KARNATAKA
STATE
ARCHIVES

KARNATAKA
STATE
ARCHIVES

KARNATAKA
STATE
ARCHIVES

KARNATAKA
STATE
ARCHIVES

KARNATAKA
STATE
ARCHIVES

KARNATAKA
STATE
ARCHIVES

"SADHVI" newspaper

Collections

Mysore.

File No: ARS 14 APP 82

"SADHVI" newspaper

Collections

Mysore.

File No: ARS 14 APP82

'SADHVI' newspaper COLLECTIONS (mysore)

'SADHVI', a Kannada newspaper is being printed & published (1936) from Mysore with Agaram Rangaiah as its Editor & proprietor.

Agaram Rangaiah, a noted Freedom Fighter, was born in the year 1901. He completed his high school studies in Marimallappa school under the Reverend Principalship of M. VenkatKrishnayya, the Grand Old Man of mysore, who exerted great influence on this young man. Later, he joined the National university, Adyar in Madras & obtained his B.A. degree in journalism.

'SADHVI', initially, was being printed and published by M. VenkatKrishnayya. After his death in 1933, Agaram revived this newspaper with the same popular name

in memory of his mentor and brought out weekly issues from the Year 1936. Later it was converted into a daily.

Agaram was a staunch Nationalist. One can really feel the pulse of the Nationalist Movement in the writings of his newspaper. His paper gave vent to the people's voice during the Movement. Such being the Case, the paper could not continue for long, it was stopped by the Govt. However, the paper resumed its publication when the Mysore Newspaper Regulation was notified in 1941. At one time the Govt had gone to the extent of insisting that the Newspaper should not be printed without being censored by the Dist. Magistrate.

These weekly issues are a rich source of information on the Movement for responsible Government in Mysore when Mysore Congress came into existence in 1937 & Shivpur Congress (1938), Vidurashwatta Firing,

Vidurashwattha Congress (1939) and Hamilton Building Satyagraha were held.

'SADHVI' newspaper COLLECTIONS (mysore)

'SADHVI', a Kannada newspaper is being printed & published (1936) from Mysore with Agaram Rangaiah as its Editor & proprietor.

Agaram Rangaiah, a noted Freedom Fighter, was born in the year 1901. He completed his high school studies in Marimallappa's school under the Reverend Principalship of M. VenkatKrishnayya, the Grand Old Man of mysore, who exerted great influence on this young man. Later, he joined the National university, Adyar in Madras & obtained his B.A. degree in journalism.

'SADHVI', initially, was being printed and published by M. VenkatKrishnayya. After his death in 1933, Agaram revived this newspaper with the same popular name

in memory of his mentor and brought out weekly issues from the year 1938. Later it was converted into a daily.

Agaram was a staunch Nationalist. One can really feel the pulse of the Nationalist Movement in the writings of his newspaper. His paper gave vent to the people's voice during the Movement. Such being the case, the paper could not continue for long, it was stopped by the Govt. However, the paper resumed its publication when the Mysore Newspaper Regulation was modified in 1941. At one time the Govt had gone to the extent of insisting that the Newspaper should not be printed without being censored by the Dist. Magistrate.

These weekly issues are a rich source of information on the Movement for responsible Government in Mysore when Mysore Congress came into existence in 1937 & Shivpur Congress (1938), Vidurashwatta Firing,

Vidurashwattha Congress (1939) and Hamilton Building Satyagraha were held.

— • —

With the Compliments of—
The Editor

|| ಸತ್ಯಮೇವೋದ್ಧರಾಮ್ಯಹಮ್ ||

ರಾಜಧಾನಿಯ ರಾಷ್ಟ್ರೀಯ ವಾರ ಪತ್ರಿಕೆ.

ವೃದ್ಧಪಿತಾಮಹ ಎಂ. ವೆಂಕಟಕೃಷ್ಣಯ್ಯನವರ ಜ್ಞಾಪಕಾರ್ಥವಾಗಿ ಪ್ರಕಟಿಸಲ್ಪಡುವುದು

ಸಂಪಾದಕರು ಅಗರಂ ರಂಗಯ್ಯ, ಬಿ. ಎ.

ಸಂಪುಟ ೧] ಮೈಸೂರು : ಸೋಮವಾರ ೨೪—೨—೧೯೩೬ [ಸಂಚಿಕೆ ೧

ಶ್ರೀ ರಾಮಕೃಷ್ಣ

—

ಲೇಖಕರು
ಪ್ರೊ|| ನಾ. ಕಸ್ತೂರಿ, ಎಂ. ಎ. ಬಿ. ಎಲ್.

ಶ್ರೀ ರಾಮಕೃಷ್ಣ ಪರಮಹಂಸರು ಜನ್ಮವೆತ್ತಿ ಇಂದು ನೂರು ವರ್ಷಗಳಾದವು. ಇಂದಿನಿಂದ ಪ್ರಾರಂಭವಾಗಿ ಬರುವ ಫೆಬ್ರವರಿ ವರೆಗೆ, ಒಂದು ಸಂವತ್ಸರ ಕಾಲ 'ಶತಮಾನೋತ್ಸವ'ವನ್ನು ಜಗತ್ತಿನ ನಾನಾ ಕಡೆಗಳಲ್ಲಿ ಅವರ ಭಕ್ತರು ಆಚರಿಸುವರೆಂದು ತಿಳಿದುಬಂದಿದೆ. ಇವರು ದೇಹತ್ಯಾಗಮಾಡಿ ಈಗ ಐವತ್ತು ವರ್ಷಗಳಾಗುತ್ತ ಬಂದವು. ಆದರೂ ಅವರ 'ವಿಶ್ವರೂಪ'ವನ್ನು ತಾನು ಇಡೀ ಪ್ರಪಂಚವನ್ನೇ ತಮ್ಮ ದಿವ್ಯ ಸಂದೇಶದಿಂದ ಪ್ರಸನ್ನವಾಗಿಸಿದ್ದಾರೆ. ಉದಾಹರಣೆಗೆ ಇದರ ಫಲವಾಗಿ ಶತಮಾನೋತ್ಸವ ಪ್ರಯುಕ್ತ ಬೇಲೂರು ಎಂಬ ಮೂಲ ಮಠದಲ್ಲಿ ಶ್ರೀ ರಾಮಕೃಷ್ಣ ದೇವಾಲಯವೊಂದನ್ನು ಕಟ್ಟಬೇಕೆಂತಲೂ, ಇದಕ್ಕಾಗಿ ತಗಲುವ ಸುಮಾರು ಒಂದುಲಕ್ಷ ರೂಪಾಯಿಗಳನ್ನು ತಾನೇ ಕೊಡುತ್ತೇನೆಂಬುದಾಗಿಯೂ ಒಬ್ಬ ಅಮೆರಿಕಾ ದೇಶದ ಭಕ್ತರು ಹೇಳಿರುತ್ತಾರೆ!

ಗುರಿಯಿಲ್ಲದ ಗೊಂದಲದಲ್ಲಿ ಸಿಕ್ಕಿ, ಚಿತ್ರವಿಚಿತ್ರ ಆವಿಷ್ಕಾರಗಳ ಯಂತ್ರದಾಸರಾದ ಪಾಶ್ಚಾತ್ಯರನೇಕರು, ಭಾರತೀಯರ ಪ್ರಶಾಂತ ಗಂಭೀರ ಜೀವನದ ಗುಟ್ಟನ್ನು ತಿಳಿಯಲು ತವಕದಿಂದ ಹೊರಟಿದ್ದಾರೆ, ಮತ್ತು ಶ್ರೀ ರಾಮಕೃಷ್ಣ ಮಠದವರು ಉತ್ತರ ಅಮೆರಿಕಾ, ದಕ್ಷಿಣ ಅಮೆರಿಕ, ಇಂಗ್ಲೆಂಡು, ಜರ್ಮನಿ ಮುಂತಾದ ಕಡೆಗಳಲ್ಲಿ ಸ್ಥಾಪಿಸಿರುವ ಆಶ್ರಮಗಳಿಗೂ ಬಂದು ಪರಮಹಂಸರ ಭಕ್ತರಾಗುತ್ತಿದ್ದಾರೆ. ಇದೂ ಅಲ್ಲದೆ, ನಾವು ನಮ್ಮ ಕಣ್ಣು ತೆರೆದು ಹಿರಿಯರು ಗಳಿಸಿದ ಸಂಸ್ಕೃತಿಯ ಸಂರಕ್ಷಣೆಗಾಗಿ, ಅದರ ಸುಧಾರಣೆಗಾಗಿ, ಕಂಕಣಬದ್ಧರಾಗುತ್ತಿದ್ದೇವೆ. ಕಂಠದಿಂದ ಹೊರಹೊಮ್ಮುವ ವೇದಾಂತಕ್ಕೂ ಕಾರ್ಯತಃ ಮಾಡುವ ವೇದಾಂತಕ್ಕೂ ಇರುವ ವ್ಯತ್ಯಾಸವನ್ನು ಕಾಣುವ ಸಾಧಿಸಿ, ಸೇವಾಧರ್ಮದಿಂದಲೇ "ಮಾಧವ ದೇವಸ್ಪರ್ಶಮಿದಂ" ಎಂಬುದನ್ನು ಮನಗಾಣಬೇಕೆಂದು ಸಾರಿದರು. ಅನೇಕ ವಿಷಯಗಳಾಗಿ ಪತಿತೋದ್ಧರಣ ಕೆಲಸಗಳನ್ನು ಕೈಕೊಳ್ಳುತ್ತಿದ್ದೇವೆ. ಇದಲ್ಲಕ್ಕೂ ಕಾರಣಕರ್ತರು ಶ್ರೀ ರಾಮಕೃಷ್ಣ ಪರಮಹಂಸರು.

ಅವರ ಜೀವನವು ಅತ್ಯದ್ಭುತವಾದದ್ದು. ಅವರ, ಕಟ್ಟು ಕಥೆಯಲ್ಲಿ ಅವರೊಡನೆ ಮಾತನಾಡಿ, ಅವರನ್ನು ಕಂಡು ಕೇಳಿದವರು ಅನೇಕರಿದ್ದಾರೆ. ಅವರನ್ನು ಅನೇಕರು ಸಂದರ್ಶಿಸಿ, ಆಗಾಗ ಬರೆದಿಟ್ಟ ಅನೇಕ ಗ್ರಂಥಗಳಿವೆ. ಅವರ ಸಾಧನೆಗಳ ಪವಿತ್ರ, ಅವರ ವಚನಾಮೃತ, ಅವರ ದಿವ್ಯ ಸಂದೇಶ ಇವನ್ನು ಅವರ ವಾಣಿಯಿಂದಲೇ ಈಗಲೂ ನಾವು ಓದಿ ತಿಳಿದುಕೊಳ್ಳಬಹುದಾಗಿದೆ! ಎಂತಹ ಮಹದ್ಭಾಗ್ಯ!

"ಒಂದು ಕೋಟಿ ಭಾರತೀಯರು ೫೦೦೦ ವರ್ಷ ತಪಸ್ಸು ಮಾಡಿ ಪಡೆದ ಪುಣ್ಯಫಲ" ಎಂದು ರೋಮೇ ರೋಲಂಡರು, ಅವರ ವಿಷಯವಾಗಿ ಹೇಳಿರುವರು. 'ಮಂತ್ರಯುಗದ ಮಹರ್ಷಿಗಳು ಯಂತ್ರಯುಗದಲ್ಲಿ ಅವತರಿಸಿದರು' ಎಂದು ಇನ್ನೊಬ್ಬರು ಬರೆದಿರುವರು. ಪಾಶ್ಚಾತ್ಯ ಸಂಸ್ಕೃತಿಯ ಪ್ರಾಬಲ್ಯಾತ್ಮಕ ಜೀವನವು ಪ್ರಪಂಚವನ್ನೆಲ್ಲಾ ಆವರಿಸಿದಾಗ, ಮತದ್ವೇಷ್ಯ ಶಾಂತಿಗೊಳ್ಳಲೆಂದು ಒಂದ ಯುಗಾಚಾರ್ಯರಿವರೆಂದು ಮಹಾತ್ಮರು ಹೊಗಳುವರು. ಭಾರತ ವರ್ಷವು ಪತನದ ಪಥದಲ್ಲಿ ಮುಳುಗಿ, ತಾಮಸವನ್ನೇ ಸಾತ್ವಿಕವೆಂದು ಭಾವಿಸಿದ್ದಾಗ, ನಮ್ಮನ್ನೆಚ್ಚರಿಸಿ ಪ್ರಪಂಚಕ್ಕೆ ಆಗಬೇಕಾದ ಶ್ರೇಯಸ್ಸನ್ನೂ ಮನಗಾಣಿಸಿದರಿವರು (ಇಂಡಿಯಾ ದೇಶದಲ್ಲಿ ಓದುಭ್ಯಾಸವು ಆಂಗಭಾಷೆಯ ಮೂಲಕವೇ ನಡೆಯಬೇಕೆಂದು ಕಂಕಣಬದ್ಧರಾದವರು ತೀರ್ಮಾನಿಸಿದ ವರ್ಷವೇ ಶ್ರೀ ರಾಮಕೃಷ್ಣರೂ ಕೂಡ ಜನ್ಮವೆತ್ತಿದ್ದು, ಶುಭಸೂಚನೆಯೇ ಸರಿ!) ಅವರೊಬ್ಬ ಬಡ ಪೂಜಾರಿ, ಓದುಬರಹ ಹೆಚ್ಚು ಬಾರದು. ಶಾಸ್ತ್ರ, ನ್ಯಾಯ, ತರ್ಕ, ಅಲಂಕಾರ, ಇವುಗಳನ್ನು ಕಂಠಪಾಠಮಾಡಿದ ವಿದ್ವಾಂಸರಲ್ಲಿ ಇಂಗ್ಲೀಷು ತಿಳಿಯದು. ಆದರೂ ತಮ್ಮ ತೀವ್ರ ಸಾಧನೆಗಳಿಂದ, ನಿಷ್ಕಲ ಭಕ್ತಿಯಿಂದ, ಸತ್ಯ ವ್ರತದಿಂದ ಸನಾತನ ಧರ್ಮ ಸಮನ್ವಯದ ಆಚಾರ್ಯರಾಗಿ, ಲೋಕ ಕಲ್ಯಾಣಕ್ಕೆ ಕಾರಣಕರ್ತರಾಗಿ ದ್ವಾರ ದಕ್ಷಿಣೇಶ್ವರದಲ್ಲಿ ತಾವು ಮೂಲಮೂರ್ತಿಯೆಂತ ಇದ್ದುಕೊಂಡು, ಉತ್ಸವಮೂರ್ತಿಯಾದ ಸ್ವಾಮಿ ವಿವೇಕಾನಂದರನ್ನು, ಅಮೃತ ಶಿಲೆಯಲ್ಲಿ ದಾವೇ ಉತ್ತಮ ಶಿಲ್ಪಿಯಾಗಿ ನಿಂತು ರಚಿಸಿ, ತಲ್ಲಣಿಸುತ್ತಿದ್ದ ಜೀವರಾಶಿಗಳ ಹೃದಯವನ್ನೂ, ಶಾಂತಿಯನ್ನು ದಯಪಾಲಿಸಿದರು. ಇಂದಿಗೂ ಶ್ರೀ ರಾಮಕೃಷ್ಣಾಶ್ರಮಗಳು, ನಾನಾ ಕಡೆ ಅವರ ಆದೇಶದಿಂದ ಒಳಪಟ್ಟ ದರಿದ್ರನಾರಾಯಣ, ಆರ್ತನಾರಾಯಣ, ಅಜ್ಞಾನನಾರಾಯಣರ ಸೇವೆಯನ್ನು ಮಾಡುತ್ತಿವೆ. ಪರಮಹಂಸರವರು ತಮ್ಮ ಸ್ವಾನುಭವದಿಂದ, ನಿಸ್ವಾರ್ಥ ಜ್ಞಾನದಿಂದ, ಅಧಿಕಾರವಾಣಿಯಿಂದ, ಅನುಗ್ರಹ ದೃಷ್ಟಿಯಿಂದ, ವೇದಾಂತದ ತಿರುಳು, ಇಸ್ಲಾಂಮತ, ಕ್ರೈಸ್ತಮತ, ಇವುಗಳಿಗೂ ಸನಾತನ ಧರ್ಮಕ್ಕೂ ಇರುವ ಐಕ್ಯತೆ, ಕರ್ಮ, ಜ್ಞಾನ, ಭಕ್ತಿ ಮಾರ್ಗಗಳ ಒಳತತ್ವಗಳು, ತ್ಯಾಗಪೂರ್ವಕವಾದ ಲೋಕಸೇವೆಯೇ ಮೋಕ್ಷಕ್ಕೆ ಸೋಪಾನ, ಎಂಬಿವುಗಳನ್ನು ಉಪದೇಶ ಮಾಡಿದರು. ನೊಂದವರನ್ನು ಸಂತೈಸಿ, ಮಾನವ [illegible] ಜನ [illegible] ಅಭಯ ಹಸ್ತವನ್ನು ನೀಡಿದರು.

ಅವರು ಅವತರಿಸಿದ ಭಾರತ ಮಾತೆಯ ಮಕ್ಕಳಾದ ನಾವು ಧನ್ಯರು. ಅವರ ದಿವ್ಯ ಸಂದೇಶಕ್ಕೆ ಕಿವಿಗೊಟ್ಟು, ಅದರಂತೆ ಕಿಂಚಿತ್ ಆದರೂ ನಮ್ಮ ನಿತ್ಯ ಜೀವನವನ್ನು ನಡೆಯಿಸಲು ಯತ್ನಿಸಿದರೆ, ಆಗ ನಾವು ಮಹರ್ಷಿಗಳ ಮಕ್ಕಳು, ಸನಾತನ ಧರ್ಮದ ಮಡಿಲಿನಲ್ಲಿ ಬೆಳೆಯಲು ಅರ್ಹರು, ಆಗ ನಾವು ನಿಜವಾದ ಭಾರತೀಯರು.

ಪರಮಹಂಸರ ಶತಮಾನೋತ್ಸವವನ್ನು ಪ್ರತಿಯೊಬ್ಬ ಭಕ್ತನ ಮನೆಯಲ್ಲಿಯೂ, ಪ್ರತಿಯೊಂದು ಊರಿನಲ್ಲಿಯೂ ಆಚರಿಸಿ ಅವರ ಜೀವನದ ಮಹತ್ವ, ಉಪದೇಶದ ಮಹತ್ವ ಇವುಗಳನ್ನು ನಾವು ನಿರೂಪಿಸಿ ತಿಳಿಸಿಕೊಂಡು

ಅಸತೋ ಮಾ ಸದ್ಗಮಯ,
ತಮಸೋ ಮಾ ಜ್ಯೋತಿರ್ಗಮಯ,
ಮೃತ್ಯೋರ್ಮಾಽಮೃತಂ ಗಮಯ,

ಎಂದು ಪ್ರಾರ್ಥಿಸೋಣ.

With the Compliments of—
The Editor

|| ಸತ್ಯಮೇವೋಽಸ್ಮರಾಮ್ಯಹಮ್ ||

ರಾಜಧಾನಿಯ ರಾಷ್ಟ್ರೀಯ ವಾರ ಪತ್ರಿಕೆ.

ವೃದ್ಧಪಿತಾಮಹ ಎಂ. ವೆಂಕಟಕೃಷ್ಣಯ್ಯನವರ ಜ್ಞಾಪಕಾರ್ಥವಾಗಿ ಪ್ರಕಟಿಸಲ್ಪಡುವುದು

ಸಂಪಾದಕರು ಅಗರಂ ರಂಗಯ್ಯ, ಬಿ.ಎ.

ಸಂಪುಟ ೧] ಮೈಸೂರು : ಸೋಮವಾರ ೨೪—೨—೧೯೩೬ [ಸಂಚಿಕೆ ೧

ಶ್ರೀ ರಾಮಕೃಷ್ಣ.

ಲೇಖಕರು

ಶ್ರೀ|| ನಾ. ಕಸ್ತೂರಿ, ಎಂ.ಎ., ಬಿ.ಎಲ್.

ಶ್ರೀ ರಾಮಕೃಷ್ಣ ಪರಮಹಂಸರು ಜನ್ಮವೆತ್ತಿ ಇಂದು ನೂರು ವರ್ಷಗಳಾದವು. ಇಂದಿನಿಂದ ಪ್ರಾರಂಭವಾಗಿ ಬರುವ ಫೆಬ್ರವರಿ ವರೆಗೂ, ಒಂದು ಸಂವತ್ಸರ ಕಾಲ 'ಶತವರ್ಷೋತ್ಸವ' ವನ್ನು ಜಗತ್ತಿನ ನಾನಾ ಕಡೆಗಳಲ್ಲಿ ಅವರ ಭಕ್ತರು ಆಚರಿಸುವರಂತೆ. ತಿಳಿದು ಬಂದಿದೆ. ಅವರು ದೇಹತ್ಯಾಗ ಮಾಡಿ ಈಗ ಅರ್ಧ ಶತಮಾನವಾಯಿತು. ಅಷ್ಟರೊಳಗೆ ಅವರು 'ವಿಶ್ವರೂಪ' ವನ್ನು ತಾಳಿ ಇಡೀ ಪ್ರಪಂಚವನ್ನೇ ತಮ್ಮ ದಿವ್ಯ ಸಂದೇಶದಿಂದ ಪುನೀತವನ್ನಾಗಿಸಿದ್ದಾರೆ. ಉದಾಹರಣೆಗಾಗಿ ಅವರ ಸಲುವಾಗಿ ಶತಮಾನೋತ್ಸವ ಪ್ರಯುಕ್ತ ಬೇಲೂರು ಎಂಬ ಮೂಲ ಮಠದಲ್ಲಿ ಶ್ರೀ ರಾಮಕೃಷ್ಣ ದೇವಾಲಯವೊಂದನ್ನು ಕಟ್ಟಬೇಕೆಂತಲೂ, ಅದಕ್ಕಾಗಿ ತಗಲುವ ಸುಮಾರು ಆರುಲಕ್ಷ ರೂಪಾಯಿಗಳನ್ನು ತಾನೇ ಕೊಡುತ್ತೇನೆಂಬುದಾಗಿಯೂ ಒಬ್ಬ ಅಮೆರಿಕಾ ದೇಶದ ಭಕ್ತಳು ಹೇಳಿರುತ್ತಾಳೆ!

ಗುರಿಯಿಲ್ಲದ ಗೊಂದಲದಲ್ಲಿ ಸಿಕ್ಕಿ, ಚಿತ್ತಭ್ರಮೆ ಹಿಡಿದಂತೆ ಅಲೆದಾಡುತ್ತಿರುವ ಯಂತ್ರದಾಸರಾದ ಪಾಶ್ಚಾತ್ಯರನೇಕರು, ಭಾರತೀಯರ ಪ್ರಶಾಂತ ಗಂಭೀರ ಜೀವನದ ಗುಟ್ಟನ್ನು ತಿಳಿಯಲು ತಂಡೋಪತಂಡವಾಗಿ ಬರುತ್ತಲಿದ್ದಾರೆ, ಮತ್ತು ಶ್ರೀ ರಾಮಕೃಷ್ಣ ಮಠದವರು ಉತ್ತರ ಅಮೆರಿಕಾ, ದಕ್ಷಿಣ ಅಮೆರಿಕ, ಇಂಗ್ಲೆಂಡು, ಜರ್ಮನಿ ಮುಂತಾದ ಕಡೆಗಳಲ್ಲಿ ಸ್ಥಾಪಿಸಿರುವ ಆಶ್ರಮಗಳಿಗೂ ಎಂದು ಪರಮಹಂಸರ ಭಕ್ತರಾಗುತ್ತಿದ್ದಾರೆ. ಇದೂ ಒಳ್ಳೆಯದೇ, ನಾವೂ ಕೂಡ ಕಣ್ಣು ತೆರೆದು ಹಿರಿಯರು ಗಳಿಸಿಟ್ಟ ಸಂಪತ್ತಿನ ಸಂರಕ್ಷಣೆಗಾಗಿ, ಅವರ ಸುಧಾರಣೆಗಾಗಿ, ಟೊಂಕಕಟ್ಟಿ ಬದ್ಧರಾಗುತ್ತಿದ್ದೇವೆ. ಕೆಲವರಂತೂ ಹೊರಮೊನ್ನುವ ಸಿದ್ಧಾಂತಕ್ಕೂ ಕಾರ್ಯತಃ ನಡೆಯುವ ಸಿದ್ಧಾಂತಕ್ಕೂ ಇರುವ ವ್ಯತ್ಯಾಸವನ್ನು ಕಂಡು ನಾಚಿ, 'ಸೇವಾಧರ್ಮದಿಂದಲೇ ಮಾನವ ದೇವಸ್ವರೂಪನಾಗುವನು' ಎಂಬುದನ್ನು ತಿಳಿಯಬೇಕೆಂದು ಮನಗಂಡು, ಅನೇಕ ರೀತಿಯಾಗಿ ಪತಿತೋದ್ಧರಣ ಕಲಸಗಳನ್ನು ಕೈಕೊಳ್ಳುತ್ತಿದ್ದಾರೆ. ಇವೆಲ್ಲಕ್ಕೂ ಕಾರಣಕರ್ತರು ಶ್ರೀ ರಾಮಕೃಷ್ಣ ಪರಮಹಂಸರು.

ಅವರ ಜೀವನವು ಅತ್ಯದ್ಭುತವಾದದ್ದು. ಅವರ, ಕಟ್ಟು ಕಥೆಯಲ್ಲ. ಅವರೊಡನೆ ಮಾತನಾಡಿ, ಅವರನ್ನು ಕಂಡು ಕೇಳಿದವರು ಇನ್ನೂ ಅನೇಕರಿದ್ದಾರೆ. ಅವರನ್ನು ಅನೇಕರು ಸಂದರ್ಶಿಸಿ, ಆಗಾಗ ಬರೆದಿಟ್ಟ ಅನೇಕ ಗ್ರಂಥಗಳಿವೆ. ಅವರ ಸಾಧನೆಗಳ

ಚರಿತ್ರೆ, ಅವರ ವಚನಾಮೃತ, ಅವರ ದಿವ್ಯ ಸಂದೇಶ ಇವನ್ನು ಅವರ ವಾಣಿಯಿಂದಲೇ ಈಗಲೂ ನಾವು ಓದಿ ತಿಳಿದುಕೊಳ್ಳಬಹುದಾಗಿದೆ! ಎಂತಹ ಸುಭಾಗ್ಯವಿದು!

೩೩ ಕೋಟಿ ಭಾರತೀಯರು ೫೦೦೦ ವರ್ಷ ತಪಸ್ಸು ಮಾಡಿ ಪಡೆದ ಪುಣ್ಯಫಲ' ಎಂದು ರೂಮೇ ರೋಲಂಡರು, ಅವರ ವಿಷಯವಾಗಿ ಹೇಳಿರುವರು. 'ಮುಂತ್ರಯುಗದ ಮಹರ್ಷಿಗಳು ಯಂತ್ರಯುಗದಲ್ಲಿ ಅವತರಿಸಿದರು' ಎಂದು ಇನ್ನೊಬ್ಬರು ಬರೆದಿರುವರು. ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವಾತ್ಮಕ ಜೀವನವು ಪ್ರಪಂಚವನ್ನೆಲ್ಲಾ ಆವರಿಸಿದಾಗ, ಮತ್ತೊಮ್ಮೆ ಶಾಂತಿಗೊಳ್ಳಲೆಂದು ಬಂದ ಯುಗಾವತಾರಿಗಳಿವರೆಂದು ಮತ್ತೊಬ್ಬರು ಹೊಗಳುವರು. ಭಾರತ ವರ್ಷವು ಬಡತನ ಜಡತನಗಳಲ್ಲಿ ಮುಳುಗಿ, ತಾಮಸವನ್ನೇ ಸಾತ್ವಿಕವೆಂದು ಭಾವಿಸಿದ್ದಾಗ, ನಮ್ಮನ್ನೆಚ್ಚರಿಸಿ, ಪ್ರಪಂಚಕ್ಕೆ ಆಗಬೇಕಾದ ಶ್ರೇಯಸ್ಸನ್ನು ಮನಗಾಣಿಸಿದರಿವರು (ಇಂಡಿಯಾ ದೇಶದಲ್ಲಿ ವಿದ್ಯಾಬಲವು ಆಂಗ್ಲಭಾಷೆಯ ಮೂಲಕವೇ ನಡೆಯಬೇಕೆಂದು ಕಂಪನಿಯವರು ತೀರ್ಮಾನಿಸಿದ ವರ್ಷವೇ ಶ್ರೀ ರಾಮಕೃಷ್ಣರೂ ಕೂಡ ಜನ್ಮವೆತ್ತಿದುದು ಶುಭಸೂಚನೆಯೇ ಸರಿ!) ಅವರೊಬ್ಬ ಬಡ ಪೂಜಾರಿ, ಓದುಬರಹ ಬಾರದವರು. ಶಾಸ್ತ್ರ, ನ್ಯಾಯ, ತರ್ಕ, ಅಲಂಕಾರ, ಇವುಗಳನ್ನು ಕಂಠಪಾಠಮಾಡಿದ ವಿದ್ವಾಂಸರಲ್ಲ, ಇಂಗ್ಲೀಷು ತಿಳಿಯದ ಅವರೂ ತಮ್ಮ ತೀವ್ರ ಸಾಧನೆಗಳಿಂದ, ನಿಶ್ಚಲ ಭಕ್ತಿಯಿಂದ, ಸತ್ಯವ್ರತದಿಂದ, ಸರ್ವಧರ್ಮ ಸಮನ್ವಯಾಚಾರ್ಯರಾಗಿ, ಲೋಕ ಕಲ್ಯಾಣಕ್ಕೆ ಕಾರಣಕರ್ತರಾಗಿ ದ್ವಾರಕ ದಕ್ಷಿಣೇಶ್ವರದಲ್ಲಿ ತಾವು ಮೂಲ ಮೂರ್ತಿಯಂತೆ ಇದ್ದುಕೊಂಡು, ಉತ್ಸವ ಮೂರ್ತಿಯಾದ ಸ್ವಾಮಿ ವಿವೇಕಾನಂದರನ್ನು, ಅಮೃತ ಶಿಲೆಯಲ್ಲಿ ತಾವೇ ಉತ್ತಮ ಶಿಲ್ಪಿಯಾಗಿ ನಿಂತು ರಚಿಸಿ, ತಲ್ಲಣಿಸುತ್ತಿದ್ದ ಜೀವರಾಶಿಗಳಿಗೆ ಗುರುವನ್ನು, ಶಾಂತಿಯನ್ನು ದಯಪಾಲಿಸಿದರು. ಇಂದಿಗೂ ಶ್ರೀ ರಾಮಕೃಷ್ಣಾಶ್ರಮಗಳು, ನೂರಾರು ಕಡೆ ಅವರ ಆಶೀರ್ವಾದದಿಂದ ಬೆಳೆದು ದರಿದ್ರನಾರಾಯಣ, ಆರ್ತನಾರಾಯಣ, ಸರ್ವನಾರಾಯಣರ ಸೇವೆಯನ್ನು ಮಾಡುತ್ತಿವೆ. ಪರಮಹಂಸರು ತಮ್ಮ ಸ್ವಾನುಭವದಿಂದ, ನಿರ್ಮಲ ಜ್ಞಾನದಿಂದ, ಅಧಿಕಾರವಾಣಿಯಿಂದ, ಅನುಗ್ರಹ ದೃಷ್ಟಿಯಿಂದ, ವೇದಾಂತದ ತಿರುಳು, ಇಸ್ಲಾಂಮತ, ಕ್ರೈಸ್ತಮತ, ಇವುಗಳಿಗೂ ಸನಾತನ ಧರ್ಮಕ್ಕೂ ಇರುವ ಐಕ್ಯತೆ, ಕರ್ಮ, ಜ್ಞಾನ, ಭಕ್ತಿಮಾರ್ಗಗಳ ಒಳ ತತ್ವಗಳು, ತ್ಯಾಗಪೂರ್ವಕವಾದ ಲೋಕ ಸೇವೆಯೇ ಮೋಕ್ಷಕ್ಕೆ ಸುಲಭ ದಾರಿ, ಎಂಬಿವುಗಳನ್ನು ಉಪದೇಶ ಮಾಡಿದರು. ನೊಂದವರನ್ನು ಸಂತೈಸಿ, ಮಾನವ [illegible] ಜನಾಂಗಕ್ಕೆ ಅಭಯ ಹಸ್ತವನ್ನು ನೀಡಿದರು.

ಅವರು ಅವತರಿಸಿದ ಭಾರತ ಮಾತೆಯ ಮಕ್ಕಳಾದ ನಾವು ಧನ್ಯರು. ಅವರ ದಿವ್ಯ ಸಂದೇಶಕ್ಕೆ ಕಿವಿಗೊಟ್ಟು, ಅದರಂತೆ ಕಿಂಚಿತ್ ಆದರೂ ನಮ್ಮ ನಿತ್ಯ ಜೀವನವನ್ನು ನಡೆಯಿಸಲು ಯತ್ನಿಸಿದರೆ, ಅಂದು ನಾವು ಮಹರ್ಷಿಗಳ ಮೊಮ್ಮಕ್ಕಳು, ಸನಾತನ ಧರ್ಮದ ಮಡಿಲಿನಲ್ಲಿ ಬೆಳೆಯಲು ಅರ್ಹರು, ಅಂದು ನಾವು ನಿಜವಾದ ಭಾರತೀಯರು.

ಪರಮಹಂಸರ ಶತಮಾನೋತ್ಸವವನ್ನು ಪ್ರತಿಯೊಬ್ಬ ಭಕ್ತನ ಮನೆಯಲ್ಲಿಯೂ, ಪ್ರತಿಯೊಂದು ಊರಿನಲ್ಲಿಯೂ ಆಚರಿಸಿ ಅವರ ಜೀವನದ ಮಹತ್ವ, ಉಪದೇಶದ ಮಹತ್ವ ಇವುಗಳನ್ನು ನಾವು ಮನಸ್ಸಿಗೆ ತಂದುಕೊಂಡು,

ಅಸತೋ ಮಾ ಸದ್ಗಮಯ
ತಮಸೋ ಮಾ ಜ್ಯೋತಿರ್ಗಮಯ,
ಮೃತ್ಯೋರ್ಮಾಽಮೃತಂ ಗಮಯ,

ಎಂದು ಪ್ರಾರ್ಥಿಸೋಣ

ಶುಭ ಸಂದೇಶ.

ಮುಖಂಡರುಗಳಿಂದ

ಸರ್. ರಾಧಾಕೃಷ್ಣನ್ ರವರು,

ಆಂಧ್ರ ವಿಶ್ವವಿದ್ಯಾನಿಲಯದ ವೈಸ್ ಛಾನ್ಸಲರು, ವಾಲ್ಟೇರ್

ನಾನು ಮೈಸೂರಿನಲ್ಲಿದ್ದಾಗ್ಗೆ ಶ್ರೀ ವೆಂಕಟಕೃಷ್ಣಯ್ಯನವರನ್ನು ನೋಡಿದ್ದೇನೆ. ಅವರು ತಮ್ಮ ಕಾಲದಲ್ಲಿ ಪತ್ರಿಕೋದ್ಯಮಕ್ಕಾಗಿ ಬಹಳ ಕೆಲಸ ಮಾಡಿರುವರು. ಅವರ ಸಾರ್ವಜನಿಕ ಜೀವನ [illegible] ಪತ್ರಿಕೋದ್ಯಮಗಳ ಜ್ಞಾಪಕಾರ್ಥವಾಗಿ ತಾವು ಕೈಗೊಂಡಿರುವ ಈ ಕಾರ್ಯವು ಸಂತೋಷಪ್ರದವಾಗಿದೆ. ನಾನು ಅದರ ಅಭಿವೃದ್ಧಿಯನ್ನೇ ಅಪೇಕ್ಷಿಸುತ್ತೇನೆ.

ಶ್ರೀ ಸಿ. ವೈ. ಚಿಂತಾಮಣಿಯವರು.

"ಲೀಡರ್" ಪತ್ರಿಕಾ ಸಂಪಾದಕರು ಅಲಹಾಬಾದ್

ವೃದ್ಧಪಿತಾಮಹರವರ ಜ್ಞಾಪಕಾರ್ಥವಾಗಿ, ಅವರ ಪತ್ರಿಕೆಯನ್ನು ಪುನಃ [illegible] ನಡೆಸಬೇಕೆಂದಿರುವ ತಮ್ಮ ಪ್ರಯತ್ನವು ಯಶಸ್ವಿಯಾಗಿ ನಡೆಯಲೆಂದು ಹಾರೈಸುತ್ತೇನೆ.

ಸರ್. ಎಂ. ವಿಶ್ವೇಶ್ವರಯ್ಯನವರು.

ಮೈಸೂರಿನ ಮಾಜಿ ದಿವಾನರು

ತಾವು ಪತ್ರಿಕೆಯನ್ನು ನಡೆಸಬೇಕೆಂದಿರುವ ಉದ್ದೇಶವು ನಿಜವಾಗಿಯೂ ಶ್ಲಾಘನೀಯವಾದುದು. ನಿಮ್ಮ ಕಾರ್ಯವು ಯಶಸ್ವಿಯಾಗಲೆಂದು ಹಾರೈಸುತ್ತೇನೆ.

ಶ್ರೀ ಪಿ. ಆರ್. ರಾಮಯ್ಯನವರು,

ತಾಯಿನಾಡು. ಸಂಪಾದಕರು. ಬೆಂಗಳೂರು.

ವೃದ್ಧಪಿತಾಮಹ ಎಂ. ವೆಂಕಟಕೃಷ್ಣಯ್ಯನವರ ಸ್ಮರಣೆಯು ಅತಿ ಪವಿತ್ರವಾದುದು. ಅವರ ಸ್ಮರಣೆಯಲ್ಲಿ ನಾವು ಯಾವ ಕೆಲಸವನ್ನು ಕೈಕೊಳ್ಳಲಿ ಅದು ಈಶ್ವರಪ್ರೀತಿಯಾದುದು ಎಂಬುವದರಲ್ಲಿ ಸಂದೇಹವಿಲ್ಲ. 'ಸಾಧ್ವಿ' ಪತ್ರಿಕೆಯು ಅವರಿಂದ ಸೃಷ್ಟಿಯಾಯಿತು. ಅವರು ಬದುಕಿರುವವರಗೆ ಅವರ ಪ್ರತಿಯೊಂದು ನಿಮಿಷವೂ ದೇಶಸೇವೆ ಮತ್ತು ಪರೋಪಕಾರಗಳಿಗಾಗಿಯೇ ಅರ್ಪಿತವಾಯಿತು. "ಸಾಧ್ವಿ" ಪತ್ರಿಕೆಯು ಆ ಪರೋಪಕಾರ ಮಂತ್ರವನ್ನೇ ಅವರ ಪಾಠಕ್ಕೆ ಸಾರುತ್ತಿತ್ತು. ಪರೋಪಕಾರವೆಂಬ ಒಂದು ಶಬ್ದದಲ್ಲಿಯೇ ನಿಕಟ ರಾಜಕೀಯ, ಸಾಮಾಜಿಕ, ಆರ್ಥಿಕ ಅಭಿವೃದ್ಧಿಯೂ ಅಡಗಿದೆ. ಯಾವನ ಸಾರ್ವಜನಿಕ ಜೀವನವು ಪರೋಪಕಾರ ತತ್ವದ ತಳಹದಿಯ ಮೇಲೆ ಕಟ್ಟಲ್ಪಟ್ಟಿದೆಯೋ ಅವನ ಕಾರ್ಯಗಳು ಇತರರಿಗೆ ಮಾರ್ಗದರ್ಶಕವಾಗುವುವು. ತಾತಯ್ಯನವರ ಜೀವನವು ಇದಕ್ಕೆ ಉದಾಹರಣೆ.

ನಮ್ಮ ಸಂಸ್ಥಾನದಲ್ಲಿ ಸಾರ್ವಜನಿಕ ಜೀವನದ ಮಟ್ಟವು ಹೆಚ್ಚುತ್ತಿದೆ. ಇಂತಹ ಪರಿಸ್ಥಿತಿಯಲ್ಲಿ ಕೇವಲ ಪರೋಪಕಾರದ ತತ್ವದ ಸಾರ್ವಜನಿಕ ಜೀವನವನ್ನೂ ವೈಯಕ್ತಿಕ ಜೀವನವನ್ನೂ ಉತ್ತೇಜನಗೊಳಿಸುವ "ಸಾಧ್ವಿ"ಯು [illegible] ಅತ್ಯಂತ ಅಭಿನಂದನೀಯವಾದ ಸಂಗತಿ.

ತಮ್ಮ ಸಂಪಾದಕತ್ವದಲ್ಲಿ "ಸಾಧ್ವಿ" ಪತ್ರಿಕೆಯು ತನ್ನ ಪ್ರಾಚೀನ ವೈಭವವನ್ನು ಉಳಿಸಿಕೊಂಡು ಮುಂದಿನ ಪ್ರಗತಿ ವೈಭವವನ್ನೂ ಹೊಂದಲಿ ಎಂದು ಆಶಿಸುತ್ತೇನೆ.

ಶ್ರೀ ಸಿ. ನರಸಿಂಹಯ್ಯನವರು

ಬಿ. ಎ., ಬಿ. ಎಲ್., ಅಡ್ವೋಕೇಟ್, ಮೈಸೂರು

ಕೀರ್ತಿಶೇಷರಾದ ವೃದ್ಧಪಿತಾಮಹ ವೆಂಕಟಕೃಷ್ಣಯ್ಯನವರ ಜ್ಞಾಪಕಾರ್ಥವಾಗಿ "ಸಾಧ್ವಿ" ವಾರ ಪತ್ರಿಕೆಯನ್ನು ಹೊರಡಿಸಲು ನಿಶ್ಚಯಿಸಿರುವುದು ಬಹಳ ಸ್ತೋತ್ರಾರ್ಹವಾದದ್ದು. ಮೈಸೂರು ಸಿಟಿಯ ವರ್ತಮಾನಗಳನ್ನು ದೀರ್ಘವಾಗಿ ಮುದ್ರಿಸಲು ಯಾವ ಪತ್ರಿಕೆಗಳಿಗೂ ಸಾಧ್ಯವಿಲ್ಲ. ಈಗ ನಮ್ಮ ರಂಗಯ್ಯನವರು ವಾರ ಪತ್ರಿಕೆಯನ್ನು ಹೊರಡಿಸಲು ಏರ್ಪಾಡು ಮಾಡಿ ಮೈಸೂರು ಸಿಟಿ ಮತ್ತು ಡಿಸ್ಟ್ರಿಕ್ಟಿನ ಗ್ರಾಮಾಂತರಗಳಲ್ಲಿನ ಜನಗಳ ಕುಂದು ಕೊರತೆಗಳನ್ನು ಹೊರಪಡಿಸಲು ಮತ್ತು ಜನ ಸಮುದಾಯಕ್ಕೆ ಪ್ರಯೋಜನಕರವಾದ ಸಲಹೆಗಳನ್ನು ಸೂಚಿಸಲು ಕೈಗೊಂಡಿರುವುದು ಬಹಳ ಸಾಧುವಾದದ್ದು.

ಲೇಟ್ ವೆಂಕಟಕೃಷ್ಣಯ್ಯನವರಲ್ಲಿ ರಂಗಯ್ಯನವರು ಸೇವೆಯನ್ನು ಮಾಡಿ ಅವರ ಜ್ಞಾಪಕಾರ್ಥವಾಗಿ, ಅವರು ಹಿಂದೆ ನಡೆಸುತ್ತಿದ್ದ "ಸಾಧ್ವಿ" ಎಂಬ ಹೆಸರಿನಿಂದಲೇ ಹೊರಡಿಸುವ ಪತ್ರಿಕೆಯು ಯಶಸ್ವಿಯಾಗಿ ನಡೆಯಲೆಂದು ಹಾರೈಸುತ್ತೇನೆ.

ಶ್ರೀ ಹೊಸಕೊಪ್ಪ ಕೃಷ್ಣರಾಯರವರು.

"ಸಾಧ್ವಿ" ಎಂದರೆ ನನ್ನ [illegible] ಗತ ಪಿತಾಮಹರ ಸ್ಮರಣೆಯು ಬರುತ್ತೆ. ವೃತ್ತ ಪತ್ರಿಕೆಗಳೇ ಅವರ ಪಸ[illegible] ಪವಿತ್ರಾದರ್ಶಗಳು ಪತ್ರಿಕಾ [illegible] ಅವರದ್ದೇ ಮಾದರಿ.

ಆ ಧೈರ್ಯ ಸಾಹಸಗಳು ಈಗಿನ ಯಾವ ವೃತ್ತ ಪತ್ರಿಕೆಗಳಿಗಿವೆಯೋ ಬಹಳ ಯೋಚಿಸಿ ಮಾತು ಹೇಳಬೇಕಾಗಿದೆ. ಈಗ ಅವರು ಇಹಲೋಕದಲ್ಲಿಲ್ಲದಿದ್ದರೂ [illegible] ಅದೇ "ಸಾಧ್ವಿ" [illegible] ಯಶಸ್ಸಿಗಾಗಿ ಈ ಭಾಗದಲ್ಲಿ ಅವರ [illegible] ನಿಮ್ಮ ಪ್ರಯತ್ನ [illegible]. ನಿಮಗೆ ಆದೇ [illegible] ಶಕ್ತಿಯನ್ನು ದೇವರು [illegible] ಯಾವಾಗಲೂ ಪ್ರಜಾಪಕ್ಷಪಾತ, ಪ್ರಜೆಗಳ ಆಜನ್ಮಸಿದ್ಧ [illegible] ಇರಲಿ ನಿಮ್ಮ ಗುರಿಯಾಗಿರಲಿ.

ಶ್ರೀ [illegible] ಚಿಂತಾಮಣಿಯವರು.

ಶ್ರೀ [illegible] ನರಸೂರ್ಯರವರು. ಮಾಜಿ [illegible] ಹೊಸ ದೆಹಲಿ.

[illegible] ವೃದ್ಧಪಿತಾಮಹ ಎಂ. ವೆಂಕಟಕೃಷ್ಣಯ್ಯನವರ ಜ್ಞಾಪಕಾರ್ಥವಾಗಿ 'ಸಾಧ್ವಿ' ಎಂಬ ಕನ್ನಡ ವಾರಪತ್ರಿಕೆಯನ್ನು ಪ್ರಕಟಿಸುವಿರೆಂದು [illegible] ನಾನು ತುಂಬ ಸಂತೋಷಪಡುತ್ತೇನೆ. ಅಂತಹ ಪುಣ್ಯಾತ್ಮರಿಂದ ಹುಟ್ಟಿದ ಈ ಪತ್ರಿಕೆಯು, ಪುನಃ [illegible] ಪ್ರಭುತ್ವವು [illegible] ಮಹಾ ಸಂತೋಷದ ಸಂಗತಿ. ನಿಮ್ಮ ಪತ್ರಿಕೆಯು, [illegible] ಉದ್ದೇಶವನ್ನು ಪೂರ್ಣಗೊಳಿಸುವುದರಲ್ಲಿ [illegible] ಸಂದೇಹವಿಲ್ಲವೆಂದು [illegible] ಬಯಸುತ್ತೇನೆ.

ಶ್ರೀ ತಿರುಮಲೆ ತಾತಾಚಾರ್ಯ ಶರ್ಮ

ಸಂಪಾದಕರು: 'ವಿಶ್ವಕರ್ನಾಟಕ', ಬೆಂಗಳೂರು

ತಾತಯ್ಯನವರ 'ಸಾಧ್ವಿ' ಪತ್ರಿಕೆಯನ್ನು ಪುನರುಜ್ಜೀವನಗೊಳಿಸುವ ತಮ್ಮ ಪ್ರಯತ್ನ [illegible] ಅಭಿನಂದನೀಯವಾದುದು. ಅದಕ್ಕೆ ನನ್ನ ಪೂರ್ಣ ಸಹಾನುಭೂತಿಯುಂಟು. ತಾತಯ್ಯನವರ ಹೆಸರನ್ನು [illegible] ನಾನು ಪತ್ರಿಕಾವೃತ್ತಿಯಲ್ಲಿ ತೊಡಗಿದ್ದೇನೆ. ಪೂರ್ಣ [illegible] ನನಗೆ ಅವರ ಹೆಸರೇ ತಕ್ಕ [illegible]. ಧೈರ್ಯವನ್ನೂ ಕೊಡುತ್ತಿರುವುದು 'ಸಾಧ್ವಿ' ಪತ್ರಿಕೆಯು ತಾತಯ್ಯನವರು ಹಚ್ಚಿದ ನಂದಾದೀವಿಗೆ. ಅದು ನಂದಿ ಹೋಗದಂತೆ ಮಾಡಲು ತಾವು ಮುಂದೆ ಬಂದಿದ್ದೀರಿ. ದೇವರು ತಮಗೆ ನೆರವಾಗಬೇಕು.

HER PET
"I Love nothin[illegible]etter"
ವನಿತಾ ಮೋದ
ಕುಶಲ ವಿದ್ಯಾಸಕ್ತರಾದ ಮಹಿಳೆಯರಿಗೆ [illegible] ಎಲ್ಲಾ [illegible] ಬಣ್ಣಗಳ [illegible] ಮತ್ತು ಅದಕ್ಕೆ ಸಂಬಂಧಿಸಿದ ಇತರ ಸಾಮಾನುಗಳೆಲ್ಲವೂ [illegible] ದೊರೆಯುತ್ತವೆ
ಎಂಪ್ರಾಯಿಡರೀ
ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು.

ವಂದನಾಸಾಗರರು.

ಶ್ರೀ ಎಸ್. ಸುಬ್ರಹ್ಮಣ್ಯಯ್ಯನವರ

[illegible]

ಶ್ರೀ ರಾಮಕೃಷ್ಣ ಶತಮಾನೋತ್ಸವ.

ಮಹಾಧ್ಯಕ್ಷರ ಸಂದೇಶ

[illegible]

ಓಂ ಶಾಂತಿಃ ಶಾಂತಿಃ ಶಾಂತಿಃ

ಶ್ರೀ ದಿವಾಕರ ರಂಗನಾಥರವರು

ಸಂಯುಕ್ತ ಕರ್ನಾಟಕ ದ ಸಂಪಾದಕರು

[illegible]

MESSAGE FROM Mr A Subrahmanya Iyer

Ltd Exc Commissioner

Let me in the first place convey my best wishes for the success of your enterprise financially and express the hope that within a short time the paper will become a Daily Newspapers in Indian languages may not appeal to English knowing people, but such people are after all a very small minority and papers in these languages are eagerly read by others and are the means for educating and awakening the masses in this vast country them as to form sound views Whatever applies to British India does not always apply to Indian States, and Mysore is one of the best administered, if not the best administered, State in India Of course I do not mean that no improvement is necessary or possible Newspapers are a power in any land I hope that you will use the power for the good of the people

Before concluding let me say something, as perhaps expected, about the venerable gentleman whose

ಧರ್ಮಪ್ರಕಾಶ ರಾವ್ ಬಹದ್ದೂರ್ ಡಿ. ಬನುಮಯ್ಯನವರ

ಮೈಸೂರಿನ ದಾನವೀರರು

I note that your paper will be a Nationalist Paper and hope that this will be borne in mind always and that Communalism and Parochialism will be avoided

Each paper, of course will have its own definite policy, but opportunity may be given for the expression of the views of those that differ

You are in an Indian State and have to reflect the views of the people thereof and also so guide memory is to be kept green by the publication of your paper. His long life to the very end was devoted to the service of his countrymen, and for over half a century he was a factor to be reckoned with in Mysore Domestic calamities which he had many did not sour his temper and divert him from the good work he was doing. His was a purposeful life and you have done the right thing in keeping his memory alive

I wish you success

ಶುಭ ಸಂದೇಶ.

ಮುಖಂಡರುಗಳಿಂದ

ಡಾ. ರಾಧಾಕೃಷ್ಣನ್ ರವರು,

ಆಂಧ್ರ ವಿಶ್ವವಿದ್ಯಾನಿಲಯದ ವೈಸ್ ಛಾನ್ಸಲರು, ವಾಲ್ಟೇರ್

ನಾನು ಮೈಸೂರಿನಲ್ಲಿದ್ದಾಗ್ಗೆ ಶ್ರೀ ವೆಂಕಟಕೃಷ್ಣಯ್ಯನವರನ್ನು ನೋಡಿದ್ದೇನೆ. ಅವರು ತಮ್ಮ ಕಾಲದಲ್ಲಿ ಪತ್ರಿಕೋದ್ಯಮದಲ್ಲಿ ಬಹಳ ಕೆಲಸ ಮಾಡಿರುವರು. ಅವರ ಸಾರ್ವಜನಿಕ ಜೀವನ ಮತ್ತು ಪತ್ರಿಕೋದ್ಯಮಗಳ ಜ್ಞಾಪಕಾರ್ಥವಾಗಿ ನೀವು ಕೈಗೊಂಡಿರುವ ಈ ಕಾರ್ಯವನ್ನು ಸಂತೋಷವಾಗಿ ನೋಡುವೆ. ನಾನು ಅದರ ಅಭಿವೃದ್ಧಿಯನ್ನೇ ಆಶಿಸುತ್ತೇನೆ.

ಶ್ರೀ ಸಿ. ವೈ. ಚಿಂತಾಮಣಿಯವರು,

'ಲೀಡರ್' ಪತ್ರಿಕಾ ಸಂಪಾದಕರು, ಅಲಹಾಬಾದ್

ವೃದ್ಧ ಪಿತಾಮಹರವರ ಜ್ಞಾಪಕಾರ್ಥವಾಗಿ, ಅವರ ಪತ್ರಿಕೆಯನ್ನು ಪುನಃ ಹೊರತರಲು ಯೋಚಿಸಿರುವ ತಮ್ಮ ಪ್ರಯತ್ನವು ಯಶಸ್ವಿಯಾಗಿ ನಡೆಯಲೆಂದು ಹಾರೈಸುತ್ತೇನೆ.

ಶ್ರೀ ಎನ್. ಸತ್ಯಮೂರ್ತಿಯವರ
ಮದರಾಸ್

ಶ್ರೀ ... ವೃದ್ಧ ಪಿತಾಮಹ ... ವೆಂಕಟಕೃಷ್ಣಯ್ಯನವರ ಜ್ಞಾಪಕಾರ್ಥವಾಗಿ ... ಎಂಬ ಪತ್ರಿಕೆ ... ಪ್ರಕಟಿಸುವಿರೆಂದು ... ನಾನು ... ಸಂತೋಷಪಡುತ್ತೇನೆ. ಅಂತಹ ... ಈ ಪತ್ರಿಕೆಯು ಪುನಃ ... ಪ್ರಾರಂಭವಾಗುತ್ತಿರುವುದು ಬಹಳ ಸಂತೋಷದ ಸಂಗತಿ. ... ಪತ್ರಿಕೆಯು ... ಉದ್ದೇಶವನ್ನು ಪೂರೈಸುವುದರಲ್ಲಿ ಶೀಘ್ರ ... ಯಶಸ್ಸನ್ನು ಬಯಸುತ್ತೇನೆ.

ಸರ್. ಎಂ. ವಿಶ್ವೇಶ್ವರಯ್ಯನವರು.

ಮೈಸೂರಿನ ಮಾಜಿ ದಿವಾನರು

ತಾವು ಪತ್ರಿಕೆಯನ್ನು ನಡೆಸಬೇಕೆಂದಿರುವ ಉದ್ದೇಶವು ನಿಜವಾಗಿಯೂ ಶ್ಲಾಘನೀಯವಾದುದು. ನಿಮ್ಮ ಕಾರ್ಯವು ಯಶಸ್ವಿಯಾಗಲೆಂದು ಹಾರೈಸುತ್ತೇನೆ.

ಶ್ರೀ ಪಿ. ಆರ್. ರಾಮಯ್ಯನವರು,

ತಾಯಿನಾಡು. ಸಂಪಾದಕರು, ಬೆಂಗಳೂರು

ವೃದ್ಧಪಿತಾಮಹ ಎಂ. ವೆಂಕಟಕೃಷ್ಣಯ್ಯನವರ ಸ್ಮರಣೆಯು ಅತಿ ಪವಿತ್ರವಾದುದು. ಅವರ ಸ್ಮರಣೆಯಲ್ಲಿ ನಾವು ಯಾವ ಕೆಲಸವನ್ನು ಕೈಕೊಳ್ಳಲಿ ಅದು ಈಶ್ವರ ಪ್ರೀತಿಯಾದುದು ಎಂಬುದರಲ್ಲಿ ಸಂದೇಹವಿಲ್ಲ. 'ಸಾಧ್ವಿ' ಪತ್ರಿಕೆಯು ಅವರಿಂದ ಸೃಷ್ಟಿಯಾಯಿತು. ಅವರು ಬದುಕಿರುವವರೆಗೆ ಅವರ ಪ್ರತಿಭೆಯ ನಿಮಿತ್ತವೂ ದೇಶಸೇವೆ ಮತ್ತು ಪರೋಪಕಾರಕ್ಕಾಗಿಯೇ ಅರ್ಪಿತವಾಯಿತು. ಸಾಧ್ವಿ ಪತ್ರಿಕೆಯು ಆ ಪರೋಪಕಾರ ಮಂತ್ರವನ್ನೇ ಸಾರ ಸಾರಕ್ಕೂ ಸಾರುತ್ತಿತ್ತು. ಪರೋಪಕಾರವೆಂಬ ಒಂದು ಬಳ್ಳಿಯಲ್ಲಿಯೇ ನಿಕಟ ರಾಜಕೀಯ ಸಾಮಾಜಿಕ, ಆರ್ಥಿಕ ಅಭಿವೃದ್ಧಿಯೂ ಅಡಗಿದೆ. ಯಾವನ ಸಾರ್ವಜನಿಕ ಜೀವನವು ಪರೋಪಕಾರ ತತ್ವದ ಆಧಾರದಲ್ಲಿ ಕಟ್ಟಲ್ಪಟ್ಟಿದೆಯೋ ಅವನ ಕಾರ್ಯಗಳು ಇತರರಿಗೆ ಮಾರ್ಗದರ್ಶಕವಾಗುವುವು. ತಾತಯ್ಯನವರ ಜೀವನವು ಇದಕ್ಕೆ ಉದಾಹರಣೆ.

ನಮ್ಮ ಸಂಸ್ಥಾನದಲ್ಲಿ ಸಾರ್ವಜನಿಕ ಜೀವನದ ವ್ಯಾಪನೆಯು ಹೆಚ್ಚುತ್ತಿದೆ. ಇಂತಹ ಸಮಯದಲ್ಲಿ ಕೇವಲ ಪರೋಪಕಾರದ ತತ್ವದ ಸಾರ್ವಜನಿಕ ಜೀವನವನ್ನೂ ವೈಯುಕ್ತಿಕ ಜೀವನವನ್ನೂ ಉತ್ತೇಜನಗೊಳಿಸುವ "ಸಾಧ್ವಿ" ಯು ಪುನರುಜ್ಜೀವಿಸುತ್ತಿರುವುದು ಅತ್ಯಂತ ಅಭಿನಂದನೀಯವಾದ ಸಂಗತಿ.

ತಮ್ಮ ಸಂಪಾದಕತ್ವದಲ್ಲಿ ಸಾಧ್ವಿ ಪತ್ರಿಕೆಯು ತನ್ನ ಪ್ರಾಚೀನ ವೈಭವವನ್ನು ಉಳಿಸಿಕೊಂಡು ಮುಂದಿನ ಪ್ರಗತಿ ವೈಭವವನ್ನೂ ಹೊಂದಲಿ ಎಂದು ಆಶಿಸುತ್ತೇನೆ.

ಶ್ರೀ ತಿರುಮಲೆ ತಾತಾಚಾರ್ಯ ಶರ್ಮ

ಸಂಪಾದಕರು 'ವಿಶ್ವಕರ್ನಾಟಕ", ಬೆಂಗಳೂರು

ತಾತಯ್ಯನವರ 'ಸಾಧ್ವಿ' ಪತ್ರಿಕೆಯು ಪುನರುಜ್ಜೀವನಗೊಳಿಸುವ ತಮ್ಮ ಪ್ರಯತ್ನ ... ಅಭಿನಂದನೀಯವಾದುದು. ... ಪೂರ್ಣ ಸಹಾನುಭೂತಿ ... ತಾತಯ್ಯನವರ ಹೆಸರನ್ನು ಸ್ಮರಣೀಯವಾದ ... ನಾನು ಪತ್ರಿಕಾ ... ತಿಳಿಯಲು ತೊಡಗಿದ್ದೇನೆ. ಪೂರ್ಣ ... ಅವರ ಹೆಸರೇ ತಕ್ಕ ... ದನ್ನೂ, ಧೈರ್ಯವನ್ನೂ ಕೊಡುತ್ತಿರುವುದು. 'ಸಾಧ್ವಿ' ಪತ್ರಿಕೆಯು ತಾತಯ್ಯನವರು ಹಚ್ಚಿದ ಸಂಜೀವಿನಿ ... ಹೋಗದಂತೆ ನೋಡಬೇಕು. ತಾವು ಮುಂದೆ ಬಂದಿದ್ದೀರಿ. ದೇವರು ತಮಗೆ ನೆರವಾಗಬೇಕು.

ಶ್ರೀ ಸಿ. ನರಸಿಂಹಯ್ಯನವರು

ಬಿ. ಎ., ಬಿ. ಎಲ್., ಅಡ್ವೊಕೇಟ್, ಮೈಸೂರು

ಕೀರ್ತಿಶೇಷರಾದ ವೃದ್ಧಪಿತಾಮಹ ವೆಂಕಟಕೃಷ್ಣಯ್ಯನವರ ಜ್ಞಾಪಕಾರ್ಥವಾಗಿ "ಸಾಧ್ವಿ" ವಾರ ಪತ್ರಿಕೆಯನ್ನು ಹೊರಡಿಸಲು ನಿಶ್ಚಯಿಸಿರುವುದು ಬಹಳ ಸ್ತೋತ್ರಾರ್ಹವಾದದ್ದು. ಮೈಸೂರು ಸಿಟಿಯ ವರ್ತಮಾನಗಳನ್ನು ದೀರ್ಘವಾಗಿ ಮುದ್ರಿಸಲು ಯಾವ ಪತ್ರಿಕೆಗಳಿಗೂ ಸಾಧ್ಯವಿಲ್ಲ. ಈಗ ನಮ್ಮ ರಂಗಯ್ಯನವರು ವಾರ ಪತ್ರಿಕೆಯನ್ನು ಹೊರಡಿಸಲು ಏರ್ಪಾಡು ಮಾಡಿ ಮೈಸೂರು ಸಿಟಿ ಮತ್ತು ಡಿಸ್ಟ್ರಿಕ್ಟಿನ ಗ್ರಾಮಾಂತರಗಳಲ್ಲಿನ ಜನಗಳ ಕುಂದು ಕೊರತೆಗಳನ್ನು ಹೊರಪಡಿಸಲು ಮತ್ತು ಜನ ಸಮುದಾಯಕ್ಕೆ ಪ್ರಯೋಜನಕರವಾದ ಸಲಹೆಗಳನ್ನು ಸೂಚಿಸಲು ಕೈಗೊಂಡಿರುವುದು ಬಹಳ ಶ್ಲಾಘನೀಯವು.

ಶ್ರೀ ವೆಂಕಟಕೃಷ್ಣಯ್ಯನವರಲ್ಲಿ ರಂಗಯ್ಯನವರು ಸೇವೆಯನ್ನು ಮಾಡಿ ಅವರ ಜ್ಞಾಪಕಾರ್ಥವಾಗಿ, ಅವರು ಹಿಂದೆ ನಡಿಸುತ್ತಿದ್ದ 'ಸಾಧ್ವಿ' ಎಂಬ ಹೆಸರಿನಿಂದಲೇ ಹೊರಡಿಸುವ ಪತ್ರಿಕೆಯು ಯಶಸ್ವಿಯಾಗಿ ನಡೆಯಲೆಂದು ಹಾರೈಸುತ್ತೇನೆ.

ಶ್ರೀ ಹೊಸಕೊಪ್ಪ ಕೃಷ್ಣರಾಯರವರು

'ಸಾಧ್ವಿ' ಎಂದರೆ ನಮ್ಮ ... ಗತ ಪಿತಾಮಹರ ಸ್ಮರಣೆಯು ಬರುತ್ತದೆ. ... ಪತ್ರಿಕೆಗಳೇ ಅವರ ... ಪತ್ರಾಲಾಪಗಳು ಪತ್ರಿಕಾ ಜೀವನದವರ ... ಆ ಧೈರ್ಯ ಸಾಹಸಗಳು ಈಗಿನ ಯಾವ ಪತ್ರಿಕೆಗಿದೆಯೋ ಬಹಳ ... ಹೇಳಬೇಕಾಗಿದೆ. ಈಗ ಅವರು ಇಹಲೋಕದಲ್ಲಿಲ್ಲದಿದ್ದರೂ ... ಆದೇ 'ಸಾಧ್ವಿ' ... ಬಹಳ ... ಜನರ ಬಲದಿಂದ ... ಅನಂದವಾಗಬಹುದು. ಈ ... ಅವರ ಶಕ್ತಿ ... ನಿಮ್ಮ ಪ್ರಯತ್ನವು ... ನಿಮಗೆ ... ಶಕ್ತಿಯನ್ನು ದೇವರು ... ಯಾವಾಗಲೂ ಪ್ರಜಾಸಮೂಹದ ಪಕ್ಷಪಾತ, ಪ್ರಜೆಗಳ ... ಆಗಿ ಹೋರಾಟ ಇದೇ ನಿಮ್ಮ ನೀತಿ.

ಚಿಂತಾಮಣಿಯವರು.

I Love nothing Better"

ವನಿತಾ ವಿನೋದ

... ಸದ್ಯಾಭಿರುಚಿಯಿಂದ ... ಎಲ್ಲಾ ... ಬಗ್ಗೆ ... ಮಾದರಿಯು ... ಮತ್ತು, ಅದಕ್ಕೆ ಸಂಬಂಧಿಸಿದ ಇತರ ಸಾಮಾನುಗಳೆಲ್ಲವೂ ಬಿಲ್ಲೆಯಾಗಿಯೂ ... ಬಳ್ಳಾಗಿಯೂ ದೊರೆಯುತ್ತವೆ.

ಎಂಬ್ರಾಯಿಡರಿ ಹೋಂ

ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು.

ದಂತಾಸಾಗರರು.

ಶ್ರೀ ಎನ್. ಸುಬ್ರಹ್ಮಣ್ಯಯ್ಯನವರಿಂದ.

ನಮ್ಮ ಪ್ರಜಾಸೇವೆಯಲ್ಲಿ ಪ್ರವೃತ್ತರಾದವರನ್ನು ಬಾರಿಬಾರಿಗೂ ಸ್ಮರಿಸುವ ಸುಯೋಗವು ಒದಗುತ್ತಿದ್ದು ವೃತ್ತ ಪತ್ರಗಳ ಪ್ರತಿನಿಧಿಗಳು ಇವರು ಶ್ರೀ ಬನುಮಯ್ಯನವರ ಈಗಿನ ಸ್ಥಿತಿಯನ್ನು [illegible] ಎಂದು [illegible] ಪತ್ರಿಕೆಗಳ ಕಣ್ಣನ್ನು [illegible] ಧನ್ಯನೆನ್ನು [illegible] ತು ನನಗಿಲ್ಲಿ ಎಲ್ಲರೂ [illegible] ಮಾದರಿಯ [illegible] ಪ್ರಪಂಚದಲ್ಲಿ [illegible] ಎಂದು ಹೇಳಲಾಗಿ ಎಂದ [illegible] ಕರ್ತವ್ಯ [illegible] ಸಂಸ್ಥ [illegible] ದೇಶವು [illegible] ಕಾರ್ಯ [illegible] ಕಾಲಿಗ [illegible] ಆನಂದ [illegible] ತನಗೆ [illegible] ನನ್ನು ಇಂದು [illegible] ನಿಷ್ಠುರ ವಾಗ [illegible]

[illegible] ಮುಂದಿರುವವರ ನಾವು [illegible] ದೂರ ನಿಂತಿದ್ದವು. [illegible] ಯಿಂದ ತರದು [illegible] ನನ್ನು ನೀನು ಸರಿಯಾದ [illegible] ತೊಡವಿಲ್ಲ ನನ್ನ [illegible] ಕ್ಕೆ ನೀನೇನು ಮಾಡಬಹುದು [illegible] ಮಾಡಲಿಲ್ಲ,' ಎಂದು ಹೇಳಿ, [illegible] ಒಬ್ಬರ ಆರೋಗ್ಯಭಾಗವನ್ನು [illegible] ಪ್ರಸ್ತಿಸಿದರು ಮಾತು [illegible] ತು ಸರಿಯಾಗಿ [illegible] ಆಶ್ರಯದಿಂದ ಆ ಕೀರ್ತಿಶೇಷರು [illegible] ಬಾಳನ್ನು ಪಡೆದಿದ್ದರೋ, ಅವರ ಪ್ರತಿ ಯಾಗಿ ಮತ್ತೂ [illegible] ಬಂದು ನಮ್ಮನ್ನು ಹೊರಮೂಡಿದರು [illegible] ತ್ತಿಲ್ಲ'

ಇಂದು ಮಾನವ ಕೋಟಿಯಲ್ಲಿ [illegible] ರಲ್ಲಿಯೂ ಸ್ವಾರ್ಥವನ್ನು [illegible] ಸರ್ವಾರ್ಥ ಚಿಂತನೆಯುಳ್ಳವರಷ್ಟು [illegible] ವೈಶ್ಯರಾಗಿಯೇ ಹುಟ್ಟಿ, [illegible] ಗಾಗಿಯೇ ಬಾಳಿದ ಆ ಮಹಿಮರ [illegible] ವನ್ನು [illegible] ಮೈಸೂರಿನಲ್ಲಿಯೇ ಒಬ್ಬ ರಾದರೂ ಮುಂದೆ ಬಂದರಲ್ಲವೇ? [illegible] ವೇ ಮನಸ್ಸಿಗೆ ಸ್ವಲ್ಪ ನೆಮ್ಮದಿ

ಸಾಧ್ವಿಯು ಸಾರ್ಥಕನಾಮವಾಗಿ ಅಂದಿನ ಜನಕನ, ಇಂದಿನ ಚಾಲಕನ [illegible] ಪ್ರದೀಪವನ್ನು ಮೈಸೂರಿನ ಮನೆ ಮನೆಯಲ್ಲೂ ಬೆಳಗಿಸಲಿ.

ಶ್ರೀ ರಾಮಕೃಷ್ಣ ಶತಮಾನೋತ್ಸವ.

ಮಹಾಧ್ವಕ್ಷರ ಸಂದೇಶ

ಜಗಜ್ಜೀವನದ ಆಕಾಶದಲ್ಲಿ ನವಯುಗದ ಅರುಣೋದಯವಾಗುತ್ತಿದೆ ಅದರ ಜ್ಯೋತಿರ್ಮಹಿಮೆಯಿಂದ ನಮ್ಮ ಹೃತ್ಕಮಲಗಳು ಅರಳುವ ಮಂಗಳ ಮುಹೂರ್ತವು ಬಳಿಸಾರುತ್ತಿದೆ

ತಿಳಿದೋ ತಿಳಿಯದೆಯೋ ಮಾನವರೆಲ್ಲರೂ ಗುರುದೇವರ ಸರ್ವಧರ್ಮಸಮನ್ವಯ ಸಂದೇಶದಿಂದಲೂ, ಆತನ ಕರ್ಮ, ಜ್ಞಾನ, ಭಕ್ತಿ ಮತ್ತು ಯೋಗಗಳ ಸಮ್ಯಕ್ ಭಾವದ ನಿರುಪಮವಾದ ಅನುಭೂತಿಯಿಂದಲೂ ಪ್ರೇರಿತರಾಗಿ ಮುಕ್ತಿಪಥದಲ್ಲಿ ಮುಂದುವರಿಯುತ್ತಿದ್ದಾರೆ ಸಕಲ ಜಲ ಸರ್ವದೇಶದಲ್ಲಿಯೂ ವಿಶ್ವಶಾಂತಿಯ ಮಹಾಸಾಮ್ರಾಜ್ಯ ಸಂಸ್ಥಾಪನೆಯಾಗುವ ದಿನವು ಬಹುದೂರವಾಗಿಲ್ಲ ಗುರುದೇವನ ಪ್ರೇಮಪೂರ್ಣವಾದ ಆಹ್ವಾನ[illegible] ಸರ್ವ ರಾಷ್ಟ್ರದವರೂ ಸರ್ವ ಜನಾಂಗದವರೂ ಸಂಪ್ರೀತರಾಗಿ ಪಥಿಕರಾಗಿರುವಂತೆ [illegible] ಎಂಬ ಗುರುವಾಣಿಯನ್ನು [illegible] ದ್ವೇಷವಿಲ್ಲದೆ, ಸ್ವಾರ್ಥವಿಲ್ಲದ, ಉಚ್ಚ ಕಂಠದಿಂದಲೂ [illegible] ಜಯಕೋಶ ಮಾಡುವ [illegible] ದಿನವು ಬಹು ದೂರವಾಗಿಲ್ಲ ಆ ಶುಭಮುಹೂರ್ತದಲ್ಲಿ ಗುರುದೇವನ ಕೀರ್ತಿಸೂರ್ಯನು ಗಗನ ಮಧ್ಯದಲ್ಲಿ ವಿರಾಜಿಸುತ್ತಾನೆ ಲೋಕದ ಕತ್ತಲೆಯನ್ನು ಕತ್ತರಿಸುತ್ತಾನೆ

ಗುರುದೇವನ ನವಯುಗ ಧ್ವಜಪತಾಕೆ [illegible] ಮಾನವ ಪುತ್ರ [illegible] ಧರ್ಮಬಂಧುಗಳಾಗಿ ನೆರೆದು ನಿಂತು [illegible] ಆ ಜಯಗಾನವು ದಿಗ್ದಿಗಂತ ವ್ಯಾಪಿಯಾಗುತ್ತದೆ

ಈ ಧನ್ಯಮಹಾದಿನದಲ್ಲಿ ಸೃಷ್ಟಿಯ ಉನ್ನತ ಪುತ್ರರೆಲ್ಲರೂ ಗುರುದೇವನ ಅವತಾರದ ಅರ್ಥವನ್ನು ತಿಳಿದು ಪುನೀತರಾಗಲಿ ಇದೇ ನನ್ನ ಹೃತ್ಪೂರ್ವಕವಾದ ಪ್ರಾರ್ಥನೆ

ಓಂ ಶಾಂತಿಃ ಶಾಂತಿಃ ಶಾಂತಿಃ

ಶ್ರೀ ದಿವಾಕರ ರಂಗನಾಥರವರು
ಸಂಯುಕ್ತ ಕರ್ನಾಟಕದ ಸಂಪಾದಕರು

ನೀವು ಪ್ರಾರಂಭಿಸಿದ ಉದ್ಯೋಗವು ಸ್ತುತ್ಯವಿದೆ ಶ್ರೀ ದಿವಂಗತ ವೆಂಕಟಕೃಷ್ಣಯ್ಯನವರಂಥ ಜೀವಗಳು ವಿರಳ ಅವರ ಹೆಸರು ನೋಡಿದೊಡನೆ ಅವರ ಪ್ರೇಮಮೂರ್ತಿ ಅವರ ಸರಳತನ, ಅವರ ಸ್ಪಷ್ಟ ಒಡ [illegible], ಅವರ ನಿಸ್ಸೀಮ ದೇಶಾಭಿಮಾನ ಇವು ಕಣ್ಣು ಮುಂದೆ ಕಟ್ಟುತ್ತವೆ ಅವರ ಸ್ಮರಣಾರ್ಥವಾಗಿ ನೀವು "ಸಾಧ್ವಿ"ಯನ್ನು ಪುನಃ ಪ್ರಾರಂಭಿಸುವುದು ಉಚಿತವು

ದಿವಂಗತ ವೆಂಕಟಕೃಷ್ಣಯ್ಯನವರ ನಿರ್ಭಿಡ ವೃತ್ತಿ, ನಿರ್ಭಯ ಟೀಕೆ, ಇವು "ಸಾಧ್ವಿ" ಯ ಮುಖಾಂತರ ಪುನಃ ಜನ್ಮತಾಳಲಿ ಎಂದು ನಾನು ಬಯಸುತ್ತೇನೆ

MESSAGE FROM
Mr A Subrahmanya Iyer
Rtd Exc Commissioner.

Let me in the first place convey my best wishes for the success of your enterprise financially and express the hope that within a short time the paper will become a Daily Newspapers in Indian languages may not appeal to English knowing people, but such people are after all a very small minority and papers in these languages are eagerly read by others and are the means for educating and awakening the masses in this vast country

them as to form sound views. Whatever applies to British India does not always apply to Indian States; and Mysore is one of the best administered, if not the best-administered, State in India Of course I do not mean that no improvement is necessary or possible Newspapers are a power in any land. I hope that you will use the power for the good of the people.

Before concluding let me say something, as perhaps expected, about the venerable gentleman whose

ಧರ್ಮಪ್ರಕಾಶ ರಾವ್ ಬಹದ್ದೂರ್ ಡಿ. ಬನುಮಯ್ಯನವರ.

ಮೈಸೂರಿನ ದಾನವೀರರು.

I note that your paper will be a Nationalist Paper and hope that this will be borne in mind always and that Communalism and Parochialism will be avoided

Each paper, of course will have its own definite policy, but opportunity may be given for the expression of the views of those that differ

You are in an Indian State and have to reflect the views of the people thereof and also so guide

memory is to be kept green by the publication of your paper. His long life till the very end was devoted to the service of his country men, and for over half century he was a factor to be reckoned with in Mysore. Domestic calamities which he had many did not sour his temper and divert him from the good work he was doing. His was a purposeful life and you have done the right thing in keeping his memory alive

I wish you success

ಚಿತ್ರ ಉಪ್ಪು

ಶುಭ ಸಂದೇಶ.

ಮುಖಂಡರುಗಳಿಂದ

ಎಸ್. ರಾಧಾಕೃಷ್ಣನ್ ರವರು,

ಆಂಧ್ರ ವಿಶ್ವವಿದ್ಯಾನಿಲಯದ ವೈಸ್ ಛಾನ್ಸಲರು, ವಾಲ್ಟೇರ್

ನಾನು ಮೈಸೂರಿನಲ್ಲಿದ್ದಾಗ್ಗೆ ಶ್ರೀ ವೆಂಕಟಕೃಷ್ಣಯ್ಯನವರನ್ನು ನೋಡಿದ್ದೇನೆ. ಅವರು ತಮ್ಮ ಕಾಲದಲ್ಲಿ ಪತ್ರಿಕೋದ್ಯಮಕ್ಕಾಗಿ ಬಹಳ ಕೆಲಸ ಮಾಡಿರುವರು. ಅವರ ಸಾರ್ವಜನಿಕ ಜೀವನ ಮತ್ತು ಪತ್ರಿಕೋದ್ಯಮಗಳ ಜ್ಞಾಪಕಾರ್ಥವಾಗಿ ನೀವು ಕೈಗೊಂಡಿರುವ ಈ ಕಾರ್ಯವು ಸಂತೋಷಪ್ರದವಾಗಿದೆ. ನಾನು ಅವರ ಅಭಿವೃದ್ಧಿಯನ್ನು ಬಯಸುತ್ತೇನೆ.

ಶ್ರೀ ಸಿ. ವೈ. ಚಿಂತಾಮಣಿಯವರು.

ಲೀಡರ್ ಪತ್ರಿಕಾ ಸಂಪಾದಕರು, ಅಲಹಾಬಾದ್.

ವೃದ್ಧಪಿತಾಮಹರವರ ಜ್ಞಾಪಕಾರ್ಥವಾಗಿ, ಅವರ ಪತ್ರಿಕೆಯನ್ನು ಪುನಃ ಪ್ರಾರಂಭಿಸಬೇಕೆಂಬುದಾಗಿ ತಮ್ಮ ಪ್ರಯತ್ನವು ಯಶಸ್ವಿಯಾಗಿ ನಡೆಯಲೆಂದು ಹಾರೈಸುತ್ತೇನೆ.

ಶ್ರೀ ಎಸ್. ಸತ್ಯಮೂರ್ತಿಯವರು

ಮದ್ರಾಸು, ಹೊಸ ದಿಹಲಿ

ಮಿಸ್ತರ್ ಮೈಸೂರು ವೃದ್ಧಪಿತಾಮಹ ಎಂ. ವೆಂಕಟಕೃಷ್ಣಯ್ಯನವರ ಜ್ಞಾಪಕಾರ್ಥವಾಗಿ 'ಸಾಧ್ವಿ' ಎಂಬ ಕನ್ನಡ ವಾರ ಪತ್ರಿಕೆಯನ್ನು ಪ್ರಕಟಿಸುವಿರೆಂದು ತಿಳಿದು ನಾನು ತುಂಬಾ ಸಂತೋಷಪಡುತ್ತೇನೆ. ಅಂತಹ ಪ್ರಸಿದ್ಧ ವ್ಯಕ್ತಿಯಿಂದ ಸ್ಥಾಪಿಸಲ್ಪಟ್ಟ ಈ ಪತ್ರಿಕೆಯು ಪುನರುಜ್ಜೀವನಕ್ಕೆ ಪ್ರಭುತ್ವವು ಒಪ್ಪಿದೆಯೆಂಬುದು ಬಹಳ ಸಂತೋಷದ ಸಂಗತಿ. ನಿಮ್ಮ ಪತ್ರಿಕೆಯು, ಅವರ ಸ್ಥಾಪಕರ ಹೆಸರನ್ನು ಪಡೆದ ಉದ್ದೇಶವನ್ನು ಪೂರ್ಣಗೊಳಿಸುವದರಲ್ಲಿ ಏನೂ ಸಂದೇಹವಿಲ್ಲವೆಂದು ನಂಬಿ ಪತ್ರಿಕೆಯ ಏಳಿಗೆಯನ್ನು ಬಯಸುತ್ತೇನೆ.

ಸರ್. ಎಂ. ವಿಶ್ವೇಶ್ವರಯ್ಯನವರು.

ಮೈಸೂರಿನ ಮಾಜಿ ದಿವಾನರು

ತಾವು ಪತ್ರಿಕೆಯನ್ನು ನಡೆಸಬೇಕೆಂದಿರುವ ಉದ್ದೇಶವು ನಿಜವಾಗಿಯೂ ಶ್ಲಾಘನೀಯವಾದುದು. ನಿಮ್ಮ ಕಾರ್ಯವು ಯಶಸ್ವಿಯಾಗಲೆಂದು ಹಾರೈಸುತ್ತೇನೆ.

ಶ್ರೀ ಪಿ. ಆರ್. ರಾಮಯ್ಯನವರು,

ತಾಯಿನಾಡು, ಸಂಪಾದಕರು, ಬೆಂಗಳೂರು

ವೃದ್ಧಪಿತಾಮಹ ಎಂ. ವೆಂಕಟಕೃಷ್ಣಯ್ಯನವರ ಸ್ಮರಣೆಯು ಅತಿ ಪವಿತ್ರವಾದುದು. ಅವರ ಸ್ಮರಣೆಯಲ್ಲಿ ನಾವು ಯಾವ ಕೆಲಸವನ್ನು ಕೈಕೊಂಡರೂ ಅದು ಈಶ್ವರ ಪ್ರೀತಿಯಾದುದು ಎಂಬುದರಲ್ಲಿ ಸಂದೇಹವಿಲ್ಲ. ಸಾಧ್ವಿ ಪತ್ರಿಕೆಯು ಅವರಿಂದ ಸೃಷ್ಟಿಯಾಯಿತು. ಅವರು ಬದುಕಿರುವವರೆಗೆ ಅವರ ಪ್ರತಿಯೊಂದು ನಿಮಿಷವೂ ದೇಶಸೇವೆ ಮತ್ತು ಪರೋಪಕಾರಗಳಿಗಾಗಿಯೇ ವಿನಿಯೋಗವಾಯಿತು. 'ಸಾಧ್ವಿ' ಪತ್ರಿಕೆಯು ಆ ಪರೋಪಕಾರ ಮಂತ್ರವನ್ನೇ ಪಾಠ ಮಾಡುತ್ತಿತ್ತು. ಪರೋಪಕಾರವೆಂಬ ಒಂದು ಕಬ್ಬಿಣದ ಕಡ್ಡಿಯೇ ನಿಕಟ ರಾಜಕೀಯ, ಸಾಮಾಜಿಕ, ಆರ್ಥಿಕ ಅಭಿವೃದ್ಧಿಯೂ ಆದೀತು. ಯಾವನ ಸಾರ್ವಜನಿಕ ಜೀವನವು ಪರೋಪಕಾರ ತತ್ವದ ಆಧಾರದಲ್ಲಿನ ಮೇಲೆ ಕಟ್ಟಲ್ಪಟ್ಟಿದೆಯೋ ಅವನ ಕಾರ್ಯಗಳು ಇತರರಿಗೆ ಮಾರ್ಗದರ್ಶಕವಾಗುವುವು. ತಾತಯ್ಯನವರ ಜೀವನವು ಇದಕ್ಕೆ ಉದಾಹರಣೆ.

ನಮ್ಮ ಸಂಸ್ಥಾನದಲ್ಲಿ ಸಾರ್ವಜನಿಕ ಜೀವನದ ಸ್ಥಾಪನೆಯು ಹೆಚ್ಚುತ್ತಿರುವ ಇಂತಹ ಪರಿಸ್ಥಿತಿಯಲ್ಲಿ ಕೇವಲ ಪರೋಪಕಾರ ತತ್ವದ ಸಾರ್ವಜನಿಕ ಜೀವನವನ್ನೂ ವೈಯಕ್ತಿಕ ಜೀವನವನ್ನೂ ಉತ್ತೇಜನಗೊಳಿಸುವ "ಸಾಧ್ವಿ"ಯ ಪುನರ್ಜನ್ಮವು ಅತ್ಯಂತ ಅಭಿನಂದನೀಯವಾದ ಸಂಗತಿ.

ತಮ್ಮ ಸಂಪಾದಕತ್ವದಲ್ಲಿ 'ಸಾಧ್ವಿ' ಪತ್ರಿಕೆಯು ತನ್ನ ಪ್ರಾಚೀನ ವೈಭವವನ್ನು ಉಳಿಸಿಕೊಂಡು ಮುಂದಿನ ಪ್ರಗತಿ ಪ್ರಚಾರವನ್ನೂ ಹೊಂದಲಿ ಎಂದು ಬಯಸುತ್ತೇನೆ.

ಶ್ರೀ ತಿರುಮಲೆ ತಾತಾಚಾರ್ಯ ಶರ್ಮ

ಸಂಪಾದಕರು, 'ವಿಶ್ವಕರ್ನಾಟಕ", ಬೆಂಗಳೂರು

ತಾತಯ್ಯನವರ 'ಸಾಧ್ವಿ' ಪತ್ರಿಕೆಯನ್ನು ಪುನರುಜ್ಜೀವನಗೊಳಿಸುವ ತಮ್ಮ ಪ್ರಯತ್ನವು ಅಭಿನಂದನೀಯವಾದುದು. ಅದಕ್ಕೆ ನನ್ನ ಪೂರ್ಣ ಸಹಾನುಭೂತಿಯುಂಟು. ತಾತಯ್ಯನವರ ಹೆಸರನ್ನು ಸ್ಮರಿಸಿದಾಗ ನಾನು ಪತ್ರಿಕಾ ವೃತ್ತಿಯಲ್ಲಿ ತೊಡಗಿದ್ದೇನೆ. ಪೂರ್ಣ ಮರ್ಯಾದೆಯಾದ ನನಗೆ ಅವರ ಹೆಸರೇ ತಕ್ಕಷ್ಟಿಗೆ ಧೈರ್ಯವನ್ನೂ ಸ್ಫೂರ್ತಿಯನ್ನೂ ಕೊಡುತ್ತಿರುವುದು. 'ಸಾಧ್ವಿ' ಪತ್ರಿಕೆಯು ತಾತಯ್ಯನವರು ಹಚ್ಚಿದ ನಂದಾದೀವಿಗೆ. ಅದು ನಂದಿ ಹೋಗದಂತೆ ಮಾಡಲು ತಾವು ಮುಂದೆ ಬಂದಿದ್ದೀರಿ. ದೇವರು ತಮಗೆ ನೆರವಾಗಬೇಕು.

ಶ್ರೀ ಸಿ. ನರಸಿಂಹಯ್ಯನವರು

ಬಿ. ಎ., ಬಿ. ಎಲ್., ಅಡ್ವೋಕೇಟ್, ಮೈಸೂರು.

ಕೀರ್ತಿಶೇಷರಾದ ವೃದ್ಧಪಿತಾಮಹ ವೆಂಕಟಕೃಷ್ಣಯ್ಯನವರ ಜ್ಞಾಪಕಾರ್ಥವಾಗಿ "ಸಾಧ್ವಿ" ವಾರ ಪತ್ರಿಕೆಯನ್ನು ಹೊರಡಿಸಲು ನಿಶ್ಚಯಿಸಿರುವುದು ಬಹಳ ಸ್ತೋತ್ರಾರ್ಹವಾದದ್ದು. ಮೈಸೂರು ಸಿಟಿಯ ವರ್ತಮಾನಗಳನ್ನು ದೀರ್ಘವಾಗಿ ಮುದ್ರಿಸಲು ಯಾವ ಪತ್ರಿಕೆಗಳಿಗೂ ಸಾಧ್ಯವಿಲ್ಲ. ಈಗ ನಮ್ಮ ರಂಗಯ್ಯನವರು ವಾರ ಪತ್ರಿಕೆಯನ್ನು ಹೊರಡಿಸಲು ಏರ್ಪಾಡು ಮಾಡಿ ಮೈಸೂರು ಸಿಟಿ ಮತ್ತು ಡಿಸ್ಟ್ರಿಕ್ಟಿನ ಗ್ರಾಮಾಂತರಗಳಲ್ಲಿನ ಜನಗಳ ಕುಂದು ಕೊರತೆಗಳನ್ನು ಹೊರಪಡಿಸಲು ಮತ್ತು ಜನ ಸಮುದಾಯಕ್ಕೆ ಪ್ರಯೋಜನಕರವಾದ ಸಂಗತಿಗಳನ್ನು ಸೂಚಿಸಲು ಕೈಗೊಂಡಿರುವುದು ಬಹಳ ಸಾಧುವಾದದ್ದು.

ಲೇಟ್ ವೆಂಕಟಕೃಷ್ಣಯ್ಯನವರಲ್ಲಿ ರಂಗಯ್ಯನವರು ಸೇವೆಯನ್ನು ಮಾಡಿ ಅವರ ಜ್ಞಾಪಕಾರ್ಥವಾಗಿ, ಅವರು ಹಿಂದೆ ನಡೆಸುತ್ತಿದ್ದ 'ಸಾಧ್ವಿ' ಎಂಬ ಹೆಸರಿನಿಂದಲೇ ಹೊರಡಿಸುವ ಪತ್ರಿಕೆಯು ಯಶಸ್ವಿಯಾಗಿ ನಡೆಯಲೆಂದು ಹಾರೈಸುತ್ತೇನೆ.

ಶ್ರೀ ಹೊಸಕೊಪ್ಪ ಕೃಷ್ಣರಾಯರವರು.

"ಸಾಧ್ವಿ" ಎಂದರೆ ನಮ್ಮ [illegible] ಗತ ಪಿತಾಮಹರ ಸ್ಮರಣೆಯು [illegible] ಬರುತ್ತೆ. ವೃತ್ತ ಪತ್ರಿಕೆಗಳೇ ಅವರ ಹಸ[illegible]ಲ್ಲಿ ಸವಿ[illegible] ತ್ರಾಣವನ್ನಗಲು ಪತ್ರಿಕಾ ರ[illegible]ಯನೆಂದರೆ ಅವರನ್ನೇ ನೋಡಿ.

ಆ ಧೈರ್ಯ ಸಾ[illegible]ಸಗಳು ಈಗಿನ ಯಾವ ವೃತ್ತ ಪತ್ರಿಕೆಗ[illegible]ಗಿವೆಯೋ ಬರೆ[illegible] ಯೋಚಿಸಿ ಮಡು[illegible] ಹೇಳಬೇಕಾಗಿದೆ. ಈಗ ಅವರು ಇಹ[illegible]ಲೋಕದಲ್ಲಿಲ್ಲದಿದ್ದರೂ [illegible]ಗಿ ಅವೇ "ಸಾಧ್ವಿ

ಯು [illegible]ಗಿದರೆ ಒದುಗರಿಗೆ ಆನಂದವಾಗ[illegible]ರದು. ಈ ಭಾಗದಲ್ಲಿ ಅವರ ಶಿಷ್ಯ[illegible]ಕ್ಕೆ ಸೇರಿದ ನಿಮ್ಮ ಪ್ರಯತ್ನ[illegible]ವಾದದ್ದು. ನಿಮಗೆ ಅದೇ ಧೈ[illegible] ಶಕ್ತಿಯನ್ನು ದೇವರು ಒದ[illegible] ಯೋಗಾಗಲೂ ಪ್ರಜಾನುರಾಗ, [illegible]ನ್ಯಾತ, ಪ್ರಜೆಗಳ ಆಜನ್ಮಸಿದ್ಧ[illegible]ಗಾಗಿ ಕಾದಾಟ ಇವೇ ನಿಮ್ಮ [illegible]ರಲಿ

ಶ್ರೀ ಚಿಂತಾಮಣಿಯವರು.

HER PET

"I Love nothing Better"

ವನಿತಾ ವಿನೋದ

ಕುಶಲ ವಿದ್ಯಾಸಿಂಗಾರದ ಹವಣಿಕೆಯಾಗಿ ಉಪಯೋಗಿಸುವ ಎಲ್ಲಾ ಬಗೆ ಬಣ್ಣಗಳ ನವೀನ ಮಾದರಿಯ ಕಸೂತಿ ದಾರಗಳು ಮತ್ತು ಅದಕ್ಕೆ ಸಂಬಂಧಿಸಿದ ಇತರ ಸಾಮಾನುಗಳೆಲ್ಲವೂ ಚಿಲ್ಲರೆಯಾಗಿಯೂ ಒಟ್ಟಾಗಿಯೂ ದೊರೆಯ ಸ್ಥಳವೆ

ಎಂಬ್ರಾಯಿಡರಿ ಹೋಂ

ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು.

ದಯಾಸಾಗರರು.

ಶ್ರೀ॥ ಎಸ್. ಸುಬ್ರಹ್ಮಣ್ಯಯ್ಯನವರಿಂದ.

ನನಗೆ ಪ್ರಜಾಸೇವೆಯಲ್ಲಿ ವೃದ್ಧಪಿತಾಮಹರನ್ನು ಬಾರಿಬಾರಿಗೂ ಸಂದರ್ಶಿಸುವ ಸುಯೋಗವು ಲಭಿಸುತ್ತಿದ್ದಿತು. ವೃತ್ತಪತ್ರಿಕೆಗಳ ಪ್ರತಿನಿಧಿಗಳು ಕೆಲವರು ಶ್ರೀ ಮರಿಮಲ್ಲಪ್ಪನವರ ಈಗಿನ ಹೈಸ್ಕೂಲಿನಲ್ಲಿ ಒಂದು ಸಭೆ ಸೇರಿದ್ದೆವು. ಎಲ್ಲ ಬಗೆಯಿಂದ ಕನ್ನಡ ಪತ್ರಿಕೆಗಳ ಕಷ್ಟವನ್ನು ಕೇಳುವ ಶಿಷ್ಟ ಶ್ರೀಯುತರು ದಟ್ಟನ ಎದ್ದು ನಿಂತು 'ನಡೆಯಿರಿ ಎಲ್ಲರೂ ಒಟ್ಟಿಗೆ ನಮ್ಮ ದಿವಾನರವರ ಬಳಿಗೆ ಹೋಗೋಣ. ನಿಮ್ಮ ರಾಜ್ಯದಲ್ಲಿ ಇಂತಹ ಕಷ್ಟಗಳಿವೆ ಎಂದು ಹೇಳೋಣ' ಎಂದು ಉದ್ಘೋಷಿಸಿಬಿಟ್ಟರು. ಕರ್ತವ್ಯತತ್ಪರನಾದ ಆ ಮಹನೀಯನಿಗೆ ತನ್ನ ವಯಸ್ಸಾಗಲೀ, ಉಪಜೀವನಕ್ಕೆ ನಡೆಸುವ ಸಂಸ್ಥಾನಗಳಾಗಲೀ ಅಡ್ಡಿ ಎಂದು ತೋರಲಿಲ್ಲ. ಅಂತಹ ಉತ್ಸಾಹ! ದೇಹವು ಗಳಿತವಾದರೂ ಮನಸ್ಸಿನ ಆ ಶೌರ್ಯ ಇಂದಿನ ಸಮಾಜ ಸೇವಕರಿಗೆ ಪಾಠವಲ್ಲವೆ? ಆಸ್ಪತ್ರೆಯಲ್ಲಿದ್ದ ಒಬ್ಬ ದೊಡ್ಡ ಸಂಸಾರಿಯಾದ ಕೂಲಿಗೆ ಚಿಕಿತ್ಸೆ ನಡೆಯುತ್ತಿದ್ದಾಗ ಬಾಗಿಲಿನಲ್ಲಿ ಬಂದಿತೆಂದು ಅವರು ಆನಂದಭಾಷ್ಪವನ್ನು ಸುರಿಸಿದ್ದನ್ನು ನಾವು ನೋಡಿರುವೆವು. ಬಾಗಿಲಿಗೆ ಒಳ್ಳೆಯದಾದರೆ ತನಗೆ ಒಳ್ಳೆಯದಾದಂತೆ ಭಾವಿಸುವ ಮಹಾತ್ಮರ ಸುಖದುಃಖಗಳನ್ನು ಇಂದು ಮೈಸೂರು ನಮಗೆ ತೋರಿಸಬಲ್ಲದೇ?

ಆಸ್ಪತ್ರೆಯಲ್ಲಿ ಮಲಗಿರುವಾಗ ನಾಲ್ಕಾರು ತಿಂಗಳಿಂದ ನಾವು ನೋಡುವುದಕ್ಕೆ ಹೋಗಿ ದೂರ ನಿಂತಿದ್ದೆವು. ಕೈಸನ್ನೆಯಿಂದ ಕರೆದು ಅನಾಥಾಲಯದ ಕೆಲಸವನ್ನು ನೀನು ಸರಿಯಾದ ರೀತಿಯಲ್ಲಿ ನಾಗರಿಕರಿಗೆ ತಿಳಿಸಲಿಲ್ಲ. ನನ್ನ ಆತ್ಮಶಾಂತಿಗೆ ನೀನೇನು ಮಾಡಬಹುದೋ ಅದನ್ನು ಮಾಡಲಿಲ್ಲ, ಎಂದು ಹೇಳಿ, ಧೀರರೊಬ್ಬರ ಆರೋಗ್ಯಲಾಭವನ್ನು ಪ್ರಾರ್ಥಿಸಿದರು. ಮಾತು ಸ್ಪಷ್ಟವಾಗಿದ್ದಿತು. ಸರಿಯಾಗಿ ಕೇಳಿಸಲಿಲ್ಲ. ಅವರ ಆಶ್ರಯದಿಂದ ಆ ಕೀರ್ತಿಶೇಷರ ದರ್ಶನಲಾಭವನ್ನು ಪಡೆದಿದ್ದೆವು. ಎಲ್ಲರ ಪ್ರತಿಯಾಗಿ ಮತ್ತೊಬ್ಬರು ಎಂದು ನನ್ನನ್ನು ಹೊರನೂಕಿದರು. ಮಾತಿಗೆ ಅವಕಾಶವಿಲ್ಲ."

ಇಂದು ಮಾನವ ಕೋಟಿಯಲ್ಲಿ ಸ್ವತಂತ್ರರೆನ್ನಿಸಿಕೊಳ್ಳುವವರೂ ಸ್ವಾರ್ಥವನ್ನು ಬಿಟ್ಟು ಪರರ ಚಿಂತನೆಯಲ್ಲಿರುವವರು ಎಷ್ಟು ಮಂದಿ? ಮೈಸೂರಿನಾಗಿಯೇ ಹುಟ್ಟಿ, ಮೈಸೂರಿನಾಗಿಯೇ ಬಾಳಿದ ಆ ಮಹಿಮರ ಹೆಸರನ್ನುಳಿಸಲು ಮೈಸೂರಿನಲ್ಲಿಯೇ ಒಬ್ಬರಾದರೂ ಮುಂದೆ ಬಂದರಲ್ಲವೇ? ಇದೊಂದೇ ಮನಸ್ಸಿಗೆ ಸ್ವಲ್ಪ ನೆಮ್ಮದಿ.

ಸಾಧ್ವಿಯು ಸಾರ್ಥಕನಾಮವುಳ್ಳದ್ದಾಗಿ ಅಂದಿನ ಜನಕನ, ಇಂದಿನ ಬಾಲಕನ ಕೀರ್ತಿ ಪ್ರದೀಪವನ್ನು ಮೈಸೂರಿನ ಮನೆ ಮನೆಯಲ್ಲೂ ಬೆಳಗಿಸಲಿ.

[illegible]

ಶ್ರೀ ರಾಮಕೃಷ್ಣ ಶತಮಾನೋತ್ಸವ.

ಮಹಾಧ್ಯಕ್ಷರ ಸಂದೇಶ

ಜಗಜ್ಜೀವನದ ಆಕಾಶದಲ್ಲಿ ನವಯುಗದ ಅರುಣೋದಯವಾಗುತ್ತಿದೆ. ಅವರ ಜ್ಯೋತಿರ್ಮಹಿಮೆಯಿಂದ ನನ್ನ ಹೃತ್ಕಮಲಗಳು ಅರಳುವ ಮಂಗಳ ಮುಹೂರ್ತವು ಬಳಸಾರುತ್ತಿದೆ.

ಶ್ರೀಮೋ ಶೀಲಯುವೆಯೋ ಮಾನವರೆಲ್ಲರೂ ಗುರುದೇವನ ಸಚ್ಚರಿತ್ರ ಸಂದೇಶದಿಂದಲೂ, ಆತನ ಕರ್ತೃತ್ವ, ಭಕ್ತಿ ಮತ್ತು ಯೋಗಗಳ ಸಮ್ಯಕ್ ಭಾವದ ನಿರುಪಮವಾದ ಅನುಭೂತಿಯಿಂದಲೂ ಪ್ರೇರಿತರಾಗಿ ಮುಕ್ತಿಪಥದಲ್ಲಿ ಮುಂದುವರಿಯುತ್ತಿದ್ದಾರೆ. ಸ್ವಲ್ಪ ಕಾಲ ಸರ್ವದೇಶಗಳಲ್ಲಿಯೂ ವಿಶ್ವಶಾಂತಿಯು ಪರಮಸಾಮ್ರಾಜ್ಯ ಸಂಸ್ಥಾಪನೆಯಾಗುವ ದಿನವು ಬಹುದೂರವಾಗಿಲ್ಲ. ಗುರುದೇವನ ಪ್ರೇಮಪೂರ್ಣವಾದ ವ್ಯಾಖ್ಯಾನವಾಣಿಯನ್ನು ಕೇಳಿದ ಸರ್ವ ರಾಷ್ಟ್ರದವರೂ ಸರ್ವ ಜನಾಂಗದವರೂ ಸಂಘಟಿತರಾಗಿ ಪಥಗಾಮಿಗಳಂತೆ ಮುಂದುವರಿಯುತ್ತಿದ್ದಾರೆ. ಎಲ್ಲಿ ಗುರುವಾಣಿಯನ್ನು ಜಾತಿಯಿಲ್ಲದೆ, ದ್ವೇಷವಿಲ್ಲದೆ ಸ್ವರಭಾವವಿಲ್ಲದೆ, ಏಕ ಕಂಠದಿಂದಲೂ ಏಕ ಮನಸ್ಸಿನಿಂದಲೂ ಜಯಘೋಷ ಮಾಡುವ ಆ ಪುಣ್ಯ ದಿನವು ಬಹು ದೂರವಾಗಿಲ್ಲ. ಆ ಶುಭಮುಹೂರ್ತದಲ್ಲಿ ಗುರುದೇವನ ದಿವ್ಯಕೀರ್ತಿಸೂರ್ಯನು ಗಗನ ಮಧ್ಯದಲ್ಲಿ ಪ್ರಕಾಶಿಸುತ್ತಾನೆ. ಲೋಕದ ಕತ್ತಲೆಯನ್ನು ಕಳೆಯುತ್ತಾನೆ.

ಗುರುದೇವನ ನವವರ್ಷ ಜನ್ಮಶತಾಬ್ದಿಯ ಪುಣ್ಯ ಜ್ಯೋತಿಯಲ್ಲಿ ಮಾನವ ಪುತ್ರ ಪುತ್ರಿಯರೆಲ್ಲರೂ ಒಟ್ಟುಗೂಡಿ ನಿಂತು ಪ್ರಾರ್ಥಿಸುವ ಆ ಜಯಗಾನವು ದಿಗ್ದಿಗಂತ ವ್ಯಾಪಿಯಾಗುತ್ತಿದೆ.

ಈ ಧನ್ಯಮುಹೂರ್ತದಲ್ಲಿ ಸೃಷ್ಟಿಯ ಸಮಸ್ತ ಪುತ್ರರೆಲ್ಲರೂ ಗುರುದೇವನ ಅವತಾರದ ಅರ್ಥವನ್ನು ತಿಳಿದು ಪುನೀತರಾಗಲಿ. ಇದೇ ನನ್ನ ಹೃತ್ಪೂರ್ವಕವಾದ ಪ್ರಾರ್ಥನೆ.

ಓಂ ಶಾಂತಿಃ ಶಾಂತಿಃ ಶಾಂತಿಃ

ಶ್ರೀ॥ ದಿವಾಕರ ರಂಗನಾಥರವರು

'ಸಂಯುಕ್ತ ಕರ್ಣಾಟಕ'ದ ಸಂಪಾದಕರು

ನೀವು ಪ್ರಾರಂಭಿಸಿದ ಉದ್ಯೋಗವು ಸ್ತುತ್ಯವಿದೆ. ಶ್ರೀ ದಿವಂಗತ ವೆಂಕಟಕೃಷ್ಣಯ್ಯನವರಂಥ ಜೀವಗಳು ವಿರಳ. ಅವರ ಹೆಸರು ನೋಡಿದೊಡನೆ ಅವರ ಪ್ರೇಮಮೂರ್ತಿ, ಅವರ ಸತತತನ, ಅವರ ಸ್ಪಷ್ಟವಾದ ನುಡಿಗಳು, ಅವರ ನಿಸ್ಸೀಮ ಪರಾಭಿಮಾನ ಇವು ಕಣ್ಣ ಮುಂದೆ ಕಟ್ಟುತ್ತವೆ. ಅವರ ಸ್ಮರಣಾರ್ಥವಾಗಿ ನೀವು 'ಸಾಧ್ವಿ'ಯನ್ನು ಪುನಃ ಪ್ರಾರಂಭಿಸುವುದು ಉಚಿತವು.

ದಿವಂಗತ ವೆಂಕಟಕೃಷ್ಣಯ್ಯನವರ ನಿರ್ಭಿಡ ವೃತ್ತಿ, ನಿರ್ಭಯ ಟೀಕೆ, ಇವು 'ಸಾಧ್ವಿ'ಯ ಮುಖಾಂತರ ಪುನಃ ಪ್ರಸ್ತಾವಿಸಲಿ' ಎಂದು ನಾನು ಬಯಸುತ್ತೇನೆ.

MESSAGE FROM
Mr A Subrahmanya Iyer.
Rtd Exc Commissioner

Let me in the first place convey my best wishes for the success of your enterprise financially and express the hope that within a short time the paper will become a Daily. Newspapers in Indian languages may not appeal to English knowing people, but such people are after all a very small minority and papers in these languages are eagerly read by others and are the means for educating and awakening the masses in this vast country.

I note that your paper will be a Nationalist Paper and hope that this will be borne in mind always and that Communalism and Parochialism will be avoided.

Each paper, of course will have its own definite policy, but opportunity may be given for the expression of the views of those that differ.

You are in an Indian State and have to reflect the views of the people thereof and also so guide them as to form sound views. Whatever applies to British India does not always apply to Indian States, and Mysore is one of the best-administered, if not the best-administered, State in India. Of course I do not mean that no improvement is necessary or possible. Newspapers are a power in any land. I hope that you will use the power for the good of the people.

Before concluding let me say something, as perhaps expected, about the venerable gentleman whose memory is to be kept green by the publication of your paper. His long life till the very end was devoted to the service of his country men, and for over half a century he was a factor to be reckoned with in Mysore. Domestic calamities which he had many did not sour his temper and divert him from the good work he was doing. His was a purposeful life and you have done the right thing in keeping his memory alive.

I wish you success.

ಧರ್ಮಪ್ರಕಾಶ ರಾವ್ ಬಹಾದ್ದೂರ್ ಡಿ. ಬನುಮಯ್ಯನವರ.

ಮೈಸೂರಿನ ದಾನವೀರರು

ಸಾಧ್ವಿ

೨೪-೨-೩೬ ನೇ ಸೋಮವಾರ

ಅಳಿಲು ಸೇವೆ.

ನಾವು ಇಂದಿನಿಂದ ಮೈಸೂರಿನ ವೃದ್ಧಪಿತಾಮಹರಾದ ಶ್ರೀಮಾನ್ ಎಂ ವೆಂಕಟಕೃಷ್ಣಯ್ಯನವರ ಜ್ಞಾಪಕಾರ್ಥವಾಗಿ 'ಸಾಧ್ವಿ' ಎಂಬ ಪತ್ರಿಕೆಯನ್ನು ಹೊರಡಿಸಲು ಉದ್ಯುಕ್ತರಾಗಿದ್ದೇವೆ ತಾತಯ್ಯನವರು ಸಾಧ್ವೀ ಮತ್ತು ಇತರ ಹಲವು ಪತ್ರಿಕೆಗಳನ್ನು ಬಹು ವರ್ಷಗಳಕಾಲ ನಡೆಸಿದರು. ಆ ಸಂದರ್ಭದಲ್ಲಿ ನಾವು ಕೂಡ ಅವರಲ್ಲಿ ಕೆಲಕಾಲ ಶಿಷ್ಯವೃತ್ತಿಯನ್ನು ಮಾಡುತ್ತಿದ್ದೆವು ಅವರ ಕೃತಜ್ಞತಾರೂಪವಾಗಿ ಈ ಸಣ್ಣ ಸೇವೆಯನ್ನು ಕೈಗೊಂಡಿರುವೆವು

ತಾತಯ್ಯನವರನ್ನು ಅರಿಯದವರೇ ನಮ್ಮಲ್ಲಿ ಇಲ್ಲ ನಮ್ಮ ತಾತಯ್ಯನವರಿಗೆ ವೃದ್ಧಪಿತಾಮಹ, ದಯಾಸಾಗರ, ಪತ್ರಿಕೆಗಳ ಜನಕ, ಕರ್ನಾಟಕ ಭೀಷ್ಮಾಚಾರ್ಯ, ದೀನಾಭಿರಕ್ಷಕ, ಎಂಬೀ ಜನಪ್ರಿಯವಾದ ನಾನಾ ಅಂಕಿತಗಳುಂಟು ಪತ್ರಿಕೋದ್ಯಮದಲ್ಲಿಯೇ ಅವರಿಗೆ ಹೆಚ್ಚು ಪ್ರೇಮ ಸಾರ್ವಜನಿಕರ ಹಿತಚಿಂತನೆಯ ಮಹಾಸಾಧನವು ಪತ್ರಿಕೆಗಳಲ್ಲೇ ಬಹಳವಾಗಿ ನೆಲಸಿರುತ್ತವೆಂದೂ, ಪತ್ರಿಕೋದ್ಯಮವು ಅತ್ಯಂತ ಪವಿತ್ರತಮವಾದುದೆಂದೂ ಅದಕ್ಕಿಂತಲೂ ಉತ್ತಮವಾದ ಈಶ್ವರಾರಾಧನೆಯ ಮಾರ್ಗವು ಇಲ್ಲವೆಂದೂ ಅವರ ಅಭಿಮತವಾಗಿತ್ತು ಈ ಉದ್ದಿಶ್ಯ ಸಾಧನೆಗಾಗಿಯೇ ತಾತಯ್ಯನವರು 'ಸಾಧ್ವಿ' ಪತ್ರಿಕೆಯನ್ನು ಅನೇಕ ವರ್ಷಗಳ ಕಾಲ ನಡೆಸುತ್ತಿದ್ದರು ಸಾರ್ವಜನಿಕ ಹಿತದೃಷ್ಟಿಯಿಂದ, ಯಾವ ವಿಧವಾದ ಪಕ್ಷಪಾತಕ್ಕೂ ಒಳಗಾಗದೆ ನಿರ್ಭಯವಾಗಿ ರಾಜಕೀಯ ಸಾಮಾಜಿಕ, ನೈತಿಕ ಮತ್ತು ಧಾರ್ಮಿಕ ವಿಷಯಗಳನ್ನು ಚರ್ಚಿಸುತ್ತಿದ್ದ 'ಸಾಧ್ವಿ'ಯನ್ನು ನಮ್ಮ ಇಡೀ ಕರ್ನಾಟಕದಲ್ಲಿ ಯಾರು ತಾನೇ ಅರಿಯರು!

ಅವರ ಶಿಷ್ಯಕೋಟಿಯಲ್ಲಿ 'ತಾತ' ನಿಗೂ "ಸಾಧ್ವಿ" ಗೂ ಭೇದವೇ ಇಲ್ಲ ಹಾದಿಕಡೆ ಬುಳಿದಿರುವ ವರೆಗೂ ಜನ

ಪ್ರಾರ್ಥನೆ.

ನೇಸರುದಿಸುವ ಮುನ್ನ
ಅಲಸಿಕೆಯನೀಡಾಡಿ
ಹಾಸಿಂದಲರುಗಳ
ನಾರಿಪುತೆ ನೋಡು
ಪರಮ ಗುರುವೇ ನಿನ್ನ
ಚರಣ ಸಾನ್ನಿಧ್ಯದಲಿ
ಕಿರಿಯ ಕಾಣ್ಕೆಯ
ನಿವನು ಸಲ್ಲಿಸಿರುವ !
ಉದಯ ಗೀತೆಯ ನುಲಿದು
ಪಕ್ಷಿಗಳು ಹಾಡಿದವು
ಸದಯ ! ನಿನ್ನಯ
ಮಹಿಮೆ ದೆಸೆಯ ಬೀಗಿಡುವ
ಹೊಂಬಿಸಿಲ ಸೋಲಿಗಿ
ತಂದವಮಾಡುತ ನಿಂದು
ಇಂಪೆನಿಸಿ ಬೀಸು
ನವರಲ ಪರಿಮಳದಿ
ಹೊಂಬಿಸಿಲು ಕಾದು
ಬಿಸಿಲಾಯಿತಮ ಹೇಗೆ
ಜೆಂಬತ್ತುತಿಹುದಿಳೆ
ಯ ನಾವರಿಸುತಿಂದು
ಬಿಸಿಗಾಳಿ ವೀಸುತಿದೆ
ಕುಸುಮವಮೋ ಮಾಸುತಿದೆ
ಮನದ ಶಾಂತಿಯು
ಇಳೆಯ ನಾಲುತಿಹುದ
ಇಳಿಹೊತ್ತು ಸನಿಹವೆಲ್ಲ
ಹಗಲು ಹೂವುಗಳುದುರಿ
ಬಾಡಿದುದ ಹೂವು
ಗಳಗಡೆಗೂಡುತಲಿಹವು
ಕೆಳದ ಹಿಮಸೋನೆಯಲಿ
ಬಿಸಿಗಾಳಿ ಸಾರಿಹುದು
ಓ ಗುರುವೆಯುರಿ ಯೂರ
ಲಿನ್ನನ್ನು ನರನೋ !

ಶ್ರೀ ಪರಮೇಶ್ವರ

ತಾ ಸೇವೆ, ಪತ್ರಿಕಾವೃತ್ತಿ ಮತ್ತು ಅವರ ಸ್ವಾತಂತ್ರ್ಯವಾದೀ ಅವರ ಮೂಲಮಂತ್ರಗಳಾಗಿದ್ದವು ಸ್ವಾರ್ಥತ್ಯಾಗ, ಪರಹಿತ ಚಿಂತನೆ, ತಾಳ್ಮೆ, ಸತ್ಯವ್ರತ ಇವು ಅವರಲ್ಲಿ ಮೂರ್ತೀಭವಿಸಿದ್ದವು

ಈಗಲೂ ನಾವು ಅವರ ಉದಾತ್ತ ಧ್ಯೇಯಗಳನ್ನೇ ಆದರ್ಶವಾಗಿಟ್ಟುಕೊಂಡು, ಸಂಕುಚಿತವಾದ ಕೋಮುವಾರು ಭಾವನೆಯನ್ನು ದೂರಮಾಡಿ, ರಾಷ್ಟ್ರೀಯ ಪ್ರಗತಿಗೆ ಕಾರಣವಾದ ಜಗತ್ತಿನ ಕಲ್ಯಾಣವನ್ನು ಬಯಸಲು ಪ್ರಯತ್ನಿಸುವೆವು

ವೃದ್ಧಪಿತಾಮಹರು ಅವರ ಪಾರ್ಥಿವ ಶರೀರವನ್ನು ಬಿಟ್ಟು ನಮ್ಮಿಂದ ದೂರವಾದ ಮೇಲೆ ಅವರ ಸ್ಮರಣಾರ್ಥವಾಗಿ ಏನ್ಕಕೊ ಕೆಲಸಗಳನ್ನು ನಡೆಸುವ ಸನ್ನಿವೇಶಗಳುಂಟಾದರೂ, 'ಅಳಿಲು ಭಕ್ತಿ ಮಳಲು ಸೇವೆ' ಎಂಬಂತೆ ಅವರಿಗೆ ಪ್ರಿಯತಮವಾದ ಈ ಕಾರ್ಯಕ್ಕೆ ನಾವು ಕೈ ಹಾಕುತ್ತೇವೆ ಈ ಕಾರ್ಯದ ಯಶಸ್ಸು ಯಶಃಕೀರ್ತಿಗಳು ಮಹಾ ಜನರನ್ನೇ ಸೇರಿವೆ ಆದುದರಿಂದ ವೃದ್ಧಪಿತಾಮಹರ ಅನುಯಾಯಿಗಳೂ, ಅಭಿಮಾನಿಗಳೂ ಶಿಷ್ಯಕೋಟಿಯೂ ಮತ್ತು ವಾಚಕವೃಂದವೂ ಸಾದರ ಪ್ರೋತ್ಸಾಹವನ್ನು ಕೊಡಬೇಕೆಂದು ಕೋರುತ್ತೇವೆ

SIR M. VISWESVARAYA.

YOUR AIM TO PUBLISH A PAPER IS CERTAINLY COMMENDABLE AND I WISH YOU SUCCESS, -

M. Visweswaraya

Messages.

Dr Sir Radha Krishnan
Vice Chancellor Andhra University

I knew Mr Venkatakrishnayya for some time when I was at Mysore, and he did a good deal for Journalism in Mysore, in his time It is a pleasure to know that in memory of his public spirit and journalistic work you are starting this venture I wish it every success

Prof A R Wadia,
(Cantab),

I wish you every success in your new venture hoping that your journal will always maintain the very highest traditions of journalistic responsibility May it lead to better communal understanding and make for peace and ordered progress in our State!

Pandit Taranath

Your efforts to bring 'Sadhvi' back again to life, are laudable' Further, I cannot think of a better way of honouring the memory of the Grand Old Man of Mysore than the one you intend to open I wish you success

Dr James H. Cousins,
Madanapalli.

I can express the hope that in the paper you will carry out the journalistic Ideals of your *alma mater* and its founder, Dr Annie Besant Truth, Purity, Idealism, Service

Dr N S. Hardiker

I am glad to note that the Grand Old Man of Mysore has left behind him a few stalwart lieutenants to continue the good work that he was doing The very fact that "Sadhvi" is being republished in order to perpetuate the memory of the great man, Venkatakrishnayya proves that his work is destined to be continued in future also Who can then say that Venkatakrishnayya is dead?

"Sadhvi" during its life time has done immense service to the State of Mysore in particular and to Karnatak in general. I hope that under the Editorship of my friend Mr Agaram Rangayya, 'Sadhvi will not only prosper, but will also be a guide to the people of Karnatak.

ಮಹಿಳೆಯರ ಕಾಣಿಕೆ.

'ಸಾಧ್ವಿ' ಪತ್ರಿಕಾ ಸಂಪಾದಕರ ಸಾ॥ ಕ್ಕೆ ಸೀತಮ್ಮನ ವಿಜ್ಞಾಪನೆಗಳು:—

ಪ್ರಿಯ!

ಮೈಸೂರಿನ ವೃದ್ಧ ಪಿತಾಮಹರಾಗಿ ಸ್ಸು ಕೀರ್ತಿಶೇಷರಾದ ಶ್ರೀಯುತ ಎಂ. ವೆಂಕಟಕೃಷ್ಣಯ್ಯನವರ ಜ್ಞಾಪಕಾರ್ಥವಾ ಗಿ ಅವರಿಂದಲೇ ಸ್ಥಾಪಿಸಲ್ಪಡುತ್ತಿದ್ದ 'ಸಾಧ್ವಿ' ವಾರ ಪತ್ರಿಕೆಯ ಪುನರು ಜ್ಜೀವನ ಕಾರ್ಯವನ್ನು ತಾವು ಕೈಗೊಂಡಿರುವುದನ್ನು ತಿಳಿದು ತುಂಬಾ ಸಂತೋಷ ವಾಯಿತು.

ವೃದ್ಧ ಪಿತಾಮಹ ಎನ್ನುವುದಕ್ಕಿಂ ತಲೂ 'ತಾತಯ್ಯ' ಎಂಬ ಹೆಸರೇ ಹೆ ಚ್ಚು ವಾಡಿಕೆಯಾಗಿತ್ತು. ರಾಜಕೀಯ, ಸಾ ಮಾಜಿಕ, ಧಾರ್ಮಿಕ ಮೊದಲಾದ ಎಲ್ಲಾ ವಿಷಯಗಳಲ್ಲಿಯೂ ಇವರ ನಡೆ, ನುಡಿ ಗಳಿಂದ ಇವರು 'ತಾತಯ್ಯ' ಎಂಬ ಹೆಸ ರಿನ ಅನ್ವರ್ಥತೆಯನ್ನು ಪೂರ್ಣಗೊಳಿಸು ತ್ತಿದ್ದರು.

ಯಾವುದೊಂದು ಸಾರ್ವಜನಿಕ ಸಂ ಸ್ಥೆಯಲ್ಲಿಯೂ ಹೆಚ್ಚು ಕಡಿಮೆ ಈ ತಾ ತನ ಹೆಸರಿಲ್ಲದೆ ಇರುತ್ತಿರಲಿಲ್ಲ. ನವರಿ ಗಳಲ್ಲಿ ಈಗಲೂ ತಾತಯ್ಯನ ಹೆಸರ ನ್ನು ನವರುಗಳಿಂದ ದೂರ ಮಾಡಿಲ್ಲ.

ಅವರಿಗೆ ವೃತ್ತ ಪತ್ರಿಕೋದ್ಯಮದಲ್ಲಿ ಬಹಳ ಆಸಕ್ತಿ. ಪತ್ರಿಕಾ ಮುಖೇನ ಪ್ರಜಾ ಸೇವೆಯನ್ನು ಮಾಡಿ, ತನ್ಮೂಲಕ ದೇಶ ಸೇವೆಯನ್ನು ಮಾಡಬೇಕೆಂ ಬುದೇ ಅವರ ಮೂಲ ಮಂತ್ರವಾಗಿತ್ತು.

ಅವರಿಂದ ವಿದ್ಯೆ ಕಲಿಯುವವರು, ಅ ವರ ಆಶ್ರಯ ಹೊಂದಿದವರು, ಅವರ ಸಹಾ ಯವನ್ನು ಪಡೆಯುವವರು, ನಮ್ಮಲ್ಲಿ ಎಷ್ಟೋ ಜನ. ನಮ್ಮ ದೇಶದ ಸ್ತ್ರೀಯರ ಏಳಿಗೆಗಾಗಿ ಅವರು ಮಾಡಿರುವ ಉಪಕಾರವು ಅಪಾ ರವಾಗಿದೆ.

ಇಂತಹ ಪುಣ್ಯಾತ್ಮನ ನಾಮ ಸ್ಮರ ಣೆಗೆ ಈ ಕಾರ್ಯಕ್ಕಿಂತಲೂ ಉತ್ತಮವಾ ದ ಕಾರ್ಯವು ಬೇರೊಂದಿಲ್ಲ. ಆದುದರಿಂದ ತಮಗೆ ವಿಶೇಷವಾದ ಬಗೆಯಲ್ಲಿ ನಮ್ಮ ಮಹಿಳೆಯರಿಗೆ ಅವಶ್ಯಕವಾಗಿ ಬೇಕಾದ ನೈತಿಕ, ಆರ್ಥಿಕ ಮತ್ತು ಸಾಮಾಜಿಕ ವಿ ಷಯಗಳನ್ನು ಬರೆದು ಕಳುಹಿಸಬೇಕೆಂದು ಉದ್ಯುಕ್ತಳಾಗಿದ್ದೇನೆ.

ತಾವು ಆದರದಿಂದ ಇಂತಹ ಲೇಖ ನಗಳನ್ನು ಸೂಕ್ತವಾದ ರೀತಿಯಲ್ಲಿ ಪ್ರಕ ಟಿಸುತ್ತಾ ಬರಬೇಕೆಂದೂ, ನಮ್ಮ ಮಹಿಳೆ ಯರಿಗಾಗಿಯೇ ಸ್ವಲ್ಪ ಸ್ಥಳವನ್ನು ಮೀಸ ಲಾಗಿಟ್ಟಿರಬೇಕೆಂದೂ ಕೋರುತ್ತೇನೆ.

ಈ ಮೂಲಕವಾಗಿಯಾದರೂ ತಾತ ಯ್ಯನಿಗೆ, ನನ್ನ ಚಿಕ್ಕ ಕಾಣಿಕೆಯನ್ನರ್ಪಿ ಸಲು ಆಗಾಗ್ಗೆ ಅವಕಾಶವೀಯುವಿರೆಂದು ನಂಬಿರುವ,

ತಮ್ಮ ಹಿತೈಷಿ,
ಸೀತಮ್ಮ.

ಕರ್ಣಾಟಕ ಭೀಷ್ಮಾಚಾರ್ಯರು.

(ಕುಮಾರಿ ಪದ್ಮಾವತಿಯವರಿಂದ)

ಯಾವ ಮಹಾಶಯನು ತನ್ನ ಸರ್ವ ಸ್ವವನ್ನೂ ಪರಹಿತಕ್ಕಾಗಿ ನೀರಿನಂತೆ ವೆಚ್ಚ ಮಾಡಿ ಮಹಾತ್ಮ ಗಾಂಧಿಯವರ ಕಥನ ದಂತೆ ದರಿದ್ರ ನಾರಾಯಣನಾದನೋ ಮತ್ತು ಈಗಲೂ ಯಾವನ ಹೆಸರಿನಲ್ಲಿ ಅನೇಕ ಅನಾಥರು ಸನಾಥರೆಂದು ಹೇಳಿ ಕೊಳ್ಳಲು ಗರ್ವ ಪಡುತ್ತಾರೋ ಅಂಥಹ ನಮ್ಮ ವೃದ್ಧ ಪಿತಾಮಹನ ಮನೋಹರ ತ್ಯಾ ಗವನ್ನು ಪ್ರಪಂಚದ ಇತಿಹಾಸದಲ್ಲಿ ಸ್ವ ರ್ಣಾಕ್ಷರಗಳಿಂದ ಬರೆದಿಟ್ಟರೂ ಸಾಲದು.

ಸಾತ್ವಿಕವಾದ ಅವರ ಸ್ವಲ್ಪ ಕಾಲದ ತಿಮ್ಮತಮಯಮವಾದ ಸತ್ಸಂಗದಿಂದಲೇ ನನ್ನ ಹೃದಯವು ದೇವಮಾನವರ ಪ್ರತಿಭಕ್ತಿ ಯಿಂದ ತುಂಬಿ ತುಳುಕಿತು. ಅವರು ನಮ್ಮ ಕರ್ಣಾಟಕ ಪ್ರಾಂತ್ಯಕ್ಕೆ ಪ್ರಾಣಸ್ವ ರೂಪರು. ಭಾರತಾಂಬೆಯ ಅಮೂಲ್ಯರತ್ನ ರು. 'ವಸುಧೈವಕುಟುಂಬಕಂ' ಎಂಬ ವಾಕ್ಯವನ್ನು ಸಾರ್ಥಕಗೊಳಿಸಲಿಕ್ಕೆ ವೀರ ಸೇವೆಯ ವ್ರತವನ್ನು ಕೈಗೊಂಡಿದ್ದರು. ಅವರ ಧವಳ ಕೀರ್ತಿಯು ಸೀತಾದೇವಿಯ ಅಗ್ನಿಪರೀಕ್ಷೆಯಂತೆ ಹೊಳಪಿಗೆ ಬಂತು. ದೊಡ್ಡ ವೃಕ್ಷವು ಅನೇಕ ಪಕ್ಷಿಗಳಿಗೆ ಆ ಶ್ರಯವನ್ನೂ ದಾರಿಗರಿಗೆ ನೆರಳನ್ನೂ ಕೊಡು ತ್ತಾ ತಾನು ಹೇಗೆ ಬಿಸಿಲು ಛಳಿ ಮಳೆ ಯನ್ನು ನಿಂತರಲ್ಲೂ ಸಹಿಸುತ್ತದೋ ತದ್ರೀತಿಯಲ್ಲಿ ಅವರು ನಮ್ಮ ಅನಾ ಥದೀನ ದುಃಖಿಯರಿಗೆ ಆಧಾರವಾಗಿದ್ದರು. ಮಹಾ ಪುರುಷರು ಜನ್ಮವೆತ್ತುವುದೂ ಜೀವಿಸುವುದೂ ಬೇರೆಯವರಿಗಾಗಿಯೇ. ತಾತಯ್ಯನವರ 90 ವಯಸ್ಸಿನ ಜೀವನವ ನ್ನು ಬರೆದರೆ ಇಡೀ ಮೈಸೂರು ದೇಶದ 90 ವರುಷದ ಇತಿಹಾಸವನ್ನು ಬರೆದಂತಾ ಗುವುದೆಂದು ಹೇಳುವುದರಲ್ಲಿ ಸಂದೇಹ ವಿಲ್ಲ.

ತಾತಯ್ಯನವರಂತಹ ಪುತ್ರ ರತ್ನ ವನ್ನು ಪಡೆದ ಕರ್ಣಾಟಕ ಮಾತೆ ಎಷ್ಟು ಧನ್ಯಳು!

ಅವರ ಧೈರ್ಯ, ಸ್ಥೈರ್ಯ ಮತ್ತು ವಿವೇಕಗಳನ್ನು ನೋಡುವಾಗ ಅವರನ್ನು ಯಾವ ಪದವಿಗೆ ಏರಿಸಬೇಕೆಂದು ಗೊತ್ತಾ ಗುವುದಿಲ್ಲ. ಅವರು ಮಹರ್ಷಿಯರಲ್ಲವೆಂದ ರಿತಿದ್ದೇನೆ. ಯಾರು ಕೀರ್ತಿ ಕಾಂಕ್ಷಿಗ ಳೋ ಅವರಿಗೆ ಕೀರ್ತಿಯು ಲಭಿ ಸಲಾರದು. ಆದರೆ ಯಾವನು ಗೌರವದ ಕಡೆ ಓರೆಗಣ್ಣಿನಿಂದ ಕೂಡ ನೋಡುವು ದಿಲ್ಲವೋ ಅವನನ್ನು ಕೀರ್ತಿಯು ಛಾಯೆ ಯಂತೆ ಹಿಂಬಾಲಿಸುವಳು. ವೃದ್ಧ ಪಿತಾ ಮಹರ ಸಮುದ್ರದಂತೆ ಗಂಭೀರ, ಹಿಮಾ ಚಲದಂತೆ ಉಚ್ಚ, ಭಾಗೀರಥಿಯಂತೆ ಪಾ ವನ ಮತ್ತು ಆಕಾಶದಂತ ವಿಸ್ತಾರವಾದ ಅಂತಃಕರಣದ ಮುಂದೆ ನತಮಸ್ತಕಳಾಗಿ, ಕರೆಯಲ್ಪಡದೆ ಇದ್ದರೂ ಕೀರ್ತಿಯು ಕಿಂಕ ರಿಯಂತೆ ಅವರನ್ನು ಅನುಸರಿಸುವಳು.

ಇಡೀ ಮೈಸೂರೇ ನೀರವ ಗಾಯನ ದಿಂದ ಅವರ ದಿವ್ಯ ಗುಣಗಳನ್ನು ಕೊಂ ಡಾಡುತ್ತಿದೆ. ಹಣದಲ್ಲಿ ಅವರನ್ನು ಮೀರಿ ಸುವ ಕುಬೇರರೂ ವಿದ್ಯಾಪಾಂಡಿತ್ಯದಲ್ಲಿ ಉದ್ದ ಉದ್ದ ಡಿಗ್ರಿಗಳನ್ನು ಪಡೆದವರೂ

ಶ್ರೀ ಕಮಲಾದೇವಿಯವರ ಸಂದೇಶ

ಪತ್ರಿಕಾ ಪ್ರಪಂಚದಲ್ಲಿ "ಸಾಧ್ವಿ" ಯು ಮತ್ತೊಮ್ಮೆ ಪ್ರವೇಶಿಸುತ್ತಿದೆ ಎಂದು ಕೇಳಿ ಬಹಳ ಸಂತೋಷಪಡು ತ್ತೇನೆ. ವೃದ್ಧ ಪಿತಾಮಹ ಶ್ರೀಮಾನ್ ಎಂ. ವೆಂಕಟಕೃಷ್ಣಯ್ಯನವರ ಸ್ಮಾರಕಾ ರ್ಥವಾಗಿ ಇದು ಹೊರಡುವುದು ಮತ್ತೂ ಸಂತೋಷಕರವಾದ ವಿಷಯ. ಆ ಸವಿ ತ್ಯಾತ್ಮರ ಅಮೋಘವಾದ ಸೇವೆಗಳು ಸರ್ವ ಜನವಿದಿತವಾಗಿವೆ. ಇಂತಹ ಸುಸಮಯ ದಲ್ಲಿ ಪುನರುಜ್ಜೀವಿತವಾಗುವ ಪತ್ರಿಕೆಯು ದೀರ್ಘವೂ ಉಪಯುಕ್ತವೂ ಆಗಿ ಬಾಳ ಬೇಕು. ಅದು ಯಶಸ್ವಿಯಾಗಿ ನಡೆಯ ಲೆಂದು ಹಾರೈಸುತ್ತೇನೆ.

ಶ್ರೀ ರಾಮೇಶ್ವರಿ ನೆಹರೂರವರು.

"ಸಾಧ್ವಿ"ಯು ಯಶಸ್ವಿಯಾಗಿ ನಡೆಯಲೆಂದು ಹಾರೈಸುತ್ತೇನೆ. ಯಾವ ಮಹನೀಯರ ಪುಣ್ಯ ಸ್ಮರಣಾರ್ಥವಾಗಿ ಈ ಪತ್ರಿಕೆಯು ಹೊರಡುವುದೋ ಅದಕ್ಕೆ ಅನುರೂಪವಾದ ಉದಾತ್ತವಾದ ಭಾವನೆ ಗಳನ್ನೂ ಸತ್ಯವಾದ ಅಭಿಪ್ರಾಯಗಳನ್ನೂ ಹರಡುವುದಕ್ಕೆ ನಿಮ್ಮ ಪತ್ರಿಕೆಯು ಅನು ವಾಗಲಿ. ಅದು ದೀರ್ಘಕಾಲ ಉಪಯು ಕ್ತವಾಗಿ ಬಾಳಲಿ.

ಮೈಸೂರು ಪ್ರಾಂತ್ಯದಲ್ಲಿ ಹೇರಳವಾಗಿರು ವರು. ಆದರೆ ಅವರೆಲ್ಲರಿಗಿಂತಲೂ ಉತ್ತ ಮವಾದ ಸ್ಥಾನವನ್ನು ತಾತಯ್ಯನವರು ಹೊಂದಿರುವಾಗ ಈ ಪ್ರಪಂಚದಲ್ಲಿ ಹಣ, ವಿದ್ಯೆಯೇ ಮೇಲೆಂದು ಕಾಣುವುದಿಲ್ಲ. ಈ ನಶ್ವರವಾದ ಜಗತ್ತಿನಲ್ಲಿ ತ್ಯಾಗವೊಂದೇ ಮೇಲೆಂದು ಕಂಡುಬರುವುದು. ತ್ಯಾಗ ವಾದರೋ ತಾತಯ್ಯನವರಲ್ಲಿ ತುಂಬಿತುಳು ಕುತ್ತಿತ್ತು. ಅವರು ಹಣವನ್ನು ಹುಲ್ಲಿ ಗಿಂತಲೂ ಕಡೆಯಾಗಿ ಕಾಣುತ್ತಿದ್ದರು.

ನನ್ನ ಹೃದಯದಲ್ಲಿರುವ ಭಾವನೆಗ ಳನ್ನೆಲ್ಲಾ ಬರೆದರೆ ಮಹಾಭಾರತ ಬರೆದಂ ತಾಗುವುದು. ಅವರ ಗುಣಸಮುದಾಯ ಗಳು ಆಗಲೂ ತೀರಲಿಕ್ಕಿಲ್ಲ. ಆದುದರಿಂದ ಹೆಚ್ಚು ಬರೆಯದೆ ಮೌನ ಸಾಧಿಸುವುದೇ ಒಳ್ಳೆಯದು. ಇವನ್ನೆಲ್ಲಾ ಭಕ್ತಿಪುಷ್ಪಾಂ ಜಲಿಯೆಂದು ಸ್ವೀಕರಿಸೋಣವಾಗಲಿ. ಸುಧಾ ಮನ ಅವಲಕ್ಕಿಯಂತೆ ನನ್ನ ಬಡಭಕ್ತಿ ಯು ... ಅವರೊಳಗೆ ನಿರ್ಮಲತೆಯ ಅಭಾ -ವ ... ವುದನ್ನು ಮರೆಯಬೇಡಿ.

ಸಾಮರ ದೀಕ್ಷೆ.

(ಹಿಂದಿನ ಸಂಚಿಕೆಯಿಂದ ಮುಂದುವರಿದುದು — ಬರೆದು ಬಂದುದು.)

ಮಹಾ ಮೋರವ್ವಾರದ ಹೊಸ್ತಿಲಿ ನಿಂದ ಒಳಗೆ ಕಾಲಿಟ್ಟೊಡನೆಯೇ ಕಣ್ಣಿಗೆ ಮನೋಹರವಾದ ಹತ್ತೆಂಟು ರವಿವರ್ಮನ ಚಿತ್ರಪಟಗಳು ಅಲ್ಲಲ್ಲಿ ಫ್ರೆಂಚು ದೇಶೀಯ ರ ಪ್ರಣಯ ಚಿತ್ರಗಳು ರಂಗರಂಗಾಗಿ ಕಾಣಿಸಿಕೊಂಡವು. ನಟ್ಟನಡುವೆ ದ್ವಾರಕ್ಕೆ ಎದುರಾಗಿ ಬಾಗಿಲಿಗೆ ಕಟ್ಟಿದ ಮನೆ ತೋರಣಗಳು ಹಾಲಿನಿಂದ ಚಿಮ್ಮಿಸಿದ್ದರು. ತರಹದ ಗಂಧದ ಗೊಂಬೆಗಳು ಅಲ್ಲಲ್ಲಿ ಆಯಕಟ್ಟ ದಂತೆ ನಾಜೂಕಾಗಿ ಜೋಡಿಸಿರುವ ಸಿಂ ಹುಗಳ ಮಡಿಗಳೂ ಅವುಗಳ ಬಳಿ ಇರುವ ಬಾಗಿಲುಗಳೂ ಬಂದವರಿಗೆ ಮನೆಯ ಶ್ರೀಮಂತಿಕೆಯನ್ನು ಬಾಯಿಬಿಟ್ಟು ಒಪ್ಪಿಸು ತಿದ್ದವು. ಇಷ್ಟೇ ಅಲ್ಲದೆ ಹಗಲಾಗಲೀ ರಾತ್ರಿಯಾಗಲೀ ಬಂದ ಆಗಂತುಕರನ್ನು ವಿಚಾರಿಸಿಕೊಳ್ಳಲು ಪರಿಚಾರಕರಿದ್ದರು. ಯಾರು ಬಾಗಿಲಿನಿಂದ ಬಂದರೂ ಅವರ ನ್ನು ಒಳ ಬರಮಾಡಿ ಸ್ವಾಗತಿಸಿ ಉಪಚರಿಸಿ ಕಳುಹಿಸಿ ತನಗೆ ಬಂದು ಹೇಳಬೇಕೆಂದು ಮಾಲೀಕ ಯಜಮಾನಿಯ ಕಟ್ಟಪ್ಪಣೆ.

ಅದರಂತೆಯೇ ಇಂದು ಇನ್ನೂ ಎ ಗ್ಗೆ ಎಂಟು ಘಂಟೆ ಒಳಗೇ ತನ್ನನ್ನು ಯಾರೋ ಆಗಂತುಕರು ಹೊರಗೆ ನಿರೀಕ್ಷಿ ಸುತ್ತಿರುವರೆಂದು ಯಜಮಾನಿಗೆ ವಾರ್ತೆ ಬಂತು.

ಸರಿಯಾದ ಬಾತ್ಮಿಯನರಿಂ ದ, ಬಂದವರು ಮಹನೀಯರೆಂಬುದನ್ನು ತಿಳಿದು ಬಳಿಗ ಬಂದಳು! ಎಂತಹ ಮಹ ನೀಯರಾದರೂ ನಮ್ಮಲ್ಲಿ ಮರುಳಾಗದೇ ಎಂದು ಯೋಚಿಸಿ ತನ್ನ ವಿಲಾಸದ ಮೈ ಮನೋಹರವಾದ ಬಿನ್ನಾಣಕ್ಕೆ ನಾಂದೀ ಪದ್ಯವನ್ನು ಪ್ರಾರಂಭಿಸಿದಳು. ಆದರೆ ಬಂದ ಮಹನೀಯರು ಕಾರ್ಯವಿಮುಖ ರಾಗದೆ ಬಿಚ್ಚನೆ ಹೇಳಿದರು:—

"ನಾನು ತಮ್ಮಲ್ಲಿ ಹಣಕ್ಕಾಗಿ ಬಂದಿದ್ದೇನೆ. ನಾನೊಂದು ಅನಾಥಾಲ ಯವನ್ನು ಕಟ್ಟಿಸುತ್ತಿದ್ದೇನೆ. ತಾವೇನಾದ ರೂ ಸಹಾಯ ಮಾಡುವುದಾದರೆ ತುಂ ಬ ..."

"ಸ್ವಾಮಿ ಹಾಗಾದರೆ ನಾನು ಬಡ ವ ... ನನ್ನಲ್ಲಿ ಏನೂ ಇಲ್ಲ. ಒಂದು ಕಾಸು ಕೊಡುತ್ತೇನೆ ಅಷ್ಟೇ ತೆಗೆದುಕೊಳ್ಳುತ್ತೀ ರಾ ..."

ಧ್ವನಿಯು ವ್ಯಂಗ್ಯವಾಗಿತ್ತು.

"ತಾಯಿ ತಮ್ಮಂತಹವರು ಇನ್ನೂ ... ಒಂದೊಂ ದು ಕಾಸು ಕೊಟ್ಟರೂ ನನಗೆ ಸಾಕು ಎಂದು ಯೋಚಿಸಿದೆನು." "ಹನಿಗೂ ಡಿದರೆ ಹಳ್ಳ, ತೆನೆಗೂಡಿದರೆ ಭತ್ತ" ಹೀಗೆ ಎಂದು ಕಾಸನ್ನೇ ಕೊಡಿ ನಾನು ಸಂತೋಷದಿಂದ ಸ್ವೀಕರಿಸುತ್ತೇನೆ."

ಧ್ವನಿಯು ಗಂಭೀರವಾಗಿತ್ತು. ಉ ಪದೇಶದಂತೆ ಯಜಮಾನಿಯು ಮಂತ್ರ ಮುಗ್ಧಳಾಗಿ ಕೇಳಿದಳು. ಹೃದಯವು ನಡುಗಿತು. ಮತ್ತೆ ಆನಂದದಿಂದ ಪುಳ ಕಿತವಾಯಿತು. ಮಿಂಚಿನಂತೆ ಒಳಕ್ಕೆ ಹೋದಳು.

(ಮುಂದಿನ ... ನೋಡಿ)



ಶ್ರೀರಾಮಕೃಷ್ಣ ಪರಮಹಂಸರವರ ಶತಮಾನೋತ್ಸವದ ಜ್ಞಾಪಕಾರ್ಥವಾಗಿ ರಾಜಧಾನಿಯ ಒಂಟಿಕೊಪ್ಪಲಿನಲ್ಲಿರುವ ರಾಮಕೃಷ್ಣಾಶ್ರಮದ ಆವರಣದಲ್ಲಿ ಮೇಲ್ಕಂಡ ನಕಾಸೆಯಂತೆ ಒಂದು ಮಂದಿರವು ನಿರ್ಮಿಸಲ್ಪಡುವುದರಲ್ಲಿದೆ. ಮಂದಿರವನ್ನು ಕಟ್ಟಲು 25 ಸಾವಿರ ರೂಪಾಯಿಗಳ ವೆಚ್ಚದ ಅಂದಾಜಾಗಿದೆ. ಮಹಾಜನರ ಉದಾರಾಶ್ರಯವು ಕೋರಲ್ಪಟ್ಟಿದೆ.

MESSAGE FROM

Mr G R Josyer

I welcome your move to start an independent newspaper for Mysore. Even in the days when the city had none of its present charms and not half of its present population, it owned newspapers which exercised influence, and wielded authority.

The gap left by the death of Mr M Venkatakrishnayya in the public life of Mysore is yet to be filled, and the gap left by the stoppage of his newspapers, should no longer be left unfilled.

A city without a newspaper is something like a Government without a publicity officer, or a cinema Star without a publicity manager. Mysore is now an important city with a substancial population. It has got a sufficiency of news, social, judicial, civic and political. It has got grievances to ventilate, defects to point out, evils to efface, and causes to uphold.

In the absence of a mirror even a refined man gets slovenly. In the absence of a newspaper even a rising city deteriorates. A city in order to thrive, requires the support of a newspaper. A newspaper in order to prosper, requires the support of the city. I hope that the new newspaper will promote the cause of Mysore and I hope the public of Mysore will give it their full measure of support. I wish you paper every success.

ಸಾಧ್ವಿ.

(ಒಂದು ಹಾರೈಕೆ)

ಸಾಧ್ವಿ! ಬಾಲೆ! ಚಿರಕಾಲ ಈ ನಾಡಿನಲಿ, ಕೀರ್ತಿಲತೆಯು ಹಬ್ಬಲಿ. ದೇಶದ ಮೂಲೆ ಮೂಲೆಯಲಿ ಜನರೊಳು ಮೂಡಿರುವ ಅಜ್ಞಾನಾಂಧಕಾರವಂ ದೂಡಿ, ಬೆಳಕಂ ಬೀರಿ ಮುಂಬರಿಯಲು ಪರಿಪರಿ ವಿಧದಿಂ ಸಹಾಯ ಮಾಡಲಿ. ಜನರ ಮನದಲಿ ಸ್ವಾತಂತ್ರ್ಯ ಭಾವನೆಯ ಬಿತ್ತಿ, ಉಚ್ಚ ಉದಾತ್ತ ಧ್ಯೇಯಗಳು ಮೊಳಕೆಯಾಗುವಂತೆ ಮಾಡಲಿ. ಅಧಿಕಾರಿಗಳ ಸ್ವೇಚ್ಛಾ ಪ್ರವರ್ತನೆಗೆ ವಿಷ್ಣು ಚಕ್ರದಂತಾಗಲಿ. ಭಾನುವಿನ ಕಿರಣಗಳಿಗೆ ಕಗ್ಗತ್ತಲೆಯು ಹೆದರೋಡುವಂದದಿ, ಸಾಧ್ವಿಯ ಕಂಠದಿಂದ ಹೊರಡುವ ಧ್ವನಿಯು ಜನಸೇವೆಯಲಿಹ ಸ್ವಾರ್ಥ ಲೇಶಗಳಂ ತೂರಲಿ. ಜನಸಾಮಾನ್ಯರಂ ಸಾಧ್ವೀ ವಿನೋದಮಯರನ್ನಾಗಿ ಮಾಡಲಿ. ಭೂಧೀಶ್ವರರ ಪ್ರಜಾಕೋಟಿಯಲಿಹ ತಪ್ಪುಗಳಂ ಧೈರ್ಯದಿ ಎತ್ತಿ ಹಿಡಿಯಲಿ. ಕಡಲಿನಲಿ ಹೋಗುತಿಹ ನಾವೆಯು ಬಿರುಸಾದ ಬಿರುಗಾಳಿಗೆ ಸಿಲುಕಿ, ಮುಳುಗುವುದೋ ಉಳಿಯುವುದೋ ಎಂಬುದಂ ಹೇಳಲು ಅಸಾಧ್ಯವಾಗಿರುವಂದು ನಾವಿಕರು ಜಗದೀಶ್ವರನಿಗೆ ಪ್ರಾರ್ಥನೆಗಳಂ ಸಲ್ಲಿಸುತಿರುವಾಗ, ಬಾನಿನಲಿ ಮಿನುಗುತಿಹ, ಕಿರುತಾರೆಯ ಬೆಳಕಿನಿಂದಲಿ ದಡವಂ ಸೇರುವುದು. ಅಂತೆಯೇ ಪರಿಪರಿಯ ಕಷ್ಟಗಳ ಗಾಢಾಂಧಕಾರದಲ್ಲಿ ತೊಳಲಿ ಬಳಲುವ ನಾಡವರಿಯರಿಗೆ ಕಿರುತಾರೆಯಾಗಿರಲಿ.

ಪಿತಾಮಹ! ನೀಂ ಗತಿಸಿದರೂ ಅನಾಥರನ್ನಾಗಿ ನಮ್ಮನ್ನು ದುಃಖವು ಆವರಿಸಬಾರದು. ಮನುಜರು ಉಸಿರಾಡುವವರೆಗೂ, ವೃಷ್ಟಿಯು ಗೋಚರವಾಗುವವರೆಗೂ ನಿನ್ನನ್ನು ಸ್ಮರಿಸದಿರರು. ನಿನ್ನ ಸ್ಮಾರಕವಾಗಿ ಹೊರಡಿಸಿರುವ ಈ ಪತ್ರಿಕೆಯ ಮೂಲಕ ಮತ್ತೊಮ್ಮೆ ನೀನು ಜೀವಿಸು. ಜಡಶರೀರವು ಬಾಹ್ಯಪ್ರಪಂಚವನ್ನು ಬಿಟ್ಟು ತೆರಳಿದರೂ, ನಿನ್ನ ಆತ್ಮವು ನಮ್ಮೊಡನಿದ್ದು ನಮ್ಮ ಕಾರ್ಯಗಳೆಲ್ಲಾ ಪ್ರೇರಿಸಲಿ.

—ವೈ. ಪಿ. [illegible]

USE ALWAYS

DERMOTONE

(SASTRIC BATHING HERBAL PREPARATION)

THE UNIQUE PRODUCT

IN THE MARKET FOR SKN HYGIENE.

ಡರ್ಮೊಟೋನ್,

ಶಾಸ್ತ್ರೀಯವಾದ ಮತ್ತು ಆರೋಗ್ಯಕರವಾದ ಚರ್ಮರಕ್ಷಣೀ ಚೂರ್ಣ
ಡರ್ಮೊಟೋನ್ ವರ್ಕ್ಸ್, ಮೈಸೂರು

WATCH FOR THE OPENING DATE!

BOMBAY INDRA BHAVAN,

WITH

Modern Equipments and efficient Management

IN

SAYYAJI RAO ROAD, MYSORE

ANANDA SODA FACTORY,

DODDAPET, MYSORE.

BEST AERATED WATER SUPPLIERS.
COMPLETE REQUISITES FOR
AERATED WATER MANUFACTURERS
AVAILABLE

ಆನಂದಾ ಸೋಡಾ ಫ್ಯಾಕ್ಟರಿ,

ದೊಡ್ಡಪೇಟೆ, ಮೈಸೂರು

(ಹಿಂದಿನ ಪುಟದಿಂದ ಮುಂದುವರಿದುದು)

ಸ್ವಲ್ಪ ಹೊತ್ತಿನ ಮೇಲೆ ಮತ್ತೆ ಆಗಂತುಕರ ಸಮೀಪಕ್ಕೆ ಬಂದಳು. ಎರಡೂ ಕೈಯಲ್ಲಿ ಪೂರ್ಣವಾಗಿ ಹಿಡಿದ ಬೆಳ್ಳಿಯ ತಟ್ಟೆ. ತಟ್ಟೆಯಲ್ಲಿ ನೂರೊಂದು ರೂಪಾಯಿಗಳು ನೂರೊಂದೂ ಬೆಳ್ಳಿಯ ನಾಣ್ಯಗಳು ಮತ್ತು ಹಣ್ಣು ಹಂಪಲು ಹೂವು ಬಂದವಳು ಆಗಂತುಕ ವ್ಯಕ್ತಿಯ ಕಾಲು ಹಿಡಿದು ಅಡ್ಡಬಿದ್ದು ನುಡಿದಳು

"ನಾನು ಮಹಾ ಪಾಪಿ! ನನ್ನ ಈ ಅತ್ಯಲ್ಪ ಸೇವೆಯಿಂದ ತುಷ್ಟರಾಗಿ ನನ್ನನ್ನು ಕೃತಾರ್ಥಳನ್ನಾಗಿ ಮಾಡಬೇಕು."

"ತಂಗೀ ನೀನು ಇಂದಿನಿಂದ ಪುಣ್ಯವಂತೆ. ಭಗವಂತನು ದಯಾಮಯನು. ನೀನು ಪವಿತ್ರಳಾದೆ."

ಪವಿತ್ರದೀಕ್ಷಾ ಬೋಧಕರು ವೃದ್ಧ ಪಿತಾಮಹ ವೆಂಕಟಕೃಷ್ಣಯ್ಯನವರು. ದೀಕ್ಷಾಬದ್ಧಳಾದವಳು ಒಬ್ಬ ವೇಶ್ಯೆ!

ಮಹಾತ್ಮಾಜಿಯವರ ಪ್ರಶಂಸೆ.

ದರ್ಮಪ್ರಕಾರ ಬಸಪ್ಪಯ್ಯನವರ ಶಾಲೆಯಲ್ಲಿನ ಸಭಾಂಗಣ ಪ್ರಮುಖ ಪ್ರೇಕ್ಷಕರು ಕಿಕ್ಕಿರಿದಿದ್ದರು. ಎಲ್ಲೆಲ್ಲೂ ವಿತರಣ ವೈಭವ ಕೋಲಾಹಲದ ಕಲಕಲ. ವೇದಿಕೆಯ ಮೇಲೆ ನಿಂತು ಭಾಷಣ ಮಾಡುವ ಸುಪ್ರಸಿದ್ಧ ವ್ಯಕ್ತಿಗಾಗಿ ಮತ್ತು ಅಧ್ಯಕ್ಷ ಪೀಠವನ್ನು ಅಲಂಕರಿಸುವವರ ಹಾದಿಯನ್ನೂ ಜನ ಎದುರುನೋಡುತ್ತಿದೆ. ಮತ್ತೆ ಗದ್ದಲವೆಲ್ಲವೂ ಶಾಂತಿಯಾಯಿತು. ಸೂಜಿ ಬಿದ್ದರೆ ಕೇಳುವಷ್ಟು ಮೌನ. ಅವರು ಬಂದರು. ಇಬ್ಬರೂ ಎಡಕಲ ದೇಹಿಗಳು. ಮುದುಕರು ವೃದ್ಧರು. ಅವರ ಒಬ್ಬರ ವ್ಯಕ್ತಿತ್ವ ಉವನ್ನು ಪ್ರತ್ಯಕ್ಷ ಎಂಬುದು ಯಾರಿಗೆ ಇದೆ!

ಭಾಷಣಕಾರರು ಇಪ್ಪತ್ತುವರ್ಷದವರ ಮಹನೀಯರೇ. ಇಂದು ಇಲ್ಲಿ ಅಧ್ಯಕ್ಷಸ್ಥಾನವನ್ನು ಅಲಂಕರಿಸಿರುವ ಪೂಜ್ಯರನ್ನು ನಾನು ಸಂಬೋಧಿಸುವುದು ಯಾವ ರೀತಿ ... ನಾನೇನೋ ಪ್ರಸಿದ್ಧ ವ್ಯಕ್ತಿಯಾದೆ. ನಂದೇ ಹೆಸರಿಟ್ಟು ಕರೆಯುತ್ತೇನೆ. ಈ ಹೆಸರಿಗೆ ಸಂಪೂರ್ಣವಾಗಿ ಅವರು ಅರ್ಹರು ... ವೃದ್ಧ ಪಿತಾಮಹರೆಂದು ಹಾಗೂ ಮೊದಲಿಗೆ ಹೃದಯ ತುಂಬಿ ನುಡಿದವರು ಮಹಾತ್ಮಾ ಗಾಂಧಿ. ಇಂತಹ ಭವ್ಯ ಮರೆಬತ್ತಲೆಯ ಫಕೀರ ... ರಾಜ್ಯದ ಪುತ್ರನಿಗೆ ದೊರೆತ ಈ ಗೌರವವಾದ ... ಯಾವ ಜಗದ್ವಿಖ್ಯಾತ ವ್ಯಕ್ತಿ ಕಾಣ ಬಯಸದ ವಿರಳ!

ಡಾ॥ ಬ್ರಜೇಂದ್ರನಾಥ ಶೀಲರ ಸನ್ಮಾನ

(ಪ್ರೇಕ್ಷಕನಿಂದ)

ಅಂದು ಗೋಕುಲಾಷ್ಟಮಿಯ ಬಸ. ರಾಷ್ಟ್ರ ರಾಜಧಾನಿಯ ಲಕ್ಷ್ಮೀಪುರದಲ್ಲಿನ ಒಂದು ಸಾಧಾರಣ ಮನೆಯಲ್ಲಿ ಮುಂಭಾಗದ ಕೋಣೆಯಲ್ಲಿ ಇಬ್ಬರು ಮಾತನಾಡುತ್ತಿದ್ದರು. ಒಂದರ ಮನೆ ಸಾಧಾರಣವಾದದ್ದು. ಕೋಣೆಯಂತೂ ಸಾಧಾರಣವಾದದ್ದೇ. ಅಲ್ಲಿ ಗೋಡೆಯ ಒಂದು ಮಗ್ಗುಲಿಗೆ ಹಿಡಿದಾದ ಮಂಚ. ಮಂಚದ ಮೇಲೆ ಮೆತ್ತನೆ ಹಾಸಿಗೆ. ಹಾಸಿದ ಹಾಸಿಗೆಯಲ್ಲಿ ವಿಶ್ರಾಂತಿಗಾಗಿ ಒರಗಿ ವೃದ್ಧರೊಬ್ಬರು ಮೊದಿಕೆಯನ್ನು ಹೊದೆಕೊಂಡು ಹಾಗೆಯೇ ಕೈಯಲ್ಲಿದ್ದ 'ಹಿಂದೂ' ಪತ್ರಿಕೆಯನ್ನು ಓದುತ್ತಿದ್ದರು. ಮಧ್ಯೆ ಮಧ್ಯೆ ಎದುರು ಕುರ್ಚಿಯಲ್ಲಿ ಕುಳಿತಿರುವವರೊಡನೆ ಮಾತನಾಡುತ್ತಿದ್ದರು. ಒಬ್ಬ ವೃದ್ಧ ವ್ಯಕ್ತಿಯು ಮಲಗಿದ್ದ ... ಮತ್ತೆ ಮಂಚದ ಪಕ್ಕದಲ್ಲೇ ಒಂದು ಮೇಜು. ಮೇಜಿನ ಮೇಲೆ ನಾಲ್ಕಾರು ಪುಸ್ತಕಗಳು. ಅವುಗಳಲ್ಲಿ Mills Essays on Liberty ಎಂಬುದೂ ಒಂದು. ಗೋಡೆಯಲ್ಲಿ ನಾಲ್ಕಾರು ಮಹಾಪುರುಷರ ಚಿತ್ರಗಳು ಇದ್ದುವು. ಕೋಣೆಯು ಸಲವು ಅಷ್ಟೇನೂ ಚೊಕ್ಕಟವಾಗಿರಲಿಲ್ಲ. ಅಲ್ಲಲ್ಲಿ ಕಾಗದದ ಚೂರುಗಳು ಬಿದ್ದಿದ್ದುವು. ಸಾಲದು ಪಕ್ಕದ ಮೇಜಿನ ಕೆಳಗೆ ಒಂದು ಬರಿಯ ಬರಳುಕಲ್ಲೂ ಇದ್ದವು.

ವಿಶ್ರಾಂತಿತ ವ್ಯಕ್ತಿಯು ಕುಳಿತವರೊಂದಿಗೆ ಆ ಮಾತು ಈ ಮಾತು ಆಡುತ್ತಿದ್ದಂತೆಯೇ ಹೊರಗೆ ಯಾರೋ ಗಾಡಿಯಲ್ಲಿ ಬಂದಿಳಿದ ಶಬ್ದವಾಯಿತು. ಯಾರೆಂದು ನೋಡುವಷ್ಟರಲ್ಲಿಯೇ ದೀರ್ಘಕಾಯದ ವಯಸ್ಸು ಮೀರಿದ ಖ್ಯಾತ ವ್ಯಕ್ತಿಯೊಬ್ಬರು ಒಳಗೆ ಬಂದಿತು.

ಆಗಂತುಕ ವ್ಯಕ್ತಿಯು ಬಿಳಿಯ ವಸ್ತ್ರವನ್ನು ಗಂಭೀರವಾದ ಪೋಷಾಕನ್ನೂ ಗೌರವಾರ್ಹವ ನಡಿಗೆಯ ರೀತಿಯನ್ನೂ ನೋಡಿ ಗುರುತಿಸಿ ಸ್ವಾಗತಿಸುವುದರ ಒಳಗೇ ಬಂದವರು ವಿಶ್ರಾಂತ ವೃದ್ಧ ವ್ಯಕ್ತಿಯ ಸನಿಹದಲ್ಲಿ ತಾವು ತಂದಿದ್ದ ಬೆಳ್ಳಿಯ ತಟ್ಟೆಯ ಹಣ್ಣು ಹಂಪಲು ಹೂವುಗಳನ್ನು ಸಮರ್ಪಿಸಿ ವಿನಮ್ರವಾಗಿ ವಂದಿಸಿದರು.

'ಇದೇನು! ತಾವು ಮಾಡಿರುವ ಕೆಲಸ! ನಾನು ತಮ್ಮ ಸ್ಪರ್ಶಕ್ಕೆ ಅರ್ಹನೇ! ನನಗೆ ಅರ್ಥವಾಗಲಿಲ್ಲ! ತಾವು ಎಂತಹ ಕಿರಿಯ ಮಾಡಿದಿರಿ'

ಇಲ್ಲ ಇಲ್ಲ, ನಾನು ಅರ್ಥವಾಗುವಂತೆ ಹೇಳುತ್ತೇನೆ. ಹೀಗೆ ಮಾಡಿರುವುದರಿಂದ ನ್ಯಾಯ ವನ್ನು ಹೊರತು ಅನ್ಯಾಯವನ್ನು ಎಂದಿಗೂ ಮಾಡಿಲ್ಲ. ನನ್ನ ಸರ್ವ ಸರ್ವವೂ ಹೀಗೆಯೇ ಮಾಡುವುದು. ಇಂದು ನನ್ನ ಹುಟ್ಟಿದ ದಿವಸ. ಅಷ್ಟಮಿಯ ಪೂಜ್ಯ ಮಹನೀಯರಲ್ಲಿಗೆ ನನ್ನ ಕೃತಜ್ಞತೆಯನ್ನು ಅರ್ಪಿಸಲು ಹೋಗಿ ಅವರಿಗೆ ಅವನ್ನು ನಿವೇದಿಸಿ ಆಶೀರ್ವಾದ ಪಡೆಯುವುದು ನನ್ನ ಪದ್ಧತಿ. ಅದರಂತೆಯೇ ಈ ಹೊತ್ತು ನಡೆದುಕೊಂಡಿದ್ದೇನೆ. ನನ್ನ ದೃಷ್ಟಿಯಲ್ಲಿ ಇಡೀ ಮೈಸೂರು ಸಂಸ್ಥಾನದಲ್ಲಿಯೇ ತಮ್ಮಂತಹ ಪೂಜ್ಯ ಮಹನೀಯರು ಇನ್ನೊಬ್ಬರು ದುರ್ಲಭವಾದುದರಿಂದ ತಮ್ಮಲ್ಲಿಗೆ ಬಂದೆ. ಆಶೀರ್ವದಿಸಿ ಕಳಿಸಬೇಕು

'ಇದು ಎಂತಹ ವಿಧಿವಿಲಾಸ! ಇಂದೇ ನನ್ನದೂ ಹುಟ್ಟಿದ ಹಬ್ಬ. ಆದರೆ ನಾನು ನನ್ನ ಕೀಳುಮಾಂಚೆಯಿಂದ ಪೈ ... ಜಗತ್ಪ್ರಸಿದ್ಧ ತತ್ವಜ್ಞರಾದ ತಮ್ಮನ್ನು ಬಿಟ್ಟು ಬೇರೇನನ್ನೂ ಕೊಡಲಾರೆ'

ವಿಶ್ರಾಂತಿತ ವ್ಯಕ್ತಿಯಾದ ವೃದ್ಧ ಪಿತಾಮಹ ವೆಂಕಟಕೃಷ್ಣಯ್ಯನವರ ತೋಳಿನಲ್ಲಿ ಮೈಸೂರು ವಿಶ್ವವಿದ್ಯಾಲಯದ ಸ್ಥಾನಪತಿ ಡಾಕ್ಟರ್ ಬ್ರಜೇಂದ್ರನಾಥ ಶೀಲರವರ ಶಿರವು ಆನಮಿತವಾಯಿತು

—

ಶ್ರೀ ಎ ಸಿ. ಮಾಧವರಾಯರ ಹೇಳಿಕೆ.

ಮಾಜಿ ಮೈಸೂರು ದಿವಾನರು

ನಿರ್ಭೀತಿಯಿಂದ ಸಾರ್ವಜನಿಕ ಕೆಲಸ ಮಾಡುವುದಕ್ಕೆ ದಿವಂಗತರಾದ ವೆಂಕಟಕೃಷ್ಣಯ್ಯನವರನ್ನು ಮಾದರಿಗಾಗಿ ಇಟ್ಟುಕೊಳ್ಳಬಹುದು. ಮೈಸೂರಿನಲ್ಲಿ ಅವರು ಸಾರ್ವಜನಿಕ ಜೀವನವನ್ನು ನಿರ್ಮಿಸಿದರು. ಅವರ ಉತ್ತಮ ಹಾದಿಯನ್ನೇ ಮುಂದಿನ ಜನಾಂಗವು ಅನುಸರಿಸುವುದು ಯುಕ್ತವಾಗಿದೆ

ಸರಳ ಹೃದಯ.

(ತಾತನ ಪ್ರಿಯಶಿಷ್ಯನಿಂದ)

ಒಂದು ದಿನ ನಾನೂ ತಾತಯ್ಯನವರೂ ನಗರ ಸಂಚಾರಕ್ಕೆ ಹೊರಟಾಗ ದಾರಿಯಲ್ಲಿ ಈ ಮಾತು ಬಂತು —

ನಾನು— ತಾತ, ನಿಮ್ಮನ್ನು ನೋಡಿ ಜನ ನಗುವುದಿಲ್ಲವೇ? ನೀವು ನಿಮ್ಮ ಹುಡುಗಿಯಲ್ಲಿ ಇಷ್ಟು ಆಸಕ್ತಿ ಪಟ್ಟುಕೊಂಡರೆ ಹೇಗೆ? ನೋಡಿ ಈಗ ನೀವು ಒಂದು ಕಾಲಿಗೆ ಕರೀ ಕಾಲುಚೀಲವನ್ನು ಹಾಕಿಕೊಂಡಿದ್ದೀರಿ. ಇನ್ನೊಂದು ಕಾಲಿಗೆ ಹರಿದುಹೋದ ಬಿಳಿಯ ಕಾಲುಚೀಲವನ್ನು ಹಾಕಿಕೊಂಡಿದ್ದೀರಿ. ಹೀಗೆಯೇ ಬೀದಿಯ ಜನಕ್ಕೆ ಬಂದರೆ ಯಾರಾದರೂ ನೋಡಿ ನಗುತ್ತಿದ್ದಿಲ್ಲವೆ? ಒಂದು ಹೊಸ ಕಾಲುಚೀಲ ಕೊಂಡುಕೊಳ್ಳಬಾರದ?

ತಾತಯ್ಯ — 'ಮಗೂ ನಿನಗೇನು ಗೊತ್ತು ಪುಡ್ಡಿನ ಬೆಲೆ? ನೀನಿನ್ನೂ ಹುಡುಗ. ನಾನು ಹೇಳುತ್ತೇನೆ ಕೇಳು. ನಾನಂತೂ ಮುದುಕ. ನಾನು ಹೇಗಿದ್ದರೂ ಸರಿಯೆ. ಜನ ನಗುತ್ತಾರೆ ಎಂತ ಹೊಸ ಕಾಲುಚೀಲ ಕೊಂಡುಕೊಂಡ ಮಾತ್ರಕ್ಕೇ ಅವರು ನಗುವುದು ನಿಲ್ಲುತ್ತದೆಯೇ? ನಗುವವರು ಹೇಗಿದ್ದರೂ ನಗುತ್ತಾರೆ. ಅಷ್ಟೇ ಅಲ್ಲದೆ ಈಗ ಹೊಸ ಕಾಲುಚೀಲಕ್ಕಾಗಿಯೇ ನಾನು ಹತ್ತು ಹನ್ನೆರಡು ಆಣೆ ಖರ್ಚು ಮಾಡುವುದರ ಬದಲು ಅದೇ ಹಣವನ್ನು ಅನಾಥಾಲಯಕ್ಕೆ ಕೊಟ್ಟರೆ ಒಬ್ಬ ಹುಡುಗನಿಗೆ ಎರಡು ದಿನದ ಗ್ರಾಸವಾಗುವುದಿಲ್ಲವೆ? ಮಗೂ ಯಾವಾಗಲೂ ಹಣದ ವಿಷಯದಲ್ಲಿ ಹೀಗೆ ಯೋಚನೆ ಮಾಡಬೇಕು'

ಗುರುವಿನ ಉಪದೇಶವಾಣಿಯ ಮುಂದೆ ನಾನು ಮೂಕನಾದೆ. ಎಂತಹ ಸರಳ ಹೃದಯ! ಎಂತಹ ಪರೋಪಕಾರ ಪ್ರೇರಣೆ! ನಿಸ್ವಾರ್ಥವಾದ ಬುದ್ಧಿ? ಹೀಗೆ ಪ್ರೇರಣೆಯಾಗುವುದು ಮಹಾತ್ಮರಿಗೆ ಮಾತ್ರ ಸಾಧ್ಯವಲ್ಲವ? ತಾತಯ್ಯನವರು ನುಡಿದಂತೆ ನಡೆದವರು. 'ಅನಾಥಾಲಯ' ಎಂಬ ಹೆಸರು ಕೊನೆಯ ಉಸಿರು ಹಾರುವ ವರೆಗೂ ಅವರ ಹೃದಯದಲ್ಲಿ ಅಚ್ಚೊತ್ತಿದಂತೆ ಸುಸ್ಥಿರವಾಗಿತ್ತು

—

ತಾತಯ್ಯನವರ ಕಡೆಯ ಸಂದೇಶ!

ವೃದ್ಧ ಪಿತಾಮಹರು ರೋಗಪೀಡಿತರಾಗಿ ಶಯ್ಯೆಯಲ್ಲಿ ಮಲಗಿದ್ದಾಗ ಕಡೆಯುಸಿರಿನ ಅನಂತ ಪ್ರಯಾಣಕ್ಕೆ ಇನ್ನೂ ಐವತ್ತು ಗಂಟೆಗಳ ವಿರಾಮವಿದೆ. ಈ ಅಂತರದಲ್ಲಿ ಮೊಮ್ಮಗನನ್ನು ಕರೆಸಿ ಈ ಶಾಸನವನ್ನು ಅವನಿಗೆ ಉಲ್ಲೇಖಿಸಿದರು "— ಮೈಸೂರು ಸರ್ಕಾರಕ್ಕೆ ನಾನು ಮಾಡಿರುವ ಸೇವೆಯನ್ನು ನೆನೆಯುವುದಾದರೆ ಇಂದೇ ಸರ್ಕಾರವು ವೃತ್ತಪತ್ರಿಕಾ ಶಾಸನವನ್ನು ಕಿತ್ತೊಗೆಯಲಿ" ಇಲ್ಲಿ ಶಾಸನ ಸಾರಾಂಶವನ್ನು ಮಾತ್ರ ತಿಳಿಸಿದೆ. ಇದರಿಂದ ತಾತಯ್ಯನವರು ಕಡೆಯವರೆಗೂ ಎಂತಹ ಧೀರರೂ ಧ್ಯೇಯಸಾಧಕರೂ ಆಗಿದ್ದರೆಂಬುದನ್ನು ಮನಗಾಣಬಹುದು

Messages

Sir K P Puttanna Chetty

It has given me much pleasure to hear that in memory of the late Mr M Venkrtakrishnayya his old paper 'Sadhvi' is to be revived as a Weekly Kannada newspaper This is the best tribute that can be paid to the Grand Old Man of Mysore who it was that created a newspaper press in the capital and kept it going for a long number of years at great sacrifice to himself He always stood on the side of the people and fought bravely for them, oftentimes bringing on him self the displeasure of the high and mighty I had a great admiration for his sincerity honesty, courage and patriotism Mysore has good cause to remember him with gratitude for his great public services extending over several generations It is a matter for gratification that a paper which bore his name is to be resuscitated as a weekly I wish Mr Agaram Rangiah every success

Mr D V Gundappa M L C

I am very happy to hear that you propose to revive the wellknown paper which the late G O M of Mysore started and conducted for many years, practically to the end of his days, with so much distinction and usefulness to the public Your way is a most appropriate way of perpetuating the memory of that Great Man, and I sincerely wish you every success in this two fold service of bringing the revered name continuously before the public and serving the great cause of public good which is the chief inspiration of that name

ಮಕ್ಕಳ ಜೊಕ್ಕಸ.

ಹುಡುಗ! ತಾತಯ್ಯನವರ ಹೆಸರನ್ನು ಕೇಳಿದ್ದೀಯಾ? ನಿನ್ನ ಮನೆಯಲ್ಲಿ ಹುಡುಗರೂ, ಮುದುಕರೂ ತಾತಯ್ಯನವರ ಹೆಸರನ್ನು ಆಗಾಗ ಹೇಳುತ್ತಿರಬಹುದಲ್ಲವೆ? ಅವರೇ ತಾತಯ್ಯ, ವೆಂಕಟಕೃಷ್ಣಯ್ಯನವರು. ಅವರು 13 ವರುಷಗಳು ಮರಿಮಲ್ಲಪ್ಪನವರ ಸ್ಕೂಲಿನಲ್ಲಿ ಉಪಾಧ್ಯಾಯರಾಗಿದ್ದರು. ಅವರು ಹೋಗಿ ಕಣ್ಣರೆಯಾದ ಸಮಾಚಾರವು ಅವರ ಹೆಸರನ್ನು ಕೇಳಿದವರೆಲ್ಲರೂ ಅವರಿಗೆ ಮಕ್ಕಳೆಂದರೆ ಪ್ರಾಣ. ಅವರು ಬಹು ದಯಾಳುಗಳು. ಸ್ಕೂಲಿನಲ್ಲಿ ಹುಡುಗರು ಯಾರ ತಪ್ಪಿದರೂ, ಸ್ಕೂಲಿಗೆ ಸರಿಯಾಗಿ ಬರದೇ ಹೋದರೂ ಅಂಥವರನ್ನು ಪೆಟ್ಟಿನಿಂದ ಹೊಡೆಯುತ್ತಿದ್ದರು. ಹಸಿವಿನಿಂದ ಹುಡುಗನು ಸ್ಕೂಲಿಗೆ ಬರುತ್ತಿದ್ದ ಬಡವನಾದರೆ ಅವನನ್ನು ಹತ್ತಿರ ಕರೆದು ಅವನಿಗೆ ಹಣ್ಣು, ಬಿಸ್ಕತ್, ಪುಸ್ತಕ, ಕಾಗದ, ಬಟ್ಟೆಗಳನ್ನು ಕೊಟ್ಟು ಕೃಪೆ ತೋರಿಸುತ್ತಿದ್ದರು. ಕೊಟ್ಟು, ಗಂಡಸಾಗಿ ಮಾಡಿ ಕಳುಹಿಸುತ್ತಿದ್ದರು. ಎಂತಹ ದಯಾಳು! ಸಮಾಜ ಸೇವಾನಿರತರು. ಅವರಿಂದ ಅನೇಕ ಹುಡುಗರು ಸನ್ಮಾರ್ಗಕ್ಕೆ ಹೋದರು. ನಾನೂ ಸಹ ಪೆಟ್ಟು ತಿಂದು ಸಾರ್ ಎಂದು ತಾತಯ್ಯನವರನ್ನು ಹಿಂಬಾಲಿಸುತ್ತಿದ್ದೆ. ಅವರು ಶಾಸ್ತ್ರ ಜ್ಞಾನಿಗಳಾಗಿದ್ದು ಇರುವಲ್ಲಿ ಅವರನ್ನು ಸುಮಾರು 10000 ವಿದ್ಯಾರ್ಥಿಗಳು ಎಲ್ಲಾ ಕಡೆ ಇದ್ದಾರೆ. ಅವರ ಆಶೀರ್ವಾದದಿಂದ ಒಳ್ಳೆಯವರಾಗಿರುವುದರಿಂದ ತಾತಯ್ಯನವರ ಶಿಷ್ಯರು ಎಲ್ಲ ದೊಡ್ಡ ಅಧಿಕಾರಗಳಲ್ಲಿ ಇದ್ದಾರೆ. ಇದರಿಂದ ನೀನೂ, ನಾನೂ, ಇನ್ನೂ ಅನೇಕರು ಅವರ ಶಿಷ್ಯರಾದಂತೆ ಆಗಲಿಲ್ಲವೇ? ಅವರು ಮಕ್ಕಳಿಗೋಸ್ಕರ ಉಪಾಧ್ಯಾಯರಾದರು. ಮಕ್ಕಳ ಒಸಗೆಗಾಗಿ ಮಾಡಿದರು. ಮಕ್ಕಳ ಅನೇಕ ಸಂಘಗಳಿಗೆ ಅಧಿಕಾರಿಗಳಾಗಿದ್ದರು. ಅವರ ಜ್ಞಾಪಕಾರ್ಥವಾಗಿ ನಾನು ಮಕ್ಕಳಿಗೋಸ್ಕರ ಸ್ವಲ್ಪ ವಿಚಾರಗಳನ್ನು ಆಗಾಗ್ಗೆ ಬರೆದು ಕಳುಹಿಸಬೇಕೆಂದಿದ್ದೇನೆ. ಅದಕ್ಕಾಗಿ ಸಾಧ್ವಿ ಪೇಪರಿನಲ್ಲಿ ಆಗಾಗ ನಿನ್ನ ಜೊಕ್ಕಸದಿಂದ ತೆಗೆದು ನಿನ್ನ ವಿಚಾರಗಳನ್ನು ಬರೆಯುತ್ತೇನೆ. ನೀನು ಸಾಧ್ವಿ ಪೇಪರಿನಲ್ಲಿ ಅವುಗಳನ್ನು ಆಗಾಗ್ಗೆ ಓದುತ್ತಾ ಇರು. ನೀನೂ ಬರೆಯುವ ಶಕ್ತಿ ಸಂಪಾದಿಸಿ ಏನಾದರೂ ಬರೆದು ಕಳುಹಿಸು. ಸಾಧ್ವಿ ಪತ್ರಿಕೆಯನ್ನು ತಾತಯ್ಯನವರು ಹೊರಡಿಸುತ್ತಿದ್ದರು. ಈಗ ಅವರು, ಅವರ ಶಿಷ್ಯರು ಹೊರಡಿಸುತ್ತಿದ್ದಾರೆ.

"ಮಕ್ಕಳನ್ನು ಕಂಡರೆ ಅವರಿಗೆ ಹೇಗೆ ಇಷ್ಟವೋ ನನಗೂ ಹಾಗೆ. ಆಗಾಗ್ಗೆ ಮಕ್ಕಳ ಜೊಕ್ಕಸದಿಂದ ಮಕ್ಕಳ ಸಕ್ಕರೆಯೋ ಹುಣ್ಣೋ ಚಕ್ಕುಲಿಯೋ ಏನೋ ನಿನ್ನ ಕೈಗೆ ಸಿಕ್ಕುತ್ತದೆ. ತಿನ್ನು. ನೀನು ನನ್ನನ್ನೂ ತಾತಾ ಎಂದರೆ ನಿನಗೆ ಹೋ ಹೋ ನಗುತ್ತೇನೋ ಎಂದು ನಿನ್ನ ವಿಚಾರವಾಗಿ ಬರೆದು ಕಳುಹಿಸಿ ಕೊಡು.

ಮ॥ ಬಿ. ನರಸಿಂಗರಾಯರ ಸಂದೇಶ.

ಮೈಸೂರು ಸಂಸ್ಥಾನದಲ್ಲಿ ವೃದ್ಧ ಪಿತಾಮಹ ಎಂ. ವೆಂಕಟಕೃಷ್ಣಯ್ಯನವರು ಸಾಧ್ವಿ ಮತ್ತು ಇತರ ಪತ್ರಿಕೆಗಳನ್ನು ಪ್ರಚುರ ಪಡಿಸುತ್ತಾ ಸಾರ್ವಜನಿಕ ಪ್ರಜೆಗಳಿಗೆ ನಾನಾ ವಿಧವಾದ ಸೇವೆಯ ವಿಚಾರವು ಎಲ್ಲರ ಜ್ಞಾಪಕದಲ್ಲಿ ಇರುತ್ತದೆ. ಪತ್ರಿಕಾ ಪ್ರಪಂಚದಲ್ಲಿ ಸುಂದರರು ವೃದ್ಧ ಪಿತಾಮಹರು ತಾವು ಇಹಲೋಕವನ್ನು ಬಿಡುವುದಕ್ಕೆ ಎಂಬತ್ತು ವರ್ಷಗಳಿಗೆ ಮುಂಚೆ ಕನ್ನಡ ಪತ್ರಿಕೆಗಳನ್ನು ಪ್ರಚುರಪಡಿಸುವುದನ್ನು ಬಿಡಬೇಕಾಗಿ ಒಂದು ವೃದ್ಧ ಪಿತಾಮಹರ ಗುಣ ಕೀರ್ತಿ ವಾಸಿ ಪ್ರಾರಂಭಿಸಿದರು. ಅವನ್ನು ಕೊನೆಗಾಣಿಸುವುದು ಬಹಳ ಅಸಾಧ್ಯವಾದ ವಿಷಯ. ಅವರು ನಿರ್ದಾಕ್ಷಿಣ್ಯವಾಗಿ ಪ್ರಜೆಗಳ ಅಭಿವೃದ್ಧಿ ಮತ್ತು ಸ್ವಾತಂತ್ರ್ಯಗಳನ್ನೇ ತಮ್ಮ ಗುರಿಯನ್ನಾಗಿಟ್ಟುಕೊಂಡು ಮಾಡಿದ ಅಮೋಘವಾದ ದೇಶ ಸೇವೆಯ ವಿಚಾರವು ಸರ್ವರಿಗೂ ಚೆನ್ನಾಗಿ ತಿಳಿದ ವಿಷಯವೇ ಆಗಿರುತ್ತೆ.

ವೃದ್ಧಪಿತಾಮಹರ ಶಿಷ್ಯರಾಗಿ ತಮ್ಮ ಸಾಧ್ವಿ ಎಂಬ ಪತ್ರಿಕೆಯನ್ನು ಪುನರುಜ್ಜೀವಿಸಲು ಪ್ರಯತ್ನ ಪಟ್ಟಿರುವುದಕ್ಕಾಗಿ ನಾನು ಬಹು ಸಂತೋಷಪಡುತ್ತೇನೆ. ಸಾಧ್ವಿಯು ಯಶಸ್ವಿಯಾಗಿಯೂ, ಯಶಸ್ವಿಯಾಗಿ ಪ್ರಯೋಜನಕರವಾಗಿರಲಿ ಎಂದು ನನ್ನ ಹಾರೈಕೆ.

ತ್ರೈನ ಸಬ್ಬರ್ ಬೊಂಬೆ ಮಕ್ಕಳಿಗೆ ಕೇಳಿ ಜೇಬಿ ನಾನು ಬರಯುವುದೇ ನಿನಗೆ ಪ್ರೈಜ್ ಮೆಂಟ್.

ನೀನೂ ತಾತಯ್ಯನವರಂತೆಯೇ ಆಗಬೇಕು. ನೀನೂ ತಾತನೇ ಆಗಬೇಕು. ಇವೆ ನನ್ನ ಆಸೆ. ತಾತಯ್ಯನವರು ಎಲ್ಲಾ ಹುಡುಗರನ್ನೂ ಏನೋ ಸ್ಟೈಲಿ ಎಂಬುದಾಗಿ ತಬ್ಬಿಡಿಸುತ್ತಿದ್ದರು. ಅವರ ಅನೇಕರಲ್ಲಿರೂ ಪ್ರೀತಿಗಾಗಿ ಕೊಡಲು ಎಂಬುದೇ ಒಂದು. ತಾತಯ್ಯನವರು 90 ವರುಷಗಳು ಬದುಕಿದ್ದರು. ನೀನು 100 ವರ್ಷ ಬದುಕಿ ಬಾಳು. ಇದೇ ನನ್ನ ಆಶೀರ್ವಾದ.

ಮಕ್ಕಳ ತಾತ

V P Madhava Raos' Tribute

Accept the late Mr M Venkatkrishnayya as an example of strenuous public life which knew no fear. He created public life in Mysore. It is for succeeding generations to follow his worthy example.

ಇಣಕಪ್ಪನ ನೋಟ.

ಸ್ವಾಮಿ,
ಸಂಪಾದಕ ಮಹಾಶಯರೇ!
ನಮಸ್ಕಾರ!
ವಾದೀವಾದಿಗಳೇ ನಿಮಗೊಂದು
ನಮಸ್ಕಾರ!
ವಾಚಕ ವೃಂದಕ್ಕೆ ಮತ್ತೊಂದು
ನಮಸ್ಕಾರ!

ಇಲ್ಲಿ ನನ್ನ ಪುರಾಣವ ಸ್ವಲ್ಪ ಬಿಚ್ಚೀತೀನಿ. ಏನೋ ಅಂತ ಘಾಬರಿಪಟ್ಟು ಕೋಬ್ಯಾಡಿ. ನೀವು ಮೊದಲೇ ವಾದೀವಾದಿಗಳು. ಅಂದರೆ ಸ್ಪೆಷಲ್ ಜಂಜರ ಸೃಷ್ಟಿ ನಿಮ್ಮಲ್ಲಿ ಇದೆ ಅಂತ ಎಲ್ಲರ ಭಾವನೆ. ಎಲ್ಲರ ಭಾವನೆಯೇನು? ರಾಜಕೀಯ ಚಳುವಳಿಯಲ್ಲಿ ನಲಿ ದಾಡುವ ನಿಮ್ಮಂತಹವರುಗಳ ಬಲಿಷ ವಲಸಗಳಿಗೂ ಪ್ರಭುತ್ವಕ್ಕೂ ನಿಕಟ ಸಂಬಂಧ ತ ಸಂಬಂಧದ ಸೂಗಸೇನು! ಎಷ್ಟು ಸೊಗಸು! 'ಸೂತ್ರಿಲ್ಲದ' ಪತ್ರಿಕೋದ್ಯೋಗಿಗಳಾದ ನಿಮ್ಮನ್ನು ವಾದಲೀ ಎಲ್ಲರೂ ಆದರಿಸುತ್ತಿರುವರು. ಈಗಲೀಗ ಅಂತು ತಾವೂ ಸಹ ಒಂದು ರಾಷ್ಟ್ರೀಯ ಭಾವನೆಯನ್ನು ಹರಡತಕ್ಕ ಪತ್ರಿಕೆಯ ಚಾಲಕರಾಗಿರುತ್ತೀರಿ. ಅವರೊಳಗೂ ವೃದ್ಧಪಿತಾಮಹರ ಬ್ವಾಸಕಾರ್ದವಾಗಿ, ಅವರು ನಡೆಸುತ್ತಿದ್ದ "ಸಾಧ್ವಿ" ಪತ್ರಿಕೆಯನ್ನೇ ತಾವು ಪುನರುಜ್ಜೀವನಗೊಳಿಸಿ ಶಿಷ್ಯ ನಿಸುವುದರಿಂದ ತಮ್ಮ ಸಹಾಯವು ಯಾರಿಗ ತಾನೇ ಬೇಡ? ಸ್ವಾಮಿ!

ಏನಪ್ಪ! ನಿನ್ನ ಪುರಾಣ ಬಿಗ್ರತಿ ಹೇಳಯ್ಯಾ! ಅಂತ ಬೇಸರ ಪಡಬ್ಯಾಡಿ. ಅದಕ್ಕೇ ನಾನು ಮೊದಲೇ ನಮಸ್ಕಾರ ತಗೊಳ್ಳೀ ಅಂತ ಹೇಳ್ಬಿಟ್ಟಿದ್ದೀನಿ.

ಏನೋ ಯೋಚನೆ! ಏನೋ ಮಾತು! ಇಲ್ಲ ಇಲ್ಲ ಈಗ ಜ್ಞಾಪಕ ಬಂತು. ಏನೂ ಅಂದರೆ! ಇಷ್ಟೇ. ನೀವೂ ನೋಡ ಲ್ ಹಾಕುತ್ತೀರಲ್ಲ! ಅದರಲ್ಲಿ ನನಗೂ ಒಂದು ರವಷ್ಟು ಜಾಗಾನಾ ಕೊಡುತ್ತೀರೇನೋ ಅಂತ ಕೇಳಬೇಕು ಅನ್ನುವ ಇರಾದೆ ಇದೆ. ಅಷ್ಟೇ ಸ್ವಾಮಿ!

ನೋಡಿ! ನನಗೆ ಹಾಕಿದ ಜಾಗ ಕೊಡ ಬೇಡಿ. ಪ್ರತಿಯಾಗಿ ನನಗೂ ಒಂದಾನ ಮೀಸಲಾಗಿ ಕಟ್ಟಿ ಹಾಕಬ್ಯಾಡಿ ಯಾಕ ಅಂತೀರೋ!

ನಾನು ಧೈರ್ಯ ಬರಯೋದನ್ನೂ ಜೋಬಿಗೆ ಹಾಕ್ಕೊಂಡು ಹೋಗೋದನ್ನೂ ಅಲ್ಲಿ ಪಾನ್ ಸುಪಾರಿ ಹಾಕೋದನ್ನೂ ಅಲ್ಲಿ ಭೂಲೋಕ ಸುಪರ್ ಲೋಕಗಳ ಓಡಾಟದ ನಾಟಕದಂತೆ ಸ್ಥಳ, ಮನೆ ಬಿಟ್ಟು ದೇಶಾಂತರ ಅಲೆಯುವವನು. ಅಲ್ಲಿ ಮಸಾಲೆ ಕೇಳ್ತೀರೇನೋ! ಬೇಸಿಗೆ ಕಾಲ ದೇಹಕ್ಕೆ ವಿಪರೀತ ಖಾರ ಆಗೊಲ್ಲ. ಮಸಾಲೆಯೂ ಆಗೊಲ್ಲ ಅಂದ ಮೇಲೆ, ಈ ವಣೆಯಲ್ಲಿ ಚಟಕೆಗಳಿಗಂತೂ ದೂರದಲ್ಲೇ ನಮಸ್ಕಾರ! ದಪ್ಪ ರವೆಗ್ನಾಪ ರೂ ಓಡಿಯೋಣ ಅಂದರ ನೋಡಿ! ಸ್ವಲ್ಪ ನಿಧಾನವಾಗಿ! ವಂಶಪಾರಂಪರ್ಯವಾಗಿ ನಡೆ ದುಬರುತ್ತಿದ್ದ ದ್ವಾರಪಾಲಕರುಗಳ ದಸ್ತು ರಕ್ಷೇನೆ ಬಂತು! ಏನಾ ಕಾಲ! ಪ್ರಭುತ್ವದ "ಕಾನೂನು" ಎಂಬ ಬಿದ್ದವು ಒಂದು ಕಡೆಯಿಂದ ಆ ಪಕ್ಕದಾರರನ್ನು ಓಡಹುಟ್ಟಿ ಮಾಡಲು ಹೊರಟಿದೆ. ಉದರ ಭರಣಕ್ಕಾಗಿ ಹಿರಣ್ಯಪ್ಪನ ವಸ್ತ್ರ ಒಂದನ್ನು ಬಿಟ್ಟು ನನ್ನ ವಸ್ತ್ರ ಕೇಳೋದನ್ಯಾರೋ?

'ಪಾಪಿ' ಅಂತೀರೋ! ಹಾ! ಅಂತ ಆಕಾಶವಾಣಿಯೇ ಎದ್ದಿದ್ದು ಕುಣೀತಿರೋವಾಗ ಈ ವಾಣಿ ಯಾರಿಗ ತಾನ ಬೇಕು? 'ಕಂಡದ್ದು ಹೇಳೋಕ್ಕೋದರೆ ಕೆಂಡದಂತ ಕೋಪ' ಆದ್ದರಿಂದ ಅದೂ ಬೇಡ. ಇದು ಕಲಿಗಾಲ, ತಲೆ ಕಳೆಗಿನ ಪ್ರಪಂಚ. ನಮಗೆ 'ಸರ್ವಜ್ಞಮೂರ್ತಿ' 'ಸೋಮೇಶ್ವರ ಶತಕ' "ಪುರಂದರದಾಸರ ಪದಗಳು" ಇವುಗಳಲ್ಲಿ ಬೆಲೆಯಾದರೂ ಏನಿದೆ?

ಇದೊಂದೂ ಒಲ್ಲದಿದ್ದರೆ ನೀ ಹಾಳಾಗಿ ಹೋದೇನು? ಅಂತ ಕೇಳೀರೇನೋ.

ಸ್ವಲ್ಪ ಕೇಳಿ! ಕಣ್ಣ ಕಟ್ಟಿ ನಾ ಹೋಕೆ ಹೋಗೊಲ್ಲ. ಎಲ್ಲರಂತ ಜಂಟಲ್ ಮನ್ ಔಟ್ ಲಾರ್ಜ್ ಅಲ್ಲ. ನನಗೆ ದೇಶ ಭೂಷಣಗಳಲ್ಲಿ ಸಾರ್ವಜನಿಕ ಪ್ರಪಂಚದಲ್ಲಿ ದಿನಂ ಪ್ರತಿ ನನ್ನ ದೃಷ್ಟಿಗೆ ಬೀಳುವ ಕುಂದು ಕೊರತೆಗಳು, ನನ್ನ ಒಂದು ಛಗಿಸಿರುವ ಕ್ಷೇಮಲಾಭಕ್ಕಾಗಿ ಅನುಸರಿಸಬೇಕಾದ ಪರಿಹಾರೋಪಾಯಗಳು, ಇವೇ ನನ್ನ ಮುಖ್ಯವಾದ ಗುರಿ.

ಎಷ್ಟರ ಮಟ್ಟಿಗೆ ಸಾಧ್ಯವೋ ಅಷ್ಟು ಒಳ್ಳೆಯದು. ಜೊತೆಗೆ ಕಲ್ಯಾಣವಾಗುವುದಕ್ಕೆ ಕಾರ್ಯನಿರ್ವಹಿಸುವವರು ಸಾವು ಇಲ್ಲದೇ ಆಗದಿದ್ದರೆ ಆ ಜಗತ್ತಿನ ಯಾಮಕನಿಂದ ಕೂಡಲ್ಪಟ್ಟಿರುವ ಜ್ಞಾನೇಂದ್ರಿಯಗಳಿಂದ ಇಣಿಕಿ ನೋಡಿಯಾದರೂ ತಿಳಿದದ್ದನ್ನು ವಂಚನೆಯಿಲ್ಲದೇ ಆವೃತ್ತಿಗೆ ಮಾಡುವುದು. ಇದರಿಂದ ಕೆಲವರಿಗೆ ಸಮಾಧಾನವಾಗಬಹುದು. ಮತ್ತೆ ಕೆಲವರಿಗೆ ಅಪ್ರಿಯವಾಗಿಯೂ ಇರಬಹುದು. ಇವುಗಳ ಕೆಲವರಿಗ ತೃಪ್ತಿ, ಅಸಂತೃಪ್ತಿಗಳೆರಡೂ ಏಕಕಾಲದಲ್ಲಿಯೇ ಉಂಟಾಗಬಹುದು. ಅದೊಂದನ್ನೂ ಲಕ್ಷ್ಯಕ್ಕೆ ತಾರದೆ ಇದ್ದದ್ದನ್ನ ಇದ್ದ ಹಾಗೆ ಬರೆದು ಬಿಡುವೆನು.

ನಂತರ ಅದರಲ್ಲಿ ಒದಗಬಹುದಾದ ಜಗಳ, ಕಲಹಗಳ ಜವಾಬ್ದಾರಿಯು ನನ್ನದಲ್ಲ. ಅಂತೆಯೇ ತಮ್ಮ ಜವಾಬ್ದಾರಿಯೂ ಕೂಡ ಇಲ್ಲ. ನೀವೂ ನನ್ನ ನೋಟ ಪ್ರಚಾರ ಮಾಡಬೇಕೆಂತ ಕೋರಿದರೇನೆ ಮಾಡಿ. ನಿಮ್ಮ ವಾಚಕ ವೃಂದವೂ ಸಹ ಲಭ್ಯವಿದ್ದಂತೆ ಸಂತೋಷವನ್ನು ಹೊಂದಲಿ.

ಭೇಷ್ ಎಂತ ಬೆನ್ನು ತಟ್ಟಿದರಂತೆ ಸರಿ. ನನ್ನ ನೋಟದ ದೃಷ್ಟಿಯು ಮತ್ತಷ್ಟು ವಿಶಾಲವಾಗಿ ಪಸರಿಸುವಂತೆ, ಅಂಜನ ಇಟ್ಟಂತಾಯಿತು ಇಲ್ಲ! ವ್ಯಾಕುಲಪಟ್ಟರೇ ನನ್ನ ಶ್ರಮವೇ ತಪ್ಪಿತು! ಇದರ ಮೇಲೆ ಅಪ್ಪಣೆಯೇನು! ಸ್ವಾಮಿ!

ನಿಮಗಾಗಲಿ ನಿಮ್ಮ ವಾಚಕ ಸಮುದಾಯಕ್ಕಾಗಲಿ ಬೇಸರವಾಗದಂತಿರಲೆಂದು ವಿಷಯಗಳನ್ನು ಅಂಬಿಸದ ಸಂಕ್ಷಿಪ್ತವಾಗಿ ಬರೆಯಬೇಕೆಂದಿರುತ್ತೇನೆ. ನನ್ನ ನೋಟಗಳು ವಿರಾಮವಾದಾಗೆಲ್ಲಾ ನಿಮ್ಮ ಪತ್ರಿಕೆಯಲ್ಲಿ ಪ್ರಚುರವಾಗಲು ಆಕಾರವಾಗಿ ಕೊಡುವಿರೆಂದು ನಂಬಿರುವ

ತಮ್ಮ ವಿಶ್ವಾಸಿ, ಇಣಕಪ್ಪ



ಕರ್ಣಾನಂದಕರವಾದ ರೇಡಿಯೋ ಸಂಗೀತ!

ನೂತನ ವರ್ಷದ ಜ್ಞಾಪಕಾರ್ಥವಾಗಿಯೂ ಮತ್ತು ನಮ್ಮ ಪ್ರಿಯಗಿರಾಕಿಗಳ ಸೌಕರ್ಯಕ್ಕಾಗಿಯೂ
ನೂರಾರು ರೂಪಾಯಿಗಳ ವೆಚ್ಚದಿಂದ
ಹೊಸ ರೇಡಿಯೋ ಯಂತ್ರವನ್ನು ನಮ್ಮ ಫಲಹಾರಮಂದಿರದಲ್ಲಿ ಸ್ಥಾಪಿಸಿರುತ್ತೇನೆ.

—ಉಡುಪಿ ಆನಂದ ಭವನಂ—

ಬ್ರಾಹ್ಮಣರ ಫಲಹಾರ ಮಂದಿರ
ಸಿಲ್ವರ್ ಜ್ಯೂಬಿಲಿ ಕ್ಲಾಕ್ ಟವರ್ ಎದುರು, ಮೈಸೂರು

ಬ್ರಾಹ್ಮಣ ಸ್ವಾಮಿ ಬಂಗ್ಲೆ, [illegible] ... ಶುದ್ಧ ... ಕೃಷ್ಣರಾಜಸಾಗರ ಬೃಂದಾವನ
ರುಚಿಕರವಾದ ಫಲಹಾರ! ... ಉತ್ತಮವಾದ ಕಾಫಿ ಮತ್ತು ಟೀ!!
ಮಹಾಜನರು ಈ ಸ್ವದೇಶೀಯರ ಫಲಹಾರ ಮಂದಿರವನ್ನು ಪ್ರೋತ್ಸಾಹಿಸಬೇಕಾಗಿ ಪ್ರಾರ್ಥನೆ.
ಕೆ. ಗುರುರಾಜಾಚಾರ್, ಪ್ರೊಪ್ರೈಟರ್

NEW 1936 MODEL PILOT RADIO

Udupi Ananda Bhavanam

OPPOSITE TO SILVER JUBILEE CLOCK TOWER, MYSORE CITY.

S U L O C H A N A

In "A N A R K A L I" to be Screened at OLYMPIA TALKIES, Mysore during the 1st week of March 1936

ಶ್ರೀ ಸತ್ಯನಾರಾಯಣ ವೈದ್ಯಶಾಲೆ,

ಚಲುವಾಂಬಾ ಅಗ್ರಹಾರ, ಮೈಸೂರು
[illegible], ಅಶ್ವಗಂಧಿ ರಸಾಯನ, ಜ್ವರಾಂಕುಶ ಮಾತ್ರೆಗಳು, ಸತ್ಯನಾರಾಯಣ ರಸಾಯನ
ದಂತಧಾವನ ಚೂರ್ಣ, ಪುಷ್ಪಾಂಜನ

ಪಂಡಿತ ಸಿ. ಎಚ್. ಚಂದ್ರಶೇಖರಸಿಂಗ್ ಅಂಡ್ ಬ್ರದರ್

ಮಹಾಕಾಳಿಂಗಾದಿ ಕಷಾಯ

'ಮಲೇರಿಯಾ ಮತ್ತು ಇತರ ಜ್ವರಗಳಿಗೆ [illegible] ಈ ಕಷಾಯವು ಪ್ಲೀಹ ಮತ್ತು ಯಕೃತ್ಪಿಂಡಗಳ ವರ್ಧನ (ಜ್ವರಗೆಡ್ಡೆ) [illegible] ದೀರ್ಘಕಾಲದ ಎಲ್ಲಾ ಬಗೆಯ ಜ್ವರಗಳಿಗೂ [illegible] ಈ ಬಗೆಯ ಜ್ವರವು [illegible] ಇದರ ಸೇವನೆಯಿಂದ ಯಕೃತ್ಪಿಂಡದ ಕೆಲಸವು [illegible] ಪ್ಲೀಹವು ತನ್ನ ಸ್ಥಿತಿಗೆ ಬರುವುದು ರಕ್ತದಲ್ಲಿ ಕೆಂಪುರಕ್ತಕಣಗಳು ಹೆಚ್ಚುವವು

[illegible] ಸ್ವಲ್ಪ ದಿವಸಗಳಲ್ಲಿಯೇ ಉತ್ತಮವಾದ ಆರೋಗ್ಯ ಸ್ಥಿತಿಗೆ ಬರುವನು. ಈ ಶಾಸ್ತ್ರೀಯ ವನಸ್ಪತಿ ಸಂಯೋಗವು [illegible]
[illegible] ಗುಣಪಡಿಸುತ್ತದೆ [illegible] ೧—೪—೦
ಬ್ರಾಂಚ್.—ಶ್ರೀ ಸತ್ಯನಾರಾಯಣ ಆಯುರ್ವೇದಿಕ್ ಮೆಡಿಕಲ್ ಸ್ಟೋರ್ಸ್, ಜಗನ್ಮೋಹನ ಬಂಗ್ಲೆ ರಸ್ತೆ, ಮೈಸೂರು

ನಾಳಿನ ಮಹಾ ಮೈಸೂರು.

ಉದಯಿಸಲು ಅಡಿಗಲ್ಲನ್ನಿಡಿ.

ಮೈಸೂರು ವಿಮಾ ಕಂಪೆನಿಯೊಂದಿಗೆ ಸರ್ವ ಪ್ರಕಾರದಿಂದಲೂ ಸಹಕರಿಸಿ ಇದು ನಮ್ಮ ಪ್ರಾರ್ಥನೆ

ಹೀಗೆ ಪ್ರಾರ್ಥಿಸುವುದು ನಮ್ಮ ಆಜನ್ಮಸಿದ್ಧವಾದ ಹಕ್ಕು ಹಾಗೆ ಸಹಕರಿಸುವುದು ನಿಮ್ಮ ಪವಿತ್ರ ಕರ್ತವ್ಯ

ಕರ್ನಾಟಕದಲ್ಲಿ ಸ್ಥಾಪಿತವಾದ ವಿಮಾ ಕಂಪೆನಿಗಳಲ್ಲಿ ಪ್ರಥಮ ವರ್ಷದಲ್ಲೇ ಯಾವುದೂ ಈ ಕಂಪೆನಿಯಷ್ಟು ಕಾರ್ಯನಡೆಸಿಲ್ಲ.

ನಾಳಿನ ಮಹಾ ಮೈಸೂರಿನ ಮುಂಬೆಳಗು ಯಾವುದು ?

ಮೈಸೂರು ವಿಮಾ ಕಂಪೆನಿ, ಲಿಮಿಟೆಡ್.,

ಬೆಂಗಳೂರು

ಮೈಸೂರು ವಿಮಾ ಕಂಪೆನಿಯು ಮೈಸೂರಿನವರ ಮತ್ತು ಮೈಸೂರಿನ ಅಭ್ಯುದಯಕ್ಕಾಗಿ ಮೈಸೂರು ಬಂಡವಾಳದಿಂದ ಮೈಸೂರಿನವರ ನೇತೃತ್ವದಲ್ಲಿ ಮೈಸೂರಿನ ಕೆಲಸಗಾರರಿಂದ ನಡೆಸಲ್ಪಡುತ್ತಿರುವ ಅಚ್ಚ ಮೈಸೂರು ಸಂಸ್ಥೆ.

ಭಾರತಮಾತೆಯ ಆರ್ಥಿಕೋನ್ನತಿಗಾಗಿ ದೇಶದ ನಾನಾ ಭಾಗಗಳಲ್ಲಿ ನಡೆಯುತ್ತಿರುವ ಪ್ರಯತ್ನಗಳಿಗೆ ತನ್ನ ಶಕ್ತ್ಯಾನುಸಾರ ಮೈಸೂರು ನೆರವಾಗಬೇಕೆಂಬ ಆಶಯದಿಂದ ಈ ಸಂಸ್ಥೆಯು ಬೆಳಕುಗಂಡಿತು.

ವಿಮಾ ಉದ್ಯಮದಲ್ಲಿ ಇದೇ ಸಂಸ್ಥಾನಕ್ಕೆ ಏಕಮಾತ್ರ ಆದರ್ಶ ಸಾರ್ವಜನಿಕ ಸಂಸ್ಥೆಯಿದು.

ಇಂತಹ ಕಂಪೆನಿಯಲ್ಲಿ ಮೈಸೂರಿನವರೆಲ್ಲರ ಪ್ರಾತಿನಿಧ್ಯವಿದ್ದೇ ತೀರಬೇಕು.

ಮೊದಲಿನ ೧ ಲಕ್ಷ ರೂ ಗಳ ಷೇರುಗಳೂ ಅತ್ಯಲ್ಪಕಾಲದಲ್ಲಿಯೇ ಚಂದಾ ಆಗಿಹೋದವು

ಬೇಡಿಕೆ ಅವಶ್ಯಕತೆಗಳನ್ನನುಸರಿಸಿ

ಷೇರು ಬಂಡವಾಳವನ್ನು ಇನ್ನೂ ೨ ಲಕ್ಷ ಹೆಚ್ಚಿಸಲಾಗಿದೆ

ಈ ಎರಡು ಲಕ್ಷದಲ್ಲಿ ೧೦೦ ರೂಗಳ ೧೦೦೦ ಷೇರುಗಳನ್ನು ಮಾತ್ರ, ಡೈರೆಕ್ಟರುಗಳು ಮಾರಾಟಕ್ಕಿಟ್ಟಿರುವರು

ಈ ಸಾವಿರ ಷೇರುಗಳಲ್ಲಿ ಈಗಾಗಲೇ ಬಹು ಭಾಗವು ಚಂದಾ ಆಗಿದೆ

ಷೇರು ಬೇಕಾದರಿಂದೇ ಬರೆಯಿರಿ ಇಂದು ಬಿಟ್ಟರೆ ನಾಳೆ ಸಿಗದು ! ತ್ವರೆಮಾಡಿ

ಸರ್ವರ ಅನುಕೂಲ ಅವಶ್ಯಕತೆಗಳಿಗೆ ಸರಿಹೊಂದುವ ವೈದ್ಯ ಪರೀಕ್ಷೆಯಿರುವ ಮತ್ತು ಇಲ್ಲದಿರುವ ನವೀನ ವಿಮಾ ಪದ್ಧತಿಗಳು.

ಸ್ತ್ರೀಯರೂ ವಿಮೆ ಮಾಡಬಹುದು

ಏಜೆಂಟರುಗಳಿಲ್ಲದ ಸ್ಥಳಗಳಲ್ಲೆಲ್ಲಾ ಏಜೆಂಟರು ಬೇಕು.

ವೇತನದ ಮೇಲೆ ಕೆಲಸ ಮಾಡಲು ಅವಕಾಶವಿದೆ.

ಹೆಚ್ಚು ವಿವರಗಳಿಗೆ—

ಕಂಠೀರವ ಮತ್ತು ಕಂಪೆನಿ,
ಮ್ಯಾನೇಜಿಂಗ್ ಏಜೆಂಟ್ಸ್
ಮೈಸೂರು ವಿಮಾ ಕಂಪೆನಿ ಲಿಮಿಟೆಡ್,
ಶ್ರೀ ನರಸಿಂಹರಾಜ ರೋಡ್, ಬೆಂಗಳೂರು ಸಿಟಿ

KANTEERAVA & Co.
Managing Agents,
MYSORE INSURANCE CO., LTD.,
Narasimharaja Road, Bangalore City.

Edited, Printed & Published by Agaram Rangiah B.A. at Sri Rama Press, D. Subbiah Road, Mysore

ವಾರ್ಷಿಕ, ಚಂದಾ ವಿವರ.

[illegible] 1—5—0
[illegible] 2—1—0 [illegible] 0—0—6

0—1—0 [illegible]

|| ಸತ್ಯಮೇವೋದ್ಧರಾಮ್ಯಹಮ್ ||

ರಾಜಧಾನಿಯ ರಾಷ್ಟ್ರೀಯ ವಾರ ಪತ್ರಿಕೆ.

ವೃದ್ಧ ಪಿತಾಮಹ ಎಂ. ವೆಂಕಟಕೃಷ್ಣಯ್ಯನವರ ಜ್ಞಾಪಕಾರ್ಥವಾಗಿ ಪ್ರಕಟಿಸಲ್ಪಡುವುದು.

ಸಂಪಾದಕರು ಅಗರಂ ರಂಗಯ್ಯ, ಬಿ. ಎ.

ಸಂಪುಟ ೧] ಮೈಸೂರು : ಸೋಮವಾರ ೨—೩—೧೯೩೭ [ಸಂಚಿಕ ೨

ಶ್ರೀಮನ್ ಮಹಾರಾಜರವರು

ಕಳೆದ ಸೋಮವಾರ ರಾಮನಾದಪುರದ ಸೇತುವೆಯ ಶಂಕು ಸ್ಥಾಪನೆಯನ್ನು ಮಾಡಿದರು.

ಕರ್ಣಾನಂದಕರವಾದ ರೇಡಿಯೋ ಸಂಗೀತ!
ನೂತನ ವರ್ಷದ ಜ್ಞಾಪಕಾರ್ಥವಾಗಿಯೂ ಮತ್ತು ನಮ್ಮ ಪ್ರಿಯಗಿರಾಕಿಗಳ ಸೌಕರ್ಯಕ್ಕಾಗಿಯೂ
ಸಾವಿರಾರು ರೂಪಾಯಿಗಳ ವೆಚ್ಚದಿಂದ
ಹೊಸ ರೇಡಿಯೋ ಯಂತ್ರವನ್ನು ನಮ್ಮ ಫಲಹಾರಮಂದಿರದಲ್ಲಿ ಸ್ಥಾಪಿಸಿರುತ್ತೇವೆ.

ಉಡುಪಿ ಆನಂದ ಭವನಂ

ಬ್ರಾಹ್ಮಣರ ಫಲಹಾರ ಮಂದಿರ,
ಸಿಲ್ವರ್ ಜುಬಿಲಿ ಕ್ಲಾಕ್ ಟವರ್ ಎದುರು, ಮೈಸೂರು.
ಬ್ರಾಂಚ್ . ಟೌನ್ ಬಂಗ್ಲಾ, ಮೈಸೂರು ಮತ್ತು ಕೃಷ್ಣರಾಜಸಾಗರ ವೃಂದಾವನ
ರುಚಿಕರವಾದ ಫಲಹಾರ! ಉತ್ತಮವಾದ ಕಾಫಿ ಮತ್ತು ಟೀ!
ಮಹಾಜನರು ಈ ಸ್ವದೇಶೀಯ ಫಲಹಾರ ಮಂದಿರವನ್ನು ಪ್ರೋತ್ಸಾಹಿಸಬೇಕಾಗಿ ಪ್ರಾರ್ಥನೆ ಕೆ. ಗುರುರಾಜಾಚಾರ್, ಪ್ರೊಪ್ರೈಟರ್

NEW 1936 MODEL PILOT RADIO

Udupi Ananda Bhavanam

OPPOSITE TO SILVER JUBILEE CLOCK TOWER, MYSORE CITY

SULOCHANA

IN

Wild Cat of Bombay

Comming Shortly

AT

OPERA TALKIES.

ಶ್ರೀ ಸತ್ಯನಾರಾಯಣ ವೈದ್ಯಶಾಲೆ,

ಚಾಮುಂಡಿ ಅಗ್ರಹಾರ ಮೈಸೂರು
ನಿಸ್ಸೋಟಿ ನಿವೃಂಸಿಪ್ರಿ, ಆಪ್ತಾಣ ಚೂರ್ಣ, ದ್ರಾಕ್ಷಾದಿ ರಸಾಯನ, ಜ್ವರಾಂಕುಶ ಮಾತ್ರೆಗಳು, ಸತ್ಯನಾರಾಯಣ ರಸಾಯನ
ದಂತರೋಗ ನಿವಾರಿಣಿ, ಮೃತ್ಸಂಜನ

ಪಂಡಿತ ಸಿ. ಎಚ್. ಚಂದ್ರಭಾನುಸಿಂಗ್ ಅಂಡ್ ಬ್ರದರ್

ಮಹಾಕಾಳಿಂಗಾದಿ ಕಷಾಯ

"ಮಲೇರಿಯಾ ಮತ್ತು ಇತರ ಜ್ವರಗಳಿಗೆ ಖಾತರಿ ಔಷಧ ಈ ಕಷಾಯವು ಪ್ಲೀಹ ಮತ್ತು ಯಕೃತ್ತುಗಳ ವರ್ಧನೆ (ಜ್ವರದಗೆಡ್ಡೆ) ಯಿಂದೊಡಗೂಡಿದ ಮತ್ತು ಇತರ ಸತತ ಸಂತತ ಮತ್ತು ದೀರ್ಘಕಾಲದ ಎಲ್ಲಾ ಬಗೆಯ ಜ್ವರಗಳ ಮನಗಂಡ ನಿರ್ಭಯವಾದ ಸಂಜೀವನವು ಪರಿಸ್ಥಿತಿಯಲ್ಲಿ ಆಗಾಗ್ಗೆ ಆವಿಸುವುದರಿಂದ ಈ ಬಗೆಯ ಜ್ವರ ಅಂಟುವುದಿಲ್ಲ ಔಷಧಿಯು ಬಂದೆಂದಾವರ್ತಿ ದಾಳಿಯನ್ನು ಮಾಡಿಸುತ್ತದೆ ಇದರ ಸೇವನೆಯಿಂದ ಯಕೃತ್ತಿನದ ಕೆಲಸ ಸರಿಯಾಗುವದು ಪ್ಲೀಹವು ತನ್ನ ಸ್ಥಿತಿಗೆ ಬರುವುದು ರಕ್ತದಲ್ಲಿ ಕೆಂಪುರಕ್ತ ಕಣಗಳು ಹೆಚ್ಚುವುವು ಮತ್ತು ವ್ಯಾಧಿಗ್ರಸ್ತನು ಸ್ವಲ್ಪ ದಿವಸಗಳಲ್ಲಿಯೇ ಉತ್ತಮವಾದ ಆರೋಗ್ಯ ಸ್ಥಿತಿಗೆ ಬರುವನು. ಈ ಶಾಸ್ತ್ರೀಯ ವನಸ್ಪತಿ ಸಂಯೋಗವು ಎಲ್ಲಾ ಬಗೆಯವುಗಳ ಸಕಲವಿಧ ಜ್ವರಗಳನ್ನು ಗುಣಪಡಿಸುತ್ತದೆ

ಕ್ರಯ ೬ ಔನ್ಸ್ ಶೀಸೆಗೆ ೧—೪—

ಬ್ರಾಂಚ್ —ಶ್ರೀ ಸತ್ಯನಾರಾಯಣ ಆಯುರ್ವೇದಿಕ್ ಮೆಡಿಕಲ್ ಸ್ಟೋರ್ಸ್, ಜಗನ್ಮೋಹನ ಬಂಗ್ಲೆ ರಸ್ತೆ, ಮೈಸೂರು

|| ಸತ್ಯಮೇವೋದ್ಧರಾಮ್ಯಹಮ್ ||
ರಾಜಧಾನಿಯ ರಾಷ್ಟ್ರೀಯ ವಾರ ಪತ್ರಿಕೆ.
ವೃದ್ಧಪಿತಾಮಹ ಎಂ. ವೆಂಕಟಕೃಷ್ಣಯ್ಯನವರ ಜ್ಞಾಪಕಾರ್ಥವಾಗಿ ಪ್ರಕಟಿಸಲ್ಪಡುವುದು.
ಸಂಪಾದಕರು ಅಗರಂ ರಂಗಯ್ಯ, ಬಿ ಎ

ಸಂಪುಟ ೧] ಮೈಸೂರು : ಸೋಮವಾರ ೨—೩—೧೯೩೬ [ಸಂಚಿಕೆ ೨

ಇಂಡಿಯಾ ಸರ್ಕಾರದ ಆಯ ವ್ಯಯ.

ಅಂಚೆ ದರದ ರಿಯಾಯಿತಿ

ಕಳೆದ ಶುಕ್ರವಾರ ಹೊಸಡೆಲ್ಲಿ ನಗರದ ಲ್ಲಿ ನಡೆದ ಪ್ರಧಾನ ನ್ಯಾಯವಿಧಾಯಕ ಸಭೆಯ ಅಧಿವೇಶನದಲ್ಲಿ ಇಂಡಿಯಾ ಸರ್ಕಾರದ ಆಯವ್ಯಯದ ಪಟ್ಟಿಯನ್ನು ಫೈನಾನ್ಸ್ ಮೆಂಬರಾದ ಸರ್ ಜೇಮ್ಸ್ ಗ್ರಿಗ್ಗ್ ರವರು ನಿವೇದಿಸಿದರು. ಅದರಲ್ಲಿ ಈ ಕೆಳಗೆ ಕಂಡ ವಿಶೇಷ ಅಂಶಗಳು ಕಂಡು ಬರುತ್ತವೆ—

(1) ಹೊಸ ತೆರಿಗೆಗಳನ್ನು ಹೇರುವ ಆಲೋಚನೆ ಇರುವುದಿಲ್ಲ.

(2) ಎರಡು ಸಾವಿರ ರೂಪಾಯಿಗಳಿಗಿಂತ ಕಡಿಮೆ ವರಮಾನವಿರುವವರು ವರಮಾನ ತೆರಿಗೆಯನ್ನು ಸಲ್ಲಿಸುವುದಾಗಿಲ್ಲ

(3) ವರಮಾನ ತೆರಿಗೆಯ ಮೇಲೆ ಈ ಗದರಕ್ಕೆ "ಸರ್ ಛಾರ್ಜಿ" ನಲ್ಲಿ ಶೇಕಡ ...ವತ್ತರಂತೆ ಕಮ್ಮಿ ಮಾಡಲಾಗುವುದು

(4) ಒಂದಾಣೆ ಸ್ಟಾಂಪನ್ನು ಹಚ್ಚಿ ಅರ್ಧ ತೊಲ ತೂಕದಷ್ಟು ಮಾತ್ರ ಕಾಗದವನ್ನಿಟ್ಟು ಕಳುಹಿಸುವ ನಿಯಮವು ಇದೆಯಷ್ಟೆ. ಇನ್ನು ಮುಂದೆ ಒಂದು ತೊಲ ದಷ್ಟು ತೂಕದ ಕಾಗದಗಳನ್ನಿಟ್ಟು ರವಾನಿಸಬಹುದು. ಅನಂತರ ಹೆಚ್ಚಾಗಬಹುದಾದ ಪ್ರತಿ ಒಂದು ತೊಲಕ್ಕೂ ಅರುಕಾಸಿನ ಹಚ್ಚು ಸ್ಟಾಂಪನ್ನು ಅಂಟಿಸಬೇಕು

ಮಹಾತ್ಮರ ಶೋಕ.

ಶ್ರೀಮತಿ ಕಮಲಾ ನೆಹರೂರವರ ಮರಣದ ವಿಷಯವಾಗಿ ಮಹಾತ್ಮ ಗಾಂಧಿಯವರು ಈ ಕೆಳಗೆ ಕಂಡ ಶೋಕಸಂದೇಶವನ್ನು ಕಳುಹಿಸಿದ್ದಾರೆ—

ಶ್ರೀಮತಿ ಯವರ ಮರಣದಿಂದ ದೇಶಕ್ಕೆ ಒಂದು ಮಹತ್ತರವಾದ ನಷ್ಟವುಂಟಾಗಿದೆ. ಆಕೆಯನ್ನು ಅನೇಕ ವರ್ಷಕಾಲ ಅತ್ಯಂತ ಸಮೀಪದಲ್ಲಿ ನೋಡಿ ಅರಿಯುವ ಸೌಭಾಗ್ಯವು ನನಗೆ ಇತ್ತು. ಕಮಲೆಗಿಂತಲೂ ಹೆಚ್ಚು ಧೀರಳಾದ, ನಿರ್ಮಳಾದ, ದೇವಭಕ್ತಳಾದ ನಾರೀಮಣಿಯನ್ನು ನಾನು ನೋಡಿಲ್ಲ. ಆಕೆಯ ಜೀವನವು ನಮಗೆಲ್ಲರಿಗೂ ಮಾದರಿಯಾಗಿ ಪರಿಣಮಿಸಲಿ

ಭರತಖಂಡದಲ್ಲಿ ಸಹೃದಯವು ಅತ್ಯವಶ್ಯಕ.

ರೋಟರಿ ಸಮ್ಮೇಳನದಲ್ಲಿ ಶ್ರೀಮದ್ಯುವರಾಜರವರ ಭಾಷಣ.

ಶ್ರೀಮದ್ಯುವರಾಜರವರು

ಶ್ರೀಮದ್ಯುವರಾಜರವರು, ಬೆಂಗಳೂರು ದಂಡಿನಲ್ಲಿ ನಡೆಯುತ್ತಿರುವ ಅಖಿಲ ಭಾರತ, ಬರ್ಮಾ ಮತ್ತು ಸಿಲೋನಿನ ೨೪ನೇ ಡಿಸ್ಟ್ರಿಕ್ಟ್ ರೋಟರಿ 'ಕಾನ್ಫರೆನ್ಸ್' ನವರ ಗೌರವಾರ್ಥವಾಗಿ 'ವೆಸ್ಟ್ಎಂಡ್' ಹೋಟೆಲಿನಲ್ಲಿ ಏರ್ಪಾಟು ಮಾಡಿದ್ದ "ಡಿನ್ನರ್" ಸಮಯದಲ್ಲಿ ಈ ಕೆಳಗೆ ಕಂಡಂತೆ ಭಾಷಣ ಮಾಡಿದರು —

"ರೋಟರಿ' ಯನ್ನು "ಪ್ರೋಮೋಟ್' ಮಾಡುವುದಂದರೆ ಸೌಹಾರ್ದವನ್ನು "ಪ್ರೋಮೋಟ್" ಮಾಡುವುದಂದರ್ಥ ಈಗ ಭಾರತಕ್ಕೆ ಮತ್ತೆಲ್ಲವಕ್ಕಿಂತಲೂ ಹೆಚ್ಚಾಗಿ ಬೇಕಾಗಿರುವುದೇ ಆ ಸೌಹಾರ್ದ. ನಮ್ಮ ದೇಶದಲ್ಲಿ ಸೌಹಾರ್ದವಿದ್ದರೆ ನಾವು ಪಡೆಯಲಾರದ ನಾವು ಏರಲಾಗದ ಉನ್ನತ ಸ್ಥಾನಗಳೇ ಇಲ್ಲ.

"ಮತ ಅವನತಿಗೆ ಎತ್ತ ಎಂಬ ಅಸಂತೃಪ್ತಿ ಅಭಿಪ್ರಾಯಗಳನ್ನು ನಾವು ಇಲ್ಲಿ ಓದುತ್ತೇವೆ ಕೇಳುತ್ತಾ ಹೋಗುತ್ತಿದ್ದೇವೆ, ತಲಾಂತರದವರು ನಡೆಸಿಕೊಂಡು ಬರುತ್ತಿದ್ದ ಕುರುಡು ಮತಾಚಾರಗಳು ಅವನತಿಗೆ ಬಂದಿವೆ ಎಂಬುದೇ ಇವರ ಸಾಧಾರಣ ಅರ್ಥ. ಭಿನ್ನತೆಯಲ್ಲಿ ಐಕ್ಯತೆಯನ್ನು ಅಭಿವೃದ್ಧಿ ಮಾಡುವುದು, ಪರಸ್ಪರ ಭಾವನೆಗಳನ್ನು ತಿಳಿದುಕೊಳ್ಳುವುದು ಮತ್ತು ಸಾಮಾನ್ಯ ಸೌಹಾರ್ದವನ್ನುಂಟು ಮಾಡುವುದು, ಇವೇ ಮೊದಲಾದ ಉದ್ದೇಶಗಳನ್ನಿಟ್ಟುಕೊಂಡು ಸ್ಥಾಪಿತವಾಗಿ ಈಗ ಪ್ರಪಂಚದಲ್ಲಿ ಅಭಿವೃದ್ಧಿ ಹೊಂದಿರುವ ಕೆಲವು ಚಳವಳಿಗಳನ್ನು ಜ್ಞಾಪಿಸಿಕೊಂಡು ಸಂತೃಪ್ತರಾಗುತ್ತೇವೆ. 'ರಾಮಕೃಷ್ಣ ಮಿಷನ್' 'ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿ,' 'ಸ್ಟೂಡೆಂಟ್ಸ್ ಕ್ರಿಶ್ಚಿಯನ್ ಅಸೋಸಿಯೇಷನ್' 'ದಿ ವರ್ಲ್ಡ್ ಫೆಲೋಷಿಪ್ ಆಫ್ ಫೈತ್ಸ್,' ರೆಡ್ ಕ್ರಾಸ್ ಸೊಸೈಟಿ ಬಾಯ್ಸ್ ಸ್ಕೌಟ್ಸ್ ಚಳುವಳಿ, ಕೋ ಆಪರೇಟಿವ್ ಚಳುವಳಿ, "ಓವರ್ ಸೀಸ್ ಲೀಗ್ ಮತ್ತು "ಲೀಗ್ ಆಫ್ ನೇಷನ್ಸ್, ಈ ಸಂಸ್ಥೆಗಳಂತಹ ಚಳುವಳಿ ವಿಷಯವನ್ನೇ ನಾವು ಈಗ ಮಾತನಾಡುತ್ತಿರುವುದು ಈ ಸಂಸ್ಥೆಗಳು ಅಂತಹ ಚಳುವಳಿಗಳಲ್ಲಿ ಕೆಲವು ಮಾತ್ರವೇ. ಈ ಸಂಸ್ಥೆಗಳು ಬೇರೆ ಬೇರೆ ಮಾರ್ಗಗಳನ್ನು ಅವಲಂಬಿಸಿದ್ದರೂ ಅವುಗಳ ಧ್ಯೇಯವೊಂದೇ. ಆ ಧ್ಯೇಯವು ಪ್ರಪಂಚದಲ್ಲಿ ಭ್ರಾತೃತ್ವವನ್ನೂ ಸೇವಾ ಅಭಿಪ್ರಾಯವನ್ನೂ ಹರಡುವುದು'

ಮೈಸೂರು ಪೌರಸಭೆ.

ಕಮಲಾ ನೆಹರೂರವರ ಮರಣದ ಬಗ್ಗೆ ಸಂತಾಪ

ಮೊನ್ನೆ ದಿನ ಸಾಯಂಕಾಲ ರಾಜಧಾನಿಯ ಪೌರಸಭೆಯ ಸಾಧಾರಣ ಮೀಟಿಂಗು ನಡೆಯಿತು ಶ್ರೀ|| ಎಂ ಎ ಶ್ರೀನಿವಾಸನ್ ರವರು ಅಗ್ರಾಸನವನ್ನು ವಹಿಸಿದ್ದರು. ದಿವಂಗತರಾದ ಶ್ರೀಮತಿ ಕಮಲಾ ನೆಹರೂರವರ ಬಗ್ಗೆ ಶೋಕಸೂಚಕನಿರ್ಣಯವನ್ನು ಎಲ್ಲರೂ ಎದ್ದು ನಿಂತು ಅನುಮೋದಿಸಿದರು. ಈ ತಿಂಗಳು 28 29 ಮತ್ತು 30ನೇ ತಾ|| ಗಳಲ್ಲಿ ದೆಹಲಿಯಲ್ಲಿ ನಡೆಯುವ ಅಖಿಲಭಾರತ ಸ್ಥಳೀಯ ಸಂಸ್ಥೆಗಳ ಸಮ್ಮೇಳನಕ್ಕೆ ಶ್ರೀ|| ಎಚ್ ಸಿ ದಾಸಪ್ಪನವರು ಪ್ರತಿನಿಧಿಯಾಗಿ ಚುನಾಯಿಸಲ್ಪಟ್ಟರು. ಅವರ ಖರ್ಚಿನ ಬಗ್ಗೆ ಐದುನೂರು ರೂಪಾಯಿ ಮಂಜೂರಾಯಿತು. ಮುನಿಸಿಪಲ್ ಚುನಾವಣೆಯ ಎಲ್ಲಾ ನಗರಗಳನ್ನು ರೀತಿ ಬೇರೆ ವಾರ್ಡುಗಳಾಗಿ ಹಂಚುವ ವಿಷಯದಲ್ಲಿ ಸರ್ಕಾರದವರು ಸಭೆಯ ಅಭಿಪ್ರಾಯವನ್ನು ಕೇಳಿದ್ದರು. ಅಲ್ಪಸಂಖ್ಯಾತರ ಹಕ್ಕು ಬಾಧ್ಯತೆಗೆ ತೊಂದರೆ ಬರದಂತೆ ಏರ್ಪಾಡು ಮಾಡಬೇಕೆಂದು ಮ|| ದಾಸಪ್ಪನವರು ತಿಳಿಸಿದರು. ಯಾವ ಬದಲಾವಣೆಯೂ ಆಗಬಾರದೆಂದು ಅನೇಕರು ಅಭಿಪ್ರಾಯಪಟ್ಟರು. ಈಗಿನ ಪದ್ಧತಿಯಂತೆಯೇ ಚುನಾವಣೆಗಳು ನಡೆಯಬೇಕೆಂದು ತೀರ್ಮಾನವಾಯಿತು

"ಸಾಧ್ವೀ" ಪತ್ರಿಕೆಯ ಆರಂಭೋತ್ಸವ.

ವೃದ್ಧಪಿತಾಮಹರ ಛಾಯಾಚಿತ್ರ ಅನಾವರಣ.

ಕಳೆದ ಸೋಮವಾರ ಸಾಯಂಕಾಲ ಸಾಧ್ವೀ ಪತ್ರಿಕೆಯ ಪ್ರಾರಂಭೋತ್ಸವವು ರಾಜಧಾನಿಯ ಡಿ ಸುಬ್ಬಯ್ಯನವರ ಛತ್ರದಲ್ಲಿರುವ ಶ್ರೀ ರಾಮ ಪ್ರೆಸ್ ಮಹಡಿಯಮೇಲೆ ನಡೆಯಿತು. ಶ್ರೀ|| ಅಂಬಳೆ ಸುಬ್ಬಣ್ಣಾಚಾರ್ಯರವರು ಒದ ಕ್ಷೀರಾಬ್ಧಿ ಕನ್ನೆಯರು ಶ್ರೀಮತೀ ಕೃಷ್ಣ IIವಿ ಕೃಷ್ಣಯ್ಯನವರು ಆರತಿ ಪ್ರದರ್ಶನಮಾಡಿ ಅನಂತರ ಬ್ರ|| ಶ್ರೀ|| ನಂಜನಗೂಡು ಶ್ರೀಕಂಠ ಶಾಸ್ತ್ರಿಗಳವರು ಈ ಸಮಾರಂಭಕ್ಕಾಗಿ ರಚಿಸಿದ್ದ ಕೆಲವು ಪದ್ಯಗಳನ್ನು ಶ್ರಾವ್ಯವಾದ ಗಾನದಿಂದ ಓದಿದರು. ಶ್ರೀ|| ಅಗರಂ ರಂಗಯ್ಯನವರು ಸಾಧ್ವೀ ಪತ್ರಿಕೆಯನ್ನು ಹೊರಡಿಸಬೇಕೆಂದಿರುವುದರ ಉದ್ದೇಶವನ್ನು ತಿಳಿಸಿದನಂತರ ಶ್ರೀ|| ಅಡ್ವೋಕೇಟ್ ಸಿ ನರಸಿಂಹಯ್ಯನವರು ವೃದ್ಧಪಿತಾಮಹರ ವಿಷಯವಾಗಿ ತಮ್ಮ ಪರಿಚಯವನ್ನೂ, ಅವರ ಜುಜಾತ್ರ ಗುಣಗಳನ್ನು ಮತ್ತು ಅವರ ಪವಿತ್ರವಾದ ವ್ಯಕ್ತಿಯೊಡನೆ ತಮಗಿದ್ದ ಸಂಬಂಧವನ್ನೂ ಚೆನ್ನಾಗಿ ಬಣ್ಣಿಸಿದರು. ನಂತರ ಅಧ್ಯಕ್ಷರವರು ಸಮಯೋಚಿತವಾದ ವೃಷ್ಟಿ ಭಾಷಣವನ್ನು ಮಾಡಿ, ನಮ್ಮ ರಾಜಧಾನಿಯ ಸುಪ್ರಸಿದ್ಧ ಕಲಾನಿಪುಣರಾದ ಶ್ರೀ|| ಎಸ್ ಆರ್ ಅಯ್ಯಂಗಾರ್‌ರವರು ಚಿತ್ರಿಸಿದ್ದ ವೃದ್ಧಪಿತಾಮಹರ ಸುಂದರವಾದ ಛಾಯಾಚಿತ್ರವನ್ನು ಅನಾವರಣ ಮಾಡಿದರು.

ಇದಾದನಂತರ ಬ್ರ|| ಸಂಗೀತ ವಿದ್ವಾಂಸರಾದ ಶ್ರೀ ಚಿಕ್ಕರಾಮರಾಯರವರ ಸುಶ್ರಾವ್ಯವಾದ ಸಂಗೀತ ಕಚೇರಿಯು ನಡೆಯಿತು. ವಿದ್ವಾಂಸರುಗಳಾದ ಸೋಸಲೆ ರಾಮದಾಸರವರ ಕಂಜರಿಯೂ, ಶ್ರೀ|| ಮಹಾ ಸಿ ರಾಮರಾಯರವರ ಪಿಟೀಲುವಾದನವೂ ಮತ್ತು ಶ್ರೀ ರಾಮಯ್ಯನವರ ಮೃದಂಗವೂ ಸಹ ಸಂಗೀತ ಕಚೇರಿಗೆ ಅತ್ಯಂತ ಪ್ರತಿಭೆಯನ್ನು ಉಂಟುಮಾಡಿದುವು. ಸಭಿಕರು ಸಂಗೀತಾಬ್ಧಿಯಲ್ಲಿ ಮುಳುಗಿ ಕೇಳುವಷ್ಟು ಆನಂದ ಪರವಶರಾಗಿದ್ದರು.

ಆಮೇಲೆ ಗಂಧ ಪುಷ್ಪ ತಾಂಬೂಲ ವಿನಿಯೋಗವಾದನಂತರ ಸಭೆಯು ಮಂಗಳಾಚರಣೆಯೊಡನೆ ಭರಖಾಸ್ತಾಯಿತು.

ಸತ್ಕಾರ ಕೂಟ.

ಸಾಧ್ವೀ ಪತ್ರಿಕಾ ಸಂಪಾದಕರಾದ ಶ್ರೀ|| ಅಗರಂ ರಂಗಯ್ಯನವರು ಕಳೆದ ಮಂಗಳವಾರ ಸಾಯಂಕಾಲ ಲ್ಯಾನ್ಸ್‌ಡೌನ್ ಬಜಾರ್ ಮಹಡಿಯಮೇಲಿರುವ ಡಿಸ್ಟ್ರಿಕ್ಟ್ ಸೆಂಟ್ರಲ್ ಕೋ ಆಪರೇಟಿವ್ ಬ್ಯಾಂಕ್ ಹಾಲಿನಲ್ಲಿ ಪತ್ರಿಕೋದ್ಯೋಗಿಗಳನ್ನೂ ಕೆಲವು ದೊಡ್ಡ ಮನುಷ್ಯರುಗಳನ್ನೂ ಬರಮಾಡಿಕೊಂಡು ಒಂದು ಸತ್ಕಾರವನ್ನು ಕೊಟ್ಟರು. ಶ್ರೀ|| ಗಳಾದ ಅಂಬಳೆ ಸುಬ್ಬಣ್ಣಾಚಾರ್ಯರವರೂ, ಸಿ ನರಸಿಂಹಯ್ಯನವರೂ, ಡಿ ಆರ್ ಜೋಯಿಸರ್‌ರವರೂ, ಟಿ ಕೃಷ್ಣರಾಯರವರೂ ಮತ್ತು ಅನೇಕ ಪತ್ರಿಕೋದ್ಯೋಗಿಗಳೂ ದಯಮಾಡಿಸಿದ್ದರು. ಫಲಾಹಾರವಾಯಿತು.

ಶ್ರೀ|| ಅಗರಂ ರಂಗಯ್ಯನವರು ತಾವು ಕೈಗೊಂಡಿರುವ 'ಸಾಧ್ವಿ' ಪತ್ರಿಕಾ ಚಾಲನದ ವಿಷಯವನ್ನು ತಿಳಿಸಿ ಈ ಮಹತ್ಕಾರ್ಯದಲ್ಲಿ ಎಲ್ಲರೂ ಸಹಕರಿಸಬೇಕೆಂದು ಕೋರಿದರು. ಸಭಿಕರ ಪರವಾಗಿ ಶ್ರೀ|| ಟಿ ಕೃಷ್ಣರಾಯರು ಧನ್ಯವಾದಗಳನ್ನು ಸಲ್ಲಿಸಿ ಸಾಧ್ವಿಯು ಯಶಸ್ವಿಯಾಗಿ ನಡೆಯಲೆಂದು ಹಾರೈಸಿದರು.

ಶ್ರೀ
ಮಂಗಳಾಚರಣೆ.

ಶ್ರೀ ಮಹಿಷಮರ್ದಿನಿಯು ಸಚ್ಛ್ರೀಯ ।
ನೀಮಹೀಸುರ ಪ್ರವರ ನಲಿವುದ ।
ಚಾಮನರಪತಿ ತನಯ ಸಾಧ್ವಿಡಿ ಕೃಷ್ಣ
ಭೂವರರ್ ।

ಶ್ರೀಮಹಾನ್ ನರಪತಿಯು ಮರವು ।
ದ್ದಾಮ ವೇಂಕಟ ಕೃಷ್ಣಯನ ಸುತ ।
ಹಾಮಹಿನ ನ ಶಿವನ ನಮಗಿಂದೀಗ
ಸತ್ಕೃತಿಯಂ ॥ ೧ ॥

ಸೊಂದಿಯಾದು ಸನ್ಮಾರ್ಗದಿಂ ತಾಂ
ಮುಂದುವರಿದಾನಂದವುಂಸತಿ ।
ಪೊಂದರೆಂಬುದವೇಶ ಶತಗಳ ನಿತ್ತು
ಪನಲಿರ ಳುಂ ।

ಕುಂದನುಚ್ಚಾವಪಲಿ ಗತಿನ ತಿ ।
ಯೊಂದುಮಿಲ್ಲದ ತರಳರ ಕ ।
ತಂದು ಗಲಿಸದ ತುಂತಸಲೆ ವಿಷಯತ
ಗುಣಜಾತಂ ॥ ೨ ॥

ಮಿರಿದ ಸಾಧ್ವೀ ಪತ್ರಮುಖದಿಂ ।
ಪರಿಶರಿಯ ವಿಷಯಗಳ ಲೋಕ ।
ಕ್ಕರಿಸಿ ಮುಕ್ತಿ ಮಹಿಳೆಯರ ಸಡವಳಿಯ
ಸರಿಗೊಳಿಸಿ ॥

ಎರವರಗ್ರಣಿಯೀತನೆಂದೀ ।
ದರಣ ಮುನಿಸಲು ಚಾಲ್ವ ಕರುಣಾ ।
ಕರನ ಸುಂದರ ಛಾಯಚಿತ್ರವನಿಂದು
ಮೆರೆಯಿಸುವ ॥ ೩ ॥

ಸುರೆಯೂ ಅದಿಸರಿಗನಿರ್ದಾ ।
ಸರಸ ಸಾಧ್ವಿಯ ದರ್ಶನಕ್ಕಾ ।
ತರಿಸುತಿಹ ಬಾಲವೃದ್ಧರ ಬಯ್ಕೆ
ಕೈಸೇರೆ ॥

ಇರದ ನನ್ನೀ ಪೇರ ಮಾತಯು ।
ವರವುನಿತ್ತ ಳೊ ಎಂಬ ಸಾಕ್ಷಿಯು ।
ನರರ ಅಗರಂ ರಂಗಯರ್ ತಾವ್
ನೇತ್ರವಾದರಲಾ ॥ ೪ ॥

ಕನ್ನಡನಾಡಿಗೆ ಸೂಗಯಿಕೆ ।
ಕನ್ನಡನೊಡಯರ್ಗೆ ನಲಿವು ಸಮನಿಕೆ
ಸತತಂ ॥

ಕನ್ನತದ ಸಾಧ್ವಿಯೊಪ್ಪಗ ।
ಕನ್ನಡಿಗರ ತಾತನೊಳ್ಳಿ ಸರ್
ಶೋಗಗ ತಾಂ ॥ ೫ ॥

ಆಸ್ಥಾನ ಪಂಡಿತ
ನಂಜನಗೂಡು ಶ್ರೀಕಂಠ ಶಾಸ್ತ್ರಿ,
ಮೈಸೂರು

ಅಡ್ವೋಕೇಟ್ ಸಿ. ನರಸಿಂಹಯ್ಯನವರು.

ಮಕ್ಕಳ ಬೊಕ್ಕಸ

ಸಿಂಧಘಟ್ಟದ ದೇವರು ಹಿಂದು ಮುಂದಾಯಿತು.

ನೀಗೂ ಪೋಲಿಸ ಗಾದೆಯನ್ನು ಕೇಳಿದ್ದೀಯ? ಹಾಗಾದರೆ ಇದರ ಅರ್ಥವೇನು? ಎಂಬುದನ್ನು ತಿಳಿದುಕೊಳ್ಳಬೇಕಲ್ಲವೆ? ನಮ್ಮ ಮೈಸೂರು ಡಿಸ್ಟ್ರಿಕ್ಟಿನಲ್ಲಿ ಕೃಷ್ಣರಾಜಪೇಟೆ ಅಥವಾ ಕತ್ತಿಕುಪ್ಪೆ ಎಂಬ ತಾಲ್ಲೂಕಿದೆ ಈ ತಾಲ್ಲೂಕಿಗೆ ನಾಲ್ಕಾವರೆ ಮೈಲಿಯಲ್ಲಿ ಸಿಂಧಘಟ್ಟವೆಂಬ ಊರಿದೆ. ಇದಕ್ಕೆ ಪೂರ್ವದಲ್ಲಿ ಸಿದ್ಧರಘಟ್ಟವೆಂದು ಹೆಸರಿತ್ತಂತೆ. ಸಿಂಧಘಟ್ಟಕ್ಕೆ ೩ ಮೈಲಿ ದೂರದಲ್ಲಿ ನಾರಾಯಣ ದುರ್ಗವಿದೆ. ಸಿಂಧಘಟ್ಟದಲ್ಲಿ ನಾರಾಯಣಸ್ವಾಮಿ ದೇವಸ್ಥಾನವೂ ಒಂದು ಶಾಸನವೂ ಒಂದು ಮಸೀದಿಯೂ ಇವೆ. ನಾರಾಯಣಸ್ವಾಮಿ ದೇವಸ್ಥಾನ ಕಟ್ಟಿಸಿ 500 ವರ್ಷಗಳಾಯಿತಂತೆ. ಶಾಸನವನ್ನು 700 ವರ್ಷಗಳಲ್ಲಿ ಕಟ್ಟಿದರಂತೆ. ರಂಗಪ್ಪನಾಯಕನೆಂಬ ಪಾಳೆಯಗಾರನು 350 ವರ್ಷಗಳಲ್ಲಿ ಈ ಮಸೀದಿಯನ್ನು ಕಟ್ಟಿಸಿದನಂತೆ. ನಾರಾಯಣ ದುರ್ಗದ ಮೇಲೆ ಏಳುಸುತ್ತಿನ ಕೋಟೆಯೂ, ಪಾಳು ಅರಮನೆಯೂ ಒಂದು ಶಿವಾಲಯವೂ ಇವೆ. ಈ ದುರ್ಗದಲ್ಲಿ ಒಂದು ಗುಹೆ ಇದೆ. ಅಲ್ಲಿ ಸಿದ್ಧರಿದ್ದರಂತೆ. ಅವರು ಈ ಪುರವನ್ನು ಕಟ್ಟಿಸಿ ಸಿದ್ಧರಘಟ್ಟವೆಂದು ಹೆಸರಿಟ್ಟರಂತೆ. ಅದು ಬರಬರುತ್ತಾ ಸಿದ್ಧರಘಟ್ಟ ಹೋಗಿ ಸಿಂಧಘಟ್ಟ ವಾಗಿಬಿಟ್ಟಿದೆ.

ಈ ಊರಿನ ಪಕ್ಕದಲ್ಲಿ ಒಂದು ಕೆರೆಯಿದೆ. ಈ ಕೆರೆಗೆ ಪೂರ್ವಕ್ಕೆ ಒಂದು ಸಣ್ಣ ಘಟ್ಟ ಅದರ ಬಳಿ ಇದೆ. ಇದರ ಮೇಲೆ ಒಂದು ದೇವಸ್ಥಾನವಿದೆ. ಇದು ಸಣ್ಣದು. ಆ ದೇವಸ್ಥಾನದಲ್ಲಿ ತಿರುನರಸಿಂಹದೇವರನ್ನು ಪ್ರತಿಷ್ಠೆ ಮಾಡಿದ್ದರು. ಈಗ್ಗೆ ಸುಮಾರು 100 ವರ್ಷಗಳ ಹಿಂದೆ ಈ ತಿರುನರಸಿಂಹ ದೇವರ ಕೆಳಗೆ ರತ್ನಗಳೂ, ನಾಣ್ಯಗಳೂ ಇವೆಯೆಂದು ಕಳ್ಳರು ತಿಳಿದು ದೇವರನ್ನು ಕಿತ್ತು ಎಲ್ಲವನ್ನೂ ದೋಚಿಕೊಂಡು ಹೋದರು. ಇದರಿಂದ ದೇವರು ಅಲ್ಲಾಡುತ್ತಿತ್ತು. ಇದಾದಮೇಲೆ ಒಂದು ದಿನ ಪೂಜಾರಿಯು ಪೂಜೆ ಮಾಡಿ ಬಾಗಿಲು ಹಾಕಿಕೊಳ್ಳದೆ ಮರೆತು ಒಂದು ಬಿಟ್ಟನು. ಸುತ್ತಲೂ ಕಾಡು ಪ್ರದೇಶ. ಆ ದಿನ ರಾತ್ರಿ ಒಂದು ಕರಡಿಯು ದೇವಸ್ಥಾನಕ್ಕೆ ನುಗ್ಗಿ ದೇವರಿಗೆ ತನ್ನ ಮೈಯನ್ನು ಬಲವಾಗಿ ತೀಡಿತಂತೆ. ಇದರಿಂದ ಸಡಿಲವಾಗಿದ್ದ ದೇವರು ಪೂರ್ವಕ್ಕೆ ಇದ್ದದ್ದು ಪಶ್ಚಿಮಕ್ಕೆ ಊರಿನಕಡೆ ತಿರುಗಿಬಿಟ್ಟಿತಂತೆ. ಮಾರನೇ ದಿನ ಪೂಜಾರಿಯು ಹೋಗಿ ನೋಡುತ್ತಾನೆ. ದೇವರು ಹಿಂದುಮುಂದಾಗಿದೆ. ಊರಿಗೆ ಒಂದು ಆಪತ್ತಿಗೆಂದು ತಿಳಿಸಿದ. ಹಾಗೂ ಹೀಗೂ ದೊರೆಯವರಿಗೂ ದೂರು ಮುಟ್ಟಿತು. ಕಡೆಗೆ ದೊಡ್ಡ ದೊಡ್ಡ ಅಧಿಕಾರಿಗಳು ಅಲ್ಲಿಗೆ ಹೋಗಿ ವಿಚಾರಿಸಿದರು. ದೇವರ ಮೈಗೆ ಕರಡಿಯ ಕೂದಲು ಅಂಟಿದ್ದದ್ದರಿಂದ ಕರಡಿ ಬಂದು ಹೀಗೆ ಮಾಡಿರಬೇಕು. ಕಳ್ಳರಿಂದ ಮೊದಲೇ ಸಡಿಲವಾಗಿದ್ದ ದೇವರು ತಿರುಗಿರಬೇಕೆಂದು ಊಹಿಸಿ ತೀರ್ಮಾನಿಸಿದರು. ಅಂದಿನಿಂದ ಈ ಪೋಲಿಸ ಗಾದೆಯು ರೂಢಿಯಾಯಿತು.

ಈ ಊರಿನ ದೇವಸ್ಥಾನಗಳ ಕಲ್ಲು ಶಾಸನಗಳ ಮೇಲೆ ದೇವರನ್ನು ಎಂದಿರುವುದರಿಂದ ರಂಗಪ್ಪನಾಯಕನ ಹಿಂದೆ ದೇವರನೆಂಬ ಪಾಳೆಯಗಾರನಿದ್ದಂತೆ ಕಾಣುತ್ತದೆ. ನಾಗಮಂಗಲದಲ್ಲಿದ್ದ ಜಗದೇವರಾಯನೆಂಬುವನಿಗೆ ಕಡೆಗೆ ಈ ಊರು ಸೇರಿಹೋಯಿತು. ಆ ಜಗದೇವರಾಯನ ಕಾಲದಲ್ಲಿಯೇ ಈ ಊರು ಮೈಸೂರು ರಾಜರಿಗೆ ಸೇರಿತಂತೆ. ಜಗದೇವರಾಯನನ್ನೇ ಜಗದೇವರಾಯ ಜಗದೇವರಾಯ ಎಂದು ಕರೆಯುತ್ತಾರೆ. ಈ ಊರಿನ ಸಮೀಪದಲ್ಲಿರುವ ನಾರಾಯಣ ದುರ್ಗಕ್ಕೆ ಆಗಾಗ್ಗೆ ಸ್ಕೌಟುಗಳು ಬಂದು ಒಂದುದಿನ ತಂಗಿದ್ದು ತಮ್ಮ ತಮ್ಮ ಸ್ಥಳಗಳಿಗೆ ಹೋಗುತ್ತಾರೆ. ಮಗೂ, ನೀನೂ ಒಂದಾನೊಂದು ದಿನ ಬಂದು ಇವುಗಳನ್ನೆಲ್ಲಾ ನೋಡಿಕೊಂಡು ಹೋಗಿ ಸಿಂಧಘಟ್ಟದ ದೇವರು ಹಿಂದುಮುಂದಾದುದನ್ನು ಖಚಿತಮಾಡಿಕೊ.

ತಾತ

ವರ್ತಮಾನ ಸಂಗ್ರಹ.

ಟ್ರಾಫಿಕ್ ಸಮಿತಿಗಳು.

ಡಿಸ್ಟ್ರಿಕ್ಟ್ ಟ್ರಾಫಿಕ್ ಅಡ್ವೈಸರಿ ಸಮಿತಿಗಳು.—ಬೆಂಗಳೂರು ಜಿಲ್ಲೆಗೆ ಡಿ॥ ಮ್ಯಾಜಿಸ್ಟ್ರೇಟ್‌ರವರು (ಅಧ್ಯಕ್ಷರು), ಮುನಿಸಿಪಲ್ ಕಮಿಷನರ್‌ರವರು, ಬೆಂಗಳೂರು ಡಿವಿಜನ್ ಎಕ್ಸಿಕ್ಯೂಟಿವ್ ಇಂಜನಿಯರು, ಪೃಲ್ಸ್ ಡಿ॥ ಟ್ರಾಫಿಕ್ ಸೂಪರಿಂಟೆಂಡೆಂಟರು, ಡಿ ಎಸ್ ಪಿ. ಯವರು, ಸಿಟಿ ಪೋಲೀಸ್ ಸೂಪರಿಂಟೆಂಡೆಂಟರು (ಇವರು ಸರ್ಕಾರಿ ಸದಸ್ಯರು). ಖಾಸಗೀಯಾಗಿ ಶ್ರೀ॥ ಗಳಾದ ಡಿ॥ ಬೋ॥ ಪ್ರೆಸಿಡೆಂಟರು, ಲಿಯೋ ಬಸ್ ಸರ್ವಿಸ್ ಪ್ರೊಪ್ರೈಟರ್, ಎಸ್ ಎಲ್ ಎ. ಸರ್ವಿಸ್ ಮಾಲೀಕರು ಸಣ್ಮುಗಾನಂದ ಸರ್ವಿಸ್ ಮಾಲೀಕರು, ಬಿ ಎಲ್ ಬೈಯಣ್ಣನವರು ಮತ್ತು ಎಸ್. ಎಂ ಅಬ್ದುಲ್ ಖಿದ್ದೂಸ್‌ರವರು.

ಮೈಸೂರು ಜಿಲ್ಲೆಗೆ—ಸರ್ಕಾರದ ಪರವಾಗಿ ಡಿ. ಸಿ ಯವರು (ಅಧ್ಯಕ್ಷರು). ಎಕ್ಸಿಕ್ಯೂಟಿವ್ ಇಂಜನಿಯರ್, ಒಂಗಳೂರು ಡಿ॥ ಟ್ರಾ॥ ಸೂಪರಿಂಟೆಂಡೆಂಟರು, ಮೈಸೂರು ಡಿ ಎಸ್. ಪಿ. ಮತ್ತು ಫ್ರೆಂಚ್‌ರಾಕ್ಸ್ ಪೋಲೀಸ್ ಸೂಪರಿಂಟೆಂಡೆಂಟರು, (ಖಾಸಗಿಯಾಗಿ) ಶ್ರೀ॥ ಗಳಾದ ಡಿ॥ ಬೋ॥ ಪ್ರಸಿಡೆಂಟರು, ಜಿ. ಆರ್ ಪರಮೇಶ್ವರವರು. ಎಂ. ಸಿ. ತಮ್ಮಯ್ಯನವರು, ಆರ್ ಸಿ. ಮಾರಿಸ್ ಮತ್ತು ಎಸ್ ಸಿ ಮಲ್ಲಯ್ಯನವರು.

ಸ್ವಿಮಪತಿಗಳ ಸುದ್ದಿ—ಡಾ॥ ಮಿಟ್‌ಕಾಫ್‌ರವರು. ಈ ತಿಂಗಳು ನೇ ತಾ॥ ನಿಂದ ಮೂರು ಆಕ್ಸೆರ್ ವಿವಿಗೂ ರಜಾ ಪಡೆದಿರುವರು. ಜೊತೆಗೆ ಬೇಸಿಗೆ ರಜವನ್ನೂ ಪಡೆದು ವಿಲಾಯಿತಿಗೆ ಪ್ರಯಾಣ ಬೆಳಸುವರು. ಇವರ ಐಬ್ಸೆನ್ಸಿಯಲ್ಲಿ ಸೆಕ್ಷನ್ ಇಲಾಖೆ ಮುಖ್ಯಾಧಿಕಾರಿಗಳಾದ ಶ್ರೀ॥ ಎಸ್. ಎ. ಸುಬ್ಬರಾಯರವರು ತಮ್ಮ ಕೆಲಸದ ಜೊತೆಗೆ ಸ್ವಿಮಪತಿಗಳ ಕಾರ್ಯವನ್ನೂ ಕೈಕೊಳ್ಳುವರು.

ಜೊರಿಯಿಂದ ಇರಿತ—ಕಳೆದ ಗುರುವಾರ ಮಧ್ಯಾಹ್ನ ಸುಮಾರು ಐದು ಘಂಟೆ ಸಮಯದಲ್ಲಿ, ಶ್ರೀಮನ್ ಮಹಾರಾಜರವರ ಬೆ॥ ಕ॥ ಗೋಪಾಲರಾಯರು ತಮ್ಮ ಮನೆಯಿಂದ ಕುದುರೆ ಗಾಡಿಯಲ್ಲಿ ಹೋಗುತ್ತಿದ್ದಾಗ ಅರಮನೆ ಮೋಟಾರ್ ಗ್ಯಾರೇಜಿನಲ್ಲಿ ಡಿಸ್‌ಮಿಸ್ ಮಾಡಲ್ಪಟ್ಟಿದ್ದ ಮುನಿವೆಂಕಟಪ್ಪನೆಂಬ ಕುದುರೆ ರಾವುತನಿಂದ, ಚಾಕುವಿನಿಂದ ಇರಿಯಲ್ಪಟ್ಟರು. ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ ಹಾಲಿ ಚಿಕಿತ್ಸೆ ಹೊಂದುತ್ತಲಿರುವರು. ಕೃತ್ಯ ನಡೆಸಿದವನನ್ನೂ ಸಹ ವಸ್ತಗಿರಿ ಮಾಡಿದರು. ಅವರಿಗೂ ಏಟು ಬಿದ್ದು ಚಿಕಿತ್ಸೆ ಹೊಂದುತ್ತಿರುವನು. ಶ್ರೀಮನ್ ಮಹಾರಾಜರವರಿಯವಾಗಿ ಅರಮನೆ ಅಧಿಕಾರಿಗಳೆಲ್ಲರೂ ಶ್ರೀ ಗೋಪಾಲರಾಯರನ್ನು ನೋಡಿಕೊಂಡು ಬಂದರು.

ಗ್ರಾಮ ಕೋರ್ಟುಗಳ ಸ್ಟಾಂಪ್ ಹಾಸಗಳು.

ಮೈಸೂರು ಸರ್ಕಾರದವರು ನಿಷ್ಕರ್ಷೆ ಮಾಡಿರುವ ಫೀಜುಗಳು—

ಶ್ರೀಮನ್ಮಹಾರಾಜರವರ ಸರ್ಕಾರದವರು ಸಂಸ್ಥಾನದಲ್ಲಿರತಕ್ಕ ಗ್ರಾಮಕೋರ್ಟುಗಳ ಡಿಕ್ರಿಗಳನ್ನು ಅಮಲ್ದಾರಿ ಮಾಡುವುದಕ್ಕಾಗಿಯೂ, ಪ್ರೋಸೆಸ್ಸುಗಳನ್ನು ಜಾರಿ ಮಾಡುವುದಕ್ಕಾಗಿಯೂ ಈ ಕೆಳಗೆ ಕಂಡ ರುಸುಂಗಳನ್ನು ಕೋರ್ಟ್ ಫೀ ಸ್ಟಾಂಪ್ ರೂಪದಲ್ಲಿ ವಸೂಲು ಮಾಡತಕ್ಕದ್ದೆಂದು ನಿರ್ಣಯ ಮಾಡಿರುತ್ತಾರೆ—

(1) ಗ್ರಾಮಕೋರ್ಟಿನ ಡಿಕ್ರಿಯ ಅಮಲ್ದಾರಿ ಅರ್ಜಿಗೂ 1 ಆಣೆಗಳು, (2) ಪ್ರತಿಯೊಂದು ನೋಟೀಸಿಗೂ 1 ಆಣೆ (ಯಾವ ವ್ಯಕ್ತಿಯ ಮೇಲೆ ನೋಟೀಸು ಜಾರಿ ಮಾಡಬೇಕೋ ಅವನು ಯಾವ ಕೋರ್ಟಿನಿಂದ ನೋಟೀಸು ಹೊರಡುತ್ತದೆಯೋ ಆ ಕೋರ್ಟಿನ ಅಧಿಕಾರ ವ್ಯಾಪ್ತಿಗೊಳಪಟ್ಟ ಪ್ರದೇಶದಲ್ಲಿ ವಾಸಿಸುತ್ತಿದ್ದರೆ). 2 ಆಣೆಗಳು (ಸದರಿ ಕೋರ್ಟಿನ ಅಧಿಕಾರ ವ್ಯಾಪ್ತಿಗೊಳಪಟ್ಟಿಲ್ಲದ ಪ್ರದೇಶದಲ್ಲಿ ವಾಸಿಸುತ್ತಿದ್ದರೆ). (3) ಹರಾಜು ಇಸ್ತಿಹಾರಿಗೆ 2 ಆಣೆಗಳು, (4) ಜಪ್ತಿ ವಾರಂಟಿಗೆ 5 ಆಣೆಗಳು, (5) ಹರಾಜು ವಾರಂಟಿಗೆ 2 ಆಣೆಗಳು, (6ಎ) ಜಪ್ತಿ ಯಾವುದೂ ನಡೆಯದೆ ಇದ್ದಲ್ಲಿ ಸ್ವತ್ತಿನ ಸ್ವಾಧೀನತೆಯನ್ನು ಬಿಟ್ಟುಕೊಡುವ (ಡಿಲಿವರಿ) ವಾರಂಟಿಗಾಗಿ 5 ಆಣೆಗಳು, (6ಬಿ) ಜಪ್ತಿ ಆಗಿರತಕ್ಕ ಆಸ್ತಿಯನ್ನು ಸ್ವಾಧೀನಕ್ಕೆ ತೆಗೆದುಕೊಳ್ಳಬೇಕಾದ ಡಿಲಿವರಿ ವಾರಂಟಿಗಾಗಿ 4 ಆಣೆಗಳು.

ಎಂಪೈರ್ ವಸ್ತುಪ್ರದರ್ಶನ:—ಬರುವ ಏಪ್ರಿಲ್ ಮಾಹೆಯಲ್ಲಿ "ಇಂಡಿಯನ್ ಎಂಪೈರ್ ಎಕ್ಸಿಬಿಷನ್" ಎಂಬ ಪ್ರದರ್ಶನೋತ್ಸವವು ನಡೆಯುವುದಾಗಿದೆ. ರೆಸಿಡೆನ್ಸಿ ಕೌನ್ಸಿಲರ್ ಆದ ಶ್ರೀ॥ ಪಿ ಜಿ ಡಿಸೋಜಾರವರೂ ಮತ್ತು ಬೆಂಗಳೂರಿನ ಹಲವು ಪುರಪ್ರಮುಖರೂ ಇದರ ವ್ಯವಸ್ಥಾಪಕರು. ಬಸವನಗುಡಿಯಲ್ಲಿರುವ ನ್ಯಾಷನಲ್ ವಿದ್ಯಾಶಾಲೆಯ ಪಕ್ಕದ ಮೈದಾನದಲ್ಲಿ ಈ ಉತ್ಸವದ ಎಲ್ಲಾ ಕಾರ್ಯಕ್ರಮಗಳೂ ನಡೆಯುವುವು. ವಿದ್ಯಾ ಸಮ್ಮೇಳನ, ಸಂಗೀತಸಮ್ಮೇಳನ, ನಾಟಕಸಮ್ಮೇಳನ, ಸಿರುದ್ಯೋಗ ವಿದ್ಯಾವಂತರ ಸಮ್ಮೇಳನ ಇವೂ ಸಹ ಉತ್ಸವದ ಕೆಲ ಅಂಗಗಳು. ಎಕ್ಸಿಬಿಷನ್ನಿನ ಪ್ರಾರಂಭೋತ್ಸವವನ್ನು ನಡೆಸಲು ಶ್ರೀಮದ್ ಯುವರಾಜರವರಿಗೆ ಪ್ರಾರ್ಥನೆಯು ಕಳುಹಿಸಲ್ಪಟ್ಟಿದೆ. ಸಂಗೀತ ಸಮ್ಮೇಳನವನ್ನು ಶ್ರೀ ಜಯಚಾಮರಾಜ ಒಡೆಯರ್ ರವರು ತೆರೆಯುವರೆಂದೂ ಪಂಡಿತ ಇದ ಅಲಹಾಬಾದಿನ ಸರ್ ತೇಜ್ ಬಹದ್ದೂರ್ ಸಪ್ರೂರವರು ನಿರುದ್ಯೋಗ ವಿದ್ಯಾವಂತರ ಸಮ್ಮೇಳನಾಧ್ಯಕ್ಷತೆಯನ್ನು ವಹಿಸುವರೆಂದು ತಿಳಿಯಬರುತ್ತದೆ.

ಸ್ಕೌಟು ಸ್ಪರ್ಧೆಗಳು—ಬರುವ ಏಪ್ರಿಲ್ ತಿಂಗಳಿನ ಮಧ್ಯಭಾಗದಲ್ಲಿ ನಾಲ್ಕು ದಿನಗಳು ದಾವಣಗೆರೆಯಲ್ಲಿ ಮೈಸೂರು ಸ್ಟೇಟ್ ಸ್ಕೌಟುರ್‍ಯಾಲಿ ಮತ್ತು ಅಖಿಲ ಭಾರತ ಪ್ರಥಮಚಿಕಿತ್ಸೆ ಮತ್ತು ಶ್ರೀಮದ್ ಯುವರಾಜರವರ ಷೀಲ್ಡ್ ಸ್ಪರ್ಧೆಗಳು ನಡೆಯುವುವು.

ಬೆಂಗಳೂರು—ಮೈಸೂರು ಮೈಲ್ ರೈಲು—ಬರುವ ಏಪ್ರಿಲ್ ತಿಂಗಳಿಂದ ಮೇಲ್ಕಂಡ ರೈಲಿನ ವೇಗವನ್ನು ಹೆಚ್ಚಿಸಿ ಮೂರೇ ಗಂಟೆಗಳ ಕಾಲದಲ್ಲಿ ಪ್ರಯಾಣ ನಡೆಯುವ ಹಾಗೆ ಏರ್ಪಾಡು ಮಾಡುವರೆಂದು ತಿಳಿಯಬರುತ್ತದೆ.

ಮುಜರಾಯಿ ಇಲಾಖೆ—ಕಳೆದ ವರ್ಷದ ಮುಜರಾಯಿ ಇಲಾಖೆಯ ವರದಿಯನ್ನು ಸರ್ಕಾರದವರು ಪ್ರಕಟಿಸಿರುವರು. ಇದರಲ್ಲಿ ಈ ಕೆಳಗೆ ಕಂಡ ಮುಖ್ಯ ಅಂಶಗಳು ಕಂಡುಬರುತ್ತವೆ. ಬೇಲೂರಿನ ಶ್ರೀ ಚನ್ನಕೇಶವಸ್ವಾಮಿ ದೇವಾಲಯದ ಜೀರ್ಣೋದ್ಧಾರಕ್ಕಾಗಿ ಆರು ವರ್ಷದ ಕಾರ್ಯಕ್ರಮದ ಬಗ್ಗೆ 39,000 ರೂ. ಗಳು ಮಂಜೂರಾದವು. ಮೈಸೂರು ಆಯುರ್ವೇದ ಮತ್ತು ಯುನಾನಿ ಕಾಲೇಜಿಗೆ ಸ್ಕೂಲ್ ಫೈನಲ್ ಪರೀಕ್ಷೆ ಆದವರನ್ನು ಸೇರಿಸಿಕೊಳ್ಳುವಂತೆ ಹುಕುಂ ಮಾಡಲಾಗಿದೆ. ಯುನಾನಿ ವಿದ್ಯಾರ್ಥಿಗಳಿಗೆ ಕೊಡುತ್ತಿದ್ದ ವೇತನವನ್ನು 12 ರಿಂದ 15 ರೂ ಗಳಿಗೆ ಹೆಚ್ಚಿಸಿದೆ.

ದೇವಸ್ಥಾನದಲ್ಲಿ ಕಳುವು—ನಂಜನಗೂಡಿನ ಶ್ರೀ ಆದಿಶಕ್ತಿ ದೇವಸ್ಥಾನದಲ್ಲಿ ಸುಮಾರು 285 ರೂಪಾಯಿಗಳಷ್ಟು ಚಿನ್ನ ಬೆಳ್ಳಿಯ ಆಭರಣಗಳು ಕಳುವಾದವೆಂದು ತಿಳಿದುಬರುತ್ತದೆ.

ಸಿಲ್ವರ್ ಜ್ಯೂಬಿಲಿ ನಿಧಿ.—ಗತಿಸಿದ ಐದನೇ ಜಾರ್ಜ್ ಚಕ್ರವರ್ತಿಗಳ ಆಳ್ವಿಕೆಯ ಸಿಲ್ವರ್ ಜ್ಯೂಬಿಲಿ ನಿಧಿಯಲ್ಲಿ ಮೈಸೂರು ಸಂಸ್ಥಾನದಿಂದ 1,20,000 ರೂಪಾಯಿ ಚಂದಾ ಕೂಡಿದೆ. ಈ ಹಣವನ್ನು ಈ ರೀತಿಯಲ್ಲಿ ವಿನಿಯೋಗಿಸತಕ್ಕದ್ದೆಂದು ನಿಧಿಯ ಕಮಿಟಿಯವರು ತೀರ್ಮಾನಿಸಿರುತ್ತಾರೆ—ಮೈಸೂರು ಸಂಸ್ಥಾನದ ಇಂಡಿಯನ್ ರೆಡ್-ಕ್ರಾಸ್ ಸಂಸ್ಥೆಯ ಶಾಖೆಗೆ (1) ಎಂಟು ಡಿಸ್ಟ್ರಿಕ್ಟುಗಳಲ್ಲೂ ಒಂದೊಂದು ಹೆರಿಗೆ ಮನೆಯನ್ನು ಕಟ್ಟಲು 16,000 ರೂ. (2) ಬೆಂಗಳೂರಿನಲ್ಲಿ ಮಾದರೀ ಸಂರಕ್ಷಣಾಲಯವನ್ನೂ ರೆಡ್-ಕ್ರಾಸ್ ಸಂಸ್ಥೆಯ ಹೆಡ್‌ಕ್ವಾರ್ಟರನ್ನೂ ಕಟ್ಟಲು 35,000 ರೂಪಾಯಿ ಕೌಂಟೆಸ್ ಆಫ್ ಡಫರಿನ್ ಫಂಡ್—ಸೂಲಗಿತ್ತಿಯರನ್ನು ತರಪೇತು ಮಾಡಲು ಬೆಂಗಳೂರಿನಲ್ಲಿ ಒಂದು ಶಾಲೆಯನ್ನು ನಿರ್ಮಿಸಲು 15,000 ರೂ. (3) ಮೈಸೂರಿನಲ್ಲಿ ಹೊಸ ವಾಣೀ ವಿಲಾಸ ಆಸ್ಪತ್ರೆಗೆ ಗ್ರಾಂಟ್ 10,000 ರೂ (4) ಕೌಂಟೆಸ್ ಆಫ್ ಡಫರಿನ್ ಫಂಡಿನ ಮೂಲನಿಧಿಗೆ 15,000 ರೂ ಸೋಲ್ಜರರ ಸಹಾಯಾರ್ಥವಾದ ನಿಧಿಗೆ 1,000 ರೂ ಉಳಿದ ಹಣವನ್ನು ದೆಹಲಿ ಸಿಲ್ವರ್ ಜ್ಯೂಬಿಲಿಯ ನಿಧಿಗೆ ಮೈಸೂರು ಸಂಸ್ಥಾನದ ಕಾಣಿಕೆಯಾಗಿ ಕಳುಹಿಸಲಾಗುತ್ತದೆ.

ಶೃಂಗೇರಿ ಸುದ್ದಿ.

ಶ್ರೀ ಜಗದ್ಗುರುಗಳವರು ಸ್ವಲ್ಪ ಸ್ವಲ್ಪವಾಗಿ ಚೇತರಿಸಿಕೊಳ್ಳುತ್ತಿದ್ದಾರೆ. ಯಾರೂ ಅವರ ಭೇಟಿಯನ್ನು ತೆಗೆದುಕೊಳ್ಳುವ ಹಾಗಿಲ್ಲ. ಶ್ರೀ॥ ವೈ. ಶ್ರೀಕಂಠಯ್ಯನವರು ಕಳೆದ ಮಾಹೆ 15ನೇ ತಾ॥ ನ ದಿವಸ ಶೃಂಗೇರಿ ಆಡಳಿತದ ಸೂತ್ರವನ್ನು ವಹಿಸಿಕೊಂಡರು. ಜಹಗೀರಿಯ ಆಸ್ತಿ ಪಾಸಿಗಳ ರೆಕಾರ್ಡುಗಳೆಲ್ಲವೂ ಇವರ ಆಧೀನವಾದವು. ಹಿಂದಿನ ಏಜಂಟರಾಗಿದ್ದ ಶ್ರೀ॥ ರಾಮರಾಯರು ಕಳೆದ ಗುರುವಾರ ಬೆಂಗಳೂರಿಗೆ ಪ್ರಯಾಣ ಮಾಡಿದರು.

ಅಖಿಲಭಾರತ ಶೋಕದಿನ.

ಕಾಂಗ್ರೆಸ್ ಅಧ್ಯಕ್ಷರಾದ ಬಾಬೂ ರಾಜೇಂದ್ರಪ್ರಸಾದರವರು, ದಿವಂಗತರಾದ ಶ್ರೀ॥ ಕಮಲಾ ನೆಹರೂರವರ ಮರಣದ ಬಗ್ಗೆ, ಇಡೀ ರಾಷ್ಟ್ರದಲ್ಲೆಲ್ಲಾ ಮಾರ್ಚಿ 8 ನೇ ತಾ॥ ಭಾನುವಾರವನ್ನು ಶೋಕದಿನವಾಗಿ ಭಾವಿಸಬೇಕೆಂದೂ, ಸಾರ್ವಜನಿಕ ಸಭೆಗಳನ್ನು ನಡೆಸಿ, ಉಚಿತ ರೀತಿಯಲ್ಲಿ ಶೋಕ ಠರಾವುಗಳನ್ನು ಪಾಸು ಮಾಡಬೇಕೆಂದೂ, ಸಂದೇಶವನ್ನು ಕಳುಹಿಸಿರುತ್ತಾರೆ.

ಶಾರದಾ ಯೂನಿಯನ್.

ಮೈಸೂರು ಶಾರದಾ ಯೂನಿಯನ್ ಬ್ಯಾಡ್‌ಮಿಂಟನ್ ಕ್ಲಬ್ಬಿನ ವಾರ್ಷಿಕೋತ್ಸವವು ನಿನ್ನೆಯ ದಿನ, ಎಮ್ಮೆಯ್ಯನವರ ಸ್ಕೂಲಿನ ಒಳ ಆವರಣದಲ್ಲಿ ನೆರವೇರಿಸಲ್ಪಟ್ಟಿತು. ಪ್ರಾತಃಕಾಲ ಗ್ರೂಪ್ ಫೋಟೋ ತೆಗೆದುಕೊಳ್ಳಲ್ಪಟ್ಟಿತು. ಸಾಯಂಕಾಲ ಉಪಾಹಾರವಾದನಂತರ ಸಭೆ ಕೂಡಿತು. ಸಂಗೀತವೂ, ಆಟಪಾಟಗಳ ಮೇಲೆ ಶ್ರೀಯುತ ವೈ. ಜಿ. ಕೃಷ್ಣಮೂರ್ತಿಯವರ ಉಪನ್ಯಾಸವೂ, ವಾರ್ಷಿಕ ವರದಿಯ ಓದುವಿಕೆಯೂ, ಆಯಿತು. ಅಧ್ಯಕ್ಷರ ಕಾಲೋಚಿತ ಉಪಸಂಹಾರ ಭಾಷಣಾನಂತರ ವಂದನಾಸಮರ್ಪಣೆಯೊಡನೆ ಸಭೆ ಮುಗಿಯಿತು.

ನಂಜನಗೂಡು ಶ್ರೀ ನಂಜುಂಡೇಶ್ವರ ಬ್ಯಾಂಕ್ ಲಿಮಿಟೆಡ್., ಕಂಪೆನಿ.

(Under Liquidation)

ಮೇಲ್ಕಂಡ ಕಂಪೆನಿಯ ಕ್ರೆಡಿಟರ್ಸ್ ಮೀಟಿಂಗು ನಂಜನಗೂಡು ಕಸಬಾ ಅರಮನೇ ಬೀದಿ 426 ನೇ ನಂಬರು ಮನೆಯಲ್ಲಿನ ಈ ಆಫೀಸಿನಲ್ಲಿ 18—3—36 ನೇ ಬುಧವಾರ ಸಾಯಂಕಾಲ 5 ಘಂಟೆಗೆ ನಡೆಯುತ್ತೆ. ಈ ವಿಚಾರವನ್ನು ಸದರಿ ಕಂಪೆನಿಯ ಕ್ರೆಡಿಟರುಗಳ ಅವಗಾಹನೆಗೆ ತಂದಿರುತ್ತೆ.

ಆರ್. ಎಸ್. ಸೀತಾರಾಮಯ್ಯ,
ಲಿಕ್ವಿಡೇಟರ್

ಸಾಧ್ವಿ

೨-೩-೩೬ ನೇ ಸೋಮವಾರ

ಶ್ರೀಮತಿ ಕಮಲಾ ನೆಹರೂರವರು.

ಪಂಡಿತ ಜವಾಹರಲಾಲ ನೆಹರೂರವರ ಧರ್ಮಪತ್ನಿಯವರಾದ ಶ್ರೀಮತಿ ಕಮಲಾ ನೆಹರೂರವರ ಮರಣವಾರ್ತೆಯು ಭಾರತೀಯರೆಲ್ಲರಿಗೂ ಅತ್ಯಂತ ದುಃಖವನ್ನುಂಟುಮಾಡಿರುವುದು. ಇವರಿಗೆ ಬಹಳ ದಿನಗಳಿಂದ ದೇಹದಲ್ಲಿ ಆಲಸ್ಯವಾಗಿತ್ತು. ಪಾಶ್ಚಾತ್ಯ ದೇಶಗಳಲ್ಲಿ ಚಿಕಿತ್ಸೆಗಾಗಿ ವಾಸ ಮಾಡಿಸಿದರು. ಆಗ ಪಂಡಿತ ಜವಾಹರರು ಕಾರಾಗೃಹದಲ್ಲಿದ್ದರು. ಶ್ರೀಮತಿಯವರ ದೇಹಸ್ಥಿತಿಯು ವಿಪರೀತವಾದಾಗ ಪಂಡಿತರು ಬಿಡುಗಡೆಯಾದರು. ರೋಗಗ್ರಸ್ತರಾಗಿ, ಕೇವಲ ಕೃಶರಾಗಿ, ಪತಿಸುತ್ತಿದ್ದ ತಮ್ಮ ಪತ್ನಿಯವರಿಗೆ ತಾವೇ ಶೈತ್ಯೋಪಚಾರಗಳನ್ನು ಮಾಡಿ ತಕ್ಕಾಲಕ್ಕೆ ಸ್ವಲ್ಪ ಚೇತರಿಸುವಂತೆ ಮಾಡಿದರು.

ಅನಂತರ ಸ್ವಲ್ಪ ಉತ್ತಮಸ್ಥಿತಿಗೆ ಬಂದ ಮೇಲೆ ವಿದೇಶಗಳಲ್ಲಿಯೂ, ಮಾತೃದೇಶದ ಅನೇಕ ಊರುಗಳಲ್ಲಿ ತಿರುಗಿದರು. ಪಾರ್ಲಿಮೆಂಟಿನಲ್ಲಿಯೂ ಹೋಗಿ ಗುಹೆಯಲ್ಲಿ ... ಎದುರಿಸಿದಂತೆ ಬ್ರಿಟಿಷ ರಾಜನೀತಿಜ್ಞರಲ್ಲಿ ಭರತಖಂಡದ ಸಂಪೂರ್ಣ ಸ್ವರಾಜ್ಯದ ವಾದವನ್ನು ಸಮರ್ಥಿಸಿದರು. ಇವನ್ನೆಲ್ಲಾ ಮಾಡಿ ಮುಂದಿನ ರಾಷ್ಟ್ರೀಯ ಮಹಾಸಭೆಗೆ ಅಧ್ಯಕ್ಷತೆಯನ್ನು ವಹಿಸಲು ಸಮ್ಮತಿಸಿದರು.

ಇಂತಹ ಸಮಯದಲ್ಲಿ ಇವರಿಗೆ ಉಂಟಾದ ವಿಯೋಗವು ಅತ್ಯಂತ ವಿಷಾದಕರವು. ಶ್ರೀಮತಿಯವರು ಪಂಡಿತರ ಎಲ್ಲಾ ಕಾರ್ಯಕ್ರಮಗಳಲ್ಲಿಯೂ ಪರಿಪೂರ್ಣವಾದ ಅನುವರ್ತಿನಿಯಾಗಿದ್ದರು. ಸೀತಾದೇವಿಯು ಶ್ರೀರಾಮಚಂದ್ರನ ನೆರಳಿನೋಪಾದಿಯಲ್ಲಿ ಹೇಗೆ ಅಂತಃಪುರವನ್ನೂ ಸಹ ತ್ಯಾಗಮಾಡಿ ವನವಾಸವನ್ನನುಭವಿಸಲು ಸಿದ್ಧಳಾದಳೋ ಹಾಗೆಯೇ ಶ್ರೀಮತಿಯವರೂ ಪಂಡಿತರ ಸಕಲ ಕಷ್ಟಸುಖಗಳಲ್ಲಿಯೂ ಸಮಭಾಗಿಗಳಾಗುತ್ತಿದ್ದರು. ಎಲ್ಲಾ ರಾಜಕೀಯ ಕಾರ್ಯಕ್ರಮಗಳಲ್ಲಿಯೂ ಭಾಗವಹಿಸುತ್ತಿದ್ದರು. ಅಖಿಲ ಭಾರತ ರಾಷ್ಟ್ರೀಯ ಮಹಾಸಭೆಯ ಕಾರ್ಯಕಾರಿಮಂಡಲಿಯ ಸದಸ್ಯರಾಗಿದ್ದರು. ಸತ್ಯಾಗ್ರಹ ಸಂಗ್ರಾಮದಲ್ಲಿ ಕಾರಾಗೃಹವಾಸವನ್ನು ಅನುಭವಿಸಿದರು.

ನೆಹರೂ ವಂಶದ ಐಶ್ವರ್ಯವೂ ಆ ಮನೆಯ ಸಂಪತ್ತಿಗೂ ಐತಿಹಾಸಿಕ ಪ್ರಸಿದ್ಧಿಯಾದವು. ಇವರು ಹೆಂಗಸರಾಗಿ ಬಾಲ್ಯದಲ್ಲಿ ಬೆಳೆದವರು ರಾಜಕುಮಾರಿಯೆಂಬುದನ್ನೇ ಅವರು ಅರಿಯರು.

ಶ್ರೀಮತಿಯವರಂತೂ ಅಂತಃಪುರದಲ್ಲಿ ರಾಜಪುತ್ರಿಯಂತೆ ಬೆಳೆದ ಕೋಮಲಾಂಗಿಯರು. ಅಂತಹವರಿಗೆ ಕಾರಾಗೃಹದಲ್ಲಿನ ನಿರ್ಬಂಧಗಳೂ, ಒರಟಾದ ರೊಟ್ಟಿ, ಗಂಜಿ ಮುಂತಾದವುಗಳೂ ಶಾರೀರಿಕ ಕಷ್ಟಗಳನ್ನು ತರುವುದಲ್ಲದೆ ಇನ್ನೇನು?

ಅವರೂ ಪಂಡಿತರವರು ಅಪೂರ್ವ ದೇಶಾಭಿಮಾನಿಗಳು. ಅವರ ಸ್ವಾಭಿಮಾನ ದೇಶಾಭಿಮಾನ, ಸ್ವಾತಂತ್ರ್ಯಾಭಿಲಾಷೆಗಳ ಮುಂದೆ ನಶ್ವರವಾದ ಕ್ಷಣಿಕ ಕಷ್ಟಪರಂಪರೆಗಳು ಲೆಕ್ಕಕ್ಕಿಲ್ಲ. ಹಾಕಿದ ಮುಸ್ತಂತೆ ಮಾಯವಾಗುತ್ತಿದ್ದವು. ಎಂತಹ ಬಿಕ್ಕಟ್ಟಿನ ಸಂದರ್ಭದಲ್ಲಿಯೂ ಅವರು ರಾಜಿ ರಿಯಾಯಿತಿ ಎಂಬುದನ್ನೇ ಅರಿಯರು. ಗುಲಾಮಗಿರಿಗೂ ಸಂಪೂರ್ಣ ಸ್ವಾತಂತ್ರ್ಯಕ್ಕೂ ರಾಜಿಯುಂಟೆ? ಕತ್ತಲೆಗೂ ಬೆಳಕಿಗೂ ಸಮನ್ವಯವುಂಟೆ?

ಪಂಡಿತರಿಗೆ ಕೆಲವು ದಿನಗಳ ಹಿಂದೆ ಪಿತೃವಿಯೋಗವುಂಟಾಯಿತು. ಅನಂತರ ಎಡಬಿಡದ ಕಾರಾಗೃಹವಾಸಗಳು ಸಂಪ್ರಾಪ್ತವಾದವು. ಮನೆಮಠಗಳು ಸರ್ಕಾರದವರ ವಶವಾದವು. ಅವರ ವೀರ ಹೃದಯವು ಯಾವುದಕ್ಕೂ ಜಗ್ಗಲಿಲ್ಲ. ಎಂತಹ ಗಾಢವಾದ ಕಷ್ಟಗಳು ಬಂದರೂ ಸತ್ಯಾಹಿಂಸಾ ವ್ರತದಂತೆ ತಮ್ಮ ಸಂಕಲ್ಪವನ್ನು ಮಾತ್ರ ಬಿಡದೆ ಮುಂದುವರಿಸುತ್ತಿರುವರು. ಅವರಿಗೆ ಪರಮಾತ್ಮನು ಸಂಪೂರ್ಣವಾದ ಧೈರ್ಯವನ್ನು ಕೊಡಲಿ. ಶ್ರೀಮತಿಯವರ ಆತ್ಮಕ್ಕೆ ಶಾಂತಿಯುಂಟಾಗಲಿ.

ವೈಸ್‌ಚಾನ್ಸಲರ್ ಪದವಿ.

ಕಟ್ಟಕಡೆಗೆ ನಮ್ಮ ವಿಶ್ವವಿದ್ಯಾನಿಲಯದ ವೈಸ್ ಚಾನ್ಸಲರ್ ಪದವಿಯು ವಿದ್ಯಾಶಾಖೆಯ ಡೈರಕ್ಟರಾದ ಶ್ರೀ ಎಂ. ಎನ್. ಸುಬ್ಬರಾಯರವರ ಪಾಲಿಗೆ ಬಂದಿರುತ್ತದೆ. ಈ ಗೌರವವು ಇವರಿಗೆ ಬಹಳ ಹಿಂದೆಯೇ ದೊರೆಯಬೇಕಾಗಿತ್ತು. ಅವರ ವಿದ್ಯಾಪ್ರವೃತ್ತಿಯೂ, ಕಾರ್ಯದಕ್ಷತೆಯೂ ಅಪೂರ್ವವಾದವು. ಶಿಕ್ಷಣಶಾಖೆಯ ಕಾರ್ಯನಿರ್ವಹಣದಲ್ಲಿ ಇವರು ಉತ್ತಮವಾದ ಪ್ರತಿಭೆಯನ್ನು ತೋರಿಸಿರುವರು. ಆದುದರಿಂದ ಇವರನ್ನು ಹೊರಗಿನ ಪ್ರಾಂತ್ಯದವರೂ ಆಗ್ಗಾಗ್ಗೆ ತಮ್ಮ ವಿದ್ಯಾ ಸಮ್ಮೇಳನಗಳಿಗೆ ಅಧ್ಯಕ್ಷರನ್ನಾಗಿ ಆರಿಸಿ ಅವರ ಸಲಹೆಗಳನ್ನು ತೆಗೆದುಕೊಂಡಿರುವರು. ಅರ್ಥಶಾಸ್ತ್ರದ ಬೋಧನೆಯಲ್ಲಿ ಇವರು ಅದ್ವಿತೀಯ ಪಾಂಡಿತ್ಯವನ್ನು ಪಡೆದಿರುವರು.

ಡಾಕ್ಟರ್ ಬ್ರಜೇಂದ್ರನಾಥಶೀಲರ ನಂತರ ಇವರಿಗೇ ಈ ಪದವಿಯು ದೊರೆಯುವುದೆಂಬ ಭರವಸೆ ಇತ್ತು. ಕಾರಣಾಂತರಗಳಿಂದ ದೊರೆಯಲಿಲ್ಲ. ಇತರರ ಪಾಲಾಗುತ್ತಿತ್ತು. ಅವು ವ್ಯಕ್ತಿಗತವಾದ ಕಾರಣಗಳು. ಹೇಗೂ ಅವರ ಯೋಗ್ಯತೆಯಲ್ಲಿಯೂ ದಕ್ಷತೆಯಲ್ಲಿಯೂ ಈ ಸ್ಥಾನಕ್ಕೆ ಇಷ್ಟು ಅರ್ಹರಾದ ಮೈಸೂರಿನವರು ಮತ್ತೊಬ್ಬರಿಲ್ಲ. ಆದರೆ ಅಂಜನೇಯನ ಪ್ರತ್ಯಕ್ಷ ಪಟ್ಟಕ್ಕಾದಂತೆ ಇವರು ಕಾಯಬೇಕಾದೀತೋ ಎಂಬ ಶಂಕೆ ನಮಗೆ ಇತ್ತು. ಈಗ ಅದು ಹೋಗುವ ಸೂಚನೆಯಿದೆ. ಡಾ॥ ಮೆಟ್ಕಾಫರನಂತರ ಇವರನ್ನೇ ಖಾಯಂ ಆಗಿ ವೈಸ್ ಚಾನ್ಸಲರನ್ನಾಗಿ ಮಾಡುವುದು ಸೂಕ್ತವಾಗಿದೆ.

ಶ್ರೀಮತಿ ಕಮಲಾ ನೆಹರೂರವರು

ಪಂಡಿತ ಜವಾಹಿರಲಾಲರು.

ಅಷ್ಟವಸುಗಳು ನವಗ್ರಹಗಳಾಗಬೇಕೆ?

ಮೈಸೂರು ಜಿಲ್ಲಾ ವಿಭಜನೆ.

(ಲೇಖಕ — ಕೌಟಿಲ್ಯ)

ನಮ್ಮ ಸಂಸ್ಥಾನದಲ್ಲಿ ಎಂಟು ಜಿಲ್ಲೆಗಳಿವೆಯಷ್ಟೆ. ಅವುಗಳಲ್ಲೆಲ್ಲಾ ಮೈಸೂರು ಡಿಸ್ಟ್ರಿಕ್ಟೇ ದೊಡ್ಡದು. ಈಗ ಅದು ವಿಭಾಗಿಸಲ್ಪಡುವುದೆಂಬ ಕೂಗು ನಾನಾ ಕಡೆಗಳಿಂದ ಕೇಳಿಬರುತ್ತಿದೆ. ವಿಭಜನೆಯೇ ಆಗಿಬಿಡುತ್ತದೆಂದೂ ಇದರಿಂದ ಮಂಡ್ಯವು ಹೊಸ ಡಿಸ್ಟ್ರಿಕ್ಟ್ ಹೆಡ್‌ಕ್ವಾರ್ಟರ್ ಆಗುತ್ತದೆಂದೂ, ಅಲ್ಲಿ ಸ್ಥಾಪಿತವಾಗಲಿರುವ ಹೊಸ ಕಛೇರಿಗಳ ವಾರ್ಷಿಕ ವೆಚ್ಚವು ಸುಮಾರು ನಾಲ್ಕು ಲಕ್ಷ ರೂಪಾಯಿಗಳಿಗಿಂತಲೂ ಹೆಚ್ಚಾಗಬಹುದೆಂದೂ ಊಹಾಪೋಹಗಳು ಆಗುತ್ತಿವೆ. ಇವರಲ್ಲಿ ಒಂದು ವಿಷಯ ಪರ್ಯಾಲೋಚನೆಗೆ ಬೇಕಾಗಿದೆ. ನಮ್ಮ ರಾಜ್ಯವು ಪ್ರತಿಯೊಂದು ವಿಷಯದಲ್ಲಿಯೂ ನೆರೆಯ ಬ್ರಿಟಿಷ್ ಇಂಡಿಯಾ ಸರ್ಕಾರವನ್ನೇ ಅನುಕರಿಸಲು ಹೊರಡುತ್ತಿರುವುದು ಸರ್ವಜನವಿದಿತವಾಗಿಯೇ ಇದೆ. ಎಲ್ಲದರಲ್ಲೂ ಅವರಂತೆಯೇ ಅನುಕರಣ ಮಾಡಿದರೆ ಚಿಂತೆಯಿಲ್ಲ. ಕೆಲವು ಬೇಕು ಕೆಲವು ಬೇಡ. ನಿದರ್ಶನ—ಮದರಾಸ್ ಆಧಿಪತ್ಯದ ಕೊಯಮತ್ತೂರು ಜಿಲ್ಲೆಯನ್ನು ನೋಡಿ. ಅದು ನಮ್ಮ ದೇಶದ ಮಗ್ಗುಲಲ್ಲೇ ಇದೆ. ಆ ಎರಡು ಕೊಯಮತ್ತೂರುಗಳನ್ನು ಸೇರಿಸಿದರೆ ಒಂದು ಮೈಸೂರಿನಷ್ಟು ದೊಡ್ಡದಾಗುತ್ತದೆ. ಆ ಜಿಲ್ಲೆಯು ಒಬ್ಬ ಕಲೆಕ್ಟರವರ ಆಡಳಿತಕ್ಕೊಳಪಟ್ಟಿದೆ. ಆ ಕಲೆಕ್ಟರ್ ದರ್ಜೆಯೂ ನಮ್ಮ ಡೆಪ್ಯುಟಿ ಕಮೀಷನರ್‌ರವರ ದರ್ಜೆಯೂ ಎರಡೂ ಸರಿಸಮಾನವಾದುವು. ಹೆಚ್ಚು ಕಡಿಮೆ ಇಬ್ಬರ ಸಂಬಳ ಸಾರಿಕೆಗಳೂ ಒಂದೇ. ಅಧಿಕಾರಿಗಳ ಹೆಸರುಗಳಲ್ಲಿಯೂ ಅದೇರೀತಿಯಾಗಿದೆ. ಹಕ್ಕುದಾರಿ ವ್ಯಾಜ್ಯ ಭೋಗಿಗಳನ್ನು ವಜಾ ಮಾಡಿ ಸಂಬಳದ ಪದ್ಧತಿಯನ್ನನುಸರಿಸಬೇಕೆಂಬುದೂ ಬಸ್ಸುಗಳಿಗೆ ಲೈಸನ್ಸ್ ಕೊಡುವಾಗ ಸೀಟುಗಳ ಲೆಕ್ಕದಂತೆ ಮಾಡ್ಡ ವಸೂಲಿಪದ್ಧತಿ, ಹೀಗೆಯೇ ಎಲ್ಲಾ ವಿಷಯಗಳಲ್ಲೂ ಅವರನ್ನೇ ಮಾದರಿ ಮಾಡಿಕೊಳ್ಳುವ ಪ್ರಯತ್ನ.

ನಮ್ಮ ಹಣಕಾಸಿನ ಸ್ಥಿತಿಗತಿಗಳು ವಿಷಮಾವಸ್ಥೆಗಿಟ್ಟುಕೊಂಡಾಗ ಕತ್ತರಿ ಪ್ರಯೋಗವಾಯಿತಷ್ಟೆ. ಅಂಥಾ ಸಂದರ್ಭಗಳನ್ನೆಲ್ಲಾ ಈಗಿರುವ ಹಾಗೆ ಅಷ್ಟದಿಕ್ಪಾಲಕರುಗಳು ಬೇಡ, ನಮ್ಮ ದೇಶವು ಆರೇ ಭಾಗವಾಗಿ ವಿಂಗಡಿಸಲ್ಪಟ್ಟರೂ ಒಳ್ಳೆಯದು. ಅದರಿಂದ ಹೆಚ್ಚಿನ ದುಂದು ವ್ಯಯವು ಕಮ್ಮಿಯಾಗುವುದು, ಎಂದು ಎಷ್ಟೋ ಜನರು ವಾಗ್ಮಿಗಳವರು ಇದನ್ನು ಕೇಳುವರಾರು? ಅಲ್ಲದೆ ಹಿಂದೆ ಇದ್ದ ಡಿವಿಷನಲ್ ಕಮೀಷನರುಗಳೂ ಕೂಡ ಈಗಲೇ ತಮಗೆ ಸ್ವತಃ ಸಾಕಷ್ಟು ಕೆಲಸವಿಲ್ಲದಿರಲಾಗ ಈ ವಿಭಜನೆಯು ಅಗತ್ಯವಿಲ್ಲವೆಂದು ಪ್ರಭುತ್ವಕ್ಕೆ ತಿಳಿಸಿದ್ದುದನ್ನೋದಿ ಆ ಪ್ರಶ್ನೆಯು ಅಷ್ಟಕ್ಕೇ ನಿಂತಿತ್ತೆಂದೂ ಈಗ ಪುನಃ ಸದರಿ ಪ್ರಶ್ನೆಯು ಹೇಗೆ ಬೆಳೆಯಬೇಕಾದ ಪ್ರಬಲವಾದ ಕಾರಣವೇನಿರಬಹುದೆಂದೂ ಎಲ್ಲವರೇನಕರು ಕೇಳುತ್ತಿರುವರು. ಅಂತು ಹೊಸ ಡಿ॥ ಕ॥ ಅಧಿಕಾರಸ್ಥಾನವು ಯಾವ್ಯಾವ (ಸಿಪಾರಸುದಾರರ) ಜನಾಂಗದ ದೊಡ್ಡ ಮನುಷ್ಯರುಗಳ ನಿರೀಕ್ಷಣೆಯಲ್ಲಿದೆಯೋ ನೋಡಬೇಕಾಗಿದೆ. ಅಷ್ಟವಸುಗಳಿಗೆ ಬದಲಾಗಿ ನವಗ್ರಹಗಳಾಗುತ್ತೋ ಅಥವಾ ಅಷ್ಟದಿಗ್ಗಜಗಳು ಅರಿಷಡ್ವರ್ಗಗಳನ್ನು ನಿಗ್ರಹಿಸಿ ದೇಶದ ಕಲ್ಯಾಣವನ್ನು ಬಯಸುತ್ತವೋ ಸಾವಧಾನದಿಂದ ಎದುರು ನೋಡೋಣ.

ಇಣುಕಪ್ಪನ ನೋಟ.

ಗಣೇಶನ ಪೂಜೆ

ಚಿಕ ಮಹಾಶಯರೆ,

ನಾನು ಪ್ರತಿ ವಾರವೂ ಬರೋಲ್ಲ! ನನಗೆ ಮೀಸಲು ಜಾಗ ಬ್ಯಾಡ? ಈವಾಗಿನ ಗುಮಾನೆ ಲೈನಿ ಗಿಬಿನಿ ಏನೂ ಇಲ್ಲ, ಅಂತ ಹೇಳಿದ್ದವನು ಯಾಕೆ ಬಂದ?" ಅನ್ನೋ ಪ್ರಶ್ನೆ ನಿಮ್ಮಲ್ಲೇ ಹುಟ್ಟಬಹುದು. ಅದಕ್ಕೆ ಇಷ್ಟೇನೆ ಉತ್ತರ. ಯಾವಾಗಲೂ ಕೆಲಸ ಪ್ರಾರಂಭ ಮಾಡಿಬಿಟ್ಟರೆ ಅದರ ವಿರಹವೇ ವಿಷ ಎಂಬಿ, ಬಿಡಬಾರದು ಹಾಗೆ ಬಿಟ್ಟರೆ ಕೆಲ್ಸ ಒಪ್ಪೊಕ್ಕೇ ಸುಖ್ವಾಪು ಅಂತ ಬಿತಿಯವರು ಹೇಳುತ್ತಾರೆ. ಅದಕ್ಕೋಸ್ಕರ ಈ ಸಾರಿ ಈ ವಿಷಯದಲ್ಲಿ ಆವರು ಹೇದ್ದೋರ ಮಾತು ಏನಪ್ಪ ಕೇಳಬಾರದು ಅಂತಾ ಚಪಲ! ಅದಕ್ಕಾಗಿ ಬರೆದಿದ್ದೇನೆ ಕೋಪವನಾಡ ಬ್ಯಾಡಿ. ನಾನು ಎಕ್ಸ್ಕ್ಯೂಸ ಕೇಳುಕೊಳ್ತೀನಿ ಅಷ್ಟೆ!

ಇನ್ನೂ ಒಂದು ಗುಟ್ಟೇನು ಅಂತಿರೋ? ನಮ್ಮ ಇತ ಸ್ವಾತಂತ್ರ್ಯದೀರಲ್ಲಾ ಸ್ವಾಮಿ ಕೆಲಸ ಮಾಡಿದರೂ ಹೊಟ್ಟೆಮೊರಾ, ಬಾಯಿ, ಕಡುಬು, ಉದ್ದಿನ ಕಡುಬು ತಿನ್ನೊಂಡಿಲು ಗಣೇಶನಿಗ ಎರಡು ಹೂವು ಹಾಕು, ಅಂತ ಹೇಳುತ್ತಿದ್ದರೆ. ತಮ್ಮಂತವರೂ ಯಾವ ಪೂಜೆಗೂ ಮಾಡಬು 'ಓಂ ಗಣಾಧಿಪತಯೇ ನಮಃ' ಎಂದು ಮಂತ್ರ ಹೇಳುತ್ತೀರಲ್ಲಾ ದೇವರು!

ಹಾಗೇನೇ ನಾನೂ ಕೂಡಾ ಗಣಪ್ಪನ ಪೂಜೆ ಮಾಡೋಣ ಅಂತ ಮನಸು ಮಾಡಿದ್ದೀನಿ ಅಷ್ಟೆ!

ಮೊನ್ನೆ 3 4 ದಿನದಾಗ ಹಾಂಗೇ ಹೋಗುತಿದ್ದ ನಮ್ಮ ಸಾರವಾಳ ತಾಪ್ರ. ಯಾವುದೂ ಅಂದರೆ ಸೀವಿಲ್ಲಾ ಕರೀತೀರಲ್ಲಾ ಈಗ ಸಂಸ್ಕೃತ ಕಾಲೇಜು. ಅದನ್ನೇ ಆ ಸಿದಿಯಾಗಿ ಸಾರವಾಳ ಅಂತ ಕರಿಯೋದು ಅಲ್ಲೂ ಒಬ್ಬ ಗಣಪ್ಪ ಇದ್ದಾನೆ ಅವನಿಗೆ, ವಿದ್ಯಾ ಗಣಪತಿ ಅನ್ನೋದು ಅವನ ಪೂಜೆನೇ ಮಾಡೋಣ ಅಂತ ಮನಸ್ಸಾಯಿತು ನಾನೂ ಹೋಗಿ ಧ್ಯಾನ ಮಾಡ್ಕೊಂಡ ಅವನ ಹತ್ತಿರ ಇದ್ದ ಎಲೆಕ್ಟ್ರಿಕ್ ದೀಪ ಕೋಟಿ ಸೂರ್ಯಪ್ರಕಾಶ ಮಯವಾಗಿತ್ತು. ಹಾಗೇನೇ ಅಲ್ಲಿಂದ ಅರಮನೆ ಆಫೀಸು ಗೇಟು, ನಾರಾಯಣ ರಸ್ತೆ, ಹೊಸ ಮ್ಯಾಜಿಸ್ಟ್ರೇಟ್ ರಸ್ತೆ ಇವು ಕೂಡುವ ಕಡೆಯಿಂದ ವಾಣೀವಿಲಾಸ ಮಾರ್ಕೆಟ್ಟಿನ ಕಡೆಗೆ ಹೊರಟೆ ನಾನು ಹಿಂದ ಎಷ್ಟೋ ಸಾರಿ ಅದೇ ರಸ್ತೇಲಿ (ರುಕ್ಮ ಪಕ್ಕದಲ್ಲಿ) ಓಡಾಡಿದ್ದೀನಿ ಈಗ ನಾವು ಬಂದ ಕೊಟ್ಟೋ ಕಡೆಯಲ್ಲಿ ದೀಪಗಳು. ಅದಕ್ಕೇ ನೊನ್ನೆ ಕಡೆಯಿಂದ ಹತ್ತು ಗಜ ದೂರ ಮುಂದೆ ಹೋದರ ಅವಾಸೆ ಕಾವಳಾನೆ ಹಾಜರ್ ಯಾಕೆ ಅಂತೀರೋ ಹಿಂದೆ ಅಲ್ಲಿ ಬಾಳೇ ವಸರ ಸಾಕುಲಾಯ ಇತ್ತು. ಚೊಕ್ಕೇ ಹಿನ್ನನ ಗಿಡ ಇತ್ತು. ಅಂಥಾ ಜಾಗದಲ್ಲಿ ಇತ್ತು ಅಂತ ಗುರ್ತುಮಾಡಿ ಹಾಜರಿದ್ದೇನಲ್ಲ?

ಎಲ್ಲೋ ಹೋಗಿ ಬಿಟ್ಟ' ಕ್ಷಮಿಸಿ ದಯವಿಟ್ಟು. ನಮ್ಮ ನಾಡಿನ ರಾಮರಾಜ್ಯದ ರಾಜಧಾನಿಯಲ್ಲಿ ಅದೂ ಅರಮನೆಗೆ ಕೇವಲ ಎರಡು ಫರ್ಲಾಂಗ್ ದೂರದವಳಗೇ ಇರುವ ನಮ್ಮ ವಿದ್ಯಾಗಣಪ್ಪನೂ ಕೂಡ ಇಷ್ಟು ಘೋರಣೆಮಾಡಿ ಕುಂತವನಲ್ಲಾ ಅಂತ ಯೋಚನೆ!

ನೋಡಿ! ಎಲೆಕ್ಟ್ರಿಕ್ ದೀಪ ನಮ್ಮೂರಾಗೆ ಸೀರಿನವಂಗೆ ಮಿರ್ಚ, ಕಣ್ಣುಂಬಾ ಲಿ ಇರುವುದು ನೀರು! ನೋಡೋಕೋ ಗೋವರು ನೋಡುವುದು ನೀರು! ಮೊದಲು' ನೀರಿನಸ್ಸೇ ದೀಪಗಳು!

ನವರಾತ್ರಿ, ವರ್ದಂತಿ ಮತ್ತು ಇನ್ನ ಯಾವಾದರೂ ಜಂಟಲ್‌ಮನ್ ಸಾಹೇಬರು ಊರು ನೋಡೋಕ ಬಂದಾಗ ಕರೆಂಟನ್ನ ನೀರು ಹ್ಯಾಗೋ ಹಂಗ ಖರ್ಚು ಮಾಡುತ್ತಾರೆ ಹಾಗೇನೇ ಏನು! ದೊಡ್ಡ ಬೀದಿಗಳು ಕೆಲವು ಬಿಟ್ಟರೆ ಬಡಬಗ್ಗರ ಬೀದಿ ಕೇಳೋವರ್‍ಯಾರೆ ಸ್ವಾಮಿ!

ಆಗ ಬಸ್ಸಿ ನಿತು! ದೇವರೂನು ಜೇಬಾರಾಗಿ ಆಗವನೆ. ತಾನು ಒಬ್ಬ ಸಂತೋಷಪಟ್ಟರ ಸಾಕು ಅಂತ. ಈ ಊರಾಗ ಯಾವ ಯಾವ ಬೀದಿಲಿ ದೀಪಾಗಲ್ಲ ಅಂಬೋದು ಪಟ್ಟಿಮಾಡಿ ಕೊಡುತಿನಿ. ಡಸ್ತ್ರಿಕ್ಟ್! ತಿರುಗಿ ಹೊಸ ರೋಡು ಅಂತ ಬಾಯಿಸ್ ಪಟ್ಟಿ ಮಾಡಿಸೋ ರಸ್ತೇಲೇ ಈ ಪಾಡು. ಅಂದರ ನಮ್ಮಂಥ ಗರೀಬರ ಬೀದಿ—ಬೀದಿಯೇ ?

⁜ ⁜ ⁜ ⁜

ಈಗ ಆಗತಿರೋದೆಲ್ಲಾ ಏನು ಅಂದರ "ಪೆನ್ನೀ ವೈಸ್ ಪೌಂಡ್ ಫೂಲಿಷ್" ಅಂತ ಕೇಳಿಲ್ಲವೆ? ನಮ್ಮ ಘಾನುವಾರ ಬೆಳಗಿನ ಸೈಲಿನಲ್ಲಿ ನಂಜನಗೂಡಿಗೆ ಏನೋ ಕಾರ್ಯಾರ್ಥವಾಗಿ ಹೋಗುತ್ತಿದ್ದ. ಬೆಳಗ್ಗೆ 7 30 ಗಂಟೆ ರೈಲಿನಲ್ಲಿ ಹೋಗುತಿರೋವಾಗ ಕಡಕೊಳದಲ್ಲಿ ಬೀದಿ ಕಂಬಗಳಲ್ಲಿ ಎಲೆಕ್ಟ್ರಿಕ್ ದೀಪಗಳು ಉರೀತಿತ್ತು. ನಾನು ರಾತ್ರಿ ಗಾಡೀಲಿ ಕೂತುಕೊಂಡು ಯಾಲಕ್ಕಿ ಬೆಟ್ಟ ದೀಪದ ಆನಂದ ತಗೋತೀನೇನೋ ಅಂತ ಮನಸಾಯಿತು ಅದರ ನಮ್ಮ ಸೂರ್ಯನ ಪ್ರಕಾಶದ ಮುಂದೆ ಎಲೆಕ್ಟ್ರಿಕ್ ಬೆಳಕು ಹಾಯಲಿಲ್ಲ.

ಆಗ ಭಾನುವಾರ. ಕರೆಂಟ್ ಆಫೀಸಿಗೆ ರಜಾ ಕೆಲಸಗಾರರು ಚರ್ಚಿನಲ್ಲಿ ಪ್ರಾರ್ಥನೆಗೆ ಹೋಗಿರಬೇಕೇನೋ ಅಂತ ಯೋಚನೆ ಆಯಿತು ಚರ್ಚೇ ಇಲ್ಲದಿರೋವಾಗ ನನ್ನ ಯೋಜನೆಗೆ ಕಾರಣವಿಲ್ಲ! ಹ್ಯಾಗಿದ್ದರೂ ಮಟ್ಟೋರಿಗೆ ನಮ್ಮ ಕರೆಂಟ್ ಹೋಗೊಲ್ಲ ಜಡೆಲ್ಲಾ ಉಳೀತು ನಮಗೇ ಹೆಚ್ಚು ಸುಖ ಇರುತ್ತೆ ಅಂತ ತಿಳಿದೆ ಅನ್ನಿ.

ದೀಪ ಅಂದರೆ ಈಗ ಜ್ಞಾಪಕ ಬಂತು. ರಾತ್ರಿ ಹೊತ್ತು ಹೆಣ ಹೊತ್ತುಕೊಂಡು ಕೆರ ಏರಿ ಕೆಳಗೆ ಹೋಗುತಾರಲ್ಲ ಅವರ ಕಷ್ಟ! ಅದೂ ಅಮಾವಾಸ್ಯೆ ಕಾಲಗಳಲ್ಲಿ ಬೆಳಕಿಲ್ಲದೆ ಅವಸ್ಥೆ ಪಡುತಾರಲ್ಲ ಯಾರಿಗ ತಿಳಿಬೇಕು?

ಒಟ್ಟಿನಲ್ಲಿ ಏನು ಸ್ವಾಮಿ! ನಾಡೇತೀಸ ಜಿಸಮ್ ಇಲ್ಲದಿರೋ ಊರಗಳಿಗೂ ಎಕ್ಸ್‌ಟೆನ್‌ಷನ್ ಬೇಕು. ಅಂತೂ ಒಂದಾದರೆ ಸಾಲದು. ಅಪ್ಪದಿಗ್ಬಂಧನದಂತೆ ಮೂಲೆ ಮೂಲೆಯಲ್ಲೂ ಬಡಾವಣೆ ಬೇಕು ತಕ್ಕ ಸೌಕರ್ಯ ಕೇಳಬೇಡಿ ತಕ್ಕ ರಕ್ಷಣೆ ಕೇಳಬೇಡಿ ಭಗವಂತ ಕೊಟ್ಟಿರೋ ಚರ್ಮವೇ ರಕ್ಷಕ! ಅದೂ ಈಗ ಉಳೀತಾ ಇಲ್ಲ. ಯಾಕ ಅಂತಿರೋ ಎಕ್‌ಟೆನ್‌ಷನ್ ಹೆಸರಿನಲ್ಲಿ "ಹಾವು ಹೊಡೆದು ಹದ್ದಿಗೆ ಹಾಕಿದರೂ" ಅಂತ ಯಾವುದೋ ವಸ್ತೋ ದುಂಡು ಪೆಚ್ಚಾಗಾಗತಾ ಇಲ್ಲವೇ! ಅದಕ್ಕೆಲ್ಲಾ ಕೇಡರ್ ಯಾರು? ನಾವೇ! ಕೊತರ, ನಿಂತರೆ ಮಾತಾಡಿದರೆ ತೆರಿಗೆ ಎಲ್ಲಕ್ಕೂ ತೆರಿಗೆಗಳನ್ನು ಒಡಾಯಿಸುವುದು ಇದರಲ್ಲೇ ದೇಶವೆಲ್ಲಾ ಹಿಸ್ಸೆ ಹೀರೋಕಾಯಾಗುವುದು ಆ ನೇಜಿ ಕವರ್ ಕಿಸುಕ್ ಎಂದರೆ ತಪ್ಪು ಸಾಜೀತು ಮಾಡುವ ಕರಾಳ ಶಾಸನಗಳಿವೆ ಯಲ್ಲಾ. ಇನ್ನೇನೇನು ಆಗಬೇಕು' ದೇವರು!

ಇಂತು ನಿಸ್ಸಾರವಾದ ನಮ್ಮ ಸೂಳೆಗಳು ವಿಶ್ವಸನೀಯರಿಗೂ ಬೇಡವಂತ. ಅವರಿಗಾದರೂ ಅವ್ಯಾದರೂ ಕನಿಕರವಿದೆ. ಅದು ಜಗಜ್ಜನಕನ ಪ್ರಾಕಾರ.

ನೋಡಿ, ಮುಂದೆ ನಾನು ಹೀಗೆ ತಮ್ಮನ್ನು ತೊಂದರ ಪಡಿಸೋಕೆ ಅವಕಾಶವಿಲ್ಲ ಅಂತ ಈದಿನ ಹೀಗೆ ಗಣೇಶನ ಪೂಜೆ ಮಾಡಿದೀನಿ. ಬೇಸರಪಡಬ್ಯಾಡಿ, ಯಾವಾಗ ಆದರೂ ನಮಯನಿಷ್ಠರ, ತಮ್ಮ ವಿರಾಮದ ಟೈಮಿನಲ್ಲಿ ಭೇಟಿ ತಗೋತೀನಿ ಪ್ರೀತಿ ಮಡಗಿರಿ ದ್ಯಾವರು.

ತಮ್ಮವ,

ಇಣಕಪ್ಪ.

ಯಳಂದೂರು ಜಹಗೀರಿ ಸುದ್ದಿ.

(ಸ್ವಂತ ಬಾತ್ಮೀದಾರರಿಂದ)

ಘನವನ್ನು ಹೊಂದಿದ ಲೇಟ್ ದಿವಾನ್ ಪೂರ್ಣಯ್ಯನವರಿಗೆ ನಮ್ಮ ಪ್ರಭುಗಳವರು ಈ ತಾಲ್ಲೂಕನ್ನು ಜಹಗೀರಿಯಾಗಿ ಅವರ ಸ್ವಾಮಿಭಕ್ತಿಗೆ ಸಲುವಾಗಿ ಕೊಟ್ಟರು ಯಳಂದೂರು ಜಹಗೀರಿಯು 32 ಸಾವಿರ ಪ್ರಜೆಗಳನ್ನು ಒಳಗೊಂಡು, ಒಳ್ಳೆ ಫಲವತ್ತಾದ ಜಮೀನು ಉಳ್ಳದ್ದಾಗಿದೆ ಸುವರ್ಣಾವತಿ ನದೀತೀರದಲ್ಲಿ ಈ ಪ್ರದೇಶಗಳಲ್ಲಿನ ಜಮೀನುಗಳಿಗೆ ನೀರು ಹಾಯಿ, ಈ ನೀರಿನ ಆಶ್ರಯದಿಂದ ಕೆರೆ ತುಂಬಿ ಈ ಜಮೀನು ಫಲವತ್ತಾದ ಕಪ್ಪು ಮಣ್ಣಿನಿಂದ ನವಧಾನ್ಯಗಳ ಬೆಳವಣಿಗೆಗೆ ತುಂಬಾ ಸಾಧಕವಾಗಿದೆ. ಇಂಥಾ ಫಲವತ್ತಾದ ಜಮೀನು ಸಾಗುವಳಿಗೆ ಕೆರೆಗಳಿಗೆ ಈ ನದೀ ನೀರು ಬರುವುದಕ್ಕೆ ನಾಲುವೆ ವ್ಯವಸ್ಥೆ ಮಾಡಿದ್ದರೂ ಅವುಗಳ ಸಕಾಲದಲ್ಲಿ ಕಾಮಗಾರಿಯಿಲ್ಲದೆ ರೈತರ ವ್ಯವಸಾಯಕ್ಕೆ ತಕ್ಕ ಫಲ ಅನುಭವಿಸಲು ಕುಂದಕವಾಗಿದೆ ಇದಕ್ಕೆ ಪೂರ್ವದಿಂದಲೂ ತಕ್ಕ ಗಮನವು ಪೂರ್ಣ ದೃಷ್ಟಿಯಿಂದ ಜಹಗೀರುದಾರರು ಕೊಡಲಿಲ್ಲವಾಗಿ ರೈತರ ಸೌಕರ್ಯಗಳಿಗೆ ಕುಂದಕ ಉಂಟಾಗಿರುತ್ತೆ. ಈ ತಾಲ್ಲೂಕಿನಲ್ಲಿ ರೆವಿನ್ಯೂ, ಮುಜರಾಯಿ, ಫಾರೆಸ್ಟ್, ಇರಿಗೇಷನ್, ಎಜುಕೇಷನ್, ಮೆಡಿಕಲ್, ರೋಡು, ಪೋಲೀಸ್, ಮುನಿಸಿಪಾಲಿಟಿ, ಗ್ರಾಮಪಂಚಾಯಿತಿ ವಗೈರೆ ಖಾತೆಗಳು ಮೊದಲು ಹೀನಸ್ಥಿತಿಯಲ್ಲಿದ್ದುದರಿಂದ— ಪ್ರಜೆಗಳ ಪ್ರಾರ್ಥನಾನುಸಾರ ಜಹಗೀರಿಯು ಗೌರ್ನಮೆಂಟ್ ಮ್ಯಾನೇಜ್‌ಮೆಂಟಿನಲ್ಲಿ ಇರುತ್ತೆ ಪ್ರಜೆಗಳ ಪ್ರಯೋ

ಚಾ. ಚಾ.

೧

'ಕಣ್ಣುಗಳೆರಡನ್ನೂ ಚೆನ್ನಾಗಿ ಮುಚ್ಚಿಕೊಂಡರೆ, ಕಿವಿ ಮತ್ತಷ್ಟು ಚೆನ್ನಾಗಿ ಕೇಳಿಸುವುದು ಎಂದು ಒಬ್ಬರು ಡಾಕ್ಟರು ಹೇಳುವರು. ಉಪನ್ಯಾಸಕರೆಲ್ಲರೂ ಈ ಸಂಗತಿಯನ್ನು ನೆನಪಿಸಲ್ಲಿಟ್ಟು, ಇನ್ನು ಮುಂದೆ ಸಮಾಧಾನನಾಗಿರಲಿ!

೨

ಕಳೆದವಾರ ಬೆಂಗಳೂರಿನಲ್ಲಿ ಯಾವನೋ ಒಬ್ಬ, ಏಣಿಯ ಸಹಾಯವಿಲ್ಲದ, ಮಹಡಿಯ ಎಂತಸ್ತಿಗೆ ಹತ್ತಿದನಂತೆ! ಬಬಿರುತ್ತಾ, ಇನ್‌ಷೂರನ್ಸ್ ಏಜಂಟರುಗಳು ಎಷ್ಟು ಸಾಹಸಿಗಳಾಗಿರುವರು, ನೋಡಿದಿರಾ!

೩

ಎಷ್ಟು ಜನ ನೆಂಟರಿದ್ದಾರೆ ಎಂದು ನಮ್ಮಲ್ಲಿ ಯಾರು ಯಾರು ಸರಿಯಾಗಿ ಹೇಳಬಲ್ಲಿರು? ಎಂದು ಒಬ್ಬರು ಕೇಳಿದರಂತೆ ದಸರಾ ಕಾಲದಲ್ಲಿ ಮೈಸೂರಲ್ಲೇ ಇದ್ದ ಪ್ರತಿಯೊಬ್ಬರಿಗೂ ಗೊತ್ತು ಎಂದು ನಾವು ಧೈರ್ಯವಾಗಿ ಹೇಳಬಲ್ಲೆವು.

೪

"ಕನ್ನಡ ಮಾತೆಯ ಸೇವೆಗಾಗಿ ನಾನು ಮಾಡುತ್ತಿರುವ ಕೆಲಸದ ಮಹತ್ವವನ್ನು ಇನ್ನೂ ಯಾರೂ ಮನಗಂಡಿಲ್ಲ" ಎಂದು ಒಬ್ಬರು ಗೋಳಿಡುವರು. ಇಂತಹ ಸುಯೋಗವು ಅವರಿಗೆ ಇನ್ನೆಷ್ಟು ದಿನಗಳು ಇರುತ್ತೋ, ನಾವು ಹೇಳಲಾರೆವು.

೫

"ಹೊಸ ಸಂಸಾರ ಪ್ರಾರಂಭವಾದನಂತರ, ಮೊದಲನೆಯ ಸಾರಿ ದೋಸೆ ಮಾಡಿ, ತಂದು ಗಂಡನ ಮುಂದಿಡುವಾಗ ಕಳವಳದಿಂದ ಆಕೆಯ ಕೈ ನಡುಗದಿರಲಾರದು' ಎಂದು ಒಬ್ಬರು ಬರೆದಿರುವರು ಗಂಡನ ಕೈ ಕೂಡ ನಡುಗದಿರಲಾರದು, ಎಂದು ನಾವು ಹೇಳಬಲ್ಲೆವು.

೬.

"ಕೊಂಡು ಬಳಿಗಳು ಕೆಡದಿರಬೇಕಾದರೆ, ಸ್ವಲ್ಪ ಉಪ್ಪನ್ನು ಸೇರಿಸಿ" (ಪಾಕಶಾಸ್ತ್ರದ ಪುಸ್ತಕ). ಇನ್ನೊಂದು ಉಪಾಯವೂ ಇದೆ ಮಡುಗರಿಗೆ ಎಟುಕದಹಾಗೆ ಗೂಡೆಯನ್ನು ಗೋಡೆಗೆ ತಗುಲಿಸಿ!

೭.

"ಮಾರ್ಚಿ ೧ ನೇ ತಾ॥ ನಲ್ಲಿ ದೊರೆಯುತ್ತದೆ" "ಬರುತ್ತದೆ" "ಪ್ರಕಟವಾಗುತ್ತಲಿದೆ' ....ಸದ್ಯ! ಮೊದಲೇ ಎಚ್ಚರಿಕೆ ಕೊಡುತ್ತಾರಲ್ಲಾ! ಅವಕ್ಕೆ ನಮ್ಮ ಹೃತ್ಪೂರ್ವಕವಾದ ವಂದನೆಗಳು

೮.

ತಮ್ಮ ಕೊಠಡಿಯಲ್ಲೇ ಕುಳಿತು ಕತ್ತಲಲ್ಲಿ "ಕರುಣಾಳು ಬಾ ಬೆಳಕೆ" ಎಂದು ಹಾಡುತ್ತಿದ್ದ ಸ್ನೇಹಿತನನ್ನು ಕುರಿತು, ಇನ್ನೊಬ್ಬ 'ದುಡ್ಡು ಹಾಕುತ್ತೀಯಾ' ಎಂದನಂತೆ. (ನಾಕ)

ಜನಗಳು ಎಷ್ಟೋ ಮುಟ್ಟಿಗೆ ನಡೆಯುತ್ತಲಿದೆ ಎಂಬ ವಿಷಯಕ್ಕೆ ಆಯಾಯ ಬಾಬಿನ ವಿದ್ಯಮಾನಗಳನ್ನು ಕುರಿತು ಮುಂದಿನ ಪತ್ರಿಕೆಗಳಲ್ಲಿ ಅರಿಕೆ ಮಾಡುತ್ತೇನೆ.

Vox Populi·

The Vice-Chancellorship
(BY UNCLE GEORGE)

It has been announced that Dr. Metcalfe is going on leave shortly and that Mr N S Subba Rao is to officiate as Vice Chancellor in addition to his Directorship This bears out the contention that a whole time Vice Chancellor of 2,000 rupees cadre is unnecessary for the University This does not mean however that the Vice-Chancellorship should be tacked on permanently to the Director of Public Instruction, as that would detract from the special dignity attaching to that high office

Mr N S Subba Rao's appointment for the time being is of interest from two stand points We are told that the University is to confer the Doctorate on Sir Puttanna Chetty during this month Since it was Mr Subba Rao who moved before the Senate the Conferment of Doctorate on that most lucky citizen of the state, it is as well that he should be allowed principle part as Vice Chancellor in the special Convocation to be convened for the purpose Again it has been the practice of University Professors to take shelter for the heavy failures in the Public Examinations under the plea that the High Schools are supplying inefficient material to the University With Mr Subba Rao as Vice Chancellor-cum Director of Public Instruction, that specious plea could hardly now be seriously advanced

ವರ್ತಮಾನ ಸಂಗ್ರಹ.

ಖಾದಿಬಜಾರ್ —ಚನ್ನಪಟ್ಟಣದಲ್ಲಿ ಈ ವಾರ ನಾಲ್ಕು ದಿನಗಳು ಖಾದಿಬಜಾರ್ ನಡೆಯುತ್ತದೆ ಬದನವಾಳು, ತಗಡೂರು, ಅಜ್ಜಂಪುರ, ಹೊಸೂರು, ಐಮಂಗಲಗಳ ಖಾದಿಯು ಮಾರಾಟಕ್ಕೆ ಬರುತ್ತದ

ಹೊಸ ಡಿ॥ ಪೊ॥ ಸೂಪರಿಂಟೆಂಡೆಂಟರು —ಮೈಸೂರು ಜಿಲ್ಲೆಗೆ ವರ್ಗವಾಗಿರತಕ್ಕ ಶ್ರೀ॥ ಸಿ ಎಂ ರಣಜೋಡ್ ಸಿಂಗರವರು ಈ ವಾರದ ಅಂತ್ಯದಲ್ಲಿ ಛಾರ್ಜು ವಹಿಸುವರೆಂದು ತಿಳಿಯಬರುತ್ತದೆ

ಶ್ರೀ ಸೀತಾರಾಮ ಮಂದಿರ —ಕಳೆದ ಬುಧವಾರ ಈ ಮಂದಿರದ ವಾರ್ಷಿಕ ಸಭೆ ನಡೆಯಿತು ಹೊಸ ವರ್ಷದ ಸಮಿತಿಯ ಚುನಾವಣೆ ಆಯಿತು ಶ್ರೀ॥ ಗೋಪಾಲ ಮಲ್ಲರಾಜೇ ಅರಸಿನವರು ಅಧ್ಯಕ್ಷರಾಗಿಯೂ ಆರ್ ಕೃಷ್ಣಯ್ಯಂಗಾರ್ರು ಉಪಾಧ್ಯಕ್ಷರಾಗಿಯೂ, ಟಿ ಚಾಮಯ್ಯನವರ್, ಬಿ ಕೆ ಸುಬ್ಬರಾಯರೂ, ಮತ್ತು ಎಸ್ ನಂಜುಂಡರಾಯರೂ ಕಾರ್ಯದರ್ಶಿಗಳಾಗಿಯೂ ಚುನಾಯಿಸಲ್ಪಟ್ಟರು ಕಮಿಟಿಯ ಚುನಾವಣೆಯೂ ಆಯಿತು

ಮೋಟಾರ್ ಸಂಘ —ಮೊನ್ನೆ ಗುರುವಾರ ರಾಜಧಾನಿಯ ಜಿಲ್ಲಾ ಮೋಟಾರ್ ಸಂಘದ ಮೀಟಿಂಗು ನಡೆಯಿತು ಶ್ರೀ॥ ಜ ಆರ್. ಜೋಸೈರ್‌ರವರು ಅಧ್ಯಕ್ಷರಾಗಿದ್ದರು ಬಸ್ ಮಾಲೀಕರ ಹಿತಕ್ಕೆ ಸಂಬಂಧಿತವಾದ ಹಲವು ವಿಷಯಗಳು ಪರ್ಯಾಲೋಚಿಸಲ್ಪಟ್ಟವು

ದಿವಾನರ ಸಂಚಾರ —ಸರ್ ಮಿರ್ಜಾರವರು ಕಳೆದ ಶುಕ್ರವಾರ ಪ್ರಾತಃಕಾಲ "ಇನ್‌ವೆಸ್ಟಿಚರ್" ಉತ್ಸವದ ಪ್ರಯುಕ್ತ ಡೆಹಲಿಗೆ ಪ್ರೈ॥ ಸೆ॥ ಯರೊಡನೆ ಪ್ರಯಾಣ ಮಾಡಿದರು ಮಾರ್ಗದಲ್ಲಿ ಎರಡು ದಿನ ಭೂಪಾಲ್ ನವಾಬರ ಅತಿಥಿಗಳಾಗಿರುವರು ಡೆಲ್ಲಿಯಿಂದ ಹಿಂತಿರುಗುವಾಗ ಎಲ್ಲೋರ, ಅಜಂಟಾ ಗುಹೆಗಳನ್ನು ನೋಡಿಕೊಂಡು ಈ ಮಾಹೆ 15ನೇ ತಾ॥ ನ ದಿವಸ ಬೆಂಗಳೂರನ್ನು ತಲುಪುವರು. ಇರುವರಿವಿಗೂ ಶ್ರೀ॥ ಎಸ್. ಪಿ ರಾಜಗೋಪಾಲಾಚಾರಿಯವರು ತಮ್ಮ ಕೆಲಸದ ಜೊತೆಗೆ ದಿವಾನರ ಸ್ಥಾನವನ್ನೂ ಅಲಂಕರಿಸಿರುತ್ತಾರೆ

Specially arranged for Bakrid
at OLYMPIA TALKIES, Mysore
from 3rd March 1936

Raja Ramani

in a grand combination of Laughs, Thrills and Romance Also showing one reel of cartoon



ಮೆಡಿಕಲ್ ಸಮ್ಮೇಳನ.

ಕಡೂರು ಜಿಲ್ಲೆಯ ಮುಖ್ಯ ಪಟ್ಟಣವಾದ ಚಿಕ್ಕಮಗಳೂರಿನಲ್ಲಿ ಇದೇ ಮಾರ್ಚಿ 2, 3 ಮತ್ತು 4ನೇ ತಾ॥ ಗಳಲ್ಲಿ ಮೈಸೂರು ವೈದ್ಯಕೀಯ ಸಮ್ಮೇಳನವು ಸೇರುವುದು ಸೀನಿಯರ್ ಸರ್ಜನರಾದ ಶಸ್ತ್ರವೈದ್ಯ ಪ್ರವೀಣ ಡಾ॥ ಎನ್ ಸುಬ್ಬರಾಯರು ಅಧ್ಯಕ್ಷತೆಯನ್ನು ವಹಿಸುವರು ದರ್ಬಾರ್ ಸರ್ಜನ್‌ರಾದ ಡಾ॥ ರಾಬಿನ್‌ಸನ್‌ರವರು ಸಮ್ಮೇಳನವನ್ನು ತೆರೆಯುವರು ಚಿಕ್ಕಮಗಳೂರಿನ ಮೆಡಿಕಲ್ ಆಫೀಸರಾದ ಡಾ॥ ಡಿ ಎಸ್ ಪುಟ್ಟಣ್ಣನವರು ಪ್ರತಿನಿಧಿಗಳಿಗೆ ಸ್ವಾಗತವನ್ನು ಬಯಸುವರು

ಕಲಾಭಿವೃದ್ಧಿ —ಕಳೆದ ವಾರ 5 ನೇ ತಾ॥ ನ ದಿವಸ ರಾಜಧಾನಿಯ ವಾಣೀವಿಲಾಸ ಸರ್ಕಲ್‌ನಲ್ಲಿರುವ ಶ್ರೀ ನಂಜುಂಡಯ್ಯನವರ ಮನೆ ಮಹಡಿಯ ಮೇಲೆ ಶ್ರೀ ಕರ್ನಾಟಕ ಕಲಾಭ್ಯುದಯ ಮಂಡಲಿ, ಮೈಸೂರು ಎಂಬ ಕಲಾಸಂಸ್ಥೆಯ ಪ್ರಾರಂಭೋತ್ಸವವು ನಡೆಯಿತು ವಿದ್ಯಾವಂತರುಗಳೂ, ಕೇವಲ ಅನುಭವಶಾಲಿಗಳೂ ಇದರಲ್ಲಿ ಭಾಗವಹಿಸಿರುವರು ಐತಿಹಾಸಿಕ ಮತ್ತು ಸಾಮಾಜಿಕ ನಾಟಕಗಳನ್ನು ರಂಗಭೂಮಿಯಲ್ಲಿ ಪ್ರದರ್ಶಿಸಿ, ತನ್ಮೂಲಕ ಅವಶ್ಯಕವಾದ ಸಂಸ್ಥೆಗಳಿಗೆ ಸಾಧ್ಯವಿರುವಷ್ಟು ಮಟ್ಟಿನ ಸಹಾಯ ಮಾಡಬೇಕೆಂಬುದೇ ತನ್ನ ಉದ್ದೇಶವಾಗಿದೆ ಎಂದೂ ಈ ವಿಷಯದಲ್ಲಿ ಮಹಾಜನರ ನಾವರ ಪ್ರೋತ್ಸಾಹವು ಅತ್ಯವಶ್ಯಕವಾಗಿದೆಯೆಂದೂ ಸಂಸ್ಥೆಯ ಚಾಲಕರು ತಿಳಿಸುತ್ತಾರೆ

ಹಣದ ದಸ್ತಿನ ಅಪಾವನೆ— ರಾಜಧಾನಿಯ ನಜರ್‌ಬಾದ್‌ನಲ್ಲಿರುವ ಹಂಚಿನ ಕಾರ್ಖಾನೆಯಲ್ಲಿ ಸುಮಾರು ಐದುಸಾವಿರ ರೂ. ನ ಹಣದ ದುರುಪಯೋಗವು ನಡೆದಿರುವುದಾಗಿ ಹಾದನಿಯ ಮೇಲೆ ಆ ಸ್ಥಾನದ ಕಾರ್ಯದರ್ಶಿಗಳಾದ ಶ್ರೀ॥ ಬಿ ಆರ್ ಚಕ್ರವರ್ತಯ್ಯಂಗಾರ್ರನ್ನೂ ಕ್ಲಾರ್ಕ್ ಆದ ಮಿಸ್ಟರ್ ಆರ್. ಕೃಷ್ಣಯ್ಯರ್‌ರನ್ನೂ ಪೋಲೀಸಿನವರು ಕಳೆದ ವಾರ ದಸ್ತಗಿರಿ ಮಾಡಿದರು ಪೋಲೀಸರು ತಕ್ಕ ವಿಚಾರಣೆ ತನಿಖೆ ಮಾಡುತ್ತಿರುವರು ಈಚೆಗೆ ಶ್ರೀ॥ ಚಕ್ರವರ್ತಯ್ಯಂಗಾರ್ಯರು ಜಾಮೀನಿನ ಮೇಲೆ ಬಿಡುಗಡೆ ಮಾಡಲ್ಪಟ್ಟಿರುವರೆಂದು ತಿಳಿಯಬರುತ್ತದೆ

ಪ್ರಭುತ್ವದ ಸಾಲ —ನಮ್ಮ ಸರ್ಕಾರದವರು ಈಚೆಗೆ ಏರ್ಪಡಿಸಿರುವ ಸಾಲಕ್ಕೆ ಈಗಾಗಲೇ ತೊಂಬತ್ತನಾಲ್ಕು ಲಕ್ಷ ರೂಗಳು ಜಮಾ ಆಗಿದೆಯೆಂದು ತಿಳಿಯಬರುತ್ತದೆ ಈ ಸಾಲದ ಕೃತಿ ಸ್ವಲ್ಪಭಾಗವು ಭದ್ರಾವತಿಯ ಉಕ್ಕಿನ ಕಾರ್ಖಾನೆಗೂ ಇನ್ನು ಸ್ವಲ್ಪ ಕೋಲಾರದ ರಿಲೀಫ್ ಕಾರ್ಯಗಳಿಗಾಗಿಯೂ ವಿನಿಯೋಗವಾಗುವುದೆಂದು ಗೊತ್ತಾಗುತ್ತದೆ

ಆಹಾರದಲ್ಲಿ ಕೆಲವು ಅಂಶಗಳನ್ನು ನಿರ್ಧರಿಸುವುದರಿಂದ, ಶಿಶುಗಳ ಸಂಖ್ಯೆಯನ್ನು ಅನಾಯಾಸವಾಗಿ ಹೆಚ್ಚಿಸಬಹುದು, ಎಂದು ಒಬ್ಬ ಅಮೇರಿಕ ಡಾಕ್ಟರು ಹೇಳುವರು ಜಗತ್ತಿನ ಕಲ್ಯಾಣವನ್ನು ಮುಂದಿಟ್ಟು ಇಂತಹ ಪಾಪ ಮಾಡಬೇಡಿರೆಂದು ನಾವು ಅವರನ್ನು ಕೇಳಿಕೊಳ್ಳುತ್ತೇವೆ (ನಾಕ

ಕಾವೇರಿಮಾತೆಗೆ ಕಾಣಿಕೆ.

ರಾಮನಾಥಪುರದ ಸೇತುವೆ.

ಶಂಕು ಸ್ಥಾಪನೆ

ಶ್ರೀಮನ್ಮಹಾರಾಜರವರ ಭಾಷಣ.

ಶ್ರೀ ರಾಮನಾಥಪುರದ ಸೇತುವೆಯ ಶಂಕುಸ್ಥಾಪನಾ ಮಹೋತ್ಸವವು ಕಳೆದ 21 ನೇ ತಾ॥ ಮಧ್ಯಾಹ್ನ ೩-೩೦ ಗಂಟೆಗೆ ನಡೆಯಿತು,

ದಿವಾನರು, ಚೀಫ್ ಇಂಜನೀಯರ್, ಮುಖ್ಯ ಅಧಿಕಾರಿಗಳು, ಡಿ॥ ಬೋ॥ ಪ್ರೆಸಿಡೆಂಟ್ ಮುಂತಾಗಿ ಅನೇಕರು ಈ ಸಮಾರಂಭಕ್ಕೆ ಬಂದಿದ್ದರು

ಚೀಫ್ ಇಂಜನೀಯರ್ ಮಿ॥ ಬಿ। ಎಸ್ ಎಸ್ ಅಯ್ಯಂಗಾರ್ಯರು ಮಾನಪತ್ರವನ್ನು ಓದಿದರು. ಇದರಲ್ಲಿ ಸೇತುವೆಯ ವಿಷಯವಾಗಿ ಕಲವು ಮುಖ್ಯವಾದ ಸಂಗತಿಗಳನ್ನು ತಿಳಿಸಿದರು. ಈ ಸೇತುವೆಯ ನಿರ್ಮಾಣದ ವೆಚ್ಚವು ೩,೭೩,೬೦೦ ರೂಪಾಯಿಗಳಾಗುವುದೆಂದೂ, ಇದರಲ್ಲಿ ಅರ್ಧದಷ್ಟು ಒಂದೂಕಾಲು ಲಕ್ಷವನ್ನು ಇಂಡಿಯಾ ಸರ್ಕಾರದವರು ಕೊಡುವರೆಂದೂ, ಸೇತುವೆಯ ಕಾರ್ಯಕ್ರಮಗಳು ಕಳೆದ ಅಕ್ಟೋಬರಿನಿಂದಲೇ ಆರಂಭವಾಗಿದೆಯೆಂದೂ, ಎರಡು ವರ್ಷಗಳ ಒಳಗಾಗಿ ಇದರ ಕೆಲಸವು ಮುಗಿಯಬಹುದೆಂಬ ನಿರೀಕ್ಷಣೆ ಇದೆಯೆಂದೂ ತಿಳಿಸಿದರು. ಈ ಸೇತುವೆಯು ಪೂರ್ತಿಯಾದರೆ ಹಾಸನ ಜಿಲ್ಲೆಗೂ, ಮೈಸೂರು ಜಿಲ್ಲೆಗೂ, ಕೊಡಗಿಗೂ, ಸಂಚಾರ ಸೌಲಭ್ಯವು ಹೆಚ್ಚುವುದೆಂದೂ ಅರುಹಿದರು

ಚೀಫ್ ಇಂಜನೀಯರ ಮಾನಪತ್ರವು ಮುಗಿದನಂತರ ಡಿ॥ ಬೋ॥ ಅಧ್ಯಕ್ಷರಾದ ಶ್ರೀ ಎಚ್. ಬಿ. ಗುಂಡಪ್ಪಗೌಡರು ಡಿ॥ ಬೋ॥ ಮಾನಪತ್ರವನ್ನು ಓದಿ ಕಾಸ್ಕೆಟ್ಟಿನಲ್ಲಿ ಅರ್ಪಿಸಿದರು

ಶ್ರೀಮನ್ಮಹಾರಾಜರವರ ಭಾಷಣ.

ಶ್ರೀಮನ್ಮಹಾರಾಜರವರು ಈ ಕೆಳಗಿನ ರೀತಿ ತಮ್ಮ ಭಾಷಣವನ್ನು ಅಪ್ಪಣೆ ಕೊಡಿಸಿದರು

ಈ ದಿನದ ಉತ್ಸವವನ್ನು ನಾವು ನೆರವೇರಿಸಬೇಕೆಂಬ ಪ್ರಾರ್ಥನೆಯನ್ನು, ಅತ್ಯಂತ ಸಂತೋಷದಿಂದ ಅಂಗೀಕರಿಸಿ ಇಲ್ಲಿಗೆ ಬಂದಿರುವೆವು ೧೯೩೦ನೆಯ ಇಸವಿಯಲ್ಲಿ ನಮ್ಮ ಸರ್ಕಾರದವರು ಸೇತುವೆಗಳ ಕಾರ್ಯಕ್ರಮದ ಪ್ರೋಗ್ರಾಮನ್ನು ರಚಿಸಿಕೊಂಡಿದ್ದರು ಇಲ್ಲಿ ನಿರ್ಮಿತವಾಗುವ ಈ ಸೇತುವೆಯೂ ಸೇರಿ ಒಟ್ಟು ಮೂವತ್ತೈದು ಸೇತುವೆಗಳನ್ನು ಕೇವಲ ಹತ್ತು ವರ್ಷಗಳ ಅವಧಿಯಲ್ಲಿ ಕಟ್ಟಬೇಕೆಂದು ಆಗ್ಗೆ ನಿಷ್ಕರ್ಷೆಯಾಗಿದ್ದಿತು. ನಮ್ಮ ಸರ್ಕಾರದವರು ಎಷ್ಟು ಮಹತ್ತರವಾದ ಉತ್ಸಾಹದಿಂದ ಕಾರ್ಯಕ್ರಮವನ್ನು ನಿಷ್ಕರ್ಷೆ ಮಾಡಿದ್ದರೆಂಬುದು ಇದರಿಂದ ವ್ಯಕ್ತವಾಗುವುದು

ಸೇತುಬಂಧನ ಕಾರ್ಯಕ್ರಮವು ನಿಷ್ಕರ್ಷೆಯಾದ ಬಳಿಕ, ಕಳೆದ ಐದಾರು ವರ್ಷಗಳ ಅವಧಿಯಲ್ಲಿ—ಅಕ್ಕಿಹೆಬ್ಬಾಳು, ಗೊರೂರು, ಶಿರಮಕೂಡಲು, ನರಸೀಪುರ, ಹೊಸಹಳ್ಳಿ ಈ ಸ್ಥಳಗಳ ಸೇತುವೆಗಳು ಮಾತ್ರವೇ ನಿರ್ಮಿತವಾದವು

ಇನ್ನೂ ಹೆಚ್ಚು ಸೇತುವೆಗಳು ನಿಷ್ಕ ವಾಗುವುದು ಸಾಧ್ಯವಿಲ್ಲದ ಹೋದುದಕ್ಕಾಗಿ ನಮ್ಮ ಮನಸ್ಸಿಗೆ ವಿಷಾದವಾಗುತ್ತಿದೆ

ಇಲ್ಲಿ ನಿರ್ಮಿತವಾಗುವ ಸೇತುವಿನಿಂದ ಮೈಸೂರು ಸಂಸ್ಥಾನಕ್ಕೂ, ಮದರಾಸು, ಕೊಡಗು ಪ್ರಾಂತಗಳಿಗೂ ಮಹತ್ತರವಾದ ಪ್ರಯೋಜನಗಳು ದೊರೆಯುತ್ತವೆ ಈ ಸೇತು ನಿರ್ಮಾಣದ ವೆಚ್ಚದಲ್ಲೊಂದು ಭಾಗವನ್ನು ವಹಿಸಲು ಇಂಡಿಯಾ ಸರ್ಕಾರದವರು ಸಮ್ಮತಿಸಿದ್ದಾರೆ ಈ ಉದಾರ ಸಹಾಯಕ್ಕಾಗಿ ಅವರು ನಮ್ಮೆಲ್ಲರ ಕೃತಜ್ಞತೆಗೂ ಪಾತ್ರರಾಗಿರುವರು.

ಇಲ್ಲಿ ನಿರ್ಮಿತವಾಗುವ ಸೇತುವು ಕಾವೇರಿ ಮಾತೆಗೆ ಸಮರ್ಪಿತವಾದ ಭಕ್ತಿಪೂರ್ವಕವಾದ ಕಾಣಿಕೆಯಂತೆ ಕಂಗೊಳಿಸುವುದು. ಕಾವೇರಿ ನದಿಯಿಂದ ಮಹೋಪಕಾರವಾಗುತ್ತಿದೆ ಬೆಳೆಗಳಿಗೆ ವಾರಿಧಾರೆಯೂ, ಗೃಹಗಳಿಗೆ ಬೆಳಕೂ ಈ ನದಿಯಿಂದ ದೊರೆಯುತ್ತಿವೆ ಕೃಷಿಯುಕ್ತವಾಗಿದ್ದ ಪ್ರದೇಶಗಳಲ್ಲಿ ಕಬ್ಬು ಬೆಳೆದು ಸಕ್ಕರೆಯು ದೊರೆಯುವಂತಾಗಿರುವುದೂ, ಇದರಿಂದ ಉಕ್ಕು ಕಬ್ಬಿಣಗಳು ಲಭಿಸುವಂತಾಗಿರುವುದೂ ಈ ನದಿಯ ಪ್ರಾಭಾವದಿಂದಲೇ

ರಾಮನಾಥ ಪುರದಂತಹ ಪುಣ್ಯಕ್ಷೇತ್ರಗಳೂ, ಇಲ್ಲಿರುವಂತಹ ಪವಿತ್ರ ದೇವಾಲಯಗಳೂ, ಈ ಜೀವನದಿಯ ತೀರಯುದ್ದಕ್ಕೂ ಅಲ್ಲಲ್ಲಿ ಶೋಭಿಸುತ್ತಿವೆ. ಕೃಷ್ಣರಾಜಸಾಗರದ ಹಿಂದೆ ಮನೋಹರವಾದ ಬಗೆಬಗೆಯ ವಾರಿಪಾತ ಯಂತ್ರಸಾಧನಗಳಿಂದ ಕಂಗೊಳಿಸುವ "ಬೃಂದಾವನ" ವೆಂಬ ಉದ್ಯಾನದಿಂದಲೂ ಈ ನದಿಯು ಅಲಂಕೃತವಾಗಿದೆ

ಮೈಸೂರಿನಿಂದ ಸಮುದ್ರತೀರಕ್ಕೆ ಹೋಗುವ ರಾಜಮಾರ್ಗಕ್ಕೆ ಹಾಸನದ ಸಮೀಪ ಮುತ್ತಲಿನ ಕಾಫೀ ಬೆಳೆವ ಪ್ರದೇಶಗಳಿಂದ, ನೇರವಾದ ಸಂಚಾರ ಮಾರ್ಗ ಸೌಲಭ್ಯವಿಲ್ಲದೆ ಈಗ ಬಹು ಕಷ್ಟವಾಗಿದೆ. ಹುಣಸೂರು ತಾಲ್ಲೂಕಿನ ಮತ್ತು ಕೊಡಗು ಪ್ರಾಂತ್ಯದ ಕಲವು ಪ್ರದೇಶಗಳಿಗೂ, ಇಲ್ಲಿಂದ ನೇರವಾದ ಸಂಚಾರ ಮಾರ್ಗ ಸಂಬಂಧವು ಕಲ್ಪಿತವಾಗಿಲ್ಲದ ಕಷ್ಟವೂ ಇದೆ

ನಾವು ಇಲ್ಲಿ ಅಸ್ತಿಭಾರ ಶಿಲೆಯನ್ನು ಪ್ರತಿಷ್ಠಿಸುವ ಸೇತುವಿನಿಂದ ಆ ಕಷ್ಟಗಳು ನಿವಾರಣೆಯಾಗುವುವು ಈಗ ಹಲವು ದಾರಿಗಳ ಮೂಲಕ ಬಳಸಿಕೊಂಡು ಹೋಗಬೇಕಾಗಿರುವ ಕ್ಲೇಶವು ಪರಿಹಾರವಾಗಿ ಪೇಟೆಯ ಅನುಕೂಲವುಂಟಾಗುವುದು.

ಇಲ್ಲಿಯ ಸೇತು ನಿರ್ಮಾಣಕ್ಕಾಗಿ ವಿಶೇಷ ಧನ ವ್ಯಯವಾಗುವುದಾಗಿದೆ. ಇಂಡಿಯಾ ಸರ್ಕಾರದವರ ಉದಾರ ಸಹಾಯವಿಲ್ಲದೆ ಮಹತ್ತರವಾದ ಈ ಕಾರ್ಯವು ಸಾಧ್ಯವೆನಿಸುತ್ತಿರಲಿಲ್ಲ.

ಇಂಡಿಯಾ ಸರ್ಕಾರದವರ ಉದಾರ ಸಹಾಯವು ಲಭಿಸಿಯೂ ಕೂಡ ಡಿಸ್ಟ್ರಿಕ್ಟು ಬೋರ್ಡಿನವರು ಈ ಸೇತು ನಿರ್ಮಾಣಕ್ಕಾಗಿ ಸಾಲ ಮಾಡಬೇಕಾಗುತ್ತದೆ ಆ ಸಾಲವನ್ನು ತೀರಿಸುವುದಕ್ಕೆ ಅನುಕೂಲ ಮಾಡಿಕೊಳ್ಳುವುದಕ್ಕಾಗಿ ಅವರು ಈ ಸೇತುವಿನ ಬಳಿಯಲ್ಲಿ ಸ್ವಲ್ಪ ಸುಂಕವನ್ನು ಕೂಡ ವಿಧಿಸಬೇಕಾಗುವುದು ಈ ಸೇತುವಿನಿಂದ ಮಹತ್ತರವಾಗಿ ಸಂಚಾರ ಸೌಕರ್ಯ ಪ್ರಯೋಜನವನ್ನು ಪಡೆಯುವ ಜನರು ಇದನ್ನು ಗಮನಿಸಲಾರರೆಂಬುದು ನಮಗಿರುವ ನಂಬುಗೆ

ಇಲ್ಲಿ ನಿರ್ಮಿತವಾಗುವ ಸೇತುವಿನ ಅಸ್ತಿಭಾರ ಶಿಲೆಯನ್ನು ನಾವು ಅತಿ ಸಂತೋಷದಿಂದ ಪ್ರತಿಷ್ಠಿಸುವೆವು ಈ ಸೇತುವು ವಿಶೇಷ ಪ್ರಯೋಜನಕರವಾಗಿ ಪರಿಣಮಿಸುವಂತೆ ಜಗದೀಶ್ವರನು ಅನುಗ್ರಹಿಸಲೆಂದು ಪ್ರಾರ್ಥನಾಪೂರ್ವಕವಾಗಿ ವಾಕ್ಯಸುವೆವು

ಹಿಂದೀ ಪ್ರಚಾರ ಸಭೆಯ

ಮಹಾಧಿವೇಶನ.

ಕಳೆದ ತಿಂಗಳು 20 ನೇ ತಾ॥ ಬೆಂಗಳೂರು ನ್ಯಾಷನಲ್ ಹೈಸ್ಕೂಲಿನಲ್ಲಿ, ಅಖಿಲ ಕರ್ನಾಟಕ ಹಿಂದೀ ಪ್ರಚಾರ ಸಭೆಯ ಮಹಾಧಿವೇಶನವು ಶ್ರೀ॥ ನವರತ್ನರಾಮರಾಯರವರ ಅಧ್ಯಕ್ಷತೆಯಲ್ಲಿ ನಡೆಯಿತು ಶ್ರೀ ಗಳಾದ ಕಾರ್ನಾಡ್ ಸದಾಶಿವರಾಯರೂ, ಡಾ॥ ಸಿ ಬಿ ರಾಮರಾಯರವರೂ, ಮಂಗಳೂರಿನ ಪದ್ಮನಾಭಶಣೆಯರವರೂ, ಧಾರವಾಡದ ಗೋವಿಂದರಾವ್ ಕೆಲಪಟಿಗಿಯವರೂ ಶ್ರೀಮತಿ ಕಮಲಮ್ಮ ದಾಸಪ್ಪನವರೂ ಮತ್ತು ಸುಮಾರು 25 ಜನ ಪ್ರಚಾರಕ ಪ್ರತಿನಿಧಿಗಳೂ ಅಧಿವೇಶನದಲ್ಲಿ ಭಾಗಗಳಾಗಿದ್ದರು ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯ ಸಂಚಾಲಕರಾದ ಪಂ॥ ಸತ್ಯನಾರಾಯಣಜೀಯವರೂ ಹಾಗೆ ವಹಿಸಿದ್ದರು. ನಾ॥ ಕಾ॥ ದರ್ಶಿಗಳಾದ ಶ್ರೀ॥ ಕೆ. ಸಂಪದ್ಗಿರಿರಾಯರು ವರದಿಯನ್ನೊಪ್ಪಿಸಿದರು ಸಭೆಯ ಕಾಯಿದ ಕಟ್ಟಳೆಗಳು ಅಂಗೀಕೃತವಾದುವು. ಹೊಸ ಅಧಿಕಾರಿಗಳ ಚುನಾವಣೆ ನಡೆದು ಸಭೆಯು ಪರಿಸಮಾಪ್ತಿ ಹೊಂದಿತು

ವಿಶ್ವವಿದ್ಯಾನಿಲಯದ ಸ್ಪೆಷಲ್ ಕಾನ್ವೋಕೇಷನ್

ವಿಶ್ವವಿದ್ಯಾನಿಲಯದ ಛಾನ್ಸಲರಾದ ಶ್ರೀಮನ್ಮಹಾರಾಜರು ಸರ್ ಫ್ರಾನ್ಸಿಸ್ ಯಂಗ್ ಹಸ್ಬೆಂಡರವರಿಗೆ ಗೌರವ ಎಲ್ ಎಲ್ ಡಿ ಡಿಗ್ರಿಯನ್ನು ಕೊಡಬೇಕೆಂಬ ಸೆನೆಟ್ಟಿನವರ ಸಲಹೆಯನ್ನು ಒಪ್ಪಿರುತ್ತಾರೆ

ಬಹುಶಃ ಈ ಸಂದರ್ಭದಲ್ಲಿ ಮೈಸೂರಿನಲ್ಲಿ ಮುಂದಿನ ತಿಂಗಳು ಒಂದು ಸ್ಪೆಷಲ್ ಕಾನ್ವೋಕೇಷನ್ ನಡೆಯಬಹುದು. ಯಾವ ತಾರೀಖು ನಡೆಯುವುದೆಂಬುದು ಇನ್ನೂ ಸರಿಯಾಗಿ ಗೊತ್ತಿಲ್ಲ

ಈ ವಿಷಯದಲ್ಲಿ ಸರಕಾರಕ್ಕೂ ವಿಶ್ವವಿದ್ಯಾನಿಲಯದ ಅಧಿಕಾರಿಗಳಿಗೂ ವ್ಯವಹಾರ ನಡೆಯುತ್ತಿರುವುದೆಂದೂ. ಆದ್ದರಿಂದ ಯಾವುದೂ ಗೊತ್ತಾಗಿಲ್ಲವೆಂದೂ ತಿಳಿದು ಬಂದಿದೆ

ನಮ್ಮ ಪತ್ರಿಕೆಗಳ ಕರ್ತವ್ಯ.

ಶ್ರೀ॥ ಪಾಳಿಹಳ್ಳಿ ಸೀತಾರಾಮಯ್ಯನವರ ಸಂದೇಶ.

ರಾಜಧಾನಿಯಲ್ಲಿ ರಾಜಕೀಯ, ಮತ್ತು ಸಾರ್ವಜನಿಕವಾದ ಪತ್ರಿಕೆಗಳು ವಿರಳವಾಗಿದೆ ತಾತಯ್ಯನವರು ಮೃತಿಯೊಂದುವುದಕ್ಕೆ ಕೆಲವು ದಿನಗಳ ಮುಂಚಿತವಾಗಿಯೇ ಈ ದುರವಸ್ಥೆಯು ನಮಗೆ ಬಂದೊದಗಿದ್ದಿತು ಈ ದುರವಸ್ಥೆಯನ್ನು ಹೋಗಲಾಡಿಸಲು ವೃದ್ಧ ಪಿತಾಮಹನ ಪ್ರಯತ್ನಗಳು ಅವರ ಜೀವಿತಕಾಲದ ಕಡೆಯ ಭಾಗದಲ್ಲಿ ಸಫಲವಾಗಲಿಲ್ಲವೆಂದು ಕೇವಲ ಸಂಕೋಚದಿಂದ ಹೇಳಬೇಕಾಗಿದೆ ಅವರ ಜ್ಞಾಪಕಾರ್ಥವಾಗಿ ತಾವು ಈಗ ಹೊರಡಿಸಬೇಕೆಂದಿರುವ ರಾಷ್ಟ್ರೀಯ ವಾರಪತ್ರಿಕೆಯು ಚಿರಸ್ಥಾಯಿಯಾಗಿ ನಿಂತು ರಾಜಕೀಯ ಮತ್ತು ಸಾಮಾಜಿಕ ಸೇವೆಯನ್ನು ಅತಿ ನಿಷ್ಪೃಹತೆಯಿಂದ ನಡೆಯತಕ್ಕ ಶಕ್ತಿಯನ್ನು ಆ ವೃದ್ಧಪಿತಾಮಹರು ದಯಪಾಲಿಸಲೆಂದು ಮೊದಲು ಹಾರೈಸುತ್ತೇನೆ

ಇತ್ತೀಚೆಗೆ ವೃತ್ತಪತ್ರಿಕೆಗಳು ಕೇವಲ ವರ್ತಮಾನಸಂಗ್ರಹವನ್ನು ಮಾಡುವುದರಲ್ಲಿ ಮಾತ್ರ ಶ್ರದ್ಧೆಯನ್ನು ತೋರಿಸುತ್ತಿವೆ ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ಸಮಸ್ಯೆಗಳಲ್ಲಿ ವೃತ್ತಪತ್ರಿಕೆಗಳು ಸರಿಯಾದ ಮಾರ್ಗದಾಯಕಗಳಾಗಿರಬೇಕಾದದ್ದು ಅತ್ಯವಶ್ಯಕವಾದ ಕರ್ತವ್ಯವಾದಾಗ್ಯೂ ಆ ಕರ್ತವ್ಯವನ್ನು ಅಷ್ಟು ಶ್ರದ್ಧೆಯಿಂದ ಮಾಡುತ್ತಿಲ್ಲವೆಂತ ನನ್ನ ಅಭಿಪ್ರಾಯ ಅನೇಕ ಸಮಸ್ಯೆಗಳಲ್ಲಿ ಹೀಗೂ ಸರಿ, ಹಾಗೂ ಸರಿ ಎಂಬ ರೀತಿಗಳಲ್ಲಿ ವ್ಯಾಖ್ಯಾನ ಮತ್ತು ಅಭಿಪ್ರಾಯಗಳನ್ನು ಬರೆಯುತ್ತಾ ಜನಾಭಿಪ್ರಾಯವನ್ನು ಸರಿಯಾದ ಮಾರ್ಗದಲ್ಲಿ ತೋರದೇ, ಸರಿಯಾದ ಜನಾಭಿಪ್ರಾಯ (Public opinion) ವೇ ಇಲ್ಲದೇ, ಇದರಿಂದ ಕ್ಷಿಪ್ರ ಫಲಿತಾಂಶವಾಗುತ್ತಾ ಬರುತ್ತಿದೆ ವೃತ್ತಪತ್ರಿಕೆಗಳು ರಾಜಕೀಯ ಸಮಸ್ಯೆಗಳಲ್ಲಿ ಸರಿಯಾದ ಅಭಿಪ್ರಾಯಗಳನ್ನು ನಿರ್ದಾಕ್ಷಿಣ್ಯವಾಗಿಯೂ, ದೂರಾಲೋಚನೆಯಿಂದಲೂ ತಿಳಿಸಿ ಜನಾಭಿಪ್ರಾಯವನ್ನು ನೇರಪಡಿಸತಕ್ಕದ್ದಲ್ಲದೆ, ಸರ್ಕಾರಕ್ಕೂ ಕೂಡ ಅವಶ್ಯಕ ಸಹಾಯ ಮಾಡಬಹುದು ಬಹುಶಃ ಸಮಸ್ತ ರಾಜಕೀಯ ಪತ್ರಿಕೆಗಳ ಮುಖ್ಯೋದ್ದೇಶವಾಗಿರಬೇಕಷ್ಟೆ.

ಬಾಲ್ಯ ಕರ್ತವ್ಯಕ್ಕೆ ಲಕ್ಷಿಸಿಯೂ, ಈ ಕರ್ತವ್ಯವನ್ನು ತಾವು ಹೊರಡಿಸುವ ಈ ಪತ್ರಿಕೆಯು ಮಾಡತಕ್ಕ ಭಾರವನ್ನು ವಹಿಸಬೇಕೆಂತ ನನ್ನ ಹಾರೈಕೆ

ಸ್ಥಳೀಯ ಸರ್ಕಾರಗಳ ಸಮಸ್ಯೆಗಳ ಮತ್ತು ಇವುಗಳ ವಿಚಾರಗಳಲ್ಲಿ ಹೆಚ್ಚು ಗಮನವು ಬಹು ಅತ್ಯವಶ್ಯಕವೆಂದು ನಾನು ತಮಗೆ ತಿಳಿಸಬೇಕಾಗಿಲ್ಲ ಇತರ ಸ್ಥಳೀಯ ಸಂಸ್ಥೆಗಳ ವಿಷಯಗಳಲ್ಲಿಯೂ ಸಹ, ತಮ್ಮ ಪತ್ರಿಕೆಯು, ಹೆಚ್ಚು ಆದರವಿಟ್ಟು, ನಿರ್ದಾಕ್ಷಿಣ್ಯವಾದ ವ್ಯಾಖ್ಯಾನ ಮತ್ತು ಟೀಕೆಗಳಿಂದ, ನಮ್ಮನಮ್ಮ ಕರ್ತವ್ಯಗಳನ್ನು ಪ್ರತಿಯೊಬ್ಬ ಪುರಜನನೂ ಮಾಡತಕ್ಕ ಬಗ್ಗೆ, ತುಂಬಾ ಸಹಾಯಕವಾಗಿ ಪರಿಣಮಿಸಲೆಂದು ನಾನು ಹಾರೈಸುತ್ತೇನೆ

ಬಹಿರಂಗ ಪತ್ರಗಳು.

(ಅನಾಮಧೇಯನಿಂದ)

ಸ್ವಾಮಿ !

ಸಂಪಾದಕ ಮಹಾಶಯರೇ !

ನಾನೊಬ್ಬ ಅನಾಮಧೇಯ ನನ್ನ ಇರುವಿಕೆಯೇ ಎಷ್ಟೋ ಜನರಿಗೆ ತಿಳಿಯದು ನಗರ ಜನರ ಸ್ಥಾನಮಾನಗಳೂ ಇರುವುದಿಲ್ಲ ನನ್ನ ಯೋಗ್ಯತೆಗಳು ಹೀಗಿರ ಬಿಸ್ಯೆ ಕೇಳಿದರೆ ಸರಸ್ವತಿ ಮುರುಕು ಬಿಕ್ಕಪ್ಟೆ ನೋಡೋಣ ಹೋದರೆ ಆ ಕುಬೇರ ಇದ್ದಾನಲ್ಲ ಅವರ ಅಣ್ಣ ಕುಚೇಲನೇ ನಾನು ಊಟವಲ್ಲೋ ಭಾರತದ ಭೀಮಣ್ಣನಂತೆ ಪುಷ್ಕಳ ಭೋಜನಪ್ರಿಯ ಅದಕ್ಕೆ ತಕ್ಕಂತೆ ನಿದ್ರೆಯಲ್ಲಿ ಕುಂಭಕರ್ಣನ ಛಾರ್ಜ ವಹಿಸಿಕೊಂಡಿದ್ದೇನೆ ಈ ಜೋಡನ ಈ ನಿದ್ರೆಗಳಾದಮೇಲೆ ಕಲಸ ಕಾರ್ಯ ಮಾಡಿ ಉದ್ಧಾರವಾಗುವುದೇನು? ಕಡೆಗ ವಾಕಿಂಗ್ ಕೂಡ ಹೊರಡೋಲ್ಲ ಹೀಗಿದ್ದರೋ ಛೂಪಸಿಗೂ ಬಹಿರಂಗವಾಗಿ ನಡೆಯುವ ಎಲ್ಲಾ ಘಟನಾಂಕಿಗಳನ್ನೂ ತಿಳಿದುಕೊಳ್ಳಬೇಕೆಂಬ ಕಾತುರತೆ ಬುತ್ತಾ ಹೆಗಳನೋ ವಿಪರೀತವಾಗಿದೆ ಇದರ ಒಳ್ಳವೆ ಏನಾದರೂ ಒಂದು ಹೆಚ್ಚು ಕಡಿಮೆ ಇದ್ದರೆ ತತ್ಕ್ಷಣವೇ ನನ್ನ ಮನಸ್ಸಿನಲ್ಲಿ ಸಂಕಲ್ಪ ವಿಕಲ್ಪಗಳಾಗಿ ಬಿಡುತ್ತವೆ ಸುತ್ತ ಹಾಗೆ ಆದುದನ್ನು ಕೂಡಲೇ ಸ್ಪಷ್ಟವಾಗಿ ನನ ಹಿತ್ಯೆಷಿಗಳಿಗೆ ಇದ್ದದ್ದನ್ನ ಲಾ ಸ್ವಲ್ಪವೂ ಮರೆಮಾಚದ ತಿಳಿಸಿಬಿಡ ಬೇಕೆಂದ್ಕೃಸುತ್ತದ ಅಪ್ಪಿ ಹೋದೇನು! ಬಾಗ ಕಿಸೀ ವರಗೂ ಕೆಣ್ಣಿಗ ಸಿಕ್ಕಿದ ಯ ಬರೊಲ್ಲ ಉಂಡದ್ದು ಉಂಡದಾಗೂ ಇರೋದಿಲ್ಲ ನನ್ನ ಮಾತನ್ನು ಕೇಳೋ ವರು ಕೇಳಲಿ ಬಿಟ್ಟವರು ಬಿಡಲಿ ಹೇಳ ಬೇಕೆಂದಿರುವುದನ್ನೆಲ್ಲಾ ಹೇಳಿಯೇ ಬಿಟ್ಟು ನನ್ನ ಮನಸ್ಸನ್ನು ತೃಪ್ತಿಗೊಳಿಸಿಕೊಳ್ಳ ಬೇಕೆಂದಿರುತ್ತೇನೆ

ನಮ್ಮ ನಗರದ, ನಮ್ಮ ರಾಷ್ಟ್ರದ ಮತ್ತು ನಮ್ಮ ಸಾರ್ವಜನಿಕ ಸಂಸ್ಥೆಗಳ ಶ್ರೇಯಸ್ಸಿಗೆ ಸಾಧಕವಾದ ಎಲ್ಲಾ ವಿಷಯಗಳ ಮೇಲೂ ನಾನು ನಿಸ್ಸಂಕೋಚವಾಗಿ ನನ್ನ ಅಭಿಪ್ರಾಯಗಳನ್ನು ಹೊರಗೆಡಹುತ್ತೇನೆ ಇದರಿಂದ ಯಾರೂ ವ್ಯಕ್ತಿಶಃ ಕುಗ್ಗಬಾರದು ನನ್ನ ಟೀಕೆ ಟಿಪ್ಪಣಿಗಳು ಅವರ ವ್ಯಕ್ತಿತ್ವಕ್ಕೆ ಸಂಬಂಧಪಟ್ಟವಲ್ಲ ಅವರ ಸಾರ್ವಜನಿಕ ಕಾರ್ಯಗಳನ್ನು ಕುರಿತು ವಿಮರ್ಶೆ ಮಾಡುತ್ತೇನೆ ಒಬ್ಬರಂತೆಯೇ ಎಲ್ಲರನ್ನೂ ಸ್ತೋತ್ರ ಮಾಡಿದರೂ ಎಲ್ಲರೂ ಅನರೇ ಸ್ತುತಿಪಾತ್ರರೆಂದು ತಿಳಿಯಬಾರದು ನನಗೆ ಗೌರವ ಬೇಕಾ ಅದರಂತೆಯೇ ಇತರರಿಗೆ ಗೌರವ ಕೊಡುತ್ತೇನೆ ತಪ್ಪು ಮಾಡುವುದು ಮನುಷ್ಯನ ಸ್ವಭಾವ ಸಾರ್ವಜನಿಕ ಕಾರ್ಯದಲ್ಲಿ ನಿರತರಾದವರು ಯೋಚನೆ ಮಾಡಿದಲ್ಲಿದ ಪರಿಪೂರ್ಣರಾಗಿಯೇ ಎಲ್ಲ ಕೆಲಸಗಳನ್ನೂ ಮಾಡುವರೆಂದು ಹೇಳಲಾಗುವುದಿಲ್ಲ ಇಂಥ ತಪ್ಪುಗಳು ಮತ್ತೊಬ್ಬರಿಂದ ತಿದ್ದಿಸಲ್ಪಡಬೇಕಾದ್ದು ಸಹಜ ಈ ದೃಷ್ಟಿಯಿಂದ ಸಾರ್ವಜನಿಕ ಹಿತಕ್ಕಾಗಿ ಬಾವುದು ಅತ್ಯಾವಶ್ಯಕವೆಂದು ತೋರು

ವಿಶ್ವವಿದ್ಯಾನಿಲಯ ಸಂಘ, ಮೈಸೂರು.

ಪಂಡಿತ ಜವಾಹಿರಲಾಲರ ಭಾವಚಿತ್ರ ಅನಾವರಣ.

ಕಳೆದ ಶುಕ್ರವಾರ ಸಾಯಂಕಾಲ ಮಹಾರಾಜರ ಕಾಲೇಜಿನ ಅಂಗಳದಲ್ಲಿ ಮೈಸೂರು ವಿಶ್ವವಿದ್ಯಾನಿಲಯ ಸಂಘದ ವಾರ್ಷಿಕೋತ್ಸವವು ನಡೆಯಿತು ವಿದ್ಯಾ ಇಲಾಖೆಯ ಡೈರೆಕ್ಟರಾದ ಶ್ರೀ ಎಸ್ ಎಸ್ ಸುಬ್ಬರಾಯರು ಅಧ್ಯಾಸನವನ್ನು ವಹಿಸಿದ್ದರು ಹಿಂದಿನ ದಿನ ಆಟದ ಸ್ಪರ್ಧೆ ನಡೆಯಿತು. ಶುಕ್ರವಾರ ಬೆಳಗ್ಗೆ ಸಂಘದ ಕಟ್ಟಡದಲ್ಲಿ ಸಂಘದ ಸದಸ್ಯರಿಂದ ಸಂಗ್ರಹಿಸಲ್ಪಟ್ಟಿದ್ದ ವಸ್ತುಗಳ ಪ್ರದರ್ಶನವು ನಡೆಯಿತು

ಆ ದಿನ ಸಾಯಂಕಾಲ ದೊಡ್ಡ ಸಭೆ ನಡೆಯಿತು ಅನೇಕ ಜನ ದೊಡ್ಡ ಮನುಷ್ಯರು ಬಂದಿದ್ದರು ಪ್ರಾರ್ಥನೆಯಾದ ನಂತರ ವಿವಿಧ ವೇಷಗಳ ಸ್ಪರ್ಧೆ ನಡೆಯಿತು ವಿದ್ಯಾರ್ಥಿಗಳು ಬಹು ಮಾತುಗಳನ್ನು ಹಂಚಿದರು ಅನಂತರ ಪಂಡಿತ ಜವಾಹರಲಾಲ ನೆಹರೂರವರ ಸುಂದರವಾದ ಭಾವಚಿತ್ರವನ್ನು ಅನಾವರಣಮಾಡಿದರು ಈ ಚಿತ್ರವನ್ನು ಮೈಸೂರಿನ ಸುಪ್ರಸಿದ್ಧ ಕಲಾನಿಪುಣರಾದ ಶ್ರೀ ಎಸ್ ಆರ್. ಅಯ್ಯಂಗಾರ್ಯರವರು ಬರೆದಿರುವರು ಅದನ್ನು ಶ್ರೀ ವೈ ಜಿ ಕೃಷ್ಣಮೂರ್ತಿಯವರು ಉಡುಗೊರೆಯಾಗಿ ಸಂಘಕ್ಕೆ ಕೊಟ್ಟಿರುವರು

ಅಧ್ಯಕ್ಷರಾದ ಶ್ರೀ ಎಸ್ ಎಸ್ ಸುಬ್ಬರಾಯರು ಒಂದು ಸಣ್ಣ ಭಾಷಣವನ್ನು ಮಾಡಿದರು ಪಂಡಿತ ಜವಾಹರಲಾಲರ ಗುಣಾತಿಶಯವನ್ನು ಕೊಂಡಾಡಿದರು ನಿರುದ್ಯೋಗ ಸಮಸ್ಯೆಯನ್ನು ಕುರಿತು ವಿಮರ್ಶಿಸಿದರು ನಿರುದ್ಯೋಗವನ್ನು ನಿವಾರಿಸಲು ವಿದ್ಯಾವಂತರೂ ಮುಂದಾಳುಗಳೂ ಆದ ಜನರು ಮುಂದೆ ಬರಬೇಕೆಂದು ತಿಳಿಸಿದರು

ಸಂಗೀತವೂ ನಾಟಕ ಪ್ರದರ್ಶನವೂ ಆದನಂತರ ಧನ್ಯವಾದಗಳೊಡನೆ ಸಭೆ ಮುಕ್ತಾಯವಾಯಿತು ಇಷ್ಟು ಹೊತ್ತಿಗೆ ಶ್ರೀಮತಿ ಕಮಲಾ ನೆಹರೂರವರ ಮರಣದ ದುಃಖವಾರ್ತೆಯು ಸಭೆಗೆ ಮುಟ್ಟಿತು ಎಲ್ಲರೂ ಬಹಳ ವಿಷಾದಪಟ್ಟರು

ತ್ತದೋ ಅದನ್ನು ಘಂಟಾ ಘೋಷವಾಗಿ ತಿಳಿಸಿಬಿಡುವುದೇ ನನ್ನ ಕರ್ತವ್ಯವೆಂದರಿತಿದ್ದೇನೆ ಆದುದರಿಂದ ತಾವು ನನ್ನ ಟೀಕೆಗಳನ್ನು ವಿಶ್ವಾಸ ಪೂರ್ವಕವಾಗಿ ಸ್ವೀಕರಿಸಿ ತಮ್ಮ ಪತ್ರಿಕೆಯಲ್ಲಿ ಅವಕಾಶ ಇದ್ದ ಹಾಗೆ ಆದರಿಸಬೇಕೆಂದು ಕೋರುವ,

ತಮ್ಮ ಹಿತೈಷಿ,
ಅನಾಮಧೇಯ.

ನಂಜನಗೂಡು ಸುದ್ದಿ.

ಸಬ್ ಡಿವಿಜನ್ ಆಫೀಸರವರು — ಹೊಸದಾಗಿ ಬಂದಿರುವ ಶ್ರೀಮಾನ್ ಪಿ ಎಚ್ ಕೃಷ್ಣರಾಯರವರು ಮ್ಯುನಿಸಿಪಾಲಿಟಿಯಲ್ಲಿ ಸ್ವಲ್ಪ ಚಟುವಟಿಕೆಯನ್ನು ಹುಟ್ಟಿಸಿದಂತಿದೆ ಊರಿನ ಅಂದವೂ ಆವಶ್ಯಕತೆಯೂ ಜನಹಿತವನ್ನೇ ಲಕ್ಷ್ಯದಲ್ಲಿಟ್ಟು ಮುಂದುವರಿದು ಪೂರೈಸುವುದು— ಎಂದು ನಂಬುವ

ಶ್ರೀ ಶ್ರೀಕಂಠೇಶ್ವರಸ್ವಾಮಿಯವರ ದೇವಸ್ಥಾನ — ಹಲವು ಅವಶ್ಯಕವಾದ ಕೆಲಸಗಳನ್ನು ಚಿತ್ರವಾಕಿ ರಿಸರ್ವ್ ಫಂಡಿಗಾಗಿ ಅವಕಾಶಕೊಟ್ಟು, ಜೀರ್ಣೋದ್ಧಾರ ಕಂದಾಯವನ್ನೂ ಸರ್ಕಾರದಿಂದ ಒಪ್ಪಿಗೆಯನ್ನು ಪಡೆದುಬಂದಿಲ್ಲ ಭಕ್ತಾದಿಗಳಿಗೆ ಸೌಕರ್ಯವಾಗಲೀ ದೇವಸ್ಥಾನದ ರಿಪೇರಿಯಾಗಲೀ ಇಲಾಖೆಯವರಿಂದ ಗಮನಿಸಲ್ಪಡುತ್ತಿಲ್ಲ ಊರಿನಲ್ಲಿರುವ ಪದ್ಧತಿಯಂತೆ ಮುಖ್ಯಾಧಿಕಾರಿಗಳು ಕಾವಲುಗಾರ ಮುಜರಾಯಿ ಹೇಳಿಕೆಯಂತೆ ಪಾರ್ಟಿ ಮಾಡಿಕೊಂಡು ಒಂದು ಪಾರ್ಟಿಯವರನ್ನು ಕಿರುಕುಳಪಡಿಸುತ್ತಿರುವರಂತೆ! ಇದು ನಿಜವಾದಲ್ಲಿ, ತೀರ ವಿಷಾದಕರವಾದುದು ಮೇಲಿನ ಅಧಿಕಾರಿಗಳು ಗಮನಿಸಬೇಕಾದುದು

ಕೋ ಆಪರೇಟಿವ್ ಕ್ರೆಡಿಟ್ ಬ್ಯಾಂಕು — ಡಿಸಂಬರು ತಿಂಗಳಿಗಾಗೇ ಇಷ್ಟು ಶ್ರೈಮ ವರ್ಷಗಳ ಪೂರೈಸಿದರೂ ಸಿಬ್ಬಂದಿಗೂ ವಿಲಿಯ ಒಗ್ಗೆ ಜನರಲ್ ಬಾಡಿಯವರು ವಿಷಯವನ್ನು ಪ್ರಸ್ತಾಪಿಸಿದ್ದರೂ ಈ ಬ್ಯಾಂಕಿನ ಡಿಕ್ಟೇಟರುಗಳ ಇಷ್ಟಕ್ಕೆ ಬರಲಿಲ್ಲವಾಗಿ ನಡೆದಿಲ್ಲವಂತೆ! ಈ ಬ್ಯಾಂಕಿಗೂ ಮುಸ್ಸೋಲಿನಿ, ಹಿಟ್ಲರ್‌ಗಳು ಇದ್ದಿರಬಹುದು ಯಾರಿಗೂ ಆಶ್ಚರ್ಯವಿಲ್ಲ. ಆದರೆ ನೂರಾರು ರೂಪಾಯಿಗಳು ವೆಚ್ಚ ಮಾಡಿ ತಯಾರಿಸಿದ ಶ್ರೀ॥ ಕೆ. ಎಚ್ ರಾಮಯ್ಯನವರ ಭಾವಚಿತ್ರವನ್ನೇಕೆ ಮೂಲೆಗೊತ್ತಿದ್ದಾರೆ? ಬಳಕೆಯಲ್ಲಿಡಬಾರದೆ "ರೇಡಿಯೋ ಯಂತ್ರವಿದ್ದಾದರೂ ಕೇಳಿ ಕೇಳದ ಭಾವ ಚಿತ್ರವು ಇವರುಗಳ ಪ್ರೇಮಕ್ಕೆ ಪಾತ್ರವಾಗದಿದ್ದುದು ವಿಷಾದವು ಸಿಬ್ಬಂದಿಯನ್ನು ಮನಸ್ಸಿ ಹೆಚ್ಚಿಸಿದ ಹಾಗೆಯೇ ಬಡ್ಡಿಯನ್ನೂ ಸ್ವಲ್ಪ ಮಟ್ಟಿಗೆ ಕಡಿಮೆ ಮಾಡಬಾರದಾಗಿದ್ದಿತೆ? ಎಂದು ಮುಂತಾಗಿ ಅಲ್ಲಲ್ಲಿ ಜನರಾಡಿಕೊಳ್ಳುತ್ತಿದ್ದಾರೆ ಜನಾನುರಾಗಿಗಳಾದ ಅಧ್ಯಕ್ಷರೂ ಉಪಾಧ್ಯಕ್ಷರೂ ಗಮನಿಸುವರೆಂದು ನಂಬುತ್ತೇನೆ ಶಾಶ್ವತವಾದ ಧರ್ಮಕ್ಕೆ ವೆಚ್ಚ ಮಾಡಬೇಕಲ್ಲದೆ ತಿಂದುಂಡು ಮುಗಿಸುವ ತಾತ್ಕಾಲಿಕವಾದ ಬೆಡಗಿಗೆ ರಜತೋತ್ಸವದಲ್ಲಿ ವಿಶೇಷ ವೆಚ್ಚವಾಗದಂತೆ ಸಂಘದವರು ನೋಡಿಕೊಳ್ಳಬೇಕಾಗಿದೆ

ಕರ್ನಾಟಕ ಸಂಘ — ಇದಕ್ಕೂ ಒಬ್ಬ ಡಿಕ್ಟೇಟರು ಏಕಾಗಬಾರದು? ಚಟುವಟಿಕೆಯಿಂದ ಕೆಲಸ ಮಾಡಬಾರದೆ? ನಿದ್ರೆ ಏಕೆ? ಎಂದು ಜನರು ಕೇಳುತ್ತಿರುವರು

ಹಿತೈಷಿ.



ಮಹಾತ್ಮ ಗಾಂಧಿಯವರು

ಶ್ರೀಮತಿ ಕಮಲಾ ನೆಹರೂರವರ ಮರಣದ ಬಗ್ಗೆ ತಮ್ಮ ಅನುತಾಪವನ್ನು ಸೂಚಿಸಿರುವರು

ಬಾಲಚಮೂ ಭವನ — ದಿವಾನ್ ಸರ್ ಮಿರ್ಜಾ ಎಂ ಇಸ್ಮೈಲ್‌ರವರು ಕಳೆದ ಭಾನುವಾರ ಬೆಳಿಗ್ಗೆ ಬೆಂಗಳೂರು ಸಿಟಿ ಕೃಷ್ಣರಾಜೇಂದ್ರ ರೋಡಿನಲ್ಲಿರುವ ಬಾಲಚಮೂಗಳ ಪ್ರಧಾನ ಭವನದ ಪ್ರಾರಂಭೋತ್ಸವವನ್ನು ನೆರವೇರಿಸಿದರು ಆ ಸಂದರ್ಭದಲ್ಲಿ ಮಾಡಿದ ಕಾಲೋಚಿತವಾದ ಭಾಷಣದಲ್ಲಿ ಬಾಲಚಮೂಗಳ ಕರ್ತವ್ಯ ನಿಷ್ಠೆಯ ಪ್ರಶಂಸೆ, ಪ್ರಭುಭಕ್ತಿ, ದೇಶವಾತ್ಸಲ್ಯ, ಸತ್ಯಸಂಧತೆ, ಪ್ರಜಾಸೇ

ಕೀರ್ತನೆ ಪ್ರೋತ್ಸಾಹ — ನಮ್ಮ ಶ್ರೀಮನ್ಮಹಾರಾಜರವರು ಆ॥ ವಿ॥ ನೂಸಲೆ ರಾಮದಾಸರವರನ್ನು ತಮ್ಮ ಚಾಮುಂಡಿ ವಿಹಾರಕ್ಕೆ ಮೊನ್ನೆ ಶಿವರಾತ್ರಿಯ ದಿನ ಕರಸಿಕೊಂಡು, ಮೂರು ಘಂಟೆಗಳ ಕಾಲ ಅವರ ಹರಿಕೀರ್ತನೆಯನ್ನು ಕೇಳಿ ಆನಂದಪಟ್ಟು ಅವರನ್ನು ಪ್ರೋತ್ಸಾಹಿಸಿದರೆಂದು ತಿಳಿಯಬರುತ್ತದೆ

ವೆ ಮುಂತಾದ ಉತ್ತಮ ಗುಣಗಳ ಉಪದೇಶವು ತುಂಬಿತ್ತು

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ಬಾಲಸುಧಾ

ಮಕ್ಕಳ ಜ್ವರದ ಗೆಡ್ಡೆಯನ್ನು ಬಾಕಿ ಗುಣ ಪಡಿಸುತ್ತೆ. ಲಿವರ್ (ಪಿತ್ತಕೋಶ) ದಪ್ಪನಾಗಿ ಕಣ್ಣು ಹಳದಿ ಬಣ್ಣವಾಗಿದ್ದರೆ ಇದರ ಸೇವನೆಯಿಂದ ದಿನೇ ದಿನೇ ಗುಣವಾಗುತ್ತೆ. 20 ವರ್ಷಗಳಿಂದಲೂ ಅನುಭವ ಸಿದ್ಧವಾದ ಮಕ್ಕಳ ಸೇವೆಗೆ ನಮ್ಮ ಬಾಲಸಂಜೀವಿನಿಯನ್ನೇ ಉಪಯೋಗಿಸಿ

ಬಾಲಸುಧಾ ಬೆಲೆ 1 ರೂ. ಬಾಲಸಂಜೀವಿನಿ 4 ರೂ.

ಮೈಸೂರು, ಬೆಂಗಳೂರು, ಮದ್ರಾಸುಗಳಲ್ಲಿ ನಮ್ಮ ಶಾಖೆಗಳಿವೆ.

ಸದ್ವೈದ್ಯಶಾಲಾ, ನಂಜನಗೂಡು.

ANANDA SODA FACTORY,

DODDAPET, MYSORE.

BEST AERATED WATER SUPPLIERS
COMPLETE REQUISITES FOR
AERATED WATER MANUFACTURERS
AVAILABLE.

ಆನಂದಾ ಸೋಡಾ ಫ್ಯಾಕ್ಟರಿ,

ದೊಡ್ಡಪೇಟೆ, ಮೈಸೂರು

WATCH FOR THE OPENING DATE!

BOMBAY INDRA BHAVAN,

WITH

Modern Equipments and efficient Management

IN

SAYYAJI RAO ROAD, MYSORE

Where to go in Mysore?

Surely To

Bombay Anand Bhavan

Ideal Restaurant.

FRUIT SALAADS, COOL DRINKS,
CRUSHES SWEETS ARE OUR SPECIALITIES

Catering arrangements undertaken.

**Have you visited Mount Abu?
If not we shall take you there.**



A Reliable House for Repairs of
WATCHES & GRAMOPHONES.
HIGH CLASS RUBBER STAMP
Suppliers,
M. V. N. WATCH COY.,
The General Commission Agency.
Lansdowne Buildings,
MYSORE.

ಗಡಿಯಾರ ಮತ್ತು ಗ್ರಾಮೋಫೋನುಗಳ ರಿಪೇರಿ
ಮತ್ತು ರಬ್ಬರ್ ಮೊಹರುಗಳ ತಯಾರಿ
ನಮ್ಮಲ್ಲಿ ನಡೆಯುತ್ತವೆ.
ಎಂ. ವಿ. ಎನ್. ವಾಚ್ ಕಂಪನಿ, ಮೈಸೂರು.

ಎಂ. ವಿ. ನಾರಾಯಣರಾಯರ
ಶ್ರೀ ಸತ್ಯನಾರಾಯಣ ಪರಿಮಳ ಫ್ಯಾಕ್ಟರಿ,
ಜಗನ್ಮೋಹನ ಬಂಗ್ಲಾ ಬೀದಿ, ಮೈಸೂರು.

ಪರಿಮಳ ಅಗರ್ ಬತ್ತಿ

ಉಪಯೋಗಿಸಿ ಪ್ರೋತ್ಸಾಹಿಸಿರಿ

USE ALWAYS

DERMOTONE

(SASTRIC BATHING HERBAL PREPARATION)
THE UNIQUE PRODUCT
IN THE MARKET FOR SKN HYGIENE.

ಡರ್ಮೋಟೋನ್,
ಶಾಸ್ತ್ರೀಯವಾದ ಮತ್ತು ಆರೋಗ್ಯಕರವಾದ ಚರ್ಮರಕ್ಷಕ ಚೂರ್ಣ.
ಡರ್ಮೋಟೋನ್ ವರ್ಕ್ಸ್, ಮೈಸೂರು.

ವನಿತಾ ವಿನೋದ

ಕುಶಲ ವಿದ್ಯಾನಿರತರಾದ ಮಹಿಳೆಯರಿಗಾಗಿ ದೊರಕಿಸುವ ಎಲ್ಲಾ ವಿಧ ಬಣ್ಣಗಳ ನೂಲಿನ ಸಾಮಾನುಗಳು ಮತ್ತು ಅದಕ್ಕೆ ಸಂಬಂಧಿಸಿದ ಇತರ ಸಾಮಾನುಗಳು ಚಿಲ್ಲರೆಯಾಗಿಯೂ, ಒಟ್ಟಾಗಿಯೂ ದೊರೆಯುತ್ತವೆ

ಎಂಬ್ರಾಯಿಡರಿ ಹೋಂ
ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು.

ನೋಟೀಸು

ಶ್ರೀ ನಂಜುಂಡೇಶ್ವರ ಬ್ಯಾಂಕ್ ಲಿಮಿಟೆಡ್.,
ನಂಜನಗೂಡು.

ಸದರಿ ಕಂಪನಿಯ ಡೈರೆಕ್ಟರುಗಳಾದ ಸದಸ್ಯರು... ಶ್ರೀ ರಾ. ಸೀತಾರಾಮಯ್ಯನವರೂ, ಶ್ರೀ ಕ. ಸುಬ್ರಹ್ಮಣ್ಯ ಪಂಡಿತರೂ, ಶ್ರೀ ಎನ್. ಸುಬ್ರಹ್ಮಣ್ಯಯ್ಯನವರೂ ಸಹ ಲಿಕ್ವಿಡೇಟರುಗಳಾಗಿರತಕ್ಕದ್ದೆಂತಲೂ 20-2-1936 ನೇ ದಿನದ ಮೀಟಿಂಗಿನಲ್ಲಿ ತೀರ್ಮಾನಿಸಲಾಗಿರುವುದನ್ನು ಷೇರುದಾರರು ಗಮನಿಸಬೇಕಾಗಿ ಕೋರಿದೆ

ನಂಜನಗೂಡು
ತಾ|| 23—2—36

ಆರ್. ಎಸ್. ಸೀತಾರಾಮಯ್ಯ,
ಏಜಂಟ್.

ನಾಳಿನ ಮಹಾ ಮೈಸೂರು.

ಉದಯಿಸಲು ಅಡಿಗಲ್ಲನ್ನಿಡಿ.

ಮೈಸೂರು ವಿಮಾ ಕಂಪೆನಿಯೊಂದಿಗೆ ಸರ್ವ ಪ್ರಕಾರದಿಂದಲೂ ಸಹಕರಿಸಿ ಇದು ನಮ್ಮ ಪ್ರಾರ್ಥನೆ,
ಹೀಗೆ ಪ್ರಾರ್ಥಿಸುವುದು ನಮ್ಮ ಜನ್ಮಸಿದ್ಧವಾದ ಹಕ್ಕು, ಹಾಗೆ ಸಹಕರಿಸುವುದು ನಿಮ್ಮ ಪವಿತ್ರ ಕರ್ತವ್ಯ.
ಕರ್ನಾಟಕದಲ್ಲಿ ಸ್ಥಾಪಿತವಾದ ವಿಮಾ ಕಂಪೆನಿಗಳಲ್ಲಿ ಪ್ರಥಮ ವರ್ಷದಲ್ಲೇ ಯಾವುದೂ ಈ ಕಂಪನಿಯಷ್ಟು ಕಾರ್ಯ ನಡೆಸಿಲ್ಲ.

ನಾಳಿನ ಮಹಾ ಮೈಸೂರಿನ ಮುಂಬೆಳಗು ಯಾವುದು ?

ಮೈಸೂರು ವಿಮಾ ಕಂಪೆನಿ, ಲಿಮಿಟೆಡ್.,

ಬೆಂಗಳೂರು.

ಮೈಸೂರು ವಿಮಾ ಕಂಪೆನಿಯು ಮೈಸೂರಿನವರ ಮತ್ತು ಮೈಸೂರಿನ ಅಭ್ಯುದಯಕ್ಕಾಗಿ ಮೈಸೂರು ಬಂಡವಾಳದಿಂದ ಮೈಸೂರಿನವರ ನೇತೃತ್ವದಲ್ಲಿ ಮೈಸೂರಿನ ಕೆಲಸಗಾರರಿಂದ ನಡೆಸಲ್ಪಡುತ್ತಿರುವ ಅಚ್ಚ ಮೈಸೂರು ಸಂಸ್ಥೆ.

ಭಾರತಮಾತೆಯ ಆರ್ಥಿಕೋನ್ನತಿಗಾಗಿ ದೇಶದ ನಾನಾ ಭಾಗಗಳಲ್ಲಿ ನಡೆಯುತ್ತಿರುವ ಪ್ರಯತ್ನಗಳಿಗೆ ತನ್ನ ಶಕ್ತ್ಯನುಸಾರ ಮೈಸೂರು ನೆರವಾಗಬೇಕೆಂಬ ಆಶೆಯಿಂದ ಈ ಸಂಸ್ಥೆಯು ಬೆಳಕು ಕಂಡಿತು.

ವಿಮಾ ಉದ್ಯಮದಲ್ಲಿ ಇಡೀ ಸಂಸ್ಥಾನಕ್ಕೆ ಏಕಮಾತ್ರ ಆದರ್ಶ ಸಾರ್ವಜನಿಕ ಸಂಸ್ಥೆಯಿದು.

ಇಂತಹ ಕಂಪೆನಿಯಲ್ಲಿ ಮೈಸೂರಿನವರೆಲ್ಲರ ಪ್ರಾತಿನಿಧ್ಯವಿದ್ದೇ ತೀರಬೇಕು.

ಮೊದಲಿನ ೧ ಲಕ್ಷ ರೂ. ಗಳ ಷೇರುಗಳೂ ಅತ್ಯಲ್ಪಕಾಲದಲ್ಲಿಯೇ ಚಂದಾ ಆಗಿಹೋದವು

ಬೇಡಿಕೆ ಅವಶ್ಯಕತೆಗಳನ್ನನುಸರಿಸಿ

ಷೇರು ಬಂಡವಾಳವನ್ನು ಇನ್ನೂ ೨ ಲಕ್ಷ ಹೆಚ್ಚಿಸಲಾಗಿದೆ

ಈ ಎರಡು ಲಕ್ಷದಲ್ಲಿ ೧೦೦ ರೂಗಳ ೧೦೦೦ ಷೇರುಗಳನ್ನು ಮಾತ್ರ ಡೈರೆಕ್ಟರುಗಳು ಮಾರಾಟಕ್ಕಿಟ್ಟಿರುವರು.

ಈ ಸಾವಿರ ಷೇರುಗಳಲ್ಲಿ ಈಗಾಗಲೇ ಬಹು ಭಾಗವು ಚಂದಾ ಆಗಿದೆ

ಷೇರು ಬೇಕಾದರಿಂದೇ ಬರೆಯಿರಿ. ಇಂದು ಬಿಟ್ಟರೆ ನಾಳೆ ಸಿಗದು ! ತ್ವರೆಮಾಡಿ.

ಸರ್ವರ ಅನುಕೂಲ ಅವಶ್ಯಕತೆಗಳಿಗೆ ಸರಿಹೊಂದುವ ವೈದ್ಯ ಪರೀಕ್ಷೆಯಿರುವ ಮತ್ತು ಇಲ್ಲದಿರುವ ನವೀನ ವಿಮಾ ಪದ್ಧತಿಗಳು.

ಸ್ತ್ರೀಯರೂ ವಿಮೆ ಮಾಡಬಹುದು.

ಏಜೆಂಟರುಗಳಿಲ್ಲದ ಸ್ಥಳಗಳಲ್ಲೆಲ್ಲಾ ಏಜೆಂಟರು ಬೇಕು.

ವೇತನದ ಮೇಲೂ ಕೆಲಸಮಾಡಲು ಅವಕಾಶವಿದೆ

ಹೆಚ್ಚು ವಿವರಗಳಿಗೆ—

ಕಂಠೀರವ ಮತ್ತು ಕಂಪೆನಿ,
ಮ್ಯಾನೇಜಿಂಗ್ ಏಜೆಂಟ್ಸ್,
ಮೈಸೂರು ವಿಮಾ ಕಂಪೆನಿ ಲಿಮಿಟೆಡ್.,
ಶ್ರೀ ನರಸಿಂಹರಾಜ ರೋಡ್, ಬೆಂಗಳೂರು ಸಿಟಿ

KANTEERAVA & Co.
Managing Agents,
MYSORE INSURANCE CO., LTD.,
Narasimharaja Road, Bangalore City.

Edited, Printed & Published by Agaram Rangiah, B. A., at Sri Rama Press, D. Subbiah Road, Mysore.

ವಾರ್ಷಿಕ ಚಂದಾ ದರ.
ಸ್ಥಳೀಯರಿಗೆ ಅಂಚೆಯ ಮೂಲಕ 1—8—0
ಅಂಚೆ ಮೂಲಕ 1—4—0 ಬಿಡಿ ಪ್ರತಿ 0—0—6



ವಿದೇಶಗಳಿಗೆ ಚಂದಾ ದರ.
ಬ್ರಹ್ಮದೇಶ, ಸಿಂಹಳ ಮುಂತಾದ
ದೇಶಗಳಿಗೆ 2—4—0

॥ ಸತ್ಯಮೇವೋದ್ಧರಾಮ್ಯಹಮ್ ॥
ರಾಜಧಾನಿಯ ರಾಷ್ಟ್ರೀಯ ವಾರ ಪತ್ರಿಕೆ.
ವೃದ್ಧಪಿತಾಮಹ ಎಂ. ವೆಂಕಟಕೃಷ್ಣಯ್ಯನವರ ಜ್ಞಾಪಕಾರ್ಥವಾಗಿ ಪ್ರಕಟಿಸಲ್ಪಡುವುದು.
ಸಂಪಾದಕರು: ಅಗರಂ ರಂಗಯ್ಯ, ಬಿ.ಎ.

Sadhvi: A Leading Nationalist Weekly of Mysore.

FOUNDED IN MEMORY OF MR. M. VENKATA KRISHNANAYYA, THE GRAND OLD MAN OF MYSORE

ಸಂಪುಟ ೧] MYSORE : MONDAY 16—3—36 ಮೈಸೂರು : ಸೋಮವಾರ ೧೬—೩—೩೬ [ಸಂಚಿಕೆ ೪

NEW OPERA TALKIES, MYSORE.

ನ್ಯೂ ಅಪೆರಾ ಟಾಕೀಸ್, ಮೈಸೂರು. ೧೧-೩-೩೬ ನೇ ಬುಧವಾರದಿಂದ

Droupadi Vastrapaharanam

ದ್ರೌಪದಿ ವಸ್ತ್ರಾಪಹರಣ.

(ತೆಲುಗು ಭಾಷೆಯಲ್ಲಿ)

ಕನ್ನಾಂಬಾ ಬಾನುತಿಲಕಂ, ಗಗ್ಗಯ್ಯ, ಚಪ್ಪಳ್ಳಿ ಸೂರ್ಯನಾರಾಯಣ ಭಾಗವತರ
ಮುಂತಾದವರು ಪಾತ್ರವಹಿಸಿರುವರು.

ANANDA SODA FACTORY,

DODDAPET, MYSORE.

BEST AERATED WATER SUPPLIERS.
COMPLETE REQUISITES FOR
AERATED WATER MANUFACTURERS
AVAILABLE

ಆನಂದಾ ಸೋಡಾ ಫ್ಯಾಕ್ಟರಿ,
ದೊಡ್ಡಪೇಟೆ, ಮೈಸೂರು

WATCH FOR THE OPENING DATE!

BOMBAY INDRA BHAVAN,

WITH

Modern Equipments and efficient Management

IN

SAYYAJI RAO ROAD, MYSORE

Where to go in Mysore?
Surely To

Bombay Anand Bhavan

Ideal Restaurant.

FRUIT SALAADS, COOL DRINKS,
CRUSHES SWEETS ARE OUR SPECIALITIES

Catering arrangements undertaken

Have you visited Mount Abu?
If not, we shall take you there.

UP-TO-DATE NEWS FEARLESS IN VIEWS!

READ

'Swarajya'

The foremost Nationalistic Daily of India.

THE LONG EXPECTED NEWSPAPER
FOR INDIA TO-DAY

Buy a specimen copy

YOU WILL KNOW ITS MERITS PRICE HALF ANNA



A Reliable House for Repairs of
WATCHES & GRAMOPHONES.
HIGH CLASS RUBBER STAMP
Suppliers,

M V N WATCH COY,
The General Commission Agency
Lansdowne Buildings,
MYSORE.

ಗಡಿಯಾರ ಮತ್ತು ಗ್ರಾಮೋಫೋನುಗಳ ರಿಪೇರಿ
ಮತ್ತು ರಬ್ಬರ್ ಮೊಹರುಗಳ ತಯಾರಿ
ನಮ್ಮಲ್ಲಿ ನಡೆಯುತ್ತವೆ.
ಎಂ ವಿ ಎನ್ ವಾಚ್ ಕಂಪನಿ, ಮೈಸೂರು

ಎಂ ವಿ. ನಾರಾಯಣರಾಯರ
ಶ್ರೀ ಸತ್ಯನಾರಾಯಣ ಪರಿಮಳ ಫ್ಯಾಕ್ಟರಿ,
ಜಗನ್ಮೋಹನ ಬಂಗ್ಲ ಬೀದಿ, ಮೈಸೂರು.

ಪರಿಮಳ ಅಗರ್ ಬತ್ತಿ

ಉಪಯೋಗಿಸಿ ಪ್ರೋತ್ಸಾಹಿಸಿರಿ.

USE ALWAYS

DERMOTONE

(SASTRIC BATHING HERBAL PREPARATION)
THE UNIQUE PRODUCT
IN THE MARKET FOR SKIN HYGIENE.

ಡರ್ಮೊಟೋನ್,
ಶಾಸ್ತ್ರೀಯವಾದ ಮತ್ತು ಆರೋಗ್ಯಕರವಾದ ಚರ್ಮರಕ್ಷಣೆ ಚೂರ್ಣ
ಡರ್ಮೊಟೋನ್ ವರ್ಕ್ಸ್, ಮೈಸೂರು.

ವನಿತಾ ವಿನೋದ

ಕಾಲ ವಿದ್ಯಾಸಕ್ತರಾದ ಮಹಿಳೆಯರಿಗಾಗಿ ದೊರೆಯುವ ಎಲ್ಲಾ ವಿಧ ಬಣ್ಣಗಳ ಸೂಜಿ ಮಾದರಿಯ ಕಸೂತಿ ದಾರಗಳು ಮತ್ತು ಅದಕ್ಕೆ ಸಂಬಂಧಿಸಿದ ಇತರ ಸಾಮಾನುಗಳೆಲ್ಲವೂ ಚಿಲ್ಲರೆಯಾಗಿಯೂ, ಒಟ್ಟಾಗಿಯೂ ದೊರೆಯುತ್ತವೆ

ಎಂಬ್ರಾಯಿಡರಿ ಹೋಂ
ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು.

Reserved For SRI KRISHNA BHAVAN Mysore.

॥ ಸತ್ಯಮೇವೋದ್ಧರಾಮ್ಯಹಮ್ ॥
ರಾಜಧಾನಿಯ ರಾಷ್ಟ್ರೀಯ ವಾರ ಪತ್ರಿಕೆ.
ವೃದ್ಧ ಪಿತಾಮಹ ಎಂ. ವೆಂಕಟಕೃಷ್ಣಯ್ಯನವರ ಜ್ಞಾಪಕಾರ್ಥವಾಗಿ ಪ್ರಕಟಿಸಲ್ಪಡುವುದು.
ಸಂಪಾದಕರು ಅಗರಂ ರಂಗಯ್ಯ, ಬಿ.ಎ

ಸಂಪುಟ ೧] MYSORE : MONDAY 16—3—36 ಮೈಸೂರು : ಸೋಮವಾರ ೧೬—೩—೩೬ [ಸಂಚಿಕೆ ೪

ಜರ್ಮನಿಯ ಹಿಟ್ಲರರು ಕ್ರೈಸ್ತರಾಗುವರೆ?

ಪುನಃ ಯೂರೋಪಿನಲ್ಲಿ ಯುದ್ಧದ ಸಂಭವ.



ಜರ್ಮನಿಯ ಹಿಟ್ಲರ್

ಜವಾಹಿರರ ಆಗಮನ.

ಪಂಡಿತ ಜವಾಹಿರಲಾಲರು 10 ನೇ ತಾ॥ ಸಂಜೆ ವಿಮಾನದಲ್ಲಿ ಕರಾಚಿಗೆ ಬಂದರು 11 ನೇ ತಾ॥ ಬೆಳಿಗ್ಗೆ ಅಲಹಾಬಾದನ್ನು ತಲುಪಿದರು ನೂರಾರು ಜನರು ಆವರಿಗೆ ಸ್ವಾಗತ ಬಯಸಿದರು ಬಾಬು ರಾಜೇಂದ್ರ ಪ್ರಸಾದರೂ, ಜಮ್ನಾಲಾಲ್ ಬಜಾಜರೂ, ಡಾ॥ ವಾರ್ಡೇಕರ್, ಪುರುಷೋತ್ತಮದಾಸ್ ಟಂಡನ್‌ರವರೂ ಬಂದಿದ್ದರು ಅದಿನ ಸಂಪೂರ್ಣವಾದ ಹರತಾಳವು ಆಚರಿಸಲ್ಪಟ್ಟಿತು ಸ್ಕೂಲುಗಳೂ ಕಾಲೇಜುಗಳೂ ಮುಚ್ಚಲ್ಪಟ್ಟಿದ್ದವು ದೊಡ್ಡ ಮೆರವಣಿಗೆಯಲ್ಲಿ ಸಾವಿರಾರು ಜನರು ಬರೀ ತಲೆಯಲ್ಲಿ ಹೊರಟು ಶ್ರೀಮತಿ ಕಮಲಾ ನೆಹರೂರವರ ಅಸ್ಥಿಗಳನ್ನು ಪ್ರಯಾಗದ ಗಂಗಾ, ಯಮುನಾ, ಸರಸ್ವತಿ, ತ್ರಿವೇಣಿ ಸಂಗಮದಲ್ಲಿ ಒಗೆದುಕೊಂಡುಹೋಗಿ ಅಲ್ಲಿ ಅರ್ಪಣ ಮಾಡಿದರು ಜವಾಹಿರರು ಧೈರ್ಯಗೊಂಡರು ಮುಂದಿನ ಕಾರ್ಯಗಳಲ್ಲಿ ಆಸಕ್ತರಾಗಿರುವರು

ಸಿಮೆಂಟ್ ಮೊಕದ್ದಮೆ.

ಮಂಡ್ಯದ ಸಿಮೆಂಟ್ ಮೊಕದ್ದಮೆಯ ಅಪೀಲನ್ನು ಇಲ್ಲಿನ ಸೆಷನ್ಸ್ ಜಡ್ಜಿಯವರು ವಜಾಮಾಡಿ ಕೆಳಗಿನ ಕೋರ್ಟಿನ ಶಿಕ್ಷೆಯನ್ನೇ ಖಾಯಂ ಮಾಡಿದರು

ವಿಜ್ಞಾಪನೆ.

ಮಹನೀಯರ,

ಈ ಬಡವನಾದ ನಾನು, ತಮ್ಮೆಲ್ಲರ ಉದಾರ ಸಹಾಯದಿಂದ ರತ್ನಾವಳಿ ಥಿಯೇಟರಿನಲ್ಲಿ ಹೋದ ಸಂವತ್ಸರದಲ್ಲಿ ಮಹಾಶಿವರಾತ್ರಿಯ ದಿವಸ ಸುಮಾರು ಎರಡು ಸಾವಿರ ಜನ ಬಡವರಿಗೆ ಸಂತುಷ್ಟರಾಗುವ ಹಾಗೆ ಅನ್ನದಾನ ಮಾಡಲಾಯಿತು ಈಗ ಹಿರವಕ್ಕೆ 'ಶ್ರೀ ರಾಮ ನವಮಿ" ಯನ್ನು ಆಚರಿಸಿ ಅಂದೂ ಹೋದ ಶಿವರಾತ್ರಿಯಂತೆ ಬಡಬಗ್ಗರಿಗೆ ಅನ್ನದಾನ ಮಾಡಬೇಕೆಂದಿರುವುದರಿಂದ ಮಹನೀಯರು ಉದಾರ ಮನಸ್ಸಿನಿಂದ ಈ ಕಾರ್ಯಕ್ಕೆ ಧನ ಧಾನ್ಯಗಳ ಸಹಾಯಮಾಡಿ ಪುಣ್ಯಶಾಲಿಗಳಾಗಬೇಕಾಗಿ ಪ್ರಾರ್ಥಿಸುವ

ತಮ್ಮ ಅತ್ಯಂತ ವಿಧೇಯ,
ವಿದ್ಯಾನಂದ ಸನ್ಯಾಸಿ
ವೇದಿಕ್ ಮಿಷನರಿ
ಆರ್ಯ ಸಮಾಜ ಮೈಸೂರು

ಮಂಡ್ಯದ ಡಿಸ್ಟ್ರಿಕ್ಟ್ ಬೋರ್ಡ್.

ಮೈಸೂರು ಡಿಸ್ಟ್ರಿಕ್ಟನ್ನು ಎರಡು ಭಾಗ ಮಾಡಿ ಮಂಡ್ಯದಲ್ಲಿ ಮತ್ತೊಂದು ಡಿಸ್ಟ್ರಿಕ್ಟ್ ಬೋರ್ಡ್ ಮಾಡುವಂತೆ ಇಲ್ಲಿನ ಜಿಲ್ಲಾಧಿಕಾರಿಗಳು ಸರ್ಕಾರಕ್ಕೆ ಸೂಚನೆ ಕೊಟ್ಟಿದ್ದಾರ

ಖಜಾನೆಗೆ ಬಂದ ಹಣ ಕಮ್ಮಿ

ಕಳೆದವಾರ ಮೈಸೂರು ಖಜಾನೆಗೆ ಮದ್ದೂರಿನಿಂದ ಬಂದ ಹಣದಲ್ಲಿ ಇನ್ನೂರು ರೂ ಕಡಿಮೆಯಾಗಿತ್ತೆಂದೂ ಜಿಲ್ಲಾಧಿಕಾರಿಗಳು ವಿಚಾರಿಸುತ್ತಿರುವರೆಂದೂ ಗೊತ್ತಾ[illegible]

ಕ್ರೈಸ್ತರಾಗುವರಂತೆ.

ತಿರುವನಂತಪುರದಲ್ಲಿ 500 ಜನ ತಿಯ್ಯಾ ಜನರು ಕ್ರೈಸ್ತರಾಗಬೇಕೆಂದಿರುವ ದಾಗಿ ತಿಳಿದು ಬಂದಿದೆ

ಸೆನೆಟ್ ಮೀಟಿಂಗು

ಮೈಸೂರು ವಿಶ್ವ ವಿದ್ಯಾಲಯ ಸನೆಟ್ ಮೀಟಿಂಗು ಈ ತಿಂಗಳು 26 ನೇ ತಾ॥ ಗುರುವಾರ ಮಧ್ಯಾಹ್ನ ಮೈಸೂರು ವಿಶ್ವ ವಿದ್ಯಾ ನಿಲಯ ಸಂಘದಲ್ಲಿ ನಡೆಯುವುದು ವಾರ್ಷಿಕ ವರದಿ, ಜಮಾ ಖರ್ಚು ಪಟ್ಟಿ ಮತ್ತು ಇತರ ಠರಾವುಗಳು ಚರ್ಚಿ[illegible]

ಶೋಕ ಸಭೆ.

ಶ್ರೀಮತಿ ಕಮಲಾ ನೆಹರೂರವರ ನಿಧನದ ಬಗ್ಗೆ ಪುರನಿವಾಸಿಗಳ ಸಂತಾಪವನ್ನು ಸೂಚಿಸಲು ಕಳೆದ ಬುಧವಾರ ಸಾಯಂಕಾಲ ಮೈಸೂರು ಟೌನ್‌ಹಾಲಿನಲ್ಲಿ ಒಂದು ದೊಡ್ಡ ಸಭೆ ನಡೆಯಿತು ಅಡ್ವೋಕೇಟ್ ಶ್ರೀ॥ ಸಿ ನರಸಿಂಹಯ್ಯನವರು ಅಧ್ಯಕ್ಷತೆ ವಹಿಸಿದ್ದರು ಶ್ರೀ॥ ಗಂ[illegible] ಸಿ ಎಂ ಪೊಂಗಣ್ಣನವರೂ, ಮಿ॥ ಮಹಮದ ವಲಿಯುಲ್ಲಾರವರೂ, ಶ್ರೀ॥ ಕಪ್ಪಣ್ಣನವರೂ ಭಾಷಣಗಳನ್ನು ಮಾಡಿದರು. ಶೋಕ ಸೂಚನೆಯ ಠರಾವನ್ನು ಎಲ್ಲರೂ ಎದ್ದು ನಿಂತು ಅಂಗೀಕರಿಸಿದರು.

ಬೆಂಗಳೂರಿನಲ್ಲಿ ಶೋಕ ಪ್ರದರ್ಶನ

ಬೆಂಗಳೂರು ನಗರವು ಶ್ರೀಮತಿ ಕಮಲಾ ನೆಹರೂರವರ ಮರಣದ ಬಗ್ಗೆ ತನ್ನ ತೀವ್ರವಾದ ಶೋಕ ಪ್ರದರ್ಶನವನ್ನು ಮಾಡಿತು. ಊರಿನಲ್ಲೆಲ್ಲಾ ಅಪೂರ್ವವಾದ ಹರತಾಳವು ಆಚರಿಸಲ್ಪಟ್ಟಿತು ವರ್ತಕರು ಅಂಗಡಿಗಳನ್ನು ಮುಚ್ಚಿದ್ದರು. ರಾಷ್ಟ್ರಧ್ವಜಗಳು ಅರ್ಧ ಮಟ್ಟಕ್ಕೆ ಹಾರಿಸಲ್ಪಟ್ಟಿದ್ದವು. ವೆಂಕಟ ಮುನಯ್ಯ ಶೆಟ್ಟರ ಛತ್ರದಲ್ಲಿ ದೊಡ್ಡ ಬಹಿರಂಗ ಸಭೆಯು ಶ್ರೀ ಮಾ[illegible] ಕಾರ್ನಾಡ ಸದಾಶಿವರಾಯರ ಅಧ್ಯಕ್ಷತೆಯಲ್ಲಿ ಜರುಗಿತು ಸಂತಾಪ ಸೂಚಕ ಠರಾವು ಪಾಸಾಯಿತು

ಕಲಾ ಉತ್ಸವ.

ನಾಟಕ ಶಿರೋಮಣಿ ವರದಾಚಾರ್ಯರ ಸ್ಮಾರಕ ಸಮಿತಿಯವರು ಮೇ ತಿಂಗಳಲ್ಲಿ ಬೆಂಗಳೂರಿನಲ್ಲಿ ಕಲಾ ಉತ್ಸವವನ್ನು ನಡೆಸುವರು ನಾಟಕ ಕಲಾಸ್ಪರ್ಧೆ ನಡೆಯುವುದು ಅಭ್ಯಾಸಿಗಳು ಸ್ಪರ್ಧೆಗೆ ಸೇರಬಹುದು ಅವರಿಗೆ ಊಟ ವಸತಿಗಳ ಸೌಕರ್ಯಗಳು ಒದಗಿಸಲ್ಪಡುವುವು ಹೆಚ್ಚು ವಿಷಯಗಳನ್ನು ಮೈಸೂರು ವಾಣೀವಿಲಾಸ ಮೊಹಲ್ಲಾ ನೂರಡಿ ರಸ್ತೆಯಲ್ಲಿರುವ ಸಂಘದ ಉಪಾಧ್ಯಕ್ಷರಾದ ಶ್ರೀಮತಿ ಕನಕಲಕ್ಷ್ಮಮ್ಮನವರಿಂದ ತಿಳಿಯಬಹುದು.

ರಜಾ.

ಸರ್ ಕೆ ಪಿ ಪುಟ್ಟಣ್ಣ ಶೆಟ್ಟರಿಗೆ ಗೌರವ ಪ್ರಶಸ್ತಿಯನ್ನು ಕೊಡಲು ಈ ತಿಂಗಳು 25 ನೇ ತಾ॥ ವಿಶ್ವ ವಿದ್ಯಾನಿಲಯದ ವಿಶೇಷ ಸಮಾರಂಭವು ನಡೆಯುವುದರಿಂದ ಅದಿನ ವಿಶ್ವವಿದ್ಯಾಲಯದ ಎಲ್ಲಾ ಸಂಸ್ಥೆಗಳಿಗೂ ರಜಾ ಕೊಡಲಾಗಿದೆ

ಆಹ್ವಾನ ಗೀತೆ!

ಲೇಖಕ—ಶ್ರೀ ಪರಮೇಶ್ವರ
(ಮುಕ್ತಾಯವಾದುದು)

೧೦.
ಓರ್ವಬಲದಿ ಶೌರ್ಯಬಲದಿ
ಕ್ರಾಂತಿ ನಸ್ಸದನ್ನುನೆ!
ಮನಕ್ರಾಂತಿ ತನುಕ್ರಾಂತಿ
ನುಡಿಕ್ರಾಂತಿ ಎನ್ನುನ!
ನೂರು ಕುರುಕ್ಷೇತ್ರಗಳಲಿ
ನೂರು ಕೋಟೆಗಳಲಿ
ನೂರು ಪಾಣಿಪಟ್ಟಗಳಲಿ
ನೂರು ನೂರು ಯುದ್ಧಗಳಲಿ
ನುಗ್ಗಿ ಗಲುವ ಸ್ಫೂರ್ತಿಗೊಳಿಸಿ
ಕ್ರಾಂತಿ ನೀ ಬಾ ಬಾ ಬಾ!!!

೧೧
ಬಿಯ ಮನೆಯ ಕೊಡಯ ತೆರ...
ಸವಿಯ ದೇಂ ಸುಖಂ!
ನುಡಿಸಿದವನ್ನು ಸುಖಿಸಿದಂದ
ತೃಪ್ತಿ ಪರಾಙ್ಮುಖಂ!
ಕಪಲಕಡೆನು ಹುಡುಕಿದಂದು
ಮುತ್ತುರತ್ನ ಹೊಳೆದುದಂದು
ಕರದಿ ಎದಿಯ ಮೆಟ್ಟಿದಿದ್ದ
ಸಂಸ್ಕೃತಮಂತಕ ಮಣಿಇದ್ದ
ನನಿಪೆ! ಕಿವಜೇಕು ನಮಗೆ
ಕ್ರಾಂತಿ ನೀ ಬಾ ಬಾ ಬಾ!!!

೧೨
ಹೊಗಳಿಸಿ ಹೊಗಳಿಸಿ
ಬೃಹ್ಮನೆನಿಸಿ ಸುಸ್ವರಕಿ
ನಿಜ ಲಿಖಿತದೊಳು
ಮುಸಲಿಸವನೆನಿಸುವವರತನಿ
ಸತ್ತು ಹಂಪ ಲಂಕಯಲ್ಲಿ
ಉಳಿದರೇನು ಮತ್ತೆ ಇಲ್ಲಿ
ಉಳಿವುದೊಂದ ಉಳಿದುದದಕ
ಮುಂದೆ ನಮ್ಮ ಹೋರಾಟಕ
ಸಿಕ್ಕದಿರುವ ಶಕುನಬೇಡ!
ಕ್ರಾಂತಿ ನೀ ಬಾ ಬಾ ಬಾ!!!

೧೩
ಬಿಮುಗನಾ ಮಾಣದಿಂದ
ಉಲಿದ ಸದಾವಿನೋದಿನೀ!
ಬಾಮ ಕೋದಂಡದಿಂದ
ಉಲಿದ ಗಂಡುಮೇದಿನೀ!
ಪರಶುಮೊತ್ತ ಬಾಮದಗ್ನಿ
ಹಸಿಮುಸುಟ್ಟ ಖಂಡನಗ್ನಿ
ಸ್ತ್ರೀಯ ರುದ್ರನದಿಯ ಕೆಚ್ಚು
ರಾಮಚಪ್ಪನರಿಯ ನೆಚ್ಚು
ಎಲ್ಲ ನಿನ್ನ ಹೆಸರ ಹೆಮ್ಮೆ
ಕ್ರಾಂತಿ ನೀ ಬಾ ಬಾ ಬಾ!!!

೧೪
ರಂದುರಕ್ತ ಕುದಿಯುತಿದ್ದ
ನೀ ಪ್ರವಿರಾಳೆ ಪೆಣ್ದಳಂ!
ರಕ್ತಿ ಎದ್ದು ಕಾದುತಿದ್ದ
ನೀ ಸುಗ್ರೀವ ಕಪಿಪೆಳಂ!
ತಾಳಿಕೋಟೆ ರಾಮಸಂ
ಮೇವಾರ ಪ್ರತಾಪಸಂ
ಕೃಷ್ಣರಾಜಘೋಷಸಂ
ಶಿವಾಜಿ ಸಾಮ್ರಾಟಸಂ
ಗಂಡುವಳದಿ ಕೂಡಿ ಬಂದೆ
ಕ್ರಾಂತಿ ನೀ ಬಾ ಬಾ ಬಾ!!!

೧೫
ಬ ರಣಾಂಗಣಾಗ್ನಿದೇವಿ
ಭಸ್ಮ ಭೂಷಿತೇ!
ಬಸವಾಂಗಿ ಬಾರಕರ
ಪ್ರಳಯಕಾಮಪರ್ಷಿತೇ
ಬಿಸಿಯ ಮಸಣಭೂದಿಯಲ್ಲು
ಆಟಿಯುವಲವ್ರ ಗೂಡಿನಲ್ಲು
ಸ್ವರ್ಗವೂದಿ ಸ್ಫೂರ್ತಿಯೂದಿ
ಬಾಸ್ತತಂತ್ರ ನೀರಹಾದಿ
ತುಂಬು ಕುಣಿದು ಹಾಡದವಾಂತು
ಕ್ರಾಂತಿ ನೀ ಬಾ ಬಾ ಬಾ!!!

೧೬
ನ ನೋಗತಿಗು ಮುರಿದೊಂದ
ಸಂತತಿ ಗಾಮಿನೀ
ಕ್ಷಣಕ್ಷಣಕು ಯುಗ ಯುಗಾಂತರವನು
ತೋರ್ದ ಭಾಮಿನೀ
ಶಾಂತಿ ಸುಕ್ಷಿಕ್ಷನೆಲ್ಲು ಒಮ್ಮೆ
ನೀರಕ್ಷಾನು ತೋರ್ದ ಹೆಮ್ಮೆ
ನಿನ್ನ ಹಾವಣಾತ್ಮದೆಲ್ಲು
ರಂಮ ತತ ತೋರ್ವಗಳ್ಳು
ಹೇ ನಿಲುಸ ವೀರ ಧಧ್ರಿ
ಕ್ರಾಂತಿ ನೀ ಬಾ ಬಾ ಬಾ!!!

೧೭
ತುತ್ತು ಹಿಡಿದ ರಂತಿಯಲ್ಲಿ
ವಿಜಯ ಜೀವನ ಸ್ವರಂ
ಉಕ್ಕಿ ಬರುವ ಒಸಗಯು
ಸರಳನಿದೀ ಉಪಸ್ಥರಂ
ಕೇಳುಪಿಹುದು ನುತ ಲಿತ್ತ
ತೇಲಿಬರ್ಪನು ಗೀತ ಸ್ವಸ್ಥ
ಪುಟಕ ಇಡಲು ಜೀವ ಲೋಹ
ನೀನೆ ಉರಿವ ಮೃತ್ಯುಗೇಹ
ನಿನ್ನ ನಂತ ಜ್ಯೋತಿಯುರಿಸಿ
ಕ್ರಾಂತಿ ನೀ ಬಾ ಬಾ ಬಾ!!!

೧೮
ಬ ಪ್ರಗತಿಕ್ಷೇತ್ರ ಬನವಿಮಾರ್ಗ
ತೂರ್ಯನಾದಿನೀ
ಸೇ ಪ್ರಯತ್ನ ಪುರುಷ ಧೀರ
ರಾಗಗುಣವಿರಾಗಿಣೀ
ಅಲ್ಪನೂಡ ಪುಣ್ಯಜೇಡ!
ಇಂದ್ರಾಸನವ ಹೆಮ್ಮ ಬೇಡ
ನಸಿಕ್ಕ ಬ್ರಹ್ಮ ದಂಡ ಬೇಡ!
ಚಮುರ ವಿಸುರ ನೀತಿ ಬೇಡ!
ಏಕಮುಗ ಸರ್ವಸ್ವ ಯೋಗ
ಕ್ರಾಂತಿ ನೀ ಬಾ ಬಾ ಬಾ!!!

೧೯
ಅಪರಿಮೇಯ ಅನಿರ್ವಚನ
ಬಳೀವ ಜಗದ್ವಿನಾಯಕೀ!
ವಿನೀಭೂತ ಜಗತಿವಲಯ
ಮುಪ ಮಹಾ ಸಾಥಕೀ!
ಜರಾಮರಣ ಷಡೂರ್ಮಿಗಳಿಗು
ಕಾಲಚೇರಮವಾಧಿಗಳಿಗು
ಅನೇಕರೂಗನೂಹ್ಯಮಾಗಿ
ಒಚ್ಚುತನಂತ ಶಾಂತಿಯಾಗಿ
ನೆಲೆಸಲೆಂಬ ನಂಬಿಕೆಯಲಿ
ಕ್ರಾಂತಿ ನೀ ಬಾ ಬಾ ಬಾ!!!

—

ಸಮಾಜ ಶಾಸನ

(ಒಂದು ಸಣ್ಣ ಕಥೆ)

ಲೇಖಕ—ಟಿ. ಎಸ್. ಬಾಲಕೃಷ್ಣನ್,
ಅರಸೀಕೆರೆ
(ಕಳೆದವಾರದ ಶೇಷ)

ಕ್ಷಣಾರ್ಧದಲ್ಲಿ ನಾಥನ ಚಿತ್ರವು ಹೃದಯದ ಅಂತರಾಳದಲ್ಲಿ ಪ್ರವೇಶಿಸಿದಂತಾಗಿ ಅವಸಿಗಾದ ಉಬ್ಬಾಯವೂ ತೋಚದಂತಾಯಿತು ಪ್ರಮುಪ್ರ ಹೆಚ್ಚಾಗ ತೊಡಗಿತು ಒಸ್ಸಿರುವ ನಿರ್ಭಾಗ್ಯ ಹೆಣ್ಣು ಮಗುವಿಗಾಗಿ ತನ್ನ ಪ್ರಾಣವು ಸಿದ್ಧವಾಗಿ ಹೋಗುವುದೆಂದೆಂತಸು! ಕ್ಷಣ ಕ್ಷಣಕ್ಕೂ ಪ್ರಮುಪ ಹೆಚ್ಚಾಗ ತೊಡಗಿದಂತೆಲ್ಲಾ ಒಂದು ಬಗೆಯ ಮೂರ್ಛೆಯು ಆತನನ್ನಾವರಿಸತೊಡಗಿತು ಸರಿ ಸರಿ, ಒಂದು ಧ್ವನಿಯಾಯಿತು ಕತ್ತಿತ್ತಿದನು ಅವನಿಗುಂಟಾದ ಆನಂದವನ್ನು ವರ್ಣಿಸಲಸದಳವಾಯ್ತು ಯಾರೋ ನೀರಿಗಾಗಿ ಬಂದವರು ಬಂದಿಗೆಗ ಹಗ್ಗವನ್ನು ಬಿಟ್ಟು ವಿಹುತ್ತಿದ್ದರು 'ಎಲ್ಲಾರು ಹಗ್ಗ ಬಿಡಬೇಡಿ ಒಮ್ಮೆಗೆ ಹಿಡುಕೊಳ್ಳಿ, ಪ್ರಾಣ ಉಳಿಯಿತು ಎಂದು ಚೀರಿದನು ಇವನಾ ಅಲ್ಪ ತೃಪ್ತಿಗಾಗಿ ಕೂಗು ಭಾವಿಯಿಂದ ಮೇಲಂ ಗುಟ್ಟಿಸಿತ ನೀರಿಗಾಗಿ ಬಂದಿದ್ದ ಚೆಲುವಮ್ಮನವರು, ಪಯಾಸ್ಸಿತರಾಗಿ ಭಾವಿಯಲ್ಲಿ ಇಣಿಕಿ ನಾಕಿದರು ಪಾಪ ಎದೆಗಂದಿರಿತು ಕೊಂಪರ್ದ, ಬಿಟ್ಟ ಪಾತ್ರೆ ದಗ್ಗವನ್ನು ಬಿಟ್ಟು ನಿಟ್ಟುಸಿರಿಟ್ಟಿನಿಂದ ಮನೆಕಡೆಗ ಓಡ ತೊಡಗಿದರ ಅವರಾಗಿನ ಪ್ರಕೃತಿಯನ್ನು ನೋಡಿದರ ಎಂಥವನಿಗಾದರೂ ನಗು ಬರದಿರುತ್ತಿರಲಿಲ್ಲ ಅದಕ್ಕೂ ಕಾರಣವಿಷ್ಟೇ ಇಟ್ಟಿದ ಭಾವಿಯಲ್ಲಿ ಒಂದೊಂದು ಪಿಶಾಚಿಗಳಿರುವುವೆಂತಲೂ, ನಡು ಬಿಸಿಲಿನ ಜಗಯಲ್ಲವು ಭಾವಿಯಲ್ಲಿ ಕ್ರೀಡಿಸುವುವೆಂತಲೂ ಒಂದು ರಾಮಭಟ್ಟರ ಹೆಂಡತಿ ಹೇಳಿದ್ದನ್ನು ಮರೆಯದೆ ಮನಸ್ಸಿನಲ್ಲಿಟ್ಟುಕೊಂಡಿದರು ಇಂದು ಆಕಸ್ಮಾತ್ ತಿಳಿಯದೆ ತಿಳಿಯದಯೇ ನೀರಿಗೆ ಒಂದು ಬಿಟ್ಟಿದ್ದರು ನಾಥನ ಧ್ವನಿಯು ಅವರದಿಯನ್ನು ಭರಗುಟ್ಟಿಸಿತ್ತು ಮಾತ್ರವಿರಲಿ ಮಾದನು ನೀರಿನಲ್ಲಿ ಮುಳುಗಿದ್ದಾಗ ತನಗಿಂದಲು ಬಿಚ್ಚಿ ಭುಜದ ಮೇಲೂ ಮುಖದ ಮೇಲೂ ಹರಡಿ ಭಯಂಕರವಾಗಿ ಕಾಣಿಸುತ್ತಿದ್ದಂತೆ ಅಪ್ಪಿಕೊಂಡಿದ್ದ ಕಮಲಮ್ಮನ ಕೇಶರಾಶಿಯೂ ಬಿಚ್ಚಿ ಅದೂ ಭಯಂಕರ ಸ್ವರೂಪವಾಗಿಯೇ ಕಾಣುತ್ತಿತ್ತು ಇಂತಹುದರಲ್ಲಿ ಚೆಲುವಮ್ಮನವರು ಬೇಗ ಓಡಿದ ವೇಸೂ ಆಶ್ಚರ್ಯವಲ್ಲ ಇದರಿ ಒಬ್ಬನನ್ನು ನಾವರಿಂದ ಬಿಡಲ್ಪಟ್ಟ ಹಗ್ಗವು ಬಿಂದಿಗೆಯ ಭಾರದಿಂದ ಸರ, ಸರನ ಹರಿಯುತ್ತಾ ನೀರಿನ ಮೇಲೆ ಒಂದು ಎದಿತು ಎಗ್ಗದ ಕೊನೆಯು ಮಾತ್ರಾ ಮೇಲೆಯೇ ನಿಂತಿತು ನಾಥನಿಗೆ ಹೇಳ ತೀರದಷ್ಟು ಸಂತೋಷವಾಗಿ ಎತ್ತಾತುರದಿಂದ ಕಾಲನ್ನು ಬಿಚ್ಚಿ ಹಗ್ಗವನ್ನು ಸನಿಯಾಗಿ ಎಳೆದುಕೊಂಡನು ಬಿಂದಿಗೆಯು ತುಂಬಾ ನೀರು ತುಂಬಿ ಭಾವಿಯೊಳಗಡೆ ಬಿಟ್ಟನು ಬಿಂದಿಗೆಯು ಕಣ್ಣಿಗೆ ಕಾಣದಂತೆ ಮುಳುಗಿತು ಮರುಕ್ಷಣವೇ ನಾಥನ ನಾದನು ಒಂದರಡು ಎರಿ ಹಗ್ಗವನ್ನು ಕಾಲಿನಿಂದ ಜಗ್ಗಿ ಹಿಡಿದ

ನು, ಯಾರೋ ಬಲವಾಗಿ ಹಿಡಿದಿರುವಂತೆ ಭಾಸವಾಯಿತು ನಿರ್ಭಾಗ್ಯೆ ಕಮಲಮ್ಮನನ್ನು ಹೆಗಲಮೇಲೆ ಹಾಕಿ, ಭದ್ರವಾಗಿ ಹಾಕಿಕೊಂಡು, ಅತಿ ಪ್ರಯಾಸದಿಂದ ಮೇಲೇರತೊಡಗಿದನು

ರಾಮಶಾಸ್ತ್ರಿಗಳು, ಕೇವಲ 10 ರೂಪಾಯಿ ವೇತನ ಪಡೆಯುತ್ತಿದ್ದ ಸರ್ಕಾರಿ ನೌಕರರು ಇವರ ಆಗಿನ ಸಂಸಾರವೆಂದರೆ ಗೃಹಿಣಿಯಾದ ಸಾವಿತ್ರಮ್ಮ ಹೆಣ್ಣೊಂದು ಗಂಡೊಂದು, ಮಕ್ಕಳು ಇಷ್ಟೇ ಗಂಡು ಮಗನಾದ ನಾರಾಯಣನನ್ನು ಅತಿ ಪ್ರಯಾಸಪಟ್ಟು ಶೇಖರಿಸಿದ್ದ ಪುಸ್ತಕವನ್ನು ಖರ್ಚುಮಾಡಿ ಮೆಟ್ರಿಕ್ಯುಲೇಷನ್ ಪಾಸು ಮಾಡಿಸಿದ್ದರು ಅವನೀಗ 16 ರೂಪಾಯಿನ ಉಪಾಧ್ಯಾಯ, ಹೆಣ್ಣಾದ ಕುಮಾರಿ, ಕಮಲಮ್ಮನನ್ನು ಹಂತನಗ್ರಾಮದ ಜೋಯಿಸ ತಿಮ್ಮಣ್ಣಶಾಸ್ತ್ರಿಗಳ ಮಗನಿಗೆ ಕಟ್ಟಿ ವಿವಾಹ ಬೆಳೆಸಬೇಕೆಂದು ನಿಶ್ಚಿತ ಮಾಡಿಕೊಂಡಿದ್ದರು, ಮೆಟ್ರಿಕ್ಯುಲೇಷನ್ ತರಗತಿಯಲ್ಲಿ ಉತ್ತೀರ್ಣನಾಗುವವರೆಗೂ ತಾನು ಲಗ್ನವಾಗುವುದಿಲ್ಲವೆಂದು, ಶಾಸ್ತ್ರಿಗಳ ಮಗನು, ತಿಳಿಸಿದ್ದನು ಅಂತೆಯೇ, ಇನ್ನು ನಾಲ್ಕುತಿಂಗಳು ರಾಮಶಾಸ್ತ್ರಿಗಳು ಕ್ಷ ಒಪ್ಪಿಕೊಂಡು ಕುಳಿತಿರಬೇಕಾಯ್ತು ಕಮಲೆಗ ಕಾಲಾತೀತವಾಗುವ ಸಂಭವವು ತೋರುತ್ತಿತ್ತು ಆದರ ಸಮಾಜ ಶಾಸನದ ಪಾಶವು ಅವರಾಗಿನ ಅಭಿಪ್ರಾಯಕ್ಕೆ ವಿರುದ್ಧವಾಗಿ ಕಾಲನ ಪಾಶಕ್ಕೆ ಸಮನಾಗಿದ್ದಿತಾದ್ದರಿಂದ, ಅಗ್ರಹಾರಪಂಬ ಊರಿನ—ಸಾಮಾನ್ಯ ತರಗತಿಯ—ಅನುಕೂಲಸ್ಥರೊಬ್ಬರ ಮಗನಿಗೆ ಕೊಟ್ಟು ವಿವಾಹ ಬೆಳೆಸಿಬಿಟ್ಟಿದ್ದರು

ಲಗ್ನವಾದ ಎರಡನೇ ತಿಂಗಳ ಕೊನೆಯಲ್ಲೇ ಸಾವಿತ್ರಮ್ಮನು ಅಕಾಲಮರಣಕ್ಕೆ ತುತ್ತಾದಳು ಮತ್ತೊಂದುತಿಂಗಳು ಗತಿಸಿದ ನಂತರ, ಕಮಲೆಯು ಪುಷ್ಪವತಿಯಾದಳು ರಾಮಶಾಸ್ತ್ರಿಗಳು ಅತಿ ಪ್ರಯಾಸದಿಂದ ನಿಷೇಕ ಪ್ರಸ್ತವನ್ನು ಬೆಳಸಿ ವಧುವನ್ನು, ನಾಥನ ಮನೆಗ ಕಳಿಸಿಕೊಟ್ಟರು ಕಮಲಮ್ಮನು ನಾಥನ ಮನೆಗ ಬಂದೊಂದು ಪಕ್ಷದಲ್ಲಿಯೇ, ಆಕೆಯ ಪತಿಯು ಟೈಫಾಯಿಡ್ ಜ್ವರದಿಂದ ಆವರಿಸಲ್ಪಟ್ಟು ಮೃತ್ಯುವಶನಾದನು ಕಮಲಮ್ಮನ ಸೌಭಾಗ್ಯವು ಈ ರೀತಿ ಅಳಿವುದೆಂದು ವಿಧಿಯೊಬ್ಬನುಳಿತು, ಅದಾರು ಬಲ್ಲರು? ಇದನ್ನು ಕೇಳಿದ ರಾಮಭಟ್ಟರಂತೂ, ದುಃಖದಿಂದ ಕೊರಗಿ, ಕೊರಗಿ, ಹಾಸಿಗೆ ಹಿಡಿದುಬಿಟ್ಟರು ಕೊನೆಗವರ ಗತಿಯಾದದೂ—ನಾಥನವನ ನಿರ್ದಿಷ್ಟವಾದ ಆಯುಷ್ಯಾಂತ್ಯದ ಪರಿಣಾಮವನ್ನು ಹೊಂದಿತು ಇತ್ತ ಕಮಲಗುಂಟಾದ ವ್ಯಸನವು ಹೇಳತೀರದಷ್ಟಾಯಿತು ಮಾಡುವಳೇನು? ಅತ್ತೆ—ನಾಥನಿಂದಿರ ಮನೆಯಲ್ಲಿಳಿದು ತನ್ನ ದುಃಖವನ್ನು ಮರೆಯಲೆತ್ನಿಸಿದಳು ಆದರೇನು? ಆಸುಖವನ್ನು ನೀಗಿದ ನಾಥತು ನಿನ್ನ ಬೆನ್ನು ಬಿಡೆನೆಂದು ಆ ದುಃಖವು ಅವಳ ಹೃದಯದಲ್ಲಿ ಬೇರೂರಿ ನಿಂತಿತು ಬರುಬರುತ್ತಾ ಅತ್ತೆಮಾವಂದಿರು ಆಕೆಯಲ್ಲಿ ಅಪ್ರಾಜ ಉದಾಸೀನತೆಯನ್ನು

(೮ ನೇ ಪುಟ ನೋಡಿ)

ವರ್ತಮಾನ ಸಂಗ್ರಹ.

ಮೈಸೂರಿನಲ್ಲಿ ಕಾಗದದ ಕಾರ್ಖಾನೆ

ಸನ್ನ ಸರ್ಕಾರದವರು ಸದ್ಯದಲ್ಲಿಯೇ ಒಂದು ಕಾಗದದ ಕಾರ್ಖಾನೆಯನ್ನು ಸ್ಥಾಪಿಸುವ ಆಲೋಚನೆಯಲ್ಲಿದ್ದಾರೆಂದು ತಿಳಿದು ಬಂದಿತ್ತು. ಮಂಡ್ಯದ ಸಕ್ಕರೆ ಕಾರ್ಖಾನೆಯು ಮಾದರಿಯಲ್ಲಿಯೇ ಇದನ್ನು ನ ಮಾಜನರಿಂದ ತೆಗೆದುಕೊಳ್ಳಲ್ಪಟ್ಟ ಸೇರುಗಳ ಮೂಲಧನದಿಂದ ಏರ್ಪಡಿಸುವ ಸರ್ಕಾರದವರೇ ಶೇಕಡ ಹತ್ತರಷ್ಟು ಭಾಗ ಷೇರುಗಳನ್ನು ತೆಗೆದುಕೊಳ್ಳುವರು ಕಾರ್ಖಾನೆಗೆ ಉಚಿತವಾದ ಸ್ಥಳವನ್ನು ಕೊಡುವರು. ಅಗ್ಗವಾದ ದರದ ಮೇಲೆ ವಿದ್ಯುಚ್ಛಕ್ತಿಯನ್ನು ಒದಗಿಸುವರು ಮತ್ತು ಸರ್ಕಾರಕ್ಕೆ ಬೇಕಾಗುವ ಕಾಗದವನ್ನು ಇಲ್ಲಿಂದಲೇ ತೆಗೆದುಕೊಳ್ಳುವರು ಸ್ಥಾಪಿತವಾಗುವ ಕಾರ್ಖಾನೆಯವರು ಬ್ಯಾಂಕ್ ಮುಂತಾದ ಸೌಕರ್ಯಗಳನ್ನು ಮಾಡಿಕೊಡುವರು ಮತ್ತು ವರ್ಕ್ ಷಾಪಿನ ಸೌಕರ್ಯಗಳನ್ನು ಒದಗಿಸುವರು. ಕೆಲಸಗಾರರಿಗೆ ವಿದ್ಯಾಸಹಾಯಗಳನ್ನು ಕೊಡಲ್ಪಡುವವು. ಇಂತಹ ಸೌಕರ್ಯಗಳಿಂದ ಕೂಡಿದ ಪ್ರಯತ್ನವು ಯಶಸ್ವಿಯಾಗಿ ನಡೆಯುವುದರಲ್ಲಿ ಸಂದೇಹವಿಲ್ಲ.

ಸ್ಥಳೀಯ ಸಂಸ್ಥೆಗಳ ನೌಕರರ ವರ್ಗಾವರ್ಗಿ

ಡಿಸ್ಟ್ರಿಕ್ಟ್ ಬೋರ್ಡುಗಳು ಹೆಡ್ ಮಾಸ್ತರುಗಳು ಮತ್ತು ನೌಕರರು ಮತ್ತು ಮುನಿಸಿಪಾಲಿಟಿಗಳ ನೌಕರರು ಇವರುಗಳನ್ನು ವರ್ಗಮಾಡಲು ಎಸ್ಸಿಕ್ಯೂಟಿವ್ ಆಫೀಸರಿಗೆ ಅಧಿಕಾರ ಹೊಂದಿರುವರೆಂದು ಸರ್ಕಾರದವರು ಸೂಚಿಸಿರುತ್ತಾರೆ. ಈ ವಿಷಯದಲ್ಲಿ ಬೆಂಗಳೂರು ಪೌರ ಸಭೆಯಲ್ಲಿ ಚರ್ಚೆ ನಡೆದು ಒಂದು ಸರ್ವಾನುಮತದಿಂದ ಖಂಡಿಸಲ್ಪಟ್ಟಿತು.

ವಿದ್ಯಾರ್ಥಿಗಳಿಗೆ ಸೌಕರ್ಯ

ಮುಂದಿನ ತಿಂಗಳಲ್ಲಿ ನಡೆಯುವ ಲೋವರ್ ಸೆಕೆಂಡರಿ ಮತ್ತು ಮಿಡ್ಲ್ ಸ್ಕೂಲ್ ಪರೀಕ್ಷೆಗಳಿಗೆ ಮೈಸೂರಿಗೆ ಬರುವ ಹಳೇ ಕರ್ನಾಟಕ ಬ್ರಾಹ್ಮಣ ವಿದ್ಯಾರ್ಥಿಗಳಿಗೆ ಚಾಮುಂಡಿ ಬಡಾವಣೆಯ ಶಾರದಾ ನಿಕೇತನ ಹಾಸ್ಟಲಿನಲ್ಲಿ ಊಟವಸತಿಗಳಿಗೆ ಏರ್ಪಾಡು ಮಾಡಲಾಗಿದೆ. ಇವರು ಸಕಾಲದಲ್ಲಿ ಮ್ಯಾನೇಜರಿಗೆ ಬರೆಯಬೇಕು.

ಕುಡುಕನಿಗೆ ಶಿಕ್ಷೆಯ ಪರಿಹಾರ.

ಅಮೇರಿಕದ ಒಬ್ಬ ಕುಡುಕನಿಗೆ ಸಜಾ ಆಯಿತು. ಶಿಕ್ಷೆಯನ್ನು ತಪ್ಪಿಸಬೇಕಾದರೆ ಈತನು ಇನ್ನು ಕುಡಿಯಕೂಡದು, ತನ್ನ ಹೆಂಡತಿಯನ್ನು ಜತೆಯಲ್ಲಿ ಕರೆದುಕೊಳ್ಳದೆ ಎಲ್ಲಿಯೂ ಹೋಗಕೂಡದು. ಬಂದ ಸಂಬಳವನ್ನೆಲ್ಲಾ ಆಕೆಯ ಕೈಯಲ್ಲೇ ಕೊಡಬೇಕು. ಮೂರು ತಿಂಗಳಕಾಲ ಹೀಗೆ ಮಾಡಬೇಕೆಂದು ವಿಧಿಸಲಾಗಿತ್ತು.

ಬೆಂಕಿಯ ಅನಾಹುತ.

ಫಾರೆಸ್ಟ್ ಇಲಾಖೆಯವರು ಕಾಡಿಗೆ ಹಾಕಿದ ಬೆಂಕಿಯು, ಒಂದು ಹಳ್ಳಿಗೆ ಆವರಿಸಿ ಮನೆಗಳೂ, ಗುಡಿಸಲುಗಳೂ ಏಕಕಾಲದಲ್ಲಿ ಸುಟ್ಟು ಭಸ್ಮವಾದ ಕಠೋರವಾದ ಕಥೆಯು ತಿಳಿದುಬಂದಿದೆ. ಕೊಪ್ಪದಿಂದ ತರೀಕೆರೆಗೆ ಹೋಗುವ ದಾರಿಯಲ್ಲಿರುವ ತಾಂಡ್ಯ ಎಂಬ ಊರಿನಲ್ಲಿ ಈ ರೀತಿ ಸಂಭವಿಸಿತೆಂದು ಹೇಳಲಾಗಿದೆ.

ಸಹಕಾರ ಸಮಿತಿ.

ಮೇಲ್ಕಂಡ ಸಮಿತಿಯವರು ಕಳೆದ ವಾರ ಶಿವಮೊಗ್ಗಾಕ್ಕೆ ಭೇಟಿ ಇತ್ತರು. ಅಲ್ಲಿನ ಪ್ರಮುಖರಾದ ಅನೇಕ ಮಹನೀಯರು ಸಲಹೆಗಳನ್ನು ಕೊಟ್ಟರು. ಸಮಿತಿಯವರು ಶಿವಮೊಗ್ಗಾ ಸಹಕಾರ ಸಂಘದ ಕಟ್ಟಡಕ್ಕೆ ಭೇಟಿ ಇತ್ತರು.

ಜವಾಹಿರಲಾಲರಿಗೆ ಎಡ್ವರ್ಡ್ ಚಕ್ರವರ್ತಿಗಳ ಆಹ್ವಾನ.

ಪಂಡಿತ ಜವಾಹರಲಾಲರು ಲಂಡನ್ನಿನಲ್ಲಿದ್ದಾಗ್ಯೆ ಚಕ್ರವರ್ತಿಗಳು ಅವರಿಗೆ ಆಹ್ವಾನ ಕೊಟ್ಟು ಭೇಟಿಗೆ ಬರಬೇಕೆಂದು ಕರೆದಿದ್ದರೆಂದು ಒಂದು ಪತ್ರಿಕೆಯಲ್ಲಿ ಪ್ರಕಟವಾಗಿದೆ. ಆದರೆ ಪಂಡಿತರು ಆಹ್ವಾನವನ್ನು ಅಂಗೀಕರಿಸಲಿಲ್ಲ.

ಪಂಡಿತ ಮದನಮೋಹನ ಮಾಳವೀಯರು.

ಹಿಂದೂ ಜನಾಂಗದ ಸಂಘಟನೆಗಾಗಿ ಅಖಿಲ ಭಾರತ ಕಾರ್ಯಕ್ರಮವನ್ನು ಹಾಕಿರುವರು

ಏಳು ಮಕ್ಕಳ ಜನನ.

ವಿಜಾಪುರ ತಾಲ್ಲೂಕು ಉಪಲಾಕ್ ಎಂಬ ಗ್ರಾಮದಲ್ಲಿ ಒಬ್ಬ ಹೆಂಗಸು ಏಕಕಾಲದಲ್ಲಿ ಏಳು ಮಕ್ಕಳನ್ನು ಹಡೆದಿರುವಳು. ಎರಡು ಗಂಡು, ಐದು ಹೆಣ್ಣು. ಇದು ಪ್ರಪಂಚದಲ್ಲೇ ರೆಕಾರ್ಡಾದ ವಿಷಯ. ಇದುವರೆಗೆ ನಾಲ್ಕು ಮಕ್ಕಳ ಜನನವು ಒಂದೇ ಸಾರಿ ಆಗಿತ್ತು. ಇದು ಅದನ್ನು ಮೀರಿಸಿದೆ.

ತಿದ್ದುಪಡಿ.

ಏಳನೇ ಪುಟದ ಮೂರನೇ ಕಾಲಂನಲ್ಲಿರುವ ಬಹಿರಂಗಪತ್ರದಲ್ಲಿ ಇಪತ್ತು ರೂಪಾಯಿ ಎಂದಿರುವುದನ್ನು ಇಪ್ಪತ್ತು ರೂಪಾಯಿ ಎಂದು ಓದಿಕೊಳ್ಳಬೇಕು.

ಅಬಿಸೀನಿಯಾ ಮತ್ತು ಮೈಸೂರು

ಅಬಿಸೀನಿಯಾದಲ್ಲಿ ಮೈಸೂರಿನ ನ್ಯಾಯ ಸಮ್ಮತವಾದ ಕಾಗದಪತ್ರಗಳನ್ನು ಉಪಯೋಗಿಸಲು ಇರುವ ಅಡ್ಡಿಗಳನ್ನು ತೆಗೆಯುವುದಕ್ಕಾಗಿ ಸರ್ಕಾರದವರು ಕೆಲವು ನಿಯಮಗಳನ್ನು ಮಾಡಿರುವರು. ಮೈಸೂರಿನಲ್ಲಿ ರಿಜಿಸ್ಟರಾಗಿ ಅಬಿಸೀನಿಯದಲ್ಲಿ ಉಪಯೋಗಿಸಲ್ಪಡುವ ರಿಕಾರ್ಡುಗಳನ್ನು ಅಡಿಸ್ ಅಬಾಬಾದಲ್ಲಿರುವ ಬ್ರಿಟಿಷ್ ಪ್ರತಿನಿಧಿಗಳು ಅನುಮೋದಿಸಬೇಕು. ಅದಕ್ಕೆ ಮೈಸೂರು ಸರ್ಕಾರದ ಚೀಫ್ ಸಕ್ರೆಟರಿಯವರ ಮುದ್ರೆಯ ರುಜುವೂ ಇರಬೇಕು.

ಕಂದಾಯದ ಬಾಕಿಗಾಗಿ ಹೆಂಗಸರು.

ಕೆನ್ಯಾದಲ್ಲಿ ತೆರಿಗೆಯನ್ನು ಕೊಡದೆ ಬಾಕಿಯಾಗಿರುವವರಿಂದ ಅದನ್ನು ವಸೂಲುಮಾಡಲು ಅವರ ಹೆಂಡಿರು ಹೆಂಗಸರನ್ನು ಎಳೆದುಕೊಂಡು ಹೋಗುತ್ತಿರುವರೆಂದು ಪಾರ್ಲಿಮೆಂಟಿನಲ್ಲಿ ಪ್ರಶ್ನೆ ಮಾಡಲ್ಪಟ್ಟಿತು. ಅದನ್ನು ವಿಚಾರಣೆ ಮಾಡಿ, ನಿಜವಾಗಿದ್ದ ಪಕ್ಷದಲ್ಲಿ ತಕ್ಕ ಬಂದೋಬಸ್ತು ಮಾಡುವುದಾಗಿ ಸಕ್ರೆಟರಿಗಳು ಹೇಳಿದರು.

ಸ್ತ್ರೀ ಶರೀರದಿಂದ ಬೆಂಕಿ.

ನೋಟಿಂಗ್‌ಹ್ಯಾಂ ಗ್ರಾಮದ ಒಬ್ಬ ಸ್ತ್ರೀಯು ಮನೆಗೆ ಎಣ್ಣೆ ಹಚ್ಚಿಕೊಳ್ಳುತ್ತಾ ಕುಳಿತಿದ್ದಾಗ ಇದ್ದಕ್ಕಿದ್ದ ಹಾಗೆ ಬೆಂಕಿಯು ಆಕೆಯ ಬಟ್ಟೆಗೆ ಹತ್ತಿಕೊಂಡಿತು. ಮೈಯಲ್ಲಾ ಹುಣ್ಣುಗಳಾದವು. ಆಸ್ಪತ್ರೆಯಲ್ಲಿ ಚಿಕಿತ್ಸೆ ನಡೆಯಿತು. ಭೂಮಿ ಶಕ್ತಿಯಿಂದ ಬೆಂಕಿಯು ಉತ್ಪತ್ತಿಯಾಯಿತೆಂದು ಆಕೆ ಹೇಳಿದಳು.

ಅರಮನೆಯಲ್ಲಿ ಸಂಗೀತ

ನಾಳಿದ್ದು ಸಾಯಂಕಾಲ ಅರಮನೆಯಲ್ಲಿ ರಾಜಸಭಾಭೂಷಣ ಟಿ. ಚೌಡಯ್ಯನವರ ಪುತ್ರಿ ಮಿಸ್ ಸಿರೋಮಣಿ ರತ್ನಮ್ಮನವರು ಶ್ರೀಮನ್ಮಹಾರಾಜರ ಸಮ್ಮುಖದಲ್ಲಿ ಪಿಟೀಲು ಕಛೇರಿ ನಡೆಸುವರು. ಇವರು ಪಾಶ್ಚಾತ್ಯ ದೇಶಗಳಲ್ಲಿ ಪ್ರಖ್ಯಾತಿ ಪಡೆದು ಬಂದಿರುವರು.

ಶಿವಮೊಗ್ಗಾ ಜಿಲ್ಲಾ ಕೈಪಿಡಿ.

(ಒಬ್ಬ ಬಾತ್ಮೀದಾರರಿಂದ)

ಶಿವಮೊಗ್ಗಾ ಡಿಸ್ಟ್ರಿಕ್ಟಿನ ಕೈಪಿಡಿ (Hand Book) ತಯಾರಾಗತಕ್ಕ ವಿಷಯದಲ್ಲಿ ತೀರ್ಥಹಳ್ಳಿ ಮ॥ ರಾ॥ ಕಾಳಿಂಗಯ್ಯನ ಪುಟ್ಟಪ್ಪರಾಯರು ತಮ್ಮ ಸಲಹೆಗಳೊಡನೆ ಡಿ॥ ಬೋರ್ಡಿಗೆ ಅರ್ಜಿ ಗುಜರಾಯಿಸಿಕೊಂಡಿದ್ದರು. ಡಿ॥ ಬೋರ್ಡಿನ ಉಪಸಮಿತಿಯವರು ಸೂಕ್ತವೆಂದು ಶಿಫಾರಸ್ಸು ಮಾಡಿದರು.

ಇದೇ ಡಿ॥ ಬೋರ್ಡಿಗೆ ಪುಟ್ಟಪ್ಪರಾಯರು ಒಪ್ಪಿಸಿದ ಜನಜೀವನ ಸೂಕ್ತಿಮಾಲೆಗೂ ಇತರ ಇವರ ಅರ್ಥಸಾಧಕ ಮತ್ತು ಗ್ರಾಮಾಭಿವೃದ್ಧಿ ಕೆಲಸಗಳಿಗೂ ಪ್ರಾಪ್ತಿ ದೊರಕಿರುವದಲ್ಲದೆ ಸುವರ್ಣ ಪದಕವನ್ನೂ ಕೊಟ್ಟಿರುತ್ತಾರೆ. ಆದ್ದರಿಂದ ಈ ಕೆಲಸಕ್ಕೆ ಸದರಿ ಪುಟ್ಟಪ್ಪರಾಯರನ್ನು ನೇಮಕ ಮಾಡುವುದಾದರೆ ಈ ಕೈಪಿಡಿಯು ಉತ್ತಮವಾಗಿ ಆಗುತ್ತೆಂಬದರಲ್ಲಿ ಸಂಶಯವಿಲ್ಲ.

ಯೂರೋಪಿನ ಸ್ಥಿತಿ.

ಯೂರೋಪ್ ಎಂತಹ ಸ್ಥಿತಿಯ ವಿಷಯದಲ್ಲಿ ಪಂಡಿತ ಜವಾಹಿರರವರು ತಿಳಿಸುವುದೇನೆಂದರೆ, ಅಲ್ಲಿನ ಪರಿಸ್ಥಿತಿಯು ಬಹಳ ತೊಡಕಾಗಿದೆ. ಅನೇಕ ರಾಜ್ಯಗಳನ್ನು ಆಕ್ರಮಿಸಿರುವವರಿಗೂ ಏನೂ ಇಲ್ಲದಿರುವವರಿಗೂ ಅಲ್ಲಿ ದೊಡ್ಡ ಕಿತ್ತಾಟವು ನಡೆಯುತ್ತಿದೆ.

ಅಪೂರ್ವ ಗಿಡ.

ದಕ್ಷಿಣ ಆಫ್ರಿಕದ ಕಲಹರಿ ಮರುಭೂಮಿಯಲ್ಲಿ ಮಾತ್ರ ಬೆಳೆಯುವ ವೆಲ್ವಿಚಿಯಾ ಎಂಬ ಗಿಡವು ಮತ್ತೆಲ್ಲಿಯೂ ಬೆಳೆಯುವುದಿಲ್ಲ. ಬಹಳದಿಂದಲೇ ಇದರ ಎಲೆಗಳು ಹೋದರಂತೆ. ಇತರ ಎಲ್ಲಾ ಗಿಡಗಳಿಗಿಂತಲೂ ಇದು ಬಹಳ ಪುರಾತನವೆಂದು ಎಣಿಸಲ್ಪಟ್ಟಿದೆ. ಈ ಗಿಡವನ್ನು ರಕ್ಷಿಸಲು ಒಂದು ಸರ್ಕಾರಗಳು ಒಟ್ಟುಗೂಡಿವೆ.

ಡಾ॥ ಎ. ಜೆ. ರಾಂ. ಅಂಡ್ ಸನ್ಸ್,

ಸಯ್ಯಾಜಿರಾವ್ ರೋಡ್, ಮೈಸೂರು ಸಿಟಿ.

ಔಷಧ ವ್ಯಾಪಾರಿಗಳು ಚಿಕಿತ್ಸಕರು, ದಂತವೈದ್ಯರು, ಮತ್ತು ಕನ್ನಡಕ ವ್ಯಾಪಾರಿಗಳು

ನಮ್ಮಲ್ಲಿ ಖಚಿತವಾದ ಇಂಗ್ಲೀಷ್ ಅಮೇರಿಕನ್, ಜರ್ಮನ್ ಡಾಕ್ಟರುಗಳೂ ದೊರೆಯುತ್ತವೆ. ಎಲ್ಲಾ ತರಹ ವ್ಯಾಧಿಗಳನ್ನೂ ಚಿಕಿತ್ಸೆ ಮಾಡುತ್ತೇವೆ. ಹುಳುಕು ಹಲ್ಲುಗಳನ್ನು ನೋವಿಲ್ಲದ ರೀತಿ ಕೀಳುವಿಕೆ, ಅವುಗಳ ರಂಧ್ರಗಳನ್ನು ಟಿನ್ನು, ಬೆಳ್ಳಿ, ಸಿಮೆಂಟ್ ಇವುಗಳಿಂದ ಮುಚ್ಚುವಿಕೆ, ಹಲ್ಲುಗಳನ್ನು ಕಟ್ಟುವಿಕೆ, ಮತ್ತು ಹಲ್ಲುಗಳನ್ನು ಕ್ಲೀನ್ (ಶುದ್ಧಿ) ಮಾಡುವಿಕೆ, ಇವುಗಳನ್ನು ನವೀನರೀತಿಯಲ್ಲಿ ಮಾಡುತ್ತೇವೆ. ನಿಮಗೆ ಕನ್ನಡಕಗಳು ಬೇಕಾಗಿದ್ದರೆ ತಿಳುವಳಿಕೆ ಇಲ್ಲದ ವ್ಯಾಪಾರಿಗಳಲ್ಲಿ ಎಲ್ಲಿಯೂ ಮತ್ತು ಅನುಭವವಿಲ್ಲದವರಲ್ಲಿಯೂ ತೆಗೆದುಕೊಂಡು ನಿಮಗೆ ಅಮೂಲ್ಯವಾದ ಮತ್ತು ಮುಖ್ಯ ಅಂಗವಾಗಿರುವ ಕಣ್ಣುಗಳನ್ನು ಕೆಡಿಸಿಕೊಳ್ಳದೆ, ಅನುಭವಸ್ಥರೂ ಮತ್ತು ಸುಧಾರಿಸಿದ ರೀತಿಯಲ್ಲಿ ತಯಾರು ಮಾಡಿಕೊಡುವವರೂ ಆದ ನಮ್ಮಲ್ಲಿಗೆ ಬಂದು ನಿಮ್ಮ ಕಣ್ಣುಗಳನ್ನು ಪರೀಕ್ಷೆ ಮಾಡಿಸಿ ಕನ್ನಡಕಗಳನ್ನು ಹೊಂದಬೇಕಾಗಿ ಪ್ರಾರ್ಥನೆ.

ನಮ್ಮಲ್ಲಿ ಕ್ರಿಕ್ಸ್, ಇಂಗ್ಲೀಷ್, ಜರ್ಮನ್ ಮತ್ತು ಜಪಾನ್ ಮುಂತಾದ ತರಹೇವಾರಿ ಲೇನ್ಸು (ಕನ್ನಡಕಗಳ ಗಾಜುಗಳು) ದೊರೆಯುತ್ತವೆ

ಸಾಧ್ವಿ
೧೬-೩-೩೬ ನೇ ಸೋಮವಾರ

ಬ್ರಿಟಿಷ್ ಇಂಡಿಯಾ ಮತ್ತು ದೇಶೀಯ ಸಂಸ್ಥಾನಗಳು.

ಪಂಡಿತ ಜವಾಹರಲಾಲರು ಕರಾಚಿಯಲ್ಲಿ ಬಂದಿಳಿದ ಮೇಲೆ ಅಲಹಾಬಾದಿಗೆ ಹೊರಡುವ ಮುಂಚೆ ಜೋಧಪುರ ಸಂಸ್ಥಾನದ ಪ್ರಜೆಗಳು ಅವರಿಗೆ ಒಂದು ಬಿನ್ನವತ್ತಳೆಯನ್ನರ್ಪಿಸಿದರು. ಪಂಡಿತರು ಮುಂದಿನ ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷರು. ಇದುವರೆಗೆ ಕಾಂಗ್ರೆಸ್ ಸಭೆಯು ದೇಶೀಯ ಸಂಸ್ಥಾನಗಳ ರಾಜಕೀಯ ಪ್ರಗತಿಯಲ್ಲಿ ಮುತುವರ್ಜಿ ವಹಿಸಿಲ್ಲ. ದೇಶೀಯ ಸಂಸ್ಥಾನಗಳು ಮಾತ್ರ ಬ್ರಿಟಿಷ್ ಇಂಡಿಯದ ಚಳವಳಿಗಳಲ್ಲಿ ಧಾರಾಳವಾಗಿ ಭಾಗವಹಿಸಿವೆ. ಇನ್ನುಮುಂದೆ ಸಂಸ್ಥಾನಗಳ ಪ್ರಶ್ನೆಯಲ್ಲಿ ಕಾಂಗ್ರೆಸ್ ಹೆಚ್ಚು ಆಸಕ್ತಿಯನ್ನು ವಹಿಸಬೇಕೆಂದು ಬಿನ್ನವತ್ತಳೆಯಲ್ಲಿ ಸೂಚಿಸಲಾಗಿತ್ತು. ಪಂಡಿತರವರು ಇದಕ್ಕೆ ಸಮಾಧಾನಕರವಾದ ಉತ್ತರವನ್ನು ಕೊಟ್ಟಿರುವರು. ಭರತಖಂಡವು ಒಂದೇ ರಾಷ್ಟ್ರ. ಅದನ್ನು ಬ್ರಿಟಿಷ್ ಮತ್ತು ದೇಶೀಯ ಭಾಗಗಳೆಂದು ಬೇರ್ಪಡಿಸುವ ಅಗತ್ಯವಿಲ್ಲ. ನಾವುಗಳು ಒಟ್ಟುಗೂಡಿ ಹಿಂದೂಸ್ಥಾನದ ಶ್ರೇಯಸ್ಸನ್ನು ಸಾಧಿಸುವ ಕಾರ್ಯಗಳನ್ನೇ ಮಾಡಬೇಕು, ಎಂದು ಹೇಳಿದರು.

ದೇಶೀಯ ಸಂಸ್ಥಾನಗಳಲ್ಲಿ ಅನೇಕ ಪ್ರಶ್ನೆಗಳು ಬಗೆಹರಿಯಲ್ಪಡಬೇಕಾಗಿವೆ. ಬ್ರಿಟಿಷ್ ಇಂಡಿಯಕ್ಕೂ ಸಂಸ್ಥಾನಗಳಿಗೂ ಸಮಾನವಾಗಿರುವ ಆರ್ಥಿಕ ಸಮಸ್ಯೆಗಳು ಅನೇಕವಾಗಿವೆ. ಇವುಗಳಲ್ಲಿ ಬ್ರಿಟಿಷ್ ಇಂಡಿಯದ ಸಹೋದರರು ಸಹಕರಿಸಬೇಕು. ಇನ್ನುಮುಂದೆ ಈ ವಿಷಯದಲ್ಲಿ ಹೆಚ್ಚು ಹೆಚ್ಚಾದ ಆಸಕ್ತಿಯು ತೋರಿಸಲ್ಪಡುವುದೆಂದು ಆಶಿಸೋಣ.

ಬ್ರಿಟಿಷ್ ಇಂಡಿಯಾದಲ್ಲಿ ಸ್ವರಾಜ್ಯಕ್ಕಾಗಿ ಕಾಂಗ್ರೆಸ್ಸು ಪ್ರಯತ್ನಿಸುತ್ತಿದೆ. ದೇಶೀಯ ಸಂಸ್ಥಾನಗಳ ಪ್ರಜೆಗಳು ಜವಾಬ್ದಾರಿ ಸರ್ಕಾರದ ಸ್ಥಾಪನೆಗಾಗಿ ಪ್ರಯತ್ನಿಸುತ್ತಿರುವರು. ಇದಕ್ಕಾಗಿ ಸಂಸ್ಥಾನದ ಪ್ರಜೆಗಳೂ ಸಮ್ಮೇಳನಗಳನ್ನು ನಡೆಸುತ್ತಿರುವರ. ಇವರ ಉದ್ದೇಶವನ್ನು ಅಖಿಲಭಾರತ ಕಾಂಗ್ರೆಸ್ ಸಭೆಯವರು ಅಂಗೀಕರಿಸಿರುವರು. ಆದರ ಒಬ್ಬೊಬ್ಬ ಕಾಂಗ್ರೆಸ್ ಮುಖಂಡರು ಈ ವಿಷಯದಲ್ಲಿ ಒಂದೊಂದು ರೀತಿ ಅಭಿಪ್ರಾಯಗಳನ್ನು ಕೊಟ್ಟು ಈ ಪ್ರಶ್ನೆಯು ಇನ್ನೂ ತಟಸ್ಥವಾಗಿಯೇ ಇದೆ. ಪಂಡಿತ ಜವಾಹರಲಾಲರು ಮುಂದಿನ ಕಾಂಗ್ರೆಸ್ಸಿನ ಅಧ್ಯಕ್ಷತೆಯನ್ನು ವಹಿಸುವರು. ಅವರು ಪ್ರಾದೇಶಿಕ ಸಮತಾವಾದಿಗಳು. ಅವರಿಗೆ ಭಾರತೀಯರಲ್ಲಿ ಯಾವ ಭೇದವೂ ಇಲ್ಲ. ಅವರ ಕಾಲದಲ್ಲಿ ದೇಶೀಯ ಸಂಸ್ಥಾನಗಳ ಸಮಸ್ಯೆಯು ತೃಪ್ತಿಕರವಾಗಿ ತೀರ್ಮಾನವಾಗಬಹುದೆಂದು ಹಾರೈಸುತ್ತೇನೆ.

ಹಿಟ್ಲರನ ಗುಡುಗು.

ಅನಂತವಾದ ಕಾಲ ಪ್ರವಾಹದಲ್ಲಿ ದಿನಗಳೂ ವರ್ಷಗಳೂ ಕಳೆಯುತ್ತಾ ಇವೆ. ಕ್ರಾಂತಿಗಳ ಬದಲು, ಪ್ರಬಲವಾದ ಅಸಂತೋಷವು ತಲೆದೋರುತ್ತಿದೆ. ಪ್ರಳಯಕಾಲದ ಕಾರ್ಮೋಡಗಳು ಆಕಾಶದಲ್ಲಿ ಒಮ್ಮೆಲೇ ಹರಡಿ, ಭಯಂಕರವಾಗಿ ಗರ್ಜನ ತರ್ಜನೆ ಮಾಡತೊಡಗಿವೆ. ಕಳೆದ 2ನೇ ತಾರೀಖಿನ ದಿನ ಜರ್ಮನಿಯ ಸರ್ವಾಧಿಕಾರಿ ಹರ್ ಹಿಟ್ಲರನು ರೀಚ್ ಸ್ಟ್ಯಾಗಿನಲ್ಲಿ ಮಾಡಿದ ಭಾಷಣದಿಂದ ಸಮಗ್ರ ಯೂರೋಪಿನ ರಾಷ್ಟ್ರಗಳೇ ತಲ್ಲಣಗೊಳ್ಳುತ್ತಿವೆ. ಮಹಾಯುದ್ಧಾನಂತರ (1914) ಜರ್ಮನಿಯು ಬಹಳ ಹೀನಾಯಸ್ಥಿತಿಯಲ್ಲಿತ್ತು. ಹರ್ ಹಿಟ್ಲರನು ಸರ್ವಾಧಿಕಾರಿಯಾದನಂತರ, ಇತರೇ ರಾಷ್ಟ್ರಗಳಂತೆಯೇ ತಾವೂ ಸಹ ತಲೆ ಎತ್ತಿ ತಿರುಗಬೇಕೆಂಬ ಭಾವನೆಯು ಜರ್ಮನರಲ್ಲಿ ಮೂಡಿತು. ಜರ್ಮನಿಯಲ್ಲಿ ಯುದ್ಧದ ಸಿದ್ಧತೆಗಳು ಬಹಳ ದಿನಗಳಿಂದ ಒಳ್ಳೇ ಜೋರಿನಿಂದ ನಡೆದಿರಬಹುದೆಂದು ಆಗಾಗ ತೋರಿಬರುತ್ತಿದ್ದಿತು. ಇಂದು ಹಿಟ್ಲರನು ಲೋಕಾರ್ನೊ ಒಪ್ಪಂದವನ್ನು ಮುರಿದಿದ್ದಾನೆ. ವರ್ಸೇಲ್ಸ್ ಒಪ್ಪಂದವನ್ನು ಕಿತ್ತೊಗೆದಿದ್ದಾನೆ. ರಕ್ಷಾದೇಶದ ಸಾಮ್ಯವಾದ ತತ್ವವನ್ನು ಅವಹೇಳನ ಮಾಡಿದ್ದಾನ. ಸೈನ್ಯರಹಿತ ರೈಯನ್ ಲ್ಯಾಂಡ್ ಪ್ರದೇಶಕ್ಕೆ ತನ್ನ ಸೈನ್ಯವನ್ನು ಕಳುಹಿಸಿ ಆಕ್ರಮಿಸಿ ಮಾಡಿದ್ದಾನೆ. ಯೂರೋಪಿನ ರಾಜತಂತ್ರಜ್ಞರೆಲ್ಲರೂ ಏನು ಮಾಡಬೇಕೆಂದು ತೋಚದೆ ಭ್ರಾಂತರಾಗಿದ್ದಾರೆ.

ಫ್ರೆಂಚ್ ಸರ್ಕಾರವು ಜರ್ಮನಿಯ ಮೇಲೆ "ಸ್ಯಾಂಕ್ಷನ್ಸ್' ಗಳನ್ನು ಜಾರಿಗೆ ತರಬೇಕೆಂಬ ಸಿದ್ಧತೆಯು ಕಾಣಬರುತ್ತಿರುವುದು. ಅಂತರರಾಷ್ಟ್ರೀಯ ಕರಾರುಗಳನ್ನು ಕಿತ್ತೊಗೆದಿರುವ ಜರ್ಮನಿಯಮೇಲೆ ಸ್ಟ್ರೆಸಾ ಒಪ್ಪಂದದ ಪ್ರಕಾರ, ಆರ್ಥಿಕ ನಿರ್ಬಂಧಗಳನ್ನು ಹಾಕಬೇಕೆಂದು, ರಾಷ್ಟ್ರ ಸಭೆಗೆ ತಿಳಿಸಲುದ್ಯುಕ್ತವಾಗಿದೆ. ಬ್ರಿಟನ್, ಇಟಲಿ, ಮತ್ತು ಬೆಲ್ಜಿಯಮ್ ರಾಷ್ಟ್ರಗಳ ಸಹಾಯವನ್ನು ಫ್ರಾನ್ಸ್ ದೇಶವು ಕೋರಿದೆ. ಇತ್ತೀಚಿಗೆ ತಿಳಿದು ಬಂದಿರುವ ಸುದ್ದಿಯ ಪ್ರಕಾರ, ಫ್ರಾನ್ಸು 'ಜರ್ಮನಿಯು ರಯಿನ್ ಲ್ಯಾಂಡ್ ಪ್ರದೇಶದಿಂದ ಸೈನ್ಯವನ್ನು ಹಿಂತೆಗೆದುಕೊಂಡು, ರಾಷ್ಟ್ರ ಸಭೆಯಲ್ಲಿಯೇ ಸಂಧಾನಮಾಡಿಕೊಳ್ಳಲು ಒಪ್ಪುವವರೆ'' ತಾನು ಸಂಧಾನಕ್ಕೆ ಸಿದ್ಧ ಎಂದು ತಿಳಿಸಿರುವುದು. ಅಂದರೆ ಫ್ರಾನ್ಸ್ ರಾಷ್ಟ್ರ ಸಂಘವನ್ನು ಮರೆಹೊಕ್ಕಿದೆ. ಹಿಟ್ಲರನೋ ರಯಿನ್ ಲ್ಯಾಂಡ್ ಪ್ರದೇಶದಿಂದ ಸೈನ್ಯವನ್ನು ಹಿಂತೆಗೆಯಲಾಗುವುದಿಲ್ಲವೆಂಬುದನ್ನು ಖಂಡಿತವಾಗಿ ತಿಳಿಸಿದ್ದಾನೆ. 'ಸ್ಯಾಂಕ್ಷನ್ಸ್'ಗಳಿಗೇನೂ ಹಿಟ್ಲರನು ಹೆದರುವಂತಿಲ್ಲ. ಬ್ರಿಟನ್ನಿನ ನೀತಿಯನ್ನು ಈ ಹದನ್ನು ತಿಳಿಸಿದ್ದಾರೆ. ಲೋಕಾರ್ನೊ ಒಪ್ಪಂದವನ್ನು ಜರ್ಮನಿಯು ಮುರಿದಿದ್ದರಿಂದಲೂ, ಒಪ್ಪಂದಕ್ಕೆ ಸಹಿಮಾಡಿರುವ ಬ್ರಿಟನ್ನು, ಫ್ರಾನ್ಸ್ ಅಥವಾ ಬೆಲ್ಜಿಯಮ್ ರಾಷ್ಟ್ರಗಳ ಮೇಲೆ ಪರ ರಾಷ್ಟ್ರಗಳಾವುವಾದರೂ ಧಾಳಿ ನಡೆಸಿದರೆ ತಾನು ಸಹಾಯಮಾಡಬೇಕಾಗುವುದೆಂಬುದನ್ನು ತಿಳಿಸಿದ್ದಾರೆ. ಅಂದರೆ ಹಿಟ್ಲರನ ಏರಾಟಿಕೆಯನ್ನ ತಡೆಯಲು ಸಿದ್ಧರಾಗಿದ್ದಾರೆ. ರಷ್ಯಾ ದೇಶವಂತೂ, ಫ್ರಾನ್ಸಿನೊಡನೆ ಒಪ್ಪಂದಮಾಡಿಕೊಂಡಿರುವುದರಿಂದ, ಫ್ರಾನ್ಸಿಗೆ ಸಹಾಯನೀಡುವುದೆಂಬುದು ನಿರ್ವಿವಾದ ಸಂಗತಿ. ತನ್ನ ಷರತ್ತುಗಳನ್ನೊಪ್ಪಿದ್ದಲ್ಲಿ ಶಾಂತಿ ಪ್ರಯತ್ನದಿಂದ ತಾನು ದೂರವಾಗಿರುವುದೆಂದು ಜರ್ಮನಿಯು ಹೇಳಿದೆ. ಫ್ರೆಂಚ್ ಸೆನೆಟಿನಲ್ಲಿ ಫ್ರಾಂಕೋ ಸೋವಿಯಟ್ ಒಪ್ಪಂದವು ೨೩೧-೫೨ ಓಟುಗಳಿಂದ ಪಾಸಾಗಿದೆ. ಸೈನ್ಯಗಳನ್ನು ತೋರಿಕೆಗೆ ಅಗಿ ಮಾತ್ರ ಬಿಡಬೇಕೆಂದೂ, ಕೋಟೆ ಕೊತ್ತಲುಗಳನ್ನು ನಿರ್ಮಿಸಕೂಡದೆಂದೂ ಬ್ರಿಟನ್ನಿನ ಸೂಚನೆಗೆ, ಜರ್ಮನಿಯು, ಸೈನ್ಯವನ್ನು ಇಟ್ಟಿರುವುದು ಕೇವಲ ಗುರುತಿಗಾಗೆಂದೂ, ಸೈನ್ಯವನ್ನು ಹೆಚ್ಚಿಸುವುದಿಲ್ಲವೆಂದೂ, ಫ್ರೆಂಚ್, ಬೆಲ್ಜಿಯಂ ಸರಹದ್ದಿನ ಹತ್ತಿರ ಸೈನ್ಯವಿಡುವುದಿಲ್ಲವೆಂದು ತಿಳಿಸಿದೆ.

ಒಟ್ಟಿನಲ್ಲಿ ಹೇಳುವುದಾದರೆ, ಯುರೋಪು ಖಂಡವು ಒಂದು ಮದ್ದಿನಗಣಿಯಮೇಲೆ ವಾಸಿಸುತ್ತಿದೆ. ಯಾವಾಗ ಒಡೆಯುವುದೋ ತಿಳಿಯದು!

ಶ್ರೀಮದ್ಯುವರಾಜರ ದಾನ

ಮೈಸೂರು ಒಂಟಿಕೊಪ್ಪಲಿನಲ್ಲಿ ಶ್ರೀ ರಾಮಕೃಷ್ಣ ಪರಮಹಂಸರ ಶತಮಾನೋತ್ಸವದ ಜ್ಞಾಪಕಾರ್ಥವಾಗಿ ಕಟ್ಟಲ್ಪಡುತ್ತಿರುವ ಕಟ್ಟಡದ ಸಹಾಯಾರ್ಥವಾಗಿ ಶ್ರೀಮದ್ಯುವರಾಜರು 1500 ರೂ ಕೊಟ್ಟಿರುವರು.

ಪಟೇಲ ಶ್ಯಾನುಭೋಗರ ರಜಾ.

ಪಟೇಲರಾಗಲೀ ಶ್ಯಾನುಭೋಗರಾಗಲಿ ಅಮಲ್ದಾರರಿಂದ ರಜಾ ಪಡೆಯದೆ ಮೂರು ದಿನಗಳಿಗಿಂತ ಹೆಚ್ಚಾಗಿ ತಮ್ಮ ಸ್ಥಳದಿಂದ ಗೈರುಹಾಜರಾಗಕೂಡದು. ಮೂರು ದಿನಗಳಿಗಿಂತ ಕಡಿಮೆಯಾಗಿ ರಜಾ ಬೇಕಾದರೆ, ಹೋಬಳಿ ಶೇಕದಾರರಿಗೆ ತಿಳಿಸಬೇಕು—ಎಂದು ಸರ್ಕಾರದವರು ವಿಧಾಯಕ ಮಾಡಿರುವರು.

ಪ್ರಜಾಪ್ರತಿನಿಧಿ ಸಭೆಗೆ ಠರಾವುಗಳು.

ಬೆಂಗಳೂರು ಶ್ರೀ|| ಕೆ ಟಿ ಭಾಷ್ಯಂರವರು ಈ ಕೆಳಗೆ ಕಂಡ ವಿಷಯಗಳನ್ನು ಪ್ರಜಾಪ್ರತಿನಿಧಿ ಸಭೆಯಲ್ಲಿ ಚರ್ಚಿಸಲು ಕಳುಹಿಸಿದ್ದಾರೆ.

1 ಮೈಸೂರು ಸಂಸ್ಥಾನದಲ್ಲಿ ಸಾಮಾಜಿಕ ವಿಮಾಪದ್ಧತಿಯನ್ನು ಏರ್ಪಡಿಸಿ, ಜನರಿಗೆ ವೃದ್ಧಾಪ್ಯ, ಅನಾರೋಗ್ಯ, ನಿರುದ್ಯೋಗ, ನಿಶ್ಶಕ್ತಿ ಮುಂತಾವುಗಳಿಗೆ ಪರಿಹಾರವು ದೊರೆಯುವಂತೆ ಮಾಡಬೇಕು. 2 ಗ್ರಾಮಪುನರುಜ್ಜೀವನದ ಹತ್ತು ವರ್ಷದ ಕಾರ್ಯಕ್ರಮವೊಂದನ್ನು ಮಾಡಬೇಕು. ಪ್ರತಿಯೊಂದು ಹಳ್ಳಿಗೂ ಕಡೇಪಕ್ಷ ಒಂದು ಸ್ಕೂಲು, ವಾಚನಾಲಯ, ಆಟದ ಮೈದಾನ ಆಸ್ಪತ್ರೆ, ಬಾವಿ, ಸಹಕಾರ ಸಂಘ, ಒಂದು ಪಾರ್ಕು, ನೈರ್ಮಲ್ಯ, ಒಳ್ಳೇ ರಸ್ತೆ, ಇವುಗಳು ಇರಬೇಕು. 3. ಸಾಲಗಳನ್ನು ತೀರಿಸುವ ಸಲುವಾಗಿ ಒಂದು ಕಾನೂನನ್ನು ಮಾಡಬೇಕು. ಮುಖ್ಯವಾಗಿ ವ್ಯವಸಾಯಗಾರರ ಹೊರೆಯನ್ನು ಇಳಿಸಬೇಕು. 4 ಎಲ್ಲಾ ಇನಾಂ ಗ್ರಾಮಗಳನ್ನೂ ಒಡನೆ ಸರ್ವೆ ಮಾಡಿಸಿ ಸೆಟ್ಲ್ಮೆಂಟು ಏರ್ಪಡಿಸಬೇಕು. 5 ಗ್ರಾಮ ಕೈಗಾರಿಕೆಗಳನ್ನು ಅಭಿವೃದ್ಧಿಪಡಿಸಲು ಸರಿಯಾದ ಏರ್ಪಾಡು ಮಾಡಬೇಕು. 6 ನಮ್ಮ ಸಂಸ್ಥಾನಕ್ಕೆ ಒಂದು ರೇವು ಪಟ್ಟಣವು ಅತ್ಯವಶ್ಯಕ, ಭಟ್ಕಳದಲ್ಲಿ ಇದನ್ನು ಕೂಡಲೇ ಸ್ಥಾಪಿಸುವ ಏರ್ಪಾಡನ್ನು ಕೈಕೊಳ್ಳಬೇಕು.

ಇವುಗಳಷ್ಟೂ ಜಾರಿಗೆ ಬಂದರೆ ನಮ್ಮ ರಾಜ್ಯವು ನಿಜವಾಗಿಯೂ ಮಾದರಿಯಾಗುವುದು.

ಕೋಚ್ ಮ್ಯಾನನಮೇಲೆ ಮೊಕದ್ದಮ

ಶ್ರೀಮನ್ಮಹಾರಾಜರವರ ಬಾಡಿಗಾರ್ಡಿನ ಮುಖಂಡರಾದ ಲೆ| ಕರ್ನಲ್ ಗೋಪಾಲರಾಯರನ್ನು, ಹೆಡ್ ಕೋಚ್ ಮ್ಯಾನ್ ಮುನಿವೆಂಕಟಪ್ಪನೆಂಬುವನು ಕೊಲೆಮಾಡಲು ಯತ್ನಿಸಿದನೆಂಬ ಆಪಾದನೆಯಮೇಲೆ ಪೋಲೀಸಿನವರು ಸಿಟಿ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಮೊಕದ್ದಮೆ ಹೂಡಿರುವರು. ಇದರ ವಿವರಗಳು ಹಿಂದೆಯೇ ಕೊಡಲ್ಪಟ್ಟಿವೆ. ಮಿ|| ಗೋಪಾಲರಾಯರು ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದಿ ಗುಣಮುಖರಾಗಿ ಮನೆಗೆ ವಾಪಸು ತೆರಳಿರುವರು. ಮುನಿವೆಂಕಟಪ್ಪನು ಗಾಯಗಳನ್ನು ಹೊಂದಿ ಚಿಕಿತ್ಸೆ ಪಡೆಯುತ್ತಿರುವನು.

ಮೈಸೂರಾಯರಿಗೆ ಡಿಗ್ರಿ.

ಅಲಿಘರ್ ವಿಶ್ವವಿದ್ಯಾಲಯದವರು ಮೈಸೂರಾಯರಿಗೆ ಈ ತಿಂಗಳು 22ನೇ ತಾ|| ಗೌರವ ಎಲ್ ಎಲ್. ಡಿ ಪ್ರಶಸ್ತಿಯನ್ನು ಕೊಡುವರು. ಇದಕ್ಕಾಗಿ ಒಂದು ಸಮಾರಂಭವು ನಡೆಯುವುದು. ನೈಜಾಮರು ಅಧ್ಯಕ್ಷತೆ ವಹಿಸುವರು.

ಸಹಾಯ.

ಶಿವಮೊಗ್ಗೆಯ ಆರ್ಟಿಸ್ಟ್ಸ್ ಕ್ಲಬ್ಬಿನವರು ಶ್ರೀ|| ಎಸ್. ನಾರಾಯಣರಾಯರ ಅಧ್ಯಕ್ಷತೆಯಲ್ಲಿ ನಾಗರಿಕ ಮುಂತಾದ ನಾಟಕಗಳ ದೃಶ್ಯಗಳನ್ನು ಪ್ರದರ್ಶಿಸಿ ಬಂದ ಆದಾಯವನ್ನು ಶ್ರೀ ರಾಮಕೃಷ್ಣ ಶತಮಾನೋತ್ಸವಕ್ಕಾಗಿ ಕೊಟ್ಟರು.

ಬಹಿರಂಗ ಪತ್ರ

ಮೈಸೂರು ಪೌರ ಸಭಾಧ್ಯಕ್ಷರವರ ಸ॥ ಕ್ಕೆ.

ಟೌನ್‌ಹಾಲ್ ಆಡಳಿತದ ಅವ್ಯವಸ್ಥೆ.

ಪ್ರಧಾನ ನಗರಪಿತೃಗಳವರೆ!

ನನ್ನ ಬಹಿರಂಗ ಪತ್ರಗಳ ವಿಚಾರವಾಗಿ ಮೊದಲೇ ಹೇಳಿಕೆ ಬರೆದಿದ್ದೇನೆ. ನಾನೊಬ್ಬ ಅನಾಮಧೇಯನೆಂದು ಅರಿಕೆ ಮಾಡಿಕೊಂಡಿದ್ದೇನೆ. ಆದರೆ ನಾನು ಬರೆಯುವುದು ಮಾತ್ರ ಅನಾಮಧೇಯದ ವಿಷಯವಲ್ಲ. ಅನಾಮಧೇಯ ಸಂಸ್ಥೆಗಳ ವಿಷಯವೂ ಅಲ್ಲ. ಸಾರ್ವಜನಿಕ ಸಮಸ್ಯೆಗಳ ಮೇಲೆಯೇ ನಾನು ಬರೆಯುವುದು. ಇದರಲ್ಲಿ ದೂಷಣೆಗೇ ಪ್ರಾಧಾನ್ಯವಿಲ್ಲ. ಭೂಷಣೆಗೆ ಅಗತ್ಯವಿಲ್ಲ.

ಪ್ರಕೃತದಲ್ಲಿ ನನ್ನ ಬಹಿರಂಗ ಪತ್ರದ ಅಗ್ರಪೂಜೆಯು ತಮಗೆ ಸಲ್ಲತಕ್ಕದ್ದಾಗಿದೆ. ಏಕೆಂದರೆ ತಾವು ನಗರ ಪಿತೃಗಳು (City Father) ಈ ಊರಿನ ನಿವಾಸಿಗಳೆಲ್ಲರೂ (Citizens—City Sons) ನಿಮ್ಮ ಆಶ್ರಯಕ್ಕೆ ಪಾತ್ರರು. ಮಕ್ಕಳು ಹಿರಿಯರಿಗೆ ಹೇಳಿಕೊಳ್ಳುವ ವಿಷಯಗಳು ಎಷ್ಟೋ ಇರುತ್ತವೆ. ತಾವೂ ಸಹ ಅದೇ ದೃಷ್ಟಿಯಿಂದ ಅವುಗಳನ್ನು ವಿಶ್ವಾಸದಿಂದ ಕೇಳಿ ವಿಶ್ವಾಸದಿಂದ ನೆರವೇರಿಸಬೇಕೆಂದು ಕೋರುತ್ತೇನೆ.

ತಾವು ನಮ್ಮ ಪೌರ ಸಭೆಗೆ ಅಧ್ಯಕ್ಷರಾಗಿ ಬಂದಂದಿನಿಂದ ಸ್ವಲ್ಪ ಶಿಸ್ತು (efficiency) ಹೆಚ್ಚಾಗಿ ಉಂಟಾಗುತ್ತಿದೆಯೆಂದು ಕೇಳುತ್ತೇನೆ. ತಮ್ಮನ್ನು ನೋಡಿದರೇನೇ ಶಿಸ್ತಿನ ಮೂರ್ತಿಭವಿಸಿದಂತೆ ಕಾಣುತ್ತದೆ. ಒಂದು ವಿಧವಾದ "ಬಿಗಿ"ಯು ನಿಮ್ಮಲ್ಲಿ ಒಡೆದು ಮೂಡಿರುತ್ತದೆ. ನೀವು ಯಾರಿಗೂ ಸಡಿಲ ಕೊಟ್ಟಿಲ್ಲ. ಒಂದು ಕಡೆ ಕೈಕೆಳಗಿನ ನೌಕರರನ್ನು ಅದುಪಿನಲ್ಲಿಟ್ಟಿರುತ್ತೀರಿ. ಮತ್ತೊಂದು ಕಡೆ ನಿಮ್ಮ ಸಹೋದ್ಯೋಗಿಗಳಾದ ಇತರ ನಗರಪಿತೃಗಳನ್ನೂ ಹದ್ದುಬಸ್ತಿನಲ್ಲಿಟ್ಟಿರುತ್ತೀರಿ.

ತಮ್ಮ ಕಾಲದಲ್ಲಿ ತೆರಿಗೆಗಳ ಮೇಲೆ ತೆರಿಗೆಗಳನ್ನು ವಿಧಿಸುವ ಪ್ರಸಂಗ ಬಿದ್ದಿರುವುದು ಅದೊಂದು ಶೋಚನೀಯ ಸಂಗತಿ. ಈಗ ಸಧ್ಯಕ್ಕೆ ಈ ದೊಡ್ಡ ವಿಚಾರ ಬೇಡ. ಮುಂದೆ ಅದನ್ನು ತೆಗೆದುಕೊಳ್ಳೋಣ.

ತಮ್ಮ ಕಾಲದಲ್ಲಿ ನಮ್ಮ ನಗರಭವನದ (ಟೌನ್ ಹಾಲ್) ಆಡಳಿತವು ಹೀನಾಯವಾಗಬಹುದೇ ಎಂಬುದು ನನ್ನ ಚಿಂತೆ. ಈ ಭವನವು ನಗರಭವನವೆಂದು ಕರೆಯಲ್ಪಟ್ಟಿದೆ. ಪುರನಿವಾಸಿಗಳ ಹಣವೂ ಅದಕ್ಕೆ ಬಿದ್ದಿದೆ. ದೊಡ್ಡ ದಿವಾನರೊಬ್ಬರ ಹೆಸರನ್ನಿಟ್ಟಿದೆ. ಆದರೂ ಅದರ ಮೇಲ್ವಿಚಾರಣೆಯು ತ್ರಿಶಂಕು ಸ್ವರ್ಗವಾಗಿದೆ. ಇತ್ತ ಮಹಾಜನರ ವಶದಲ್ಲಿಲ್ಲ. ಅತ್ತ ಪೌರಸಭೆಯ ಸಂಪೂರ್ಣ ಸ್ವಾಧೀನದಲ್ಲಿಲ್ಲ. ಮತ್ತೆ ಸರ್ಕಾರದವರೂ ಅದನ್ನು ವಹಿಸಿಕೊಂಡಿಲ್ಲ. ಭವನದ ಹೆಸರು ನಗರಭವನ. ಆದರೆ ನಗರನಿವಾಸಿಗಳ ಉಪಯೋಗಕ್ಕೆ ಮಾತ್ರ ಅದು ಸರಿಯಾಗಿ ದೊರೆಯುತ್ತಿಲ್ಲ.

ಮೊನ್ನೆ ಕಮಲಾ ನೆಹರೂರವರ ದಿನಾಚರಣೆಯ ಸಂದರ್ಭದಲ್ಲಿ ಆದ ಭಂಗವನ್ನು ನಾನು ಏನು ಹೇಳಲಿ? ಬಹಿರಂಗ ಸಭೆಗೆ ಟೌನ್ ಹಾಲ್ ಬೇಕೆಂದು ವ್ಯವಸ್ಥಾಪಕರು ಹಿಂದಿನ ದಿನವೇ ತಮಗೆ ಅರ್ಜಿ ಕೊಟ್ಟರು. ಸಭೆಯ ಸಮಯಕ್ಕೆ ಮಹಾಜನರು ಭವನದ ಬಳಿ ಸೇರಿದರು. ಅಲ್ಲಿ ಕೇಳುವವರೇ ದಿಕ್ಕಿಲ್ಲ. ಬಾಗಿಲು ಹಾಕಿದೆ. ಸ್ವಲ್ಪ ಹೊತ್ತಿನ ಮೇಲೆ ಅಲ್ಲಿದ್ದ ಜವಾನನನ್ನು ಕೇಳಿದರೆ ನಮಗೆ ಆರ್ಡರ್ ಆಗಿಲ್ಲವೆಂದು ಹೇಳುತ್ತಿದ್ದನು

ಬಂದವರೆಲ್ಲರೂ ವಿಮುಖರಾಗಿ ಪಕ್ಕದಲ್ಲಿರುವ ಮೈದಾನದಲ್ಲಿ ಕುಳಿತರು. ಆ ದಿನದ ಅಧ್ಯಕ್ಷರೊಬ್ಬರು ಪ್ರಧಾನ ನಗರ ಪಿತೃಗಳು. ಭಾಷಣಕಾರರೊಬ್ಬರೂ ಹಾಗೆಯೇ. ಮತ್ತೊಬ್ಬ ಭಾಷಣಕಾರರು ಮಾಜಿ ನಗರ ಪಿತೃಗಳು. ಇವರುಗಳಿಗೂ ಹುಲ್ಲುಗರಿಕೆಯೂ ಇಲ್ಲದ ಆ ಮಣ್ಣಿನ ಮೈದಾನದಲ್ಲಿ ಕೂಡುವ ಪ್ರಸಂಗವು ಮತ್ತೆ ಯಾವಾಗ ಬರಬೇಕು? ಆವಾಗ ಇದಾವ ಕರ್ಮ ಸಭೆಯೋ ಎಂದು ನನಗೆ ಅನಿಸಿತು. ಪುರ ಭವನದ ಆಡಳಿತವನ್ನು ವ್ಯವಸ್ಥೆ ಪಡಿಸದಿರುವ ಲೋಪ ದೋಷಕ್ಕೆ ಇದು ಪ್ರಾಯಶ್ಚಿತ್ತವಿರಬಹುದೋ ಎಂದು ತೋರಿತು.

ಅಷ್ಟುಹೊತ್ತಿಗೆ ತಮ್ಮ ಆಫೀಸಿನಿಂದ ಅನುಮತಿ ಬಂತು. ಭವನದ ಬಾಗಿಲು ತೆರೆಯಿತು. ಆದರೆ ದೀಪ ಬರಲೊಲ್ಲದು. ಆಗ ಅಲ್ಲಿದ್ದ ಹಂಗಾಮಿ ಜವಾನನಿಗೆ ದೀಪ ಹಚ್ಚಲು ಬಾರದು. ಬೆಂಚು ಕುರ್ಚಿಗಳೆಲ್ಲವೂ ಯದ್ವಾ ತದ್ವಾ ಬಿದ್ದಿದ್ದವು. ಸಭಾಸದರೆಲ್ಲರೂ ಸ್ವಯಂಸೇವಕರಾದರು. ಸಭೆಯು ಪ್ರಾರಂಭವಾದಮೇಲೆ ದೀಪ ಬಂತು.

ಈ ದೀಪದ ವಿಚಾರದಲ್ಲಿ ಮತ್ತೊಂದು ಮಾತು. ಇದು ಬಹು ಮುಖ್ಯವಾದದ್ದು ಅನೇಕರಿಗೆ ಬಹಳ ವಿನೋದಕರವಾದದ್ದು. ಈಚೆಗೆ ತಾವು ಬಂದನಂತರ ಟೌನ್‌ಹಾಲಿನ ಸಭೆಗಳಿಗೆ ದೀಪದ ಖರ್ಚಿಗಾಗಿ ಇಪ್ಪತ್ತು ರೂಪಾಯಿ ಕೇಳುತ್ತಿದ್ದೀರಿ. ಹಿಂದೆ ಎಂದೂ ಇದು ಇರಲಿಲ್ಲ. ದೊಡ್ಡ ಕಟ್ಟಡವನ್ನೇ ಸುಮ್ಮನೆ ಕೊಡುತ್ತೀರಿ. ಬೆಂಚು ಕುರ್ಚಿಗಳನ್ನೆಲ್ಲಾ ಬಿಟ್ಟುಕೊಡುತ್ತೀರಿ. ಇನ್ನು ಈ ದೀಪದಲ್ಲೇನು ಸ್ವಾಮಿ ಕೊಳ್ಳೆ ಹೋಗೋದು? ಒಂದು ಗಂಟೆಹೊತ್ತು ನಡೆಯುವ ಮಹಾಜನರ ಸಭೆಗೆ ಇಪ್ಪತ್ತು ರೂಪಾಯಿಯೇಕೆ? ಹೇಗಿದ್ದರೂ ನೀವು ಎಲೆಕ್ಟ್ರಿಕ್ ಇಲಾಖೆಗೆ ತಿಂಗಳುಗಟ್ಲೆ ಮಿನಿಮಂ ಕಟ್ಟಬೇಕು. ಈಚೆಗೆ ಮಿನಿಮಂ ಪವರ್ ಕೂಡ ಖರ್ಚಾಗುತ್ತಿಲ್ಲ. ಟೌನ್‌ಹಾಲನ್ನು ಯಾರೂ ಅಪೇಕ್ಷಿಸುವವರೇ ಇಲ್ಲ. ಬರೀ ಹಕ್ಕಿ ಪಕ್ಷಿಗಳು ಸೇರಿಕೊಂಡು ಚಿಲಿಪಿಲಿಗುಟ್ಟುತ್ತವೆ. ತಿಂಗಳಿಗೊಂದುಸಾರಿಯೋ ಏನೋ ನಡೆಯುವ ಈ ಸಭೆಗಳಿಗೇಕೆ ಈ ಅಡ್ಡಿ? ಇದನ್ನು ದಯವಿಟ್ಟು ರದ್ದು ಮಾಡಿಸಿರಿ.

ಪೌರಸಂಘದವರು ಕಾಂಗ್ರೆಸ್ ಜ್ಯೂಬಿಲಿ ಉತ್ಸವವನ್ನು ನಡೆಸಿದಾಗ ದೀಪದ ಖರ್ಚಿಗೆ ತಾವು ಹತ್ತು ರೂ. ಕೇಳಿದಿರಂತೆ. ಈ ದೀಪದ ಚಾರ್ಜಿನ ಅಧ್ಯಾಯದಲ್ಲಿ ಇದು ಅತ್ಯಂತ ವಿನೋದಕರವಾದ ಭಾಗ.

ನಿಮ್ಮ ಉಪಾಧ್ಯಕ್ಷರು ಈ ವಿಷಯದಲ್ಲಿ ನಿಮಗಿಂತಲೂ ಬಿರುಸು. ಒಂದುಸಾರಿ ಅವರು ಟೌನ್‌ಹಾಲಿನಲ್ಲಿ ನಡೆಯಬೇಕಾಗಿದ್ದ ಒಂದು ಚಿಕ್ಕ ಹರಿಕಥೆಗೆ ದೀಪದ ಬಾಡಿಗೆ ಐವತ್ತು ರೂ ಕೊಡಬೇಕೆಂದು ಕೇಳಿದ್ದರೆಂದು ತಿಳಿಯಬರುತ್ತದೆ. ಬಾಕಿ ಮಡಗಿದ್ದೀನಿ. ಇವೆಲ್ಲಾ ಸಮರ್ಪಕವಾಗಿಲ್ಲ. ಸಾವಿರಾರು ಜನರು ಬಂದು ಒಂದುಗಳಿಗೆ ವಿಶ್ವಾಸದಿಂದ ಭಾಗ ವಹಿಸುವ ಪ್ರಸಂಗಗಳಿಗೆ ಇಂತಹ ನಿರ್ಬಂಧಗಳನ್ನು ಹಾಕಬೇಡಿ. ನಿಮ್ಮ ಕಾಲದಲ್ಲಿ ಆದದ್ದು ನಿಮ್ಮ ಕಾಲದಲ್ಲೇ ಹೋಗಲಿ.

ಸಧ್ಯಕ್ಕೆ ಇಷ್ಟು ಸಾಕು. ಮುಂದೆ ಮಿಕ್ಕ ವಿಷಯಗಳನ್ನು ಬರೆಯುತ್ತೇನೆ.

ಅನಾಮಧೇಯ.

ಯಳಂದೂರು ಜಹಗೀರಿ ವರ್ತಮಾನ.

(ನಮ್ಮ ಬಾತ್ಮೀದಾರರಿಂದ)

ಈ ತಾಲ್ಲೂಕಿನಲ್ಲಿ ಬೆಳಗಿನವೇಳೆ ಸ್ವಲ್ಪ ಚಳಿ ಇದ್ದರೂ ಮಧ್ಯಾಹ್ನ ಬಿಸಿಲಿನ ತಾಪ ವಿಪರೀತವಾಗಿದೆ. ಮಳೆಯ ಸೂಚನೆಯೇ ಇಲ್ಲ. ಕಸಬಾದಲ್ಲಿ ಸಿಡುಬಿನ ಹಾವಳಿ ಇರುತ್ತೆ. ದೇವೀ ಹಾಕುತ್ತಿರುವರು. ಗ್ರಾಮಾಂತರಗಳಲ್ಲಿಯೂ ಕೆಲವು ಕಡೆ ಸಿಡುಬು ಮತ್ತು ಪ್ಲೇಗ್ ಸಹ ಸುಮಾರಾಗಿದೆ. ಟೌನ್ ಮ್ಯುನಿಸಿಪಾಲಿಟಿಯವರು ಟೌನ್ ಸರ್ವೆ ಮಾಡಿಸುತ್ತಿದ್ದಾರೆ. ಇದಕ್ಕಾಗಿ ಮ್ಯುನಿಸಿಪಾಲಿಟಿಯಿಂದ ವೇತನವನ್ನು ಕೊಡುವಂತೆ ತೀರ್ಮಾನವಾಗಿದೆ. ಎರಡು ಮೂರು ತಿಂಗಳಿಂದ ಸರ್ವೇಯವರು ಅಳತೆ ವಗೈರೆ ಕೆಲಸ ಮಾಡುತ್ತಿದ್ದಾರೆ. ಈ ತಾಲ್ಲೂಕಿನ ದೇವಸ್ಥಾನಗಳು ಮುಂಚೆ ಜಹಗೀರ್‌ದಾರರ ಆಡಳಿತದಲ್ಲಿದ್ದು ಈಗ ಗೌರ್ನಮೆಂಟಿಗೆ ಸೇರಿವೆ. ಇಂತಹ ದೇವಸ್ಥಾನಗಳು ಎಷ್ಟಿವೆ? ಅವುಗಳಿಗೆ ಭಕ್ತಾದಿಗಳಿಂದ ಕೊಡಲ್ಪಟ್ಟಿರುವ ಒಡವೆಗಳೇನು? ಅವುಗಳ ಮೇಲ್ವಿಚಾರಣೆ ಕ್ರಮವಾಗಿದೆಯೇ? ಒಡವೆಗಳ ಉತ್ಪತ್ತಿ ಕ್ರಮವಾಗಿ ಬರುತ್ತಿದೆಯೇ ಎಂಬ ಅಂಶಗಳನ್ನು ಸರ್ಕಾರದವರು ಪರಿಶೀಲಿಸಿ ಭಕ್ತಾದಿಗಳ ಧರ್ಮವು ಸಾರೋದ್ಧಾರವಾಗಿ ನಡೆಯುವಂತೆ ಏರ್ಪಾಡುಮಾಡಬೇಕಾಗಿ ಕೋರಲ್ಪಟ್ಟಿದೆ. ಇಲ್ಲಿನ ಶ್ರೀ ಲಕ್ಷ್ಮೀ ವರಾಹಸ್ವಾಮಿಯವರ ರಥೋತ್ಸವವು ಈ ಕಾಲದಲ್ಲಿ ನಡೆಯುತ್ತಿದ್ದದ್ದು ಈ ಸಾರಿ ನಿಂತುಹೋಗಿದೆ. ಇದು ಸರಿಯಾಗಿ ನಡೆಯುವಂತೆ ಸರ್ಕಾರದವರು ಏರ್ಪಡಿಸಬೇಕಾಗಿ ಕೋರಲ್ಪಟ್ಟಿದೆ.

ರಾಜೇಂದ್ರ ಸಿನಿಮಾ, ನಂಜನಗೂಡು.

ಮೈಸೂರಿನ ರಾಜೇಂದ್ರ ಪಿಕ್ಚರ್ ಕಾರ್ಪೋರೇಷನ್ನಿನ ಮಾಲಿಕರಾದ ಸೋನರಾಜ್ ರತನಚಂದ್ ಕಂಪೆನಿಯವರು ನಂಜನಗೂಡಿನ ಲಕ್ಷ್ಮೀ ಥಿಯೇಟರಿನಲ್ಲಿ ರಾಜೇಂದ್ರ ಸಿನಿಮಾವನ್ನು ನಡೆಸುವರು.

Vox Populi.

The Second Madman of Europe!

While the world is still voicing a chorus of condemnation of the antics of the First Madman of Europe, the second madman has flung down the gauntlet, and is creating the atmosphere for another world-war. And Europe's big statesmen are all in a flutter! Whether they will have the moral power to shut up the madmen in their cells, or whether they will let months pass filling the press with their make-believe efforts to restore peace is to be seen. These are the great spokesmen of so-called civilised nations who impudently decry the communal misunderstandings amongst India's peoples. It is easy to utter pious platitudes about the uncompromising attitude in the Shahidgunj dispute, and take it as signifying Indians' incapacity for self-government, when they themselves have to set an example of peaceful settlement of disputes, as in the case of the occupation of the Ruhr they can behave as uncompromisingly as any body else in the world, and yet pose as the world's saviours and exemplars! And yet there are thousands in this country who have got the inferiority complex to believe that the European people are always destined to be Rulers, and we always to remain the ruled!

G. R. J.

ಜಾಲಿ ಕ್ಲಬ್

ಮೈಸೂರು ಜಾಲಿ ಕ್ಲಬ್ ಮತ್ತು ಸೊಸೈಟಿಯವರು ಬುಧವಾರ ಶ್ರೀ॥ ನಾಮಕಲ್ ರಾಯರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಶ್ರೀಮತಿ ಕಮಲಾ ನೆಹರೂರವರು ಸ್ವರ್ಗಸ್ಥರಾದ ವಿಷಯದಲ್ಲಿ ಸಂತಾಪ ಸೂಚನೆಯ ಠರಾವನ್ನು ಮಂಜೂರುಮಾಡಿ ಅದನ್ನು ಪಂಡಿತ ಜವಾಹಿರಲಾಲರಿಗೆ ಕಳುಹಿಸಿ ಕೊಟ್ಟರು.

ಕಸಬಿನ ಪಾಠ

Industrial Education.

ಕಸಬನ್ನು ಕಲಿಯುವವರು ಜಾಣರೂ, ಒಳ್ಳೆಯ ಕೆಲಸಗಾರರೂ ಎನಿಸಿಕೊಳ್ಳಲು ತಕ್ಕಷ್ಟು ಸಾಮಾನ್ಯ ವಿದ್ಯೆಯು ಅವರಿಗೆ ಬಂದಿರಬೇಕು. ಇರುವ ಸ್ವಲ್ಪ ಅವಕಾಶದಲ್ಲೇ, ಅವರಿಗೆ ವ್ಯವಹಾರಕ್ಕೆ ಅವಶ್ಯಕವಿರುವ ಜ್ಞಾನಾರ್ಜನೆ ಅನುಕೂಲಗಳನ್ನು ಕಲ್ಪಿಸಿರಬೇಕು. ಓದಲು ಪ್ರಾರಂಭಿಸಿದ ಮಕ್ಕಳಲ್ಲರೂ, ಪ್ರೌಢ ವಿದ್ಯಾಪಾರಂಗತರಾಗುವ ಸಂಭವವಿಲ್ಲವಾಗಿ ಪ್ರೌಢ ವಿದ್ಯೆಗೆ ಸಹಾಯಕಾರಿಯಾಗಿರುವ ಸಂಗತಿಗಳೆಲ್ಲವನ್ನೂ, ಎಲ್ಲರಿಗೂ, ಏಕೆ ನಿರ್ಬಂಧವಮಾಡಿ ಕಲಿಸಬೇಕೆಂದು ಕೆಲವರು ಆಕ್ಷೇಪಣೆ ಮಾಡುತ್ತಾರೆ. ಕೆಲವು ವಿಷಯ ಸಂಗ್ರಹಣೆಯಿಂದಲೂ, ಹೃದಯಂಗಮವಾಗದಿರುವ ನೂತನ ವಿಷಯ ಪರಿಚಯದಿಂದಲೂ ಯಾರಿಗೂ ಫಲವಿಲ್ಲ. ಚುರುಕುಬುದ್ಧಿ, ಚಟುವಟಿಕೆ, ಇವೇ ಎಲ್ಲರಿಗೂ ಅವಶ್ಯಕವಿರುವ ಸುಗುಣಗಳು. ಕಾಲೇಜು, ವಿದ್ಯಾಕಲಾನಿಲಯಗಳಿಗೆ ಅರ್ಹರನ್ನಾಗಿ ಮಾಡುವ ಶಿಕ್ಷಣಕ್ರಮವು ಕಸಬನ್ನು ಕಲಿಯುವವರಿಗೆ ಅವಶ್ಯಕವಿಲ್ಲ. ಅಕ್ಕರೆಯಿಲ್ಲದ ಪಾಠವು ಯಾರಿಗೂ ರುಚಿಸದು. ಈ ಕಾರಣದಿಂದ ಬಾಲ್ಯದಲ್ಲಿ ವಿದ್ಯೆಯನ್ನು ಕಲಿಯದೇ ವಯಸ್ಸಾದ ಮೇಲೆ ಕೆಲವರು ಕಷ್ಟಪಟ್ಟು ವ್ಯವಹಾರ ಜ್ಞಾನವನ್ನು ಪಡೆಯುತ್ತಾರೆ. ತಾವು ಮಾಡಬೇಕಾದ ಕೆಲಸದ ವಿವರಣೆ, ಅದರ ತತ್ವ, ಇವೆರಡಲ್ಲದೆ ಮತ್ತಾವುದೂ ಕೆಲಬರು ಕಸಬುದಾರರಿಗೆ ಹಿತವಿಲ್ಲ. ಆಸಕ್ತಿಯಿದ್ದವರು ಪ್ರವೀಣರಾಗಲು ಯಾವ ತಂಟೆಯೂ ಇರಕೂಡದು.

ಮುಂದೆ ಪ್ರೌಢ ವಿದ್ಯೆಯಲ್ಲಿ ಪ್ರವೀಣರಾಗುವ ಸಂಭವವೇ ಇಲ್ಲದವರಿಗೆ ಕೈಕೆಲಸವನ್ನು ಬಿಡಿಸುವುದು ಸರಿಯಲ್ಲ. ಅಂಗಿಯನ್ನು ಮುದರದೇ, ಅದನ್ನು ತೆಗೆಯದೇ ಮಾಡಬಹುದಾದ ಕೆಲಸದಲ್ಲೇ ಕೆಲವರಿಗೆ ಅನುರಾಗವಿರುವುದು ಸ್ವಭಾವ. ಯಾಂತ್ರಿಕ ವ್ಯಾಪಾರದಲ್ಲಂತೂ, ಪ್ರತಿಯೊಬ್ಬನಿಗೂ, ಇತರ ಲಕ್ಷಣಗಳೆಷ್ಟಿದ್ದರೂ ತನ್ನ ಕೈಕೆಲಸದಿಂದಲೇ ಜೀವಿಸಲು ಶಕ್ತಿಯಿರಬೇಕು.

ಯಂತ್ರಪ್ರಾಬಲ್ಯವಿರುವ ಈ ಕಾಲದಲ್ಲಿ ಸಾಮಾನ್ಯ ಕೆಲಸಗಾರರಿಗೆ, ವಿಶೇಷ ಜಾಣತನವೂ ಶಾಸ್ತ್ರಜ್ಞಾನವೂ ಅವಶ್ಯಕವಿಲ್ಲ. ಮೇಲ್ವಿಚಾರಕರಾದವರೂ, ಯಜಮಾನರೂ, ವಿಶೇಷವಾಗಿ ಚತುರರೂ, ನಿರ್ವಾಹಕಶಾಲಿಗಳೂ, ದಕ್ಷರೂ ಆಗಿರಬೇಕು. ಶಿಕ್ಷಣದ ಪ್ರಾರಂಭದಲ್ಲಿ, ಸಾಮಾನ್ಯ ಕೆಲಸಗಾರರಿಗೆ, ವಿಶೇಷ ಶಾಸ್ತ್ರಜ್ಞಾನಕ್ಕಿಂತಲೂ, ವ್ಯವಹಾರಜ್ಞಾನವೂ ಕೆಲಸದ ಅನುಭವವೂ ಹೆಚ್ಚಾಗಿ ಉಪಯೋಗವಾಗಿರುವುದು. ಕಾರ್ಯದ ಜಯಕ್ಕೆ ವಿಷಯಜ್ಞಾನವೇ ಮುಖ್ಯವಾಗುವುದಿಲ್ಲ. ಕೆಲಸಗಾರನ 'ಸ್ವತ್ವ' ಸುಗುಣಗಳೇ, ಮುಖ್ಯವಾಗುವುವು. ಅವಕಾರಣ ಸುತ್ತಲಿರುವ ಸ್ಥಿತಿ ವಿಶೇಷಗಳಿಗೆ ಸರಿಹೊಂದಿಸಿಕೊಂಡು ಜೀವಿಸಿರಲು ಶಕ್ತಿಯೂ, ತನ್ನ ಶಕ್ತಿಯಿಂದ ಪೂರ್ಣ ಫಲಪ್ರಾಪ್ತಿಯೂ, ಇವೆರಡರ ಜತೆಗೆ, ಸಮಾಜದ ಕ್ಷೇಮಕಾಂಕ್ಷೆಯೂ, ವಿದ್ಯೆಯಿಂದಲೇ ಲಭಿಸಬೇಕಾಗಿದೆ.

ಕಸಬುದಾರರ ಶಿಕ್ಷಣವು ಸಮರ್ಪಕವಾಗಿರಬೇಕಾದರೆ ಕಾರ್ಖಾನೆಯಲ್ಲಿ ಅವರು ಮಾಡುವ ಕೆಲಸದ ಜತೆಯಲ್ಲಿ, ಕೆಲಸದ ತತ್ವವನ್ನೂ ಅವರಿಗೆ ತಿಳಿಸಲು ಅವಕಾಶವನ್ನುಂಟುಮಾಡಬೇಕು. ಪ್ರಖ್ಯಾತರಾಗಿರುವ ನಾಗರಿಕ ದೇಶೀಯರೂ, ಈ ಕಾರಣದಿಂದಲೇ, ಪ್ರತಿ ಕಾರ್ಖಾನೆಯಲ್ಲೂ, ಪ್ರತ್ಯೇಕ ಪಾಠಶಾಲೆಯನ್ನು ಸ್ಥಾಪಿಸಿರುತ್ತಾರೆ. ಆ ಶಾಲೆಗಳಲ್ಲಿ ಕೆಲಸಗಾರರು ಓದುಬರಹ, ಗಣಿತಗಳನ್ನೂ, ತಮ್ಮ ಕಸಬಿನ ವಿವರಣೆಯನ್ನೂ, ಸತ್ಪ್ರಜೆಗಳ ಧರ್ಮವನ್ನೂ ಕಲಿಯುತ್ತಾರೆ. ಸ್ವಶಕ್ತಿಯಲ್ಲಿ ಪ್ರತಿಯೊಬ್ಬನೂ ಶ್ರೇಷ್ಠನಾಗಲು ಈ ಕ್ರಮದಿಂದಲೂ ಸಾಧ್ಯವಿದೆ. ಜಾಣರಾಗಿರುವವರು, ಅತಿಶಯವಾದ ಜ್ಞಾನಾರ್ಜನೆಯಿಂದ, ಶಾಸ್ತ್ರಪಾರಮಾಡಿ ಕಾರ್ಯದಕ್ಷರೂ, ನಿರ್ವಾಹಕಶಾಲಿಗಳೂ, ಯಜಮಾನರೂ ಆಗುವರು. ನಮ್ಮ ದೇಶದಲ್ಲಿ ಇನ್ನೂ ಬಾಲ್ಯಾವಸ್ಥೆಯಲ್ಲಿರುವ ಕಸಬು, ವ್ಯಾಪಾರ ಸಂಬಂಧ ಶಾಲೆಗಳು ಅಭಿವೃದ್ಧಿಗೆ ಬಂದು, ದೇಶೋಪಕಾರವನ್ನು ಮಾಡಲೆಂದು ಹಾರೈಸುತ್ತೇವೆ.

—ಶ್ರೀರಾಮ

ಡಾ|| ಅನ್ಸಾರಿಯವರು



ಮಹಾತ್ಮ ಗಾಂಧಿಯವರ ದೇಹಾರೋಗ್ಯವನ್ನು ಪರೀಕ್ಷಿಸಿ ಅದು ಉತ್ತಮಗೊಳ್ಳುತ್ತಿರುವುದೆಂದು ತಿಳಿಸಿರುವರು.

ದ್ರೌಪದಿ ವಸ್ತ್ರಾಪಹರಣ

"ದ್ರೌಪದಿ ವಸ್ತ್ರಾಪಹರಣ" ವೆಂಬ ತೆಲುಗು ಮಾತನಾಡುವ ಚಲನಚಿತ್ರವನ್ನು ಆಪೆರಾ ಟಾಕೀಸಿನಲ್ಲಿ ಕಳೆದ ಬುಧವಾರದಿಂದ ಪ್ರದರ್ಶಿಸುತ್ತಿರುವರು. ಇದರಲ್ಲಿ ಸುಪ್ರಸಿದ್ಧ ನಟರುಗಳಾದ ಕನ್ನಾಂಬಾ, ರಾಮತಿಲಕಂ, ಗಗ್ಗಯ್ಯ ಮುಂತಾದವರು ಪಾತ್ರವಹಿಸಿರುವರು. ನಟರುಗಳ ಪಾತ್ರಾಭಿನಯವು ಉತ್ತಮವಾಗಿದೆ. ಗಾನವು ಮಧುರವಾಗಿದೆ. ವಾಣಿಯು ಸ್ವಚ್ಛವಾಗಿದೆ. ಜನರು ತಂಡೋಪತಂಡವಾಗಿ ಹೋಗಿ ನೋಡುತ್ತಿದ್ದಾರೆ.

ಜ್ಞಾನ ಯೋಗ.

ಆಸ್ಥಾನ ಮಹಾ ವಿದ್ವಾನ್ ವೇ|| ಬ್ರ|| ಕೆ. ಗೋಪಾಲಕೃಷ್ಣಶಾಸ್ತ್ರಿಗಳವರು ದೇಶೀಯ ವಿದ್ಯಾಶಾಲಾ ಪಂಡಿತ ಮಂಡಲದಲ್ಲಿ ಮೈಸೂರು ಸಂಸ್ಕೃತ ಮಹಾ ಪಾಠಶಾಲೆಯಲ್ಲಿ ಮಾಡಿದ ಭಾಷಣದ ಸಾರಾಂಶ—

ಆದಿಯಲ್ಲಿ ಶ್ರೀಪರಮೇಶ್ವರನು ಪಂಚಭೂತಗಳನ್ನು ಸೃಷ್ಟಿಸಿ ಆದಿಪುರುಷನಾದ ಹಿರಣ್ಯಗರ್ಭನೆಂಬ ಬ್ರಹ್ಮನನ್ನೂ ನಿರ್ಮಿಸಿ, ತನ್ನಲ್ಲೇ ಲೀನವಾಗಿದ್ದ, ಮಹಾಮಹಿಮಾಸ್ಪದಗಳಾದ, ಕಾಮಧೇನುವಿನಂತೆ ಸಕಲ ಐಹಿಕಾಮುಷ್ಮಿಕ ಸುಖಗಳನ್ನೂ ತತ್ಸಾಧಗಳನ್ನೂ ಬೋಧಿಸುವ ವೇದರಾಶಿಗಳನ್ನು ಪ್ರಥಮ ಜೀವನೆಂದು ಖ್ಯಾತನಾದ ಹಿರಣ್ಯಗರ್ಭನಿಗೆ ಉಪದೇಶಿಸಿ ತನ್ಮೂಲಕ ಭೌತಿಕ ಪ್ರಪಂಚವನ್ನು ನಿರ್ಮಾಣ ಮಾಡಿಸಿದನು. ಜಗತ್ತಿನ ಪರಿಪಾಲನಾರ್ಥವಾಗಿ ಪ್ರವೃತ್ತಿಧರ್ಮ, ನಿವೃತ್ತಿಧರ್ಮ ಎಂಬ ಎರಡು ವಿಧ ಸನಾತನ ಧರ್ಮಗಳನ್ನೂ ಬೋಧಿಸಿ, ಮೊದಲನೆಯದಾದ ಪ್ರವೃತ್ತಿಧರ್ಮವನ್ನ ಮರೀಚಿ, ಪುಲಹ, ಪುಲಸ್ತ್ಯ, ಕ್ರತು, ಅಂಗಿರಸ ಮುಂತಾದವರು ಆಚರಿಸಿ ಅವರಿಂದಲೇ ಜಗತ್ತು ವಿಸ್ತರಿಸುವಂತೆ ಏರ್ಪಡಿಸಿದನು. ಎರಡನೇದಾದ ನಿವೃತ್ತಿಧರ್ಮವನ್ನ ಸನಕ, ಸನಾತನ, ಸನಂದನ ಮುಂತಾದವರು ಪರಿಗ್ರಹಿಸಿ ಸಂಸಾರಸಾಗರಮಗ್ನರಾದ ಜೀವರುಗಳನ್ನು ಉದ್ಧರಿಸಿ ಶಾಶ್ವತ ಸುಖವನ್ನೂ ಅದರ ಉಪಾಯವನ್ನೂ ಸಹ ಬೋಧಿಸುವಂತೆ ಏರ್ಪಡಿಸಿದನು. ದ್ವಿವಿಧ ಧರ್ಮಗಳೂ ಆಯಾಯ ಅಧಿಕಾರಿ ವರ್ಗಗಳಿಂದ ಅನುಷ್ಠಿಸಲ್ಪಟ್ಟರೂ ಕಾಲಕೃತ ಸ್ವಭಾವದಿಂದ ಹ್ರಸ್ವವಾಗಿ ದುರ್ಲಭವಾಗುತ್ತಾ ಬಂದವು. 'ಯದಾ ಯದಾ ಹಿ ಧರ್ಮಸ್ಯ ಗ್ಲಾನಿರ್ಭವತಿ ಭಾರತ,' ಎಂಬ ಗೀತಾ ವಾಕ್ಯದಂತೆ ಮಧ್ಯೆ ಮಧ್ಯೆ ತಾನು ಅವತಾರಗಳನ್ನು ಮಾಡಿ ಸನಾತನ ಧರ್ಮವನ್ನ ಉದ್ಧರಿಸುತ್ತಾ ಬಂದನು.

ಪ್ರವೃತ್ತಿ ಧರ್ಮವು ಪ್ರಾಣಿಗಳ ಅಭ್ಯುದಯಕ್ಕೆ ಸಾಧನವಾದದ್ದು. ಆತ್ಮೈಕತತ್ವವು ವಾಸ್ತವವಾಗಿದ್ದರೂ, ಕರ್ಮಗಳು ಉಪಾಸನೆಗಳು ಮುಂತಾದ ಸದ್ಧರ್ಮಗಳು ಜಗತ್ತಿನಲ್ಲಿ ವಿಸ್ತರಿಸಬೇಕಾದರೆ ಆತ್ಮನಾನಾತ್ವವು ಅಂದರೆ ದ್ವೈತಪ್ರಪಂಚವು, ಜೀವ, ಈಶ್ವರ, ಉಪಾಸ್ಯ, ಉಪಾಸಕ, ಅನುಷ್ಠಾತೃ, ಅನುಷ್ಠೇಯ, ಪ್ರಮಾಣ, ಪ್ರಮೇಯ, ಶಿಷ್ಯ, ಶಾಸ್ತ್ರ ಈ ರೀತಿ ದ್ವೈತವು ಅತ್ಯಾವಶ್ಯಕವು. ಇಂಥಾ ದ್ವೈತಾತ್ಮಬೋಧಕ ಶಾಸ್ತ್ರಗಳು, ಪೂರ್ವಮೀಮಾಂಸ, ಸ್ಮೃತಿಗಳು, ಪುರಾಣಗಳು ಸಾಂಖ್ಯಯೋಗ, ತರ್ಕ ಮುಂತಾದ ದರ್ಶನಗಳೂ ಆಗಿರುತ್ತವೆ. ದ್ವಾವಿಮಾವಥ ಪಂಥಾನೌ ಯತ್ರವೇದಾಃ ಪ್ರತಿಷ್ಠಿತಾಃ || ಪ್ರವೃತ್ತಿಲಕ್ಷಣ ನಿವೃತ್ತಿಶ್ಚ ಎಂಬ ವೇದವ್ಯಾಸರ ಉಕ್ತ್ಯನುಸಾರ ಪ್ರವೃತ್ತಿ ಮಾರ್ಗವು ಕರ್ಮಕಾಂಡಾತ್ಮಕ ವೇದಭಾಗಗಳಲ್ಲೂ, ನಿವೃತ್ತಿ ಮಾರ್ಗವು ಜ್ಞಾನ ಕಾಂಡಾತ್ಮಕ ಉಪನಿಷದ್ಭಾಗಗಳಲ್ಲೂ ಅಡಕವಾಗಿವೆ.

ವೇದ ಬೋಧಿತ ಸತ್ಕರ್ಮಗಳಿಂದಾಗಲೀ ಉಪಾಸನೆಗಳಿಂದಾಗಲೀ ಶ್ರೇಯಸ್ಸು ಲಭಿಸುವದೆಂದು ಹೇಳುವ ಪ್ರವೃತ್ತಿ ಮಾರ್ಗವು ಜೈಮಿನಿಯಿಂದ ರಚಿಸಿರುವ ಪೂರ್ವಮೀಮಾಂಸ 12 ಅಧ್ಯಾಯಗಳಲ್ಲೂ ಸಂಕರ್ಷಣ ಕಾಂಡವೆಂಬ 4 ಅಧ್ಯಾಯಗಳಲ್ಲೂ ಪ್ರಾಧಾನ್ಯೇನ ವಿಸ್ತರಿಸಿ ನಿರೂಪಿಸಲ್ಪಟ್ಟಿರುತ್ತೆ. ಅನಂತರ ಉಪನಿಷತ್ತುಗಳ ಸಾರರೂಪವಾದ ಬಾದರಾಯಣ ಋಷಿಪ್ರಣೀತಗಳಾದ 4 ಅಧ್ಯಾಯಗಳಲ್ಲಿ ನಿವೃತ್ತಿ ಮಾರ್ಗವು ವಿಸ್ತರಿಸಿ ಹೇಳಲ್ಪಟ್ಟಿರುತ್ತೆ. ಬೇರೆ ಬೇರೆ ಋಷಿಗಳಿಂದ ಹೇಳಲ್ಪಟ್ಟ 20 ಅಧ್ಯಾಯಗಳೂ ಒಂದೇ ಶಾಸ್ತ್ರವೆಂದು ಕೆಲವರೂ, ಅಧಿಕಾರಿತಃ, ಫಲತಃ, ವಿಷಯತಃ, ಸಾರ್ಥಕ್ಯವು ಇರುವುದರಿಂದಲೂ, ಕರ್ತೃಭೇದದಿಂದಲೂ ಸಹ ಬೇರೆ ಬೇರೆ ಶಾಸ್ತ್ರಗಳು ಎಂದು ಮತ್ತೆ ಕೆಲವರೂ ವಾದಿಸುವರು. ಇದು ಹಾಗಿರಲಿ.

ಶ್ರೀಜೈಮಿನಿಗಳಿಂದ ಕರ್ಮಗಳ ಸ್ವರೂಪ, ಅವುಗಳ ಪ್ರಾಮಾಣ್ಯ, ಅವುಗಳ ಫಲ. ಅನುಷ್ಠಾನಕ್ರಮ ಇವೇ ಮುಂತಾದವುಗಳು ಪೂರ್ವಮೀಮಾಂಸ ಶಾಸ್ತ್ರದಲ್ಲಿ ಅಥಾತೋ ಧರ್ಮಜಿಜ್ಞಾಸಾ ಎಂದು ಆರಂಭಿಸಲ್ಪಟ್ಟಿರುತ್ತೆ. ಧರ್ಮವೆಂದರೆ ಪುಣ್ಯವೆಂದು ಪ್ರಸಿದ್ಧವಾಗಿದ್ದರೂ ಅಂಥಾ ಪುಣ್ಯವನ್ನು ಉಂಟುಮಾಡುವ ವೇದಾಧ್ಯಯನ, ಉಪಾಸನ ಇತ್ಯಾದಿಗಳೇ ಧರ್ಮವು ಅಥವಾ ಸತ್ಕರ್ಮವು. ಇದೇ ಅಭಿಪ್ರಾಯವನ್ನು 'ವಿದ್ವದ್ಭಿಃ ಸೇವಿತಃ ಸದ್ಭಿಃ ನಿತ್ಯಮದ್ವೇಷರಾಗಿಭಿಃ' ಹೃದಯೇನಾಭ್ಯನುಜ್ಞಾತಃ ಯೋಧರ್ಮಸ್ತಂ ನಿಬೋಧತ || ಎಂಬ ಶ್ಲೋಕದಿಂದ ಮನುವು ವ್ಯಕ್ತಪಡಿಸಿರುತ್ತಾನೆ. ರಾಗದ್ವೇಷಾದಿ ಕಾಲುಷ್ಯಗಳನ್ನು ಹೊಂದದೇ ಶುದ್ಧಾಂತಃ ಕರಣವುಳ್ಳ ಜ್ಞಾನಿಗಳು, ಸರ್ವಜನಗಳಿಗೂ ಗ್ರಾಹ್ಯಗಳಾಗಿ ಅನುಷ್ಠಿಸಲು ಅರ್ಹಗಳಾದ ಧರ್ಮಗಳನ್ನು ಹೇಳುತ್ತೇನೆ ಎಂದು ಉಪಕ್ರಮಿಸಿ ಮಾನವಧರ್ಮಶಾಸ್ತ್ರದಲ್ಲಿ ಪೂರ್ವೋಕ್ತ ಧರ್ಮಗಳನ್ನು ಮನುವು ಹೇಳಿರುವನು. ಇಂಥಾ ವೇದಭಾಗವನ್ನು ಕರ್ಮಯೋಗ ಪ್ರಕಾರವೆಂದು ಗೀತಾದಿ ಗ್ರಂಥಗಳಲ್ಲಿ ಹೇಳಲ್ಪಟ್ಟಿರುತ್ತೆ. ಆತ್ಮಯಾಥಾತ್ಮ್ಯವನ್ನರಿಯಲು ವಿದ್ವತ್ತು ಇಲ್ಲದ, ಐಹಿಕಾಮುಷ್ಮಿಕ ಫಲಗಳನ್ನಪೇಕ್ಷಿಸುವ ಜನರ ಅಂತಃಕರಣವು ನಿರ್ಮಲವಾಗಬೇಕಾದರೆ. ಸಂಧ್ಯಾವಂದನಾ, ದೇವಪೂಜಾ, ಅಹಿಂಸಾ, ತೀರ್ಥಸ್ನಾನ, ಪಿತೃದೇವತಾರಾಧನಾದಿಗಳು ಅತ್ಯಾವಶ್ಯಕಗಳು. ಈ ರೀತಿಯಾಗಿ ವಿಹಿತ ಸತ್ಕರ್ಮಗಳನ್ನನುಷ್ಠಿಸಿ, ಅನೃತಭಾಷಣ, ಪರದಾರ ಗಮನ, ಸುರಾಪಾನಾದಿ ನಿಷಿದ್ಧ ಕರ್ಮಗಳನ್ನು ತ್ಯಜಿಸಿ ಸ್ವಭಾವತಃ ವಿಷಯಾಭಿಮುಖವಾಗಿ ಪ್ರವಹಿಸುವ ಇಂದ್ರಿಯಾದಿಗಳನ್ನು ನಿಯಮಿತ ವಿಷಯಗಳಲ್ಲಿ ಪ್ರವರ್ತಿಸುವಂತೆ ನಿಗ್ರಹಿಸಿ ಸುಖಪರಂಪರೆಯನ್ನನುಭವಿಸಬೇಕು. ಇಲ್ಲವಾದರೆ ಪತನ—ಅಧೋಗತಿಯನ್ನು ಹೊಂದುವನೆಂದು ಯಾಜ್ಞವಲ್ಕ್ಯರು 'ವಿಹಿತಸ್ಯಾನನುಷ್ಠಾನಾತ್ ನಿಂದಿತಸ್ಯ ಚ ಸೇವನಾತ್ | ಅನಿಗ್ರಹಾಚ್ಚೇಂದ್ರಿಯಾಣಾಂ ನರಃ ಪತನಮೃಚ್ಛತಿ ||' ಎಂದು ಹೇಳಿರುವರು.

ಚೌ. ಚೌ. (೩)

೧

"ಕಡೆಯ ಆಟದಲ್ಲಿ ಗದ್ದವರಿಗೆ ಕಪ್ಪು (Cup) ಕೊಟ್ಟರೆ, ಅಲ್ಲಿಯತನಕ ಗೆಲ್ಲುತ್ತಾ ಬಂದ ಟೀಮಿನವರಿಗೆ ಏನನ್ನು ಕೊಡುವುದು ?" ಎಂಬುದು ಪ್ರಶ್ನೆ. ಸಾಸರು (Saucer ತಟ್ಟೆ) ಗಳನ್ನು ಕೊಟ್ಟರಾಯಿತು.

೨.

ಕಛೇರಿ ಆದ ಸಂತರ ಪಂಪನ್ನಾರ್ಪಣ ಮಾಡ ಮೇಲೆ, ಒಬ್ಬರು ಸಂಗೀತ ವಿದ್ವಾಂಸರು ಎದ್ದು, "ಇಷ್ಟರ ಮಟ್ಟಿನ ವಿದ್ಯೆಯನ್ನು ನಾನು ಸ್ವತಃ ಕಲಿತೆನೇ ಹೊರತು, ಅನ್ಯರಿಂದ ಅಲ್ಲ ' ಎಂದು ಹೇಳಿದರು ಸದ್ಯಕ್ಕೆ ಇನ್ನೊಬ್ಬನ ಮೇರೆ ತಪ್ಪು ಹೊರಿಸುವ ದುರ್ಗುಣವು ಅವರಲ್ಲಿಲ್ಲವಲ್ಲಾ ಎಂದು ನಾವು ಸಂತೋಷ ಪಡುವೆವು

೩.

"ಕನ್ನಡದಲ್ಲಿ ಕತೆಗಳನ್ನು ಬರೆಯುವುದು ಹೇಗೆ ?" ಎಂಬ ಪ್ರಶ್ನೆಗೆ ಒಬ್ಬರು ಮಹನೀಯರು, "ಇನ್ನೇನೂ ಬೇಕಿಲ್ಲ ಕತೆಗಳನ್ನು ಕನ್ನಡದಲ್ಲಿ ಬರೆದರೆ ಆಯಿತು" ಎಂದರು ಈ ಸಲಹೆಯನ್ನು ಇನ್ನು ಮುಂದಾದರೂ ಕರ್ಣಾಟಕದ ಕತೆಗಾರರು ಅನುಸರಿಸುವರೆಂದು ನಾವು ನಂಬೋಣ

೪.

ರಾಮನಗರದ ಕೋಸಂಬರೀ ಪಾಸಕ ಪ್ರಯುಕ್ತ ಆಸ್ಪತ್ರೆಗಳಲ್ಲೂ ಅಂಗಡಿಗಳಲ್ಲೂ ಅಗಲೇ ಹೊಟ್ಟೆನೋವಿನ ಔಷಧಿಗಳನ್ನು ಗ್ಯಾಲನ್ ಗಟ್ಟಳೆ ತಯಾರು ಮಾಡುತ್ತಿದಾರಂತೆ

೫.

ಮೈಸೂರಿನ ಹೋಟೆಲುಗಳಲ್ಲಿ ಕುಡಿಯುವುದಕ್ಕೆ ಬಿಸಿನೀರು ಸಿಗುವುದೇ ಇಲ್ಲ, ಎಂದು ಬೊಂಬಾಯಿಂದ ಬಂದ ಮಿತ್ರರೊಬ್ಬರು ಹೇಳಿದರು ಅವರಿಗೆ ಗೊತ್ತಿಲ್ಲ, ಪಾಪ! "ಒಂದು ಕಪ್ಪು ಟೀ ಕೊಡಿ" ಎಂದು ಕೇಳಿಬಿಟ್ಟಿದ್ದರೆ, ಸಿಕ್ಕುತ್ತಿತ್ತು

೬.

ಸಮಯಕ್ಕೆ ಸರಿಯಾಗಿ ರೈಲು ಬರದಿದ್ದ ಮೇಲೆ, ನಿಮ್ಮ ಟೈಂ ಟೇಬಲ್ (Time Table) ನಿಂದ ಏನು ಪ್ರಯೋಜನ ?' ಎಂದು ಒಬ್ಬರು ಬಾತ್ಮಿ ಬರೆಯುತ್ತಾರೆ ಟೈಂ ಟೇಬಲ್ ಎಂಬುದೊಂದು ಇಲ್ಲದಿದ್ದರೆ, ರೈಲು ಸಮಯಕ್ಕೆ ಸರಿಯಾಗಿ ಬರಲಿಲ್ಲ ಎಂದು ಅವರಿಗೆ ಹೇಗೆ ಗೊತ್ತಾಗುತ್ತಿತ್ತು ?

೭

"ನಿಮ್ಮ ವಿಶ್ವವಿದ್ಯಾನಿಲಯದಲ್ಲಿ ಎಷ್ಟು ಜನ ವಿದ್ಯಾರ್ಥಿಗಳು ಓದುತ್ತಿದಾರೆ" ಎಂಬ ಪ್ರಶ್ನೆಗೆ, ಅಧಿಕಾರಿಗಳು, "ಶೇಕಡ ಸುಮಾರು ೫ ಜನರು" ಎಂದು ಉತ್ತರ ಬರೆಯುವರಂತೆ.

೮.

"ನಮ್ಮ ತಾತನ ಕಾಲದಲ್ಲಿ ಹಾರ್ಮೋನಿಯಂ ಎಂಬ ವಾದ್ಯವನ್ನು ಯಾರೂ ಉಪಯೋಗಿಸುತ್ತಿರಲಿಲ್ಲ" ಎಂದು ಒಬ್ಬರು ಹೇಳಿದರು. ಪಕ್ಕದ ಮನೆಯವರನ್ನು ಮನೆ ಬಿಟ್ಟು ಓಡಿಸುವುದಕ್ಕೆ ಆಗಿನ ಕಾಲದಲ್ಲಿ ಏನನ್ನು ಯಾವ ಉಪಾಯ ಮಾಡುತ್ತಿದ್ದರೋ, ತಿಳಿಯದ

೯.

"ಜರ್ಮನಿ ದೇಶದ ಶಾಸ್ತ್ರಜ್ಞರು ಕೃತಕವಾದ ರಬ್ಬರನ್ನು (Synthetic Rubber) ಅಗ್ಗವಾಗಿ ತಯಾರು ಮಾಡಿ ದೇಶಕ್ಕೆ ಕೀರ್ತಿ ತಂದಿದ್ದಾರೆ' ಎಂದು ಹಿಟ್ಲರ್ ಮಹಾಶಯನು ಹೆಮ್ಮೆ ಪಡುತ್ತಾನೆ ಮೈಸೂರಿನ ಕೆಲವು ಹೋಟೆಲುಗಳಲ್ಲಿ ಮೂರು ಕಾಸಿಗೆ ಒಂದು ದೋಸೆಯಷ್ಟು ಅಗಲದ ಕೃತಕ ರಬ್ಬರನ್ನು ಅನೇಕ ವರ್ಷಗಳಿಂದಲೂ ಮಾರುತ್ತಿರುವ ಸಂಗತಿ ಆ ಮಹಾಶಯರಿಗೆ ಇನ್ನೂ ಗೊತ್ತಿಲ್ಲ.

೧೦

ಸಿಂಹಳ ದ್ವೀಪದಲ್ಲಿ ಭೂ ಶೋಧನೆ ನಡೆಸುತ್ತಿದ್ದಾಗ, ಮಣ್ಣು ಮುಚ್ಚಿ ಹೋಗಿದ್ದ ಒಂದು ಗವಿಯೊಳಗಿನಿಂದ, ರಾವಣಾಸುರನ ವಾಸದ ಹಳ ತಾಮ್ರ ಸಿಕ್ಕಿದೆ ಅಂತೆ ಈ ವಿಷಯವನ್ನು ಪತ್ರಿಕೆಗಳಿಗೆ ತಿಳಿಸಿದಾತನ ಹೆಸರು 'ಸತ್ಯಶೀಲ' ಎಂಬುದಾದ್ದರಿಂದ ನಾವು ಸಂಶಯಿಸಲಾಗುವುದಿಲ್ಲ ಆದರೆ ಪಯಣಿಯನ್ನೊದರೇನೆ, ಅದರಲ್ಲಿ ಏನಿದೆ ಎಂದು ನಾವು ಹೇಳಬಲ್ಲೆವು ಪೋಲಿಸಿಂದಲೂ ಕೂನೆಯವರೆಗೂ,—ಸಾಕ್ಷ್ಯಾಧಾರ ದತ್ತರಾಮ, ಗಗ್ಗರಾಮ, ಛಡಿರಾಮ, ಥಾಂಡಿಗರಾಮ, ಕೆದ್ದರಾಮ—ಅಷ್ಟೆ! ಇನ್ನೇನೂ ಇರುವುದಿಲ್ಲ!

೧೧

'ಸಿಗರೇಟು ಸೇದಿದ ಮೇಲೆ ಮಸಾಲೆ ದೋಸೆ ತಿಂದರೆ, ಹಾಳಾದ್ದು ಸಿಗರೇಟು ವಾಸನೆ!' ಎಂದು ಒಬ್ಬರು ಹೋಟೆಲಿನಲ್ಲಿ ಅಸಹ್ಯ ಪಡುತ್ತಿದ್ದರು ಆದರೆ, ಸಿಗರೇಟು ಸೇದದೆ ತಿಂದರೆ, ಹಾಳಾದ್ದು ಮಸಾಲೆ ದೋಸೆ ವಾಸನೆ ಬರುತ್ತದಲ್ಲಾ' ಅದಕ್ಕೇನು ಮಾಡುವುದು ?

ನಾರಸಸ್ವಾಮಿ

ಮಕ್ಕಳಿಗೆ ಪ್ರಶ್ನೆಗಳು.

ಮಕ್ಕಳಿರಾ, ಈ ಕೆಳಗಿನ ಪ್ರಶ್ನೆಗಳಿಗೆ ಉತ್ತರವನ್ನು ಬರೆದು ಕಳುಹಿಸಿರಿ. ಅವನ್ನು ಪ್ರಕಟಿಸಲಾಗುವುದು.

(1) ಔಷಧದಲ್ಲಿ ಯಾವುದು ಶ್ರೇಷ್ಠ ?
(2) ದಾನದಲ್ಲಿ ಯಾವುದು ಶ್ರೇಷ್ಠ ?
(3) ಪಲ್ಲವದಲ್ಲಿ ಯಾವುದು ಶ್ರೇಷ್ಠ ?
(4) ರಾಗಗಳಲ್ಲಿ ಯಾವುದು ಶ್ರೇಷ್ಠ ?
(5) ತಾಳಗಳಲ್ಲಿ ಯಾವುದು ಶ್ರೇಷ್ಠ ?
(6) ಹಣ್ಣುಗಳಲ್ಲಿ ಯಾವುದು ಶ್ರೇಷ್ಠ ?
(7) ಎಲೆಗಳಲ್ಲಿ ಯಾವುದು ಶ್ರೇಷ್ಠ ?
(8) ಮನೆಗಳಲ್ಲೆಲ್ಲಾ ಯಾವುದು ಶ್ರೇಷ್ಠ ?
(9) ಜನಗಳಲ್ಲೆಲ್ಲಾ ಯಾವುದು ಶ್ರೇಷ್ಠ ?
(10) ಗುಡಿಗಳಲ್ಲಿ ಯಾವುದು ಶ್ರೇಷ್ಠ ?
(11) ಪಟಗಳಲ್ಲೆಲ್ಲಾ ಯಾವುದು ಶ್ರೇಷ್ಠ ?
(12) ಸರಗಳಲ್ಲಿ ಯಾವುದು ಶ್ರೇಷ್ಠ ?

ಲಾಯರೊಬ್ಬರ ರುಮಾಲು ಹಾರಿಸಿದರು.

ಬೆಂಗಳೂರು ಅಡ್ವೊಕೇಟರಾದ ಶ್ರೀ॥ ಎಸ್. ಕೃಷ್ಣಪ್ಪನವರು ಶೇಷಾದ್ರಿಪುರದಲ್ಲಿ ಹೋಗುತ್ತಿದ್ದಾಗ ಯಾರೋ ಹಿಂದಿನಿಂದ ಬಂದು ತಮ್ಮ ರುಮಾಲನ್ನು ಹಾರಿಸಿ ಹೊಡೆದರೆಂದು ಪೋಲೀಸಿಗೆ ಫಿರ್ಯಾದು ಕೊಟ್ಟಿರುತ್ತಾರೆ

ಸಮಾಜ ಶಾಸನ

(ಒಂದು ಸಣ್ಣ ಕಥೆ)

ಲೇಖಕ—ಟಿ ಎಲ್. ಬಾಲಕೃಷ್ಣನ್, ಅರಸೀಕೆರೆ.

(೪ ನೇ ಪುಟದಿಂದ ಮುಂದುವರಿದುದು)

ನಮಿಸಿ ಆಕೆಯ ಮನ ನೊಂದಿಸತೊಡಗಿದರು ಒಮ್ಮೊಮ್ಮೆ 'ಈ ಮೂದೇವಿ ಮನೆಗೆ ಎಂದು ಬಂದಳೋ ಅಂದೇ ನಮ್ಮ ವಂಶವೃಕ್ಷವು ಬೇರುಸಹಿತ ಉರುಳಿತು ಪಾಪಿ ಹೆಣ್ಣು ತಂದು ಮನೆಗೆ ಬೆಂಕಿ ಹೊತ್ತಿಸಿಕೊಂಡಂತಾಯಿತು" ಇತ್ಯಾದಿ ಇವು ಗಳೆಲ್ಲವನ್ನೂ ಸಹಿಸಿಕೊಂಡು ಕಮಲುವು ಸುಮ್ಮನಾಗುತ್ತಿದ್ದಳು. ಒತ್ತಡದ ತನ್ನ ಜನ್ಮವನ್ನು ಧಿಕ್ಕರಿಸುವಳು, ಮತ್ತೊಮ್ಮೆ ತನ್ನ ಭಾಗದ ದುರ್ದೈವವನ್ನು ದೂಷಿಸುವಳು ಅತ್ತೆ ಮಾವಂದಿರ ಬಯ್ಗುಳುಗಳು ದಿಟ್ಟಿದಂತೆಲ್ಲಾ ಹೊಡೆತಗಳೂ ಬಿದ್ದಾಗತೊಡಗಿದುವು ಅಲ್ಪವಾದೊಂದು ತಪ್ಪಿಗಾಗಿ ಘೋರತರವಾದ ಶಿಕ್ಷೆಯನ್ನೇ ಆ ಬಾಲೆಯು ಅನುಭವಿಸಬೇಕಾಗುತ್ತಿತ್ತು ಇಂತಹ ದುರ್ದಶೆಯಿಂದ ಪಾರಾಗಬೇಕೆಂದು ತನ್ನ ಅಣ್ಣನಲ್ಲಿ ಸರಿಸು ಯಾನ ದೀನ ವಾಕ್ಯಗಳಿಂದ ಪತ್ರವು ಬೇನ ಬರ ಆಟ್ಟಳು. ಎಲ್ಲವೂ ನಿರರ್ಥಕ. ಕೊನೆಕೊನೆಗೆ ಕಮಲುವಿಗೆ ಜೀವನದಲ್ಲಿ ಬೇಸರವಾಗತೊಡಗಿತು ಬೇಸರದ ವಾದಂದಿನಿಂದ ಎತ್ತ ನೋಡಿದರತ್ತ ನತ್ತ ಮಾತಾಪಿತೃಗಳ ರೂಪೇ ಕಣ್ಣಿಗೆ ಕಟ್ಟುತ್ತಿತ್ತು ಅವರು ತನ್ನನ್ನು ಕರೆಯುವಂತೆ, ಸಂದೇಶವೊಂದು ಆಕೆಗೆ ಬೋಧೆಯಾಗುತ್ತಿತ್ತು. ಅದೇ ಅಂದು, ಆ ನಿರ್ಜನತೆ, ನೀರವತೆಯ ಆಸರಾತ್ರೆಯಲ್ಲಿ ಕಮಲುವು ಪ್ರಾಣತ್ಯಾಗದ ಸಲುವಾಗಿ ಆಟ್ಟಿದ ಭಾವಿಯಲ್ಲಿರುವ ದು, ಮುಂತಾದ, ನೈಚಿತ್ರಗಳನ್ನು, ವಾಚಕರು ಅರಿತೇ ಇರುವರು

ಪಾಪದನು ನಿರ್ಭಾಗ್ಯ ಕಮಲುವನ್ನು ಹೆಗಲಮೇಲೆ ಬಿಡ್ಡಗಿಸಿಕೊಂಡು, ಏರುತ್ತಿದ್ದಾಗ ಅವನಿಗುಂಟಾದ ಆನಂದವನ್ನು ನಾವಿಲ್ಲಿ ವರ್ಣಿಸಲಾರೆವು ತನ್ನ ಜೀವಿತದಲ್ಲೊಂದು ಸಾಹಸಕಾರ್ಯವನ್ನು ನಡೆಸಿದನೆಂಬ ಹೆಮ್ಮೆಯು ಅವನಲ್ಲುಂಟಾಗ ತೊಡಗಿತು ಆದರೇನು ? ದೈವಸಂಕಲ್ಪವು ಅತನ ಮನೋಭಿಪ್ರಾಯಕ್ಕೆ ವಿರುದ್ಧವಾಗಿದ್ದಿತು ಇನ್ನೇನು ? ಆತನು ಬಾವಿಗೆ ಅರ್ಧವಾಗಿ ಆಗಿಎಷ್ಟು ತೂಲೆಗೆ ಕೈ ಚಾಚಿದನು ಅಪ್ರಿಯವಾಗಿದ್ದ ಹಗ್ಗವು ಹಂಮ ಬಿದ್ದಿತು ಅದರೊಡನೆ ಮಾಧವನ ದೇಹವೂ ಅನ್ನು ಮಾಧವನಿಂದುದ್ಧರಿಸಲ್ಪಟ್ಟ ಬಹುದಾದ ನಿರ್ಭಾಗ್ಯೆ ಕಮಲೆಯ ದೇಹವೂ. ಬಿದ್ದುಬಿಟ್ಟವೆಂದು ಹೇಳಲು ನಮ್ಮ ಬಡಲೇಖನಿಯು ಮರುಗುವುದು ಇಷ್ಟೊತ್ತಿಗೆ ಚೆಲುವನ್ನಾನ ಸಂದರ್ಶದಿಂದ ಹಾಸ್ಯವದನರಾದ ಅಪ್ಪಯ್ಯಭಟ್ಟರು ಹೂಗಿಗೆ ನಡ್ಡವೇರಿಸುತ್ತಾ ಭಾವಿಯ ಸಮೀಪಕ್ಕೆ ಬಂದು ಬಗ್ಗಿ ನೋಡಿದರು. ಬಿಂದಿಗೆಯ ಕುರುಹು ಸಿಕ್ಕಲಿಲ್ಲವಾಗಿ ಹಿಂದಿರುಗಿದರು ಮಾರನೇ ದಿನದ ಸಂಜೆಯಲ್ಲಿ—ಕಮಲೂ—ಮಾಧವರ ದೇಹಗಳು ಬಾವಿಯಲ್ಲಿ ತೇಲಾಡುತ್ತಿದ್ದುವು ಊರ ಜನಗಳು ಬಂದು ಸೇರಿ ನಾನಾವಿಧವಾಗಿ ತರ್ಕಿಸಿದರು. ಆ ದಿರ—ತರ್ಕಗಳೊಂದೂ— ಸಮಜವೆನಿಸಲಿಲ್ಲ ಕೆಗಲೂ ಕಮಲುವಿನ ಅತ್ತೆ ಮಾವಂದಿರು ಕಮಲುವನ್ನು ಜ್ಞಾಪಕ ತಂದುಕೊಂಡಾಗ ವಿಸ್ಮಯದಿಂದಲೆ ತಲೆ ಎತ್ತಿಕೊಳ್ಳದಂತೆ ಮಾಡಿಬಿಟ್ಟವು ಚಂಡಾಳಿ, ಇತ್ಯಾದಿ, ದೋಷಾರೋಪಣೆಗಳಿಂದ, ವಿಕೆ ಸುಮಯೋಗಗಳಿಂದ ನಿವೃತ್ತವಾದ ಆಕೆಯ ಆತ್ಮಕ್ಕೆ ಧಿಕ್ಕಾರವೆಸಗುವರು. ಏನಾದರಾಗಲಿ. ಸಮಾಜ ಶಾಸನವೆಂಬ ಪಾತಕವು ಕಾಲನ ಪಾತಕಕ್ಕಿಂತಲೂ ಮಿಗಿಲಾದುದು ನಿಷ್ಠಾಪರ ಸೌಭಾಗ್ಯವನ್ನು ನಾಶಿಸಿ, ಸತ್ತ ಮಾತ್ರ—ಪಿತೃಗಳಿಗೆ ರವ ರವ ನರಕಯಾತನೆಗಿಂತಲೂ ಮಿಗಿಲಾದ ಮನೋಯಾತನೆಯನ್ನಿತ್ತು ನಿರ್ದಾಕ್ಷಿಣ್ಯದಿಂದ ಅವರ ಆತ್ಮವನ್ನು ಕೊಂದುಬಿಡುವುದೆಂದರೆ ಇದೇ ಸಮಾಜ ಶಾಸನ—ನಾಶವು. ನಿಸ್ವಾರ್ಥ ಬುದ್ಧಿಯನ್ನು ಮೂಲೆಗೆ ತಳ್ಳಿ ತನು ಹೆಚ್ಚು, ತನ್ನದೇ ಇತ್ಯಾದಿ ದುರ್ಬುದ್ಧಿಯನ್ನೂ, ಸ್ವಾರ್ಥಪರತೆಯನ್ನೂ ಉಂಟುಮಾಡಿ ವರದಕ್ಷಿಣೆ, ಕನ್ಯಾಶುಲ್ಕ, ಇತ್ಯಾದಿ ದುಷ್ಕೃತ್ಯಗಳಿಗೆ ಮಾನ ಕೊಡುವುದೆಂದರೆ ಇದೇ ಸಮಾಜಶಾಸನ ಪಾತವು ? ಇಷ್ಟಾದರೂ ನಾವು ಅಸ್ವತಂತ್ರರೆಂಬ ಭಾವನೆಯು ಅವರಿಗಿಲ್ಲದೆ ಸ್ವಸುಖದ ಕಡೆಗ ಬಾಲಿಗಯನ್ನು ಆಟುತ್ತಿರುವುದು ವಿಷಾದಕರವಾದ ಸಂಗತಿಯಾಗಿದೆ ಒಬ್ಬಳೇ ಒಡನಿಯ ಉದರದಲ್ಲುದಿಸಿ, ಅಣ್ಣತಮ್ಮಂದಿರಾದ ನಾವು ಪ್ರೇಮಬದ್ಧರಾಗಿ ಸಮಾಜ ಶಾಸನವನ್ನು ಮುಂದು ಮಾಡಿಕೊಂಡು ಕುಳಿತರ ಭಾರತಾಂಬೆಯು ಬಿಡುಗಡೆಯಾಗುವುದಾದರೂ ಹೇಗೆ? ಈಗಲಾದರೇನು ? ನಮ್ಮನಮ್ಮಲ್ಲಿನ ಆ ಪರಿಯ, ಶಾಸನಗಳನ್ನು ಕಳಕುಬದಾದರೂ ತಡೆಗಟ್ಟಿ, 'ಐಕಮತ್ಯವೇ—ಬಲ' ವೆಂಬುದನ್ನು ಅರಿತು, ಒಕ್ಕಟ್ಟಿನಿಂದ ಕಾರ್ಯೋನ್ಮುಖರಾದರೆ, ನಮ್ಮ ಜನನಿಯು ಸ್ವತಂತ್ರಳಾಗದಿರಲಾರಳು! ಒಂದುಗಳೇ—ಆ ಜಗವತಿಯು ಈ ಪರಿಯ, ಸದ್ಬುದ್ಧಿಯನ್ನು ತನ್ನ ಮಕ್ಕಳಿಗೂ ಕೊಡಲಿ.

ಓಂ ! ಶಾಂತಿಃ ಶಾಂತಿಃ

ಸ್ವದೇಶಿಗೆ ಪಂಜಾಬಾ ಮಂತ್ರಿಯ ಬೆಂಬಲ.

ಕೈಗಾರಿಕೆಯ ಅಭಿವೃದ್ಧಿಗೆ ನಮ್ಮ ಸರ್ಕಾರವು ಸಾಕಾದಷ್ಟು ಸಹಾಯ ಮಾಡಿಲ್ಲವೆಂದು ನಾನು ಒಪ್ಪುತ್ತೇನೆ ಆದರೆ ಅದು ಪ್ರಾಂತೀಯ ಸರ್ಕಾರಗಳ ಕೈಯ್ಯಲ್ಲಿಲ್ಲ ದೇಶಾಭಿವೃದ್ಧಿಗೆ ಸ್ವರಾಜ್ಯವೊಂದೇ ಸಾಧನ. ಪೂರ್ಣ ಸ್ವರಾಜ್ಯವಿಲ್ಲದಿದ್ದರೂ ಆರ್ಥಿಕ ಸ್ವರಾಜ್ಯವಾದರೂ ಇದ್ದೇ ತೀರಬೇಕು. ಈ ಸ್ವರಾಜ್ಯವು ಇಲ್ಲದಿದ್ದ ಪಕ್ಷದಲ್ಲಿ ಸ್ವದೇಶಿ ವ್ರತವನ್ನು ಅನುಸರಿಸಿ ಜನರ ಅಭಿವೃದ್ಧಿಯಾಗಬೇಕು ಬೇರೆ ಉಪಾಯವೇ ಇಲ್ಲ—ಎಂಬುದಾಗಿ ಸರ್ ಗೋಕುಲಚಂದ್ರ ನಾರಂಗ್ ಎಂಬ ಪಂಜಾಬಿನ ಮಂತ್ರಿಗಳು. ಅಲ್ಲಿನ ನ್ಯಾಯವಿಧಾಯಕ ಸಭೆಯಲ್ಲಿ ಹೇಳಿದರು.

ದಾಸಯ್ಯನ ಜಾಗಟೆ.

(ಜಿ. ಎ. ಆರ್. ಬಂಟಕೊಪ್ಪಲ್.)

ದಾಸಯ್ಯ.—ಶ್ರೀಮನ್ನಾರಾಯಣ ಗೋವಿಂದಾ ಗೋವಿಂದ. ಮೂಡಲಗಿರಿ ವಾಸ ಮುಪ್ಪತ್ತುಗಾವಪ್ಪೊ ದೇವಾ, ರಕ್ಷಿಸಪ್ಪಾ. ಭಂ. ಭಂ-ಭಂ-ಭಂ

ನಾನು—ಇಷ್ಟು ದಿನ ಎಲ್ಲಿಗೆ ಹೋಗಿದ್ದೆ ದಾಸಯ್ಯ ?

ದಾ.—ನಮ್ಮ ತಾತಯ್ಯನ ಹುಡಿಕ್ಕೊಂಡು ಹೊಂಟೋಗಿದ್ದ ಗೋವಿಂದ.

ನಾನು—ಸಿಕ್ಕಿದ್ನರೇ ನಿಮ್ಮ ತಾತಯ್ಯ?

ದಾ.—ಇವ್ಯಾಕೆ ನಿಮ್ಮ ತಾತಯ್ಯ ಅಂತೀರಿ. ನಿಮಗೂ ತಾತಯ್ಯ. ನಮಗೂ ತಾತಯ್ಯ. ಆ ನಮ್ಮಪ್ಪ ಎಲ್ಲರಿಗೂ ತಾತಪ್ಪ. ಅವನ ಕಾಪಾಡೋ ಗತಿ.

ನಾನು—ಹಾಗೆ ಆಗಲಿ- ಆ ನಮ್ಮ ತಾತಯ್ಯ ಎಲ್ಲಿದ್ದಾರೆ ಹೇಳು

ದಾ.—ಆ ನಮ್ಮ ದಣಿ. ವೈಕುಂಟದಲ್ಲಿ ನಾರಾಯಣನ ಜತೇಲಿ ಮಾತಾಡುತ್ತಾ ಕುಂತುಬಿಟ್ಟವ್ನೆ.

ನಾನು.- ಇಲ್ಲಿಗೆ ಬರೋದಿಲ್ಲವಂತೇನೋ ದಾಸಯ್ಯ. ಆ ತಾತ !

ದಾ.—ಎಂಗೇಳಲೋ ನಮ್ಮ ಸ್ವಾಮಿ ನೋಡ್ಕೊಂಡು ಬರ್ತೀನಿ ಅಂತಾ ಹೊರಟವ್ರು. ಆ ಅಮ್ಮ ಅವರೆಲ್ಲ ಲಕ್ಷ್ಮೀದೇವಿ. ದಾಸಯ್ಯನ ರೆಕ್ಕೆ ಹಿಡಿದೆಳೆದು ಕುಂದ್ರಿ ಅವ್ರ ಎಲ್ಲ ಹೋಗ್ತಿ. ನೀನು ಇಲ್ಲೇ ಇದ್ದು ನನಗೆ ಬುದ್ಧಿ ಹೇಳ್ಕೊಂಡು ಅಂತಾ ಹೊಂಟವ್ರನ್ನ ನಿಲ್ಲಿಸಿಬಿಟ್ಟಳು.

ನಾನು. ಆಗ ನೀನೇನು ಮಾಡ್ದೆ—ದಾಸಯ್ಯ ?

ದಾ — ನಾನೂ ನನ್ನ ಸಂಕ ಜಾಗ್ಟೆ ಇಟ್ಟು ಕುಂತ್ಕೊಳ್ಳೋಕ ಹೋದೆ. ಆಗ ತಾತಯ್ಯ ನನ್ನ ಕರದು ಎಲೋ ದಾಸಯ್ಯ ಈಸು ದಿನ... ಈ ಗಂಟಿನ ತುಂಬ ಕಾಗದ ಬರದಿಟ್ಟಿದೀನಿ. ಇವನ್ನು ತೆಕ್ಕೊಂಡು ಹೋಗಿ ನಮ್ಮ ದೊಡ್ಡ ಹುಡುಗನ ಕೈಲಿ ಕೊಡು. ಅವರಲ್ಲಿರೋದರಲ್ಲಿ ನಮ್ಮ ರಂಗಪ್ಪ ನನ್ನ ಕಡೆಯೋನು ... ನೀನೂ ರಂಗಪ್ಪನ ಹತ್ರ ಕೇಳ್ಕೊಂಡಿರು. ಅಂದ್ಬಿಟ್ರು. ನನಗಾ ಒಂದ್ಬಿಟ್ಟ

ನಾನು. ರಂಗಪ್ಪ ಗಂಟಿನಲ್ಲಿದ್ದ ಕಾಗದವನ್ನು ಬಿಚ್ಚಿದ್ದರೇನೋ ?

ದಾ. ನೀವೆಲ್ಲಿ ನುಲಿಗಿದ್ದಿರಿ? ಆಗಲೇ ಎರಡು ಕಾಗದ ಬಿಚ್ಚಿ ತಾತಯ್ಯನ ಮಾತು ಎಲ್ಲರಿಗೂ ತಿಳಿಸಲಿಲ್ವಾ ?

ನಾನು – ಅಪ್ಪ ಎರಡು ಕಾಗದ! ನಾನು ನೋಡಲೇ ಇಲ್ಲವಲ್ಲೋ ದಾಸಯ್ಯ - ಅದರಲ್ಲಿ ಎಂತಾ ವಿಷಯ ಬರೆದಿತ್ತೊ ಕಾಗದದಲ್ಲಿ ಏನು ನಾ ಹೇಳಲಿ ?

ದಾ. ಆ ತಾತಯ್ಯನ ಒಂದೊಂದು ಮಾತು ಎತ್ತಿಯ ಮುತ್ತು. ರತ್ನದ ಗದ್ದು ಮತ್ತೆ ನಿಲ್ಲಾ ಸಂತೋಷದ ಪದಗಳು. ಹುಡುಗರಿಗೆಲ್ಲಾ ಚಿನ್ನದ ಕಥೆಗಳು. ಆ ಮಾತುಗಳನು ಪ್ರೀತಿಯಿಂದ ಓದಿದವರು. ಆನಂದದ ಪದಗಳು, ಕಲ್ಲಿನೆಲ್ಲ ಒಳ್ಳೇ ಗುಣಗಳು. ಆ ಗುರುಗಳ್ಳ ಪುಸ್ತಕಗ ಅವರ್ಯರಿಗೆಲ್ಲಾ ಮನಸಿಗೆ ರೋಗ ಪರಿಹಾರದ ಔಷಧ ಎಷ್ಟು ಅಂತಾ ಹೇಳಲೀ - ಗೋವಿಂದಾ. ಗೋವಿಂದ. ತಾತಯ್ಯನ ಮಾತೇ ಮಾತು.

ನಾನು:—ದಾಸಯ್ಯ, ಮೊದಲನೇ ಕಾಗದದಲ್ಲಿ ಏನು ಇತ್ತೊ ತಿಳಿದದ್ದರ ಹೇಳು.

ದಾ:—ಚಿನ್ನದಂತಾ ಮಾತು. ಎರಡು ಮೂರು ಸಲ ಹೇಳ್ತ್ಯಾಡ್ದ್ಯ. ಇನ್ನು ಮೇಲೆ ನಿಂಗೆ ಕೇಳ್ಬೇಡಿ. ಮತ್ತೆ ಹೇಳ್ಬಿಡ್ತೀನಿ ಕೇಳಿ ನನ್ನಪ್ಪನ ಮಾತಾ.—

ಒಂದು ದಿನ ನಾನು—ತಾತ. ತಾತ. ಒಂದು ಕತೆಯೇಳಪ್ಪಾ ಅಂದೆ. "ಮುಯ್ಯಿಗೆ ಮುಯ್ಯಿ" ಅಂದ ಅಜ್ಜ. ಅದೆಂಗೆ ಅಂದೆ ನಾನು. ಆಗ ತಾತ ಸುರು ಮಾಡ್ತಾ ಮಾಡ್ತಾ ನಾನು ಹಂಗೇ ಒಪ್ಪಾಗಿ ಕುಂತ್ಬಿಟ್ಟೆ.

ನಾನು—(ಕಾಗದವನ್ನು ಓದಿದೆ ಅದರಲ್ಲಿ ಇತ್ತು ಹೀಗೆ):—

ದಾಸಯ್ಯ - ಅದೆಂದೊಂದು ಅಂತ ಒಂದೂರು. ಕೃಷ್ಣರಾಯ ಅಂತ ಒಬ್ಬ ದೊರೆ. ಬಹಳ ಸತ್ಯವಂತ. ಅವನ ಹತ್ತಿರ ಕೆಲವರು ಹೊಟ್ಟೆಬಾಕರು ಸೇರಿಕೊಂಡಿದ್ದರು.

ಕೃಷ್ಣರಾಯನ ತಾಯಿಗೆ ವಿಪರೀತ ಖಾಯಿಲೆ ಬಂತು. ಮಾವಿನ ಹಣ್ಣನ್ನು ತಿನ್ನಬೇಕೆಂದು ಆಸೆಯಾಯಿತು. ಅಕಾಲವಾದ್ದರಿಂದ ಎಲ್ಲಿಯೂ ಮಾವಿನಹಣ್ಣು ಸಿಕ್ಕಲಿಲ್ಲ. ಹಾಗೆಯೇ ಸತ್ತುಹೋದಳು. ರಾಜನ ಹತ್ತಿರವಿದ್ದವರು ಚಿನ್ನದ ಮಾವಿನ ಹಣ್ಣನ್ನು ಮಾಡಿಸಿ ತಮಗೆ ದಾನ ಮಾಡಿದರೆ ಆಕೆಗೆ ತೃಪ್ತಿಯಾಗುವುದೆಂದು ಹೇಳಿದರು. ದೊರೆಯು ಹಾಗೇ ಮಾಡಿದನು.

ದೊರೆಯ ಬಳಿ ರಾಮಕೃಷ್ಣನೆಂಬೊಬ್ಬ ಶಿಷ್ಯ. ಇದನ್ನೆಲ್ಲಾ ತಾನು ನೋಡಿದನು. ತಕ್ಕ ಬುದ್ಧಿ ಕಲಿಸಬೇಕೆಂದು ಅಂದುಕೊಂಡನು. ಮೇಲ್ಕಂಡ ಜನರನ್ನೆಲ್ಲಾ ತನ್ನ ಮನೆಗೆ ಕರೆದನು. ತನ್ನ ತಾಯಿಯು ಚಳಿಯಿಂದ ನಡುಗಿ ಸತ್ತಳೆಂದೂ ಬರೆ ಹಾಕಬೇಕೆಂದು ಕೇಳುತ್ತಿದ್ದಳೆಂದೂ ಹೇಳಿ ಕಬ್ಬಿಣದ ಸಲಾಕಿಗಳನ್ನು ಕಾಯಿಸಿ ಅವರೆಲ್ಲರಿಗೂ ಬರೆಯನ್ನು ಎಳೆಯಲು ಆರಂಭಿಸಿದನು. ಎಲ್ಲರೂ ಹೇಳದೆ ಕೇಳದೆ ಪರಾರಿಯಾದರು.

ಈ ಕಥೆಯನ್ನು ನೋಡಿ "ದಾಸಯ್ಯ, ಎರಡನೆ ಕಾಗದದಲ್ಲಿ ತಾತಯ್ಯ ಏನು ಬರೆದಿದ್ದಾರೆ" ಅಂದೆ.

ದಾಸಯ್ಯ—ಮುಂದಿನ ಸೋಮವಾರ ಬಂದರೆ ಆ ಕಾಗದದಲ್ಲಿದ್ದದ್ದನ್ನು ಹೇಳ್ತೀನೆ.

ಎಂದು ಹೇಳಿ ಶ್ರೀಮನ್ನಾರಾಯಣ ಗೋವಿಂದಾ ಗೋವಿಂದ, ಎಂದು ಜಾಗಟೆ ಬಾರಿಸುತ್ತಾ ದಾಸಯ್ಯ ಹೊರಟು ಹೋದನು.

ನಾನು ಮುಂದಿನ ಸೋಮವಾರವನ್ನು ಎದುರುನೋಡುತ್ತಿದ್ದೇನೆ.

ನಂಜನಗೂಡು ವರ್ತಮಾನ.

(ನಮ್ಮ ಬಾತ್ಮೀದಾರರಿಂದ)

ಮುನಿಸಿಪಾಲಿಟಿ

ಸಾಕೀಚಾ ಸುತರಾಂ ಸಮರ್ಪಕವಾಗಿಲ್ಲ. ಇಷ್ಟೊಂದು ಭಾರೀ ಸಂಬಳದ ಸ್ಯಾನಿಟರಿ ಇನ್‌ಸ್ಪೆಕ್ಟರವರು ಇಲ್ಲಿಗೆ ಅನವಶ್ಯಕವೆಂಬುದು ಅನೇಕರ ಅಭಿಪ್ರಾಯ.

ಮೈಸೂರು ದೇಶದಲ್ಲಿ ಮತ್ತೆಲ್ಲಿಯೂ ಇಲ್ಲದಷ್ಟು ನೀರಿನ ತೆರಿಗೆಯನ್ನು ನಾವು ಕೊಡುತ್ತಿದ್ದರೂ, ಇಲ್ಲಿನ ಕಣಜದ ಬೀದಿ ಅರಮನೆ ಬೀದಿಗಳಲ್ಲಿ ಅರಮನೆಯಿಂದ ಈಕಡೆ ಸುತರಾಂ ನೀರಿನ ಸರಬರಾಯಿ ಇಲ್ಲ. ಜನರು ಬಹು ಕಷ್ಟಪಡುತ್ತಿದ್ದಾರೆ.

ಡ್ರೆಯಿನೇಜ್ ವ್ಯವಸ್ಥೆ:—ಸಬ್ ಡಿವಿಜನ್ ಆಫೀಸರವರು ಸ್ವಂತವಾಗಿ ನಿಂತು ರಥದ ಬೀದಿ ಕೆಲಸವನ್ನು ಸುಲಲಿತವಾಗಿ ನೆರವೇರಿಸಿದರಲ್ಲದೆ ಹಳ್ಳಿಯ ರೈತರಿಗೆ ಅವರು ಆ ದಿನ ಕೊಟ್ಟ ಬುದ್ಧಿವಾದವು ಅಮೂಲ್ಯವಾದುದಾಗಿದ್ದಿತು. ಮುಂದಿನ ರಥೋತ್ಸವವು ಒಂದು ವ್ಯವಸ್ಥಿತವಾದ ಕ್ರಮದಿಂದ ನೆರವೇರಬಹುದೆಂದೂ ಗ್ರಾಮ ಜೀವನದಲ್ಲಿ ಹೊಸ ಚಟುವಟಿಕೆಯೇ ಹುಟ್ಟಬಹುದೆಂದೂ ತೋರುವುದು.

ಮುನಿಸಿಪಲ್ ಆಫೀಸಿನವರು ಈ ವರುಷ ದನಗಳ ಜಾತ್ರೆಯನ್ನು ಹೆಚ್ಚು ವಿಜೃಂಭಣೆಯಿಂದ ನೆರವೇರಿಸಲೆಂದು ಹಾರೈಸುತ್ತೇವೆ.

ಕೋ-ಆಪರೇಟಿವ್ ಕ್ರೆಡಿಟ್ ಬ್ಯಾಂಕಿನವರು ಇಷ್ಟರಲ್ಲಿಯೇ ಬಡ್ಡಿಯ ದರಗಳನ್ನು ಇಳಿಸುವವರಾಗಿರುತ್ತಾರೆಂದು ಕೇಳಿ ಜನರೆಲ್ಲರೂ ಬ್ಯಾಂಕಿನವರನ್ನು ಕೊಂಡಾಡುತ್ತಿದ್ದಾರೆ

ಆಟದ ಮೈದಾನವನ್ನು ಬಿಡುವವರು ದೊಡ್ಡ ಜಾತ್ರೆಗೆ ಒದಗುತ್ತಾರೆಂದು ಕೇಳುತ್ತೇವೆ.

ಕೀರ್ತಿಶೇಷ ದೇಶೋದ್ಧಾರಿಣಿ ಕಮಲಾ ನೆಹ್ರೂರವರ ಸ್ಮಾರಕಕ್ಕಾಗಿ ತಂಗಡಿಗಳಲ್ಲಿ ವೂ ಒಂದು ಮಾಡಲ್ಪಟ್ಟದ್ದವು ಇಲ್ಲಿನ ಕೋ-ಆಪರೇಟಿವ್ ಕ್ರೆಡಿಟ್ ಬ್ಯಾಂಕಿನ ಹಾಲಿನಲ್ಲಿ ಪುರಜನರು ಸಭೆ ಸೇರಿ ಮೃತರ ಆತ್ಮಕ್ಕೆ ಶಾಂತಿಯನ್ನು ಕೋರಿ ಶ್ರೀ ಕೆ. ವೆಂಕಟಪ್ಪಾಮಯ್ಯರವರ ಅಧ್ಯಕ್ಷತೆಯಲ್ಲಿ ಪ್ರಾರ್ಥಿಸಿದರು.

ಲೋಕ ಕ್ಷೇಮಾರ್ಥ.

ಬೆಂಗಳೂರು ಸಜ್ಜನರಾಯರ ಛತ್ರದಲ್ಲಿ ಲೋಕ ಕ್ಷೇಮಾರ್ಥವಾಗಿ ಶ್ರೋತ್ರಿಯ ಬ್ರಾಹ್ಮಣರಿಂದ ಜಪತಪಗಳು ಮಾಡಿಸಲ್ಪಡುತ್ತಿವೆ. ಉತ್ತರ ದೇಶದಿಂದ ಇಲ್ಲಿಗೆ ಬಂದು ಲೇವಾದೇವಿ ನಡೆಸುವವರು ಈ ಕಾರ್ಯವನ್ನು ಕೈಗೊಂಡಿರುತ್ತಾರೆ.

ಜಪಾನಿನ ದಂಗೆ.

ಕೆಲವು ದಿನಗಳ ಕೆಳಗೆ ಜಪಾನಿನಲ್ಲಿ ನಡೆದ ದಂಗೆಯು ವಿಫಲವಾಗಿ ಅಲ್ಲಿನ ಮಾಜಿ ಯುದ್ಧ ಮಂತ್ರಿಗಳಾದ ಕಾನೂಕಿ ಮಾರನೂ ಚಕ್ರವರ್ತಿಗಳ ಅಂಗರಕ್ಷಕ ದಳದ ಆರು ಜನ ರೆಜ್ಮೆಂಟ್ ಕರ್ನಲ್‌ಗಳೂ ಇತರ 500 ಜನರೂ ರಾಜಿನಾಮೆ ಕೊಟ್ಟರು.

ಜಮೀನ್ ತಕರಾರು.

ಸ್ವಾಮಿ,

ಚಾಮರಾಜನಗರದ ತಾ॥ ಹರವೆ ಹೋಬಳಿ ಕೆರೆಹಳ್ಳಿ ಗ್ರಾಮದ ಸರ್ವೆ 35 ಮತ್ತು ಈ ಗ್ರಾಮದ ಸಮೀಪದಲ್ಲಿರುವ ಭುಜಗನಪುರ ಗ್ರಾಮದ ಸರ್ವೆ 69—ಈ ಎರಡು ಜಮೀನುಗಳನ್ನು ನಂಜನಗೂಡು ತಾ॥ ಕೌಲಂದೆ ಗ್ರಾಮದ ಮಹಮದೀಯರು ತಮಗೆ ಮಸೀತಿಗೆ ಕೊಡಬೇಕೆಂದು ಐದಾರು ವರ್ಷದ ಹಿಂದೆ ಅರ್ಜಿ ಕೊಟ್ಟಿದ್ದರು. ಸರ್ಕಾರದವರು ಕೊಡಕೂಡದೆಂದು ಅರ್ಜಿಯನ್ನು ವಜಾ ಮಾಡಿರುತ್ತಾರೆ. ಈಗ ಕೆರೆಹಳ್ಳಿ ಗ್ರಾಮದ ಜಮೀನನ್ನು ಪುನಃ ಕೊಡಿಸಬೇಕೆಂದು ಅರ್ಜಿ ಹಾಕಿದ್ದರು. ಸರ್ಕಾರದವರು ಆರ್ಡರ್ ಮಾಡಿರುವುದಾಗಿ ತಿಳಿಯಬರುತ್ತದೆ. ಸರ್ಕಾರದವರು ಗ್ರಾಮದಲ್ಲಿ ವಿಚಾರ ಮಾಡದೆ ಆರ್ಡರ್ ಮಾಡುವುದು ನ್ಯಾಯವಾಗಿ ತೋರುವುದಿಲ್ಲ. ಏಕೆಂದರೆ 35 ವರ್ಷಗಳಿಂದಲೂ ಇಲ್ಲಿ ಮನಸ್ತಾಪಗಳಿವೆ. ಅನೇಕ ಅರ್ಜಿಗಳು ಸರ್ಕಾರದಲ್ಲಿ ದಾಖಲಾಗಿವೆ. ಈ ಜಮೀನು ಇತರ ರೈತರ ಜಮೀನಿನ ಮಧ್ಯಭಾಗದಲ್ಲಿದೆ. ಗ್ರಾಮಸ್ಥರು ರವಿನ್ಯೂ ಕಮೀಷನರಿಗೆ ಅರ್ಜಿ ಕಳುಹಿಸಿರುತ್ತಾರೆ. ಈ ವಿಷಯಕ್ಕೆ ಸರ್ಕಾರದವರು ಗಮನಕೊಟ್ಟು ಯಾವ ತೊಂದರೆಗೂ ಅವಕಾಶವಿಲ್ಲದಂತೆ ಬೇರೆ ಯಾವುದಾದರೂ ಸ್ಥಳದಲ್ಲಿ ಜಮೀನನ್ನು ಕೊಡುವಂತೆ ಏರ್ಪಡಿಸಬೇಕಾಗಿ ಪ್ರಾರ್ಥನೆ.

ಪ್ರಜಾ ಹಿತೈಷಿ.

ಸಿಂಧಘಟ್ಟದ ಸ್ಕೌಟ್ ರ್‍ಯಾಲಿ.

(ನಮ್ಮ ಬಾತ್ಮೀದಾರರಿಂದ)

ಮೈಸೂರಿನಿಂದ ಬಂದಿದ್ದ ಶ್ರೀಯುತ F. C. ದೇವರಾಜೆ ಅರಸಿನವರ ಅಧ್ಯಕ್ಷತೆಯಲ್ಲಿ ಮೇಲ್ಕಂಡ ರ್‍ಯಾಲಿ ಉತ್ಸವವು ಸಿಂಧಘಟ್ಟದಲ್ಲಿ 8—3—36ರಲ್ಲಿ ನೆರವೇರಿತು. ಕೃಷ್ಣರಾಜಪೇಟೆ, ಹೊಸಹೊಳಲು ಇಲ್ಲಿಂದ ಸ್ಕೌಟುಗಳೂ ಸ್ಕೌಟು ಮಾಸ್ಟರುಗಳೂ ಬಂದಿದ್ದರು. ಮೈಸೂರಿನಿಂದ ದಳವಾಯಿಯವರ ಸ್ಕೂಲ್ ಹೆಡ್ಮಾಸ್ಟರವರಾದ ಶ್ರೀಯುತ ನಂಜುಂಡಯ್ಯನವರೂ ಬಂದು ಈ ಉತ್ಸವದಲ್ಲಿ ಭಾಗಿಗಳಾಗಿದ್ದರು. ಈ ಊರಿನ ಪುರಪ್ರಮುಖರು, ಇತರರೂ ಎಲ್ಲಾ ಕೋಮುಗಳವರೂ ಬಂದಿದ್ದರು.

ರಾತ್ರಿ 9 ಘಂಟೆಗೆ ಕೋಳದ ಬಳಿ ಏರ್ಪಡಿಸಿದ್ದ ಬೆಳದಿಂಗಳ ಭೋಜನಾನಂತರ ಈ ಊರಿನ ಸ್ಕೂಲ್ ಮಾಸ್ಟರ್ ಶ್ರೀ ಎಸ್. ಕೃಷ್ಣಯ್ಯಂಗಾರ್ಯರವರಿಂದ ಒಂದು ಘಂಟೆಯ ಕಾಲ ಮನೋಹರವಾದ ಸಂಗೀತವಾದ ನಂತರ ಆ ದಿವಸದ ಕಾರ್ಯಕಲಾಪವು ಮುಗಿಯಿತು.

ಹೊಸ ಸಿನಿಮಾ.

ಇದುವರೆಗೆ ರಾಜೇಂದ್ರ ಟಾಕೀಸ್ ನಡೆಯುತ್ತಿದ್ದ ಸ್ಥಳದಲ್ಲಿ ಶ್ರೀ॥ ತಿಮ್ಮಯ್ಯಾಚಾರ್ಯರವರು ತಾವೇ ಸ್ವಂತವಾಗಿ ಚಾಮುಂಡೇಶ್ವರೀ ಟಾಕೀಸ್ ಎಂಬ ಹೆಸರಿನಿಂದ ಸಿನಿಮಾವನ್ನು ಕಳೆದ ಬುಧವಾರದಿಂದ ಆರಂಭಿಸಿರುವರು.

ಶ್ರೀ ರಂಗನಾಥ ಟೈಪ್ ಫೌಂಡ್ರಿ

ಚಿಕ್ಕಪೇಟೆ, ಬೆಂಗಳೂರು ಸಿಟಿ.

ಸುಂದರವಾದ ಅಕ್ಷರಗಳು, ಮುದ್ದು ಮುದ್ದಾದ ಬಾರ್ಡರುಗಳು ಬಗೆಬಗೆಯ ಆಕಾರ ನಮಗೆ ಈ ಕೆಲಸದಲ್ಲಿ ೩೦ ವರ್ಷಗಳ ಕಾಲದ ಅನುಭವವಿದೆ. ಆಧುನಿಕ ಕಾಲಕ್ಕೆ ತಕ್ಕಂತೆ ಅಕ್ಷರದ ಆಕಾರವನ್ನು ಬಹು ಸುಂದರವಾಗಿ ಸುಧಾರಿಸಿದ್ದೇವೆ. ನಮ್ಮಲ್ಲಿನ " ಕನ್ನಡ, ಇಂಗ್ಲೀಷ್ " ಅಕ್ಷರಗಳಂತಹ ಸುಂದರವಾದ ಅಕ್ಷರಗಳನ್ನು ಮತ್ತೆಲ್ಲಿಯೂ ನೋಡಲಾರಿರಿ. ಮತ್ತು ನೂರಾರು ಬಗೆಯ ಸುಂದರವಾದ ಬಾರ್ಡರುಗಳು, ನಯನಮನೋಹರವಾಗಿವೆ. ೮ ಪಾಯಿಂಟಿನಿಂದ ೪೮ ಪಾಯಿಂಟಿನವರೆಗೆ ವಿಧವಿಧವಾದ ಸುಂದರಾಕ್ಷರಗಳಿವೆ. ನಮ್ಮ " ರಂಗನಾಥ ಕನ್ನಡ ಡಾಮಿನೆಸ್" ಅಕ್ಷರಗಳನ್ನು ನೋಡಲು ಮರೆಯಬೇಡಿರಿ. ನಾವು ಕಾಪರ್ ಅಲಾಯ್ಸ್ (ತಾಮ್ರಮಿಶ್ರಿತ) ಸೀಸದಿಂದ ಅಕ್ಷರಗಳನ್ನು ತಯಾರಿಸುತ್ತೇವೆ. ಸುಲಭ ಬೆಲೆ. ಗ್ಯಾರಂಟಿಯಾದ ಬಾಳಿಕೆ.

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ಬಾಲಸುಧಾ

ಮಕ್ಕಳ ಜ್ವರದ ಗೆಡ್ಡೆಯನ್ನು ಬಹಳ ಗುಣ ಪಡಿಸುತ್ತೆ. ಲಿವರ್ (ಪಿತ್ತಕೋಶ) ದಪ್ಪನಾಗಿ ಕಣ್ಣು ಹಳದಿ ಬಣ್ಣವಾಗಿದ್ದರೆ ಇದರ ಸೇವನೆಯಿಂದ ದಿನೇ ದಿನೇ ಗುಣವಾಗುತ್ತೆ. 20 ವರ್ಷಗಳಿಂದಲೂ ಅನುಭವ ಸಿದ್ಧವಾಗಿದೆ—ಮಕ್ಕಳ ಹೊಂದಿಗೆ ನಮ್ಮ ಬಾಲ ಸಂಜೀವಿನಿಯನ್ನೇ ಉಪಯೋಗಿಸಿರಿ.

ಬಾಲ ಸುಧಾ ಬೆಲೆ ೧ ಆ. ಬಾಲ ಸಂಜೀವಿನಿ ೪ ಆ.

ಮೈಸೂರು, ಬೆಂಗಳೂರು, ಮದ್ರಾಸುಗಳಲ್ಲಿ ನಮ್ಮ ಶಾಖೆಗಳಿವೆ.

ಸದ್ವೈದ್ಯಶಾಲಾ, ನಂಜನಗೂಡು.

ಶೀಘ್ರದಲ್ಲಿಯೇ ಬರುತ್ತದೆ! ನಂಜನಗೂಡಿನಲ್ಲಿರುವ ಲಕ್ಷ್ಮೀ ಥಿಯೇಟರಿನಲ್ಲಿ!

ರಾಜೇಂದ್ರ ಸಿನಿಮಾ, ನಂಜನಗೂಡು.

ಪ್ರೊಪ್ರೈಟರ್ಸ್ :
ಸೋನರಾಜ್ ರತನ್ ಚಂದ್ ಅಂಡ್ ಕಂಪೆನಿ, ಮೈಸೂರು.

ತಮ್ಮ ಅಪೂರ್ವ ಮೂಕ ಚಲನ ಚಿತ್ರಗಳನ್ನು ಪ್ರದರ್ಶಿಸುತ್ತಾರೆ. ಬರುವ ತಾರೀಖನ್ನು ಗಮನಿಸಿರಿ:—ಸತೀ ಸುಲೋಚನ ವೆಂಬ ಕನ್ನಡ ಚಿತ್ರದಲ್ಲಿ ಸೀತೆ ಪಾತ್ರ ಧರಿಸಿರುವ ಮಿಸೆಸ್ ರಾಜಂ ಮತ್ತು ಕೊಲ್ಹಾಪುರದ ಪ್ಲಂಟ್ ಮಾಸ್ಟರ್, ಪ್ರಭಾತ ಫಿಲಂ ಕಂಪೆನಿಯ ಸೈಟಂಗ್ ಬ್ಲಡ್ ಮತ್ತು ಚಂದ್ರಸೇನೆಯಲ್ಲಿ ಪಾರ್ಟು ಮಾಡಿರುವ ಗಣಪತಜಯ ಮುಖ್ಯಪಾತ್ರ ವಹಿಸಿರುವ ಪೌರಾಣಿಕ ಚಲನ ಚಿತ್ರ

ಭಕ್ತ ವಿಜಯ

(ಮೊದಲನೇ ಪ್ರದರ್ಶನ)

(ರಮೇಶ್ ಫಿಲಂ ಕಂಪೆನಿ, ಬೆಂಗಳೂರು ಇವರ ತಯಾರಿಕೆ.) ಡೈರಕ್ಟರು ವೈ. ವಿ. ರಾವ್, (ಸತೀ ಸುಲೋಚನ ಡೈರೆಕ್ಟರು.)

FOR SILENT & TALKIE PICTURES
Bookings at
RAJENDRA PICTURES CORPORATION
Sayaji Rao Road Cross, Mysore.

ಶ್ರೀ ಸತ್ಯನಾರಾಯಣ ವೈದ್ಯಶಾಲೆ.

ಚಲುವಾಂಬಾ ಅಗ್ರಹಾರ, ಮೈಸೂರು.

ವಿಷೂಚಿ ವಿಧ್ವಂಸಿನಿ, ಅಶ್ವಾರಿ ಚೂರ್ಣ, ದ್ರಾಕ್ಷಾದಿ ರಸಾಯನ, ಜ್ವರಾಂಕುಶ ಮಾತ್ರೆಗಳು, ಸತ್ಯನಾರಾಯಣ ರಸಾಯನ ದಂತರೋಗ ನಿವಾರಿಣಿ, ಪುಷ್ಪಾಂಜನ.

ಪಂಡಿತ ಸಿ. ಎಚ್. ಚಂದ್ರಭೂಷಸಿಂಗ್ ಅಂಡ್ ಬ್ರದರ್

ಮಹಾಕಾಳಿಂಗಾದಿ ಕಷಾಯ

" ಮಲೇರಿಯಾ ಮತ್ತು ಇತರ ಜ್ವರಗಳಿಗೆ ಖಚಿತ ಔಷಧ " ಈ ಕಷಾಯವು ಪ್ಲೀಹ ಮತ್ತು ಯಕೃತ್ಖಂಡಗಳ ವರ್ಧನ (ಜ್ವರದಗೆಡ್ಡೆ) ಯಿಂದೊಡಗೂಡಿದ ಮತ್ತು ಇತರ ಸತತ ಸಂತತ ಮತ್ತು ದೀರ್ಘಕಾಲದ ಎಲ್ಲಾ ಬಗೆಯ ಜ್ವರಗಳಿಗೂ ಮನಗಂಡ ನಿರ್ಣಯವಾದ ಸಂಜೀವನವು. ಮರುಜ್ವರಬರುವವರೆಗೆಲ್ಲಿ ಆಗಾಗ್ಗೆ ಸೇವಿಸುವುದರಿಂದ ಈ ಬಗೆಯ ಜ್ವರವು ಆಟಮಾಡಲಿಲ್ಲ. ಔಷಧಿಯು ಒಂದೆಂಡಾವರ್ತಿ ಭೇದಿಯನ್ನು ಮಾಡಿಸುತ್ತದೆ ಇದರ ಸೇವನೆಯಿಂದ ಯಕೃತ್ಖಂಡದ ಕೆಲಸವು ಸರಿಯಾಗುವುದು. ಪ್ಲೀಹವು ತನ್ನ ಸ್ಥಿತಿಗೆ ಬರುವುದು. ರಕ್ತದಲ್ಲಿ ಕೆಂಪು ಕಣಗಳು ಹೆಚ್ಚುವುವು. ಮತ್ತು ವ್ಯಾಧಿಗ್ರಸ್ತನು ಸ್ವಲ್ಪ ದಿವಸಗಳಲ್ಲಿಯೇ ಉತ್ತಮವಾದ ಆರೋಗ್ಯ ಸ್ಥಿತಿಗೆ ಬರುವನು. ಈ ಶಾಸ್ತ್ರೀಯ ವನಸ್ಪತಿ ಸಂಯೋಗವು ಎಲ್ಲಾ ಬಗೆಯವುಗಳಲ್ಲಿ ಸಕಲ ವಿಧ ಜ್ವರಗಳನ್ನು ಗುಣಪಡಿಸುತ್ತದೆ.

ಕ್ರಯ ೭ ಔನ್ಸ್ ಶೀಸೆ ೧ ಕ್ಕೆ ೧—೪—೦

ಬ್ರಾಂಚ್:—ಶ್ರೀಸತ್ಯನಾರಾಯಣ ಆಯುರ್ವೇದಿಕ್ ಮೆಡಿಕಲ್ ಸ್ಟೋರ್ಸ್, ಜಗನ್ಮೋಹನ ಬಂಗ್ಲೆ ರಸ್ತೆ, ಮೈಸೂರು.

ನಾಳಿನ ಮಹಾ ಮೈಸೂರು.

ಉದಯವಲು ಅಡಿಗಲ್ಲನ್ನಿಡಿ.

ಮೈಸೂರು ವಿಮಾ ಕಂಪೆನಿಯೊಂದಿಗೆ ಸರ್ವ ಪ್ರಕಾರದಿಂದಲೂ ಸಹಕರಿಸಿ. ಇದು ನಮ್ಮ ಪ್ರಾರ್ಥನೆ.

ಹೀಗೆ ಪ್ರಾರ್ಥಿಸುವುದು ನಮ್ಮ ಜನ್ಮಸಿದ್ಧವಾದ ಹಕ್ಕು. ಹಾಗೆ ಸಹಕರಿಸುವುದು ನಿಮ್ಮ ಪವಿತ್ರ ಕರ್ತವ್ಯ.

ಕರ್ನಾಟಕದಲ್ಲಿ ಸ್ಥಾಪಿತವಾದ ವಿಮಾ ಕಂಪೆನಿಗಳಲ್ಲಿ ಪ್ರಥಮ ವರ್ಷದಲ್ಲೇ ಯಾವುದೂ ಈ ಕಂಪೆನಿಯಷ್ಟು ಕಾರ್ಯ ನಡೆಸಿಲ್ಲ.

ನಾಳಿನ ಮಹಾ ಮೈಸೂರಿನ ಮುಂಬೆಳಗು ಯಾವುದು?

ಮೈಸೂರು ವಿಮಾ ಕಂಪೆನಿ, ಲಿಮಿಟೆಡ್.,

ಬೆಂಗಳೂರು

ಮೈಸೂರು ವಿಮಾ ಕಂಪೆನಿಯು ಮೈಸೂರಿನವರ ಮತ್ತು ಮೈಸೂರಿನ ಅಭ್ಯುದಯಕ್ಕಾಗಿ ಮೈಸೂರು ಬಂಡವಾಳದಿಂದ ಮೈಸೂರಿನವರ ನೇತೃತ್ವದಲ್ಲಿ ಮೈಸೂರಿನ ಕೆಲಸಗಾರರಿಂದ ನಡೆಸಲ್ಪಡುತ್ತಿರುವ ಅಚ್ಚ ಮೈಸೂರು ಸಂಸ್ಥೆ.

[illegible] ಅಭಿವೃದ್ಧಿಗೋಸ್ಕರ ದೇಶದ ನಾನಾ ಭಾಗಗಳಲ್ಲಿ ನಡೆಯುತ್ತಿರುವ ಪ್ರಯತ್ನಗಳಿಗೆ ತನ್ನ ಶಕ್ತ್ಯಾನುಸಾರ [illegible] ನೆರವಾಗಬೇಕೆಂಬ ಆಶೆಯಿಂದ ಈ ಸಂಸ್ಥೆಯು ಬೆಳಕಂಡಿತು.

ವಿಮಾ ಉದ್ಯಮದಲ್ಲಿ ಇಡೀ ಸಂಸ್ಥಾನಕ್ಕೆ ಏಕಮಾತ್ರ ಆದರ್ಶ ಸಾರ್ವಜನಿಕ ಸಂಸ್ಥೆಯಿದು.

ಇಂತಹ ಕಂಪೆನಿಯಲ್ಲಿ ಮೈಸೂರಿನವರೆಲ್ಲರ ಪ್ರಾತಿನಿಧ್ಯವಿದ್ದೇ ತೀರಬೇಕು.

ಮೊದಲಿನ ೧ ಲಕ್ಷ ರೂ. ಗಳ ಷೇರುಗಳೂ ಅಲ್ಪಕಾಲದಲ್ಲಿಯೇ ಚಂದಾ ಆಗಿಹೋದವು

ಬೇಡಿಕೆ ಅವಶ್ಯಕತೆಗಳನ್ನನುಸರಿಸಿ

ಷೇರು ಬಂಡವಾಳವನ್ನು ಇನ್ನೂ ೨ ಲಕ್ಷ ಹೆಚ್ಚಿಸಲಾಗಿದೆ

ಈ ಎರಡು ಲಕ್ಷದಲ್ಲಿ ೧೦ ರೂಗಳ ೧೦೦೦೦ ಷೇರುಗಳನ್ನು ಮಾತ್ರ ಡೈರೆಕ್ಟರುಗಳು ಮಾರಾಟಕ್ಕಿಟ್ಟಿರುವರು

ಈ ಸಾವಿರ ಷೇರುಗಳಲ್ಲಿ ಈಗಾಗಲೇ

ಬಹು ಭಾಗವು ಚಂದಾ ಆಗಿದೆ

ಷೇರು ಬೇಕಾದರಿಂದೇ ಬರೆಯಿರಿ. ಇಂದು ಬಿಟ್ಟರೆ ನಾಳೆ ಸಿಗದು! ತ್ವರೆಮಾಡಿ.

ಸರ್ವರ ಅನುಕೂಲ ಅವಶ್ಯಕತೆಗಳಿಗೆ ಹೊಂದುವ ವೈದ್ಯ ಪರೀಕ್ಷೆಯಿರುವ ಮತ್ತು ಇಲ್ಲದಿರುವ ನವೀನ ವಿಮಾ ಪದ್ಧತಿಗಳು.

ಸ್ತ್ರೀಯರೂ ವಿಮೆ ಮಾಡಬಹುದು

ಏಜೆಂಟರುಗಳಿಲ್ಲದ ಸ್ಥಳಗಳಲ್ಲೆಲ್ಲಾ ಏಜೆಂಟರು ಬೇಕು.

ವೇತನದ ಮೇಲೆ ಕೆಲಸ ಮಾಡಲು ಅವಕಾಶವಿದೆ.

ಹೆಚ್ಚು ವಿವರಗಳಿಗೆ—

ಕಂಠೀರವ ಮತ್ತು ಕಂಪೆನಿ,
ಮ್ಯಾನೇಜಿಂಗ್ ಏಜೆಂಟ್ಸ್,
ಮೈಸೂರು ವಿಮಾ ಕಂಪೆನಿ ಲಿಮಿಟೆಡ್.,
ಶ್ರೀ ನರಸಿಂಹರಾಜ ರೋಡ್, ಬೆಂಗಳೂರು ಸಿಟಿ.

KANTEERAVA & Co.
Managing Agents,
MYSORE INSURANCE CO., LTD.,
Narasimharaja Road, Bangalore City.

Edited, Printed & Published by Agaram Rangiah, B. A., at Sri Rama Press, D. Subbiah Road, Mysore.

ವಾರ್ಷಿಕ ಚಂದಾ ವಿವರ.
[illegible] 1—8—0
[illegible] 2—1—0 ಬಿಡಿ ಪ್ರತಿ 0—0—6

ಜಾಹೀರಾತು ಚಂದಾ ವಿವರ.
[illegible] 0—1—0

|| ಸತ್ಯಮೇವೋದ್ಧರಾಮ್ಯಹಮ್ ||

ರಾಜಧಾನಿಯ ರಾಷ್ಟ್ರೀಯ ವಾರ ಪತ್ರಿಕೆ.

ವೃದ್ಧಪಿತಾಮಹ ಎಂ. ವೆಂಕಟಕೃಷ್ಣಯ್ಯನವರ ಜ್ಞಾಪಕಾರ್ಥವಾಗಿ ಪ್ರಕಟಿಸಲ್ಪಡುವುದು.

ಸಂಪಾದಕರು ಆಗರಂ ರಂಗಯ್ಯ, ಬಿ.ಎ

Sadhvi: A Leading Nationalist Weekly of Mysore.

FOUNDED IN MEMORY OF Mr. M. VENKATA KRISHNAYYA, THE GRAND OLD MAN OF MYSORE.

ಸಂಪುಟ ೧] MYSORE : MONDAY 23—3—36 ಮೈಸೂರು : ಸೋಮವಾರ ೨೩—೩—೩೬ [ಸಂಚಿಕೆ ೫

Specially arranged for Telugu New Year's Day.

'Sati Anjani' or 'Birth of Sri Hanuman'

The Mighty mythological master-piece of Sagar Film Co.,

From 24—3—1936, at OLYMPIA TALKIES.

ನೂತನ ಸಂವತ್ಸರದ ಸಮಾರಂಭ.

'ಸತಿ ಅಂಜನಿ' ಅಥವಾ 'ಶ್ರೀ ಹನುಮ ಜನ್ಮ'

ಒಲಿಂಪಿಯಾ ಟಾಕೀಸ್. ೨೪—೩—೩೬ ರಿಂದ.

ಶ್ರೀ ರಂಗನಾಥ ಟೈಪ್ ಫೌಂಡ್ರಿ

ಚಿಕ್ಕಪೇಟೆ, ಬೆಂಗಳೂರು ಸಿಟಿ.

ಸುಂದರವಾದ ಅಕ್ಷರಗಳು, ಮುದ್ದು ಮುದ್ದಾದ ಬಾರ್ಡರುಗಳು ಬಗೆಬಗೆಯ ಆಕಾರ

ನಮಗೆ ಈ ಕಲಸದಲ್ಲಿ ೩೦ ವರ್ಷಗಳ ಕಾಲದ ಅನುಭವವಿದೆ ಆದುದರಿಂದ ಕಾಲಕ್ಕೆ ತಕ್ಕಂತೆ ಅಕ್ಷರದ ಆಕಾರವನ್ನು ಬಹು ಸುಂದರವಾಗಿ ಸುಧಾರಿಸಿದ್ದೇವೆ ನಮ್ಮಲ್ಲಿ "ಕನ್ನಡ, ಇಂಗ್ಲೀಷ್" ಅಕ್ಷರಗಳಂತಹ ಸುಂದರವಾದ ಅಕ್ಷರಗಳನ್ನು ಮತ್ತೆಲ್ಲಿಯೂ ನೋಡಲಾರಿರಿ ಮತ್ತು

ನೂರಾರು ಬಗೆಯ ಸುಂದರವಾದ ಬಾರ್ಡರುಗಳು, ನಯನಮನೋಹರವಾಗಿವೆ ಬೇರೆ ಯಾರಲ್ಲಿಯೂ ಇಲ್ಲ ಪಾಯಿಂಟುಗಳಿಗೆ ವಿಧವಿಧವಾದ ಸುಂದರಾಕ್ಷರಗಳಿವೆ ನಮ್ಮ "ರಂಗನಾಥ ಕನ್ನಡ ಡಾಮಿನಸ್" ಅಕ್ಷರಗಳನ್ನು ನೋಡಲು ಮರೆಯಬೇಡಿರಿ. ಸುಲಭ ಕಾಸದ ಟಾಯ್ಪ್ (ತಾಮ್ರಮಿಶ್ರಿತ) ಸೀಸದಿಂದ ಅಕ್ಷರಗಳನ್ನು ತಯಾರಿಸುತ್ತೇವೆ ಸುಲಭ ಬೆಲೆ ಗ್ಯಾರಂಟಿಯಾದ ಬಾಳಿಕೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ಬಾಲಸುಧಾ

ಮಕ್ಕಳ ಒಂದು ಗೆಣ್ಣಿಯನ್ನು ಬಾಕಿ ಗುಣ ಪಡಿಸುತ್ತೆ. ಅ ವ ರ ಪಿತ್ಥ ಕೋಶ) ದಪ್ಪನಾಗಿ ಕಣ್ಣು ಹಳದಿ ಬಣ್ಣವಾಗಿದ್ದರೆ ಇದರ ಸೇವನೆಯಿಂದ ದಿನೇ ದಿನೇ ಗುಣವಾಗುತ್ತೆ. ೨೦ ವರ್ಷಗಳಿಂದಲೂ ಅನುಭವ ಸಿದ್ಧವಾಗಿದೆ—ಮಕ್ಕಳ ಜೋಡಿಗೆ ನಮ್ಮ ಬಾಲ ಸಂಜೀವಿನಿಯನ್ನೇ ಉಪಯೋಗಿಸಿರಿ

ಬಾಲ ಸುಧಾ ಬೆಲೆ 1 ರೂ   ಬಾಲ ಸಂಜೀವಿನಿ 4 ಆ

ಮೈಸೂರು, ಬೆಂಗಳೂರು, ಮದ್ರಾಸುಗಳಲ್ಲಿ ನಮ್ಮ ಶಾಖೆಗಳಿವೆ

ಸದ್ವೈದ್ಯಶಾಲಾ, ನಂಜನಗೂಡು.

ಶೀಘ್ರದಲ್ಲಿಯೇ ಬರುತ್ತದೆ!   ನಂಜನಗೂಡಿನಲ್ಲಿರುವ ಲಕ್ಷ್ಮೀ ಥಿಯೇಟರಿನಲ್ಲಿ!

ರಾಜೇಂದ್ರ ಸಿನಿಮಾ, ನಂಜನಗೂಡು.



ಪ್ರೊಪ್ರೈಟರ್ಸ್
ಸೋಲಾಪುರ್ ದರ್ಶ ಚೇಂಪ್ ಲಿಂಚ್
ಕಂಪೆನಿ ಮೈಸೂರು

ತಮ್ಮ ಉತ್ಕೃಷ್ಟ ಮೂಕ ಚಲನ ಚಿತ್ರಗಳನ್ನು ಪ್ರದರ್ಶಿಸುತ್ತಾ ಬಂದಿರುವ ಶಾಂತಿಯನ್ನು ಗಮನಿಸಿರಿ —ಸತೀ ಸುಲೋಚನ ಎಂಬ ಕನ್ನಡ ಚಿತ್ರದಲ್ಲಿ ಭಾಗ ಪಾತ್ರ ವಹಿಸಿರುವ ಮಿಸೆಸ್ ರಾಜಂ ಮತ್ತು ಕಲಾ ಪ್ರಿಯ ಸ್ಟಾರ್ ಸಮಸ್ತ ಪ್ರಖ್ಯಾತ ಸಿನಿಮಾ ಕಂಪನಿಯ ಸ್ಟಾರ್ ಮತ್ತು ಬಂಧುಸೇನೆಯಲ್ಲಿ ಪಾತ್ರವಹಿಸಿರುವ ಗಣಪತಜಯ ಸಾರ್ವಜನಿಕ ಮನೋಹರ ಪೌರಾಣಿಕ ಚಲನ ಚಿತ್ರ

ಭಕ್ತ ವಿಜಯ

(ಮೊದಲನೇ ಪ್ರದರ್ಶನ)

(ರಮೇಶ್ ಫಿಲಂ ಕಂಪನಿ ಬೆಂಗಳೂರು ಇವರ ತಯಾರಿಕೆ) ಡೈರೆಕ್ಟರು ವ್ಯ. ವಿ ರಾವ್. (ಸತೀ ಸುಲೋಚನ ಡೈರೆಕ್ಟರು)

FOR SILENT & TALKIE PICTURES
Booking at
RAJENDRA PICTURES CORPORATION
Sayaji Rao Road Cross, Mysore

ಭಂಗಾರದ ಪದಕಗಳೂ ಅನೇಕ ಪ್ರಶಸ್ತಿ ಪತ್ರಗಳೂ ದೊರೆತಿವೆ.

೧೫ ವರ್ಷಗಳಿಂದಲೂ

ಮೈಸೂರು ಸರ್ಕಾರದ ಅನೇಕ ಆಫೀಸರುಗಳ ಮೆಚ್ಚಿಕೆಗೆ ಪಾತ್ರವಾಗಿ

ಸುಂದರವಾದ

ಬೋರ್ಡುಗಳನ್ನೂ

ಉತ್ತಮವಾದ

ರಬ್ಬರ್ ಮೊಹರುಗಳನ್ನೂ

ತಯಾರುಮಾಡುವ

ನಮಗೆ ಸಂಸ್ಥಾನದ, ಮದರಾಸಿನ ಮತ್ತು ಕರ್ನಾಟಕದ ಖ್ಯಾತಿಯ ಸ್ಥಾನವನ್ನು ಪಡೆದಿದ್ದೇವೆ ಎಂಬುದನ್ನು ಮರೆಯದೆ ಜ್ಞಾಪಕದಲ್ಲಿಡಿರಿ

ಓರಿಯಂಟಲ್ ಇಂಡಸ್ಟ್ರೀಸ್,

ಜಗನ್ಮೋಹನ ಬಂಗ್ಲೆ ಬೀದಿ, ಮೈಸೂರು.

Where to go in Mysore?
Surely To

Bombay Anand Bhavan

Ideal Restaurant.

FRUIT SALAADS, COOL DRINKS, CRUSHES SWEETS ARE OUR SPECIALITIES

Catering arrangements undertaken

Have you visited Mount Abu?
If not, we shall take you there.

॥ ಸತ್ಯಮೇವೋದ್ಧರಾಮ್ಯಹಮ್ ॥
ರಾಜಧಾನಿಯ ರಾಷ್ಟ್ರೀಯ ವಾರ ಪತ್ರಿಕೆ.
ವೃದ್ಧ ಪಿತಾಮಹ ಎಂ. ವೆಂಕಟಕೃಷ್ಣಯ್ಯನವರ ಜ್ಞಾಪಕಾರ್ಥವಾಗಿ ಪ್ರಕಟಿಸಲ್ಪಡುವುದು
ಸಂಪಾದಕರು ಅಗರಂ ರಂಗಯ್ಯ, ಬಿ.ಎ.

ಸಂಪುಟ ೧] MYSORE · MONDAY 23—3—36 ಮೈಸೂರು : ಸೋಮವಾರ ೨೩—೩—೩೬ [ಸಂಚಿಕೆ ೫

ಪೌರಸಭೆಯ ಉಪಾಧ್ಯಕ್ಷರ ಅಧಿಕಾರಗಳು

ಮೈಸೂರು ಪೌರಸಭೆಯ ಉಪಾಧ್ಯಕ್ಷರಾದ ಮಿ॥ ಮಹಮದ್ ಸೇಟರು ಉಪಾಧ್ಯಕ್ಷರ ಅಧಿಕಾರದ ವಿಷಯವಾಗಿ ಕೆಲವು ಪ್ರಶ್ನೆಗಳನ್ನು ಎತ್ತಿರುತ್ತಾರೆ. ಅವುಗಳನ್ನು ಎಲ್ಲಾ ಸದಸ್ಯರೂ ಗಮನಿಸುವುದು ಸೂಕ್ತವಾಗಿದೆ. ಪೌರ ಸದಸ್ಯರನ್ನು ಕುರಿತು ಅವರು ದೀರ್ಘವಾದ ಒಂದು ಪತ್ರವನ್ನು ಬರೆದಿದ್ದಾರೆ. ಅದರಲ್ಲಿ ಮೈಸೂರು ಪೌರ ಸಭಾಧ್ಯಕ್ಷರಿಂದ ತಮಗೂ ನಡೆದ ಕೆಲವು ವ್ಯವಹಾರಗಳನ್ನು ಸೂಚಿಸಿರುವರು. ಅದರಿಂದ ತಮ್ಮ ಅಧಿಕಾರಕ್ಕೆ ಚ್ಯುತಿಯುಂಟಾಗಿರುವುದೆಂದೂ, ಆ ಮೂಲಕ ಸದಸ್ಯರ ಹಕ್ಕುಬಾಧ್ಯತೆಗಳಿಗೂ ಕುಂದುಂಟಾಗಿರುವುದೆಂದೂ ತಿಳಿಸಿರುತ್ತಾರೆ. ಉಪಾಧ್ಯಕ್ಷರಿಗೆ ಅಧ್ಯಕ್ಷರು ತಮ್ಮ ಅಧಿಕಾರದ ಕೆಲವು ಭಾಗಗಳನ್ನು ವಹಿಸುವ ವಿಚಾರದಲ್ಲಿ ಮ್ಯುನಿಸಿಪಲ್ ಕಾನೂನಿನಲ್ಲಿ ಸ್ಪಷ್ಟವಾಗಿ ಕೆಲವು ಅಂಶಗಳು ಸೇರಿಸಲ್ಪಟ್ಟಿವೆ. ಇದರ ಪ್ರಕಾರ ಸರ್ಕಾರದ ಸಮ್ಮತಿ ತೆಗೆದುಕೊಂಡು ಅಧ್ಯಕ್ಷರು ಉಪಾಧ್ಯಕ್ಷರಿಗೆ ವಹಿಸಬೇಕು. ಇಂತಹ ಸಂದರ್ಭಗಳಲ್ಲಿ ಅಧ್ಯಕ್ಷರು ಯಾವಾಗಿ ಸದಸ್ಯರ ಅಧಿಕಾರಗಳನ್ನು ಪುರಸ್ಕರಿಸಲಿಲ್ಲವೆಂದು ಅವರು ಹೇಳುತ್ತಾರೆ. ಇದಕ್ಕೆ ಪೌರಸಭಾ ಸದಸ್ಯರ ಗಮನವು ಕೊಡಲ್ಪಡುವುದೆಂದು ಕೋರಲ್ಪಟ್ಟಿದೆ.

ಬಂಗಾಳದಲ್ಲಿ ಕ್ಷಾಮ.

ಬಂಗಾಳದ ಪತಿಯಾ ದ್ವೀಪದಲ್ಲಿ ಕ್ಷಾಮವು ವಿಪರೀತವಾಗಿದೆ. ನೂರಾರು ಜನರು ಹೊಟ್ಟೆಗಿಲ್ಲದೆ ಕಷ್ಟಪಡುತ್ತಿರುವರು. ಹತ್ತು ಜನರು ಉಪವಾಸದಿಂದ ಸತ್ತುಹೋದರು.

ವಿಮಾನ ಸೌಕರ್ಯ

ಲಂಡನ್ನಿನಿಂದ ಇಂಡಿಯಕ್ಕೆ ವಾರದ ದಿನಗಳಲ್ಲಿ ಎರಡಕ್ಕೆ ವಿಮಾನಗಳು ಸಿದ್ಧವಾಗುತ್ತಿವೆ. ಈಗ ವಾರ ದಿನಗಳಲ್ಲಿ ತ್ವರಿತವೇ ಬರುವ ಸರ್ವೀಸ್ ಸಿದ್ಧವಿರುವ ನಾಲ್ಕನೆಯದೂ ಹೊರಡುತ್ತದೆ.

ಪತ್ರಿಕಾ ವೃತ್ತಿಯ ಶಿಕ್ಷಣವು ಅತ್ಯವಶ್ಯಕ.

ದಕ್ಷಿಣ ಆರ್ಕಾಟಿನ ಪತ್ರಿಕಾ ಕರ್ತರ ಸಂಘದವರು ರೈಟ್ ಆನರಬಲ್ ಶ್ರೀನಿವಾಸ ಶಾಸ್ತ್ರಿಗಳವರಿಗೆ ಕೊಟ್ಟ ಸತ್ಕಾರ ಕೂಟದಲ್ಲಿ ಹೀಗೆ ಹೇಳಿದರು
"ಪತ್ರಿಕೋದ್ಯಮವು ಯಶಸ್ವಿಯಾಗಿ ನಡೆಯಬೇಕಾದರೆ ವೃತ್ತಪತ್ರಿಕಾ ಶಿಕ್ಷಣವು ಅತ್ಯವಶ್ಯಕ"

ರೈ॥ ಆ॥ ಶ್ರೀನಿವಾಸ ಶಾಸ್ತ್ರಿ

ಇಂಗ್ಲೆಂಡಿನಲ್ಲಿ ಸೂರ್ಯ ನಮಸ್ಕಾರ

ಸೂರ್ಯನಮಸ್ಕಾರ ಮತ್ತು ಯೋಗಾಸನ ಕ್ರಮದ ವ್ಯಾಯಾಮಗಳನ್ನು ಔಂಧ್ ಸಂಸ್ಥಾನದ ಮಹಾರಾಜರು ಭರತಖಂಡದ ಅನೇಕ ಭಾಗಗಳಲ್ಲಿ ಪ್ರಚಾರ ಮಾಡಲು ಬದ್ಧಕಂಕಣರಾಗಿರುವರು. ನೂರಾರು ಸ್ಥಳಗಳಲ್ಲಿ ತಮ್ಮ ಶಿಕ್ಷಣಾಲಯಗಳನ್ನು ಸ್ಥಾಪಿಸಿರುವರು. ಈಗ ಈ ಪದ್ಧತಿಯನ್ನು ಪಾಶ್ಚಿಮಾತ್ಯ ದೇಶಗಳಲ್ಲಿಯೂ ಹರಡಲು ಅವರು ಇಂಗ್ಲೆಂಡಿಗೆ ಪ್ರಯಾಣ ಬೆಳೆಸಿರುವರು. ಅವರೊಡನೆ ಅವರ ಪಟ್ಟಮಹಿಷಿಯವರ ಶ್ರೀಮತಿ ಲಕ್ಷ್ಮೀನಾರಾಯಣ ಹೊರಟಿರುವರು.

ಚಕ್ರಗಳೇ ಇಲ್ಲದ ರೈಲು

ಚಕ್ರಗಳೇ ಇಲ್ಲದೆ ಬಹಳ ವೇಗದಿಂದ ಸಂಚರಿಸುವ ರೈಲುಗಳನ್ನು ತಯಾರು ಮಾಡಲು ಜರ್ಮನಿಯ ಕೆಲವು ಇಂಜನಿಯರುಗಳು ಸಿದ್ಧರಾಗಿರುವರು. ಈ ರೈಲುಬಂಡಿಯು ಅಂತರಿಕ್ಷದಲ್ಲಿ ಎಲೆಕ್ಟ್ರಿಕ್ ಮ್ಯಾಗ್ನೆಟುಗಳ ಮೂಲಕ ಸಂಚರಿಸುತ್ತವೆ. ಪರ್ವತ ಶಿಖರಗಳ ಮೇಲೆ ಎಲೆಕ್ಟ್ರಿಕ್ ಮ್ಯಾಗ್ನೆಟುಗಳು ಇಡಲ್ಪಡುತ್ತವೆ. ರೈಲುಕಂಬಿಗಳೇ ಬೇಕಾಗಿಲ್ಲ. ವಾಯು ವಿಮಾನಗಳಂತೆಯೇ ಇವುಗಳೂ ಆಕಾಶದಲ್ಲಿ ಎಲ್ಲಾ ಬಗೆಯ ಸಂಚಾರಕ್ಕೂ ಸೌಕರ್ಯವನ್ನುಂಟುಮಾಡುತ್ತವೆ.

ತಗಡೂರು ಖಾದಿ ಸಂಸ್ಥೆಯಲ್ಲಿ ಚಳುವಳಿ.

ಈ ಸಂಸ್ಥೆಯ ಮ್ಯಾನೇಜರವರಾದ ಮಿ॥ ವೈಕುಂಠ ನಾರಾಣಪ್ಪನವರ ಮೇಲೆ ಸಂದೇಹ ಕಾಣ್ಸಿಯಾಗಿ ಫೆಬ್ರವರಿ 14ನೇ ತಾ॥ ದಿವಸ ಗ್ರಾಮ ಮುಖಂಡರ ಸಭೆ ಸೇರಿಸಿ ವಿಚಾರಣೆ ನಡೆಸಿ ಕ್ಯಾಷ್ ಚೆಕ್ ಮಾಡಿದಾಗ 109—7—3ಷ್ಟು ಹಣ ಕಡಿಮೆ ಬಂದಿತ್ತು. ಅದಕ್ಕೆ ಸಮಜಾಯಿಷಿ ಕೊಡುವುದಾಗಿ ಮ್ಯಾನೇಜರವರು ತಿಳಿಸಿದರು. ತಕ್ಷಣ ಆಡಿಟರವರನ್ನು ಗೊತ್ತುಮಾಡಲಾಗಿ ನಮಗೆ ಸಂದೇಹವು ಇನ್ನೂ ಬಲವಾಯಿತು. ಒಂದನೇ ತಾ॥ ದಿವಸ ಬದ್ದಾಂಡಸಾರಿ ಮುಖಂಡರ ಸಭೆ ಸೇರಿಸಲಾಯಿತು. ಆ ಸಭೆಯಲ್ಲಿ ನಾಲುವರ ಹಣವನ್ನು ಮ್ಯಾನೇಜರವರು ಉಪಯೋಗಿಸಿಕೊಂಡಿರುವುದಾಗಿ ಗೊತ್ತಾಯಿತು. ಪುನಃ 15ನೇ ತಾರೀಖಿನ ದಿವಸ ಪುನಃ ಕ್ಯಾಷ್ ಚೆಕ್ ಮಾಡಲಾಗಿ 112—2—10ಷ್ಟು ಹಣ ಕಡಿಮೆ ಬಂದಿದ್ದಿತು. ಕ್ಯಾಷ್ ಬುಕ್ಕಿನ 191ನೇ ಪೇಜಿನ ಕೊನೆಯಲ್ಲಿ ಮ್ಯಾನೇಜರಿಂದ ಬರೆಸಲಾಯಿತು. 19ನೇ ತಾ॥ ಸುಪ್ರಭಾತ ಕೆಲಸ ನಡೆದಿಲ್ಲದೂ ಮನೆಗೆ ಹೋದನಂತರ ಈ ಮ್ಯಾನೇಜರವರು ಆಫೀಸಿನ ಬೀಗ ತೆಗೆದು ಒಳಗೆ ಬಂದು 15ನೇ ತಾ॥ ದಿವಸ ಕ್ಯಾಷ್ ಬುಕ್ಕಿನಲ್ಲಿ ಬರೆದಿರುವ "ಬರವಣಿಗೆಯ ಕೊನೆಯ ಪಂಕ್ತಿಯಲ್ಲಿ" ಸಮಜಾಯಿಷಿ ಕೊಡುತ್ತೇನೆ ಎಂದು ಬರೆದಿದ್ದುದನ್ನು ತಿದ್ದಿ ಬೇರೆ ಅರ್ಥ ಬರುವ ಹಾಗೆ ಮಾಡಿ ಮುಂದೆ ಸುಳ್ಳುಸುಳ್ಳು ಜಮಾ ಖರ್ಚುಗಳನ್ನು ನಡೆಸಿ ಅವರು ದುರುಪಯೋಗಪಡಿಸಿಕೊಂಡಿರುವಷ್ಟು ರೂಪಾಯಿಗಳಿಗೆ ತಕ್ಕಹಾಗೆ ಬರುವ ಆ ದಿವಸದ ಲೆಖ್ಖ ಬರೆಯುವುದಕ್ಕೆ ಅಡ್ಜಸ್ಟ್‌ಮೆಂಟು ಮಾಡಿದ್ದರು. ಇನ್ನು ಮುಂದೆ ಕ್ರಮವಾಗಿ ಲೆಖ್ಖ ಬರೆಯತಕ್ಕದ್ದೆಂದು ಗುಮಾಸ್ತೆಯರಿಗೆ ಕೊಟ್ಟಿದ್ದ ಹಣ ದುರುಪಯೋಗಮಾಡಿಕೊಂಡಿರುವುದಕ್ಕೂ ಈ ರೀತಿ ಕ್ಯಾಷ್‌ಬುಕ್ಕಿನಲ್ಲಿ ಬರೆದಿರುವುದಕ್ಕೂ ಸಹ ಯೋಗ್ಯರೀತಿಯ ಕ್ರಮ ಜರುಗಿಸಲಾಗುವುದು. ಮಾಮೂಲಿನಂತೆ ಕೆಲಸಕಾರ್ಯಗಳು ನಡೆದುಕೊಂಡು ಹೋಗುತ್ತಿವೆ— ಎಂಬುದಾಗಿ ಶ್ರೀ ತಗಡೂರು ರಾಮಚಂದ್ರರಾಯರು ಬರೆಯುತ್ತಾರೆ.

ಧಾತು ಸಂವತ್ಸರದ ಪಂಚಾಂಗ ಫಲ.

೧೯೪೦ ನೇ ಇಸವಿಯಲ್ಲಿ ಘೋರ ಯುದ್ಧ.

(ಒಬ್ಬ ಜ್ಯೋತಿಷ್ಕರಿಂದ)

ಕಲಿ ಮಹಾಪುರುಷನ ಯುಗವು ಆರಂಭವಾಗಿ ಈಗ 5036 ವರ್ಷಗಳು ಕಳೆದು 37ನೇ ವರ್ಷವು ಮಂಗಳವಾರದ ದಿನ ಪ್ರಾರಂಭವಾಗುತ್ತೆ ಇದಕ್ಕೆ ಧಾತುಸಂವತ್ಸರವೆಂದು ಕರೆಯುತ್ತಾರೆ ಈ ಸಂವತ್ಸರಕ್ಕೆ ಅಧಿಪತಿ, ಸೇನಾಧಿಪತಿ, ಮಂತ್ರಿ, ಇವರುಗಳೆಲ್ಲಾ ರಜ, ತಮೋಗುಣಗಳಿಂದ ಕೂಡಿದವರಾಗಿಯೂ ಯುದ್ಧಾಭಿಲಾಷೆಯುಳ್ಳವರಾಗಿಯೂ ಇರುತ್ತಾರೆ ಭಗವದ್ಗೀತೆಯಲ್ಲಿ, ಕಲಿಯುಗದಲ್ಲಿ ಐದುಸಹಸ್ರ ವರ್ಷಗಳು ಕಳೆದಮೇಲೆ ಧರ್ಮ ನಷ್ಟವಾಗುವುದಲ್ಲದೆ ಜಾತಿ, ಕರ್ಮ, ಇವುಗಳು ವ್ಯತ್ಯಾಸವಾಗುತ್ತವೆ, ಎಂಬುದಕ್ಕೆ ತಕ್ಕಹಾಗೆ 5000 ವರ್ಷಗಳು ಕಳೆದು 36 ವರ್ಷಗಳು ತುಂಬಿತು ಧರ್ಮಕ್ಕೂ, ಸತ್ಯಕ್ಕೂ ಆಶ್ರಯಭೂತನಾದ ಬೃಹಸ್ಪತಿಯು ಸಸ್ಯಗಳಿಗೆ ಅಧಿಪನಾಗಿರುವುದರಿಂದ ಈ ವರ್ಷದಲ್ಲಿ ಪ್ರಪಂಚದ ಎಲ್ಲಾ ಭಾಗಗಳಲ್ಲಿಯೂ, ಅಸತ್ಯವೂ, ಅಧರ್ಮವೂ, ಸ್ತ್ರೀಯರ ಪ್ರಾಬಲ್ಯವೂ, ದುಷ್ಟ ಮಂತ್ರಿಗಳ ಕುಹಕವೂ ಹೆಚ್ಚಾಗಿ ಅದರಿಂದ ಪ್ರಪಂಚಕ್ಕೆ ತೊಂದರೆಗೆ ಕಾರಣವುಂಟು

ಕಳೆದ 60 ವರ್ಷದ ಧಾತುಸಂವತ್ಸರದ ರೀತಿಯ ಭಯವು ಈಗ ಬರುವ ಧಾತುಸಂವತ್ಸರದಲ್ಲಿ ಉಂಟಾಗುವುದಿಲ್ಲ. ಕಳೆದ ಧಾತುವಿನಲ್ಲಿ ಕ್ಷಾಮವೊಂದೇ ಇತ್ತು ಈಗಬರುವರೋ ಕ್ಷಾಮವಿಲ್ಲದೆ ಅದಕ್ಕೆ ಸಹ ಪ್ರಮಾಲು ತೊಂದರೆಯು ಉಂಟಾಗುವುದಕ್ಕೆ ಎಷ್ಟು ಬೇಕೋ ಅಷ್ಟು ಅನರ್ಥಗಳೂ ಅಧರ್ಮವೂ, ಯುದ್ಧವೂ ತಲೆ ಎತ್ತುತ್ತವೆ. ಈ ವರ್ಷ ಪ್ರಪಂಚದ ಎಲ್ಲಾ ಭಾಗದಲ್ಲಿಯೂ ಅನಾಹುತಗಳೂ ವಿಷಗಳಿಂದ ಹುಟ್ಟುವ ರೋಗಗಳೂ ವಂಚನೆಯಿಂದ ಉಂಟಾಗುವ ಮುಖ್ಯ ಮುಖ್ಯ ಮರಣಗಳೂ, ಪದಚ್ಯುತಿಯೂ, ಐಶ್ವರ್ಯವಂತರ ಧನಹಾನಿಯೂ ಒಗ್ಗಟ್ಟಿನ ಚಿಮುರಿಕೆಯೂ ಉಂಟಾಗಬಹುದು.

ಮುಖ್ಯವಾಗಿ ಯುದ್ಧೋತ್ಸಾಹವುಳ್ಳ ಅಂಗಾರಕನೇ ರಾಜನಾಗಿರುವುದರಿಂದಲೂ ಪ್ರತಿಯೊಬ್ಬರ ಮನಸ್ಸಿಗೆ ಮುಖ್ಯ ಕಾರಣನಾದ ಚಂದ್ರನೇ ಮಂತ್ರಿಯಾಗಿರುವುದರಿಂದಲೂ, ಅಗ್ನಿಗೆ ತುಪ್ಪ ಹಾಕಿದ ಹಾಗೆ ರಾಜ, ಮಂತ್ರಿ ಇವರುಗಳು ಒಂದಾಗಿರುವುದರಿಂದಲೂ, ರವಿಯೇ ಸೇನಾಧಿಪತಿಯಾಗಿರುವುದರಿಂದಲೂ, ಈ ರವಿಯು ರಾಜಗ್ರಹವಾದುದರಿಂದ ಯುದ್ಧಾಪೇಕ್ಷೆಯುಳ್ಳ ಅಂಗಾರಕನೇ ಹೋರಿಯಾಗಿರುವುದರಿಂದ ಇವರಿಬ್ಬರುಗಳ ಮನಸ್ಸಿಗೆ ಕಾರಣಭೂತನಾದ ಚಂದ್ರನೂ, ಇಬ್ಬರಿಗೂ ಆಪ್ತನಾಗಿರುವುದರಿಂದ ಎಲ್ಲಾ ಪ್ರದೇಶಗಳಲ್ಲಿಯೂ ಅನರವರ ಏಟಿ, ವರ್ಷಗಳಂತೆ ಯುದ್ಧವೂ, ಮನಸ್ತಾಪವೂ, ದ್ವೇಷವೂ, ಉಂಟಾಗುವುದಲ್ಲದೆ ಕಾಲಪ್ರಕಾರ ಮುಖ್ಯ ಮುಖ್ಯ ಅಧಿಕಾರಿಗಳಿಗೆ ತೊಂದರೆಯೂ (ಅಂದರೆ ರಾಜ್ಯದ ಸೂತ್ರಾಧಿಕಾರಿಗಳಿಗೆ ತೊಂದರೆಯೂ) ಬೃಹಸ್ಪತಿಯು ಶೀಘ್ರ, ವಕ್ರಗತಿಗಳಿಂದ ಸಂಚಾರ ಮಾಡುವುದರಿಂದಲೂ, ಬೃಹಸ್ಪತಿಗೆ ಪೂರ್ಣ ಬಲವಿಲ್ಲದೇ ಇರುವುದರಿಂದಲೂ ಇವಕ್ಕೆಲ್ಲಾ ಮಾರ್ಗವುಂಟು.

ಇದೇ ವರ್ಷ ರಾಜನಿಗೂ ಪ್ರಜೆಗಳಿಗೂ ದ್ವೇಷ, ಮನಸ್ತಾಪ, ಅಸೂಯೆ ಇವುಗಳು ಹೆಚ್ಚಾಗಲು ಅವಕಾಶವಿರುತ್ತೆ ಕೆಲವು ಅನ್ಯದೇಶಗಳಲ್ಲಿ ಧನಹಾನಿಯೂ, ಮುಖ್ಯಾಧಿಕಾರಿಗಳಿಗೆ ಪ್ರಾಣಕ್ಕೆ ಸಂಚಕಾರವೂ, ಸ್ತ್ರೀಯರ ಮೂಲಕದಿಂದಲೂ, ಶತ್ರು ಮೂಲಕದಿಂದಲೂ ಉಂಟಾಗಲು ಕಾರಣವಿರುತ್ತೆ ಈ ವರ್ಷವು ಬಹಳ ಶೋಚನೀಯಕರವಾದದ್ದು

ಮುಂದೆ 1940ನೇ ಇಸವಿಯಲ್ಲಿ ನಡೆಯುವ ಮಹಾ ಸಂಗ್ರಾಮಕ್ಕೆ ಈ ವರ್ಷವೇ ಅಸ್ತಿಭಾರವಾಗಿರುತ್ತೆ. ಮತ್ತು ರಾಜ, ಮಂತ್ರಿ, ಸೇನಾಪತಿ, ಇವರುಗಳಿಂದ ಉಂಟಾಗುವ ಅನರ್ಥಗಳು ಅದ್ಭುತವಾಗಿ ಪ್ರವಹಿಸಿ ಅದರಿಂದ ಶಾಂತತೆ ಇಲ್ಲದೆ ಕ್ಷೋಭೆಯು ಉಂಟಾಗುತ್ತದೆ ಈ ವರ್ಷ ಆ ಸ್ವದೇಶದಲ್ಲೂ ಇಂಡಿಯಾ ದೇಶದಲ್ಲೂ ಶನಿ, ಅಂಗಾರಕ ಇವರುಗಳ ಶಕ್ತಿಯಿಂದ ಹೊಸದಾದ ಖಾಯಿಲೆಯು ಉತ್ಪತ್ತಿಯಾಗುತ್ತದೆ ವಿಷಸಂಬಂಧವಾಗಿಯೂ ಮತ್ತು ಅಗ್ನಿಸಂಬಂಧವಾದ ಬಾಧೆಗಳೂ ಮತ್ತು ಸ್ಫೋಟಕಾದಿಗಳೂ ತಲೆದೋರುತ್ತೆ. ಜ್ವರಬಾಧೆಯು ಪ್ರಪಂಚದಲ್ಲೆಲ್ಲಾ ಹರಡಲು ಮಾರ್ಗವಿರುತ್ತೆ.

ಮಳೆ ಬೆಳೆ.

ಪ್ರಪಂಚದ ಎಲ್ಲಾ ಭಾಗದಲ್ಲಿಯೂ ಮಳೆಯೂ ಗಾಳಿಯೂ ವ್ಯತ್ಯಾಸವಾಗಿ ನಡೆದಾಗ್ಯೂ ಬೆಳೆಗಳು ಬೇಕಾದಷ್ಟು ಆಗುತ್ತೆ ಆದರೂ ಅದರಿಂದ ಜನಗಳಿಗೆ ಸುಖ ಕಡಿಮೆ ಪ್ರತಿಯೊಬ್ಬರ ಮನಸ್ಸೂ ಭಯದಿಂದಲೂ ಆತಂಕದಿಂದಲೂ ಕೂಡಿರುತ್ತೆ. ಧನಕ್ಷೋಭೆಯೂ ಜನಕ್ಷೋಭೆಯೂ ಈ ವರ್ಷ ಬಹಳ ಪ್ರಬಲವಾಗಿರುತ್ತೆ ಇಂಡಿಯಾ ದೇಶದಲ್ಲಿ ಮುಖ್ಯಮುಖ್ಯ ಪ್ರಜಾಪಾಲನೆ ಮಾಡುವವರಲ್ಲಿ ಅಧರ್ಮವೂ, ಧನವ್ಯಯವೂ, ಅತ್ಯಾಚಾರವೂ ಬಂಧುಮರಣವೂ ಉಂಟಾಗುತ್ತದೆ ಭೂಮಿಯಲ್ಲಿ ಉತ್ಪಾತಗಳು ಕಾಣುತ್ತೆ ಪರದೇಶಗಳಲ್ಲಿ ಅನೇಕ ವಿಧವಾದ ಜನಕ್ಷೋಭೆ ಧನನಾಶ ದ್ವೇಷ ಇವುಗಳೆಲ್ಲಾ ಪ್ರಾಪ್ತಿಯಾಗುತ್ತೆ. ಮತ್ತು ಅನೇಕ ಮುಖ್ಯ ಜನಾಂಗದ ಪ್ರಮುಖರಿಗೆ ಪ್ರಾಣಭೀತಿಯು ಉಂಟಾಗುತ್ತದೆ ನಮ್ಮ ಭರತಖಂಡದಲ್ಲಿ ಅನೇಕ ಸತ್ಪುರುಷರುಗಳಿಗೆ ಧರ್ಮನಷ್ಟವುಂಟಾಗುವುದಲ್ಲದೆ ಕೆಲವು ಮಹಾ ಪುರುಷರುಗಳಿಗೆ ಮರಣವುಂಟಾಗಬಹುದು. ಅಮ ಬೃಹಸ್ಪತಿಯಿಂದಲೂ ಸೂರ್ಯನಿಂದಲೂ ಚಂದ್ರನಿಂದಲೂ ತಪ್ಪಬೇಕು ಅಲ್ಲದೆ ಪ್ರವಾಹದಿಂದಲೂ, ಗಾಳಿಯಿಂದಲೂ, ಬೆಂಕಿಯಿಂದಲೂ ಬಹಳ ಅನಾಹುತ ನಡೆಯುವುದಕ್ಕೆ ಮಾರ್ಗವುಂಟು. ಈ ವರ್ಷ ವೃದ್ಧರೂ, ಬಾಲಕರೂ, ಬಹಳವಾಗಿ ನಷ್ಟಹೊಂದುತ್ತಾರೆ

ವ್ಯಾಪಾರ.

ವ್ಯಾಪಾರಸ್ಥರಿಗೆ ಈ ವರ್ಷವು (ಧಾತು ಸಂವತ್ಸರವು) ಬಹಳ ಶೋಚನೀಯವಾದದ್ದು ಅನೇಕರು ಬಹಳವಾಗಿ ನಷ್ಟಹೊಂದುತ್ತಾರೆ ಈ ವರ್ಷ ದ್ರವವಸ್ತುವಾಗಲೀ ಚಿನ್ನ ಬೆಳ್ಳಿಯಾಗಲೀ, ಹತ್ತಿಯೇ ಆಗಲೀ ಯಾವುದರಿಂದಲೂ ಲಾಭವು ಕಡಿಮೆ ಒಟ್ಟಿನಲ್ಲಿ ಬಂಡವಾಳಸ್ಥರು ಎಚ್ಚರಿಕೆಯಾಗಿರುವುದು ಉತ್ತಮ. ಇಂಡಿಯಾ ದೇಶಕ್ಕೆಲ್ಲಾ ಕೇಂದ್ರಪ್ರಾಯವಾದ ಬೊಂಬಾಯಿನ ವರ್ತಕರು ಬಹಳ ಮಟ್ಟಿಗೆ ಎಚ್ಚರವಾಗಿರಬೇಕು ಈ ವರ್ಷ ಪಶುಪಕ್ಷ್ಯಾದಿಗಳಿಗೂ ಮತ್ತು ಕಾಡಿನಲ್ಲಿ ಸಂಚಾರ ಮಾಡುವ ಚತುಷ್ಪಾದ ಜಂತುಗಳಿಗೂ ನಷ್ಟವುಂಟು

ಯುದ್ಧ ವಿಷಯ.

ಇಟಲಿ ಅಬಿಸೀನಿಯಾ ಇವರುಗಳ ಕಾದಾಟದಲ್ಲಿ ಅಬಿಸೀನಿಯಾ ರಾಜ್ಯವು ಕೈವಶವಾಗುವುದಿಲ್ಲ ಇದೇ 1936ನೇ ಇಸವಿ ಜೂ 10ನೇ ತಾ॥ ಕಳೆದನಂತರ ಇಟಲಿಯವರಿಗೆ ಬಹಳವಾಗಿ ತೊಂದರೆಯುಂಟು. 1914ನೇ ಇಸವಿಯ ಯುದ್ಧದಿಂದ ಪತನ ಹೊಂದಿದ ಜರ್ಮನಿಯು ಮಾಡುತ್ತಿರುವ ಪ್ರಯತ್ನಕ್ಕೆ ಫಲವು ಇರುವುದು ಇದೇ ಧಾತುಸಂವತ್ಸರದಲ್ಲಿ ಇವರುಗಳ ಉತ್ಸಾಹದಿಂದ ಸಣ್ಣಸಣ್ಣ ಕಲಹಗಳು ನಡೆಯಬಹುದೇ ವಿನಹ ದೊಡ್ಡ ಕಲಹವು ನಡೆಯುವುದಿಲ್ಲ ಇದರಿಂದ ಜರ್ಮನಿಯು ಸ್ವಲ್ಪ ನಷ್ಟವನ್ನು ಹೊಂದುತ್ತದೆ

ಕರ್ನಾಟಕಭಕ್ತ.

ಹೊಸ ವರ್ಷ.

(ಲೇಖಕ — ಕೆ. ವೆಂಕಟೇಶಮೂರ್ತಿ, ಹೊಂಟಿಕೊಪ್ಪಲು)

ಬಂದಿತು ಬಂದಿತು ಹೊಸ ವರ್ಷ।
ತಂದಿತು ಜನಗಳಿಗತಿಹರ್ಷ॥೧॥

ಎಲ್ಲೆಲ್ಲಿ ನೋಡಿದರ್ ಸಂಭ್ರಮಗಳ್।
ಎಲ್ಲೆಲ್ಲಿ ನೋಡಿದರ್ ನಗೆ
ಮುಖಗಳ್ ॥೨॥

ಎಲ್ಲರು ಪೋಪರು ಮನೆಗಳ ಬಿಟ್ಟು।
ಬಗೆ ಬಗೆ ಬಣ್ಣದ ಬಟ್ಟೆಯತೊಟ್ಟು ॥೩॥

ಮಕ್ಕಳು ಮರಿಗಳು ಎಲ್ಲರು ಸೇರಿ।
ದೇವರ ಗುಡಿಯನು ಸೇರುವರು ॥ ೪॥

ಎಲ್ಲರು ಬೇಡುವರ್ ದೇವರನೂ।
ಲೋಕಕ್ಷೇಮವ ಕೊಡು ಎಂದೂ ॥೫॥

ದೇವರು ಅವರನು ಹರಸುವನೂ।
ಮನೆಗಳನೆಲ್ಲರು ಸೇರುವರು ॥ ೬ ॥

ಎಲ್ಲರು ಒಟ್ಟಿಗೆ ಊಟಕೆ ಕುಳಿತೂ॥
ಉಂಬರು ಬಗೆ ಬಗೆ ಭಕ್ಷ್ಯಗಳ ॥ ೭॥

ನೆಂಟರು ಇಷ್ಟರ ಸಂಧಿಪರೂ।
ಕುಶಲ ಪ್ರಶ್ನೆಯ ಮಾಡುವರೂ ॥ ೮ ॥

ಹುಡುಗರು ಮಕ್ಕಳು ಎಲ್ಲರು ಸೇರಿ।
ನಸುನಗೆಯಿಂದಲಿ ಆಡುವರು ॥ ೯ ॥

ನಿಮಗೂ ಒಳ್ಳೆಯದಾಗಲಿ ಎಂದು।
ಬೇಡುವೆ ದೇವರ ನಾನಿಂದು ॥ ೧೦ ॥

ನಂಜನಗೂಡು ವರ್ತಮಾನ.

ಮುನ್ಸಿಫ್ ಕೋರ್ಟು.—ಲಾಯರುಗಳಿಗೂ ಕಕ್ಷಿಗಾರರಿಗೂ ತೀರಾ ತೊಂದರೆಯಾಗುತ್ತಿದೆ. ಏಕೆಂದರೆ, ಒಂದು ದಿನಕ್ಕೆ ಎಷ್ಟು ಜನ ಸಾಕ್ಷಿಗಳನ್ನು ವಿಚಾರಿಸಬಹುದೋ ಅದಕ್ಕಿಂತಲೂ ನಾಲ್ಕು ಐದರಷ್ಟು ಕೇಸುಗಳನ್ನು ಇಟ್ಟುಕೊಂಡು ವೃಥಾ ಮುಂದಕ್ಕೆ ತಳ್ಳಿಹಾಕುತ್ತಿರುತ್ತಾರೆ. ಇದರಿಂದ ಮುಂದಿನ ಭತ್ಯ ಕಟ್ಟಿ, ಕಟ್ಟಿ, ಕಕ್ಷಿಗಾರರು ಸಾಲಗಾರರಾಗಬೇಕಾಗಿದೆ, ಕೆಲಸಗೇಡಾಗಿ ವೃಥಾ ದೂರಪ್ರದೇಶದಿಂದ ಜನರು ಅಲೆದಾಡಬೇಕಾಗಿದೆ.

ರೈಲ್ವೆಸ್ಟೇಷನ್.—ಇಲ್ಲಿ ಸಾಮಾನು ಸಾಗಿಸುವವರಿಗೂ ಕಳುಹಿಸುವವರಿಗೂ ಬಹು ಕಷ್ಟಗಳಿರುವವು. ಹಲವು ಮಾಮೂಲುಗಳನ್ನು ಗಮನಿಸಿದರೂ ಗಾಡಿಯವರಿಗೆ ಸಾಮಾನು ಸಾಗಿಸಲು ಬಹು ಅನನುಕೂಲ ಸಾಮಾನುಗಳೇ ಕಮ್ಮಿಯಾಗಿರುವುದೂ ಉಂಟಂತೆ! ಸಂಬಂಧಪಟ್ಟವರ ಮೇಲೆ ಒಂದು ಕ್ರಿಮಿನಲ್ ಕೇಸು ಸಹಾ ನಡೆಯುತ್ತಿದೆಯಂತೆ! ಟ್ರಾಫಿಕ್ ಸೂಪರಿಂಟೆಂಡೆರವರು ಇವನ್ನೆಲ್ಲಾ ಗಮನಿಸಬಾರದೆ? ನಿಜವಿದ್ದಲ್ಲಿ ಅಲ್ಲಿನ ಅಧಿಕಾರಿಯನ್ನೇಕೆ ವರ್ಗಾಯಿಸಬಾರದು?

ರೈಲ್ವೆ ಸೇತುವೆ—ಆಗಾಗ್ಯೆ ಎದುರಾಗಿ ಬರುತ್ತಿರುವ ಗಾಡಿಗಳು ರೈಲನ್ನು ಸಂಧಿಸಿ ಎತ್ತುಗಳು ಬೆದರಿ ಅಪಾಯ ಸಂಭವಿಸುತ್ತಿದೆ ಡಿ. ಪಿ ಡಬ್ಲ್ಯುಯು ಇಲಾಖೆಯವರು ಕೂಡಲೇ ಆ ಸೇತುವೆಯ ಕೈಪಿಡಿಯಗೋಡೆಯ ಮೇಲೆ ಒಂದು ಕಟಕಟೆಯನ್ನು ಹಾಕಿಸಿಕೊಡಲು ಮಹಾ ಜನರು ಬಿನ್ನವಿಸುತ್ತಾರೆ

ದೊಡ್ಡ ಜಾತ್ರೆ —ಈ ಕಾಲದಲ್ಲಿ ದನಗಳ ಪರಿಷೆಯೂ ಲಾವಣಿಗಳ ಹಾಡುಗಾರಿಕೆಯೂ, ಹಗ್ಗಿ ಕುಣಿತವೂ ಸಹ ಏರ್ಪಡಿಸುವುದಾಗಿ ವದಂತಿಯಿದೆ

ಮುನಿಸಿಪಾಲಿಟಿ—ಮುನಿಸಿಪಾಲಿಟಿಯಲ್ಲಿ ಮನೆಗಂದಾಯವು ತೀರಾ ಹೆಚ್ಚಿರುವುದರ ಪ್ರಯುಕ್ತವೂ, ಇನ್ನೂ ಅನೇಕ ಸಂಗತಿಗಳೂ ಊರಿನ ಅಭಿವೃದ್ಧಿಗೆ ಸಾಧಕಗಳಾಗುವಂತೆ, ಒಂದು ಟೌನ್ ಕಾನ್ಫರೆನ್ಸನ್ನು ನೆರವೇರಿಸತಕ್ಕ ಬಗ್ಗೆ ಕರ್ನಾಟಕ ಸಂಘದವರನ್ನು ಕೇಳಿಕೊಂಡಿರುವಂತೆಯೂ, ಮೇ ತಿಂಗಳಲ್ಲಿ ನೆರವೇರಿಸಬಹುದೆಂದೂ ಕೇಳುತ್ತೇವೆ. ಹಿತೈಷಿ

ವಿಶ್ವವಿದ್ಯಾಲಯದ ವಿಶೇಷ ಪದವೀದಾನ ಸಮಾರಂಭ.

ಸರ್ ಪುಟ್ಟಣ್ಣಶೆಟ್ಟರಿಗೆ ಗೌರವ ಪ್ರಶಸ್ತಿಯನ್ನು ಕೊಡುವುದಕ್ಕಾಗಿ ಈ ತಿಂಗಳ 25ನೇ ತಾ॥ ಮೈಸೂರು ಜಗನ್ಮೋಹನ ಭವನದಲ್ಲಿ ನಡೆಯುವ ವಿಶೇಷ ಸಮಾರಂಭಕ್ಕೆ ಪ್ರೇಕ್ಷಕರಾಗಿ ಹೋಗಬೇಕೆನ್ನುವವರು ಲಿಖಿತ ಮೂಲಕ ಯೂನಿವರ್ಸಿಟಿ ರಿಜಿಸ್ಟ್ರಾರವರಿಗೆ ಖುದ್ದಾಗಿ ಬರೆದುಕೊಳ್ಳಬೇಕು ತಮ್ಮ ಹೆಸರು ಮತ್ತು ಕಸುಬನ್ನು ತಿಳಿಸಬೇಕು ಸ್ಥಳ ಸಂಕೋಚವಾಗಿರುವುದರಿಂದ ಸ್ಕೂಲು ವಿದ್ಯಾರ್ಥಿಗಳಿಗೆ ಟಿಕೇಟುಗಳನ್ನು ಕೊಡಲಾಗುವುದಿಲ್ಲ ಪ್ರೇಕ್ಷಕರು ದರ್ಬಾರ್ ಡ್ರೆಸ್ಸಿನಲ್ಲಿ ಬರಬೇಕು

ವರ್ತಮಾನ ಸಂಗ್ರಹ

ಹಿಟ್ಲರರ ಗಲಾಟೆ.

ಹಿಟ್ಲರನ ರಣಭೇರಿಯು ಪಾಶ್ಚಿಮಾತ್ಯರನ್ನು ತಲ್ಲಣಗೊಳಿಸಿರುತ್ತದೆ ಆತನ ರಣಭೇರಿಯನ್ನು ಎದುರಿಸಲು ಯಾರಿಗೂ ಬುದ್ಧಿ ತೋಚಲಿಲ್ಲ ಎಲ್ಲರೂ ತಟಸ್ಥರಾಗಿರುವರು. ಇದಲ್ಲದೆ ಹಿಟ್ಲರನು ಒಂದೊಂದು ಸಮಯದಲ್ಲಿ ಒಂದೊಂದು ರೀತಿ ತೋರ್ಪಡಿಸಿಕೊಳ್ಳುತ್ತಿರುವನು ಇದರಿಂದ ಪಾಶ್ಚಿಮಾತ್ಯ ದೇಶಗಳವರಿಗೆ ಮತ್ತಷ್ಟು ಭ್ರಾಂತಿಯುಂಟಾಗಿದೆ ಫ್ರಾನ್ಸಿನೊಡನೆ ಅತ್ಯಂತ ಸೌಹಾರ್ದದಿಂದ ಇರಬೇಕೆಂಬುದೇ ತನ್ನ ಇಷ್ಟವೆಂದು ಒಂದು ಕಡೆ ಹೇಳುತ್ತಾನೆ ಅತ್ತಲಾಗಿ ಸರಹದ್ದಿನ ಪ್ರದೇಶಗಳಲ್ಲಿ ಗಲಭೆಯನ್ನೆಬ್ಬಿಸುವ ಪ್ರಯತ್ನ ಪಡುತ್ತಾನೆ ಇದರಿಂದ ಯೂರೋಪಿನ ಸ್ಥಿತಿಯು ಹೇಗೆ ಪರಿಣಮಿಸುವುದೆಂಬುದನ್ನು ಈಗಲೇ ಹೇಳಲಾಗುವುದಿಲ್ಲ

ಖೈದಿಗೆ ಹೊಗೇಸೊಪ್ಪು.

ದಿಬ್ರುಗಡದ ಜೈಲಿನಲ್ಲಿದ್ದ ಒಬ್ಬ ಖೈದಿಗೆ ಹೊಗೇಸೊಪ್ಪನ್ನು ತಂದುಕೊಟ್ಟನೆಂಬ ಆಪಾದನೆಯ ಮೇಲೆ ನೇಪಾಲಿ ಎಂಬ ಒಬ್ಬನಿಗೆ ಮೂರು ತಿಂಗಳ ಸಜಾ ವಿಧಿಸಲ್ಪಟ್ಟಿತು

ಜರ್ಮನಿಯ ಕೈಸರರು.

ಇವರಿಗೆ ಈಗ 77 ವರ್ಷ ವಯಸ್ಸು ತಮ್ಮ ವರ್ಧಂತಿಯನ್ನು ಹಾಲೆಂಡಿನಲ್ಲಿ ನೆರವೇರಿಸಿದರು ಪ್ರಪಂಚದ ಎಲ್ಲಾ ಭಾಗಗಳಿಂದಲೂ ಅಭಿನಂದನೆಗಳು ಬಂದವು ಅದಕ್ಕಾಗಿ ಅವರು ಎಲ್ಲರಿಗೂ ಧನ್ಯವಾದವನ್ನು ಸಲ್ಲಿಸಿರುವರು.

ಹರಿಜನರೂ ಮಾಳವೀಯರೂ.

ಡಾ|| ಅಂಬೇಡಕರರ ಗಲಾಟೆಯ ಪರಿಣಾಮವಾಗಿ ಹರಿಜನರ ಸಮಸ್ಯೆಯು ಬಹು ಪ್ರಾಮುಖ್ಯತೆಗೆ ಬಂದಿದೆ ಇದಕ್ಕಾಗಿ ಪಂಡಿತ ಮದನಮೋಹನ ಮಾಳವೀಯರು ನಾಸಿಕಕ್ಷೇತ್ರಕ್ಕೆ ಬಂದಿರುವರು ಹರಿಜನರ ಅಭಿವೃದ್ಧಿಗೆ ಸಾಧಕವಾದ ಎಲ್ಲಾ ಮಾರ್ಗಗಳನ್ನೂ ಹುಡುಕುತ್ತಿರುವರು. ಹರಿಜನರು ಹಿಂದೂ ಜನಾಂಗಕ್ಕೆ ಸೇರಿದವರೆಂದೂ ಮುಸಲ್ಮಾನ ಮತ್ತು ಕ್ರೈಸ್ತರು ಅವರ ವಿಷಯದಲ್ಲಿ ಪ್ರವೇಶಿಸಕೂಡದೆಂದೂ ಹೇಳಿರುತ್ತಾರೆ

ಖೋಟಾ ನಾಣ್ಯಗಳು.

ಕಳೆದ ವರ್ಷ ಬಿಹಾರ್ ಮತ್ತು ಒರಿಸ್ಸಾ ಸಂಸ್ಥಾನದಲ್ಲಿ ಗೌರ್ನಮೆಂಟ್ ಖಜಾನೆಗಳು, ರೈಲ್ವೆ ಸ್ಟೇಷನ್ನುಗಳು, ಮತ್ತು ಪೋಸ್ಟಾಫೀಸುಗಳಲ್ಲಿ 11837 ಖೋಟಾ ರೂಪಾಯಿಗಳು ಬಂದಿದ್ದವೆಂದು ಗೊತ್ತಾಗುತ್ತದೆ

ಜೋಧಪುರ ರಾಜರ ಸಹಾಯ.

ಜೋಧಪುರದ ಮಹಾರಾಜರು ವ್ಯವಸಾಯಗಾರರ ಸಹಾಯಾರ್ಥವಾಗಿ ಒಂದು ಲಕ್ಷ ರೂ ಗಳ ತೆರಿಗೆಯನ್ನು ಕಡಿಮೆಮಾಡಿರುವರು ಅಲ್ಲದೆ 32 ಸಾವಿರ ರೂಪಾಯಿಗಳನ್ನೂ ಬಿಟ್ಟುಕೊಟ್ಟಿರುವರು

ಜಾರ್ಜ್ ಪ್ರಭುಗಳ ಅಂತ್ಯಕ್ರಿಯೆಯ ಖರ್ಚು.

ಜಾರ್ಜ್ ಸಾರ್ವಭೌಮರ ಅಂತ್ಯಕ್ರಿಯೆಗೆ ಇಪ್ಪತ್ತೈದು ಸಾವಿರ ಪೌಂಡುಗಳು ವೆಚ್ಚವಾಗಿವೆ ರಾಜಬಂಧುಗಳು, ಅತಿಥಿಗಳು ಇವರುಗಳ ಪ್ರಯಾಣ, ಮತ್ತು ಉತ್ಸವದ ಮೋಟಾರುಗಳ ಅಲಂಕಾರ ಇವಕ್ಕೆ ಏಳು ಸಾವಿರ ಪೌಂಡುಗಳು. ನೌಕಾಧಿಕಾರಿಗಳ ಭತ್ಯ ಐದು ಸಾವಿರ ಪೌಂಡುಗಳು. ಸೋಲ್ಜರುಗಳಿಗೆ ಆರು ಸಾವಿರ ಪೌಂಡುಗಳು. ಖಾಸಗಿ ವೆಚ್ಚ ಇನ್ಶೂರೆನ್ಸ್ ಹತ್ತು ಪೌಂಡುಗಳು. ವೆಸ್ಟ್ ಮಿನಿಸ್ಟರ್ ಹಾಲಿನಲ್ಲಿ ಮೂರುಸಾವಿರ ಪೌಂಡುಗಳು ಪ್ರಿಂಟಿಂಗ್ ಮತ್ತು ಇತರೆ 3740 ಪೌ.

ಅಮೆರಿಕೆಯಲ್ಲಿ ಪ್ರವಾಹದ ಹಾವಳಿ.

ಅಮೆರಿಕದ ಪೆನ್ಸಿಲ್‌ವೇನಿಯಾ ಎಂಬಲ್ಲಿ ಪ್ರವಾಹದಿಂದ ಅಣೆಕಟ್ಟೆ ಒಡೆದು ಹತ್ತು ಜನರು ಮೃತಪಟ್ಟರು ಅರವತ್ತು ಲಕ್ಷ ರೂ ನಷ್ಟವಾಯಿತು.

ಭಾರತ ಪಠನ

ಮೈಸೂರು ಶ್ರೀ ರಾಮ ಪ್ರೆಸ್ಸಿನಲ್ಲಿರುವ ಶ್ರೀರಾಮ ಮಂದಿರದಲ್ಲಿ ಕಳೆದ 11 ಮತ್ತು 21 ನೇ ತಾ|| ಗಳಲ್ಲಿ ಶ್ರೀ|| ಗಮಕ ಎಂ ಎಸ್ ಶ್ರೀಕಂಠಯ್ಯನವರೂ ಶೇಷಗಿರಿರಾಯರೂ ಸುಶ್ರಾವ್ಯವಾಗಿ ಭಾರತ ಪಠನವನ್ನು ಮಾಡಿದರು

ನಿರುದ್ಯೋಗದಿಂದ ಆತ್ಮ ಹತ್ಯೆ.

ಸುಮಾರು 33 ವರ್ಷ ವಯಸ್ಸಿನ ಸ್ವಾಮಿ ವೆಂಕಟಾದ್ರಿ ಅಯ್ಯರ್ ಎಂಬ ತರುಣನೊಬ್ಬನು ನಿರುದ್ಯೋಗದ ಪ್ರಯುಕ್ತ ಒಂದು ರಸವನ್ನು ಕುಡಿದು ಪ್ರಜ್ಞೆ ತಪ್ಪಿ ಬೆಂಗಳೂರು ಪೂರ್ಣಯ್ಯನ ಛತ್ರದಲ್ಲಿ ಬಿದ್ದಿದ್ದನೆಂದೂ, ಪೋಲೀಸರು ಆಸ್ಪತ್ರೆಗೆ ಸಾಗಿಸಿದರೆಂದೂ ಗೊತ್ತಾಗಿದೆ

ಮದುವೆ ತೆರಿಗೆ.

ಸರಕಾರದ ವರಮಾನವು ಕಡಿಮೆಯಾಗುತ್ತಿರುವುದರಿಂದ ಅದಕ್ಕೆ ಭರ್ತಿ ಮಾಡಲು ಮದುವೆಯ ತೆರಿಗೆಯನ್ನು ಹಾಕಬೇಕೆಂದು, ಷೇಕ್ ಹಬೀಬುಲ್ಲಾ ಎಂ ಎ ಸದಸ್ಯರೊಬ್ಬರು ಸಂಯುಕ್ತ ಪ್ರಾಂತ್ಯದ ಶಾಸನ ಸಭೆಯಲ್ಲಿ ಹೇಳಿದರು. ಅನೇಕ ಸದಸ್ಯರು ತಮ್ಮ ಭಾಷಣದಲ್ಲಿ ತೆರಿಗೆಗಳನ್ನು ಹೆಚ್ಚಿಸುವುದಕ್ಕಿಂತಲೂ ಸಂಬಳಗಳನ್ನು ಕಮ್ಮಿ ಮಾಡಬೇಕೆಂದು ಸೂಚಿಸಿದರು ಆದರೆ ಮೇಲ್ಕಂಡ ಮಹನೀಯರು ಆ ಪ್ರಾಂತ್ಯದಲ್ಲಿ ಪ್ರತಿದಿನವೂ ಸುಮಾರು ನಾಲ್ಕೈದು ಮದುವೆಗಳಾಗುತ್ತಿವೆಯೆಂದೂ ಅವುಗಳಮೇಲೆ ಸರಾಸರಿ ಒಂದು ರೂ. ತೆರಿಗೆಯನ್ನು ಹಾಕಿದರೆ ಸರಕಾರಕ್ಕೆ ವಿಶೇಷ ವರಮಾನವು ಬರುವುದೆಂದೂ ಹೇಳಿದರು ಯಾರೂ ಅದಕ್ಕೆ ಗಮನ ಕೊಡಲಿಲ್ಲ

ಜರ್ಮನಿಗೆ ಯುದ್ಧ ಬೇಡ.

ಜರ್ಮನಿಯ ಸೇನಾಪತಿಗಳಾದ ಜನರಲ್ ಗೋರಿಂಗ್‌ರವರು 15 ಸಾವಿರ ಜನರ ಮುಂದೆ ಭಾಷಣಮಾಡುತ್ತ ನಮಗೆ ಯುದ್ಧ ಬೇಕಿಲ್ಲ ಶಾಂತಿಯನ್ನೇ ಅಪೇಕ್ಷಿಸುತ್ತೇವೆ ಎಂದು ಹೇಳಿದರು ಆದರೆ ತಮ್ಮ ದೇಶದ ಎಲ್ಲೆಯೊಳಗೆ ಮಾಡುವ ಕಾರ್ಯಗಳಲ್ಲಿ ಇತರರು ಕೈಹಾಕಕೂಡದೆಂದು ಅವರು ಹೇಳಿರುವರು

ವಿದ್ಯಾರ್ಥಿಗಳ ಮುಷ್ಕರ.

ಮೈಸೂರಿನ ಆಯುರ್ವೇದಿಕ ಮತ್ತು ಯುನಾನಿ ಕಾಲೇಜಿನ ಯುನಾನಿ ಶಾಖೆಯ ವಿದ್ಯಾರ್ಥಿಗಳು ಕೆಲವುಅಸಮಾಧಾನಗಳಿಂದ ಮುಷ್ಕರ ಹಿಡಿದಿರುವರು ಇದನ್ನು ಹತೋಟಿಗೆ ತರಲು ಅಧಿಕಾರಿಗಳು ತಕ್ಕ ಪ್ರಯತ್ನಗಳನ್ನು ಮಾಡುತ್ತಿರುವರು

ಬೆಂಗಳೂರಿನಲ್ಲಿ ಜಪತಪಗಳು.

ಕಳೆದ ಎರಡು ವಾರಗಳಿಂದಲೂ ಬೆಂಗಳೂರಿನ ವಿಶ್ವೇಶ್ವರಪುರದಲ್ಲಿರುವ ಶ್ರೀ ಸಜ್ಜನರಾಯರ ಛತ್ರದಲ್ಲಿ ಲೋಕಶಾಂತಿಗಾಗಿ ಉತ್ತರದೇಶದ ಬ್ಯಾಂಕರುಗಳಾದ ಕೆಲವು ಸೇಟರುಗಳು ವಿಧಿವತ್ತಾಗಿ ಯೋಗ್ಯರಾದ ಬ್ರಾಹ್ಮಣರುಗಳಿಂದ ದೊಡ್ಡದಾಗಿ ಜಪತಪ ಹೋಮ ಹವನ ಇತ್ಯಾದಿಗಳನ್ನು ಮಾಡಿಸಿದರು ಕಳೆದವಾರ ಇದು ಮುಕ್ತಾಯವಾಯಿತು

ಧೈರ್ಯವನ್ನು ಕೊಡಲು ಇಂಜಕ್ಷನ್.

ಜಪಾನಿನ ವೈಜ್ಞಾನಿಕನೊಬ್ಬನು ಒಂದು ಇಂಜಕ್ಷನ್ನನ್ನು ಕಂಡುಹಿಡಿದಿರುವನು. ಇದನ್ನು ಕೊಟ್ಟರೆ ಎಂತಹ ಹೇಡಿಯಾದರೂ ಧೈರ್ಯಶಾಲಿಯಾಗುವನು

ಸ್ವಾಮಿ ಪ್ರಭಾವಾನಂದರವರು.

ಇವರು ಅಮೇರಿಕಾ ಸಂಯುಕ್ತ ಸಂಸ್ಥಾನದಲ್ಲಿ ಹಾಲಿ ವುಡ್ ಎಂಬ ಪ್ರದೇಶದಲ್ಲಿ ಹಿಂದೂಮತ ಪ್ರಚಾರವನ್ನು ಮಾಡುತ್ತಿರುವರು ಈಗ ಇವರು ಮೈಸೂರು ಸಂಸ್ಥಾನದಲ್ಲಿ ಸಂಚಾರ ಮಾಡುತ್ತಿರುವರು ಇವರೊಡನೆ ಇವರ ಅಮೇರಿಕ ಶಿಷ್ಯೆಯಾದ ಸಿಸ್ಟರ್ ಲಲಿತರವರೂ ಬಂದಿರುವರು. ಸ್ವಾಮಿಗಳವರು ನಿನ್ನೆಯದಿನ ಪ್ರೊ|| ವಾಡಿಯರವರ ಅಧ್ಯಕ್ಷತೆಯಲ್ಲಿ ಬನುಮಯ್ಯನವರ ಸ್ಕೂಲಿನಲ್ಲಿ ಸ್ವಾರಸ್ಯವಾದ ಭಾಷಣವನ್ನು ಮಾಡಿದರು ಪಾಶ್ಚಿಮಾತ್ಯರಿಂದ ನಾವು ತಿಳಿದುಕೊಳ್ಳಬೇಕಾದ ಅನೇಕ ಅಂಶಗಳು ಇವೆಯೆಂದೂ, ಅವರಿಗೆ ನಾವು ತಿಳಿಸಬೇಕಾದ ವಿಷಯಗಳೂ ಅನೇಕವಾಗಿವೆಯೆಂದೂ ತಿಳಿಸಿದರು

ಉಡುಪಿ ಸ್ವಾಮಿಗಳಮೇಲೆ ಮಾನ ನಷ್ಟದ ಮೊಕದ್ದಮೆ

(ಒಬ್ಬ ಬಾತ್ಮೀದಾರರಿಂದ)

ಚಿತ್ರದುರ್ಗದ ನಾರಾಯಣಪ್ಪನೆಂಬಾತನು ಉಡುಪಿ ಸ್ವಾಮಿಗಳಲ್ಲೊಬ್ಬರಾದ ಶ್ರೀ ವಿಶ್ವಮಾನ್ಯ ತೀರ್ಥ ಶ್ರೀ ಪಾದಂಗಳವರು ಮತ್ತು ದಾವಣಗೆರೆಯ ಜಮದಗ್ನಿ ಶ್ರೀನಿವಾಸ ರಾಯರ ಮೇಲೆ ಒಂದು ಮಾನನಷ್ಟದ ಮೊಕದ್ದಮೆಯನ್ನು ಹೂಡಿರುವನು ನಾರಾಣಪ್ಪನೂ ಅವನ ಕುಲಸ್ಥರೂ ಶೂದ್ರರಿಗಿಂತಲೂ ಕಡೆಯೆಂತಲೂ ಸಮ್ಮವಹಾರಕ್ಕೆ ಯೋಗ್ಯರಲ್ಲವೆಂತಲೂ ಮುಂತಾಗಿ ಸೂಚಿಸುವ ಒಂದು ಬಹಿಷ್ಕಾರ ಪತ್ರಿಕೆಯನ್ನು ಎರಡನೇ ಪ್ರತಿವಾದಿಗಳ ಹೇಳಿಕೆ ಮೇರೆ ಮೊದಲನೇ ಪ್ರತಿವಾದಿಗಳಾದ ಶ್ರೀ ಸ್ವಾಮಿಗಳು ಹೊರಡಿಸಿದರೆಂಬುದೇ ಆಪಾದನೆ ಈ ಮೊಕದ್ದಮೆಯು ಮ್ಯಾಜಿಸ್ಟ್ರೇಟ್ ಕೋರ್ಟುಗಳಲ್ಲಿ ವಿಚಾರಣೆಯಾಗಿ ಈಗ ಹೈಕೋರ್ಟಿನಲ್ಲಿ ಅಪ್ಪೀಲಾಗಿದೆ ದೊಡ್ಡ ದೊಡ್ಡ ಲಾಯರುಗಳು ಎರಡು ಕಡೆಯೂ ನಿಂತಿರುವರು ವಿಚಾರಣೆ ನಡೆಯುತ್ತಿದೆ.

ಪುನರ್ಜನ್ಮ ಸ್ಮರಣೆಯ ಮತ್ತೊಂದು ಹುಡುಗಿ

ಒಂಬತ್ತು ವರ್ಷವಯಸ್ಸಿನ ಶಾಂತಿದೇವಿ ಎಂಬ ಡೆಲ್ಲಿ ನಗರದ ಕುಮಾರಿಯು ತನ್ನ ಪೂರ್ವ ಜನ್ಮದ ವೃತ್ತಾಂತಗಳನ್ನೆಲ್ಲಾ ಹೇಳುವುದರಲ್ಲಿ ಜಗದ್ವಿಖ್ಯಾತಳಾಗಿರುವಳು ಈಗ ಮತ್ತೊಂದು ಹುಡುಗಿಯ ಕಥೆಯು ತಿಳಿದು ಬಂದಿದೆ ಆಕೆಗೆ ನಾಲ್ಕೇ ವರ್ಷವಯಸ್ಸು. ಆಕೆಯ ತಂದೆಯು ಭಗವತಿ ಎಂದು ಆಕೆಗೆ ಹೆಸರಿಟ್ಟನು ಆ ಹೆಸರು ಬೇಡವೆಂದೂ, ತನ್ನ ಹೆಸರು ಶಾಂತಿದೇವಿ ಎಂದೂ ಹೇಳಿದಳು. ಮತ್ತು ತನ್ನ ಪೂರ್ವಜನ್ಮದ ವಿಷಯವಾಗಿ ಈ ಕೆಳಗೆ ಕಂಡ ಅಂಶವನ್ನೂ ತಿಳಿಸಿದಳು..—ಷಾಜೇಗಡದ ಸಮೀಪದಲ್ಲಿ ಬೋಲ್‌ಪುರ ಗ್ರಾಮದಲ್ಲಿ ಆಕೆಗೆ ಮದುವೆಯಾಗಿತ್ತು. ಮೂರು ಮಕ್ಕಳಿದ್ದವು ಅನಂತರ ಸತ್ತು ಹೋದಳು ಈ ಹುಡುಗಿಯನ್ನು ಸೋಲ್ಪಂಡ ಗ್ರಾಮಕ್ಕೆ ಕರೆದುಕೊಂಡು ಹೋಗಲು ತನ್ನ ಹಳೆಯ ಮನೆಯನ್ನು ಗುರುತಿಸಿ ಸಂತೋಷದಿಂದ ಒಳಗೆ ಹೋದಳು ಆ ಊರಿನ ಬಾಲಿಕಾ ಶಾಲೆಯಲ್ಲಿ ಈಗ ಉಪಾಧ್ಯಾಯಿನಿಯಾಗಿರುವ ಗಂಗಾದೇವಿಯೆಂಬ ತನ್ನ ಮಗಳನ್ನು ಕರೆದಳು. ಪೋಸ್ಟ್ ಆಫೀಸಿನಲ್ಲಿ ನೌಕರನಾಗಿರುವ 33ವರ್ಷ ವಯಸ್ಸಿನ ರಾಮ ಕೃಷ್ಣ ಮತ್ತು ರೈಲ್ವೆಯಲ್ಲಿ ಇರುವ ಪಟ್ವೊಲಾಲ್ ಎಂಬುವ ತನ್ನ ಮಕ್ಕಳನ್ನು ಕರೆದಳು ಎಲ್ಲರೂ ಆಶ್ಚರ್ಯಪಟ್ಟರು ಆಕೆಯನ್ನು ಪರೀಕ್ಷಿಸಲು ಹಾಕಿದ ಪ್ರಶ್ನೆಗಳಿಗೆ ಸರಿಯಾದ ಉತ್ತರಗಳನ್ನು ಕೊಟ್ಟಳು. ಬಂಧುಬಾಂಧವರನ್ನೆಲ್ಲಾ ಗುರುತಿಸಿದಳು. ಈಗಿನ ತಂದೆತಾಯಿಗಳೊಡನೆ ಇರಲು ಇಷ್ಟಪಡುವುದಿಲ್ಲ ಬಹಳವಾಗಿ ಅಳುತ್ತಾಳೆ ಏಕೆಂದರೆ ಅವರು ಕೀಳುಜಾತಿಯವರೆಂದು ತಿಳಿದುಕೊಂಡಿರುತ್ತಾಳೆ ತನ್ನ ಮಕ್ಕಳನ್ನು ನೋಡಲು ಬೋಲ್‌ಪುರಕ್ಕೆ ಇದ್ದಕ್ಕಿದ್ದಹಾಗೆ ಓಡಿಹೋಗುತ್ತಾಳೆ 60 ವರ್ಷ ವಯಸ್ಸಾಗಿದ್ದಾಗ ಆಕೆಯು ಮೃತಪಟ್ಟಳು. ಅವಳು ಸತ್ತು ಈಗ 4|| ವರ್ಷವಾಯಿತು ಈಗ ಆಕೆಯು ಹುಟ್ಟಿ 3 ವರ್ಷ 8 ತಿಂಗಳು ಆಯಿತು ಈ ಹತ್ತು ತಿಂಗಳು ಆಕೆಯು ಎಲ್ಲಿದ್ದಳೆಂಬುದೇ ಪ್ರಶ್ನೆ.

ಅಬಿಸೀನಿಯನರ ಘೋರಪ್ರತಿಜ್ಞೆ.

ಅಬಿಸೀನಿಯನರು ಕೊನೆಯವರೆಗೂ ಯುದ್ಧವನ್ನು ಮಾಡಿಯೇ ಮಾಡುವರು ಶಾಂತಿ ಸಂಧಾನಕ್ಕೆ ಮನಸ್ಸು ಕೊಟ್ಟಿಲ್ಲ ಎಂಬುದಾಗಿ ಅಲ್ಲಿನ ಸರಕಾರದವರು ಪ್ರಕಟಿಸಿರುತ್ತಾರೆ

ಹರಿಜನರ ಶುದ್ಧಿ.

ಹರಿಜನರ ಏಳಿಗೆಗಾಗಿ ಪ್ರಯತ್ನಪಡುತ್ತಿರುವರುವ ಪಂಡಿತ ಮಾಳವೀಯರು ನಾಸಿಕದಲ್ಲಿ ಅವರಿಗೆ ಪಂಚಗವ್ಯವನ್ನೂ, ವಿಭೂತಿಧಾರಣೆಯನ್ನೂ ಮಾಡಿಸಿ ಶಿವ ಮಂತ್ರವನ್ನು ಉಪದೇಶಿಸಿದರು.

ಸಾಧ್ವಿ

೨೩-೩-೩೬ ನೇ ಸೋಮವಾರ

ನೂತನ ವರ್ಷದ ಅಭಿನಂದನೆ

ನಾಳೆಯ ದಿನ ಹೊಸ ವರ್ಷವು ಹುಟ್ಟುವುದು. ಇದಕ್ಕೆ ಧಾತು ಸಂವತ್ಸರವೆಂದು ಹೆಸರು. ಧಾತು ಈಶ್ವರ ಸಂವತ್ಸರಗಳೆಂದರೆ ಜನರ ಮನಸ್ಸಿನಲ್ಲಿ ಒಂದು ವಿಧವಾದ ಗಾಬರಿ. ಕ್ಷಾಮ, ಡಾಮರಗಳು ಹಿವ್ವನೆಂಬ ಖಾತರಿ ಅರವತ್ತು ವರ್ಷಗಳ ಕೆಳಗೆ ಧಾತು ಈಶ್ವರ ಸಂವತ್ಸರಗಳ ನೆನಪು ಇರುವವರು ಘೋರವಾದ ವರ್ಣನೆಗಳನ್ನು ಕೊಡುವರು ಮಳೆ ಬೆಳೆಗಳಿರಲಿಲ್ಲ ತಿನ್ನುವುದಕ್ಕೆ ಆಹಾರವಿರಲಿಲ್ಲ ಭೂತಾಳೆ ಗೆಡ್ಡೆಯನ್ನು ಜನರು ತಿಂದುಕೊಂಡು ಕಾಲ ಕಳೆದರೆಂದೂ ಹೇಳಲ್ಪಡುತ್ತಿದೆ ಇವುಗಳೆಲ್ಲವೂ ಕಥೆಯಂತೆ ಕಾಣುವುವು ಏಕೆಂದರೆ ನವೀನ ಕಾಲದಲ್ಲಿ ಈ ವಿಧವಾದ ಅನಾನುಕೂಲಗಳು ಉಂಟಾಗುವುದಿಲ್ಲ ಕೃತಕವಾಗಿಯಾದರೂ ವಿಜ್ಞಾನ ಶಾಸ್ತ್ರದ ಮೂಲಕ ಭೋಗ್ಯ ವಸ್ತುಗಳನ್ನು ಸಿದ್ಧಪಡಿಸುವ ಕಾಲವಿದು ಮನುಷ್ಯನು ಪ್ರಕೃತಿಯನ್ನು ಸರ್ವ ವಿಧದಲ್ಲಿಯೂ ಪರಾಜಯ ಪಡಿಸಲು ಪ್ರಯತ್ನಿಸುತ್ತಿರುವ ಕಾಲವಿದು ಪ್ರಪಂಚದ ಯಾವ ಭಾಗದಲ್ಲಿ ಪದಾರ್ಥಗಳು ದೊರಕಿದರೂ ಅವುಗಳನ್ನು ಎಲ್ಲಾ ಭಾಗಗಳಿಗೂ ಹಂಚುವ ಸೌಕರ್ಯಗಳು ಈಗ ಇರುತ್ತವೆ

ಆದರೆ ಈಗ ಜನಾಂಗಕ್ಕೆ ಬರತಕ್ಕ ಕ್ಷೋಭೆಯು ರೀತಿಯೇ ಬೇರೆ ಹಿಂದೆ ಮಳೆ ಬೆಳೆಗಳಿಲ್ಲದ ಕ್ಷಾಮ. ಈಗ ಇದ್ದೂ ಇಲ್ಲದ ಕ್ಷಾಮ ಎಷ್ಟಿದ್ದರೂ ಇನ್ನೂ ಬೇಕೆಂಬ ಸಮಾಧಾನ ಚಿತ್ತವಿಲ್ಲದ ಕ್ಷಾಮ. ಐಶ್ವರ್ಯಕ್ಕೂ ಬಡತನಕ್ಕೂ ಸ್ಪರ್ಧೆ ಪೋಟಿ ಇವರಿಂದ ಬಡಜನರ ಕ್ಷೋಭೆ ಇವುಗಳೇ ಪ್ರಪಂಚದ ಈಗಿನ ಮಹಾ ಅನರ್ಥಗಳು. ಆರ್ಥಿಕ ಅವನತಿಗಿಂತಲೂ ಈ ಮಾನಸಿಕ ದಾವಾಗ್ನಿಯು ಪ್ರಪಂಚವನ್ನು ನೂರ್ಕಡಿಯಾಗಿ ಪಡಿಸುವುದು

ಇಂತಹ ಪರಿಸ್ಥಿತಿಯಲ್ಲಿ ಭಗವಂತನು ನೂತನ ವರ್ಷಕ್ಕೆ ಸಮಾಧಾನತೆಯನ್ನೂ ಶಾಂತಿಯನ್ನೂ ಕರುಣಿಸಿ ಧಾತು ಸಂವತ್ಸರವನ್ನು ಸುಖವಾಗಿಯೂ ಶಾಂತಿಯಿಂದಲೂ ಕಳೆಯುವಂತೆ ಅನುಗ್ರಹಿಸಲೆಂದು ಪ್ರಾರ್ಥಿಸುತ್ತೇವೆ

ಸ್ವದೇಶೀಯರಿಗೆ ಪ್ರೋತ್ಸಾಹ.

ಕಲ್ಕತ್ತಾ ನಗರದ ಪೌರಸಭೆಗೆ ಕಾಂಗ್ರೆಸ್ಸಿನ ಪಕ್ಷದವರು ಪ್ರವೇಶಿಸಿದ ಮೇಲೆ ದೇಶೀಯ ಕೈಗಾರಿಕೆಗಳಿಗೇ ಉತ್ತೇಜನವು ದೊರೆಯುತ್ತಿದೆ ವಿದೇಶದ ಪದಾರ್ಥಗಳನ್ನು ಸಾಧ್ಯವಾದಷ್ಟು ತರಿಸುತ್ತಿಲ್ಲ. ದೇಶೀಯ ಕೈಗಾರಿಕೆಗಳಿಗೂ ಸ್ವದೇಶೀ ಸಂಸ್ಥೆಗಳಿಗೂ ಉತ್ತೇಜನ ಕೊಡುತ್ತಿರುವರು. ಕೆಲವು ದಿನಗಳ ಹಿಂದೆ ಮೋಟುರುಲಾರಿಯೊಂದನ್ನು ತಯಾರುಮಾಡಲು ಒಬ್ಬರಿಗೆ ಬೇಕಾದ ಸೌಕರ್ಯಗಳನ್ನೆಲ್ಲಾ ಒದಗಿಸಿದ್ದರು. ಈಚೆಗೆ ಹೌರಾದಲ್ಲಿ ಗಂಗಾನದಿಯಮೇಲೆ ದೊಡ್ಡ ಸೇತುವೆಯೊಂದನ್ನು ಕಟ್ಟುವ ಏರ್ಪಾಡಾಗಿದೆ ಅದನ್ನು ಭಾರತೀಯ ಕಂಟ್ರಾಕ್ಟರುಗಳಿಗೇ ಕೊಡಬೇಕೆಂದು ಪೌರಸಭೆಯವರು ನಿರ್ಣಯಿಸಿರುವರು. ಈ ಮೇಲ್ಪಂಗ್ತಿಯು ಇತರ ಪೌರಸಭೆಗಳಿಗೂ ಸ್ಥಳೀಯ ಸರ್ಕಾರಗಳಿಗೂ ಅನುಕರಣೀಯವಾದದ್ದು.

"ಗರಿಕೆ"

ಮೈಸೂರು ಶಾರದಾವಿಲಾಸ ಹೈಸ್ಕೂಲಿನ ಕರ್ನಾಟಕ ಸಂಘದ ಆಶ್ರಯದಲ್ಲಿ ಹೊರಡುತ್ತಿರುವ ಮೇಲ್ಕಂಡ ತ್ರೈಮಾಸಿಕ ಪತ್ರಿಕೆಯ ನಾಲ್ಕನೇ ಸಂಚಿಕೆಯನ್ನು ನಾವು ಆದರದಿಂದ ಸ್ವೀಕರಿಸಿದ್ದೇವೆ. ಇದು ವೃದ್ಧಪಿತಾಮಹ ಎಂ ವೆಂಕಟಕೃಷ್ಣಯ್ಯನವರ ಸ್ಮಾರಕ ಸಂಚಿಕೆ. ಇದರಲ್ಲಿ ತಾತಯ್ಯನವರ ವಿಷಯವಾಗಿ ಶ್ರೀ ಗಳಾದ ಎಂ. ಶಾಮರಾವ್ ಕೆ. ಪಿ ಪುಟ್ಟಣ್ಣಶೆಟ್ಟಿ. ಪಿ. ಮಹದೇವಯ್ಯ. ಶ್ರೀ ಸಾಡಿ ಮುಂತಾದವರ ಲೇಖನಗಳು ಪ್ರಕಟವಾಗಿವೆ. ಮತ್ತು ತಾತಯ್ಯನವರ 3 ಭಾವಚಿತ್ರಗಳೂ ಇರುತ್ತವೆ ಇದರ ಬೆಲೆ ಎರಡಾಣೆ ಮಾತ್ರ ಸರ್ವರೂ ಓದಬೇಕಾದುದು

ಆಕಾಶವಾಣಿ ಕಾರ್ಯಕ್ರಮ.

ಸೋಮವಾರ ರಾತ್ರಿ 8 30 ರಿಂದ 9 45 ಪಾಶ್ಚಿಮಾತ್ಯ ಸಂಗೀತ ಮತ್ತು ಜನಪದ ವಿಜ್ಞಾನ; ಮಂಗಳವಾರ 6 30 ರಿಂದ 7 45 ಕರ್ನಾಟಕ ಗಾನ, ಉಪನ್ಯಾಸ "ಶ್ರೀ ಸಚ್ಚಿದಾನಂದ ಶಿವಾಭಿನವ ನೃಸಿಂಹ ಭಾರತಿಗಳವರು' ನಂಜನಗೂಡು ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ ಎನ್ ಸುಬ್ರಹ್ಮಣ್ಯಯ್ಯನವರಿಂದ, ಬುಧವಾರ 8 ರಿಂದ 9 30 ಆ॥ ವಿ॥ ವೆಂಕಟರಮಣಯ್ಯನವರ ಪಿಟೀಲು ಗುರುವಾರ 6-30ರಿಂದ 8 30 ಹಿಂದೂಸ್ಥಾನಿ ಸಂಗೀತ ಶುಕ್ರವಾರ 8-30 ರಿಂದ 9 30 ವಿಪ್ಲವಲೀಲಾ' ಕನ್ನಡ ನಾಟಕ ಪ್ರೊ॥ ವಾಡಿಯಾರವರ ಭಾಷಣ "ಸಮಾಜ ಶಾಸ್ತ್ರ"

"ಸಂಘದ ಸಮಸ್ಯೆ"

ಇದೊಂದು ಸಾಮಾಜಿಕ ನಾಟಕ ಕಾದಂಬರಿ ಸಾಗರ ಗ್ರಂಥಮಾಲೆಯಲ್ಲಿ ಪ್ರಕಟವಾಗಿದೆ ಗ್ರಂಥಕರ್ತರು ಮ॥ ಸೋ ಗೋಪಾಲಶಾಸ್ತ್ರಿಗಳು ಈಗಿನಕಾಲದ ಸಮಾಜದ ಸ್ಥಿತಿಗತಿಗಳನ್ನು ಸುಧಾರಣೆ ಮಾಡಲು ಪ್ರಕಟಿಸಲ್ಪಟ್ಟಿದೆ ಬೆಲೆ ಆರಾಣೆ.

ಚೇಳುಕಡಿತಕ್ಕೆ ಚಿಕಿತ್ಸೆ.

ಈಗ ಬೇಸಿಗೆ ಕಾಲವಾದುದರಿಂದ ಎಲ್ಲೆಲ್ಲಿಯೂ ಚೇಳಿನ ಕಡಿತವು ಆಗುತ್ತಿದೆ ಇದಕ್ಕೆ ಒಬ್ಬ ಮಹನೀಯರು ಅನುಭವಪೂರ್ವಕವಾದ ಮತ್ತು ಅತಿ ಸುಲಭವಾದ ಚಿಕಿತ್ಸೆಯನ್ನು ಸೂಚಿಸಿರುತ್ತಾರೆ ಅದನ್ನು ಮಹಾಜನರು ಉಪಯೋಗಿಸಿ ಪ್ರಯೋಜನ ಹೊಂದಲೆಂದು ಆಶಿಸಲಾಗಿದೆ ಹೊಗೆಸೊಪ್ಪನ್ನು ಕಲ್ಲುಹತ್ತಿನಲ್ಲಿ ಚೆನ್ನಾಗಿ ಅರೆದು, ಸ್ವಲ್ಪ ಸುಣ್ಣವನ್ನು ಸೇರಿಸಿ ತೆಳ್ಳಗೆ ಲೇಪವಾಗುವಂತೆಮಾಡಿ ಅದನ್ನು ಚೇಳು ಕಚ್ಚಿದ ಸ್ಥಳದಲ್ಲಿ ಹಚ್ಚಿದರೆ ಶೀಘ್ರದಲ್ಲಿಯೇ ಉರಿ ಕಡಿಮೆಯಾಗುತ್ತದೆ ಇದನ್ನು ಅನೇಕರಿಗೆ ಪ್ರಯೋಗಿಸಿ ಗುಣವನ್ನು ಕಂಡಿರುತ್ತಾರೆ.

ಹಿಂದೀ ಪ್ರಚಾರ ಸಭಾ, ಮೈಸೂರು.

ಪ್ರತಿ ವರ್ಷವೂ ನಡೆಯುವಂತೆ ಈ ವರ್ಷವೂ ಬೇಸಿಗೆ ಕಾಲದ ಹಿಂದೀ ತರಗತಿಗಳು ಮರಿಮಲ್ಲಪ್ಪ ಹೈಸ್ಕೂಲಿನಲ್ಲಿ ನಡೆಯುವುವು. ಉಪಾಧ್ಯಾಯರೂ, ಲಾಯರು ವರ್ತಕರೇ ಮೊದಲಾದವರು ಆರು ವಾರಗಳಲ್ಲಿ ಸಾಮಾನ್ಯವಾದ ಹಿಂದೀ ಜ್ಞಾನವನ್ನು ಪಡೆಯಲು ಅನುಕೂಲಿಸುವಂತೆ ಮುಂದಿನ ತಿಂಗಳಿಂದ ನಿತ್ಯವೂ ಸಾಯಂಕಾಲ 5॥ ಘಂಟೆಗೆ ತರಗತಿಗಳು ಪ್ರಾರಂಭವಾಗುವುವು. ತರಗತಿಗೆ ಸೇರಲು ಇಷ್ಟವುಳ್ಳವರು ಈ ತಿಂಗಳು ಅಖೈರಿನೊಳಗಾಗಿ ಹಿಂದೀ ಪ್ರಚಾರ ಸಭಾ ಸೆಕ್ರೆಟರಿಯವರಿಗೆ ಮೊಕ್ತ ಅಥವಾ ಲಿಖಿತ ಮೂಲಕ ತಿಳಿಸಬಹುದು.

ವೈರಮುಡಿ ಮಹೋತ್ಸವ.

ಏಪ್ರಿಲ್ ಒಂದನೇ ತಾ॥ ಬುಧವಾರ ಮೇಲ್ಕೋಟೆಯಲ್ಲಿ ಶ್ರೀ ಚಲುವರಾಯಸ್ವಾಮಿಯವರಿಗೆ ವೈರಮುಡಿ (ಕಿರೀಟಧಾರಣ) ಉತ್ಸವವು ನಡೆಯುತ್ತದೆ.

ಶಿವಮೊಗ್ಗ-ಸಾಗರ ರೈಲ್ವೆ.

ಶಿವಮೊಗ್ಗದಿಂದ ಸಾಗರಕ್ಕೆ ರೈಲನ್ನು ಹಾಕಲು ಸರ್ಕಾರದವರು ಮಂಜೂರುಮಾಡಿರುವರಷ್ಟೆ. ಈಚೆಗೆ ಇದರ ಕೆಲಸಕ್ಕೆ ಆರಂಭವಾಗಿದೆ. ಶರಾವತಿ ನದಿಯ ಸೇತುವೆ ಮತ್ತು ಬಟ್ಕಳ್ ರೇವುಗಳು ತಯಾರಾದರೆ ಮೈಸೂರಿನ ಅಭಿವೃದ್ಧಿಗೆ ಬಹಳ ಅವಕಾಶವಾಗುವುದು.

ಸಿಡಿಲಿನಿಂದ ಮರಣ.

ಎಡತೊರೆ ತಾಲ್ಲೋಕು ಗಂಧನಹಳ್ಳಿಯಲ್ಲಿ ಕಳೆದ ಗುರುವಾರ ಸಾಯಂಕಾಲ ಕುರಿಯನ್ನು ಮೇಯಿಸುತ್ತಿದ್ದ ಇಬ್ಬರು ಸಿಡಿಲಿಗೆ ಸಿಕ್ಕಿ ಮೃತಪಟ್ಟರೆಂದು ತಿಳಿದು ಬರುತ್ತದೆ.

ಬಹಿರಂಗ ಪತ್ರ

ಶ್ರೀ॥ ಎಚ್. ಸಿ. ದಾಸಪ್ಪನವರ ಸ॥ ಕ್ಕೆ.

ಸ್ವಾಮಿ,

ತಮ್ಮನ್ನು ಪ್ರಜಾಪಕ್ಷದವರು ಮುಂದಿನ ತಮ್ಮ ಅಧಿವೇಶನಕ್ಕೆ ಅಧ್ಯಕ್ಷರನ್ನಾಗಿ ಚುನಾಯಿಸಿರುತ್ತಾರೆ ಇದಕ್ಕಾಗಿ ನಾನು ತಮ್ಮನ್ನು ಅಭಿನಂದಿಸುತ್ತೇನೆ. ಪ್ರಜಾಪಕ್ಷದ ಮುಖಂಡರು ಒಂದು ರೀತಿಯಲ್ಲಿ ನಮ್ಮ ಈ ನಗರವನ್ನು ಗೌರವಿಸಿರುವರೆಂದೇ ಇಟ್ಟುಕೊಳ್ಳೋಣ. ಆದರೆ ಪ್ರಜಾಪಕ್ಷಕ್ಕೆ ಆದಿಯಿಂದಲೂ ಒಂದು ವಿಧವಾದ ಸೋಂಕು ಇರುತ್ತದೆ. ಅದರಮೇಲೆ ಅರಿತ ಜನರಿಗೆ ಒಂದು ವಿಧವಾದ ಗುಮಾನಿಯು ಇದ್ದೇ ಇರುತ್ತದೆ ಅದನ್ನು ಆ ಪಕ್ಷವು ಇನ್ನೂ ಅಳಿಸಿಕೊಂಡಿದೆಯೆಂದು ಹೇಳಲಾಗುವುದಿಲ್ಲ.

ಹೆಸರಿಗೇನೋ ಇದು ಪ್ರಜಾಪಕ್ಷ ಅಥವಾ ಇದು ಬಹು ಸಂಖ್ಯಾತರಾದ ಪ್ರಜೆಗಳ ಕೋಮಿನವರು ಇರುವ ಪಕ್ಷವೆಂದೂ ಒಪ್ಪುತ್ತೇನೆ ಆದರೆ ಮೈಸೂರು ದೇಶದ ಸಕಲ ಪ್ರಜೆಗಳಿಗೂ ಪ್ರಾತಿನಿಧ್ಯವನ್ನು ಕೊಡುವ ಪಕ್ಷವೆಂದು ಹೇಳಲಾಗುವುದಿಲ್ಲ. ಏನೇ ಆಗಲಿ. ಅದು ಒಂದು ಪಕ್ಷ, ಪಾರ್ಟಿ. ಸಂಪೂರ್ಣ ಜನಾಂಗವಲ್ಲ.

ಈ ಪಕ್ಷವು ಹುಟ್ಟುವಾಗಲೇ ಒಂದು ಕೋಮಿನ ಜನರನ್ನು ದೂರ ತಳ್ಳಿದ್ದಿತು. ಅದರಿಂದ ಪ್ರಜಾಪಕ್ಷವೆಂದು ಕರೆದುಕೊಳ್ಳುವ ಔಚಿತ್ಯದ ವಿಷಯವಾಗಿ ವಿಶೇಷ ಜಿಜ್ಞಾಸೆ ನಡೆಯಿತು ಇಷ್ಟೇ ಅಲ್ಲದೆ, ಈ ಪಕ್ಷದಲ್ಲಿ ಮೊದಲೊಡನೆ ತಾವು ಸದಸ್ಯರಾಗಿದ್ದ ಪ್ರಜಾಮಿತ್ರ ಮಂಡಲಿಯೇ ಸೇರಿಲ್ಲ ಎಂದ ಮೇಲೆ ಅದರ ಪ್ರತಿನಿಧಿತ್ವವು ಎಷ್ಟು ಉಚಿತವಾದುದೆಂಬುದು ವೇದ್ಯವಾಗುತ್ತದೆ

ಈಚೆಗೆ ಈ ಪಕ್ಷವನ್ನು ಸೇರಲು ಯಾರಿಗೂ ನಿರ್ಬಂಧವಿಲ್ಲದಂತೆ ಮಾಡಲಾಗಿದೆಯೆಂದು ಹೇಳಲ್ಪಡುತ್ತಿದೆ ಆದರೆ ಕಾರ್ಯತಃ ಇದಕ್ಕೆ ಅವಕಾಶಗಳು ಕಲ್ಪಿಸಲ್ಪಟ್ಟಿಲ್ಲ ಪ್ರಜಾಪಕ್ಷವೆಂದರೆ ಅಖಿಲ ಮೈಸೂರಿನ ಪ್ರಜೆಗಳ ಪ್ರತಿನಿಧಿ ಸಂಸ್ಥೆಯಾಗಬೇಕು ಯಾವ ಒಂದು ಪಂಗಡವನ್ನೂ ದೂರೀಕರಿಸಬಾರದು ಸರ್ವರ ಯೋಗಕ್ಷೇಮವನ್ನೂ ನೋಡಬೇಕು

ತಾವು ಬಹಳಮಟ್ಟಿಗೆ ಹಿಂದುಳಿದ ಜನಾಂಗದವರನ್ನು ಮುಂದಕ್ಕೆ ತರುವ ಕಾಂಕ್ಷೆಯುಳ್ಳವರಾಗಿರುತ್ತೀರಿ ಈ ಉದ್ದೇಶದಿಂದಲೇ ತಾವೂ ಸಹ ಮುಂದಕ್ಕೆ ಬಂದಿರುತ್ತೀರಿ ತಮ್ಮ ಸ್ವಂತ ಅಭಿಪ್ರಾಯಗಳೂ ಚಲನವಲನಗಳೂ ಸಹ ವಿಶೇಷವಾಗಿ ರಾಷ್ಟ್ರೀಯ ಸಮೂಹಗಳಲ್ಲಿ ಬೆರೆತಿವೆ ಈಗ ಪ್ರಜಾಪಕ್ಷದ ಅಧ್ಯಕ್ಷರಾಗಿ ತಾವು ಮೈಸೂರು ದೇಶದ ರೈತರ ಕಷ್ಟಗಳನ್ನು ನಿವಾರಿಸುವ ಅವಕಾಶವಿದೆ

ಸಮ್ಮೇಳನಗಳಲ್ಲಿ ಅನೇಕ ವಿಧಗಳಿವೆ ಕಾಫಿ, ತಿಂಡಿ ಸಮ್ಮೇಳನಗಳು ಕಾಗದರಾವಿನ ಸಮ್ಮೇಳನಗಳು, ಗೊಡ್ಡು ಬೆ

(ಹಿಂದಿನ ಕಾಲಂ ನೋಡಿ)

ರಿಕೆಯ ಸಮ್ಮೇಳನಗಳು, ರಾಜಿ ಸಂಧಾನದ ಸಮ್ಮೇಳನಗಳು ಮತ್ತು ಸ್ವಾರ್ಥಸಾಧನೆಯ ಸಮ್ಮೇಳನಗಳು ಇವೊಂದೂ ಪ್ರಯೋಜನವಿಲ್ಲ ಜನರಿಗೆ ಉಪಕಾರವಾಗುವ ಅಂಶಗಳನ್ನು ಕಾರ್ಯಗತವಾಗುವ ರೀತಿಯಲ್ಲಿ ನಿರ್ಣಯಿಸಿ ಮಾತಿನಂತೆ ಮಾಡತಕ್ಕ ಸಮ್ಮೇಳನಗಳೇ ನಿಜವಾದ ಸಮ್ಮೇಳನಗಳು ತಾವು ಇದಕ್ಕೆ ಗಮನಕೊಟ್ಟು ಬಡ ರೈತರಿಗೆ ಉಪಯೋಗವಾಗುವ ಯಾವುದಾದರೂ ಕಾರ್ಯವನ್ನು ಸೂಚಿಸಿದರೆ ತಮ್ಮ ಅಧ್ಯಕ್ಷಪದವಿಯು ಸಾರ್ಥಕವಾಗುವುದು

ಅನಾಮಧೇಯ.

ನಗರದ ಕುಂದುಕೊರತೆಗಳು

(ಲೇಖಕ:—ನಾರದ)

ಲ್ಯಾನ್ಸ್‌ಡೌನ್ ಬಜಾರ್:—

ಇಲ್ಲಿನ ಮಳಿಗೆಗಳಲ್ಲಿ ನೂರಾರು ಜನ ವರ್ತಕರೂ, ಲಾಯರುಗಳೂ, ವಿದ್ಯಾರ್ಥಿಗಳೂ ಇತರ ಸಾರ್ವಜನಿಕಸಂಸ್ಥೆಗಳವರೂ ಇರುತ್ತಾರೆ ಕಡೇ ಪಕ್ಷ ಏನಿಲ್ಲವೆಂದರೂ ಐದು ಸಾವಿರ ಜನರು ಪ್ರತಿ ದಿನವೂ ಇಲ್ಲಿ ಬಂದು ಹೋಗುತ್ತಾರೆ ಪ್ರತಿ ದಿನವೂ ಕಡೇ ಪಕ್ಷ 12 ಗಂಟೆಗಳನ್ನಾದರೂ ಇಲ್ಲಿ ಕಳೆಯುತ್ತಾರೆ ಇಲಾಖೆಯವರೇನೋ ಇಲ್ಲಿನ ವರ್ತಕರಿಂದ ಸರಿಯಾಗಿ ಬಾಡಿಗೆ ಸುಂಕಗಳನ್ನು ವಸೂಲುಮಾಡಿ ಬಿಡುತ್ತಾರೆ ಆದರೆ ಬಂದು ಹೋಗುವ ಜನರ ಆವಶ್ಯಕತೆಗಳ ಕಡೆ ಸಾಕಾದಷ್ಟು ಲಕ್ಷ್ಯ ಕೊಟ್ಟಿಲ್ಲ ಇಲ್ಲಿನ ನಿವಾಸಿಗಳಿಗೆ ಕುಡಿಯುವ ನೀರಿನ ತೊಂದರೆ ಬಹಳವಾಗಿದೆ. ಇಲ್ಲಿ ಎರಡು ನಲ್ಲಿಗಳಿದ್ದದ್ದು ಒಂದಕ್ಕೆ ಇಳಿದಿದೆ ಅದರಲ್ಲಿಯೂ ಸರಿಯಾಗಿ ನೀರೇ ಬೀಳುವುದಿಲ್ಲ. ಇದಕ್ಕಿಂತಲೂ ಹೆಚ್ಚಾಗಿ ಇಲ್ಲಿನ ನಿವಾಸಿಗಳಿಗೆ ಜಲಮಲ ವಿಸರ್ಜನೆಗೆ ಅವಕಾಶವಿಲ್ಲದಿರುವುದು ಅತ್ಯಂತ ಶೋಚನೀಯ ಸಂಗತಿ ಯಾವ ಬಾಡಿಗೆ ಮನೆಗಳಲ್ಲಿಯಾಗಲೀ ಕಡೇ ಪಕ್ಷ ಈ ಸೌಕರ್ಯಗಳು ಇದ್ದೇ ಇರುತ್ತವೆ. ಸಾವಿರಾರು ಜನರು ಸಂಚರಿಸುವ ಈ ಪ್ರದೇಶದಲ್ಲಿ ಅವು ಇಲ್ಲದಿರುವುದು ಅಕ್ಷಮ್ಯವಾದುದು ಈ ಕಾರಣದಿಂದ ಕಟ್ಟಡದ ಎದುರಿಗಿರುವ ಪೋಟು ಗೋಡೆಯ ಬುಡವನ್ನೇ ಜನರೆಲ್ಲರೂ ಕೆಡಿಸುವಂತಾಗಿದೆ. ಈ ಗೋಡೆಯ ಸಮೀಪದಲ್ಲಿ ಯಾರೂ ಮೂಗನ್ನು ಬಿಟ್ಟುಕೊಂಡು ಹೋಗುವ ಹಾಗಿಲ್ಲ. ಅಲ್ಲದೆ ಗೋಡೆಯ ಬುಡವೆಲ್ಲವೂ ಉಪ್ಪು ತಿಂದು ಹೋಗಿ ಮುಕ್ಕು ಮುಕ್ಕಾಗುತ್ತಿದೆ. ಇದಕ್ಕೆ ಜನರನ್ನು ನಿಂದಿಸಿ ಫಲವಿಲ್ಲ ಅವರಿಗೆ ಬೇಕಾದ ಸೌಕರ್ಯಗಳನ್ನು ಒದಗಿಸಿ ಕೊಡುವುದೇ ಉಪಾಯ ಒಂದುಸಲಹೆ ಇಲ್ಲಿನ ನಿವಾಸಿಗಳೆಲ್ಲರೂ ಸೇರಬೇಕು ಒಂದು ಸಭೆಯನ್ನೋ ಸಂತೋಷ ಕೂಟವನ್ನೋ ಏರ್ಪಡಿಸಬೇಕು ಅದಕ್ಕೆ ದಿವಾನರನ್ನೋ ಅಥವಾ ಮತ್ಯಾರಾದರೂ ದೊಡ್ಡವರನ್ನೋ ಕರೆಯಬೇಕು. ಅಲ್ಲಿಂದ ಮುಂದಕ್ಕೆ ಆಗಬೇಕಾದ್ದು ತಾನಾಗಿಯೇ ಆಗುತ್ತೆ.

ಚಾಮರಾಜಪುರಂ ರೈಲ್ವೆ ಸ್ಟೇಷನ್:—

ಈ ಸ್ಟೇಷನ್ನಿನಲ್ಲಿ ಎರಡು ಕುಡಿಯುವ ನೀರಿನ ನಲ್ಲಿಗಳಿವೆ ಒಂದರಲ್ಲಿಯೂ ನೀರಿಲ್ಲ ಸುಮ್ಮನೆ ಸಾಕ್ಷಿ ಭೂತಗಳಾಗಿ ನಿಂತಿವೆ ಈಗಿನ ಉರಿ ಬೇಸಿಗೆಯ ಬಿಸಿಲಿನ ಕಾಲದಲ್ಲಿ ದಾಹಾಂತದಿಂದ ಪರದಾಡುವ ಬಡ ಪ್ರಯಾಣಿಕರಿಗೆ ಸ್ವಲ್ಪ ಕುಡಿಯುವ ನೀರನ್ನು ಒದಗಿಸಿದರೆ ಕೋಟಿ ಗಟ್ಟಲೆ ಪುಣ್ಯವು ಲಭಿಸುವುದು ಈ ಕಾಲದಲ್ಲಿ ಕೆಲವು ಸ್ಟೇಷನ್ನುಗಳಲ್ಲಿ ಕುಡಿಯುವ ನೀರನ್ನು ಕೊಡಲು ಒಬ್ಬ ಆಳನ್ನು ಇಡುವುದುಂಟು ಉತ್ತರ ದೇಶದಲ್ಲಿ ದೂರ ಸಂಚಾರ ಮಾಡುವ ಪ್ರಯಾಣಿಕರ ಸೌಕರ್ಯಕ್ಕಾಗಿ ಸ್ನಾನಕ್ಕೂ ಸಹ ನೀರನ್ನು ಒದಗಿಸುವುದುಂಟು ದೇವರು ಕೊಟ್ಟಹಾಗೆ ನಿಂತಿರುವ ನಲ್ಲಿಗಳಿಗೆ ಸ್ವಲ್ಪ ನೀರನ್ನಾದರೂ ಬಿಡಿಸುವ ಏರ್ಪಾಡು ಮಾಡಬಾರದೇ?

ಕಳ್ಳತನಗಳು:—

ಚಾಮುಂಡಿ ಬಡಾವಣೆಯಲ್ಲಿ ಕಳ್ಳತನಗಳು ಹೆಚ್ಚಾಗುತ್ತಿವೆ ಎಲ್ಲಾ ಸಣ್ಣಪುಟ್ಟ ಚೋರಿಗಳು ತಪ್ಪಲೆ, ಚೊಂಬು, ಹಳೇ ಬಟ್ಟೆ ಮುಂತಾದುವೇ ಹೋಗುವುದು ಹೆಚ್ಚು ಮೊದಲೇ ಗಾದೆ ಹೇಳುವುದಿಲ್ಲವೆ? ಬೆಂದ ಮನೆಗೆ ಹಿರಿದಷ್ಟು ಲಾಭ ಈ ಬಡಾವಣೆಯಲ್ಲಿಯೇ ವಾಸಿಸುತ್ತಿರುವ ಇನ್ಸ್‌ಪೆಕ್ಟರವರು ಸ್ವಲ್ಪ ಹೆಚ್ಚು ನಿಗಾ ಕೊಡಬೇಕು

ಶುದ್ಧವಾದ ಹೋಟೆಲುಗಳ ಆವಶ್ಯಕತೆ.

ಹೋಟೆಲುಗಳು, ಕಾಫಿ ಕ್ಲಬ್ಬುಗಳು, ಇವುಗಳ ಪಾರಿಶುಧ್ಯತೆಯನ್ನು ಕುರಿತು ಮೈಸೂರು ಪೌರ ಸಭಾಧ್ಯಕ್ಷರು ಒಂದು ಉಪಯುಕ್ತವೂ ಸ್ವಾರಸ್ಯವೂ ಆದ ಭಾಷಣವನ್ನು ಕಳೆದ ಬುಧವಾರ ಕೊಟ್ಟರು ಇಲ್ಲಿನ ಸಯ್ಯಾಜಿರಾವ್ ರಸ್ತೆಯಲ್ಲಿ ಇಂದ್ರಭವನವೆಂಬ ಹೆಸರಿಂದ ಶ್ರೀ॥ ಗಳಾದ ಒಡೇ ಪ್ರಸಾದ್ ಮತ್ತು ಮುರ್ಷಿಲಾಲರು ಉತ್ತಮವಾದ ಹೊಸ ಫಲಾಹಾರ ಮಂದಿರವನ್ನು ಏರ್ಪಡಿಸಿರುವರು. ಇದರ ಪ್ರಾರಂಭೋತ್ಸವವನ್ನು ಪೌರ ಸಭಾಧ್ಯಕ್ಷರಾದ ಶ್ರೀ॥ ಎಂ ಎ ಶ್ರೀನಿವಾಸರವರು ನೆರವೇರಿಸಿದರು ಅನೇಕ ಜನ ದೊಡ್ಡ ಮನುಷ್ಯರು ಬಂದಿದ್ದರು ಈ ಸಂದರ್ಭದಲ್ಲಿ ಅಧ್ಯಕ್ಷರು ಮೇಲ್ಕಂಡ ಭಾಷಣವನ್ನು ಮಾಡಿದರು "ನಮಗೆ ಇಷ್ಟವಿರಲಿ ಇಲ್ಲದಿರಲಿ ಹೋಟೆಲುಗಳು ಶಾಶ್ವತವಾಗಿ ನಮ್ಮ ದೇಶದಲ್ಲಿ ನಡೆಯಬೇಕಾದ ಪ್ರಮೇಯವು ಬರುತ್ತಿದೆ. ಆದ್ದರಿಂದ ಉತ್ತಮವಾಗಿಯೂ ಶುಚಿ ರುಚಿಯಾಗಿಯೂ ಇರುವ ಹೋಟೆಲುಗಳೇ ವೃದ್ಧಿಯಾಗುವಂತೆ ನಾವೆಲ್ಲರೂ ಪ್ರಯತ್ನಿಸಬೇಕು. ಈಗ ಇಂತಹ ಹೋಟೆಲುಗಳಲ್ಲಿ ಶೇ॥ ಎರಡರಷ್ಟು ಸಹ ಸಮರ್ಪಕವಾಗಿಲ್ಲ ಇವುಗಳಲ್ಲಿ ಕತ್ತಲೆಯ ಗವಿಗಳಂತೆ ಇರುವವುಗಳೇ ಹೆಚ್ಚು. ಮಿಶ್ರವಾದ ಪದಾರ್ಥಗಳನ್ನು ಉಪಯೋಗಿಸುವವುಗಳು ಅಧಿಕ. ಅನಾರೋಗ್ಯಕ್ಕೆ ಅವುಗಳೇ ಮಾತೃ ಸ್ಥಾನಗಳು ಪಾಶ್ಚಾತ್ಯ ದೇಶಗಳಲ್ಲಿ ಹೋಟೆಲುಗಳಿಗೆ ಭೇಟಿ ಕೊಡುವುದೇ ಒಂದು ಆನಂದ ಅವುಗಳು ಪಾರಿಶುಧ್ಯತೆಗೂ, ಅಂದಚಂದಗಳಿಗೂ ಮಾದರಿಯಾಗಿವೆ. ಈಗಿನ ಕಾಲದ ಜನ ಜೀವನದಲ್ಲಿ ಹೋಟೆಲುಗಳಿಗೆ ಒಂದು ಪ್ರಾಮುಖ್ಯಸ್ಥಾನವಿದೆ ಸಾರ್ವಜನಿಕ ಹಿತದ ದೃಷ್ಟಿಯಿಂದ ಅವುಗಳನ್ನು ಎಷ್ಟು ಪರಿಷ್ಕಾರವಾಗಿ ಇಟ್ಟರೆ ಅಷ್ಟು ಒಳ್ಳೆಯದು" ಎಂದು ಅವರು ಹೇಳಿದರು. ಅನಂತರ ಎಲ್ಲರಿಗೂ ಉಪಾಹಾರವಾಯಿತು ಧನ್ಯವಾದಗಳೊಡನೆ ಸಭೆ ಮುಗಿಯಿತು

ಅಮಲ್‌ದೇವತೆ ಪೂಜೆ.

(ದಾಸಯ್ಯನ ಜಾಗಟೆ.)

೨.

(ಲೇಖಕ-ಜಿ.ವಿ.ಆರ್. ಒಂಟಿಕೊಪ್ಪಲ್)

ದಾಸಯ್ಯ— ಶ್ರೀಮದ್‌ರಮಾರಮಣ ಗೋವಿಂದಾ ಗೋಹಿಂದ ಎಂದು ಜಾಗಟೆಯನ್ನು ಬಾರಿಸುತ್ತಾ ಹೋಗುತ್ತಿದ್ದನು

ನಾನು—ಅಮಲ್‌ದೇವತೆ ಪೂಜೆ ಅಂದರೇನು ಒಲ್ಲೆಯಾ?

ದಾಸ—ಅಯ್ಯೋ ಬುದ್ಧಿ ಮೈಸೂರಲ್ಲೇ ಹುಟ್ಟಿ ಮೈಸೂರಲ್ಲೇ ಬೆಳೆದು ನಮ್ಮ ಮೈಸೂರು ದೊರೆಗೋಳ್ಕತೆ ನಂಗೆ ಗೊತ್ತಿಲ್ಲ ಅಂದರೆ ಜನ ನಕ್ಕಾರು (ತನ್ನ ಗಂಟಿನಲ್ಲಿದ್ದ ಕಾಗದವನ್ನು ಕೊಟ್ಟು) ಬುದ್ಧಿ, ಇದು ನಮ್ಮ ತಾತಯ್ಯನ ಕಡತದ ಗಂಟು ಇದರಲ್ಲಿ ಏನು ಬರೆದದೆ ನೋಡಿ

ನಾನು—ಕಾಗದವನ್ನು ಓದಿಕೊಂಡೆನು ಅದರಲ್ಲಿ ಹೀಗಿತ್ತು. ಮೈಸೂರು ದೊರೆಗಳಲ್ಲಿ ಒಬ್ಬರಾದ ರಾಜಒಡೆಯರು ಮೈಸೂರಲ್ಲಿ ಆಳುತ್ತಿದ್ದರು. ವಿಜಯನಗರದ ರಾಜರ ಕಡೆಯವನಾಗಿ ತಿರುಮಲರಾಯನು ಶ್ರೀರಂಗಪಟ್ಟಣದಲ್ಲಿ ಆಳುತ್ತಾ ಮೈಸೂರು ಮೊದಲಾದ ಕೆಲವು ಪಾಳೆಯಗಾರರಿಂದ ಕಪ್ಪವನ್ನು ವಸೂಲ್ಮಾಡುತ್ತಾ ವಿಜಯನಗರಕ್ಕೆ ಕಳುಹಿಸುತ್ತಾ ಇದ್ದನು ತಿರುಮಲರಾಯನಿಗೆ ಅಲಮೇಲಮ್ಮನೆಂಬ ಮಹಾ ಪತಿವ್ರತೆಯಾದ ಪತ್ನಿ ಇದ್ದಳು ಶ್ರೀರಂಗಪಟ್ಟಣದಲ್ಲಿದ್ದ ಶ್ರೀ ರಂಗನಾಥಸ್ವಾಮಿಯಲ್ಲಿ ತಿರುಮಲರಾಯನಿಗೂ ಅಲಮೇಲಮ್ಮನಿಗೂ ಅಸಾಧಾರಣವಾದ ಭಕ್ತಿ ರಂಗನಾಥನೆಂದರೆ ಆ ದಂಪತಿಗಳಿಗೆ ಪ್ರಾಣ ಆಗಾಗ್ಗೆ ನಡೆಯುತ್ತಿದ್ದ ಉತ್ಸವಕಾಲಗಳಲ್ಲಿ ಅಲಮೇಲಮ್ಮನು ತನ್ನ ಅಮೂಲ್ಯಾಭರಣಗಳನ್ನು ದೇವರಿಗೆ ಅಲಂಕರಿಸುವದಕ್ಕೆ ಕೊಡುತ್ತಿದ್ದಳು.

ಇತ್ತ ಮೈಸೂರಲ್ಲಿ ರಾಜಒಡೆಯರು ಧೈರ್ಯ ಶಕ್ತಿಸಾಹಸಾದಿಗಳಿಂದ ದೊಡ್ಡವರಾಗುತ್ತಾ ಸುತ್ತಮುತ್ತಿನ ಪಾಳೆಯಗಾರರನ್ನೆಲ್ಲಾ ಬಡಿದು ಸ್ವಾಧೀನಕ್ಕೆ ತೆಗೆದುಕೊಳ್ಳುತ್ತಾ ಪ್ರಸಿದ್ಧಿಗೆ ಬರುತ್ತಿದ್ದರು ಈ ಕಾಲಕ್ಕೆ ಸರಿಯಾಗಿ ವಿಜಯನಗರದ ರಾಜರಿಗೆ ತಮ್ಮ ಪರವಾಗಿ ಶ್ರೀರಂಗಪಟ್ಟಣದಲ್ಲಿ ಆಳುತ್ತಿರುವ ತಿರುಮಲರಾಯನು ಅಯೋಗ್ಯನೆಂಬ ಭಾವನೆ ಬಂದಿತು ಗ್ರಹಚಾರವಶಾತ್ ಆ ಕಾಲದಲ್ಲೇ ತಿರುಮಲರಾಯನಿಗೆ ಬೆನ್ನುಫಣಿ ಬೇನೆ ಬಂದಿತು ಆ ರೋಗದಿಂದ ವಾಸಿಯಾಗುವಂತೆ ಕಾಣಲಿಲ್ಲ ಆಪ್ತರಾದವರು ಬಂದು 'ತಾವು ತಲಕಾಡಿಗೆಹೋಗಿ ಸ್ವಾಮಿಯನ್ನು ಪೂಜಿಸಿದರೆ ಈ ಕೆಟ್ಟರೋಗವು ವಾಸಿಯಾಗಬಹು" ದೆಂದು ತಿಳಿಸಿದರು ತಿರುಮಲರಾಯನು ಶ್ರೀರಂಗಪಟ್ಟಣವನ್ನು ನೋಡಿಕೊಳ್ಳುವಂತೆ ವೀರರಾಗಿದ್ದ ಮೈಸೂರು ದೊರೆ ರಾಜಒಡೆಯರಿಗೆ ಹೇಳಿ ವಹಿಸಿ ತಾನು ಪತ್ನಿಯೊಡನೆ ತಲಕಾಡನ್ನು ಸೇರಿ ದೇವತಾರಾಧನೆಯಲ್ಲಿ ನಿಂತನು ರಾಜಒಡೆಯರು ಈ ಸಂಧಿಯನ್ನೇ ಕಾದು ಶ್ರೀರಂಗಪಟ್ಟಣದ ಸಿಂಹಾಸನದಲ್ಲಿ ತಾವೇ ಕುಳಿತು ನವರಾತ್ರಿಯ ವೈಭವವನ್ನು ವಿಜೃಂಭಣೆಯಿಂದ ನಡೆಸಿ ಎಲ್ಲ ಪಾಳೆಯಗಾರರನ್ನೂ ನಯ ಭಯಗಳಿಂದ ತಮ್ಮ ಸ್ವಾಧೀನಕ್ಕೆ ತೆಗೆದುಕೊಂಡು ಆಳುವದಕ್ಕೆ ಮೊದಲುಮಾಡಿದರು.

ಹೀಗಿರುವಾಗ ರಂಗನಾಥಸ್ವಾಮಿಯ ಉತ್ಸವವು ನಡೆಯಬೇಕಾಯಿತು ಅರ್ಚಕನು ಬಂದು ರಾಜಒಡೆಯರನ್ನು ಕಂಡು "ದೇವಾ, ದೇವರ ಅಲಂಕಾರಕ್ಕೆ ಆಭರಣಗಳಿಲ್ಲ ಕೊಡಿಸಬೇಕು' ಎಂದನು

ರಾಜ—ಈ ವರೆಗೆ ಹೇಗೆ ನಡೆಯುತ್ತಿತ್ತು?

ಅರ್ಚಕ—ಅಲಮೇಲಮ್ಮನವರು ತಮ್ಮ ಆಭರಣಗಳನ್ನೆಲ್ಲಾ ಉತ್ಸವಕಾಲದಲ್ಲಿ ದೇವರ ಅಲಂಕಾರಕ್ಕೆ ಕೊಡುತ್ತಿದ್ದರು.

ರಾಜ—ಈಗಲೂ ಹಾಗೆಯೇ ನಡೆಯಲಿ ಹೀಗೆಂದು ಹೇಳಿ ಸರಿಯಾದವರನ್ನು ಕರೆದು ಅಲಮೇಲಮ್ಮನವರನ್ನು ಕೇಳಿ ಆಭರಣಗಳನ್ನು ತನ್ನಿರಿ ಎಂದು ಕಳುಹಿಸಿದರು ದೂತರು ಬಂದು ಆಕೆಯನ್ನು ಕಂಡು ಆಭರಣಗಳನ್ನು ಕೊಡುವಂತೆ ಕೇಳಿದರು ಅಲಮೇಲಮ್ಮನವರು 'ಇದು ನಮ್ಮ ಸ್ವಂತದ್ದು ಯಾರಿಗು ಅಧಿಕಾರವೂ ಇಲ್ಲ' ಎಂದು ಹೇಳಿಬಿಟ್ಟಳು ದೂತರಿಂದ ಆ ಮಾತನ್ನು ಕೇಳಿದ ರಾಜಒಡೆಯರು ಪುನಃ ದೂತರನ್ನು ಕಳುಹಿಸಿದರು. ಮತ್ತೆ ಅವರು ಬಂದು ಅಲಮೇಲಮ್ಮನವರನ್ನು ಕಂಡರು

ದೂತ—ತಾವು ದುಃಖದಲ್ಲಿರುವಿರಿ ತಿರುಮಲರಾಯರು ಉಳಿಯುವ ನಂಬಿಕೆ ತೋರಲಿಲ್ಲ ಈ ಆಭರಣಗಳಿಂದ ಇನ್ನು ನಿಮಗೆ ಪ್ರಯೋಜನವಿಲ್ಲ ರಾಜರ ಅಪೇಕ್ಷೆಯಂತೆ ಆಭರಣಗಳನ್ನು ಈಗ ನೀವು ಕೊಡದಿದ್ದರೆ ನಾವು ಬಲಾತ್ಕಾರದಿಂದ ತೆಗೆದುಕೊಂಡು ಹೋಗುತ್ತೇವೆ.

ಈ ಮಾತನ್ನು ಕೇಳಿ ಅಲಮೇಲಮ್ಮನು ತುಂಬ ನೊಂದುಕೊಂಡಳು. ಒಂದು ಕಡೆ ಪತಿಯ ಮರಣಕಾಲ ಮತ್ತೊಂದು ಕಡೆ ಬೆಲೆಯಾದ ಆಭರಣಗಳ ಸುಲಿಗೆ ಆಕೆಯು ತನ್ನ ಮೂಗುತಿಯನ್ನು ಮಾತ್ರ ರಾಜರಿಗೆ ಕೊಡುವಂತೆ ಹೇಳಿಕೊಟ್ಟು ಆಭರಣಗಳನ್ನೆಲ್ಲಾ ಮಡಿಲಲ್ಲಿ ಕಟ್ಟಿಕೊಂಡು ವೈಧವ್ಯವನ್ನು ಅನುಭವಿಸುವದಕ್ಕೆ ಇಷ್ಟಪಡದೆ ಮಾಲಂಗಿಯ ಬಳಿಗೆ ಹೋಗಿ ನೀರಿನ ದಡದಲ್ಲಿ ನಿಂತು ಮಹಾ ಸಂತಾಪದಿಂದಲೂ ರೋಷದಿಂದಲೂ ಕೂಡಿ 'ಇನ್ನುಮೇಲೆ ತಲಕಾಡು ಮರಳಾಗಿ ಮಾಲಂಗಿ ಮಡುವಾಗಿ, ಮೈಸೂರು ದೊರೆಗಳಿಗೆ ಮಕ್ಕಳೇ ಇಲ್ಲವಾಗಲಿ" ಎಂದು ಹೇಳಿ ನದಿಯಲ್ಲಿ ಮುಳುಗಿಬಿಟ್ಟಳು

ರಾಜಒಡೆಯರಿಗೆ ಈ ಶಾಪದ ಸುದ್ದಿ ತಿಳಿಯಿತು ಸಹಿಸಲಾರದಷ್ಟು ಸಂಕಟವಾಯಿತು ತಿಳಿದವರನ್ನು ಕೇಳಿ ಅಲಮೇಲಮ್ಮನಂತೆ ವಿಗ್ರಹವೊಂದನ್ನು ಮಾಡಿಸಿ ಅದಕ್ಕೆ ನವರಾತ್ರಿಯ ಕಾಲದಲ್ಲಿ ಪೂಜೆ ನಡೆಸುವಂತೆ ಗೊತ್ತುಮಾಡಿದರು ಅಂದಿನಿಂದ ಆ ವಿಗ್ರಹಕ್ಕೆ ನವರಾತ್ರಿಯಲ್ಲಿ ಪೂಜೆ ಮಾಡುತ್ತಾರೆ

ಅಲಮೇಲಮ್ಮನ ವಿಗ್ರಹಕ್ಕೆ ಅಮಲ್ ದೇವತೆಯೆಂದೂ ಅದರ ಪೂಜೆಗೆ ಅಮಲ್ ದೇವತೆಯ ಪೂಜೆಯೆಂದೂ ಹೆಸರುಬಂತು

The Vice-Chancellorship.

Plea for Indianisation of the Educational Service

By

Mr. B. S. Puttaswamy B.A., B.L.
Advocate and President,
DISTRICT BOARD, MYSORE.

The appointment of Mr. N. S. Subba Rao to look after the current work of the Vice Chancellor of the University of Mysore during the absence of Dr. Metcalfe on leave has pleased all Mysoreans. Apart from its appropriateness due to the competence of Mr N.S. Subba Rao both by virtue of his scholarship and of his administrative experience, his appointment implies the recognition of a very salutary and desirable principle, that other things being equal, it is best to have an Indian at the helm of the University affairs in India. The increasing recognition of this principle largely accounts for the fact that in almost every Indian University at present, except in Madras, one finds an Indian as the Vice Chancellor. That an Indian can more readily and easily enter into sympathy with his own people and understand their culture, needs and aspirations, is a statement of fact which can not be gain said. It is also to be admitted that he will bring to bear on his work such a lively interest and earnestness and a spirit of understanding, sympathy and patriotism as can never be ordinarily equalled by one of a foreign extraction whose services are hired. This consideration alone should induce the authorities to pursue a policy of increasing association of the sons of the soil in the administration of the country. Attractive careers must always be open to the local talent. Indians must be freely called upon to fill places of rule and administration so that they could direct and mould the general course of affairs. It is earnestly hoped the present stop-gap arrangement is but a prelude to the permanent appointment of Mr. Subba Rao to the post.

Similar considerations apply with greater force in the matter of appointment of the Director of Public Instruction in Mysore. We have had hitherto a long succession of Indians who filled that post with distinction, and they have all placed us under a deep debt of gratitude by their eminent and patriotic services. The Director of Public Instruction in Mysore is in charge of the most important stage of educational course i. e the elementary as well as the secondary stage. Quite a large number of the pupils do not go beyond the secondary education standard but launch into the world with instruction received at the elementary and secondary schools. The Director, having thus to deal with a system of Education which vitally affects the growing generations of students in their most impressionable period, should be one who could understand the aspirations of the people, and as such the same qualities required of the Vice-Chancellor of our Indian University are needed to a greater degree in the case of the Director. It is universally recognised that the future of India, as that of the rest of the World, largely depends on Education, and we would be registering one step in the onward march of humanity when in the Government of every country "the minister of Education is more important than the minister of war." Unfortunately it is here that most unworthy and irrelevent considerations intrude and Indians of the right type are not infrequently excluded. We are confident that our enlightened Government which is less hampered by extraneous influences and which has a freer hand in the matter, will appoint only Indians to the two key places in the important branches of our Educational system. We have reason to expect that the question of filling up both the places will come up for consideration before long, and we are sure that our Dewan would certainly choose Indians for the places and thus satisfy the legitimate aspirations of our people. We need hardly add that we have immense faith in his wisdom and farsightedness.

ಹಬ್ಬಗಳ ಉದ್ದೇಶ.

(ಬರೆದು ಬಂದುದು)

ಜ್ಞಾನಿಗಳಿಗೆ ವಿಗ್ರಹಾರಾಧನೆಯು ಅವಶ್ಯವಿಲ್ಲ. ಕೇವಲ ಅಜ್ಞಾನಿಗಳ ಗತಿಗಾಗಿಯೇ ದೇವಾಲಯಗಳೂ—ಪೂಜಾಕ್ರಮಗಳೂ—ಸ್ಥಾಪಿತವಾಗಿವೆ. ಶಿಲ್ಪಿಯ ಕೌಶಲ್ಯದಿಂದ ನಿರ್ಮಿತವಾದ ವಿಗ್ರಹದಲ್ಲಿ, ದೇವತಾಸ್ವರೂಪವನ್ನು ಆವಾಹನೆ ಮಾಡಿಯೇ ಪೂಜಾದಿಗಳನ್ನು ನಡೆಯಿಸುವರು. ಸರ್ವಾಂತರ್ಯಾಮಿಯಾದ ಶ್ರೀಮನ್ನಾರಾಯಣನನ್ನು ಯಾವ ವಸ್ತುವಿನಲ್ಲಿ ಭಾವಿಸಿ ಪೂಜಿಸಿದರೂ ಸದ್ಗತಿಯುಂಟೇ ಉಂಟು "ನಿಶ್ಚಂಚಲವಾದ ಮನಸ್ಸಿನಿಂದಲೂ ದೃಢಭಕ್ತಿಯಿಂದಲೂ, ಭಗವನ್ನಾಮ ಸಂಕೀರ್ತನೆ ಮಾಡಿದರೆ, ಸಮಸ್ತ ಪಾಪಗಳೂ ನಾಶವಾಗಿ, ಉತ್ತಮ ಲೋಕಗಳು ಪ್ರಾಪ್ತವಾಗುವುವು" ಎಂದು ಹೇಳುವಾಗ ವಿಶೇಷವಾಗಿ ಪೂಜಾಕ್ರಮಗಳು ಏತಕ್ಕೆ ಏರ್ಪಟ್ಟುವು?

ಭಗವಂತನ ಪಾದಾರವಿಂದದಲ್ಲಿ ಒಂದು ನಿಮಿಷವಾದರೂ ನಿಶ್ಚಲವಾದ ಮನಸ್ಸನ್ನಿಡಲು—ಅಭ್ಯಾಸಮಾಡಲು, ಪ್ರಾಜ್ಞರಾದ ಹಿರಿಯರು ಇಟ್ಟಿರುವ ಸಂಪ್ರದಾಯ ರೀತಿ ಪೂಜಾಕ್ರಮವೇ ಸಾಧನೆಯ ಮಾರ್ಗವೆಂದು ಸ್ಪಷ್ಟವಾಗಿ ತಿಳಿದುಕೊಳ್ಳಬೇಕು. ಇಹಪರ ಸಾಧನೆಗೆ ಮಾರ್ಗವನ್ನು ತೋರಿಸತಕ್ಕ ದೇವತಾರಾಧನೆಯು, ಎಲ್ಲ ದಲ್ಲಿಯೂ, ಎಲ್ಲ ಕಾಲಗಳಲ್ಲಿಯೂ, ನೆಲೆಗೊಳ್ಳಲು, ಪೂರ್ವಿಕರು ವರ್ಷವೆಲ್ಲಾ ಹಬ್ಬಗಳನ್ನೂ ಹರಿದಿನಗಳನ್ನೂ ಗೊತ್ತು ಮಾಡಿರುತ್ತಾರೆ. ಸರ್ವಕಾಲದಲ್ಲಿಯೂ, ದೇವರಸೇವೆಯೂ, ಪೂಜೆಯೂ, ಮನಸ್ಸಿನಲ್ಲಿರಬೇಕೆಂಬುದೇ ಈ ಹಬ್ಬಗಳ ಮುಖ್ಯೋದ್ದೇಶವಾಗಿರಬೇಕು. ಈಗ ನೋಡಿದರೆ, ಹಬ್ಬದ ಕ್ರಮಗಳು ಕೇವಲ ಶೋಚನೀಯವಾಗಿವೆ. ಹೊರಗಣ ಆಕಾರವು ಮಾತ್ರ ನಿಂತಿದೆ. ಒಳಗಣ ಹೂರಣವೇ ಇಲ್ಲ. ನೋಟಕ್ಕೆ ತೆಂಗಿನಕಾಯಿ, ಕರಟವು ಮಾತ್ರ ಉಳಿದಿದೆ. ಒಳಗಣ ತಿರುಳೇ ಮಾಯವಾಯಿತು. ವಿದ್ಯಾವಂತರಲ್ಲಿಯೂ ಈ ರೀತಿ ಇರುತ್ತೆಂದು ಹೇಳಬಹುದಾಗಿರುವಾಗ—ಮೂಢರ ಮಾತೇನು! ಹೆಮ್ಮೆಯಿಂದಲೂ, ಮೌಢ್ಯದಿಂದಲೂ ಇತರರು ನೋಡಿ ಏನೆನ್ನುವರೋ ಎಂಬ ವಿಚಿತ್ರವಾದ ಶಂಕೆಯಿಂದಲೂ, ದಾರಿದ್ರ್ಯದಿಂದ ಪೀಡಿತರಾಗಿರುವ ಅನೇಕರು ಮತ್ತೂ ಮತ್ತೂ ಹಳ್ಳಕ್ಕೆ ಬೀಳುತ್ತಿರುವುದಕ್ಕೆ ಈ ಹಬ್ಬಗಳೂ ಒಂದು ಮುಖ್ಯಕಾರಣವಾಗಿವೆ.

ದೇವರು ಮನಸ್ಸಿನ ನಿಜಸ್ಥಿತಿಯನ್ನು ನೋಡುವನಲ್ಲದೆ ಆಡಂಬರಕ್ಕೆ ಮೆಚ್ಚುವನೆ? "ಹರಿಯುಕೊಟ್ಟ ಭಾಗ್ಯವನ್ನು ಹಂಗಿಕೊಟ್ಟು ಧನ್ಯರಾಗಿ ಬಾಳಿ" ರೆಂದಾಗ—ದೃಢಭಕ್ತಿಯಿಂದ ಕೂಡಿದ ಮನಸ್ಸೂ—ಭಜನೆಯೂ—ತಮ್ಮ ಭಾಗ್ಯವೆಂದು ದರಿದ್ರರು ಮನಸ್ಸಿನಲ್ಲಿ ತಿಳಿಯಬೇಕಾದುದು ಅವಶ್ಯವಲ್ಲವೆ? ಆ ಭಾಗ್ಯವನ್ನು ಹಂಗಿ ಸಮರ್ಪಿಸಿದರೆ ಸಾಲದೆ? "ಅಯ್ಯೋ! ವರ್ಷಕ್ಕೊಂದು ಹಬ್ಬ, ಎಲ್ಲರೂ ವಿಜೃಂಭಣೆಯಿಂದ ಮಾಡುತ್ತಾರೆ. ಕೊನೆಗೆ ಎರಡು ಭಕ್ಷ್ಯವನ್ನಾದರೂ ಮಾಡಿ ದೇವರಿಗಿಡಬೇಡವೆ? ನಮ್ಮ ದಾರಿದ್ರ್ಯಕ್ಕೆ ಕೊನೆಯೇ ಇಲ್ಲ,—ಎಂದಿಗೂ ಹಣವಿಲ್ಲದಿದ್ದರೆ ಹಣವು ಇದ್ದಾಗಲೇ ಹಬ್ಬವು ಬರುತ್ತದೇನು? ನೆರೆಯವರನ್ನು ನೋಡಬಾರದೆ? ನಿಮ್ಮ ಹಣೆಯಬರಹವೇ ಹೀಗೆ!" ಎಂದು ಹೀನಗಳೆಯುವ ಸ್ತ್ರೀರತ್ನಗಳೂ ಸಂಸಾರ ಸಮುದ್ರದಲ್ಲಿ ಉಂಟಲ್ಲವೆ? ಮಳೆಬೆಳೆಯಿಲ್ಲದೆ ಧಾರಣೆವಾಸಿಗಳು ಹೆಚ್ಚಿರಬಹುದು ನಿತ್ಯವೂ ಸರಿಯಾದ ಊಟಕ್ಕೇ ಕಷ್ಟವಾಗಿರಬಹುದು. ಆದರೆ ಹಬ್ಬದ ದಿನ ಇಂತಹ ನಾರೀಕುಲ ಚೂಡಾಮಣಿಗಳ ಉಗ್ರಾಣದಲ್ಲಿ ಯಾವ ಕ್ಷಾಮವೂ ಇರಕೂಡದು. ಈ ಮಂಕುತನಕ್ಕಾಗಿ ಅವರನ್ನು ನೋಡಿ ಪಶ್ಚಾತ್ತಾಪಪಡಬೇಕಲ್ಲವೆ? ಯಾವ ಶಾಸ್ತ್ರ ಕ್ರಮಗಳನ್ನು ಅನುಸರಿಸಿ ಹಬ್ಬಗಳನ್ನು ಮಾಡಬೇಕೆನ್ನುವರೋ ಅದೇ ಶಾಸ್ತ್ರದಲ್ಲಿಯೇ "ಮನುಷ್ಯನು ಸಾಧ್ಯವಾದರೆ, ಸಾಲವನ್ನು ಮಾಡದಿರಬೇಕ ತನ್ನ ಸಂಪಾದನೆಯಲ್ಲಿ ಪತ್ನೀಪುತ್ರರ ಸಂರಕ್ಷಣೆಗೂ ದಾನಧರ್ಮಗಳಿಗೂ, ಆಪತ್ಕಾಲಕ್ಕೂ ತೆಗೆದಿಡಬೇಕು" ಎಂದು ವಿಧಿಸಿರುವುದನ್ನು ಮರೆಯಬಹುದೆ?

ಹೀಗೆಂದರೆ, 'ಹಬ್ಬವೇ ಕೂಡದು,—ಸಂತೋಷವೇ ಬೇಡ ಹಣವನ್ನು ವ್ಯಯ ಮಾಡದೆ ಲೋಭಿಯಾಗಿರಬೇಕು ಸದಾ ಕೆಲಸವನ್ನೇ—ಕೂಲಿಯನ್ನೇ—ಮಾಡಬೇಕು' ಎಂದು ಅಭಿಪ್ರಾಯವಲ್ಲ. ಹಬ್ಬಗಳು ಇರಬೇಕು ಅದರ ಗುಣಗಳು ಬಹಳವುಂಟು ಬಂಧುಮಿತ್ರರು ಸೇರಿ ಸುಖವಾಗಿರಬೇಕು. ನೆರೆಹೊರೆಯವರಂತೆ, ಅಸಂಗ್ರಹ ಕೋಲಸ್ವರಂತೆ ಕುಣಿಯಲು ಆಶೆಪಡದಿರು ನಟನೆಯು ಎಂದಿಗೂ ಬೇಡ. ಮುಖ್ಯ ತಿರುಳಿಗೆ ಮನಸ್ಸುಕೊಡಬೇಕು, ಕರಟಕ್ಕಲ್ಲ." ಎಂಬುದೇ 'ದಾ

ಕರ್ಮ ಯೋಗ.

(ಕಳೆದವಾರದ ಶೇಷ)

ಸೂರ್ಯ, ಇಂದ್ರ, ಅಗ್ನಿ, ವಾಯು, ಪರ್ಜನ್ಯ, ಉಷಸ್ಸು, ಅಶ್ವಿನಿ ದೇವತೆಗಳನ್ನು ಆರಾಧಿಸಿ ಅವರ ಅನುಗ್ರಹದಿಂದ ವೃಷ್ಟ್ಯಾದಿಗಳ ದ್ವಾರಾ ಸುಭಿಕ್ಷತೆಯನ್ನು ಹೊಂದಿ ಪರೋಪಕಾರ, ಮೈತ್ರಿ, ದಯಾ, ಆರ್ಜವ, ಶಮ, ದಮ, ಶಾಂತಿ ಮುಂತಾದ ಧರ್ಮಗಳು ಈಶ್ವರಾರಾಧನವೆಂದೂ ಹೀಗೆ ಜಗಚ್ಚಕ್ರವು ಸಂತತವಾಗಿ ನಡೆಯುತ್ತಿದ್ದರೆ ಮನುಷ್ಯರು ಮರ್ತ್ಯನಾಗಿದ್ದರೂ, 'ಪ್ರಜಾಭಿರಗ್ನೇ ಅಮೃತತ್ವಮಶ್ಯಾಂ,' ಎಂಬ ಋಗ್ವೇದವೂ ಪ್ರಜಾಮನು ಪ್ರಜಾಯಸೇ । ತದುತೇ ಮರ್ತ್ಯಾಮೃತಂ ॥ ಎಂಬ ಯಜುಸ್ಸೂ ಸಹ ಪುತ್ರಪೌತ್ರಾದಿ ಮೂಲಕ ಲೋಕಚಕ್ರವನ್ನ ನಿಲ್ಲಿಸದೇನೆ ಸಂತತ ವಂಶವು ಅಭಿವೃದ್ಧಿಯಾಗುವಂತೆ ಮಾಡಿದವನು ಅಮರ್ತ್ಯನಾಗುತ್ತಾನೆಂದು ಹೇಳುವವು ದೇವತೆಗಳೂ ಮನುಷ್ಯರೂ ಪರಸ್ಪರ ಸಹಾಯದಿಂದ ಬದುಕಿರಲಿ, ಎಂದು 'ದೇವಾನ್ ಭಾವಯತಾನೇನ ತೇ ದೇವಾ ಭಾವಯಂತುವಃ । ಪರಸ್ಪರಂ ಭಾವಯಂತಃ ಶ್ರೇಯಃಪರಮವಾಪ್ಸ್ಯಥ' ॥ ಎಂದು ಗೀತಾದಿ ಗ್ರಂಥಗಳಲ್ಲಿ ಭಗವಂತನು ಆಜ್ಞೆ ಮಾಡಿರುವನು. ಇಂತಹ ಆಜ್ಞೆಯನ್ನು ತಿರಸ್ಕರಿಸುವವರು ಈಶ್ವರ ದ್ರೋಹಿಗಳಾಗಿ ನರಕಗಳಲ್ಲಿ, ಅಂದರೆ ಕಷ್ಟಪ್ರಾಣಿಗಳಾಗಿ ಹುಟ್ಟಿ, ಬಹು ದುಃಖ ಪರಂಪರೆಯನ್ನನುಭವಿಸುವರು. ಯಾರು ಶ್ರುತಿ ಸ್ಮೃತ್ಯುಕ್ತ ಸತ್ಕರ್ಮಗಳನ್ನು 'ಕುರು ಕರ್ಮೈವ ತಸ್ಮಾತ್ತ್ವಂ ಪೂರ್ವೈಃ ಪೂರ್ವತರಂ ಕೃತಂ । ಯಜ್ಞಾರ್ಥಾತ್ ಕರ್ಮಣೋಽನ್ಯತ್ರ ಲೋಕೋಽಯಂ ಕರ್ಮಬಂಧನಃ' ॥ ಇತ್ಯಾದಿ ಭಗವಂತನ ಸೂಚನೆಯಂತೆ ತಮ್ಮ ಪಿತೃಪಿತಾಮಹಾದಿ ಪರಂಪರೆಯಲ್ಲಿ ಬಂದು, ಈಶ್ವರ ಪ್ರೀತಿಗಾಗಿ ಮಾಡುತ್ತಿರುವರೋ ಅಂಥಾ ವರ್ಣಾಶ್ರಮಿಗಳು ಇಹಪರಗಳ ಸೌಖ್ಯವನ್ನನುಭವಿಸಿ ಕರ್ಮಶೇಷದಿಂದ ಆರ್ಯಾವರ್ತಾದಿ ದೇಶಗಳಲ್ಲೂ ವಿಶಿಷ್ಟ ಬ್ರಾಹ್ಮಣಾದಿ ವರ್ಣಗಳಲ್ಲಿ ತತ್ಕಾಲ ಶಾಸ್ತ್ರಾಧ್ಯಯನಾದಿ ಸಾಮರ್ಥ್ಯ ಉಳ್ಳ ಸತ್ಕುಲಗಳಲ್ಲಿ ಸಮಗ್ರ ಆಯುಷ್ಯದಿಂದ ಸುಂದರತರವಾದ ಸೌಂದರ್ಯ, ಲೋಕಹಿತಕರವಾದ ಚರಿತ್ರೆ, ಯಾವಜ್ಜೀವಾರೋಗ್ಯ ವಿಶಿಷ್ಟ ಧನ ಪುತ್ರಾದಿ ಸಮೃದ್ಧಿಯುಕ್ತರಾಗಿ ಜನಿಸಿ ಪುನಃ ಸತ್ಕರ್ಮಾಚರಣೆಗಳಿಂದ ಲೋಕವನ್ನು ವಿಾರುವ ಗುಣಾದಿಗಳಿಂದ ಕೂಡಿ ಇಹಪರ ಲೋಕಗಳ ಗತಾಗತಗಳಿಂದ ಚಕ್ರದಂತೆ ಸಂಸಾರ ಚಕ್ರದಲ್ಲಿರುವವರೆಂದು ಧರ್ಮಸೂತ್ರಕಾರರಾದ ಗೌತಮರು ನುಡಿದಿರುವರು. ಇವರಿಂದ ಆಸ್ತಿಕರಾದ ನಾವುಗಳು ಮನ್ವಾದಿ ಸ್ಮೃತಿಗಳಲ್ಲೂ ಭಗವದ್ಗೀತಾದಿ ಸಚ್ಛಾಸ್ತ್ರಗಳಲ್ಲೂ ಸಹ ಉಪದೇಶಿಸಿರುವಂತೆ ಕಾಮ್ಯಕರ್ಮಗಳನ್ನು ಬಿಟ್ಟು, ನಿತ್ಯನೈಮಿತ್ತಿಕ ಕರ್ಮಗಳನ್ನು ಈಶ್ವರಾರ್ಪಣ ಬುದ್ಧ್ಯಾ ಅಂದರೆ, 'ಜ್ಞಾನತೋ ಜ್ಞಾನತೋವಾಪಿ ಯತ್ಕೃತಂ ಮಯಾ ಶುಭಾಶುಭಂ । ತತ್ಸರ್ವಂ ತ್ವಯಿಸನ್ಯಸ್ತಂ ತ್ವತ್ಪ್ರಯುಕ್ತಃ ಕರೋಮ್ಯಹಂ' ॥ ಎಂದು ಸಮಸ್ತ ಕರ್ಮಫಲಗಳನ್ನು ಈಶ್ವರನಲ್ಲರ್ಪಿಸುತ್ತಾ ಬಂದರೆ, 'ತೇಷಾಮಹಂ ಸಮುದ್ಧರ್ತಾ ಮೃತ್ಯುಸಂಸಾರ ಸಾಗರಾತ್' ॥ ಎಂದು ಹೇಳಿದ ಕೃಷ್ಣಪರಮಾತ್ಮನನ್ನು ಧ್ಯಾನಿಸುತ್ತಾ ಒಂದರೆ 'ಮಯ್ಯೇವ ಮನ ಆಧತ್ಸ್ವ ಮಯಿಬುದ್ಧಿಂ ನಿವೇಶಯ । ನಿವಸಿಷ್ಯಸಿ ಮಯ್ಯೇವ ಅತ ಊರ್ಧ್ವಂ ನ ಸಂಶಯಃ ॥ ಎಂದು ಪ್ರಮಾಣ ಪುರಸ್ಸರವಾಗಿ ಹೇಳಿದ ಈಶ್ವರಸಾಯುಜ್ಯ ರೂಪವಾದ ಮುಕ್ತಿಯು ಕ್ರಮವಾಗಿ ಸತ್ಕರ್ಮಿಗಳಿಗೆ ಲಭಿಸುವದೆಂಬುವದೇ ಕರ್ಮಯೋಗದ ಸಾರತರಾಂಶವು

ಓಂ ತತ್ಸತು

ನಂಜನಗೂಡು ರಥೋತ್ಸವ.

ನಂಜನಗೂಡು ಶ್ರೀ ಶ್ರೀಕಂಠೇಶ್ವರ ಸ್ವಾಮಿಯವರಿಗೆ 1936ನೇ ಏಪ್ರಿಲ್ ಮಾಹೆಯಲ್ಲಿ ಜರುಗುತಕ್ಕ ದೊಡ್ಡ ಜಾತ್ರೆ ಮಹೋತ್ಸವದ ಉತ್ಸವಗಳ ತಪಶೀಲು —

27-3 36 ಅನುಜ್ಞಾಪೂರ್ವಕ ಅಂಕುರಾರ್ಪಣ, 28-3 36 ಧ್ವಜಾರೋಹಣ, ಭೇರೀತಾಡನೆ ಉತ್ಸವ, 29 3-36 ಚಂದ್ರಮಂಡಲಾರೋಹಣ, 30 3-36 ಅನಂತಪೀಠಾರೋಹಣ, 31 3 36 ಶ್ರೀಕಂಠ ಮುಡೀ ಪುಷ್ಪಮಂಟಪಾರೋಹಣ, 1 4 36 ವೃಷಭಾರೋಹಣ, 2-4 36 ಗಜಾರೋಹಣ, 3 4 36 ಪಂಚರಥೋತ್ಸವ, ಹಗಲು ೫ ಘಂಟೆ ಮೇಲೆ ೬ ಘಂಟೆಯೊಳಗೆ ಮೀನಲಗ್ನದಲ್ಲಿ ರಥಾರೋಹಣ, ರಾತ್ರಿ ನಟೇಶೋತ್ಸವ, 4 4 36 ಅಶ್ವಾರೋಹಣ ನಂತರ ಮಹಾಭೂತಾರೋಹಣ, 5 4 36 ಅವಭೃತ ತೀರ್ಥಸ್ನಾನ, ರಾತ್ರಿ ತೆಪ್ಪೋತ್ಸವ, ನಂತರ ಪುಷ್ಪಾಂದೋಳಿಕೋತ್ಸವ, ಧ್ವಜಾರೋಹಣ

ಮಕ್ಕಳ ಪ್ರಶ್ನೆಗಳಿಗೆ ಉತ್ತರ.

(ಕಳೆದವಾರ ಪ್ರಶ್ನೆಗಳು ಪ್ರಕಟಿಸಲ್ಪಟ್ಟವೆ.)

(1) ಲಂಘನಂ ಪರಮೌಷಧಂ, ಅಥವಾ (ಗಂಡೌಷಧ)
(2) ವೈದಾನ (ದೇಹತ್ಯಾಗ)
(3) ಚಾಪಲ್ಯ.
(4) ಸರಾಗ (ಅನುರಾಗ)
(5) ತಪ್ಪಿತಳ (ಪಕತಾಳ)
(6) (ಮಕ್ಕಳು) ತಿನ್ನಬಾರಹಣ್ಣು ಬಹು ರುಚಿ.
(7) ಬೆಂಡೋಲೆ (ಗೆಜ್ಜೋಲೆ)
(8) ಸುಮ್ಮನೆ.
(9) ಭೋಜನ.
(10) ಗುಡಿಗುಡಿ (ಭಂಗಿ)
(11) ಭೂಪಟ
(12) ಅವಸರ (ಸರಸರ)

ಚೌ. ಚೌ. (೪)

೧.

"ಉಪನ್ಯಾಸಗಳನ್ನು ಪ್ರಾರಂಭಿಸುವುದು ಹೇಗೆ?" ಎಂಬ ಒಂದು ಲೇಖನವನ್ನು ಮಹನೀಯರೊಬ್ಬರು ಬರೆದಿರುವರು ನಮ್ಮಲ್ಲನೇಕರಿಗೆ, ಉಪನ್ಯಾಸಗಳನ್ನು ಮುಗಿಸುವುದು ಹೇಗೆ, ಅಂತ ಯಾರಾದರೂ ಹೇಳಿಕೊಟ್ಟರೆ ವಾಸಿ

೨

ಪೋಲಂಡಿನಿಂದ ಬಂದ ಶ್ರೀಮತಿ ಪ್ರೆಸ್ಟ ಎಂಬಾಕೆ 'ನಿಮ್ಮ ಜನರು ಸದಾ ನಗುಮುಖರವರು ನಾನು ಎಲ್ಲೆಲ್ಲಿಯೂ ಹುಡುಕಿದೆ, ಕೋಪಗೊಂಡ ಮುಖ ನಾನು ಕಾಣಲಿಲ್ಲ ಅಂದಳು ಪಾಪ ಜಟಕಾಗಾಡಿಯವನಿಗೆ ಹೇಳಿದಷ್ಟು ಕೂಲಿ ಕೊಟ್ಟು 'ಹೋಗಿದಾ' ಅಂತ ಆಕೆ ಹೇಳಿ ನೋಡಿಲ್ಲ, ಅಂತ ಕಾಣುತ್ತೆ.

೩

ಸಂತೋಷಚಿತ್ತರಾಗಿದ್ದರೆ ಸಾಕು, ನಾವೆಲ್ಲರೂ ೧೦೦ ವರ್ಷಗಳು ಅನಾಯಾಸವಾಗಿ ಜೀವಿಸಬಹುದೆಂದು ಅಮೇರಿಕನ್ ಮೆಡಿಕಲ್ ಜರ್ನಲ್‌ನಲ್ಲಿ ಬರೆದಿದ್ದಾರೆ. ಆದರೆ, ಅಷ್ಟೊಂದು ವರ್ಷದ ಬದುಕನ್ನು ನೆನೆಸಿಕೊಂಡರೆ, ಸಂತೋಷವೆಲ್ಲಿಂದ ಬರಬೇಕು?

೪

ಇಂಜನಿಯರುಗಳ ಮಹಾ ಸಮ್ಮೇಳನದಲ್ಲಿ ಒಬ್ಬರು **"ಯಾಂತ್ರಿಕ ಮತ್ತು ಸಾಮಾಜಿಕ ಸಮಸ್ಯೆಗಳ ವಿಷಯದಲ್ಲಿ ಶಾಸ್ತ್ರೀಯವಾದ ಸಂಶೋಧನೆಗಳನ್ನು ಸಾಂಗವಾಗಿ ನಡೆಸುವ ವಿಧಾನಗಳನ್ನು ಕುರಿತು (ಪಾಶ್ಚಾತ್ಯ ದೇಶಗಳಲ್ಲಿ ಮಾಡಿದ ಪ್ರವಾಸದ ಫಲವಾಗಿ) ಹಲಕೆಲವು ಸೂಚನೆಗಳು ಮತ್ತು ಸಲಹೆಗಳು"** ಎಂಬ ಶಿರೋನಾಮೆಯನ್ನು ಪಡೆದ ಒಂದು ಉಪನ್ಯಾಸವನ್ನು ಓದಿದರಂತೆ ಅಬ್ಬಬ್ಬ! ಇಂಜಿನಿಯರುಗಳ ಪಾಡು ಇಷ್ಟು ಕಷ್ಟವಾದದ್ದೆಂದು ನಮಗೆ ತಿಳಿದಿರಲಿಲ್ಲ

೫.

'ಹೊಸವರ್ಷದ ಪಂಚಾಂಗದಲ್ಲಿ ಯುದ್ಧದ ಸಂಭವ ಹೇಗಿದೆ ಎಂದು ಬರೆದಿದೆ, ಅದನ್ನು ನೋಡಿಕೊಂಡು ಮುಂದಿನ ಕೆಲಸ ಜರುಗಿಸೋಣ' ಎಂದು ಹಿಟ್ಲರ್, ಫ್ಲಾಂಡಿನ್, ಇಡೆನ್ ಮುಂತಾದವರು ತೀರ್ಮಾನಿಸಿರುವರಂತೆ. ಯಾರಾದರೂ ಪುಣ್ಯಾತ್ಮರು ಪಂಚಾಂಗದ ಪ್ರತಿಯೊಂದನ್ನು ಬೇಗ ಕಳುಹಿಸಬಾರದೆ?

೬

ಮೈಸೂರಿಂದ ಕೆಲವು ಕಾಡುಮೃಗಗಳನ್ನು ಜರ್ಮನಿ ದೇಶದವನೊಬ್ಬ ಕಳೆದ ತಿಂಗಳು ತೆಗೆದುಕೊಂಡು ಹೋದನಂತೆ ತುಂಬಾ ಸಂತೋಷದ ಸುದ್ದಿ ಇದು ಆ ಮಹರಾಯ ಇನ್ನೊಂದುಸಾರಿ ದಯಮಾಡಿಸಿದಾಗ, ನಾವು ಸೂಚಿಸುವ ಕೆಲವು ಇಸಮ್ಮುಗಳನ್ನೂ ಸಾಗಿಸಿದರೆ, ಎಷ್ಟೋ ಕ್ಷೇಮ

೭.

ನಗರದ ಕೆಲವು ಅಧ್ಯಾಪಕರು ೩ ವರ್ಷಗಳ ಪಾಠವನ್ನು ಕೇವಲ ಮೂರು ಗಂಟೆಗಳಲ್ಲಿ ಪುನರಾವರ್ತಿಸಿ ಪರೀಕ್ಷೆಗೆ ಕೂರುವ ಹುಡುಗರಿಗಾಗಿ ಉಪನ್ಯಾಸ ಮಾಲೆಯನ್ನು ನಡೆಸಿದರು. ಮತ್ತಷ್ಟು ಪಾಠಕ ಇಳಿಸಿ. ಆಯಾ ಪರೀಕ್ಷೆ ದಿನ ಬೆಳಗ್ಗೆ ಉಪನ್ಯಾಸ ಮಾತ್ರೆಗಳನ್ನು ಮಾಡಿಕೊಟ್ಟರೆ, ಇನ್ನೂ ಒಳ್ಳೆಯದಲ್ಲವೆ?

೮

"ನಾನು ಬರೆದ ಈ ಚಿತ್ರವನ್ನ ಚನ್ನಾಗಿಲ್ಲ ಅಂತ ಅಂದಾರಲ್ಲಾ, ದಡ್ಡರು! ಎಂದು ಮಿತ್ರರೊಬ್ಬರು ಗೊಣಗಿದರು ಒಂದುವೇಳೆ ಅದೇ 'ದಡ್ಡರು' ಚನ್ನಾಗಿದೆ, ಅಂತ ಹೇಳಿದ್ದರೂ ಕೂಡ, ಅದೂ ದು ನಂಬಲ ವಿಷಯವಲ್ಲ.

೯.

ತೆಂಗೈಲ್ ಎಂಬ ಊರಿನಲ್ಲಿ ಒಂದು ತರಹ ಖಾಯಿಲೆಯಂತೆ ತಗುಲಿದ ಆ ನಾಮಿ ಒಂದೇ ಸಮನಾಗಿ ಎಂಟು ಹತ್ತು ದಿನ ನಾಸಿಗೆ ಹಿಡಿದು, ಗಾಢನಿದ್ರೆಯಲ್ಲಿರುತ್ತಾನೆ. ಡಾಕ್ಟರುಗಳು ಕಾಪಿ, ಹಾಲು, ಹಣ್ಣಿನ ರಸ—ಇವುಗಳನ್ನು ಕೊಟ್ಟು ಜೀವ ಉಳಿಸುತ್ತಾರೆ. ಈ ಸಮಾಚಾರವನ್ನು ಕೇಳಿದ ಕೂಡಲೇ, ಮೈಸೂರಿಂದ ಅನೇಕರು ಟಪಾಲಿನ ಮೂಲಕ ಸದರಿ ಖಾಯಿಲೆಯನ್ನು ಇಲ್ಲಿಗೆ ತರಿಸುವ ಏರ್ಪಾಡು ಮಾಡುತ್ತಿದ್ದಾರಂತೆ.

೧೦

ಕಾಶಿ ರಾಜನು ಯಾವ ಊರಿನಲ್ಲಿ ಜನ್ಮವೆತ್ತಿದವನು ಎಂದು ಪಂಡಿತರೊಬ್ಬರು ಬಹಳ ಶ್ರಮಪಟ್ಟು ಕಂಡು ಹಿಡಿಯಲು ಕಂಕಣ ಬದ್ಧರಾಗಿದ್ದಾರಂತೆ. ತಪ್ಪು ಯಾವ ಊರಿನವನಾದರೂ ಇರಲಿ, ನಡೆದು ಹೋಯಿತು ಏಕೆ ಅವರ ಚಿಂತೆ?

೧೧

ಪೋಲಿ ನಾಯಿಗಳ ಹಾವಳಿಯನ್ನು ತಪ್ಪಿಸಿ, ಅವುಗಳನ್ನು ನಾಶಮಾಡಲು ಇಲೆಕ್ಟ್ರಿಕ್ ಕೊಠಡಿ ಒಂದನ್ನು ತಯಾರು ಮಾಡಬೇಕೆಂಬ ಸೂಚನೆಯು ನಗರ ಸಭೆಯಲ್ಲಿ ಬಿದ್ದುಹೋಯಿತು ಬೀದಿಗಳಲ್ಲಿ ಹೇಸಿಗೆ ಮಾಡುವುದನ್ನು ತಪ್ಪಿಸಿದರೆ, ಇದೇ ಉದ್ದೇಶವು ನೆರವೇರುವುದು, ನಾಯಿಗಳು ಹಸಿವಿನಿಂದಲೇ ಸಾಯುವುವು, ಎಂಬುದು ಕೌನ್ಸಿಲರುಗಳ ಅಭಿಪ್ರಾಯವಿರಬಹುದು

೧೨.

"ತಲೆನೋವಿನ ಕಾರಣಗಳು" ಎಂಬ ವಿಷಯವಾಗಿ ಡಾಕ್ಟರೊಬ್ಬರು ಉಪನ್ಯಾಸ ಮಾಡಿದರು ಕಾಫಿ, ಟಿ, ಸೇವನೆ, ಹೊಗೆಸೊಪ್ಪು ಉಪಯೋಗಿಸುವುದು, ಕಣ್ಣಿನ ಖಾಯಿಲೆಗಳು—ಎಂದು ಮುಂತಾದ ಕಾರಣಗಳನ್ನು ಹೇಳಿದರು ಎಲ್ಲವಕ್ಕಿಂತ ಮುಖ್ಯ ಕಾರಣವಾದ 'ಉಪನ್ಯಾಸ' ಗಳನ್ನು ಕುರಿತು ಏನೂ ಹೇಳಲಿಲ್ಲ. ಅದು ಹೇಗೆ ಹೇಳುತ್ತಾರೆ, ಪಾಪ! ಉಪನ್ಯಾಸದಲ್ಲಿ?

ಅಪೂರ್ವ ಸುಂದರ ದೃಶ್ಯ

(ಲೇಖಕರು:—ತೀರ್ಥಹಳ್ಳಿ ಕಾಳಿಂಗಯ್ಯನ ಪುಟ್ಟಸ್ವಾಮಿರಾಯರು)

ತೀರ್ಥಹಳ್ಳಿ ತಾಲ್ಲೋಕಿನಲ್ಲಿ ತೀರ್ಥಹಳ್ಳಿಗೆ ೯ ಮೈಲಿಯ ದೂರದಲ್ಲಿ ಕೌಲೆದುರ್ಗ (ಕಾವಲದುರ್ಗ) ಎಂಬದಾಗಿ ಒಂದು ದುರ್ಗವಿದೆ. ಇಲ್ಲಿ ಕೆಳದಿ ನೃಪರ ಕಾಲದ ಪ್ರಸಿದ್ಧಿಯಾದ - ಕೋಟೆ ಕೊತ್ತಲಗಳೂ, ಊರುಕೇರಿಗಳಿದ್ದ ಪ್ರದೇಶವೂ ಗತವೈಭವಗಳ ನಿದರ್ಶನವಾಗಿವೆ. ಇಲ್ಲಿಯ ಸವಿಸ್ತಾರವಾದ ಚರಿತ್ರೆಯು ಬೇರೆ. ಅದನ್ನು ಇಲ್ಲಿ ಪೂರ್ತಿ ಮಾಡುವುದಿಲ್ಲ.

ಈ ದುರ್ಗವು ಸಮುದ್ರ ಮಟ್ಟದಿಂದ ೩೦೫೦ ಅಡಿ ಎತ್ತರವಾಗಿದ್ದ ದುರ್ಗವಾಯಿತು. ಆ ಕೋಟೆಕೊತ್ತಲಗಳ ನಿರ್ಮಾಣ, ಶಿಲ್ಪ ಚಾತುರ್ಯಗಳ ಸ್ಫೂರ್ತಿ, ಗ್ರಾಮನಿರ್ಮಾಣದ ರೀತಿನೀತಿಗಳು, ಇವುಗಳೆಲ್ಲ ಎಂಥಾ ಮನುಷ್ಯನನ್ನಾದರೂ ವಿಸ್ಮಯಗೊಳಿಸದಿರಲಾರವು. ಅಲ್ಲದೆ ಗೋಪುರಾಗ್ರದಲ್ಲಿ ಸಮುದ್ರ ದರ್ಶನದಿಂದಾಗತಕ್ಕ ಆನಂದ, ಆ ಸೂರ್ಯಾಸ್ತಕಾಲದ ವೈಚಿತ್ರ್ಯ (Sunset) ತಂಗಾಳಿಯ, ಸುಖ, ಇವುಗಳನ್ನೆಲ್ಲಾ ವರ್ಣಿಸಲಸಾಧ್ಯ.

ಇಂಥಾ ರಮಣೀಯವಾದ ಗಿರಿ ದುರ್ಗವನ್ನು ಹಿಂದೆ ಒಂದು ಕಾಲದಲ್ಲಿ ನಮ್ಮ ಪ್ರಭುಗಳವರು ಸಂದರ್ಶಿಸಿದ್ದಾರೆ [ಮಹಾಜನರು ಸದಾ ಹೋಗಿ ನೋಡುವುದಕ್ಕೆ ಸಾಧಾರಣ ಗ್ರಾಮ ರಸ್ತೆಯು ಇದ್ದೀತು ಇದ ಮುಂದೆ ರಾಜಮಾರ್ಗವೇರ್ಪಡಬೇಕಾಗಿದೆ] ಈ ದುರ್ಗಕ್ಕೆ ಭುವನಗಿರಿ ಎಂತಲೂ ಇನ್ನೊಂದು ಹೆಸರಿದೆ. ಈ ದುರ್ಗದ ನೆತ್ತಿಯಮೇಲೆ ಆಕಾಶಗಂಗೆ ಎಂಬ ಒಂದು ರಮಣೀಯವಾದ ಕೊಳವು ಇದೆ. ಇದು ೧೯೩೩—೩೪ನೇ ಸಾಲಿನ ವಿಶೇಷವಾದ ಮಳೆ ಮತ್ತು ನೀರಿನ ಪ್ರವಾಹದಿಂದ ಹೂತುಹೋಗಿದೆ. ಇದಲ್ಲದೆ ಇನ್ನೂ ದಿವ್ಯ ಕೊಳಗಳು ಈ ಗಿರಿಯ ಮೇಲಿವೆ. ಅರಮನೆ ಇತ್ತೆಂಬ ನಿವೇಶನವೂ ತಜೀಲಿಗಳಿದ್ದವೆಂಬ ನಿವೇಶನಗಳೂ ಮದ್ದಿನ ಮನೆಯ ಮತ್ತು ಕೋವಿ ಖಾನೆಯ ನಿವೇಶನಗಳೆಂಬುದೂ ತುಪ್ಪದಬಾವಿ, ಎಣ್ಣೆಯ ಬಾವಿ ಎಂತ ಕರೆಯಲ್ಪಡುವ ಬಾವಿಗಳೂ ಉದ್ಯಾನಗಳ ಸಂಕೇತಸ್ಥಾನಗಳೂ ಶಿಲ್ಪಮಯ ದೇವಾಲಯಗಳೂ ದ್ವಾರಗಳು ಹೆಬ್ಬಾಗಿಲುಗಳೂ ಸೋಪಾನಗಳೂ ಬೀದಿಗಳೂ ಅನೇಕಾನೇಕ ನಿವೇಶನಗಳೂ ಮಂಟಪಗಳು ವಿಹಾರ ಸ್ಥಾನಗಳೂ ಶಿಲಾತಲ್ಪಗಳೂ ಕಾಡುಪಾಲಾಗಿ ಪ್ರಕೃತಿಯ ಪ್ರಕೋಪಕ್ಕೂ ಸಿಕ್ಕಿ ನಾಮಾವಶೇಷವಾಗಿರುತ್ತವೆ. ಈಗಿನ ಇಲ್ಲಿಯ ಹಾಳೂರನ್ನು ನೋಡಿದರೆ ಸಂಕಟವಾಗುತ್ತದೆ.

ಪೂರ್ವಿಕರು ಇಂಥ ಶಾಂತಿಮಯ ಸನ್ನಿವೇಶವನ್ನು ನಿರ್ಮಿಸಿ ಕೀರ್ತಿಶೇಷರಾದರು. ಈ ಅಂಶವು ಕರ್ನಾಟಕ ಚರಿತ್ರೆಯ ಪರಿಷ್ಕರಣದಲ್ಲಿ ಸೇರತಕ್ಕದ್ದಾಗಿರುವುದು.

ಇಲ್ಲಿ ೩ ವರ್ಷಕ್ಕೊಂದಾವರ್ತಿ ಮಾರೀಜಾತ್ರೆಯು ನಡೆಯುತ್ತಿರುವುದು. ಆ ಜಾತ್ರೆಯ ಉದ್ದೇಶವು ಕರ್ತವ್ಯ ಕಾರ್ಯಗಳೂ ಸಾಧುವಾಗಿದ್ದರೂ, ಪ್ರಾಣಿಹತ್ಯಾ ದೆಸೆಯಿಂದ ವಿಶೇಷ ಹಾನಿಗೆ ಕಾರಣವಾಗಿದೆ. ಇದೊಂದು ಕ್ರಮಪಡಬೇಕಾಗಿದೆ. ಈ ಜಾತ್ರೆಯಿಂದ ಕೂಡತಕ್ಕ ಹಣಕಾಸಿನಿಂದಲೂ ಮಹಾಜನರ ಸಹಾಯದಿಂದಲೂ ಈ ದುರ್ಗದ ಕೋಟೆ ಮುಂತಾದ್ದನ್ನು ಪುನರುದ್ಧಾರಮಾಡಬೇಕು. ಇಲ್ಲಿ ಒಂದು ಗ್ರಾಮ ಕೈಗಾರಿಕೆಯ ಮಂದಿರವನ್ನು ಕಟ್ಟಿಸಬೇಕು. ಇದು ಮಹಾಜನರ ಯಾತ್ರಾಸ್ಥಳವಾಗಿ ಪರಿಣಮಿಸುವ ಹಾಗೆ ಮಾಡುವುದರಿಂದ ಮೈಸೂರು ಸಂಸ್ಥಾನಕ್ಕೆ ಕೀರ್ತಿ ಬರುವುದು.

ಮುಖ್ಯವಾಗಿ ಈ ದುರ್ಗದ ಕೋಟೆ ಮುಂತಾದ್ದನ್ನು ಸರ್ಕಾರದವರು ಪುನರುದ್ಧಾರ ಮಾಡಿದರೆ ಇದೊಂದು ದಿವ್ಯವಾದ ಯಾತ್ರಾಸ್ಥಳವಾಗಿಯೂ ಉದಕ ಮಂಡಲ ಕೆಮ್ಮಣ್ಣುಗುಂಡಿ, ನಂದಿ ಮುಂತಾದ ಹವಾ ಹೊಂದುವ ಸ್ಥಳದಂತೆಯೂ ಆಗುವುದು. ಆರಸಾಳುವಿನಿಂದ ತೀರ್ಥಹಳ್ಳಿಗೆ ಮುಂದೆ ಬರಬಹುದಾದ ರೈಲು ಮಾರ್ಗವು ಈ ದುರ್ಗದ ಸಮೀಪಬರುವುದು. ಆ ಸರ್ವೆಯನ್ನು ಇನ್ನು ಸ್ವಲ್ಪ ಗಿರಿಯ ಬುಡಕ್ಕೆ ಎತ್ತಿದರೆ ಬಹಳ ಲಾಭವೂ ಉಂಟಾಗುವುದು.

ಕಡೂರು ಉಪಾಧ್ಯಾಯ ಸಂಘ

(ಒಬ್ಬ ಬಾತ್ಮೀದಾರರಿಂದ)

ಈ ಸಂಘದ ವಾರ್ಷಿಕೋತ್ಸವವು ತಾ 14—3—36 ನೇ ಶನಿವಾರ ಕಡೂರು ಪ್ರಾಥಮಿಕ ಶಾಲಾ ಕಟ್ಟಡದಲ್ಲಿ ಕಡೂರು ರೇಂಜ್ ಸ್ಕೂಲುಗಳ ಆ|| ಇನ್|| ರವರಾದ ಮ|| ರಾ|| ಜಿ ಭೀಮರಾವ್ ಎಂ. ಎ. ರವರ ನೇತೃತ್ವದಲ್ಲಿ ತಳಿರು ತೋರಣಗಳಿಂದ ಅಲಂಕೃತ ಶೋಭಾಯಮಾನವಾದ ಭವ್ಯ ಮಂದಿರದಲ್ಲಿ ನಡೆಯಿತು. ಆದಿನ ಬಾಲಿಕಾ ಪಾಠಶಾಲಾ ಬಾಲಕಿಯರು ದೇವತಾ ಪ್ರಾರ್ಥನೆ ಮತ್ತು ಸ್ವಾಗತ ಗೀತೆಗಳನ್ನು ಹಾಡಿದರು. ಕೈಲಾಸವಾಸಿಗಳಾದ ಚಕ್ರವರ್ತಿ ಸಾರ್ವಭೌಮರವರಾದ ಪಂಚಮ ಜಾರ್ಜರ ಮತ್ತು ಶ್ರೀಮತಿ ಕಮಲಾ ನೆಹರೂರವರ ನಿಧನಕ್ಕಾಗಿ ಅನುತಾಪ ಸೂಚಕವಾದ ಠರಾವು ಅಂಗೀಕೃತವಾಯಿತು. ಕಾರ್ಯದರ್ಶಿಗಳಾದ ರಾ|| ಎಂ. ಎಸ್. ರಾಮರಾಯರು ಸಂಘದ ವರದಿಯನ್ನು ಓದಿದನಂತರ ಭಾರತ ಪಠನವು ಮ|| ರಾ|| ಕೆ ವೆಂಕಟಸುಬ್ಬಯ್ಯನವರಿಂದಲೂ, ಸಂಗೀತವು ಸಂಗೀತ ವಿದ್ವಾನ್ ಪರುಶುರಾಮನ್‌ರವರಿಂದಲೂ ಮತ್ತು ಮ|| ರಾ|| ತಿಮ್ಮಯ್ಯನವರಿಂದಲೂ, ಹಾರ್ಮೋನಿಯಂ ಮ|| ರಾ|| ಎಚ್. ಮೈಲಾರಯ್ಯನವರಿಂದಲೂ, ತಬಲ ಟಿ|| ಎಚ್. ಟಿ. ನಾಗಣ್ಣನಿಂದಲೂ ನಡೆಸಲ್ಪಟ್ಟಿತು. ಲೇಖನ ಪಠನಗಳೂ, ಲಾವಣಿಗಳೂ ಆನಂತರ ಪ್ರದರ್ಶನ ತೆರೆಯಲ್ಪಟ್ಟು ಅಧ್ಯಕ್ಷರ ಭಾಷಣ ಪ್ರಾರಂಭವಾಯಿತು. ಅಧ್ಯಕ್ಷರು ಬೋಧಕರು ತಾವು ಪಡೆಯುತ್ತಿರುವ ಅಲ್ಪ ವೇತನದಮೇಲೆ ದೃಷ್ಟಿಯಿಡದೆ ದೇಶಸೇವೆಗೆ, ಜನ ಸೇವೆಗೆ ಸಿದ್ಧರಾಗುವ ವಿದ್ಯಾರ್ಥಿಗಳಮೇಲೆ ಅಭಿಮಾನವಿಟ್ಟು ಕರ್ತವ್ಯ ನಿಷ್ಠತೆಯಿಂದ ಕೆಲಸಮಾಡಿ ಕೀರ್ತಿವಂತರಾಗಬೇಕೆಂದರು. ಈ ಸಂತೋಷ ಕೂಟಕ್ಕೆ ಬೀರೂರು ಮಾಧ್ಯಮಿಕ ಪ್ರಾಥಮಿಕ ಶಾಲಾಗಳ ಬೋಧಕರು ದಯಮಾಡಿದ್ದುದು ಸಂತೋಷ ವಾರ್ತೆ. ಅಲ್ಲದೆ ಬೀರೂರು ಸಾಹುಕಾರ್ ಶ್ರೀ|| ಕೆ ಟಿ. ಸತ್ಯನಾರಾಯಣ ಶೆಟ್ಟರವರು ಸಂಘವು ಯಶಸ್ವಿಯಾಗಿ ನಡೆಯಲು ಕಳುಹಿಸಿದ ಸಂದೇಶವು ಓದಲ್ಪಟ್ಟಿತು.

ಸದಸ್ಯರೂ ಮೇಲ್ಕಂಡ ಇತರ ಮಹನೀಯರೂ ವಿಶೇಷ ಪ್ರೋತ್ಸಾಹವಿತ್ತು ಈ ಸಂತೋಷ ಕೂಟವು ಯಶಸ್ವಿಯಾಗಿ ನಡೆಯಲು ಸಹಾಯವನ್ನಿತ್ತುದಕ್ಕಾಗಿ ಕಾರ್ಯದರ್ಶಿಗಳು ವಂದನೆಗಳನ್ನು ಅರ್ಪಿಸಿದರು. ಶ್ರೀಮನ್ಮಹಾರಾಜರವರ ಶ್ರೇಯಃ ಪ್ರಾರ್ಥನಾನಂತರ ಈ ದಿನದ ಕಾರ್ಯಗಳು ಮುಕ್ತಾಯಗೊಂಡುವು.

ಎಡ್ವರ್ಡ್ ಚಕ್ರವರ್ತಿಗಳ ತ್ಯಾಗ.

ಬ್ರಿಟಿಷ್ ಚಕ್ರವರ್ತಿಗಳು ತಮ್ಮ ಪಿತ್ರಾರ್ಜಿತವಾದ ಆಸ್ತಿಯ ಉತ್ಪತ್ತಿಯನ್ನು ಪಾರ್ಲಿಮೆಂಟಿನವರಿಗೆ ಬಿಟ್ಟುಕೊಟ್ಟಿರುತ್ತಾರೆ. ಇದರಲ್ಲಿ ತಮ್ಮ ಬಂಧು ವರ್ಗದವರಿಗೂ ಇತರ ಖರ್ಚುಗಳಿಗೂ ಸ್ವಲ್ಪ ವಿಮಾಸಲಾಗಿಟ್ಟಿರುವರು

ಮನುಷ್ಯ ಶರೀರದಲ್ಲಿ ಸೂಜಿಯ ಸಂಚಾರ.

ವಿಚಿತ್ರ ಮರಣ.

ಕೈಗೆ ಸೂಜಿಯು ಚುಚ್ಚಿಕೊಂಡು ಮುರಿದುಹೋಗಿ ಅದು ಶರೀರದಲ್ಲೆಲ್ಲಾ ಸಂಚಾರಮಾಡಿ ಹೃದಯವನ್ನು ಪ್ರವೇಶಿಸಿ ವಿಷಾದಕರವಾದ ಮರಣವನ್ನುಂಟುಮಾಡಿದ ಒಂದು ಪ್ರಸಂಗವು ಕೆಳಗೆ ಕಂಡಂತೆ ತಿಳಿದು ಬಂದಿದೆ. ಚಾಮರಾಜನಗರದ ತಾ|| ಕುದೇರು. ಆ ಊರಿನಲ್ಲಿ ವೀರಭದ್ರನೆಂಬ ಒಬ್ಬ ವೀರಶೈವ ತರುಣ. ಇಪ್ಪತ್ತೈದು ವರ್ಷ ವಯಸ್ಸು. ತನ್ನ ಅಂಗಿಗೆ ಗುಂಡಿಯನ್ನು ಹೊಲಿಯುತ್ತಿದ್ದ. ಅವನ ಸ್ನೇಹಿತನೊಬ್ಬನು ಅವನೊಡನೆ ಸರಸವಾಡುತ್ತ ಅತನನ್ನು ತಪ್ಪಿಕೊಂಡನು. ಸೂಜಿಯು ಅತನ ಕೈಗೆ ಚುಚ್ಚಿಕೊಂಡಿತು. ಅರ್ಧಕ್ಕೆ ಮುರಿಯಿತು. ಕೂಡಲೇ ಸಮೀಪದ ಗ್ರಾಮದಲ್ಲಿರುವ ಆಸ್ಪತ್ರೆಗೆ ಹೋಗಿ ತೋರಿಸಿದನು. ಅಷ್ಟು ಹೊತ್ತಿಗೆ ಸೂಜಿಯು ಕೈಯಿಂದ ರಕ್ತನಾಳಗಳ ಮೂಲಕ ತೋಳಿಗೆ ಹತ್ತಿತ್ತು. ಆಸ್ಪತ್ರೆಯ ಡಾಕ್ಟರು ಅದನ್ನು ತೆಗೆಯಲು ತಮ್ಮಿಂದ ಸಾಧ್ಯವಿಲ್ಲವೆಂದು ಹೇಳಿದರು. ಅತನನ್ನು ಮೈಸೂರು ಆಸ್ಪತ್ರೆಗೆ ತೋರಿಸಲು ಕರೆತಂದರು. ಇಲ್ಲಿ ಡಾಕ್ಟರಿಗೆ ತೋರಿಸಲು ದೊಡ್ಡ ಡಾಕ್ಟರು ಬರಬೇಕೆಂದು ಹೇಳಿದರು. ದೊಡ್ಡವರು ಬರುವಷ್ಟರಲ್ಲಿ ಸೂಜಿ ಆ ಮನುಷ್ಯನ ಹೃದಯಕ್ಕೆ ಪ್ರವೇಶಿಸಿತು. ಸ್ವಲ್ಪ ಹೊತ್ತಿನಲ್ಲಿಯೇ ಅತನು ಮೃತಿಹೊಂದಿದನು. ಅವನ ಶವವನ್ನು ಊರಿಗೆ ಸಾಗಿಸಿದರು. ಈ ವಿಚಿತ್ರವನ್ನು ನೋಡಲು ಅವನ ಮಿತ್ರರಾದ ನೂರಾರು ಜನರು ಸುತ್ತಮುತ್ತಿನ ಪ್ರದೇಶಗಳಿಂದ ಬಂದಿದ್ದರು.

ತೆರಿಗೆಗೆ ವಿರೋಧಪ್ರದರ್ಶನ.

ತಿರುಚನಾಪಳ್ಳಿಯಲ್ಲಿ ಬೈಸಿಕಲ್‌ಗಳ ಮೇಲೆ ವಿಶೇಷವಾದ ತೆರಿಗೆಯನ್ನು ಹಾಕಿದರು. ಇದನ್ನು ಪ್ರತಿಭಟಿಸಲು ಬಹಿರಂಗ ಸಭೆಯೂ ಪ್ರದರ್ಶನವೂ ನಡೆದವು. ಆ ಸಂದರ್ಭದಲ್ಲಿ ಒಂದು ರಥೋತ್ಸವವನ್ನು ಮಾಡಿ ಅದರಲ್ಲಿ ಒಂದು ಬೈಸಿಕಲ್ಲನ್ನಿಟ್ಟು ಅಲಂಕಾರ ಮಾಡಿ ಅದರ ಮೇಲೆ ಬೋರ್ಡುಗಳನ್ನು ಹಚ್ಚಿ ಊರಿನಲ್ಲೆಲ್ಲಾ ಮೆರವಣಿಗೆ ಮಾಡಿದರು. ಬೈಸಿಕಲ್ ತೆರಿಗೆ ವಜಾ ಮಾಡಿರೆಂದು ಅದರಲ್ಲಿ ಬರೆದಿತ್ತು.

ಲಂಡನ್ನಿನಿಂದ ಅಮೆರಿಕದ ದೀಪ ಹಚ್ಚುವುದು.

ರೇಡಿಯೋ ಸಹಾಯದಿಂದ ಸಾವಿರಾರು ಮೈಲಿಗಳ ದೂರದಲ್ಲಿರುವ ದೀಪಗಳನ್ನು ಹಚ್ಚುವ ಪ್ರಯತ್ನವು ಮೊನ್ನೆ ಲಂಡನ್ನಿನಲ್ಲಿ ಯಶಸ್ವಿಯಾಗಿ ನಡೆಯಿತು. ದೀಪದ ಕಡ್ಡಿಯನ್ನು ಹಚ್ಚಿ ಒಂದು ಮೇಣಬತ್ತಿಗೆ ಹಚ್ಚಲಾಯಿತು. ಅದರ ಶಬ್ದವು ಒಂದು ಮೈಕ್ರೋಫೋನಿಗೆ ತಗಲಿ ಮೂಲಕ ಅಮೇರಿಕಕ್ಕೆ ಹೋಗಿ ಅಲ್ಲಿ ನೂರಾರು ದೀಪಗಳು ಹಚ್ಚಲ್ಪಟ್ಟವು

For Up to-date and Efficient Medical Treatment

Go to—**Dr. A. J. RAM & SONS,**

Sayaji Rao Road, Mysore.

Physicians, Dentists, Opticians, etc.

ಡಾ|| ಎ. ಜೆ. ರಾಂ. ಅಂಡ್ ಸನ್ಸ್,

ಸಯ್ಯಾಜಿರಾವ್ ರೋಡ್, ಮೈಸೂರು ಸಿಟಿ.

ಔಷಧ ವ್ಯಾಪಾರಿಗಳು, ಚಿಕಿತ್ಸಕರು, ದಂತವೈದ್ಯರು,

ಮತ್ತು ಕನ್ನಡಕ ವ್ಯಾಪಾರಿಗಳು

ಉತ್ತಮವಾದ ನವೀನ ಚಿಕಿತ್ಸೆಗಳಿಗೆ ನಮ್ಮಲ್ಲಿಯೇ ಬನ್ನಿರಿ



A Reliable House for Repairs of
WATCHES & GRAMOPHONES
HIGH CLASS RUBBER STAMP
Suppliers,
M V N WATCH COY,
The General Commission Agency,
Lansdowne Buildings,
MYSORE

ಗಡಿಯಾರ ಮತ್ತು ಗ್ರಾಮೋಫೋನುಗಳ ರಿಪೇರಿ
ಮತ್ತು ರಬ್ಬರ್ ಮೊಹರುಗಳ ತಯಾರಿ
ನಮ್ಮಲ್ಲಿ ನಡೆಯುತ್ತವೆ.
ಎಂ. ವಿ. ಎನ್. ವಾಚ್ ಕಂಪೆನಿ, ಮೈಸೂರು.

ಎಂ. ವಿ. ನಾರಾಯಣರಾಯರ
ಶ್ರೀ ಸತ್ಯನಾರಾಯಣ ಪರಿಮಳ ಫ್ಯಾಕ್ಟರಿ,
ಜಗನ್ಮೋಹನ ಬಂಗ್ಲಾ ಬೀದಿ, ಮೈಸೂರು.

ಪರಿಮಳ ಅಗರ್ ಬತ್ತಿ

ಉಪಯೋಗಿಸಿ ಪ್ರೋತ್ಸಾಹಿಸಿರಿ.

USE ALWAYS
DERMOTONE
(ASTRIC BATHING HERBAL PREPARATION)
THE UNIQUE PRODUCT
IN THE MARKET FOR SKIN HYGIENE

ಡರ್ಮೊಟೋನ್,
ಸ್ನಾನ ಮಾಡುವ ಮತ್ತು ಆರೋಗ್ಯಕರವಾದ ಚರ್ಮರಕ್ಷಣೆ ...
ವನಿತಾ ವಿನೋದ, ಮೈಸೂರು

ವನಿತಾ ವಿನೋದ

ಕೇವಲ ಸ್ತ್ರೀ ... ಎಲ್ಲಾ ವಿಧ ...
... ಅದಕ್ಕೆ ಸಂಬಂಧಿಸಿದ ...
... ದೊರೆಯುತ್ತವೆ

ಎಂಬ್ರಾಯಿಡರಿ ಹೌಸ್
ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು.

Reserved For
SRI KRISHNA BHAVAN
Mysore.

ANANDA SODA FACTORY,
DODDAPET, MYSORE.

BEST AERATED WATER SUPPLIERS.
COMPLETE REQUISITES FOR
AERATED WATER MANUFACTURERS
AVAILABLE

ಆನಂದಾ ಸೋಡಾ ಫ್ಯಾಕ್ಟರಿ,
ದೊಡ್ಡಪೇಟೆ, ಮೈಸೂರು

DO NOT FAIL TO VISIT
BOMBAY INDRA BHAVAN,
NEW UP TO-DATE AND FASHIONABLE
RESTAURANT
WITH
Modern Equipments and efficient Management
IN
SAYYAJI RAO ROAD, MYSORE.

ಶ್ರೀ ಸತ್ಯನಾರಾಯಣ ವೈದ್ಯಶಾಲೆ,
ಚಾಮುಂಡಿ ಅಗ್ರಹಾರ, ಮೈಸೂರು

... ಸತ್ಯನಾರಾಯಣ ರಸಾಯನ ... ಪ್ರಜ್ವಾಂಜನ

ಪಂಡಿತ ಸಿ. ಎಚ್. ಚಂದ್ರಭಾನುಸಿಂಗ್ ಅಂಡ್ ಬ್ರದರ್

ಮಹಾಕಾಳಿಂಗಾದಿ ಕಷಾಯ

"ಮಲೇರಿಯಾ ಮತ್ತು ಇತರ ಜ್ವರಗಳಿಗೆ ಖಾತರಿ ಔಷಧ" ಈ ಕಷಾಯವು ಪ್ಲೀಹ ಮತ್ತು ಯಕೃತ್ತುಗಳ ವರ್ಧನೆ (ಜ್ವರದಗೆಡ್ಡೆ) ಯಿಂದೊದಗುವ ಮತ್ತು ಇತರ ಸಕಲ ಸಂಕಟ ಮತ್ತು ದೀರ್ಘಕಾಲದ ಎಲ್ಲಾ ಬಗೆಯ ಜ್ವರಗಳಿಗೂ ಮನಗಂಡ ನಿರ್ಣಯವಾದ ಸಂಜೀವನವು. ... ಔಷಧಿಯು ... ದಿಂದಾವರ್ತಿ ... ಯಕೃತ್ತುಗಳ ಕೆಲಸವು ... ಪ್ಲೀಹವು ತನ್ನ ಸ್ಥಿತಿಗೆ ಬರುವುದು ರಕ್ತದಲ್ಲಿ ಕೆಂಪು ರಕ್ತ ಕಣಗಳು ಹೆಚ್ಚುವುವು

ಮತ್ತು ವ್ಯಾಧಿಗ್ರಸ್ಥನು ಸ್ವಲ್ಪ ದಿವಸಗಳಲ್ಲಿಯೇ ಉತ್ತಮವಾದ ಆರೋಗ್ಯ ಸ್ಥಿತಿಗೆ ಬರುವನು. ಈ ರಾಷ್ಟ್ರೀಯ ವನಸ್ಪತಿ ಸಂಯೋಗವು ... ಗಳಲ್ಲಿ ಅನೇಕ ವಿಧ ಜ್ವರಗಳನ್ನು ಗುಣಪಡಿಸುತ್ತದೆ.

ಕ್ರಯ ... ಬಾಟಲ್ ... ೧—೪—೦

ಬ್ರಾಂಚ್.—ಶ್ರೀಸತ್ಯನಾರಾಯಣ ಆಯುರ್ವೇದಿಕ್ ಮೆಡಿಕಲ್ ಸ್ಟೋರ್ಸ್,
ಜಗನ್ಮೋಹನ ಬಂಗ್ಲೆ ರಸ್ತೆ, ಮೈಸೂರು.

ನಾಳಿನ ಮಹಾ ಮೈಸೂರು.

ಉದಯಿಸಲು ಅಡಿಗಲ್ಲನ್ನಿಡಿ

ಮೈಸೂರು ವಿಮಾ ಕಂಪೆನಿಯೊಂದಿಗೆ ಸರ್ವ ಪ್ರಕಾರದಿಂದಲೂ ಸಹಕರಿಸಿ ಇದು ನಿಮ್ಮ ಪ್ರಾರ್ಥನೆ

ಹೀಗೆ ಪ್ರಾರ್ಥಿಸುವುದು ನಮ್ಮ ಜನ್ಮಸಿದ್ಧವಾದ ಹಕ್ಕು ಹಾಗೆ ಸಹಕರಿಸುವುದು ನಿಮ್ಮ ಪವಿತ್ರ ಕರ್ತವ್ಯ.

ಕರ್ನಾಟಕದಲ್ಲಿ ಸ್ಥಾಪಿತವಾದ ವಿಮಾ ಕಂಪೆನಿಗಳಲ್ಲಿ ಪ್ರಥಮ ವರ್ಷದಲ್ಲೇ ಯಾವುದೂ ಈ ಕಂಪೆನಿಯಷ್ಟು ಕಾರ್ಯನಡೆಸಿಲ್ಲ

ನಾಳಿನ ಮಹಾ ಮೈಸೂರಿನ ಮುಂಬೆಳಗು ಯಾವುದು?

ಮೈಸೂರು ವಿಮಾ ಕಂಪೆನಿ, ಲಿಮಿಟೆಡ್.,

ಬೆಂಗಳೂರು

ಮೈಸೂರು ವಿಮಾ ಕಂಪೆನಿಯು ಮೈಸೂರಿನವರ ಮತ್ತು ಮೈಸೂರಿನ ಅಭ್ಯುದಯಕ್ಕಾಗಿ ಮೈಸೂರು ಬಂಡವಾಳದಿಂದ ಮೈಸೂರಿನವರ ನೇತೃತ್ವದಲ್ಲಿ ಮೈಸೂರಿನ ಕೆಲಸಗಾರರಿಂದ ನಡೆಸಲ್ಪಡುತ್ತಿರುವ ಅಚ್ಚ ಮೈಸೂರು ಸಂಸ್ಥೆ

ಜನಸಾಮಾನ್ಯರ ಅನುಕೂಲಕ್ಕಾಗಿ ದೇಶದ ನಾನಾ ಭಾಗಗಳಲ್ಲಿ ನಡೆಯುತ್ತಿರುವ ಪ್ರಯತ್ನಗಳಿಗೆ ತಕ್ಕ ಶಕ್ತ್ಯಾನುಸಾರ ಮೈಸೂರು ಸರಕಾರದವರ ಆಶ್ರಯದಿಂದ ಈ ಸಂಸ್ಥೆಯು ಬೆಳಕು ಕಂಡಿತು

ವಿಮಾ ಉದ್ಯಮದಲ್ಲಿ ಇಂಥ ಸಂಸ್ಥಾನಕ್ಕೆ ಏಕಮಾತ್ರ ಆದರ್ಶ ಸಾರ್ವಜನಿಕ ಸಂಸ್ಥೆಯಿದು

ಇಂತಹ ಕಂಪೆನಿಯಲ್ಲಿ ಮೈಸೂರಿನವರೆಲ್ಲರ ಪ್ರಾತಿನಿಧ್ಯವಿದ್ದೇ ತೀರಬೇಕು.

ಮೊದಲಿನ ೧ ಲಕ್ಷ ರೂ ಗಳ ಷೇರುಗಳು ಅತ್ಯಲ್ಪಕಾಲದಲ್ಲಿಯೇ ಚಂದಾ ಆಗಿಹೋದವು

ಅಧಿಕ ಅವಶ್ಯಕತೆಗಳನ್ನನುಸರಿಸಿ

ಷೇರು ಬಂಡವಾಳವನ್ನು ಇನ್ನೂ ೨ ಲಕ್ಷ ಹೆಚ್ಚಿಸಲಾಗಿದೆ

ಈ ಎರಡು ಲಕ್ಷದಲ್ಲಿ ೧೦೦ ರೂಗಳ ೧೦೦೦ ಷೇರುಗಳನ್ನು ಮಾತ್ರ ಡೈರೆಕ್ಟರುಗಳು ಮಾರಾಟಕ್ಕಿಟ್ಟಿರುವರು

ಈ ಸಾವಿರ ಷೇರುಗಳಲ್ಲಿ ಈಗಾಗಲೇ ಬಹು ಭಾಗವು ಚಂದಾ ಆಗಿದೆ

ಷೇರು ಬೇಕಾದವರಿಂದೇ ಬರೆಯಿರಿ ಇಂದು ಬಿಟ್ಟರೆ ನಾಳೆ ಸಿಗದು! ತ್ವರೆಮಾಡಿ.

ಸರ್ವರ ಅನುಕೂಲ ಅವಶ್ಯಕತೆಗಳಿಗೆ ಸರಿಹೊಂದುವ ವೈದ್ಯ ಪರೀಕ್ಷೆಯಿರುವ ಮತ್ತು ಇಲ್ಲದಿರುವ ನವೀನ ವಿಮಾ ಪದ್ಧತಿಗಳು

ಸ್ತ್ರೀಯರೂ ವಿಮೆ ಮಾಡಬಹುದು

ಏಜೆಂಟರುಗಳಿಲ್ಲದ ಸ್ಥಳಗಳಲ್ಲೆಲ್ಲಾ ಏಜೆಂಟರು ಬೇಕು.

ದೇಶದ ಸೇವೆ ಕೆಲಸಮಾಡಲು ಅವಕಾಶವಿದೆ

ಹೆಚ್ಚು ವಿವರಗಳಿಗೆ—

ಕಂಠೀರವ ಮತ್ತು ಕಂಪೆನಿ,
ಮ್ಯಾನೇಜಿಂಗ್ ಏಜೆಂಟ್ಸ್
ಮೈಸೂರು ವಿಮಾ ಕಂಪನಿ ಲಿಮಿಟೆಡ್.,
ಶ್ರೀ ನರಸಿಂಹರಾಜ ರೋಡ್, ಬೆಂಗಳೂರು ಸಿಟಿ

KANTEERAVA & Co.
Managing Agents,
MYSORE INSURANCE CO., LTD,
Narasimharaja Road, Bangalore City

Edited, Printed & Published by Agaram Rangiah B.A., at Sri Rama Press, D Subbiah Road, Mysore.



॥ ಸತ್ಯಮೇವೋದ್ಧರಾಮ್ಯಹಮ್ ॥

ರಾಜಧಾನಿಯ ರಾಷ್ಟ್ರೀಯ ವಾರ ಪತ್ರಿಕೆ.

ವೃದ್ಧಪಿತಾಮಹ ಎಂ. ವೆಂಕಟಕೃಷ್ಣಯ್ಯನವರ ಜ್ಞಾಪಕಾರ್ಥವಾಗಿ ಪ್ರಕಟಿಸಲ್ಪಡುವುದು.

ಸಂಪಾದಕರು ಅಗರಂ ರಂಗಯ್ಯ, ಬಿ.ಎ.

Sadhvi: A Leading Nationalist Weekly of Mysore.

FOUNDED IN MEMORY OF MR. M. VENKATA KRISHNAYYA, THE GRAND OLD MAN OF MYSORE.

ಸಂಪುಟ ೧] MYSORE : MONDAY 30—3—36 ಮೈಸೂರು : ಸೋಮವಾರ ೩೦—೩—೩೬ [ಸಂಚಿಕೆ ೬

Bombay

INDRA BHAVAN,

IDEAL INDIAN RESTAURANT,

Sayaji Rao Road, MYSORE.

LADIES AND GENTLEMEN,

Don't you like to Safegaurd your health at all times? Then you must insist upon having your Lunch and Drinks hygienically prepared by pure and choicest articles.

We are at your service,

Bombay Indra Bhavan,

SAYAJI RAO ROAD, MYSORE.

ಬೊಂಬಾಯಿ ಇಂದ್ರ ಭವನ,

ಅತ್ಯುತ್ತಮವಾದ ಹಿಂದೂ ಫಲಾಹಾರ ಮಂದಿರ,

ಸಯ್ಯಾಜಿ ರಾವ್ ರಸ್ತೆ, ಮೈಸೂರು.

ಮಹಿಳೆಯರೇ ಮತ್ತು ಮಹನೀಯರೇ,

ನೀವು ಸದಾ ನಿಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳಬೇಕೆಂದು ಆಶಿಸುವುದಿಲ್ಲವೇ? ಹಾಗಾದರೆ ಯಾವಾಗಲೂ ಶುಚಿಯಾದ ಮತ್ತು ಉತ್ತಮವಾದ ಪದಾರ್ಥಗಳಿಂದಲೇ ತಯಾರಿಸಿದ ರುಚಿಯಾದ ಆಹಾರ ಮತ್ತು ಪಾನೀಯಗಳು ಅವಶ್ಯವಾನೆ?

ತಮ್ಮ ಆರೋಗ್ಯಾಪೇಕ್ಷಿಗಳು,

ಬೊಂಬಾಯಿ ಇಂದ್ರ ಭವನ,

ಸಯ್ಯಾಜಿರಾವ್ ರೋಡು, ಮೈಸೂರು.



A Reliable House for Repairs of
WATCHES & GRAMOPHONES
HIGH CLASS RUBBER STAMP
Suppliers,
M V N WATCH COY,
The General Commission Agency
Lansdowne Buildings,
MYSORE.

ಗಡಿಯಾರ ಮತ್ತು ಗ್ರಾಮೋಫೋನುಗಳ ರಿಪೇರಿ
ಮತ್ತು ರಬ್ಬರ್ ಮೊಹರುಗಳ ತಯಾರಿ
ನಮ್ಮಲ್ಲಿ ನಡೆಯುತ್ತವೆ.
ಎಂ ವಿ ಎನ್ ವಾಚ್ ಕಂಪೆನಿ, ಮೈಸೂರು

ಎಂ. ವಿ. ನಾರಾಯಣರಾಯರ
ಶ್ರೀ ಸತ್ಯನಾರಾಯಣ ಪರಿಮಳ ಫ್ಯಾಕ್ಟರಿ,
ಜಗನ್ಮೋಹನ ಬಂಗ್ಲಾ ಬೀದಿ, ಮೈಸೂರು

ಪರಿಮಳ ಅಗರ್ ಬತ್ತಿ

ಉಪಯೋಗಿಸಿ ಪ್ರೋತ್ಸಾಹಿಸಿರಿ

USE ALWAYS

DERMOTONE

(SASTRIC BATHING HERBAL PREPARATION)
THE UNIQUE PRODUCT
IN THE MARKET FOR SKIN HYGIENE

ಡರ್ಮೊಟೋನ್,
ಶಾಸ್ತ್ರೀಯವಾದ ಮತ್ತು ಆರೋಗ್ಯಕರವಾದ ಚರ್ಮರಕ್ಷಣೀ ಚೂರ್ಣ
ಡರ್ಮೊಟೋನ್ ವರ್ಕ್ಸ್, ಮೈಸೂರು

ವನಿತಾ ವಿನೋದ

ಸಕಲ ವಿದ್ಯಾಸಕ್ತರಾದ ಮಹಿಳೆಯರಿಗಾಗಿ ಧರಿಸುವ ಎಲ್ಲಾ ವಿಧ ಉಡುಗೆಗಳ ಹೊಸ ಮಾದರಿಯ ಕಸೂತಿ ದಾರಗಳು ಮತ್ತು ಅದಕ್ಕೆ ಸಂಬಂಧಿಸಿದ ಇತರ ಸಾಮಾನುಗಳೆಲ್ಲವೂ ಚಿಲ್ಲರೆಯಾಗಿಯೂ, ಒಟ್ಟಾಗಿಯೂ ದೊರೆಯುತ್ತವೆ

ಎಂಬ್ರಾಯಿಡರಿ ಹೋಂ
ಲ್ಯಾನ್ಸ್‌ಡೌನ್ ಬಿಲ್ಡಿಂಗ್ಸ್, ಮೈಸೂರು.

Reserved For
SRI KRISHNA BHAVAN
Mysore.

INDIA'S GREATEST PICTURE, **"DEVADAS"**
"See Devadas & Die" said Balu Rao Patel, Indias' Cine Critic To be shown at OLYMPIA TALKIES during the 1st week of April.

ಒಲಂಪಿಯಾ ಟಾಕೀಸ್, "ದೇವದಾಸ್"
ತಾರೀಖನ್ನು ಗಮನಿಸಿರಿ

ಶ್ರೀ ಸತ್ಯನಾರಾಯಣ ವೈದ್ಯಶಾಲೆ,
ಚಲುವಾಂಬಾ ಅಗ್ರಹಾರ, ಮೈಸೂರು
ವಿಷೂಚಿ ವಿಧ್ವಂಸಿನಿ, ಅಘ್ರಾಣ ಚೂರ್ಣ, ದ್ರಾಕ್ಷಾದಿ ರಸಾಯನ, ಜ್ವರಾಂಕುಶ ಮಾತ್ರೆಗಳು, ಸತ್ಯನಾರಾಯಣ ರಸಾಯನ ದಂತಶೂಲ ನಿವಾರಿಣಿ, ಪುಷ್ಪಾಂಜನ

ಪಂಡಿತ ಪಿ. ಎಚ್. ಚಂದ್ರಭಾನ್‌ಸಿಂಗ್ ಅಂಡ್ ಬ್ರದರ್

ಮಹಾಕಾಳಿಂಗಾದಿ ಕಷಾಯ

ಮಲೇರಿಯಾ ಮತ್ತು ಇತರ ಜ್ವರಗಳಿಗೆ ಖಚಿತ ಔಷಧ. ಈ ಕಷಾಯವು ಪ್ಲೀಹ ಮತ್ತು ಯಕೃತ್ತುಗಳ ವರ್ಧನೆ (ಜ್ವರದಗೆಡ್ಡೆ) ಯಿಂದೊಡಗೂಡಿದ ಮತ್ತು ಇತರ ಸಕಲ ಸಂತತ ಮತ್ತು ದೀರ್ಘಕಾಲದ ಎಲ್ಲಾ ಬಗೆಯ ಜ್ವರಗಳಿಗೂ ಮಸಗಂಡ ನಿರ್ದಯವಾದ ಸಂಜೀವನವು ಛಳಿಜ್ವರಬರುವವೇಳೆಗಳಲ್ಲಿ ಆಗಾಗ್ಗೆ ಸೇವಿಸುವುದರಿಂದ ಈ ಬಗೆಯ ಜ್ವರವು ಅಂಟುವುದಿಲ್ಲ ಔಷಧಿಯು ಒಂದೆರಡಾವರ್ತಿ ಭೇದಿಯನ್ನು ಮಾಡಿಸುತ್ತದೆ ಇದರ ಸೇವನೆಯಿಂದ ಯಕೃತ್ತಿನ ಕೆಲಸವು ಸರಿಯಾಗುವುದು ಪ್ಲೀಹವು ತನ್ನ ಸ್ಥಿತಿಗೆ ಬರುವುದು ರಕ್ತದಲ್ಲಿ ಕೆಂಪು ರಕ್ತ ಕಣಗಳು ಹೆಚ್ಚುವುವು.

ರೋಗಿ ವ್ಯಾಧಿಗ್ರಸ್ತನು ಸ್ವಲ್ಪ ದಿವಸಗಳಲ್ಲಿಯೇ ಉತ್ತಮವಾದ ಆರೋಗ್ಯ ಸ್ಥಿತಿಗೆ ಬರುವನು. ಈ ಶಾಸ್ತ್ರೀಯ ವನಸ್ಪತಿ ಸಂಯೋಗವು ಎಲ್ಲಾ ಬಗೆಯವುಗಳಲ್ಲಿ ಅನೇಕ ವಿಧ ಜ್ವರಗಳನ್ನು ಗುಣಪಡಿಸುತ್ತದೆ

ಕ್ರಯ ೬ ಔನ್ಸ್ ಸೀಸೆ ೧ ಕ್ಕೆ ೧—೪—೦

ಬ್ರಾಂಚ್:—ಶ್ರೀಸತ್ಯನಾರಾಯಣ ಆಯುರ್ವೇದಿಕ್ ಮೆಡಿಕಲ್ ಸ್ಟೋರ್ಸ್,
ಜಗನ್ಮೋಹನ ಬಂಗ್ಲೆ ರಸ್ತೆ, ಮೈಸೂರು.

॥ ಸತ್ಯಮೇವೋದ್ಧರಾಮ್ಯಹಮ್ ॥
ರಾಜಧಾನಿಯ ರಾಷ್ಟ್ರೀಯ ವಾರ ಪತ್ರಿಕೆ.
ವೃದ್ಧಪಿತಾಮಹ ಎಂ. ವೆಂಕಟಕೃಷ್ಣಯ್ಯನವರ ಜ್ಞಾಪಕಾರ್ಥವಾಗಿ ಪ್ರಕಟಿಸಲ್ಪಡುವುದು.
ಸಂಪಾದಕರು: ಅಗರಂ ರಂಗಯ್ಯ, ಬಿ. ಎ.
ಸಂಪುಟ ೧] MYSORE : MONDAY 30—3—36 ಮೈಸೂರು : ಸೋಮವಾರ ೩೦—೩—೩೬ [ಸಂಚಿಕೆ ೬

ಜರ್ಮನಿಯು ಯುದ್ಧಕ್ಕೆ ಸಿದ್ಧವಾಗಿದೆಯೆ ?

ಜರ್ಮನಿಯು ಯುದ್ಧಕ್ಕೆ ಸಿದ್ಧವಾಗಿರುವುದು. ಅದರ ಶಸ್ತ್ರಾಸ್ತ್ರಗಳೆಲ್ಲವೂ ಈಗಲೇ ಸಿದ್ಧವಾಗಿವೆ. ಶೀಘ್ರವಾಗಿಯೂ ಗೋಪ್ಯವಾಗಿಯೂ ನಿಶ್ಶಬ್ದದಿಂದಲೂ ಜರ್ಮನಿಯು ದೊಡ್ಡದೊಂದು ಸಂಧಾನವನ್ನು ಮಾಡುತ್ತಿರುತ್ತದೆ. ಭೂಮಿಯ ಮೇಲೆಯೂ ಅಂತರಿಕ್ಷದಲ್ಲಿಯೂ ಯುದ್ಧದ ಸಾಮಗ್ರಿಗಳನ್ನು ಸಂಗ್ರಹಿಸಿರುತ್ತದೆ. 1911 ನೆ ಇಸವಿಯಲ್ಲಿ ಕಳೆದ ಘೋರ ಸಂಗ್ರಾಮದಲ್ಲಿ ಇದ್ದುದಕ್ಕಿಂತಲೂ ಈಗ ಅದರ ಶಕ್ತಿಯು ಬಹಳ ಹೆಚ್ಚಿರುತ್ತದೆ. ಜರ್ಮನಿಯು ಸಮಯವನ್ನು ಕಾಯುತ್ತಿದೆ. ದಿಗ್ಭ್ರಾಂತವಾದ ಪ್ರಪಂಚದಮೇಲೆ ತನ್ನ ಯುದ್ಧೋತ್ಸಾಹ ಪ್ರದರ್ಶನವನ್ನು ಜರ್ಮನಿಯು ಹಠಾತ್ತನೆ ಬೀರುತ್ತದೆ. ಈ ತಿಂಗಳ ಅಂತ್ಯದೊಳಗೆ ಜರ್ಮನಿಯಲ್ಲಿ ಹತ್ತು ಲಕ್ಷಕ್ಕಿಂತ ಹೆಚ್ಚಾದ ಸೇನಾ ಬಲವು ಹೆಚ್ಚಿಸಲ್ಪಡುತ್ತದೆ. ಆಧುನಿಕಕಾಲದಸಂಸ್ಕೃತವಾದ ಸಮಸ್ತ ಶಸ್ತ್ರಾಸ್ತ್ರಗಳೂ ಸಜ್ಜುಗೊಳಿಸಲ್ಪಡುತ್ತವೆ. ಜರ್ಮನಿಯಲ್ಲಿ ಈಗಾಗಲೇ 2000 ವಾಯು ವಿಮಾನಗಳು ಇರುತ್ತವೆ. ಹೀಗೆಂಬುದಾಗಿ ಸೀಸಲ್ ಪತ್ರಿಕೆಯ ವಿಶೇಷ ಬಾತ್ಮೀದಾರರು ಬರೆದಿದ್ದಾರೆ.

ಚೀನಾ—ಜಪಾನ್ ಸಂಬಂಧ.

ಚೀನಾದೇಶದಮೇಲೆ ಜಪಾನಿನವರು ದಾಳಿ ನಡೆಸಬಹುದೆಂಬ ನಿರೀಕ್ಷಣೆಯಿದೆ. ಅದನ್ನು ಎದುರಿಸಲು ಚೀನಾ ಸರ್ಕಾರದವರು ಸಿದ್ಧರಾಗುತ್ತಿರುವರು. ಚೀನದಲ್ಲಿರುವ 18 ರಿಂದ 45 ವರ್ಷ ವಯಸ್ಸಿನ ಎಲ್ಲಾ ಯುವಕರೂ ಬಲಾತ್ಕಾರವಾಗಿ ಸೈನಿಕ ಶಿಕ್ಷಣವನ್ನು ಪಡೆಯಬೇಕೆಂದು ಚೀನಾ ಸರಕಾರದವರು ವಿಧಾಯಕ ಮಾಡಿರುವರು.

ಮಕ್ಕಳ ತಾಯಿ ಮೆಟ್ರಿಕ್ಯುಲೇಷನ್ ವಿದ್ಯಾರ್ಥಿನಿ.

ಮೈಮೆನ್‌ಸಿಂಗ್ ಎಂಬಲ್ಲಿ ಈ ವರುಷದ ಮೆಟ್ರಿಕ್ಯುಲೇಷನ್ ಪರೀಕ್ಷೆಗೆ 6 ಮಕ್ಕಳತಾಯಿಯಾದ ವಿದ್ಯಾರ್ಥಿನಿಯೊಬ್ಬಳು ಉಮೇದುವಾರಳಾಗಿದ್ದಳು. ಪರೀಕ್ಷೆಯ ಮಧ್ಯೆ ಆಕೆಯು ಒಂದು ದಿನ ಪ್ರಸವಿಸಿದ್ದಳು. ಸ್ವಲ್ಪಕಾಲದಮೇಲೆ ಚೇತರಿಸಿಕೊಂಡು ಎದ್ದು ಪ್ರಶ್ನ ಪತ್ರಿಕೆಗೆ ಉತ್ತರಗಳನ್ನು ಬರೆದಳು.

ಸರ್ದಾರ್ ವಲ್ಲಭಾಯಿ ಪಟೇಲರು.



ಇನ್‌ಫ್ಲೂಯೆಂಜಾ ದಿಂದ ನರಳುತ್ತಿದ್ದು ಈಚೆಗೆ ಗುಣಮುಖರಾಗುತ್ತಿರುವರು.

ಸತ್ಕಾರ.

ಮೈಸೂರು ಹಿಂದೀಪ್ರಚಾರ ಸಭೆಯ ಪ್ರಚಾರಕರಾದ ಪಂ॥ ಹಿರಣ್ಮಯಜೀಯವರು ಹೆಚ್ಚಿನ ವಿದ್ಯಾಪಾಂಡಿತ್ಯವನ್ನು ಪಡೆಯಲು ಉತ್ತರದೇಶಕ್ಕೆ ಪ್ರಯಾಣ ಮಾಡುವರು. ಅವರಿಗೆ ಸತ್ಕಾರ ಮಾಡಲು ನಿನ್ನೆ ದಿನ ಮರಿಮಲ್ಲಪ್ಪಸ್ಕೂಲಿನಲ್ಲಿ ಶ್ರೀ॥ ಅಂಬಳೆ ಸುಬ್ರಹ್ಮಣ್ಯ ಅಯ್ಯರವರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು. ಉಪಾಹಾರ, ಫೋಟೋ ಮತ್ತು ಭಾಷಣಗಳಾದವು.

ವಿಶ್ವಕರ್ಮ ಜಯಂತಿ.

ರಾಜಧಾನಿಯ ವಿಶ್ವಕರ್ಮ ಸಮಾಜದವರು ಕಳೆದ ಮಂಗಳವಾರದಿಂದ ಶ್ರೀ ವಿಶ್ವಕರ್ಮ ಜಯಂತೀ ಮಹೋತ್ಸವವನ್ನು ವೈಭವದಿಂದ ಆಚರಿಸುತ್ತಿರುವರು. ಇದರಲ್ಲಿ ಅನೇಕ ಸ್ವಾರಸ್ಯವಾದ ಉಪನ್ಯಾಸಗಳೂ, ಹರಿಕಥೆ ಮತ್ತು ಸಂಗೀತ ಕಛೇರಿಗಳೂ ನಡೆಯುತ್ತಿವೆ. ಶಿಲ್ಪ ಕಲೆಯ ವಿಷಯವಾಗಿ ಶಿಲ್ಪ ಸಿದ್ಧಾಂತಿ ಶ್ರೀ ಸಿದ್ಧಲಿಂಗ ಸ್ವಾಮಿಗಳವರೂ ಶ್ರೀ ವರ್ಮಾ ಶಾಂತಿರಾಜ ಶಾಸ್ತ್ರಿಗಳವರೂ ಇತರ ಮಹನೀಯರುಗಳೂ ಭಾಷಣ ಮಾಡಿದರು.

ವಿಮಾನ ಮುರಿಯಿತು.

ಮೆಕ್ಸಿಕೋದಿಂದ ಬಂದಿರುವ ವರ್ತಮಾನದ ಪ್ರಕಾರ ಕಳೆದವಾರ ಒಂದು ವಿಮಾನವು ಮುರಿದುಬಿದ್ದು ಹತ್ತು ಜನ ಜರ್ಮನಿಯರೂ, ಇಬ್ಬರು ವಿಮಾನ ನಡೆಸುವವರೂ ಮತ್ತೊಬ್ಬನೂ ಮೃತರಾದರು.

ಹುಡುಗಿಯು ವ್ಯಭಿಚಾರಕ್ಕೆ ಅನುಮತಿ ಕೇಳಿದಳು.

ಜಮ್ನಾದಾಸಿ ಎಂಬುವಳೊಬ್ಬ ಹುಡುಗಿಯು ವ್ಯಭಿಚಾರವನ್ನು ನಡೆಸಲು ಅನುಮತಿಯನ್ನು ಕೇಳಿ ಬರ್ದವಾನಿನ ಕೋರ್ಟಿನಲ್ಲಿ ಅರ್ಜಿ ಹಾಕಿದಾಳೆ. ಅರ್ಜಿಯಲ್ಲಿ ಇನ್ನೂ ತಾನು ೨೦ ವರ್ಷದ ತರುಣಿಯೆಂದೂ, ನೋಡಿಕೊಳ್ಳಲೊಬ್ಬರೂ ಇಲ್ಲವೆಂದೂ, ತಿಳಿಸಿರುವಳು. ಒಬ್ಬ ತರುಣನು ಆವಳನ್ನು ಪುಸಲಾಯಿಸಿ, ರಕ್ಷಕರಿಂದ ಕರೆದುಕೊಂಡು ಬಂದು, ನಗರ ರಕ್ಷಕರಿಂದ ತಪ್ಪಿಸಿಕೊಳ್ಳಲು, ಕೋರ್ಟಿಗೆ ಅರ್ಜಿ ಹಾಕಿಸಿದನೆಂದು ವದಂತಿ. ಪೋಲೀಸಿನವರು ಎಚ್ಚರಿಕೆ ಇಂದಿದ್ದು, ಅವಳ ವ್ಯವಹಾರಗಳನ್ನು ಕೂಲಂಕಷವಾಗಿ ವಿಚಾರಿಸಲು ಅಧಿಕಾರಿಗಳು ಅಪ್ಪಣೆ ಮಾಡಿರುವರು.

ಪ್ರೇತದ ಭೇಟಿ.

ಸುರಿ ಗ್ರಾಮದ ಹತ್ತಿರವಿರುವ ಸಿಂಗೂರ್ ಎಂಬಲ್ಲಿಂದ ಒಂದು ವಿಚಿತ್ರ ಸುದ್ದಿಯು ಬಂದಿದೆ. ಮೊದಲನೆಯ ಹೆಂಡತಿಯ ಪ್ರೇತವು ಆಗಾಗ ಆದರಪೂರ್ವಕವಾಗಿ ಭೇಟಿಯನ್ನು ಕೊಡುವುದಂತೆ! ಇದು ನಡೆದಿರುವುದು ಬಾಬು ಕಮಲ ನಿರಂಜನ ಭಟ್ಟಾಚಾರ್ಯ ಎಂಬುವರ ಮನೆಯಲ್ಲಿ. ಇವರು ಪ್ರಮೀಳ ಎಂಬ ಮೊದಲನೇ ಭಾರ್ಯೆಯ ಮರಣಾನಂತರ, ಎರಡನೇ ಹೆಂಡತಿಯನ್ನು ಮದುವೆಯಾದರು. ಮನೆಯವರೆಲ್ಲರೂ ನಿದ್ರೆಯಲ್ಲಿದ್ದಾಗ, ಬಾಬುವಿನ ಎರಡನೇ ಹೆಂಡತಿಯು ಅಡಿಗೆ ಮನೆಯ ಬಾಗಿಲಿನಲ್ಲಿ ಒಂದು ವಿಚಿತ್ರ ಹೆಂಗಸನ್ನು ಕಂಡಳಂತೆ. ಯಾರೆಂದು ಪ್ರಶ್ನಿಸಲು "ನಾನು ಪ್ರಮೀಳ, ಮನೆಯಿರುವುದು ಮಧುರದಲ್ಲಿ, ಸ್ವಲ್ಪ ಹೊತ್ತು ಕುಳಿತುಕೊ, ಸ್ವಲ್ಪ ಮಾತನಾಡಬೇಕೆಂದಿರುವೆನು' ಎಂದಿತು. ಮನೆಯ ಆಡಳಿತ ವಿಚಾರದಲ್ಲಿ ಸಲಹೆಗಳನ್ನು ಕೊಟ್ಟು ಒಂದು ಕಬ್ಬಿಣದುಂಗುರವನ್ನು ಕೊಟ್ಟಿತು. ತರುವಾಯ ಐದು ನಿಮಿಷಾನಂತರ ಎರಡನೇ ಹೆಂಡತಿಯು ಅತ್ತೆಯನ್ನು ಕರೆಯಲೆತ್ನಿಸಿದಾಗ ಮಾಯವಾಯಿತು. ಮನೆಯವರೆಲ್ಲರೂ ಎಚ್ಚೆತ್ತರು. ಹುಡುಕಿದಾಗ ಅದು ಕುಳಿತಿದ್ದಲ್ಲಿ ಸ್ವಲ್ಪ ಕುಂಕುಮವೂ ಕಾಲಿನ ಗುರುತುಗಳೂ ಇದ್ದುವು. ಹಳ್ಳಿಯೆಲ್ಲಾ ಕೌತುಕವಾಗಿದೆ.

ಮೋಟಾರನ್ನು ನಿಲ್ಲಿಸುವುದು

ವೇಗದಿಂದಿರುವ ಮೋಟಾರನ್ನು ಕುತ್ತಿಗೆಯ ಬಲದಿಂದ ನಿಲ್ಲಿಸುವುದು, ಭಾರವಾದ ಮನುಷ್ಯನೊಬ್ಬನನ್ನು ಹಲ್ಲಿನಿಂದೆತ್ತುವುದು, ಮತ್ತು ಉಕ್ಕಿನ ಬೈಸಿಕಲ್ಲನ್ನು ಒಂದು ಬೆರಳಿನಿಂದ ಎತ್ತುವುದು ಇವು ಮ॥ ಜೆ. ಪಿ ಸಿನ್ಹ ಪೋಲೀಸ್ ಸಬ್ ಇನ್ಸ್‌ಪೆಕ್ಟರ್‌ರವರಿಂದ ರಾಂಚಿಯಲ್ಲಿ ಪ್ರದರ್ಶಿಸಲ್ಪಟ್ಟ ಸಾಹಸಗಳು. ಕಾರು ಡೆಪ್ಯುಟಿ ಮ್ಯಾಜಿಸ್ಟ್ರೇಟರಿಂದ ಬಿಡಲ್ಪಟ್ಟಿತು ಅದು ಐದು ಜನರು ಕೂರುವ ಮಾದರಿನ ಮೋಟಾರಾಗಿತ್ತು. ಸಿನ್ಹರವರು ಶಕ್ತಿನಿಂದ ಅವುಕಿದರೊಡನೆ ಮೋಟಾರು ಬಿಡಲ್ಪಟ್ಟಿತು. ತರುವಾಯ ೬ ಅಂಗುಲಗಳಷ್ಟು ಮುಂದೆ ಬಂದಿತು. ಪ್ರದರ್ಶನಕಾರರು ಶಕ್ತಿನಿಂದಲೇ ಹಿಂದಕ್ಕೆ ತಳ್ಳಿದರು. ಮ॥ ಸಿನ್ಹರವರು ಪ್ರಾಣಾಯಾಮದಿಂದ ತಮ್ಮ ಉಸಿರನ್ನು ಹಿಡಿದು ಪ್ರದರ್ಶನವನ್ನು ಮಾಡಿದರು.

ವಿಷ ಕುಡಿದು ಬದುಕಿದ ಕಥೆ.

ದಾಸಯ್ಯನ ಜಾಗಟೆ. (೪)

(ಜಿ. ವಿ. ಆರ್. ಒಂಟಿಕೊಪ್ಪಲ್.)

ದಾಸಯ್ಯ —ಎಂದಿನಂತೆ ಜಾಗಟೆ ಬಾರಿಸುತ್ತಾ ಹೊರಟನು ಶ್ರೀಮನ್ನಾರಾಯಣ ಗೋವಿಂದ ಗೋವಿಂದ

ನಾನು —ದಾಸಯ್ಯ ನೀನು ಹೇಳಿದ ಮೈಸೂರು ರಾಜರ ಕಥೆ ಚನ್ನಾಗಿತ್ತು

ದಾಸ—ಅಂತ ಕತೆಗೇನು ಬುದ್ಧಿ ? ಇನ್ನೂ ಎಷ್ಟೋ ಅವೇ ನಮ್ಮ ತಾತಯ್ಯನ ಕಡತದಲ್ಲಿ

ನಾನು —ಆದರೆ ಇನ್ನೊಂದು ಕಥೆ ಹೇಳು ನೋಡೋಣ

ದಾಸ—ವಿಸ ಕುಡಿದು ಬದೀಕ್ಕೊಂಡ ನಮ್ಮಪ್ಪನ ಕತೆ ಕೇಳಿದ್ದೀರಾ ಬುದ್ಧಿ ?

ನಾನು —ಅದ್ಯಾವದೋ ಆ ಕತೆ? ಎಲ್ಲಿ ಹೇಳು

ದಾಸ —(ಕಡತ ಹುಡುಕಿ ಕಾಗದ ತೆಗಮಕೊಟ್ಟನು) ಅದರಲ್ಲಿ ಹೀಗೆ ಬರೆದಿತ್ತು —

—ಎಲ್ಲಕ್ಕೂ ಮನಸ್ಸಿನ ಬಲವೇ ಕಾರಣ—

ಮೈಸೂರು ದೂರೆಗಳಲ್ಲಿ ರಾಜ ಒಡೆಯರು ತುಂಬ ಪ್ರಖ್ಯಾತಿ ಹೊಂದಿದ್ದರು ನಂಜುಂಡೇಶ್ವರನ ತೇರಿಗಾಗಿ ಒಂದು ಸಲ ನಂಜನಗೂಡಿಗೆ ಬಂದಿಳಿದಿದ್ದರು ಕಾರುಗಹಳ್ಳಿ ಪಾಳೇಗಾರ ವೀರ ರಾಜಯ್ಯನೆಂಬುವನು ತುಂಬ ದುರಹಂಕಾರಿಯಾಗಿ ತನ್ನ ಅಟ್ಟಹಾಸವನ್ನು ರಾಜಒಡೆಯರಿಗೆ ತೋರಿಸಿ ಅವಮಾನ ಮಾಡಬೇಕೆಂದೆಣಿಸಿ ಪಲ್ಲಕ್ಕಿಯಲ್ಲಿ ಕುಳಿತು ವಾದ್ಯ ವೈಖರಿಯಿಂದ ಅವರ ಮುಂದೆ ಬಂದನು ಇವನ ಅಹಂಕಾರವನ್ನು ಕಂಡು ರಾಜ ಒಡೆಯರ ಕಡೆಯ ವೀರರು ಸಹಿಸದೆ ಅವನನ್ನು ನೂಕಿ ಪರಿವಾರವನ್ನು ಬಡಿದು ಪಲ್ಲಕ್ಕಿಯನ್ನು ತೆಗೆದುಕೊಂಡುಹೋಗಿ ಅಪಮಾನಮಾಡಿದರು

ವೀರ ರಾಜಯ್ಯನು ಈ ಕೋಪವನ್ನು ಮನಸ್ಸಿನಲ್ಲಿಟ್ಟು ಸಮಯವನ್ನು ಕಾದು ಮೈಸೂರಿನ ಲಕ್ಷ್ಮೀರಮಣನ ದೇವಾಲಯದ ಅರ್ಚಕನನ್ನು ಒಳಗು ಮಾಡಿಕೊಂಡು ಅವನಿಗೆ ಬೇಕಾದಂತೆ ಲಂಚವನ್ನು ಕೊಟ್ಟು ರಾಜರಿಗೆ ವಿಷ ಹಾಕಿ ಕೊಲ್ಲಲು ಗೊತ್ತು ಮಾಡಿ ಕ್ರೂರ ವಿಷವನ್ನು ತಂದು ಕೊಟ್ಟನು

ಎಂದಿನಂತೆ ರಾಜರು ದೇವರ ಸಂದರ್ಶನಕ್ಕೆಂದು ದೇವಾಲಯಕ್ಕೆ ಬಂದರು ಅರ್ಚಕನಾದ ಶ್ರೀನಿವಾಸಯ್ಯನು ವಿಷವನ್ನು ತೀರ್ಥಕ್ಕೆ ಬೆರಿಕೆಮಾಡಿ ರಾಜರಿಗೆ ಕೊಡುವುದಕ್ಕಾಗಿ ಅವರೆದುರಿಗೆ ಬಂದನು ಮುಖವು ಸಪ್ಪೆಯಾಗಿತ್ತು ಮೈಯಲ್ಲಾ ಬೆವರುತ್ತಿತ್ತು ಕೈ ಕಾಲುಗಳು ಗಡಗಡನೆ ನಡುಗುತ್ತಿದ್ದವು ಅರ್ಚಕನ ಈ ವಿಧವಾದ ಸ್ಥಿತಿಯನ್ನು ನೋಡಿ ರಾಜರು ಆಶ್ಚರ್ಯದಿಂದ " ಏನಯ್ಯ ಹೀಗೇಕೆ ಭಯಗೊಂಡಿರುವೆ ಕಾರಣವೇನು ನಿಜವನ್ನು ಹೇಳು ಅಭಯವನ್ನು ಕೊಟ್ಟಿದ್ದೇನೆ " ಎಂದು ಹೇಳಿದರು ಅರ್ಚಕನಿಗೆ ದಿಕ್ಕೇ ತೋರದೆ ರಾಜರಿಗೆ ಕೈ ಮುಗಿದು " ಮಹಾ ಪ್ರಭು. ನಾನು ಲಂಚಕ್ಕೆ ಆಸೆ ಬಿದ್ದು ತಮಗೆ ವಿಷ ಕೊಡಲು ಬಂದಿದೇನೆ. ನನ್ನ ಅಪರಾಧವನ್ನು ಕ್ಷಮಿಸಿ " ಎಂದನು ರಾಜರು ನಿ[illegible]ಜಾಂಶವನ್ನು ಹೇಳು ಎಂದು ಕೇಳಲು ಅರ್ಚಕನು " ದೇವಾ. ಕಾರುಗಹಳ್ಳಿ ವೀರ ರಾಜಯ್ಯನಿಗೆ ತಾವು ಅಪಮಾನಮಾಡಿದಿರಂತೆ ಅವರ ಕೋಪವನ್ನು ತೀರಿಸಿಕೊಳ್ಳಲು ವೀರರಾಜಯ್ಯನು ನನಗೆ ತುಂಬ ದ್ರವ್ಯದ ಆಸೆ ಹುಟ್ಟಿಸಿ ವಿಷವನ್ನು ತಂದು ಕೊಟ್ಟು ನಿಮಗೆ ಕೊಡಲು ಹೇಳಿದನು ನಾನು ಆ ವಿಷವನ್ನು ದೇವರ ತೀರ್ಥಕ್ಕೆ ಬೆರಸಿ ತಂದಿದೇನೆ ಇದೇ ನಿಶ್ಚಯಾಂಶ ಕ್ಷಮಿಸಬೇಕು ಪ್ರಭು " ಎಂದನು

ರಾಜ—ಏನಯ್ಯ ನೀನು ಈಗ ಯಾರಾಗಿದ್ದೀ ?

ಅರ್ಚ —ನಾನು ಲಕ್ಷ್ಮೀರಮಣಸ್ವಾಮಿಯ ಅರ್ಚಕನಾಗಿದೇನೆ

ರಾಜ —ಈ ಬಟ್ಟಲನ್ನು ಏನೆಂದು ತಂದಿರುತ್ತೀ ?

ಅರ್ಚ;—ದೇವರ ತೀರ್ಥದ ಬಟ್ಟಲೆಂದು ತಂದಿದೇನೆ

ರಾಜ —ನನಗೆ ಏನೆಂದು ಹೇಳಿಕೊಡುತ್ತಿ ?

ಅರ್ಚಕ —ಲಕ್ಷ್ಮೀರಮಣನ ತೀರ್ಥವೆಂದು ಹೇಳಿ ಕೊಡುತ್ತೇನೆ.

ರಾಜ —ಎಲ್ಲಿ ಹಾಕು ಲಕ್ಷ್ಮೀರಮಣನ ತೀರ್ಥವನ್ನು

ಅರ್ಚಕ —(ಮೂರು ಉದ್ಧರಣೆ ತೀರ್ಥವನ್ನು ಮಹಾರಾಜರ ಕೈಗೆ ಹಾಕಿದನು)

[ಅಬ್ಬಾ ಅದು ಘೋರ ವಿಷ ಮಿಶ್ರವಾದದ್ದು]

ರಾಜ —ಲಕ್ಷ್ಮೀರಮಣ, ಇದು ನಿನ್ನ ತೀರ್ಥ (ಎಂದು ಹೇಳಿ ಕುಡಿದೇ ಬಿಟ್ಟರು)

ಅರ್ಚಕನು ಇನ್ನೇನು ಗತಿಯೆಂದು ನಡುಗಿದನು. ರಾಜರು ಅರಮನೆಗೆ ಒಂದು ಬಿಟ್ಟರು ಎಂದಿನಂತೆಯೇ ಇದಾರೆ ವೀರ ರಾಜಯ್ಯನನ್ನು ಹಿಡಿತರಿಸಿ ಕಿವಿ ಮೂಗನ್ನು ಕೊಯಿಸಿ ದೇಶದಿಂದ ಓಡಿಸಿ ಬಿಟ್ಟರು ಅವನ ಸ್ವತ್ತನ್ನು ದೇವರಿಗೆ ಅರ್ಪಿಸಿದರು ಕಾರುಗಹಳ್ಳಿ ಕೋಟೆಯನ್ನೊಡೆಸಿ ನೆಲ ಸಮ ಮಾಡಿ ಹರಳು ಬಿತ್ತಿಸಿದರು ಅರ್ಚಕ ಶ್ರೀನಿವಾಸನನ್ನು ಲಕ್ಷ್ಮೀರಮಣನ ದೇವಾಲಯದಿಂದ ಬಿಡಿಸಿ ಕನ್ನಂಬಾಡಿ ಗೋಪಾಲಕೃಷ್ಣ ದೇವಾಲಯಕ್ಕೆ ಕಳುಹಿಸಿಬಿಟ್ಟರು

ರಾಜ ಒಡೆಯರ ಮನೋ ನಿಶ್ಚಯವು ಎಂತಹ ಅಸಾಧಾರಣವಾದದ್ದು ! ಅಬ್ಬ ಪುಣ್ಯಶಾಲಿ

ನಾನು —ದಾಸಯ್ಯ ಎಂತೆಂತಹ ಮಹಾ ಮಹಿಮರಿದ್ದರು, ನಮ್ಮ ಮೈಸೂರು ದೊರೆಗಳ ಗುಂಪಿನಲ್ಲಿ

ದಾಸ— ಇದ್ದದ್ದೂ ನಿಜ ಈಗ ಇರುತ್ತಿರುವದೂ ನಿಜ ಮುಂದೆ ಇರುವದೂ ನಿಜ ಬುದ್ಧಿ. ನಮ್ಮ ರಾಜವಂಶವೇನು ಸಾಮಾನ್ಯವೆ ? ಬನ್ನಿ ಬರೋ ಸೋಮವಾರ

ರೈತರ ಕಷ್ಟಪರಿಹಾರ.

(ಲೇಖಕರು:—ಮ|| ಎಲ್. ಚನ್ನಪ್ಪಯ್ಯನವರು, ಹದಿನಾರು.)

ರೈತರಿಗಿರುವ ಎಲ್ಲಾ ತೊಂದರೆಗಳಲ್ಲಿ ಸಾಲದ ತೊಂದರೆಯಂತೂ ಮಿತಿಮೀರಿರುತ್ತೆ ಇಂದು ರೈತನಾಗಿದ್ದವನು ನಾಳೆ ಜೀತಗಾರನಾಗುವ ಸ್ಥಿತಿಯೊದಗಿ ಕೆಡುತ್ತಿರುವುದನ್ನು ಅರಿಯದವರಾರು? ಆದರಿಂದಲೇ ನಮ್ಮ ಘನ ಸರ್ಕಾರದವರು ವ್ಯವಸಾಯಗಾರರ ಪರಿಹಾರದ ಕಾನೂನುಗಳನ್ನು ನಮುಯವರಿತು ಜಾರಿಗೆ ತಂದು ಸಾಹುಕಾರರ ದಾಂಧಲೆಗೊಂದು ತಡೆ ಗಟ್ಟಿದ್ದು ಅಭಿನಂದನೀಯವಾಗಿರುತ್ತೆ

ಆದರೇನು? ಕೋರ್ಟಿನ ನ್ಯಾಯಾಧೀಶರೂ ಕೊಂಚ ವಿಶಾಲ ಹೃದಯರಾಗಿ ನೆರಳಿಗೆ ಕೊಡೆ ಹಿಡಿಯದಿದ್ದಲ್ಲಿ ರೈತನ ಹಿತವು ಚೆನ್ನಾಗಿ ಸಾಧಿಸಿ ಬದುಕಲು ಅವಕಾಶವಾಗುತ್ತೆ ಸಾಲಗಾರನು ಕಾಲಗತಿಯಿಂದ ನಂಬಿಕೆಯನ್ನು ಕಳೆದುಕೊಂಡವನಾಗುತ್ತಾನೆ ಸಾಹುಕಾರನು ಯತ್ನವಿಲ್ಲದೆ ದಾವಾ ಮಾಡುತ್ತಾನೆ ವಿವಾದಾನಂತರ ಕೆಲವು ವಾಯಿದಾನಿಸಿ ಡಿಕ್ರಿಯಾಗುತ್ತೆ ಇದರಿಂದಾದ ರೈತನ ಹಿತಸಾಧನೆಯು ಅಷ್ಟರಲ್ಲೇ ಇದೆ

ನಂಬಿಕೆಯು ಜಗತ್ತಿನ ಜೀವನಾಧಾರ ಇದು ಸಾಲದ ಕೆಟ್ಟಚಾಳಿಯಿಂದ ನಾಶವಾಗುತ್ತೆಂಬುದು ನಿರ್ವಿವಾದವಾಗಿದೆ ಕುಟುಂಬಕ್ಕೆ ಬರುವ ವರಮಾನವು ತೆರಿಗೆ, ಗೃಹಕೃತ್ಯ ಇದಕ್ಕೆ ಆಗಿ ಸಾಲಕ್ಕೆ ಕೊಡುವಷ್ಟು ಉಳಿಯುವುದಂತೂ ಅಪರೂಪ ಮುಂದೆ ಡಿಕ್ರಿದಾರರಿಗೇನು ಕೊಡಬೇಕು? ಮಾರ್ಗವಿಲ್ಲ ಕೋರ್ಟಿನವರ ವಾಯಿದೆಯನ್ನು ಮೀರಿ ನಂಬಿಕೆ ಹೋಗಲು ಅವಕಾಶವಾಗಿ, ಕುಟುಂಬದ ಜೀವನಾಧಾರವೂ, ಪಿತ್ರಾರ್ಜಿತವೂ ಆದ ಭಾರಿ ಬೆಲೆಯ ಸ್ವತ್ತುಗಳನ್ನು ಅಲ್ಪಬೆಲೆಗೆ ಕಳೆದುಕೊಂಡು ರೈತನು ಭಿಕಾರಿಯಾಗುತ್ತಾನೆ ರಿಲೀಫಿನ ಸಹಾಯವು ನಿಧಾನವಾಗಿ ಸಾಹುಕಾರನಿಗೇ ದೊರೆಯುತ್ತೆ ಅಂದರೆ ಡಿಕ್ರಿ ಹೋಲ್ಡರು ತನ್ನ ಕಷ್ಟಾರ್ಜಿತ ಹಣವನ್ನು ಕಳೆದುಕೊಳ್ಳಬೇಕೆಂಬುದು ನನ್ನ ಉದ್ದೇಶವಲ್ಲ ಆತನಿಗೂ ಪ್ರಯೋಜನವಾಗಬೇಕು ರೈತನೂ ಬದುಕಬೇಕು ಹಾಗೊಂದು ಏರ್ಪಾಡು ನಡೆಯುವದು ಅವಶ್ಯಕ

ಸಾಲಗಾರನಿಗೆ ಇತರ ಸಹಾಯ ಒದಗದೆ ಉತ್ತಮ ಜಮೀನುಗಳು ಬೆಲೆ ಬಾಳುತ್ತಿದ್ದರೂ, ವ್ಯರ್ಥವಾಗಿ ಕಡಮೆ ಅಂದಾಜಾಹಾಕಿ ಹರಾಜು ಮಾಡಿಸುವ ಪದ್ಧತಿಯಿಂದ ತೀರ ಸಾಲಗಾರನ, ಮುಳುಗಿ ಹೋಗುತ್ತಾನೆ ಹೀಗೆ ನಿರ್ದಯರಾದ ಕೆಲವು ಲೇವಾದೇವಸ್ಥರ ಕಾಟಕ್ಕೆ ಸಿಕ್ಕಿ, ದಮ್ಮಯ್ಯ, ಕೋರ್ಟಿಗೆ ಹೋಗಬೇಡಿ. ಹಣಕೊಡಲು ನಮಗೆ ಮಾರ್ಗವಿಲ್ಲ ನಿಮ್ಮ ಹಣಕ್ಕೆ ಆಗುವಷ್ಟು ಜಮೀನುಗಳನ್ನು ಕೊಡುತ್ತೇವೆ ರಿಯಾಯಿತಿ ಮಾಡಿಕೊಳ್ಳೋಣ ಎಂದರೆ ನಮಗೆ ಜಮೀನು ಬೇಡ ಹಣವೇಬೇಕು ಎಂದು ಹೇಳಿ ರಿಯಾಯಿತಿ ಮೀರಿ ಕೋರ್ಟಿಗೆ ದಾವಾ ಮಾಡಿ ದಾಂಧಲೆ ಮಾಡುವ ಸಾಹುಕಾರರುಗಳನ್ನೂ, ಇವರ ಹಾವಳಿಗೆ ಸಿಕ್ಕಿ ನಾಶವಾಗುವ ಕುಟುಂಬಗಳನ್ನೂ ದಿನಚರಿ ಎಷ್ಟೋ ನೋಡಬಹುದಾಗಿದೆ ದಯಾಪರರಾದ ಕೆಲವರು ರಿಯಾಯಿತಿ ತೋರಿಸಿ ಕೋರ್ಟಿಗೆ ಹೋಗದೆ ರೈತನ ಸ್ಥಿತಿಯರಿತು ಸ್ಥಳವಿದ್ಯಮಾನಗಳನ್ನನುಸರಿಸಿ ತಮ್ಮ ಹಣಕ್ಕೆ ತಕ್ಕಷ್ಟು ಜಮೀನನ್ನೇ ಕಟ್ಟಿಕೊಂಡು ತಾವೂ ತಮಲ್ಲಿ ಸಾಲಮಾಡಿದ ಕುಟುಂಬವೂ ಸುಖವಾಗಿರಲು ಅವಕಾಶ ಮಾಡಿಕೊಂಡಿರುವುದನ್ನೂ ನಿತ್ಯಗಟ್ಟಲೆ ಕಾಣುತ್ತಲೇ ಇದ್ದೇವೆ

ಈ ಸಂದರ್ಭದಲ್ಲಿ, ಸಾಹುಕಾರರು ದಾವಾ ಮಾಡುವಾಗಲೇ, ತಮ್ಮ ಆಧಾರ ಸ್ವತ್ತುಗಳ ಬೆಲೆಯ ಅಂದಾಜನ್ನು ತಯಾರಿಸಿ ದಾವಾ ಕೊಡುವಂತೆಯೂ ಸಾಲಗಾರನು ಈ ವಿಷಯದ ತನ್ನ ತಕರಾರನ್ನು ಕೋರ್ಟಿಗೆ ತರುವಂತೆಯೂ, ಈ ಇಬ್ಬರ ವಿವಾದವನ್ನೂ, ಸ್ಥಳವಿದ್ಯಮಾನವನ್ನನುಸರಿಸಿ ಮೊಕದ್ದಮಾ ಸಂದರ್ಭಾನುಸಾರದ ಜಮೀನು ಬೆಲೆಯನ್ನು ನಿರ್ಧರಿಸಿ, ಡಿಕ್ರೀ ಮಾಡಿದಲ್ಲಿ ಪ್ರತಿ ವಾದಿಯ ಅಶ್ರದ್ಧೆಯಿಂದ ಮುಂದೆ ಭಾರಿ ಬೆಲೆಯ ಸ್ವತ್ತುಗಳು ಅಲ್ಪ ಬೆಲೆಗೆ ವಾದಿಗೆ ಸೇರಿ ಆಗಾಗ್ಗೆ ಜಾರಿಕ್ರಮದಲ್ಲಿ ಬರುವ ಸುಳ್ಳು ತಕರಾರಿಗೆ ಅವಕಾಶವಿಲ್ಲದೆ ಸಾಲಗಾರರಾದ ರೈತ ಕುಟುಂಬವು ಋಣ ಮುಕ್ತರಾಗಿ ಉಳಿಯುವಷ್ಟರಲ್ಲಿ ಮುಂದಿನವರಾದರೂ ಬದುಕುವುದಕ್ಕೂ, ಸಾಹುಕಾರನೂ ಸಹ ತನ್ನ ಹಣವನ್ನು ಹಾಳುಮಾಡಿಕೊಳ್ಳದೆ ತನ್ನ ಹಣಕ್ಕೆ ತಕ್ಕಷ್ಟು ಸ್ವತ್ತುಗಳನ್ನು ಪಡೆದು ಕೋರ್ಟಿಗೆ ಅಲೆಯುವ ತೊಂದರೆಯಿಂದ ಮುಕ್ತನಾಗುವುದಕ್ಕೂ ಅವಕಾಶ ವಾಗುತ್ತೆಂಬುದು ಒಂದು ಸಣ್ಣ ಸಲಹೆ ನನಗೆ ತೋರಿ ಬಂದ ಅನುಭವದ ವಿಷಯ ಇದನ್ನು ಮಹಾಶಯರ ಮುಂದಿಟ್ಟಿದೇನೆ ಇದನ್ನು ಖಾಸಗೀ ದೊಡ್ಡ ಮನುಷ್ಯರೂ ಯೋಚಿಸಿ, ರೈತರ ಹಿತವು ಇದರಿಂದ ಸಾಧಿಸುವಂತಿದ್ದರೆ ಸರ್ಕಾರದ ಗಮನಕ್ಕೆ ತಂದು ಕಾನೂನು ಮಾಡಿ ಜಾಗ್ರತೆ ಜಾರಿಗೆ ಬರುವಂತೆ ಮಾಡಿದಲ್ಲಿ ಲೋಕ ಕಲ್ಯಾಣವು ಚೆನ್ನಾಗಿ ಸಾಧಿಸಿ ಮುಂದಿನ ಬಹು ಕಷ್ಟಗಳು ತಪ್ಪುವಂತೆಮಾಡಿ ಕೀರ್ತಿಶೇಷರಾಗುವರೆಂದು ಅರಿಕೆ

ಹುಡುಗ —ವೈಯಾಕರಣ ಖಸೂಚಿ ಎನ್ನುವ ಪದಕ್ಕೆ ಅರ್ಥವೇನು ?

ಸ್ನೇಹಿತ —ವೈಯಾರವಾಗಿ ಯಾವನ ಕೈಯಿಂದ ಕಸೂಟಿಕೆಲಸಮಾಡುತ್ತಾನೊ ಅವನಿಗೆ ವೈಯಾಕರಣ ಖಸೂಚಿ ಎಂದ ಹೆಸರು

ಹುಡುಗ-ಭಲಾರೆ! ಯಾರು ಹೇಳಿಕೊಟ್ಟರೋ ನಿನಗ ?

ಸ್ನೇಹಿತ-ಬಾಯಿ ಮುಚ್ಕೊಳ್ಳು

ಉಪಾಧ್ಯಾಯ —ಅವಮಾನ ಎನುವುದು ಯಾವ ಸಮಾಸವೊ?

ಹುಡುಗ — ಅವನ+ಮಾನ-ಅವನ ನ ಷಷ್ಠಿ ತತ್ಪುರುಷಸಮಾಸ

ವಿಶ್ವವಿದ್ಯಾಲಯದ ಸೆನೆಟ್.

ಕಳೆದ ಗುರುವಾರ ಮೈಸೂರು ವಿಶ್ವವಿದ್ಯಾಲಯದ ಸೆನೆಟ್ ಮೀಟಿಂಗು ಮೈಸೂರಿನಲ್ಲಿ ನಡೆಯಿತು ಹೊಸ ವೈಸ್ ಛಾನ್ಸಲರಾದ ಶ್ರೀ॥ ಎನ್. ಎಸ್. ಸುಬ್ಬರಾಯರು ಅಗ್ರಾಸನವನ್ನು ವಹಿಸಿದ್ದರು. ಶ್ರೀ॥ ಸುಬ್ಬರಾಯರಿಗೆ ಹೊಸ ಪದವಿ ದೊರೆತುದಕ್ಕಾಗಿ ಶ್ರೀ॥ ಎಂ. ರಾಮಚಂದ್ರರಾಯರು ಅವರನ್ನು ಅಭಿನಂದಿಸಿದರು ಮಿ॥ ರೋಲೋರವರು ಬಜೆಟ್ಟನ್ನು ಸೂಚಿಸಿದರು ಅನೇಕರು ಭಾಷಣಗಳನ್ನು ಮಾಡಿದರು

ಶಾಸನ ಇಲಾಖೆಯ ಕಾರ್ಯಕ್ರಮಗಳ ಮೇಲೆ ಮಿ॥ ಮರುಳಪ್ಪನವರು ಬಹಳ ನಾಟಕೀಯ ಟೀಕೆಯನ್ನು ಮಾಡಿದರು ಚಂದ್ರವಳ್ಳಿಯ ಶೋಧನೆಗಳಿಂದ ಏನೂ ಪ್ರಯೋಜನವಿಲ್ಲವೆಂದು ಅವರು ಹೇಳಿದರು ವರದಿಗಳೆಲ್ಲ ಉತ್ಪ್ರೇಕ್ಷೆಯೆಂದು ತಿಳಿಸಿದರು. ಇದಕ್ಕೆ ಡಾ॥ ಕೃಷ್ಣಾರವರು ಉತ್ತರ ವಿತ್ತರು. ಚಂದ್ರವಳ್ಳಿ ಶೋಧನೆಯ ವಿಷಯದಲ್ಲಿ ಏನೂ ಮೋಸವಿಲ್ಲವೆಂದೂ, ಅದನ್ನು ಅನೇಕ ಜನ ಪ್ರಾಜ್ಞರು ಒಪ್ಪಿರುವುದಾಗಿಯೂ ತಿಳಿಸಿದರು ಇದರ ಮೇಲೆ ಮಿ॥ ಮರುಳಪ್ಪನವರು ತಮ್ಮ ಮಾತುಗಳನ್ನು ವಾಪಸು ತೆಗೆದುಕೊಂಡರು

ಶಾಸನ ಇಲಾಖಾ ಅಧಿಕಾರಿಗಳೇ ಚರಿತ್ರೆಯ ಅಧ್ಯಾಪಕರಾಗಿರುವದ್ದರಿಂದ ಅವರು ತಮ್ಮ ಕೆಲಸಕ್ಕೆ ಸರಿಯಾದ ಗಮನ ಕೊಡುವುದಿಲ್ಲವೆಂದೂ ಸೂಚಿಸಲ್ಪಟ್ಟಿತು ಕೆಲವು ವಿದ್ಯಾರ್ಥಿಗಳು ಹೀಗೆ ಹೇಳಿದರೆಂದು ಮಿ॥ ಸಿದ್ದಯ್ಯನವರು ಹೇಳಿದರು ವಿಶ್ವವಿದ್ಯಾಲಯದ ಬಜೆಟ್ಟು ಅಂಗೀಕರಿಸಲ್ಪಟ್ಟು ಸಭೆ ಮುಗಿಯಿತು.

ಒಬ್ಬ ತರುಣಿಯ ಗಾಢ ನಿದ್ರೆ.

ಚಿಕಾಗೋವಿನಲ್ಲಿ ಒಬ್ಬಳು ಸುಂದರಳಾದ ತರುಣಿಯು 5 ವರ್ಷಗಳಿಂದಲೂ ನಿದ್ದೆ ಮಾಡುತ್ತಲೇ ಇದ್ದಾಳೆ 1932 ನೇ ಇಸವಿ 5 ನೇ ತಾರೀಕು ನಿದ್ದೆಗೆ ಶುರು ಮಾಡಿದ ಇವಳು ಇನ್ನೂ ಎದ್ದಿಲ್ಲ ಪತಿಯು ಪ್ರತಿವಾರವೂ ಬಂದು ಹೋಗುವನು ಡಾಕ್ಟರುಗಳು ಎದ್ದರೂ ಏಳಬಹುದು ಇಲ್ಲವೇ ಎಂದೆಂದಿಗೂ ಹೀಗೆಯೇ ಮಲಗಿರಲೂಬಹುದು ಎಂದು ಹೇಳಿದರು.

ಸುಭಾಷರು ಹಿಂತಿರುಗುವರು-

ಸುಭಾಷ ಚಂದ್ರಬೋಸರು ಸರ್ಕಾರದ ದಸ್ತಗಿರಿ ಮಾಡುವುದಾಗಿ ಎಚ್ಚರಿಕೆ ಕೊಟ್ಟಿದ್ದರೂ ಸಹ ಲಕ್ಷಿಸದೆ ಇಂಡಿಯಾಕ್ಕೆ ಹಿಂತಿರುಗಲು ನಿಶ್ಚಯಿಸಿರುವುದಾಗಿ ಕೇಬಲ್ ಮೂಲಕ ತಿಳಿಸಿರುವರು. ಅವರು ವಿಮಾನದ ಮೂಲಕ ಬರುವರು.

ಮೂರು ಮಕ್ಕಳ ಜನನ.

ಹಿರ್ಗಹಳ್ಳಿ ತಾ॥ ಹುಲ್ಲತ್ತಿ ಗ್ರಾಮದ ಕಳೆದ ವಾರ ನಾಮಧಾರಿ ಹೆಂಗಸೊಬ್ಬಳು ಮೂರು ಮಕ್ಕಳನ್ನು ಹೆತ್ತಳು. ಮೊದಲನೆ ಎರಡು ಮಕ್ಕಳು ಕೂಡಲೇ ಸತ್ತು ಹೋದವು ಮೂರನೆಯದಾದ ಹೆಣ್ಣು ಮಗು ಬದುಕಿದೆ.

ಆಕಾಶವಾಣಿ ಕಾರ್ಯಕ್ರಮ.

31 ಮಂಗಳವಾರ 6-30 ರಿಂದ 7-45 ಕರ್ನಾಟಕ ಗಾನ ಕನ್ನಡದ ಕಥೆಗಳನ್ನು ಓದುವುದು. ಮಿ॥ ಎ ಎಸ್ ವೆಂಕಟಸುಬ್ಬರಾಯರಿಂದ 1 ಬುಧವಾರ 8-30 ರಿಂದ 9 45 ವಿವಿಧ ವಿನೋದಗಳು 2ನೇ ಗುರುವಾರ 6 30 ರಿಂದ 7-45 ಕನ್ನಡ ನಾಟಕ "ಲಂಕಾದಹನ" ಉಪನ್ಯಾಸ, ಶ್ರೀಮತಿ ಎ. ಕಸ್ತೂರಿಯವರು "ಓಟು" 3ನೇ ಶುಕ್ರವಾರ 8 30 ರಿಂದ 9-45 ಹಿಂದೂಸ್ಥಾನೀ ಸಂಗೀತ, ಶ್ರೀ॥ ಜಿ ಹನುಮಂತರಾಯರ ಭಾಷಣ "ದಾನದ ಉದ್ದೇಶ."

ನೋಟುಗಳಲ್ಲಿ ಕ್ರಿಮಿಗಳಿವೆಯೆ?

ನೋಟುಗಳಲ್ಲಿಯೂ ಮತ್ತು ನಾಣ್ಯಗಳಲ್ಲಿಯೂ ಸಾವಿರಾರು ಕ್ರಿಮಿಗಳಿವೆಯೆಂದು ಸಕೋನ ಪೇಕಿಯಾದ ಒಬ್ಬ ವಿಜ್ಞಾನಶಾಸ್ತ್ರಜ್ಞನು ಕಂಡು ಹಿಡಿದಿರುವನು. ವಿವಿಧ ನಾಣ್ಯಗಳ ಮೇಲೆಲ್ಲಾ ಪ್ರಯೋಗ ನಡೆಸಿ, ಬೆಳ್ಳಿಯ ಮೇಲೆ ಕ್ರಿಮಿಗಳು ವಿಶೇಷವಾಗಿಲ್ಲವೆಂದೂ, ತಾಮ್ರ ಅಥವಾ ಕಂಚಿನ ಮೇಲೆ ಹೇರಳವಾಗಿರುವುವೆಂದೂ ಹೇಳುವನು. ಆದರೆ ನಾಣ್ಯಗಳ ಮೇಲಿರುವ ಕ್ರಿಮಿಗಳು ಅಪಾಯಕರವಲ್ಲ ಕರೆನ್ಸಿ ನೋಟುಗಳ ಮೇಲೆ, ನಾಣ್ಯಗಳ ಎರಡರಷ್ಟು, ಮೂರರಷ್ಟು ಕ್ರಿಮಿಗಳಿವೆಯೆಂದೂ, ಹೆಚ್ಚು ಅಪಾಯಕರವೂ ಆಗಿವೆಯೆಂದೂ ಹೇಳುತ್ತಾನೆ

ಆಕಾಶದಲ್ಲಿ ಕಣ್ಣಿಗೆ ಕಾಣದ ಗೋಡೆ.

ಶತ್ರುಗಳಿಂದ ಬ್ರಿಟನ್ನನ್ನು ವಿಮಾನಧಾಳಿಯಿಂದ ರಕ್ಷಿಸಲು, ಆಕಾಶದಲ್ಲಿ ಕಣ್ಣಿಗೆ ಕಾಣದ ಗೋಡೆಯೊಂದನ್ನು ಅಡ್ಮಿರಲ್ ಸರ್ ರೋಗರ್ ಕೀಸ್ ಎಂಬುವರೊಬ್ಬರು ಕಂಡು ಹಿಡಿದಿರುವರು. ಬ್ರಿಟನ್ನಿನ ಸುತ್ತಲೂ ಅದೃಶ್ಯವಾಗುವ ಗೋಡೆಯೊಂದನ್ನು ನಿರ್ಮಿಸಿ, ಪರೀಕ್ಷಿಸಲೋಸುಗ ಮೇಲಿನಿಂದ ಧಾಳಿ ನಡೆಸಿದರು. ಆದರೆ ಧಾಳಿಯಿಂದೇನೂ ನಡೆಯಲಿಲ್ಲ. ಯಾವ ಬಗೆಯ ಧಾಳಿಯನ್ನಾದರೂ ತಡೆಯಬಲ್ಲದೆಂದು, ಇದನ್ನು ಕಂಡು ಹಿಡಿದವರು ಹೇಳುವರು. ಆದರೆ ಸಂಕುಚಿತ ಮನಸ್ಸರೂ, ಸಿರಾಶಾವಾದಿಗಳೂ ಆದ ಕೆಲವರಿಂದ ಇದನ್ನು ಜಾರಿಗೆ ತರುವುದು ಕಷ್ಟವೆಂದು ಡೇಲಿ ಹೆರಾಲ್ಡ ಪತ್ರಿಕೆಯು ತಿಳಿಸುತ್ತದೆ ಇನ್ನು ಅಂತರಿಕ್ಷದಲ್ಲಿ ಬಂಗಲೆಯನ್ನೂ ಕಟ್ಟುವುದೊಂದೇ ಬಾಕಿ

ಶ್ರೀ ರಘುವೀರ ಸಮರ್ಥ.

ಸೇವಕನು ಈ ಮೈಸೂರು ಸಂಸ್ಥಾನದಲ್ಲಿ ಒಂದು ಸಾವಿರಾರು ಇಪ್ಪತ್ತೆರಡು ವರ್ಷಗಳಿಂದವನು. ಹತ್ತು ವರ್ಷಗಳ ಹಿಂದೆ ತಮ್ಮಗಳ ಉದಾರಾಶ್ರಯದಿಂದ ಮೈಸೂರು ಯುವರಾಜ ಮೊಹಲ್ಲಾ ಸುಬ್ಬರಾಯನ ಕೆರೆಯ ಈಶಾನ್ಯ ಭಾಗದಲ್ಲಿ ಶ್ರೀ ರಾಮಚಂದ್ರ ದೇವರ ದೇವಸ್ಥಾನ ಪ್ರತಿಷ್ಠಾದಿ ಕಾರ್ಯಗಳನ್ನು ನೆರವೇರಿಸಲಾಯಿತು. ಈಗ ವಾಣೀವಿಲಾಸ ಮೊಹಲ್ಲಾದಲ್ಲಿ ಶ್ರೀ ಪ್ರಾಣದೇವರ ದೇವಸ್ಥಾನವನ್ನು ಕಟ್ಟಿಸಿ ಪುನಃ ಪ್ರತಿಷ್ಠಾಪನೆ ನಡೆಸಲು ಶ್ರೀ ಹರಿವಾಯುಗಳ ಪ್ರೇರಣೆಯಿಂದ ನಿಶ್ಚಯಿಸಿರುತ್ತದೆ. ಮತ್ತು ಕಟ್ಟಡದ ಕೆಲಸವು ಉಪಕ್ರಮವಾಗಿದೆ ತಾವುಗಳು ಸ್ವಹಸ್ತ ಪರಹಸ್ತಗಳಿಂದ ಉದಾರವಾಗಿ ಸಹಾಯ ಮಾಡಬೇಕೆಂದು ವಿನಯದಿಂದ ಬೇಡುತ್ತೇನೆ

ಸೈದ ರಾಬಾದ್ ರಾಮದಾಸ್.

ವೈಶ್ಯರ ಧರ್ಮ ಸಹಾಯ.

ನಂಜನಗೂಡಿನಲ್ಲಿ ತಾ॥ 3-4-1936 ನೆ ಶುಕ್ರವಾರದಲ್ಲು ನಡೆಯುವ ಶ್ರೀಕಂಠೇಶ್ವರ ಸ್ವಾಮಿಯವರ ಕಂಚ ರಥೋತ್ಸವಕ್ಕೆ ಪರಸ್ಥಳದಿಂದಬರುವ ಆರ್ಯ ವೈಶ್ಯ ಮಹಾಜನಗಳಿಗೆ ಆ ದಿವಸದ ಊಟಾದ್ಯುಪಚಾರ 3 ದಿವಸಗಳು ವಾರವೋಲಾಗಿ ನಡೆಯುತ್ತಿದ್ದ ಸಂತರ್ಪಣೆಗಾಗಿ ಮೈಸೂರು ಮೊದ್ದ ಛೇಟಿಯಸ್ತರುದ ಮಿ॥ ರಾ॥ ಚೌಧ್ರಿ ಶ್ರೀ ಕಂಠಶೆಟ್ಟರು ಮತ್ತು ಇವರ ಕುಟುಂಬ ಶ್ರೀಮತಿ ಬಂಗಾರಮ್ಮನವರು ಸಹಾ ನಂಜನಗೂಡು ಶ್ರೀಮತ್ ಕನ್ಯಾಕಾಪರಮೇಶ್ವರಿ ಅಮ್ಮನವರ ದೇವಸ್ಥಾನದ ಟ್ರಸ್ಟಿಗಳಿಗೆ, ಪುದುವಟ್ಟು ಆಗಿ, ಒಂದು ಕಟ್ಟಡವನ್ನು ಕೆಗೆದುಕೊಟ್ಟು ಅದರ ಹುಟ್ಟುವಳಿಇಂದ ಮೇಲ್ಕಂಡ ಧರ್ಮಕಾರ್ಯವು ಸಾರ್ವಕಾಲಿಕವಾಗಿ ನಡೆಸಲು ಏರ್ಪಾಡು ಮಾಡಿರುವ ಇವರ ಉದಾರ ಗುಣವು ಸ್ತೋತ್ರಾರ್ಹವಾಗಿರುತ್ತೆ.

ಗಾಂಧಿಜಿಯವರಿಗೆ ಹೊಸ ತಾಯಿ, ಬೇರ ಮಗ!

ಸವಾಲಿಯಲ್ಲಿ ನೂಲುವ ಸ್ಪರ್ಧೆಯಲ್ಲಿ ವಿಜಯಿಗಳಾದವರಿಗೆ ಬಹುಮಾನ ವಿನಿಯೋಗ ಸಮಾರಂಭದಲ್ಲಿ ಗಾಂಧಿಜಿಯವರು ಬಹಳ ಉಲ್ಲಾಸದಿಂದ ಕಾಲವನ್ನು ಕಳೆದರು ಒಬ್ಬಳು ಭಾರವಾದ ಒಡವೆಗಳನ್ನು ಧರಿಸಿದ್ದಳು ಅವಳನ್ನು ಕಂಡು "ಇವುಗಳು ನಿನ್ನ ಶರೀರದ ಮೇಲಿಲ್ಲದಿದ್ದರೆ ಇನ್ನೂ ಚೆನ್ನಾಗಿ ನೂಲಲಾಗುತ್ತಿರಲಿಲ್ಲವೇ? ಎಂದು ಪ್ರಶ್ನಿಸಿದರು. ಮುಸಿನಗೆ ನಕ್ಕಳು "ನೋಡು, ಕೊಳೆ ಎಷ್ಟಿರುವುದು. ಇಷ್ಟು ಕೊಳೆಯಿರುವಲ್ಲಿ ಅದು ಆಭರಣ ಹೇಗಾದೀತು?" ಎಂದರು ವಿಜಯಿಗಳಲ್ಲಿ ಮುದುಕಿಯೊಬ್ಬಳಿದ್ದಳು. "ನೀನು ನನ್ನ ತಾಯಿಯಂತಿರುವೆ' ಎಂದರು. ಗಾಂಧಿಯವರು ದತ್ತೊಬ್ಬ ಯುವಕನನ್ನು ತೋರಿಸುತ್ತಾ' ನನ್ನ ಸುಗನಾಗಿರುವೆಯಾ? ನನಗೆ ಒಬ್ಬ ಕುಡುಕ ಮಗನಿರುವುದು ನಿನಗೆ ಗೊತ್ತೇ? ನೀನು ಕುಡಿಯುವೆಯೇನು?" ಎಂದರು. 'ಇಲ್ಲ' ಎಂದು ಆ ಮುದಕನು ಉತ್ತರವಿತ್ತನು. "ನೀನು ಸೇದುವೆಯೋ"? "ಇಲ್ಲ' ಎಂದನು "ಖಾದಿ ಧರಿಸುವೆಯಾ?" "ನಿಜವಾಗಿಯೂ'" "ಹಾಗಾದರೆ ನೀನು ನನ್ನ ಪುತ್ರನಾಗಲು ಅರ್ಹನಾಗಿರುವೆ" ಎಂದು ಬಾಪುಜಿಯವರು ನಕ್ಕರು.

ಅಂತರಿಕ್ಷದಲ್ಲಿ ಚಲಿಸದೆ ನಿಲ್ಲುವ ವಿಮಾನ.

ಇಸಾಕ್ ಜಾನುವಿ ಎಂಬೊಬ್ಬ ತರುಣ ಇಂಜನೀಯರು, ಹೊಸ ವಿಮಾನವೊಂದನ್ನು ಕಂಡು ಹಿಡಿದಿದ್ದಾನೆ. ಇದು ನೇರವಾಗಿ ಅಂತರಿಕ್ಷಕ್ಕೆ ಹತ್ತಬಲ್ಲದು. ಮತ್ತು ಇಳಿಯಬಲ್ಲದು ಬಾನಿನಲ್ಲೇ ಎಷ್ಟು ಕಾಲವಾದರೂ ಚಲಿಸದೆ ನಿಂತಿರಬಲ್ಲದು ವಿಮಾನ ನಿಲ್ದಾಣವು ಕೈಲ್ಫ ಫ್ಲೇರ್ ಫ್ಲಾಟ್ ಫಾರಮ್ಮಿನಷ್ಟು ಸಾಕಂತೆ. ಇವರೀ ಹೊಸಬಗೆಯ ವಿಮಾನವು ಚತುರರಿಂದ ಪರೀಕ್ಷಿಸಲ್ಪಟ್ಟಿರುತ್ತದೆ

ಸಾಧ್ವಿ

೩೦-೩-೩೬ ನೇ ಸೋಮವಾರ

ಗಳಿಳನೇ ಕಲಮಿನ ಸದು ಪಯೋಗ.

ಸಾರ್ವಜನಿಕ ಕಾರ್ಯಕ್ರಮಗಳನ್ನು ಅಧಿಕಾರಿಗಳು ಪಟ್ಟಾಳಿಕೆಯಿಂದ ನಿರ್ಬಂಧಿಸುವ ಪದ್ಧತಿಯನ್ನು ನಾವು ಒಪ್ಪುವುದಿಲ್ಲ. ಅನೇಕ ವೇಳೆ ಇಂತಹ ನಿರ್ಬಂಧಗಳು ಅಪ್ರಸಂಗವಾದ ರೀತಿಯಲ್ಲಿಯೇ ಹಾಕಲ್ಪಟ್ಟಿವೆ. ಶಾಂತಿಭಂಗವೆಂಬ ನೆಪದಿಂದ ಮ್ಯಾಜಿಸ್ಟ್ರೇಟರುಗಳು ಕ್ರಿಮಿನಲ್ ಪ್ರೊಸೀಜರ್ ಕೋಡಿನ ಗಳಿಳ ಮತ್ತು ಪೊಲೀಸ್ ಕಾನೂನಿನ ೩೦ನೇ ಕಲಮುಗಳನ್ನು ಲೆಕ್ಕವಿಲ್ಲದಷ್ಟು ಸಾರಿ ಜಾರಿ ಮಾಡಿರುತ್ತಾರೆ. ಸಹಜವಾದ ಮತ್ತು ಶಾಂತಿಯುತವಾದ ಅನೇಕ ಕಾರ್ಯಕ್ರಮಗಳನ್ನು ಪ್ರತಿಬಂಧಿಸಿರುತ್ತಾರೆ. ಈ ಕಲಮುಗಳು ರಾಜಕೀಯ ಪ್ರಸಂಗಗಳಲ್ಲಂತೂ ಅನಾವಶ್ಯಕವಾಗಿಯೂ ಅನುಚಿತವಾಗಿಯೂ ಜಾರಿಯಾಗುವುದೇ ಹೆಚ್ಚು. ಆದರೆ ಕಳೆದ ೨೪ನೇ ತಾ॥ ಚಾಮರಾಜನಗರದ ತಾ॥ ಭೋಗಾಪುರದಲ್ಲಿ ಗಳಿಳನೇ ಕಲಮಿನ ಪ್ರಯೋಗವಾಯಿತು. ಕ್ರೈಸ್ತ ಉಪದೇಶಿಗಳು ಆದಿ ಕರ್ನಾಟಕರ ಭಾವಿಗೆ ತೊಂದರೆ ಕೊಡುತ್ತಾರೆಂಬ ಕಾರಣದ ಮೇಲೆ ಅವರುಗಳಿಗೆ ಈ ನಿರ್ಬಂಧವು ಹಾಕಲ್ಪಟ್ಟಿತು. ವಸ್ತುತಃ ಅವರುಗಳಿಂದ ಅಲ್ಲಿ ಶಾಂತಿಭಂಗವಾಗುವ ಸಂದರ್ಭವಿರುವುದೆಂದು ಖಚಿತವಾಗಿತ್ತು. ಆದ್ದರಿಂದ ಈ ಸಮಯದಲ್ಲಿ ಈ ಕಾನೂನನ್ನು ಜಾರಿ ಮಾಡಿದ್ದಕ್ಕಾಗಿ ನಾವು ಅಧಿಕಾರಿಗಳನ್ನು ಅಭಿನಂದಿಸಬೇಕಾಗಿದೆ.

ಕ್ರೈಸ್ತರ ಗುರುಗಳೊಬ್ಬರು ನಮ್ಮ ಸರ್ಕಾರದ ಅಧಿಕಾರಿಗಳನ್ನೂ ಸಹ ನಿರ್ಲಕ್ಷಿಸಿ ಮೇಲ್ಕಂಡ ಭೋಗಾಪುರದ ಸಮಸ್ಯೆಯನ್ನು ತಾವು ಬಗೆಹರಿಸಿಯೇ ತೀರುವುದಾಗಿಯೂ, ಅಧಿಕಾರಿಗಳು ತಮ್ಮ ಸಹಾಯವನ್ನು ಕೋರಿದರೆ ಅಗತ್ಯವಾಗಿ ಈ ಪ್ರಶ್ನೆಯನ್ನು ತೀರ್ಮಾನ ಮಾಡುವುದಾಗಿಯೂ ಹೇಳಿಕೊಂಡಿದ್ದರು. ಇವರ ಮೇಲೆ ಹಲವು ಕ್ರೈಸ್ತ ಉಪದೇಶಿಗಳು ಬಹಳವಾಗಿ ಮೆರೆಯುತ್ತಿದ್ದರು. ಈ ಅಂಶಗಳನ್ನು ಚಾಮರಾಜನಗರದ ಅಮಲ್ದಾರ್ ಮ್ಯಾಜಿಸ್ಟ್ರೇಟರವರು ಸರಿಯಾಗಿ ಅರಿತು ಶಾಂತಿಭಂಗಮಾಡಬಹುದಾದವರಿಗೆ ತಕ್ಕ ಬಂದೋಬಸ್ತನ್ನು ಮಾಡಿದರು.

ಇದುವರೆಗೆ ರಾಷ್ಟ್ರೀಯ ಕೆಲಸಗಾರರಿಗೇ ಇಂತಹ ನಿರ್ಬಂಧಗಳು ಹಾಕಲ್ಪಡುತ್ತಿದ್ದವು. ಕ್ರೈಸ್ತ ಪಾದ್ರಿಗಳಿಗೂ ಉಪದೇಶಿಗಳಿಗೂ ಹಾಕಲ್ಪಡುತ್ತಿರಲಿಲ್ಲ. ಹೀಗೆ ಒಂದುಸಾರಿಯಾದರೂ ಗಳಿಳನೇ ಕಲಮು ಉಚಿತವಾದ ರೀತಿಯಲ್ಲಿ ಹಾಕಲ್ಪಟ್ಟದ್ದು ಈ ಕಾನೂನಿನ ಸಾರ್ಥಕ್ಯವನ್ನು ಸೂಚಿಸುತ್ತದೆ. ಇನ್ನು ಮುಂದೆಯೂ ಇಂತಹ ನಿರ್ಬಂಧಗಳನ್ನು ಹಾಕುವಾಗ ಅಧಿಕಾರಿಗಳು ನಿಷ್ಪಕ್ಷಪಾತ ದೃಷ್ಟಿಯಿಂದಲೂ ಪ್ರಜಾ ಸೌಕರ್ಯದ ದೃಷ್ಟಿಯಿಂದಲೂ ವರ್ತಿಸುವರೆಂದು ಆಶಿಸಲಾಗಿದೆ.

ಕೋರ್ಟುಗಳ ಕೊರತೆ.

ನಮ್ಮ ಸಂಸ್ಥಾನದ ಅನೇಕ ಕೋರ್ಟುಗಳಲ್ಲಿ ಇಸ್ತಿಹಾರ್ ವಗೈರೆ ಫಾರಂಗಳಿಲ್ಲದೆ ಮೊಕದ್ದಮೆಗಳು ಮುಂದುವರಿಯಲು ಬಹಳ ಅನನುಕೂಲವಾಗುವೆಯೆಂಬುದು ತಿಳಿದುಬಂದಿದೆ. ಈ ಫಾರಂಗಳು ಅನೇಕಕಡೆ ಅನೇಕ ತಿಂಗಳುಗಳಿಂದ ಇರುವುದಿಲ್ಲ. ಕೈನಲ್ಲಿ ಎಲ್ಲವನ್ನು ಬರೆದು ಮುಗಿಸಲು ಸಾಧ್ಯವಿಲ್ಲ. ಈ ಕಾರಣಗಳಿಂದ ಮೊಖದ್ದಮೆಗಳು ತಿಂಗಳುಗಟ್ಟಲೆ ಮುಂದುವರಿಯುತ್ತಿವೆಯೆಂದು ಗೊತ್ತಾಗಿದೆ. ಈ ಫಾರಂಗಳು ಗೌರ್ನಮೆಂಟ್ ಪ್ರೆಸ್ಸಿನಲ್ಲಿಯೂ ಸಹ ಸಾಕಾದಷ್ಟು ಅಚ್ಚು ಹಾಕಿಸಲ್ಪಟ್ಟಿಲ್ಲವೆಂದು ಹೇಳಲಾಗಿದೆ

ಅಲ್ಲದೆ ಕೆಲವು ಕೋರ್ಟುಗಳಲ್ಲಿ ಸಾಕಾದಷ್ಟು ಸ್ಟೇಷನರೀ (ಕಾಗದ ವಗೈರೆಗಳು) ಸರಬರಾಜಿಲ್ಲದೆ ಜಡ್ಜಿಗಳು ತೊಂದರೆಪಡುತ್ತಿರುವರಂತೆ. ಒಂದೆರಡು ಸಂದರ್ಭಗಳಲ್ಲಿ ಲಾಯರುಗಳೇ ತಮ್ಮ ಕಾಗದಗಳನ್ನು ಕೊಟ್ಟು ತಮಗೆ ಅವಶ್ಯಕವಾದ ಅಂಶಗಳನ್ನು ಬರೆಸಿಕೊಂಡುಹೋದರೆಂದೂ ತಿಳಿದುಬಂದಿದೆ. ಕೋರ್ಟುಗಳಿಂದ ನಮ್ಮ ದೇಶದಲ್ಲಿ ವಿಶೇಷವಾಗಿ ಹುಟ್ಟುವಳಿಯು ಆಗುತ್ತಿದೆ. ಹೀಗಿರುವಲ್ಲಿ ಇಂಥಹ ಸ್ಥಳಗಳಲ್ಲಿಯೇ ಮೇಲ್ಕಂಡ ಕೊರತೆಗಳಿರಲು ಅವಕಾಶವಾಗಿರುವುದು ಅತ್ಯಂತ ಶೋಚನೀಯ.

ಸನ್ಮಾನ

ಸರ್ ಪುಟ್ಟಣ್ಣಚೆಟ್ಟರಿಗೆ ಪುರಜನರ ಪರವಾಗಿ ಸನ್ಮಾನ ಮಾಡಲು ಮೈಸೂರು ಮಹಾರಾಜರ ಕಾಲೇಜಿನ ಅಂಗಳದಲ್ಲಿ ಕಳೆದ ಬುಧವಾರ ಒಂದು ಸಂತೋಷಕೂಟವು ನಡೆಯಿತು. ಆಹ್ವಾನಿತರಾದ ಅನೇಕ ಜನ ಮಹನೀಯರೂ ಮಹಿಳೆಯರೂ ಬಂದಿದ್ದರು. ಉಪಾಹಾರವೂ ಸಂಗೀತವೂ ನಡೆದವು.

ಸಹಾಯಾರ್ಥ ನಾಟಕ.

ಮೈಸೂರು ಕರ್ನಾಟಕ ಕಲಾಭ್ಯುದಯ ನಾಟಕ ಮಂಡಲಿಯವರು ಏಪ್ರಿಲ್ ೩ನೇ ಬುಧವಾರ ರಾತ್ರಿ ಟೌನಹಾಲಿನಲ್ಲಿ "ಸಿಭಾಗ್ಯ ಭಾರತಿ" ಎಂಬ ನಾಟಕವನ್ನಾಡಿ ಕೃಷ್ಣಮೂರ್ತಿಪುರದ ಶ್ರೀರಾಮ ಮಂದಿರಕ್ಕೆ ಉತ್ಪತ್ತಿಯನ್ನು ಕೊಡುವರೆಂದು ತಿಳಿದುಬರುತ್ತದೆ.

ಮೈಸೂರು ವಿಮಾ ಕಂಪೆನಿ.

ಮೇಲ್ಕಂಡ ವಿಮಾ ಕಂಪೆನಿಯ ವಾರ್ಷಿಕ ವರದಿಯಿಂದ ಈ ಕೆಳಗಿನ ಅಂಶಗಳು ಗೊತ್ತಾಗುತ್ತವೆ. ಇಷ್ಟು ಅಲ್ಪಕಾಲದಲ್ಲಿ ಕಂಪೆನಿಯು ಹೊಂದಿರತಕ್ಕ ಪ್ರಗತಿಯು ಅಭಿನಂದನಾರ್ಹವೇ ಸರಿ:—

ಮೈಸೂರು ವಿಮಾ ಭಾಸ್ಕರನುದಿಸಿ ಇಂದಿಗೆ ವರುಷವೆರಡು ಕಳೆಯಿತು. ಆವನು ಮೊದಲಿಗಿಂತಲೂ ಇಂದು ಹೆಚ್ಚು ಪ್ರಕಾಶದಿಂದ ಬೆಳಗುತ್ತಿದ್ದಾನೆ. ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದೆಂಬಂತೆ ಕಂಪೆನಿಯು ವಯಸ್ಸಿನಲ್ಲಿ ಚಿಕ್ಕದಾದರೂ ದೊಡ್ಡದಕ್ಕೆ ದೊಡ್ಡದಾದ ಫಲವಿತ್ತಿದೆ. ಶೀಘ್ರದಲ್ಲಿಯೇ ಕಂಪೆನಿಯು ರಚನಾಕಾರ್ಯವು ಸಂಸ್ಥಾನದ ಎಲ್ಲೆಡೆಗಳಲ್ಲಿಯೂ ಹರಡುವುದೆಂಬ ನಿರೀಕ್ಷಣೆ ಇದೆ. ಕಂಪೆನಿಯು ಕಳೆದ ವಾರ್ಷಿಕ ಸಭೆಯಲ್ಲಿ ಹೊರಹೊಮ್ಮಿದ ಆಶಾಸುಧೆಗಳು ಇಂದು ರೂಪುಗೊಳ್ಳುತ್ತಲಿವೆ. ನಮ್ಮ ಮುಂದಿನ ವಾರ್ಷಿಕ ವರದಿಯ ವೇಳೆಗೆ ಈ ಕಂಪೆನಿಯು ಒಂದು ಅಖಿಲಭಾರತ ಸಂಸ್ಥೆಯಾಗಿ ರಾರಾಜಿಸುವುದೆಂಬ ನಂಬಿಕೆಯು ನಮಗಿದೆ.

ಸರ್ ಪುಟ್ಟಣ್ಣಚೆಟ್ಟಿಯವರಿಗೆ ಗೌರವ.

ಬೆಂಗಳೂರಿನ ಮಾನ್ಯ ಗೃಹಸ್ಥರಾದ ಸರ್ ಕೆ. ಪಿ. ಪುಟ್ಟಣ್ಣಚೆಟ್ಟಿಯವರಿಗೆ ಡಾಕ್ಟರೇಟ್ ಪದವಿಯನ್ನು ಕೊಡಲು ಕಳೆದ ಬುಧವಾರ ಬೆಳಿಗ್ಗೆ ಇಲ್ಲಿನ ಜಗನ್ಮೋಹನ ಭವನದಲ್ಲಿ ವಿಶ್ವವಿದ್ಯಾಲಯದ ವಿಶೇಷ ಸಮಾರಂಭೋತ್ಸವವು ಜರುಗಿತು. ಶ್ರೀಮನ್ಮಹಾರಾಜರವರು ಅಗ್ರಾಸನವನ್ನು ವಹಿಸಿದ್ದರು. ಸಾವಿರಾರುಜನ ದೊಡ್ಡ ಮನುಷ್ಯರೂ ಮಹಿಳೆಯರೂ ವಿದ್ಯಾರ್ಥಿಗಳೂ ಬಂದಿದ್ದರು. ಶ್ರೀಮನ್ಮಹಾರಾಜರವರು ಸಕಲ ಮರ್ಯಾದೆಗಳೊಡನೆ ಬಿಜಯಮಾಡಿಸಿದರು. ವಿಶ್ವವಿದ್ಯಾಲಯದ ಅಧಿಕಾರಿಗಳೂ ಸೆನೆಟ್ ಸದಸ್ಯರೂ ಅವರಿಗೆ ಸ್ವಾಗತವನ್ನು ಬಯಸಿದರು.

ಆರಂಭದಲ್ಲಿ ವಿಶ್ವವಿದ್ಯಾಲಯದ ಈಗಿನ ವೈಸ್‌ಛಾನ್ಸಲರಾದ ಶ್ರೀ॥ ಎ. ಎಸ್. ಸುಬ್ಬರಾಯರು ಸಣ್ಣ ಭಾಷಣವನ್ನು ಮಾಡಿ ಸರ್ ಚೆಟ್ಟರ ಅಪೂರ್ವವಾದ ಗುಣಗಳನ್ನು ವರ್ಣಿಸಿದರು. ಅವರು ವಿಶ್ವವಿದ್ಯಾಲಯದ ಮನ್ನಣೆಗೆ ಪಾತ್ರರೆಂದು ತಿಳಿಸಿದರು. ಶ್ರೀಮನ್ಮಹಾರಾಜರು ಸರ್ ಪುಟ್ಟಣ್ಣಚೆಟ್ಟರಿಗೆ ಗೌರವದ "ಡಾಕ್ಟರ್ ಆಫ್ ಲಾಸ್" ಎಂಬ ಪ್ರಶಸ್ತಿಯನ್ನು ಅನುಗ್ರಹಿಸಿದರು. ಸರ್ ಚೆಟ್ಟರವರು ಸಮಯೋಚಿತ ವಾಕ್ಯಗಳಿಂದ ಕೂಡಿದ ಭಾಷಣ ಮಾಡಿ ವಿಶ್ವವಿದ್ಯಾಲಯದವರಿಗೂ ಶ್ರೀಮನ್ಮಹಾರಾಜರಿಗೂ ತಮ್ಮ ಕೃತಜ್ಞತೆಯನ್ನು ಸೂಚಿಸಿದರು. ಅನಂತರ ಸಮಾರಂಭವು ಮುಕ್ತಾಯವಾಯಿತು.

ವಿಮಾನದ ತಯಾರಿ.

ಬೆಂಗಳೂರು ಇಂಡಿಯನ್ ಇನ್ಸ್‌ಟಿಟ್ಯೂಟ್ ಆಫ್ ಸೈಯನ್ಸಿನ ಪ್ರೊಫೆಸರಾದ ಕೆ. ಆರ್ಸರ್ಕರ್ ಎಂಬುವರು ಇಂಡಿಯಾದಲ್ಲಿಯೇ ಒಂದು ಸೀಟರ್ ಏರೋಪ್ಲೇನನ್ನು ಭಾರತೀಯ ಸಾಮಗ್ರಿಗಳಿಂದಲೇ ಮಾಡಲು ಯತ್ನಿಸುತ್ತಿದ್ದಾರೆ.

ಭೋಗಾಪುರದಲ್ಲಿ ಗಳಿಳನೇ ಕಲಮಿನ ಪ್ರಯೋಗ.

ಚಾಮರಾಜನಗರದ ತಾ॥ ಭೋಗಾಪುರದಲ್ಲಿ ಹರಿಜನರ ಭಾವಿಯ ವಿಷಯದಲ್ಲಿ ಕ್ರೈಸ್ತ ಉಪದೇಶಿಗಳೂ ಅವರ ಕಡೆಯವರೂ ಆಟಂಕ ಪಡಿಸುವರೆಂದು ತಿಳಿದು ಬಂದುದರ ಮೇಲೆ ಅಮಲ್ದಾರ್ ಮ್ಯಾಜಿಸ್ಟ್ರೇಟರು ಕ್ರಿಮಿನಲ್ ಪ್ರೊಸೀಜರ್ ಕೋಡಿನ ಗಳಿಳನೇ ಕಲಮನ್ನು ಪ್ರಯೋಗಿಸಿದರು. ಅದರಲ್ಲಿ ಈ ಕೆಳಗೆ ಕಂಡಂತೆ ನಿರೂಪಿಸಿದಾರೆ—

ಚಾಮರಾಜನಗರದ ತಾ॥ ಪೊಲೀಸ್ ಇನ್ಸ್‌ಪೆಕ್ಟರ ವರದಿಯನ್ನು ಓದಲಾಯಿತು. ಈ ತಾಲ್ಲೂಕಿನ ಕೆಸ್ತೂರು ಹೋಬಳಿ ಭೋಗಾಪುರದ ಆದಿ ಕರ್ನಾಟಕರು ತಮ್ಮ ಭಾವಿಯಲ್ಲಿ ಗಂಗಾ ಪೂಜೆಯನ್ನು ಮಾಡುವ ಸಂದರ್ಭದಲ್ಲಿ ಈ ತಿಂಗಳು ೨೪ನೇ ತಾ॥ ಶಾಂತಿಭಂಗವುಂಟಾಗಬಹುದೆಂದು ನನಗೆ ತಿಳಿದುಬಂದಿದೆ. ಆದ್ದರಿಂದ ಗಳಿಳನೇ ಕಲಮಿನ ಪ್ರಕಾರ ಈ ಕೆಳಗೆ ಕಂಡಂತೆ ಅಪ್ಪಣೆ ಮಾಡಿದ್ದೇನೆ—ಡೇರಿಯಲ್ ಮಗ ಮಿತ್ರಯ್ಯ, ದಾಸಯ್ಯನ ಮಗ ಗುರುದಾಸಯ್ಯ, ದೊಡ್ಡ ನಂಜನ ಮಗ ಸಂಜೀವಯ್ಯ, ಬಸವಯ್ಯನ ಮಗ ಪ್ರಸಾದಯ್ಯ, ಚನ್ನನ ಮಗ ಸ್ವಾಮಿದಾಸ್, ಉಪದೇಶಿ ಪ್ರಭಾಕರಗಿ, ಕೆಸ್ತೂರು ಉಪದೇಶಿ ಯೇಸುದಾಸ್ ಇವರುಗಳೂ ಇತರ ಕೆಲವು ಕ್ರೈಸ್ತರೂ, ೨೪ನೇ ತಾ॥ ಭೋಗಾಪುರದಲ್ಲಿರುವ ಆದಿ ಕರ್ನಾಟಕರ ಭಾವಿಯ ಬಳಿ ಸೇರುತ್ತಾರೆಂತಲೂ ಹೀಗೆ ಅವರ ಗುಂಪು ಸೇರುವುದರಿಂದ ಕೋಮವಾರು ಕಲಹಕ್ಕೆ ಆಸ್ಪದವಾಗುವುದೆಂದೂ ತಿಳಿದು ಬಂದಿರುವುದರಿಂದ ಮೇಲ್ಕಂಡವರನ್ನೂ ಅವರ ಅನುಯಾಯಿಗಳನ್ನೂ ಈ ಮೂಲಕ ನಿರ್ಬಂಧಪಡಿಸಿರುವುದೇನೆಂದರೆ—ಅವರುಗಳು ಸದರಿ ಬಾವಿಯಬಳಿ ಸೇರಕೂಡದು. ಬಾವಿಯಲ್ಲಿ ನೀರು ತೆಗೆದುಕೊಳ್ಳಲು ಪ್ರಯತ್ನಿಸಕೂಡದು. ಮತ್ತು ಜಾತಿಭೇದಗಳನ್ನು ಉಂಟುಮಾಡುವ ರೀತಿಯಲ್ಲಿ ಪ್ರವರ್ತಿಸಕೂಡದು. ಈ ಅಪ್ಪಣೆಯು ಇನ್ನು ಎರಡು ತಿಂಗಳ ಕಾಲ ಜಾರಿಯಲ್ಲಿರುತ್ತದೆ.

ಅಶಕ್ತಾಶ್ರಮ.

ರಾಜಧಾನಿಯ ಕೃಷ್ಣರಾಜೇಂದ್ರ ಮಾರ್ಕೆಟ್ಟಿಯಲ್ಲಿ ಮದ್ರಾಸ್ ಪ್ರಿಮಿಯರ್ ಇನ್ಷೂರೆನ್ಸ್ ಕಂಪೆನಿಯವರು ಅಶಕ್ತರ ಪೋಷಣೆಗಾಗಿ ಮೇಲ್ಕಂಡ ಆಶ್ರಮವನ್ನು ಸ್ಥಾಪಿಸಿರುತ್ತಾರೆ. ಪ್ರತಿ ನಿತ್ಯವೂ ಐವತ್ತು ಜನಗಳವರೆಗೆ ಆಹಾರವನ್ನು ಹೊಂದುತ್ತಿರುವರು. ಇವರ ಸಂಖ್ಯೆಯು ದಿನೇ ದಿನೇ ಹೆಚ್ಚುತ್ತಿರುವುದು. ಇದಕ್ಕೆ ಮಹಾಜನರು ಉದಾರವಾಗಿ ಸಹಾಯ ಮಾಡಬೇಕೆಂದು ಕೋರಲ್ಪಟ್ಟಿದೆ.

ಖೈದಿ ಸಿಕ್ಕಿದನು.

ಕೆಲವು ದಿನಗಳ ಹಿಂದೆ ಸೆಂಟ್ರಲ್ ಜೈಲಿನಿಂದ ಪರಾರಿಯಾಗಿದ್ದ ವೈದ್ಯಲಿಂಗಂ ಎಂಬುವನು ಸೇಲಂಜಿಲ್ಲೆಯಲ್ಲಿ ಸಿಕ್ಕಿಬಿದ್ದನು. ಇವನನ್ನು ಸೆಂಟ್ರಲ್ ಜೈಲಿಗೆ ರಿಮ್ಯಾಂಡ್ ಮಾಡಿರುವುದಾಗಿ ಗೊತ್ತಾಗಿದೆ.

ವರ್ತಮಾನ ಸಂಗ್ರಹ

ಅಮಲ್ದಾರರಿಗೆ ಹೊಡೆತ.

ಹೆಗ್ಗಡದೇವನಕೋಟೆ ಅಮಲ್ದಾರರಾಗಿದ್ದ ಮ|| ಗೋಪಾಲಸ್ವಾಮಿ ನಾಯಕರು ಕಳೆದ ವರ್ಷ ಮಾರ್ಚಿ ತಿಂಗಳಿನಲ್ಲಿ ಕಂದಾಯದ ವಸೂಲಿಗಾಗಿ ಹೋಗಿದ್ದಾಗ ಕೆಲವು ಜನ ಹೆಂಗಸರೂ, ಗಂಡಸರೂ ಅವರನ್ನು ದಾರಿಯಲ್ಲಿ ಹಿಡಿದು ಹೊಡೆದರೆಂಬ ಆಪಾದನೆಯ ಮೇಲೆ ಇಲ್ಲಿನ ಮೊದಲನೇ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಮೊಕದ್ದಮೆ ನಡೆಯುತ್ತಿತ್ತು. ಇದನ್ನು ವಿಚಾರಿಸಿ ಮ್ಯಾಜಿಸ್ಟ್ರೇಟರು ಕಳೆದ 24ನೇ ತಾ|| ತೀರ್ಪಿತ್ತು ಆಪಾದಿತರಿಗೆ ಶಿಕ್ಷೆಯನ್ನು ವಿಧಿಸಿದರು. ಒಬ್ಬ ಅಪರಾಧಿಯು ಈ ಮಧ್ಯೆ ಮೃತಪಟ್ಟಿದ್ದನು. ಇನ್ನು 3 ಜನರಿಗೆ ಖುಲಾಸೆಯಾಯಿತು. ಈ ಕೆಳಗೆ ಆಪಾದಿತರ ಹೆಸರುಗಳನ್ನು ಕೊಡಲಾಗಿದೆ — ಮಾದಪ್ಪ ಉರುಫ್ ದೊಡ್ಡತಮ್ಮ, ಕೆಂಚಯ್ಯ, ಚಿಕ್ಕಮಾಯಿಗೌಡ, ಚಿಕ್ಕೇಗೌಡ, ನಿಂಗೇಗೌಡ, ಮರೀಗೌಡ, ಪುಟ್ಟಸ್ವಾಮಯ್ಯ, ಭೋಜಯ್ಯ, ದೇವಯ್ಯ, ಪುಟ್ಟಮ್ಮ ಉರುಫ್ ಸಂಜಮ್ಮ, ಮಾದಮ್ಮ, ಬಸಂಬಿ, ಕಾಳಪುಟ್ಟಮ್ಮ ಮತ್ತು ಬಸವೇಗೌಡ. 5, 6, 14ನೇ ಆಪಾದಿತರುಗಳಿಗೆ ಖುಲಾಸೆಯಾಯಿತು. 9ನೇ ಆಪಾದಿತನಾದ ದೇವಯ್ಯನಿಗೆ ಎರಡು ವರ್ಷ ಕಠಿಣ ಸಜಾ ಮತ್ತು 600 ರೂ ಜುಲ್ಮಾನೆ ತಪ್ಪಿದರೆ ಮತ್ತೆರಡು ವರ್ಷ ಕಠಿಣ ಸಜಾ ವಿಧಿಸಲಾಯಿತು ಉಳಿದವರೆಲ್ಲರಿಗೂ 1 ವರ್ಷ ಕಠಿಣ ಸಜಾ, 400 ರೂ. ಜುಲ್ಮಾನೆ ವಿಧಿಸಲಾಯಿತು

ಕಪ್ಪೆ ಕಾಲುಗಳ ಬೆಲೆ.

ಕಪ್ಪೆಗಳ ಕಾಲುಗಳನ್ನು ಕೇಳುವವರ ಸಂಖ್ಯೆ ಜಾಸ್ತಿಯಾಗುತ್ತಿದೆ. ಅಮೇರಿಕಾ ಸಂಸ್ಥಾನದಲ್ಲಿ ಜನಾನುರಾಗವನ್ನು ಬಹಳವಾಗಿ ಇವು ಪಡೆಯುತ್ತಿವೆ ಒಂದು ಕಪ್ಪೆ ೨ ಶಿಲಿಂಗು ೬ ಪೆನ್ನಿಗಳು. ಒಂದು ವರ್ಷದಲ್ಲಿ ಒಂದು ಜೊತೆ ಕಪ್ಪೆಗಳಿಂದ [illegible]೦೦೦ ಕಪ್ಪೆಗಳು ಹುಟ್ಟುವುವು. ಕಪ್ಪೆಗಳನ್ನು ಸಾಕುವುದರಿಂದ ವರ್ಷಕ್ಕೆ ೧೦೦೦೦ ಪೌಂಡುಗಳು ದೊರಕುವುದು.

ಹಾರುವ ಮೋಟಾರ್ ಕಾರ್

ಸಿನಾರ್ ಜಾರ್ಜ ಡಿಲಾಕಾರ್ವೆ ಎಂಬುವನು ಬಾರ್ಸಿಲೋನಾದಲ್ಲಿ ಒಂದು ವಿಚಿತ್ರರೀತಿಯ ಮೋಟಾರ್ ಕಾರನ್ನು ತಯಾರಿಸುತ್ತಿದ್ದಾನೆ ಇದು ಅಂತರಿಕ್ಷದಲ್ಲಿ ಹಾರಬಲ್ಲದು, ಭೂಮಿಯಮೇಲೆ ಸಂಚರಿಸಬಹುದು ವಿಚಿತ್ರವೇ ಸರಿ.

ಸ್ವೀಕಾರ.

ಮೈಸೂರು ಹಳ್ಳದಕೇರಿಯಲ್ಲಿರುವ ರಾ|| ಬ್ರ|| ಸಚ್ಚಿದಾನಂದ ಜೋಯಿಸರವರು ರಚಿಸಿರುವ ಧಾತೃನಾಮ ಸಂವತ್ಸರದ ಮೈಸೂರು ಸಿದ್ಧಾಂತ ಪಂಚಾಂಗದ ಒಂದು ಪ್ರತಿಯನ್ನು ನಾವು ಆದರದಿಂದ ಸ್ವೀಕರಿಸಿರುತ್ತೇವೆ.

ನ್ಯಾಯ ಇಲಾಖೆ.

ನ್ಯಾಯ ಇಲಾಖೆಯಲ್ಲಿ ಈ ವರ್ಗಾವರ್ಗಿಗಳು ಆರ್ಡರಾಗಿವೆ:—

ಮ|| ಆರ್. ಪುಟ್ಟರಾಜೇ ಅರಸರು, ಚಿಕ್ಕಮಗಳೂರು ಸ್ಪೆಷಲ್ ಮೊದಲನೇ ತರಗತಿ ಮ್ಯಾಜಿಸ್ಟ್ರೇಟರಾಗಿ ಮ|| ಜಿ. ಕೃಷ್ಣಮೂರ್ತಿ ಬೆಂಗಳೂರು ಸಬ್ ಜಡ್ಜ್ ಮ|| ಯು. ಡಿ ನಾರಾಯಣಮೂರ್ತಿ ಮೈಸೂರಿನ ಎರಡನೇ ಮುನ್ಸೀಫ್. ಮ|| ಟಿ. ಎಸ್. ಅನಂತಮೂರ್ತಿ ಹಾಸನದ ಮುನ್ಸಿಫ್ ಮ|| ಕೆ. ಎಚ್. ಪದ್ಮನಾಭಯ್ಯ ಚಿತ್ರದುರ್ಗದ ಮುನ್ಸೀಫ್ ಮ|| ಪಿ ಅಬ್ದುಲ್ ನಾಬಿ ನರಸಿಂಹರಾಜಪುರದ ಮುನ್ಸೀಫ್. ಮ|| ಕೆ. ಹಬೀಬುಲ್ಲಾಖಾನ್ ಶಿವಮೊಗ್ಗಾ ಮುನ್ಸೀಫ್. ಮ|| ಕೆ. ವಿ. ರಾಮರಾವ್ ನಂಜನಗೂಡು ಮುನ್ಸೀಫ್. ಮ|| ಟಿ. ಮಹಮ್ಮದ್ ಮುಸ್ತಫಾ ಬೆಂಗಳೂರಿನ ಎರಡನೇ ಮುನ್ಸೀಫ್. ಮ|| ಕೆ. ಸಿ ಲಿಂಗಯ್ಯ ಗೌಡ ತುಂಕೂರು ಎರಡನೇ ಮುನ್ಸೀಫ್. ಎಸ್. ವಿ ರಂಗರಾವ್ ಸಾಗರದ ಮುನ್ಸೀಫ್.

ವಿದ್ಯುಚ್ಛಕ್ತಿ ಇಲಾಖೆಯಲ್ಲಿ ಭಷಾವಣೆ.

ಮೈಸೂರು ಸರ್ಕಾರದ ವಿದ್ಯುಚ್ಛಕ್ತಿ ಇಲಾಖೆಯಲ್ಲಿ ಭಷಾವಣೆ ನಡೆದು ಹಲವರ ದಸ್ತಗಿರಿ ಆಗುವ ಸಂಭವವಿದೆ. ಈಗ ರಾಮಚಂದ್ರಾಚಾರ್ ಎಂಬುವರೊಬ್ಬರು ದಸ್ತಗಿರಿಯಾಗಿದ್ದಾರೆ ಇವರು ಚೀಫ್ ಎಲೆಕ್ಟ್ರಿಕಲ್ ಇಂಜನಿಯರ್ ಆಫೀಸಿನ ಅಕೌಂಟೆಂಟರು. ಇವರಲ್ಲದೆ ಇನ್ನು ಐದು ಜನರ ದಸ್ತಗಿರಿಯಾಗುವ ಸಂಭವವಿದೆಯೆಂದೂ ಹೇಳಲ್ಪಟ್ಟಿದೆ. ಭದ್ರಾವತಿ ಕಾರ್ಖಾನೆಗೆ ವಿದ್ಯುಚ್ಛಕ್ತಿಯನ್ನು ಸರಬರಾಜುಮಾಡುವ ಏರ್ಪಾಡುಗಳು ಈಗ ನಡೆಯುತ್ತಿವೆಯಷ್ಟೆ. ಈ ಸಂದರ್ಭದಲ್ಲಿ ಸಾಮಾನುಗಳನ್ನು ಸಾಗಿಸಲು ಏರ್ಪಡಿಸಿದ್ದ ಗಾಡಿಗಳ ಬಾಡಿಗೆ ಮತ್ತು ಇತರ ಕೆಲವು ಲೆಕ್ಕಾಚಾರಗಳ ಸಂಬಂಧವಾಗಿ ಈ ಭಷಾವಣೆಯು ನಡೆದಿರುವುದಾಗಿ ತಿಳಿದು ಬಂದಿದೆ. ಒಟ್ಟು 34,000ರೂ ಭಷಾವಣೆ ನಡೆದಿದೆಯೆಂದೂ, ಆಡಿಟ್ ಮೊದಲಾದ ತನಿಖೆ ಕ್ರಮಗಳು ಬಿರುಸಾಗಿ ನಡೆಯುತ್ತಿವೆ ಎಂದೂ ತಿಳಿದುಬಂದಿದೆ.

ಮೈಸೂರು ಜಿಲ್ಲಾ ವಿಭಜನೆ.

ಮೈಸೂರು ಜಿಲ್ಲೆಯನ್ನು ಎರಡುಭಾಗವಾಗಿ ಹಂಚುವ ಏರ್ಪಾಡು ಸದ್ಯಕ್ಕೆ ತಟಸ್ಥವಾಗಿದೆ. ಈ ವಿಭಜನೆಯನ್ನು ಅನುಮೋದಿಸಿ ಮೈಸೂರು ಜಿಲ್ಲಾಧಿಕಾರಿಗಳು ಸಲಹೆ ಕೊಟ್ಟಿದ್ದರು. ಆದರೆ ಸರ್ಕಾರದವರು ಇದನ್ನು ಸದ್ಯಕ್ಕೆ ನಿಲ್ಲಿಸಿ, ಮುಂದಕ್ಕೆ ತಳ್ಳಿದ್ದಾರೆ. ಪುನಃ ಸೆಪ್ಟಂಬರಿನಲ್ಲಿ ಈ ವಿಷಯವು ಪರ್ಯಾಲೋಚಿಸಲ್ಪಡುವುದು.

ಕಾಮರ್ಸ್ ಇನ್‌ಸ್ಟಿಟ್ಯೂಟ್.

ಶಾರದಾವಿಲಾಸ ಹೈಸ್ಕೂಲಿನಲ್ಲಿ ಟೈಪ್ ರೈಟಿಂಗ್, ಷಾರ್ಟ್‌ಹ್ಯಾಂಡ್ ಮತ್ತು ಅಕೌಂಟೆನ್ಸಿ ಪಾಠಗಳಲ್ಲಿ ಬೇಸಿಗೆ ತರಗತಿಗಳು ಮುಂದಿನ ಏಪ್ರಿಲ್ 7ನೇ ತಾರೀಖಿನಿಂದ ಪ್ರಾರಂಭವಾಗುತ್ತವೆ ಉಮೇದುವಾರರು ಪ್ರಾತಃಕಾಲಗಳಲ್ಲಿ ಅರ್ಜಿಗಳನ್ನು ಕೊಡಬಹುದು

ಕಾಂಗ್ರೆಸ್ಸಿನ ಮುಂದಿನ ನೀತಿ ಏನು?

ಮುಂದಿನ ಕಾಂಗ್ರೆಸ್ಸಿನ ನೀತಿಯನ್ನು ಕುರಿತು ಪಂ|| ಜವಾಹಿರಲಾಲರು ತಮ್ಮ ಅಭಿಪ್ರಾಯವನ್ನು ತಿಳಿಸಿದರು ಕೌನ್ಸಿಲ್ ಪ್ರವೇಶ ಮತ್ತು ರಚನಾತ್ಮಕ ಕಾರ್ಯಕ್ರಮಗಳಲ್ಲಿ ಏನೂ ವ್ಯತ್ಯಾಸವಾದ ಅಭಿಪ್ರಾಯಗಳಿಲ್ಲ. ಅಧಿಕಾರಸೂತ್ರ ವಹಿಸುವ ವಿಷಯದಲ್ಲಿ ಮಾತ್ರ ಭಿನ್ನಾಭಿಪ್ರಾಯಗಳಿರುವುದರಿಂದ ಲಕ್ನೋ ಕಾಂಗ್ರೆಸ್ಸಿನಲ್ಲಿ ಇತ್ಯರ್ಥವಾಗಬೇಕು. ಆದರೆ ಕಾಂಗ್ರೆಸ್ ಸಂಸ್ಥೆಯು ಮಾತ್ರ ಹೊಸ ರಾಜ್ಯಾಂಗ ವ್ಯವಸ್ಥೆಯನ್ನು ಅನುಮೋದಿಸಲಾರದು ಎಂಬುದು ಚೆನ್ನಾಗಿ ವ್ಯಕ್ತವಾಗಿದೆ. ಕಾಂಗ್ರೆಸ್ಸು ಹೆಚ್ಚಾಗಿ ರೈತರ ಮತ್ತು ಕೆಲಸಗಾರರ ಸಂಸ್ಥೆಯಾಗಬೇಕು ಐಕ್ಯತೆಯಿಂದ ಎಲ್ಲರೂ ಒಟ್ಟುಗೂಡಿ ಚಳುವಳಿ ನಡಸಬೇಕೆಂಬುದೇ ಕಾಂಗ್ರೆಸ್ಸಿನ ಧ್ಯೇಯ

ಸವಿಗನ್ನಡ ಸಾಹಿತ್ಯೋತ್ಸವ.

ಬಾಲಕನ್ನಡ ಸೇವಾಮಂಡಲಿಯ ಆಶ್ರಯದಲ್ಲಿ ಸವಿಗನ್ನಡ ಸಾಹಿತ್ಯೋತ್ಸವವು, ಡಿ ಬನುಮಯ್ಯನವರ ಹೈಸ್ಕೂಲಿನಲ್ಲಿ ಪ್ರಾರಂಭವಾಯಿತು. ಕನ್ನಡ ನಾಡಿನ ಸುಪ್ರಸಿದ್ಧರಾದ ಬಿ. ಎಂ. ಶ್ರೀಕಂಠಯ್ಯನವರು ಅಧ್ಯಕ್ಷಸ್ಥಾನವನ್ನಲಂಕರಿಸಿದ್ದರು ಶ್ರೀ|| ಎಂ. ನಂಜುಂಡ ಶಾಸ್ತ್ರಿಗಳು ಪ್ರಥಮಪರಿಚಯಮಾಡಿಕೊಟ್ಟನಂತರ, ಶ್ರೀ|| ಆರ್ ಕೆ ಕೃಷ್ಣಪ್ಪನವರು ಸುಶ್ರಾವ್ಯವಾಗಿ ಭಾರತವನ್ನು ಪಠಿಸಿದರು ಅನಂತರ ಶ್ರೀ|| ಶ್ರೀಕಂಠಯ್ಯನವರು 'ಕುಮಾರವ್ಯಾಸಭಾರತದ ಸೊಬಗು' ಎಂಬ ವಿಚಾರ ಕುರಿತು ಬಹಳ ಸ್ವಾರಸ್ಯವಾದ ಉಪನ್ಯಾಸವನ್ನು ಮಾಡಿದರು.

ಬೇಸಿಗೆ ಶಿಬಿರ.

ಮೈಸೂರಿನ ಹಿಂದೀ ಕಾರ್ಯಕರ್ತರ ಮತ್ತು ಸ್ವಯಂಸೇವಕರ ಸಲುವಾಗಿ ಏಪ್ರಿಲ್ 15ನೇ ತಾರೀಖಿನಿಂದ 6 ವಾರದವರೆಗೆ ಧರ್ಮಪ್ರಕಾಶ ಸಾ|| ಡಿ. ಬನುಮಯ್ಯನವರ ಹೈಸ್ಕೂಲಿನಲ್ಲಿ "ಬೇಸಿಗೆ ಶಿಬಿರ"ವನ್ನು ಪ್ರಾರಂಭಿಸಲು ಏರ್ಪಡಿಸಿರುತ್ತೆ. ಶಿಬಿರಕ್ಕೆ ಸೇರಲು ಇಚ್ಛೆಯುಳ್ಳವರು ಮೈಸೂರು ಹಿಂದೀ ಪ್ರಚಾರ ಸಭೆಯ ಕಾರ್ಯದರ್ಶಿಯವರಿಗೆ ತಿಳಿಸಬಹುದು.

ಕಾಂಗ್ರೆಸ್ಸಿಗೆ ವಿಜಯ.

ಕಲ್ಕತ್ತಾ ಕಾರ್ಪೊರೇಷನ್ನಿನ ಚುನಾವಣೆಗಳಲ್ಲಿ ಕಾಂಗ್ರೆಸ್ಸಿನವರಿಗೆ ಬಹುಸಂಖ್ಯೆಯು ದೊರಕಿದೆ. 65 ಜಾಗಗಳಲ್ಲಿ 33 ಜನರು ಕಾಂಗ್ರೆಸ್ಸಿನವರೇ ಆಗಿದ್ದಾರೆ. ಕೆಲವು ಸ್ವತಂತ್ರ ಪಂಗಡದವರಿಗೂ ಸಹ ಜಯವಾಗಿದೆ ನಾಲ್ಕು ಸ್ತ್ರೀಯರ ಪೈಕಿ ಒಬ್ಬರಿಗೆ ಮಾತ್ರ ಜಯವಾಗಲಿಲ್ಲ.

ಹಿಂದೂವು ಮಹಮ್ಮದೀಯ ಮತಕ್ಕೆ.

ಗೋವಿಂದನೆಂಬ 9 ವರ್ಷದ ಅಕ್ಕಸಾಲಿಗ ಬಾಲಕನು ಹೊಳೇನರಸೀಪುರದ ಬಿ. ಎಂ. ಸುಲ್ತಾನರ ಮನೆಯಲ್ಲಿ ಊಟ, ತಿಂಡಿ ಮಾಡಿಕೊಂಡಿರುವನು. ಸದರಿ ಬಿ ಎಂ ಸುಲ್ತಾನರು, ಒಂದು ತಿಂಗಳೊಳಗೆ ವಾರಸುದಾರರಿದ್ದರೆ ಕರೆದುಕೊಂಡು ಹೋಗಬಹುದೆಂದೂ, ಇಲ್ಲದಿದ್ದರೆ ತಮ್ಮ ಮತಕ್ಕೆ ಸೇರಿಸಿಕೊಂಡು, ಸಾಕುಮಗನಂತೆ ಸಾಕುವೆನೆಂದೂ ತಿಳಿಸಿದ್ದಾರೆ.

ರಷ್ಯಾ ಜಪಾನ್ ಯುದ್ಧ

ಒಂದುವಾರ ನಡೆಯಿತು.

ಕಳೆದ ತಿಂಗಳಲ್ಲಿ ರಷ್ಯಾ ಮತ್ತು ಜಪಾನ್ ದೇಶಗಳ ಸೈನ್ಯಗಳಿಗೆ ಒಂದು ವಾರದ ಕಾಲ ಒಂದು ಸಣ್ಣ ಯುದ್ಧವು ನಡೆಯಿತು ಇದು ಪ್ರಪಂಚಕ್ಕೆ ಸ್ಪಷ್ಟವಾಗಿ ಗೊತ್ತಾಗಿಲ್ಲ. ಏಷ್ಯಾಖಂಡದ ಒಳಭಾಗದಲ್ಲಿ ಇದು ನಡೆಯಿತು. ಮಂಗೋಲಿಯ ಮತ್ತು ಮಂಚುಕೋ ಇವುಗಳ ಸರಹದ್ದಿನಲ್ಲಿ ಬೋರ್ ನರೋವರದ ಸಮೀಪದಲ್ಲಿ ನಡೆಯಿತು. ಆ ಪ್ರದೇಶದಲ್ಲಿ ಒಂದು ಪುರಾತನವಾದ ಬೌದ್ಧ ದೇವಾಲಯವಿದೆ. ಅದರ ಗೋಡೆಗಳು ಬಹಳ ದಪ್ಪವಾಗಿವೆ. ಛಳಿಗಾಲದಲ್ಲಿ ಬೆಚ್ಚಗೆ ಬಿಡಾರ ಮಾಡಲು ಈ ಸ್ಥಳವು ಸೌಕರ್ಯವಾಗಿರುವುದೆಂದು ಉಭಯ ಪಂಗಡಗಳ ಸೇನಾಪತಿಗಳೂ ಆಶಿಪಟ್ಟು ಇದಕ್ಕಾಗಿ ಜಗಳವನ್ನು ಹೂಡಿದರು. ಗುಂಡಿನ ಶಬ್ದಗಳು ಕೇಳಿಬಂದುವು. ಕೂಡಲೆ ಎರಡು ವಿಮಾನಗಳು ಗೋಚರವಾದುವು ಬಾಂಬುಗಳು ಹಾಕಲ್ಪಟ್ಟವು ಮೇಲ್ಕಂಡ ದೇವಾಲಯಕ್ಕಾಗಿ ಒಂದು ವಾರದವರೆಗೆ ಕದನವು ನಡೆಯಿತು ಯುದ್ಧವು ಪ್ರಬಲವಾಗುವುದರಲ್ಲಿತ್ತು ಜನರು ದಿಕ್ಕು ದಿಕ್ಕಿಗೆ ಚದುರಿದರು ಚೀನಾದೇಶದ ಸರಹದ್ದಿನೊಳಕ್ಕೆ ಅನೇಕರು ಓಡಿಹೋದರು ರಷ್ಯಾದೇಶದ ಪ್ರತಿನಿಧಿಯೂ ಇತರ ರಷ್ಯದ ನಿವಾಸಿಗಳೂ ತಮ್ಮ ದೇಶಕ್ಕೆ ವಾಪಸು ಹೋಗುವಂತೆ ಅಪ್ಪಣೆಯಾಗಿತ್ತು. ಆದರ ಜಪಾನ್ ಸರ್ಕಾರವು ಶಾಂತಿಯಿಂದ ವರ್ತಿಸಿತು ರಷ್ಯದ ಸೈನ್ಯವು ಹದಿಮೂರು ಲಕ್ಷವಿರುತ್ತದೆ ಮತ್ತು ಅದರ ಪೂರ್ವದೇಶಗಳ ಸೈನ್ಯವು ೨|| ಲಕ್ಷವಿರುತ್ತದೆ. ಜಪಾನಿನ ಒಟ್ಟು ಸೈನ್ಯವೂ ಅಷ್ಟೇ ಆಗುತ್ತದೆ. ಜಪಾನಿನವರು ತಮ್ಮ ಈಗಿನ ನಿಶ್ಶಕ್ತಿಯನ್ನು ಅರಿತು ರಷ್ಯದೊಡನೆ ಸ್ನೇಹದಿಂದ ವರ್ತಿಸಲು ಉಪಕ್ರಮಿಸಿರುವರು

ವಿದ್ಯಾಶಾಲಾ ಪಂಡಿತ ಮಂಡಲ

ಮೈಸೂರು ದೇಶದ ವಿದ್ಯಾಶಾಲಾ ಪಂಡಿತ ಮಂಡಲದ ಮೈಸೂರು ಶಾಖೆಯ ಆಶ್ರಯದಲ್ಲಿ ಎರಡನೇ ಮಹಾ ಸಮ್ಮೇಳನವನ್ನು ಬರುವ ಏಪ್ರಿಲ್‌ನಲ್ಲಿ ಮೈಸೂರಿನಲ್ಲಿ ನಡೆಸಬೇಕೆಂದು ನಿರ್ಣಯಿಸಿದೆ. ಈ ಸಮ್ಮೇಳನಕ್ಕೆ ಸಕಲರೂ ಸದಸ್ಯರಾಗುವುದಲ್ಲದೆ ಎಲ್ಲಾ ವಿಧಗಳಲ್ಲಿಯೂ ಸಹಕರಿಸಬೇಕೆಂದು ಕಾರ್ಯದರ್ಶಿಗಳು ಕೋರಿರುತ್ತಾರೆ.

ಶ್ರೀ ರಾಮೋತ್ಸವ.

ಕಳೆದ 15 ವರ್ಷಗಳಿಂದ ಯಳಂದೂರು ತಾ|| ಅಗರದಲ್ಲಿ ಶ್ರೀ ರಾಮೋತ್ಸವವು ಶ್ರದ್ಧಾ ಭಕ್ತಿಗಳಿಂದ ನಡೆಸಲ್ಪಡುತ್ತಿದೆ ಈ ಸಾರಿಯೂ ಶ್ರೀ ರಾಮನವಮಿಯಿಂದ ನಡೆಯಲು ಏರ್ಪಾಡಾಗಿದೆ. ಮಹಾ ಜನರ ಉದಾರ ಸಹಾಯವು ಕೋರಲ್ಪಟ್ಟಿದೆ.

ಪ್ರಜಾಪ್ರತಿನಿಧಿ ಸಭೆ.

ಪ್ರಜಾಪ್ರತಿನಿಧಿ ಸಭೆಯ ವರ್ಧಂತಿ ಅಧಿವೇಶನವು ಜೂನ್ 3ನೇ ತಾ|| ಮೈಸೂರು ಜಗನ್ಮೋಹನ ಬಂಗಲೆಯಲ್ಲಿ ಪ್ರಾರಂಭವಾಗುವುದು.

ಸಾಧ್ವಿ

೩೦-೩-೩೬ ನೇ ಸೋಮವಾರ

ಗಿಳಿಲನೇ ಕಲಮಿನ ಸದು ಪಯೋಗ.

ಸಾರ್ವಜನಿಕ ಕಾರ್ಯಕ್ರಮಗಳನ್ನು ಅಧಿಕಾರಿಗಳು ದಪ್ಪಾಳಿಕೆಯಿಂದ ನಿರ್ಬಂಧಿಸುವ ಪದ್ಧತಿಯನ್ನು ನಾವು ಒಪ್ಪುವುದಿಲ್ಲ. ಅನೇಕ ವೇಳೆ ಇಂತಹ ನಿರ್ಬಂಧಗಳು ಅಪ್ರಸಂಗವಾದ ರೀತಿಯಲ್ಲಿಯೇ ಹಾಕಲ್ಪಟ್ಟಿವೆ. ಶಾಂತಿಭಂಗವೆಂಬ ನೆಪದಿಂದ ಮ್ಯಾಜಿಸ್ಟ್ರೇಟರುಗಳು ಕ್ರಿಮಿನಲ್ ಪ್ರೊಸೀಜರ್ ಕೋಡಿನ ೧೪೪ ಮತ್ತು ಪೋಲೀಸ್ ಕಾನೂನಿನ ೩೯ನೇ ಕಲಮುಗಳನ್ನು ತಪ್ಪಿಲ್ಲದಷ್ಟು ಜಾರಿ ಮಾಡಿರುತ್ತಾರೆ. ಸಹಜವಾದ ಮತ್ತು ಶಾಂತಿಯುತವಾದ ಅನೇಕ ಕಾರ್ಯಕ್ರಮಗಳನ್ನು ಪ್ರತಿಬಂಧಿಸಿರುತ್ತಾರೆ. ಈ ಕಲಮುಗಳು ರಾಜಕೀಯ ಪ್ರಸಂಗಗಳಲ್ಲಂತೂ ಅನಾವಶ್ಯಕವಾಗಿಯೂ ಅನುಚಿತವಾಗಿಯೂ ಜಾರಿಯಾಗಿರುವುದೇ ಹೆಚ್ಚು. ಆದರೆ ಕಳೆದ ೨೧ನೇ ತಾ॥ ಚಾಮರಾಜನಗರದ ತಾ॥ ಭೋಗಾಪುರದಲ್ಲಿ ೧೪೪ನೇ ಕಲಮಿನ ಪ್ರಯೋಗವಾಯಿತು. ಕ್ರೈಸ್ತ ಉಪದೇಶಿಗಳು ಆದಿ ಕರ್ನಾಟಕರ ಭಾವಿಗೆ ತೊಂದರೆ ಪಡಿಸುತ್ತಾರೆಂಬ ಕಾರಣದ ಮೇಲೆ ಅವರುಗಳಿಗೆ ಈ ನಿರ್ಬಂಧವು ಹಾಕಲ್ಪಟ್ಟಿತು. ವಸ್ತುತಃ ಅವರುಗಳಿಂದ ಅಲ್ಲಿ ಶಾಂತಿಭಂಗವಾಗುವ ಸಂದರ್ಭವಿರುವುದೆಂದು ಖಚಿತವಾಗಿತ್ತು. ಆದ್ದರಿಂದ ಈ ಸಮಯದಲ್ಲಿ ಈ ಕಾನೂನನ್ನು ಜಾರಿ ಮಾಡಿದ್ದಕ್ಕಾಗಿ ನಾವು ಅಧಿಕಾರಿಗಳನ್ನು ಅಭಿನಂದಿಸಬೇಕಾಗಿದೆ.

ಕ್ರೈಸ್ತರ ಗುರುಗಳೊಬ್ಬರು ನಮ್ಮ ಸರ್ಕಾರದ ಅಧಿಕಾರಿಗಳನ್ನೂ ಸಹ ನಿರ್ಲಕ್ಷಿಸಿ ಮೇಲ್ಕಂಡ ಭೋಗಾಪುರದ ಸಮಸ್ಯೆಯನ್ನು ತಾವು ಬಗೆಹರಿಸಿಯೇ ತೀರುವುದಾಗಿಯೂ, ಅಧಿಕಾರಿಗಳು ತಮ್ಮ ಸಹಾಯವನ್ನು ಕೋರಿದರೆ ಅಗತ್ಯವಾಗಿ ಈ ಪ್ರಶ್ನೆಯನ್ನು ತೀರ್ಮಾನ ಮಾಡುವುದಾಗಿಯೂ ಹೇಳಿಕೊಂಡಿದ್ದರು. ಇದರ ಮೇಲೆ ಹಲವು ಕ್ರೈಸ್ತ ಉಪದೇಶಿಗಳು ಬಹಳವಾಗಿ ಮೆರೆಯುತ್ತಿದ್ದರು. ಈ ಅಂಶಗಳನ್ನು ಚಾಮರಾಜನಗರದ ಅಮಲ್ದಾರ್ ಮ್ಯಾಜಿಸ್ಟ್ರೇಟರವರು ಸರಿಯಾಗಿ ಅರಿತು ಶಾಂತಿಭಂಗಮಾಡಬಹುದಾದವರಿಗೆ ತಕ್ಕ ಬಂದೋಬಸ್ತನ್ನು ಮಾಡಿದರು.

ಇದುವರಿಗೆ ರಾಷ್ಟ್ರೀಯ ಕೆಲಸಗಾರರಿಗೇ ಇಂತಹ ನಿರ್ಬಂಧಗಳು ಹಾಕಲ್ಪಡುತ್ತಿದ್ದವು. ಕ್ರೈಸ್ತ ಪಾದ್ರಿಗಳಿಗೂ ಉಪದೇಶಿಗಳಿಗೂ ಹಾಕಲ್ಪಡುತ್ತಿರಲಿಲ್ಲ. ಹೀಗೆ ಒಂದುಸಾರಿಯಾದರೂ ೧೪೪ನೇ ಕಲಮು ಉಚಿತವಾದ ರೀತಿಯಲ್ಲಿ ಹಾಕಲ್ಪಟ್ಟದ್ದು ಈ ಕಾನೂನಿನ ಸಾರ್ಥಕ್ಯವನ್ನು ಸೂಚಿಸುತ್ತದೆ. ಇನ್ನು ಮುಂದೆಯೂ ಇಂತಹ ನಿರ್ಬಂಧಗಳನ್ನು ಹಾಕುವಾಗ ಅಧಿಕಾರಿಗಳು ನಿಷ್ಪಕ್ಷಪಾತ ದೃಷ್ಟಿಯಿಂದಲೂ ಪ್ರಜಾ ಸೌಕರ್ಯದ ದೃಷ್ಟಿಯಿಂದಲೂ ವರ್ತಿಸುವರೆಂದು ಆಶಿಸಲಾಗಿದೆ.

ಕೋರ್ಟುಗಳ ಕೊರತೆ.

ನಮ್ಮ ಸಂಸ್ಥಾನದ ಅನೇಕ ಕೋರ್ಟುಗಳಲ್ಲಿ ಇಸ್ತಿಹಾರ ಪತ್ರದ ಫಾರಂಗಳಿಲ್ಲದೆ ಮೊಕದ್ದಮೆಗಳು ಮುಂದುವರಿಯಲು ಬಹಳ ಅನಾನುಕೂಲವಾಗಿದೆಯೆಂಬುದು ತಿಳಿದುಬಂದಿದೆ. ಈ ಫಾರಂಗಳು ಅನೇಕಕಡೆ ಅನೇಕ ತಿಂಗಳುಗಳಿಂದ ಇರುವುದಿಲ್ಲ. ಕೈನಲ್ಲಿ ಎಲ್ಲವನ್ನು ಬರೆದು ಮುಗಿಸಲು ಸಾಧ್ಯವಿಲ್ಲ. ಈ ಕಾರಣಗಳಿಂದ ಮೊಕದ್ದಮೆಗಳು ತಿಂಗಳುಗಟ್ಟಲೆ ಮುಂದುವರಿಯುತ್ತಿವೆಯೆಂದು ಗೊತ್ತಾಗಿದೆ. ಈ ಫಾರಂಗಳು ಗೌರ್ನಮೆಂಟ್ ಪ್ರೆಸ್ಸಿನಲ್ಲಿಯೂ ಸಹ ಸಾಕಾದಷ್ಟು ಅಚ್ಚು ಹಾಕಿಸಲ್ಪಟ್ಟಿಲ್ಲವೆಂದು ಹೇಳಲಾಗಿದೆ.

ಇಲ್ಲದೆ ಕೆಲವು ಕೋರ್ಟುಗಳಲ್ಲಿ ಸಾಕಾದಷ್ಟು ಸ್ಟೇಷನರೀ (ಕಾಗದ ಪತ್ರಗಳು) ಸರಬರಾಜಿಲ್ಲದ ಜಡ್ಜಿಗಳು ತೊಂದರೆಪಡುತ್ತಿರುವರಂತೆ. ಒಂದೆರಡು ಸಂದರ್ಭಗಳಲ್ಲಿ ಲಾಯರುಗಳೇ ತಮ್ಮ ಕಾಗದಗಳನ್ನು ಕೊಟ್ಟು ತಮಗೆ ಅವಶ್ಯಕವಾದ ಅಂಶಗಳನ್ನು ಬರೆಸಿಕೊಂಡುಹೋದರೆಂದೂ ತಿಳಿದುಬಂದಿದೆ. ಕೋರ್ಟುಗಳಿಂದ ನಮ್ಮ ಜೀವನದಲ್ಲಿ ವಿಶೇಷವಾಗಿ ಹುಟ್ಟುವಳಿಯು ಆಗುತ್ತಿದೆ. ಹೀಗಿರುವಲ್ಲಿ ಇಂಥಹ ಸ್ಥಳಗಳಲ್ಲಿಯೇ ಮೇಲ್ಕಂಡ ಕೊರತೆಗಳಿರಲು ಅವಕಾಶವಾಗಿರುವುದು ಅತ್ಯಂತ ಶೋಚನೀಯ.

ಸನ್ಮಾನ

ಸರ್ ಪುಟ್ಟಣ್ಣಶೆಟ್ಟರಿಗೆ ಪುರಜನರ ಪರವಾಗಿ ಸನ್ಮಾನ ಮಾಡಲು ಮೈಸೂರು ಮಹಾರಾಜರ ಕಾಲೇಜಿನ ಅಂಗಳದಲ್ಲಿ ಕಳೆದ ಬುಧವಾರ ಒಂದು ಸಂತೋಷಕೂಟವು ನಡೆಯಿತು. ಆಹ್ವಾನಿತರಾದ ಅನೇಕ ಜನ ಮಹನೀಯರೂ ಮಹಿಳೆಯರೂ ಬಂದಿದ್ದರು. ಉಪಹಾರವೂ ಸಂಗೀತವೂ ನಡೆದವು.

ಸಹಾಯಾರ್ಥ ನಾಟಕ

ಮೈಸೂರು ಕರ್ನಾಟಕ ಕಲಾಭ್ಯುದಯ ನಾಟಕ ಮಂಡಲಿಯವರು ಏಪ್ರಿಲ್ ೮ನೇ ಬುಧವಾರ ರಾತ್ರಿ ಟೌನಹಾಲಿನಲ್ಲಿ "ಸಿರ್ಭಾಗ್ಯ ಭಾರತಿ" ಎಂಬ ನಾಟಕವನ್ನಾಡಿ ಕೃಷ್ಣಮೂರ್ತಿಪುರದ ಶ್ರೀರಾಮ ಮಂದಿರಕ್ಕೆ ಉತ್ಪತ್ತಿಯನ್ನು ಕೊಡುವರೆಂದು ತಿಳಿದುಬರುತ್ತದೆ.

ಮೈಸೂರು ವಿಮಾ ಕಂಪೆನಿ.

ಮೇಲ್ಕಂಡ ವಿಮಾ ಕಂಪೆನಿಯ ವಾರ್ಷಿಕ ವರದಿಯಿಂದ ಈ ಕೆಳಗಿನ ಅಂಶಗಳು ಗೊತ್ತಾಗುತ್ತವೆ. ಇಷ್ಟು ಅಲ್ಪಕಾಲದಲ್ಲಿ ಕಂಪೆನಿಯು ಹೊಂದಿರತಕ್ಕ ಪ್ರಗತಿಯು ಅಭಿನಂದನಾರ್ಹವೇ ಸರಿ —

ಮೈಸೂರು ವಿಮಾ ಭಾಸ್ಕರನುದಿಸಿ ಇಂದಿಗೆ ವರುಷವೆರಡು ಕಳೆಯಿತು. ಅವನು ಮೊದಲಿಗಿಂತಲೂ ಇಂದು ಹೆಚ್ಚು ಪ್ರಕಾಶದಿಂದ ಬೆಳಗುತ್ತಿದ್ದಾನೆ. ಮೂರ್ತಿ ಚಿಕ್ಕದಾದರೂ ಕೀರ್ತಿ ದೊಡ್ಡದೆಂಬಂತೆ ಕಂಪೆನಿಯು ವಯಸ್ಸಿನಲ್ಲಿ ಚಿಕ್ಕದಾದರೂ ದೊಡ್ಡದಕ್ಕೆ ದೊಡ್ಡದಾದ ಫಲವಿತ್ತಿದೆ. ಶೀಘ್ರದಲ್ಲಿಯೇ ಕಂಪೆನಿಯ ರಚನಾಕಾರ್ಯವು ಸಂಸ್ಥಾನದ ಎಲ್ಲೆಡೆಗಳಲ್ಲಿಯೂ ಹರಡುವುದೆಂಬ ನಿರೀಕ್ಷೆ ಇದೆ. ಕಂಪೆನಿಯು ಕಳೆದ ವಾರ್ಷಿಕ ಸಭೆಯಲ್ಲಿ ಹೊರಹೊಮ್ಮಿದ ಅಭಿಪ್ರಾಯಗಳು ಇಂದು ರೂಪುಗೊಳ್ಳುತ್ತಲಿವೆ. ನಮ್ಮ ಮುಂದಿನ ವಾರ್ಷಿಕ ವರದಿಯ ವೇಳೆಗೆ ಈ ಕಂಪೆನಿಯು ಒಂದು ಅಖಿಲಭಾರತ ಸಂಸ್ಥೆಯಾಗಿ ರಾರಾಜಿಸುವುದೆಂಬ ನಂಬಿಕೆಯು ನಮಗಿದೆ.

ಸರ್ ಪುಟ್ಟಣ್ಣಶೆಟ್ಟಿಯವರಿಗೆ ಗೌರವ

ಬೆಂಗಳೂರಿನ ಮಾನ್ಯ ಗೃಹಸ್ಥರಾದ ಸರ್ ಕೆ ಪಿ ಪುಟ್ಟಣ್ಣಶೆಟ್ಟರಿಗೆ ಡಾಕ್ಟರೇಟ್ ಪದವಿಯನ್ನು ಕೊಡಲು ಕಳೆದ ಬುಧವಾರ ಬೆಳಿಗ್ಗೆ ಇಲ್ಲಿನ ಜಗನ್ಮೋಹನ ಭವನದಲ್ಲಿ ವಿಶ್ವವಿದ್ಯಾಲಯದ ವಿಶೇಷ ಸಮಾರಂಭೋತ್ಸವವು ಜರುಗಿತು. ಶ್ರೀಮನ್ಮಹಾರಾಜರವರು ಅಗ್ರಾಸನವನ್ನು ವಹಿಸಿದ್ದರು. ಸಾವಿರಾರುಜನ ದೊಡ್ಡ ಮನುಷ್ಯರೂ ಮಹಿಳೆಯರೂ ವಿದ್ಯಾರ್ಥಿಗಳೂ ಬಂದಿದ್ದರು. ಶ್ರೀಮನ್ಮಹಾರಾಜರವರು ಸಕಲ ಮರ್ಯಾದೆಗಳೊಡನೆ ಬಿಜಯಮಾಡಿಸಿದರು. ವಿಶ್ವವಿದ್ಯಾಲಯದ ಅಧಿಕಾರಿಗಳೂ ಸೆನೆಟ್ ಸದಸ್ಯರೂ ಅವರಿಗೆ ಸ್ವಾಗತವನ್ನು ಬಯಸಿದರು.

ಆರಂಭದಲ್ಲಿ ವಿಶ್ವವಿದ್ಯಾಲಯದ ಈಗಿನ ವೈಸ್‌ಛಾನ್ಸಲರಾದ ಶ್ರೀ॥ ಎನ್ ಎಸ್ ಸುಬ್ಬರಾಯರು ಸಣ್ಣ ಭಾಷಣವನ್ನು ಮಾಡಿ ಸರ್ ಶೆಟ್ಟರ ಅಪೂರ್ವವಾದ ಗುಣಗಳನ್ನು ವರ್ಣಿಸಿದರು. ಅವರು ವಿಶ್ವವಿದ್ಯಾಲಯದ ಮನ್ನಣೆಗೆ ಪಾತ್ರರೆಂದು ತಿಳಿಸಿದರು. ಶ್ರೀಮನ್ಮಹಾರಾಜರು ಸರ್ ಪುಟ್ಟಣ್ಣಶೆಟ್ಟರಿಗೆ ಗೌರವದ "ಡಾಕ್ಟರ್ ಆಫ್ ಲಾಸ್" ಎಂಬ ಪ್ರಶಸ್ತಿಯನ್ನು ಅನುಗ್ರಹಿಸಿದರು. ಸರ್ ಶೆಟ್ಟರವರು ಸಮಯೋಚಿತ ವಾಕ್ಯಗಳಿಂದ ಕೂಡಿದ ಭಾಷಣ ಮಾಡಿ ವಿಶ್ವವಿದ್ಯಾಲಯದವರಿಗೂ ಶ್ರೀಮನ್ಮಹಾರಾಜರಿಗೂ ತಮ್ಮ ಕೃತಜ್ಞತೆಯನ್ನು ಸೂಚಿಸಿದರು. ಅನಂತರದ ಸಮಾರಂಭವು ಮುಕ್ತಾಯವಾಯಿತು.

ವಿಮಾನದ ತಯಾರಿ.

ಬೆಂಗಳೂರು ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈಯನ್ಸಿನ ಪ್ರೊಫೆಸರಾದ ಕೆ ಆರ್ಪರ್ಕರ್ ಎಂಬುವರು ಇಂಡಿಯಾದಲ್ಲಿಯೇ ಒಂದು ಸೀಟಿನ ಏರೋಪ್ಲೇನನ್ನು ಭಾರತೀಯ ಸಾಮಗ್ರಿಗಳಿಂದಲೇ ಮಾಡಲು ಯತ್ನಿಸುತ್ತಿದ್ದಾರೆ.

ಭೋಗಾಪುರದಲ್ಲಿ ೧೪೪ನೇ ಕಲಮಿನ ಪ್ರಯೋಗ.

ಚಾಮರಾಜನಗರದ ತಾ॥ ಭೋಗಾಪುರದಲ್ಲಿ ಹರಿಜನರ ಬಾವಿಯ ವಿಷಯದಲ್ಲಿ ಕ್ರೈಸ್ತ ಉಪದೇಶಿಗಳೂ ಅವರ ಕಡೆಯವರೂ ಆಟಂಕ ಪಡಿಸುವರೆಂದು ತಿಳಿದುಬಂದುದರ ಮೇಲೆ ಅಮಲ್ದಾರ್ ಮ್ಯಾಜಿಸ್ಟ್ರೇಟರು ಕ್ರಿಮಿನಲ್ ಪ್ರೊಸೀಜರ್ ಕೋಡಿನ ೧೪೪ನೇ ಕಲಮನ್ನು ಪ್ರಯೋಗಿಸಿದರು. ಅದರಲ್ಲಿ ಈ ಕೆಳಗೆ ಕಂಡಂತೆ ನಿರೂಪಿಸಿದ್ದಾರೆ—

ಚಾಮರಾಜನಗರದ ತಾ॥ ಪೋಲೀಸ್ ಇನ್ಸ್‌ಪೆಕ್ಟರ ವರದಿಯನ್ನು ಓದಲಾಯಿತು. ಈ ತಾಲ್ಲೂಕಿನ ಕೆಸ್ತೂರು ಹೋಬಳಿ ಭೋಗಾಪುರದ ಆದಿ ಕರ್ನಾಟಕರು ತಮ್ಮ ಭಾವಿಯಲ್ಲಿ ಗಂಗಾ ಪೂಜೆಯನ್ನು ಮಾಡುವ ಸಂದರ್ಭದಲ್ಲಿ ಈ ತಿಂಗಳು ೨೧ನೇ ತಾ॥ ಶಾಂತಿಭಂಗವುಂಟಾಗಬಹುದೆಂದು ನನಗೆ ತಿಳಿದುಬಂದಿದೆ. ಆದ್ದರಿಂದ ೧೪೪ನೇ ಕಲಮಿನ ಪ್ರಕಾರ ಈ ಕೆಳಗೆ ಕಂಡಂತೆ ಅಪ್ಪಣೆ ಮಾಡಿದ್ದೇನೆ—ಜೇರಿಯಲ್ ಮಗ ಮಿತ್ರಯ್ಯ, ದಾಸಯ್ಯನ ಮಗ ಗುರುದಾಸಯ್ಯ, ದೊಡ್ಡ ನಂಜನ ಮಗ ಸಂಜೀವಯ್ಯ, ಬಸವಯ್ಯನ ಮಗ ಪ್ರಸಾದಯ್ಯ, ಚನ್ನನ ಮಗ ಸ್ವಾಮಿದಾಸ್, ಉಪದೇಶಿ ಪ್ರಭಾಕರಗಿ, ಕೆಸ್ತೂರು ಉಪದೇಶಿ ಯೇಸುದಾಸ್ ಇವರುಗಳೂ ಇತರ ಕೆಲವು ಕ್ರೈಸ್ತರೂ, ೨೧ನೇ ತಾ॥ ಭೋಗಾಪುರದಲ್ಲಿರುವ ಆದಿ ಕರ್ನಾಟಕರ ಭಾವಿಯ ಬಳಿ ಸೇರುತ್ತಾರೆಂತಲೂ ಹೀಗೆ ಅವರು ಗುಂಪು ಸೇರುವುದರಿಂದ ಕೋಮುವಾರು ಕಲಹಕ್ಕೆ ಆಸ್ಪದವಾಗುವುದೆಂದೂ ತಿಳಿದುಬಂದಿರುವುದರಿಂದ ಮೇಲ್ಕಂಡವರನ್ನೂ ಅವರ ಅನುಯಾಯಿಗಳನ್ನೂ ಈ ಮೂಲಕ ನಿರ್ಬಂಧಪಡಿಸಿರುವುದೇನೆಂದರೆ—ಅವರುಗಳು ಸದರಿ ಬಾವಿಯಬಳಿ ಸೇರಕೂಡದು. ಬಾವಿಯಲ್ಲಿ ನೀರು ತೆಗೆಯಕೊಳ್ಳಲು ಪ್ರಯತ್ನಿಸಕೂಡದು ಮತ್ತು ಜಾತಿಭೇದವನ್ನು ಉಂಟುಮಾಡುವ ರೀತಿಯಲ್ಲಿ ಪ್ರವರ್ತಿಸಕೂಡದು. ಈ ಅಪ್ಪಣೆಯು ಇನ್ನು ಎರಡು ತಿಂಗಳ ಕಾಲ ಜಾರಿಯಲ್ಲಿರುತ್ತದೆ.

ಅಶಕ್ತಾಶ್ರಮ.

ರಾಜಧಾನಿಯ ಕೃಷ್ಣರಾಜೇಂದ್ರ ಮಾರ್ಕೆಟಿನಲ್ಲಿ ಮದ್ರಾಸ್ ಪ್ರಿಮಿಯರ್ ಇನ್ಷೂರೆನ್ಸ್ ಕಂಪೆನಿಯವರು ಅಶಕ್ತಪೋಷಣೆಗಾಗಿ ಮೇಲ್ಕಂಡ ಆಶ್ರಮವನ್ನು ಸ್ಥಾಪಿಸಿರುತ್ತಾರೆ. ಪ್ರತಿ ನಿತ್ಯವೂ ಐವತ್ತು ಜನಗಳವರೆಗೆ ಆಹಾರವನ್ನು ಹೊಂದುತ್ತಿರುವರು. ಇವರ ಸಂಖ್ಯೆಯು ದಿನೇ ದಿನೇ ಹೆಚ್ಚುತ್ತಿರುವುದು. ಇದಕ್ಕೆ ಮಹಾಜನರು ಉದಾರವಾಗಿ ಸಹಾಯ ಮಾಡಬೇಕೆಂದು ಕೋರಲ್ಪಟ್ಟಿದೆ.

ಖೈದಿ ಸಿಕ್ಕಿದನು.

ಕೆಲವು ದಿನಗಳ ಹಿಂದೆ ಸೆಂಟ್ರಲ್ ಜೈಲಿನಿಂದ ಪರಾರಿಯಾಗಿದ್ದ ವೈದ್ಯಲಿಂಗಂ ಎಂಬುವನು ಸೇಲಂಜಿಲ್ಲೆಯಲ್ಲಿ ಸಿಕ್ಕಿಬಿದ್ದನು. ಇವನನ್ನು ಸೆಂಟ್ರಲ್ ಜೈಲಿಗೆ ರಿಮ್ಯಾಂಡ್ ಮಾಡಿರುವುದಾಗಿ ಗೊತ್ತಾಗಿದೆ.

ವರ್ತಮಾನ ಸಂಗ್ರಹ

ಅಮಲ್ದಾರರಿಗೆ ಹೊಡೆತ.

ಹೆಗ್ಗಡದೇವನಕೋಟೆ ಅಮಲ್ದಾರರಾದ ಮ॥ ಗೋಪಾಲಸ್ವಾಮಿ ನಾಯಕರು ಕಳೆದ ವರ್ಷ ಮಾರ್ಚಿ ತಿಂಗಳಿನಲ್ಲಿ ಕಂದಾಯದ ವಸೂಲಿಗಾಗಿ ಹೋಗಿದ್ದಾಗ ಕೆಲವು ಜನ ಹೆಂಗಸರೂ, ಗಂಡಸರೂ ಅವರನ್ನು ದಾರಿಯಲ್ಲಿ ಹಿಡಿದು ಹೊಡೆದರೆಂಬ ಆಪಾದನೆಯ ಮೇಲೆ ಇಲ್ಲಿನ ಮೊದಲನೇ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಮೊಕದ್ದಮೆ ನಡೆಯುತ್ತಿತ್ತು. ಇವನ್ನು ವಿಚಾರಿಸಿ ಮ್ಯಾಜಿಸ್ಟ್ರೇಟರು ಕಳೆದ 24ನೇ ತಾ॥ ತೀರ್ಪಿತ್ತು ಆಪಾದಿತರಿಗೆ ಶಿಕ್ಷೆಯನ್ನು ವಿಧಿಸಿದರು. ಒಬ್ಬ ಅಪರಾಧಿಯು ಈ ಮಧ್ಯೆ ಮೃತಪಟ್ಟಿದ್ದನು. ಇನ್ನು 3 ಜನರಿಗೆ ಖುಲಾಸೆಯಾಯಿತು. ಈ ಕೆಳಗೆ ಆಪಾದಿತರ ಹೆಸರುಗಳನ್ನು ಕೊಡಲಾಗಿದೆ — ಮಾದಪ್ಪ ಉರುಫ್ ದೊಡ್ಡತಮ್ಮ, ಕೆಂಚಯ್ಯ, ಚಿಕ್ಕ ಮಾಯಿಗೌಡ, ಚಿಕ್ಕೇಗೌಡ, ನಿಂಗೇಗೌಡ, ಮರೀಗೌಡ, ಪುಟ್ಟಸ್ವಾಮಯ್ಯ, ಭೋಜಯ್ಯ, ದೇವಯ್ಯ, ಪುಟ್ಟಮ್ಮ ಉರುಫ್ ನಂಜಮ್ಮ, ಮಾದಮ್ಮ, ಬಲಸಂಬಿ, ಕಾಳಪುಟ್ಟಮ್ಮ ಮತ್ತು ಬಸವೇಗೌಡ. 5, 6, 14ನೇ ಆಪಾದಿತರುಗಳಿಗೆ ಖುಲಾಸೆಯಾಯಿತು. 9ನೇ ಆಪಾದಿತನಾದ ದೇವಯ್ಯನಿಗೆ ಎರಡು ವರ್ಷ ಕಠಿಣ ಸಜಾ ಮತ್ತು 600 ರೂ ಜುಲ್ಮಾನೆ ತಪ್ಪಿದರೆ ಮತ್ತೆರಡು ವರ್ಷ ಕಠಿಣ ಸಜಾ ವಿಧಿಸಲಾಯಿತು. ಉಳಿದವರೆಲ್ಲರಿಗೂ 1 ವರ್ಷ ಕಠಿಣ ಸಜಾ, 400 ರೂ. ಜುಲ್ಮಾನೆ ವಿಧಿಸಲಾಯಿತು.

ಕಪ್ಪೆ ಕಾಲುಗಳ ಬೆಲೆ.

ಕಪ್ಪೆಗಳ ಕಾಲುಗಳನ್ನು ಕೇಳುವವರ ಸಂಖ್ಯೆ ಜಾಸ್ತಿಯಾಗುತ್ತಿದೆ. ಅಮೇರಿಕಾ ಸಂಸ್ಥಾನದಲ್ಲಿ ಜನಾನುರಾಗವನ್ನು ಬಹಳವಾಗಿ ಇವು ಪಡೆಯುತ್ತಿವೆ. ಒಂದು ಕಪ್ಪೆ 3 ಷಿಲಿಂಗು 6 ಪೆನ್ನಿಗಳು. ಒಂದು ವರ್ಷದಲ್ಲಿ ಒಂದು ಜೊತೆ ಕಪ್ಪೆಗಳಿಂದ 000 ಕಪ್ಪೆಗಳು ಹುಟ್ಟುವುವು. ಕಪ್ಪೆಗಳನ್ನು ಸಾಕುವುದರಿಂದ ವರ್ಷಕ್ಕೆ 1000 ಪೌಂಡುಗಳು ದೊರಕುವುವು.

ಹಾರುವ ಮೋಟಾರ್ ಕಾರ್.

ಸಿನಾರ್ ಜಾರ್ ಡಿಲ್‌ಕಾರ್ವೆ ಎಂಬುವ ಬಾರ್ಸಿಲೋನಾದಲ್ಲಿ ಒಂದು ವಿಚಿತ್ರ ರೀತಿಯ ಮೋಟಾರ್ ಕಾರನ್ನು ತಯಾರಿಸುತ್ತಿದ್ದಾನೆ. ಇದು ಅಂತರಿಕ್ಷದಲ್ಲಿ ಹಾರಬಲ್ಲದು, ಭೂಮಿಯಮೇಲೆ ಸಂಚರಿಸಬಲ್ಲದು. ವಿಚಿತ್ರವೇ ಸರಿ.

ಸ್ವೀಕಾರ.

ಮೈಸೂರು ಹಳ್ಳದಕೇರಿಯಲ್ಲಿರುವ ವೇ॥ ಬ್ರ॥ ಸಚ್ಚಿದಾನಂದ ಜೋಯಿಸರವರು ರಚಿಸಿರುವ ಧಾತೃನಾಮ ಸಂವತ್ಸರದ ಮೈಸೂರು ಸಿದ್ಧಾಂತ ಪಂಚಾಂಗದ ಒಂದು ಪ್ರತಿಯನ್ನು ನಾವು ಆದರದಿಂದ ಸ್ವೀಕರಿಸಿರುತ್ತೇವೆ.

ನ್ಯಾಯ ಇಲಾಖೆ.

ನ್ಯಾಯ ಇಲಾಖೆಯಲ್ಲಿ ಈ ವರ್ಗಾವರ್ಗಿಗಳು ಆರ್ಡರಾಗಿವೆ —

ಮಿ॥ ಆರ್. ಪುಟ್ಟರಾಜೇ ಅರಸರು, ಚಿಕ್ಕಮಗಳೂರು ಸ್ಪೆಷಲ್ ಮೊದಲನೇ ತರಗತಿ ಮ್ಯಾಜಿಸ್ಟ್ರೇಟಾಗಿ. ಮಿ॥ ಜಿ. ಕೃಷ್ಣಮೂರ್ತಿ ಬೆಂಗಳೂರು ಸಬ್ ಜಡ್ಜ್. ಮಿ॥ ಯು. ಡಿ ನಾರಾಯಣಮೂರ್ತಿ ಮೈಸೂರಿನ ಎರಡನೇ ಮುನ್ಸೀಫ್. ಮಿ॥ ಬಿ. ಎಸ್. ಅನಂತಮೂರ್ತಿ ಹಾಸನದ ಮುನ್ಸೀಫ್. ಮಿ॥ ಕೆ ಎಚ್. ಪದ್ಮನಾಭಯ್ಯ ಚಿತ್ರದುರ್ಗದ ಮುನ್ಸೀಫ್. ಮಿ॥ ಪಿ. ಎ. ಬ್ದುಲ್ ನಾಬಿ ನರಸಿಂಹರಾಜಪುರದ ಮುನ್ಸೀಫ್. ಮಿ॥ ಕೆ. ಹಬೀಬುಲ್ಲಾಖಾನ್ ಶಿವಮೊಗ್ಗಾ ಮುನ್ಸೀಫ್. ಮಿ॥ ಕೆ ವಿ. ದಾಮುರಾವ್ ನಂಜನಗೂಡು ಮುನ್ಸೀಫ್. ಮಿ॥ ಪಿ. ಮಹಮ್ಮದ್ ಮುಸ್ತಫಾ ಬೆಂಗಳೂರಿನ ಎರಡನೇ ಮುನ್ಸೀಫ್. ಮಿ॥ ಕೆ. ಸಿ ಲಿಂಗಯ್ಯ ಗೌಡ ತುಂಕೂರು ಎರಡನೇ ಮುನ್ಸೀಫ್. ಎಸ್ ವಿ. ರಂಗರಾವ್ ಸಾಗರದ ಮುನ್ಸೀಫ್.

ವಿದ್ಯುಚ್ಛಕ್ತಿ ಇಲಾಖೆಯಲ್ಲಿ ಭಟಾವಣೆ.

ಮೈಸೂರು ಸರ್ಕಾರದ ವಿದ್ಯುಚ್ಛಕ್ತಿ ಇಲಾಖೆಯಲ್ಲಿ ಭಟಾವಣೆ ನಡೆದು ಹಲವರ ದಸ್ತಗಿರಿ ಆಗುವ ಸಂಭವವಿದೆ. ಈಗ ರಾಮಚಂದ್ರಾಚಾರ್ ಎಂಬುವರೊಬ್ಬರು ದಸ್ತಗಿರಿಯಾಗಿದ್ದಾರೆ. ಇವರು ಚೀಫ್ ಎಲೆಕ್ಟ್ರಿಕಲ್ ಇಂಜನಿಯರ್ ಆಫೀಸಿನ ಅಕೌಂಟೆಂಟರು. ಇವರಲ್ಲದೆ ಇನ್ನು ಐದು ಜನರ ದಸ್ತಗಿರಿಯಾಗುವ ಸಂಭವವಿದೆಯೆಂದೂ ಹೇಳಲ್ಪಟ್ಟಿದೆ. ಭದ್ರಾವತಿ ಕಾರ್ಖಾನೆಗೆ ವಿದ್ಯುಚ್ಛಕ್ತಿಯನ್ನು ಸರಬರಾಜುಮಾಡುವ ಏರ್ಪಾಡುಗಳು ಈಗ ನಡೆಯುತ್ತಿವೆಯಷ್ಟೆ. ಈ ಸಂದರ್ಭದಲ್ಲಿ ಸಾಮಾನುಗಳನ್ನು ಸಾಗಿಸಲು ಏರ್ಪಡಿಸಿದ್ದ ಗಾಡಿಗಳ ಬಾಡಿಗೆ ಮತ್ತು ಇತರ ಕೆಲವು ಲೆಕ್ಕಾಚಾರಗಳ ಸಂಬಂಧವಾಗಿ ಈ ಭಟಾವಣೆಯು ನಡೆದಿರುವುದಾಗಿ ತಿಳಿದುಬಂದಿದೆ. ಒಟ್ಟು 34,000ರೂ ಭಟಾವಣೆ ನಡೆದಿದೆಯೆಂದೂ, ಆಡಿಟ್ ಮೊದಲಾದ ತನಿಖೆ ಕ್ರಮಗಳು ಬಿರುಸಾಗಿ ನಡೆಯುತ್ತಿವೆ ಎಂದೂ ತಿಳಿದುಬಂದಿದೆ.

ಮೈಸೂರು ಜಿಲ್ಲಾ ವಿಭಜನೆ.

ಮೈಸೂರು ಜಿಲ್ಲೆಯನ್ನು ಎರಡುಭಾಗವಾಗಿ ಹಂಚುವ ಏರ್ಪಾಡು ಸದ್ಯಕ್ಕೆ ತಟಸ್ಥವಾಗಿದೆ. ಈ ವಿಭಜನೆಯನ್ನು ಅನುಮೋದಿಸಿ ಮೈಸೂರು ಜಿಲ್ಲಾಧಿಕಾರಿಗಳು ಸಲಹೆ ಕೊಟ್ಟಿದ್ದರು. ಆದರೆ ಸರ್ಕಾರದವರು ಇದನ್ನು ಸದ್ಯಕ್ಕೆ ನಿಲ್ಲಿಸಿ, ಮುಂದಕ್ಕೆ ತಳ್ಳಿದ್ದಾರೆ. ಪುನಃ ಸೆಪ್ಟಂಬರಿನಲ್ಲಿ ಈ ವಿಷಯವು ಪರ್ಯಾಲೋಚಿಸಲ್ಪಡುವುದು.

ಕಾಮರ್ಸ್ ಇನ್ಸ್ಟಿಟ್ಯೂಟ್.

ಶಾರದಾವಿಲಾಸ ಹೈಸ್ಕೂಲಿನಲ್ಲಿ ಟೈಪ್‌ರೈಟಿಂಗ್, ಷಾರ್ಟ್‌ಹ್ಯಾಂಡ್ ಮತ್ತು ಅಕೌಂಟೆನ್ಸಿ ಪಾಠಗಳಲ್ಲಿ ಬೇಸಿಗೆ ತರಗತಿಗಳು ಮುಂದಿನ ಏಪ್ರಿಲ್ 7ನೇ ತಾರೀಖಿನಿಂದ ಪ್ರಾರಂಭವಾಗುತ್ತವೆ. ಉಮೇದುವಾರರು ಪ್ರಾತಃಕಾಲಗಳಲ್ಲಿ ಅರ್ಜಿಗಳನ್ನು ಕೊಡಬಹುದು.

ಕಾಂಗ್ರೆಸ್ಸಿನ ಮುಂದಿನ ನೀತಿ ಏನು?

ಮುಂದಿನ ಕಾಂಗ್ರೆಸ್ಸಿನ ನೀತಿಯನ್ನು ಕುರಿತು ಪಂ॥ ಜವಾಹಿರಲಾಲರು ತಮ್ಮ ಅಭಿಪ್ರಾಯವನ್ನು ತಿಳಿಸಿದರು. ಕೌನ್ಸಿಲ್ ಪ್ರವೇಶ ಮತ್ತು ರಚನಾತ್ಮಕ ಕಾರ್ಯಕ್ರಮಗಳಲ್ಲಿ ಏನೂ ವ್ಯತ್ಯಾಸವಾದ ಅಭಿಪ್ರಾಯಗಳಿಲ್ಲ. ಅಧಿಕಾರಸೂತ್ರ ವಹಿಸುವ ವಿಷಯದಲ್ಲಿ ಮಾತ್ರ ಭಿನ್ನಾಭಿಪ್ರಾಯಗಳಿರುವುದರಿಂದ ಲಕ್ನೋ ಕಾಂಗ್ರೆಸ್ಸಿನಲ್ಲಿ ಇತ್ಯರ್ಥವಾಗಬೇಕು. ಆದರೆ ಕಾಂಗ್ರೆಸ್ ಸಂಸ್ಥೆಯು ಮಾತ್ರ ಹೊಸ ರಾಜ್ಯಾಂಗ ವ್ಯವಸ್ಥೆಯನ್ನು ಅನುಮೋದಿಸಬಾರದು ಎಂಬುದು ಚೆನ್ನಾಗಿ ವ್ಯಕ್ತವಾಗಿದೆ. ಕಾಂಗ್ರೆಸ್ಸು ಹೆಚ್ಚಾಗಿ ರೈತರ ಮತ್ತು ಕೆಲಸಗಾರರ ಸಂಸ್ಥೆಯಾಗಬೇಕು. ಐಕ್ಯತೆಯಿಂದ ಎಲ್ಲರೂ ಒಟ್ಟುಗೂಡಿ ಚಳುವಳಿ ನಡಸಬೇಕೆಂಬುದೇ ಕಾಂಗ್ರೆಸ್ಸಿನ ಧ್ಯೇಯ.

ಸವಿಗನ್ನಡ ಸಾಹಿತ್ಯೋತ್ಸವ.

ಬಾಲಕನ್ನಡ ಸೇವಾಮಂಡಲಿಯ ಆಶ್ರಯದಲ್ಲಿ ಸವಿಗನ್ನಡ ಸಾಹಿತ್ಯೋತ್ಸವವು, ಡಿ. ಬನುಮಯ್ಯನವರ ಹೈಸ್ಕೂಲಿನಲ್ಲಿ ಪ್ರಾರಂಭವಾಯಿತು. ಕನ್ನಡ ನಾಡಿನ ಸುಪ್ರಸಿದ್ಧರಾದ ಬಿ. ಎಂ. ಶ್ರೀಕಂಠಯ್ಯನವರು ಅಧ್ಯಕ್ಷಸ್ಥಾನವನ್ನಲಂಕರಿಸಿದ್ದರು. ಶ್ರೀ॥ ಎಂ. ನಂಜುಂಡ ಶಾಸ್ತ್ರಿಗಳು ಪ್ರಥಮಪರಿಚಯಮಾಡಿಕೊಟ್ಟನಂತರ, ಶ್ರೀ॥ ಆರ್ ಕೆ ಕೃಷ್ಣಪ್ಪನವರು ಸುಶ್ರಾವ್ಯವಾಗಿ ಭಾರತವನ್ನು ಪಠಿಸಿದರು. ಅನಂತರ ಶ್ರೀ॥ ಶ್ರೀಕಂಠಯ್ಯನವರು 'ಕುಮಾರವ್ಯಾಸಭಾರತದ ಸೊಬಗು' ಎಂಬ ವಿಚಾರ ಕುರಿತು ಬಹಳ ಸ್ವಾರಸ್ಯವಾದ ಉಪನ್ಯಾಸವನ್ನು ಮಾಡಿದರು.

ಬೇಸಿಗೆ ಶಿಬಿರ

ಮೈಸೂರಿನ ಹಿಂದೀ ಕಾರ್ಯಕರ್ತರ ಮತ್ತು ಸ್ವಯಂಸೇವಕರ ಸಲುವಾಗಿ ಏಪ್ರಿಲ್ 15ನೇ ತಾರೀಖಿನಿಂದ 6 ವಾರದವರೆಗೆ ಧರ್ಮಪ್ರಕಾಶ ಸಾ॥ ಡಿ. ಬನುಮಯ್ಯನವರ ಹೈಸ್ಕೂಲಿನಲ್ಲಿ "ಬೇಸಿಗೆ ಶಿಬಿರ"ವನ್ನು ಪ್ರಾರಂಭಿಸಲು ಏರ್ಪಡಿಸಿರುತ್ತೆ. ಶಿಬಿರಕ್ಕೆ ಸೇರಲು ಇಚ್ಛೆಯುಳ್ಳವರು ಮೈಸೂರು ಹಿಂದೀ ಪ್ರಚಾರ ಸಭೆಯ ಕಾರ್ಯದರ್ಶಿಯವರಿಗೆ ತಿಳಿಸಬಹುದು.

ಕಾಂಗ್ರೆಸ್ಸಿಗೆ ವಿಜಯ.

ಕಲ್ಕತ್ತಾ ಕಾರ್ಪರೇಷನ್ನಿನ ಚುನಾವಣೆಗಳಲ್ಲಿ ಕಾಂಗ್ರೆಸ್ಸಿನವರಿಗೆ ಬಹುಸಂಖ್ಯೆಯು ದೊರಕಿದೆ. 65 ಜಾಗಗಳಲ್ಲಿ 33 ಜನರು ಕಾಂಗ್ರೆಸ್ಸಿನವರೇ ಆಗಿದ್ದಾರೆ. ಕೆಲವು ಸ್ವತಂತ್ರ ಪಂಗಡದವರಿಗೂ ಸಹ ಜಯವಾಗಿದೆ. ನಾಲ್ಕು ಸ್ತ್ರೀಯರ ಪೈಕಿ ಒಬ್ಬರಿಗೆ ಮಾತ್ರ ಜಯವಾಗಲಿಲ್ಲ.

ಹಿಂದೂವು ಮಹಮ್ಮದೀಯ ಮತಕ್ಕೆ.

ಗೋವಿಂದನೆಂಬ 9 ವರ್ಷದ ಆಕ್ಕಸಾಲಿಗ ಬಾಲಕನು ಹೊಳೇನರಸೀಪುರದ ಬಿ. ಎಂ. ಸುಲ್ತಾನರ ಮನೆಯಲ್ಲಿ ಊಟ, ತಿಂಡಿ ಮಾಡಿಕೊಂಡಿರುವನು. ಸದರಿ ಬಿ. ಎಂ. ಸುಲ್ತಾನರು, ಒಂದು ತಿಂಗಳೊಳಗೆ ವಾರಸುದಾರರಿದ್ದರೆ ಕರೆದುಕೊಂಡು ಹೋಗಬಹುದೆಂದೂ, ಇಲ್ಲದಿದ್ದರೆ ತಮ್ಮ ಮತಕ್ಕೆ ಸೇರಿಸಿಕೊಂಡು, ಸಾಕುಮಗನಂತೆ ಸಾಕುವೆವೆಂದೂ ತಿಳಿಸಿದ್ದಾರೆ.

ರಷ್ಯಾ ಜಪಾನ್ ಯುದ್ಧ

ಒಂದುವಾರ ನಡೆಯಿತು.

ಕಳೆದ ತಿಂಗಳಲ್ಲಿ ರಷ್ಯಾ ಮತ್ತು ಜಪಾನ್ ದೇಶಗಳ ಸೈನ್ಯಗಳಿಗೆ ಒಂದು ವಾರದ ಕಾಲ ಒಂದು ಸಣ್ಣ ಯುದ್ಧವು ನಡೆಯಿತು. ಇದು ಪ್ರಪಂಚಕ್ಕೆ ಸ್ಪಷ್ಟವಾಗಿ ಗೊತ್ತಾಗಿಲ್ಲ. ಏಷ್ಯಾ ಖಂಡದ ಒಳಭಾಗದಲ್ಲಿ ಇದು ನಡೆಯಿತು. ಮಂಚೂರಿಯ ಮತ್ತು ಮಂಚುಕೋ ಇವುಗಳ ಸರಹದ್ದಿನಲ್ಲಿ ಬೋರ್ ಸರೋವರದ ಸಮೀಪದಲ್ಲಿ ನಡೆಯಿತು. ಆ ಪ್ರದೇಶದಲ್ಲಿ ಒಂದು ಪುರಾತನವಾದ ಬೌದ್ಧ ದೇವಾಲಯವಿದೆ. ಅದರ ಗೋಡೆಗಳು ಬಹಳ ದಪ್ಪವಾಗಿವೆ. ಛಳಿಗಾಲದಲ್ಲಿ ಬೆಚ್ಚಗೆ ಬಿಡಾರ ಮಾಡಲು ಈ ಸ್ಥಳವು ಸೌಕರ್ಯವಾಗಿರುವುದೆಂದು ಉಭಯ ಪಂಗಡಗಳ ಸೇನಾಪತಿಗಳೂ ಆ ಕಟ್ಟಡಕ್ಕಾಗಿ ಜಗಳವನ್ನು ಹೂಡಿದರು. ಗುಂಡಿನ ಶಬ್ದಗಳು ಕೇಳಿಬಂದುವು. ಕೂಡಲೆ ಎರಡು ವಿಮಾನಗಳು ಗೋಚರವಾದುವು. ಬಾಂಬುಗಳು ಹಾಕಲ್ಪಟ್ಟುವು. ಮೇಲ್ಗಡೆ ದೇವಾಲಯಕ್ಕಾಗಿ ಒಂದು ವಾರದವರೆಗೆ ಕದನವು ನಡೆಯಿತು. ಯುದ್ಧವು ಪ್ರಬಲವಾಗುವುದರಲ್ಲಿತ್ತು. ಜನರು ದಿಕ್ಕು ದಿಕ್ಕಿಗೆ ಚದುರಿದರು. ಚೀನಾದೇಶದ ಸರಹದ್ದಿನೊಳಕ್ಕೆ ಅನೇಕರು ಓಡಿಹೋದರು. ರಷ್ಯಾದೇಶದ ಪ್ರತಿನಿಧಿಯೂ ಇತರ ರಷ್ಯದ ನಿವಾಸಿಗಳೂ ತಮ್ಮ ದೇಶಕ್ಕೆ ವಾಪಸು ಹೋಗುವಂತೆ ಆಜ್ಞೆಯಾಯಿತು. ಆದರೆ ಜಪಾನ್ ಸರ್ಕಾರವು ಶಾಂತಿಯಿಂದ ವರ್ತಿಸಿತು. ರಷ್ಯದ ಸೈನ್ಯವು ಹದಿಮೂರು ಲಕ್ಷವಿರುತ್ತದೆ ಮತ್ತು ಅದರ ಪೂರ್ವದೇಶಗಳ ಸೈನ್ಯವು 3॥ ಲಕ್ಷವಿರುತ್ತದೆ. ಜಪಾನಿನ ಒಟ್ಟು ಸೈನ್ಯವೂ ಅಷ್ಟೇ ಇರುತ್ತದೆ. ಜಪಾನಿನವರು ತಮ್ಮ ಈಗಿನ ನಿಷ್ಕ್ರಿಯತ್ವವನ್ನು ಅರಿತು ರಷ್ಯದೊಡನೆ ಸ್ನೇಹದಿಂದ ವರ್ತಿಸಲು ಉಪಕ್ರಮಿಸಿರುವರು.

ವಿದ್ಯಾಶಾಲಾ ಪಂಡಿತ ಮಂಡಲ

ಮೈಸೂರು ದೇಶದ ವಿದ್ಯಾಶಾಲಾ ಪಂಡಿತ ಮಂಡಲದ ಮೈಸೂರು ಶಾಖೆಯ ಆಶ್ರಯದಲ್ಲಿ ಎರಡನೇ ಮಹಾ ಸಮ್ಮೇಳನವನ್ನು ಬರುವ ಏಪ್ರಿಲ್‌ನಲ್ಲಿ ಮೈಸೂರಿನಲ್ಲಿ ನಡೆಸಬೇಕೆಂದು ನಿರ್ಣಯಿಸಿದೆ. ಈ ಸಮ್ಮೇಳನಕ್ಕೆ ಸಕಲರೂ ಸದಸ್ಯರಾಗುವುದಲ್ಲದೆ ಎಲ್ಲಾ ವಿಧಗಳಲ್ಲಿಯೂ ಸಹಕರಿಸಬೇಕೆಂದು ಕಾರ್ಯದರ್ಶಿಗಳು ಕೋರಿರುತ್ತಾರೆ.

ಶ್ರೀ ರಾಮೋತ್ಸವ.

ಕಳೆದ 15 ವರ್ಷಗಳಿಂದ ಯಳಂದೂರು ತಾ॥ ಅಗರದಲ್ಲಿ ಶ್ರೀ ರಾಮೋತ್ಸವವು ಶ್ರದ್ಧಾ ಭಕ್ತಿಗಳಿಂದ ನಡೆಸಲ್ಪಡುತ್ತಿದೆ. ಈ ಸಾರಿಯೂ ಶ್ರೀ ರಾಮನವಮಿಯಿಂದ ನಡೆಯಲು ಏರ್ಪಾಡಾಗಿದೆ. ಮಹಾ ಜನರ ಉದಾರ ಸಹಾಯವು ಕೋರಲ್ಪಟ್ಟಿದೆ.

ಪ್ರಜಾಪ್ರತಿನಿಧಿ ಸಭೆ.

ಪ್ರಜಾಪ್ರತಿನಿಧಿ ಸಭೆಯ ವರ್ಧಂತಿ ಅಧಿವೇಶನವು ಜೂನ್ 3ನೇ ತಾ॥ ಮೈಸೂರು ಜಗನ್ಮೋಹನ ಬಂಗಲೆಯಲ್ಲಿ ಪ್ರಾರಂಭವಾಗುವುದು.

ಸಾಧ್ವೀ ಲಕ್ಷ್ಮೀದೇವಿ.

ಲೇಖಕ—ಟಿ. ಎಗ್. ಬಾಲಕೃಷ್ಣನ್,
ಅರಸೀಕೆರೆ.

"ದೇವಿ; ಹಾಗಾದರೆ ನಾನು ಯುದ್ಧರಂಗಕ್ಕೆ ಹೊರಡಲೇಬೇಕೇನು?"—ರಘುನಾಥನು ಮ್ಲಾನವದನನಾಗಿ ನುಡಿದನು

ಅದನ್ನು ಕೇಳಿದ ರಘುನಾಥನ ಪತ್ನಿ, ಪ್ರಾಪಂಚಿಕ ವ್ಯವಹಾರಗಳನ್ನೇ ಅರಿಯದ ಆ ಹದಿನಾಲ್ಕು ವಯಸ್ಸಿನ ಬಾಲೆಯು ಕಂಬನಿದುಂಬಿದಳು.

ರಘುನಾಥನು ರಾಣಾ ಪ್ರತಾಪಸಿಂಹನ ಅಂಗರಕ್ಷಕರಲ್ಲೊಬ್ಬನು. ಮೊಟ್ಟಮೊದಲು ಆತನು ಸಾಮಾನ್ಯನಾದೊಬ್ಬ ಸೈನಿಕನಾಗಿದ್ದನು, ಅವನ ಸುಗುಣ ಸಂಪತ್ತಿಗಳು ಅವನನ್ನೀಸ್ಥಾನಕ್ಕೆ ಕರೆತಂದಿದ್ದುವು. ಅಂತೆಯೇ ಆತನನ್ನು ಕಂಡರೆ ಪ್ರತಾಪಸಿಂಹನಿಗೆ ಬಹಳ ಪ್ರೀತಿ ಅವನು ಸಣ್ಣ ಹರೆಯದ ವಯಸ್ಸಿನಲ್ಲಿ ತೋರಿಸಿದ್ದ ಒಂದೆರಡು ಸಾಹಸ ಪ್ರದರ್ಶನಗಳು ಪ್ರತಾಪಸಿಂಹನಿಗೆ ಚಿರಸ್ಮರಣೀಯವಾಗಿದ್ದುವು ರಘುನಾಥನು ಪ್ರತಾಪಸಿಂಹನಿಂದ ಪ್ರೀತಿಸಲ್ಪಟ್ಟಂತೆ, ಸೃಷ್ಟಿದಾಯಕನಾದ ವಿಧಾತನಿಂದಲೂ ಪ್ರೀತಿಸಲ್ಪಟ್ಟಿರಬಹುದೆಂದು ಆವನ ಪ್ರಕೃತಿಸ್ಥಿತಿಯಿಂದ ನಿರಾಯಾಸವಾಗಿ ಹೇಳಬಹುದಾಗಿದ್ದಿತು

ಬುದ್ಧಿ ಬಲ ಸಂಪನ್ನವನ್ನೆಲ್ಲಾ ಅಸಾಧಾರಣ ಪರಿಮಾಣದಲ್ಲಿ ಹೊಂದಿದ್ದನು, ಅಂತೆಯೇ. ಪ್ರಭುವಿನಲ್ಲಿಡಬೇಕಾದ ಭಕ್ತಿ, ವಿಶ್ವಾಸಗಳನ್ನವನು ಚೆನ್ನಾಗಿ ಅರಿತಿದ್ದನು ಸರಳತೆ, ಗಂಭೀರತೆಗಳಲ್ಲಿಯೂ, ದಯಾಳುತ್ವ, ಪ್ರಣಾಮಶೀಲತೆಗಳಲ್ಲಿಯೂ ಆತನನ್ನು ಮೀರಿಸಿದವರು ಮತ್ತಾರೂ ಇಲ್ಲವೆಂದು ಹೇಳಬಹುದಾಗಿದ್ದಿತು ಮಾನವನು ತನ್ನ ಜೀವಮಾನ ಕಾಲದಲ್ಲಿ ಆವುದರಿಂದ ಸುಖಿಯಾಗಬಹುದೋ ಅದೆಲ್ಲವನ್ನೂ ರಘುನಾದನು ಮಾತೃಗರ್ಭದಲ್ಲಿದ್ದಾಗಲೇ ಹೊಂದಿ ಬಂದಿದ್ದನು ಪ್ರತಾಪಸಿಂಹನಾದರೂ ಆತನ ಯಾವ ಸೌಖ್ಯಕ್ಕೂ ಕುಂದುಂಟುಮಾಡಿರಲಿಲ್ಲ ಮೇವಾಡ ಸಂಸ್ಥಾನದ ವೇದನೂರಿನ, ವೀರ ಸಿಂಹನ ಪುತ್ರಿಯಾದ ಲಕ್ಷ್ಮೀದೇವಿಯನ್ನು ರಘುನಾಥನೊಂದಿಗೆ ಲಗ್ನ ಬೆಳೆಸಿದ್ದನು.

ಲಕ್ಷ್ಮೀದೇವಿಯಾದರೋ ಕೇವಲ ಹದಿನಾಲ್ಕು ವಯಸ್ಸಿನ ಬಾಲೆ ಪ್ರಾಪಂಚಿಕ ವ್ಯವಹಾರಗಳನ್ನೇ ಅರಿಯದ ವಸ್ತು ಕಣ್ಣುಗಳೋ ನೀಲವರ್ಣ. ವಿಶಾಲವಾದ ಆ ಕಣ್ಣುಗಳೆರಡೂ ಕಮಲ ದಳಗಳನ್ನು ಹೋಲುತ್ತಿದ್ದುವು. ದೇಹಕಾಂತಿಯಾದರೂ ಎಣೆಗೆಂಪು. ಪದ್ಮಿನೀ ಜಾತಿಯ ಸ್ತ್ರೀಲಕ್ಷಣಗಳನ್ನುಳ್ಳ ಲಕ್ಷ್ಮೀದೇವಿಯು ಒಟ್ಟಿನಲ್ಲಿ ರಘುನಾಥನಿಗೆ ತಕ್ಕ ಪತ್ನಿಯಾಗಿದ್ದಳು. ಆದರೇನು? ವಿಧಾತನ ಸಂಕಲ್ಪವು ಆ ದಂಪತಿಗಳ ವಿಷಯದಲ್ಲಿ ತದ್ವಿರುದ್ಧವಾಗಿದ್ದಿತು. ಅಲ್ಪಕಾಲವಾದರೂ ಸುಖಾನುಭವಗಳನ್ನು ಪಡೆಯುವ ಯೋಗವು ಆ ನವದಂಪತಿಗಳಿಗೆ ಲಭಿಸದೆ ಹೋಯಿತು ಲಕ್ಷ್ಮೀದೇವಿಯು ಪತೀಗೃಹವನ್ನಲಂಕರಿಸಿ ಇಂದಿಗೆ ಒಂದು ಪಕ್ಷವು ಮಾತ್ರ ಗತಿಸಿದ್ದಿತು. ಅಷ್ಟರಲ್ಲಿ ಅನಿವಾರ್ಯವಾದ ಯುದ್ಧವೊಂದು ರಾಣಾ ಪ್ರತಾಪಸಿಂಹನಿಗೆ ಒದಗಿ ರಘುನಾಥನ ಚಿತ್ತ ವಿಕಾಸಕ್ಕೆ ಮೂಲಕಾರಣವಾಯಿತು.

ಪ್ರತಾಪಸಿಂಹನು ಸುಪ್ರಸಿದ್ಧನಾದ ಬಾಪ್ಪಾರಾಯನ ವಂಶಸ್ಥನು. ಬಾಪ್ಪಾರಾಯನು ಅರಿಷಡ್ವರ್ಗಕ್ಕೆ ಸಿಂಹಸ್ವಪ್ನದಂತಿದ್ದನು ಪ್ರತಾಪನಾದರೂ ಅಂತೆಯೇ; ಅಕ್ಬರಷಾಹನು ಮನಸ್ಸಿನ ಆವ ಮಹತ್ವಾಕಾಂಕ್ಷೆಯ ಸಿದ್ಧಿಗೋಸುಗ ರಜಪೂತರೊಡನೆ ಸಂಬಂಧ ಬೆಳೆಸಲು ಮೊದಲಿಟ್ಟನೋ ಅದು ನಮಗೆ ತಿಳಿಯದಾಗಿದೆ ಅವನ ಸವಿನುಡಿಯ ಸೋಗಿಗೆ ಮರುಳಾಗಿ ಆವನೊಂದಿಗೆ ಸಂಬಂಧ ಬೆಳೆಸಿದ ರಜಪೂತರಂತೆ ಪ್ರತಾಪನು ಅಕ್ಬರನಿಗೆ ವಶನಾಗಲಿಲ್ಲ ಅವನನ್ನಾಶ್ರಯಿಸಿ ಬಾಂಧವ್ಯ ಬೆಳೆಸಿದ ರಜಪೂತರನ್ನು ಕಂಡರಂತೂ ಅವನಿಗಾಗದು. ಅಂದು ಅಕ್ಬರನ ಸೈನಿಕನೂ, ಮುಖ್ಯ ಸೇನಾಪತಿಯೂ ಆದ ಮಾನಸಿಂಹನು ಸೋಲಾಪುರದ ಘೋರ ಸಂಗ್ರಾಮದಲ್ಲಿ ವಿಜಯಲಕ್ಷ್ಮಿಯನ್ನು ಒಲಿಸಿಕೊಂಡು ಹಿಂದಿರುಗಿ ಬರುತ್ತಿದ್ದಾಗ ಕಮಲಮೇರುವಿನಲ್ಲಿದ್ದ ಪ್ರತಾಪಸಿಂಹನನ್ನು ನೋಡಬಯಸಿ ಅವನಿದ್ದಲ್ಲಿಗೆ ಹೊರಟನು ಮಾನಸಿಂಹನ ಈ ಉದಾರತೆಯನ್ನು ಮೆಚ್ಚಿ ಪ್ರತಾಪಸಿಂಹನು ಆತನನ್ನು ಸತ್ಕರಿಸಲು ತನ್ನ ಕುಮಾರನಾದ ಅಮರಸಿಂಹನನ್ನು ಕಳುಹಿಸಿದನು. ಅಮರಸಿಂಹನು ಪಿತೃವಾಕ್ಯವನ್ನು ಅನುಮೋದಿಸಿ ಮಾನಸಿಂಹನನ್ನು ಉಪಚಾರಮಾಡಿದನು ಮಧ್ಯಾಹ್ನದ ಭೋಜನವೇಳೆಯು ಸಮೀಪಿಸಲು ಪ್ರತಾಪಸಿಂಹನನ್ನು ಸಹಪಙ್ಕ್ತಿಯ ಭೋಜನಕ್ಕೆ ಬರಹೇಳಿದನು. ಆದರೆ ತುರುಷ್ಕ ಸಂಬಂಧವನ್ನು ಬೆಳೆಸಿದ ಅಧರ್ಮದ ರಜಪೂತರೊಂದಿಗೆ ಸಹಪಂಙ್ತಿಯಲ್ಲಿ ಭೋಜನಮಾಡೆನೆಂದು ಪ್ರತಾಪನು ಘಂಟಾಘೋಷವಾಗಿ ಹೇಳಿ ಕಳುಹಿಸಿಬಿಟ್ಟನು

ಪ್ರತಾಪಸಿಂಹನ ಉತ್ತರದಿಂದ ಮಾನಸಿಂಹನು ಕ್ರೋಧೋತ್ಪನ್ನನಾದನು. ಅವನು ಭೋಜನವನ್ನು ಸಹ ಮಾಡದೆ "ಪ್ರತಾಪನ ಸೊಕ್ಕು ಮುರಿಯುವುದಾಗಿ" ಶಪಥ ಮಾಡಿಕೊಂಡು ಹೊರಟು ಹೋದನು ಕೆಚ್ಚೆದೆಯ ವೀರಾಗ್ರಣಿ ಪ್ರತಾಪನಾದರೂ ಅವನ ಮಾತಿಗೆ ಸೊಪ್ಪು ಹಾಕಲಿಲ್ಲ.

ಮಾನಸಿಂಹನ ಮಾನಭಂಗ ಗೊಳಿಸಿದನೆಂಬ ವಾರ್ತೆಯು ಅಕ್ಬರನ ಕಿವಿಗೆ ಬಿದ್ದಿತು. ಅವನು ಉಕ್ಕಿ ಬರುತ್ತಿದ್ದ ಕೋಪವನ್ನು ತಡೆಗಟ್ಟದಾದನು. ಉಗ್ರ ಪ್ರಕೃತಿಯನ್ನು ಹೊಂದಿದ ಅಕ್ಬರನನ್ನು ನೋಡಿ ಸರದಾರ ಸಾಮಂತರೆಲ್ಲರೂ ಹೆದರಿದರು ಇನ್ನೇನು, ಪ್ರತಾಪನ ಅವತಾರವೇ ಪೂರ್ತಿಯಾಯಿತೆನ್ನುವಷ್ಟು ಸಂಕಲ್ಪವು ಅವರ ಭಾವನಾಪ್ರಪಂಚದಲ್ಲಿ ಕಲೆಯುತ್ತಿತು. ಅಕ್ಬರನಾದರೂ ಚಿತ್ತವನ್ನು ಶಮನ ಪಡಿಸುವುದರಲ್ಲಿ ವಿಲಕ್ಷಣ ಶಕ್ತಿಯುಳ್ಳವನಾಗಿದ್ದನು ಅಂತೆಯೇ ಆತನು ಪ್ರತಾಪನ ಮೇಲಿನ ಸೇಡು ತೀರಿಸಿಕೊಳ್ಳಲು ಅಸಂಖ್ಯಾತ ಸೈನ್ಯದೊಡನೆ ಯುವರಾಜ ಸಲೀಮನನ್ನು ಸೇನಾಧಿಕಾರಿಯನ್ನಾಗಿಸಿ ಪ್ರತಾಪನನ್ನು ಹಿಡಿತರಲು ಕಳುಹಿಸಿದನು. ಪ್ರತಾಪಸಿಂಹನು ಇಂದು ಸೈನ್ಯದೊಡನೆ ಹಳದೀಘಾಟ್ಟದ ಕಣಿವೇ ದಾರಿಯನ್ನು ಅಡ್ಡಗಟ್ಟಿ ಸ್ವಸ್ಥಾನದ ಜಾಗೃತಿ ಮಾಡತೊಡಗಿದನು ಇಂತಹ ಆಪತ್ತಿನಲ್ಲಿ ರಘುನಾಥನು ತನ್ನೊಡೆಯನ ಬೆಂಬಿಟ್ಟು ಇರಲಾದೀತೆ?

ರಘುನಾಥನ ಪ್ರಶ್ನೆಗೆ ಲಕ್ಷ್ಮೀದೇವಿಯು ಕಂಬನಿ ದುಂಬಿದಳು ಅನುಕೂಲನಾದ ಪತಿ ದೊರೆಯಲೆಂದು ಅನವರತವೂ ದೇವಪ್ರಾರ್ಥನೆಯಾಗಿ, ದೊರೆತ ಪತಿಯೊಡನೆ ಅವಿಚ್ಛಿನ್ನವಾದ ಸುಖಸಾಮ್ರಾಜ್ಯವನ್ನನುಭವಿಸುವೆನೆಂದು ಭಾವನಾಪ್ರಪಂಚದಲ್ಲಿ ಮೈಮರೆತಿದ್ದ ಲಕ್ಷ್ಮೀದೇವಿಯ ದುಃಖಕ್ಕೆ ತುದಿಮೊದಲಿಲ್ಲದಂತಾಯಿತು. ಆವ ಪತಿಯ ಪದಸಾನ್ನಿಧ್ಯದಿಂದ ಅನಿರ್ವಚನೀಯವಾದ ಪ್ರೇಮದ ಮಹಿಮೆಯನ್ನು ರಾಗಪೂರಿತವಾದ ಸಲ್ಲಾಪಗಳ ಮೂಲಕ ಕೇಳಿ ಅಮಿತಾನಂದವನ್ನು ಹೊಂದುವೆನೆಂದು, ಬಾಲ್ಯದಿಂದ ಭಾವಿಸುತ್ತಿದ್ದಳೋ ಯಾವ ವೀರಪತಿಯ ಅರ್ಧಾಂಗಿಯೆನಿಸಿ ಪವಿತ್ರವಾದ ಕುಲಗೌರವದ ಹಾಗೂ ಅಭಿಮಾನದ, ರಕ್ಷಣೆಯ, ಉದ್ಯಮದಲ್ಲಿ ಭಾಗವಹಿಸಿ, ಅಪರಿಮಿತ ಸಾಹಸ ಪ್ರದರ್ಶನದಿಂದ, ರಜಪೂತ ವೀರ ರಮಣರಮಣಿಯರ ಇತಿಹಾಸದಲ್ಲೊಂದು ಸ್ಥಾನ ಪಡೆಯುವೆನೋ ಎಂಬ ಮಹತ್ವಾಕಾಂಕ್ಷೆಯಿಂದ ಕೂಡಿದ್ದ ಲಕ್ಷ್ಮೀದೇವಿಯ ಮನದ ಬಯಕೆಗಳೆಲ್ಲವೂ ನಿಷ್ಫಲವಾದುದರಿಂದಾಗಿ, ಅವಳಿಗೆ ದುಃಖವು ಉತ್ತರತೆಯಿಂದ ಬರತೊಡಗಿತು

ಆದರೆ ಅದು ದುಃಖವನ್ನಾಗಲೀ, ಯೋಚನೆಯನ್ನಾಗಲೀ, ಮಾಡುವ ಸಮಯವಲ್ಲ. ಮಂತ್ರಾಲೋಚನ ಸಭೆಯಲ್ಲಿ ನಿರ್ಣಯಿಸಿದ್ದಂತೆ ಯುದ್ಧಾರಂಭದ ವೇಳೆ ಸನ್ನಿಹಿತವಾಗುತ್ತಾ ಬಂದಿತು. ಅಷ್ಟರಲ್ಲಿ ದೂರದಲ್ಲೊಂದು ಭೇರಿಯ ನಾದವು ಸಹ ಕೇಳಿ ಬಂದಿತು. ಭೇರಿಯ ನಾದದಿಂದ ಅವಳ ಮನಸ್ಸು ಸರಳವಾದೊಂದು ಪಥವನ್ನು ಸರಿಸಿತು. ಅಂತೆಯೇ, ಪ್ರಾಣಾಧಿಕನ ಪ್ರೇಮಸುಧೆಯ ವೃಷ್ಟಿಯಿಂದ ಪ್ರಣಯ ಪೂರಿತವಾಗಿದ್ದ ಲಕ್ಷ್ಮೀದೇವಿಯ ಚಂಚಲ ಮನಸ್ಸು, ಸರಳ ಪಥದ ಆಕ್ರಮಣದಿಂದ ಸದ್ಭಾವನೆಯನ್ನು ಹೊಂದಿ, ಉಜ್ವಲ ಕ್ಷಾತ್ರ ತೇಜದಿಂದ ದ್ರವೀಭೂತವಾಯಿತು ಮುಖದಲ್ಲಿ ಕಾಂತಿಯು ಪ್ರಾದುರ್ಭವಿಸಿ ಪ್ರಫುಲ್ಲವಾಯಿತು. ಮೆಲ್ಲನೆ, ತಲೆಯೆತ್ತಿ ಪ್ರಾಣನಾಯಕನನ್ನು ವಿಚಲಿತ ದೃಷ್ಟಿಯಿಂದ ನೋಡತೊಡಗಿದಳು ರಘುನಾಥನು ತನ್ನಾ ಅರ್ಧಾಂಗಿಯ ವಿಚಿತ್ರ ದೇಹ ಪರಿವರ್ತನಾ ದೃಶ್ಯದಲ್ಲಿ ಮಗ್ನನಾಗಿ ತನ್ನ ಇರವನ್ನೇ ಮರೆತಿದ್ದನು.

ಚಿತ್ತ ಸ್ಫೂರ್ತಿಯಿಂದ ಲಕ್ಷ್ಮೀದೇವಿಯು ಮಾತನಾಡತೊಡಗಿದಳು, "ನಾಥಾ ಈ ವಿಪ್ಲವ ವೇಳೆಯಲ್ಲಿ ತಮಗೆ ಆಜ್ಞೆ ಅನುಜ್ಞೆಗಳನ್ನು ಕೊಡಲು ನಾನು ಸರ್ವಥಾ ಸ್ವತಂತ್ರಳಲ್ಲ, ಆದರೆ ಪ್ರಕೃತ ಸಮಯದಲ್ಲಿ ಸ್ಥಿತಿಗತಿಗಳ ಮತ್ತು ಪ್ರಾಣಪ್ರಣಯಗಳ ಆಳವನ್ನು ನೋಡ ಬಯಸಿ, ವಿಚಾರಪೂರಿತರಾಗಿ ಕುಳಿತರೆ ಸ್ವಾಮಿ ಕಾರ್ಯವು ಪೂರ್ತಿಯಾಗುವುದಾದರೂ ಹೇಗೆ? ಏಕಾರಕ್ಕಿದು ವೇಳೆಯಲ್ಲ ತಮ್ಮಂತಹ ಏಕನಿಷ್ಠ ಸ್ವಾಮಿಭಕ್ತರ ಸಹಾಯದಿಂದ ಪ್ರಭುಗಳ ಸತ್ಸಂಕಲ್ಪಗಳು ಸಿದ್ಧಿ ಹೊಂದಬೇಕಾಗಿವೆ ಪ್ರಸಕ್ತ ವೇಳೆಯಾದರೂ ಅಂತಹುದಾಗಿರುತ್ತದೆ, ಹೂಂ ಇನ್ನು ತಡಮಾಡದೆ ಯುದ್ಧರಂಗಕ್ಕೆ ತೆರಳಿರಿ ಮಹಾದೇವನು ನಿಮಗೆ ಸನ್ಮಂಗಳವನ್ನುಂಟುಮಾಡಲಿ ನನ್ನ ಪುಣ್ಯವಿಶೇಷವು ಫಲದಾಯಕವಾಗಿ ನನ್ನ ಮಂಗಲ ಸೂತ್ರವು ಗಟ್ಟಿಯಾಗಿದ್ದುದಾದರೆ ಇಂದಿನ ಸಂಗ್ರಾಮದಲ್ಲಿ ವಿಜಯಲಕ್ಷ್ಮಿಯನ್ನೊಲಿಸಿಕೊಂಡು ನನಗೆ ಪುನಃ ದರ್ಶನ ಕೊಡುವಿರಿ ಹಾಗಿಲ್ಲದೆ ಹೋದಲ್ಲಿ ನನ್ನ ಈ ದೇಹವೂ ತನ್ನ ಸ್ವಾಮಿಯ ಗತಿಯನ್ನೇ ಅನುಸರಿಸುವುದು

(ಸಶೇಷ)

ANANDA SODA FACTORY,

DODDAPET, MYSORE.

BEST AERATED WATER SUPPLIERS

COMPLETE REQUISITES FOR

AERATED WATER MANUFACTURERS

AVAILABLE.

ಆನಂದಾ ಸೋಡಾ ಫ್ಯಾಕ್ಟರಿ,

ದೊಡ್ಡಪೇಟೆ, ಮೈಸೂರು.

ನನ್ನ ನಾಯಿ.

(ಶ್ರೀಮಾನ್ ಕೆ. ವಿ. ಪುಟ್ಟಪ್ಪನವರ "ಕಾಡಿನ ಕೊಳಲಿದು" ಎಂಬಂತೆ)

೧.
ಅಕ್ಕರದಿಂದಲಿ ಸಾಕಿದ ನಾಯಿಯ
ಕಥೆಯಿದು ಕೇಳಿ ಕೃಪೆಯಿಂದ ।
ಸರ್ವರ ಪ್ರೀತಿಯ ನಾಯಿಯಮರಿಯು
ಹುಟ್ಟಿದ ಹಬ್ಬದ ಅಳಲಿಂದ ॥

೨.
ನಾಯಿಗಳೊಳಗೆಲ್ಲ ಬಲು ಸೊಗಸಾದ
ನಾಯಿಯಮರಿಯು ರಿಂಟಿಟಿ ।
ಜನಗಳಪ್ರೀತಿಯ ರನ್ನದಗಂಟೆ
ಶಬ್ದವಕೂಗು ಟಿ ಟಿ ಟಿ ॥

೩.
ರ್ಷವು ತುಂಬುತ ಕೂಡಲೆ ಬಂದಿತು
ರಿಂಟಿಯ ಹುಟ್ಟಿದ ಹಬ್ಬವದು ।
ಬ್ಬವಮಾಡುವೆನೆನ್ನುತಲೆನ್ನಯ
ಮನದಲಿ ಹುಟ್ಟಿದುದಾಸೆಯದು ॥

೪.
ರಿಂಟಿಯುಹುಟ್ಟಿದ ಹಬ್ಬಕ್ಕೋಸ್ಕರ
ಮಾತ್ರಗಳು ಅಮ್ಮನು ತಿಂಡಿಯನು ।
ನ ಜೊತೆಯಲಿ ಪೇಟೆಗೆಹೋಗಿ
ತಂದೆನು ರಿಂಟಿಗೆ ಬಟ್ಟೆಯನು ॥

೫.
ಯ ಊಟಕ್ಕೋಸ್ಕರವೆಂಸೂ
ತಂದೆನು ತಟ್ಟೆಬಟ್ಟಲನೂ ।
ಡೆನು ಅಲಂಕೃತವಾಗಿರುವಂಥ
ರಪಳಗಂಟೆ ಪಟ್ಟಿಯನೂ

೬.
ಪರಿಯಲಿ ಯನ್ನಯರಿಂಟಿಯು
ಡುತಲಿರುವ ಸಮಯದಲಿ ।
ರಿನ ಅಭ್ಯಂಜನ ಮಾಡಿಸಿ
ಗರವಮಾಡಿದೆ ಹರುಷದಲಿ ॥

೭.
ಮ ಜೊತೆಯಲಿ ಉಣಲಿಕ್ಕೆಂದು
ವೆನು ನೆರೆಮನೆ ನಾಯ್ಗಳನು ।
, ಜಾನಿ, ಟಾಮಿ, ವೋಕೀ
ಬ ನಾಯ್ಗಳು ಒಂದಿದ್ದವು ॥

೮.
ವಬಕ್ಷ್ಯವ ಬಡಿಸಿದಕೂಡಲೆ
ಯ್ಗಳು ಊಟವ ಮಾಡಿದವು ।
ಜೊತೆಯಲಿ ನಾಯ್ಗಳನಿಲ್ಲಿಸಿ
ಟೋವನ್ನೂ ತೆಗೆಸಿದೆವು ॥

೯.
ತೊಡಿಸಿ ನಾಯ್ಗಳ ಜೊತೆಯಲಿ
ನು ರಿಂಟಿಯು ನಾಟಕ್ಕೆ ।
ರಿಂಟಿಯನಾಟಕ್ಕೆ ತಳುಹ
ಟೆನು ತಿಂಡಿಯ ತರಲಿಕ್ಕೆ ॥

೧೦.
ನು ಮುಳುಗಿದ ಕತ್ತಲೆಯಾ
ಯಿತು.
ಯು ಮನೆಗೆ ಬರಲಿಲ್ಲಾ ।
ಹುಡುಕಿದರೂ ಷಹ
ನ ರಿಂಟಿಯು ಸಿಗಲಿಲ್ಲಾ ॥

೧೧.
ು ಮುಳುಗಿದ ಕೂಡಲೆ ರಿಂ
ಟಿಯು
ಮಾರ್ಗವನು ಹಿಡಿದಿತ್ತು ।
ಂದು ಕರಿ ಸರ್ಪವು ಬಂದು
ಕಾಲನು ಕಚ್ಚಿತು ॥

೧೨.
ಬೆಳಗಾಗುತ್ತಲೇ ಜನಗಳು ಬಂದು
ರಿಂಟಿಯ ವಾರ್ತೆ ಹೇಳಿದಾಗ ।
ರಿಂಟಿಯು ನೋವನು ಸಹಿಸಲು ಆಗದೆ
ಕುಂಟುತಬಂದಿತು ಮನೆಗಾಗ ॥

೧೩.
ಮುದ್ದಿನನಾಯಿಯ ಕಾಲನುತೊಳೆದು
ಔಷಧಿ ನಾನಾಗ ಹಾಕಿದೆನು ।
ಹೊಸಹಾಸಿಗೆಯಲಿ ರಿಂಟಿಯನುಮಲಗಿಸಿ
ದಿಕ್ಕುತೋಚದೆ ಕುಳ್ಳಿರ್ದೆನು ॥

೧೪.
ರಿಂಟಿಯು ನನ್ನಯ ಮುಖವನು ನೋಡಿ
ಮುಚ್ಚಿತು ಕಣ್ಗಳು ಎರಡನ್ನು ।
ಇಂತೀ ಪರಿಯೆಯ ಅವಸ್ಥೆಯನೋಡಿ
ಭೇದಿಸಿತೆನ್ನಯ ಹೃದಯವದು ॥

೧೫.
ಅನ್ನಾಹಾರಗಳೆಲ್ಲವಬಿಟ್ಟೇ
ರಿಂಟಿನಾವಿಗೆ ವ್ಯಥೆಪಟ್ಟೆ ।
ಇಂತೀ ಯನ್ನಯ ವ್ಯಥೆಯನು ಕಂಡು
ಅಮ್ಮನು ನನ್ನನು ಸಂತೈಸೇ ॥

೧೬.
ಅಕಟಾ ! ನೀರ್ಮೇಲಿನ ಗುಳ್ಳೆಯಂತೆ
ಸ್ಥಿರವಿಲ್ಲದ ತನುವಿದು ಜಗದಿ ।
ಅಲ್ಪಕಾಲದಲಿ ರಾಮನಪೂಜಿಸಿ
ಮುಕುತಿಪಡೆಯಿರಿ ಆ ಸ್ವರ್ಗದಿ ॥

—ಶ್ರೀರಾಮು

ಯಂ. ಸೂರ್ಯನಾರಾಯಣರಾವ್,
ಮೈಸೂರು.

† ಈ ಕಥೆಯು 1935ನೇ ಇಸವಿ ಡಿಸಂಬರ್ ತಿಂಗಳು ಆರನೆ ತಾರೀಕು ಮೈಸೂರು ಲಕ್ಷ್ಮೀಪುರದಲಿ ನಡೆದುದು

ನಂಜನಗೂಡು ವರ್ತಮಾನ.

ಸುಂಕ—ಶ್ರೀರಂಗ ಪಟ್ಟಣ ಮುಂತಾದ ಕಡೆಗಳಿಂದ ಮೈಸೂರು ಮಾರ್ಗವಾಗಿ ಬರುವ ಬೆಲ್ಲದ ಗಾಡಿಗಳಿಗೆ ಮೈಸೂರಿನ ಮುನಿಸಿಪಾಲಿಟಿಯವರೂ ಮೈಸೂರಿನಲ್ಲಿ ತಮ್ಮ ದರದಂತೆ, ಸುಂಕವನ್ನು ವಸೂಲ್ಮಾಡುತ್ತಿರುವದರಿಂದ ಇಲ್ಲಿ ಬೆಲ್ಲದ ಮಾರಾಟಕ್ಕೆ ತೊಂದರೆಯುಂಟಾಗುತ್ತಿದೆ. ಹಜರತ್ ಡೆಪ್ಯುಟಿ ಕಮಿಷನರ್ ಸಾಹೇಬರವರು ಇದನ್ನು ತಪ್ಪಿಸಲು ಕಾರ್ಯಕ್ರಮವನ್ನು ಕೈಗೊಳ್ಳಬೇಕಾಗಿದೆ ಹೊಸ ಚೀಫ್ ಆಫೀಸರವರುಕೂಡ ಚಟುವಟಿಗೆಯಿಂದ ಕೆಲಸಮಾಡುತ್ತಿದ್ದಾರೆ.

ಮುನಿಸಿಫ್ ಕೋರ್ಟು—ಪ್ರೋಸೆಸ್ ತಡವಾಗಿ ಬಂದಿತೆಂದೋ ಮತ್ತಾವ ಕಾರಣದಿಂದಲೋ ಏನೋ ಮೊಕದ್ದಮೆಗಳು ವಜಾ ಆಗುತ್ತಿವೆಯಂತ ದಯಾಳುಗಳಾಗಿ ಮುನಿಸಿಫರವರು ಇದು ನಿಜವಿದ್ದಲ್ಲಿ ಗಮನಕೊಡಬೇಕಾಗಿದೆ ಅಪೀಲಿಗೆ ದುಡ್ಡನ್ನು ತೆರುವುದೆಂದರೆ ಜನರಿಗೆ ಈ ದುಷ್ಕಾಲದಲ್ಲಿ ಬಹು ಕಷ್ಟವಲ್ಲವೇ?

ಆಸ್ಪತ್ರೆ—ಆಸ್ಪತ್ರೆಯ ಹೊಸ ಕಟ್ಟಡವು ಪೂರೈಸುತ್ತ ಬಂದಿದೆ ಆದರೆ ಬಹು ಮುಖ್ಯವಾದ ಹೆರಿಗೆಯ ಕೆಲಸವು ತಡವಾಗದಂತಿರಲು ಸಮೀಪದಲ್ಲಿಯೇ ಹೆಣ್ಣು ಡಾಕ್ಟರವರ ವಾಸ ಗೃಹವೊಂದಿಲ್ಲದಿರುವುದು ಕೊರತೆಯೇ ಸರಿ. ಆದಷ್ಟು ಬೇಗನೆ ಕಟ್ಟಿಸಿದರಾದೀತು

—ಹಿತೈಷಿ

ಚಾ. ಚಾ. (೫)

೧. ಹೇಡಿಗಳನ್ನು ಧೀರರಾಗಿ ಮಾರ್ಪಡಿಸಲು ಒಂದು ಇಂಜಕ್ಷನ್ನನ್ನು ಜರ್ಮದೇಶದವನು ಕಂಡು ಹಿಡಿದಿದ್ದಾನೆ ಅಂತ ಕಳೆದ ವಾರದ 'ಸಾಧ್ವಿ' ಯಲ್ಲಿ ಬರೆದಿದೆ. ಆದರೆ, ನಮ್ಮ ದೇಶದಲ್ಲಿರುವ ಲಕ್ಷಾಂತರ ಹೇಡಿಗಳಿಗೆ ಈ ಇಂಜಕ್ಷನ್ ಕೊಡುವುದಕ್ಕಿಂತ, ಇರುವ ಹಲಕೆಲವು ಧೀರರನ್ನು ಯಾವುದಾದರೂ ಇಂಜಕ್ಷನ್ ಮೂಲಕ ಹೇಡಿಗಳಾಗಿ ಮಾಡಿದರೆ, ಖರ್ಚು ಕಡಿಮೆ, ನೆಮ್ಮದಿಯೂ ಹೆಚ್ಚು.

೨. ರಾಜಧಾನಿಯಲ್ಲಿ ಕಳೆದ ವಾರ ಒಂದು 'ಕರ್ಣಾಟಕ ಸಂಘ' ವನ್ನು ಸ್ಥಾಪಿಸಿದಾರೆ ಆದ್ದರಿಂದ, ಸದ್ಯದಲ್ಲೇ S.P.C A. ಇದ್ದ ಹಾಗೆ, 'ಉಪನ್ಯಾಸಕ ಹಿಂಸಾ ನಿರೋಧಕ ಸಂಘ' ವೊಂದನ್ನು (Society for the Prevention of Cruelty to Lecturers) ಸ್ಥಾಪಿಸಬೇಕಾಗಬಹುದೆಂದು ತೋರುತ್ತದೆ.

೩. ಮೋಟಾರ್ ಡ್ರೈವರುಗಳ ದೃಷ್ಟಿಶಕ್ತಿಯನ್ನು ಹೆಚ್ಚಿಸುವುದಕ್ಕೆ ಕಣ್ಣಿಗೆ ಒಂದು ತರಹ ಎಣ್ಣೆಯನ್ನು ವೈದ್ಯರೊಬ್ಬರು ಕಂಡುಹಿಡಿದಿದ್ದಾರಂತೆ ಆದರೆ, ನಮಗೆ ಇದು ಅಷ್ಟು ಅವಶ್ಯಕವಿಲ್ಲ ಔಷಧಿಯನ್ನು ಉಪಯೋಗಿಸದೇನೇ, ನಮ್ಮ ಡ್ರೈವರುಗಳು ಜನಗಳ ಮೈಮೇಲೇ ಮೋಟಾರು ಬಿಡುತ್ತಿದಾರಲ್ಲಾ !

೪ ತಮ್ಮ ಸಂಸ್ಥೆಯ ಶಾಖೆಯೊಂದನ್ನು ರಾಜಧಾನಿಯಲ್ಲಿ ಸ್ಥಾಪಿಸಬೇಕೆಂದು ಒಬ್ಬರಿಗೆ ಕೆಲವು ದಿನಗಳ ಕೆಳಗೆ ಕನಸಾಗಿದೆಯಂತೆ ಸೆಚ್ಚು ತಿಂದು ತಕ್ಷಣ ಮಲಗಿಕೊಂಡರೆ, ಇಂಥಾ ಕೆಟ್ಟ ಕನಸುಗಳು ಆಗಿಯೇ ಆಗುತ್ತೆ. ತಿಳಿದವರು ಅವುಗಳಿಗೆ ಗಮನ ಕೊಡಬಾರದು ಎಂದು ನಾವು ಅವರನ್ನ ಕೇಳಿಕೊಳ್ಳೋಣ.

೫. ಯುಗಾದಿ ಪ್ರಯುಕ್ತ ಊರಿನ ನಾಲ್ಕಾರು ರಾಮಮಂದಿರಗಳಲ್ಲಿ ಯಥಾವಿಧಿ ಇಸ್ಪೀಟು, ಪುರಾಣ, ಪಾರಾಯಣ ಮತ್ತು ದಿವಾಳಿ ಸೇವೆ ನಡೆಯಿತು. ಶ್ರೀರಾಮನೇ ಕಾಪಾಡಬೇಕು.

೬. "ನಾವು ತಯಾರಿಸುವ ಅಂಗಿ ಚಡ್ಡಿಗಳನ್ನು ಒಮ್ಮೆ ತೊಟ್ಟರೆ, ತೆಗೆಯುವ ಕ್ರಮವೇ ಇಲ್ಲ ದೇಹ ಬೆಳೆದಹಾಗೆಲ್ಲಾ, ಅಂಗಿ ಚಡ್ಡಿಗಳೂ ಹಿರಿದಾಗುತ್ತವೆ" ಎಂದು ಒಂದು ಪ್ರಕಟಣೆಯನ್ನು ನೋಡಿದೆವೆ ಆದರೆ, ನಮ್ಮ ದೇಶದ ಹಳ್ಳಿಗಳಲ್ಲಿ ಆಗಲೇ, ಇಂತಹ ಬಟ್ಟೆಗಳನ್ನೇ ಉಡುತ್ತಿದಾರೆ. ಇದರಲ್ಲಿ ಹೊಸದಾಗಿ ಯಾವ ವಿಶೇಷವೂ ಇಲ್ಲ.

೭. ಕಳೆದವಾರ ಕಲ್ಕತ್ತಾ ನಗರದ ಬೀದಿಗಳಲ್ಲಿ ಗಂಟೆಗೆ ೪೫ ಮೈಲಿ ವೇಗವಾಗಿ ಬಿರುಗಾಳಿ ಬೀಸಿತು. ಅದರ ಲೈಸೆನ್ಸನ್ನು ರದ್ದು ಮಾಡಬೇಕೆಂದು ಕೌನ್ಸಿಲರುಗಳು ಸಲಹೆ ಮಾಡುತ್ತಿದಾರಂತೆ.

೮. "ಹಾರ್ಮೋನಿಯಂ ಬಾರಿಸುವವರಿಗೆ ಕ್ಷಯರೋಗ ಬರುವುದಿಲ್ಲ" ಎಂದು ಒಬ್ಬರು ಹೆಮ್ಮೆಪಡುತ್ತಿದ್ದರು ಇರಬಹುದು ಆದರೂ, ಪಕ್ಕದ ಮನೆಯಲ್ಲಿ ಸದಾ ಕೂತು ಹಾರ್ಮೋನಿಯಂ ಬಾರಿಸುವ ಪುಣ್ಯಾತ್ಮನಿಗೆ ದೇವರು ಇನ್ನು ಯಾವುದಾದರೂ ಒಂದು ಶಿಕ್ಷೆಯನ್ನು ಕೊಟ್ಟೇ ಕೊಡುತ್ತಾನೆ, ಸಂದೇಹವಿಲ್ಲ.

೯. ಹೆಂಡತಿ ತನ್ನನ್ನು ಬೈಯ್ಯುವುದಕ್ಕೆ ಪ್ರಾರಂಭ ಮಾಡಿದ ತಕ್ಷಣವೇ ಒಬ್ಬ ಗಂಡ ಮೂರ್ಛೆ ಹೋದನಂತೆ, ಮಹರಾಯ, ೩ ದಿವಸ ಏಳಲೇ ಇಲ್ಲವಂತೆ ನೋಡಿದಿರಾ ! ಕೆಲವರಿಗೆ ಅದೃಷ್ಟ ಹೀಗೆ ಕುಲಾಯಿಸುತ್ತೆ !

೧೦ ಪ್ರತಿವರ್ಷದಂತೆ ಈ ವರ್ಷವೂ ಜನರು ಆಗಲೇ "ಏನು ಬಿಸಿಲಿದು ! ಯಾವತ್ತೂ ಇಂಥಾ ಬೇಸಿಗೆ ಇರಲಿಲ್ಲ ಕಾಲ ಕೆಟ್ಟುಹೋಯಿತು" ಅಂತ ಹೇಳತೊಡಗಿದಾರೆ.

೧೧ "ಕಾಫಿ ಎಂಬ ಪಾನೀಯವು ಔಷಧವಲ್ಲ, ಅದು ಒಂದು ವಿಷ" ಎಂದು ಡಾಕ್ಟರೊಬ್ಬರು ಹೇಳಿರುವರು ಆದರೆ, ನಮಗೇಕೆ ಅದರ ಚಿಂತೆ? ನಮಗೆ ಹೋಟಲುಗಳಲ್ಲಿ ಕೊಡುವುದು "ಕಾಫಿ" ಅಲ್ಲವಲ್ಲ ಸದ್ಯ! ಇನ್ನೇನೇನೋ, ತಾನೆ! ಆದ್ದರಿಂದ, ನಮಗೇನೂ ಚಿಂತೆ ಇಲ್ಲ

೧೨. ಕಾಲೇಜು ವಿದ್ಯಾರ್ಥಿಗಳಿಗೆ ಬರಬರುತ್ತಾ ಕೆಲಸ ಹೆಚ್ಚುತ್ತಿದೆ, ಎಂದು ಒಬ್ಬರು ಗೊಣಗಿದರು. ಹಾಗಾದರೆ ತಿಂಡಿ ತಿನ್ನುವುದನ್ನು ದಿನಕ್ಕೆ ಒಂದೆರಡುಸಲ ಕಡಿಮೆಮಾಡಿಕೊಳ್ಳುವಂತೆ ಅವರಿಗೆ ಅನುಕೂಲ ಮಾಡಿಕೊಟ್ಟರೆ, ಎಷ್ಟೋ ಶ್ರಮ ಪರಿಹಾರವಾದೀತು

೧೩ ಟಪಾಲು ಕಾರ್ಡಿನ ದರವನ್ನು ೯ ಕಾಸಿಂದ ೬ ಕಾಸಿಗೆ ಇಳಿಸಿದರೆ, ತಾವು ಕಳುಹಿಸದೇ ಇರುವ ಕಾರ್ಡುಗಳಿಂದ ತಮಗೆ ಬರುವ ಲಾಭ ಕಡಿಮೆಯಾಗಿ, ತಮಗೆ ಪ್ರತಿಯೊಂದು ಕಾರ್ಡಿನಲ್ಲಿಯೂ ೩ ಕಾಸು ನಷ್ಟವಾಗುತ್ತೆ ಎಂದು ಒಬ್ಬರು ವಿದ್ವಾಂಸರು ಪತ್ರಿಕೆಗಳಿಗೆ ಬರೆದಿರುವರು.

೧೪. "ನಮಗೆ ಬೇಡವೆಯಿರುವ ಯಾವುದಾದರೂ ಒಂದು ಕೆಲಸವನ್ನು ಬಲವಂತದಿಂದಲಾದರೂ ಪ್ರತಿ ದಿನವೂ ಮಾಡುತ್ತಾ ಬಂದರೆ ಬಹಳ ಒಳ್ಳೆಯದು ' ಎಂಬುದು ಶಾಸ್ತ್ರಜ್ಞರಮತ. ಈ ಉಪದೇಶವನ್ನು ನಾವು ಆಗಲೇ ಅನುಸರಿಸುತ್ತಿದ್ದೇವೆ. ಹೇಗೆ, ಅಂತಿರೊ? . ದಿನವೂ ಬೆಳಗ್ಗೆ ನಾವು ಹಾಸಿಗೆ ಇಂದ ಏಳುತ್ತಿದ್ದೇವೆ

೧೫ "ಎಲ್ಲಾ ಸಣ್ಣ ಪುಟ್ಟ ಚೋರಿಗಳು; ಕಪ್ಪಲೆ, ಚೊಂಬು, ಹಳೇ ಬಟ್ಟೆ ಮುಂತಾದುವೇ ಹೋಗುವುದು ಹೆಚ್ಚು" ಎಂದು ಸಾಧ್ವಿ ಪೇಪರಿನಲ್ಲಿ ಬರೆದಿದೆ ಇದನ್ನು ನೋಡಿಯಾದರೂ ನಾಚಿಕೆಪಟ್ಟು, ದೊಡ್ಡ ದೊಡ್ಡ ದರೋಡೆಗಳನ್ನು ಮಾಡುತ್ತಾರೋ ಏನೋ ನೋಡೋಣ.

ಸಾ. ಕ

ಯಳಂದೂರು ಜಹಗೀರಿ.

ಸ್ವಾಮಿ,

ಬೆಳಗಾಯಿತು ಈಗತಾನೆ ಹಾಸಿಗೆ ಯಿಂದೆದ್ದಿ ಧೇನೆ ಸೂರ್ಯೋದಯವಾಗುತ್ತಾ ಬಂತು ಸೂರ್ಯನ ದರ್ಶನಕಾಲದಲ್ಲಿ ನನ್ನ ವಾಸಗೃಹಕ್ಕೆ ನೇರವಾಗಿ ಕಣ್ಣಿಗೆ ಗೋಚರವಾಗತಕ್ಕದ್ದೇ ಶ್ರೀ ಬಿಳಿಗಿರಿ ರಂಗಸ್ವಾಮಿಯವರ ಸನ್ನಿಧಿ. ಸರ್ವೇಸಾಮಾನ್ಯವಾಗಿ ಇಂಥಾ ದೇವಾಲಯಗಳಲ್ಲಿ ಮೂಲ ದೇವರು ಮತ್ತು ಅಮ್ಮನವರು ಅಕ್ಕಪಕ್ಕದಲ್ಲಿರತಕ್ಕದ್ದು ವಾಡಿಕೆ ಆದರೆ, ಶ್ರೀ ಬಿಳಿಗಿರಿರಂಗನ ಮರದೃಷ್ಟದಿಂದ, ಏನೋ ಕಾಲತಂತ್ರ ನಡೆದು, ಸಾಧ್ವಿಯು ಪಕ್ಕದಲ್ಲಿರಲಾರದೇ ಮುನಿಸಿಕೊಂಡು ಹೋಗಿ ಎಲ್ಲಿಯೋ ಗೋಪ್ಯವಾಗಿ ಅಡಗಿದ್ದಳು

ಸತಿಯು ಸಮಿಪದಲ್ಲಿರುವಾಗ್ಯೆ ಒಂದು ಬಗೆಯ ಉಲ್ಲಾಸವೂ, ಹತ್ತಿರವಿಲ್ಲದಿರುವಾಗ್ಯೆ ಏನೋ ಜಿಗುಪ್ಸೆ, ಸಿಡುಕು, ಆಕ್ರೋಶ ಇತ್ಯಾದಿಗಳುಂಟಾಗತಕ್ಕದ್ದು ಸ್ವಾಭಾವಿಕ ಅದೇ ಮೇರೆ, ಸಾಧ್ವಿಯು ಹತ್ತಿರದಲ್ಲಿಲ್ಲದ್ದರಿಂದ, ಶ್ರೀ ಬಿಳಿಗಿರಿರಂಗನು ತನ್ನ ಸಮಿಪವರ್ತಿಗಳಾದ ಜಹಗೀರ್ ಪ್ರಜೆಗಳ ಮೇಲೆ ಕೋಪಗೊಂಡು, ಅವರುಗಳಿಗೆ ಜೀವನಾಧಾರವಾಗಿರತಕ್ಕ ಕಲಾಮೆಗಳಿಗೆ ಸರೀಸ್ ನೀರು ಸಪ್ಲೈ ಆಗಲು ತಕ್ಕ ಸೌಕರ್ಯಗಳನ್ನು ಕಲ್ಪಿಸಿಕೊಡದೆ, ಅಧಿಕಾರಿಗಳಾದ ಆ ಒಡವಾಯಿಗಳನ್ನು (ವಿಷ್ಣುವು ಬಲಿಚಕ್ರವರ್ತಿಯನ್ನು ಮಾಡಿದಂತೆ) ಅಧಃ ಪಾತಾಳದಲ್ಲಿ ತುಳಿದಿರುತ್ತಾನೆ ತಿನ್ನಲು ಅನ್ನವಿಲ್ಲ, ಉಡಲು ಬಟ್ಟೆ ಇಲ್ಲ ಸಾಮಾನ್ಯ ಜೀವನವೇ ದುಸ್ತರವಾಗಿದೆ ಇದು ನಿಜಸ್ಥಿತಿ, ಉತ್ಪ್ರೇಕ್ಷೆಯಲ್ಲ

ಇಷ್ಟಾದಾಗ್ಯೂ, ಸ್ವಮತಸ್ಥರಲ್ಲಿ ಪಕ್ಷಪಾತಾಭಿಮಾನ ವಾತ್ಸಲ್ಯಾದಿಗಳು ಇರಲೇಬೇಕು ಎಂಬ ತತ್ವವನ್ನು ದೃಷ್ಟಾಂತಪುರಸ್ಸರವಾಗಿ ಮನುಷ್ಯ ವರ್ಗಕ್ಕೆ ಉಪದೇಶ ಮಾಡುವದಕ್ಕೋಸ್ಕರವೋ ಎಂಬಂತೆ, ಶ್ರೀ ಬಿಳಿಗಿರಿರಂಗನು ತನ್ನ ಮತಸ್ಥನಾದ ಶ್ರೀ ನರಸಿಹ್ಮಸ್ವಾಮಿಯು ನೆಲೆಯಾಗಿ ನಿಂತಿರತಕ್ಕ ಅಗರ ಗ್ರಾಮದ ಕೆರೆಗೆ ಮಾತ್ರ ಆಣೆಕಟ್ ವಗ್ಯೆರೆ ಸೌಕರ್ಯಗಳನ್ನು ಕಲ್ಪಿಸಿ ಕೊಟ್ಟು, ಉಳಿದ ಗ್ರಾಮಗಳ ನೀರಾವರಿ ಕೆಲಸಕಾರ್ಯಗಳ ವಿಚಾರದಲ್ಲಿ ಮೌನವನ್ನು ಧರಿಸಿರುತ್ತಾನೆ.

ಪರನ ಅನುಗ್ರಹಕ್ಕೆ ಪಾತ್ರಳಾದ ಶ್ರೀ ಚಾಮುಂಡೇಶ್ವರೀ ಅಮ್ಮನವರು ವಾಸವಾಗಿರತಕ್ಕ (ಅಂಬ+ಆಲಯ=ಅಂಬಾಲಯ ಅಥವಾ) ಅಂಬಳ, ಮತ್ತು ಶ್ರೀ ಗೌರೀಶ್ವರ, ಭುಜಂಗೇಶ್ವರ, ದೇಶೇಶ್ವರ ಎಂಬ ಅಭಿಧಾನದಿಂದ ಹೆಸರು ನೆಲೆಸಿರತಕ್ಕ ಯಳಂದೂರು, ಯರಿಯೂರು, ಮದ್ದೂರು ಈ ಗ್ರಾಮಗಳ ಶ್ರೇಯೋಭಿವೃದ್ಧಿ ವಿಚಾರದಲ್ಲಿ 'ಕೇಶವ, ಮಾಧವ, ಅನಂತ, ಶ್ರೀನಿವಾಸ, ಶ್ರೀಹರಿ ಎಂಬಿವೇ ಮೊದಲಾದ ನಾಮಗಳನ್ನು ಧರಿಸಿರತಕ್ಕ ಶ್ರೀ ಬಿಳಿಗಿರಿ ರಂಗಸ್ವಾಮಿಯು ಕರುಣದೃಷ್ಟಿ ಇಡದೇ ಇರತಕ್ಕದ್ದು ಸ್ವಾಭಾವಿಕವಾಗಿದೆ 'ಗಂಡಹೆಂಡಿರ ವ್ಯಾಜ್ಯದಲ್ಲಿ ಕೂಸು ಮೆತ್ತಗಾಯ್ತು' ಎಂಬ ಗಾದೆಗನುಸಾರವಾಗಿ, ಈ ಹರಿಹರರ ಮಧ್ಯೆ ಸಿಕ್ಕಿ ನರಳುತಿರತಕ್ಕ ನಮ್ಮಗಳ ಪಾಡು ನಾಯಿಪಾಡಾಗಿದೆ

ಗಂಗಾದೇವಿಯನ್ನು ಶಿರಸ್ಸಿನಲ್ಲಿಟ್ಟಿರತಕ್ಕ ಆ ಮಹಾದೇವನು ಅಧಿಪತಿಯಾಗಿ ಬಂದಿರುವಲ್ಲಿ, ಜಹಗೀರಿಗೆ ಶಿರಃಪ್ರಾಯವಾಗಿರತಕ್ಕ ಅಂಬಳೆ, ಯಳಂದೂರು, ಯರಿಯೂರು, ಮದ್ದೂರು, ಈ ಗ್ರಾಮಗಳ ತಲಾವ್‌ಗಳಿಗೆ ಇದೇ ಮುಂಗಾರಿನಲ್ಲಾದರೂ ಸರೀಸ್ ನೀರುಬಂದು ನಿಲ್ಲುವಂತೆ ಕಾಂಗರಿ ಆದೀತೆಂದು ನಿರೀಕ್ಷಿಸೋಣ ಒಂದು ವೇಳೆ ಆ ರೀತಿ ಆಗದೇ ಹೋದಲ್ಲಿ ಮಾಡತಕ್ಕದ್ದೇನು? ತಲೆಯಮೇಲೆ ಗಂಗೆ ಇಟ್ಟುಕೊಂಡಿದ್ದಾಗ್ಯೂ ಆ ಮಹಾದೇವನು ಭಿಕ್ಷಾಟನೆಗೆ ಹೊರಟಂತೆಯೇ, ನೆತ್ತಿಯಮೇಲೆ ನೀರಿದ್ದಾಗ್ಯೂ ಅದರ ಫಲವನ್ನನುಭವಿಸಲು ಲಭ್ಯವಿಲ್ಲದ ನಾವುಗಳೂ ಕೂಡ ಭಿಕ್ಷಾಪಾತ್ರೆ ಹಿಡಿದು, ತಲೆಯಮೇಲೆ ಗುಡ್ಡೆ ಹಾಕಿಕೊಂಡು ದೇಶಾಂತರ ಸಂಚಾರ ಹೊರಡೋಣ ಇದು ವಿನಹಾ ಬೇರೆ ಮಾರ್ಗವಿಲ್ಲ

ಜಹಗೀರ್ ಹಿತೈಷಿ.

A Reply

To all malicious and false mis-representations, (if any)

WHAT AN EMINENT ACTUARY OF GREAT BRITAIN SAYS

After perusal of the Company's Balance Sheet, Directors' Report and Abstract of Business, our Actuary, Mr H L Humphreys has favoured with his invaluable opinion in the course of which he observes —

It is clear that the very difficult task of the establishment of a LIFE OFFICE is well begun You are to be congratulated on the extent to which so far you have limited the inevitably heavy expenses of the Start . I shall hope to see continued progress in this and the following years and that the economical efforts obvious from these accounts will be continued

I wish the Company continued success '

THE MYSORE INSURANCE COMPANY LTD,
SRI NARASIMHARAJA ROAD, Bangalore City

ಭೋಗಾಪುರದಲ್ಲಿ ಗಂಗಾ ಪೂಜೆ.

ಕ್ರೈಸ್ತ ಉಪದೇಶಿಗಳ ಮೇಲೆ ೧೪೪ ನೇ ಸೆಕ್ಷನ್.

ಮೊದಲೇ ತಿಳಿಸಿದ್ದಂತೆ 24ನೇ ತಾ॥ ದಿವಸ ಆದಿಕರ್ನಾಟಕರು. ಗಂಗಾ ಪೂಜೆಗಾಗಿ ಎಲ್ಲವನ್ನೂ ಸಿದ್ಧಮಾಡಿಕೊಂಡಿದ್ದರು ಆ॥ ಪೋ॥ ಸೂಪರಿಂಟೆಂಡೆಂಟರವರೂ ಪೋ॥ ಇನ್ಸ್ಪೆಕ್ಟರವರೂ, ಚಾಮರಾಜನಗರ, ನಂಜನಗೂಡು, ಸಂತೇ ಮರಹಳ್ಳಿಗಳಿಂದ ಸುಮಾರು ಮೂವತ್ತು ಜನ ಪೋಲೀಸರನ್ನು ಬರಮಾಡಿಕೊಂಡು ದಯಮಾಡಿಸಿದ್ದರು ಪೋಲೀಸರು ಕ್ರೈಸ್ತ ಉಪದೇಶಿಗಳಿಗೂ ಅವರ ಮುಖಂಡರುಗಳಿಗೂ 144 ನೇ ಸೆಕ್ಷನ್ ಆರ್ಡರು ಜಾರಿ ಮಾಡಿದರು, ಕ್ರೈಸ್ತರು ಆ ಬಾವಿಯ ಸಮೀಪಕ್ಕ ಬಂದು ಗಂಗಾ ಪೂಜೆ ವಗ್ಯೆರೆ ಕೆಲಸ ಕಾರ್ಯಗಳಿಗೆ ಅಡ್ಡಿ ಪಡಿಸಕೂಡದೆಂದೂ ಆ ಬಾವಿಗೆ ಕ್ರೈಸ್ತರು ಹಕ್ಕುಪಡೆಯುಕೊಂಡು ಬರುವವರೆಗೂ ಅವರು ನೀರು ಸೇದಕೂಡದೆಂದು ಡಂಗೂರ ಹೊಡೆಸಿದರು ಬಹಿರಂಗ ಪ್ರದೇಶಗಳಲ್ಲಿ 144 ನೇ ಸೆಕ್ಷನ್ ಆರ್ಡರಿನ ಕಾಪಿಯನ್ನು ಅಂಟಿಸಿದರು ಆದಿಕರ್ನಾಟಕರು ಸುಮಾರು 11 ಗಂಟೆಯ ಸಮಯದಲ್ಲಿ ಪಟೇಲರ ಮನೆಯಿಂದ ಕುದೇರು ಪಳ್ಳಿದೇವರ ಮಠದ ಪಟ್ಟದ ಸ್ವಾಮಿಗಳಾದ ಮಹಂತದೇವರೂರವರನ್ನೂ ಪೂಜಾ ಸಾಮಗ್ರಿಗಳನ್ನೂ ಪಂಚವಾದ್ಯಗಳ ಸಮೇತ ಮೆರವಣಿಗೆ ಮಾಡಿಕೊಂಡು ಆದಿಕರ್ನಾಟಕರ ಬಾವಿಗೆ ದಯಮಾಡಿಸಿದರು ವೈಭವದಿಂದ ಸ್ವಾಮಿಗಳು ಗಂಗಾ ಪೂಜೆಯನ್ನು ನಡಸಿದರು. ನಂತರ ಪುಷ್ಪ ತಾಂಬೂಲಗಳ ವಿನಿಯೋಗವಾಯಿತು ಗ್ರಾಮದ ಸವರ್ಣ ಹಿಂದೂಗಳೂ, ಛೇರ್ಮೆನ್ನರವರೂ ಮತ್ತು ಪಟೇಲರವರೂ ಸಹ ದಯಮಾಡಿಸಿದ್ದರು ಪೋ॥ ಅ॥ ಸೂಪರಿಂಟೆಂಡೆಂಟರವರು ಬಹು ಜಾಗರೂಕತೆಯಿಂದಲೂ, ಶಾಂತಿಯಿಂದಲೂ ಕೆಲಸ ಕಾರ್ಯಗಳು ಸಾಂಗವಾಗಿ ನೆರವೇರುವಂತೆ ಏರ್ಪಾಡುಮಾಡಿ ಸಹಕರಿಸಿದ್ದರು ಅದಕ್ಕಾಗಿ ಅವರಿಗೆ ಅನಂತ ಧನ್ಯವಾದಗಳು

ತಗಡೂರು ರಾಮಚಂದ್ರರಾವ್

ಕರ್ನಾಟಕ ಸಂಘ, ಮೈಸೂರು.

ಕಳೆದ 26ನೇ ತಾರೀಖು ಗುರುವಾರ, ಡಿ. ಬನುಮಯ್ಯನವರ ಹೈಸ್ಕೂಲಿನಲ್ಲಿ, ಸರ್ ಕೆ. ಪಿ ಪುಟ್ಟಣ್ಣ ಶೆಟ್ಟರ ಅಧ್ಯಕ್ಷತೆಯಲ್ಲಿ ಕರ್ನಾಟಕ ಸಂಘದ ಆರಂಭೋತ್ಸವವು ನಡೆಯಿತು ಅನೇಕ ಮಹಿಳೆಯರೂ, ಮಹನೀಯರೂ ಬಂದಿದ್ದರು ದೇವತಾಪ್ರಾರ್ಥನೆ, ಭಾರತವಾಚನ ಮತ್ತು ಆಸ್ಥಾನ ವಿದ್ವಾನ್ ಬಿ ದೇವೇಂದ್ರಪ್ಪನವರ ಗಾನವಾದ ನಂತರ, ಕರ್ನಾಟಕ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಶ್ರೀ॥ ಡಿ ವಿ ಗುಂಡಪ್ಪನವರು ಭಾಷಣ ಮಾಡಿದರು ಕನ್ನಡದಲ್ಲಿ ಜೀವನ ಧರ್ಮವನ್ನು ಬರೆದು ಪ್ರಚಾರ ಮಾಡಬೇಕು ಕನ್ನಡವು ಕರಡು ಕಟ್ಟಿದೆ, ವಿಜ್ಞಾನಶಾಸ್ತ್ರವನ್ನು ಕನ್ನಡದಲ್ಲಿ ಬರಸಿದರೆ ಆಂಗ್ಲ ಪಾಂಡಿತ್ಯಕ್ಕೆ ಕುಂದಕವಿಲ್ಲವೆಂದು ಅವರು ಹೇಳಿದರು ವಂದನಾ ಸಮರ್ಪಣ ಮತ್ತು ಮಂಗಳಗಳೊಡನೆ ಸಭೆಯು ಮುಕ್ತಾಯವಾಯಿತು

ವಾರವನ್ನು ಕಂಡು ಹಿಡಿಯುವುದು ಹೇಗೆ?

ಸಾವಿರದ ಒಂಭೈನೂರ ಮೂವತ್ತಾರನೆಯ ಇಸವಿಯ ಯಾವುದಾದರೂ ತಿಂಗಳಿನ ಒಂದು ತಾರೀಖನ್ನು ಗೊತ್ತು ಮಾಡಿಕೊಂಡು ಆ ತಾರೀಖಿನ ದಿನವಾವುದು ಎಂಬುದನ್ನು ತಿಳಿಯಬೇಕಾದಲ್ಲಿ ಈ ಗಣಿತವು ಸಹಾಯಕವಾಗಿದೆ ಅದು ಹೇಗೆ ಎಂಬುದು ಕೆಳಗಿನ ಪಟ್ಟಿಯಿಂದ ತಿಳಿಯುವುದು

ಜನವರಿ—3	ಫೆಬ್ರವರಿ—6
ಮಾರ್ಚಿ—0	ಏಪ್ರಿಲ್—3
ಮೇ —5	ಜೂನ್—1
ಜುಲೈ—3	ಆಗಸ್ಟ್—6
ಸಪ್ಟೆಂಬರ್—2	ಅಕ್ಟೋಬರ್—[illegible]
ನವೆಂಬರ್—0	ಡಿಸೆಂಬರ್—2

ತಿಂಗಳಿನ ಪಕ್ಕದಲ್ಲಿರುವ ಸಂಖ್ಯೆಯನ್ನು ನಮಗೆ ಬೇಕಾದ ತಾರೀಖಿಗೆ ಸೇರಿಸಬೇಕು ಆ ಸಂಖ್ಯೆಯನ್ನು 7ರಿಂದ ಭಾಗಿಸಬೇಕು

ಶೇಷವು 1 ಉಳಿದರೆ ಭಾನುವಾರವೆಂದೂ, 2 ಉಳಿದರೆ ಸೋಮವಾರವೆಂದೂ 3 ಉಳಿದರೆ ಮಂಗಳವಾರವೆಂದೂ, 4 ಉಳಿದರೆ ಬುಧವಾರವೆಂದೂ, 5 ಉಳಿದರೆ ಗುರುವಾರವೆಂದೂ, 6 ಉಳಿದರೆ ಶುಕ್ರವಾರವೆಂದೂ ತಿಳಿಯಬೇಕು ಸೊನ್ನೆ ಉಳಿದರೆ ಶನಿವಾರವೆಂದು ತಿಳಿಯಬೇಕು

ಉದಾಹರಣೆ— ಮಾರ್ಚಿ ತಿಂಗಳ 24ನೇ ತಾರೀಖು ಯಾವ ದಿನ? ತಿಂಗಳ ಮುಂದಿನ ಸಂಖ್ಯೆ 0 ಆದರೆ 24 ನೂ 0 ನ್ನೂ ಕೂಡಬೇಕು 24+0= 24 ಬರುವ ಸಂಖ್ಯೆ 24 24ನ್ನು 7ರಿಂದ ಭಾಗಿಸಿದರೆ ಶೇಷ 3 3 ಶೇಷ ಉಳಿದರೆ ಮಂಗಳವಾರ

ಆರ್ ವಿ. ರಂಗರಾವ್,
ವಿದ್ಯಾರ್ಥಿ

ಶ್ರೀ ರಂಗನಾಥ ಟೈಪ್ ಫೌಂಡ್ರಿ

ಚಿಕ್ಕಪೇಟೆ, ಬೆಂಗಳೂರು ಸಿಟಿ

ಸುಂದರವಾದ ಅಕ್ಷರಗಳು, ಮುದ್ದುಮುದ್ದಾದ ಬಾರ್ಡರುಗಳು ಬಗೆಬಗೆಯ ಆಕಾರ
ನಮಗೆ ಈ ಕಲಸದಲ್ಲಿ ೨೦ ವರ್ಷಗಳ ಕಾಲದ ಅನುಭವವಿದೆ ಆಧುನಿಕ ಶಾಸ್ತ್ರಕ್ಕೆ
ತಕ್ಕಂತೆ ಅಕ್ಷರದ ಆಕಾರವನ್ನು ಬಹು ಸುಂದರವಾಗಿ ಸುಧಾರಿಸಿದ್ದೇವೆ
ನಮ್ಮಲ್ಲಿನ "ಕನ್ನಡ, ಇಂಗ್ಲೀಷ್" ಅಕ್ಷರಗಳಂತಹ ಸುಂದರವಾದ ಅಕ್ಷರಗಳನ್ನು
ಮತ್ತೆಲ್ಲಿಯೂ ನೋಡಲಾರಿರಿ ಮತ್ತು
ನಾನಾ ಬಗೆಯ ಸುಂದರವಾದ ಬಾರ್ಡರುಗಳು, ನವೀನಮಾದರಿಯಾದ
೬ ಪಾಯಿಂಟಿನಿಂದ ೪೮ ಪಾಯಿಂಟಿನವರಿಗೆ ನಿರ್ಧರಿತವಾದ ಸಂಖ್ಯೆಗಳಿವೆ
ನಮ್ಮ 'ರಂಗನಾಥ ಕನ್ನಡ ಡಾಮಿನನ್ಸ್" ಅಕ್ಷರಗಳನ್ನು ನೋಡಲು ಮರೆಯಬೇಡಿರಿ.
ನಾವು ಕಾಪರ್ ಅಲಾಯ್ನು (ತಾಮ್ರಮಿಶ್ರಿತ) ಸೀಸದಿಂದ ಅಕ್ಷರಗಳನ್ನು
ತಯಾರಿಸುತ್ತೇವೆ ಸುಲಭ ಬೆಲೆ ಗ್ಯಾರಂಟಿಯಾದ ಬಾಳಿಕೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ಬಾಲಸುಧಾ

ಮಕ್ಕಳ ಜ್ವರದ ಗೆಡ್ಡೆಯನ್ನು ಬಾತರ ಗುಣ ಪಡಿಸುತ್ತೆ, ಲಿವರ್ ಪಿತ್ತಕೋಶ) ದಪ್ಪನಾಗಿ ಕಣ್ಣು ಹಳದಿ ಬಣ್ಣವಾಗಿದ್ದರೆ ಇದರ ಸೇವನೆಯಿಂದ ದಿನೇ ದಿನೇ ಗುಣವಾಗುತ್ತೆ, 20 ವರ್ಷಗಳಿಂದಲೂ ಅನುಭವ ಸಿದ್ಧವಾಗಿದೆ—ಮಕ್ಕಳ ಭೇದಿಗೆ ನಮ್ಮ ಬಾಲ ಸಂಜೀವಿನಿಯನ್ನೇ ಉಪಯೋಗಿಸಿರಿ

ಬಾಲಸುಧಾ ಬೆಲೆ 1 ರೂ   ಬಾಲ ಸಂಜೀವಿನಿ ೪ ಆ

ಮೈಸೂರು, ಬೆಂಗಳೂರು ಮದ್ರಾಸುಗಳಲ್ಲಿ ನಮ್ಮ ಶಾಖೆಗಳಿವೆ
ಸದ್ವೈದ್ಯಶಾಲಾ, ನಂಜನಗೂಡು.

ಶೀಘ್ರದಲ್ಲಿಯೇ ಬರುತ್ತದೆ!   ನಂಜನಗೂಡಿನಲ್ಲಿರುವ ಲಕ್ಷ್ಮೀ ಥಿಯೇಟರಿನಲ್ಲಿ!

ರಾಜೇಂದ್ರ ಸಿನಿಮಾ, ನಂಜನಗೂಡು.



ಪ್ರೊಪ್ರೈಟರ್ಸ್
ಸೋನರಾಜ್ ರತನ್ ಚಂದ್ ಅಂಡ್ ಕಂಪೆನಿ, ಮೈಸೂರು

ತಮ್ಮ ಎಂಪ್ರೆಸ್ ಟಾಕಿ ಹೊಸ ಚಿತ್ರಗಳನ್ನು ಪ್ರದರ್ಶಿಸುತ್ತಾರೆ ಒದುವ ತಾರೀಖನ್ನು ಗಮನಿಸಿರಿ—**ಸತೀ ಸುಲೋಚನ** ಎಂಬ ಕನ್ನಡ ಚಿತ್ರದಲ್ಲಿ ಸೀತೆ ಪಾತ್ರ ಧರಿಸಿದ್ದ **ಮಿಸೆಸ್ ರಾಜಂ** ಮತ್ತು ಕೊಲ್ಹಾಪುರದ ಸ್ಟಂಟ್ ಮಾಸ್ಟರ್, ಪ್ರಭಾತ ಫಿಲಂ ಕಂಪೆನಿಯ ಪೈಟಿಂಗ್ ಬ್ಲಡ ಮತ್ತು ಚಂದ್ರಸೇನೆಯಲ್ಲಿ ಪಾರ್ಟುಮಾಡಿದ್ದ **ಗಣಪತಜಯ** ಮುಖ್ಯಪಾತ್ರ ವಹಿಸಿರುವ ಪೌರಾಣಿಕ ಚಲನ ಚಿತ್ರ

ಭಕ್ತ ವಿಜಯ
(ನೂತನ ಪ್ರದರ್ಶನ)

(ರಮೇಶ್ ಫಿಲಂ ಕಂಪನಿ, ಬೆಂಗಳೂರು ಇವರ ತಯಾರಿಕೆ) ಡೈರೆಕ್ಟರು ವೈ. ವಿ. ರಾವ್ (ಸತೀ ಸುಲೋಚನ ಡೈರೆಕ್ಟರು)

FOR SILENT & TALKIE PICTURES
Bookings at
RAJENDRA PICTURES CORPORATION
Sayaji Rao Road Cross, Mysore

ಬಂಗಾರದ ಪದಕಗಳೂ ಅನೇಕ ಪ್ರಶಸ್ತಿ ಪತ್ರಗಳೂ ದೊರೆತಿವೆ.
೧೫ ವರ್ಷಗಳಿಂದಲೂ
ಅರಮನೆಯ ಅನೇಕ ಆಫೀಸರುಗಳ ಮತ್ತು ಮಹಾಜನರ ಮೆಚ್ಚಿಕೆಗೆ ಪಾತ್ರವಾಗಿ
ಸುಂದರವಾದ

ಬೋರ್ಡುಗಳನ್ನೂ

ಉತ್ತಮವಾದ

ರಬ್ಬರ್ ಮೊಹರುಗಳನ್ನೂ

ತಯಾರಿಸುವ
ಒಮ್ಮೆ ನಮ್ಮಲ್ಲಿ ಮಾಡಿಸಿದವರು ಬೇರೆಕಡೆ ಹೋಗುವುದಿಲ್ಲ, ಮಾದರಿ ಕಳುಹಿಸಲಾಗುವುದು
ನಮ್ಮದೇ ಎಂಬುವನ್ನು ನಮೂದಿಸಿ ಬರೆಯಿರಿ

ಓರಿಯಂಟಲ್ ಇಂಡಸ್ಟ್ರೀಸ್,

ಜಗನ್ಮೋಹನ ಬಂಗ್ಲೆ ಬೀದಿ, ಮೈಸೂರು

For Up to date and Efficient Medical Treatment

Go to—**Dr. A. J. RAM & SONS,**

Sayaji Rao Road, Mysore.

Physicians, Dentists Opticians, etc

ಡಾ॥ ಎ ಜೆ ರಾಂ. ಅಂಡ್ ಸನ್ಸ್,

ಸಯ್ಯಾಜಿರಾವ್ ರೋಡ್, ಮೈಸೂರು ಸಿಟಿ.

ಔಷಧ ವ್ಯಾಪಾರಿಗಳು, ಚಿಕಿತ್ಸಕರು, ದಂತವೈದ್ಯರು,

ಮತ್ತು ಕನ್ನಡಕ ವ್ಯಾಪಾರಿಗಳು.

ಉತ್ತಮವಾದ ನವೀನ ಚಿಕಿತ್ಸೆಗಳಿಗೆ ನಮ್ಮಲ್ಲಿಯೇ ಬನ್ನಿರಿ.

ನಾಳಿನ ಮಹಾ ಮೈಸೂರು.

ಉದಯಿಸಲು ಅಡಿಗಲ್ಲನ್ನಿಡಿ.

ಮೈಸೂರು ವಿಮಾ ಕಂಪೆನಿಯೊಂದಿಗೆ ಸರ್ವ ಪ್ರಕಾರದಿಂದಲೂ ಸಹಕರಿಸಿ. ಇದು ನಮ್ಮ ಪ್ರಾರ್ಥನೆ.

ಹೀಗೆ ಪ್ರಾರ್ಥಿಸುವುದು ನಮ್ಮ ಜನ್ಮಸಿದ್ಧವಾದ ಹಕ್ಕು. ಹಾಗೆ ಸಹಕರಿಸುವುದು ನಿಮ್ಮ ಪವಿತ್ರ ಕರ್ತವ್ಯ.

ಕರ್ಣಾಟಕದಲ್ಲಿ ಸ್ಥಾಪಿತವಾದ ವಿಮಾ ಕಂಪೆನಿಗಳಲ್ಲಿ ಪ್ರಥಮ ವರ್ಷದಲ್ಲೇ ಯಾವುದೂ ಈ ಕಂಪೆನಿಯಷ್ಟು ಕಾರ್ಯನಡೆಸಿಲ್ಲ

ನಾಳಿನ ಮಹಾ ಮೈಸೂರಿನ ಮುಂಬೆಳಗು ಯಾವುದು?

ಮೈಸೂರು ವಿಮಾ ಕಂಪೆನಿ, ಲಿಮಿಟೆಡ್.,

ಬೆಂಗಳೂರು.

ಮೈಸೂರು ವಿಮಾ ಕಂಪೆನಿಯು ಮೈಸೂರಿನವರ ಮತ್ತು ಮೈಸೂರಿನ ಅಭ್ಯುದಯಕ್ಕಾಗಿ ಮೈಸೂರು ಬಂಡವಾಳದಿಂದ ಮೈಸೂರಿನವರ ನೇತೃತ್ವದಲ್ಲಿ ಮೈಸೂರಿನ ಕೆಲಸಗಾರರಿಂದ ನಡೆಸಲ್ಪಡುತ್ತಿರುವ ಅಚ್ಚ ಮೈಸೂರು ಸಂಸ್ಥೆ.

ಭರತಮಾತೆಯ ಆರ್ಥಿಕೋನ್ನತಿಗಾಗಿ ದೇಶದ ನಾನಾ ಭಾಗಗಳಲ್ಲಿ ನಡೆಯುತ್ತಿರುವ ಪ್ರಯತ್ನಗಳಿಗೆ ತನ್ನ ಶಕ್ತ್ಯನುಸಾರ ಮೈಸೂರು ನೆರವಾಗಬೇಕೆಂಬ ಆಶೆಯಿಂದ ಈ ಸಂಸ್ಥೆಯು ಬೆಳಕುಕಂಡಿತು.

ವಿಮಾ ಉದ್ಯಮದಲ್ಲಿ ಇಡೀ ಸಂಸ್ಥಾನಕ್ಕೆ ಏಕಮಾತ್ರ ಆದರ್ಶ ಸಾರ್ವಜನಿಕ ಸಂಸ್ಥೆಯಿದು.

ಇಂತಹ ಕಂಪೆನಿಯಲ್ಲಿ ಮೈಸೂರಿನವರೆಲ್ಲರ ಪ್ರಾತಿನಿಧ್ಯವಿದ್ದೇ ತೀರಬೇಕು.

ಮೊದಲಿನ ೧ ಲಕ್ಷ ರೂ. ಗಳ ಷೇರುಗಳೂ ಅತ್ಯಲ್ಪಕಾಲದಲ್ಲಿಯೇ ಚಂದಾ ಆಗಿಹೋದವು.

ಬೇಡಿಕೆ ಆವಶ್ಯಕತೆಗಳನ್ನನುಸರಿಸಿ

ಷೇರು ಬಂಡವಾಳವನ್ನು ಇನ್ನೂ ೨ ಲಕ್ಷ ಹೆಚ್ಚಿಸಲಾಗಿದೆ

ಈ ಎರಡು ಲಕ್ಷದಲ್ಲಿ ೧೦೦ ರೂಗಳ ೧೦೦೦ ಷೇರುಗಳನ್ನು ಮಾತ್ರ ಡೈರೆಕ್ಟರುಗಳು ಮೀಸಲಿಟ್ಟಿರುವರು.

ಬಂದ ಷೇರು ದರಖಾಸ್ತುಗಳನ್ನೆಲ್ಲ ಅಂಗೀಕರಿಸಿದ್ದರೆ ಈ ಬಂಡವಾಳವೂ ಈಗಾಗಲೇ ಚಂದಾ ಆಗಿ ಹೋಗಿರುತ್ತಿತ್ತು. ಆದರೆ, ಕೊನೆಯ ಪಕ್ಷ ಸಾವಿರ ರೂಪಾಯಿನ ವಿಮಾ ಪತ್ರವನ್ನು ತೆಗೆದುಕೊಂಡಲ್ಲದೆ ಷೇರುಗಳನ್ನು ಕೊಡಲಾಗದೆಂಬ ನಿಯಮವನ್ನು ಅನುಸರಿಸಿದ ಪರಿಣಾಮ ಇನ್ನೂ ಕೆಲವು ಷೇರುಗಳು ಮಾತ್ರ ಉಳಿದಿವೆ.

ಸರ್ವರ ಅನುಕೂಲ ಆವಶ್ಯಕತೆಗಳಿಗೆ ಸರಿಹೊಂದುವ ವೈದ್ಯ ಪರೀಕ್ಷೆಯಿರುವ ಮತ್ತು ಇಲ್ಲದಿರುವ ನವೀನ ವಿಮಾ ಪದ್ಧತಿಗಳು.

ಸ್ತ್ರೀಯರೂ ವಿಮೆ ಮಾಡಬಹುದು.

ಏಜೆಂಟರುಗಳಿಲ್ಲದ ಸ್ಥಳಗಳಲ್ಲೆಲ್ಲಾ ಏಜೆಂಟರು ಬೇಕು.

ವೇತನದ ಮೇಲೂ ಕೆಲಸಮಾಡಲು ಅವಕಾಶವಿದೆ.

ಹೆಚ್ಚು ವಿವರಗಳಿಗೆ—

ಕಂಠೀರವ ಮತ್ತು ಕಂಪೆನಿ,
ಮ್ಯಾನೇಜಿಂಗ್ ಏಜೆಂಟ್ಸ್,
ಮೈಸೂರು ವಿಮಾ ಕಂಪೆನಿ ಲಿಮಿಟೆಡ್.,
ಶ್ರೀ ನರಸಿಂಹರಾಜ ರೋಡ್, ಬೆಂಗಳೂರು ಸಿಟಿ.

KANTEERAVA & Co.
Managing Agents,
MYSORE INSURANCE CO., LTD.,
Narasimharaja Road, Bangalore City.

Edited, Printed & Published by Agaram Rangiah, B. A., at Sri Rama Press, D. Subbiah Road, Mysore.

ಸಾಧ್ವಿ ಚಂದಾ ವಿವರ.

ಒಂದು ವರ್ಷಕ್ಕೆ ಮುಂಗಡ 1—8—0
ಬಿಡಿ ಪ್ರತಿ 2—4—0 ಬಿಡಿ ಪ್ರತಿಗೆ 0—0—6

ಜಾಹೀರಾತು ಚಂದಾ ವಿವರ.

ವಿದ್ಯಾರ್ಥಿಗಳಿಗೆ, ಮತ್ತು ಸಂಘಗಳಿಗೆ
ಮುಫಸ್ಸಲ್ ಸಂಘಗಳಿಗೆ 2—4—0

॥ ಸತ್ಯಮೇವೋದ್ಧರಾಮ್ಯಹಮ್ ॥

ರಾಜಧಾನಿಯ ರಾಷ್ಟ್ರೀಯ ವಾರ ಪತ್ರಿಕೆ.

ವೃದ್ಧ ಪಿತಾಮಹ ಎಂ. ವೆಂಕಟಕೃಷ್ಣಯ್ಯನವರ ಜ್ಞಾಪಕಾರ್ಥವಾಗಿ ಪ್ರಕಟಿಸಲ್ಪಡುವುದು.

ಸಂಪಾದಕರು ಅಗರಂ ರಂಗಯ್ಯ, ಬಿ.ಎ

Sadhvi: A Leading Nationalist Weekly of Mysore.

FOUNDED IN MEMORY OF MR M. VENKATA KRISHNAYYA, THE GRAND OLD MAN OF MYSORE

ಸಂಪುಟ ೧] MYSORE : MONDAY 13—4—36 ಮೈಸೂರು : ಸೋಮವಾರ ೧೩—೪—೩೬ [ಸಂಚಿಕೆ ೮

Bombay

INDRA BHAVAN,

IDEAL INDIAN RESTAURANT,

Sayaji Rao Road, MYSORE.

LADIES AND GENTLEMEN,

Don't you like to safegaurd your health at all times? Then you must insist upon having your Lunch and Drinks hygienically prepared by pure and choicest articles

We are at your service,

Bombay Indra Bhavan,

SAYAJI RAO ROAD, MYSORE.

ಬೊಂಬಾಯಿ ಇಂದ್ರ ಭವನ,

ಅತ್ಯುತ್ತಮವಾದ ಹಿಂದೂ ಫಲಾಹಾರ ಮಂದಿರ,

ಸಯ್ಯಾಜಿ ರಾವ್ ರಸ್ತೆ, ಮೈಸೂರು

ಮಹಿಳೆಯರೇ ಮತ್ತು ಮಹನೀಯರೇ,

ನೀವು ಸದಾ ನಿಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳಬೇಕೆಂದು ಆಶಿಸುವುದಿಲ್ಲವೇ? ಹಾಗಾದರೆ ಯಾವಾಗಲೂ ಶುಚಿಯಾದ ಮತ್ತು ಉತ್ತಮವಾದ ಪದಾರ್ಥಗಳಿಂದಲೇ ತಯಾರಿಸಿದ ರುಚಿಯಾದ ಆಹಾರ ಮತ್ತು ಪಾನೀಯಗಳು ಅಗತ್ಯವಾಗಿವೆ?

ತಮ್ಮ ಆರೋಗ್ಯಾಪೇಕ್ಷಿಗಳು,

ಬೊಂಬಾಯಿ ಇಂದ್ರ ಭವನ,

ಸಯ್ಯಾಜಿರಾವ್ ರೋಡು, ಮೈಸೂರು.



A Reliable House for Repairs of
WATCHES & GRAMOPHONES.
HIGH CLASS RUBBER STAMP
Suppliers,
M·V N·WATCH COY,
The General Commission Agency
Lansdowne Buildings,
MYSORE.

ಗಡಿಯಾರ ಮತ್ತು ಗ್ರಾಮೋಫೋನುಗಳ ರಿಪೇರಿ
ಮತ್ತು ರಬ್ಬರ್ ಮೊಹರುಗಳ ತಯಾರಿ
ನಮ್ಮಲ್ಲಿ ನಡೆಯುತ್ತವೆ.
ಎಂ ವಿ ಎನ್ ವಾಚ್ ಕಂಪೆನಿ, ಮೈಸೂರು

ಎಂ. ವಿ. ನಾರಾಯಣರಾಯರ
ಶ್ರೀ ಸತ್ಯನಾರಾಯಣ ಪರಿಮಳ ಫ್ಯಾಕ್ಟರಿ,
ಜಗನ್ಮೋಹನ ಬಂಗ್ಲೆ ಬೀದಿ, ಮೈಸೂರು.

ಪರಿಮಳ ಅಗರ್ ಬತ್ತಿ

ಉಪಯೋಗಿಸಿ ಪ್ರೋತ್ಸಾಹಿಸಿರಿ.

ANANDA SODA FACTORY,
DODDAPET, MYSORE.

BEST AERATED WATER SUPPLIERS
COMPLETE REQUISITES FOR
AERATED WATER MANUFACTURERS
AVAILABLE

ಆನಂದಾ ಸೋಡಾ ಫ್ಯಾಕ್ಟರಿ,
ದೊಡ್ಡಪೇಟೆ, ಮೈಸೂರು

MYSORE RACES & SWEEP
Races—30th May, 3rd, 6th 9th, 11th & 13th June,

Railway Specials run on all Race days between Bangalore & Mysore at Special Concession rates

GOLD CUP SWEEP (BY PERMISSION OF GOVERNMENT OF MYSORE).

Tickets Rs 5/- each

To close on Saturday 23rd May 1936
Bonus given to Sellers of Winning Tickets.
Total Collection 1935-Rs 19,970/-
For Prospectus & Particulars apply to

The Honorary Secretary,
RACE COURSE MYSORE

USE ALWAYS
DERMOTONE
(GASTRIC BATHING HERBAL PREPARATION)
THE UNIQUE PRODUCT
IN THE MARKET FOR SKIN HYGIENE.

ಡರ್ಮೊಟೋನ್,
ಶಾಸ್ತ್ರೀಯವಾದ ಮತ್ತು ಆರೋಗ್ಯಕರವಾದ ಚರ್ಮರಕ್ಷಣೆ ಚೂರ್ಣ.
ಡರ್ಮೊಟೋನ್ ವರ್ಕ್ಸ್, ಮೈಸೂರು

FROM 11th APRIL 1936
AT OLYMPIA TALKIES, MYSORE
(The City's Perfect Sound Theatre)
"KARAWAN-E-HUSN"
Featuring your favourite stars, Nazir & Zohra,
Full of thrills, mirth and Music.

ತಾ|| ೧೧—೪—೩೬ ರಿಂದ "ಕಾರವಾನ್ ಎ ಹುಸನ್"
ಎಂಬ ಮನೋಹರವಾದ ನಾಟಕ
ಒಲಿಂಪಿಯಾ ಟಾಕೀಸ್, ಮೈಸೂರು

ಶ್ರೀ ಸತ್ಯನಾರಾಯಣ ವೈದ್ಯಶಾಲೆ,
ಚಾಮರಾಜ ಅಗ್ರಹಾರ, ಮೈಸೂರು

ವಿಷೂಚಿ ವಿಧ್ವಂಸಿನಿ, ಲಘುಪ್ರಾಣ ಚೂರ್ಣ, ದ್ರಾಕ್ಷಾದಿ ರಸಾಯನ, ಜ್ವರಾಂಕುಶ ಮಾತ್ರೆಗಳು, ಸತ್ಯನಾರಾಯಣ ರಸಾಯನ ದಂತಶೂಲ ನಿವಾರಿಣಿ, ಪುಷ್ಪಾಂಜನ

ಪಂಡಿತ ಸಿ. ಎಚ್. ಚಂದ್ರಭಾನಸಿಂಗ್ ಅಂಡ್ ಬ್ರದರ್

ಮಹಾಕಾಳಿಂಗಾದಿ ಕಷಾಯ

'ಮಲೇರಿಯಾ ಮತ್ತು ಇತರ ಜ್ವರಗಳಿಗೆ ಖಾತರಿ ಔಷಧ' ಈ ಕಷಾಯವು ಪ್ಲೀಹ ಮತ್ತು ಯಕೃತ್ಖಂಡಗಳ ವರ್ಧನೆ (ಬ್ರಹ್ಮಗೆಡ್ಡೆ) ಯೊಂದೊಡಗೂಡಿದ ಮತ್ತು ಇತರ ಸತತ ಸಾತತ ಮತ್ತು ದೀರ್ಘಕಾಲದ ಎಲ್ಲಾ ಬಗೆಯ ಜ್ವರಗಳಿಗೂ ಮನಗಂಡ ನಿರ್ಭಯವಾದ ಸಂಜೀವನವು. ಪರಿಪಕ್ವವಾಗಿರುವವರಿಗೆಲ್ಲ ಆಗಾಗ್ಗೆ ಸೇವಿಸುವುದರಿಂದ ಈ ಬಗೆಯ ಜ್ವರವು ಅಂಟುವುದಿಲ್ಲ. ಔಷಧಿಯು ಬಹು ದಿನಗಳವರೆಗೆ ಪ್ರತಿಬಂಧವನ್ನು ಮಾಡಿಸುತ್ತದೆ. ಇದರ ಸೇವನೆಯಿಂದ ಯಕೃತ್ಖಂಡಗಳ ಕೆಲಸವು ಸರಿಯಾಗುವುದು. ಪ್ಲೀಹವು ತನ್ನ ಸ್ಥಿತಿಗೆ ಬರುವುದು. ರಕ್ತದಲ್ಲಿ ಕೆಂಪು ರಕ್ತ ಕಣಗಳು ಹೆಚ್ಚುವುವು.

ಮುಖ್ಯ ವ್ಯಾಧಿಗ್ರಸ್ತನು ಸ್ವಲ್ಪ ದಿವಸಗಳಲ್ಲಿಯೇ ಉತ್ತಮವಾದ ಆರೋಗ್ಯ ಸ್ಥಿತಿಗೆ ಬರುವನು. ಈ ಕಷಾಯದ ವನಸ್ಪತಿ ಸಂಯೋಗವು ಎಲ್ಲಾ ಬಗೆಯಗಳಲ್ಲಿ ಅನೇಕ ವಿಧ ಜ್ವರಗಳನ್ನು ಗುಣಪಡಿಸುತ್ತದೆ.

ಕ್ರಯ:— ಔನ್ಸ್ ಸೀಸೆಗೆ ೧—೪—

ಬ್ರಾಂಚ್:—ಶ್ರೀಸತ್ಯನಾರಾಯಣ ಆಯುರ್ವೇದಿಕ್ ಮೆಡಿಕಲ್ ಸ್ಟೋರ್ಸ್
ಜಗನ್ಮೋಹನ ಬಂಗ್ಲೆ ರಸ್ತೆ, ಮೈಸೂರು.

|| ಸತ್ಯಮೇವೋದ್ಧರಾಮ್ಯಹಮ್ ||

ರಾಜಧಾನಿಯ ರಾಷ್ಟ್ರೀಯ ವಾರ ಪತ್ರಿಕೆ.

ವೃದ್ಧಪಿತಾಮಹ ಎಂ. ವೆಂಕಟಕೃಷ್ಣಯ್ಯನವರ ಜ್ಞಾಪಕಾರ್ಥವಾಗಿ ಪ್ರಕಟಿಸಲ್ಪಡುವುದು.

ಸಂಪಾದಕರು: ಆಗರಂ ರಂಗಯ್ಯ, ಬಿ. ಎ.

ಸಂಪುಟ ೧] MYSORE : MONDAY 13—4—36 ಮೈಸೂರು : ಸೋಮವಾರ ೧೩—೪—೩೬ [ಸಂಚಿಕೆ ೮

ಚೈನಾ ಗಡಿನಾಡಿನ ಘಟನೆ.

ಜಪಾನರ ಹೇಳಿಕೆ.

ಮಾರ್ಚಿ 31 ರಲ್ಲಿ ಟಾಲಾನ್ ಎಂಬ ಸ್ಥಳದಲ್ಲಿ ಜಪಾನರಿಗೂ, ಮಂಗೋಲಿಯನ್ನರಿಗೂ ತಿಕ್ಕಾಟ ಸಂಭವಿಸಿತಷ್ಟೆ. ಅದರ ವಿಚಾರವಾಗಿ ಜಪಾನಿನವರು ತಮ್ಮ ಹೇಳಿಕೆಯೊಂದನ್ನಿತ್ತಿರುವರು 13 ಮದ್ದು ತುಂಬಿದ ಮೋಟಾರುಗಾಡಿಗಳೂ, 12 ವಿಮಾನಗಳೂ, 300 ಕಾಲಾಳುಗಳೂ, ಯುದ್ಧೋಪಕರಣಗಳಿಂದ ಸಜ್ಜಿತರಾಗಿ ಗಡಿನಾಡನ್ನು ಕಾಯುತ್ತಿದ್ದ ತಮ್ಮ ಸೈನ್ಯದ ಮೇಲೆ ಬುಯಿರ್‌ನಾರ್ ಸರೋವರದ ಹತ್ತಿರ ಮುತ್ತಿದರೆಂದೂ ಅವರು ತಿಳಿಸಿರುವರು. 700 ಬಾಂಬುಗಳ ಮಳೆಗರೆಯಿತು ; ಇದರ ಫಲವಾಗಿ ಒಬ್ಬ ಜಪಾನೀ ಅಧಿಕಾರಿಗಳೂ, 3 ಜನ ಜಪಾನೀ ಸೈನಿಕರೂ ಸತ್ತರು ಮೂರು ಮಂಗೋಲಿಯನ್ನರ ವಿಮಾನಗಳು ಕೆಳಗಿಳಿಸಲ್ಪಟ್ಟವು ಮತ್ತು ಅಪಾರ ನಷ್ಟ ಸಂಭವಿಸಿ ಅವರು ಹಿಮ್ಮೆಟ್ಟಿದರು.

೧೦೫ ವರ್ಷದ ಮನುಷ್ಯ !

ನ್ಯೂಯಾರ್ಕಿನಲ್ಲಿ ವಾಸಿಸುತ್ತಿರುವ ಜಾಕ್ ಕಾರ್ನ್ಸ್‌ಫಾಕ್ಸ್ ಡೀರ್‌ಹಿಲ್ ಎಂಬೊಬ್ಬ ಮೊಹವಾಕ್ ಇಂಡಿಯನ್ನನಿಗೆ 105 ವರ್ಷಗಳಾಗಿವೆ. ಈ ವಯಸ್ಸಿನಲ್ಲೂ ಅವನು ಸಂತೋಷಚಿತ್ತನಾಗಿಯೇ ಇರುತ್ತಾನೆ. ಹೀಗೆ ಬದುಕಬೇಕು ಎಂಬುದರ ವಿಚಾರವಾಗಿ ಅವನು ಈ ಕೆಳಗೆ ಕಂಡಂತೆ ಹೇಳುತ್ತಾನೆ.—ಎಲೆಗಳು ತುಂಬಿರುವ ದಿಂಬನ್ನು ಉಪಯೋಗಿಸು ಕಾಲುಗಳಿಗೆ ಪಟ್ಟಿಯನ್ನು ಕಟ್ಟು ರಾತ್ರಿಯ ಕಾಲದಲ್ಲಿ ಕಟ್ಟುಗಳನ್ನು ಬಿಚ್ಚಿಬಿಡು. ನಿನಗೆ 25 ವರ್ಷಗಳಾಗಿದ್ದರೆ ಕೆಲವು ದಿನಗಳಲ್ಲೇ 15 ವರುಷದ ನವತರುಣನಾಗುವೆ. ಔಷಧಿಗಳನ್ನು ಖಂಡಿತವಾಗಿಯೂ ಉಪಯೋಗಿಸಬೇಡ ಒಣಗಿದ ಹುಲ್ಲಿನ ರುಚಿ ಬಹಳ ಇದೆ. ಹುಲ್ಲಿಗೆ ಉಪ್ಪು ಮತ್ತು ಮೆಣಸನ್ನು ಸೇರಿಸಿ ಭಕ್ಷಿಸು ಕೊನೆಯದಾಗಿ ಮರದ ಹಲಿಗೆಯಮೇಲೆ ಮಲಗು. ಇವೇ ಅವನ ಉಪದೇಶಗಳು ವಿಚಿತ್ರ ಮನು...

ಸಹಗಮನದ ಪ್ರಯತ್ನ.

ಗಣಪತಿರಾಂ ಎಂಬುವನೊಬ್ಬ ಫತೇಗರ್ ಎಂಬ ಊರಿನ ನಿವಾಸಿಯು ಮರಣ ಹೊಂದಲು, ಅವನ ಸತಿಯು ಸಹಗಮನವನ್ನಾಚರಿಸಲು ಯತ್ನಿಸಿದಳು. ಕುಂಕುಮವನ್ನು ಲೇಪಿಸಿಕೊಂಡು. ಅಗ್ನಿನಾರಾಯಣನಿಗೆ ದೇಹವನ್ನರ್ಪಿಸುವವರಲ್ಲಿದ್ದಳು. ಪೋಲೀಸ್ ಅಧಿಕಾರಿಗಳಿಗೆ ಇದು ಹೇಗೋ ತಿಳಿದು ತಕ್ಕ ಬಂದೋಬಸ್ತನ್ನಿಟ್ಟು 'ಸತಿ' ಯನ್ನು ತಪ್ಪಿಸಿದರಂತೆ.

ಸತ್ತು ಬದುಕುವ ಯೋಗಿ

ಪ್ರೊಫೆಸರ್ ಯಶಪಾಲ್ ಎಂಬ ಯೋಗಿಗಳು ಬೊಂಬಾಯಿನಲ್ಲಿ ತಮ್ಮ ಕೌಶಲ್ಯವನ್ನು ಪ್ರದರ್ಶಿಸಿದರು. ನಾಡಿಯ ಬಡಿತವನ್ನು ನಿಲ್ಲಿಸುವುದು, ಗುಳಿಯಲ್ಲಿ ಸಮಾಧಿಗ್ರಸ್ತರಾಗುವುದು, ಇವೇ ಅವರು ಪ್ರದರ್ಶಿಸಿದ ಕೆಲವು ಕೌಶಲ್ಯವಾದ ವಿದ್ಯೆಗಳು ಯೋಗಾಭ್ಯಾಸದ ಬಲದಿಂದ ಇವುಗಳನ್ನು ಮಾಡುವರು

ಶ್ರೀ ಕೂಡ್ಲಿ ಜಗದ್ಗುರುಗಳಾಗಿದ್ದ

ಶ್ರೀ ವಾಲುಕೇಶ್ವರ ಸ್ವಾಮಿಗಳವರು.

ಕಾಂಗ್ರೆಸ್ ಅಧಿವೇಶನ 'ಕ್ರಿಸ್‌ಮಸ್' ನಲ್ಲಿ.

ಮುಂದಿನ ವರ್ಷದಿಂದ ಕಾಂಗ್ರೆಸ್ ಅಧಿವೇಶನವು ಕ್ರಿಸ್‌ಮಸ್‌ನಲ್ಲಿ ನಡೆಯುವುದು. ಯಾಕಂದರೆ ಮಾರ್ಚಿ ಮತ್ತು ಏಪ್ರಿಲ್ ತಿಂಗಳುಗಳಲ್ಲಿ ಸುಮಾರು 1000 ಜನರು ಅಸೆಂಬ್ಲಿ ಮತ್ತು ಕೌನ್ಸಿಲ್‌ಗಳಲ್ಲಿ ಇರುವುದರಿಂದ ಅವರಿಗೆ ಬರಲು ಕ್ರಿಸ್‌ಮಸ್ ರಜಾ ದಿನಗಳೇ ಸರಿಯಾಗಿದೆ.

ರಾಮೋತ್ಸವಗಳು.

ಮೈಸೂರಿನಲ್ಲಿರುವ ಎಲ್ಲಾ ರಾಮಮಂದಿರಗಳಲ್ಲೂ ಶ್ರೀರಾಮನವಮಿಯಿಂದ ಪ್ರಾರಂಭವಾದ ಸಂಗೀತ, ಹರಿಕಥೆ, ಪುರಾಣ ಶ್ರವಣ ಮೊದಲಾದವುಗಳು ನಿನ್ನೆಗೆ ಮುಕ್ತಾಯಗೊಂಡವು. ಅನೇಕ ಕಡೆಗಳಲ್ಲಿ ಶ್ರೀರಾಮ ಪಟ್ಟಾಭಿಷೇಕವು ಬಹಳ ವೈಭವದಿಂದ ನಿನ್ನೆಯದಿನ ಜರುಗಿತು.

ಮುಸೋಲಿನಿಯ ವೀರ ಘರ್ಜನೆ.

ಮುಸೋಲಿನಿಯು ಕ್ಯಾಬಿನೆಟ್ ಸಭೆಯನ್ನು ಕೂಡಿಸಿ, ಅಬಿಸೀನಿಯಾದಲ್ಲಿ ಉಂಟಾಗುತ್ತಿರುವ ಜಯಕ್ಕೆ ಕಾರಣರಾದ ಸೈನ್ಯಾಧಿಪತಿಗಳನ್ನು ಅಭಿನಂದಿಸಿದನು. ಮಾರ್ಷಲ್ ಬಡೋಗ್ಲಿಯೋ, ಅಧಿಕಾರಿಗಳೂ, ಸೈನ್ಯವೂ ಅಭಿನಂದಿಸಲ್ಪಟ್ಟರು. ಅಬಿಸೀನಿಯಾವನ್ನು ಸಂಪೂರ್ಣವಾಗಿ ಹಾಳುಮಾಡುವವರೆಗೂ ತಮಗೆ ಸೌಖ್ಯವಿಲ್ಲವೆಂದು ವೀರಾಲಾಪವನ್ನು ಮಾಡಿದನು ಸ್ಯಾಂಕ್ಷನ್ನುಗಳನ್ನು ಪ್ರಯೋಗಿಸಿದಂದಿನಿಂದ ಇಟಲಿಯವರು ಇನ್ನೂ ಗಟ್ಟಿ ಮನಸ್ಸಿನಿಂದ ಯುದ್ಧ ಮಾಡುತ್ತಾ, ಜಯಸಿರಿಯನ್ನು ವರಿಸುತ್ತಿರುವರೆಂದು ಮುಸೋಲಿನಿಯು ಹೇಳಿದನು. ಬಲವಂತವಾಗಿ ವಿಮಾನ ಸೈನ್ಯ ಹೆಚ್ಚಿಸಲು ಅಲ್ಲಿನ 'ಕ್ಯಾಬಿನೆಟ್' ಸಭೆಯು ತೀರ್ಮಾನಿಸಿದೆ.

ಖಾದಿ ಕೈಗಾರಿಕೆಯ ಬೆಳವಣಿಗೆ.

1931 ರಿಂದ ಇರುವ ಆರ್ಥಿಕಮುಗ್ಗಟ್ಟಿನಿಂದ ಖಾದಿ ಕೈಗಾರಿಕೆಗೂ ಧಕ್ಕೆ ತಗುಲಿದೆ, ಎಂದು ಅಖಿಲಭಾರತ ನೂಲುವವರ ಸಂಘದ ಕಾರ್ಯದರ್ಶಿಗಳು ಹೇಳುತ್ತಾರೆ. ಈ ಸಂಘದ ಆಶ್ರಯದಲ್ಲಿರುವ ಸಂಸ್ಥೆಗಳು ಸುಮಾರು 30 ಲಕ್ಷ ರೂ ಬಾಳುವ ಖಾದಿ ತಯಾರಿಸಿರುವವೆಂದೂ, ವಿಕ್ರಯವನ್ನು 40 ಲಕ್ಷ ರೂ ನಷ್ಟು ಮಾಡಿರುವರೆಂದೂ ಅವರು ವರದಿಯಲ್ಲಿ ಹೇಳಿರುತ್ತಾರೆ ಬಾಬು ರಾಜೇಂದ್ರರು ತಮ್ಮ 1935 ನೇ ಇಸವಿಯ ಪ್ರವಾಸದಲ್ಲಿ 59,297 ರೂ ಗಳನ್ನು ಕೂಡಿಸಿದರು. ಎಂಟನೇ ಒಂದು ಭಾಗವು ಅಖಿಲಭಾರತ ರಾಷ್ಟ್ರೀಯ ಸಮಿತಿಗೆ ಕೊಡಲ್ಪಟ್ಟಿತು ಮತ್ತು ಉಳಿದ ಹಣವು ಆಯಾಯ ಪ್ರಾಂತ್ಯಗಳಿಗೆ ಕೊಡಲ್ಪಟ್ಟಿತು. ಇವರ ಪ್ರವಾಸವೆಲ್ಲವೂ ಹೆಚ್ಚಾಗಿ ಮದರಾಸ್ ಪ್ರಾಂತ್ಯದಲ್ಲೇ ಆಯಿತು.

ಶಬ್ದದಿಂದ ಕುಳ್ಳರಾಗುವರು.

ಹೆಚ್ಚಾದ ಶಬ್ದವನ್ನು ಕೇಳಿದರೆ ರೋಮನಾಳಗಳು ಸಂಕುಚಿತವಾಗುವುವು. ಮತ್ತು ಇದರ ಫಲವಾಗಿ ಮನುಷ್ಯನು ಕುಳ್ಳ, ವಾಮನನು ಎಂಬುದಾಗಿ ಲಂಡನ್ನಿನ ಒಬ್ಬರು ವೈದ್ಯಶಾಸ್ತ್ರಜ್ಞರು ಕಂಡು ಹಿಡಿದಿರುವರು

ಲಕ್ಷ್ಮೀ ಪಾರ್ವತಿಯರ ಸಂವಾದ

(ಮಕ್ಕಳ ನಾಟಕದಿಂದ)

ಪಾರ್ವತಿ —ಲಕ್ಷ್ಮೀ ? ನಿನ್ನ ಮಗ ಅನಂಗನಂತಲ್ಲ ? ಅವನಿಗೆ ಶರೀರವೇ ಇಲ್ಲವಂತೆ ! ಅವನು ಎಲ್ಲಿದ್ದಾನೆಯೆ ?

ಲಕ್ಷ್ಮೀ —ಪಾರ್ವತಿ ! ಅನಂಗನೇ ! ಈಶ್ವರನ ಮಗ, ಆ ಆನೆಮೊಗದ ಮುಖದವನು, ಆ ಗಣಪ್ಪ, ಅವನ ಜೊತೆಯಲ್ಲಿ ಆಡುವುದಕ್ಕೆ ಹೊ ಗಿದ್ದಾನೆಯೆ

ಪಾ—ಇದಿರಲಿ. ಅದ್ಯಾವನೋ ಬ್ರಹ್ಮನಂತಲ್ಲ ! ಅವನಿಗೆ ನಾಲ್ಕು ತಲೆಗಳಂತ ! ದಿಕ್ಕುಗಳನ್ನು ನೋಡುವುದಕ್ಕೆ ತುಂಬಾ ಸರಾಗವಲ್ಲವೇನೆ ?

ಲ—ಎಷ್ಟಿದ್ದರೇನು ! ಕುಮಾರನಂತೆ ಆರು ತಲೆಗಳು ಇದ್ದಿದ್ದರೆ ನಾಲ್ಕು ದಿಕ್ಕುಗಳನ್ನೇಕ ? ಭೂಮಿ ಮತ್ತು ಆಕಾಶಗಳನ್ನೂ ನೋಡಬಹುದಾಗಿತ್ತು

ಪಾ—ಲಕ್ಷ್ಮೀ ! ಅದ್ಯಾವನೇ ಅವನು ? ಮೀನಾಗಿ, ಆಮೆಯಾಗಿ, ಹಂದಿಯಾಗಿ, ಸಿಂಹವಾಗಿ, ಕುಳ್ಳನಾಗಿ, ಕಳ್ಳನಾಗಿದ್ದನಂತಲ್ಲ ?

ಲ—ಹೌದು ಹೌದು ಅವನೇ ! ಅದ್ಯಾವನೋ ಒಬ್ಬ ಬಿಬ್ಬೆಗೆ ಗತಿಯಿಲ್ಲದೆ, ದಿಗಂಬರನಾದ, ಕಿರಾತನಿರುವನಂತೆ ಅವನ ಹೆಂಡತಿಗೆ ಅಣ್ಣ ಕಾಣೆ

ಪಾ—ಹೋಗಲಿ ಏನೋ ಒಂದು ಮಾತು ಕೇಳುತ್ತೇನಮ್ಮ ಕೋಪಿಸಬೇಕ ನಿನ್ನ ಗಂಡನಿಗೆ ನೀನೊಬ್ಬಳೂ, ಭೂದೇವಿಯೊಬ್ಬಳೂ, ಪತ್ನಿಯರಲ್ಲವೆ ? ಭೂದೇವಿಯನ್ನು ಅನೇಕ ರಾಜರುಗಳು ಅಪಹರಿಸಿದರು ನೀನು ಚಂಚಲೆ ಘಳಿಗೆಗೆ ಒಬ್ಬೊಬ್ಬರ ಮನೆಯಲ್ಲಿರುತ್ತೀಯೆ ಹೀಗಿರುವಾಗ ನಿನ್ನ ಗಂಡನಿಗೇನೆ ಸೌಖ್ಯ ?

ಲ—ಹೌದು ಹೌದು ಪರರ ಮನೆಗೆ ಹೋದ ಮಾತ್ರದಿಂದ ಬಂದ ಬಾಧಕವೇನು ? ಗಂಡನ ಮಾತು ಕೇಳದೆ ಯಜ್ಞದ ನೆಪದಿಂದ, ತಂದೆಯ ಮನೆಗೆ ಹೋಗಿ, ಅವಮಾನಿತಳಾಗಿ, ಸತ್ತು ಗಂಡನನ್ನು ಸಾವಿರಾರು ವರ್ಷಗಳು ತಪಸ್ಸು ಮಾಡುವಂತೆ ಮಾಡಿದೆಯಲ್ಲೆ ! ಅದಕ್ಕಿಂತಲೂ, ಇದು ಅನ್ಯಾಯವೆ ?

ಪಾ—ಲಕ್ಷ್ಮೀ, ನಿನ್ನ ಮನೆಯಲ್ಲಿ ಅದೆಷ್ಟು ಜಗಳ ! ಆ ಹಾವಿಗೂ ಆ ಹಕ್ಕಿಗೂ ಒಂದನ್ನು ಕಂಡರೆ ಒಂದಕ್ಕೆ ಆಗುವುದಿಲ್ಲ! ಸಾಲದಕ್ಕೆ ನಿನಗೆ ಹದಿನಾರು ಸಾವಿರ ಸವತಿಯರು ಪರಸ್ಪರ ಯಾದವೀ ಕಲಹ, ಇದನ್ನು ನೋಡಲಾರದೆ ನಿನ್ನ ಗಂಡನು ಮನೆಗೆ ಬರುವುದಿಲ್ಲವೆಂದು ಕೋಪಿಸಿಕೊಂಡು ಮರಹತ್ತಿಬಿಟ್ಟನಂತಲ್ಲೆ !

ಲ—ಹೌದು ಹೌದು, ಇಲಿಗೂ ಹಾವಿಗೂ ವೈರ ಹಾವಿಗೂ ನವಿಲಿಗೂ ವೈರ ಆ ಆನೆಮುಖದವನಿಗೂ, ಸಿಂಹಕ್ಕೂ ಜಗಳ, ಗಂಗೆಗೂ ಗೌರಿಗೂ ಜಗಳ ಇದನ್ನೆಲ್ಲ ಸಹಿಸಲಾರದೆ ವಿಷಕುಡಿದನಲ್ಲವೆ ನಿನ್ನ ಗಂಡ ? ನನ್ನ ಮನೆ ದೋಸೆ ತೂತಾದರೆ ನಿನ್ನ ಮನೆ ಕಾವಲಿಯೇ ತೂತು ಕಾಣ.

ಪಾ—ಲಕ್ಷ್ಮೀ ನಾನು ಬಲ್ಲೆ ! ನಾನೇನೂ ಯಾವಾಗಲೂ ಗಂಡನ ಎದೆ ಮೇಲೆ ಕೂತುಕೊಂಡು ಗಂಡನನ್ನು ಪೀಡಿಸುತ್ತಾ ಇಲ್ಲಕಾಣೆ

ಲ—ನಾನು ಹಾಗಿರಲಿ, ನೀನು ನಿನ್ನ ಗಂಡನ ತೊಡೆ ಮೇಲೆ ಮೂರು ಹೊತ್ತು ಹೇರಿಕೊಂಡು ಅವನನ್ನು ಅರ್ಧ ಹೆಂಗಸನ್ನೇ ಮಾಡಿದ್ದು ಸಾಲದೆ ಆ ಗಂಗೆ ಕೈಲಿ ನಿನ್ನ ಗಂಡನ ತಲೆ ಮೊಟ್ಟಿಸುತ್ತಾ ಇದ್ದೀಯಲ್ಲ ! ಇದು ಸರಿಯೇನೆ ?

ಪಾ ಅತ್ತಿಗೇ ! ಕೋಪಿಸಬೇಡ ! ನಾವುಗಳೇ ಹೀಗೆ ಪರಸ್ಪರ ದೂಷಣೆ ಮಾಡುತ್ತಿದ್ದರೆ ನಮ್ಮ ಭಕ್ತರು ಸುಮ್ಮನಿರುವರೆ ? ಅವರೂ ಒಬ್ಬರಿಗೊಬ್ಬರು ಹೊಣಗಾಡುವರು

ಲ—ತಂಗಿ, ಇದು ನಿಜ, ಮೊದಲು ನೀನೇ ಕೆಣಕಿದ್ದರಿಂದ ನಾನೂ ಆಡಬೇಕಾಯಿತು. ಅಗೋ, ನನ್ನ ನಿನ್ನ ಭಕ್ತರನೇಕರು ಲೋಕಸೇವೆ ಮಾಡುತ್ತಿದ್ದಾರೆ ಕಾಣಿಸುವುದೆ ?

ಪಾ—ಅದಿರಲಿ, ಅವರಲ್ಲಿ ಲೋಕಸೇವೆ ಮಾಡುತ್ತಿದ್ದ ವೃದ್ಧಪಿತಾಮಹ, ತಾತನನ್ನು ಅದೇಕೆ ಅಪಹರಿಸಿರುವೆ ? ಅವನು ನನ್ನ ಭಕ್ತನು

ಲ—ಭೂಲೋಕದಲ್ಲಿ ಲೋಕಸೇವೆ ಮಾಡುವಾಗ ನಿನ್ನ ಭಕ್ತನೇ ಹೌದು ಆಗ ನಾನು ಆ ವೃದ್ಧ ತಾತನನ್ನು ವಶಪಡಿಸಿಕೊಳ್ಳಲು ಅನೇಕಸಲ ಅವನೊಡನೆ ಇದ್ದರೂ ಆ ತಾತನು ನನ್ನನ್ನು ಪುರಸ್ಕರಿಸದೆ ಇತರರಲ್ಲಿಗೇ ನನ್ನನ್ನು ಅಟ್ಟುತ್ತಿದ್ದನು. ಇವನ್ನು ಸಹಿಸಲಾರದೆ ದುಃಖಿತಳಾಗಿದ್ದು ನಾನು ಈಗ ನನ್ನನ್ನಗಲಲು ಅವಕಾಶವೇ ಇರದಂತೆ ನನ್ನ ಸ್ವಾಮಿಯ ಬಳಿ ಕೂರಿಸಿರುವೆನು

ಜಗದೀಶಾ ನೀನೆಕಾಯಬೇಕು ಎಲ್ಲರ !
ಹಗಲಿರುಳು ನಿನ್ನಧ್ಯಾನವಮಾಳ್ಪದೀನರೊಳಿಷ್ಟ!
ವಿಶ್ವಜನಕನೆಂಬ ನಾಮದಿಂದ ಕರೆವರೋ!
ವಿಶ್ವೇಶಾ! ನಿನ್ನನುತಿಸಿ ಕೇಳಿಕೊಂಬರೋ||

ಮಕ್ಕಳ ತಾತ

ವೈಸ್-ಛಾನ್ಸಿಲರ್.

ಈಗ ರಜದಮೇಲೆ ಹೋಗಿರುವ ವಿಶ್ವವಿದ್ಯಾಲಯದ ವೈಸ್ ಛಾನ್ಸೆಲರಾದ ಡಾ|| ಮೆಟ್ಕಾಫ್ ರವರಿಗೆ 1936 ನೇ ಜುಲೈ 2 ರಿಂದ ಮತ್ತೊಂದು ವರ್ಷ ಒಡಾವಣೆಯನ್ನು ಕೊಡಲಾಗಿದೆ

ಕಳಲೆ ರಥೋತ್ಸವ

ನಂಜನಗೂಡು ತಾ|| ಕಳಲೆ ಶ್ರೀ ಲಕ್ಷ್ಮೀಕಾಂತಸ್ವಾಮಿಯವರ ಮಹಾ ರಥೋತ್ಸವವು ಈ ತಿಂಗಳು 9 ನೇ ತಾ|| ಗುರುವಾರ ನಡೆಯಿತು

ಗಂಜಿಯಲ್ಲಿ ಬಿದ್ದು ಮರಣ

ಬೆಂಗಳೂರಿನಲ್ಲಿ ಮುನಿತಿಪ್ಪಯ್ಯ ಎಂಬ 11 ತಿಂಗಳ ಮಗುವು ಕುದಿಯುತ್ತಿದ್ದ ಗಂಜಿಯ ತೊಟ್ಟಿಯಲ್ಲಿ ಬಿದ್ದು ಮೃತಪಟ್ಟಿತು

ಚೌ. ಚೌ. (೭)

---

೧. ರಾಂಚಿ ಎಂಬ ಊರಲ್ಲಿ ಸಿಂಹ ಎಂಬ ಹೆಸರಿನ ಪೋಲೀಸ್ ಇನ್ಸ್‌ಪೆಕ್ಟರೊಬ್ಬರು, " ವೇಗದಿಂದ ಬರುವ ಮೋಟಾರನ್ನು **ಕುತ್ತಿಗೆಯ ಬಲದಿಂದ** ನಿಲ್ಲಿಸಿದ" ರೆಂದು ' ಸಾಧ್ವಿ ' ಯಲ್ಲಿ ಬರೆದಿದೆ ಆ ಇನ್ಸ್‌ಪೆಕ್ಟರಿಗಿಂತ ನಮ್ಮೂರು ಕಾನ್ಸ್ಟೆಬಲ್ಲುಗಳು ಎಷ್ಟೋ ಮೇಲು. ವೇಗದಿಂದ ಬರುವ ಮೋಟಾರನ್ನು **ದೂರದಿಂದ ಕೈ ಎತ್ತಿ** ನಮ್ಮವರು ನಿಲ್ಲಿಸುತ್ತಿದಾರಲ್ಲಾ.

೨ ಬೋಳು ತಲೆ ವಾಸಿಮಾಡಿ, ಮತ್ತೆ ಕೂದಲು ಬೆಳೆಯಿಸಲು ಒಬ್ಬರು ಒಂದು ಉಪಾಯ ಕಂಡು ಹಿಡಿದಿದ್ದಾರಂತೆ--ಅದೇನೆಂದರೆ ತಲೆಯಮೇಲೆ ನಿಂತುಕೊಳ್ಳುವುದು ಹುಚ್ಚಾಸ್ಪತ್ರೆಯಲ್ಲಿರುವ ಒಬ್ಬಿಬ್ಬರು ಬೋಳು ತಲೆಯವರು ಈ ವಿಧಾನವನ್ನು ಅನುಸರಿಸುತ್ತಿರುವರಂತೆ.

೩ ಒಂದು ಪತ್ರಿಕೆಯಲ್ಲಿ 'Silk Sarees, cheap and easy to sell. No Guarantee. Agents wanted" ಎಂಬ ಪ್ರಕಟಣೆ ಇದೆ, (ರೇಷ್ಮೆ ಸೀರೆಗಳು, ಬೆಲೆ ಸುಲಭ, ಮಾರಲು ಸುಲಭ, ಖಾತ್ರಿ ಇಲ್ಲ ಏಜೆಂಟರು ಬೇಕು) ಮಾರಲು ಸುಲಭ. ಆದರೆ, ಕೊಂಡುಕೊಳ್ಳಲು ಮಾತ್ರ ಕಷ್ಟ

೪ ರಬ್ಬರಿನ ಹಾಗೆ ಎಳೆದು ಸುತ್ತಬಹುದಾದ ಮರದ ಹಲಗೆಗಳನ್ನು ಅಮೇರಿಕಾ ದೇಶದಲ್ಲಿ ಕಂಡುಹಿಡಿದಿದ್ದಾರಂತೆ ಆಗಲೇ ಮೈಸೂರಲ್ಲಿ ಇಂತಹುದನ್ನು ಮಾರಾಟಕ್ಕೆ ಇಟ್ಟಿರುವಹಾಗಿದೆ ಏಕೆಂದರೆ, ಮೊನ್ನೆ ನಾನು ತಂದ ಹಲಗೆ ಅಂಗಡಿಯಲ್ಲಿ ೧೨ ಅಡಿ ಉದ್ದವಿತ್ತು ಮನೆಗೆ ತಂದು ಅಳತೆ ಮಾಡಿದಾಗ ೧೪ ಅಡಿ ಆಗಿತ್ತು

೫ ಲಾರ್ಡ್ ಗ್ರೇ ಎಂಬ ಪ್ರಖ್ಯಾತ ಬ್ರಿಟಿಷ್ ಮಂತ್ರಿಯವರು ಪಾರ್ಲಿಮೆಂಟಿನಲ್ಲಿ ಭಾಷಣಕೊಡುವಾಗ, ಇದ್ದಕ್ಕಿದ್ದ ಹಾಗೆಯಾವುದೋ ಭೂತ ಬಂದು ಅವರ ಕತ್ತನ್ನು ಹಿಸುಕಿದಂತಾಗುತ್ತಿತ್ತಂತೆ ! ಆಶ್ಚರ್ಯ || ಅದೇ ಭೂತ ಗ್ರೇ ಅವರ ಮರಣಾನಂತರ ಮೈಸೂರಿಗೆ ಬಂದು ಕೆಲವು ಉಪನ್ಯಾಸಕರನ್ನು ಕಾಡಿಸುವಹಾಗಿದೆ.

೬. ಪೆಚ್ಚು, ತಪ್ಪು, ಇವುಗಳ ವ್ಯತ್ಯಾಸವೇನು ? ಎಂದು ಒಬ್ಬರು ನಮ್ಮನ್ನು ಕೇಳುತ್ತಾರೆ. ಉದಾಹರಣೆಗಳಿಂದ ವಿಶದಪಡಿಸುವೆವು—(೧) ರಾಮಮಂದಿರದ ಸಂಗೀತಕ್ಕೆ ಹೋಗಿ, ಬರುವಾಗ, ಹೊಸ ಜೋಡನ್ನು ಅಲ್ಲಿ ಬಿಟ್ಟು ಅವಸರದಲ್ಲಿ ಹಳೇ ಜೋಡನ್ನು ತಂದರೆ, ಪೆಚ್ಚು ! (೨) ಅದೇ ಸನ್ನಿವೇಶದಲ್ಲಿ, ಹಳೇದನ್ನು ಬಿಟ್ಟು ಹೊಸದನ್ನು ತಂದರೆ, ತಪ್ಪು !

೭. ಒಬ್ಬರು ಉಪನ್ಯಾಸಕರು, " ಮಹನೀಯರೆ ! " ಎಂದು ತಮ್ಮ ಭಾಷಣವನ್ನು ಪ್ರಾರಂಭಿಸಿದರು. ಆಗ ಸಭಿಕರಲ್ಲೊಬ್ಬ " ಮಹನೀಯರೆ ಎಂದು ಅಪ್ಪಣ ಕೊ... ನೋಣವಾಗಲಿ" ಎಂದು ಕೊಕ್ಕೆ ಹಾ... ದರು " ಇಲ್ಲ, ಇಲ್ಲ ! ತಾವೆಲ್ಲರೂ ಪ... ಚಿರಪರಿಚಿತರು ಆದ್ದರಿಂದ, ಮಹ... ಯರೆ ಎಂದು ಹೇಳಲು ಧೈರ್ಯಬರುವುದಿಲ್ಲ ಎಂದು ಹೇಳಿ ಉಪನ್ಯಾಸಕರು ಮುಂದ... ವರಿಸಿದರು ಕೈತೋರಿಸಿ ಅವಲಕ್ಷಣ ಅಂ... ಹೇಳಿಸಿಕೊಂಡಹಾಗಾಯಿತು

೮ " I will beat you " " ... ನ್ನು ಹೊಡೆಯುತ್ತೇನೆ ಎಂಬ ಭಾವ... ವಹಾಗೆ ಅಮೇರಿಕಾ ದೇಶದಲ್ಲಿ ಉ... ಗಳು ಬಳಕೆಯಲ್ಲಿವೆಯಂತೆ ಕನ್ನಡದ... ನಾವು ಮಾಡುವ ಆಷ್ಟೋತ್ತರ, ಸಹ... ನಾಮಾರ್ಚನೆಗಳನ್ನು ನೆನೆದರೆ, ... ಸಂಸ್ಕೃತಿ ಮತ್ತು ಸಾಹಿತ್ಯ ಎಷ್ಟು ಬ... ತರವಾದದ್ದೆಂದು ಗೊತ್ತಾಗುವುದು

೯. ಬೋರ ಎಂಬುವರು ಅಮೇರಿ... ನ್ಯಾಯ ಸಭೆಯ ಪ್ರಖ್ಯಾತ ಮೆಂಬ... (Senator Borah) ತಮ್ಮನ್ನು ... ದೇಶದ ಪ್ರೆಸಿಡೆಂಟ್ ಪದವಿಗೆ ಚುನಾ... ಸಿದರೆ, ಮುದುಕರಿಗೆಲ್ಲಾ ೧೨ ಸಮ... ಮಾಸಾಶನವನ್ನು ಕೊಡುತ್ತೇನೆ ಎಂ... ಭರವಸೆ ಕೊಡುತ್ತಿದಾರೆ. ಆ ದೇಶದಲ್ಲಿ... ಬಡ ಬೋರನೇ ಅನಾಥರಕ್ಷಕ !

೧೦. ಸರ್ಕಾರದವರು ಹೊರಡಿಸಿ... ವ ಒಂದು ಜಾಹಿರಾತಿನ ಫಲವಾಗಿ ಟಪಾಲ್ ಆಫೀಸಿನವರು ಸಾರ್ವಜನರೊಂದಿ... ನಡೆಸುವ ಪತ್ರವ್ಯವಹಾರಗಳಲ್ಲಿ ಇನ್ನು ಮುಂದೆ, " Your obedient servant ' (ತಮ್ಮ ವಿಧೇಯ) ಎಂ... ಕಾಗದದ ಕೊನೆಯಲ್ಲಿ ಬರೆಯುವುದಿ... ವಂತೆ ! ಇದುವರೆಗೂ ಅರ್ಥವಿಲ್ಲದೆ ಏ... ಹಾಗ ಬರೆಯುತ್ತಿದ್ದರೋ ಕಾಣ !

೧೧. ಡಿಲ್ಲಿಯಲ್ಲಿ ಒಬ್ಬರು ಟೀ ಕ... ಯುತ್ತಿದ್ದಹಾಗೆ ಅವರ ಹೃದಯ ನಿಂ... ಹೋಯಿತಂತೆ ನಮಗೂ ಅನೇಕಸ... ಹೋಟಲುಗಳಲ್ಲಿ ಕಾಫಿ ಕುಡಿಯುವಾ... ಬಿಲ್ಲನ್ನು ನೋಡಿ ಎದೆ ಒಡೆದು ಹೋ... ದ್ದುಂಟು.

೧೨ ಸದ್ಯದಲ್ಲೇ ಹೈದರಾಬಾದಿ... Television ನನ್ನೂ (ನಾಟಕ, ಉಪನ್ಯಾ... ಸ, ಮುಂತಾದವುಗಳನ್ನು ಅವುಗಳು ... ತ್ತಿದ್ದಹಾಗೆ ರೇಡಿಯೋ ಮೂಲಕ ಕೇ... ವುದು ಮಾತ್ರವಲ್ಲದೆ ಕಾಣುವುದೂ) ಕ... ಏರ್ಪಡಿಸುತ್ತಾರಂತೆ ಸಿನಿಮಾ ಆಯಿತು ಟಾಕಿ ಆಯಿತು ! ರೇಡಿಯೋ ಆಯಿತು ಟೆಲಿವಿಷನ್ ಕೂಡ ಸದ್ಯದಲ್ಲೇ ಆಗುತ್ತೆ ಇನ್ನು, ದುಡ್ಡು ಸಂಪಾದಿಸುವುದು, ಒಂದೇ ಬಾಕಿ !

ನಾ. ಕ

ಚೂರಿಯ ತಿವಿತದ ಮೊಕದ್ದಮೆ

ಅಪರಾಧಿಯನ್ನು ಸೆಷನ್ಸಿಗೆ ಕಮಿಟ್ ಮಾಡಲಾಯಿತು.

ಶ್ರೀ ಕೆ॥ ಗೋಪಾಲರಾಯರನ್ನು, ಮಾಜಿ ಕೋಚ್‌ಮ್ಯಾನ್ ಮುನಿವೆಂಕಟಪ್ಪನೆಂಬುವನು ಚೂರಿಯಿಂದ ತಿವಿದನೆಂಬ ಆಪಾದನೆಯ ಮೇಲೆ ಸಿಟಿ ಮ್ಯಾಜಿಸ್ಟ್ರೇಟರ ಸನ್ನಿಧಿಯಲ್ಲಿ ವಿಚಾರಣೆ ನಡೆಯುತ್ತಿತ್ತಷ್ಟೆ. ಪ್ರಾಸಿಕ್ಯೂಷನ್ ಪರ 9 ಸಾಕ್ಷಿಗಳ ವಿಚಾರಣೆಯೂ ಅನಂತರ ಅಪರಾಧಿ ಮುನಿವೆಂಕಟಪ್ಪನ ಹೇಳಿಕೆಯೂ ತೆಗೆದುಕೊಳ್ಳಲ್ಪಟ್ಟಿತು.

ಗೋಪಾಲರಾಯರ ಹೇಳಿಕೆ—ನಾನು ಬಾಡಿಗಾರ್ಡಿಗೆ ಕಮ್ಯಾಂಡೆಂಟ್. 1924 ನೇ ಆಗಸ್ಟಿನಲ್ಲಿ ಮುನಿವೆಂಕಟಪ್ಪನು ಕೆಲಸಕ್ಕೆ ಸೇರಿದನು ಮತ್ತು 1936 ರಲ್ಲಿ ಅವನಿಗೆ ಡಿಸ್‌ಮಿಸ್ ಆಯಿತು. ಜನವರಿ 2 ನೇ ತಾ॥ ನಲ್ಲಿ ಅವನು ಬಂದು ತನ್ನ ಯೋಗ್ಯತಾಪತ್ರಗಳನ್ನು ಹೇಳಿಕೊಂಡಿದ್ದರಿಂದ 20 ರೂಪಾಯಿಗಳನ್ನು ಧರ್ಮವಾಗಿಯೇ ಕೊಟ್ಟೆ. ಅನಂತರ ತನ್ನ ಯೋಗ್ಯತಾಪತ್ರಗಳನ್ನು ಕೇಳಲು ಸಾಹೇಬರ ಆಫೀಸಿಗೆ ಹೋಗಬೇಕೆಂದೆನು. ಹಿಂದಿನ ಯೋಗ್ಯತಾಪತ್ರಗಳನ್ನು ಕೊಡಲಾಗುವುದಿಲ್ಲವೆಂದೂ, ಹೊಸದಾದವುಗಳನ್ನು ಕೊಡುವೆನೆಂದೂ, ಅದರಿಂದ ಉಪಯೋಗವಾಗುವುದೆಂಬುದಾಗಿಯೂ ಅವನಿಗೆ ತಿಳಿಸಿದೆನು. ಒಪ್ಪಿಕೊಂಡು ಹೊರಟುಹೋದನು. ನಾನು ಸರ್ಕೀಟ್ ಹೊರಟುಹೋದೆನು. ಅದನಂತರ ವಿಚಾರಿಸುವಲ್ಲಿ ಅವನಿಂದ ಅರ್ಜಿ ಬಂದಿರುವದೆಂದು ತಿಳಿಯಿತು. 'ಡ್ರಾಫ್ಟ್' ಮಾಡಿ ಅವನ ಸಮ್ಮತಿಪಡೆದು ಯೋಗ್ಯತಾಪತ್ರವೊಂದಕ್ಕೆ ಸಹಿಹಾಕಿದುದರಿಂದ ಕರಣಿಕರಿಗೆ ಹೇಳಿ ತರಿಸಿದೆ. 27 ನೇ ತಾ॥ ದಿನ ಮೂರು ಘಂಟೆಗೆ ತಂಬೂಚೆಟ್ಟಿರ ಮನೆಗೆ ಹೋಗಿ, ಗೃಹದಲ್ಲಿ ಅವರಿಲ್ಲದಿರಲು ತಬೇಲಿ ಕಡೆ ಹೊರಟಾಗ ವಸಂತಮಹಲಿನ ಹತ್ತಿರ ವೆಂಕಟಪ್ಪನನ್ನು ನೋಡಿದೆ. ಅವನು ಓಡಿಬಂದು ಗಾಡಿಯಲ್ಲಿ 'ನಾನು ಸಾಯುತ್ತಿದ್ದೇನೆ. ಸರ್ಟಿಫಿಕೇಟು ಕೊಡಿ' ಎಂದು ಕೇಳಲು, ಅದರ ಪತ್ತೆರ ಕೊಟ್ಟಿರುವೆನು, ತೆಗದುಕೊಂಡು ಹೋಗು ಎಂದು ಹೇಳಿ, ಗಾಡಿಯನ್ನು ಮುಂದೆ ನಡೆಸುವಂತೆ ಹೇಳಿದ ತಕ್ಷಣವೇ ಅವನು ಚೂರಿಯಿಂದ ಇರಿದನು, ಎಡಗಡೆಗೆ ತಾಗಿ ರಕ್ತವು ಕೋಡಿಯಂತೆ ಹರಿಯಿತು. ಅನಂತರ ನಡೆದ ಸಂಗತಿಗಳನ್ನೂ ಆಸ್ಪತ್ರೆಯಲ್ಲಿ ಚಿಕಿತ್ಸೆಹೊಂದಿದ ವಿಷಯವನ್ನೂ ಹೇಳಿದರು. ಪಾಟಿಸವಾಲ್ ನಡೆದನಂತರ ಇವರ ವಿಚಾರಣೆಯು ಮುಗಿಯಿತು.

ಮುನಿವೆಂಕಟಪ್ಪನ ಹೇಳಿಕೆ—ಎರಡು ತಿಂಗಳಿಂದಲೂ ಸರ್ಟಿಫಿಕೇಟಿಗೋಸ್ಕರ ಆಫೀಸಿಗೂ, ಬಂಗಲೆಗೂ ಸುತ್ತುತ್ತಲಿದ್ದೆನು, ಒಂದು ದಿನ ತನ್ನ ಹೀನಾಯಕರವಾದ ಸ್ಥಿತಿಗೋಸ್ಕರ ಎಲ್ಲಿ ಹೋಗುವೆ ಎಂದು ಗೋಪಾಲರಾಯರು ಪ್ರಶ್ನಿಸಲು ಹೈದರಾಬಾದಿಗೆ ಹೋಗುವೆನೆಂದು ಹೇಳಿದೆನು. ಸತೀ, ಪುತ್ರರ ಗತಿಯೇನು ಎಂದು ಅವರು ಕೇಳಲು 'ರೈಲು ಚಾರ್ಜಿಗೂ ಗತಿಯಿಲ್ಲ ಏನಾದರೂ ಸಹಾಯ ನೀಡಿದರೆ ಅವರನ್ನು ಕಳುಹಿಸಿಬಿಡುವೆನು, ಎಂದೆನ್ನಲು 20 ರೂಪಾಯಿಗಳನ್ನು ಕೊಟ್ಟರು. ಯೋಗ್ಯತಾಪತ್ರಗಳನ್ನು ಕೇಳಲು, ಅವುಗಳನ್ನೆಲ್ಲಾ ಸುಟ್ಟಿಡಿ ಎಂದು ಆರ್ಡರ್ ಬಂದಿದೆ ಎಂದು ಹೇಳಿದರು. ಕೋಪಾಕುಲಿತನಾಗಿ ಸುಟ್ಟಿದ್ದರ ರೂಲ್ಸು ಪ್ರಕಾರ ಸುಟ್ಟ ದೆ ಎಂ ದು ರಶೀತಿ ಕೊಡಿ ಎಂದೆ. ಏನೂ ಕೊಡಲಾರೆ ಹಾಳಾಗಿ ಹೋಗು, ರಾಮರಾಯರನ್ನೋ, ಶೆಟ್ಟರನ್ನೋ ಕೇಳು ಎಂದರು. ಎಲ್ಲಿಂದಲೂ ಏನೂ ಸರಿಯಾದ ಉತ್ತರವೇ ಬರಲಿಲ್ಲ. ಆ ಮೇಲೆ ನಡೆದ ಸಂಗತಿಗಳನ್ನೆಲ್ಲಾ ಹೇಳಿದನು. ವಸಂತ ಮಹಲಿನ ಹತ್ತಿರ ಗಾಡಿ ಕಂಡಾಗ, ಅವನು ಓಡಿ ಹೋಗಿ ಅವರಲ್ಲಿ ಮೊರೆಯಿಟ್ಟನೆಂದೂ ಹೇಳಿದನು. ಪೋಲೀಸಿಗೆ ನಿನ್ನನ್ನು ಕೊಡುವೆನು ಎಂದು ಅವರು ಹೇಳಿದಾಗ 'ನಾನೇ ನಿಮ್ಮನ್ನು ಹೊಡೆಯುವೆನು, ನಂತರ ಪೋಲೀಸಿಗೆ ಕೊಡಿ ಎಂದು ಹೇಳಿದನು. ನನ್ನ ಕಾಗದಪತ್ರಗಳು ಗಾಡಿಯಲ್ಲಿ ಜಾರಿಬಿದ್ದವು. ತೆಗೆದುಕೊಳ್ಳಲು ಹೋದೆ. ಗಾಡಿಯು ವೇಗದಿಂದೋಡಿ ಸ್ಟೇಬಲ್ ಬಳಿಗೆ ಬಂದಿತು ಅಲ್ಲಿಂದಿಳಿದು ಮೃಗಶಾಲೆಯಕಡೆ ಓಡಿದೆ. 50-60 ಜನ ಶಸ್ತ್ರಸಹಿತರಾಗಿ ನನ್ನ ಹಿಂದೆ ಬಂದರು. ಅಷ್ಟರಲ್ಲಿಯೇ ಸಬೇದಾರನ ಮೋಟಾರು ಅಡ್ಡಗಟ್ಟಿತು. ಹಿಂಗಟ್ಟು, ಮುಂಗಟ್ಟು ಕಟ್ಟಿದರು. ತಲೆಯ ಮೇಲೆ ಬಲವಾದ ಏಟುಗಳು ಬಿದ್ದವು. ಜ್ಞಾನತಪ್ಪಿತು. ರಾತ್ರಿ 10 ಘಂಟೆಗೆ ಮೂರ್ಛೆಯಿಂದ ತಿಳಿದೆದ್ದೆನು. ಆಸ್ಪತ್ರೆಯಲ್ಲಿದ್ದೆನೆಂದು ಆಗ ನನಗೆ ತಿಳುವಳಿಕೆಯುಂಟಾಯಿತು—ಇದೇ ಅವನ ಹೇಳಿಕೆ.

ಮ್ಯಾಜಿಸ್ಟ್ರೇಟರು ವಿಚಾರಣೆಯನ್ನು ಮುಗಿಸಿ ಅಪರಾಧಿಯನ್ನು ಸೆಷನ್ಸಿಗೆ ಗುರಿ ಮಾಡಿದರು.

ಅಖಿಲಕರ್ಣಾಟಕ ಆಯುರ್ವೇದ ಸಮ್ಮೇಳನ

ಎಂಟನೇ ಅಖಿಲಕರ್ಣಾಟಕ ಆಯುರ್ವೇದ ಸಮ್ಮೇಳನವನ್ನು ಶಿವಮೊಗ್ಗಾದಲ್ಲಿ ಮುಂದಿನ ತಿಂಗಳ ಮೊದಲನೇ ವಾರದಲ್ಲಿ ನಡೆಸಬೇಕೆಂದು ಅಲ್ಲಿನ ಪ್ರಮುಖ ವೈದ್ಯರು ತೀರ್ಮಾನಿಸಿರುತ್ತಾರೆ.

ಈ ಸಮ್ಮೇಳನದೊಡನೆ ರಸಶಾಸ್ತ್ರ ಸಮ್ಮೇಳನ, ವೈದ್ಯವಿದ್ವತ್‌ಪರಿಷತ್ ಮತ್ತು ಪ್ರದರ್ಶನಗಳೂ ನಡೆಯುವುವು. ರಸಶಾಸ್ತ್ರ ಸಮ್ಮೇಳನಕ್ಕೆ ವಿಜಾಪುರದ ಡಾ॥ ಗೋವಿಂದರಾವ್ ಮಂಗಳವೇಡೆಯವರು ಅಧ್ಯಕ್ಷರಾಗುವರು. ಪ್ರದರ್ಶನದಲ್ಲಿ ಆಯುರ್ವೇದಕ್ಕೆ ಸಂಬಂಧಪಟ್ಟ ಎಲ್ಲಾ ವಸ್ತುಗಳೂ ಇಡಲ್ಪಡುವುವು. ಈ ಕಾರ್ಯಕ್ರಮದಲ್ಲಿ ಕರ್ಣಾಟಕದ ಎಲ್ಲಾ ವೈದ್ಯರೂ ಸಹಕರಿಸಬೇಕೆಂದು ವ್ಯವಸ್ಥಾಪಕರು ಕೋರುತ್ತಾರೆ.

ರಾಷ್ಟ್ರಪತಿ



ಪಂಡಿತ ಜವಾಹರಲಾಲರು.

ಪಟ್ಟಾಭಿಷೇಕ.

ಚಾಮುಂಡಿ ಬಡಾವಣೆಯಲ್ಲಿರುವ ಶಂಕರನಾರಾಯಣಸ್ವಾಮಿ ದೇವಾಲಯದಲ್ಲಿ ನಿನ್ನೆ ರಾಮ ಪಟ್ಟಾಭಿಷೇಕವು ಜರುಗಿತು. ನೂರಾರು ಜನರಿಗೆ ಸಂತರ್ಪಣೆಯಾಯಿತು. ಆ ರಾಮಮಂದಿರದಲ್ಲಿ ಅನೇಕಜನ ವಿದ್ವಾಂಸರ ಸಂಗೀತ ಕಛೇರಿಗಳು ನಡೆದುವು.

ನಾಟಕ.

ಕಳೆದ ಬುಧವಾರ ಮೈಸೂರಿನ ಬಾಲಸರಸ್ವತೀನಾಟಕ ಮಂಡಲಿಯವರು 'ಭಕ್ತಪ್ರಹ್ಲಾದ' ನಾಟಕವನ್ನು ಟೌನ್‌ಹಾಲಿನಲ್ಲಿ ಅಭಿನಯಿಸಿದರು. ಬಾಲಕಿಯರಾದರೂ ಇವರ ಅಭಿನಯ ಚಾತುರ್ಯವು ಪ್ರಶಂಸನೀಯವಾಗಿತ್ತು.

ದುಃಖವಾರ್ತೆ.

ಶ್ರೀಮನ್ಮಹಾರಾಜರವರ ಸಹೋದರಿಯವರೂ ಸರ್ದಾರ್ ಲಕ್ಷ್ಮೀ ಕಾಂತರಾಜೇ ಅರಸಿನವರ ಪತ್ನಿಯವರೂ ಆದ ರಾಜಕುಮಾರಿ ಚಲುವಾಜಮ್ಮಣ್ಣಿಯವರು 12 ನೇ ತಾ॥ ಭಾನುವಾರ ಬೆಳಿಗ್ಗೆ ಹತ್ತೂವರೆ ಗಂಟೆಯಲ್ಲಿ ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದಿಸುತ್ತೇವೆ

ವಿದ್ಯಾಶಾಲಾ ಪಂಡಿತಮಂಡಲಿ.

ಈ ಮಂಡಲಿಯ ಆಶ್ರಯದಲ್ಲಿ ಮೈಸೂರು ಸಂಸ್ಥಾನದ ಪಂಡಿತರ ಎರಡನೆಯ ಮಹಾಸಮ್ಮೇಳನದ ಪ್ರಾರಂಭೋತ್ಸವವು ಪ್ರೆಸ್ ಪ್ರಿನ್ಸಿಪಾಲರಾದ ಮ॥ ಎ. ಎಸ್. ಸುಬ್ಬರಾಯರಿಂದ ಸಂಸ್ಕೃತ ಮಹಾಪಾಠಶಾಲೆಯಲ್ಲಿ ಕಳೆದ ಶುಕ್ರವಾರ ನೆರವೇರಿಸಲ್ಪಟ್ಟಿತು. ಅನೇಕ ಜನ ಪಂಡಿತೋತ್ತಮರು ಸಭೆಯನ್ನಲಂಕರಿಸಿದ್ದರು. ಡಾ॥ ಆರ್. ಶಾಮಶಾಸ್ತ್ರಿಗಳು ಅಧ್ಯಕ್ಷರಾಗಿದ್ದರು. ಪ್ರಾರ್ಥನೆಯಾದ ನಂತರ, ಸ್ವಾಗತ ಸಮಿತಿಯ ಅಧ್ಯಕ್ಷರಾದ ಮೇಜರ್ ಬಕ್ಷಿ ಮ॥ ಮೇಜರ್ ಲಿಂಗರಾಜೇ ಅರಸರ ಭಾಷಣವಾಯಿತು. ಕಾರ್ಯದರ್ಶಿಗಳು ವರದಿಯನ್ನೋದಿದರು. ಅನಂತರ ಪ್ರಿನ್ಸಿಪಾಲರು ಭಾಷಣ ಮಾಡಿದರು. ಪಂಡಿತರು ಸಂಕುಚಿತಮನಸ್ಕರಾಗಿರದೆ ವಿಶಾಲ ಮನಸ್ಸುಳ್ಳವರಾಗಬೇಕೆಂದು ಹೇಳಿ, ಪುರಾತನ ಕಾಲದಲ್ಲಿ ವಿದ್ಯೆಯನ್ನು ಹೇಳಿಕೊಡುತ್ತಿದ್ದ ವಿಧಾನಕ್ಕೂ, ಈಗಿನ ಕಾಲದಲ್ಲಿರುವ ಪದ್ಧತಿಗೂ ಅಂತರವನ್ನು ತೋರಿಸಿದರು

BETTER LIGHT

LIGHTER BILLS.

Use

"BIJLEE"

ELECTRIC BULBS.

Made in INDIA.

ಸ್ವದೇಶಿ ಎಲೆಕ್ಟ್ರಿಕ್ ಬಲ್ಬುಗಳನ್ನೇ

ಉಪಯೋಗಿಸಿರಿ.

"ಬಿ ಜ ಲಿ"

ಸಾಧ್ವಿ

೧೩-೪-೩೬ ನೇ ಸೋಮವಾರ

ಜವಾಹರಲಾಲರ ಜವಾಬ್ದಾರಿ.

ಈ ಸಾರಿ ಕಾಂಗ್ರೆಸ್ ಅಧ್ಯಕ್ಷರು ಪಂಡಿತ ಜವಾಹರಲಾಲರು ಇವರು ಈ ಸಮಯದಲ್ಲಿ ರಾಷ್ಟ್ರದ ನಾಯಕತ್ವವನ್ನು ವಹಿಸಲು ಸಂಪೂರ್ಣ ಅರ್ಹರೆಂದು ಬೇರೆ ಹೇಳಬೇಕಾಗಿಲ್ಲ ಮಹಾತ್ಮಾಜಿಯವರು ಹೇಳಿದಂತೆ ದೇಶದ ಅಭ್ಯುದಯವು ಜವಾಹರಲಾಲರ ಕೈಯಲ್ಲಿ ಸುರಕ್ಷಿತವಾಗಿದೆ. ಪಂಡಿತರು ಭಾರತ ವೀರ ದೇಶಾಭಿಮಾನಿಗಳಲ್ಲಿ ಅಗ್ರಶ್ರೇಣಿಯವರು ಮಹಾತ್ಮರನ್ನು ಬಿಟ್ಟರೆ ಭರತಖಂಡದ ಸೂತ್ರಗಳನ್ನು ಯಶಸ್ವಿಯಾಗಿ ನಡೆಸಲು ಇವರೇ ಮೊದಲನೆಯವರು ಇವರು ಯುವಕರಿಗೆ ಯುವಕರು, ಹಿರಿಯರಿಗೆ ಹಿರಿಯರು ಸರಳತೆಯು ಇವರಲ್ಲಿ ಪರಿಪೂರ್ಣವಾಗಿದೆ ಆದರೂ ಆಧುನಿಕ ರಾಜನೀತಿ ನೈಪುಣ್ಯಗಳು ಇವರಿಗೆ ಕರತಲಾಮಲಕವಾಗಿವೆ ಆದ್ದರಿಂದ ನಮ್ಮ ದೇಶದ ಎಲ್ಲಾ ಸಮಸ್ಯೆಗಳನ್ನೂ ಯುಕ್ತವಾದ ರೀತಿಯಲ್ಲಿ ಬಗೆಹರಿಸಲು ಇವರೇ ಸಮರ್ಥರು

ಪ್ರಕೃತದಲ್ಲಿ ರಾಷ್ಟ್ರೀಯ ಮಹಾಸಭೆಗೆ ಅನೇಕ ತೊಡಕಿನ ಪ್ರಶ್ನೆಗಳು ಸಂಪ್ರಾಪ್ತವಾಗಿವೆ ಅಧಿಕಾರ ಸ್ವೀಕಾರದ ವಿಚಾರವು ಬಹಳ ಗೊಂದಲವನ್ನೆಬ್ಬಿಸಿದೆ ತೀಕ್ಷ್ಣವಾದ ಭಿನ್ನಾಭಿಪ್ರಾಯಗಳೇ ಹೊರಟಿವೆ. ಇದಲ್ಲದ ದೇಶೀಯ ಸಂಸ್ಥಾನದ ಪ್ರಜೆಗಳ ಪ್ರಶ್ನೆಯು ಪುನಃ ಪ್ರಾಮುಖ್ಯತೆಗೆ ಬರುತ್ತಿದೆ ಇತ್ತ, ಕಾರ್ಯರಂಗವು ಭೀಕರವಾಗಿ ಕಾಣಬರುತ್ತಿದೆ ಅಷ್ಟೇನೂ ಸುರಕ್ಷಿತವಾಗಿ ಕಾಣಬರುತ್ತಿಲ್ಲ ಮೊನ್ನೆತಾನೇ ಬಾಬು ಸುಭಾಸ್ ಚಂದ್ರಬೋಸರು ಬೊಂಬಾಯಿ ನಲ್ಲಿ ಇಂದಿಳಿಯುವಾಗಲೇ ಅಧಿಕಾರಿಗಳು ಅವರನ್ನು ಸೆರೆಹಿಡಿದರು ಇದು ಶಾಂತಿಯನ್ನು ಸೂಚಿಸುವುದಿಲ್ಲ ಈ ಪರಿಸ್ಥಿತಿಯಲ್ಲಿ ಜವಾಹರಲಾಲರು ಹೇಗೆ ಪ್ರವರ್ತಿಸುವರೆಂಬುವನ್ನು ಭಾರತೀಯರೆಲ್ಲರೂ ಕುತೂಹಲದಿಂದ ಇದಿರುನೋಡುತ್ತಿರುವರು

ಲಾಯರುಗಳ ಸಮ್ಮೇಳನ.

ಈ ವಾರದಲ್ಲಿ ತುಮಕೂರು ನಗರದಲ್ಲಿ ಮೈಸೂರು ಸಂಸ್ಥಾನದ ಲಾಯರುಗಳ ವಾರ್ಷಿಕ ಅಧಿವೇಶನವು ಸೇರುತ್ತದೆ ನಮ್ಮ ಸಂಸ್ಥಾನದ ಸುಸಂಸ್ಕೃತ ಸಮೂಹಗಳಲ್ಲಿ ಇದೂ ಒಂದು ಗಣ್ಯರೂ, ವಿಚಾರಶೀಲರೂ ಆದ ಅನೇಕ ಜನ ದೊಡ್ಡ ಮನುಷ್ಯರು ಇದರಲ್ಲಿ ಭಾಗವಹಿಸುವರು ನ್ಯಾಯವೃತ್ತಿಯ ಕಷ್ಟಸುಖಗಳನ್ನು ವಿಚಾರಿಸಿ, ಪರಿಹಾರಗಳನ್ನು ಪರ್ಯಾಲೋಚಿಸುವುದು, ಕಾಯಿದೆ ಕಟ್ಟಳೆಗಳನ್ನು ಪರಿಷ್ಕರಣಮಾಡಲು ಸಲಹೆ ಕೊಡುವುದು, ನ್ಯಾಯ ನಿರ್ವಹಣಾ ಕಾರ್ಯವು ಸಮರ್ಪಕವಾಗಿ ನಡೆಯಲು ಆವಶ್ಯಕವಾದ ಏರ್ಪಾಡುಗಳನ್ನು ಮಾಡುವುದು, ಇವುಗಳಲ್ಲದ ವಕೀಲರುಗಳೆಲ್ಲರೂ, ವರ್ಷಕ್ಕೊಮ್ಮೆಯಾದರೂ ಪರಸ್ಪರ ಸಂಧಿಸಿ ಕೆಲವು ದಿನಗಳ ಕಾಲ ಸಾಮುದಾಯಿಕ ಸಂತೋಷವನ್ನು ಹೊಂದುವುದು ಈ ಉದ್ದೇಶಗಳು ಈ ಸಮ್ಮೇಳನದಿಂದ ನೆರವೇರುವುವು

ಆದರೆ ಈ ಸಮ್ಮೇಳನದಿಂದ ಪ್ರತಿವರ್ಷವೂ ಮಂಜೂರಾಗತಕ್ಕ ನಿರ್ಣಯಗಳಲ್ಲಿ ಶೇಕಡ ಐದರಷ್ಟನ್ನೂ ಅಧಿಕಾರಿವರ್ಗದವರು ಅಂಗೀಕರಿಸುತ್ತಿಲ್ಲ ಇದು ಕೇವಲ ವಿಷಾದಕರ ವಕೀಲರುಗಳೂ ಕೋರ್ಟಿನ ಅಧಿಕಾರಿ ವರ್ಗದವರೆಂದು ಕಾನೂನಿನಲ್ಲಿ ಅಂಗೀಕರಿಸಲಾಗಿದೆ ನ್ಯಾಯವನ್ನು ಜಾರಿಗೆ ತರುವುದರಲ್ಲಿ ನ್ಯಾಯಾಧೀಶರಷ್ಟೇ ನ್ಯಾಯವಾದಿಗಳ ಜವಾಬ್ದಾರಿಯೂ ಇರುತ್ತದೆ ಆದ್ದರಿಂದ ಇವರುಗಳು ವಿಚಾರಪೂರ್ಣವಾಗಿ ಮಾಡುವ ನಿರ್ಣಯಗಳನ್ನು ಇಲಾಖೆಯವರು ವಿಶಾಲದೃಷ್ಟಿಯಿಂದ ಅಂಗೀಕರಿಸಬೇಕು ಹಾಗೆ ಮಾಡಲು ಸಮ್ಮೇಳನದವರೂ ತಕ್ಕ ಸನ್ನಾಹಗಳನ್ನು ಕಲ್ಪಿಸಬೇಕು

—

ಅಬಿಸೀನಿಯಾದಲ್ಲಿ ಸಿನಿಮಾ

ಅಬಿಸೀನಿಯಾದ ರಾಜಧಾನಿಯಾದ ಅಡಿಸ್ ಅಬಾಬಾದಲ್ಲಿ ನೂರು ಸಿನಿಮಾಗಳಿವೆ ಅಮೇರಿಕಾ ಮತ್ತು ಯುರೋಪಿಯನ್ ಚಿತ್ರಪಟಗಳು ಈ ಸಿನಿಮಾಗಳಲ್ಲಿ ಪ್ರದರ್ಶಿಸಲ್ಪಡುತ್ತಿವೆ ಕ್ರೂರವ್ಯಾಘ್ರಗಳ ಮತ್ತು ಪ್ರಣಯ ಪ್ರಸಂಗಗಳಿರುವ ಚಿತ್ರಪಟಗಳು ಬಹಳವಾಗಿ ಅಬಿಸೀನಿಯನರಿಂದ ಇಚ್ಛಿಸಲ್ಪಡುತ್ತಿವೆ ಕಡೆಯ ಕ್ಲಾಸಿಗೆ 12 ಆಣೆಯಾದರೂ ಸಹ 40 ರಿಂದ 60 ಮೈಲಿಗಳ ದೂರದ ಹಳ್ಳಿಗಳಿಂದ ಚಿತ್ರಪಟವನ್ನು ನೋಡಲು ಅಡಿಸ್ ಅಬಾಬಾಗೆ ಬರುವರಂತೆ! ಅದನ್ನು ಹತ್ತಿರ ಅವರು ಕುಳಿತುಕೊಳ್ಳುವರು—ಇದರಿಂದ ಚೆನ್ನಾಗಿ ಕಾಣುವುದೆಂದು ಅವರ ಅಭಿಪ್ರಾಯ ಇಟಲಿ ಅಬ್ಸೀನಿಯಾ ಯುದ್ಧಕ್ಕೆ ಸಂಬಂಧಪಟ್ಟ ಮಾತನಾಡುವ ಚಿತ್ರಪಟಗಳೂ ತೋರಿಸಲ್ಪಡುವುವು ತಮ್ಮ ದೊರೆಯ ಚಿತ್ರವನ್ನು ಕಂಡರೆ ಸಂತೋಷದಿಂದ ಕೂಗುವರು. ಮುಸೋಲಿನಿಯನ್ನೇನಾದರೂ ನೋಡಿದರೆ ತಿರಸ್ಕಾರದ ಕೂಗುಗಳು ಎಲ್ಲೆಲ್ಲೂ ಕೇಳಿಬರುವುವು

"ನನ್ನ ಹಿತಕ್ಕಿಂತಲೂ ದೇಶದ ಹಿತವೇ ಹೆಚ್ಚು"

ಸುಭಾಷ ಚಂದ್ರ ಬೋಸರ ವೀರವಾಣಿ

ಭರತಖಂಡಕ್ಕೆ ಹಿಂತಿರುಗಬೇಕೆಂದು ನಿರ್ಧರಿಸಿದ ಸುಭಾಷಚಂದ್ರ ಬೋಸರಿಗೆ, ವಿಯನ್ನಾದಲ್ಲಿರುವ ಬ್ರಿಟಿಷ್ ಕಾನ್ಸಲ್‌ರವರು ಒಂದು ಪತ್ರವನ್ನು ಬರೆದು, ಹಿಂದೂದೇಶದಲ್ಲಿ ಅವರ ಚಲನವಲನಗಳಿಗೆ ಆತಂಕವಿರುವುದೆಂದು ತಿಳಿಸಿದರು ಇದರಮೇಲೆ ಬೋಸರು ವೀರಪತ್ರವೊಂದನ್ನು ಬರೆದು ಪ್ರಕಟನೆಗಾಗಿ ಕಳುಹಿಸಿರುವರು ಅದರ ಭಾವವು ಕೆಳಗೆ ಕಂಡ ರೀತಿ ಇದೆ —"ವಿಯನ್ನಾದ ಬ್ರಿಟಿಷ್ ಕಾನ್ಸಲರಿಂದ ಕಾಗದವು ಬಂದಾಗಿನಿಂದ ಏನು ಮಾಡಬೇಕೆಂದು ಆಲೋಚನಾಕ್ರಾಂತನಾಗಿದ್ದೇನೆ ಇಂಡಿಯಾದ ಹಿತಾಕಾಂಕ್ಷಿಗಳಾದ ಅನೇಕರೊಡನೆ ಪತ್ರವ್ಯವಹಾರವನ್ನು ನಡೆಸಿದೆನು ಅಸಹಕಾರ ಚಳುವಳಿಯನ್ನು ಕಾಂಗ್ರೆಸ್ ಸಂಸ್ಥೆಯು ರದ್ದುಮಾಡಿರುವ ಕಾರಣ ನಾನು ಬಂದೀಖಾನೆಗೆ ಹೋಗುವುದು ಪ್ರಯೋಜನವಿಲ್ಲೆಂದು ಅನೇಕರ ಮತ ಇಂಡಿಯಾದಿಂದ ಹೊರಗಿದ್ದು ಕಾಂಗ್ರೆಸಿನ ತತ್ವಗಳನ್ನು ಪ್ರಚುರಮಾಡುವುದೊಳ್ಳೇದೆಂದು ಕೆಲವರ ಅಭಿಪ್ರಾಯ ಯೂರೋಪಿಗೆ ಬಂದನಂತರ ಉತ್ತಮಗೊಂಡ ನನ್ನ ದೇಹದ ಸ್ಥಿತಿಯು, ಪುನಃ ಕಾರಾಗೃಹವಾಸದಿಂದ ಕೆಡಬಹುದೆಂದು ಕೆಲವರು ನನಗೆ ತಿಳಿಸಿರುವರು ಅಸಹಕಾರ ಚಳುವಳಿ ನಿಂತ ಮೇಲೆ ಅಧಿಕಾರಿಗಳ ಅಪ್ಪಣೆಯನ್ನು ಮುರಿಯಲೆತ್ನಿಸಲ್ಲವೆಂದೂ, ಇನ್ನು ಕೆಲವರು ನುಡಿದಿರುವರು ಆದರೆ ಇವುಗಳೆಲ್ಲವನ್ನೂ ಬದಿಗೊತ್ತಿ ಲಕ್ನೋ ಕಾಂಗ್ರೆಸ್ ಅಧಿವೇಶನಕ್ಕೆ ಬರಲು ನಾನು ನಿರ್ಧರಿಸಿರುವೆನು ರಾಷ್ಟ್ರದ ಹಿತಚಿಂತನೆ ಮತ್ತು ರಾಷ್ಟ್ರದ ಸೇವೆಗಾಗಿ ಬರಬೇಕೆಂಬುದೇ ನನ್ನ ಅಭೀಷ್ಟ ರಾಷ್ಟ್ರದ ಕಲ್ಯಾಣಕ್ಕಾಗಿ, ಸ್ವದೇಶದಿಂದ ಹೊರಗಿದ್ದು ಹೋರಾಡುವುದು ಕಷ್ಟಸಾಧ್ಯವಾದದ್ದೇ ಸರಿ

ನನ್ನಲ್ಲಿ ಏನಾದರೂ ಸಾಕಷ್ಟು ದ್ರವ್ಯವಿದ್ದಿದ್ದರೂ ಅಥವಾ ಕಾಂಗ್ರೆಸ್ಸಿನ ಬೆಂಬಲ ದೊರತಿದ್ದರೂ ಯೂರೋಪಿನಲ್ಲಿ ನನ್ನ ಕಾರ್ಯವು ಹೆಚ್ಚಾಗಿರುತ್ತಿತ್ತು ದಿವಂಗತ ವಿ. ಜೆ. ಪಟೇಲರ ನಿಧಿಯು ಉಪಯೋಗವಾಗುತ್ತಿಲ್ಲ ಕಾಂಗ್ರೆಸ್ ಕಾರ್ಯಕಾರೀ ಮಂಡಳಿಯ ಸಹಾಯ ಇಲ್ಲವೇ ಇಲ್ಲ ಕಳೆದ ಮೂರು ಸಂವತ್ಸರಗಳಿಂದ ಭರತಖಂಡದ ಉನ್ನತಿಗೆ ಯೂರೋಪಿನಲ್ಲಿದ್ದು ಕಷ್ಟಪಟ್ಟೆನು ಇನ್ನು ಮುಂದೆ ನನ್ನ ಕಾರ್ಯಸಾಧನೆಯೇನೂ ಯೂರೋಪಿನಲ್ಲಿ ಹೆಚ್ಚಾಗಿ ಆಗಲಾರದು

ದೇಶಬಾಂಧವರೊಡನೆ ಇರಲು ನನ್ನ ಮನಸ್ಸು ಕಾತರಿಸುತ್ತಿದೆ. ನನ್ನ ಆರೋಗ್ಯವೇನೂ ಸಂಪೂರ್ಣವಾಗಿ ಉತ್ತಮಗೊಂಡಿಲ್ಲ ಆದರೆ ಇಂಡಿಯಾದ ಪ್ರತಿಯೊಬ್ಬ ದೇಶಸೇವಕನ ಗತಿಯೂ ಹೀಗೆಯೇ ಇದೆ ಅಸಹಕಾರವೆಂಬ ಅಸ್ತ್ರವು ರದ್ದಾಗಿರುವಾಗ ಈಗ ಅಧಿಕಾರಿಗಳ ಅಪ್ಪಣೆಯನ್ನು ಮುರಿಯಬೇಕೇ ಎಂಬುದೇ ಪ್ರಶ್ನೆಯಾಗಿದೆ ಆದರೆ ಪ್ರತಿಯೊಬ್ಬ ಮಾನವನಿಗೂ ಸಲ್ಲಬೇಕಾದ ಪ್ರಾಥಮಿಕ ಹಕ್ಕುಗಳನ್ನು ಚಲಾಯಿಸಲೇಬೇಕು ಇಂಡಿಯಾ ಸರ್ಕಾರದ ಆಜ್ಞೆಯು ಬಹಳ ದೋಷವನ್ನುಂಟುಮಾಡುವದಾಗಿದೆ, ಯಾಕೆಂದರೆ, ವಿಚಾರಣೆಯಿಲ್ಲದೆ ಕಾರಾಗಾರದ ವಾಸವನ್ನು ನನ್ನ ಮೇಲೆ ಹೊರಿಸುತ್ತದೆ

ಅಧಿಕಾರಿಗಳ ಅಸಭ್ಯ ವರ್ತನೆಗೊಳಗಾಗಿ ನಾನು ಎಂದೂ ತಲೆಬಾಗಿಸಿದವನಲ್ಲ ಕಾರಾಗೃಹವಾಸವು ಆಗಾಗಲೇ ಪ್ರಾಪ್ತಿಯಾದ್ದರೂ, ಪೋಲೀಸರ ಅತ್ಯಾಚಾರಕ್ಕೊಳಗಿದ್ದರೂ ಎಂದೂ ನಾನು ಹೆದರಿದವನಲ್ಲ ಮಾನವನ ಪ್ರಾಥಮಿಕ ಹಕ್ಕುಗಳೇ ಕಸಿಯಲ್ಪಟ್ಟರೆ, ಈಗ ನಮಗೆ ಕೊಡಲ್ಪಡಬೇಕೆಂದಿರುವ ರಾಜ್ಯಾಂಗ ರಚನೆಯು ಪೊಳ್ಳುತನವನ್ನು ವ್ಯಕ್ತಪಡಿಸಿದಂತಾಗುವುದು ಈ ಕಾರಣಗಳಿಂದ ನಾನು ಇಂಡಿಯಕ್ಕೆ ಹಿಂತಿರುಗಲು ನಿಶ್ಚಯಿಸಿ, ಬ್ರಿಟಿಷ್ ಕಾನ್ಸಲರಿಂದ ಬಂದಿರುವ ಕಾಗದವನ್ನು ಕಾಲುಕಸದಂತೆ ಕಾಣುತ್ತೇನೆ."

—

ಕಾಂಗ್ರೆಸ್ ಮಹಾ ಸಭೆಯ ವೈಭವ

ಲಕ್ನೋ ನಗರದಲ್ಲಿ ನಡೆಯುವ ಕಾಂಗ್ರೆಸ್ ಮಹಾಸಭೆಯು ಬಹಳ ವೈಭವದಿಂದ ಜರುಗುವುದು ಆದರೆ ಪದ್ಧತಿ ಪ್ರಕಾರ ನಡೆಯಬೇಕಾದ ಎಲ್ಲಾ ಆಡಂಬರಗಳೂ ಅಲಂಕಾರಗಳೂ ವಜಾಮಾಡಲ್ಪಟ್ಟಿವೆ ಆದಷ್ಟು ಮಟ್ಟಿಗೆ ಸರಳವಾಗಿರಬೇಕೆಂದು ಪಂಡಿತ ಜವಾಹರಲಾಲರು ಅಭಿಪ್ರಾಯಪಟ್ಟರು ಅಧ್ಯಕ್ಷರ ಮೆರವಣಿಗೆಯು ಕಾಲ್ನಡಿಯಲ್ಲಿಯೇ ಆಯಿತು ತಮ್ಮ ಸ್ವಾಗತಕ್ಕೆ ಕೂಡ ಯಾವ ಹೆಚ್ಚಿನ ಅಲಂಕಾರವನ್ನೂ ಮಾಡಕೂಡದೆಂದು ಅವರು ತಿಳಿಸಿರುವರು ಒಟ್ಟಿನಲ್ಲಿ ಮಹಾ ಸಭೆಯ ಕ್ಲುಪ್ತವಾದ ಕಾರ್ಯಗಳಲ್ಲಿ ತೊಡಗುವುದೇ ವಿನಾ ಹೆಚ್ಚು ಬಾಹ್ಯಾಡಂಬರಗಳಿಗೆ ಅವಕಾಶವಿಲ್ಲ ಇದು ಹೊಸ ರೀತಿ.

ಶ್ರೀ ಕೂಡ್ಲಿ ಜಗದ್ಗುರುಗಳ ನಿಧನ.

ಶ್ರೀ ಕೂಡ್ಲಿ ಶೃಂಗೇರಿ ಜಗದ್ಗುರುಗಳಾದ ಶ್ರೀ ವಾಲುಕೇಶ್ವರ ಸ್ವಾಮಿಗಳವರು ಶುಕ್ರವಾರ ಬೆಳಿಗ್ಗೆ ಈ ಊರಿನಲ್ಲಿ ಸಮಾಧಿಯನ್ನೈದಿದರು. ಇವರು ಈಚೆಗೆ ಕೆಲವು ದಿನಗಳಿಂದ ಆಲಸ್ಯಹೊಂದಿದ್ದರು. ಗುರುವಾರವೇ ಅವರ ಸ್ಥಿತಿಯು ಕಳವಳವನ್ನು ಉಂಟುಮಾಡುತ್ತಿತ್ತು. ಶುಕ್ರವಾರ ಬೆಳಿಗ್ಗೆ ಅವರ ಆತ್ಮವು ಪರಮಾತ್ಮನಲ್ಲಿ ಐಕ್ಯವಾಯಿತು

ಶ್ರೀಸ್ವಾಮಿಗಳು ಒಳ್ಳೇ ತೇಜಸ್ವಿಗಳೂ ಪ್ರಾಜ್ಞರೂ ಆಗಿದ್ದರು. ಅವರ ವಿದ್ಯಾಪಾಂಡಿತ್ಯವು ಅಸಾಧಾರಣವಾಗಿದ್ದಿತು. ಅಪೂರ್ವವಾದ ಪ್ರಶಸ್ತಿಗಳನ್ನು ಪಡೆದಿದ್ದರು. ಪೂರ್ವಾಶ್ರಮದಲ್ಲಿ ಅವರು ಹಿಂದಿನ ಶೃಂಗೇರಿ ಜಗದ್ಗುರುಗಳವರಿಗೆ ಅಧ್ಯಾಪಕರಾಗಿದ್ದರು. ಅನಂತರ ಮೈಸೂರಿನಲ್ಲಿ ಶ್ರೀಮನ್ಮಹಾರಾಜರವರ ಸಂಸ್ಕೃತಪಾಠಶಾಲೆಯ ಅಧ್ಯಾಪಕರಾದರು ಅಲ್ಲಿ ಅವರ ವಿದ್ಯಾಪಾಂಡಿತ್ಯವೂ, ಅಮೋಘವಾದ ಭಾಷಣ ಸಾಮರ್ಥ್ಯವೂ ಪ್ರಕಾಶಕ್ಕೆ ಬಂದವು. ಅವರ ಉಪನ್ಯಾಸಗಳು ಉದಾತ್ತವಾದ ಭಾವನೆಯಿಂದಲೂ ಸರಳವಾದ ವಿಷಯ ನಿರೂಪಣದಿಂದಲೂ ಕೂಡಿದ್ದವು. ಗಹನವಾದ ವೇದಾಂತ ತತ್ವಗಳನ್ನು ಅವರು ಎಳೆಯ ಮಕ್ಕಳಿಗೂ ಸುಲಭವಾಗಿ ಅರ್ಥವಾಗುವಂತೆ ವಿವರಿಸಿ ಹೇಳುತ್ತಿದ್ದರು. ಅವರಿಗೆ ಮಹಾಮಹೋಪಾಧ್ಯಾಯ ವಿದ್ಯಾನಿಧಿ ಮುಂತಾದ ಬಿರುದುಗಳು ಬಂದಿದ್ದವು.

ಈಚೆಗೆ ಅವರು ಆಶ್ರಮ ಸ್ವೀಕಾರವನ್ನು ಮಾಡಿ ಕೂಡ್ಲಿ ಮಠದ ಆಧಿಪತ್ಯವನ್ನು ವಹಿಸಿದರು ಆ ಮಠವು ಬಹಳ ಹೀನ ಸ್ಥಿತಿಯಲ್ಲಿತ್ತು. ಆದ್ದರಿಂದ ರಾಜಧಾನಿಗೆ ಬಂದು ಇಲ್ಲಿಯೇ ನೆಲೆಸಿ ಶ್ರೀಮನ್ಮಹಾರಾಜರವರಿಗೂ ಪ್ರಜೆಗಳಿಗೂ ಸದ್ಬೋಧನೆಗಳನ್ನು ಮಾಡುತ್ತ ಇಲ್ಲಿಯೇ ತಪಶ್ಚರ್ಯೆಯಲ್ಲಿ ನಿರತರಾಗಿದ್ದರು. ಶ್ರೀ ಮಠವು ಉತ್ತಮಸ್ಥಿತಿಗೆ ಬಂದಿತು. ಈಗ ಹಠಾತ್ತಾಗಿ ಸಂಭವಿಸಿದ ಇವರ ನಿಧನದಿಂದ ಶ್ರೀಮಠಕ್ಕೂ ಶಿಷ್ಯವರ್ಗಕ್ಕೂ ಅಪಾರವಾದ ನಷ್ಟವುಂಟಾಗಿದೆ.

ಇವರ ಸಮಾಧಿ ಸಂಸ್ಕಾರವು ಶುಕ್ರವಾರ ಮಧ್ಯಾಹ್ನ ಮೈಸೂರು ಪಾಠಶಾಲೆಯ ಆವರಣದಲ್ಲಿ ಯಥಾವಿಧಿಯಿಂದ ನೆರವೇರಿತು. ಸಾವಿರಾರು ಜನ ಶಿಷ್ಯರು ನೆರೆದಿದ್ದರು.

ಇನ್ನುಮುಂದೆ ಈ ಮಠಕ್ಕೆ ಅಧಿಪತಿಯಾಗುವವರಲ್ಲೂ, ಶ್ರೀ ಶ್ರೀಗಳವರಲ್ಲಿದ್ದ ಉದಾತ್ತಗುಣಗಳು ನೆಲೆಯಾಗಿ ನಿಂತು ಸಕಲ ಮಾನವಕೋಟಿಗೂ ಮಾರ್ಗದರ್ಶಿಗಳಾಗಲೆಂದು ನಾವು ಭಗವಂತನಲ್ಲಿ ಮೊರೆಯಿಡುತ್ತೇವೆ.

ಅವರ ನಿಧನದ ವಾರ್ತೆಯು ಬಹಳ ಬೇಗ ಕಾಡ್ಕಿಚ್ಚಿನಂತೆ ಎಲ್ಲೆಲ್ಲೂ ಹರಡಿತು. ವೃದ್ಧರು, ಬಾಲರು, ನಾರಿಯರು, ಅಪರಿಮಿತ ಸಂಖ್ಯೆಯಿಂದ ಮೋತಿಖಾನೆ ಬಳಿ ಸೇರಿದರು. ಇಲ್ಲೇ ಅವರ ಬಿಡಾರವಿದ್ದಿತು. ಅನಂತರ ವೈದಿಕ ಬ್ರಾಹ್ಮಣರು ಅಲ್ಲಿ ನಡೆಯಬೇಕಾಗಿದ್ದ ಕರ್ಮಗಳನ್ನೆಲ್ಲಾ ವಿಧಿವತ್ತಾಗಿ ನೆರವೇರಿಸಿದರು. ಕೈಲಾಸವಾಸಿಗಳಾದ ಶ್ರೀ ಶ್ರೀಗಳವರು ಒಂದು ಮೆತ್ತನೆಯ ಆಸನದ ಮೇಲೆ ಕುಳಿತಿದ್ದರು. ಹಾಗೆಯೇ ಪ್ರಾಣವಾಯುವು ಹೊರಟು ಹೋಯಿತು. ಪ್ರಾಣವಾಯುವು ಹೋಗಿದ್ದರೂ ಅವರ ಮುಖದಲ್ಲಿ ಒಂದು ವಿಧವಾದ ಅಪೂರ್ವ ತೇಜಸ್ಸು ಪ್ರಕಾಶಿಸುತ್ತಿತ್ತು. ಸ್ವಾಮಿಗಳ ಕಡೆಯ ದರ್ಶನ ಪಡೆಯಲು ಅನೇಕ ಜನ ದೊಡ್ಡ ಮನುಷ್ಯರು ಮಧ್ಯಾಹ್ನ 3 ಘಂಟೆಯವರೆಗ ಬರುತ್ತಲೇ ಇದ್ದರು.

ಶ್ರೀ ಶ್ರೀಗಳವರ ಶರೀರವನ್ನು ಸಮಾಧಿಸ್ಥಳಕ್ಕೆ ತೆಗೆದೊಯ್ಯಲು ಮಂಟಪವು ಸಿದ್ಧವಾಯಿತು ಪುಷ್ಪಗಳಿಂದ ಅಲಂಕೃತವಾದ ಆ ಮಂಟಪವು ದೇವೇಂದ್ರನ ಪುಷ್ಪಕ ವಿಮಾನವನ್ನು ಹೋಲುವಂತಿತ್ತು. ಅನಂತರ 3 ಘಂಟೆಯ ಹೊತ್ತಿಗೆ ಸ್ವಾಮಿಗಳ ಶರೀರವು, ವೈದಿಕರ ವೇದಘೋಷವಾಗುತ್ತಿರಲು ಮಂಟಪದಲ್ಲಿಡಲ್ಪಟ್ಟಿತು. ರಾಜಮರ್ಯಾದೆಗಳೊಡನೆ ಉತ್ಸವವು ಹೊರಟಿತು. ಅನೇಕ ಜನ ಖಾಸಗೀ ದೊಡ್ಡ ಮನುಷ್ಯರೂ ಅಧಿಕಾರಿಗಳೂ ಭಾಗಿಗಳಾಗಿದ್ದರು. ಸುಮಾರು 6½ ಗಂಟೆಯ ಹೊತ್ತಿಗೆ ಸಮಾಧಿ ಸ್ಥಳವನ್ನು ಉತ್ಸವವು ಸೇರಿತು. 4 ಅಡಿ ಆಳವಾದ ಗುಳಿಯೊಂದು ತೆಗೆಯಲ್ಪಟ್ಟಿತು. ಉತ್ಸವವು ಅಲ್ಲಿಗೆ ಬಿಜಯಗೈದನಂತರ ಶರೀರವು ಮಂಟಪದಿಂದ ಕೆಳಗಿಳಿಸಲ್ಪಟ್ಟಿತು

ಹಾಲು, ಮೊಸರು ಇವುಗಳಿಂದ ಅಭಿಷೇಕ ಮಾಡಲ್ಪಟ್ಟಿತು. ಮಂಗಳಾರತಿ ಮಾಡಲ್ಪಟ್ಟಿತು. ಅವರ ಶರೀರಕ್ಕೆ ಪೂಜೆ ಮಾಡಲಾಯಿತು. ನಂತರ ಗುಳಿಗೆ ಶರೀರವನ್ನು ಇಳಿಸಿದರು. ಬಾಳೆ ಎಲೆಯಮೇಲೆ ಕೂರಿಸಲ್ಪಟ್ಟು ಸುತ್ತಲೂ ಉಪ್ಪನ್ನು ತುಂಬಿದ ತರುವಾಯ ಸ್ವಾಮಿಗಳ ಬ್ರಹ್ಮದಂಡವನ್ನು ಮುರಿದು ಗುಳಿಯೊಳಗೆ ಹಾಕಿದರು. ತಲೆಯ ಚಿಪ್ಪು ಸ್ವಲ್ಪ ಕಾಣುತ್ತಿತ್ತು. ಆಮೇಲೆ ತೆಂಗಿನಕಾಯಿಯಿಂದ ಅವರ ಬುರುಡೆಗೆ ಹೊಡೆಯಲಾಯಿತು. 38 ನೇಯ ಕಾಯಿಗೆ ಅವರ ಬುರುಡೆಯು ಸೀಳಿತು. ಸೀಳಿದ ಜಾಗಕ್ಕೆ ಉಪ್ಪನ್ನು ತುಂಬಿ, ಗುಳಿಯನ್ನು ಮುಚ್ಚಿದರು.

ಸುಭಾಷಚಂದ್ರ ಬೋಸರ ದಸ್ತಗಿರಿ.

ನಾಲ್ಕು ವರ್ಷಗಳ ಕೆಳಗೆ ದೇಹಾಲಸ್ಯದ ನಿಮಿತ್ತದಿಂದ ಯೂರೋಪಿಗೆ ಹೋಗಲು ಸುಭಾಷಬೋಸರಿಗೆ ಅವಕಾಶಕೊಡಲ್ಪಟ್ಟಿತು. ಅದಕ್ಕಿಂತ ಹಿಂದೆ ಇವರು ಕ್ರಿಮಿನಲ್-ಲಾಗೆ ಒಳಗಾಗಿ ರಾಜಬಂದೀಖಾನೆಯಲ್ಲಿಡಲ್ಪಟ್ಟಿದ್ದರು. ಈಗ ಇವರು ಮಾತೃಭೂಮಿಗೆ ಹಿಂತಿರುಗಲು ಮನಸ್ಸು ಮಾಡಿದರು. ಆದರೆ ಬ್ರಿಟಿಷ್ ಕಾನ್ಸಲ್‌ರವರು, ಇವರ ಚಲನವಲನಗಳಿಗೆ ಅಡ್ಡಿಗಳು ಉಂಟಾಗಬಹುದೆಂದು ತಿಳಿಸಿದರು. ಸ್ವದೇಶಾಭಿಮಾನದ ಮೂರ್ತಿಯಾದ ಬೋಸರು ಎಷ್ಟೇ ತೊಡಕುಗಳು ಬರಲಿ ಮಾತೃಭೂಮಿಗೆ ಹಿಂತಿರುಗಲು ನಿಶ್ಚಯಿಸಿದರು ದೇಶದ ಪ್ರಜೆಗಳೆಲ್ಲರೂ ಇವರಿಗೆ ಯಾವ ಪ್ರತಿಬಂಧಕವನ್ನೂ ಒಡ್ಡಕೂಡದೆಂದು ಸರ್ಕಾರದಲ್ಲಿ ಮೊರೆಯಿಟ್ಟರು ಆದರೇನು? ಇದೆಲ್ಲವನ್ನೂ ತಿರಸ್ಕರಿಸಿ ಅವರನ್ನು ದಸ್ತಗಿರಿ ಮಾಡಿದರು. ಇವರನ್ನು ದಸ್ತಗಿರಿ ಮಾಡಿದ ಕಥೆಯು ವಿಚಿತ್ರವಾಗಿದೆ

ಶ್ರೀ॥ ಸುಭಾಸ ಚಂದ್ರ ಬೋಸರು.

ಬೊಂಬಾಯಿನಲ್ಲಿ ಬಂದಿಳಿದೊಡನೆ ದಸ್ತಗಿರಿ ಮಾಡಲ್ಪಟ್ಟರು. ಅವರ ಆರೋಗ್ಯವು ತೃಪ್ತಿಕರವಾಗಿಲ್ಲ

ಕಾಂಟೆವರ್ಡೆ ಎಂಬ ಇಟಲಿ ದೇಶದ ಹಡಗಿನಲ್ಲಿ ಸುಭಾಷರು ತಾ॥ ೮ ರ ಪ್ರಾತಃಕಾಲ ಮುಂಬಯಿಗೆ ಆಗಮಿಸಿದರು. ಅಪರಿಮಿತವಾಗಿ ಸೇರಿದ್ದ ಜನಸ್ತೋಮವು ಗ್ಯಾಂಗ್‌ವೇನಲ್ಲಿ ಸುಭಾಷರ ಮುಖವನ್ನು ಕಂಡೊಡನೆಯೇ 'ಸುಭಾಷಕೀ ಜೈ' ಎಂದು ನಭೋಮಂಡಲವನ್ನು ಭೇದಿಸುವಂತೆ ಕೂಗಿತು. ಕಂದಿದ್ದ ಮುಖವಾದರೂ ನಗೆಯು ಪ್ರಫುಲ್ಲಿತವಾಗಿತ್ತು. ಪೋಲೀಸರು ಅವರನ್ನು ಡಾಕ್‌ವರೆಗೆ ಕರೆತಂದರು ಬೋಸರು ಭೂಮಿಯ ಮೇಲೆ ಕಾಲಿಟ್ಟೊಡನೆಯೇ ಅವರನ್ನು ಬಂಧಿಸಿ ಹಡಗಿನಲ್ಲಿ ಥಾನಾಜೈಲಿಗೆ ಕರೆದೊಯ್ದರು

ಪೋರ್ಟ್ ಸಯಿದ್ದಿನಲ್ಲಿಯೇ ಇವರನ್ನು ದಸ್ತಗಿರಿ ಮಾಡಲು ಯತ್ನಿಸಿದರು. ಆದರೆ ಹಡಗಿನ ಕ್ಯಾಪ್ಟನ್ನರು ಅದಕ್ಕೆ ಅವಕಾಶ ಕೊಡಲಿಲ್ಲ. ಪೋಲೀಸರು ಪಾಸ್‌ಪೋರ್ಟನ್ನು ಕಿತ್ತುಕೊಂಡಿದ್ದು, ಹಡಗು ಪೋರ್ಟ್ ಸಯಿದ್ದಿನಿಂದ ಚಲಿಸಿದ ತರುವಾಯ ಕೊಟ್ಟರು.

ಮುಂಬಯಿನಲ್ಲಿಯೂ ಇದೇ ರೀತಿ ಹಡಗಿನಲ್ಲಿರುವಾಗಲೇ ಬಂಧಿಸಲೆತ್ನಿಸಲು ಹಡಗಿನ ಕ್ಯಾಪ್ಟನ್ನರು ಆಗದೆಂದು ಹೇಳಿದರು

ಈ ರೀತಿ ತಮ್ಮ ಹಡಗಿನಲ್ಲಿ ಬಂದ ಬೋಸರನ್ನು ಪೋಲೀಸರ ವಶಕ್ಕೆ ಬಿಟ್ಟುಕೊಡಲು ಕ್ಯಾಪ್ಟನ್ನರು ಸಮ್ಮತಿ ಕೊಡದಿರುವಾಗ ಹಿಂದೂಸ್ಥಾನದಲ್ಲೇ ಹುಟ್ಟಿಬೆಳೆದ ತ್ಯಾಗವೀರರಾದ ಬೋಸರನ್ನು ಸ್ವದೇಶದಲ್ಲಿ ಕಾಲಿಟ್ಟೊಡನೆಯೇ ದಸ್ತಗಿರಿ ಮಾಡಲು ಯಾವ ದೇಶಾಭಿಮಾನಿಗೆತಾನೇ ವಿಷಾದ ಉಂಟಾಗದು? ಇದು ಯಾವ ನ್ಯಾಯ" ಈ ರೀತಿ ಪ್ರಜೆಗಳ ಚಲನವಲನರೂಪವಾದ ಮೂಲಭೂತ ಹಕ್ಕುಗಳಿಗೆ ಗದಾಪ್ರಹಾರವಾದುದರ ನೀತಿಯು ಯಾವ ಸರ್ಕಾರದಲ್ಲೂ ಬಹಳ ಕಾಲ ನಡೆಯಲಾರದು

ವೈಸ್‌ರಾಯರು ಅಪ್ಪಣೆ ತೆಗೆದುಕೊಂಡರು

ಲಾರ್ಡ್ ವಿಲಿಂಗ್‌ಡನ್ನರು ತಮ್ಮ ವೈಸರಾಯ್ ಪದವಿಯ ಅಂತ್ಯದಲ್ಲಿ ಭಾರತ ಶಾಸನ ಸಭಾಸದರ ಅಪ್ಪಣೆ ತೆಗೆದುಕೊಳ್ಳಲು ಸಭೆಗೆ ಭೇಟಿಕೊಟ್ಟರು. ಕಾಂಗ್ರೆಸ್ ಸದಸ್ಯರೆಲ್ಲರೂ ಈ ಸಮಾರಂಭಕ್ಕೆ ಬಹಿಷ್ಕಾರ ಹಾಕಿದ್ದರು. ಇವರ ವೈಸರಾಯ್ ಪದವಿಯು ಭಾರತೀಯರಿಗೆ ಹಿತಕರವಾಗಿರಲಿಲ್ಲವೆಂದು ಸೂಚಿಸುವುದೇ ಇದರ ಉದ್ದೇಶ. ಕಾನೂನುಭಂಗ ಚಳವಳಿಯನ್ನು ಮುರಿಯುವುದರಲ್ಲಿ ಇವರು ಅತ್ಯಂತ ಕ್ರೂರವಾದ ದಬ್ಬಾಳಿಕೆಯ ನೀತಿಯನ್ನು ಅನುಸರಿಸಿದರು. ಆದ್ದರಿಂದ ಇವರಿಗೆ ಕಾಂಗ್ರೆಸ್ ಸದಸ್ಯರು ತಮ್ಮ ಅಸಮಾಧಾನವನ್ನು ಸೂಚಿಸಿದರು.

ಖಾದಿ ಮತ್ತು ಸ್ವದೇಶಿ ಪ್ರದರ್ಶನ

ತುಮಕೂರಿನಲ್ಲಿ ನಾಳಿದ್ದಿನಿಂದ ನಡೆಯುವ ಲಾಯರುಗಳ ಸಮ್ಮೇಳನದ ಆಶ್ರಯದಲ್ಲಿ ಖಾದಿ ಮತ್ತು ಸ್ವದೇಶಿ ಪ್ರದರ್ಶನವೊಂದನ್ನು ನಡೆಸುವ ಏರ್ಪಾಡಾಗಿದೆ. ಇದು ನಾಳೆಯಿಂದ ನಾಲ್ಕು ದಿನಗಳು ನಡೆಯುವುದಾಗಿ ತಿಳಿದುಬಂದಿದೆ. ವಿವಿಧ ವಿನೋದಾವಳಿ, ಸಂಗೀತ, ಭಾಷಣ, ವ್ಯಾಯಾಮ ಪ್ರದರ್ಶನ ಇತ್ಯಾದಿಗಳು ಆಗುವವು.

ಲಾಯರ ರುಮಾಲು ಹಾರಿಸಿದ ಮೊಕದ್ದಮೆ.

ಬೆಂಗಳೂರಿನ ಅಡ್ವೋಕೇಟ್ ಮ॥ ಎಸ್ ಕೃಷ್ಣಪ್ಪನವರ ರುಮಾಲನ್ನು ಹಾರಿಸಿ ಅವರಮೇಲೆ ಕೈಮಾಡಿದರೆಂಬ ಕಾರಣದಮೇಲೆ ಕಂಟ್ರ್ಯಾಕ್ಟರ್ ಮ॥ ಕೃಷ್ಣಸ್ವಾಮಿಶೆಟ್ಟಿ ಮತ್ತು ರಾಮಚಂದ್ರರಾವ್ ಎಂಬುವರ ಮೇಲೆ ಮೊಕದ್ದಮೆ ಹೂಡಲ್ಪಟ್ಟಿದೆ.

ಶಿಲ್ಪ ಸಂದೇಶ.

—

ಶ್ರೀ ವಿಶ್ವಕರ್ಮಜಯಂತಿ ಮಹೋತ್ಸವದಲ್ಲಿ ಶಿಲ್ಪಸಿದ್ಧಾಂತಿ ಶ್ರೀ ಶಿದ್ಧಲಿಂಗ ಸ್ವಾಮಿಗಳು ಮಾಡಿದ ಭಾಷಣದ ಸಾರಾಂಶ—

ಈ ಪ್ರಸಂಗದಲ್ಲಿ ಶಿಲ್ಪಶಾಸ್ತ್ರವು ಅನಾದಿಯಿಂದಲೂ ವೈದಿಕವಾಗಿ ಸರ್ವದ ಅನುಷ್ಠಾನದಲ್ಲಿದ್ದು ಈ ವಿಶಾಲಪ್ರಪಂಚದ ಜೀವಿತಕ್ಕೆ ಅತ್ಯಂತ ಹಿತಕಾರಿಯಾಗಿರುತ್ತದೆ ಈ ಶಿಲ್ಪವೇ ಮಾನವನ ಜೀವಿತಕ್ಕೆ ಅತ್ಯಂತ ಹಿತಕಾರಿಯಾಗಿಯೂ ಪುರುಷಾರ್ಥಸಾಧನೆಗೆ ಮುಖ್ಯವಾಗಿಯೂ ಇರುವುದರಿಂದ ಪ್ರಾಚೀನ ಮಹರ್ಷಿಗಳೂ ಈ ಶಿಲ್ಪದ ಮಹಿಮೆಯನ್ನರಿತು, ಅನುಷ್ಠಾನಿತರಾಗಿದ್ದರೆಂದು ಶೃತಿಸ್ಮೃತಿ ಬ್ರಾಹ್ಮಣದಲ್ಲಿ ಸಾರುತ್ತಿರುವುದು

ಅನಂತ ಶೃತಿಗಳು ಶಿಲ್ಪಧರ್ಮವನ್ನು ಉದ್ಘೋಷಿಸುತ್ತಿರುತ್ತವೆ ಇದರಿಂದ ಪ್ರಾಚೀನಕಾಲದಿಂದಲೂ ಶಿಲ್ಪದ ಮಹಿಮೆಯು ಅತೀವ ಮಹತ್ತ್ವಪೂರ್ಣವೆಂದು ಸರ್ವರಿಗೂ ಗೋಚರವಾಗದೆ ಇರಲಾರದು ಇದರಿಂದಲೇ ಶಿಲ್ಪಕಲೆಯು ಸಕಲ ಕಲೆಗಳಿಗೂ ಶ್ರೇಷ್ಠವಾಗಿರುತ್ತದೆ ಮಿಕ್ಕ ಕಲೆಗಳೆಲ್ಲವೂ ಈ ಶಿಲ್ಪ ಕಲೆಗೆ ಅಧೀನಗಳಾಗಿರುತ್ತವೆ

ಇಂತಹ ಶಿಲ್ಪದಿಂದ ಮಾನವಕೋಟಿಗೆ ಬಹು ಮುಖ್ಯವಾದ ಎರಡು ಪ್ರಯೋಜನಗಳುಂಟು ಒಂದನೆಯದು ಪ್ರಾಪಂಚಿಕ ಸುಖವು ಎರಡನೆಯದು ಪಾರಮಾರ್ಥಿಕ ಸುಖವು ಈ ಸುಖಗಳೇ ಮನುಷ್ಯನ ಜೀವಿತವು. ಇದಿಲ್ಲದ ಜೀವಿತವೇ ನಿಷ್ಫಲವು. ಸ್ತ್ರೀಪುತ್ರಾದಿಗಳ ಭೋಗಕ್ಕೂ ಜನನ ನಾಶಿಕ್ಕೂ ಧರ್ಮಾರ್ಥಕಾಮಗಳಿಗೂ ಶೀತೋಷ್ಣಾದಿ ಬಾಧೆಗಳ ನಿವಾರಣೆಗಳಿಗೂ ವಾಸ, ಕೂಪ, ಆರಾಮ, ದೇವಾಲಯ ಮುಂತಾದ ಧರ್ಮಸಂಪಾದನೆಗೂ ಶಿಲ್ಪವೇ ಮುಖ್ಯವೆಂದು ವಿಶ್ವಕರ್ಮಾದಿ ಋಷಿಗಳು ಹೇಳಿರುತ್ತಾರೆ ಈ ಉದಾಹರಣೆಗಳಿಂದ ಶಿಲ್ಪವೇ ಪ್ರಾಪಂಚಿಕ ಸುಖಕ್ಕೆ ಮೂಲವೆಂದು ಒಡೆದು ಕಾಣುವುದು ಇನ್ನು ಪ್ರಾಪಂಚಿಕ ಸುಖಕ್ಕೆ ಬೇಕಾದವುಗಳೆಲ್ಲವನ್ನೂ ಯೋಚಿಸಿದರೆ—ನಗರ, ಪಟ್ಟಣ, ಗ್ರಾಮ, ಕೋಟೆ, ರಾಜಗೃಹ, ದೇವಮಂದಿರ, ದೇವತಾ ಬಿಂಬಗಳು, ಚಿತ್ರಲೇಖನ, ತಂತುಪಟ, ಮಾಲಾಕರಣ ನೃತ್ತ, ಗೀತ, ವಾದ್ಯ, ಅಲಂಕಾರವೇ ಮುಂತಾದ ರಚನೆಗಳೆಲ್ಲವೂ ಶಿಲ್ಪವೇ ಆಗಿರುತ್ತವೆ. ಶಿಲ್ಪದಿಂದ ಪಾರಮಾರ್ಥಿಕ ಸುಖವನ್ನು ವಿವರಿಸಿದರೆ ಪಾರಮಾರ್ಥಿಕ ಸುಖಕ್ಕೆ ಮೂಲವಾದುದು ಸಚ್ಚಿದಾನಂದಸ್ವರೂಪನಾದ ಭಗವಂತನ ಉಪಾಸನೆ ಈ ಉಪಾಸನೆಯು ಸಗುಣ ನಿರ್ಗುಣವೆಂದು ಎರಡು ಪ್ರಕಾರವಾಗಿರುತ್ತದೆ ಇವುಗಳಲ್ಲಿ ಸಗುಣೋಪಾಸನೆಯ ಬಲವಿಲ್ಲದೆ ನಿರ್ಗುಣೋಪಾಸನೆಯು ಲಭಿಸುವುದಿಲ್ಲ ಈ ಸಗುಣೋಪಾಸನೆಗೆ ಶಿಲ್ಪವೇ ಉಪಕರಣವು ಹೇಗೆಂದರೆ—ದರ್ಶನಕಾರರಾದ—ಶೈವರಿಗೆ ಶಿವಲಿಂಗವೂ ವೈಷ್ಣವರಿಗೆ ವಿಷ್ಣುವೂ ಗಾಣಾಪತ್ಯರಿಗೆ ಗಣಪತಿಯೂ ಶಾಕ್ತೇಯರಿಗೆ ಶಕ್ತಿಯೂ ಸೌರವರಿಗೆ ಸೂರ್ಯನೂ ಕಾಪಾಲಿಕರಿಗೆ ಕಾಪಾಲಿಯೂ ಜೈನರಿಗೆ ಜಿನನೂ ಬೌದ್ಧರಿಗೆ ಬುದ್ಧನೂ ಅತ್ಯಾವಶ್ಯಕವಾಗಿರುವುದರಿಂದ ಇವರುಗಳು ಯಾವ ಪ್ರಕಾರ ಉಪಾಸನೆ ಮಾಡಿದರೂ ಅದರ ಧ್ಯಾನ ಮಂತ್ರಗಳೆಲ್ಲವೂ ರೂಪಾತ್ಮಕವಾದ ವರ್ಣನೆಯೇ ಆಗಿರುತ್ತದೆ ಆ ರೂಪವೆಲ್ಲವೂ ಶಿಲ್ಪಸೌಂದರ್ಯಗಳೇ ಆಗಿರುತ್ತವೆ ಆಕಾರಾದಿ ಯಾವ ದಾರ್ಶನಿಕನಿಗಾದರೂ ಶಿಲ್ಪದ ಬಲವಿರುತ್ತದಲ್ಲವೆ ಶಿಲ್ಪವು ಸರ್ವಮಾನ್ಯವಾಗಿಯೂ ಇರುತ್ತದೆ. ಆಗಮೋಕ್ತಂತು ಕರ್ಮಾದಿ ಪ್ರತಿಷ್ಠಾಂತವಾಗಿ ಶಿಲ್ಪವೇ ತಳಹದಿಯಾಗಿರುತ್ತದೆ ಶಿಲ್ಪವಿಲ್ಲದಿದ್ದರೆ ಆಗಮವು ಅರಣ್ಯರೋದನವಾಗುತ್ತದೆ ಕೇವಲ ಸನ್ಯಾಸಿಗಳಿಗಾದರೂ ಯೋಗದಂಡವೂ ಜಪಮಾಲಿಕೆಯೂ ದಂಡ ಕಮಂಡಲುಗಳೂ ಬೇಕೇಬೇಕು ಹೀಗೆ ಸಕಲ ಮಾನವರಿಗೂ ಪಶು ಪಕ್ಷಿ ಮುಂತಾದ ತಿರ್ಯಗ್ಜಂತುಗಳಿಗೂ ಸನ್ಯಾಸಿಗಳಿಗೂ ಶಿಲ್ಪವೇ ಆಧಾರಭೂತವಾಗಿರುತ್ತದೆ. ಶಿಲ್ಪವು ಸಕಲಧರ್ಮಗಳಿಗೂ ಮೂಲವೆಂಬುದನ್ನು ತಿಳಿದೇ ನಮ್ಮ ಸನಾತನ ಋಷ್ಯರ್ಷಿಗಳು ಶಿಲ್ಪಕಲಾ ಉಪಾಸನೆಯನ್ನು ಕೈಗೊಂಡಿದ್ದರು.

ಶಿಲ್ಪಿಯಾದವನು ಸಕಲಶಾಸ್ತ್ರಪಾರಂಗತನೂ ಸರ್ವಾಂಗಪೂರ್ಣನೂ ಧಾರ್ಮಿಕನೂ ದಯಾಪರನೂ ಮತ್ಸರವಿಲ್ಲದವನೂ ಅಸೂಯಾರಹಿತನೂ ಆಗಿರತಕ್ಕ ಶುಚಿಯುಳ್ಳವನೂ ಸತ್ಯವಾದಿಯೂ ಜಿತೇಂದ್ರಿಯನೂ ನೀರೋಗಿಯೂ ಸ್ವಾಗತಿಂದ ಎದೆಬ್ಬಿಟ್ಟವನೂ ಶ್ರೀಪದ್ಮನಾಭಾಂಕಿತನಾಗಿ ವಾಸ್ತುವಿದ್ಯಾಪಾರಂಗತನೂ ಸಂತ್ರವಂತನೂ ಪುರಾಣಗಳನ್ನೂ ಮಹಾಸೋಪಾನಗಳನ್ನೂ ತಿಳಿದವನೂ ಗುರ್ವಾಜ್ಞಾಪರಿಪಾಲಕನೂ ಆಗಿರಬೇಕೆಂದರೆ ಆತನೇ ಶಿಲ್ಪಿಯೆಂದೂ ಶಾಸ್ತ್ರವು ಘಂಟಾಘೋಷವಾಗಿ ಸಾರುವುದು ಇದರಿಂದ ಶಿಲ್ಪಾಧಿಕಾರವು ಎಷ್ಟು ಕಟುತರವಾದುದೆಂಬುದನ್ನು ಚೆನ್ನಾಗಿ ಯೋಚಿಸಬಹುದು ಈ ವಿಧವಾದ ಶ್ರೇಯಾಸಿದ್ಧಿಗಳುಳ್ಳ ಶಿಲ್ಪಿಗಳಿಗೆ ಪ್ರಾಚೀನ ಪೂಜ್ಯತೆಯು ಎಲ್ಲಿಂದ ಬರಬೇಕು? ಇತ್ತೀಚೆಗೆ ಅವತರಿಸಿದ್ದ ವಿಶ್ವಕರ್ಮಾಂಶ ಸಂಭೂತರೂ ವಿಶ್ವಕರ್ಮ ಕುಲದೀಪಕರೂ ಆದ ಜಕ್ಕಣಾಚಾರ್ಯ ಮುಂತಾದ ಅಸಂಖ್ಯ ಮಹಾಚಾರ್ಯರುಗಳು ಅಗಣಿತವಾದ ಮಹಾಕಾರ್ಯಗಳನ್ನು ಮಾಡಿರುವುದರಿಂದ ಆ ದಿವ್ಯಶಿಲ್ಪಗಳು ಪೂರ್ವಾಚಾರ್ಯರ ಕೀರ್ತಿಲತೆಗಳು ಹಬ್ಬುತ್ತಿರುವುವಲ್ಲದೆ ಮುಂದೆ ಆಚಂದ್ರಾರ್ಕವಾಗಿರುವ ವರೆಗೂ ಬೆಳಗುತ್ತಲೇ ಹೋಗುವುವು ಮುಖ್ಯವಾಗಿ ಯಾವ ಶಿಲ್ಪವು ಸನಾತನಿಗಳಿಂದ ಪವಿತ್ರವಾಗಿತ್ತೋ ಯಾವ ಪವಿತ್ರಶಿಲ್ಪದಿಂದ ಸಕಲಕಳೆಯೂ ಅಭಿವೃದ್ಧಿಯನ್ನು ಹೊಂದಿತ್ತೋ ಯಾವ ಶಿಲ್ಪದಿಂದ ಜಗತ್ತಿನ ಮಾನವರೆಲ್ಲರೂ ಸಗುಣಾರಾಧನೆಯನ್ನು ಮಾಡಿ ತಮ್ಮ ತಮ್ಮ ಜನ್ಮಗಳನ್ನು ಸಾರ್ಥಕವನ್ನಾಗಿ ಮಾಡಿಕೊಂಡರೋ ಯಾವ ಶಿಲ್ಪದಿಂದ ದೇವಮಾನವಾದಿಗಳಿಗೆ ಗೃಹವಾಸಾದಿ ಆಶ್ರಮಗಳು ಸಿದ್ಧಿಯಾಗುತ್ತಿದ್ದುವೋ ಯಾವ ಶಿಲ್ಪವು ಪ್ರಪಂಚದ ಸಕಲಕಲಾ ಸೌಂದರ್ಯಕ್ಕೂ ತವರಾಗಿತ್ತೋ ಯಾವ ಶಿಲ್ಪಿಗಳು ಭೂಮಂಡಲದ ಸರ್ವಾಲಂಕಾರಗಳಿಗೂ ಅಧಿಗಳಾಗಿದ್ದರೋ ಆದ ಸರ್ವೋತ್ತಮವಾದ ಆಚಾರ್ಯವಂಶದಲ್ಲಿ ಹುಟ್ಟಿದ ನಮ್ಮಗಳ ಸ್ಥಿತಿಯೂ ಆ ಪವಿತ್ರ ಶಿಲ್ಪದ ಸ್ಥಿತಿಯೂ ಇಂದು ಇಷ್ಟು ಅವನತಿಗೀಡಾಗಿರುವುದು ಎಷ್ಟು ಶೋಚನೀಯ ಆಧುನಿಕರಾದ ಕೆಲವು ಶಿಲ್ಪಿಗಳು ಶಾಸ್ತ್ರೀಯವಲ್ಲದ ಶಿಲ್ಪಕಾರ್ಯಗಳನ್ನು ಮಾಡುತ್ತಿರುವುದರಿಂದ ಅವರು ಅಂಧಪರಂಪರೆ [illegible] ಎಂದೂ ಹೀಗಾಗಬಾರದು ಶಾಸ್ತ್ರಪ್ರಮಾಣದಿಂದಲೂ ತಕ್ಕಮಾನ ಪ್ರಮಾಣದಿಂದಲೂ ಕೂಡಿದವನೇ ಆಚಾರ್ಯನೆಂದು ಶಾಸ್ತ್ರಗಳು ಸಾರುತ್ತಿರುವುವು ಆದ್ದರಿಂದ ಶಿಲ್ಪಾಧಿಕಾರಿಗಳೆಲ್ಲರೂ ಶಿಲ್ಪಶಾಸ್ತ್ರವನ್ನು ಓದಿ ಅದರಂತೆ ವಸ್ತುನಿರ್ಮಾಣಗಳನ್ನು ಮಾಡಬೇಕು ಇದೇ ಶಿಲ್ಪಿಗಳ ಅಭ್ಯುದಯಕ್ಕೆ ಮುಖ್ಯವಾದ ಸಂಪತ್ತು

ಮತ್ತೊಂದು ರಹಸ್ಯವೇನೆಂದರೆ—ಶಿಲ್ಪಕಲೋಪಾಸನೆಯೆಂಬುದು ದೇವರ ಉಪಾಸನೆಗಿಂತಲೂ ಮಹತ್ತ್ವಪೂರ್ಣವೆಂದು ನಮ್ಮ ಅಭಿಪ್ರಾಯವಾಗುತ್ತದೆ ಹೇಗೆಂದರೆ ದೇವರ ಉಪಾಸನೆಯಿಂದ ಒಬ್ಬ ಉಪಾಸಕನಿಗೆ ಮಾತ್ರ ಇಷ್ಟಾರ್ಥಸಿದ್ಧಿಯಾಗಿ ಆತನಿಗೆ ಆನಂದವುಂಟಾಗಬಹುದು ಆದರೆ ಶಿಲ್ಪಕಲೋಪಾಸಕನಿಗೆ ಹಾಗಾಗಲಾರದು ಶಿಲ್ಪಕಲೋಪಾಸಕನು ಒಂದು ಬಿಂಬ ನಿರ್ಮಾಣವಾಗಲಿ ಒಂದು ಚಿತ್ರಲೇಖನವಾಗಲಿ ಆರಂಭಿಸಿದಾಗಲೇ ಆತನಿಗೆ ಅನಂತ [illegible] ಆ ಕರ್ಮವು ಮುಂದೆ ಹೋದಹಾಗೆಲ್ಲ ಆ ಶಿಲ್ಪಸೌಂದರ್ಯಗಳು ಆಗ ತೋರುತ್ತ ತೋರುತ್ತ ತನ್ನ ಕಣ್ಣಿಗೆ ಆದ ತಾನೇ ನೋಡಿ ನೋಡಿ ಮತ್ತಷ್ಟು ಸೌಂದರ್ಯವನ್ನು ಹೆಚ್ಚುಗೊಳಿಸುತ್ತ ಆನಂದಸಾಗರದಲ್ಲಿ ಮುಳುಗಿಬಿಡುತ್ತಾನೆ

ಹೀಗೆ ತಾನು ಪೂರ್ಣಾನಂದನಾದುದಲ್ಲದೆ ತಾನು ನಿರ್ಮಿಸಿದ ಬಿಂಬವನ್ನಾಗಲಿ ಚಿತ್ರಪಟವನ್ನಾಗಲಿ ನೋಡುವವರಿಗೆಲ್ಲ ದರ್ಶನಮಾತ್ರದಿಂದ ಆನಂದವುಂಟಾಗುವಂತೆ ಮಾಡುವನು.

ಶ್ರೀ ಶಿಲ್ಪ ಸಿದ್ಧಾಂತಿ ಶಿದ್ಧಲಿಂಗ ಸ್ವಾಮಿಗಳು.

You Know
OUR IDEAL ARRANGEMENTS & CHOICEST PREPARATIONS'
We need not tell you about it
COME & SEE OUR NOVEL
innovations and up-to-date Management.
SRI KRISHNA BHAVAN,
Mysore.

ಮಾತೃದ್ರೋಹಿ.

(ಏಕಾಂಕ ನಾಟಕ).

ಲೇಖಕ—**ಜಿ.ಪಿ.ಆರ್. ಒಂಟಿಕೊಪ್ಪಲ್.**

(ದೃಶ್ಯ ೧.)

[ಜಯಚಂದ್ರನ ಅರಮನೆಯಲ್ಲಿ ಸ್ವಯಂವರ. ಹಿಂದೂ ರಾಜರೆಲ್ಲ ಬಂದಿದಾರೆ. ವಾದ್ಯಘೋಷ, ವಿಶೇಷ ಆಟ್ಟಹಾಸ.]

ಜಯಚಂದ್ರ—ಮಿತ್ರರೇ, ಹಿಂದೂರಾಜವರೇಣ್ಯರೇ, ನನ್ನ ಆಹ್ವಾನದಂತೆ ಸ್ವಯಂವರಕ್ಕೆ ತಾವೆಲ್ಲರೂ ಬಂದಿರುವದು ನನಗೆ ಮಹದಾನಂದ. ಯಾರಲ್ಲಿ? ಕುಮಾರೀ ಸಂಯುಕ್ತೆಯನ್ನು ಬರಮಾಡಿ

(ಸಖಿಯರೊಡನೆ ಸಂಯುಕ್ತೆ ಬರುವಳು) ಬಾಲೇ—ಇಲ್ಲಿ ಸೇರಿರುವ ಹಿಂದೂ ರಾಜರಲ್ಲಿ ನೀನು ಯಾರನ್ನು ಮೆಚ್ಚುವೆಯೋ ಅವರಿಗೆ ಮಾಲೆ ಹಾಕಿ ಪತಿಯಾಗಿ ವರಿಸು.

ಸಂಯುಕ್ತೆ.—ಸಖಿ, ದೆಹಲೀ ಸಿಂಹಾಸನಾಧೀಶ್ವರರಾದ ಪೃಥ್ವೀರಾಜ ಮಹಾರಾಜರು ಇಲ್ಲಿರುವರೇ?

ಸಖಿ:—ಅಮ್ಮ. ಅವರಿಗೆ ಆಹ್ವಾನವು ಹೋಗಲಿಲ್ಲ—ಅವರು ಬಂದಿಲ್ಲ.

ಸಂಯುಕ್ತೆ.—ಆದರೆ ಮುಂದೆ?

ಸಖಿ—ಪೃಥ್ವೀರಾಜರಂತೆ ಗೊಂಬೆಯೊಂದನ್ನು ಮಾಡಿ ಚಾರನ ವೇಷಹಾಕಿ ದ್ವಾರದಲ್ಲಿ ನಿಲ್ಲಿಸಿರುವರಂತೆ

ಸಂಯುಕ್ತೆ:—(ಹೋಗಿ ಆ ಗೊಂಬೆಗೆ ಹಾರ ಹಾಕುವಳು)

ಜಯ.—ಸಂಯುಕ್ತೆ—ಛೀ—ಏನು ಕೆಲಸವಿದು? ನನ್ನ ವೈರಿಯನ್ನು ನೀನು ವರಿಸುವೆಯಾ? ಆ ಅಧಮನ ಪತ್ನಿಯಾಗುವೆಯಾ?

ಸಂಯುಕ್ತೆ:—ಅಯ್ಯಾ ನಾನು ಪೃಥ್ವೀರಾಜರನ್ನು ಮೆಚ್ಚಿರುವೆನು-ಅವರೇ ನನ್ನ ಪತಿ. ಅವರ ಮೇಲಿನ ಆಗ್ರಹವನ್ನು ಬಿಡಿ.

ಜಯ.—ನನಗೆ ಸಲ್ಲಬೇಕಾದ ದೆಹಲೀ ಸಿಂಹಾಸನವನ್ನು ತಾನು ಆಕ್ರಮಿಸಿ ನನಗೆ ದ್ರೋಹಮಾಡಿದ ಆ ನೀಚನು ನನಗೆ ವೈರಿ. ಪರಮವೈರಿ. ನೀನು ನನ್ನ ವೈರಿಯ ಪತ್ನಿ ಆದ್ದರಿಂದ ನೀನೂ ಈ ಮುಂದೆ ನನಗೆ ವೈರಿ.

ಸಂಯುಕ್ತೆ:—ಅಪ್ಪಾಜಿ ಬಿಡಿ. ಕ್ರೋಧವನ್ನು ಬಿಡಿ. ಈ ನಿಮ್ಮ ಆಗ್ರಹದಿಂದ ಮುಂದೆ ಹಿಂದೂರಾಜರ ಐಕಮತ್ಯಕ್ಕೆ ಭಂಗಬಂದು ಮಹಾ ಅನರ್ಥಕ್ಕೆ ಕಾರಣವಾಗುವುದು.

ಜಯ:—ಛೀ. ಅಧಮಳೆ-ನನಗೆ ವಿವೇಕವನ್ನು ಹೇಳುವೆಯಾ?ಯಾರಲ್ಲಿ, ಈ ಪಾಪಿಯನ್ನು ಬಂಧನದಲ್ಲಿಡಿ. ಮಿತ್ರರೇ. ನನ್ನ ಮಗಳ ಅವಿವೇಕದಿಂದ ನಿಮಗೆಲ್ಲಾ ಅಪಮಾನವಾಯಿತು. ಅಪರಾಧವನ್ನು ಮನ್ನಿಸಿ.

ಎಲ್ಲರೂ:—ಹೆಂಗಸರ ಮನಸ್ಸು ಅವರ ಪ್ರೀತಿಯು ಎಲ್ಲಿರುವದೋ ಅಲ್ಲೇ ಸೇರುವುದು. ಇದು ಸ್ವಯಂವರವೇ ತಾನೇ. ಆಗಲಿ. (ಹೋಗುವರು)

ಜಯ:—ಎಂತಹ ಕಾರ್ಯವನ್ನು ಮಾಡಿದಳು? ಇವಳು ನನ್ನ ಮಗಳೇ-ಆ ನೀಚ ಪೃಥ್ವೀರಾಜನನ್ನು.......

ಚಾರ.—ಮಹಾರಾಜ. ಅಪಾರ ಸೈನ್ಯವು ಬಂದು ನಮ್ಮ ಕನೂಜನಲ್ಲಿ ಮುತ್ತಿದೆ. ದೆಹಲಿಯವರಂತೆ. ಪೃಥ್ವಿರಾಜರು. ಸಂಯುಕ್ತೆಯನ್ನು ಕರೆದುಕೊಂಡು ಹೋಗಲು ಬಂದಿದಾರಂತೆ.

ಜಯ:—ಎಲಾ ನೀಚ, ಆಗಲೇ ಸಂಯುಕ್ತೆಯನ್ನು ಕರೆದುಕೊಂಡೇ ಹೋಗಲು ಬಂದನೆ? ಇರಲಿ- (ಹೋಗುವನು)

(ದೃಶ್ಯ ೨.)

[ಮಾರ್ಗದಲ್ಲಿ ಮಹಮದ್‌ಘೋರಿ—ಮಂತ್ರಿ]

ಘೋರಿ.—ನಾವು ಬಂದು ಬಹುದಿನವಾಯಿತು ದೊಡ್ಡ ಸೈನ್ಯವು ಕೆಲಸವಿಲ್ಲದೆ ನಿಂತಿದೆ. ಹಿಂದೂರಾಜರಲ್ಲಿ ಏಕಮತ್ಯವು ಬಲವಾಗಿರುವದರಿಂದ ಯಾವ ರಾಜ್ಯದಮೇಲೆ ಬೀಳುವದಕ್ಕೂ ಧೈರ್ಯಸಾಲದು ಏನುಮಾಡೋಣ?

ಮಂತ್ರಿ:—ಮಹಾರಾಜ. ದೆಹಲಿಯಲ್ಲಿ ಪೃಥ್ವೀರಾಜನೆಂಬುವನು ಆಳುವನಂತೆ. ಅಜ್ಮೀರಿಗೂ ಅವನೇ ಅರಸಂತೆ. ಹಿಂದೂ ರಾಜರಲ್ಲೆಲ್ಲಾ ಪ್ರಖ್ಯಾತನಂತೆ ಎಲ್ಲಾ ಹಿಂದೂ ರಾಜರೂ ಅವನನ್ನೇ ಮುಂದಾಳನ್ನಾಗಿ ಮಾಡಿಕೊಂಡು ಅನುಸರಿಸುವರಂತೆ.

ಘೋರಿ—ಭಗವಂತನ ಕೃಪೆಯಿಂದ ಹಿಂದೂರಾಜರಲ್ಲಿ ಐಕಮತ್ಯವು ತಪ್ಪಿಹೋದರೇ—

ಮಂತ್ರಿ:—ಆಗೋ-ಅಲ್ಲಿ ಯಾರೋ ಬರುವಂತಿದೆ ದೇವ.

ಜಯಚಂದ್ರ:—(ವಂದಿಸುವನು)

ಘೋರಿ—ನೀವು ಯಾರು? ಏನು ಕೆಲಸವಾಗಿ ಬಂದಿರಿ?

ಜಯ:—ನಾನು ಕನೂಜನ ದೊರೆ, ಜಯಚಂದ್ರ. ತಮ್ಮ ಸ್ನೇಹವನ್ನು ಬಯಸಿ ಬಂದಿದ್ದೇನೆ.

ಘೋರಿ—ನಾವೂ ಒಬ್ಬ ಹಿಂದೂ ರಾಜರಲ್ಲಿ ಸ್ನೇಹ ಬೆಳೆಸಬೇಕೆಂದೇ ಬಯಸಿದ್ದೆವು. ನೀವು ಬಂದದ್ದು ನಮಗೆ ತುಂಬ ಸಂತೋಷ. ವಿಶೇಷವೇನು?

ಜಯ:—ತಾವು ಯಾವ ಹಿಂದೂ ರಾಜ್ಯದ ಮೇಲೂ ಯುದ್ಧಕ್ಕೆ ಹೊರಡದಿರಲು ಕಾರಣವೇನು?

ಮಂತ್ರಿ:—ಹಿಂದೂ ರಾಜರಲ್ಲಿ ಐಕಮತ್ಯವು ಹೆಚ್ಚಾಗಿರುವದರಿಂದ ಹೆದರುತ್ತೇವೆ.

ಜಯ:—ಆ ಭಯವು ತಮಗೇತಕ್ಕೆ? ಹಿಂದೂ ರಾಜರಲ್ಲಿ ಅಂತಃಕಲಹವನ್ನು ತಂದುಹಾಕಲು ನಾನು ನಂಬಿಕೆ ಕೊಡುತ್ತೇನೆ. ಹೊರಡಿ ಯುದ್ಧಕ್ಕೆ.

ಘೋರಿ—ಆದರೆ ಯಾರಮೇಲೆ ಯುದ್ಧಕ್ಕೆ ಹೋಗೋಣ?

ಜಯ:—ಮೊದಲು ದೆಹಲಿಯನ್ನೇ ಹಿಡಿಯಬೇಕು.

ಘೋರಿ:—ಪೃಥ್ವಿರಾಜನು ಬಹಳ ಪರಾಕ್ರಮಶಾಲಿಯಂತಲ್ಲ.

ಜಯ:—ನಿಮ್ಮ ಮತ್ತು ನನ್ನ ಸೈನ್ಯದ ಮುಂದೆ ಆ ಪೃಥ್ವಿರಾಜನ ಆಟವು ನಡೆಯುವುದಿಲ್ಲ. ಸ್ಥಾನೇಶ್ವರ ಮೈದಾನಕ್ಕೆ ನಿಮ್ಮ ಸೈನ್ಯವು ಹೊರಡಲಿ. ನಾನೂ ಬಂದು ಸೇರುತ್ತೇನೆ

ಘೋರಿ:—ನಿಮ್ಮಂತಹ ಮಿತ್ರರು ಸಿಕ್ಕಿದ್ದು ನಮಗೆ ಪರಮಾನಂದವಾಯಿತು. ಹೋಗಿ—ಸಹಾಯಕ್ಕೆ ಸಿದ್ಧರಾಗಿ ಬನ್ನಿ (ಹೋಗುವರು) (ಸಶೇಷ)

ಬಾ ಬಾ ಕಂದ!

೧

ಬಾ..ಬಾ, ಕಂದ, ನೀನೆನಗಂದ
ನಮ್ಮಾಟವೇ, ಬಲುಚಂದ
ಬಾಲೆಲೆರನ್ನ, ಮೋಹದಚಿನ್ನ
ನಿನ್ನಾಟವೇ ಬಲುಚಿನ್ನ.

೨

ಬಾಲ್ಯವುಮೂಡೆ, ಅಣ್ಣನಕೂಡೆ
ಕಲಿತೆಯನೆನ್ನೊಡನಾಡೆ?
ಬಣ್ಣದಗಿಳಿಯೆ, ಸೊಬಗಲಿಸುಳಿಯ
ನನ್ನೇತಕೆನೀಪಳಿಯೆ?

೩

ತುಂಗಾತೀರ, ಚಂದದಿಬಾರ
ಹಸುಳೆಯೆ! ಗಾನವತಾರ.
ಬಾರೆಲೆಪ್ರೋಲ, ಕೊಡುವೆನುಹಾರ
ನಿನಗೇತಕೆ ಸೈಯ್ಯಾರ.

೪

ನೋಡುವೆಯೇಕೆ? ತಿಂಡಿಯುಬೇಕೆ
ಮಾತುಗಳೊಂದೆ ಸಾಕೆ?
ಜೊಂಪೆಯತರುವೆ, ಹಣ್ಣತರಿವೆ
ತಿನ್ನಲು ಮಿಠಾಯಿಕೊಡುವೆ.

೫

ಹಾಡಲುನೀನು, ಕುಣಿಯಲು ನಾನು
ನೋಡಲು ಸೊಗಸು ಅದನು
ಬಾ, ಬಾ, ಕಂದ; ನೀನೆನಗಂದ
ನಮ್ಮಾಟವೆ, ಬಲುಚಂದ

ಶ್ರೀ ರಾಮ.

ಸೌಂದರ್ಯವೇ ಅನುಮಾನಕ್ಕೆ ಕಾರಣ.

ಜುಗೊಸ್ಲೋವಿಯಾದ ಹಳ್ಳಿಯೊಂದರಲ್ಲಿ ವಾಸಿಸುತ್ತಿದ್ದ ಒಬ್ಬನು ತನ್ನ ಹೆಂಡತಿಯು ಸೌಂದರ್ಯದ ಅವತಾರವೆಂದು ಭಾವಿಸಿ, ಆಕೆಗೆ ಸ್ನಾನಮಾಡಕೂಡದೆಂದು ಆಜ್ಞಾಪಿಸಿದನು. ಅಲ್ಲದೆ ತಲೆಕೂದಲನ್ನು ತೆಗೆದುಹಾಕಿದನು ಮತ್ತು ಹುಬ್ಬಿನ ಕೂದಲನ್ನು ಬೋಳಿಸಿದನು. 4 ತಿಂಗಳುಕಾಲ ಬಂದೀಖಾನೆಗೆ ಕಳುಹಿಸಲ್ಪಟ್ಟಿದ್ದೂ ಅಲ್ಲದೆ, ಅವನು ಕ್ರೂರ ವರ್ತನೆಗಾಗಿ 3 ಪೌ ಜುಲ್ಮಾನೆಯನ್ನು ವಿಧಿಸಲ್ಪಟ್ಟನು

ಸ್ವಾಗತಾಧ್ಯಕ್ಷರು

ಬಾಬು ಭಗವಾನ್‌ದಾಸರ ಮಕ್ಕಳೂ ಕಾಶಿಯ ಸುಪ್ರಸಿದ್ಧ ಕಾಂಗ್ರೆಸ್ ಮುಖಂಡರೂ, ಆದ ಬಾಬು ಶ್ರೀಪ್ರಕಾಶರು ಲಕ್ನೋ ಕಾಂಗ್ರೆಸ್ ಅಧಿವೇಶನದ ಸ್ವಾಗತಾಧ್ಯಕ್ಷರಾಗಿ ಚುನಾಯಿಸಲ್ಪಟ್ಟಿರುವರು.

ಸಾಹಿತ್ಯ ಸೇವಾಸಮಾಜ, ತುಮಕೂರು

ಮೇಲ್ಕಂಡ ಸಮಾಜವು ಯುಗಾದಿ ಹಬ್ಬದ ದಿನ ಸ್ಥಾಪಿಸಲ್ಪಟ್ಟಿತು. ತಾ॥ 29ನೇ ಭಾನುವಾರ ಡಿ॥ ವಿದ್ಯಾಖಾತೆಯ ಅಧಿಕಾರಿಗಳಾದ ಶ್ರೀ॥ ಸಿ. ರಾಮಾನುಜಯ್ಯಂಗಾರ್ರವರ ಅಧ್ಯಕ್ಷತೆಯಲ್ಲಿ ಇದರ ಪ್ರಾರಂಭೋತ್ಸವವು ಜರುಗಿತು. ಕರ್ನಾಟಕ ಸಾಹಿತ್ಯ, ಸಂಸ್ಕೃತಿ, ಇತಿಹಾಸ, ಕನ್ನಡ ಭಾಷೆ, ಇವುಗಳ ಸೇವೆಯನ್ನು ಮಾಡುವುದೇ ಸಮಾಜದ ಮುಖ್ಯ ಗುರಿ. ಹಿಂದೂ ಸಂಸ್ಕೃತಿ, ಧರ್ಮ, ಸಮಾಜ ಇವುಗಳ ಉನ್ನತಿಗಾಗಿಯೂ ಸಮಾಜವು ಪ್ರಯತ್ನಪಡುತ್ತದೆ. ಸಂಘಕ್ಕೆ ವಕೀಲರಾದ ಶ್ರೀ॥ ಮುದ್ದಪ್ಪನವರು ಅಧ್ಯಕ್ಷರು, ಕೀರ್ತನಕೇಸರಿ, ಕವಿರತ್ನ ವೇ॥ ಬಿ. ಶಿವಮೂರ್ತಿ ಶಾಸ್ತ್ರಿಗಳು ಉಪಾಧ್ಯಕ್ಷರು ಮತ್ತು ಶ್ರೀ॥ ಗಳಾದ ವಿ. ಶಿವಲಿಂಗಯ್ಯ ಮತ್ತು ಬೇಲೂರಯ್ಯ ಇವರುಗಳು ಕಾರ್ಯದರ್ಶಿಗಳು.

ಮೂರು ಮಕ್ಕಳ ಜನನ

ತೀರ್ಥಹಳ್ಳಿ ತಾ॥ ಕೋಣಂದೂರು ಎಂಬಲ್ಲಿ ಗೌಡಜಾತಿಯ ಸೀತಮ್ಮನೆಂಬಾಕೆಯು ಮೂರು ಮಕ್ಕಳನ್ನು ಒಂದೇ ದಿನ ಹಡದಳು. ಮೊದಲು ಹುಟ್ಟಿದ ಎರಡು ಮಕ್ಕಳು ಚೆನ್ನಾಗಿ ಬೆಳೆದಿರಲಿಲ್ಲ. ಆದುದರಿಂದ ಚೇತನವಿರಲಿಲ್ಲ. ಮೂರನೆಯದಕ್ಕೆ ಚೇತನವಿತ್ತು. ಮೊದಲಿನ ಎರಡು ಮಕ್ಕಳನ್ನು ಸೀಸೆಯಲ್ಲಿ ಹಾಕಿ ಪ್ರದರ್ಶನದ ಬಗ್ಗೆ ಮಂಗಳೂರಿನ ಕೆನರಾ ಹೈಸ್ಕೂಲ್ ಮ್ಯೂಸಿಯಂಗೆ ಕಳುಹಿಸಿದ್ದಾರೆ.

ರೈತರು ದೇಶವನ್ನು ಬಿಟ್ಟು ಹೊರಟರು

ಕಂದಾಯಗಳನ್ನು ವಿಪರೀತವಾಗಿ ಹೊರಿಸಿದ್ದರಿಂದಲೂ, ಇತರ ಕೆಲವು ತೊಂದರೆಗಳಿಂದಲೂ, ಲುನಾವಾಡ ಸಂಸ್ಥಾನದ ರೈತರು ತಮ್ಮ ದೇಶದ ಸರಹದ್ದನ್ನು ತ್ಯಾಗಮಾಡಿ ಹೊರಗೆ ಹೋಗುತ್ತಿದ್ದಾರೆಂದು ವರ್ತಮಾನ.

ಮುಡುಕುತೊರೆ ದೇವಸ್ಥಾನ.

ತಿರುಮಕೂಡ್ಲು ನರಸೀಪುರದ ತಾಲ್ಲೂಕಿನ ಮುಡುಕುತೊರೆಯಲ್ಲಿ ಮಲ್ಲಿಕಾರ್ಜುನಸ್ವಾಮಿಯ ದೇವಾಲಯವೊಂದುಂಟು. ದೇವರಿಗೆ ಪೂಜೆ ಯಾರು ಮಾಡಬೇಕೆಂಬ ವಿಷಯದಲ್ಲಿ ಬ್ರಾಹ್ಮಣರಿಗೂ ಮತ್ತು ತಮ್ಮಡಿಗಳಿಗೂ ಅನೇಕ ದಿನಗಳಿಂದ ಚರ್ಚೆ ನಡೆಯುತ್ತಿತ್ತು. ನಂಜನಗೂಡಿನ ನ್ಯಾಯಸ್ಥಾನದ ತೀರ್ಮಾನದ ಮೇಲೆ ಮೈಸೂರಿನ ಡೆಪ್ಯುಟಿ ಕಮೀಷನರಲ್ಲಿ ಅಪೀಲು ಮಾಡಲ್ಪಟ್ಟಿತ್ತು ಎರಡು ಪಂಗಡಗಳವರೂ ತಮ್ಮ ಪಕ್ಷವನ್ನು ಸಾಧಿಸಲು ಪುರಾತನ ಕಾಲದ ಕಾಗದ ಪತ್ರಗಳನ್ನೆಲ್ಲಾ ತಂದು ಕೋರ್ಟಿನಲ್ಲಿ ಹಾಜರುಮಾಡಿದರು. ಡೆಪ್ಯುಟಿ ಕಮೀಷನರು ಎಲ್ಲವನ್ನೂ ವಿಚಾರಿಸಿ ತೀರ್ಪನ್ನಿತ್ತರು. ಜಾತ್ರೆ ಕಾಲದಲ್ಲಿ ಅಂಕುರಾರ್ಪಣದಿಂದ ಹಿಡಿದು ಧ್ವಜಾ ಅವರೋಹಣದ 9 ದಿನಗಳವರೆಗೆ ಸಕಲ ಪೂಜೆ ಬ್ರಾಹ್ಮಣರು ನಡೆಸಬಹುದೆಂದೂ, ಉಳಿದ ದಿನಗಳಲ್ಲಿ ತಮ್ಮಡಿಗಳು ಪೂಜೆ ನಡೆಸಬಹುದೆಂದೂ ಅಪ್ಪಣೆ ಮಾಡಿದರು.

THE MYSORE UNIVERSITY.

It is reported that Dr. Metcalfe's term of Vice-Chancellorship has been extended by another year. Perhaps we are expected to say "so far so good." The principle in our state seems to be, where the upper reaches of Government are concerned to, keep on the old stopper as long as possible in order to avoid the trouble of finding a new one. This is the usual "safety first" principle.

Walpole who is considered to have been a past-master in Jobbery has said, "when I appoint a man to a post, out of a hundred applicants, I make 99 enemies and one man ungrateful'! All this is avoided when you keep on the same man.

Moreover when we purposely select superannuated men from outside to such important departments as those of Law and protection, i.e. Judicial and Police, and to such a dynamic Department as the Railways, we cannot with much grace say that the Head of the easy-going Department of Higher Education should go home as soon as his clock strikes 55, after 30 years' loyal and faithful service to the state.

After all Dr. Metcalfe is a safe man. During his fairly long term he has been quite *unobtrusive* and *non-interfering*. After the fire-works and high jumps of the Seal Regime he has given rest to the University and considerable rest to the professors. They think of work somewhere in the month of August, spend two or three hours of the day in the premises of the College, granting interviews to Colleagues or favorite students and putting in one or two lectures in order to satisfy a dormant conscience rush out to other universities during the Dasara and Christmas holidays, or under special leave, gathering current coin for rainy day, return to work by the middle of January, disappear again all through February, giving students well-needed rest before examinations and come back by March to examine them, and then again from April on wards, a long rest till August next.

No one inside or outside the League of Nations could accuse Dr. Metcalfe of "sweating his labour" or overworking his employees. Even that is something to a man's credit. So, if Dr. Metcalfe has been given another extension, let the public of Mysore say "all for the best."

G. R. JOSYER.

ಶ್ರೀ ರಮಣ ಮಹರ್ಷಿಗಳು

ಅವರ ಪುಣ್ಯ ಚರಿತ್ರೆ.

ಲೇಖಕ.— ಶ್ರೀ ಕೃಷ್ಣ.

ಈ ಮಹಾತ್ಮರು ಶ್ರೀ ಪರಾಶರ ಮಹಾಮುನಿಗಳ ವಂಶದಲ್ಲಿ ಜನಿಸಿದರು. ಮದರಾಸು ಸಂಸ್ಥಾನದ ರಾಮನಾಥಪುರದ ಜಿಲ್ಲೆಯ "ತಿರುಚುಳಿ" ಎಂಬುವ ಗ್ರಾಮದಲ್ಲಿ ಜನ್ಮವೆತ್ತಿದರು. (ಡಿಸೆಂಬರ್, ಜನವರಿ 1880-81).

ಇವರು ಪುನರ್ವಸು ನಕ್ಷತ್ರದಲ್ಲಿ ಮಿಥುನರಾಶಿಯಲ್ಲಿ ಜನಿಸಿದರು. ಇವರ ಬಾಲ್ಯದ ಹೆಸರು ವೆಂಕಟರಮಣ. ಇವರ ತಂದೆಯ ಹೆಸರು ಸುಂದರಯ್ಯರ್. ಇವರ ತಾಯಿ ಅಳಗಮ್ಮ. ಇವರು ಈ ದಂಪತಿಗಳಿಗೆ ಎರಡನೆಯ ಗಂಡು ಮಗ. ಸುಂದರಯ್ಯರು ನ್ಯಾಯವಾದಿ ವೃತ್ತಿಯನ್ನು ಅವಲಂಬಿಸಿ ಆ ಗ್ರಾಮದಲ್ಲಿ ಉನ್ನತ ಸ್ಥಾನವನ್ನು ಪಡೆದಿದ್ದರು. ಸುಂದರಯ್ಯರ ತಾತಂದಿರುಗಳಲ್ಲಿ ಒಬ್ಬರು ದಂಡ ಕಮಂಡಲಗಳನ್ನು ಧರಿಸಿ ಸನ್ಯಾಸವನ್ನು ಹೊಂದಿದ್ದರು. ಇವರ ತಂದೆಯ ಅಣ್ಣ ತಮ್ಮಂದಿರುಗಳಲ್ಲಿ ಒಬ್ಬರು ಸನ್ಯಾಸವನ್ನು ಹೊಂದಿ, ಮತಭೇದಗಳಿಲ್ಲದೆ, ಎಲ್ಲಾ ಬ್ರಾಹ್ಮಣರುಗಳ ಮನೆಗಳಲ್ಲಿಯೂ ಊಟವನ್ನುಮಾಡುತ್ತಾ, ಚಿದಂಬರ ಕ್ಷೇತ್ರದಲ್ಲಿ ಆಗಿಂದಾಗ್ಯೆ ಬರುವ ಭಕ್ತರ ಸೇವೆಯನ್ನು ಮಾಡಿ, ಕಾಲಕಳೆಯುತ್ತಿದ್ದರೆಂದು ಅಭಿಪ್ರಾಯ ಹೇಳುವುದುಂಟು.

ವೆಂಕಟರಮಣನ ತಂದೆಯು ತೀರಿಹೋದ ಬಳಿಕ ತಾಯಿ, ಅಣ್ಣ, ತಮ್ಮ, ತಂಗಿ ಇವರ ಸಹಿತ ಮಧುರೆಗೆ ಬಂದುಸೇರಿದರು ಸರಿ ಯಾವ ವಯಸ್ಸಿನಲ್ಲಿ ಈ ವೆಂಕಟರಮಣನನ್ನು ಮಧುರೆಯಲ್ಲಿರುವ "ಅಮೇರಿಕನ್ ಮಿಷನ್ ಹೈಸ್ಕೂಲಿನಲ್ಲಿ' ವಿದ್ಯಾಭ್ಯಾಸಕ್ಕೆ ಹಾಕಿದರು. ಬುದ್ಧಿಶಾಲಿಯಾಗಿ ತನ್ನ ತರಗತಿಯಲ್ಲಿ ಗಟ್ಟಿಗನೆಂಬ ಹೆಸರಿನಿಂದ ಪ್ರಕಾಶಿಸಿದರು. ಇವರ ಶರೀರವು ದೃಢಗಾತ್ರವಾಗಿತ್ತು. ಇವರಿಗೆ ಯಾವ ಆಟದಲ್ಲಾದರೂ ಬಹಳ ಕುತೂಹಲವು. ಇವರು ಬಿಸಿಲು ಕಾಲಗಳಲ್ಲಿ ಅರ್ಧರಾತ್ರಿಯಲ್ಲಿ, ಜೊತೆಗಾರರನ್ನು ಕರೆದುಕೊಂಡು 'ವೈಗೇ' ನದಿಯ ಮರಳಿನಲ್ಲಿ ಆಟವಾಡುವುದುಂಟು. ಯಾವಾಗಲೂ ತಪ್ಪಾಟ ಆಡುವವರನ್ನು ಕಂಡರೆ ಇವರಿಗೆ ಸರಿಬೀಳದು. ಮುಷ್ಟಿ, ಮಲ್ಲಯುದ್ಧಗಳಲ್ಲಿ ಇವರಿಗೆ ಅತಿ ವಿಶ್ವಾಸ. ಓಡುವುದು, ಹಾರ್ತಿಂದಾಡುವುದು ಮತ್ತು ನಮ್ಮ ದೇಶದ ಆಟಗಳಲ್ಲಿ ಇವರನ್ನು ಗೆಲ್ಲುವರೇ ಇರಲಿಲ್ಲ. ಇವರಿಗೆ ಈಜುವುದರಲ್ಲಿಯೂ ಪರಿಶ್ರಮವಿತ್ತು. 'ವೈಗೇ' ನದಿಯ ಪೂರ್ಣಪ್ರವಾಹದಲ್ಲಿ ಒಂದು ದಡದಿಂದ ಮತ್ತೊಂದು ದಡಕ್ಕೆ ಶೀಘ್ರವಾಗಿ ಹೋಗುತ್ತಿದ್ದರು.

ಇವರ ಮನಸ್ಸಿನಲ್ಲಿ 'ಭಯ' ಎಂಬುವ ಶಬ್ದಕ್ಕೆ ಅರ್ಥವೇ ಇರಲಿಲ್ಲ. ಹಿರಿಯರಿಗಾಗಿ ಓದುತ್ತಿದ್ದರು. ಇವರು ಈ ರೀತಿಯಾದ ಮನಸ್ಸಿನ ಪ್ರವರ್ತನೆಯನ್ನು ಬಿಟ್ಟು ಮುಂದೆ ಮಹರ್ಷಿಗಳಾಗುವರೆಂದು ಯಾರು ತಾನೆ ತಿಳಿಯಬಲ್ಲರು? ಸರ್ವಸಂಗ ಪರಿತ್ಯಾಗವನ್ನು ಮಾಡಿ ದಾರಿ ತೋರಲು ಒಂದು ಅದ್ಭುತವಾದ ಜ್ಞಾನದ ಊಟೆ ಒಸರುವರೆಂದು ಯಾರು ತಾನೆ ಊಹಿಸಬಲ್ಲವರಾಗಿದ್ದರು?"

ಪ್ರಪಂಚದಲ್ಲಿ ನೋಡುವವರಿಗೆ ಎಲ್ಲಾ ವಿಷಯಗಳಲ್ಲಿಯೂ ಅಭಿಮಾನವಿರುವವರಂತೆ ನಟಿಸಿ ಹೃದಯದಲ್ಲಿ ಯಾವ ವಿದ್ಯೆಯನ್ನು ಕಲಿತರೆ ಹುಟ್ಟುವಿಕೆ, ಸಾಯುವಿಕೆ ಇಲ್ಲವೋ ಅಂತಹ ವಿದ್ಯೆಯನ್ನು ಕಲಿಯುತ್ತಿದ್ದರು. ಹಿಂದೆ ಮಹಾತ್ಮರುಗಳು ಯಾವ ದಾರಿಯನ್ನು ತೋರಿಸಿ ಕೊಟ್ಟರೋ ಆ ಮಾರ್ಗವನ್ನೇ ಅನುಸರಿಸುತ್ತಿದ್ದರು. ಸೂರ್ಯನಂತೆ ಪ್ರಕಾಶಿಸುವ ಸ್ವರೂಪದಿಂದ ಕೂಡಿದ್ದರು. ಇವರು ಪರಮ ಶಿವನ ಎರಡನೆಯ ಮಗನಾದ 'ಷಣ್ಮುಖನ' ಅವತಾರವೆಂದು ಶ್ರೀ ಗಣಪತಿ ಮುನಿಗಳು ಹೇಳಿದ್ದಾರೆ.

ಕ್ರಮ ಕ್ರಮವಾಗಿ ವಿದ್ಯೆಯನ್ನು ಕಲಿತು 1896 ರಲ್ಲಿ "ಮೆಟ್ರಿಕ್ಯುಲೇಷನ್' ತರಗತಿಯಲ್ಲಿ ಓದುತ್ತಿದ್ದರು. ಇವರ ಪೂರ್ವಜನ್ಮದ ಸುಕೃತದ ಪರಿಪಾಕದಿಂದ 'ಸತ್' 'ಅಸತ್' ಇವುಗಳ ಸ್ವಭಾವವಾದ ಸ್ವರೂಪವನ್ನು ವಿಮರ್ಶಿಸಿ ತಾನು 'ಸತ್' ಎಂಬುವುದಾಗಿ ಅರಿತಿದ್ದರು. ಕ್ರಮೇಣ ಒಳಗಿನ ಅನುಭವದಿಂದ 'ನಾನು' ಎಂಬುವುದು ಎಲ್ಲೆಲ್ಲಿಯೂ ಹರಡಿದ್ದು, ಅದಕ್ಕೆ ಸಾವಿಲ್ಲವೆಂದೂ ಅರಿತರು. ಇವರಿಗೆ ಆಗಿಂದಾಗ್ಗೆ ಅರುಣಾಚಲೇಶ್ವರನ ಜ್ಞಾಪಕವು ಬರುತ್ತಿತ್ತು.

'ಅರುಣ+ಅಚಲ' ಎಂದರೆ 'ಬೆಂಕಿಯ-ಪರ್ವತ' ಎಂದರ್ಥವು. ಅರುಣಾಚಲ ಎಂಬುವುದು ಕೈಲಾಸದಲ್ಲಿದೆ ಎಂದು ತಿಳಿದುಕೊಂಡಿದ್ದರು. ಒಂದು ಸಮಯದಲ್ಲಿ ಅರುಣಾಚಲ ಕ್ಷೇತ್ರವಾಸಿಯಾದ ಒಬ್ಬ ಬಳಗವು ಅರುಣಾಚಲವು ದಕ್ಷಿಣ ಆರ್ಕಾಟು ಜಿಲ್ಲೆಯಲ್ಲಿ ಒಂದು ಪುಣ್ಯಸ್ಥಳವೆಂದು ಸುದ್ದಿಯಲು, ತಟಸ್ಥರಾಗಿ ನಿಂತು, "ಇದು ಭೂಲೋಕದಲ್ಲಿದೆಯೋ?" ಎಂದು ಕೇಳಿ ಅಂದಿನಿಂದ 'ಅರುಣಾಚಲ' ಎಂದು ಹುಚ್ಚು ಹಿಡಿಯಿತು.

ಮತ್ತೊಂದು ಸಮಯದಲ್ಲಿ ಇವರ ತರಗತಿಯ ಉಪಾಧ್ಯಾಯರು ಒಂದು ಪದವನ್ನು ಹೊರಿಸಿ (imposition) ಬರೆಯಬೇಕೆಂದು ಹೇಳಲು ತನ್ನ ಚಿಕ್ಕ ಕೊಠಡಿಯಲ್ಲಿ ಕುಳಿತು ಬರೆಯುತ್ತಿರುವಲ್ಲಿ "ಈ ಪದವನ್ನು ಎಷ್ಟುಸಲ ಬರೆಯುವುದು? ನನ್ನ ಹೃದಯದಲ್ಲಿ ಬರೆದಿರುವುದು ಇದೇಯೇ?" ಎಂಬುವ ಯೋಚನೆಯಿಂದ ಪೀಡಿತರಾಗಿ ಸಮಾಧಿ ಹೊಂದಿದರು. ಅರ್ಧ ಓದುತ್ತಿರುವ ವೇಳೆಯಲ್ಲಿಯೇ ಇವರು ಸಮಾಧಿ ಹೊಂದುತ್ತಿದ್ದರು. ಇವರು ಸಮಾಧಿ ಹೊಂದುವವನ್ನು ಕಂಡ ಇವರ ಅಣ್ಣನು "ನೀನು ಯೋಗಿಯಾಗಲು ಇಷ್ಟವಿದ್ದರೆ ಕಾಡಿಗೆ ಹೋಗಬೇಕು ನಿನಗೆ ಪುಸ್ತಕದ ಸಹವಾಸವೇಕೆ" ಎಂದು ಗದರಿಸಿದನು. "ಯೋಗಿಯಾಗುವುದಾದರೆ ನಿಶ್ಚಯವಾಗಿಯೂ ಪುಸ್ತಕವನ್ನು ಮುಟ್ಟುವುದೇ ಇಲ್ಲ" ಎಂದರು.

ಇವರು ಸ್ವಾನುಭವದಲ್ಲಿ ಎರಡು ಘಂಟೆಯ ಕಾಲ ಸಾವನ್ನು ಅನುಭವಿಸಿದರು. ಈ ಮೇಲಿನ ಘಟನೆಗಳಿಂದ ಅರುಣಾಚಲೇಶ್ವರನ ಸನ್ನಿಧಿಗೆ ಹೋಗಲು ಕಾಲವನ್ನು ನಿರೀಕ್ಷಿಸುತ್ತಿದ್ದರು.

ಮಧುರೆಯಲ್ಲಿ ಶ್ರೀ ಸುಂದರೇಶ್ವರರ ಸನ್ನಿಧಿಯಲ್ಲಿ ನಿಂತು ಶಿವಭಕ್ತರುಗಳಾದ 'ಅರವತ್ತುಮೂವರ' ಗಳನ್ನು ಕಾಣದ ದೇವರು ನನ್ನನ್ನು ಕಾಪಾಡಬೇಕೆಂದು ಅತ್ತು ನಿಲ್ಲುತ್ತಿದ್ದರು. ಕಣ್ಣಿಂದ ಧಾರಾಧಾರೆಯಾಗಿ ಎರಡೇ ಘಂಟೆಗಳ ಕಾಲ ನೀರು ಸುರಿಯುತ್ತಿತ್ತು. ಇವರು 'ಅರವತ್ತುನಾಲು ತಿರುತ್ತೊಂಡರ್' ಎಂಬುವ ಶಿವಭಕ್ತವಿಜಯವನ್ನು ಆಗಿಂದಾಗ್ಗೆ ಓದುತ್ತಿದ್ದರು. ಇವರಿಗೆ ಭಕ್ತನಾಗಬೇಕೆಂಬ ಅಭಿಲಾಷೆಯು ಅಧಿಕವಾಗಿತ್ತು. ಜ್ಞಾನಕ್ಕೆ ಹೊರತಾದ ಅನುಭವವೇ ಪರಿಣಾಮ ಸರಿಯಾದ ಕಾಲದಲ್ಲಿ ಶ್ರೀ ಅರುಣಾಚಲೇಶ್ವರನ ಕೃಪೆಯು ಬಂದುದಾಗಲು ಹಾರೈಸುತ್ತಿದ್ದರು.

ಮನೆ, ಮಠ, ತಾಯಿ ಮತ್ತು ಒಡಹುಟ್ಟಿದವರು ಬಂಧುಗಳನ್ನು ಬಿಟ್ಟುಹೋಗಲು ನಿಶ್ಚಯಮಾಡಿಕೊಂಡರು. ಇವರ ಅಣ್ಣನು 1896 ನೇ ಇಸವಿ ಆಗಸ್ಟು ತಿಂಗಳ ಶನಿವಾರ ತನ್ನ 'ಎಫ್ ಎ' ಕ್ಲಾಸಿಗೆ ಕಟ್ಟಬೇಕಾದ ತಿಂಗಳು ಸಂಬಳವನ್ನು ಇವರಲ್ಲಿ ಕೊಟ್ಟು ಕಟ್ಟುವಂತೆ ಹೇಳಿದನು. ಆ ರೂಪಾಯಿಗಳಲ್ಲಿ ಮೂರು ರೂಪಾಯನ್ನು ಮಾತ್ರ ತೆಗೆದುಕೊಂಡು ಮಧ್ಯಾಹ್ನ 12 ಘಂಟೆಗೆ ರೈಲ್ವೆ ಸ್ಟೇಷನ್ನಿಗೆ ಹೋದರು. ಯಾವಾಗಲೂ 11.45 ಕ್ಕೆ ಬರಬೇಕಾದ ಗಾಡಿಯು ಒಂದೂವರೆ ಘಂಟೆ ಕಾಲ ಹೊತ್ತು ಮೀರಿ ಬಂದಿತು. ಇದು ದೇವರ ಸಹಾಯವಲ್ಲವೇ!

(ಸಶೇಷ.

ಶ್ರೀ ರಂಗನಾಥ ಟೈಪ್ ಫೌಂಡ್ರಿ

ಚಿಕ್ಕಪೇಟೆ, ಬೆಂಗಳೂರು ಸಿಟಿ

ಸುಂದರವಾದ ಅಕ್ಷರಗಳು, ಮುದ್ರಣಕ್ಕಾದ ಬಾರ್ಡರುಗಳು ಬಗೆಬಗೆಯ ಆಕಾರ
ನಮಗೆ ಈ ಕೆಲಸದಲ್ಲಿ ೩೦ ವರ್ಷಗಳ ಕಾಲದ ಅನುಭವವಿದೆ. ಆಧುನಿಕ ಕಾಲಕ್ಕೆ
ತಕ್ಕಂತೆ ಅಕ್ಷರದ ಆಕಾರವನ್ನು ಬಹು ಸುಂದರವಾಗಿ ಸುಧಾರಿಸಿದ್ದೇವೆ.
ನಮ್ಮಲ್ಲಿನ "**ಕನ್ನಡ, ಇಂಗ್ಲೀಷ್**" ಅಕ್ಷರಗಳಂತಹ ಸುಂದರವಾದ ಅಕ್ಷರಗಳನ್ನು
ಮತ್ತೆಲ್ಲಿಯೂ ನೋಡಲಾರಿರಿ. ಮತ್ತು
ನೂರಾರು ಬಗೆಯ ಸುಂದರವಾದ ಬಾರ್ಡರುಗಳು, ನಯನಮನೋಹರವಾಗಿವೆ.
೬ ಪಾಯಿಂಟಿನಿಂದ ೬೪ ಪಾಯಿಂಟಿನವರಿಗೆ ವಿಧವಿಧವಾದ ಸುಂದರಾಕ್ಷರಗಳಿವೆ.
ನಮ್ಮ "ರಂಗನಾಥ ಕನ್ನಡ ಡಾಮಿನಸ್" ಅಕ್ಷರಗಳನ್ನು ನೋಡಲು ಮರೆಯಬೇಡಿ.
ನಾವು ಕಾಪರ್ ಅಲಾಯ್ಡ್ (ತಾಮ್ರಮಿಶ್ರಿತ) ಸೀಸದಿಂದ ಅಕ್ಷರಗಳನ್ನು
ತಯಾರಿಸುತ್ತೇವೆ. ಸುಲಭ ಬೆಲೆ. ಗ್ಯಾರಂಟಿಯಾದ ಬಾಳಿಕೆ.

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ಬಾಲಸುಧಾ

ಮಕ್ಕಳ ಜ್ವರದ ಗೆಡ್ಡೆಯನ್ನು ಬಾಕರ ಗುಣ ಪಡಿಸುತ್ತೆ. ಲಿವರ್ (ಪಿತ್ತಕೋಶ) ದಪ್ಪನಾಗಿ ಕಣ್ಣು ಹಳದಿ ಬಣ್ಣವಾಗಿದ್ದರೆ ಇದರ ಸೇವನೆಯಿಂದ ದಿನೇ ದಿನೇ ಗುಣವಾಗುತ್ತೆ. 20 ವರ್ಷಗಳಿಂದಲೂ ಅನುಭವ ಸಿದ್ಧವಾದ—ಮಕ್ಕಳ ಭೇದಿಗೆ ನಮ್ಮ ಬಾಲ ಸಂಜೀವಿನಿಯನ್ನೇ ಉಪಯೋಗಿಸಿರಿ.

ಬಾಲ ಸುಧಾ ಬೆಲೆ 1 ರೂ. ಬಾಲ ಸಂಜೀವಿನಿ 4 ಆ

ಮೈಸೂರು, ಬೆಂಗಳೂರು, ಮದ್ರಾಸುಗಳಲ್ಲಿ ನಮ್ಮ ಶಾಖೆಗಳಿವೆ.

ಸದ್ವೈದ್ಯಶಾಲಾ, ನಂಜನಗೂಡು.

ಶೀಘ್ರದಲ್ಲಿಯೇ ಬರುತ್ತದೆ! ನಂಜನಗೂಡಿನಲ್ಲಿರುವ ಲಕ್ಷ್ಮೀ ಥಿಯೇಟರಿನಲ್ಲಿ!

ರಾಜೇಂದ್ರ ಸಿನಿಮಾ, ನಂಜನಗೂಡು.

ಪ್ರೊಪ್ರೈಟರ್ಸ್ :
ಸೋನರಾಜ್ ರತನ್ ಚಂದ್ ಅಂಡ್
ಕಂಪೆನಿ, ಮೈಸೂರು.

ತಮ್ಮ ಅಪೂರ್ವ ಮೂಕ ಚಲನ ಚಿತ್ರಗಳನ್ನು ಪ್ರದರ್ಶಿಸುತ್ತಾರೆ. ಬರುವ ತಾರೀಖನ್ನು ಗಮನಿಸಿರಿ—**ಸತೀ ಸುಲೋಚನ** ವೆಂಬ ಕನ್ನಡ ಚಿತ್ರದಲ್ಲಿ ಸೀತೆ ಪಾತ್ರ ಧರಿಸಿರುವ **ಮಿಸೆಸ್ ರಾಜಂ** ಮತ್ತು ಕೊಲ್ಹಾಪುರದ ಸ್ಟಂಟ್ ಮಾಸ್ಟರ್, ಪ್ರಭಾತ ಫಿಲಂ ಕಂಪೆನಿಯ ಫೈಕಿಂಗ್ ಬ್ಲಡ್ ಮತ್ತು ಚಂದ್ರಸೇನೆಯಲ್ಲಿ ಪಾರ್ಟು ಮಾಡಿರುವ **ಗಣಪತಜಯ** ಮುಖ್ಯಪಾತ್ರ ವಹಿಸಿರುವ ಪುರಾಣಿಕ ಚಲನ ಚಿತ್ರ

ಭಕ್ತ ವಿಜಯ

(ಮೊದಲನೇ ಪ್ರದರ್ಶನ)

(ರಮೇಶ್ ಫಿಲಂ ಕಂಪೆನಿ ಬೆಂಗಳೂರು ಯವರ ತಯಾರಿಕೆ.) ಡೈರೆಕ್ಟರು ವೈ. ವಿ. ರಾವ್, (ಸತೀ ಸುಲೋಚನ ಡೈರೆಕ್ಟರು.)

FOR SILENT & TALKIE PICTURES
Bookings at
RAJENDRA PICTURES CORPORATION
Sayaji Rao Road Cross, Mysore.

ಭಂಗಾರದ ಪದಕಗಳೂ ಅನೇಕ ಪ್ರಶಸ್ತಿ ಪತ್ರಗಳೂ ದೊರೆತಿವೆ.
೧೫ ವರ್ಷಗಳಿಂದಲೂ
ಸರ್ಕಾರದ ಅನೇಕ ಆಫೀಸರುಗಳ ಮತ್ತು ಮಹಾಜನರ ಮೆಚ್ಚಿಕೆಗೆ ಪಾತ್ರವಾಗಿ
ಸುಂದರವಾದ

ಬೋರ್ಡುಗಳನ್ನೂ

ಉತ್ತಮವಾದ

ರಬ್ಬರ್ ಮೊಹರುಗಳನ್ನೂ

ತಯಾರ್ಮಾಡುವ
ಮಾನವರಿ ಸಂಸ್ಥಾನದ, ಮಾನವರಿ ರಾಜಧಾನಿಯ. ಮಾನವರಿ ಕಾರ್ಖಾನೆಯು
ನಮ್ಮದೇ ಎಂಬುದನ್ನು ದಯವಿಟ್ಟು ಜ್ಞಾಪಕದಲ್ಲಿಡಿರಿ

ಓರಿಯಂಟಲ್ ಇಂಡಸ್ಟ್ರೀಸ್,

ಜಗನ್ಮೋಹನ ಬಂಗ್ಲೆ ಬೀದಿ, ಮೈಸೂರು.

For Up-to-date and Efficient Medical Treatment

Go to—**Dr. A. J. RAM & SONS,**

Sayaji Rao Road, Mysore.

Physicians, Dentists, Opticians, etc.

ಡಾ॥ ಎ. ಜೆ. ರಾಂ. ಅಂಡ್ ಸನ್ಸ್,

ಸಯ್ಯಾಜಿರಾವ್ ರೋಡ್, ಮೈಸೂರು ಸಿಟಿ.

ಔಷಧ ವ್ಯಾಪಾರಿಗಳು, ಚಿಕಿತ್ಸಕರು, ದಂತವೈದ್ಯರು,

ಮತ್ತು ಕನ್ನಡಕ ವ್ಯಾಪಾರಿಗಳು.

ಉತ್ತಮವಾದ ನವೀನ ಚಿಕಿತ್ಸೆಗಳಿಗೆ ನಮ್ಮಲ್ಲಿಯೇ ಬನ್ನಿರಿ.

ನಾಳಿನ ಮಹಾ ಮೈಸೂರು.

ಉದಯಿಸಲು ಅಡಿಗಲ್ಲನ್ನಿಡಿ.

ಮೈಸೂರು ವಿಮಾ ಕಂಪೆನಿಯೊಂದಿಗೆ ಸರ್ವ ಪ್ರಕಾರದಿಂದಲೂ ಸಹಕರಿಸಿ. ಇದು ನಮ್ಮ ಪ್ರಾರ್ಥನೆ.

ಹೀಗೆ ಪ್ರಾರ್ಥಿಸುವುದು ನಮ್ಮ ಜನ್ಮಸಿದ್ಧವಾದ ಹಕ್ಕು. ಹಾಗೆ ಸಹಕರಿಸುವುದು ನಿಮ್ಮ ಪವಿತ್ರ ಕರ್ತವ್ಯ.

ಕರ್ಣಾಟಕದಲ್ಲಿ ಸ್ಥಾಪಿತವಾದ ವಿಮಾ ಕಂಪೆನಿಗಳಲ್ಲಿ ಪ್ರಥಮ ವರ್ಷದಲ್ಲೇ ಯಾವುದೂ ಈ ಕಂಪೆನಿಯಷ್ಟು ಕಾರ್ಯನಡೆಸಿಲ್ಲ

ನಾಳಿನ ಮಹಾ ಮೈಸೂರಿನ ಮುಂಬೆಳಗು ಯಾವುದು?

ಮೈಸೂರು ವಿಮಾ ಕಂಪೆನಿ, ಲಿಮಿಟೆಡ್.,

ಬೆಂಗಳೂರು

ಮೈಸೂರು ವಿಮಾ ಕಂಪೆನಿಯು ಮೈಸೂರಿನವರ ಮತ್ತು ಮೈಸೂರಿನ ಅಭ್ಯುದಯಕ್ಕಾಗಿ ಮೈಸೂರು ಬಂಡವಾಳದಿಂದ ಮೈಸೂರಿನವರ ನೇತೃತ್ವದಲ್ಲಿ ಮೈಸೂರಿನ ಕೆಲಸಗಾರರಿಂದ ನಡೆಸಲ್ಪಡುತ್ತಿರುವ ಅಚ್ಚ ಮೈಸೂರು ಸಂಸ್ಥೆ.

ಭರತಮಾತೆಯ ಆರ್ಥಿಕೋನ್ನತಿಗಾಗಿ ದೇಶದ ನಾನಾ ಭಾಗಗಳಲ್ಲಿ ನಡೆಯುತ್ತಿರುವ ಪ್ರಯತ್ನಗಳಿಗೆ ತನ್ನ ಶಕ್ತ್ಯನುಸಾರ ಮೈಸೂರು ನೆರವಾಗಬೇಕೆಂಬ ಉದ್ದೇಶದ ಈ ಸಂಸ್ಥೆಯು [illegible].

ವಿಮಾ ಉದ್ಯಮದಲ್ಲಿ ಇಡೀ ಸಂಸ್ಥಾನಕ್ಕೆ ಏಕಮಾತ್ರ ಆದರ್ಶ ಸಾರ್ವಜನಿಕ ಸಂಸ್ಥೆಯಿದು.

ಇಂತಹ ಕಂಪೆನಿಯಲ್ಲಿ ಮೈಸೂರಿನವರೆಲ್ಲರ ಪ್ರಾತಿನಿಧ್ಯವಿದ್ದೇ ತೀರಬೇಕು.

ಮೊದಲಿನ ೧ ಲಕ್ಷ ರೂ. ಗಳ ಷೇರುಗಳೂ ಅತ್ಯಲ್ಪಕಾಲದಲ್ಲಿಯೇ ಚಂದಾ ಆಗಿಹೋದವು.

ಬೇಡಿಕೆ ಅವಶ್ಯಕತೆಗಳನ್ನನುಸರಿಸಿ

ಷೇರು ಬಂಡವಾಳವನ್ನು ಇನ್ನೂ ೨ ಲಕ್ಷ ಹೆಚ್ಚಿಸಲಾಗಿದೆ

ಈ ಎರಡು ಲಕ್ಷದಲ್ಲಿ ೧೦೦ ರೂಗಳ ೧೦೦೦ ಷೇರುಗಳನ್ನು ಮಾತ್ರ ಡೈರೆಕ್ಟರುಗಳು ಮಾರಾಟಕ್ಕಿಟ್ಟಿರುವರು.

ಬಂದ ಷೇರು ದರಖಾಸ್ತುಗಳನ್ನೆಲ್ಲ ಅಂಗೀಕರಿಸಿದ್ದರೆ ಈ ಬಂಡವಾಳವೂ ಈಗಾಗಲೇ ಚಂದಾ ಆಗಿಹೋಗಿರುತ್ತಿತ್ತು. ಆದರೆ, ಕೊನೆಯ ಪಕ್ಷ ಸಾವಿರ ರೂಪಾಯಿನ ವಿಮಾ ಪತ್ರವನ್ನು ತೆಗೆದುಕೊಂಡಲ್ಲದೆ ಷೇರುಗಳನ್ನು ಕೊಡಲಾಗದೆಂಬ ನಿಯಮವನ್ನು ಅನುಸರಿಸಿದ್ದರಿಂದ ಇನ್ನೂ ಕೆಲವು ಷೇರುಗಳು ಮಾತ್ರ ಉಳಿದಿವೆ.

ಸರ್ವರ ಅನುಕೂಲ ಅವಶ್ಯಕತೆಗಳಿಗೆ ಸರಿಹೊಂದುವ ವೈದ್ಯ ಪರೀಕ್ಷೆಯಿರುವ ಮತ್ತು ಇಲ್ಲದಿರುವ ನವೀನ ವಿಮಾ ಪದ್ಧತಿಗಳು.

ಸ್ತ್ರೀಯರೂ ವಿಮೆ ಮಾಡಬಹುದು

ಏಜೆಂಟರುಗಳಿಲ್ಲದ ಸ್ಥಳಗಳಲ್ಲೆಲ್ಲಾ ಏಜೆಂಟರು ಬೇಕು.

ವೇತನದ ಮೇಲೂ ಕೆಲಸಮಾಡಲು ಅವಕಾಶವಿದೆ

ಹೆಚ್ಚು ವಿವರಗಳಿಗೆ—

ಕಂಠೀರವ ಮತ್ತು ಕಂಪೆನಿ,
ಮ್ಯಾನೇಜಿಂಗ್ ಏಜೆಂಟ್ಸ್,
ಮೈಸೂರು ವಿಮಾ ಕಂಪೆನಿ ಲಿಮಿಟೆಡ್.,
ಶ್ರೀ ನರಸಿಂಹರಾಜ ರೋಡ್, ಬೆಂಗಳೂರು ಸಿಟಿ.

KANTEERAVA & Co.
Managing Agents,
MYSORE INSURANCE CO., LTD,
Narasimharaja Road, Bangalore City.

Edited, Printed & Published by Agaram Rangiah, B. A., at Sri Rama Press, D. Subbiah Road, Mysore.

॥ ಸತ್ಯಮೇವೋದ್ಧರಾಮ್ಯಹಮ್ ॥

ರಾಜಧಾನಿಯ ರಾಷ್ಟ್ರೀಯ ವಾರ ಪತ್ರಿಕೆ.

ವೃದ್ಧ ಪಿತಾಮಹ ಎಂ. ವೆಂಕಟಕೃಷ್ಣಯ್ಯನವರ ಜ್ಞಾಪಕಾರ್ಥವಾಗಿ ಪ್ರಕಟಿಸಲ್ಪಡುವುದು.

ಸಂಪಾದಕರು ಆಗರಂ ರಂಗಯ್ಯ, ಬಿ.ಎ

Sadhvi: A Leading Nationalist Weekly of Mysore.

FOUNDED IN MEMORY OF MR M. VENKATA KRISHNAYYA, THE GRAND OLD MAN OF MYSORE

ಸಂಪುಟ ೧] MYSORE : MONDAY 20—4—36 ಮೈಸೂರು : ಸೋಮವಾರ ೨೦—೪—೩೬ [ಸಂಚಿಕೆ ೯

Bombay

INDRA BHAVAN,

IDEAL INDIAN RESTAURANT,

Sayaji Rao Road, MYSORE.

LADIES AND GENTLEMEN,

Don't you like to safegaurd your health at all times? Then you must insist upon having your Lunch and Drinks hygienically prepared by pure and choicest articles

We are at your service,

Bombay Indra Bhavan,

SAYAJI RAO ROAD, MYSORE

ಬೊಂಬಾಯಿ ಇಂದ್ರ ಭವನ,

ಅತ್ಯುತ್ತಮವಾದ ಹಿಂದೂ ಫಲಾಹಾರ ಮಂದಿರ,

ಸಯ್ಯಾಜಿ ರಾವ್ ರಸ್ತೆ, ಮೈಸೂರು

ಮಹಿಳೆಯರೇ ಮತ್ತು ಮಹನೀಯರೇ,

ನೀವು ಸದಾ ನಿಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳಬೇಕೆಂದು ಆಶಿಸುವುದಿಲ್ಲವೇ? ಹಾಗಾದರೆ ಯಾವಾಗಲೂ ಶುಚಿಯಾದ ಮತ್ತು ಉತ್ತಮವಾದ ಪದಾರ್ಥಗಳಿಂದಲೇ ತಯಾರಿಸಿದ ರುಚಿಯಾದ ಆಹಾರ ಮತ್ತು ಪಾನೀಯಗಳು ಅಗತ್ಯವಾನೆ?

ತಮ್ಮ ಆರೋಗ್ಯಾಪೇಕ್ಷಿಗಳು,

ಬೊಂಬಾಯಿ ಇಂದ್ರ ಭವನ,

ಸಯ್ಯಾಜಿರಾವ್ ರೋದು, ಮೈಸೂರು.

You Know

OUR IDEAL ARRANGEMENTS & CHOICEST PREPARATIONS.

We need not tell you about it

COME & SEE OUR NOVEL

innovations and up-to-date Management.

SRI KRISHNA BHAVAN,

Mysore.

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ಬಾಲಸುಧಾ

ಮಕ್ಕಳ ಜ್ವರದ ಗೆಡ್ಡೆಯನ್ನು ಖಾತರಿ ಗುಣ ಪಡಿಸುತ್ತೆ. (ಲಿವರ್ ಪಿತ್ತಕೋಶ) ದಪ್ಪನಾಗಿ ಕಣ್ಣು ಹಳದಿ ಬಣ್ಣವಾಗಿದ್ದರೆ ಇದರ ಸೇವನೆಯಿಂದ ದಿನೇ ದಿನೇ ಗುಣವಾಗುತ್ತೆ. 20 ವರ್ಷಗಳಿಂದಲೂ ಅನುಭವ ಸಿದ್ಧವಾಗಿದೆ—ಮಕ್ಕಳಿಗೆ ನಮ್ಮ ಬಾಲ ಸಂಜೀವಿನಿಯನ್ನೇ ಉಪಯೋಗಿಸಿರಿ

ಬಾಲ ಸುಧಾ ಬೆಲೆ 1 ರೂ ಬಾಲ ಸಂಜೀವಿನಿ 4 ಆ

ಮೈಸೂರು, ಬೆಂಗಳೂರು, ಮದ್ರಾಸುಗಳಲ್ಲಿ ನಮ್ಮ ಏಜಂಟರ

ಸದ್ವೈದ್ಯಶಾಲಾ, ನಂಜನಗೂಡು.

ಶೀಘ್ರದಲ್ಲಿಯೇ ಬರುತ್ತದೆ! ನಂಜನಗೂಡಿನಲ್ಲಿರುವ ಲಕ್ಷ್ಮೀ ಥಿಯೇಟರಿನಲ್ಲಿ!

ರಾಜೇಂದ್ರ ಸಿನಿಮಾ, ನಂಜನಗೂಡು.

ಪ್ರೊಪ್ರೈಟರ್ಸ್
ಸೋಪರಾಜ್ ರತ್ನ ಚಂದ್ ಅಂಡ್ ಕಂಪೆನಿ, ಮೈಸೂರು

ತಮ್ಮ ಉತ್ತಮ ಮೂಕ ಚಲನ ಚಿತ್ರಗಳನ್ನು ಪ್ರದರ್ಶಿಸುತ್ತಾರೆ ಬರುವ ತಾರೀಖನ್ನು ಗಮನಿಸಿರಿ—**ಸತಿ ಸುಲೋಚನ** ವೆಂಬ ಕನ್ನಡ ಚಿತ್ರದಲ್ಲಿ ಸೀತೆ ಪಾತ್ರ ವಹಿಸಿರುವ **ಮಿಸೆಸ್ ರಾಜಂ** ಮತ್ತು ಕೊಲ್ಹಾಪುರದ ಸ್ಟಂಟ್ ಮಾಸ್ಟರ್, ಪ್ರಭಾತ ಫಿಲಂ ಕಂಪೆನಿಯ ಫೈಕಿಂಗ್ ಬ್ರಿಡ್ ಮತ್ತು ಚಂದ್ರಸೇನೆಯಲ್ಲಿ ಪಾರ್ಟುಮಾಡಿರುವ **ಗಣಪತಜಯ** ಪ್ರಮುಖ ಪಾತ್ರ ವಹಿಸಿರುವ ಪೌರಾಣಿಕ ಚಲನಚಿತ್ರ

ಭಕ್ತ ವಿಜಯ

(ಮೊದಲನೇ ಪ್ರದರ್ಶನ)

(ರಮೇಶ್ ಫಿಲಂ ಕಂಪೆನಿ ಬೆಂಗಳೂರು ಇವರ ತಯಾರಿಕೆ) ಡೈರೆಕ್ಟರು ವೈ. ವಿ. ರಾವ, (ಸತೀ ಸುಲೋಚನ ಖ್ಯಾತರು)

FOR SILENT & TALKIE PICTURES

Bookings at

RAJENDRA PICTURES CORPORATION

Sayaji Rao Road Cross, Mysore

ಬಂಗಾರದ ಪದಕಗಳೂ ಅನೇಕ ಪ್ರಶಸ್ತಿ ಪತ್ರಗಳೂ ದೊರಕಿವೆ.

೧೫ ವರ್ಷಗಳಿಂದಲೂ

ಸರ್ಕಾರದ ಅನೇಕ ಆಫೀಸರುಗಳ ಮತ್ತು ಮಹಾಜನರ ಮೆಚ್ಚಿಕೆಗೆ ಪಾತ್ರವಾಗಿ

ಸುಂದರವಾದ

ಬೋರ್ಡುಗಳನ್ನೂ

ಉತ್ತಮವಾದ

ರಬ್ಬರ್ ಮೊಹರುಗಳನ್ನೂ

ತಯಾರುಮಾಡುವ

ಮೈಸೂರು ಸಂಸ್ಥಾನದ, ಮೈಸೂರು ರಾಜಧಾನಿಯ, ಮೈಸೂರು ಕಾರ್ಖಾನೆಯು ನಮ್ಮದೇ ಎಂಬುದನ್ನು ದಯವಿಟ್ಟು ಜ್ಞಾಪಕದಲ್ಲಿಡಿರಿ.

ಓರಿಯಂಟಲ್ ಇಂಡಸ್ಟ್ರೀಸ್,

ಜಗನ್ಮೋಹನ ಬಂಗ್ಲೆ ಬೀದಿ, ಮೈಸೂರು.

For Up to date and Efficient Medical Treatment

Go to—**Dr. A. J. RAM & SONS**

Sayaji Rao Road, Mysore.

Physicians, Dentists, Opticians, etc.

ಡಾ॥ ಎ. ಜೆ. ರಾಂ. ಅಂಡ್ ಸನ್ಸ್

ಸಯ್ಯಾಜಿರಾವ್ ರೋಡ್, ಮೈಸೂರು ಸಿಟಿ.

ಔಷಧ ವ್ಯಾಪಾರಿಗಳು, ಚಿಕಿತ್ಸಕರು, ದಂತವೈದ್ಯರು,

ಮತ್ತು ಕನ್ನಡಕ ವ್ಯಾಪಾರಿಗಳು

ಉತ್ತಮವಾದ ನವೀನ ಚಿಕಿತ್ಸೆಗಳಿಗೆ ನಮ್ಮಲ್ಲಿಯೇ ಬನ್ನಿರಿ!

॥ ಸತ್ಯಮೇವೋದ್ಧರಾಮ್ಯಹಮ್ ॥

ರಾ ಜ ಧಾ ನಿ ಯ ರಾ ಷ್ಟ್ರೀ ಯ ವಾ ರ ಪ ತ್ರಿ ಕೆ.

ವೃದ್ಧ ಪಿತಾಮಹ ಎಂ. ವೆಂಕಟಕೃಷ್ಣಯ್ಯನವರ ಜ್ಞಾಪಕಾರ್ಥವಾಗಿ ಪ್ರಕಟಿಸಲ್ಪಡುವುದು.

ಸಂಪಾದಕರು: ಅಗರಂ ರಂಗಯ್ಯ, ಬಿ.ಎ.

ಸಂಪುಟ ೧] MYSORE : MONDAY 20—4—36 ಮೈಸೂರು : ಸೋಮವಾರ ೨೦—೪—೩೬ [ಸಂಚಿಕೆ ೯

ಸ್ವದೇಶಿ ವಸ್ತುಪ್ರದರ್ಶನ.

ನಾಲ್ಕನೆಯ ಮೈಸೂರು ಸ್ವದೇಶಿ ವಸ್ತುಪ್ರದರ್ಶನವನ್ನು ಎಂದಿನಂತೆ ಶ್ರೀಮನ್ಮಹಾರಾಜರವರ ವರ್ಧಂತಿ ಸಮಯದಲ್ಲಿ ನೆರವೇರಿಸಬೇಕೆಂದು ಗೊತ್ತಾಗಿದೆ. ಇದುವರೆಗೆ ಮೂರು ಪ್ರದರ್ಶನಗಳಾದವು. ಮೊದಲನೇ ಸಾರಿ ದಿವಾನ್ ಸರ್ ಮಿರ್ಜಾ ಇಸ್ಮಾಯಿಲರು ಪ್ರಾರಂಭೋತ್ಸವವನ್ನು ನಡೆಸಿದರು. ಎರಡನೇ ಸಾರಿ ರಾಷ್ಟ್ರೀಯ ಸಭೆಯ ಮಾಜಿ ಅಧ್ಯಕ್ಷರಾದ ಶ್ರೀ ರಾಜಗೋಪಾಲಾಚಾರ್ಯರವರೂ ಮೂರನೇ ಸಾರಿ ಬೊಂಬಾಯಿನ ಸುಪ್ರಸಿದ್ಧ ಮುಖಂಡರಾದ ಶ್ರೀ॥ ಭುಲಾಬಾಯಿ ದೇಸಾಯಿಯವರೂ ಪ್ರಾರಂಭೋತ್ಸವವನ್ನು ನಡೆಸಿದರು. ಈ ಸಾರಿ ಪ್ರದರ್ಶನ ಸಮಿತಿಗೆ ಕೆಳಗೆ ಕಂಡ ಮಹನೀಯರುಗಳು ಕಾರ್ಯನಿರ್ವಾಹಕರಾಗಿ ನೇಮಿಸಲ್ಪಟ್ಟಿರುವರು—ಅಡ್ವೊಕೇಟರೂ ಮ್ಯುನಿಸಿಪಲ್ ಕೌನ್ಸಿಲರೂ ಆದ ಶ್ರೀ॥ ಸಿ. ನರಸಿಂಹಯ್ಯನವರು ಅಧ್ಯಕ್ಷರು, ಖಾನ್ ಸಾಹೇಬ್ ... ರಾಮಸ್ವಾಮಿ, ಮಿ॥ ಮಹಮ್ಮದ್ ... ಮತ್ತು ಶ್ರೀ॥ ಜಿ. ಆರ್. ಜೋಸ್ಯರವರು ಉಪಾಧ್ಯಕ್ಷರು; ಶ್ರೀ॥ ಡಿ. ಬಿ. ... ರಾಮಯ್ಯನವರು ಕೋಶಾಧ್ಯಕ್ಷರು, ಶ್ರೀ॥ ... ಅಗರಂ ರಂಗಯ್ಯ ಮತ್ತು ... ಕೃಷ್ಣಮೂರ್ತಿ—ಇವರು ಕಾರ್ಯದರ್ಶಿಗಳು. ಕಾರ್ಯಕಾರಿ ಮಂಡಲಿಯೊಂದು ನೇಮಿಸಲ್ಪಟ್ಟಿದೆ.

ರಾಷ್ಟ್ರಧ್ವಜಾರೋಹಣ.

ರಾಷ್ಟ್ರೀಯ ಮಹಾ ಸಭೆಯಲ್ಲಿ ಧ್ವಜಾರೋಹಣವನ್ನು ಮಾಡುತ್ತ ಪಂಡಿತ ಜವಾಹರಲಾಲರು ಈ ಧ್ವಜವು ಸ್ವಾತಂತ್ರ್ಯದ್ದು ಎಂದು ಹೇಳಿದರು. ಈ ಧ್ವಜದ ನೆರಳಲ್ಲಿ ನಿಂತು ನಾವು ಸ್ವಾತಂತ್ರ್ಯದೀಕ್ಷೆಯನ್ನು ಕೈಗೊಂಡೆವು. ಅನಂತರ ಸತ್ಯಾಗ್ರಹ ನಡೆಯುವ ಹೊತ್ತಾಗ ಸರ್ಕಾರದವರು ಧ್ವಜದ ಮೇಲೆ ಧಾಳಿಯನ್ನು ನಡೆಸಿದಾಗ ನಾವು ಹೆದರಿಕೊಂಡೆವು. ಒಂದಾವರ್ತಿ ಧ್ವಜವನ್ನು ಏರಿಸಿದ ಮೇಲೆ ಅದಕ್ಕೆ ಅಗೌರವ ಬರದಂತೆ ಕಾಪಾಡಿಕೊಳ್ಳುವುದು ನಮ್ಮೆಲ್ಲರ ಕರ್ತವ್ಯ. ಈ ಧ್ವಜದಿಂದ ಎಲ್ಲರೂ ಸ್ಫೂರ್ತಿಯನ್ನು ತಂದುಕೊಳ್ಳಿರಿ. ಹೆದರಿಕೆಯನ್ನು ಬಿಟ್ಟುಬಿಡಿ. ಧೈರ್ಯದಿಂದ ಮುಂದೆ ಸಾಗಿರಿ—ಎಂದು ಅವರು ತಿಳಿಸಿದರು. ಈ ಧ್ವಜದ ಸ್ತಂಭವು ... ಅಡಿ ಎತ್ತರವಿದೆ.

ಪಂ॥ ಜವಾಹಿರಲಾಲರ ಉಪನ್ಯಾಸಗಳ ಮೇಲೆ ಸರ್ಕಾರದವರ ಲಕ್ಷ್ಯ

ಪಂಡಿತ ಜವಾಹಿರಲಾಲರ ಎಲ್ಲಾ ಉಪನ್ಯಾಸಗಳನ್ನೂ ಎಚ್ಚರಿಕೆಯಿಂದ ಓದಿ ನೋಡಿ, ತಂತಮ್ಮ ಟಿಪ್ಪಣಿಗಳೊಡನೆ ಅವುಗಳನ್ನು ತಮ್ಮಲ್ಲಿಗೆ ಕಳುಹಿಕೊಡಬೇಕೆಂದೂ, ಯಾವಾಗ ಬೇಗೆ ಯಾವ ಸಂದರ್ಭ ಒದಗಿದರೂ ಏನಕ್ಕೆಲ್ಲಾ ಸಮಸ್ತರೂ ಸದಾ ಸಿದ್ಧರಾಗಿರಬೇಕೆಂದೂ, ತಮ್ಮ ಜಿಲ್ಲಾಧಿಕಾರಿಗಳಿಗೂ ಪೋಲೀಸು ಇಲಾಖೆಯವರಿಗೂ ಸಂಯುಕ್ತಪ್ರಾಂತಗಳ ಸರ್ಕಾರದವರು ಗುಪ್ತ ಸರ್ಕ್ಯುಲರ್ ಒಂದನ್ನು ಕಳುಹಿಸಿರುವರೆಂದು, ಡಿ ಹ ಲಿ ಯ ಹಿಂದೂಸ್ತಾನ ಟೈಮ್ಸ್ ಪತ್ರಿಕೆಯು ಪ್ರಕಟಿಸಿದೆ

"ಜೈಲಿಗೆ ಹೋಗುವವರೇ ಹೊರತು ಸೈನ್ಯಕ್ಕೆ ಸೇರುವುದಿಲ್ಲ."

ಧೈರ್ಯಶಾಲಿಯರೂ ಶಕ್ತರೂ ಪುಷ್ಟರೂ ಸಮರ್ಥರೂ ಆಗಿರುವ ಕೇಂಬ್ರಿಡ್ಜ್ ವಿಶ್ವವಿದ್ಯಾನಿಲಯದ ಹತ್ತು ಮಂದಿ ಯುವಕರನ್ನು ಕೇಳಿದರೆ, ಅವರಲ್ಲಿ ಒಂಭತ್ತು ಜನರು ಜೈಲಿಗೆ ಹೋಗುವರೇ ಹೊರತು ಸೈನ್ಯಕ್ಕೆ ಸೇರುವುದಕ್ಕೊಪ್ಪುವುದೇ ಇಲ್ಲ. ಯುದ್ಧದ ವಿಷಯದಲ್ಲಿ ನಮ್ಮ ಯುವಕ ಯುವತಿಯರಿಗೆ ಯಾವ ಅಭಿಪ್ರಾಯಗಳು ಹಿಂದಕ್ಕಿಂತಲೂ ಎಷ್ಟೋ ಮಟ್ಟಿಗೆ ದೂರವಾಗಿವೆಯೆಂಬುದು ನಮ್ಮ ಮುಂದಾಳುಗಳ ಅವಗಾಹನೆಗೆ ಬಂದಿಲ್ಲ ಎಂಬುದು ಕೇಂಬ್ರಿಜ್ ವಿಶ್ವವಿದ್ಯಾನಿಲಯದ ಒಬ್ಬ ಪ್ರೊಫೆಸರರು ಘಂಟಾಘೋಷವಾಗಿ ಹೇಳುತ್ತಾರೆ.

ರಾಷ್ಟ್ರಪತಿ

ಪಂಡಿತ ಜವಾಹರಲಾಲರು.

ಶತ್ರುಗಳಿಗೆ ಮದ್ದುಗುಂಡು ತುಪಾಕಿಗಳ ದಾನ.

ಎಥಿಯೋಪಿಯಾ ದೇಶದಲ್ಲಿ ಗೊಜ್ಜಂ ಜಿಲ್ಲೆಯಲ್ಲಿ ಆ ಚಕ್ರವರ್ತಿಗಳಿಗೆ ವಿರುದ್ಧವಾಗಿ ಹೋರಾಡಿದ ಕೆಲವು ಜನರ ದಂಗೆಯನ್ನು ಚಕ್ರವರ್ತಿಗಳ ಸೈನ್ಯದವರು ಸಂಪೂರ್ಣವಾಗಿ ನಿಗ್ರಹಿಸಿದ್ದರು. ಇಟಲಿಯವರು ಆ ದಂಗೆಗಾರರಿಗೆ ಸಹಾಯ ಮಾಡಿ, ಎಥಿಯೋಪಿಯನ್ ಚಕ್ರವರ್ತಿಗಳಿಗೆ ಅವಮಾನಕರವನ್ನುಂಟುಮಾಡಬೇಕೆಂಬ ಉದ್ದೇಶದಿಂದ ತಮ್ಮ ವಿಮಾನಗಳಿಂದ ನಾಲ್ಕು ಮೆಷಿನ್ ಗನ್ ಗಳನ್ನೂ ಹತ್ತು ಸಹಸ್ರ ಗುಂಡುಗಳನ್ನೂ ಆ ದಂಗೆಯಾಗಿದ್ದ ಪ್ರದೇಶದಲ್ಲಿ ಹಾಕಿದರು. ಆ ತುಪಾಕಿಗಳೂ ಗುಂಡುಗಳೂ ದಂಗೆಗಾರರಿಗೆ ಸಿಕ್ಕುವುದಕ್ಕೆ ಬದಲಾಗಿ, ಅವರನ್ನು ನಿಗ್ರಹಿಸಿ ಅಲ್ಲಿ ಶಿಬಿರಮಾಡಿಕೊಂಡಿದ್ದ ಚಕ್ರವರ್ತಿಗಳ (ಸರ್ಕಾರೀ) ಸೈನ್ಯದವರ ಕೈಗೆ ಬಿದ್ದಿತು. ಹೀಗೆ ಅನಿರೀಕ್ಷಿತವಾಗಿ ತಮ್ಮ ಶತ್ರುಗಳಿಂದ ತಮಗೆ ಒದಗಿದ ಯುದ್ಧ ಸಾಮಗ್ರಿಗಳ ಲಾಭದಿಂದ ಆ ಎಥಿಯೋಪಿಯನರಿಗೆ ಸಂತೋಷವುಂಟಾದುದು ಸಹಜವಾಗಿಯೇ ಆಗಿದೆ.

ಪ್ರಜಾ ಪ್ರತಿನಿಧಿ ಸಭೆ.

ಪ್ರಜಾ ಪ್ರತಿನಿಧಿ ಸಭೆಗೆ ಮೈಸೂರು ದಿಸ್ಟ್ರಿಕ್ಟಿನಿಂದ ವಿಷಯಗಳನ್ನು ಚುನಾಯಿಸಲು ಪ್ರತಿನಿಧಿಗಳ ಸಭೆಯು ಕಳೆದ ಶನಿವಾರ ಅರಮನೆ ಕಚೇರಿಯಲ್ಲಿ ನಡೆಯಿತು. ಪ್ರೈಮರಿ ವಿದ್ಯಾಭ್ಯಾಸವನ್ನು ಉತ್ತಮಪಡಿಸಲು ಹತ್ತು ಲಕ್ಷ ರೂ ಮಂಜೂರು ಮಾಡಬೇಕೆಂದು ಸರ್ಕಾರವನ್ನು ಪ್ರಾರ್ಥಿಸಬೇಕೆಂದು ತೀರ್ಮಾನವಾಯಿತು. ನೀಜರ್ ಮತ್ತು ಮೈನರ್ ಕರಗಳನ್ನು ಸರಿಪಡಿಸುವುದು; ಚಾಮರಾಜನಗರದ ತಾ॥ ಕಚೇರಿ ... ದ್ವಿತೀಯ ದರ್ಜೆ ... ಮೈಸೂರು ಮಹಾರಾಜಾ ಸಂಸ್ಕೃತ ಪಾಠಶಾಲೆಗೆ ಎಲ್ಲಾ ಜಾತಿಯ ಜನರನ್ನೂ ಸೇರಿಸುವುದು, ಬನ್ನೂರನ್ನು ತಾಲ್ಲೂಕಾಗಿ ಬದಲಾಯಿಸುವುದು, ಮಂಡ್ಯ ಮತ್ತು ಶ್ರೀರಂಗಪಟ್ಟಣಗಳಲ್ಲಿ ಹೈಸ್ಕೂಲುಗಳನ್ನು ಸ್ಥಾಪಿಸುವುದು, ರೈತರ ಸಾಲಗಳನ್ನು ತೀರಿಸಲು ದೀರ್ಘಕಾಲದ ಸಾಲದ ಬಾಂಡುಗಳನ್ನು ಕೊಡುವುದು—ಇವೇ ಮೊದಲಾದ ವಿಷಯಗಳು ಗೊತ್ತಾದುವು.

ಶ್ರೀಮತಿ ಕಮಲಾನೆಹರೂ ಅವರ ಸ್ಮಾರಕ.

ಮಹಾತ್ಮಾ ಗಾಂಧಿಯವರ ಸೂಚನೆಯಂತೆ ಶ್ರೀಮತಿ ಕಮಲಾ ನೆಹರೂ ಅವರ ಸ್ಮಾರಕಾರ್ಥವಾಗಿ ಅಲಹಾಬಾದಿನಲ್ಲಿ ಒಂದು ದೊಡ್ಡ ಆಸ್ಪತ್ರೆಯನ್ನು ಸ್ಥಾಪಿಸಬೇಕೆಂದು ನಿರ್ಧರವಾಗಿದೆ. ಈಗ ಆ ನಗರದಲ್ಲಿರುವ ಕಾಂಗ್ರೆಸ್ ಆಸ್ಪತ್ರೆಯನ್ನು ಇಷ್ಟು ಅಭಿವೃದ್ಧಿಸ್ಥಿತಿಗೆ ತಂದವರು ಶ್ರೀಮತಿ ಕಮಲಾ ನೆಹರೂ. ಸ್ವರಾಜ್ಯ ಭವನದ ಟ್ರಸ್ಟಿಗಳೂ, ಪಂಡಿತ ಜವಾಹಿರ್ ಲಾಲರೂ ಈ ಸ್ಮಾರಕದ ಆಸ್ಪತ್ರೆಯ ಕಮಿಟಿಯವರಿಗೆ ಸ್ವಲ್ಪ ಸ್ವಲ್ಪ ಭೂ ಪ್ರದೇಶಗಳನ್ನು ಉಚಿತವಾಗಿ ಕೊಟ್ಟು ಸಹಾಯ ಮಾಡುವರೆಂದೂ, ಅಲಹಾಬಾದ್ ಸೇವಾ ಸಭೆಯವರು ಹತ್ತು ಸಹಸ್ರ ರೂಪಾಯಿಗಳನ್ನು ಕೊಡುವರೆಂದೂ ತಿಳಿದುಬಂದಿದೆ. ಆ ಸ್ಮಾರಕದ ಆಸ್ಪತ್ರೆಯು ಸಂಪೂರ್ಣವಾಗಿ ಸಿದ್ಧವಾಗಲು ಮೂರು ಲಕ್ಷ ರೂಪಾಯಿಗಳು ಬೇಕಾಗಬಹುದೆಂದು ಅಂದಾಜಾಗಿ ಚಂದಾ ಎತ್ತಬೇಕೆಂದು ನಿರ್ಧರವಾಗಿದೆ. ಆ ಆಸ್ಪತ್ರೆಯು ಮುಖ್ಯವಾಗಿ ಹೆಂಗಸರು ಮಕ್ಕಳಿಗೋಸ್ಕರವೇ ಸ್ಥಾಪಿತವಾಗುವುದಾದರೂ ಇತರರಿಗೂ ಔಷಧವು ದೊರೆಯುವುದು

ಶ್ರೀ ರಮಣ ಮಹರ್ಷಿಗಳು

ಅವರ ಪುಣ್ಯ ಚರಿತ್ರೆ.

(ಕಳೆದವಾರದ ಶೇಷ)

ಲೇಖಕ:—ಶ್ರೀ ಕೃಷ್ಣ.

ಇವರು ಮನೆಯನ್ನು ಬಿಟ್ಟು ಹೊರಡುವುದಕ್ಕೆ ಮುಂಚೆ ತಾಯಿಗೆ ಬರೆದ ಕಾಗದದ ವಿವರ—ನನ್ನ ಮಾತೋಶ್ರೀಯವರಿಗೆ,

"ನಾನು ನನ್ನ ತಂದೆಯನ್ನು ಹುಡುಕಿಕೊಂಡು ಆತನ ಆಜ್ಞಾನುಸಾರ ಈ ಸ್ಥಳವನ್ನು ಬಿಟ್ಟು ಹೊರಟೆನು. ಇದು (ಈ ದೇಹವು) ಒಳ್ಳೆಯ ಕಾರ್ಯವನ್ನೇ ಕೈಗೊಂಡಿರುವುದು. ಆದುದರಿಂದ ಇದನ್ನು ಹುಡುಕುವುದಕ್ಕೆ ಹಣವನ್ನು ಖರ್ಚು ಮಾಡಬೇಡ"

ನಿನ್ನ ಸಂಬಳವನ್ನು ಇನ್ನೂ ಕೊಡಲಿಲ್ಲ. ಎರಡು ರೂಪಾಯಿ ಇದರ ಸಹಿತವಿವೆ

ಇಂತಿ.

ಹೀಗೆ ಕಾಗದವನ್ನು ಬರೆದು ತನ್ನ ಪೆಟ್ಟಿಗೆಯೊಳಗಿಟ್ಟು ಹೊರಟರು.

ಮಧ್ಯಾಹ್ನ 1-30 ಗಂಟೆ ಗಾಡಿಯಲ್ಲಿ ದಿಂಡಿವನಕ್ಕೆ ಟಿಕೆಟ್ ತೆಗೆದು ಹೊರಟರು ಗಾಡಿಯಲ್ಲಿ ಹತ್ತಿದ ಈ ಬಾಲಕನು, ಕಿಟಕಿಗಳಿಂದ ಹೊರಗೆ ಕೂಡ ನೋಡದೆ ಸುಮ್ಮನೆ ಸಮಾಧಿಯೊಳಗೆ ಕುಳಿತನು. ಓರ್ವ ಮಹಮ್ಮದೀಯ ಜಾತಿಯ ಪ್ರಯಾಣಿಕನು ಇವರನ್ನು ನೋಡಿ ಸ್ವಾಮಿಾ, ನೀವೆಲ್ಲಿಗೆ ಹೋಗುವಿರಿ?" "ಇದು ತಿರುವಣ್ಣಾಮಲೆಗೆ ಹೋಗುತ್ತಿದೆ" ಎಂದು ಇವರು ಉತ್ತರವಿತ್ತರು. "ನಾನೂ ಸಹ ತಿರುಕ್ಕೋವಿಲೂರಿಗೆ ಹೋಗುತ್ತೇನೆ. ಅದು ವಿಳಿಪ್ಪುರದಿಂದ ತಿರುವಣ್ಣಾಮಲೆಗೆ ಹೋಗುವ ದಾರಿಯಲ್ಲಿ ಇದೆ. ತಿರುಕ್ಕೋವಿಲೂರಿನಿಂದ ತಿರುವಣ್ಣಾಮಲೆಗೆ ಎರಡು ಸ್ಟೇಷನುಗಳಿವೆ. ವಿಳಿಪ್ಪುರದಲ್ಲಿ ಇಳಿದು ಹತ್ತಬೇಕು" ಎಂದನು. ಅದನ್ನು ಕೇಳಿದ ಇವರು "ಇದು ದಿಂಡಿವನಕ್ಕೆ ಟಿಕೇಟು ತೆಗೆದಿದೆ" ಎಂದು ಹೇಳಿ ಸುಮ್ಮನಾದರು. ಇವರಿಗೆ ತಿರುವಣ್ಣಾಮಲೆಗೆ ರೈಲಿದೆ ಎಂಬುದು ಕೂಡ ತಿಳಿಯದು. ಮಹಮ್ಮದಿಯ ರೂಪವನ್ನು ತಾಳಿದ ಈ ಮಹಾತ್ಮನಿಂದ ದಾರಿಯನ್ನು ಅರಿತು, ವಿಳಿಪ್ಪುರದಲ್ಲಿಳಿದು, ತಿರುಕ್ಕೋವಿಲೂರು, ಅರೆಯಣಿನಲ್ಲೂರ್ ಈ ಪುಣ್ಯಸ್ಥಳಗಳನ್ನು ಕಾಲು ನಡಗೆಯಿಂದಲೇ ನಡೆದು ಅಲ್ಲಲ್ಲಿರುವ ಸ್ವಾಮಿದರ್ಶನವನ್ನು ಮಾಡಿಕೊಂಡು, ತಿರುಕ್ಕೋವಿಲೂರ್‌ನಲ್ಲಿರುವ ಮುದ್ದು ಕೃಷ್ಣಯ್ಯರ್ ಎಂಬ ಭಾಗವತರ ಮನೆಗೆ ಬಂದು ಹಸಿವನ್ನು ತೀರಿಸಿಕೊಂಡರು. ಕೃಷ್ಣಾಷ್ಟಮಿಯಾದುದರಿಂದ ಆ ರಾತ್ರಿಯನ್ನು ಅಲ್ಲಿ ಕಳೆದು, ಇಪ್ಪತ್ತು ರೂಪಾಯಿ ಬಾಳುವ ತನ್ನ ಜೊತೆ ಹತ್ತಕಡುಕನ್ನು ನಾಲ್ಕು ರೂಪಾಯಿಗಳಿಗೆ ಒತ್ತೆ ಇಟ್ಟು, ಟಿಕೇಟು ತೆಗೆದುಕೊಂಡು ತಿರುವಣ್ಣಾಮಲೆಗೆ ಬಂದು ಸೇರಿದರು.

ಮಧುರೆಯನ್ನು ಬಿಟ್ಟ 4 ನೆಯ ದಿನ ಅಂದರೇ ಮಂಗಳವಾರ (1-9-1896) ತಿರುವಣ್ಣಾಮಲೆಯನ್ನು ಸೇರಿದರು. ಶ್ರೀ ಅರುಣಾಚಲೇಶ್ವರನ ಸನ್ನಿಧಿಯಲ್ಲಿ ನಿಂತು "ಅಪ್ಪಾ! ಅಪ್ಪಣೆಯ ಪ್ರಕಾರ ಬಂದೆ, ನಿನ್ನ ಚಿತ್ತಬಂದಂತೆ ನನ್ನನ್ನು ಉಪಯೋಗಿಸಿಕೋ" ಎಂದು ಹೇಳಿ ನಮಸ್ಕಾರ ಮಾಡಿ, ಹೊರಗೆ ಬಂದು, ಕ್ಷೌರಿಕನನ್ನು ಕರೆದು ತಲೆ ಬೋಳಿಸಿಕೊಂಡು, ಜನಿವಾರವನ್ನು ಕಿತ್ತುಹಾಕಿ, ಇದ್ದ ಬಟ್ಟೆಗಳನ್ನೆಲ್ಲಾ ತೆಗೆದೊಗೆದು, ಕೌಪೀನವನ್ನು ಧರಿಸಿ "ತ್ವಮೇವಶರಣಂಮಮ" ಎಂದು ಹೇಳಿದರು. ತನ್ನ ಕೈಯಲ್ಲಿದ್ದ ಚಿಲ್ಲರೆಯನ್ನು ಬಳಿಯಲ್ಲಿರುವ ತಟಾಕದಲ್ಲೆಸೆದು ದೇವರೇ ಗತಿ! ಎಂದು ಸ್ನಾನ ಮಾಡಿದರು.

ತಕ್ಷಣದಲ್ಲಿ ಮೌನಿಯಾದರು. ಯೋಗಗಳಲ್ಲಿ ಮೌನಯೋಗವು ಬಹಳ ಕಠಿಣವಾದುದು. ಅದನ್ನು ಸಾಧಿಸುವುದು ಎಂಥವರಿಗೂ ಸುಲಭಸಾಧ್ಯವಲ್ಲ. ಜನಗಳಿಂದ ಬರುವ ತೊಂದರೆಯನ್ನು ಕಳೆದುಕೊಳ್ಳುವುದಕ್ಕೂ, ಅಡಚಣೆಯಿಲ್ಲದೆ ಧ್ಯಾನವು ನಡೆಯುವುದಕ್ಕೂ ಮೌನವನ್ನವಲಂಬಿಸಿದರು. ಇವರು ರೂಪನಾಮ ಗುಣರಹಿತನಾದ ಅಖಂಡ ಪರಿಪೂರ್ಣನನ್ನು ಕುರಿತು ತಪಸ್ಸು ಮಾಡಿದರು.

ಇವರು ತಿರುವಣ್ಣಾಮಲೆಗೆ ಬಂದ ಬಳಿಕ ಮೂರು ಸಂವತ್ಸರಗಳು ಎಡೆಬಿಡದೆ ಧೀರ್ಘಧ್ಯಾನದಿಂದ ಸಮಾಧಿಯಲ್ಲಿ ಕಾಲವನ್ನು ಕಳೆದರು ಕುಳಿತ ಸ್ಥಳದಲ್ಲಿಯೇ ಕಲ್ಲಿನ ವಿಗ್ರಹದಂತೆ ಕುಳಿತು ಪ್ರಾಪಂಚಿಕ ಜ್ಞಾನವನ್ನು ಮರೆತು, ಶರೀರಾಭಿಮಾನವನ್ನು ತ್ಯಾಗಮಾಡಿ ತಪಸ್ಸು ಮಾಡಿದರು. ಅಂತರಂಗ ಅಭಿಮಾನಿಗಳು ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸಾಗಿಸುವ ವೇಳೆಯಲ್ಲಿ ಇವರನ್ನು ಹೊತ್ತೇ ಸಾಗಿಸಿದುದಾಗಿ ತಿಳಿಯಬರುತ್ತೆ. ಆಮೇಲೆ ಎರಡು ಸಂವತ್ಸರಗಳಲ್ಲಿ ಯಾವಾಗಲಾದರೂ, ಬೇಕಾದವರಲ್ಲಿ ಒಂದೆರಡು ಮಾತನ್ನಾಡುವುದುಂಟು. ಇವರು ಸಹಜ ಸಮಾಧಿಯನ್ನು ಅನುಭವಿಸುತ್ತಿರುವ ಮಹಾತ್ಮರು.

ಈ ಮಹನೀಯರು ಕೆಲವು ದಿನಗಳು ಒಬ್ಬರ ಕೈಯಲ್ಲಿಯೂ, ಕಣ್ಣಲ್ಲಿಯೂ ಸಿಕ್ಕದಂತೆಯೂ, ಕಾಣದಂತೆಯೂ ಬಾಳಲು ಯತ್ನಪಟ್ಟರೂ ಕೂಡ ಇವರ ಆತ್ಮವಿಶ್ವಾಸಿಗಳು ಕಡೇ ಹಿಡಿಯುತ್ತಿದ್ದರು, ಎಂದು ಇವರಲ್ಲಿ ಬಳಗಿದವರು ಹೇಳುತ್ತಾರೆ.

ಈ ಮಹನೀಯರು ಅಮೃತ ಕಾರ್ಯಗಳನ್ನು ಮಾಡಿ ತೋರಿಸಲು ಬಂದವರಲ್ಲ ಜನಗಳಿಗೆ ಭ್ರಮೆಹುಟ್ಟುವಂತೆ ಮಾಡುವುದು, ಆಶ್ಚರ್ಯಹುಟ್ಟುವಂತೆ ಮಾಡಿದವರಲ್ಲ. ತನ್ನನ್ನು ಜನಗಳು ಮಹಾತ್ಮನೆಂದು ಕರೆಯುವುದಕ್ಕಾಗಿ ಮಹತ್ಕಾರ್ಯಗಳನ್ನು ಮಾಡಿದವರಲ್ಲ. ಮಾಂತ್ರಿಕರಲ್ಲ ವ್ಯರ್ಥವಾದ ಕರ್ಮಾಚಾರಬದ್ಧರಾದವರಲ್ಲ ಅಣಿಮಾದಿ ಅಷ್ಟಸಿದ್ಧಿ ಮಾಹಾತ್ಮ್ಯವನ್ನು ತೋರಿಸುವವರಾಗಿರಲಿಲ್ಲ. ಅಹಂಕಾರವಿಲ್ಲದ, ಸ್ವಾಭಾವಿಕವಾದ, ಸಾತ್ವಿಕ ತಪಶ್ಚರ್ಯೆಯಲ್ಲಿ ನಿರತರಾದವರು. ನಿಷ್ಕಲ್ಮಷವಾದ, ಶಾಂತತೆಯು ತುಂಬಿದ ಹೃದಯವನ್ನು ಹೊಂದಿದವರು. ಶಾಂತಮೂರ್ತಿಯಾಗಿರುವುದು ಇವರ ಸ್ವಭಾವ.

ಇವರು ಪ್ರಪಂಚಕ್ಕೆ ಜ್ಞಾನಜ್ಯೋತಿಯಾಗಿರುವರೆಂದು ಅನೇಕ ಪಾಶ್ಚಾತ್ಯರು ಕೊಂಡಾಡಿರುವರು. ಇವರು ಮಧುರೆಯನ್ನು ಬಿಟ್ಟು ಬರುವ ವೇಳೆಯಲ್ಲಿ ಹದಿನಾರು ವಯಸ್ಸು ತುಂಬಿದ್ದಿತು. ಈಗ ಇವರಿಗೆ ಐವತ್ತೈದು ವರ್ಷವು ತುಂಬಿರುತ್ತದೆ ಇವರನ್ನು ನೋಡಲು ಬಂದ ಶ್ರೀ ಕಾವ್ಯಕಂಠ ಗಣಪತಿ ಶಾಸ್ತ್ರಿಗಳು, "ಶ್ರೀ ರಮಣ ಮಹರ್ಷಿ" ಎಂದು ಕರೆದರು. ಅಂದಿನಿಂದ ಇಂದಿನವರಿವಿಗೂ ಇವರನ್ನು "ಭಗವಾನ್ ಶ್ರೀ ರಮಣ ಮಹರ್ಷಿ" ಎಂದು ಇಡೀ ಪ್ರಪಂಚವೇ ಕರೆಯುತ್ತಿದೆ ಈಗ ಇವರು ತಿರುವಣ್ಣಾಮಲೆಯಲ್ಲಿ ಪರ್ವತದ ದಕ್ಷಿಣ ಭಾಗದ ತಪ್ಪಲಿನಲ್ಲಿ, ತಿರುವಣ್ಣಾಮಲೆಯಿಂದ ವಾಣಿಯಂಬಾಡಿ ತಿರುಪತ್ತೂರಿಗೆ ಹೋಗುವ ದೊಡ್ಡ ಘಾಟಿಯಲ್ಲಿ ಭಕ್ತರುಗಳಿಂದ ಕಟ್ಟಿಕೊಡಲ್ಪಟ್ಟ ತಪೋವನದಲ್ಲಿ ವಾಸನಾಗಿದ್ದಾರೆ ಬರುವವರಿಗೆ ಜ್ಞಾನಾಹಾರವನ್ನು ಕೊಡಲು ಬದ್ಧರಾಗಿದ್ದಾರೆ ಸಹಜ ಸಮಾಧಿಯಲ್ಲಿ ಕಳಿತು ದಕ್ಷಿಣಾಭಿಮುಖವಾಗಿ ಸುಖಾಸನದಲ್ಲಿ ಕುಳಿತಿರುವರು

ಇವರು ನಿಜವಾದ ಮಹಾತ್ಮರೆಂದು ಅಲ್ಪನಾದ ನಾನು ಎಷ್ಟೇ ಒತ್ತಿ ಹೇಳಿದರೂ ನಂಬಿಕೆಯು ಬರಲಾರದು ಜ್ಞಾನಹೊಂದಬೇಕೆಂಬ ದಾಹಹೊಂದಿದವರು ಅಲ್ಲಿಗೆ ಹೋಗಿ ದಾಹಶಾಂತಿ ಮಾಡಿಕೊಳ್ಳಲೇಬೇಕೆಂದು ಬಹಳ ವಿನಯದಿಂದಲೂ, ನಮಸ್ಕಾರಪೂರ್ಣವಾಗಿಯೂ ಬೇಡಿಕೊಳ್ಳುವೆನು. ಬೆಲ್ಲದ ಸವಿ ಬಲ್ಲವರೇ ಬಲ್ಲರು, ಎಲ್ಲರೂ ಬಲ್ಲರೇ? ಎಂಬುವ ನಾಣ್ಣುಡಿಯಂತೆ ಒಬ್ಬರು ಹೇಳಿರುವುದರಿಂದ ನಾನೂ ಹೇಳುತ್ತಿದ್ದೇನೆ. ಭಗವಾನ್ ಶ್ರೀ ರಮಣ ಮಹರ್ಷಿಗಳೇ ಆದಿಯು, ಮಧ್ಯವು ಅಂತ್ಯವು ಅವರನ್ನು ಬಾಲಕರು ಎಂಬುವ ಏಕ ವಚನದಿಂದ ಕರೆಯಲು ನಾಲಿಗೆಯು ನಡೆಯಿತು. ಒರೆಯಲು ಕೈನಡುಗಿತು ಆದುದರಿಂದ ಎಲ್ಲೆಲ್ಲಿಯೂ 'ಇವರು' ಎಂದು ಸಂಬೋಧನೆಮಾಡಿರುವೆನು. ಅನೇಕಾವರ್ತಿ 'ಇವರು' ಎಂದು ಬರೆದಿರುವ ನನ್ನ ತಪ್ಪನ್ನು ಮನ್ನಿಸಬೇಕಾಗಿ ಬೇಡುತ್ತೇನೆ

ಇವರ ಕಲ್ಯಾಣಗುಣಗಳನ್ನು ಹೊಗಳಲು ಇಡೀ ಪ್ರಪಂಚವೇ ಪುಸ್ತಕವಾದರೂ ಸಾಲದೆಂದು ಈ ಅಲ್ಪನು ತಿಳಿದಿರುವನು. ಇವರು ಯಾವಾಗಲೂ ಸಹಜ ಸಮಾಧಿಯನ್ನು ಅನುಭವಿಸುತ್ತಿರುವರೆಂಬುದಾಗಿ ಎಷ್ಟೋ ವೃತ್ತಾಂತ ಪತ್ರಿಕೆಗಳಲ್ಲಿ ಮಹಾಜನಗಳು ಇಂಗ್ಲಿಷಿನಲ್ಲಿ ಓದಿರಬಹುದು. ಕರ್ನಾಟಕದ ಮಹನೀಯರುಗಳು ಓದಲು ನಾನು ಸ್ಥಳ ಸಂಕೋಚದಿಂದ ಸಂಗ್ರಹಿಸಿ ಇವರ ಚರಿತ್ರೆಯನ್ನು ಬರೆದಿರುವೆನು. ಇವರು ಲೋಕಕ್ಕೆ ಉಪದೇಶಿಸಿರುವ ಅನೇಕ ಉಪದೇಶಗಳಲ್ಲಿ ಒಂದಾದ 'ನಾನು ಯಾರು?' ಎಂಬ ಉಪದೇಶ ತತ್ವವನ್ನು ಕನ್ನಡ ಭಾಷೆಯಲ್ಲಿ ಬರೆಯಲು ಅಪ್ಪಣೆಯನ್ನು ಹೊಂದಿರುವೆನು ಇದು ಬರುವ ಸಂಚಿಕೆಯನ್ನು ಎದುರು ನೋಡುವುದು

ನಾನು ಯಾರು" ಎಂಬುವ ಕಿ[...]ನ್ನು ಅರಿತರೆ ಅವನೇ ಜೀವನ್ಮುಕ್ತ ಇದನ್ನು ತಿಳಿಸಲೇ ಶ್ರೀ ಭಗವಾನ್ ರ[...] ಮಹರ್ಷಿಗಳು ಅವತಾರ ಮಾಡಿರು[...]

ಅಬಿಸ್ ಅಬಾಬಾ ಬಹಳ ಆರೋಗ್ಯಕರವಾದ ನಗರ.

ಅಬಿಸೀನಿಯಾ ರಾಜಧಾನಿಯಾದ ಅಬಿಸ್ ಅಬಾಬಾವು ಪ್ರಪಂಚದಲ್ಲಿ ಬಹಳ ಆರೋಗ್ಯಕರವಾದ ನ[...] ಸಮುದ್ರ ಮಟ್ಟಕ್ಕಿಂತ 8000 ಅಡಿ ಎತ್ತರದಲ್ಲಿರುವ ಈ ನಗರವು ಸುತ್ತಲೂ ಇನ್ನೂ ಎತ್ತರವಾದ ಕಣಿವೆ, ಬೆಟ್ಟಗಳಿಂದ [...]ತನಾಗಿದೆ ಸಮಭಾಜಕವೃತ್ತವು 8 ಡಿಗ್ರಿಗಳಷ್ಟು ದಕ್ಷಿಣದಲ್ಲೇ ಇದ್ದರೂ, ಇಲ್ಲಿ ವಾಯುಗುಣವು ಅತಿ ಹಿತಕರವಾಗಿದೆ ಹಗಲಿನಲ್ಲಿ 70 ಅಥವಾ 80 ಡಿಗ್ರಿಗಳಷ್ಟು ಇರುವ ಉಷ್ಣವು ರಾತ್ರಿಯ ಕಾಲದಲ್ಲಿ 2[...] ಅಥವಾ 25 ಕ್ಕೆ ಇಳಿಯುವುದು. ಜೀ[...]ಗಿರುವ ಮನೆಗಳನ್ನು ರಾತ್ರಿ ಕಾಲದ[...] ಮರಿಸಲು, ಮತ್ತು ಹಗಲಿನಲ್ಲೂ ಸ[...] ಗೆಯ ಸಾಧನಗಳೇ ಉಪಯೋಗ

ಲಿಬಿಯ ಮರುಭೂಮಿಯು ಹಿಂದೆ ಫಲವತ್ತಾಗಿತ್ತು!

ಲಿಬಿಯ ಮರುಭೂಮಿಯು 5000 [...] ವರ್ಷಗಳ ಹಿಂದೆ ಫಲವತ್ತಾಗಿತ್ತೆಂಬುದ[...] ನ್ನು ಕಂಡುಹಿಡಿದವರು ಲಂಡನ್ನಿನ ಒಂ[...] ಸಭೆಯಲ್ಲಿ ಹೇಳಿದರು ಕೆಲವು ಗುಹೆಗ[...]ಲ್ಲಿ, ಸುಮಾರು 25 ಚಿತ್ರಗಳು ಬರೆಯ[...]ಟ್ಟಿತ್ತೆಂದೂ, ಅವುಗಳಲ್ಲಿ ಹಸು ಮತ್ತು [...] ತರ ಪ್ರಾಣಿಗಳೂ ಚಿತ್ರಿತವಾಗಿತ್ತೆಂದ[...] ತಿಳಿಸಿದರು. 'ವಾಡಿಹವ' ಎಂಬ ಯ[...] ವಾಗಲೂ ಒಣಗಿರುವ ನದಿಯು ಸುಮ[...]ರು 300 ಮೈಲಿಗಳು ಹರಿಯುತ್ತಿತ್ತು ಎ[...]ದು ಹೇಳಿದರು ಇನ್ನೂ ಅದಕ್ಕೆ ಸಂಬ[...]ಧಿಸಿದ ಅನೇಕ ವಿಷಯಗಳನ್ನು ತಿಳಿಸಿ[...]ದು ಒಟ್ಟಿನಲ್ಲಿ ಅವುಗಳೆಲ್ಲವನ್ನೂ ಸಂಶೋ[...]ಧಿಸಿದುದರಿಂದ ಲಿಬಿಯ ಮರುಭೂಮಿಯ[...] ಹಿಂದೆ ಬಹಳ ಫಲವತ್ತಾದ ಪ್ರದೇಶವಾ[...]ಗಿತ್ತೆಂದು ಅಭಿಪ್ರಾಯಪಟ್ಟರು

ಸುವರ್ಣಚಿಕಿತ್ಸೆ.

ವಾಯುವಿನಿಂದ ಉಂಟಾಗುವ ಅನೇ[...] ರೋಗಗಳು ಸುವರ್ಣ ಚಿಕಿತ್ಸೆಯಿಂದ[...] ನ್ನಾಗಿ ಗುಣವಾಗುವುವಂತೆ ಊರು ಗೋ[...] ಲಿನ ನರವಿನಿಂದ ನಡೆಯುತ್ತಿದ್ದ ಅನೇಕ[...] ಈ ಚಿಕಿತ್ಸೆ ನಡೆಸಿದುದರ ಫಲವಾಗಿ ಈ[...]ರು ಈಗ ಹೆಚ್ಚಾಗಿ ಆರೋಗ್ಯವಂತರಾ[...]ರುವುದೂ ಅಲ್ಲದೆ, ಗುಣವಾಗುವ ಲ[...]ಯ ಕಾಣುತ್ತಿರುವುದಂತೆ!

ನಗುವ ಜಾಡ್ಯ.

ವರ್ಜೀನಿಯಾದ ರಿಚ್‌ಮಂಡಿನಲ್ಲಿರು[...] ಒಬ್ಬಳು ಹುಡುಗಿಗೆ ನಗುವ ಜಾಡ್ಯವು[...] ಹಿಡಿದ ನಾಟಕದ ಥಿಯೇಟರಿಗೆ ಒಂ[...] ದಿನ ಹೋದಳು ನಾಟಕವು ಮುಗಿಯಲು 10 ನಿಮಿಷಗಳಿರುವಲ್ಲಿ ಹಿಡಿದ ಈ ಜಾ[...]ಡ್ಯವು ಇನ್ನೂ ಬಿಟ್ಟೇ ಇಲ್ಲ.

ಇಟಲಿ—ಅಬಿಸೀನಿಯಾ.

ಲೇಖಕರು:—ಎ. ಎಂ. ಕೃಷ್ಣಮೂರ್ತಿ ಮೈಸೂರು.

ಭಯಂಕರವಾದ, ಹೃದಯಭೇದಕವಾದ ಮತ್ತು ಮನ ಕರಗಿಸುವ ಇಟಲಿ-ಅಬಿಸೀನಿಯಾ ಯುದ್ಧದ ಪರಿಣಾಮವನ್ನರಿಯಲು ಇಡೀ ಪ್ರಪಂಚವೇ ಕಣ್ದೆರೆಯುತ್ತಿದೆ. ಯುದ್ಧದ ಹಲವು ಕಾರಣಗಳನ್ನು ತಿಳಿಯುವ ಮೊದಲು ವೀರಾವೇಶದಿಂದ ಯುದ್ಧ ತಟ್ಟಿ ನಿಂತಿರುವ ರಾಜ್ಯಗಳ ಸಂಕ್ಷಿಪ್ತ ಚರಿತ್ರೆಗಳನ್ನು ತಿಳಿಯಲು ಗಮನವಿಡೋಣ.

ಅಬಿಸೀನಿಯವು ಆಫ್ರಿಕಾಖಂಡದ ಈಶಾನ್ಯದಲ್ಲಿರುವ ಒಂದು ಅನಾಗರಿಕ ದೇಶವು. 8000 ಅಡಿಗಳಷ್ಟು ಸಮುದ್ರಮಟ್ಟವುಳ್ಳ ಪ್ರಸ್ಥ ಭೂಮಿಯೂ ಮತ್ತು ಬೆಟ್ಟ ಗುಡ್ಡಗಳಿಂದ ತುಂಬಿದ ಸೀಮೆಯೂ ಆಗಿದೆ. ನಶಿಸಿಹೋದ ಅಗ್ನಿ ಪರ್ವತಗಳ ಶಿಲಾರಸವೂ ಮತ್ತು ಮಳೆ ಬೀಳುವಿಕೆಯೂ ಹೇರಳವಾಗಿರುವುದರಿಂದ ಆಹಾರ ಪದಾರ್ಥಗಳ ಬೆಳವಣಿಗೆಯೂ ಉತ್ತಮಸ್ಥಿತಿಯಲ್ಲಿರುತ್ತದೆ. ಇಲ್ಲಿ ಚಿನ್ನವೇ ಮುಂತಾದ ಉತ್ಕೃಷ್ಟ ಖನಿಜಗಳು ದೊರೆತರೂ ಮತ್ತು ಫಲವತ್ತಾದ ಭೂಮಿ ಇದ್ದರೂ ವ್ಯಾಪಾರ ಮಾರ್ಗಗಳ ಸೌಲಭ್ಯಗಳು ಬಹಳ ಮಟ್ಟಿಗೆ ಕಡಿಮೆಯಾಗಿರಲು ಈ ದೇಶದ ಪ್ರಾಕೃತಿಕ ಲಕ್ಷಣಗಳೇ ಕಾರಣಗಳೆನ್ನಬಹುದು. ಇಟಲಿಯ ಸರ್ವಾಧಿಕಾರಿಯಾದ ಸಿನಾರ್ ಬೆನಿಟೋ ಮುಸೋಲಿನಿಯು ಸ್ವದೇಶದಿಂದ ಯುದ್ಧಸಾಮಗ್ರಿಗಳನ್ನು ಅಬಿಸೀನಿಯಾಕ್ಕೆ ಸಾಗಿಸಲು ಮಾರ್ಗಗಳನ್ನು ರಚಿಸುತ್ತಿದ್ದುದು ಎಲ್ಲರಿಗೂ ತಿಳಿದ ಸಮಾಚಾರವೇ ಆಗಿದೆ. ವಿಜ್ಞಾನವಿಶಾರದರನ್ನೂ, ರಣಭಯಂಕರರಾದ ಅಪ್ರತಿಮ ವೀರ ಸೈನಿಕರನ್ನೂ ಹೊಂದಿರುವ ಮುಸೋಲಿನಿಯು ಬಹಳ ಕಷ್ಟದಿಂದ ದಿನಕ್ಕೆ ಎಂಟು ಮೈಲಿಗಳ ಪ್ರಕಾರ ರಸ್ತೆಯನ್ನು ನಿರ್ಮಿಸುತ್ತಿದ್ದನು. ಇದಕ್ಕೆ ಈ ದೇಶದ ಬೆಟ್ಟ ಗುಡ್ಡಗಳೂ, ಹಳ್ಳಕೊಳ್ಳಗಳೂ ಮತ್ತು ಹರಿವ ನದಿಗಳೂ ಮುಖ್ಯ ಕಾರಣಗಳಾಗಿವೆ. ರೈಲುಗಳೂ, ರಸ್ತೆಗಳೂ, ವಿಶೇಷವಾಗಿ ಇಲ್ಲದಿರುವುದರಿಂದ ಹೇಸರಕತ್ತೆಗಳೇ ಇಲ್ಲಿನ ಸಾಮಾನುಗಳನ್ನು ಸಾಗಿಸುವ ಸಾಧನಗಳಾಗಿವೆ. ಈ 'ಬಡಜಂತುಗಳು ಅನೇಕವೇಳೆ ಮನುಷ್ಯರನ್ನೂ ಹೊತ್ತುಕೊಂಡು ಬೆಟ್ಟ ಗುಡ್ಡಗಳನ್ನು ಹತ್ತಬೇಕಾಗುವುದು.

ಬಹಳ ಪ್ರಾಚೀನದಿಂದಲೂ ಅಬಿಸೀನಿಯವು ಆಫ್ರಿಕಾಖಂಡದ ಸ್ವತಂತ್ರ ರಾಷ್ಟ್ರವೆಂದು ಚರಿತ್ರಕಾರರು ಬರೆದಿದ್ದಾರೆ. ಜರ್ಮನಿಯ ರಕ್ತಕೋಡಿಯು (1914—1918) ಪ್ರವಹಿಸಿದನಂತರ, ಅಬಿಸೀನಿಯಾ ದೇಶದ ಸೇನಾನಾಯಕನೂ, ರಾಜಮನೆತನದವನೂ ಆದ ರಾಸ್‌ಟಫಾರಿ ಹೈಲ್ಲೆಸೆಲಾಸಿ ಎಂಬುವನು ಅಬಿಸೀನಿಯಾದ ಚಕ್ರವರ್ತಿಯಾದನು. ಬಿಳಿಯರಿಗೆ ಅನುಕೂಲವೂ ಅನಾಗರಿಕ ಅಬಿಸೀನಿಯದವರಿಗೆ ನಷ್ಟಕರವೂ ಮತ್ತು ಅವಮಾನಕರವೂ ಆದ, ಅಂತರರಾಷ್ಟ್ರೀಯ ಸಮಿತಿಯಿಂದ ಹೊರಬಿದ್ದ, ಶಾಂತಿಸಂಧಾನದ ಷರತ್ತುಗಳನ್ನು ತಿರಸ್ಕರಿಸಿ ಮೂಲೆಗೊತ್ತಿದ ಮಹಾ ಪುರುಷನೇ ರಾಸ್‌ಟಫಾರಿ!

ಮಾತೃಭೂಮಿಯ ಗೌರವವನ್ನೂ, ಮತದ ಕೀರ್ತಿಯನ್ನೂ, ಅಬಿಸೀನಿಯನ್ನರು ಬಹಳ ಹಿಂದಿನಿಂದಲೂ ಅವಿಚ್ಛಿನ್ನವಾಗಿ ಕಾಪಾಡಿಕೊಂಡು ಬಂದಿರುತ್ತಾರೆ. ನಾಗರಿಕತೆಯ ಸೊಕ್ಕಿನ ಅಮಲು ಏರಿಗೇರಿ, ಮೇಲೆ ಬಿದ್ದ, ಇಟಲಿಯನ್ನು ಈ ಅನಾಗರಿಕ ಅಬಿಸೀನಿಯನ್ನರು ಸೋಲಿಸಿ ಓಡಿಸಿರುವುದು ಬಹಳ ಶ್ಲಾಘನೀಯವಾದ ಸುದ್ದಿಯು. ಅಬಿಸೀನಿಯನ್ನರಲ್ಲಿ ಭ್ರಾತೃಪ್ರೇಮವೂ, ದೇಶವಾತ್ಸಲ್ಯವೂ ಮೇಳವಾಗಿ ವಿಶ್ವಪ್ರೇಮವೂ ತುಂಬಿ ತುಳುಕಾಡುತ್ತಿವೆ. ಮಾತೃಭೂಮಿಗಾಗಿ ತಮ್ಮ ಸರ್ವಸ್ವವನ್ನೂ ಅರ್ಪಿಸುವರು; ಹೆಚ್ಚೇಕೆ, ತಮ್ಮ ಪ್ರಾಣವನ್ನು ಹುಲ್ಲಿಗಿಂತಲೂ ಕಡೆಯಾಗಿ ಕಾಣುವರು. ಮಹಾತ್ಮ ಶಿವಾಜಿ ಚಕ್ರವರ್ತಿಯ ಮರಾಠಾ ಸೈನ್ಯದಂತೆ ಇವರೂ ಕೂಡ ಗೊರಿಲ್ಲಾ ಯುದ್ಧದಲ್ಲಿ ನಿಪುಣರು. "ಜನನೀ ಜನ್ಮಭೂಮಿಶ್ಚ ಸ್ವರ್ಗಾದಪಿ ಗರೀಯಸೀ' ಎಂಬ ವೇದ ವಾಕ್ಯದ ಪ್ರಮಾಣವನ್ನು ಕಾರ್ಯರಂಗಕ್ಕೆ ತಂದಿರುವವರು ಅಬಿಸೀನಿಯರು. ಇವರಲ್ಲಿ ಯುದ್ಧರಂಗದಿಂದ ಹಿಮ್ಮೆಟ್ಟುವ ವ್ಯಕ್ತಿಯೇ ಇಲ್ಲ. ಮಾತೃಭೂಮಿಗೋಸುಗ ಮಡದಿ ಮಕ್ಕಳನ್ನು ತ್ಯಜಿಸಿ ಮರಣಾಂತ್ಯದ ವರೆವಿಗೂ ಯುದ್ಧ ಮಾಡಿ ನಂತರ ವೀರಸ್ವರ್ಗವನ್ನು ಹೊಂದುವ ಆ ಜನರ ದೇಶಪ್ರೇಮ, ಉತ್ಸಾಹ, ಶಕ್ತಿಯನ್ನು ಯಾವ ರೀತಿಯಲ್ಲಿ ಬಣ್ಣಿಸೋಣ? ಭಾರತಾಂಬೆಗೆ ದಾಸ್ಯ ಶೃಂಖಲೆಗಳನ್ನು ತೊಡಿಸಿ, ಮೆರೆಯುವ, ಆ ಬಿಳಿಯರ ಗುಲಾಮರಾಗಿ, ದಾಸ್ಯವೃತ್ತಿಯಲ್ಲಿದ್ದು, ಪಶುಗಳಂತೆ ಜೀವಿಸಿ, ಪ್ರಾಣವನ್ನು ನೀಗುವುದಕ್ಕಿಂತಲೂ ನಮಗೆ ಹೇಯವಾದ ಮತ್ತು ನೀಚವಾದ ಕ್ರೂರಕೃತ್ಯವೇನುಂಟು?

ನಮ್ಮ ದೇಶದ ರಜಪೂತ ವೀರ ರಮಣಿಯರಂತೆ ಅಬಿಸೀನಿಯಾ ಸ್ತ್ರೀಯರೂ ಸಾಹಸ ಮತ್ತು ಶೌರ್ಯಕ್ಕೆ ಪ್ರಸಿದ್ಧರಾಗಿದ್ದಾರೆ. ದೇಶಸೇವೆಗಾಗಿ, ಈ ದೇಶದ ರಾಣಿಯು ರಾಜಭೋಗಗಳ ಸುಖಾಭಿಲಾಷೆಗಳನ್ನು ತ್ಯಜಿಸಿರುವುದು ಮತ್ತೂ ಪ್ರಾಣವನ್ನೂ ಸಹ ಮಾತೃಭೂಮಿಯ ಅಡಿದಾವರೆಗಳಲ್ಲಿ ಅರ್ಪಿಸಲು ಹೊರಟಿರುವುದು ಸ್ತ್ರೀ ಪ್ರಪಂಚಕ್ಕೇ ಒಂದು ಹೆಮ್ಮೆಯಾದ ವಿಷಯವೇ ಸರಿ. ಇಟಲಿಯ ರಾಕ್ಷಸೀಕೃತ್ಯವನ್ನು ಕಂಡು ಬೆದರಿದ ರಾಜಕುಮಾರಿಯು "ವಿಷಗಾಳಿಯಿಂದ ರಕ್ಷಿಸುವಿರಾ?" ಎಂದು ಅಂತರರಾಷ್ಟ್ರೀಯ ಸಮಿತಿಯಲ್ಲಿ ದೈನ್ಯದಿಂದ ಇಟ್ಟ ಮೊರೆಯು ಯಾವ ಮಾನವನ ಮನ ಮರುಗಿಸಲಾರದು? ಮುದುಕರು, ಮಕ್ಕಳು, ರೋಗಿಗಳು ಎಂಬ ಭೇದಭಾವವಿಲ್ಲದೆ ಎಲ್ಲರನ್ನೂ ವಿಷಗಾಳಿಯಿಂದಲೂ, ಮದ್ದು ಗುಂಡುಗಳಿಂದಲೂ ಧ್ವಂಸ ಮಾಡುತ್ತಿರುವ ಆ ಇಟಲಿಯ ಪ್ರಚಂಡ ಸೈನ್ಯವನ್ನು ಅಬಿಸೀನಿಯದ ಸ್ತ್ರೀಯರು ತಮ್ಮ ರಾಣಿಯ ನಾಯಕತ್ವದಲ್ಲಿ ಮುಂದೆ ನುಗ್ಗಿ, ಎದುರಿಸಲು ಹೋಗಿ, ಬಿರುಗಾಳಿಗೆ ಸಿಕ್ಕಿದ ಬೀಸಣಿಗೆಯಂತೆ, ಆ ಮದೋನ್ಮತ್ತ ಇಟಲಿಯವರ ಆಹುತಿಗೆ ಒಳಪಡುತ್ತಿದ್ದಾರೆ. ಇಷ್ಟಾದರೂ ಕೂಡ ಅವರು ಎದೆಗುಂದದೆ ದೇಶಸೇವೆಯೇ ತಮ್ಮ ಜೀವನದ ಮುಖ್ಯ ಧ್ಯೇಯವೆಂಬುದನ್ನು ಸಾಧಿಸುವವರಾಗಿದ್ದಾರೆ.

ಈ ದೇಶದ ಜನಸಂಖ್ಯೆ ಸುಮಾರು ಒಂದು ಕೋಟಿ. ಇವರ ಮತವು ಕ್ರೈಸ್ತಮತ. ಜನರಲ್ಲಿ ಪರಸ್ಪರ ಸೌಹಾರ್ದ ಭಾವವುಂಟು ಐಕಮತ್ಯವಿದ್ದರೂ. ಈ ದೇಶದಲ್ಲಿ ಪ್ರಪಂಚದ ಏಳಿಗೆಗೆ ಕಳಂಕ ಬರುವಂತಹ ಗುಲಾಮರ ವ್ಯಾಪಾರದ ವೃತ್ತಿಯೂ ಇದೆ. ದೊರೆಗೆ ಆಶ್ರಿತ ರಾಜರುಗಳಿಂದ ಬರುವ ಕಪ್ಪ ಕಾಣಿಕೆಗಳೇ ಈ ಗುಲಾಮರು. ಇಪ್ಪತ್ತನೇ ಶತಮಾನದ ನಾಗರಿಕತೆಯ ವೈಭವವನ್ನು ತನ್ನ ರಾಜ್ಯದಲ್ಲಿ ಹರಡಲು ಈ ದೇಶದ ಚಕ್ರವರ್ತಿಯಾದ ರಾಸ್‌ಟಫಾರಿಯು ತನ್ನ ಕೈಲಾದಮಟ್ಟಿಗೂ ಪ್ರಯತ್ನಿಸುತ್ತಿರುತ್ತಾನೆ. ಸ್ವತಂತ್ರವಾದ, ಅನಾಗರಿಕ ಅಬಿಸೀನಿಯಾ ದೇಶದ ಮೇಲೆ ಇಟಲಿಯು ತನ್ನ ಸ್ವಾಮಿತ್ವವನ್ನು ತೋರಿಸಲು ಹೊರಟಿರುವುದನ್ನು ಇತರ ಐರೋಪ್ಯ ರಾಷ್ಟ್ರಗಳು ಕಣ್ದೆರೆದು ನೋಡುತ್ತಿದ್ದರೂ ಸುಮ್ಮನಿವೆ. ಅದೇ ಇಟಲಿಯು ಯೂರೋಪಿನ ರಾಷ್ಟ್ರಗಳಲ್ಲಿ ಒಂದನ್ನಾದರೂ ನುಂಗಲು ಆರ್ಭಟಿಸಿದ್ದಲ್ಲಿ, ಇಡೀ ಪ್ರಪಂಚವೇ ಘೋರ ಸಂಗ್ರಾಮಕ್ಕಾಗಿ ಸೊಂಟಕಟ್ಟಿ ನಿಲ್ಲುತ್ತಿದ್ದುದರಿಂದ ಮಾನವನ ಶಾಂತಿಗೆ ಭಂಗಬರುತ್ತಿದ್ದಿತೆಂಬ ವಿಷಯವು ನಿಸ್ಸಂದೇಹವಾಗಿದೆ.

ಮಹಾತ್ಮಾ ಗಾಂಧಿಯವರು.

ಬಾಲಕರ ಸೇವೆ.

ಚಾಮುಂಡಿ ಬಡಾವಣೆಯಲ್ಲಿರುವ ಬಾಲಕರ ರಾಮಮಂದಿರದಲ್ಲಿ ಕಳೆದ ಗುರುವಾರ ಪಟ್ಟಾಭಿಷೇಕವೂ ನೂರಾರು ಬಾಲಕ ಬಾಲಕಿಯರಿಗೆ ಸಂತರ್ಪಣೆಯೂ ಆಯಿತು ಮಾಸ್ಟರ್ ದೊರಸ್ವಾಮಿಯವರ ಸುಶ್ರಾವ್ಯವಾದ ಗಾನವೂ ಆಯಿತು. ಬಾಲಕರ ಆನಂದಕ್ಕೆ ಪಾರವೇ ಇಲ್ಲ

ದಿವಂಗತ ಎಸ್. ಸುಬ್ಬರಾಯರು.

ಮೈಸೂರಿನ ಸುಪ್ರಸಿದ್ಧ ವಕೀಲರೂ, ಸಾರ್ವಜನಿಕ ಕಾರ್ಯಕರ್ತರೂ ಆದ ಶ್ರೀ|| ಎಸ್. ಸುಬ್ಬರಾಯರು ಕಳೆದ ಶುಕ್ರವಾರ ಬೆಳಿಗ್ಗೆ ವಿಷಮಶೀತ ಜ್ವರದಿಂದ ಸ್ವರ್ಗಸ್ಥರಾದರೆಂದು ತಿಳಿಸಲು ಅತ್ಯಂತ ವಿಷಾದಿಸುತ್ತೇವೆ. ಇವರು ಮೈಸೂರಿನ ಅನೇಕ ಸಾರ್ವಜನಿಕ ಸಂಘಗಳಲ್ಲಿ ಸದಸ್ಯರಾಗಿದ್ದರು ಕಾಂಗ್ರೆಸ್ ಕಮಿಟಿಯ ಕಾರ್ಯದರ್ಶಿಗಳಾಗಿದ್ದರು ಬಿಲ್ಡರ್ ಸಹಕಾರ ಸಂಘ, ಸಿಟಿ ಕೋ-ಆಪರೇಟಿವ್ ಸೊಸೈಟಿ ಮುಂತಾದ ಸಂಸ್ಥೆಗಳಿಗೆ 'ಕಾರ್ಯದರ್ಶಿಯಾಗಿದ್ದರು ಇವರು ಇನ್ನೂ 40 ವರ್ಷ ವಯಸ್ಸಿನವರು. ವೃದ್ಧರಾದ ತಂದೆಯವರೂ, ಚಿಕ್ಕ ವಯಸ್ಸಿನ ಕುಟುಂಬವೂ ಇರುವರು ಇವರಿಗೆ ನಮ್ಮ ಹೃತ್ಪೂರ್ವಕವಾದ ಅನುತಾಪವನ್ನು ಸಲ್ಲಿಸುತ್ತೇವೆ.

ಶ್ರೀ ರಾಮ ಸೇವಾ.

ಮೈಸೂರು ಚಾಮುಂಡಿ ಬಡಾವಣೆಯ ಶ್ರೀ ಶಂಕರನಾರಾಯಣಸ್ವಾಮಿ ದೇವಸ್ಥಾನದಲ್ಲಿರುವ ಶ್ರೀ ರಾಮಮಂದಿರದಲ್ಲಿ ಶ್ರೀ ರಾಮ ಪಟ್ಟಾಭಿಷೇಕೋತ್ಸವವೂ, ಸಂಗೀತ, ಹರಿಕಥೆಯೂ, ಅನ್ನಸಂತರ್ಪಣೆಯೂ ವೈಭವದಿಂದ ನಡೆದವು ಪಟ್ಟಾಭಿಷೇಕದ ದಿನ ಶ್ರೀ|| ಲಕ್ಷ್ಮೀನಾರಾಯಣ ಶಾಸ್ತ್ರಿಗಳ ಹರಿಕಥೆಯು ಆಯಿತು. ಅನಂತರ ಆಸ್ಥಾನ ವಿದ್ವಾನ್ ಟಿ ಚೌಡಯ್ಯನವರ ಗಾನ, ಶ್ರೀಮತಿ ಗಂಗೂಬಾಯಿಯವರ ಗಾನ, ಶ್ರೀಮತಿಗಳಾದ ಸುಬ್ಬಮ್ಮ ಮತ್ತು ನಾಗರತ್ನಮ್ಮನವರ ವೀಣಾಗಾನ ವೇ|| ಕೋಣನೂರು ಶ್ರೀಕಂಠಶಾಸ್ತ್ರಿಗಳು ಮತ್ತು ವಿದ್ವಾನ್ ಎಸ್. ಕೃಷ್ಣಯ್ಯಂಗಾರ್ರವರ ಹರಿಕಥೆ—ಇವುಗಳು ನಡೆದವು. ಪ್ರತಿ ದಿನವೂ ಸಾವಿರಾರು ಜನರು ಸೇರಿ ಕೇಳಿ ಆನಂದ ಪಡುತ್ತಿದ್ದರು

ವರ್ತಕರಿಗೆ ತೊಂದರೆ.

ಮೈಸೂರು ದೊಡ್ಡಪೇಟೆಯಲ್ಲಿ ಇರುವ ವರ್ತಕರು ತಮ್ಮ ಅಂಗಡಿಗಳಿಗೆ ಜವಳಿ ವಗೈರೆ ಮೂಟೆಗಳನ್ನು ಗಾಡಿಗಳಲ್ಲಿ ಸಾಗಿಸುವುದಕ್ಕೆ ಈಚೆಗೆ ಅನೇಕ ಅನಿವಾರ್ಯಗಳು ಒದಗಿವೆ. ಇದುವರೆಗೆ ಗಾಡಿಗಳು ಸಲೀಸಾಗಿ ಪೇಟೆಯ ರಸ್ತೆಯೊಳಗೆ ತರಲ್ಪಡುತ್ತಿದ್ದವು ವರ್ತಕರು ತಮ್ಮ ತಮ್ಮ ಅಂಗಡಿಗಳ ಹತ್ತಿರ ಮೂಟೆಗಳನ್ನು ಇಳಿಸಲು ಸೌಕರ್ಯವಾಗುತ್ತಿತ್ತು. ಈಗ ಕನ್ಸರ್ವೆನ್ಸಿ ಗಲ್ಲಿಗಳಲ್ಲಿಯೇ ಗಾಡಿಗಳನ್ನು ನಿಲ್ಲಿಸಿಕೊಂಡು ಅಲ್ಲಿಂದ ಮೂಟೆಗಳನ್ನು ಹೊತ್ತು ಸಾಗಿಸಬೇಕೆಂದು ನಿರ್ಬಂಧವಾಗಿದೆ ಮತ್ತು ಕೆಲವು ಕಾಲ ಪೇಟೆ ರಸ್ತೆಯಲ್ಲಿ ಗಾಡಿ ನಿಲ್ಲಿಸಿ ಸಾಮಾನನ್ನು ಸಾಗಿಸುತ್ತಿರುವಾಗ್ಯೆ ಪೋಲೀಸಿನವರು ಬಂದು ಗಾಡಿಯವನ ಮೇಲೆ ಮೊಕದ್ದಮೆ ಹೂಡಿ ಒಂದು ರೂ. ಜುಲ್ಮಾನೆಯನ್ನೂ ಹಾಕಿಸಿದರು. ಈ ರೀತಿ ವರ್ತಕರಿಗೆ ತೊಂದರೆ ಕೊಡುತ್ತಿರುವುದು ಬಹಳ ಅನ್ಯಾಯವೂ, ಅವಿವೇಕವೂ ಆಗಿದೆ ಎಂದು 'ವರ್ತಕರ ಹಿತೈಷಿ' ಯೊಬ್ಬರು ತಿಳಿಸುತ್ತಾರೆ.

ಸಾಧ್ವಿ

೨೦-೪-೩೬ ನೇ ಸೋಮವಾರ

ರಾಷ್ಟ್ರೀಯ ಮಹಾಸಭೆ

ಕಳೆದ ಭಾನುವಾರ ಲಕ್ನೋ ನಗರದಲ್ಲಿ ಅಖಿಲಭಾರತ ರಾಷ್ಟ್ರೀಯ ಮಹಾಸಭೆಯ ಅಧಿವೇಶನವು ಪಂಡಿತ ಜವಹರಲಾಲರ ಅಧ್ಯಕ್ಷತೆಯಲ್ಲಿ ಆರಂಭವಾಯಿತು ದೇಶದ ನಾನಾ ಕಡೆಗಳಿಂದಲೂ ವೀರಾದಿ ವೀರರೂ ಸ್ವಾರ್ಥತ್ಯಾಗ ಮೂರ್ತಿಗಳೂ ಆದ ದೇಶ ಭಕ್ತರುಗಳು ಸೇರಿದ್ದರು. ನಮ್ಮ ದೇಶದ ಪಾರತಂತ್ರ್ಯವನ್ನು ನಿವಾರಿಸಲು ಹಲವು ಬಗೆಯ ಮಾರ್ಗಗಳನ್ನು ಪರಿಶೀಲಿಸಿದರು ಅದಕ್ಕೆ ಅನುಗುಣವಾದ ಕಾರ್ಯಕ್ರಮವನ್ನು ಗೊತ್ತುಮಾಡಿದರು

ಈ ಮಹಾಸಭೆಯು ಭರತಖಂಡದಲ್ಲಿ ಪ್ರಮುಖ್ಯ ಸಂಸ್ಥೆ ಇದು ರಾಷ್ಟ್ರದ ಜನತೆಯ ಹೆಸರಿನಲ್ಲಿ ಅಧಿಕಾರವಾಣಿಯಿಂದ ಪ್ರವರ್ತಿಸಬಲ್ಲುದು ಇದರ ಪ್ರಾಧಾನ್ಯವು ಮತ್ತಾವ ಸಭೆಗೂ ಇಲ್ಲ. ಈ ಸಭೆಯು ಜಾತಿ, ಮತ, ಕೋಮುಗಳ ಭೇದವಿಲ್ಲದೆ ಭಾರತೀಯರ ಆರ್ಥಿಕ ಮತ್ತು ರಾಜಕೀಯ ಗುಲಾಮಗಿರಿಯನ್ನು ಹೋಗಲಾಡಿಸಿ ಸಂಪೂರ್ಣ ಸ್ವಾತಂತ್ರ್ಯವನ್ನು ಸಾಧಿಸಲು ಹೋರಾಡುತ್ತಿದೆ ಕಳೆದ ಐವತ್ತು ವರು ಷಗಳಿಂದ ಇದು ಸ್ವಾತಂತ್ರ್ಯಸಾಧನೆಯ ಪ್ರಯತ್ನದಲ್ಲಿ ಕ್ರಮ ಕ್ರಮವಾಗಿ ಮುಂದುವರಿಯುತ್ತಬಂದು ಈಗ ಬ್ರಿಟಿಷ್ ಸಾಮ್ರಾಜ್ಯದೊಡನೆ ಸಮಾನತೆಯಿಂದ ಕೌಲು ಕರಾರುಗಳನ್ನು ಮಾಡಿಕೊಳ್ಳುವಂತಾಗಿದೆ ಆದ್ದರಿಂದ ಈ ಸಭೆಯ ಕಾರ್ಯಕ್ರಮಗಳೆಲ್ಲವೂ ಸಮಸ್ತ ಭಾರತೀಯರಿಗೂ ಮಾನ್ಯವಾಗಿವೆ

ಪಂಡಿತ ಜವಹರಲಾಲರು ಮಹಾಸಭೆಯ ಅಧ್ಯಕ್ಷಸ್ಥಾನದಿಂದ ಮಾಡಿದ ಭಾಷಣವು ನವೀನ ಸ್ಫೂರ್ತಿಯಿಂದ ತುಂಬಿದೆ ಸ್ವಾತಂತ್ರ್ಯ ವಾದವನ್ನು ಅವರು ನೂತನ ರೀತಿಯಲ್ಲಿ ತೋರ್ಪಡಿಸಿರುವರು ಸಂಪೂರ್ಣ ಸ್ವಾತಂತ್ರ್ಯವೆಂದರೆ ಬ್ರಿಟಿಷ್ ಸಾಮ್ರಾಜ್ಯದ ಸಂಪರ್ಕವನ್ನು ತೊರದುಬಿಡುವುದೆಂದೂ ಯಾವ ಸಾಮ್ರಾಜ್ಯದಲ್ಲಿಯೂ ನಮ್ಮ ದೇಶವು ಒಂದು ಅಂಗವಾಗಿರಕೂಡದೆಂದೂ, ಅವರು ಹೇಳಿರುವರು

ವಿದ್ಯುಚ್ಛಕ್ತಿ ಇಲಾಖೆ.

ಈ ಇಲಾಖೆಯ ವರದಿಯು ಪ್ರಕಟಿಸಲ್ಪಟ್ಟಿದೆ ವಿದ್ಯುಚ್ಛಕ್ತಿಯು ದಿನೇ ದಿನೇ ಹೆಚ್ಚುಹೆಚ್ಚಾಗಿ ಉಪಯೋಗಿಸಲ್ಪಡುತ್ತಿದೆಯೆಂದೂ, ಇಲಾಖೆಯವರು ಅದನ್ನು ಮೊದಲಿಗಿಂತಲೂ ಸುಲಭ ಖರ್ಚಿನಲ್ಲಿ ಉತ್ಪತ್ತಿಮಾಡುತ್ತಿರುವರೆಂದೂ ಗೊತ್ತಾಗುತ್ತದೆ ಒಂದು ಯೂನಿಟ್ಟಿನಷ್ಟು ವಿದ್ಯುಚ್ಛಕ್ತಿಯನ್ನು ಉತ್ಪತ್ತಿಮಾಡಲು ಒಂದು ಕಾಸಿಗಿಂತ ಸ್ವಲ್ಪ ಹೆಚ್ಚು ವೆಚ್ಚವಾಗುತ್ತಿದೆ ಕಳೆದ ವರ್ಷ ಇಲಾಖೆಯ ನಿವ್ವಳ ನಫೆ ರೂ. 39,22,107. ಮೂಲಧನದ ಮೇಲೆ ಶೇ॥ ಐದರಂತೆ ಲಾಭ ಬಂದಿದೆ ಸರ್ಕಾರದವರ. ಇಲಾಖೆಯ ಆಡಳಿತವು ಎಂದಿನಂತೆ ತೃಪ್ತಿಕರವಾಗಿತ್ತು ಎಂದು ಅಭಿಪ್ರಾಯಪಟ್ಟಿರುತ್ತಾರೆ

ಇವರಲ್ಲಿ ಒಂದು ವಿಷಯವನ್ನು ಮುಖ್ಯವಾಗಿ ಗಮನಿಸಬೇಕಾಗಿದೆ ಒಂದು ಯೂನಿಟ್ಟಿನಷ್ಟು ವಿದ್ಯುಚ್ಛಕ್ತಿಯನ್ನು ತಯಾರಿಸಲು ಒಂದೂಕಾಲು ಕಾಸಿನಷ್ಟು ಖರ್ಚಾಗುತ್ತದೆ ಆದರೂ ದೀಪಗಳನ್ನು ಇಟ್ಟುಕೊಳ್ಳುವವರಿಗೆ ಯೂನಿಟ್ಟಿಗೆ ನಾಲ್ಕಾಣೆ ತೆರಿಗೆ ಹಾಕಲ್ಪಡುತ್ತಿದೆ ಇದು ಅರ್ಥಾರ್ಥಕ ಸಂಬಂಧವಿಲ್ಲ ಒಂದೂಕಾಲು ಕಾಸಿನ ಪದಾರ್ಥದ ಬಾಬಿಗೆ ನಾಲ್ಕಾಣೆ ವಸೂಲು ಮಾಡುವುದು ಸೂಕ್ತವಲ್ಲ ಕೈಗಾರಿಕೆ, ವ್ಯಾಪಾರ ವ್ಯವಸಾಯದ ಕಾರ್ಯಗಳಿಗೆ ರಿಯಾಯಿತಿ ದರದಮೇಲೆ ಕೊಡುತ್ತಿರುವರು ಆದರೂ ಈಗ ಇರತಕ್ಕ ದರಗಳು ಬಹಳ ದುಬಾರಿ ಕಾವೇರಿ ಮಾತೆಯ ವರ ಪ್ರಸಾದದಿಂದ ಮೈಸೂರು ಜನರಿಗೆ ಪ್ರಾಪ್ತವಾಗಿರುವ ಈ ಸೌಲಭ್ಯವು ಮತ್ತಷ್ಟು ಸುಲಭವಾಗಿ ಮಹಾ ಜನರಿಗೆ ದೊರೆಯುವಂತಾಗಬೇಕು ಮೊದಲಿದ್ದಂತೆ ಎರಡೂವರಾಣೆ ಯೂನಿಟ್ಟಿನ ವರಕ್ಕೆ ಬರಬೇಕು.

ಸತ್ಯಾಗ್ರಹ ಸಂಗ್ರಾಮದಲ್ಲಿ ಹಲವು ವಿಧವಾದ ಕಷ್ಟಪರಂಪರೆಗಳಿಂದ ಬಳಲಿ ಜಿಂಡಾಗಿದ್ದ ಭಾರತೀಯರಿಗೆ ಜವಾಹರಲಾಲರ ಉತ್ತೇಜಕ ಭಾಷಣವು ನವಚೈತನ್ಯವನ್ನುಂಟುಮಾಡುವುದು ದೇಶಸೇವೆಗಾಗಿ ಎಷ್ಟು ತ್ಯಾಗವನ್ನು ಮಾಡಿದರೂ ಸಾಲದೆಂಬ ಸ್ಫೂರ್ತಿಯನ್ನುಂಟುಮಾಡುವುದು ಸ್ವಾತಂತ್ರ್ಯಕ್ಕೂ ಗುಲಾಮಗಿರಿಗೂ ರಾಜಿಯಿಲ್ಲವೆಂಬುದನ್ನು ಸ್ಪಷ್ಟಪಡಿಸುವುದು

ಪಂಡಿತರು ದೇಶೀಯ ಸಂಸ್ಥಾನಗಳ ಪ್ರಜೆಗಳ ವಿಷಯದಲ್ಲಿ ಅಭಿಮಾನಾಸ್ಪದವಾದ ಮಾತುಗಳನ್ನು ಹೇಳಿರುವರು ಸಂಸ್ಥಾನದ ಪ್ರಜೆಗಳ ಹಕ್ಕುಭಾಧ್ಯತೆಯನ್ನು ಕಾಪಾಡುವುದರಲ್ಲಿ ರಾಷ್ಟ್ರೀಯ ಸಭೆಯು ಸಂಪೂರ್ಣವಾದ ಆಸಕ್ತಿಯನ್ನು ಹೊಂದಿರುವುದೆಂದು ತಿಳಿಸಿರುವರು ಇವರ ಅಧ್ಯಕ್ಷತೆಯಲ್ಲಿ ನಮ್ಮ ದೇಶದ ಹಿರಾಪ ಲಂಬನವು ಹೋಗಿ ಸ್ವಾತಂತ್ರ್ಯ ಸಾಮ್ರಾಜ್ಯವು ಸ್ಥಾಪಿಸಲ್ಪಡಲೆಂದು ಹಾರೈಸೋಣ

ಲಾಯರುಗಳ ಸಮ್ಮೇಳನ.

ಕಳೆದ 15 ನೇ ತಾ॥ ದಿನ ತುಮಕೂರಿನಲ್ಲಿ ಮೈಸೂರು 'ಸಂಸ್ಥಾನದ ಲಾಯರುಗಳ ಹದಿನೇಳನೇ ಅಧಿವೇಶನವು ಜರುಗಿತು ಚಿತ್ರದುರ್ಗದ ಸುಪ್ರಸಿದ್ಧ ವಕೀಲರಾದ ಶ್ರೀ ಬಿ ವೆಂಕಟರಾಮಯ್ಯನವರು ಅಧ್ಯಕ್ಷತೆಯನ್ನು ವಹಿಸಿದ್ದರು ಅನೇಕ ಜನ ಲಾಯರುಗಳು ಸೇರಿದ್ದರು. ತುಮಕೂರಿನ ನಾಮಾಂಕಿತರಾದ ಶ್ರೀ॥ ಕೆ ರಂಗಯ್ಯಂಗಾರ್ರವರು ಸ್ವಾಗತಭಾಷಣವನ್ನು ಮಾಡಿ ವಕೀಲವೃತ್ತಿಯ ಕಷ್ಟ ಸುಖಗಳನ್ನು ವಿವರಿಸಿದರು ಬಾರ್ ಕೌನ್ಸಿಲ್ ಆಕ್ಟ್ ಎಂಬ ಶಾಸನವನ್ನು ಜಾರಿಗೆ ತರುವುದು, ಲಾಯರುಗಳ ವ್ಯವಹಾರಗಳನ್ನೆಲ್ಲಾ ವಿತ್ತದ್ದಪಡಿಸಲು ಮೈಸೂರು ಬಾರ್‌ನವರಿಗೆ ಅಧಿಕಾರ ಕೊಡುವುದು ಒಂದೆ ಸಂಯುಕ್ತ ಲಾಯರ್ ಸಂಸ್ಥೆಯನ್ನು ಸ್ಥಾಪಿಸುವುದು, ಇವೇ ಮುಂತಾದ ಸಲಹೆಗಳನ್ನು ಅವರು ಕೊಟ್ಟರು ಸಮ್ಮೇಳನದಲ್ಲಿ ಅಂಗೀಕೃತವಾದ ಠರಾವುಗಳನ್ನು ಲಾಯರುಗಳೇ ಮನ್ನಣೆ ಮಾಡದಿರುವುದಕ್ಕಾಗಿ ಬಹಳ ಸಂತಾಪಪಟ್ಟರು. ಲಾಯರುಗಳುಗಳು ಪ್ರತಿಯೊಂದು ಊರಿನಲ್ಲಿಯೂ ಸಾಮಾಜನರ ಸಹಾಯದಿಂದ ಅಲ್ಲಿನ ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ವಿಷಯಗಳಲ್ಲಿ ಸಹಕಾರಿಗಳಾಗಬೇಕೆಂದೂ ಸ್ವದೇಶಿ ಮತ್ತು ಖಾದಿಯನ್ನೇ ಉಪಯೋಗಿಸಬೇಕೆಂದೂ ಮಾಡಿದ ಠರಾವುಗಳು ಮೂಲೆಗೆ ಬಿದ್ದಿವೆ ಲಾಯರುಗಳು ಇತರ ಜನರಿಗೆ ಮಾದರಿಯಾಗಿ ವರ್ತಿಸಬೇಕು ಅವರು ತಮ್ಮ ಹೊಟ್ಟೆಯನ್ನು ಹೊಂದುಕೊಂಡರೆ ಸಾಲದು ವಿಶ್ವಕುಟುಂಬದಲ್ಲಿ ತಮ್ಮ ಜವಾಬ್ದಾರಿಯನ್ನು ಉಚಿತರೀತಿಯಲ್ಲಿ ನಿರ್ವಹಿಸಬೇಕು ಎಂಬುದಾಗಿ ಅವರು ಹೇಳಿದರು

ಅಧ್ಯಕ್ಷರು ತಮ್ಮ ಭಾಷಣದಲ್ಲಿ ನ್ಯಾಯವೃತ್ತಿಯ ಪರಿಷ್ಕರಣವನ್ನು ಕುರಿತು ಮಾತನಾಡಿದರು ನ್ಯಾಯಸ್ಥಾನಗಳಿಗೆ ಲಾಯರುಗಳಲ್ಲೇ ಉತ್ತಮರಾದವರನ್ನು ಚುನಾಯಿಸಬೇಕೆಂದು ಅಭಿಪ್ರಾಯಪಟ್ಟರು ಮುನ್ಸೀಫರ ಸ್ಥಾನಗಳನ್ನು ಕೈಪೋಟಿಯ ಪರೀಕ್ಷೆಗಳ ಮೂಲಕ ಭರ್ತಿಮಾಡಬೇಕೆಂದರು ರಾಜ್ಯಭಾರದ ಎಗ್ಸಿಕ್ಯೂಟಿವ್ ಮತ್ತು ಜ್ಯುಡಿಷಲ್ ಶಾಖೆಗಳನ್ನು ಬೇರೆ ಬೇರೆ ಮಾಡಬೇಕೆಂದು ತಿಳಿಸಿದರು ನಮ್ಮ ದೇಶದಲ್ಲಿ ಪ್ರಜಾಪ್ರಭುತ್ವ ತತ್ವದ ಮೇಲೆ ಆಡಳಿತವನ್ನು ನಿರ್ವಹಿಸಬೇಕೆಂದೂ ಸೂಚಿಸಿದರು ದೇಶಸೇವೆಯಲ್ಲಿ ಲಾಯರುಗಳು ಮುಖ್ಯಭಾಗವನ್ನು ವಹಿಸಬೇಕೆಂದು ಪ್ರಾರ್ಥಿಸಿದರು ಅನೇಕ ಮುಖ್ಯವಾದ ನಿರ್ಣಯಗಳಾದುವು

ಶ್ರೀ॥ ಸುಭಾಸ್ ಬೋಸರು.

ಶ್ರೀ॥ ಸುಭಾಸ್ ಚಂದ್ರ ಬೋಸರನ್ನು ಎರವಾಡಾ ಜೈಲಿಗೆ ಕಳಿಸಿದ್ದುಕೊಂಡರು ಇಲ್ಲಿ ಮಹಾತ್ಮಾಜಿಯವರೂ ವಲ್ಲಭ ಭಾಯಿ ಪಟೇಲರೂ, ಶ್ರೀಮತಿ ಸರೋಜಿನಿ ನಾಯುಡ್‌ರೇ ಮುಂತಾದ ಪ್ರಮುಖ ದೇಶಭಕ್ತರುಗಳೂ ಸೆರೆ ಇಡಲ್ಪಟ್ಟಿದ್ದರು

ನಗರದ ಕುಂದು ಕೊರತೆಗಳು.

(ಲೇಖಕ—ನಾರದ)

ಡ್ರೈನೇಜು

ರಾಜಧಾನಿಯ ಡ್ರೈನೇಜು ಸಿಬ್ಬಂದಿ ಹಲವು ಇಪ್ಪತ್ತೈದು ವರ್ಷಗಳಿಂದಲೂ ಒಂದೇ ರೀತಿಯಲ್ಲಿದೆಯೆಂದು ಗೊತ್ತಾಗುತ್ತದೆ ಈಗ ಡ್ರೈನೇಜು ಕೈವುಗಳು ಅಧಿಕವಾಗಿ ಬೆಳೆದಿವೆ ಅಲ್ಲದೆ ಈ ಸಿಬ್ಬಂದಿ ಸಹ ಆಗಾಗ್ಗೆ ಕೆಲವರನ್ನು ಸ... ಮೇಟ್ ಕಾರಂ ಕೆಲಸಕ್ಕೆ ಕರೆದುಕೊಂಡು ... ದರಂತೆ ಎಂದಮೇಲೆ ಡ್ರೈನೇಜು ಕೆಲಸ ... ತೃಪ್ತಿಕರವಾಗಿ ನಡೆಯುವುದಿಲ್ಲ ಎಂಬುದನ್ನು ತಿಳಿಯಬಹುದು ... ರಾತ್ರಿಮಾಡಿದರೂ ಡ್ರೈನೇಜುಗಳನ್ನು ಚೊಕ್ಕಟ ಮಾಡಲು ಆಗುತ್ತಿಲ್ಲ. ... ಸ್ಥಳದ ವಾಸನಾಲ ಬರುತ್ತಿದೆ ಬಚ್ಚಲು ... ನೀರು ನಿಂತುಹೋಗಿ ರಸ್ತೆಗಳಲ್ಲೆಲ್ಲಾ ... ಹರಿಯುತ್ತದೆ ಮೈವುಗಳಲ್ಲಿ ಪಾಚಿ ಕಟ್ಟಿ ... ಒಂದು ಸರಿಯಾಗಿ ನೀರೇ ಹೋಗುವ ... ಈಗ ... ಬಲಾತ್ಕಾರವಾಗಿ ಫ್ಲಷಿಂಗ್ ಪದ್ಧತಿಯನ್ನು ಇಡಿಸುತ್ತಿರುವರು ಹೀಗಿರುವಲ್ಲಿ ಡ್ರೈನೇಜನ್ನು ... ಸಿನದಿಂದ ಬಿಟ್ಟಿರುವುದು ... ಆರೋಗ್ಯವನ್ನು ರುದ್ಧಿ ಮಾಡಿಸಲು ತ... ಏರ್ಪಾಡು ಮಾಡಬೇಕು

ಹೋಟಲುಗಳ ಲೈಸೆನ್ಸು.

ಹೋಟಲುಗಳ ಲೈಸೆನ್ಸಿನ ವಿಚಾರದ... ಬಹಳ ಪುಕಾರುಗಳು ಕೇಳಿಬರುತ್ತಿವೆ ... ನ್ಸಿಗಾಗಿ ಮಾಲೀಕರಿಂದ ಹಣವನ್ನು ... ನಗರಸಭೆಯವರು ... ಹಣವಿಲ್ಲದ ಅ... ಮಾಂದರ ಗಮನಿಸುವುದಿಲ್ಲ ಲೈಸನ್ಸಿ... ಹೋಟಲುಗಳನ್ನು ನಡೆಸಿದರೆ ಮ್ಯಾಜಿಸ್ಟ್ರೇಟರ ಮುಂದೆ ಪ್ರಾಸಿಕ್ಯೂಷನ್ ನಡೆಯು... ದ ... ಜನರ ಮೇಲೆ ಮೊ... ದ್ದಮೆ ನಡೆದು, ತಲಾ 15-20 ರೂಪಾಯಿಗಳ ವರಗ ದಂಡವು ವಿಧಿಸಲ್ಪಟ್ಟಿ... ಹೋಟಲುಗಳು ಯಾವುದಾದರೂ ಜಾ... ಲ್ಲಿ ಸರಿಯಾಗಿಲ್ಲದಿದ್ದರೆ ಸಲಹೆ ಕೊಟ್ಟು ... ಮ್ಯುನಿಸಿಪಲ್ ನೌಕರರು ಅದನ್ನು ಸರಿ... ಪಡಿಸುತ್ತಿಲ್ಲ ಇದರಿಂದ ಅನೇಕರು ಲೈಸ... ... ದುಕೊಳ್ಳಲು ಅವಕಾಶವಾಗ... ... ಉತ್ಪತ್ತಿಯೂ ಇಲ್ಲದೆ ಇ... ... ಕೂಡಲೇ ಕ್ರಮಪಡಿಸಬೇಕು

ಪಟ್ಟಣದ ನೈರ್ಮಲ್ಯ

ಇದುವರೆಗೆ ಈ ನಗರದ ಕಸ್ಸ ಪರಿ... ನಿರ್ಮೂಲೀಕರಣವು ಪ್ರತಿದಿನ... ನಡೆಯುತ್ತಿಲ್ಲ ಈಗ ವಾರ ಕ್ಕೊ... ಮಾಡತಿ... ಒಂದು ಮೂರು ಭಾಗದ... ಮಾಡನಂತೆ ಏರ್ಪಾಡಾಗಿರುವುದಾಗಿ ತಿ... ಮುಖ್ಯ ... ಇದರಿಂದ ಒಂದು ನಾ... ವರೆಗೆ ಕಸ್ಸವು ಸೇರುತ್ತ ಹೋಗುತ್ತ... ಆರೋಗ್ಯಕ್ಕೆ ಸಹಕಾರಿಯಾಗಲ... ದ ... ಮೊದಲು ಇದ್ದಹಾಗೆ ಪ್ರತಿದಿನ... ... ಮಾಡುವಂತೆ ಏರ್ಪಡಿಸುವು... ಸೂಕ್ತವಾಗಿದ

ಪೋಲೀಸ್ ಇನ್ಸ್‌ಪೆಕ್ಟರ ಮೇಲೆ ದೂರು.

(ಇಣಕಸ್ಟನ ನೋಟ)

ತಾ॥ 13-4-36

ಪೈ ಸೂಪು ಡಿ॥ ಪೋಲೀಸ್ ಸೂಪರಿಂಟೆಂಡೆಂಟರ ಮನೆಯ ಮುಂದೆ ಈ ದಿನ ಬೆಳಗ್ಗೆ ಗುಂಪುಗುಂಪಾಗಿ ಹಲವು ಟಾಂಗಾ ಗಾಡಿಗಳು ಬಂದು ನಿಂತವು. ಅವುಗಳಿಂದ ಸಂತೇಪೇಟೆ ವರ್ತಕರೂ, ಸೇಟುಗಳೂ ಸಂಧೋಪಶಾಂತವಾಗಿ ಇಳಿದರು. ನಾವು ಕುತೂಹಲದಿಂದ ನಿಂತು ವಿಚಾರಿಸಲು ಅವರುಗಳೆಲ್ಲರೂ ಒಬ್ಬ ಪೋಲೀಸ್ ಇನ್ಸ್‌ಪೆಕ್ಟರ ಮೇಲೆ ದೂರು ಹೇಳಲು ಬಂದಿದ್ದಾರೆಂದು ತಿಳಿಯಿತು. ಒಬ್ಬ ಇನ್ಸ್‌ಪೆಕ್ಟರ ಮೇಲೆ ದೂರು ಹೇಳಲು ಇಷ್ಟೊಂದು ಜನರೇಕೆ ಎಂದು ಯೋಚಿಸಿ ಮತ್ತಷ್ಟು ಕುತೂಹಲದಿಂದ ಅಲ್ಲಿಯೇ ನಿಂತೆವು. ಸುಮಾರು 1 ಗಂಟೆಯ ಕಾಲಾನಂತರ ಎಲ್ಲರೂ ಹೊರಗೆ ಬಂದರು. ವಿಚಾರಿಸಿದ್ದರಲ್ಲಿ ಈ ಕೆಳಗೆ ಕಂಡ ವಿವರಗಳು ತಿಳಿದುಬಂದವು —

ಸಂತೇಪೇಟೆಯಲ್ಲಿ ಸಂಚಾರವನ್ನು ಕ್ರಮಪಡಿಸಲು ಈಚೆಗೆ ಕೆಲವು ನಿಯಮಗಳನ್ನು ಮಾಡಿರುವರು. ಇವನ್ನು ಜಾರಿಗೆ ತರಲು ಕೆಲವು ಪೋಲೀಸ್ ಕಾನ್‌ಸ್ಟೇಬಲುಗಳನ್ನೂ ಹಾಕಿರುವರು. ಇವರುಗಳು ಸಾಮಾನ್ಯವಾಗಿ ಜನರಲ್ಲೂ ವರ್ತಕರಲ್ಲೂ ಸಭ್ಯ ರೀತಿಯಿಂದ ವರ್ತಿಸುತ್ತಿರುವರು. ಆದರೆ ಈ ದಿನ ಬೆಳಗ್ಗೆ ಒಬ್ಬ ಸೇಟರ ಅಂಗಡಿ ಮುಂದೆ ಗಾಡಿಗಳು ಗುಂಪುಗುಂಪಾಗಿ ನಿಂತಿದ್ದವು. ಅವನ್ನು ಒಂದು ಪಾರ್ಶ್ವಕ್ಕೆ ಕಳುಹಿಸುವ ಸಂದರ್ಭದಲ್ಲಿ ಪೋಲೀಸ್ ಇನ್ಸ್‌ಪೆಕ್ಟರ್ ಮಿ॥ ಸುಬ್ಬಣ್ಣನವರಿಗೂ ಅಂಗಡಿಯ ಸೇಟರಿಗೂ ಮಾತುಕತೆಗಳು ಬೆಳೆದು ಇನ್ಸ್‌ಪೆಕ್ಟರು ಅಂಗಡಿಯವರನ್ನು ಹೀನಾಯಮಾನವಾಗಿ ಬಯ್ದರೆಂದು ತಿಳಿದು ಬಂದಿದೆ. ಅಲ್ಲದೆ ಗಾಡಿಯವನನ್ನೂ ತುಚ್ಛವಾಗಿ ಒಬ್ಬರಿಂದೂ ಹೇಳಲಾಗದ. ಇದನ್ನು ಕೇಳಿ ಸುತ್ತಮುತ್ತಲಿನ ವರ್ತಕರುಗಳೆಲ್ಲಾ ಉದ್ರೇಕವಾಗಿ ಎಲ್ಲರೂ ಗುಂಪು ಕೂಡಿದರು. ಮತ್ತಷ್ಟು ಮಾತುಕತೆಯು ಬೆಳೆಯಿತು. ಪುನಃ ಎಲ್ಲರನ್ನೂ ಸೇರಿಸಿ ಹೀನಾಯವಾಗಿ ನಿಂದಿಸಿದರೆಂದು ಹೇಳಲ್ಪಟ್ಟಿದೆ.

ಇದರ ಮೇಲೆ ವರ್ತಕರೆಲ್ಲರೂ ಅಸಮಾಧಾನಪಟ್ಟು ಒಟ್ಟಾಗಿ ಸೇರಿ ಆ ಕೂಡಲೆ ಡಿಸ್ಟ್ರಿಕ್ಟ್ ಸೂಪರಿಂಟೆಂಡೆಂಟರಲ್ಲಿಗೆ ಹೋದರು. ಸೂಪರಿಂಟೆಂಡೆಂಟರು ಸಾವಧಾನದಿಂದ ಎಲ್ಲವನ್ನೂ ವಿಚಾರಿಸಿದರು. ಈ ವಿಷಯವನ್ನು ತಾವೇ ವಿಶದವಾಗಿ ವಿಚಾರಿಸಿ ತಕ್ಕ ಬಂದೋಬಸ್ತು ಮಾಡುವುದಾಗಿ ಹೇಳಿ ಎಲ್ಲರನ್ನೂ ಸಮಾಧಾನಪಡಿಸಿದರು. ಅನಂತರ ವರ್ತಕರೆಲ್ಲರೂ ಹಿಂತೆರಳಿದರು. ಪುನಃ ಸಾಯಂಕಾಲ ವರ್ತಕರೆಲ್ಲರೂ ಸಭೆ ಸೇರಿ ಮೇಲ್ಕಂಡ ಅಂಶವನ್ನೂ ಇತರ ತಮ್ಮ ಹಕ್ಕುಬಾಧ್ಯತೆಗಳ ವಿಷಯವನ್ನೂ ಆಲೋಚಿಸಿ ಇನ್ನು ಮೇಲೆ ಇಂತಹ ಸನ್ನಿವೇಶಗಳು ಬಾರದಂತೆ ನೋಡಿಕೊಳ್ಳಬೇಕೆಂದು ತೀರ್ಮಾನಿಸಿದರು.

ಇದರಲ್ಲಿ ಒಂದು ಅಂಶವನ್ನು ಗಮನಿಸತಕ್ಕದ್ದಾಗಿದೆ. ಸಂತೇಪೇಟೆಯಲ್ಲಿರುವ ವರ್ತಕರೆಲ್ಲರೂ ಬಹಳ ಗೌರವಸ್ಥರು. ದೊಡ್ಡ ಮನುಷ್ಯರು. ಒಬ್ಬೊಬ್ಬರೂ ಲಕ್ಷಾಂತರ ರೂಪಾಯಿನ ಆದಾಯವನ್ನು ನಡೆಸುವರು. ಅನೇಕ ಜನರಿಗೆ ಆಶ್ರಯದಾತರಾಗಿರುವರು. ಇವರುಗಳ ಅಂತಸ್ತೂ ಯೋಗ್ಯತೆಯೂ ಯಾವ ಸಾಧಾರಣ ಅಧಿಕಾರಿಯ ಅಂತಸ್ತಿಗಿಂತಲೂ ಕಡಿಮೆಯಾಗಿರುವುದಿಲ್ಲ. ಅವರನ್ನು ತಿರಸ್ಕಾರ ದೃಷ್ಟಿಯಿಂದ ಕಾಣುವುದು ಸರ್ವಥಾ ಯುಕ್ತವಲ್ಲ.

ಜೊತೆ ಇಲ್ಲದೆ ಹೋಗ ಇಷ್ಟೊಂದು ಜನ ದೊಡ್ಡ ದೊಡ್ಡ ವರ್ತಕರು ತಮ್ಮ ಕೆಲಸಕಾರ್ಯಗಳನ್ನೆಲ್ಲಾ ಬಿಟ್ಟು ವ್ಯಾಪಾರದ ವೇಳೆಯಲ್ಲಿ ಪೋಲೀಸ್ ಸೂಪರಿಂಟೆಂಡೆಂಟರ ಮನೆಗೆ ಅಲೆಯಬೇಕಾಗಿ ಬಂದರೆ ಅವರುಗಳಿಗೆ ಮನೋವ್ಯಥೆಯು ಉಂಟಾಗಿರಬೇಕು.

ಇನ್ನು ಮೇಲಾದರೂ ಪೋಲೀಸಿನವರು ತಾವು ಮಹಾಜನರ ಸೇವಕರೆಂದೂ, ಗೌರವವನ್ನು ಕೊಟ್ಟು ಗೌರವವನ್ನು ಪಡೆಯಬೇಕೆಂಬುದನ್ನು ತಿಳಿದು ವರ್ತಿಸಿದರೆ ಸಕಲರಿಗೂ ಕ್ಷೇಮವೆಂದೂ ಅರಿತರೆ ಒಳ್ಳೆಯದು. ಮ್ಯುನಿಸಿಪಲ್ ಅಧಿಕಾರಿಗಳೂ ಸಹ ವರ್ತಕರಿಗೆ ಬೇಕಾದ ಸೌಕರ್ಯಗಳನ್ನು ಒದಗಿಸಿಕೊಡುವುದು ಅಗತ್ಯವಾಗಿದೆ.

ಸರೋಜಿನಿ ದೇವಿಯವರು.

ವಸ್ತುಪ್ರದರ್ಶನ

ಬೆಂಗಳೂರು ದೇಶೀಯ ವಿದ್ಯಾಶಾಲೆಯ ಪಕ್ಕದ ಮೈದಾನದಲ್ಲಿ ಇಂಡಿಯನ್ ಎಂಪೈರ್ ವಸ್ತುಪ್ರದರ್ಶನವು ನಡೆಯುತ್ತಿದೆ. ಕಳೆದ ಸೋಮವಾರ ಡಾ॥ ಸರ್ ಕೆ. ಪಿ. ಪುಟ್ಟಣ್ಣ ಶೆಟ್ಟರು ಇದರ ಪ್ರಾರಂಭೋತ್ಸವವನ್ನು ನೆರವೇರಿಸಿದರು. ಮಿ॥ ಪಿ. ಜಿ. ಡಿಸೋಜಾ ರವರು ಸ್ವಾಗತ ಭಾಷಣವನ್ನು ಮಾಡಿ ಸರ್ ಶೆಟ್ಟರಿಗೆ ಒಂದು ಬಿನ್ನವತ್ತಳೆಯನ್ನು ಅರ್ಪಿಸಿದರು. ದೇಶದ ಆರ್ಥಿಕ ಸಂಪತ್ತನ್ನು ಹೆಚ್ಚಿಸುವುದರಲ್ಲಿ ಸಾರ್ವಜನರು ಹೆಚ್ಚು ಹೆಚ್ಚಾದ ಭಾಗವನ್ನು ವಹಿಸಬೇಕೆಂದು ಶೆಟ್ಟರು ಹೇಳಿದರು. ಪ್ರದರ್ಶನವು ಹತ್ತು ದಿನಗಳ ವರೆಗೆ ನಡೆಯುವುದು.

ಪಂ॥ ಜವಾಹಿರಲಾಲರ ಭಾಷಣ

49 ನೆಯ ರಾಷ್ಟ್ರೀಯ ಮಹಾಸಭೆಯ ಅಧ್ಯಕ್ಷರಾದ ಪಂಡಿತ ಜವಾಹಿರಲಾಲರು ಮಾಡಿದ ಭಾಷಣದ ಸಾರಾಂಶ —

ಅನೇಕ ಮಂದಿ ಗೆಳೆಯರು ಅಕಾಲದಲ್ಲಿಯೇ ಇಹಲೋಕವನ್ನು ತ್ಯಜಿಸಿ, ಶಾಂತಿಯನ್ನು ಪಡೆಯಲು ತೆರಳಿದರು. ಅವರು ನಮ್ಮನ್ನು ಬಿಟ್ಟು ತೆರಳಿದುದರಿಂದ ನಮ್ಮ ಹೃದಯದಲ್ಲಿ ಒಂದು ಸ್ಥಳವನ್ನು ಖಾಲಿ ಮಾಡಿದಂತಾಗಿ, ದುಃಖವು ನಮ್ಮನ್ನು ಆವರಿಸಿದೆ. ನಮ್ಮ ಧ್ಯೇಯವಾದ 'ಸಂಪೂರ್ಣ ಸ್ವರಾಜ್ಯ'ವನ್ನು ಪಡೆಯುವವರೆಗೂ ನಮಗೆ ವಿಶ್ರಾಂತಿಯಿಲ್ಲ. ಹಾಗೇನಾದರೂ ನಾವು ಕರ್ತವ್ಯವಿಮುಖರಾದರೆ ಕಾರಾಗೃಹಗಳಲ್ಲಿ ವಿಚಾರಣೆಯಿಲ್ಲದೆ, ತೊಂದರೆಯನ್ನು ಅನುಭವಿಸುತ್ತ, ಕೊಳೆಯುತ್ತಿರುವ ಬಂಧುಭಗಿನಿಯರಿಗೆ ದ್ರೋಹಮಾಡಿದಂತಾಗುವುದು. ರಾಷ್ಟ್ರಪತಿಯನ್ನಾಗಿ ನನ್ನನ್ನು ಚುನಾಯಿಸಿದುದಕ್ಕಾಗಿ ಅನಂತ ವಂದನೆಗಳನ್ನು ನಿಮಗೆ ಅರ್ಪಿಸುವೆನು. ನಮಗೆ ಅನೇಕ ಸಲ ಗೆಲುವಿನ ಹಿಂದೆ ಸೋಲೂ ಆಶಾಭಂಗವೂ ಉಂಟಾಗಿದೆ. ಆದರೆ ನಮ್ಮ ಧ್ಯೇಯವು ಉದಾತ್ತವಾಗಿದ್ದು, ಹೋರಾಟವು ದೊಡ್ಡದಾಗಿರುವಾಗ ಸೋಲು ಎಂಬ ಮಾತು ಅರ್ಥಶೂನ್ಯವಾದುದು. ಸೋಲೇ ಅನೇಕ ಭಾರೀ ವಿಜಯಗಳ ಸೀಡಿಕೆ ಎಂಬುದನ್ನು ನಾವು ಮರೆಯಕೂಡದು.

ಯೂರೋಪಿನ ಘೋರ ಯುದ್ಧಾನಂತರ, ಅನೇಕ ದೇಶಗಳಲ್ಲಿ ಸಾಮಾಜಿಕ ಸ್ವಾತಂತ್ರ್ಯಕ್ಕಾಗಿ ಬಿರುಸಾದ ಹೋರಾಟವಾಗಿ, ಎಲ್ಲೆಲ್ಲೂ ಪ್ರಬಲವಾದ ಅಶಾಂತಿಯು ತಲೆದೋರಿದೆ. ಸೋವಿಯಟ್ ರಷ್ಯಾವು ಮಾತ್ರ ಈ ಉಪಟಳಕ್ಕೆ ಆಹುತಿಯಾಗಲಿಲ್ಲ. ಎಲ್ಲ ವಿಧಗಳಲ್ಲೂ ಪ್ರಗತಿಯನ್ನೈದುತ್ತಾ ಜಗದ ರಾಷ್ಟ್ರಗಳಿಗೆ ಮಾದರಿಯಾಗುತ್ತಿದೆ. ನಾನು, ಸಾಮ್ರಾಜ್ಯವಾದಿತ್ವ ಹಾಗೂ ಫ್ಯಾಸಿಜಂ ಪದ್ಧತಿಗಳಿಗೆ ಪ್ರಬಲವಾದ ವಿರೋಧಿ. ಈ ತತ್ವಗಳಿಂದ ರಾಷ್ಟ್ರಕಲ್ಯಾಣವಾಗಲಾರದು. ಪ್ರಜೆಗಳ ಕಷ್ಟಗಳು ದೂರವಾಗಲಾರವು.

ನಮ್ಮ ದೇಶದಲ್ಲಿ ರಾಷ್ಟ್ರೀಯ ಚಳುವಳಿ ಬಲವಾದ ಹಾಗೆಲ್ಲಾ ದಬ್ಬಾಳಿಕೆಯ ನೀತಿಯು ಹೆಚ್ಚಾಗುತ್ತಾ ಬಂದಿತು. ಪ್ರಜೆಗಳ ಪ್ರಾಥಮಿಕ ಹಕ್ಕುಗಳಿಗೆ ಗದಾಪ್ರಹಾರ ಮಾಡಿರುವ ಸರ್ಕಾರವು ಎಂದಿಗೂ ಸರ್ಕಾರವೆನಿಸಿಕೊಳ್ಳಲಾರದು. ಬ್ರಿಟಿಷ್ ಸಾಮ್ರಾಜ್ಯದ ಅವನತಿಯ ಕುರುಹುಗಳು ಕಾಣುತ್ತಿವೆ. ಇನ್ನೇನು ಉರುಳಲು ಹೆಚ್ಚು ಕಾಲವಾಗಲಾರದು! ಕ್ರಾಂತಿಯು ನಮ್ಮ ದೇಶದಿಂದ ದೂರ ಸರಿದಿದೆ. ಕ್ರಾಂತಿಯಿಂದಲೇ ಶಾಂತಿ ಹೊರಹೊಮ್ಮಿದಂತಿರುವುದು. ನಮ್ಮಲ್ಲಿಯೇ ಏಕಮತ್ಯವಿಲ್ಲದೆ ನಾವು ಕಾದಾಡುತ್ತಿದ್ದೇವೆ.

ಕಾಂಗ್ರೆಸ್ ಸಂಸ್ಥೆಯು ಪ್ರಜೆಗಳಿಗೋಸ್ಕರವಿರುವುದು. ಆದಕಾರಣ ಅದು ಪ್ರಜಾಕೋಟಿಯವರದೇ ಆಗಿರಬೇಕು. ರಾಷ್ಟ್ರಸಭೆಯು ಸಮತಾವಾದಿಗಳ ಗುಂಪಾಗಬೇಕು. ಜಗತ್ತಿನ ಕಲ್ಯಾಣವು ಸಮತಾವಾದದಿಂದಲೇ ಆಗುವುದು ಎಂದು ನನ್ನ ಅಭಿಮತ. ಸಕಲ ರೋಗಗಳಿಗೂ ಸಂಜೀವಿನಿಯು ಅದು. ವಿಶ್ವದ ಸಮಸ್ಯೆಗಳ ಪರಿಹಾರವಾಗಬೇಕಾಗಿರುವುದು ಈ ತತ್ವದಿಂದಲೇ.

ನಮ್ಮ ದೇಶಕ್ಕೆ ಕೊಡಲ್ಪಟ್ಟಿರುವ ರಾಜ್ಯಾಂಗರಚನೆಯಲ್ಲಿ ತಿರುಳಿಲ್ಲ. ಹಣ್ಣನ್ನು ತಿಂದು ಸಿಪ್ಪೆಯನ್ನು ತಿನ್ನಲಿಕ್ಕೆ ಕೊಟ್ಟಿರುವರು. ತಿರಸ್ಕಾರವೇ ಅದಕ್ಕೆ ಸಮುತ್ತರ. ಕಾಂಗ್ರೆಸ್ಸಿನವರು ಮಂತ್ರಿ ಪದವಿಗಳನ್ನು ಸ್ವೀಕಾರಮಾಡುವುದಕ್ಕಿಂತ ಹೆಚ್ಚಾದ ದ್ರೋಹವು ಇನ್ನಾವುದೂ ಇಲ್ಲ. ಅಧಿಕಾರಗ್ರಸ್ತರಾಗಿ, ಅಧಿಕಾರಿಗಳ ಕೈಗೊಂಬೆಗಳಾಗಿ ರಾಷ್ಟ್ರದ ಹಿತಚಿಂತನೆಯೇ ಮರೆತುಹೋಗುವುದು. ಕಾಂಗ್ರೆಸ್ಸಿನವರು ಸೂತ್ರದ ಗೊಂಬೆಗಳಂತಾಗುವರು. ಆದುದರಿಂದ ಖಂಡಿತವಾಗಿಯೂ ಅಧಿಕಾರ ಸ್ವೀಕಾರವು ಯೋಗ್ಯವಲ್ಲ. ದರ್ಪದ ಅಡಿಯಾಳು ಆದ ಆರ್ಥಿಕ ತೊಡಕುಗಳು ದೂರವಾಗಿ, ಕೋಮುವಾರು ಪ್ರಶ್ನೆಯು ಪರಿಹಾರವಾಗಬೇಕಾದರೆ ಸಾಮ್ಯವಾದವೇ ಮಾರ್ಗ ಎಂದು ಹೇಳಿ ಗಾಂಧಿಯವರನ್ನು ಪ್ರಶಂಸಿಸಿ, ಎತಿಯೋಪಿಯಾ ಯುದ್ಧದಲ್ಲಿ ಸಹಾನುಭೂತಿ ವ್ಯಕ್ತಗೊಳಿಸಿ, ಧೈರ್ಯಗೆಡದೆ, ಮುಂದೆ ಮುಂದೆ ಹೆಜ್ಜೆಯಿಡುತ್ತಾ ನಮ್ಮ ಧ್ಯೇಯದ ಸಾಧನೆಗೆ ಸಕಲವನ್ನೂ ತ್ಯಾಗಮಾಡಿ ಹೋರಾಡಬೇಕೆಂದು ತಿಳಿಸಿ ಭಾಷಣವನ್ನು ಪರಿಸಮಾಪ್ತಿಗೊಳಿಸಿದರು.

ಪಂಡಿತರು ತಮ್ಮ ಭಾಷಣದಲ್ಲಿ ಕ್ರಾಂತಿಕಾರರ ವಿಷಯವಾಗಿ ಹೃತ್ಪೂರ್ವಕವಾದ ಸಹಾನುಭೂತಿಯನ್ನೂ ಅಭಿಮಾನವನ್ನೂ ತೋರಿಸಿದರು. ಕ್ರಾಂತಿಕಾರರ ಮಾರ್ಗಗಳು ನಮಗೆ ಒಪ್ಪದೆ ಇರಬಹುದು. ಆದರೆ ಅವರ ದೇಶಾಭಿಮಾನವೂ, ಧೈರ್ಯ ಸಾಹಸಗಳೂ ಅದ್ವಿತೀಯವಾದುದೆಂದು ಹೇಳಿದರು. ಕ್ರಾಂತಿಕಾರರನ್ನು ವಿಚಾರಣೆಗೂ ಗುರಿಮಾಡದೆ ಗೊತ್ತು ಗುರಿಯಿಲ್ಲದೆ ಬಂಧನದಲ್ಲಿಟ್ಟಿರುವ ನೀತಿಯನ್ನು ಖಂಡಿಸಿದರು. ಕ್ರಾಂತಿಯನ್ನು ಹೋಗಲಾಡಿಸಲು ದಬ್ಬಾಳಿಕೆಯ ನೀತಿಯು ಉಪಯುಕ್ತವಾದುದಲ್ಲವೆಂದು ಅಭಿಪ್ರಾಯಪಟ್ಟರು.

ದೇಶೀಯ ಸಂಸ್ಥಾನಗಳ ವಿಷಯದಲ್ಲಿ ವಿಶಾಲ ಹೃದಯದಿಂದ ಕಾಂಗ್ರೆಸ್ಸು ವರ್ತಿಸಬೇಕೆಂದು ತಿಳಿಸಿದರು. ಸಂಪೂರ್ಣ ಸ್ವರಾಜ್ಯವೆಂದರೆ ಬ್ರಿಟಿಷ್ ಚಕ್ರಾಧಿಪತ್ಯದಿಂದ ಹೊರಗೆ ಹೋಗುವುದೆಂದು ವಿವರಿಸಿದರು.

ಮುಂದಿನ ಕಾಂಗ್ರೆಸ್ ಅಧಿವೇಶನ.

ರಾಷ್ಟ್ರೀಯ ಮಹಾಸಭೆಯ ಮುಂದಿನ ಅಧಿವೇಶನವು ಪೂನಾ ನಗರದಲ್ಲಿ ನಡೆಯುವುದಾಗಿ ಗೊತ್ತಾಗಿದೆ. ಮಹಾರಾಷ್ಟ್ರದಲ್ಲಿ ಸಭೆ ನಡೆದು ಬಹಳ ದಿನಗಳಾಗಿತ್ತು.

"ಬಾಹಿ" ಚಳವಳಿ.

ಲೇಖಕರು—ಶ್ರೀ|| ಮೂ. ನ. ಚೌಡಪ್ಪ, (ಪ್ರಜಾಮತದ ಸಹಾಯ ಸಂಪಾದಕರಾಗಿದ್ದವರು.)

ಇಂದಿನ ವೃತ್ತಪತ್ರಿಕೆಗಳನ್ನೋದುವುದು ಬೇಡ, ಅವುಗಳಲ್ಲಿರುವ ದಪ್ಪಕ್ಷರಗಳನ್ನು ನೋಡುತ್ತಿದ್ದರೆ ಸಾಕು. ಇಂದು ಜಗತ್ತಿನ ಸ್ಥಿತಿಯು ವಿಷಮಪರಿಸ್ಥಿತಿಯೊಂದರ ಕಡೆಗೆ ವೇಗವಾಗಿ ಓಡುತ್ತಿದೆಯೆಂಬುದು ಸ್ವಯಂ ವ್ಯಕ್ತವಾಗುವುದು.

ಇಂತಹ ಪರಿಸ್ಥಿತಿಯು ಮಾನವ ಹಿತ, ಸುಖ ವಿಘಾತಕವೂ, ದುಃಖದಾಯಕವೂ ಆದುದೆಂಬುದರಲ್ಲಿ ಅಡ್ಡಿಯಿಲ್ಲ. ಆದುದರಿಂದ ಇಂತಹ ಪರಿಸ್ಥಿತಿಯನ್ನು ತಡೆಗಟ್ಟಲು, ಅದು ಅಷ್ಟಕ್ಕೇ ನಿಲ್ಲದೆ ಮೀರಿಬಂದಲ್ಲಿ ಅದರ ಆಘಾತದಿಂದ ಪಾರಾಗಲು ಪ್ರಯತ್ನಿಸುವುದು ಮಾನವ ಸ್ವಭಾವ.

ಈಗ್ಗೆ ಅರ್ಧ ಶತಮಾನದಿಂದೀಚೆಗೆ ಇಂತಹ ಪ್ರಯತ್ನಗಳು ವಿವಿಧ ದೇಶಗಳಲ್ಲಿ ವಿಪುಲವಾಗಿ ನಡೆಯುತ್ತಿವೆ. ಈ ಪ್ರಯತ್ನಗಳನ್ನು ಪ್ರತಿಷ್ಠಿಸಿದ 'ದೇವಮಾನವ'ರ ಬೋಧೆಗಳೆಲ್ಲವೂ ಏಕರೀತಿಯಾಗಿವೆಯೆನ್ನಬಹುದು.

ನಮ್ಮ ಭಾರತವರ್ಷದಲ್ಲಿ ಈಗ್ಗೆ ಒಂದು ಶತಮಾನದ ಹಿಂದೆ ಹುಟ್ಟಿದ ಶ್ರೀರಾಮಕೃಷ್ಣ ಪರಮಹಂಸರು ಸರ್ವಧರ್ಮ ಸಮನ್ವಯ, ಇಡೀ ಜಗತ್ತಿನ ಐಕ್ಯತೆಗಳನ್ನೇ ಬೋಧಿಸಿದರು.

ಇದರಂತೆ, ಕಳೆದ ಒಂದು ಶತಮಾನದಿಂದೀಚೆಗೆ ಪರ್ಷಿಯಾದಲ್ಲಿ ಮಿರ್ಜ ಆಲಿ ಮಹಮ್ಮದ್, ಮಿರ್ಜ ಹುಸೇನ್ ಆಲಿ, ಅಬ್ದುಲ್ ಬಾಹ ಇವರುಗಳ ಬೋಧೆಯನ್ನನುಸರಿಸಿ ಮಾನವವರ್ಗದ ಐಕ್ಯತೆ, ಸರ್ವಧರ್ಮ ಸಮನ್ವಯಾದಿ ತತ್ವಗಳು ಪಾಶ್ಚಾತ್ಯ ದೇಶಗಳಲ್ಲಿ ಹರಡುತ್ತಿವೆ.

ಈ ಬೋಧಕರಲ್ಲಿ ಕೊನೆಯವರಾದ ಅಬ್ದುಲ್ ಬಾಹಾರವರು (ಅಂದರೆ ದೇವಸೇವಕ ಎಂದರ್ಥ) ಈಜಿಪ್ಟ್, ಸ್ವಿಟ್ಸರ್ಲ್ಯಾಂಡ್, ಫ್ರಾನ್ಸ್, ಜರ್ಮನಿ, ಆಸ್ಟ್ರಿಯ, ಹಂಗೆರಿ, ಇಂಗ್ಲೆಂಡ್, ಅಮೆರಿಕಾ ದೇಶಗಳಲ್ಲಿ ಪ್ರವಾಸಮಾಡಿ ತಮ್ಮ ತಮ್ಮ ಹಿರಿಯರ ಸಮನ್ವಯ ತತ್ವಗಳನ್ನು ಹರಡಿ ೧೯೨೧ನೇ ಇಸವಿಯಲ್ಲಿ ತಮ್ಮ ಎಪ್ಪತ್ತೇಳನೇ ವಯಸ್ಸಿನಲ್ಲಿ ಕಾಲವಾದರು.

ಅಲ್ಲಿಂದೀಚೆಗೆ ಅವರ ಕಾರ್ಯದರ್ಶಿಗಳಾಗಿದ್ದ ಮಿರ್ಜ ಅಹಮ್ಮದ್ ಸೊಹ್ರಾಬ್ ರವರು ಅಬ್ದುಲ್ ಬಾಹಾರವರ ಚಳವಳಿಯನ್ನು ಒಂದು ಶಿಸ್ತಿನ ರೂಪಕ್ಕೆ ತಂದು ಈಗ್ಗೆ ಕೆಲವು ವರ್ಷಗಳ ಹಿಂದೆ ಅಮೇರಿಕಾದಲ್ಲಿ 'ದಿ ನ್ಯೂ ಹಿಸ್ಟರಿ ಸೊಸೈಟಿ' ಎಂಬ ಸಂಸ್ಥೆಯನ್ನು ಸ್ಥಾಪಿಸಿ ಅದರ ಮೂಲಕ ಅಬ್ದುಲ್ ಬಾಹಿಯವರ ಬೋಧನೆಗಳನ್ನು ಜಗತ್ತಿಗೆಲ್ಲಾ ಹರಡಬೇಕೆಂದು ಪ್ರಯತ್ನಿಸುತ್ತಿರುವರು.

ಈ ಚಳವಳಿಗೇ 'ಬಾಹಿ ಚಳವಳಿ' ಎಂದು ಹೆಸರು.

ಈ ಚಳವಳಿಯ ಸಂಸ್ಥಾಪಕರ ಭಾವನೆಗಳ ಸ್ವರೂಪವೇನೆಂಬುವನ್ನು ತಿಳಿಸುವ ಉದ್ದೇಶ್ಯದಿಂದ ಅಬ್ದುಲ್ ಬಾಹಾರವರ ಲೇಖನಗಳಿಂದ ಅಲ್ಲೊಂದು ಇಲ್ಲೊಂದು ವಾಕ್ಯಗಳನ್ನು ಸಂಗ್ರಹಿಸಿ ಈ ಕೆಳಗೆ ಅನುವಾದ ಮಾಡಲಾಗಿದೆ. ಇದರಿಂದ ಬಾಹಾರವರ ವಿಶಾಲ ಮನೋವೃತ್ತಿಯೂ, ಅವರ ಆಸೆ, ಆಶಯಗಳೂ ಸ್ಪಷ್ಟವಾಗಿ ಪ್ರತಿಬಿಂಬಿತವಾಗುವವೆಂದು ಹೇಳಬಹುದಾಗಿದೆ—

ದುರಭಿಮಾನ ಹುಟ್ಟೀತು. ಎಚ್ಚರಿಕೆಯಿಂದಿರು! ಯಾವ ದೀಪದಿಂದ ಬಂದರೇನು? ಬೆಳಕು ಒಳ್ಳೆಯದೇ. ಯಾವ ತೋಟದಲ್ಲಿ ಅರಳಿದರೇನು? ಗುಲಾಬಿ ಮನೋಹರವಾದದ್ದೇ. ಪೂರ್ವದಲ್ಲಿ ಹೊಳೆದರೇನು, ಪಶ್ಚಿಮದಲ್ಲಿ ಹೊಳೆದರೇನು, ನಕ್ಷತ್ರದ ಹೊಳಪು ಒಂದೇ.

ಸ್ವಸುಖವನ್ನು ಮರೆತ ಮಾನವನೇ ಪರಮ ಸುಖಿ.

ದುಃಖ ಮುಸುಗಿರುವ ಈ ಜಗತ್ತನ್ನು ಮತ್ತೆ ಬೆಳಗಿಸಬೇಕಾದರೆ ನಾವೆಲ್ಲರೂ ಒಂದಾಗಬೇಕು. ನಮ್ಮಲ್ಲಿ ಸಾಮರಸ್ಯ ಬೆಳೆಯಬೇಕು.

ನಾವು ಜನಿಸಿರುವುದು ಸುಖವಾಗಿರಲಿಕ್ಕೆ, ದುಃಖಿಸುವುದಕ್ಕಲ್ಲ. ಸುಖವೇ ಜೀವನ, ದುಃಖವೇ ಸಾವು.

ಪ್ರತಿ ಮಾನವನು ಪರಸುಖದ ಒರತೆಯಾಗಿರಬೇಕು, ಜನತೆಯ ಸೇವೆಗಣಿಯಾಗಿರಬೇಕು.

ಇಡೀ ಮಾನವ ಜನಾಂಗವೆಲ್ಲ ಒಂದು ಮನೆಯವರು. ಅವರೆಲ್ಲರೂ ಮನುಷ್ಯತ್ವದ ಸುಖಸಂಪದಗಳಿಗೆಲ್ಲ ಸಮಾನಾಧಿಕಾರಿಗಳು.

ಯಾರ ಹೃದಯವನ್ನಾದರೂ ನೋಯಿಸೀಯೆ—ಎಚ್ಚರಿಕೆ ಎಚ್ಚರಿಕೆ! ಯಾರೊಡನೆಯಾದರೂ ಕ್ರೂರವಾಗಿ ನಡೆಕೊಂಡೀಯೇ ಎಚ್ಚರಿಕೆ, ಎಚ್ಚರಿಕೆ! ಯಾವ ಪ್ರಾಣಿಗಾದರೂ ನಿರಾಶೆಯನ್ನುಂಟುಮಾಡೀಯೆ ಎಚ್ಚರಿಕೆ, ಎಚ್ಚರಿಕೆ!

ಯಾವಾಗಲೂ ಒಳ್ಳೆಯದನ್ನೇ ಗಮನಿಸು; ಕೆಟ್ಟದರಮೇಲೆ ಕಣ್ಣು ಬೇಡ. ಒಬ್ಬನಲ್ಲಿ ಹತ್ತು ಒಳ್ಳೆಯ ಗುಣವಿದ್ದು ಒಂದು ಕೆಟ್ಟದಿದ್ದರೆ, ಆ ಹತ್ತನ್ನು ನೋಡು, ಒಂದನ್ನು ಮರೆತುಬಿಡು. ಒಬ್ಬನಲ್ಲಿ ಹತ್ತು ಕೆಟ್ಟ ಗುಣಗಳಿದ್ದು ಒಂದು ಒಳ್ಳೆಯದಿದ್ದರೆ, ಆ ಒಂದನ್ನು ನೋಡು, ಹತ್ತರಮಾತು ಬೇಡ.

ದೋಷಾನ್ವೇಷಣೆಯಂತಹ ಅನಿಷ್ಟ ಗುಣ ಬೇರೆ ಇನ್ನೊಂದಿಲ್ಲ. ಬೇರೆಯವರ ಸುಗುಣಗಳನ್ನು ನಾವು ಪ್ರಕಟಿಸಬೇಕೇ ಹೊರತು ಅವರ ಹುಳುಕನ್ನು ಹೊರಗೆಡಹಬಾರದು.

ವಿವಿಧ ಜನಾಂಗಗಳ ನಡುವೆ ಇರುವ ಭೇದಭಾವವು ಮರೆಯಾಗಬೇಕೆಂಬುದೇ ದೇವರ ಆಜ್ಞೆಯಾಗಿದೆ. ಈ ಐಕ್ಯದ ಶಕ್ತಿಗೆ ಬೆಂಬಲವಾಗುವವನಲ್ಲಾ ದೇವರ ಆಜ್ಞೆ ನಡೆಸಲು ದುಡಿದವನಾಗುತ್ತಾನೆ.

ಜನಹಿತಕ್ಕಾಗಿ ದುಡಿಯುವುದಕ್ಕಿಂತ ಹೆಚ್ಚಿನ ಉದ್ಯೋಗವಿನ್ನೇನಿದೆ? ಇದಕ್ಕಿಂತ ಹೆಚ್ಚಿನದಾದ ಕೆಲಸವಿದೆಯೆಂದು ಯಾರಾದರೂ ಬಾವಿಸಲು ಸಾಧ್ಯವೇ?

ಮನುಷ್ಯನ ಕಾರ್ಯಶಕ್ತಿಗೆ ಕೊನೆಯಿರಬಾರದು. ಅವನ ಕಾರ್ಯಶಕ್ತಿಯು ಒಮ್ಮೆ ಯೋಗ್ಯವಾದ ಮಾರ್ಗದಲ್ಲಿ ಪ್ರವಹಿಸಿತೆಂದರೆ ಸಾಕು, ಇವತ್ತಲ್ಲದಿದ್ದರೆ ನಾಳೆಯಾದರೂ ಅವನಿಗೆ ಖಂಡಿತವಾಗಿ ಅವನ ಕಾರ್ಯದಲ್ಲಿ ಜಯ ದೊರೆತೇ ದೊರೆಯುವುದು.

ಮೇಣದ ಬತ್ತಿಯನ್ನು ನೋಡು—ಬೆಳಕನ್ನು ಹರಡಲಿಕ್ಕಾಗಿ ಅದು ಕೊನೆಯವರೆಗೂ ತೊಟ್ಟು ತೊಟ್ಟಾಗಿ ತನ್ನ ಜೀವಿತವನ್ನು ಕರಗಿ ಸುರಿಸುವುದು!

ಇಂದಿನ ಪ್ರಬುದ್ಧ ಯುಗಕ್ಕೆ ದೇವರ ಸದವೇನು ಗೊತ್ತೆ? ಮಾನವ ವರ್ಗವೆಲ್ಲಾ ಒಂದೇ, ವಿಭಿನ್ನ ಧರ್ಮಗಳ ಮೂಲವೆಲ್ಲಾ ಒಂದೇ ಎಂಬ ತಿಳುವಳಿಕೆ.

ಧರ್ಮವೆಂದರೇನು ಗೊತ್ತೆ—ಅದು ವಿದ್ವೇಷವಲ್ಲ—ಮೌಢ್ಯಯುಕ್ತತನವಲ್ಲ, ಅನ್ಯಾಯ, ಹಿಂಸೆ ಅಲ್ಲ. ಧರ್ಮವು ಭಿನ್ನತೆ ಮೂರ್ಖತೆಗಳ ಕಾರಣವಾಗುವುದಾದರೆ ಅಂತಹ ಧರ್ಮಕ್ಕಿಂತ ಧರ್ಮಹೀನತೆಯೇ ಲೇಸು! ಅಂತಹ ಸಂದರ್ಭದಲ್ಲಿ ಧರ್ಮಕ್ಕೆ ತಿಲತರ್ಪಣ ಕೊಡುವುದೇ ಮಾನವವರ್ಗದ ಐಕ್ಯತೆಯ ಮೊದಲ ಮೆಟ್ಟಿಲಾದೀತು!

ಸಹೋದರರೇ, ಈ ಜಗತ್ತಿನಲ್ಲಿ ಐಕ್ಯತೆ, ಸಾಮರಸ್ಯಗಳ ತಳಹದಿಯನ್ನು ಹಾಕಿ ಕಾದಾಟ, ಕಚ್ಚಾಟಗಳ ತಂತುಗಳನ್ನು ಕತ್ತರಿಸಿರಿ. ಈ ಜಗತ್ತಿನಲ್ಲಿ ಅವಕ್ಕೆ ಸ್ಥಾನವಿಲ್ಲ.

ಶಾಂತಿಯೇ ಜೀವನವಲ್ಲದೆ ಬೇರೆಯಲ್ಲ; ಯುದ್ಧವೇ ಮೃತ್ಯುಸ್ವರೂಪ. ಶಾಂತಿಯು ದೈವಿಕವಾದುದು, ಯುದ್ಧವು ಸೈತಾನಿ ಸ್ವಭಾವದ್ದು. ಶಾಂತಿಯೇ ಸಮೃದ್ಧಿ, ಯುದ್ಧವೇ ದಾರಿದ್ರ್ಯ.

"ಬಾಹಿ" ಪಂಥದವರ ಸಾಧನೆಯ ಗಮ್ಯದ ವಿವರವಿದು, ಈ ಜಗತ್ತಿನಲ್ಲಿ ಇಡೀ ಮಾನವ ವರ್ಗದ ಭ್ರಾತೃತ್ವಭಾವ ಸಂಸ್ಥಾಪನೆ. ವಿಶ್ವಶಾಂತಿಗಾಗಿ ನಡೆಯುವ ಸಾಧನೆಗಳೊಡನೆ ಸಹಕರಿಸುವುದು. ಜನರ ಹೃದಯದಲ್ಲಿ ನ್ಯಾಯ, ಪ್ರೇಮ, ದಯೆಗಳ ಸಾಮ್ರಾಜ್ಯಸಂಸ್ಥಾಪನ.

ತಾಳ್ಮೆಯಿರಲಿ, ಸಾಧನೆಗಾಗಿ ಕಾದುಕೋ. ಆದರೆ, ಸೋಮಾರಿಯಾಗಿರಬೇಡ. ಕಾದು ಕುಳಿತಿದ್ದಾಗ ಕೆಲಸ ಮಾಡುತ್ತಲೇ ಇರು. ಕೆಲಸ ಮಾಡಿ ಮಾಡಿ ಬೇಜಾರಾದಾಗ ಕೂಡ ನಿನ್ನ ಮುಖದಮೇಲೆ ನಸುನಗೆಯಿರಲಿ.

ಕೇಳಿರುವುದು, ಮಾತಾಡುವುದು, ಮ... ತನಾಡಿದ್ದನ್ನು ಕೇಳುವುದು—ಇದರಲ್ಲಿ ಏನೇನೂ ಗುಣವಿಲ್ಲ.

ನಡುಗಟ್ಟು, ಕೆಲಸಮಾಡು, ಸೇವೆ ಸಲಿಸು—ಅದು, ಬಾಹಿ ಜೀವನ.

ಪ್ರತಿ ಮಾನವನೂ ಪ್ರೇಮಮೂರ್ತಿಯಾಗಬೇಕು, ಪ್ರೇಮದಿವಾಕರನಾಗಬೇಕು, ಪ್ರೇಮತಾರೆಯಾಗಬೇಕು. ಪ್ರೇಮಮಯ ಸ್ವರ್ಗ, ಪ್ರೇಮಮಯ ಜಗತ್ತು, ಪ್ರೇಮಮಯ ಜನ್ಮ—ಪ್ರೇಮವೇ ಅವಿನಾಶಿಯಾದ ಜೀವನ—ಅದೇ ಪರಿಪೂರ್ಣವಾದ ಶಕ್ತಿ. ನಿನ್ನಲ್ಲಿ ಪ್ರೇಮವಿದೆಯೇ? ಅದು ನಿನ್ನಲ್ಲಿದೆಯಾದರೆ ನಿನ್ನ ಶಕ್ತಿಗಿದಿರೇ ಇ... ದಾರರು ಅದನ್ನಾರೂ ತಡೆಯಲಾರರು. ನಿನ್ನಲ್ಲಿ ಕರುಣೆಯಿದೆಯೇ? ಹಾಗಾದರೆ ಇಡೀ ಸೃಷ್ಟಿಯೇ ನಿನ್ನ ಗುಣಗಾನಮಾಡುವುದು.

ಪಂಡಿತ ಸಿ. ಎಚ್. ಚಂದ್ರಭಾನ್‌ಸಿಂಗ್

ಇವರಿಂದ ತಯಾರಿಸಲ್ಪಟ್ಟ

ಫಲಪುಷ್ಪಸಾರ ರಸಾಯನ.

ಸುಖಕರ ಮಲಬಂಧನಿವಾರಿಣೀ ಕ್ರಯ —1-8-0

ಗುಣ:—ಇದು ಜಯಪಾಳ ಮುಂತಾದ ಕಠಿಣ ವಿರೇಚನ ವಸ್ತುಗಳ ಸಂಯೋಗವಿಲ್ಲದ ಕೇವಲ ಅಮೃತೀಕರಣ ಪ್ರಯೋಗವು. ಕೇವಲ ಅನುಭವಸಿದ್ಧವಾದದ್ದು. ಇದನ್ನು ಉಪಯೋಗಿಸುವುದರಿಂದ ಎಲ್ಲಾ ವಿಧವಾದ ಮಲಬಂಧವೂ, ಮೂಲವ್ಯಾಧಿ, ಅಜೀರ್ಣ, ಉಷ್ಣವಾಯು, ಕೀಲುವಾಯು, ಎದೆಉರಿ, ಹೊಟ್ಟೆನೋವು, ಕೆಮ್ಮು, ತಲೆತಿರುಗು ಮುಂತಾದ ರೋಗಗಳೆಲ್ಲವೂ ಖಂಡಿತ ಗುಣವಾಗುತ್ತವೆ. **ಉಪಯೋಗಿಸುವ ವಿಧಾನ:**—ದೊಡ್ಡವರಿಗೆ 1 ತೊಲದಿಂದ 1½ ತೊಲ, 10 ವರ್ಷದವರಿಗೆ ½ ತೊಲ, 5 ವರ್ಷದವರಿಗೆ ಕಾಲು ತೊಲ, 2 ವರ್ಷ ಅದಕ್ಕೆ ಕೆಳಪಟ್ಟವರಿಗೆ ಒಂದು ಅವರೆ ಕಾಳಿನಷ್ಟು ದಿನಕ್ಕೊಂದುವೇಳೆ, ರಾತ್ರಿ ಊಟವಾದ ಮೇಲೆ ಮಲಗಿಕೊಳ್ಳುವಾಗ ಒಂದು ಎಲೆಯಲ್ಲಿ ಹಾಕಿ ತೆಗೆದುಕೊಳ್ಳುವುದು. ಇದನ್ನು ಉಪಯೋಗಿಸಿದನಂತರ ದೊಡ್ಡವರು ಸ್ವಲ್ಪ ಬಿಸಿನೀರು ಕುಡಿಯಬೇಕು. ಮಕ್ಕಳಿಗೆ ಸ್ವಲ್ಪ ಬಿಸಿ ಹಾಲನ್ನು ಉಪಯೋಗಿಸುವುದು. ಇದರಿಂದ ದಿನಕ್ಕೆರಡುಸಲ ಸುಖವಾಗಿ ಕಾಲಪ್ರವೃತ್ತಿಯಾಗುತ್ತೆ. ಪಥ್ಯ ಇಚ್ಛಾ ಪಥ್ಯ. ಈ ರೀತಿ ಕೆಲವು ದಿವಸ ಉಪಯೋಗಿಸುವುದರಿಂದ ಮಲಬಂಧವು ಸಂಪೂರ್ಣವಾಗಿ ಪರಿಹಾರವಾಗುವುದಲ್ಲದೆ, ಕಠಿಣಕೋಷ್ಠವು ಮೃದುಕೋಷ್ಠವಾಗಿ ಪರಿಣಮಿಸುತ್ತೆ.

ಬ್ರಾಂಚ್:—ಶ್ರೀಸತ್ಯನಾರಾಯಣ ಆಯುರ್ವೇದಿಕ್ ಫಾರ್ಮಸಿ,
ಜಗನ್ಮೋಹನ ಬಂಗ್ಲೆ ರಸ್ತೆ, ಮೈಸೂರು.

ಮಾತೃದ್ರೋಹಿ.

(ಏಕಾಂಕ ನಾಟಕ)
(ಕಳೆದವಾರದ ಶೇಷ)

ಲೇಖಕ—**ಜಿ ವಿ.ಆರ್. ಒಂಟಿಕೊಪ್ಪಲ್.**

(ದೃಶ್ಯ ೩)

(ಅಂತಃಪುರದಲ್ಲಿ ಪೃಥ್ವಿರಾಜ. ಸಂಯುಕ್ತೆ)

ಸಂಯುಕ್ತೆ—ಆರ್ಯಪುತ್ರ. ಸ್ಥಾನೇಶ್ವರ ಯುದ್ಧದಲ್ಲಿ ಹಿಂದೂ ರಾಜರಿಗೆ ಜಯವು ಲಭಿಸುತ್ತೆಂದು ನಾನು ತಿಳಿದಿರಲಿಲ್ಲ

ಪೃಥ್ವಿ — ರಮಣೀಮಣಿ. ಎಲ್ಲಿಯವರೆಗೆ ಈ ಭಾರತಭೂಮಿಯಲ್ಲಿ ಹಿಂದೂರಾಜರಿಗೆ ಒಂದಾದ ಐಕಮತ್ಯವಿರುವದೋ ಅ ವರೆಗೂ ಎಂತವನೇ ಬಂದರೂ ಏನೂ ಮಾಡಲಾರನು ಐಕಮತ್ಯವು ತಪ್ಪಿದ ದುರುದಿನವೇ ಹಿಂದೂಗಳ ಬಾಳು ನಾಯಿ ಬಾಳೆಂದು ತಿಳಿ.

ಸಂ —ಹಿಂದೂ ರಾಜರಲ್ಲಿ ಶಾಶ್ವತವಾದ ಐಕಮತ್ಯವು ಬೆಳೆಯುವಂತೆ ದೇವರು ಅನುಗ್ರಹಿಸಲಿ

ಮಂತ್ರಿ—ದೇವ? ಅಪಾಯಕಾಲ ಮುಂದೇನುಗತಿ ?

ಪೃಥ್ವಿ—ಏನು ಅಪಾಯಕರವೇ ಹಾಗಂದರೆ ?

ಮಂತ್ರಿ—ಸ್ಥಾನೇಶ್ವರದಲ್ಲಿ ಮತ್ತೆ ನಮ್ಮೊಡನೆ ಕಾದಲು ಮಹಮದ್ ಘೋರಿಯು ಸಸೈನ್ಯನಾಗಿ ಕಾದುನಿಂತಿರುವನು. ತಮ್ಮ ಮಾವನಾದ ಜಯಚಂದ್ರರೂ ಸೈನ್ಯ ದೊಡನೆ ಅವನಿಗೆ ಸಹಾಯಕ್ಕೆ ಬಂದಿದ್ದಾರೆ.

ಪೃಥ್ವಿ—ಆದರೆ ಮೊದಲಿನಂತೆ ನಮ್ಮ ಹಿಂದೂ ರಾಜರಿಗೆಲ್ಲಾ ತಿಳಿಸಿ ಅವರವರ ಸೈನ್ಯದೊಡನೆ ಬರುವಂತೆ ಮಾಡು ನಾನೂ ಹೊರಡಲು ಸಿದ್ಧನಾಗುವೆನು

ಮಂತ್ರಿ—ನಿಮ್ಮ ಮಾವಂದಿರು ಎಲ್ಲ ಹಿಂದೂ ರಾಜರಿಗೂ ನಿಮ್ಮ ವಿಷಯದಲ್ಲಿ ದುರಭಿಪ್ರಾಯವನ್ನು ಹುಟ್ಟಿಸಿ ಸಹಾಯಕ್ಕೆ ಒಬ್ಬನಾದರೂ ಬರದಂತೆ ಮಾಡಿದ್ದಾರೆ ಅವರ್‍ಯಾರೂ ಬರುವಂತಿಲ್ಲ. ನಾವು ನಾವೆ

ಸಂ—ಏನು ನಮ್ಮ ಅಯ್ಯನು ತನ್ನ ವೈರವನ್ನು ಸಂಪೂರ್ಣವಾಗಿ ಸಾಧಿಸಿಯೇ ಬಿಟ್ಟನೆ ? ಮಾತೃಭೂಮಿಗೆ ದ್ರೋಹಮಾಡಿ ಹಿಂದುಗಳನ್ನು ಗುಲಾಮರನ್ನಾಗಿ ಮಾಡಿದನೆ ' ಅಯ್ಯೋ, ಭಾರತಮಾತೇ ಯವನರ ಪಾಲಾದೆಯಾ. ಅಮಂಗಳದ ಮನೆಯಾದೆಯಾ ' (ಅಳುವಳು)

ಪೃಥ್ವಿ—ಮಂತ್ರಿ, ಹೊರಡು ಸೈನ್ಯವು ಸಿದ್ಧವಾಗಲಿ, ನಾನೂ ಬಂದೆನು. ಸಂಯುಕ್ತಾ, ಹೋಯಿತು ಭಾರತದ ಮಂಗಳ ಕಾಲವು ಮಾಯವಾಯಿತು. ಹಿಂದೂ ಸಿಂಹಾಸನವು ಅಪವಿತ್ರವಾಯಿತು ನಿಮ್ಮ ತಂದೆ ಮಾತೃದ್ರೋಹಿ. ಆಗಲಿ. ಈಶ್ವರಾಜ್ಞೆ ನಾನು ಹೋಗಿ ನನ್ನ ಮಾತೃ ಭೂಮಿಗಾಗಿ ಕಾದುವೆನು ನನಗೆ ಅನುಜ್ಞೆ ಕೊಡು

ಸಂ—ಹೊರಡಿ ಹೊರಡಿ ಈವರೆಗೆ ನಾವು ಅನುಭವಿಸಿದ ಆನಂದವೇ ಸಾಕು ಮಾತೆಯ ರಕ್ಷಣೆ ಮಾಡಿ ' ಆರ್ಯಪುತ್ರ ಮಾರಿ ಬಂದರೆ ನಾನೂ ನಿಮ್ಮ ಹಿಂದೆಯೇ ಬಂದೆನೆಂದರಿಯಿರಿ. ಆಹಾ. ಇದೇ ಕಡೆಯ ಸಂದರ್ಶನ. ಕಡೆಯ ಆಲಿಂಗನ (ಆಲಿಂಗಿಸುವಳು)

(ದೃಶ್ಯ 4.)

(ಮಾರ್ಗದಲ್ಲಿ ಒಬ್ಬೊಬ್ಬರಾಗಿ ಅಳುತ್ತಾ)

1 ನೇ—ಅಯ್ಯೋ, ಮೈದಾನದಲ್ಲಿ ಯುದ್ಧವಾಗುತ್ತಿದೆ ಅನೇಕ ಯವನರು ದೆಹಲಿ ನಗರಕ್ಕೆ ನುಗ್ಗಿ ಅಮಂಗಳ ಮಾಡುತ್ತಿದ್ದಾರೆ

2 ನೇ—ಅಪ್ಪಾ, ನಮ್ಮ ಮನೆಗೆ ನುಗ್ಗಿ. ನನ್ನ ಮಗಳನ್ನೂ ಸೊಸೆಯನ್ನೂ ಯವನರು ಹೊತ್ತುಕೊಂಡೇ ಹೋದರಲ್ಲ.

3 ನೇ—ಸಾವಿರಾರು ದನಗಳನ್ನು ನಮ್ಮ ದೇವಾಲಯದ ಮುಂದೆ ಕಡಿದು ಹಾಕಿದರಲ್ಲಾ, ಏನನ್ಯಾಯ.

4 ನೇ—ಸಿಕ್ಕಿದ್ದನ್ನೆಲ್ಲಾ ದೋಚಿ ತೃಪ್ತರಾಗದೆ ದೇವಮಂದಿರಕ್ಕೂ ನುಗ್ಗಿದ್ದಾರೆ, ಮುಂದೇನುಗತಿ ?

5 ನೇ—(ಓಡಿಬಂದು) ಆಯಿತು ಭಾರತಭೂಮಿಯ ಸೂರ್ಯನು ಅಸ್ತಂಗತನಾದನು. ವೀರಭಾರತ ಪುತ್ರನು ಅಳಿದನು ಹಿಂದೂ ಧರ್ಮವು ಹಾಳಾಯಿತು

1 ನೇ—ಏನು, ನಮ್ಮ ಪೃಥ್ವೀರಾಜರು ಸತ್ತರೆ ?

5 ನೇ—ರಣರಂಗದಲ್ಲಿ ಕಾದಿ ಕಡೆಗೆ ಯವನನ ಕತ್ತಿಯ ಪೆಟ್ಟಿಗೆ ತುತ್ತಾದರು. ಈ ಸಂಗತಿಯನ್ನು ಸಂಯುಕ್ತಾದೇವಿಯರಿಗೆ ಹೋಗಿ ತಿಳಿಸುವದು ಹೇಗೆ ?

(ಹೋಗುವರು)

(ದೃಶ್ಯ 5)

[ಅರಮನೆ ಮುಂಭಾಗದಲ್ಲಿ]

(ಸಾವಿರಾರು ಪತಿವ್ರತೆಯರು ಅಗ್ನಿಕುಂಡವನ್ನು ಬಳಸುತ್ತಿರುವರು)

ಸಂ—ಯುದ್ಧದಲ್ಲಿ ಏನಾಯಿತೆಂಬುದು ತಿಳಿಯಲಿಲ್ಲ.

5 ನೇ—(ಬಂದು) ದೇವಿ ಅಮಂಗಳ, ಮಹಾರಾಜರು—

ಸಂ— ಭಾರತಮಾತೆ ನಮ್ಮ ತಂದೆಯಂತಹ ಮಾತೃದ್ರೋಹಿಯನ್ನು ಏಕೆ ಪಡೆದೆ ? ಅನುಭವಿಸು ನೀನಿನ್ನು ಯವನರ ದಾಸಿ ಹಿಂದೂ ಧರ್ಮನಾಶವೇ ಸರಿ ಹಾಯ್, ಹಾಯ್, ಚಂಡಾಲ, ಜಯಚಂದ್ರ

(ಒಬ್ಬೊಬ್ಬರಾಗಿ ಬೆಂಕಿಗೆ ದುಮುಕುವರು)

(ದೃಶ್ಯ 6)

(ಮಾರ್ಗದಲ್ಲಿ ಜಯಚಂದ್ರನು ಒಬ್ಬನೆ)

ಜಯ—ನನ್ನ ವೈರಿಯು ಸತ್ತನು ಯವನನು ದಹಲೀ ಸಿಂಹಾಸನವನ್ನು ಅಲಂಕರಿಸಿದನು. ನನಗೆ ಆನಂದವೇ ಆನಂದ

ಸೇನಾನಿ—ಮಹಾರಾಜ ಘೋರಿಯ ಸೈನ್ಯವು ನಮ್ಮ ಕನೂಜನ್ನು ಮುತ್ತಿರುವದು. ಮುಂದೇನುಗತಿ ?

ಜಯ—ಕಸು. ನನ್ನ ಪರಮಮಿತ್ರನು ನನ್ನ ಮೇಲೆ ಯುದ್ಧಕ್ಕೆ ಬಂದನೇ ? ನಾನು ಮಾಡಿದ ಉಪಕಾರವನ್ನು ಮರೆತನೆ ?

ಸೇನಾನಿ—ನೀವು ಮಾಡಿದ ಉಪಕಾರಕ್ಕೆ ಇದು ಪ್ರತಿಯಾದ ಪ್ರತ್ಯುಪಕಾರ ಏನಗೇನಾಜ್ಞೆ ?

ಜಯ—ನನಗೆ ತಕ್ಕ ಶಿಕ್ಷೆ ಸರಿ. ಸರಿ ವೀರನಾದ ಪೃಥ್ವೀರಾಜನನ್ನು ದ್ವೇಷಿಸಿ ಹಿಂದೂ ರಾಜರಲ್ಲಿ ಕಲಹ ತಂದುಹಾಕಿದ ಪರಮ ಪಾತಕಿಯಾದ ನನಗೆ ದೇವರು ತಕ್ಕ ಶಿಕ್ಷೆ ಕೊಟ್ಟನು ಸಂಯುಕ್ತೆ, ನಿನ್ನ ಮಾತನ್ನು ಕೇಳದೆ ನಿನ್ನನ್ನೂ ಕೆಡಿಸಿ ನಾನೂ ಕೆಟ್ಟೆನು ಭಾರತಭೂಮಿಯನ್ನು ಗುಲಾಮಳನ್ನಾಗಿ ಮಾಡಿದೆನು ನಾನಿನ್ನು ಬದುಕಬಾರದು. ಯುದ್ಧ ಮಾಡಿ ಸಾಯುವದೇ ಸರಿ (ಹೋಗು)

(ದೃಶ್ಯ 7.)

(ಕನೂಜಿನ ಸಿಂಹಾಸನದಲ್ಲಿ ಘೋರಿ)

ಘೋರಿ—ಜಯಚಂದ್ರನಂತಹ ಮಾತೃದ್ರೋಹಿಯು ಇರದಿದ್ದರೆ ನನಗೆ ಭಾರತದಲ್ಲಿ ಅವಕಾಶವಾದರೂ ಸಿಕ್ಕುತ್ತಿತ್ತೆ ? ಭೇಷ್ ಹಿಂದೂಗಳ ಅಂತಃಕಲಹವೇ ನಮಗೆ ಅಭ್ಯುದಯಕ್ಕೆ ದಾರಿ

ಮಂತ್ರಿ—ಇನ್ನು ಹಿಂದೂರಾಜರು ಗುಲಾಮರೇ ಸರಿ. ದೇವಾ. ಸಿಂಹಾಸನದಲ್ಲಿ ಕುಳಿತು ಆಳುವ ಯೋಗ್ಯತೆ ಅವರಿಗೆಲ್ಲಿ ? ಒಬ್ಬರಿಗಲ್ಲ ಮತ್ತೊಬ್ಬರಿಗೆ ಸೇವಾವೃತ್ತಿ ಮಾಡುವದಕ್ಕಾಗಿಯೇ ಭಗವಂತನು ಹಿಂದೂ ಜನಾಂಗವನ್ನು ನಿರ್ಮಿಸಿದಾನೆ

ಘೋರಿ—ಭೇಷ್, ಚನ್ನಾಗಿ ಹೇಳಿದೆ ಎಲ್ಲಿ ನಮ್ಮ ಕೀರ್ತಿಯನ್ನು ಹೊಗಳಿ.

ವಂದಿಗಳು—ರಾಜಾಧಿರಾಜ ದೆಹಲೀ ಸಿಂಹಾಸನಾಧೀಶ್ವರ ಘೋರೀ ಮಹಾರಾಜ ಪರಾಕ್.

ಅಜ್ಮೀರ್ ಸಿಂಹಾಸನಾಧೀಶ್ವರ ಮಹಮದ್ ಘೋರಿ ಮಹಾರಾಜ ಪರಾಕ್.

ಶೂರ ವೀರ ಧೀರ ಹಮ್ಮೀರ ಯವನ ಕುಲಾವತಂಸ, ಹಿಂದೂ ಧರ್ಮ ಕುಠಾರ, ಪರಾಕ್

(ಪರದೆ ಬೀಳುವದು)

ಸರದಾರ್ ವಲ್ಲಭಬಾಯಿ ಪಟೇಲರು



ಜರ್ಮನಿಯಲ್ಲಿ ಬಲವಂತ ದಾಂಪತ್ಯ ವಿಚ್ಛೇದನ !

ಇಷ್ಟವಿಲ್ಲದಿದ್ದರೂ ಬಲವಂತದಿಂದ ದಾಂಪತ್ಯವಿಚ್ಛೇದನ ಮಾಡಬಹುದೆಂದು ನಾಜೀ ಕೋರ್ಟುಗಳಿಗೆ ಅಪ್ಪಣೆ ದೊರಕಿದೆ. ಗಂಡಹೆಂಡಿರು ಕ್ರಿಮಿನಲ್‌ಗಳಾಗಿದ್ದರೂ, ಅಸಭ್ಯ ಜೀವನವನ್ನು ನಡೆಸುತ್ತಿದ್ದರೂ, ಮತವಿರೋಧ ಚಳುವಳಿ ನಡಸುತ್ತಿದ್ದರೂ ಅಥವಾ ಅವರ ಜೀವನವು ಸ್ವಲ್ಪವೂ ಧಾರ್ಮಿಕ ಜೀವನವಾಗಿಲ್ಲದಿದ್ದರೂ ಈ ರೀತಿ ಮಾಡಬಹುದಂತೆ ರಾಷ್ಟ್ರದ ಅಸ್ತಿಭಾರವು ನೈತಿಕ ಜೀವನದಮೇಲೆಯೇ ಕಟ್ಟಲ್ಪಡಬೇಕು. ಈ ರೀತಿ ಇಲ್ಲದ ಮದುವೆಯಲ್ಲಿ ನಾಜಿಗಳಿಗೆ ಸ್ವಲ್ಪವೂ ಗೌರವವಿಲ್ಲ

ಶ್ರೀ ರಂಗನಾಥ ಟೈಪ್ ಫೌಂಡ್ರಿ

ಚಿಕ್ಕಪೇಟೆ, ಬೆಂಗಳೂರು ಸಿಟಿ

ಸುಂದರವಾದ ಅಕ್ಷರಗಳು, ಮುದ್ದುಮುದ್ದಾದ ಬಾರ್ಡರುಗಳು, ಬಗೆಬಗೆಯ ಆಕಾರ

ನಮಗೆ ಈ ಕೆಲಸದಲ್ಲಿ ೩೦ ವರ್ಷಗಳ ಕಾಲದ ಅನುಭವವಿದೆ. ಆಧುನಿಕ ಕಾಲಕ್ಕೆ ತಕ್ಕಂತೆ ಅಕ್ಷರದ ಆಕಾರವನ್ನು ಬಹು ಸುಂದರವಾಗಿ ಸುಧಾರಿಸಿದ್ದೇವೆ. ನಮ್ಮಲ್ಲಿನ " **ಕನ್ನಡ, ಇಂಗ್ಲೀಷ್** " ಅಕ್ಷರಗಳಂತಹ ಸುಂದರವಾದ ಅಕ್ಷರಗಳನ್ನು ಮತ್ತೆಲ್ಲಿಯೂ ನೋಡಲಾರಿರಿ. ಮತ್ತು

ನೂರಾರು ಬಗೆಯ ಸುಂದರವಾದ ಬಾರ್ಡರುಗಳು, ನಯನಮನೋಹರವಾಗಿವೆ. ೮ ಪಾಯಿಂಟಿನಿಂದ ೪೮ ಪಾಯಿಂಟಿನವರೆಗೆ ವಿಧವಿಧವಾದ ಸುಂದರಾಕ್ಷರಗಳಿವೆ. ನಮ್ಮ " ರಂಗನಾಥ ಕನ್ನಡ ಡಾಮಿನಸ್" ಅಕ್ಷರಗಳನ್ನು ನೋಡಲು ಮರೆಯಬೇಡಿರಿ ನಾವು ಕಾಪರ್ ಅಲಾಯ್ಡ್ (ತಾಮ್ರಮಿಶ್ರಿತ) ಸೀಸದಿಂದ ಅಕ್ಷರಗಳನ್ನು ತಯಾರಿಸುತ್ತೇವೆ. ಸುಲಭ ಬೆಲೆ. ಗ್ಯಾರಂಟಿಯಾದ ಬಾಳಿಕೆ.

JAWAHARLAL,
The Hope of India
(By Y. G.)

Jawaharlal is a name to conjure with He is not a speculative mystic but a practical realist. He is an impassioned champion of freedom, whose self confidence, energy and imagination, the three elements in his make-up, have brought him into the temple of fame His bewildering naturalness, frank realism, sterling simplicity and grim determination of purpose have made a grateful nation speak of him with spontaneous homage

A man slenderly and regularly built, wearing a Bengali Baman and a Gandhi cap on with the noble bearing of a conquering Roman, the features as if hewn out of marble, the most delicate curl of the lips showing the many shades of good humour, Pandit Nehru, with his ardent vision and coolest calculation, showers a cataract of freshness and joy He is not a prophet of destruction but the harbinger of peace

Jawaharlal beyond compare is a born leader of men It is indeed a truism to say that to command came to him naturally just as a calf learns to stand and walk in the first hour of its life. The magic of his personality exercises a bewitching lure. His soaring imagination does not reach the chiller altitude, for reason restrains his fantasy He is a practical genius He calculates the minutest details like "a girl going to have a baby"

Jawahar writes a homely and racy prose, vivid and moving, scintillating with a new spirit It is the language of reason itself. Precision penetrates all he touches. An amiable optimism illumines his style Unimpaired by faults it shines "as brilliant as colours in a golden pheasant's plumages

The exhortation of Jawahar is not the sweet notes of a lute but the call of the trumpet from live lips He rouses the dull, inspires the learned and his influence is irresistible A prophetic effulgence seems to radiate from him He has influence without arrogance and genius without pride In his brain there is no cloud, in his heart no venom and in his action no stain Selfless service is the guiding principle of his life Liberty is his only passion. With unwavering hands he holds the torch of truth. His heart is fresh and pure as the tender and smiling leaves in spring An affectionate father, a dutiful husband, a generous host, a redoubtable warrior, Jawahar, is the most single-minded and unselfish of men.

The hope of India centres round Pandit Nehru He is the idol of Indian Youth. Stalin's fervent faith in mass programme, Mussolini's unshakeable belief in the hidden powers of youth, De Valera's 'vigour and go', and Trotsky's deep historic insight are cunningly commingled in him

ಯಳಂದೂರು ಜಹಗೀರ್ ಸುದ್ದಿ.
(ಸ್ವಂತ ಸುದ್ದಿಗಾರರಿಂದ)

ತಾ॥ 10 1-36

ಈ ತಾಲ್ಲೂಕಿನಲ್ಲಿ 8-10 ದಿವಸಗಳ ಕೆಳಗೆ ರೇವತಿ ಮಳೆ ಸುಮಾರು 2 ಇಂಚು ಮಳೆ ಆಗಿದೆ. ರೈತರು ಜೋಳ ಬಿತ್ತಿದ್ದಾರೆ. ಇನ್ನೂ ಈ ತಾಲ್ಲೂಕು ಕೆರೆಗಳಿಗೆ ನೀರು ಬರತಕ್ಕ ಮಳೆ ಬಂದಿಲ್ಲ.

ಇಲ್ಲಿನ ಜಹಗೀರ್‌ದಾರ್‍ರಾದ ಮ॥ ರಾ॥ ನಾಗರಾಜರಾವ್ ಪೂರ್ಣಯ್ಯನವರು ರಿಸ್ಟ್ರಾರ್ ಡೆವಲಪ್‌ಮೆಂಟ್ ಸೆಕ್ರೆಟರಿಗಳಾದ ಶ್ರೀ॥ ನವರತ್ನ ರಾಮರಾಯರ ಜೊತೆಯಲ್ಲಿ ಈ ಮಾಹೆ ತಾ॥ 9 ನೇ ಗುರುವಾರ ಸಾಯಂಕಾಲ ಯಳಂದೂರಿಗೆ ದಯಮಾಡಿಸಿದರು. ತಾ॥ 10 ನೇ ಶುಕ್ರವಾರ ರೈತರಿಗೆ ದರುಶನಕೊಟ್ಟು ಅಗರ, ಮಾಂಬಳ್ಳಿ, ಕೆರೆ ಹೋಗಿ ಕೆರೆ ನಗ್ಗೆರೆ ಕಾಂಗಾರಿ ವಿಚಾರದ [illegible] ಯಳಂದೂರು, ಮರಿಯೂರು ಮದ್ದೂರು ನಗ್ಗೆರೆ ಗ್ರಾಮದ ಕೆರೆ ಮತ್ತು ನಾಲಾ ಹೊಸ ಮದ ಕಾಂಗಾರಿ ಮಾಡಿಸಲು ರೈತರಿಗೆ [illegible] ಇನ್ನು ಇವರು ಈ ತಾಲ್ಲೂಕಿನಲ್ಲಿ 2-3 ದಿವಸವಿರುವಂತೆ [illegible] ಬರುತ್ತೆ.

ತಾ॥ 11 ನೇ ಶನಿವಾರ ತಮ್ಮ [illegible] ಯಳಂದೂರು ರೈತರು ಕಸಬಾ ರೈತರನ್ನು ಬರಮಾಡಿಕೊಂಡು ಯಳಂದೂರು ಕೆರೆಗೆ ಸುವರ್ಣಾವತಿ ನದಿಯಿಂದ ನಾಲೆಗೆ ನಲೀನ ನೀರು ಬಂದು ಕೆರೆ ತುಂಬಲು ಅನುಕೂಲಪಡಿಸುವದಕ್ಕೆ ರೈತರ ಸಹಾಯ ಕೇಳಿದರು ರೈತರು ಕಂಟ್ರಿಬ್ಯೂಷನ್ ಕೊಡುವದರ ಜೊತೆಗೆ ತಮ್ಮಿಂದ ಕೆಲವು ಹಾಗ ಮೊಬಲಗು ಕೊಡುವುದಾಗಿ ಹೇಳಿದರು

ಇದೇರೀತಿ ಈ ಮಾಹೆ 12 ನೇ ತಾರೀಖು ಬಾನುವಾರ ಚಿಕ್ಕೆಗ್ಗೆ ನದಿಯಿಂದ ನಾಲಾ ಕ್ಕೆ ನೀರು ಬರಲು ಅನಾನುಕೂಲವಾಗಿ ಮದ ಭಾಗವನ್ನು ಸ್ಥಳಕ್ಕೆ ಹೋಗಿ ಆದಷ್ಟು ಯಿಷಿ ಮಾಡಿಕೊಂಡು ಬಂದರು ಮತ್ತು ಈ ಏಗ್ಗೆ ಹಿರಿಯೂರು, ಹಿಂಬಳ ರೈತರನ್ನು ಬರಮಾಡಿಕೊಂಡು ಹಿರಿಯೂರು ಕೆರೆ, ಅಂಬಳೆ ಕೆರೆ ಇವುಗಳ ಕಾಂಗಾರಿ ವಿಷಯದಲ್ಲಿ ರೈತರ ಜಹಗೀರ್ ಕೆರೆ ಇವುಗಳ ಕಾಂಗಾರಿ ಮಾಡಿಸುವದಾಗಿ ಈ ವಿಷಯದಲ್ಲಿ ರೈತರು ಕೊಡತಕ್ಕ ಕಂಟ್ರಿಬ್ಯೂಷನ್ ಜೊತೆಗೆ ತಾವು ಸಹಾಯ ಮಾಡಿಕೊಡುವುದಾಗಿ ಹೇಳಿದ್ದಾರೆ ಇವರು ತಮ್ಮ ಜಹಗೀರ್ ತಾಲ್ಲೂಕಿಗೆ ಹೆಚ್ಚೆ ಹೆಚ್ಚೆ ದಯಮಾಡಿಸಿ ರೈತರಿಗೆ ಇರತಕ್ಕ ಕುಂದು ಕೊರತೆಗಳನ್ನು ವಿಚಾರಮಾಡಿ ಎಲ್ಲಾ ಪರಿಹಾರಮಾಡಿಕೊಡುವದಾಗಿ ಹಾಸ್ಟೆಲ್ ಗೆ ಒಪ್ಪಿಗೆ ಕೊಟ್ಟಿದ್ದು ಇಲ್ಲಿ ನರದಿದ್ದ ರೈತ ಪ್ರಜೆಗಳಿಗೆ ತುಂಬಾ ಸಂತೋಷವನ್ನುಂಟುಮಾಡಿತೆ.

ಯಾ ಇವರು ಹಿರಿಯೂರು ಅಂಬಳೆ ಕೆರೆಗಳಿಗೆ ದಾಮ ಕಾಮಗಾರಿಗಳ ವಿದ್ಯು ಹೆಂಡರು ಕಾಂಗಾರಿಗಳ ವಿಷಯವೇ ಹೊಡಲುವವನ್ನು ತಾಲ್ಲೂಕು ಅಮಲ್‌ದಾರರವರು ತಿಳಿಸಿದರು ಹೋಬಳಿಂದ ಗ್ರಾಮಗಳ ಕೆರೆಗಳ ಮತ್ತು ನಾಲಾ ಹೊಗವಾಯಿ ನಲ್ಲಿ ಮರಳು ಹೂಗಿರುವ ವಿಷಯವಾಗಿ ಈ ಗ್ರಾಮಗಳ ಮುಖಂಡ ರೈತರು ಹೇಳಿದರು ಇರುವ ತೊಂದರೆಗಳನ್ನು ತಿಳಿಸುವಡಿ ಸಿದರು.

ನಂತರ ಸಭಿಕರ ಪರವಾಗಿ ಇಲ್ಲಿನ ಮುನಿಸಿಪಲ್ ಕೌನ್ಸಿಲರಾದ ಮೈ ಶ್ರೀನಿವಾಸಯ್ಯಂಗಾರ್ರು ಶ್ರೀಮಂತ ಜಹಗೀರ್‌ದಾರ್‍ರವರು ತಮ್ಮ ತಾಲ್ಲೂಕು ಪ್ರಜೆಗಳ ವಿಷಯದಲ್ಲಿ ಆಸಕ್ತಿಕೊಟ್ಟ ಸಂತೋಷವಾದ ವಾರ್ತೆಗಳನ್ನು ಹೊಗಳಿ ವಂದನೆ ಮಾಡಿದರು

ಗಲಭೆ.

[illegible] ನಗರದ ತಾ॥ ಕೆರೆಹಳ್ಳಿಯ ಹಿಂದೂಜನರಿಗೂ ಮತ್ತು ಸಂಪನಗೂಡು ತಾ॥ ದೊಡ್ಡ ಕೌಲಂದೆ ಗ್ರಾಮದಲ್ಲಿರುವ ಮಹಮ್ಮದೀಯರಿಗೂ ಕಳೆದ ತಿಂಗಳು 13 ನೇ ತಾ॥ ಮನಸ್ತಾಪವುಂಟಾಗಿ ಆಯುಧಗಳ ಸಮೇತ ಮಹಮ್ಮದೀಯರು ಬಂದಿದ್ದರು ಇವರು ಬಂದು [illegible] ಹಿಂದೂಗಳೂ ಸಹ ದೊಣ್ಣೆಗಳನ್ನು ತೆಗೆದುಕೊಂಡು ಜಗಳಕ್ಕೆ [illegible] ಮಹಮ್ಮದೀಯರ ಪೈಕಿ ಗುಲಾಂ ಮಹಮ್ಮದ್ ಸಾಹೇಬರೆಂಬುವರು [illegible] ತಂದುಕೊಂಡು ತಮ್ಮವರನ್ನು [illegible] ಸಮಾಧಾನಪಡಿಸಿ ಹಿಂದಕ್ಕೆ ಕರೆದುಕೊಂಡುಹೋದರು ನಂತರ ಹಿಂದೂಜನರು ಸರ್ಕಾರಕ್ಕೆ ಅರ್ಜಿ ಹಾಕಿರುವರು ಇದುವರಿಗೆ ವಿಚಾರಣೆ ನಡೆದಿಲ್ಲ ಇನ್ನು ಮುಂದೆ ಇದೇ ರೀತಿ ಗಲಾಟೆ ನಡೆಯುವ [illegible]. ಆದರೆ ಗೌರ್ನ[illegible] ಹಿಗಾ ತಂದುಕೊಂಡು ಬಂದೋಬಸ್ತು ನಡಿಸುವರೆಂದು ನಂಬಲಾಗಿದೆ ಎಂದು ಒಬ್ಬ ವಾತ್ತೀದಾರರು ಬರೆಯುತ್ತಾರೆ

ಹೆರಿಗೆ ಆಸ್ಪತ್ರೆ

ತುರುವೇಕೆರೆಯಲ್ಲಿ ಹೆರಿಗೆ ಆಸ್ಪತ್ರೆ ಯೊಂದನ್ನು ಕಟ್ಟಲು ತುಮಕೂರು ಡಿಸ್ಟ್ರಿಕ್ಟ್ ಡಿಪ್ಯುಟಿ ಕಮಿಷನರಾದ ಮಿ॥ ಅಬುಬಕರ್‌ರವರು ಈ ತಿಂಗಳ ಹತ್ತನೇ ತಾ॥ ಬೆಳಿಗ್ಗೆ ಶಂಕುಸ್ಥಾಪನೆಯನ್ನು ಮಾಡಿದರು

ಸಂಸ್ಥಾನದ ಸ್ಕೌಟ್ ರ್‍ಯಾಲಿ

ಮೈಸೂರು ಸಂಸ್ಥಾನದ ಸ್ಕೌಟ್ ರ್‍ಯಾಲಿ ಯನ್ನು ದಾವಣಗೆರೆಯಲ್ಲಿ ಮಾರ್ಚಿ ತಿಂಗಳ 1, 5 ಮತ್ತು 6 ನೇ ತಾ॥ಗಳಲ್ಲಿ ನಡೆಸುವಂತೆ ತೀರ್ಮಾನವಾಗಿದೆ ಇದರ ಪ್ರಾರಂಭೋತ್ಸವವನ್ನು ನಡೆಸಲು ಚಾಮರಾಜನಗರ ಜಯಚಾಮರಾಜೇಂದ್ರ ಒಡೆಯರವರನ್ನು ಪ್ರಾರ್ಥಿಸಲಾಗಿದೆ

ಕೊಡ್ಲಿ ಸ್ವಾಮಿಗಳವರ ಬದರೀ ಯಾತ್ರೆ

ಶ್ರೀ ಕೊಡ್ಲಿ ಮಠದ ಮತ್ತೊಬ್ಬ ಸ್ವಾಮಿಗಳವರು ಬದರೀನಾಥದ ಯಾತ್ರೆಗೆ ದಯಮಾಡಿಸಿರುವರು ಇವರೊಡನೆ ಶ್ರೀ ಪೋಲೀಸು ಸೂಪರಿಂಟೆಂಡೆಂಟರಾದ ಶ್ರೀ ನರಸಿಂಹಮೂರ್ತಿಗಳವರೂ ಇತರ ಹದಿನ[illegible] ಜನರೂ ಹೊರಟಿರುವರು ಇವರು ಸಂಚಾರಮಾಡುತ್ತ ಇಂದೂರು ಸಂಸ್ಥಾನದಲ್ಲಿ [illegible] ಮುಂದೆ [illegible]ರುವರು

ಉಪಾಧ್ಯಾಯರ ಸಂಘ ಚಿಕ್ಕಮಗಳೂರು

ಚಿಕ್ಕಮಗಳೂರು ಎಲಿಮೆಂಟರಿ ಸ್ಕೂಲು ಉಪಾಧ್ಯಾಯರ ಸಂಘದ ವಾರ್ಷಿಕೋತ್ಸವವು ಕಳೆದ ತಾ॥ 9 ರಲ್ಲಿ ಅಡಿಷ್ನಲ್ ಕೋರ್ಟ್ ಮ॥ ಎನ್ ವೆಂಕಟರಾಮಯ್ಯನವರ ಅಧ್ಯಕ್ಷತೆಯಲ್ಲಿ ನಡೆಯಿತು. ಪ್ರಾರ್ಥನೆ ಪ್ರಾರ್ಥನಾನಂತರ ಮ॥ ಟಿ ಕೃಷ್ಣ[illegible]ರವರು ಸಂಸ್ಥಾನದ ಎಲಿಮೆಂಟರಿ ವಿದ್ಯಾಭ್ಯಾಸದ ಸ್ಥಿತಿಯ ವಿಷಯವಾಗಿ ಭಾಷಣಮಾಡಿದರು



A Reliable House for Repairs of
WATCHES & GRAMOPHONES
HIGH CLASS RUBBER STAMP
Suppliers,
M V·N WATCH COY.,
The General Commission Agency.
Lansdowne Buildings,
MYSORE

ಗಡಿಯಾರ ಮತ್ತು ಗ್ರಾಮೋಫೋನುಗಳ ರಿಪೇರಿ
ಮತ್ತು ರಬ್ಬರ್ ಮೊಹರುಗಳ ತಯಾರಿ
ನಮ್ಮಲ್ಲಿ ನಡೆಯುತ್ತವೆ.
ಎಂ. ವಿ. ಎನ್ ವಾಚ್ ಕಂಪೆನಿ, ಮೈಸೂರು

ಎಂ. ವಿ. ನಾರಾಯಣರಾಯರ
ಶ್ರೀ ಸತ್ಯನಾರಾಯಣ ಪರಿಮಳ ಫ್ಯಾಕ್ಟರಿ,
ಜಗನ್ಮೋಹನ ಬಂಗ್ಲಾ ಬೀದಿ, ಮೈಸೂರು.

ಪರಿಮಳ ಅಗರ್ ಬತ್ತಿ

ಉಪಯೋಗಿಸಿ ಪ್ರೋತ್ಸಾಹಿಸಿರಿ.

ANANDA SODA FACTORY,
DODDAPET, MYSORE.

BEST AERATED WATER SUPPLIERS.
COMPLETE REQUISITES FOR
AERATED WATER MANUFACTURERS
AVAILABLE.

ಆನಂದಾ ಸೋಡಾ ಫ್ಯಾಕ್ಟರಿ,
ದೊಡ್ಡಪೇಟೆ, ಮೈಸೂರು.

MYSORE RACES & SWEEP
Races—30th May, 3rd, 6th, 9th, 11th & 13th June.

Railway Specials run on all Race days between Bangalore & Mysore at Special Concession rates.

Gold Cup Sweep (By Permission of Government, Of Mysore)

Tickets Rs. 5/- each.

To close on Saturday 23rd May 1936
Bonus given to Sellers of Winning Tickets
Total Collection 1935-Rs 19,970/-
For Prospectus & Particulars apply to

The Honorary Secretary,
Race Course, Mysore

USE ALWAYS
DERMOTONE
(ASTRIC BATHING HERBAL PREPARATION)
THE UNIQUE PRODUCT
IN THE MARKET FOR SKIN HYGIENE.

ಡರ್ಮೋಟೋನ್,
ಶಾಸ್ತ್ರೀಯವಾದ ಮತ್ತು ಆರೋಗ್ಯಕರವಾದ ಚರ್ಮರಕ್ಷಣೆ ಚೂರ್ಣ.
ಡರ್ಮೋಟೋನ್ ವರ್ಕ್ಸ್, ಮೈಸೂರು

BETETR LIGHT
LIGHTER BILLS.

Use—

"BIJLEE"

ELECTRIC BULBS.
made in INDIA.

ಸ್ವದೇಶಿ ಎಲೆಕ್ಟ್ರಿಕ್ ಬಲ್ಬುಗಳನ್ನೇ
ಉಪಯೋಗಿಸಿರಿ.
"ಬಿಜಲಿ"

FROM 20th APRIL 1936
AT OLYMPIA TALKIES, MYSORE.

ಇದೇ ೧೯೩೬ ನೇ ಏಪ್ರಿಲ್ ೨೦ ನೇ ಸೋಮವಾರದಿಂದ
(ತೆಲುಗು ಭಾಷೆಯಲ್ಲಿ)
„ ಭಕ್ತ ಕುಚೇಲ"
ಎಂಬ ಮಹಾ ಭಕ್ತಿ ರಸವಾದ ಚಲನ ಚಿತ್ರ.

ನಾಳಿನ ಮಹಾ ಮೈಸೂರು.

ಉದಯಿಸಲು ಅಡಿಗಲ್ಲನ್ನಿಡಿ

ಮೈಸೂರು ವಿಮಾ ಕಂಪೆನಿಯೊಂದಿಗೆ ಸರ್ವ ಪ್ರಕಾರದಿಂದಲೂ ಸಹಕರಿಸಿ ಇದು ನಮ್ಮ ಪ್ರಾರ್ಥನೆ

ಹೀಗೆ ಪ್ರಾರ್ಥಿಸುವುದು ನಮ್ಮ ಜನ್ಮಸಿದ್ಧವಾದ ಹಕ್ಕು, ಹಾಗೆ ಸಹಕರಿಸುವುದು ನಿಮ್ಮ ಪವಿತ್ರ ಕರ್ತವ್ಯ.

ಕರ್ನಾಟಕದಲ್ಲಿ ಸ್ಥಾಪಿತವಾದ ವಿಮಾ ಕಂಪೆನಿಗಳಲ್ಲಿ ಪ್ರಥಮ ದರ್ಜೆಯಲ್ಲಿ ಬರುವುದು ಈ ಕಂಪೆನಿಯನ್ನು ಸಾಧನೆಗೆಲ್ಲ

ನಾಳಿನ ಮಹಾ ಮೈಸೂರಿನ ಮುಂಬೆಳಗು ಯಾವುದು?

ಮೈಸೂರು ವಿಮಾ ಕಂಪೆನಿ, ಲಿಮಿಟೆಡ್.

ಬೆಂಗಳೂರು.

ಮೈಸೂರು ವಿಮಾ ಕಂಪೆನಿಯು ಮೈಸೂರಿನವರ ಮತ್ತು ಮೈಸೂರಿನ ಅಭ್ಯುದಯಕ್ಕಾಗಿ ಮೈಸೂರು ಬಂಡವಾಳದಿಂದ ಮೈಸೂರಿನವರ ನೇತೃತ್ವದಲ್ಲಿ ಮೈಸೂರಿನ ಕೆಲಸಗಾರರಿಂದ ನಡೆಸಲ್ಪಡುತ್ತಿರುವ ಅಚ್ಚ ಮೈಸೂರು ಸಂಸ್ಥೆ.

ಜನತೆಯ ಆರ್ಥಿಕೋನ್ನತಿಗಾಗಿ ದೇಶದ ನಾನಾ ಭಾಗಗಳಲ್ಲಿ ನಡೆಯುತ್ತಿರುವ ಪ್ರಯತ್ನಗಳಿಗೆ ಅನ್ನ ಕರ್ನಾಟಕದ ಮೈಸೂರು ನೆರವಾಗಬೇಕೆಂಬ ಉದ್ದೇಶದಿಂದ ಈ ಸಂಸ್ಥೆಯು ಬೆಳಕುಕಂಡಿತು.

ವಿಮಾ ಉದ್ಯಮದಲ್ಲಿ ಇಡೀ ಸಂಸ್ಥಾನಕ್ಕೆ ನಿಜವಾದ ಅದರ ಸಾರ್ವಜನಿಕ ಸಂಸ್ಥೆಯಿದು.

ಇಂತಹ ಕಂಪೆನಿಯಲ್ಲಿ ಮೈಸೂರಿನವರೆಲ್ಲರ ಪಾತ್ರವಿದ್ದೇ ತೀರಬೇಕು.

ಮೊದಲಿನ ೧ ಲಕ್ಷ ರೂ. ಗಳ ಷೇರುಗಳೂ ಅತ್ಯಲ್ಪಕಾಲದಲ್ಲಿ ಬೇಗ ಮಾರಾಟ ಆಗಿಹೋದವು.

ಹೆಚ್ಚಿನ ಅವಶ್ಯಕತೆಗಳನ್ನನುಸರಿಸಿ

ಷೇರು ಬಂಡವಾಳವನ್ನು ಇನ್ನೂ ೨ ಲಕ್ಷ ಹೆಚ್ಚಿಸಲಾಗಿದೆ.

ಈ ಎರಡು ಲಕ್ಷದಲ್ಲಿ ೧೦೦ ರೂಗಳ ೧೦೦೦ ಷೇರುಗಳನ್ನು ಮಾತ್ರ ಪ್ರಿಫರೆನ್ಸುಗಳು ಮಾರಾಟಕ್ಕಿಟ್ಟಿರುವುದು

ಬಂದ ಷೇರು ಹಣವನ್ನು ಸರ್ಕಾರಿ ಸಾಲಪತ್ರಗಳಲ್ಲಿ ತೊಡಗಿಸಿದ್ದರೆ ಈ ವರ್ಷ ಲಾಭ ಬಂದಿತು ಹೋಗುತ್ತಿತ್ತು. ಆದರೆ, ಕೊನೆಯ ಪಕ್ಷ ಸಾವಿರ ರೂಪಾಯಿ ಪತ್ರಗಳನ್ನು ತೆಗೆದು ಕೊಂಡಲ್ಲಿದೆ ಷೇರುಗಳನ್ನು ಕೊಡಬೇಕೆಂದು ತೀರ್ಮಾನಿಸಿದೆ. ಇದರಿಂದ ಇನ್ನು ಕೆಲವು ಷೇರುಗಳು ಮಾತ್ರ ಉಳಿದಿವೆ

ಸರ್ವರ ಅನುಕೂಲ ಅವಶ್ಯಕತೆಗಳಿಗೆ ಸರಿಹೊಂದುವ ವೈದ್ಯ ಪರೀಕ್ಷೆಯಿಲ್ಲದ ಮತ್ತು ಇಲ್ಲದಿರುವ ನವೀನ ವಿಮಾ ಪದ್ಧತಿಗಳು.

ಸ್ತ್ರೀಯರೂ ವಿಮೆ ಮಾಡಬಹುದು

ಏಜೆಂಟರುಗಳಿಲ್ಲದ ಸ್ಥಳಗಳಲ್ಲೆಲ್ಲಾ ಏಜೆಂಟರು ಬೇಕು.

ವೇತನದ ಮೇಲೂ ಕೆಲಸ ಮಾಡಲು ಅವಕಾಶವಿದೆ.

ಹೆಚ್ಚು ವಿವರಗಳಿಗೆ—

ಕಂಠೀರವ ಮತ್ತು ಕಂಪೆನಿ,
ಮ್ಯಾನೇಜಿಂಗ್ ಏಜೆಂಟ್ಸ್,
ಮೈಸೂರು ವಿಮಾ ಕಂಪೆನಿ ಲಿಮಿಟೆಡ್,
ಶ್ರೀ ನರಸಿಂಹರಾಜ ರೋಡ್, ಬೆಂಗಳೂರು ಸಿಟಿ.

KANTEERAVA & Co.
Managing Agents,
MYSORE INSURANCE CO., LTD.,
Narasimharaja Road, Bangalore City.

Edited, Printed & Published by Agaram Rangiah, B. A., at Sri Rama Press, D. Subbiah Road, Mysore.

ಪತ್ರಿಕೆ ಚಂದಾ ವಿವರ.

ವರ್ಷ ಒಂದಕ್ಕೆ ಅಂಚೆವೆಚ್ಚ ಸಹಿತ ರೂ 1—8—0

ಆರು ತಿಂಗಳಿಗೆ 2—1—0 ಬಿಡಿ ಪ್ರತಿಗೆ 0—0—6

ಜಾಹೀರಾತು ಚಂದಾ ವಿವರ.

ಬಿಡಿ ಸಂಚಿಕೆಗೆ

2—1—0

|| ಸತ್ಯಮೇವೋದ್ಧರಾಮ್ಯಹಮ್ ||

ರಾಜಧಾನಿಯ ರಾಷ್ಟ್ರೀಯ ವಾರ ಪತ್ರಿಕೆ.

ವೃದ್ಧ ಪಿತಾಮಹ ಎಂ. ವೆಂಕಟಕೃಷ್ಣಯ್ಯನವರ ಜ್ಞಾಪಕಾರ್ಥವಾಗಿ ಪ್ರಕಟಿಸಲ್ಪಡುವುದು.

ಸಂಪಾದಕರು ಅಗರಂ ರಂಗಯ್ಯ, ಬಿ.ಎ.

Sadhvi: A Leading Nationalist Weekly of Mysore.

FOUNDED IN MEMORY OF MR. M. VENKATA KRISHNAYYA, THE GRAND OLD MAN OF MYSORE

ಸಂಪುಟ ೧] MYSORE : MONDAY 27—4—36 ಮೈಸೂರು : ಸೋಮವಾರ ೨೭—೪—೩೬ [ಸಂಚಿಕೆ ೧೦

Bombay
INDRA BHAVAN,
IDEAL INDIAN RESTAURANT,
Sayaji Rao Road, MYSORE.

LADIES AND GENTLEMEN,

Don't you like to safegaurd your health at all times? Then you must insist upon having your Lunch and Drinks hygienically prepared by pure and choicest articles.

One Sweet and One Savoury are the Specialities everyDay.

This Week	Sweets.	Savoury.
Monday	Rose Halwa	Vegetable Bonda
Tuesday	Bombay Bowar	Potato Stick
Wednesday	Queen Cake	Chips
Thursday	Custard Cake	Pepper Bada
Friday	Mango Halwa	Diamond Tukadi
Saturday	Calcutta Tope	Vegetable Tablets
Sunday	Badam Louge	Vegetable Katlis.

ಬೊಂಬಾಯಿ ಇಂದ್ರಭವನ,
ಅತ್ಯುತ್ತಮವಾದ ಹಿಂದೂ ಫಲಾಹಾರ ಮಂದಿರ
ಸಯ್ಯಾಜಿರಾವ್ ರಸ್ತೆ, ಮೈಸೂರು.

ಮಹಿಳೆಯರೇ ಮತ್ತು ಮಹನೀಯರೇ,

ನೀವು ಸದಾ ನಿಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳಬೇಕೆಂದು ಆಶಿಸುವುದಿಲ್ಲವೇ? ಹಾಗಾದರೆ ಯಾವಾಗಲೂ ಶುಚಿಯಾದ ಮತ್ತು ಉತ್ತಮವಾದ ಪದಾರ್ಥಗಳಿಂದಲೇ ತಯಾರಿಸಿದ ರುಚಿಯಾದ ಆಹಾರ ಮತ್ತು ಪಾನೀಯಗಳು ಅಗತ್ಯವಾನೆ?



A Reliable House for R pairs of
WATCHES & GRAMOPHONES.
HIGH CLASS RUBBER STAMP
Suppliers,
M. V. N. WATCH COY.
The General Commission Agency.
Lansdowne Buildings,
MYSORE.
ಗಡಿಯಾರ ಮತ್ತು ಗ್ರಾಮೋಫೋನುಗಳ ರಿಪೇರಿ
ಮತ್ತು ರಬ್ಬರ್ ಮೊಹರುಗಳ ತಯಾರಿ
ನಮ್ಮಲ್ಲಿ ನಡೆಯುತ್ತವೆ.
ಎಂ. ವಿ. ಎನ್. ವಾಚ್ ಕಂಪೆನಿ, ಮೈಸೂರು.

MYSORE RACES & SWEEP

Races.—30th May, 3rd, 6th, 9th, 11th & 13th June,

Railway Specials run on all Race days between Bangalore & Mysore at Special Concession rates.

GOLD CUP SWEEP (BY PERMISSION OF GOVERNMENT OF MYSORE.)

Tickets Rs. 5/- each

To close on Saturday 23rd May 1936.
Bonus given to Sellers of Winning Tickets.
Total Collection 1935-Rs. 19,970/-
For Prospectus & Particulars apply to

The Honorary Secretary,
RACE COURSE, MYSORE.

WIN RUPEES 100

In the WORD BUILDING Competition.

1st Prize	2nd Prize	3rd Prize
Rs 40	Rs 30	Rs 20

Rs. 10, for the sender of largest number of entries.
Last Posting Date; **12-5-1936.**

You are given the 26 English Alphabets numbered as:—

A	B	C	D	E	F	G	H	I	J	K	L	M	N	O	P	Q
1	2	3	4	5	6	7	8	9	10	11	12	13	14	15	16	17
R	S	T	U	V	W	X	Y	Z								
18	19	20	21	22	23	24	25	26								

You are required to compile as many words as possible to score the highest number when the value of all the Alphabets of all the words is summed up together. A letter may be repeated in a word for any number of times, but no letter used in one word should be used in other words. Ex. In the word RUPEE, the total value of all the letters is 65. Here E is repeated twice. It is allowed. But no letter used in this word should be used in others.

Rules:—An Entrance Fee of as 4, must accompany every entry by M. O. Any number of Entries attached with Coupons cut out from "SADHVI" are accepted with the requisite Fee. If Coupons are not available, plain paper entries with 6 pies stamps are accepted. A competitor may share in all the three prizes. The results will be judged by the Editor, "Sadhvi" whose decision will be final, and will be published in the same on 18—5—1936. Prizes will be distributed in proportion to the amount collected.

Coupon.

Name..................................
Address..................................
....

H. R. V. SHASTRY.
Sri Rama Press,
Mysore

BETETR LIGHT
LIGHTER BILLS.

Use—

"BIJLEE"

ELECTRIC BULBS.
Made in INDIA.

ಸ್ವದೇಶಿ ಎಲೆಕ್ಟ್ರಿಕ್ ಬಲ್ಬುಗಳನ್ನೇ
ಉಪಯೋಗಿಸಿರಿ.

"ಬಿ ಜ ಲಿ"

SOLE DISTRIBUTORS:-
THE STATES ENGINEERING COMPAN
BANGALORE, MYSORE, SHIMOGA & COIMBATORE.

FROM 28—4—1936 (FULL SERIAL)
AT OLYMPIA TALKIES, MYSORE.



ಒಲಿಂಪಿಯಾ ಟಾಕೀಸ್, ಮೈಸೂರು.
"ದಿ ಲಾಸ್ಟ್ ಸಿಟಿ"

|| ಸತ್ಯಮೇವೋದ್ಧರಾಮ್ಯಹಮ್ ||
ರಾಜಧಾನಿಯ ರಾಷ್ಟ್ರೀಯ ವಾರ ಪತ್ರಿಕೆ.
ವೃದ್ಧಸಿಕಾಪುರದ ಎಂ. ವೆಂಕಟಕೃಷ್ಣಯ್ಯನವರ ಜ್ಞಾಪಕಾರ್ಥವಾಗಿ ಪ್ರಕಟಿಸಲ್ಪಡುವುದು.
ಸಂಪಾದಕರು ಅಗರಂ ರಂಗಯ್ಯ, ಬಿ. ಎ.

ಸಂಪುಟ ೧] MYSORE : MONDAY 27—4—36 ಮೈಸೂರು : ಸೋಮವಾರ ೨೭—೪—೩೬ [ಸಂಚಿಕೆ ೧೦

ಸಾಂಡೂರು ಸಂಸ್ಥಾನದಲ್ಲಿ ಸಾಲಗಳ ಪರಿಹಾರ.

ಸಾಲಗಳನ್ನು ಪರಿಹಾರ ಮಾಡಿ ತೀರ್ಮಾನಿಸುವ ಬಗ್ಗೆ ಸಾಂಡೂರು ಸಂಸ್ಥಾನ ಸರ್ಕಾರದವರು ಒಂದು ಸಮಿತಿಯನ್ನು ಏರ್ಪಡಿಸಿರುವರು. ಈ ಸಮಿತಿಗೆ ಶಕ್ತಿಯೊಂದು ಸಾಲದ ಲೆಕ್ಕವೂ ನಿರ್ಣಯಾಗಿ ಕೊಡಲ್ಪಡುವುದು. ಇವರು ಸಾಲ ಕೊಟ್ಟವರ ಮತ್ತು ಸಾಲಗಾರರ ಅಹವಾಲುಗಳನ್ನು ವಿಶದವಾಗಿ ಪರಿಶೀಲಿಸುವರು ಮತ್ತು ಅವರಿಬ್ಬರಿಗೂ ಕ್ಷೇಮಕರವಾದ ಒಪ್ಪಂದವನ್ನು ಮಾಡಿಸುವರು. ಇಲ್ಲಿಂದ ಇಬ್ಬರೂ ಸರಿಯಾದ ಒಪ್ಪಂದಕ್ಕೆ ಬಾರದಿದ್ದರೆ ಈ ಸಮಿತಿಯವರೇ ಅವರ ಲೆಕ್ಕಗಳನ್ನೂ ಪರಿಶೀಲಿಸಿ ತಮಗೆ ಯುಕ್ತ ತೋರಿದಂತೆ ತೀರ್ಮಾನವನ್ನು ಮಾಡುವರು. ಈ ತೀರ್ಮಾನವು ರಿಜಿಸ್ಟರ್ ಮಾಡಿಸಲ್ಪಡುವುದು. ಸಾಲಗಾರರೂ ಸಾಹುಕಾರರೂ ಪರಸ್ಪರ ಸಮ್ಮತಿಯಿಂದ ಮಾಡಿಕೊಂಡ ಒಪ್ಪಂದದಂತೆಯೇ ತಾನು ಇತ್ಯರ್ಥ ಇದು ಪರಿಗಣಿಸಲ್ಪಡುವುದು. ಇದರಿಂದ ದೀರ್ಘಕಾಲದವರೆಗೆ ಎಳೆಯುತ್ತಿದ್ದ ಲೇವಾದೇವಿಗಳು ಅಲ್ಪಕಾಲದಲ್ಲಿಯೇ ತೀರ್ಮಾನವಾಗುತ್ತವೆ. ಮತ್ತು ಉಭಯ ಪಂಗಡದವರಿಗೂ ಉಪಯುಕ್ತವಾದ ರೀತಿಯಲ್ಲಿ ತೀರ್ಮಾನವು ಕೊಡಲ್ಪಡುತ್ತದೆ. ಇದಕ್ಕಾಗಿ ಸಾಂಡೂರು ಸಂಸ್ಥಾನದಲ್ಲಿ ಒಂದು ಹೊಸ ಕಾನೂನು ಮಾಡಲ್ಪಟ್ಟಿದೆ. ಈ ಕಾನೂನು ಜಾರಿಗೆ ಬರುವುದಕ್ಕೆ ಮುಂಚೆ ಕೋರ್ಟುಗಳಲ್ಲಿ ತೀರ್ಮಾನವಾಗುತ್ತಿದ್ದ ದಾವಾಗಳೆಲ್ಲವನ್ನೂ ಮೇಲ್ಕಂಡ ಸಮಿತಿಯಲ್ಲಿ ಏಕೇ ಮಾಡತಕ್ಕ ಸಮಿತಿಯು ಪರ್ಯಾಲೋಚನೆಗೆ ತೆಗೆದುಕೊಳ್ಳಲಾಗುತ್ತದೆ.

ಇತರ ಸಾಲಗಳನ್ನು ತೀರಿಸಿ ಅವರನ್ನು ಮುಕ್ತರನ್ನಾಗಿ ಮಾಡುವ ವಿಷಯದಲ್ಲಿ ಅನೇಕ ಸಂಸ್ಥಾನಗಳೂ ಆಧಿಪತ್ಯಗಳೂ ತಮ್ಮ ವಿಶೇಷವಾದ ಗಮನವನ್ನು ಕೊಡುತ್ತವೆ. ನಮ್ಮ ಸೀಮೆಯಲ್ಲಿಯೂ ಈ ಏರ್ಪಾಡು ಶೀಘ್ರದಲ್ಲಿಯೇ ಆಗುವುದು ಅತ್ಯವಶ್ಯಕ.

ಶ್ರೀ ರಮಣ ಮಹರ್ಷಿಗಳು.

ಇವರು ತಿರುವಣ್ಣಾಮಲೆಯಲ್ಲಿ ಒಂದು ಆಶ್ರಮವನ್ನು ಮಾಡಿಕೊಂಡಿರುವರು
ಇವರ ಚರಿತ್ರೆಯು ಹಿಂದಿನ ಎರಡು ಸಂಚಿಕೆಗಳಲ್ಲಿ ಕೊಡಲ್ಪಟ್ಟಿದೆ.

SRI RAMANA MAHARSHI

ಶಂಕರಜಯಂತಿ.

ಮೈಸೂರು ಶ್ರೀ ಶಂಕರಜಯಂತಿ ಮಹೋತ್ಸವ ಸಭಿಕರು ಕಳೆದ ಬುಧವಾರದಿಂದ ಪದ್ಧತಿಪ್ರಕಾರ ಶ್ರೀ ಶಂಕರಜಯಂತೀ ಮಹೋತ್ಸವದ ಪ್ರಯುಕ್ತವಾದ ಕಾರ್ಯಕ್ರಮಗಳನ್ನು ನೆರವೇರಿಸುತ್ತಿರುವರು. ಪ್ರತಿ ದಿನವೂ ಬೆಳಗ್ಗೆ ಸಂಸ್ಕೃತ ಪಾಠಶಾಲೆಯಲ್ಲಿ ಅಭಿಷೇಕ, ಪಾರಾಯಣ, ಮಂಗಳಾರತಿ ಇತ್ಯಾದಿಗಳೂ ಸಾಯಂಕಾಲಗಳಲ್ಲಿ ದೊಡ್ಡ ದೊಡ್ಡ ವಿದ್ವಾಂಸರುಗಳಿಂದ ಉಪನ್ಯಾಸಗಳೂ, ಹರಿಕಥೆಯೂ ಸಂಗೀತವೂ ನಡೆಯುತ್ತಿವೆ. ಮೇ ತಿಂಗಳು 3 ನೇ ತಾ|| ಭಾನುವಾರದವರೆಗೆ ಉತ್ಸವವು ನಡೆಯುತ್ತದೆ.

ವಿಲಕ್ಷಣಾಕ್ಷರ

ಹಾಸನದ ಡಿಸ್ಟ್ರಿಕ್ಟ್ ಎಕ್ಸೈಸ್ ಹೆಡ್ ಗುಮಾಸ್ತರಾದ ಮ|| ಬಿ ಶ್ರೀಕಂಠಯ್ಯನವರು "ವಿಲಕ್ಷಣಾಕ್ಷರ" ವೆಂಬ ಒಂದು ಸಣ್ಣ ಗ್ರಂಥವನ್ನು ಪ್ರಕಟಿಸಿರುತ್ತಾರೆ. ಅದರ ಒಂದು ಪ್ರತಿಯನ್ನು ನಾವು ಆದರದಿಂದ ಸ್ವೀಕರಿಸಿರುತ್ತೇವೆ. ಅರಸೀಕೆರೆ ಕರ್ನಾಟಕಸಂಘದವರು ಪ್ರಥಮ ಪುಷ್ಪವಾಗಿ ಇದನ್ನು ಪ್ರಕಟಿಸಿರುವರು. ಕನ್ನಡ ಭಾಷೆಯನ್ನು ಸುಲಭವಾಗಿ ಕಲಿಯಲು ಕೆಲವು ಬದಲಾವಣೆಗಳನ್ನು ಸೂಚಿಸಿರುವರು. ಈಗ ಇರತಕ್ಕ ಕೊರತೆಗಳನ್ನು ಒಂದು ನಾಟಕದ ರೂಪದಲ್ಲಿ ಬಣ್ಣಿಸಿರುವರು. ಕರ್ನಾಟಕ ಭಾಷಾಭಿಮಾನಿಗಳು ಓದಬೇಕಾದ ಪುಸ್ತಕ. ಬೆಲೆ ನಾಲ್ಕಾಣೆ

ಕರ್ನಾಟಕ ಆಯುರ್ವೇದ ಸಮ್ಮೇಳನ, ಶಿವಮೊಗ್ಗ.

ಡಾ|| ಎ. ಲ. ಸಾಮಿ, ಕೆ. ಪಿ., ಎಲ್. ಓ. ಡಿ. ಪಿ. ಎಚ್, ಆಯುರ್ವೇದಾಚಾರ್ಯ ಇವರ ಅಧ್ಯಕ್ಷತೆಯಲ್ಲಿ ಮ. ಮ. ಸಮ್ಮೇಳನವು ೬—೫—೩೬ ನೇ ಪ್ರಾತಃಕಾಲ ೮-೩೦ ಗಂಟೆಗೆ ಪ್ರಾರಂಭವಾಗುವುದು. ಪ್ರದರ್ಶನದ ಪ್ರಾರಂಭೋತ್ಸವವು ೪ ನೇ ತಾರೀಖು ಸಾಯಂಕಾಲ ೫|| ಗಂಟೆಗೆ ಪ್ರದರ್ಶನದ ಆವರಣದಲ್ಲಿ ಸುಪ್ರಸಿದ್ಧ ವೈದ್ಯರಾದ ನಂಜನಗೂಡಿನ ಭಿಷಗ್ರತ್ನ ಶ್ರೀ ಬಿ ವಿ ಪಂಡಿತರವರಿಂದ ನೆರವೇರಿಸಲ್ಪಡುವುದು.

ರಸಶಾಸ್ತ್ರ ಸಮ್ಮೇಳನವು—೭ ನೇ ತಾರೀಖು ಸಾಯಂಕಾಲ ೩ ಗಂಟೆಗೆ ಪ್ರಾರಂಭವಾಗುವುದು. ಬಿಜಾಪುರದ ಸುಪ್ರಸಿದ್ಧ ವೈದ್ಯರಾದ ಡಾ|| ಗೋವಿಂದರಾವ್ ಮಾಂಗಲಗಿ, ಬೇಡ, ಎಲ್. ಎಂ. ಅಂಡ್ ಎಸ್. ಇವರು ಅಧ್ಯಕ್ಷರಾಗಲು ದಯಮಾಡಿ ಒಪ್ಪಿರುವರು.

ವೈದ್ಯವಿದ್ವತ್ ಪರಿಷತ್— ೭ ನೇ ತಾರೀಖಿಗೆ ಪ್ರಾರಂಭವಾಗುವುದು ೮ ನೇ ತಾರೀಖು ಸಾಯಂಕಾಲ ಮಹಾ ಸಮ್ಮೇಳನವು ಪುನಃ ನಡೆಯುವುದು. ಶಿವಮೊಗ್ಗಾ ನಗರದಲ್ಲಿ ಮಳೆಗಳಾಗಿ ಉಷ್ಣವು ಕಡಿಮೆಯಾಗಿದೆ. ಯಾವ ತರಹದ ಸಾಂಕ್ರಾಮಿಕ ರೋಗಗಳೂ ಇಲ್ಲ. ವಾಯುಗುಣವು ಬಹಳ ಹಿತಕರವಾಗಿದೆ. ಸಮ್ಮೇಳನಕ್ಕೆ ದಯಮಾಡಿಸುವವರು ತಾವು ಬರುವ ತಾರೀಖು ಮತ್ತು ಬೇಕಾದ ಸೌಕರ್ಯಗಳನ್ನು ತಿಳಿಸಿದರೆ ಬೇಕಾದ ಏರ್ಪಾಡು ಮಾಡಲಾಗುವುದು. ಸ್ವಯಂಸೇವಕರಾಗಿ ಬರುವವರು ಪ್ರತಿನಿಧಿಗಳಿಗೆ ತಮ್ಮ ಕೈಚೀಲದ ಜೊತೆಗೆ ಹಾಸಿಗೆ ಮುಂತಾದವು ಸಿದ್ಧಗೊಳಿಸಲ್ಪಟ್ಟಿರುವುದು ದಯವಿಟ್ಟು ಮುಂಚೆ ತಿಳಿಸಿದರೆ ಅನುಕೂಲ. ಪ್ರತಿನಿಧಿಗಳಿಗೆ ಊಟ ಉಪಚಾರಗಳನ್ನು ಉಚಿತ ರೀತಿಯಲ್ಲಿ ಮಾಡಲಾಗುತ್ತೆ.

ಸಮ್ಮೇಳನದ ಪ್ರತಿನಿಧಿತ್ವಕ್ಕೆ ವೈದ್ಯರು ೨-೦-೦ ರೂ. ರುಸುಂ ಕೊಡಬೇಕು. ಪ್ರದರ್ಶನಕ್ಕೆ ಮಾತ್ರ ಔಷಧಿಗಳನ್ನು ಕಳುಹಿಸುವ ವೈದ್ಯರು ಪ್ರದರ್ಶನ ರುಸುಂ ಅಲ್ಲದೆ ಪ್ರತಿನಿಧಿ ಹಣವನ್ನು ಸಹ ಕಳುಹಿಸಬೇಕು.

ಪ್ರೇಮ ಬಿಂದು.

ಒಂದು ಸಣ್ಣ ಕಥೆ

ಶ್ರೀ—ಮ॥ ಕೆ. ಎಸ್. ಕೃಷ್ಣಮೂರ್ತಿರಾವ್.

ಅಂದಿನ ಸಂಜೆ ಸುಮಾರು ನಾಲ್ಕುರ ಸಮಯ. ಸರಸಿಯೊಡನೆ ಮಾತನಾಡುತ್ತಾ ಉದ್ಯಾನದಲ್ಲಿ ಕುಳಿತಿದ್ದೆ. ಸರಸಿಯೇ ನನಗೆ ಸರ್ವಸ್ವ. ಸರಸಿ ಬಹು ಜಾಣೆ. ಹಳ್ಳಿಯಲ್ಲಿ ಬೆಳೆದವಳಾದರೂ ಒರಟುತನ ಅವಳಲ್ಲಿಲ್ಲ. ನಸುಕೆಂಪು ದೇಹ. ಕಣ್ಮನಗಳನ್ನು ಸೆಳೆಯುವ ಗುಲಾಬಿಯ ಬಣ್ಣ. ತನ್ನ ಪುಟ್ಟ ಕೈಗಳಲ್ಲಿ ಹಣ್ಣಿನ ತಟ್ಟೆ ಹಿಡಿದು ಒಳಗೆ ಬರಲವಳು ತಟ್ಟನೆ ನಮ್ಮ ಮುತ್ತನಿಕ್ಕುವ ಚಟ ಎನಗಾಗುತ್ತದೆ. ಹಸುರು ಬಣ್ಣದ ಸೀರೆಯನುಟ್ಟು ಬಿಳಿಯ ಜಾಕೀಟು ತೊಟ್ಟು ಅದರ ಜೊತೆಗೆ ತನ್ನ ಗುಲಾಬಿಯ ಮೈಬಣ್ಣವನ್ನು ಸೇರಿಸಿದಳೆಂದರೆ ಅಪ್ಸರಗ ಮಿಗಿಲಾಗುವಳು

'ಏನೋ ಹೇಳುತ್ತಾ ಎಲ್ಲಿಗೋ ಒಂದೆ ಇರಲಿ. ಹಾಗೆಯೇ ನಾವಿಬ್ಬರೂ ಆ ವಿಷಯ ಈ ವಿಷಯ ಮಾತನಾಡುತ್ತಿರಲು ಹೆಬ್ಬಾಗಿಲನ್ನು ತೆರೆದು ಯಾರೋ ಒಳಗೆ ಪ್ರವೇಶಿಸಿದಂತಾಯಿತು. ನೋಡುತ್ತೇನೆ ಒಬ್ಬ ಹೆಂಗಸು. ಅವಳನ್ನು ನೋಡಿದರೆ ಹಿಂದ ಒಮ್ಮೆ ಬಾಳಿ ಈಗ ಜೀವನಾಭಾವದಿಂದ ಅಳಿಯುತ್ತಿರುವಂತೆ ತೋರಿತು. ಈ ಹೆಂಗಸು ಬಂದವಳು ನಾಚಿಕೆಯಿಂದ ತಲೆ ತಗ್ಗಿಸಿಕೊಂಡು ದೂರದಲ್ಲಿಯೇ ನಿಂತಿದ್ದಳು. ಸರಸಿಯನ್ನು ವಿಚಾರಿಸುವಂತೆ ಹೇಳಿದೆ ಆಕೆ ಹೆಚ್ಚು ಮಾತನಾಡದೆ ತನ್ನ ಕೈಲಿದ್ದ ಪತ್ರವೊಂದನ್ನು ಕೊಟ್ಟಳು. ನಾನು ಸರಸಿಯಿಂದ ಆ ಪತ್ರವನ್ನು ತೆಗೆದುಕೊಂಡು ಓದಿದೆ

ಈಗ ಅರ್ಥವಾಯಿತು. ಪಾಪ! ಆಕೆ ಒಂದಾನೊಂದು ಕಾಲದಲ್ಲಿ, ಅಲ್ಲಲ್ಲ, ಆರು ತಿಂಗಳ ಹಿಂದೆ ದೊಡ್ಡ ಜಮೀನುದಾರನ ಮಡದಿ. ಭೂಕಂಪದ ಕರಾಳ ಹಿಡಿತದಲ್ಲಿ ಸೆರೆಸಿಕ್ಕಿದ ಪತಿಯನ್ನು ಕಳೆದುಕೊಂಡು, ತನಗುಳಿದ ತನ್ನ ಜೀವನ ಸರ್ವಸ್ವವಾದ ಒಂದು ವರ್ಷದ ಹಸುಗೂಸನ್ನು ಬಗಲಲ್ಲಿ ಎತ್ತಿಕೊಂಡು ಹೊಟ್ಟೆಯಪಾಡಿಗಾಗಿ ಕಂಡವರನ್ನು ಬೇಡುವ ಸ್ಥಿತಿ ನನಗೆ ಬಹಳ ಸಂಕಟವಾಯಿತು. ನಾನು ಯೋಚಿಸುತ್ತಾ ಕುಳಿತಿದ್ದ ಆರಾಮ ಕುರ್ಚಿಯನ್ನು ಒರಗಿದೆ. ಹಾಗೆಯೇ ಯೋಚನೆಯಲ್ಲಿ ತೇಲಿಹೋದೆ ಹೀಗೆ ಎಷ್ಟು ಹೊತ್ತಿದ್ದೆನೋ ಅರಿಯೆ.

ನನಗೆ ಸ್ಮೃತಿ ಬಂದಾಗ ಸರಸಿ ನನ್ನ ಪಕ್ಕದಲ್ಲಿ ಕುಳಿತು ನನ್ನ ಮುಖವನ್ನೇ ಅವಲೋಕಿಸುತ್ತಿದ್ದಳು. ನಾನು ಎದ್ದು ಸುತ್ತಲೂ ನೋಡಿದೆ ಸಾಯಂಕಾಲದಲ್ಲಿ ನೋಡಿದ ಹೆಂಗಸು ಅಲ್ಲೆಲ್ಲೂ ಕಾಣಿಸಲಿಲ್ಲ

ಸರಸಿಯನ್ನು ವಿಚಾರಿಸಿದ್ದರಲ್ಲಿ ನನ್ನ ಸ್ಥಿತಿಯನ್ನು ನೋಡಿ ಬಹಳ ಸಂಕಟಪಟ್ಟುಕೊಂಡು ತಾನು ಏನು ಕೊಡಲು ಹೋದರೂ ಸ್ವೀಕರಿಸದೆ ವ್ಯಸನದಿಂದ ಹೊರಟು ಹೋದಳೆಂದು ತಿಳಿಸಿದಳು.

ನಾನು ಸರಸಿಯೊಡನೆ ಹೀಗೆ ಹೇಳಿದೆ- "ನೋಡು ದಾರಿದ್ರ್ಯವೆನ್ನುವುದೆ ಸುಖದಿಂದಿದ್ದ ಅವಳು ಈಗ ಯಾವ ಸ್ಥಿತಿಗೊಳಪಟ್ಟಿದ್ದಾಳೆ? ವಿಧಿಯು ಕ್ರೂರವಾದುದು 'ಕೈನೀಡಿ ಇತರರಿಗೆ ಕೊಡುತ್ತಿದ್ದವಳು ಕೈಚಾಚಿ ಬೇಡುವುದೆಂದರೆ ಅವಳ ವ್ಯಸನವು ಮೇರೆ ಮೀರಿದುದು. ದೇಹವನ್ನು ಹಿಡಿದಾಡಿ ಪರರ ಮನೆಯ ಬಾಗಿಲಿಗೆ ಹೋದರೆ, ಅವಳನ್ನು ವಿಚಾರಿಸದೆ ಕಠಿಣೋಕ್ತಿಗಳನ್ನಾಡುವವರೆಷ್ಟು ಜನವೊ" " ಹೀಗೆ ಹೇಳುತ್ತಾ ಸರಸಿಯ ಮುಖವನ್ನು ನೋಡುತ್ತೇನೆ. ಕಣ್ಣೀರು ಧಾರಾಕಾರವಾಗಿ ಸುರಿಯುತ್ತಿದೆ. "ನೋಡು, ನಾವು ಸುಖವಾಗಿದ್ದೇವೆ ಮುಂದಿನ ಕ್ಷಣವೇನೋ ಯಾರು ಬಲ್ಲರು? ನೀನೇ ಈ ಸ್ಥಿತಿಗೆ .. " ಸರಸಿಯು ನನ್ನ ಬಾಯಿಯನ್ನು ಭದ್ರವಾಗಿ ಮುಚ್ಚಿ ಬಿಕ್ಕಿ ಬಿಕ್ಕಿ ಅಳಲಾರಂಭಿಸಿದಳು.

ಅಂದಿನ ರಾತ್ರಿ ನಮ್ಮಿಬ್ಬರಿಗೂ ನಿದ್ರೆಯೇ ಬಾರದು. ಹೊರಳಿ ಹೊರಳಿ ಸಾಕಾಯಿತು. ರಾತ್ರಿಯೆಲ್ಲಾ ದುಸ್ವಪ್ನ. ಸರಸಿಯು ಅನೇಕ ವೇಳೆ ನರಳುತ್ತಿದ್ದಳು. ಮೈಮುಟ್ಟಿ ನೋಡಿದೆ, ಸ್ವಲ್ಪ ಜ್ವರವೂ ಬಂದಿತ್ತು.

ಮರುದಿನ ಸಂಜೆ. ವಾಕ್ಯಿಂಗ್‌ನಿಂದ ಮನೆಗೆ ಹಿಂದಿರುಗುತ್ತಿದ್ದೆ. ಸಾಲುಮರ ಪೊದೆಯ ಬುಡದಲ್ಲಿ ಒಬ್ಬ ಹೆಂಗಸು ತನ್ನ ಮಗುವಿಗೆ ಮೊಲೆಯೂಡಿಸುತ್ತಾ ಕುಳಿತಿದ್ದಳು. ದೃಷ್ಟಿಸಿ ನೋಡಿದ ಅದೇ ಹೆಂಗಸು ಮಗುವನ್ನು ದೃಷ್ಟಿಸುತ್ತಾ ವ್ಯಸನದಿಂದ ಕುಳಿತಿದ್ದಾಳೆ. ಅವಳ ಹಣೆಯು ವ್ಯಸನದಿಂದ ತುಂಬಿ ಭಾರೈಸಿಕೊಂಡಿದೆ. ನನಗೆ ಪುನಃ ಅವಳ ಸಂಕಟ ಕಣ್ಣಿಗೆ ಕಟ್ಟಿದಂತಾಯಿತು. ಪಾಪ! ಆ ಹಸು ಕಂದನಿಗೆ ಅವಳ ವ್ಯಸನದನುಭವವೆಲ್ಲಿ ಆಗಬೇಕು? ತಾನು ಒಬ್ಬ ಜಮೀನುದಾರನ ಮಗನೆಂಬುದು ಅದಕ್ಕೇನು ಗೊತ್ತು? ಸಾಮಾಜಿಕ ಸೋಪಾನದ ಮೇಲು ಕೀಳೆಂಬ ಕಿತ್ತಾಟದ ಕಿಲುಬು ಶುಭ್ರಕಾಂತಿಯಿಂದ ಬೆಳಗುತ್ತಿರುವ ಅದರ ಮೈಗೆಲ್ಲಿ ಅಂಟಬೇಕು? ಭೇದಭಾವ, ಅಸೂಯೆ, ಅಸತ್ಯಗಳ ಹೆಸರನ್ನರಿಯದ ಆ ಮಗುವಿನ ಹೃದಯವೆಷ್ಟು ಪವಿತ್ರವಾದುದು! ಜಗದೀಶ, ನಾನು ಮತ್ತೊಮ್ಮೆ ಮಗುವಾಗಬಲ್ಲೆನೆ! ನನಗಿದೆಲ್ಲಿಯ ಹುಚ್ಚು?

ಹೀಗೆಯೇ ಯೋಚನೆಗಳು ತೆರೆ ತೆರೆಯಾಗಿ ಹಬ್ಬುತ್ತಿದ್ದವು. ಅಷ್ಟರಲ್ಲೇ ಆ ಮಗುವು ತೃಪ್ತಿಹೊಂದಿ ತನ್ನ ಕಿರಿದಾದ ಬಾಯಿಯನ್ನು ಅಗಲವಾಗಿ ತೆರೆದು ತಾಯಿಯ ಮುಖವನ್ನೇ ನೋಡುತ್ತಾ ಸಂತೋಷದಿಂದ ನಕ್ಕಿತು. ತಾಯಿಯಾದವಳಿಗೆ ಇದಕ್ಕಿಂತ ಇನ್ನೇನು ಬೇಕು! ಯೋಚನಾತರಂಗಗಳಲ್ಲಿ ಮುಳುಗಿದ್ದ ಅವಳ ಲಲಾಟವು ಒಮ್ಮಿಂದೊಮ್ಮೆ ಕಾಂತಿಗೂಡಿ ನಗಲಾರಂಭಿಸಿತು ಮಗುವನ್ನು ಮುತ್ತೆ ಮುತ್ತಿಕ್ಕಿದಳು. ಸ್ವರ್ಗವೇ ಕೈಚಾಚಿ ಕರೆದಿದ್ದರೂ ತನ್ನ ರತ್ನವನ್ನು ಅವಳು ಬಿಟ್ಟು ಹೋಗುತ್ತಿದ್ದಳೆ? ಅದೇ ಅವಳ ಗಾಢಾಂಧಕಾರ ಜೀವನದ ಬೆಳಕು. ಅದೇ ಅವಳ ರೂಪುವಡೆದ ದೂರದ ಆಶೆ

ಭುವನೇಶ್ವರಿಯು ಇಂದು ನನ್ನ ಮನೆಯ ಒಡತಿ. ಅವರೇನು ದಾಕ್ಷಿಣ್ಯಬದ್ಧಳಾಗಿ ನಮ್ಮ ಆಚಾರ ವ್ಯವಹಾರವನ್ನೇ ಬಳಕೆಯಲ್ಲಿಟ್ಟುಕೊಂಡು ಅನಾಥನಾದ ನನಗೂ ನನ್ನ ಸರಸಿಗೂ ತಾಯಿಯಂತಿದ್ದಾಳೆ. ಸರಸಿಯನ್ನು ಸ್ವಲ್ಪ ಮಾತ್ರವೂ ನೋಯಿಸಳು ನನಗೆ ಆಕೆಯಲ್ಲಿ ತುಂಬಾ ಗೌರವ. ಅವರೇನು ಆಕೆಯು ದಾಕ್ಷಿಣ್ಯಪಾಶದಿಂದ ಬಿಗಿಯಲ್ಪಟ್ಟಿರುವುದನ್ನು ನೋಡಿದರೆ ನನಗೆ ಸಂಕಟ. ನಾನು ಆ ವಿಷಯ ಎತ್ತಿದೆನೆಂದರೆ ನನ್ನ ದಯಾಧರ್ಮಗಳನ್ನೆತ್ತಿ ಮುಂದೆ ಮಾತನಾಡಲಾಸ್ಪದವಿಲ್ಲದಂತೆ ಮಾಡುತ್ತಾಳೆ ಸರಸಿಯನ್ನು ಕಂಡರಂತೂ ಅವಳಿಗೆ ಹಿಡಿಸಲಾರದ ಪ್ರೇಮ, ಅಳಿಯಲಾರದ ವಿಶ್ವಾಸ ಅನೇಕವೇಳೆ ಸರಸಿಯನ್ನು ಕುರಿತು "ನೀನು ರೂಪಿನಲ್ಲಿ ಹೇಗೆ ಅಗ್ಗಳಯೋ ಸುಗುಣದಲ್ಲಿಯೂ ಹಾಗೆಯೇ. ಈ ರೀತಿಯಾದ ರೂಪಗುಣಗಳ ಜೊತೆಗೆ ಈ ವಿಶ್ವದಲ್ಲಿ ಅಪೂರ್ವ" ಎಂದು ಬಹಳವಾಗಿ ಹೊಗಳುತ್ತಾಳೆ

ಸುರೇಂದ್ರನು ನನ್ನ ಕೋಣೆಗೆ ಆಗಿಂದಾಗ್ಗೆ ಬಂದು ಮಸಿ ಉರುಡಿಸುವುದು, ಕಾಗದಪತ್ರಗಳ ಮೇಲೆ ಜೊಲ್ಲು ಸುರಿಸುವುದು, ಪುಸ್ತಕಗಳನ್ನು ತೆಗೆದುಕೊಂಡು ತನಗೆ ತೋರಿದ ಹಾಳೆಗಳನ್ನು ಕಿತ್ತೆಸೆಯುವುದು; ಹೀಗೆ ಬಹಳ ಚೇಷ್ಟೆ ಮಾಡುತ್ತಾನೆ.

ನಾನು ಕೆಲವು ವೇಳೆ ಕುಪಿತನಾದರೆ ಸರಸಿಯು ತಕ್ಷಣ ಸುರೇಂದ್ರನ ವಕಾಲತ್ತು ವಹಿಸುತ್ತಾಳೆ ಅದರಿಂದ ಅವಳಿಗ ಭಾರಿ ಮುಸುಮು ಸಿಕ್ಕುತ್ತದಂತೆ. ಆ ರುಸುಮಿನ ಅರ್ಥವಾಗದೆ ಕೊನೆಗೆ ಬೇಡಲು ದೇವಿಯು ಪ್ರಸನ್ನಳಾಗಿ, ಆದರೂ ಸ್ವಲ್ಪ ಕುಪಿತಳಾಗಿಯೇ 'ಅಯ್ಯೋ' ಹೋಗಿ, ಅದೂ ಹೇಳಬೇಕೆ! ತನ್ನ ಮುದ್ದು ಮುದ್ದು ಕೈಗಳಿಂದ ನನ್ನ ತಲೆಯನ್ನು ತಬ್ಬಿ ಕೂದಲನ್ನು ಕೀಳುತ್ತಾ ಒಂದು ಮುತ್ತು ಕೊಡುತ್ತಾನೆ ಅದಕ್ಕಿಂತ ಇನ್ನು ರುಸುಮೆ!" ಎಂದಳು

ಇಷ್ಟಕ್ಕೋಸ್ಕರ ನಾನು ಅಷ್ಟು ಬೇಡಿದೆನಲ್ಲಾ ಎಂದು ನನಗೆ ಬಹಳ ನಗು ಬಂದಿತು

"ಕ್ರೂರಮರ ಜಾತಿ" ಯನ್ನೇ ತೆಗೆದು ಹಾಕಿದರು.

ಬರೋಡಾ ಸಂಸ್ಥಾನದಲ್ಲಿ ತಮ್ಮ ಸಂಸ್ಥಾನದ ಪ್ರಜಾಲೋಕಕ್ಕೆ 'ಕೊರಮರ ಜಾತಿ' ವಿಷಯದಲ್ಲಿ ಈಗಿರುವ ಅಭಿಪ್ರಾಯ, ನಡೆವಳಿಕೆ ಮೊದಲಾದವು ಸಂಪೂರ್ಣವಾಗಿಯೂ ಮಾರ್ಪಟ್ಟು ಉತ್ತಮತರವಾಗಬೇಕೆಂಬ ಅಪೇಕ್ಷೆಯಿಂದ, ಬರೋಡಾ ರಾಜ್ಯದ ನಾಯಕರಾದ ಪ್ರಭುಗಳವರು ಆ ನಗರದ ಸೆಂಟ್ರಲ್ ಜೈಲಿನಿಂದ ಆ ಜಾತಿಯ ರಾಕಿರ್ದಾರ ಮತ್ತು ಬಾರಿಯಾ ಕುಲಗಳ ಅನೇಕರನ್ನು ಕ್ಷಮಿಸಿ ಬಿಡುಗಡೆ ಮಾಡಿಸಿದ್ದಾರೆ

ಪೊಲೀಸಿನವರ ಸಹವಾಸದಲ್ಲಿಯೇ ತಮ್ಮ ಜೀವಮಾನವನ್ನೆಲ್ಲಾ ಕಳೆಯುತ್ತಿರುವ ಈ ಜಾತಿಯ ಜನರ ಉದ್ಧಾರಕ್ಕೋಸ್ಕರವಾಗಿ ಸರ್ಕಾರದವರು ವಿಶ್ವಪ್ರಯತ್ನ ಮಾಡುತ್ತಿರುವರೆಂದೂ, ಅವರಿಗೇನೆ ಈ ವರೆಗೆ ನಿರ್ದೋಷಿಗಳಾಗಿರುವವರಾರೂ ಪೊಲೀಸಿನವರ ಹಜರಿಗಾಗಿ ಪೊಲೀಸ್ ಸ್ಟೇಷನ್ನುಗಳಲ್ಲಿ ಹಾಜರಿ ಕೊಡಬೇಕಾದ ನಿರ್ಬಂಧಕ್ಕಾಗಲಿ ಒಳಪಡಬೇಕಾಗಿಲ್ಲವೆಂದೂ ಗಾಯಕವಾಡಾ ಮಹಾರಾಜರು ಆಜ್ಞಾಪಿಸಿರುವರೆಂದೂ, ಇದರಿಂದ ಇಪ್ಪತ್ತು ಸಾವಿರಕ್ಕಿಂತ ಹೆಚ್ಚು ಸಂಖ್ಯೆಯ ಕೊರಮರಿಗೆ ಅನುಕೂಲವಾಗುವುದೆಂದೂ ತಿಳಿದು ಬಂದಿದೆ

ಕಾಲೇಜು ಹಾಸ್ಟೆಲುಗಳಲ್ಲಿ ಸೈನ್ಯಗಳು.

ಮುಂದಣ ಮಳೆಗಾಲದಲ್ಲಿ ಆಕಸ್ಮಾತ್ತಾಗಿ ಅವಶ್ಯಕವಾದರೆ, ಬಂಗಾಳಾ ಪ್ರಾಂತ್ಯದ ಢಾಕಾ ನಗರದಲ್ಲಿರುವ ಕಾಲೇಜಿನ ಹಾಸ್ಟೆಲ್ (ವಿದ್ಯಾರ್ಥಿಗಳ ವಸತಿ) ಕಟ್ಟಡವನ್ನು ತಾವು ಸೂಚನೆ ಕೊಟ್ಟ ಇಪ್ಪತ್ತನಾಲ್ಕು ಘಂಟೆಗಳ ಕಾಲದೊಳಗಾಗಿ ಖಾಲಿ ಮಾಡಿ ತಮ್ಮ ಸ್ವಾಧೀನಕ್ಕೆ ಬಿಟ್ಟುಕೊಡಬೇಕೆಂದು ಸರ್ಕಾರದವರು ಆ ಕಾಲೇಜಿನ ಅಧಿಕಾರಿಗಳಿಗೆ ಸೂಚಿಸಿ ಈಗಲೇ ಎಚ್ಚರಿಕೆ ಕೊಟ್ಟಿರುವರು ಈಗ್ಗೆ ಕೆಲವು ವರ್ಷಗಳಿಗೆ ಹಿಂದೆ ಅಪಾರ ಧನವ್ಯಯ ಮಾಡಿ ಆ ನಗರದಲ್ಲಿ ಸರ್ಕಾರದವರು ಕಲ್ಪಿಸಿದ ಸೇನಾಗಾರವು ಈಗ ಮುರಿದು ಬಿದ್ದು ಹೋಗುತ್ತಿರುವುದರಿಂದ ಸೈನ್ಯಗಳಿಗೆ ಆ ಕಾಲೇಜಿನ ಹಾಸ್ಟಲಿನಲ್ಲಿ ವಸತಿಯಾಗುವುದಂತೆ

For Up to-date and Efficient Medical Treatment

Go to—**Dr. A. J. RAM & SONS,**

Sayaji Rao Road, Mysore.

Physicians Dentists, Opticians, etc.

ಡಾ॥ ಎ. ಜೆ. ರಾಂ. ಅಂಡ್ ಸನ್ಸ್,

ಸಯ್ಯಾಜಿರಾವ್ ರೋಡ್, ಮೈಸೂರು ಸಿಟಿ.

ಔಷಧ ವ್ಯಾಪಾರಿಗಳು, ಚಿಕಿತ್ಸಕರು, ದಂತವೈದ್ಯರು,

ಮತ್ತು ಕನ್ನಡಕ ವ್ಯಾಪಾರಿಗಳು.

ಉತ್ತಮವಾದ ನವೀನ ಚಿಕಿತ್ಸೆಗಳಿಗೆ ನಮ್ಮಲ್ಲಿಯೇ ಬನ್ನಿರಿ.

ಪುರುಷ ಸಂಪರ್ಕವಿಲ್ಲದೆ ಜನನ

ಮಕ್ಕಳಾಗಲು ಪುರುಷನ ಸಂಪರ್ಕವೇ ಬೇಕಿಲ್ಲ. ಸ್ತ್ರೀಯರೇ ಮಕ್ಕಳನ್ನು ಹೆರಬಹುದು. ಇದು ವಿಜ್ಞಾನಶಾಸ್ತ್ರದ ಅತ್ಯಂತ ನೂತನವಾದ ಪ್ರಯೋಗದ ಪರಿಣಾಮ ಕೃತಕವಾಗಿ ಇಂಜಕ್ಷನ್ನುಗಳ ಮೂಲಕ ಜೀವೋತ್ಪತ್ತಿ ಮಾಡುವ ವಿಷಯವು ಎರಡು ವರ್ಷಗಳಿಂದ ಪ್ರಸಿದ್ಧಿಗೆ ಬಂದಿದೆ. ಇದಕ್ಕೆ “ಕೃತಕ ಗರ್ಭಾಧಾನ” (arti[ficial] impregnation) ಎಂದು ಹೆಸರು. ಈ ರೀತಿಯಿಂದ ಜನಿಸುವ ಮಕ್ಕಳಿಗೆ ಟೆಸ್ಟ್‌ಟ್ಯೂಬ್ ಬೇಬೀಸ್ ಎಂದು ಹೆಸರು. ರಸಾಯನ ಶಾಸ್ತ್ರದ ಪ್ರಯೋಗಶಾಲೆಗೆ ಟೆಸ್ಟ್‌ಟ್ಯೂಬ್–ಗಾಜಿನ ಕೊಳವೆಯು ಪ್ರತಿನಿಧಿರೂಪದಲ್ಲಿ ಹೇಳಲ್ಪಡುತ್ತದೆ. ವಿಜ್ಞಾನ ಪ್ರಯೋಗದಿಂದ [ಉ]ತ್ಪನ್ನವಾಗುವುದರಿಂದ ಈ ಮಕ್ಕಳಿಗೆ [ಟೆ]ಸ್ಟ್‌ಟ್ಯೂಬ್ ಮಕ್ಕಳೆಂದು ಹೇಳುವ ವಾ[ಡಿ]ಕೆ. ಈ ಪ್ರಕಾರ ಒಂದು ಜತೆ ಅವಳಿ [ಜ]ವಳಿ ಮಕ್ಕಳು ಸೃಷ್ಟಿಸಲ್ಪಟ್ಟವು ಅದು [ಪ್ರ]ಪಂಚದಲ್ಲೆಲ್ಲಾ ಅಲ್ಲೋಲಕಲ್ಲೋಲ[ವ]ನ್ನುಂಟುಮಾಡಿತು. ದೈವ ಸೃಷ್ಟಿಯು [ಮ]ನುಷ್ಯನಿಗೆ ಕರಗತವಾಯಿತೆಂಬ ಭಾವ[ನೆ]ಯು ಬಂದಿತು. ಅನಂತರ ಇದೇ ರೀತಿ[ಯ]ನ್ನೂ ಅನೇಕ ಮಕ್ಕಳು ಸೃಷ್ಟಿಸಲ್ಪಟ್ಟವು. [ಈ] ವಿಷಯವು ಈಚೆಗೆ ಪಾಶ್ಚಾತ್ಯ ದೇಶ[ಗಳ]ಲ್ಲಿ ಹಳೆಯದಾಗುತ್ತ ಬಂದಿದೆ.

ಆದರೆ ಈಗ ತಿಳಿದು ಬಂದಿರುವ ವಿಚಾ[ರ]ವು ಇದನ್ನು ಮೀರಿಸಿರುತ್ತದೆ. ಮೇ[ಲ್ಕ]ಂಡ ಸಂದರ್ಭದಲ್ಲಿ ಪುರುಷನ ಇಂದ್ರಿ[ಯ]ವು ಉಪಯೋಗಿಸಲ್ಪಡುತ್ತಿ[ತ್ತು]. ಹಾರ್ವರ್ಡಿನ ಡಾ॥ ಗ್ರೆಗರಿ ಪಿ[ಂಕ]ಸ್ ಎಂಬುವರು ಇನ್ನೂ ಒಂದು ಹೆಜ್ಜೆ [ಮು]ಂದೆ ಹೋಗಿದ್ದಾರೆ. ಪುರುಷ ಬಿಂದು[ವಿ]ನ ಆವಶ್ಯಕತೆಯು ಇಲ್ಲದೆ ಜೀವ[ರಾಶಿ]ಗಳನ್ನು ಸೃಷ್ಟಿಸುವ ಉದ್ಯಮದಲ್ಲಿ [ಅ]ವರು ಉತ್ತೀರ್ಣರಾಗಿರುವರು. ಮೊಲ[ಗಳ]ನ್ನು ಹಿಡಿದು ತಂದು ಅವುಗಳ ಮೇಲೆ [ಅ]ವರು ಈ ಪ್ರಯೋಗಗಳನ್ನು ನಡೆಸಿರು[ವ]ರು. ಮನುಷ್ಯರಿಗೂ ಇದೇ ಅನ್ವಯ[ವಾ]ಗುವುದೆಂದು ಅವರು ಹೇಳುವರು.

ಇಷ್ಟೇ ಅಲ್ಲದೆ ಒಂದು ಗರ್ಭದಲ್ಲಿರುವ [ಜೀ]ವ ಪಿಂಡವನ್ನು ಮತ್ತೊಂದು ಗರ್ಭ[ಕ್ಕೆ] ರವಾನಿಸಿ ಅದರಲ್ಲಿ ಅದನ್ನು ಪೋಷಿಸ[ಬ]ಹುದೆಂದೂ ಅವರು ಕಂಡು ಹಿಡಿದಿರು[ವ]ರು. ಇದನ್ನು ಸಹ ಮೊಲಗಳ ಮೇಲೆ [ಅವ]ರು ಪ್ರಯೋಗಿಸಿರುವರು. ಮನುಷ್ಯ[ರಿಗೂ] ಹೀಗೆ ಮಾಡಬಹುದೆಂದು ಹೇಳು[ವ]ರು. ಸೂಕ್ಷ್ಮಶರೀರಿಗಳಾದ ಮಾತೆಯ[ರಿಗೆ] ಹೀಗೆ ಮಾಡುವುದರಿಂದ ಶರೀರದ [ಆ]ರೋಗ್ಯವನ್ನು ರಕ್ಷಿಸಿಕೊಳ್ಳಬಹುದೆಂದು [ಅ]ವರು ಹೇಳುವರು. ಹೊಸ ಮಾತೆಯ [ಗರ್ಭ]ದಲ್ಲಿ ಬೆಳೆಯುವ ಮಗುವು ಹಳೆಯ [ಮಾ]ತೆಯ ಗುಣಗಳನ್ನೇ ಹೊಂದಿರುತ್ತದೆ. [ಆ]ದರೆ ಗಂಡುಮಗು ಹುಟ್ಟಬೇಕಾದರೆ [ಪುರು]ಷ ಬಿಂದುವಿನ ಸಂಪರ್ಕವೇ ಬೇಕು ಎಂದುವಿನಿಂದ ಹೆಣ್ಣು ಮಕ್ಕಳು ಮಾ[ತ್ರ] ಹುಟ್ಟುತ್ತವೆ.

ಟ್ರೆಜರಿಗೆ ಹಣ ಕಡಿಮೆ ಬಂದುದರ ಪರಿಣಾಮ.

ಕೆಲವು ದಿನಗಳ ಕೆಳಗೆ ಮದ್ರಾಸಿನಿಂದ ಮೈಸೂರು ಡಿಸ್ಟ್ರಿಕ್ಟ್ ಟ್ರೆಜರಿಗೆ ಬಂದ ಹಣದ ಪೈಕಿ ಇನ್ನೂರು ರೂಪಾಯಿ ಕಡಿಮೆಯಾಗಿತ್ತೆಂದು ತಿಳಿದುಬಂದಿದ್ದಿತಷ್ಟೆ. ಈ ವಿಷಯದಲ್ಲಿ ಇದುವರೆಗೆ ತನಿಖೆ ಜರುಗುತ್ತಿತ್ತು. ಇದರ ಪರಿಣಾಮವಾಗಿ ಟ್ರೆಜರಿಯ ಅಧಿಕಾರಿಗಳಿಗೆ ಹತ್ತು ರೂ ಡಿಗ್ರೇಡಾಗಿಯೂ ಇತರ ಒಬ್ಬಿಬ್ಬರು ನೌಕರರಿಗೆ ಸಸ್ಪೆಂಡು ಆಗಿರುವುದಾಗಿಯೂ ವರ್ತಮಾನ.

ಅನ್ನದಾನ.

ದಿವಂಗತರಾದ ರಾಜಕುಮಾರಿ ಚೆಲುವಾಜಮ್ಮಣ್ಣಿಯವರ ಜ್ಞಾಪಕಾರ್ಥವಾಗಿ ನಿನ್ನೆ ದಿನ ಮಧ್ಯಾಹ್ನ ಮೈಸೂರು ಸಂಜ ರಾಜ ಬಹದ್ದೂರ್ ಛತ್ರದಲ್ಲಿ ಸಾವಿರಾರು ಜನ ಬಡಬಗ್ಗರಿಗೆ ಅನ್ನದಾನವು ನಡೆಯಿತು.

ಪಂಡಿತ ಮದನ ಮೋಹನ ಮಾಳವೀಯರವರು.

ಸಧ್ಯದಲ್ಲೇ ಮೈಸೂರಿಗೆ ಬರುವರು.

ಹುಚ್ಚರ ಆಸ್ಪತ್ರೆ.

ಬೆಂಗಳೂರಿನ ಹುಚ್ಚರ ಆಸ್ಪತ್ರೆಯು ಈಗ ನಗರದ ಮಧ್ಯದಲ್ಲಿ ಬಹಳ ಗಲಾಟೆಯಿರುವ ಕಡೆ ಇದೆ. ಕಟ್ಟಡವೂ ಶಿಥಿಲವಾಗಿದೆ. ಆದ್ದರಿಂದ ಲಾಲ್‌ಬಾಗ್ ತೋಟದ ಸಮೀಪದಲ್ಲಿ ವಿಶಾಲ ಮೈದಾನದಲ್ಲಿ ಅದನ್ನು ಕಟ್ಟಿಸಲು ಸರ್ಕಾರದವರು [?].10,000 ರೂ ಮಂಜೂರುಮಾಡಿರುವರು.

ಆಸ್ಪತ್ರೆಗೆ ಸಹಾಯ.

ಬೆಂಗಳೂರಿನ ಸುಪ್ರಸಿದ್ಧ ವರ್ತಕರಾದ ಶ್ರೀ॥ ಚೆಲ್ಲಾರಾಂ ರಾಮನಾರಾಯಣರವರು ರೆಡ್ ಕ್ರಾಸ್ ಸಂಘಕ್ಕೆ ಹತ್ತುಸಾವಿರ ರೂ ದಾನಮಾಡಿರುತ್ತಾರೆ. ಬೆಂಗಳೂರು ಹುಚ್ಚರ ಆಸ್ಪತ್ರೆಯ ಬಳಿ ಒಂದು ಸಣ್ಣ ಆಸ್ಪತ್ರೆಯನ್ನೂ, ಹೆರಿಗೆ ಗೃಹವನ್ನೂ ಕಟ್ಟಿಸಲು ಈ ಹಣವು ಉಪಯೋಗಿಸಲ್ಪಡುತ್ತದೆ. ಇದರ ಶಂಕುಸ್ಥಾಪನೆಯನ್ನು ಮೇ 9 ನೇ ತಾ॥ ಸರ್ ಮಿರ್ಜಾ ಇಸ್ಮೈಲರು ನಡೆಸುವರು.

ಜರ್ಮನಿಯು ಆಸ್ಟ್ರಿಯಾದ ಮೇಲೆ ಬೀಳುತ್ತದೆ.

ಆಸ್ಟ್ರಿಯಾದಮೇಲೆ ಬೀಳುವುದೇ ಜರ್ಮನಿಯ ಮುಂದಿನ ಯೋಚನೆ. ತನ್ನ ಎಲ್ಲೆಯಿಂದ ಬಿಟ್ಟ ಆರುಗಂಟೆ ಕಾಲದೊಳಗೆ ಜರ್ಮನಿಯು ವಿಯನ್ನಾ ನಗರವನ್ನು ಆಕ್ರಮಿಸಬಲ್ಲದು. ಆಸ್ಟ್ರಿಯಾವನ್ನು ಪ್ರವೇಶಿಸಿದೊಡನೆ, ಹಂಗೇರಿಯೊಡನೆ ಸ್ನೇಹವನ್ನು ಬೆಳೆಸಿ ಇಟಲಿಯ ಮಾರ್ಗಗಳನ್ನು ಮುಚ್ಚಿ ಜೆಕೊಸ್ಲೋವೇಕಿಯಾವನ್ನು ಮುತ್ತುವುದು. ಈ ಮಧ್ಯೆ ಜರ್ಮನಿಯ ಸೈನ್ಯವೆಲ್ಲವೂ ಸಿದ್ಧಪಡಿಸಲ್ಪಡುವುದು. 24 ಗಂಟೆಕಾಲದಲ್ಲಿ ಯುದ್ಧರಂಗಕ್ಕೆ ಇಳಿಯಲು ಅನುಕೂಲವಾಗುವುದು. ಈರೀತಿ ಪೂರ್ಣಬಲವುಳ್ಳ ಸ್ಥಾನವನ್ನು ಆಕ್ರಮಿಸಿ ಜರ್ಮನಿಯು ಯೂರೋಪಿನ ಚಲನವಲನಗಳನ್ನು ನಿರೀಕ್ಷಿಸುತ್ತದೆ. ಫ್ರಾನ್ಸು ಸೇನೆಯನ್ನು ಕಳುಹಿಸುವುದು. ಇಟಲಿಯೂ ಸೈನ್ಯಸಂಗ್ರಹವನ್ನು ಮಾಡುವುದು. ಏನು ಮಾಡಬೇಕೋ ತೋಚದೆ ಇಂಗ್ಲೆಂಡು ಭ್ರಮಿಸುವುದು. ಪರಿಣಾಮದಲ್ಲಿ ಎಲ್ಲರೂ ತಣ್ಣಗಾಗುವರು. ಮತ್ತೊಂದು ಮಹಾಯುದ್ಧದ ಕರಾಳ ಪರಿಣಾಮವನ್ನು ಯಾರು ಅನುಭವಿಸುವರೆಂಬ ಭೀತಿಯಿಂದ ಜರ್ಮನಿಗೇ ಎಲ್ಲರೂ ಬಿಟ್ಟುಕೊಟ್ಟು ತೆಪ್ಪಗಾಗುವರು—ಎಂಬುದಾಗಿ ಫ್ರೆಂಚ್ ಸೈನ್ಯಾಧಿಕಾರಿಯಾದ ಜನರಲ್ ಡುವಾಲನು ಹೇಳಿರುವನು.

ಶ್ರೀ ಬಸವೇಶ್ವರಜಯಂತಿ.

ಮೈಸೂರು ವೀರಶೈವ ಮಂಡಲಿಯವರು (ತಾ॥ 24—4—36) ರಿಂದ “ಶ್ರೀ ಬಸವೇಶ್ವರ ಜಯಂತಿ” ಮಹೋತ್ಸವವನ್ನು ಮೈಸೂರು ಕೃಷ್ಣರಾಜವೊಹಲ್ಲಾ ಅಂಗಡಿಬೀದಿಯಲ್ಲಿರುವ ತುಂಸೇರಳೆ ಸಾಹುಕಾರ್ ಮ॥ ರಾ॥ ಶ್ರೀ॥ ಮಾದಪ್ಪನವರ ಕಟ್ಟಡದಲ್ಲಿ 5 ದಿವಸಗಳ ಪರಿಯಂತರವೂ ವೈಭವದಿಂದ ನಡೆಸುತ್ತಿರುವರು.

ಸ್ವದೇಶಿ ವಸ್ತುಪ್ರದರ್ಶನ ಮೈಸೂರು.

ಮೈಸೂರು ನಗರದಲ್ಲಿ ಮುಂದಿನ ತಿಂಗಳು ಕೊನೆಯ ಭಾಗದಲ್ಲಿ ನಡೆಯುವ ನಾಲ್ಕನೇ ಮೈಸೂರು ಸ್ವದೇಶಿ ವಸ್ತು ಪ್ರದರ್ಶನದ ಆರಂಭೋತ್ಸವವನ್ನು ಪ್ರಧಾನ ಸಚಿವರಾದ ರಾಜಮಂತ್ರಪ್ರವೀಣ ಎಸ್. ಪಿ ರಾಜಗೋಪಾಲಾಚಾರ್ಯರವರು ನೆರವೇರಿಸಲು ಒಪ್ಪಿರುತ್ತಾರೆ. ಪ್ರದರ್ಶನದ ಕೆಲಸ ಕಾರ್ಯಗಳು ಬಿರುಸಾಗಿ ನಡೆಯುತ್ತಿವೆ. ಸ್ಟಾಲುಗಳಿಗೆ ಆರ್ಡರುಗಳು ಬರುತ್ತಿವೆ. ಪ್ರತಿ ಸ್ಟಾಲಿಗೆ ಬಾಡಿಗೆ 5 ರೂ. ಇಡಲಾಗಿದೆ. ಜನರಲ್ ಸ್ಟಾಲಿಗೆ 2 ರೂ. ಎಂದಿನಂತೆ ಈಸಾರಿಯೂ ಉಪಯುಕ್ತವಾದ ಅನೇಕ ವಿನೋದಗಳ ಪ್ರದರ್ಶನಗಳೂ ನಡೆಯುತ್ತವೆ.

ಬೆಂಗಳೂರಿನಲ್ಲಿ ವಿಮಾನ ನಿಲ್ದಾಣ.

ಬೆಂಗಳೂರಿನಿಂದ ದೊಡ್ಡಬಳ್ಳಾಪುರಕ್ಕೆ ಹೋಗುವ ರಸ್ತೆಯ ಎಂಟನೆಯ ಮೈಲಿ ಬಳಿ ಜಕ್ಕೂರಿನ ಸಮೀಪದಲ್ಲಿ ಒಂದು ವಿಮಾನ ನಿಲ್ದಾಣವನ್ನು ಕಟ್ಟಿಸಲು ಸರ್ಕಾರದವರು ನಿರ್ಧರಿಸಿರುತ್ತಾರೆ. ಅಲ್ಲಿ ಒಂದು ಸಾವಿರ ಎಕರೆಗಳ ಜಾಗವನ್ನು ಮೀಸಲಾಗಿಡಲಾಗಿದೆ. ಜಮೀನನ್ನು ಮಟ್ಟಮಾಡಲು 36 ಸಾವಿರ ರೂ. ಮಂಜೂರಾಗಿದೆ. ನಿಲ್ದಾಣದ ಆಡಳಿತವನ್ನು ನಮ್ಮ ಸರ್ಕಾರದವರೇ ಇಟ್ಟುಕೊಳ್ಳುವರೋ ಇಂಡಿಯಾ ಸರಕಾರಕ್ಕೇ ಬಿಟ್ಟುಬಿಡುವರೋ ಇನ್ನೂ ತೀರ್ಮಾನವಾಗಿಲ್ಲ.

ಮೈಸೂರು ಡಿಸ್ಟ್ರಿಕ್ಟ್ ಬೋರ್ಡು

ಕಳೆದ ಬುಧವಾರ ಮಧ್ಯಾಹ್ನ ಮೈಸೂರು ಡಿಸ್ಟ್ರಿಕ್ಟ್ ಬೋರ್ಡಿನ ಮೀಟಿಂಗು ಮ॥ ಬಿ ಎಸ್ ಪುಟ್ಟಸ್ವಾಮಿಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಬೋರ್ಡಿನ ಆಯವ್ಯಯಗಳನ್ನು ಪರ್ಯಾಲೋಚಿಸಿ ಒಪ್ಪಲಾಯಿತು.

ಅರ್ಧ ಕ್ರಯಕ್ಕೆ ಕೊಡಲ್ಪಡುತ್ತೆ.

ಮುಂಚಿನ ಕ್ರಯ ರೂ. 1 12 0. **ಈಗ 14 ಅಣೆ.**

ಬ್ರಿಟಿಷ್ ಫೌಂಟೆನ್ ಪೆನ್.

BRITISH FOUNTAIN PEN.



ಇಂಗ್ಲಾಂಡಿನಲ್ಲಿ ತಯಾರಾದದ್ದು. ಇದಕ್ಕೆ 14 ಕ್ಯಾರೆಟಿನ ಭಂಗಾರದ ನಿಬ್ಬು ಹಾಕಿದೆ. ಈ ಪೇನಾವನ್ನು ನಮ್ಮ ೫ನೆಯ ಕಿಂಗ್ ಜಾರ್ಜ್ ಚಕ್ರವರ್ತಿಯವರು ಕೊಂಡು ಸಂತೋಷಪಟ್ಟು ಬಹು ಮೇಲಾದ ಯೋಗ್ಯತಾಪತ್ರ (Certificate) ಕೊಟ್ಟಿರುವರು. ಅಕ್ಷರಗಳನ್ನು ಮುತ್ತುಗಳ ಹಾಗೆ ಮುದ್ದಾಗಿ ಬರೆಯುವದು. ಇದರ ವಿಷಯವಾಗಿ ಬರೆದು ತಿಳಿಸಲು ಸ್ಥಳ ಸಂಕೋಚ. ಒಂದನ್ನು ತರಿಸಿ ನೋಡಿದರೆ ಸಂತೋಷ ಪಡುವಿರಿ. ಬಹಳ ಸುಲಭ ಕ್ರಯ **0–14–0.**

ಒಂದೇ ಸಲ ಮೂರು ಪೇನಾಗಳನ್ನು ತರಿಸಿದರೆ ಒಂದು ಪೇನಾವನ್ನು ಬಹುಮಾನವಾಗಿ ಕೊಡಲ್ಪಡುತ್ತೆ.

T. R. ROYAL & Co.,
19 Beat, Madras

T R. ರಾಯಲ್ ಕಂಪೆನಿ,
೧೯ ಬೀಟ್, ಮದರಾಸು

ಸಾಧ್ವಿ

೨೭-೪-೩೬ ನೇ ಸೋಮವಾರ

ಅಳಿಯನ ಕುರುಡು ಬೆಳಗಾದ ಮೇಲೆ.

ಹಿಂದಿನ ವೈಸ್‌ರಾಯರಾಗಿದ್ದ ಲಾರ್ಡ್ ವಿಲಿಂಗ್‌ಡನ್ನರು ತಮ್ಮ ದೇಶಕ್ಕೆ ಹೊರಟರು ಇಂದಿನ ವೈಸರಾಯರಾದ ಲಾರ್ಡ್ ಲಿನ್‌ಲಿತ್ ಗೋರವರು ಬಂದರು ಇವರು ಬರುವಾಗಲೇ ಬಹಳ ವಿಧವಾದ ಆಶೋತ್ತರಗಳನ್ನು ಹೇಳಿಕೊಂಡು ಬರುತ್ತಿರುವರು ಭರತಖಂಡದ ಸರ್ವತೋಮುಖವಾದ ಅಭಿವೃದ್ಧಿಯಲ್ಲಿ ತನಗೆ ಸಂಪೂರ್ಣವಾದ ಆಸಕ್ತಿಯಿರುವುದೆಂದು ಹೇಳಿರುವರು ಇಲ್ಲಿನ ಬಡ ರೈತರ ಶೋಚನೀಯ ಪರಿಸ್ಥಿತಿಯಲ್ಲಿ ಬಹಳವಾಗಿ ಕನಿಕರವನ್ನು ಸೂಚಿಸಿರುವರು ಅದರ ದೃಷ್ಟಾಂತವಾಗಿ ಅವರು ಕೆಲವು ಗೂಳಿಗಳನ್ನು ತೆಗೆದು ದಾನಮಾಡಿರುವರು ತಮ್ಮ ಆಳ್ವಿಕೆಯಲ್ಲಿ ಬಡ ರೈತರ ಸ್ಥಿತಿಯು ಉತ್ತಮವಾಗಿ ಹಿಂದೂಸ್ಥಾನದ ಆರ್ಥಿಕ ಅಭಿವೃದ್ಧಿಯು ಆಗಲೆಂದು ಹಾರೈಸಿರುವರು

ಲಾರ್ಡ್ ವಿಲ್ಲಿಂಗ್‌ಡನ್ನರೂ ಭರತಖಂಡದ ಹಿತಕ್ಕೆ ಸಾಧಕವಾದ ಅನೇಕ ಸವಿನುಡಿಗಳನ್ನು ಆಡುತ್ತಿದ್ದರು ತಮ್ಮ ಕಾಲದಲ್ಲಿಯೇ ಈ ದೇಶಕ್ಕೆ ಡೊಮಿನಿಯನ್ ಸ●●ಾರವು ಬರುವುದೆಂದು ಭರವಸೆ ಕೊಡುತ್ತಿದ್ದರು ಆದರೆ ಅವರು ತಮ್ಮ ಆಡಳಿತವನ್ನು ಮುಗಿಸಿಕೊಂಡು ವಿಶ್ರಾಂತಿ ಸುಖವನ್ನನುಭವಿಸಲು ತಮ್ಮ ದೇಶಕ್ಕೆ ಸುಖವಾಗಿ ಪ್ರಯಾಣ ಮಾಡಿದರು. ಅವರ ಆಡಳಿತವು ಮಾತ್ರ ಮುಗಿಯಿತು ಡೊಮಿನಿಯನ್ ಸ್ಟೇಟಸ್ಸು ಬರಲಿಲ್ಲ. ಅದಕ್ಕೆ ಬದಲಾಗಿ ಲಾಠಿ ಏಟುಗಳೂ, ವಸ್ತಿಗರಿಗಳೂ, ಜುಲ್ಮಾನೆಗಳೂ ಕಾರಾಗೃಹವಾಸಗಳೂ ವಿಶೇಷವಾಗಿ ಪ್ರಾಪ್ತವಾದವು. ಕರಾಳ ಶಾಸನಗಳು ಶಾಸನ ಕಡಿತವನ್ನು ತುಂಬಿದವು.

ಈಗ ಹೊಸದಾಗಿ ಬರುವ ವೈಸ್ರಾಯರು ಭಾರತೀಯರಿಗೆ ಅನೇಕ ಆಶೋತ್ತರಗಳನ್ನು ಹೇಳುವರು ತಮ್ಮೊತನೆ ಎಲ್ಲರೂ ಸಹಕರಿಸಬೇಕೆಂದು ಕೋರಿರುವರು. ತಾವು ಎಲ್ಲರಲ್ಲಿಯೂ ಸರ್ವ ಸಮದೃಷ್ಟಿಯಿಂದಲೂ ನಿಷ್ಪಕ್ಷಪಾತದಿಂದಲೂ ವರ್ತಿಸುವುದಾಗಿ ಹೇಳಿರುವರು. ಇವರ ಭರವಸೆಗಳೂ ಆಶೋತ್ತರಗಳೂ ಎಷ್ಟು ಮಟ್ಟಿಗೆ ಸಫಲವಾಗುವುವೋ ನೋಡಬೇಕು ಅಳಿಯನ ಕುರುಡು ಬೆಳಗಾದ ಮೇಲೆ

ಪೌರಸಭೆಗೆ ಹೊಸ ಸಾಲವೆ?

ಮೈಸೂರು ಪೌರಸಭೆಗೆ ಸರ್ಕಾರದವರು ಏಳು ಲಕ್ಷ ರೂಪಾಯಿಗಳ ಸಾಲವನ್ನು ಕೊಡುವರೆಂದೂ, ಅದನ್ನು ಇಪ್ಪತ್ತೈದು ವರ್ಷಗಳ ಅವಧಿಯಲ್ಲಿ ತೀರಿಸಲು ಅವಕಾಶ ಕೊಡಲ್ಪಡುವುದೆಂದೂ ತಿಳಿದು ಬರುತ್ತದೆ ಇದರಿಂದ ಇತರ ಸಾಲಗಳನ್ನೆಲ್ಲಾ ತೀರಿಸಲಾಗುವುದು ಅಲ್ಲದೆ ನೀರು ಸರಬರಾಜಿನ ವ್ಯವಸ್ಥೆಗೆ ಐವತ್ತು ಸಾವಿರ ರೂಪಾಯಿ, ಅಂಡರ್‌ಗ್ರೌಂಡ್ ಡ್ರೇನೇಜು ಇಲ್ಲದ ಕಡೆಗಳಲ್ಲಿ ಅದನ್ನು ಹಾಕಲು ಒಂದು ಲಕ್ಷ ರೂಪಾಯಿ ಸ್ಕ್ಯಾಯೇರ್ ಫಾರಂನನ್ನು ವಿಸ್ತರಿಸಲು ಇಪ್ಪತ್ತು ಸಾವಿರ ರೂಪಾಯಿ ಮತ್ತು ಶಿಥಿಲವಾಗಿರುವ ವಸತಿಗಳನ್ನು ಸರಿಪಡಿಸುವದು, ದೊಡ್ಡ ದೊಡ್ಡ ಮನೆಗಳಿಗೆ ನೀರಿನ ಮೀಟರು ಇಡಿಸುವುದು, ಒಂದು ಈಜುವಿಂಗ ಬಾತ್ ಕಟ್ಟುವುದು ಇವೇ ಮುಂತಾದ ಕಾರ್ಯಕ್ರಮಗಳಿಗೆ ಸಾವಿರಾರು ರೂಪಾಯಿ ಈ ರೀತಿ ಹಂಚಿಕೆಯಾಗಿರುವುದಾಗಿಯೂ ವರ್ತಮಾನ ರಸ್ತೆಗಳಿಗೆ ತಾರನ್ನು ಹಾಕುವುದು ಇವರಲ್ಲಿ ಬಹು ಮುಖ್ಯವಾದ ವೆಚ್ಚ

ಪೌರಸಭೆಯವರು ನೀರಿನ ಸರಬರಾಜನ್ನು ಉತ್ತಮಪಡಿಸಲು ಐವತ್ತು ಸಾವಿರ ರೂಪಾಯಿ ಸಾಲ ಕೇಳಿದಾಗ ನಮ್ಮ ಸರ್ಕಾರದವರು ಎಲ್ಲಿಂದ ಹೇಗೆ ಸಾಲವನ್ನು ತೀರಿಸುತ್ತೀರಿ? ಎಂದು ಕೇಳಿದ್ದರು ಈಗ ಲಕ್ಷಾಂತರ ರೂಪಾಯಿನ ಸಾಲವನ್ನು ದೀರ್ಘಕಾಲದ ಅವಧಿ ಮೇಲೆ ಕೊಡಲು ಒಪ್ಪಿರುವುದು ಪೌರಸಭೆಯ ಬಹೂತಿಗೆ ಗುರುತಾಗಿದೆ ಸಾಲಮಾಡುವುದು ದೊಡ್ಡದಲ್ಲ ಆದರೆ ಈ ಸಾಲಗಳ ಮತ್ತು ಅವುಗಳ ಮೇಲಿನ ಬಡ್ಡಿಯ ಹೊರೆಯನ್ನು ಕ್ರಮ ಕ್ರಮವಾಗಿ ಇಳಿಸಿ ಪುರನಿವಾಸಿಗಳಿಗೂ ಸಾಧ್ಯವಾದಷ್ಟು ಸೌಕರ್ಯಗಳನ್ನು ಒದಗಿಸುವ ಏರ್ಪಾಡನ್ನು ಪೌರಸಭೆಯವರು ಪರ್ಯಾಲೋಚಿಸಬೇಕು.

ವೈಸರಾಯರೂ ತೆರಿಗೆಯ ಹೊರೆಯೂ

ತೆರಿಗೆಯು ಎಷ್ಟು ಭಾರವಾದುದೆಂಬುದನ್ನು ಈಗಿನ ವೈಸರಾಯರಾದ ಲಾರ್ಡ್ ಲಿನ್‌ಲಿತ್ ಗೋರವರು ಸ್ವತಃ ಅನುಭವಿಸಿರುವರು ಇವರಿಗೆ ಇಂಗ್ಲೆಂಡಿನಲ್ಲಿ ವಿಶೇಷವಾದ ಪಿತ್ರಾರ್ಜಿತ ಆಸ್ತಿ ಇತ್ತು ಜಮೀನು ಬಹಳವಾಗಿತ್ತು ಇವುಗಳು ಅವರ ವಂಶಕ್ಕೆ ಎರಡು ಶತಮಾನಗಳಿಂದ ಬಂದಿದ್ದವು ಆದರೆ ಇವುಗಳ ಮೇಲೆ ಸರ್ಕಾರದವರು ಹೊರಿಸಿದ್ದ ತೆರಿಗೆಯ ಭಾರವು ವಿಪರೀತವಾಗುತ್ತ ಬರಲು ಅವುಗಳನ್ನು ತೆರಲಾರದೆ ಇವರು ಬಹಿರಂಗವಾಗಿ ಈ ತೆರಿಗೆಗಳನ್ನು ಖಂಡಿಸಿದರು ಭೂಕಂದಾಯವು ವಿಪರೀತ ಜಬಾಬಿಯಾಗಿದೆ ಎಂದೂ ಅವಶ್ಯಕರಣ ತಾವು ತಮ್ಮ ಜಮೀನು, ಸ್ವತ್ತು ಮನೆತನಗಳನ್ನು ಆಬಾದು ಮಾಡಿಸುವುದಕ್ಕೂ ಹಣವು ಉಳಿಯುವುದಿಲ್ಲವೆಂದೂ ಹೇಳಿ, ತಮ್ಮ ಆಸ್ತಿಗೆ ರಾಜೀನಾಮೆ ಕೊಟ್ಟು ಬಂದು ಕೈಗಾರಿಕೆಗಳ ಉದ್ಯಮಕ್ಕೆ ಕೈಹಚ್ಚಿದರು

ಅವರಿಗೆ ಸ್ವತಃ ವ್ಯವಸಾಯಗಾರರ ಕಷ್ಟಗಳು ಎಷ್ಟಿವೆಯೆಂಬುದು ಗೊತ್ತಿದೆ ಆದ್ದರಿಂದಲೇ ಭರತಖಂಡದಲ್ಲಿ ಬಂದಿಳಿದೊಡನೆಯೇ ಕೆಲವು ರೈತರನ್ನು ಕರೆಸಿಕೊಂಡು ಅವರ ಹಿತಚಿಂತನೆಯನ್ನು ಮಾಡಿದರು ಇಂಗ್ಲೆಂಡಿನಲ್ಲಿಯೇ ಭೂಕಂದಾಯದ ಹಾವಳಿಯು ಹೀಗೆ ಇದ್ದಾಗ ಇನ್ನು ಭರತಖಂಡದ ಮಾತೇನೆನ್ನಬೇಕು? ಇವರ ಕಾಲದಲ್ಲೇನಾದರೂ ಭೂಕಂದಾಯದ ಭಾರವು ತಗ್ಗೀತೋ ನೋಡೋಣ"

ಸ್ಪೈರ್ಧೋಟೆಯ ಪರಮಾವಧಿ

ಮೋಟಾರ್ ಬಸ್ಸುಗಳ ಪೈಪೋಟಿಯು ಸರ್ವಜನ ವಿದಿತವಾದುದು ಆದ್ದರಿಂದ ಮೋಟಾರುಬಸ್ಸು ಮಾಲೀಕರುಗಳು ಹೊಂದಿರುವ ಹೀನಸ್ಥಿತಿಯೂ ಲೋಕವಿಖ್ಯಾತವಾಗಿದೆ ಪ್ರಯಾಣದ ದರಗಳನ್ನು ಇಳಿಸಿ ಒಬ್ಬರ ಮೇಲೊಬ್ಬರು ಪೈಪೋಟಿ ಮಾಡಿ ತಮ್ಮ ವ್ಯಾಪಾರವನ್ನು ಹೆಚ್ಚಿಸಿಕೊಳ್ಳಲು ಪ್ರಯತ್ನಿಸುವುದು ಕೆಲವು ವರ್ತಕರಿಗೆ ಕೆಲವು ಕಾಲದ ಸಹಜ ಪದ್ಧತಿಯಾಗಿದೆ ಆದ್ದರಿಂದ ಈಗಿನ ವ್ಯಾಪಾರಗಳಲ್ಲಿ ಪೈಪೋಟಿಗೂ ಒಂದು ಸ್ಥಾನವು ಕಲ್ಪನೆಯಾಗಿದೆ ರಚನಾತ್ಮಕವಾದ, ಉತ್ತೇಜಕರವಾದ ಸ್ಪರ್ಧೆಯು ಎಷ್ಟಿದ್ದರೂ ಯಾರಿಗೂ ಬಾಧಕವಿಲ್ಲ ಈಚೆಗೆ ನಮ್ಮ ಕೆಲವು ಬಸ್ಸುಗಳ ಮಾಲಿಕರು ಕೈಗೊಂಡಿರುವ ಪೈಪೋಟಿಯ ರೀತಿಯು ಯಾವ ದೇವರಿಗೆ ಪ್ರೀತಿಯೋ ಗೊತ್ತಿಲ್ಲ ಇಬ್ಬರ ಜಗಳ ಮೂರನೆಯವನಿಗೆ ಲಾಭ ಟಪಾಲುಗಳನ್ನು ಹೊತ್ತುಕೊಂಡು ಹೋಗಲು ಇದುವರೆಗೆ ಬಸ್ಸುಗಳ ಮಾಲೀಕರಿಗೆ ಟಪಾಲ್ ಇಲಾಖೆಯವರು ಹೇರಳವಾಗಿ ಹಣಕೊಡುತ್ತಿದ್ದರು ಎದುರುತ್ತಾ ಅದು ಬಹಳ ಕಡಿಮೆ ದರಕ್ಕೆ ಇಳಿಯಿತು ಅಷ್ಟೇ ಸಾಲದೆ ಈಗ ಬಸ್ಸಿನವರೇ ಇಲಾಖೆಗೆ ಹಣಕೊಡುವುದಾಗಿಯೂ ಟಪಾಲು ಹೊರುವ ಕಂಟ್ರಾಕ್ಟ ತಮಗೆ ಕೊಡಿಸಬೇಕೆಂದೂ ಪೈಪೋಟಿಯನ್ನು ಮಾಡುತ್ತಿರುವರು ಇದರಿಂದ ಎಷ್ಟು ಸರ್ವೀಸ್ಸಿಗೆ ಗೌರವ ಬರುವುದೆಂತೆ, ಬಸ್ಸು ಹೊರಡುವ ಮತ್ತು ಸೇರುವ ಕಾಲಗಳ ಖಾತರಿ ಉಂಟಾಗುವುದಂತೆ ಇದು ಪೈಪೋಟಿಯ ಪರಮಾವಧಿಯೇ ಸರಿ

ಸ್ತ್ರೀ ಸೈನಿಕರು.

ಕ್ಯೂಬಾ ದ್ವೀಪದಲ್ಲಿ ಸ್ತ್ರೀಯರೂ ಸೈನ್ಯ ಇಲಾಖೆಗೆ ಸೇರುತ್ತಿರುವರು ಮೊನ್ನೆ ನಡೆದ ಒಂದು ಸೈನಿಕರ ಪ್ರದರ್ಶನದಲ್ಲಿ ಅವರೂ ಭಾಗ ವಹಿಸಿದ್ದರು ಅವರು ಕಾಲಾಳುಗಳಾಗಿಯೂ, ಅಶ್ವ ಸೈನ್ಯದವರಾಗಿಯೂ ಸೇರಿರುವರು ಅಶ್ವಸೈನ್ಯದ ಗುಂಪಿನಲ್ಲಿ ಸ್ತ್ರೀಯರು ತೋರಿಸಿದ ಕೌಶಲ್ಯವು ಎಲ್ಲರ ಮೆಚ್ಚಿಕೆಗೂ ಪಾತ್ರವಾಗಿತ್ತು

ಹಿಟ್ಲರರ ವರ್ಧಂತಿ.

ಜರ್ಮನಿಯ ಮುಖ್ಯಾಧಿಪತಿಯಾ[illegible] ಹೆರ್ ಹಿಟ್ಲರಿನ ವರ್ಧಂತಿಯು ಕಳೆ[illegible] ಸೋಮವಾರ ಬಹಳ ವಿಜೃಂಭಣೆಯಿ[illegible] ಜರುಗಿತು. ಸೈನಿಕ ದಳದ ಭಾರಿ ಪ್ರ[illegible] ರ್ಶನವೊಂದು ಆಯಿತು. 38,000 [illegible] ನಿಕರು ಪೆರೇಡ್ ಮಾಡಿದರು. ನಾ[illegible] ರು ಟ್ಯಾಂಕ್ ಮಿಷನ್ನುಗಳೂ ಇದ್ದ[illegible] ಬಿಳೀ ಉಡುಪುಗಳನ್ನು ಧರಿಸಿದ್ದ ನೌ[illegible] ಸೇನೆಯವರೂ ಇದ್ದರು ಅನೇಕರು [illegible] ಟ್ಲರನಿಗೆ ಹಾರೈಕೆಗಳನ್ನು ಸಲ್ಲಿಸಿದರು. [illegible] ಟ್ಲರನು ವಿದ್ವಾಂಸರಿಗೂ, ಶಾಸ್ತ್ರಜ್ಞರಿ[illegible] ಬಿರುದುಗಳನ್ನು ಕೊಟ್ಟನು

ಹಿಟ್ಲರನು ತನ್ನ ವರ್ಧಂತಿ ಪ್ರಯು[illegible] ಕೆಲವು ಬಹುಮಾನಗಳನ್ನು ಹಂಚಿ[illegible] ನು. ಅವುಗಳಲ್ಲಿ 1,012 ತೊಟ್ಟಿಲ ಗ[illegible] 31 ಸಾವಿರ ಜೊತೆ ಕಾಲು ಚೀಲಗ[illegible] ಇವೆ ತೊಟ್ಟಿಲುಗಳನ್ನು ಬಡ ಜನ[illegible] ಕೊಡಲಾಗುವುದು ಇದರಿಂದ ಈತನಿ[illegible] ದೇಶದ ಬಡಮಕ್ಕಳ ಯೋಗಕ್ಷೇಮದ ವಿ[illegible] ಚಾರದಲ್ಲಿ ಇರುವ ಶ್ರದ್ಧೆಯು ವೇದ್ಯವಾಗು[illegible] ವುದು ಇತರ ಕೆಲವರಿಗೆ ಹೂವಿನ ಗೊಂ[illegible] ಚಲುಗಳನ್ನು ಬಹುಮಾನವಾಗಿ ಕೊ[illegible] ನು ಒಂದು ಯುದ್ಧ ವಿಮಾನದ ಮಾ[illegible] ಯೂ ಸಹ ಬಹುಮಾನ ಕೊಡಲ್ಪಟ್ಟಿತ[illegible]

ಮಹಾತ್ಮ ಗಾಂಧಿಯವರು ನಂದಿಬೆಟ್ಟಕ್ಕೆ ಬರುವರು

ಮಹಾತ್ಮಾ ಗಾಂಧಿಯವರು ವಿಶ್ರಾಂ[illegible] ಗಾಗಿ ಮುಂದಿನ ೧೦ ನೇ ತಾ॥ ನಂದಿ [illegible] ಟ್ಟಕ್ಕೆ ಬಂದು ಅಲ್ಲಿ ಎರಡು ತಿಂಗಳ ಕಾ[illegible] ತಂಗುವರು ಮೈಸೂರು ಸರ್ಕಾರದ ಅ[illegible] ಥಿಗಳಾಗಿರುವರು ಅವರ ಸೌಕರ್ಯಕ್ಕಾ[illegible] ಗಿ ಅಲ್ಲಿ ಎಲ್ಲಾ ಸಿದ್ಧತೆಗಳೂ ಅಣಿಯಾಗ[illegible] ತ್ತಿವೆ ಇವರಲ್ಲದೆ ಶ್ರೀ॥ ಜೆ ಡಿ ಬಿರ್ಲಾ[illegible] ಮುಂತಾದ ಅನೇಕ ಜನ ದೇಶಭಕ್ತರೂ [illegible] ಬರುವರು

ಮಾಳವೀಯರ ಆಗಮನ.

ಪಂಡಿತ ಮದನಮೋಹನ ಮಾಳವೀ[illegible] ಯರು ಮೇ ತಿಂಗಳು ಮಧ್ಯ ಭಾಗದ[illegible] ಮೈಸೂರಿಗೆ ದಯಮಾಡಿಸುವರು ತಿರು[illegible] ವಾಂಕೂರಿನ ಹರಿಜನ ಸಮಸ್ಯೆಯನ್ನು ಪ[illegible] ರಿಶೀಲಿಸಲು ಇವರು ಸಂಚಾರ ಹೊರಟಿ[illegible] ವರು ಮದರಾಸಿನ ದಿವಾನ್ ಬಹದ್ದೂರ್ [illegible] ಭಾಷ್ಯಂ ರವರೂ ಹರಿಜನ ಸಮ್ಮೇಳನ[illegible] ದ ಅಧ್ಯಕ್ಷತೆಯನ್ನು ವಹಿಸಲು ದಯಮಾ[illegible] ಡಿಸುವರು

"ಹಿಂದಿನ" ವೈಸ್‌ರಾಯರು.

ಹೊಸದಾಗಿ ವೈಸ್‌ರಾಯರಾಗಿ ಬಂ[illegible] ರುವ ಲಾರ್ಡ್ ಲಿನ್‌ಲಿತ್ ಗೋರವರ[illegible] ಸುಖಾಗಮನವನ್ನು ಬಯಸಿ ಕೊಯಮ[illegible] ತ್ತೂರು ವ್ಯವಸಾಯ ಸಂಸ್ಥೆಯೊಂದು [illegible] ಕೆಳಗೆ ಕಂಡಂತೆ ಬರೆದಿದೆ—ಈ ಸಂಸ್[illegible] ಯು "ಹಿಂದಿನ" ವೈಸರಾಯರಿಗೆ ಸ್ವಾ[illegible] ತವನ್ನು ಬಯಸುತ್ತದೆ ಮತ್ತು ಇವರ [illegible] ಡಳಿತದಲ್ಲಿ ಬಡ ಹಳ್ಳಿಗಾಡಿನವರ ಸ್ಥಿತಿ[illegible] ತಿಗಳು ಅಭಿವೃದ್ಧಿ ಹೊಂದಲೆಂದು ಆಶಿಸು[illegible] ತ್ತದೆ.

ನ ರ ಜ ನ್ಮ.

ಲೇಖಕ—ಜಿ.ವಿ.ಆರ್. ಒಂಟಿಕೊಪ್ಪಲ್.

ಲೋಕದಲ್ಲಿ ಪ್ರತಿಯೊಬ್ಬನಿಗೂ ನಾನು ಎನ್ನುವ ಭಾವವು ಇದ್ದೇ ಇರುವದಲ್ಲವೆ? ಪಂಡಿತೋತ್ತಮರಾಗಲಿ ಪಾಮರ ಜನರಾಗಲಿ ಧನವಂತನಾಗಲಿ ದರಿದ್ರನಾಗಲಿ ಬಾಲಕನಾಗಲಿ ವೃದ್ಧರಾಗಲಿ ಎಲ್ಲ ದೇಶಗಳಲ್ಲಿರುವವರೂ ಎಲ್ಲ ಮತಗಳಲ್ಲಿರುವವರೂ ಸರ್ವ ವರ್ಣದವರೂ ಸ್ತ್ರೀಯರೂ ಪುರುಷರೂ ಯಾರೇ ಆಗಲಿ ಆ ಭಾವವನ್ನು ಹೊಂದಿರುತ್ತಾರೆ. ಬಾಲ್ಯ ಕೌಮಾರಾದಿ ಶರೀರಾವಸ್ಥೆಗಳು ಬದಲಾಯಿಸಿದರೂ ನಾನು ಎನ್ನುವದು ಹೋಗುವದಿಲ್ಲ. ನಾನು ಬಾಲ್ಯದಲ್ಲಿ ಬಹು ಕಷ್ಟಪಟ್ಟೆನು. ಯೌವನದಲ್ಲಿ ನಾನು ಸುಖವಾಗಿದ್ದೆನು. ಈಗ ನಾನು ಮುದುಕನಾಗಿದ್ದೇನೆ ಎಂದು ಒಬ್ಬನು ಹೇಳುತ್ತಾನೆ. ಜಾಗ್ರತ್ಸ್ವಪ್ನಗಳು ಬದಲಾಯಿಸಿದರೂ ನಾನು ಅನ್ನುವದು ಸ್ಥಿರವಾಗಿರುತ್ತದೆ. ನಾನು ರಾತ್ರಿ ನಿದ್ರೆ ಮಾಡಿದೆನು, ನಾನು ಬೆಳಗಿನ ಜಾವ ಸ್ವಪ್ನ ಕಂಡೆ ಎಂದು ಒಬ್ಬನು ಹೇಳುತ್ತಾನೆ. ಹೀಗೆ ಕಾಲಬದಲಾದರೂ ಶರೀರಬದಲಾದರೂ ಅವಸ್ಥೆಗಳು ಬದಲಾದರೂ ನಾನು ಎಂಬುವುದು ಬದಲಾಗುವದೇ ಇಲ್ಲ. ಅಷ್ಟೇ ಅಲ್ಲ. ಜನ್ಮಗಳು ಬದಲಾದರೂ ನಾನು ಅನ್ನುವದು ಹೋಗುವದಿಲ್ಲ ನಾನು ಹಿಂದಿನ ಜನ್ಮದಲ್ಲಿ [illegible]ನು ಮಾಡಿದ್ದೆನೋ ಎಂದು ಅಡುವ[illegible]ಲ್ಲವೆ?"

ಹೀಗೆ ಒಂದೇ ಸಮನಾಗಿ ಅನುಸರಿಸು[illegible]ರುವ ಈ ನಾನು ಅನ್ನುವದಕ್ಕೆ ವಾಚ್ಯ[illegible]ದ ಪದಾರ್ಥವ್ಯಾವದು? ಶರೀರವೇ? [illegible] ನನ್ನ ಶರೀರ ಅನ್ನುತ್ತಾರೆಯೇ [illegible] ನಾನೇ ಶರೀರ ಅನ್ನುವದಿಲ್ಲ. ಮ[illegible]ಸ್ಸೆ? ನನ್ನ ಮನಸ್ಸು ನಿನ್ನ ಮನಸ್ಸು [illegible]ನ್ನುತ್ತಾರಲ್ಲವೇ? ನಾನೇಮನಸ್ಸು ಎಂದು [illegible]ಳುವದಿಲ್ಲ. ಅಲ್ಲದೆ ಮನಸ್ಸು ಚಂಚ[illegible]ವಾದ್ದು. ನಾನು ಅನ್ನುವದು ಸ್ಥಿರ[illegible]ವಾದ್ದು. ಹೀಗೆ ಶರೀರಕ್ಕಿಂತಲೂ ಮ[illegible]ಸ್ಸಿಗಿಂತಲೂ ವಿಲಕ್ಷಣವಾಗಿ ಅವುಗಳಗೆ [illegible]ಪ್ರಿಯವಾಗಿ ಅವುಗಳ ವ್ಯಾಪಾರಕ್ಕೆ ಕಾರ[illegible]ವಾಗಿ ನಿತ್ಯವಾದ ವಸ್ತುವು ಮತ್ತೊಂದಿ[illegible]ರಬೇಕಲ್ಲವೆ? ಅದಕ್ಕೇ ಆತ್ಮ ಎಂದೂ [illegible]ವ ಎಂದೂ ಸಂಜ್ಞೆಯುಂಟು. ಅಗ್ನಿ[illegible]ಯಿಂದ ಕಿಡಿಗಳು ಹೊರಡುವಂತ[illegible]ವರಿಂದ ಜೀವಗಳು ಹೊರಡುತ್ತವೆ. [illegible]ಪದಲ್ಲಿ ದೇವ ಜೀವರು ಒಂದೇ. [illegible]ಕ ಪರ್ವತದಿಂದ ಒಂದು ಚೂರು ಬಂ[illegible]ದನ್ನು ತೆಗೆದರೆ ಅದರೆರಡಕ್ಕೂ ವಸ್ತು[illegible]ವೆಲ್ಲಿ? ಜೀವನಿಗೆ ಜನನ ಮರಣಾದಿ[illegible] ನಿತ್ಯನು. ಶಾಶ್ವತನು. ಪುರಾ[illegible]. ಶರೀರಗಳು ನಶಿಸಿದರೂ ನಾನು [illegible]ಸುವದಿಲ್ಲ. ಭಗವಂತನ ಮಹಿಮಾತಿ[illegible]ಗಳೆಲ್ಲವೂ ಜೀವನಲ್ಲಿ ನಿಗೂಢವಾಗಿ [illegible]ವೆ ವೃಕ್ಷ ಬೀಜದಂತೆ ವೃಕ್ಷಾಂಗ[illegible]ದ ಬೇರು, ತೊಗಟೆ, ತುದಿ, ಕೊಂಬೆ, [illegible] ಹೂ, ಫಲ ಮೊದಲಾದವೆಲ್ಲವೂ [illegible]ನಲ್ಲಿ ಹೇಗೆ ಅಡಗಿರುತ್ತವೋ ಅದರಂತೆಯೆ ಈಶ್ವರ ಶಕ್ತಿಯೆಲ್ಲವೂ ಜೀವನಲ್ಲಿ ಗೋಪ್ಯವಾಗಿರುತ್ತವೆ.

ಬೀಜಾಂತರ್ಗತವಾದ ವೃಕ್ಷವು ಬಹಿರ್ಪ್ರಕಟವಾಗಬೇಕಾದರೆ ಅದನ್ನು ಒಂದು ಕ್ಷೇತ್ರದಲ್ಲಿ ನೆಟ್ಟು ಉಚಿತ ಸನ್ನಿವೇಶವನ್ನು ಉಂಟುಮಾಡಿ ಗೊಬ್ಬರ ಹಾಕಿ ನೀರು ಹುಯ್ದು ಕಾಪಾಡಬೇಕಾದದ್ದು ಹೇಗೆ ಆವಶ್ಯಕವೋ ಅದೇ ರೀತಿಯಲ್ಲಿ ಜೀವನಲ್ಲಿ ಗೂಢವಾದ ಭಗವಂತನ ಶಕ್ತಿ ಬಹಿರ್ಗತವಾಗಬೇಕಾದರೂ ಜೀವನನ್ನು ಯೋಗ್ಯವಾದ ಕ್ಷೇತ್ರದಲ್ಲಿ ನಿಲ್ಲಿಸಿ ಉಚಿತ ಸಂಸ್ಕಾರಗಳನ್ನುಂಟುಮಾಡಬೇಕು. ಜೀವವೆಂಬ ಬಿತ್ತವನ್ನು ಪ್ರಕೃತಿ ಎಂಬ ಕ್ಷೇತ್ರದಲ್ಲಿ ಸ್ವಾಮಿಯಾದ ಈಶ್ವರನು ಪ್ರತಿಷ್ಠಿಸುತ್ತಾನೆ ಆ ಕಾರಣದಿಂದ ಜೀವನು ಪ್ರಕೃತಿಬದ್ಧನಾಗಿ ಕಾರಣ, ಸೂಕ್ಷ್ಮ, ಸ್ಥೂಲಗಳೆಂಬ ಶರೀರತ್ರಯವನ್ನು ಕಲ್ಪಿಸಿಕೊಂಡು ನಿಜಸ್ವರೂಪವನ್ನು ಮರೆತು ಪರಂಪರೆಯಿಂದ ಬಂದು ಭೂಲೋಕವನ್ನು ಸೇರುತ್ತಾನೆ.

ಜೀವನಿಗೆ ಮೊದಲು ಎಷ್ಟೋಕಾಲದವರೆಗೆ ಪಾಷಾಣಾದಿ ಸ್ಥಾವರಗಳಲ್ಲಿ ವಾಸ. ಆಮೇಲೆ ಬಹುಕಾಲ ತರುಗುಲ್ಮಲತಾದಿಗಳಲ್ಲಿ ವಾಸ. ಆ ಮುಂದೆ ತಿರ್ಯಗ್ಯೋನಿಗಳಲ್ಲಿ ಜನಿಸುತ್ತಾನೆ ಇಂದ್ರಿಯಗಳು ವಿಕಾಸವಾಗುತ್ತಾ ಕಾಮಕ್ರೋಧಾದಿಗಳು ಅಂಟುತ್ತಾ ತಾನು ಇತರರು ಅನ್ನುವ ಭಾವಬರುತ್ತಾ ಅನೇಕ ಯುಗಗಳೇ ಕಳೆಯುತ್ತಾ ಬಂದಮೇಲೆ ಜೀವನು ಮನುಷ್ಯ ಜನ್ಮಕ್ಕೆ ಅರ್ಹನಾಗುತ್ತಾನೆ. ಹೀಗೆ ಜೀವನು ನಾನಾ ಯೋನಿಗಳಲ್ಲಿ ಹುಟ್ಟಬೇಕು.

ಈ ಪ್ರಕಾರ ಜೀವನು 84 ಲಕ್ಷ ಯೋನಿಗಳಲ್ಲಿ ಕ್ರಮಕ್ರಮವಾಗಿ ಅಭಿವೃದ್ಧಿ ಹೊಂದುತ್ತಾ ಬಂದು ಶ್ರೇಷ್ಠವಾದ ನರಜನ್ಮದಲ್ಲಿ ಜನಿಸುತ್ತಾನೆ. ಈ ಜನನ ಮರಣ ಪ್ರವಾಹವನ್ನು ತಪ್ಪಿಸಿಕೊಳ್ಳುವ ಪಕ್ಷಾಗಲಿ ಹೆಚ್ಚುಮಾಡಿಕೊಳ್ಳುವದಕ್ಕಾಗಲಿ, ಈ ನರಜನ್ಮದಲ್ಲಿ ಅವಕಾಶವಿದೆ. ಇಂತಹ ಪರಮ ಪವಿತ್ರವಾದ ನರಜನ್ಮವನ್ನು ಪಡೆದಿದ್ದು. ತಾನು ಅಂದರೇನು? ತಾನು ಈ ಲೋಕಕ್ಕೆ ಬಂದಿರುವದೇಕೆ? ಇಲ್ಲಿ ಮಾಡಬೇಕಾದ ಕರ್ತವ್ಯವೇನು? ಯಾವ ಕರ್ತವ್ಯದಿಂದ ಆತ್ಮಶ್ರೇಯಸ್ಸು? ಯಾವ ಕಾರ್ಯದಿಂದ ಆತ್ಮನಾಶ ಎಂಬುವನ್ನು ತಿಳಿಯದಿದ್ದರೆ ಅಂತಹ ನರನನ್ನು ನರನೆನ್ನುವುದಕ್ಕೆ ಸಾಧ್ಯವೆ? ನರನ ಆಕಾರದ ಪಶುವೇ ಸರಿ. ಬಹುಭಾಗ ಅಂದರೆ ನೂರಕ್ಕೆ 80–90 ಇಂತಹ ಮಾನವ ಮೃಗಗಳೇ ಕಾಣುತ್ತಿವೆ. ಕಾರಣವೇನು? ಅವಿದ್ಯಾ.

ಹಿಂದಿನ ಘೋರ ಯುದ್ಧಕ್ಕಿಂತ ಹೆಚ್ಚು.

ಇಂದಿನ ಯೂರೋಪಿನ ಸ್ಥಿತಿಯು ಕಳೆದ ಘೋರ ಸಂಗ್ರಾಮದ ಕಾಲಕ್ಕಿಂತಲೂ ವಿಷಮವಾಗಿದೆ ಎಂದು ಯುದ್ಧ ಸಚಿವರಾದ ಆಲ್‌ಫ್ರೆಡ್ ಕೂಪರರವರು ಮ್ಯಾಂಚೆಸ್ಟರಿನಲ್ಲಿ ಹೇಳಿದರು.

ಮುನಿವೆಂಕಟಪ್ಪನವರಿಗೆ ಜುಲ್ಮಾನೆ

ಮೈಸೂರು ಅರಮನೆ ಕಂಟ್ರಾಕ್ಟರಾದ ಶ್ರೀ॥ ಬಿ. ಮುನಿವೆಂಕಟಪ್ಪನವರಿಗೆ ಮೈಸೂರು ಸ್ಪೆಷಲ್ ಮ್ಯಾಜಿಸ್ಟ್ರೇಟರು ೩೫ ರೂ. ಜುಲ್ಮಾನೆ, ಅದನ್ನ ಕೊಡಲು ತಪ್ಪಿದರೆ ಕೋರ್ಟು ಏಳುವ ವರೆಗೆ ಸಜಾವನ್ನು ವಿಧಿಸಿದರು. ಮ॥ ಮುನಿವೆಂಕಟಪ್ಪನವರು ತಿರುಮಕೂಡ್ಲು ನರಸೀಪುರದ ಬಳಿ ಕಪಿಲಾ ಸೇತುವೆಯನ್ನು ಕಟ್ಟಿದರು. ಅದರ ಪ್ರಾರಂಭೋತ್ಸವದ ಸಮಯದಲ್ಲಿ ಚಪ್ಪರ ಹಾಕಿದ್ದವನನ್ನು ಬೆತ್ತದಿಂದ ಹೊಡೆದರೆಂದು ಆಪಾದನೆಯಾಗಿತ್ತು. ಇದು ರುಜುವಾತಾಗಿದ್ದರಿಂದ ಶಿಕ್ಷೆಯಾಯಿತು. ಜುಲ್ಮಾನೆ ಹಣದಲ್ಲಿ ಮೂವತ್ತು ರೂಪಾಯನ್ನು ಫಿರ್ಯಾದಿಗೆ ಕೊಡಿಸಬೇಕೆಂದು ತೀರ್ಮಾನವಾಯಿತು.

ಶ್ರೀ॥ ವೈ. ಜಿ. ಕೃಷ್ಣಮೂರ್ತಿ.

ಮೈಸೂರು ಪತ್ರಿಕೋದ್ಯೋಗಿಗಳ ಸಂಘದ ಕಾರ್ಯದರ್ಶಿ.

ಇವರು ಮುಂದಿನ ವ್ಯಾಸಂಗಕ್ಕಾಗಿಯೂ ಮತ್ತು "ಲೀಡರ್" ಪತ್ರಿಕೆಯ ಆಫೀಸಿನಲ್ಲಿ ಕೆಲಸಮಾಡುವುದಕ್ಕಾಗಿಯೂ ಈ ದಿನ ಅಲಹಾಬಾದಿಗೆ ತೆರಳುವರು.

ಹೆಣ್ಣು ಕೂಲಿ ಆಳುಗಳ ಮುಷ್ಕರ

ಮೈಸೂರು ಕೃಷ್ಣರಾಜೇಂದ್ರ ಮಿಲ್ಲಿನ ಹೆಣ್ಣು ಕೂಲಿ ಆಳುಗಳು ಕೆಲವು ದಿನಗಳಿಂದ ಮುಷ್ಕರ ಹಿಡಿದು ಕೆಲಸಕ್ಕೆ ಹೋಗದೆ ನಿಂತಿರುವರು. ಇವರುಗಳಿಗೆ ಹತ್ತಿ ಬಿಡಿಸುವ ಕೂಲಿಯಲ್ಲಿ ಸ್ವಲ್ಪ ಕಡಿಮೆ ಮಾಡಲ್ಪಟ್ಟಿದೆ ಕೆಲವು ದಿನಗಳ ಹಿಂದೆ ಹೀಗೆಯೇ ಕಡಿಮೆ ಮಾಡಲ್ಪಟ್ಟಿದ್ದಿತು ಆದು ಸಮಾಧಾನವಾಗಿ ಅವರುಗಳು ಕೆಲಸಕ್ಕೆ ಬರಲಾರಂಭಿಸಿದರು. ಈಗ ಪುನಃ ಎಲ್ಲರೂ, ಸುಮಾರು ನಾನೂರು ಜನರು ಮುಷ್ಕರ ಹಿಡಿದಿರುವರು. ಇದನ್ನು ನೋಡಿ ಅವರಿಗೆ ಸಹಾನುಭೂತಿ ತೋರಿಸಲು ಮಿಲ್ಲಿನ ಗಂಡು ಕೂಲಿ ಆಳುಗಳೂ ಸಹ ಮುಷ್ಕರ ಹಿಡಿದಿರುವರು ಪರಿಸ್ಥಿತಿಯು ಶಾಂತವಾಗಿದೆ .ಗಲಭೆಯೇನೂ ನಡೆದಿಲ್ಲ.

ಅಪೂರ್ವದೃಶ್ಯ—ಅಶರೀರವಾಣಿ.

ಮಾದರಿ ಪುರವೆಂಬ ಗ್ರಾಮದಬಳಿ ಬಜೀತ್ ಪುರವೆಂಬ ಊರು. ಅಲ್ಲಿ ಸೇನಾದಳದ ಒಂದು ಶಿಬಿರವು ಇತ್ತು. ಆ ಶಿಬಿರದ ಬಳಿ ವಿಚಿತ್ರ ದೃಶ್ಯಗಳೂ, ವಾಣಿಗಳೂ ಕಂಡುಬರುತ್ತಿದ್ದವು. ಒಂದುದಿನ ರಾತ್ರಿ ಶಿಬಿರದಬಳಿ ಗಸ್ತು ತಿರುಗುತ್ತಿದ್ದ ಸೋಲ್ಜರುಗಳು ತಮ್ಮ ಶಿಬಿರದ ಬಳಿಯ ಬೈಲಿನಲ್ಲಿ ಒಂದು ಬಿಳಿಯ ಹಸುವು ತನ್ನ ಕರುವಿನೊಡನೆ ಮೇಯುತ್ತಿದ್ದುದನ್ನು ಕಂಡರು. ಹಸುವನ್ನೂ ಕರುವನ್ನೂ ಸಿಪಾಯಿಗಳು ಹಿಡಿಯಲು ಹೋದಾಗ ಇದ್ದಕ್ಕಿದ್ದಹಾಗೆ ಅವುಗಳು ಅಂತರಿಕ್ಷದಲ್ಲಿ ಮಾಯವಾದವು ಕೆಲವು ದಿನಗಳನಂತರ ಇದಕ್ಕಿಂತಲೂ ವಿಚಿತ್ರವಾದ ಪ್ರಸಂಗವು ನಡೆಯಿತು. ಮನುಷ್ಯಾಕೃತಿಯಲ್ಲಿದ್ದ ಒಂದು ಬಿಳಿಯ ಸ್ವರೂಪವು ರಾತ್ರಿ ಕಾವಲು ಕಾಯುತ್ತಿದ್ದ ಸಿಪಾಯಿಗಳ ಮುಂದೆ ಬಂದು ನಿಂತಿತು. ಸಿಪಾಯಿಗಳು ಆ ಆಕೃತಿಯನ್ನು ಬೆದರಿಸಿದರು. ಅದು ಜಗ್ಗಲಿಲ್ಲ. ಹವಲ್ದಾರರನ್ನು ಕರೆದರು. ಎಲ್ಲರೂ ಅದರ ಸಮೀಪಕ್ಕೆ ಹೋಗಲು, ಮೇಲೆ ಹೇಳಿದ ದನಕರುಗಳಂತೆಯೇ ಅದೂ ಸಹ ಮಾಯವಾಯಿತು. ಅದೇ ಸಮಯದಲ್ಲಿ ಒಂದು ಅಶರೀರವಾಣಿಯು ಗಾಳಿಯಲ್ಲಿ ಕೇಳಬಂತು. "ನರಸಿಂಹ ದೇವರಿಗೆ ಪೂಜೆಯನ್ನು ಸಲ್ಲಿಸುವವರೆಗೆ ನೀವು ಏನೇನು ಕಷ್ಟಗಳನ್ನು ಅನುಭವಿಸುವಿರೋ ನೋಡಿ ಎಂದು ನುಡಿಯಿತು. ಸಿಪಾಯಿಗಳು ಆತುರದಿಂದ ನರಸಿಂಹದೇವರಲ್ಲಿ ತಮ್ಮ ಭಕ್ತಿ ಕಾಣಿಕೆಯನ್ನು ಸಲ್ಲಿಸಿ ಊರಿನವರಿಗೆಲ್ಲಾ ಪ್ರಸಾದವನ್ನು ಹಂಚಿದರು. ಮಾದರಿ ಪುರ ಮತ್ತು ಬಜೀತ್ ಪುರದಲ್ಲಿ ಬಿಡಾರಮಾಡಿಸಿದ್ದ ಸಿಪಾಯಿಗಳ ಶಿಬಿರವು ಒಡನೆ ರದ್ದುಮಾಡಲ್ಪಟ್ಟಿತು.

ಜಪಾನ್ ಸಾಮಾನುಗಳ ಮೇಲೆ ಬೆಲೆ ಏರಿಸಲಾಗುವುದು.

ಜಪಾನ್ ದೇಶದಲ್ಲಿ ತಯಾರಾಗುವ ಪದಾರ್ಥಗಳ ಬೆಲೆ ಎಷ್ಟು ಸುಲಭವೆಂಬುದು ಜಗದ್ವಿಖ್ಯಾತವಾಗಿದೆ ಈಜಿಪ್ಟ್ ದೇಶದಲ್ಲಿ ಜಪಾನ್ ಸಾಮಗ್ರಿಗಳನ್ನು ಅಗ್ಗವಾಗಿ ಮಾರುತ್ತಿದ್ದುದರ ಪರಿಣಾಮವಾಗಿ ಆ ದೇಶದ ವ್ಯಾಪಾರಕ್ಕೆ ಬಹಳ ತೊಂದರೆಯುಂಟಾಯಿತು. ಈ ವಿಷಯವನ್ನು ಪರ್ಯಾಲೋಚಿಸಲು ಒಂದು ಪಂಚಾಯಿತಿ ಏರ್ಪಾಡಾಯಿತು. ಈಜಿಪ್ಟ್ ದೇಶದವರು ಜಪಾನಿನ ಪದಾರ್ಥಗಳ ಮೇಲೆ ಶೇ॥ ೪೦ ರಷ್ಟು ತೆರಿಗೆಯನ್ನು ಹಾಕಿದ್ದರು. ಈ ಸಂದರ್ಭದಲ್ಲಿ ಜಪಾನಿನ ಪ್ರತಿನಿಧಿಯಾದ ಡಾ॥ ಕಾನಾಮಾರರವರು ಹೇಳಿದ್ದೇನೆಂದರೆ—ಬಲೋದ್ವಂದಿಯ ಪೈಪೋಟಿಯಿಂದ ಉತ್ತರೋತ್ತರ ಜಪಾನಿಗೆ ತೊಂದರೆಯಾಗುವುದು ಜಪಾನ್ ದೇಶವು ತನ್ನ ವಸ್ತುಗಳ ಬೆಲೆಯನ್ನು ಹೆಚ್ಚಿಸುವುದು. ಈಜಿಪ್ಟ್ ದೇಶದಿಂದ ಜಪಾನಿಗೆ ಹೋಗುವ ಹತ್ತಿಯ ಬೆಲೆಗೆ ಅನುರೂಪವಾಗಿ ಜಪಾನ್ ಸಾಮಾನುಗಳ ರಫ್ತನ್ನು ಹಂಚಲಾಗುವುದೆಂದು ಅವರು ತಿಳಿಸಿದರು.

ಜ್ಞಾನ ಮಾರ್ಗ

(ಬ್ರ|| ಶ್ರೀ|| ಮಹಾವಿದ್ವಾನ್
ಕೆ. ಗೋಪಾಲಕೃಷ್ಣ ಶಾಸ್ತ್ರಿಗಳವರಿಂದ)

ವೇದೋಪನಿಷತ್ತುಗಳಲ್ಲಿ ಭಕ್ತಿಯಿಂದ ಮೋಕ್ಷವುಂಟಾಗುವದೆಂದು ಹೇಳದೇ ಇದ್ದರೂ ಉಪನಿಷತ್ಸಮಾನವಾದ ಗೀತಾ ಶಾಸ್ತ್ರದಲ್ಲಿ ಕ್ರಿ|| 11 ನೇ ಶತಮಾನದಿಂದ ಈಚೆಯವರು ಜ್ಞಾನನಿಷ್ಠೆಯು ಪ್ರಾಧಾನ್ಯವೇನ ಇರುವದಿಲ್ಲ ಭಕ್ತಿಯೋಗವೇ ಪ್ರಧಾನವೆಂದು ತಿಳಿಯಬೇಕು, ಯಾಕೆಂದರೆ ಮೊದಲಿನಲ್ಲಿ ಶಿಷ್ಯಸ್ತೇಹಂ ಶಾಧಿ ಮಾಂ ತ್ವಾಂ ಪ್ರಪನ್ನಂ, ಎಂದು ಉಪಕ್ರಮಿಸಿ ಕೊನೆಯಲ್ಲಿ ಸರ್ವಧರ್ಮಾನ್ ಪರಿತ್ಯಜ್ಯ ಮಾಮೇಕಂ ಶರಣಂ ವ್ರಜ ಎಂದು ಭಗವಚ್ಛರಣಾಗತಿ ಮಾಮೇಕಂ ಅಥವಾ ಪ್ರಪತ್ತಿಯನ್ನೇ ಬೋಧಿಸಿರುವದರಿಂದ ಭಗವದ್ಗೀತೆಯು ಪ್ರಪತ್ತಿಶಾಸ್ತ್ರ ಅಥವಾ ಭಕ್ತಿಶಾಸ್ತ್ರವು ಜ್ಞಾನಶಾಸ್ತ್ರವಲ್ಲ ಎಂದು ಪ್ರತಿಪಾದಿಸುವರು ಇದಕ್ಕೆ ಸಮಾಧಾನವೀರೀತಿ ಇರುವದು ಯದ್ಯಪಿ ಗೀತಾ ಶಾಸ್ತ್ರದಲ್ಲಿ ಸಮಸ್ತ ವೇದಾರ್ಥಗಳೂ ಸಂಗ್ರಹಿಸಿ ನಿರೂಪಿಸಲ್ಪಟ್ಟಿವೆ ಕರ್ಮಿಗಳನ್ನೂ ಭಕ್ತರನ್ನೂ ಯೋಗಿಗಳನ್ನೂ ಆಯಾಯ ಸಂದರ್ಭದಲ್ಲಿ ಪ್ರಶಂಸಿಸುತ್ತಿತ್ತು ಪ್ರಶಂಸಾಮಾತ್ರಮಂವ್ರತಂ ಎಂಬ ನ್ಯಾಯದಂತೆ ಭಗವಂತನು ಮಾಡಿರುವದುಂಟು 6 ನೇ ಅಧ್ಯಾಯದಲ್ಲಿ ಯೋಗಮಹಿಮೆಯನ್ನು ಹೇಳುವಾಗ್ಯೆ ಯೋಗಾನುಷ್ಠಾನಪರನಿಗ ಸರ್ವಾಧಿಕ್ಯವನ್ನು ಹೇಳಿರುತ್ತಾನೆ

ಕ್ರಿ|| 2 ನೇ ಶತಮಾನದಲ್ಲಿದ್ದ ಭರ್ತೃಹರಿಯು, ಶಾಸ್ತ್ರಾರ್ಥಗಳನ್ನ ಪ್ರಬಲ ಪ್ರಮಾಣಗಳನ್ನವಲಂಬಿಸದೇನೆ ತಮಗೆ ತೋರಿದಂತೆ ಊಹೆಗಳಿಂದ ನಿರ್ಣಯಿಸುತ್ತಾ ಹೋದರ ಅದು ಎಂದಿಗೂ ಶಾಸ್ತ್ರಾರ್ಥವಾಗಲಾರದು ಮತ್ತೇನೆಂದರೆ ಪ್ರಾಚೀನ ಸಂಪ್ರದಾಯ ಪರಂಪರೆಯಲ್ಲಿ ಯಾವ ವಿಷಯವು ನಿರ್ಣೀತವಾಗಿರುತ್ತೋ ಅದನ್ನೇ ಅನುಸರಿಸಿ ಅರ್ವಾಚೀನರು ಭಾಷಿಸಬೇಕು ಎಂದು ಹೇಳಿರುವನು ಹೇಗಂದರೆ ಭರತಮುನಿಯು ಶೃಂಗಾರ, ವೀರ, ಕರುಣ, ಅದ್ಭುತ, ಹಾಸ್ಯ, ಭಯಾನಕ, ಭೀಭತ್ಸರೌದ್ರಾದಿ ರಸಗಳನ್ನ ಸುಖಸ್ವರೂಪವನ್ನಾಗಿ ಹೇಳಿರುವನಷ್ಟೆ ಆದರೆ ಕರುಣ, ಭಯಾನಕ, ಬೀಭತ್ಸ, ಮುಂತಾದವುಗಳಲ್ಲಿ ಸೌಖ್ಯಕ್ಕೆ ಬದಲಾಗಿ ದುಃಖಾದಿಗಳೇ ತೋರಿಬರುವದರಿಂದ 8 ರಸವೆಂದು ಹೇಳಬಾರದು ಎಂದು ಈಗಿನವರು ಹೇಳಲು ಸಮರ್ಥರಾಗಿಲ್ಲ ಅದೇರೀತಿ ಇತಿಶ್ರೀ ಭಗವದ್ಗೀತಾ ಸೂಪನಿಷತ್ಸು ಬ್ರಹ್ಮವಿದ್ಯಾಯಾಂ ಎಂದು ಅನಾದಿ ಕಾಲದಿಂದ ಜ್ಞಾನಶಾಸ್ತ್ರವೆಂದು ಪ್ರಸಿದ್ಧಿ ಇರುವಾಗ್ಯೆ ಇದನ್ನು ಅರ್ವಾಚೀನರು ಹೇಗೆ ಹೋಗಲಾಡಿಸಬಲ್ಲರು ?

ಶ್ರೀಮಚ್ಛಂಕರಾಚಾರ್ಯರು ಗೀತಾಭಾಷ್ಯಾರಂಭದಲ್ಲಿ ಗೀತಾಶಾಸ್ತ್ರವನ್ನ ಅನೇಕರು ಪದಾರ್ಥ ವಾಕ್ಯಾರ್ಥ ಪುರಸ್ಸರ ವ್ಯಾಖ್ಯಾನ ಮಾಡಿದ್ದರೂ ಅನೇಕ ವಿರುದ್ಧಾರ್ಥಗಳು ಲೌಕಿಕರಿಗೂ ಪರಿತೋರಬರುವದರಿಂದ ಆ ವಿರುದ್ಧಾಂಶಗಳನ್ನ ತೆಗೆದು ಗೀತಾರ್ಥವನ್ನ ಯಥಾಮತಿ ತತ್ತ್ವಾಂಶವನ್ನವಲಂಬಿಸಿ ತೋರ್ಪಡಿಸುತ್ತೇನೆಂದು ಪ್ರತಿಜ್ಞೆ ಮಾಡಿದ್ದಾರೆ ಈ ಕಾಲಕ್ಕೆ ಹಿಂದೆ ಗೀತೆಗೆ ಎಷ್ಟೋ ವ್ಯಾಖ್ಯಾನಗಳಿದ್ದರೂ ವೃತ್ತಿಕಾರರೆಂಬುವರ ಕರ್ಮಜ್ಞಾನ ಸಮುಚ್ಚಯವನ್ನ ಮಾತ್ರ ಖಂಡಿಸಿ ಜ್ಞಾನಕ್ಕೆ ಪ್ರಾಧಾನ್ಯವನ್ನ ಕೊಟ್ಟಿರುತ್ತಾರೆ ಮೀಮಾಂಸಕರಲ್ಲಿ ಪ್ರಾಭಾಕರ ಮತಾನುಯಾಯಿಗಳಂತೆ ವೃತ್ತಿಕಾರರು ಕರ್ಮಜ್ಞಾನಗಳೆರಡೂ ವೇದಗಳಲ್ಲಿ ಕಂಡುಬರುತ್ತೆ ಬರಿ ಕರ್ಮದಿಂದಾಗಲಿ ಜ್ಞಾನದಿಂದಾಗಲಿ ಮೋಕ್ಷ ಪ್ರಾಪ್ತಿಸಲಾರದು ಒಂದೊಂದನ್ನ ಅವಲಂಬಿಸಿದರೆ ಮತ್ತೊಂದು ವೇದಭಾಗಕ್ಕೆ ಅಪ್ರಾಮಾಣ್ಯವು ಬರುವದು ಪಕ್ಷಿಯು ತನ್ನ ಎರಡು ಪಕ್ಷಗಳನ್ನೂ ಅವಲಂಬಿಸಿ ಹೇಗೆ ಹಾರುವದೋ ಅದೇ ರೀತಿ ವೇದಬೋಧಿತ ಕರ್ಮಜ್ಞಾನ ನಿಷ್ಠೆಗಳಿಂದ ಕೂಡಿ ಅಧಿಕಾರಿಯು ಪುರುಷಾರ್ಥವನ್ನ ಹೊಂದಬೇಕೆಂದು ಈ ಗೀತಾಶಾಸ್ತ್ರದಲ್ಲಿ ಕರ್ಮಜ್ಞಾನ ಮಾರ್ಗಗಳೆರಡು ಪ್ರಾಧಾನ್ಯೇನ ಹೇಳಲ್ಪಟ್ಟಿವೆಯೆಂದೂ ಸನ್ಯಾಸ ಭಕ್ತಿ ಯೋಗಾದಿಗಳು ಅವುಗಳಿಗ ಸಾಧನಗಳೆಂದು ನಿರ್ಣಯಿಸಿದರು ಶ್ರೀಮದಾಚಾರ್ಯರು, ಅಧಿಕಾರಿತಃ, ಫಲತಃ, ಸಾಧನತಃ, ಸ್ವರೂಪತಃ ಕರ್ಮಜ್ಞಾನಗಳಿಗೆ ಭೇದವು ಸ್ಪಷ್ಟವಾಗಿರುವಾಗ್ಯೆ ಸಮುಚ್ಚಯವು ಸಿದ್ಧಿಸಲಾರದು, ಅವಿದ್ವಜ್ಜನರಿಗ ಕರ್ಮವೂ ಅದರ ಫಲವು ಸಾತಿಶಯವಾದ ಅಭ್ಯುದಯವೂ ಕ್ರಿಯಾಕಾರಕಾದಿ ಸಾಧನಗಳೂ ಸಿದ್ಧಿಸಿರುತ್ತವೆ ಕ್ರಿಯಾಕಾರಕ ಫಲೋಪಮರ್ದಪೂರ್ವಕ ಅದ್ವೈತಪರರಾದ ಮತ್ತು ಸಮಬುದ್ಧಿವುಳ್ಳ ಜ್ಞಾನಿಗಳಿಗೆ, ಅಥವಾ ಸನ್ಯಾಸಿಗ ನಿರತಿಶಯರೂಪವಾದ ಶ್ರೇಯಸ್ಸು ಹೇಳಲ್ಪಟ್ಟಿರುತ್ತೆ ಜ್ಞಾನಗಳನ್ನು ಶ್ರುತಿಗಳೇ ಸ್ತುತಿಸಿರುವದರಿಂದ ಕರ್ಮಜ್ಞಾನಗಳಿಗೆ ಸಮಪ್ರಾಧಾನ್ಯವು ಅಯುಕ್ತವೆಂದೂ, ಜ್ಞಾನಾಗ್ನಿಃ ಸರ್ವಕರ್ಮಾಣಿ ಭಸ್ಮಸಾತ್ಕುರುತೇಽರ್ಜುನ, ನಹಿಜ್ಞಾನೇನ ಸದೃಶಂ ಪವಿತ್ರಮಿತ್ಯಾದಿ ಭಗವಂತನ ಸೂಕ್ತಿಗಳಿಂದಲೂ ಜ್ಞಾನಕ್ಕೆ ಪ್ರಾಧಾನ್ಯವನ್ನೂ ಅದಕ್ಕೆ ಕರ್ಮವೂ ಭಕ್ತಿಯೂ ಸನ್ಯಾಸವೂ ಸಾಧನವೆಂದೂ ನಿರ್ಣಯಿಸಿರುತ್ತಾರೆ.

ಕೂಡ್ಲಿ ಮಠದ ಹೊಸ ಸ್ವಾಮಿಗಳು

ಶ್ರೀ|| ಕೂಡ್ಲಿ ಶೃಂಗೇರಿ ಮಠಕ್ಕೆ ಹೊಸ ಸ್ವಾಮಿಗಳ ಪಟ್ಟಾಭಿಷೇಕ ಮಹೋತ್ಸವವು ಕಳೆದ ಶುಕ್ರವಾರ ವೈಭವದಿಂದ ನಡೆಯಿತು ಗತಿಸಿದ ಸ್ವಾಮಿಗಳವರ ತಮ್ಮಂದಿರು ವೇ|| ಗಣೇಶಶಾಸ್ತ್ರಿಗಳ ಮಕ್ಕಳಾದ ವೇ|| ಮಹದೇವ ಶಾಸ್ತ್ರಿಗಳಿಗೆ ಪಟ್ಟವು ಕಟ್ಟಲ್ಪಟ್ಟಿತು ಶಾಸ್ತ್ರೋಕ್ತ ವಿಧಿಗಳೆಲ್ಲವೂ ಸಾಂಗವಾಗಿ ನಡೆದವು ಹನ್ನೊಂದು ಕುಶಾಲು ತೋಪುಗಳು ಆದವು ರಾತ್ರಿ ಸ್ವಾಮಿಗಳವರನ್ನು ಆನೆಯ ಮೇಲೆ ಕುಳ್ಳಿರಿಸಿ ರಾಜಧಾನಿಯ ಬೀದಿಗಳಲ್ಲೆಲ್ಲಾ ಮೆರವಣಿಗೆ ಮಾಡಲಾಯಿತು ಅವರಿಗೆ ಶ್ರೀ ಸಚ್ಚಿದಾನಂದ ಶಂಕರ ಭಾರತೀ ಸ್ವಾಮಿಗಳೆಂಬ ಹೆಸರು ಕೊಡಲ್ಪಟ್ಟಿದೆ

ಜೇಡನ ಬಲೆಯಿಂದ ಬಟ್ಟೆ.

ಸ್ವೀಡ್ ದೇಶದ ಒಂದು ಮದವಣಗಿತ್ತಿಯು ತನ್ನ ಉಡುಗೆರೆಗಾಗಿ ಕೌತುಕದಿಂದ ಕಾಯುತ್ತಿರುವಳು ಜೇಡನ ಬಲೆಯ ದಾರಗಳಿಂದಲೇ ಈಕೆಯ ಬಟ್ಟೆಗಳು ತಯಾರಾಗಬೇಕಂತೆ. ಸಾಮಾನ್ಯವಾದ ಒಂದು ರೇಷ್ಮೆ ದಾರಕ್ಕೆ ಜೇಡನ ದಾರಗಳು 20 ಸಮವಾಗುತ್ತವೆ ಎಷ್ಟುಕಾಲ ಆಕೆಯು ತಾಳ್ಮೆಯಿಂದ ಕಾಯಬಲ್ಲಳೋ ಸಂದೇಹ ಜೇಡನ ರೇಷ್ಮೆಯನ್ನು ಶೇಖರಿಸುವುದರಲ್ಲಿ ನಿಪುಣನಾದವನೊಬ್ಬನು ಹಿಂದೆ 30 ವರ್ಷಗಳಲ್ಲಿ ಒಂದೂವರೆ ಪೌಂಡಿನಷ್ಟು ಶೇಖರಿಸಿದ್ದನಂತೆ.

ನಿರುದ್ಯೋಗ ನಿವಾರಣೆ.

ನಿರುದ್ಯೋಗಿಗಳಾಗಿ ಅನ್ನವಿಲ್ಲದೆ ಕಷ್ಟಪಡುತ್ತಿರುವವರ ಸಹಾಯಾರ್ಥವಾಗಿ ಕೆನಡಾ ಸರಕಾರದವರು ಒಂದುಕೋಟಿ ಪೌಂಡುಗಳಿಗಿಂತ ಹೆಚ್ಚಾಗಿ ಹಣವನ್ನು ಮಂಜೂರುಮಾಡಿರುತ್ತಾರೆ

ಸಿನಿಮಾಗಳೆಷ್ಟಿವೆ ?

ಈ ಪ್ರಪಂಚದಲ್ಲಿ 67,399 ಸಿನಿಮಾ ಮಂದಿರಗಳಿವೆ 160 ಕೋಟಿ ಜನಗಳಿರುವರು, ಸರಾಸರಿ ಪ್ರತಿಯೊಂದು ಮಂದಿರವೂ 20,716 ಜನರಿಗೆ ಚಿತ್ರಗಳನ್ನು ಪ್ರದರ್ಶಿಸುತ್ತವೆ ಯೂರೋಪಿನಲ್ಲಿ 60,150 ಮಂದಿರಗಳೂ, ಅಮೆರಿಕಾದಲ್ಲಿ 15,378 ಮಂದಿರಗಳೂ ಇವೆ ಚೀನಾದಲ್ಲಿ ಬಹಳ ಕಡಿಮೆ ಅಲ್ಲಿ ಮುನ್ನೂರು ಮಾತ್ರ ಇವೆ

ಜ್ಯೂಬಿಲಿ ಸ್ಪೋರ್ಟ್ಸ್ ಕ್ಲಬ್.

ಮೈಸೂರು ವೆಸ್ಲಿಪ್ರೆಸ್ಸಿನ ಜ್ಯೂಬಿಲಿ ಸ್ಪೋರ್ಟ್ಸ್ ಕ್ಲಬ್ಬಿನ ವಾರ್ಷಿಕೋತ್ಸವವು ಕಳೆದ 18 ನೇ ತಾ|| ಶನಿವಾರ ಸಾಯಂಕಾಲ ವೆಸ್ಲಿ ಗಿಲ್ಡ್ ಹಾಲಿನಲ್ಲಿ ನಡೆಯಿತು ರಾ|| ಜಿ. ಡಬ್ಲ್ಯು ಸಾಡೆಯವರು ಅಗ್ರಾಸನವನ್ನು ವಹಿಸಿದ್ದರು ಪ್ರಾರ್ಥನೆ ವರದಿ, ಬಹುಮಾನ ವಿನಿಯೋಗ, ಗಾನ, ಭಾಷಣ-ಇವು ನಡೆದುವು

ಯುವಕರ ಮೇಲೆ ಎಚ್ಚರಿಕೆ.

ಬಂಗಾಳದಲ್ಲಿ ಯುವಕರ ಮೇಲೆ ವಿಪರೀತ ಗುಮಾನಿಯಿದೆ. ಯಾವ ಯುವಕನು ಏನು ಪಿತೂರಿ ಮಾಡಿ ಕ್ರಾಂತಿಯೆಬ್ಬಿಸುತ್ತಾನೊ ಎಂಬ ಶಂಕೆ. ನೋವಾಕಾಲಿ ಡಿಸ್ಟ್ರಿಕ್ಟಿನ ಫೇನಿ ಸರಹದ್ದಿನಲ್ಲಿರುವ ಪ್ರತಿಯೊಬ್ಬ ಗೃಹಸ್ಥನೂ ತನ್ನ ಮನೆ ಎಂದು ಹೋಗುವ ೧೪ ರಿಂದ ೩೦ ವಯಸ್ಸಿನ ತರುಣರ ಆಗಮನ ನಿರ್ಗಮನವನ್ನ ಪೋಲೀಸಿಗೆ ತಿಳಿಸಬೇಕು ತಪ್ಪಿದರೆ ಶಿಕ್ಷೆ

ಬಿ.ಎ. ಓದಿ ಮೋಚಿ

ಪಂಜಾಬ್ ವಿಶ್ವವಿದ್ಯಾಲಯದಲ್ಲಿ ಬಿ.ಎ. ಡಿಗ್ರಿ ಪಡೆದ ಒಬ್ಬ ಯುವಕನು ಜಲಂಧರನಗರದಲ್ಲಿ ಮೋಚಿ ಕೆಲಸವನ್ನು ಕೈಗೊಂಡಿದ್ದಾನೆ ಈತನು ಅಂಗಡಿಯನ್ನೂ ಕೂಡ ಇಟ್ಟಿಲ್ಲ. ಶಾಪಿನಿಂದ ಶಾಪಿಗೆ ಹೋಗಿ ಅಲ್ಲಿನ ಮ್ಯಾನೇಜರ ಅನುಮತಿ ಪಡೆದು ಅಲ್ಲಿನ ನೌಕರರ ಬೂಟ್ಸುಗಳನ್ನು ಒರೆಸಿ ಬಣ್ಣ ಹಾಕುತ್ತಿದ್ದಾನೆ

SPECIAL ATTRACTION FOR SUMMER!

DO NOT FAIL TO VISIT

'MOUNT ABU'

AT BOMBAY ANAND BHAVAN RESTAURANT, MYSORE.

EQUIPPED WITH EVERY MEANS OF COMFORT AND ENTERTAINMANT.

Radio Music—Special Catering Arrangements—Free Supply of Ice Cooled Water—Special Recreation Games, Luxurious Furniture & Special Cutlery.

In addition to the above, the Decent Garden which has been laid out will add to your Comfort,

'MOUNT ABU' is the 'BEAUTY SPOT' of Mysore

AN IDEAL PLACE FOR GARDEN PARTIES

ಹರಿಜನ ಸೇವೆಯೇ ಹರಿಸೇವೆ!

ಲೇಖಕರು:—ಶ್ರೀ ಕೃಷ್ಣ.

ವೇದಪ್ರಾಮಾಣ್ಯಕ್ಕನುಸಾರವಾಗಿಯೂ, ಶಾಸ್ತ್ರ ರೀತಿಯಾಗಿಯೂ ಪ್ರಪಂಚವು ಹರಿಯ ಇಚ್ಛಾಮಾತ್ರದಿಂದ ಉಂಟಾದುದೆಂದು ಎಲ್ಲರಿಗೂ ತಿಳಿದೇ ಇದೆ. ಮೊಟ್ಟಮೊದಲು ಹರಿಯು, ಅಂದರೆ ಆದಿ ಸರ್ವೇಶ್ವರನು ಬ್ರಹ್ಮನನ್ನು ಉತ್ಪತ್ತಿ ಮಾಡಿಕೊಂಡು ಅವನಿಗೆ ವೇದಾರ್ಥವನ್ನೂ, ಮತ್ತು ಲೋಕ ಸೃಷ್ಟಿಗಳ ಕ್ರಮವನ್ನೂ ಉಪದೇಶ ಮಾಡಿದನೆಂಬುದಾಗಿ ವೇದಗಳು ಸಾರುತ್ತಿವೆ. ಬ್ರಹ್ಮನು ಲೋಕ ಸೃಷ್ಟಿಯನ್ನು ಮಾಡುವ ವೇಳೆಯಲ್ಲಿ ಮೊದಲು ದ್ವಾದಶ ಬ್ರಹ್ಮರು, ಏಕಾದಶ ರುದ್ರರು, ಮನ್ವಂತರಗಳು. ಸಪ್ತಋಷಿಗಳು, ಇಂದ್ರರೇ ಆದಿಯಾಗಿ ಮೂವತ್ತು ಮೂರು ಕೋಟಿ ದೇವತೆಗಳನ್ನು ಸೃಷ್ಟಿ ಮಾಡಿ ಇವರುಗಳಿಗೆ ವೇದವನ್ನು ಉಪದೇಶ ಮಾಡಿದರು

ಚಾತುರ್ವರ್ಣ್ಯದ ಸೃಷ್ಟಿಯನ್ನು ವೇದವು ಸಾರುತ್ತದೆ. ಭಗವದ್ಗೀತೆಯಲ್ಲಿ ಶ್ರೀ ಕೃಷ್ಣ ಪರಮಾತ್ಮನು ಘಂಟಾಘೋಷವಾಗಿ ನಾಲ್ಕು ವರ್ಣಾಶ್ರಮಗಳನ್ನು ನಾನೇ ಸೃಷ್ಟಿಸಿದೆನು ಎಂಬುದಾಗಿ ಹೇಳಿದ್ದಾನೆ. ಯೇ ವಿನಃ ವೇದಗಳಲ್ಲಾಗಲೀ, ಶಾಸ್ತ್ರಗಳಲ್ಲಾಗಲೀ, ಇತಿಹಾಸ ಪುರಾಣಗಳಲ್ಲಾಗಲೀ, ಚಂಡಾಲರನ್ನು ತಾನು ಹುಟ್ಟಿಸಿದೆನೆಂದು ಎಲ್ಲಿಯೂ ಯಾವ ಸಂದರ್ಭದಲ್ಲಿಯೂ ಹೇಳಿಯೇ ಇಲ್ಲ ಅಂದರೆ ಪಂಚಮರು ಯಾರು? ಇವರ ಪಂಗಡವು ಯಾವಾಗ ಯಾರಿಂದ ಏರ್ಪಡಿಸಲ್ಪಟ್ಟಿತು? ಇದೇ ನಾವು ತಿಳಿಯಬೇಕಾದ ವಿಷಯವು.

ಪಂಚಮರು ಯಾರು? ಬ್ರಾಹ್ಮಣರಲ್ಲಿಯೂ, ಕ್ಷತ್ರಿಯರಲ್ಲಿಯೂ, ವೈಶ್ಯರಲ್ಲಿಯೂ, ಶೂದ್ರರಲ್ಲಿಯೂ ಆಚಾರ, ವ್ಯವಹಾರಗಳನ್ನು ಬಿಟ್ಟು, ತಮ್ಮ ಮನಸ್ಸು ಬಂದಂತೆ ನಡೆದು ಮೇಲೆ ಹೇಳಿದ ವರ್ಣಾಶ್ರಮಗಳಿಂದ ಬಹಿಷ್ಕಾರ ಹಾಕಲ್ಪಟ್ಟು, ಅಗ್ರಹಾರಗಳಿಂದಲೂ, ಗ್ರಾಮಗಳಿಂದಲೂ ಹೊರಗೆ ಪ್ರತ್ಯೇಕವಾದ ಸ್ಥಳದಲ್ಲಿ ಇಡಲ್ಪಟ್ಟವರೇ ಪಂಚಮರು. ಊರಿಂದ ಹೊರಗಟ್ಟಿ ಇವರುಗಳಿಗೆ ಅನ್ನಾಹಾರಗಳಿಲ್ಲದಂತೆ ಮಾಡಿ ಅವರ ಪಿತ್ರಾರ್ಜಿತ ಸ್ವತ್ತನ್ನು ತಮ್ಮ ಕೈವಶಮಾಡಿಕೊಂಡು ಕೂಲಿಯಾಗುವುದಕ್ಕೂ ಕೂಡ ಕರೆಯದೆ ಕೈಬಿಡಲ್ಪಟ್ಟವರೇ ಪಂಚಮರು. ಇವರು ವಸ್ತುತಃ ತಿಳಿದೋ, ತಿಳಿಯದೆಯೋ ಅಥವಾ ಅಹಂಕಾರದಿಂದಲೋ ಮಾಡಿದ ಕಾರ್ಯಗಳ ಕಾರಣವಾಗಿ ಏಳು ಕೋಟಿ ಜನಗಳು ಈ ಬುಡಕಟ್ಟಿಗೆ ಸೇರಿದವರಾಗಿ ಬಹಳ ಹೀನದಶೆಯಲ್ಲಿರುವರೆಂಬುದು ಸಕಲರೂ ವಿದಿತ ವಿಷಯವೇ ಆಗಿದೆ.

ಆದರೆ ಈಗ ಅವರನ್ನು ಪುನರುದ್ಧಾರ ಮಾಡಬೇಕೆಂಬುವ ಚಳುವಳಿಯಲ್ಲಿ ಮಹಾತ್ಮಾಜೀಯವರು, ಮತ್ತು ಪಂಡಿತ ಮಾಳವೀಯರು ಪಡುತ್ತಿರುವ ಶ್ರಮವು ಮತ್ತು ಉತ್ಸಾಹವು ಪರಮೇಶ್ವರನ ಅನುಗ್ರಹದಿಂದ ಮುಂದೆ ಸಾಗಿ ನಮ್ಮ ಹಿಂದೂ ಜನಾಂಗದ ಬುಡಕಟ್ಟಿನಲ್ಲಿ ಸೇರಿ ನಾವು ಕೈಕೊಂಡಿರುವ ಕೆಲಸವು ಪೂರ್ತಿಯಾಗಬೇಕಾಗಿರುವುದು.

ಪಂಚಮರ ಕೈಬಿಡದೆ ಅವರ ಸುಖದುಃಖವೇ ನಮ್ಮ ಸುಖದುಃಖವೆಂದು ಹಿಂದೂ ಜನಾಂಗದವರು ತಿಳಿಯದೇ ಇದ್ದ ಪಕ್ಷದಲ್ಲಿ ನಾವು ಉದ್ಧಾರವಾಗಲು ದಾರಿಯೇ ಇಲ್ಲ. ಅವರ ಕೂಡ ಕಲೆತು ಊಟ ಮಾಡದಿದ್ದರೂ, ಅವರಲ್ಲಿ ಹೆಣ್ಣನ್ನು ತರದೇ ಇದ್ದರೂ, ಅವರ ಮನೆಯಲ್ಲಿ ವಾಸ ಮಾಡದೇ ಇದ್ದರೂ, ಅವರಿಗೆ ಮಾಡಬೇಕಾದ ಸೇವೆಯೇ ಹರಿಸೇವೆಯು. ಅವರಿಗೆ ವಾಸಮಾಡಲು ಅನುಕೂಲವಾದ ಸ್ಥಳ, ಅಂದರೆ ಅನಾರೋಗ್ಯವಿಲ್ಲದ ಸ್ಥಳದಲ್ಲಿ ಒಳ್ಳೆಯ ಬೆಳಕು, ಒಳ್ಳೆಯ ಗಾಳಿ ಇವುಗಳಿಂದ ಕೂಡಿದ, ಅವರಿಗೆ ವಾಸಕ್ಕೆ ಯೋಗ್ಯವಾದ ಚಿಕ್ಕ ಚಿಕ್ಕ ಮನೆಗಳು, ಬಳಿಯೊಳಗೆ ನಿರ್ಮಲವಾದ ನೀರಿನ ಭಾವಿ, ಇವುಗಳನ್ನು ಕೊಡಲು ಧನ ಸಹಾಯವನ್ನು ಏರ್ಪಡಿಸಬೇಕು. ಮಾಂಸಾಹಾರವನ್ನು ಅವರಿಂದ ಬಿಡಿಸಿಯೇ ತೀರಬೇಕು ಹೆಂಡ ಕುಡಿಯುವುದನ್ನು ತಪ್ಪಿಸಲೇಬೇಕು. ಮತದ ದೀಕ್ಷೆಯನ್ನು ಒಬ್ಬೊಬ್ಬರಿಗೂ ಕೊಟ್ಟೇ ತೀರಬೇಕು. ಮಕ್ಕಳಿಗಾಗಿ ಪಾಠಶಾಲೆಗಳನ್ನೂ ಭಜನ ಮಂದಿರಗಳನ್ನೂ ಕಟ್ಟಿಸಿ ಕೊಡಬೇಕು. ಹೀಗೆ ಮಾಡಿ ಹರಿಜನಗಳ ಆಚಾರ ವ್ಯವಹಾರಗಳು ಶುದ್ಧಿ ಅವರು ನೋಡುವುದಕ್ಕೂ ಸಹವಾಸ ಮಾಡುವುದಕ್ಕೂ ಯೋಗ್ಯರಾಗುವರೆಂಬುವುದಕ್ಕೆ ಸಂದೇಹವೇ ಇಲ್ಲ.

ಇಷ್ಟು ಬರೆಯಲು ಕಾರಣವೇನೆಂದರೆ, ಮನುಷ್ಯನಾಗಿ ಹುಟ್ಟಿ ಜನಾಂಗದ ಒಂದು ಭಾಗವು ಇಷ್ಟು ಹೀನಸ್ಥಿತಿಯಲ್ಲಿರುವುದನ್ನು ಕಣ್ಣಿಂದ ನೋಡಿಮಡೇ! ದಕ್ಷಿಣ ಮಲಬಾರ್‌ನಲ್ಲಿ ಸಂಚಾರಮಾಡುತ್ತಿದ್ದಾಗ ಪಂಚಮರ ಜಾತಿಯಲ್ಲಿ ಅಧಮಾಧಮರಾಗಿರುವವರು ಜೀವನಮಾಡುವುದನ್ನು ಕೇಳಿದರೆ ನರನಾಗಿ ಹುಟ್ಟಿದವನು ಭ್ರಮಿಸಿಯೇ ಹೋಗಬೇಕಾಗುತ್ತದೆ. ಅದೇನೆಂದರೆ. 'ತಿಯ್ಯ' ಎಂಬುವ ಪಂಚಮನಿಗಿಂತ ಕೀಳಾದ ಪಂಚಮರು (Cheruman) 'ಚೆರುಮ' ಇವರ ಜೀವನವು ಬಹಳ ಕಷ್ಟತರವಾಗಿರುತ್ತದೆ. ಇವರನ್ನು ಕೂಲಿ ಮಾಡುವುದಕ್ಕೂ ಕೂಡ ಕರೆಯುವುದಿಲ್ಲ. ಇವರು ಹೆಣಗಳನ್ನು ತಿಂದೇ ಬದುಕುತ್ತಾರೆ ಹೇಗೆಂದರೆ, ಸತ್ತ ನಾಯಿಯೋ, ಎಮ್ಮೆಯೋ, ಕತ್ತೆಯೋ, ಹಂದಿಯೋ ಇವುಗಳ ಹೆಣಗಳನ್ನು ತಂದು ತಮ್ಮ ಹಟ್ಟಿಯ ಒಂದು ಭಾಗದಲ್ಲಿ ನೆಲದಲ್ಲಿ ಎಂಟು ದಿನ ಹೂತಿಡುವರು ಒಂಭತ್ತನೆಯ ದಿನ ಹೆಣವನ್ನು ತೆಗೆದು ಚರ್ಮವನ್ನು ಸುಲಿದು ನೋಡಿದರೆ ಸಂಪೂರ್ಣವಾಗಿ ಎಲ್ಲಾ ಭಾಗವೂ ಅಕ್ಕಿಯ ಕಾಳಿನ ಹಾಗೆ ಹುಳುವಾಗಿರುತ್ತದೆ. ಹುಳುವು ಅಕ್ಕಿಯಷ್ಟೇ ಇರುತ್ತದೆ. ಎರಡು ಚುಕ್ಕೆಯ ಕಣ್ಣುಗಳಿರುತ್ತವೆ. ಈ ಹುಳುಗಳನ್ನು ತೆಗೆದು ಒಳ್ಳೆಯ ನೀರಿನಲ್ಲಿ ಚೆನ್ನಾಗಿ ತೊಳೆದು, ಮಡಿಕೆಯಲ್ಲಿ ಹಾಕಿ, ಗಂಜಿಯನ್ನು ಮಾಡಿ ಕುಡಿದು ಜೀವನಮಾಡುತ್ತಾರೆ. ಸರ್ವ ಕುಟುಂಬಿಯು ಕುಟುಂಬದಲ್ಲಿ ಒಬ್ಬರು ಸುಖದಿಂದ ಬಾಳುತ್ತಿರುವದೇನು? ನಮ್ಮ ಸಹೋದರ ಸಹೋದರಿಗಳು ಹೀಗೆ ಕಷ್ಟಪಡುವುದೇನು? ಇದಕ್ಕೆ ನಾವೇ ಕಾರಣವಾಗಿರುವುದರಿಂದ ಇಗಲಾದರೂ ಕಣ್ತೆರೆದು ಈ ಸಹೋದರರುಗಳನ್ನು ಉದ್ಧಾರ ಮಾಡಬೇಕಾದುದು ನಮ್ಮ ಕರ್ತವ್ಯವೇ ಆಗಿರುತ್ತದೆ 'ಜನಾಂಗಸೇವೆಯೇ ಹರಿಸೇವೆಯು' ಈಗ 'ಹರಿಜನಗಳ ಸೇವೆಯೇ ಜನಾಂಗಸೇವೆಯು'. ಆದುದರಿಂದ ಒಬ್ಬೊಬ್ಬರೂ ಪರಮಾತ್ಮನ ಕಣ್ಣಿನಲ್ಲಿ ಮನುಷ್ಯನಾಗಬೇಕೆಂದು ಆಶೆಯಿದ್ದದ್ದೇ ಆದರೆ ಹರಿಜನ ಸೇವೆಯನ್ನು ಮಾಡಿ ಜನ್ಮ ಸಾಫಲ್ಯಮಾಡಿಕೊಳ್ಳಬೇಕೆಂದು ಅತಿವಿನಯದಿಂದ ತಿಳಿಸಿಕೊಳ್ಳುತ್ತೇನೆ.

ಹೆಂಡತಿ ಕಾವಲಿಗೆ ಮುಳ್ಳುತಂತಿಯ ಬೇಲಿ.

ಇಂಗ್ಲೆಂಡಿನಲ್ಲಿ ಮಿಲ್ಫರ್ಡ್ ಹೇವನ್ ಎಂಬ ಊರಿನ 'ಕ್ಯಾಸಲ್ ಟೆರ್ರೇಸ್' ಎಂಬಲ್ಲಿ ವಾಸವಾಗಿದ್ದ ಆರಂಬ ಜೀವನದ ಹೂಪರ್ ಎಂಬ ಗೃಹಸ್ಥನ ಹೆಂಡತಿಯು ಇಪ್ಪತ್ತೆಂಟು ವಯಸ್ಸಿನ ಯುವತಿ. ಆಕೆಯ ಪಾತಿವ್ರತ್ಯದ ವಿಷಯದಲ್ಲಿ ಗಂಡನಿಗೆ ಬಹಳ ಸಂಶಯ. ಆದುದರಿಂದ ಹೂಪರ್ ಮಹಾಶಯನು ತನ್ನ ಮನೆಯ ಸುತ್ತಲೂ ಅಭೇದ್ಯವಾದ ಮುಳ್ಳುತಂತಿಗಳ ಬೇಲಿಯನ್ನು ಎಬ್ಬಿಸಿದನು. ಕಿಟಕಿಗಳಿಗೆಲ್ಲಾ ದಪ್ಪ ದಪ್ಪ ಕಬ್ಬಿಣದ ಸರಳನ್ನು ಹಾಕಿಸಿದನು. ಹೊರಗಣ ಬಾಗಿಲಿಗೆ ಬಲವಾದ ಬೀಗವನ್ನು ಹಾಕಿಸಿ, ಭದ್ರಮಾಡಿಕೊಂಡನು. ಹೆಂಡತಿಯು ಒಬ್ಬಂಟಿಗಳಾಗಿ ಎಲ್ಲಿಗೆ ಹೋಗಲೂ ಅಪ್ಪಣೆಯಿಲ್ಲ, ಅವಕಾಶವೂ ಇಲ್ಲ. ದಂಪತಿಗಳು ಮಲಗುವ ಕೋಣೆಯಲ್ಲಿ ಒಂದು ಗುಂಡು ಹಾಕಿದ ತುಪಾಕಿಯು ಯಾವಾಗಲೂ ಸಿದ್ಧವಾಗಿರುತ್ತಿತ್ತು. ಅಷ್ಟೇ ಅಲ್ಲ; ತನ್ನ ಹೆಂಡತಿಯ ದ್ರೋಹವನ್ನು ಪತ್ತೆ ಮಾಡಿಬಿಡುವ ಆಶೆಯಿಂದ ಹೂಪರ್ ಪತಿದೇವನು ಆಕೆಯ (ಹೆಂಗುಸರ) ಬಟ್ಟೆಬರೆಗಳನ್ನು ಧರಿಸಿ ತನ್ನ ಮನೆಯ ಸಮೀಪದಲ್ಲಿ ಓಡಾಡುತ್ತ, ಆಕೆಯ ವಿಟನಾವನಾದರೂ ಬಂದು ತನ್ನೊಡನೆ ಮಾತನಾಡುವನೆಂದು ನಿರೀಕ್ಷಿಸುತ್ತಿದ್ದನಂತೆ!

ಕಡೆಗೆ ಹೆಂಡತಿಯು ಆ ಗಂಡನ ಮನೆಯ ದುರ್ಗದಿಂದ ಹೇಗೆಯೋ ತಪ್ಪಿಸಿಕೊಂಡು ಓಡಿಹೋಗಿ, ತನ್ನ ಗಂಡನಿಂದಾಗುತ್ತಿದ್ದ ತೊಂದರೆಗಳನ್ನೆಲ್ಲಾ ತಪ್ಪಿಸಿ ತಾನು ಬೇರೆಯಾಗಿರಲು ಆಜ್ಞೆ ಮಾಡಿಕೊಡಬೇಕೆಂದು ಕೋರ್ಟಿನಲ್ಲಿ ವ್ಯಾಜ್ಯ ಹೂಡಿದಳು. ಕೋರ್ಟಿನವರು ಆಕೆಯ ಇಷ್ಟದಂತೆ ತೀರ್ಪು ಕೊಟ್ಟರು. ಹೂಪರ್ (ಪತಿ) ಮಹಾಶಯನು ತನ್ನ ಹೆಂಡತಿಯ ಲಾಯರು ಹೇಳಿದ ಈ ಆರೋಪಣೆಗಳಲ್ಲಿ ಎಳ್ಳಷ್ಟೂ ಸತ್ಯಾಂಶವಿಲ್ಲವೆಂದು ವಾದಿಸಿದನು.

ಯುವತಿಯರಿಗೆ ಗಡ್ಡ.

ಜಪಾನೀ ದ್ವೀಪಗಳಲ್ಲಿ.

ಉತ್ತರ ಜಪಾನಿನ ಹೊಕ್ಕೈಯ್ಡೊ ದ್ವೀಪದಲ್ಲಿ ದಾಡಿ (ಗಡ್ಡ) ಗಳಿಗೆ ನಿಜವಾಗಿ ಬಹಳ ಬೆಲೆಯುಂಟು. ಅಲ್ಲಿ ಗಂಡಸರಷ್ಟೇ ಅಲ್ಲದೆ ಹೆಂಗಸರೂ ತಮಗೆ ದಾಡಿ ಬೆಳಸಿಕೊಳ್ಳಲು ಕಾತರೆಯರಾಗಿ ಶ್ರಮಪಡುವರಂತೆ!

ಆ ಪ್ರದೇಶದಲ್ಲಿ ದಾಡಿಯಿಲ್ಲದ ಮಹಿಳೆಯರಿಗೆ ಅದರಿಂದ ತಾವು ಕೀಳು ಎಂಬ ಭಾವನೆ ಹುಟ್ಟಿ ಕುಗ್ಗಿಹೋಗುವರು. ಅನೇಕ ತೆರದ ವ್ರತಾನುಷ್ಠಾನಗಳಿಂದಲೂ, ಮಂತ್ರಪುನಶ್ಚರಣೆಗಳಿಂದಲೂ, ಮಂತ್ರವಾದಗಳಿಂದಲೂ, ವಿಚಿತ್ರ ವಿಲಕ್ಷಣಗಳಾದ ಮುಲಾಮುಗಳ ಔಷಧ ಚಿಕಿತ್ಸೆಗಳಿಂದಲೂ, ದಾಡಿ ಬೆಳೆಯಿಸಿಕೊಳ್ಳಲು ಅಲ್ಲಿಯ ರಮಣಿಯರು ಪ್ರಯತ್ನಿಸುವರು. ಈ ಪ್ರಯತ್ನಗಳಿಂದೇನೂ ಪ್ರಯೋಜನವಾಗದಿದ್ದರೆ, ಆ ನಿರ್ಭಾಗ್ಯೆಯರು ಮುಖದ ಮೇಲೆ ಗಡ್ಡ ಮೀಸೆಗಳನ್ನು ಹಸುರು ಚುಚ್ಚಿಸಿಕೊಳ್ಳುವರಂತೆ! ಹಸುರು ಚುಚ್ಚುವ ಕಸಬಿನವರಿಗೆ ಒಳ್ಳೆಯ ವರಮಾನ!

ಮದುವೆಗೆ ಅಶ್ವಮೇಧದ ಪೀಠಿಕೆ.

ಹಂಗೇರಿ ದೇಶದ ಪ್ರಾಚೀನರಿಗೆ ಹೆಡೂರ್ ಎಂಬುದು ಯುದ್ಧದೇವತೆ. ಈಗ್ಗೆ ಕೆಲವು ದಿನಗಳಿಗೆ ಹಿಂದೆ ಕ್ರಿಸ್ತರಾಗಿರುವ ಇಂದಿನ ಹಂಗೇರಿಯ ಹಲವರು ಆ ಹೆಡೂರ್ ದೇವತೆಗೋಸ್ಕರವಾಗಿ ಒಂದು ಬಲಿಗಲ್ಲನ್ನು ಸ್ಥಾಪಿಸಿ, ಅದರ ಮುಂದೆ ಐದು ಜತೆ ವಧೂವರರಿಗೆ ಮದುವೆ ಮಾಡಿದರು ಆ ವಿವಾಹ ಕರ್ಮಗಳ ಪೀಠಿಕೆಯಾಗಿ, ಮೊಟ್ಟಮೊದಲು, ಒಂದು ಬಿಳಿಯ ಕುದುರೆಯನ್ನು ಬಲಿಕಲ್ಲಿನ ಮೇಲೆ ಕೊಂದು ಬಲಿಕೊಟ್ಟರು. ತರುವಾಯ, ವಧುವಿನ ಮತ್ತು ವರನ ತೋಳುಗಳಲ್ಲಿ ಒಂದೊಂದು ರಕ್ತನಾಳವನ್ನು ಕುತ್ತಿ, ಹೊರಹೊಮ್ಮಿದ ಇಬ್ಬರ ರಕ್ತಗಳನ್ನೂ ಬೆರಸಿ, ಪ್ರತ್ಯಕ್ಷವಾಗಿ ವಸ್ತುತಃ 'ರಕ್ತ ಸಂಬಂಧ' ಮದುವೆಗಳನ್ನೇ ನೆರವೇರಿಸಿದರಂತೆ.

ಸ್ಕೌಟ್‌ ರ್ಯಾಲಿ.

ಮುಂದಿನ ತಿಂಗಳ ಮೊದಲನೇ ವಾರದಲ್ಲಿ ಚಿತ್ರದುರ್ಗದಲ್ಲಿ ಮೈಸೂರು ಸಂಸ್ಥಾನದ ಸ್ಕೌಟ್‌ ರ್ಯಾಲಿಯು ನಡೆಯುವುದಾಗಿ ಏರ್ಪಾಡಾಗಿತ್ತು. ಆದರೆ ಅದನ್ನು ಜುಲೈ ತಿಂಗಳಿಗೆ ಮುಂದಕ್ಕೆ ಹಾಕಲಾಗಿದೆ. ಕಾರಣ ಅಲ್ಲಿನ ವಿಪರೀತ ಶೆಖೆ ಮತ್ತು ಅದರಿಂದ ಉಂಟಾಗಬಹುದಾದ ಅನಾರೋಗ್ಯ.

ಮುಸಲ್ಮಾನ ರಾಜರಿಂದ ಹಿಂದೂ ದೇವಾಲಯಕ್ಕೆ ಸಹಾಯ.

ಆಫ್ಘಾನಿಸ್ಥಾನದಲ್ಲಿರುವ ಹಿಂದೂ ದೇವಾಲಯಗಳನ್ನು ದುರಸ್ತುಮಾಡಲು ಅಲ್ಲಿನ ದೊರೆಗಳಾದ ಜಾಹಿರ್‌ಷಾರವರು 14,000 ರೂಪಾಯಿಗಳನ್ನು ಮಂಜೂರು ಮಾಡಿರುವುದಾಗಿ ತಿಳಿದುಬಂದಿದೆ.

ಶ್ರೀ ಕೂಡ್ಲಿ ಮಠದ ಪಟ್ಟ ಸನ್ಯಾಸ ಸ್ವೀಕಾರ.

(ಒಬ್ಬ ಶಿಷ್ಯರಿಂದ)

ಶ್ರೀ ಕೂಡ್ಲಿ ಮಠವು ಶ್ರೀ ಶೃಂಗೇರಿ ಮಠಕ್ಕೆ ಆದಿಯಾದದ್ದು. ಶ್ರೀ ಆದಿಶಂಕರಾಚಾರ್ಯರು, ಕಾಶ್ಮೀರದಿಂದ, ಶ್ರೀ ಸರಸ್ವತಿ ಅಮ್ಮನವರನ್ನು ಜಯಿಸಿ ಕರತಂದಾಗ ತುಂಗಾನದಿಯ ಮರಳಲ್ಲಿ ಬರುತ್ತಿದ್ದಾಗ ಈ ಕೂಡ್ಲಿ ಕ್ಷೇತ್ರದಲ್ಲಿ ಶ್ರೀ ಸರಸ್ವತಿ ಅಮ್ಮನವರು ನಿಂತರು. ಆನಂತರ ಸಂಪ್ರಾರ್ಥಿಸಿ, ಶೃಂಗೇರಿಗೂ ಕರತಂದದ್ದು ಶಂಕರವಿಜಯದಲ್ಲಿ ಹೇಳಿದೆ

ಶ್ರೀ ಶೃಂಗೇರಿ ಮಠಕ್ಕೆ ಪ್ರಾಶಸ್ತ್ಯ ದೊರೆತ ಮೇಲೆ, ಈ ಮಠ ದೂರ್ವಾಂಕುರನ್ಯಾಯಪ್ರಕಾರ ನಡೆದುಬಂತು. ಶ್ರೀ ವಾಲುಕೇಶ್ವರ ಸ್ವಾಮಿಗಳು, ಈ ಮಠಕ್ಕೆ ಸ್ವೀಕಾರ ಮಾಡಿ ಪಟ್ಟಕ್ಕೆ ಬಂದ, ಈ ಮೂರು ವರುಷದಿಂದ ಇವರ ಪ್ರಶಸ್ತಿ ಅವರ ಪೂರ್ವಾಶ್ರಮದ ಕರ್ಮನಿಷ್ಠತೆ, ಪಾಂಡಿತ್ಯ, ಬೋಧನಾಕ್ರಮ, ಚಾತುರ್ಯ ಮಹಿಮೆಯಿಂದ ಉಂಟಾಯಿತು ಮತ್ತು ಶ್ರೀಮನ್ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರವರ ಶಿಷ್ಯ ಔದಾರ್ಯ ಕೃಪಾಮಹಿಮೆಯಿಂದಲೂ ಶ್ರೀ ವಾಲುಕೇಶ್ವರಸ್ವಾಮಿಗಳ ವಿದ್ವತ್ ಪಾಂಡಿತ್ಯ ಮಹಿಮೆಯಿಂದಲೂ ಈ ಮಠಕ್ಕೆ ಆಗಿದ್ದ ೫೦ ೩೦ ಸಾವಿರ ಸಾಲ ನಿರಾಯಾಸವಾಗಿ ಎರಡು ವರುಷ ಕಾಲದಲ್ಲಿ ತೀರಿದ್ದು ಸರ್ವರಿಗೂ ತಿಳಿದ ಸಂತೋಷವಿಷಯ. ಈ ವಿಚಾರದಲ್ಲಿ ಶಿಷ್ಯರೆಲ್ಲರೂ ಶ್ರೀಮನ್ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರಿಗೆ ಚಿರಋಣಿಯಾಗಿದ್ದಾರೆ

ಈ ಮಠಕ್ಕೆ ಸ್ವಾಸ್ತ್ಯಗಳೂ, ಕಪ್ಪಕಾಣಿಕೆ ಶಿಷ್ಯವರ್ಗ ಸಂಪತ್ತು ಬೊಂಬಾಯಿ ಪ್ರಾಂತದ ಕರ್ನಾಟಕದೇಶದಲ್ಲಿ ಹೆಚ್ಚು ಆದ್ದರಿಂದಲೇ, ಆ ಶಿಷ್ಯವರ್ಗದವರ ಕೋರಿಕೆಯಂತೆ, ಈ ಮಠದ ಈಗಿರುವ ಸ್ವಾಮಿಗಳು ನಿಷ್ಠರಾದಾಗ್ಯೂ ಯತ್ನವಿಲ್ಲದೆ ಕೈಲಾಸವಾಸಿಯಾದ ಆರ್ಯರಸ್ಥರಾದ ಬ್ರ॥ ಶ್ರೀ॥ ವಿರೂಪಾಕ್ಷ ಶಾಸ್ತ್ರಿಗಳಿಗೆ ಸನ್ಯಾಸ ಪಟ್ಟ ಕಟ್ಟಿ ನಿರ್ಗಮಿಸಿದರು. ಈ ಮಠದ ಮೇಲುವಿಚಾರಣೆಯನ್ನು ಮೈಸೂರು ಸರ್ಕಾರದವರು ನೋಡುತ್ತಿದ್ದಾರೆ. ಮಠಕ್ಕೆ ಸಾಲ ತೀರಿ ಆಸ್ತಿಯಾಗಿದೆ. ಈಗ ಮುಂದೆ ಪಟ್ಟಕ್ಕೆ ಬರುವ ಶಿಷ್ಯರು ಉತ್ಸಾಹಿತರಾಗಿ ಅನೇಕರು ಇದ್ದಾರೆ. ಪ್ರಕೃತ, ನಿರ್ವಾಣ ಹೊಂದಿದ ಸ್ವಾಮಿಗಳವರ ತಮ್ಮಂದಿರಾದ, ಬ್ರ॥ ಶ್ರೀ॥ ವೇ॥ ಗಣೇಶ ಶಾಸ್ತ್ರಿಗಳ ಮಕ್ಕಳಲ್ಲಿ ಒಬ್ಬ ವಟುವಿಗೆ, ಸನ್ಯಾಸ ಪಟ್ಟವಾಗುವ ಉದ್ಯಮ ವಿಶೇಷ ಪ್ರಯತ್ನಗಳು ನಡೆಯುತ್ತಿವೆ ಎಂದು ವದಂತಿ. ಮುಖ್ಯ ಶಿಷ್ಯರಾದ, ಪಂಡಿತೋತ್ತಮರಾದ, ಆ ಕರ್ನಾಟಕ ದೇಶಸ್ಥರಾದ ವೇ॥ ಬ್ರ॥ ಧಾರವಾಡದ ನಾಗೇಶ ಶಾಸ್ತ್ರಿಗಳೇ ಎಲ್ಲಾ ವಿಚಾರದಲ್ಲೂ ಈ ಮಠಕ್ಕೆ ಪಟ್ಟಸನ್ಯಾಸ ಸ್ವೀಕಾರ ಮಾಡುವದಕ್ಕೆ ಯೋಗ್ಯರಾದ ದಕ್ಷರು. ಇವರು ಸಂಕೇಶ್ವರನಠ ಮತ್ತು ಶ್ರೀ ನಾರಾಯಣಸ್ವಾಮಿ ಮಹಾರಾಜರಲ್ಲಿಯೂ, ಆಡಳಿತ ನಡೆಸುತ್ತಿರುವ ದಕ್ಷರಾಗಿರುವ ಪಟ್ಟಶಿಷ್ಯರು ಮತ್ತು ಸಂಸಾರಿಗಳು. ಇವರನ್ನು ಪಟ್ಟಶಿಷ್ಯರನ್ನಾಗಿ ಮಾಡಿದರೆ ನಮ್ಮನ್ನಾಳುವ ಶ್ರೀಮನ್ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರು ಈ ಆದಿಶಂಕರ ಮಠವನ್ನು ಮನವಿಟ್ಟು ಜೀರ್ಣೋದ್ಧಾರ ಮಾಡಿ ನಡೆಸಿದ್ದು ಸಾರ್ಥಕವಾಗುತ್ತೆ ಎಂಬುವದು ನಿಸ್ಸಂದೇಹವಾದ್ದು.

ಹಾಗೆ ದೈವಾನುಕೂಲವಾದ ಪಕ್ಷದಲ್ಲಿ, ಕರ್ಮಠರಾಗಿಯೂ, ನಿಷ್ಠರಾಗಿ ಪಂಡಿತರಾಗಿರುವವರನ್ನು ಆರಿಸುವದು ಯುಕ್ತ. ಶ್ರೀ ವಾಲುಕೇಶ್ವರ ಸ್ವಾಮಿಗಳ ಹಾಗೆ ಉದ್ದಾಮ ಪಂಡಿತರು ವಿರಳ ಮತ್ತು ಪಂಡಿತೋತ್ತಮರಲ್ಲಿ ಅನೇಕರು ಇದ್ದಾಗ್ಯೂ, ಕರ್ಮಠರಾದಾಗ್ಯೂ ಅವರು, ವೃದ್ಧಾಪ್ಯ ಜರಾಯುಕ್ತರು. ಆದ್ದರಿಂದ ಮಧ್ಯ ವಯಸ್ಕರಾಗಿ, ವಿಧುರರಾಗಿ, ವಾಗ್ಮಿ ಮತ್ತು ಬೋಧನಾಶಕ್ತಿ ಯುಕ್ತರಾಗಿ, ನಿಷ್ಠರಾಗಿ, ಮೇಧಾವಿಗಳಾಗಿರುವವರನ್ನು ಆರಿಸಿ ಪಟ್ಟ ಕಟ್ಟುವದು ಯುಕ್ತ. ಇದು ಈ ಮಠದ ಉತ್ತರೋತ್ತರ ಅಭಿವೃದ್ಧಿಗೂ, ಶ್ರೀ ಮಹಾರಾಜರು ಮಾಡಿದ ಜೀರ್ಣೋದ್ಧಾರದ ಕೃತಜ್ಞತೆಗೂ ಯುಕ್ತವಾಗುತ್ತದೆ. ಹಾಗಲ್ಲದ, ಕರ್ನಾಟಕ ದೇಶೀಯರೇ ಆಗಬೇಕು (ದೇಶಸ್ಥರು) ಇನ್ನಾವ ಪಂಚದ್ರಾವಿಡರೂ ಆಗಕೂಡದೆಂಬ ದುರಭಿಮಾನ ಈ ಮಠದ ಮತ್ತು ಸನಾತನ ಧರ್ಮದ ದೃಷ್ಟಿಯಿಂದ ಯುಕ್ತವಲ್ಲ. ಹಿಂದೆ ಶ್ರೀ ಶಂಕರಾಚಾರ್ಯರು ಶೃಂಗೇರಿ ಪೀಠಕ್ಕೆ ಮಂಡನ ಮಿಶ್ರರಿಗೆ (ಗೌಡ ಬ್ರಾಹ್ಮಣ) ಪಟ್ಟಸನ್ಯಾಸ ಕೊಡಲಿಲ್ಲವೇ? ಮುಖ್ಯ ಶಿಷ್ಯರು, ಮತ್ತು ಸರಕಾರದವರ ದೃಷ್ಟಿಯೇ ಯೋಗ್ಯರು ಮಠದ ಮತ್ತು ಧರ್ಮದ ಪ್ರಯೋಭಿವೃದ್ಧಿಗೆ ಪಟ್ಟಶಿಷ್ಯರನ್ನು ಆರಿಸುವದಕ್ಕೆ ಕಾರಣವಾಗಬೇಕು. ಗಂಡಹೆಂಡರ ಜಗಳದಲ್ಲಿ ಕೂಸು ಬಡವಾಯ್ತು ಎಂಬ ನಾಣ್ನುಡಿಯಂತೆ, ಸ್ವಾರ್ಥತೆ ಮತ್ತು ಶಿಷ್ಯರ ಭಿನ್ನಾಭಿಪ್ರಾಯದಿಂದ ಲುಪ್ತವಾಗಬಾರದೆಂಬುದೇ ಆಶೆ

[ಈಚೆಗೆ ಶ್ರೀ ಮಠದ ಹೊಸ ಸ್ವಾಮಿಗಳ ಪಟ್ಟಾಭಿಷೇಕವು ನಡೆದಿರುತ್ತೆ. ಸಂ]

ಟೀ ಕುಡಿಯುವುದು ಹೆಚ್ಚುತ್ತಿದೆ.

ಹಿಂದೂಸ್ಥಾನದಲ್ಲಿ ಟೀ ಎಲೆಯ ತಯಾರಿಯು ಹೆಚ್ಚುತ್ತಿದೆ. ಬ್ರಾಂದಿಯ ತಯಾರಿ ಕಡಿಮೆಯಾಗುತ್ತಿದೆ. ಯುದ್ಧ ಕಾಲಕ್ಕಿಂತಲೂ ಈಗ ಬ್ರಾಂದಿಯ ಆಮದು ಹತ್ತು ಲಕ್ಷ ಗ್ಯಾಲನ್ನಿನಷ್ಟು ಕಡಿಮೆಯಾಗಿದೆ. ಇಲ್ಲಿಯೇ ತಯಾರಾಗುವ ಬ್ರಾಂದಿಯು ಅರ್ಧಕ್ಕೆ ಇಳಿದಿದೆ—ಎಂದು ವ್ಯಾಪಾರದ ಕಮಿಷನರಾದ ಮಿ॥ ಮಿಾಕ ಎಂಬವರು ಹೇಳಿರುವರು

ಮೆಕ್ಕಾವಿಗೆ ಕಾಲು ನಡೆಯಿಂದ ಯಾತ್ರೆ

ಅಸ್ಸಾಂ ಪ್ರಾಂತದ **ಸಿಲ್ಹೆಟ್** ಜಿಲ್ಲೆಯ ಪಂಚಖಂಡ ಎಂಬೂರಿನ ಮೌಲ್ವಿ ಸೈಯದ್ ಆಲಿ ಎಂಬ ಮುಸಲ್ಮಾನ ಗೃಹಸ್ಥರು ಅರೇಬಿಯಾ ದೇಶದಲ್ಲಿರುವ ಮೆಕ್ಕಾ ಕ್ಷೇತ್ರಕ್ಕೆ ಪಾದಚಾರಿಯಾಗಿ ಯಾತ್ರೆ ಹೊರಟಿರುವರು

ಚೌ. ಚೌ. (೮)

೧

" ಹೋಟಲುಗಳು ಪತ್ತೆದಾರಿಗೆಯ್ನಾ ವೃತ್ತಪತ್ರಿಕೆಗಳು ಹೆಚ್ಚುತ್ತಿವೆ. ಏಕೆ?" 'ಇದು ಕಣ್ಣೊರಸುವ ವಿಷಯ ಅಲ್ಲ ಕೈಒರಸುವ ವಿಷಯ!'

೨

ಗಂಡಸರೆಲ್ಲರೂ ಹೇಡಿಗಳು ಎಂದ ಮಹಿಳೆ ಒಬ್ಬರು ಹೇಳುವರು. "ದರೂ, ಅವರು ಮದುವೆ ಮಾಡಿಕೊಂಡು ಗೃಹಸ್ಥರಾಗಿದ್ದಾರೆ

೩

" Records broken in Mysore Hotel " ಇನ್ನೇನು ಮಾಡುತ್ತಾರೆ? ಈಪಾಟಿ ಸಂಗೀತ ಶಸ್ತ್ರ ಪ್ರಯೋಗವಾಗುತ್ತಿದ್ದರೆ? ಗ್ರಾಮಾಫೋನಾದರೂ ಉಳಿಯಿತಲ್ಲ.

೪

We have had many patients who were unable to wash or feed themselves and who have been restored to normal health through gold injections (Sunday Times) ಆದರೆ, ನಮ್ಮಲ್ಲಿ gold injections ಬೇಕಾಗಿಲ್ಲ. ಜೇಬಿನ ಒಳಗೆ ಹಾಕಿದರೆ ಸಾಕು, ಮನುಷ್ಯ ಆರೋಗ್ಯವಂತನಾಗುತ್ತಾನೆ

೫

ರವರು ಕಳೆದ ಒಂದು ವಾರದಿಂದಲೂ ಒಂದು ಕವನವನ್ನೂ ಕೂಡ ಬರೆದಿಲ್ಲವಂತೆ! ದೇವರ ದಯೆಯಿಂದ ಅವರು ಹೀಗೆ ಗುಣಮುಖರಾಗುತ್ತ ಬರಲೆಂದು ಪ್ರಾರ್ಥಿಸುತ್ತೇವೆ

೬

ಬೆಳಿಗ್ಗೆ ಒಂದು ತೊಲ ತೂಗುವ ವೈಸೂರುಪಾಕು ತುಂಡು ಸಾಯಂಕಾಲ ಒಂದೂ ಕಾಲು ತೊಲ ತೂಕವಾಗುತ್ತಿದೆಯಲ್ಲಾ, ಹೇಗೆ? ರಸ್ತೆ ಧೂಳಿನಿಂದ

೭

ಅಮೇರಿಕಾ ದೇಶದ ಪ್ರಸಿದ್ಧ ವೈಜ್ಞಾನಿಕನೊಬ್ಬನು ಕಂಡು ಹಿಡಿದಿರುವುದೇನೆಂದರೆ, ಸಿಡಿಲು ಒಬ್ಬನ ತಲೆಯ ಮೇಲೆ ಎರಡುಸಾರಿ ಹೊಡೆಯುವುದಿಲ್ಲವಂತೆ—ಜೀಕಾಗಿಯೂ ಇಲ್ಲ, ಆಸ್ತಿ

೮

ಡಾ॥ ಅಲೆಕ್ಸಾಂಡರ್ ಕಾರ್ನ ಎಂ ಎ ಎಂ ಡಿ, ಅವರು ಒಂದು ಪುಸ್ತಕ ಬರೆದಿದಾರೆ. ಅದರಿಂದ ಒಂದು ವಾಚಕವನ್ನು ಉದಹರಿಸುತ್ತೇವೆ. ಅದನ್ನು ಓದಿದ ತಕ್ಷಣವೇ ಅವರು ಯಾವ ಆಸ್ಪತ್ರೆಯಲ್ಲಿದ್ದಾರೆ ಎಂದು ನಾವು ಪತ್ತೆಮಾಡಬಹುದಾಗಿದೆ ಕೇಳಿ—' ಕ್ರಿ ಪೂ 35166 ರಲ್ಲಿ ಮಾನವನ ದುರಭಿಮಾನ ಹೆಚ್ಚಿದ್ದರಿಂದ ಸಾಗರದೊಳಗೆ ಮುಳುಗಿದ ಅಟ್ಲಾಂಟಿಸ್ ವಿಶ್ವವಿದ್ಯಾಲಯದ ಒಂದು ಮುರುಕಲು ಸಂಸ್ಥೆ ಈಗ ಹಿಮಾಲಯ ಪರ್ವತದ ಮೇಲೆ "ಮಹಾ ಶ್ವೇತನಿಲಯ' ಎಂಬ ಹೆಸರಿನಿಂದ ವಿರಾಜಿಸುತ್ತಿದೆ

೯

ಬೋಳು ತಲೆಯಮೇಲೆ ತುಂಬಾ ಕೂದಲು ಬೆಳೆಯುವಹಾಗೆ ಮಾಡುವ ಒಂದು ತೈಲದ ಪ್ರಕಟಣೆ ಹೀಗಿದೆ—" ಪ್ರತಿಯೊಂದು ಬಾಟ್ಲಿ ಜೊತೆಯಲ್ಲಿ ನಿಮಗೆ ಒಂದು ಬಾಚಣಿಗೆ ಇನಾಂ" ಬಾಚಣಿಗೆ ಉಂಟಾಗ, ಜನರಿಗೆ ನಂಬಿಕೆ ಬರುತ್ತೆ, ಒಳ್ಳೇ ಉಪಾಯ

೧೦

" See—and die ' ಇದೊಂದು ಸಿನಿಮಾ ಪ್ರಕಟಣೆ! ಏಕೆ? ಸುಖವಾಗಿ ಮನೆಯಲ್ಲೇ ಸಾಯಬಾರದೇನು ?

೧೧

ವರುಣಜಪ ಮಾಡಿ ಮಳೆ ಬೀಳಿಸುತ್ತೇವೆಂದು ಹೇಳಿ ಜನಗಳಿಂದ ಚಂದಾ ವಸೂಲುಮಾಡುವದ್ದು ಊರಲ್ಲ ಸಲಿ ಜಾಸ್ತಿಯಾಗುತ್ತಿದೆ

೧೨

' ನಾಲ್ಕು ದಿನಗಳಲ್ಲಿ ಮೂರುಸಾರಿ ಆತ್ಮಹತ್ಯದ ಪ್ರಯತ್ನ! "—ಎಂದು ಆಲಪಾಡಿನ ಒಂದು ಪೇಪರಲ್ಲಿದೆ. ಸದ್ಯ ಈ ಆತನು ನಿಂತನಾಗಿದ್ದಾನೆ. ನಸ್ಯದ ಡಬ್ಬಿ ಸಿಕ್ಕಿತಂತೆ

೧೩

ಸಾಧ್ವಿಯಲ್ಲಿ ಬರುತ್ತಿರುವ ಚೌ ಚೌಗಳ ಸ್ವಾರಸ್ಯ ಅರ್ಥವಾಗುವುದಿಲ್ಲ ಎಂದು ಹೇಳಿದ ಪ್ರಾಣ ಮಿತ್ರ ಸ್ನೇಹಿತರ ಬಲವಂತದಮೇಲೆ, ಡಾಕ್ಟರನ್ನು ನೋಡಿದಂತೆ ಸದ್ಯದಲ್ಲೇ ಬೆಂಗಳೂರಿಗೆ ರವಾನಿಸುತ್ತಾರಂತ

ನಾ ೯

ಕಿವುಡ ಗಂಡ ಕುರುಡು ಹೆಂಡತಿ.

ಗಂಡ—ಎಲೇ ಕನ್ನಡಕ ಬೇಕು ಅಂದೆಯಲ್ಲಾ, ಯಾಕೇ ನಿಂಗೆ?

ಹೆಂಡತಿ—ನೀವೊಂದು ಗಡಿಯಾರ ತರಿಸ್ತೀನಿ ಅಂದರಲ್ಲಾ, ಅದಕ್ಕೆ ನನಗೂ ಒಂದು ಕನ್ನಡಕಬೇಕು ಅಂದೆ?

ಗಂಡ—ಗಡಿಯಾರ ಘಂಟೆ ನೋಡಿ ತಿಳಕೊಳ್ಳೋಕೆ

ಹೆಂಡತಿ—ಕನ್ನಡಕ, ನೀವು ಹೇಳೊ ಘಂಟೆ ಸರಿಯೊ ತಪ್ಪೋ ನೋಡೋಕೆ

ಒಬ್ಬ—ಇದೇನಯ್ಯಾ ನಿನ್ನ ಕೋಟಿಗೆ ಇಷ್ಟೊಂದು ಜೇಬುಗಳು?

ಇನ್ನೊಬ್ಬ—ನಾನು ಯಾವ ಯಾವ ಮಾರ್ಗದಿಂದ ಸಂಪಾದಿಸುತ್ತೇನೋ ಆ ಹಣವನ್ನೆಲ್ಲಾ ಅಲ್ಲಲ್ಲೇ ಇಡೋಕೆ

ಯಜಮಾನ—(ಉಪ್ಪು ಹಾಕದ ಸಾರನ್ನು ಊಟಮಾಡುತ್ತಾ ಪರಿಚಾರಕನನ್ನು ಕರೆದು) (ವಿನೋದ) ಏನಯ್ಯಾ ಸಾರಿಗೆ ಇಷ್ಟೊಂದು ಉಪ್ಪನ್ನು ಹಾಕಿದ್ದೀಯೆ!

ಅಡಿಗೆಯವ—ಉಪ್ಪು ಮರನೋ ಏನೋ ಅಂತ ಇಷ್ಟೊಂದುಸಲ ಹಾಕಿಟ್ಟೆ ಸ್ವಾಮಿ

ಯಜಮಾನ—(ಕೋಪದಿಂದ) ನನ್ನ ತಲೆ! ಉಪ್ಪೇ ಹಾಕಿಲ್ಲವಲ್ಲ?

ಅಡಿಗೆಯವ—ಜ್ಞಾಪಕಬಂತು, ಉಪ್ಪು ಹಾಕಿದ್ದೀನಿ ಅಂತ ಸುಮ್ಮನಾದೆ ಸ್ವಾಮಿ

You Know

OUR IDEAL ARRANGEMENTS & CHOICEST PREPARATIONS.

We need not tell you about it

COME & SEE OUR NOVEL

innovations and up-to-date Management

SRI KRISHNA BHAVAN,

Mysore.

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ಬಾಲಸುಧಾ

ಮಕ್ಕಳ ಜ್ವರದ ಗೆಡ್ಡೆಯನ್ನು ಜಾತರಿ ಗುಣಪಡಿಸುತ್ತೆ. (ಲಿವರ್ ಪಿತ್ತ ಕೋಶ) ದಪ್ಪನಾಗಿ ಕಣ್ಣು ಹಳದಿ ಬಣ್ಣವಾಗಿದ್ದರೆ ಇದರ ಸೇವನೆಯಿಂದ ದಿನೇ ದಿನೇ ಗುಣವಾಗುತ್ತೆ. 20 ವರ್ಷಗಳಿಂದಲೂ ಅನುಭವ ಸಿದ್ಧವಾಗಿದೆ—ಮಕ್ಕಳ ಭೇದಿಗೆ ನಮ್ಮ ಬಾಲಸಂಜೀವಿನಿಯನ್ನೇ ಉಪಯೋಗಿಸಿರಿ.

ಬಾಲಸುಧಾ ಬೆಲೆ 1 ರೂ. ಬಾಲಸಂಜೀವಿನಿ 4 ಆ.

ಮೈಸೂರು, ಬೆಂಗಳೂರು, ಮದ್ರಾಸುಗಳಲ್ಲಿ ನಮ್ಮ ಏಜಂಟರುಗಳಿವೆ.

ವೈದ್ಯಶಾಲಾ, ನಂಜನಗೂಡು.

ಶೀಘ್ರದಲ್ಲಿಯೇ ಬರುತ್ತದೆ! ನಂಜನಗೂಡಿನಲ್ಲಿರುವ ಲಕ್ಷ್ಮೀ ಥಿಯೇಟರಿನಲ್ಲಿ?

ರಾಜೇಂದ್ರ ಸಿನಿಮಾ, ನಂಜನಗೂಡು.

ಪ್ರೊಪ್ರೈಟರ್ಸ್:
ಸೋನರಾಜ್ ರತ್ನ ಚಂದ್ ಅಂಡ್ ಕಂಪೆನಿ, ಮೈಸೂರು.

ತಮ್ಮ ಅತ್ಯೂರ್ವ ಮೂಕ ಚಲನ ಚಿತ್ರಗಳನ್ನು ಪ್ರದರ್ಶಿಸುತ್ತಾರೆ. ಬರುವ ತಾರೀಖನ್ನು ಗಮನಿಸಿರಿ—ಸತೀ ಸುಲೋಚನ ಎಂಬ ಕನ್ನಡ ಚಿತ್ರದಲ್ಲಿ ಸೀತೆ ಪಾತ್ರ ಧರಿಸಿರುವ ಮಿಸೆಸ್ ರಾಜಂ ಮತ್ತು ಕೊಲ್ಲಾಪುರದ ಸ್ಟಂಟ್ ಮಾಸ್ಟರ್, ಪ್ರಭಾತ ಫಿಲಂ ಕಂಪೆನಿಯ ಫೈಟಿಂಗ್ ಬ್ರದರ್ ಮತ್ತು ಚಂದ್ರಸೇನೆಯಲ್ಲಿ ಪಾಟೀಲನಾಗಿರುವ ಗಣಪತ್ ಜಯ ಮುಖ್ಯಪಾತ್ರ ವಹಿಸಿರುವ ಪೌರಾಣಿಕ ಚಲನ ಚಿತ್ರ

ಭಕ್ತ ವಿಜಯ

(ಮೊದಲನೇ ಪ್ರದರ್ಶನ)

(ರಮೇಶ್ ಫಿಲಂ ಕಂಪೆನಿ ಬೆಂಗಳೂರು ಇವರ ತಯಾರಿಕೆ.) ಡೈರೆಕ್ಟರು ವೈ. ವಿ. ರಾವ್, (ಸತೀ ಸುಲೋಚನ ಡೈರೆಕ್ಟರು.)

FOR SILENT & TALKIE PICTURES

Bookings at

RAJENDRA PICTURES CORPORATION

Sayaji Rao Road Cross, Mysore.

ಪಂಡಿತ ಸಿ. ಎಚ್. ಚಂದ್ರಭಾನುಸಿಂಗ್

ಇವರಿಂದ ತಯಾರಿಸಲ್ಪಟ್ಟ

ಫಲಪುಷ್ಪಸಾರ ರಸಾಯನ.

ಸುಖಕರ ಮಲಬಂಧನಿವಾರಿಣೀ. ಕ್ರಯ:—1-8-0

ಗುಣ:—ಇದು ಜಾಪಾಳ ಮುಂತಾದ ಕಠಿಣ ವಿರೇಚನ ವಸ್ತುಗಳ ಯೋಗವಿಲ್ಲದ ಕೇವಲ ಅಮೃತೀಕರಣ ಪ್ರಯೋಗವು. ಕೇವಲ ಅನುಭವಸಿದ್ಧವು. ಇದನ್ನು ಉಪಯೋಗಿಸುವುದರಿಂದ ಎಲ್ಲಾ ವಿಧವಾದ ಮಲಬಂಧವೂ, ವ್ಯಾಧಿ, ಅಜೀರ್ಣ, ಉಷ್ಣವಾಯು, ಕೀಲುವಾಯು, ಎದೆಯುರಿ, ಹೊಟ್ಟೆ ಕೆಮ್ಮು, ತಲೆತಿರುಗು ಮುಂತಾದ ರೋಗಗಳೆಲ್ಲವೂ ಖಂಡಿತ ಗುಣವಾಗು

ಬ್ರಾಂಚ್:—ಶ್ರೀ ಸತ್ಯನಾರಾಯಣ ಆಯುರ್ವೇದಿಕ್ ಫಾರ್ಮಸಿ, ಜಗನ್ಮೋಹನ ಬಂಗ್ಲೆ ರಸ್ತೆ, ಮೈಸೂರು.

ಎಂ. ವಿ. ನಾರಾಯಣರಾಯರ

ಶ್ರೀ ಸತ್ಯನಾರಾಯಣ ಪರಿಮಳ ಫ್ಯಾಕ್ಟರಿ,

ಜಗನ್ಮೋಹನ ಬಂಗ್ಲಾ ಬೀದಿ, ಮೈಸೂರು.

ಪರಿಮಳ ಅಗರ್ ಬತ್ತಿ

ಉಪಯೋಗಿಸಿ ಪ್ರೋತ್ಸಾಹಿಸಿರಿ

ANANDA SODA FACTORY,

DODDAPET, MYSORE.

BEST AERATED WATER SUPPLIERS.

COMPLETE REQUISITES FOR AERATED WATER MANUFACTURERS AVAILABLE.

ಆನಂದಾ ಸೋಡಾ ಫ್ಯಾಕ್ಟರಿ,

ದೊಡ್ಡಪೇಟೆ, ಮೈಸೂರು.

ನಾಳಿನ ಮಹಾ ಮೈಸೂರು.

ಉದಯಿಸಲು ಅಡಿಗಲ್ಲನ್ನಿಡಿ.

ಮೈಸೂರು ವಿಮಾ ಕಂಪೆನಿಯೊಂದಿಗೆ ಸರ್ವ ಪ್ರಕಾರದಿಂದಲೂ ಸಹಕರಿಸಿ. ಇದು ನಮ್ಮ ಪ್ರಾರ್ಥನೆ.

ಹೀಗೆ ಪ್ರಾರ್ಥಿಸುವುದು ನಮ್ಮ ಜನ್ಮಸಿದ್ಧವಾದ ಹಕ್ಕು. ಹಾಗೆ ಸಹಕರಿಸುವುದು ನಿಮ್ಮ ಪವಿತ್ರ ಕರ್ತವ್ಯ.

ಕರ್ಣಾಟಕದಲ್ಲಿ ಸ್ಥಾಪಿತವಾದ ವಿಮಾ ಕಂಪೆನಿಗಳಲ್ಲಿ ಪ್ರಥಮ ವರ್ಷದಲ್ಲೇ ಯಾವುದೂ ಈ ಕಂಪೆನಿಯಷ್ಟು ಕಾರ್ಯ ನಡೆಸಿಲ್ಲ.

ನಾಳಿನ ಮಹಾ ಮೈಸೂರಿನ ಮುಂಬೆಳಗು ಯಾವುದು?

ಮೈಸೂರು ವಿಮಾ ಕಂಪೆನಿ, ಲಿಮಿಟೆಡ್.

ಬೆಂಗಳೂರು.

ಮೈಸೂರು ವಿಮಾ ಕಂಪೆನಿಯು ಮೈಸೂರಿನವರ ಮತ್ತು ಮೈಸೂರಿನ ಅಭ್ಯುದಯಕ್ಕಾಗಿ ಮೈಸೂರು ಬಂಡವಾಳದಿಂದ ಮೈಸೂರಿನವರ ನೇತೃತ್ವದಲ್ಲಿ ಮೈಸೂರಿನ ಕೆಲಸಗಾರರಿಂದ ನಡೆಸಲ್ಪಡುತ್ತಿರುವ ಅಚ್ಚ ಮೈಸೂರು ಸಂಸ್ಥೆ.

ಭಾರತಮಾತೆಯ ಆರ್ಥಿಕೋನ್ನತಿಗಾಗಿ ದೇಶದ ನಾನಾ ಭಾಗಗಳಲ್ಲಿ ನಡೆಯುತ್ತಿರುವ ಪ್ರಯತ್ನಗಳಿಗೆ ತನ್ನ ಶಕ್ತ್ಯಾನುಸಾರ ಮೈಸೂರು ನೆರವಾಗಬೇಕೆಂಬ ಉದ್ದೇಶದಿಂದ ಈ ಸಂಸ್ಥೆಯು ಜೀವತಳೆಯಿತು.

ವಿಮಾ ಉದ್ಯಮದಲ್ಲಿ ಇಂಥ ಸಂಸ್ಥಾನಕ್ಕೆ ಏಕಮಾತ್ರ ಆದರ್ಶ ಸಾರ್ವಜನಿಕ ಸಂಸ್ಥೆಯಿದು.

ಇಂಥಹ ಕಂಪೆನಿಯಲ್ಲಿ ಮೈಸೂರಿನವರೆಲ್ಲರ ಪ್ರಾತಿನಿಧ್ಯವಿದ್ದೇ ತೀರಬೇಕು.

ಮೊದಲಿನ ೧ ಲಕ್ಷ ರೂ. ಗಳ ಷೇರುಗಳೂ ಅತ್ಯಲ್ಪಕಾಲದಲ್ಲಿಯೇ ಚಂದಾ ಆಗಿಹೋದವು.

ಬೇಡಿಕೆ ಅವಶ್ಯಕತೆಗಳನ್ನನುಸರಿಸಿ

ಷೇರು ಬಂಡವಾಳವನ್ನು ಇನ್ನೂ ೨ ಲಕ್ಷ ಹೆಚ್ಚಿಸಲಾಗಿದೆ

ಈ ಎರಡು ಲಕ್ಷದಲ್ಲಿ ೧೦೦ ರೂಗಳ ೧೦೦೦ ಷೇರುಗಳನ್ನು ಮಾತ್ರ ಡೈರೆಕ್ಟರುಗಳು ಮಾರಾಟಕ್ಕಿಟ್ಟಿರುವರು.

ಬಂದ ಷೇರು ದರಖಾಸ್ತುಗಳನ್ನೆಲ್ಲ ಅಂಗೀಕರಿಸಿದ್ದರೆ ಈ ಬಂಡವಾಳವೂ ಈಗಾಗಲೇ ಚಂದಾ ಆಗಿ ಹೋಗಿರುತ್ತಿತ್ತು. ಆದರೆ, ಕೊನೆಯ ಪಕ್ಷ ಸಾವಿರ ರೂಪಾಯಿನ ವಿಮಾ ಪತ್ರವನ್ನು ತೆಗೆದುಕೊಂಡವರಿಗೆ ಷೇರುಗಳನ್ನು ಕೊಡಲಾಗದೆಂಬ ನಿಯಮವನ್ನು ಅನುಸರಿಸಿದುದರಿಂದ ಇನ್ನೂ ಕೆಲವು ಷೇರುಗಳು ಮಾತ್ರ ಉಳಿದಿವೆ.

ಸರ್ವರ ಅನುಕೂಲ ಅವಶ್ಯಕತೆಗಳಿಗೆ ಸರಿಹೊಂದುವ ವೈದ್ಯ ಪರೀಕ್ಷೆಯಿರುವ ಮತ್ತು ಇಲ್ಲದಿರುವ ನವೀನ ವಿಮಾ ಪದ್ಧತಿಗಳು.

ಸ್ತ್ರೀಯರೂ ವಿಮೆ ಮಾಡಬಹುದು.

ಏಜೆಂಟರುಗಳಿಲ್ಲದ ಸ್ಥಳಗಳಲ್ಲೆಲ್ಲಾ ಏಜೆಂಟರು ಬೇಕು.

ವೇತನದ ಮೇಲೂ ಕೆಲಸ ಮಾಡಲು ಅವಕಾಶವಿದೆ.

ಹೆಚ್ಚು ವಿವರಗಳಿಗೆ—

ಕಂಠೀರವ ಮತ್ತು ಕಂಪೆನಿ,	**KANTEERAVA & Co.**
ಮ್ಯಾನೇಜಿಂಗ್ ಏಜೆಂಟ್ಸ್,	*Managing Agents,*
ಮೈಸೂರು ವಿಮಾ ಕಂಪೆನಿ ಲಿಮಿಟೆಡ್.,	MYSORE INSURANCE CO., LTD.,
ಶ್ರೀ ನರಸಿಂಹರಾಜ ರೋಡ್, ಬೆಂಗಳೂರು ಸಿಟಿ.	Narasimharaja Road, Bangalore City.

Edited, Printed & Published by Agaram Rangiah, B.A., at Sri Rama Press, D. Subbiah Road, Mysore.



॥ ಸತ್ಯಮೇವೋದ್ಧರಾಮ್ಯಹಮ್ ॥

ರಾಜಧಾನಿಯ ರಾಷ್ಟ್ರೀಯ ವಾರ ಪತ್ರಿಕೆ.

ವೃದ್ಧಪಿತಾಮಹ ಎಂ. ವೆಂಕಟಕೃಷ್ಣಯ್ಯನವರ ಜ್ಞಾಪಕಾರ್ಥವಾಗಿ ಪ್ರಕಟಿಸಲ್ಪಡುವುದು.

ಸಂಪಾದಕರು. ಅಗರಂ ರಂಗಯ್ಯ, ಬಿ. ಎ.

Sadhvi: A Leading Nationalist Weekly of Mysore.

FOUNDED IN MEMORY OF Mr M. VENKATA KRISHNAYYA THE GRAND OLD MAN OF MYSORE

ಪುಟ ೧] MYSORE · MONDAY 4-5-36 ಮೈಸೂರು : ಸೋಮವಾರ ೪—೫—೩೬ [ಸಂಚಿಕೆ ೧೧

Bombay INDRA BHAVAN,

IDEAL INDIAN RESTAURANT,

Sayaji Rao Road, MYSORE.

LADIES AND GENTLEMEN,

Don't you like to safeguard your health at all times? Then you must insist upon having your Lunch and Drinks hygienically prepared by pure and choicest articles.

We are at your service,

Bombay Indra Bhavan,

SAYAJI RAO ROAD, MYSORE

ಬೊಂಬಾಯಿ ಇಂದ್ರ ಭವನ,

ಅತ್ಯುತ್ತಮವಾದ ಹಿಂದೂ ಫಲಾಹಾರ ಮಂದಿರ,

ಸಯ್ಯಾಜಿ ರಾವ್ ರಸ್ತೆ, ಮೈಸೂರು

ಮಹಿಳೆಯರೇ ಮತ್ತು ಮಹನೀಯರೇ,

ನೀವು ಸದಾ ನಿಮ್ಮ ಆರೋಗ್ಯವನ್ನು ಕಾಪಾಡಿಕೊಳ್ಳಬೇಕೆಂದು ಬಯಸುವುದಿಲ್ಲವೇ? ಹಾಗಾದರೆ ಯಾವಾಗಲೂ ಶುಚಿಯಾದ ಮತ್ತು ಉತ್ತಮವಾದ ಪದಾರ್ಥಗಳಿಂದಲೇ ತಯಾರಿಸಿದ ರುಚಿಯಾದ ಆಹಾರ ಮತ್ತು ಪಾನೀಯಗಳು ಅಗತ್ಯವಾನೆ?

ತಮ್ಮ ಆರೋಗ್ಯಾಪೇಕ್ಷಿಗಳು,

ಬೊಂಬಾಯಿ ಇಂದ್ರ ಭವನ,

ಸಯ್ಯಾಜಿರಾವ್ ರೋಡು, ಮೈಸೂರು.

You Know

OUR IDEAL ARRANGEMENTS & CHOICEST PREPARATIONS

We need not tell you about it

COME & SEE OUR NOVEL

innovations and up-to-date Management.

SRI KRISHNA BHAVAN,

Mysore.

ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ಬಾಲಸುಧಾ

ಉದರ ಸುಧಾ, ನರದೌರ್ಬಲ್ಯ ಗುಣ ಪಡಿಸತಕ್ಕ ಲಿವರ್ (ಪಿತ್ತ ಕೋಶ) ... 20 ವರ್ಷಗಳಿಂದಲೂ ಅನುಭವ ಸಿದ್ಧವಾಗಿದೆ—ಮಕ್ಕಳಿಗೆ ... ಉಪಯೋಗಿಸಿರಿ

ಮೈಸೂರು, ... ನಂಜನಗೂಡು

ನಂಜನಗೂಡಿನಲ್ಲಿರುವ ಲಕ್ಷ್ಮೀ ಥಿಯೇಟರಿನಲ್ಲಿ!

ಶೀಘ್ರದಲ್ಲಿಯೇ ಬರುತ್ತದೆ!

ರಾಜೇಂದ್ರ ಸಿನಿಮಾ, ನಂಜನಗೂಡು.

ಪ್ರೊಪ್ರೈಟರ್ಸ್

ಸೋಮರಾಜ್ ರತನ್ ಚಂದ್ ಅಂಡ್ ಕಂಪೆನಿ ಮೈಸೂರು

... ಗಣಪತ್ ಜಯ ... ಮಿಸೆಸ್ ರಾಜಂ ... ಕಂಪೆನಿಯ ... ಚಿತ್ರ

ಭಕ್ತ ವಿಜಯ

(ಪ್ರಥಮ ಪ್ರದರ್ಶನ)

(... ಬೆಂಗಳೂರು ...) ಡೈರೆಕ್ಟರು ವೈ. ವಿ. ರಾವ್ (...)

FOR SILENT & TALKIE PICTURES

Bookings at

RAJENDRA PICTURES CORPORATION

Sayaji Rao Road Cross, Mysore

ಎಂ. ವಿ. ನಾರಾಯಣರಾಯರ

ಶ್ರೀ ಸತ್ಯನಾರಾಯಣ ಪರಿಮಳ ಫ್ಯಾಕ್ಟರಿ, ಜಗನ್ಮೋಹನ ಬಂಗ್ಲಾ ಬೀದಿ, ಮೈಸೂರು

ಪರಿಮಳ ಅಗರ್ ಬತ್ತಿ

ಉಪಯೋಗಿಸಿ ಪ್ರೋತ್ಸಾಹಿಸಿರಿ

ANANDA SODA FACTORY,

DODDAPET, MYSORE.

BEST AERATED WATER SUPPLIERS

COMPLETE REQUISITES FOR AERATED WATER MANUFACTURERS AVAILABLE

ಆನಂದಾ ಸೋಡಾ ಫ್ಯಾಕ್ಟರಿ,

ದೊಡ್ಡಪೇಟೆ, ಮೈಸೂರು

ಅರ್ಧ ಕ್ರಯಕ್ಕೆ ಕೊಡಲ್ಪಡುತ್ತೆ

ಮುಂಚಿನ ಕ್ರಯ ರೂ 1 12 0 ಈಗ 14 ಅ

ಬ್ರಿಟಿಷ್ ಫೌಂಟನ್ ಪೆನ್

BRITISH FOUNTAIN PEN

ಇಂಗ್ಲೆಂಡಿನಲ್ಲಿ ತಯಾರಾದದ್ದು ಇದಕ್ಕೆ 11 ಕ್ಯಾರೆಟಿನ ... ಹಾಕಿದ ಈ ಪೆನ್ನನ್ನು ... ಚಕ್ರವರ್ತಿಯವರು ... ಸರ್ಟಿಫಿಕೇಟ್ (Certificate) ... ಮುಂಚಿನ ಕ್ರಯ 0-14 0.

ಒಂದೇ ಸಲ ಮೂರು ಪೆನ್ನುಗಳನ್ನು ತರಿಸಿದರೆ ಒಂದು ಪೆನ್ನನ್ನು ಬಹುಮಾನವಾಗಿ ಕೊಡಲ್ಪಡುತ್ತೆ

T R ROYAL & Co., 19 Beat, Madras

T R ರಾಯಲ್ ಕಂಪೆನಿ, ೧೯ ಬೀಟ್, ಮದರಾಸು

ಸಾಧ್ವಿ

|| ಸತ್ಯಮೇವೋದ್ಧರಾಮ್ಯಹಮ್ ||

ರಾ ಜ ಧಾ ನಿ ಯ ರಾ ಷ್ಟ್ರೀ ಯ ವಾ ರ ಪ ತ್ರಿ ಕೆ.

ವೃದ್ಧ ಪಿತಾಮಹ ಎಂ. ವೆಂಕಟಕೃಷ್ಣಯ್ಯನವರ ಜ್ಞಾಪಕಾರ್ಥವಾಗಿ ಪ್ರಕಟಿಸಲ್ಪಡುವುದು.

ಸಂಪಾದಕರು. ಅ ಗ ರ ಂ ರ ಂ ಗ ಯ್ಯ, ಬಿ. ಎ

ಸಂಪುಟ ೧] MYSORE : MONDAY 4—5—36 ಮೈಸೂರು : ಸೋಮವಾರ ೪—೫—೩೬ [ಸಂಚಿಕೆ ೧೧

ಸುಭಾಸ್ ಚಂದ್ರ ಬೋಸರ ದಿನಾಚರಣೆ.

ಬಾಬು ಸುಭಾಸ ಚಂದ್ರ ಬೋಸರ ದಸ್ತಗಿರಿಯನ್ನು ಖಂಡಿಸಲು ಮುಂದಿನ ಬುಧವಾರ ಬಹಿರಂಗ ಸಭೆಗಳನ್ನು ನಡೆಸಬೇಕೆಂದು ಪಂಡಿತ ಜವಾಹರಲಾಲರು ಅಪ್ಪಣೆ ಮಾಡಿರುವರು

ಶ್ರೀ ಸುಭಾಸ್ ಚಂದ್ರ ಬೋಸರು.

ಇವರು ಕಾರಾಗೃಹದಲ್ಲಿ ಅಸ್ವಸ್ಥತೆಯಿಂ ದಿರುತ್ತಾರೆ.

ಅಬಿಸೀನಿಯ ಯುದ್ಧದ ಅಂತ್ಯವು ಸಮೀಪಿಸುತ್ತಿದೆ.

ಇಟಲಿ-ಅಬಿಸೀನಿಯಾ ಯುದ್ಧದ ಅಂ ...ವು ಸಮೀಪಿಸುತ್ತಿದೆ. ಇಟಲಿಯವರು ...ಂದರಮೇಲೊಂದು ಪ್ರದೇಶವನ್ನು ಆಕ್ರ...ಸುತ್ತಾ ಮುಂದೆ ನುಗ್ಗುತ್ತಿರುವರು. ...ಬಿಸೀನಿಯನ್ನರು ಅಲ್ಲಿ ಇಲ್ಲಿ ಸಣ್ಣ ಪು... ವಿಜಯವನ್ನು ಹೊಂದುತ್ತಿದ್ದರೂ ಒ...ನಲ್ಲಿ ತಮ್ಮ ಪ್ರದೇಶಗಳನ್ನೆಲ್ಲಾ ಕಳ...ಕೊಳ್ಳುತ್ತಿರುವರು. ಇಟಲಿ ಸೈನ್ಯವು ...ಬಿಸೀನಿಯಾ ರಾಜಧಾನಿಯಾದ ಎಡಿಸ್ ...ಬಾಬದ ಸಮೀಪಕ್ಕೆ ಬಂದಿದೆ. ಇನ್ನು ...ಲವು ದಿನಗಳಲ್ಲೇ ಇದು ಅವರ ವಶವಾ...ದರೆ ಏನೂ ಆಶ್ಚರ್ಯವಿಲ್ಲ.

...ಚಕ್ರವರ್ತಿ ರಾಸ್ ಟಫಾರಿಯವರು ...ಜರಾಗಿದ್ದಾರೆ ಹೇಗಾದರೂ ಮಾಡಿ ...ಜಧಾನಿಯನ್ನಾದರೂ ಉಳಿಸಿಕೊಳ್ಳ...ತ ಪ್ರಜೆಗಳಿಗೆ ಬಿನ್ನವಿಸಿಕೊಳ್ಳುತ್ತಿರು... ತಮ್ಮ ಪ್ರಜೆಗಳು ಶತ್ರುಗಳ ಕೈವ...ಗಬಾರದೆಂದೂ ಅವರಿಗೆ ಶರಣಾಗತ...ಗಕೂಡದೆಂದೂ ನಿಶ್ಚಯಿಸಿದ್ದಾರೆ. ಇ...ಯವರು ತಮ್ಮ ಅಧಿಕವಾದ ಸೈನ್ಯ...ತ್ತು ಯುದ್ಧ ಸಾಮಗ್ರಿಗಳ ಬಲದಿಂದ ...ಸ್ವತ್ರರಾಗಿ ಅಬಿಸೀನಿಯನರ ಮೇಲೆ ... ನಡೆಸುತ್ತಿರುವರು ಅವರ ಧಾಳಿಯು ...ಮಾದುದೆಂದೂ, ಅದಕ್ಕೆ ತಲೆವಾ...ಕೂಡದೆಂದೂ ಅವರ ಅಭಿಮತ. ಎ... ಕಷ್ಟಗಳು ಬಂದರೂ ಅವುಗಳನ್ನು ...ಸಲು ಅವರು ದೃಢಸಂಕಲ್ಪಮಾಡಿರು... ಅವರ ಪ್ರಜೆಗಳೂ ಅವರ ಉದಾ...ರದ ಮೇಲ್ಪಂಕ್ತಿಯನ್ನೇ ಅನುಸರಿಸು...ನೆನು ಆದರೂ ವಿಜಯಲಕ್ಷ್ಮಿಯು ...ಕೈ ಬಿಟ್ಟಂತೆ ಕಾಣುತ್ತದೆ. ಇನ್ನೊಂ...ಕಾಲದಲ್ಲಿ ಅಬಿಸೀನಿಯಾದ ಗತಿಯು ...ಗುವುದೋ ಹೇಳಲಾಗುವುದಿಲ್ಲ. ಅ...ಸೀನಿಯಾ ಚಕ್ರವರ್ತಿನಿಯವರೂ ಪ...ಜೆರೂಸಲೆಮ್ಮಿಗೆ ತೆರಳುವರು. ಚ...ರ್ತಿಗಳು ಮಾತ್ರ ರಂಗದಲ್ಲಿಯೇ ...ಕಡೆಯವರೆಗೂ ಯುದ್ಧ ಮಾಡು... ದೃಢಸಂಕಲ್ಪವು ಹೇಗಿದೆಯೋ ...ದವು.

ಹಜಾಮರ ಮುಷ್ಕರ

ನಾಗಪಟ್ಟಣದ ಹಜಾಮರು ಒಂದನೇ ತಾರೀಖಿನಿಂದ ಮುಷ್ಕರ ಹಿಡಿದಿದ್ದಾರೆ. ಅಲ್ಲಿನ ಪೌರಸಭೆಯು ಅವರುಗಳ ಅಂಗಡಿಗಳ ಮೇಲೆ ಹಾಕಿದ್ದ ತೆರಿಗೆಗಳನ್ನು ಹೆಚ್ಚು ಮಾಡಲು ಅದನ್ನು ಖಂಡಿಸಲು ಮುಷ್ಕರವನ್ನು ಆರಂಭಿಸಿದರು ಎಲ್ಲರೂ ಐಕಮತ್ಯವಾಗಿದ್ದಾರೆ, ಯಾರೂ ಅಂಗಡಿಗಳನ್ನು ತೆಗದಿಲ್ಲ. ಊರಿನಲ್ಲಿ ಜನರಿಗೆ ಬಹಳ ತೊಂದರೆಯಾಗಿದೆ. ಆದ್ದರಿಂದ ರಾಜಿ ಸಂಧಾನಗಳೂ ನಡೆಯುತ್ತಿವೆ

ಡಿಸ್ಟ್ರಿಕ್ಟ್ ಬೋರ್ಡುಗಳ ಹಣಕಾಸು

ಡಿಸ್ಟ್ರಿಕ್ಟ್ ಬೋರ್ಡುಗಳ ಕಾನೂನು ವಿವರಿಸಲು ಸರ್ಕಾರದವರು ನೇಮಿಸಿದ್ದ ಸಮಿತಿಯವರು ಕೆಲವು ಸೂಚನೆಗಳನ್ನು ಮಾಡಿರುತ್ತಾರೆ. ಇವು ಮುಂದಿನ ಜೂನ್ ತಿಂಗಳಲ್ಲಿ ನಡೆಯುವ ನ್ಯಾಯವಿಧಾಯಕ ಸಭೆಯಲ್ಲಿ ಚರ್ಚಿಸಲ್ಪಡುತ್ತವೆ.. ರೈಲ್ವೆ ಸೆಸ್ಸಿನ ಬಾಬ್ತು ಹಣವನ್ನು ರಸ್ತೆ ರಿಪೇರಿ ಮತ್ತು ಸೇತುವೆಗಳ ನಿರ್ಮಾಣಕ್ಕೂ ಉಪಯೋಗಿಸಬಹುದೆಂದು ಸಲಹೆ ಕೊಡಲ್ಪಟ್ಟಿದೆ

" ಸಾಧ್ವಿ " ಪತ್ರಿಕೆಗೆ ವಿದ್ಯಾ ಇಲಾಖೆಯ ಪ್ರೋತ್ಸಾಹ.

'ಸಾಧ್ವೀ' ವಾರಪತ್ರಿಕೆಯನ್ನು ನಮ್ಮ ಸಂಸ್ಥಾನದ ಎಲ್ಲಾ ಮಿಡ್ಲ್, ನಾರ್ಮಲ್ ಮತ್ತು ಹೈ ಸ್ಕೂಲುಗಳಿಗೂ ತೆಗದುಕೊಳ್ಳುವಂತೆ ವಿದ್ಯಾ ಇಲಾಖೆಯ ಡೈರೆಕ್ಟರವರು ಶಿಫಾರ್ಸು ಮಾಡಿರುತ್ತಾರೆ. ಇದಕ್ಕಾಗಿ ಅವರಿಗೆ ನಮ್ಮ ವಂದನೆಗಳನ್ನು ಸಲ್ಲಿಸುತ್ತೇವೆ ನಮ್ಮ ಸಂಸ್ಥಾನದ ಎಲ್ಲಾ ಶಾಲೆಗಳ ಅಧಿಕಾರಿಗಳೂ ನಮ್ಮ ಪತ್ರಿಕೆಯನ್ನು ತರಿಸಿಕೊಂಡು ನಮ್ಮ ಪ್ರಯತ್ನಕ್ಕೆ ಪ್ರೋತ್ಸಾಹವನ್ನು ಕೊಡಬೇಕೆಂದು ಕೋರುತ್ತೇವೆ

ಪ್ರಜಾಪ್ರತಿನಿಧಿ ಸಭೆ

ಮೈಸೂರು ಪ್ರಜಾಪ್ರತಿನಿಧಿ ಸಭೆಯ ಬಜೆಟ್ ಅಧಿವೇಶನವು ಜೂನ್ ಎಂಟನೇ ತಾರೀಖು ಮಧ್ಯಾಹ್ನ ಹನ್ನೆರಡು ಗಂಟೆಗೆ ಮೈಸೂರು ಜಗನ್ಮೋಹನ ಬಂಗಲೆಯಲ್ಲಿ ನಡೆಯುವುದು ಈ ಸಂಬಂಧವಾಗಿಯೂ ಮತ್ತು ಮೈಸೂರಿನ ವರ್ಧಂತಿ ಸಮಯದಲ್ಲಿ ಬರತಕ್ಕ ಹಿಂದೂ ಅತಿಥಿಗಳ ಸೌಕರ್ಯಗಳನ್ನು ಏರ್ಪಡಿಸುವುದಕ್ಕಾಗಿಯೂ ಮ|| ಸಿ. ಎಸ್ ಶ್ರೀನಿವಾಸಾಚಾರ್ಯರು ಎಂದಿನಂತೆ ಸ್ಪೆಷಲ್ ಡ್ಯೂಟಿ ಆಫೀಸರಾಗಿ ನೇಮಿಸಲ್ಪಟ್ಟಿರುವರು.

ಬೆಂಗಳೂರಿನಲ್ಲಿ ಸಿನಿಮಾ ತಯಾರಿ

ಕನ್ನಡ, ಹಿಂದುಸ್ತಾನಿ ಮತ್ತು ಇಂಗ್ಲೀಷಿನಲ್ಲಿ ಉತ್ತಮವಾದ ನವೀನ ಮಾತನಾಡುವ ಚಲನಚಿತ್ರಗಳನ್ನು ಬೆಂಗಳೂರಿನಲ್ಲಿ ತಯಾರಿಸಲು ಒಂದು ಸ್ಕೀಮು ತಯಾರಾಗಿ ಸರ್ಕಾರದವರ ಪರ್ಯಾಲೋಚನೆಗೆ ಕಳುಹಿಸಲ್ಪಟ್ಟಿದೆ ಅಧಿಕಾರಿಗಳು ಇದನ್ನು ಪರ್ಯಾಲೋಚಿಸುತ್ತಿರುವರು.

ಚಂಡಮಾರುತದಿಂದ ಮರಣ

ಬರ್ಮಾದಲ್ಲಿರುವ ಅರಕಾನ್ ಪ್ರಾಂತ್ಯದಲ್ಲಿ ಪ್ರಚಂಡ ಮಾರುತದಿಂದ ವಿಶೇಷವಾದ ಪ್ರಾಣ ಮತ್ತು ಧನಗಳ ನಷ್ಟವಾಯಿತೆಂದು ತಿಳಿದು ಬಂದಿದೆ ಕೊಂಡನ್ ಎಂಬಲ್ಲಿ ಮೂರು ಲಕ್ಷ ರೂ. ನಷ್ಟ ನಷ್ಟವೂ 36 ಜನರ ಮರಣವೂ ಉಂಟಾಯಿತು ದಟೌಂಗೂಪ್ ಎಂಬಲ್ಲಿ 20 ಹಳ್ಳಿಗಳಿಂ ಒಟ್ಟು ಒಂದುಸಾವಿರ ಜನರು ಮೃತಪಟ್ಟರೆಂದು ಗೊತ್ತಾಗಿದೆ

ಮಾಡಿದ್ದುಣ್ಣೋ ಮಹ ರಾಯ.

(ಲೇಖಕ —ವಿದ್ಯಾನಿಹಿ)

ಮಲ್ಲೇಗೌಡ ಒಂದು ಎತ್ತನ್ನೂ ಒಂ
ದು ಕರುವನ್ನೂ ಓಣಿ—ಕಾಲ್ದಾರೀಲಿ
ಸಂತೆಗೆ ಹೊಡೆದುಕೊಂಡು ಹೋಗುತ್ತಿ
ದ್ದಾ. ಅವನ ಹಿಂದೆ ಬರುತ್ತಿದ್ದ ಅವನ
ಪರಿಚಿತಸ್ತನಾದ ಮಧುವನ ಹಳ್ಳಿಯ

ಅಂಕೇಗೌಡ—ಏನ್ ಗೌಡ್ರೆ, ಚಂದಾಗಿ
ದ್ದೀರಾ ?

ಮಲ್ಲೇಗೌಡ (ಹಿಂತಿರುಗಿ ನೋಡಿ)—
ನಮ್ಮ ಚಂದಾ ಏನು ! ಸಾಯಲಿಲ್ಲ, ಬದು
ಕಲಿಲ್ಲ, ಊರಿಗೆ ಪ್ಲೇಗಿಲ್ಲ, ಮಸಾಣಕೆ
ಹೆಣವಿಲ್ಲ—ನೀವು ಚಂದಾಗಿರಬೇಕು
ಗೌಡ್ರೆ !

ಅಂ—ಯಾಕಪ್ಪಾ ಅಷ್ಟು ಬೇಜಾರು ?

ಮ—ಬೇಜಾರಲ್ಲದೆ ಏನಣ್ಣ ? ಜೋಳ
ಬಿತ್ತಿದ್ದೋ, ಎಳ್ಳು ಬಿತ್ತಿದ್ದೋ, ಬಿತ್ತಿದ
ಮೇಲೆ ಒಂದು ಹನಿಯೂ ಮಳೆ ಇಲ್ಲ,
ಪೈರೆಲ್ಲಾ ಒಣಗಿ ಹೋಯ್ತು, ಮಾಡಿದ
ಫಸಲ್ಲೆಲ್ಲಾ ಹಿಂಗಾದ್ರೆ, ಕೊಟ್ಟವರಿಗೆ
ಕೊಟ್ಟು, ಕಂದಾಯ ಕಟ್ಟಿ, ನಾವು ಬದು
ಕೋದು ಹ್ಯಾಂಗೆ ಹೇಳಿಮತ್ತೆ ?

ಅಂ (ನಿಟ್ಟುಸುರು ಬಿಡುತ್ತಾ)—
ನಮ್ಮ ಕಡೇನೂ ಇದೇ ಗೋಳಪ್ಪಾ, ಇದೇ
ಗೋಳು.

ಮ—ನಿಮ್ಮ ಕಡೆ ತರಹಾನೇ ಬೇರೆ
ಬುಷ್ಕಿ ಜಮೀನಲ್ಲಿ ಖುಷ್ಕಿ ಫಸಲ್ ಮಾ
ಡ್ತೀರಿ—ಒಂದು ಬೆಳೆ ಹೋದ್ರೆ ಇನ್ನೊಂದು
ಬೆಳೆ ಒಡ್ತೀರಿ—ಖುಷ್ಕಿ ಕಂದಾಯ ಕಟ್ತೀ
ರಿ. ತರೀ ಜಮೀನಲ್ಲಿ ಭತ್ತದ ಫಸಲ್
ಆಗದೇ ಹೋದ್ರೆ, ತಾಸಿಲ್ದಾರ್ರು, ಕಲ್ಲೇ
ಕಟರ್ ಸಾಹೇಬರು ಹೊಷ್ಟಾ ಬಂದು,
ಪೈಲ್ ನೋಡಿ, ಕಂದಾಯ ರಮಿಷ್ಟ
ಕೊಡ್ತಾರೆ. ರೈತರ ಅಹವಾಲ್ ಕಿವಿ
ಕೊಟ್ಟು ಕೇಳ್ತಾರೆ. ನಂಕಡೆ ಹಂಗಲ್ಲ,
ನಮ್ಮ ಕೆರೆ ಕೆಳಗೆ ಭತ್ತದ ಪಸಲಾಗಿ 1 ವ
ರ್ಷವಾಯ್ತು, ಮನೇಲಿ ಯಾರಾದರೂ
ಸತ್ತರೆ, ಸಂತೇಲೋ ಅಂಗಡೀಲೋ ಅಕ್ಕೀ
ಕಾಳು ಕೊಂಡ್ತಂದು ಬಾಯಿಗೆ ಹಾಕ
ಬೇಕು. ತರೀ ಜಮೀನಲ್ಲಿ ಭತ್ತದ ಪಸಲ್
ಆಗದೇ ಖುಷ್ಕಿ ಬೆಳೆ ಮಾಡಿದರೂ ತರೀ
ಕಂದಾಯ ಕೊಷ್ಟೇ ತೀರಬೇಕಂತೆ, ರೆಮಿ
ಷನ್ ಕೊಡೋ ರೂಲಸ್ಸೇ ಇಲ್ಲವಂತೆ ಇಲ್ಲಿ
ಸರಿ, ಕಂದಾಯ ಕೊಡದೇ ಹೋದ್ರೆ, ಪ
ಟ್ಟೇಲಿಯೋ ಪಾತ್ರೆ ಪದಾರ್ಥ, ದನಾ ಕರಾ,
ಎಲ್ಲಾ ಚಾವಡೀ ಮುಂದೆ ಹಾಜರ್.
ನನ್ನದು (ತಾನು ಹಿಡಿದಿದ್ದ ಎತ್ತನ್ನು
ತೋರಿಸುತ್ತಾ) ಇದರ ಜೊತೇದು ಒಂದು
ಒಂಟಿ ಮತ್ತು ತಿಂಗಳು ಕೆಳಗೆ ಈದ ಹಸಾ
ಇವೆರಡೂ ಹಿಡಿದು ಕಟ್ಟಿಹಾಕೊಂಡವ್ರೆ
ಹುಲ್ಲು ನೀರಿಲ್ಲದೇ ೩ ದಿನ್ನದಿಂದಲೂ ಬೇ
ಸಗೆ ಬಿಸಲಿಗೆ ಬಾಡ್ತಾ ನಿಂತವೆ. ಎಳ
ಗರು ಹಟ್ಟೀಲಿ ಸುಮ್ಮನೇ ಅರಚ್ತೋತಿ
ತ್ತು—ನೋಡಲಾರದೆ, ಹೋದಷ್ಟಕ್ಕೆ ಮಾ
ರಿಬಿಟ್ಟು, ಉಣ್ಣೋಕೆ ದವಸ ತರೋವಾ
ಅಂತ ಸಂತೆಗೆ ಹೊಡೆತಂದಿನ್ನಿ, ನನ್ಯಪ್ಪ.

ಅಂ—ಕೆರೆಗೆ ನೀರು ಬಂದು ಪಲೀಸ್
ಬೆಳೆ ಆದ್ರೆ, ಕಂದಾಯ ಕೊಡೋಕಿಲ್ಲಾ
ಅಂದಾರಾ ? ಗತಿಯಿಲ್ಲದೇ ಕಂದಾಯ ನಾ
ವು ಕೊಡದೇ ಹೋದ್ರೆ, ಆ ಮೂಕಪ್ರಾಣಿ
ಗಳೇನ್ಮಾಡ್ತವೆ, ಪಾಪ ! ಜಮೀನ್ ಹರಾಜ್
ಮಾಡಿಸಲಿ, ಅದರ ಮೇಲಿನ ಫಸಲ್
ಜಪ್ತು ಮಾಡಿಸಲಿ, ಆ ಬಸವೇಶ್ವರನನ್ಯಾ
ಕೆ ಆಯ್ಯೋ ಅನ್ನೀಸಬೇಕು ?

ಮ—ಗ್ರಾಚಾರ ಕಮ್ಮಿಯಾದ್ರೆ, ಬಸ
ವೇಶ್ವರನಾದರೇನು ಅವನ ಮೇಲಿನವನಾ
ದರೇನು, ಯಾರಾದರೂ ಉಸ್ಸಪ್ಪಾ ಅನ್ನ
ಲೇಬೇಕಾಗ್ತದೆ. ಜಯವಿದೋ ಗಂಟಾ
ಭಯವಿಲ್ಲ, ಅಷ್ಟೇ ತಿನ್ನೋ ಕುಡಿಯೋ
ಜಾತೀವ್ರು ದೊಡ್ಡ ದೊಡ್ಡ ಹುದ್ದೇದಾರ್ರಾ
ಗಿ ನಮ್ಮ ತಾಲ್ಲೂಕಿಗೆ ಬಂದಿದ್ರು ; ಅವರ
ಕಾಲದಲ್ಲೂ ಹಿಂಗೆಲ್ಲಾ ದಾಸು ಹಿಡಿದು
ಕಟ್ಟಿಹಾಕಿಸ್ತಿರಲಿಲ್ಲ. ಒತ್ತಾಬಡ್ತಾ ಕಾಲ
ಕೆಟ್ಟುಹೋಯ್ತು, ಗೌಡ್ರೆ. ಸಾಯ್ದೇ
ಬದುಕಿದ್ದರೆ, ಈ ಹಾಳ್ ಕಣ್ಣು ಇನ್ನೂ
ಏನೇನು ನೋಡಬೇಕೋ ಕಾಣೆ ! ' ಹಳೆ
ಗಣ್ಣು ' ಹೊಸ ನೋಟ ?

ಅಂ—ಕಾಲ ಯಾಕ್ರೀ ಕೆಟ್ಟೋಯ್ತು,
ಕಾಲ ಸರಿಯಾಗೇ ಅವೆ, ಆಗಲೂ ವಾರಕ್ಕೆ
7 ದಿವಸ ಈಗಲೂ ಏಳೇ ದಿವಸ ನಾವ್ರು
ಕೆಟ್ಟು ಹೋದೆವು ಅಷ್ಟೇ. ಇದೆಲ್ಲಾ ನೋಡಿ
ದ್ರೆ, ಸಂಕಡೇನೇ ಪ್ರೋಸಿ ಮಾಸಿ ಅಂತಾ
ಕಾಣ್ತದೆ—ದಾಸು ಗೀಸು ಇಷ್ಟು ಗಲಾಟೆ
ಇಲ್ಲ.

ಮ—ಎಷ್ಟೇ ಆಗಲಿ. ನಿಮ್ಮದು ಕುಂಪ
ಣಿ ಶೀಮೆ, ರಾಜಾ ಶೀಮೇನೂ ಹಂಗೂ
ಹಿಂಗೂ ಪರವಾ ಇಲ್ಲ ಅನ್ನಿ, ನಮ್ಮದು
ರಾಜಾನೂ ಅಲ್ಲ ಕುಂಪಣೀನೂ ಅಲ್ಲ—ಎರ
ಡಕ್ಕೂ ಮಧ್ಯೆ ತ್ರಿಶಂಕು ಸ್ವರ್ಗ ಅಂತಾರ
ಲ್ಲಾ, ಹಂಗಾಗದೆ ನಮ್ಮ ಬಾಳು ಮುಖ್ಯ,
ನಮ್ಮ ಹಣೇಬರಹಕ್ಕೆ ಯಾರು ಹೊಣೆ
ಹೇಳಿ ? ಆಗ ಶಿವಪೂಜೆ ಚಂದಾಗಿ ಮಾ
ಡ್ಲಿಲ್ಲ, ಈಗ ಇಲ್ಲಿದ್ದುಕೊಂಡು ನಾವುಗಳು
ಬಾಳಾಟ ಮಾಡ್ತಿರೋದೇ ಅದಕ್ಕೆ ಸಾಕ್ಷಿ.
ನೀವು ಮಾಡಿದ ಫಲ ನಿಮಗೆ, ನಾವು
ಮಾಡಿದ ಫಲ ನಮಗೆ. ಅವರವರ
ಕರ್ಮಕ್ಕೆ ತಕ್ಕ ಫಲ ಅವರವರು ಅನುಭ
ವಿಸಲೇಬೇಕು—ಪ್ರೋಸ್ಟೆ ಅಂದ್ರೆ ತಪ್ಪದಾ ?
ಕೇಳಿಲ್ವಾ “ಮಾಡಿದ್ದುಣ್ಣೋ ಮಹ
ರಾಯ ? ”

ವಿಜಯನಗರದ ಸ್ಮಾರಕೋತ್ಸವ.

ಕಳೆದ ಮಂಗಳವಾರ ಅಖಿಲ ಕರ್ನಾಟ
ಕದಲ್ಲಿ ವಿಜಯನಗರದ ಸ್ಮಾರಕೋತ್ಸವವು
ವೈಭವದಿಂದ ಆಚರಿಸಲ್ಪಟ್ಟಿತು.

೧೩೦ ವಯಸ್ಸಿನಲ್ಲಿ ಮದುವೆ.

ನೂರಮುವ್ವತ್ತು ವಯಸ್ಸಾದ ಜಲಿ
ಕ್ಸಾಂಡ್ರಿಯಾ ಎಂಬಲ್ಲಿಯವನೊಬ್ಬನು
ಮದುವೆಯಾಗಲು ನಿಶ್ಚಯಿಸಿದ್ದಾನೆ. ಮದ
ವಣಿಗೆಗೆ ಇಪ್ಪತ್ತೈದು ವಯಸ್ಸು. ಆತನಿ
ಗೆ ಇದು ಹತ್ತೊಂಬತ್ತನೇ ಮದುವೆ. ಹಿಂ
ದಿನ ಹೆಂಡತಿಯರೆಲ್ಲಾ ಹೋಗಿಬಿಟ್ಟರು.
ಹೊಸ ವಧುವಿಗೂ ವರನಿಗೂ ನೂರೈದು
ವರ್ಷಗಳ ವ್ಯತ್ಯಾಸವಿರುವುದರಿಂದ ಆತನ
23 ಮಕ್ಕಳು ಈ ಮದುವೆಗೆ ವಿರೋಧಿಯಾ
ಗಿದ್ದಾರೆ.

ಜ್ಞಾನಮಾರ್ಗ

(ಬ್ರ॥ ಶ್ರೀ॥ ಮಹಾ ವಿದ್ವಾನ್
ಕೆ. ಗೋಪಾಲಕೃಷ್ಣಶಾಸ್ತ್ರಿಗಳವರಿಂದ)

(ಹಿಂದಿನಿಂದ ಮುಂದುವರಿದುದು.)

ಕ್ರಿ 11 12 13 ನೇ ಶತಮಾನದ
ಪೌರಾಣಿಕ ಪಂಡಿತರು ಜ್ಞಾನಮಾರ್ಗಕ್ಕೆ
ವಿರುದ್ಧವಾಗಿ ಭಕ್ತಿಮಾರ್ಗದ ಚಳುವಳಿ
ಯನ್ನು ಹೂಡಿದರೂ ಉಪನಿಷದರ್ಥಕ್ಕೆ
ಶೀರಾ ವಿರುದ್ಧವಾದದ್ದು. ಆದರೆ ಭಕ್ತಿ ಪ
ಕ್ಷಪಾತಿಗಳು ಆದ್ಯಂತ ಗ್ರಂಥಗಳಲ್ಲಿ ಶರಣಾ
ಗತಿಯನ್ನು ಬೋಧಿಸಿದೆ ಎಂದು ಹೇಳುವ
ದು ಸರಿಯಲ್ಲ. ಪ್ರೀಭಗವಾನುವಾಚ—ಅ
ತೋಚ್ಯಾನನ್ವಶೋಚಸ್ತ್ವಂ ಪ್ರಜ್ಞಾವಾದಾಂ
ಶ್ಚಭಾಷಸೆ। ಗತಾಸೂನಗತಾಸೂಂಶ್ಚ ಪಂ
ಡಿತಾಃ॥ ನತ್ವೇವಾಹಂಜಾತುನಾಸಂ ಇತ್ಯಾ
ದಿ ವೇದಾಂತ ಶಾಸ್ತ್ರದ ವಚನಗಳೇ ಶಾಸ್ತ್ರಾ
ರಂಭವೆಂದು ತಿಳಿಯಬೇಕು. ಸರ್ವಧ
ರ್ಮಾನ್ ಪರಿತ್ಯಜ್ಯ ಎಂಬ ಕೊನೇ ಶ್ಲೋ
ಕವು ಸನ್ಯಾಸಕ್ಕೆ ಸಂಬಂಧಪಟ್ಟದ್ದು. ಅ
ದರ ಹಿಂದಿನ ಶ್ಲೋಕಗಳು ಈಶ್ವರಸ್ಸರ್ವ
ಭೂತಾನಾಂ ಹೃದ್ದೇಶೇರ್ಜುನತಿಷ್ಠತಿ। ತ
ಮೇವಶರಣಂಗಚ್ಛ ಸರ್ವಭಾವೇನ
ಭಾರತ ಎಂದು ಶರಣಾಗತಿಯನ್ನು ಹೇ
ಳಿದನಂತರ ಪುನಃ ಶರಣಾಗತಿಯನ್ನು ಹೇ
ಳಿದರೆ ಪುನರುಕ್ತವೆನಿಸಿಕೊಳ್ಳುತ್ತದೆ. ಭಕ್ತ
ನಾದವನಿಗೂ ಕರ್ಮಿಗೂ ಸರ್ವ ಧರ್ಮ
ಪರಿತ್ಯಾಗವು ಕೂಡತಕ್ಕದ್ದು. ಸನ್ಯಾಸಿಗೆ
ಮಾತ್ರ ಸಂಭವಿಸಬಹುದು. ಮಾಮೇಕಂ
ಶರಣಂ ವ್ರಜ ಎಂಬ ಸ್ಥಳದಲ್ಲಿ ಶರಣಾಗತಿ
ಎಂದು ತಿಳಿದುಕೊಳ್ಳಬಾರದು. ಶರಣಂ—
ಗೃಹಂ ರಕ್ಷಿತಾರಂ ಎಂಬ ಧಾತ್ವನುಸಾರ
ಅವಿದ್ಯಾ ನಿವರ್ತಕಂ ಏಕಂ—ಅದ್ವಿತೀ
ಯಂ ಮಾಂ ವ್ರಜ ಎಂದು ಅರ್ಥ ಮಾ
ಡಿಕೊಂಡರೆ ಪೂರ್ವೋತ್ತರ ವಾಕ್ಯಗಳು
ಸಂಗತಗಳಾಗುವವು (ಭಕ್ತ್ಯಾಮಾಮ
ಭಿಜಾನಾತಿ ಎಂಬ ಸ್ಥಳದಲ್ಲೂ ಸಹ,)
ಭಕ್ತಿಯಿಂದ ಪರಮಾತ್ಮನನ್ನು ತಿಳಿದರು
ತತೋ ಮಾಂ ತತ್ವತೋಜ್ಞಾತ್ವಾ ಎಂಬ ಉ
ತ್ತರಾರ್ಧದಿಂದ ಭಕ್ತಿ ಎಂದ ನಂತರ ತತ್ವ
ಜ್ಞಾನ ಬಂದು ಮುಕ್ತಿ ಎರುವದು ಎಂ
ದು ಭಗವಂತನೇ ಕಂಠರವೇಣಾ ಹೇಳಿರು
ತ್ತಾನೆ. ಮತ್ತು ನಾಲ್ಕು ಜನ ಭಕ್ತರ ಪೈಕಿ
ಜ್ಞಾನಿಯೇ ಅಧಿಕನು ಎನಿಸಿ ಸನಿಗ
ತಂಬಾ ಇಷ್ಟನು ನಾನು ಅವನಿಗೆ ಇಷ್ಟ
ನು ಎಂದು ಜ್ಞಾನಿಯನ್ನೇ ಪ್ರಶಂಸಿಸಿರು
ತ್ತಾನೆ. ತುಂಬಾ ಪ್ರಶಂಸಿಸಿ, ತೇಷಾಂ ಸ
ತತ ಯುಕ್ತಾನಾಂ ಭಜತಾಂ ಪ್ರೀತಿಪೂ
ರ್ವಕಂ । ದದಾಮಿ ಬುದ್ಧಿಯೋಗಂತಂ
ಯೇನಮಾಮುಪಯಾಂತಿತೇ॥ ಮಚ್ಚಿತ್ತಾ
ಮದ್ಗತಪ್ರಾಣಾ ಬೋಧಯಂತಃ ಪರಸ್ಪರಂ
ತಿ—ಇತ್ಯಾದಿ ಸೂಕ್ತಿಗಳಿಂದ ಭಗವಂತನೇ
ತನ್ನನ್ನ ಪ್ರೀತಿಪೂರ್ವಕ ಸೇವಿಸುವ ಭಕ್ತ
ರಿಗೆ ಜ್ಞಾನಯೋಗವನ್ನ ಕೊಡುತ್ತೇನೆ.
ಅದರಿಂದ ಮತ್ಸಾಯುಜ್ಯವನ್ನ ಹೊಂದಬ
ಹುದು ಎಂದು ಸ್ಪಷ್ಟೋಕ್ತ್ಯಾ ಜಾದ್ವೈತ
ಸಿದ್ಧಾಂತಕ್ಕೆ ಸರಿಪ್ರೋಷವನ್ನು ಮಾಡಿರು
ತ್ತಾನೆ. ಶ್ರೀಮದಾಚಾರ್ಯರು ಭಕ್ತಿಯ
ನ್ನು ಪರಿಗ್ರಹಿಸಿ, ಸ್ವಾಗ್ರೈಭಕ್ತ್ಯಾ ವಿಷ್ಣು

ಮನಾದಿಂ ಜಗದಾದಿಂ—ತಂಸಂ ಸಾ
ಧ್ವಾಂತವಿನಾಶಂ ಹರಿಮಾಡೆ ॥ ಎಂದು
ಸ್ತುತಿಸಿರುವರು. ಆದರೆ ಭಕ್ತಿಯು ಕರ್ಮ
ದಂತೆ ಜ್ಞಾನನಿಷ್ಠೆಗೆ ಸಾಧನವೆಂದು ತಿಳಿಯ
ಬೇಕು. ಭಕ್ತಿಯು ಕ್ರಿಯಾರೂಪವಾಗಿ
ಯೂ ಜ್ಞಾನರೂಪವಾಗಿಯೂ ಎರಡು ವಿಧ
ವಾಗಿರುತ್ತದೆ. ಕ್ರಿಯಾರೂಪವಾದ ಭಕ್ತಿ
ಯು, ಶ್ರವಣಂ ಕೀರ್ತನಂ ವಿಷ್ಣೋಃ
ರ್ಚನಂ ದಾಸ್ಯಂ—ಇತ್ಯಾದಿ ಭಾಗವತೋ
ಕ್ತರೀತಿಯಿಂದ ನವವಿಧವಾಗಿರುತ್ತೆ.
ಯಾದ ಭಕ್ತಿಯು ತೈಲಧಾರೆಯಂ
ಅವಿಚ್ಛಿನ್ನ ಸ್ಮೃತಿಸಂತಾನ ರೂಪವಾದ
ನಿದಿಧ್ಯಾಸದಲ್ಲಿ ಸೇರುತ್ತೆ. ಇದು ವಿನ
ದೇವತಾಂತರದಲ್ಲಿ ದ್ವೇಷಪೂರ್ವಕ ಅ
ಮತ ದೇವತೆಯಲ್ಲಿ ಪ್ರಕರ್ಷ ಸ್ನೇಹರೂ
ವಾದ ಭಕ್ತಿಯು ಶಾಸ್ತ್ರೀಯವಾಗಿರ
ದ. ಕ್ರಿ ಶ 7 ನೇ ಶತಮಾನದಿಂದ
ನಾರಾಯಣನು ಶೇಣೀ ಸಂಹಾರದ
ನೆ ಹಲ್ಲಿ ಭವತು ಭಗರ್ವ ಭಕ್ತಿರ್ದ್ವೈ
ವಿನಾ ಪುರುಷೋತ್ತಮ ॥ ಎಂದೂ
ಶತಮಾನದ ಭರ್ತೃಹರಿಯು ಮಹೇ
ನಾಜಗತಾಮಧೀಶ್ವರೆ ಜನಾರ್ದನೇ
ಗದಂತರಾತ್ಮನಿ ॥ ನ ವಸ್ತುಭೇದ ಪ್ರ
ಪತ್ತಿರಸ್ತಿಮ ತಥಾಪಿ ಭಕ್ತಿಸ್ತರುಣೇಂ
ಮಾಂ ॥ ಜಗದೀಶ್ವರನಾ
ವ ಹೇಶ್ವರನಲ್ಲಾಗಲಿ, ಅಂತರ್ಯಾ
ಮಿಯಾದ ವಿಷ್ಣುವಲ್ಲಾಗಲೀ ನನಗ
ಲ್ಲಿಷ್ಟೂ ಬೇದವಿರುವುದಿಲ್ಲವೆಂದೂ ಹೇ
ವ ಭಕ್ತಿಯೇ ಗ್ರಾಹ್ಯವಾದ ಮತ್ತು
ಚೀನ ಸಾಂಪ್ರದಾಯಸಿದ್ಧವಾದ ಭಕ್ತಿ
ಗಿರುತ್ತೆ. ಈ ರೀತಿ ಭಕ್ತಿ ಕರ್ಮಯೋಗ
ಳಿಂದ ಪ್ರಾಪ್ಯವಾದ ಜ್ಞಾನಯೋಗವು
ಕ್ತಿಗೆ ಸಾಕ್ಷಾತ್ಸಾಧನವೆಂದು ಸಿದ್ಧವಾ
ತು. ಜ್ಞಾನಯೋಗವೆಂಬಲ್ಲಿ ಜ್ಞಾನ
ಕ್ಕೆ ವ್ಯವಹಾರರೂಪಯೋಗಜ್ಞಾನವೆ
ಅರ್ಥ ಮಾಡಬಾರದು. ಇಂದ್ರಾ ಜ್ಞಾ
ಶಾಸ್ತ್ರದಿಂದಾಗಲಿ ಉಪನಿಷತ್ತುಗಳಿಂದ
ಲಿ ಹುಟ್ಟಬೇಕಾಗಿಲ್ಲ. ಸರ್ವಪ್ರಾಣಿ
ಸ್ವಾಭಾವಿಕವಾಗಿ ಆಹಾರವಿಹಾರ ನಿ
ಗಳಲ್ಲಿ ಪ್ರವೃತ್ತಿಯೂ, ತತ್ಸಾಧನಾನ
ವೂ ಇರುತ್ತೆ. ಅದು ಉಪದೇಶಗ
ಲ್ಲಿ ಪ್ರಕೃತ ಮುಕ್ತಿಗೆ ಸಾಧನವಾದ
ತ್ವಗ್ಬ್ರಹ್ಮೈಕ್ಯಜ್ಞಾನವು ಗುರೂಪ
ದಿಂದಲೂ ಉಪನಿಷದ್ಭಗವದ್ಗೀತಾದಿ
ಸ್ತ್ರಗಳಿಂದಲೂ ಉಂಟಾಗಬೇಕಾಗಿ

ಸತ್ತವರ ಕಣ್ಣು ಇರುವವರಿಗೆ

ಸತ್ತು ಹೋದವರ ಕಣ್ಣನ್ನು
ಬದುಕಿರುವ ಕುರುಡರ ಕ
ಕಳೆಮಾಡಿ ದೃಷ್ಟಿಯನ್ನು ತಂದು
ಬಹುದು. ಈ ವಿಧದ ಪ್ರಯೋಗ
ಯಶಸ್ವಿಯಾಗಿ ನಡೆಸಿ ಒಡೆಸ್ಸಾ
ಯ ಆಸ್ಪತ್ರೆಯ ಡಾ॥ ವಿ ಪಿ ಫಿ
ಎಂಬುವರು ಬಹಳ ಪ್ರಸಿದ್ಧಿಗೆ
ಬಂದಿರುವರು.

ಪೊಲೀಸಿನವರಿಗೂ ದಂಗೆಕೋರರಿಗೂ ಸಣ್ಣ ಯುದ್ಧ.

ಪಂಜಾಬ್ ಪ್ರಾಂತದಲ್ಲಿರುವ ಲೋಹಾರು ಎಂಬ ಮುಸಲ್ಮಾನ್ ಸಂಸ್ಥಾನದಲ್ಲಿ ಕಳೆದ ಬುಧವಾರ ಒಂದು ಸಣ್ಣ ಯುದ್ಧವು ನಡೆಯಿತು. ಈ ವಿಷಯದಲ್ಲಿ ಸಂಸ್ಥಾನದ ಅಧಿಕಾರಿಗಳು ಒಂದು ಪ್ರಕಟಣೆಯನ್ನು ಹೊರಡಿಸಿರುವರು. ಅದು ಕೆಳಗೆ ಕಂಡಂತೆ ಇರುವುದು:—

ಬಿಷ್ ಮುಖ್ತಾರ್ ಮತ್ತು ಇತರ ಕೆಲವು ಜನರು ಈ ಸಂಸ್ಥಾನದಿಂದ ಪರಾರಿಯಾಗಿದ್ದವರು ಬಿಹಾರ್ ಗ್ರಾಮಸ್ಥರ ಮತ್ತು ಜಾಠರ ಸಹಾಯದಿಂದ ಬಿಹಾರ್ ಪೋಲೀಸ್ ಸ್ಟೇಷನನ್ನು ಮುತ್ತಿಗೆ ಹಾಕಿ ಲೂಟಿ ಮಾಡಿದರು. ಒಬ್ಬ ಕಾನ್ಸ್ಟೇಬಲ್ ನು ಇತರ ಕಾನ್ಸ್ಟೇಬಲ್ಲುಗಳಿಗೆ ಬಹಳ ಗಾಯಗಳಾದವು. ದಂಗೆಕೋರರು ಪೋಲೀಸ್ ಸ್ಟೇಷನ್ನಿನಲ್ಲಿದ್ದ ಅನೇಕ ಆಯುಧಗಳನ್ನೂ ಸಾಮಗ್ರಿಗಳನ್ನೂ ತೆಗೆದುಕೊಂಡರು. ಈ ವಾರ್ತೆಯನ್ನು ಕೇಳಿ ಬಲವಾದ ಪೋಲೀಸರ ದಳವೊಂದು ಹೊರಟಿತು. ದಂಗೆಕೋರರು ಬಲವಾಗಿ ಪ್ರತಿಭಟಿಸಿದರು. ಇನ್ನೂರು ಗುಂಡುಗಳನ್ನು ಹೊಡೆದರು. ನೂರು ಜನ ಜಾಠರು ಗ್ರಾಮವನ್ನು ಕಾಯುತ್ತಿದ್ದರು. ಪೋಲೀಸಿನವರ ಸಂಖ್ಯೆಗಿಂತಲೂ ದಂಗೆಕೋರರ ಸಂಖ್ಯೆಯೇ ಹೆಚ್ಚಾಗಿದ್ದುದರಿಂದ ಅವರು ತಪ್ಪಗೆ ಹಿಂದಕ್ಕೆ ತೆರಳಬೇಕಾಯಿತು.

ಸಂಸ್ಥಾನದ ದಿವಾನರು ತಾವೇ ಆ ಸ್ಥಳದ ಪರಿಸ್ಥಿತಿಯನ್ನು ಪರಿಶೀಲಿಸಲು ಹೋದರು. ಅವರ ಮೇಲೆಯೂ ಗುಂಡಿನ ಸುರಿಮಳೆ ಬಿದ್ದವು. ಗುಂಡು ಹಾರಿಸುವಂತೆ ಅವರು ಪೋಲೀಸಿನವರಿಗೆ ಆಜ್ಞೆ ಮಾಡಿದರು. ನಾಲ್ಕು ಗಂಟೆಗಳ ಕಾಲ ಕದನವು ಆಯಿತು. ಕಡೆಗೂ ದಂಗೆಕೋರರು ಬಿಹಾರ್ ಗ್ರಾಮಕ್ಕೆ ಬೆಂಕಿ ಹಚ್ಚಿ ಓಡಿಹೋದರು. ದಿವಾನರು ಆ ಗ್ರಾಮವನ್ನು ಪುನಃ ಆಕ್ರಮಿಸಿದರು. ಇಲಾಖೆಯ ಜನರು ಯಾರೂ ಮೃತ ಪಡಲಿಲ್ಲ. ದಂಗೆಕೋರರ ಒಬ್ಬನು ಗುಂಡಿನಿಂದ ಸುಡಲ್ಪಟ್ಟನು. ಪರಿಸ್ಥಿತಿಯು ಈಗ ಶಾಂತವಾಗಿದೆ. ದಂಗೆಕೋರರು ಹೊತ್ತುಕೊಂಡುಹೋದ ಸಾಮಗ್ರಿಗಳು ಇನ್ನೂ ಸಿಕ್ಕಿಲ್ಲ.

ಕಳೆದ ವರ್ಷ ಈ ಸಂಸ್ಥಾನದಲ್ಲಿ ಜಾಠ ಜನಾಂಗದವರು ದೊಡ್ಡ ಆಂದೋಲನವನ್ನು ಎಬ್ಬಿಸಿದರು. ಅವರು ಕಂದಾಯವನ್ನು ಕೊಡುವುದಿಲ್ಲವೆಂದು ಹಠ ಹಿಡಿದರು. ಕಾನೂನು ಕಟ್ಟಳೆಗಳನ್ನು ತಿರಸ್ಕರಿಸಿದರು. ದಂಗೆಕೋರರ ಇಷ್ಟದಂತೆಯೇ ನಡೆಸಲು ಒಂದು ಸ್ವತಂತ್ರ ಸರ್ಕಾರವನ್ನೂ ಸ್ಥಾಪಿಸಲು ಪ್ರಯತ್ನಿಸಿದರು. ಸರ್ಕಾರದವರನ್ನು ಉಪೇಕ್ಷೆ ಮಾಡುವ ರೀತಿಯ ಒಂದು ಚಳುವಳಿಯನ್ನು ಹೂಡಿದರು. ಇದರಲ್ಲಿ ಶಸ್ತ್ರಗಳನ್ನೂ ಉಪಯೋಗಿಸಿದರು. ಈ ಜಾಠರ ಚಳುವಳಿಯು ಬಹಳ ದೊಡ್ಡದು. ದೊಡ್ಡ ಸ್ವರೂಪದಲ್ಲಿ ಬೇರೆ ಕಡೆ ಆರಂಭವಾಯಿತು. ಈ ಸಂಸ್ಥಾನಕ್ಕೂ ಬಂದಿತು. ಎಷ್ಟು ಹೇಳಿದರೂ ಈ ಸಂಸ್ಥಾನದ ಜಾಠರು ಕಂದಾಯವನ್ನು ಕೊಡಲು ಒಪ್ಪಲಿಲ್ಲ. ಆಗ ಸಂಸ್ಥಾನದ ನವಾಬರು ಒಂದು ಸಮಿತಿಯನ್ನು ಕೂಡಿಸಿದರು. ಜಾಠರ ಮುಖಂಡರುಗಳನ್ನು ಕರೆಸಿದರು. ಪೊಲಿಟಿಕಲ್ ಏಜೆಂಟರಾದ ಮಿ|| ವಿಲ್ಬರ್ ಫ್ಲೆಚರ್ ರವರನ್ನು ಬರಮಾಡಿಕೊಂಡರು. ಆರ್ಥಿಕ ಮುಗ್ಗಟ್ಟಿನ ಕಾರಣದಿಂದ ಕಂದಾಯವನ್ನು ಬಹುಮಟ್ಟಿಗೆ ಕಡಿಮೆ ಮಾಡಿದ್ದುದಾಗಿ ನವಾಬರು ಹೇಳಿದರು. ಈ ರಿಯಾಯಿತಿಯು ಜಾಠರಿಗೆ ಸಮಾಧಾನವಾಗಲಿಲ್ಲ. ಕಾನೂನನ್ನು ಉಲ್ಲಂಘಿಸುತ್ತಲೇ ಇದ್ದರು. ಅನಂತರ 5000 ಶಸ್ತ್ರಸಜ್ಜಿತರಾದ ಜಾಠರು ಬೆಹಾರ್ ಗ್ರಾಮದಲ್ಲಿ ಸೇರಿ ಸಂಸ್ಥಾನದ ಪೋಲೀಸಿನವರಮೇಲೆ ಬೀಳುವುದಾಗಿ ಬೆದರಿಸಿದರು. ಅನಂತರ ಬ್ರಿಟಿಷ್ ಇಂಡಿಯಾ ಸೈನ್ಯದ ಸಹಾಯದೊಡನೆ ಆ ಗುಂಪನ್ನು ಚದರಿಸಲಾಯಿತು. ಪೋಲೀಸಿನವರು ಗುಂಡನ್ನು ಹಾರಿಸಿದರು. ಮೂರು ಜನ ಜಾಠರು ಸತ್ತರು. ಅನೇಕರಿಗೆ ಗಾಯಗಳಾದವು.

ಭಾರತೀಯ ಜವಳಿ ಕೈಗಾರಿಕೆಯ ಸ್ಪರ್ಧೆ.

ಪಾಶ್ಚಾತ್ಯ ದೇಶಗಳ ಮಿಲ್ಲುಗಳಲ್ಲಿ ತಯಾರಾಗುವ ಸಾಮಗ್ರಿಗಳಿಂದ ನಮ್ಮ ದೇಶದ ಪದಾರ್ಥಗಳ ವ್ಯಾಪಾರಕ್ಕೆ ತೊಂದರೆಯುಂಟಾಗಿರುವುದು ಪ್ರಸಿದ್ಧವಾದ ವಿಷಯ. ಆದರೆ ಒಂದು ಜಾಗದಲ್ಲಾದರೂ ಭಾರತೀಯ ಕೈಗಾರಿಕೆಯು ಬ್ರಿಟಿಷ್ ಕೈಗಾರಿಕೆಗಳನ್ನು ಸೋಲಿಸಿದೆ ಎಂದನ್ನಬಹುದು. ಬ್ರಿಸ್ಟಲ್ ಎಂಡ್ ಕಂಪೆನಿಯವರು ಒಂದು ಜ್ಯೂಟ್ ಕಾರ್ಖಾನೆಯನ್ನು ನಡಸುತ್ತಿದ್ದರು. ಹಿಂದೂಸ್ಥಾನದ ಜ್ಯೂಟ್ ಮಿಲ್ಲುಗಳ ಸ್ಪರ್ಧೆಯನ್ನು ತಡೆಯಲಾರದ ಮೇಲ್ಕಂಡ ಕಂಪೆನಿಯವರು ತಮ್ಮ ಗಿರಣಿಯನ್ನು ಮುಚ್ಚಲು ನಿರ್ಧರಿಸುತ್ತಾರೆ. ಸುಮಾರು ಇನ್ನೂರು ಜನರಿಗೆ ಕೆಲಸ ಹೋಗಿರುತ್ತದೆ.

ಮತಗಳ ಸಮ್ಮೇಳನ

ಶ್ರೀರಾಮಕೃಷ್ಣ ಪರಮಹಂಸರ ಶತಮಾನೋತ್ಸವದ ಪ್ರಯುಕ್ತ ಬೊಂಬಾಯಿನಲ್ಲಿ ಈ ತಿಂಗಳು 7 ರಿಂದ 9 ನೇ ತಾ|| ವರೆಗೆ ನಡೆಯುವ ಮತಗಳ ಸಮ್ಮೇಳನಕ್ಕೆ ಸರ್ ಎಸ್. ರಾಧಾಕೃಷ್ಣನ್‌ರವರು ಅಧ್ಯಕ್ಷರಾಗುವರು.

ನಾಲಕ್ಕುವರೆ ತಿಂಗಳ ಉಪವಾಸ

ಬಂಗಾಳದ ರಾಜಕೀಯ ಖೈದಿಯಾದ ಪ್ರಫುಲ್ಲ ನಾರಾಯಣನು ನಾಲ್ಕೂವರೆ ತಿಂಗಳಿಂದ ಉಪವಾಸ ಮಾಡುತ್ತಿರುವನು. ಖೈದಿಗಳಿಗೆ ಇರತಕ್ಕ ಕೆಲವು ಕುಂದು ಕೊರತೆಗಳ ವಿಷಯದಲ್ಲಿ ಇವನ ಅಹವಾಲುಗಳನ್ನು ಸರ್ಕಾರದವರು ಮನ್ನಿಸಿಲ್ಲ. ಉಪವಾಸ ಬಿಟ್ಟಿಲ್ಲದ ಏನೂ ಮಾಡಲಾಗುವುದಿಲ್ಲವೆಂದು ಹೇಳುತ್ತಾರೆ.

ಮೂರು ದಿನಗಳ ನಿದ್ದೆ.

ನೇತ್ರಕೋಣ ಎಂಬಲ್ಲಿ ಒಬ್ಬಾಕೆಯು ೭೭ ಗಂಟೆಗಳ ಕಾಲ ದೀರ್ಘವಾದ ನಿದ್ರೆಯನ್ನು ಮಾಡುತ್ತಿದ್ದಳು. ಆಕೆಯ ವ್ಯಾಧಿಯನ್ನು ಯಾರೂ ಕಂಡು ಹಿಡಿಯಲಾಗಲಿಲ್ಲ. ಅನಂತರ ಸತ್ತುಹೋದಳು.

ಅಬಿಸೀನಿಯನರ ಧೈರ್ಯಸ್ಥೈರ್ಯ

ಅಬಿಸೀನಿಯ ಚಕ್ರವರ್ತಿಯಾದ ನೆಗಸ್ ರವರು ಅಜ್ಞಾತರಾಗಿದ್ದರು. ಈಗ ರಾಜಧಾನಿಯಾದ ಅಡಿಸ್ ಅಬಾಬಾಕ್ಕೆ ಬಂದಿರುವರು. ಎಥಿಯೋಪಿಯವು ಸೋತಿಲ್ಲವೆಂದು ಅವರು ಹೇಳುತ್ತಾರೆ. ಇಟಲಿಯನರು ಹಿಂಡೆನ್‌ಬರ್ಗ್ ಲೈನನ್ನು ಹಿಡಿದಿರುವರು. ಯುದ್ಧದ ಮುನ್ನ ಎಥಿಯೋಪಿಯನ್ನರ ಮೇಲೆ ಬಾಂಬುಗಳು ಹಾಕಲ್ಪಟ್ಟವು. ವಿಷವಾಯುಗಳು ಪ್ರಯೋಗಿಸಲ್ಪಟ್ಟವು. ವಿಷವಾಯುವೂ ಸಹ ಉಪಯೋಗಿಸಲ್ಪಟ್ಟಿತು. ಕೆಲವು ಜನ ಅಬಿಸೀನಿಯನ್ನರು ಮುಖವಾಡಗಳನ್ನು ಹಾಕಿಕೊಂಡಿದ್ದರಿಂದ ವಿಷವಾಯುವಿನ ಶಕ್ತಿ ನಡೆಯಲಿಲ್ಲ. ಇತರ ಅನೇಕರು ಹತರಾದರು. ಹೀಗೆ ಬದುಕಿ ಉಳಿದ ಒಬ್ಬ ಅಬಿಸೀನಿಯಾ ಸೈನಿಕನು ಹೇಳುವುದೇನೆಂದರೆ—ಎರಡು ದಿನ ಸತತವಾಗಿ ಅಬಿಸೀನಿಯನರು ಇಟಲಿಯನವರನ್ನು ಸೋಲಿಸಿದರು. ಮೂರನೇ ದಿವಸವೂ ಜಯಶೀಲರಾಗಿಯೇ ಇದ್ದರು. ಅವರ ಹೊತ್ತಿಗೆ ಅಕಸ್ಮಾತ್ತಾಗಿ ಆಕಾಶವು ಕತ್ತಲೆಯಿಂದ ತುಂಬಿತು. ನೂರಾರು ವಿಮಾನಗಳಿಂದ ಬಾಂಬುಗಳು ಹಾಕಲ್ಪಟ್ಟವು. ಮತ್ತು ವಿಷವಾಯುವು ಬಿಡಲ್ಪಟ್ಟಿತು. ಮುಖವಾಡವನ್ನು ಹಾಕಿಕೊಳ್ಳದ ಇದ್ದವರೆಲ್ಲರೂ ಹತರಾದರು. ಅದನ್ನು ಹಾಕಿಕೊಂಡಿದ್ದ ಕೆಲವರು ಬದುಕಿಕೊಂಡರು.

ಇಟಲಿಯನರು ಕ್ರಮ ಕ್ರಮವಾಗಿ ಅನೇಕ ಪ್ರಾಂತಗಳನ್ನು ಆಕ್ರಮಿಸುತ್ತಿದ್ದಾರೆ. ಅಡಿಸ್ ಅಬಾಬಾದಿಂದ 70 ಮೈಲಿ ದೂರದಲ್ಲಿರುವ ವಾರ್ಡರ್ ಪರ್ವತವನ್ನು ಸ್ವಾಧೀನಪಡಿಸಿಕೊಂಡರು. ಇದರಲ್ಲಿ ಸ್ವಲ್ಪ ಯುದ್ಧವು ನಡೆದಿರಬಹುದೆಂದು ಊಹಿಸಲ್ಪಟ್ಟಿದೆ. ಆದ್ದರಿಂದ ಅಬಿಸೀನಿಯದ ಸೈನ್ಯವೆಲ್ಲಾ ಆ ಕಡೆ ಓಡಿಸಲಾಗಿದೆ. ಅವರ ಜನಗಳ ಹೋಗತಕ್ಕ ಆಹಾರ ಸಾಮಗ್ರಿಗಳ ಬಂಡಿಗಳು ಬಾಗಿದೆ. ಸೋಬ್ಲಾಂಡ ಪರ್ವತವನ್ನು ಇಟಲಿಯವರು ನಿರಾಯಾಸವಾಗಿ ಆಕ್ರಮಿಸಿ ಹತ್ತು ಸಾವಿರ ಸೈನ್ಯದೊಡನೆ ಮುಂದಕ್ಕೆ ನುಗ್ಗುತ್ತಿರುವರು. ಅವರನ್ನು ಎದುರಿಸುವವರೇ ಇಲ್ಲ.

[illegible] ಇವರ ವಿಮಾನಗಳು ಎಥಿಯೋಪಿಯನರ ವಿಮಾನ ನಿಲ್ದಾಣದ ಮೇಲೆ ಹಾರಿಹೋದವು. ಅಲ್ಲಿ ಬರಿದಾದ ಪ್ರದೇಶಗಳ ಮೇಲೆ ಗುಂಡಿನ ಮಳೆಯನ್ನು ಸುರಿಸಿದರು.

ಸರ್ಕಾರದ ಮೇಲೆ ಪೌರಸಭೆಯ ದಾವಾ

ಪುರೂಲಿಯಾ ಎಂಬಲ್ಲಿಯ ಪೌರಸಭೆಯವರು ಹರಿಜನ ಸಂಸ್ಥೆಗೆ ಧನಸಹಾಯವನ್ನು ಮಾಡಿದ್ದರು. ಅದನ್ನು ಸರ್ಕಾರದವರು ಆಕ್ಷೇಪಿಸಿದ್ದರು. 171 ರೂ. ವೆಚ್ಚವಾಗಿತ್ತು. ಅದನ್ನು ಪೌರಸಭಾ ಸದಸ್ಯರೇ ಕೊಡಬೇಕೆಂದು ಸರ್ಕಾರದವರು ತೀರ್ಮಾನಿಸಿದ್ದರು. ಇದರ ಮೇಲೆ ಕೋರ್ಟಿನಲ್ಲಿ ದಾವಾ ಆಗಿದೆ.

ಹೆಂಗಸು ಗಂಡಸಾದಳು.

ಸ್ಟಾಂಕಾ ಕೌಚ್ ಕೋವಾ ಎಂಬೊಬ್ಬ ಯುವತಿ. ಈಕೆಯು ಒಳ್ಳೇ ಆಟಗಾರಳೆಂದು ಪ್ರಸಿದ್ಧಳಾಗಿದ್ದಳು. ಈಚೆಗೆ ಪ್ರೇಗ್ ನಗರದಲ್ಲಿ ಒಂದು ಶಸ್ತ್ರ ಚಿಕಿತ್ಸೆ ನಡೆಯಿತು. ಅನಂತರ ಅವಳು ಗಂಡಸಾದಳು. ಆಕೆಯ ಹೊಸ ಬದಲಾವಣೆಯು ಪೂರ್ತಿಯಾಗಲು ಇನ್ನೆರಡು ಆಪರೇಷನ್ ಆಗಬೇಕು. ಕೆಲವು ವಾರಗಳು ಆಸ್ಪತ್ರೆಯಲ್ಲೇ ಇರಬೇಕು. ಈಗ ಆತನು ಲಕ್ಷಣವಾದ ಯುವಕನಾಗಿದ್ದಾನೆ. ಆತನು ವ್ಯವಸಾಯ ಮಾಡುವುದಿಲ್ಲ. ಮೊಗೆಬತ್ತಿ ನೇಯುವುದಿಲ್ಲ. ಗಡ್ಡವನ್ನು ಬೆಳಸಲು ಉತ್ಸುಕನಾಗಿದ್ದಾನೆ.

ಮಂಗಗಳಿಗೆ ಮಾತು ಕಲಿಸುವದು

ಮಂಗಗಳಿಗೆ ಮಾತನಾಡುವುದನ್ನು ಕಲಿಸುವ ದೊಡ್ಡ ಪ್ರಯತ್ನವು ಲಂಡನ್ ಮೃಗಶಾಲೆಯಲ್ಲಿ ನಡೆಯುತ್ತಿದೆ. ಮನುಷ್ಯನು ಮಾತನಾಡುವುದನ್ನು ಕಲಿಯುವ ಮುಂಚೆ ಉಪಯೋಗಿಸುತ್ತಿದ್ದ ಸಂಜ್ಞೆಗಳನ್ನೇ ಉಪಯೋಗಿಸಲಾಗಿದೆ. ಎರಡು ತಿಂಗಳಿಂದ ಪಾಠ ನಡೆಯುತ್ತಿದೆ. ವಿಶೇಷ ಅಭಿವೃದ್ಧಿ ಹೊಂದಿಲ್ಲ. ಆಹಾರ ಕಡೆಯಿಂದ ತಮ್ಮ ತಿಂಡಿ ಬರುತ್ತಿದೆಯೆಂಬ ವಿಷಯವನ್ನು ಹೇಳಿದಾಗ ಮಾತ್ರ ಈ ಮಂಗಗಳಿಗೆ ಗೊತ್ತಾಗುತ್ತದೆ. ಪಾಠಗಳನ್ನು ಬಹಳ ಹೊತ್ತು ಹೇಳಿದರೆ ಈ ಕೋತಿಗಳಿಗೆ ಬೇಜಾರಾಗುತ್ತಿದೆಯಂತೆ. ಒಂದು ಸಲಕ್ಕೆ ಹತ್ತು ನಿಮಿಷಕ್ಕಿಂತಲೂ ಹೆಚ್ಚಾಗಿ ಶಿಕ್ಷಣವನ್ನು ಕೊಡಕೂಡದು.

ವಿಚಿತ್ರ ಮನುಷ್ಯ.

ಪೆನ್ಸಿಲ್ವೇನಿಯಾ ಎಂಬಲ್ಲಿ ಸುಮಾರು [illegible] ವರ್ಷ ವಯಸ್ಸಿನ ಜಾರ್ಜ್ ಗೋಸ್ಟಿ ಎಂಬುವನು ಶಾಖದ ಅಳತೆಗೆ ವಿಚಿತ್ರ ಪ್ರಮಾಣವನ್ನು ಸೂಚಿಸುತ್ತಾನೆ. ವಾತಾವರಣವು ಶಾಖವಾಗಿದ್ದರೆ ಆತನ ಶರೀರವು ಶೀತಲವಾಗುವುದು. ಶೀತವಾಗಿದ್ದರೆ ಶರೀರವು ಉಷ್ಣವಾಗುವುದು. ಇವನ ಪರಿಸ್ಥಿತಿಯು ಡಾಕ್ಟರುಗಳಿಗೆ ಆಶ್ಚರ್ಯವನ್ನೂ ವಿಸ್ಮಯವನ್ನೂ ಉಂಟುಮಾಡಿದೆ.

ಮೊದಲನೆಯ ವಿಧವಾ ವಿವಾಹ

ತಾ|| 19-4-36ನೇ ದಿವಸ ಮೈಸೂರಿನ ಬಿ. ಎಂ. ಉತ್ತರಕರ್ ಇವರ ಮುಂದಾಳತ್ವದಲ್ಲಿ ಶಿವಮೊಗ್ಗದ ಶಿವಗಿರಿ ಕ್ಷೇತ್ರದಲ್ಲಿ ಮೈಸೂರಿನ ಬಗರೆ ವಂಕೋಜಿರಾವ್ ಇವರಿಗೆ ಶಿವಮೊಗ್ಗದ ಮುಂಟೇ ರವರ ವಿಧವೆ ಆಗಿದ್ದ ತುಳಜಾಬಾಯಿಯನ್ನು ಕೊಟ್ಟು ವೈದಿಕ ಬ್ರಾಹ್ಮಣರ ಸಮ್ಮುಖದಲ್ಲಿ ಶಾಸ್ತ್ರೋಕ್ತವಾಗಿ, ಅಗ್ನಿಸಾಕ್ಷಿಯಾಗಿ ಮದುವೆಯು ನಡೆಯಿತು. ಅನೇಕ ಜನ ದೊಡ್ಡ ಮನುಷ್ಯರೂ ಬ್ರಾಹ್ಮಣರೂ ಶಿವಮೊಗ್ಗದ ಭಾವುಸಾರ ಕ್ಷತ್ರಿಯರೆಲ್ಲರೂ ಅಕ್ಕಪಕ್ಕದ ಊರಿನವರೂ ಕುಲಸ್ಥರು ಬಂದಿದ್ದರು. ಮದುವೆ ಕಾರ್ಯವು ಬಹು ವಿಜೃಂಭಣೆಯಿಂದ ನಡೆಯಿತು. ಇದು ಭಾವುಸಾರ ಕ್ಷತ್ರಿಯರಲ್ಲಿ ಮೊದಲನೇ ವಿಧವಾ ವಿವಾಹವೆಂದಾಗಿ ಒಬ್ಬ ವಾರ್ತಾದಾರರು ಬರೆಯುತ್ತಾರೆ.

ಸಾಧ್ವಿ

೪-೫-೩೬ ನೇ ಸೋಮವಾರ

ನಾಗರಿಕ ಹಕ್ಕುಗಳ ರಕ್ಷಣೆ.

ಜನಾಂಗದ ಪ್ರಾಥಮಿಕ ಹಕ್ಕುಗಳನ್ನು ರಕ್ಷಣೆ ಮಾಡಲು ಒಂದು ಸಂಘವನ್ನು ಸ್ಥಾಪಿಸಬೇಕೆಂದು ಪಂಡಿತ ಜವಾಹರಲಾಲರು ಪರ್ಯಾಲೋಚಿಸುತ್ತಿದ್ದಾರೆ ಇದಕ್ಕೆ ಎಲ್ಲಾ ಮುಖಂಡರುಗಳೂ ಸಹಾನುಭೂತಿಯನ್ನು ತೋರಿಸುತ್ತಿರುವರು

ನಾಗರಿಕ ಹಕ್ಕುಗಳನ್ನು ರಕ್ಷಿಸಿಕೊಳ್ಳುವುದು ಸಮಸ್ತ ದೇಶೀಯರ ಪ್ರಥಮ ಕರ್ತವ್ಯ. ನಾಗರಿಕ ಹಕ್ಕುಗಳಲ್ಲಿ ಮುಖ್ಯವಾದವು ಯಾವುವೆಂದರೆ, ಯಾವ ವಿಧವಾದ ಅಡ್ಡಿ ಆತಂಕಗಳೂ ಇಲ್ಲದೆ ಸಂಚರಿಸುವುದು, ವ್ಯಕ್ತಿಸ್ವಾತಂತ್ರ್ಯ, ಭಾಷಣಸ್ವಾತಂತ್ರ್ಯ, ಸಭಾಸ್ವಾತಂತ್ರ್ಯ ಮತ್ತು ಲೇಖನಸ್ವಾತಂತ್ರ್ಯ. ಈ ಹಕ್ಕುಗಳು ಎಲ್ಲಾ ನಾಗರಿಕ ಜನಾಂಗಗಳಲ್ಲಿಯೂ ಅಲ್ಲಿನ ಸರ್ಕಾರಗಳಿಂದ ಅಂಗೀಕರಿಸಲ್ಪಟ್ಟಿವೆ ಇವುಗಳನ್ನು ಸಾಮಾನ್ಯವಾಗಿ ಅಧಿಕಾರಿವರ್ಗದವರು ಅತಿಕ್ರಮಿಸಲಾರರು ಇವನ್ನು ಸಂಪಾದಿಸಲು ಆ ಜನಾಂಗಗಳೂ ಬಹಳವಾದ ತ್ಯಾಗಗಳನ್ನು ಮಾಡಿವೆ. ಇಂಗ್ಲೆಂಡಿನಲ್ಲಿ ಈ ಪ್ರಾಥಮಿಕ ಹಕ್ಕುಗಳು ಪರಿಪೂರ್ಣವಾದ ಸ್ಥಿತಿಯಲ್ಲಿವೆ ವ್ಯಕ್ತಿಯ ಸ್ವಾತಂತ್ರ್ಯಕ್ಕೆ ಅಡ್ಡಿಯುಂಟಾಗುವ ಕಾರ್ಯವನ್ನು ಮಾಡಲು ಆಳರಸರಿಗೆ ಎಳ್ಳಷ್ಟೂ ಅವಕಾಶ ಕೊಡುವುದಿಲ್ಲ.

ನಮ್ಮ ದೇಶದಲ್ಲಿಯಾದರೋ ಮಾತೆತ್ತಿದರೆ ನಿರ್ಬಂಧಗಳು ಬರುತ್ತವೆ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಉದ್ಯುಕ್ತರಾಗಿರುವವರ ಮೇಲಂತೂ ಈ ನಿರ್ಬಂಧಗಳು ನಾನಾ ರೂಪದಿಂದ ಬಂದು ಬೀಳುತ್ತವೆ ಮೊದಲನೆಯದಾಗಿ ಜನರ ಚಲನವಲನಗಳಿಗೇ ನಿರ್ಬಂಧವು ಹಾಕಲ್ಪಡುತ್ತದೆ ಇದಕ್ಕೆ ಶ್ರೀ ಸುಭಾಸ್‌ಚಂದ್ರರೇ ಸಾಕ್ಷಿ ಇದಲ್ಲದೆ ಭಾಷಣಮಾಡಕೂಡದೆಂಬ ನಿರ್ಬಂಧವು ಸಹಸ್ರ ಸಂದರ್ಭಗಳಲ್ಲಿ ಹಾಕಲ್ಪಟ್ಟಿದೆ ಮತ್ತು ಸಂಘಗಳು ಅಕ್ರಮಕೂಟಗಳೆಂದು ಸಾರಲ್ಪಟ್ಟಿವೆ ಪುಸ್ತಕಗಳೂ, ಪ್ರಕಟನೆಗಳೂ, ಪತ್ರಿಕೆಗಳೂ ಹಿಂಸಿಸಲ್ಪಟ್ಟಿವೆ. ಇದರಿಂದ ಸಹಜವಾಗಿ ನಡೆಯುವ ಚಳವಳಿಗೆ ವಿಶೇಷ ಅಡಚಣೆಯುಂಟಾಗಿದೆ

ಆದ್ದರಿಂದ ಇವನ್ನು ತಡೆಗಟ್ಟಿ ಮನುಷ್ಯಸಾಮಾನ್ಯದ ಹಕ್ಕುಬಾಧ್ಯತೆಗಳಿಗೆ ಅಪೋಹಬಾರದಂತೆ ಏರ್ಪಡಿಸುವುದಕ್ಕಾಗಿ ಪಂಡಿತರವರು ಈ ಸಂಘವನ್ನು ಸ್ಥಾಪಿಸಬೇಕೆಂದಿರುವರು ಈ ಉದ್ದೇಶವು ಘನವಾದುದು ವಿಶೇಷ ಸ್ವಾರ್ಥತ್ಯಾಗವೂ, ಧೈರ್ಯಸ್ಥೈರ್ಯಗಳೂ ಬೇಕಾಗಿರುವವು. ಅವರ ಪ್ರಯತ್ನವು ಯಶಸ್ವಿಯಾಗಲೆಂದು ಹಾರೈಸೋಣ

ಶಿಕ್ಷಣಪದ್ಧತಿಯ ಸುಧಾರಣೆ

ಶಿಕ್ಷಣಪದ್ಧತಿಯನ್ನು ವಿಮರ್ಶಿಸಿ ಸೂಕ್ತವಾದ ಬದಲಾವಣೆಗಳನ್ನು ಸೂಚಿಸಲು ಸರ್ಕಾರದವರು ಒಂದು ಸಮಿತಿಯನ್ನು ಮೂರು ವರ್ಷಗಳ ಕೆಳಗೆ ನೇಮಿಸಿದ್ದರು. ಅದಕ್ಕೆ ಹದಿನೆಂಟು ಜನರು ಸದಸ್ಯರು. ಶ್ರೀ॥ ಎಸ್. ಎನ್. ಸುಬ್ಬರಾಯರು ಅಧ್ಯಕ್ಷರು. ಈ ಸಮಿತಿಯವರು ಕೆಳಗೆ ಕಂಡ ಸಲಹೆಗಳನ್ನು ಕೊಟ್ಟಿರುವರು—

ಸಾಮಾನ್ಯ ವಿದ್ಯಾಭ್ಯಾಸವಲ್ಲದೆ ಕಸುಬಿನ ವಿದ್ಯಾಭ್ಯಾಸವನ್ನೂ ಪ್ರತ್ಯೇಕವಾಗಿ ಕೊಡಬೇಕು ಸ್ಕೂಲುಗಳಲ್ಲಿ ಮೂರು ಭಾಗವಿರಬೇಕು. ಪ್ರೈಮರಿ, ಮಿಡ್ಲ್ ಮತ್ತು ಹೈಸ್ಕೂಲುಗಳು ವಿದ್ಯಾರ್ಥಿಗಳಿಗೂ ಅವರ ತಂದೆತಾಯಿಗಳಿಗೂ ಸಲಹೆಯನ್ನು ಕೊಟ್ಟು ಯಾವ ಪಾಠಕ್ರಮವನ್ನು ಯಾವ ವಿದ್ಯಾರ್ಥಿಯು ಅನುಸರಿಸಬೇಕೆಂಬುವನ್ನೂ, ಯಾವ ಮಾರ್ಗವಲ್ಲಿ ಉದ್ಯೋಗವು ದೊರೆಯಬಹುದೆಂಬುವನ್ನೂ ತಿಳಿಸಲು ಉಪಸಮಿತಿಗಳನ್ನು ಏರ್ಪಡಿಸಬೇಕು ವಿದ್ಯಾಭ್ಯಾಸದ ಕ್ರಮದಲ್ಲಿ ಹಳ್ಳಿಗಾಡಿನ ಸ್ಕೂಲುಗಳಿಗೂ ಪಟ್ಟಣಗಳ ಸ್ಕೂಲುಗಳಿಗೂ ಭೇದವನ್ನು ಉಂಟುಮಾಡುವ ಅವಶ್ಯಕತೆಯಿಲ್ಲ ಕಾಲೇಜುವರೆಗಿನ ವಿದ್ಯಾಭ್ಯಾಸದ ಅವಧಿಯು ಹನ್ನೆರಡು ವರ್ಷವಿರಬೇಕು ಇದರಲ್ಲಿ ಪ್ರೈಮರಿ ಸ್ಕೂಲು ಆರು ವರ್ಷ, ಮಿಡ್ಲ್ ಸ್ಕೂಲು ಮೂರು ವರ್ಷ ಮತ್ತು ಹೈಸ್ಕೂಲು ಮೂರು ವರ್ಷ. ಭಾಷೆಗೆ ಸಂಬಂಧಪಡದ ಎಲ್ಲಾ ಪಾಠಗಳೂ ಮಾತೃಭಾಷೆಯಲ್ಲಿಯೇ ಕಲಿಸಲ್ಪಡಬೇಕು. ಮಿಡ್ಲ್ ಮತ್ತು ಹೈಸ್ಕೂಲುಗಳಲ್ಲಿ ಪರೀಕ್ಷೆಗಳು ಲಿಖಿತ ಮೂಲಕವೂ ಪ್ರಯೋಗ ಮೂಲಕವೂ ಆಗಬೇಕು ಪ್ರೈಮರಿ ಪರೀಕ್ಷೆಗಳು, ಬರವಣಿಗೆ ಮತ್ತು ಬಾಯಿಪಾಠಗಳ ಮೂಲಕ ನಡೆಯಬೇಕು ಈ ಸಲಹೆಗಳು ಬಹಳ ಉಪಯುಕ್ತವಾದುವು ಮತ್ತು ಇದುವರೆಗೆ ಬಹಳ ದಿನಗಳಿಂದಲೂ ಶಿಕ್ಷಣ ಧುರೀಣರು ಕಾತುರತೆಯಿಂದ ನಿರೀಕ್ಷಿಸುತ್ತಿದ್ದವು ಈ ಸಲಹೆಗಳು ಕಾರ್ಯರೂಪದಲ್ಲಿ ಒಂದು ಫಲಕಾರಿಯಾಗಲೆಂದು ನಾವು ಕೋರುತ್ತೇವೆ

ಗೀತಾಪ್ರಚಾರಿಣೀ ಸಭಾ

ಮೈಸೂರು ಗೀತಾಪ್ರಚಾರಿಣೀ ಸಭೆಯವರು ಶ್ರೀ ಶಂಕರ ಜಯಂತಿ ಪ್ರಯುಕ್ತ ದೊಡ್ಡಪೇಟೆ ಜಗ್ಗುಲಾಲ್‌ರವರ ಧರ್ಮಶಾಲೆಯಲ್ಲಿ ಕಳೆದ ಭಾನುವಾರದಿಂದ ಭಜನೆ, ಪೂಜೆ, ಉಪನ್ಯಾಸ ಮುಂತಾದುವುಗಳನ್ನು ನಡೆಸುತ್ತಿರುವರು ಮುಂದಿನ ಗುರುವಾರದವರೆಗೆ ಈ ಉತ್ಸವವು ನಡೆಯುವುದು

ಅಂಗ್ಲೋ-ಇಂಡಿಯನ್ ವಸಾಹತಿನ ಪ್ರಶ್ನೆ

(ಬರೆದು ಬಂದುದ್ದು)

—

ತಾ॥ 21–4–1936 ರ ಪತ್ರಿಕೆಯಲ್ಲಿ 'ವೈಟ್ ಫೀಲ್ಡ್' ಎಂಬ ವಸಾಹತದ ಆದರ್ಶವನ್ನು ಕುರಿತು ಬಹುದೀರ್ಘವಾದ ಒಂದು ಲೇಖನವನ್ನು ಮದ್ರಾಸ್ ಮೇಲ್ ಪತ್ರಿಕೆಯು ಪ್ರಕಟಿಸಿದೆ ಹಿಂದಿನ ಮಹಾರಾಜರವರನ್ನು ಹೊಗಳಿರುವ ಪ್ರಕಟಣೆ! ವಸಾಹತದ ಪ್ರಾಚೀನ ನಿವಾಸಿಯ ಭಾಷಣ! ಇಷ್ಟೇ ಅಲ್ಲ ಪತ್ರಿಕಾಪ್ರತಿನಿಧಿಯ ಆತುರದ ದಿವಾನರವರ ಭೇಟಿ' ಎಷ್ಟೊಂದು ಗೊಂದಲ!

ಅಲ್ಲಿ ನಡೆದಿರುವುದಾದರೂ ಏನು? ಆಳಿದ ಮಹಾಸ್ವಾಮಿಯವರಾದ ಶ್ರೀ ಚಾಮರಾಜ ಒಡೆಯರವರು ಅಂಗ್ಲೋ ಇಂಡಿಯನ್ನರು ಕೆಲವರಿಗೆ ಸುಮಾರು ೨ ಸಾವಿರ ಎಕರೆಗಳನ್ನು ಪ್ರದೇಶವನ್ನು ಕೆಲವು ನಿಯಮಗಳನ್ನನುಸರಿಸಿ ಕೊಟ್ಟರು. ಆಗಿಂದಾಗ್ಗೆ ಆ ನಿಯಮಾವಳಿಯ ವಿಮರ್ಶೆಯು ಮಾಡಲ್ಪಟ್ಟಿತು ಕೊನೆಯದಾಗಿ ಪ್ರಚಾರದಲ್ಲಿರುವ ಕಾನೂನನ್ನನುಸರಿಸಿ, ಆ ಗ್ರಾಮವನ್ನು ಪಂಚಾಯತಿಯಾಗಿ ಏರ್ಪಡಿಸಿದುದು ಮಾತ್ರ! ಇಷ್ಟಕ್ಕೆ ಎಷ್ಟು ಕೋಲಾಹಲ'

ನಿಯಮಬದ್ಧವಾದ ಸರ್ಕಾರವೆಂಬುದು ಮೈಸೂರಿಗೆ ಬಂದ ಹೆಸರುವಾಸಿ ನಿಯಮಬದ್ಧವಾದ ಜನಾಂಗವೆಂಬುದಾದರೂ ಆ ಜನರ ವಿಶೇಷ ಗುಣ. ಹೀಗಿದ್ದೂ ಇಷ್ಟೊಂದು ಗೊಂದಲವೇಕೆ' ಇದುವರೆಗೆ ಈ ಸಂಗತಿಯನ್ನು ತಡಮಾಡಿದುದೇ ಸರಿಯಲ್ಲ ಈಗಲಾದರೂ ನಿಯಮಕ್ಕೆ ಸರಕಾರವು ಕಟ್ಟುಬಿದ್ದು ನಿಷ್ಪಕ್ಷಪಾತತೆಯನ್ನು ತೋರಿಸಿ ಕೊಟ್ಟುದಕ್ಕಾಗಿ ಜನರು ಸರ್ಕಾರಕ್ಕೆ ವಿಶೇಷ ವಂದನೆಗಳೇ ಸರಿ

ಆ ನಿವಾಸಿಗಳಾದರೂ ಮೈಸೂರಿನವರೇ ರಾಜ್ಯವಂತೂ ಮೈಸೂರೇ. ಅಂದಮೇಲೆ ಮೈಸೂರಿನ ಕಾನೂನು ಕಟ್ಟಲೆಗಳಿಗೆ ತಲೆಬಾಗುವುದರಲ್ಲಿ ಹಿಂಜರಿಯುವುದು ಸರಿಯೆ? ಮೈಸೂರಿನ ಕೀರ್ತಿಗಾಗಿಯೇ ದುಡಿಯುತ್ತಿರುವ ಮೈಸೂರು ಸರಕಾರದ ಈ ವರ್ತನವು ಪರ್ಯಾಪ್ತವಾದುದೇ ತಾನೆ? ಅವರ ಮತ್ತೊಂದು ಪಾಠಕಿದೆ ಮದರಾಸು ಮೇಲಿನ ಸುದ್ದಿಗಾರರು 'ಈ ಅಸ್ಪೃಶ್ಯ ಸಮ್ಮತಕ್ಕೆ ನಿಲ್ಲಿಸಲ್ಪಟ್ಟಿದ ಎಂದೂ ಪ್ರಕಟಿಸಿರುವರು

ಇಲ್ಲಿಯೇ ಇಂದು ಎಲ್ಲರಿಗೆ ಸಂದೇಹ! ವಾಗೆಯೇ ದಿವಾನ್ ಸಾಹೇಬರವರು ಪತ್ರಿಕಾ ಪ್ರತಿನಿಧಿಗೆ ಕೊಟ್ಟಿರುವ ಉತ್ತರವು ವಿಶೇಷ ರಾಜತಂತ್ರ ನೈಪುಣ್ಯದಿಂದ ಕೂಡಿರುವುದೆಂಬುದನ್ನು ತಿಳಿಸಲು ಸಂತೋಷಿಸುವೆನು

ಪ್ರಾರ್ಥನೆಯನ್ನು ಕೇಳಬೇಕಾದುದೂ, ಸರ್ಕಾರದ ಸದುದ್ದೇಶವನ್ನು ಸ್ಪಷ್ಟವಾಗಿ ತಿಳಿಸಬೇಕಾದುದು ಸರಿ—ಆದರೆ ಕಾನೂನನ್ನು ಜಾರಿಗೆ ತರುವುದರಲ್ಲಿ ಸಾವಕಾಶವು ಸರಿಯಲ್ಲ.

ರಾಜರ ಇಷ್ಟಕ್ಕೆ ವಿರುದ್ಧವಾಗಿ ಮಕ್ಕಳ ರವಾನೆ.

ವಿಶಾಖ ಪಟ್ಟಣದ ಬಳಿ ವಿಜಯನಗರವೆಂಬ ಸಂಸ್ಥಾನ. ಅಲ್ಲಿ ಒಬ್ಬ ಸಣ್ಣ ರಾಜರು. ಸಂಸ್ಥಾನದ ಆಡಳಿತವು ಕಾರಣಾಂತರದಿಂದ ಅವರ ಕೈತಪ್ಪಿದೆ. ಕೋರ್ಟ್ ಆಫ್ ವಾರ್ಡ್ಸ್ ಎಂಬ ಅಧಿಕಾರಿವರ್ಗದವರ ಅಧೀನದಲ್ಲಿದೆ. ಈ ರಾಜರ ನಾಲ್ಕು ಜನ ಮೈನರ್ ಮಕ್ಕಳನ್ನು ಇಂಗ್ಲೆಂಡಿಗೆ ಕಳುಹಿಸಬೇಕೆಂದು ಸದರಿ ಕೋರ್ಟಿನವರು ಯೋಚಿಸಿರುವರು. ಇದು ರಾಜರಿಗೆ ಇಷ್ಟವಿಲ್ಲ. ಆದ್ದರಿಂದ ರಾಜರು ವಿಶಾಖ ಪಟ್ಟಣದ ಸಬ್ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಒಂದು ಇಂಜಕ್ಷನ್ ದಾವಾ ಹೂಡಿದರು ಕೋರ್ಟು ಮುಚ್ಚುವ ಕಾಲವಾದ್ದರಿಂದ ಮೊಕದ್ದಮೆ ವಿಚಾರಿಸಲು ಅವಕಾಶವಿಲ್ಲವೆಂದೂ, ಈ ವಿಷಯವನ್ನು ಬೇಕಾದರೆ ಹೈಕೋರ್ಟಿಗೆ ಹಾಕಿ ತಡೆ ಹುಕುಂ ಹೊಂದಬಹುದೆಂದೂ, ಈ ಮಧ್ಯೆ ಕಾಲದಲ್ಲಿ ಸದರಿ ಮಕ್ಕಳನ್ನು ಇಂಗ್ಲೆಂಡಿಗೆ ರವಾನಿಸಬೇಕಾದರೆ ವಿಶಾಖ ಪಟ್ಟಣದ ಕಲೆಕ್ಟರು ರಾಜರಿಗೆ ಹದಿನೈದು ದಿನ ಮುಂಚಿತವಾಗಿ ತಿಳಿಸಬೇಕೆಂದೂ ತೀರ್ಮಾನಿಸಿರುವರು. ಈ ವಿಷಯದಲ್ಲಿ ರಾಜರು ಮದರಾಸಿನ ಹೈಕೋರ್ಟಿನಲ್ಲಿ ಅರ್ಜಿ ಹಾಕಿರುತ್ತಾರೆ ರಾಜರುಗಳಿಗೆ ರಾಜ್ಯವಂತೂ ಇಲ್ಲ. ರಾಜತ್ವವು ಹೋದರೇ ಇಲ್ಲ ತಮ್ಮ ತಮ್ಮ ಮಕ್ಕಳ ಮೇಲಿನ ಸ್ವಾಮಿತ್ವವಾದರೂ ಇಲ್ಲದಿದ್ದರೆ ಅವರು ಹೆಸರಿಗೆ ಮಾತ್ರ ರಾಜರಷ್ಟೆ

ಅಬಿಸೀನಿಯನರಿಗೆ ಸಹಾಯ

ಅಬಿಸೀನಿಯನರ ಮೇಲೆ ಇಟಲಿ ಸೈನ್ಯದವರು ವಿಷವಾಯು ಪ್ರಯೋಗವನ್ನು ಮಾಡುತ್ತಿರುವರಷ್ಟೆ ಆ ವಿಷವಾಯುವನ್ನು ತಡೆಗಟ್ಟಲು ಮುಖವಾಡಗಳನ್ನು ಒದಗಿಸುವುದಕ್ಕಾಗಿ ಇಂಗ್ಲೆಂಡಿನ ಕೆಲವು ಸಾರ್ವಜನಿಕ ಸಂಸ್ಥೆಗಳು ಏರ್ಪಡಿಸುತ್ತಿವೆ ಇದಕ್ಕೆ ಸರ್ಕಾರದವರೂ ಸಹಾನುಭೂತಿಯುಳ್ಳವರಾಗಿರುತ್ತಾರೆ.

ಕ್ರೈಸ್ತ ಪಾದರಿಗಳ ಭೋಗಾಪುರದ ಪ್ರಕರಣದಂತೆ ನಿಷ್ಪಕ್ಷಪಾತತೆಯಿಂದ ವರ್ತಿ[illegible] ಆಳುವ ಮಹಾಸ್ವಾಮಿಯವರ ಎಲ್ಲ ಪ್ರ[illegible]ಗಳಂತೆ ಇವರೂ ನ್ಯಾಯಬದ್ಧವಾದ [illegible] ನಿಲಕೆಗೆ ತಲೆ ಬಾಗುವಂತೆ ಉಪದೇಶಿಸಲ[illegible] ಪ್ರವರ್ತಿಸಬಾರದೇಕೆ?

ಮೈಸೂರೊಂದು ವ್ಯವಸ್ಥಿತವಾದ ಸ[illegible]ಕಾರ' ಅತ್ಯುಗೌರವವುಳ್ಳ ಅಧಿಕಾರಿಗಳಿ[illegible] ವಿಚಕ್ಷಣವಾಗಿ ಆಳಲ್ಪಡುತ್ತಿದೆ ಎಂ[illegible] ಕೀರ್ತಿಯನ್ನು ಪಡೆದಿದೆ. ಈ ವಿಷ[illegible]ದಲ್ಲಿಯೂ ಅದು ತನ್ನ ವ್ಯಕ್ತಿತ್ವವನ್ನು [illegible]ಳಿಸಿಕೊಳ್ಳುವುದೆಂದು ಸಂತೋಷ.

ಆ ನಿವಾಸಿಗಳಾದರೂ ಆಳುವ [illegible] ಮಹಾಸ್ವಾಮಿಯವರ ಪ್ರಜೆಗಳೇ! ನಮ್ಮ [illegible] ನೆರೆಯವರೆ! ನಾವು ಸಮಾನತೆಯಿಂದ [illegible] ವಾಗಬೇಕೆನ್ನುವುದು ಏಯುಸತಕ್ಕದ್ದೇ [illegible] ಅನ್ಯೋನ್ಯತೆಯಿಂದ ಬಾಳಲು ಬಾಧ್ಯ[illegible] ಆದರೆ ಹೆಚ್ಚಿನ ಹೆಮ್ಮೆಯೂ ಪಕ್ಷಪಾ[illegible]ತೆಯೂ ಸರಿಯಲ್ಲ.

ವೈಟ್ ಫೀಲ್ಡಿನ ಇತಿಹಾಸ

ಬಿಳಿ ಜನರ ಹಕ್ಕು ಹೋಯಿತು

ಬೆಂಗಳೂರು ತಾಲ್ಲೂಕಿನ ವೈಟ್ ಫೀಲ್ಡ್ ಎಂಬ ಸ್ಥಳದಲ್ಲಿ ಆಂಗ್ಲೋಇಂಡಿಯನ್ನರಿಗೆ ವಸತಿಯನ್ನು ಕಟ್ಟಿಸಲು ಸುಮಾರು ಅರ್ಧ ಶತಮಾನದ ಹಿಂದೆ ಮೈಸೂರು ಸರ್ಕಾರದವರು 3 ಸಾವಿರ ಎಕರೆ ಜಮೀನನ್ನು ಕೊಟ್ಟಿದ್ದರು. ಯೂರೋಪಿಯನ್ ಮತ್ತು ಆಂಗ್ಲೋ ಇಂಡಿಯನ್ನರಿಗೆ ಒಂದು ವ್ಯವಸಾಯ ಕ್ಷೇತ್ರವನ್ನು ಕಲ್ಪಿಸುವುದೇ ಇದರ ಉದ್ದೇಶವಾಗಿತ್ತು. ಇದನ್ನು ...ರೂಪು ರಾಜರು ಆಂಗ್ಲೋ ಇಂಡಿಯನ್ ಮತ್ತು ಯೂರೋಪಿಯನ್ ಸಂಘಕ್ಕೆ ...ಡಲಾಗಿತ್ತು. ಮೇಲ್ಕಂಡ ಉದ್ದೇಶ ಭಂಗವುಂಟಾದರೆ ಸದರಿ ಜಮೀನನ್ನು ಸರ್ಕಾರದವರೇ ಸ್ವಾಧೀನಪಡಿಸಿಕೊಳ್ಳುವುದಾಗಿಯೂ ತಿಳಿಸಲಾಗಿತ್ತು. ಕ್ರಮೇಣ ಕೆಲವು ಖಾಲಿಯಾಗಿದ್ದ ಜಮೀನುಗಳು ...ನ ನಿವಾಸಿಗಳಿಗೆ ಮನೆಗಳನ್ನು ಕಟ್ಟಿಕೊಳ್ಳಲು ಕೊಡಲ್ಪಟ್ಟವು. ಅವುಗಳ ಮೇಲೆ ಕಂದಾಯವೂ ತೆಗೆಯಲ್ಪಟ್ಟಿತು. ಆನಂತರ ಸಂಘದವರೇ ಜಮೀನಿನ ಆಡಳಿತವನ್ನು ಇಟ್ಟುಕೊಂಡು, ಅದರ ಮೇಲಿನ ಕಂದಾಯವನ್ನು ವಸೂಲು ಮಾಡಿ ಸರ್ಕಾರಕ್ಕೆ ಕಟ್ಟುತ್ತಿದ್ದರು. ಕಾಲಕ್ರಮದಲ್ಲಿ ಕಂದಾಯವನ್ನು ಕಟ್ಟಲು ಸಂಘಕ್ಕೆ ಶಕ್ತಿಯಿಲ್ಲದಂತಾಯಿತು. ಹೊಸದಾಗಿ ಬಂದ ನಿವಾಸಿಗಳಿಗೆ ಜಮೀನುಗಳನ್ನು ಬಿಟ್ಟುಕೊಡಲು ಸಂಘದವರು ಸರ್ಕಾರದವರನ್ನು ...ದರು. 1894ರಲ್ಲಿ ಇದಕ್ಕೆ ಸರ್ಕಾರದವರು ಸಮ್ಮತಿಕೊಟ್ಟರು.

...ಕದವಾಯ ವೈಟ್ ಫೀಲ್ಡಿನ ಹೊಸ ನಿವಾಸಿಗಳು ತಮ್ಮದೇ ಒಂದು ಸ್ವತಂತ್ರ ಸಂಸ್ಥೆಯನ್ನು ಸ್ಥಾಪಿಸಿ, ಸರ್ಕಾರದವರ ...ಕಾರವನ್ನು ಅಪೇಕ್ಷಿಸಿದರು 1935 ...ನಲ್ಲಿ ಸರ್ಕಾರದವರು ಹುಕುಂ ಮಾಡಿ ...ಬಿ. ಸಂಘ ಮತ್ತು ಹೊಸ ನಿವಾಸಿಗಳ ...ರ ಹಕ್ಕುಬಾಧ್ಯತೆಗಳನ್ನು ತೀರ್ಮಾನ ಮಾಡಿದರು ಸಂಘದವರು ಬಿಟ್ಟುಕೊಟ್ಟ ಪ್ರದೇಶಗಳು ಮಾತ್ರವಲ್ಲದೆ, ಸಾರ್ವಜನಿಕ ಕಟ್ಟಡಗಳು ಮತ್ತು ನಿವೇಶನಗಳ ...ನ ಅಧಿಕಾರವನ್ನು ಸರ್ಕಾರದವರು ...ಮಿಸಿದರು. 1921ರಲ್ಲಿ ಸರ್ಕಾರದವರು ಹುಕುಂ ಮಾಡಿ ಗ್ರಾಮಪ್ರದೇಶವನ್ನು ಸ್ವಾಧೀನಕ್ಕೆ ತೆಗೆದುಕೊಂಡರು. ಮ...ತಿಗೆಯಿಲ್ಲದೆ ಆಂಗ್ಲೋ ಇಂಡಿಯನ್ ...ಸಿಯೇಷನ್ನಿನ ಸ್ವಾಧೀನದಲ್ಲಿದ್ದ ...ಗಳನ್ನು ತೆಗೆದುಕೊಂಡರು

...ಲ್ಡಿನ ನಿವಾಸಿಗಳು ಮಾಡಿದ ಫಿರ್ಯಾದಿನ ...ರ ದಿವಾನ್ ಕಮೀಷನರು ವಿಚಾರಣೆ ನಡೆಸಿ ಹಳೆಯ ಸಂಘವಾಗಲೀ ಹೊಸ ...ವಾಗಲೀ ಈ ವಸತಿಯ ಮೂಲ ಉದ್ದೇಶಗಳನ್ನು ನೆರವೇರಿಸಲಿಲ್ಲವೆಂದು ನಿ...ಯಿಸಿದರು. ಈ ವಸತಿಯನ್ನು ಕಲ್ಪಿಸಿದ ಎರಡು ಮುಖ್ಯವಾದ ಕರಾರುಗಳು ...ಟ್ಟಿದ್ದವು. ಈ ವಸತಿಯು ಸಂಪೂರ್ಣವಾಗಿ ವ್ಯವಸಾಯ ಕ್ಷೇತ್ರವಾಗಿರಬೇಕೆಂದೂ ಅಲ್ಲಿನ ಭೂ ಪ್ರದೇಶಗಳನ್ನು ಸಂಘದ ಸದಸ್ಯರಿಗಲ್ಲದೆ ಮತ್ಯಾರಿಗೂ ಮಾರಕೂಡದೆಂದೂ ವಿಧಾಯಕವಾಗಿತ್ತು. ಆದರೆ ವಸ್ತುತಃ ಈ ಸಂಘವು ಸರಿಯಾಗಿ ಕೆಲಸ ಮಾಡದಿದ್ದುದರಿಂದ ಮೇಲ್ಕಂಡ ಎರಡು ನಿಯಮಗಳೂ ಉಲ್ಲಂಘಿಸಲ್ಪಟ್ಟಿದ್ದವು. ಸಂಘವು ಈ ಉದ್ದೇಶಗಳನ್ನು ನೆರವೇರಿಸುವುದಕ್ಕಾಗಿ ಅನೇಕ ಅವಕಾಶಗಳು ಸರ್ಕಾರದವರಿಂದ ಕೊಡಲ್ಪಟ್ಟವು. ಆದರೆ ಏನೂ ಪ್ರಯೋಜನವಾಗಲಿಲ್ಲ. ಆದ್ದರಿಂದ ಅವರು ಹಳೆಯ ಸಂಘದಿಂದ ಜಮೀನುಗಳನ್ನು ಸ್ವಾಧೀನಪಡಿಸಿಕೊಂಡು, ಈಗಿನ ನಿವಾಸಿಗಳಿಗೆ ಖಾಯಂ ಪಟ್ಟೆ ಮಾಡಿಕೊಟ್ಟಿರುತ್ತಾರೆ. ಮತ್ತು ಯಾವ ಯಾವ ಕಟ್ಟಡಗಳು ಯಾರ ಯಾರ ಸ್ವಾಧೀನದಲ್ಲಿವೆಯೋ ಅವರ ಹೆಸರಿನಲ್ಲಿಯೇ ಖಾಯಂ ಮಾಡಲ್ಪಟ್ಟಿವೆ. ಕೆಲವು ಕರಾರುಗಳೂ ಹಾಕಲ್ಪಟ್ಟಿವೆ. ಈ ಜಮೀನುಗಳನ್ನಾಗಲಿ ಕಟ್ಟಡಗಳನ್ನಾಗಲೀ ಯಾರೂ ಇಪ್ಪತ್ತು ವರ್ಷಗಳ ಕಾಲ ಆಂಗ್ಲೋ ಇಂಡಿಯನ್ ಅಥವಾ ಯೂರೋಪಿಯನ್ನರಲ್ಲದವರಿಗೆ ಮಾರಕೂಡದು

ಇವರ ಮೇಲೆ ಸ್ವಲ್ಪ ಕೋಲಾಹಲವೆದ್ದಿದೆ. ದಿವಾನರಲ್ಲಿ ಪ್ರಮುಖರು ರಾಯಭಾರ ಹೋಗುವವರಾಗಿದ್ದಾರೆ. ಆದರೂ ಈಗ ಮಾಡಿರುವ ಹೊಸ ಏರ್ಪಾಡು ಬದಲಾಗುವಂತೆ ಕಾಣುವುದಿಲ್ಲ

ಗೋಳಿಗಳ ಅದೃಷ್ಟ

ಭರತಖಂಡದ ಬಡ ರೈತರ ಸಹಾಯಾರ್ಥವಾಗಿ ಮೈಸೂರಿನ ಕೆಲವು ಗೋಳಿಗಳನ್ನು ತೆಗೆದು ದಾನಮಾಡಿದರಷ್ಟೆ. ತಮ್ಮಂತೆಯೇ ಇತರ ದೊಡ್ಡ ಮನುಷ್ಯರೂ ತಮ್ಮ ತಮ್ಮ ಪ್ರದೇಶಗಳಲ್ಲಿ ತಳಿ ಹೋರಿಗಳನ್ನು ತೆಗೆದು ಧರ್ಮಾರ್ಥವಾಗಿ ರೈತರಿಗೆ ಕೊಡಬೇಕೆಂದು ಅಪೇಕ್ಷಿಸಿದ್ದರು. ಅದಕ್ಕೆ ಅನುಸಾರವಾಗಿ ಕೊಯಮುತ್ತೂರಿನ ಪೌರ ಸಭಾಧ್ಯಕ್ಷರಾದ ಶ್ರೀ ಪೊನ್ನಯ್ಯಗೌಡರು ಒಂದು ಹೋರಿಯನ್ನು ತೆಗೆದು ದಾನ ಮಾಡಿರುವರು. ದಿವಾನ್ ಬಹದ್ದೂರ್ ರತ್ನಸಭಾಪತಿ ಮದಲಿಯಾರರು ಅದರ ರಕ್ಷಣೆಯ ವೆಚ್ಚವನ್ನು ವಹಿಸುವುದಾಗಿ ಹೇಳಿರುವರು.

ಇವರಂತೆಯೇ ಇನ್ನೂ ಅನೇಕ ಪ್ರಾಂತ್ಯಗಳಲ್ಲಿ ಹೋರಿಗಳ ದಾನವು ನಡೆಯುತ್ತಿವೆ. ಹೋರಿಗಳು ಎಲ್ಲೆಲ್ಲೂ ಬೇಕಾಗಿವೆ. ಅವುಗಳ ಬೆಲೆ ಏರಬಹುದು. ದೊಡ್ಡವರು ಹಾಕಿದ ಮೇಲ್ಪಂಕ್ತಿಯನ್ನು ಚಿಕ್ಕವರು ಆಚರಿಸುತ್ತಿದ್ದಾರೆ. ಅಂತೂ ಬಸವಣ್ಣನಿಗೆ ಒಳ್ಳೇ ಕಾಲ ಬರುವಂತಿದೆ

ಒಡ್ಡರ ಹಾಸ್ಟಲ್.

ಒಕ್ಕವಳ್ಳಿಯಲ್ಲಿ ಈ ತಿಂಗಳು ಒಡ್ಡರ ಜನಾಂಗದವರಿಗಾಗಿ ಒಂದು ವಿದ್ಯಾರ್ಥಿನಿಲಯವು ಏರ್ಪಾಡಾಗುವುದು. ಬಜಾಜರ, ಕೊರವ, ಕೊರಚ ಮತ್ತು ಒಳಭೇದದ ಸಮಸ್ತ ಒಡ್ಡರ ಬಾಲಕರಿಗೂ ಅದರಲ್ಲಿ ಅವಕಾಶವಿರುತ್ತದೆ. ಮಿಡ್ಲುಸ್ಕೂಲು ಮತ್ತು ಕನ್ನಡ ಮೂರು ನಾಲ್ಕನೆಯ ತರಗತಿ ವಿದ್ಯಾರ್ಥಿಗಳಿಗೆ ಅವಕಾಶವುಂಟು.

ಭಿಕ್ಷಾಟನೆಯ ನಿರೋಧದ ಕಾನೂನು.

ಭಿಕ್ಷಾಟನ ವೃತ್ತಿಯನ್ನು ಕಾನೂನು ಮೂಲಕ ನಿವೃತ್ತಿಪಡಿಸಬೇಕೆ ಇಲ್ಲವೇ ಎಂಬ ವಿಷಯವನ್ನು ಪರ್ಯಾಲೋಚಿಸಲು ಬೆಂಗಳೂರು ಪೌರ ಸಭೆಯವರು ಒಂದು ಉಪಸಮಿತಿಯನ್ನು ನೇಮಿಸಿದ್ದರು. ಅವರು ಬೆಂಗಳೂರು ನಗರದ ಭಿಕ್ಷುಕರ ಜನಗಣತಿಯನ್ನು ತಯಾರಿಸಿರುವರು. ಅಲ್ಲಿ ಒಟ್ಟು 705 ಮಂದಿ ಭಿಕ್ಷುಕರಿರುವರೆಂದು ಅವರು ತಿಳಿಸಿರುವರು. ಅವರಲ್ಲಿ 204 ಮಂದಿ 12 ವರ್ಷಕ್ಕೆ ಕಡಿಮೆಯಾದವರು. ಅವರಲ್ಲಿ 560 ಮಂದಿ ಕೆಲಸ ಮಾಡಲು ಅಶಕ್ತರಾಗಿರುವರೆಂದು ಹೇಳಲಾಗಿದೆ. ಮುಂದುವರಿಯುತ್ತಿರುವ ಬೆಂಗಳೂರು ನಗರದಲ್ಲಿ ಭಿಕ್ಷಾಟನ ವೃತ್ತಿಯನ್ನು ಕಾನೂನು ಪ್ರಕಾರ ನಿರೋಧಿಸಬೇಕೆಂದು ಸಮಿತಿಯವರು ಅಭಿಪ್ರಾಯಪಟ್ಟಿದ್ದಾರೆ. ಸಾರ್ವಜನಿಕ ಸ್ಥಳಗಳಿಗೆ ಭಿಕ್ಷುಕರು ಬಾರದಂತೆ ತಡೆಯಬೇಕು. ಮದರಾಸಿನಲ್ಲಿರುವಂತ ಮಕ್ಕಳಿಗಾಗಿ ಬೇರೆ ಕಾನೂನನ್ನು ತರಬೇಕು—ಇವೇ ಮುಂತಾದ ಸಲಹೆಗಳನ್ನು ಕೊಟ್ಟಿರುವರು. ಈ ವಿಷಯವು ಪೌರ ಸಭೆಯ ಮುಂದಿನ ಮೀಟಿಂಗಿನಲ್ಲಿ ಚರ್ಚಿಸಲ್ಪಡುವುದು.

ನಮ್ಮ ದೇಶದಲ್ಲಿ ಭಿಕ್ಷಾಟನೆಯು ನಾನಾ ರೂಪದಲ್ಲಿ ಹರಡಿದೆ. ಅದು ಬಹಳ ಉತ್ತಮವಾದ ಸ್ಥಾನವನ್ನೂ ಹೊಂದಿದೆ. ಕೇವಲ ಅಧಮ ಸ್ಥಿತಿಯಲ್ಲಿಯೂ ಇದೆ. ಬೆಂಗಳೂರು ಪೌರ ಸಭೆಯವರು ಈ ವಿಷಯವನ್ನು ಕಾರ್ಯರೂಪದಲ್ಲಿ ಹೇಗೆ ಬಗೆ ಹರಿಸುವರೆಂಬುದನ್ನು ನಾವು ಕುತೂಹಲದಿಂದ ಇದಿರು ನೋಡುತ್ತೇವೆ.

ಸುಭಾಸ್ ಬೋಸರ ದಿನಾಚರಣೆ.

ಸುಭಾಸ್ ಚಂದ್ರ ಬೋಸರು ಬೊಂಬಾಯಿನಲ್ಲಿ ಬಂದಿಳಿದೊಡನೆ ಸರ್ಕಾರದವರು ಅವರನ್ನು ಬಂಧಿಸಿ ಕಾರಾಗೃಹದಲ್ಲಿಟ್ಟರಷ್ಟೆ. ಅದನ್ನು ಖಂಡಿಸಲು ಈ ತಿಂಗಳು 10 ನೇ ತಾ|| ಆಸೇತು ಹಿಮಾಚಲ ಪರ್ಯಂತವೂ ಸಭೆಗಳು ನಡೆಯಬೇಕೆಂದು ರಾಷ್ಟ್ರೀಯ ಸಭೆಯ ಅಧ್ಯಕ್ಷರಾದ ಪಂಡಿತ ಜವಾಹರಲಾಲರು ಆಜ್ಞೆ ಮಾಡಿರುವರು

ಕುಡಿಯುವ ನೀರಿಗೆ ಕಾಸು.

ಮದರಾಸ್ ಅಧಿಪತ್ಯದ ವಿರುದುನಗರ ಎಂಬ ಸ್ಥಳದಲ್ಲಿ ನೀರಿನ ಬಹಳ ಅಭಾವವಾಗಿದೆ. ಬಾವಿಗಳೆಲ್ಲಾ ಒಣಗಿವೆ. ಒಂದು ಕೊಡ ನೀರಿಗೆ ಮೂರು ಕಾಸಿನಿಂದ ಒಂದೂ ಕಾಲಾಣೆವರೆಗೆ ಬೆಲೆ ಇರುತ್ತದೆ. ಬೆಲೆ ಕೊಟ್ಟು ನೀರನ್ನು ಕೊಳ್ಳುತ್ತಿರುವರು. ಇದು ಕ್ಷಾಮದ ಪ್ರತ್ಯಕ್ಷ ನಿದರ್ಶನ.

ಚಕ್ರವರ್ತಿಯವರ ವರ್ಧಂತಿ.

ಜೂನ್ 23ನೇ ತಾ|| ಈಗಿನ ಬ್ರಿಟಿಷ್ ಚಕ್ರವರ್ತಿಯವರ ವರ್ಧಂತಿ ದಿನವಾದ್ದರಿಂದ ಆ ದಿನ ಎಲ್ಲಾ ಸಾರ್ವಜನಿಕ ಸಂಸ್ಥೆಗಳಿಗೂ, ಆಫೀಸುಗಳಿಗೂ ರಜಾ ಕೊಡಲ್ಪಡುವುದು.

ಸ್ವದೇಶಿ ವಸ್ತುಪ್ರದರ್ಶನ.

ಶ್ರೀಮನ್ಮಹಾರಾಜರ ಸಹಾಯ.

ಬರುವ ವರ್ಧಂತಿ ಸಮಯದಲ್ಲಿ ರಾಜಧಾನಿಯಲ್ಲಿ ನಡೆಯುವ ನಾಲ್ಕನೇ ಸ್ವದೇಶಿ ವಸ್ತುಪ್ರದರ್ಶನಕ್ಕೆ ಶ್ರೀಮನ್ಮಹಾರಾಜರವರು ಎಂದಿನಂತೆ ಒಂದುನೂರು ರೂಪಾಯನ್ನು ಸಹಾಯ ಮಾಡಿರುತ್ತಾರೆ. ಮತ್ತು ಪ್ರದರ್ಶನವು ನಡೆಯುತ್ತಿದ್ದ ಶ್ರೀ ಕೃಷ್ಣರಾಜೇಂದ್ರ ಧರ್ಮಶಾಲೆ (ಹಳೇ ಕರುವಿನ ಹಟ್ಟಿ) ಯನ್ನೂ ಬಿಟ್ಟುಕೊಟ್ಟಿರುತ್ತಾರೆ.

ಅಖಿಲಭಾರತ ಫುಟ್‌ಬಾಲ್ ಟೋರ್ನಮೆಂಟ್.

ಮೈಸೂರು ಫುಟ್‌ಬಾಲ್ ಅಸೋಸಿಯೇಷನ್ ಸಂಘದ ಆಶ್ರಮದಲ್ಲಿ ಅಖಿಲ ಭಾರತ ಏಳನೇ ಫುಟ್‌ಬಾಲ್ ಟೋರ್ನಮೆಂಟು ಶ್ರೀಮನ್ ಮಹಾರಾಜರವರ ವರ್ಧಂತಿ ಸಮಯದಲ್ಲಿ ನಡೆಯುತ್ತದೆ. ಪ್ರತಿ ಟೀಮಿಗೂ ಪ್ರವೇಶಧನ ಹತ್ತು ರೂ. ಇಡಲ್ಪಟ್ಟಿದೆ. ಮೇ ಹತ್ತನೇ ತಾ|| ವರೆಗೆ ಟೀಮುಗಳನ್ನು ತಗೆದುಕೊಳ್ಳಲಾಗುವುದು. ಟೋರ್ನಮೆಂಟು ಮೇ ಮೂರನೇ ವಾರದಲ್ಲಿ ನಡೆಯುವುದು. ಪರಸ್ಥಳದಿಂದ ಬರತಕ್ಕ ಟೀಮುಗಳಿಗೆ ವಿಶೇಷ ಸೌಕರ್ಯಗಳು ಒದಗಿಸಲ್ಪಡುವುವು. ಶ್ರೀಮನ್ಮಹಾರಾಜರು ಒಂದು ದೊಡ್ಡ ಟ್ರೋಫಿ ಕಪ್ಪನ್ನು ದಯಪಾಲಿಸಿರುವರು. ಅಲ್ಲದೆ ೨೨ ಕಪ್ಪುಗಳೂ ಬಹುಮಾನ ಮಾಡಲ್ಪಡುವುವು

ಭರತಖಂಡದಲ್ಲಿ ಮೋಟಾರು ಮತ್ತು ವಿಮಾನಗಳ ತಯಾರಿ.

ಮೋಟಾರುಕಾರುಗಳನ್ನೂ ವಿಮಾನಗಳನ್ನೂ ತಯಾರಿಸುವ ಉದ್ದೇಶದಿಂದ ಒಂದು ಜಾಯಿಂಟ್ ಸ್ಟಾಕ್ ಕಂಪೆನಿಯು ಕಲ್ಕತ್ತಾ ಪಟ್ಟಣದಲ್ಲಿ ಸ್ಥಾಪಿಸಲ್ಪಟ್ಟಿದೆ. ಇದಕ್ಕೆ ಮೂಲಧನ ಒಂದು ಕೋಟಿ ರೂಪಾಯಿ. ಡಂಡಂ ಎಂಬಲ್ಲಿ ಒಂದು ಗಿರಣಿಯನ್ನು ಸ್ಥಾಪಿಸಲು ಈ ಕಂಪೆನಿಯವರು ವಿಶಾಲವಾದ ಪ್ರದೇಶವನ್ನು ತೆಗೆದಿರುವರು. ಅಲ್ಲಿ ಯಂತ್ರ ಸಾಮಗ್ರಿಗಳನ್ನು ಸ್ಥಾಪಿಸುವರು. ಈ ಕೈಗಾರಿಕೆಗೆ ಹಿಂದೂಸ್ಥಾನದಲ್ಲಿ ಬಹಳ ಅವಕಾಶವಿದೆಯೆಂದು ಹೇಳಲಾಗಿದೆ. ಈ ವರ್ಷದ ಅಂತ್ಯದೊಳಗೇ ಮೋಟಾರುಕಾರನ್ನು ಮಾರಾಟಕ್ಕೆ ಸಿದ್ಧಮಾಡಬೇಕೆಂದು ಆಲೋಚಿಸುತ್ತಿದ್ದಾರೆ. ಈ ಕಾರುಗಳು ಹೊಸ ಮಾದರಿಯಲ್ಲಿರುತ್ತವೆ ಮತ್ತು ಸುಲಭವಾದ ಬೆಲೆಗೂ ಮಾರಲ್ಪಡುತ್ತವೆ.

ಕಲಾ ಉತ್ಸವ.

ಎ. ವಿ. ವರದಾಚಾರ್ಯರ ಸ್ಮಾರಕ ಸಭೆಯವರು ಈ ತಿಂಗಳು ಮಧ್ಯಭಾಗದಲ್ಲಿ ಬೆಂಗಳೂರಿನಲ್ಲಿ ಒಂದು ಕಲಾ ಉತ್ಸವವನ್ನು ಏರ್ಪಡಿಸಿರುತ್ತಾರೆ. ಉತ್ಸವವು ಒಂದು ವಾರ ನಡೆಯುತ್ತದೆ. ಸದಸ್ಯರಾಗುವವರು ಐದು ರೂಪಾಯಿಗೆ ಕಡಿಮೆಯಿಲ್ಲದೆ ಚಂದಾ ಕೊಡಬೇಕು. ನಾಟಕ ಸ್ಪರ್ಧೆಯೊಂದನ್ನೂ ಸಹ ಏರ್ಪಡಿಸಿರುವರು. ಇದರಲ್ಲಿ ಜಯಶೀಲರಾದವರಿಗೆ ಬಹುಮಾನಗಳು ಹಂಚಲ್ಪಡುವುವು.

ಹಿಟ್ಲರನ ದೇಶಾಭಿಮಾನ.

ಕಳೆದ ಒಂದನೇ ತಾರೀಖಿನಲ್ಲಿ ಜರ್ಮನಿಯ ಮುಖ್ಯಾಧಿಕಾರಿ ಹಿಟ್ಲರನು ಒಂದು ಲಕ್ಷ ಕಲಸಗಾರರ ಸಭೆಯಲ್ಲಿ ಹೀಗೆ ಹೇಳಿದನು—ನಮಗೆ ಅದ್ಭುತವಾದ ಆಲೋಚನೆಗಳಿವೆ ಅವುಗಳಿಂದ ನಾವು ಶಾಂತಿಯನ್ನು ಕಾಪಾಡಲು ಆಸಕ್ತರಾಗಿರುವೆವು ಅಸಂತುಷ್ಟರಾದ ಪರಕೀಯರಿಗೆ ಇದು ಅರ್ಥವಾಗದಿರಬಹುದು ಅದರ ನಮ್ಮ ಗೊಡವೆಗೆ ಯಾರೂ ಬರಬೇಕಾಗಿಲ್ಲ ಜರ್ಮನಿಯ ಧ್ಯೇಯಗಳನ್ನು ಸ್ಥಾಪಿಸಲು ವಿಶ್ವಶಾಂತಿಯು ಅಗತ್ಯ. ಜರ್ಮನಿಯ ರಾಜ್ಯ ಪ್ರದೇಶವು ಬಹಳ ಕಿಷ್ಕಿಂಡವಾಗಿದೆ ಮತ್ತು ಬೆಳೆಯುವ ಪದಾರ್ಥಗಳು ಕಡಿಮೆ ಆದರೂ ಜರ್ಮನಿಯ ಜನರಲ್ಲಿ ನಾನು ಬಹಳ ಹೆಮ್ಮೆಯುಳ್ಳವನಾಗಿದ್ದೇನೆ ಮತ್ಯಾವುದಾರೂ ದೇಶದಲ್ಲಿ ದೊರೆಯಾಗಿರುವುದಕ್ಕಿಂತಲೂ ಜರ್ಮನಿಯಲ್ಲಿ ಒಬ್ಬ ಅಲ್ಪ ಮನುಷ್ಯನಾಗಿರಲು ಬಯಸುತ್ತೇನೆ—ಹೀಗಿರಬೇಕು ಮುಖಂಡರೆಂದರೆ ಅತನ ಅನುಯಾಯಿಗಳಿಗೆ ಇವಕ್ಕಿಂತಲೂ ಉತ್ತೇಜನವು ಮತ್ತೇನುಬೇಕು? ದಿಲ್‌ಖುಷಿ ಎಂದರೆ ಇದೇ. ಇದರಿಂದಲೇ ಅನಾಮಧೇಯನಾಗಿದ್ದ ಹಿಟ್ಲರನು ಅಲ್ಪಕಾಲದಲ್ಲಿ ಜರ್ಮನಿಯನ್ನು ಅತ್ಯಂತ ಅಗಾಧವಾದ ಔನ್ನತ್ಯಕ್ಕೆ ಏರಿಸಿರುವನು

ಮುಲಕನಾಡು ಮಹಾ ಸಭಾ, ಬೆಂಗಳೂರು

೧೯೩೫ನೇ ಇಸವಿ ಡಿಸೆಂಬರ್ ತಿಂಗಳಲ್ಲಿ ಶ್ರೀಶಂಕರ ಮಠದ ಆವರಣದಲ್ಲಿ ಒಂದು ಸಮ್ಮೇಳನವು ನಡೆದ ವಿಷಯವು ಸರ್ವರಿಗೂ ವಿದಿತವಾಗಿಯೇ ಇರುತ್ತ ಭರತಖಂಡದ ನಾನಾ ಪ್ರಾಂತ್ಯಗಳಿಂದ ಬಂದು ಮಾಡಿಸಿದ ಸಮ್ಮೇಳನದಲ್ಲಿ ಸ್ತ್ರೀಪುರುಷರೆಲ್ಲರೂ ಸೇರಿ, ಮುಂದಿನ ತರುಣರ ಪುರೋಭಿವೃದ್ಧಿ, ನಮ್ಮ ಸ್ವಜಾತಿಯ ಪ್ರಾಚೀನ ಸಂಪ್ರದಾಯ ಪುನರುಜ್ಜೀವನ ಮುಂತಾದ ಮುಖ್ಯ ವಿಷಯಗಳಲ್ಲಿ ಕೆಲವು ನಿರ್ಣಯಗಳನ್ನೂ, ಸಿಬಂದಿಗಳನ್ನೂ ಮಾಡಿರುತ್ತಾರೆ ಇವುಗಳನ್ನು ಪ್ರಚಾರಕ್ಕೆ ತಂದು ಮುಂದಿನ ಕಾರ್ಯಗಳನ್ನು ಯಶಸ್ವಿಯಾಗಿ ನಡೆಸಬೇಕಾದಲ್ಲಿ ಮಹಾಜನಗಳ ಪ್ರೋತ್ಸಾಹವು ಅತ್ಯವಶ್ಯಕವೆಂಬುದು ಸರ್ವರಿಗೂ ತಿಳಿದ ವಿಷಯವೇ ಆಗಿದೆ ನಮ್ಮ ಸಭೆಯು ಚಿರಸ್ಥಾಯಿಯಾಗಿ ನಿಲ್ಲಲು ಸೂಕ್ತವಾದ ಸಲಹೆಗಳನ್ನೂ ಕೊಟ್ಟು ಇತರ ಸಹಾಯ ಸಂಪತ್ತಿಯನ್ನುಂಟುಮಾಡಿಕೊಡಬೇಕಾಗಿ ಮುಲಕನಾಡು ಮಹಾಜನರನ್ನು ಕಾರ್ಯದರ್ಶಿಗಳು ಪ್ರಾರ್ಥಿಸುತ್ತಾರೆ

ವಿವಾಹ

ಬೊಂಬಾಯಿಯ ರಾವ್ ಬಹದ್ದೂರ್ ಕೆ ರಾಮಸ್ವಾಮಿಯವರು ಮೈಸೂರಿನಲ್ಲಿರುವ ತಮ್ಮ ಬಂಗಲೆಯಲ್ಲಿ ತಮ್ಮ ಸೋದರ ಸೊಸೆ ಸೌ॥ ಲಲಿತಮ್ಮನನ್ನು ತುಮಕೂರು ಡಿಸ್ಟ್ರಿಕ್ಟ್ ಬೋರ್ಡ್ ಅಧ್ಯಕ್ಷರಾದ ಮ॥ ವೆಂಕಟರಾಮಯ್ಯನವರ ಮಕ್ಕಳು ಡಾ॥ ಹೆಚ್. ವಿ ಸೂರ್ಯನಾರಾಯಣರಾಯರಿಗೆ ಕೊಟ್ಟು ವಿವಾಹಮಹೋತ್ಸವವನ್ನು ವೈಭವದಿಂದ ನಡೆಸಿದರು

ಬೈಸಿಕಲ್ ತೆರಿಗೆ.

ಪೌರಸಭಾಸದರು ಗಮನಿಸಬೇಕು.

ಮದರಾಸಿನಲ್ಲಿ ಬೈಸಿಕಲ್ ತೆರಿಗೆಯು ವರ್ಷಕ್ಕೆ ೪ ರೂ ಇತ್ತು ಇದು ಬಹಳ ದುಬಾರಿಯಾಗಿತ್ತೆಂತಲೋ ಏನೋ ಸಾವಿರಾರು ಜನರು ಕೊಟ್ಟೇ ಇರಲಿಲ್ಲ ಕಳೆದ ೧೯ ನೇ ತಾ॥ ನಿಂದ ಲೈಸೆನ್ಸಿಲ್ಲದ ಬೈಸಿಕಲ್ಲುಗಳನ್ನು ಹಿಡಿಯುವಂತೆ ಪೌರಸಭಾಧಿಕಾರಿಗಳು ಏರ್ಪಡಿಸಿದರು ಕೆಲವು ಬೈಸಿಕಲ್ಲುಗಳು ಸಿಕ್ಕುತ್ತಿದ್ದವು ಅನೇಕವಾಗಿ ಸಿಕ್ಕುತ್ತಿರಲಿಲ್ಲ ಇದಕ್ಕಾಗಿ ಇಟ್ಟಿದ್ದ ಸಿಬ್ಬಂದಿಯ ಖರ್ಚು ಹುಟ್ಟುತ್ತಿರಲಿಲ್ಲ. ತೆರಿಗೆಯು ದುಬಾರಿಯೆಂದು ಮನಗಂಡು ಅಧಿಕಾರಿಗಳು ತೆರಿಗೆಯನ್ನು ವರ್ಷಕ್ಕೆ ಒಂದೇ ರೂಪಾಯಿಗೆ ಇಳಿಸಿದರು ಇದು ಅಲ್ಪ ಮೊಬಲಗಾದುದರಿಂದ ಬೈಸಿಕಲ್ ಮಾಲಿಕರುಗಳು ತಾವಾಗಿಯೇ ಲೈಸನ್ಸುಗಳನ್ನು ತೆಗೆಯಲು ಮುಂದೆ ಬರುತ್ತಲಿವಾರೆ ಅವರಿಂದ ಬೈಸಿಕಲ್ಲುಗಳನ್ನು ಇನ್ನು ಒಂದು ತಿಂಗಳ ಕಾಲ ಹಿಡಿಯದಂತೆ ಏರ್ಪಾಡು ಮಾಡಲಾಗಿದೆ ಕಳೆದ ತಿಂಗಳು ಮದರಾಸಿನಲ್ಲಿ ೧೯,೦೦೦ ಬೈಸಿಕಲ್ ರಿಜಿಸ್ಟರಾದವು ಕಳೆದ ವರ್ಷ ಆ ಕಾಲದಲ್ಲಿ ೭,೦೦೦ ಮಾತ್ರ ಆಗಿದ್ದವು ಮದರಾಸಿನ ಇತಿಹಾಸದಲ್ಲಿ ಇದು ಅದ್ಭುತವಾದ ವಿಷಯ.

ನಮ್ಮ ಪೌರಸಭಾಸದಸ್ಯರೂ ಈ ಅಂಶವನ್ನು ಗಮನಿಸಬೇಕು

ಆಕಾಶದಲ್ಲಿ ಈಜುವುದು.

ವೈಮಿ ಎಂಬಲ್ಲಿಯ ಕ್ಲೆಂಸರ್ ಎಂಬುವನು ಮೈಗೆ ರೆಕ್ಕೆಗಳನ್ನು ಅಂಟಿಸಿಕೊಂಡು ಅಂತರಿಕ್ಷದಲ್ಲಿ ಈಜುವ ಪ್ರದರ್ಶನವೊಂದನ್ನು ಕೆಲವು ದಿನಗಳ ಹಿಂದೆ ತೋರಿಸಿದ್ದನು ಈತನು ಹತ್ತು ಸಾವಿರ ಅಡಿ ಎತ್ತರದ ಒಂದು ವಿಮಾನದಿಂದ ಇಳಿದು ಪ್ಯಾರಾಚೂಟು ಬಟ್ಟೆಯಿಂದ ಮಾಡಿದ್ದ ರೆಕ್ಕೆಗಳನ್ನು ಕಟ್ಟಿಕೊಂಡಿದ್ದನು ಕುಳಿತು ರೆಕ್ಕೆಗಳನ್ನು ಪಸರಿಸಿ ವಾಯುಮಂಡಲಕ್ಕೆ ಇಳಿದನು ಭೂಮಿಗೆ ಸಾವಿರ ಅಡಿ ಎತ್ತರವಿದ್ದಾಗ ತನ್ನ ಪ್ಯಾರಾಷ್ಯೂಟ್ ಎಂಬ ಆಕಾಶಬುಟ್ಟಿಯಂತಹ ಯಂತ್ರವನ್ನು ಬಿಚ್ಚಿದನು ಅದರ ಸಹಾಯದಿಂದಲೇ ಭೂಮಿಗೆ ಬರಬೇಕೆಂದು ಅವನ ಇಚ್ಛೆ ಆದರ ಅತನು ಕೆಳಕ್ಕೆ ಇಳಿದು ಬರುತ್ತಿದ್ದ ವೇಗವು ಬಹಳ ಜೋರಾಗಿತ್ತು. ಹಾಗಾಗಿಯೇ ಬಿದ್ದಿದ್ದರೆ ಅವನ ತಲೆ ಒಡೆಯುತ್ತಿತ್ತು

ವಿದ್ಯುಚ್ಛಕ್ತಿ ಇಲಾಖೆಯಲ್ಲಿ ಮತ್ತೊಂದು ಭಯಾನಕ ವಿಷಯ?

ಮೈಸೂರು ವಿದ್ಯುಚ್ಛಕ್ತಿ ಇಲಾಖೆಯಲ್ಲಿ ಇನ್ನೊಂದು ಭಯಾನಕ ಸಂಗತಿ ನಡೆದಿರುವುದಾಗಿ ವರ್ತಮಾನವಿದೆ ಅಲ್ಲಿ ಸಾವಿರ ರೂಪಾಯಿಗಳ ಮೋಸ ಮತ್ತು ಫೋರ್ಜರಿ ನಡೆದಿದೆಯೆಂದು ಹೇಳಲಾಗಿದೆ ರಾಮಚಂದ್ರರಾಯರೆಂಬುವರ ಮೇಲೆ ಅಧಿಕಾರಿಗಳು ಫಿರ್ಯಾದು ಕೊಟ್ಟಿರುವುದಾಗಿ ಗೊತ್ತಾಗುತ್ತದೆ

ಜಾಣಕಸ್ವನ ನೋಟ.

ಪ್ರಿಯ ರಾಜಕಸ್ವಂದ!

ನಮ್ಮ ಸಂಪಾದಕರು ಏನಯ್ಯಾ? ಜಾಣಕಸ್ವ! ಆ ಪ್ರಾತ್ತು ಗಣೇಶನ ಪೂಜೆ ಮಾಡಿ ಹೋದವನು ತಿರುಗಿ ಬರಲೇ ಇಲ್ಲವಲ್ಲಾ ನೀನು ಎಲ್ಲಿಗೆ ಹೋಗಿ ಸಂಚಾರ ಮಾಡುತ್ತಿದ್ದೆ ಆಗಾಗ ನಿನ್ನ ಯೋಗಕ್ಷೇಮವನ್ನ ತಿಳಿಸಬೇಡವೇ? ಎಂತ ಕಾಗದ ಬರೆದಿದ್ದರು ಬರೆದರೇನು ಅವರಿಗೆ ತಿಳಿಯದೆ ಸಮ ಲೆಕ್ಕ ಹೊರಗಿತ್ತು ಎಂದಿರಿ ಪತ್ರಿಕೆ ಹೋಗಿಬಿಟ್ಟನಲ್ಲಿ ಬರೆಯಲಿಲ್ಲವೇನು ಎಂದ ಹೇಳಿದೆ

ನಾಸ್ತಿಕನಂತೆ, ನಾರಾಯಣ ಬರೋಕೆ ಆಗಲ್ಲ ಎದುರಾಗಿ ಮಾತಾಗಾದೂ ಎರಡನೆ ಎಂತ ಅನಾಗರಿಕ ಹೇಳಿಬಿಟ್ಟೆ ಏನು ಹೀಗೆ ಎಂದೂ ಎಂದಿದೀನಿ ಸ್ವಾಮಿ! ಎಂಬ ಮಾತು ಆಯಿತು

ಬಳಿಕ ಗಣೇಶನ ಪೂಜೆ ಮಾಡಿದೆನಲ್ಲಾ, ಆವನ ಪೂಜೆ ಮಾಡಿದಮೇಲಾದರೂ, ನನ್ನ ಸುಖದಿಂದ ನನ್ನೂರೆಲ್ಲಾ ಪಟ್ಟಣಾಯಿತವೇನು ನೋಡುವ ಎಂತ ಕೂಡಿದ್ದ ಇದು ಹರಿಗೂ ತಾಣ ಲಿಖ ನಗೆಗೆ ಎಷ್ಟು ಅಗತ್ಯ ಅಂತೀರೋ ನೋಡಿ ಸನಗ ದೃಷ್ಟಿ ಮಾಟ ಕಮ್ಮಿ ದಾರಿ ದೊಡ್ಡ ರಸ್ತೆಲಿ ತಿರುಗಿ ತಿರುಗಿ ಮಾಡಿದಾಗ ಪಡಿಹೆಚ್ಚಿಗೂ ಇದೆ, ಎಲೆಕ್ಟ್ರಿಕ್ ದೀಪಗಳು, ನೋ ಎಂದೆನಗಿಂತ ಮಾಡಿರುತಾರಲ್ಲ! ಆ ದೀಪಗಳು ಸಾ ಡಿ ನಾಲ್ಕಡಿ ಪ್ರಮಾಣದಿಂದ ಕತವಿ ಕಮ್ಮಿ ರಸ್ತೇಲಿ ಎಡಾಹೋದೇ ದಂಗಪ್ಪ ಎಂತ ಎಲ್ಲಿಸಿ ಬಿಡಿತು ಅದ ಕೊಂಡಸ್ತರನೇ ತುಂಬಾ ಬೇಕು ಇಲ್ಲದ ಎಡವಿ ಗುಂಡಿಗೆ ಬಿಡದ ಇದೇನೋ ಅಂತ ರಸ್ತೇಲಿ ಒಡಾಟಕ್ಕೆ ಆರಂಭಿಸಿದ್ದೇನೆ

ಒಂದು ದಿನಕ್ಕೆ ಮೊದಲು ಎಂದಾಗಲೂ ದ ಹಿಂಭಾಗದ ರಸ್ತೇಲಿ ಎಂದರೆ ಹೈದರಾ ಮುಂದಿನ ರಸ್ತೇಲಿ ಹಾಗೇ ಹೋದರೆ ಮುಂದಲೇ ಎದು ಕಡೆಲೂ ಗಿಡಗಳು ಬೆಳಕೊಂಡು ರಸ್ತೆ ಎಲ್ಲಾ ಕಾಡಿನ ಆಗಿಬಿಟ್ಟಿದೆ ಮಾರ್ಕಿಂಟ್ ಸರ್ಕಲ್, ಮಿರ್ಜಾ ರೋಡ್, ಲಲಿತಮಹಾಲ ರಸ್ತೆ, ನರಸಿಂಹರಾಜ ಬೂಲಿವಾರ್ಡ್ ಮುಂತಾದ ರಸ್ತೆಗಳನ್ನು ನೋಡಿಬಿಟ್ಟು ಈ ರಸ್ತೆಗಳ ಸಂಬಂಧಕ್ಕೆ ಒಂದರೆ ಸ್ವಾಂತ ಯುಕ್ತಿಯಲ್ಲ ಎನ್ನುವುದು ಸಂದೇಹ

ಇಂತ ರಸ್ತೆಗಳ ಲಿಸ್ಟು ದೊಡ್ಡ ಪುಸ್ತಕ ಆಗುತ್ತ ಇದೂ ಅಲ್ಲದೆ ದೇವಸ್ಥಾನ ಪುರಮುಡಿ ನಂಜನಗೂಡಿನ ಶ್ರೀಕಂಠ ಮಾಡಿ, ಮೂಡ್ತಮತ್ತೆ, ತ್ರಿವೇಣೀ ಸಂಗದ ಅಗಸ್ತ್ಯೇಶ್ವರ ರಥೋತ್ಸವ ಮುಂತಾದ ಪುಣ್ಯಕ್ಷೇತ್ರಗಳ ಪ್ರವಾಸ ವಾಸಯ್ಯ ನಾಗಾಗಜಿಯ ಶಂಕನಾಥ, ಶ್ರೀರಾಮೋತ್ಸವ, ಶಂಕರ ಜಯಂತಿಗಳ ಸಂಭ್ರಮದಲ್ಲಿ ಲೀನವಾಗಿರುವ ತನ್ನ ಮನವನ್ನು ನನ್ನ ಕಡೆಗೆ ಎಳೆಯಲು ಇಷ್ಟಪಡಲಿಲ್ಲ

ಮುಂದಿನವಾರ ತಮ್ಮ ಭೇಟಿ ತಗಲೇ ಜಾಣಕಸ್ವ ಅಂತ ಉಪ್ಪೇರ ಮಾಡಿದ್ದೀನಿ

ಕೋರ್ಟಿನಲ್ಲಿ ನಾಯಿ ಸಾಕ್ಷಿ

ಒಂದು ಖೂನಿ ಕೇಸಿನ ತನಿಖೆಯನ್ನು ನಡೆಸಲು ಕೆನ್ಯಾ ರಾಜ್ಯದ ಗುಂಪಿಗೆ ಸೇರಿದ ಒಂದು ನಾಯಿಯು ಸಹಕಾರಿಯಾಯಿತು. ದಕ್ಷಿಣ ಆಫ್ರಿಕಾದ ಜಿಲ್ಲೆಯ ತಿನ್ನಾರುಕ ರು ಎಂಬಲ್ಲಿ ಕಳ್ಳರು ಎಂದು ನನಗೆ ಸಾವಿರಾರು ರೂಪಾಯಿಗಳ ಬೆಲೆಬಾಳುವ ವಸ್ತುಗಳನ್ನು ಕದ್ದುಕೊಂಡು ಹೋದರು ಹೋಗುವಾಗ ತನ್ನೊಡನೆ ಬಂದಿದ್ದ ನಾಯಿಯನ್ನು ಅಲ್ಲಿಯೇ ಬಿಟ್ಟು ಹೋದರು ಪೋಲೀಸಿನವರು ಅದೇ ನಾಯಿ ಇದ್ದುದನ್ನು ನೋಡಿ ಅದನ್ನು ಅನುಸರಿಸುತ್ತ ಪತ್ತೆಹಚ್ಚಿಕೊಂಡು ಅದರ ಸಹಾಯದಿಂದ ಕಳ್ಳರನ್ನು ಹಲವು ಮಾಲುಗಳನ್ನು ಪತ್ತೆಮಾಡಿದರು ಕೋರ್ಟಿನ ವಿಚಾರಣೆಯಲ್ಲಿ ಹೂಡಿದರು ನಾಯಿಯನ್ನು "ಎಕ್ಸಿಬಿಟ್" ಆಗಿ ರುಜುವಾತಿಗೆ ಕೋರ್ಟಿಗೆ ತಂದಿದ್ದರು. ಅಪರಾಧಿಗಳಿಗೆ ಹಲವರಿಗೆ ಕಠಿಣ ಶಿಕ್ಷೆ ಆಯಿತು ನಾಯಿಯು ಬಹಳ ಕೃತಜ್ಞತೆಯುಳ್ಳ ಪ್ರಾಣಿಯೆಂದು ಪ್ರಸಿದ್ಧಿ ಇದೆ ಅದನ್ನು ತಿರಸ್ಕರಿಸಿದರೆ ಇದೇ ಪರಿಣಾಮವೇ ಆಗುತ್ತದೆ

"ನಿರ್ಭಾಗ್ಯ ಭಾರತಿ"

ಕರ್ನಾಟಕ ಕಲಾಭ್ಯುದಯ ಮಂಡಳಿಯವರು ಮೈಸೂರು ಬಾಲಿಕಾ ಪಾಲಿಕಾ 'ನಿರ್ಭಾಗ್ಯ ಭಾರತಿ' ಎಂಬ ನಾಟಕವನ್ನು ಅಭಿನಯಿಸಿದರು. ಪಾತ್ರವಹಿಸಿದ್ದವರೆಲ್ಲರೂ ತೃಪ್ತಿಕರವಾಗಿ ಅಭಿನಯಿಸಿ ಪ್ರೇಕ್ಷಕರಿಗೆ ಆನಂದವನ್ನುಂಟುಮಾಡಿದರು ನಾಟಕವಿಷಯವು ಉದಾತ್ತವಾದ ನೀತಿಯನ್ನು ಬೋಧಿಸುತ್ತದೆ ಆದರೆ ನಾಟಕದ ಪರಿಣಾಮವು ವಿಷಾದಕರವಾಗಿರುತ್ತದೆ ಎಲ್ಲಕ್ಕಿಂತಲೂ ಶಾಂತಿ, ಸಮಾಧಾನ ಒಳ್ಳೆಯ ಆನಂದವಿಲ್ಲ ನಾಟಕವು! ರಚಿಸಿರುವಂತೆ ಮಾಡಿದವರ ಒಳ್ಳೆಯದು

ಶ್ರೀನಿವಾಸ ಕಲ್ಯಾಣ

ಮೈಸೂರು ಶ್ರೀರಾಮಪೇಟೆಯಲ್ಲಿ ಎಸ್ ಗೋವಿಂದರಾಯರಿಂದ ನಿರ್ಮಿತವಾದ ಶ್ರೀರಾಮಚಂದ್ರ ಮಂದಿರದಲ್ಲಿ ಬ್ರ॥ ಶ್ರೀಮುನಹಳ್ಳಿ ರಘುನಾಥಾಚಾರ್ಯರು ಇದೇ ವೈಶಾಖ ಶು॥ ಬಿದಿಗೆಯಿಂದ ದಶಮಿವರೆಗೆ ವನಿಮ್ಮೋತ್ತರ ಪುರಾಣ, ಕಪಿಲ ಮಹಾತ್ಮೆಯ ಪುರಾಣ ಪ್ರವಚನವನ್ನು ನಡೆಸಿದರು ದಶಮಿ ಶುಕ್ರವಾರ ಕಲ್ಯಾಣೋತ್ಸವವನ್ನು ಬಹು ವಿಜೃಂಭಣೆಯಿಂದ ನೆರವೇರಿಸಿದರು ಮರುದಿನ ಸಾವಿರಾರು ಜನರಿಗೆ ಸಂತರ್ಪಣೆಯೂ ಆಗಿರುವುದಾಗಿ ನರವೇರಿದವು

ಖೂನಿಕೃತ್ಯ

ಮೊನ್ನೆ ದಿನ ಜಿಲ್ಲೆ ಮೈಸೂರು ಪ್ರಕರಣದ ಸಮೀಪದಲ್ಲಿರುವ ಬ್ರಾಹ್ಮಣ ಮಠ ಸರ್ವಪದಾಧಿ ಸಭೆಯ ಸಿನೇರಿನ ಭಾಗದಲ್ಲಿ ಒಂದು ಮೃತ ಶರೀರವು ದೊರಕಿದೆ ಒಬ್ಬ ಮನುಷ್ಯನ ತಲೆಯನ್ನು ಒಂದು ಕಬ್ಬಿಣದ ಸರಳಿನಿಂದ ಹೊಡೆದಿರುವರು ಬಾಯಿಯ ಕ್ಷೇಪವು ಕಾಣುತ್ತಿತ್ತು ಮರಣದ ಕಾರಣ ಗೊತ್ತಿಲ್ಲ ಖೂನಿಯಾಗಿರಬಹುದೆಂದು ಊಹಿಸಲಾಗಿದೆ!

ನಿಷ್ಕಳಂಕ ಪ್ರೇಮ

(ಒಂದು ಸಣ್ಣ ಕಥೆ.)

(ಲೇಖಕ —ಬಿ. ಎಸ್. ಬಾಲಕೃಷ್ಣನ್ ಅರಸೀಕೆರೆ)

ರಾಮುವು 'ದಿನಮಣಿ ವಂಶ' ದ ಸಂಗೀತಶಾಲೆಯಲ್ಲಿ ಐಶ್ವನಾಗಿರುವನು. ಸಮೀಪದ ಸರಸುವಿನ ಮನಸ್ಸು ಆ ಸೊಗಸಿನ ಲಹರಿ ಕ್ಷೇತ್ರದಲ್ಲಿ ಲಾವಣ್ಯ ತೇಜಸ್ಸಿನಿಂದ ವಿಹರಿಸುತ್ತಿರುವುದು. ಅಂತೆಯೇ, ಆ ನಯನಗಳ ನೆಟ್ಟದೃಷ್ಟಿಯು ಭಾವನೆಯು ಅದೊಂದು ಬಗೆಯಿಂದ ಕೂಡಿ ಸ್ವಚ್ಛ ಚಂದ್ರಿಕೆಯ ತೇಜಸ್ಸಿನಂತೆ ಪ್ರಕಾಶಿಸುತ್ತಿರುವುದು. ಪ್ರಕೃತ ಸ್ಥಿತಿಯು ಸರಸುವಿಗೆ ನೋವನ್ನೀಸಗುತ್ತಿದ್ದಂತೆ ಆ ನಿಷ್ಕಪಟ ಬಾಲ ಕ್ಷೇತ್ರದಲ್ಲಿ ಮಹತ್ತರವಾದ ಕಾಂಕ್ಷೆಯೊಂದರ ಬೀಜವನ್ನು ನೆಡಲು ಕಾರಣಭೂತವಾಯಿತು.

ಸಮಯಗಳು ಗತಿಸಿದಂತೆಲ್ಲಾ ಆ ಭಾವಕ್ಷೇತ್ರದಲ್ಲಿ ವಿವಿಧ ಕಲ್ಪನೆಯ ತರು-ಲತೆಗಳು ಮೊಳೆಗತೊಡಗಿದುವು. ಸರಸುವಿನ ಪರಿಸ್ಥಿತಿಯು ಇಂತಾಗಿರಲು ರಾಮುವು ಹಠಾತ್ತಾಗಿ ಸಂಗೀತಶಾಲೆಯನ್ನು ಸ್ತಬ್ಧಗೊಳಿಸಿ ಕತ್ತೆತ್ತಿ ಸರಸುವನ್ನು ನೋಡಿದನು. ಅವಳ ದೇಹ ಪರಿವರ್ತನದಿಂದ, ಸಂಗೀತಶಾಲೆಗೆ ಸರಸುವು ಮನಸೋತಳೆಂದು ಮಾತ್ರ ತರ್ಕಿಸಿದನು. ಆದರೆ ಆ ಸಂದರ್ಭದಲ್ಲಿ ಮನಸ್ಸಿನ ತರ್ಕವು ಅದೊಂದು ಬಗೆಯಾಗಲು ನಿರ್ಧಾರವಿಲ್ಲದವನು ಸುಮ್ಮನೆ ವಸುವಂತಾದನು.

ರಾಮುವು ಸದ್ಗುಣನಿಲಯನೂ, ಸತ್ಕುಲಪ್ರಸೂತನೂ ಆದ ತರುಣ ಜೀವಿಯು. ಅವನ ಪೂರ್ವಜರಂತೆಯೇ ಕಲೆಯ ಅಭ್ಯಾಸದಲ್ಲಿ ಪರಿಶ್ರಮ ಪಡೆದನು; ಅವನಾಬಾಲ್ಯದಿಂದಲೂ ಅದೊಂದು ಕಲೆಯನ್ನೇ ತನ್ನ ಜೀವನಕ್ಕೆ ಮುಖ್ಯ ಗುರಿಯನ್ನಾಗಿ ಹಿಡಿದು ಅದರಲ್ಲಿ ನುರಿತು ಈಗ ಊರ ಜನರೆಲ್ಲರ ಪ್ರೇಮಾಸ್ಪದಕ್ಕೆ ಪಾತ್ರನಾಗಿರುವನು.

ಯಾವನೊಬ್ಬ ಸಂಗೀತ ಶಾಸ್ತ್ರಜ್ಞನು ಊರಿಗೆ ಬಂದನೆಂದರೆ ರಾಮುವು ಮೊದಲ ಪರಿಚಯವನ್ನು ಪಡೆದು ಉಪಚಾರ ಮಾಡುವನು. ಉಪಚಾರವನ್ನು ಹೊಂದಿದವನು ಸಂತೋಷಪಟ್ಟನೆಂದರೆ ತಾನೂ ಅಪರಿಮಿತವಾದ ಆನಂದವನ್ನು ಹೊಂದುವನು. ಆದರೆ ರಾಮುವು ಹುಟ್ಟು ಬಡವನು. ಜನ್ಮದಾತೃಗಳಾದ ಮಾತಾಪಿತೃಗಳನ್ನು ಅರಿಯನು. ಒಡಹುಟ್ಟಿದ ಅಣ್ಣ ತಮ್ಮಂದಿರನ್ನು ಕಾಣನು. ತನ್ನನ್ನು ಚಿಕ್ಕಂದಿನಿಂದಲೂ ಹೊತ್ತು ಸಾಕಿದ ಅಜ್ಜಿಯೊಬ್ಬಳು ಮಾತ್ರ ಆತನ ಅನುಬಂಧಿಯು. ರಾಮುವು ಆಕೆಯಲ್ಲಿ ನಿಜವಾದ ಭಕ್ತಿಯನ್ನೂ, ಪ್ರೀತಿಯನ್ನೂ ಇಟ್ಟಿದ್ದನು. ಹೊರಗೆ ಹೇಗಿದ್ದರೂ ಅವಳ ಬಳಿಯಲ್ಲಿ ಮಾತ್ರ ನಮ್ರಸ್ವಭಾವನಾಗಿರುವನು. ಅವಳಿಗೆ ಅನುಚಿತವೆಂದು ತೋರಿದ ಕಾರ್ಯಕ್ಕೆ ಮನಮಾಡನು. ಇಂತಿರ್ಪ ರಾಮುವನ್ನು ಹೊಂದಿದ ಆ ಅಜ್ಜಿಯು ರಾಮುವಿನ ವಿಷಯದಲ್ಲಿ ಇಟ್ಟಿದ್ದ ವರ್ತನೆಯಾದರೂ ಹೇಗಿರಬೇಕೆಂಬುದನ್ನು ನಾವು ಹೆಚ್ಚಿಗೆ ತಿಳಿಸಿ ಫಲವಿಲ್ಲ. ಒಟ್ಟಿನಲ್ಲಿ "ರಾಮುವೇ ಅವಳ ಪಂಚಪ್ರಾಣವು". ರಾಮುವು ಸಂಗೀತ ಉಪಾಧ್ಯಾಯ ವೃತ್ತಿಯನ್ನು ಕೈಗೊಂಡು ಇಂದಿಗೆ ವರ್ಷವು ಅಂತ್ಯವಾಗಲು ಬಂದಿದ್ದಿತು. ಆತನ ಶ್ರದ್ಧೆಯ ಕೆಲಸದಿಂದ ಆಗಲೇ ಎಷ್ಟೋ ಮಂದಿ ಬಾಲ-ಬಾಲಿಕೆಯರು, ಸಂಗೀತದಲ್ಲಿ ಪರಿಶ್ರಮಪಡೆದಿದ್ದರು. ಅವರಲ್ಲಿ ಸರಸು ಒಬ್ಬಳು.

ಸರಸುವು ಶ್ರೀಮಂತ ಶ್ರೀಪತಿರಾಯರ ದ್ವಿತೀಯ ಪುತ್ರಿಯು. ರಾಮುವು ಉಪಾಧ್ಯಾಯ ವೃತ್ತಿಯಲ್ಲಿ ಕಾಲಿಟ್ಟುದು ಇದೇ ಸರಸುವಿನ ದೆಸೆಯಿಂದ. ಸರಸುವಿಗೀಗ 12 ನೇ ವಯಸ್ಸು ಅಂತ್ಯವಾಗುವ ಕಾಲ. ಸ್ತ್ರೀ ಸಾಮಾನ್ಯದ ಮುಗ್ಧ ಸ್ವಭಾವವು ಅವಳನ್ನಾಗಲೇ ಆವರಿಸಿತ್ತು. ರಾಮುವು ಪಾಠವನ್ನು ಹೇಳಿಕೊಡುತ್ತಿದ್ದಾಗ ಅವಳು ಗೂಢವಾದೊಂದು ತರ್ಕಕ್ಕೆ ಆರಂಭಿಸುವಳು. ಚಕ್ಷುಗಳಿಂದ, ಒಂದೇ ಸಮನಾಗಿ ಆತನನ್ನು ಈಕ್ಷಿಸುತ್ತಿರುವಳು. ಅವನು ಈ ಕಡೆ ತಿರುಗಿದನೆಂದರೆ ಅದೊಂದು ಬಗೆಯ ಮುಚ್ಚು ಭಾವನೆಯನ್ನು ತೋರಕೊಡದೆ ತನ್ನ ಪ್ರಕೃತಿ ಸ್ಥಿತಿಯನ್ನು ಬಚ್ಚಿಡುವಳು.

ಅಂದಿನ ಪ್ರಾತಃಕಾಲ 9–10 ಗಂಟೆಯ ಸಮಯವಿರಬಹುದು. ಮೇಲೆ ತಿಳಿಸಿದಂತೆ ವಿಲಕ್ಷಣ ಚಿತ್ತವಿಕಾರವು, ರಾಮುವಿಗೂ, ಸರಸುವಿಗೂ ಉಂಟಾಗಿರಲು, ಅಲ್ಲಿಗೆ ಶ್ರೀಪತಿರಾಯರು ಹಠಾತ್ತಾಗಿ ಬಂದರು. ಅವರು ಇವರೀರ್ವರ ಸ್ಥಿತಿ-ಗತಿಗಳನ್ನು ನೋಡಿ ಮರುಮಾತನಾಡದೇ ಹೊರಟು ಹೋದರು. ಶ್ರೀಪತಿರಾಯರು ಅಲ್ಲಿಂದ ಹೊರಟು ಹೋಗಲು ರಾಮುವಿಗೆ ಅಗತಿಯುಂಟಾಯಿತು. ಸರಸುವೂ ಎಚ್ಚರಗೊಂಡು ತನ್ನ ಪರಿಸ್ಥಿತಿಯನ್ನು ನೆನೆದು ಲಜ್ಜಾಭರಿತಳಾಗಿ ತಲೆ ತಗ್ಗಿಸಿದಳು. ತನ್ನ ಚಿತ್ತವೃತ್ತಿಯು ವಿಲಕ್ಷಣ ಉದ್ವೇಗಕ್ಕೆ ಕೈಹಾಕಿತೆಂದು ಅರಿತ ರಾಮುವೂ ಕಳವಳಗೊಂಡು ಅಲ್ಲಿಂದೆದ್ದು ಹೊರಟು ಹೋದನು. ಇದು ಸರಸುವಿನ ಚಿತ್ತಕ್ಕೆ ಶಾಂತಿಯನ್ನುಂಟುಮಾಡಲಿಲ್ಲ. ಕುಂತಲ್ಲಿಯೇ ಎರಡು ಹನಿ ಕಣ್ಣೀರಿಟ್ಟಳು ಮಾತ್ರ. ಅಂದಿನ ರಾತ್ರಿಯು ಗತಿಸಿತು. ಘಂಟೆ ೯ರ ಸಮಯಕ್ಕೆ ಬಂದಿದ್ದಿತು. ರಾಮುವೊಬ್ಬನೇ ತನ್ನ ಕೋಣೆಯಲ್ಲಿ ಕುಳಿತು ಪರಿಪರಿಯಾಗಿ ಯೋಚಿಸುತ್ತಿರುವನು. ಹೀಗೆ ಎಷ್ಟು ಹೊತ್ತು ಕಳೆದನೋ? ಕೊನೆಗೆ ಆ ಸ್ಪಷ್ಟ ಧ್ವನಿಯಿಂದ "ಆ ಪುಣ್ಯವತಿಗೆ ಎಲ್ಲಿ ಬರಬೇಕು? ಶ್ರೀಮಂತ ಕನ್ಯೆಯಾದ ಸರಸುವೆಲ್ಲಿ? ಅನಾಥನಿಗೆ ಪಾಠ ಹೇಳಿಕೊಟ್ಟು ಹೊರಯುವ ಈ ನಿರ್ಭಾಗ್ಯ ರಾಮಹೋದರನೆಲ್ಲಿ?" ಎಂದನು. ಆ ಕ್ಷಣವೇ ಅಲ್ಲಿಂದೆದ್ದು ಸಡಗರದಿಂದ ತನ್ನ ದಿನಪ್ರತಿಯ ಉಡುಪನ್ನು ಧರಿಸಿ, ಹೊರಯೊರಟನು. ಅವನು ದಾರಿಯನ್ನು ಆಕ್ರಮಿಸುತ್ತಿದ್ದಾಗಲೂ ಆ ಯೋಚನಾ ಪಿಶಾಚಿಯು ಆತನ ಬೆನ್ನು ಬಿಡಲಿಲ್ಲ.

ಅವನು ಅದೆಲ್ಲಿಗೆ ಹೊರಡಬೇಕೆಂದು ಹೊರಟನೋ ಅದಕ್ಕೆ ವಿರುದ್ಧವಾಗಿ ಸರಸುವಿನ ಮನೆಯ ಮುಂದೆ ಬಂದು ನಿಂತನು. ಮನಸ್ಸಿನ ಸ್ಥಿತಿಯು ಇಬ್ಬಗೆಯಾಗಿರಲು, ಬಲಾತ್ಕಾರದಿಂದ ಒಳನುಗ್ಗಿ ಶ್ರೀಪತಿರಾಯರ ಕೋಣೆಯ ಬಳಿ ಬಂದು ನಿಂತನು. ಕೆಲಸದ ಭರದಲ್ಲಿದ್ದ ಶ್ರೀಪತಿರಾಯರು ಅವನನ್ನು ನೋಡಲಿಲ್ಲ. ರಾಮುವನ್ನು ಕಂಡ ಶ್ರೀಪತಿರಾಯರ ಕರಣಿಕನು ಆ ವಿಷಯವನ್ನು ತನ್ನೊಡೆಯನಿಗೆ ತಿಳಿಸಿದನು. ಶ್ರೀಪತಿರಾಯರು ರಾಮುವನ್ನು ಕಂಡು ಕಿರುನಗೆಯನ್ನು ಸೂಸುತ್ತಾ "ರಾಮೂ ಸರಸುವಿನ ಹಸ್ತದಿಂದ ಇಂದು ನಿನ್ನ ಗುರುದಕ್ಷಿಣೆಯನ್ನು ಪಡೆಯುವಿಯಂತೆ. ಸಂಜೆ ೫ಕ್ಕೆ ಸರಿಯಾಗಿ ಬಾ" ಎಂದರು. ಇದನ್ನು ಕೇಳಿ ರಾಮುವು ಕ್ಷಣಕಾಲ ಸ್ತಂಭೀಭೂತನಾದನು. ಶ್ರೀಪತಿರಾಯರು ತನ್ನ ಮತ್ತು ಸರಸುವಿನ ಅಂದಿನ ಆಕಸ್ಮಿಕ ವರ್ತನೆಯನ್ನು ಅರಿತು ಈ ರೀತಿ ಹೇಳುತ್ತಿರುವರೇ? ಎಂದು ತರ್ಕಿಸಿದನು. ಬಾಹ್ಯಸ್ಥಿತಿಯು ಅವು ದಾವದೊಂದು ಸಂಶಯಕ್ಕೆ ಕಾರಣವಾದೀತೆಂಬ ಶಂಕೆಯಿಂದ ಅದನ್ನು ತೋರಗೊಡದೆ, ಅಲ್ಲಿಂದ ಹೊರಬಿದ್ದು ಮೇಲಂತಸ್ತಿನ ಕಡೆಗೆ ಹೊರಟನು. ಅಂತಸ್ತಿನ ಹಂತವನ್ನು ಹತ್ತುತ್ತಿದ್ದಂತೆಲ್ಲಾ ಮನಸ್ಸಿನ ಕಲ್ಪನೆಗಳು ವಿಪರೀತವಾಗುತ್ತಿದ್ದವು. ಮನಸ್ಸಿನ ಪರಿಸ್ಥಿತಿ ಎಂತಾದರೂ ಇರಲಿ. ಪದಪಲ್ಲವಗಳು ತಮ್ಮ ಕಾರ್ಯವನ್ನು ಸಾಗಿಸಿದವು. ರಾಮುವು ಸರಸುವಿನ ಕೋಣೆಯ—ಬಾಗಿಲಬಳಿ ಬಂದು ನಿಂತನು. ಕೋಣೆಯ ಬಾಗಿಲು ಅರೆವಾಸಿ ತೆರೆದಿದ್ದಿತಲ್ಲದೆ ಒಳಗಿನ ಕಿಟಕಿಯ ಮೂಲಕ ಬರುತ್ತಿದ್ದ ಸೂರ್ಯನ ಕಾಂತಿಬಿಂಬವು, ಆ ಕೊಠಡಿಯನ್ನೆಲ್ಲಾ ಆವರಿಸಿ, ಮನಸ್ಸಿಗೆ ಒಂದು ಬಗೆಯ ಆಹ್ಲಾದವನ್ನು ರಚಿಸುತ್ತಿದ್ದಿತು.

ರಾಮುವು ಹಾಗೆಯೇ ಒತ್ತಡವೆ ಇಣಕಿ ಹಾಕಿದನು. ಒಳಗಿನದೊಂದು ಸೌಂದರ್ಯ ಪ್ರತಿಮೆಯನ್ನು ಕಂಡು ಚಕಿತನಾದನು. ಮುಖವು ವಿಕಸಿತವಾಯಿತು. ತಾನು ಯಾವ ಮೂರ್ತಿಯನ್ನು ಕಂಡನೋ ಅದೇ ಸರಸುವು ಪ್ರತ್ಯಕ್ಷ ದೇವತಾ ಸ್ತ್ರೀಯಂತೆಯೂ ಲಾವಣ್ಯಮಯಿಯಾದ ಅದೇ ಸರಸು ಲೋಕೋತ್ತರ ಸೌಂದರ್ಯ ನಿಧಿಯಂತೆಯೂ ಕಂಡುಬಂದಳು. ಉಟ್ಟ ಪೀತಾಂಬರವು ಝಗಝಗಿಸುತ್ತಿದ್ದಿತು. ನಾರೆ ಬೈತಲೆ ಸುಶೋಭಿತವಾದ ಕಾಡಿಗೆಯ ಕಪ್ಪಿನಂತಹ ತಲೆಗೂದಲುಗಳು ಒಂದೊಂದು ಇಳ್ಳೊಂದರಂತೆ ಎದ್ದು ಆ ಮುಖಮಂಡಲಕ್ಕೆ ಅಪರಿಮಿತವಾದ ಕಾಂತಿಯನ್ನೀಸಗುತ್ತಿದ್ದುವು. ಕಂಠದಲ್ಲಿ ಸುವರ್ಣಹಾರಗಳು ಒಂದರ ಮೇಲೊಂದರಂತೆ ಶೋಭಿಸಿದ್ದವು. ಕೈಯೊಂದು ಲೇಖನಿಯೂ ಮೊಣಕಾಲಿನ ಮೇಲೊಂದು ಶ್ವೇತಪತ್ರವೂ ಇದ್ದು ಸರಸುವು ಏನನ್ನೋ ಯೋಚಿಸುತ್ತಿದ್ದಳು. ರಾಮುವು ನಿಶ್ಚೇಷ್ಟಿತನಾಗಿ ಆ ಬಾಗಿಲ ಸಂದಿಯಲ್ಲಿ ನೋಡುತ್ತಿದ್ದಂತೆ ಅವಳ ಯೋಚನೆಯು ಬಗೆಹರಿದಂತಾಗಿ ಆ ಮುಖವು ಅಪರಿಮಿತವಾದ ಕಾಂತಿಯನ್ನು ಹೊಂದಿತು. ಬಗೆಹರಿದ ವಿಚಾರವನ್ನು ಅತ್ಯವಸರದಿಂದ ಬರೆಯತೊಡಗಿದಳು. ಬರೆಯುವಾಗಲಂತೂ ಅವಳ ಮುಖಕಾಂತಿಯು ಕ್ಷಣಕೊಂದು ಭೇದವನ್ನು ಹೊಂದುತ್ತಿದ್ದಿತು. ಹಾಗೆಯೇ, ಒತ್ತಡವೆ ಲಜ್ಜಾಮಿಶ್ರಿತವಾದ ನಗು, ಮತ್ತೊಮ್ಮೆ ಅಧಿಕ ಪ್ರಣಯಪೂರಿತವಾದ ದೀನತೆಯ ಭಾವ, ಮತ್ತೊಮ್ಮೆ ಅವಹೇಳನತೆಯ ಅಹಂಭಾವ, ಇತ್ಯಾದಿ ಅವರ್ಣನೀಯ ಭಾವ ಸಮುದಾಯಗಳನ್ನೊಳಗೊಂಡ ಆ ಮುಖಮಂಡಲದಲ್ಲಿ ನಿಷ್ಕಾಪಟ್ಯವೂ, ಪ್ರಣಯಶೀಲತೆಯೂ, ಮಾತ್ರ ಆಗಾಗ್ಗೆ ಎದ್ದು ಕಾಣುತ್ತಿದ್ದುವು. ಸರಸುವಿನ ಈ ಬಗೆಯ ಭಾವಾ ಪರಿವರ್ತನವು ಕ್ಷಣಕಾಲ ರಾಮುವನ್ನು ಸ್ತಬ್ಧನನ್ನಾಗಿ ಮಾಡಿದುವು. ಪದಪಲ್ಲವಗಳು ಮನಸ್ಸಿನ ವರ್ತನೆಗೆ ಆಸರೆ ಕೊಡದೆ ಮುಂಬರಿದವು. ರಾಮುವು ಒಳಗೆ ಕಾಲಿಟ್ಟು ಸ್ತಬ್ಧನಾಗಿ ನಿಂತನು. ಸರಸುವಿಗೆ ಅರಿವಿರಲಿಲ್ಲ. ತನ್ನ ಕಾರ್ಯದಲ್ಲಿ ತಾನು ಮಗ್ನಳಾಗಿದ್ದಳು. ಇದನ್ನರಿತ ರಾಮುವು ಧೀರ್ಘ ನಿಟ್ಟುಸಿರೊಂದನ್ನು ಬಿಟ್ಟನು. ಇದರಿಂದ ಸರಸುವು ಎಚ್ಚೆತ್ತು ಗುಗ್ಗನೆದ್ದು ಬರೆದಿದ್ದ ಪತ್ರವನ್ನು ಮರೆಮಾಡಲೆಳಸಿದಳು. ಆದರೆ ಲೇಖನ ವ್ಯೂಹವನ್ನು ರಚಿಸುತ್ತಿದ್ದಾಗ ಸರಸುವಿನ ಭಾವಾ ಪರಿವರ್ತನವನ್ನರಿತ ರಾಮುವಿಗೆ ಸರಸುವಿನ ಈಗಿನ ಕಾರ್ಯವು ಸಂಶಯಕ್ಕೆ ಮತ್ತೂ ಆಸ್ಪದ ಕೊಟ್ಟಂತಾಯಿತು. ಯಥಾರ್ಥವನ್ನರಿಯಲು, ಸರಸುವಿನ ಕೈಯಿಂದ ಆ ಪತ್ರವನ್ನು ಕಿತ್ತುಕೊಂಡೇ ಬಿಟ್ಟನು

(ಸಶೇಷ)

ಇಟಲಿ—ಅಬಿಸೀನಿಯಾ ಯುದ್ಧವಾರ್ತೆ.

ಇಟಲಿ-ಅಬಿಸೀನಿಯ ಯುದ್ಧವು ಎಂದಿನಂತೆ ಬಿರುಸಾಗಿಯೇ ನಡೆಯುತ್ತಿದೆ. ಇಟಲಿಯವರು ಅಬಿಸೀನಿಯದಲ್ಲಿ ಅನೇಕ ಭಾಗಗಳನ್ನು ಆಕ್ರಮಿಸಿರುವರು. ವಿಶೇಷ ಸಾಮಗ್ರಿಗಳನ್ನು ವಶಪಡಿಸಿಕೊಂಡಿರುವರು. ಮದ್ದು, ಗುಂಡು, ಬಾಂಬುಗಳನ್ನು ಹಾಕುತ್ತಿರುವರು. ವಿಷವಾಯುವನ್ನು ಸಹ ಪ್ರಯೋಗಮಾಡಿದರು. ಇದಲ್ಲದೆ ಅಬಿಸೀನಿಯಾದ ಚಕ್ರವರ್ತಿಯು ಸತ್ತು ಹೋದನೆಂದು ಗಾಳಿ ವರ್ತಮಾನವನ್ನು ಹರಡಿದರು. ಆದರೆ ಆ ಚಕ್ರವರ್ತಿಗಳು ಸುರಕ್ಷಿತರಾಗಿದ್ದಾರೆ. ಅವರ ಪ್ರಜೆಗಳೂ ಧೈರ್ಯದಿಂದ ಮುಂದೆ ನುಗ್ಗುತ್ತಿರುವರು. ಈಚೆಗೆ ಬಂದ ಸಮಾಚಾರದಲ್ಲಿ ಇಟಲಿ ಕಡೆ ಸಾವಿರಾರು ಜನರು ಹತರಾದರೆಂದೂ ಇಟಲಿಯ ವಿಮಾನಗಳನ್ನು ಅಬಿಸೀನಿಯಾದವರು ಹಿಡಿದು ಸ್ವಾಧೀನಪಡಿಸಿಕೊಂಡಿರುವರೆಂದೂ ಗೊತ್ತಾಗಿದೆ. ಅವರ ಸಾಹಸವು ಆಶ್ಚರ್ಯಕರವಾಗಿದೆ

ಹಿಂದೂ ಮುಸ್ಲಿಂ ಗಲಭೆ.

ಪೂನಾ ನಗರದಲ್ಲಿ ಭಾರಿ ಹಿಂದೂ ಮುಸ್ಲಿಂ ಗಲಭೆಯಾಗಿ ಹತ್ತು ಜನರು ಸತ್ತರು. ನೂರಾರು ಜನರು ಗಾಯಗೊಂಡರು. ದೇವಸ್ಥಾನ ಮತ್ತು ಮಸೀತಿಗಳಿಗೆ ಬೆಂಕಿ ಹಾಕಲ್ಪಟ್ಟಿತು. ಮಿಲಿಟರಿಯವರು ಪ್ರವೇಶಿಸಿದರು. ಈಗ ಪರಿಸ್ಥಿತಿ ಶಾಂತವಾಗಿದೆ

ವರ್ತಮಾನ ಸಂಗ್ರಹ

—

ಉಭಯ ವೇದಾಂತ ಪ್ರವರ್ತನ ಸಭಾ

ಪೋಲ್ಕೊತ ಸಭೆಯ ೩೫ ನೇ ವರ್ಷದ ಸಮ್ಮೇಳನವು ಮೇಲ್ಕೋಟೆ ಶ್ರೀ ನಾರಾಯಣಸ್ವಾಮಿ ದೇವಸ್ಥಾನದಲ್ಲಿ ಕಳೆದ ೨೦ ನೇ ತಾ|| ನಡೆಯಿತು. ಶ್ರೀಮದ್ ಪೂರ್ಣತ್ರ್ರತ ಮೀಮಾಂಸಾ ಭೂಷಣ ವಿದ್ವಾನ್ ಶ್ರೀ ದೇವನಹಳ್ಳಿ ರಾಮಾನುಜಾಚಾರ್ಯರವರು ಉಪನ್ಯಾಸವನ್ನು ವಹಿಸಿದ್ದರು. ಅನೇಕ ಜನ ಮಹನೀಯರೂ, ಮಹಿಳೆಯರೂ ಬಂದಿದ್ದರು. ಕಾರ್ಯದರ್ಶಿಗಳು ವರದಿಯನ್ನೊಪ್ಪಿಸಿದರು. ಪರೀಕ್ಷೆಗಳಲ್ಲಿ ಜಯಶಾಲಿಗಳಾದ ವಿದ್ಯಾರ್ಥಿಗಳಿಗೆ ಬಹುಮಾನಗಳು ಹಂಚಲ್ಪಟ್ಟವು. ಐವತ್ತು ರೂ ನಿಂದ ಐದು ರೂ ವರೆಗೆ ಬಹುಮಾನಗಳು ಕೊಡಲ್ಪಟ್ಟವು. ಒಟ್ಟು ೭೧೮ ರೂ ಕೊಡಲ್ಪಟ್ಟಿತು. ವೇ|| ಆತ್ಮಕೂರು ದೀಕ್ಷಾಚಾರ್ಯರೂ ಅಧ್ಯಕ್ಷರೂ ಶ್ರೀ ರಾಮಾನುಜಾಚಾರ್ಯರ ಜೀವನ ಚರಿತ್ರೆಯ ವಿಷಯವಾಗಿ ಸ್ವಾರಸ್ಯವಾದ ಭಾಷಣವನ್ನು ಮಾಡಿದರು—ಎಂದು ಒಬ್ಬ ಬಾತ್ಮೀದಾರರು ಬರೆಯುತ್ತಾರೆ.

ಕೃಷ್ಣಾಪುರದ ರಥೋತ್ಸವ.

ಟಿ ನರಸೀಪುರದ ತಾ|| ಕೃಷ್ಣಾಪುರದಲ್ಲಿ ಶ್ರೀ ಸಂತಾನ ಗೋಪಾಲಕೃಷ್ಣಸ್ವಾಮಿಯ ವರ ರಥೋತ್ಸವವು ಕಳೆದ ೨೩ ನೇ ತಾ|| ಭಕ್ತಿಗಳಿಂದ ನೆರವೇರಿಸಲ್ಪಟ್ಟಿತು. ಈ ಗ್ರಾಮವನ್ನೂ, ಕಾರಗಹಳ್ಳಿ, ಬಂಬೂರು ವಗೈರೆ ಗ್ರಾಮಗಳನ್ನು ಸರ್ಕಾರದವರು ಶ್ರೀ ಪರಕಾಲಸ್ವಾಮಿಗಳವರ ಮಠಕ್ಕೆ ಇನಾಂ ಆಗಿ ಕೊಟ್ಟಿರುವರು. ಕೃಷ್ಣಾಪುರದಲ್ಲಿ ಶ್ರೀ ಪರಕಾಲ ಸ್ವಾಮಿಗಳ ಮಠವೂ ಶ್ರೀ ರಾಮಾನುಜ ಪರಕಾಲಸ್ವಾಮಿಗಳ ಬೃಂದಾವನವೂ ಇರುತ್ತೆ. ಇಲ್ಲಿದ್ದ ಶ್ರೀ ರಾಮಾನುಜ ಪರಕಾಲಸ್ವಾಮಿಗಳಲ್ಲಿಯೇ ಬೃಂದಾವನಸ್ಥರಾದರೆಂದು ತಿಳಿಯುತ್ತದೆ. ಇದು ಕಾವೇರಿ ತೀರದಲ್ಲಿರುವ ಒಂದು ಮುಖ್ಯ ಕ್ಷೇತ್ರವು.

ಮೈಸೂರು ಬ್ಯಾಂಕಿನಲ್ಲಿ ಭಯಾನಕ

ಬೆಂಗಳೂರು ಮೈಸೂರು ಬ್ಯಾಂಕಿನ ಚೀಫ್ ಕ್ಯಾಷಿಯರ್ ವೆಂಕಟಸ್ವಾಮಿ ಎಂಬುವನ ವಶದಲ್ಲಿ ನೂರು ರೂಪಾಯಿ ನೋಟುಗಳನ್ನು ಇನ್ಸೂರ್ ಮಾಡಲು ಬ್ಯಾಂಕಿನವರು ಕೊಟ್ಟಿದ್ದರು. ಅವನು ಹಾಗೆಯೇ ತಲೆತಪ್ಪಿಸಿಕೊಂಡು ಮೂರು ದಿನಗಳ ವರೆಗೆ ಸಿಕ್ಕಲಿಲ್ಲ. ಹಿಡಿದುಕೊಟ್ಟವರಿಗೆ ಇನ್ನೂರೈವತ್ತು ರೂ ಬಹುಮಾನ ಕೊಡುವುದಾಗಿ ಬ್ಯಾಂಕಿನವರು ಪ್ರಕಟಿಸಿದ್ದರು. ಆದರೆ ಅವನು ಕಳೆದ ಶುಕ್ರವಾರ ಬೆಂಗಳೂರು ಸಿಟಿ ರೈಲ್ವೆ ಸ್ಟೇಷನ್ನಿನಲ್ಲಿ ಪೋಲೀಸಿನವರ ಕೈಗೆ ಸಿಕ್ಕಿಬಿದ್ದನು. ಈಗ ಲಾಕಪ್ಪಿನಲ್ಲಿದ್ದಾನೆ.

ಮಹಾತ್ಮರ ನಿವಾಸ ಸ್ಥಾನ

ಮಹಾತ್ಮ ಗಾಂಧಿಯವರು ಇನ್ನು ಮುಂದೆ ಸೇಗಾನ್ ಎಂಬ ಹಳ್ಳಿಯಲ್ಲಿ ನೆಲಸುವರು. ಅಲ್ಲಿ ಇರಬೇಕೆಂದು ಅವರು ಬಹಳ ದಿವಸಗಳಿಂದ ಕಾತುರಪಟ್ಟಿರುವರು. ಅದು ವಾರ್ಧಾ ಹತ್ತಿರ ಇರುವುದು. ಅಲ್ಲಿ ಇದ್ದರೂ ಬಾಹ್ಯ ಪ್ರಪಂಚದ ಸಂಬಂಧವನ್ನು ತೊರೆಯುವುದಿಲ್ಲವೆಂದು ಅವರು ಹೇಳಿರುವರು. ಸ್ನೇಹಿತರು ಯಾವಾಗ ಬೇಕಾದರೂ ಅವರಲ್ಲಿ ಹೋಗಿ ವಿಚಾರಮಾಡಬಹುದು.

ಯುದ್ಧದಿಂದ ಸುಖವಿಲ್ಲ

ಪಾರ್ಲಿಮೆಂಟ್ ಸಭೆಯ ಅಂಡರ್ ಸೆಕ್ರಿಟೆರಿಯವರು ಒಂದು ಭಾಷಣದಲ್ಲಿ ಹೀಗೆ ಹೇಳಿದರು: ಇಟಲಿಯು ಸ್ವಲ್ಪಕಾಲದ ಹಿಂದೆ ದಾಳಿಮಾಡಿದ ದುರಾಕ್ರಮದ ಪರಿಣಾಮವನ್ನು ಅನುಭವಿಸುವುದು ಯುದ್ಧದಿಂದ ಸುಖವಿಲ್ಲವೆಂಬುದು ದಿನೇ ದಿನೇ ಹೆಚ್ಚು ಹೆಚ್ಚಾಗಿ ತಿಳಿದು ಬರುತ್ತಿದೆ. ಇನ್ನು ಮುಂದೆ ಜನಾಂಗಗಳು ಯುದ್ಧಕ್ಕೆ ಹೊರಡುವ ಸಂಭವಗಳೂ ಕಡಿಮೆಯಾಗುತ್ತಿವೆ.

ಕಾಗದದ ಕಾರ್ಖಾನೆ.

ಭದ್ರಾವತಿಯಲ್ಲಿ ಕಾಗದದ ಕಾರ್ಖಾನೆಯೊಂದನ್ನು ಸ್ಥಾಪಿಸಬೇಕೆಂದು ಸರ್ಕಾರದವರು ನಿರ್ಧರಿಸಿರುವರು. ಇದು ಲಿಮಿಟೆಡ್ ಕಂಪೆನಿಯಾಗುತ್ತದೆ. ಇದಕ್ಕೆ ಒಟ್ಟು ೨೦ ಲಕ್ಷ ರೂಪಾಯಿಗಳ ಬಂಡವಾಳವು ಬೇಕಾಗುವುದೆಂದು ಅಂದಾಜು ಮಾಡಲ್ಪಟ್ಟಿದೆ. ನವೀನ ಉಪಕರಣಗಳು ಉಪಯೋಗಿಸಲ್ಪಡುವುವು. ಇದು ಅತ್ಯಂತ ಆವಶ್ಯಕವಾದ ಕಾರ್ಯವು.

ಮುಸಲ್ಮಾನ ಮಹಾತ್ಮ.

ಸೀಲಿಂಗ್ ಒಬ್ಬ ಮುಸಲ್ಮಾನ ಮಹಾತ್ಮನು ಬಂದಿರುತ್ತಾನೆ. ಪಲ್ಲಿಕತೆಂಬಿ ಆಹುಲಿಯಾ ಎಂದು ಅವನ ಹೆಸರು. ಒ ತ್ತಿ ವರ್ಷ ವಯಸ್ಸು. ಅಶೋಕ ನಡೆದುಕೊಂಡು ಬಂದಿರುವನು. ಮಸೀದಿಯಲ್ಲಿ ಪ್ರಾರ್ಥನೆಗಳನ್ನು ನಡೆಸಿದನು. ಆತನ ಮರವಣಿಗೆಯು ಆಗುತ್ತಿದೆ. ಮುಸಲ್ಮಾನ ನೇತಾರರು ಆತನನ್ನು ಸಂದರ್ಶಿಸಿ ಬೀಳ್ಕೊಡುವರು. ಆತನಲ್ಲಿ ಅದ್ಭುತ ಶಕ್ತಿಗಳಿವೆಯೆಂದು ಹೇಳುತ್ತಾರೆ.

ಉದಾರ ದಾನ

ಮೈಸೂರು ನಗರದಲ್ಲಿ ವೀರಶೈವ ವಿದ್ಯಾರ್ಥಿನಿಲಯವನ್ನು ಕಟ್ಟಿಸಲು, ತುಮಕೂರಿನ ರಾವ್ ಬಹದ್ದೂರ್ ಶ್ರೀ|| ಪಿ ಎಸ್ ಮಾದಪ್ಪನವರು ಒಂದು ಕಟ್ಟಡವನ್ನು ದಾನ ಮಾಡಿರುವರು. ಮತ್ತು ಲಿಂಗಾಯಿತರ ಸಹಾಯಕ್ಕಾಗಿ ದೊಡ್ಡ ಜಮೀನನ್ನೂ ಬಿಟ್ಟುಕೊಟ್ಟಿರುವರು.

ಬಡವರಿಗೆ ವಸತಿ

ಮೈಸೂರು ನಗರದಲ್ಲಿ ಬಡವರಿಗೆ ವಸತಿಗಳನ್ನು ಕಟ್ಟಿಸಲು ಮದುವನಕ್ಕೆ ಕರುಹಟ್ಟಿಗೂ ಮಧ್ಯ ಇರುವ ೯೩ ಎಕರೆ ಜಮೀನನ್ನು ಮೈಸೂರು ಟ್ರಸ್ಟ್ ಬೋರ್ಡಿನವರ ಅಕ್ರಮಿಸಬೇಕೆಂದು ನಿರ್ಣಯಿಸಿರುವರು. ಇದಕ್ಕಾಗಿ ಮೈಸೂರು ಪೌರಸಭೆಯ ಮೂಲಕ ೫೦,೦೦೦ ರೂ ಸಾಲ ಪಡೆದು ೧೫ ವರ್ಷಗಳಲ್ಲಿ ತೀರಿಸತಕ್ಕದ್ದೆಂದೂ ತೀರ್ಮಾನ ಮಾಡಿರುವರು.

ವಿದ್ಯಾರ್ಥಿಗಳು ಯುವತಿಯನ್ನು ಪಾರಿಸಿದರು.

—

ನಾಟಕಶಾಲೆಯಲ್ಲಿ ಕೃತ್ಯ

ಒಂದು ನಾಟಕಶಾಲೆಯಲ್ಲಿ ಒಬ್ಬ ದಾಸಿ ಕೂತಿರುವ ಕೊಠಡಿಗೆ ನುಗ್ಗಿ ನಟಿಯೊಬ್ಬಳನ್ನು ಕಳವರು ವಿದ್ಯಾರ್ಥಿಗಳು ಪಾರು ಕೊಂಡು ಹೋದ ವಿಚಿತ್ರ ಸುದ್ದಿಯು ಸ್ಕಾಟ್ಲೆಂಡಿನಿಂದ ಬಂದಿದೆ. ಸುಪ್ರಸಿದ್ಧ ಹಾಸ್ಯ ನಟಿಯಾದ ಲೇಡಿ ಸ್ಟುವರ್ಟ್-ಸಾರ್ಟರ್ ಎಂಬಾಕೆಯು ಎಡಿನ್‌ಬರೋದ ಎಂಪೈರ್ ನಾಟಕಶಾಲೆಯಲ್ಲಿ ಒಂದು ನಾಟಕದಲ್ಲಿ ಅಭಿನಯಿಸುತ್ತಿದ್ದಳು. ಅವಳು ನಾಟಕಕ್ಕಾಗಿ ವೇಷಭೂಷಣಗಳನ್ನು ಮಾಡಿಕೊಂಡಿದ್ದಳು. ಆಗ ಕೆಲವು ಜನ ತರುಣರ ಒಂದು ದಂಡು ಆ ಕೊಠಡಿಗೆ ನುಗ್ಗಿತು. ಬಾಗಿಲು ಕಾಯುವವನ ಕೈಕಾಲು ಕಟ್ಟಿದರು. ಒಬ್ಬಳನ್ನು ಇದ್ದ ಹಾಗೆಯೇ ಒಂದು ಮೋಟಾರಿನಲ್ಲಿ ಹಾಕಿ ಹೊತ್ತುಕೊಂಡು ಹೋದರು. ಈ ಸುದ್ದಿ ನಾಟಕಶಾಲೆಯ ವ್ಯವಸ್ಥಾಪಕರಿಂದ ೨೫ ಪೌಂಡುಗಳನ್ನು ದಂಡವಾಗಿ ಇಟ್ಟರು. ಅವರು ಕೇಳಿದರು ಎಡಿನ್‌ಬರೋದ ವಿದ್ಯಾರ್ಥಿ ಸಂಘದವರಿಗೆ ಈ ಹಣವು ಸಿಕ್ಕಿತು. ವಿದ್ಯಾರ್ಥಿಗಳು ಬಂದಾಗ ಯುವತಿಯನ್ನು ಹೊತ್ತುಕೊಂಡು ಹೋದ ವಿಚಾರವನ್ನು ಆಸ್ಪತ್ರೆಗಳವರು ವಿದ್ಯಾಲಯದ ಅಧ್ಯಕ್ಷರು ಈ ವಿಷಯವನ್ನು ವಿಚಾರಿಸಿ ಪದಿನೈದು ಜನ ವಿದ್ಯಾರ್ಥಿಗಳು ಈ ಕಾರ್ಯದಲ್ಲಿ ಸೇರಿದ್ದರೆಂದು ಹೇಳಿದರು. ಆ ವಿದ್ಯಾರ್ಥಿಗಳಿಗೆ ಕೊಡಲ್ಪಟ್ಟಿದ್ದ ರಿಯಾಯಿತಿಗಳನ್ನು ರದ್ದು ಮಾಡಲಾಗಿತ್ತು.

ಈ ಪ್ರಸಂಗದಲ್ಲಿ ಆ ಯುವತಿಗೆ ಕಾಲಿನಲ್ಲಿ ಕೆಲವು ಗಾಯಗಳಾಗಿದ್ದವು. ಆದರೂ ಸದರಿ ವಿದ್ಯಾರ್ಥಿಗಳನ್ನು ಕ್ಷಮಿಸಬೇಕೆಂದು ಆಕೆಯು ಶಿಫಾರಸು ಮಾಡಿದಳು. ಪೋಲೀಸಿನವರು ಮಾತ್ರ ಇಷ್ಟಕ್ಕೆ ಬಿಡದೆ ಆ ವಿದ್ಯಾರ್ಥಿಗಳ ಮೇಲೆ ವಿಚಾರಣೆ ಮಾಡಬೇಕೆಂದಿರುವರು.

ಆಸ್ಟ್ರಿಯಾದವರ ಯುದ್ಧ ಸಿದ್ಧತೆ.

ಆಸ್ಟ್ರಿಯಾ ದೇಶದ ಸರ್ಕಾರವು ಸದ್ಯದಲ್ಲಿಯೇ ದಂಡನ್ನು ಒಂದು ಹೊಸ ಸೈನ್ಯವನ್ನು ಸಿದ್ಧಪಡಿಸುವುದಾಗಿ ಹೇಳುವರೆಂದು ಆ ದೇಶದ ಪ್ರತಿನಿಧಿಗಳ ಹೇಳಿಕೆಯು ಮಧ್ಯ ಪ್ರದೇಶದಲ್ಲಿ ಇರುತ್ತದೆ. ಯೂರೋಪಿನಲ್ಲಿ ಸಂಚರಿಸುವ ಎಲ್ಲಾ ಯುದ್ಧ ಪ್ರವೃತ್ತಿಗಳೂ, ವಿಮಾನಗಳೂ ಆಸ್ಟ್ರಿಯಾದ ಮೂಲಕ ಹೋಗಬೇಕಾಗಿರುವ ಮಾರ್ಗ ಮಾತ್ರದಲ್ಲಿ ಬೇಕಾದರೂ ಆಸ್ಟ್ರಿಯಾದಲ್ಲಿ ಯುದ್ಧರಂಗವು ಕಲ್ಪಿಸಲ್ಪಡಬಹುದು. ಆದ್ದರಿಂದ ಆಸ್ಟ್ರಿಯವು ಎಲ್ಲಾ ಸನ್ನಿವೇಶಗಳಿಗೂ ಸಿದ್ಧತೆಯನ್ನು ಮಾಡಿಕೊಳ್ಳುತ್ತಲಿದೆ.

ಜರ್ಮನಿಯು ಸರಹದ್ದಿನ ಬಳಿ ಐದು ಸಾವಿರ ಸೈನ್ಯವು ಇಡಲ್ಪಟ್ಟಿದೆ. ಮಹಾ ನಗರ ಇರುವ ಗ್ರಾಮ ಒಳಗಡೆಯೂ ಇದು ಸಂರಕ್ಷಣೆ ಹಚ್ಚಾಗಿದೆ. ಈ ಸೈನ್ಯಗಳು ವೇಸಿಗೆಕಾಲದ ಅಂತ್ಯದವರೆಗೆ ಅಲ್ಲಿಯೇ ಇರುವವು.

ಮೋಟಾರುಕಾರುಗಳ ಡಿಕ್ಕಿ

—

ಪೋಲೀಸಿನವರ ಆವಶ್ಯಕತೆ

ಕಳೆದ ಶುಕ್ರವಾರ ಮಹಾರಾಜ ಕಾಲೇಜು ಬಳಿ ಸಂಡಿಕರ ಬೀದಿಯಲ್ಲಿ ಒಂದು ಮೋಟಾರು ಡಿಕ್ಕಿ ಆದ ಸಂಗತಿ. ಬೆಂಗಳೂರು ಎಸ್ ವಯ ರವರ ಕಾರು ಒಂದು ಕಡೆಯಿಂದ ಬರುತ್ತಿತ್ತು. ಶ್ರೀನಿವಾಸಯ್ಯನವರ ಕಾರು ಮತ್ತೊಂದು ಕಡೆಯಿಂದ ಬರುತ್ತಿತ್ತು. ಮೊದಲನೆಯದರಲ್ಲಿ ಮಹಾರಾಜರ ಕಾಲೇಜಿನ ಪ್ರೊಫೆಸರಾದ ಡಾ|| ಕ ... ವಿದ್ವಾಂಸರೂ ಇತರರೂ ಇದ್ದರು. ಎರಡನೆಯದರಲ್ಲಿ ಶ್ರೀಮತಿ ಕೋಕಿಲಾ ಸುಬ್ಬಲಕ್ಷ್ಮಿಯವರಿದ್ದರು. ಎರಡು ಮೋಟಾರುಗಳಿಗೂ ಡಿಕ್ಕಿ ಹೊಡೆದು ... ಮೋಟಾರಿನ ಚಕ್ರಗಳು ಜಖಂ ಆದವು. ... ಶ್ರೀಮತಿಯವರಿಗೂ ... ಗಾಯಗಳಾದವು. ಅವರು ಒಡನೆ ... ಆಸ್ಪತ್ರೆಗೆ ಸಾಗಿಸಲ್ಪಟ್ಟು, ಚಿಕಿತ್ಸೆ ಹೊಂದಿ ... ಈಗ ಗುಣವಾಗುತ್ತಿರುವರು. ... ಮೋಟಾರುಗಳನ್ನು ಊರಿಗಳ ಮೇಲೆ ... ತೆಗೆದುಕೊಂಡು ಹೋದರು.

ಈ ರಸ್ತೆಯು ಬಹಳ ಪ್ರಾಮುಖ್ಯ... ಅನೇಕ ಮೋಟಾರುಗಳೂ ... ಗಾಡಿಗಳೂ ತಿರುಗಾಡುತ್ತ... ಸುತ್ತಮುತ್ತಲೂ ಇರುವ ಮಹಾರಾ... ಕಾಲೇಜು, ವಾಣಿವಿಲಾಸ ... ಪ್ರತಿನಿತ್ಯ ಸಾವಿರಾರು ಜನ ವಿದ್ಯಾ... ವಿದ್ಯಾರ್ಥಿನಿಯರು ಹೋಗುತ್ತಾರೆ ... ಬಳಿ ಒಬ್ಬ ಪೋಲೀಸ್ ... ಸ್ಟೇಬಲ್ ಇದ್ದಿದ್ದರೆ ... ಹಿಂದೆ ಕೆಲವು ದಿನಗಳ ಕೆಳಗೆ ಒಬ್ಬ... ಸಿಕ್ಕಿಹಾಕಿಕೊಂಡು ... ಕಡಿಗೆ ತಪ್ಪಿಸಿ... ಆದ್ದರಿಂದ ಇಂತಹ ಅಪಾಯಗಳಿಗೆ ಕಾರಣವಾಗಿದ ... ಈ ಕೊರತೆಯನ್ನು ಪರಿಹರಿಸಬೇಕೆಂದು ಒಬ್ಬ ಬಾತ್ಮೀದಾರರು ಕೋರುತ್ತಾರೆ.

ಹಿಂದೀ ಪ್ರಚಾರ ಸಭಾ

ಮೈಸೂರು ಹಿಂದೀ ಪ್ರಚಾರ ಸ... ದವರು ತುಂಡಿ ಮೊಹಲ್ಲಾ ನಜರ್... ದ ಮುನಿಸಿಪಲ್ ಸ್ಕೂಲುಗಳಲ್ಲಿ ಹಿಂದೀ ... ಗಳನ್ನು ನಡೆಸಲು ಸಿಟಿ ಎಜ್ಯುಕೇಷನ್ ... ಡೆಪ್ಯುಟಿ ಇನ್ಸ್‌ಪೆಕ್ಟರವರು ಅನುಮತಿ ... ರುವರು. ಒಡೆಯರ್ಯವರ ಸ್ಕೂಲಿನ ... ಒಂದು ಗ್ರೀಷ್ಮ ಶಿಬಿರವು ನಡೆಯು... ಅದರಲ್ಲಿ ಹಿಂದೀ ಶಿಕ್ಷಣವೂ, ಕವಾ... ಮುಂತಾದವೂ ಕಲಿಸಲ್ಪಡುತ್ತಿವೆ ... ಜೊತೆ ಮೊಹಲ್ಲಾಗಳಲ್ಲಿ ಹಿಂದೀ ತ... ಳು ನಡೆಯುತ್ತಿವೆ ... ಸ್ಕೂಲಿನಲ್ಲಿ ಪ್ರಾಥಮಿಕ, ಮಾಧ್ಯ... ರಾಷ್ಟ್ರಭಾಷಾ ತರಗತಿಗಳು ನಡೆಯು... ಹಿಂದೀ ಭಾಷೆಯಲ್ಲಿ ವ್ಯಾಖ್ಯಾನ ... ಯೂ ಜರುಗುತ್ತಿದೆ. ಹಿಂದೀ ... ಶಿಬಿರದ ಪ್ರಾರಂಭೋತ್ಸವವು ಕ... ನೇ ತಾ|| ಟೌನ್ ಹಾಲಿನಲ್ಲಿ ... ಎಚ್ ಕೃಷ್ಣರಾವ್ ರವರ ಅಧ್ಯಕ್ಷತೆಯ... ಮತ್ತು ಶಿಬಿರವು ಯಶಸ್ವಿಯಾ... ಯುತ್ತಿದೆ.



A Reliable House for Repairs of
WATCHES & GRAMOPHONES
HIGH CLASS RUBBER STAMP
Suppliers,
M V N WATCH COY,
The General Commission Agency
Lansdowne Buildings,
MYSORE.

ಗಡಿಯಾರ ಮತ್ತು ಗ್ರಾಮೋಫೋನುಗಳ ರಿಪೇರಿ
ಮತ್ತು ರಬ್ಬರ್ ಮೊಹರುಗಳ ತಯಾರಿ
ನಮ್ಮಲ್ಲಿ ನಡೆಯುತ್ತವೆ.

ಎಂ ವಿ ಎನ್. ವಾಚ್ ಕಂಪೆನಿ, ಮೈಸೂರು

MYSORE RACES & SWEEP

Races—30th May 3rd, 6th, 9th, 11th & 13th June,

Railway Specials run on all Race days between Bangalore & Mysore at Special Concession rates

GOLD CUP SWEEP (BY PERMISSION OF GOVERNMENT OF MYSORE)

Tickets Rs. 5/- each.

To close on Saturday 23rd May 1936
Bonus given to Sellers of Winning Tickets
Total Collection 1935–Rs 19,970/-
For Prospectus & Particulars apply to

The Honorary Secretary,
RACE COURSE, MYSORE

WIN RUPEES 100

In the WORD BUILDING Competition

1st Prize	2nd Prize	3rd Prize
Rs 40	**Rs 30**	**Rs 20**

Rs 10 for the sender of largest number of entries

Last Posting Date, **12 5 1936,**

You are given the 26 English Alphabets numbered as—

A	B	C	D	E	F	G	H	I	J	K	L	M	N	O	P	Q
1	2	3	4	5	6	7	8	9	10	11	12	13	14	15	16	17

R	S	T	U	V	W	X	Y	Z
18	19	20	21	22	23	24	25	26

You are required to compile as many words as possible to score the highest number when the value of all the Alphabets of all the words is summed up together. A letter may be repeated in a word any number of times, but no letter used in one word should be used in other words Ex In the word RUPEE, the total value of all the letters is 65 Here E is repeated twice It is allowed But no letter used in this word should be used in others

Rules—An Entrance Fee of as **4** must accompany every entry by M O Any number of Entries attached with Coupons cut out from SADHVI are accepted with the requisite Fee If Coupons are not available, plain paper entries with 6 pies stamps are accepted A competitor may share in all the three prizes. The results will be judged by the Editor, "Sadhvi" whose decision will be final. and will be published in the issue on **18—5—1936** Prizes will be distributed in proportion to the amount collected.

Coupon.

Name

Address .

H R. V SHASTRY.
Sri Rama Press,
Mysore

BETETR LIGHT

LIGHTER BILLS.

Use—

"BIJLEE"

ELECTRIC BULBS.

Made in INDIA.

ಸ್ವದೇಶಿ ಎಲೆಕ್ಟ್ರಿಕ್ ಬಲ್ಬುಗಳನ್ನೇ
ಉಪಯೋಗಿಸಿರಿ.

"ಬಿ ಜ ಲಿ"

SOLE DISTRIBUTORS

THE STATES ENGINEERING COMPANY,

BANGALORE, MYSORE, SHIMOGA & COIMBATORE

ಶ್ರೀ ರಂಗನಾಥ ಟೈಪ್ ಫೌಂಡ್ರಿ

ಚಿಕ್ಕಪೇಟೆ, ಬೆಂಗಳೂರು ಸಿಟಿ

ಸುಂದರವಾದ ಅಕ್ಷರಗಳು, ಮುದ್ದು ಮುದ್ದಾದ ಬಾರ್ಡರುಗಳು ಬಗೆಬಗೆಯ ಆಕಾರ
ನಮಗೆ ಈ ಕೆಲಸದಲ್ಲಿ ೩೦ ವರ್ಷಗಳ ಕಾಲದ ಅನುಭವವಿದೆ ಆಧುನಿಕ ಕಾಲಕ್ಕೆ
ತಕ್ಕಂತೆ ಅಕ್ಷರದ ಆಕಾರವನ್ನು ಬಹು ಸುಂದರವಾಗಿ ಸುಧಾರಿಸಿದ್ದೇವೆ
ನಮ್ಮಲ್ಲಿನ "**ಕನ್ನಡ. ಇಂಗ್ಲೀಷ್**" ಅಕ್ಷರಗಳಂತಹ ಸುಂದರವಾದ ಅಕ್ಷರಗಳನ್ನು
ಮತ್ತೆಲ್ಲಿಯೂ ನೋಡಲಾರಿರಿ ಮತ್ತು
ನೂರಾರು ಬಗೆಯ ಸುಂದರವಾದ ಬಾರ್ಡರುಗಳು, ನಯನಮನೋಹರವಾಗಿವೆ
೮ ಪಾಯಿಂಟಿನಿಂದ ೭೨ ಪಾಯಿಂಟಿನವರೆಗೆ ವಿಧವಿಧವಾದ ಸುಂದರಾಕ್ಷರಗಳಿವೆ.
ನಮ್ಮ "ರಂಗನಾಥ ಕನ್ನಡ ಡಾಮಿನಸ್" ಅಕ್ಷರಗಳನ್ನು ನೋಡಲು ಮರೆಯಬೇಡಿರಿ
ನಾವು ಕಾಪರ್ ಅಲಾಯ್ಸ್ (ತಾಮ್ರಮಿಶ್ರಿತ) ಸೀಸದಿಂದ ಅಕ್ಷರಗಳನ್ನು
ತಯಾರಿಸುತ್ತೇವೆ ಸುಲಭ ಬೆಲೆ ಗ್ಯಾರಂಟಿಯಾದ ಬಾಳಿಕೆ

ಮದನಕಲಾಶಾಸ್ತ್ರವೆಂಬ ಪ್ರೇಮ ರಹಸ್ಯಗಳು.

ಕನ್ನಡ ಭಾಷೆಯಲ್ಲಿ ಸ್ತ್ರೀ ಪುರುಷರ ಪ್ರೀತಿಯ ಫೋಟೋಗಳೊಡನೆ ಮುದ್ರಿಸಿದೆ ಇದರಲ್ಲಿ ಎಲ್ಲಾ ದೇಶದ ಕನ್ಯೆಗಳು ಮೋಹಿಸುವ ರಹಸ್ಯಗಳು, ಸುಖ ವಿಲಾಸಗಳು, ಸ್ತ್ರೀಪುರುಷರ ಗುಟ್ಟುಗಳು, ಪ್ರಪಂಚದಲ್ಲಿ ಇರುವ ಎಲ್ಲಾ ದೇಶಗಳ ಜನರು ಪ್ರೀತಿಸುವ ರಹಸ್ಯಗಳು, ಕನ್ಯೆಗಳ ಪ್ರೇಮ ಮತ್ತು ಸಂಯೋಗ ಕಾಲದ ಮರ್ಮಗಳು, ಇನ್ನೂ ಅನೇಕ ಪ್ರೀತಿಯ ರಮ್ಯಾಗ್ರಹದ ಶೃಂಗಾರರಹಸ್ಯ ಫೋಟೋಗಳು ಅಡಗಿವೆ. ಸ್ತ್ರೀಯರನ್ನು ವಶ ಮಾಡಿಕೊಳ್ಳುವುದು ಹೇಗೆ? ಓದಿ ನೋಡಿದರೆ ಪುಸ್ತಕ ಮ... ಯಾರಿಗೂ ಕೊಡಲೊಲ್ಲರು ಮನಸ್ಸು ಬಾರದು.

ಕ್ರಯ ೩೦ ಫೋಟೋಗಳ ಸಹಿತ ಇರುವ ಪುಸ್ತಕ ರೂ ೦ ೧೪-೦ ವಿ. ಪಿ ಪೋಸ್ಟು ಖರ್ಚು ೫ ಆಣೆ ಪ್ರತ್ಯೇಕ. ಮುಂಗಡ ೧೪ ಆಣೆ ಸ್ಟಾಂಪು ಅಥವಾ ಮನಿ ಆರ್ಡರ್ ಕಳುಹಿಸುವವರಿಗೆ ಪೋಸ್ಟು ಖರ್ಚು ಇಲ್ಲದೆ ಕಳುಹಿಸುವೆವು

ಸಿಗುವ ವಿಳಾಸ —ನೇವಕರ್ ಅಂಡ್ ಕಂಪೆನಿ,
ನಂಬುಲಿಯರ್ ಬೀದಿ, ಜಿ ಟಿ ಮದರಾಸು

ಬೇಸಿಗೆಯ ಕಾಲದ ಸಲುವಾಗಿ ಪ್ರತ್ಯೇಕವಾಗಿ ಏರ್ಪಡಿಸಿರುವ ಎಲ್ಲಾ
ಅನುಕೂಲತೆಗಳನ್ನೂ ಒಳಗೊಂಡಿರುವ

ಬೊಂಬಾಯಿ ಆನಂದಭವನ ರೆಸ್ಟೊರೆಂಟಿನಲ್ಲಿರುವ

'ಮೌಂಟ್ ಆಬು'ವನ್ನು

ಭೇಟಿ ಮಾಡಲು ಮರೆಯಬೇಡಿ!

ರೇಡಿಯೋ ಸಂಗೀತ—ಪ್ರತಿ ದಿನವೂ ಆಯಾ ದಿನದ ಪ್ರೋಗ್ರಾಂ ರೆಸ್ಟೊರೆಂಟಿನ ಬಳಿ ಪ್ರಕಟಿಸಲ್ಪಡುವುದು

ಆಹಾರ ವಿಹಾರಗಳಿಗೆ ಅನುಕೂಲವಾದ ಏರ್ಪಾಡು! ಮನೋಲ್ಲಾಸವನ್ನುಂಟುಮಾಡುವ ಆಟಗಳು!

ಮೇಲಿನ ವಿನೋದಗಳ ಜೊತೆಗೆ ಹೊಸದಾಗಿ ತಯಾರಿಸಿರುವ

ಸುಂದರ ಉದ್ಯಾನವನವು

ನಿಮಗೆ ಇನ್ನೂ ಹೆಚ್ಚಿನ ಮನೋಲ್ಲಾಸವನ್ನು ಉಂಟುಮಾಡುವುದು

"ಮನೋಹರಮಂದಿರ" ವೆನಿಸಿರುವ ಈ "ಮೌಂಟ್ ಆಬು" ವಿನೋದ ಕೂಟಗಳಿಗೆ ಶ್ರೇಷ್ಠವಾದ ಸ್ಥಳ.

"ಮೌಂಟ್ ಆಬುವು" ಆನಂದಕ್ಕೆ ಗಣಿಯಾದ "ಸ್ವರ್ಗ" ದಂತಿರುವದು.

ದಿನವಹಿ ಒಂದು ಸಿಹಿ ಮತ್ತು ಒಂದು ಖಾರದ ತಿಂಡಿಯು ಸ್ಪೆಷಲ್ಲಾಗಿ ತಯಾರಿಸಲ್ಪಡುತ್ತದೆ

For Up-to-date and Efficient Medical Treatm

Go to—**Dr. A. J. RAM & SONS,**

Sayaji Rao Road, Mysore.

Physicians, Dentists Opticians, etc

ಡಾ|| ಎ. ಜೆ. ರಾಂ. ಅಂಡ್ ಸನ್ಸ್

ಸಯ್ಯಾಜಿರಾವ್ ರೋಡ್, ಮೈಸೂರು ಸಿಟಿ.

ಔಷಧ ವ್ಯಾಪಾರಿಗಳು, ಚಿಕಿತ್ಸಕರು, ದಂತವೈದ್ಯರು,
ಮತ್ತು ಕನ್ನಡಕ ವ್ಯಾಪಾರಿಗಳು

ಉತ್ತಮವಾದ ನವೀನ ಚಿಕಿತ್ಸೆಗಳಿಗೆ ನಮ್ಮಲ್ಲಿಯೇ ಬನ್ನಿರಿ.

ಪಂಡಿತ ಸಿ. ಎಚ್. ಚಂದ್ರಭಾನ್‌ಸಿಂಗ್.

ಇವರಿಂದ ತಯಾರಿಸಲ್ಪಟ್ಟ

ಫಲಪುಷ್ಪಸಾರ ರಸಾಯನ.

ಸುಖಕರ ಮಲಬಂಧನಿವಾರಣೀ ಕ್ರಯ —1-8-0

ಗುಣ:—ಇದು ಜಾಪಾಳ ಮುಂತಾದ ಕಠಿಣ ವಿರೇಚನ ವ... ಸಂಯೋಗವಿಲ್ಲದ ಕೇವಲ ಅನ್ನ ಶೀಕರಣ ಪ್ರಯೋಗವು ಕೇವಲ ಅನು... ವಾದದ್ದು ಇದನ್ನು ಉಪಯೋಗಿಸುವುದರಿಂದ ಎಲ್ಲಾ ವಿಧವಾದ ಮಲಬಂ... ಮೂಲವ್ಯಾಧಿ, ಅಜೀರ್ಣ, ಉಷ್ಣವಾಯು, ಕೀಲುವಾಯು, ಎದೆಯುರಿ ... ನೋವು, ಕೆಮ್ಮು, ತಲೆತಿರುಗು ಮುಂತಾದ ರೋಗಗಳೆಲ್ಲವೂ ಖಂಡಿತ ಗು... ತ್ತವೆ

ಬ್ರಾಂಚ್:—ಶ್ರೀಸತ್ಯನಾರಾಯಣ ಆಯುರ್ವೇದಿಕ್ ಫಾರ್ಮ...
ಜಗನ್ಮೋಹನ ಬಂಗ್ಲೆ ರಸ್ತೆ, ಮೈಸೂ...

A Reply

To all malicious and false mis representations, (if any)

WHAT AN EMINENT ACTUARY OF GREAT BRITAIN SAYS —

After perusal of the Company's Balance Sheet, Directors' Report and Abstract of Business, our Actuary, Mr. H L Humphreys has favoured with his invaluable opinion in the course of which he observes —

"It is clear that the very difficult task of the establishment of a LIFE OFFICE is well begun You are to be congratulated on the extent to which so far you have limited the inevitably heavy expenses of the start

I shall hope to see continued progress in this and the following years and that the economical efforts obvious from these accounts will be continued

I wish the Company continued success."

THE MYSORE INSURANCE COMPANY LTD,
SRI NARASIMHARAJA ROAD, Bangalore City.

ಅಸೂಯಾಪರರ ಮತ್ತು ನಿಂದಾಯುತ ನಿರಾಧಾರ ಪ್ರಚಾರಗಳಿಗೆ

ಇದೇ ಉತ್ತರ

ಗ್ರೇಟ್ ಬ್ರಿಟನ್ನಿನ ಸುಪ್ರಸಿದ್ಧ ಆಕ್ಚುಯರಿಗಳು ಏನು ಹೇಳುವರು?

ಕಂಪೆನಿಯ ಲೆಕ್ಕದ ಪಟ್ಟಿ, ಡೈರೆಕ್ಟರುಗಳ ವರದಿ ಮತ್ತು ಉದ್ಯಮ ವಿವರ ಇವುಗಳನ್ನು ಪರಾಮರ್ಶಿಸಿ ನಮ್ಮ ಆಕ್ಚುಯರಿಗಳಾದ

ಮಿ|| ಎಚ್. ಎಲ್. ಹಂಫ್ರೀಸ್ ರವರು

ಕೊಟ್ಟಿರುವ ಸದಭಿಪ್ರಾಯದಲ್ಲಿ ಈ ರೀತಿ ಹೇಳಿದ್ದಾರೆ —

"ಜೀವವಿಮಾ ಕಂಪೆನಿಯನ್ನು ಸ್ಥಾಪಿಸುವಂತಹ ಕಷ್ಟತರವಾದ ಕೆಲಸವು ಒಳ್ಳೆ ಸದ್ಗತಿಯಾಗಿ ಪ್ರಾರಂಭವಾಗಿದೆ ಆರಂಭದಲ್ಲಿ ಅವಶ್ಯಕವಾಗಿ ಆಗುವ ಅಧಿಕ ಖರ್ಚನ್ನು ನೀವು ಬಹು ಮಟ್ಟಿಗೆ ಮಿತಿಪಡಿಸಿರುವುದು ಅಭಿನಂದನಾರ್ಹವು

ಈ ವರ್ಷವೂ ಮತ್ತು ಬರುವ ವರ್ಷಗಳಲ್ಲಿಯೂ ಕಂಪೆನಿಯು ಇದೇ ರೀತಿ ಅಭಿವೃದ್ಧಿ ಹೊಂದಿ ಮುಂದೆಯೂ ಲೆಕ್ಕದ ಪಟ್ಟಿಯಿಂದ ತೋರಿಬರುವ ಮಿತವ್ಯಯದ ಧೋರಣೆಯನ್ನು ಅನುಸರಿಸುವುದೆಂದು ನಂಬುತ್ತೇನೆ ಕಂಪೆನಿಯು ಏಕಪ್ರಕಾರ ಪ್ರಗತಿ ನಡೆಯಲೆಂದು ಹಾರೈಸುತ್ತೇನೆ"

ದಿ ಮೈಸೂರು ಇನ್ಷ್ಯೂರೆನ್ಸ್ ಕಂಪೆನಿ ಲಿಮಿಟೆಡ್.,
ಶ್ರೀ ನರಸಿಂಹರಾಜಾರೋಡ್, ಬೆಂಗಳೂರು

Edited, Printed & Published by Agaram Rangiah, B A, at Sri Rama Press, D. Subbiah Road, Mysore.



|| ಸತ್ಯಮೇವೋದ್ಧರಾಮ್ಯಹಮ್ ||

ರಾಜಧಾನಿಯ ರಾಷ್ಟ್ರೀಯ ವಾರ ಪತ್ರಿಕೆ.

ವೃದ್ಧಪಿತಾಮಹ ಎಂ. ವೆಂಕಟಕೃಷ್ಣಯ್ಯನವರ ಜ್ಞಾಪಕಾರ್ಥವಾಗಿ ಪ್ರಕಟಿಸಲ್ಪಡುವುದು

ಸಂಪಾದಕರು ಅಗರಂ ರಂಗಯ್ಯ, ಬಿ.ಎ.

Sadhvi: A Leading Nationalist Weekly of Mysore.

FOUNDED IN MEMORY OF Mr. M. VENKATAKRISHNAYYA, THE GRAND OLD MAN OF MYSORE.

ಪುಟ ೧] MYSORE : MONDAY 11—5—36 ಮೈಸೂರು : ಸೋಮವಾರ ೧೧—೫—೩೬ [ಸಂಚಿಕೆ ೧೨

RAJENDRA CINEMA,

NANJANGUD.

THE MOST UP-TO-DATE AND WELL-EQUIPPED PICTURE HOUSE.

Rare Shows of Highest Attraction Consisting of Splendid Romance, Thrill and Adventure.

SCREENED TWICE A DAY,

PLEASE PAY A VISIT AND ENJOY YOURSELF.

ರಾಜೇಂದ್ರ ಸಿನಿಮಾ, ನಂಜನಗೂಡು.

ಅತ್ಯುತ್ತಮವೂ, ನೂತನವೂ, ಸರ್ವಾಂಗ ಸುಂದರವೂ ಆದ ಸಿನಿಮಾ ಮಂದಿರ.

ಪ್ರತಿದಿನವೂ ಎರಡು ಆಟಗಳು ತೋರಿಸಲ್ಪಡುವುವು.

ಸಾಹಸ, ಆಶ್ಚರ್ಯ, ವಿನೋದ, ಆನಂದಗಳಿಂದ ಕೂಡಿದ ಮನೋಹರವಾದ ದೃಶ್ಯಗಳಿರುವುವು.

ದಯವಿಟ್ಟು ತಪ್ಪದೆ ನೋಡಿರಿ! ಆನಂದಪಡಿರಿ!



A Reliable House for Repairs of
WATCHES & GRAMOPHONES
HIGH CLASS RUBBER STAMP
Suppliers,
M V N WATCH COY,
The General Commission Agency
Lansdowne Buildings,
MYSORE

ಗಡಿಯಾರ ಮತ್ತು ಗ್ರಾಮೋಫೋನುಗಳ ರಿಪೇರಿ
ಮತ್ತು ರಬ್ಬರ್ ಮೊಹರುಗಳ ತಯಾರಿ
ನಮ್ಮಲ್ಲಿ ನಡೆಯುತ್ತದೆ
ಎಂ ವಿ ಎನ್ ವಾಚ್ ಕಂಪೆನಿ, ಮೈಸೂರು

MYSORE RACES & SWEEP

Races—30th May 3rd 6th 9th, 11th & 13th June

Railway Specials run on all Race days between Bangalore & Mysore at Special Concession rates

GOLD CUP SWEEP (BY PERMISSION OF GOVERNMENT OF MYSORE)

Tickets Rs 5/- each

To close on Saturday 23rd May 1936
Bonus given to Sellers of Winning Tickets
Total Collection 1935--Rs 19,970/-
For Prospectus & Particulars apply to

The Honorary Secretary
RACE COURSE MYSORE

WIN RUPEES 100

In the WORD BUILDING Competition

1st Prize	2nd Prize	3rd Prize
Rs 40	Rs 30	Rs 20

Rs 10 for the sender of largest number of entries
Last Posting Date, **12 5-1936**

You are given the 26 English Alphabets numbered as —

A	B	C	D	E	F	G	H	I	J	K	L	M	N	O	P	Q
1	2	3	4	5	6	7	8	9	10	11	12	13	14	15	16	17
R	S	T	U	V	W	X	Y	Z								
18	19	20	21	22	23	24	25	26								

You are required to compile as many words as possible to score the highest number when the value of all the Alphabets of all the words is summed up together. A letter may be repeated in a word for any number of times but no letter used in one word should be used in other words. Ex. In the word RUPEE the total value of all the letters is 65. Here E is repeated twice. It is allowed. But no letter used in this word should be used in others.

Rules — An Entrance Fee of as 4 must accompany every entry by M O. Any number of Entries attached with Coupons cut out from SADHVI are accepted with the requisite fee. If Coupons are not available plain paper entries with 6 pies stamps are accepted. A competitor may share in all the three prizes. The results will be judged by the Editor Sadhvi whose decision will be final and will be published in the same on 18—5—1936. Prizes will be distributed in proportion to the amount collected.

Coupon

Name
Address

H R V SHASTRY
Sri Rama Press,
Mysore

BETETR LIGHT

LIGHTER BILLS

Use—

"BIJLEE"

ELECTRIC BULBS.

Made in INDIA.

ಸ್ವದೇಶಿ ಎಲೆಕ್ಟ್ರಿಕ್ ಬಲ್ಬುಗಳನ್ನೇ
ಉಪಯೋಗಿಸಿರಿ.

"ಬಿ ಜ ಲಿ"

SOLE DISTRIBUTORS

THE STATES ENGINEERING COMPANY,

BANGALORE MYSORE, SHIMOGA & COIMBATORE

ಶ್ರೀ ರಂಗನಾಥ ಸ್ಕ್ರೀನ್ ಪ್ರಿಂಟ್ರಿ
ಚಿಕ್ಕಪೇಟೆ ಬೆಂಗಳೂರು ಸಿಟಿ

ಸುಂದರವಾದ ಅಕ್ಷರಗಳು, ಮುದ್ದು ಮುದ್ದಾದ ಬಾರ್ಡರುಗಳು ಬಗೆಬಗೆಯ ಆ...
ನಮಗೆ ಕಳೆದ ... ವರ್ಷಗಳ ಕಾಲದ ಅನುಭವವಿದೆ. ಆಧುನಿಕ ಕಾಲ...
ತಕ್ಕಂತೆ ಅಕ್ಷರದ ಆಕಾರವನ್ನು ಬಹು ಸುಂದರವಾಗಿ ಸುಧಾರಿಸಿದ್ದೇವೆ
ನಮ್ಮಲ್ಲಿ ಕನ್ನಡ, ಇಂಗ್ಲೀಷ್ ... ಸುಂದರವಾದ ಅಕ್ಷರಗಳ...
... ನೋಡಬಹುದು ಮತ್ತು
... ಸುಂದರವಾದ ಬಾರ್ಡರುಗಳು, ನಯನಮನೋಹರವಾಗಿ...
... ವಿವಿಧವಾದ ಸುಂದರ...
... ಅಕ್ಷರಗಳನ್ನು ನೋಡಲು ...
... (ಮಾದರಿ ಪ್ರತಿ) ... ಅಕ್ಷರಗಳನ್ನು
... ಗ್ಯಾರಂಟಿಯಾದ ಬಾಳಿಕೆ

ಮದನಕಲಾಶಾಸ್ತ್ರವೆಂಬ ಪ್ರೇಮ ರಹಸ್ಯಗಳು.



ಕನ್ನಡ ... ಸ್ತ್ರೀ ಪುರುಷರ ... ಮುದ್ರಿಸಿದೆ ... ಸ್ತ್ರೀಪುರುಷರ ... ಇರತಕ್ಕ ಎಲ್ಲಾ ... ರಹಸ್ಯಗಳು, ಕನ್ಯೆಗಳ ... ಸಂಯೋಗ ... ಪ್ರೀತಿಯ ... ಸ್ತ್ರೀಯರನ್ನು ವಶ ಮಾಡಿಕೊ... ಪುಸ್ತಕ ... ಮಾಲಿಕ್ಕೇ ...ನ್ನು ಬಾರದು.

... ಪುಸ್ತಕ ... ಪ್ರತ್ಯೇಕ ... ಸ್ಟಾಂಪು ... ಆರ್ಡರ್ ... ಪೋಸ್ಟು ...

... —ನ್ಯಾಷನಲ್ ಅಂಡ್ ಕಂಪೆನಿ,
... ಜ ಟಿ ...

॥ ಸತ್ಯಮೇವೋದ್ಧರಾಮ್ಯಹಮ್ ॥
ರಾ ಜ ಧಾ ನಿ ಯ ರಾ ಷ್ಟ್ರೀ ಯ ವಾ ರ ಪ ತ್ರಿ ಕೆ.
ವೃದ್ಧಪಿತಾಮಹ ಎಂ. ವೆಂಕಟಕೃಷ್ಣಯ್ಯನವರ ಜ್ಞಾಪಕಾರ್ಥವಾಗಿ ಪ್ರಕಟಿಸಲ್ಪಡುವುದು.
ಸಂಪಾದಕರು: ಅ ಗ ರಂ ರಂ ಗ ಯ್ಯ, ಬಿ. ಎ.

ಸಂಪುಟ ೧] MYSORE : MONDAY 11—5—36 ಮೈಸೂರು : ಸೋಮವಾರ ೧೧—೫—೩೬ [ಸಂಚಿಕೆ ೧೨

ಇಟಲಿ—ಅಬಿಸೀನಿಯಾ.

ಇಟಲಿಯವರು ಅಡಿಸ್ ಅಬಾಬಾವ ಆಕ್ರಮಿಸಿದರು. ಚಕ್ರವರ್ತಿಯವರಾದ ಹೇಲ್ ಸೆಲಾಸಿಯವರು ರಾಜ್ಯವನ್ನು ಬಿಟ್ಟು ತಮ್ಮ ಕುಟುಂಬ ಮತ್ತು ಇಷ್ಟ ಪರಿವಾರದೊಡನೆ ಹೊರಟುಬಿಟ್ಟರು. ಯುದ್ಧ ನಿಂತಿತು ಆದರೂ ಯುದ್ಧದ ಪರಿಣಾಮವಾಗಿ ಅಡಿಸ್ ಅಬಾಬಾ ನಗರದಲ್ಲಿ ಕೊಲೆ ಲೂಟಿ, ಬೆಂಕಿ, ದೊಂಬಿಗಳು ನಡೆದವು. ಅಬಿಸೀನಿಯಾ ರಾಜ್ಯವನ್ನು ಪೂರ್ಣವಾಗಿ ತಮ್ಮ ದೇಶಕ್ಕೆ ಸೇರಿಸಿಕೊಳ್ಳಬೇಕೆಂದು ಇಟಲಿಯವರು ನಿಶ್ಚಯಿಸಿದ್ದಾರೆ. ಕೆಲವು ಅಬಿಸೀನಿಯದ ಮುಖಂಡರಿಗೆ ಅಧಿಕಾರಗಳನ್ನು ಕೊಟ್ಟು ತಮ್ಮ ಅಧೀನದಲ್ಲಿಟ್ಟುಕೊಳ್ಳುವರು. ಮುಸೊಲಿನಿಯ ಸಾಹಸವನ್ನು ಮೆಚ್ಚಿ ಇಟಲಿಯ ರಾಜರು ಅವರಿಗೆ ದೊಡ್ಡ ಬಿರುದುಗಳನ್ನು ಕೊಟ್ಟಿರುವರು. ಇಟಲಿಯಲ್ಲೆಲ್ಲಾ ದಿಗ್ವಿಜಯದ ಉತ್ಸವ ಸಂಭ್ರಮದಿಂದ ವೈಭವವಾಗಿ ನಡೆಯುತ್ತಿದೆ.

ಅನಾಯಕತ್ವವಿಲ್ಲ.

ಅಬಿಸೀನಿಯಾದಲ್ಲಿ ಕ್ರಮ ಬದ್ಧವಾದ ಸರಕಾರವೇ ಇಲ್ಲವೆಂದು ಒಂದು ವದಂತಿ ಹೊರಟಿತ್ತು. ಅಲ್ಲಿನ ಮಂತ್ರಿಗಳಾದ ಡಾ॥ ಮಾರ್ಟಿನ್ ರವರು ಈ ವದಂತಿಯನ್ನು ಖಂಡಿಸಿರುತ್ತಾರೆ. ಹಳೇ ಮಂತ್ರಿ ಮಂಡಲದವರು ಸರ್ಕಾರವನ್ನು ನಡಿಸುತ್ತಿರುವರು. ಪಶ್ಚಿಮ ಪ್ರಾಂತ್ಯದಲ್ಲಿ ರಾಜ್ಯದ ದೀರ್ಘಭಾಗಕ್ಕಿಂತ ಹೆಚ್ಚಾದ ಪ್ರದೇಶದ ಆಡಳಿತ ನಡೆಸುತ್ತಿರುವರು. ಎಲ್ಲಾ ದಸ್ತಾವೇಜುಗಳೂ ರಿಕಾರ್ಡುಗಳೂ ಅವರ ಅಧೀನದಲ್ಲಿಯೇ ಇವೆ. ಆ ಸ್ಥಳವು ದೂರವಾಗಿದೆ. ಅದನ್ನು ಬಹಿರಂಗ ಪಡಿಸಿದರೆ ತೊಂದರೆಯಾಗುತ್ತದೆ. ಅದು ಗೊತ್ತಾದರೆ ವಿಷವಾಯು ಬಾಂಬು ಮುಂತಾದುವುಗಳು ಬೀಳಬಹುದು. ಆದ್ದರಿಂದ ತಿಳಿಸುವುದಿಲ್ಲ, ಎಂದು ಹೇಳಿರುತ್ತಾರೆ.

ಮೈಸೂರು ಡೆಪ್ಯುಟಿ ಕಮಿಷನರು.

ಮೈಸೂರು ಡಿಸ್ಟ್ರಿಕ್ಟಿಗೆ ಮ॥ ಟಿ. ಜಿ. ಸುಬ್ಬಣ್ಣನವರು ಡೆಪ್ಯುಟಿ ಕಮಿಷನರಾಗಿ ನೇಮಿಸಲ್ಪಟ್ಟಿರುವರು. ಇಲ್ಲಿ ಇರುವ ತಿಮ್ಮೇಗೌಡರು ಕೋಲಾರಕ್ಕೆ ವರ್ಗಾಯಿಸಲ್ಪಟ್ಟಿರುವರು.

ಬೊಂಬಾಯಿ ಪೌರಸಭೆಯ ಅವಿವೇಕ.

ಪಂಡಿತ ಜವಾಹರಲಾಲರು ಮುಂದಿನ ವಾರ ಬೊಂಬಾಯಿಗೆ ಬರುವರು. ಅವರಿಗೆ ಒಂದು ಬಿನ್ನವತ್ತಳೆಯನ್ನು ಕೊಡಬೇಕೆಂದು ಒಂದು ಠರಾವನ್ನು ಶ್ರೀ॥ ಮುರಾರ್ಜಿಯವರು ಸೂಚಿಸಿದರು. ಯಾರೂ ಅದನ್ನು ವಿರೋಧಿಸಲಿಲ್ಲ. ಓಟಿಗೆ ಹಾಕಿದಾಗ ಮಾತ್ರ ಅದು ಬಹುಮತದಿಂದ ಬಿದ್ದುಹೋಯಿತು. ಜವಹರರಂತಹ ದಿವ್ಯ ವಿಭೂತಿಗಳಿಗೆ ಸನ್ಮಾನ ಮಾಡಲು ಯೋಗ್ಯತೆ ಬೇಕಷ್ಟೆ"

ಅಮೇರಿಕದ ಅಭಿಪ್ರಾಯ

ಅಮೆರಿಕವು ಅಬಿಸೀನಿಯದಲ್ಲಿ ಇಟಲಿಯವರು ಸ್ಥಾಪಿಸಬೇಕೆಂದಿರುವ ಸರ್ಕಾರದ ವಿಷಯವಾಗಿ ತಟಸ್ಥರಾಗಿರುವರು. ಆದರೂ ಅಬಿಸೀನಿಯದಲ್ಲಿ ಇಟಲಿಯ ಸಾರ್ವಭೌಮತ್ವವನ್ನು ಅಮೆರಿಕದವರು ಅಂಗೀಕರಿಸಲಾಗುವುದಿಲ್ಲವೆಂದು ಹೇಳಲಾಗಿದೆ. ಏಕೆಂದರೆ ಪಶುಬಲದಿಂದ ಇಟಲಿಯು ತನ್ನ ವಿಜಯವನ್ನು ಪಡೆದಿರುತ್ತದೆ. ಅಮೆರಿಕದ ರಾಜನೀತಿಗೆ ಇದು ವಿರುದ್ಧವಾಗಿದೆ.

ಮಹಾತ್ಮ ಗಾಂಧಿಯವರು.



ವಿಶ್ರಾಂತಿಗಾಗಿ ನಂದಿಬೆಟ್ಟಕ್ಕೆ ದಯಮಾಡಿಸಿರುವರು

ಜರ್ಮನಿ ಜಪಾನ್ ಸಂಧಾನ

ಜರ್ಮನಿಗೂ ಜಪಾನಿಗೂ ಒಂದು ಗುಪ್ತ ಸಂಧಾನವು ನಡೆದಿರುತ್ತದೆ. ಇದರ ಪ್ರಯತ್ನವು ಈ ವರ್ಷದ ಪ್ರಾರಂಭದಲ್ಲಿಯೇ ನಿಷ್ಪನ್ನವಾಯಾಗಿತ್ತು. ಜರ್ಮನಿಯು ತನಗೆ ಸೇರಿದ್ದ ಮೇರಿಯನ್ ದ್ವೀಪಗಳನ್ನು ಜಪಾನಿಗೆ ಕೊಟ್ಟುಬಿಟ್ಟಿತು. ಈ ಸ್ವಾಸ್ಥ್ಯಗಳ ಮೇಲಿನ ಸ್ವಾಮಿತ್ವವನ್ನು ಜರ್ಮನಿಯು ಜಪಾನಿಗೇ ಬಿಟ್ಟುಬಿಟ್ಟಿದೆ. ಇದರಿಂದ ಜಪಾನಿನ ರಕ್ಷಣೆಗೆ ಬಹಳ ಸಹಾಯವಾಗುವುದು. ಆದರ ಯುದ್ಧಕ್ಕೆ ಮುಂಚೆ ತನಗೆ ಸೇರಿದ್ದ ಪ್ರದೇಶಗಳನ್ನು ಫ್ರಾನ್ಸ್ ಮತ್ತು ಇಂಗ್ಲೆಂಡು ಬಿಟ್ಟುಕೊಡಬೇಕೆಂದು ಜರ್ಮನಿಯು ಒತ್ತಾಯ ಪಡಿಸುತ್ತಿದೆ. ರಷ್ಯಾದವರೊಡನೆ ಯುದ್ಧವೇನಾದರೂ ಸಂಭವಿಸಿದರೆ ಜರ್ಮನಿಯೂ ಜಪಾನೂ ಒಂದಾಗುವುವೆಂಬ ವದಂತಿಯು ಸ್ವಲ್ಪ ಕಾಲದಿಂದ ಪ್ರಬಲವಾಗಿ ಹರಡಿದೆ. ಆದರೆ ಈ ವದಂತಿಯು ಬರ್ಲಿನ್ ಮತ್ತು ಟೋಕಿಯೋ ನಗರಗಳಲ್ಲಿ ಅಲ್ಲಗಳೆಯಲ್ಪಟ್ಟಿದೆ.

ವಿಜಯನಗರ ರಾಜರ ಮೊಕದ್ದಮೆ.

ವಿಜಯನಗರದ ರಾಜರ ಮಕ್ಕಳನ್ನು ಅವರ ಇಷ್ಟಕ್ಕೆ ವಿರುದ್ಧವಾಗಿ ಇಂಗ್ಲೆಂಡಿಗೆ ಕಳುಹಿಸುವ ವಿಷಯದಲ್ಲಿ ಅವರು ಒಂದು ಮೊಕದ್ದಮೆಯನ್ನು ಹೂಡಿರುವುದನ್ನು ಈ ಮೊದಲೇ ತಿಳಿಸಲಾಗಿದೆ. ಈ ವಿಷಯದಲ್ಲಿ ರಾಜರು ಮದರಾಸ್ ಹೈಕೋರ್ಟಿನಲ್ಲಿ ಅಪ್ಪೀಲು ಮಾಡಿದ್ದರು. ಅವರ ಮಕ್ಕಳನ್ನು ಇಂಗ್ಲೆಂಡಿಗೆ ಕಳುಹಿಸದಂತೆ ತಾತ್ಕಾಲಿಕ ಇಂಜಂಕ್ಷನ್ ಕೊಡಲಾಗಿದೆ. ರಾಜರ ನಾಲ್ಕು ಮಕ್ಕಳು ವಿಶಾಖ ಪಟ್ಟಣದ ಕಲೆಕ್ಟರಿಂದ ಕೂಡಿದ ಒಂದು ಕೋರ್ಟ್ ಆಫ್ ವಾರ್ಡ್ಸ್‌ರ ರಕ್ಷಣೆಯಲ್ಲಿವೆ. ಅವುಗಳನ್ನು ಇಂಗ್ಲೆಂಡಿಗೆ ಕಳುಹಿಸುವ ಪ್ರಯತ್ನ ನಡೆದಿದೆ. ಅಲ್ಲಿಯೇ ಅವರಿಗೆ ವಿದ್ಯಾಭ್ಯಾಸ ಕೊಡಿಸಬೇಕಂತೆ. ರಾಜರಿಗೆ ಇದು ಇಷ್ಟವಿಲ್ಲ. ಆದರೆ ಹುಡುಗರು ಅವರ ಸ್ವಾಧೀನದಲ್ಲಿಲ್ಲ. ಆದ್ದರಿಂದ ಅವರು ವಿಶಾಖ ಪಟ್ಟಣದ ಕೋರ್ಟಿನಲ್ಲಿ ಮೊಕದ್ದಮೆ ಹೂಡಿದರು. ಅಲ್ಲಿ ಕೇಸಿನ ರಜದ ನಿಮಿತ್ತ ವಿಚಾರಣೆಯು ನಡೆಯಲಿಲ್ಲ. ಹೈಕೋರ್ಟಿನಲ್ಲಿ ವಿಚಾರಣೆಗೆ ಬಂದು ತಾತ್ಕಾಲಿಕ ತಡೆ ಹುಕುಂ ಕೊಡಲಾಗಿದೆ.

ಇಟಲಿ ಮತ್ತು ಹಿಂದೂಸ್ಥಾನ.

ಅಬಿಸೀನಿಯನರಿಗೆ ಇಟಲಿಯವರಿಂದ ಉಂಟಾದ ಕಷ್ಟಪರಂಪರೆಗಳಿಗಾಗಿ ಸಹಾನುಭೂತಿಯನ್ನು ವ್ಯಕ್ತಪಡಿಸಿ ಇಟಲಿಯ ದೌರ್ಜನ್ಯವನ್ನು ಖಂಡಿಸಲು ಭರತಖಂಡದ ಎಲ್ಲಾ ಪ್ರಾಂತ್ಯಗಳಲ್ಲಿಯೂ ಬಹಿರಂಗ ಸಭೆಗಳಾಗಬೇಕೆಂದು ಪಂಡಿತ ಜವಹರಲಾಲರು ಅಪ್ಪಣೆ ಮಾಡಿದ್ದರು. ಅದರಂತೆ ಕಳೆದ ಶನಿವಾರ ಎಲ್ಲೆಲ್ಲೂ ಸಭೆಗಳು ನಡೆದು ಠರಾವುಗಳು ಆದವು. ಕಲ್ಕತ್ತೆಯಲ್ಲಿ ಇಟಲಿ ಪ್ರತಿನಿಧಿಗಳೊಬ್ಬರಿದ್ದಾರೆ. ಅವರಿಗೆ ಇದಕ್ಕಾಗಿ ಕಣ್ಣು ಕೆಂಪಾಯಿತು. ಇಟಲಿಯು ಇಂಡಿಯಾಕ್ಕೆ ಸಹಾನುಭೂತಿಯುಳ್ಳದ್ದಾಗಿದೆಯೆಂದೂ ಇಥಿಯೋಪಿಯನರನೇಕರ ಒಪ್ಪಿಗೆಯಂತೆಯೇ ಇಟಲಿಯು ಯುದ್ಧ ಮಾಡಿ ಅಬಿಸೀನಿಯವನ್ನು ಆಕ್ರಮಿಸಿತೆಂದೂ, ಈ ರೀತಿ ವಿರೋಧ ಪ್ರದರ್ಶನ ಮಾಡುವುದರಿಂದ ಇಟಲಿ ಇಂಡಿಯಾಗಳ ಮೈತ್ರಿಗೆ ಭಂಗ ಬರುವುದೆಂದೂ ಅವರು ತಿಳಿಸುತ್ತಾರೆ.

ಅವಿಭಕ್ತ ಕುಟುಂಬ ಪದ್ಧತಿ.

(ಲೇಖಕರು—ಶ್ರೀ "ರಾ")

ನಮ್ಮ ದೇಶದಲ್ಲಿ ಪೂರ್ವ ಪದ್ಧತಿಗಳೆಲ್ಲವನ್ನೂ ದೂಷಿಸುವುದೇ ಕೆಲವರ ಸ್ವಭಾವವಾಗಿದೆ

ಗುಣದೋಷಗಳನ್ನು ಪರ್ಯಾಲೋಚಿಸಿ, ದೋಷವಿದ್ದರೆ ತ್ಯಜಿಸಿ ಗುಣವಿರುವುದೆಲ್ಲವನ್ನೂ ಆದರಿಂದ ಆಚರಿಸಬೇಕಲ್ಲವೇ? ಅನ್ಯ ದೇಶೀಯರ ಅನುಭವಕ್ಕೆ ರುಚಿಸದೆಂದು ನಮಗೆ ಅನುಕೂಲಿಸುವ ಮಾರ್ಗವನ್ನು ಬಿಡಲಾದೀತೆ? ಯಾವ ದೇಶ ಕಾಲಕ್ಕೂ ಸಮನಾಗಿ ಅನ್ವಯಿಸುವ ವಿಷಯಗಳೇ ಅಪೂರ್ವ. ಪೂರ್ವಪದ್ಧತಿಯ ಉದ್ದೇಶವನ್ನು ಮರೆಯದ, ಕಾಲಕ್ಕೆ ತಕ್ಕಂತೆ ನಡೆಯುವುದೇ ಎಲ್ಲರ ಕರ್ತವ್ಯ. ಒಂದು ಮನೆತನದವರೆಲ್ಲರೂ ಏಕೀಭವಿಸಿ ಬಾಳುವುದು ಬಹುಕಾಲದಿಂದ ನಮ್ಮಲ್ಲಿ ಆಚರಣೆಯಲ್ಲಿತ್ತು. ಈಗೀಗ, ಕಾಲದ ಹಿರಿಮೆಯೋ, ವಿಚಿತ್ರ ಬುದ್ಧಿಶಕ್ತಿಯೋ, ಅಥವಾ, ಇತರ ದೇಶಿಯರಂತೆ ಜೀವಿಸುವ ಬಯಕೆಯೋ, ಇಲ್ಲವೇ, ಪೂರ್ವಪದ್ಧತಿಯ ಗುಣವರಿಯ್ದಾನಿಸಿಲ್ಲದ ಮೌಢ್ಯವೋ, ಅಂತೂ ಅವಿಭಕ್ತ ಸಂಸಾರವೆಂಬುದು ಮಾಯವಾಗುತ್ತಲಿದೆ ಒಂದೆರಡು ಕಡೆ, ಎಂದೂ ಹೊರವಳಿಯ ನತತೆಯ ಮಟ್ಟಿಗೆ, ಕೆಲವರು ಒಟ್ಟಿಗೆ ಇರಬಹುದು ತಿಳುಳನ್ನು ತಿಳಿದು, ಅಕ್ಕರೆಯಿಂದಲೂ, ಗೌರವದಿಂದಲೂ, ಇರುವೆಡೆಗಳೇ ಅಪೂರ್ವ.

ಒಬ್ಬನು ದುಡಿದು ಸಂಪಾದಿಸಿದ್ದನ್ನು ಹತ್ತು ಜನ ವೃಥಕಾಯರು ಸುಮ್ಮನೆ ಕುಳಿತು ತಿನ್ನುವುದು ಅವಿಭಕ್ತ ಸಂಸಾರದ ಉದ್ದೇಶವಲ್ಲ ಸೋಮಾರಿಯಾಗಿ ವ್ಯರ್ಥ ಕಾಲಕ್ಷೇಪ ಮಾಡಲು ಯಾರಿಗೂ ಅಧಿಕಾರವಿಲ್ಲ 'ಮಾನಸೊಬ್ಬನೂ ನಿರುದ್ಯೋಗಿಯಾಗಿರಕೂಡದು' ಎಂದು ನೀತಿಯುಲ್ಲವೇ? ಮಗನಾದ ಮಾತ್ರಕ್ಕೇ, ತಂದೆತಾಯಿಗಳಿಟ್ಟ ಧನವನ್ನು ದುಂದುಮಾಡಲು ಅಧಿಕಾರವನ್ನು ಕೊಡುವುದಿಲ್ಲ ಕುಳಿತು ತಿಂದರೆ, ಕುಡಿಕೆಯ ಹಣವು ಸಾಲದು" ಎಂಬುದರ ತಾತ್ಪರ್ಯವೇನು? ಜನ್ಮದ ತ್ರಿದಶದಕ್ಕೆ, ಪುಣ್ಯವಿದ್ದಲ್ಲಿ ಒದಗಿಬರುವ ಧನವನ್ನು, ವಿಶದದಿಂದ ಉಪಯೋಗಿಸಿ ಸುಖಿಯಾಗಿರಲು ಮನುಷ್ಯನ ಬುದ್ಧಿಯು ತಿದ್ದಿಪಡಬೇಕು

ಜನರು ಸಹೋದರರಂತೆ ಬಾಳಬೇಕೆಂದು ಬೋಧಿಸುವರಷ್ಟೆ! ಆಚರಣೆಗಿಂತಲೂ, ಮಾತನಾಡುವುದು ಸುಲಭವೆಂಬುದು ಎಲ್ಲರಿಗೂ ಗೊತ್ತೇ ಇದೆ ಒಂದು ಕುಟುಂಬದವರೆಲ್ಲರೂ ಒಟ್ಟಿಗೆ ಬಾಳಿದಾಗಲೇ ಸದ್ಗುಣಗಳು ಶೋಭಿಸಿ ದುರ್ಗುಣಗಳು ತಿಸಹ್ಯವಾಗಿ ತೋರುವುವು ಹುಟ್ಟು ಬುದ್ಧಿಯು ಹೇಗಿದ್ದರೂ, ಸತ್ಸಹವಾಸದಲ್ಲಿ ಸುಗುಣಗಳು ಒಳಿಯುವುವೆಂಬುದು ಅನುಭವಸಿದ್ಧವಾಗಿದೆ ಧಾರಾಳ ಮನಸ್ಸು, ಸಹನೆ, ಭೂತದಯೆ, ಧರ್ಮಬುದ್ಧಿ, ಸ್ವಾರ್ಥಪರಾಙ್ಮುಖತೆ, ಉತ್ಸಾಹ, ಕಷ್ಟಸಹಿಷ್ಣುತೆ, ಜನಾನುರಾಗ, ದೇಶವಾತ್ಸಲ್ಯ, ವಿಧೇಯತೆ, ರಾಜ ಗುರು ದೈವಭಕ್ತಿ ಇವೆಲ್ಲವನ್ನೂ ಸುಲಭವಾಗಿ ಕಲಿಯಬೇಕೆನ್ನುವ ವಿದ್ಯಾರ್ಥಿಗೆ ಅವಿಭಕ್ತ ಸಂಸಾರವೇ ಸರಿಯಾದ ಪಾಠಶಾಲೆಯು

ದೇಶದೇಶದಲ್ಲೂ ಎಲ್ಲಾ ನಂಟರೂ ದೊರೆಯುವರು. ಸಹೋದರರು ಎಲ್ಲಿ ದೊರೆಯುವರು? ಲಕ್ಷ್ಮಣನು ಯುದ್ಧರಂಗದಲ್ಲಿ ಮೂರ್ಛಿತನಾಗಿರಲು, ರಾಮನು ಭ್ರಾತೃವಾತ್ಸಲ್ಯದಿಂದ ಗೋಳಿಟ್ಟುದನ್ನು ಓದಿದರೆ, ಭ್ರಾತೃವಾತ್ಸಲ್ಯ ಮಹಿಮೆಯು ಸ್ಪಷ್ಟವಾಗದಿದ್ದೀತೆ? ಈ ವಾತ್ಸಲ್ಯರತ್ನವನ್ನು ತ್ಯಜಿಸಿ, ಮನುಷ್ಯ ಸಾಮಾನ್ಯರ ಧರ್ಮವನ್ನೂ ಮರೆತು, ದನಕ್ಕಾಗಿಯೋ, ವಿಚಿತ್ರವೇನು ಹೇಳಲಾದೀತು? ಕೆಲವೆಡೆಯಲ್ಲಿ ಒಡತನಕ್ಕಾಗಿಯೂ ನಿಷ್ಕಾರಣವಾಗಿ ಹೊಡೆದಾಡಿ, ವಾಗಾಗುವ ಜನರನ್ನು ನೋಡಿ ಪಶ್ಚಾತ್ತಾಪಪಡಬೇಕು.; 'ಪಾಲು, ಪಾಲು' ಎಂದು ಅಲೆದಾಡುವವರ ಪಾಡು, ಕಡೆಗೆ ಕಾಡೇ! ಏಕೆಂದರೆ, ಅವರಿಗೆ ಮನಶ್ಶಾಂತಿಯೆಂಬ ಸುಭಿಕ್ಷರಾಜ್ಯವು ಕೈಸೇರದು, ಅತೃಪ್ತಿ, ಕ್ರೋಧ, ಮೋಹಗಳಿಂದ ನಿಬಿಡವಾದ ಅರಣ್ಯ ಪ್ರಾಪ್ತಿಯಾಗುವುದು

"ಏನೋ, ನಾವು ಅಣ್ಣತಮ್ಮಂದಿರು ಸರಿಪಡಿಸಿಕೊಂಡು ನಡೆಯಬಹುದು ಹೆಂಗಸರಿಗೆ ಭೇದವು ಹುಟ್ಟಿದರೆ, ಆಗಲೀಗ, ಪ್ರತ್ಯೇಕ ಸಂಸಾರವನ್ನು ನಡೆಸಬೇಕಾಗುತ್ತೆ" ಎಂದು, ಹೆಂಗಸರ ಮೇಲೂ, ಹೆಂಡತಿಯ ನಂಟರಮೇಲೂ, ಧಾರಾಳವಾಗಿ ಹೊರಿಸನ್ನು ಹೊರಿಸುವವರು,—ತಮ್ಮ ದೌರ್ಬಲ್ಯವನ್ನೂ, ಸ್ವಾರ್ಥತೆಯನ್ನೂ ಪ್ರಕಾಶಪಡಿಸುವರು ಪ್ರತ್ಯೇಕವಾಗಿ ಸಂಸಾರಮಾಡಬೇಕೆಂದು ಆರಿಪಟ್ಟಾಗ ಸ್ನೇಹದಲ್ಲಿ ಭಾಗವಾಗಿ, ಸಂತೋಷದಿಂದ ಮನೆಕ್ಲೇಶವಿಲ್ಲದೆ ಪರಸ್ಪರಾನುರಾಗವನ್ನು ಬಿಡದೆ, ಬಾಳುವವರೂ ಉಂಟು ನ್ಯಾಯದ, ತಮ್ಮಲ್ಲೇ ನಿಬಂಧನೆಗೆ ಬಾರದ, ವಿಶೇಷ ಹಣವ್ಯಯಮಾಡಿ ಕೋರ್ಟು ಕಚೇರಿಗ ಅಲೆದಾಡಿ ಆಸ್ತಿಯನ್ನು ಕಳೆದುಕೊಂಡು ವಿರಕ್ತರಾಗಿರುವವರೂ ಉಂಟು ಅಂತಹರು ಕೋರ್ಟುಬಿರ್ಕೆಂಬ ಮಂಗನ ಕೈಗೆ—ಪಂಚಾಯಿತಕ್ಕೆ ಬಿದ್ದರೆ,—ಬೆಣ್ಣೆಯ ಪಾಲಿಗೆ ಹೋರಾಡಿ ಪೆಚ್ಚುತಿಂದ ಬೆಕ್ಕುಗಳನ್ನು ಹೋಲುವರು. ಎಲ್ಲರೂ ನ್ಯಾಯಪರರಾಗಿ, ಕೇವಲ ಸಾಧುಗಳಾದರೆ, ನ್ಯಾಯಸ್ಥಾನಗಳನ್ನೂ ಬಾನೂಸುಗಳನ್ನೂ ಏರ್ಪಡಿಸುತ್ತಲೇ ಇರಲಿಲ್ಲ

ಪ್ರತಿಯೊಬ್ಬನೂ ಕೈಯಲ್ಲಾದರೀತಿ ಉದ್ಯೋಗದಲ್ಲಿ ನಿರತನಾಗಿರಬೇಕೆಂದು ಮೊದಲೇ ಹೇಳಿತಷ್ಟೆ! ಐದು ಬಟ್ಟುಗಳೂ ಹೇಗೆ ಅಸಮವಾಗಿವೆಯೋ, ಹಾಗೆಯೇ, ಒಂದೇ ಮನೆಯವರ ಪುಣ್ಯಫಲವೂ ಸಮವಾಗಿರುವುದಿಲ್ಲ ಉತ್ಸಾಹದಿಂದ ಪ್ರಯತ್ನಪಟ್ಟು, ಕಾರ್ಯಸಾಧನೆಯಲ್ಲಿದ್ದರೆ, ಮನುಷ್ಯನ ಕರ್ತವ್ಯವನ್ನೂ ನಡೆಸಿದಂತಾಯಿತು ಪ್ರಾಪ್ತಿಯಂತೆ ಫಲವು ಕೈಸೇರುವುದು ನಾಲ್ಕು ಜನ ಸಹೋದರರು ತಮ್ಮ ಸಂಪಾದನೆಯಿಂದ ಪ್ರತ್ಯೇಕವಾಗಿ ಜೀವಿಸುವ ಸುಖಕ್ಕಿಂತಲೂ, ಅವರು ಒಟ್ಟಾಗಿ ಸೇರಿ, ಬಾಳುವುದರಲ್ಲಿ ಸುಖವು ಹೆಚ್ಚು! ಮೃಷ್ಟಾನ್ನವನ್ನು ತಿನ್ನುವ ಶ್ರೀಮಂತನಿಗೂ, ಹಿಟ್ಟನ್ನು ತಿನ್ನುವ ಬಡವನಿಗೂ, ಹೊಟ್ಟೆ ತುಂಬಿದಾಗ ತೃಪ್ತಿಯು ಸಮನೇ ಸರಿ! ಇದನ್ನು ನೆನಪಿನಲ್ಲಿಟ್ಟುಕೊಂಡು, ತಮ್ಮ ಆದಾಯವನ್ನು ನಿಗಾರದಂತೆ ಜೀವಿಸಲು ಮನಸ್ಸು ಮಾಡುವ ಕುಟುಂಬದವರು ಸುಖವಾಗಿಯೇ ಇರಬಹುದು. ಪರಸ್ಪರ ನಂಬಿಕೆಯಿಲ್ಲದೆ, ಯಾವ ಕಾರ್ಯಸಾಧನೆಯೂ ಆಗಲಾರದು ದೇಶಾಭಿವೃದ್ಧಿ—ವ್ಯಾಪಾರಾಭಿವೃದ್ಧಿಗೆ ಎಷ್ಟು ಜನರು ಸೇರಿ ನಂಬಿಕೆಯಿಂದಿರಬೇಕು? ನಂಬಿಕೆಯಿಟ್ಟಲ್ಲಿ ಮೋಸವಾಗಿಲ್ಲವೇ? ಬಲಿಷ್ಠರಾದ ದುರ್ಜನರು ತಮ್ಮ ಸಹೋದರರಿಗೇ ಅನ್ಯಾಯಮಾಡಿ ದುಃಖಿಗಳಾಗಿಲ್ಲವೇ?' ಎಂದರೆ, ನಂಬಿಕಗೆ ಅನರ್ಹರೆಂದು ಸ್ಪಷ್ಟವಾಗಿ ತಿಳಿಯುವವರೆಗೆ, ತನಗೆ ಸಂಬಂಧಪಟ್ಟ ಎಲ್ಲರನ್ನೂ ನಂಬಿ ವಿಶ್ವಾಸವಿಟ್ಟರೇನೇ, ಮನಸ್ಸಿನ ಶಾಂತಿಯೂ ರಾಷ್ಟ್ರಕ್ಷೇಮವೂ ಹೆಚ್ಚುವುವು

ಧಾರಾಳಬುದ್ಧಿಯೂ, ಸಹನೆಯೂ ಇಲ್ಲದೆ, ಮನೆಗಳು ಹಾಳಾಗಿವೆ ಗಂಡಸರೂ—ಮುಖ್ಯವಾಗಿ ಹೆಂಗಸರೂ— ಇತರರ ಸಮಾವಳಿಕೆಯಲ್ಲಿ ಅಲ್ಲದ ಸಲ್ಲದ—ಪ್ರಸನ್ನದ ಉದ್ದೇಶವನ್ನು ಆರೋಪಿಸಬಾರದು. ಧಾರಾಬುದ್ಧಿಯಿಲ್ಲದೆ ಇತರರ ದೋಷಕ್ಕೆ ಸಿಕ್ಕಿ ನಷ್ಟಪಡಬಹುದೇ?

ಸ್ವಾರ್ಥವೇ ಮುಖ್ಯವೆನ್ನುವವರು ಒಟ್ಟಿಗೆ ಬಾಳುವುದು ಪ್ರಯಾಸ ಇತರರ ಸುಖವೇ ತಮ್ಮ ಸಂತೋಷವೆಂದು ಭಾವಿಸುವವರು ಇರುವೆಡೆಯಲ್ಲಿ ಮನಕ್ಲೇಶವಿಲ್ಲದೆ, ಎಲ್ಲರೂ ಸಮಾಧಾನದಲ್ಲಿರಬಹುದು 'ಸಮಯಕ್ಕೊದಗುವವನೇ ನಂಟನು. ತನ್ನ ಗೌರವಕ್ಕೆ ಹಾನಿ ಬಾರದಂತೆ ತಗ್ಗಿ ನಡೆಯುವುದರಲ್ಲಿ ಮನಸ್ಸಿಟ್ಟರೆ—ಒಂದು ಕುಟುಂಬದವರು ಸುಖಿಗಳಾಗಿ ಬಾಳಲು ಸಂದೇಹವಿಲ್ಲ

ಪ್ರಧಾನ ವಿಷಯಗಳಿಗೂ ಸಾಮಾನ್ಯ ವಿಷಯಗಳಿಗೂ ತಕ್ಕ ತಕ್ಕ ಮರ್ಯಾದೆಯನ್ನು ಮಾಡಬೇಕು ಸಾಮಾನ್ಯ ವಿಷಯಗಳಿಗೆ ಅಸಾಧಾರಣ ಪ್ರಾಶಸ್ತ್ಯವನ್ನು ಕೊಟ್ಟು, ಬುದ್ಧಿಯನ್ನು ವ್ಯರ್ಥಗೊಳಿಸದಿರಬೇಕು ದೊರಕ್ಕೆ ಒಂದೇರೀತಿಯಾಗಿ ಕಂಪದರೂ, ಮೂರು ಕಾಸಿನ ನಾಣ್ಯಕ್ಕೂ, 'ಪೌ' ನಾಣ್ಯಕ್ಕೂ ಭೇದವಿಲ್ಲವೇ? ಈ ಭೇದವಿಜ್ಞಾನವಿಲ್ಲದವರು ಒಟ್ಟಿಗೆ ಬಾಳುವುದು ಪ್ರಯಾಸ

ವಿಧೇಯತೆಯ, ಯಜಮಾನನಲ್ಲಿ ವಿಶ್ವಾಸಪೂರ್ವಕವಾದ ಮರ್ಯಾದೆಯೂ ಇಲ್ಲವಾದರೆ, ಅವಿಭಕ್ತಸಂಸಾರವು ಪ್ರಯಾಸವಾಗುವುದು ಒಂದು ಕುಟುಂಬಕ್ಕೆ ಸೇರಿದ ಪ್ರತಿಯೊಬ್ಬನೂ, ಸ್ವತಂತ್ರನಾಗಿರಬೇಕೆಂದರೆ, ಆಕರ್ಷಣಶಕ್ತಿಯು ಇಲ್ಲದ ಪ್ರಪಂಚವೇ ಆದೀತು! ಉದ್ದೇಶವು ಚನ್ನಾಗಿವೆಯೆಂದು ನಂಬಿರಲು,—ಯಜಮಾನನಿಗೆ ವಿಧೇಯರಾಗಿರಲು ಸುಲಭವಾಗುವುದು.

ಎಷ್ಟೋ ಮಹನೀಯರಾದ ಸಹೋದರರು ಅವಿಭಕ್ತರಾಗಿದ್ದು ದೇಶಕ್ಕೇ ಮಾದರಿಯಂತಿದ್ದಾರೆ ಅಂತಹರು ಓದಿಯನಲ್ಲಿ—ತಮ್ಮಂದಿರು ಇಟ್ಟಿರುವ ಭಕ್ತಿ ಪ್ರೀತಿಗಳನ್ನೂ—ತಮ್ಮಂದಿರ ವಿಚಾರದಲ್ಲಿ ಹಿರಿಯರು ನಿಡುವ ವಾತ್ಸಲ್ಯವನ್ನೂ—ನಾವು ನ... ಉಪಂಗಿಯಾಗಿಟ್ಟುಕೊಂಡಿರಬೇಕು

ಸಂಘದಿಂದ ಸಾಧಿಸಬಹುದಾದ ... ಗಳನ್ನು ಒಂಟಿಯಾಗಿ ಯಾವ ... ನಿರ್ವಹಿಸಲಾಗುವುದಿಲ್ಲ ದೇಶಾಭಿವೃ... ಒಟ್ಟು ಸೇರಿ ಶ್ರದ್ಧೆಯಿಂದಲೂ, ... ಯಿಂದಲೂ, ಜನರು ನಡವಳಿಕೆಯ... ಏರ್ಪಡಿಸಿಕೊಳ್ಳಬೇಕಷ್ಟೆ! ಈ ಘಟ... ಸ್ತ್ರೀಯೂ ಪ್ರತಿಯೊಬ್ಬರೂ, ತಮ್ಮ ... ಮಲ್ಲೇ ಒಗ್ಗಟ್ಟಿನಿಂದಿದ್ದು ದೇಶಾ... ವನ್ನೂ, ಅವಿಭಕ್ತಸಂಸಾರದ ಸಮ... ಗಳನ್ನೂ ಪ್ರಪಂಚದ ಪ್ರಕಾಶಕ್ಕೆ ತ... ದು ಕೋರಿದೆ

ಈಜಿಪ್ಟಿನ ವಿಚಿತ್ರ ಪದ್ಧತಿ

ಈಜಿಪ್ಟಿನ ದೊರೆಗಳಾದ ಫಾವುದ್... ರು ಸ್ವರ್ಗಸ್ಥರಾದರಷ್ಟೆ, ಅವರ ಮ... ಳಾದ ಫರೂಕರು ದೊರೆಗಳಾಗಿ ನೇಮಿಸ... ಟ್ಟಿರುವರು ಮೃತಪಟ್ಟ ರಾಜರ ಸ್ಮಶಾನಯಾತ್ರೆಯು ವಿಚಿತ್ರ ರೀತಿಯಲ್ಲಿ ನಡೆ... ತು ಅವರ ಶರೀರವನ್ನು ಈಜಿಪ್ಟಿ... ನಾವಿಕರು ರಾಜನೌಕೆಯಿಂದ ತೆಗೆದು ... ಮೂಕದ ಗಾಡಿಯಲ್ಲಿ ಇಟ್ಟರು ಈ ಗಾಡಿ... ಆರು ಕರೀ ಕುದುರೆಗಳನ್ನು ಕಟ್ಟಿತ್ತ... ದೊಡ್ಡ ಮೆರವಣಿಗೆಯಾಯಿತು ... ಎರಡು ಮೈಲಿ ಉದ್ದವಿತ್ತು ಏಳು ಗೂ... ಗಳನ್ನು ಕೊಂದು ಅವುಗಳ ಮಾಂಸ... ನ್ನು ಬಡ ಜನರಿಗೆ ಹಂಚಿದರು. ಇದೇ... ದು ಹಳೇ ಪದ್ಧತಿ ಮೆರವಣಿಗೆಯ ಮೇ... ವಿಮಾನಗಳು ಹಾರಾಡುತ್ತಿದ್ದವು ... ದು ಗಾಡಿಗಳಿಗೂ ಅಂಗಡಿಗಳಿಗೂ ... ಕ್ಟ್ರಿಕ್ ದೀಪಗಳ ಶೃಂಗಾರವು ಮಾಡ... ಲ್ಪಟ್ಟಿತ್ತು

ಕಲಾ ಪ್ರದರ್ಶನ

ರಾಜಧಾನಿಯ ಲಲಿತ ಕಲಾಸಂಘದ... ರು ಪದ್ಧತಿಯಂತೆ ಈ ಸಾರಿಯೂ ವರ್ಧಂ... ಉತ್ಸವದ ಸಮಯದಲ್ಲಿ ಕಲಾ ಪ್ರದರ್ಶ... ನವನ್ನು ಏರ್ಪಡಿಸಿರುವರು ಅದು ಈ ... ಗಸ್ಟು 28 ರಿಂದ ಜೂನ್ 8 ರವ... ಟಿಸ್ಥಿಕಲಾಶಾಲೆಯಲ್ಲಿ ನಡೆಯುವು... ಚಿತ್ರಗಳನ್ನು ಸ್ವೀಕರಿಸಲಾಗುವುದು ... ಬಹುಮಾನಗಳೂ ಕೊಡಲ್ಪಡುವುವು ಕ... ವಿವರೆಲ್ಲರೂ ಇದರ ಪ್ರಯೋಜನವ... ಹೊಂದಬೇಕಾಗಿ ಕೋರಿದೆ.

ಸರ್ವಜ್ಞನ ನುಡಿ

ಕೊಟ್ಟು ಕುದಿಯಲಿಬೇಡ।
ಕೊಡದೆನೀನಿರಬೇಡ।
ಕೊಟ್ಟಿದ್ದು ಕೆಟ್ಟಿತು ಎನಬೇಡ
ಅದೆ ಮುಂದೆ ಕಟ್ಟಿದಿಬುತ್ತಿ ಸರ್ವಜ್ಞ
ಕನ್ಯಾನಾಲಿಗೆ ಮನವು ತನ್ನದೆಂದೆನಬೇ...
ಅನ್ಯರನು ಕೊಂದರೆನಬೇಡ
ಇವು ಮೂರು ತನ್ನನೇ ಕೊಲ್ಲುವವು
ಸರ್ವಜ್ಞ

ಸುಭಾಷಿತ.

ದಾನಂ ಭೋಗೋನಾಶಸ್ತಿ
ಸ್ತ್ರೀಗತಯೋಭವಂತಿವಿತ್ತಸ್ಯ।
ಯೋನದದಾತಿ ನ ಭುಂಕ್ತೇ
ತಸ್ಯತೃತೀಯಾ ಗತಿರ್ಭವತಿ॥

ವೈಸರಾಯಿ ಪದವಿಯ ಕಷ್ಟಸುಖಗಳು.

ಭರತಖಂಡದ ವೈಸರಾಯಿ ಪದವಿಯು ಬಹಳ ತೊಡಕಿನಿಂದ ಕೂಡಿದ್ದು ಅನೇಕ ವರ್ಷ ಸಂಕಟಗಳನ್ನು ತರತಕ್ಕದ್ದು ಲಾಭದಾಯಕವಾಗಿರುವುದಕ್ಕಿಂತಲೂ ಶ್ರಮಕರವಾಗಿರುವುದೇ ಹೆಚ್ಚು, ಎಂಬೀ ಅಭಿಪ್ರಾಯಗಳನ್ನು ಒಬ್ಬ ಲೇಖಕರು ಲಂಡನ್ ಪತ್ರಿಕೆಯಲ್ಲಿ ಬರೆಯುತ್ತಾರೆ ಅವರು ಮತ್ತೂ ಹೇಳುವುದೇನೆಂದರೆ—ವೈಸರಾಯರಿಗೆ ವರ್ಷಕ್ಕೆ 19,200 ಪೌಂಡು ಸಂಬಳ ದೊರೆಯುತ್ತದೆ ಮತ್ತು ಕೆಲವು ಸಂತೋಷಕೂಟಗಳ ಭತ್ಯಗಳೂ ಸಲ್ಲುತ್ತವೆ ಆದರೂ ಈ ಹಣವು ಅವರಿಗೆ ಸಾಲುವುದಿಲ್ಲ. ಸ್ವಂತ ಕೈಯಿಂದ ಕಾಸನ್ನು ಖರ್ಚು ಮಾಡುವಂತೆ ಆಗದಿದ್ದರವರೇ ಪುಣ್ಯವಂತರು. ವೈಸರಾಯರಾಗಿರುವುದಕ್ಕೆ ಮುಂಚೆ ಇದ್ದುದಕ್ಕಿಂತಲೂ ಬಡವರಾಗಿ ಅವರು ಹಿಂದಕ್ಕೆ ತೆರಳುವರು ಬಹಳ ದುಬಾರಿಯಾದ ಸಿಬ್ಬಂದಿಯನ್ನು ಅವರು ಇಟ್ಟುಕೊಳ್ಳಬೇಕಾಗುತ್ತದೆ ಲಾರ್ಡ್ ರೀಡಿಂಗರು ತಮ್ಮ ವೈಸರಾಯಿಗಿರಿಯು ಮುಗಿದಮೇಲೆ ದೊಡ್ಡ ಹೊರೆಯು ತಪ್ಪಿತೆಂದು ಆನಂದಪಟ್ಟರು ವೈಸರಾಯರ ಔತಣಕೂಟಗಳ ವೆಚ್ಚವು ವಿಪರೀತವಾಗುತ್ತದೆ ದೂರಾರದೇಶ ಅತಿಥಿಗಳು ಪ್ರತಿದಿನವೂ ಬರುತ್ತಾರೆ ಲಾರ್ಡ್ ಕರ್ಜನ್‌ರವರು ಒಂದಾನೊಂದು ತಿಂಗಳಲ್ಲಿ 3500 ಜನರಿಗೆ ಸಂತರ್ಪಣೆ ಮಾಡಿಸಬೇಕಾಯಿತು ಬಂಗಾಳ ಗವರ್ನರಾಗಿದ್ದಾಗ ಅವರು 1911 ನೇ ಇಸವಿ ಡಿಸೆಂಬರ್ ತಿಂಗಳಲ್ಲಿ 1115 ಸೀಸ ವೈನಿಗೆ ಹಣ ಕೊಡಬೇಕಾಗಿ ಬಂತು

ರಾಜ್ಯಾಡಳಿತದಲ್ಲಿ ವೈಸರಾಯರಿಗೆ ಅನೇಕ ವಿಧದ ದಿಗ್ಬಂಧನಗಳು ಬರುತ್ತವೆ ತಮ್ಮ ಮಂತ್ರಿ ಮಂಡಲದಲ್ಲಿ ಭಿನ್ನ ಭಿನ್ನ ಅಭಿಪ್ರಾಯದ ಸದಸ್ಯರಿರುತ್ತಾರೆ ಅವರಿಗೆ ಆಗಾಗ ಲಂಡನ್ನಿನಿಂದ ಸೆಕ್ರೆಟರಿ ಆಫ್ ಸ್ಟೇಟ್‌ರವರು ತಂತಿಯಮೇಲೆ ತಂತಿಯನ್ನು ಕಳುಹಿಸುತ್ತಾ ಹೀಗೆಯೇ ಮಾಡಬೇಕು ಹಾಗೆಯೇ ಮಾಡಬೇಕೆಂದು ಹೇಳುತ್ತಿರುವರು ಇತ್ತಲಾಗಿ ರಾಷ್ಟ್ರೀಯ ಸ್ಫೂರ್ತಿಯಿಂದ ಪ್ರೇರಿತರಾದ 35 ಕೋಟಿ ಭಾರತೀಯರು ಅವರಿಗೆ ಆತಂಕಗಳನ್ನುಂಟುಮಾಡುತ್ತಲೇ ಇರುವರು ಇದಲ್ಲದೆ ಅನೇಕ ಗುಪ್ತ ಸಲಹೆಗಳೂ ಬರುತ್ತಿರುತ್ತವೆ ಅವುಗಳ ವಿವರವು ಯಾರಿಗೂ ಗೊತ್ತಾಗುವುದಿಲ್ಲ. ಒಬ್ಬ ವೈಸರಾಯರ ಪದವಿಯು ಮುಗಿಯಿತೆಂದರೆ ಈ ಗುಪ್ತ ಕಾಗದಗಳನ್ನು ಬೇರೆಯಾಗಿ ತೆಗೆದಿಟ್ಟಿರುತ್ತಾರೆ ಬಂಗಾಳದ ಕ್ರಾಂತಿಕಾರರ ಹಾವಳಿಯೂ ಪರ್ಷಿಯ ಕೊಲ್ಲಿಯಲ್ಲಿ ಅಸ್ಥಿರ ಚಳುವಳಿಯೂ, ರಾಜಮಹಾರಾಜರುಗಳ ಮುಂದುಗಾರಿಕೆಗಳೂ ಏಕಕಾಲದಲ್ಲಿ ವೈಸರಾಯರ ಮನಸ್ಸನ್ನು ಪೀಡಿಸುತ್ತಿರುತ್ತವೆ

ಭರತಖಂಡದ ರಾಜಮಹಾರಾಜರುಗಳು ಆಡಿದ ಮುಖದಿಂದಲೂ, ಕಂಪಿಸುತ್ತಿರುವ ಶರೀರದಿಂದಲೂ, ಬೆವರು ಸುರಿಸುತ್ತ, ವೈಸರಾಯರ ನಿವಾಸಕ್ಕೆ ಹೋಗುತ್ತಲೂ ಬರುತ್ತಲೂ ಇರುತ್ತಾರೆ ಅವರುಗಳನ್ನು ವೈಸರಾಯರು, ಹಂಗಿಸುತ್ತಾರೆ, ಚೀಮಾರಿ ಮಾಡುತ್ತಾರೆ, ಎಚ್ಚರಿಕೆ ಕೊಡುತ್ತಾರೆ, ಬೆದರಿಸುತ್ತಾರೆ ಒಬ್ಬ ಹೆಡ್ಮಾಸ್ಟರ ಕೊಠಡಿಗಿಂತಲೂ ಹೆಚ್ಚಾಗಿ ಇಂತಹ ವಿಲಕ್ಷಣ ದೃಶ್ಯಗಳು ವೈಸರಾಯರ ನಿವಾಸದಲ್ಲಿ ಕಾಣಬರುತ್ತವೆ ಬೆತ್ತವನ್ನು ಮಾತ್ರ ಪ್ರಯೋಗಿಸುವುದಿಲ್ಲ ಆದರೆ ಸಾರ್ವಭೌಮತ್ವವಿರುತ್ತದೆ. ವೈಸರಾಯರ ಆಪ್ತ ಸಚಿವರು ಈ ರಾಜರ ಪೈಕಿ ಎಂತಹ ಬೇಜವಾಬ್ದಾರಿಯ, ನಿರಂಕುಶಪ್ರವರ್ತನೆಯ, ಅನೀತಿಮಯದ, ವ್ಯಕ್ತಿಯನ್ನು ವೈಸರಾಯರ ಬಳಿಗೆ ಕರೆದುಕೊಂಡು ಹೋಗುತ್ತಿದ್ದರೂ, ಹೋಗುವ ದಾರಿಯಲ್ಲೇ ಆ ವ್ಯಕ್ತಿಯು ನಡುಗಿ ಸಂಕುಚಿತನಾಗುವನು

ದೇಶೀಯ ಸಂಸ್ಥಾನಗಳಿಗೆ ಭೇಟಿಗಳನ್ನು ಕೊಡುವುದು ವೈಸರಾಯರುಗಳ ಒಂದು ಪ್ರಾಮುಖ್ಯ ಕೆಲಸ. ಆದರೆ ಈಗಿನ ವೈಸರಾಯರಾದ ಲಾರ್ಡ್ ಲಿನ್‌ಲಿತ್‌ಗೋರವರಿಗೆ ಈ ಕಷ್ಟ ತಪ್ಪಬಹುದು ಏಕೆಂದರೆ ಈ ಭೇಟಿಗಳು ದೇಶೀಯ ರಾಜರುಗಳಿಗೆ ಬರುಬರುತ್ತ ಬಹಳ ಭಾರವಾಗಿ ಪರಿಣಮಿಸುತ್ತಿವೆ. ಕೆಲವು ದಿನಗಳ ಹಿಂದೆ ಒಬ್ಬ ರಾಜರು ವಿಲಿಂಗ್ಡನ್ನು ದೊರೆಗಳನ್ನು ತಮ್ಮ ದೇಶಕ್ಕೆ ಬಾರದಂತೆ ಕೇಳಿಕೊಂಡರು

ಚಕ್ರವರ್ತಿಯವರ ಸ್ವಂತ ಖರ್ಚು.

ಬ್ರಿಟಿಷ್ ಚಕ್ರವರ್ತಿಯವರ ಸ್ವಂತ ಖರ್ಚುಗಳು ಒಂದು ನಿಯಮಕ್ಕೆ ಬದ್ಧವಾಗಿವೆ ಅವರು ದೊಡ್ಡ ಚಕ್ರಾಧಿಪತ್ಯದ ಸಾರ್ವಭೌಮರಾದಾಗ್ಯೂ ತಮ್ಮ ಸ್ವೇಚ್ಛೆಯಂತೆ ಖರ್ಚು ವೆಚ್ಚಗಳನ್ನು ಮಾಡುವಂತಿಲ್ಲ ಮೊನ್ನೆ ಪಾರ್ಲಿಮೆಂಟಿನಲ್ಲಿ ಅವರಿಗೆ ಕೊಡಬೇಕಾದ ಹಣದ ವಿಷಯವು ಚರ್ಚಿಸಲ್ಪಟ್ಟಿತು 410 ಸಾವಿರ ಪೌಂಡುಗಳನ್ನು ಕೊಡಬೇಕೆಂದು ನಿರ್ಣಯವು ಬಂದಿತು ಅಂದರೆ ಸುಮಾರು 60 ಲಕ್ಷ ರೂ ಆಗುವುದು ಇಷ್ಟು ಹಣವನ್ನು ಕೊಡಕೂಡದೆಂದೂ ಕಡಿಮೆಮಾಡಬೇಕೆಂದೂ ಸೂಚಿಸಿ ಲೇಬರ್ ಪಂಗಡದವರು, ತಿದ್ದುಪಡಿ ತಂದರು ಆದರೆ ಅದು ಬಹುಮತದಿಂದ ಬಿದ್ದುಹೋಗಿ ಮೊದಲನೇ ಸಲಹೆಯೇ ಅಂಗೀಕರಿಸಲ್ಪಟ್ಟಿತು ನಮ್ಮ ದೇಶದಲ್ಲಿ ಅನೇಕ ರಾಜರುಗಳಿರುತ್ತಾರೆ. ಇವರುಗಳ ಖರ್ಚುವೆಚ್ಚದ ನಿಗದಿಯೇ ಇಲ್ಲ ಅವರು ಮನ ಬಂದಷ್ಟು ಖರ್ಚು ಮಾಡುತ್ತಾರೆ ಕೆಲವು ಸಮಯಗಳಲ್ಲಿ ಸಾಲಸೋಲಗಳನ್ನೂ ಮಾಡುತ್ತಾರೆ ಇವರಿಗೆ ಆಗ ಮಿಕ್ಕರೆ ಆಗ ದೇಶದ ಹಿತದ ಕಡೆ ಗಮನಕೊಡಲ್ಪಡುವುದು. ನಮ್ಮ ದೇಶದ ರಾಜರ ಪೈಕಿ ಬ್ರಿಟಿಷ್ ಚಕ್ರವರ್ತಿಗಳಂತೆ ಅಂಗೀಕೃತವಾದ ಮಾಬಲಗನ್ನು ತೆಗೆದುಕೊಳ್ಳುವವರು ಒಬ್ಬರೂ ಇಲ್ಲ

ಅಷ್ಟಮ ಕರ್ಣಾಟಕಾಯುರ್ವೇದ ಸಮ್ಮೇಳನ, ಶಿವಮೊಗ್ಗ.

ಡಾ॥ ಸ್ವಾಮಿಯವರ ಅಧ್ಯಕ್ಷ ಭಾಷಣ

(೧) ಆಯುರ್ವೇದವು ಸೂರ್ಯಚಂದ್ರರಂತೆ ಸನಾತನವಾದದ್ದು (೨) ಆಯುರ್ವೇದ ಶಾಸ್ತ್ರವು ಪವಿತ್ರ ಸಾಹಿತ್ಯವೂ ಧರ್ಮವಿಜ್ಞಾನವೂ ಆಗಿದೆ (೩) ಆಯುರ್ವೇದವು ತರ್ಕವಿಜ್ಞಾನ (೪) ಆಯುರ್ವೇದವು ನೈತಿಕ ಶಾಸ್ತ್ರ. (೫)ಆಯುರ್ವೇದವು ಜ್ಯೋತಿಷ ಶಾಸ್ತ್ರವನ್ನೊಳಗೊಂಡಿದ (೬) ಆಯುರ್ವೇದವು ಎಲ್ಲ ರೋಗಗಳಿಗೆ ಸರಿಯಾದ ಚಿಕಿತ್ಸೆಯನ್ನೂ ಅತ್ಯುತ್ತಮವಾದ ರಸೌಷಧವಿಧಿಗಳನ್ನೂ ಒಳಗೊಂಡಿದೆ (೭) ನಿರೋಗಿಗಳಿಗೂ, ರೋಗಿಗಳಿಗೂ ಅವರವರಿಗೆ ತಕ್ಕ ಚಿಕಿತ್ಸೆಯನ್ನು ಆಯುರ್ವೇದವು ಸೂಚಿಸುವುದು. (೮) ವಿಕಲ್ಪಗೊಳ್ಳದ ವಾದ, ಪಿತ್ತ, ಕಫ ಮತ್ತು ಸತ್ವ, ರಜ, ತಮೋಗುಣಗಳ ಸಿದ್ಧಾಂತಗಳನ್ನೊಳಗೊಂಡಿರುವ ಆಯುರ್ವೇದವು ಅತ್ಯುತ್ತಮವಾದ ವಿಜ್ಞಾನವಾಗಿದೆ

ಆಯುರ್ವೇದವು ತನ್ನ ಜನ್ಮಭೂಮಿಯಾದ ಈ ದೇಶದಲ್ಲಿ ತಲೆಯೆತ್ತದಿದ್ದರೆ, ನಮ್ಮ ಜನಾಂಗಕ್ಕೆ ಯಾವ ಶಾಶ್ವತ ಲಾಭವೂ ಆಗಲಾರದೆಂದು ನನ್ನ ದೀರ್ಘ ಮನನಾಧ್ಯಯನಗಳಿಂದ ನನ್ನಲ್ಲಿ ಅಚಲವಾದ ವಿಶ್ವಾಸವು ಬೇರೂರಿದೆ ಬೋಸ್ ಮತ್ತು ರಾಮನ್ನರ ಭೌತಿಕ ಸಿದ್ಧಾಂತ, ರಾಯ್ ಮತ್ತು ಸಹಾ ಅವರ ರಸಾಯನಿಕ ತತ್ವ, ಟಾಗೋರರ ವಿಶ್ವಭಾರತಿ, ನಮ್ಮ ರಾಧಾಕೃಷ್ಣರ ತತ್ವಶಾಸ್ತ್ರ, ಜವಾಹಿರಲಾಲರ ಸಾಮ್ಯವಾದ—ಇವುಗಳೆಲ್ಲ ಅಮರವಾದ ಆಯುರ್ವೇದಾಮೃತವಿಲ್ಲದ ಬರಿ ನೊರೆಯಿಂದ ತುಂಬಿದ ಸೀಸೆಗಳಂತಿರುವುವು ಡಾ॥ ಜೆ ಸಿ ಬೋಸರ ಹೊರತು ಉಳಿದ ಈ ಕುಶಾಗ್ರಮತಿಗಳು ಆಯುರ್ವೇದವನ್ನು ದಯಾ ದೃಷ್ಟಿಯಿಂದ ನೋಡುತ್ತಿಲ್ಲ ಆದ್ದರಿಂದ ಧನ್ವಂತರಿಯ ಶಾಪದಿಂದ ಅವರಿಗೆ ಅತಿ ಪ್ರಿಯವಾದ ಜೀವಪ್ರಕೃತಿಗಳ ರಹಸ್ಯಭೇದದ ಪ್ರಯತ್ನದಲ್ಲಿ ಅವರಿಗೆ ಮಂಕು ಕವಿಯುತ್ತಿದೆ. ಸಮಗ್ರ ಜಗತ್ತನ್ನು ಗೆದ್ದು, ಭಾರತದ ಆತ್ಮವನ್ನು ಕಳೆದುಕೊಂಡರೇನು ಪ್ರಯೋಜನ? ಈ ಭಾರತೀಯ ವಿದ್ವಾಂಸರು ಸೇವಕರು, ದೇಶಭಕ್ತರುಗಳಿಗೆ ನಾನು ವಿನಯದಿಂದ ಈ ರೀತಿ ಬಿನ್ನೈಸಿಕೊಳ್ಳುತ್ತೇನೆ—"ಮಾನವನ ಜ್ಞಾನಭಂಡಾರಕ್ಕೆ ಆಯುರ್ವೇದದಿಂದಲೂ ಪ್ರಯೋಜನವಾಗುವುದು ಮತ್ತ ನಿಮ್ಮ ಕುಶಾಗ್ರ ಬುದ್ಧಿಗೂ ಅದು ಅತ್ಯುತ್ತಮವೂ ಆರೋಗ್ಯಕರವೂ ಆದ ಆಹಾರವನ್ನೀಯುವುದು. ಆದುದರಿಂದ ದೇಶಾಭಿಮಾನ ಪ್ರೇರಣೆಯಿಂದಲೇ ಆಯುರ್ವೇದ ವಿಮರ್ಶೆಯ ಕಡೆಗೂ ನಿಮ್ಮ ದೃಷ್ಟಿಯನ್ನು ತಿರುಗಿಸಿ ನಿಮ್ಮ ದೇಶಕ್ಕೂ ಜಗತ್ತಿನ ಸಂಸ್ಕೃತಿಯ ಮೂಲ ಉದ್ದೇಶಕ್ಕೂ ಅಮರವಾದ ಕೀರ್ತಿಯನ್ನು ತನ್ನಿರಿ ಎಂದು ಬೇಡಿಕೊಳ್ಳುತ್ತೇನೆ"

ವಿಮರ್ಶೆ

ತತ್ವಮಸಿ, ಎಂಬ ಮಹಾವಾಕ್ಯವನ್ನು ಕುರಿತು ಶ್ರೀ ಆಚಾರ್ಯರವರು ಎರಡು ಗ್ರಂಥಗಳನ್ನು ಬರೆದಿರುವರು ಒಂದರಲ್ಲಿ ದ್ವೈತಸಿದ್ಧಾಂತಕ್ಕನುಸಾರವಾದ ಅರ್ಥವನ್ನೂ, ಮತ್ತೊಂದರಲ್ಲಿ ಶ್ರೀ ಮಧ್ವಸಿದ್ಧಾಂತಾನುಸಾರವಾದ ಅರ್ಥವೇ ಸರಿ ಎಂದೂ ಪ್ರತಿಪಾದಿಸಿರುವರು ಶ್ರೀ ಆಚಾರ್ಯರವರನ್ನು ನಾವು ಅವರ ಮತಾಭಿಮಾನ, ಭಾಷಾಭಿಮಾನಗಳಿಗಾಗಿ ಅಭಿನಂದಿಸುವೆವು ಇವರು ಬುದ್ಧಿವಂತರು. ಕನ್ನಡದಲ್ಲಿ ಇಲ್ಲದ ಹಲವು ಗ್ರಂಥಗಳನ್ನು ಶ್ರೀ ಆಚಾರ್ಯರವರು ಪ್ರಕಟಿಸಲೆಂದು ಹಾರೈಸುವೆವು ಗ್ರಂಥಕರ್ತರು ತಮ್ಮ ಅರ್ಥವನ್ನು ಸಾಧಿಸುವುದಕ್ಕಾಗಿ ಹೇಳುತ್ತಿರುವ 'ಅತತ್' ಎಂಬ ಶಬ್ದವು ವೇದದಲ್ಲಿ ಎಲ್ಲಿಯಾದರೂ ಪ್ರಯೋಗಿಸಲ್ಪಟ್ಟದ್ದಲ್ಲಿ ಗ್ರಂಥಕರ್ತರಾಗಲೀ, ಹೀಗೆ ವಾದಿಸುವವರಾಗಲೀ, ಅಂತಹ ಪ್ರಯೋಗವನ್ನು ತೋರಿಸಿಕೊಟ್ಟಲ್ಲಿ ಸರ್ವರೂ ಇವರ ಅರ್ಥವೇ ಸರಿ ಎಂದು ನಂಬಬಹುದಾಗಿದ್ದಿತು ಬೆಲೆ ತತ್ವಮಸಿ ಅರ್ಥ 8 ಆಣೆ ತತ್ವಮಸಿ ವಿಮರ್ಶೆ 1 ರೂ ಸಿಕ್ಕುವ ಸ್ಥಳ ಗ್ರಂಥಕರ್ತರು, ಶ್ರೀ ಪಂಡಿತ ಚೀಮನಹಳ್ಳಿ ರಘುನಾಥಾಚಾರ್ಯ ಮತ್ತು ಸಿ ಬಾದರಾಯಣಾಚಾರ್ಯರು, 13 ಸೊನಾರ್ ಬೀದಿ, ಮೈಸೂರು

ಎ. ಎಸ್

ಆಯುರ್ವೇದ ಭಾಸ್ಕರನು ಪೂರ್ವದಿಕ್ಕಿನಿಂದಲೆ ಪಶ್ಚಿಮಕ್ಕೆ ಬೆಳಕನ್ನು ಬೀರುತ್ತಾ, ೫೦೦೦ ವರ್ಷಗಳಿಂದ ಅಸ್ತಾಚಲದ ಕಡೆ ತೆರಳುತ್ತಾ ಪಶ್ಚಿಮದಿಕ್ಕಿನಿಂದ ಪೌರ್ವಾತ್ಯರಿಗೆಲ್ಲಾ ಬೆಳಕನ್ನಿತ್ತಿದ್ದಾನೆ ಈವರೆಗೆ ನಾವು ೮ ಭಾಸ್ಕರ ಜ್ಯೋತಿಯನ್ನು ಪಶ್ಚಿಮದಲ್ಲಿ ಕಾಣುತ್ತಿದ್ದೆವು ಇದುವರೆಗೆ ಪಶ್ಚಿಮ ದಿಕ್ಕು ಜ್ಯೋತಿರ್ಮಯವಾಗಿತ್ತು ನಿಜ ಆದರೆ ಈಗ ಅಲ್ಲಿ ಮುಳುಗುತ್ತಿರುವ ಸೂರ್ಯನು ಮತ್ತೆ ಇಲ್ಲಿಯೇ ಉದಯಿಸನೆಂದು ವಿಷಾದಿಸಬೇಕಾಗಿದೆ!

ಆದ್ದರಿಂದ, ಬಂಧುಗಳೆ, ಸೂರ್ಯಾಸ್ತವಾದ ಬಳಿಕ ಬರುವ ಮರುದಿನ, ಮೂಡಲಲ್ಲಿ ಮೂಡುವ ಬಾನ್ಮಣಿಗೆ ಸ್ವಾಗತ ಗೀತೆಯನ್ನು ಹಾಡಲು ನೀವು ಈಗಿನಿಂದ ಸಿದ್ಧರಾಗಬೇಕಾಗಿದೆ ಸೂರ್ಯನು ಯಾವಾಗಲೂ ಪೂರ್ವದಿಕ್ಕಿನಲ್ಲಿ ಬಲಿಯುವವನು, ಪಶ್ಚಿಮದಲ್ಲಿ ಕಳೆಗುಂದುವವನು ಪಶ್ಚಿಮದಲ್ಲಿ ಕ್ಷೀಣ ಸೂರ್ಯನು ಸಾಗರ ಮಧ್ಯದಲ್ಲಿ ಪ್ರಕಾಶಮಾನವಾದ ಒಂದು ಚೆಂಡಿನಂತೆ ಮುಳುಗುತ್ತಿರುವ, ಮನೋಹರವಾದ ಸೂರ್ಯಾಸ್ತದ, ಘನವಾದ ದಿವ್ಯವಾದ ನೋಟವನ್ನು ಆಗುಂಬೆ ಘಟ್ಟದಿಂದ ನೋಡಿರುವ ನಿಮ್ಮಗಳಲ್ಲಿ, ಆ ನೋಟವೇ ನಾಳೆ ಮೂಡುವ 'ಧರ್ಮರಾಜ'ನ ಕಿರೀಟೋತ್ಸವವನ್ನು ನೀವೇ ಸಾಬನಂತೆ ಪ್ರೇರೇಪಿಸಬೇಕು

ಸಾಧ್ವಿ
೧೧-೫-೩೬ ನೇ ಸೋಮವಾರ

ಜಾತಿ ಕಡಲು ಕಾನೂನಿನ ಸಹಾಯ.

ಮನುಷ್ಯನು ಹುಟ್ಟುವಾಗಲೇ ಬರುವುದೊಂದು ಜಾತಿ, ಬದಲಾಯಿಸುವುದು ಮತ್ತೊಂದು ಜಾತಿ. ಈಗಿನ ಕಾಲದ ಪರಿಸ್ಥಿತಿ ಹೀಗಿದೆ. ಮುಸ್ಲಿಮರು ಹಿಂದೂ ಜನಾಂಗದಿಂದ ಬೇರೆ ಇತರ ಮತಗಳಿಗೆ ಹೋಗಲು ಸಾಧಾರಣ ಮಾರ್ಗಗಳು ಈಗಲೇ ಇವೆ. ಯಾವ ಮನುಷ್ಯನು ಬೇಕಾದರೂ ಯಾವ ಕಾರಣದಿಂದಲಾದರೂ ತಾನು ಹುಟ್ಟಿ ಬೆಳೆದ ಮತವನ್ನು ಬಿಟ್ಟು ಬೇರೆ ಮತಕ್ಕೆ ಸೇರಿಕೊಳ್ಳಬಹುದಾಗಿದೆ. ಹೀಗೆ ಬಿಟ್ಟವನು ತನ್ನ ಮತ್ತೊಂದನ್ನು ತೊಟ್ಟುಕೊಂಡಂತೆ ಮತಗಳು ಬದಲಾಯಿಸಲ್ಪಡುತ್ತಿವೆ. ಇದು ಸಾಲದೆ ಜಾತಿಕೆಡಲು ಮತ್ತಷ್ಟು ಸಹಕಾರಿಯಾಗುವ ಕಾನೂನೊಂದನ್ನು ಮಾಡುವ ಯೋಜನೆಯು ನಮ್ಮ ಸರ್ಕಾರದವರ ಮುಂದಿರುವುದೆಂದು ಬರೆದು ಮುಸಲ್ಮಾನರನ್ನು ಸರ್ಕಾರದವರು ತಮ್ಮ ಸಮಾಜದ ಅಭಿಪ್ರಾಯವನ್ನು ಪಡೆಯುವುದಕ್ಕಾಗಿ ಅದನ್ನು ಪ್ರಕಟಿಸಿರುವರು.

ಇದು ನಮ್ಮ ಸಮಾಜದ ಈಗಿನ ಸ್ಥಿತಿಯನ್ನು ತಲೆಕೆಳಗಾಗಿಮಾಡತಕ್ಕ ಕಾನೂನು ಒಂದೇ ಮತಕ್ಕೆ ಮಾತ್ರವೇ ಅಲ್ಲದೆ ಮುಸಲ್ಮಾನ್ ಮತ ಮತ್ತು ಸಮಾಜಗಳ ಪದ್ಧತಿಗೂ ವಿರೋಧವಾಗಿದೆ. ಹಿಂದೆ ಸುಮಾರು 27 ವರ್ಷಗಳ ಕೆಳಗೆ ಇಂತಹ ಮಸೂದೆ ಕೌನ್ಸಿಲಿನ ಸಭೆಯ ಮುಂದೆ ಬಂದು ತಿರಸ್ಕೃತವಾಯಿತು. ಈಗ ಪುನಃ ಬಂದಿದೆ. ಇದು ಬಹಳ ವಿಪರೀತವಾದ ಕಾನೂನಾದುದರಿಂದ ಮಹಾಜನಗಳು ಸಕಾಲದಲ್ಲಿ ಎಚ್ಚತ್ತು ಇದಕ್ಕೆ ಪ್ರತಿಭಟಿಸಬೇಕೆಂದು ನಾವು ಸೂಚಿಸುತ್ತೇವೆ. ಪ್ರಜಾ ಸಾಮಾನ್ಯಕ್ಕೆ ಇಷ್ಟವಿಲ್ಲದಿರುವ ಯಾವ ಕಾನೂನೇ ಆಗಲೀ ಬಲಾತ್ಕಾರದಿಂದ ಜಾರಿಗೆ ಮಾಡಲ್ಪಟ್ಟರೆ ಅದು ಊರ್ಜಿತವಾಗಲಾರದು. ಇತರ ಅನೇಕ ಸಾಮಾಜಿಕ ವಿಷಯಗಳಿಂತಲೂ ಹೆಚ್ಚಾಗಿ ಈ ಮಸೂದೆಗೆ ಮಹಾಜನರ ವಿರೋಧವು ಇರುತ್ತದೆ.

ಈ ಮಸೂದೆಯು ಈಗ ನಮ್ಮ ಸರ್ಕಾರದವರ ತಲೆಗೆ ಏಕೆ ಬಂದಿತೋ ಗೊತ್ತಾಗುವುದಿಲ್ಲ. ಬೇರೆ ಮತ್ತು ಪಕ್ಷಗಳ ಪಾದ್ರಿಗಳವರು ಇಂತಹ ಕಾನೂನು ಆಗತಕ್ಕದೆಂದು ಹೇಳುವುದಿಲ್ಲ. ಕ್ರೈಸ್ತರಾಗುವವರಿಗೆ ಇಂತಹ ಕಾನೂನಿನ ಸಹಾಯವಿಲ್ಲದೆ ಏನೂ ತೊಂದರೆಯಾಗಿದೆಯೆಂದು ಹೇಳುತ್ತಾರೆ. ಪ್ರಕೃತದಲ್ಲಿ ಕಾಂಟ್ರಾಕ್ಟನ್ನು ವ್ಯವಸ್ಥೆಗೊಳಿಸಿಕೊಳ್ಳಬೇಕೆಂಬ ಪ್ರಯತ್ನವಿರುವುದಕ್ಕೆ ಎಲ್ಲರೂ ಕ್ರೈಸ್ತರಿಗೆ ಮದರಾಸು ಪ್ರಾಂತ್ಯದಲ್ಲಿರುವಂತೆ ಇಲ್ಲಿಯೂ ಈ ಹಕ್ಕನ್ನು ಕಲ್ಪಿಸಲು ಸರ್ಕಾರದವರು ಈ ಆಲೋಚನೆಯನ್ನು ಮಾಡಿರುವರೆಂದು ಅವರು ಊಹಿಸುತ್ತಾರೆ.

ಹಿಂಗಾಗಲು ಮಂದನ್ನು ತೆಗೆದುಕೊಳ್ಳಬೇಕು. ನಮ್ಮ ಸರ್ಕಾರದವರು ಏನೇನು ಮಾಡಿದರೂ ಗೊತ್ತಿಲ್ಲ. ಈ ಸಾಮಾನ್ಯಕ್ಕೆ ಬೇಡವಾದ ಇಂತಹ ಕಾನೂನನ್ನಾದರೂ ಮಾಡಿ ತಮ್ಮನ್ನು ತೆಗೆದು ಹಾಕುವುದಕ್ಕಿಂತ ನಮ್ಮ ತಲೆಮೇಲೆ ಕೈಯಿಡುವುದೇ ಲೇಸು. ಇನ್ನು ಕೆಲವು ದಿನಗಳಲ್ಲಿ ಈ ವರ್ಷ ರಾಷ್ಟ್ರೀಯ ಒಂದು ಮಾಲೆ ಎನ್ನುವ ಮಾಲೆಗೆ ಸೇರುತ್ತದೆ. ಹೀಗಾದರೆ ಆಗುತ್ತದೆ, ಹಾಗಾಗುತ್ತದೆ, ಹೀಗಾಗುತ್ತದೆ ಎಂದು ಕಾದುನೋಡಿ ನಿರೀಕ್ಷಿಸಲಾಗಿರಬೇಕು.

ಈ ವಿಷಯ ಕಾನೂನಿಗೆ ಹಿಂದೂಗಳು ವಿರೋಧಿಗಳಾಗಿದ್ದರೆ ಮುಸಲ್ಮಾನರು ವಿರೋಧಿಗಳಾಗಿದ್ದರೆ ನಮ್ಮ ಕ್ರೈಸ್ತ ಸಹೋದರರು ಬಾಧ್ಯಸ್ಥರಾಗಿಯೇ ಇದ್ದಾರೆಂದು ಹೇಳಬಹುದು. ಅವರ ಅನ್ಯರೀತಿಯಾದ ಕ್ರೈಸ್ತ ಪಾದ್ರಿಗಳ ಆಸಕ್ತಿಯು ಅಪ್ರಯೋಜಕವಾಗಿದೆ. ಕ್ರೈಸ್ತ ಪಾದ್ರಿಗಳೆಂದರೆ ಜನಾಂಗದಲ್ಲಿಯೂ, ಸನಾತನಿಗಳಲ್ಲಿಯೂ ಆಗುತ್ತಿರುವ ತರ್ಕಗಳು ಸಕಲರಿಗೂ ಗೊತ್ತೇ ಇದೆ. ಈ ಕಾನೂನಿನಿಂದ ಮತ್ತಷ್ಟು ಅಶ್ಲೀಲ ಕೆಲಸಗಳು ಆಗುವುದರಲ್ಲಿ ಸಂಶಯವಿಲ್ಲ.

ಧರ್ಮವನ್ನು ರಕ್ಷಿಸುವ ಕರ್ತವ್ಯವು ರಾಜರದು. ಧರ್ಮಕ್ಕೆ ವಿರುದ್ಧವಾಗಿ ನಡೆಯುವವರಿಗೆ ಕ್ರೂರ ದಂಡನೆಯನ್ನು ಆ ಕಾಲದ ಶಾಸ್ತ್ರದ ಪ್ರಕಾರ ಈಗ ಮತಧರ್ಮವು ಎಲ್ಲಾ ಬಲವಾಗಿರುತ್ತದೆ. ಅದನ್ನು ರಕ್ಷಿಸಲು ಗಮನಕೊಡಲ್ಪಡುತ್ತಿಲ್ಲ. ಮತಾಂತರಿಗಳ ನಿಕೃಷ್ಟರಾಗಿರುವರು ಹೀಗಿರುವಲ್ಲಿ ನಮ್ಮ ಸಮಾಜಕ್ಕೂ ಧರ್ಮಕ್ಕೂ ಹೊಣೆ ಯಾರು? ದೇವರೇ ಬಲ್ಲ.

ಈ ವಿವಾಹದ ಕಾನೂನನ್ನು ಜಾರಿಗೆ ತರಬೇಕೆಂದು ಕೆಲವು ದಿನಗಳ ಕೆಳಗೆ ಪ್ರಯತ್ನ ನಡೆಯಿತಷ್ಟೆ. ಅದಕ್ಕೆ ಜನಸಾಮಾನ್ಯದಲ್ಲಿ ವಿಶೇಷವಾದ ಸಮ್ಮತಿಯೂ ಇತ್ತು. ಅವರೂ ಅನೇಕರ ವಿರೋಧವೂ ಇದ್ದುದರಿಂದ ಅದಕ್ಕೆ ಸರ್ಕಾರದವರು ಸಮ್ಮತಿ ಕೊಡಲಿಲ್ಲ. ಈಗ ಯಾರೂ ಅಷ್ಟೇ ಇರತಕ್ಕ ಮಸೂದೆಯನ್ನು ಅವರೇ ತಂದಿರುವುದು ಆಶ್ಚರ್ಯಕರ. ಇದನ್ನು ಎಲ್ಲರೂ ಖಂಡಿಸಬೇಕೆಂದು ನಾವು ಸೂಚಿಸುತ್ತೇವೆ.

ಅಬಿಸೀನಿಯದ ಗತಿ.

ಇಟಲಿ-ಅಬಿಸೀನಿಯದ ಯುದ್ಧವು ಮುಗಿಯಿತು. ಏಳು ತಿಂಗಳ ಕಲಹ ಕಡಿದಾಟಗಳ ಅಧ್ಯಾಯವು ಪರಿಸಮಾಪ್ತವಾಯಿತು. ಪರು ರಕ್ತವು ಜಯಿಸಿತು. ಸೌಜನ್ಯತೆಯೂ, ದೇಶಾಭಿಮಾನವೂ, ನಿಸ್ವಾರ್ಥತ್ವವೂ, ತಾತ್ಕಾಲಿಕ ಪರಾಜಯವನ್ನು ಹೊಂದಿದವು. ನಾವು ಕಳೆದವಾರ ಸೂಚಿಸಿದ್ದಂತೆ ಒಂದುವಾರದ ಅವಧಿಯೊಳಗೇ ಅಬಿಸೀನಿಯಾ ರಕ್ಷಿ ಸಾಹಸಗಳೆಲ್ಲವೂ ನಿಷ್ಫಲವಾಗಿ ಆ ರಾಜ್ಯವು ಇಟಲಿಯವರ ಕೈವಶವಾಯಿತು. ಇಟಲಿಯ ಸೇನಾಪತಿ ಆಡಿಸ್ ಅಬಾಬವನ್ನು ಮಹಾ ವೈಭವದಿಂದ ಪ್ರವೇಶಿಸಿದರು. ಮುಸೋಲಿನಿಯು ಜಯ ಘೋಷಣೆಯನ್ನು ಹೊರಡಿಸಿದನು.

ತಾನು ಕೈಗೊಂಡಿದ್ದ ಯುದ್ಧಕಾರ್ಯವು ಮುಗಿಯಿತೆಂದು ಆತನು ಹೇಳುತ್ತಾನೆ. ಧರ್ಮ ಯುದ್ಧವು ಅಧರ್ಮಯುದ್ಧವೋ ಪ್ರಸಂಗವೇ ಇಲ್ಲದ ಇಟಲಿಯು ತನ್ನ ಬಾಹುಬಲದಿಂದ ಗಳಿಸಿದ ರಾಜ್ಯವನ್ನು ಇದು ಸರ್ವಶಕ್ತಿಯಿಂದಲೂ ಕಾಪಾಡಿಕೊಳ್ಳುತ್ತದೆಂದು ಆತನು ಹೇಳುವನು. ರಕ್ಷಿಸಿಕೊಳ್ಳದಿದ್ದರೆ ಇದುವರೆಗೆ ಪಟ್ಟ ಕಷ್ಟವು ನೀರಿನಲ್ಲಿ ಹೋಮಮಾಡಿದ ಹೋಮದಂತೆ ಆಗುತ್ತದೆ.

ತನ್ನ ದಿಗ್ವಿಜಯದ ನಂತರ ಮಾತನಾಡಿ ಮುಸೋಲಿನಿಯು ಕೆಲವು ಬಹಿರಂಗದ ಮಾತುಗಳನ್ನಾಡಿರುತ್ತಾನೆ. ಬ್ರಿಟಿಷ್ ಚಕ್ರಾಧಿಪತ್ಯಕ್ಕೆ ಯಾವ ತೊಂದರೆಯನ್ನೂ ಉಂಟುಮಾಡುವ ಯೋಚನೆಯು ತನಗೆ ಇಲ್ಲವೆಂದು ಹೇಳುತ್ತಾನೆ. ಅಬಿಸೀನಿಯದ ಮೇಲೆ ಮಾತ್ರ ತನ್ನ ದೃಷ್ಟಿಯಿತ್ತೆಂದೂ ಇತರ ರಾಜ್ಯಗಳನ್ನು ಆಕ್ರಮಿಸುವ ಯೋಚನೆಯು ಇಲ್ಲವೆಂದೂ ಹೇಳಿರುತ್ತಾನೆ. ಈಜಿಪ್ಟ್ ದೇಶದ ಸಂಪೂರ್ಣ ಸ್ವಾತಂತ್ರ್ಯವನ್ನು ಅಂಗೀಕರಿಸಿರುತ್ತಾನೆ. ಇವುಗಳಲ್ಲಿ ಅಸಂಬದ್ಧ ಪ್ರಲಾಪಗಳು ಬ್ರಿಟಿಷ್ ಚಕ್ರಾಧಿಪತ್ಯವು ಇಟಲಿಗಿಂತ ಸಹಸ್ರಪಾಲು ಹೆಚ್ಚಿನ ಶಕ್ತಿಯುಳ್ಳದ್ದಾಗಿದೆ. ಈಜಿಪ್ಟು ಮುಸೋಲಿನಿಯ ಮೆಚ್ಚುಗೆ ಮುದ್ರೆಯನ್ನು ನಿರೀಕ್ಷಿಸುತ್ತಿರಲಿಲ್ಲ. ಈಗ ತಾನೇ ಒಂದು ರಾಜ್ಯವನ್ನು ಗಳಿಸಿ ಮತ್ತೊಂದು ರಾಜ್ಯದ ಹಂಬಲವನ್ನು ತೋರಲು ಅವಕಾಶವೆಲ್ಲಿ? ಒಟ್ಟಿನಿಂದ ಬೇರೆ ರಾಜ್ಯಗಳ ಮೇಲೆ ಆಶೆಯಿಲ್ಲವೆಂಬ ಮಾತು ಸುಳ್ಳು. ಸಮಯ ಸಿಕ್ಕಿದರೆ ಅನುಕೂಲವಾದಾಗ ಪರರ ಮತ್ತಾವ ರಾಜ್ಯದ ಮೇಲೆಯಾದರೂ ಇಟಲಿಯು ಬೀಳಬಹುದು.

ಒಟ್ಟಿನಲ್ಲಿ ಲೀಗ್ ಆಫ್ ನೇಷನ್ಸ್ ಸಭೆಯ ಪೊಳ್ಳು ತನವು ಪ್ರಪಂಚಕ್ಕೆ ವೇದ್ಯವಾಯಿತು. ಬಿಳೀ ಜನಾಂಗಗಳ ಕೂಟವೆಂಬ ಅಪಪ್ರಥೆಯು ಅದಕ್ಕಿತ್ತು. ಈಗ ಅದು ಸಾರ್ಥಕವಾಯಿತು. ಅಬಿಸೀನಿಯವು ಸೋತರೂ ಪ್ರಪಂಚದ ಸಹಾನುಭೂತಿಯು ಅವರ ಕಡೇ ಇದ್ದೇ ಇದೆ. ಎತಿಯೋಪಿಯನ್ನರು ಅನಾಗರಿಕರಾಗಿಯೂ ಆಧುನಿಕ ಶಸ್ತ್ರಾಸ್ತ್ರಗಳನ್ನು ಹೊಂದದವರೂ ಆಗಿದ್ದರೂ ಏಳು ತಿಂಗಳಕಾಲ ಇಟಲಿಯನ್ನು ಸಾಹಸದಿಂದ ಎದುರಿಸಿದ್ದು ಸ್ತೋತ್ರಾರ್ಹವಾಗಿದೆ.

ಸ್ವೀಕಾರ.

ವೇ॥ ಬ್ರ॥ ಚೀಮನಹಳ್ಳಿ ರಘುನಾಥಾಚಾರ್ಯರು ಕಳುಹಿಸಿಕೊಟ್ಟಿರುವ ಈ ಕೆಳಗೆ ಕಂಡ ಗ್ರಂಥಗಳನ್ನು ನಾವು ಆತ್ಮಾದರದಿಂದ ಸ್ವೀಕರಿಸಿರುತ್ತೇವೆ. ಅವುಗಳನ್ನು ಕನ್ನಡಿಗರೆಲ್ಲರೂ ಓದಿ ಮನನ ಮಾಡತಕ್ಕದ್ದಾಗಿದೆ.

1) ತತ್ವಮಸಿ ಅರ್ಥ
2) ತತ್ವಮಸಿ ವಿಮರ್ಶೆ
3) ಮುಕ್ತಿ ಸಾಧನೆಯ ಸುಲಭೋಪಾಯಗಳು.

ಹಜಾಮರ ಮುಷ್ಕರದ ಪರಿಸಮಾಪ್ತಿ.

ತಮ್ಮ ಅಂಗಡಿಗಳ ಮೇಲೆ ವಿಪರೀತವಾದ ತೆರಿಗೆಗಳನ್ನು ಹೊರಿಸಿದರೆಂಬ ಕಾರಣದಿಂದ ನಾಗಪಟ್ಟಣದ ಹಜಾಮರೆಲ್ಲರೂ ಮುಷ್ಕರ ಹಿಡಿದಿರುವ ಹಿಂದೆಯೇ ತಿಳಿಸಿದ್ದೆವಷ್ಟೆ. ಊರಿನ ಜನರೆಲ್ಲರಿಗೂ ಒಹಳ ತೊಂದರೆಯಾಯಿತು. ಒಂದು ಬಹಿರಂಗ ಸಭೆ ನಡೆಯಿತು. ಪೌರಸಭೆಯವರು ಹಜ್ಜಿನ ತೆರಿಗೆಯನ್ನು ಸಜಾ ಮಾಡಬೇಕೆಂದು ಪ್ರಾರ್ಥಿಸಲ್ಪಟ್ಟಿತು. ಮಹಾಜನರು ಈ ವಿಷಯದಲ್ಲಿ ಪ್ರವರ್ತಿಸಿ ತೆರಿಗೆಯನ್ನು ಪೌರಸಭೆಯಿಂದ ವಜಾಮಾಡಿಸುವಂತೆ ಕೋರಲಾಯಿತು. ಹಜಾಮರ ಸಂಘವೊಂದು ಸ್ಥಾಪಿಸಲ್ಪಟ್ಟಿತು. ಆ ಪ್ರಾಂತ್ಯದ ಹಜಾಮರೆಲ್ಲರೂ ಏಕಮತ್ಯದಿಂದ ಇದ್ದು ತಮ್ಮ ಹಕ್ಕು ಬಾಧ್ಯತೆಗಳನ್ನು ರಕ್ಷಿಸಿಕೊಳ್ಳಬೇಕೆಂದು ತೀರ್ಮಾನವಾಯಿತು. ಈಗ ಅವರೆಲ್ಲರೂ ತಮ್ಮ ಕೆಲಸಕ್ಕೆ ಹೋಗುತ್ತಿದ್ದಾರೆ.

ಕರ್ಣಾಟಕ ಸಮಾಜಸೇವಾ ಮಂಡಲಿ

ಈ ಹೆಸರಿನಿಂದ ರಾಜಧಾನಿಯಲ್ಲಿ ಒಂದು ಸಂಘವು ಸ್ಥಾಪಿತವಾಗಿದೆ. ಕಾಲೇಜು, ಇಂಟರ್ ಕಾಲೇಜು, ಹೈಸ್ಕೂಲು, ಮಿಡಲ್ ಸ್ಕೂಲು ವಿದ್ಯಾರ್ಥಿಗಳೇ ಈ ಸಂಘದ ಸದಸ್ಯರು. ಸಾಮಾಜಿಕ ನಾಟಕಗಳನ್ನು ಸಂಗೀತವಿಲ್ಲದೆಯೇ ಅಭಿನಯಿಸಿ ಸಮಾಜದ ದುರವಸ್ಥೆಗಳನ್ನು ಜನಾಂಗದ ಮುಂದಿರಿಸಿ ದೇಶೋದ್ಧಾರ ಮಾಡಬೇಕೆಂಬುದೇ ಈ ಮಂಡಲಿಯ ಆಶಯ. "ಭೂಲೋಕಸಾಕ್ಷಿ" "ಪತಿಭಕ್ತಿ" ಎಂಬ ಎರಡು ನಾಟಕಗಳು ಅಭ್ಯಾಸವಾಗುತ್ತಿವೆ. ಪ್ರಸಿದ್ಧ ಲೇಖಕರಾದ ವಿದ್ವಾನ್ ಜಿ. ವಿ. ಅರ್ ರವರೇ ರಚಿಸಿದ ನಾಟಕಗಳಿವು. ಅವರೇ ನಿಂತು ಬಾಲಕರನ್ನು ತಿದ್ದುತ್ತಿರುವರು.

ದರ್ಭಾಂಗ ಮಹಾರಾಜರ ಸಹಾಯ

ಗ್ರಾಮೋದ್ಧಾರ ಕಾರ್ಯಕ್ಕಾಗಿ ದರ್ಭಾಂಗ ಮಹಾರಾಜರು ಐದು ಲಕ್ಷ ರೂಪಾಯನ್ನು ಕೊಟ್ಟಿರುವರು ಮತ್ತು ಅವರ ಸಂಸ್ಥಾನದ ಅನೇಕ ಗ್ರಾಮೋದ್ಧಾರ ಕೇಂದ್ರಗಳ ವ್ಯವಸ್ಥಾಪಕರನ್ನು ಕರೆಸಿ ಒಂದು ಕಾರ್ಯ ರಚನೆಯನ್ನು ಸಿದ್ಧಪಡಿಸುವಂತೆ ಕೇಳುತ್ತಾರೆ. ರೈತರಿಗೆ ಕಷ್ಟಕಾಲದಲ್ಲಿ ಸಹಾಯಮಾಡಲು ಬೇರೆ ಮೊಬಲಗನ್ನೂ ಮಂಜೂರುಮಾಡಿರುವರು. ಬೆಂಕಿಯಿಂದ ಅಥವಾ ಆಕಸ್ಮಿಕವಾಗಿ ಕಷ್ಟಗಳು ಒದಗಿದವರ ವಿಷಯವನ್ನು ತಮಗೆ ತಿಳಿಸಿ ಅವರಿಗೆ ಸಹಾಯವನ್ನು ಒದಗಿಸಬೇಕೆಂದೂ ತಿಳಿಸಿರುವರು.

ಬಹಿರಂಗ ಪತ್ರ

ಮೈಸೂರು ಪೌರಸಭಾ ಸದಸ್ಯರ ಸಾ॥ ಕ್ಕೆ.

ಮಾನ್ಯರಾದ ನಗರ ಪಿತೃಗಳೇ,

ಇನ್ನೇನು, ತಮ್ಮ ಈಗಿನ ಸದಸ್ಯತ್ವದ ಅವಧಿಯು ಮುಗಿಯುತ್ತ ಬಂತು. ಇನ್ನು ಕೆಲವು ದಿನಗಳಲ್ಲಿಯೇ ಹೊಸ ಚುನಾವಣೆಗಳ ಭರಾಟೆಯು ಬರುತ್ತದೆ. ಹೊಸ ಹೊಸ ಉಮೇದುವಾರರುಗಳ ಮೈಪೋಟಿಯೂ ಬೀಳುತ್ತದೆ ಈಗಿನಿಂದಲೇ ಅದಕ್ಕಾಗಿ ಪೂರ್ವಭಾವಿಯಾದ ಸಿದ್ಧತೆಯು ನಡೆಯುವ ಸೂಚನೆಗಳೂ ಕಂಡುಬರುತ್ತಿವೆ

ಈಚಿಗೆ ಚುನಾವಣೆಗಳಲ್ಲಿ ಜನರು ಹೆಚ್ಚು ಹೆಚ್ಚಾದ ಆಸಕ್ತಿಯನ್ನು ತೋರಿಸುತ್ತಿರುವರು. ನಮ್ಮ ವಿಶ್ವವಿದ್ಯಾಲಯದ ಸೆನೆಟ್ ಚುನಾವಣೆಗೆ ಉಮೇದುವಾರರಾಗಿ ನಿಂತಿರುವ ಸದಸ್ಯರ ಪಟ್ಟಿಯಿಂದ ಇದು ವೇದ್ಯವಾಗುತ್ತದೆ. ಎಷ್ಟೋ ಮಂದಿ ಯುವಕರು ಹಿಂದೆ ಇದ್ದವರೆಲ್ಲರೂ ಮುಂದೆ ಬಂದಿದ್ದಾರೆ ಎಲ್ಲರೂ ತಮಗೆ ಚುನಾವಣೆಯಾಗುವದೆಂಬ ಭರವಸೆಯಿಂದಲೇ ಮುಂದೆ ಬಂದಿರುವರು. ಇದೊಂದು ಶುಭಸೂಚನೆ. ಅದ್ಯಾವುದಾದರೂ ಅವರುಗಳಲ್ಲಿ ಜೀವಕಳೆಯು ಉಂಟಾಗಿರುತ್ತದೆ. ಕೇವಲ ಹತ್ತಾರು ಜನರಿಗೆ ಮೀಸಲಾಗುತ್ತಿದ್ದ ಸ್ಥಾನಗಳಿಗೆ ಹತ್ತಾರು ಜನರು ಸ್ಪರ್ಧಿಗಳಾಗಿ ನಿಂತು ಓಟುದಾರರನ್ನು ಒಲಿಸುವ ಪ್ರಯತ್ನ ಮಾಡಿದರೆ ಪರಸ್ಪರ ಗುಣವಿಶೇಷಗಳ ತಾರತಮ್ಯ ಜ್ಞಾನಕ್ಕೆ ಅವಕಾಶವಾಗುವುದು.

ಇದರಂತೆಯೇ ಜನರು ಕೋ-ಆಪರೇಟಿವ್ ಸಂಸ್ಥೆಗಳು, ಸ್ಕೂಲು ಬೋರ್ಡು, ಇತ್ಯಾದಿ ಎಲ್ಲಾ ಸಂಸ್ಥೆಗಳ ಚುನಾವಣೆಗಳಲ್ಲಿಯೂ ಮೊದಲಿಗಿಂತಲೂ ಹೆಚ್ಚಿನ ಶ್ರದ್ಧೆಯನ್ನು ವಹಿಸುತ್ತಿರುವರು ಆದ್ದರಿಂದ ಈಸಾರಿ ಚುನಾವಣೆಗಳಲ್ಲಿ ತಮ್ಮ ಸ್ಥಾನಗಳು ಭದ್ರವಾಗುವ ಏರ್ಪಾಡನ್ನು ತಾವುಗಳೂ ಪರ್ಯಾಲೋಚಿಸಿರುತ್ತೀರೆಂದು ನಾನು ನಂಬುತ್ತೇನೆ.

ಆದರೆ ತಮ್ಮ ಕಾಲದ ಆಡಳಿತದ ಮೇಲೆ ಅನೇಕ ಟೀಕೆಗಳಿವೆ ಅವುಗಳನ್ನು ಸಮಾಧಾನಪಡಿಸಬೇಕಾದ ಭಾರ ತಮ್ಮ ಮೇಲಿದೆ. ಹಿಂದೆಂದೂ ಇಲ್ಲದ ಗೊಂದಲವು ಪೌರಸಭೆಯಲ್ಲಿ ಕಳೆದ ಮೂರು ವರ್ಷಗಳಲ್ಲಿ ನಡೆಯಿತು. ಸದಸ್ಯರ ಉಚ್ಚಾಟನೆಗಳು ಪೌರಸಭೆಯ ಇತಿಹಾಸದಲ್ಲೇ ಹೊಸದು. ಕಟ್ಟಡನೆಯದಾಗಿ ಮಾರ್ಕೆಟ್ಟಿನ ಸಂಬಂಧವಾದ ಗಲಭೆಯು "ದೊರೆಯುತನಕ ಕಾದು" ಎಂಬಂತೆ ಆಯಿತು. ಚುನಾವಣೆಗಳ ರದ್ದು, ಉಪಚುನಾವಣೆಗಳು ನಡೆದದ್ದು ಮತ್ತೊಂದು ವಿಶೇಷ. ಉಪಾಧ್ಯಕ್ಷರ ಅಧಿಕಾರ ಮತ್ತು ಅದಕ್ಕೆ ಸಂಬಂಧಪಟ್ಟಂತೆ ಪೌರಸಭಾಸದರ ಹಕ್ಕುಬಾಧ್ಯತೆಗಳ ವಿಚಾರವು ಬಹಳ ಪ್ರಾಮುಖ್ಯತೆಗೆ ಬಂದಿದೆ ಎಲ್ಲಕ್ಕಿಂತಲೂ ಮಿಗಿಲಾಗಿ ಈ ನೀರಿನ ತೆರಿಗೆಯ ಭೂತವು ಜನರ ಮನಸ್ಸನ್ನು ಆಕ್ರಮಿಸಿದೆ. ಕೆಲವು ದಿನಗಳ ಕೆಳಗೆ ವಜಾಮಾಡಿದ್ದ ಗಾಡಿಗಳ ತೆರಿಗೆಯನ್ನು ಈಗ ಪುನಃ ಹೆಚ್ಚಿಸಿದ್ದೀರಿ ಸಾಲಸೋಲಗಳ ಹೊರೆಯು ಏರುತ್ತಲೇ ಇದೆ. ಪುರನಿವಾಸಿಗಳ ಮೇಲಿನ ಭಾರವು ಇಳಿಯುತ್ತಿಲ್ಲ. ತಮ್ಮ ಸದಸ್ಯತ್ವ ಪ್ರಕರಣದ ಕಾರ್ಯ ವಿಶೇಷಗಳನ್ನು ಸಮರ್ಥಿಸಿ ಜನರಿಗೆ ಸಮಾಧಾನಕೊಡುವುದು ಬಹಳ ಕಷ್ಟ.

ಆದ್ದರಿಂದ ತಾವುಗಳೆಲ್ಲರೂ ಈ ಸಮಯದಲ್ಲಿ ಜನರಿಗೆ ಪ್ರತ್ಯಕ್ಷವಾಗಿ ಉಪಕಾರವಾಗುವ ಘನವಾದ ಯಾವುದಾದರೊಂದು ಮಹತ್ಕಾರ್ಯವನ್ನು ಮಾಡುವ ಯೋಚನೆಮಾಡಬೇಕು. ಇದಕ್ಕೆ ತಮ್ಮೆಲ್ಲರ ಗಮನವೂ ಕೊಡಲ್ಪಡುವುದೆಂದು ಕೋರುತ್ತೇನೆ.

ಅನಾಮಧೇಯ.

ಹಿಂದೂಗಳೇ ಇನ್ನೂ ಮಲಗಿದ್ದೀರಾ?

ಲೇಖಕ- ಜಿ. ಎ. ಆರ್. ಒಂಟಿಕೊಪ್ಪಲ್

ಹಿಂದುಗಳೇ—ಏತಕ್ಕೆ ಇಷ್ಟು ನಿದ್ರೆ, ಏತಕ್ಕೆ ಇಷ್ಟು ಮಂಕು? ಏಕೆ ಇಷ್ಟು ಉದಾಸೀನ, ನಿಮ್ಮ ಮುಂದೆ, ನಿಮ್ಮ ಹಿಂದೆ, ಅಲ್ಲಿ ಇಲ್ಲಿ ಏನೇನು ನಡೆಯುತ್ತಿದೆ ಬಲ್ಲಿರಾ? ಪವಿತ್ರವಾದ ಮತಕ್ಕೆ ಸಿಡಿಲು ಬಡಿಯುತ್ತಿರುವುದಲ್ಲಾ, ಹಿಂದೂ ಮತವು ಸರ್ವನಾಶವಾಗುವ ಗತಿ ಬಂದಿರುವುದಲ್ಲಾ. ಎಷ್ಟೋ ಪತ್ರಿಕೆಗಳು ನಿಮಗೆ ಜಾಗ್ರತಿಯನ್ನುಂಟುಮಾಡಲು ಒದ್ದಾಡುತ್ತಿರುವದಲ್ಲಾ, ಕಣ್ಣು ಬಿಟ್ಟು ನೋಡಬಾರದೆ? ಅಯ್ಯೋ, ಅಧಿಕಾರದ ಮದದಿಂದ ಬೀಗುತ್ತಾ ನಾನುಂಟೋ ಮೂರು ಲೋಕ ವುಂಟೋ ಎಂದು ಮೆರೆಯುತ್ತಿರುವ ಅಧಿಕಾರಿಗಳಾದ ಹಿಂದುಗಳಿಗೆ ಹಿಂದೂ ಮತದ ವಿಚಾರ ಬೇಕಿಲ್ಲ. ದುಡ್ಡು, ಬಡ್ಡಿ, ಕೋರ್ಟು ಲಾಯರು, ಎಂದು ಸ್ವಾರ್ಥದಲ್ಲಿ ಮುಳುಗಿರುವ ಶ್ರೀಮಂತರಿಗಂತೂ ಹಿಂದೂ ಮತವು ಬೇಕಿಲ್ಲ ದೊಡ್ಡ ದೊಡ್ಡ ಮಠಗಳಲ್ಲಿ ಕುಳಿತು ಬಂದವರಿಗೆ ತೀರ್ಥಪ್ರಸಾದ ಕೊಡುತ್ತಾ ಕೆಲಸಕ್ಕೆ ಬಾರದ ಗೊಡ್ಡು ವೇದಾಂತಗಳನ್ನು ಹರಟುತ್ತಾ ಕುಳಿತಿರುವ ಮಠಾಧಿಪತಿಗಳಿಗೆ ಈ ವಿಚಾರ ಬೇಕಿಲ್ಲ. ದರಿದ್ರ ವೈದಿಕರಿಗಂತೂ ಬೇಕೇಯಿಲ್ಲ. ಅವರಿಂದ ಏನೂ ಆಗುವಂತೆಯೂ ಇಲ್ಲ. ಕೈತಾಪಿ ಜನರಿಗೂ ಕೂಲಿಗಾರ ಹಿಂದೂಗಳಿಗೂ ಹೊಟ್ಟೆ ಬಟ್ಟೆಯ ಯೋಚನೆಯೇ ಸಾಕಾಗಿದೆ ಹೀಗಿರುವಾಗ ಹಿಂದೂ ಮತದ ಪುರೋಭಿವೃದ್ಧಿಗೆ ಯಾರು ನಿಲ್ಲಬೇಕು? ಉದಾಸೀನ ಮಾಡುವಂತಿಲ್ಲ ಅನ್ಯಮತೀಯರು ಪ್ರತಿ ನಿಮಿಷದಲ್ಲೂ ಹಿಂದುಗಳನ್ನು ತಮ್ಮ ಮತಕ್ಕೆ ಆಕರ್ಷಿಸುತ್ತಿರುವ ಸುದ್ದಿಯಂತೂ ಹೃದಯಶಲ್ಯವಾಗಿದೆ.

ಸ್ತ್ರೀ ಜನಾಂಗವನ್ನು ನೋಡಿದರಂತೂ ಅಬ್ಬ ಅದರ ಗೋಳು ಬ್ಯಾಡ. ಕನ್ಯಾಪಹಾರ ಕನ್ಯಾಪಹಾರ, ಯಾವ ಪತ್ರಿಕೆಯಲ್ಲಿ ನೋಡಿದರೂ ಅದೇ ಸುದ್ದಿ. ಕನ್ಯಾಪಹಾರದ ಮೊಕದ್ದಮೆಯನ್ನು ನಡೆಸಿ ಅಪರಾಧಿಗೆ ಶಿಕ್ಷೆ ಮಾಡುವುದರಲ್ಲಿಯೇ ಸರ್ಕಾರದ ಗಮನ. ಅಪಹಾರವೇಕಾಯಿತು? ಕನ್ಯೆ ಯಾರು? ಅವಳ ಸ್ಥಿತಿ ಏನು? ಅಪಹಾರವೇ ನಡೆಯದಂತೆ ಆಗಬೇಕಾದರೆ ಏನುಮಾಡಬೇಕು ಎಂಬ ಯೋಚನೆಯೇ ಯಾರಿಗೂ ಬರುವಂತಿಲ್ಲ ಸಹಸ್ರಾರು ಹುಡುಗಿಯರು ಗಂಡನಿಂದ ನಿಷ್ಕಾರಣ ಬಿಡಲ್ಪಟ್ಟು ಕೊರಗುತ್ತಿದ್ದಾರೆ, ಸಹಸ್ರಾರು ಹುಡುಗಿಯರು ಪ್ರಾಯದಲ್ಲೇ ಗಂಡ ಸತ್ತು ವಿಧವೆಯರಾಗಿ ಕೊರಗುತ್ತಿದ್ದಾರೆ. ಸಹಸ್ರಾರು ಹುಡುಗಿಯರು ಬೆಳೆದು ನಿಂತು ವರನೇ ಸಿಕ್ಕದೆ ಕೊರಗುತ್ತಿದ್ದಾರೆ. ಇಂತಹ ಹುಡುಗಿಯರನ್ನು ಕಾಯುವುದಕ್ಕೆ ಯಾರಿಗೆ ಸಾಧ್ಯ? ಎಂತೆಂತಹ ಸನ್ನಿವೇಶಗಳು ದೊರೆಯುತ್ತವೋ ಯಾರರೀತಿ ಮನೋವಿಕಾರಕ್ಕೆ ಆಸ್ಪದವಾಗುತ್ತದೋ. ಆ ವೇಳೆಗೆ ಯಾರು ಒದಗುತ್ತಾರೋ, ಏನು ನಡೆದು ಹೋಗುತ್ತದೋ ಬಲ್ಲವರಾರು? ಎಷ್ಟು ಮುಚ್ಚಿದರೂ ಬಯಲಾಗದಿರುವದಿಲ್ಲ. 100 ಅನ್ಯಾಯಗಳು ನಡೆದರೆ ಎಷ್ಟೋ ಒಂದು ಹೊರಗೆ ಬರಬಹುದು ಹಾಗೆ ಹೊರಗೆ ಪ್ರಕಾರಕ್ಕೆ ಬರುತ್ತಿರುವ ಅನ್ಯಾಯಗಳೇ ಸಾವಿರಾರು ಆಗುತ್ತಾ ಬಂದರೆ ಇನ್ನು ಕಾಣದಂತೆ ನಡೆಯುತ್ತಿರುವ ಅನ್ಯಾಯಗಳೆಷ್ಟು? ಇವೆಲ್ಲಾ ಅಪರಾಧಕ್ಕೂ ಹೆಂಗಸರು ಕಾರಣವೇ? ಅಲ್ಲ, ಗಂಡಸರು ಕಾರಣವೇ? ಅಲ್ಲ. ಸಮಾಜದ ಅಜ್ಞಾನವೇ ಇದಕ್ಕೆ ಕಾರಣ. ಕಾಲವು ಬದಲಾದಂತೆ ಆಚಾರಗಳನ್ನು ಬದಲಾಯಿಸಿಕೊಳ್ಳಬೇಕು—ಹಿಂದೂ ಸಮಾಜದಲ್ಲಿ ಋತುಮತೀ ವಿವಾಹವು ಆಚರಣೆಗೆ ಬರಬೇಕು. ಪುನರ್ವಿವಾಹವು ರೂಢಿಗೆ ಬರಬೇಕು. ವಿಧವಾ ವಿವಾಹವು ಜಾರಿಗೆ ಬರಬೇಕು ಯಾವ ಪ್ರಾಯದ ಹಿಂದೂ ಹೆಣ್ಣೂ ಪತಿಯಿಲ್ಲದಿರಬಾರದು ಹೀಗೆ ಮಾಡಿದರೆ ಕನ್ಯಾಪಹಾರವೂ ನಿಂತೀತು. ವರ್ಣಸಾಂಕರ್ಯವೂ ತಗ್ಗೀತು. ಶಿಶುಹತ್ಯ ಭ್ರೂಣಹತ್ಯೆಯೂ ನಿಂತೀತು

ಅದಕ್ಕೆ ಆಧಾರವಿಲ್ಲ, ಇದಕ್ಕೆ ಶಾಸ್ತ್ರವಿಲ್ಲ, ಮತಸ್ಥಾನಕ್ಕೆ ಆಚಾರವಿಲ್ಲ ಎಂದು ಹಿಂದುಗಳು ಕುಳಿತರೆ, ಕಾಲಕ್ರಮದಲ್ಲಿ ಹಿಂದೂ ರಮಣಿಯರನೇಕರು ಅನ್ಯಮತೀಯರ ಶಯ್ಯಾ ಮಂದಿರವನ್ನಲಂಕರಿಸದೆ ಬಿಡುವುದೇ ಇಲ್ಲ. ಹಿಂದೂ ಜನಸಂಖ್ಯೆಯು ಕಮ್ಮಿಯಾಗದಿರುವದೂ ಇಲ್ಲ.

ಹಿಂದೂ ಮಹಾರಥರೆ, ಉದಾಸೀನವನ್ನು ಬಿಡಿ. ಕೂಡಲೇ ಸಂಘಗಳನ್ನು ಏರ್ಪಡಿಸಿ ಸ್ತ್ರೀ ಜನಾಂಗದ ಅತ್ಯಾಚಾರವನ್ನು ತಪ್ಪಿಸುವದಕ್ಕೂ ಅವರಿಗೆ ತಕ್ಕ ಅನುಕೂಲಗಳನ್ನು ಕಲ್ಪಿಸುವದಕ್ಕೂ ಬದ್ಧಕಂಕಣರಾಗಿ ನಿಲ್ಲಿ. ಇದು ಉಪೇಕ್ಷಿಸತಕ್ಕ ಅಂಶವಲ್ಲ. ಇದಕ್ಕಿಂತಲೂ ಮುಖ್ಯವಾದ ಕಾರ್ಯವು ಮತ್ತೊಂದಿಲ್ಲ ಹೆಂಗಸರಿಂದಲೇ ಮಾನ. ಹೆಂಗಸರಿಂದಲೇ ಸಮಾಜದ ಬಲ. ಆ ಹೆಂಗಸರ ಸಂಕಟವನ್ನು ನೀಗಿಸಿರಿ. —ಎಚ್ಚರ—ಎಚ್ಚರ—

ಕ್ರೈಸ್ತರಲ್ಲಿ ಮೂರ್ತಿ ಪೂಜೆ.

ಕ್ರೈಸ್ತರಲ್ಲಿ ಸಾಮಾನ್ಯವಾಗಿ ಮೂರ್ತಿಪೂಜೆಯು ರೂಢಿಯಲ್ಲಿಲ್ಲ. ಆದರೆ ರೋಮನ್ ಕ್ಯಾಥೋಲಿಕ್ ಪಂಗಡದವರು ಕ್ರೈಸ್ತನ ಶಿಲುಬೆಗೆ ಪೂಜೆ ಮಾಡುತ್ತಿರುವರು. ಇದು ನಮ್ಮ ದೇಶದಲ್ಲಿ ವಿಪರೀತವಾಗಿ ರೂಢಿಗೆ ಬಂದಿರುತ್ತದೆ. ಮುಕ್ತ ಹಿಂದೂ ಜನಾಂಗದವರಂತೆಯೇ ಅವರು ಪೂಜೆ ಪುನಸ್ಕಾರ, ಹರಕೆ, ಸೇವೆ ಮುಂತಾದವುಗಳನ್ನು ನಡೆಸುತ್ತಿರುವರು ನೀಲಗಿರಿಯಿಂದ 3 ಮೈಲಿ ದೂರದಲ್ಲಿರುವ ಕಾಂತಾಳ್ ಎಂಬಲ್ಲಿ 3 ವರ್ಷದ ಕೆಳಗೆ ಸ್ಥಾಪಿತವಾದ ಕ್ರೈಸ್ತನ ಒಂದು ಶಿಲುಬೆಯ ಪ್ರತಿಮೆಗೆ ವಿಶೇಷವಾದ ಐತಿಹ್ಯವು ಬರುತ್ತಿದೆ. ಕೆಲವು ದಿವಸಗಳ ಕೆಳಗೆ ಅಲ್ಲಿ ಭಾರಿ ಜಾತ್ರೆ ನಡೆಯಿತು. ಹಲವು ವಿಧದ ಆಧಿವ್ಯಾಧಿಗಳಿಂದ ಪೀಡಿತರಾದ ಕ್ರೈಸ್ತಭಕ್ತರು ಅನೇಕವಿಧವಾದ ಸೇವೆಗಳನ್ನು ಸಲ್ಲಿಸಿದರು. ಕ್ರೈಸ್ತನ ಶಿಲುಬೆಯ ಪಾದ ಸ್ಪರ್ಶನದಿಂದ ಸಕಲ ವಿಧವಾದ ಅನಿಷ್ಟಗಳೂ ಪರಿಹಾರವಾಗುವುದೆಂದು ನಂಬಿರುವರು. ಅಲ್ಲಿಗೆ ಹೋದ ಸಾವಿರಾರು ಜನ ಭಕ್ತರು ಕ್ರೈಸ್ತನ ಪಾದವನ್ನು ಚುಂಬಿಸಿ ತಮ್ಮ ಕಷ್ಟವನ್ನು ನಿವಾರಿಸುವುದಕ್ಕೆ ಪ್ರಾರ್ಥಿಸುವರು. ಅನೇಕ ಅದ್ಭುತವಾದ ಫಲಗಳು ಪ್ರಾಪ್ತಿಯಾಗುವುದೆಂದು ನಂಬಿರುತ್ತಾರೆ. ಹೀಗೆ ಅಲ್ಲಿಗೆ ಹೋಗತಕ್ಕ ಜನರ ಗುಂಪು ಸಾವಿರಾರುಗಟ್ಟಳೆ ಹೆಚ್ಚುತ್ತಿದೆ

ಹರಿಜನ ಸೇವಕಸಂಘ.

ಮೈಸೂರು ಸಂಸ್ಥಾನದ ಹರಿಜನ ಸೇವಕಸಂಘದ ವಾರ್ಷಿಕ ವರದಿಯು ತಿಳಿಸುವ ಪ್ರಕಾರ 21 ಕೇಂದ್ರಗಳಲ್ಲಿ ಪಾಠಶಾಲೆಗಳನ್ನು ನಡೆಸುತ್ತಿರುವರು. ಅವುಗಳಲ್ಲಿ 711 ಜನ ವಿದ್ಯಾರ್ಥಿಗಳು ಓದುತ್ತಿರುವರು. ಅನೇಕ ಡಿಸ್ಟ್ರಿಕ್ಟುಗಳಲ್ಲಿ ಮದ್ಯಪಾನ ನಿರೋಧ, ವಿವಾಹದ ಮಿತವ್ಯಯ ಮುಂತಾದ ವಿಷಯವಾಗಿ ಪ್ರಚಾರವು ನಡೆಯುತ್ತಿದೆ. ಸಂಸ್ಥಾನದ ಕೆಲವು ಭಾಗಗಳಲ್ಲಿ ಚಾಲ್ತಿಯಲ್ಲಿರುವ ಬಸವೀ ಪದ್ಧತಿಯನ್ನು ತಪ್ಪಿಸಲು ಪ್ರಯತ್ನಗಳಾಗುತ್ತಿವೆ. ಈ ಪದ್ಧತಿಯಂತೆ ಹೊಲೆಯಂತ ಜನಾಂಗದ ಮೈನರ್ ಹೆಣ್ಣುಮಕ್ಕಳು ಆಜೀವಪರ್ಯಂತ ವ್ಯಭಿಚಾರಿಣಿಯರಾಗಿರಬೇಕಾಗಿದೆ. ಇದನ್ನು ಕಾನೂನು ಪ್ರಕಾರ ನಿಷೇಧಿಸಲು ಪ್ರಯತ್ನಗಳು ನಡೆಯುತ್ತಿವೆ.

ಒಂದು ಕೊಡ ನೀರಿಗೆ ಆರು ಕಾಸು.

ಚಿತ್ತೂರಿನಲ್ಲಿ ನೀರಿನ ಕ್ಷಾಮವು ಬಹಳವಾಗಿದೆ. ಉಷ್ಣವು 100° ಇದೆ. ಕುಡಿಯುವ ನೀರನ್ನು ಒಂದು ಕೊಡಕ್ಕೆ 6 ಕಾಸಿನಂತೆ ಮಾರುತ್ತಿರುವರು.

ಇಣಕಪ್ಪನ ನೋಟ!

ಬಲತಾಯಿಯ ಪ್ರೇಮವು ಪ್ರೇಮವೇ?

ಮೊನ್ನೆ ಹಂಗೇನೆ ಯಾವುದೋ ಪೇಪರ್ ನೋಡ್ತಿದ್ದೆ. ಅವ್ರಲ್ಲಿ ಒಂದು ವಿಶೇಷ ಇತ್ತು. ಏನೂ ಇಲ್ಲ! ನಮ್ಮ ಆಯುರ್ವೇದಿಕ್ ಕಾಲೇಜ್ ಅಧ್ಯಕ್ಷರು ಅವ್ರಲ್ಲಾ, ಎವರಿಗ್ರೀವರ್ಗ ಅಂತೆ ಶ್ರೀರಂಗಪಟ್ಟಣದ ಆಸ್ಪತ್ರೆಗಂತೆ ಇಲ್ಗೆ ಮೆಡಿಕಲ್ ಸ್ಕೂಲಿಂದ ಸೂಪರೆಂಟ್ರು ಬರ್ತಾರಂತೆ. ಇವ್ರು ಇಂತಾರ ಏನಿರಬೋದು ಊಗಿರೋರು. ಆಯುರ್ವೇದ ಮತ್ತು ಇಂಗ್ಲೀಷ್ ಎರ್ಡರಾಗೂ ಸ್ವಲ್ಪಸ್ವಲ್ಪ ಪರಿಶ್ರಮ ಹೊಂದಿದ್ರು. ಆಬ್ಳಿಯ ಇವೂ ಸೇರಿ ಎರಡು ದಪ ಕಾಲೇಜ್ನಲ್ಲಿ ಪ್ರಿನ್ಸಿಪಾಲ್ರಾಗಿದ್ರು. ಇಲ್ಗೆ ಎರ್ಡೂ ಭಾಷೇನ ತಿಳ್ಕೊಂಡಿದ್ದೂ ಆಯುರ್ವೇದದ ಅನುಭವ ಮತ್ತು ಅಭಿವೃದ್ಧಿ ಮಾಡ್ಬೇಕೂ ಅನ್ನೋ ಅಭಿಲಾಷೆ ಜಾಸ್ತಿ ಇರೋರು ಇದ್ರೆ ಸರಿಯೇ. ಒತ್ತರ್ ಬರೀ ಇಂಗ್ಲೀಷ್ ಡಾಕ್ಟರುಗಳ್ನ ತಂದಾಕ್ಬಿಟ್ರೆ ಪಾಯಿದೆ ಏನು? ಅವರ್ಗೋ ಅಲ್ಲಿರೋಕೆ ಬೇಜಾರಾಗ್ತೇನು ಬೇಕಾಬಿಟ್ಟೆ ಕೆಲ್ಸ. ಇದ್ರಿಂದ ವಾಕ್ಯದ ಗುದ್ದಾಟ ತಪ್ಪೋದೇ ಇಲ್ಲಾ. ಪರ್ಯವಸಾನ ಏನು? ಗಂಡಹೆಂಡರ ಜಗಳ್ದಾಗ ಕೂಸು ಬಡವಾಯ್ತು ಅನ್ನೋ ಹಾಂಗೆ ಆದ್ರೆ ಅಯ್ತಲ್ಲಾ. ಈ ಆಯುರ್ವೇದದ ಆಸ್ಪತ್ರೆಗೋಸ್ಕರ ಯಾರಾರೋ ಧರ್ಮಾತ್ಮರು ಎಷ್ಟೆಷ್ಟೋ ಕೊಟ್ಟಾರೆ ಅಂತಾದ್ರಲ್ಲಿ ಇಂತಾ ಆಭಾಸ ಆಗೋಕೆ ಸರ್ಕಾರವು ಅವಕಾಶ ಕೊಡಬಾರದು. ಸಾಮಾನ್ಯವಾಗಿ ಇಂಗ್ಲೀಷ್ ಡಾಕ್ಟರ್ಗಳ್ಗೆ ಆಯುರ್ವೇದ ನೋಡ್ತಾಂದ್ರೆ ಸೌತೀರ ಮಕ್ಳಂಗೆ ಪ್ರೇಮ. ಆದಕ್ಕೋಸ್ಕರ ಪ್ರಭುತ್ವದೋರು ಚೆನ್ನಾಗಿ ಎರಡು ಭಾಷೇಲೂ ಅನುಭವ ಇದ್ದೂ ಆಯುರ್ವೇದಾನಾ ಇಮಾನದ ಮೇಲೆ ಕೂಡಿಸ್ಬೇಕೂಂತಯಿರು ಮುಕರ್ಜಿ ಪಡಿಸ್ತಾರೋ ಅಂತಾವರ್ನ ನೇಮಿಸಿದ್ರೆ ಚೆನ್ನಾ ಅಲ್ವೇ? ನೋಡೋಣ. ನಾನೂವೆ ನೋಡ್ತಾ ಇರ್ತೀನಿ.

ಕುಲಕ್ಕೇ ಬಂತೆ? ಕೊಡಲಿ ಕಾವು!

ಯಾವ ಮೂರುಮನೆ ಹಳ್ಳೀಲೂ ಒಂದು ಜಾವಡಿ. ಬೆಳಗೆಲ್ಲಾ ದುಡಿದ ರಾತ್ರಿ ಹಿಟ್ಟುತಿಂದ. ಹೆಗಲಮೇಲೆ ಒಂದು ಮಬುಟಿಹಾಕಿದ. ಬಾಯಲ್ಲಿ ಅಡಿಕೆ ಹಾಕ್ಕೊಂಡು ಕೈಲಿ ವೀಳ್ಯೇದೆಲೆ ಹಿಡುಕೊಂಡು, ಸುಣ್ಣ ಅವರಿವರನು ಕೇಳುತ್ತಾ ಹೋಗೇ ಸೂಪ್ಪ ಆಗೀತಾ ಚಾವಡಿ ಬಾಗಲಲ್ಲಿ ಸೇರಿದ. ಯಾಕೆ, ನ್ಯಾಯವಿಚಾರಣೆಗೆ ಯಾದ್ಯಾರು? ಒಬ್ಬರಲ್ಲ ಇಬ್ಬರಲ್ಲ. ಅದೋ ಊರೊಟ್ಟಿನ ನ್ಯಾಯ. ಅಲ್ಲಿಗೆ ಬರವೇ ಇದ್ದರೆ ತೆಪ್ಪು ಮಡಗಬೇಕು. ವಿಷಯ ಆದರೂ ಏನು? ಚಿಲ್ಲರೆ ವಿಷಯ ಎಲ್ಲಾ ಎಷ್ಟೋ ಬರ್ತ್ತಾವೆ. ಅವರಲ್ಲೆಲ್ಲಾ ಬೋ ಮುಖ್ಯವಾದವು ಹೆಂಡತಿ ಗಂಡನ್ನಾ ಬಿಟ್ಟು ಬೇರೆ ಹೋಗಿಬಿಡೋದು. ಇಲ್ಲ. ಗಂಡ ಬಿಟ್ಟುಬಿಟ್ಟ ಹಾಕಲಾರದೆ ಗೋಳಿಡಿಸೋದು. ಇಲ್ಲ ಕುಂಟು ನೆಪಹಾಕ್ಕೊಂಡು ಬೇರೆ ರಿವಾಜ್ ಮಾಡಿಕೊಂಡು ಮನೆ ಹೆಂಡತಿ ಕಂಡರೆ ಬೇಕಾಬಿಟ್ಟಿಯಾಗಿರೋದು. ಇಂಥಾದ್ದೇ ಜಾಸ್ತಿ. ಈ ಊರೊಟ್ಟಿನೋರೆಲ್ಲಾ ಸೇರಿ ನ್ಯಾಯವಿದ್ದಂತೆ ತೀರ್ಪುಕೊಡೋದು. ಇದೆಲ್ಲಾ ಶಿವಪ್ಪನಾಯಕನ ಶಿಸ್ತು ಅಂಬೋಂತೆ ಮಾವ ಹೇಳು. ಚಾವಡಿ ನ್ಯಾಯ ಅಂದರೆ ಎಲ್ಲರಿಗೂ ಹೆಚ್ಚು ಗೌರವ ಇದಕ್ಕೆ ಜಡ್ತಿ ಇಲ್ಲ ಲಾಯರೂ ಇಲ್ಲ. ಫೀಜು ಮೊದಲೇ ಇಲ್ಲ ಭಾರೀ ತಪ್ಪೇನಾದರೂ ಆದರೆ ಊರೊಟ್ಟಿಗೆಲ್ಲಾ ಊಟ ಕೊಡಬೇಕು ಇಷ್ಟೇನೆ ಒಟ್ಟನಲ್ಲೇನು! ಜಾತಿ ಕಟ್ಟು ಬಹಳ ಚೆಂದಾಗಿ ನಡೀತಾ ಅಯಿತೆ.

ಹೋದಸಿ ಸಾರೀನೋ ಆಚೇ ಸಾರೀನೋ ಸರ್ಕಾರದೋರು ಎಂದಾದ್ಕೋ ಬಿಲ್ಲೇನೋ ಬಿಲ್ಲೋ ತಂದಿದ್ದರು ಅದರಾಗೆ ಹುಡುಗಾದ ಹುಡಿಗೀರಿಗೇ ಮದುವೆ ಮಾಡಬೇಕು ಅಂತ ಅರ್ದ ಆಯಿತು. ಇದರಿಂದ ಜಾತಿ, ಕಟ್ಟು, ಮಾನ, ಮರ್ಯಾದೆ ಎಲ್ಲಾ ಕೆಡೋಕೆ ದಾರಿ ಆಯ್ತೈತೆ. ತೂಕಡಿಸೋರಿಗ ಹಾಸಿಗೆ ಹಾಸಿಕೊಡ ಕೆಲ್ಸ ಮಾಡಬಾರದು. ಜಾತಿ ವಿಷಯಕ್ಕೆ ಸರ್ಕಾರದೋರು ತಲೆ ಹಾಕೋದು "ನೋಕು ಲಕ್ಷ್ಮಮಿಗೂ ಇಮಾಂಸಾಹೇಬರ ಸಂಬಂಧ ಅಂದಂತೆ" ತೆಪ್ಪ ಆರಿತ ಯಾರೋ! ಏನೋ! ಹಾಲನ್ನ ಉಂಡ ಪುಣ್ಯಾತ್ಮರುಗಳೆಲ್ಲಾ ಸೇರಿ ತಪ್ಪಿಸಿದರು.

ಈಗ ಅವರ ಹೆಸರೂ ಇಲ್ಲ. ಇವರ ಹೆಸರೂ ಇಲ್ಲ. ಸರ್ಕಾರದವರೇನೇ, ಜಾತಿ ಕಟ್ಟು ಬೇರೆ ಜಾತಿಗೆ ಹೋದೋವರೂ ಕೂಡ ದಾಯಬಾಗ ಹೊಂದಬಹುದು ಅನ್ನೋ ಕಾನೂನು ಮಾಡ್ತೀವಿ. ಅದಕ್ಕೆ ಅಡ್ಡೀ ಪಡಿಸೋರು ಯಾರಾದರೂ ಇದ್ರೆ ಅವರೆಲ್ಲಾ ಎರಡು ತಿಂಗಳೊಳಗೆ ಅಕ್ಷೇಪಣೆ ಕಳುಹಿಸಿಕೊಡಿ ಅಂತ ಪ್ರಚಾರ ಮಾಡಿದ್ರೆ. ಇದಕ್ಕೆಲ್ಲಾ ನೀವೇನು ಹೇಳ್ತೀರಿ ಅಂತ ನನ್ನ ಪ್ರಶ್ನೆ. ಇದ ಗಲ್ಲೀನೇ ಕುಲಕ್ಕೆಬಂತೆ ಕೊಡಲಿಕಾವು ಅನ್ನೋದು ತಿಳಿಯೋಕಿಲ್ಲವಾ? ಇದರಿಂದ ಸರ್ಕಾರಕ್ಕೆ ಫಾಯಿದೆ ಏನೈತೋ ಭಗವಂತನೇ ಬಲ್ಲ! ಇಷ್ಟೆಲ್ಲಾ ಮಾಡ್ತಲ್ಲಾ. ಹಿಂಗೇನೇ ಜನಗಳೂ ದೇವರನ್ನು ಪೂಜೆ ಮಾಡಿ ನಿಮ್ಮ ಪೂಜೆ ಮಹಿಮೆ ತೋರಿಸಿ. ಹಿಂದೆಲ್ಲಾ ಮಹಾತ್ಮರು ಅಂಥಂಥಾ ಕೆಲಸ ಮಾಡುತ್ತಿದ್ದರು. ನೀವು ಈಗಲೂ ಅಂತ ಸತ್ಯವಂತರಾಗಿ ಪ್ರಪಂಚ ಉದ್ಧಾರ ಆಗೋ ಕಲ್ಸ ಮಾಡ್ರಯ್ಯಾ ಅಂತ ಯಾಕೆ ಹೇಳಬಾರದು?

ಇದೆಲ್ಲಾ ನನಗ್ಯಾಕೆ? ಸದ್ಯ ಬೀಸೋ ದೊಣ್ಣೆ ಏಟು. ತಪ್ಪಿದರೆ ಸಾಲದಾ ಅಂತ ನನ್ನ ಯೋಚನೆ. ನನ್ನ ಸ್ನೇಹಿತರಿಗೆಲ್ಲಾ ಹೇಳೋದೂ ಇಷ್ಟೆ. ನೀವೆಲ್ಲಾ ಅಲ್ಲಲ್ಲೇ ಸೇರಿ ನಮಗೆ ಗೈರು ಮಾಮೂಲ್ ಕಾನೂನು ಒಂದೂ ಬೇಡ ನಮ್ಮ ಜಾತಿ ಸುದ್ದಿ ನಿಮಗ್ಯಾಕೆ? ಇರೋದು ಹಂಗೇ ಇರಲಿ ಶಿವಪೂಜೇಲಿ ಕರಡಿ ಬಿಡಬ್ಯಾಡಿ, ಅಂತ ಹೇಳಿಬಿಟ್ಟು ಇಂತಾ ಕಾನೂನು ಬಂಡಿತ ಬ್ಯಾಡಿ ಅಂತು ಒಟ್ಟಿಗೆ ಸೇರಿ ಸರ್ಕಾರಾನ ಕೇಳಿಕೊಳ್ಳಿ.

ನವರತ್ನ ಮಾಲಾ

(ಲೇಖಕ —ವಿದ್ಯಾನಟಿ)

ರಾಗ—ಸರಾಗ ತಾಳ—ಅಪೇತಾಳ.

ಹಂಗೂಕೆಟ್ಟೆ	ಹಿಂಗೂಕೆಟ್ಟೆ	ರಂಗಧಾಮಾ !	
ಅಂಬ್ಲಿಕೈತರಿಗಿಲ್ಲ	ಮುಂದೆ	ಪಂಗನಾಮಾ	॥ ೧ ॥
ರಾಗಿ ಹುರಳಿ	ಬೆಳೆಗೆಬಿತ್ತು	ಸಾಲಿಗ್ರಾಮಾ !	
ತಂಗಳ್ಹಿಟ್ಟು	ಬೆಂದ ಹುಳ್ಳಿ	ಗಲ್ಲನಾಮಾ	॥ ೨ ॥
ಪರುಷವಿಲ್ಲ	ಗಂಜಿ ಇಲ್ಲ	ವೀರಕ್ಷ್ಮಾಮಾ !	
ಘೋರತಾಪ	ತೋರಬೇಡ	ಮಾರಿ ಅಮ್ಮಾ	॥ ೩ ॥
ಹೆಚ್ಚು ತರಲು	ಕಾಡಿಗ್ಹೋದ್ರೆ	ಪೋಲೀಸಾಮಾ !	
ಬೆಟ್ಟದಾನೆಗೆ	ಸಿಕ್ಕಿಬಿಟ್ಟೆ	ನಿರ್ನಾಮಾ	॥ ೪ ॥
ಹೊಟ್ಟೆಗಿಲ್ಲ	ಒಟ್ಟೆಗಿಲ್ಲ	ಕೆಟ್ಟೆವಮ್ಮಾ !	
ಸಿಟ್ಟುಬಿಟ್ಟು	ಸಲಹು ಶ್ರೀ	ಚಾಮುಂಡಮ್ಮಾ	॥ ೫ ॥
ಹಿಂಗಾದರಿಲ್ಲ	ಮುಂಗಾರಿಲ್ಲ	ಪಂಚಗ್ರಾಮಾ !	
ಹಿಂಗೇ ಇದ್ದರೆ	ಮುಂದಿನ ವರ್ಷ	ರಾಜಿನಾಮಾ	॥ ೬ ॥
ತಂಗಿ ಟೋಪಿಯು	ನಡಿಗೆ ಮುರಿಗೆ	ವಿಶ್ವಕರ್ಮಾ !	
ಹ್ಯಾಂಗೆಕಂಡು	ಒಡೆಯಬೇಕು	ಜನರ ಮರ್ಮಾ	॥ ೭ ॥
ಕಾಂಗಾರಿ	ಕಲಸಕ್ಕೆಲ್ಲ	ಉಮ್ಮತ್ತ ಸೋಮಾ !	
ಇಂದು ಯಾರೋ	ನಾಳೆ ಯಾರೋ	ಶ್ರೀ ರಾಮಾ	॥ ೮ ॥
ಕರುಣವಿಲ್ಲ	ಪೇಕೆ ನಿನಗೆ	ಬಾಲಸೋಮ !	
ಪುರದಿ ಮರೆದ	ಪಾರ್ವತೀಶ	ಸಾರ್ವಭೌಮಾ ?	॥ ೯ ॥

ನಂಜನಗೂಡು ವರ್ತಮಾನ.

ಇಲ್ಲಿನ ದೇವಸ್ಥಾನದ ಪೇಷ್ಕಾರರಿಗೆ ವರ್ಗವಾಗಿ ಹೊಸಬರು ಇನ್ನೂ ಬಂದಿಲ್ಲ.

ಪ್ರಂಗಾರ—ರೈಲ್ವೆ ಸ್ಟೇಷನ್ನಿನಲ್ಲಿ ಇತ್ತೀಚೆಗೆ ಪ್ರಕಾರಿಗೆ ಅವಕಾಶವಿಲ್ಲದಂತೆ ಎಲ್ಲವೂ ಹೂವ ಹಲಿಗೆ ಅನುಸಾರವಾಗಿ ನಡೆಯುತ್ತಿದೆಯಂತೆ! ಹೊಸ ಆಸ್ಪತ್ರೆಯ ಕಟ್ಟಡವೂ, ರೈಲ್ವೆ ಸ್ಟೇಷನ್ನಿನ ಮುಂದಿರುವ ಸರ್ಕಲ್ಲೂ ಊರಿಗೇ ಒಂದು ಅಲಂಕಾರವನ್ನುಂಟುಮಾಡಿವೆ. ಈ ಸಬ್‌ಡಿವಿಜನ್ ಆಫೀಸರವರೇ ಇರುವರೆಂಬ ಭರವಸೆಯೂ ಇಲ್ಲ. ಇವೆಲ್ಲವೂ ಮುಂದುವರಿಯುವುವೆಂಬ ನಂಬಿಕೆಯೂ ಇಲ್ಲ.

ರೆವಿನ್ಯೂ ವಸೂಲಿ—ಇಲ್ಲಿಗೆ ಹೊಸ ಡೆಪ್ಯುಟಿ ತಹಸೀಲ್ದಾರರವರೊಬ್ಬರು ಬಂದಿದ್ದಾರೆ. ಮಾತೆತ್ತಿದರೆ ಜಪ್ತಿಯಂತೆ! ಅನೇಕ ಗ್ರಾಮಗಳಲ್ಲಿ ರೈತರ ಮೇಲೆ ಲೆಕ್ಕದಲ್ಲಿ ಕಾಣಬರುವಷ್ಟು ಬಾಕಿ ಇರಲಾರದೆಂದು ಜನರಾಡಿಕೊಳ್ಳುತ್ತಿದ್ದಾರೆ. ಈ ಡೆಪ್ಯುಟಿ ತಹಸೀಲ್ದಾರವರು ಆತ್ತ ಕಡೆ ಸ್ವಲ್ಪ ನಿಗಾ ಇಡುವುದು ಮೇಲಲ್ಲವೆ?

ಪಬ್ಲಿಕ್ ಲೈಬ್ರರಿ—ಈ ಕಟ್ಟಡವು ತೀರಾ ಅನಾಯಕರವಾದ ಸ್ಥಿತಿಯಲ್ಲಿದೆ. ಸರಿಯಾದ ಸೌಕರ್ಯಗಳನ್ನು ತೆಗೆದುಕೊಂಡು ಜನರಿಗೆ ಇವನ್ನು ವಹಿಸುವುದು ಒಳ್ಳೆಯದು. ಮುನಿಸಿಪಾಲಿಟಿಯು ಗ್ರಾಂಟನ್ನು ಕೊಟ್ಟರೆ ಸಾಕು.

ನಿರುತ್ಸಾಹ—ಬಹುಮಂದಿ ಬ್ರಾಹ್ಮಣರೂ, ಲಾಯರುಗಳೂ ಇರುವ ಈ ಸ್ಥಳದಲ್ಲಿ, ಸಾರ್ವಜನಿಕವಾದ ಉತ್ಸಾಹವೇ ಸಂದಿಹೋಗಿದೆ. ಶ್ರೀ ಶ್ರೀಕಂಠೇಶ್ವರಾದ್ವೈತ ಸಭೆಯನ್ನು ಸಾಕಷ್ಟು ಮುಚ್ಚಿದ್ದರೂ ನಿರ್ವಹಿಸಲಾರದಿರುವುದೇಕೆ? ಗಿರಿಜಾ ಕಲ್ಯಾಣವು ಬಂದಿತಲ್ಲವೆ?

ಹಿತೈಷಿ.

ಇಟಲಿ—ಅಲ್ಬೇನಿಯಾ

ಈಗ ತಾನೆ ಅಬಿಸೀನಿಯವನ್ನು ತನ್ನ ಶಸ್ತ್ರ ಬಲದಿಂದ ಇಟಲಿಯು ವಶಪಡಿಸಿಕೊಂಡಿದೆ. ಅಲ್ಬೇನಿಯಾ ರಾಜ್ಯದ ಮೇಲೆಯೂ ಬಹು ಹಿಂದಿನಿಂದ ತನ್ನ ಹಿಡಿತವನ್ನು ಬಹುವಾಗಿ ವ್ಯಾಪಿಸಿರುತ್ತದೆ. ಸಾಲಗಳನ್ನು ಕೊಟ್ಟಿದೆ. ಈಚೆಗೆ ಆರು ವರ ಲಕ್ಷ ಪೌಂಡುಗಳ ಹೊಸ ಸಾಲವನ್ನು ಕೊಟ್ಟು ಆ ದೇಶವನ್ನು ಮತ್ತಷ್ಟು ತನ್ನ ಹಿಡಿತದಲ್ಲಿ ಸಿಕ್ಕಿಸಿಕೊಂಡಿದೆ. ಇದಕ್ಕೆ ... ತ್ತು ವರ್ಷ ವಾಯಿದೆ ಕೊಟ್ಟಿದೆ.

ಆಕಾಶವಾಣಿ ಕಾರ್ಯಕ್ರಮ.

ಸೋಮವಾರ—ರಾತ್ರಿ 8ರಿಂದ 9–20 ಪಾಶ್ಚಾತ್ಯ ಸಂಗೀತ, ಉಪನ್ಯಾಸ, ಶ್ರೀ ಆರ್. ಆರ್. ಭಾಷ್ಯರವರಿಂದ 'ಸ... ಕೋದ್ಯೋಗ' ಮಂಗಳವಾರ. 6–30 ರಿಂದ 7–45 ಕರ್ನಾಟಕ ಗಾನ, ಉಪನ್ಯಾಸ, ನಂಜನಗೂಡು ಶ್ರೀ॥ ಎಸ್. ಸುಬ್ರಹ್ಮಣ್ಯಯ್ಯನವರಿಂದ "ಶ್ರೀ ಒಪ್ಪ... ಶಾಸ್ತ್ರಗಳು" ಬುಧವಾರ—ರಾತ್ರಿ 8 ರಿಂದ 9 ಕರ್ನಾಟಕ ವಾದ್ಯಸಂಗೀತ, ವಿಧ ವಿನೋದಗಳು ಗುರುವಾರ 6–30 ರಿಂದ 7–30 ಮಕ್ಕಳ ಕಾರ್ಯಕ್ರಮ.

ಮದ್ರಾಸು ವಸ್ತು ಪ್ರದರ್ಶನದಲ್ಲಿ ಮೈಸೂರು ಸಾಮಾನುಗಳು.

ಮದರಿಯಲ್ಲಿ ಒಂದು ಭಾರಿ ಸ್ವದೇಶಿ ವಸ್ತು ಪ್ರದರ್ಶನವು ನಡೆಯುತ್ತಿದೆ. ಅದರಲ್ಲಿ ಮೈಸೂರು ಸರ್ಕಾರದವರು ಕೆಲವು ಸಾಮಗ್ರಿಗಳನ್ನು ಇಟ್ಟಿರುವರು. ಅವುಗಳಲ್ಲಿ ಎಲೆಕ್ಟ್ರಿಕ್ ಸಮಾನುಗಳು ಒಳ್ಳೆ ... ಗಮನವನ್ನು ಸೆಳೆದಿವೆ

ನಿಷ್ಕಳಂಕ ಪ್ರೇಮ.

(ಒಂದು ಸಣ್ಣ ಕಥೆ)

(ಲೇಖಕ—ಟಿ ಎಸ್. ಬಾಲಕೃಷ್ಣನ್ ಅರಸೀಕರೆ)

(ಕಳೆದ ವಾರದ ಶೇಷ)

ರಾಮುವಿನ ನೋಟವು ಪತ್ರದ ಮೇಲೆ ನಾಂತಕವಾಗಿ ನ ವಹರಿಸುತ್ತಿತ್ತು. ಸೂರ್ಯೋದಯದಿಂದ ಕಮಲವು ವಿಕಸಿತವಾಗುವಂತೆ ಆ ಪತ್ರವಾಚನದಿಂದ ರಾಮುವಿನ ಮುಖದಲ್ಲಿ ಕಾಂತಿಯು ಮಿನುಗಿತು ಕ್ಷಣದಲ್ಲಿ ಆ ಕಾಂತಿಯು ಮಿಂಚಿನಂತೆ ಮಾಯವಾಗಿ ಅದಕ್ಕೆ ಪ್ರತಿಯಾಗಿ ಒಂದು ಚಿಂತಾರೇಖೆಯು ಉತ್ಪನ್ನವಾಯಿತು ಆಶಾ—ನಿರಾಶೆಗಳೆರಡೂ ತಮ್ಮ ಕಾರ್ಯವನ್ನು ಒಂದು ಕ್ಷಣದಲ್ಲಿ ನಡೆಸಿದ್ದುವು. ರಾಮುವಿನ ಚಿತ್ತಪ್ರವೃತ್ತಿಯನ್ನು ನೋಡುತ್ತಿದ್ದ ಸರಸುವು ಹತಾಶಳಾದಳು. ಇದರ ಕಾರಣವನ್ನರಿಯಲು ಪಾಲ್ಲನೆ ಅವಳಿಗೆ ಒಂದು ನಿಂತಳು ರಾಮುವು ತನ್ನ ಪ್ರಕೃತಿಸ್ಥನಾಯವಾದ ದೀನವದನದಿಂದ ಅದರಲ್ಲಿಯೂ ನೀರಸವಾದ ನೇತ್ರದಿಂದ ಒತ್ತಡದ ಸರಸುವನ್ನು ನೋಡಿದನು ಅವಳೂ ತನ್ನಂತಾಗಿದ್ದಳು ಚಿನ್ತಾನ್ವೇ ಅಶ್ರುಪೂರಿತವಾಗಿದ್ದ ಅವಳ ನೇತ್ರಗಳಿಂದ ಮುತ್ತಿನಂತೆ ಕಣ್ಣೀರುದುರುತ್ತಿತ್ತು ಅವನ್ನು ಕಂಡ ಸರಸುವು ತಲೆ ಬಾಗಿಬಿಟ್ಟಳು ಮನಸ್ಸಿನ ಉದ್ವಿಗ್ನತೆಯು ಮೀರಿ ಹೋಗಿದ್ದಿತು ಕುಗ್ಗಿದ ಕಂಠದಿಂದ ಸರಸೂ' ಎಂದನು ಸರಸುವಿನ ಕಣ್ಣೀರು ನೆಲದ ಮೇಲಾಗಲೇ ತಂಗ್ಗಿನಷ್ಟು ಬಿದ್ದಿತ್ತು ಆದರೂ ಸಾವರಿಸಿಕೊಂಡು —"ಏಕೆ 'ಎಂದಳು ಹೀಗೆ ಸಾಂತಿಸಿಂದನನು ಮತ್ತೂ ಕಣ್ಣೀರು ಸುರಿಸಿದನು ಆಗಿನಂತಹ ಸ್ಥಿತಿಯನ್ನು ರಾಮುವು ತನ್ನ ಗತಜೀವಿತದಲ್ಲಿ ಎಂದೂ ನೋಡಿಯೂ ಅನುಭವಿಸಿದವನೂ ಅಲ್ಲ

ಈ ಪತ್ರದ ಪದ ರತ್ನಗಳು ಆಗ ಏನೇನು ಸರಸು ? "

ಸರಸ (ನಿರುತ್ತರಳಾದಳು)

ಏಕೆ ಮಾತ ನಾಡ ಲಾರೆಯಾ ಏನಂದು

ನನ್ನ ಮೇಲಿ ಸಹಜವಾದ ಅಭಿಮಾನ ನಿನಗಿರುವುದಾದರೆ ಹೇಳು (ಹೇಳ ಕಂದಿದ್ದ ಉತ್ತರವು ಕಂಠದ ಮೇಲೆ ಬಂದಾಯಿತು) ಹಾಗಾದರೆ

" ವಾ ಹೇಳುವೆನು ನಿನ ನಿಜ ಮುವಾಗಿಯೂ, ಸರಸೂ ! ನಿಜವಾಗಿಯೂ ಹೇಳು "

ಸತ್ಯವಾಗಿಯೂ

ಹೀಗಾದರೆ ಇದು ತಿರುಕನ ಕನಸು ನೀನು ಎನ್ನನ್ನೇಕೆ ಪ್ರೀತಿಸುವೆ ? ನೀನು ಕೆಲ ದಿನದಲ್ಲಿ ಈ ಊರಿನ ಜಮೀನ್ದಾರ ಸುಂದರೇಶನ ಪತ್ನಿಯಾಗುವೆ, ಸ್ವರ್ಭೋಗಗಳನ್ನನುಭವಿಸುವೆ ಅಂದಿಗೆ ಈ ದೀನನನ್ನು ಮರೆಯ ಬೇಡ ಕಂಡೆಯಾ ನನ್ನಿಷ್ಟದ ವಿಪರೀತವಾಗುವುದು, ನಾನಿನ್ನು ಹೋಗಿಬರಲೇನು ? ಹಾಗೆಂದವನೇ ಪತ್ರವನ್ನು ಮಡಿಸಿ ಜೇಬಿನಲ್ಲಿಟ್ಟುಕೊಂಡು ದೀನವದನದಿಂದ ಹೊರಬಿದ್ದನು

ಸರಸುವಿಗೆ, ಒಮ್ಮೊಂದು ಬಗೆಯ ಗ್ಲಾನಿಯು ಆವರಿಸಿದಂತಾಗಿ ನಿಂತಲ್ಲಿಯೇ ಕುಳಿತುಬಿಟ್ಟಳು

ಈ ಘಟನೆಯು ಘಟಿಸಿ ಇಂದಿಗೆ ನಾಲ್ಕೈದು ದಿನಗಳಾದವು. ರಾಮುವಿನ ಸುಳಿವೇ ಸರಸುವಿಗೆ ತೋರಲಿಲ್ಲ ಇದರಿಂದವಳ ಮನಸ್ಸು ಕೊರೆಯತೊಡಗಿ ದೇಹಾಲಸ್ಯವು ಮೊಳಕೆಯೊಡೆಯಿತು ರಾಮುವನ್ನು ಸ್ಮರಿಸಿದಂತೆಲ್ಲಾ ಆಕೆಯ ಚಿತ್ತ ಚಾಂಚಲ್ಯವು ಮಿತಿಯಾಗುತ್ತಿತ್ತು ಸರಸು ಹಿಂದಿನ ಸರಸುವಲ್ಲ ಈಗಿನ ಸರಸುವೇ ಬೇರೆ ಆಕೆಗೀಗ ಹಚ್ಚಿನ ಸೊಗಸು ಅನಾವಶ್ಯಕವು, ಆಹಾರ ಪಾನೀಯಗಳಲ್ಲಿ ಜಿಗುಪ್ಸೆ ಹುಟ್ಟಿತು, ಅನ್ಯರಲ್ಲೇಕೆ ? ತನ್ನ ಮಾತಾಪಿತೃಗಳೊಡನೆ ಮಾತನಾಡಬೇಕೆಂದರೆ ಅಸಾಧ್ಯವಾದ ಶ್ರಮೆಯು ತಲೆದೋರುತ್ತಿತ್ತು ತನ್ನ ಪುಟ್ಟ ಪೆಟ್ಟಿಗೆಯಲ್ಲಿದ್ದ ರಾಮುವಿನ ಫೋಟೋವನ್ನು ತೆಗೆದು ಮುತ್ತಿಟ್ಟು ವಿಚಲಿತ ದೃಷ್ಟಿಯಿಂದ ನೋಡುತ್ತಿರುವಳು ನೋಡುತ್ತಿದಂತೆಲ್ಲಾ ಅವಳ ಮನಸ್ಸಿನ ಭಾವನೆಗಳು ವಿಪರೀತವಾಗುತ್ತಿದ್ದವು ಒಂದೊಂದು ನಿಶಿರಾತ್ರಿಯಲ್ಲವಳು, ಮೇಲಕ್ಕೆದ್ದು ದೀರ್ಘನಿಟ್ಟುಸಿರೊಂದನ್ನು ಬಿಟ್ಟು ' ಸರಸು ನಿನ್ನ ಅಂತರ್ಯಾಭಿಲಾಷೆಯು ಸರ್ವಥಾ ಸಫಲವಾಗದು ಎಂದೆಂದು ಆ ಸ್ಥಳವನ್ನು ಬಿಟ್ಟು ಹುಚ್ಚಿಯಂತೆ ಅತ್ತಿಂದಿತ್ತ ಅಲೆಯ ತೊಡಗಿದಳು ಕಣ್ಣಿಗೆ ಬಿದ್ದ ಪದಾರ್ಥವೊಂದನ್ನು ಕಂಡು ರಾಮೂ ನೀನೇಕೆ ನನ್ನಲ್ಲಿ ನಿರ್ದಯನಾದೆ ಎಂದು ಅಪ್ಪಿಕೊಂಡಳು ಈ ಬಗೆಯ ಉನ್ಮಾದವಸ್ಥೆಯಿಂದ ಸರಸುವು ನೆಲದ ಮೇಲೆ ನಿಶ್ಚೇಷ್ಟಿತಳಾಗಿ ಬಿದ್ದು ಬಿಟ್ಟಳು ಎಚ್ಚರವಾದಾಗ ಬೆಳಗ ಬೆಳಕು ಹರಿದಿತ್ತು

ರಾಮುವು ತನ್ನ ಕೋಣೆಯ ಮೂಲೆಯಲ್ಲೊತ್ತಿಟ್ಟು, ಓರ್ವನೇ ಕುಳಿತಿರುವನು ವ್ಯಸನದಿಂದ ಸಂತಪ್ತವಾಗಿದ್ದ ಮನಸ್ಸು ಅವನ ಮುಖಮಂಡಲದ ಮೇಲೆ ಪ್ರಪೋದಗಳ ಸಾರವನ್ನು ಹೀರಿ ನೀರಸವನ್ನಾಗಿ ಮಾಡಿದ್ದಿತು ಚಿತ್ತ ಚಾಂಚಲ್ಯದಿಂದ ಅವನ ಅಂಗಾಂಗಗಳು ಕ್ಷಣಕೊಂದು ಬಾರಿ ವಿಲಕ್ಷಣ ಚೇಷ್ಟೆಗಾರಂಭಮಾಡುತ್ತಿದ್ದುವು ಅವರ ಯೋಗ್ಯಾಯೋಗ್ಯ ರೀತಿಯು ಅವನಾ ಉನ್ಮಾದವಸ್ಥೆಯ ಬುದ್ಧಿಗೆ ಬಂದಂತೆ ತೋರಲಿಲ್ಲ ಆದುದರಿಂದ ಅವು ಕ್ಷಣ ಕ್ಷಣಕ್ಕೂ ವೃದ್ಧಿಹೊಂದತೊಡಗಿದ್ದುವು ಈಗೊಂದು ಬಾರಿ ಅವನಿಗೆ ಏನೋ ತೋಚಿದಂತಾಗಿ ಅಲ್ಲಿಂದೆದ್ದು ಬಟ್ಟೆಯನ್ನು ತೂಗುಹಾಕಿದ್ದ ಗೋಡೆಯ ಬಳಿ ಬಂದು ನಿಂತನು ಅಲ್ಲಿನದೊಂದು ಕೋಟಿನ ಜೇಬಿನಿಂದ ಸಣ್ಣ ಪತ್ರವನ್ನು ತೆಗೆದು ಬಿಚ್ಚಿ ಓದತೊಡಗಿದನು

" ಮನೋನಾಥ ರಾಮೂ

ನಾನು ನಿನ್ನ ರೂಪುಲಾವಣ್ಯಗಳಿಗೆ ಮಾತ್ರವಲ್ಲ, ನಿನ್ನ ಅನುಪಮ ಸಂಗೀತ ವಿದ್ಯಾಪ್ರೌಢಿಮೆಗೆ ಮೆಚ್ಚಿ ನಿನ್ನನ್ನು ಮನೋನಾಥನೆಂದು ಸಂಬೋಧಿಸಿರುವೆನು ನಿಶ್ಚಯವಾಗಿಯೂ ನೀನು ನನ್ನ ಮನೋನಾಥನೇ ಆಗುವೆ ನನ್ನ ಪತಿದೇವನೆಂದರೂ ತಪ್ಪಾಗಲಾರದು ಆದುದು ನನ್ನ ಮನೋಹರಾ ನನ್ನ ನಾಥ ಈಗೇನು ಹೇಳುವೆ ಒಪ್ಪುವಿಯಾ ? ಬೇಡ, ನೀನೂ ಒಪ್ಪಬೇಡ ? ನಾನೂ ಒಪ್ಪಲಾರೆ ? ಇಲ್ಲ ನೀನು ನನ್ನ ಮನೋನಾಥನೇ ಆದುದು ಅದಕ್ಕಾಗಿಯೇ ನನ್ನ ಪ್ರಾಣವನ್ನು ನಿನಗೆ ಸಲಾಗಿಟ್ಟಿರುವೆನು ಆ ಮುಂದ ಅಕ್ಷರಗಳೇ ಇರಲಿಲ್ಲ ಅಸಂಬದ್ಧವಾದ ಈ ಪದಗಳನ್ನು ಓದಿದರೂ ನೋಡಿಯೂ ರಾಮುವು ಅಪ್ರತಿಭನಾದನು ಅವರ ಮನಸ್ಸು ವಿಕಾರವಶವಾದುದಿರಲಿ ಕಲ್ಪನಾ ಶರಸಂಧಾನದಿಂದ ಜರ್ಜರಿತನಾದ ಚಿತ್ತಕ್ಕೆ ಶಾಂತಿ ದೊರೆಯುತ್ತಿಲ್ಲದು ಮಾಡುವುದೇನು ? ನಿಂತಲ್ಲಿಯೇ ಕುಸಿದು ಕುಳಿತು ಬಿಟ್ಟನು

ರಾಮುವಿನ ಚಿತ್ತಪ್ರವೃತ್ತಿಯು ಶಾಂತಾಗಿರಲು ಅವನ ಅಜ್ಜಿಯು ಎಂಯಲ್ಲಿಷ್ಟು ಫಲಾಹಾರವನ್ನೂ ಚಿಕ್ಕದೊಂದು ಗಿಂಡಿಯಲ್ಲಿ ಕಾಫಿಯನ್ನು ತಂದು 'ರಾಮು ಎಂದಳು ರಾಮು ಪಕ್ಕಕ್ಕೆ ತಿರುಗಿ ನೋಡಿ ಮಾತನಾಡದೇ ಸುಮ್ಮನಿದ್ದನು ಮಾಡುವದೇನು ? ಮನಸ್ಸಿನ ಪರಿಸ್ಥಿತಿಯು ಅದೊಂದು ಬಗೆಯ ಸಂತಾಪದಿಂದ ಸಂತಪ್ತವಾಗಿರಲು ಯಾವ ಆಹಾರ ಪಾನೀಯಗಳು ತಾನೆ ರುಚಿಸುವುವು '

ಚಿತ್ತಕ್ಕೆ ಶಾಂತಿ ದೊರೆಯದ ಮೇಲೆ ಅವರ ಪ್ರಯೋಜನವು ರಾಜಭೋಗಗಳನ್ನು ಸಹ ತುಚ್ಛೀಕರಿಸುವುದೇನು, ಹಚ್ಚಿನ ಸಂಗತಿಯಲ್ಲ ಅಂತೆಯೇ ರಾಮುವು ಆ ಉಪಾಹಾರವನ್ನು ತಿರಸ್ಕರಿಸಿದುದೇನೂ ಆಶ್ಚರ್ಯವಲ್ಲ ತನ್ನನ್ನು ನೋಡಿಯೂ ಮಾತನಾಡಿಸದಿರುವುದನ್ನು ಕಂಡ ಅಜ್ಜಿಯ ಮನಸ್ಸು ಬಹಳ ನೊಂದುಹೋಗಿತ್ತು ಆದರೆ ಅವನ್ನು ವಿಚಾರಿಸುವ ಕೆಲಸಕ್ಕೆ ಹೋಗದೆ ಹಿಂತಿರುಗಿದಳು ಅಷ್ಟರಲ್ಲಿ ಶ್ರೀಪತಿರಾಯರ ಜವಾನ ರಹೀಮನು ಓಡುತ್ತೋಡುತ್ತಾ ಬಂದನು— ಸ್ವಾಮಿ ಅರ್ಜಂಟಾಗಿ ಎರೋಕೆ ಹೇಳಿದ್ರು ಹೊ ಹೊ ಎಂದವನೇ ಒಳನುಗ್ಗಿ ರಾಮುವನ್ನು ಕೈ ಹಿಡಿದು ಕರೆದುಕೊಂಡು ಹೊರಟನು ತಾನು ಎಲ್ಲಿಗೆ ಹೋಗುತ್ತಿರುವೆನು ತನ್ನ ಜೊತೆಯಲ್ಲಿರುವನವರಾರು ಎಂಬುದು ಸಹ ಆ ಪ್ರಾಣಿಯ ಸ್ಮೃತಿ ಪಥಕ್ಕೆ ಬರದಾಯಿತು ಸೂತ್ರದ ಗೊಂಬೆಯಂತೆ ರಹೀಮನನ್ನು ಅನುಸರಿಸಿದನು ಮಾತ್ರ ರಾಮುವು ಕೋಣೆಯನ್ನು ಪ್ರವೇಶಿಸಿ ನೋಡುತ್ತಾನೆ ಅದೊಂದು ಮಂಚದ ಸುತ್ತಲೂ ಕೆಲವು ಜನರು ಮೇಲಿಸುತ್ತಿರುವರು ಶ್ರೀಪತಿರಾಯರು ತಲೆಯಮೇಲೆ ಕೈಯಿಟ್ಟು ದಿ ನವದನದಿಂದಲೂ ನೀರಸ ನೇತ್ರದಿಂದಲೂ ಸರಸುವನ್ನು ನೋಡುತ್ತಿದ್ದಾರೆ ಬಂದು ನೋಡುತ್ತಾನೆ ಸರಸುವಿನ ಮಲಿನ ಮುಖದಲ್ಲಿ ಅವಳ ಆತ್ಮವು ಮೃತ್ಯುವಶವಾಗುವ ಸೂಚನೆಯು ತೋರುತ್ತಿದೆ ದುಃಖದಿಂದ ಉಬ್ಬಿ ಬರುವ ಕಂಠದೊಡನೆ " ಸರಸೂ ಎಂದನು ಸರಸುವು ಕಣ್ದೆರೆದಳು ಸೌರಭ ಸಂಗ್ರಹಕ್ಕಾಗಿ ಅಲೆಯುತ್ತಿದ್ದ ಭ್ರಮರವೊಂದು ಸಂದ—ಸುಂದರ—ಮಂದಾರ ಪುಷ್ಪವನ್ನು ಸಂಭ್ರಮದಿಂದು ಬ್ಬಿ ಆ ಪುಷ್ಪದ ತನುವನ್ನು ಆಲಂಗಿಸುವಂತೆ ಮೃತ್ಯುಶಯ್ಯೆಯ ಅತಿಥಿಯಾಗಿದ್ದ ಸರಸುವು ವಿರಸದ ಸಂಪ್ರದಾಯವನ್ನು ವಾಯಿಕಾಂತಿಯಿಂದ ಹೊರಸೂಸುತ್ತಾ ತನ್ನ ನಿತ್ಯಸ್ಪಷ್ಟವಾದ ಹಸ್ತವನ್ನು ಚಾಚಿ ರಾಮೂ " ಎಂದು ರಾಮುವಿನ ಭುಜದ ಮೇಲಿಟ್ಟಳು ಪ್ರಕೃತ ಸ್ಥಿತಿಯು ಸರಸುವಿಗೂ—ರಾಮುವಿಗೂ ಅದಂತೆಂದು ಕಂಡಿತೋ ! ಇದೊಂದು ಬಗೆಯ ಶಾಂತಿಯು ಇಬ್ಬರ ಮುಖದಲ್ಲಿಯೂ ಮಿಂಚಿನಂತೆ ಮಿನುಗಿ ಮಾಯವಾಯಿತು—ಅದರೊಡನೆ, ಅವರಿಬ್ಬರ ಚಿಂತನಾತ್ಮವೂ ಏಕಕಾಲದಲ್ಲಿ ಪಡದೇಹವನ್ನು ಬಿಟ್ಟು ಹೋಯಿತು

ಓಂ ಶಾಂತಿಃ ಶಾಂತಿಃ

ಶ್ರೀಬಸವೇಶ್ವರರ ಅಮೃತವಾಣಿ

ಲೇಖಕ—ಜಿ ಪಿ ಆರ್. ಬಂಡಿಕೊಪ್ಪಲ್

ಆರಾದರು ನಿಮ್ಮ ನೆನೆವರಯ್ಯ, ನಾನಿಮ್ಮ ನೆನೆವನಲ್ಲ
ಅದೇನು ಕಾರಣವೆಂದೊಡೆ ಎನ್ನ ನೆನೆವ ಮನ ನೀನೆ ಆದಿರಾಗಿ.
ಆರಾದರು ನಿಮ್ಮ ಗರ್ವಿಸುವರಯ್ಯ, ನಾನಿಮ್ಮ ಗರ್ವಿಸುವನಲ್ಲ
ಅದೇನು ಕಾರಣವೆಂದೊಡೆ ಎನ್ನ ಸರ್ವಾಂಗವೆಲ್ಲವೂ ನಿಮಗರ್ಪಿತವಾಯಿತ್ತಾಗಿ,
ಆರಾದರು ನಿಮ್ಮ ಪೂಜಿಸುವರಯ್ಯ, ನಾನಿಮ್ಮ ಪೂಜಿಸುವನಲ್ಲ
ಅದೇನು ಕಾರಣವೆಂದೊಡೆ ಎನ್ನ ತನುವಿಗೆ ನೀವೇ ಪೂಜಿತರಾದಿರಾಗಿ,
ಅದು ಕಾರಣ ಅದ್ವೈತ ದೇವ ದೇವ ವೇದಿಕ ಭಕ್ತನೆಂಬ ।
ಶ್ರುತಿಯಿದನರಿಯೆ ನಾನು ಅಭಿನ್ನನಾದೆ ಕೂಡಲಸಂಗನು ।

ಇದೆಷ್ಟು ಮಧುರ ನೋಡಿ.

ಮರದೊಳಗೆ ಮಂದಾಗ್ನಿಯನುರಿಯದಂತಿರಿಸಿದ
ನೊರೆವಾಲೊಳಗೆ ತುಪ್ಪದ ಕಂಪಡಗಿದಂತಿರಿಸಿದೆ ॥
ಶರೀರದೊಳಗಾತ್ಮನ ಕಾಣದಂತಿರಿಸಿದೆ ।
ನೀ ಪರಿಸುವ ವೇದಕ್ಕೆ ಬೆರಗಾದೆನ್ನ ರಾಮನಾಥ ॥
ಬತ್ತೊಳಗೆ ಕಿತ್ತು ಬಡಿಸುವದ ಭೇದವ ।
ಕುಡಿದ ಸುರೆಕದಲ್ಲಿ ಆ ಕಿತ್ತು ನುಂಗುವ ಭೇದವ ॥
ಮೃದಸೀರಿನ ಪ್ರಕೃತಿಯೊಳಡಗಿದ ಭೇದವ ।
ಲೋಕದ ಜಡರತ್ತ ಬಲ್ಲರೈ ರಾಮನಾಥ ॥

ಇದು ಹೇಗಿದೆ?

ನಾದಪ್ರಿಯ ಶಿವನೆಂಬರು ನಾದಪ್ರಿಯ ಶಿವನಲ್ಲಯ್ಯ ।
ವೇದಪ್ರಿಯ ಶಿವನೆಂಬರು ವೇದಪ್ರಿಯ ಶಿವನಲ್ಲಯ್ಯ ॥
ನಾದವ ನುಡಿಸಿದ ರಾವಣಂಗೆ ಅರೆಯಾಯುಷ್ಯವಾಯಿತ್ತು ।
ವೇದವನೋದಿದ ಬ್ರಹ್ಮನಿಗೆ ಶಿರಹೋಯಿತ್ತು ॥
ನಾದಪ್ರಿಯನಲ್ಲ ವೇದಪ್ರಿಯನಲ್ಲ ಭಕ್ತಿಪ್ರಿಯನು ನಮ್ಮ ಕೂಡಲ ಸಂಗಮದೇವ॥

ಅಷ್ಟಮ ಕರ್ನಾಟಕಾಯು ರ್ವೇದ ಸಮ್ಮೇಳನ, ಶಿವಮೊಗ್ಗ.

ವಸ್ತುಪ್ರದರ್ಶನ ಪ್ರಾರಂಭೋತ್ಸವದಲ್ಲಿ ಭಿಷಗ್ರತ್ನ ಆಯುರ್ವೇದ ವಿದ್ವಾನ್ ಎ ವಿ ಪಂಡಿತರವರು ಮಾಡಿದ ಭಾಷಣದ ಸಾರಾಂಶ—

ಮಹಾತಪಸ್ವಿಗಳೂ, ದೂರದರ್ಶಿಗಳೂ ಆದ ಅಗಸ್ತ್ಯರು, ನಾಗಾರ್ಜುನರು, ಪೂಜ್ಯಪಾದರೇ ಮೊದಲಾದ ಮಹರ್ಷಿಗಳು ಲೋಕಾನುಗ್ರಹಾರ್ಥವಾಗಿ ದಯಪಾಲಿಸಿರುವ ಅಮೂಲ್ಯ ಗ್ರಂಥಗಳನ್ನೂ, ಚಿಕಿತ್ಸೆಯನ್ನೂ ತಿಳಿದಿರುವ ಸಿದ್ಧವೈದ್ಯರು ದಿನೇ ದಿನೇ ವಿರಳರಾಗುತ್ತಾ ಬರುತ್ತಿರುವುದು ನಮ್ಮ ದೌರ್ಭಾಗ್ಯವೇ ಸರಿ ಈಗಲಾದರೂ ಎಚ್ಚತ್ತು ರಸ, ಗಂಧಕ, ಲೋಹ, ಅಭ್ರಕ, ತಾಂಮ್ರವೇ ಮೊದಲಾದ ಸಮಸ್ತ ಧಾತುಗಳ ವಿಚಾರವಾಗಿರುವ ಗ್ರಂಥಗಳನ್ನು ಪರಿಶೋಧಿಸಿ ರಸವೈದ್ಯವನ್ನು ಅಭಿವೃದ್ಧಿಗೆ ತರತಕ್ಕದ್ದು ಪ್ರತಿಯೊಬ್ಬ ವೈದ್ಯನ ಮುಖ್ಯ ಕರ್ತವ್ಯವಾಗಿದೆ

ಮೂಲಿಕೆಗಳಿಂದ ಯಾವರೀತಿ ರೋಗಗಳನ್ನು ಗುಣಮಾಡಬಹುದೋ ಅದೇ ರೀತಿ ಲೋಹಗಳಿಂದಲೂ ಸಮಸ್ತ ರೋಗಗಳನ್ನೂ ಗುಣಮಾಡಬಹುದು ಅಲ್ಲದೆ, ಕ್ಷಯ, ಉಬ್ಬಸ, ಕುಷ್ಠ, ಶೋಫೆ, ಪಾರ್ಶ್ವವಾಯುವೇ ಮೊದಲಾದ ದೀರ್ಘರೋಗಗಳನ್ನು ಗುಣಮಾಡುವುದರಲ್ಲಿ ಈ ಲೋಹಗಳು ಅದ್ಭುತಶಕ್ತಿಯುಳ್ಳ ಪದಾರ್ಥಗಳಾಗಿವೆ ಈ ಶರೀರದಲ್ಲಿ ಒಂದೊಂದು ವೇಳೆ ನಮ್ಮ ಆಹಾರ ವಿಹಾರಗಳ ವ್ಯತ್ಯಾಸದಿಂದ ಶರೀರದ ಧಾರಣೆಗೂ, ಪೋಷಣೆಗೂ ಅವಶ್ಯಕವಾದ ಲೋಹಗಳು ಕಡಿಮೆಯಾಗಿ ಅನೇಕ ರೋಗಗಳು ಉತ್ಪತ್ತಿಯಾಗುತ್ತವೆ ಒಂದೊಂದು ಲೋಹವು ಕಡಿಮೆಯಾದರೆ ಒಂದೊಂದು ರೋಗವು ತಲೆದೋರುತ್ತದೆ. ಸಾಮಾನ್ಯವಾಗಿ ರಕ್ತದಲ್ಲಿ ಕಬ್ಬಿಣದ ಅಂಶವು ಕಡಿಮೆಯಾದರೆ ಶರೀರವು ಬಿಳಚಿಕೊಂಡು ಪಾಂಡುರೋಗವು ತಲೆದೋರುತ್ತದೆ ಇಂತಹ ಸಮಯದಲ್ಲಿ ಶರೀರಕ್ಕೆ ಮಂಡೂರವನ್ನೋ ಕಾಂತ ಸಿಂದೂರವನ್ನೋ ಉಪಯೋಗಿಸಿದರೆ ರಕ್ತದಲ್ಲಿ ಸಹಜವಾದ ಬಣ್ಣವು ಉಂಟಾಗಿ ರಸಾದಿ ಸಪ್ತಧಾತುಗಳೂ ವೃದ್ಧಿಯಾಗುತ್ತವೆ. ಗಣಿಸಿ ಮ ಪ ಗ ಳ ಹಿಂದೆ ಕಿಟ್ಟದ (Iron Pyrites) ವಿಷಯವಾಗಿ ಸ್ವಲ್ಪ ಪ್ರಸ್ತಾಪಿಸಿತಷ್ಟೆ ಕಿಟ್ಟವನ್ನು ಸಿಂದೂರ ಮಾಡಬೇಕಾಗಿದ್ದರೆ ಸುಮಾರು ಒಂದುನೂರು ವರ್ಷವಾದರೂ ಆಗಿರುವ ಕಿಟ್ಟವನ್ನು ಭೂಮಿಯಿಂದ ಅಗೆದು ತೆಗೆಯಬೇಕು

ಲೋಹವನ್ನು ಅನೇಕ ಮೂಲಿಕೆಗಳ ರಸದಲ್ಲಿ ಅರೆದು ಒಣಗಿಸಿ, ಪುಟಹಾಕುವುದರಿಂದ ಆಯುರ್ವೇದೀಯ ಭಸ್ಮ, ಸಿಂದೂರಗಳಲ್ಲಿ ಮೂಲಿಕಾ ಸಂಬಂಧವಾದ ಒಂದು ಶಕ್ತಿಯು ಅವುಗಳಲ್ಲಿ ಗೂಢವಾಗಿರುವುದು ಆ ಶಕ್ತಿಯನ್ನು ಯಾವ ಆಧುನಿಕ ಯಂತ್ರಗಳ ಸಹಾಯದಿಂದಲೂ ಕಂಡುಹಿಡಿಯಲು ಸಾಧ್ಯವಿಲ್ಲವೆಂದು ಹೇಳಬಹುದು

ನಮ್ಮ ಶ್ರೀಮನ್ಮಹಾರಾಜರವರ ಆಸ್ಥಾನದಲ್ಲಿ ನೂರಾರು ವರ್ಷಗಳ ಹಿಂದೆ ಕೆಂಪು, ಮುತ್ತು, ವಜ್ರ, ವೈಡೂರ್ಯ, ಚಿನ್ನ, ಬೆಳ್ಳಿ ಮೊದಲಾದ ಸಮಸ್ತ ಲೋಹಗಳ ಭಸ್ಮಗಳನ್ನು ತಯಾರಿಸಿ, ಅವುಗಳ ಮಿಶ್ರಣದಿಂದ ಪೂರ್ಣಚಂದ್ರೋದಯ, ರಸಗಂಗಾಧರ ವಸಂತಕುಸುಮಾಕರವೇ ಮೊದಲಾದ ಮಹೌಷಧಗಳನ್ನು ಕುಪ್ಪಿಗಳಲ್ಲಿ ಪಾಕಮಾಡುವ ಘನವಾದ ವೈದ್ಯರನೇಕರಿದ್ದರು ಆ ಮಹನೀಯರು ತಯಾರಿಸಿದ ಕುಪ್ಪಿ ಮಾತ್ರೆಗಳು ಇವತ್ತಿನ ದಿನದಲ್ಲಿಯೂ ನಮ್ಮೆಲ್ಲರಲ್ಲಿಯೂ ಇದ್ದೇ ಇವೆ ನಾವು ಹೇಳುವ ಕಠಿಣಪಥ್ಯವನ್ನು ಆಚರಿಸುವ ರೋಗಿಗಳು ವಿರಳವಾಗುತ್ತಿರುವುದರಿಂದ ಆ ಮಾತ್ರೆಗಳನ್ನು ಅಲಂಕಾರವಾಗಿ ಗೌಪ್ಯಸ್ಥಾನದಲ್ಲಿ ಭದ್ರವಾಗಿಟ್ಟಿರಬೇಕಾಗಿದೆ

ಇಂದು ಆಯುರ್ವೇದ ವೈದ್ಯರ ಸ್ಥಿತಿ ಏನೆಂಬುದನ್ನು ನಾನು ಹೇಳಬೇಕಾಗಿಲ್ಲ ಯಾವ ರಾಷ್ಟ್ರದ ಅಭಿವೃದ್ಧಿಗೂ ಅಲ್ಲಿನ ಪ್ರಜೆಗಳೇ ಕಾರಣಕರ್ತರು ಪ್ರಜೆಗಳು ದೃಢಸಂಕಲ್ಪರಾಗಿ ಆಯುರ್ವೇದವನ್ನು ಉದ್ಧಾರಮಾಡಬೇಕೆಂದರೆ ಸುಲಭಸಾಧ್ಯ ಭಾರತ ತರುಣರು ಸ್ವದೇಶೋದ್ಧಾರಕ್ಕೋಸ್ಕರ ತಮ್ಮ ಸರ್ವಸ್ವವನ್ನೂ ತ್ಯಾಗಮಾಡಿ ದೇಶಸೇವೆ ಮಾಡುತ್ತಿಲ್ಲವೆ? ಈ ದೇಹದಿಂದಲ್ಲವೇ ದೇಶಸೇವೆ ಮಾಡತಕ್ಕದ್ದು? ಈ ದೇಹವು ತನ್ನ ಜನ್ಮಭೂಮಿಯಲ್ಲಿರುವ ಆಹಾರದಿಂದ ಹೇಗೆ ಪೋಷಿಸಲ್ಪಡುತ್ತಿದೆಯೋ, ಜನ್ಮಭೂಮಿಯಲ್ಲಿ ಬೆಳೆದ ಹತ್ತಿಯಿಂದ (cotton) ಹೇಗೆ ಹೊದಿಯಲ್ಪಡುತ್ತಿದೆಯೋ ಅದರಂತೆ ತನ್ನ ಸಮೀಪದಲ್ಲಿರುವ ವನೌಷಧಿಗಳ ಸಹಾಯದಿಂದಲೇ ರಕ್ಷಿಸಲ್ಪಡಬೇಕಾದುದು ಅವಶ್ಯಕವಲ್ಲವೇ? ವಿಧಾತನು ನಮಗೆ ಅವಶ್ಯಕವಾದ ಸಕಲ ಸಾಮಗ್ರಿಗಳನ್ನೂ ಇಲ್ಲಿ ಸೃಷ್ಟಿಸಿರುವಾಗ ಔಷಧ ಮಾತ್ರ ಪರದೇಶದಿಂದ ಏತಕ್ಕೆ ಬರಬೇಕು? ಭಾರತೀಯರು ಆಯುರ್ವೇದಶಾಸ್ತ್ರವನ್ನು ಅಭ್ಯಾಸಮಾಡಿದ ಮಾತ್ರಕ್ಕೆ ಅವರ ಸರ್ವಶಕ್ತಿಯೂ ನಾಶವಾಗಿ ಹೋದೀತೇ?

ಈ ವಿಚಾರವನ್ನು ಭಾರತಬಂಧುಗಳು ಮನಸ್ಸಿಗೆ ತಂದುಕೊಳ್ಳಬೇಕು. ಖಾದಿಯಲ್ಲಿರುವ ಮಮತೆಗಿಂತಲೂ ಹೆಚ್ಚಿನ ಮಮತೆಯನ್ನು ಭಾರತ ವನಸ್ಪತಿಗಳಮೇಲಿಡಬೇಕು ದೇಹವನ್ನು ಒಳಗೂ, ಹೊರಗೂ ಸಂಪೂರ್ಣ ಸ್ವದೇಶಿಯನ್ನಾಗಿ ಮಾಡಬೇಕು ಅಂದಿಗೆ ಭಾರತವು ಭಾರತವೇ ಆಗುತ್ತದೆ ಭಾರತೀಯರ ಚಿಕಿತ್ಸಾಪದ್ಧತಿಯು ಹಾಗಿರಲಿ, ಭಾರತೀಯರ ಪ್ರಸಂದಿನ ಪದ್ಧತಿಗಳೇ ಅಂದರೆ, ದಿನಚರ್ಯಕ್ರಮವೇ ಭಾರತೀಯರಿಗೆ ಮರೆಯುತ್ತಾ ಬಂದಿದೆ ಆಯುರ್ವೇದದಲ್ಲಿರುವ ದಿನಚರ್ಯ (Daily Hygiene) ಮತ್ತು ಋತುಚರ್ಯಗಳನ್ನು ಭಾರತೀಯರು ಆಚರಿಸುತ್ತಾ ಬಂದರೆ ವೈದ್ಯರಿಗೆ ಕೆಲಸವೇ ಇಲ್ಲ ದಿನಚರ್ಯ, ಋತುಚರ್ಯಗಳೆರಡೂ ಮನುಷ್ಯನ ದೀರ್ಘಾಯುರ್ಯೋಗವನ್ನು ಬೋಧಿಸುವ ವಿಧಿಗಳು ನಮ್ಮ ಪೂರ್ವಿಕರು ಈ ವಿಧಿಗಳನ್ನು ಆಚರಣೆಯಲ್ಲಿಟ್ಟುಕೊಂಡಿದ್ದರು ಬಹುಕಾಲ ಸುಖವಾಗಿ ಜೀವಿಸುತ್ತಿದ್ದರು ಆ ಮಹನೀಯರಿಗಿದ್ದ ದೇಹದಾರ್ಢ್ಯವು ನಮಗಿಲ್ಲ, ಆ ಧಾರಣಶಕ್ತಿಯು ನಮಗಿಲ್ಲ, ಆ ಚಿತ್ತಸ್ಥೈರ್ಯವಿಲ್ಲ, ಆ ದೃಢಸಂಕಲ್ಪವಿಲ್ಲ ಈ ಕಾರಣಗಳಿಂದಲೇ ನಾವು ನಿತ್ಯರೋಗಿಗಳಾಗುತ್ತಿದ್ದೇವೆ ನ್ಯಾಯವಿಧಾಯಕ ಸಭೆಗಳಲ್ಲೂ, ಪ್ರಜಾಪ್ರತಿನಿಧಿ ಸಭೆಗಳಲ್ಲೂ ಸದಸ್ಯರುಗಳು ಆಸ್ಪತ್ರೆಗಳನ್ನು ಅಪೇಕ್ಷಿಸುತ್ತಿದ್ದಾರೆಯೇ ಹೊರತು ಆರೋಗ್ಯವನ್ನು ಅಪೇಕ್ಷಿಸುತ್ತಿಲ್ಲ ಆರೋಗ್ಯವನ್ನು ದ್ರವ್ಯವ್ಯಯದಿಂದ ಸಂಪಾದಿಸಲು ಸಾಧ್ಯವಿಲ್ಲ ಎಷ್ಟೇ ಶ್ರೀಮಂತನಾಗಿದ್ದರೂ ಆರೋಗ್ಯ ನಿಯಮಗಳನ್ನನುಸರಿಸಿ ವ್ಯಾಯಾಮವನ್ನೂ, ಮಿತಾಹಾರವನ್ನೂ, ಸ್ನಾನಪಾನಾದಿಗಳನ್ನು ಮಾಡಿದರೇನೇ ದೇಹಕ್ಕೆ ಸೌಖ್ಯವೇ ಹೊರತು ಅನ್ಯಥಾ ಸಾಧ್ಯವಿಲ್ಲ

ಮತಾಂತರ ಹೊಂದಿದವರಿಗೆ ದಾಯಭಾಗ

ಮತಭ್ರಷ್ಟರಾದವರಿಗೂ ಪಿತ್ರಾರ್ಜಿತ ಸ್ವತ್ತಿನಲ್ಲಿ ಹಕ್ಕಿರಬೇಕೆ?

ಮತಭ್ರಷ್ಟರಾದವರಿಗೂ ಪಿತ್ರಾರ್ಜಿತ ಸ್ವತ್ತಿನಲ್ಲಿ ಹಕ್ಕಿರುವಂತೆ ಸೌಕರ್ಯಪಡಿಸಲು ಸರಕಾರದವರು ಒಂದು ಮಸೂದೆಯನ್ನು ತಯಾರಿಸಿ ಪ್ರಕಟಿಸಿರುವರಷ್ಟೆ ಈ ವಿಷಯದಲ್ಲಿ ಸುಪ್ರಸಿದ್ಧ ವಕೀಲರಾದ ಮ॥ ರಾ॥ ಮಿರ್ಲೆ ಲಕ್ಷ್ಮೀನಾರಣಪ್ಪನವರು ತಮ್ಮ ಪ್ರತಿಭಟನೆಯನ್ನು ಸೂಚಿಸಿರುವರು ಅದರ ಸಾರಾಂಶವು ಈ ಕೆಳಗೆ ಕೊಡಲ್ಪಟ್ಟಿದೆ —

ಇಂತಹ ಕಾನೂನನ್ನು ಮಾಡುವ ಪ್ರಯತ್ನವು ಸುಮಾರು ಅರ್ಧಶತಮಾನದಿಂದಲೂ ಇರುತ್ತದೆ ಕ್ರೈಸ್ತ ಪಾದ್ರಿಗಳು ಇದರಲ್ಲಿ ಬಹಳ ಆಸಕ್ತರಾಗಿದ್ದರು ಆದರೆ ಅವರ ಪ್ರಯತ್ನಗಳು ಸಫಲವಾಗಲಿಲ್ಲ 1910 ನೇ ಇಸವಿಯಲ್ಲಿ ಇಂತಹ ಕಾನೂನನ್ನು ಜಾರಿಗ ತರಲು ನಮ್ಮ ನ್ಯಾಯವಿಧಾಯಕ ಸಭೆಯವರು ಅವಕಾಶ ಕೊಡಲಿಲ್ಲ ಇಂತಹ ವಿವಾದಾಸ್ಪದವಾದ ವಿಷಯದಲ್ಲಿ ಸರಕಾರದವರೇ ಪ್ರವರ್ತಿಸಿ ತಮ್ಮ ಜವಾಬ್ದಾರಿಯಿಂದಲೇ ಮಸೂದೆಯನ್ನು ತಂದಿರುವುದು ಸೂಕ್ತವಲ್ಲ ಸಾಮಾಜಿಕ ಶಾಸನಗಳನ್ನು ಜಾರಿಗೆ ತರುವುದರಲ್ಲಿ ಮೈಸೂರು ಸರ್ಕಾರದವರು ಯಾವಾಗಲೂ ಹಿಡಿತವಾಗಿಯೇ ಇರುತ್ತಾರೆ ಬಾಲ್ಯ ವಿವಾಹನಿರೋಧದ ಕಾನೂನು ಬಹಳ ದಿನಗಳಿಂದಲೂ ಬ್ರಿಟಿಷ್ ಇಂಡಿಯಾದಲ್ಲಿ ಜಾರಿಯಲ್ಲಿರುತ್ತದೆ ನಮ್ಮ ಪ್ರಜಾಪ್ರತಿನಿಧಿ ಸಭೆಯಲ್ಲೂ ಅಂಗೀಕರಿಸಲ್ಪಟ್ಟಿರುತ್ತದೆ ಆದರೂ ಮಹಾಜನರಲ್ಲಿ ಅದಕ್ಕೆ ತೀವ್ರವಾದ ವಿರೋಧವು ಇರುವುದರಿಂದ ಕಾರಣದಿಂದ ಸರ್ಕಾರದವರು ಅದನ್ನು ಅಂಗೀಕರಿಸುವುದಿಲ್ಲ ಪ್ರಕೃತದಲ್ಲಿ ತಂದಿರುವ ಮಸೂದೆಗೆ ಮಹಾಜನರೂ ಸಾರ್ವಜನಿಕ ಸಂಸ್ಥೆಗಳೂ ಸಂಪೂರ್ಣವಾಗಿ ಒಮ್ಮತದಿಂದ ಪ್ರತಿಭಟಿಸುವರಾಗಿರುತ್ತಾರೆ ಧಾರ್ಮಿಕ ಸಹನೆಯೂ ಸಮಾನವಾದ ಹಕ್ಕುಗಳೂ ಇರಬೇಕೆಂಬ ಕಾರಣಗಳನ್ನು ಸಾಮಾನ್ಯವಾಗಿ ಸೂಚಿಸುತ್ತಾರೆ ಇದು ವಿಷಯದಲ್ಲಿ ವಿವಾದವಿಲ್ಲ ಈಗ ಹಿಂದು ಅಥವಾ ಮುಸಲ್ಮಾನ ಜನರು ಕ್ರೈಸ್ತರಾದರೂ ಯಾವ ಶಾಸನ ನಿರ್ಬಂಧವೂ ಇಲ್ಲ ನಿಜವಾಗಿಯೂ ಧರ್ಮಪರಿವರ್ತನವನ್ನು ಹೊಂದಿದವನು ಐಹಿಕ ಸ್ವತ್ತಿಗೇಕೆ ಆಶಿಸಬೇಕು? ಹಿಂದೂ ಕಾನೂನು ಮುಸಲ್ಮಾನರ ಕಾನೂನು ಸಹ ಒಬ್ಬ ಮನುಷ್ಯನ ಆಸ್ತಿಯನ್ನು ಆತನ ಜಾತಿಯ ಪರಿಮಿತಿಯಲ್ಲಿಯೇ ಉಳಿಸುತ್ತವೆ ಮತವನ್ನು ತ್ಯಜಿಸಿದವನು ಈ ನಿಯಮವನ್ನು ತ್ಯಜಿಸುತ್ತಾನೆ ಮತಭ್ರಷ್ಟನಿಗೆ ಸಹಾಯ ಮಾಡುವ ಉದ್ದೇಶದಿಂದ ಆತನು ಹಿಂದೆ ಇದ್ದ ಮತಕ್ಕೂ ಸಮಾಜಕ್ಕೂ ಅಪಚಾರಮಾಡಬಹುದೇ?

ಈ ಮಸೂದೆಯಿಂದ ಜಾತಿಭ್ರಷ್ಟನಾದವನಿಗೆ ವಿಶೇಷ ಪ್ರಯೋಜನವಾಗುವುದಿಲ್ಲ ಗಾರ್ಡಿಯನ್ನುಗಳ ಹಕ್ಕು ರಕ್ಷಣೆಯಾಗುವುದಿಲ್ಲ ಸ್ವಂತ ಆಸ್ತಿಯ ಮೇಲೆ ಮತಭ್ರಷ್ಟನಾದವನಿಗೆ ಈಗಲೂ ಹಕ್ಕು ಇದೆ ಇದ ನ್ಯಾಯದುಗಳಾಗಿಯೂ ವಯಸ್ಕರೂ ಆದವರು ಜಾತಿಕಟ್ಟಿರ ಅವಿಭಕ್ತ ಕುಟುಂಬದಲ್ಲಿ ಬಹಳ ಅಡಚಣೆಯುಂಟಾಗುತ್ತದೆ ಆಸ್ತಿಯಲ್ಲಿ ಭಾಗವನ್ನು ಅಪೇಕ್ಷಿಸುತ್ತಾರೆ ಮೈನರ್ ಮಕ್ಕಳ ಮತಭ್ರಷ್ಟತೆಯ ವಿಷಯದಲ್ಲಿ ಬಹಳ ಅಪಾಯ ಸಂಭವಿಸುತ್ತಿದೆ ಅಂತಹ ಅಪರಿಪಕ್ವ ವಯಸ್ಸಿನಲ್ಲಿ ನಿಜವಾದ ಮತಭೇದವಾಗುವುದು ಸುಳ್ಳು ಯಾವ ಹಿಂದೂ ... ಮುಸಲ್ಮಾನನೂ ತನ್ನ ಆಸ್ತಿಯು ಮತಭ್ರಷ್ಟನಾದ ತನ್ನ ವಂಶದವರಿಗೆ ಹೋಗ... ಇಷ್ಟಪಡುವುದಿಲ್ಲ

ಈಚಿನ ನಮ್ಮ ದೇಶದಲ್ಲಿ ಸ್ತ್ರೀಯರ... ಯ ಭಾಗದ ಕಾನೂನು ಆಗಿರುತ್ತದೆ ... ತ ಪತಿಯ ಆಸ್ತಿಯಲ್ಲಿ ಭಾಗವನ್ನು ... ದ ಹೆಂಗಸು ಜಾತಿಕೆಟ್ಟು ಕ್ರೈಸ್ತಳಾದ... ಮ ಭಾವಿಸೋಣ. ಅಲ್ಲಿ ಇನ್ನೊಬ್ಬ ಗಂಡ... ನನ್ನು ಕಟ್ಟಿಕೊಂಡು ಮಕ್ಕಳು ಮ... ನ್ನು ಪಡೆದರೆ ಹಿಂದಿನ ಗಂಡನ ಆಸ್ತಿ... ಕ್ರೈಸ್ತಗಂಡನ ಮಕ್ಕಳಿಗೆಲ್ಲಾ ವಿನಿಯೋಗವಾಗುತ್ತದೆ ಇದಕ್ಕೆ ಯಾರೂ ಒಪ್ಪ... ಲ್ಲಿ ಈ ಮಸೂದೆಯನ್ನು ಜಾರಿಗೆ ತ... ಸಾಮಾಜಿಕ ವಿಪ್ಲವವೇ ಆಗುತ್ತದೆ

ಹರಿಜನರು ಕ್ರೈಸ್ತರಾದರು

ಸೇಲಂ ಜಿಲ್ಲೆಯ ತಿರುಚೆಂಗೋ... ಎಂಬಲ್ಲಿ ಇಪ್ಪತ್ತು ಜನ ಆದಿದ್ರಾವಿಡರು ಕ್ರೈಸ್ತರಾದರು ಕೆಲವು ದಿನಗಳ ... ಇತರ ಕೆಲವು ಜನ ಆದಿದ್ರಾವಿಡರು ... ಸ್ತ ಜಾತಿಗೆ ಸೇರಿದರು ಈಗ ... ಸೇರಿರುವರ ಅಲ್ಲದೆ ಕೊಟ್ಟಿ ಸೇ... ದಲ್ಲಿ ಹರಿಜನ ಜನರನ್ನು ಮುಸ... ಮತಕ್ಕೆ ಸೇರಿಸುವ ಪ್ರಯತ್ನವು ಜೋ... ನಡೆಯುತ್ತಿದೆ ಇದಕ್ಕಾಗಿ ಮೊನ್ನೆ ... ಹಿಂದೂ ಮತವನ್ನು ಬಿಟ್ಟು ಮುಸ... ರಾದ ಕನ್ನೈಲಾಲ್ ಗೌಬಾರವರು ... ಪೋರಿನಿಂದ ಬಂದಿರುವರು ... ಎಲ್ಲೆಲ್ಲೂ ಮುಸಲ್ಮಾನ ಮು... ಸ್ವಾಗತವನ್ನು ಕೊಡುತ್ತಿರುವರು

The Bombay

Anand Bhavan Restaurant,

Mysore.

Recipients of

GOLD MEDAL

Awarded by the Government of Mysore

during the **DASARA EXHIBITION, 1935**

for

GOOD CATERING ARRANGEMENTS

THE BEST EQUIPPED RESTAURANT IN MYSORE MANAGED ON THE MOST MODERN LINES

A Visit will convince you

and

give you complete satisfaction in all respects

RATES REDUCED

for high class Cooled Syrups and Juice

Sweet & Savoury & Radio Programmes announced Daily

ಬಹುಗ್ರತ್ನ ಆಯುರ್ವೇದ ವಿದ್ವಾನ್ ಬಿ ವಿ ಪಂಡಿತರ

ಬಾಲಸುಧಾ

ಮಕ್ಕಳ ಜ್ವರದ ಗೆಡ್ಡೆಯನ್ನು ಖಾತರಿ ಗುಣ ಪಡಿಸುತ್ತೆ ಲಿವರ್ (ಪಿತ್ತ ದ) ದಪ್ಪನಾಗಿ ಕಣ್ಣು ಹಳದಿ ಬಣ್ಣವಾಗಿದ್ದರೆ ಇದರ ಸೇವನೆಯಿಂದ ಬೇಗ ಗುಣವಾಗುತ್ತೆ 20 ವರ್ಷಗಳಿಂದಲೂ ಅನುಭವ ಸಿದ್ಧವಾಗಿದೆ—ಮಕ್ಕಳಿಗೆ ನಮ್ಮ ಬಾಲ ಸಂಜೀವಿನಿಯನ್ನೇ ಉಪಯೋಗಿಸಿರಿ

ಬಾಲಸುಧಾ ಬೆಲೆ 1 ರೂ ಬಾಲ ಸಂಜೀವಿನಿ 1 ಆ

ಮೈಸೂರು, ಬೆಂಗಳೂರು, ಮದ್ರಾಸುಗಳಲ್ಲಿ ನಮ್ಮ ಏಜಂಟರಿದ್ದಾರೆ

ಸದ್ವೈದ್ಯಶಾಲಾ, ನಂಜನಗೂಡು

ಅರ್ಧ ಕ್ರಯಕ್ಕೆ ಕೊಡಲ್ಪಡುತ್ತ

ಪೆನ್ ಕ್ರಯ ರೂ **1 12 0** ಅಗ **14 ಆಣೆ.**

ಬ್ರಿಟಿಷ್ ಫೌಂಟನ್ ಪೆನ್.

BRITISH FOUNTAIN PEN

ಇಂಗ್ಲೆಂಡಿನಲ್ಲಿ ತಯಾರಾದದ್ದು ಇದಕ್ಕೆ 11 ಕ್ಯಾರಟಿನ ಭಂಗಾರದ ನಿಬ್ಬು ಹಾಕಿದೆ ಈ ಪೆನ್ನನ್ನು ನಮ್ಮ ನೆನಪು ಕಿಂಗ್ ಜಾರ್ಜ್ ಚಕ್ರವರ್ತಿಯವರು ಕೂಡಾ ಸಂತೋಷ ಪಟ್ಟು ಒಂದು ಮೇಲಾದ ಯೋಗ್ಯತಾಪತ್ರ (Certificate) ಕೊಟ್ಟಿರುವರು ಅಕ್ಷರಗಳನ್ನು ಮುತ್ತುಗಳ ಹಾಗೆ ಬರೆಯುವದು ಇದರ ವಿಷಯವಾಗಿ ಬರೆದು ತಿಳಿಸಲು ಸ್ಥಳ ಸಂಕೋಚ. ಒಂದನ್ನು ತರಿಸಿ ನೋಡಿದರೆ ಸಂತೋಷ ಪಡುವಿರಿ ಒಹಳ ಸುಲಭ ಕ್ರಯ **0-14-0.**

ಒಂದೇ ಸಲ ಮೂರು ಪೆನ್ನುಗಳನ್ನು ತರಿಸಿದರೆ ಸೇಪ ಪಸ್ಟ್ ಬಹುಮಾನವಾಗಿ ಕೊಡಲ್ಪಡುತ್ತೆ

R ROYAL & Co, 19 Beat, Madras } **T R** ರಾಯಲ್ ಕಂಪೆನಿ. 19 ಬೀಟ್, ಮದರಾಸು

For Up to date and Efficient Medical Treatment

Go to—**Dr. A. J. RAM & SONS,**

Sayaji Rao Road, Mysore.

Physicians Dentists Opticians, etc

ಡಾ|| ಎ. ಜೆ ರಾಂ. ಅಂಡ್ ಸನ್ಸ್,

ಸಯ್ಯಾಜಿರಾವ್ ರೋಡ್, ಮೈಸೂರು ಸಿಟಿ.

ವೈದ್ಯ ಶಾಸ್ತ್ರಜ್ಞರುಗಳು, ಚಿಕಿತ್ಸಕರು, ದಂತವೈದ್ಯರು, ಮತ್ತು ಕನ್ನಡಕ ವ್ಯಾಪಾರಿಗಳು.

ಉತ್ತಮವಾದ ನವೀನ ಚಿಕಿತ್ಸೆಗಳಿಗೆ ನಮ್ಮಲ್ಲಿಯೇ ಬನ್ನಿರಿ.

ಪಂಡಿತ ಸಿ. ಎಚ್. ಚಂದ್ರಭಾನಸಿಂಗ್

ಇವರಿಂದ ತಯಾರಿಸಲ್ಪಟ್ಟ

ಫಲಪುಷ್ಪಸಾರ ರಸಾಯನ.

ಸುಮಿಕರ ಸುಲಭವಾದ ದಿನಸಾರಿಣೀ ಕ್ರಯ —1-8-0

ಗುಣ—ಇದು ಜನರ ಮುಂತಾದ ಕರಗ ವಿರೇಚಕ ವಸ್ತುಗಳ ಸಂಯೋಗವಿಲ್ಲದ ಕೇವಲ ಅಮೃತೀಕರಣ ಪ್ರಯೋಗವು ಕೇವಲ ಲಘುಭೇದಿಸಿತ್ತ ವಾದದ್ದು ಇದನ್ನು ಉಪಯೋಗಿಸುವುದರಿಂದ ಎಲ್ಲಾ ವಿಧವಾದ ಮಲಬಂಧವೂ ಮಾಯವಾಗಿ, ಅಜೀರ್ಣ ಉಷ್ಣವಾಯು, ಶೀತವಾಯು, ಎದೆಯುರಿ, ದೊಡ್ಡ ಸಣ್ಣ, ರಕ್ತ ಶುದ್ಧಿಯು ಮುಂತಾದ ರೋಗಗಳೆಲ್ಲವೂ ಖಂಡಿತ ಗುಣವಾಗು ತ್ತವೆ

ಬ್ರಾಂಚ್—ಶ್ರೀಸತ್ಯನಾರಾಯಣ ಆಯುರ್ವೇದಿಕ್ ಫಾರ್ಮಸಿ, ಜಗನ್ಮೋಹನ ಬಂಗ್ಲೆ ರಸ್ತೆ, ಮೈಸೂರು

You Know

OUR IDEAL ARRANGEMENTS & CHOICEST PREPARATIONS

We need not tell you about it.

COME & SEE OUR NOVEL

innovations and up-to-date Management.

SRI KRISHNA BHAVAN,

Mysore.

ಎಂ. ವಿ. ನಾರಾಯಣರಾಯರ

ಶ್ರೀ ಸತ್ಯನಾರಾಯಣ ಪರಿಮಳ ಫ್ಯಾಕ್ಟರಿ,

ಜಗನ್ಮೋಹನ ಬಂಗ್ಲಾ ಬೀದಿ, ಮೈಸೂರು

ಪರಿಮಳ ಅಗರ್ ಬತ್ತಿ

ಉಪಯೋಗಿಸಿ ಪ್ರೋತ್ಸಾಹಿಸಿರಿ

ANANDA SODA FACTORY,

DODDAPET, MYSORE.

BEST AERATED WATER SUPPLIERS

COMPLETE REQUISITES FOR AERATED WATER MANUFACTURERS AVAILABLE

ಆನಂದಾ ಸೋಡಾ ಫ್ಯಾಕ್ಟರಿ,

ದೊಡ್ಡಪೇಟೆ, ಮೈಸೂರು.

॥ ವಿಜಯಿಭವ ಶ್ರೀ ಕೃಷ್ಣ ಭೂಪಾಲ ॥

ಮೈಸೂರು ಶ್ರೀಮನ್ಮಹಾರಾಜರವರ ಘನ ಕೃಪಾಕಟಾಕ್ಷಕ್ಕೆ ಪಾತ್ರರಾಗಿ ದೊಡ್ಡ ದೊಡ್ಡ ಸ್ಥಾನಗಳಲ್ಲಿನ ಕಲಾ ಪ್ರೇಮಿಗಳ ಉದಾರ ಪ್ರೋತ್ಸಾಹದಿಂದ ಬಹುಮಾನಿತರಾದ

ಶ್ರೀ ಗೌರೀ ಶಂಕರ ನಾಟಕ ಸಭಾ, ಬೆಂಗಳೂರು.

ಈ ಸಂಸ್ಥೆಯವರು ಶೀಘ್ರದಲ್ಲಿಯೇ

(ಬಾಲಕೃಷ್ಣ ವಿರಚಿತ)

ಕರ್ಮ

ಎಂಬ ಶ್ರೇಷ್ಠ ಸಾಮಾಜಿಕ ನಾಟಕವನ್ನು ಪ್ರದರ್ಶಿಸುವರು.

ಪ್ರಥಮ ಪ್ರದರ್ಶನದ ಸ್ಥಳ ಮತ್ತು ತಾರೀಖನ್ನು ಗಮನಿಸಿ

ಸಿರಿತನದ ಬಾಳು! ನಿರುದ್ಯೋಗಿಯ ಜೀವನ ಸಮಸ್ಯೆ!
ಸುರೆಯ ಸಾಹಿತ್ಯ ಪ್ರಬಂಧ!

ಇತ್ಯಾದಿ ನೂತನ ಸನ್ನಿವೇಶಗಳ ಸಮಾರಂಭದಿಂದ ವಿಜೃಂಭಿಸುತ್ತಿರುವ ಸಾಮಾಜಿಕ ರಂಗ ಚಿತ್ರ—ಗಮನಿಸಿ

ಟಿ. ನೀಲಕಂಠಪ್ಪ,
ಪ್ರೊಪ್ರೈಟರ್

SEVA INSTITUTE OF COMMERCE, MADANAPALLE.

The Seva Institute of Commerce, Madanapalle has great pleasure in announcing to the public that commercial classes are being started from 1st June 1936. The Subjects taught will be Short hand and Type-writing, Book keeping, Commercial Correspondence and Office Routine for both Junior and Senior Courses, London Chamber of Commerce, and Pitmans' Certified Teachers' Diploma.

There is a Hostel attached to the Institute known as 'Seva Ashrama' situated amidst natural surroundings with a bracing climate.

Write for further particulars to

The Principal,
SEVA INSTITUTE OF COMMERCE,
Madanapalle

USE ALWAYS

DERMOTONE

(SASTRIC BATHING HERBAL PREPARATION)

THE UNIQUE PRODUCT
IN THE MARKET FOR SKIN HYGIENE.

ಡರ್ಮೋಟೋನ್,

ಶಾಸ್ತ್ರೀಯವಾದ ಮತ್ತು ಆರೋಗ್ಯಕರವಾದ ಚರ್ಮರಕ್ಷಿಣೀ ಚೂರ್ಣ
ಡರ್ಮೋಟೋನ್ ವರ್ಕ್ಸ್, ಮೈಸೂರು

A Reply

To all malicious and false mis representations, (if any)

WHAT AN EMINENT ACTUARY OF GREAT BRITAIN SAYS —

After perusal of the Company's Balance Sheet, Directors' Report and Abstract of Business, our Actuary, Mr H L Humphreys has favoured with his invaluable opinion in the course of which he observes —

' It is clear that the very difficult task of the establishment of a LIFE OFFICE is well begun You are to be congratulated on the extent to which so far you have limited the inevitably heavy expenses of the start I shall hope to see continued progress in this and the following years and that the economical efforts obvious from these accounts will be continued I wish the Company continued success "

THE MYSORE INSURANCE COMPANY LTD.,
SRI NARASIMHARAJA ROAD, Bangalore City.

ಅಸೂಯಾಪರ ಮತ್ತು ನಿಂದಾಯುತ ನಿರಾಧಾರ ಪ್ರಚಾರಗಳಿಗೆ

ಇದೇ ಉತ್ತರ

ಗ್ರೇಟ್ ಬ್ರಿಟನ್ನಿನ ಸುಪ್ರಸಿದ್ಧ ಆಕ್ಚ್ಯುಯರಿಗಳು ಏನು ಹೇಳುವರು?

ಕಂಪೆನಿಯ ಲೆಕ್ಕದ ಪಟ್ಟಿ, ಡೈರೆಕ್ಟರುಗಳ ವರದಿ ಮತ್ತು ಉದ್ಯಮ ವಿವರ ಪಟ್ಟಿಗಳನ್ನು ಪರಾಮರ್ಶಿಸಿ ನಮ್ಮ ಆಕ್ಚ್ಯುಯರಿಗಳಾದ

ಮಿ॥ ಎಚ್. ಎಲ್. ಹಂಫ್ರೀಸ್ ರವರು

ಕೊಟ್ಟಿರುವ ಸದಭಿಪ್ರಾಯದಲ್ಲಿ ಈ ರೀತಿ ಹೇಳಿದ್ದಾರೆ —

"ಜೀವವಿಮಾ ಕಂಪೆನಿಯನ್ನು ಸ್ಥಾಪಿಸುವಂತಹ ಕಷ್ಟತರವಾದ ಕೆಲಸವು ಬಹು ಸಮರ್ಪಕವಾಗಿ ಪ್ರಾರಂಭವಾಗಿದೆ ಆರಂಭದಲ್ಲಿ ಅವಶ್ಯಕವಾಗಿ ಆಗುವ ಅಧಿಕ ಖರ್ಚನ್ನು ನೀವು ಬಹು ಮಟ್ಟಿಗೆ ಮಿತಿಪಡಿಸಿರುವುದು ಅಭಿನಂದನಾರ್ಹವು
ಈ ವರ್ಷವೂ ಮತ್ತು ಬರುವ ವರ್ಷಗಳಲ್ಲಿಯೂ ಕಂಪೆನಿಯು ಇದೇ ರೀತಿ ಅಭಿವೃದ್ಧಿ ಹೊಂದಿ ಮುಂದೆಯೂ ಲೆಕ್ಕದ ಪಟ್ಟಿಯಿಂದ ತೋರಿಬರುವ ಮಿತವ್ಯಯದ ಧೋರಣೆಯನ್ನು ಅನುಸರಿಸುವರೆಂದು ತಿಳಿಯುತ್ತೇನೆ ಕಂಪೆನಿಯು ಏಕ ಪ್ರಕಾರ ಪ್ರಗತಿ ಪಡೆಯಲೆಂದು ಹಾರೈಸುತ್ತೇನೆ"

ದಿ ಮೈಸೂರು ಇನ್ಷೂರೆನ್ಸ್ ಕಂಪೆನಿ ಲಿಮಿಟೆಡ್.,
ಶ್ರೀ ನರಸಿಂಹರಾಜಾರೋಡ್, ಬೆಂಗಳೂರು

Edited Printed & Published by Agaram Rangiah, B A, at Sri Rama Press, D Subbiah Road, Mysore.

ವಾರ್ಷಿಕ ಚಂದಾ ದರ.



|| ಸತ್ಯಮೇವೋದ್ಧರಾಮ್ಯಹಮ್ ||
ರಾಜಧಾನಿಯ ರಾಷ್ಟ್ರೀಯ ವಾರ ಪತ್ರಿಕೆ.
ವೃದ್ಧಪಿತಾಮಹ ಎಂ. ವೆಂಕಟಕೃಷ್ಣಯ್ಯನವರ ಜ್ಞಾಪಕಾರ್ಥವಾಗಿ ಪ್ರಕಟಿಸಲ್ಪಡುವುದು.
ಸಂಪಾದಕರು. ಅಗರಂ ರಂಗಯ್ಯ, ಬಿ ಎ

Sadhvi: A Leading Nationalist Weekly of Mysore.

OUNDED IN MEMORY OF Mr M VENKATAKRISHNAYYA, THE GRAND OLD MAN OF MYSORE

ಂಪುಟ ೧] MYSORE : MONDAY 18—5—36 ಮೈಸೂರು : ಸೋಮವಾರ ೧೮—೫—೩೬ [ಸಂಚಿಕೆ ೧೩

RAJENDRA CINEMA,

THE MOST UP-TO-DATE AND WELL-EQUIPPFD PICTURE HOUSE, NANJANGUD.

Rare Shows of Highest Attraction Consisting of Splendid Romance, Thrill and Adventure.

SCREENED TWICE A DAY,
PLEASE PAY A VISIT AND ENJOY YOURSELF.

Charlie Chaplin

ROSE OF KOMALNER From 19th Inst
Jan Babu, Pmbashanker & Miss Lobo
(Indian Picture)
TRIUMPH OF LOVE From 22nd Inst
Miss Madhu i, Mr hale & Mr. Jayaraj.
(Indian Picture)
BROCKEN CHAINS With BURLESQUE ON CARMEN } From 25th Inst
M G M Picture Charlie Chaplin
(English)

ಚಾರ್ಲಿ ಚಾಪ್ಲಿನ್.

19 ನೇ ತಾ|| ನಿಂದ —
ರೋಜ್ ಆಫ್ ಕೋಮಲ್ನೇರ್.
22 ನೇ ತಾ|| ನಿಂದ —
ಟ್ರೈಂಫ್ ಆಫ್ ಲವ್
25 ನೇ ತಾ|| ನಿಂದ —
ಚಾರ್ಲಿ ಚಾಪ್ಲಿನ್.

ರಾಜೇಂದ್ರ ಸಿನಿಮಾ, ನಂಜನಗೂಡು.

ಅತ್ಯುತ್ತಮವೂ, ನೂತನವೂ, ಸರ್ವಾಂಗ ಸುಂದರವೂ ಆದ ಸಿನಿಮಾ ಮಂದಿರ.
ಪ್ರತಿದಿನವೂ ಎರಡು ಆಟಗಳು ತೋರಿಸಲ್ಪಡುವುವು.
ಸಾಹಸ, ಆಶ್ಚರ್ಯ, ವಿನೋದ, ಆನಂದಗಳಿಂದ ಕೂಡಿದ ಮನೋಹರವಾದ ದೃಶ್ಯಗಳಿರುವುವು.
ದಯವಿಟ್ಟು ತಪ್ಪದೆ ನೋಡಿರಿ! ಆನಂದಪಡಿರಿ!

For Up to-date and Efficient Medical Treatment

Go to—**Dr. A. J. RAM & SONS,**

Sayaji Rao Road, Mysore.

Physicians, Dentists, Opticians, etc

ಡಾ|| ಎ. ಜೆ. ರಾಂ. ಅಂಡ್ ಸನ್ಸ್,

ಸಯ್ಯಾಜಿರಾವ್ ರೋಡ್, ಮೈಸೂರು ಸಿಟಿ.

ಔಷಧ ವ್ಯಾಪಾರಿಗಳು, ಚಿಕಿತ್ಸಕರು, ದಂತವೈದ್ಯರು,
ಮತ್ತು ಕನ್ನಡಕ ವ್ಯಾಪಾರಿಗಳು

ಉತ್ತಮವಾದ ನವೀನ ಚಿಕಿತ್ಸೆಗಳಿಗೆ ನಮ್ಮಲ್ಲಿಯೇ ಬನ್ನಿರಿ

ಪಂಡಿತ ಸಿ. ಎಚ್. ಚಂದ್ರಭಾನ್‌ಸಿಂಗ್
ಇವರಿಂದ ತಯಾರಿಸಲ್ಪಟ್ಟ

ಫಲಪುಷ್ಪಸಾರ ರಸಾಯನ.

ಸುಖಕರ ಮಲಬಂಧನಿವಾರಿಣೀ ಕ್ರಯ —1-8-0

ಗುಣ.—ಇದು ಜಾಪಾಳ ಮುಂತಾದ ಕಠಿಣ ವಿರೇಚಕ ವಸ್ತುಗಳ ಸಂಯೋಗವಿಲ್ಲದ ಕೇವಲ ಅಮೃತೀಕರಣ ಪ್ರಯೋಗವು ಕೇವಲ ಅನುಭವಸಿದ್ಧವಾದದ್ದು ಇದನ್ನು ಉಪಯೋಗಿಸುವುದರಿಂದ ಎಲ್ಲಾ ವಿಧವಾದ ಮಲಬಂಧವೂ, ಮಲಬದ್ಧತೆ, ಅಜೀರ್ಣ, ಉಷ್ಣವಾಯು, ಕೀಲುವಾಯು, ಎದೆಯುರಿ, ಹೊಟ್ಟೆ ನೋವು, ಕೆಮ್ಮು, ತಲೆತಿರುಗು ಮುಂತಾದ ರೋಗಗಳೆಲ್ಲವೂ ಖಂಡಿತ ಗುಣವಾಗುತ್ತವೆ

ಬ್ರಾಂಚ್:—ಶ್ರೀಸತ್ಯನಾರಾಯಣ ಆಯುರ್ವೇದಿಕ್ ಫಾರ್ಮಸಿ,
ಜಗನ್ಮೋಹನ ಬಂಗ್ಲೆ ರಸ್ತೆ, ಮೈಸೂರು.

You Know

OUR IDEAL ARRANGEMENTS & CHOICEST PREPARATIONS

We need not tell you about it

COME & SEE OUR NOVEL

innovations and up-to-date Management.

SRI KRISHNA BHAVAN,

Mysore.

ANANDA SODA FACTORY,

DODDAPET, MYSORE.

BEST AERATED WATER SUPPLIERS
COMPLETE REQUISITES FOR

AERATED WATER MANUFACTURERS
AVAILABLE.

ಆನಂದಾ ಸೋಡಾ ಫ್ಯಾಕ್ಟರಿ,
ದೊಡ್ಡಪೇಟೆ, ಮೈಸೂರು.

ಬೇಸಿಗೆಯ ಕಾಲದ ಸಲುವಾಗಿ ಪ್ರತ್ಯೇಕವಾಗಿ ಏರ್ಪಡಿಸಿರುವ ಎಲ್ಲಾ
ಅನುಕೂಲತೆಗಳನ್ನೂ ಒಳಗೊಂಡಿರುವ

ಬೊಂಬಾಯಿ ಆನಂದಭವನ ರೆಸ್ಟೊರೆಂಟಿನಲ್ಲಿರುವ 'ಮೌಂಟ್ ಅಬು'ವನ್ನು

ಭೇಟಿ ಮಾಡಲು ದಯೆಯಿಟ್ಟು ಮರೆಯಬೇಡಿ!

ರೇಡಿಯೋ ಸಂಗೀತ—ಪ್ರತಿ ದಿನವೂ ಆಯಾ ದಿನದ ಪ್ರೋಗ್ರಾಂ ರೆಸ್ಟೊರೆಂಟಿನಲ್ಲಿ ಪ್ರಕಟಿಸಲ್ಪಡುವುದು

ಆಹಾರ ವಿಹಾರಗಳಿಗೆ ಅನುಕೂಲವಾದ ಏರ್ಪಾಡು! ಮನೋಲ್ಲಾಸವನ್ನುಂಟುಮಾಡುವ ಆಟಗಳು!!

ಮಾಲೀಕರ ವಿನೋದಗಳ ಜೊತೆಗೆ ಹೊಸದಾಗಿ ತಯಾರಿಸಿರುವ

ಸುಂದರ ಉದ್ಯಾನವನವು

ನಿಮಗೆ ಇನ್ನೂ ಹೆಚ್ಚಿನ ಮನೋಲ್ಲಾಸವನ್ನು ಉಂಟುಮಾಡುವುದು

" ಮನೋಹರಮಂದಿರ " ವೆನಿಸಿರುವ ಈ " ಮೌಂಟ್ ಅಬು "
ವಿನೋದ ಕೂಟಗಳಿಗೆ ಶ್ರೇಷ್ಠವಾದ ಸ್ಥಳ.

" ಮೌಂಟ್ ಅಬುವು" ಆನಂದಕ್ಕೆ ಗಣಿಯಾದ " ಸ್ವರ್ಗ " ದಂತಿರುವದು

ದಿನವೂ ಒಂದು ಸಿಹಿ ಮತ್ತು ಒಂದು ಖಾರದ ತಿಂಡಿಯು
ಸ್ಪೆಷಲ್ಲಾಗಿ ತಯಾರಿಸಲ್ಪಡುತ್ತದೆ

ವಿಷಗ್ರತ್ನ ಆಯುರ್ವೇದ ವಿದ್ವಾನ್ ಟಿ ವಿ ಪಂಡಿತರ

ಬಾಲಸುಧಾ

ಮಕ್ಕಳ ಜ್ವರದ ಗಡ್ಡೆಯನ್ನು ಖಾತರಿ ಗುಣ ಪಡಿಸುತ್ತೆ ಲಿವರ್ (ಪಿತ್ತಕೋಶ) ದಪ್ಪನಾಗಿ ಕಣ್ಣು ಹಳದಿ ಬಣ್ಣವಾಗಿದ್ದರೆ ಇದರ ಸೇವನೆಯಿಂದ ಬೇಗನೇ ಗುಣವಾಗುತ್ತೆ 20 ವರ್ಷಗಳಿಂದಲೂ ಅನುಭವ ಸಿದ್ಧವಾಗಿದೆ—ಜ್ವರಭೇದಿಗೆ ನಮ್ಮ ಬಾಲಸಂಜೀವಿನಿಯನ್ನೇ ಉಪಯೋಗಿಸಿರಿ

ಬಾಲಸುಧಾ ಪೆಟ್ಟಿ 1 ರೂ   ಬಾಲಸಂಜೀವಿನಿ 1

ಮೈಸೂರು, ಬೆಂಗಳೂರು, ಮದ್ರಾಸುಗಳಲ್ಲಿ ನಮ್ಮ ಏಜಂಟರ
ಸದ್ವೈದ್ಯಶಾಲಾ, ನಂಜನಗೂಡು

ಅರ್ಧ ಕ್ರಯಕ್ಕೆ ಕೊಡಲ್ಪಡುತ್ತೆ

ಮುಂಚಿನ ಕ್ರಯ ರೂ. 1 12 0   ಈಗ 14

ಬ್ರಿಟಿಷ್ ಫೌಂಟೆನ್ ಪೆನ್.

BRITISH FOUNTAIN PEN

ಇಂಗ್ಲೆಂಡಿನಲ್ಲಿ ತಯಾರಾದದ್ದು ಇದಕ್ಕೆ 14 ಕ್ಯಾರೆಟಿನ ಚಿನ್ನದ ನಿಬ್ ಹಾಕಿದೆ ಈ ಪೇನಾವನ್ನು ನಮ್ಮ ಬರೋಡ ಮಹಾರಾಜ ಚಕ್ರವರ್ತಿಯವರು ಕೊಂಡು ಸಂತೋಷಪಟ್ಟು ಉಚ್ಚ ಮೇಲಾದ ಯೋಗ್ಯತಾಪತ್ರ (Certificate) ಕೊಟ್ಟಿರುವರು ಅಕ್ಷರಗಳನ್ನು ಮುತ್ತಿನ ಹಾಗೆ ಸುಂದರವಾಗಿ ಬರೆಯುವದು ಇದರ ವಿಶೇಷ ಗುಣ ಎಂದು ತಿಳಿಸಲು ಸ್ಥಳ ಸಂಕೋಚ. ಒಂದು ತರಿಸಿ ನೋಡಿದರೆ ಸಂತೋಷ ಪಡುವಿರಿ ಸುಲಭ ಕ್ರಯ **0-14-0.**

ಒಂದೇ ಸಲ ಮೂರು ಪೇನಾಗಳನ್ನು ತರಿಸಿದರೆ ಒಂದು ಪೇನಾವನ್ನು ಬಹುಮಾನವಾಗಿ ಕೊಡಲ್ಪಡುತ್ತೆ

T R ROYAL & Co, 19 Beat, Madras	**T R** ರಾಯಲ್ ಕಂಪೆನಿ, ೧೯ ಬೀಟ್, ಮದರಾಸು

॥ ಐಕ್ಯಮೇವೋದ್ಧರಾಮ್ಯಹಮ್ ॥

ರಾಜಧಾನಿಯ ರಾಷ್ಟ್ರೀಯ ವಾರ ಪತ್ರಿಕೆ.

ವೃದ್ಧಪಿತಾಮಹ ಎಂ ವೆಂಕಟಕೃಷ್ಣಯ್ಯನವರ ಜ್ಞಾಪಕಾರ್ಥವಾಗಿ ಪ್ರಕಟಿಸಲ್ಪಡುವುದು.

ಸಂಪಾದಕರು ಅಗರಂ ರಂಗಯ್ಯ, ಬಿ ಎ

ಸಂಪುಟ ೧ | MYSORE : MONDAY 18—5—36 ಮೈಸೂರು : ಸೋಮವಾರ ೧೮—೫—೩೬ [ಸಂಚಿಕೆ ೧೩

ಡಾಕ್ಟರ್ ಅನಸಾರಿಯವರು

——

ಹಿಂದೂ ಸುಪ್ರಸಿದ್ಧ ಮುಸಲ್ಮಾನ ರಾಷ್ಟ್ರ ಮುಖಂಡರಾದ ಡಾಕ್ಟರ್ ಅನಸಾರಿಯವರು ಕಳೆದ ವಾರ ಡೆಲ್ಲಿಗೆ ಪ್ರಯಾಣ ಮಾಡುತ್ತಿದ್ದಾಗ ಹಠಾತ್ತಾಗಿ ಕಾರಣವಾಗಿ ... ಇವರ ಮರಣದಿಂದ ದೇಶಕ್ಕೆ ಬಹಳ ನಷ್ಟವುಂಟಾಗಿದೆ. ಇವರು ರಾಷ್ಟ್ರೀಯ ಭಾವನೆಯುಳ್ಳ ಮುಸಲ್ಮಾನರಲ್ಲಿ ಅಗ್ರಗಣ್ಯರು ಭಾರಿ ವೈದ್ಯ ... ವರ್ಷಕ್ಕೆ ... ಲಕ್ಷ ರೂಪಾಯಿ ಆದಾಯವಿತ್ತು. ಇವರು ತಮ್ಮ ತನುಮನಧನವನ್ನು ದೇಶಸೇವೆಗೆ ಅರ್ಪಿಸಿದರು. ... ಅಸಹಕಾರ ಚಳುವಳಿಗೆ ... ಹಿಂದೂ ಮುಸಲ್ಮಾನರ ಐಕಮತ್ಯಕ್ಕೆ ಬಹಳ ಸಹಾಯ ಮಾಡಿದರು. ಮಹಾತ್ಮ ಗಾಂಧಿಯವರ ಪಟ್ಟ ಶಿಷ್ಯರಾಗಿದ್ದರು. ... ದೇಶದ ... ಮುಂದಕ್ಕಾಗಿ ... ಭರತಖಂಡವೆಲ್ಲಾ ... ಗೋಳಾಡುತ್ತಿದೆ.

ಅರಬ್ಬಿಯವರು ತೆಂಡಾಯವನ್ನು ನಿರಾಕರಿಸಿದರು.

ಪ್ಯಾಲಸ್ಟೈನಿನಲ್ಲಿ ಅರಬ್ಬಿಯವರು ಕಂದಾಯವನ್ನು ಕೊಡುವುದಿಲ್ಲವೆಂದು ಚಳುವಳಿ ಹೂಡಿರುವರು. ಕಾನೂನು ಭಂಗವನ್ನು ನಡೆಸಲು ಒಂದು ಸಮಿತಿಯನ್ನು ರಚಿಸಿರುವರು. ಈ ಸಮಿತಿಯವರು ಸಾರ್ವತ್ರಿಕವಾದ ಕಾನೂನುಭಂಗ ಚಳುವಳಿಯನ್ನು ಆರಂಭಿಸಿರುವರು. ಅರಬ್ಬಿಯವರೆಲ್ಲರೂ ಇದರಲ್ಲಿ ಸಹಕರಿಸಬೇಕೆಂದು ಕೋರಿರುವರು. ಸುಮಾರು 1000 ಅರಬ್ಬಿಯವರು ಮಸೀದಿಯಲ್ಲಿ ಪ್ರಾರ್ಥನೆ ಮಾಡಲು ... ಪೋಲೀಸಿನವರಿಗೂ ಅವರಿಗೂ ... ಒಂದು ಕಲಹವು ಉಂಟಾಗಿ ... ಅವರು ಗುಂಡು ಹಾರಿಸಿದರು. ... ಯವರು ಲಾರಿ ಮುಂತಾದವುಗಳ ... ಪೋಲೀಸಿನವರ ಮೇಲೆ ... ಅವರನ್ನು ಬಂದೂಕದ ಹಿಂಭಾಗದ ... ನಡೆಸಲು ಪೋಲೀಸಿನವರು ಪ್ರಯತ್ನಿಸಿದರು ಸಾಧ್ಯವಾಗಲಿಲ್ಲ ಆದ್ದರಿಂದ ... ಗುಂಡನ್ನು ಹಾರಿಸಿ... ಇದರಿಂದ ಒಬ್ಬ ಅರಬ್ಬಿಯವನು ... ಒಂಭತ್ತು ಜನಗಳಿಗೆ ಗಾಯವಾಯಿತು ಸಾಯಂಕಾಲದವೇಳೆಗೆ ... ಶಾಂತವಾಯಿತು.

ಐರಿಷ್ ಖೈದಿಯ ಉಪವಾಸ

ಮೆಕ್‌ಸ್ವಿನಿ ಎಂಬ ಐರ್ಲೆಂಡಿನ ರಾಜಕೀಯ ಖೈದಿಯು 10 ದಿನಗಳಿಂದ ಉಪವಾಸ ಮಾಡುತ್ತಿರುವನು ಈಗ ಐರ್ಲೆಂಡಿನಲ್ಲಿ ಬಾಳುತ್ತಿರುವ ಡಿವೇಲರಾವರ ಸರಕಾರಕ್ಕೆ ವಿರುದ್ಧವಾಗಿ ಈತನೂ, ಇವನ 19 ಜನ ಅನುಯಾಯಿಗಳೂ ಪ್ರವರ್ತಿಸಿದ್ದರಿಂದ ಪೋಲೀಸಿನವರು ಇವರುಗಳನ್ನು ಬಂಧನದಲ್ಲಿಟ್ಟಿರು ವಿಚಾರಣೆಯೇ ನಡೆದಿಲ್ಲ ಅದರಿಂದ ಉಪವಾಸವನ್ನು ಕೈಕೊಂಡಿರುವನು

ಚೀಣವು ಜಪಾನನ್ನು ಖಂಡಿಸಿತು

ಉತ್ತರಚೀಣಾದಲ್ಲಿ ಕಳ್ಳತನದಿಂದ ಸಾಮಾನುಗಳು ಸಾಗಿಸಲ್ಪಡುತ್ತಿರುವುದಕ್ಕಾಗಿ ಚೀಣಾ ಸರ್ಕಾರವು ಜಪಾನಿನಮೇಲೆ ಪ್ರತಿಭಟನೆಯನ್ನು ಸೂಚಿಸಿದೆ ಜಪಾನಿನ ಅಧಿಕಾರಿಗಳೂ ಇದಕ್ಕೆ ಸಹಾಯಕರಾಗಿರುವರೆಂದು ಆಪಾದನೆ ಮಾಡಲ್ಪಟ್ಟಿದೆ. ಜರ್ಮನಿ ಮತ್ತು ಕೊರಿಯದ ವ್ಯಾಪಾರಿಗಳು ಕಳ್ಳತನದಿಂದ ಸಾಮಾನು ಸಾಗಿಸದಂತೆ ಬಂದೋಬಸ್ತು ಮಾಡಬೇಕೆಂದು ಕೋರಲಾಗಿದೆ

ಡಾಕ್ಟರ್ ಅನಸಾರಿಯವರು



ಇವರು ಕಳೆದವಾರ ಹೃದಯ ರೋಗದಿಂದ ಹಠಾತ್ತನೆ ಸ್ವರ್ಗಸ್ಥರಾದರು

ಮೈಸೂರು ರೈಲ್ವೆ ಬಡ್ಜೆಟ್ಟು

ಮುಂದಿನ ಸಾಲಿನ ರೈಲ್ವೆ ಆದಾಯ ವೆಚ್ಚವನ್ನು ಸರ್ಕಾರದವರು ಅಂಗೀಕರಿಸಿರುತ್ತಾರೆ ಅದರ ಪ್ರಕಾರ ಸೆಂಟ್ರಲ್ ರೈಲ್ವೆ ವರ್ಕ್‌ಷಾಪನ್ನು ಒಡಾಯಿಸಲು 13 ಲಕ್ಷ ರೂಪಾಯಿಗಳು ಖರ್ಚಾಗುವುವು ಮೈಸೂರು ರೈಲ್ವೆಯಲ್ಲಿ ದಿನೇ ದಿನೇ ಸಂಚಾರವು ಹೆಚ್ಚುತ್ತಲಿದೆ ರೈಲುಗಳ ವೇಗವನ್ನು ಹೆಚ್ಚಿಸಲಾಗಿದೆ ಬೆಂಗಳೂರು, ಹರಿಹರ ಲೈನನ್ನು ಶೀಘ್ರದಲ್ಲಿಯೇ ತೆಗೆದುಕೊಳ್ಳಲಾಗುತ್ತದೆ ಅದ್ದರಿಂದ ವರ್ಕ್‌ಷಾಪುಗಳನ್ನು ಬಡಾಯಿಸುವುದು ಅತ್ಯಗತ್ಯವಾಗಿದೆ ಚಕ್ರಗಳನ್ನು ತಯಾರುಮಾಡಲು 35 ಸಾವಿರ ರೂಪಾಯಿಗಳ ವೆಚ್ಚದಿಂದ ಹೊಸ ಏರ್ಪಾಡು ಮಾಡಲ್ಪಡುವುದು ... ಲೈನನ್ನು ಬಡಾಯಿಸಲು 1 ಲಕ್ಷ ರೂಪಾಯಿಗಳು ಮಂಜೂರಾಗಿದೆ ರೈಲ್ವೆ ಆಫೀಸನ್ನು ದಸರ ವಸ್ತುಪ್ರದರ್ಶನಶಾಲೆಯ ಬಳಿ ಹೊಸ ಕಟ್ಟಡಕ್ಕೆ ವರ್ಗಾಯಿಸಲಾಗುವುದು ಅದಕ್ಕಾಗಿ 1 ಲಕ್ಷ ರೂ ಖರ್ಚಾಗುವುದು ಸ್ಟೇಷನುಗಳು ಮತ್ತು ಕಟ್ಟಡಗಳ ದುರಸ್ತುಗಳಿಗಾಗಿ 16,700 ರೂಪಾಯಿ ಮಂಜೂರಾಗಿರುವುದು ನಂಜನಗೂಡಿನಲ್ಲಿ ಇಂಜಿನ್‌ಗೆ ನೀರುಹಾಕುವ ಏರ್ಪಾಡಿಗಾಗಿ 12,000 ರೂಪಾಯಿಗಳು ಮಂಜೂರಾಗಿರುವುವು

"ಸಾಧ್ವಿ" ಪತ್ರಿಕೆಯ ಮೇಲಿನ ಮೊಕದ್ದಮೆ ವಾಪಸ್ ಸಾಯಿತು.

ನಾವು 'ಸಾಧ್ವಿ" ವಾರ ಪತ್ರಿಕೆಯನ್ನು ಹೊರಡಿಸಿದುದರ ಮೇಲೆ ವೃದ್ಧಪಿತಾಮಹ ಎಂ ವೆಂಕಟಕೃಷ್ಣಯ್ಯನವರ ಮೊಮ್ಮಕ್ಕಳಾದ ಶ್ರೀ ಎಂ ಎಸ್ ರಾಮಕೃಷ್ಣರವರು ಈ ಪತ್ರಿಕೆಯ ಹಕ್ಕು ತಮಗೆ ಸೇರಿದ್ದೆಂದು ನಮ್ಮಮೇಲೆ ಒಂದು ದಾವಾ ಹಾಕಿದ್ದರು ಈಚೆಗೆ ಈ ವಿಷಯದಲ್ಲಿ ನಮಗೂ ಅವರಿಗೂ ರಾಜಿ ಆಗಿ ಅವರ ಆ ಮೊಕದ್ದಮೆಯನ್ನು ವಾಪಸು ತೆಗೆದುಕೊಳ್ಳುವುದಾಗಿಯೂ ಮತ್ತು ನಾವು ಕೈಗೊಂಡಿರುವ ಕಾರ್ಯದಲ್ಲಿ ಸಹಾನುಭೂತಿಯನ್ನು ತೋರಿಸುವುದಾಗಿಯೂ ತಿಳಿಸಿರುತ್ತಾರೆ ಇದಕ್ಕಾಗಿ ನಾವು ಅವರಿಗೆ ಅತ್ಯಂತ ಕೃತಜ್ಞರಾಗಿದ್ದೇವೆ ಮಹಾಜನರು ನಮ್ಮ ಪತ್ರಿಕೆಗೆ ಪ್ರೋತ್ಸಾಹವನ್ನಿತ್ತು ಅದನ್ನು ಯಶಸ್ವಿಯಾಗಿ ನಡೆಸಲು ನೆರವಾಗಬೇಕಾಗಿ ಬೇಡುತ್ತೇವೆ

ಧರ್ಮ ಸಹಾಯ.

ಬೆಂಗಳೂರಿನಲ್ಲಿರುವ ಬಸವನಗುಡಿ ಚೌಕವನ್ನು ಉತ್ತಮಪಡಿಸುವುದಕ್ಕಾಗಿಯೂ ಮತ್ತು ಮಕ್ಕಳ ಆಟದ ಮೈದಾನವೊಂದನ್ನು ಅದೇ ಚೌಕದಲ್ಲಿ ನಿರ್ಮಿಸುವುದಕ್ಕಾಗಿಯೂ ಸರ್ ಎಂ ಎನ್ ಕೃಷ್ಣರಾಯರು ಹತ್ತು ಸಾವಿರ ರೂಪಾಯಿಗಳನ್ನು ಉದಾರವಾಗಿ ದಾನ ಮಾಡಿರುವರು ಬೆಂಗಳೂರು ವಿಶ್ವೇಶ್ವರ ಪುರದಲ್ಲಿ ಮಕ್ಕಳ ಆಟದ ಮೈದಾನವನ್ನು ನಿರ್ಮಿಸಲು ರಿ ಚೀಫ್ ಕನ್ಸರ್ವೇಟರಾದ ಶ್ರೀ ಬಿ ವಿ ರಾಮಯ್ಯಂಗಾರ್ಯರವರು ಒಂದು ಸಾವಿರ ರೂಪಾಯನ್ನು ಕೊಟ್ಟಿರುವರು ಬೆಂಗಳೂರು ಕಬ್ಬನ್‌ಪಾರ್ಕಿನಲ್ಲಿ ಒಂದು ಸಿಂಹದ ಬೊಂಬೆಯನ್ನು ಇಡಲು ಬಜಾಂಗ್ ಮಹಾರಾಣಿಯವರು ಐದುಸಾವಿರ ರೂಪಾಯಿಗಳನ್ನು ಕೊಟ್ಟಿರುವರು. ಈ ಪ್ರತ್ಯಗಳನ್ನು ಸರ್ಕಾರದವರು ಕೃತಜ್ಞತೆಯಿಂದ ಸ್ವೀಕರಿಸಿರುವರು ಈಗಲೇ ನಾನಾರೀತಿಯಲ್ಲಿ ಪರಿಷ್ಕಾರಹೊಂದಿರುವ ನಗರಗಳನ್ನು ಶೃಂಗರಿಸಲು ಸಹಾಯಮಾಡುವುದಕ್ಕಿಂತ ಬಡ ಹಳ್ಳಿಗಾಡಿನ ಸ್ಥಿತಿಗತಿಗಳನ್ನು ಅಭಿವೃದ್ಧಿ ಮಾಡಲು ಈ ದ್ರವ್ಯವನ್ನು ಉಪಯೋಗಿಸಬಾರದೆ ? ಎಂದು ಒಬ್ಬ ಓದುಗರು ಕೇಳುತ್ತಾರೆ ... ನಮ್ಮ ಉತ್ತರವೇನೆಂದರೆ, ದಾನ ಕೊಡುವುದು ಕೊಡುವವರ ಇಷ್ಟ

ಕನ್ನಡ ಕಾಳಿದಾಸ.

(ನಂಜನಗೂಡು ಶ್ರೀ ಎ೯. ಸುಬ್ರಹ್ಮಣ್ಯಯ್ಯನವರಿಂದ)

ಮೈಸೂರು ಈಗ್ಗೆ ಮಾತ್ರವಲ್ಲ, ಹಿಂದೆಯೂ ಬಹು ಹೆಸರಾದವರನ್ನು ಹೆತ್ತಿದ್ದಿತು ಅವರಲ್ಲಿ ಶ್ರೀ ಬಸವಪ್ಪಶಾಸ್ತ್ರಿಗಳೆಂಬುವರೊಬ್ಬರು ಇವರು ವೀರಶೈವ ಕವಿಗಳು ಆಗಿನ ಮಹಾಸ್ವಾಮಿಯವರಾದ ಶ್ರೀ ಚಾಮರಾಜೇಂದ್ರ ಒಡೆಯರವರ ಆಸ್ಥಾನ ವಿದ್ವಾಂಸರು ದಮಯಂತೀ ಸ್ವಯಂವರವೇ ಮುಂತಾದ ಹಲವು ಗ್ರಂಥಗಳನ್ನು ಬರೆದಿರುವರು

ಇವರ ಮಹತ್ವವೇನೆಂಬುದನ್ನು ತಿಳಿಯುವುದಕ್ಕೆ ಮೊದಲು, ಕವಿಯ ಕಾರ್ಯವೇನೆಂಬುದನ್ನು ಸ್ವಲ್ಪ ತಿಳಿಯಬೇಕಾಗಿದೆ ಮನೋಹರವಾದ ಭಾವಗಳನ್ನು ಗಂಭೀರವಾದ ಶೈಲಿಯಲ್ಲಿ ಒರೆದು ವ್ಯಕ್ತಿಗೆ ಆನಂದವನ್ನುಂಟುಮಾಡುವುದು ಕವಿಯ ಕೆಲಸ ಈಗ ಉಪದೇಶದಲ್ಲಿ ಈ ಬಸಪ್ಪ ಶಾಸ್ತ್ರಿಗಳೇ ಕೊನೆಯ ಕವಿ ಆಗಿರುವವರು ವಾಗ್ಮಿಗಳು ಕವಿಯ ಮಾತು ವಚನವನ್ನು ತಮ್ಮ ಅವರ ರುಚಿಯಿಂದ ಮನಸ್ಸಿನ ತಾಪವು ಅವರಿಗೆ ಶಾಂತವಾಗುವುದು ವಾಗ್ಮಿಯ ಮಾತು ಬಾಣದ ಅಲಗಿನಂತೆ, ಅದು ಉದ್ರೇಕವನ್ನುಂಟುಮಾಡುವುದು ಶ್ರೀ ಶಂಕರರು ಚಂಡಾಲನೊಬ್ಬನನ್ನು ನೋಡಿದಾಗ ಯಾವನು ಜ್ಞಾನಿಯೋ ಅವನು ಚಂಡಾಲನಾದರೂ ನನಗೆ ಗುರುವು" ಎಂದು ಹೇಳಿದರು ಇದು ಕವಿಯ ಕೆಲಸ, ಮತ್ತು ಇವರಿಂದ ಎಡೆದ ತಪ್ಪಿಗಾಗಿ ಪಶ್ಚಾತ್ತಾಪವೇ ಹುಟ್ಟುತ್ತದೆ ಇಂತಹುದೇ ಸನ್ನಿವೇಶಗಳನ್ನು ಕಲ್ಪಿಸಿ ಈಚೆಗೆ ಬರೆದಿರುವ ಗ್ರಂಥಗಳನ್ನು ನೋಡಿರಿ ತಪ್ಪಿಗಾಗಿ ಕೋಪವೂ, ತಿರಸ್ಕಾರವೂ ಹುಟ್ಟುವುವು ಇದಕ್ಕೆ ಕಾರಣವೇನೆಂದರೆ—ಇವರು ಕವಿಗಳಲ್ಲ, ವಾಗ್ಮಿಗಳು ವಾಗ್ಮಿಗಳ ಕಾರ್ಯವು ಒಂದು ಪಕ್ಷವನ್ನು ಎತ್ತಿಹಿಡಿದು ಮತ್ತೊಂದು ಪಕ್ಷವನ್ನು ಹೀನೈಸುವುದು ಈಗ ಕವಿಗಳಾಗಿ ಜನಾಂಗವನ್ನು ಆನಂದದಲ್ಲಿ ಮುಳುಗಿಸಿ, ಮನಸ್ಸನ್ನು ಶಾಂತವಾಗಿಡುವ ಕಾಲವಲ್ಲ, ವಾಗ್ಮಿಗಳಾಗಿ ಜನಾಂಗವನ್ನು ಉದ್ರೇಕಿಸಿ, ಉತ್ಸಾಹ, ಐಕಮತ್ಯಗಳಿಂದ ಕೂಡಿ, ದೇಶಕ್ಕಾಗಿ, ಧೋರಣೆಗಾಗಿ ದುಡಿಯಬೇಕಾಗಿದೆ ಅದಕ್ಕಾಗಿಯೇ ಕವಿಗಳನ್ನು ಬಿಟ್ಟು, ವಾಗ್ಮಿಗಳ ಸುಬಾಗ ಮನವನ್ನು ಬಯಸಬೇಕಾಗಿದೆ. ಬಯಸೋಣ ಆದರೆ ಕವಿಯ ಸಂದೇಶವು ಅಜರಾಮರವು ಅಂದರೆ ಅದಕ್ಕೆ ಸಾವೂ ಇಲ್ಲ, ಮುಪ್ಪೂ ಇಲ್ಲ ಈ ಕವಿಯ ಅಂತಹ ಸಂದೇಶಗಳಲ್ಲಿ ಒಂದನ್ನು ಇಲ್ಲಿ ತಿಳಿಸುತ್ತೇನೆ—

ಆದರೆ ಕೂಡುವಾ ಕಾರ್ತಸ್ವರ ಕಂಕಣಮಕ್ಕೆ, ಸರಸರಾಸ್ವಾದಿಸಿ, ಕಾವ್ಯರಸವ ಸೂಸುವ ಸುಭಾಷ್ಪರಾಶ್ರು ಕಂಕಣವೆ, ಕವಿಗೆ ಕಂಕಣಮಲ್ತೇ '—ಧೊರೆಗಳು ಕೊಡುವ ಚಿನ್ನದ ತೋಡಾಗಳು ಹಾಗಿರಲಿ, ರಸಿಕರು ಕಾವ್ಯವನ್ನು ಓದಿ ಸುರಿಸುವ ಕಣ್ಣೀರಿನ ಹನಿಗಳೇ ಕವಿಗೆ ಕಂಕಣಗಳು ಎಂಬುದೊಂದು ರಾಜರ ಮತ್ತು ಧನಿಕರ ಮೆಚ್ಚುಗೆಯನ್ನು ಕವಿಯು ಗಣಿಸಬಾರದೆಂದು ಬೇರೆಯಾಗಿ ಹೇಳಬೇಕೇನು? ಇಂದು ಈ ಮಾತಿಗೆ ಬಹು ಬೆಲೆ ಇದು ದುಡ್ಡಿಲ್ಲದ ದರಿದ್ರನು ದುಡ್ಡನ್ನು ತಿರಸ್ಕರಿಸಿದ ಹಾಗಲ್ಲವು, ನಪುಂಸಕನು ಹೆಂಗಸನ್ನು ಹಳಿದಂತಲ್ಲವು ಯಾವನು ರಾಜಸ್ಥಾನ ಭಾವಿ ವಿದ್ವಾಂಸನೋ ಅವನ ಅನುಭವದ ಸಂದೇಶವು ಮೈಸೂರರಸರು ರಸಿಕರೂ ಪ್ರೌಢರೆಂಬುದನ್ನು ನಾವು ಹೇಳಬೇಕಾದುದಿಲ್ಲ ಪ್ರಾಚೀನ ಕವಿಗಳನ್ನು ಅಣಕಿಸುವಂತಹ ಪಂಡಿತೋತ್ತಮರು ಈಗಲೂ ಇದ್ದಾರೆ ಆಗಲೂ ಇದ್ದರು ಅವರೊಡನೆ ಕೂಡುವ ಯೋಗ್ಯತೆಯುಳ್ಳವನಂದರೆ ಈತನೇ

ಈ ಕವಿಗೆ ಸ್ವಾಮಿ ಯೆಂಬುದು ಅಡ್ಡ ಹೆಸರು. ಈತನು ಎಂತಹ ಉದ್ದಾಮ ಕವಿಯೋ ಅಂತಹ ಗಮಕಿಯೂ ಆಹುದು ಗಮಕಿ ಎಂದರೆ ಕವಿಯ ಭಾವರಸಗಳನ್ನು ಕುಂದಿಲ್ಲದ ಸಂಗೀತ, ರಾಗಗಳಿಂದ ಓದಿ ತೋರಿಸುವವನು ಶ್ರೀ ಕೃಷ್ಣಗಿರಿ ಕೃಷ್ಣರಾಯರವರು, ಶ್ರೀ ಮಾಯಿಗೌಡರವರು, ಶ್ರೀ ಸಂಪತ್ಕುಮಾರಾಚಾರ್ಯರವರು, ಶ್ರೀ ತಮ್ಮಯ್ಯನವರು ಶ್ರೀ ಬಿಂದುರಾಯರವರು ಮುಂತಾದ ಹಲವು ಮಂದಿ ಪ್ರಖ್ಯಾತ ಗಮಕಿಗಳು ಮೈಸೂರಿನ ಮತ್ತು ಇಡೀ ಕರ್ಣಾಟಕದ ಸಾಹಿತ್ಯ ರಂಗದಲ್ಲಿ ನವರಸಭರಿತವಾದ ಕಾವ್ಯಾಮೃತವನ್ನು ಸೂರೆಗೊಡುತ್ತಿದ್ದಾರೆ ಇಷ್ಟೊಂದು ವಿದ್ಯಾ ಪ್ರಾಚುರ್ಯವಿಲ್ಲದ ಆಗಿನ ಕಾಲದಲ್ಲಿ ಕರ್ಣಾಟಕ ಕಾವ್ಯ ಕಾಮಿನಿಯ ಕೀರ್ತಿಧ್ವಜವನ್ನು ಎತ್ತಿ ಹಿಡಿದುದ್ದು ಈ ಕವಿ ಗಮಕಿಯ ಮಹತ್ಕಾರ್ಯವಲ್ಲವೆನ್ನಲಾದೀತೆ ' ಕೋಮಲ ಕಂಠಸ್ವರ ! ಭಾವಾವೇಶ ! ರಸಸ್ಫೂರ್ತಿ ! ಇವೆಲ್ಲವೂ ಈ ಕವಿಗೆ ಗಮಕಕಲೆಗಾಗಿ ವಾಗ್ದೇವಿಯು ಕೊಟ್ಟ ವರಗಳು ! ಶ್ರೀ ಉಪಾಧ್ಯ ನಂಜುಂಡಪ್ಪನವರೂ, ಶ್ರೀ ಗೌರೀ ನರಸಿಹ್ಮಯ್ಯನವರೂ ಈ ಕಲೆಯಲ್ಲಿ ಅದ್ವಿತೀಯ ಕೀರ್ತಿಯನ್ನು ಪಡೆದವರು ಇಷ್ಟಾದರೂ ಕವಿತಾಂಗನೆಯೊಲಿದ ಈತನ ವಾಣಿಯೇ ಜನಾಕರ್ಷಕವಾಗಿದ್ದಿತೆಂದು ಹೇಳುವರು

ಕವಿ, ಗಮಕಿ, ವಾಗ್ಮಿಗಳೆಂಬ ಮೂರು ಗುಣಗಳೂ ಕರ್ಣಾಟಕ ರತ್ನಸಿಂಹಾಸನದ ನೆರಳಿನಲ್ಲಿ ನಲಿಯುತ್ತಿರುವ ಒಬ್ಬಳೇ ಕನ್ನಡ ಸರಸ್ವತಿಯ ಬೇರೆ ಬೇರೆ ಗುಣಗಳು ಮಾತ್ರ ತಲ್ಲೀನತೆ ತನ್ಮಯತೆ, ಎಂಬ ಎರಡು ಗುಣಗಳು ಈ ಕವಿ ಗಮಕಿ ವರರಲ್ಲಿ ವಿಶೇಷವಾಗಿದ್ದುವು ಭಾರತವನ್ನು ಹಿಡಿದು ಓದಲು ಮೊದಲಿಟ್ಟರೆ ಮುಗಿಯುವವರೆವಿಗೂ ಕೂಗಿದರೂ ಈತನಿಗೆ ಕೇಳಿಸುತ್ತಿರಲಿಲ್ಲವಂತೆ ! ಇದನ್ನೇ ತಲ್ಲೀನತೆ ಎನ್ನುವರು ತನ್ಮಯತೆ ಎಂದರೆ ಓದುವಾಗ ಕತೆಯಲ್ಲಿನ ಪಾತ್ರವೇ ತಾನಾಗಿಬಿಡುವುದು ಈತನು ಊರ್ವಶಿಯಾಗಿ ಶೃಂಗಾರವನ್ನನುಭವಿಸಿದ್ದಾನೆ, ದುರ್ಯೋಧನನಾಗಿ ದಂಭಾಹಂಕಾರಗಳಿಂದ ಮೆರೆದಿದ್ದಾನೆ ಒಂದು ದಿನ ರಾತ್ರಿ ದ್ರೌಪದೀ ವಸ್ತ್ರಾಪಹರಣದ ಭಾಗವನ್ನು ಓದಿ, ಮರುದಿನವೆಲ್ಲವೂ ಕೂತಲ್ಲ, ನಿಂತಲ್ಲಿ, ಕಣ್ಣೀರಿಡುತಲೇ ಆ ಕವಿಯು ಇದ್ದನಂತೆ ! ಈ ಗುಣಕ್ಕಾಗಿಯೇ ಶ್ರೀ ಸೋಮೇಶ್ವರನು ' ಕವಿಯೇ ಸರ್ವರೊಳುತ್ತಮಂ ' ಎಂದು ಹೇಳಿರುವುದು ಕೇಳುವವರ ಮುಖ ನೋಡುತ್ತಾ ಅವರು ತಲೆದೂಗಿದ ಹಾಗೆಲ್ಲಾ ಹಾವ, ಭಾವ ವಿನ್ಯಾಸಗಳನ್ನು ತೋರಿಸುವುದು ಈತನಿಗೆ ಬಾರದ ಕಾರ್ಯ

ಅನುಭವಾಮೃತದ ಪ್ರವಚನದ ಒಂದು ಸಭೆಯಲ್ಲಿ—

" ಬದುಕಿ ಫಲವಿಲ್ಲ, ಸಂಸಾರದಲ್ಲಿ ಸುಖವಿಲ್ಲ, ಸಂಸಾರವನ್ನು ಬಿಟ್ಟಲ್ಲದೆ ಬ್ರಹ್ಮಾನಂದವನ್ನು ಹೊಂದಲಾಗದು ' ಎಂದು ಹೃದಯಂಗಮವಾಗಿ, ಪಂಡಿತರೊಬ್ಬರು ವಿವರಿಸಿದರು ಶ್ರೋತೃಗಳ ನಡುವೆ ಬದುಕುವುದೇ ಪಾಪ, ಎಂಬ ಬುದ್ಧಿಯುಂಟಾಯಿತು ಇದು ಈ ಗಮಕಿಗೆ ಸ್ವರಿಸಲಿಲ್ಲ ' ಸಂಸಾರದಲ್ಲಿ ಸುಖವಿದೆ ಬ್ರಹ್ಮಾನಂದವೆಂಬುದು ಈ ಜನ್ಮದಲ್ಲಿಯೇ ದೊರಕಬಹುದಾದುದು ಸ್ತ್ರೀಯರೂ, ಉಪಭೋಗ ಸಾಮಗ್ರಿಗಳೂ ಬ್ರಹ್ಮಾನಂದದ ದಾಯಕಗಳೇ ಆದರೆ ನಾವು ಇವೆಲ್ಲವನ್ನೂ ಬ್ರಹ್ಮವಸ್ತುವನ್ನಾಗಿ ಕಾಣುವುದನ್ನು ಕಲಿಯಬೇಕು ಮಾತ್ರ ಎಂದು ಮೊದಲಿಸಿದರು ಸಂಸಾರದಲ್ಲಿನ ಬ್ರಹ್ಮಾನಂದವೆಂಬುದು ನೀವು ಓದುತ್ತಿರುವ ಗ್ರಂಥಗಳಲ್ಲಿನ ಮಹಾ ಪುರುಷರೆಲ್ಲರೂ ನಿಜವಿದ್ದಾಗ ಆಗಬಹುದು ಎಂದು ಒಬ್ಬರು ವಾದಲಿಸಿದರು ನೀವು ಓದುತ್ತಿರುವ ಗ್ರಂಥವನ್ನು ನೀವು ನಂಬುವುದಾದರೆ ಈ ಜಗತ್ತೆಂಬುದು ಬರಿಯ ಕಲ್ಪನೆ, ನಿಜವಲ್ಲ ನಿಜವಲ್ಲದ ಜಗತ್ತನ್ನೇ ಸತ್ಯವೆಂದು ವ್ಯವಹರಿಸುತ್ತಿರುವ ಜನರು ಕಾವ್ಯರಸಾಸ್ವಾದನಾನಂದಕ್ಕಾಗಿ ಕಲ್ಪಿತ ವ್ಯಕ್ತಿಗಳನ್ನು ನಿಜವೆಂದು ಭಾವಿಸಿ ಆನಂದಾನುಭವಮಾಡಬಾರದೇಕೆ ? ಎಂದು ಇವರು ಪ್ರತಿಭಟಿಸಿದರು ಈ ಸಂಭಾಷಣೆಯಲ್ಲಿ ನಾವು ಮೆಚ್ಚಬೇಕಾದುದು ಕವಿಯ ಪ್ರತಿಭೆ, ಉಚಿತ ಸ್ಮೃತಿ !

ಇದಾದ ಸ್ವಲ್ಪ ದಿನಗಳಲ್ಲಿಯೇ ಪುರಜನರು ಮಹಾ ಸಭೆಯಲ್ಲಿ ' ಕನ್ನಡ ಕಾಳಿದಾಸ ' ನೆಂಬ ಬಿರುದಿನಿಂದ ಇವರನ್ನು ಸನ್ಮಾನಿಸಿದರು ಅಭಿಜ್ಞಾನ ಶಾಕುಂತಲವನ್ನು ಕನ್ನಡಿಸಿರುವುದೇ ಇದಕ್ಕೆ ಕಾರಣವಾಗಿದ್ದರೂ ಇರಬಹುದು ತನ್ನನ್ನು ಕಾಪಾಡುತ್ತಿದ್ದ ನೀಲಗಿರಿ ಶ್ರೀ ಚಿಕ್ಕ ಪಾಪಣ್ಣನೆಂಬ ಧನಿಕನೇ ಈ ಕವಿಗೆ ಕರ್ಣ ! ತನ್ನನ್ನನುಸರಿಸಿದ ವೇಶ್ಯೆಯೇ ರತಿ ! ತನ್ನ ಕರ್ಣನಿಗಾಗಲೀ, ರತಿಗಾಗಲೀ, ತಮ್ಮಲ್ಲಿರಾಗಲೀ, ಈತನ ಸಂದೇಶವು ಒಂದೇ ' ಮನುಷ್ಯನಾಗಿ ಹುಟ್ಟಿ ಬೇಸರಿಕೆಯಿಂದ ಜುಗುಪ್ಸೆಯಿಂದ ಜೀವಿಸಬೇಡಿರಿ ' ಉಲ್ಲಾಸದಿಂದ ಬದುಕಿರಿ ದುಃಖವೆಂಬುದಿಲ್ಲ ಊಟ ಮೋಹಗಳನ್ನೇ ನಾವೆಲ್ಲರೂ ದುಃಖಗಳೆಂದು ಕರೆಯುತ್ತಿರುವುದು, ಇವನ್ನು ಬಿಡಿರಿ ಹೆಂಗಸೂ, ಸಂಸಾರವೂ ನರಕಕ್ಕೆ ದಾರಿಯಲ್ಲ, ಮೋಕ್ಷಕ್ಕೆ ಅಡ್ಡಿಯಲ್ಲ ಇದೇ ಈ ಕವಿ ಗಮಕಿಯ ಸಂದೇಶ ಪ್ರತಿ ಪ್ರವಚನದಲ್ಲಿಯೂ ಈತನು ತಪ್ಪದೆ ತಿಳಿಸುತ್ತಿದ್ದ ಈ ಉಪದೇಶವನ್ನು ಕೇಳಿದವರು ಇನ್ನೂ ಮೈಸೂರಿನಲ್ಲಿ ಒಬ್ಬಿಬ್ಬರಿದ್ದಾರೆ ಆತನು ಕವಿಯಾಗಿ ಸಾಹಿತ್ಯ ಸಮುದ್ರದಿಂದ ನ[illegible] ರಸಭರಿತವಾದ ಕಾವ್ಯಾಮೃತವನ್ನು ಸೃ[illegible] ಸಿರುವನು, ತಾನು ಕುಡಿದು ತೃಪ್ತ[illegible] ದ್ದಾನ, ಗಮಕಿಯಾಗಿ ಇತರರಿಗೆ ಅ[illegible] ಥೆಯನ್ನು ಕುಡಿಸಿದ್ದಾನೆ ಧನ್ಯ ! [illegible] ಸೂರು ! ಇಂತಹ ಹಲವು ಮಕ್ಕ[illegible] ಹೆತ್ತು ಕರ್ಣಾಟಕದ, ಮೈಸೂರಿನ ಕೀ[illegible] ಯನ್ನು ದಿಗಂತಗಳಲ್ಲಿಯೂ ಮೊ[illegible] ಮಾತೆ ! ಜಯವಾಗಲಿ ಯ[illegible]

(ಆಕಾಶವಾಣಿಯಲ್ಲಿ ಶ್ರೀ ಸುಬ್ರಹ್ಮ[illegible] ಣ್ಯಯ್ಯನವರು ಮಾಡಿದ ಉಪನ್ಯಾಸ

ಸ್ವದೇಶಿ ವಸ್ತು ಪ್ರದರ್ಶನ.

ಶ್ರೀಮನ್ಮಹಾರಾಜರವರ ವರ್ಧಂತಿ ಸಮಯದಲ್ಲಿ ಈ ತಿಂಗಳು 30 ನೇ ತಾ॥ ನಿಂದ ನಡೆಯುವ ನಾಲ್ಕನೇ ಮೈಸೂರು ಸ್ವದೇಶಿ ವಸ್ತು ಪ್ರದರ್ಶನಕ್ಕಾಗಿ ಮೈಸೂರು ಮಿಲ್ಸ್, ಎಂ ಎಸ್ ಎಂ ಎಸ್ ಮಿಲ್ಸ್ ಮುಂತಾದ ಮಿಲ್ಲಿಗಳವರು ರಿಯಾಯಿತಿ ದರಗಳನ್ನು ಕೊಟ್ಟಿರುವರು

ಮೈಸೂರು ಸರ್ಕಾರದವರು ತಮ್ಮ ಕೈಗಾರಿಕೆಗಳನ್ನು ಪ್ರದರ್ಶಿಸಲು ಆರು ಸ್ಟಾಲುಗಳನ್ನು ತೆಗೆದುಕೊಂಡಿರುವರು ಪ್ರದರ್ಶನ ಸಮಿತಿಯವರು ಒಂದು ವರ್ಧಂತಿ ಸ್ಪೆಷಿಯಲನ್ನೂ ಪ್ರಕಟಿಸುವರು

ಇಸ್ಲಾಂ ಮತಪ್ರಚಾರ

ಲಾಲಾ ಹರಿಕೃಷ್ಣಲಾಲರ ಮಗನಾದ ಕನ್ಹಯ್ಯಲಾಲ್ ಗೌಬಾರವರು ಮುಸಲ್ಮಾನ್ ಮತಕ್ಕೆ ಸೇರಿ ಈಗ ಇತರ ಅಸ್ಪೃಶ್ಯರನ್ನು ಮುಸಲ್ಮಾನರನ್ನಾಗಿ ಮಾಡುವ ಪ್ರಯತ್ನಕ್ಕೆ ಕೈ ಹಚ್ಚಿದ್ದಾರೆ ಮಲಬಾರ್ ಪ್ರಾಂತ್ಯದಲ್ಲಿ ತಿಯ್ಯಾ ಎಂಬ ಅಸ್ಪೃಶ್ಯ ವರ್ಗದ ಜನರಿರುವರು ಅವರು ನಮ್ಮ ದೇಶದ ಅಸ್ಪೃಶ್ಯರಿಗಿಂತಲೂ ನಿಕೃಷ್ಟವಾಗಿ ಕಾಣಲ್ಪಡುತ್ತಿರುವರು ಅವರು ' ಅದೃಷ್ಟರು ' ಅಂದರೆ ಅವರನ್ನು ಕೈಯಿಂದ ಮುಟ್ಟದೆ ಇರುವುದು ಮಾತ್ರವೇ ಅಲ್ಲದೆ ಕಣ್ಣಿನಿಂದ ನೋಡಲೂ ಕೂಡದು ಅವರುಗಳ [illegible] ಮ್ಮ ಸ್ಥಿತಿಗತಿಗಳ ವಿಚಾರದಲ್ಲಿ ಅಸಮಾಧಾನಗೊಂಡು ಮುಂದೇನುಮಾಡಬೇಕೆಂಬುದನ್ನು ಪರ್ಯಾಲೋಚಿಸಲು ಸಭೆಗಳನ್ನು ಮಾಡುತ್ತಿರುವರು ಈ ಸಮಯಕ್ಕೆ ಸರಿಯಾಗಿ ಮಿ॥ ಗೌಬಾರವರೂ ಇತರ ಕೆಲವು ಸ್ಥಳೀಯ ಮುಸಲ್ಮಾನರೂ ಸ[illegible] ತಿಯ್ಯಾ ಜನರನ್ನು ಮುಸಲ್ಮಾನ್ ಮತ[illegible] ಸೇರಿಸಲು ಪ್ರಯತ್ನಿಸುತ್ತಿರುವರು

ಡಾ। ಅಂಬೇಡಕರರು.

ಬೊಂಬಾಯಿನ ಹರಿಜನ ಮುಖಂಡ[illegible] ರಲ್ಲೊಬ್ಬರಾದ ಡಾ॥ ಅಂಬೇಡಕರರು [illegible] ವು ದಿವಸಗಳಿಂದ ಮತಾಂತರ ಹೊಂ[illegible] ವುದಾಗಿ ಬೆದರಿಸುತ್ತಿರುವರಷ್ಟೆ ಈ[illegible] ಮಹಾತ್ಮಗಾಂಧಿಯವರು ಅವರನ್ನು [illegible] ಟಮಾಡಿದಾಗ ಇವರು ಇನ್ನು ಹತ್ತು ವರ್ಷ[illegible] ಮತಾಂತರ ಹೊಂದುವುದಿಲ್ಲವೆಂದು ವ[illegible] ನ ಕೊಟ್ಟಿರುತ್ತಾರೆ

ನೀಲನಾಗಿನಿ ಮತ್ತು ಮಹಾತ್ಮಗಾಂಧಿ.

ನೀಲನಾಗಿನಿ (ಮಿಸೆಸ್ ನೀಲಾ ಕ್ರಾಂ ಕುಕ್) ಎಂಬ ಪಾಶ್ಚಿಮಾತ್ಯ ಸ್ತ್ರೀಯು ತಾನು ಹೇಗೆ ಮಹಾತ್ಮಗಾಂಧಿಯವರ ಆ ಶ್ರಮವನ್ನು ಸೇರಿದಳೆಂಬ ಕಥೆಯನ್ನು ಈ ಕೆಳಗ ಕಂಡಂತೆ ವರ್ಣಿಸಿದ್ದಾಳೆ —

ಬೃಂದಾವನದಿಂದ ನಾನು ನೀಲಗಿರಿಗ ಪ್ರವೇಶಿಸಿ ಹಿಮಾಚಲಪರ್ವತವು ನೀಲ ನಾಗನ ಶರೀರದ ಊರ್ಧ್ವಭಾಗವೆಂದೂ ನೀಲಗಿರಿಯು ಅಧೋಭಾಗವೆಂದೂ ಭಾವಿ ಸಲ್ಪಟ್ಟಿವೆ ಇವುಗಳ ಮಧ್ಯೆ ಭಾರತ ವರ್ಷವು ಸನಾತನವಾಗಿ ವಿರಾಜಿಸುತ್ತಿದೆ. ನೀಲಗಿರಿಯ ಕೆಳಗೆ ಹಿಂದೂ ರಾಜ್ಯವಾದ ಮೈಸೂರು ಸಂಸ್ಥಾನವು ಇರುತ್ತದೆ. ಶ್ರೀ ಮ. ಮಹಾರಾಜರವರ ವರ್ದಂತ್ಯುತ್ಸವ ಕ್ಕಾಗಿ ನಾನು ಕರೆಯಲ್ಪಟ್ಟೆನು ಇತರ ದೊಡ್ಡ ದೊಡ್ಡ ಕೂಟಗಳಿಗೂ ಆಹ್ವಾನಿಸ ಲ್ಪಡುತ್ತಿದ್ದೆನು ಒಂದು ಕಡೆ ಐಶ್ವರ್ಯ ವೂ ಮತ್ತೊಂದು ಕಡೆ ದಾರಿದ್ರ್ಯವೂ ಇರುವುದನ್ನು ಕಂಡು ನಾನು ಬಡಜನರ ಸೇವೆ ಮಾಡಬೇಕೆಂದು ನಿರ್ಧರಿಸಿದೆನು ಅದಕ್ಕಾಗಿ ಉಪವಾಸವೇ ಮುಂತಾದ ಕಠಿಣ ವ್ರತಗಳನ್ನು ಆಚರಿಸಿದೆನು ಎದರ ಪರಿಣಾಮವಾಗಿ ಪರಮಾತ್ಮನ ದಿವ್ಯದರ್ಶನವನ್ನೂ ಆನಂದವನ್ನೂ ಹೊಂದಿದೆನು ಇದರಿಂದ ಯಾವ ಕಾರ್ಯವೂ ನನಗೆ ಅ ಸಾಧ್ಯವಲ್ಲವೆಂದು ತೋರಿತು ಸೇವೆಯೇ ಸಾಗರದಲ್ಲಿ ನನ್ನದೊಂದು ಬಿಂದುವು ಸೇರುವುದಾದರೆ ನಾನು ಕೃತಾರ್ಥಳೆಂದು ನನನ

ಬೀದಿ ಗುಡಿಸುವ ಕೆಲಸಕ್ಕೆ ನಾನು ಮೊದಲು ಕೈಹಾಕಿದೆನು ಹಿಂದೂ ಸಮಾಜದಲ್ಲಿ ಬೀದಿ ಗುಡಿಸುವವರು ಬಹಳ ಕೀಳು ಜಾತಿಯವರೆಂದೆಣಿಸಲ್ಪಡುವರು ಅದರಿಂದ ಅವರು ಅಸ್ಪೃಶ್ಯರಾಗಿರುವರು ನಾನು ಅವರೊಡನೆ ಬಡಜನಗಳ ವಸತಿಗ ಳಿಗೆ ಹೋಗಿ ಬೀದಿಗಳನ್ನೂ ಚರಂ ಡಿಗಳನ್ನೂ ಗುಡಿಸಿದೆನು ಬ್ರಾಹ್ಮಣರ ಸಂಗತನ ನವಯುವಕರು ಈ ಕಾರ್ಯ ದಲ್ಲಿ ನನ್ನೊಡನೆ ಸೇರಿದರು ಇದರ ಮೇಲೆ ಬ್ರಾಹ್ಮಣಮಂಡಲಿಯಲ್ಲಿ ದೊಡ್ಡ ಕೋಲಾಹಲ ವಾಯಿತು ಎರವಾಡಾ ಜೈಲಿನಿಂದ ಅಸ್ಪೃಶ್ಯತಾ ನಿವಾರಣಾ ಚಳುವಳಿಯನ್ನು ನಡೆಸುತ್ತಿದ್ದ ಮಹಾತ್ಮ ಗಾಂಧಿಯವರು ನನ್ನ ಕೆಲಸ ಕಾರ್ಯಗಳ ವರದಿಯನ್ನು ಕೇಳುತ್ತಿದ್ದವು ಅವರು ನನ್ನ ಪ್ರಯತ್ನವು ಫಲವಾದುದೆಂದು ತಿಳಿಸಿ ದ ಬ್ರಾಹ್ಮಣರು ಅಸ್ಪೃಶ್ಯರ ಕೆಲಸಕ್ಕೆ ಕೈಹಾಕಿದ ಮೇಲೆ ಅಸ್ಪೃಶ್ಯತೆಯು ತಾನೇ ತೊಲಗಬೇಕು ಬಡಜನರ ಕ್ಕಾಗಿ ಆಟದ ಮೈದಾನಗಳನ್ನು ನಾ ನು ಏರ್ಪಡಿಸಿದೆನು ರಾಟೆಯಲ್ಲಿ ನೂಲು ತೆಗೆ ಯುವುದನ್ನು ಕಲಿಸಿದೆನು ಒಂದು ಶಿಕ್ಷಣಾಲಯವನ್ನು ಏರ್ಪಡಿಸಿದೆನು

ಅನಂತರ ಮಹಾತ್ಮರನ್ನು ಸಂದರ್ಶಿ ಸಲು ನಾನು ಸ್ವಲಿಗ ಹೋದೆನು. ನಾನು ಆ ವೇಳೆಯ ಮುಖಂಡಳಾಗಿದ್ದೆನೆಂದೂ ಮುಂದಾಳುತನವನ್ನು ಬಿಟ್ಟು ಕೇವಲ ನಮ್ರತೆಯ ಸೇವಕಳಾಗಬೇಕೆಂದೂ ನನಗೆ ತೋರಿತು ನನ್ನ ಅಂತರಾತ್ಮದ ಲ್ಲಿಯೇ ನನ್ನ ಧ್ಯೇಯವನ್ನು ಸಾಧಿಸಬೇ ಕೆಂದು ಮಹಾತ್ಮರು ಹೇಳಿದರು

ನಾನು ಅಂದಿನಿಂದ ಮಹಾತ್ಮರ ಶಿಷ್ಯ ಳಾದೆನು ಕೆಲವು ಕಾಲ ನಾನು ಮೈ ಸೂರು ಸಂತದ್ದಿನ ಕಾಡುಪ್ರದೇಶದ ಒಂ ದು ಹರಿಜನ ಸ್ವಾಸ್ಥ್ಯದಲ್ಲಿದ್ದು ಅನಂತರ ನನ್ನ ಮಗನೊಡನೆ ಗಾಂಧಿಯವರ ಆಶ್ರ ಮಕ್ಕೆ ಹೊರಟೆನು ನನ್ನ ನಂಬಿಕೆಯ ನ್ನು ದೃಢವಾಗಿ ಮಹಾತ್ಮರಲ್ಲಿ ಇಟ್ಟೆನು ಅವರು ಅನುಸರಿಸುತ್ತಿದ್ದ ನಿಷ್ಕಾಮವ್ರತ ವೇ ಇದಕ್ಕೆ ಕಾರಣ ಮನುಷ್ಯನು ತನಗೆ ಬೇಕಾದುದಕ್ಕಿಂತಲೂ ಹೆಚ್ಚಾದ ಐಶ್ವರ್ಯ ವನ್ನು ಗಳಿಸಬಾರದು ಮತ್ತು ಐಶ್ವರ್ಯ ವು ಕಲೆ ಮತ್ತು ಧರ್ಮಗಳ ಉದ್ಧಾರ ಕ್ಕಾಗಿ ಉಪಯೋಗವಾಗಬೇಕು ಎಂಬುದೇ ಸನಾತನಧರ್ಮದ ತತ್ವ. ಗಾಂಧಿಯವ ರು ಈ ತತ್ವವನ್ನು ಸಹಸ್ರ ರೂಪಗಳಲ್ಲಿ ಕಾರ್ಯರಂಗಕ್ಕೆ ತಂದಿದ್ದರು ಭಕ್ತಿಯ ಪರಾಕಾಷ್ಠೆಯಿಂದ ಅವರ ಅಸಂಖ್ಯಾತ ಶಿಷ್ಯರು ತಮ್ಮ ಆಸ್ತಿಪಾಸ್ತಿಗಳನ್ನು ಆನಂದದಿಂದ ಪ್ರಜಾಹಿತಕ್ಕಾಗಿ ಅರ್ಪಿ ಸಿದರು

ಉಪವಾಸದಿಂದ ನಾನು ಕೃಶಳಾಗಿದ್ದೆ ನು. ತಲೆ ಕೂದಲೆಲ್ಲಾ ಬಿದ್ದು ಹೋಗಿ ತ್ತು ಬರೀ ವೇಷದಿಂದ ಸತ್ಯಸಾಧನೆ ಮಾಡಲಾಗುವುದಿಲ್ಲವೆಂದು ನನಗೆ ತಿಳಿಯಿ ತು ಸತ್ಯವನ್ನು ಪೂರ್ವದೇಶದಲ್ಲಿಯಾ ಗಲಿ ಪಶ್ಚಿಮದೇಶದಲ್ಲಿಯಾಗಲಿ ಸಮಾನ ಸೌಕರ್ಯದಿಂದ ಸಾಧಿಸಬಹುದೆಂದು ಅರಿ ತೆನು ನಾನು ಹಾಗೆಯೇ ಮಾಡುವೆನೆಂ ದು ಗಾಂಧಿಯವರಿಗೆ ಭರವಸಕೊಟ್ಟೆನು "ನಿನಗೆ ನೀನು ನಿಜವಾಗಿದ್ದರೆ ನನಗೂ ಇರಬಲ್ಲೆ ಕಾಲವನ್ನು ಕಳೆಯದೆ ಉದಾ ತ್ತವಾದ ಮಾರ್ಗವನ್ನವಲಂಬಿಸು ಎಂ ದು ಅವರು ಹೇಳಿದರು

ಆರ್ಯಸಮಾಜ, ಮೈಸೂರು.

ತಾ॥ 21ನೇ ಭಾನುವಾರ ಬೆಳಗ್ಗೆ ೯ ಗಂಟೆಗೆ ಮೈಸೂರು ಇಲವಾಲದ ರಸ್ತೆಯ ಲ್ಲಿರುವ ಆರ್ಯಸಮಾಜದಲ್ಲಿ, ಬೆಂಗಳೂರು ಸೆಂಟ್ರಲ್‌ಕಾಲೇಜು ಉಪಾಧ್ಯಾಯರಾದ ಶ್ರೀ॥ ಎಂ ಯಮುನಾಚಾರ್ಯರವರು "ಗೀ ತಾಸಂದೇಶ" ಎಂಬ ವಿಷಯವಾಗಿ ಭಾಷ ಣಮಾಡುವರು ಸರ್ವರಿಗೂ ಸ್ವಾಗತ ವಿದೆ

ನಂದಿಯ ಪ್ರಾಶಸ್ತ್ಯ.

ಮಹಾತ್ಮಾ ಗಾಂಧಿಯವರು ಈಗ ನಂ ದಿ ಬೆಟ್ಟದಲ್ಲಿ ಮೈಸೂರು ಸರ್ಕಾರದ ಅತಿ ಥಿಗಳಾಗಿರುವರಷ್ಟೆ ಈ ಆತಿಥ್ಯದಿಂದ ಮೈಸೂರು ಸರ್ಕಾರಕ್ಕೆ ದೊಡ್ಡ ಲಾಭವೇ ಒದಗುತ್ತದೆ ನಂದಿ ಬೆಟ್ಟವನ್ನು ಎರಡ ನೇ ನೀಲಗಿರಿಯನ್ನಾಗಿ ಮಾಡಲು ನಮ್ಮ ಸರ್ಕಾರದವರು ಬಹಳ ಶ್ರಮಪಡುತ್ತಿರು ವರು. ರಸ್ತೆಗಳನ್ನು ಮಾಡಿಸುವರು ದೀ ಪಗಳನ್ನು ಹಾಕಿಸುವರು ಕಟ್ಟಡಗಳನ್ನು ಕಟ್ಟಿಸುವರು ಶೃಂಗಾರ ವನಗಳನ್ನು ನಿರ್ಮಿಸುವರು ಮತ್ತು ಬೇಸಿಗೆ ಕಾಲ ದಲ್ಲಿ ಇದು ಒಳ್ಳೇ ವಿಹಾರಸ್ಥಾನವೆಂದು ಜಾಹಿರಾತುಗಳನ್ನು ಹೊರಡಿಸುವರು

ಇವೆಲ್ಲಕ್ಕಿಂತಲೂ ಗಾಂಧಿಯವರು ಇಲ್ಲಿ ಗೆ ಬಂದು ಈಗ ನೆಲಸಿರುವುದು ದೊಡ್ಡ ಪ್ರಕಟನೆಯಾಗಿದೆ ಅವರು ಇಲ್ಲಿ ಇರು ವುದರಿಂದ ಅಖಿಲಭಾರತದ ದೃಷ್ಟಿಮಾತ್ರ ವೇ ಅಲ್ಲದೆ ಪ್ರಪಂಚದ ದೃಷ್ಟಿಯೇ ನಂದಿ ಯ ಕಡೆ ತಿರುಗಿರುತ್ತದೆ ಅವರನ್ನು ನೋ ಡಲು ಎಲ್ಲಾ ಕಡೆಯಿಂದಲೂ ಜನರು ಬ ರುತ್ತಾರೆ ಮುಂದೆ ನೀಲಗಿರಿಗೆ ಹೋಗು ವವರೆಲ್ಲರೂ ನಂದಿಯ ಕಡೆ ತಿರುಗುವ ಸಂ ಭವವಿದೆ

ಜಸ್ಟಿಸ್ ಪಂಗಡದವರ ರಾಜಿನಾಮೆ

ಮದ್ರಾಸ್ ಜಸ್ಟಿಸ್ ಪಂಗಡದ ಸದಸ್ಯ ರಾಗಿದ್ದ ಸುಂದರಂ ನಾಯ್ಡು ಎಂಬುವರು ಸದರಿ ಪಂಗಡಕ್ಕೆ ರಾಜೀನಾಮೆಯನ್ನು ಕೊಟ್ಟಿದ್ದಾರೆ ಇವರು ಆ ಪಂಗಡವು ಹುಟ್ಟಿದ ದಿನದಿಂದ ಸದಸ್ಯರಾಗಿದ್ದರ ಈ ಪಂಗಡವು ಯಾವ ಉದ್ದೇಶದಿಂದ ಸ್ಥಾಪಿತವಾಯಿತೋ ಅದನ್ನು ನೆರವೇರಿ ಸುತ್ತಿಲ್ಲವೆಂದೂ ಇದು ರಾಜಕೀಯ ಸಂಸ್ಥೆ ಯಾಗಿಲ್ಲವೆಂದೂ ಅವರು ಅಭಿಪ್ರಾಯ ಪಟ್ಟಿರುವರು ಪಂಗಡದ ಮುಖಂಡರಿಗ ಳನ್ನು ಯಶಸ್ವಿಯಾದ ರಾಷ್ಟ್ರೀಯ ಮಾರ್ಗದಲ್ಲಿ ನಡೆಸಬೇಕೆಂಬ ಅಭಿಲಾಷ ಯಿಲ್ಲವೆಂದು ಹೇಳಿದ್ದಾರೆ ಸಂಕುಚಿತ ವಾದ ಕೋಮುವಾರು ಭಾವನೆಯಿಂದ ಹು ಟ್ಟಿದ ಸಂಘಗಳ ಗತಿಯೆಲ್ಲವೂ ಹೀಗೆಯೆ

ಗುರುಕುಲ ಚುಂಚನಕಟ್ಟೆ ಕ್ಷೇತ್ರ

ಕೃಷ್ಣರಾಜನಗರ ತಾಲ್ಲೂಕು

ಇಂಗ್ಲಿಷ್ ಇಂಟರ್ ಮತ್ತು ಹಿಂದಿ ರ ಷ್ಟ್ರಭಾಷಾವಿಶಾರದ ಪಾಠ ಮುಗಿಸಿಕೊಂ ಡಿರುವವರು ಇಬ್ಬರು ಇಂಗ್ಲಿಷ್ ಎಸ್ ಎಸ್ ಎಲ್ ಸಿ ಮತ್ತು ಹಿಂದಿ ರಾಷ್ಟ್ರ ಭಾಷಾ ಪಾಠ ಮುಗಿಸಿರುವವರು ಒಬ್ಬರು, ಬೇಕಾಗಿರುತ್ತಾರೆ ತಲಬು 25 20 15, ರೂ॥ ಕೊಡಲಾಗುತ್ತೆ ಇಷ್ಟವುಳ್ಳವರು ಕೆಳಗಿನ ವಿಳಾಸಕ್ಕೆ ಬರೆದುಕೊಳ್ಳಬ ಹುದು

ಮೊ ಕೆ ಪುಟ್ಟಣ್ಣ
ಮುಖ್ಯೋಪಾಧ್ಯಾಯ.

ಚಾ. ಚಾ. (೯)

೧ ಮೊನ್ನೆ ನಮ್ಮೂರಿಂದ ಬೇರೆ ಊರಿಗೆ ವರ್ಗವಾದ ಒಬ್ಬರು ಅಧಿಕಾರಿ ಗಳು, "ಚಿಂತಿಸಬೇಡಿರಿ! ನಾನು ಹೋದ ರೆ, ನನಗಿಂತ ಒಳ್ಳೆಯವರೇ ಬರುತ್ತಾರೆ' ಅಂದರು ಆದರೆ, ಅವರ ಹಿಂದಿನವರೂ ಹಾಗೇ ಹೇಳಿದ್ದರು ಅದೇ ನಮಗೆ ಚಿಂತೆ

೨ ಬ್ರಾಹ್ಮಣ ಹುಡುಗರಿಬ್ಬರಿಗೆ ಜ ಗಳ ಮೊದಲಾಯಿತು ನಿನಗೆ ಗಾಯತ್ರಿ ಗೊತ್ತಿಲ್ಲ, ಅಂತ ಒಬ್ಬ, ಗೊತ್ತಿದೆ ಅಂತ ಇನ್ನೊಬ್ಬ ಸರಿ, ನೀನು ಸರಿಯಾಗಿ ಹೇ ಳಿದರೆ, ನಿನಗ ಆರು ಕಾಸು ಕೊಡುತ್ತೇನೆ, ಅಂದ ಮೊದಲನೆಯವನು. ಎರಡನೆಯ ವನು, 'ಕಲ್ಯಾಣಾದ್ಭುತ ಗಾತ್ರಾಯ ' ಅಂತ ಪ್ರಾರಂಭಿಸಿದ ಮೊದಲನೆಯವನು ತಕ್ಷಣವೇ ಸೋತೆ ಎಂದು ಹೇಳಿ, ಅರ್ಧ ಆಣೆ ಕೊಟ್ಟುಬಿಟ್ಟ!

೩. ನವಕಲು ಕಾಸುಗಳೆಲ್ಲವೂ ಎಲ್ಲಿಗೆ ಹೋಗಿ ಸೇರುತ್ತವೆ? ಗೊತ್ತೇ ಇದೆ, ಹರಿ ಕಥೆ ದಾಸರ ತಟ್ಟೆಗೆ

೪ ಹೋಟೆಲಿನಲ್ಲಿ ಅವನು ತಂದು ಕೊಡುವ ಕಾಫಿ ಚೆನ್ನಾಗಿಲ್ಲದಿದ್ದರೆ ಏನು ಮಾಡುವುದು" ಒಂದು ನೊಣವನ್ನು ಸಾ ಯಿಸಿ, ಅವನು ಕಾಣದ ಅದರೊಳಗಿಟ್ಟು ಬೇರೆ ಕೊಡು ಎಂದು ಕೇಳುವುದು

೫ 'ನಿಮಗೆ ಹೆಗಡಾನೇ ಆಕಸ್ಮಾ ತ್ತಾಗಿ ಲಕ್ಷ್ಯೊಂದು ಹಣಬಂದಿದೆ ನನಗೆ ಕೊಡಬೇಕಾದ ಹಣವನ್ನು ಯಾಕೆ ಕೊ ಟ್ಟು ತೀರಿಸಿಬಿಡಬಾರದು'' ಎಂದು ಕೇಳಿ ದರೆ, ಆಸಾಮಿ ಹೀಗೆ ಹೇಳಿದನಂತೆ— "ರೀ! ದುಡ್ಡು ಬಂದು ಶ್ರೀಮಂತನಾದ ತಕ್ಷಣ ಸ್ವಭಾವವೇ ಬದಲಾಯಿಸಿ ಹೋ ಯಿತು ಎಂದು ಯಾರೂ ಹೇಳಬಾರದು ಅದಕ್ಕಾಗಿ, ನಾನು ಹಿಂದಿನ ಪದ್ಧತಿಯನ್ನೇ ಇನ್ನೂ ಅನುಸರಿಸುತ್ತೇನೆ!

೬ ಇಂಟರ್ ಮೀಡಿಯೆಟ್, ಎಸ್ ಎಸ್ ಎಲ್ ಸಿ ಲೋವರ ಸೆಕೆಂಡರಿ ಮುಂತಾದ ಪರೀಕ್ಷೆಗಳ ಫಲಿತಾಂಶಗಳು ಪ್ರಕಟವಾಗುವ ವಾರಗಳಲ್ಲಿ ತಂದೆತಾಯಿ ಗಳು ಚಿಂತಿತರಾಗಿಯೂ, ಕೆಲವರ ಹಳ್ಳಿ ಕೆರೆಯ ಕಾವಲುಗಾರರು ಕೊಂಚ ಜಾಗರೂಕರಾಗಿಯೂ ಇರುವುದು ಕ್ಷೇಮ ಎಂದು ಕಾಣುತ್ತದೆ

೭ ಈ ತಿಂಗಳಿನಲ್ಲಿ ವಿವಾಹ ಲಗ್ನ ಗಳಲ್ಲಿ ರಾಜಧಾನಿಯಲ್ಲಿ ಪದ್ಧತಿಯಂತೆ ನೂರಾರು 'ಸಾಲಂ' ಕೃತ ಕನ್ಯಾದಾನ ಗಳು ನಡೆಯುವು

೮ ಅನುಭವಿಕಾ ದೇಶದಲ್ಲಿ ಈಚೆಗೆ ಕಾಗೆಗಳನ್ನು ಕೊಂದು ಅವುಗಳ ಮಾಂಸ ದಿಂದ ರುಚಿಯಾದ ತಿಂಡಿ ಪದಾರ್ಥಗಳ ನ್ನು ಮಾಡುತ್ತಿದ್ದಾರಂತೆ ನಮ್ಮ ಬೀದಿ ಗಳಲ್ಲಿ ಕಾಗೆ ಹೆಚ್ಚುವುದಕ್ಕೆ ಇದೇ ಕಾರ ಣವಿರಬೇಕು ಅಲ್ಲಿಂದ, ಏಕಾಂತರ ಕಾಗೆಗಳು ನಮ್ಮ ದೇಶಕ್ಕೆ ಓಡಿಬಂದು ಜೀವವನ್ನುಳಿಸಿಕೊಳ್ಳುತ್ತಿರಬಹುದು

ಸಾಧ್ವಿ
೧೮-೫-೩೬ ನೇ ಸೋಮವಾರ

ಸದ್ಯಸ್ಥಿತಿ.

ಸದ್ಯಸ್ಥಿತಿಯು ಕಳವಳಕ್ಕೀಡಾಗದಿದ್ದರೂ ವಿಚಾರಣೀಯವಾಗಿದೆ. ಇತ್ತೀಚಗೆ ಹೊರಗಿನ ಪೆಟ್ಟಿಗೆಯು ಮೈಸೂರಿಗೆ ಪೆಟ್ಟನ್ನುಂಟುಮಾಡುತ್ತಿದೆ. ಆದರೆ ಅದರ ಬಾಧದಲ್ಲಿ ಮೈಸೂರಿನ ತ್ಯಾಗವು ಜನರಿಗೆ ಕಾಣಬರುವಂತಿದೆ. ಕೈಗಾರಿಕೆಯು ಜೀವನಿಗೆಯು ಬಹು ಚಟುವಟಿಕೆಯಿಂದ ಸಾಗುತ್ತಿದೆ. ಆದರೆ ಇದರಿಂದ ದೇಶದ ದಾರಿದ್ರ್ಯವು ತೊಲಗುವ ಸೂಚನೆ ಏನೂ ತೋರದು. ಇಷ್ಟಾದರೂ ಸರ್ಕಾರದ ಹಲವು ಕೆಲಸಗಳ ಹಿಂದೆ ಏನಿರುವುದೆಂಬುದು ವಿಚಾರಾಸ್ಪದವಾದುದು.

ಇತ್ತೀಚಿನ ಒಂದೆರಡು ಪ್ರಸಂಗಗಳಲ್ಲಿ ಕ್ರೈಸ್ತ ವ್ಯವಹಾರದಲ್ಲಿ ನಮ್ಮ ಸರ್ಕಾರವು ಸ್ವಲ್ಪ ಧೈರ್ಯವನ್ನೇ ತೋರಿಸಿ, ನ್ಯಾಯವನ್ನು ಎತ್ತಿ ಹಿಡಿದಿರುವುದು. ಇಂದು ಹಿಂದುಗಳು ಬ್ರಾಹ್ಮಣ, ಬ್ರಾಹ್ಮಣೇತರ ಕಲಹಗಳಿಂದ ದುರ್ಬಲರಾಗಿದ್ದಾರೆ. ಇದೇ ಸಮಯದಲ್ಲಿ ಹಿಂದುಗಳ ಬಾಧ್ಯತೆಗಳನ್ನು ತುಳಿಯುವ ಸನ್ನಿವೇಶಗಳು ಒಂದೆರಡನ್ನು ದೇಶವು ನೋಡುತ್ತಿದೆ. ಮತಾಂತರ ಪಕ್ಷಬಾಧ್ಯತೆಗಳ ಕಾನೂನು ಸರ್ಕಾರಕ್ಕೇಕೆ ಬೇಕಿತ್ತು? ಇದಿಲ್ಲದೆ ಆಡಳಿತಸೂತ್ರವು ನಡೆಯುತ್ತಿರಲಿಲ್ಲವೆ? ಇದಿಲ್ಲದೆ ನೆಮ್ಮದಿಗೆ ಭಂಗ ಬಂದಿರುವುದೆ? ಜನಾಭಿಪ್ರಾಯಕ್ಕೆ ಎರಡೇ ತಿಂಗಳಷ್ಟರ ಅಲ್ಪ ಕಾಲಾವಧಿಯು ಏಕೆ? ಸರ್ಕಾರವು ಸಮಾಜಕ್ಕೇಕೆ ಕೈಯಿಕ್ಕಬೇಕು? ಆರ್ಥಿಕೋನ್ನತಿಯ ಕಾನೂನುಗಳು ತಲೆದೋರುವುದೂ, ನಿಲ್ಲುವುದೂ ತೀರಾ ಅಲ್ಪ. ಇದಕ್ಕೇನು ಕಾರಣ?

ಸಾರ್ವಭೌಮ ಸರ್ಕಾರದೊಂದಿಗೆ ವ್ಯವಹರಿಸುವ ರೀತಿ ನೀತಿಗಳಲ್ಲಿ ಜನಾಂಗವೆ ಕಣ್ಣುಕಟ್ಟಿದಂತಿದೆ. ಸರ್ಕಾರವು ಯಾವ ವಿಷಯದಲ್ಲಿ ಎಷ್ಟು ತಿಳಿಸಿದರೆ ಅಷ್ಟು ಮಾತ್ರವೇ ಇಂದು ದೇಶಕ್ಕೆ ಗೊತ್ತು. ಯಾವ ತತ್ವದಮೇಲೆ ಪಂಡಿನ ಪ್ರವೇಶವನ್ನು ಹಿಂದಕ್ಕೆ ಕೇಳುತ್ತಿದ್ದಾರೆ? ಯಾವ ತತ್ವದಮೇಲೆ ಪೂಗದಿಯನ್ನು ನಿಲ್ಲಿಸಲು ಕೇಳುತ್ತಿದ್ದಾರೆ? ದೇಶಾಭಿವೃದ್ಧಿಗೆ ಅತ್ಯವಶ್ಯಕವಾದ ಸತ್ಯಮಂಗಲದ ರೇಲ್ವೆ ಮುಂತಾದವುಗಳ ಬೇಡಿಕೆಯ ಪರಿಣಾಮವೇನು? ಇತ್ಯಾದಿ ಸಂಗತಿಗಳನ್ನು ಆಗಿಂದಾಗ್ಯೆ ಸರ್ಕಾರವು ಪ್ರಕಟಿಸಬೇಕಲ್ಲದೆ ಸಾರ್ವಜನಿಕ ಸಭೆಗಳಲ್ಲಿ ನಮ್ಮ ಮತ್ತು ಸಾರ್ವಭೌಮ ಸರ್ಕಾರದ ನಡುವೆ ಪರಸ್ಪರ ಸಹಕಾರವು ಎಲ್ಲಾ ವಿಷಯಗಳಲ್ಲಿಯೂ ಇರುವಂತೆ ಚರ್ಚಿಸಲೂ, ಬೇಡಲೂ ಸೌಕರ್ಯಗಳನ್ನು ಕಲ್ಪಿಸಬೇಕಾಗಿದೆ.

ರೈತನ ಋಣಭಾರವನ್ನು ತಗ್ಗಿಸಲು ಸರ್ಕಾರವು ಯತ್ನಿಸಿದರೆ ಸಾಲದು; ಋಣವಿಮುಕ್ತನನ್ನಾಗಿ ಮಾಡಬೇಕಾಗಿದೆ. ಹಿಂದಿನ ದಿವಾನರಿಗೂ ಇಲ್ಲದಷ್ಟು ಖ್ಯಾತಿಯು ಸರ್ ಮಿರ್ಜಾರವರಿಗಿದೆ. ಹೈದರಾಬಾದಿಗಿರುವಷ್ಟು ಮಟ್ಟಿಗಾದರೂ ಆರ್ಥಿಕ ಸ್ವಾತಂತ್ರ್ಯವನ್ನು ಅವರು ನಮಗೆ ಗಳಿಸಿಕೊಡಬೇಕು.

ಇಂದು ಮುಸ್ಸೋಲಿನಿಯ, ಹಿಟ್ಲರಿನ ಹೆಸರುಗಳೇ ವಿದೇಶೀಯರಿಗೆ ಭೀಕರವಾಗಿವೆ. ಭಾರತದಲ್ಲಿ ಜವಾಹರಲಾಲ್, ಮಹಾತ್ಮಾಜೀಯವರ ಹೆಸರುಗಳಿಗೆ ಮನ್ನಣೆ ಇದೆ—ಇವೆಲ್ಲಕ್ಕೂ ಕಾರಣವು ಅವರ ಹಿಂದಿರುವ ಪ್ರಚಂಡವಾದ ಜನಾನುರಾಗ. ಮೈಸೂರಲ್ಲಿ ಇಂದು ಅಂತಹ ಜನಾನುರಾಗವನ್ನು ಹುಟ್ಟಿಸಿ, ತನ್ನೊಡನೆಯೇ ಅದನ್ನು ಎಳೆದೊಯ್ದು ರಾಷ್ಟ್ರದ ಹಿತವನ್ನು ಸಾಧಿಸಬೇಕಾದ ಭಾರವು ಸರ್ ಮಿರ್ಜಾರವರ ಮೇಲಿದೆ. ಮುಂದಾಳುಗಳೆಂಬುವರು ತಮ್ಮ ಹೆಸರಿಗಾಗಿ ಸಂಧಾನಮಾಡುವುದನ್ನು ಬಿಟ್ಟು, ಜನಾಭಿಪ್ರಾಯಕ್ಕಾಗಿ ಬಾಳಬೇಕಾಗಿದೆ. ಹಾಗಾಗಲೆಂದು ಹಾರೈಸೋಣ.

ತೋರಿಕೆಯ ಸ್ವಾತಂತ್ರ್ಯ.

ಸ್ಥಳೀಯ ಸಂಸ್ಥೆಗಳಾದ ಪೌರ ಸಭೆಗಳು, ಜಿಲ್ಲಾ ಬೋರ್ಡುಗಳು ಮತ್ತು ಗ್ರಾಮ ಪಂಚಾಯಿತಿಗಳಿಗೆ ತಮ್ಮ ತಮ್ಮ ಕಾರ್ಯಕ್ರಮವನ್ನು ಗೊತ್ತುಮಾಡಿಕೊಂಡು ತಮಗೆ ಸೂಕ್ತ ತೋರಿದಂತೆ ವರ್ತಿಸಲು ಎಷ್ಟರ ಮಟ್ಟಿನ ಸ್ವಾತಂತ್ರವಿದೆಯೆಂಬುದು ಎಲ್ಲರಿಗೂ ಗೊತ್ತೇ ಇದೆ. ಇವುಗಳು ಹೆಸರಿಗೆ ಮಾತ್ರ ಸ್ವತಂತ್ರ ಸಂಸ್ಥೆಗಳು; ವಸ್ತುತಃ ಎಲ್ಲಾ ಅಂಶಗಳಲ್ಲಿಯೂ ಸರ್ಕಾರಕ್ಕೆ ಅಧೀನವಾಗಿರುವವು. ಸಣ್ಣ ಪುಟ್ಟ ವಿಷಯಗಳಲ್ಲಿಯೂ ಇವಕ್ಕೆ ಸ್ವಾತಂತ್ರ್ಯವಿಲ್ಲ. ಇವುಗಳು ಮಾಡುವ ನಿರ್ಣಯಗಳನ್ನು ಸರ್ಕಾರದವರು ರದ್ದು ಮಾಡಬಹುದು. ಇವರಿಗೆ ಇಷ್ಟವಿಲ್ಲದ ಏರ್ಪಾಡುಗಳನ್ನು ಬಲವಂತದಿಂದ ಜಾರಿಗೆ ತರಬಹುದು.

ಪ್ರಕೃತದಲ್ಲಿ ಪೌರಸಭೆಯ ಕೆಲವು ನೌಕರರನ್ನು ನೇಮಿಸುವ ವಿಷಯವಾಗಿ ಸರ್ಕಾರದವರು ಕೆಲವು ನಿಯಮಗಳನ್ನು ಮಾಡಿ ಪ್ರಕಟಿಸಿದ್ದಾರೆ. ಅವುಗಳ ಮೇಲೆ ಮಹಾಜನರ ಅಭಿಪ್ರಾಯವನ್ನು ಕೋರಿರುತ್ತಾರೆ. ಬೆಂಗಳೂರು ಪೌರಸಭೆಯಲ್ಲಿ ಆರೋಗ್ಯಾಧಿಕಾರಿಗಳ ಹುದ್ದೆಯ ವಿಷಯವಾಗಿ ವಿಶೇಷ ಚರ್ಚೆ ನಡೆಯಿತು. ಸರ್ಕಾರಕ್ಕೂ ಪೌರಸಭೆಗೂ ಭಿನ್ನಾಭಿಪ್ರಾಯಗಳು ಬಂದವು. ಅದರ ಪರಿಣಾಮವಾಗಿ ಈ ನಿಯಮಗಳನ್ನು ಮಾಡಲಾಗಿದೆ.

ಇದರ ಪ್ರಕಾರ ಪ್ರತಿಯೊಂದು ನಗರದ ಪೌರಸಭೆಯಲ್ಲಿಯೂ ಒಬ್ಬ ಆರೋಗ್ಯಾಧಿಕಾರಿಗಳೂ, ಒಬ್ಬ ಇಂಜನಿಯರೂ ಇರಲೇಬೇಕು. ಸರ್ಕಾರದ ಆರೋಗ್ಯ ಮತ್ತು ಪಬ್ಲಿಕ್ ವರ್ಕ್ಸ್ ಶಾಖೆಗಳಿಂದಲೇ ಈ ನೌಕರರನ್ನು ಎರವಲಾಗಿ ಕಳುಹಿಸಲಾಗುವುದು. ಸರ್ಕಾರದವರು ಯಾವ ಅಧಿಕಾರಿಯನ್ನು ಪೌರ ಸಭೆಗಳಿಗೆ ಕಳುಹಿಸಿ ಕೊಡಬೇಕೆಂದು ಪರ್ಯಾಲೋಚಿಸುತ್ತಾರೋ ಅವರ ಹೆಸರನ್ನೂ ಪೌರಸಭೆಗೆ ಮುಂಚಿತವಾಗಿ ತಿಳಿಸುವರು. ಇದರಮೇಲೆ ಪೌರ ಸಭೆಯವರು ತಮಗೆ ಸೂಕ್ತವೆಂದು ತೋರಿದ ಅರಿಕೆಗಳನ್ನು ಸರ್ಕಾರಕ್ಕೆ ತಿಳಿಸಬಹುದು. ಅವುಗಳನ್ನು ಪರಿಶೀಲಿಸಿ ಸರ್ಕಾರದವರು ಅಧಿಕಾರಿಯ ನೇಮಕದ ಬಗ್ಗೆ ಇಸ್ತಿಹಾರನ್ನು ಹೊರಡಿಸಬಹುದು. ಅದನ್ನು ಪೌರ ಸಭೆಗಳವರು ಕಾನೂನು ಪ್ರಕಾರ ಜಾರಿಯಲ್ಲಿ ತರತಕ್ಕದ್ದು. ಇದಲ್ಲದೆ ಜರೂರಾದ ಸಂದರ್ಭಗಳಲ್ಲಿ ಸರ್ಕಾರದವರು ಪೌರಸಭೆಗಳಿಗೆ ತಿಳಿವಳಿಕೆಯನ್ನು ಕೊಡದೆಯೇ ಅಧಿಕಾರಿಯ ನೇಮಕದ ಇಸ್ತಿಹಾರನ್ನು ಹೊರಡಿಸಬಹುದು. ಸಾಮಾನ್ಯವಾಗಿ ಹೀಗೆ ನೇಮಿಸಲ್ಪಟ್ಟ ಅಧಿಕಾರಿಗಳು ಮೂರು ವರ್ಷಕಾಲ ಕೆಲಸ ನೋಡತಕ್ಕದ್ದು. ಆದರೆ ಸಾರ್ವಜನಿಕ ಹಿತದೃಷ್ಟಿಯಿಂದ ಸರ್ಕಾರದವರು, ಪೌರಸಭೆಗೆ ತಿಳಿವಳಿಕೆ ಕೊಟ್ಟು ಈ ಮಧ್ಯೆ ಈ ಅಧಿಕಾರಿಯನ್ನು ಹಿಂದಕ್ಕೆ ಕರಸಿಕೊಂಡು ಬೇರೊಬ್ಬರನ್ನು ನೇಮಿಸಬಹುದು. ಈ ರೀತಿ ನೇಮಿಸಲ್ಪಟ್ಟ ಅಧಿಕಾರಿಗಳ ಸಂಬಳ ಮತ್ತು ಬತ್ಯಗಳನ್ನು ಸರ್ಕಾರದವರು ಗೊತ್ತು ಮಾಡುವರು. ಪೌರಸಭೆಯವರು ಅದನ್ನು ಕೊಡಬೇಕು. ಈ ಅಧಿಕಾರಿಗಳ ರಜ, ವಿರಾಮ ವೇತನ, ಗ್ರಾಟ್ಯೂಇಟಿ ಮುಂತಾದ ಅಂಶಗಳೂ, ಮೈಸೂರು ಸರ್ಕಾರೀ ನೌಕರಿಯ ಕಾನೂನಿನಂತೆಯೂ, ಮತ್ತು ಸರ್ಕಾರದವರಿಂದ ಮಾಡಲ್ಪಡುವ ಇತರ ನಿಯಮಗಳಂತೆಯೂ ನಿರ್ಣಯಿಸಲ್ಪಡುವುವು.

ಮೇಲ್ಕಂಡ ನಿಯಮಗಳು ಜಾರಿಗೆ ಬಂದರೆ ಈ ಸಂಸ್ಥೆಗಳು ಕೇವಲ ತೋರಿಕೆಯ ಸಂಸ್ಥೆಗಳಾಗುತ್ತವೆ. ಅವುಗಳನ್ನು ಸ್ಥಾಪಿಸಿದ ಉದ್ದೇಶಕ್ಕೇ ಭಂಗಬರುತ್ತದೆ. ತಮ್ಮ ತಮ್ಮ ನೌಕರರನ್ನು ತಾವು ನೇಮಿಸುವುದಕ್ಕೆ ಪ್ರತಿಯೊಂದು ಸಂಸ್ಥೆಗೂ ಅಧಿಕಾರವಿರಬೇಕು. ಯಾರ ಹಣವನ್ನು ಯಾವ ಅಧಿಕಾರಿಯು ತೆಗೆದುಕೊಳ್ಳುತ್ತಾನೋ ಅವರಿಗೆ ಆತನು ಅಧೀನನಾಗಿರಬೇಕು. ಅದು ಬಿಟ್ಟು ಹಣ ಕೊಡುವವರೊಬ್ಬರು, ಆಜ್ಞೆ ಮಾಡುವವರು ಮತ್ತೊಬ್ಬರಾದರೆ ಅದು ತಲೆ ಕೆಳಗಿನ ವ್ಯಾಪಾರವಾಗುತ್ತದೆ. ಈ ನಾಗರಿಕ ಕಾಲದಲ್ಲಿ ಇಂತಹ ನಿರ್ಬಂಧಗಳನ್ನು ಯಾರೂ ಒಪ್ಪುವುದಿಲ್ಲ. ನಮ್ಮ ಪೌರಸಭೆಗಳವರೂ ಇದನ್ನು ಖಂಡಿಸುತ್ತಾರೆಂದು ನಾವು ನಂಬಿದ್ದೇವೆ.

ಖೈದಿಗಳ ಸ್ವರ್ಗವಂತೆ.

ಅಂಡಮಾನ್ ದ್ವೀಪಗಳು ಖೈದಿಗಳ ಸ್ವರ್ಗವಂತೆ! ಭೂಲೋಕದ ನರಕವಲ್ಲವಂತೆ. ಅಲ್ಲಿರುವ ಖೈದಿಗಳು ಮನೆಮಠಗಳಿಂದ ದೂರವಾಗಿರುವುದೊಂದೇ ಅವರಿಗೆ ಶಿಕ್ಷೆ. ಉಳಿದ ವಿಚಾರಗಳಲ್ಲೆಲ್ಲಾ ಅವರೇ ರಾಜರು—ಇವೇ ಮುಂತಾದ ಅಭಿಪ್ರಾಯಗಳನ್ನು ಇಂಡಿಯಾ ಸರ್ಕಾರದ ಹೋಂ ಮೆಂಬರಾದ ಸರ್ ಹೆನ್ರಿ ಕ್ರೇಕರು ತಿಳಿಸಿದರು. ಅವರು ಮೊನ್ನೆ ತಾನೇ ವಿಹಾರಾರ್ಥವಾಗಿ ಅಲ್ಲಿಗೆ ಹೋಗಿಬಂದರು. ಅಲ್ಲಿನ ವಾತಾವರಣ, ದವಾಗುಣ, ಸುಂದರ ನೋಟಗಳ ರಸಾನುಭವವನ್ನು ಮಾಡಿಕೊಂಡು ಸಂತೋಷಪಟ್ಟರು. ಬಂದೊಡನೆ ಪತ್ರಿಕಾ ಪ್ರತಿನಿಧಿಗಳನ್ನು ಕರೆದು ಒಂದು ಭೇಟಿಯನ್ನು ಕೊಟ್ಟರು. ಅದರಲ್ಲಿ ಈ ಅಭಿಪ್ರಾಯವನ್ನು ತಿಳಿಸಿದರು. ಅಂಡಮಾನಿನಲ್ಲಿ ಖೈದಿಗಳನ್ನು ವಿಶ್ವಾಸದಿಂದ ಕಾಣುವಂತೆ ಪ್ರಪಂಚದಲ್ಲಿ ಮತ್ತೆಲ್ಲಿಯೂ ಕಾಣುವುದಿಲ್ಲವೆಂದು ಅವರು ಹೇಳಿದರು. ಕ್ರಾಂತಿಕಾರರ ಪೈಕಿಯ ಖೈದಿಗಳು ಯಾವ ಪುಕಾರನ್ನೂ ಮಾಡಲಿಲ್ಲವೆಂದರು. ಖೈದಿಗಳೆಲ್ಲರೂ ಅಲ್ಲಿ ಆನಂದವಾಗಿದ್ದರೆಂದೂ ವಸತಿಯಲ್ಲಿ ಎಲೆಕ್ಟ್ರಿಕ್ ದೀಪಗಳೂ, ಫ್ಯಾನುಗಳೂ, ಇವೆಯೆಂದೂ ಹೇಳಿದರು.

ಒಂದುಸಾರಿ ಮೈಸೂರು ಸಂಸ್ಥಾನದ ಜೈಲುಗಳ ದುಸ್ಥಿತಿಯ ವರ್ಣನೆಯೊಂದನ್ನು ಪ್ರಜಾಪ್ರತಿನಿಧಿ ಸಭೆಯಲ್ಲಿ ಶ್ರೀ ಕೆ ಟಿ. ಭಾಷ್ಯಂರವರು ಮಾಡುತ್ತಿದ್ದರು. ಆ ಸಮಯದಲ್ಲಿ ಅಂದಿನ ಸಚಿವರಾಗಿದ್ದ ಮಿ॥ [illegible]ರವರು ಇಂದಿನ ಹೋಂ ಮೆಂಬರಂತೆ ಜೈಲುಗಳ ಪ್ರಶಂಸೆಯನ್ನು ಮಾಡತೊಡಗಿದರು. ಹಾಗಾದರೆ ತಾವೂ ಕೆಲವು ದಿವಸ ಅಲ್ಲಿ ವಾಸಮಾಡಬಾರದು ಸ್ವಾಮಿ! ಎಂದು ಭಾಷ್ಯಂರವರು ಕೇಳಿದರು. ಸಭೆಯಲ್ಲಿ ಗೊಳ್ಳೆಂದು ನಕ್ಕಿತು. ಈ ಸಮಯದಲ್ಲಿ ಅದು ಜ್ಞಾಪಕಕ್ಕೆ ಬರುವುದು.

ಅಂಡಮಾನ್ ದ್ವೀಪವೆಂದರೆ ಘೋರ ನರಕವೆಂದೂ, ಯಮಲೋಕದ ಹಿಂಸೆಗಳೆಲ್ಲವೂ ಇಲ್ಲಿಯೇ ಕೊಡಲ್ಪಡುವುವೆಂದೂ ಹಲವರಿಂದ ವರ್ಣಿಸಲ್ಪಟ್ಟಿದೆ. ಸರ್ ಕ್ರೇಕರು ಅದನ್ನು ಸ್ವರ್ಗಕ್ಕೆ ಹೋಲಿಸಿದರು. ಅವರೂ ಅಲ್ಲಿಗೆ ಹೋಗಿ ವಾಸಿಸಲು ಯಾರೂ ಅಡ್ಡಿಪಡಿಸುವುದಿಲ್ಲವೆಂದು ನಾವು ಭರವಸೆಯಿಂದ ಹೇಳಬಹುದು.

ಮೋಸ

ಚಿತ್ರದುರ್ಗ ಡಿಸ್ಟ್ರಿಕ್ಟಿನಿಂದ ಒಂದು ಕ[illegible]ಗ ೯ ತಿಂಗಳಿಂದ ಹಾರನ ಹಳ್ಳಿಯಲ್ಲಿದ್ದ ಒಬ್ಬ ಅಕ್ಕಸಾಲಿಯು ಒಡವೆ ಮಾಡಿಕೊಡುತ್ತೇನೆಂದು ಹೇಳಿ ಒಂದು ಸಾವಿರಕ್ಕೆ ಮೇಲ್ಪಟ್ಟು ಬಾಳುವ ಒಡವೆಗಳನ್ನು ತೆಗೆದುಕೊಂಡು ಪರಾರಿಯಾಗಿದ್ದಾನೆಂದು ವರದಿ. ಅವನ ಹೆಸರು ಸಿದ್ದನಹಳ್ಳಿ ಕ[illegible]ಪ್ಪನಂತೆ.

ಮಿಷನೆರಿಗಳ ವಿಚಾರ.

(ಲೇಖಕರು—ಶ್ರೀ ಜೆ. ಸ್ವಾಮಿದಾಸ್)

ನನಗೆ ಬಾಲ್ಯದಿಂದಲೂ ವಿಮರ್ಶೆಯ ಮಾರ್ಗಗಳಲ್ಲಿ ಅಭಿರುಚಿ ಹೆಚ್ಚು. ಸಕಲ ವಿಷಯಗಳ ವಿಚಾರದಲ್ಲಿಯೂ ಸಹಾನುಭೂತಿ ಪದ ತನ್ನದು ಹೆಚ್ಚು ಮತ್ತೂ ಬ್ಬರ ಮತವೇ ಎಂಬ ಭೇದವೇ ತೋರುವುದಿಲ್ಲ. ಮತಾಚಾರಗಳ ವಿಚಾರ ಹಂಸಕ್ಷೀರ ನ್ಯಾಯದಂತೆ ನನ್ನ ಭಾವನೆ. ಸಾಧಾರಣ ರಾಗಿ ಹಿಂದುಗಳಾಗಲಿ ಕ್ರೈಸ್ತರುಗಳಾಗಲಿ ಅಥವಾ ಇತರರು ಯಾರೇ ಆಗಲಿ ತಮ್ಮ ಮತಾಚಾರ್ಯರು ತಮತಮಗೆ ಹೇಳಿದ ರೀತಿಗಳಲ್ಲಿ ನಡೆಯುತ್ತಾ ಸ್ವಮತನಿಷ್ಠರಾದರೂ ಪರಮತ ಸಹನೀಯರಾಗಿಯೂ ಇರಬೇಕೆಂಬುದೇ ನನ್ನ ಇಷ್ಟ. ಮತದ ಹೆಸರಿನಲ್ಲಿ ಅನ್ಯಾಯಗಳೂ ಅನಾಚಾರಗಳೂ ನಡೆಯುತ್ತಿರುವವರೆಗೆ ಆ ಮತವಲ್ಲ ... ದವ ಹೆಸರಿನಿಂದ ನಡೆಯುತ್ತಿರುವ ಘಾತಕತನ.

ನಾನು ಅನೇಕ ವರುಷಗಳಿಂದಲೂ ಮಿಷನರಿಗಳ ಒಡನಾಟದಲ್ಲಿಯೇ ಇದ್ದವ. ಮಿಷನರಿಗಳ ಜೀವನಗಳನ್ನು ವಿಮರ್ಶಿಸುತ್ತಾ ಬರುತ್ತಿರುವೆನು. ... ಮತ ಎಂಬುದಕ್ಕಿಂತಲೂ ಧರ್ಮ ಎಂಬುದು ಗಹನವಾದುದು. ಮತ ... ಗಳಿಗೆ ತಿಳಿಯದೇ ಗಂಟುಹಾಕಲ್ಪಡುವ ... ಧರ್ಮವು ಮಾನವನ ಐಹಿಕಾಮುಷ್ಮಿಕ ಶ್ರೇಯಸ್ಸನ್ನು ... ಸ್ವಾನುಭವ ... ವಿಶಾಲವೃಷ್ಟಿಯಿಂದಲೂ ಸರ್ವ ... ತ್ವದಿಂದಲೂ ಕೂಡಿರುತ್ತದೆ. ... ಸಂಕುಚಿತಾಭಿಮಾನದಿಂದ ಕೂಡಿದ್ದು, ಬಂದೇ ದಾರಿಯಲ್ಲಿ ಕುರುಡ ... ನಡೆಸಿದಂತೆ ನಡೆಸುತ್ತದೆ. ಮತ ... ಕರು ಸಾರ್ವಜನಿಕ ದೃಷ್ಟಿಯಿಂದ ... ಯ ಕಾರ್ಯಗಳಲ್ಲಿ ಕೈ ... ಹಣಗಳಿಸುವರು. ಮತ್ತು ... ಸಾಧಿಸಿಕೊಳ್ಳುವರು. ... ಗಳಾದರೋ ತ್ರಿಕಾಲಗಳಲ್ಲೂ ... ವಿಚಾರ ವಿಮರ್ಶೆ ... ಪರು.

... ವುದನ್ನು ಮಾಡದವನಧಮ. ಆ ... ಇರುವವ ಮಧ್ಯ ... ವುದೊಂದು ಮಾಡುವುದು ವ್ಯ ... ಉದರ ಅವನು ಅಧಮಾಧಮನು— ... ಆಡುವುದನ್ನೇ ಮಾಡಿ ... ಹೋದರೆ ಅವರ ಸ್ಥಿತಿಯು ... ಶೋಚನೀಯವಾದುದು. ಈ ಕಾಲ ... ರವು ವ್ಯಾಪಾರದ ಸರಕಿ ... ಮತವನ್ನು ಮಾರುವುದೂ ... ಎಂದರೆ ಅದಕ್ಕಿಂತಲೂ ... ವಿಲ್ಲ ಹೇಳುವುದು ಶಾಸ್ತ್ರ ... ವುದು ಮಸೀಕೆಂದ ಎಂಬಂ ... ಮತಪ್ರಚಾರಕರಾಗುವರೇ? ... ಲೋಲುಪ್ತರಾಗಿರು ... ಮತಪ್ರಚಾರ ಮಾಡುವರೇ? ಹೀ ... ಮತಪ್ರಚಾರ ಇ ... ಪ್ರಚಾರಕರಲ್ಲಿ ರಾಷ್ಟ್ರೀಯ ಬಾ ... ಕಾಣಸ್ವಾಲವಲ್ಲಿರುತ್ತದೆ.

ಧರ್ಮ ಪ್ರಚಾರಕರಲ್ಲಿ ರಾಷ್ಟ್ರೀಯ ಭಾವನೆಯು ಉಚ್ಛ್ರಾಯಸ್ಥಿತಿಯಲ್ಲಿರುತ್ತದೆ.

ನನಗೆ ಮಿಷನರಿಗಳೆಂದರೆ 15 ವರುಷಗಳ ಹಿಂದೆ ಒಂದು ಗೌರವಭಾವನೆಯಿತ್ತು. ಇವರು ಗುರುಗಳ ಕೈಕೆಳಗೆ ತಯಾರಾದವರೆಂದೂ ಉತ್ತಮ ತರದ ಮನೋಭಾವವುಳ್ಳವರೆಂದೂ ಪರೋಪಕಾರಕ್ಕಾಗಿ ನಮ್ಮ ದೇಶದಲ್ಲಿರುತ್ತಾರೆಂದೂ ಬಹಳ ಕಷ್ಟಗಳನ್ನು ಅನುಭವಿಸುತ್ತಾ ಶಾಂತಿಕಳೆಯುತ್ತಾರೆಂದೂ ಭಾರತದ ಹಿತೈಷಿಗಳೆಂದೂ ದೇವರ ರಾಯಭಾರಿಗಳೆಂದೂ ಒಂದು ಘನವಾದ ಭಾವನೆಯು ಇತ್ತು. ಅದರ ಯಾವಾಗ ನಾನು ಇವರ ಬೋಧನೆಯನ್ನೂ ಇವರ ಸಾಧನೆಯನ್ನೂ ಸರಿದೂಗಲು ಪ್ರಾರಂಭಿಸಿದೆನೋ ಆಗ ನನ್ನ ಮನೋಭಾವವೇ ಬದಲಾಯಿಸಿತು. ಆಗಲೇ ನಾನು ನನ್ನ ಅನುಭವ ಪ್ರಚಾರಮಾಡಲು ಪ್ರಾರಂಭಿಸಿದೆನು.

ನನ್ನ ಅಭಿಪ್ರಾಯದಲ್ಲಿ ಮಿಷನರಿಗಳ ಕಾರ್ಯಗಳು ತೀರಾ ಭಿನ್ನವಾದವು. ಇವರು ಯಾವ ಗುರುಸೇವೆಯನ್ನೂ ಮಾಡಿದವರಲ್ಲ. ... ಯೇಸುಸ್ವಾಮಿಯಿಂದ ಇವರು ... ಗುರುವನ್ನು ಸೇವಿಸುತ್ತೇವೆ ಎಂದು ನಟಿಸುವ ನಾಟಕಗಾರರಾಗಿದ್ದಾರೆ. ಯೇಸುಸ್ವಾಮಿಯೆಂಬುವನು ಇವರ ಆಟಕ್ಕೆ ಒಂದು ಉಪಕರಣ ಸದೃಶನಾಗಿಯೂ ಇವರಿಗೆ ಇರುವ ಗುರುಗಳು ಮಿಷನರಿಗಳ ಮನೋಭಾವದ ವಿಚಾರ ಈಗ ಗ್ರಹಿಕೆಯಾಯಿತು. ... ಸೋಲುವವರು ... ಸ್ವದೇಶ ಸ್ವಜನ ಸ್ವಗ್ರಾಮಗಳನ್ನು ವಿನಾಶಮಾಡುವ ಬುದ್ಧಿಯೇ ಇವರಿಗೆ ರಕ್ತಗತವಾಗಿದೆ. ಇವರು ಪರೋಪಕಾರಕ್ಕಾಗಿ ನಮ್ಮ ದೇಶದಲ್ಲಿರುವುದಿಲ್ಲ. ತಮ್ಮ ಸುಖಜೀವನಕ್ಕೆ ಇಲ್ಲಿರುತ್ತಾರೆ. ಬಡಜನರಮೇಲೆ ದೊರೆತನಮಾಡುವುದಕ್ಕೆ ಇಲ್ಲಿರುತ್ತಾರೆ. ತಮ್ಮ ರಾಷ್ಟ್ರದ ಬಿ... ಮಂತ್ರೋಪದೇಶಕ್ಕಾಗಿ ಇಲ್ಲಿರುತ್ತಾರೆ. ಇವರು ಇಹದಲ್ಲಿಯೇ ಸ್ವರ್ಗಸುಖವನ್ನು ಅನುಭವಿಸುತ್ತಾರೆ. ಭೂಗೋಳಕ್ಕೆ ಇವರಿಗಿಂತಲೂ ಬೇರೆ ಭಿಕ್ಷುಕರಿಲ್ಲ.

ಮಿಷನರಿಗಳು ಕಷ್ಟಪಡುತ್ತಾರೆಂದು ಭ್ರಾಂತರಾದ ಜನರು ವಿದೇಶಗಳಿಂದ ಅತ್ಯಂತರ ದ್ರವ್ಯವನ್ನು ಕಣ್ಣುಮುಚ್ಚಿ ಕೊಂಡು ಕಳುಹಿಸುತ್ತಾರೆ. ಈ ದೇಶದ ಯಾವುದಾದರೂ ಮಿಷನರಿಯನ್ನೇ ನೋಡಿ. ಅವನ ವೈಭವ, ಸುಖ ಇವು ರಾಜಭೋಗಗಳಾಗಿರುತ್ತವೆ. ಮಿಷನರಿಗಳು ಒಂದು ಸಾರಿ ಈ ದೇಶಕ್ಕೆ ಬಂದರೆ ಪುನಃ ತಮ್ಮ ದೇಶಕ್ಕೆ ಹೋಗಲು ಬಯಸುವುದೇ ಇಲ್ಲ. ಮಿಷನರಿಗಳು ಗುರುವು ... ಕನಾಗಿದ್ದು ಪುರಂದರದಾಸರಂತೆ ಕಾಲಹಾಕಿದರು. ಇವರಾದರೋ ಭೂಲೋಕದ ದೇವೇಂದ್ರರಾಗಿರುತ್ತಾರೆ. ಇವರು ಸದ್ಯಕ್ಕಾಗಿ ನಮ್ಮ ನಾಡಿನಲ್ಲಿರುತ್ತಾರೆ. ಇದು ಪ್ರತ್ಯಕ್ಷವಾಗಿದೆ. ಇವರು ಭಾರತದ ಹಿತೈಷಿಗಳಲ್ಲ. ಇವರು ಲಂಡನ್ ಹಿತೈಷಿಗಳು. ಇದಕ್ಕೆ ಇವರ ಕಾರ್ಯಗಳೇ ಸಾಕ್ಷಿಯಾಗಿರುತ್ತವೆ. ಇವರು ಸಮಯೋಚಿತವಾಗಿ ವರ್ತಿಸಬಲ್ಲರು. ನಂಬಿಕೆಗೆ ಅರ್ಹರಲ್ಲ. ಮಿಷನರಿಗಳು ತಾವು ದೇವರ ಕಡೆಯವರೆಂದೂ ರಾಯಭಾರಿಗಳೆಂದೂ ಹೇಳಿಕೊಳ್ಳುವರು. ಇದನ್ನು ನಂಬಿ ಕೆಡಬೇಡಿರಿ. ದೇವರು ಕೊಡುವ ಈ ದಿನ ಇವರಿಂದ ದೂರನಾಗಿರುವೆನು. ನಾನು ಬಹು ಸೂಕ್ಷ್ಮವಾಗಿಯೂ ದೀರ್ಘವಾದ ವಿಮರ್ಶೆಯಿಂದಲೂ ಮಿಷನರಿಗಳ ಜೀವನಗಳನ್ನು ಕಂಡುಹಿಡಿದಿರುತ್ತೇನೆ. ನಾನು ಯಾವ ಯಾವ ವಿಚಾರಗಳನ್ನು ಕಂಡು ಹಿಡಿದಿರುತ್ತೇನೋ ಆ ವಿಚಾರಗಳನ್ನೆಲ್ಲಾ ವಿಶಾಲ ಜಗತ್ತಿನಲ್ಲಿ ತಿಳಿಸಬೇಕೆಂದು ನನ್ನ ಅಂತರಂಗದ ಆಶೆ.

ಶ್ರೀ ವ್ಯಾಸರಾಯ ಮಠ, ಸೋಸಲೆ.

ಧರ್ಮ ಸಂಸ್ಥೆಯಾದ ಈ ಮಠದ ವಿಚಾರದಲ್ಲಿ ಇತ್ತೀಚೆಗೆ ಕಳವಳವನ್ನುಂಟು ಮಾಡುವ ಹಲವು ಸುದ್ದಿ ಸಮಾಚಾರಗಳು ಹರಡಿವೆ. ಇವುಗಳ ಸತ್ಯಾಂಶವನ್ನು ಸಂಶೋಧಿಸಲು ಇದುವರೆಗೆ ಯಾರೂ ಪ್ರಯತ್ನ ಪಟ್ಟಂತೆ ಕಾಣುವುದಿಲ್ಲ. ಇದೇ ತಿಂಗಳು ಎರಡನೇ ತಾ|| ಈ ಮಠದ ಉಭಯ ... ಸ್ವಾಮಿಗಳಿಗೂ ವೈಮನಸ್ಯವುಂಟಾಗಿ ಅವರ ಪೈಕಿ ಹಿರಿಯವರು ಸರ್ಕಾರದ ಸಹಾಯವನ್ನು ಕೋರಿ ಮುಜರಾಯಿ ... ಮುಖ್ಯಾಧಿಕಾರಿಗಳಿಗೆ ತಂತಿ ಕಳುಹಿಸಿದ್ದರೆಂಬ ಬಲವಾದ ವದಂತಿಯು ಹರಡಿದೆ. ಇವುಗಳೆಲ್ಲಕ್ಕೂ ಮೂಲಕಾರಣವೇ ... ವಿಷಾದದಿಂದ ... ಸರ್ಕಾರದ ಪಕ್ಷದಿಂದಲೂ ... ದೊಡ್ಡ ಮನುಷ್ಯರಿಂದಲೂ ಸ ... ಒಂದು ಸಮಿತಿಯನ್ನು ... ತನಿಖೆ ಮಾಡುವ ... ಅವಶ್ಯಕತೆ ಇರುತ್ತದೆ ... ಹೇಳಬೇಕಾಗಿದೆ. ನಮ್ಮ ... ಈ ಸಂದಿಗ್ಧ ಸಮಯದಲ್ಲಿ ... ಸ್ವಾಮಿಯವರಿಂದ ... ಈ ಮಠ ಸಂಸ್ಥೆಯನ್ನು ... ದಾಯಕವಾದ ... ಕರೆದು ... ಎಂದು ... ಮಹಾಜನಗಳು ... ರಯುತ್ತಾರೆ.

ಆಕಾಶವಾಣಿ ಕಾರ್ಯಕ್ರಮ

ಸೋಮವಾರ 8 ರಿಂದ 9 ಇಂಗ್ಲೀಷ್ ಗಾನ Nuts and More Nuts ಮಂಗಳವಾರ 6 30 ರಿಂದ 7 15 ಕರ್ನಾಟಕ ವಾದ್ಯ ಸಂಗೀತ ... ಶ್ರೀ ... ರಾಯರಿಂದ. ಬುಧವಾರ 8 ರಿಂದ 9 15 ಕರ್ನಾಟಕ ಗಾನ, ಜೀವನ ಚರಿತ್ರೆ "..." ಗುರುವಾರ 6 30 ರಿಂದ 7 15 ಕನ್ನಡ ನಾಟಕ, ಪಾರ್ವತೀ ಪರಿಣಯ ನಗರರಾತ್ರೆ "ಮುಂಬಾಳುತನ" ಶ್ರೀ ... ಯವರಿಂದ.

ರಾಜಧಾನಿಯಲ್ಲಿ ನೀರಿನ ಕೊರತೆ.

ಸ್ವಾಮಿನ್,

ಮೈಸೂರು ಪಟ್ಟಣದಲ್ಲಿ ನೀರಿನ ತೆರಿಗೆಯನ್ನು ವಸೂಲು ಮಾಡುವುದರಲ್ಲಿ ತೋರಿಸುವಷ್ಟು ಶ್ರದ್ಧೆಯನ್ನು ಅಧಿಕಾರಿಗಳು ನೀರು ಸರಬರಾಜಿನ ವಿಷಯದಲ್ಲಿ ತೋರಿಸುತ್ತಿರುವುದಿಲ್ಲ. ಇದಕ್ಕಾಗಿ ಅತ್ಯಂತ ಎಚ್ಚರಿಸಬೇಕಾಗಿದೆ. ನೀರು ಸರಬರಾಜಿನಲ್ಲಿ ಏನು ಕಡಿಮೆಯಾದರೂ, ನಲ್ಲಿಗಳಲ್ಲಿ ನೀರು ಸಂಪೂರ್ಣವಾಗಿ ನಿಲ್ಲಿಸಲ್ಪಡುವ ವಿಷಯದಲ್ಲಿ ಜನರಿಗೆ ಸರಿಯಾದ ತಿಳುವಳಿಕೆ ಕೊಡುತ್ತಿಲ್ಲ. ಇದು ಅಕ್ಷಮ್ಯ ವಾದುದು. ಒಂದು ವೇಳೆ ಸಂದರ್ಭಗಳಲ್ಲಿ ನಲ್ಲಿಗಳ ನೀರನ್ನು ನಿಲ್ಲಿಸಬೇಕಾಗುವುದೇ ಆಗುವಲ್ಲಿ ನಾಲ್ಕೈದು ದಿನಗಳು ಮುಂಚಿತವಾಗಿಯೇ ಜನರಿಗೆ ತಿಳುವಳಿಕೆಯನ್ನು ಕೊಡುತ್ತಿದ್ದರೆ ಜನರು ತಮಗೆ ಬೇಕಾದಷ್ಟು ನೀರನ್ನು ಶೇಖರಿಸಿಟ್ಟುಕೊಳ್ಳುತ್ತಿದ್ದರು. ಈಗ ಹಾಗೆ ಮಾಡುತ್ತಿರುವಂತೆ ಕಾಣುವುದಿಲ್ಲ. ಇದಾದರೋ ... ಮಧ್ಯಾಹ್ನ ನಲ್ಲಿಗಳಲ್ಲಿ ನೀರು ನಿಂತುಹೋಯಿತು. ಜನರಿಗೆ ಕುಡಿಯುವುದಕ್ಕೆ ಒಂದು ತೊಟ್ಟು ನೀರಿಲ್ಲ. ಕೊಡಗಳನ್ನು ಪಾತ್ರೆಗಳನ್ನು ಹಿಡಿದು ಕೊಂಡು ... ಗುಂಪುಗುಂಪಾಗಿ ... ಬರುವ ... ನಲ್ಲಿಗಳಲ್ಲಿ ನೀರು ಬಂತು ... ಈ ಕಷ್ಟಕ್ಕೆ ಯಾರು ಜವಾಬ್ದಾರರು? ಕೆಲವು ದಿನಗಳಲ್ಲಿ ಬೆಳಗಿನಹೊತ್ತೇ ನೀರು ನಿಂತುಹೋಗುತ್ತದೆ. ಜನರು ಸ್ನಾನಮಾಡುತ್ತಿರುತ್ತಾರೆ, ಅಡಿಗೆ ಮಾಡುತ್ತಿರುತ್ತಾರೆ. ಇತರ ಅನೇಕ ಕಾರ್ಯಗಳಿಗೆ ನೀರನ್ನು ಅಪೇಕ್ಷಿಸುತ್ತಾರೆ. ಈಗ ಜಾನಿಗಳೂ ಮುನ್ಸಿಪಲ್ ... ಇಂತಹ ಸಮಯಗಳಲ್ಲಿ ತಿಳುವಳಿಕೆಯನ್ನು ಕೊಡದೆ ನೀರನ್ನು ನಿಲ್ಲಿಸುವುದರಿಂದ ಬಹಳ ತೊಂದರೆಯುಂಟಾಗುವುದು ಈ ಬೇಸಿಗೆಯಲ್ಲಂತೂ ಈ ತೊಂದರೆಯು ಹೇಳಲಾರದು.

ತೆರಿಗೆಯನ್ನು ವಸೂಲು ಮಾಡಲು ಬಹಳ ಅನ್ಯಾಯದ ಕ್ರಮಗಳನ್ನು ಅನುಸರಿಸುತ್ತಿರುವರು. ತೆರಿಗೆ ಕೊಡುವವರ ಮನೆಯ ನಲ್ಲಿಗಳು ಎಂದು ಮಾಡಲ್ಪಡುವುವು. ... ಗುಪ್ತವಾಗಿ ... ಗಳನ್ನು ಬಿಡಿಸಿಕೊಂಡು ... ಎಂದು ನೀರನ್ನು ನಿಲ್ಲಿಸುವ ದೃಶ್ಯವು ಕೇವಲ ... ಇದು ... ಜನರಿಗೆ ತೊಂದರೆಯಾಗದಂತೆ ಏರ್ಪಾಡುಗಳನ್ನು ಮಾಡಲು ನಮ್ಮ ಪೌರಸಭಾಸದರು ಗಮನ ಕೊಡಬೇಕೆಂದು ನಂಬಲಾಗಿದೆ.

ಪುರವಾಸಿ

ಮಹಾತ್ಮರು

ಮಹಾತ್ಮ ಗಾಂಧಿಯವರು ನಂದಿಬೆಟ್ಟದಲ್ಲಿ ವಿಶ್ರಾಂತಿಯನ್ನು ಹೊಂದುತ್ತಿರುವರು ಅವರೊಡನೆ ದೇಶಭಕ್ತರುಗಳಾದ ಸರ್ದಾರ್ ವಲ್ಲಭಾಯಿ ಪಟೇಲರೂ, ಮಹದೇವ ದೇಸಾಯಿಯವರೂ, ಜೆ. ಸಿ. ಕುಮಾರಪ್ಪನವರೂ, ಮಣಿಬೇನ್ ಪಟೇಲರೂ ಇರುವರು ಮಹಾತ್ಮರು ರಾಜಕೀಯ ವಿಚಾರಗಳನ್ನು ಚರ್ಚಿಸುತ್ತಿಲ್ಲ ಹೋಮಿಯೋಪತಿ ವೈದ್ಯಶಾಸ್ತ್ರ ವಿಚಾರವನ್ನು ಪರಿಶೀಲಿಸುತ್ತಿರುವರು ಮತ್ತು ಇತರ ಸಾಮಾನ್ಯ ವಿಚಾರಗಳನ್ನು ಪರ್ಯಾಲೋಚಿಸುವರು ಪ್ರತಿದಿನವೂ ಅವರ ಬಿಡಾರದಲ್ಲಿ ಪ್ರಾರ್ಥನೆ ನಡೆಯುತ್ತಿದೆ ಅದರಲ್ಲಿ ಅಲ್ಲಿ ಇರುವವರೆಲ್ಲರೂ ಭಾಗಿಗಳಾಗಿರುತ್ತಿರುವರು ಇನ್ನು ಎರಡುವಾರ ಅಲ್ಲಿಯೇ ಇರುವರು

ಮಹಾತ್ಮರು ನಂದಿಬೆಟ್ಟವನ್ನು ಪಾದಚಾರಿಗಳಾಗಿಯೇ ಹತ್ತಿದರು ಅಲ್ಲಿ ಮೈಸೂರು ಸರ್ಕಾರದವರು ಅವರಿಗೆ ಸಕಲ ಸೌಕರ್ಯಗಳನ್ನೂ ಒದಗಿಸಿರುವರು

ಜಪಾನಿನ ವಜ್ರಮುಷ್ಟಿ

ಜಪಾನ್‌ದೇಶವು ಚೀನದಲ್ಲಿ ಸೈನ್ಯಪಡೆಯನ್ನು ಬಲಪಡಿಸುತ್ತಿದೆ ದಕ್ಷಿಣ ಪಸಿಫಿಕ್ ದ್ವೀಪಗಳಲ್ಲಿ ತನ್ನ ಹಕ್ಕುಗಳನ್ನು ಅದು ಎಂದಿಗೂ ಬಿಟ್ಟುಕೊಡುವುದಿಲ್ಲ ಇತರ ಕಡೆಗಳಲ್ಲಿ ಸ್ವಲ್ಪ ರಿಯಾಯಿತಿಯನ್ನು ತೋರಿಸಬಹುದು ಇಲ್ಲಿ ತೋರಿಸುವುದಿಲ್ಲ ಇದರಿಂದ ಚೀನದ ಸಾರ್ವಭೌಮತ್ವಕ್ಕೆ ಲೋಪಬರುವುದಿಲ್ಲವೆಂದು ಜಪಾನಿನವರು ಭಾವಿಸುವರು ಹತ್ತು ಸಾವಿರದ ಸೈನ್ಯವನ್ನು ಜಪಾನಿನವರು ಶೇಖರಿಸುತ್ತಿರುವರು.

ಆಂಗ್ಲೋ—ರಷ್ಯನ್ ನೌಕಾ ಸಂಬಂಧ.

ನೌಕಾ ಸಂಬಂಧವಾಗಿ ರಷ್ಯಾದೇಶವು ಒಂದು ಹೇಳಿಕೆಯನ್ನು ಇಂಗ್ಲೆಂಡಿಗೆ ಕೊಟ್ಟಿದೆ ಇದರಪ್ರಕಾರ ರಷ್ಯದ ನೌಕಾಪ್ರಮಾಣವನ್ನು ಬದಲಾಯಿಸುವುದಿಲ್ಲ ಜಪಾನಿನೊಡನೆ ನಡೆಯುವ ವ್ಯವಹಾರವನ್ನನುಸರಿಸಿ ರಷ್ಯವು ತನ್ನ ನೌಕಾಬಲವನ್ನು ನಿರ್ಣಯಿಸುವುದು

"ತತ್ವ ರತ್ನ ಪ್ರಕಾಶ"

ವೇ|| ಬ್ರ|| ಪಂಡಿತ ಚೇಮನಹಳ್ಳಿ ರಘುನಾಥಾಚಾರ್ಯರು ತಾವು ರಚಿಸಿರತಕ್ಕ "ತತ್ವರತ್ನ ಪ್ರಕಾಶ" ಎಂಬ ಗ್ರಂಥದ ಮೊದಲನೇ ಭಾಗವನ್ನು ನಮಗೆ ಕಳುಹಿಸಿರುತ್ತಾರೆ ಈ ಗ್ರಂಥವು ವೇದಾಂತ ತತ್ವಗಳನ್ನು ಬಹಳ ಸುಲಭವಾಗಿ ನಿರೂಪಿಸುತ್ತದೆ ಇದನ್ನು ಆಚಾರ್ಯರು ಶ್ರೀಮದುತ್ತರಾದಿ ಮಠಾಧಿಪತಿಗಳಿಗೆ ಅರ್ಪಿಸಿರುತ್ತಾರೆ ಬೆಲೆ ಎಂಟಾಣೆ ಸರ್ವರೂ ಕೊಂಡು ಓದತಕ್ಕದ್ದಾಗಿದೆ

ರೈಟ್ ಆನರಬಲ್
ವಿ. ಎಸ್. ಶ್ರೀನಿವಾಸಶಾಸ್ತ್ರಿಗಳು

ಇವರು ರಾಜಧಾನಿಗೆ ಬಂದು ರಾಜಾತಿಥಿಗಳಾಗಿ ರಾಮಮಂದಿರದಲ್ಲಿ ಇಳಿದಿರುವರು

"ಭಾರತಿಯ ಸ್ವತಂತ್ರ."

೧

ಕತ್ತಲಾಗಿಹುದಯ್ಯ ಭಾರತಿಯ ನಾಡಿನೊಳು
ಎತ್ತೆತ್ತ ನೋಡಲೂ ದ್ರೋಹಿಗಳೆ ಹೆಮ್ಮಗಿರುವ !
ರೋಗಕ್ಕೆ ಪೈಸೂತ ಹೇಡಿಗಳೆ ಹುಟ್ಟಿರುವ
ಏಗುತಲಿ ಹೆಣವಾದ ದೇಹದಲಿ ಬದುಕಿರುವ ॥

೨

ಹಿಂದಿನಾ ಸಾಮ್ರಾಜ್ಯವೆಲ್ಲೀಗಲಡಗಿಹುದು
ಎಂದಿಗೂ ಮರೆಯದಿಹ ಭಾರತಿಯ ನಾಡಿನೊಳು !
ತನ್ನೊಳಗೆ ಕಾವುಗಳೆ ಮಾತ್ಸರ್ಯಗಳ ಪಟ್ಟು
ಒಮ್ಮೊಡನೆ ಪರರ ಸಂಕೋಲೆಗಳ ನಳಿಸಿಟ್ಟು ॥

೩

'ಮಾತೆ ಭಾರತಿಯ ಸ್ವತಂತ್ರಂ ಮಂತ್ರವಂದೇ
ಮಾತರಂ' ಎಂಬುವನೆ ನೆನೆಯುತ್ತಲೆ ಓಡಿಸ್ಟ !
ನನೆದು ಗಗನದೊಳೇರಿ, ಅತ್ತ ಗಟ್ಟಿಂ ಹೋಗಿ
ನಗುತ ತನ್ನಿ ಭಾರತಿಯ, ಮಾತೆಯಾ ಪುತ್ರರೆ ! ॥

೪

ಮಾಡಿ ಸಾಹಸ ಹೆಣ್ಣಿ ಹಾಡಿ ಹಿತಬಂಧುಗಳೆ
ನೋಡಿ ಇಲ್ಲಿಯೆ ಓಡಿ ಕಾಣುವಳು ದೇವಿಯಳು !
ಜಾಡಿಸಿ ಕೈಗಳನು, ತಟ್ಟಿರೈ ತೊಡೆಗಳನು ನೀವು
ಹಾಡಿರೈ ನೀವು 'ಜೈ ಭಾರತಮಾತ' ಎಂಬುದನು ॥

೫

ಸಂಕೋಲೆಗಳ ಕಿತ್ತೆಸೆದು ನುಗ್ಗಿರೈ ವೀರರೆ!
ಬಿಂಕದಲಿ ಭಾರತಿಯ ಪೂಗಳಿರ್ಪೆ ನಾಡವರ !
ಕುನ್ನಿಗಳೆ? ಕತ್ತೆಗಳೆ? ಕುಂಟಕುರಿಗಳೆ? ನೀವು
ಇನ್ನು ಸ್ವಾತಂತ್ರ್ಯ ದೇವಿಯನು ಗಮನಿಸ ॥

— ಶ್ರೀರಾಮ

ಮದ್ರಾಸಿನಲ್ಲಿ ಪ್ರಜಾಪಕ್ಷ

ಮದ್ರಾಸಿನ ಕೆಲವು ಪ್ರಮುಖ ಮಹನೀಯರುಗಳು ಪ್ರಜಾಪಕ್ಷನೆಂಬ ಒಂದು ಸಂಸ್ಥೆಯನ್ನು ಸ್ಥಾಪಿಸಲು ಉದ್ಯುಕ್ತರಾಗಿರುವರು ಹೊಸರಾಜ್ಯಾಂಗ ಸುಧಾರಣೆಗಳನ್ನು ಕಾರ್ಯರೂಪಕ್ಕೆ ತಂದು ಅದರಿಂದ ಆಗತಕ್ಕ ಸಂಪೂರ್ಣ ಪ್ರಯೋಜನವನ್ನು ಪಡೆದು ಇನ್ನೂ ಹೆಚ್ಚಿನ ಪ್ರಯೋಜನವನ್ನು ಹೊಂದಲು ಉದ್ದೇಶಪಟ್ಟಿರುವರು ಬಡಜನರ ಆರ್ಥಿಕ ಸ್ಥಿತಿಯನ್ನು ಅಭಿವೃದ್ಧಿಪಡಿಸುವುದೇ ತಮ್ಮ ಉದ್ದೇಶವೆಂದು ಪ್ರಕಟಿಸಿರುವರು ಹೊಸ ಚಳುವಳಿಯನ್ನು ಹೂಡುವವರೆಲ್ಲರೂ ಬಡಜನರ ಉದ್ಧಾರವೆಂಬ ಹೆಸರಿನಲ್ಲಿಯೇ ತೋರುವರು ಬಡಜನರು ಉದ್ಧಾರವಾಗದಿದ್ದರೂ ಅವರುಗಳಿಗೆ ಮಂತ್ರಿ ಪದವಿಗಳೂ ಬಿರುದುಬಾವಲಿಗಳೂ ದೊರೆಯುವುದರಲ್ಲಿ ಅಡ್ಡಿಯಿಲ್ಲ ಈ ಸಂಗಡಕ್ಕೆ ಪೀಠಾಪುರದ ಮಹಾರಾಜರೂ, ಮದ್ರಾಸ್ ವಿಶ್ವವಿದ್ಯಾಲಯದ ಮಾಜಿ ವೈಸ್‌ಛಾನ್ಸೆಲ್ಲರಾದ ಸರ್ ವೆಂಕಟರತ್ನಂರವರೂ, ಇನ್ನೂ ನೂರಾರು ಜನ ಇತರ ಮುಂದಾಳುಗಳೂ ಸೇರಿರುವರು ಮದ್ರಾಸಿನಲ್ಲಿ ಪ್ರಜಾಮಿತ್ರವೆಂಬ ಸಂಗಡವೆಂದು ಮತ್ತೊಂದು ಗುಂಪು ಇರುವುದು, ಅದಕ್ಕೆ ಬೊಬ್ಬಿಲಿ ರಾಜರು ಮುಖಂಡರು ಈ ಎರಡು ಸಂಗಡಗಳೂ ಒಂದಾಗಿ ಸೇರಲು ನಿರ್ಧರಿಸಿರುವುವು

ಹಿಂದೀ ಪ್ರಚಾರ ಕಾರ್ಯವು ಸಫಲವಾಗಿದೆಯೆ?

(ಹಿಂದೀ ಪ್ರಚಾರ ಸಭಾ, ಮೈಸೂರು)

ಶಿಬಿರದ ಆಶ್ರಯದಲ್ಲಿ ನಿನ್ನೆ ಏನಬನುಮೊನ್ನಿನ ಪ್ರಸಕ್ತಾಲಿನಲ್ಲಿ (Parliamentary) ವಿಶೇಷ ಚರ್ಚೆಯು ನಡೆಯಿತು ಶ್ರೀ ವರ್ಮಾ ಅಂಬಳೆ ಸುಬ್ರಹ್ಮಣ್ಯ ಅಯ್ಯರ್‌ರವರು ಅಧ್ಯಕ್ಷ ಪದವಿಯನ್ನಿತ್ತರು ವಿಷಯವು "ಮೈಸೂರು ಹಿಂದಿ ಪ್ರಚಾರ ಸಭೆಯು ತನ್ನ ಉದ್ದೇಶದಲ್ಲಿ ಸಫಲತೆಯನ್ನು ಪಡೆದಿಲ್ಲ" ಬಹುಮತದಿಂದ ಠರಾವು ಪಾಸಾಯಿತು. ವಂದೇಮಾತರ ರಾಷ್ಟ್ರೀಯ ಗೀತದೊಡನೆ ಸಭೆಯು ಮುಕ್ತಾಯವಾಯಿತು

ವೈಮಾನಿಕರ ಸಾಹಸ

ಮಿಸೆಸ್ ಜಿಮ್. ಮಾಲಿಸನ್‌ರವರು ಹೊಸ ಪ್ರಮಾಣದ ಒಂದು ದಾಖಲೆಯನ್ನು ಸ್ಥಾಪಿಸಿರುವರು ಕೇಪ್ ಎಂಬಲ್ಲಿ ಅವರು ವಿಮಾನದಲ್ಲಿ ಹೊರಟು ಕ್ರಾಯ್ಡನ್ ಎಂಬಲ್ಲಿಗೆ 112 ಗಂಟೆ 17 ನಿಮಿಷಗಳಲ್ಲಿ ಬಂದು ಸೇರಿದರು ಟೆಮ್ಮಿ ರೋಸ್ ಎಂಬುವರು ಈ ಸಾಹಸವನ್ನು ಮಾಡಿದ್ದರು ಅದಕ್ಕಿಂತಲೂ ೧ ೨ ೩೫ ಗಂಟೆ ಕಡಿಮೆ ಕಾಲದಲ್ಲಿ ಬಂದರು

ಅತ್ತೆ ಮನೆ ಅಳಿಯಂದಿರು.

(ಒಂದು ಸಣ್ಣ ಕಥೆ)

———

(ಲೇಖಕ—ವಿ. ಎಸ್. ರಾಮಮೂರ್ತಿ).

ಅಳಿಯಂದಿರಲ್ಲಿ ಎರಡು ವಿಧ—(1) ಮಾವನ ಮನೆಗೆಷ್ಟು ಕರೆದರೂ ಹೋಗದೇ ಇರುವಂಥವರು, (2) ಕರೆದರೆ ಸಾಕು, ಮಾವನ ಮನೆಗೆ ವಕ್ಕರಿಸಿ ಅವನ ಮನೆಯನ್ನು ಬಿಡುವುದೇ ಕಷ್ಟ, ಎಂದಾ ಸಂದರ್ಭದಲ್ಲಿಯೂ ಬಿಡುವುದಿಲ್ಲ. ಈ ಗುಂಪಿನಲ್ಲಿ ಎರಡನೇ ವರ್ಗಕ್ಕೆ ಸೇರಿದ ಅಳಿಯಂದಿರಲ್ಲಿ ಕೃಷ್ಣರಾಯರಿಗೆ ನಾಲ್ಕು ಜನ ಅಳಿಯಂದಿರಿದ್ದರು.

ಕೃಷ್ಣರಾಯರಿಗೆ ನಾಲ್ಕು ಜನ ಹೆಣ್ಣು ಮಕ್ಕಳು ಎಲ್ಲರಿಗೂ ಮದುವೆಯಾಗಿತ್ತು. ಇನ್ನು ಇಬ್ಬರಿಗೆ ಮದುವೆಯಾಗಿರಲಿಲ್ಲ. ಮೂರು ಜನ ಗಂಡುಮಕ್ಕಳೂ ಇದ್ದರು. ರಾಯರಿಗೆ ಎರಡನೆ ಹೆಣ್ಣುಮಗು ಹುಟ್ಟಿದಾಗ ಹೆಂಡತಿಯ ಮೇಲೆ ಕೋಪ ಮಾಡಿಕೊಂಡು ಶಾಂತವಾದರು. ಹೀಗೆ ಆರು ಜನ ಹೆಣ್ಣು ಮಕ್ಕಳಾದರು. ಆ ಮೇಲೆ ಮೂರು ಜನ ಗಂಡುಮಕ್ಕಳಾದರು.

ರಾಯರ ಅಳಿಯಂದಿರೆಲ್ಲಾ ಬಿ.ಎ. ಗಳು (Graduates) ಕಾಲಮಹಿಮಕ್ಕೆ ನಿರುದ್ಯೋಗಿಗಳು (Unemployed). ಅಳಿಯಂದಿರಿಗೆ ಮಾವನು ಉದ್ಯೋಗ ಹುಡುಕಿಕೊಡಲಿಲ್ಲಾ ಎಂದು ಕೋಪವೂ, ಚಿಂತೆಯೂ ಇದ್ದಿತು. ಮೊದಲನೇ ಅಳಿಯನಿಗೆ ಮೂರು ಜನ ಮಕ್ಕಳಿದ್ದರು. ಎರಡನೆಯವನಿಗೆ ಎರಡು, ಮೂರನೇಯವನಿಗೆ ಒಂದು, ನಾಲ್ಕನೇಯವನಿಗೆ ಇನ್ನೂ ಏನೂ ಇರಲಿಲ್ಲ.

ರಾಯರು ಅಳಿಯಂದಿರನ್ನೆಲ್ಲಾ ದೀಪಾವಳಿ ಹಬ್ಬಕ್ಕೆ ಕರೆದಿದ್ದರು. ಹರಿ! ಹೆಂಡತಿ ಮಕ್ಕಳೊಡನೆ ಅಳಿಯಂದಿರು ಬಂದಿಳಿದರು. ಮಾವನ ಮನೆಯವರು, ಅವರಿಗೆ ಗೌರವಿಸಿತ್ತು, ಸತ್ಕರಿಸಿದರು. ಹಬ್ಬ ಮುಗಿಯಿತು. ಅಳಿಯಂದಿರೆಲ್ಲಾ ಮಾವನ ಮನೆಯಲ್ಲೇ ಸುಖವಾಗಿ ನಿಂತರು. ಒಂದು ತಿಂಗಳಾಯಿತು, ಎರಡಾಯಿತು, ಆರು ತಿಂಗಳೂ ಮುಗಿಯಿತು. ಹೊರಡುವ ಯೋಚನೆಯನ್ನೇ ಮಾಡಲಿಲ್ಲ. ಒಳ್ಳೊಳ್ಳೆ ಕೊಠಡಿಗಳನ್ನು ಆಕ್ರಮಿಸಿದರು. ರಾಯರಿಗೆ ಬೀದಿ ಜಗಲಿ. ರಾಯರಿಗೆ ಮೋಟಾರ್ ಬೇಕಾದಾಗ ಒದಗಿಸದೆ ಅಳಿಯಂದಿರು ವಿಹಾರಕ್ಕಾಗಿ ತೆಗೆದುಕೊಂಡು ಹೋಗಿದ್ದಾರೆಂದು ತಿಳಿಯುತ್ತಿದ್ದಿತು. ಮನೆಯ ಜವಾನರೂ ಈಗ ಮಾವನ ಕೆಲಸಗಳಿಗೆ ಸಿಕ್ಕದಂತೆ ಅಳಿಯಂದಿರು ತಮ್ಮ ತಮ್ಮ ಕೆಲಸಗಳಿಗೆ ಉಪಯೋಗಿಸುತ್ತಿದ್ದರು. ಅಳಿಯಂದಿರಿಗೆ ಬೇಕಾದಾಗ ಕಾಫಿಗೆ ಆರ್ಡರ್ ಮಾಡುತ್ತ ಅವರವರಿಗೆ ಬೇಕಾದಂತೆ ತಿಂಡಿಗಳನ್ನು ಮಾಡಿಸಿಕೊಳ್ಳುತ್ತಿದ್ದರು. ಅವರು ಸಿನಿಮಾ, ನಾಟಕ, ಇವುಗಳಿಂದ ಬರುವ ತನಕ ಇತರರು ಊಟಕ್ಕೆ ಕಾದಿರಬೇಕಾಗಿದ್ದಿತು.

ಈ ಮಧ್ಯ ರಾಯರು ಒಬ್ಬ ಹೊರಗಿನ ವಸಂತೆ ತನ್ನ ಮನೆಯಲ್ಲೇ ಆಗಿದ್ದರು. ರಾಯರ ಹೆಂಡತಿಯಾದ ಸೀತಮ್ಮನು ಬಹಳ ನಾಚಿಕೆಪಡುತ್ತಿದ್ದಳು. ಅವಳ ಹೆಣ್ಣುಮಕ್ಕಳೆಲ್ಲಾ ಗಂಡಂದಿರೊಂದಿಗೆ ಹರಟೆ ಹೊಡೆಯುತ್ತಿದ್ದರು. ಮನೆಯಲ್ಲೆಲ್ಲಾ ಇವರ ಗದ್ದಲವೇ.

ರಾಯರು, ಒಂದು ದಿನ ಹೊಳೆಯ ಹತ್ತಿರ ಊಟಕ್ಕೆ ಏರ್ಪಾಡು ಮಾಡಿದ್ದರು. ಮೋಟಾರಿನಲ್ಲಿ ಬೇಕಾದ ಸಾಮಾನುಗಳನ್ನು ಸಾಗಿಸಿದ್ದರು. ಹೊಳೆಯ ಹತ್ತಿರ ನೋಡುವಲ್ಲಿ ಒಬ್ಬ ಅಳಿಯನು ಬಂದಿರಲಿಲ್ಲ. ರಾಯರೇ ತಿರುಗಿ ಮೋಟಾರಿನಲ್ಲಿ ಹೋಗಿ ಅವನನ್ನು ಕರೆದುಕೊಂಡು ಬರಬೇಕಾಯಿತು.

ರಾಯರು ಬಹಳ ಒಳ್ಳೆಯವರು. ಇವನ್ನೆಲ್ಲಾ ಬಹಳ ತಾಳ್ಮೆಯಿಂದ ಸಹಿಸುತ್ತಿದ್ದರು. ಯಾವ ವಿಧದಲ್ಲಿಯೂ ಅಳಿಯಂದಿರಿಗೆ ಅಸಮಾಧಾನ ಮಾಡುತ್ತಿರಲಿಲ್ಲ. ಹೀಗೆ ಒಂದು ವರ್ಷ ಕಳೆಯಿತು. ರಾಯರಿಗೆ ಇವೆಲ್ಲಾ ಕಷ್ಟವಾಗಿ ಪರಿಣಮಿಸಿತು. ಆದರೆ ಏನುಮಾಡಿಯಾರು? ಆವಾಗ, ಯಾವವಿಧದಲ್ಲಿ ಅಳಿಯಂದಿರನ್ನು ಹೊರಡಿಸಬೇಕೆಂದು ಯೋಚಿಸುತ್ತಿದ್ದರು.

ಒಂದುದಿನ ಎಲ್ಲರೂ ಊಟ ಮಾಡುತ್ತಿರುವಾಗ ಅಳಿಯಂದಿರಿಗೆ ಅವರ ಹೆಂಡತಿಯ ಕೈಲಿ "ಏನು? ದಿನಾಗಲು ಅಳಿಯಂದಿರಿಗೆ ಹಬ್ಬದ ಊಟ ಹೇಗೆ ಸೇರುತ್ತದೆಯೋ ಕಾಣೆ. ಎರಡು ಘಂಟೆಗೆ ತಿಂಡಿ ಹೇಗೆ ಸೇರುತ್ತೋ! ನನಗೆ ದಾನೆ ಸೇರುವುದಿಲ್ಲ. ಇವತ್ತು ಬರೀ ಕಾಫಿ ಮಾಡಿ ಕೊಡು" ಎಂದು ವ್ಯಂಗ್ಯವಾಗಿ ಹೇಳಿದರು.

ಈ ವಿಷಯವು ಮೊದಲನೆ ಅಳಿಯನ ಮನಸ್ಸಿಗೆ ನಾಟಿತು. ಊಟವಾದಕೂಡಲೇ ಬಾಕಿ ಅಳಿಯಂದಿರನ್ನೆಲ್ಲಾ ಸೇರಿಸಿ, "ಊಟದಲ್ಲಿ ಮಾವನವರು ಹಾಸ್ಯಮಾಡಿದ್ದು ತಿಳಿಯಿತೊ? ಇನ್ನು ಹೊರಡುವ ಯೋಚನೆಯನ್ನು ಮಾಡಿ' ಎಂದನು.
ಉಳಿದ ಮೂರು ಜನರು —

"ಹೋಗಯ್ಯಾ, ನಮ್ಮ ಮಾವನವರು ಅಂಥವರಲ್ಲ. ಸುಮ್ಮನೆ ಮಾತಾಡಬೇಡ," ಎಂದು ಹೇಳಿದರು.

ಮೊದಲನೆಯವನು 'ಹೋಗಿಬರುತ್ತೇನೆ' ಎಂಬುದಾಗಿ ಹೇಳಲು ಹೋದನು. ಮಾವನು "ಇನ್ನು ಎರಡು ದಿನಗಳು ಇದ್ದು ಹೋಗೆಂದು" ಹೇಳಿದನು. ಅವನು ಒಡಂಬಡದೆ ಹೊರಡಲು ಸಿದ್ಧನಾಗಿ 20 ರೂ. ಗಳು ಬಾಳುವ ಪಂಚೆಯನ್ನೂ, ಹೆಂಡತಿಗೆ 50 ರೂ. ನ ಸೀರೆಯನ್ನೂ ಉಡುಗೊರೆಯನ್ನಾಗಿ ತೆಗೆದುಕೊಂಡು ರೈಲಿಗೆ ಹೊರಟುಹೋದನು.

ಬಾಕಿ ಉಳಿದ ಮೂರುಜನ ಅಳಿಯಂದಿರು ಅಲ್ಲೇ ನಿಂತರು. ಕೃಷ್ಣರಾಯರು ಒಂದು ದಿವಸ ಹೆಂಡತಿ ಕೈಯಲ್ಲಿ ಇನ್ನೊಂದು ಸೂಚನೆಯನ್ನು ಕೊಡಿಸಿದರು. ಎರಡನೆಯವನು ಇವನ್ನು ಕೇಳಿ ಇಬ್ಬರನ್ನು ಸೇರಿಸಿ ಈ ವಿಚಾರವನ್ನು ಹೇಳಿದನು. ಅದಕ್ಕೆ ಅವರು "ಏನಯ್ಯಾ ನೀವು ತಮಾಷೆ ಮಾಡುತ್ತೀರಿ. ನಮ್ಮ ಮಾವ ಅಂಥವನಲ್ಲ—ಎಂದುಬಿಟ್ಟರು. ಎಲ್ಲಾದರೂ ಹೋಗಲಿ ಎಂದು ತಾನು ಉಡುಗೊರೆಯನ್ನು ತೆಗೆದುಕೊಂಡು ಹೊರಟುಹೋದನು. ಸ್ವಲ್ಪ ದಿವಸವಾದಮೇಲೆ ಮೂರನೇಯವನೂ ಉಡುಗೊರೆಯಸಹಿತ ಹೊರಟುಹೋದನು. ನಾಲ್ಕನೆಯವನು ಮಾವನ ಮನೆಯಲ್ಲೇ ಇದ್ದನು.

ನಾಲ್ಕನೆಯವನು ತರಕಾರಿ ತರುವುದು, ಹುಡುಗರಿಗೆ ಪಾಠಹೇಳುವುದು, ಇವುಗಳನ್ನು ಮಾಡುತ್ತಿದ್ದನು. ಒಂದು ದಿನ ರಾತ್ರಿ ಮಾವನು ಇವನನ್ನು ಹೊರಡಿಸುವುದಕ್ಕೋಸ್ಕರ, ಹುಡುಗರಿಗೆ ಪಾಠ ಹೇಳುತ್ತಿರುವಾಗ ರೂಮಿಗೆ ಪ್ರವೇಶಿಸಿ ಕಾಣದವನಂತೆ ನಟಿಸಿ ದೀಪವನ್ನು ಮಂಚೆಯಿಂದ ಬೀಸಿ ಆರಿಸಿದನು. ರೂಮೆಲ್ಲಾ ಕತ್ತಲೆಯಿಂದ ಕವಿಯಲ್ಪಟ್ಟಿತು. ರಾಯರು ಅಳಿಯನನ್ನು ಕೂಡಲೇ ಹಿಡಿದುಕೊಂಡು ಕೆನ್ನೆಗೆ ಚೆನ್ನಾಗಿ ನಾಲ್ಕು ಏಟುಗಳನ್ನು ಕೊಟ್ಟರು. ಅಳಿಯನು "ಅಯ್ಯಯ್ಯೋ! ನಾನು ನಾನು ಮಾವ—ಅಳಿಯ!" ಎಂದು ಕೂಗಿಕೊಂಡನು. ಮಾವನು ತಿಳಿಯದವನಂತೆ (ಮನಸ್ಸಿನಲ್ಲಿ "ನನಗೆಬೇಕಾಗಿತ್ತು") "ಸುಮ್ಮನೇ ಇರಯ್ಯಾ, ಈವತ್ತು ಮನೆಯಲ್ಲೇ ಇರಲಿಲ್ಲ. ಎಲ್ಲೋ ಆಡುವುದಕ್ಕೆ ಹೋಗಿದ್ದ. ನಿನ್ನಿಂದಲೇ ಹುಡುಗ ಕೆಟ್ಟುಹೋಗುತ್ತಾನೆ. ಬಿಡಯ್ಯಾ ಹುಡುಗನನ್ನ. ಇನ್ನೂ ಎರಡು ಕೊಡುತ್ತೇನೆ" ಎಂದು ಅಳಿಯನಿಗೆ ಇನ್ನೂ ಎರಡು ಏಟುಗಳನ್ನು ಕೊಟ್ಟನು.

ಬೆಳಿಗ್ಗೆ ಏಳುವಷ್ಟರೊತ್ತಿಗೆ ಅಳಿಯನು ಹೊರಟುಹೋಗಿದ್ದನು.

ನಿಮಗೆ ಗೊತ್ತೇ?

ಲೇಖಕರು ಎಂ.ವಿ. ನಾರಾಯಣಮೂರ್ತಿ, ಮೈಸೂರು.

ಮನುಷ್ಯರ ನರದಲ್ಲಿ ರಕ್ತವು ಗಂಟೆಗೆ ಸರಾಸರಿ 7 ಮೈಲಿಯಂತೆ ಪ್ರಯಾಣ ಮಾಡುತ್ತಿದೆಯಂತೆ. ಅಂದರೆ ದಿನಕ್ಕೆ 168 ಮೈಲಿ ಆಯ್ತು. ವರ್ಷಕ್ಕೆ 60,000 ಮೈಲಿ ಸುತ್ತಿದಂತಾಯ್ತು.

* * *

ಇಂಗ್ಲೆಂಡಿನಲ್ಲಿ ಒಂದು ಪೋಸ್ಟ್ ಆಫೀಸಿನಲ್ಲಿ ಎರಡು ಸಲ ಭಾರಿ ಕಳ್ಳತನಗಳು ನಡೆದುವು. ಅದಕ್ಕೆ ಅಲ್ಲಿಯ ಪೋಸ್ಟ್ ಮಾಸ್ಟರು ಒಂದು ಹುಲಿ ಹಿಡಿಯುವ ಬೋನನ್ನು ಪೋಸ್ಟ್ ಆಫೀಸಿನ ಬಾಗಿಲ ಮುಂದೆ ಇಟ್ಟಿದ್ದರಂತೆ. ಆದರೆ, ಕಳ್ಳರು ಮತ್ತೆ ಬಂದು ಆ ಬೋನನ್ನೂ ಕೂಡ ಕದ್ದುಬಿಟ್ಟರಂತೆ! ಯಾರು ಹೆಚ್ಚು ಘಾಟಿಗಳು?

* * *

ಚಿಕಾಗೋನಗರದಲ್ಲಿ ಒಬ್ಬ ಆಕೆಯು ತನ್ನ [illegible] ನೆಯ ವಯಸ್ಸಿನಲ್ಲಿ ಅಜ್ಜಿಯಾದಳಂತೆ. ತನ್ನ 41ನೆಯ ವಯಸ್ಸಿನಲ್ಲಿ ದೊಡ್ಡ ಅಜ್ಜಿಯಾದಳಂತೆ. ಈಗ ಆಕೆ [illegible] ತಾಯಿ ಆಗಿರುವಳಂತೆ. [illegible] ತಾಯಿಗೆ [illegible] ವರ್ಷಗಳಂತೆ!

ಜವಾನರ ಪ್ರಲಾಪ.

Lament of Office Peons, on duty at Officers' Houses

೧

'ದೀಪವನೊರೆಸೋ! ಚಾಪೆಯ ಹಾಸೋ!
ಮಕ್ಕಳನೆತ್ತೋ! ಪಾದ! ಜೋಡಾ!
ಸೌದೆಯ ಕಡಿಯೋ! ಮೊಸರನು ಕಡೆಯೋ!
ತೊಟ್ಟಿಲ ತೂಗೂ! ಒಪ್ಪಲ ತೊಳೆಯೋ!'
ಅಯ್ಯೋ! ನಾವು ಆಫೀಸ್ ಪ್ಯೂನು
ನಮ್ಮ ಗೋಳನು ಕೇಳೋರಿಲ್ಲವೆ?

೨

"ಸಕ್ಕರೆ ಎಲ್ಲೋ? ನೀರನು ಹುಯ್ಯೋ!
ಮಕ್ಕಳ ಜತೆಗೆ ಶಾಲೆಗೆ ಹೋಗೋ!
ಲಕ್ಕಾ! ಕತ್ತೀ! ಹೊಗೆ ಕೊಯ್ಯೋ!
ಪಕ್ಕದ ಮನೆಯಿಂದಕ್ಕಿಯ ತಾರೋ!'
ಅಯ್ಯೋ! ನೋಡಿರಿ! ಆಫೀಸ್ ಪ್ಯೂನು!
ಇಲಾಖ ಸಂಬಳ ತಿಂಬ ಜವಾನು?

೩

'ಸುಣ್ಣದ ಬಳಿಯೋ! ಸುಣ್ಣವು ಓಗಿಯೋ!
ಅಣ್ಣನ ಬೂಟ್ಸಿಗೆ ಪಾಲಿಷ್ ಹಾಕೋ!
ಮೊಣ್ಣೇ! ಮಂಕೆ! ತಣ್ಣಗೆ ಕೂತೆಯಾ!
ಕಣ್ಣಾಸ್ಪತ್ರೆಗೆ ಹೊರಡೋ, ಸಾಕು!
"ಅಯ್ಯೋ! ಅಪ್ಪಾ! ಬಂದೇ! ಬಂದೇ!"
ಕೇಳಿರಿ! ನಮ್ಮ ಕೂಗನು! ಗೋಳನು!

೪

ಗಿಡದಲಿ ಹೂಗಳು ಕದಿಯೆ ಬಿಟ್ಟರೆ
ಒಡನೇ ಬಿತ್ತು ನನಗೇ ಪೈನು!
ಸಂಬಳ ಮನಿವರ ಕೂಸಿನ ಮಾಗಲಿ
ಸಂಬಳ ಮೋದ, ಕೂಸಿಗೆ ಮೋಸ!
ದೇಸಿಗೆ ಪಾತ್ರ ಆಫೀಸ್ ಪ್ಯೂನು,
ಮನೆಯ ಗುಲಾಮರು ನಾವುಗಳು!

ಲಕ್ಷ್ಮೀ.

ಜಪಾನಿನಲ್ಲಿ ಗುಮಾನಿ

ಗುಮಾನಿಯ ಹುಚ್ಚು ಜಪಾನಿನಲ್ಲಿ ಬಹಳವಾಗಿ ಹರಡಿಕೊಳ್ಳುತ್ತಿದೆ. ಇದಕ್ಕಾಗಿ ಒಂದುಸಾವಿರ ಸ್ಪೆಷಲ್ ಪೋಲೀಸರನ್ನು ದಾಖಲ್ಮಾಡಿಕೊಳ್ಳುತ್ತಿರುವರು. ರಾಜದ್ರೋಹವನ್ನೂ ಸಿತೂರಿಯನ್ನೂ ಪತ್ತೆ ಮಾಡಲು ಸಕಲ ಸನ್ನಾಹಗಳನ್ನೂ ನಡೆಸಲಾಗುತ್ತಿದೆ.

———

ಬ್ರಿಟನ್ನಿನಲ್ಲಿ ಸುಮಾರು 5 ಲಕ್ಷ ಜೇನು ಹುಳಗಳಿವೆಯಂತೆ. ಇವರಿಂದ 250 ಟನ್ ತುಪ್ಪವನ್ನು ಪ್ರತಿ ವರ್ಷವೂ ತೆಗೆಯುತ್ತಿರುವರಂತೆ!

* * *

ಬುಡಾಪೆಸ್ಟಿನಲ್ಲಿ ಇರುವ ಒಬ್ಬ ತರುಣ ಕ್ಷೌರಕನು ಪ್ರಪಂಚಕ್ಕೆಲ್ಲಾ ಒಂದು ರೆಕಾರ್ಡನ್ನು (Record) ಮಾಡಿರುವನಂತೆ. ಅವನು ಒಂದು ದಿನ ಒಬ್ಬನ ತಲೆ ಗೂದಲನ್ನು [illegible] ಸೆಕೆಂಡುಗಳಲ್ಲಿ ತೆಗೆದನಂತೆ!

ಮತಾಂತರ ಹೊಂದಿದವರಿಗೆ ದಾಯಭಾಗ.

ಅನ್ಯಮತವನ್ನು ಅವಲಂಬಿಸುವುದರಿಂದ ಅಥವಾ ಜಾತಿ ಹೋಗುವುದರಿಂದ ಉಂಟಾಗುವ ಕೆಲವು ಅನರ್ಹತೆಗಳನ್ನು ನಿವಾರಿಸುವುದಕ್ಕಾಗಿ ಮೈಸೂರು ಸಂಸ್ಥಾನದಲ್ಲಿ ರಚಿಸಿರತಕ್ಕ ಮಸೂದಾ ಕಾನೂನಿನ ವಿಚಾರ.—

ಅನ್ಯಮತವನ್ನು ಅವಲಂಬಿಸುವುದರಿಂದ ಅಥವಾ ಜಾತಿ ಹೋಗುವುದರಿಂದ ಉಂಟಾಗುವ ಕೆಲವು ಅನರ್ಹತೆಗಳನ್ನು ನಿವಾರಿಸುವುದಕ್ಕಾಗಿ ರಚಿಸಿರತಕ್ಕ ಮಸೂದಾ ಕಾನೂನನ್ನು, ಆ ವಿಷಯದಲ್ಲಿ ಮಹಾಜನರ ಅಭಿಪ್ರಾಯವನ್ನು ತಿಳಿದುಕೊಳ್ಳುವುದಕ್ಕಾಗಿ ಈಚೆಗೆ ಮೈಸೂರು ಗೆಜೆಟ್ಟಿನಲ್ಲಿ ಪ್ರಕಟಿಸಲಾಗಿದ್ದಿತಷ್ಟೆ. ಇದರ ಸಂಬಂಧವಾಗಿ ರೆವರೆಂಡ್ ಡಬ್ಲ್ಯು ಪ್ರಿಸ್ಟ್ಲೀರವರು, 1936ನೆಯ ಇಸವಿ ಮೇ 5ನೆಯ ತಾರೀಖಿನ 'ಮದರಾಸ್ ಮೇಯ್ಲ್' ಪತ್ರಿಕೆಯಲ್ಲಿ ಒಂದು ಲೇಖನವನ್ನು ಬರೆದಿದ್ದಾರೆ. ಆ ಲೇಖನದಲ್ಲಿ ಒಂದೆರಡು ವಿಷಯಗಳು ತಪ್ಪಾಗಿ ಬರೆಯಲ್ಪಟ್ಟಿವೆ; ಅವುಗಳನ್ನು ಸರಿಪಡಿಸುವುದು ಯುಕ್ತವೆಂದು ತೋರುತ್ತದೆ. ಮಸೂದಾ ಕಾನೂನಿನಲ್ಲಿ ಕೊಟ್ಟಿರುವ ಉದಾಹರಣೆಗಳ ಪೈಕಿ ಒಂದು ಉದಾಹರಣೆಯು, ಎಂದರೆ ಒಬ್ಬ ಕ್ರೈಸ್ತ ಹೆಂಡತಿಯ ಗಂಡನು ಮುಸಲ್ಮಾನ ಮತವನ್ನು ಅವಲಂಬಿಸಿ ಇನ್ನೊಬ್ಬ ಹೆಂಡತಿಯನ್ನು ಮದುವೆಯಾದ ಸಂದರ್ಭದ ವಿಷಯದಲ್ಲಿ ಕೊಟ್ಟಿರುವ ಉದಾಹರಣೆಯು ಸರಿಯಾಗಿಲ್ಲವೆಂದು ಆ ಲೇಖನದಲ್ಲಿ ತಿಳಿಸಿದೆ. ಇದು ಮಸೂದಾ ಕಾನೂನಿನ (3) ನೆಯ ಕ್ಲಾಜಿನ ಮೇರೆಗೆ ಕೊಟ್ಟಿರುವ (c) ಉದಾಹರಣೆಗೆ ಸಂಬಂಧಪಟ್ಟದ್ದಾಗಿದೆ. ಈ ಉದಾಹರಣೆಯಲ್ಲಿ ಸರಿಯಾಗಿಲ್ಲದೆ ಇರತಕ್ಕ ಅಂಶವು ಯಾವುದೂ ಇಲ್ಲ. ಇದರಲ್ಲಿ ನಮೂದಿಸಿರುವಂಥ ಅನಾವಿಗೆ ದಾಂಪತ್ಯ ವಿಚ್ಛೇದದ ವಿಷಯದಲ್ಲಿ ಯಾವುದಾದರೂ ಹಕ್ಕು ಇರಬಹುದಾದಲ್ಲಿ ಅದನ್ನು ಕ್ರೈಸ್ತರಿಗೆ ಅನ್ವಯಿಸುವ ಕಾನೂನಿನ (ಕ್ರಿಶ್ಚಿಯನ್ ಲಾ) ಮೇರೆಗೆ ಉಪಯೋಗಪಡಿಸಿಕೊಳ್ಳಬೇಕೇ ಹೊರತು ಮುಸಲ್ಮಾನರಿಗೆ ಅನ್ವಯಿಸುವ ಕಾನೂನಿನ (ಮುಸ್ಲಿಂ ಲಾ) ಮೇರೆಗೆ ಉಪಯೋಗಪಡಿಸಿಕೊಳ್ಳತಕ್ಕದ್ದಲ್ಲವೆಂಬುದೇ ಈ ಉದಾಹರಣೆಯಿಂದ ಆಗತಕ್ಕ ಅರ್ಥ. ದಾಂಪತ್ಯ ವಿಚ್ಛೇದ ಸಂಬಂಧವಾದ ಕಾನೂನು ಯಾವುದೂ ಈ ಸಂಸ್ಥಾನದಲ್ಲಿ ಜಾರಿಯಲ್ಲಿಲ್ಲವೆಂಬುದೇ ನಿಜ; ಆದರೆ ಇಲ್ಲಿ ಕೊಟ್ಟಿರತಕ್ಕ ಉದಾಹರಣೆಯಲ್ಲಿ ಸೂಚಿಸಿರುವಂಥ ಸಂದರ್ಭದಲ್ಲಿ ಸ್ವಾಗೂಂಡಿರತಕ್ಕ 1869ನೆಯ ಇಸವಿಯ ಇಂಡಿಯಾ ದೇಶದ ದಾಂಪತ್ಯ ವಿಚ್ಛೇದದ ಕಾನೂನು (ಇಂಡಿಯನ್ ಡೈವೋರ್ಸ್ ಆಕ್ಟು) ಮೈಸೂರು ದೇಶದಲ್ಲಿ ವಾಸಿಸುತ್ತಿರುವ ಬ್ರಿಟಿಷ್ ಸರ್ಕಾರದ ಪ್ರಜೆಗಳಿಗೂ ಅನ್ವಯಿಸತಕ್ಕದ್ದಾಗಿದೆ.

ಕ್ರೈಸ್ತರಲ್ಲಿ ದಾಂಪತ್ಯ ವಿಚ್ಛೇದನಕ್ಕೆ ಅವಕಾಶವಿರುವ ಬಗೆ ಕಾನೂನನ್ನು ಏರ್ಪಡಿಸುವಂತೆ ಸರ್ಕಾರದವರನ್ನು ಸದೇ ಸದೇ ಪ್ರಾರ್ಥಿಸುತ್ತಿದ್ದಾಗ್ಗ್ಯೂ, ಆ ರೀತಿ ಕಾನೂನನ್ನು ಅವರು ಏರ್ಪಡಿಸುವಂತೆ ಮಾಡುವುದಕ್ಕೆ ಸಾಧ್ಯವಾಗಲಿಲ್ಲವೆಂದೂ ಲೇಖನದಲ್ಲಿ ರವರೆಂಡ್ ಪ್ರಿಸ್ಟ್ಲೀರವರು ಸೂಚಿಸಿದ್ದಾರೆ. ಈ ವಿಷಯದಲ್ಲಿ ಯಾವ ಕಾನೂನೂ ಇಲ್ಲದಿರುವುದಕ್ಕೆ ಮೈಸೂರು ಸರ್ಕಾರದವರನ್ನು ಆಕ್ಷೇಪಿಸುವಂತಿಲ್ಲ. ಈ ವಿಷಯದಲ್ಲಿ ಒಂದು ಕಾನೂನನ್ನೇರ್ಪಡಿಸಬೇಕೆಂದು ಕೆಲವು ಮಿಷನರಿ ಸಂಸ್ಥೆಗಳವರು ಮೈಸೂರು ಸರ್ಕಾರದವರಿಗೆ ಸಲಹೆ ಮಾಡಿದ್ದರು. ಅದರಂತೆ ಸರ್ಕಾರದವರು ದಾಂಪತ್ಯ ವಿಚ್ಛೇದನಕ್ಕೆ ಸಂಬಂಧಪಟ್ಟ ಮಸೂದಾ ಕಾನೂನೊಂದನ್ನು ಏರ್ಪಡಿಸಿ, ಇದರ ವಿಷಯದಲ್ಲಿ ಜನಗಳಿಗಿರತಕ್ಕ ಅಭಿಪ್ರಾಯವನ್ನು ತಿಳಿದುಕೊಳ್ಳುವ ಉದ್ದೇಶದಿಂದ, ಅದನ್ನು 1932ನೆಯ ಇಸವಿ ಜುಲೈ ತಿಂಗಳಲ್ಲಿ ಪ್ರಕಟಿಸಿದರು. ಈ ಮಸೂದಾ ಕಾನೂನನ್ನು ಜಾರಿಗೆ ತರುವ ವಿಷಯದಲ್ಲಿ, ಕ್ರೈಸ್ತ ಸಂಗಡದವರ ಪೈಕಿ ಬಹು ಸಂಖ್ಯಾತ ರಾಯಿಯವರಾದ ಪ್ರಾಟೆಸ್ಟಂಟರುಗಳು ಇಷ್ಟಪಡುವವರಾಗಿಲ್ಲವಾದುದರಿಂದ, ಮಸೂದಾ ಕಾನೂನಿನ ವಿಷಯದಲ್ಲಿ ಸರ್ಕಾರದವರು ನಡೆಯಿಸಬೇಕಾಗಿದ್ದ ಮುಂದಿನ ಕ್ರಮಗಳನ್ನು ಅವರು ಮುಂದುವರಿಸಲಿಲ್ಲ.

ದಂಡಿನ ಪ್ರದೇಶದ ಒಂದು ಭಾಗವನ್ನು ಮೈಸೂರು ಸಂಸ್ಥಾನಕ್ಕೆ ಸೇರಿಸಿಕೊಳ್ಳುವ ಪ್ರಮೇಯವಿರುವುದರಿಂದ, ಆ ದಂಡಿನ ಪ್ರದೇಶದಲ್ಲಿ ವಾಸಿಸುವ ಕ್ರೈಸ್ತರಿಗೆ, ಈಗಿರುವ ತಮ್ಮ ಸ್ಥಿತಿಯು ಬದಲಾಯಿಸಿ ಮತ ಸಂಬಂಧವಾದ ಅನರ್ಹತೆಗಳಿಗೆ ಗುರಿಯಾಗಬಹುದೆಂದು ಅವರಿಗೆ ಶಂಕೆಯೇನಾದರೂ ಉಂಟಾಗಿದ್ದಲ್ಲಿ ಅದನ್ನು ನಿವಾರಿಸುವ ಉದ್ದೇಶದಿಂದ ಈ ಕಾನೂನನ್ನು ರಚಿಸಿರುತ್ತಾರೆಂದು, ಲೇಖಕರು ತಪ್ಪಾಗಿ ಊಹಿಸಿ, ಆ ಲೇಖನದಲ್ಲಿ ಬರೆದಿರುತ್ತಾರೆ. ಇದು ಸ್ವಲ್ಪವೂ ಆಧಾರವಿಲ್ಲದ ಊಹೆಯಾಗಿರುತ್ತದೆ. ಏಕೆಂದರೆ, ಆ ಪ್ರದೇಶದಲ್ಲಿ ವಾಸಿಸುತ್ತಿರುವ ಜನಗಳ ವ್ಯಕ್ತಿ ಸಂಬಂಧವಾದ ಹಕ್ಕು ಬಾಧ್ಯತೆಗಳ ವಿಷಯದಲ್ಲಿ, ಬ್ರಿಟಿಷ್ ಇಂಡಿಯನ್ ಆಕ್ಟುಗಳು ಮತ್ತು ಜಾತಿ ಹೋಗುವುದರಿಂದ ಉಂಟಾಗುವ ಅನರ್ಹತೆಗಳನ್ನು ನಿವಾರಿಸುವುದಕ್ಕಾಗಿ ಏರ್ಪಡಿಸಿರುವ 1850ನೆಯ ಇಸವಿಯ ಆಕ್ಟು ಈಗ ಅನ್ವಯಿಸುವುದಾಗಿವೆಯಷ್ಟೆ. ದಂಡಿನ ಪ್ರದೇಶವು ಮೈಸೂರು ಸಂಸ್ಥಾನಕ್ಕೆ ಬಂದಮೇಲೂ ಸಹ ಅದೇ ಕಾನೂನುಗಳೇ ಆ ವಿಷಯದಲ್ಲಿ ಎಂದಿನಂತೆ ಅವರಿಗೆ ಅನ್ವಯಿಸಿಕೊಂಡು ಬರುವುದರಲ್ಲಿ ಯಾವ ಸಂಶಯವೂ ಇರುವುದಿಲ್ಲ.

ಪಿ. ವೇದವ್ಯಾಸಾಚಾರ್ಯ,
ಮೈಸೂರು ಸರ್ಕಾರದ ಪಬ್ಲಿಸಿಟಿ ಆಫೀಸರು.

ಒಂದು ಭಾವಿಗಾಗಿ ಇಷ್ಟು ಹಟವೆ?

ಶ್ರೀ॥ ತಗಡೂರು ರಾಮಚಂದ್ರರಾಯರು ಮೈಸೂರು ಡಿ॥ ಡೆಪ್ಯುಟಿ ಕಮಿಷನರಿಗೆ ಈಚೆಗೆ ಕಂದ ಪತ್ರವನ್ನು ಬರೆದಿರುತ್ತಾರೆ —

ಚಾಮರಾಜನಗರದ ತಾಲ್ಲೂಕು ಭೋಗಾಪುರದ ಬಾವಿ ವಿಷಯದಲ್ಲಿ ಮದರಾಸ್ ಮೇಯಿಲ್ ಮತ್ತು ವೃತ್ತಾಂತ ಪತ್ರಿಕೆಯಲ್ಲೊಬ್ಬ ಬಾತ್ಮೀದಾರರು ಸುಳ್ಳು ಬಾತ್ಮಿಯನ್ನು ಪ್ರಕಟಿಸಿದ್ದಾರೆ. ಮತ್ತು ತಮ್ಮ ಗಮನಕ್ಕೆ ತಂದಿರುವುದಾಗಿಯೂ ವರ್ತಮಾನ ಕೇಳುತ್ತೇನೆ. ವಾಸ್ತವಾಂಶವನ್ನು ಮುಚ್ಚಿ ಬರವಣಿಗೆಯ ಪೈಪಿರಿಯಿಂದ ತಾವು ಮಾಡುತ್ತಿರುವ ಕ್ರೈಸ್ತಮತ ಪ್ರಚಾರದ ಸ್ವಾರ್ಥತೆಯನ್ನು ವ್ಯಕ್ತಪಡಿಸಿಕೊಂಡಿದ್ದಾರೆ. ಕ್ರೈಸ್ತರಿಗೆ ಎರಡು ಬಾವಿಗಳಿವೆ. ಅವರಿಗೆ ನೀರಿನ ಸೌಕರ್ಯವು ಬೇಕಾದಷ್ಟಿದೆ. ಆದಿ ಕರ್ನಾಟಕರಿಗೆ ಈ ಹೊಸಬಾವಿಯೊಂದೇ. ಹೀಗಿದ್ದರೂ ಈ ಬಾವಿಯ ಮೇಲೆ ಇಷ್ಟು ಚಳುವಳಿಯನ್ನು ಏಕೆ ಎಬ್ಬಿಸಿರುವರು ಎಂಬುದನ್ನು ತಾವೇ ಆಲೋಚಿಸಬೇಕು.

ಕ್ರೈಸ್ತ ಪಾದ್ರಿಗಳು ದೊಡ್ಡ ದೊಡ್ಡ ವಿಷಯಗಳನ್ನು ಕುರಿತು ಚರ್ಚಿಸುವುದೇ ಇಲ್ಲ. ಹಳ್ಳಿಗಳಲ್ಲಿ ಪಟ್ಟಣದಲ್ಲಿಯೂ ಆದಿ ಕರ್ನಾಟಕರ ಬೀದಿಯಲ್ಲಿ ಒಂಥ ಮಹತ್ವದ ಪ್ರಶ್ನೆಗಳೂ ಇಲ್ಲ. ಕೆಲಸಕ್ಕೆ ಬಾರದ ಸಣ್ಣ ಸಣ್ಣ ವಿಷಯಗಳನ್ನು ಅದ್ಭುತ ಮಾಡಿ ಜನರ ಮನಸ್ಸನ್ನು ಬದಲಾಯಿಸಿ ಸರ್ಕಾರವೇ ನಮ್ಮದು. ಬಿಳಿಯರು ದೇಶ ಬಿಟ್ಟರೆ ಸರ್ಕಾರವು ತಲೆಬಾಗಿಸಬೇಕು ನೋಡಿ ನಿಮಗೆ ಎಂಥಹ ಉಪಕಾರಮಾಡಿ ಕೊಡುತ್ತೇವೆ. ನಿಮ್ಮ ಜನರು ನಿಮಗೆ ಉಪಕಾರ ಮಾಡಿಕೊಟ್ಟರು ಎಂಬದಾಗಿ ಹೇಳುತ್ತಾ ತಮ್ಮ ಮತವನ್ನು ಹೆಚ್ಚಿಸಿಕೊಳ್ಳುತ್ತಿದ್ದಾರೆ.

ಭೋಗಾಪುರದ ಬಾವಿಯ ವಿಷಯವಾಗಿ ತಾಲ್ಲೂಕು ಅಧಿಕಾರಿಗಳ ಮೇಲೂ ನನ್ನ ಮೇಲೂ ವಿರುದ್ಧ ಪ್ರಚಾರ ಮಾಡುತ್ತಿದ್ದಾರೆ. ಮೇಲಧಿಕಾರಿಗಳೂ, ಸರ್ಕಾರದವರೂ ನನ್ನ ಕಡೆ ಇದ್ದಾರೆ. ತಾಲ್ಲೂಕು ಅಧಿಕಾರಿಗಳಿಗೆ ಶಿಕ್ಷೆ ವಿಧಿಸುತ್ತಾರೆ. ನೋಡಿರಿ, ಇನ್ನು ಸ್ವಲ್ಪ ದಿವಸದಲ್ಲೇ ಅವರ ಆಸ್ತಿಯು ನಷ್ಟವಾಗುತ್ತದೆ. ಬಾವಿಯು ನನಗೆ ಸೇರುತ್ತದೆ, ಎಂದು ಹಳ್ಳಿಗಳಲ್ಲಿ ಪ್ರಚಾರ ಮಾಡುತ್ತಿದ್ದಾರೆ.

ಭೋಗಾಪುರದ ಬಾವಿಯ ವಿಷಯವಾಗಿ ಹಿಂದೆ ವಾಸ್ತವಾಂಶವನ್ನು ಪ್ರಿಂಟು ಮಾಡಿ ಹರಡಿದ್ದೇನೆ. ಮೈಸೂರು ಸಂಸ್ಥಾನದ ಬಾವಿಗಳನ್ನೆಲ್ಲಾ ಸಾರ್ವಜನಿಕ ಬಾವಿಗಳನ್ನಾಗಿ ಮಾಡಬೇಕೆಂದು ಹತ್ತು ವರ್ಷಗಳಿಂದಲೂ ನಮ್ಮ ಪ್ರಾರ್ಥನೆಯೂ ಚಳವಳಿಯೂ ನಡೆಯುತ್ತಲೇ ಇದೆ. ಈಗಲೂ ಹಾಗೆ ಸಂಸ್ಥಾನಕ್ಕೆಲ್ಲಾ ಅಪ್ಪಣೆಯನ್ನು ಕೊಟ್ಟರೆ ನಮ್ಮ ಹೇನೂ ಎಡಿ ಇಲ್ಲ. ಒಂದೇ ಊರಿಗೆ ಮುಚ್ಚಿರುವರಲ್ಲಗಿ ಕೊ

ಬಿಳಿಗಿರಿ ರಂಗಸ್ವಾಮಿ ರಥೋತ್ಸವ.

(ನಮ್ಮ ಸುದ್ದಿಗಾರರಿಂದ)

ಯಳಂದೂರು ತಾ॥ ಬಿಳಿಗಿರಿರಂಗನ ಬೆಟ್ಟದಲ್ಲಿ ಕಳೆದ ಐದನೇ ತಾ॥ ಮಹಾ ರಥೋತ್ಸವವು ಯಥಾ ವಿಧಿಯಂತೆ ವೈಭವದಿಂದ ನಡೆಯಿತು. ಸಾವಿರಾರು ಜನ ಭಕ್ತಾದಿಗಳು ದೇವರ ದರ್ಶನಕ್ಕಾಗಿ ಬಂದಿದ್ದರು. ಸೇವೆಗಳನ್ನು ನಡೆಸಿದರು. ಮಾರನೇ ದಿನ ಗರುಡೋತ್ಸವವೇ ಮುಂತಾದ ಸೇವಾರ್ಥಗಳು ವಿಶೇಷವಾಗಿ ಜರುಗಿದುವು. ಶ್ರೀಮಂತ ಜಹಗೀರ್‌ದಾರ್‌ರವರ ಛತ್ರದಲ್ಲಿಯೂ, ಮತ್ತು ಮಾ॥ ಬಿಳಿಗಿರಿ ರಂಗರೆಡ್ಡಿಯವರೇ ಮುಂತಾದ ಭಕ್ತಾದಿಗಳಿಂದಲೂ ಸಂತರ್ಪಣೆಗಳು ನೆರವೇರಿಸಲ್ಪಟ್ಟವು. ರಥಾರೋಹಣವಾದಮೇಲೆ ಅಲ್ಲಿ ನೆರೆದಿದ್ದ ಭಕ್ತಾದಿಗಳಿಗೆಲ್ಲಾ ಸಾರ್ವತ್ರಿಕವಾಗಿ ತೀರ್ಥವಿನಿಯೋಗವಾಗಲಿಲ್ಲವೆಂದೂ ಕೆಲವರು ಉದಾಸೀನದಿಂದ ಕಾಣಲ್ಪಟ್ಟರೆಂದೂ ಪುಕಾರು ಬಂದುದರ ಮೇಲೆ ಅಮಲ್ದಾರರು ಎಲ್ಲರಿಗೂ ಕೊಡಿಸಿದರು. ಮೈಸೂರು ಅರಮನೆಯ ಇಲಾಖೆಯವರು ಬಹಳ ಸಾಹಸಪಟ್ಟು ಈ ಕಾಡಿನಲ್ಲಿ ಒಂದು ಛಾವಣಿಯನ್ನು ಹಿಡಿದಿರುವರೆಂದು ತಿಳಿದು ಬಂದಿದೆ.

ಗಡ್ಡ ಬೆಳೆಸಲು ಸಂಕಲ್ಪ.

ಟೆಕ್ಸಾಸ್ ಎಂಬಲ್ಲಿನ ವೃತರಲ್ಲರೂ ಗಡ್ಡವನ್ನು ಬೆಳಸಬೇಕೆಂದು ಸಂಕಲ್ಪ ಮಾಡಿದ್ದಾರೆ. ಪೂರ್ವಕಾಲದಲ್ಲಿ ಆ ದೇಶವು ಹೇಗಿತ್ತೆಂಬುದನ್ನು ತೋರಿಸಲು ಈ ಉದ್ದೇಶವನ್ನು ಮಾಡಿರುತ್ತಾರೆ. ಈ ಸಂಕಲ್ಪವನ್ನು ಉಲ್ಲಂಘಿಸಿದವರಿಗೆ ಒಂದು ಪೌಂಡು ಜುಲ್ಮಾನೆ ವಿಧಿಸಲ್ಪಡುವುದು.

ಸ್ತ್ರೀ ವೈಮಾನಿಕರು.

ಈಗಾಗಲೆ ಇಂಗ್ಲೆಂಡಿನಲ್ಲಿ ನೂರಾರು ಜನ ಸ್ತ್ರೀಯರು ವಿಮಾನ ನಡೆಸುವುದನ್ನು ಕಲಿಯಲು ಆರಂಭಿಸಿದ್ದಾರೆ. ಚೆನ್ನಾಗಿ ಕಲಿಯಲು ಒಟ್ಟು ಐವತ್ತು ಪೌಂಡು ಖರ್ಚು ಆಗುತ್ತದೆ. ಈಗಾಗಲೆ ಚೆನ್ನಾಗಿ ತರಬೇತಾದ ಸುಮಾರು 400 ಜನ ಸ್ತ್ರೀ ವೈಮಾನಿಕರಿದ್ದಾರೆ.

ದಕೂಡವೆಂಬುದೇ ನಮ್ಮ ಅಭಿಪ್ರಾಯ. ಪಾದ್ರಿಗಳಾದರೂ ಹೀಗೆ ಸರ್ಕಾರವನ್ನು ಪ್ರಾರ್ಥಿಸಿದ್ದರೆ ನಮ್ಮಗೆ ಸಹಾಯವಾಗುತ್ತಿತ್ತು. ಅವರು ತಮ್ಮ ಮತದ ಸ್ವಾರ್ಥಕ್ಕಾಗಿ ಮಾಡುತ್ತಿರುವುದರಿಂದ ನಾವು ನಮ್ಮ ಮತದ ರಕ್ಷಣೆಗಾಗಿ ತಕರಾರು ಮಾಡುತ್ತಿದ್ದೇವೆ. ಸಬ್ ಡಿವಿಜನ್ ಸಾಹುಕಾರರೂ, ಶ್ರೀ ಪ್ರೋಲೀಸ್ ಸೂಪರಿಂಟೆಂಡೆಂಟರವರೂ, ತಾ॥ ಅಮಲ್ದಾರರವರೂ ಸ್ಥಳಕ್ಕೆ ದಯಮಾಡಿಸಿ ಮೊದಲು ಪರಾಂಬರಿಸಿದ್ದಾರೆ. ತಾವು ಈಗ ಯಿಂದ ಎಲ್ಲವನ್ನೂ ಪರಿಶೀಲಿಸಿ ನ್ಯಾಯವನ್ನು ಕೊಡಬೇಕಾಗಿ ಪ್ರಾರ್ಥಿಸುತ್ತೇನೆ.



A Reliable House for Repairs of
WATCHES & GRAMOPHONES
HIGH CLASS RUBBER STAMP
Suppliers,
M. V. N WATCH COY.
The General Commission Agency
Lansdowne Buildings,
MYSORE

ಗಡಿಯಾರ ಮತ್ತು ಗ್ರಾಮೋಫೋನುಗಳ ರಿಪೇರಿ
ಮತ್ತು ರಬ್ಬರ್ ಮೊಹರುಗಳ ತಯಾರಿ
ನಮ್ಮಲ್ಲಿ ನಡೆಯುತ್ತವೆ
ಎಂ. ವಿ. ಎನ್ ವಾಚ್ ಕಂಪೆನಿ, ಮೈಸೂರು

MYSORE RACES & SWEEP

Races—30th May, 3rd, 6th, 9th, 11th & 13th June,

Railway Specials run on all Race days between Bangalore & Mysore at Special Concession rates

GOLD CUP SWEEP (BY PERMISSION OF GOVERNMENT OF MYSORE)

Tickets Rs. 5/- each

To close on Saturday 23rd May 1936
Bonus given to Sellers of Winning Tickets
Total Collection 1935–Rs. 19,970/-
For Prospectus & Particulars apply to

The Honorary Secretary,
RACE COURSE, MYSORE

ಮದನಕಳಾಶಾಸ್ತ್ರವೆಂಬ ಪ್ರೇಮ ರಹಸ್ಯಗಳು.

ಕನ್ನಡ ಭಾಷೆಯಲ್ಲಿ ಸ್ತ್ರೀ ಪುರುಷರ ಪ್ರೀತಿಯ ಫೋಟೋಗಳೊಡನೆ ಮುದ್ರಿಸಿದೆ ಇದರಲ್ಲಿ ಎಲ್ಲಾ ದೇಶದ ಕನ್ಯೆಗಳು ಪೋಷಿಸುವ ರಹಸ್ಯಗಳು, ಸುಖ ವಿಲಾಸಗಳು, ಸ್ತ್ರೀಪುರುಷರ ಗುಟ್ಟುಗಳು, ಪ್ರಪಂಚದಲ್ಲಿ ಇರುವ ಎಲ್ಲಾ ದೇಶಗಳ ಜನರು ಪ್ರೀತಿಸುವ ರಹಸ್ಯಗಳು, ಕನ್ಯೆಗಳ ಪ್ರಥಮ ಸಂಯೋಗ ಕಾಲದ ಮರ್ಮಗಳು, ಇನ್ನೂ ಅನೇಕ ಪ್ರೀತಿಯ ರಹಸ್ಯಾನ್ವಿತ [illegible] ರಹಸ್ಯ ಫೋಟೋಗಳು ಅಡಗಿವೆ ಸ್ತ್ರೀಯರನ್ನು ವಶ ಮಾಡಿಕೊಳ್ಳುವ [illegible] ಓದಿ ನೋಡಿದರೆ ಪುಸ್ತಕ ಮುಗಿಯುವವರೆಗೂ ಮೇಲಕ್ಕೇಳಲು ಮನಸ್ಸಾಗದು

ಕ್ರಯ ೬೦ ಫೋಟೋಗಳ ಸಹಿತ ಇರುವ ಪುಸ್ತಕ ರೂ ೧-೪-೦ ವಿ. ಪಿ. ಖರ್ಚು [illegible] ಪ್ರತ್ಯೇಕ, ಮುಂಗಡ [illegible] ಅಣೆ ಸ್ಟಾಂಪು [illegible] ಕಳುಹಿಸುವವರಿಗೆ ಪೋಸ್ಟು ಖರ್ಚು ಇಲ್ಲದೆ ಕಳುಹಿಸುವೆವು
ಸಿಗುವ ವಿಳಾಸ—**ದೇವಕರ್ ಅಂಡ್ ಕಂಪೆನಿ,**
ನಂಬುಲಯರ್ ವೀದಿ, ಜಿ. ಟಿ. ಮದರಾಸು

ಎಂ. ವಿ. ನಾರಾಯಣರಾಯರ

ಶ್ರೀ ಸತ್ಯನಾರಾಯಣ ಪರಿಮಳ ಫ್ಯಾಕ್ಟರಿ,
ಜಗನ್ಮೋಹನ ಬಂಗ್ಲಾ ರೋಡ್, ಮೈಸೂರು

ಪರಿಮಳ ಅಗರ್ ಬತ್ತಿ

ಉಪಯೋಗಿಸಿ ಪ್ರೋತ್ಸಾಹಿಸಿರಿ

BETETR LIGHT

LIGHTER BILLS.

Use—

"BIJLEE"

ELECTRIC BULBS.

Made in INDIA.

ಸ್ವದೇಶಿ ಎಲೆಕ್ಟ್ರಿಕ್ ಬಲ್ಬುಗಳನ್ನೇ
ಉಪಯೋಗಿಸಿರಿ.

"ಬಿಜಲಿ"

SOLE DISTRIBUTORS

THE STATES ENGINEERING COMPANY,
BANGALORE MYSORE SHIMOGA & COIMBATORE

Now running Successfully For the Fourth Week at
OLYMPIA TALKIES MYSORE.
"KRISHNA LEELA," in Telugu

ಒಲಂಪಿಯಾ ಟಾಕೀಸಿನಲ್ಲಿ ನಾಲ್ಕನೇವಾರ

ಶ್ರೀ ಕೃಷ್ಣ ಲೀಲಾ (ತೆಲುಗಿನಲ್ಲಿ)

॥ ವಿಜಯಾಭರ ಶ್ರೀ ಕೃಷ್ಣ ಭೂಪಾಲ ॥

ಮೈಸೂರು ಶ್ರೀಮನ್ ಮಹಾರಾಜರವರ ಘನ ಕೃಪಾಕಟಾಕ್ಷಕ್ಕೆ ಪಾತ್ರರಾಗಿ ದೊಡ್ಡ ದೊಡ್ಡ ಸ್ಥಾನಗಳಲ್ಲಿನ ಕಲಾ ಪ್ರೇಮಿಗಳ ಉದಾರ ಪ್ರೋತ್ಸಾಹದಿಂದ ಬಹುಮಾನಿತರಾದ

ಶ್ರೀ ಗೌರೀ ಶಂಕರ ನಾಟಕ ಸಭಾ,

ಬೆಂಗಳೂರು.

ಈ ಸಂಘದವರು ಶೀಘ್ರದಲ್ಲಿಯೇ

(ಬಾಲಕೃಷ್ಣ ವಿರಚಿತ)

ಕರ್ಮ

ಎಂಬ ಶ್ರೇಷ್ಠ ಸಾಮಾಜಿಕ ನಾಟಕವನ್ನು ಪ್ರದರ್ಶಿಸುವರು.

ಪ್ರಥಮ ಪ್ರದರ್ಶನದ ಸ್ಥಳ ಮತ್ತು ತಾರೀಖನ್ನು ಗಮನಿಸಿ

ನಿರಕ್ಷರದ ದಾಹ! ನಿರುದ್ಯೋಗಿಯ ಜೀವನ ಸಮಸ್ಯೆ!

ಸುರೆಯ ಸಾಹಿತ್ಯ ಪ್ರಬಂಧ!

ಇತ್ಯಾದಿ ನೂತನ ಸಮಸ್ಯೆಗಳನ್ನು ಸಮಾರಂಭದಿಂದ ಬಿಂಬಿಸುತ್ತಿರುವ ಸಾಮಾಜಿಕ ರಂಗ ಚಿತ್ರ— ಗಮನಿಸಿ

ಟಿ. ನೀಲಕಂಠಪ್ಪ,
ಪ್ರೊಪ್ರೈಟರ್

SEVA INSTITUTE OF COMMERCE,
MADANAPALLE.

The Seva Institute of Commerce, Madanaplle has great pleasure in announcing to the public that commercial classes are being started from 1st June 1936. The Subjects taught will be Short-hand and Type-writing, Book-keeping, Commercial Correspondence and Office Routine for both Junior and Senior Courses, London Chamber of Commerce, and Pitmans' Certified Teachers' Diploma.

There is a Hostel attached to the Institute known as "Seva Ashrama" situated amidst natural surroundings with a bracing climate.

Write for further particulars to

The Principal,
Seva Institute of Commerce
Madanapalle.

USE ALWAYS

DERMOTONE

(SASTRIC BATHING HERBAL PREPARATION)

THE UNIQUE PRODUCT
IN THE MARKET FOR SKIN HYGIENE.

ಡರ್ಮೊಟೋನ್,

ಶಾಸ್ತ್ರೀಯವಾದ ಮತ್ತು ಆರೋಗ್ಯಕರವಾದ ಚರ್ಮರಕ್ಷಣೆಗೆ ಜೋಡ
ಡರ್ಮೊಟೋನ್ ವರ್ಕ್ಸ್, ಮೈಸೂರು.

A Reply

To all malicious and false mis-representations, (if any).

What an Eminent Actuary of Great Britain Says —

After perusal of the Company's Balance Sheet, Directors' Report and Abstract of Business, our Actuary, Mr H. L. Humphreys has favoured with his invaluable opinion in the course of which he observes: —

"It is clear that the very difficult task of the establishment of a Life Office is well begun. You are to be congratulated on the extent to which so far you have limited the inevitably heavy expenses of the start .. ..I shall hope to see continued progress in this and the following years and that the economical efforts obvious from these accounts will be continued ... . . . I wish the Company continued success."

THE MYSORE INSURANCE COMPANY Ltd.,
Sri Narasimharaja Road, Bangalore City.

ಅಸೂಯಾಪರರ ಮತ್ತು ನಿಂದಾಯುಕ್ತ ನಿರಾಧಾರ ಪ್ರಚಾರಗಳಿಗೆ

ಇದೇ ಉತ್ತರ

ಗ್ರೇಟ್ ಬ್ರಿಟನ್ನಿನ ಸುಪ್ರಸಿದ್ಧ ಆಕ್ಚುಯರಿಗಳು ಏನು ಹೇಳುವರು?

ಕಂಪೆನಿಯ ಲೆಕ್ಕದ ಪಟ್ಟಿ, ಡೈರೆಕ್ಟರುಗಳ ವರದಿ ಮತ್ತು ವ್ಯವಹಾರ ವಿವರ ಪತ್ರಗಳನ್ನು ಪರಾಮರ್ಶಿಸಿ ನಮ್ಮ ಆಕ್ಚುಯರಿಗಳಾದ

ಮಿ॥ ಎಚ್. ಎಲ್. ಹಂಫ್ರೀಸ್ ರವರು

ಕೊಟ್ಟಿರುವ ಅಭಿಪ್ರಾಯದಲ್ಲಿ ಈ ರೀತಿ ಹೇಳಿದ್ದಾರೆ :—

"ಜೀವವಿಮಾ ಕಂಪೆನಿಯನ್ನು ಸ್ಥಾಪಿಸುವಂತಹ ಕಷ್ಟತರವಾದ ಕೆಲಸವು ಬಹು ಸಮರ್ಪಕವಾಗಿ ಪ್ರಾರಂಭವಾಗಿದೆ. ಆರಂಭದಲ್ಲಿ ಅನಿವಾರ್ಯವಾಗಿ ಆಗುವ ಅಧಿಕ ಖರ್ಚನ್ನು ನೀವು ಬಹು ಮಟ್ಟಿಗೆ ಮಿತಿಗೊಳಿಸಿರುವುದು ಅಭಿನಂದನಾರ್ಹವು . . . . ಈ ವರ್ಷವೂ ಮತ್ತು ಮುಂದಿನ ವರ್ಷಗಳಲ್ಲಿಯೂ ಕಂಪೆನಿಯು ಇದೇ ರೀತಿ ಅಭಿವೃದ್ಧಿ ಹೊಂದಿ ಮುಂದೆಯೂ ಲೆಕ್ಕದ ಪಟ್ಟಿಯಿಂದ ತೋರಿಬರುವ ಮಿತವ್ಯಯದ ಪ್ರಯತ್ನವನ್ನು ಅನುಸರಿಸುವುದೆಂದು ಆಶಿಸುತ್ತೇನೆ. ಕಂಪೆನಿಯು ಏಕ ಪ್ರಕಾರ ಪ್ರಗತಿ ಹೊಂದಲೆಂದು ಹಾರೈಸುತ್ತೇನೆ."

ದಿ ಮೈಸೂರು ಇನ್ಷೂರೆನ್ಸ್ ಕಂಪೆನಿ ಲಿಮಿಟೆಡ್.,
ಶ್ರೀ ನರಸಿಂಹರಾಜ ರೋಡ್, ಬೆಂಗಳೂರು ಸಿಟಿ

Edited, Printed & Published by Agaram Rangaiah, B. A., at Sri Rama Press, D. Subbiah Road, Mysore



|| ಸತ್ಯಮೇವೋದ್ಧರಾಮ್ಯಹಮ್ ||

ರಾಜಧಾನಿಯ ರಾಷ್ಟ್ರೀಯ ವಾರ ಪತ್ರಿಕೆ.

ವೃದ್ಧಪಿತಾಮಹ ಎಂ. ವೆಂಕಟಕೃಷ್ಣಯ್ಯನವರ ಜ್ಞಾಪಕಾರ್ಥವಾಗಿ ಪ್ರಕಟಿಸಲ್ಪಡುವುದು.

ಸಂಪಾದಕರು ಅಗರಂ ರಂಗಯ್ಯ, ಬಿ ಎ

Sadhvi: A Leading Nationalist Weekly of Mysore.

FOUNDED IN MEMORY OF Mr M VENKATAKRISHNAYYA, THE GRAND OLD MAN OF MYSORE

ಸಂಪುಟ ೧] MYSORE . MONDAY 25—5—36 ಮೈಸೂರು : ಸೋಮವಾರ ೨೫—೫—೩೬ [ಸಂಚಿಕೆ ೧೪

RAJENDRA CINEMA,

THE MOST UP-TO-DATE AND WELL-EQUIPPED PICTURE HOUSE,

NANJANGUD.

Rare Shows of Highest Attraction Consisting of Splendid Romance, Thrill and Adventure.

SCREENED TWICE A DAY,

PLEASE PAY A VISIT AND ENJOY YOURSELF.

BROCKEN CHAINS With BURLESQUE ON CARMEN } From 25th Inst

M G M Picture Charlie Chaplin (English)

PRINCESS From 25th Inst

Master Navinchandra and Miss Mumtaz (Indian)

Coming Attraction "VASANTA SENA"

25 ನೇ ತಾ। ನಿಂದ —

ಚಾರ್ಲಿ ಚಾಪ್ಲಿನ್.

25 ನೇ ತಾ। ನಿಂದ —

" ರಾಜ ಪುತ್ರಿ "

ಮುಂದೆ ಬರುವ ವಿನೋದ " ವಸಂತ ಸೇನಾ "

ರಾಜೇಂದ್ರ ಸಿನಿಮಾ, ನಂಜನಗೂಡು.

ಅತ್ಯುತ್ಕೃಷ್ಟವೂ, ನೂತನವೂ, ಸರ್ವಾಂಗ ಸುಂದರವೂ ಆದ ಸಿನಿಮಾ ಮಂದಿರ.

ಪ್ರತಿದಿನವೂ ಎರಡು ಆಟಗಳು ತೋರಿಸಲ್ಪಡುವುವು.

ಸಾಹಸ, ಆಶ್ಚರ್ಯ, ವಿನೋದ, ಆನಂದಗಳಿಂದ ಕೂಡಿದ ಮನೋಹರವಾದ ದೃಶ್ಯಗಳಿರುವುವು.

ದಯವಿಟ್ಟು ತಪ್ಪದೆ ನೋಡಿರಿ! ಆನಂದಪಡಿರಿ!



A Reliable House for Repairs of
WATCHES & GRAMOPHONES.
HIGH CLASS RUBBER STAMP
Suppliers,
M·V·N WATCH COY,
The General Commission Agency
Lansdowne Buildings,
MYSORE

ಗಡಿಯಾರ ಮತ್ತು ಗ್ರಾಮೋಫೋನುಗಳ ರಿಪೇರಿ
ಮತ್ತು ರಬ್ಬರ್ ಮೊಹರುಗಳ ತಯಾರಿ
ನಮ್ಮಲ್ಲಿ ನಡೆಯುತ್ತವೆ.
ಎಂ ವಿ ಎನ್ ವಾಚ್ ಕಂಪೆನಿ, ಮೈಸೂರು

MYSORE RACES & SWEEP

Races—30th May 3rd, 6th, 9th, 11th & 13th June,

Railway Specials run on all Race days between Bangalore & Mysore at Special Concession rates

GOLD CUP SWEEP (BY PERMISSION OF GOVERNMENT OF MYSORE)

Tickets Rs. 5/- each

To close on Saturday 23rd May 1936
Bonus given to Sellers of Winning Tickets
Total Collection 1935–Rs 19,970/-
For Prospectus & Particulars apply to

The Honorary Secretary,
RACE COURSE, MYSORE

॥ ವಿಜಯಾಭವ ಶ್ರೀ ಕೃಷ್ಣ ಭೂಪಾಲ ॥
ಮೈಸೂರು ಶ್ರೀಮನ್ಮಹಾರಾಜರವರ ಘನ ಕೃಪಾಕಟಾಕ್ಷಕ್ಕೆ ಪಾತ್ರರಾಗಿ ದೊಡ್ಡ
ದೊಡ್ಡ ಸ್ಥಾನಗಳಲ್ಲಿನ ಕಲಾ ಪ್ರೇಮಿಗಳ ಉದಾರ
ಪ್ರೋತ್ಸಾಹದಿಂದ ಬಹುಮಾನಿತರಾದ

ಶ್ರೀ ಗೌರೀ ಶಂಕರ ನಾಟಕ ಸಭಾ,
ಬೆಂಗಳೂರು.

ಈ ಸಂಘದವರು ಪ್ರಪ್ರಥಮದಲ್ಲಿಯೇ
(ಬಾಲಕೃಷ್ಣ ವಿರಚಿತ)

ಕರ್ಮ

ಎಂಬ ಶ್ರೇಷ್ಠ ಸಾಮಾಜಿಕ ನಾಟಕವನ್ನು ಪ್ರದರ್ಶಿಸುವರು
ಪ್ರಥಮ ಪ್ರದರ್ಶನದ ಸ್ಥಳ ಮತ್ತು ತಾರೀಖನ್ನು ಗಮನಿಸಿ
ಪಿರಿತನದ ಬಾಳು! ನಿರುದ್ಯೋಗಿಯ ಜೀವನ ಸಮಸ್ಯೆ!
ಸುರೆಯ ಸಾಹಿತ್ಯ ಪ್ರಬಂಧ!
ಇತ್ತೀಚಿನ ನಾಟಕ ಸನ್ನಿವೇಶಗಳ ಸಮಾರಂಭದಿಂದ ವಿಜೃಂಭಿಸುತ್ತಿರುವ
ಸಾಮಾಜಿಕ ರಂಗ ಚಿತ್ರ—ಗಮನಿಸಿ

ಟಿ ನೀಲಕಂಠಯ್ಯ,
ಪ್ರೊಪ್ರೈಟರ್

BETTER LIGHT
LIGHTER BILLS
Use—
"BIJLEE"
ELECTRIC BULBS.
Made in INDIA.

ಸ್ವದೇಶಿ ಎಲೆಕ್ಟ್ರಿಕ್ ಬಲ್ಬುಗಳನ್ನೇ
ಉಪಯೋಗಿಸಿರಿ.
"ಬಿಜಲಿ"

SOLE DISTRIBUTORS

THE STATES ENGINEERING COMPANY,
BANGALORE, MYSORE, SHIMOGA & COIMBATORE

THE SADHVI
A LEADING NATIONALIST WEEKLY OF MYSORE

Recommended for Schools by the Department.

No TB 3778 140—35 36

OFFICE OF THE DIRECTOR OF PUBLIC INSTRUCTION IN MYSORE,

Bangalore Dated 20th April 1936.

MEMO.

The Newspaper "SADHVI" a Kannada Weekly recommended to all Government High, Middle and Normal School Reading Rooms in the State.

PARTICULARS

Name	The Sadhvi
Editor	Mr Agaram Rangiah
Place of Publication	Mysore

ANNUAL SUBSCRIPTION

Local	Rs 2—4—0
Moffusil	Rs 2—4—0

DIRECTOR

"ಸಾಧ್ವಿ" ವಾರಪತ್ರಿಕೆ.
ವಿದ್ಯಾ ಇಲಾಖೆಯವರಿಂದ ಶಿಫಾರ್ಸು ಮಾಡಲ್ಪಟ್ಟಿದೆ
ಕೂಡಲೇ ಚಂದಾದಾರರಾಗಿ ಪ್ರೋತ್ಸಾಹಿಸಿರಿ.

॥ ಸತ್ಯಮೇವೋದ್ಧರಾಮ್ಯಹಮ್ ॥
ರಾಜಧಾನಿಯ ರಾಷ್ಟ್ರೀಯ ವಾರ ಪತ್ರಿಕೆ.
ವೃದ್ಧಪಿತಾಮಹ ಎಂ. ವೆಂಕಟಕೃಷ್ಣಯ್ಯನವರ ಜ್ಞಾಪಕಾರ್ಥವಾಗಿ ಪ್ರಕಟಿಸಲ್ಪಡುವುದು.
ಸಂಪಾದಕರು: ಅಗರಂ ರಂಗಯ್ಯ, ಬಿ. ಎ.

ಸಂಪುಟ ೧] MYSORE : MONDAY 25—5—36 ಮೈಸೂರು : ಸೋಮವಾರ ೨೫—೫—೩೬ [ಸಂಚಿಕೆ ೧೪

ಮಹಾತ್ಮರ ಕೋಲಾರ ಡಿಸ್ಟ್ರಿಕ್ಟ್ ಸಂಚಾರ.

ಮಹಾತ್ಮ ಗಾಂಧಿಯವರೂ, ಸರ್ದಾರ್ ವಲ್ಲಭಾಯಿ ಪಟೇಲರೂ ಕೋಲಾರ ಡಿಸ್ಟ್ರಿಕ್ಟಿನಲ್ಲಿ ಈ ತಿಂಗಳು ತಾ॥ 31 ರಲ್ಲಿ ಸಂಚಾರ ಮಾಡುವರು. ಆ ದಿನ ಬೆಳಿಗ್ಗೆ ನಂದೀಬೆಟ್ಟವನ್ನು ಬಿಟ್ಟು ಶಿಡ್ಲಘಟ್ಟ, ಕೋಲಾರ, ಬೌರಿಂಗ್‌ಪೇಟೆ, ಚಿಕ್ಕಬಳ್ಳಾಪುರಗಳನ್ನು ಭೇಟಿಮಾಡಿ ಚಿನ್ನದ ಗಣಿ ಪ್ರಯಾಣಮಾಡಿಸುವರು. ಅಲ್ಲಿ ಬಿನ್ನವತ್ತಳೆಗಳನ್ನೂ, ನಿಧಿಗಳನ್ನೂ ಸ್ವೀಕರಿಸುವರು. ಆ ದಿನ ಮಧ್ಯಾಹ್ನ ಕೋಲಾರದಲ್ಲಿ ತಂಗುವರು. ಆ ದಿನ ರಾತ್ರಿ ಬೆಂಗಳೂರಿಗೆ ವಾಪಸು ತೆರಳುವರು.

ಧನ್ಯವಾದಗಳು

ದಿವಂಗತರಾದ ಶ್ರೀ॥ ಜೆ. ಪಿ. ವಿದ್ಯಾರ್ಥಿಯವರ ಧರ್ಮಪತ್ನಿ ಶ್ರೀಮತಿ ರಾಜಕುಮಾರಿಯವರು ತಮಗೆ ಉಂಟಾದ ಪತಿವಿಯೋಗಕ್ಕಾಗಿ ಸಂತಾಪವನ್ನು ಸೂಚಿಸಿದವರೆಲ್ಲರಿಗೂ ಈ ಮೂಲಕ ಹೃತ್ಪೂರ್ವಕವಾದ ಧನ್ಯವಾದಗಳನ್ನು ಅರ್ಪಿಸುತ್ತಾರೆ. ಅವರ ದೇಹಸ್ಥಿತಿಯು ಬಹಳ ಸೂಕ್ಷ್ಮವಾಗಿದೆ, ಆದ್ದರಿಂದ ತಮ್ಮ ಪತಿಯ ಮಿತ್ರರುಗಳಿಗೂ ಹಿತೈಷಿಗಳಿಗೂ ಬೇರೆ ಬೇರೆಯಾಗಿ ಪತ್ರಗಳನ್ನು ಬರೆಯಲು ಅವರು ಶಕ್ತರಾಗಿಲ್ಲ. ಅವರಿಗೆ ಬಂದಿರತಕ್ಕ ಅನುತಾಪದ ಸಂದೇಶಗಳಿಂದ ಅವರು ಬಹಳವಾಗಿ ಚಕಿತರಾಗಿದ್ದಾರೆ.

ಇಟಲಿಯಲ್ಲಿ ಪಾದ್ರಿಗಳ ಉಚ್ಚಾಟನೆ

ಫ್ರೆಂಚ್ ಪಾದ್ರಿಗಳೂ, ಕಾರ್ಡಿನಲ್ ಎಂಬ ಬಿಷಪ್ಪರೂ ಆದ ಜರೋಸೋನಿಯವರು ಇಟಲಿಗೆ ವಿರೋಧವಾದ ಚಳವಳಿ ನಡೆಸುತ್ತಿದ್ದರೆಂಬ ಕಾರಣದ ಮೇಲೆ ಅವರು ಅಬಿಸೀನಿಯವನ್ನು ಬಿಟ್ಟು ಹೊರಡಬೇಕೆಂದು ಆಜ್ಞೆಯಾಗಿದೆ.

ಅಬಿಸೀನಿಯದಲ್ಲಿ ಲೂಟಿ

ಅಬಿಸೀನಿಯದಲ್ಲಿ ಯುದ್ಧ ನಿಂತ ಮೇಲೆ ಲೂಟಿ ಆರಂಭವಾಗಿದೆ. ಸಿಕ್ಕಿದ ಕಡೆಯಲ್ಲಾ ದಂಗೆಕೋರರು ಲೂಟಿ ಮಾಡುತ್ತಿರುವರು. ಅವರನ್ನು ಅಡಗಿಸಲು ಬಲವಾದ ಸೈನ್ಯಪಡೆಯು ಹೋಗಿದೆ.

ವಿದ್ಯುಚ್ಛಕ್ತಿ ರಿಯಾಯಿತಿ

ವ್ಯವಸಾಯದ ಪ್ರಯೋಜನಾರ್ಥವಾಗಿ ಉಪಯೋಗಿಸುವ ವಿದ್ಯುಚ್ಛಕ್ತಿ ದರಗಳನ್ನು ಸರ್ಕಾರದವರು ಕಡಿಮೆ ಮಾಡಿರುವರು. ಒಂದು ಅಶ್ವಶಕ್ತಿಯ ವ್ಯವಸಾಯದ ಪಂಪಿಗೆ ತಿಂಗಳಿಗೆ ಒಂದು ರೂ. ನಿಂದ ಎಂಟಾಣೆಗೆ ಮಿನಿಮಂ ದರವನ್ನು ಇಳಿಸಿದ್ದಾರೆ. ಈ ರಿಯಾಯಿತಿಯನ್ನು ವ್ಯವಸಾಯಗಾರರು ಉಪಯೋಗಿಸಿಕೊಳ್ಳುವರೆಂದು ಸರ್ಕಾರದವರು ನಂಬಿದ್ದಾರೆ.

ಮದರಾಸು ಗೌರ್ನರವರು

ಮದರಾಸ್ ಗೌರ್ನರವರು ವರ್ಧಂತಿ ಉತ್ಸವಕ್ಕೆ ರಾಜಾತಿಥಿಗಳಾಗಿ ಬರುವರು.

ಜೀವವಿಮೆ ಕಾನೂನು

ಜೀವವಿಮಾ ಚಳುವಳಿಗೆ ಸಂಬಂಧಪಟ್ಟ ಕಾನೂನೊಂದನ್ನು ಜಾರಿಗೆ ತರಬೇಕೆಂದು ಸರ್ಕಾರದವರು ಪರ್ಯಾಲೋಚಿಸಿದ್ದಾರೆ. ಜೀವವಿಮಾ ಸಮಿತಿಯವರು ಈ ವಿಷಯವಾಗಿ ಶಿಫಾರ್ಸು ಮಾಡಿರುವರು.

ಪ್ರಜಾ ಪ್ರತಿನಿಧಿ ಸಭೆ.

ಈ ಸಭೆಯು ಮುಂದಿನ ಎರಡನೆಯ ತಾರೀಖು ಮಧ್ಯಾಹ್ನ ಜಗನ್ಮೋಹನಭವನದಲ್ಲಿ ಆರಂಭವಾಗುತ್ತದೆ. ಆರು ದಿವಸಗಳವರೆಗೆ ನಡೆಯುತ್ತದೆ. ಈ ಅಧಿವೇಶನದಲ್ಲಿ ನಾಲ್ಕು ಮಸೂದೆಗಳು ಚರ್ಚೆಗೆ ಬರಲಿವೆ. 31 ಠರಾವುಗಳೂ, 60 ಪ್ರಶ್ನೆಗಳೂ, 117 ಅರಿಕೆಗಳೂ ಇವೆ. ಮಸೂದೆಗಳ ಪೈಕಿ ಕೃಷಿಕರ ಪರಿಹಾರ ಕಾನೂನು ತಿದ್ದುಪಡಿ ಮಸೂದೆ ರಿಜಿಸ್ಟ್ರೇಷನ್ ಕಾನೂನು ತಿದ್ದುಪಡಿ ಮಸೂದೆ ಹಿಂದೂ ವಿಧವೆಯರ ವಿವಾಹಕ್ಕೆ ಸಂಬಂಧಪಟ್ಟ ಮಸೂದೆಗಳಿವೆ.

ಎಲ್ಲಾ ಮುಜರಾಯಿ ದೇವಸ್ಥಾನಗಳಿಗೂ, ಸಾರ್ವಜನಿಕ ಬಾವಿಗಳಿಗೂ ಹರಿಜನರನ್ನು ಬಿಡಬೇಕೆಂಬ ಅಭಿಪ್ರಾಯದ ಒಂದು ಠರಾವು ಇದೆ. ಇನ್ನು ಹತ್ತು ವರ್ಷದವರೆಗೆ ಬಾಲಕ ಬಾಲಿಕೆಯರನ್ನು ಬಲಾತ್ಕಾರದಿಂದ ವಿದ್ಯಾಭ್ಯಾಸ ಮಾಡುವಂತೆ ನಿರ್ಬಂಧಿಸಬೇಕೆಂದು ಮತ್ತೊಂದು ಠರಾವು ಇದೆ.

ನಿರುದ್ಯೋಗ ನಿವಾರಣೆಗೆ ಶಸ್ತ್ರಗಳ ತಯಾರಿ.

ಫ್ರಾನ್ಸಿನಲ್ಲಿ ನಿರುದ್ಯೋಗವನ್ನು ಹೋಗಲಾಡಿಸಲು ಈಗಿನ ಸಮತಾಪಕ್ಷ ಸರ್ಕಾರದ ಕಡೆಯಿಂದ ಹೊಸ ಏರ್ಪಾಡು ಆಗಿದೆ. ಶಸ್ತ್ರ ತಯಾರಿ ಕೆಲಸವನ್ನು ಬಹಳ ದೊಡ್ಡ ಪ್ರಮಾಣದಲ್ಲಿ ಕೈಗೊಳ್ಳಬೇಕೆಂದೂ, ಅದಕ್ಕೆ 500 ದಶಲಕ್ಷ ಫ್ರಾಂಕುಗಳನ್ನು ಮಂಜೂರು ಮಾಡಬೇಕೆಂದೂ ನಿರ್ಣಯವಾಗಿದೆ. ಈ ಕೈಗಾರಿಕೆಯು ರಭಸದಿಂದ ನಡೆಯುತ್ತಿದೆ.

ತುಮಕೂರು ಸುದ್ದಿ.

ತುಮಕೂರಿನಲ್ಲಿ ಪೋಲೀ ದನಗಳು ಹೆಚ್ಚಿ ಜನಗಳಿಗೆ ಬಹಳ ತೊಂದರೆಯುಂಟಾಗಿದೆ. ಮುನಿಸಿಪಾಲಿಟಿಯವರು ಏನೂ ಮಾಡುತ್ತಾ ಇಲ್ಲವೆಂದು ಕಾಣುತ್ತದೆ. ಇನ್ನುಮೇಲಾದರೂ ಮುನಿಸಿಪಾಲಿಟಿಯವರು ಎಚ್ಚರಿಕೆಗೊಂಡು ಪೋಲಿ ದನಗಳಿಂದುಂಟಾದ ನಷ್ಟದಿಂದ ಕೊರಗುತ್ತಿರುವ ಜನರುಗಳಿಗೆ ಉಪಕಾರ ಮಾಡುತ್ತಾರೆಂದು ನಂಬಿದ್ದೇನೆ. ಎಂದು ಹಿತೈಷಿಗಳೊಬ್ಬರು ಬರೆಯುತ್ತಾರೆ.

J. P. VIDYARTHI.

IN MEMORIAM

"Just! . . . Just! . . ." They prate that God is kind
and just,
Put not thy blinded faith in Him, who cheats that trust.
Vainly we cling to His vaunted name. He lies in wait
In gleeful, heartless cunning, armed with causeless hate,
Dealing destruction on the true, the great and gay.
Yonder lies—behold—just where that eve He lay,
Alas—Vidyarthi—straight and faultless, smiling friend!
Rare soul! promoting e'er another's worthy end!
Ten thousand dreams his ardour dreamt! His
constant thought
His faith, his tongue, to render strong! He ne'er forgot
In day to day distress, his country and his God.

ರೈಲ್ವೆ ಸೌಕರ್ಯ

ಕೃಷ್ಣರಾಜಸಾಗರದ ಬೃಂದಾವನ ಉದ್ಯಾನವನ್ನು ನೋಡಿಬರಲು ಹೋಗತಕ್ಕವರ ಸೌಕರ್ಯಕ್ಕಾಗಿ ಮೈಸೂರು ರೈಲ್ವೆಯವರು ಇದೇ ತಾ॥ 24 ರಿಂದ ಜೂನ್ ತಾ॥ 7 ರ ವರೆಗೆ ಮೈಸೂರಿನಿಂದ ಸ್ಪೆಷಲ್ ಟ್ರೇನನ್ನು ಬಿಡುವರು.

ಕೋಲಾರ ಡಿಸ್ಟ್ರಿಕ್ಟ್ ಬೋರ್ಡು

ಮುಂದಿನ ಸಾಲಿನ ಬಡ್ಜೆಟ್ಟನ್ನು ಪರಿಶೀಲಿಸಲು ಈ ದಿನ ಕೋಲಾರ ಡಿಸ್ಟ್ರಿಕ್ಟ್ ಬೋರ್ಡಿನ ವಿಶೇಷ ಸಭೆ ನಡೆಯುತ್ತದೆ.

ಬಲವಂತ ಸೈನ್ಯ ಶಿಕ್ಷಣ.

ಇಟಲಿಯಲ್ಲಿ ಸಶಕ್ತರಾಗಿರುವ ಫ್ಯಾಸಿಸ್ಟರೆಲ್ಲರೂ ಸೈನ್ಯಕ್ಕೆ ಬಲಾತ್ಕಾರದಿಂದ ಸೇರಿಸಲ್ಪಡಬೇಕೆಂದು ವಿಧಾಯಕವಾಗಿದೆ. 21 ರಿಂದ 55 ವರ್ಷ ವಯಸ್ಸಿನೊಳಗಿರುವವರೆಲ್ಲರೂ ಸೈನ್ಯಕ್ಕೆ ಸೇರಬೇಕು.

ಇಟಲಿ ಖೈದಿಗಳ ಬಿಡುಗಡೆ.

ಇಟಲಿಯವರು ಅಬಿಸೀನಿಯದಲ್ಲಿ ಪಡೆದ ವಿಜಯದ ಸಂತೋಷಕ್ಕಾಗಿ ಲಿಪಾರಿ ದ್ವೀಪ ಮತ್ತು ಇತರ ಕಡೆಗಳಲ್ಲಿ ಬಂಧಿಸಲ್ಪಟ್ಟಿದ್ದ ರಾಜಕೀಯ ಖೈದಿಗಳು 498 ಜನರು ಬಿಡುಗಡೆ ಹೊಂದಿದರು

ನಿಮಗೆ ಗೊತ್ತೇ?

ಲೇಖಕರು:—ಎಂ. ವಿ. ನಾರಾಯಣ ಮೂರ್ತಿ, ಮೈಸೂರು.

(೧) ಬ್ರಿಟಿಷ್ ಗಿನಿಯ ಸರ್ಕಾರದವರು 1856ನೆ ಇಸವಿಯಲ್ಲಿ ಪ್ರಕಟಿಸಿದ ಸ್ಟಾಂಪು ಈಗ ಪ್ರಪಂಚದಲ್ಲೆಲ್ಲಾ ಒಂದೇ ಒಂದು ಪ್ರತಿ ಇರುವುದು. ಇದನ್ನು ಒಂದೂವರೆ ಲಕ್ಷ ರೂ. ಗಳಿಗೆ ಏಲಮು ಮಾಡಿರುವರಂತೆ!

(೨) ಕ್ಯಾಲಿಯ ಎಂಬಲ್ಲಿ ಇರುವ ಒಂದು ಆಸ್ಪತ್ರೆಯವರು ಚಂದಾ ವಸೂಲಿಗಾಗಿ ಒಂದು ನಾಯಿಯ ಕತ್ತಿಗೆ ಒಂದು ಗೋಲಕ ದ (Collection box)ನ್ನು ಕಟ್ಟಿ ರೈಲ್ವೆ ಪ್ಲಾಟ್‌ಫಾರಂನಲ್ಲಿ ಬಿಡುವರು. ಆ ನಾಯಿ ಹೋದ ವರ್ಷ ಸುಮಾರು 1500 ರೂ. ಸಂಪಾದಿಸಿತಂತೆ!

(೩) ಒಂದು ಪೆನ್ನಿ ಚಿನ್ನವನ್ನು 146 ಚದರಡಿಗಳ ಅಗಲ ತೆಳ್ಳನೆ ತಗಡಾಗಿ ಮಾಡಬಹುದಂತೆ!

(೪) ಈಗ ಇಡೀ ಬ್ರಿಟಿಷ್ ದ್ವೀಪಗಳ ಲ್ಲೆಲ್ಲಾ ಒಂದೇ ಒಂದು ಚಲನ ಚಿತ್ರಮಂ ದಿರ (Silent Picture House) ಇದೆಯಂತೆ! ಅದು ನ್ಯೂಂಚೆಸ್ಟರಿನಲ್ಲಿದೆ. ಮಿಕ್ಕವೆಲ್ಲವೂ ಮೂಕಿ ಹೋಗಿ ಟಾಕಿ ಆಗಿ ಬಿಟ್ಟಿವೆ!

(೫) ಲಂಡನ್ನಿನಲ್ಲಿರುವ 'ಬಿಗ್ ಬೆನ್' (Big Ben) ಗಿಂತ ಆರರಷ್ಟು ದೊಡ್ಡದಾಗಿರುವ ಒಂದು ಗಡಿಯಾರವನ್ನು ಮಾಂಟ್ರಿಯಲ್‌ನಲ್ಲಿ ತಯಾರಿಸಿರುವರಂತೆ. ಇದು ಪ್ರಪಂಚದಲ್ಲಿರುವ ಎಲ್ಲಾ ಗಡಿಯಾರಗಳಿಗಿಂತಲೂ ದೊಡ್ಡದು. ನಿಮಿಷ ಗೆರೆಗಳ ನಡುವೆ (Minute Marks) 3 ಅಡಿ ಅಂತರವಿದೆ. ನಿಮಿಷವನ್ನು ತೋರಿಸುವ ಮುಳ್ಳು 30 ಅಡಿ ಉದ್ದವಿದೆ, ಮತ್ತು ಅದು 2500 ಪೌಂಡು ತೂಗುತ್ತದೆ! ಒಂದು ವರ್ಷದಲ್ಲಿ ಇದರ ದೊಡ್ಡ ಮುಳ್ಳು 312 ಮೈಲಿ ಸುತ್ತುತ್ತದೆ.

(೬) ಒಂದು ನಗರದಲ್ಲಿ 39 ತರುಣರು ಸೇರಿ ಒಂದು "ವಿಪರೀತದ ಸಂಘ" (Reverse Club) ವನ್ನೇರ್ಪಡಿಸಿರುವರು. ಅವರು ಬರುವಾಗ ಕೋಟು, ಹ್ಯಾಟು, ಬೂಟ್ಸುಗಳನ್ನು ಹಿಂದುಮುಂದಾಗಿ ಹಾಕಿಕೊಂಡು ಬರುವರು. ಯಾರಾದರೂ ಇಬ್ಬರು ಭೇಟಿ ಮಾಡಿದರೆ ಮೊದಲು 'ಹೋಗಿಬಿಟ್ಟು ಬರುತ್ತೇನೆ ಸ್ವಾಮಿ' ಎನ್ನುತ್ತಾರೆ. ಒಳಗೆ ಬರುವಾಗ ಹಿಂದ ಹಿಂದಕ್ಕೆ ಬರುತ್ತಾರೆ. ರೂಮಿನಲ್ಲಿ ಚಿತ್ರಗಳು ಗೋಡೆಗೆ ಮುಖ ತಿರುಗಿಸಿ ಹಾಕಲ್ಪಟ್ಟಿವೆ. ಊಟಮಾಡುವಾಗ ನೀರಿಗೆ ಅನ್ನವನ್ನು ನೋಡಲು ಬಡಿಸುತ್ತಾರೆ. ಅವರನ್ನು ನಿಮ್ಮ ಸಂಘದಲ್ಲಿ ಎಷ್ಟು ಜನರಿರುವರೆಂದು ಕೇಳಿದರೆ ಅವರು 39 ಕ್ಕೆ ಬದಲಾಗಿ '93' ಎನ್ನುತ್ತಾರೆ!

(೭) ಅಮೆರಿಕಾ ದೇಶದಲ್ಲಿ ಅತ್ಯಲ್ಪ ಶಬ್ದವನ್ನು ಕೂಡ ಹೆಚ್ಚು ಮಾಡಿ ತಿಳಿಸುವ ಒಂದು ಯಂತ್ರವನ್ನು (Sound Microscope) ಕಂಡು ಹಿಡಿದಿರುವರು. ಇದರ ಸಹಾಯದಿಂದ ಹುಳುಕು ಹಲ್ಲಿನೊಳಗಿನ ಕ್ರಿಮಿಗಳು ಮಾಡುವ ಸದ್ದನ್ನು ಕೇಳಬಹುದು. ರೈಲ್ವೆ 'ಮೇಲ್' (Mail) ಗಾಡಿಯು ಬರುವ ಶಬ್ದವಂತಿರುವುದು!

ನೆನೆಸಿದ ಅಂಕಿಯನ್ನು ಹೇಳುವುದು.

ನಿಮ್ಮ ಸ್ನೇಹಿತನಿಗೆ- ಅವನ ವಯಸ್ಸನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳುವುದಕ್ಕೆ ಹೇಳಿ. ಅದನ್ನು 3ರಿಂದ ಗುಣಿಸಲಿ. ಆ ಮೇಲೆ 1ನ್ನು ಸೇರಿಸಲಿ. ಒಟ್ಟನ್ನು 3 ರಿಂದ ಗುಣಿಸಲಿ. ಬಂದ ಉತ್ತರವನ್ನು ತಿಳಿದುಕೊಳ್ಳಿ. ಕೊನೆಯ ಅಂಕಿಯು ಯಾವಾಗಲೂ 3 ಆಗಿರುತ್ತದೆ. ಅದನ್ನು ಬಿಟ್ಟುಬಿಡಿ ಉಳಿದ್ದೇ ವಯಸ್ಸು. ಉದಾ: ಸ್ನೇಹಿತನ ವಯಸ್ಸು ... ...15ಆಗಿರಲಿ

3ರಿಂದ ಗುಣಿಸಿದರೆ	45 ,,
ಒಂದು ಸೇರಿಸಿ	46 ,,
3ರಿಂದ ಮತ್ತೆ ಗುಣಿಸಿ ...	46×3 ,,
	138

ಅವನ ವಯಸ್ಸನ್ನು ಸೇರಿಸಿ 153 ,, 3ನ್ನು ಬಿಟ್ಟು ಉಳಿಯುವುದು(15)

(೮) ಬೆಲ್‌ಗ್ರೇಡ್ ಎಂಬ ಪಟ್ಟಣದ ಹತ್ತಿರ ಬಿತ್ತನೆಕರಿಗೆ ಒಂದು ವಿಶ್ವ ವಿದ್ಯಾನಿಲಯವನ್ನು ಏರ್ಪಡಿಸಿದ್ದಾರೆ. ಇಲ್ಲಿರುವ ವಿದ್ಯಾರ್ಥಿಗಳಿಗೆ ಬಿತ್ತ ಬೇಡುವ ರೀತಿ, ನಟನೆ, ಬಾಯಿಟಿಕೆ, ಗೋಳಿನ ಹಾಡುಗಳು ಮುಂತಾದುವುಗಳನ್ನು ಕಲಿಸುತ್ತಿರುವರಂತೆ.

(೯) ಕಳೆದ ವರ್ಷ ಪ್ರಪಂಚದಲ್ಲೆಲ್ಲಾ 42,300,000, ರೇಡಿಯೋ ಯಂತ್ರಗಳು (Wireless receiving sets) ಉಪಯೋಗದಲ್ಲಿತ್ತಂತೆ! ಅಮೆರಿಕಾದ ಸಂಯುಕ್ತ ಸಂಸ್ಥಾನಗಳಲ್ಲಿ 20,750,000 ರೇಡಿಯೋಗಳಿವೆ. ಇದು ರೇಡಿಯೋ ಪ್ರಪಂಚದಲ್ಲಿ ಮೊದಲನೆಯದು. ಗ್ರೇಟ್ ಬ್ರಿಟನ್ನಿನಲ್ಲಿ 6,780,569 ಯಂತ್ರಗಳಿವೆಯಂತೆ. ಜರ್ಮನಿಯಲ್ಲಿ 6,192,921 ಯಂತ್ರಗಳಿವೆಯಂತೆ!

(೧೦) ಕಳೆದ ಮಹಾ ಯುದ್ಧದಲ್ಲಿ ಒಂದು ಲಕ್ಷ ಇಪ್ಪತ್ತುಸಾವಿರ ಕೋಟಿ ರೂಪಾಯಿ ಖರ್ಚಾಯಿತು. ಹೀಗೆ ದುರ್ವ್ಯಯವಾಗದೆ ಉಳಿದಿದ್ದರೆ ಗ್ರೇಟ್‌ಬ್ರಿಟನ್, ಸಂಯುಕ್ತ ಪ್ರಾಂತಗಳು, ಕೆನಡಾ, ಆಸ್ಟ್ರೇಲಿಯಾ, ಫ್ರಾನ್ಸ್, ಬೆಲ್ಜಿಯಮ್, ಜರ್ಮನಿ ಮತ್ತು ರಷ್ಯಾ ದೇಶಗಳ ಪ್ರತಿ ಒಂದು ಸಂಸಾರಕ್ಕೂ 7000 ರೂ. ನ ಒಂದು ಮನೆ ಮತ್ತು ಅದರಲ್ಲಿ 3000 ರೂ. ಸಾಮಾನುಗಳನ್ನೂ ಎಕರೆಗೆ 300 ರೂ. ನೇರಿ 5 ಎಕರೆ ಜಮೀನನ್ನೂ ಕೊಡಬಹುದಾಗಿತ್ತು. ಮತ್ತು 20,000 ಜನ ಸಂಖ್ಯೆಯ ಮೇಲಿರುವ ಪಟ್ಟಣಗಳಲ್ಲೆಲ್ಲಾ ಒಂದೊಂದು, ಒಂದೂವರ ಲಕ್ಷ ರೂಪಾಯಿನ ಪುಸ್ತಕಗಳನ್ನು ಸೇರಿಸಿ ಒಂದು ವಾಚನಾಲಯವನ್ನೂ (Library) 30 ಲಕ್ಷ ರೂಪಾಯಿನ ಒಂದೊಂದು ವಿಶ್ವ ವಿದ್ಯಾನಿಲಯವನ್ನೂ (University) ಏರ್ಪಡಿಸಿಕೊಡಬಹುದಾಗಿತ್ತಂತೆ. ಇದಲ್ಲದೆ ಐವತ್ತುಕಾಲು ಲಕ್ಷ ಜನ ಉಪಾಧ್ಯಾಯರಿಗೆ ಪ್ರತಿಯೊಬ್ಬರಿಗೂ ತಿಂಗಳಿಗೆ 250 ರೂಪಾಯಿ ಸಂಬಳವನ್ನು ಕೊಡಬಹುದಾಗಿತ್ತಂತೆ. ಯುದ್ಧದ ದುಂದುಗಾರಿಕೆಯನ್ನು ನೋಡಿದಿರಾ?

ಚೌ. ಚೌ. (೧೦)

ಜನರು ದೇಶದವರು ಫುಟ್‌ಬಾಲ್ Foot-ball ಆಟದ ತರಹ ಒಂದು ಆಟವನ್ನು ಕಂಡುಹಿಡಿದಿರುವರಂತೆ. ಮೈಸೂರಿನ ಅನೇಕ ಕ್ರೀಡಾಪಟುಗಳು ಅದೇ ಆಟವನ್ನು ಆಗಲೇ ಆಡುತ್ತಿರುವುದು ಹೆಮ್ಮೆಯ ವಿಷಯವಲ್ಲವೆ?

೨ ತಮ್ಮ ಪತ್ರಿಕೆ ಬರುವ ತಿಂಗಳಿನ ಮೊದಲನೆಯ ವಾರದಲ್ಲಿ ಬೆಂಗಳೂರಿಗೆ ದೊರೆಯುತ್ತಾದರೆ ಈಗಲೇ ಯಾಕೆ ಬೇಕು ಮದುವೆ? ಅಂತ ಕೇಳಿದ್ದಕ್ಕೆ, ನಮ್ಮ ಹುಡುಗ, 'ನಾಳೆ ನಾಂದಿ ನಾವಲೇ ಹೋಗುತ್ತೇನೆ ಅಂತ ಹೇಳಿದ್ದಕ್ಕೆ ಈ ಕ್ತೆ' ಅಂದರು. ಈಗ ಅರ್ಥವಾಯಿತು.

೩ ರಾಜ್ಯಾಡಳಿಯ ಕೋಡಿ ಅರಡಿ ಅಡ್ ನೊಕ್ಸಪೋರ್ಡ್ ಪ್ರಶ್ನೆಗೆ "ಪಿಜಲ್ ಪಜ್ಲ್ ಸಮಸ್ಯೆ ಸಂಘ" (Cross word Puzzle Syndicate ಗಳು ಮಾಡಿಕೊಂಡಿರುವ ಪಾಲುಗಳು ನಿರುಪಯುಕ್ತವಾಗಿವೆಯಂತೆ. ಪಿಜಲ್‌ವಾಲೆ ಗತಿ!

೪ ನೀವು ಬಾಯಿಬಿಟ್ಟು ಹಾಡಿದರ ಒಳ್ಳೆಯದು, ಎಂದು ನನಗೊಬ್ಬರು ಹೇಳಿದರು. ಅವರೆ, ಬಾಯಿಬಿಟ್ಟು ಹಾಡಿದರೆ, ವಿನಾಗುತ್ತದೆಂದು ನನಗೂ ಅಂದೇ ಗೊತ್ತಿದೆ. ಇಂತಹ ರತ್ನಗಳ ಮಾತನ್ನು ನಾನು ಎಂದಿಗೂ ನಂಬುವುದಿಲ್ಲ.

೫ ಯಾವುದೋ ಒಂದು ಕರ್ನಾಟಕ ಸಂಘದ ಕಟ್ಟಡಕ್ಕೆ ಅಸ್ತಿಭಾರ ಹಾಕುವಾಗ, ಕೆಳಗಡೆ ಏನು ಬೇಕು ತೇಲು? ಕನ್ನಡ ಗ್ರಂಥಗಳನ್ನು ಇಟ್ಟುಬಿಟ್ಟರಂತೆ. ಒಳ್ಳೇ ಕೆಲಸ! ಸುಗಮವಾದ ಹಾದಿ, ಅವರದಾದ ಯೋಚನೆ!

೬. ಮನೆಯಲ್ಲಿ ಮಾಡಿತರಲು ಲಕ್ಷಗಳನ್ನು ಕೊಟ್ಟರೆ, ಹತ್ತರಲ್ಲೊಬ್ಬ ಸರಿಯಾಗಿ ಮಾಡುತ್ತಾನೆ. ಅಷ್ಟೇ, ಎಂದು ನೋಡುವರು ಗೊಣಗಿದರು. ಇತರ ಒಂಬತ್ತು ಜನರಿಗೆ ಅವರ ತಂದೆಗಳು ಲಕ್ಷ ಮಾಡಿಕೊಟ್ಟು ಬಿಡುತ್ತಾರಂತೆ-ನಾಗುತ್ತೆ.

೭ "ನನ್ನ ಹೆಂಡತಿ ನನ್ನ ಹೆಂಡತಿ ಕೆಲಸಕ್ಕೆ ಹಾಕಿಕೊಳ್ಳುವುದಿಲ್ಲ ಎಂದು ಗಂಡನೊಬ್ಬ ಗೊಣಗಿದ. ಪಡೆದಂಥ ಮೊದಲ ಗಂಡು ಎಂದು ಮೂರು ಅಡಿ ನೋಡಲು! ಅದೇ ನ್ಯಾಯ!

೮ ಬೊಂಬಾಯಿನಲ್ಲಿ ಒಂದು ಅಂಗಡಿಗೆ ಬೆಂಕಿಬಿತ್ತು. ಒಂದು ಪೆಟ್ಟಿಗೆ ತುಂಬಾ ಬೆಂಕಿಪೆಟ್ಟಿಗೆಗಳಿದ್ದುವಂತೆ. ಆ ದರೆ, ಅವು ಉರಿಯ ಬೇಗನೇ ಇಲ್ಲ! ಆ ಪೆಟ್ಟಿಗೆಗಳು ಯಾವ ಮಾರ್ಕಿನವು, ಯಾವ ಕಂಪನಿಯವು ಎಂದು ನಾನು ಬೇಕಾದರೆ ಹೇಳಬಲ್ಲೆ. ನನಗೆ ತುಂಬಾ ಅನುಭವವಿದೆ.

೯ ಕ್ಲಾಸಿನಲ್ಲಿದ್ದ ಮಾಸ್ಟರು ಹುಡುಗನನ್ನು ನೋಡಿದರು. 'ಲೋ! ನಿನ್ನ ತಂದೆಯ ಹತ್ತಿರ ನಾನು ನೂರು ರೂಪಾಯಿ ಸಾಲ ತೆಗೆದು, ತಿಂಗಳಿಗೆ ೧೦ ರೂಪಾಯಿಯ ಹಾಗೆ ತೀರಿಸುತ್ತಾ ಬಂದರೆ, ಎಂಟು ತಿಂಗಳಾದ ಮೇಲೆ, ಎಷ್ಟು ಸಾಲ ಉಳಿದಿರುತ್ತದೆ?' ಅಂತ ಕೇಳಿದರು. ಹುಡುಗ, "೧೦೦ ರೂಪಾಯಿ' ಅಂದ. ಆಗ ಮೇ

ಬೃಂದಾವನ.

ಕೃಷ್ಣರಾಜಸಾಗರದಲ್ಲಿರುವ ಬೃಂದಾವನವು ಅಭಿವೃದ್ಧಿ ಹೊಂದಿದ ಉದ್ಯಾನವನಗಳನ್ನು, ವಿಶೇಷ ಪ್ರಕಾರ ಕೊಡತಕ್ಕ ದೀಪಗಳಿಂದಲೂ, ಬಿಡಿಸಿದ್ದ ದೀಪಗಳಿಂದಲೂ, ಅಲಂಕರಿಸಿ ದಸರಾ ಗೋಳಿಸುವ ಶ್ರೀ ಸಾರ್ವಭೌಮ ಮುಂದಿನ ವರ್ಧಂತ್ಯುತ್ಸವದ ದಿನಗಳಲ್ಲಿ ಎಂದರೆ, 1936ನೆಯ ಇಸವಿ ಜೂನ್ 23ನೆಯ ತಾರೀಖಿನಿಂದ 1936ನೆಯ ಇಸವಿ ಜೂನ್ 7ನೆಯ ತಾರೀಖಿನವರೆಗೆ ಎರಡು ದಿನಗಳು ಸೇರಿ ಪ್ರತಿದಿನವೂ ನಡೆಸಲಾಗುವುದೆಂದು, ಸಮಸ್ತ ಜನತೆಯ ತಿಳುವಳಿಕೆಗಾಗಿ ಪ್ರಕಟಿಸಲಾಗಿದೆ.

ಮರಣದಂಡನೆ ಸಜಾ ಆಗಬೇಕು.

ಲೋನಿನ ಸ್ಟ್ರೇಟ್ ಕೌನ್ಸಿಲ್ಲಿನ ಕೆಲವು ಸದಸ್ಯರು ಮರಣದಂಡನೆಯನ್ನು ಸಜಾ ನಾಡಬೇಕೆಂದು, ರಾಜ್ಯ ತಂದಿದ್ದಾರೆ. ಇದುವರೆಗೆ ವಿಧಿಸಿರುವ ಮರಣದಂಡನೆಗಳೆಲ್ಲ ಅನೇಕಸಾರಿ ನಿರಪರಾಧಿಗಳಿಗೆ ಶಿಕ್ಷೆಯಾಗಿರುವುದೆಂದು ಅವರು ತಿಳಿಸಿದರು. ಈ ವಿಷಯವನ್ನು ನಯವಾಗಿ ಚೆನಲು ನಿರ್ಧರವಾಗಿದೆ.

ಒಂದು ವರ್ಷ ರಿಮ್ಯಾಂಡ್

ಕ್ರಿಮಿನಲ್ ಮೊಕದ್ದಮೆಗಳಲ್ಲಿ ಆಪಾದಿತನಾದವನಿಗೆ ಸಾಮಾನ್ಯವಾಗಿ ಒಂದೆರಡು ವಾರಗಳ ರಿಮ್ಯಾಂಡ್ ಕೊಡುವುದುಂಟು. ಸಿರೋಹಿನ ಆರುಜನ ಆಪಾದಿತರು ಒಂದು ವರ್ಷಕಾಲ ವಿಚಾರಣೆಯಿಲ್ಲದೆ ರಿಮ್ಯಾಂಡಿನಲ್ಲಿದ್ದರು. ಖೂನಿಯ ಕಟ್ಟಡವನ್ನು ಪೋಲೀಸರು ಮುತ್ತಿದಾಗ ಒಬ್ಬ ಪೋಲೀಸ್ ಕಾನ್‌ಸ್ಟೇಬಲನು ಕೊಲ್ಲಲ್ಪಟ್ಟನು. ಅವನು ಅಪ್ರಯತ್ನವಾಗಿ ಕೊಲ್ಲಲ್ಪಟ್ಟನೆಂದೂ, ಇವರ ಮೇಲೆ ಆಪಾದಿಸಿದರೆಂದೂ ಇವರೆಲ್ಲರ ಮೇಲೆ ಆಪಾದನೆ. ನ್ಯಾಯಾಧೀಶರು ಈ ಮೊಕದ್ದಮೆಯನ್ನು ಪರಿಶೀಲಿಸುವಾಗ ಇವರುಗಳನ್ನು ದೀರ್ಘಕಾಲ ರಿಮ್ಯಾಂಡಿನಲ್ಲಿ ಇಟ್ಟದ್ದಕ್ಕಾಗಿ ಆಶ್ಚರ್ಯಪಟ್ಟರು. ಆಪಾದಿತರು ಬಹಳ ದೀರ್ಘಕಾಲ ನಿರ್ಬಂಧದಲ್ಲಿದ್ದರಿಂದ ಅವರ ಶಿಕ್ಷೆ ಮೂವರನ್ನು ಬಿಟ್ಟು ಒಂದು ದಿನ ಸಜೆಕ್ಕೆ ಗುರಿ ಮಾಡಿದರು. ಒಬ್ಬನನ್ನು ಖುಲಾಸೆ ಮಾಡಿ ಮತ್ತೆ ಬ್ಬರಿಗೆ ಶಿಕ್ಷೆ ವಿಧಿಸಿದರು.

ಕ್ಕರು, "ಮೂರ್ಖ, ನಿನಗೆ ಲೆಕ್ಕ ಗೊತ್ತಿ ಲ್ಲ' ಅಂದರಂತೆ. ಅದಕ್ಕೆ, ಹುಡುಗ, "ಸಾರ್ ನಿಮಗೆ ನಮ್ಮ ತಂದೆ ಸ್ವಭಾವ ಗೊತ್ತಿಲ್ಲ" ಅಂದನಂತೆ!

೧೦ ಹೋಟೆಲಿನ ಮಾಲೀಕನೇ, ಗಿರಾಕಿಯನ್ನು ಹಿಡಿಸುತ್ತಾ, 'ಹೋ ನಿಮ್ಮಿಂದ ನಮ್ಮ ವ್ಯಾಪಾರವೇ ಹಾಳಾಯಿತು!" ಅಂದರು. ಅದನು 'ಪ್ರತಿಯೊಬ್ಬರೂ ನನ್ನ ಬಳಿಗೆ ಬಂದು ಅಂತ ಹೋಗುತ್ತಿದ್ದರು!" ಅಂದ ಮಾಲೀಕರು, 'ಅದಕ್ಕೇ ನನ್ನ ವ್ಯಾಪಾರವಾದದ್ದು. ಅವರು ಅಪಾಯ ನನ್ನ ಗತಿ ಏನಯ್ಯಾ!" ಎಂದರಂ

... ಲಕ್ಷ ರೂ. ಗಳಿಗೆ ದಾವ.

ರಿಲೈಯನ್ಸ್ ಅಶ್ಯುರೆನ್ಸ್ ಕಂಪನಿಯ ಮೇಲೆ

...ಂಗಳೂರಿನಲ್ಲಿರುವ ರಿಲೈಯನ್ಸ್ ಅ ಶ್ಯುರೆನ್ಸ್ ಕಂಪನಿಗೆ ಶ್ರೀ ವೀರರಾಘವ ...ರ್ ಎಂಬುವರೂ ಮತ್ತು ಅವರ ... ...ಯಿಗಳೂ ಏಜಂಟರಾಗಿದ್ದರೆಂದೂ, ...ವು ಕಾಲದವಾದಮೇಲೆ ಶ್ರೀ ವೀರರಾ ಘವಯ್ಯರ್ ರವರು ಮೃತರಾದರೆಂದೂ, ...ಂದ ಅವರಿಗ ಬರಬೇಕಾಗಿದ್ದ ...ವು ಬರಲಿಲ್ಲವೆಂದೂ, ಅವರ ಮೈನರ್ ... ...ದ ಶ್ರೀ ಎ ಡಿ ಸುಬ್ರಹ್ಮಣ್ಯಂ, ಶ್ರೀ ಎ ಡಿ ಶ್ರೀನಿವಾಸನ್, ಮತ್ತು ಶ್ರೀ ಎ ಡಿ ಗುರು...ರ್ತಿ ಯವರ ಪರವಾಗಿ ಶ್ರೀ ...ರ ಘವಯ್ಯರ್ ರವರ ತಮ್ಮಂದಿ... ರಿಲೈಯನ್ಸ್ ಅಶ್ಯುರೆನ್ಸ್ ಕಂಪೆನಿಯ ಮ್ಯಾನೇಜಿಂಗ್ ಏಜಂಟರಾದ ತಿರುಪತಿ ... ಮತ್ತು ಕಂಪೆನಿಯ ಮೇಲೆ ... ... ಗೆ ಬೆಂಗಳೂರು ಡಿಸ್ಟ್ರಿಕ್ಟ್ ...ರ್ಟಿನಲ್ಲಿ 'ಪಾಪರ್ ಸೂಟ್' ಹೂ ...ದಾರೆಂದು ತಿಳಿದುಬಂದಿದೆ

ರುದ್ರಹೋಮ.

...ಸ್ಥದ ಶ್ರೀ ಶಂಕರ ಮೋಟಾರ್ ಕಂ... ...ಮಾಲೀಕರಾದ ಶ್ರೀ॥ ಎಂ ಎಸ್ ...ರವರು ೬ ೫ ೩೭ ರಲ್ಲಿ ರುದ್ರ... ...ವನ್ನು ವರ್ಷಂಪ್ರತಿ ವರ್ಷದಿಸು... ...ರ ಈ ವರ್ಷವೂ ವರ್ಪಡಿಸಿದ್ದರು ...ನ್ನು ...ತಿನ ಅಮಲ್ದಾರ್‌ರವರೂ ...ತ್ತು ವ್ಯವಸಾಯದ ಇಲಾಖೆ ಇನ್ಸ್ ...ಕ್ಟರ್ ಮೊಲಾದವರು ದಯಮಾಡಿ... ...ದು ಈ ತರನಾದ ರುದ್ರಹೋಮವು ಸು... ...ರು ೧೦ ವರ್ಷಗಳಿಂದಲೂ ನಡೆಯುತ್ತಿ... ಈ ವರ್ಷ ಅನೇಕ ಪ್ರತಿಬಂಧಕಗಳಿ... ...ದ್ದರೂ ಇದೇ ವಿಜೃಂಭಣೆಯಿಂದ ...ನೆರವೇರಿತು ಈ ಕಿಗ್ಗಕ್ಕೆ ಸುಮಾ... ... ಘರ್ಮಾರ್ಥವಾದ ಬಸ್ಸುಗಳ ವಿ... ...ಮಾಡಲ್ಪಟ್ಟಿತ್ತು ಈ ತರನಾದ ...ದ್ರ ಹೋಮವು ಸ್ವಂತವಾಗಿ ವಿರ್ಪಡಿಸ ...ತ್ತಿರುವುದು ಶ್ರೀ॥ ...ರವರೊಬ್ಬರಿಂ... ...

ಕಾಂಗ್ರೆಸ್ ಮಹಾಸಭೆ

ಮುಂದಿನ ಸಾರಿ ಕಾಂಗ್ರೆಸ್ ಮಹಾಸ... ...ಪ್ರಾಂತ್ಯ ವೇರದಲ್ಲಿರುವ ಕ್ಷೇ... ...ದಲ್ಲಿ ನಡೆಯುವುದು ವಡ್ಲಿ ಶಂಕ... ...ದೇವಶಾವರು ಸ್ವಾಗತಾಧ್ಯಕ್ಷರು

...ಗಳನ್ನು ಮಾರುವ ವಿದ್ಯಾಲಯ

...ರ್ವರ್ಡ್ ಯೂನಿವರ್ಸಿಟಿ ಆಫ ... ಎಂಬ ಒಂದು ಸಂಸ್ಥೆ ಇದಕ್ಕೆ ...ದೇಶದಲ್ಲಿ ಅನೇಕ ಶಾಖೆಗಳ. ಮು... ...ಲ ಇಂಡೋರಿನಲ್ಲಿದೆ ಅವರ ...ಗಳನ್ನು ಅಮೇರಿಕದಲ್ಲಿ ಯಾರೂ ...ಸಿಲ್ಲ ಪ್ರಶಸ್ತಿಗಳನ್ನು ಮಾ... ...ಗಿಯೇ ಇದು ಸ್ಥಾಪಿಸಲ್ಪಟ್ಟಿದ ...ವರೂ ಅವನ್ನು ಅಂಗೀಕರಿಸು... ... ಆ...ೂ ಬಗೆಬಗೆಯ ರೀತಿಯಲ್ಲಿ ...ತಿ...ನ್ನು ಕೊಡುತ್ತಿದೆ

ನಿರುದ್ಯೋಗಿಗಳ ಪ್ರದರ್ಶನ

ತಲಚೇರಿಯಲ್ಲಿ ನಿರುದ್ಯೋಗಿ ತರುಣ ರ ಒಂದು ಪ್ರದರ್ಶನವು ನಡೆಯಿತು ಅ ನೇಕ ಯುವಕರುಗಳ ಸೇರಿದ್ದರು ಬೀದಿ ಯಲ್ಲೆಲ್ಲಾ ಮೆರವಣಿಗೆ ಮಾಡಿದರು ಸ ಬ್ ಕಲೆಕ್ಟರ್ ಆಫೀಸನ್ನು ಹೋಗಿ ಮು ತ್ತಿದರು ಸರ್ಕಾರದಿಂದ ನಿರುದ್ಯೋಗಿಗ ಳಿಗೆ ಸಹಾಯ ಮಾಡಿಸಬೇಕೆಂದು ಕೋ ರಿದರು ಅನಂತರ ಗುಂಪು ಚದುರಿತು

ಪೋಸ್ಟಲ್ ಸೇವಿಂಗ್ಸ್ ಬ್ಯಾಂಕ್.

1936 ನೇ ಜುಲೈ 1 ರಿಂದ ಪೋಸ್ಟಾ ಫೀಸು ಸೇವಿಂಗ್ಸ್ ಬ್ಯಾಂಕಿನ ಕ್ಯಾಷ್ ಡಿ ಪಾಜಿಟ್ಟುಗಳ ಮೇಲೆ ಕೊಡುವ ಬಡ್ಡಿಯ ನ್ನು ಶೇ॥ ಎರಡಕ್ಕೆ ಇಳಿಸುವಂತೆ ತೀರ್ಮಾ ನವಾಗಿದೆ ಈಗ ಕೊಡುತ್ತಿರುವ ಬಡ್ಡಿದ ರವು ಇಂಪೀರಿಯಲ್ ಬ್ಯಾಂಕಿಗಿಂತ ಹೆ ಚ್ಚಾಗಿದೆ

ಉಪಾಧ್ಯಕ್ಷರ ವಜಾ

ಸಿರಾ ಪೌರಸಭೆಯ ಉಪಾಧ್ಯಕ್ಷರಾದ ಮಿ॥ ಅಸೀಮುಲ್ಲಾಖಾನ್ ಇವರನ್ನು ಅವರ ಸ್ಥಾನದಿಂದ ತೆಗೆದುಹಾಕಲಾಗಿದೆ ಖಾ ಗೆಯೇ ...ಪಟ್ಟಣದ ಉಪಾಧ್ಯಕ್ಷ ರಾದ ಶ್ರೀ॥ ಎನ್ ...ನವರೂ ತ ಮ್ಮ ಸ್ಥಾನವನ್ನು ಕಳೆದುಕೊಂಡಿರು ವರು

ಪ್ರೊ॥ ಬಿ. ಎಂ. ಶ್ರೀಕಂಠಯ್ಯನವರು.

ಕರ್ನಾಟಕ ಭಾಷಾಪ್ರಚಾರಕ್ಕಾಗಿ ಶಿವಮೊಗ್ಗ ಜಿಲ್ಲೆಯಲ್ಲಿ ಸಂಚಾರ ಮಾಡುತ್ತಿರುವರು

ಜೆ ಸಿ ಕುಮಾರಪ್ಪನವರು

ಮಹಾತ್ಮ ಗಾಂಧಿಯವರ ಶಿಷ್ಯರೂ ಅಖಿ ಲಭಾರತ ಗ್ರಾಮಕೈಗಾರಿಕೆಗಳ ಸಂಘದ ಕಾರ್ಯದರ್ಶಿಗಳೂ ಆದ ಶ್ರೀ॥ ಜೆ ಸಿ ಕುಮಾರಪ್ಪನವರು ಸ್ವದೇಶಿ ವಸ್ತುಪ್ರದ ರ್ಶನಕ್ಕಾಗಿ 30ನೇ ತಾ॥ ರಾಜಧಾನಿಗೆ ದ ಯಮಾಡಿಸುವರು ಆ ದಿನ ಸಾಯಂಕಾ ಲ ಪ್ರದರ್ಶನದಲ್ಲಿ ಭಾಷಣ ಮಾಡುವರು ಮಹಾತ್ಮ ಗಾಂಧಿಯವರಿಗೂ ಸರದಾರ್ ವಲ್ಲಭಭಾಯಿ, ಪಟೇಲರಿಗೂ ಆಹ್ವಾನಗ ಳು ಹೋಗಿವೆ ಅವರೂ ಬರುವುದೆಂಬ ನಿರೀಕ್ಷಣೆ ಇದೆ

ಇಂಡಿಯಾ ಸರ್ಕಾರದ ಸಾಲ

ಇಂಡಿಯಾ ಸರ್ಕಾರದವರು ಹೊಸ ಸಾಲವೊಂದನ್ನು ಪ್ರಕಟಿಸಿರುವರು ಶೇ॥ ಎರಡೂಮುಕ್ಕಾಲು ರೂ ಬಡ್ಡಿ ಕೊಡಲ್ಪ ಡುವುದು. ಈ ಸಾಲಕ್ಕೆ ೧೪ ವರ್ಷ ಅವ ಧಿ ಒಪ್ಪೊಬ್ಬರು ಐದು ಸಾವಿರಕ್ಕೆ ಕಡಿಮೆ ಇಲ್ಲದೆ ಕೊಡಬೇಕು ಹನ್ನೆರಡು ಕೋಟಿ ರೂ ಸಾಲ ತೆಗೆದುಕೊಳ್ಳಲ್ಪಡುವುದು ಈಚೆಗೆ ಚಿನ್ನದ ರಫ್ತು ಕಡಿಮೆಯಾಗಿದೆ ಸ್ಟೇಟ್ ಸೆಕ್ರೆಟರಿಯವರಿಗೆ ಕೊಡಬೇ ಕಾದ ಬಾಕಿಗಾಗಿ ಇದು ಉಪಯೋಗಿಸಲ್ಪ ಡುವುದು.

ಕನ್ಯಾಪಹಾರ ಪ್ರಯತ್ನ.

ಕಳೆದವಾರ ಒಬ್ಬ ಬ್ರಾಹ್ಮಣ ತರುಣಿಯನ್ನು ಅದೇ ಊರಿನ ಒಬ್ಬ ಮುಸಲ್ಮಾನನು ಇತ ರ ಕೆಲವು ಮ ಸಲ್ಮಾನರ ಸಹಾಯದಿಂದ ಬಂಟ್ವಾಳ ...ಲ್ಲಿಗ ಕರೆದುಕೊಂಡು ಹೋಗಿ ಅಲ್ಲಿ ಆಕೆಯನ್ನು "ನಿಕಾ ಮಾ ಡಿಕೊಳ್ಳುವುದರಲ್ಲಿದ್ದನೆಂದೂ ಅಷ್ಟರಲ್ಲಿ ಕೆ ಲವು ಜನ ಮ...ಾಳುಗಳು ಅಲ್ಲಿಗೆ ಹೋ ಗಿ ಅಪಾದಿತನನ್ನು ದಸ್ತಗಿರಿ ಮಾಡಿಸಿ ಚಿಕ್ಕಮಗಳೂರು ಒಂದನೇ ತರಗತಿ ಮ್ಯಾಜಿಸ್ಟ್ರೇಟರ ಮುಂದ ಮೊಕದ್ದಮೆ ನ ಡೆಯುತ್ತಿರುವುದಾಗಿಯೂ ತಿಳಿದು ಬರು ತ್ತದೆ

ಸಾಧ್ವಿ

೨೫-೫-೩೬ ನೇ ಸೋಮವಾರ

ಸಂಸ್ಥಾನದ ಆಯವ್ಯಯ

ನಮ್ಮ ಸಂಸ್ಥಾನದ ಮುಂದಿನ ವರ್ಷದ ಆಯವ್ಯಯದ ಅಂದಾಜು ಪಟ್ಟಿಯಿಂದ ಎರಡು ಲಕ್ಷ ರೂಪಾಯಿನ ಆದಾಯವು ಕಂಡುಬರುವುದು. ಇತರ ನಿಧಿಗಳಿಂದ ಸುಮಾರು 2,63,000 ರೂಪಾಯನ್ನು ತೆಗೆದುಕೊಂಡು ಈ ಉಳಿತಾಯವು ತೋರಿಸಲ್ಪಟ್ಟಿದೆ. ಒಟ್ಟು ಹುಟ್ಟುವಳಿ 3,78,72,000 ರೂಪಾಯಿ ಆಗುವುದೆಂದು ನಿರೀಕ್ಷಿಸಲ್ಪಟ್ಟಿದೆ ಒಟ್ಟು ಖರ್ಚು ರೂ 3,76,72,000 ಉಳಿತಾಯ 2 ಲಕ್ಷ ರೂಪಾಯಿ

ರೈಲ್ವೆ ಇಲಾಖೆಯಿಂದ 18,67,000 ರೂಪಾಯಿ ಆದಾಯವು ಅಂದಾಜು ಮಾಡಲ್ಪಟ್ಟಿದೆ. ಇದುವರೆಗೆ 9,60,000 ರೂಪಾಯಿ ಮಾತ್ರ ನಿರೀಕ್ಷಿಸಲ್ಪಟ್ಟಿತ್ತು. ಆದರೆ ಇನ್ನು ಮುಂದೆ ರೈಲ್ವೆ ಸಾಲಗಳನ್ನು ತೀರಿಸಲು ಏರ್ಪಾಡು ಮಾಡುತ್ತಿರುವುದರಿಂದ ಅವುಗಳ ಮೇಲಿನ ಬಡ್ಡಿಯನ್ನು ಕೊಡಬೇಕಾಗುವುದಿಲ್ಲ. ಆದ್ದರಿಂದ ಸದರಿ ಉಳಿತಾಯವನ್ನು ಸೂಚಿಸಲಾಗಿದೆ

ವೆಚ್ಚದ ಬಾಬುಗಳಲ್ಲಿ ವಿಶೇಷವಾದ ಬದಲಾವಣೆಯೇನೂ ಕಂಡುಬರುವದಿಲ್ಲ. ಸುಮಾರು ಎರಡು ಲಕ್ಷ ರೂಪಾಯಿನಷ್ಟು ಹೆಚ್ಚಿನ ಬಡ್ಡಿಯು ಕೊಡಲ್ಪಡುವುದು.

ವಿದ್ಯಾಭ್ಯಾಸಕ್ಕಾಗಿ ಐವತ್ತೆರಡು ಲಕ್ಷ ರೂಪಾಯಿಗಳನ್ನು ನಮೂದು ಮಾಡಲಾಗಿದೆ. ಇಂದರೆ ಕಳೆದ ಸಾಲಿಗಿಂತಲೂ 2,21,000 ರೂ. ಹೆಚ್ಚು. ಅಧಿಕಾರಿಗಳ ಸಂಬಳಗಳಲ್ಲಿ ಈಗ ಮಾಡಿರುವ ಮುರಿತಾವನ್ನು ಪೂರ್ವದಲ್ಲಿದ್ದ ದರಕ್ಕೇ ನಿಲ್ಲಿಸಲಾಗುವುದು.

ಎಕ್ಸೈಸ್ ಕಮೀಷನರ್.

ಶ್ರೀ॥ ಡಿ. ಶ್ರೀನಿವಾಸಯ್ಯಂಗಾರ್ರವರು ನಿವೃತ್ತರಾದ ಪ್ರಯುಕ್ತ ಶ್ರೀ॥ ಬಿ. ಟಿ ಕೇಶವಯ್ಯಂಗಾರ್ರವರು ಎಕ್ಸೈಜ್ ಕಮೀಷನರ್ ಕಛೇರಿಯ ಚಾರ್ಜನ್ನು ವಹಿಸಿಕೊಂಡಿರುವರು

ಶ್ರೀ॥ ಜೆ. ಪಿ. ವಿದ್ಯಾರ್ಥಿ.

ಶ್ರೀ॥ ಜೆ. ಪಿ. ವಿದ್ಯಾರ್ಥಿಯವರ ಮರಣದಿಂದ ಮೈಸೂರು ನಗರವು ಒಂದು ಅಮೂಲ್ಯ ರತ್ನವನ್ನು ಕಳೆದುಕೊಂಡಂತಾಯಿತು. ಇವರು ಇಂಟರ್ ಯೂನಿವರ್ಸಿಟಿ ಬೋರ್ಡಿನ ಮ್ಯಾನೇಜರಾಗಿದ್ದರು. ಕಾನ್ಪುರದವರು. ಕೇವಲ ಮುವತ್ತೆರಡು ವಯಸ್ಸು. ಚಿಕ್ಕ ಸಂಸಾರ. ಒಂದು ಸಣ್ಣ ಮಗು, ಒಬ್ಬ ತಮ್ಮ. ಇವರಿಗೆ ಕಳೆದ ಬುಧವಾರ ಘೋರ ಮರಣವು ಸಂಭವಿಸಿತು ಮಂಗಳವಾರ ಬೈಸಿಕಲ್ಲಿನಮೇಲೆ ಮೈಸೂರು ಚಾಮರಾಜ ಪೋಲೀಸ್ ಸ್ಟೇಷನ್ ಚೌಕದಲ್ಲಿ ಹೋಗುತ್ತಿದ್ದರು. ಎದುರಿಗೆ ಒಂದು ಟ್ಯಾಕ್ಸಿ ಮೋಟಾರು ಬರುತ್ತಿತ್ತು. ಅವರು ಬೈಸಿಕಲ್ಲನ್ನು ಪಕ್ಕಕ್ಕೆ ತಿರುಗಿಸಲು ರಸ್ತೆಯ ಮಗ್ಗುಲಲ್ಲಿದ್ದ ಕಲ್ಲು ಮತ್ತು ಕಬ್ಬಿಣದ ಕಂಬಗಳಿಗೆ ಅವರ ತಲೆ ತಗುಲಿತು. ಗಾಯವಾಯಿತು ರಸ್ತೆ ಕಡೆ ಚಾಚಿದ್ದ ಅವರ ಕಾಲಿನಮೇಲೆ ಮೋಟಾರು ಚಕ್ರವು ಹರಿಯಿತು. ಒಡನೆ ಅದೇ ಕಾರಿನಲ್ಲಿ ಆಸ್ಪತ್ರೆಗೆ ಸಾಗಿಸಲ್ಪಟ್ಟರು ಅಲ್ಲಿ ಚಿಕಿತ್ಸೆ ಮಾಡಿದರೂ ಪ್ರಯೋಜನವಾಗದೆ ಬುಧವಾರ ಬೆಳಗ್ಗೆ ಸ್ವರ್ಗಸ್ಥರಾದರು

ಇವರು ಹಿಂದೀ ಪ್ರಚಾರ ಸಭಾ, ಆರ್ಯ ಸಮಾಜ, ಮುಂತಾದ ಸಂಸ್ಥೆಗಳಲ್ಲಿ ವಿಶೇಷವಾಗಿ ಭಾಗ ವಹಿಸುತ್ತಿದ್ದರು. ಮೊನ್ನೆ ತಾನೆ ಶ್ರೀಮದ್ಯುವರಾಜರ ಕುಮಾರರಾದ ಶ್ರೀ ಜಯಚಾಮರಾಜ ಒಡೆಯರವರಿಗೆ ಹಿಂದೀ ಅಧ್ಯಾಪಕರಾಗಿ ನೇಮಿಸಲ್ಪಟ್ಟಿದ್ದರು. ಎಲ್ಲಾ ಸಾರ್ವಜನಿಕ ಕಾರ್ಯಗಳಲ್ಲಿಯೂ ಉತ್ಸಾಹದಿಂದ ಭಾಗ ವಹಿಸುತ್ತಿದ್ದರು. ಯಾವಾಗಲೂ ಹಸನ್ಮುಖರಾಗಿಯೂ, ಉತ್ಸಾಹದಿಂದಲೂ ತುಂಬಿ ತುಳುಕುತ್ತಿದ್ದರು. ಅವರ ಮರಣದ ಬಗ್ಗೆ ಸಂತಾಪವನ್ನು ಸೂಚಿಸಲು ಕಳೆದ ಗುರುವಾರ ಬನುಮಯ್ಯನವರ ಸ್ಕೂಲಿನಲ್ಲಿ ಬಹಿರಂಗ ಸಭೆ ನಡೆಯಿತು. ಶ್ರೀ ಅಂಬಳೆ ಸುಬ್ರಹ್ಮಣ್ಯರವರು ಅಗ್ರಾಸನವನ್ನು ವಹಿಸಿದ್ದರು. ಶ್ರೀ ಗಳಾದ ಎಂ. ನಾಗಪ್ಪನವರೂ, ಅಗರಂ ರಂಗಯ್ಯನವರೂ, ಪ್ರೊ॥ ವಾಡಿಯಾರವರೂ ಭಾಷಣ ಮಾಡಿದರು. ಅವರ ಗುಣಕರ್ಣವಾದ ತರುವಾಯ ಸಂತಾಪ ಸೂಚನೆಯ ಠರಾವು ಅಂಗೀಕರಿಸಲ್ಪಟ್ಟಿತು.

ಶ್ರೀ ವಿದ್ಯಾರ್ಥಿಯವರ ಮರಣಕ್ಕೆ ಕಾರಣವಾದ ಮೋಟಾರ್ ಅನಾಹುತವು ಒಂದು ಇಕ್ಕಟ್ಟಾದ ಪ್ರದೇಶದಲ್ಲಿ ನಡೆಯಿತು ಅದು ಒಂದು ಚೌಕ. ಎರಡು ಕಡೆಯಿಂದ ರಸ್ತೆಗಳು ಇಳಿಜಾರಾಗಿ ಬರುತ್ತವೆ. ಮತ್ತು ಮೂರುಕಡೆ ಭಾರಿ ಸಳ್ಳಗಳಿವೆ. ಈ ಸ್ಥಳದಲ್ಲಿ ಸಂಚಾರ ಹೆಚ್ಚು ಈ ಚೌಕವನ್ನು ಬಿಡಾಯಿಸಿ ಸಂಚಾರಕ್ಕೆ ಸೌಕರ್ಯ ಮಾಡುವುದು ಅವಶ್ಯಕ. ಮೊನ್ನೆ ತಾನೆ ಅಂಬಳೆ ಅಣ್ಣಯ್ಯ ಪಂಡಿತರ ಚೌಕದಲ್ಲಿ ಒಂದು ಅನಾಹುತವು ಆಯಿತು. ಇಂತಹ ವಿಪತ್ತುಗಳನ್ನು ತಪ್ಪಿಸುವುದು ಪೌರ ಸಭೆಯವರ ಕರ್ತವ್ಯ.

ಸಂಸ್ಥಾನದ ಪ್ರಜೆಗಳಿಗೆ ಕಾಂಗ್ರೆಸ್ ಸಹಾಯ ಮಾಡಬೇಕು

ಪಂಡಿತ ಜವಾಹರಲಾಲರ ಭಾಷಣ

ಬೊಂಬಾಯಿಯಲ್ಲಿ ಸಂಸ್ಥಾನ ಪ್ರಜೆಗಳ ಸಮ್ಮೇಳನದ ಆಶ್ರಯದಲ್ಲಿ ಇದೇ- ಮೇ ತಾ॥ 16 ರಲ್ಲಿ ಪಂಡಿತ ಜವಾಹರಲಾಲ ನೆಹರೂರವರು ಒಂದು ಸಾರ್ವಜನಿಕ ಸಭೆಯಲ್ಲಿ ಭಾಷಣಮಾಡಿದರು. ಬೊಂಬಾಯಿಯ ಮೇಯರರಾದ ಮಿ॥ ಜಮ್ನಾದಾಸ್ ಮೆಹತಾರವರು ಅಧ್ಯಕ್ಷತೆಯನ್ನು ವಹಿಸಿದ್ದರು

ಪಂಡಿತ ಜವಹರಲಾಲರು ಮಾತನಾಡುತ್ತಾ, ಹಿಂದೂ ದೇಶವನ್ನು ಬ್ರಿಟಿಷ್ ಇಂಡಿಯಾ ಮತ್ತು ಇಂಡಿಯನ್ ಇಂಡಿಯಾ (ದೇಶೀಯ ಸಂಸ್ಥಾನಗಳು) ಎಂಬುದಾಗಿ ಪ್ರಾಕೃತಿಕವಾಗಿ ವಿಭಾಗಿಸುವುದಕ್ಕಾಗುವುದಿಲ್ಲ ಇದು ಬರೀ ಕೃತಕವಾದ ವಿಭಾಗ. ಕಾಂಗ್ರೆಸ್ಸು ಸ್ವಾತಂತ್ರ್ಯಕಾಗಿ ಹೋರಾಡುತ್ತಿರುವುದು ಇಡೀ ದೇಶಕ್ಕಾಗಿಯೇ ಎಂದಮೇಲೆ, ಸಂಸ್ಥಾನಗಳಲ್ಲಿ ನಿರಂಕುಶಪ್ರಭುತ್ವವು ಇದ್ದರೆ ಅದನ್ನು ಕಾಂಗ್ರೆಸು ಸಹಿಸಲಾರದು ಸಂಸ್ಥಾನಗಳಲ್ಲಿ ಸಾಂಕುಶ ಪ್ರಭುತ್ವವು ಬರಬೇಕಾದರೆ, ಸ್ವಾತಂತ್ರ್ಯವನ್ನು ಪಡೆಯಬೇಕಾದರೆ ಸಂಸ್ಥಾನದ ಪ್ರಜೆಗಳೇ ಅದರ ಜವಾಬ್ದಾರಿ ವಹಿಸಬೇಕು. ಆದರೆ, ಸಂಸ್ಥಾನ ಪ್ರಜೆಗಳ ಜವಾಬ್ದಾರೀ ಎಂದು ಹೇಳಿಬಿಟ್ಟು ಕಾಂಗ್ರೆಸು ಸುಮ್ಮನಿರುವುದಕ್ಕೆ ಆಗುವುದಿಲ್ಲ ಕಾಂಗ್ರೆಸು ಸಂಸ್ಥಾನ ಪ್ರಜೆಗಳಿಗೆ ಸಹಾಯಮಾಡಬೇಕೆಂದು ಹೇಳುವದಾಗಿಲ್ಲ. ಬ್ರಿಟಿಷ್ ಇಂಡಿಯಾದ ಒಂದು ಪ್ರಾಂತ್ಯದಲ್ಲಿ ಯಾವುದಾದರೂ ಕಲಹ ನಡೆದರೆ, ಆಗ್ಗೆ ಆ ಪ್ರಾಂತ್ಯದ ಜನರೇ ಅದರ ಹೊರೆಯನ್ನು ಹೊರಬೇಕು. ಅದೇ ರೀತಿ ಮುಂದೆಯೇ ಸಂಸ್ಥಾನಗಳಲ್ಲಿ ನಡೆಸಬೇಕಾದ ಕಲಹಕ್ಕೆ ಸಂಸ್ಥಾನ ಪ್ರಜೆಗಳು ಅದರ ಹೊರೆಯನ್ನು ಹೊರಬೇಕು ಇಷ್ಟೇ ಅದರ ತತ್ವ. ಕಾನ್ಸ್ಟಿಟ್ಯೂಯಂಟ್ ಅಸೆಂಬ್ಲಿಯು ನೇರಿಸಲ್ಪಟ್ಟಾಗ ಸಂಸ್ಥಾನ ಪ್ರಜೆಗಳಿಗೆ ಮೂಲಭೂತ ಹಕ್ಕುಗಳನ್ನು ಕೊಡುವರೆಂಬುದಾಗಿ ನಾನು ಭರವಸೆಯಿಡುತ್ತೇನೆ ಎಂಬುದಾಗಿ ಹೇಳಿದರು

ಶ್ರೀ ರಾಮ ಪಟ್ಟಾಭಿಷೇಕ

ಮೈಸೂರು ಮಾಡರ್ನ ಹೋಟಲಿನಲ್ಲಿ ಮೊನ್ನೆ ದಿನ ಶ್ರೀ ರಾಮಪಟ್ಟಾಭಿಷೇಕ ಮಹೋತ್ಸವವು ಬಹಳ ವೈಭವದಿಂದ ನಡೆಯಿತು ಅನೇಕಜನ ಮಹನೀಯರು ಸೇರಿದ್ದರು. ಎಲ್ಲರಿಗೂ ದಿವ್ಯವಾದ ಭೋಜನವಾಯಿತು. ರಾತ್ರಿ ಮ॥ ವಿದ್ವಾನ್ ಸಂಗೀತಶಾಸ್ತ್ರರತ್ನ ವಾಸುದೇವಾಚಾರ್ಯರ ಮನೋಹರವಾದ ಗಾನವು ನಡೆಯಿತು

ವಾಯುಮಾಪಕ ಕೇಂದ್ರ

ಮೈಸೂರು ಗವರ್ನಮೆಂಟಿನವರು ಹೊಸದಾಗಿ ನಂದಿ ಬೆಟ್ಟದ ಮೇಲೆ ಒಂದು ಸಣ್ಣ ವಾಯುಮಾಪಕಕೇಂದ್ರವನ್ನು ಸ್ಥಾಪಿಸಿರುವರು.

ಕನ್ನಂಬಾಡಿ ಕಟ್ಟೆ.

1 ಅಡಿ ಎತ್ತರ ಹೆಚ್ಚುವುದು.

ಕೃಷ್ಣರಾಜ ಸಾಗರದಲ್ಲಿ ಜಲಾರಾಶಿಯನ್ನು 120 ಅಡಿಯಿಂದ 124 ಅಡಿಗೆ ಹೆಚ್ಚಿಸಬೇಕೆಂದು ಸರ್ಕಾರದವರು ನಿಶ್ಚಯಿಸಿರುತ್ತಾರೆ. ಹೀಗೆ ಹೆಚ್ಚು ನೀರನ್ನು ನಿಲ್ಲಿಸುವುದರಿಂದ ಯಾವ ಯಾವ ಭೂಮಿಗಳು ನೀರೊಳಗೆ ಸೇರುವುವೋ ಅವುಗಳಿಗೆಲ್ಲಾ ಪರಿಹಾರ ಮಾಡಬೇಕೆಂದು ಗೊತ್ತಾಗಿದೆ ಇದಕ್ಕಾಗಿ 3 ಲಕ್ಷ ರೂಪಾಯಿ ಖರ್ಚಾಗುತ್ತದೆ. ಈಗ ಇರ್ವಿನ್ ನಾಲೆಯಿಂದ 36 ಸಾವಿರ ಎಕರೆ ಭೂಮಿಯು ವ್ಯವಸಾಯಕ್ಕೆ ಸಿದ್ಧಪಡಿಸಬೇಕೆಂದು ಆಲೋಚಿಸಲ್ಪಟ್ಟಿದೆ. ಇನ್ನೂ 10 ಸಾವಿರ ಎಕರೆಗಳನ್ನು ಹೆಚ್ಚಾಗಿ ವ್ಯವಸಾಯಕ್ಕೆ ಸಿದ್ಧಪಡಿಸಬೇಕೆಂದು ಆಲೋಚಿಸಲ್ಪಟ್ಟಿದೆ. ವಿದ್ಯುಚ್ಛಕ್ತಿಯನ್ನೂ ಸಹ ಜನರು ಹೆಚ್ಚಾಗಿ ಅಪೇಕ್ಷಿಸುತ್ತಿದ್ದಾರೆ. ಆದ್ದರಿಂದ ಈಗಿರತಕ್ಕ ನೀರಿನ ಪ್ರಮಾಣವು ವ್ಯವಸಾಯಕ್ಕೂ ವಿದ್ಯುಚ್ಛಕ್ತಿಯ ತಯಾರಿಗೂ ಸಾಲದಾಗಿದೆ ಆದ್ದರಿಂದ ಕಟ್ಟೆಯನ್ನು ಹೆಚ್ಚಿಸಲು ಸರ್ಕಾರದವರು ತೀರ್ಮಾನಿಸಿರುತ್ತಾರೆ. 120 ಅಡಿ ಎತ್ತರವಿರುವ ಈಗಿನ ಕಟ್ಟೆಯಲ್ಲಿ 39,516 ದಶಲಕ್ಷ ಘನಅಡಿಗಳಷ್ಟು ನೀರು ಶೇಖರಿಸಲ್ಪಡುತ್ತಿದೆ

ಕೋರ್ಟುಗಳ ಬದಲಾವಣೆ ಇಲ್ಲ.

ಮೈಸೂರು ಸಂಸ್ಥಾನದ ಹದಿಮೂರು ತಾಲ್ಲೂಕುಗಳಲ್ಲಿ ಸ್ಪೆಷಲ್ ಮ್ಯಾಜಿಸ್ಟ್ರೇಟರುಗಳು ತಮ್ಮ ಕೋರ್ಟುಗಳನ್ನು ಹಂಗಾಮಿಯಾಗಿ ತಮ್ಮ ಸ್ವಂತ ಹಳ್ಳಿಗಳಲ್ಲಿಯೂ ನಡೆಸುವ ಪದ್ಧತಿಯನ್ನು ಇನ್ನು ಮುಂದೆ ತಪ್ಪಿಸಬೇಕೆಂದು ಮೈಸೂರು ಹೈಕೋರ್ಟಿನವರು ಶಿಫಾರಸು ಮಾಡಿದ್ದರು. ಆದರೆ ಸರ್ಕಾರದವರು ಒಪ್ಪಿರುವುದಿಲ್ಲ ತಮ್ಮ ತಮ್ಮ ಕಸಬಾಗಳಲ್ಲಿಯೇ ಕೋರ್ಟುಗಳನ್ನು ಸ್ಪೆಷಲ್ ಮ್ಯಾಜಿಸ್ಟ್ರೇಟರುಗಳು ನಡೆಸಬೇಕೆಂದು ಆಜ್ಞೆಯಾಗಿದೆ. ಸ್ಪೆಷಲ್ ಮ್ಯಾಜಿಸ್ಟ್ರೇಟರುಗಳು ಆಗಾಗ್ಗೆ ಪರಸ್ಥಳಗಳಿಗೆ ಕೋರ್ಟುಗಳನ್ನು ವರ್ಗಾಯಿಸಿಕೊಂಡು ಹೋಗುವುದರಿಂದ ಕೆಲಸ ಕಾರ್ಯಗಳಲ್ಲಿ ಬಹಳ ಅಡಚಣೆಯಾಗುವುದೆಂದೂ ಮೊಕದ್ದಮೆಗಳ ವಿಚಾರಣೆಯನ್ನು ಸರಿಯಾಗಿ ಮಾಡುವುದು ಕಷ್ಟವಾಗುವುದೆಂದೂ ಸರ್ಕಾರದವರು ಅಭಿಪ್ರಾಯಪಡುತ್ತಾರೆ

ಲ್ಯಾಂಡ್ ರಿಕಾರ್ಡುಗಳು

ಇದುವರೆಗೆ ಲ್ಯಾಂಡ್ ರಿಕಾರ್ಡ್ ಇಲಾಖೆಯೆಂಬುದಾಗಿ ಬೇರೆ ಒಂದು ಶಾಖೆಯಿತ್ತು. ರಿಕಾರ್ಡ್ಸ್ ಆಫ್ ರೈಟ್ಸ್ ಪದ್ಧತಿಯನ್ನು ಅನೇಕ ತಾಲ್ಲೂಕುಗಳಿಗೆ ವಿಸ್ತರಿಸಿರುವುದರಿಂದ ಈ ಇಲಾಖೆಯ ಆವಶ್ಯಕತೆ ಇರುವುದಿಲ್ಲ. ಆದ್ದರಿಂದ ಆದನ್ನು ಜೂನ್ ತಾ॥ 15 ರಿಂದ ರೆವಿನ್ಯೂ ಶಾಖೆಗೆ ವರ್ಗಾಯಿಸಬೇಕೆಂದು ನಿರ್ಣಯಿಸಿರುವರು.

ಗ್ರಾಮೋದ್ಯಮ.

ತೀರ್ಥಹಳ್ಳಿ ಕಾಳಿಂಗಯ್ಯನ ಪುಟ್ಟಪ್ಪ ರಾಯರಿಂದ

ಜನಸಾಮಾನ್ಯರ ಚತುರತೆ ಮತ್ತು ಶೀಲ ಸ್ವಭಾವ ಇವುಗಳನ್ನು ಎಷ್ಟು ವರ್ಣಿಸಿದರೂ ಸಾಲದಾಗಿದೆ. ಅಲ್ಲದೆ ಒಳನಾಡಿನ ಹಣವು ಒಳನಾಡಿನಲ್ಲಿಯೇ ತಿರುಗುತ್ತಿರಬೇಕೆಂಬ ಸುವ್ಯವಸ್ಥೆಯು ದೇಶದಿಂದ ಪ್ರಪಂಚದಲ್ಲೆಲ್ಲಾ ಅವರ ಕೈಗಾರಿಕೆ ವಸ್ತುಗಳು ತುಂಬಿವೆ. ಅವರ ನಾಡು ಸಂಪದ್ಯುಕ್ತವಾಗಿಯೂ ಜನಭರಿತವಾಗಿಯೂ ಜನಲೋಕಕ್ಕೆ ಸದ್ಬರವಾಗಿರುತ್ತೆಂದೂ ನಾವು ಓದುತ್ತೇವೆ. ಹೋಗಿ ನೋಡಿಬಂದವರೂ ಹೀಗೆಯೇ ಹೇಳುತ್ತಾರೆ.

ಮುಖ್ಯವಾಗಿ ಹೊರನಾಡಿನವರ ಉದ್ಯೋಗ ಶೀಲತೆಯನ್ನು ಸದ್ಗುಣಗಳನ್ನು ನಮ್ಮ ಕನ್ನಡನಾಡಿನವರೂ ಅರಿಸಿ ಅನುಕರಣ ಮಾಡುವುದು ಯುಕ್ತವಾದದ್ದಾಗಿದೆ.

ನಮ್ಮ ನಾಡಿನ ಗ್ರಾಮಗಳಲ್ಲಿ ಹಣವಿಲ್ಲದೆ ಬದುಕುಬಾಳುಗಳು ಸುವ್ಯವಸ್ಥಿತವಾಗಿಲ್ಲ. ಅಲ್ಪಸ್ವಲ್ಪ ಹಣವಿರುವವರು ಮತ್ತು ಭಾರಿ ಜಮೀನ್ದಾರರು ಅಧಿಕ ಸಂಬಳಗಾರರು ಪೇಟೆ ಪಟ್ಟಣಗಳಲ್ಲಿ ವಾಸಿಸಿ ಹೊರನಾಡಿನ ಲಕ್ಷಾಂತರ ರೂಪಾಯಿನ ವಸ್ತುಗಳನ್ನು ಕೊಳ್ಳುತ್ತಾ ಇದ್ದಾರೆ. ಗ್ರಾಮವತ್ತು ಬದುಕುಬಾಳ್ವೆಗಳ ಸ್ಥಿತಿಗತಿಗಳ ಕಟ್ಟಿರುವಾಗಿ ತಮ್ಮ ಹಣಕಾಸನ್ನು ಪೇಟೆ ಪಟ್ಟಣಗಳಲ್ಲಿ ಹೀಗೆ ಸೂರೆ ಮಾಡಬಹುದೆಂಬುದು ಅವರ ಮನಸ್ಸಿಗೆ ಇನ್ನೂ ಬಂದಿಲ್ಲ. ಹಣವಂತರಿಗೆ ಉದ್ಯೋಗಾದಿಗಳ ರ್ಥ ಪ್ರತಿಸ್ಪರ್ಧೆಗಳೂ ಸದ್ವಿನಿಯೋಗ ಚತುರತೆಯೂ ಉಂಟಾಗಬೇಕು.

ಕನ್ನಡನಾಡಿನಲ್ಲಿ ಬಡಜನರೇ ಬಹಳ ಮಂದಿ. ಬಡಜನರಲ್ಲಿರುವ ಕಷ್ಟಗಾರರು (ಭಾವಿಗಳು ಮತ್ತು ಒಕ್ಕಲಿಗರು) ಇಡೀ ದಿನ ಹಣಕಾಸನ್ನು ಸಂಪಾದಿಸಬೇಕಾಗಿದೆ. ದವಸಧಾನ್ಯಗಳನ್ನು ಪಡೆಗಿಸಿ ... ಇವು ಸಾಲಕ್ಕೆ ಪಜಾ ಆಗುವುದೋ ... ಸ್ವಾರ್ಥಪರರ ಹಿಂಸೆಗೆ ಬಲಿಯಾಗುತ್ತ ಹೀಗೆ ಬಡಜನರ ಕಷ್ಟಾರ್ಜಿತ ... ದಂಡಕ್ಕೂ ದೋಷಕ್ಕೂ ವೆಚ್ಚವಾಗುತ್ತಿರುವುದಾದರೆ ಗ್ರಾಮ ಮತ್ತು ಗ್ರಾಮದ ಬದುಕುಬಾಳ್ವೆಗಳ ಉದ್ಧಾರವು ಹೇಗಾದೀತು? ದಿನದ ಸಂಪಾದನೆಗೆ ... ಉದ್ಯೋಗ ಯಾ ವೃತ್ತಿಗಳಿಲ್ಲ.

ಗ್ರಾಮೋದ್ಧಾರಗಳ ವ್ಯವಸ್ಥೆ.

ಮುಖ್ಯವಾಗಿ ನಮ್ಮ ಕನ್ನಡನಾಡು ಉದ್ಯೋಗವೇಕಾದರ ಗ್ರಾಮಪಾಲನಾ ಸಂಸ್ಥೆಗಳನ್ನು ತಿದ್ದಬೇಕು. ಅವುಗಳ ಆಯಾ ಸ್ಥಳ ವಿದ್ಯಮಾನಗಳಿಗ ತಕ್ಕಂತೆ ... ಕೇಂದ್ರೀಕರಿಸಿ ವಿಧಿನಿಯಮ ಶಾಸನಗಳನ್ನು ಮಾಡಿ ಪ್ರಮುಖ ... ಜನರನ್ನು ನೇಮಕ ಮಾಡಿ

ಸರ್ಕಾರದ ಅಪ್ಪಣೆಯಂತೆ ಜನಸಾಮಾನ್ಯ ಜನಗಳಿಂದ ನಡೆಯುತ್ತಿರುವ ಸ್ಥಳೀಯ ಸಂಸ್ಥೆಗಳು (ಲೋಕಲ್ ಬೋರ್ಡುಗಳು) ಈ ಬಗ್ಗೆ ಸರಿಯಾದ ವ್ಯವಸ್ಥೆಗಳನ್ನು ಮಾಡುವ ಹಾಗಾಗಬೇಕು. ಸಂಸ್ಥೆಗಳಿಗೆ ಈ ವ್ಯವಸ್ಥೆಗಳನ್ನು ಮಾಡುವುದಕ್ಕೆ ಸಾಧ್ಯವಿಲ್ಲದೇ ಹೋದರೆ ಸರ್ಕಾರದವರೇ ವಹಿಸಿಕೊಂಡು ಮಾಡಬೇಕು. ಇದೂ ಆಗದೆ ಹೋಗುವ ಪಕ್ಷಕ್ಕೆ ಜನರು ತಾವೇ ಕಾಂಗ್ರೆಸ್ ಅಥವಾ ಮಹಾತ್ಮರ ಗ್ರಾಮ ಕಾರ್ಯಸಂಘಗಳನ್ನಾದರೂ ಅನುಸರಿಸದೆ ಬಿಡಲಾರರು. ಅನುಸರಿಸದಿದ್ದರೆ ಗತ್ಯಂತರವಿಲ್ಲ. ನಿರೂಪಗೊಂಡ ಬುನಾದೀ ಗ್ರಾಮಗಳು ಇನ್ನೆಷ್ಟು ಕಾಲ ಬದುಕಿಬಾಳೀತು?

ಪುನರುದ್ಧಾರದ ಪ್ರಶ್ನೆ ಎಂಬುದು ಹಳೆಯದೇ. ಕಾರ್ಯಕ್ಷೇತ್ರದ ಮೇಲೆ ಹುಟ್ಟಿದ ಸರ್ವನವಾಗಿದೆ.

ಪುನರುದ್ಧಾರದ ಸರ್ವೆ.

ಕನ್ನಡ ನಾಡಿನ ಪ್ರತಿಯೊಂದು ಗ್ರಾಮಗಳಲ್ಲಿಯೂ ಶಾಂಗ್ರವಾದ ಒಂದು ಹೊಸ ಸರ್ವೆಯು ನಡೆಯಬೇಕು.

ಗ್ರಾಮಗಳ ಬದುಕುಬಾಳುಗಳ ಸರ್ವೆಯೂ, ಉತ್ಪಾದಕ ಸರ್ವೆಯೂ ಮುಖ್ಯವಾದುದು. ಇದು ಮೊದಲಾಗಬೇಕು.

ಹಳೆಯ ಉದ್ಯೋಗಗಳು ಯಾವುವು. ಅವು ಹೇಗೆ ನಡೆಯುತ್ತವೆ. ಆದಾಯವೇನು ನಷ್ಟವೇನು. ಅವುಗಳು ಸುಧಾರಣೆ ಹೊಂದಬೇಕೇ ಶಿವಾಯಿ ಪ್ರತಿಯೊಬ್ಬರ ಕಸುಬನ್ನು ತಿಳಿಯಬೇಕು.

ಎಲ್ಲೆಲ್ಲಿ ಯಾವ ಯಾವ ಹೊಸ ಉದ್ಯೋಗ (ವೃತ್ತಿ) ಗಳನ್ನು ಏರ್ಪಡಿಸಬಹುದು. ಒಂದಷ್ಟು ಜೀವನವನ್ನು ಕೊಡತಕ್ಕವರಾಗಿದ್ದಾರೆಯೇ ಅವುಗಳ ಮೊತ್ತವೇನು?

ಗ್ರಾಮ ಪುನರುದ್ಧಾರದ ವಿಷಯಕವಾದ ಇತರ ಸಂಗತಿಗಳ್ಯಾವುವು? ಇವುಗಳೇ ಸರ್ವೆಯ ಮುಖ್ಯ ಪ್ರಶ್ನೆಗಳಾಗಿರಬೇಕು. ಆ ತನಕ ಸು ಮ್ಮ ನಿ ರ ತ ಕ್ಕ ದ್ದ ಲ್ಲ. ಮೈಸೂರ್ ಮತ್ತು ಮಲನಾಡು ಜಿಲ್ಲೆಗಳ ಗ್ರಾಮಾಂತರಗಳಲ್ಲಿ ಕೆಲವು ಕೇಂದ್ರಗಳನ್ನು ನಿರ್ಧರಿಸಿಕೊಂಡು ವಿದ್ಯಾವಂತರೂ ಕಸಬುಗಳನ್ನು ತಿಳಿದವರೂ ಸಂಚಾರಮಾಡಿ ಟಿಪ್ಪಣಿಗಳನ್ನು ತಯಾರು ಮಾಡುವಹಾಗೆ ಮಾಡಬೇಕು.

ಮತ್ತು ಪಟ್ಟಣಗಳಲ್ಲಿನ ಜಾತ್ರೆಗಳನ್ನು ಎಲ್ಲಾ ಕಾಯಂ ಅಂಗಡಿಗಳನ್ನೂ ಗುರ್ತುಮಾಡಿಕೊಳ್ಳುತ್ತಾ ಬಂದು ಮೊದಲಾದ ಒಳನಾಡಿನ ತಯಾರೀ ವಸ್ತುಗಳನ್ನು ಗುರ್ತುಹಾಕಿಕೊಳ್ಳಬೇಕಲ್ಲದೇ ಮಾರಾಟದ ಮೊತ್ತವೆಷ್ಟಾಗಿದೆ (100 ನಾಲಿನ ಉತ್ಪತ್ತಿ ಎಷ್ಟಾಗಿದೆ) ಇದನ್ನೂ ಸಹ ಸಂಗ್ರಹಿಸಬೇಕು.

ಹೆಚ್ಚು ಹೆಚ್ಚಾಗಿ ವಸ್ತುಪ್ರದರ್ಶನಗಳನ್ನು ಏರ್ಪಡಿಸಿ ಆ ಮೂಲಕವೂ ಕೈಗಾರಿಕೆಗಳನ್ನು ಗೊತ್ತುಹಚ್ಚಬೇಕು.

ಹಣವಂತರನ್ನೂ ಉದ್ಯೋಗಿಗಳನ್ನೂ ನಿರುದ್ಯೋಗಿಗಳನ್ನೂ ಗಣನೇ ಮಾಡಬೇಕು.

ಪಲನಾಡಿನ ಜನರ ಉಪಯೋಗಕ್ಕೆ ತಕ್ಕಂಥಾ ಕೈಗಾರಿಕೆಗಳನ್ನು ಯಾವಾವ ರೀತಿ ಗ್ರಾಮಗಳಲ್ಲಿ ಮಾಡತಕ್ಕವರಿದ್ದರೆ ತಕ್ಕ ತರಬೇತಿಗಳನ್ನು ಕೊಡುವಪಲ್ಲದೆ ಮಾರಾಟದ ವಿಷಯಕವಾದ ಪ್ರಕಟನೆಗಳ ವಿಧಾನವನ್ನು ಅನುಸರಿಸಿದ್ದಾರೆಯೇ ಹ್ಯಾಗೆಂಬುದನ್ನು ತಿಳಿಯತಕ್ಕದ್ದು.

ಮನೆಯ ಕಲಾ ಕೌಶಲ್ಯಗಳು

ಗೃಹಿಣಿಯರು ಹುಡುಗಿಯರು ಹುಡುಗರು ಯುವತಿಯರು ಯುವಕರು ಮನೆಗೆ ಲಕ್ಷ್ಮಿ ಮಾಡತಕ್ಕ ಕೈಗಾರಿಕ ಮತ್ತು ಹಸ್ತಕೌಶಲ್ಯಾದಿ ಕುಶಲ ಕಲೆಗಳು ಅನೇಕವಾಗಿವೆ. ಇವುಗಳಲ್ಲಿ ದಿಪ್ಪ ಪಳಸಾರಿನ ತಯಾರಿ ವಸ್ತುಗಳ್ಯಾವುವು. ಹೊರನಾಡಿನ ವಸ್ತುಗಳನ್ನುಪಯೋಗಿಸುತ್ತಾ ಇರುವ ಕೈಗಾರಿಕೆ ಗಳ್ಯಾವುವು ಇವುಗಳನ್ನು ಒಬ್ಬೊಬ್ಬ ಗೃಹ ಶೃಂಗಾರಕ್ಕಾಗಿ ಮಾಡತ್ತಿದ್ದಾರೆಯೇ ಅಥವಾ ಮಾರಾಟದ ಉದ್ದೇಶಕ್ಕಾಗಿ ಮಾಡುತ್ತಿದ್ದಾರೆಯೇ ಈ ಪ್ರಶ್ನೆಗಳಿಗಲ್ಲಾ ಸಮಂಜಸವಾದ ಉತ್ತರವನ್ನು ಹೊಂದಬೇಕು.

ಹೊರನಾಡಿನ ಗಾಜು ಮುಂತಾದ ಮಿಸುಗುವ ಪಳಪಳ ಸರಕಿನ ಕೈಗಾರಿಕೆ ಉತ್ಕೃಷ್ಟವಾದವ ಕೈಗಾರಿಕೆ ರೇಷ್ಮೆ ದಾರದ ಕೈಗಾರಿಕೆ ಈ ಮುಂತಾದ ಕೈಗಾರಿಕೆಗಳು ವಿಶೇಷವಾಗಿ ಹಬ್ಬಿರುತ್ತವೆ. ಕನ್ನಡಿಗಳು ಮಂದ ಕಟ್ಟುಗಳು ಪೂಜೆಗಳು ತೋರಣ ರಂಗೋಲಿ ಕಾಗದಗಳು ಬಿರಿಪೆಗಳು ಥಳಿಕಿನ ಚೂರು ಚಾರುಗಳು ಇವೇ ಉಪಕ್ರಮ ಕೌಶಲ್ಯಗಳ ಮೂಲಾಧಾರ ವಸ್ತುಗಳಾಗಿವೆ.

ವಿಶೇಷವಾಗಿ ಹೊರನಾಡಿನ ಸರಕುಗಳನ್ನೇ ಕೊಂಡುಕೊಂಡು ಕೈಗಾರಿಕಗಳಿಗೆ ಉಪಯೋಗಿಸುವುದರಿಂದ ಪ್ರಯೋಜನವೇನು, ಅಲ್ಲದ ವೃಥಾ ಕಾಲಹರಣ. ಗೃಹಸ್ಥರು ಈ ವಿಷಯವಾಗಿ ತಕ್ಕ ತಿಳುವಳಿಕೆ ಕೊಡುವುದು ಒಳ್ಳೆಯದು.

ಕನ್ನಡನಾಡಿನ ' ರಂಗವಲ್ಲಿ ಕೈಗಾರಿಕೆಗಳನ್ನು ' ಕಾಲದೇಶಕ್ಕೆ ತಕ್ಕಂತೆ ಸುಧಾರಣೆಗೆ ತಂದು ವಿದವಿಧಾನಗಳಿಂದ ರೂಪುಗೊಳಿಸಬಹುದಲ್ಲದೆ ಸರ್ವತೋ ಭದ್ರವಾದಂಥಾ ರಂಗವಲ್ಲಿ, ಬಟ್ಟು ಮಣೆಗಳನ್ನು ತಯಾರಿಸುವ ನಿಧಾನಗಳನ್ನು ರೂಢಿಸಬಹುದು.

ರಂಗವಲ್ಲಿ ಶಿಕ್ಷಣ ಶಾಲೆಗಳನ್ನು ಪ್ರತ್ಯೇಕವಾಗಿ ಏರ್ಪಡಿಸುವುದಾದರ ನಮ್ಮ ನಾಡಿನ ಗೃಹಸಂಪತ್ತು ಹೆಚ್ಚುವುದು. ಮನೆಗಳಲ್ಲಿ ಹೈಮೊಲಿಗೆಗಳ ಕೈಗಾರಿಕೆ ಚಿತ್ರಗಾರಿಕೆ ಬಣ್ಣಗಾರಿಕೆ ಮುಂತಾದ ಕೈಗಾರಿಕೆಗಳು ನಡೆಯಬೇಕು.

ಒಟ್ಟಿನ ಮೇಲೆ ನಮ್ಮ ದೇಶದ ವಸ್ತುಗಳಿಂದಲೇ ಗೃಹೋಪಯುಕ್ತಗಳಾದಂಥಾ ವಿವಿಧ ಕೈಗಾರಿಕೆಗಳನ್ನು ಮಾಡುವಹಾಗೆ ಉಪದೇಶ ಮಾಡುವುದು ಸರ್ವಶ್ರೇಷ್ಠವಾದದ್ದಾಗಿದೆ. ಈ ಸಂಬಂಧವಾಗಿ ಎಷ್ಟೇ ಕಾರ್ಯಗಳಿ ಆ ಏರ್ಪಾಡುಗಳೆಲ್ಲವೂ ನಮ್ಮ ನಾಡಿನ ಜನಜೀವನದ ಒಂದು ದೊಡ್ಡ ಆಸ್ತಿಯೇ ಆಗುವುದು.

ಡಿಸ್ಟ್ರಿಕ್ಟ್ ಬೋರ್ಡು
ಸುಧಾರಣೆಯ ತಿದ್ದುಪಡಿ

ಮೈಸೂರು ಡಿಸ್ಟ್ರಿಕ್ಟ್ ಬೋರ್ಡು ಕಾನೂನನ್ನು ವಿಮರ್ಶಿಸಿ ಸಲಹೆಗಳನ್ನು ಕೊಡಲು ಒಂದು ಸಮಿತಿಯನ್ನು ನೇಮಿಸಿದ್ದರು. ಆ ಸಮಿತಿಯ ವರದಿಯು ಹೊರಬಿದ್ದಿದೆ. ಅವರು ಮಾಡಿರತಕ್ಕ ಕೆಲವು ಸಲಹೆಗಳನ್ನು ಸಮಿತಿಯ ಸದಸ್ಯರುಗಳಾದ ಹೆಚ್. ಬಿ. ಗುಂಡಪ್ಪಗೌಡರೂ, ಜಿ. ಚೆನ್ನಪ್ಪನವರೂ ವಿರೋಧಿಸಿದ್ದಾರೆ. ನೆಸ್ಸಸು ರಸ್ತೆ ರಿಪೇರಿ ಕೆಲಸಕ್ಕೆ ಉಪಯೋಗಿಸುವ ವಿಷಯದಲ್ಲಿಯೂ ಮತ್ತು ಸರ್ಕಾರ್ ಮಾಡುವ ಅಧಿಕಾರವು ಡೆಪ್ಯುಟಿ ಕಮಿಷನರುಗಳು ಇರಬೇಕೆಂಬ ವಿಷಯದಲ್ಲಿಯೂ ಅವರು ಭಿನ್ನಾಭಿಪ್ರಾಯವನ್ನು ಸೂಚಿಸಿದ್ದಾರೆ. ಈ ಅಧಿಕಾರವು ಸರಕಾರದವರಿಗೆ ಇರಬೇಕೆಂದು ಅವರ ಸಲಹೆ.

ಟೋಲ್‌ಗೇಟುಗಳ ಬದಲಾವಣೆ

ಮೈಸೂರು ರಸ್ತೆ ಮತ್ತು ತೆರಿಗೆಗಳ ರೆಗ್ಯುಲೇಷನ್ ಪ್ರಕಾರ ಜುಲೈ ತಾ|| 1 ರಿಂದ ಮೈಸೂರು ಪ್ರಾಂತ್ಯದಲ್ಲಿ ಕೆಲವು ಕಡೆ ಟೋಲ್‌ಗೇಟುಗಳನ್ನು ತೆಗೆದು ಇಲ್ಲದಿದ್ದ ಕಡೆ ಹೊಸದಾಗಿ ಸ್ಥಾಪನೆ ಮಾಡುತ್ತಾರೆ. ಕೋಲಾರ ಡಿಸ್ಟ್ರಿಕ್ಟ್ ಯನಗದಲೆ, ಹಾಸನ ಡಿಸ್ಟ್ರಿಕ್ಟಿನ ದೊಡ್ಡಮುಟಿಕುರ್ತಿ, ಅಗ್ಗುಂದ, ಕಡೂರು ಡಿಸ್ಟ್ರಿಕ್ಟಿನ ಬ್ಯಾಲದಾಳ್, ದೊಗ್ಗಿಹಳ್ಳಿ ಮತ್ತು ಚಿತ್ರದುರ್ಗ ಡಿಸ್ಟ್ರಿಕ್ಟಿನ ಒಬ್ಬಿಹಳ್ಳಿಗಳಲ್ಲಿ ಟೋಲ್‌ಗೇಟು ತೆಗೆಯುತ್ತಾರೆ.

ಬೆಂಗಳೂರು ನಂದಿ ರಸ್ತೆಯಲ್ಲಿರುವ ಚಿಕ್ಕಜಾಲದ ಹತ್ತಿರ, ಕೋಲಾರ ಡಿಸ್ಟ್ರಿಕ್ಟಿನ ಜೇಬೂರು ಹತ್ತಿರ, ಹಾಸನ ಡಿಸ್ಟ್ರಿಕ್ಟಿನ ಬಾಣಾವರ ಮತ್ತು ಬೇಲೂರು ರಸ್ತೆ, ಚೆನ್ನರಾಯಪಟ್ಟಣ ಮತ್ತು ಶ್ರವಣಬೆಳಗೊಳದ ರಸ್ತೆ ಸೇರುವ ಕಡೆ, ಶಿವಮೊಗ್ಗ ಬಿದನೂರು ರಸ್ತೆಯ ಸಂಪಗೋಡಿನ ಹತ್ತಿರ, ಶಿಕಾರಿಪುರ ಮಾಸೂರು ರಸ್ತೆಯ ಕವಡಪುರದಲ್ಲಿ ಹೊಸದಾಗಿ ಟೋಲುಗೇಟುಗಳನ್ನು ಇಡುತ್ತಾರೆ ಮತ್ತು ಕೆಲವನ್ನು ಬೇರೆ ಬೇರ ಜಾಗಕ್ಕೆ ಬದಲಾಯಿಸುತ್ತಾರೆ.

ಕೂಲೀಗಾರರ ಮುಷ್ಕರ

ಬೆಂಗಳೂರು ಕಂಟೋನ್ಮೆಂಟಿನ ಹೊಗೆಸೊಪ್ಪಿನ ಕಾರ್ಖಾನೆಯಲ್ಲಿ ಕೆಲಸಗಾರರಿಗೂ, ವ್ಯವಸ್ಥಾಪಕರಿಗೂ ಭಿನ್ನಾಭಿಪ್ರಾಯಗಳುಂಟಾಗಿ ಕೆಲಸಗಾರರು ಮುಷ್ಕರಹಿಡಿದಿದ್ದಾರೆ. ಇಬ್ಬರೂ ಒಹಳ ಬಿಗಿಯಾಗಿದ್ದಾರೆ. ಕಾರ್ಖಾನೆಯು ಮುಚ್ಚಿದೆ. ಪ್ರತಿದಿನವೂ ಕಾರ್ಖಾನೆ ಬಳಿ ಕೂಲಿಗಾರರೆಲ್ಲರೂ ಸೇರುವರು. ಅವರ ಮುಖಂಡರುಗಳು ಮಾಡತಕ್ಕ ಭಾಷಣವನ್ನು ಕೇಳುವರು. ಸಮಾಧಾನಕರವಾದ ತೀರ್ಮಾನವು ಆಗುವವರೆಗೆ ಕೆಲಸಕ್ಕೆ ಹೋಗಕೂಡದೆಂದು ಅವರಿಗೆ ಹೇಳಲಾಗುತ್ತಿದೆ. ಬ್ರಿಟಿಷ್ ರೆಸಿಡೆಂಟರಿಗೆ ಕೆಲಸಗಾರರ ಪರವಾಗಿ ಒಂದು ವಿಜ್ಞಾಪನಾ ಪತ್ರವು ಹೋಗಿದೆ. ಈ ಮಧ್ಯೆ ಬಡ ಕೂಲಿಗಾರ ಸಹಾಯಾರ್ಥವಾಗಿ ಊರಿನ ಪೇಟೆಗಳಲ್ಲಿ ಚಂದಾ ದ್ರವ್ಯವನ್ನು ವಸೂಲು ಮಾಡುತ್ತಿರುವರು.

ಬೇಡಿಕೆ.

ಶಕ್ತಿಯನು ಗಳಿಸಿರ್ವೈ
ಯುಕ್ತಿಯಿಂದೆಲ್ಲರು
ಮುಕ್ತಿದಾಯಕ ಪರಮೇಶನಂ ಭಜಿಸಿ
ಭಕ್ತಿಯಿಂ ದೆರಗಿರ್ವೈ
ವ್ಯಕ್ತಿಗಳೆ ಸುವಿಚಾ
ರೋಕ್ತಿಗಳೆ ಮದಮಾತ್ಸರ್ಯಗಳ ತ್ಯಜಿಸಿ
ಗಳಿವಿಂಡುಗಳಂತೆ
ಬಳಿಸೇರಿ ಶಿವನನು
ಮುಳಿಗು ಮೆರೆಯಿರ್ವೈ ಪ್ರೇಮಿಗಳೆ!
ಕುಣಿಯಿರ್ವೈ

ಮುಳುಗುತಲೆ ಶಂಕರ
ನಲಿಹ ಪ್ರೇಮರಸ
ದಲಿ ಗಂಗಾಧರನಂ ಪಾಡಿ ಮಣಿಯಿರ್ವೈ
ಮೃಣ್ಮಯ ದೇಹದಲಿ
ಕಣ್ಮಯ ವಾಗಿರುವ
ಷಣ್ಮುಖ ನಪ್ಪನ ನೆನೆದು ಸೇವೆ ಪಾಡಿರ್ವೈ
ಚಿನ್ಮಯಾ ನಂದದಿ
ತನ್ಮಯ ವಾಗಿರುವ
ಉನ್ಮಯೂಖ ಮುರಹರನ ಸೇವೆ ಪಾಡಿರ್ವೈ
ಪಾಡಿರ್ವೈ ! ಹೂಗಳನು
ಜೋಡಿಸುತ ಕಟ್ಟಿಹ
ನಾಡು ಮಾಲೆಗಳ ಮುರಹರಗೆ ನೀಡಿರ್ವೈ !
ಓಡಿರ್ವೈ ! ಭಾರತಿಯೊ
ಳಾಡುತಲೆ ಮೈಸೂರ
ಕಾಡಿಸೊಳಿಹ ಗಿರಿಜಾವರನ ಜೇಡಿರ್ವೈ !!

ಶ್ರೀ ರಾಮುಲು.

ನಂದಿಯಲ್ಲಿ ಹಾವಿಗೆ ಸಿಕ್ಕಿ ಪಾರಾದರು

ಬೆಂಗಳೂರು ದಂಡಿನ ಪ್ರಮುಖ ವ್ಯಾಪಾರಿಗಳಾದ ಶ್ರೀ॥ ಪ್ರೇಮರಾಜ್ ಸೇರರು ಕೆಲವು ಮಿತ್ರರೊಡನೆ ಮಹಾತ್ಮರನ್ನು ನೋಡಲು ನಂದಿಬೆಟ್ಟಕ್ಕೆ ಹೋಗಿದ್ದರು ವಾಪಸು ಬರುವಾಗ ಕತ್ತಲೆಯಾಯಿತು ದಾರಿಯಲ್ಲಿ ಒಂದು ಭಾರಿ ಹಾವು ಅಟ್ಟಿಸಿಕೊಂಡು ಬಂದು ಅವರ ಮಗನ ಮೇಲೆ ಹಾರಿ ಇನ್ನೊಬ್ಬರ ಕಾಲಿನ ಕೆಳಗೆ ತೂರಿ ಹೋಯಿತು ಯಾರಿಗೂ ಅಪಾಯವಾಗಲಿಲ್ಲ. ಹಾವು ಒಂದು ಆಳುದ್ದವಿದ್ದಿತು. ಅದು ಕಚ್ಚುವ ಹಾವಲ್ಲ. ಅನಾಮತ್ತಾಗಿ ಮನುಷ್ಯರನ್ನು ನುಂಗುವ ಹಾವು ಕಡೆಗೆ ಆಳುಗಳ ಸಹಾಯದಿಂದ ಧೈರ್ಯಹೊಂದಿ ಬೆಟ್ಟವನ್ನಿಳಿದು ಬಂದರು

ಉಪನಯನ

ಮೈಸೂರು ಅಡ್ವೊಕೇಟ್ ಮ॥ ಎಸ್. ರಂಗರಾಮಯ್ಯನವರ ಮಗ ಚಿ॥ ಪಾಂಡುರಂಗನಿಗೆ ಕಳೆದ ಶುಕ್ರವಾರ ಉಪನಯನವು ನಡೆಯಿತು ಅನೇಕ ಜನ ಅತಿಥಿಗಳು ದಯಮಾಡಿಸಿದ್ದರು. ಅ॥ ವಿದ್ವಾನ್ ವೆಂಕಟೇಶಯ್ಯಂಗಾರ್ರವರ ಕೊಳಲು, ಮಾಸ್ಟರ್ ದೊರೆಸಾಮಿಯ ವೀಣಾಗಾನ ಮತ್ತು ಸಂಗೀತ ವಿದ್ವಾಂಸರುಗಳಾದ ಎಚ್ ವಿ ಕೃಷ್ಣರಾಯರ ಪಿಟೀಲು, ಮತ್ತು ಶಂಕರನಾರಾಯಣರಾಯರ ಮೃದಂಗದೊಡನೆ ಕೂಡಿದ ಅಮೋಘವಾದ ಸಂಗೀತಕಚೇರಿ ನಡೆಯಿತು ಮತ್ತು ನೆನ್ನೆ ದಿನ ಬುಡುಪಿ ಕುಮಾರಿ ಹೇಮಾವತಿಯ ನೇತ್ರಾನಂದಕರವಾದ ನರ್ತನವೂ ಸಹ ಆಯಿತು

ಲಾಯರಿಗೆ ಅರ್ಧಾಣೆ ಜುಲ್ಮಾನೆ

ಹೈದರಾಬಾದು ಕೋರ್ಟಿನ ಪ್ಲೀಡರಾದ ಮ॥ ಟಿ. ಬಿ ಸುದರ್ಶನಾಚಾರಿಯವರು ಸಂಚಾರ ನಿಯಮವನ್ನು ಉಲ್ಲಂಘಿಸಿದರೆಂಬ ಆಪಾದನೆ ಮೇಲೆ ಹೈದರಾಬಾದಿನ ಮೂರನೇ ಮ್ಯಾಜಿಸ್ಟ್ರೇಟರ ಮುಂದೆ ವಿಚಾರಣೆ ನಡೆದು ಅವರಿಗೆ ಅರ್ಧಾಣೆ ಜುಲ್ಮಾನೆ ಆಯಿತು ಆಚಾರಿಯವರು ಬೈಸಿಕಲ್ಲಿನ ಮೇಲೆ ಹೋಗುತ್ತಿದ್ದರು ಪೋಲೀಸಿನವನು ನಿಲ್ಲಿಸುವಂತೆ ಹೇಳಿದನು, ಅವರು ನಿಲ್ಲಿಸಲಿಲ್ಲ ಅದ್ದರಿಂದ ಮೊಕದ್ದಮೆಯಾಯಿತು.

ಸ್ತ್ರೀ ಕಾನ್‌ಸ್ಟೇಬಲ್‌ಗಳು

ಸ್ತ್ರೀಯರು ದೇಹಶ್ರಮದ ನೌಕರಿಗಳಿಗೆ ಸೇರುವುದು ಅಪೂರ್ವ. ಅದರಲ್ಲೂ ಕಾನ್‌ಸ್ಟೇಬಲ್ ಕೆಲಸಕ್ಕೆ ಸೇರುವುದು ಮತ್ತೂ ವಿಶೇಷ ಅದೂ ಹೋಗಲಾಗಿ ಎಕ್ಸೈಜು ಕಾನ್‌ಸ್ಟೇಬಲುಗಳಾಗುವುದು ಅತ್ಯಂತ ವಿಶೇಷ ಅವರಲ್ಲಿ ಅವರು ಅನೇಕ ಕಷ್ಟಸುಖಗಳನ್ನು ಅನುಭವಿಸಬೇಕಾಗುವದು. ಆದರೂ ನಾಗಪುರದಲ್ಲಿ ಸುಮಾರು ಆರು ಜನ ಸ್ತ್ರೀಯರು ಎಕ್ಸೈಜು ಕಾನ್‌ಸ್ಟೇಬಲುಗಳಾಗಿ ತೆಗೆದುಕೊಳ್ಳಲ್ಪಟ್ಟಿರುವರು ಸ್ತ್ರೀಯರಿಗೆ ಈ ಕೆಲಸವನ್ನು ತೃಪ್ತಿಕರವಾಗಿ ಮಾಡಲು ಸಾಧ್ಯವೇ ಎಂಬುದನ್ನು ಪರೀಕ್ಷಿಸಲು ಈ ಏರ್ಪಾಡು ಮಾಡಲ್ಪಟ್ಟಿದೆ ಇದು ಚೆನ್ನಾಗಿ ನಡೆದರೆ ಇನ್ನೂ ಹೆಚ್ಚು ಜನರನ್ನು ತೆಗೆದುಕೊಳ್ಳುವರು

ಶ್ರೀ ರಾಮಕೃಷ್ಣ ವಿದ್ಯಾರ್ಥಿನಿಲಯ

ಕಳೆದ ನಾಲ್ಕು ವರ್ಷಗಳಿಂದಲೂ ಮೈಸೂರು ಶ್ರೀ ರಾಮಕೃಷ್ಣಾಶ್ರಮದಿಂದ ನಡೆಸುತ್ತಿರುವ ಶ್ರೀ ರಾಮಕೃಷ್ಣ ವಿದ್ಯಾರ್ಥಿನಿಲಯದಲ್ಲಿ ಬರುವ ಜೂನ್ ತಿಂಗಳಿಂದ ಕೆಲವು ವಿದ್ಯಾರ್ಥಿಗಳನ್ನು ಸೇರಿಸಿಕೊಳ್ಳಲು ಅವಕಾಶವಿದೆ ಬಾಲಕರ ವಿದ್ಯಾಭ್ಯಾಸ, ಮತ್ತು ಅವರ ಶೀಲಸ್ವಭಾವಗಳಿಗೆ ವಿಶೇಷ ಗಮನ ಕೊಡಲಾಗುವುದು ಆಲಯದ ಖರ್ಚನ್ನು ಸಮವಾಗಿ ವಿಭಾಗಿಸಿ, ಪೋಷಕರಿಂದ ವಸೂಲು ಮಾಡಲಾಗುವುದು ಅಪ್ಲಿಕೇಷನ್ ಫಾರಮನ್ನೂ ಹೆಚ್ಚು ವಿಷಯಗಳನ್ನೂ, ಶ್ರೀ ರಾಮಕೃಷ್ಣಾಶ್ರಮದ ಕಾರ್ಯದರ್ಶಿಗಳಿಗೆ 1 ಆಣೆ ಸ್ಟಾಂಪು ಸಹಿತ ಬರೆದು ತಿಳಿದುಕೊಳ್ಳಬಹುದಾಗಿದೆ

ಇರ್ವಿನ್ ನಾಲಾಬಳಿ ರಸ್ತೆ ಸೌಕರ್ಯ

ಇರ್ವಿನ್ ನಾಲೆಯ ಪ್ರಾಂತ್ಯದ ಬಳಿ 50,000 ರೂ ವೆಚ್ಚದಿಂದ ಕೆಲವು ರಸ್ತೆಗಳನ್ನು ಮಾಡಿಸಲು ಸರ್ಕಾರದವರು ಮಂಜೂರು ಮಾಡಿರುತ್ತಾರೆ ಇಲ್ಲಿ ವಿಶೇಷವಾದ ಕಬ್ಬಿನ ವ್ಯವಸಾಯವು ನಡೆಯುತ್ತಿದೆ. ಈ ರಸ್ತೆಗಳನ್ನು ನಿರ್ಮಿಸುವದಕ್ಕೂ, ಅವುಗಳ ಉಸ್ತುವಾರಿ ಮತ್ತು ಅವುಗಳ ರಿಪೇರಿಗಳಿಗೆ ಬೇಕಾದ ಖರ್ಚುವೆಚ್ಚಗಳನ್ನು ಸರ್ಕಾರದವರೂ ಡಿಸ್ಟ್ರಿಕ್ಟ್ ಬೋರ್ಡಿನವರೂ ಸಕ್ಕರೆ ಕಾರ್ಖಾನೆಯವರೂ ಹಂಚಿಕೊಳ್ಳಬೇಕಾದ ಪ್ರಮಾಣವನ್ನು ಒಂದು ಉಪಸಮಿತಿಯವರು ನಿಶ್ಚಯ ಮಾಡಿರುತ್ತಾರೆ ಅದನ್ನು ಸರ್ಕಾರದವರು ಅಂಗೀಕರಿಸಿರುತ್ತಾರೆ ಈ ಕೆಲಸವು ಕೂಡಲೇ ಆರಂಭವಾಗುವುದು.

ವರ್ಗಾವರ್ಗಿ

ದೊಡ್ಡಬಳ್ಳಾಪುರದ ಸಬ್ ಡಿವಿಜನ್ ಆಫೀಸರಾದ ಶ್ರೀ॥ ಜಿ ಮಲ್ಲಾರಾಧ್ಯರು ಸೆಂಟ್ರಲ್ ರಿಕ್ರೂಟ್‌ಮೆಂಟ್ ಬೋರ್ಡಿನ ಸೆಕ್ರೆಟರಿಯವರಾಗಿ ನಿಯಮಿಸಲ್ಪಟ್ಟಿರುವರು

ದಾವಣಗೆರೆಯ ಸ್ಪೆಷಲ್ ಮ್ಯಾಜಿಸ್ಟ್ರೇಟರಾಗಿರುವ ಶ್ರೀ॥ ವಿಜಾರ್ ಸಫದರ್ ಹುಸೇನರವರು ದೊಡ್ಡಬಳ್ಳಾಪುರದ ಸಬ್ ಡಿವಿಜನ್ ಆಫೀಸರಾಗಿ ನಿಯಮಿಸಲ್ಪಟ್ಟಿರುವರು

ಬೆಂಗಳೂರು ಜಿಲ್ಲಾಧಿಕಾರಿಗಳ ಪರ್ಸನಲ್ ಅಸಿಸ್ಟೆಂಟರಾದ ಶ್ರೀ॥ ಎಸ್ ಕೆ ವೆಂಕಟರಮಣ ಅಯ್ಯಂಗಾರರವರು ದಾವಣಗೆರೆಯ ಸ್ಪೆಷಲ್ ಮ್ಯಾಜಿಸ್ಟ್ರೇಟರಾಗಿ ನಿಯಮಿಸಲ್ಪಟ್ಟಿರುವರು

ಬೆಂಗಳೂರು ನಗರದ ಪೌರಸಭೆಯ ಲ್ಯಾಂಡ್ ಅಕ್ವಿಜಿಷನ್ ಆಫೀಸರಾಗಿರುವ ಶ್ರೀ॥ ಎಂ ನಾರಾಯಣರಾಯರು ಬೆಂಗಳೂರು ಡೆಪ್ಯುಟಿ ಕಮಿಷನರ ಪರ್ಸನಲ್ ಅಸಿಸ್ಟೆಂಟರಾಗಿ ನಿಯಮಿಸಲ್ಪಟ್ಟಿರುವರು ಅಲ್ಲದೆ ಲ್ಯಾಂಡ್ ಅಕ್ವಿಜಿಷನ್ ಆಫೀಸರಾಗಿಯೂ ಕೂಡ ಕೆಲಸ ಮಾಡುವರು

ಸೆಂಟ್ರಲ್ ರಿಕ್ರೂಟ್‌ಮೆಂಟ್ ಬೋರ್ಡಿನ ಸೆಕ್ರೆಟರಿಗಳಾಗಿದ್ದ ಶ್ರೀ॥ ಎಂ ನಜೀತಂ ನಾಯಿಡುರವರು ರೆವಿನ್ಯೂ ಸರ್ವೆ ಸೆಟಲ್‌ಮೆಂಟ್ ಆಫೀಸಿಗ ವರ್ಗ ಮಾಡಲ್ಪಟ್ಟಿರುವರು

ಎಂ. ವಿ. ನಾರಾಯಣರಾಯರ

ಶ್ರೀ ಸತ್ಯನಾರಾಯಣ ಪರಿಮಳ ಫ್ಯಾಕ್ಟರಿ,

ಜಗನ್ಮೋಹನ ಬಂಗ್ಲಾ ಬೀದಿ, ಮೈಸೂರು

ಪರಿಮಳ ಅಗರ್ ಬತ್ತಿ

ಉಪಯೋಗಿಸಿ ಪ್ರೋತ್ಸಾಹಿಸಿರಿ

ರಾಜರಿಗೆ ಜುಲ್ಮಾನೆ.

ಮಧ್ಯಪ್ರಾಂತ್ಯದ ರಾಯಿಪುರದ ಡಿಸ್ಟ್ರಿಕ್ಟಿನಲ್ಲಿರುವ ಕಾಮಕಾನ್ ಎಂಬಲ್ಲಿಯ ರಾಜರಾದ ಭಾನುಪ್ರತಾಪಸಿಂಗರಿಗೆ ಮೋಟಾರನ್ನು ಸ್ವೇಚ್ಛೆಯಿಂದ ನಡೆಸುತ್ತಿದ್ದುದಕ್ಕಾಗಿ ನೂರು ರೂಪಾಯಿ ಜುಲ್ಮಾನೆಯಾಯಿತು ಈ ರಾಜರೂ ಸಾರಂಗರದ ಕುಮಾರ ರಾಜರಾದ ಠಾಕೂರ್ ಖಗೇಶ್ವರ ಸಿಂಗರೂ ವಿಶಾಖ ಪಟ್ಟಣ ರಸ್ತೆಯಲ್ಲಿ ಮೋಟಾರಿನಲ್ಲಿ ಬಿರುಸಾಗಿ ಹೋಗುತ್ತಿದ್ದರು. ಅಲ್ಲಿನ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ಆಫೀಸಿಗೆ ಹೋಗುತ್ತಿದ್ದರು. ಮೋಟಾರನ್ನು ನಿಲ್ಲಿಸುವಂತೆ ಮೇಲ್ಕಂಡ ರಾಜರಿಗೆ ಹೇಳಿದರು ಅವರ ಮೋಟಾರು ಮಧ್ಯಪ್ರಾಂತದಲ್ಲಿ ರಿಜಿಸ್ಟರಾಗಿತ್ತು ಕುಮಾರ ರಾಜರ ಮೋಟಾರು ನಡೆಸುತ್ತಿದ್ದರು ಸ್ವಲ್ಪ ದೂರ ಮೋಟಾರು ಹೋದಮೇಲೆ ಅಲ್ಲಿಂದ ಅದನ್ನು ನಿಲ್ಲಿಸಿ ರಾಜಾ ಪ್ರತಾಪಸಿಂಗರೇ ಅದನ್ನು ನಡೆಸಲು ಆರಂಭಿಸಿದರು ಅವರಿಗೇ ಲೈಸನ್ಸು ಇದ್ದದ್ದು ಸ್ವೇಚ್ಛೆಯಿಂದ ಮೋಟಾರನ್ನು ನಡೆಸಿದ ಆಪಾದನೆ ಮೇಲೆ ವಿಚಾರಣೆ ನಡೆದು ರಾಜರಿಗೆ ನೂರು ರೂಪಾಯಿ ಜುಲ್ಮಾನೆ ವಿಧಿಸಲ್ಪಟ್ಟಿತು

ನಗರದ ಅಭಿವೃದ್ಧಿ.

ಮೈಸೂರು ನಗರವನ್ನು ಇನ್ನೂ ಉತ್ತಮ ರೀತಿಗಳಲ್ಲಿ ಅಭಿವೃದ್ಧಿಪಡಿಸಲು ಸರ್ಕಾರದವರು ಸಿಟಿ ಇಂಪ್ರೂವ್‌ಮೆಂಟ್ ಟ್ರಸ್ಟಿಗೆ ಇಪ್ಪತ್ತೈದು ಸಾವಿರ ರೂಪಾಯಿಗಳ ಹೆಚ್ಚು ಗ್ರಾಂಟನ್ನು ಮಂಜೂರು ಮಾಡಿರುವರು

ತಾಲ್ಲೂಕು ಗ್ರಾಮಗಳ ವರ್ಗ

ಮಳವಳ್ಳಿ ತಾಲ್ಲೂಕಿಗೆ ಸೇರಿದ ಹ... ಗನಹಳ್ಳಿ, ಹಸೀಬಾರ್, ಬೂಚ್‌ಹಳ್ಳಿ ಬಪ್ಪಾಳ್ಳಿ, ಸಾಬಗೇರಿ, ಸಾಂಬಪುರ ಮತ್ತು ಕೊಡಬಳ್ಳಿ ಈ ಗ್ರಾಮಗಳನ್ನು ಕನಕಪುರ ತಾಲ್ಲೂಕಿಗೆ ಸೇರಿಸಲಾಗಿದೆ

'ಸೆಕ್ರೆಟೇರಿಯಟ್' ಬೆಕ್ಕಿನ ಮೇಲೆ ಬಸ್ಸು ಹರಿಯಿತು

ಜನರಲ್ ಮತ್ತು ರೆವಿನ್ಯೂ ಸೆಕ್ರೆಟೇರಿಯಟ್ ಕಚೇರಿಯಲ್ಲಿರುವ ರಿಕಾರ್ಡುಗಳನ್ನು ಇಲಿಗಳೂ, ಹೆಗ್ಗಣಗಳೂ ಹಾಳುಮಾಡದಂತೆ ಕಾಪಾಡುವುದಕ್ಕಾಗಿ ಬೆಕ್ಕುಗಳನ್ನು ಸಾಕಿರುವರಷ್ಟೆ 'ಸೆಕ್ರೆಟೇರಿಯಟ್' ಬೆಕ್ಕೊಂದು ರಸ್ತೆಯಲ್ಲಿ ಹೋಗುತ್ತಿರುವಲ್ಲಿ ದಂತಿನ ಕಡೆ ಹೋಗುತ್ತಿದ್ದ ಬಸ್ಸೊಂದು ಅದರ ಮೇಲೆ ಹರಿಯಿತು ಬೆಕ್ಕು ತಕ್ಷಣ ಮೃತಪಟ್ಟಿತು.

ಹರಿಜನ ಸಮ್ಮೇಳನ

ಗಾಂಧಿಜಿಯವರ ಅಧ್ಯಕ್ಷತೆ

ಮೈಸೂರು ಸಂಸ್ಥಾನದ ಹರಿಜನ ಸಂಘದ ಆಶ್ರಯದಲ್ಲಿ ದಕ್ಷಿಣ ಭಾರತ ಹರಿಜನ ಸಮ್ಮೇಳನವು ಜೂನ್ ತಾ॥ ... ಮತ್ತು ೧೧ ರಲ್ಲಿ ಕೆಂಗೇರಿಯಲ್ಲಿ ನಡೆಯುವದೆಂದು ಗೊತ್ತಾಗಿದೆ. ಮಹಾತ್ಮಾಜಿಯವರು ಅಧ್ಯಕ್ಷತೆಯನ್ನು ವಹಿಸುವರು. ಶ್ರೀ॥ ಜಿ ಡಿ ಬಿರ್ಲಾ, ಶ್ರೀ॥ ಎ ವಿ ಠಕ್ಕರವರು ಸಮ್ಮೇಳನಕ್ಕೆ ಬರುವರೆಂದು ಗೊತ್ತಾಗಿದೆ

ಇಂಡಿಯಾದಲ್ಲಿ ಪೊಲೀಸಿನವರು

ಲೇಖಕ — ಎ ಎಂ ಕೃಷ್ಣಮೂರ್ತಿ

ವಿಷಯರು ಜಗತಿನಂಡನವನ್ನು ಸೂ ರ್ಯನಿಂದ ಕೆಲವು ಕಾಲದಲ್ಲೇ ಅನೇಕ ಸ್ಥಾನಗಳು ರೂಪಾಂತರಗಳನ್ನು ತಾಳಿ ದ್ದ ಹಿಂದಿನಿಂದಲೂ ಇಂಡೋಸ್ತಾನದ ನಗರ ರಕ್ಷಕರು (ಪೊಲೀಸಿನವರು) ತನು ತವಾಗಿದ್ದರೆಂಬ ಚರಿತ್ರೆ ಯ ಪ್ರತ್ಯಕ್ಷವಾಗುವುದು ಗಣ್ಯ ಪಕ್ಷ ರತ್ನ ಪಂಚಾಯತ ಸಭೆಯೂ, ದೊಡ್ಡ ಗ್ರಾಮಗಳಲ್ಲಿ ನಗರ ಸಭೆಗಳೂ ಸರಿ ಯಾದ ಶಿಕ್ಷೆ ಕ್ರಮಗಳ ತಮ್ಮ ಪ್ರ ಜಾ ಜನಗಳಿಂದ ಗುಣವನ್ನು ಸಾಧಿಸುತ್ತ ಬಂದ್ದು ಶಿಕ್ಷಿತವು ದುಷ್ಟಶಿಕ್ಷಣ ಶಿಷ್ಟಪಾಲನೆ ಎಂಬ ಸೂತ್ರ, ಸ್ನೇಹ, ಲೋಕಗಳಲ್ಲೇ ಪಟ್ಟ ಹಾಗೆ ಜನಹಿತಸಾಧನೆಯು ನಾನಾ ಭಾಗ ಜನರಿಂದಲೇ ಧರ್ಮಕಾರ್ಯ ರೀತಿಯಲ್ಲಿ ಕೈಗೂಡುತ್ತಿತ್ತು' ಎಂದರೆ ನಗರ ರಕ್ಷಕರಲ್ಲಿ ಸ್ವಾತಂತ್ರ್ಯವೂ, ನ ಸಮತ್ವವೂ ಮತ್ತು ಪಿತೃತ್ವಭಾವವೂ ರಿಸಿದ್ದು ನಲಿಸಿದ್ದವು ದೇಶ ಕ್ಕೆ ಏಟಾ ರಾಷ್ಟ್ರಭಕ್ತಿಯೂ ಒತನ ರವರ ಮುಖ್ಯ ಧ್ಯೇಯವಾಗಿರುತ್ತಿತ್ತು ಲ್ಲ, ಒತನಲ್ಲಿ ಸೆ ತಿಗತಿಗಳ ಪರಿ ಮತ್ತು ವಿವೇಚನಾಶಕ್ತಿಯೂ ... ಸಮಾಜ ಸೇವೆಯ ಪೊ ... ದಲ್ಲಿ ಭ್ರಾತೃಪ್ರೇಮ, ದೇಶಪ್ರೇಮ ... ವಿಶ್ವಪ್ರೇಮ ಇವುಗಳು ಸಹಜ ... ಮತ್ತು ತತ್ವಪ್ರವರ್ತಕವಾಗಿಯೂ ... ಜನಸಾಮಾನ್ಯದಲ್ಲ ಪೊಲೀ ... ನ ಗೌರವವು ಅವಿರ್ಭವಿಸಬೇಕು ... ನೀತಿಶಕ್ತಿಯಲ್ಲಿ ಪ್ರವೇಶಿಸಿದ, ... ಶಿಕ್ಷಣ ಶಿಸ್ತುಪಾಲಕರಾಗಬೇಕು ... ದಿಂದ ಗೌರವವನ್ನು ತನ್ನ ಕರ್ತ ... ವ್ಯ ಅಧಿಕಾರ ಬಲದಿಂದ ಸಂಪಾ ... ಕೇವಲ ಒತ್ತಾಯದಿಂದ ಪಡೆಯ ... ರಿಂದಲೂ ಪ್ರೀತಿ ಗೌರವಗಳಿಂದ ... ಅಧಿಕಾರಿಗಳನ್ನು ಕಂಡು ಎದ ... ಪ್ರೇಮವನ್ನೂ ಸನ್ಮಾನವನ್ನೂ ಪಡೆ ... ಬೇಕು

ಇಂದು ಭರತವರ್ಷದಲ್ಲಿರುವ ಅನೇಕ ಪೊಲೀಸಿನವರು ನಿರಕ್ಷರ ಕುಕ್ಷಿಗಳು ... ನವರ ಹಕ್ಕುಬಾಧ್ಯತೆಗಳು, ಶಾಸ್ತ್ರದ ... ಗಳು ಮತ್ತು ತನ್ನ ಅಧಿಕಾರ ... ಸ್ತರಣ್ಯ, ಇನ್ನೆಷ್ಟೂ ಅವರಿಗ ತಿಳಿ ... ವಿಲ್ಲ ಈ ವಿಷಯಗಳಲ್ಲಿ ಅವರು ... ಇಂದು 'ದಿಮ್ಮಾರೆಂಬುದು ವ್ಯಸನ ... ಇವರ ವಿದ್ಯಾಭ್ಯಾಸವೂ ಮತ್ತು ... ತ ಪರಿಚಯವೂ ಬಹಳ ಸ್ವಲ್ಪಗಿ ... ಯಾಗಿರುತ್ತವೆ ಪಾಶ್ಚಾತ್ಯ ದೇಶ ... ದ ಪೊಲೀಸಿನವರ ಧ್ಯೇಯ ಮತ್ತು ... ವೃಗಳನ್ನು ಇವರೂ ಅನುಸರಿಸಿ ನಡೆ ... ಇವರ ಉದ್ಯೋಗವು ಸಾರ್ಥಕ ... ವು!

... ರಾತ್ರೀಯ ಪೊಲೀಸಿನವರ ... ಸ್ಪ ದೂಷಿಸಿ ಪ್ರಯೋಜನವಿಲ್ಲ ... ಎದುರಿಗಿರುವ ಸನ್ನಿವೇಶವು ಉತ್ತೇಜನಕಾರಿಯಲ್ಲ ಇವರ ಇಷ್ಟಿವೆ ಅವರ ವೇತನವು ಬಹಳ ಕಡಿಮೆ ಬೆ ... ಗ್ಗಿನಿಂದ ಸಂಜೆಯವರೆಗೆ ದುಡಿದರೂ ಶಾಗ ಮತ್ತು ತನ್ನ ಹೆಂಡತಿ ಮಕ್ಕಳಿಗೆ ಹೊಟ್ಟೆ ತುಂಬ ಒನ್ನವನ್ನು ಸಂಪಾದಿಸುವಷ್ಟು ದುಡ್ಡು ದೊರಕುವುದಿಲ್ಲ

ಮೇಲ್ದರ್ಜೆಯ ಅಧಿಕಾರಿಗಳೋ ಎಷ್ಟ ಹಾಸದಿಂದ ಮರೆಯುವವರಾಗಿದ್ದಾರೆ ಸ್ವಾರ್ಥತೆ ಎಂಬುದು ಇವರಲ್ಲಿ ತಲೆ ತಿಕ್ಕಿಡು ಕಾಮತ್ತಿದ ಇವರೆಲ್ಲರೂ ಈ ಜಾಗ ಸೈಭವಗಳ ವಿಲಾಸದಲ್ಲಿ ನಿರತರಾಗಿದ್ದರೆ ಬಡ ಪೊಲೀಸಿನವರ ಗತಿಯೇನು? ಅವರ ಜೀವನವು ದೇಸಂನಾಗ ವೃದ್ಧಿಯೇ? ಜೀ ವನವು ಬೇಸರಹೊಂದಿದಮೇಲೆ ಯಾವ ಮನುಷ್ಯ ತಾನೆ ಅಭಿಮಾನವಿಟ್ಟು ಕಾರ್ಯ ಸಾಧನೆಯಲ್ಲಿ ತೊಡಗ ಬಲ್ಲ?

'ಪೊಲೀಸ್ ಸಂಸ್ಥಾನ' ಎಂದು ಹೆಸರು ಪಡೆದ ನಮ್ಮ ಮೈಸೂರು ಸಂಸ್ಥಾನದಲ್ಲಿಯೂ ಕೂಡ ನಿರಕ್ಷರಕುಕ್ಷಿಗಳು ಹೇರಳವಾಗಿರುತ್ತಾರೆ ಇವರಿಗ ಈ ಇಲಾಖೆಯ ಎಲ್ಲ ವಿಷಯಗಳಲ್ಲಿಯೂ ತಿಳುವಳಿಕೆಯು ಬಹ ಳ ಸ್ವಲ್ಪ ನಾಗರೀಕತೆಯಲ್ಲಿ ಮುಂದು ವರಿದ ಪಾಶ್ಚಾತ್ಯ ಪೊಲೀಸಿನವರಲ್ಲಿ ಎಲ್ಲಿ ಕರ್ತವ್ಯಗಳ ಎಂಬವು ಭರತಖಂಡದ ಸಂಸ್ಥಾನವು ಹೆಸರು ಪಡೆದ ಮಾತ್ರಕ್ಕೇ ಎಲ್ಲ ವಿಷಯಗಳಲ್ಲಿಯೂ ಮುಂದುವರಿದಿದೆ ಎಂಬು ದು ದೊಡ್ಡ ತಪ್ಪು ಇದನ್ನು ಒತ್ತಿ ಪದ್ಯ ದಾಗಿ ಪರಿಶೀಲಿಸಬೇಕಗಿದೆ

ನಮ್ಮ ಪೊಲೀಸಿನವರಿಗೆ ಇನ್ನು ಮುಂದೆ ಅವರ ಇಲಾಖೆಯ ಎಲ್ಲಾ ವಿಷಯಗಳಲ್ಲೂ ಕರ್ತವ್ಯ ಮತ್ತು ಅಧಿಕಾರಗಳನ್ನು ವಿಶದವಾಗಿ ಬೋಧಿಸಿ, ಮೇಲ್ದರ್ಜೆಯ ಅಧಿಕಾರಿಗಳು ಜನಸಾಮಾನ್ಯಕ್ಕೆ ಕುಮಾರ ಪ್ರಾಯರಾಗಿರದೆ, ಸ್ವವಕರ್ಮವನ್ನು ಅರಿತು ದೇಶಸೇವೆಯೇ ತಮ್ಮ ಪ್ರಧಾನ ಧ್ಯೇಯವೆಂದು ತಮ್ಮ ಜೀವನದ ಮುಖ್ಯ ಧ್ಯೇಯ ಎಂಬ ವಿಷಯಗಳನ್ನು ನಿರಂತರವೂ ಕಾರ್ಯರಂಗದಲ್ಲಿ ಸಾಧಿಸಿ ತನ್ಮೂಲಕ ತೋರಿಸಬೇಕೆಂದು ನಾವು ಕೋರುವೆವು ನಂಬಿರುವೆ

ಸತ್ಯಾ ಲಕ್ಷ್ಮೀ ಪ.

ವೇ॥ ಬ್ರಹ್ಮಶ್ರೀ ಜೀಮನಹಳ್ಳಿ ರಘು ನಾಥಾಚಾರ್ಯರು, ಮೈಸೂರು ರವಾವಿ ಲಾಸ ಅಗ್ರಹಾರದಲ್ಲಿರುವ ಶ್ರೀ ಅಜಿ ವೆಂಕಟಾಚಾರ್ಯರ ಮನೆಯಲ್ಲಿ ಮಹಾ ಜನರ ಪ್ರಾರ್ಥನೆಯ ಮೇರೆ ಭಾಗವತ ದಶಮಸ್ಕಂಧ ಪುರಾಣವನ್ನು ಶ್ರವಣಮಾಡಿಸಲು ಉಪಕ್ರಮಿಸಿರುತ್ತಾರೆ ಅನೇಕ ಲೌಕಿಕ ವೈದಿಕ ವಿದ್ವಾಂಸರೂ, ಮಹಿಳೆಯರೂ, ಬಹು ಆದರದಿಂದ ಶ್ರವಣ ಮಾಡುತ್ತಿರುತ್ತಾರೆ ಶ್ರೀಗಳೂ ಆಚಾರ್ಯರು ಭಾಗವತ, ಬ್ರಹ್ಮವೈವರ್ತ ಕೃಷ್ಣಜನ್ಮಖಂಡ ಮೊದಲಾದ ಗ್ರಂಥಗಳ ಆಧಾರದಿಂದ ಸಂಕ್ಷೇಪ ವಿಸ್ತರಗಳಿಂದ ಶ್ರೀ ಕೃಷ್ಣನ ಮಹಿಮೆಗಳನ್ನು ಗಂಗಾ ಪ್ರವಹದಂತಿರುವ ತಮ್ಮ ವಾಣಿಯಿಂದ ಸ್ವಾರಸ್ಯವಾಗಿ ಶ್ರೋತೃಗಳಿಗೆ ಆನಂದವಾಗುವಂತೆ ನಿರೂಪಿಸುತ್ತಾ ಭಗವಂತನ ಕೃಪೆಗೂ ಜನರ ಮೆಚ್ಚಿಗೆಗೂ ಪಾತ್ರರಾಗಿರುತ್ತಾರೆ

ಹುಣಸೂರಿನಲ್ಲಿ ಮಿಷನರಿಗಳ ಕಾರ್ಯಗಳು.

ಹುಣಸೂರು ಮೈಸೂರಿಗೆ ಮೂವತ್ತು ಮೈಲಿಗಳ ದೂರದಲ್ಲಿದೆ ಈ ಸ್ಥಳದಲ್ಲಿ ವೆಸ್ಲಿಯನ್ ಮಿಷನರಿಗಳು ಎರಡು ಪಾಠಶಾಲೆಗಳನ್ನು ನಡೆಸುತ್ತಾ ಬಂದಿರುತ್ತಾರೆ ಒಂದು ವಿದ್ಯಾರ್ಥಿಗಳಿಗೆ, ಇಂದರೆ ಅಧಿಕ ಸಂಖ್ಯೆಯಾಗಿರುವ ಶಾಲೆ ಮತ್ತೊಂದು ಎಲ್ಲಾ ಕೋಮಿನವರಿಗೂ ಅವಕಾಶವಿರುವ ಹುಡುಗ ಮಕ್ಕಳ ಪಾಠಶಾಲೆ ಈ ಸ್ಥಳದಲ್ಲಿ ನಾಲ್ಕೈದು ದೇಶೀಯ ಕ್ರೈಸ್ತರ ಮನೆಗಳಿರುತ್ತವೆ ಇವಕ್ಕೋಸ್ಕರ ಮ ಹೆಯಾಗ ವಾರತ್ತು ರೂಪಾಯಿ ಸಂಬಳ ಪಡೆಯುವ ಒಬ್ಬ ಉಪದೇಶಿಯನ್ನು ಇರಿಸಿರುತ್ತಾರೆ ಇದು ಮಾತ್ರವಲ್ಲದೆ ಮೈಸೂರಿನ ಮಿಷನರಿಯು ಪ್ರತಿ ಸಾರಿಯೂ ಒಬ್ಬರಲ್ಲಿ ಹೋಗಿ ಬರುವರು ಅವರ ಮಿಷನರಿಗಳು ಮತ ಪ್ರಚಾರಕ್ಕಾಗಿ ಪ್ರತಿ ತಾಲ್ಲೂಕಿಗೆ ಇಲ್ಲಿ ತಮ್ಮ ಕಡೆಯ ಏಜೆಂಟರನ್ನು ನೇಮಿಸಿರುವರು ಇವರು ಎತ್ತರದಿಂದ ಒಳ ಹಣದ ಚೀಲಿಯು ಗಟ್ಟಿಗ ಮದ ಸಂಬಳಕ್ಕೆ ಬೋಧಕರ ದೇಶೀಯ ಕ್ರೈಸ್ತರು ಕಣ್ಣು ಮುಚ್ಚಿಕೊಂಡಿರುವುದರಿಂದ ಮಿಷನರಿಗಳು ಹಣವನ್ನು ತಮ್ಮ ಮನಸ್ಸಿಗೆ ಬಂದಂತೆಲ್ಲಾ ಉಪಯೋಗಿಸುವರು

ಹುಣಸೂರಿನಲ್ಲಿ ಹಿಂದೂ ಜನರು ಒಗ್ಗಟ್ಟಾಗಿ ತಮ್ಮ ಧರ್ಮವನ್ನು ಕಾಪಾಡಿಕೊಳ್ಳುವುದಕ್ಕಾಗಿ ಮಿಷನರಿಗಳ ಪಾಠಶಾಲೆಗಳಿಗೆ ತಮ್ಮ ಮಕ್ಕಳನ್ನು ಕಳುಹಿಸದಂತೆ ಒಂದು ಒಗ್ಗಟ್ಟು ಮಾಡಿಕೊಂಡು ಹಿಂದೂ ಧರ್ಮದ ಸಂರಕ್ಷಣಾರ್ಥವಾಗಿ ಒಂದು ಪಾಠಶಾಲೆಯನ್ನು ಸ್ಥಾಪಿಸಿ ಅದನ್ನು ನಡೆಸುತ್ತಿರುವರು ಈ ಹೊಸ ಪಾಠಶಾಲೆಯಲ್ಲಿ ಮ॥ ರಾ॥ ಎಸ್ ಜಾರ್ಜ್ ಸನ್ ಸ್ಪೆಯವರೂ ರತ್ನ ಬ್ರಹ್ಮ ಹಿಂದೂ ಸಹೋದರರೂ ಪಾಠಕರಾಗಿರುವರು ಈಗ ಸ್ಥಾಪಿಸಲ್ಪಟ್ಟ ಪಾಠಶಾಲೆಯು ಧಾರ್ಮಿಕ ದೃಷ್ಟಿಯಿಂದ ಮಾನ್ಯವಾಗಿದೆ

ನಮ್ಮ ಸಂಸ್ಥಾನದಲ್ಲಿ ಎಲ್ಲಾ ಕಡೆಗಳಲ್ಲೂ ಇಂತಾ ಸ್ವತಂತ್ರವಾದ ಸರ್ವಾರು ಪಾಠಶಾಲೆಗಳು ಸ್ಥಾಪಿಸಲ್ಪಡುವುದು ಒಳ್ಳೆಯದು ಮೊದಲು ಗ್ರಾಮಾಂತರಗಳಲ್ಲಿರುವ ಮಿಷನರಿಗಳ ಪಾಠಶಾಲೆಗಳು ಮುಚ್ಚಲ್ಪಡಬೇಕು ಇದಕ್ಕಾಗಿ ಸಮಾಜಾಭಿಮಾನಿಗಳೂ, ಧರ್ಮ ಸಂರಕ್ಷಕರೂ ಮುಂದಾಳುಗಳಾಗಿ ಕೆಲಸ ಮಾಡಬೇಕಾಗಿದೆ

ಹುಣಸೂರು ಇಡೀ ಮೈಸೂರಿಗೇ ಹಿಂದೂ ಧರ್ಮ ಸಂರಕ್ಷಣಕ್ಕೂ ಮಿಷನರಿಗಳ ಅಧೀನದಲ್ಲಿರದೆ ಸ್ವತಂತ್ರರಾಗಿ ವಿದ್ಯಾರ್ಜನ ಮಾಡಲಿಕ್ಕೂ ಒಂದು ಪ್ರಥಮ ನಿದರ್ಶನವಾಗಿದೆ ಜೆ ಎಸ್

ಅಬಿಸೀನಿಯಾ ಚಕ್ರವರ್ತಿ.

ಲೀಗ್ ಆಫ್ ನೇಷನ್ಸ್ ಸಂಸ್ಥೆಯ ಮುಂದೆ ತಾನೇ ಸ್ವತಃ ಬಂದು ತನ್ನ ಅಹವಾಲುಗಳನ್ನು ಒಬಿಸೀನಿಯಾ ಚಕ್ರವರ್ತಿಗಳು ಹೇಳಿಕೊಳ್ಳುವರೆಂಬ ವದಂತಿಯು ಆಶ್ಚರ್ಯವನ್ನುಂಟುಮಾಡಿದೆ ಇದುವರೆಗ ಯಾವ ರಾಜ್ಯದ ದೊರೆಯೂ ತಾನೇ ಖುದ್ದಾಗಿ ಆ ಸಭೆಗೆ ಹೋಗಿರಲಿಲ್ಲ ಈಗರು ತನ್ನ ದೇಶವನ್ನು ಬಿಟ್ಟು ಹೊರಟಿರುವುದರಿಂದ ಅವರು ಯಾರ ಪ್ರತಿನಿಧಿಗಳಾಗಿ ಹೋಗಿರುವರೆಂಬ ಪ್ರಶ್ನೆಯು ಬರುತ್ತದೆ ಇದರಿಂದ ಅವರನ್ನು ಚಕ್ರವರ್ತಿಯೆಂದು ಕರೆಯುವುದಿಲ್ಲ ಮಿಸ್ಟರ್ ಟಫಾರಿಯೆನ್ನುವರು

ಇವರು ಈಗ ಪ್ರಪಂಚ ಸಂಚಾರವನ್ನು ಮಾಡಲು ಉದ್ದೇಶಿಸಿರುತ್ತಾರೆ ಅವರಿಗೆ ಎರಡು ಕಡೆಯಿಂದಲೂ ಆಹ್ವಾನಗಳು ಬರುತ್ತಿವೆ ಈ ಮಧ್ಯೆ ಅಬಿಸೀನಿಯದಲ್ಲ ಕಾದು ಪ್ರದೇಶಗಳಿಂದ ಕೆಲವರು ದಂಗೆಯೆದ್ದು ಇಟಲಿಯ ನೌಕರರ ಮೇಲೆ ಬೀಳುತ್ತಿರುವರು ಇನ್ನೂ ಇಟಲಿಯ ಪ್ರಭುತ್ವವು ಅಬಿಸೀನಿಯದಲ್ಲಿ ಚೆನ್ನಾಗಿ ಸ್ಥಾಪನೆಯಾಗಿಲ್ಲ ಇಟಲಿಯವರು ಸ್ಥಳೀಯ ಮುಖಂಡರಲ್ಲಿ ಧೀವೋಸಾಯುವನ್ನು ನಾವು ಜನಗಳಿಗೆ ದೊಡ್ಡ ದೊಡ್ಡ ಹುದ್ದೆಗಳನ್ನು ಕೊಟ್ಟು ಸ್ವಾಧೀನಪಡಿಸಿಕೊಳ್ಳುತ್ತಿರುವರು ಅಂತೂ ಅಬಿಸೀನಿಯಾ ಚಕ್ರವರ್ತಿಗಳ ಮರ್ಮವು ಇನ್ನೂ ಚೆನ್ನಾಗಿ ಗೋಚರವಾಗಿಲ್ಲ

ಶಿವಮೊಗ್ಗೆ ವಾರ್ತೆ.

ಶಿವಮೊಗ್ಗ ಜಿಲ್ಲಾ ವೈದ್ಯಶಾಲೆಯ ಮತ್ತು ಅಧಿಕಾರಿಗಳ ಮೇಲೆ ಒಂದು ದಿನ ಪತ್ರಿಕೆಯಲ್ಲಿ ಜಿಲ್ಲಾ ವೈದ್ಯಾಧಿಕಾರಿಗಳು ಕೋಮುವಾರು ಮನೋಭಾವದಿಂದ ವರ್ತಿಸುವುದಾಗಿಯೂ, ಮತ್ತು ಗುಮಾಸ್ತರ ಸರ್ವಾಧಿಕಗಳಿಂದಾಗಿಯೂ ಪ್ರಕಟಿಸಲ್ಪಟ್ಟಿದೆ ಈ ವಾರ್ತೆಯು ನಿರಾಧಾರವಾದದ್ದು ಮತ್ತು ಸಂಬಳಸರ್ವಾದ ದ್ವೇಷದಿಂದ ಘೋಂಘೋತಹವಾಗಿ ಹೇಳಲ್ಪಡುವ ಜಿಲ್ಲಾ ವೈದ್ಯಾಧಿಕಾರಿಗಳು, ವಯೋವಂತರು, ಒಳ್ಳೆಯವರು ಮತ್ತು ಕಾರ್ಯದಕ್ಷರೂ ಆಗಿದ್ದಾರೆ ಆದರೆ ವಾರ್ತೆ ಯವರು ಈ ರೀತಿ ಇಲ್ಲದ ಸಲ್ಲದ ಆರೋಪಣೆಮಾಡಿರುವುದನ್ನು ನೋಡಿದರೆ ಆಶ್ಚರ್ಯ ಮಾತ್ರವಲ್ಲದೆ, ವಿಷಾದವೂ ಆಗುತ್ತದೆ ಪ್ರತಿನಿಧಿಗಳು ಯಾವ ಆಧಾರದ ಮೇಲೆ ಆರೋಪಣೆ ಮಾಡಿರುವರೋ ತಿಳಿಯಲಿಕ್ಕವಾಗಿದೆ. ಮತ್ತು ಖುದ್ದು ವಿಚಾರಿಸಿ ಬರೆಯದೆ, ಹೇಳಿಕೆಯ ಮಾತಿನ ಮೇಲೆ ಬರೆದಿರಬೇಕೆಂದು ತೋರುತ್ತದೆ ವಿಚಾರಣೆಯಲ್ಲಿ ಆಲೋಚನೆಗಳಿಗೆ ಸ್ವಲ್ಪವೂ ಬಿಡವಿಲ್ಲ

ಪ್ರಜಾನುರಾಗಿ

ಪಂಡಿತರಲ್ಲಿ ಗೊಂದಲ.

ಕಳೆದವಾರ ಕುಂಭಕೋಣದಲ್ಲಿ ಪಂಡಿತರುಗಳ ಒಂದು ದೊಡ್ಡ ವಾಗ್ಯುದ್ಧವು ನಡೆಯಿತು. ಸಿರುಗುಡಿ ಪಂಡಿತ ಶ್ರೀರಾಮ ಶಾಸ್ತ್ರಿಗಳೆಂಬವರು ರಾಮಾಯಣದ ಒಂದು ಹೊಸ ರೀತಿಯ ಅರ್ಥವನ್ನು ಹೇಳಿದ್ದರು. ಇದನ್ನೇ ಸಮರ್ಥಿಸಿ ಬರೆದು ಪ್ರಕಟ ಮಾಡಿಸಿದರು. ಅದನ್ನು ಯಾರೂ ತಪ್ಪೆಂದು ಹೇಳಲಾರರೆಂದು ಸವಾಲು ಹಾಕಿದರು. ಯಾರಾದರೂ ಅದನ್ನು ಸುಳ್ಳೆಂದು ರುಜುವಾತುಮಾಡಿದರೆ ತಮ್ಮ ಜನಿವಾರವನ್ನು ಕತ್ತರಿಸಿ ಉರಿಯುವ ಬೆಂಕಿಗೆ ಹಾಕುವುದಾಗಿ ತಿಳಿಸಿದ್ದರು. ಇದನ್ನು ಸುಳ್ಳುಮಾಡಿದ್ದರೆ ಇತರರು ಹಾಗೆಯೇ ಮಾಡಬೇಕೆಂದು ಕೋರಿದ್ದರು. ಈ ದೊಡ್ಡ ವಿಷಯವನ್ನು ಚರ್ಚಿಸಲು ಕುಂಭಕೋಣದ ಶ್ರೀ ಶಂಕರಾಚಾರ್ಯರ ಮಠದಲ್ಲಿ ಪಂಡಿತರುಗಳ ಸಭೆ ಸೇರಿತು. ದಿವಾನಬಹದ್ದೂರ್ ಕೆ. ಎಸ್. ರಾಮಸ್ವಾಮಿಶಾಸ್ತ್ರಿಯವರು ಅಗ್ರಾಸನವನ್ನು ವಹಿಸಿದ್ದರು. ಮೇಲ್ಕಂಡ ಶ್ರೀರಾಮಶಾಸ್ತ್ರಿಗಳನ್ನು ವಾದಕ್ಕೆ ಕರೆದಿದ್ದರು. ಶಾಸ್ತ್ರಿಗಳ ವಾದಸರಣಿಯನ್ನೂ ಅವರ ರೀತಿಯನ್ನೂ ಜನರು ಒಪ್ಪಲಿಲ್ಲ. ಜನಿವಾರ, ಬೆಂಕಿ ಮುಂತಾದವುಗಳ ಮಾತನ್ನೆತ್ತಿದುದಕ್ಕಾಗಿ ಎಲ್ಲರೂ ಆಗ್ರಹಗೊಂಡಿದ್ದರು. ಆದರೂ ತಮ್ಮ ಹಠವನ್ನು ಸದಾತ್ರ ಶಾಸ್ತ್ರಿಗಳು ಬಿಡಲಿಲ್ಲ. ಸಭಿಕರಿಗೆ ಕೋಪವು ಮಿತಿಮೀರುತ್ತಿತ್ತು. ಸಭೆಯಲ್ಲೆಲ್ಲಾ ಕೋಲಾಹಲವುಂಟಾಯಿತು. ವಾದಾವಾದವೂ, ಗಲಭೆಯೂ ಹರಡಿತು. ಕೆಲವರು ಶಾಂತಿ ಉಪಾಯವಾಗಿ ಶಾಸ್ತ್ರಿಗಳನ್ನು ಒಂದು ಕೋಣೆಗೆ ಸಾಗಿಸಿದರು. ಜನರಲ್ಲಿಯೂ ಜನಿವಾರದ ಮೇಲೆ ತಾವರನ್ನು ಹೊರಕ್ಕೆ ಬಿಟ್ಟರು. ವಿದ್ವಾಂಸರಾದ ಅನೇಕ ಪಂಡಿತರು ಸೇರಿದ್ದರು.

ಗೋಡೆಗಳಿಗೆ ಚೀಟಿ ಹಚ್ಚುವುದು.

ಗೋಡೆಗಳಿಗೆ ದೊಡ್ಡ ದೊಡ್ಡ ಚೀಟಿಗಳನ್ನು ಹಚ್ಚುವುದರಿಂದ ನಗರದ ಸೌಂದರ್ಯಕ್ಕೆ ಭಂಗಬರುವುದೆಂದು ಸಿಮ್ಲಾ ಪೌರ ಸಮುದ್ಧಾರಿಗಳು ಎಣಿಸುವರು. ಪ್ರತಿ ದಿನವೂ ಚೀಟಿಗಳನ್ನು ಹಚ್ಚಿಸತಕ್ಕ ಸಿನಿಮಾ ಮುಂತಾದ ಸಂಸ್ಥೆಗಳಿಗೆ ಅವರು ಎಚ್ಚರಿಕೆಯನ್ನು ಕಳುಹಿಸುವರು. ಸಿಮ್ಲಾ ನಗರವು ಬೇಸಿಗೆಯಲ್ಲಿ ದೊಡ್ಡಮನುಷ್ಯರಿಗೆ ಮುಖ್ಯವಾದ ವಿಹಾರ ಸ್ಥಾನವಾಗಿದೆ. ಅಲ್ಲಿನ ನೈಸರ್ಗಿಕ ಸೌಂದರ್ಯವು ಬಹಳ ರಮಣೀಯವಾಗಿದ್ದು, ರಸ್ತೆಗಳ ಅಂದಚಂದಗಳು ಅಚ್ಚುಮೆಚ್ಚಾಗಿವೆ. ಇಲ್ಲಿ ಒಗೆಬಗೆಯ ಬಣ್ಣದ ಚಿತ್ರವಿಚಿತ್ರವಾದ ಚೀಟಿಗಳನ್ನು ಗೋಡೆಗೆ ಹಚ್ಚಿ ಊರಿನ ಸೌಂದರ್ಯವನ್ನು ಕೆಡಿಸಕೂಡದೆಂದು ಅವರ ಅಭಿಪ್ರಾಯ. ಅವರಿಗೆ ತಿಳಿದಂತೆ ಯಾರೋ ಹಚ್ಚಿಬಿಟ್ಟರೆಂದರೆ ಕೇಳುವುದಿಲ್ಲ ಕ್ಷಿಪ್ರನೇ ರದ್ದಾಗುವುದು. ಕ್ಲುಪ್ತವಾದ ಸ್ಥಳಗಳಲ್ಲಿ ಬೇಕಾದರೆ ಹಚ್ಚಬಹುದು.

ಜಾಲಿ ಕ್ಲಬ್ ಮತ್ತು ಸೊಸೈಟಿ.

ತಾ॥ 18-5-1936 ನೇ ಸೋಮವಾರ ಸಾಯಂಕಾಲ ಮೈಸೂರು ಜಾಲಿಕ್ಲಬ್ಬಿನ ಮೂರನೆಯ ವಾರ್ಷಿಕೋತ್ಸವವು ಶ್ರೀ ಇಂದಿರಾ ಥಿಯೇಟ್ರಿಕಲ್ ಕಂಪೆನಿಯಲ್ಲಿ ನಡೆಯಿತು. ಡಾ॥ ನಾಮಕಲ್ಲರಾವ್ ಅವರು ಅಧ್ಯಕ್ಷತೆಯನ್ನು ವಹಿಸಿದ್ದರು. ಕಾರ್ಯಕ್ರಮದಂತೆ ಮ॥ ನಾರಾಯಣರಾಯರು ದೇವರ ಪ್ರಾರ್ಥನೆಯನ್ನು ಮಾಡಿದರು. ಕ್ಲಬ್ಬಿನ ಸಕ್ರೆಟರಿಗಳಾದ ಮ॥ ಶ್ರೀನಿವಾಸರಾಯರು ಸಂಘದ ವರದಿಯನ್ನು ಓದಿದರು. ಅಧ್ಯಕ್ಷರ ಭಾಷಣವಾದನಂತರ ಕ್ಲಬ್ಬಿನ ವೈಸ್‌ಪ್ರೆಸಿಡೆಂಟರಾದ ಮ॥ ನರಸಿಂಹರಾಯರು ಗೆದ್ದವರಿಗೆಲ್ಲಾ ಬೆಳ್ಳಿ ಬಟ್ಟಲುಗಳನ್ನು ಬಹುಮಾನವಾಗಿ ಹಂಚಿದರು. ತರುವಾಯ ಮ॥ ಕೆ. ಶ್ರೀನಿವಾಸಾಚಾರ್ಯರವರ ಸಂಗೀತವು ನಡೆಯಿತು. ಶ್ರೀಮುಸ್ತಫಾ ರಾವರವರ ಶ್ರೀಯುತ ಪ್ರಾರ್ಥನೆಯಾದ ನಂತರ ಸಭೆಯು ಮುಕ್ತಾಯವಾಯಿತು.

ಮೇಲ್ಕಂಡ ಸಂಘದವರು, ಪರೀಕ್ಷೆಗೆ ಕಟ್ಟಿರುವ ಬಡವಿದ್ಯಾರ್ಥಿಗಳಿಗೆ ಉಚಿತ ವಿದ್ಯಾಭ್ಯಾಸವನ್ನು ಕೊಡುವುದಲ್ಲದೆ ಪ್ರತಿವಾರವೂ ಸ್ವಾಸ್ಥ್ಯ, ಸಾಮಾಜಿಕ, ಮತಧರ್ಮ ಮತ್ತು ಟೆಕ್ನಿಕಲ್ ವಿಷಯಗಳ ಬಗ್ಗೆಯೂ ಉಪನ್ಯಾಸಗಳನ್ನು ಏರ್ಪಡಿಸಿರುತ್ತಾರೆ. ಮೆಂಬರುಗಳ ವಿನೋದಕ್ಕಾಗಿ ಆಟಪಾಟಗಳನ್ನೂ ಸದಾ ಇಟ್ಟಿರುತ್ತಾರೆ ಮತ್ತು ತಮ್ಮ ತಮ್ಮಲ್ಲಿರುವ ಆರ್ಥಿಕ ತೊಂದರೆಗಳನ್ನು ಕೊಂಚಮಟ್ಟಿಗಾದರೂ ನಿವಾರಿಸುವುದಕ್ಕಾಗಿ ಒಂದು ಬ್ಯಾಂಕಿಂಗ್ ವಿಭಾಗವನ್ನೂ ಸಹಾ ತೆರೆದಿದ್ದಾರೆ. ದೇವರು ಇವರ ಪ್ರಯತ್ನಗಳನ್ನು ಸಫಲಗೊಳಿಸಲೆಂದು ಪ್ರಾರ್ಥನೆ.

ತಗಡೂರಿನ ಭವಾನಣೆ

ಕೆಲವು ದಿನಗಳ ಕೆಳಗೆ ತಗಡೂರು ಖಾದಿ ಕೇಂದ್ರದ ಮ್ಯಾನೇಜರು ಸಂಸ್ಥೆಯ ಹಣವನ್ನು ದುರುಪಯೋಗಪಡಿಸಿಕೊಂಡಿದ್ದರೆಂದು ಶ್ರೀ॥ ತಗಡೂರು ರಾಮಚಂದ್ರರಾಯರು ತಿಳಿಸಿದರಷ್ಟೆ. ಈಚೆಗೆ ಈ ವಿಷಯವು ತೀರ್ಮಾನವಾಗಿರುವುದಾಗಿ ಅವರು ತಿಳಿಸುತ್ತಾರೆ. ಮ್ಯಾನೇಜರಾಗಿದ್ದ ಮ॥ ವೈಕುಂಠನಾರಣಪ್ಪನವರ ಅಣ್ಣಂದಿರೂ ಬಿಡುಗಲದ ಖಾದಿ ಕೇಂದ್ರದ ಮ್ಯಾನೇಜರೂ ಆದ ಶ್ರೀ॥ ವೆಂಕಟಗಿರಿರಾಯರು ಸದರೀ ಮೊಬಲಗನ್ನು ತಾವೇ ತೀರಿಸುವದಾಗಿ ಒಪ್ಪಿಕೊಂಡಿರತ್ತಾರೆ. ನಗದಾಗಿ ಉಪಯೋಗಿಸಿಕೊಂಡಿದ್ದ ರೂಪಾಯಿ 117-10-6 ಅನ್ನು ಮಾಡೇಯಾನಾ ಹತ್ತು ರೂಪಾಯಿನಂತೆ ಕೊಟ್ಟು ತೀರಿಸುವುದಾಗಿ ಅವರು ಒಪ್ಪಿರುತ್ತಾರೆ.

ದರೋಯಿತರು ರೆವಿನ್ಯೂ ಅಧಿಕಾರಿಯನ್ನು ಕೊಂದರು.

ಗೊಂಡಾ ಡಿಸ್ಟ್ರಿಕ್ಟಿನ ತಾರಬ್‌ಗಂಜ್ ಎಂಬಲ್ಲಿನ ರೆವಿನ್ಯೂ ಅಧಿಕಾರಿಗಳಾದ ಸಜ್ರಾಂಗಲಾಲ್ ಎಂಬವರ ಮನೆಗೆ ಪೋಲೀಸ್ ವೇಷಧಾರಿಗಳಾಗಿ, ಕೈಯ್ಯಲ್ಲಿ ರಿವಾಲ್ವರುಗಳನ್ನು ಹಿಡಿದ ಇಬ್ಬರು ದರೋಯಿತರು ಹೋದರು. ಪಜ್ರಾಂಗಲಾಲರು ಬಾಗಿಲನ್ನು ತೆಗೆದರು. ದರೋಯಿತರು ಇನ್ನೂರು ರೂಪಾಯಿನ್ನು ಕೇಳಿದರು. ಅವು ಕೊಡಲ್ಪಟ್ಟಿತು. ದರೋಯಿತರ ಗುಂಪಿನ ಮುಖಂಡನಾದ ಸುಂಚಿತ ಎಂಬುವನನ್ನು ಪೋಲೀಸರು ವಿಚಾರಣೆಗಗರಿ ಮಾಡಿ ಕಡೆಗೆ ಆತನನ್ನು ಗುಂಡು ಹಾಕಿ ಸುಟ್ಟ ಸಂದರ್ಭದಲ್ಲಿ ಈ ಅಧಿಕಾರಿಯು ತಮ್ಮನು ಸುಂಚಿತನಿಗೆ ವಿರೋಧವಾಗಿ ಸಾಕ್ಷ್ಯವನ್ನು ಕೊಟ್ಟನೆಂಬೂ ಅದ್ದರಿಂದ ತನನನ್ನು ಕೂರಿಸಬೇಕೆಂದೂ ಕೇಳಿದರು. ಆತನು ಹೊರಗೆ ಹೋಗಿರುವನೆಂದು ಹೇಳಲಾಯಿತು. ಅದರ ಮೇಲೆ ದರೋಯಿತರು ಸಜ್ರಾಂಗಲಾಲರನ್ನು ಗುಂಡಿನಿಂದ ಹೊಡೆದು ಕೊಂದುಹಾಕಿ ಓಡಿಹೋದರು. ಕೆಲವು ದಿನಗಳನಂತರ ಮತ್ತೊಂದುಸಾರಿ ಪೋಲೀಸ್ ವೇಷಧಾರಿಗಳಾದ ಕೆಲವರು ಇನ್ನೊಬ್ಬ ಮನುಷ್ಯನನ್ನು ಹೊಡೆದು ಗಾಯ ಪಡಿಸಿದರು. ಅವರು ಓಗೆ ಮಾಡಿದರು ಬಹುದೆಂದು ಊಹಿಸಲ್ಪಟ್ಟಿದೆ.

ಈಜುವುದರಲ್ಲಿ ಗಟ್ಟಿಗರು.

ಸ್ತ್ರೀಯರ ಪೈಕಿ ಫ್ರೀಸ್ಟೈಲ್ ಈಜುವಿಕೆಯ ಪ್ರಪಂಚದ ರಿಕಾರ್ಡನ್ನು ಡಾಲೆಂಡ ಮಿಸ್ ವ್ಟಿಲ್ಲಾಗ್ಲರ ತರಲು ಸ್ಥಾಪಿಸಿದರು. ಇದು ನಿಮಿಷ ಇಪ್ಪತ್ತೆರಡು ಸೆಕೆಂಡಿನಲ್ಲಿ ಅವರು ೪೪೦ ಗಜ ಈಜಿದರು. ಇದಕ್ಕೆ ಹಿಂದೆ ಮಿಸ್ ಅರ್ನನ್ಸ್ಟೈಂಬ್ರಿಕ್‌ರವರು ಐದು ನಿಮಿಷ ೩೦ ಸೆಕೆಂಡುಗಳಲ್ಲಿ ಈ ದೂರವನ್ನು ಈಜಿದರು.

ಸಂಸಾರದೊಡನೆ ಅಗ್ನಿಪ್ರವೇಶ.

ಬಡನನಾದುದರಿಂದ ಸಿಖ್ಖನು ಊಟಾಫೆ ಸಹಿಸಲಾರದೆ ತನ್ನ ಮನೆಯ ಮುಂದೆ ದೊಡ್ಡ ಬೆಂಕಿಯನ್ನು ಹಾಕಿ ತನ್ನ ಹೆಂಡತಿಯನ್ನೂ, ಮಕ್ಕಳನ್ನೂ ಅದರಲ್ಲಿ ತಳ್ಳಿ ಕೊಂದುಹಾಕಿದನು. ತಾನೂ ಅದರಲ್ಲಿ ಬಿದ್ದು ಸತ್ತನು. ಅವನ ಹೆಸರು ಗುರುಸಿಂಗ್ ವಯಸ್ಸು 3೬. ರಂಗೂನಿನ ಬೀಟಾಂಗಿನ್ ಎಂಬಲ್ಲಿ ಇದು ನಡೆಯಿತು.

ವಾರಕ್ಕೆ ಐದು ವಿಮಾನ ಸಂಚಾರ.

ವಿಮಾನ ಸಂಚಾರವು ದಿನೇ ದಿನೇ ಬಹಳ ಅಭಿವೃದ್ಧಿಯಾಗುತ್ತಿದೆ. ಇದರಿಂದ ಉತ್ಪತ್ತಿಯೂ ಹೆಚ್ಚುತ್ತಿದೆ. ನಿರೀಕ್ಷಿಸಿದ್ದುದಕ್ಕಿಂತ ಹೆಚ್ಚು ಲಾಭವಿದೆ. ಆದ್ದರಿಂದ ವಿಮಾನಗಳ ಓಡುವ ವೇಗವನ್ನು ಹೆಚ್ಚುಮಾಡುವರು. ಮತ್ತು ಹೆಚ್ಚು ನಾಲ್ಕು ವಿಮಾನಗಳನ್ನು ಕೊಳ್ಳುವರು. ಲಂಡನ್ನಿನಿಂದ ಇಂಡಿಯಾಕ್ಕೆ ಎರಡುವಾರ ದಿನದಲ್ಲಿ ವಿಮಾನ ಸಂಚಾರವು ಏರ್ಪಡುಗುವುದು. ವಾರಕ್ಕೆ ಐದಾವರ್ತಿ ಇಂಡಿಯಾಕ್ಕೆ ವಿಮಾನಗಳು ಬರುವುವು.

"ಕೇವಲ ಐದು ವರ್ಷದ ಬಾಲಕ!" ತಬಲ ಬಾರಿಸುವುದರಲ್ಲಿ ಅದ್ವಿತೀಯ!"

(Lament of a Prodigy)

ಅವನ ಪ್ರಲಾಪ!

ತಕತ ಧಿಮಿತ ತಬಲವನ್ನ
ಮನದ ಹಿತಕೆ ಹೊಡೆಯಲಿ,
ಸರಿಗ ಮಧನಿ ಮಗಮ ಎಂ
ಕಿರಿಯ ಸುಖಕೆ ನುಡಿದರೆ,
ಮಾನೆಯಲಿದ್ದು ನನಗೆ ನಾನು,
ಪುಟ್ಟ ಪುಟ್ಟ ಹೆಜ್ಜೆಯಿಟ್ಟು,
ಗಜ್ಜೆ ಗಿಜ್ಜೆ ಲಜ್ಜೆಯಿಲ್ಲದೆ,
ನನ್ನ ಪಾಡಿಗೆ ನಾನು ಕುಣಿದರೆ,
ಇಷ್ಟು ಹಿಟ್ಟು ಬಟ್ಟೆಗಾಗಿ
ತಂದೆ ತಾಯಿ ಮಾನ ಬಾನ
"ನೋಡಿ! ಬನ್ನಿ! ಐದು ವರ್ಷ!
ಹಸುಳೆ! ಕೂಸು! ಮೂರು ಹಣ
ನಮಗೆ ಕಾಸು! ನಿಮಗೆ ಹರ್ಷ
ಎಷ್ಟು ಅಂದ! ಎಷ್ಟು ಚಂದ
ಎಂದು ಸಾರಿ ನನ್ನ ಮಾರಿ,
ಪ್ರೈಜು, ಹೊಗಳಿ, ಒಸುಕಿ, ಕಿವುಚಿ
ಜನರ ಮುಂದಕ್ಕೆಳೆದು ನಿಲಿಸಿ,
ಅಯ್ಯೋ, ನಾನು ಬೆಳೆವ ಮುನ್ನ
ನನ್ನ ವಿದ್ಯೆ ಬಲಿವ ಮುನ್ನ
ನನ್ನ ಹೊಗಳಿ ಕೊಲ್ವರು!

— ಸ್ವಾಮಿ

ಮಿಷನ್ ಸ್ಕೂಲಿಗೆ ಗ್ರಾಂಟಿಲ್ಲ

ಪಂಜಾಬಿನಲ್ಲಿ ಎಲಿಮುಯೂರೆಂಬ ಗ್ರಾಮ. ಅಲ್ಲಿ ಒಂದು ಮಿಷನ್ ಸ್ಕೂಲು. ಅದರಲ್ಲಿ ಬಾಲಕರಿಗೆ ಬಲಾತ್ಕಾರವಾಗಿ ಬೈಬಲ್ ಪುಸ್ತಕವನ್ನು ಓದಿಸುತ್ತಾರೆಂದು ಜನರಲ್ಲಿ ಪುಕಾರು ಹುಟ್ಟಿತು. ಸ್ಕೂಲಿನ ವ್ಯವಸ್ಥಾಪಕರು ಉಪಾಯವಾಗಿ ಮಕ್ಕಳನ್ನು ಕ್ರೈಸ್ತ ಜಾತಿಗೆ ಸೇರಿಸಲು ಪ್ರಯತ್ನಿಸುತ್ತಿರುವರೆಂದೂ ಗಲಭೆಯೆದ್ದಿತು. ಈ ಅಭಿಪ್ರಾಯಗಳನ್ನೊಳಗೊಂಡ ಒಂದು ವಿಜ್ಞಾಪನಾ ಪತ್ರಿಕೆಯನ್ನು ಜನರು ವಿದ್ಯಾಧಿಕಾರಿಗಳಿಗೆ ಒಪ್ಪಿಸಿದರು. ಪಂಜಾಬ್ ರೇಂಜಿನ ಡೆಪ್ಯುಟಿ ಇನ್ಸ್‌ಪೆಕ್ಟರು ಈ ಅಂಶಗಳನ್ನು ಪರಿಶೀಲಿಸಿ ಆಪಾದನೆಗಳೆಲ್ಲವೂ ನಿಜವೆಂದು ತಿಳಿಸಿದರು. ಮತ ಪ್ರಚಾರಕ್ಕಾಗಿಯೇ ಸದರಿ ಸ್ಕೂಲು ಕೆಲಸ ಮಾಡುತ್ತಿದೆಯಲ್ಲದೆ ವಿದ್ಯಾಪ್ರಚಾರಕ್ಕೆ ಅಲ್ಲನೆಂದು ಅವರು ತಿಳಿಸಿದರು. ಇಪ್ಪತ್ತು ಜನ ವಿದ್ಯಾರ್ಥಿಗಳು ಆ ಶಾಲೆಯನ್ನು ಬಿಟ್ಟು ಬಿಟ್ಟಿದ್ದರು. ಇಬ್ಬರು ಕ್ರೈಸ್ತ ವಿದ್ಯಾರ್ಥಿಗಳು ಮಾತ್ರ ಉಳಿದಿದ್ದರು. ಹರಿಜನ ಜಾತಿಯ ಕೆಲವು ಸಂಸಾರಗಳು ಆಗಲೇ ಜಾತಿಕೆಡಿಸಲ್ಪಟ್ಟು ಕ್ರೈಸ್ತ ಮತಕ್ಕೆ ಸೇರಿಸಲ್ಪಟ್ಟಿವೆ. ಆದ್ದರಿಂದ ಆ ಸ್ಕೂಲಿಗೆ ಗ್ರಾಂಟು ಕೊಡಕೂಡದೆಂದು ವಿದ್ಯಾಸಂಸ್ಥೆಯವರು ನಿರ್ಣಯಿಸಿದರು.

Up to date and Efficient Medical Treatment

Go to—**Dr. A. J. RAM & SONS,**

Sayaji Rao Road, Mysure.

Physicians, Dentists, Opticians, etc.

ಡಾ|| ಎ. ಜೆ. ರಾಂ. ಅಂಡ್ ಸನ್ಸ್,

ಸಯ್ಯಾಜಿರಾವ್ ರೋಡ್, ಮೈಸೂರು ಸಿಟಿ.

ಔಷಧ ವ್ಯಾಪಾರಿಗಳು, ಚಿಕಿತ್ಸಕರು, ದಂತವೈದ್ಯರು,
ಮತ್ತು ಕನ್ನಡಕ ವ್ಯಾಪಾರಿಗಳು.

ಉತ್ತಮವಾದ ನವೀನ ಚಿಕಿತ್ಸೆಗಳಿಗೆ ನಮ್ಮಲ್ಲಿಯೇ ಬನ್ನಿರಿ.

ಪಂಡಿತ ಪಿ. ಎಚ್. ಚಂದ್ರಭಾನಸಿಂಗ್
ಇವರಿಂದ ತಯಾರಿಸಲ್ಪಟ್ಟ

ಸಲಪುಷ್ಪಸಾರ ರಸಾಯನ.

ಸುಖಕರ ಮಲಬಂಧನಿವಾರಿಣೀ ಕ್ರಯ.—1-8-0

ಗುಣ:—ಇದು ಜಾಪಾಳ ಮುಂತಾದ ಕಠಿಣ ವಿರೇಚನ ವಸ್ತುಗಳ ಇಲ್ಲದ ಕೇವಲ ಅನ್ಯತೀಕರಣ ಪ್ರಯೋಗವು ಕೇವಲ ಅನುಭವಸಿದ್ಧ ಇದನ್ನು ಉಪಯೋಗಿಸುವುದರಿಂದ ಎಲ್ಲಾ ವಿಧವಾದ ಮಲಬಂಧವೂ, ಅಜೀರ್ಣ, ಉಷ್ಣವಾಯು, ಕೀಲುವಾಯು, ಎದೆಯುರಿ, ಹೊಟ್ಟೆ ನೋವು, ತಲೆತಿರುಗು ಮುಂತಾದ ರೋಗಗಳೆಲ್ಲವೂ ಖಂಡಿತ ಗುಣವಾಗು

ಬ್ರಾಂಚ್:—ಶ್ರೀಸತ್ಯನಾರಾಯಣ ಆಯುರ್ವೇದಿಕ್ ಫಾರ್ಮಸಿ,
ಜಗನ್ಮೋಹನ ಬಂಗ್ಲೆ ರಸ್ತೆ, ಮೈಸೂರು.

You Know

IN IDEAL ARRANGEMENTS & CHOICEST PREPARATIONS

We need not tell you about it

COME & SEE OUR NOVEL

innovations and up-to-date Management.

SRI KRISHNA BHAVAN,

Mysore.

ANANDA SODA FACTORY,

DODDAPET, MYSORE.

FIRST AERATED WATER SUPPLIERS

COMPLETE REQUISITES FOR

AERATED WATER MANUFACTURERS

AVAILABLE

ಆನಂದಾ ಸೋಡಾ ಫ್ಯಾಕ್ಟರಿ,

ದೊಡ್ಡಪೇಟೆ, ಮೈಸೂರು

The Bombay

Anand Bhavan Restaurant,

Mysore.

Recipients of

GOLD MEDAL

Awarded by the Government of Mysore,

during the **DASARA EXHIBITION, 1935**

for

GOOD CATERING ARRANGEMENTS

THE BEST EQUIPPED RESTAURANT IN MYSORE MANAGED ON THE MOST MODERN LINES.

A Visit will convince you
and
give you complete satisfaction in all respects

RATES REDUCED

for high class Cooled Syrups and Juice.

Sweet & Savoury & Radio Programmes
announced Daily

ಜನಪ್ರಖ್ಯಾತ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ಬಾಲಸುಧಾ

ಮಕ್ಕಳ ಜ್ವರದ ಗಡ್ಡೆಯನ್ನು ಬಾತು ಗುಣ ಪಡಿಸುತ್ತೆ ಲಿವರ್ (ಪಿತ್ತಕೋಶ) ದಪ್ಪನಾಗಿ ಕಣ್ಣು ಮೈಬಿ ಬಣ್ಣವಾಗಿದ್ದರೆ ಇದರ ಸೇವನೆಯಿಂದ ದಿನೇ ದಿನೇ ಗುಣವಾಗುತ್ತೆ 20 ವರ್ಷಗಳಿಂದಲೂ ಅನುಭವ ಸಿದ್ಧವಾಗಿದೆ—ಮಕ್ಕಳ ಭೇದಿಗೆ ನಮ್ಮ ಬಾಲ ಸಂಜೀವಿನಿಯನ್ನೇ ಉಪಯೋಗಿಸಿರಿ

ಬಾಲಸುಧಾ ಬೆಲೆ 1 ರೂ   ಬಾಲಸಂಜೀವಿನಿ 1 ಆ

ಮೈಸೂರು, ಬೆಂಗಳೂರು, ಮದ್ರಾಸುಗಳಲ್ಲಿ ಸಿಕ್ಕುತ್ತವೆ.

ಸದ್ವೈದ್ಯಶಾಲಾ, ನಂಜನಗೂಡು.

ಅರ್ಧ ಕ್ರಯಕ್ಕೆ ಕೊಡಲ್ಪಡುತ್ತೆ.

ಮುಂಚಿನ ಕ್ರಯ ರೂ. 1 12 0.   ಈಗ 14 ಆಣೆ

ಬ್ರಿಟಿಷ್ ಫೌಂಟೇನ್ ಪೆನ್

BRITISH FOUNTAIN PEN

ಇಂಗ್ಲೆಂಡಿನಲ್ಲಿ ತಯಾರಾದದ್ದು ಇದಕ್ಕೆ 14 ಕ್ಯಾರೆಟಿನ ಬಂಗಾರದ ನಿಬ್ಬು



ಹಾಕಿದೆ ಈ ಪೆನ್ನನ್ನು ನಮ್ಮ 5ನೆಯ ಕಿಂಗ್ ಜಾರ್ಜ್ ಚಕ್ರವರ್ತಿಯವರು ಕೊಂಡು ಸಂತೋಷಪಟ್ಟು ಬಹು ಮೇಲಾದ ಯೋಗ್ಯತಾಪತ್ರ (Certificate) ಕೊಟ್ಟಿರುವರು. ಅಕ್ಷರಗಳನ್ನು ಮುತ್ತುಗಳ ಹಾಗೆ ಮುದ್ದಾಗಿ ಬರೆಯುತ್ತದೆ ಇದರ ವಿಷಯವಾಗಿ ಬರೆದು ತಿಳಿಸಲು ಸ್ಥಳ ಸಂಕೋಚ ಒಂದನ್ನು ತರಿಸಿ ನೋಡಿದರೆ ಸಂತೋಷ ಪಡುವಿರಿ ಅಂಚೆ ಸಹಿತ ಕ್ರಯ 0–14–0.

ಒಂದೇ ಸಲ ಮೂರು ಪೆನ್ನುಗಳನ್ನು ತರಿಸಿದರೆ ಒಂದು ಪೆನ್ನನ್ನು ಬಹುಮಾನವಾಗಿ ಕೊಡಲ್ಪಡುತ್ತೆ

T R ROYAL & Co., 19 Beat, Madras. } **T R** ರಾಯಲ್ ಕಂಪೆನಿ, ೧೯ ಬೀಟ್, ಮದರಾಸು.

SEVA INSTITUTE OF COMMERCE, MADANAPALLE.

The Seva Institute of Commerce, Madanapalle has great pleasure in announcing to the public that commercial classes are being started from 1st June 1936. The Subjects taught will be Short hand and Type-writing, Book keeping, Commercial Correspondence and Office Routine for both Junior and Senior Courses, London Chamber of Commerce, and Pitmans' Certified Teachers' Diploma.

There is a Hostel attached to the Institute known as 'Seva Ashrama' situated amidst natural surroundings with a bracing climate.

Write for further particulars to

The Principal,
SEVA INSTITUTE OF COMMERCE,
Madanapalle.

USE ALWAYS

DERMOTONE

(SYSTRIC BATHING HERBAL PREPARATION)

THE UNIQUE PRODUCT IN THE MARKET FOR SKIN HYGIENE

ಡರ್ಮೊಟೋನ್,

[illegible] ಮತ್ತು ಆರೋಗ್ಯಕರವಾದ ಚರ್ಮರಕ್ಷಣೆ [illegible]

ಡರ್ಮೊಟೋನ್ ವರ್ಕ್ಸ್, ಮೈಸೂರು.

Now running Successfully For the Third Week at

OLYMPIA TALKIES, MYSORE

"KRISHNA LEELA," in Telugu

ಒಲಿಂಪಿಯಾ ಟಾಕೀಸ್, ಮೈಸೂರು.

ಶ್ರೀ ಕೃಷ್ಣ ಲೀಲಾ (ತೆಲುಗಿನಲ್ಲಿ

97,000 [illegible]

[illegible] ಬಂದು ನೋಡಿ.

A Reply

To all malicious and false mis representations, (if any)

WHAT AN EMINENT ACTUARY OF GREAT BRITAIN SAYS—

After perusal of the Company's Balance Sheet, Directors' Report and Abstract of Business, our Actuary, Mr H L. Humphreys has favoured with his invaluable opinion in the course of which he observes—

"It is clear that the very difficult task of the establishment of a LIFE OFFICE is well begun. You are to be congratulated on the extent to which so far you have limited the inevitably heavy expenses of the start ...... I shall hope to see continued progress in this and the following years and that the economical efforts obvious from these accounts will be continued. I wish the Company continued success."

THE MYSORE INSURANCE COMPANY LTD.,
SRI NARASIMHARAJA ROAD, Bangalore City.

[illegible] ಮತ್ತು [illegible] ಪ್ರಚಾರಕರಿಗೆ

ಇದೇ ಉತ್ತರ

ಗ್ರೇಟ್ ಬ್ರಿಟನ್ನಿನ ಸುಪ್ರಸಿದ್ಧ ಆಕ್ಚುಯರಿಗಳು ಏನು ಹೇಳುವರು?

[illegible]

ಮಿ|| ಎಚ್. ಎಲ್. ಹಂಫ್ರೀಸ್ ರವರು

[illegible] —

"[illegible]"

ದಿ ಮೈಸೂರು ಇನ್ಶೂರೆನ್ಸ್ ಕಂಪನಿ ಲಿಮಿಟೆಡ್.,
ಶ್ರೀ ನರಸಿಂಹರಾಜರೋಡ್, ಬೆಂಗಳೂರು

Edited, Printed & Published by Agaram Rangiah, B A, at Sri Rama Press, D Subbiah Road, Mysore.

ವರ್ಧಂತಿ ವಿಶೇಷ ಸಂಚಿಕೆ.



॥ ಸತ್ಯಮೇವೋದ್ಧರಾಮ್ಯಹಮ್ ॥

ರಾಜಧಾನಿಯ ರಾಷ್ಟ್ರೀಯ ವಾರ ಪತ್ರಿಕೆ.

ವೃದ್ಧಪಿತಾಮಹ ಎಂ. ವೆಂಕಟಕೃಷ್ಣಯ್ಯನವರ ಜ್ಞಾಪಕಾರ್ಥವಾಗಿ ಪ್ರಕಟಿಸಲ್ಪಡುವುದು.

ಸಂಪಾದಕರು ಅಗರಂ ರಂಗಯ್ಯ, ಬಿ ಎ

Sadhvi: A Leading Nationalist Weekly of Mysore.

FOUNDED IN MEMORY OF Mr M VENKATAKRISHNAYYA, THE GRAND OLD MAN OF MYSORE

ಪ್ರತಿ ೧] MYSORE MONDAY 1—6—36 ಮೈಸೂರು : ಸೋಮವಾರ ೧—೬—೩೬ [ಸಂಚಿಕೆ ೧೫

ಶ್ರೀಮನ್ ಮಹಾರಾಜ ಕೃಷ್ಣರಾಜೇಂದ್ರ ಒಡೆಯರ್ ಬಹದ್ದೂರ್,

ಜಿ ಸಿ ಎಸ್ ಐ, ಜಿ ಬಿ ಇ ರವರು

ಇವರ ಐವತ್ತ ಮೂರನೇ ವರ್ಷದ ವರ್ಧಂತಿ ಉತ್ಸವವು ನೆನ್ನೆಯ ದಿನ
ಬಹಳ ವಿಜೃಂಭಣೆಯಿಂದ ನೆರವೇರಿತು



A Reliable House for Repairs of
WATCHES & GRAMOPHONES.
HIGH CLASS RUBBER ST MP
Suppliers,
M V N WATCH COY.
The General Commission Agency
Lansdowne Buildings,
MYSORE

ಗಡಿಯಾರ ಮತ್ತು ಗ್ರಾಮೋಫೋನುಗಳ ರಿಪೇರಿ
ಮತ್ತು ರಬ್ಬರ್ ಮೊಹರುಗಳ ತಯಾರಿ
ನಮ್ಮಲ್ಲಿ ನಡೆಯುತ್ತದೆ.
ಎಂ ವಿ ಎನ್ ವಾಚ್ ಕಂಪೆನಿ, ಮೈಸೂರು

USE ALWAYS

DERMOTONE

(SASTRIC BATHING HERBAL PREPARATION)
THE UNIQUE PRODUCT
IN THE MARKET FOR SKIN HYGIENE

ಡರ್ಮೊಟೋನ್,

ಶಾಸ್ತ್ರೀಯವಾದ ಮತ್ತು ಆರೋಗ್ಯಕರವಾದ ಚರ್ಮರಕ್ಷಣೆಗೆ ಚೂರ್ಣ
ಡರ್ಮೊಟೋನ್ ವರ್ಕ್ಸ್ ಮೈಸೂರು

॥ ವಿಜಯಿಯಾಗಲಿ ಶ್ರೀ ಕೃಷ್ಣ ಭೂಪಾಲ ॥
ಮೈಸೂರು ಶ್ರೀಮನ್ಮಹಾರಾಜರವರ ಘನ ಕೃಪಾಕಟಾಕ್ಷಕ್ಕೆ ಪಾತ್ರರಾಗಿ ದೊಡ್ಡ
ದೊಡ್ಡ ಸ್ಥಾನಗಳಲ್ಲಿನ ಕಲಾ ಪ್ರೇಮಿಗಳ ಉದಾರ
ಪ್ರೋತ್ಸಾಹದಿಂದ ಬಹುಮಾನಿತರಾದ

ಶ್ರೀ ಗೌರೀ ಶಂಕರ ನಾಟಕ ಸಭಾ,
ಬೆಂಗಳೂರು.

ಈ ಸಂಘದವರು ಶೀಘ್ರದಲ್ಲಿಯೇ
(ಬಾಲಕೃಷ್ಣ ವಿರಚಿತ)

ಕರ್ಮ

ಎಂಬ ಶ್ರೇಷ್ಠ ಸಾಮಾಜಿಕ ನಾಟಕವನ್ನು ಪ್ರದರ್ಶಿಸುವರು

ಪ್ರಥಮ ಪ್ರದರ್ಶನದ ಸ್ಥಳ ಮತ್ತು ತಾರೀಖನ್ನು ಗಮನಿಸಿ

ಸಿರಿತನದ ಬಾಳು! ನಿರುದ್ಯೋಗಿಯ ಜೀವನ ಸಮಸ್ಯೆ!
ಸುರಿವ ಸಾಹಿತ್ಯ ಪ್ರಬಂಧ!

ಅತ್ಯಾಧುನಿಕ ನೂತನ ಸನ್ನಿವೇಶಗಳ ಸಮಾರಂಭದಿಂದ ವಿಜೃಂಭಿಸುತ್ತಿರುವ
ಸಾಮಾಜಿಕ ರಂಗ ಚಿತ್ರ—ಗಮನಿಸಿ

ಟಿ ನೀಲಕಂಠಪ್ಪ,
ಪ್ರೊಪ್ರೈಟರ್

BETTER LIGHT - -

- - LIGHTER BILLS.

Use—

"B I J L E E"

ELECTRIC BULBS.

Made in INDIA.

ಸ್ವದೇಶಿ ಎಲೆಕ್ಟ್ರಿಕ್ ಬಲ್ಬುಗಳನ್ನೇ
ಉಪಯೋಗಿಸಿರಿ.

BIJLEE PRODUCTS (INDIA)
Bombay 8.

SOLE DISTRIBUTORS

THE STATES ENGINEERING COMPANY,
BANGALORE MYSORE SHIMOGA & COIMBATORE

THE SADHVI

A LEADING NATIONALIST WEEKLY
OF MYSORE

Recommended for Schools by th[e]
Department.

No TI 3778 140—35 36

OFFICE OF THE DIRECTOR OF PUBLIC
INSTRUCTION IN MYSORE.

Bangalore Dated 20th April 1936

MEMO.

The Newspaper 'SADHVI' a Kannada Weekly [is] recommended to all Government High, Middle [and] Normal School Reading Rooms in the State

PARTICULARS

Name	The Sadhvi
Editor	Mr Agaram Rangiah,
Place of Publication	Mysore

ANNUAL SUBSCRIPTION

Local Mofussil	Rs 2—4—0

DIRECTO[R]

"ಸಾಧ್ವಿ" ವಾರಪತ್ರಿಕೆ.

ವಿದ್ಯಾ ಇಲಾಖೆಯವರಿಂದ ಶಿಫಾರಸು ಮಾಡಲ್ಪಟ್ಟಿ[ದೆ]
ಕನ್ನಡಿಗರ ಬೆಂಬಲವನ್ನು ಪ್ರೋತ್ಸಾಹಿಸಿ

|| ಸತ್ಯಮೇವೋದ್ಧರಾಮ್ಯಹಮ್ ||
ರಾಜಧಾನಿಯ ರಾಷ್ಟ್ರೀಯ ವಾರ ಪತ್ರಿಕೆ.
ವೃದ್ಧಪಿತಾಮಹ ಎಂ. ವೆಂಕಟಕೃಷ್ಣಯ್ಯನವರ ಜ್ಞಾಪಕಾರ್ಥವಾಗಿ ಪ್ರಕಟಿಸಲ್ಪಡುವುದು.
ಸಂಪಾದಕರ ಅಗರಂ ರಂಗಯ್ಯ, ಬಿ ಎ

ಸಂಪುಟ ೧] MYSORE : MONDAY 1—6—36 ಮೈಸೂರು : ಸೋಮವಾರ ೧—೬—೩೬ [ಸಂಚಿಕೆ ೧೫

ಚಿಕ್ಕಮಗಳೂರು ವರ್ತಮಾನ

(ಸ್ವಂತ ಸವಿುಗಾರರಿಂದ)

ಚಿಕ್ಕಮಗಳೂರಿನಲ್ಲಿ ಸುಮಾರು ಒಂದು ವಾರದ ಕೆಳಗೆ ಮಳೆಯಾಗಿತ್ತು. ಈಗಲೂ ಹಾಗೆ ಮಾಡುತ್ತಿರುವುದು ಒಮ್ಮೆ ಸ್ವಲ್ಪ ವಾತಾವರಣವು ಶಾಂತವಾಯಿತೆಂದು ಕಡಮೆಯಾಗಿಲ್ಲ.

ಜಿಲ್ಲಾ ಬೋರ್ಡ್.

ಕಳೆದ ಜಿಲ್ಲಾ ಬೋರ್ಡಿನ ಒಟ್ಟಿಗೆ ಕೂಡಿ ಹೋದವಾರ, ಸೇರಿತ್ತು. ಬೋರ್ಡಿನ ಉಪಾಧ್ಯಕ್ಷರಾದ ಶ್ರೀಮಾನ್ ಬಾಗಮನೆ ಗೌಡರಿಗೆ ಉಪಸ್ಥಿತಿಯಾಗಿದ್ದ ಮುಕ್ತಾ, ಉಪಾಧ್ಯಕ್ಷರಾದ ಶ್ರೀಮಾನ್ ಕಿರಾನ್ ಸಾಹೇಬರು ಅಧ್ಯಕ್ಷತೆಯನ್ನು ವಹಿಸಿ ಸಭೆಯ ಕಾರ್ಯ ಕಲಾಪಗಳನ್ನು ನಡೆಸಿದರು. ಡಾ|| ಅನ್ಸಾರಿಯವರ ಮರಣದ ಬಗ್ಗೆ ಒಂದು ಸಂತಾಪಸೂಚಕ ನಿರ್ಣಯವನ್ನು ಮಾಡಲಾಯಿತು. ಇದೇ ಕಳೆದ ಜೂನ್ ಅದ್ದರಿಂದ, ಬೋರ್ಡಿನ ಕಾರ್ಯವನ್ನು ಈ ಮೂರು ವರ್ಷ ನಿಯಮಿತ ನಿರ್ವಹಿಸಿದ್ದಕ್ಕಾಗಿ ಅಧ್ಯಕ್ಷರನ್ನೂ ಉಪಾಧ್ಯಕ್ಷರನ್ನೂ ಅಧಿಕಾರಿ ವರ್ಗದವರನ್ನೂ ಸಹಕರಿಸಿದ ಸದಸ್ಯರನ್ನೂ ಮೊದಲು ಕೊಂಡಾಡಿ ವಂದಿಸಿದರು.

ವಾರ್ಷಿಕೋತ್ಸವ

ಚಿಕ್ಕಮಗಳೂರಿನಲ್ಲಿರುವ ಪಟೇಲ್ ಶ್ರೀಮಾನ್ ರಾಮಸ್ವಾಮಿಯವರು ಮತ್ತು ಶ್ರೀ ಜಯಕರ್ನಾಟಕ ನಾಟಕ ಸಂಘದವರು ಇವರ ಮೇಲ್ವಿಚಾರಣೆಯಲ್ಲಿ ಸಂಘದ ಮತ್ತು ನಗರದ ವಾರ್ಷಿಕೋತ್ಸವವನ್ನು, ಇಲ್ಲಿ ನಾಗರಿಕರ ವರ್ಗದ ನ್ಯಾಯಾರ್ಥಿ ನೇತೃತ್ವದಲ್ಲಿ ಪುರಭವನದಲ್ಲಿ ಜರುಗಿತು.

ಕಳ್ಳತನ.

ಲಿಂಗ ಎಂಬ ಒಬ್ಬ ಕೇಡಿಯು ಸ್ಥಳದ ಮುಖ್ಯ ವರ್ತಕರಾದ ಶ್ರೀಮಾನ್ ಮಂಜಪ್ಪಶೆಟ್ಟರ ಅಂಗಡಿಯಲ್ಲಿ ಮೂರು ತಿಂಗಳ ಹಿಂದೆ ಸುಮಾರು ಎಪ್ಪತ್ತು ರೂಪಾಯಿಗಳ ವರೆಗೆ ಸರಕುಗಳನ್ನು ಕಳವು ಮಾಡಿ ಸಾಗಿಸುವುದರಲ್ಲಿದ್ದಾಗ, ಅಂಗಡಿಯವರು ಕಳ್ಳನನ್ನು ಹಿಡಿದು ಪೋಲೀಸಿನವರ ವಶಕ್ಕೆ ಒಪ್ಪಿಸಿದರು. ವಿಚಾರಣೆ ನಡೆಯುತ್ತಿದೆ.

ಶ್ರೀ ಮಹಾರಾಜರು.

ಶ್ರೀ ಕೃಷ್ಣರಾಜ ನರಸಿಂಹರಾಜ ಒಡೆಯರ್ ಬಹದ್ದೂರ್, ಜಿ ಸಿ ಐ ಇ

ಬಂದೂಕು ಹಾರಿ ಮರಣ

ಬಾಣಾವಾರದ ಮೋಟಾರ್ ಸರ್ವೀಸಿನ ಮಾಲೀಕರಾದ ಶ್ರೀ|| ಸಾಲುಮನ್ನರವರು, ಕಾಫಿ ಪ್ಲಾಂಟರ್ ಶ್ರೀ ಜಿ ಎಂ ಪ್ರಭುಗಳ ತೋಟಕ್ಕೆ ಹೋಗಿದ್ದರು. ಸೋಮವಾರದ ದಿನ ಹಿಂದಕ್ಕೆ ಮೋಟಾರ್ ಕಾರಿನಲ್ಲಿ ಬರುತ್ತಿರುವಾಗ ತಮ್ಮ ಹತ್ತಿರ ಮದ್ದು ಹಾಕಿದ ಬಂದೂಕವನ್ನು ಇಟ್ಟುಕೊಂಡಿದ್ದರು. ದಾರಿಯಲ್ಲಿ ಮೋಟಾರನ್ನು ನಿಲ್ಲಿಸಿದಾಗ ಸಾಲುಮನ್ನರು ಕೆಳಕ್ಕೆ ಇಳಿದರು. ಬಂದೂಕವು ಕೆಳಗೆ ಬಿದ್ದು, ಆದಕ್ಕೆ ಹಾಕಿದ್ದ ಗುಂಡು ಹಾರಿ, ಸಾಲುಮನ್ನರಿಗೆ ತಗಲಿತು. ಕೂಡಲೇ ಸಾಲುಮನ್ನರು ಮೃತಪಟ್ಟರು. ಈ ಸುದ್ದಿಯನ್ನು ಕೇಳಿ ಪೋಲೀಸಿನವರು ಶವವನ್ನು ವೈದ್ಯಾಧಿಕಾರಿಗಳ ಹತ್ತಿರ ಪರೀಕ್ಷಿಸಿ, ಅಪಾಯ ಮರಣವೆಂದು ನಿರ್ಣಯಿಸಿದರು ಎಂದರು.

ಸಾದರ ಸ್ವೀಕಾರ

ಮೈಸೂರು ಮಹಾರಾಜರ ಕಾಲೇಜಿನ ರಿಟೈರ್ಡ್ ಸೀನಿಯರ್ ಇನ್ಸ್‌ಪೆಕ್ಟರ್ ಶ್ರೀಮಾನ್ ಎಂ ಶ್ರೀನಿವಾಸರಾಯರವರು ಕಳುಹಿಸಿ ಕೊಟ್ಟಿರುವ ಶ್ರೀ ಕರ್ನಾಟಕ ಭಗವದ್ಗೀತೆಯ ಪ್ರತಿಯೊಂದನ್ನು ನಾವು ಆದರದಿಂದ ಸ್ವೀಕರಿಸಿರುತ್ತೇವೆ. ಇದರಲ್ಲಿ ಭಗವದ್ಗೀತೆಯ ಹದಿನೆಂಟು ಅಧ್ಯಾಯಗಳೂ ಭಾಮಿನಿ ಷಟ್ಪದಿಯಲ್ಲಿ ಪದ್ಯರೂಪವಾಗಿ ಬರೆಯಲ್ಪಟ್ಟಿವೆ. ನಾಗರಸನೆಂಬ ಕರ್ನಾಟಕ ಪ್ರಾಚೀನ ಕವಿಯೇ ಇದರ ಮೂಲ ಕರ್ತೃ. ಶ್ರೀಮಾನ್ ಶ್ರೀನಿವಾಸರಾಯರವರು ತಮಗೆ ದೊರೆತ ಪುರಾತನ ಪ್ರತಿಯನ್ನು ಮುದ್ರಿಸಿ ಸರ್ವತ್ರ ಪ್ರಯೋಜನವಾಗಲೆಂದು ಸಿದ್ಧಪಡಿಸಿರುವರು. ಗೀತೆಯು ಸುಲಭ ಶೈಲಿಯಲ್ಲಿ ಗ್ಲೇಜ್ ಕಾಗದದ ಮೇಲೆ ಮುದ್ರಿತವಾಗಿದೆ. ಇದು ದ್ವಿತೀಯ ಮುದ್ರಣವಾದರೂ ಸಕಲರಿಗೂ ಗೀತಾ ಪಠನಾನುಕೂಲವಾಗಲೆಂದು ಕ್ರಯವು ಒಂದು ರೂ ಇಂದ ಹನ್ನೆರಡಾಣೆಗೆ ಇಳಿಸಲ್ಪಟ್ಟಿದೆ.

ಒಕ್ಕಲಿಗ ಕರಣಿಕರವರ ಇದನ್ನು ಪಠಿಸುವ ಪುಸ್ತಕವಾಗಿ ಅಂಗೀಕರಿಸುವುದರಲ್ಲಿ ನಿಜವಾಗಿಯೂ ಈ ಗ್ರಂಥ ಕರ್ತರ ಮತ್ತು ಪ್ರಕಾಶಕರ ಶ್ರಮವು ಸಾರ್ಥಕಗೊಳ್ಳುವುದಲ್ಲದೆ, ಶ್ರೀ ಭಗವದ್ಗೀತೆಯ ಆನಂದವು ಸರ್ವತ್ರರಿಗೂ ದೊರಕುವುದರಲ್ಲಿ ಸಂಶಯವಿಲ್ಲವೆಂದು ನಾವು ನಂಬುತ್ತೇವೆ.

ಮೈಸೂರಿಗೆ ಮಾನ್ಯ ಅತಿಥಿಗಳ ಆಗಮನ.

ಮದ್ರಾಸ್ ಗವರ್ನರರಾದ ಲಾರ್ಡ್ ಎರ್ಸ್ಕಿನ್ ರವರೂ ಲೇಡಿ ಎರ್ಸ್ಕಿನ್ ರವರೂ, ಅವರ ಪರಿವಾರವೂ ಮೈಸೂರು ರೆಸಿಡೆಂಟರಾದ ಕರ್ನಲ್ ಸಿ ಟಿ ಸಿ ಪ್ಲೌಡೆನ್ ರವರೂ ಅವರ ಪರಿವಾರವೂ ಇತರ ಪ್ರಮುಖ ವ್ಯಕ್ತಿಗಳೂ ಶ್ರೀಮನ್ಮಹಾರಾಜರವರ ವರ್ಧಂತ್ಯುತ್ಸವಕ್ಕಾಗಿ ಅತಿಥಿಗಳಾಗಿ ಆಹ್ವಾನಿಸಲ್ಪಟ್ಟಿದ್ದಾರೆ.

" ಫಾರೆಸ್ಟ್ " ಶಾಲೆ.

ಹಿಂದೆ ಇದ್ದ " ಫಾರೆಸ್ಟ್ " ಶಾಲೆಯನ್ನು ಪುನಃ ತೆರೆಯುವ ವಿಷಯದಲ್ಲಿ ಸರ್ಕಾರದವರು ಪರ್ಯಾಲೋಚಿಸುತ್ತಿರುತ್ತಾರೆ. ಈ ವರ್ಷದಿಂದಲೇ ಶಾಲೆಯು ಪ್ರಾರಂಭವಾಗುವ ಸಂಭವವಿದೆ.

ಮತಾಂತರದ ಬಿಲ್ಲು ನಮಗೆ ಬೇಡ.

೧

ಬಲಾತ್ಕಾರವಾಗಿ ನಮ್ಮ ಮೇಲೆ ಹೊರಿಸಬೇಡಿ

ಮೈಸೂರು ಸರ್ಕಾರದಲ್ಲಿ ಪ್ರಾರ್ಥನೆ.

ಮಹಾಜನರೇ ಈ ಬಿಲ್ಲನ್ನು ಪಾಸುಮಾಡಲು ಅವಕಾಶ ಕೊಡಬೇಡಿರಿ.

ಎಲ್ಲರೂ ಪ್ರತಿಭಟಿಸಿರಿ

ಈ ಬಿಲ್ಲು ಯಾರಿಗೆ ಬೇಕಾಗಿದೆ?

ನಮ್ಮ ಸರ್ಕಾರದವರು ಮತಾಂತರದ ಬಿಲ್ಲನ್ನು ತಾವೇ ತಂದು ದೇಶದಲ್ಲಿ ಕೋಲಾಹಲವನ್ನುಂಟು ಮಾಡುತ್ತಿರುವುದು ತುಂಬಾ ವಿಷಾದಕರವಾಗಿದೆ. ಸರ್ಕಾರಕ್ಕಾಗಲೀ ಪ್ರಜೆಗಳಿಗಾಗಲೀ ಈ ಬಿಲ್ಲಿನಿಂದ ಆಗಬೇಕಾದ ಅಗತ್ಯದ ಕಾರ್ಯವೇನೂ ಇಲ್ಲ. ಹಿಂದೂಗಳೇ ಆಗಲಿ ಮುಸಲ್ಮಾನರೇ ಆಗಲಿ ಮತವನ್ನು ಹೆಚ್ಚಿಸಿಕೊಳ್ಳುವ ಸಂಸ್ಥೆಗಳನ್ನು ಸ್ಥಾಪಿಸಿ ಇತರ ಮತದಿಂದ ತಮ್ಮ ಮತಗಳಿಗೆ ಜನರನ್ನು ಸೇರಿಸಿಕೊಳ್ಳುತ್ತಿಲ್ಲ. ಅನ್ಯಮತದ ಆಸ್ತಿಯನ್ನು ಅಪೇಕ್ಷಿಸುತ್ತಲೂ ಇಲ್ಲ. ಆದಮೇಲೆ ಈ ಬಿಲ್ಲು ಯಾರಿಗೆ ಬೇಕಾಗಿದೆ. ಈ ಬಿಲ್ಲಿನಿಂದ ಯಾರ ರಕ್ಷಣೆಯಾಗಬೇಕಾಗಿದೆ. ಎಂಬುದನ್ನು ಮಹಾಜನರು ಆಲೋಚಿಸಬೇಕು. ಕ್ರೈಸ್ತ ಪಾದ್ರಿಗಳು ಅನೇಕ ಸಂಸ್ಥೆಗಳನ್ನು ಸ್ಥಾಪಿಸಿ ನಾನಾ ವಿಧವಾದ ಆಶೆಗಳನ್ನು ಹುಟ್ಟಿಸಿ ತಮ್ಮ ಮತಕ್ಕೆ ಸೇರಿಸಿಕೊಳ್ಳುತ್ತಿದ್ದಾರೆ ಹುಡುಗಿಯರನ್ನು ಸಾಕಿ ಅವರುಗಳ ಆಶೆಯನ್ನು ಹುಟ್ಟಿಸಿ ತಮ್ಮ ಮತವನ್ನು ಹೆಚ್ಚಿಸಿಕೊಳ್ಳುತ್ತಿದ್ದಾರೆ ಆಸ್ತಿಪಾಸ್ತಿಗಳನ್ನು ತಮ್ಮ ಹೆಸರಿಗೆ ಕ್ರಯ, ಭೋಗ್ಯಗಳಿಗೆ ಬರೆಸಿಕೊಂಡು ಸಾಲ ತೀರಿಸುವ ನೆಪದಲ್ಲಿ ಜನರನ್ನು ಕ್ರೈಸ್ತಮತಕ್ಕೆ ಸೇರಿಸಿಕೊಳ್ಳುತ್ತಿದ್ದಾರೆ. ಬಿಳಿಯ ಜನರೆಂಬ ದರ್ಪವನ್ನು ಉಪಯೋಗಿಸಿ ಸಣ್ಣ ಸಣ್ಣ ವ್ಯವಹಾರಗಳನ್ನು ಫೈಸಲು ಮಾಡಿಸಿಕೊಡುತ್ತೇವೆಂದು ಹೇಳಿ ಮತಕ್ಕೆ ಸೇರಿಸಿಕೊಳ್ಳುತ್ತಿದ್ದಾರೆ ಈ ಹಾವಳಿಯನ್ನು ತಡೆಯುಕೊಳ್ಳುವುದೇ ಕಷ್ಟವಾಗಿದೆ ಈ ಎಲ್ಲ ಕಷ್ಟಗಳೂ ಹಿಂದೂ ಮತಕ್ಕೆ ಪ್ರಾಪ್ತಿಯಾಗಿದೆ. ಈ ವಿಷಯವು ಪ್ರತಿಯೊಬ್ಬ ಹಿಂದೂವಿಗೂ ಗೊತ್ತಿದೆ. ಅಧಿಕಾರಿಗಳಿಗೂ ಗೊತ್ತಿದೆ ಸರ್ಕಾರಕ್ಕೂ ಗೊತ್ತಿದೆ. ತಿಳಿದೂ ತಿಳಿದೂ ಹಿಂದೂ ಮತವನ್ನು ಧ್ವಂಸಮಾಡುವ ಮತಾಂತರದ ಬಿಲ್ಲನ್ನು ಹಿಂದೂ ರಾಜರು ಆಳುವ ಈ ರಾಜ್ಯದಲ್ಲಿ ಸರ್ಕಾರದವರೇ ತಂದು ವ್ಯವಹಾರಕ್ಕೆ ಬೆಳೆಸುತ್ತಿರುವುದು ತೀರ ಅಸಮಂಜಸವಾಗಿದೆ. ಈ ಬಿಲ್ಲು ಹಿಂದೂಗಳಿಗಲ್ಲ. ಮುಸಲ್ಮಾನರಿಗಲ್ಲ. ಕ್ರೈಸ್ತರಿಗಾಗಿ ಬಂದಿದೆ ಮಹಾಜನರೇ ಈ ಬಿಲ್ಲನ್ನು ಪ್ರತಿಭಟಿಸಿರಿ.

ಈ ಬಿಲ್ಲಿನ ಪರಿಣಾಮವನ್ನು ಕೇಳಿ.

ಮದ್ರಾಸ್ ಗೌರ್ನರ್ರವರೂ ಹಿಂದೂಸ್ಥಾನಕ್ಕೆ ವೈಸ್ರಾಯರವರೂ ಆಗಿದ್ದ ಲಾರ್ಡ್ ವಿಲಿಯಂ ಬೆಂಟಿಂಕ್‌ರವರು ಸುಮಾರು 1850 ರಲ್ಲಿ ಹಿಂದೂಸ್ಥಾನವನ್ನೆಲ್ಲಾ ಕ್ರೈಸ್ತಮಯವನ್ನಾಗಿ ಮಾಡಿಬಿಡಬೇಕೆಂದು ಈ ಮತಾಂತರದ ಬಿಲ್ಲನ್ನು ತಂದ ಮಹಾಶಯರು ಅವರ ಕಾಲದಲ್ಲೇ ಪೆಲ್ಲೂರು ದಂಗೆ, ಸಿಪಾಯಿ ದಂಗೆಗಳು ನಡೆದವು ದೇಶದಲ್ಲಿ ಕ್ರೈಸ್ತ ಮತಪ್ರಚಾರವು ಅಪ್ರತಿಹತವಾಗಿ ಎಲ್ಲೆಮೀರಿ ಅಶಾಂತಿಯು ಪ್ರಬಲವಾಯಿತು. ಇದಕ್ಕೆಲ್ಲಾ ಈ ಬಿಲ್ಲೇ ಬಹುಮಟ್ಟಿಗೆ ಕಾರಣವೆಂದು ಹಿಂದೂಸ್ಥಾನದಲ್ಲೆಲ್ಲಾ ಪ್ರತಿಭಟನೆಗಳು ನಡೆದವು ನಮ್ಮ ಸರ್ಕಾರದವರೂ ಇದಕ್ಕಾಗಿಯೇ ಇದುವರೆಗೂ ಅವಕಾಶವನ್ನು ಕೊಟ್ಟಿರಲಿಲ್ಲ ಹಿಂದೆ ಈ ಬಿಲ್ಲು ನಮ್ಮ ಪ್ರಜಾಪ್ರತಿನಿಧಿ ಸಭೆಯಲ್ಲಿ ಬಂದಾಗ ಪ್ರತಿಭಟನೆಯು ಬಹಳ ಜೋರಾಗಿ ಬಂದು ಕಾನೂನಾಗಲು ಅವಕಾಶವಾಗಲಿಲ್ಲ. ಸುಮಾರು 80 ವರ್ಷಗಳಿಂದಲೂ ಒಂದೇ ಸಮನಾಗಿ ಪ್ರತಿಭಟನೆಯು ಈ ಬಿಲ್ಲಿಗೆ ಬರುತ್ತಿದ್ದರೂ ಈಗ ಹಠಾತ್ತಾಗಿ ನಮ್ಮ ಸರ್ಕಾರದವರೇ ಈ ಬಿಲ್ಲನ್ನು ತಂದಿರುವುದರ ರಹಸ್ಯವೇನು? ಕ್ರೈಸ್ತ ಮತಪ್ರಚಾರಕ್ಕೆ ಬೆಂಬಲಕೊಡುವುದು. ಹಿಂದೂ ಮತವನ್ನು ಧ್ವಂಸಮಾಡುವುದು. ಈ ನೀತಿಯು ಸರಿಯಲ್ಲ. ಪರಿಣಾಮವು ಒಳ್ಳೆಯದಾಗುವುದಿಲ್ಲ. ಆದುದರಿಂದ ಸರ್ಕಾರದವರೇ ಈ ಬಿಲ್ಲನ್ನು ವಾಪಸು ತೆಗೆದುಕೊಳ್ಳಬೇಕೆಂದು ಕೇಳಿಕೊಳ್ಳುತ್ತೇನೆ.

ಈ ಬಿಲ್ಲು ಪ್ರಳಯವನ್ನುಂಟು ಮಾಡುತ್ತದೆ.

ಈ ಮತಾಂತರದ ಬಿಲ್ಲು ಪಾಸಾದರೆ, ವೈಸರ್ ಮಕ್ಕಳು ಬೇರೆ ಮತವನ್ನು ಅವಲಂಬಿಸಿದರೆ ಮೆಜಾರಿಟಿಗೆ ಬಂದ ಮೇಲೆ ಆತನು ಹಿಂದಿನ ಮತದ ತಂದೆಯಿಂದ ಆಸ್ತಿಯನ್ನು ಪಡೆಯಲು ಹಕ್ಕುಳ್ಳವನಾಗುತ್ತಾನೆ. ವಿಧವೆಯು ಬೇರೆ ಮತದವನನ್ನು ಮದುವೆಯಾದರೆ ಅಥವ ಅವನ ಜಾತಿಗೆ ಸೇರಿಕೊಂಡರೆ ಆಕೆಯು ಮಕ್ಕಳ ನೆಪದಿಂದ ಗಂಡನ ಆಸ್ತಿಗೂ ತನ್ನ ಪಾಲಿಗೆ ಬರುವ ತಂದೆಯ ಆಸ್ತಿಗೂ ಹಕ್ಕುಳ್ಳವಳಾಗುತ್ತಾಳೆ ಸಂಸಾರವೆಲ್ಲಾ ಛಿದ್ರ ಛಿದ್ರವಾಗುತ್ತದೆ. ಬಂಧುವರ್ಗವೆಲ್ಲಾ ದಿವಾಳಿಯಾಗುತ್ತದೆ. ಮಾನವನ ಜೀವನವು ನರಕಜೀವನವಾಗುತ್ತದೆ ಈ ರೀತಿಯಾಗಿ ಮಕ್ಕಳನ್ನೂ, ಹೆಂಗಸರನ್ನೂ, ಆಸ್ತಿಯನ್ನೂ ಅಗಲಿಸುವ ಮತ್ತು ಅಪಹರಿಸುವ ಕಾನೂನಾಗಿ ದೇಶದಲ್ಲಿ ನೆಮ್ಮದಿಗೆ ಭಂಗವನ್ನು ತರುತ್ತದೆ ಅಶಾಂತಿಯನ್ನು ಅಧಿಕವಮಾಡುತ್ತದೆ ದೇಶದಲ್ಲೆಲ್ಲಾ ಹಾಹಾಕಾರವು ಉತ್ಪನ್ನವಾಗಿ ಪ್ರಳಯಕ್ಕೆ ಸಿದ್ಧತೆಯನ್ನುಂಟುಮಾಡುತ್ತದೆ ಆದುದರಿಂದ ಈ ಬಿಲ್ಲನ್ನು ಖ[...]

[...]ತವಾಗಿ ತರಬಾರದೆಂದು ಮೈಸೂರು ಸರಕಾರದವರನ್ನು ಈ ಮೂಲಕ ಪ್ರಾರ್ಥಿಸಿಕೊಳ್ಳುತ್ತೇನೆ

[ಈ ಹಸ್ತಪತ್ರಿಕೆಯನ್ನು ಸರ್ಕಾರದ ಗಮನಕ್ಕೆ ತರಲು ಸಲುವಾಗಿ ಚೀಫ್ ಸೆಕ್ರೆಟರಿಯವರಿಗೆ ಕಳುಹಿಸಿದ್ದೇನೆ ಪ್ರಜಾಪ್ರತಿನಿಧಿ ಸಭೆಯ ಸದಸ್ಯರಿಗೆಲ್ಲಾ ಕಳುಹಿಸಿದ್ದೇನೆ]

ತಾ|| 30-5-36 ತಗಡೂರು ರಾಮಚಂದ್ರರಾವ್.

ಚಾ. ಚಾ. (೧೧)

೧ ಒಂದು ಹೋಟಲಿಂದ ೧೫ ಮಸಾಲೆ ವಡೆಯನ್ನು ಕದ್ದನೆಂಬ ಆಪಾದನೆಯ ಮೇಲೆ ಕೋರ್ಟಿಗೆ ಪೋಲೀಸಿನವರು ತಂದಿದ್ದ ಹುಡುಗನನ್ನು, ಅದರ ಪೈಕಿ ಒಂದು ವಡೆಯನ್ನು ಅವನು ಆಗಲೇ ತಿಂದಿದ್ದನೆಂದು ತಿಳಿದ ತಕ್ಷಣ, ಇನ್ನು ಹೆಚ್ಚು ಶಿಕ್ಷೆ ಬೇಕಿಲ್ಲವೆಂದು ಹೇಳಿ ಮ್ಯಾಜಿಸ್ಟ್ರೇಟರು ಖುಲಾಸೆ ಮಾಡಿಬಿಟ್ಟರಂತೆ

೨ ಶ್ರೀ ಕೃಷ್ಣನು ಕೊಳಲೂದಲು ಮೊದಲುಮಾಡಿದರೆ, ಸುತ್ತಲಿದ್ದ ಜನಗಳೆಲ್ಲರೂ ಸಂತೋಷದಿಂದ ಕುಣಿದಾಡುತ್ತಿದ್ದರಂತೆ ನನಗೆ ಗೊತ್ತಿರುವ ಒಬ್ಬರು ಕೊಳಲು ಬಾರಿಸಿ ಒಬ್ಬಿಸಿ, ತನ್ನ ನೆರೆಹೊರೆಯ ಮನೆಯವರೆಲ್ಲರೂ ಆ ಬೀದಿಯಿಂದ ಇನ್ನೊಂದು ಬೀದಿಗೆ ಬಿಡಾರವಾಗಿ ಮಾಡಿದಾರೆ. ಸಂಗೀತದ ಮಹಿಮೆ ಅಂದರೆ, ಇದು.

೩ "ಲೋ! ಶೂದ್ರ'! ಅಂತ ಒಬ್ಬರು ಬ್ರಾಹ್ಮಣರು ಮಗನನ್ನು ಬೈದರಂತೆ. ಅದಕ್ಕೆ ಅವನು, ಅಪ್ಪಾ! ಆ ವಿಷಯವನ್ನು ಪಬ್ಲಿಕ್ಕಾಗಿ ನಾಲ್ಕು ಜನರ ಎದುರಿಗೆ ರುಜುವಾತು ಮಾಡಿಸಿದರೆ, ನಾನು ಒಂದು ಬಾಕರಿಯನ್ನು ಸಂಪಾದಿಸಿಕೊಂಡ ಸುಖಿಯಾಗಿದ್ದೇನು" ಅಂದನಂತೆ

೪ 'ರೀ! ನೀವು ಯಾಕೆ ಉಮೇದುವಾರರಾಗಿ ನಿಂತಿದ್ದೀರಿ?" ಅಂತ ಕೇಳಿದಾಗ, ಅವರು, "ಸುಮ್ಮನೆ ಕೂತುಕೊಳ್ಳುವುದಕ್ಕಾಗುವುದಿಲ್ಲ ಅದಕ್ಕೆ!" ಅಂದರಂತೆ.

೫ "ಜೇನು ಹುಳದ ಮುಳ್ಳಿಗೆ ಒಂದು ಅಂಗುಲದ ೩೦ ನೇ ಒಂದು ಭಾಗ ಉದ್ದ, ಅಷ್ಟೆ!' ಎಂದು ಒಬ್ಬರು ಶಾಸ್ತ್ರಜ್ಞರು ತಿಳಿಸುತ್ತಾರೆ ಸದ್ಯ, ಆ ವಿಷಯ ತಿಳಿದಹಾಗಾಯಿತು. ಮುಳ ಚುಚ್ಚಿದಾಗ ಅದರ ಮುಳ್ಳಿನ ಉದ್ದವನ್ನು, ಅಳತೆಮಾಡಿ ನೋಡಲು ನಮಗೆ ಕ್ಷಮೆ ಇರುವುದಿಲ್ಲ! ಇನ್ನು ಮೇಲೆ ನಿರ್ಭಯವಾಗಿ ಓಡಾಡಬಹುದು.

೬ ಉಲ್ಲನ್ ಅಂಗಿ ಮತ್ತು ಪರಾಂಗಳನ್ನು ಸೋಪುಹಾಕಿ ಒಗೆಯುವುದಕ್ಕೆ ಮೊದಲು, ಚೆನ್ನಾಗಿ ಕೊಡವಿ ಒಂದು ಕೋಲಿನಿಂದ ಹೊಡೆಯಬೇಕು—ಎಂದು ಒಂದು ಗ್ರಂಥದಲ್ಲಿ ಬರೆದಿದೆ ಅದಕ್ಕೆ, ಹಾಗೆ ಹೊಡೆಯುವುದಕ್ಕೆ ಮೊದಲು, ಅವುಗಳೊಳಗೆ ಗಂಡ ಎಂಬ ಪ್ರಾಣಿ ಇದ್ದಾನೆಯೋ, ಇಲ್ಲವೋ, ಎಂದು ನೋಡುವುದು ಮೇಲು

೭ ಪೆಟ್ರೋಲಿನ ಸಹಾಯವಿಲ್ಲದೆ, ಖರ್ಚಿಲ್ಲದೆ ನಡೆಸಲು ಸಾಧ್ಯವಾಗುವ ಒಂದು ತೆರದ ಮೋಟಾರನ್ನು ಕಂಡುಹಿಡಿದಾರಂತೆ ಇದು ಬಡವರ ಭಾಗ [...] ಇಂತಹ ಮೋಟಾರಲ್ಲಿ ಜನರು ಕೂತ [...] ಮೂರು ನಾಲ್ಕು ಜನರು ಹಿಂದಿನಿಂದ ತಳ್ಳಿದರೆ, ಅದು ಮುಂದ ಮುಂದಕ್ಕೆ ಹೋಗುವುದಂತೆ! ಮೈಸೂರಲ್ಲೂ ಕೆಲ[...]ರು ಈ ತೆರದ ಹೊಸಕಾರುಗಳನ್ನು ಕೊಂಡು ಕೊಂಡಿದಾರೆ. ಬೇಕಾದವರು ಅದರಿಂದ ವಿಶ್ರಾಸವನ್ನು ಪಡೆದುಕೊಳ್ಳಬಹುದು

೮ ಕುಂಭಕೋಣದಲ್ಲಿ ಪಂಡಿತ[...]ಬ್ಬರಿಗೆ ದೊಡ್ಡ ಮಹಾ ಮಾರಿಯಾ[...] ಮೊದಲನೆಯವರು ತನ್ನ ಅಭಿಪ್ರಾ[...] (ಶ್ರೀ ರಾಮನು ವಾಲಿಯನ್ನು ಮರೆ[...]ನಿಂತು ಹೊಡೆಯಲಿಲ್ಲ ಎಂಬುದು) ತ[...]ವರ ತನ್ನ ಜನಿವಾರವನ್ನು ಕಿತ್ತು[...] ಬೆಂಕಿಯಲ್ಲಿ ಬಿಳುತ್ತೇನೆ ಅಂತ ಪ್ರತಿಜ್ಞೆ ಮಾಡಿದಾರಂತೆ ಸದ್ಯದಲ್ಲೇ ಅವರ [...]ವಾರವನ್ನೂ ಪ್ರಾಣವನ್ನೂ ಉಳಿಸುವ[...] ಕೋಟೀಶ್ವರ ರಾವ್, ಸುಗ್ರೀವ, ಶ್ರೀ ರಾ[...] ಮುಂತಾದವರು, ಕುಂಭಕೋಣಕ್ಕೆ [...]ವನ್ನು ಕೈಸಿಯುತ್ತವನ್ನು ಕೊಡುವರೆ[...] ನಿರೀಕ್ಷಿಸಲಾಗಿದೆ

೯ ಗಂಡಾದವನು ಎಷ್ಟನೇ ವಯಸ್ಸಿನಲ್ಲಿ ಮದುವೆಯಾಡಿಕೊಳ್ಳಬಹುದು, [...]ತ ನಮ್ಮನ್ನು ಕೆಲವರು ಕೇಳುತ್ತಿದ್ದಾ[...] ಯಾವ ವಯಸ್ಸಿನವನೇ ಆಗಲಿ, ನನ್ನ ಕೇಳಿದರೆ ನಾವು ಹೇಳುವುದು ಇ[...] "ಇನ್ನೂ ಕೊಂಚ ತಾಳಿ, ಸ್ವಾಮಿ"!

೧೦ 'ಲೋ! ನೀನು ಹಿಂದೆ ಕೆಲಸ[...]ದ್ದ ಮನೆಯನ್ನು ಏಕೆ ಬಿಟ್ಟೆ?' [...] ಸಾಹೆಬರು ಕೇಳಿದರೆ, ಅವನು, ' [...] ಮರ್ಯಾದೆ ತಿಲ್ಲ, ಬುದ್ಧಿ! ಅದನ[...] ನೀವು ಕೇಳಬೇಕು? ನಿಂಹತ್ರ ಕೆಲ[...]ದ್ದ ಆಳು ಯಾಕೆ ಓಡಿಹೋದ [...] ನಾನು ನಿಮ್ಮನ್ನು ಕೇಳಿದ್ನಾ?" [...]ನಂತೆ. ನ್ಯಾಯ ತಾನೆ?

೧೧ ಸಿಬಿಲಿಗೆ ಹೋಗಿ ವಾಪ್ಪ[...] ಬಾರ ಪ್ರಯಾಣ (Trip) ಇನ್ನು [...]ವುದೂ ಇಲ್ಲ. ಅಂತ ನಮ್ಮ ಸ್ನೇಹಿ[...] ಹೇಳಿದರು. ಆದರೆ ಅಲ್ಲಿಂದ ವೈಸ[...] ಹಿಂತಿರುಗುವ ಪ್ರಯಾಣ (Re[...] trip) ಅದಕ್ಕಿಂತ ಸುಖವಾಗಿರುತ್ತೆ

ಶ್ರೀ ಯಸ್. ಪಿ. ರಾಜಗೋಪಾಲಾಚಾರಿಯವರ ಭಾಷಣ

ಮೊನ್ನೆ ಶನಿವಾರ ರಾಜಧಾನಿಯಲ್ಲಿ ಆರಂಭವಾದ ಸ್ವದೇಶಿ ವಸ್ತು ಪ್ರದರ್ಶನದಲ್ಲಿ ಗ್ರಾಮಮಂತ್ರ್ಯಪ್ರವೀಣ ಶ್ರೀ ಎಸ್. ಪಿ. ರಾಜಗೋಪಾಲಾಚಾರಿಯವರು ಮಾಡಿದ ಭಾಷಣದ ಸಾರಾಂಶವೇನೆಂದರೆ.—

ಶ್ರೀಮನ್ಮಹಾರಾಜರವರ ವರ್ಧಂತಿಯ ಸಮಯದಲ್ಲಿ ಖಾಸಗಿ ಪ್ರಯತ್ನದಲ್ಲಿ ಪ್ರದರ್ಶನವು ನಡೆಯುತ್ತಿರುವುದು ಸೂಕ್ತವಾದುದು ಎಂಬುದಾಗಿ ನುಡಿದರು. ಸರ್ ಮಿರ್ಜಾ ಇಸ್ಮಾಯಿಲ್, ಶ್ರೀ ಸಿ. ವಿಜಯರಾಘವಾಚಾರಿಯರ್, ಬುಲಾಖಿಯ ದೇವಿ ... ರವರ ಸಹಕಾರವನ್ನು ... ...

ಈ ಪ್ರದರ್ಶನದ ... ... ಸಾಮಾನುಗಳನ್ನು ... ... ಈ ರೀತಿಯ ಪ್ರೋತ್ಸಾಹವು ... ...

ಇಂತಹ ಸ್ವದೇಶೀ ಪ್ರದರ್ಶನದ ... ... ದಿನ ... ... ಪ್ರದರ್ಶನಗಳು ತೋರಿಸುತ್ತವೆ. ಸಾಧಾರಣವಾಗಿ ಪ್ರದರ್ಶನವೆಂಬುದು ವ್ಯಾಪಾರದ ಅಂಗಡಿ ಬೀದಿಯಂತೆ ಆಯಿತ್ತೇನೆ. ... ... ಪ್ರದರ್ಶನದಲ್ಲಿ ... ... ಆಗಬಹುದು.

... ... ಪ್ರದರ್ಶನಕ್ಕೂ ... ... ಪ್ರದರ್ಶಿಸಿದರೆ ... ...

... ... ಮೈಸೂರು ... ... ಕೈಗಾರಿಕೆಗಳಿಗೆ ಕೊಟ್ಟಿರುವ ... ... ಪ್ರದರ್ಶನದಲ್ಲಿ ... ... ಮೈಸೂರು ಸರಕಾರವು ಖಾದಿಗೂ, ಕೈಗಾರಿಕೆಗೂ ಹೆಚ್ಚು ಪ್ರೋತ್ಸಾಹ ಕೊಟ್ಟಿದೆ. ರೇಷ್ಮೆಯ ಕೈಗಾರಿಕೆಯನ್ನು ಉತ್ತಮಪಡಿಸಲು ಸರಕಾರವು ಯತ್ನಿಸಿದೆ. ... ... ಸರಕಾರವು ... ... ತಯಾರಿಕೆಯ ಕಾರ್ಖಾನೆಗಳನ್ನು ... ... ಕಾರ್ಖಾನೆಗಳ ಸ್ಥಾಪನೆಯಿಂದ ಸಂಪೂರ್ಣ ಸ್ವದೇಶಿ ಕೈಗಾರಿಕೆಯಾಗಲಾರದು ... ... ಕಾರ್ಖಾನೆಯನ್ನು ಸ್ಥಾಪಿಸುವುದರ ಮೂಲಕ ನಾವು ಮುಂದೆ ನಮ್ಮ ಯಂತ್ರಗಳನ್ನು ನಾವೇ ತಯಾರಿಸಿಕೊಳ್ಳುವ ಕಾಲ ಬರಬಹುದು ಎಂದು ಆಶಿಸಬಹುದು ಎಂದರು.

ವರ್ಧಂತ್ಯುತ್ಸವ.

ಶ್ರೀಮನ್ಮಹಾರಾಜರವರ ವರ್ಧಂತ್ಯುತ್ಸವವು ನಿನ್ನೆ ದಿನ ಯಥಾರೀತಿಯಲ್ಲಿ ಅತ್ಯಂತ ವೈಭವದಿಂದ ನಡೆಯಿತು. ಸಾಯಂಕಾಲ ಆರು ಗಂಟೆಗೆ ಸರಿಯಾಗಿ ಶ್ರೀ ಮನ್ಮಹಾರಾಜರು ಅಶ್ವಾರೂಢರಾಗಿ ಅರಮನೆಯಿಂದ ಸಮಸ್ತ ಪರಿವಾರದೊಡನೆ ಮೆರವಣಿಗೆಯಲ್ಲಿ ಹೊರಟರು. ರಾತ್ರಿ ಹತ್ತು ಗಂಟೆಗೆ ಉತ್ಸವವು ಅರಮನೆಗೆ ಹಿಂತಿರುಗಿ ಬಂದು ಸೇರಿತು.

ಅನ್ನದಾನ

ದಿವಂಗತ ಜೆ. ಪಿ. ... ... ಯವರ ಧರ್ಮಪತ್ನಿ ಶ್ರೀಮತಿ ರಾಜಕುಮಾರಿಯವರು ತಮ್ಮ ಯಜಮಾನರು ನಿಧನರಾದ ... ... ದಿನ ಮೈಸೂರು ... ... ಬಡಬಗ್ಗರಿಗೆ ಸಂತರ್ಪಣೆ ನಡೆಸಿದರು.

ಸಹಾಯ.

ಮೊನ್ನೆ ದಿನ ನಡೆದ ಮೈಸೂರು ಪೌರ ಸಭೆಯಲ್ಲಿ ಹಿಂದೀ ಪ್ರಚಾರ ಸಭೆಗೆ ಇನ್ನೂರೈವತ್ತು ರೂಪಾಯಿ ಸಹಾಯವು ಮಂಜೂರಾಯಿತು.

ಸ್ವದೇಶಿ ವಸ್ತು ಪ್ರದರ್ಶನಕ್ಕೆ ಒಂದು ನೂರು ರೂ ಮಂಜೂರಾಯಿತು.

ಭಗಿನೀ ಸೇವಾ ಸಮಾಜಕ್ಕೆ ಇನ್ನೂರು ರೂ ಮಂಜೂರಾಯಿತು.

... ... ಸೇವಕ ಸಂಘಕ್ಕಾಗಿ ಮಾಸ ಯಾನಾ 15 ರೂ. ಮಂಜೂರಾಯಿತು

ಅಮೀನ್-ಉಲ್-ಮುಲ್ಕ್ ಸರ್ ಮಿರ್ಜಾ ಎಂ. ಇಸ್ಮಾಯಿಲ್ ರವರು.

ಮೈಸೂರು ಸಂಸ್ಥಾನದ ದಿವಾನರವರು

"ಮಾಡರ್ನ್ ಮೈಸೂರು."

ತಿರುನಾಂಕೂರಿನ ಪತ್ರಿಕೋದ್ಯೋಗಿಗಳಾದ ಶ್ರೀ ಎ. ಸದ್ಯೋನಾಥಯ್ಯರ್‌ರವರು ಪ್ರಕಟಿಸಿರುವ (" Modern Mysore ") 'ಮಾಡರ್ನ್ ಮೈಸೂರು" ಎಂಬ ಸುಂದರವಾದ ಪುಸ್ತಕವು ನಮ್ಮ ಹಸ್ತಗತವಾಗಿದೆ. ಇದರಲ್ಲಿ ಮೈಸೂರಿಗೆ ಸಂಬಂಧಪಟ್ಟ ಚಿತ್ರಗಳು ... ... ಜಲಪಾತಗಳು, ಅರಮನೆ, ಲಲಿತಮಹಲ್, ಚಾಮುಂಡೇಶ್ವರಿ ದೇವಸ್ಥಾನ, ಕೃಷ್ಣರಾಜಸಾಗರ, ... ಪ್ರೇಕ್ಷಣೀಯ ಸ್ಥಳಗಳ ದೃಶ್ಯಗಳೂ, ಶ್ರೀಮನ್ಮಹಾರಾಜರವರ, ಶ್ರೀಯುವರಾಜರವರ, ಶ್ರೀ ಜಯಚಾಮರಾಜ ಒಡೆಯರ್‌ರವರ, ದಿವಾನ್ ಸರ್ ಮಿರ್ಜಾ ಸಾಹೇಬರವರ, ಭಾವಚಿತ್ರಗಳೂ ಬಂದ ... ... ಬಹಳ ಸುಂದರವಾಗಿಯೂ ಮನೋಹರವಾಗಿಯೂ ಪ್ರಿಂಟಾಗಿರುತ್ತವೆ.

ಪ್ರೊಫೆಸರ್ ಎಲ್. ಎಸ್. ರಘುಬ್ರಾಹ್ಮಿ ವಿಲಿಯಮ್ಸ್ ರವರೂ ಮತ್ತು ದಿವಾನ್ ಬಹದ್ದೂರ್ ರಾಜಮಂತ್ರಪ್ರವೀಣ ಸರ್ ಕೆ. ಪಿ. ಪುಟ್ಟಣ್ಣಚೆಟ್ಟಿಯವರೂ ಇದಕ್ಕೆ ಮುನ್ನುಡಿಗಳನ್ನು ಬರೆದಿರುವರು. ... ... ಮುಖ್ಯ ವಿಷಯಗಳನ್ನೊಳಗೊಂಡಿರುವ ಈ ಪುಸ್ತಕವು ದಿವಾನ್ ಸರ್ ಮಿರ್ಜಾ ಎಂ. ಇಸ್ಮಾಯಿಲ್ ರವರಿಗೆ ಬಹಳ ಸಮ್ಮತಿಯಿಂದ ಅರ್ಪಣೆ ಮಾಡಲ್ಪಟ್ಟಿದೆ

ನೋಟೀಸು.

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ —

ನಮ್ಮ ಪಿತ್ರಾರ್ಜಿತ ಆಸ್ತಿಯಿಂದ ಸಂಪಾದಿಸಲ್ಪಟ್ಟ ಶಿವಮೊಗ್ಗಾ ತಾಲ್ಲೋಕಿನಲ್ಲಿರುವ ಎಲ್ಲಾ ಆಸ್ತಿಗಳನ್ನೂ, ನಮ್ಮ ತಂದೆ, ಶಿವಮೊಗ್ಗಾದಲ್ಲಿರುವ ಅಡ್ವೋಕೇಟ್ ಕೆ. ಶಂಕರನಾರಾಯಣ ಐಯ್ಯರು, ಕೇವಲ ಅನವಶ್ಯಕವಾದ, ಮತ್ತು ನಮ್ಮಗಳಿಗೆ ಯಾವ ಪ್ರಯೋಜನವೂ ಆಗದಿರುವ, ನ್ಯಾಯಕ್ಕೆ ಮುಂದಾಗಾರಿಕೆ, ಸಾಲಗಳನ್ನು ಮಾಡಿ, ನೋಟ್ಸಿಂದ ಆಸ್ತಿಗಳನ್ನು ಕೊಡ್ಲಿ ವೆಂಕಟರಮಣ ಉಪಾಧ್ಯಾಯರು, ಅನಂತ ಆಚಾರ್ಯರುಗಳು, ಇವರಿಗೂ, ಶಿವಮೊಗ್ಗಾದಲ್ಲಿರುವ ಕೋ ಆಪರೇಟಿವ್ ಬ್ಯಾಂಕಿಗೂ ಬೀಡುಮಾಡಿಕೊಟ್ಟಿದ್ದರಲ್ಲದೆ, ನಮ್ಮನ್ನು ಬಾಧೆಗಾಗಿ ಮಾಡಿದ್ದರೆ, ಅವರು ತಮಗೆ ಬೀಡಾಗಿರುವ ಆಸ್ತಿಗಳ ಮೇಲೆ ದಾವಾ, ಕಸ್ಟಡಿ ಮಾಡಿರುವುದರಿಂದ ವರ್ತಮಾನ ಕೇಳಿ ... ... ನಮ್ಮಗಳಿಗೆ ಯಾವ ... ... ಇಲ್ಲದೆ ... ... ನಮಗೆ ಯಾವ ವಿಧವಾದ ಪ್ರಯೋಜನವನ್ನು ... ... ಸಾಲಗಳನ್ನು ಇವರು ಅನ್ಯಾಯವಾಗಿ ಮುಂದಾಗಿ ... ... ಮಾಡಿರುವುದರಿಂದ, ಈ ... ... ಯಾವ ಸಂದರ್ಭದಲ್ಲೂ ನಮ್ಮ ... ... ಮೂರನೇ ಭಾಗವನ್ನು ... ... ಅಗಿರುವ ಸಂಗತಿ ಇವರುಗಳು ತಿಳಿದುಕೊಂಡು ಕೋರ್ಟಿನ ವ್ಯವಹಾರಗಳಲ್ಲಿ ನಮ್ಮನ್ನು ಕಕ್ಷಿದಾರರುಗಳನ್ನಾಗಿ ಮಾಡದೆ ಮೇಲ್ಕಂಡ ಶಂಕರನಾರಾಯಣ ಐಯ್ಯರ ಒಬ್ಬರ ಮೇಲೆ ಮಾತ್ರ ದಾವಾ ನಡೆಸಿ ಮಾಡಿ, ಡಿಕ್ರಿ ಪಡೆದಿರುವುದು ... ... ನಮ್ಮಗಳ ... ... ನಮ್ಮ ... ... ಬರುವ ಪಿತ್ರಾರ್ಜಿತ ಆಸ್ತಿಗಳನ್ನು ಬೀಡಾಗಿರುವುದರಿಂದ, ಮೇಲ್ಕಂಡ ಆ ಸಲು ದಾವಾ ಮಿಸ್ಲೇನಿಯಸ್ ವಗೈರೆಗಳಿಂದ ಯಾವ ಪ್ರಯೋಜನವೂ ಆಗದಾರದೆಂಬ ಅಂಶವನ್ನು ಈ ಮೂಲಕ ಸಕಲರಿಗೂ ತಿಳಿಸಿರುತ್ತೇವೆ

ಕೆ. ಎಸ್. ಸುಬ್ರಹ್ಮಣ್ಯ.
ಕೆ. ಎಸ್. ಕೃಷ್ಣಮೂರ್ತಿ.
ಮೈನರ್ ಗಾರ್ಡಿಯನ್ ತಾಯಿ
ಪುಟ್ಟಮ್ಮ ಯಾನೆ ಗೌರಮ್ಮ.

॥ ಶ್ರೀಃ ॥

ಶ್ರೀಮನ್ ಮಹಿಸೂರು ಮಹಾರಾಜವರ ಶ್ರೇಯಃಪ್ರಾರ್ಥನೆ ನಮ್ಮ [illegible]
ಶ್ರೀಮಾನ್ ನಾಲ್ವಡಿ ಕೃಷ್ಣರಾಜೇಂದ್ರ ಒಡೆಯರ್ ಬಹದ್ದೂರ್,
ಜಿ. ಸಿ. ಎಸ್. ಐ., ಜಿ. ಬಿ. ಇ. ಇವರ ಮಹಾಸನ್ನಿಧಿಯಲ್ಲಿ
ಭಕ್ತಿಪೂರ್ವಕವಾಗಿ ಅತ್ಯಂತ ವಿನಯದಿಂದ
ವರ್ಧಂತಿಮಹೋತ್ಸವದಲ್ಲಿ
ಸಮರ್ಪಿಸಿದ

" ನವರತ್ನಮಾಲಿಕೆ "

[illegible] ।
[illegible] ।
[illegible] ।
[illegible] ಗೋಪಾಲಬಾಲಃ ॥ ೧
[illegible] ಮಹೇಂದ್ರಂ ವಿಧಾಯ ತೃಪ್ತಿಃ ।
[illegible] ನಿವೇಶ್ಯ ।
[illegible] ಗ್ರಹಾಯ ।
[illegible] ಕೃಷ್ಣರಾಜೇಂದ್ರ [illegible] ॥ ೨
ಶ್ರೀ [illegible] ।
[illegible] ॥
[illegible] ಶ್ರೀಸತ್ಯಧರ್ಮಾ [illegible]
[illegible] ॥ ೩
[illegible] ।
[illegible] ಶ್ರೀಕೃಷ್ಣರಾಜೇಂದ್ರಂ ॥ ೪
[illegible] ।
[illegible] ಶ್ರೀಕೃಷ್ಣರಾಜೇಂದ್ರಂ । ೫
[illegible] ।
[illegible] ॥ ೬
[illegible] ।
[illegible] ಶ್ರೀಯಂ ॥ ೭
[illegible] ।
[illegible] ॥ ೮
[illegible] ।
[illegible] ॥ ೯
ಜಯತು ಜಯತು ಕರ್ಣಾಟ [illegible] ।
ಜಯತು ಜಯತು ವಿದ್ಯಾ [illegible] ॥
ಜಯತು ಜಯತು ವಿಶ್ವ [illegible] ।
ಜಯತು ಜಯತು [illegible] ॥ ೧೦
[illegible] ರಾಜ್ಯ ವೈಭವಂ [illegible] ।
[illegible] ॥ ೧೧
ಶ್ರೀ [illegible] ।
[illegible] ಪ್ರಿಯತಾಂ ಸೇವಯಾನಯಾ ॥ ೧೨

ಪಂಡಿತ ಚೇಮನಹಳ್ಳಿ, ರಘುನಾಥಾಚಾರ್ಯ,
[illegible], ಜ್ಞಾನಗುಣಾಕರ, ತತ್ವಚಿಂತಾಮಣಿ, ವಿದ್ಯಾರ್ಣವ, ಇತ್ಯಾದಿ,
[illegible] 1936. ಮಹಾರಾಜಾ ಹೈಸ್ಕೂಲ್, ಮೈಸೂರು

ಮೈಸೂರು ವಿಶ್ವವಿದ್ಯಾನಿಲಯ
ಚುನಾವಣೆಗಳ ಫಲಿತಾಂಶ

ಮೈಸೂರು ವಿಶ್ವವಿದ್ಯಾನಿಲಯದ [illegible] ಇವರುಗಳು ಸೆನೆಟ್ಟಿಗೆ ಅಕಡೆ[illegible] ಕೌನ್ಸಿಲ್ ಮತ್ತು ರಿಜಿಸ್ಟರ್ಡ್ ಗ್ರಾಜುಯೇಟುಗಳಿಂದ ನಡೆದ ಚುನಾವಣೆ ಫಲಿತಾಂಶ:—

ರಿಜಿಸ್ಟರ್ಡ್ ಗ್ರಾಜುಯೇಟ್ಸ್
ಶ್ರೀಯುತರುಗಳಾದ
[illegible] ಎಸ್. ಲಕ್ಷ್ಮೀನಾರಾಯಣಪ್ಪ
ಎ. ವೆಂಕಟೇಶಯ್ಯ
ಎಂ. ಶ್ರೀನಿವಾಸಯ್ಯಂಗಾರ್
ಎಂ. ರಾಮಚಂದ್ರರಾವ್
ಜೆ. ಆರ್. ಮೋಸ್ಸರ್
ವಿ. ಲಿಂಗಪ್ಪಶೆಟ್ಟಿ

ಅಕ್ಯಾಡೆಮಿಕ್ ಕೌನ್ಸಿಲಿನಿಂದ
ಶ್ರೀಯುತರುಗಳಾದ
ಎಲ್. ರಾಮರಾವ್
ಡಾ॥ ಮಂಜುನಾಥ್
ಬಿ. ಎಲ್. ಡಿಸೋಜ
ಬಿ. ಕೆ. ಮಾಧವ

ಪ್ರಜಾಪ್ರತಿನಿಧಿ ಸಭೆಯ ಸದಸ್ಯರುಗಳ ಸ॥ ಕ್ಕೆ.

ಸ್ವಾಮಿ,

ತಾವು ನಮ್ಮ ಜನಗಳ ಪ್ರತಿನಿಧಿಗಳಾಗಿ ಬೇರೆ ಬೇರೆ ಮೂಲೆ ಮೂಲೆಗಳಿಂದಲೂ ಬಂದು ಸೇರಿರುವಿರಿ. ಮೊದಲು ನಮ್ಮೆಲ್ಲರಂತೆ ತಾವೂ ಪ್ರಭು ದರ್ಶನಾನಂದವನ್ನು ಪಡೆದಿರಿ. ಈಗ ಪ್ರಜಾಸಮುದಾಯಕ್ಕೂ ಪ್ರಭುತ್ವಕ್ಕೂ ನಡುವೆ ಇರತಕ್ಕ ರಾಜ್ಯಾಡಳಿತದ ಸೂತ್ರಧಾರಿಗಳಾಗಿರುವಿರಿ. ಬರೀ ಸೂತ್ರಧಾರಿಗಳೆಂದು ನಾನು ಭಾವಿಸಲಿಲ್ಲ. ಯಾಕೆಂದರೆ, ಪ್ರಜೆಗಳ ಹಿತವೇನೆಂಬುದನ್ನೂ ಮತ್ತು ಯಾವ ರೀತಿಯಲ್ಲಿ ನಡೆಯುವುದರಿಂದ ರಾಷ್ಟ್ರಹಿತವಾಗುತ್ತಂಬುದನ್ನೂ ಅರಿತು, ಸಾಧನೆ ಮಾಡತಕ್ಕ ಜವಾಬ್ದಾರಿಯು ತಮ್ಮನ್ನು ಸೇರಿರುತ್ತದೆ.

ವರ್ಷಕ್ಕೆ ಎರಡು ಸಾರಿ (ವರ್ಧಂತಿ ಮತ್ತು ದಸರಾ) ತಾವುಗಳು ಇಲ್ಲಿ ಸೇರುವಿರಿ. ತಾವು ಪ್ರತಿಸಾರಿಯೂ 6-7 ದಿನಗಳ ಕಾಲ ಇಲ್ಲಿದ್ದಂತೆ ಸಭೆಯನ್ನು ಅಲಂಕರಿಸುವಿರಿ. ಅಂದರೆ ಮೂವತ್ತೈದು ಘಂಟೆಗಳ ಕಾಲದಲ್ಲಿ ಸಭೆಯ ಕಾರ್ಯಕಲಾಪಗಳು ಪ್ರತಿನಿಧಿಗಳಿಂದ ವಿಮರ್ಶಿಸಲ್ಪಡಬೇಕೆಂದಹಾಗಾಯಿತು. ಅತ್ಯಲ್ಪಕಾಲದಲ್ಲಿ ನೀವು ನಿಮ್ಮ ಗುರಿಯನ್ನು ಎಷ್ಟರಮಟ್ಟಿಗೆ ಗೆಲ್ಲಬಹುದು? ಇದುವರೆವಿಗೆ ನೀವು ಕೈಗೊಂಡ ಸಾರ್ವಜನಿಕ ಕಾರ್ಯಗಳ ಪೈಕಿ ಎಷ್ಟು ಭಾಗ ಫಲಪ್ರಾಯಿಕವಾಗಿರುತ್ತವೆ? ಎಂಬೀ ವಿಷಯಗಳನ್ನೆಲ್ಲಾ ಪುನಸ್ಮರಣೆ ಮಾಡಿಕೊಳ್ಳಿರಿ. ಅನಂತರ ತಮ್ಮ ತಮ್ಮ ಭವ್ಯಾಸನವನ್ನು ಸ್ವೀಕರಿಸಿ. ಜನತಾಸೇವೆಯೇ ಜನಾರ್ದನನ ಸೇವೆಯೆಂಬ ಮೂಲಮಂತ್ರವನ್ನ ಮರೆಯಬಾರದು.

ನಿಮ್ಮ ಚುನಾವಣೆಗಳ ಕಾಲದಲ್ಲಿ, ನಿಮ್ಮಲ್ಲಿದ್ದ ಜನತಾಪ್ರೇಮ, ಸರ್ವಸಮನ್ವಯದ ಸರಳತೆ, ಕಲ್ಮಷವೂ, ಪಕ್ಷಪಾತವೂ ಇಲ್ಲದ ರಾಷ್ಟ್ರಹಿತದೃಷ್ಟಿಯಲ್ಲಿ ಕೆಲಸ ಮಾಡಬೇಕೆಂದಿದ್ದ ಕಾರ್ಯತತ್ಪರತೆ ಇವು ತಾವು ಪ್ರತಿನಿಧಿ ಸಭೆಯ ಸದಸ್ಯರಾಗಿರುವವರೆಗೂ ಕಾಯಾ, ವಾಚಾ ಮನಸಾ ತಮ್ಮಲ್ಲಿ ಮೂಡಿರಲಿ. ಪ್ರಾಯಕವಾಗಿ ತಮ್ಮವರಿಗೆ ಅಡ್ಡವಾಗಿ ಬರಬಹುದಾದ ಕೋಮುವಾರು ಭೂತಗಳು, ಪಕ್ಷ, ಪ್ರತಿಪಕ್ಷಗಳು, ಪ್ರಭುತ್ವದ ಬೆದರಿಕೆಯ ನೋಟಗಳು, ದಾಕ್ಷಿಣ್ಯಕ್ಕೆ ಕೈ ಎತ್ತಿ ಓಟು ಮಾಡುವ ಪ್ರಸಂಗಗಳು ಇವನ್ನೆಲ್ಲಾ ದೂರೀಕರಿಸಿ, ಬಡ ಜೋರೇಗೌಡನ ತಲೆಹೊರೆಯನ್ನ ಕಮ್ಮಿ ಮಾಡಿ, ಗ್ರಾಮೋದ್ಧರಣ ಕಾರ್ಯಗಳು ಬೆಳೆದು ತನ್ಮೂಲಕ ರಾಷ್ಟ್ರದ ಸುಖ ಸಂಪತ್ತಿಗಳು ಉಂಟಾಗುವ ರೀತಿಯಲ್ಲಿ ತಮ್ಮ ಚಟುವಟಿಕೆಯು ಪ್ರತಿನಿಧಿ ಸಭೆಯಲ್ಲಿ ವಿಜೃಂಭಿಸಲೆಂದು ಆಶಿಸುವ,

ತಮ್ಮ ವಿಧೇಯ,
ಅನಾಮಧೇಯ.

ಭೋಗಾಪುರದಲ್ಲಿ ಕ್ರೈಸ್ತರ ಶುದ್ಧಿ.

ಚಾಮರಾಜನಗರದ ತಾಲ್ಲೋಕು ಭೋಗಾಪುರದಲ್ಲಿ ಈಗ್ಗೆ ಕೆಲವು ದಿನಗಳ ಹಿಂದೆ (1) ಭಾಗ್ಯಮ್ಮ (2) ಸುವರ್ಣ (3) ಜಯಮಿತ್ರ (4) ವಿಮಲಪುತ್ರ—ಎಂಬ ನಾಲ್ವರು ಕ್ರೈಸ್ತಮತವನ್ನು ಬಿಟ್ಟು ಹಿಂದೂ ಮತಕ್ಕೆ ಬಂದು ಸೇರಿಕೊಂಡಿರು. ಇನ್ನೂ ಹಲವರು 10-6-1936 ನೇ ಬುಧವಾರದ ದಿವಸ ವಾಪಸು ಹಿಂದೂ ಮತಕ್ಕೆ ಬಂದು ಸೇರುವರು. ಕುದೇರು ವೀರಶೈವ ಮಠದ ಸ್ವಾಮಿಗಳು ಈ ಶುದ್ಧಿ ಕಾರ್ಯ ನಡೆಸುವರು. ಕಾರ್ಯಕ್ರಮ—ಮಧ್ಯಾಹ್ನ 13 ಘಂಟೆಗೆ ಸರಿಯಾಗಿ ಮಂಗಳವಾದ್ಯದೊಡನೆ ಶುದ್ಧಿ ಮಂಟಪ ಪ್ರವೇಶ. ನಂತರ ಕ್ರಮಪ್ರಕಾರವಾಗಿ ಶುದ್ಧಿಸ್ನಾನ, ಚೌಲ, ನಾಮಧಾರಣೆ ಹೋಮ, ಪ್ರತಿಜ್ಞೆ, ಗ್ರಾಮ ಪ್ರದಕ್ಷಿಣೆ, ಸಹಪಂಕ್ತಿ ಭೋಜನ.

ತಗಡೂರು ರಾಮಚಂದ್ರರಾವ್

ಸೌಹಾರ್ದತೆ

ಸಾಮಾನ್ಯವಾಗಿ ಮಸೀದಿಗಳ ಮುಂದೆ ಬಾಜಾ ಮಾಡಕೂಡದೆಂಬ ನಿಯಮವಿರುವುದಷ್ಟೆ. ಆದರೆ ಧನ್ವಾಂತರಿ ಮತ್ತು ತರೀಕೆರೆ ರಸ್ತೆಯಲ್ಲಿ ಒಂದು ಹೊಸ ಮಸೀದಿ ಇದೆ. ಅದರ ಮುಂದೆ ಎಲ್ಲಾ ಕಾಲಗಳಲ್ಲೂ ಬಾಜಾ ಮಾಡಬಹುದೆಂದು ಬೋರ್ಡ್ ಹಾಕಲ್ಪಟ್ಟಿದೆ ಎಂದೂ ಉರ್ದ ಕೋಮಿನವರ ಸೌಹಾರ್ದತೆಯೇ ಇದಕ್ಕೆ ಕಾರಣವೆಂದೂ ತಿಳಿಯ ಬರುತ್ತದೆ.

ಭೂಗರ್ಭದ ದ್ರವ್ಯ ಶೋಧನೆ.
ಇಟಲಿಯ ಹೊಸ ಯಂತ್ರ

ಇಟಲಿಯ ಒಬ್ಬ ಸಂಶೋಧಕನಿಂದ ಕಂಡು ಹಿಡಿಯಲ್ಪಟ್ಟ ಭೂಮಿಯೊಳಗಿನ ದ್ರವ್ಯವನ್ನು ಪರಿಶೋಧಿಸಬಲ್ಲ ಯಂತ್ರವನ್ನು ಇಟಲಿಯ ಸರಕಾರವು ಒಪ್ಪಿದೆಯಷ್ಟೆ.

ಆ ಯಂತ್ರವನ್ನು ಹಲವು ಬಗೆಯಿಂದ ಪರೀಕ್ಷಿಸಿ ಸಮಾಧಾನಕರವಾಗಿ ಕಂಡುಬಂದಿದೆ. ಯಂತ್ರವನ್ನು ಪರೀಕ್ಷಿಸಿದಾಗ ಟಸ್ಕಾನಿ ಪ್ರಾಂತ್ಯದಲ್ಲಿ ಇದ್ದಲಿನ ಗಣಿಗಳೂ, ಸಿಸಿಲಿ ಮತ್ತು ಸಾರ್ಡಿನ್ ಪ್ರಾಂತ್ಯಗಳಲ್ಲಿ ಧಾರಾಳವಾದ ಎಣ್ಣೆ, ಕಬ್ಬಿಣ ಮತ್ತು ಇದ್ದಲಿನ ಗಣಿಗಳೂ ಇರುವುದಾಗಿ ತಿಳಿದು ಬಂದಿದೆ.

ಪ್ರತಿಯೊಂದು ವಸ್ತುವೂ ಒಂದೊಂದು ಬಗೆಯ ಪ್ರಮಾಣದ ತರಂಗಗಳನ್ನು ಹುಟ್ಟಿಸುವುದು ಎಂಬ ಮೂಲ ತತ್ವದ ಬಲದಿಂದ ಅವುಗಳನ್ನು ಅಂಥ ಯಂತ್ರವು ವಶಗೊಳಿಸಲು ಸಮರ್ಥವಾಗುತ್ತದೆ.

ಉಕ್ಕಿನ ರಸ್ತೆ.

ಬ್ರಿಟನ್ನಿನ ಎಪ್ಪಿಂಗ್ ಎಂಬಲ್ಲಿ ಉಕ್ಕಿನ ರಸ್ತೆಯ ರಚನೆಯಾಗಿದೆ. ಇಂತಹ ರಸ್ತೆ ಪ್ರಪಂಚದಲ್ಲಿ ಇದೇ ಮೊದಲು. ಇದು ಶಬ್ದವನ್ನು ಕಡಿಮೆ ಮಾಡುತ್ತದಂತೆ. ತ್ರಿಕೋಣದ ಉಕ್ಕಿನ ಇಟ್ಟಿಗೆಗಳನ್ನಿಟ್ಟು ಈ ರಸ್ತೆಯನ್ನು ರಚಿಸಿರುವರು. ಗಾಡಿ ಚಲಾವಣೆಗೂ, ಮನುಷ್ಯರು ಓಡಾಡುವುದಕ್ಕೂ ಸುಖಕರ, ಬಾಳಿಕೆಯೂ ಹೆಚ್ಚು. ಖರ್ಚು ಮಾತ್ರ ವಿಶೇಷ.

ಸಾಧ್ವಿ

೧-೬-೩೬ ನೇ ಸೋಮವಾರ

ಶ್ರೀ ಯುವರಾಜರವರ ವರ್ಧಂತಿ.

ಇದು ನಮ್ಮ ಶ್ರೀಮನ್ ಯುವರಾಜರವರ ಐವತ್ತನೆಯ ವರ್ಷದ ವರ್ಧಂತಿ ಮಹೋತ್ಸವವನ್ನು ನೋಡಿ ಆನಂದಿಸುವ ಕಾಲ. ಈ ಸಂತೋಷ ಸಮಾರಂಭದಲ್ಲಿ ನಾವು ನಮ್ಮ ಹೃತ್ಪೂರ್ವಕವಾದ ಅಭಿನಂದನೆಗಳನ್ನು ಶ್ರೀಮನ್ ಮಹಾರಾಜರವರಿಗೆ ಅರ್ಪಿಸುತ್ತೇವೆ. ಕೈಲಾಸವಾಸಿಗಳಾದ ಶ್ರೀಮನ್ ಚಾಮರಾಜ ಒಡೆಯರ್‌ರವರ ನಂತರ ನಮ್ಮ ಮಹಾರಾಜರವರು ಪ್ರಾಪ್ತ ವಯಸ್ಕರಾಗುವ ತನಕ ರೀಜೆಂಟರವರ ಮೂಲಕ ರಾಜ್ಯಾಡಳಿತವು ನಡೆಯಿಸಲ್ಪಡುತ್ತಿತ್ತು.

ನಮ್ಮ ಯುವರಾಜರವರ ಆಳ್ವಿಕೆಯಲ್ಲಿ ಹಲವು ಜನೋಪಕಾರ ಕಾರ್ಯಗಳು ನಡೆದಿವೆ. ಒಳ್ಳೆ ಸಂಸ್ಥೆಗಳು ವಿದ್ಯೆ, ಕಲೆ, ವೈದ್ಯಕೀಯ, ಕುರುಡ ಕಿವುಡರ ಹಲವು ವಿಷಯಗಳಲ್ಲಿ ಬಹಳ ರೀತಿ ಮುಂದುವರಿಯುತ್ತಲಿವೆ. ಈಗ ನಮ್ಮ ಮಹಾರಾಜರವರ ಆಳ್ವಿಕೆಯ ರಜತ ಮಹೋತ್ಸವವು ಬಹು ವೈಭವದಿಂದ ನಡೆಸಲ್ಪಟ್ಟಿತು. ಇವರಂತೆಯೇ ಷಷ್ಠಿಪೂರ್ತಿ ಮತ್ತು ವಜ್ರೋತ್ಸವಗಳೂ ನಡೆಸಲ್ಪಡುವ ಸುಯೋಗವನ್ನು ಭಗವಂತನು ಕರುಣಿಸಲೆಂದು ಪ್ರಾರ್ಥಿಸುತ್ತೇವೆ.

ಈ ಉತ್ಸವವನ್ನು ನೋಡಿ ಸಂತೋಷಿಸುವ ಸಲುವಾಗಿ ನಮ್ಮ ದೇಶೀಯ ಸಂಸ್ಥಾನಗಳಲ್ಲಿನ ಅನೇಕ ರಾಜರುಗಳೂ, ಗೌವರ್ನರುಗಳೂ ಇತರ ಸಿಲೋನಿನಿಂದ ಮುಂದಿ ಶ್ರೀಮಂತರುಗಳೂ ಸಹ ಇಂಡಿಯಾದ ನಾನಾ ಭಾಗಗಳಿಂದ ಬಂದು ಸೇರುವರು.

ಈ ಸಂಬಂಧದಲ್ಲಿ ಹಲವು ಉತ್ಸವಗಳೂ, ಪ್ರಜಾಪ್ರತಿನಿಧಿ ಸಭೆ, ಸ್ವದೇಶಿ ವಸ್ತು ಪ್ರದರ್ಶನ, ಕುದುರೆ ಜೂಜು, ವ್ಯಾಯಾಮ, ನಾಟಕ, ಪ್ರಾಣಿಗಳ ಪ್ರದರ್ಶನ, ಇತರ ವಿಶೇಷ ಸಭೆಗಳು ಇವೆಲ್ಲಾ ಜರುಗುತ್ತವೆ.

ಸ್ವದೇಶಿ ವಸ್ತು ಪ್ರದರ್ಶನಾ ರಂಭೋತ್ಸವ.

ಮೊನ್ನೆ ಶನಿವಾರ ಪ್ರಾತಃಕಾಲ ಎಂಟೂವರೆ ಘಂಟೆಗೆ ಪ್ರಥಮ ಸಚಿವರಾದ ರಾಜಮಂತ್ರ ಪ್ರವೀಣ ಎಸ್ ಪಿ ರಾಜಗೋಪಾಲಾಚಾರಿಯವರಿಂದ ಸಾಲ್ಕನೆ ಮೈಸೂರು ಸ್ವದೇಶಿ ವಸ್ತು ಪ್ರದರ್ಶನದ ಆರಂಭೋತ್ಸವವು ಮೈಸೂರು ಶ್ರೀ ಕೃಷ್ಣರಾಜೇಂದ್ರ ವರ್ಮಶಾಲೆಯಲ್ಲಿ ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು. ಪ್ರಾರ್ಥನೆಯ ನಂತರ ಪ್ರದರ್ಶನದ ಕಾರ್ಯದರ್ಶಿಗಳ ಸ್ವಾಗತ ಭಾಷಣ, ರಾಜಮಂತ್ರಪ್ರವೀಣರ ಕಾರ್ಯೋಚಿತವಾದ ಭಾಷಣ ಇವುಗಳು ನಡೆದುವು.

ಅಧಿಕಾರವರ್ಗದವರುಗಳು, ನಾಗರಿಕ ದೊಡ್ಡ ಮನುಷ್ಯರುಗಳೂ, ಎಲ್ಲರೂ ಸಭೆಯನ್ನಲಂಕರಿಸಿದ್ದರು. ಕೆಳಗಿನ ಎಲ್ಲಾ ವರ್ಗಗಳಿಂದಲೂ ಈಸಾರಿ ಹೆಚ್ಚಿನ ಅಂಗಡಿಗಳು ಬಂದಿರುತ್ತವೆ.

ಈಸಾರಿ ಪ್ರದರ್ಶನಕ್ಕೆ 1 ಶ್ರೀ ಕೃಷ್ಣರಾಜೇಂದ್ರಮಿಲ್ಸ್ 2 ಸಿಟಿ ಕೋ-ಆಪರೇಟಿವ್ 3 ಪೂನಾ ಪ್ರಾಡಕ್ಟ್ಸ್ ಏಜನ್ಸಿ 4 ಸರ್ಕಾರದ ಇಂಡಸ್ಟ್ರಿಯಲ್ ಇಲಾಖೆ 5 ಷಡಕಿ ಸ್ಟೋರ್ಸ್ 6 ಕಿರ್ಲೋಸ್ಕರ್ ಬ್ರದರ್ಸ್ 7 ಷಡಕ್ಷರ ಪ್ರಸಾದ್ 8 ಸ್ವಾಮಿ ಟ್ರೇಡಿಂಗ್‌ಕೊ 9 ಒರಿಯಂಟಲ್ ಬುಕ್ ಡಿಸ್ಟ್ರಿಬ್ಯೂಟರ್ಸ್ 10 ಒಡೆಯರ್ ಕೋ-ಆಪರೇಟಿವ್ ಸೊಸೈಟಿ 11 ಹರಿಜನ

ಶ್ರೀ ಮದ್ಯುವರಾಜ ಕುಮಾರರು

ಶ್ರೀ ಜಯಚಾಮರಾಜ ಒಡೆಯರ್‌ರವರು.

ಸೇವಕ ಸಂಘ 12 ಏಕಲಿಂಗಶೆಟ್ಟಿಯಾರ್ ರವರ ಖಾದಿ ಅಂಗಡಿ 13 ಎಸ್ ರಾಮರಾವ್ ಅಂಡ್ ಸನ್ಸ್ 14 ಬೆಂಗಾಲ್ ಸಿಲ್ಕ್ ಸ್ಟೋರ್ಸ್ 15 ಅಬ್ದುಲ್ ಬಾಬುರವರ ಕೈಗಾರಿಕೆ ಶಾಲೆ 16 ಸಿ ಆರ್ ವೆಂಕಟರಾಮಯ್ಯರು 17 ಕಜ ರಾಮರಾಯರು 18 ಸುಬ್ರಹ್ಮಣ್ಯ ಅಂಡ್ ಸನ್ಸ್ 19 ಸ್ಟೇಟ್ ಫ್ಯಾಕ್ಟರಿ 20 ಆರ್ ಎಂ ಚೆಟ್ಟಿ ಅಂಡ ಸನ್ಸ್ 21 ಕುರುಡು ಮೂಗರ ಶಾಲೆ 22 ಎಸ್ ಎಸ್ ಶೋಗ 23 ಬಿ ಸೂರ್ಯನಾರಾಯಣ ಶೆಟ್ಟರು 24 ಸ್ವದೇಶಿ ಮಂದಿರ 25 ರಾಘವೇಂದ್ರಶೆಟ್ಟರು 26 ಮೋಹಿನಿ ಆರ್ಟ್ಸ್ 27 ಅಬ್ದುಲ್ ಕರೀಂಸಾಹೇಬ್ 28 ಜಿ ಆರ್ ನಾಯುಡುರವರ ಅಗರಬತ್ತಿ ಕಾರ್ಖಾನೆ 29 ಆರ್ ಚೆಟ್ಟಿಯಪ್ಪನವರ ಪ್ರೀಮಿಯರ್ ಅಗರಬತ್ತಿ ಕಾರ್ಖಾನೆ 30 ಮಂಡ್ಯದ ಸಕ್ಕರೆ ಫ್ಯಾಕ್ಟರಿ 31 ಹೆಚ್ ವಿ ಅನಂತ ಮಧ್ಯಸ್ಥರ ಸಂಡೇ ಟೈಮ್ಸ್ ಡಿಪೋ 32 ಸೀತಾರಾಮಶೆಟ್ಟಿ ಬ್ರದರ್ಸ್ 33 ಶ್ರೀ ಕಂಚಿ ಶ್ರೀವಾಸ ಏಜನ್ಸಿ 34 ಗೌಡ ಆದಿಕರ್ನಾಟಕ ಇನ್ಸ್ಟಿಟ್ಯೂಟ್ 35 ಮ್ಯಾಚ್ ಫ್ಯಾಕ್ಟರಿ 36 ರಾಷ್ಟ್ರ ಕರ ಪ್ರತಿಪಾದ 37 ಸ್ಟೇಟ್ಸ್ ಇಷ್ಯುರೆನ್ಸ್ ಕಂಪೆನಿ 38 ಎಂ ಪಿ ಸಿಂಹಯ್ಯಂಗಾರ್ 39 ಬಿಜಲಿ ಬಲ್ಬ್ 40 ಇಂಡಿಯಾ ಪೌಡರ್ 41 ಗೌರಿ ಫ್ರೂಟ್ ಫ್ಯಾಕ್ಟರಿ 42 ಆನಾರಾಯಣ 43 ಮೂಗಲ್ ಶಾಫಿ ವರ್ಕ್ಸ್ 44 ಪ್ರತಾಪ್‌ರಾವ್ 45 ಆಯುರ್ವೇದ ಇಲಾಖೆ 46 ಎಂ ಆರ್ ಪ್ರಭು ಸನ್ಸ್ ಎಂದು ಮತ್ತು ಇನ್ನೂ ಇತರ ಅಂಗಡಿಗಳು ಬಂದಿರುತ್ತವೆ.

ವಸ್ತು ಪ್ರದರ್ಶನವೆಲ್ಲವೂ ಕಣ್ಣಿಗೆ ಆನಂದವೆಂದ ಪ್ರೇಕ್ಷಕರ ಮನವನ್ನು ಸೆಳೆಯುತ್ತದೆ.

ಮೈಸೂರಿನಲ್ಲಿ ಎಲ್ಲಿ ನೋಡಿದರೂ ಬೀದಿಗಳು ಶೃಂಗಾರ ಮತ್ತು ಬೆಳಕಿನ ಅಲಂಕಾರದಿಂದ ತುಂಬಿ ತುಳುಕುತ್ತಲಿರುತ್ತದೆ. ಶ್ರೀಮನ್ ಮಹಾರಾಜರವರು ಮಂಡಿಸಿದ ಷಷ್ಠಿ ವರ್ಧಂತ್ಯೋತ್ಸವವನ್ನು ನೋಡಲೆಂದೇ ಅವರ ಅಭಿಮಾನಿಗಳು ಬರುತ್ತಲಿರುವುದರಿಂದ ಮೈಸೂರು ರಾಷ್ಟ್ರವು ಸರ್ವತೋಮುಖವಾದ ಮಹೋತ್ಸವದ ಕೀರ್ತಿಗಳನ್ನು ಪಡೆಯುವುದೆಂದು ಆಶಿಸುತ್ತೇವೆ.

ವರ್ಧಂತಿ ಕೈಪಿಡಿ.

ಮಾನ್ಯರಾದ ಮೈಸೂರು ಸ್ವದೇಶಿ ವಸ್ತು ಪ್ರದರ್ಶನದ ವರ್ಧಂತಿ ಕೈಪಿಡಿಯನ್ನು ಅವರಿಂದ ನಾವು ಸ್ವೀಕರಿಸಿದ್ದೇವೆ. ಇದರಲ್ಲಿ ಆದ ಮೂರು ವಸ್ತು ಪ್ರದರ್ಶನಗಳ ವರದಿಗಳೂ, ಅಂದರೆ ಪ್ರದರ್ಶನದ ಆರಂಭೋತ್ಸವದಲ್ಲಿ ಸರ್ ಮಿರ್ಜಾ ಎಂ ಇಸ್ಮಾಯಿಲ್, ಎಸ್ ಪಿ ರಾಜಗೋಪಾಲಾಚಾರಿ ಮತ್ತು ಎನ್ ಮಾಧವರಾಯರುಗಳು ಮಾಡಿದ ಭಾಷಣಗಳೂ, ಸ್ವಾಗತಾಧ್ಯಕ್ಷರ ಭಾಷಣಗಳೂ, ಅಲ್ಲದೆ ವಿಭಾಗಗಳ ಸಚಿತ್ರ ವರದಿ ಜೊತೆಗೆ ಇವು ಶ್ರೀಮನ್ ಮಹಾರಾಜರವರ, ಶ್ರೀಮದ್ಯುವರಾಜರವರ ಶ್ರೀ ಜಯಚಾಮರಾಜ ಒಡೆಯರ್ ರವರ, ಸರ್ ಮಿರ್ಜಾ ಎಂ ಇಸ್ಮಾಯಿಲ್ ರವರ ಛಾಯಾ ಚಿತ್ರಗಳೂ, ಮತ್ತು ಮಹಾತ್ಮಾ ಗಾಂಧಿ, ಜವಹರಲಾಲ್ ನೆಹರು, ಪಂಡಿತ್ ಮಾಳವೀಯರೂ, ಡಾ॥ ಅನ್ಸಾರಿಯವರೂ ಶ್ರೀ ಜಮ್ನಾಲಾಲ್ ಬಜಾಜ್ ಇವರುಗಳ ಅಭಿಪ್ರಾಯಗಳೂ ಸಹ ಇವೆ.

ಇವು ಗಾತ್ರದಲ್ಲಿದೆ ಪರಿಷ್ಕರಣೆ ಅವಶ್ಯಕವಾಗಿ ಬೇಕಾದ ವಿಚಾರ ಸ್ಥಳಗಳು, ಪ್ರೇಕ್ಷಣೀಯ ಸ್ಥಳಗಳು, ವಿದ್ಯಾಸಂಸ್ಥೆಗಳು, ರೈಲು ಮತ್ತು ಬಸ್ಸುಗಳು ಹೋಗತಕ್ಕ ಕಾಲಗಳು ಇವೇ ಮೊದಲಾದವುಗಳ ಉಪಯುಕ್ತ ವಿಷಯಗಳೂ ಇವೆ. ಇದರ ಕ್ರಯ ಒಂದಾಣೆ ಮಾತ್ರ.

ಭಾರತ ಕೇಸರೀ ಉಸಲ್ಲಾ...

॥ ಶ್ರೀಃ ॥

ಶ್ರೀಮನ್ ಮಹಿಸೂರು ಮಹಾರಾಜರವರ ಶ್ರೇಯಃಪ್ರಾರ್ಥನೆ ನಮ್ಮನ್ನಾಳುವ
ಶ್ರೀಮನ್ ನಾಲ್ವಡಿ ಕೃಷ್ಣರಾಜೇಂದ್ರ ಒಡೆಯರ್ ಬಹದ್ದೂರ್,
ಜಿ ಸಿ ಎಸ್ ಐ, ಜಿ ಬಿ.ಇ. ಇವರ ಮಹಾಸನ್ನಿಧಿಯಲ್ಲಿ
ಭಕ್ತಿಪೂರ್ವಕವಾಗಿ ಅತ್ಯಂತ ವಿನಯದಿಂದ
ವರ್ಧಂತಿಮಹೋತ್ಸವದಲ್ಲಿ
ಸಮರ್ಪಿಸಿದ

"ನವರತ್ನಮಾಲಿಕೆ"

ಕುವಲಯದಳನೀಲಃ ಕುಂದಮಂದಾರಮಾಲಃ ।
ಕನಕರುಚಿರಚೇಲಃ ಕಾಮಿನೀಸಂಗಲೋಲಃ ॥
ಕ್ಷಿತಿಧರವರಕೋಲಃ ಕಂಸಸಂಹಾರಕಾಲಃ ।
ಸಕಲಭುವನಪಾಲಃ ಪಾತು ಗೋಪಾಲಬಾಲಃ ॥ ೧
ಉಪೇಂದ್ರೋ ಮಹೇಂದ್ರಂ ವಿಧಾಯ ತ್ರ್ಯಧೀಶಂ ।
ಬಲೀಂದ್ರಂ ಕರಾರ್ಥಂ ರಸಾಯಾಂ ನಿವೇಶ್ಯ ॥
ದರಾಯಾಂ ನರೇಭ್ಯಃ ಕರಾಣಾಂ ಗ್ರಹಾಯ ।
ಸ್ವಯಂ ಕೃಷ್ಣರಾಜೇಂದ್ರತಾಮಾಪ ವಿಷ್ಣುಃ ॥ ೨
ಶ್ರೀಮದ್ಯಾದವವಂಶಮಂಡನಮಣಿರ್ದೀನಾರ್ಥಿ ಚಿಂತಾಮಣಿಃ ।
ಪ್ರತ್ಯಾಸನ್ನವಿಪಜ್ಜನಾವನಮಣಿರ್ವಿದ್ಯಾಬ್ಧಿ ತಾರಾಮಣಿಃ ॥
ಸತ್ಕೀರ್ತ್ಯಂಬುಜಭಾಸ್ವದಂಬರಮಣಿಃ ಶ್ರೀಸತ್ಯಭಾಮಾಮಣಿಃ ।
ಜೀಯಾತ್ಕೃಷ್ಣನೃಪಾಲ ಶೇಖರಮಣಿರ್ಭಾಸ್ವದ್ಗುಣೋದ್ಯನ್ಮಣಿಃ ॥ ೩
ರಿಪುಕುಲಜಲನಿಧಿಚಂದ್ರಂ ಬುಧಕುಲಕಲ್ಪದ್ರುಮಂ ದಯಾಸಾಂದ್ರಂ ।
ಪದಮುಲಪ್ಯದಯಮತಂದ್ರಂ ಮದಕಲಭೇಂದ್ರಂ ಶ್ರಿತೋಽಸ್ಮಿ ಕೃಷ್ಣೇಂದ್ರಂ ॥ ೪
ಕುವಲಯಸುಖಹಿಮಕಿರಣಂ ಕವಿಜನಶರಣಂ ಮನೋಜ್ಞನಿಜಕರಣಂ ।
ಪ್ರವಣಂ ವಸುಧಾಭರಣಂ ಚೋರ್ವೀರಮಣಂ ಶ್ರಿತೋಽಸ್ಮಿ ಕೃಷ್ಣೇಂದ್ರಂ ॥ ೫
ಹರಿಣಪತೀರ ನಿಷಣ್ಣಂ ಪರಿತಃ ಪ್ರಸೃತಾತ್ಮನೇತ್ರಲಾವಣ್ಯಂ ।
ಪರಿಜನಸಮನವಗಣ್ಯಂ ಕರುಣಂ ಗೃಹ್ಣಂತಮಾಶ್ರಯ ವರೇಣ್ಯಂ ॥ ೬
ಚಿರ್ಣಾತ್ಮರಾಜ್ಯಕಾರ್ಯಂ ವರ್ಣಾಶ್ರಮರಕ್ಷಣಾಚಾರ್ಯಂ ।
ಪೂರ್ಣಾರ್ಣವಮಾವಿಮಾರ್ಯಂ ತೂರ್ಣಂ ರಾಜರ್ಷಿಮಾಶ್ರಿತಾ ಶ್ರೀರ್ಯಂ ॥ ೭
ಚಾಮುಂಡಾರ್ಚನಶೌಂಡಂ ಚಾಮೇಂದ್ರಾತ್ಮಜಮಜೇಯಮೋರ್ದಂಡಂ ।
ಕಾಮಿತವಿತರಣಶೌಂಡಂ ಶೀಮಾತಿಗಶಿಕ್ಷಣಾತ್ತಕೋದಂಡಂ ॥ ೮
ನಾಸ್ವಯಮವನೀಪಾಲಂ ಗುಣಲವಲೋಲಂ ಪಯೋಧಿಜಾ ಬಾಲಂ ।
ವನಿತಾವತಿಹಿತಶೀಲಂ ವಿನಯವಿಶಾಲಂ ರಮಾಪತಿಃ ಕುಶಲಂ ॥ ೯
ಜಯತು ಜಯತು ಕರ್ಣಾಟಾವನೀಪದ್ಮಭಾನುಃ ।
ಜಯತು ಜಯತು ವಿದ್ವಿಟ್ಕಾನನಾಳೀಕೃಶಾನುಃ ॥
ಜಯತು ಜಯತು ವಿದ್ವನ್ಮಂಡಲೀಕಾಮಧೇನುಃ ।
ಜಯತು ಜಯತು ಚಾಮಕ್ಷ್ಮಾಪತೀಂದ್ರಸ್ಯ ಸೂನುಃ ॥ ೧೦
ಆಚಂದ್ರಾರ್ಕಸ್ಥಿತಂ ರಾಜ್ಯ ವೈಭವಂ ಸ್ಯಾದಕಂಟಕಂ ।
ರಘುನಾಥಾರ್ಯಗದಿತಾ ವಾಣೀಯಂ ಸಾರ್ಥಕಾ ಭವೇತ್ ॥ ೧೧
ಶ್ರೀಮನ್ಹಯಗ್ರೀವಕೃಷ್ಣಾರ್ಯ ಹೃದಬ್ಜಾಮಲಮಂದಿರಃ ।
ಹಯಗ್ರೀವೋ ರಮಾಕಾಂತಃ ಪ್ರಿಯತಾಂ ಸೇವಯಾನಯಾ ॥ ೧೨

ಪಂಡಿತ ಚೀಮನಹಳ್ಳಿ, ರಘುನಾಥಾಚಾರ್ಯ,
ಕವಿಪದ್ಮಾಕರ, ಜ್ಞಾನಗುಣಾಕರ, ತತ್ವಚಿಂತಾಮಣಿ, ವಿದ್ಯಾರ್ಣವ, ಇತ್ಯಾದಿ,
ತಾ॥ 30 6 1936.   ಮಹಾರಾಜಾ ಹೈಸ್ಕೂಲ್, ಮೈಸೂರು

ಮೈಸೂರು ವಿಶ್ವವಿದ್ಯಾನಿಲಯ
ಚುನಾವಣೆಗಳ ಫಲಿತಾಂಶ

ಮೈಸೂರು ವಿಶ್ವವಿದ್ಯಾನಿಲಯದ ೯೩ ನೇ ಇಸವಿಯ ಸನೆಟ್ಟಿಗೆ ಅಕಡೆಮಿಕ್ ಕೌನ್ಸಿಲ್ ಮತ್ತು ರಿಜಿಸ್ಟರ್ಡ್ ಗ್ರಾಜುಯೇಟುಗಳಿಂದ ನಡೆದ ಚುನಾವಣೆ ಫಲಿತಾಂಶ —

ರಿಜಿಸ್ಟರ್ಡ್ ಗ್ರಾಜುಯೇಟ್ಸ್
ಶ್ರೀಯುತರುಗಳಾದ
ಡಾ॥ ಎಸ್ ಲಕ್ಷ್ಮೀನಾರಾಯಣಪ್ಪ
ಎ ವೆಂಕಟೇಶಯ್ಯ
ಎಂ ಶೇಷಯ್ಯಂಗಾರ್
ಎಂ ರಾಮಚಂದ್ರರಾವ್
ಜಿ. ಆರ್ ಜೋಸ್ಯರ್
ವಿ. ಲಿಂಗಪ್ಪಯ್ಯ

ಅಕ್ಯಾಡೆಮಿಕ್ ಕೌನ್ಸಿಲಿನಿಂದ
ಶ್ರೀಯುತರುಗಳಾದ
ಎಲ್ ರಾಮರಾವ್
ಡಾ॥ ಮಂಜುನಾಥ್
ವಿ ಎಲ್. ಡಿಸೋಜ
ಬಿ. ಕೆ ಮಾಧವ

ಪ್ರಜಾಪ್ರತಿನಿಧಿ ಸಭೆಯ ಸದಸ್ಯರುಗಳ ಸ॥ ಕ್ಕೆ.

ಸ್ವಾಮಿಾ,

ತಾವು ನಮ್ಮ ಜನಗಳ ಪ್ರತಿನಿಧಿಗಳಾಗಿ ದೇಶದ ಮೂಲೆ ಮೂಲೆಗಳಿಂದಲೂ ದಯಮಾಡಿಸಿರುವಿರಿ ಮೊದಲು ನಮ್ಮೆಲ್ಲರಂತೆ ತಾವೂ ಪ್ರಭು ದರ್ಶನಾನಂದವನ್ನು ಪಡೆದಿರಿ ಈಗ ಪ್ರಜಾಸಮುದಾಯಕ್ಕೂ ಮತ್ತು ಪ್ರಭುತ್ವಕ್ಕೂ ನಡುವೆ ಇರತಕ್ಕ ರಾಜ್ಯಾಡಳಿತದ ಸೂತ್ರಧಾರಿಗಳಾಗಿರುವಿರಿ ಬರೀ ಸೂತ್ರಧಾರಿಗಳಿಂದ ನಾನು ಭಾವಿಸಲಿಲ್ಲ ಯಾಕೆಂದರೆ, ಪ್ರಜೆಗಳ ಹಿತವೇನೆಂಬುದನ್ನೂ ಮತ್ತು ಯಾವ ರೀತಿಯಲ್ಲಿ ನಡೆಯುವುದರಿಂದ ರಾಷ್ಟ್ರಹಿತವಾಗುತ್ತೆಂಬುದನ್ನೂ ಅರಿತು, ಸಾಧನೆ ಮಾಡತಕ್ಕ ಜವಾಬ್ದಾರಿಯು ತಮ್ಮನ್ನು ಸೇರಿರುತ್ತದೆ

ವರ್ಷಕ್ಕೆ ಎರಡು ಸಾರಿ (ವರ್ಧಂತಿ ಮತ್ತು ದಸರಾ) ತಾವುಗಳು ಇಲ್ಲಿ ಸೇರುವಿರಿ ತಾವು ಪ್ರತಿಸಾರಿಯೂ 6 7 ದಿನಗಳಿಗೆ ಕಮ್ಮಿ ಇಲ್ಲದಂತೆ ಸಭೆಯನ್ನು ಅಲಂಕರಿಸುವಿರಿ ಅಂದರೆ ಮೂವತ್ತೈದು ಘಂಟೆಗಳ ಕಾಲದಲ್ಲಿ ಸಭೆಯ ಕಾರ್ಯಕಲಾಪಗಳು ಪ್ರತಿನಿಧಿಗಳಿಂದ ನಿವರ್ತಿಸಲ್ಪಡಬೇಕೆಂದಹಾಗಾಯಿತು. ಅತ್ಯಲ್ಪಕಾಲದಲ್ಲಿ ನೀವು ನಿಮ್ಮ ಗುರಿಯನ್ನು ಎಷ್ಟರಮಟ್ಟಿಗೆ ಗೆಲ್ಲಬಹುದು? ಇದುವರೆವಿಗೆ ನೀವು ಕೈಗೊಂಡ ಸಾರ್ವಜನಿಕ ಕಾರ್ಯಗಳ ಪೈಕಿ ಎಷ್ಟು ಭಾಗ ಸಫಲವಾಯಿತವಾಗಿರುತ್ತದೆ? ಎಂಬೀ ವಿಷಯಗಳನ್ನೆಲ್ಲಾ ಪುನಸ್ಮರಣೆ ಮಾಡಿಕೊಳ್ಳಿರಿ ಅನಂತರ ತಮ್ಮ ತಮ್ಮ ಭಪ್ರಾಯವನ್ನು ಸ್ವೀಕರಿಸಿ ಜನತಾಸೇವೆಯೇ ಜನಾರ್ದನನ ಸೇವೆಯೆಂಬ ಮೂಲಮಂತ್ರವನ್ನು ಮರೆಯಬಾರದು

ನಿಮ್ಮ ಚುನಾವಣೆಗಳ ಕಾಲದಲ್ಲಿ, ನಿಮ್ಮಲ್ಲಿದ್ದ ಜನತಾಪ್ರೇಮ, ಸರ್ವಸಮನ್ವಯದ ಸರಳತೆ, ಕಲ್ಮಷವೂ, ಪಕ್ಷಪಾತವೂ ಇಲ್ಲದ ರಾಷ್ಟ್ರಹಿತದೃಷ್ಟಿಯಲ್ಲಿ ಕೆಲಸ ಮಾಡಬೇಕೆಂದಿದ್ದ ಕಾರ್ಯತತ್ಪರತೆ ಇವು ತಾವು ಪ್ರತಿನಿಧಿ ಸಭೆಯ ಸದಸ್ಯರಾಗಿರುವವರೆಗೂ ಕಾಯಾ, ವಾಚಾ ಮನಸಾ ತಮ್ಮಲ್ಲಿ ಮೂಡಿರಲಿ ಪ್ರಾಯಶವಾಗಿ ತಮ್ಮ ದಾರಿಗ ಅಡ್ಡವಾಗಿ ಬರಬಹುದಾದ ಕೋಮುವಾರು ಭೂತಗಳು, ಪಕ್ಷ, ಪ್ರತಿಪಕ್ಷಗಳು, ಪ್ರಭುತ್ವದ ಬೆನರಿಕೆಯ ನೋಟಗಳು, ಅಕ್ಷಿಣ್ಯಕ್ಕೆ ಕೈ ಎತ್ತಿ ಒಟು ಮಾಡುವ ಪ್ರಸಂಗಗಳು ಇವನ್ನೆಲ್ಲಾ ದೂರೀಕರಿಸಿ, ಬಡ ಬೋರೇಗೌಡನ ತಲೆಹೊರೆಯನ್ನ ಕಮ್ಮಿ ಮಾಡಿ, ಗ್ರಾಮೋದ್ಧರಣ ಕಾರ್ಯಗಳು ಬೆಳೆದು ಕನ್ನಡದ ರಾಷ್ಟ್ರದ ಸುಖಸಂಪತ್ತಿಗಳು ಉಂಟಾಗುವ ರೀತಿಯಲ್ಲಿ ತಮ್ಮ ಚಟುವಟಿಕೆಯು ಪ್ರತಿನಿಧಿ ಸಭೆಯಲ್ಲಿ ವಿಜೃಂಭಿಸಲೆಂದು ಆಶಿಸುವ,

ತಮ್ಮ ವಿಧೇಯ,
ಅನಾಮಧೇಯ.

ಭೋಗಾಪುರದಲ್ಲಿ ಕ್ರೈಸ್ತರ ಶುದ್ಧಿ.

ಚಾಮರಾಜನಗರದ ತಾಲ್ಲೋಕು ಭೋಗಾಪುರದಲ್ಲಿ ಈಗ್ಗೆ ಕೆಲವು ದಿನಗಳ ಹಿಂದ (1) ಭಾಗ್ಯಮ್ಮ (2) ಸುವರ್ಣ (3) ಜಯಮಿತ್ರ (4) ವಿಸುಪುತ್ರ—ಎಂಬ ನಾಲ್ವರು ಕ್ರೈಸ್ತಮತವನ್ನು ಬಿಟ್ಟು ಹಿಂದೂ ಮತಕ್ಕೆ ಬಂದು ಸೇರಿಕೊಂಡರು ಇನ್ನೂ ಹಲವರು 10–6–1936 ನೇ ಬುಧವಾರದ ದಿವಸ ವಾಪಸು ಹಿಂದೂ ಮತಕ್ಕೆ ಒಂದು ಸೇರುವರು ಕುದೇರು ವೀರಶೈವ ಮಠದ ಸ್ವಾಮಿಗಳು ಈ ಶುದ್ಧಿಕಾರ್ಯ ನಡೆಸುವರು ಕಾರ್ಯಕ್ರಮ —ಮಧ್ಯಾಹ್ನ 12 ಘಂಟೆಗೆ ಸರಿಯಾಗಿ ಮಂಗಳವಾದ್ಯದೊಡನೆ ಶುದ್ಧಿ ಮಂಟಪ ಪ್ರವೇಶ ನಂತರ ಕ್ರಮಪ್ರಕಾರವಾಗಿ ಶುದ್ಧಿಸ್ನಾನ ಚೌಲ, ನಾಮಧಾರಣೆ. ಹೋಮ, ಪ್ರತಿಷ್ಠೆ, ಗ್ರಾಮ ಪ್ರದಕ್ಷಿಣೆ, ಸಹಪಂಕ್ತಿ ಭೋಜನ

ತಗಡೂರು ರಾಮಚಂದ್ರರಾವ್

ಸೌಹಾರ್ದತೆ

ಸಾಮಾನ್ಯವಾಗಿ ಮಸೀದಿಗಳ ಮುಂದೆ ಬಾಜಾ ಮಾಡಕೂಡದೆಂಬ ನಿಯಮವಿರುವುದಷ್ಟೆ ಆದರೆ ಭದ್ರಾವತಿ ಮತ್ತು ತರೀಕೆರೆ ರಸ್ತೆಯಲ್ಲಿ ಒಂದು ಹೊಸ ಮಸೀತಿ ಇದೆ ಆದರ ಮುಂದೆ ಎಲ್ಲಾ ಕಾಲಗಳಲ್ಲೂ ಬಾಜಾ ಮಾಡಬಹುದೆಂದು ಬೋರ್ಡ್ ಹಾಕಲ್ಪಟ್ಟಿದೆ ಎಂದೂ ಈರ್ವ ಕೋಮಿನವರ ಸೌಹಾರ್ದತೆಯೇ ಇದಕ್ಕೆ ಕಾರಣವೆಂದೂ ತಿಳಿಯ ಬರುತ್ತದೆ

ಭೂಗರ್ಭದ ದ್ರವ್ಯ ಶೋಧನೆ.
ಇಟಲಿಯ ಹೊಸ ಯಂತ್ರ

ಇಟಲಿಯ ಒಬ್ಬ ಸಂಶೋಧಕನಿಂದ ಕಂಡು ಹಿಡಿಯಲ್ಪಟ್ಟ ಭೂಮಿಯೊಳಗಿನ ದ್ರವ್ಯವನ್ನು ಪರಿಶೋಧಿಸಬಲ್ಲ ಯಂತ್ರವನ್ನು ಇಟಲಿಯ ಸರಕಾರವು ಒಪ್ಪಿದೆಯಷ್ಟೆ

ಆ ಯಂತ್ರವನ್ನು ಹಲವು ಬಗೆಯಿಂದ ಪರೀಕ್ಷಿಸಿ ಸಮಾಧಾನಕರವಾಗಿ ಕಂಡುಬಂದಿದೆ ಯಂತ್ರವನ್ನು ಪರೀಕ್ಷಿಸಿದಾಗ ಟಸ್ಕಾನಿ ಪ್ರಾಂತ್ಯದಲ್ಲಿ ಇದ್ದಲಿನ ಗಣಿಗಳೂ, ಸಿಸಿಲಿ ಮತ್ತು ಸಾರ್ಡಿನ್ ಪ್ರಾಂತ್ಯಗಳಲ್ಲಿ ಧಾರಾಳವಾದ ಎಣ್ಣೆ, ಕಬ್ಬಿಣ ಮತ್ತು ಇದ್ದಲಿನ ಗಣಿಗಳೂ ಇರುವುದಾಗಿ ತಿಳಿದು ಬಂದಿದೆ

ಪ್ರತಿಯೊಂದು ವಸ್ತುವೂ ಒಂದೊಂದು ಬಗೆಯ ಪ್ರಮಾಣದ ತರಂಗಗಳನ್ನು ಹುಟ್ಟಿಸುವುದು ಎಂಬ ಮೂಲ ತತ್ವದ ಬಲದಿಂದ ಅವುಗಳನ್ನು ಕಂಡ ಯಂತ್ರವು ವಶಗೊಳಿಸಲು ಸಮರ್ಥವಾಗುತ್ತದೆ

ಉಕ್ಕಿನ ರಸ್ತೆ

ಬ್ರಿಟನ್ನಿನ ಎಗ್ರಿಂಗ್ಹ್ಯಾಂ ಎಂಬಲ್ಲಿ ಉಕ್ಕಿನ ರಸ್ತೆಯು ರಚನೆಯಾಗಿದ ಇಂತಹ ರಸ್ತೆ ಪ್ರಪಂಚದಲ್ಲಿ ಇದೇ ಮೊದಲು ಇದು ಶಬ್ದವನ್ನು ಕಡಿಮೆ ಮಾಡುತ್ತದಂತೆ. ತ್ರಿಕೋಣದ ಉಕ್ಕಿನ ಇಟ್ಟಿಗೆಗಳನ್ನಿಟ್ಟು ಈ ರಸ್ತೆಯನ್ನು ರಚಿಸಿರುವರು ಗಾಡಿ ಚಲಾವಣೆಗೂ, ಮನುಷ್ಯರು ಓಡಾಡುವುದಕ್ಕೂ ಸುಖಕರ, ಬಾಳಿಕೆಯೂ ಹೆಚ್ಚು ಖರ್ಚು ಮಾತ್ರ ವಿಶೇಷ

ಇಣಕಪ್ಪನ ನೋಟ !

ಪ್ರಿಯವಾಚಕ ಬಂಧು !

ಈಗ ಎಲ್ಲರಿಗೂ ನಗರದ ಮೇಲೆ ನಗರ ಯಾರಿಗೂ ಒಬ್ಬರನ್ನೊಬ್ಬರು ಭೇಟಿ ಮಾಡಲು ಕೂಡ ಅವಕಾಶವೇ ಇಲ್ಲ. ಮಾಡುವುದೇನು ? ಅಂಥಂವಾ ಎಂಗೇಜ್ ಮೆಂಟುಗಳ ಕಾಲ ಇದು. ಸಾಮಾನ್ಯ ದಿನಗಳಲ್ಲೇ ಬೇಕಾದಷ್ಟು ಕಾರ್ಯಕ್ರಮಗಳು. ಅಂದಮೇಲೆ ಈಗ ಮಹಾರಾಜರವರ ವರ್ಧಂತಿ, ಸ್ವದೇಶಿ ವಸ್ತುಪ್ರದರ್ಶನ, ಪರೀಕ್ಷಾ ಫಲಿತಾಂಶಗಳ ಗಲಾಟೆ, ಫುಟ್‌ಬಾಲ್ ಪಂದ್ಯಗಳು, ಪ್ರತಿನಿಧಿ ಸಭೆಯ ನಾಟಕ, ಎಲ್ಲಕ್ಕಿಂತಲೂ ಮಿಗಿಲಾದ ಕುದುರೆ ಜೂಜಿನ ಚಟುವಟಿಕೆಗಳು, ಹೀಗೆ ಒಂದರಮೇಲೊಂದು ಪ್ರಾಮುಖ್ಯವಾದ ಕಾರ್ಯಕ್ರಮಗಳೇ ಇರುವಾಗ ಯಾವುದಕ್ಕೆ ತಾನೆ ಪುರಸತ್ತಿರುತ್ತದೆ ?

ದಿನಂಪ್ರತಿ ಇದರಕಡೆ ಪತ್ರಿಕಾವಲೋಕನಕ್ಕೇ ಅವಕಾಶವಿಲ್ಲ. ಈಗ ಕುದುರೆ ಜೂಜಿನ ಅಂಗೀಕಾರದ ಪಟ್ಟಿಗಳಿಗೂ ಮತ್ತು ರೇಸ್ ಟಿಪ್ಸ್ ಎಂಬ ಪುಸ್ತಕಗಳಿಗೂ ಹೆಚ್ಚು ಪ್ರಾಮುಖ್ಯತೆ. ಇದಕ್ಕೆ ಪ್ರಥಮದಲ್ಲಿ ಸ್ವೀಪ್ ಟಿಕೆಟ್ಟುಗಳು ಈಗಾಗಲೇ ಎಷ್ಟೋ ಜನರ ಹಣವನ್ನು ವಂಚಿಸಿ ತಾನು ಉಚ್ಚಸ್ಥಾನವನ್ನು ಪಡೆದುಬಿಟ್ಟಿದೆ. ನಾಳೆ ಅರಸೀಕೆರೆವರೆಗೆ ಅದರ ಪ್ರಭಾವ ಪ್ರಖ್ಯಾತ ಪ್ರಾಣಿಕ್ಕಿಂತಲೂ ಮಿಗಿಲಾದ ಗೌರವ.

ಕುದುರೆಜೂಜು ನಡೆಯುವುದು ಒರೆ, ದಿನಗಳು ಎಷ್ಟು ಸಾವಿರ ಜನರು ಲಕ್ಷ್ಮಿಯಲ್ಲಿ ಸುವರ್ಣ ಪ್ರಾಪ್ತಿ ಜನ್ಮ ಮಾಡುವದೆಗೆ ನಿಸರ್ಗ ಲಭ್ಯವೂ ಕೂಡ ಲಭಿಸಲಾರದ ಸ್ಥಿತಿಗೆ ಕೇವಲ ಅಧಿಕ ತನಕ್ಕೆ ತುತ್ತಾಗುವರೋ ಅದನ್ನು ವರ್ಣಿಸಲಸಾಧ್ಯ. ಎಷ್ಟು ಒಡ ಕುಟುಂಬಗಳು ನಿರ್ನಾಮವಾಗುವ ಸ್ಥಿತಿಗಿಳಿಯುವವೋ ತಿಳಿದವರಾರು ? ಕುದುರೆ ಜೂಜಿಗೆ ಬರತಕ್ಕವರ ಸೌಕರ್ಯಕ್ಕಾಗಿ ಸ್ಪೆಷಲ್ ರೈಲುಗಳು, ಸ್ಪೆಷಲ್ ರಿಯಾಯಿತಿ ಟಿಕೆಟ್ಟುಗಳು, ರೈಲ್ವೆ ಟಿಕೆಟ್ ಪಡೆಯುವಾಗಲೇ ರೇಸ್ ಕೋರ್ಸಿನ ಟಿಕೇಟುಗಳು ಮಾರಾಟದ ವ್ಯವಸ್ಥೆ. ಇದೆಲ್ಲಾ ಸಲ್ಲಾಪದವರು ಒದಗಿಸಿದ ರಿಯಾಯಿತಿ ಮತ್ತು ಪ್ರೋತ್ಸಾಹ. ಹೂವಿನ ಮಾರ್ಕಟೆ ! ಪ್ರೀತಿ ಮಾತ್ರ ಈಗಾದೆ ನನಗೆ ಬಂತು ಬಂದದ್ದೇನು ? ಅತ್ತೆಯೂಡದ ಪಾತ್ರೆಗೆ ಜಂ ಇಲ್ಲ ! ಇಲ್ಲವೆ.

ಮೂಕಾಡಿಸಾ ಎಲ್ಲೋ ಹೋಗಿಬಿಟ್ಟು ದಯವಿಟ್ಟು ಕ್ಷಮಿಸಿ. ಇಂಥಾ ಉತ್ಸಾಹದ ಕಾಲದಲ್ಲೂ ಜನತಾಸೇವೆ ಮಾಡಬೇಕೆಂಬ ಕಾತುರತೆ ನನಗೆ. ಅದೂ ಸಾಮಾನ್ಯ ಆಸೆ ಅಲ್ಲ. ಅದೊ, ನಮ್ಮ ರಾಷ್ಟ್ರದ ಆಡಳಿತವನ್ನು ನಡಿಸುತ್ತೀವೆ. ಜನಾಭಿಪ್ರಾಯವೇ ನಮ್ಮದು. ಪ್ರತಿನಿಧಿಗಳಾದ ನಮ್ಮ ಅಭಿಪ್ರಾಯಗಳಿಗೇ ಹೆಚ್ಚು ಮನ್ನಣೆ—ಎಂದು ವಿಜೃಂಭಿಸುವ ಪ್ರಜಾಪ್ರತಿನಿಧಿ ಸಭಾ ಸದಸ್ಯರುಗಳಿಗಿಂತ ಹೆಚ್ಚಿನ ಹೊಣೆಗಬೇಕೆಂಬ ಕಾಂಕ್ಷೆ. ಇದು ಎಷ್ಟರಮಟ್ಟಿಗೆ ಸಾಧ್ಯವೋ ನನಗೆಬೇಲ ಗೊತ್ತಿಲ್ಲ. ಇರಲಿ ಆದರೂ ಪ್ರಯತ್ನ ಮಾಡಿ ಒಂದುಕೈ ನೋಡುತ್ತೇನೆ.

§ § § §

ಸ್ವಾಮಿ ! ಪ್ರಜಾಪ್ರತಿನಿಧಿ ಸಭಾ ಸದಸ್ಯರುಗಳೇ ! ನಾನು ತಮ್ಮ ಮುಂದೆ ಇಡುವ ಕೆಲವು ವಿಷಯಗಳನ್ನು ದಯವಿಟ್ಟು ಪರಿಶೀಲಿಸಬೇಕೆಂದು ಕೋರುತ್ತೇನೆ. ನಿಮ್ಮ ಅಮೋಘವಾದ ಕಾಲವನ್ನು ಹಾಳುಗೆ ನಾನು ಉಪಯೋಗಿಸಿಕೊಳ್ಳಲಿಚ್ಛಿಸುವುದಿಲ್ಲ.

ತಾವುಗಳೆಲ್ಲಾ ಒಟ್ಟು ಕೆಲಸ ಮಾಡುವುದಕ್ಕಾಗಿಯೇ ಆ ಸಾಲಿನಲ್ಲಿ ನೀರುತೀರಿ. ಈಗ ಎಷ್ಟೆಲ್ಲೂ ಸ್ವರ, ಪಕ್ಷಗಳಲ್ಲಿದ ಕೇಂದ್ರಾಯ ಕಾಣುವುದಕ್ಕೆ ತೊಂದರೆಯಾಗಿದೆ. ಎಷ್ಟೋ ಕಡೆಗಳಲ್ಲಿ ದನಕರುಗಳಿಗೆ ಹುಲ್ಲು ನೀರೂ ಕೂಡ ದೊರೆಯದಂತಾಗಿದೆ. ಇದೊಂದೂ ತಮಗೆ ತಿಳಿಯದ ಅಂಶವಲ್ಲ. ಹೀಗಿದ್ದರೂ ನೀವು ಕಂದಾಯದ ಹೊರೆಯನ್ನು ಕಮ್ಮಿ ಮಾಡಿಸದೆಯೂ, ಆಡಳಿತದ ಖರ್ಚುವೆಚ್ಚಗಳನ್ನೂ ಅಲುಗಾಡಿಸದೆ, ಆ ಆಯವ್ಯಯ ತಕ್ತೆಯ ಏರು ಪೇರುಗಳನ್ನು ಸರಿದೂಗಿಸುವ ಸಲುವಾಗಿ ಹೊಸ ಹೊಸ ತಲೆ ಕಂದಾಯಗಳಿಗೆ, ದಾಕ್ಷಿಣ್ಯಗಳಿಂದಲೋ ಅಥವಾ ಪ್ರಬಲವಾದ ಇನ್ನಿತರ ಕಾರಣಗಳಿಂದಲೋ ಹೊಂಗುಟ್ಟುತ್ತ ನಿಮ್ಮ ಸಮ್ಮತವನ್ನು ಕೊಡುತ್ತಿರುವುದು ಅನೇಕರಿಗೆ ಬೇಸರ ತರುವ ಸಂಗತಿಯಾಗಿದೆ.

ನೀವು ಮೊದಲು ಎಲ್ಲಾ ವಿಷಯಗಳಲ್ಲಿಯೂ ಮಿತವ್ಯಯ ಮಾಡಬೇಕಾದುದು ಧರ್ಮ. ರಾಜ್ಯಾದಾಯದಲ್ಲಿ ಉಳಿವಿಲ್ಲದಷ್ಟು ಮಟ್ಟಿಗೆ ಉದ್ಯೋಗಸ್ಥರ ಸಂಬಳ ಬಾಬಿನಲ್ಲಿ ಪ್ರತಿನಿಧಿ ಸಭೆಯ ಎದುರು ಒಂದು ಈ ಸಭೆಗಾಗಿ ನಿಮಗೆ ಮತ್ತು ಸರ್ಕಾರಿ ಉದ್ಯೋಗಸ್ಥರುಗಳಿಗೂ ಭತ್ಯೆ ಸಲ್ಲುತ್ತಿರುವುದು ನಿಮ್ಮ ಕರ್ತವ್ಯವಷ್ಟೆ.

ತಾವೆಲ್ಲರೂ ಏಕವಾಕ್ಯತೆಯಿಂದಲೇ ರಾಷ್ಟ್ರವನ್ನು ಒಡತನದಿಂದ ಪಾರುಗಾಣಿಸಬೇಕೆಂಬ ಉಚ್ಚ ಧ್ಯೇಯದಿಂದಲೂ ತಮ್ಮ ಮಾಮೂಲ್ ಭತ್ಯದ ಮೊಬಲಗನ್ನು ಬಿಟ್ಟುಬಿಡಿ. ಅದರಿಂದ ತಮಗೆ ಒಂದಾ ನಷ್ಟವೇನೂ ಸಂಭವಿಸಲಾರದು. ಸರ್ಕಾರಕ್ಕೆ ಒಂದು ಉಳಿತಾಯ ಒಟ್ಟಿನಲ್ಲಿ ಕೂಲಿನಾಲಿಯಿಂದ ಜೀವಿಸುವ ಬಡ ಬೋರೇಗೌಡನ ಅನುಯಾಯಿಗಳಿಗೆ ಕೆಲವು ಗಳ ಪರಿಹಾರ. ಇದಕ್ಕಿಂತಲೂ ಬೇರೆ ಕೀರ್ತಿಪೂಜೆಯು ತಮಗೆ ಲಭ್ಯವಾದೀತೆ ?

ಈ ರೀತಿ ಮಾಡೋಣವೆಂದು ತಾವು ಅಧಿಕಾರಿ ವರ್ಗಕ್ಕೆ ಈ ವಿಷಯದಲ್ಲಿ ದಿಕ್ಸೂಚಿಗಳಾಗಬಹುದು. ಅವರೂ ತಮ್ಮನ್ನು ಅನುಸರಿಸಿಯೇ ಅನುಸರಿಸುವರು. ಇದು ಮಾದರಿಯನ್ನು ಎಲ್ಲಾ ವಿಷಯಗಳಲ್ಲೂ ಅನ್ವಯಿಸುವಂತೆ ಮಾಡಿ ಉಳಿತಾಯವನ್ನು ತೋರಿಸಿರಿ.



ಮೈಸೂರು ಅರಮನೆ.

ಯಾವ ಕಾನೂನು ಕೇವಲಾತುರಗಳ ಅಭಿಪ್ರಾಯ ಕೊಡುವಾಗಲೂ ನೀವು ರಾಷ್ಟ್ರಹಿತ ದೃಷ್ಟಿಯ ಕಡೆಗೆ ಸ್ವಲ್ಪ ಕಣ್ತೆರೆದು ನೋಡಿ. ಕಾನೂನು ಆಗುವುದು ಸುಲಭ. ಆನಂತರ ಅದು ನಿರ್ದಾಕ್ಷಿಣ್ಯವಾಗಿ ಎಲ್ಲರನ್ನೂ ಧ್ವಂಸಮಾಡಿಯೇ ಬಿಡುತ್ತದೆ.

ಈಗಾಗಲೇ ಸರ್ಕಾರವು ಪ್ರಕಟಮಾಡಿರುವ ಮತಾಂತರದ ಬಿಲ್ಲಿನ ಸಂದರ್ಭದಲ್ಲಿ ನೋಲಿನ ಹಿರಿಕರು ನೂರಾರು ತಮ್ಮನ್ನು ಎಚ್ಚರಿಸಬೇಕಾಯಿತು.

ನಿಮ್ಮ ನಿಸ್ವಾರ್ಥತೆಯು ಎಲ್ಲರಿಗೂ ಎಲ್ಲ ವಿಷಯಗಳಲ್ಲಿಯೂ ಮಾದರಿಯಾಗಿರಬೇಕು. ಎಲ್ಲಕ್ಕಿಂತಲೂ ಮೊಟ್ಟಮೊದಲು ಕಾನೂನು ಮಾಡುವ ಹೊತ್ತಿಗೆ ನಿಮ್ಮ ಸ್ವಂತದ, ಪಕ್ಷ ಪ್ರತಿಪಕ್ಷಗಳಿಂದ ದೂರ ಹಾರಿಗೆ ಹೋಗದೆ, ಸಾರ್ವಜನಿಕರ ಹಿತದೃಷ್ಟಿಯ ದೃಷ್ಟಿ ತಮ್ಮಸ್ವಂತ ತಿಳಿವಿನಿಂದ ಎಂದು ದಾನವೀಯತೆಯಿಂದ ಆ ಮಾಡಿದ್ದನ್ನು ನಿರ್ವಹಿಸುವಂತೆ, ಪ್ರಾಂತ್ಯದಲ್ಲಿರುವ ಪರವಾಗಿ ನಿಂತಿರುವ ತಾವುಗಳೆಲ್ಲರೂ ಏಕಮತ್ಯತೆಯಿಂದ, ಪ್ರಭುತ್ವಕ್ಕೆ ಸನ್ಮಾರ್ಗದರ್ಶಕರಾಗಿರಬೇಕೆಂದು ಬಯಸುತ್ತೇನೆ. ಏನಾದರೂ ತಪ್ಪುಗಳಿದ್ದಲ್ಲಿ ಮಾನಸಿಕ ಮಾಫಬೇಕಾಗಿ ವಿನಂತಿ.

ತಮ್ಮ ವಿಶ್ವಾಸಿ,

ಇಣಕಪ್ಪ

ಫುಟ್‌ಬಾಲ್ ಮೊಕದ್ದಮೆಯ ವಜಾ

ಮೈಸೂರು ಯಂಗ್‌ಮೆನ್ಸ್ ಎಕ್ಸ್‌ಯರ್ಸ್ ಯೂನಿಯನ್ನಿನವರು ಮೈಸೂರು ಫುಟ್‌ಬಾಲ್ ಅಸೋಸಿಯೇಷನ್ನಿನ ಲೀಯೂ ಚಾಲೆಂಜ್ ಯೂನಿಯನ್ ಲೀಯೂ ಹಾಕಿದ್ದ ಮೊಕದ್ದಮೆಯು ಖರ್ಚುಸಹಿತ ವಜಾ ಮಾಡಲ್ಪಟ್ಟಿತು. ಮುನ್ಸೀಫರಾದ ಮಿ|| ಬಿ. ಜಿ. ರಾಮಸ್ವಾಮಿ ಐಯ್ಯಂಗಾರ್‌ರವರು ಈ ಮೊಕದ್ದಮೆಯನ್ನು ೨೯ ನೇ ತಾರೀಖಿನ ದಿವಸ ಮಾಡಿದರು.

ನಿಮಗೆ ಗೊತ್ತೇ ?

ಬರೆದವರು : ಎಂ. ವಿ. ನಾರಾಯಣ ಮೂರ್ತಿ, ಮೈಸೂರು.

೧. ಸಾಮ್ಯುಎಲ್ ಟೇಡನ್ ಎಂಬುವ ಪಿಯಾನೋ ವಾದಕರ ಚಕ್ರವರ್ತಿಯು ನೇಣು ಹಾಕಿಕೊಂಡು ಸತ್ತನು. ಇವನು ಸಾಯುವ ಮುಂಚೆ ನೇಣುಹಾಕಿಕೊಳ್ಳುವ ಪಗ್ಗಕ್ಕೆ ೩ ಗಂಟೆ ಹೊತ್ತು ಚೌಕಾಶಿಮಾಡಿದನು. ಆದರೆ ಸತ್ತ ಮೇಲೆ ೩೫ ಲಕ್ಷ ರೂಪಾಯಿ ಬಿಟ್ಟು ಹೋಗಿದ್ದನಂತೆ!

೨. ೨೦೦೦ ಮೈಲಿ ದೂರದಲ್ಲಿರುವ ಸಹಾರಾ ಮರುಭೂಮಿಯಿಂದಲೂ, ಗಾಳಿಯ ಮೂಲಕ ಧೂಳು ಇಂಗ್ಲೆಂಡಿಗೆ ಬಂದು ಬೀಳುತ್ತದೆಂದು ಕಂಡುಹಿಡಿದಿದ್ದಾರೆ!

೩. ಇಂಗ್ಲೆಂಡಿನ ಒಬ್ಬ ಹೆಡ್ಮಾಸ್ಟರು ಭೂಗೋಳವನ್ನು ಪಾಠ ಹೇಳಲು ಒಂದು ವಿಮಾನವನ್ನು ಉಪಯೋಗಿಸುತ್ತಿದ್ದನಂತೆ. ಪ್ರತಿಯೊಬ್ಬನಿಗೂ ಒಂದು ಭೂಪಟವನ್ನು ಕೊಟ್ಟು ವಿಮಾನದಲ್ಲಿ ಕುಳ್ಳಿರಿಸಿ ಕೆಳಗೆ ಕಾಣಿಸುವ ಎಲ್ಲಾ ದೇಶಗಳ ಪೂರ್ವವಿವರಣೆಯನ್ನೂ ಹುಡುಗರಿಗೆ ವಿವರಿಸುತ್ತಾರಂತೆ. ಇದರಿಂದ ನೆಲದ ಮೇಲೆ ಶಾಲೆಯಲ್ಲಿ ಭೂಗೋಳ ಪಾಠವನ್ನು ಕಲಿಯುವುದಕ್ಕಿಂತ ಇಪ್ಪತ್ತರಷ್ಟು ಚೆನ್ನಾಗಿ ವಿಮಾನದ ಮೇಲಿಂದ ಕಲಿಯುವರೆಂದು ಕಂಡುಹಿಡಿದಿದ್ದಾರೆ!

೪. ಯೂರೋಪಿನಲ್ಲಿ ಕಳ್ಳರಿಗೆ ಒಂದು ವಿಶ್ವವಿದ್ಯಾನಿಲಯವನ್ನು ಒಬ್ಬರು ಪುಣ್ಯಾತ್ಮರು ಮಾಡಿರುವರಂತೆ. ಇವರು ಕಳ್ಳತನ ಮಾಡುವರೀತಿ ಮುಂತಾದುವುಗಳನ್ನು ಹೇಳಿಕೊಡುವರು. ಕಳ್ಳರಿಗೆ ಸಿಕ್ಕಿದ್ದರಲ್ಲಿ ಶೇ. ೬೦ ರಷ್ಟು ಫೀಜಿಗೆ ಬದಲಾಗಿ ಇವರಿಗೆ ಕೊಡಬೇಕಂತೆ. ಇವರ ಕೈಕೆಳಗೆ ೧೦೦ ವಿದ್ಯಾರ್ಥಿಗಳು ಆಗಲೇ ವ್ಯಾಸಂಗಮಾಡಿರುವರಂತೆ!

ಬರ್ಲಿನ್ನಲ್ಲಿರುವ ಒಂದು ವಾಚನಾಲಯದಲ್ಲಿ ತಾಳೆಗರಿ (Palm leaves) ಯಿಂದ ಬರೆಯಲ್ಪಟ್ಟಿರುವ ಒಂದು ಬೈಬಲ್ ಇದೆಯಂತೆ. ಮತ್ತು ಒಂದು ಬೆಂಕಿಪೊಟ್ಟಣದಲ್ಲಿ ಹಿಡಿಸುವಷ್ಟು ಸಣ್ಣದಾದ ಇನ್ನೊಂದು ಬೈಬಲ್ (Bible) ಇದೆಯಂತೆ!

೬. ಕೆನಡಾ ದೇಶದಲ್ಲಿರುವ ಚಿನ್ನದ ಅಂಗಡಿಯನ್ನು ಫೋಟೋ ಎಲೆಕ್ಟ್ರಿಕ್-ಸೆಲ್ (Photo electric cell) ಎಂಬ ಯಂತ್ರವು ರಕ್ಷಿಸುತ್ತಿತ್ತು. ಒಂದು ದಿನ ಒಬ್ಬ ಕಳ್ಳನು ಚಿನ್ನದ ಇಟ್ಟಿಗೆಗಳನ್ನು ಕೇಳಿರಿಸಿದ್ದ ಕೊಠಡಿಯ ಬಾಗಿಲನ್ನು ಒಡೆದು ಒಳಕ್ಕೆ ನುಗ್ಗಿದ್ದನು, ಕಳ್ಳನು ಒಳಕ್ಕೆ ಬರುವ ನೆರಳು ಈ ಯಂತ್ರದ ಮೇಲೆ ಬಿದ್ದಿತಂತೆ. ತಕ್ಷಣವೇ ಆ ಕಟ್ಟಡದಲ್ಲಿ ೧೯ ಗಂಟೆಗಳು ಶಬ್ದ ಮಾಡಿದುವಂತೆ. ಆಗ ಗಣಿಯ ಮುಖ್ಯಾಧಿಪತಿಯು ತನ್ನ ಮನೆಗೆ ಬರಲು ಕಳ್ಳನು ದೀಪವನ್ನು ಹಿಡಿದುಕೊಂಡು ನೋಡುತ್ತಿರುವುದು ಕಂಡಿತಂತೆ. ತಕ್ಷಣವೇ ಅವನು ಪೋಲೀಸಿನವರಿಗೆ ಕೊಡಲ್ಪಟ್ಟನಂತೆ! ಅನೇಕ ಬ್ಯಾಂಕುಗಳಲ್ಲೂ ಈ ಯಂತ್ರವಿಟ್ಟಿರುವರಂತೆ!

೭. ಪ್ರಪಂಚದಲ್ಲೆಲ್ಲಾ ಹೆಚ್ಚು ಮಳೆ ಬೀಳುವುದು ಅಸ್ಸಾಮಿನಲ್ಲಿರುವ ಚಿರಾಪುಂಜಿಯಲ್ಲಿ. ಒಂದು ಸಾರಿ 24 ಗಂಟೆಗಳಲ್ಲಿ 36·1 ಅಂಗುಲ ಮಳೆ ಅಲ್ಲಿ ಬಿತ್ತು. ಇನ್ನೊಂದು ಸಾರಿ ಕೇವಲ ಒಂದು ವಾರದಲ್ಲಿ 116.5 ಅಂಗುಲ ಮಳೆ ಬಿತ್ತಂತೆ!

೮. ಮೆಕ್ಸಿಕೋದಲ್ಲಿ ಒಬ್ಬ ರೈಲ್ವೆ ಅಧಿಕಾರಿಯು ಇಮರ್ ಫಿಬಿಂಜರ್ (Emer Fibinger) ಎಂಬುವನನ್ನು ಕುರಿತು "30 ವರ್ಷಗಳಲ್ಲಿ ಪ್ರಪಂಚದಲ್ಲಿ ನಾನು ಹೇಳುವ ಬೇರೆ ಬೇರೆ ಕಡೆಗಳಲ್ಲಿ ಇರುವ 30 ನಗರಗಳನ್ನು ಸಂದರ್ಶಿಸಿದರೆ 4½ ಲಕ್ಷ ರೂಪಾಯಿಗಳನ್ನು ಕೊಡುವೆ" ನೆಂಬುದಾಗಿ ಹೇಳಿದನಂತೆ. ಅವನು ಅದೇ ರೀತಿ ತಕ್ಷಣವೇ ಹೊರಟನು. 20 ವರ್ಷಗಳ ನಂತರ, ಅಂದರೆ ಈಗ 103,750 ಮೈಲಿಗಳಷ್ಟು ನಡೆದಿರುವನಂತೆ! ಮತ್ತು 1939ನೇ ಇಸವಿ ಡಿಸೆಂಬರು 31ನೇ ತಾರೀಖು ಹಿಂತಿರುಗುವನೆಂದು ನಂಬುತ್ತಾನೆ! ಆಗ ಅವನು ಶ್ರೀಮಂತನಾಗುವನು.

೯. ಕಳೆದ ಮಹಾಯುದ್ಧದಲ್ಲಿ ಎಸೆದ ಎಷ್ಟೋ ಗುಂಡುಗಳು ಇನ್ನೂ ಆಸ್ಫೋಟನವಾಗದೇ ಅಲ್ಲಲ್ಲಿ ಬಿದ್ದಿವೆಯಂತೆ. ಅವು ಈಗ, ಆಗಾಗ, ಆಸ್ಫೋಟನವಾಗುತ್ತಿವೆಯಂತೆ. ಆದ್ದರಿಂದ ಬ್ರಿಟಿಷ್ ಸರ್ಕಾರದವರು ಜನರು ಅವುಗಳನ್ನು ಎಲ್ಲಿ ಕಂಡರೂ ಜಾಗರೂಕತೆಯಿಂದ ಪೋಲೀಸಿನವರಿಗೆ ತೆಗೆದುಕೊಂಡು ಹೋಗಿ ಕೊಡಬೇಕೆಂದು ಆಜ್ಞೆ ಮಾಡಿದ್ದಾರಂತೆ!

೧೦. ಒಬ್ಬ ಕಳ್ಳನು (Midget) ವಾಟರ್‌ಲೂ ಎಂಬಲ್ಲಿ ನೆಲದ ಮೇಲಿದ್ದ ಬೆಂಕಿ ಪೆಟ್ಟಿಗೆಯಿಂದ ಕೆಳಕ್ಕೆ ಹಾರಿ ಆತ್ಮಹತ್ಯ ಮಾಡಿಕೊಂಡಿರುವನಂತೆ!

೧೧. ಈಗ 50 ವರ್ಷಗಳ ಹಿಂದೆ 'ನನ್ನ ಸೇವಾಧುರೀಣರು' ಪಾರ್ಲಿಮೆಂಟಿನಲ್ಲಿ ಯಾವ ಮೆಂಬರು ಬಂದು ಒಂದು ಚಿಟಿಕೆ ನಶ್ಯವನ್ನು ಕೇಳಿದಾಗ್ಯೂ ಅವನ್ನು ಒದಗಿಸಲು ಒಂದು ನಿಧಿಯನ್ನು ಇಟ್ಟು ಹೋಗಿರುವನಂತೆ!

೧೨. ಎಂ. ಹಾಸಲ್ (M Hasl) ಎಂಬುವರು ಪ್ರಪಂಚದಲೆಲ್ಲಾ ಅತಿ ಚಿಕ್ಕದಾದ ಒಂದು ವೈರ್‌ಲೆಸ್ ಯಂತ್ರ (Wireless receiving set) ವನ್ನು ಮಾಡಿರುವರು! ಇದು ಸಾಮಾನ್ಯ ಗಡಿಯಾರದಷ್ಟಿದೆಯಂತೆ!

ಸರ್ ಸಿ. ವಿ ರಾಮನ್.

ಮಹಾತ್ಮರೊಂದಿಗೆ ಸಂಭಾಷಣೆ

ಇದೇ ಮಾರ್ಚಿ ೧೯ ನೇ ತಾರೀಖಿನ ದಿವಸ ಟಾಟಾ ವಿಜ್ಞಾನ ಮಂದಿರದ ಡೈರೆಕ್ಟರವರಾದ ಸರ್ ಸಿ. ವಿ. ರಾಮನ್ ರವರು ಮಹಾತ್ಮ ಗಾಂಧಿಯವರೊಂದಿಗೆ ಸ್ವಲ್ಪ ಕಾಲ ಸಂಭಾಷಣೆ ನಡೆಸಿದರೆಂದು ತಿಳಿದು ಬಂದಿದೆ.

'ಯೂರೋಪಿಯನ್ ಯುದ್ಧವಾಗುವುದಿಲ್ಲ'

ಮುಸೋಲಿನಿಯ ಭರವಸೆ

'ನಾನು ಬ್ರಿಟನ್ನಿನಿಂದ ಏನನ್ನೂ ಕೇಳುವುದಿಲ್ಲ. ಬ್ರಿಟಿಷ್ ರಾಷ್ಟ್ರಕ್ಕೆ ಸಾಧ್ಯವಾಗುವಷ್ಟು ಭರವಸೆಯನ್ನು ಕೊಡಲು ಸಿದ್ಧನಾಗಿದ್ದೇನೆ' ಎಂದು ಸಿನಾರ್ ಬೆನಿಟೊ ಮುಸೋಲಿನಿಯವರು ಲಾ ಇಂಟ್ರಾನ್ಸಿಜಿಯಂಟ್ ಪತ್ರಿಕೆಯ ವಾರ್ತಾದಾರರಿಗೆ ಭೇಟಿ ಕೊಟ್ಟು ಹೇಳಿದರು.

ಪತ್ರಿಕಾ ವಾರ್ತಾದಾರರು ಡ್ಯೂಸರನ್ನು ಭೇಟಿಯ ಕಾಲದಲ್ಲಿ ಹೀಗೆ ಪ್ರಶ್ನೆ ಮಾಡಿದರು "ಬ್ರಿಟನ್ನು ಇಟಲಿಯ ಇಥಿಯೋಪಿಯವನ್ನು ಒಪ್ಪಿ ಮನ್ನಿಸಿದರೆ, ಡ್ಯೂಸರು ಪೂರ್ವ ಆಫ್ರಿಕಾದಲ್ಲಿರುವ ಬ್ರಿಟಿಷ್ ಕಾಲೋನಿ ಮತ್ತು ಈಜಿಪ್ಟುಗಳ ತಂಟೆಗೆ ಹೋಗುವುದಿಲ್ಲವೆಂದು ಭರವಸೆ ಕೊಡಬೇಕೆಂದು ಬ್ರಿಟನ್ನು ಕೇಳಿದೆಯೋ? ನಿಮ್ಮ ಪವಿತ್ರವಾದ ಭರವಸೆಯಿದೆಯೋ?"

ಪುನಃ ಯೂರೋಪಿನ ಯುದ್ಧವಾಗುವುದಿಲ್ಲವೆಂದು ಸಿನಾರ್ ಮುಸೋಲಿನಿಯವರು ಅಭಿಪ್ರಾಯಪಟ್ಟರು. ಶಾಂತಿಪಾಲನೆಗಾಗಿ ನಾವು ದುಡಿಯುವುದಾಗಿ ಹೇಳಿದರು. ಆದರೆ ಶಾಂತಿಸ್ಥಾಪನೆಯಾಗಲು ಜನಾಂಗದ ಹಕ್ಕು ಬಾಧ್ಯತೆಗಳು ಸರಿಸಮನಾಗುವಂತೆ ವಿಕಾಸವಾಗಬೇಕು ಎಂದರು.

ಇಟಲಿಯು ಲೀಗ್ ಆಫ್ ನೇಷನ್ಸಿನಲ್ಲಿ ಸದಸ್ಯ ರಾಷ್ಟ್ರವಾಗಿರಲು ಇಷ್ಟಪಟ್ಟಿದೆ ಎಂದು ಡ್ಯೂಸರು ಹೇಳಿದರು. ಆದರೆ ಇಟಲಿಯ ಪರಿಶೋಧನೆ ವಿವೇಚನೆಗಳಿಗೆ ಅಡ್ಡಿಯಾಗಕೂಡದು.

"ತತ್ವ ಶಾಸ್ತ್ರದ ಆಕಾಶದ ಮೋಡಗಳಿಂದ ಕೆಳಗಿಳಿದು ವಾಸ್ತವ ಸ್ಥಿತಿಗತಿಗಳನ್ನು ನೋಡಿದರೆ ಇವು ಯೂರೋಪಿಯನ್ ನಾಗರಿಕತೆಯ ಪ್ರಚಾರಕ್ಕೆ ಅನುಕೂಲವೆಂದು ತಿಳಿಯಲು ಕಾಲವೊದಗಿದೆ"

ಅಬಿಸೀನಿಯದಲ್ಲಿ ಇಟಲಿಯ ಮಿಲಿಟರಿಯು ಇಳಿದಿರುವುದು ಕೇವಲ ರಕ್ಷಿವಿಹಾರವೆಂದು ಡ್ಯೂಸರು ಹೇಳಿ ವಿದೇಶ ರಾಜಧಾನಿ ಮುಂತಾದುವುಗಳ ಹೆಚ್ಚಿನ ರಕ್ಷಣೆಯ ಪ್ರಶ್ನೆಯು ಈಗ ಏಳದು ಎಂದರು.

ಮಿಸ್. ಶಾಂತ ಹೇಮಾವತಿ

ಉಡುಪಿಯ ಎಂಟು ವರ್ಷದ ಕುಮಾರಿ ನರ್ತಕಿ

ಆಕಾಶವಾಣಿ ಕಾರ್ಯಕ್ರಮ

ಶ್ರೀಮನ್ಮಹಾರಾಜರವರ ವರ್ಧಂತಿ ಪ್ರಯುಕ್ತ ಈ ಕೆಳಗೆ ಕಂಡಮೇರೆ ಆಕಾಶವಾಣಿಯ ವಿಶೇಷ ಕಾರ್ಯಕ್ರಮವು ಏರ್ಪಡಿಸಿರುತ್ತೆ.—

ತಾ॥ 1—6—36 ನೇ ಸೋಮವಾರ ಆರ್ಕೆಸ್ಟ್ರಾ 2—6—36 ನೇ ಮಂಗಳವಾರ ಆಸ್ಥಾನ ವಿದ್ವಾನ್ ತಿಟ್ಟೆ ಕೃಷ್ಣಯ್ಯಂಗಾರ್ಯರ ಸಂಗೀತ. 3—6—36 ನೇ ಬುಧವಾರ ಆಸ್ಥಾನ ವಿದ್ವಾನ್ ಚಿಕ್ಕರಾಮರಾಯರವರ ಸಂಗೀತ 4—6—36 ನೇ ಗುರುವಾರ ಮ॥ ವಿದ್ವಾನ್ ಎ. ಕೆ ಸುಬ್ಬರಾಯರವರ ವೇಣುಗಾನ. 5—6—36 ನೇ ಶುಕ್ರವಾರ ಆಸ್ಥಾನ ವಿದ್ವಾನ್ ಶಿವರುದ್ರಪ್ಪನವರ ಪಿಟೀಲು ವಾದನ 6—6—36 ನೇ ಶನಿವಾರ ಆಸ್ಥಾನ ವಿದ್ವಾನ್ ಸಂಗೀತ ಶಾಸ್ತ್ರ ರತ್ನ ವಾಸುದೇವಾಚಾರ್ಯರವರ ಸಂಗೀತ

ಓರಿಯಂಟಲ್ ಲೈಬ್ರೆರಿ, ಮೈಸೂರು.

ಮೇಲ್ಕಂಡ ಲೈಬ್ರೆರಿಯಲ್ಲಿ ಅಚ್ಚಾದ ಗಮಕಿನ ಭಾರತ. ಬ್ರಹ್ಮಸೂತ್ರ ಭಾಷ್ಯ ಮುಂತಾದ ಕೆಲವು ಸಂಸ್ಕೃತ ಮತ್ತು ಕನ್ನಡ ಕಾವ್ಯಗಳು ಮೊದಲಿನ ಬೆಲೆಗಿಂತಲೂ ಈಗ ಅತಿ ಸುಲಭವಾದ ಬೆಲೆಗೆ ಮಾರಲ್ಪಟ್ಟಿರುವರೆಂದು ತಿಳಿಯಬರುತ್ತದೆ.

ನನ್ನ ಸಂಕಲ್ಪದಿ ಕೃಷ್ಣ.

ಬರೆದವರು — ಎಂ. ವಿ. ನಾರಾಯಣ
ಶಾಸ್ತ್ರಿ, ಮೈಸೂರು

ನಾಡಿಲಿ ದಿನದಿನ ಜನಗಣಜನಯನ
ಸಿಸ್ಥಿಯುಗುಣಗಳ ಸಾರುತಿಪ,
ಇನ್ನೂ ಸ ಬಿಸಸು ತೋರುತಿಪ
ಕವಿಗಳು ರಚಿಸಿದ ಗಾಯಕತ್ವಂದವು
ಉತ್ತಮಸನ್ಮಾತ ಹೇಳುತಿಪ,
ಚಿತ್ರದ ವಿಸ್ತರ ತೋರುತಿಪ
ನವನವ ಸಕಲಮುಗ ನಗರದ ನೋಟವು
ಶಂಕಾಪೂರಿಯನು ಹೋಲುತಿದೆ,
ಬೆಳಗಿದ ಮನುಜರ ನೆಳಲುತಿದೆ,
ಬನದಲಿ ತುಂಬಿದ ಸಖಿಗಳು ಕುಸುಮಗಳು
ಕವಿಗಳ ಸುಧೆಯನು ಒತ್ತುತಿಪ
ನವಿಗಳಸಂಯುಗ ಎತ್ತುತಿಪ,
ಜಾಜಿಯು ಮಲ್ಲಿಗೆ ಸಂಪಿಗೆ ತುಂಬಿದೆ,
ಸಂಪಿಗೆ ಚಂದನ ದೇವಿಯಿದೆ,
ಕೆಂಪಿನ ತುಂಬಿದ ತಾವರೆ ,
ಕಾವೇರಿ ತಾಯ ಪ ಕೆರೆಗಳಂತೆ
ರಾಜ ಮೋಹನ ಪಡುವುತಿಪ,
ಮಿತ್ರಗಳೆಲ್ಲಪ ನಲಿಯುತಿಪ,
ಒಂದೆಯ ಮತ್ತ ... ಸಲೆದೊರೆ
ಪ್ರೇಮದ ತುಂಬಿದ ಬಾಳಿದೆ,
ಕ್ಷೇಮದ ನಿಧಿಯಗ ತುತುರಲಿದೆ,
ಸಂಹಾರ ರಾಜರ ಪ್ರಜೆಗಳ ರಕ್ಷಿಸ
ನಮ್ಮಯ ಬಿಸುಲ ತೋರುತಿರ,
ಜನ್ಮಗೆ ' ಮಾದರಿ ' ಎನ್ನುತಿಪ,

ಬರೆಯುವ ಕಲೆ

ಕಾಲಾಂತರದಿಂದಲೂ ಕವಿಗಳೂ, ಗ್ರಂಥಕರ್ತರುಗಳೂ ಸಮ್ಮಾನ ಗೌರವಾದಿಗಳು ಬಗಳಿದವಾಗಿ ನಡೆಯುತ್ತಲಿರುವವು ಯಾವ ಭಾಷೆಯಲ್ಲಿಯೂ ಬರೆಯುವವರಿಗೂ ಮತ್ತು ಓದುವವರಿಗೂ ಸಮಾಜದಲ್ಲಿ ಗೌರವವೂ ಮತ್ತು ಸ್ಥಾನವೂ ದೊರಕುವುದು ಇದಕ್ಕೆ ಮುಖ್ಯ ಸಾಹಿತ್ಯದ ಬಲೆಯು ಮತ್ತು ಗೌರವವೂ ಬರುವುದು ... ಜೀವನವಾಗಿರುವುದೋ ಅಲ್ಲದೆ ನಿರಿಗೂ ನಮ್ಮ ಹಿಂದಿನ ಕಾಲದ ಕವಿಗಳೂ ಮುಂದೆ ಯಶಸ್ವಿಯಾದವರ ಬರಹಗಳೂ, ಸಾಹಿತ್ಯ ... ಸ್ವಾರ್ಥದಿಂದ ದೂರವಾದವು ಇದಕ್ಕೆ ಕೇವಲ ವ್ಯಕ್ತಿ ... ಕಾರಣವಲ್ಲ

ಸಾಹಿತ್ಯವು ಕೇವಲ ವ್ಯಕ್ತಿಯಿಂದ ಎದರಲ್ಲಿ ... ಪಾತ್ರವಹಿಸುವುದು. ಜನಜಾಗ್ರತಿಯಲ್ಲಿನ ಭಾವನೆಗಳನ್ನು ವ್ಯಕ್ತಿ ಭಾವನಾಜಗತ್ತಿನ ಮನಸ್ಸೋ ಹಿಸುವಂತೆ ರಚಿಸಿದ ಗ್ರಂಥವೇ ಜಯಶೀಲ ಯಾಗುವುದು ಈ ಮುಖ್ಯ ವಿಷಯ ವನ್ನು ಗಮನದಲ್ಲಿಟ್ಟು ಬರೆಯುವ ಸಾಹಿತಿಯೇ ಜನತೆಯಿಂದ ಗೌರವವನ್ನು ಪಡೆಯುವನು

ಭಾಷೆಯು ಮುಂದೋರಿಯುವಲ್ಲಿ ಸಮಾಜವೂ ಮುಂದೊರೆಯುವುದು ಈ ರೀತಿ ನಾದ ಪರಸ್ಪರ ಸಂಬಂಧದಿಂದಲೇ ಸಾಹಿತಿಗೂ ಸಮಾಜಕ್ಕೂ ಒಂದು ಕಲ್ಪನೆ ಯಾಗುವುದು ಸಾಹಿತಿಯು ಬರೆವಣಿಗೆಯು ಸಮಾಜಕ್ಕೆ ಉಪಕಾರಿಯಾದಂತಲ್ಲ ಆ ಸಾಹಿತ್ಯ—ಸಾಹಿತಿಯ ಬೆಲೆಯೂ ಕೂಡ ಕೆಲವು ಸಮಯ ಆ ಬೆಲೆಯು ಕೆಲವು ಕಾಲದಲ್ಲಿದ್ದು ಬಳಿದು ಹೋಗುವ ಸಂಭವವು ಒದಗುವುದು. ಆದರೆ ಸಾಹಿತಿಯ ವಿಷಯ ಜ್ಞಾನವು ಪಕ್ವವಾಗಿದ್ದು, ಭಾಷಾಶೈಲಿಯು ಸುಂದರವಾಗಿದ್ದು ಭಾವ ಪೂರಿತವಾಗಿದ್ದು ಸತ್ಯತೆಯಿಂದ ಶೋಭಿತ ವಾಗಿದ್ದಲ್ಲಿ ಆಸಾಹಿತ್ಯವು ಕಾಲಾಂತರದಲ್ಲಿ ಯೂ ಸಮಾಜಕ್ಕೆ ಉಪಯೋಗವಾಗುವುದರಿಂದ ಆಸಾಹಿತ್ಯದ ಬೆಲೆಯು ಕಾಲಾಂತರದಲ್ಲಿಯೂ ಸ್ಥಿರವಾಗಿ ನಿಲ್ಲುವುದು

ಭಾಷೆಯು—ಬರವಣಿಗೆಯು— ಕಲಿಕಾಲ ಮಹಿಮೆಯಾಗುವುದು, ಕೆಲಕಾಲ ಶಾಂತಿ ಕುತೂಹಲ ಪೂರಿತವಾಗುವುದು, ಕೆಲವೆಡೆ ರಸವತ್ತಾಗುವುದು, ಕೆಲವೆಡೆ ಸಾರ ರಹಿತವಾಗುವುದು ಕೆಲಸವೂ ಕಠಿಣವಾಗುವುದು, ಕಲಸವೂ ಸಲಲಿತ ಸರಳತೆಯಿಂದ ಹರಿಯುವುದು. ಈ ತೆರನ ಭಾಷೆಯು ಮನಸ್ಸಿನ ಪರಿಣಾಮದ ಬಹಿರಂಗ ಪ್ರಕಟನೆ ತತ್ವದಲ್ಲಿಂದ ಸಲ್ಲಿ ಕಾಣಿಸುವುದು.

ಭಾಷಾವಿಜ್ಞಾನದಿಂದಲೇ ... ಜೀವನದೆಗೆಯು ಬಲಿಯುವುದು, ಯೋಚನಾಲಹರಿಗಳು ವಿಚಾರವಾದದ ದರ್ಶನ ವು, ಸಾಹಿತಿಯು ತನ್ನ ಅಂತರಂಗದ ಭಾವನಾಟಕವನ್ನು ಜನತೆಯ ಮುಂದೆ ಬಯಲಿಗೆ ತರುವುದು, ಸಮಾಜವು ಸಾಹಿತಿಯ ಸಹಯೋಗ ವನ್ನರಿಯುವುದು. ಭಾಷೆಯ ಭಾವನೆ ಉದ್ದೇಶಗಳನ್ನು ಸಾಹಿತ್ಯ ಶಕ್ತಿ ಮತ್ತು ಮಾರ್ಗ ಭಾವನೆ ಸಾಧಕನ ಅನಂತ ಕಲೆ ಆನಂದವನ್ನು ಗಳಿಸಿಯೂ ಸಾಧಿಸಬ ಹುದು

ಭಾಷಾ ಶೈಲಿಯ ಭಾವನೆಗಳು ನಾನಾ ರೀತಿಯವು ಇದಕ್ಕೆ ಒಂದೇ ಇಲ್ಲ ಶೈಲಿ ವ್ಯಕ್ತಿಯ ವ್ಯಕ್ತಿತ್ವ ... ಇಲ್ಲ, ನ ತರಂಗಗಳು ಹರಿಯಂತಿಲ್ಲ, ವಿಷಯ ಬರವು ಅಲ್ಲ ... ಭಾಷೆಯಲ್ಲಿ ಬಹು ರೂಪಾಂತರ ಹೊಂದುವುದು

ಭಾಷೆಯ ರೀತಿಯೇ ಬೇರೆ ಸಮಾಜಸುಧಾರಕರ ಸಾಮಾನ್ಯ ಶೈಲಿಯೇ ಬೇರೆ ಕವಿಯ ಒಬ್ಬದ ಹಾದಿಯೇ ಕಲ್ಪನಾಶಕ್ತಿ ಬರಹ ಅದೆ ಪ್ರಬಂಧ ರಚನೆಯ ಎಲ್ಲಾ ಸ ಹೀಗ ಶೈಲಿಸ್ವಾತಂತ್ರ್ಯ ವ್ಯಕ್ತಿ ಶಕ್ತಿಯನ್ನನುಸರಿಸಿ ... ತ್ತದೆ

ಸಾಹಿತ್ಯದಲ್ಲಿ ... ನವರಸ ಭರಿತ ... ವು ... ಅದರ ಸನ್ನಿವೇಶ ಶಕ್ತಿಯಂತಹ ... ಮತ್ತು ವಿಷಯ ... ಇದು ... ಪ್ರಚಾರಕನಿಗೆ ... ಅಂತರ ... ಶೈಲಿಯ ...



ಲೇಟ್ ಶ್ರೀ ಚಾಮರಾಜ ಒಡೆಯರ್ ಛತ್ರ

ಅಸ್ಮೃತ ಶಿಲಾ ಪ್ರತಿಮೆ.

ನಮ್ಮ ದೇಶದ ಸಾಹಿತ್ಯವು ಸಹ ಇ ... ಗ ... ಬರ ... ಲಕ್ಷಣ ... ಮತ್ತು ಹಾರ ... ಮುಂದೆ ಬರುತ್ತಿರುವ ... ಕಲ ... ಸಮಾಜ ... ದ ...

ನಮ್ಮ ಪ್ರಾಚೀನ ಗ್ರಂಥಕರ್ತರು ... ಕಾವ್ಯದರ್ಶಗಳನ್ನು ತೋರಿಕೊಟ್ಟು ... ಭಾಗವತ ... ಮತ್ತು ... ಇಲ್ಲಿ ... ಬರೆಯುವುದು ಒಂದು ಕಲೆಯು ... ಎಂದು ...

ಬರೆಯುವುದೊಂದು ಕಲೆಯೇ ... ಅಂತಹ ಕಲೆ ' ಎಂಬುದು ಮಾಸಿ ಚಿತ್ರದ ಕನ್ನಡಿಯೊಳಗಿನ ಗೊಂಬೆ ... ಎಂದು ಹಾಸ್ಯ ಮಾಡಿ ... ವನ್ನು ತೋರುವರು

ಬರೆಯುವುದೂ ಒಂದು ಕಲೆ. ಕಲೆ ಎಂದರೆ ಬರೆಯುವ ಒಂದು ... ಮನಸ್ಸು, ಬುದ್ಧಿ ಮತ್ತು ಸಂಕಲ್ಪ (... ಈ ತ್ರಿಮೂರ್ತಿಯ ... ತೆಯಿಂದ ... ರಸಪ್ರಕಾರ ... ಬರೆಯುವಲ್ಲಿ ... ತನ್ನ ಬುದ್ಧಿ ಸಂಕಲ್ಪಗಳನ್ನು ... ಭಾವನಾ ಪೂರಿತವಾಗಿ ... ಬರೆಯುವ ... ಗಾಗುವುದು

ಕ ಶ್ರೀನಿವಾಸಮೂರ್ತಿ
ಮೈಸೂರು

For Up-to-date and Efficient Medical Treatment

Go to—**Dr. A. J. RAM & SONS,**

Sayaji Rao Road, Mysore.

Physicians, Dentists, Opticians, etc.

ಡಾ|| ಎ. ಜೆ. ರಾಂ. ಅಂಡ್ ಸನ್ಸ್,

ಸಯ್ಯಾಜಿರಾವ್ ರೋಡ್, ಮೈಸೂರು ಸಿಟಿ.

ಔಷಧ ವ್ಯಾಪಾರಿಗಳು, ಚಿಕಿತ್ಸಕರು, ದಂತವೈದ್ಯರು,
ಮತ್ತು ಕನ್ನಡಕ ವ್ಯಾಪಾರಿಗಳು

ಉತ್ತಮವಾದ ನವೀನ ಚಿಕಿತ್ಸೆಗಳಿಗೆ ನಮ್ಮಲ್ಲಿಯೇ ಬನ್ನಿರಿ

ಪಂಡಿತ ಸಿ. ಎಚ್. ಚಂದ್ರಭಾರ್ಗಸಿಂಗ್

ಇವರಿಂದ ತಯಾರಿಸಲ್ಪಟ್ಟ

ಫಲಪುಷ್ಪಸಾರ ರಸಾಯನ.

ಸುಖಕರ ಮಲಬಂಧನಿವಾರಿಣೀ ಕ್ರಯ —1-6-0

ಗುಣ.—ಇದು ಜಾನಾಕ ಮುಂತಾದ ಕಠಿಣ ವಿರೇಚಕ ವಸ್ತುಗಳ ಸಂಯೋಗವಿಲ್ಲದ ಕೇವಲ ಅನ್ನಶೀಕರಣ ಪ್ರಯೋಗವು ಕೇವಲ ಔಷಧಸಿದ್ಧ ... ಇದನ್ನು ಉಪಯೋಗಿಸುವುದರಿಂದ ಎಲ್ಲಾ ವಿಧವಾದ ಮಲಬಂಧವೂ, ... ಅಜೀರ್ಣ, ಉಷ್ಣವಾಯು, ಶೀಲವಾಯು, ಎದೆಯುರಿ, ಹೊಟ್ಟೆ ... ತಲೆತಿರುಗು ಮುಂತಾದ ರೋಗಗಳೆಲ್ಲವೂ ಖಂಡಿತ ಗುಣವಾಗುತ್ತೆ

ಬ್ರಾಂಚ್:—ಶ್ರೀಸತ್ಯನಾರಾಯಣ ಆಯುರ್ವೇದಿಕ್ ಫಾರ್ಮಸಿ,
ಜಗನ್ಮೋಹನ ಬಂಗ್ಲೆ ರಸ್ತೆ, ಮೈಸೂರು

You Know

OUR IDEAL ARRANGEMENTS & CHOICEST PREPARATIONS

We need not tell you about it

COME & SEE OUR NOVEL

innovations and up-to-date Management.

SRI KRISHNA BHAVAN,

Mysore.

ANANDA SODA FACTORY,

DODDAPET. MYSORE.

BEST AERATED WATER SUPPLIERS

COMPLETE REQUISITES FOR

AERATED WATER MANUFACTURERS

AVAILABLE

ಆನಂದಾ ಸೋಡಾ ಫ್ಯಾಕ್ಟರಿ,

ದೊಡ್ಡಪೇಟೆ, ಮೈಸೂರು

ಮರ್ಚೆಂಟ್ಸ್ ಬ್ಯಾಂಕ್ ಲಿಮಿಟೆಡ್, (H.O) ಮೈಸೂರು.

೧೯೩೨ ರಲ್ಲಿ ಸ್ಥಾಪಿತವಾದದ್ದು.

ಷೇರುದಾರ್ರಿಗೆ ಸೇ|| ಸಾ|| 9 ರಂತೆ ಡಿವಿಡೆಂಡ್ ಕೊಟ್ಟಿರುತ್ತೆ. ನಮ್ಮ 5 ರೂಪಾಯಿನ F T B ಸರ್ಟಿಫಿಕೇಟಿಗೆ ಬೆನಫಿಟ್ 500 ರೂಪಾಯಿಗಳಾಗಿವೆ ಕುಟುಂಬ ತ್ರೈಫಲದಾಯಕ ಸಹಾಯನಿಧಿ ಈಗಾಗಲೇ ಸಾವಿರಾರು ಜನ ಮೆಂಬರಾಗಿರುತ್ತಾರೆ ಅನೇಕರು ಬೆನಫಿಟ್ ಪಡೆದಿರುತ್ತಾರೆ ಬೆನಫಿಟ್ ಹಂಚಿಕೆಯಲ್ಲಿ ಮೊದಲನೇ ವರ್ಷವೇ ಸರ್ಟಿಫಿಕೇಟ್ ಮೊಬಲಗಿನ ನಾಲ್ಕರಷ್ಟು ಬೆನಫಿಟ್ ಬಂದಿರುತ್ತದೆ

ಜನನಕ್ಕೆ, ಉಪನಯನಕ್ಕೆ, ವಿವಾಹಕ್ಕೆ, ವಿದ್ಯಾಭ್ಯಾಸಕ್ಕೆ, ಮರಣಕ್ಕೆ ಮತ್ತು ನಿಮ್ಮ ಕುಟುಂಬಕ್ಕೆ ಧನಸಹಾಯ ಬೇಕೋ? ಹಾಗಾದರೆ ನಮ್ಮ ಬ್ಯಾಂಕಿನ F T B ಸರ್ಟಿಫಿಕೇಟಿಗೆ 5 ರೂಪಾಯಿಗಳನ್ನು ಒಟ್ಟಾಗಿಯಾಗಲೀ, ಕಂತುಗಳಲ್ಲಾಗಲೀ, ಪಾವತಿಮಾಡಿ ಮೆಂಬರಾಗಿ 15 ವರ್ಷಗಳೂ ಬೆನಿಫಿಟ್ ಪಡೆಯಬಹುದು. ನಂತರ ಸರ್ಟಿಫಿಕೇಟ್ ಮೊಬಲಗು ಬೋನಸ್ ಸಮೇತ ವಾಪಸ್ ಮಾಡಲ್ಪಡುತ್ತೆ ಬೆನಿಫಿಟ್ ಪಡೆಯದ ಮೆಂಬರಿಗೆ 15 ವರ್ಷಗಳ ನಂತರ ಸರ್ಟಿಫಿಕೇಟ್ ಮೊಬಲಗಿನ 3 ರಷ್ಟು ಮೊಬಲಗು ಕೊಡಲ್ಪಡುವುದು ಪ್ರವೇಶಧನ—ಸರ್ಟಿಫಿಕೇಟ್ 1 ಕ್ಕೆ 1 ರೂಪಾಯಿ ಹೆಂಗಸು, ಗಂಡಸು, ಜಾತಿ ಮತ ಮತ್ತು ವಯಸ್ಸಿನ ಯಾವ ನಿರ್ಬಂಧವೂ ಇಲ್ಲ

ಸೇ|| ಸಾ|| 6 | ರಂತೆ 200 ತಿಂಗಳ ಮುಯಿದೆಯಿಂದ ಸ್ಥಿರಾಧಾರದ ಮೇಲೆ ಸಾಲ ಬೇಕೋ? ಹಾಗಾದರೆ, ನಮ್ಮ 15 ವರ್ಷಗಳ 250 ರೂಪಾಯಿನ ಪ್ರಾವಿಡೆಂಟ್ ಬಾಂಡುಗಳನ್ನು ಪಡೆಯಿರಿ ಇದಕ್ಕೆ ಕಂತು, ತಿಂಗಳೊಂದಕ್ಕೆ 1 ರೂಪಾಯಿ ಮಾತ್ರ ಪ್ರವೇಶದರ ಬಾಂಡ್ 1 ಕ್ಕೆ 1 ರೂಪಾಯಿ ಪರಮಾವಧಿ ಸಾಲದ ಮೊಬಲಗು ರೂ 5,000

ಪ್ರತಿ ತಾಲ್ಲೂಕಿನಲ್ಲೂ ಮೈಸೂರು ಮತ್ತು ಬೆಂಗಳೂರು ನಗರಗಳ ಪ್ರತಿ ಮೊಹಲ್ಲಾದಲ್ಲೂ ಬ್ಯಾಂಕಿನ ಕೆಲಸ ನಡೆಸಲು ಏಜಂಟರು ಮತ್ತು ಲೋಕಲ್ ಡೈರೆಕ್ಟರುಗಳು ಬೇಕಾಗಿವೆ ಒಳ್ಳೇ ಕಮಿಷನ್ ಯಾ ಸಂಬಳ ಮಾಹೆಯಾನ 25 ರೂಪಾಯಿ ಬಾಗಾಯಿತು 100 ರೂಪಾಯಿ ಆಲೋಯೆನ್ಸು ದೊರೆಯುವದು

ಹೆಚ್ಚು ವಿಷಯಗಳಿಗೆ 0–1–3 ಪೋಸ್ಟೇಜ್ ಸ್ಟಾಂಪು ಸಮೇತ ಕೆಳಗಿನ ವಿಳಾಸಕ್ಕೆ ಬರೆಯಿರಿ

ಮ್ಯಾನೇಜಿಂಗ್ ಏಜಂಟ್ಸ್,
ಮರ್ಚೆಂಟ್ಸ್ ಬ್ಯಾಂಕ್, ಲಿಮಿಟೆಡ್, ಮೈಸೂರು

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ ಪಂಡಿತರ

ಬಾಲಸುಧಾ

ಮಕ್ಕಳ ಜ್ವರದ ಗೆಡ್ಡೆಯನ್ನು ಖಾತರಿ ಗುಣಪಡಿಸುತ್ತೆ ಲಿವರ್ (ಪಿತ್ತಕೋಶ) ದಪ್ಪನಾಗಿ ಕಣ್ಣು ಹಳದಿ ಬಣ್ಣವಾಗಿದ್ದರೆ ಇದರ ಸೇವನೆಯಿಂದ ದಿನೇ ದಿನೇ ಗುಣವಾಗುತ್ತೆ 20 ವರ್ಷಗಳಿಂದಲೂ ಅನುಭವ ಸಿದ್ಧವಾಗಿದೆ—ಮಕ್ಕಳ ಭೇದಿಗೆ ನಮ್ಮ ಬಾಲ ಸಂಜೀವಿನಿಯನ್ನೇ ಉಪಯೋಗಿಸಿರಿ

ಬಾಲಸುಧಾ ಬೆಲೆ 1 ರೂ   ಬಾಲಸಂಜೀವಿನಿ 4 ಆ

ಮೈಸೂರು, ಬೆಂಗಳೂರು, ಮದ್ರಾಸುಗಳಲ್ಲಿ ನಮ್ಮ ಶಾಖೆಗಳಿವೆ

ಸದ್ವೈದ್ಯಶಾಲಾ, ನಂಜನಗೂಡು.

ಎಂ. ವಿ. ನಾರಾಯಣರಾಯರ

ಶ್ರೀ ಸತ್ಯನಾರಾಯಣ ಪರಿಮಳ ಫ್ಯಾಕ್ಟರಿ,

ಜಗನ್ಮೋಹನ ಬಂಗ್ಲಾ ಬೀದಿ, ಮೈಸೂರು

ಪರಿಮಳ ಅಗರ್ ಬತ್ತಿ

ಉಪಯೋಗಿಸಿ ಪ್ರೋತ್ಸಾಹಿಸಿರಿ

For Up-to-date and Efficient Medical Treatment

Go to—**Dr. A. J. RAM & SONS,**

Sayaji Rao Road, Mysore.

Physicians, Dentists, Opticians, etc.

ಡಾ|| ಎ. ಜೆ. ರಾಂ. ಅಂಡ್ ಸನ್ಸ್,

ಸಯ್ಯಾಜಿರಾವ್ ರೋಡ್, ಮೈಸೂರು ಸಿಟಿ.

ಔಷಧ ವ್ಯಾಪಾರಿಗಳು, ಚಿಕಿತ್ಸಕರು, ದಂತವೈದ್ಯರು,
ಮತ್ತು ಕನ್ನಡಕ ವ್ಯಾಪಾರಿಗಳು.

ಉತ್ತಮವಾದ ನವೀನ ಚಿಕಿತ್ಸೆಗಳಿಗೆ ನಮ್ಮಲ್ಲಿಯೇ ಬನ್ನಿರಿ.

ಪಂಡಿತ ಪಿ. ಎಚ್. ಚಂದ್ರಭಾನ್‌ಸಿಂಗ್

ಇವರಿಂದ ತಯಾರಿಸಲ್ಪಟ್ಟ

ಫಲಪುಷ್ಪಸಾರ ರಸಾಯನ.

ಸುಖಕರ ಮಲಬಂಧನಿವಾರಿಣೀ. ಕ್ರಯ:—1-8-0

ಗುಣ:—ಇದು ಜಾಪಾಳ ಮುಂತಾದ ಕಠಿಣ ವಿರೇಚನ ವಸ್ತುಗಳ ಸಂಯೋಗವಿಲ್ಲದ ಕೇವಲ ಆಮ್ಲೀಕರಣ ಪ್ರಯೋಗವು. ಕೇವಲ ಅನುಭವಸಿದ್ಧವಾದದ್ದು. ಇದನ್ನು ಉಪಯೋಗಿಸುವುದರಿಂದ ಎಲ್ಲಾ ವಿಧವಾದ ಮಲಬಂಧವು, ಮೂಲವ್ಯಾಧಿ, ಅಜೀರ್ಣ, ಉಷ್ಣವಾಯು, ಕೀಲುವಾಯು, ಸಿವೆಯುಂ, ಹೊಟ್ಟೆ ನೋವು, ಕೆಮ್ಮು, ತಲೆತಿರುಗು ಮುಂತಾದ ರೋಗಗಳೆಲ್ಲವೂ ಖಂಡಿತ ಗುಣವಾಗುತ್ತವೆ.

ಬ್ರಾಂಚ್:—ಶ್ರೀಸತ್ಯನಾರಾಯಣ ಆಯುರ್ವೇದಿಕ್ ಫಾರ್ಮಸಿ,
ಜಗನ್ಮೋಹನ ಬಂಗ್ಲೆ ರಸ್ತೆ, ಮೈಸೂರು.

You Know

OUR IDEAL ARRANGEMENTS & CHOICEST PREPARATIONS.

We need not tell you about it.

COME & SEE OUR NOVEL

innovations and up-to-date Management

SRI KRISHNA BHAVAN,

Mysore.

ANANDA SODA FACTORY,

DODDAPET, MYSORE.

BEST AERATED WATER SUPPLIERS.

COMPLETE REQUISITES FOR

AERATED WATER MANUFACTURERS

AVAILABLE.

ಆನಂದಾ ಸೋಡಾ ಫ್ಯಾಕ್ಟರಿ,

ದೊಡ್ಡಪೇಟೆ, ಮೈಸೂರು.

ಮರ್ಚೆಂಟ್ಸ್ ಬ್ಯಾಂಕ್ ಲಿಮಿಟೆಡ್, (H.O.) ಮೈಸೂರು.

೧೯೩೦ ರಲ್ಲಿ ಸ್ಥಾಪಿತವಾದದ್ದು.

ಷೇರುದಾರ್ರಿಗೆ ಸೇ|| ಸಾ|| 9 ರಂತೆ ಡಿವಿಡೆಂಡ್ ಕೊಟ್ಟಿರುತ್ತೆ. ನಮ್ಮ ... ರೂಪಾಯಿನ F.T.B. ಸರ್ಟಿಫಿಕೇಟಿಗೆ ಬೆನಫಿಟ್ 600 ರೂಪಾಯಿಗಳಾಗಿ ... ಕುಟುಂಬ ಶ್ರೇಯಸ್ಸು ದಾಯಕ ಸಹಾಯನಿಧಿ. ಈಗಾಗಲೇ ಸಾವಿರಾರು ಜನ ಮೆಂಬರಾಗಿರುತ್ತಾರೆ. ಅನೇಕರು ಬೆನಫಿಟ್ ಪಡೆದಿರುತ್ತಾರೆ. ಬೆನಫಿಟ್ ಹಂಚಿಕೆಯು... ಮೊದಲನೇ ವರ್ಷವೇ ಸರ್ಟಿಫಿಕೇಟ್ ಮೊಬಲಗಿನ ನಾಲ್ಕರಷ್ಟು ಬೆನಫಿಟ್ ಬಂದಿರುತ್ತದೆ.

ಜನನಕ್ಕೆ, ಉಪನಯನಕ್ಕೆ, ವಿವಾಹಕ್ಕೆ, ವಿದ್ಯಾಭ್ಯಾಸಕ್ಕೆ, ಮರಣಕ್ಕೆ ಮತ್ತು ನಿಮ್ಮ ಕುಟುಂಬಕ್ಕೆ ಧನಸಹಾಯ ಬೇಕೋ? ಹಾಗಾದರೆ ನಮ್ಮ ಬ್ಯಾಂಕಿನ F.T.B. ಸರ್ಟಿಫಿಕೇಟಿನ 5 ರೂಪಾಯಿಗಳನ್ನು ಒಟ್ಟಾಗಿಯಾಗಲೀ, ಕಂತು ... ಲ್ಯಾಗಲೀ, ಪಾವತಿಮಾಡಿ ಮೆಂಬರಾಗಿ. 15 ವರ್ಷಗಳೂ ಬೆನಿಫಿಟ್ ಪಡೆಯಬಹುದು. ನಂತರ ಸರ್ಟಿಫಿಕೇಟ್ ಮೊಬಲಗು ಬೋನಸ್ ಸಮೇತ ವಾಪಸ್ ಮಾಡಲ್ಪಡುತ್ತೆ. ಬೆನಿಫಿಟ್ ಪಡೆಯದ ಮೆಂಬರಿಗೆ 15 ವರ್ಷಗಳ ನಂತರ ಸರ್ಟಿಫಿಕೇಟ್ ಮೊಬಲಗಿನ 2 ರಷ್ಟು ಮೊಬಲಗು ಕೊಡಲ್ಪಡುವದು. ಪ್ರವೇಶಧನ — ಸರ್ಟಿಫಿಕೇಟ್ 1 ಕ್ಕೆ 1 ರೂಪಾಯಿ. ಹೆಂಗಸು, ಗಂಡಸು, ಜಾತಿ ಮತ ಮತ್ತು ವಯಸ್ಸಿನ ಯಾವ ನಿರ್ಬಂಧವೂ ಇಲ್ಲ.

ಸ|| ಸಾ 6| ರಂತೆ 20) ತಿಂಗಳ ವಾಯಿದೆಯಿಂದ ನಿರಾಘಾತದ ಮೇಲೆ ಸಾಲ ಬೇಕೋ? ಹಾಗಾದರೆ, ನಮ್ಮ 15 ವರ್ಷಗಳ 250 ರೂಪಾಯಿನ ... ಡೆಂಟ್ ಬಾಂಡುಗಳನ್ನು ಪಡೆಯಿರಿ. ಇದಕ್ಕೆ ಕಂತು, ತಿಂಗಳೊಂದಕ್ಕೆ 1 ರೂಪಾಯಿ ಮಾತ್ರ. ಪ್ರವೇಶಧನ ಬಾಂಡ್ 1 ಕ್ಕೆ 1 ರೂಪಾಯಿ. ಪರಮಾವಧಿ ಸಾಲದ ಮೊಬಲಗು ರೂ. 5,000.

ಪ್ರತಿ ತಾಲ್ಲೂಕಿನಲ್ಲೂ ಮೈಸೂರು ಮತ್ತು ಬೆಂಗಳೂರು ನಗರಗಳ ... ಮೊಹಲ್ಲಾದಲ್ಲೂ ಬ್ಯಾಂಕಿನ ಕೆಲಸ ನಡೆಸಲು ಏಜಂಟರು ಮತ್ತು ಲೋಕಲ್ ... ಕ್ಟರುಗಳು ಬೇಕಾಗಿವೆ. ಒಳ್ಳೇ ಕಮಿಷನ್ ಯಾ ತಲಬು ಮಾಹೆವಾರ 25 ರೂಪಾಯಿ ಲಾಗಾಯತು 100 ರೂಪಾಯಿ ಅಲೋಯನ್ಸು ದೊರೆಯುವದು.

ಹೆಚ್ಚು ವಿವರಗಳಿಗೆ 0-1-3 ಪೋಸ್ಟೇಜ್ ಸ್ಟಾಂಪು ಸಮೇತ ಕೆಳಗಿನ ವಿಳಾಸಕ್ಕೆ ಬರೆಯಿರಿ.

ಮ್ಯಾನೇಜಿಂಗ್ ಏಜಂಟ್ಸ್,
ಮರ್ಚೆಂಟ್ಸ್ ಬ್ಯಾಂಕ್ ಲಿಮಿಟೆಡ್, ಮೈಸೂರು.

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ಬಾಲಸುಧಾ

ಮಕ್ಕಳ ಜ್ವರವ ಗೆಡ್ಡೆಯನ್ನು ಖಾತರಿ ಗುಣ ಪಡಿಸುತ್ತೆ. ಲಿವರ್ (... ಕೋಶ) ದಪ್ಪನಾಗಿ ಕಣ್ಣು ಹಳದಿ ಬಣ್ಣವಾಗಿದ್ದರೆ ಇದರ ಸೇವನೆಯಿಂದ ... ದಿನೇ ಗುಣವಾಗುತ್ತೆ. 20 ವರ್ಷಗಳಿಂದಲೂ ಅನುಭವ ಸಿದ್ಧವಾಗಿದೆ—... ಬೇಬಿಗೆ ನಮ್ಮ ಬಾಲ ಸಂಜೀವಿನಿಯನ್ನೇ ಉಪಯೋಗಿಸಿರಿ.

ಬಾಲ ಸುಧಾ ಬೆಲೆ 1 ರೂ. ಬಾಲ ಸಂಜೀವಿನಿ ...

ಮೈಸೂರು, ಬೆಂಗಳೂರು, ಮದ್ರಾಸುಗಳಲ್ಲಿ ನಮ್ಮ ಶಾಖೆಗಳಿವೆ.

ಸದ್ವೈದ್ಯಶಾಲಾ, ನಂಜನಗೂಡು.

ಎಂ. ವಿ. ನಾರಾಯಣರಾಯರ

ಶ್ರೀ ಸತ್ಯನಾರಾಯಣ ಪರಿಮಳ ಫ್ಯಾಕ್ಟರಿ,

ಜಗನ್ಮೋಹನ ಬಂಗ್ಲಾ ಬೀದಿ, ಮೈಸೂರು.

ಪರಿಮಳ ಅಗರ್ ಬತ್ತಿ

ಉಪಯೋಗಿಸಿ ಪ್ರೋತ್ಸಾಹಿಸಿರಿ.

|| ಸತ್ಯಮೇವೋದ್ಧರಾಮ್ಯಹಮ್ ||

ರಾಜಧಾನಿಯ ರಾಷ್ಟ್ರೀಯ ವಾರ ಪತ್ರಿಕೆ.

ವೃದ್ಧ ಪಿತಾಮಹ ಎಂ. ವೆಂಕಟಕೃಷ್ಣಯ್ಯನವರ ಜ್ಞಾಪಕಾರ್ಥವಾಗಿ ಪ್ರಕಟಿಸಲ್ಪಡುವುದು.

ಸಂಪಾದಕರು ಅಗರಂ ರಂಗಯ್ಯ, ಬಿ ಎ

ಸಂಪುಟ ೧] MYSORE : MONDAY 8—6—36 ಮೈಸೂರು : ಸೋಮವಾರ ೮—೬—೩೬ [ಸಂಚಿಕೆ ೧೬

ಪ್ರಜಾಪ್ರತಿನಿಧಿ ಸಭೆ.

ದಿವಾನರ ಭಾಷಣದ ಸಾರಾಂಶ.

ನಾನು ಮುಂದೆ ಒಳ್ಳೆಯದಾಗುವುದೆಂ ... ನಂಬಿ ಯಾವಾಗಲೂ ಉತ್ಸಾಹದಿಂದ ... ರತಕ್ಕವನು ಆದಕಾರಣ, ನಾವು ಪ ... ಸಾಪದಿಯ ಮುಗ್ಗಟ್ಟಿನ ಸ್ಥಿತಿಯಿಂದ ... ರಾಗುವ ಕಾಲವು ಈಗ ಒದಗಿದೆಯೆಂ ... ಮುಂದೆ ಸರ್ವಸಮೃದ್ಧಿಯುಳ್ಳ ಸು ... ಕಾಲವು ಒಂದು ವೇಳೆ ಬಾರದಿದ್ದರೂ ... ಗ್ಗಟ್ಟಿಗೆ ಆಕಾರವಿಲ್ಲದೆ ಸರ್ವೇ ಸಾ ... ರಾ ಪರಿಸ್ಥಿತಿಯು ಕಾಣಿಸಾದರೂ ಒದ ... ವೆಂದೂ ನನಗೆ ತೋರುತ್ತಿದೆ ಇದು ... ರಂಗದಲ್ಲಿ ಕೈಗೂಡದ ಮಿತಿಮೀರಿದ ... ಹದ ನುಡಿಯೆಂದೇನೂ ನನಗೆ ತೋ ... ರವಿಲ್ಲ

...ದ ಹತ್ತು ವರ್ಷಗಳ ಕಾರ್ಯನಿಯಮದ ಫಲಿತಾಂಶಗಳು

1926–27 ನೆಯ ಸಾಲಿನಲ್ಲಿ ನಮ್ಮ ... ನದ ಒಟ್ಟು ಹುಟ್ಟುವಳಿಯು 338 ... ರೂಪಾಯಿಗಳಾಗಿದ್ದಿತು ಮುಂದಿನ ... ಲ್ಲಿ (1936–37 ನೆಯ ಸಾಲಿನಲ್ಲಿ) ... ಲಕ್ಷ ರೂಪಾಯಿಗಳ ಹುಟ್ಟುವಳಿಯು ... ದೆಂದು ನಾವು ಅಂದಾಜು ಮಾಡಿ ... ವ 1926–27 ನೆಯ ಸಾಲಿನಲ್ಲಿ ನ ... ನಕ್ಕಿದ್ದ ಒಟ್ಟು ಸಾಲವು 271 ... ರೂಪಾಯಿಗಳು 1936 37ನೆಯ ... ಲ್ಲಿ ಅದು 710 ಲಕ್ಷ ರೂಪಾಯಿಗ ... ಗುತ್ತದೆ 1926–27 ನೆಯ ಸಾಲಿ ... ನಮ್ಮ ಸಲ್ಲಿಸಿದ್ದ ಬಡ್ಡಿಯ ಒಟ್ಟು ... ತವು 19 ಲಕ್ಷ ರೂಪಾಯಿಗಳು ... 36 37 ನೆಯ ಸಾಲಿನಲ್ಲಿ ನಾವು ಕೊ ... ರುವ ಬಡ್ಡಿಯ ಒಟ್ಟು ಮೊತ್ತವು ... ಲಕ್ಷ ರೂಪಾಯಿಗಳು ಈ ಹತ್ತು ... ಗಳ ಅವಧಿಯಲ್ಲಿ ನಮ್ಮ ಹುಟ್ಟುವ ... ಗ ಹೆಚ್ಚಿರುವುದು ಸರಿಯಷ್ಟೆ. ... ತೆರಿಗೆಯನ್ನೇನೂ ವಿಧಿಸದೆಯೇ ... ಯು ಹೀಗೆ ಹೆಚ್ಚಾಗಿದೆ ಇಷ್ಟ ... ತಿ ಮುಖ್ಯವಾದ ಹುಟ್ಟುವಳಿ ಬಾ ... ರಡಾದ ಜಮೀನು ಕಂದಾಯ, ... ಎಕ್ಸೈಜು ಬಾಬುಗಳ ಹುಟ್ಟುವಳಿ ... ಬವಳವಟ್ಟಿಗೆ ಇಳಿದುಹೋಗಿವೆ ... ತೆರಿಗೆಗಳ ಬಾಬುಗಳ ವರಮಾನವೂ ಅಷ್ಟೇನೂ ಹೆಚ್ಚಿಲ್ಲ ಹೀಗಿದ್ದೂ ಹುಟ್ಟುವಳಿಯು 10 ಲಕ್ಷ ರೂಪಾಯಿಗಳಷ್ಟು ಹೆಚ್ಚಾಗಿದೆ ಸರ್ಕಾರವು ಕೇವಲ ಒಂದು ವಾಣಿಜ್ಯ ಸಂಘವಾಗಿದ್ದು ಈ ರೀತಿಯ ಫಲಿತಾಂಶಗಳು ಕಂಡುಬಂದಿದ್ದ ಪಕ್ಷಕ್ಕೆ, ಆಗ್ಗೆ ಬಂಡವಾಳವನ್ನು 436 ಲಕ್ಷ ರೂಪಾಯಿಗಳಷ್ಟು ಹೆಚ್ಚಿಸಿದಂತೆಯೂ, 10 ಲಕ್ಷ ರೂಪಾಯಿಗಳ ಹೆಚ್ಚು ನಫೆಯನ್ನು ಪಡೆದಂತೆಯೂ ನಾವು ಹೇಳಿಕೊಳ್ಳಬಹುದಾಗಿದ್ದಿತು. ಸಂಸ್ಥಾನದ ಆಸ್ತಿಯ ರೂಪದ ಸ್ವತ್ತುಗಳ ಮತ್ತು ದೇಣಿಗಳ ದೃಷ್ಟಿಯಿಂದ ಈ ಅಂಶಗಳನ್ನು ವಿಮರ್ಶೆಮಾಡಿ ನೋಡಿದರೂ ಇದೇ ಬಗೆಯ ಫಲಿತಾಂಶಗಳೇ ಕಂಡುಬರುತ್ತವೆ

ನಾನಾ ಜಲಾಶಯಗಳೇ ಮುಂತಾದ ನೀರಾವರಿ ಕಾಮಗಾರಿಗಳನ್ನೇರ್ಪಡಿಸಿ ನಾವು ಕಳೆದ ಹತ್ತು ವರ್ಷಗಳ ಅವಧಿಯಲ್ಲಿ 1, 15,500 ಎಕರೆಗಳ ಹೆಚ್ಚು ಜಮೀನುಗಳನ್ನು ನೀರಾವರಿ ಸಾಗುವಳಿಗೆ ತಂದಿದ್ದೇವೆ. ಆ ಜಮೀನುಗಳಲ್ಲಿ ಬಹುಭಾಗವನ್ನುಗಳು ಹೀಗ ನೀರಸ್ನೊದಗಿಸದ ಹೋಗಿದ್ದರೆ ಸಾಗುವಳಿಗೆ ಬಾರದೆಯೇ ಇರುತ್ತಿದ್ದ ಜಮೀನುಗಳು ನಮ್ಮ ನೀರಾವರಿ ಕಾಮಗಾರಿಗಳ ಸಹಾಯದಿಂದ ಇನ್ನು ಸ್ವಲ್ಪಕಾಲದಲ್ಲಿಯೇ ಒಟ್ಟು ಇದೇ ವಿಸ್ತೀರ್ಣದಷ್ಟು ಹೊಸ ಜಮೀನುಗಳೂ ನೀರಾವರಿಗೆ ಬರುತ್ತವೆ

ರೈಲ್ವೆಯ ಬಾಬಿನ ಸಾಲವನ್ನು ತೀರಿಸಿದುದರ ಫಲಿತಾಂಶವಾಗಿ ಬೆಂಗಳೂರಿನಿಂದ ಹರಿಹರದ ವರೆಗಿರುವ ಮುಖ್ಯ ಅತಿ ಮುಖ್ಯವಾದ ರೈಲ್ವೆ ಸಂಬಂಧವನ್ನು ಕಲ್ಪಿಸುವುದಾಗಿರುವ ರೈಲು ಮಾರ್ಗವು ಇಷ್ಟರಲ್ಲಿಯೇ ನಮ್ಮ ಅಧೀನಕ್ಕೆ ಬರುತ್ತದೆ

ಒಟ್ಟು 20,07,51,010 ಯೂನಿಟ್ಟುಗಳ ಅಥವಾ 30,720 ಅಶ್ವಶಕ್ತಿಗಳ ಪ್ರಮಾಣದ ವಿದ್ಯುಚ್ಛಕ್ತಿಯನ್ನು ಉತ್ಪತ್ತಿಮಾಡಲು ಯಂತ್ರಗಳನ್ನು ಸ್ಥಾಪಿಸಿದ್ದೇವೆ ಇಷ್ಟು ಪ್ರಮಾಣದ ವಿದ್ಯುಚ್ಛಕ್ತಿಗೂ ಈಗ ಗಿರಾಕಿಯಿರುವುದಲ್ಲದೆ, ಒಟ್ಟು ಇದರ ಜೊತೆಗೆ ಮತ್ತಷ್ಟು ಪ್ರಮಾಣದಲ್ಲಿ ವಿದ್ಯುಚ್ಛಕ್ತಿಯು ಉತ್ಪತ್ತಿಯಾದರೂ ಅದಕ್ಕೆ ಸಿದ್ಧವಾಗಿ ಗಿರಾಕಿಯು ದೊರೆಯುವದಾಗಿದೆ ಮತ್ತೊಂದು ಉದಾಹರಣೆಯಾಗಿ ಸಕ್ಕರೆ ಕಾರ್ಖಾನೆಯನ್ನು ಸೂಚಿಸಬಹುದಾಗಿದೆ ಈ ಕಾರ್ಖಾನೆಯು 20 ಲಕ್ಷ ರೂಪಾಯಿಗಳ ಮೂಲಧನದ ಸ್ವತ್ತಾಗಿದೆ ಆ ಕಾರ್ಖಾನೆಯ ಸಂಬಂಧದಲ್ಲಿ ಸರ್ಕಾರದವರು ತೆಗೆದುಕೊಂಡಿರುವ ಷೇರುಗಳನ್ನೂ ಇತರ ಷೇರುದಾರರು ಪಡೆದಿರುವ ಷೇರುಗಳನ್ನೂ ಆ ವೆಲ್ಲಕ್ಕೂ ಕೊಟ್ಟಿರುವ ಹಣದ ಎರಡರಷ್ಟರಿಯನ್ನು ಮೊತ್ತಕ್ಕೆ ಧಾರಾಳವಾಗಿ ಮಾರಬಹುದಾದಷ್ಟುಮಟ್ಟಿಗೆ ಆ ಷೇರುಗಳ ಬೆಲೆಯು ಏರಿದೆ

ವಿದ್ಯಾವಂತರಾದ ಯುವಕರಲ್ಲಿ ನಿರುದ್ಯೋಗದ ಕಷ್ಟವು ಬಹಳ ಹೆಚ್ಚಾಗಿರುವುದನ್ನು ನಾನೇನೂ ಉಪೇಕ್ಷಿಸತಕ್ಕವನಾಗಿಲ್ಲ ಆದಾಗ್ಯೂ ಕಳೆದ ಹತ್ತು ವರ್ಷಗಳ ಅವಧಿಯಲ್ಲಿ ನಿರುದ್ಯೋಗದ ಕಷ್ಟವನ್ನು ಕಡಮೆ ಮಾಡಲು ಸಹಾಯಕವಾಗುವಂತ ನಾನಾ ಉದ್ಯಮಗಳನ್ನು ಕೈಕೊಂಡಿರುವುದಕ್ಕಾಗಿ ನಾವುಗಳು ಪರಸ್ಪರವಾಗಿ ಅಭಿನಂದನೆಗಳಿಗೆ ಪಾತ್ರರಾಗಿ ಹರ್ಷಿಸಲು ಕಾರಣವಿಲ್ಲದೆ ಹೋಗಿಲ್ಲ

ಯೂರೋಪು ಖಂಡದಲ್ಲಿ ವೈಮನಸ್ಯ ಹುಟ್ಟಿ ಯುದ್ಧವೇನಾದರೂ ಸಂಘಟಿಸಿದರೆ, ಬ್ರಿಟಿಷರೂ ಅದರಲ್ಲಿ ಸೇರುವುದು ಬಹುತರವಾಗಿ ಖಂಡಿತ ಅಗ್ಗೆ ಭರತಖಂಡವೂ ಅದರ ಹೀಗೆ ಒಕ್ಕೂಟವಾಗುತ್ತದೆ ಘೋರವಾದ ಆ ಬಗೆಯ ದಾರುಣ ಸನ್ನಿವೇಶದ ಪರಿಣಾಮ ಫಲಿತಾಂಶಗಳನ್ನು ಹೀಗೆಯೇ ಸರಿಯೆಂದು ಭವಿಷ್ಯ ಹೇಳಬಲ್ಲವರಾರು? ತಮ್ಮ ನಾಡನ್ನು ರಕ್ಷಿಸಿಕೊಳ್ಳಲು ಶಕ್ತರಾಗಿಲ್ಲದ ಭಾರತೀಯರು ಶತ್ರುಗಳಿಗೆ—ಅದರಲ್ಲಿಯೂ ಸಮುದ್ರ ಮಾರ್ಗವಾಗಿ ದೇಶವನ್ನು ಮುತ್ತಿದ ಶತ್ರುಗಳಿಗೆ—ಕಾಳಗ ಕೊಟ್ಟು ಆತ್ಮರಕ್ಷಣೆ ಮಾಡಿಕೊಳ್ಳಲಾರದ ಕಾರಣ, ಭರತಖಂಡಕ್ಕೆ ಆ ಬಗೆಯ ಸನ್ನಿವೇಶವೇನಾದರೂ ಒದಗಿದರೆ ಆಗ್ಗೆ ಸಂಭವಿಸುವ ದುರ್ದಶೆಯ ಸ್ವಭಾವವನ್ನು ಗುಣಿಸಿ ಹೇಳಲಾರಿಗೆ ಸಾಧ್ಯ?

ಪರಿಸಮಾಪ್ತಿ

ಚಾಲ್ತಿ ಸಾಲಿನ ಮತ್ತು ಮುಂದಿನ ಸಾಲಿನ ಆಯವ್ಯಯಗಳ ಮೊಬಲಗುಗಳ ... ಯಲ್ಲಿ ನಡೆದಿರುವ ಆಯವ್ಯಯಗಳ ಅಂಕಿತದ ಸಾಮಾನ್ಯ ಫಲಿತಾಂಶಗಳನ್ನೂ ತಮಗೆ ನಿವೇದಿಸಿದ್ದೇನೆ ಅವುಗಳು ತೃಪ್ತಿಕರವಾಗಿರುವಂತೆ ತಾವುಗಳು ಭಾವಿಸುವಿರೆಂದು ನಾನು ನಂಬಿರುವೆನಾದರೂ, ಈಗಿನದು ಕೇವಲ ಕ್ಲೇಶದಾಯಕವಾಗಿ ತೊಂದರೆಗಳಿಂದ ತುಂಬಿರುವ ಸಂಧಿಕಟ್ಟಿನ ಸಮಯವೆಂಬುದನ್ನು ನಾನು ಗಮನಿಸದೇ ಹೋಗಿಲ್ಲ

ಮಹಿಳೆಯರೇ ಮತ್ತು ಮಹಾಶಯರೇ, ಈಗ ನಡೆಗಿರುವ ಭಯಾನಕವಾದ ವಿದ್ಯಮಾನಗಳಿಗೆ ಹೋಲಿಸಿ ನೋಡಿದರೆ, ನಮ್ಮಲ್ಲಿರುವ ಭೇದಭಾವನೆಗಳು ಎಷ್ಟು ಕ್ಷುಲ್ಲಕವಾದುವೆಂಬುದೂ, ನಮ್ಮಲ್ಲಿರುವ ಜಾತಿ ಜನಾಂಗಗಳ ಅಥವಾ ಮತಪಂಗಡಗಳ ಭೇದಭಾವನೆಗಳ ವಿಚಾರವು ಎಷ್ಟು ಅಲ್ಪವಾದುವೆಂಬುದೂ ಚೆನ್ನಾಗಿ ಗೊತ್ತಾಗುತ್ತವೆ ನಮ್ಮೆಲ್ಲರಿಗೂ ಪೂಜ್ಯಳಾದ ದೇಶಮಾತೆಯ ಸೇವೆಯಲ್ಲಿ ಸಮಸ್ತರೂ ಏಕಮತದಿಂದ ಉದ್ಯುಕ್ತರಾಗದೆ, ತೀರಾ ಅಸಾರವಾದ ಅಲ್ಪ ವಿಚಾರಗಳಿಗಾಗಿ ನಾವುಗಳು ಒಬ್ಬರೊಡನೆ ಮತ್ತೊಬ್ಬರು ಸರ್ವದಾ ಜಗಳವಾಡುತ್ತೇವೆ ಆ ಅಲ್ಪ ವಿಚಾರಗಳು ಇಹಲೋಕದಲ್ಲಿಯೂ ಕೆಲಸಕ್ಕೆ ಬಾರದವುಗಳು ಪರಲೋಕದಲ್ಲಂತು ಅವುಗಳು ಸ್ವಲ್ಪವೂ ಬೆಲೆಯಿಲ್ಲದವುಗಳೆಂದು ಧಾರಾಳವಾಗಿ ಹೇಳಬಹುದು ಕೆಲಸ ನಡೆಯಿಸುವುದಕ್ಕೆ ಸಾಧ್ಯವೆನಿಸುವ ಅಂಶಗಳಿಗೆ ಮಾತ್ರವೇ ನಾವು ಮತ್ತಷ್ಟು ಹೆಚ್ಚಾಗಿ ವಿವೇಚನೆಯನ್ನು ಪ್ರದರ್ಶಿಸಿ ಕೆಲಸ ಮಾಡೋಣ ಹಿಂದುಗಳೂ ಮುಸಲ್ಮಾನರೂ ಕ್ರೈಸ್ತರೂ—ಬ್ರಿಟಿಷ್ ಇಂಡಿಯಾದವರೂ, ಸಂಸ್ಥಾನಗಳ ಪ್ರಜೆಗಳೂ—ಆದ ನಾವುಗಳೆಲ್ಲರೂ ಒಬ್ಬಳೇ ಭಾರತಮಾತೆಯ ಮಕ್ಕಳೆಂಬುದನ್ನು ಮನಸ್ಸಿನಲ್ಲಿಟ್ಟು, ದೇಶೋನ್ನತಿಸಾಧನೆಯ ಸಮಾನಧರ್ಮದ ಅವಲಂಬನವೊಂದರಿಂದಲೇ ಪ್ರೇರಿತರಾಗಿ ...

ನಿಮಗಿದು ಗೊತ್ತೇ?

ಲೇಖಕರು —ಎಂ. ವಿ. ನಾರಾಯಣ ಮೂರ್ತಿ, ಮೈಸೂರು

೧ **ಹಾಡುವ ಮರಳು:** ಅಮೆರಿಕಾದೇಶದ ಸಂಯುಕ್ತ ಸಂಸ್ಥಾನಗಳಲ್ಲಿ ಕೊಲರಾಡ ಒಂದು ವಿಧದ ಮರಳಿದೆಯಂತೆ ಇದರ ಮೇಲೆ ಯಾರು ನಡೆದರೂ ಒಂದು ತರಹದ ಹಾಡಿನ ಶಬ್ದವು ಉಂಟಾಗುತ್ತದೆ ಅಮೆರಿಕಾಖಂಡದಲ್ಲಿ ಈ ವಿಧದ ಮರಳಿರುವ ಸಾವಿರಾರು ಎಕರೆಗಳಿವೆ! ಇದೇ ರೀತಿಯಲ್ಲಿ ಶಬ್ದವನ್ನುಂಟು ಮಾಡುವ ಮರಳು ರಾಶಿಗಳೂ, ಬೆಟ್ಟಗುಡ್ಡಗಳೂ ಪ್ರಪಂಚದ ಅನೇಕ ಕಡೆ ಇವೆ!

೨ **ವಿದ್ಯುಚ್ಛಕ್ತಿಯ ಮರ** ಪ್ರಪಂಚದ ವಿಚಿತ್ರಗಳಲ್ಲಿ ಒಂದಾದ ವಿದ್ಯುಚ್ಛಕ್ತಿಯ ಮರವು ಮಧ್ಯ ಇಂಡಿಯಾ ಪ್ರಾಂತದಲ್ಲಿದೆ ಇದರ ಎಲೆಗಳನ್ನು ಯಾರು ಮುಟ್ಟಿದರೂ ಅವರಿಗೆ ಷಾಕು (Electric Shock) ಹೊಡೆಯುವುದು ಸೂಜಿಗಲ್ಲನ್ನು ಎಪ್ಪತ್ತು ಅಡಿ ದೂರದಲ್ಲಿ ಹಿಡಿದರೂ ಅವುಗಳನ್ನು ಆಕರ್ಷಿಸುತ್ತದೆ. ಆದರೆ ಮಳೆಗಾಲದಲ್ಲಿ ಮಾತ್ರ ಇದಕ್ಕೆ ಈ ಶಕ್ತಿ ಇಲ್ಲ ಇದರ ಮೇಲೆ ಪಕ್ಷಿಗಳಾವುವೂ ಕುಳಿತುಕೊಳ್ಳುವುದಿಲ್ಲ

೩ **ಹೆಂಗಸರೂ ನಶ್ಯ ಹಾಕುತ್ತಿರುವರು!** ಇಂಗ್ಲೆಂಡಿನಲ್ಲಿ ಈಚೆಗೆ ನಶ್ಯವು ಬಹಳ ಪ್ರಸಿದ್ಧಿಯಲ್ಲಿದೆಯಂತೆ ಇಲ್ಲಿ ಹೆಂಗಸರು ನಶ್ಯವನ್ನು ಉಪಯೋಗಿಸುತ್ತಿರುವರು ಸಂಡರ್‌ಲ್ಯಾಂಡ್ ಎಂಬಲ್ಲಿನ ಹೆಲ್ತಾಫೀಸರು ನಶ್ಯವು ಒಳ್ಳೆಯದೆಂದು ಹೇಳುತ್ತಿರುವರು! ಇನ್‌ಫ್ಲೂಯೆಂಜ ಜ್ವರವು ಬರದಂತೆ ನಶ್ಯವು ಕಾಪಾಡುತ್ತದೆಯಂತೆ!

೪ **ನೆಗೆತದಲ್ಲಿ ಪ್ರಪಂಚಕ್ಕೆಲ್ಲಾ ರೆಕಾರ್ಡು.** ಇಂಗ್ಲೆಂಡಿನಲ್ಲಿ ಒಬ್ಬ ಹುಡುಗಿಯು ಎರಡು ಗಂಟೆಗಳಲ್ಲಿ 15,000 ಸಾರಿ ಹಗ್ಗವನ್ನು ಹಿಡಿದು ಅದರ ಮೇಲೆ ನೆಗೆದು (Skipping) ಪ್ರಪಂಚಕ್ಕೆಲ್ಲಾ ರೆಕಾರ್ಡನ್ನು ಮಾಡಿರುವಳು!

೫ **೧೫೦ ಕೋಟಿ ರೂ ದಾನ!:** ಅಮೆರಿಕಾದಲ್ಲಿ ಸೀಮೆ ಎಣ್ಣೆ ಕಂಪನಿಯ ಮಾಲೀಕರಾದ ರಾಕ್‌ಫೆಲ್ಲರ್ ಎಂಬುವನು ಸುಮಾರು 150 ಕೋಟಿ ರೂಪಾಯಿಗಳನ್ನು ದಾನಮಾಡಿರುವನು! ಇನ್ನು ಅವನ ಆಸ್ತಿ ಎಷ್ಟಿರಬಹುದು?

೬ **ಕ್ವಿನೀನ್ ಖರ್ಚು.** ಕಳೆದ ವರ್ಷ ಸಿಂಹಳದ್ವೀಪದಲ್ಲಿ 60 ಲಕ್ಷ ರೂಪಾಯಿನ ಕ್ವಿನೀನು ಖರ್ಚಾಯಿತಂತೆ!

೭ **ವಿಮಾನದ ಟಪಾಲು** ಕಳೆದ ವರ್ಷ ಇಂಗ್ಲೆಂಡಿನಿಂದ ವಿಮಾನದ ಟಪಾಲಿನ (Airmail) ಮೂಲಕ ಕಳುಹಿಸಿದ ಕಾಗದಗಳು 192 ಟನ್ ಭಾರವಿದ್ದಿತು!

೮. **ನೋಟುನಾಣ್ಯಗಳು:** ಕಳೆದ ವರ್ಷ ಒಟ್ಟು 1,51,000 ಕೋಟಿ ರೂಪಾಯಿಗಳು ಬ್ಯಾಂಕುಗಳಿಗೂ, ಖಜಾನೆಗಳಿಗೂ ಬಂದುವು!

೯. **ಸಮುದ್ರದಲ್ಲಿ ಉಪ್ಪೆಷ್ಟಿರಬಹುದು?** ಪ್ರಪಂಚದ ಎಲ್ಲಾ ಸಾಗರಗಳ ಉಪ್ಪನ್ನೂ ಸೇರಿಸಿ ಇಂಡಿಯಾ ದೇಶದ ಮೇಲೆ ಹರಡಿದರೆ ಒಂದು ಮೈಲಿ ಎತ್ತರದಷ್ಟು ಆಗುವುದೆಂದು ಶಾಸ್ತ್ರಜ್ಞರು ಲೆಕ್ಕ ಹಾಕಿದಾರೆ!

೧೦. **ಇಂಡಿಯನ್ ರಾಜರ ವ್ಯಯ:** ನಮ್ಮ ಇಂಡಿಯಾ ದೇಶದ ಒಬ್ಬರು ರಾಜರು ಲಂಡನ್ನಿನಲ್ಲಿ ಒಂದು ಅಂಗಡಿಗೆ ಹೋಗಿ 6000 ರೂಪಾಯಿ ಬಾಳುವ ಒಂದು ತಲೆ ಬಾಚುವ ಬ್ರಷ್ಷನ್ನು (Hair brush) ಕೊಂಡು ಕೊಂಡರಂತೆ!

೧೧ **ತಾಯಂದಿರಿಗೆ ಅನುಕೂಲ** ಜರ್ಮನಿಯಲ್ಲಿ ಎದೆಹಾಲು ಕುಡಿಯುವ ಮಕ್ಕಳಿರುವ ತಾಯಂದಿರಿಗೆ ಹೆಚ್ಚು ಅನುಕೂಲವನ್ನು ಕಲ್ಪಿಸಿರುವರು ಅಂಗಡಿ ಮುಂತಾದ ಜಾಗಗಳಲ್ಲಿ ಅಂಥವರನ್ನು ಕಾಯಿಸಿದರೆ ಅವರ ಮಕ್ಕಳಿಗೆ ತೊಂದರೆಯಾಗುವುದೆಂದು ಮನಗಂಡು ಅವರಿಗೆ ಒಂದು ವಿಶೇಷ ಕಾರ್ಡನ್ನು ಮ್ಯುನಿಸಿಪಾಲಿಟಿಯವರು ಕೊಡುತ್ತಾರೆ ಈ ಕಾರ್ಡುಗಳನ್ನು ಅಂಗಡಿ, ಕಚೇರಿ, ಹೋಟೆಲು, ರೈಲ್ವೆಸ್ಟೇಷನುಗಳಲ್ಲೆಲ್ಲ ತೋರಿಸಿದರೆ ಅವರಿಗೆ ಮೊದಲು, ಸಾಮಾನು, ಟಿಕೇಟು ಮುಂತಾದವುಗಳನ್ನು ಕೊಟ್ಟು ಕಳುಹಿಸುವರು ತಾಯಂದಿರು ಪುಣ್ಯವಂತೆಯರಲ್ಲವೆ?

೧೨ **"೩ ಕಾಸಿಗೆ ಒಂದು ಲೆಕ್ಕ"** ಬೆಲ್‌ಗ್ರೇಡ್ ನಗರದಲ್ಲಿ ಜಾಗ್ರೆಬ್ (Zagreb) ನಲ್ಲಿರುವ ಒಂದು ಸ್ಕೂಲಿನ ಮುಂದೆ ಒಂದು ಅಂಗಡಿ ಇದೆ '೩ ಕಾಸಿಗೆ ಒಂದು ಲೆಕ್ಕವನ್ನು ಮಾಡಿಕೊಡುತ್ತೇವೆ' ಎಂದು ಅಲ್ಲಿ ಪ್ರಕಟಿಸಿದೆ ಹುಡುಗರು ಮನೆಗೆ ಹೋಗುವಾಗ ಶಾಲೆಯಲ್ಲಿ ಕೊಟ್ಟ ಮನೆ ಲೆಕ್ಕಗಳನ್ನು ಆ ಅಂಗಡಿಯವನಿಗೆ ಕೊಟ್ಟು ಹೋದರೆ ಬೆಳಿಗ್ಗೆ ಬರುವಾಗ ಅವನು ಲೆಕ್ಕಗಳನ್ನು ಮಾಡಿಟ್ಟಿರುವನು ಹುಡುಗರು ಅವುಗಳನ್ನು ಮೇಷ್ಟರಿಗೆ ತೋರಿಸುವರಂತೆ! ಇಂಥಾ ವ್ಯಾಪಾರ ಬಹಳ ಲಾಭಕರವಾಗಿದೆ ನಮ್ಮಲ್ಲೂ ಯಾರಾದರೂ ನಿರುದ್ಯೋಗಿಗಳು ಇದನ್ನು ಅನುಸರಿಸಬಹುದಾಗಿದೆ!

ಸಕಲೇಶಪುರದ ವರ್ತಮಾನ

ಗಣಪತಿಯು ಬೆಳೆಯುತ್ತಿದೆ.

(ಒಬ್ಬ ಬಾತ್ಮೀದಾರರಿಂದ)

ಈ ಊರಿನ ಸಕಲೇಶ್ವರ ದೇವಸ್ಥಾನದಲ್ಲಿ ವಿನಾಯಕನ ವಿಗ್ರಹವೊಂದು ಶಿಲಾಸ್ತಂಭದಲ್ಲಿ ಉದ್ಭವಿಸಿ ವರ್ಷ ವರ್ಷ ದೊಡ್ಡದಾಗಿ ಬೆಳೆಯುತ್ತಾ ಇದೆ ಹಿಂದೆ ಸುಮಾರು 60-90 ವರ್ಷಗಳಲ್ಲಿ ಶೃಂಗೇರಿ ಸ್ವಾಮಿಯವರು ದಯಮಾಡಿಸಿದ್ದಾಗ ಕಲ್ಲು ಕಂಬದಲ್ಲಿ ವಿನಾಯಕನ ಆಕಾರದ ಕಲವು ಗೆರೆಗಳನ್ನು ಶ್ರೀ ಸ್ವಾಮಿಯವರು ತಿಳಿಸಿದಂತೆ ಅಂದಿನಿಂದಲೂ ಆ ಗೆರೆಗಳಿಗೆ ಸಮನಾಗಿ ವಿಗ್ರಹವು ಬೆಳೆದು ಬಂದಿದೆ ಈ ದೇವಸ್ಥಾನದ ಅರ್ಚಕರಾದ ಸುಬ್ಬಾಭಟ್ಟರವರು ಸುಮಾರು 30 ವರ್ಷಗಳಿಂದಲೂ ಇದೇ ದೇವಸ್ಥಾನದಲ್ಲಿ ಅರ್ಚನೆ ಮಾಡುತ್ತಿದ್ದಾರೆ "30 ವರ್ಷಗಳ ಹಿಂದೆ ಗಣಪತಿಯ ಹೊಟ್ಟೆಯೊಂದು ಮಾತ್ರ ಕಾಣುತ್ತಿತ್ತು ಈಚೆಗೆ ಸ್ವಾಮಿಯ ಆಕಾರವೆಲ್ಲವೂ ಬೆಳೆದು ಬಂದಿದೆ ಎಂದು ಅರ್ಚಕರೂ ಮತ್ತು ಈ ಸ್ಥಳದ ಇತರ ಮಹನೀಯರೂ ಅಭಿಪ್ರಾಯಪಟ್ಟಿರುತ್ತಾರೆ ಅನೇಕ ಜನಗಳು ಈ ವಿಗ್ರಹವನ್ನು ಸಂದರ್ಶಿಸಲು ಕುತೂಹಲವುಳ್ಳವರಾಗಿ ಈ ಊರಿಗೆ ಬರುತ್ತಿದ್ದಾರೆ

ಆಗಮನ

ರೆವಿನ್ಯೂ ಕಮೀಷನರವರಾದ ಮ|| ಕೆ ವಿ ಅನಂತರಾಮಯ್ಯರವರು ಕಳೆದ ತಿಂಗಳು ತಾ|| 26 ರಲ್ಲಿ ಇಲ್ಲಿಗೆ ದಯಮಾಡಿಸಿದ್ದರು ಪುರಪ್ರಮುಖರಿಂದ ಸ್ವಾಗತ ಮಾಡಲ್ಪಟ್ಟು ಮರುದಿನ ಪ್ರಯಾಣವನ್ನು ಮುಂದುವರಿಸಿದರು

ಅಭಿಪ್ರಾಯ

ಈ ಊರಿನಲ್ಲಿ ಈ ತಿಂಗಳು ತಾ| 15 ರಲ್ಲಿ ಮ್ಯುನಿಸಿಪಲ್ ಮೆಂಬರುಗಳ ಚುನಾವಣೆಯು ಜರುಗುತ್ತದೆ ಅನೇಕ ಪುರಪ್ರಮುಖರು ಉಮೇದುವಾರರಾಗಿ ನಿಂತು ನನಗೆ ತಮ್ಮ ಘನವಾದ ಒಂದು ಓಟು ಕೊಡಿ" ಎಂದು [illegible] ಕಾಲು ಕಟ್ಟಿಕೊಳ್ಳುತ್ತಿದ್ದಾರೆ ಮತ್ತು ಅವರಿಗೆ ಮುಂದಿನ ಸಹಾಯಸಂಪತ್ತುಗಳನ್ನು ಒದಗಿಸಿಕೊಡುತ್ತೇವೆಂಬ ಆಸೆಯನ್ನು ಹುಟ್ಟಿಸಿ, ವಚನ ಕೊಟ್ಟು, ಸದಸ್ಯರಾದ ಅನಂತರ ಪ್ರಜಾಸೇವೆಯೇ ತಮ್ಮ ಮುಖ್ಯಧ್ಯೇಯವೆಂಬುದನ್ನು ಕನಸಿನಲ್ಲೂ ಕಾಣದೆ ಸ್ವಾರ್ಥಪರರಾಗುತ್ತಾರೆಂದು ಒಬ್ಬ ನಿವಾಸಿಯ ಮತ ಇನ್ನು ಮುಂದೆ ಸದಸ್ಯರು [illegible] ಉಪಕಾರಕರಾದ ಜನಸೇವೆ ಮಾಡುತ್ತಾರೆಂದು ನಂಬಿರುತ್ತೇವೆ

ಕರ್ನಾಟಕ ಸಂಘ

ಈ ಊರಿನಲ್ಲಿ ಜನರೆಲ್ಲರೂ ಸ್ವಾ… ವಾಗಿ ಸಾರ್ವಜನಿಕ ಕಾರ್ಯಕ್ರಮ… ಸಹಕರಿಸುತ್ತಾರೆಂಬ ಅಂಶವು ಸಂ… ಕರವಾದದ್ದು ಆದಾಗ್ಯೂ ಇಲ್ಲಿ… ಕರ್ನಾಟಕ ಸಂಘವಿಲ್ಲದಿರುವುದು… ದೊಡ್ಡ ಕೊರತೆಯಾಗಿದೆ ಸ್ಥಳ… ನಿಗಳೆಲ್ಲರೂ ಈ ವಿಷಯವನ್ನು… ಮಾಡಿ, ಸಂಘದ ಸ್ಥಾಪನೆಯನ್ನು… ವಾಗಿ ನೆರವೇರಿಸಿ ತನ್ಮೂಲಕ ಭಾಷಾ… ಯನ್ನು ಮಾಡಿ ಯಶಸ್ವಿಗಳಾಗು… ದು ಆಶಿಸುತ್ತೇವೆ

ಪರೀಕ್ಷೆಯ ಫಲಿತಾಂಶ

ಲೋವರ್ ಸೆಕೆಂಡರೀ ಪರೀಕ್ಷೆಗೆ… 36 ಹುಡುಗರು ಕುಳಿತಿದ್ದರು… ಜನಗಳಿಗೆ ಮಾತ್ರ ತೇರ್ಗಡೆಯಾ… ಇದು ಬಹಳ ಶೋಚನೀಯವಾದ… ಚಾರ

ಸಕಲೇಶಪುರದಲ್ಲಿ ಶ್ರೀಮನ್ಮಹಾರಾಜರವರ ವರ್ಧಂತ್ಯುತ್ಸವ

ಶ್ರೀಮನ್ಮಹಾರಾಜರವರ ವರ್ಧಂತ್ಯು… ತ್ಸವದ ಪ್ರಯುಕ್ತ ಕಳೆದ ಭಾನುವಾರ… ಗ್ಗೆ (ತಾ|| 31-5-36) ಈ ಊ… ಪುರ ಪ್ರಮುಖರು, ವರ್ತಕರು ಮತ್ತು… ನೇಕ ಸರ್ಕಾರೀ ನೌಕರರು ಕೂಡಿ ಶ್ರೀ… ನ್ಮಹಾರಾಜರವರ ಭಾವಚಿತ್ರದೊಡನೆ… ಹಳ ವಿಜೃಂಭಣೆಯಿಂದ ಪುರ ಪ್ರದಕ್ಷಿ… ಣೆಯನ್ನು ಮುಗಿಸಿಕೊಂಡು ಇಲ್ಲಿನ ಪ್ರೈ… ಸ್ಕೂಲಿನಲ್ಲಿ ಸಭೆ ಸೇರಿದರು ಈ ದಿನ… ಯಲ್ಲಿ ಇಲ್ಲಿನ ಸಬ್ ಡಿವಿಜನ್ ಸಾಹೇ… ರಾದ ಅಬ್ದುಲ್ಲಾ ಹುಸೇನ್ ಷರೀಫ್… ಹೇಬರವರು ಅಧ್ಯಕ್ಷತೆಯನ್ನು ವಹಿಸಿ… ಸ್ಕೂಲ್‌ಬೋರ್ಡ್ ಅಸಿಸ್ಟೆಂಟರಾದ… ಸಂಪತ್ಕುಮಾರಾಚಾರ್ಯರವರೂ, ಕ… ಉಪಾಧ್ಯಾಯರೂ ಭಾಷಣವನ್ನು ಮಾ… ರು ಕಡೆಯಲ್ಲಿ ಅಧ್ಯಕ್ಷರ ಭಾಷಣವಾದ… ತರ ಬಾಲಕ ಬಾಲಕಿಯರಿಂದ ಶ್ರೀಮ… ಹಾರಾಜರವರ ಶ್ರೇಯಃ ಪ್ರಾರ್ಥನೆಯ… ಡೆದು ಜಯ ಜಯ ಕಾರದೊಡನೆ ಸಭೆ… ಮುಕ್ತಾಯವಾಯಿತು

ನವನಾಗರಿಕತೆಯಲ್ಲಿ ಉಚ್ಚಾವಸ್ಥೆಯನ್ನು ಪಡೆದಿರುವ ಇಂಗ್ಲೀಷರಲ್ಲೂ ಅಪನಂಬಿಕೆಗಳಿವೆ!

೧೩ ಜನ ಊಟಕ್ಕೆ ಕೂತರೆ,… ತಿಂಗಳೊಳಗೆ ಅವರಲ್ಲೊಬ್ಬನು ಸಾ… ವನಂತೆ!

ಕರಿ ಬೆಕ್ಕು ಅಡ್ಡವಾಗಿ ಬಂದರೆ… ವಕ್ಕೆ ಹೋಗಕೂಡದಂತೆ!

ಏಣಿಯ ಕೆಳಗಡೆಯಿಂದ ನಡೆದು… ವರ ಕೆಟ್ಟದಾಗುವುದಂತೆ!

ಒಂದೇ ಬೆಂಕಿ ಕಡ್ಡಿಯಿಂದ ೩ ಜ… ಸಿಗರೇಟನ್ನು ಹತ್ತಿಸಿಕೊಂಡರೆ ಅನಾ… ವಾಗುವುದಂತೆ!

ಉಪನಿಷತ್ತುಗಳೂ ಜನಜೀವನವೂ.

ಶ್ರೀ ವರ್ಮಾ ವೈ. ಚಂದ್ರಶೇಖರಶಾಸ್ತ್ರಿ, ಎಂ. ಎ. ಯವರಿಂದ.

ಉಪನಿಷತ್ತು ಎಂಬ ಪದದ ಅರ್ಥವು ಈ ರೀತಿ ಇದೆ. ಉಪ, ಅಂದರೆ ಸಮೀಪದಲ್ಲಿ, ನಿ, ಅಂದರೆ ವಿನಯದಿಂದ ಸತ್ ಕುಳಿತುಕೊಳ್ಳುವುದು ಎಂದು. ಅಂದರೆ ಶಿಷ್ಯನು ಗುರುವಿನ ಸಮೀಪದಲ್ಲಿ ವಿನಯದಿಂದ ಕುಳಿತು ರಹಸ್ಯವಾದ ಬ್ರಹ್ಮತತ್ವವನ್ನು ಕೇಳುವುದು ಎಂದರ್ಥ. ವೇದಗಳಲ್ಲಿ ಸಂಹಿತ, ಬ್ರಾಹ್ಮಣ, ಆರಣ್ಯಕ, ಉಪನಿಷತ್ತು ಎಂದು ನಾಲ್ಕು ಭಾಗಗಳುಂಟು. ಉಪನಿಷತ್ತು ವೇದದ ಕಡೆಯ ಭಾಗವಾದ್ದರಿಂದ ಇದಕ್ಕೆ ವೇದಾಂತವೆಂದು ಹೆಸರು ಬಂದಿದೆ. ವೇದಾಂತವೆಂದರೆ ತಿಳುವಳಿಕೆಯ ಕಡೆಯ ಹದಿಯೆಂದು ಅರ್ಥವಾಗುತ್ತದೆ.

ಹೊಸ ಹೊಸ ವಿಷಯಗಳನ್ನು ತಿಳಿಯಬೇಕೆಂಬ ಲವಲವಿಕೆಯು ಮನುಷ್ಯನಿಗೆ ಸ್ವಭಾವ ಜನ್ಯವಾದದ್ದು. ಇದನ್ನು ನಾವು ಮಕ್ಕಳಲ್ಲಿಯೂ ನೋಡಬಹುದು. ಮಕ್ಕಳು ಯಾವಾಗಲೂ ಇದು ಏನು? ಇದು ಏಕೆ? ಇದು ಹೇಗೆ? ಎಂದು ಪ್ರಶ್ನೆ ಮಾಡುತ್ತಲೇ ಇರುತ್ತವೆ. ಈ ಗುಣದಿಂದಲೇ ಮನುಷ್ಯನು ತಿಳುವಳಿಕೆಯಲ್ಲಿ ಮುಂದುವರಿಯಲು ಪ್ರಯತ್ನಿಸುತ್ತಲೇ ಇದ್ದಾನೆ.

ದರ್ಶನವೆಂದರೆ ನೋಡುವುದೆಂದರ್ಥ. ಹೊಸ ಹೊಸ ತತ್ವಗಳನ್ನು ನೋಡುವುದು ಎಂದರ್ಥ. ತತ್ವಗಳು ಸಾಮಾನ್ಯವಾಗಿ ಮೂರು ಎಂದು ಹೇಳಬಹುದು. ಇವು ಯಾವುವೆಂದರೆ ಜೀವನ ಸ್ವಭಾವ, ದೇವರ ಸ್ವಭಾವ, ಪ್ರಪಂಚದ ಸ್ವಭಾವ ಮೂರಕ್ಕೂ ಇರುವ ಸಂಬಂಧ. ಈ ವಿಷಯಗಳನ್ನು ವೇದಾಂತದಲ್ಲಿ, ದರ್ಶನದಲ್ಲಿ ಮತ್ತು ಉಪನಿಷತ್ತುಗಳಲ್ಲಿ ವಿಚಾರಮಾಡಿ ವಿವರಿಸಿರುವುದು ಕಂಡುಬರುತ್ತೆ.

ಉಪನಿಷತ್ತುಗಳಲ್ಲಿ ಮೊದಲನೆ ತತ್ವವಾದ ಜೀವನು ನಿತ್ಯನೆಂದೂ ಸಚ್ಚಿದಾನಂದ ಸ್ವರೂಪನೆಂದೂ ಹೇಳಿದೆ. ಜಾಗ್ರತ್, ಸ್ವಪ್ನ, ಸುಷುಪ್ತಿ ಮೊದಲಾದ ಅವಸ್ಥೆಗಳೂ ಬಾಲ್ಯ, ಯೌವನ, ವಾರ್ಧಕ್ಯ ಮುಂತಾದ ಅವಸ್ಥೆಗಳು ಒಂದರಮೇಲೊಂದು ಬರುತ್ತಿರುವುದು ಕಂಡುಬಂದರೂ ಇವೆಲ್ಲವನ್ನು ನೋಡುತ್ತಿರುವ ಜೀವನು ಮಾತ್ರ ಒಬ್ಬನೇ ಅನುಸ್ಯೂತವಾಗಿ ಇವೆಲ್ಲವುಗಳಲ್ಲಿಯೂ ಇರುವನು ಕಂಡುಬರುತ್ತದೆ. ಇದರಂತೆ ಕರ್ಮಫಲವಾದ ಸುಖದುಃಖಗಳು ಈ ಜನ್ಮದಲ್ಲಿ ಹೇಗೋ ಹಾಗೆ ಜನ್ಮಾಂತರಗಳಲ್ಲಿಯೂ ಉಂಟಾಗುತ್ತವೆ. ಇದನ್ನು ಅನುಭವಿಸುವ ಜೀವನು ಒಬ್ಬನೇ ಆಗಿರಬೇಕೆಂಬುದು ನ್ಯಾಯವಾಗಿ ಕಂಡುಬರುವುದರಿಂದ ಜೀವನು ನಿತ್ಯನೆಂದು ಹೇಳಬೇಕು.

ಹಾಗೆಯೇ ಜೀವನು ಆನಂದ ಸ್ವರೂಪನೆಂದೂ ಹೇಳಬೇಕಾಗಿದೆ. ಯಾಕಂದರೆ ನಮಗೆ ಉಂಟಾಗುವ ಸುಖದ ಅನುಭವಗಳು ಜ್ಞಾನೇಂದ್ರಿಯಗಳ ಮೂಲಕ ಆಗುತ್ತವೆ. ಸುಂದರವಾದ ರೂಪವನ್ನು ನೋಡಿದರೆ, ಮನೋಹರವಾದ ಶಬ್ದವನ್ನು ಕೇಳಿದರೆ, ರುಚಿಯಾದ ಪದಾರ್ಥವನ್ನು ಸವಿದರೆ, ಹಿತವಾದ ಪರಿಮಳವನ್ನು ಘ್ರಾಣಿಸಿದರೆ, ಮೃದುವಾದ ಸ್ಪರ್ಶವನ್ನು ಪಡೆದರೆ ನಮಗೆ ಸುಖವಾಗುವುದು ಕಂಡು ಬಂದಿದೆ. ಈ ಸುಖಾನುಭವವು ಯಾತರಿಂದುಂಟಾಯಿತೆಂದರೆ, ವಿಷಯ, ಇಂದ್ರಿಯ, ಮನಸ್ಸು, ಆತ್ಮ ಈ ನಾಲ್ಕು ಅಂಶಗಳಿಂದ ಉಂಟಾಗುವಂತೆ ತೋರುತ್ತೆ. ಈ ನಾಲ್ಕರಲ್ಲಿ ಸುಖವು ಯಾವುದರ ಸ್ವಭಾವವೆಂದು ವಿವೇಚಿಸಿದರೆ ಅದು ವಿಷಯೇಂದ್ರಿಯಗಳಿಗೆ ಸಂಬಂಧಪಟ್ಟದ್ದಲ್ಲವೆಂದು ಸುಲಭವಾಗಿ ಮನಗಾಣಬಹುದು. ಯಾಕಂದರೆ, ಕಾಲ, ದೇಶ, ವ್ಯಕ್ತಿಗಳು ಬದಲಾಯಿಸಿದ ಹಾಗೆಲ್ಲಾ ಸುಖವಾದುದು ದುಃಖಕರವಾಗಿ ಕಂಡುಬರುತ್ತವೆ. ಸುಖಕರವಾದ ಒಳ್ಳೇ ಆಹಾರವು ಹೊಟ್ಟೆ ತುಂಬಿದ ಮೇಲೆ ಅರುಚಿಯಾಗಿ ಪರಿಣಮಿಸುತ್ತೆ. ಬೇಸಿಗೆಯಲ್ಲಿ ಹಿತಕರವಾದ ಶೀತಳ ಗಾಳಿಯು ಚಳಿಗಾಲದಲ್ಲಿ ಅಹಿತವಾಗಿ ಕಾಣುತ್ತೆ. ಆದಮೇಲೆ ಸುಖವು ವಿಷಯೇಂದ್ರಿಯ ಸ್ವಭಾವವಲ್ಲವೆಂದು ಧಾರಾಳವಾಗಿ ಹೇಳಬಹುದು.

ಅದರಂತೆಯೇ ಸುಖವು ಮನಸ್ಸಿನದೂ ಅಲ್ಲ. ಮನಸ್ಸು ಸಮಾಧಾನಸ್ಥಿತಿಯಲ್ಲಿದ್ದಾಗ ಒಂದು ಸಣ್ಣ ವಿಷಯವೂ ಆಹ್ಲಾದವನ್ನುಂಟುಮಾಡುವದು. ಅದೇ ಮನಸ್ಸು ವ್ಯಾಕುಲ ಅಥವಾ ಗಾಢವಾದ ಚಿಂತೆಯಲ್ಲಿದ್ದಾಗ ಆ ಸುಖವನ್ನುಂಟುಮಾಡಲಾರದು. ಅದರ ಸುಷುಪ್ತಿಯಲ್ಲಿ (ಗಾಢ ನಿದ್ರೆಯಲ್ಲಿ) ಮನಸ್ಸು, ಇಂದ್ರಿಯ, ವಿಷಯ ಇವುಗಳ ವ್ಯಾಪಾರವೇ ಲೇಶವಿಲ್ಲದಿದ್ದರೂ ಸುಖವಾಗಿ ನಿದ್ರೆ ಮಾಡಿದೆ ಎಂಬ ಅನುಭವವು ಕಂಡುಬರುವದ್ದರಿಂದ ಸುಖವು ಆತ್ಮಸ್ವರೂಪವೆಂದು ಹೇಳಬಹುದು.

ದೇವರ ಸ್ವರೂಪವನ್ನು ತೈತ್ತರಿಯೋಪನಿಷತ್ತಿನಲ್ಲಿ ಹೀಗೆ ಹೇಳಿದೆ—ಯಾರಿಂದ ಈ ಚರಾಚರ ಪ್ರಪಂಚವು ಉಂಟಾಗಿದೆಯೋ ಯಾರು ಇದನ್ನು ಕಾಪಾಡುತ್ತಿದ್ದಾರೊ ಕಡೆಗೆ ಇದರ ಕೆಲಸ ಮುಗಿದಮೇಲೆ ಇದು ಯಾರಲ್ಲಿ ಅಡಗುವುದೋ ಅದೇ ಬ್ರಹ್ಮವೆನ್ನಿಸಿಕೊಳ್ಳುತ್ತದೆ. ಒಂದು ಗಡಿಯಾರವನ್ನು ನಾವು ನೋಡಿದರೆ ಅದರಲ್ಲಿರುವ ಕ್ರಮ, ಸೌಂದರ್ಯ, ಉದ್ದೇಶ ಈ ಮೂರನ್ನು ನಾವು ನೋಡುತ್ತೇವೆ. ಇದರಂತೆಯೆ ಪ್ರಪಂಚದಲ್ಲಿಯೂ ಒಂದು ಕ್ಲುಪ್ತವಾದ ರೀತಿಯೂ ಸೌಂದರ್ಯವೂ ಉದ್ದೇಶವೂ ಕಂಡುಬರುವದರಿಂದ ಈ ಪ್ರಪಂಚಕ್ಕೆ ಕಾರಣವಾದ ಬ್ರಹ್ಮವು ಸರ್ವಜ್ಞನೂ ಸರ್ವ ಶಕ್ತನೂ ಆನಂದಸ್ವರೂಪನೂ ನಿತ್ಯನೂ ಆಗಿರಬೇಕೆಂದು ನಾವು ಗೊತ್ತುಮಾಡಬಹುದು. ಆದರ ಪ್ರಪಂಚದ ಸ್ವಭಾವವು ಮಾತ್ರ ಪ್ರತಿ ಕ್ಷಣದಲ್ಲಿಯೂ ಮಾರ್ಪಡುತ್ತಿರುವುದರಿಂದ ಇದು ಅನಿತ್ಯವೆಂದು ಹೇಳಿದೆ. ಈ ಅಂಶವು ನಮಗೂ ಅನುಭವಕ್ಕೆ ಬರುತ್ತದೆ.

ಈ ಮೇಲೆ ವಿವರಿಸಿದ ಬ್ರಹ್ಮ, ಜೀವ, ಪ್ರಪಂಚ ತತ್ವಗಳನ್ನು ಸಾಮಾನ್ಯವಾಗಿ ಎಲ್ಲಾ ಮತಗಳೂ ವಿವರಿಸುತ್ತವೆ. ಮತಗಳನ್ನು ಮೂರು ವಿಧಗಳಾಗಿ ವಿಂಗಡಿಸಬಹುದು (1) ನಾಸ್ತಿಕ ಮತ, (2) ಸಂಶಯವಾದಿ ಮತ, (3) ಆಸ್ತಿಕ ಮತ ಎಂದು ವಿಭಾಗಿಸಬಹುದು. ದೇವರಿಲ್ಲ, ಜೀವನಿಲ್ಲ ಕರ್ಮಗಳೂ ಪುಣ್ಯ ಪಾಪಗಳೂ ಸದ್ಗತಿ ದುರ್ಗತಿಗಳೂ ಜನ್ಮಾಂತರಗಳೂ ಇಲ್ಲವೆಂದು ಹೇಳುವ ಮತಕ್ಕೆ ನಾಸ್ತಿಕ ಮತವೆಂದು ಹೆಸರು. ತರ್ಕವನ್ನು ಪ್ರಮಾಣವಿಲ್ಲದಿರುವುದರಿಂದ, ಪ್ರಯೋಗಗಳನ್ನು ಮಾಡಿ ನೋಡಲು ಆಗದೆ ಇರೋಣದರಿಂದ ದೇವರು ಇಲ್ಲವೆಂತಾಗಲಿ, ಇದಾನೆಂತಾಗಲಿ ಖಂಡಿತವಾಗಿ ಹೇಳಲಾಗುವದಿಲ್ಲ ಎಂಬುದೇ ಸಂಶಯವಾದಿಗಳ ಮತ. ಈ ಗುಂಪಿಗೆ ಭೌತಿಕ ಶಾಸ್ತ್ರಜ್ಞರು ಸೇರುತ್ತಾರೆ. ನಾಸ್ತಿಕ ಮತದವರು ಯಾವವು ಇಲ್ಲವೆನ್ನುತ್ತಾರೋ ಅವೆಲ್ಲವೂ ಇವೆಯೆಂದು ಆಸ್ತಿಕರು ಒಪ್ಪುತ್ತಾರೆ. ಈ ಎಲ್ಲಾ ಮತಗಳಿಗೂ ಸಂಬಂಧಪಡುವ ಮಾತುಗಳು ಉಪನಿಷತ್ತುಗಳಲ್ಲಿ ಕಂಡುಬರುತ್ತವೆ. ಮನುಷ್ಯನು ತತ್ವದರ್ಶನ ಮಾರ್ಗದಲ್ಲಿ ಮುಂದುವರಿದ ಹಾಗೆಲ್ಲಾ ತನ್ನ ಅನುಭವಕ್ಕೆ ಬಂದ ಅಂಶಗಳನ್ನೆಲ್ಲಾ ವಿವರಿಸಿರುವುದು ಇದಕ್ಕೆ ಕಾರಣವಾಗಿದೆ ಯೆಂದು ಹೇಳಬೇಕೇ ಹೊರತು ಉಪನಿಷತ್ತುಗಳಲ್ಲಿ ಪರಸ್ಪರ ವಿರೋಧವಿದೆಯೆಂದು ತಿಳಿಯುವುದು ಸರಿಯಲ್ಲ.

ಉತ್ತಮವಾದ ಮನುಷ್ಯ ಜನ್ಮವು ಬಂದಿರುವಾಗ ವಿವೇಚನಾ ಶಕ್ತಿಯು ದೊರೆತಿರುವಾಗ ಅದರಿಂದ ಮುಂದುವರಿದು ಸದ್ಗತಿಯನ್ನು ಪಡೆಯಬೇಕು. ಈ ತಿಳುವಳಿಕೆಯನ್ನು ಉಪನಿಷತ್ತುಗಳಲ್ಲಿ ಪಡೆದು ಇಹಪರ ಸೌಖ್ಯಗಳನ್ನು ಸಾಧಿಸಬೇಕು.

(ಮೈಸೂರು ಕರ್ನಾಟಕ ಸಂಘದಲ್ಲಿ ಮಾಡಿದ ಭಾಷಣದ ಸಾರಾಂಶ)

ಮನುಷ್ಯನು ಪಕ್ಷಿಗಳಂತೆ ನಭದಲ್ಲಿ ಹಾರಾಡಬಲ್ಲನು.

ಪ್ಯಾರಿಸ್ ಪ್ರಾಂತ್ಯದ ಕ್ಲೆಮ್‌ಸೇಶನನೆಂಬವನು ತನ್ನ ದೇಹದ ಕರ್ಕಡೆಗಳಲ್ಲೂ ಗರಿಗಳನ್ನು ಕಟ್ಟಿ ಪಕ್ಷಿಗಳಂತೆ ನಭದಲ್ಲಿ ಹಾರಿ ಭೂತಲಕ್ಕೆ ಬಂದು ಮುಟ್ಟಿದನು. ಮೊದಲು ವಿಮಾನದಲ್ಲಿ ಹತ್ತು ಸಾವಿರ ಅಡಿ ಮೇಲಕ್ಕೇರಿ ಕಡೆಗೆ ಅಲ್ಲಿಂದ ಕೃತಕ ಗರಿಗಳನ್ನು ಕಟ್ಟಿ ಭೂತಲಕ್ಕೆ ಹಾರಿದನು. ಕೃತಕ ಗರಿಗಳು ಅವನನ್ನು ನಭದಲ್ಲಿ ತೇಲಿಸಿ, ಸ್ವಲ್ಪ ಹೊತ್ತಿನಲ್ಲಿಯೇ ಸುರಕ್ಷಿತವಾಗಿ ಭೂಮಿಗೆ ತಂದು ಮುಟ್ಟಿಸಿದವು. ಇನ್ನು ಎಲ್ಲರೂ ಪಕ್ಷಿಗಳಂತೆ ಹಾರಾಡಬಹುದಲ್ಲ! ವಿಜ್ಞಾನ ಯುಗವು ಏನನ್ನು ತಾನೆ ಮಾಡಲಾರದು!

ಮೈಸೂರು ನಗರದಲ್ಲಿ ಸಾಹುಕಾರರಾದ ಸಿದ್ದಪ್ಪನವರ ಹೆಸರಿನಲ್ಲಿ ಕಟ್ಟಿಸಿರುವ ವೀರಶೈವ ಅನಾಥಾಲಯ ಮಂದಿರದ ಪ್ರವೇಶ ಮಹೋತ್ಸವವು ನೆನ್ನೆಯದಿವಸ ನೆರವೇರಿತು ಆಗ್ಗೆ ಮೈಸೂರು ಸಂಸ್ಥಾನದ ದಿವಾನ್ ಸಾಹೇಬರವರು ಮಾಡಿದ ಭಾಷಣದ ಸಾರಾಂಶ.

ಮಹಾಶಯರೇ,—

ಈ ದಿನ ಇಲ್ಲಿಗೆ ಬಂದು, ಶ್ರೀ ವರ್ಮಾ ಮಾದಪ್ಪನವರು ವೀರಶೈವ ಪಂಗಡದ ಕಿರಿಯ ವಿದ್ಯಾರ್ಥಿಗಳ ವಿಚಾರದಲ್ಲಿ ಸಹಾನುಭೂತಿಯನ್ನು ತೋರಿಸಿ ಉದಾರ ರೀತಿಯಲ್ಲಿ ಸಹಾಯ ಮಾಡಿರುವುದಕ್ಕಾಗಿ ನನ್ನ ಮೆಚ್ಚಿಕೆಯನ್ನು ಸೂಚಿಸುವುದು ನನಗೆ ವಿಶೇಷ ಸಂತೋಷಕರವಾಗಿದೆ. ಸಂಸ್ಥಾನದಲ್ಲಿ ವಿದ್ಯಾಪ್ರಚಾರಮಾಡುವುದಕ್ಕಾಗಿ ಸರ್ಕಾರದವರು ನೆರವೇರಿಸುತ್ತಿರುವ ಪ್ರಯತ್ನಗಳಿಗೆ ಸಹಾಯವಾಗುವಂತೆ ಇದರಂಥ ಖಾಸಗಿ ದೊಡ್ಡ ಮನುಷ್ಯರು ತಾವೂ ನೇರವಾಗಿ ಧರ್ಮಕಾರ್ಯಗಳನ್ನು ನೆರವೇರಿಸುತ್ತಿರುವುದು ಬಹಳ ತೃಪ್ತಿಕರವಾದ ವತ್ತು ಸಂತೋಷಕರವಾದ ವಿಚಾರವಾಗಿದೆ

ಸಂಸ್ಥಾನದಲ್ಲಿ ವಿದ್ಯಾರ್ಥಿಗಳಿಗೆ ಊಟ ವಸತಿಗಳಿಗಾಗಿ ತಕ್ಕ ಏರ್ಪಾಡುಗಳನ್ನು ಮಾಡಲು ಸರ್ಕಾರದವರು ಭಾರಿಯಾಗಿ ಹಣವನ್ನು ವೆಚ್ಚಮಾಡುತ್ತಿರುವ ವಿಚಾರವು ನಿಮ್ಮೆಲ್ಲರಿಗೂ ತಿಳಿದೇ ಇದೆ. ಸರ್ಕಾರದವರೇ ಸಂಪೂರ್ಣವಾಗಿ ವೆಚ್ಚವನ್ನು ವಹಿಸಿಕೊಂಡಿರುವ ಕೆಲವು ವಿದ್ಯಾರ್ಥಿ ನಿಲಯಗಳಿವೆ. ಇತರ ವಿದ್ಯಾರ್ಥಿ ನಿಲಯಗಳ (ಹಾಸ್ಟೆಲುಗಳ) ಮತ್ತು ಅನಾಥಾಲಯಗಳ ವಿಷಯದಲ್ಲಿ ಅಲ್ಲಿನ ಕೆಲಸ ನಡೆಯುವ ವೆಚ್ಚ, ಪಾತ್ರೆ ಪದಾರ್ಥಗಳೇ ಮುಂತಾದವುಗಳ ವೆಚ್ಚ, ಕಟ್ಟಡಗಳ ವೆಚ್ಚ—ಇವಕ್ಕಾಗಿ ಸರ್ಕಾರದವರು ಸಹಾಯಧನಗಳನ್ನು ಸಲ್ಲಿಸುತ್ತಿದ್ದಾರೆ.

ನಮ್ಮ ಸಂಸ್ಥಾನದಲ್ಲಿರುವ ಪರೋಪಕಾರಿಗಳಾದ ಪ್ರಜಾವತ್ಸಲರಲ್ಲಿ ಇಷ್ಟು ಹೆಚ್ಚು ಮಂದಿಗಳು ದೇಶೋನ್ನತಿಗೂ ಪ್ರಜೆಗಳ ಸುಖ ಸಂತೋಷಗಳಿಗೂ ಸಾಧಕವಾಗುವಂತೆ ತಮ್ಮ ಕಾಲವನ್ನೂ, ಹಣವನ್ನೂ, ಶಕ್ತಿಸಾಮರ್ಥ್ಯಗಳನ್ನೂ ವಿನಿಯೋಗಿಸುತ್ತಿರುವುದು ಹರ್ಷದಾಯಕವಾಗಿದೆ. ಹೀಗೆ ಹರ್ಷಪಡುವುದೂ, ಇಂಥ ದೇಶಬಾಂಧವರನ್ನು ಪಡೆದಿರುವುದಕ್ಕಾಗಿ ಹೆಮ್ಮೆ ಪಡುವುದೂ ನಮ್ಮ ಹಕ್ಕಾಗಿದೆ

ಪರೋಪಕಾರ ಬುದ್ಧಿಯುಳ್ಳ ಈ ಪುಣ್ಯಾತ್ಮರು ಉದಾರ ಸಹಾಯದಿಂದ ಕಟ್ಟಿಸಿಕೊಟ್ಟಿರುವ ಈ ವಿದ್ಯಾರ್ಥಿ ನಿಲಯದಲ್ಲಿ ವಾಸಮಾಡುವ ವಿದ್ಯಾರ್ಥಿಗಳೆಲ್ಲರೂ ಇದರಿಂದ ಪೂರ್ಣಪ್ರಯೋಜನವನ್ನು ಪಡೆಯುವರೆಂದು ನಾನು ನಂಬಿರುವೆನು. ಈ ವಿದ್ಯಾರ್ಥಿನಿಲಯವು ಮುಂದಿನ ವರ್ಷಗಳಲ್ಲಿ ವಿದ್ಯಾರ್ಥಿಗಳಿಗೆ ಹೆಚ್ಚು ಹೆಚ್ಚು ಪ್ರಯೋಜನಕರವಾಗಿ ಪರಿಣಮಿಸುತ್ತದೆಂಬುದರಲ್ಲಿ ಸಂದೇಹವೇ ಇಲ್ಲ.

ಸಾಧ್ವಿ

೮-೬-೩೬ ನೇ ಸೋಮವಾರ

ಸರ್ ಮಿರ್ಜಾರವರ ಭಾಷಣ

ಭಾಷಣವು ನಡೆದಿತು. ಕೇಳಿದವರು ಮೆಚ್ಚಿದರು. ಸರ್ ರವರಿಗೂ ತೃಪ್ತಿಯೇ ಆಗಿದ್ದೀತು. ಆದರೆ ನಮಗೆ ತಿಳಿದಂತೆ ದೇಶದ ನಿರೀಕ್ಷಣೆಗೆ ಅದರಲ್ಲಿ ಉತ್ತರವಿಲ್ಲ. ತಮ್ಮ ಸರಕಾರವು ಏನುಮಾಡಿದೆ? ಏನು ಮಾಡಲಿಕ್ಕಿದೆ? ಎಂಬುದನ್ನು ತಕ್ಕಮಟ್ಟಿಗೆ ವಿವರಿಸಿರುವರು. ಇಷ್ಟೇ ಸಾಲದು. ಸರ್ ರವರು ಹಲವು ಕೂಡಕಾದ ಸಮಸ್ಯೆಗಳನ್ನು ಕುರಿತು ಏನುಮಾಡಿದ್ದಾರೆ, ಮಾಡುವರು? ಎಂಬುದನ್ನು ಇಂದೂ ದೇಶವು ಕೇಳುತ್ತಿದೆ.

ಕೇವಲ ಶಾಂತಿರಕ್ಷಣೆಗಾಗಿಯೇ ಸರ್ಕಾರವೆಂಬುದು ಹದಿನೆಂಟನೆಯ ಶತಮಾನದ ಮಾತು. ಇಂದಿನ ಸರ್ಕಾರವೆಂದರೆ ಅದು ಜನಜೀವನದ ಆರ್ಥಿಕ, ನೈತಿಕ ಪರಿಸ್ಥಿತಿಯುಳ್ಳದು, ಪಕ್ಷಬಾಧ್ಯತೆಗಳ ಸಂರಕ್ಷಣೆಯ ಭಾರವನ್ನು ವಹಿಸಿರತಕ್ಕದ್ದು. ಜನಜೀವನದ ಆರ್ಥಿಕಸ್ಥಿತಿಯನ್ನು ಕುರಿತು ಸರ್ ರವರಿಗೆ ನೀತಿಯು ದೊಡ್ಡದೊಡ್ಡ ಕಾರ್ಖಾನೆಗಳನ್ನು ಭಾರಿ ಬಂಡವಾಳದಿಂದ ಸ್ಥಾಪಿಸಬೇಕೆಂಬುದು, ಎಂದು ಕಾಣುವುದು. ಯೂರೋಪಿನ ರಾಜನೀತಿಯನ್ನು ಅಷ್ಟೊಂದು ವಿಶದವಾಗಿ ವಿವೇಚಿಸಿದ್ದರೂ ಇಂದಿನ ಜಗತ್ತಿನ ಅಶಾಂತಿಗೆ ಇಂತಹ ಭಾರೀ ಕಾರ್ಖಾನೆಗಳೇ ಕಾರಣಗಳೆಂಬುದು ಸರ್ ಮಿರ್ಜಾರವರಿಗೆ ತಿಳಿಯದುದಕ್ಕಾಗಿ ವಿಷಾದಿಸುವೆವು.

ಬಡ್ಡಿಯ ದರವು ಕಡಿಮೆಯಾಗಿರುವ ಈಗಿನ ಸನ್ನಿವೇಶವನ್ನು ವಿತರಣೆಯಿಂದ ಉಪಯೋಗಿಸಿಕೊಂಡು ಕೈಗಾರಿಕೆಗಳನ್ನು ಪ್ರಾರಂಭಿಸುತ್ತಿರುವ ಶೀಲಕ್ಕಾಗಿ ನಾವು ಸರ್ ಮಿರ್ಜಾರವರ ಸರಕಾರವನ್ನು ಅಭಿನಂದಿಸುವೆವು. ಈ ಕೈಗಾರಿಕೆಯ ಉದ್ಯಮಗಳಿಂದ ಜೋರೇಗೌಡನಿಗೆ ಪರಿಣಾಮದಲ್ಲಿ ಪ್ರಯೋಜನವಾಗುವುದಕ್ಕೆ ಪ್ರತಿಯಾಗಿ ನಷ್ಟನೇ ಕೈಗಟ್ಟುತ್ತಿದೆ. ನಿದರ್ಶನವೆಂದರೆ ಎಮ್ಮೆಚ್ಛಕ್ತಿಯ ಇಲಾಖೆ. ಈ ಇಲಾಖೆಯ ಬಂಡವಾಳವು ಜೋರೇಗೌಡನದು. ಅದರಿಂದ ಸುಖಪಡುವವರು ಜೋರೇಗೌಡರ ವಠ್ಠಾರಗಳಾದ ಧನಿಕರೂ, ಭಾರಿಯ ಅಧಿಕಾರಿಗಳೂ ಇತ್ಯಾದಿ. ಜೋರೇಗೌಡನು ಶೀಮೆ ಎಣ್ಣೆಗಾಗಿ ಪರದೇಶಕ್ಕೆ ತೆರುತ್ತಿರುವುದರ ಒಂದೇ ಒಂದು ಬಿಡಿಗಾಸಾದರೂ ಕಡಿಮೆಯಾಯಿತೇನು? ಹೀಗೆಯೇ ಬಡಜೋರೇಗೌಡನ ಮಕ್ಕಳಿಗೆ ಈ ಕಾರ್ಖಾನೆಗಳಲ್ಲಿ ಕೂಲಿಯೇ ದೊರೆಯದು. ಮೈಸೂರಿನ ಹೊರಗಿನವರಿಗೆ ಕೂಲಿ ಸಿಕ್ಕುವುದಕ್ಕಾಗಿ ಮಾತ್ರವೇ ಈ ಕಾರ್ಖಾನೆಗಳು ಇದಿರಲಿ. ಇಂತಹ ಕೆಲಸಗಳ 'ಎಕ್ಸ್‌ಪರ್ಟ್' ಗಳಂತೂ ಮೈಸೂರಿನವರಲ್ಲವಷ್ಟೆ!

ಇನ್ನು ಮೈಸೂರಿನವರ ಪಕ್ಷಬಾಧ್ಯತೆಗಳಂದರೆ, ಸಿಲೋನ್, ಮಲಯ ಮುಂತಾದ ಕಡೆಗಳಿಗೆ ಮೈಸೂರಿನವರೆಷ್ಟೋ ಮಂದಿ ಹೋಗಿದ್ದಾರೆ. ಅವರ ಸ್ಥಿತಿಗತಿಗಳೇನು? ಎಂಬುದರ ಮಾತು ಈ ವರದಿಯಲ್ಲಿರಬೇಡವೇ? ಬೆಂಗಳೂರು ದಂಡಿನ ಪ್ರದೇಶ ಪೂಗದ ಸತ್ಯಮಂಗಲದ ಕೈಬಿಟ್ಟ ಇಂತಹ ಸಮಸ್ಯೆಗಳು ಯಾವ ಸ್ಥಿತಿಯಲ್ಲಿವೆ? ಎಂಬುದು ಇರಬೇಡವೇ? ಮುಂದಿನ ಅಧಿವೇಶನದಲ್ಲಿಯಾದರೂ ಸರ್ ಮಿರ್ಜಾರವರು ಪರಿಸ್ಥಿತಿಯನ್ನು ದೇಶದ ಮುಂದೆ ಸ್ಪಷ್ಟವಾಗಿ ಇಡುವರೆಂದು ನಂಬುವೆವು. ದೇಶದ ರಕ್ಷಣೆಗಾಗಿ ಇಡಲ್ಪಟ್ಟಿರುವ ಭಾರತ ಸೈನ್ಯದಲ್ಲಿ ಮೈಸೂರಿನವರದು ಒಂದು ಭಾಗವನ್ನು ಏರ್ಪಡಿಸಲು ಸರ್ ಮಿರ್ಜಾರವರೇಕೆ ಯತ್ನಿಸಬಾರದು? ತುಂಗಭದ್ರೆಯ ನೀರಿನ ವಾದವೆಲ್ಲಿಗೆ ಬಂದಿದೆ!

ಇದು ಗ್ರಾಮ ಕೈಗಾರಿಕೆಗಳ ಯುಗ. ಅದಕ್ಕೆ ಸರ್ ಮಿರ್ಜಾರವರ ಸರ್ಕಾರವು ಕೊಡುತ್ತಿರುವ ಗಮನವು ಸಾಲದು. ಭಾರತದ ನಗರಗಳೇ, ಮೈಸೂರಿಗಳಿ, ರಕ್ಷಣೆಯಿಲ್ಲದವುಗಳೆಂಬುದು ಎಲ್ಲರಿಗೂ ತಿಳಿದುದೇ. ನಿಮ್ಮ ಸಾರ್ವಭೌಮ ಸರಕಾರದವರು ನಮ್ಮನ್ನು ನಂಬಿ ನಮ್ಮ ಯುದ್ಧನಾವೆಗಳನ್ನೂ, ನಮಗೆ ಸಮರ ಶಿಕ್ಷಣವನ್ನೂ ಕೊಡಬೇಕಾಗಿದೆ. ಯೂರೋಪಿನ ಪರಿಸ್ಥಿತಿಗೂ ಮೈಸೂರಿಗೂ ಸಂಬಂಧವಿಲ್ಲವೆ? ಇಲ್ಲ. ಆದರೆ ನಮ್ಮ ರಾಜನೀತಿನಿಪುಣರು ಬಡಜೋರೇಗೌಡರ ಋಣಭಾರವನ್ನು ತಗ್ಗಿಸುವಿಕೆಗೂ, ಬೆಳೆಗಳಿಗೆ ಗಿರಾಕಿಯನ್ನು ಕಲ್ಪಿಸುವುದಕ್ಕೂ ವಿಶೇಷ ಗಮನ ಕೊಡಬೇಕಾಗಿದೆ. ನಮ್ಮ ಸರ್ಕಾರದ ಪ್ರಗತಿಪರಮುಖವಾದ ಉಪಸ್ಥಿತಿಗೆ ಸುದಾಗಮನವನ್ನು ಬಯಸುವೆವು. ಅವರ ಭಾಷಣದ ಹಲವು ಪ್ರಾಮುಖ್ಯ ಸಂಗತಿಗಳನ್ನು ಕುರಿತು ಮುಂದೆ ಪ್ರಸ್ತಾಪಿಸುವೆವು.

ರಾಷ್ಟ್ರಧ್ವಜದ ಅಡ್ಡಿಯನ್ನು ತೆಗೆಯಿರಿ!

ನಮ್ಮ ಸರ್ಕಾರದವರು ರಾಷ್ಟ್ರಧ್ವಜದ ಮೇಲೆ ಹಾಕಿದ್ದ ನಿಷೇಧಾಜ್ಞೆಯನ್ನು ತೆಗೆದುಹಾಕುವರೆಂಬ ಸದ್ದಿಯು ಹೊರಬಿದೆ. ಈ ಅರ್ಥವಿಲ್ಲದ ನಿರ್ಬಂಧವನ್ನು ತಪ್ಪಿಸಬೇಕೆಂದು ಇಷ್ಟು ದಿನಗಳ ಮೇಲಾದರೂ ಅವರಿಗೆ ಮನಸ್ಸು ಬಂದಿದ್ದರೆ ಬಹಳ ಸಂತೋಷ. ಕಳೆದ ನಾಲ್ಕೈದು ವರ್ಷಗಳಿಂದಲೂ ಆರುತಿಂಗಳಿಗೊಮ್ಮೆ ಈ ನಿರ್ಬಂಧದ ಆಜ್ಞೆಯನ್ನು ಮುಂದುವರಿಸುತ್ತ ಹೋಗುವುದು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರುಗಳ ಒಂದು ವಿಧಿಯಾಗಿದೆ. ಆರು ತಿಂಗಳಾಯಿತೆಂದರೆ ಪೋಲೀಸಿನವರಿಗ ಸ್ವಲ್ಪ ಕೆಲಸ ಬೀಳುತ್ತದೆ. ಈ ಆಜ್ಞೆಯ ವಿಷಯವನ್ನು ಅವರು ಮ್ಯಾಜಿಸ್ಟ್ರೇಟರಿಗೆ ಜ್ಞಾಪಿಸುವರು. ಮ್ಯಾಜಿಸ್ಟ್ರೇಟರು ಮತ್ತೆ ಆರುತಿಂಗಳ ಅವಧಿಯನ್ನು ಹೆಚ್ಚಿಸುವರು. ಹೊಸ ಅಪ್ಪಣೆಯ ನಾಲ್ಕಾರು ಪ್ರತಿಗಳನ್ನು ಮಾಡಿ ಕೆಲವರ ಮೇಲೆ ಜಾರಿ ಮಾಡಿ ಕೆಲವು ಕಡೆಗಳಲ್ಲಿ ಪ್ರಕಟಿಸುವರು. ಇಷ್ಟು ಮಾತ್ರ ಆಗುತ್ತಿದೆ.

ಪ್ರಕೃತದಲ್ಲಿ ರಾಷ್ಟ್ರಧ್ವಜವನ್ನು ಹಾರಿಸುವ ಕುತೂಹಲವುಳ್ಳವರೂ ಕಡಿಮೆ. ಹಾರಿಸುವ ಪ್ರಮೇಯಗಳೂ ಇಲ್ಲ. ಆದರೂ ಅದರಲ್ಲಿ ಅಧಿಕಾರಿಗಳ ಆಸಕ್ತಿಯು ಮಾತ್ರ ಮಿತಿಮೀರಿರುತ್ತದೆ. ಅವರು ಒಂದು ಅಪ್ಪಣೆಯನ್ನು ಹೊರಡಿಸಿ ಜಾರಿ ಮಾಡುವಷ್ಟು ನಿಮಿತ್ತ ತಕ್ಕ ಪ್ರಯೋಜನವಿದೆಯೇ ಎಂಬುದು ಸಂದೇಹ.

ಆದರೂ ಈ ಅಪ್ಪಣೆಯು ಹೊರಡುತ್ತಿರುವುದರಿಂದ ರಾಷ್ಟ್ರಧ್ವಜಾರೋಹಣದಲ್ಲಿ ಆಸಕ್ತಿಯುಳ್ಳವರಿರುವರೆಂದು ಎಲ್ಲರಿಗೂ ಸರ್ಕಾರದವರೇ ಜಾಹೀರು ಮಾಡಿದಂತಾಗುತ್ತಿದೆ. ಈ ನಿರ್ಬಂಧವನ್ನು ತೆಗೆದುಹಾಕಿದರೆ ಯಾರೂ ಧ್ವಜವನ್ನು ಹಾರಿಸುವುದಿಲ್ಲವೆಂಬ ಭರವಸೆಯುಳ್ಳ ಆದರೆ ಒಂದು ವೇಳೆ ಯಾರಾದರೂ ಹಾರಿಸಿದರೂ ಅದರಿಂದ ಆಕಾಶ ತಲೆಯಮೇಲೆ ಬೀಳುವುದಿಲ್ಲ. ಮ್ಯಾಜಿಸ್ಟ್ರೇಟರುಗಳ ಅಪ್ಪಣೆಯುಳ್ಳ ಕಾಣಬರುವ ಅಲ್ಲೋಲಕಲ್ಲೋಲಗಳೇನೂ ಆಗುವುದಿಲ್ಲ. ಶಾಂತಿಭಂಗವಾಗುವುದಿಲ್ಲ. ಇದುವರೆಗೆ ಎಲ್ಲಿಯೂ ಆಗಿಲ್ಲ. ಶ್ರೀಮನ್ಮಹಾರಾಜರ ಗೌರವಕ್ಕೆ ಕೊರತೆಯುಂಟಾಗುವುದಿಲ್ಲ. ಪಂಡಿತ ಜವಾಹರಲಾಲರು ಈ ಅಭಿಪ್ರಾಯಗಳನ್ನು ಖಂಡಿತವಾಗಿ ಹೇಳಿರುತ್ತಾರೆ. ಮಹಾತ್ಮಗಾಂಧಿಯವರೂ ಈ ಸಮಯದಲ್ಲಿ ಇಲ್ಲಿಯೇ ಇದ್ದಾರೆ. ಇನ್ನು ಮುಂದೆ ಯಾಗಲೂ ಈ ಅಡ್ಡಿಯನ್ನು ಹಾಕದಂತೆ ಸರ್ಕಾರದವರು ಅಪ್ಪಣೆ ಮಾಡುವರೆಂದು ನಾವು ನಂಬಿದ್ದೇವೆ.

ಮಹಾತ್ಮರ ಮಗನ ಮತಾಂತರ.

ಮಹಾತ್ಮ ಗಾಂಧಿಯವರ ಹಿರೇ ಮಗನಾದ ಹೀರಾಲಾಲನು ಮುಸಲ್ಮಾನ ಮತಕ್ಕೆ ಸೇರಿದ ವಿಷಯವು ಈಗಾಗಲೇ ಎಲ್ಲರಿಗೂ ವೇದ್ಯವಾಗಿದೆ. ತಂದೆಯವರಿಗೂ ತನಗೂ ಭೇದಗಳಿದ್ದುದರಿಂದ ಈ ರೀತಿ ಅವನು ಮಾಡಿರುವುದಾಗಿ ಒಂದು ಕಡೆ ಹೇಳುತ್ತಾನೆ. ಇಸ್ಲಾಂ ಮತವೇ ಸತ್ಯವಾದ ಮತವೆಂದು ತನಗೆ ತೋರಿದ್ದು ಬಂದಿದೆಯೆಂದೂ ಮತ್ತೊಂದು ಕಡೆ ಹೇಳ್ತಾನೆ. ಮತ್ತು ಈತನು ಎರಡು ಮೂರು ವರ್ಷಗಳ ಕೆಳಗೆ ಕ್ರೈಸ್ತಮತಕ್ಕೆ ಸೇರುವ ಪ್ರಯತ್ನದಲ್ಲಿದ್ದ ವಿಷಯವೂ ಎಲ್ಲರಿಗೂ ಗೊತ್ತೇ ಇದೆ. ಹೀಗೆ ಕ್ಷಣ ಕ್ಷಣಕ್ಕೂ ಮತವನ್ನು ಬದಲಾಯಿಸುವ ಪ್ರವೃತ್ತಿಯು ಈತನಿಗೆ ಇರುವುದೇನೂ ಹೊಸದಲ್ಲ.

ಮಹಾತ್ಮರೇ ಈತನ ಮತಾಂತರದ ವಿಷಯವನ್ನು ವಿವರವಾಗಿ ವರ್ಣಿಸಿದ್ದಾರೆ. ಈತನಿಗೆ ಐವತ್ತು ವರ್ಷ ವಯಸ್ಸು. ವೃದ್ಧ ಸ್ವೇಚ್ಛಾಚಾರಿ, ದುಂದುಗಾರ, ನೀಚ ಬಾಹಿರ, ಕುಡುಕ, ಮಕ್ಕಳು ಮರಿಗಳಿದ್ದಾರೆ. ಪತಿವ್ರತೆಯಾದ ಹೆಂಡತಿಯಿದ್ದಳು. ಆಕೆಯು ಈತನ ಮಾತಿಗೆ ಪ್ರತಿಯಾಡುತ್ತಿರಲಿಲ್ಲ. ಎಷ್ಟೋ ಸಾರಿ ಅವನನ್ನು ಸರಿಗ ತರಲು ಪ್ರಯತ್ನಿಸಿದಳು. ಸಾಧ್ಯವಾಗಲಿಲ್ಲ. ಆಕೆಯು ಮೃತಪಟ್ಟಳು. ಅನಂತರ ಈತನು ಮತ್ತಷ್ಟು ವಿಷಯಲಂಪಟನಾದನು. ಮದ್ಯ ಕೊಟ್ಟವರ ಜಾತಿಗೆ ಸೇರಲು ಸಿದ್ಧನಾದನು. ಸಾಲಸೋಲಗಳನ್ನು ವಿಪರೀತವಾಗಿ ಮಾಡಿದನು. ಪಠಾಣರ ಕೈಗೆ ಸಿಕ್ಕಿ ಏಟು ತಿನ್ನುವುದರಲ್ಲಿದ್ದನು. ಯಾರೋ ಪುಣ್ಯಾತ್ಮರು ಬಿಡಿಸಿಕೊಂಡರು.

ಕೆಲವು ದಿನಗಳ ಕೆಳಗೆ ಈತನು ಮೈಸೂರಿಗೆ ಬಂದು ಒಂದು ಸಣ್ಣ ಹೋಟಲಿನಲ್ಲಿ ಇಳಿದಿದ್ದನು. ಪ್ರಪಂಚಕ್ಕೇ ಪೂಜ್ಯರಾದ ಮಹಾತ್ಮರ ಹೊಟ್ಟೆಯಲ್ಲಿ ಇಂತಹವನು ಹುಟ್ಟಬಹುದೇ ಎನ್ನುವಂತಿತ್ತು.

ಇಂತಹ ವಸ್ತುಬಿಸ್ತಿಲ್ಲದ ಮನುಷ್ಯನನ್ನು ಮುಸಲ್ಮಾನ ಮೌಲ್ವಿಗಳು ತಮ್ಮ ಜಾತಿಗೆ ಸೇರಿಸಿಕೊಂಡು ಅಬ್ದುಲ್ಲಾ ಎಂದು ಹೆಸರನ್ನು ಕೊಟ್ಟರು. ಈತನಿಂದ ಅವರಿಗೆ ತಕ್ಕುದಾದರೂ ಯಾವ ಪ್ರಯೋಜನವಾಗುವುದೋ ಗೊತ್ತಿಲ್ಲ. ಅಲ್ಲಿ ಕೂಡ ಎಷ್ಟು ದಿನಗಳಿರುವನೋ ಅದೂ ತಿಳಿಯದು. ಬಿಸ್ಕತ್ತು ದೊಣ್ಣೆಗಳ ಆಸೆಯನ್ನು ತೋರಿಸಿದರೆ ಇವನು ಇನ್ನು ಒಂದೆರಡು ತಿಂಗಳಲ್ಲಿ ಕ್ರಿಸ್ತಮತವನ್ನೋ ಮತ್ಯಾವ ಮತವನ್ನೋ ಸೇರುವುದರಲ್ಲೇನೂ ಆಶ್ಚರ್ಯವಿಲ್ಲ.

ಮತಾಂತರವು ಕೇವಲ ಕ್ಷಣಿಕ ವೈರಾಗ್ಯವಾಗಿರುತ್ತದೆ. ಇದುವರೆಗೆ ಹಿಂದೂ ಜನಾಂಗದಿಂದ ಬೇರೆಯಾದ ಸಹೋದರರೆಲ್ಲರೂ ಈ ರೀತಿಯ ಕ್ಷಣಿಕ ಆವೇಶಗಳಿಗೆ ಬದ್ಧರಾಗಿ ಮತಾಂತರ ಹೊಂದಿರುವರು. ಇದರಿಂದ ಹಿಂದೂ ಜನಾಂಗದ ಸಂಖ್ಯೆಯು ಕಡಮೆಯಾಗುವುದೇನೋ ನಿಜ. ಇದರಿಂದ ಆಗುವ ಕೆಲವು ಅನಿವಾರ್ಯಗಳನ್ನು ಹಿಂದೂ ಜನಾಂಗವು ಅನುಭವಿಸಲೇಬೇಕು.

ಆದರೆ ಮಹಾತ್ಮರವರೇ ಇದಕ್ಕೆ ತಕ್ಕ ಉತ್ತರವನ್ನು ಕೊಟ್ಟಿರುವರು. ಹೊಟ್ಟೆಯಲ್ಲಿ ಹುಟ್ಟಿದ ಮಗನು ಅನ್ಯಾಕ್ರಾಂತನಾದುದು ಅವರಿಗೆ ಎಲ್ಲರಿಗಿಂತಲೂ ಹೆಚ್ಚಾಗಿಯೇ ಇರಬೇಕು. ಆದರೂ ಇಂತಹ ಕ್ಷಣಿಕ ಉದ್ರೇಕಗಳನ್ನು ಉದಾಸೀನದಿಂದ ಕಾಣಿರಿ ಎಂದು ಅವರು ಹೇಳುತ್ತಾರೆ. ಇಂತಹ "ಕಶ್ಮಲ"ಗಳಿಂದ ಹಿಂದೂ ಮತವು ಪರಿಶುದ್ಧಿಗೊಳ್ಳಲೆಂದು ಕೋರಿರುತ್ತಾರೆ. ಇದೇ ಸರ್ವೋತ್ತಮವಾದ ಭಾವನೆ.

ವ್ಯವಸಾಯಗಾರರ ಸಹಾಯದ ಮಸೂದೆ.

ಮೈಸೂರು ಸಂಸ್ಥಾನದ ವ್ಯವಸಾಯಗಾರರ ಸಹಾಯಾರ್ಥವಾಗಿ ರೆಗ್ಯುಲೇಷನ್ನು ಮತ್ತಷ್ಟು ತಿದ್ದುಪಾಟು ಮಾಡುವುದಕ್ಕಾಗಿ ಏರ್ಪಟ್ಟ ಮಸೂದಾ ಕಾನೂನಿನ ಸಾಮಾನ್ಯ ನಿಯಮಗಳು:—

ಇವುಗಳನ್ನು ಈಸಾರಿ ಪ್ರಜಾಪ್ರತಿನಿಧಿ ಸಭೆಯಲ್ಲಿ ಅಂಗೀಕರಿಸಲಾಯಿತು.

ಮೈಸೂರು ಸಂಸ್ಥಾನದ ವ್ಯವಸಾಯಗಾರರ ಸಹಾಯಾರ್ಥವಾದ ರೆಗ್ಯುಲೇಷನು ಆಚರಣೆಗೆ ಬಂದಮೇಲೆ ಅದರ ಮೇರೆಗೆ ವ್ಯಾಜ್ಯ ವಿಚಾರಣೆ ನಡೆಯುತ್ತಿದೆಯೆಂಬುದರ ಸಂಬಂಧದಲ್ಲಿ ಹೈಕೋರ್ಟಿನವರಿಂದ ಒಂದು ವಿಶೇಷ ರೀತಿಯ ವರದಿಯು ತಲುಪುತ್ತದೆ. ಇದರಿಂದ ವ್ಯಕ್ತವಾಗುವ ಅಂಶಗಳವು ಈ ರೆಗ್ಯುಲೇಷನ್ನಿನ ಪ್ರಯೋಜನವನ್ನು ಪಡೆಯುವುದಕ್ಕಾಗಿ ಪ್ರತಿವಾದಿಗಳು ಹಕ್ಕುಗಳನ್ನು ಸೂಚಿಸಿದ್ದ ಮೊಕದ್ದಮೆಗಳ ಪೈಕಿ ಅನೇಕ ಮೊಕದ್ದಮೆಗಳಲ್ಲಿ ಅವರು ಸೂಚಿಸಿದ ಹಕ್ಕುಗಳು ನಿರಾಕರಿಸಲ್ಪಡಬೇಕಾಯಿತು. ದಾವೆಗಳು ಇತ್ಯರ್ಥವಾಗದೆ ದೀರ್ಘಕಾಲದವರೆಗೂ ನಡೆಯುವಂತೆ ಮಾಡುವುದಕ್ಕಾಗಿಯೋ ಅಥವಾ ಇಂತಹ ಹಕ್ಕು ಅದನ್ನು ತರತಕ್ಕ ಋಣದಾರರುಗಳಿಗೆ ಅನ್ವಯಿಸುವುದಾಗಿಲ್ಲದಿದ್ದರೂ ರೆಗ್ಯುಲೇಷನ್ನಿನ ನಿಯಮಗಳ ಪ್ರಯೋಜನವನ್ನು ತಾವೂ ಪಡೆಯಬಹುದೆಂಬ ಅಪೇಕ್ಷೆಯಿಂದಲೋ ಕೊಟ್ಟ ತಕರಾರುಗಳು ಅನೇಕ ಸಂದರ್ಭಗಳಲ್ಲಿ ಕೋರ್ಟಿನಲ್ಲಿ ದಾಖಲಾಗುತ್ತಿವೆ. ಈ ಅಂಶವು ಹೈಕೋರ್ಟಿನವರ ವರದಿಯಿಂದ ವ್ಯಕ್ತವಾಗುತ್ತದೆ. ಎಂದಿದ ದಾಖಲಾಗಿರತಕ್ಕ ಒಂದು ದಾವೆಯ ಸಂಬಂಧದಲ್ಲಿ, ಅದು ಇತ್ಯರ್ಥವಾಗುವುದಕ್ಕೆ ಮುಂಚೆ ಯಾವ ಕಾಲದಲ್ಲಾದರೂ ಸಹ, ಪ್ರತಿವಾದಿಯು ತಾನು ರೆಗ್ಯುಲೇಷನಿನ ಅರ್ಥದ ಮೇರೆಗೆ ವ್ಯವಸಾಯಗಾರನೆಂದೂ, ಆ ಕಾರಣದಿಂದ ತನಗೆ ರೆಗ್ಯುಲೇಷನ್ನಿನ ಫಲಾನಾ ಪ್ರಯೋಜನಗಳನ್ನು ಪಡೆಯಲು ಹಕ್ಕಿದೆ ಎಂದು ಕೇಳುವುದಕ್ಕೆ ಈ ರೆಗ್ಯುಲೇಷನಿನಲ್ಲಿ ಈಗ ಅವಕಾಶವಿದೆ. ಈ ವಿಧವಾದ ಅವಕಾಶವನ್ನು ಕಲ್ಪಿಸಿದ್ದುದು, ದಾವೆಯು ಮೊದಲು ಜರುಗುವಲ್ಲಿ ತರಗತಿ ಮತ್ತು ಅಗ್ಗೆ ಇನ್ನೂ ಫೈಸಲಾಗದಿದ್ದ ದಾವೆಗಳಿಗೆ ಅದು ಅನ್ವಯವಾಗುವಾಗ ಉಚಿತವೆನಿಸಿದ್ದಿತೆಂದು ಹೇಳಬಹುದು. ಆದರೆ, ಇನ್ನು ಮುಂದೆ ದಾಖಲಾಗುವ ದಾವೆಗಳಲ್ಲಿ (ಎಂದರೆ ಫಲಾನಾ ತಾರೀಖಿನಿಂದ ಗೊತ್ತುಮಾಡುವ ತಾರೀಖಿನ ತರುವಾಯ ದಾಖಲಾಗತಕ್ಕ ಎಲ್ಲ ದಾವೆಗಳಲ್ಲಿಯೂ) ಪ್ರತಿವಾದಿಯು ರೆಗ್ಯುಲೇಷನಿನ ಮೇರೆಗೆ ಪ್ರಯೋಜನವನ್ನು ಪಡೆಯುವುದಕ್ಕೆ ತನಗಿರತಕ್ಕ ಹಕ್ಕನ್ನು ಸೂಚಿಸಬೇಕಾದರೆ, ಅವನು ಎಷ್ಟು ಮುಂಚಿತವಾಗಿ ಆ ರೀತಿ ಮಾಡುವುದು ಸಾಧ್ಯವೋ ಅಷ್ಟು ಮುಂಚಿತವಾಗಿ ಮಾತ್ರವೇ ಆ ರೀತಿ ಮಾಡಬೇಕೆಂದು ವಿಧಾಯಕ ಮಾಡುವುದು ವಾದಿಗಳ ಯೋಗಕ್ಷೇಮವನ್ನೂ ನೋಡಿಕೊಳ್ಳುವ ದೃಷ್ಟಿಯಿಂದಲೂ ಮತ್ತು ಕೋರ್ಟಿನಲ್ಲಿ ಸುಸೂತ್ರವಾಗಿ ಕೆಲಸ ನಡೆಯುವ ದೃಷ್ಟಿಯಿಂದಲೂ ಉಭಯತಾ ಸೂಕ್ತವಾಗಿದೆ.

ಇದಕ್ಕನುಸಾರವಾಗಿ ವ್ಯವಸಾಯಗಾರರ ಸಹಾಯಾರ್ಥವಾದ ರೆಗ್ಯುಲೇಷನನ್ನು ತಿದ್ದುಪಾಟು ಮಾಡಬೇಕೆಂದು ಉದ್ದೇಶಿಸಲಾಗಿದೆ

ವಿಧವಾ ವಿವಾಹದ ಕಾನೂನು

ಹಿಂದೂ ವಿಧವೆಯರ ವಿವಾಹದ ವಿಷಯದಲ್ಲಿ ಈಗಿರತಕ್ಕ ಕಾನೂನು ಸಂಬಂಧವಾದ ಎಲ್ಲ ಪ್ರತಿಬಂಧಕಗಳನ್ನೂ ಹೋಗಲಾಡಿಸುವುದಕ್ಕಾಗಿ ರಚಿಸಲ್ಪಟ್ಟ ಮಸೂದಾ ಕಾನೂನಿನ ಸಾಮಾನ್ಯ ನಿಯಮಗಳು.

ಇವುಗಳನ್ನು ಈಸಾರಿ ಪ್ರಜಾಪ್ರತಿನಿಧಿ ಸಭೆಯಲ್ಲಿ ಅಂಗೀಕರಿಸಲಾಯಿತು

ಹಿಂದೂ ವಿಧವೆಯರ ಪುನರ್ವಿವಾಹದ ವಿಷಯದಲ್ಲಿ ಕಾನೂನಿನ ಬಲವನ್ನು ಕೊಟ್ಟು ಏರ್ಪಟ್ಟಿರುವ, 1856ನೆಯ ಇಸವಿಯ XVನೆಯ ನಂಬರಿನ ಆಕ್ಟಿನಂಥ ಒಂದು ರೆಗ್ಯುಲೇಷನನ್ನು ಮೈಸೂರು ಸಂಸ್ಥಾನದಲ್ಲಿ ಇನ್ನೂ ಏರ್ಪಡಿಸಿಲ್ಲ. ಆದುದರಿಂದ ಈ ವಿಷಯದಲ್ಲಿ, ನಾವುಗಳು ಬ್ರಿಟಿಷ್ ಇಂಡಿಯಾದವರಿಗಿಂತಲೂ ವಾಸ್ತವವಾಗಿಯೂ ಹಿಂದುಳಿದಿರುತ್ತೇವೆ. ಹಿಂದೂ ಧರ್ಮಶಾಸ್ತ್ರದಲ್ಲಿ ಸಂಪ್ರದಾಯಕ್ಕನುಸಾರವಾಗಿ ಮಾಡಿರುವ ಅರ್ಥನಿರ್ಣಯದಲ್ಲಿಯೂ ಅಥವಾ ರೂಢಿಯಲ್ಲಿಯೂ, ಹಿಂದೂ ವಿಧವೆಯರ ಪುನರ್ವಿವಾಹವು ಕೂಡದೆಂದು ನಿಷಿದ್ಧವಾಗಿದ್ದಾಗ್ಯೂ, ಹಿಂದೂ ವಿಧವೆಯರ ಪೈಕಿ ಪುನರ್ವಿವಾಹ ಮಾಡಿಕೊಳ್ಳಬೇಕೆಂಬ ಇಚ್ಛೆಯುಳ್ಳವರಿಗೆಲ್ಲರಿಗೂ ಆ ಆಕ್ಟು ಅನ್ವಯಿಸುವಂತೆ ಮಾಡಬೇಕೆಂಬ ಉದ್ದೇಶದಿಂದ, ದಿವಂಗತರಾದ ಪಂಡಿತ ಈಶ್ವರಚಂದ್ರ ವಿದ್ಯಾಸಾಗರರವರು ನೆರವೇರಿಸಿದ ಪ್ರಯತ್ನಗಳ ಫಲಿತಾಂಶವಾಗಿ 1856ನೆಯ ಇಸವಿಯ ಆ ಬ್ರಿಟಿಷ್ ಇಂಡಿಯಾ ಆಕ್ಟು ಬ್ರಿಟಿಷ್ ಇಂಡಿಯಾದಲ್ಲಿ ಜಾರಿಗೆ ತರಲ್ಪಟ್ಟಿತು

ಪುನರ್ವಿವಾಹ ಮಾಡಿಕೊಳ್ಳಬೇಕೆಂಬ ಇಷ್ಟವುಳ್ಳ ವಿಧವೆಯರಿಗೆ ಪ್ರತಿಬಂಧಕವಿಲ್ಲದಂತೆ ಕಾನೂನಿನ ಬಲವಿರಲು ಆ ರೀತಿ ಅವಕಾಶವನ್ನು ಕಲ್ಪಿಸುವುದಕ್ಕಾಗಿ ಮಾತ್ರವೇ ಈ ಮಸೂದಾ ಕಾನೂನನ್ನು ಏರ್ಪಡಿಸಲಾಗಿದೆ, ಅಲ್ಲದೆ, ಪುನರ್ವಿವಾಹ ಮಾಡಿಕೊಳ್ಳಬೇಕೆಂಬ ಇಷ್ಟವುಳ್ಳ ಹಿಂದೂ ವಿಧವೆಯರ ಪುನರ್ವಿವಾಹದ ವಿಷಯದಲ್ಲಿರತಕ್ಕ ಕಾನೂನಿನ ಅಡ್ಡಿಗಳನ್ನು ಹೋಗಲಾಡಿಸಿ, ಅಂಥ ವಿವಾಹದ ದೆಸೆಯಿಂದ ಹುಟ್ಟಿದ ಮಕ್ಕಳುಗಳನ್ನು ನ್ಯಾಯವಾದ ದಂಪತಿಗಳಿಗೆ ಹುಟ್ಟಿದ ಮಕ್ಕಳುಗಳಂತೆಯೇ ಭಾವಿಸುವಂತೆ ವಿಧಾಯಕ ಮಾಡಬೇಕೆಂಬುದೇ ಈ ಮಸೂದಾ ಕಾನೂನಿನ ಉದ್ದೇಶ. ಹಿಂದೂ ಮತಸಂಬಂಧವಾದ ನಿಯಮಗಳ ವಾಸ್ತವವಾದ ಅರ್ಥನಿರ್ಣಯದ ಪ್ರಕಾರ ನೋಡಿದರೆ ಹಿಂದೂ ವಿಧವೆಯರ ಪುನರ್ವಿವಾಹವು ನಿಷಿದ್ಧವಾಗಿಲ್ಲವೆಂದು ವಿದ್ವಾಂಸರಾದ ಹಿಂದುಗಳಲ್ಲಿ ಹೆಚ್ಚು ಹೆಚ್ಚಾಗಿ ಭಾವನೆಯು ಹುಟ್ಟುತ್ತಿದೆ, ಮತ್ತು ನ್ಯಾಯದೃಷ್ಟಿಯಿಂದಲೂ ಮತ್ತು ಧರ್ಮದೃಷ್ಟಿಯಿಂದಲೂ ನೋಡಿದರೂ ವಿಧವಾ ವಿವಾಹವು ಯುಕ್ತವೆಂದೂ ಜನರಿಗೆ ತೋರಿ ಬರುತ್ತಿದೆ. ಆಗುವದಂಥ ಅವಶ್ಯಕತೆಗನುಗುಣವಾಗಿ ಕಾನೂನಿನಲ್ಲಿ ಅವಕಾಶವನ್ನು ಕಲ್ಪಿಸಬೇಕೆಂಬ ಉದ್ದೇಶದಿಂದ ಈ ಮಸೂದಾ ಕಾನೂನನ್ನು ರಚಿಸಲಾಗಿದೆ. ಪುನರ್ವಿವಾಹ ಮಾಡಿಕೊಳ್ಳಲು ಜಾತಿ ಪದ್ಧತಿಯ ಮೇರೆಗೆ ಅವಕಾಶವಿರುವ ಹಿಂದೂ ವಿಧವೆಯರ ಹಕ್ಕಿನ ವಿಷಯದಲ್ಲಿ ಇದು ಅನ್ವಯಿಸುವುದಿಲ್ಲ

ಹಿಂದೂ ಧರ್ಮಶಾಸ್ತ್ರದ ಮೇರೆಗೆ ಏರ್ಪಟ್ಟಿರುವ ನಿಯಮಗಳಿಗನುಸಾರವಾಗಿಯೇ ಹಿಂದೂ ವಿಧವೆಯು ಸ್ವಗೋತ್ರದವರನ್ನು ವಿವಾಹ ಮಾಡಿಕೊಳ್ಳಕೂಡದೆಂದೂ ಮತ್ತು ವಿವಾಹವು ನಿಷಿದ್ಧವಾಗಿರುವ ಸಮೀಪ ಬಂಧುಗಳನ್ನು ಮದುವೆ ಮಾಡಿಕೊಳ್ಳಕೂಡದೆಂದೂ ಈ ಮಸೂದಾ ಕಾನೂನಿನಲ್ಲಿ ವಿಧಾಯಕ ಮಾಡಿದೆ. ಪ್ರಸಕ್ತ ಉದ್ದೇಶಗಳಿಗಾಗಿ ವಿಧವೆಯ ಗೋತ್ರವು ಆಕೆಯ ತಂದೆಯ ಗೋತ್ರವೇ ಎಂದು ಭಾವಿಸತಕ್ಕದೆಂದು ಗೊತ್ತುಮಾಡಿದೆ. ಸಾಮಾನ್ಯವಾಗಿ ಪ್ರಥಮ ವಿವಾಹದ ವಿಷಯದಲ್ಲಿ ಅನುಸರಿಸುವ ವಿಧ್ಯುಕ್ತ ಕರ್ಮಗಳನ್ನೇ ವಿಧವಾ ವಿವಾಹದ ವಿಷಯದಲ್ಲಿ ಕೂಡ ಅನುಸರಿಸತಕ್ಕದೆಂದು ವಿಧಾಯಕ ಮಾಡಿದೆ. ಅಪ್ರಾಪ್ತವಯಸ್ಕಳಾದ (ಮೈನರಾದ) ಒಬ್ಬಳು ಹಿಂದೂ ವಿಧವೆಗೆ ಅವಳ ಪ್ರಥಮ ವಿವಾಹದ ಸಂದರ್ಭದಲ್ಲಿ ನಿಷೇಕಪ್ರಸಕ್ತವಾಗಿದ್ದ ಸಂದರ್ಭದಲ್ಲಿ ಹೊರತು ಉಳಿದ ಸಂದರ್ಭಗಳಲ್ಲೆಲ್ಲ ಅವಳ ಪುನರ್ವಿವಾಹದ ವಿಷಯದಲ್ಲಿ ಅವಳ ಪೋಷಕರ (ಗಾರ್ಡಿಯನ್) ಅನುಮತಿಯು ಅಗತ್ಯವೆಂದು ನಿಬಂಧನೆಯನ್ನು ರಚಿಸಲಾಗಿದೆ

ವಿಧವೆಯು ವಿವಾಹ ಮಾಡಿಕೊಂಡರೆ ಆಕೆಯು ತನ್ನ ಪೂರ್ವದ ಗಂಡನ ಆಸ್ತಿಯಲ್ಲಿ ಪಡೆದಿದ್ದ ಹಕ್ಕು ಆಕೆಗೆ ತಪ್ಪಿಹೋಗುತ್ತದೆ. ಆತನಿಂದ ಆಕೆಗೆ ಬಂದಿದ್ದ ಎಲ್ಲ ಹಕ್ಕುಗಳು ತಪ್ಪಿಹೋಗಿ, ಅವು ಆತನ ಆಸ್ತಿಗೆ ಅವಳ ತರುವಾಯ ಹಕ್ಕುದಾರರಾಗಬೇಕಾದ ವಾರಸುದಾರರಿಗೆ ಸೇರುತ್ತವೆ. ಅಂಥವರಾರೂ ಇಲ್ಲದ ಪಕ್ಷದಲ್ಲಿ, ಪುನರ್ವಿವಾಹ ಮಾಡಿಕೊಂಡ ವಿಧವೆಯು ಆ ಆಸ್ತಿಗಳನ್ನು ತನ್ನ ಸ್ವಂತ ಸ್ವತ್ತಿನಂತೆ ಪೂರ್ಣಾಧಿಕಾರದೊಡನೆ ಅನುಭವಿಸಲು ಹಕ್ಕುದಾರಳಾಗಿರುತ್ತಾಳೆ. ಒಬ್ಬ ಮನುಷ್ಯನು ತನ್ನ ಹೆಂಡತಿಗೆ ಸ್ವತ್ತಿನ ಹಕ್ಕುಗಳನ್ನುಂಟುಮಾಡಿ ಬರೆದ ದಾನಪತ್ರದಲ್ಲಿ, ದಸ್ತಾವೇಜಿನಲ್ಲಿ, ಅಥವಾ ಮರಣ ಶಾಸನ ಪತ್ರದಲ್ಲಿ (ವಿಲ್ಲಿನಲ್ಲಿ) ಆಕೆಯು ತನ್ನ ಮರಣಾನಂತರ ಪುನರ್ವಿವಾಹ ಮಾಡಿಕೊಳ್ಳಕೂಡದೆಂದು ನಿರೋಧಿಸಿ, ನಮೂದಿಸಿದ್ದ ವಿನಾ, ಆ ಮನುಷ್ಯನ ಮರಣಾನಂತರ ವಿಧವೆಯಾದ ಆಕೆಯು ಆ ದಾನಪತ್ರದ ಮೇರೆಗೆ ಅಥವಾ ದಸ್ತಾವೇಜಿನ ಮೇರೆಗೆ, ಅಥವಾ ಮರಣಶಾಸನ ಪತ್ರದ ಮೇರೆಗೆ ಪಡೆದ ಆಸ್ತಿಯಲ್ಲಿ ಆಕೆಯು ಹೊಂದಿರುವ ಹಕ್ಕುಗಳೆಲ್ಲವೂ ಪೂರ್ಣಾಧಿಕಾರವುಳ್ಳ ಆಸ್ತಿಯ ಹಕ್ಕುಗಳೆಂದೇ ಭಾವಿಸಲ್ಪಡತಕ್ಕವೆಂದು ನಿಬಂಧನೆಯನ್ನು ರಚಿಸಲಾಗಿದೆ

ಪುನರ್ವಿವಾಹ ಮಾಡಿಕೊಂಡ ವಿಧವೆಯು ತನ್ನ ಮೊದಲನೆಯ ಗಂಡನಿಂದ ಪಡೆದ ಮಕ್ಕಳನ್ನು—ಆ ಮಕ್ಕಳಲ್ಲಿ ಆಸಕ್ತಿಯುಳ್ಳ ಜನರು ದಾವಾ ಅರ್ಜಿ ಕೊಟ್ಟಿದ್ದರ ಮೇಲೆ ಆ ಮಕ್ಕಳಿಗೆ ಸಿವಿಲ್ ಕೋರ್ಟಿನವರು ಮತ್ತೊಬ್ಬರನ್ನು ಆಕೆಗೆ ಬದಲಾಗಿ ಪೋಷಕರನ್ನಾಗಿ (ಗಾರ್ಡಿಯನ್ನಾಗಿ) ನೇಮಕಮಾಡುವವರೆಗೂ ತನ್ನ ಸ್ವಾಧೀನದಲ್ಲಿಟ್ಟುಕೊಂಡು ಆ ಮಕ್ಕಳಿಗೆ ಪೋಷಕಳಾಗಿರುವುದಕ್ಕೆ ಅವಕಾಶವಿರುವಂತೆ ನಿಬಂಧನೆಯನ್ನು ರಚಿಸಲಾಗಿದೆ

ಮಿಡ್ಲ್ ಉಪಾಧ್ಯಾಯರ ಪ್ರಾವಿಡೆಂಟ್ ಫಂಡು

[ಹುಣಸೂರು ಚಾರ್ಲ್ಸ್ ವೆಸ್ಲಿಯವರು ಮಿಷನರಿಗಳಾದ ರೆ॥ ಎಸ್. ಇ ಹಿಲ್‌ರವರಿಗೆ ಪ್ರಾವಿಡೆಂಟ್ ಫಂಡಿನ ಸಂಬಂಧದಲ್ಲಿ ತಾ॥ 27–5–1936 ರಲ್ಲಿ ಬರೆದು ಉತ್ತರ ಕೊಡಬೇಕೆಂದು ಕೇಳಿರುವ ರಿಜಿಸ್ಟರ್ ಪತ್ರವಿದು.]

ಮೈಸೂರು ಡಿಸ್ಟ್ರಿಕ್ಟ್ ಮೆಥೋಡಿಸ್ಟ್ ಮಿಷನ್ ಸೂಪರಿಂಟೆಂಡೆಂಟರವರಾದ ರೆ॥ ಎಸ್ ಇ ಹಿಲ್‌ರವರ ಸನ್ನಿಧಾನಕ್ಕೆ — ಹುಣಸೂರು ಟೌನಿನಲ್ಲಿರುವ ಎಸ್ ಚಾರ್ಲ್ಸ್ ವೆಸ್ಲಿಯು ತಿಳಿಯಪಡಿಸುವ ಸಂಗತಿಗಳು ಇದಾಗಿ —

ಮಹಾಸ್ವಾಮಿ,

ನಾನು ನಿಮ್ಮ ಮಿಷನ್ ಇಲಾಖೆಯಲ್ಲಿ ಅವಿಚ್ಛಿನ್ನವಾಗಿ ಹದಿಮೂರು ವರ್ಷಗಳಕಾಲ ಉಪಾಧ್ಯಾಯನಾಗಿ ದುಡಿದೆನು ತಾ॥ 17—11—35 ರಲ್ಲಿ ಸುಮಾರು ಇಪ್ಪತ್ತು ಪುಟಗಳು ಒಳಗೊಂಡಿರುವ ರಾಜಿನಾಮೆಯನ್ನು ಬರೆದೆನು ನಾನು ದುಡಿದಿರುವ ಹದಿಮೂರು ವರ್ಷಗಳು ಬೆಲೆಯುಳ್ಳವುಗಳು ಈ ಅವಧಿಯಲ್ಲಿ ನಾನು ನನ್ನ ಆತ್ಮಸಾಕ್ಷಿಯಾಗಿ ನಿಷ್ಕಾಮವಾದ ಸೇವೆಯನ್ನು ಮಾಡಿದೆನು

ಬಡ ಉಪಾಧ್ಯಾಯರಿಗೋಸ್ಕರವಾಗಿ ಮಿಷನ ಸರ್ಕಾರದವರು ಪ್ರಾವಿಡೆಂಟ್ ಫಂಡೆಂಬ ಸಹಾಯಸಂಸ್ಥೆಯನ್ನು ಏರ್ಪಡಿಸಿರುವರು ಈ ಸಂಸ್ಥೆಯ ಹಕ್ಕು ಅನೇಕ ನಿಯಮಗಳಿಗೆ ಒಳಪಟ್ಟಿರುವುದು ನಾನು ಕಳೆದ ಒಂಬತ್ತು ವರ್ಷಗಳಿಂದಲೂ ನನ್ನ ಬೆವರು ಸುರಿಸಿ ದುಡಿದ ಕಷ್ಟಾರ್ಜಿತ ಹಣದಲ್ಲಿ ಸ್ವಲ್ಪ ಭಾಗವನ್ನು ನನ್ನ ಬಡ ಕುಟುಂಬದ ಸಂರಕ್ಷಣಾರ್ಥವಾಗಿ ಈ ಸಂಸ್ಥೆಗೆ ಹಾಕುತ್ತೇನೆ ಕಾನೂನಿನ ರೀತ್ಯಾ ಸಹಾಯದ್ರವ್ಯವು ಇಲಾಖೆಯವರಿಂದಲೂ ಸೇರಿಸಲ್ಪಟ್ಟಿದೆ ನಾನು ಕೆಲಸದಿಂದ ನಿವೃತ್ತನಾದ ಕೆಲವು ಕಾಲದಲ್ಲಿಯೇ ನನ್ನ ಹಕ್ಕಿನ ಸಹಾಯ ದ್ರವ್ಯವು ಬರಬೇಕಾಗಿದ್ದಿತಷ್ಟೆ ಇದಕ್ಕಾಗಿ ನಾನು ಕಳೆದ ನವಂಬರ್ ತಿಂಗಳಲ್ಲಿ (Final Settle ment) ಅರ್ಜಿ ಹಾಕಿಕೊಂಡೆನು ಅದಕ್ಕೆ ನಿಮ್ಮ ರುಜುವೆನಿಸಿ ಇಲಾಖೆಯ ಅಧಿಕಾರಿಗಳಿಗೆ ನೀವು ಕಳಿಸಿಕೊಟ್ಟದ್ದು ಸರಿಯಷ್ಟೆ. ಘನವಿದ್ಯಾ ಇಲಾಖೆಯವರಿಂದ ಪರಿಶೋಧಿಸಲ್ಪಟ್ಟು ಸ್ಯಾಂಕ್ಷನ್ನಾಗಿ ಬಂದಿದ್ದ ಪ್ರಾವಿಡೆಂಟ್ ಫಂಡ್ ಮೊಬಲಗನ್ನು ನನಗೆ ಪಾವತಿಮಾಡುವುದಕ್ಕೆ ಬದಲು ನಾನು ನಿಮಗೆ ಬರೆದು ಕೇಳಲು, ತಾ॥ 8–3–36 ರಲ್ಲಿ 'Your Provident Fund File is sent to the D E O, Mysore, to make some Corrections' ಹೀಗೆಂದು ಬರೆದು ತಿಳಿಸಿದಿರಷ್ಟೆ ಇದನ್ನು ತಿಳಿದು ನಾನು ಬಂದು ನಿಮ್ಮನ್ನು ಕೇಳಲು ನೀವು ನನ್ನ ಹಣಕ್ಕೆ ತೊಂದರೆ ಕೊಡಬೇಕೆಂಬ ಉದ್ದೇಶದಿಂದ ನೀವು ನನ್ನಲ್ಲಿ ಆಡಿದ ಮಾತುಗಳು ನನಗೆ ವ್ಯಸನವನ್ನುಂಟುಮಾಡಿದವು ನನ್ನ ಹಣಕ್ಕೆ ಅಡಚಣೆಯನ್ನುಂಟುಮಾಡಬೇಕೆಂಬ ಉದ್ದೇಶದಿಂದ ಆ ಹಣವನ್ನು ನೀವು ಡಿ ಇ ಒ ಆಫೀಸಿಗೆ ಕಳಿಸಿರುವಿರೆಂದು ನೀವಾಡಿದ ಮಾತಿನಿಂದ ಪರಿಷ್ಕಾರವಾಗುತ್ತದೆ ಕರೆಕ್ಷನಿಗೆ ಹೋದ ಫೈಲು ಇನ್ನೂ ಬಾರದಿರುವುದಕ್ಕೆ ಏನು ಕಾರಣವೋ ತಿಳಿಯದು ನನ್ನ ಹಣವನ್ನು ನನಗೆ ಕೊಡುವುದಕ್ಕೆ ಇಂಥಾ ತೊಂದರೆಗಳನ್ನು ತಂದೊಡ್ಡುವ ನೀವು ನನಗೆ ಉಪಕಾರಿಗಳೆನ್ನುವುದನ್ನು ನಾನು ನಂಬಬಹುದೋ ?

ನಮ್ಮ ಸರಕಾರದ ಅನೇಕ ಇಲಾಖೆಗಳಲ್ಲಿ ವಿದ್ಯಾ ಇಲಾಖೆಯು ಶ್ರೇಷ್ಟವಾದುದು ಇದರಲ್ಲಿ ಪ್ರಾಜ್ಞರೂ ಜವಾಬ್ದಾರರೂ ಆದ ಅನೇಕ ಅಧಿಕಾರಿಗಳು ಇರುವರು ಮತ್ತು ಅನೇಕ ಶಾಖೆಗಳಿರುವುವು ಪ್ರತಿಯೊಂದು 'ರಿಕಾರ್ಡು' ಈ ಎಲ್ಲಾ ಶಾಖೆಗಳಲ್ಲಿಯೂ ಪರಿಶೋಧಿಸಲ್ಪಡುವುದು ಈ ಸೂತ್ರವನ್ನನುಸರಿಸಿಯೇ ನನ್ನ 'ಪ್ರಾವಿಡೆಂಟ್ ಫಂಡು ರಿಕಾರ್ಡು' ಪರಿಶೋಧಿಸಲ್ಪಟ್ಟಿದೆಯೆಂದು ನಾನು ದೃಢವಾಗಿ ನಂಬಿದ್ದೇನೆ ವಿದ್ಯಾ ಇಲಾಖೆಯವರಿಂದ ಪರಿಶೋಧಿಸಲ್ಪಟ್ಟು ಪಾವತಿಯ ಬಗ್ಗೆ ಬಂದ ಹಣವನ್ನು ನೀವು ನನಗೆ ಕೊಡದೆ ವಾಪಸ್ಸು ಮಾಡಲು ಪ್ರಮೇಯವೇನಿತ್ತು ಇದರಿಂದ ನೀವು ಬೇಕು ಬೇಕಾಗಿ ನನಗೆ ತೊಂದರೆಯನ್ನು ಕೊಡಬೇಕೆಂದು ಮಾಡಿರುವಿರೆಂದು ನಿರ್ಧರಿಸಲ್ಪಡುತ್ತದೆ "ನಿನ್ನನ್ನು ಪ್ರೀತಿಸಿಕೊಳ್ಳುವಂತೆ ನಿನ್ನ ನೆರೆಯವನನ್ನು ಪ್ರೀತಿಸು ಎಂಬ ಧರ್ಮಶಾಸ್ತ್ರ ವಚನವನ್ನು ಮರೆತುಬಿಟ್ಟಿರಾ ?" "ನಿನ್ನ ಬಲಕೆನ್ನೆಗೆ ಹೊಡೆದವನಿಗೆ ನಿನ್ನ ಎಡಗೆನ್ನೆಯನ್ನು ಒಡ್ಡು, ಎಂಬ ವಾಕ್ಯವು ಒರಿ ಬಾಯಮಾತಾಗಿದೆ ಯೆಂದುಬಿಟ್ಟು ಆಲೋಚಿಸಿರಿ 'ಮುಯ್ಯಿಗೆ ಮುಯ್ಯಿ ತೀರಿಸುವುದು' ನಿಮ್ಮ ಕೆಲಸವಲ್ಲವೆಂದು' ನಾನು ನಂಬಿರುವ ಕ್ರಿಸ್ತಸ್ವಾಮಿಯವರ ಉಪದೇಶವಾಗಿದೆ ನೀವು ನಂಬಿರುವ ಕ್ರಿಸ್ತನು ಏನು ಹೇಳುತ್ತಾನೆ ? ಕ್ರಿಸ್ತಸ್ವಾಮಿಯು ತನ್ನ ಜೀವಮಾನದಲ್ಲಿ "ಪ್ರೀತಿ" ಗಿಂತ ಹೆಚ್ಚಾಗಿ ಮತ್ಯಾವ ಬೋಧನೆಯನ್ನು ಮಾಡಿದ್ದಾನೆ ! 'ಪ್ರೀತಿಯು' ಬರೀ ಬೋಧನೆಯಲ್ಲವದು ಕಾರ್ಯದಲ್ಲಿ ಪ್ರಕಟಮಾಡುವುದು ಯಾವಾಗ ಈ ದುರ್ಘಟನೆಯ ಕಾಲದಲ್ಲಿ ದೊಡ್ಡ ಕುಟುಂಬಸ್ಥನಾದ ನಾನು 'ರಾಜಿನಾಮೆ ಕೊಡಬೇಕಾದರೆ ನಿಮ್ಮ ತೊಂದರೆಗಳೂ ಅನ್ಯಾಯಗಳೂ ಕಾರಣವಲ್ಲವೇ" ಬೋಧಕರೆನಿಸಿಕೊಳ್ಳುವ ನಿಮಗೆ ಬಡವರ ಮೇಲೆ ಕರವೆಂದರೇನು ! ಕೋಪಮಾಡಿ, ಕೆಡಕು ಮಾಡಿ, ನಷ್ಟಪಡಿಸಿ ಒಬ್ಬ ಮನುಷ್ಯನನ್ನು ಉತ್ತಮಗೊಳಿಸುವುದು ನಿಮ್ಮಿಂದ ಅಸಾಧ್ಯ ಇದಕ್ಕೆ ಬದಲು ಕ್ರಿಸ್ತಸ್ವಾಮಿಯ ದೈವಿಕ ಸ್ವಭಾವಗಳು ನಿಮ್ಮಲ್ಲಿ ವ್ಯಕ್ತವಾಗಲಿ. ನಿಮ್ಮ ಸೂತ್ರಗಳು ಸ್ವಾಮಿಯ ಸೂತ್ರಗಳಿಗೆ ಬದ್ಧವಿರೋಧ ನನ್ನ ಹಣಕ್ಕೆ ತಡೆಹಾಕಲು ಕಾರಣವೇನಿತ್ತು ? ಈ ವಿಚಾರದಲ್ಲಿ ಇನ್ನು ಎಷ್ಟುಕಾಲ ತೊಂದರೆ ಕೊಡಬೇಕೆಂದು ನಿಮಗೆ ಮನಸ್ಸಿದೆ ? ಮಿಷನರಿಗಳಾದ ನಿಮ್ಮಿಂದ ಬಡಜನರಾದ ನಮಗೆ ನೆಮ್ಮದಿಯಿಲ್ಲವಲ್ಲಾ. ನಿಮ್ಮ ತೊಂದರೆ, ಹಿಂಸೆ, ಅಧರ್ಮ, ಅನ್ಯಾಯಗಳು ಬಡವರ ರಕ್ತಕಣಗಳಲ್ಲೆಲ್ಲಾ ಬಿಡಿದುಹೋಗಿದೆ ಇದು ಮಸಿಯಿಂದಲ್ಲ—ರಕ್ತದಿಂದ ಕಲ್ಲಿನ ಹಲಿಗೆಗಳ ಮೇಲಲ್ಲಾ—ಜೀವಸಹಿತವಾದ ಹೃದಯವೆಂಬ ಹಲಗೆಗಳ ಮೇಲೆ ಬರೆಯಲ್ಪಟ್ಟಿದೆ

'ಪ್ರಾವಿಡೆಂಟ್ ಫಂಡಿನ' ಸಂಬಂಧದಿಂದಲೇ ಈ ಪತ್ರವನ್ನು ನಾನು ನಿಮಗೆ ಬರೆಯಬೇಕಾಯಿತು ಇದರ ವಿಚಾರದಲ್ಲಿ ನಿಮ್ಮ ಅಭಿಪ್ರಾಯವನ್ನು ವಿಶದವಾಗಿ ತಿಳಿಸಬೇಕೆಂಬುದಾಗಿ ನಿರೀಕ್ಷಿಸುತ್ತಾ ಇದ್ದೇನೆ

ಇತಿ ತಮ್ಮ ಯಥಾರ್ಥಿ,

ಚಾರ್ಲೆಸ್ ವೆಸ್ಲಿ

ಕೋಣವು ಮನುಷ್ಯನಂತೆ ಮಾತನಾಡಿತು.

ಮದ್ರಾಸು ಪ್ರಾಂತ್ಯದ ಗೋದಾವರಿ ಡಿಸ್ಟ್ರಿಕ್ಟಿನದ ಆಶ್ಚರ್ಯಕರ ವರ್ತಮಾನವಿದು

ರೈತನೊಬ್ಬನು ಗದ್ದೆಯನ್ನು ಉಳುತ್ತಿದ್ದನು. ಹೀಗೆ ಉಳುತ್ತಿರುವಾಗ ಒಂದು ಕೋಣವು ಅಕಸ್ಮಾತ್ ಅರ್ಧದಲ್ಲಿ ತಟಸ್ಥವಾಗಿ ನಿಂತುಬಿಟ್ಟಿತು ಯಜಮಾನನು ಎಷ್ಟು ಪ್ರಯತ್ನ ಪಟ್ಟರೂ ನಿಂತಲ್ಲಿಂದ ಕದಲಲಿಲ್ಲ ಇದರ ಕಾರಣವೇನಾಗಿರಬಹುದೆಂದು ರೈತನು ಆಲೋಚಿಸುವಷ್ಟರಲ್ಲಿಯೇ ಕೋಣವು ಮನುಷ್ಯರಂತೆ ಸಂಬೋಧಿಸಿ ಯಜಮಾನನೇ ನಿಷ್ಕಾರಣವಾಗಿ ಇದನ್ನು ಉತ್ತು ಘಾತ ಪಡುವೆನು ? ಈ ಭೂಮಿಯು ನೆರೆಯಿಂದ ಗಿಡಾಗಿ ಹೋಗುವುದು ಎಂದಿತು ಇದನ್ನು ಕೇಳಿ ರೈತನಿಗೆ ಇನ್ನಷ್ಟು ಆಶ್ಚರ್ಯವಾಯಿತು ಕೋಣವು ಮನುಷ್ಯ ಭಾಷೆಯಿಂದ ಮಾತಾಡಿದ್ದು ಇದೇ ಪ್ರಥಮ ಸಲ ಆದ್ದರಿಂದ ಅವನು ಧಾವಿಸಿ ಈ ಸಂಗತಿಯನ್ನು ಹಳ್ಳಿಗರಿಗೆಲ್ಲಾ ತಿಳಿಸಿದನು. ಹಳ್ಳಿಯವರೆಲ್ಲರು ಈ ಕೌತುಕವನ್ನು ನೋಡಲು ಕಿಕ್ಕಿರಿದು ಬಂದರು ಆಗಲೂ ಕೋಣವು ನೆರೆಯ ಹಾವಳಿಯನ್ನು ಹೇಳಿತು ಒಡನೆಯೇ ಜನರು ನೋಡುತ್ತಿರುವಷ್ಟಕ್ಕೆ ದೊಪ್ಪನೆ ನೆಲಕ್ಕುರುಳಿ ಸತ್ತುಹೋಯಿತು

ಅಮೆರಿಕಾದಲ್ಲಿ ೯೦ ಲಕ್ಷ ಅವಳಿ ಜವಳಿಗಳು.

ಅಮೆರಿಕಾದ ಮೆಟ್ರೋಪಾಲಿಟನ್ ಜೀವ ವಿಮಾ ಸಂಸ್ಥೆಯವರು ತಮ್ಮ ವರದಿಯೊಂದನ್ನು ಪ್ರಕಟಿಸಿದ್ದಾರೆ ಅದರ ಪ್ರಕಾರ ಪ್ರತಿ ನೂರು ಜನಗಳಲ್ಲಿಯೂ ಒಂದೊಂದು ಅವಳಿಜವಳಿ ಸಂತಾನವಿದೆಯೆಂತೆ ಈಗ ಯುನೈಟೆಡ್ ಸ್ಟೇಟ್ಸಿನಲ್ಲಿ ಸುಮಾರು ೯೦ ಲಕ್ಷ ಅವಳಿಜವಳಿಗಳಿವೆ

ಹಲವು ಶಾಸ್ತ್ರಜ್ಞರು ಈ ಅವಳಿಜವಳಿಯಾಗಿ ಹುಟ್ಟಿದ ಮಕ್ಕಳ ಆಯುಸ್ಸನ್ನು ಅಂದಾಜು ಕಟ್ಟಿದ್ದಾರೆ ಗಂಡು ಕೂಸುಗಳೇ ಅವಳಿಜವಳಿಯಾದರೆ ೪೬ ವರುಷಗಳೂ, ಹೆಣ್ಣುಗಳಾದರೆ ೪೦ ವರ್ಷಗಳೂ ಬದುಕುವುವೆಂದು ಲೆಕ್ಕ ಹಾಕಿದ್ದಾರೆ

ಯುವತಿಗೆ ಭೂತದ ಗೋಚರ.

ಹೈದರಾಬಾದಿನ ನಿವಾಸಿಯಾದ ಮಹಮ್ಮದ್ ಇಸ್ಮಾಯಿಲ್ ಎಂಬಾತನು ಕೇವಲ ಆರು ವರ್ಷ ವಯಸ್ಸಿನ ಸುಂದರಳಾದ ಒಬ್ಬಳು ಮಗಳ ಸಂಗಡ ತಾನು ಹೊಸದಾಗಿ ಕೊಂಡುಕೊಂಡ ಒಂದು ಮನೆಯಲ್ಲಿ ವಾಸಿಸುತ್ತಿದ್ದನು ಈತನ ಮಗಳು ದಿನೇ ದಿನೇ ಸುಂದರಳಾಗಿ ಬೆಳೆಯುತ್ತಿದ್ದುದೂ ಅಲ್ಲದೆ ಇವಳ ಕೊಠಡಿಯಲ್ಲಿ ಆಗಾಗ್ಗೆ ನಾಣ್ಯಗಳ ಝೇಂಕಾರವೂ ಕೇಳಲ್ಪಡುತ್ತಿದ್ದಿತು ಒಂದು ದಿನ ಈ ಯುವತಿಯು ತನ್ನ ಕೊಠಡಿಯಲ್ಲಿ ಮಲಗಿದ್ದ ಸಮಯದಲ್ಲಿ ಹಠಾತ್ತನೆ ಎದ್ದು ತನ್ನ ತಂದೆ ತಾಯಿಗಳನ್ನು ಗಾಬರಿಯಿಂದ ಕೂಗಿಕೊಂಡು ಯಾರೋ ಒಬ್ಬ ಸುಂದರನಾದ ಯುವಕನು ತನ್ನ ಕಣ್ಣಿಗೆ ಗೋಚರಿಸಿ ತನಗೆ ಚಿನ್ನದ ನಾಣ್ಯಗಳ ಒಂದು ರಾಶಿಯನ್ನು ತೋರಿಸಿ, ತಾನು ಪ್ರಾಪ್ತ ವಯಸ್ಕಳಾದ ಮೇಲೆ ಆತನನ್ನು ಮದುವೆಯಾದ ಪಕ್ಷದಲ್ಲಿ ಆ ಚಿನ್ನದ ನಾಣ್ಯವೆಲ್ಲವೂ ಅವಳಿಗೆ ಸಲ್ಲುವುದೆಂದು ಬಲಾತ್ಕರಿಸಿದನೆಂದೂ ಮತ್ತು ಆತನು ತನ್ನನ್ನು ತಬ್ಬಿ ಅತ್ಯಾಚಾರ ನಡೆಸಲು ಪ್ರಯತ್ನಪಟ್ಟನೆಂದೂ ತಿಳಿಸಿದಳು

ಈ ವಿವಾದ ಪ್ರಸಂಗಗಳು ಇದುವರೆಗೂ ಇಲ್ಲಿ ಅನೇಕ ಸಾರಿ ನಡೆದಿರುವುದರಿಂದ ಮನೆಯ ಯಜಮಾನನಿಗೆ ಹೆದರಿಕೆಯಿಂದ ಅವನು ತನ್ನ ಮಗಳ ಕ್ಷೇಮಕ್ಕಾಗಿ ಈ ವಿಚಾರವನ್ನು ಪೋಲೀಸಿನವರಿಗೆ ತಿಳಿಸಿದನು ಅನಂತರ ಪೋಲೀಸಿನವರು ಬಂದು ಆ ಭೂತವು ಯುವತಿಗೆ ತೋರಿಸಿದ ಜಾಗವನ್ನು ಅಗೆದು ನೋಡಲು ಅಲ್ಲಿ ಏನೂ ದೊರೆಯಲಿಲ್ಲ ಈ ಸಮಯದಲ್ಲಿ ಅಲ್ಲಿ ನೆರೆದಿದ್ದ ಹಲವು ಜನರು 'ಭೂತವು' ತನ್ನ ಪ್ರಿಯ ಪಾತ್ರಳಿಗೆ ಭರವಸೆಯಿತ್ತು ತೆಗೆದಿಟ್ಟ ಧನವು ಅವಳ ವಿವಾಹಾನಂತರ ಅವಳಿಗೆ ಸಲ್ಲುವುದೇ ವಿನಃ ಮತ್ತೆ ಯಾರಿಗೂ ಅದು ಗೋಚರವಾಗಲಾರದು ಎಂಬ ಒಂದು ವಾಣಿಯನ್ನು ತಾವು ಕೇಳಿದೆವೆಂದು ತಿಳಿಸಿದರು. ಇದರಿಂದ ಆ ಯಜಮಾನನು ಭೀತಿಪಟ್ಟು ತನ್ನ ಮನೆಯನ್ನು ತ್ಯಜಿಸಿ ಮಗಳ ಸಂಗಡ ಬೇರೆ ಮನೆಯನ್ನು ಸೇರಿ ಆಕೆಯ ವಿಚಾರದಲ್ಲಿ ಬಹಳ ಜಾಗರೂಕತೆಯಿಂದಿರುವನು

ಕಪಿಗಳನ್ನು ಓಡಿಸುವುದಕ್ಕೆ ಹೋಗಿ ಮರಣ.

ಪಶುಪತಿ ಕೋಯಿಲ್ ಎಂಬ ಗ್ರಾಮದಲ್ಲಿ ಶಿವಸ್ವಾಮಿ ಎಂಬ 12 ವರ್ಷ ವಯಸ್ಸಿನ ಒಬ್ಬ ಬಾಲಕನು ಒಂದು ತೆಂಗಿನ ಮರದ ಮೇಲೆ ಕಾವಲು ಮಾಡುತ್ತಿದ್ದ ಹಲವು ಕಪಿಗಳನ್ನು ಓಡಿಸಲು ಪ್ರಯತ್ನಪಟ್ಟು ಮರವನ್ನು ಹತ್ತಲು ಆ ಕೋತಿಗಳು ಇವನ ಮೇಲೆ ಎದುರು ಬೀಳಲು ಇವನು ಮರದಿಂದ ಕೆಳಕ್ಕೆ ಬಿದ್ದು ತಕ್ಷಣವೇ ಮೃತನಾದನು

ಹೊಸ ರೀತಿ.

ತಾ॥ 31-5-1936 ಭಾನುವಾರ ಈ ಸುದಿನವು ನಮ್ಮನ್ನಾಳುವ ಕರ್ನಾಟಕ ಸಿಂಹಾಸನಾರೂಢರಾಗಿರುವ ಶ್ರೀಮನ್ಮಹಾರಾಜರು ಮಹಾ ಪ್ರಭುಗಳವರ ವರ್ಧಂತಿಯಾದ ಪ್ರಯುಕ್ತ ನಂಜನಗೂಡು ಶ್ರೀ ಶ್ರೀ ರಾಘವೇಂದ್ರ ಸ್ವಾಮಿಗಳವರ ಮಠದ ಹಾಲಿ ಪೀಠಾಧೀಶ್ವರರಾದ ಶ್ರೀಮತ್ಪರಮಹಂಸೇತ್ಯಾದ್ಯನಂತ ಬಿರುದಾಂಕಿತರಾದ ೧೦೮ ಶ್ರೀ ಶ್ರೀಮತ್ಸುಯಮೀಂದ್ರ ತೀರ್ಥ ಶ್ರೀ ಪಾದಂಗಳವರು ಹಾಲಿ ತಾವು ದಿಗ್ವಿಜಯ ಮಾಡಿರುವ ಹಾವೇರಿ ತಾಲ್ಲೂಕು ಹೊಸರಿತ್ತಿ ಕ್ಷೇತ್ರದಲ್ಲಿ ಮಹಾಮೂಲ ನೂರೆಗೆ ಶ್ರೀ ವರ್ಧಂತಿ ಪ್ರಯುಕ್ತ ಸುವರ್ಣ ಮಂಟಪಾದಿಗಳಲ್ಲಿ ಶ್ರೀಮನ್ಮೂಲ ರಘುಪತಿ ವೇದವ್ಯಾಸದೇವರ ಪೂಜಾ ಪದ್ಧತಿಗಳನ್ನು ನೆರವೇರಿಸಿ ಇಲ್ಲಿರತಕ್ಕ ಶ್ರೀಮದ್ಧೀರೇಂದ್ರ ತೀರ್ಥ ಶ್ರೀ ಪಾದಂಗಳವರ ಮತ್ತು ತಮ್ಮ ಪರಮ ಗುರುಗಳಾದ ಶ್ರೀಮತ್ಸುಶೀಲೇಂದ್ರ ತೀರ್ಥ ಶ್ರೀ ಪಾದಂಗಳವರ ಸನ್ನಿಧಿಯಲ್ಲಿ ಪಂಚಾಮೃತ ಅಭಿಷೇಕಾದಿಗಳನ್ನು ಸಹ ಏರ್ಪಡಿಸಿ ಬ್ರಾಹ್ಮಣ ಸುವಾಸಿನಿಯರ ಸಂತರ್ಪಣ ಮೊದಲಾದ ಕಾರ್ಯಗಳನ್ನೆಲ್ಲಾ ಸಾಂಗ ಗೊಳಿಸಿ ಸಾಯಂಕಾಲ 7 ಘಂಟೆಗೆ ಸುವರ್ಣ ಮಯವಾದ ತೊಟ್ಟಿಲಲ್ಲಿ ಶ್ರೀಮನ್ಮೂಲ ರಘುಪತಿ ವೇದವ್ಯಾಸ ದೇವರನ್ನು ಮಂಡಿಸಿ ಮಂಗಳಾರ್ತಿ ಮತ್ತು ಮೇಲ್ಕಂಡ ಉಭಯ ಶ್ರೀ ಪಾದಂಗಳವರ ಸನ್ನಿಧಿಯ ಮಂಗಳಾರ್ತಿ ಯಾದನಂತರ ತಮ್ಮ ದಿಗ್ವಿಜಯ ಸಿಂಹಾಸನಾರೂಢರಾಗಿ ನಮ್ಮನ್ನಾಳುವ ಮಹಾ ಪ್ರಭುಗಳವರ ಗುಣಕಥನಮಾಡಿ ಶ್ರೀ ಮಹಾಪ್ರಭುಗಳವರಿಂದ ಕರ್ನಾಟಕಕ್ಕೇ ಮಾತ್ರವಲ್ಲದ ಸಮಸ್ತ ದರ್ಶನಗಳಿಗೂ ಮತ್ತು ಸಮಸ್ತ ಕಲಾದಿ ವಿದ್ಯೆಗಳಿಗೂ ಉಂಟಾಗಿರುವ ಆಶ್ರಯವನ್ನೂ ಹೃದಯಂಗಮವಾಗಿ ವಿವರಿಸಿ, ನಿಖಿಲ ಕರ್ನಾಟಕ ಜನರೂ ಈ ರೀತಿಯಾದ ಆದರ್ಶ ಪುರುಷರನ್ನು ಹೊಂದಿರತಕ್ಕ ಬಗ್ಗೆ ಹೆಮ್ಮೆ ಪಡತಕ್ಕದ್ದೆಂದೂ ಮೊದಲಾದ ಹೃದಯಂಗಮ ಭಾಷಣಮಾಡಿ ನಮ್ಮನ್ನಾಳುವ ಮಹಾಪ್ರಭುಗಳವರಿಗೂ ಅವರ ಕುಟುಂಬದವರಿಗೂ ಶ್ರೀಮನ್ಮೂಲ ರಘುಪತಿ ವೇದವ್ಯಾಸದೇವರು ಮತ್ತು ಶ್ರೀಮದ್ಧೀರೇಂದ್ರ ತೀರ್ಥ ಶ್ರೀ ಪಾದಂಗಳವರು ಮತ್ತು ಶ್ರೀ ಮತ್ಸುಶೀಲೇಂದ್ರ ತೀರ್ಥ ಶ್ರೀ ಪಾದಂಗಳೂ ಸಹ ಅನಂತಾಯುಷ್ಯವನ್ನು ದಯಪಾಲಿಸುವ ಮೂಲಕ ಯಶೋಪ್ರತಿಪನ್ನವಾದ ಆಯುರಾರೋಗ್ಯ ಐಶ್ವರ್ಯಾದಿಗಳನ್ನು ಅಭಿವೃದ್ಧಿಪಡಿಸಿ ನಮ್ಮ ಕರ್ನಾಟಕದ "ರಾಜರ್ಷಿ" ಎಂಬ ಬಿರುದನ್ನು ಸಾರ್ಥಕಗೊಳಿಸಬೇಕೆಂದು ಶ್ರೀಯಃಪ್ರಾರ್ಥನ ಮಾಡಿದರು. ಶ್ರೀ ಶ್ರೀಗಳವರ ಈ ಮನೋಜ್ಞವಾದ ಭಾಷಣದಿಂದ ಪ್ರತಿಯೊಬ್ಬ ಕನ್ನಡಿಗನ ದಮನಿಯಲ್ಲೂ ರಾಜಭಕ್ತಿಯು ಉತ್ಸಾಹದಿಂದ ತುಂಬಿ ಹೊರಸೂಸುತ್ತಿತ್ತು

"ಓರ್ವ ಕನ್ನಡಿಗ ಪ್ರತ್ಯಕ್ಷದರ್ಶಿ"

ಮುದುಕನ ಮದುವೆ.

ಲೇಖಕರು —ಎ ನಾರಾಯಣ ಶಾಸ್ತ್ರಿ, ಸಕಲೇಶಪುರ

ಬಾಳುವುದು ಬಲುಕಷ್ಟವೀಕಾಲದೊಳಗೆ ।
ಹೇಳುವುದು ಬಲುಕಷ್ಟ ಮನದಬಲುಬೇಗೆ ॥ ೧
ಹಾಳು ಸಂಸಾರದಿ ಸಾರವೆಲ್ಲಿಹುದು ।
ಕಾಳಾಹಿಪೇಟೆಯಂಕಮೊಳು ತಾಳಿಹುದು ॥ ೨
ಮಕ್ಕಳೈವರು ನನಗೆ ಪ್ರೌಢರಾಗಿಹರು ।
ಸೊಕ್ಕಿ ಮೆರೆಯುತ್ತಿಹರು ನನ್ನಲಕ್ಷಿಸರು ॥ ೩
ಮೋಸಮಾಡಿದೆ ನಾನು ವ್ಯಾಪಾರದಿಂದ ।
ಕಾಸುಗಳಿಸಿದೆ ಕಷ್ಟಪಡವೆನಲವಿಂದ ॥ ೪
ಮನೆಯನ್ನು ಕಟ್ಟಿದೆನು ನೆಲವನ್ನು ಕೊಂಡೆ ।
ಕನಕವಸುಗಳಿಸಿ ನಾಂ ತುಂಬಿದೆನು ಹಂಡೆ ॥ ೫
ಸತಿಯಿಲ್ಲದಿರ್ದರೆ ಕೇಳುವರದಾರು? ।
ಮತಿವಂತರೀಮಾತ ನನಗಪೇಳುವರು ॥ ೬
ಎಪ್ಪತ್ತು ವಯಸಿನವ ಕಣ್ಣಿಲ್ಲದವನು ।
ಚಪ್ಪರಿಸಿ ತಿನ್ನುವನು ಹಲ್ಲಿಲ್ಲದವನು ॥ ೭
ಬಾಗಿ ತಿರುಗುವನು ಅತಿವೃದ್ಧನಿವನು ।
ಚೆನ್ನಿಲ್ಲ ಸೊಬಗಿಲ್ಲ ಹಣಮೋರೆಯವನು ॥ ೮
ಎಂದು ಹೇಳುವರೆಲ್ಲ ಜನರೆಲ್ಲ ನನಗೆ ।
ಮುಂದು ಕೋಚದು ಮದುವೆ ಎಂದಿಗೋ ನನಗೆ ॥ ೯
ಕಟ್ಟಿಸಿದ ಹಲ್ಲುಗಳ ಬಲುಪ್ರಿಯದಿಂದ ।
ಉಟ್ಟಿ ಪೀತಾಂಬರವ ಸೊಗಸುತನದಿಂದ ॥ ೧೦
ಕನ್ಯೆಕೊಟ್ಟರೆ ಇವಗೆ ಸಿಕ್ಕೆ ನೈನೂರು ।
ಹೊನ್ನು ನಿಮಗೆನ್ನುತ್ತ ಒಂದವೈನೋರು ॥ ೧೧
ಬಾಳುವಳು ಬದುಕುವಳು ಬಲುಬೆಡಗಿನಿಂದ ।
ಏಳು ಸಾವಿರ ಹೊನ್ನು ಒಡವೆಭರದಿಂದ ॥ ೧೨
ಬಾಗಿಮುತ್ತಿನ ಯಾಡಿಗೆ ತೊಡಿಗೆಗಳ ತೊಟ್ಟು ।
ಸೀಗಿಕಷ್ಟವ ಬಾಳ್ವರಹಹ ಇದುಗುಟ್ಟು ॥ ೧೩
ಮದುವೆಯಾಯಿತು ಕೊನೆಗೆ ಮುದಿಯರಂಗನಿಗೆ ।
ಪದುಳದಿಂಬಾಳಿದನು ಅದು ಮೂರುಗಳಿಗೆ ॥ ೧೪
ಬಾರೆ ಚಿನ್ನದ ಗಿಣಿಯೆ ಬಾರೆನ್ನ ಚಲುವೆ ।
ಬಾರೆ ಭಾಗ್ಯದನಿಧಿಯೆ, ಬಾರ ಬಾ ಚಲುವೆ ॥ ೧೫
ಎಂದು ಹೇಳುತ ರಂಗ ಹೆಂಡತಿಯ ಬಿಟ್ಟು ।
ಎದೆಂದಿಗಗಲದೇ ಇದ್ದನಿದುಬಿಟ್ಟ ॥ ೧೬
ರಂಗನಾದನು ಮಂಗನಾಯುವತಿಗಾಗ ।
ಭಂಗವಾಗಲು ಅಂಗಸಂಗಕ್ಕೆ ಬೇಗ ॥ ೧೭
ತುಯ್ಯಂದೆ ಮನೆಗೆ ತಾಂ ಸೇರಿದಳುವಾಗ(ಳ್) ।
ನಾಯಕರ ಕೂಡಿ ತಾಂ ನಲಿದಳ್ಬೆ ಬೇಗ ॥ ೧೮
ಬರೆದನೋಲೆಯ ರೇಗಿ ಕಳಿಸೆಂದು ಸತಿಯ ।
ಜರಿದು ಸತಿಚರ್ಯವನು ಮಾವನಿಗೆ ಮುದಿಯ ॥ ೧೯
ಮಡ್ಡಿಗಾಯಿತು ಮದುವೆ ನನಗಲ್ಲವೆಂದು ।
ಅಡ್ಡಿ ತೀರಿದ ಬಳಿಕ ಫಲವಿಲ್ಲವೆಂದು ॥ ೨೦
ಉತ್ತರವು ಬರಲಾಗ ಸಿಟ್ಟಿಗೀಡಾಗಿ ।
ಹೆತ್ತಗೋವಿನ ತೆರದಲಿದ್ದ ಬೆರಗಾಗಿ ॥ ೨೧
ಪುತ್ರರಲ್ಲಿಗೆ ಹೋಗೆ ಸೇರಿಸರು ಅವನ ।
ಪುತ್ರಿಯರ ಬಳಿಯಲ್ಲಿ ಸೇರಿಸರು ಅವನ ॥ ೨೨
ಕಣ್ಣು ಕಾಣದ ಮುದುಕ ಭ್ರಮಿಸಿ ಬೆಂಡಾಗಿ ।
ಮಣ್ಣುಪಾಲಾದನೈ ನಿಮಿಷದೊಳಗಾಗಿ ॥ ೨೩
ಮುದುಕರಿಗ ಅತಿಚಪಲ ಹಿಂಡಿತೀರ್ಥಮೊಸು ।
ಹದಿನಾರು ವಯಸೆಂದು ತಿಳಿವದಾದಿಯೊಳು ॥ ೨೪
ಮಾಡಿದಪರಾಧಕ್ಕೆ ಮದ್ದಿಲ್ಲವೆಂದು ।
ಹಾಡುತ್ತ ಕೊನೆಯಲ್ಲಿ ಅಳುವರೆಂದೇನು ॥ ೨೫
ಕುಲಹೀನನಾದವರೂ ವರಹೀನದೊಸಗೆ ।
ಫಲವಿಲ್ಲ ಕೊನೆಯಲ್ಲಿ ಹತ್ತಾದ್ಯೆ ಬೆಸಗೆ ॥ ೨೬
ಮುದುಕನಿಗೆ ವರರಮಣಿದೊರೆಯೆ ಫಲವಿಲ್ಲ ।
ಮುದುಕಿಗೆ ವರತರುಣಪತಿ ದೊರೆವುದಿಲ್ಲ ॥ ೨೭
ಧರ್ಮಶಾಸ್ತ್ರದಿ ನೋಡಲಿದು ಏನುಚೋದ್ಯ ।
ಕರ್ಮವಿದು ಬಹುನಿಂದ್ಯ ಕಡೆಗೆ ದುರ್ಭೇದ್ಯ ॥ ೨೮

ಶಾರದಾವಿಲಾಸ್ ಹೈಸ್ಕೂಲಿಗೆ ಅಗ್ರಸ್ಥಾನ.

ಎಸ್. ಎಸ್. ಎಲ್ ಸಿ. ಪರೀಕ್ಷೆಯಲ್ಲಿ ಫಲಿತಾಂಶಗಳು.

(ಬರೆದು ಬಂದುದು)

ದಿವಂಗತ, ವೃದ್ಧಪಿತಾಮಹ, ದಯಾಸಾಗರ ಶ್ರೀಮಾನ್ ಎಂ ವೆಂಕಟಕೃಷ್ಣಯ್ಯನವರಿಂದ ಸ್ಥಾಪಿಸಲ್ಪಟ್ಟ ಮೇಲ್ಕಂಡ ಶಾಲೆಯು ಈ ಸಲದ ಎಸ್ ಎಸ್ ಎಲ್ ಸಿ ಪರೀಕ್ಷೆಯಲ್ಲಿ ಮೈಸೂರು ಸಂಸ್ಥಾನದಲ್ಲೆಲ್ಲಾ ಮೊದಲನೆಯ ಸ್ಥಾನವನ್ನು ಪಡೆದಿದೆ ಎಂಬ ವಿಷಯವು ನಮಗೆ ಬಹಳ ಹರ್ಷವನ್ನುಂಟುಮಾಡಿದೆ ಇದಕ್ಕೆ ಕಾರಣಕರ್ತರು ಮುಖ್ಯವಾಗಿ ಮುಖ್ಯೋಪಾಧ್ಯಾಯರಾದ ಶ್ರೀಮಾನ್ ಎಂ ಎಸ್ ರಾಮಸ್ವಾಮಿ ಎಂ ಎ ರವರು ಇವರು ಹಗಲಿರುಳೆನ್ನದೆ ಸರ್ವದಾ ಶಾಲೆಯ ಅಭಿವೃದ್ಧಿಯ ವಿಷಯಗಳಲ್ಲಿಯೇ ಹೆಚ್ಚು ಆಸಕ್ತಿ ವಹಿಸಿದ್ದಾರೆ ಇವರು ಇನ್ನೂ ದೊಡ್ಡ ಹುದ್ದೆಗೆ ಹೋಗಬಹುದಾಗಿತ್ತು ಆದರೂ ಹಣಸಂಪಾದನೆಯೇ ತಮ್ಮ ಧ್ಯೇಯವಲ್ಲವೆಂದು ತಿಳಿದು ವೆಂಕಟ ಕೃಷ್ಣಯ್ಯನವರ ಕಾರ್ಯಗಳಲ್ಲಿ ಸಹಕಾರಿಗಳಾಗಿ ಈ ಶಾಲೆಯನ್ನು ಮುಂದಕ್ಕೆ ತಂದಿರುತ್ತಾರೆ ಈ ಶಾಲೆಯು ಅಗ್ರಸ್ಥಾನ ಪಡೆದಿರುವುದು ಇದೇ ಮೊದಲು. ಹೀಗೆಯೇ ಇದೇ ಯಶಸ್ಸು ಮುಂದುವರಿಯಲಿ ಎಂಬುದೇ ನಮ್ಮ ಹಾರೈಕೆ. ಈ ಶಾಲೆಯ ಸಹಾಯೋಪಾಧ್ಯಾಯರುಗಳೂ ಮತ್ತು ಮುಖ್ಯೋಪಾಧ್ಯಾಯರೂ ಇನ್ನೂ ತರುಣರು, ಉತ್ಸಾಹಿಗಳು ಇವರೆಲ್ಲರನ್ನೂ ದೇವರು ಅನುಗ್ರಹಿಸಲೆಂದು ಪ್ರಾರ್ಥಿಸುತ್ತೇವೆ

ಸ್ವರ್ಗವಾಸಿಗಳಾದ, ಪೂಜ್ಯರಾದ ವೆಂಕಟ ಕೃಷ್ಣಯ್ಯನವರಿಗೆ ಅವರಿಂದ ಸ್ಥಾಪಿತವಾದ ಈ ಬಡಶಾಲೆಯು ಅವರ ಆತ್ಮತೃಪ್ತಿಯಾಗುವಂತೆ ಮಾಡಬೇಕಾದರೆ ಪ್ರತಿ ವರ್ಷವೂ ಅಗ್ರಸ್ಥಾನಪಡೆದು ಹಸ್ಕೂಲ ಯಶಸ್ವಿಯಾದಲ್ಲಿ ದಿವಂಗತರ ಆತ್ಮಶಾಂತಿಯನ್ನು ನೆರವೇರಿಸಿದಂತಾಗುವುದೇ ಹೊರತು ಪುನಃ ಯಾವ ರೂಪದಲ್ಲಿಯೂ ಅವರ ಆತ್ಮ ಶಾಂತಿಗೆ ನೆಮ್ಮದಿಯನ್ನು ತರಬಾರದು ಈ ಶಾಲೆಯು ಇನ್ನು ಮುಂದೆ ಉಜ್ವಲವಾದ ತನ್ನ ಕೀರ್ತಿಯುತ ಕಾಂತಿಯನ್ನು ಬೆಳಗಲೆಂಬುದೇ ನಮ್ಮ ಹಾರೈಕೆ.

ಹಾಸನದ ಹೈಸ್ಕೂಲ್

ಈ ಸಾರಿ ಈ ಶಾಲೆಯಿಂದ 77 ಜನ ವಿದ್ಯಾರ್ಥಿಗಳು ಪರೀಕ್ಷೆಗೆ ಕುಳಿತಿದ್ದರು. ಮೊದಲನೆಯ ದರ್ಜೆಯಲ್ಲಿ ಐದು ಜನರೂ ಮತ್ತು ಸೆಕೆಂಡ್ ಕ್ಲಾಸ್‌ನಲ್ಲಿ 51 ಜನ ವಿದ್ಯಾರ್ಥಿಗಳೂ ಉತ್ತೀರ್ಣರಾಗಿರುತ್ತಾರೆ

ಹುಣಸೂರು ವರ್ತಮಾನಗಳು.

(ಸ್ವಂತ ಸುದ್ದಿಗಾರರಿಂದ)

ಹುಣಸೂರು ಟೌನಿನಲ್ಲಿ ಸುಮಾರು ಎಂಟು ಸಾವಿರ ಜನಸಂಖ್ಯೆ ಇರುತ್ತದೆ. ಇವರಲ್ಲಿ ಮಹಮ್ಮದೀಯ ಸಹೋದರರು ಸುಮಾರು ಒಂದು ಸಾವಿರ ಮಂದಿ ಇದ್ದಾರೆ. ಇಷ್ಟು ದೊಡ್ಡ ಸಂಖ್ಯೆಯಲ್ಲಿ ವಿದ್ಯಾವಂತರ ಸಂಖ್ಯೆ ಕೇವಲ ವಿರಳ. ಘನ ಸರಕಾರದವರು ಇಲ್ಲಿಗೆ ಒಂದು ಮಾಧ್ಯಮಿಕ ಪಾಠಶಾಲೆಯನ್ನೂ, ಒಂದೆರಡು ಪ್ರಾಥಮಿಕ ಪಾಠಶಾಲೆಗಳನ್ನೂ, ಮಹಮ್ಮದೀಯರಿಗಾಗಿ ಒಂದು ಉರ್ದು ಬಾಯ್ಸ್ ಸ್ಕೂಲನ್ನೂ, ಒಂದು ಉರ್ದು ಗರ್ಲ್ಸ್ ಸ್ಕೂಲನ್ನೂ ಕೊಟ್ಟು, ವಿದ್ಯಾರ್ಜನೆಗೆ ಪ್ರೋತ್ಸಾಹಿಸುವುದು ತುಂಬಾ ಸ್ತೋತ್ರಾರ್ಹವಾಗಿರುತ್ತದೆ. ಆದರೆ ದೊಡ್ಡ ಸಂಖ್ಯೆಯಿರುವ ಹಿಂದೂಗಳಿಗೆ ಹೆಣ್ಣು ಮಕ್ಕಳ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹಕೊಡಲು ಒಂದು ಗೌರ್ನ್‌ಮೆಂಟ್ ಗರ್ಲ್ಸ್ ಸ್ಕೂಲು ಇಲ್ಲದಿರುವುದು ಇಲ್ಲಿನ ಪ್ರಜೆಗಳಿಗೆ ತುಂಬಾ ತೊಂದರೆಯಾಗಿದೆ. ಹೆಣ್ಣುಮಕ್ಕಳ ವಿದ್ಯಾರ್ಜನೆಗೆ ಅಡಚಣೆಯೂ ಉಂಟಾಗಿರುತ್ತದೆ. ಇಲ್ಲಿನ ನಿವಾಸಿಗಳು ತುಂಬಾ ಹಂಬಲಿಸುತ್ತಲಿದ್ದಾರೆ. ಈ ಕೊರತೆಯನ್ನು ಹೋಗಲಾಡಿಸಲು ಘನ ವಿದ್ಯಾ ಇಲಾಖೆಯ ಮುಖಾಂತರವರಿಗೆ ಒಂದು ವರದಿ ಮಾಡಿಕೊಂಡೆವು. ಏನು ಕಾರಣವೋ ಈ ಟವುನ್ನಿನ ನಿವಾಸಿಗಳ ಕೋರಿಕೆಯು ಇದುವರೆಗೂ ನೆರವೇರಿದಂತೆ ಕಾಣುವುದಿಲ್ಲ. ಸರಕಾರದವರು ಕಟ್ಟಡಕ್ಕೋಸ್ಕರ ಚಿಂತೆಪಡಬೇಕಾದುದಿಲ್ಲ. ಮಾನ್ಯ ದಿವಾನ್ ಸಾಹೇಬರವರು ಈ ಊರಿಗೆ ದಯಮಾಡಿಸಿರುವಾಗ್ಗೆ ವಿಶಾಲವಾದ ಸಂದಲ್‌ಕೋಟೆ ಕಟ್ಟಡವನ್ನು ಪ್ರಾಥಮಿಕ ಪಾಠಶಾಲೆಗೋಸ್ಕರ ದಯಪಾಲಿಸಿರುತ್ತಾರೆ. ಹಾಲಿ ಕಟ್ಟಡದಲ್ಲಿ ಈಗ ಗೌ|| ಪ್ರೈಮರಿ ಸ್ಕೂಲು ನಡೆಯುತ್ತಲಿದೆ. ಬಾಲಕರ ಜೊತೆಯಲ್ಲಿ ಸುಮಾರು ಎಪ್ಪತ್ತು ಹೆಣ್ಣುಮಕ್ಕಳು ವ್ಯಾಸಂಗಿಸುತ್ತಲಿದ್ದಾರೆ. ಇನ್ನೂ ನಾನೂರು ಐನೂರು ವಿದ್ಯಾರ್ಥಿಗಳು ಕುಳಿತುಕೊಳ್ಳುವಷ್ಟು ಸವಿಸ್ತಾರ ಸ್ಥಳವು ಖಾಲಿಯಿದೆ. ಘನ ವಿದ್ಯಾ ಇಲಾಖೆಯ ಡೈರೆಕ್ಟರ್ ಸಾಹೇಬರವರು ಈ ಗ್ರಾಮದ ನಿವಾಸಿಗಳ ಮನವಿಯನ್ನು ಸ್ವೀಕರಿಸಿ ಹೆಣ್ಣು ಮಕ್ಕಳ ವಿದ್ಯಾಭ್ಯಾಸಕ್ಕೆ ಒಂದು ಶಾಲೆಯನ್ನು ಸ್ಥಾಪಿಸಿಕೊಡಬೇಕೆಂದು ಪ್ರಾರ್ಥನೆ.

1935-36 ನೇ ಸಾಲಿನಲ್ಲಿ ಈ ಊರಿನ ಗೌ|| ಮಿಡಲ್ ಸ್ಕೂಲಿನಲ್ಲಿ ಹದಿನಾಲ್ಕು ಮಂದಿ ವಿದ್ಯಾರ್ಥಿಗಳು ಲೋಯರ್ ಸೆಕೆಂಡರಿ ಪರೀಕ್ಷೆಗೆ ಕುಳಿತಿದ್ದರು. ಇವರ ಪೈಕಿ ಹದಿಮೂರು ಮಂದಿ ತೇರ್ಗಡೆಯಾದರೆಂದು ತಿಳಿದು ಪುರನಿವಾಸಿಗಳಿಗೆ ತುಂಬಾ ಸಂತೋಷ. ಈ ಪಾಠಶಾಲೆಯ ಮೇಲ್ ತನಿಖೆಯು ಅತ್ಯಂತ ಸಮರ್ಪಕವಾಗಿದೆ ಎಂಬುದಕ್ಕೆ ಪರೀಕ್ಷೆಯ ಫಲಿತಾಂಶವೇ ನಿದರ್ಶನವಾಗಿದೆ.

ಯಳಂದೂರು ಜಹಗೀರಿ ಸುದ್ದಿ.

(ಸ್ವಂತ ಸುದ್ದಿಗಾರರಿಂದ)

ಘನವನ್ನು ಹೊಂದಿದ ನಮ್ಮ ಶ್ರೀಮನ್ಮಹಾರಾಜ ರಾಜಾ ಸಾಹೇಬರವರ ವರ್ಧಂತಿ ಮಹೋತ್ಸವವು 31-5-36 ನೇ ಭಾನುವಾರ ಬೆಳಗ್ಗೆ ಬಹಳ ಸಂಭ್ರಮವಾಗಿ ನೆರವೇರಿತು.

ಶ್ರೀಮನ್ಮಹಾರಾಜರವರ ಫೋಟೋವನ್ನು ತಾಲ್ಲೂಕು ಅಮಲ್ದಾರ್‌ರೇ ಮೊದಲಾದ ಅಧಿಕಾರಿಗಳೂ, ಪುರ ಪ್ರಮುಖರೂ ಸನಾದಿ ಬಾಜಾ, ಓಲಗ, ಕೊಂಬು ಇವುಗಳೇ ಮೊದಲಾದ ಮಂಗಳವಾದ್ಯಗಳ ಸಹಿತ ಆಂಗ್ಲೋ ವರ್ನಾಕ್ಯುಲರ್ ಸ್ಕೂಲ್‌ನಿಂದ ಹೊರಟು ಟವುನ್ ಬೀದಿಗಳಲ್ಲಿ ಮೆರವಣಿಗೆ ನಡೆಸಿದರು.

ನಂತರ ಸ್ಕೂಲ್ ಕಟ್ಟಡದಲ್ಲಿ ಎಲ್ಲರೂ ಸಭೆ ಸೇರಿದ್ದರು. ತಾಲ್ಲೂಕು ಅಮಲ್ದಾರ್‌ರವರು ಸಭಾ ಪ್ರೆಸಿಡೆಂಟರಾಗಿದ್ದರು. ಅವರು ಸಭೆ ಸೇರಿದ್ದ ಉದ್ದೇಶ, ನಾವು ಮಾಡತಕ್ಕ ಕರ್ತವ್ಯಗಳನ್ನು ತಿಳಿಸಿದರು. ನಂತರ ಮ|| ಗಂಡ ಸ್ಕೂಲ್ ಸಂಸ್ಕೃತ ಪಂಡಿತರಾದ ವೇ|| ಅಂಬಳೆ ಶ್ರೀನಿವಾಸಚಾರ್ಯರವರೂ ಮ|| ರಾ|| ಶ್ರೀಕಂಠಶಾಸ್ತ್ರಿಗಳೂ ಮ|| ರಾ|| ಮುನಿಸಿಪಲ್ ಕೌನ್ಸಿಲರಾದ ವೈ. ಶ್ರೀನಿವಾಸಯ್ಯಂಗಾರ್ರೂ ಮ|| ರಾ|| ಮಿಡಲ್ ಸ್ಕೂಲ್ ಹೆಡ್ಮಾಸ್ಟರ್ ಮ|| ರಾ|| ಸುಬ್ಬಾಭಟ್ಟರೂ ಪ್ರೆಸಿಡೆಂಟರಾದ ಅಮಲ್ದಾರ್‌ರವರೂ ಶ್ರೀಮನ್ ಮಹಾರಾಜರ ಗುಣಕಥನ ಮಾಡಿ ಪ್ರಭುಗಳು ದೇಶದ ಪ್ರಜೆಗಳಿಗೆ ಮಾಡಿರತಕ್ಕ ಸೌಕರ್ಯಗಳ ಮೇಲೆ ಇನ್ನೂ ವಿವರವಾಗಿ ಸಭೆಯಲ್ಲಿ ತಿಳಿಸಿ ಉಪನ್ಯಾಸ ಮಾಡಿದರು. ಬಾಲಕಿಯರುಗಳು ಮಂಗಳವನ್ನು ಹಾಡಿ ಶ್ರೀಮನ್ ಮಹಾರಾಜರವರಿಗೆ ಶ್ರೀ ಬಿಳಿಗಿರಿ ರಂಗಸ್ವಾಮಿಯು ಆಯುರಾರೋಗ್ಯ ಐಶ್ವರ್ಯಾದಿಗಳನ್ನು ಕೊಟ್ಟು ಸುಖವಾಗಿ ಸಲಹಲಿ ಎಂದು ಹರಸಿದರು. ತಾಂಬೂಲ ಗಂಧ ಪುಷ್ಪ ಸಕ್ಕರೆ ಬಾಲಕ ಬಾಲಕಿಯರಿಗೆ ರವೆ ಉಂಡೆ ಸಹ ಹಂಚಿದರು. ಸಭೆ ಬರಖಾಸ್ತು ಆಯಿತು.

ಈ ತಾಲ್ಲೋಕಿನಲ್ಲಿ ಕೃತ್ತಿಕೆ ಮಳೆ ಆಯಿತು. ಸುವರ್ಣಾವತಿ ನದಿಯಲ್ಲಿ ಸ್ವಲ್ಪ ತಕ್ಕಷ್ಟು ನೀರು ಬಂದು ರೈತರು ಉಳುವ ಕೆಲಸ ಮಾಡುವುದಲ್ಲದೆ ಕೊತ್ತುಮರಿ ವಗೈರೆ ಚಿಲ್ರೆ ಧಾನ್ಯಗಳು ಕೆಲವುಕಡೆ ಬಿತ್ತುತ್ತಿದ್ದಾರೆ. ಭತ್ತದ ವಸಲು ಮಾಡಲು ರೈತರ ವ್ಯವಸಾಯಕ್ಕೆ ಅನುಕೂಲವಾದಷ್ಟು ನೀರು ಬಂದಿಲ್ಲ. ಹವಾ ಪ್ರಕೃತ ಚೆನ್ನಾಗಿದೆ. ಹರಡಿದ್ದ ತಿಪಟು ಜಾಯಿಲೆ ತಕ್ಕಷ್ಟು ಸಮಾಧಾನವಾಗಿದೆ. ಇತರ ಸಾಂಕ್ರಾಮಿಕ ವ್ಯಾಧಿಗಳೇನೂ ಇಲ್ಲ. ಇಲ್ಲಿಗೆ ಹಿಂದೆ ಇದ್ದ **ಡಾಕ್ಟರು ಕಂಪೌಂಡರು ಮಿಡ್‌ವೈಫ್** ಸಹ ಎಲ್ಲರೂ ವರ್ಗವಾಗಿ ಬೇರೆ **ಡಾಕ್ಟರು** ಬೇರೆ **ಕಂಪೌಂಡರು** ಬೇರೆ **ಮಿಡ್‌ವೈಫ್** ಸಹಾ ಬಂದಿದ್ದಾರೆ. ಹಿಂದೆ ಇದ್ದ ಶಿರಸ್ತಾರ್‌ರು ಕೆಲಸದಿಂದ ನಿವೃತ್ತಿ ಮಾಡಲ್ಪಟ್ಟರು. ಹೊಸ ಶಿರಸ್ತಾರ್‌ರು ಬಂದು 1 ವಾರದಿಂದ ತಾಲ್ಲೂಕು ಶಿರಸ್ತೆ ಕೆಲಸ ಸಬ್ ರಿಜಿಸ್ಟ್ರಾರ್ ಆಫೀಸಿನಲ್ಲಿ ಸಬ್ ರಿಜಿಸ್ಟ್ರಾರ್ ಕೆಲಸ ನೋಡುತ್ತಲಿದ್ದಾರೆ.

ಕಳೆದ ತಿಂಗಳು 21 ನೇ ತಾರೀಖಿನ ದಿವಸ ಶ್ರೀ ಬಿಳಿಗಿರಿ ರಂಗಸ್ವಾಮಿಯವರ ಬೆಟ್ಟಕ್ಕೆ ಈ ಸಂಸ್ಥಾನದ ರೆವಿನ್ಯೂ ಕಮಿಷನರಾಗಿಯೂ ಮುಜರಾಯಿ ಕಮಿಷನರಾಗಿಯೂ ಇರುವ ಮಿ|| ಅನಂತರಾಮ್ ಬಿ. ಎ. ಯವರು ದಯಮಾಡಿಸಿದ್ದರು. ಈ ಬೆಟ್ಟದಲ್ಲಿ ಹೊಸದಾಗಿ ಹಿಡಿದಿರುವ ಆನೆಯನ್ನು ಪರಾಂಬರಿಸಿ, ನಾರಸ್ತು ದೇವಸ್ಥಾನ ವಗೈರೆ ಪರಾಂಬರಿಸಿ ಸಾಕ್ಷಾತ್ತಾಗಿ ಅಲ್ಲಿ ಬಂದಿದ್ದ ಸಂಬಂಧಪಟ್ಟ ನೌಕರರಿಗೆ ಅಲ್ಲಿ ಕಂಡ ನ್ಯೂನಾತಿರಿಕ್ತಗಳನ್ನು ಸರಿಪಡಿಸಬೇಕೆಂದು ಅಪ್ಪಣೆ ಕೊಟ್ಟು ದೇವರ ದರುಶನ ಮಾಡಿಕೊಂಡು ಕಳೆದ ತಿಂಗಳು 22ನೇ ತಾರೀಖಿನಲ್ಲಿ ಚಾಮರಾಜನಗರಕ್ಕೆ ದಯ ಮಾಡಿಸಿದರು.

ಚೌ ಚೌ (೧೨)

೧. ಮೊನ್ನೆ ನಡೆದ ಒಂದು ಮದುವೆ ಸಂಭ್ರಮದಲ್ಲಿ ಅಳಿಯನಿಗೆ ಮಾವ ಒಂದು ವಜ್ರದುಂಗುರವನ್ನು ಕೊಟ್ಟನಂತೆ. ಆಗ, ವರನ ತಂದೆಗೆ ತುಂಬಾ ರೇಗಿತಂತೆ "ಏನ್ರಿ ಇದು! ನನ್ನ ಹುಡುಗನಿಗೆ ಬೇಕಾಗಿದ್ದುದು ಈ ಉಂಗುರದ ಜತೆಗೆ ಒಂದು ಮೋಟಾರು ಕಾರು, ಎಂದು ನಾನು ಮೊದಲೇ ಹೇಳಲಿಲ್ಲವೇ?' ಎಂದು ಗದರಿಸಿದರು. ಆಗ, ಮಾವ ಹೇಳಿದನಂತೆ, "ಹೇಳಿದಿರಿ, ಸ್ವಾಮಿ! ಇಲ್ಲ ಅಂತ ಅಂದನೇ? ಆದರೆ, ಇಮಿಟೇಷನ್ ಮೋಟಾರ್ ಎಲ್ಲೂ ಸಿಕ್ಕಲಿಲ್ಲ, ನಾನೇನು ಮಾಡಲಿ! ಇಮಿಟೇಷನ್ ವಜ್ರ ಮಾತ್ರ ಸಿಕ್ಕಿತು ಅದನ್ನು ತಂದ" ಎಂದನಂತೆ

೨. ಹೆಂಡತಿ ಹೇಳಿದಳು, 'ನಾನು ಆಷ್ಟು ಹೊತ್ತಿನಿಂದ ಮಾತನಾಡುತ್ತಿದ್ದರೆ ನಿಮಗೆ ಇತ್ತಲಾಗೆ ಧ್ಯಾನವೇ ಇಲ್ಲ" ಆಗ, ಗಂಡ, "ಅದು ಹೇಗೆ ಗೊತ್ತು ನಿನಗೆ?" ಅಂದ. ಅದಕ್ಕೆ ಅವಳೆಂದಳು, "ನಾನು ದರ್ಮಾವರದ ಸೀರೆ ಬೇಕು ಅಂತ ಹೇಳಿದರೆ ನೀವು 'ಹೂಂ' ಅಂತಿದೀರಲ್ಲಾ! ಅದರಿಂದಲೇ ಗೊತ್ತಾಗೋದಿಲ್ವೆ! ಅಂತ.

೩. ಮೊನ್ನೆ ನಮ್ಮೂರಲ್ಲಿ ಒಬ್ಬರಿಗೆ ನಾಲ್ಕನೇ ಮದುವೆ. ಲಾಜಹೋಮಕ್ಕೆ ಸರಿಯಾಗಿ ಪುರೋಹಿತರಿಗೂ ವರನಿಗೂ ಜಗಳ. ಆಗ, ಆಸಾಮಿ ಹೇಳಿದ, "ನೋಡಿ, ಜೋಯಿಸರೇ! ಹೀಗೆಲ್ಲಾ ಮಾಡಿದರೆ, ನಾನು ನಿಮ್ಮನ್ನು ಇನ್ನೊಂದು ಮದುವೆಗೆ ಕರೆಸುವುದೇ ಇಲ್ಲ"

೪. 'ನೋಡಿ! ಎಂಟು ದಿವಸದಿಂದಲೂ ಈ ಒಂದು ಔಷಧಿ ಡಬ್ಬದಲ್ಲಿ ನಾನು ಜೀವನ ಮಾಡುತ್ತಿದ್ದೇ," ಎಂದು ಒಬ್ಬರು ಹೇಳಿದರು. ಅಯ್ಯೋ! ಎಷ್ಟು ಚಿಕ್ಕ ಜಾಗ! ಕೂರುವುದಕ್ಕೂ ನಿಂತುಕೊಳ್ಳುವುದಕ್ಕೂ ಕೂಡ ಸ್ಥಳವಿಲ್ಲವಲಾ!

೫. "ಕಾಫಿ ಎಂಬ ಪಾನೀಯವು ಸ್ವಲ್ಪ ಸ್ವಲ್ಪವಾಗಿ ಮನುಷ್ಯನ ಪ್ರಾಣವನ್ನು ಹಾಳುಮಾಡಿ, ಅವನನ್ನು ನಿಧಾನದಲ್ಲಿ ಕೊಂದು ತಿಂಬ ಒಂದು ತೆರನ ವಿಷ!" ಎಂದು ಒಂದು ಗ್ರಂಥದಲ್ಲಿದೆ. ಚಿಂತೆ ಇಲ್ಲ! ನನಗೇನು ಅಷ್ಟು ಬೇಗನೆ, ಅವಸರದಲ್ಲಿ, ಸಾಯಬೇಕೆಂಬ ಅಭಿಲಾಷೆಯಿಲ್ಲ. ನಿಧಾನದಲ್ಲೇ ನಡೆಯಲಿ, ಕಾಫಿಯನ್ನೇ ಕುಡಿಯೋಣ, ಸಾಕು.

೬. ಒಬ್ಬರು ಆಚಾರ್ರು ಬಿ.ಎ. ಪಾಸಾಗಿದ್ದ ಮಗನಿಗೆ ಹೇಳುತ್ತಾಯಿದ್ದರು. "ಲೋ! ಭೀಮೂ, ನೀನು ಪೋಲೀಸ ಇಲಾಖೆಗೆ ಮಾತ್ರ ಅರ್ಜಿ ಹಾಕಬೇಡ!" ಮಗ, ಪಾಪ, "ಏಕೆ?' ಅಂತ ಪ್ರಶ್ನೆ ಹಾಕಿದ. ಆಗ ತಂದೆ ಹೇಳಿದನು, "ಪೋಲೀಸಿನವರು ಯಾರೂ ಸ್ವರ್ಗಕ್ಕೆ ಹೋಗೋದಿಲ್ಲ. ಏಕೆ ಅಂತೀಯೋ! ಸ್ವರ್ಗದಲ್ಲಿ ಗಲಾಟೆ, ಗಲಭೆ, ಖೂನಿ, ಕಳ್ಳತನ ಇನ್ನುವುದಕ್ಕೆ ಅವಕಾಶವೇ ಇಲ್ಲ!"

೭. ಒಬ್ಬರ ಮನೆಯಲ್ಲಿ ಹುಡುಗನ್ನೆಲ್ಲರೂ ಅವರ ಮನೆ ಮೋಟಾರನ್ನು 'ಅಳಿಯ! ಅಳಿಯ!" ಅಂತ ಕರೆಯುತ್ತಿದ್ದರು. ಇದು ಏಕೆ ಅಂತ ತಿಳಿದುಕೊಳ್ಳಬೇಕೆಂದು ಅವರ ಮನೆ ಅಳಿಯನಿಗೆ ಆಸೆಯಾಯಿತು. ಒಬ್ಬ ಹುಡುಗನನ್ನು ಕರೆದು ಕೇಳಿದ. ಆಗ ಆ ಹುಡುಗ ಹೇಳಿದ, "ಇನ್ನೇನೂ ಇಲ್ಲ, ಭಾವ! ಅದು ಎಷ್ಟು ದಬ್ಬಿದರೂ ಹೋಗೋದೇ ಇಲ್ಲ ಅದಕ್ಕೋಸ್ಕರ "ಅಳಿಯ" ಅಂತೇವೆ" ಅಂದ.

೮ "ಅಣ್ಣಾ! ನನ್ನ ಹೆಸರು ಕಮಲ ಅಂತ ಇದ್ದರೂ ಕೂಡ ನೀವು ಯಾಕೆ ಸ್ಪಷ್ಟ ಹೆಸರತ್ತಿ ಕರೆಯುವುದೇ ಇಲ್ಲ" ಅಂತ, ಪಾಪ, ಆಕೆ ಗೋಣಗಿದಳು. ಆಗ, ಗಂಡನಾದವನು ಹೇಳಿದ, "ಅಲ್ಲಾ ಕಣೆ! ಕಮಲ ಅನ್ನೋದು ರಾತ್ರಿಯಾದರೆ ಬಾಯಿಮುಚ್ಚಿಕೊಳ್ಳುತ್ತದೆ. ನೀನು, ಇಪ್ಪತ್ತನಾಲ್ಕು ಗಂಟೆಯೂ ಕೂಡ, ಅವಿಚ್ಛಿನ್ನವಾಗಿ . . . ."

೯. ಮೊನ್ನೆ ಮದುವೆಯಲ್ಲಿ ಉಡುಗೊರೆಯಾಗಿ ಕೊಟ್ಟ ಒಂದು ಸೀರೆಯನ್ನು ಆಸೇತೆರನ ಸೀರೆ ಇದೆ ಎಂಬ ನೆಪದಿಂದ ಒಬ್ಬರು, ಬಜಾರು ಅಂಗಡಿಗೆ ತೆಗೆದುಕೊಂಡು ಹೋದರಂತೆ. ಶೆಟ್ಟರು, "ಇದಕ್ಕೆ ಬದಲಾಗಿ ಇನ್ನೊಂದು ಸೀರೆ ಕೊಡಲಾಗುವುದಿಲ್ಲ" ಅಂದರಂತೆ. ಆಗ, ರಾಯರು, "ಏಕೆ! ಇದು ನಿಮ್ಮ ಅಂಗಡಿಯಿಂದ ಕೊಂಡುಕೊಂಡದ್ದಲ್ಲವೆ? ನಿಮ್ಮ ಚೀಟಿ ಇದೆ, ಇದರ ಮೇಲೆ, ಅಂದರು. ಆಗ ಶೆಟ್ಟರು, "ಚೀಟಿ ಏನೋ, ನಮ್ಮದೆ ಆದರೆ, ಅವರು ತಂದ ಹಳೇ ಸೀರೆಗೆ ... ಕಟ್ಟಿ ಕೊಟ್ಟಿವು, ಅಷ್ಟೆ!" ಅಂದರು

೧೦. ನನಗೆ ನರಕ ಎಂಬುದರಲ್ಲಿ ನಂಬಿಕೆಯೇ ಇಲ್ಲ, ಅಂತ ಒಬ್ಬರು ಹೇಳಿದರು. ಅವರಿಗೆ ನಂಬಿಕೆಬರಬೇಕಾದರೆ, ಒಂದೇ ಉಪಾಯ—ಬೇಗ ಮದುವೆ ಮಾಡಿಕೊಂಡು ಬಿಡಲಿ.



A Reliable House for Repairs of
WATCHES & GRAMOPHONES.
HIGH CLASS RUBBER ST MP
Suppliers,
M. V. N. WATCH COY.,
The General Commission Agency,
Lansdowne Buildings,
MYSORE.

ಗಡಿಯಾರ ಮತ್ತು ಗ್ರಾಮೋಫೋನುಗಳ ರಿಪೇರಿ
ಮತ್ತು ರಬ್ಬರ್ ಮೊಹರುಗಳ ತಯಾರಿ
ನಮ್ಮಲ್ಲಿ ನಡೆಯುತ್ತವೆ.
ಎಂ. ವಿ. ಎನ್. ವಾಚ್ ಕಂಪೆನಿ, ಮೈಸೂರು.

USE ALWAYS

DERMOTONE

(SASTRIC BATHING HERBAL PREPARATION)
THE UNIQUE PRODUCT
IN THE MARKET FOR SKIN HYGIENE.

ಡರ್ಮೊಟೋನ್,

ಶಾಸ್ತ್ರೀಯವಾದ ಮತ್ತು ಆರೋಗ್ಯಕರವಾದ ಚರ್ಮರಕ್ಷಣೀ ಚೂರ್ಣ.
ಡರ್ಮೊಟೋನ್ ವರ್ಕ್ಸ್, ಮೈಸೂರು.

॥ ವಿಜಯೀಭವ ಶ್ರೀ ಕೃಷ್ಣ ಭೂಪಾಲ ॥
ಶ್ರೀಮನ್ ಮಹಾರಾಜರವರ ಘನ ಕೃಪಾಕಟಾಕ್ಷಕ್ಕೆ ಪಾತ್ರರಾಗಿ ದೊಡ್ಡ
ದೊಡ್ಡ ಸ್ಥಾನಗಳಲ್ಲಿನ ಕಲಾ ಪ್ರೇಮಿಗಳ ಉದಾರ
ಪ್ರೋತ್ಸಾಹದಿಂದ ಬಹುಮಾನಿತರಾದ

ಶ್ರೀ ಗೌರೀ ಶಂಕರ ನಾಟಕ ಸಭಾ,
ಬೆಂಗಳೂರು.

ಈ ಸಂಘದವರು ಶೀಘ್ರದಲ್ಲಿಯೇ
(ಬಾಲಕೃಷ್ಣ ವಿರಚಿತ)

ಕರ್ಮ

ಎಂಬ ಶ್ರೇಷ್ಠ ಸಾಮಾಜಿಕ ನಾಟಕವನ್ನು ಪ್ರದರ್ಶಿಸುವರು.
ಇದರ ಪ್ರದರ್ಶನದ ಸ್ಥಳ ಮತ್ತು ತಾರೀಖನ್ನು ಗಮನಿಸಿ
ಸಿರಿತನದ ಬಾಳು! ನಿರುದ್ಯೋಗಿಯ ಜೀವನ ಸಮಸ್ಯೆ!
ಸುಗೆಯ ಸಾಹಿತ್ಯ ಪ್ರಬಂಧ!

ವಿನೂತನ ಸನ್ನಿವೇಶಗಳ ಸಮಾರಂಭದಿಂದ ವಿಜೃಂಭಿಸುತ್ತಿರುವ
ಸಾಮಾಜಿಕ ರಂಗ ಚಿತ್ರ—ಗಮನಿಸಿ.

ಟಿ. ನೀಲಕಂಠಪ್ಪ,
ಪ್ರೊಪ್ರೈಟರ್

BETTER LIGHT— —LIGHTER BILLS.

Use—

"BIJLEE"

ELECTRIC BULBS.

Made in INDIA.

ಸ್ವದೇಶಿ ಎಲೆಕ್ಟ್ರಿಕ್ ಬಲ್ಬುಗಳನ್ನೇ
ಉಪಯೋಗಿಸಿರಿ.

BIJLEE PRODUCTS (INDIA)
Bombay 8.

SOLE DISTRIBUTORS:-

THE STATES ENGINEERING COMPANY,
BANGALORE, MYSORE, SHIMOGA & COIMBATORE.

THE SADHVI

A LEADING NATIONALIST WEEKLY
OF MYSORE.

Recommended for Schools by the Department.

No. TI. 3778-146—35-36.

OFFICE OF THE DIRECTOR OF PUBLIC
INSTRUCTION IN MYSORE,
Bangalore, Dated 20th April 1936.

MEMO.

The Newspaper "SADHVI" a Kannada Weekly is recommended to all Government High, Middle and Normal School Reading Rooms in the State.

PARTICULARS.

Name	The Sadhvi.
Editor	Mr. Agaram Rangiah, B.A.
Place of Publication ...	Mysore

ANNUAL SUBSCRIPTION.

Local	Rs. 2—4—0.
Moffusil	Rs. 2—4—0.

DIRECTOR.

"ಸಾಧ್ವಿ" ವಾರಪತ್ರಿಕೆ.
ವಿದ್ಯಾ ಇಲಾಖೆಯವರಿಂದ ಶಿಫಾರ್ಸು ಮಾಡಲ್ಪಟ್ಟಿದೆ
ಕೂಡಲೇ ಚಂದಾದಾರರಾಗಿ ಪ್ರೋತ್ಸಾಹಿಸಿರಿ.

For Up-to-date and Efficient Medical Treatment

Go to—Dr. A. J. RAM & SONS,

Sayaji Rao Road, Mysore.

Physicians, Dentists Opticians, etc

ಡಾ॥ ಎ ಜೆ. ರಾಂ. ಅಂಡ್ ಸನ್ಸ್,

ಸಯ್ಯಾಜಿರಾವ್ ರೋಡ್, ಮೈಸೂರು ಸಿಟಿ.

ಔಷಧ ವ್ಯಾಪಾರಿಗಳು, ಚಿಕಿತ್ಸಕರು, ದಂತವೈದ್ಯರು,
ಮತ್ತು ಕನ್ನಡಕ ವ್ಯಾಪಾರಿಗಳು

ಉತ್ತಮವಾದ ನವೀನ ಚಿಕಿತ್ಸೆಗಳಿಗೆ ನಮ್ಮಲ್ಲಿಯೇ ಬನ್ನಿರಿ

ಪಂಡಿತ ಪಿ. ಎಚ್. ಚಂದ್ರಭಾನ್‌ಸಿಂಗ್
ಇವರಿಂದ ತಯಾರಿಸಲ್ಪಟ್ಟ

ಫಲಪುಷ್ಪಸಾರ ರಸಾಯನ.

ಸುಖಕರ ಮಲಬಂಧನಿವಾರಿಣೀ ಕ್ರಯ —1-6-0

ಗುಣ:— ಇದು ಜಾಪಾಳ ಮುಂತಾದ ಕಠಿಣ ವಿರೇಚಕ ವಸ್ತುಗಳ ಸಂಯೋಗವಿಲ್ಲದ ಕೇವಲ ಅನ್ನ ಶೀಕರಣ ಪ್ರಯೋಗವು ಕೇವಲ ಅನುಭವಸಿದ್ಧವಾದದ್ದು ಇದನ್ನು ಉಪಯೋಗಿಸುವುದರಿಂದ ಎಲ್ಲಾ ವಿಧವಾದ ಮಲಬಂಧವೂ, ಮೂಲವ್ಯಾಧಿ, ಅಜೀರ್ಣ, ಶುಕ್ಲನಷ್ಟವು, ಕೀಲುವಾಯು, ಎದೆಯುರಿ, ಹೊಟ್ಟೆನೋವು, ಕೆಮ್ಮು, ತಲೆತಿರುಗು ಮುಂತಾದ ರೋಗಗಳೆಲ್ಲವೂ ಖಂಡಿತ ಗುಣವಾಗುತ್ತವೆ

ಬ್ರಾಂಚ್:—ಶ್ರೀಸತ್ಯನಾರಾಯಣ ಆಯುರ್ವೇದಿಕ್ ಫಾರ್ಮಸಿ,
ಜಗನ್ಮೋಹನ ಬಂಗ್ಲೆ ರಸ್ತೆ, ಮೈಸೂರು

You Know

OUR IDEAL ARRANGEMENTS & CHOICEST PREPARATIONS

We need not tell you about it

COME & SEE OUR NOVEL

innovations and up-to-date Management.

SRI KRISHNA BHAVAN, Mysore.

ANANDA SODA FACTORY,

DODDAPET, MYSORE.

BEST AERATED WATER SUPPLIERS

COMPLETE REQUISITES FOR

AERATED WATER MANUFACTURERS

AVAILABLE

ಆನಂದಾ ಸೋಡಾ ಫ್ಯಾಕ್ಟರಿ,

ದೊಡ್ಡಪೇಟೆ, ಮೈಸೂರು

ಮರ್ಚೆಂಟ್ಸ್ ಬ್ಯಾಂಕ್ ಲಿಮಿಟೆಡ್, (H.O.) ಮೈಸೂರು.

೧೯೩೨ ರಲ್ಲಿ ಸ್ಥಾಪಿತವಾದದ್ದು.

ಷೇರುದಾರರಿಗೆ ಸ॥ ಸ॥ 9 ರಂತೆ ಡಿವಿಡೆಂಡ್ ಕೊಟ್ಟಿರುತ್ತೆ ... ರೂಪಾಯಿನ F T B ಸರ್ಟಿಫಿಕೇಟಿಗೆ ಬೆನಿಫಿಟ್ ...00 ರೂಪಾಯಿಗಳವರೆಗೂ ಕುಟುಂಬ ತ್ರಿಫಲದ ಸುಕಸಾಧನವಿದು ಈಗಾಗಲೇ ಸಾವಿರಾರು ಜನ ಮೆಂಬರಾಗಿರುತ್ತಾರೆ ಅನೇಕರು ಬೆನಿಫಿಟ್ ಪಡೆದಿರುತ್ತಾರೆ ಬೆನಿಫಿಟ್ ಹಂಚಿದ ಮೊದಲನೇ ವರ್ಷವೇ ಸರ್ಟಿಫಿಕೇಟ್ ಮೊಬಲಗಿನ ನಾಲ್ಕರಷ್ಟು ಬೆನಿಫಿಟ್ ... ರುತ್ತದೆ

ಜನನಕ್ಕೆ, ಉಪನಯನಕ್ಕೆ, ವಿವಾಹಕ್ಕೆ, ವಿದ್ಯಾಭ್ಯಾಸಕ್ಕೆ, ಮರಣಕ್ಕೆ ... ನಿಮ್ಮ ಕುಟುಂಬಕ್ಕೆ ಧನಸಹಾಯ ಬೇಕೋ? ಹಾಗಾದರೆ ನಮ್ಮ ... F T B ಸರ್ಟಿಫಿಕೇಟಿಗೆ 5 ರೂಪಾಯಿಗಳನ್ನು ಒಟ್ಟಾಗಿಯಾಗಲೀ, ಕಂತುಗಳಾಗಲೀ, ಪಾವತಿಮಾಡಿ ಮುಂದಾಗಿ 15 ವರ್ಷಗಳೂ ಬೆನಿಫಿಟ್ ... ಬಹುದು ನಂತರ ಸರ್ಟಿಫಿಕೇಟ್ ಮೊಬಲಗು ಬೋನಸ್ ಸಮೇತ ... ಮಾಡಲ್ಪಡುತ್ತೆ ಬೆನಿಫಿಟ್ ಪಡೆಯದ ಮೆಂಬರಿಗೆ 15 ವರ್ಷಗಳ ನಂತರ ಸರ್ಟಿಫಿಕೇಟ್ ಮೊಬಲಗಿನ 2 ರಷ್ಟು ಮೊಬಲಗು ಕೊಡಲ್ಪಡುವುದು ಪ್ರವೇಶದ ... ಸರ್ಟಿಫಿಕೇಟ್ 1 ಕ್ಕೆ 1 ರೂಪಾಯಿ ಹೆಂಗಸು, ಗಂಡಸು, ಜಾತಿ ಮತ ... ವಯಸ್ಸಿನ ಯಾವ ನಿರ್ಬಂಧವೂ ಇಲ್ಲ

ಸ॥ ಸಾ 6 l ರಂತೆ 20 ತಿಂಗಳ ಪಾಮದೆಯಿಂದ ಸ್ಥಿರಂಭಾವದ ... ಸಾಲ ಬೇಕೋ? ಹಾಗಾದರೆ ನಮ್ಮ 15 ವರ್ಷಗಳ 200 ರೂಪಾಯಿನ ... ಡೆಂಟ್ ಬಾಂಡುಗಳನ್ನು ಪಡೆಯಿರಿ ಇದಕ್ಕೆ ಕಂತು, ತಿಂಗಳೊಂದಕ್ಕೆ 1 ರೂಪಾಯಿ ಮಾತ್ರ ಪ್ರವೇಶದರ ಬಾಂಡ್ 1 ಕ್ಕೆ 1 ರೂಪಾಯಿ ಪರಮಾವಧಿ ... ಮೊಬಲಗು ರೂ 5,000

ಪ್ರತಿ ತಾಲ್ಲೂಕಿನಲ್ಲೂ ಮೈಸೂರು ಮತ್ತು ಬೆಂಗಳೂರು ನಗರಗಳ ಮೊಹಲ್ಲಾದಲ್ಲೂ ಬ್ಯಾಂಕಿನ ಕೆಲಸ ನಡೆಸಲು ಏಜಂಟರು ಮತ್ತು ಲೋಕಲ್ ಕ್ಲರುಗಳು ಬೇಕಾಗಿವೆ ಒಳ್ಳೇ ಕಮಿಷನ್ ಯಾ ಸಂಬಳ ಮಾಹೆವಾರ 2... ಪಾಯಿ ಖಾಯಿತು 100 ರೂಪಾಯಿ ಅಡ್ವಾನ್ಸು ದೊರೆಯುವದು

ಹೆಚ್ಚು ವಿಷಯಗಳಿಗೆ 0-1-3 ಪೋಸ್ಟಲ್ ಸ್ಟಾಂಪು ಸಮೇತ ಕೆಳಗಿನ ವಿಳಾಸಕ್ಕೆ ಬರೆಯಿರಿ

ಮ್ಯಾನೇಜಿಂಗ್ ಏಜಂಟ್,
ಮರ್ಚೆಂಟ್ಸ್ ಬ್ಯಾಂಕ್ ಲಿಮಿಟೆಡ್, ಮೈಸೂ...

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ ವಿ. ಪಂಡಿತರ

ಬಾಲಸುಧಾ

ಮಕ್ಕಳ ಜ್ವರದ ಗೆಡ್ಡೆಯನ್ನು ಜಾತರಿ ಗುಣ ಪಡಿಸುತ್ತೆ ಲಿವರ್ (ಕಲೇಜ) ದಪ್ಪನಾಗಿ ಕಣ್ಣು ಹಳದಿ ಬಣ್ಣವಾಗಿದ್ದರೆ ಇದರ ಸೇವನೆಯಿಂದ ವಿಶೇಷ ಗುಣವಾಗುತ್ತೆ 20 ವರ್ಷಗಳಿಂದಲೂ ಅನುಭವ ಸಿದ್ಧವಾಗಿದೆ—ಶಕ್ತಿಗೆ ನಮ್ಮ ಬಾಲ ಸಂಜೀವಿನಿಯನ್ನೇ ಉಪಯೋಗಿಸಿರಿ

ಬಾಲಸುಧಾ ಬೆಲೆ 1 ರೂ ಬಾಲಸಂಜೀವಿನಿ ...

ಮೈಸೂರು, ಬೆಂಗಳೂರು, ಮದ್ರಾಸುಗಳಲ್ಲಿ ನಮ್ಮ ಶಾಖೆಗಳಿವೆ

ಸದ್ವೈದ್ಯಶಾಲಾ, ನಂಜನಗೂಡು.

ಎಂ ವಿ. ನಾರಾಯಣರಾಯರ

ಶ್ರೀ ಸತ್ಯನಾರಾಯಣ ಪರಿಮಳ ಫ್ಯಾಕ್ಟರಿ,

ಜಗನ್ಮೋಹನ ಬಂಗ್ಲಾ ಬೀದಿ, ಮೈಸೂರು

ಪರಿಮಳ ಅಗರ್ ಬತ್ತಿ

ಉಪಯೋಗಿಸಿ ಪ್ರೋತ್ಸಾಹಿಸಿರಿ

|| ಸತ್ಯಮೇವೋದ್ಧರಾಮ್ಯಹಮ್ ||
ರಾಜಧಾನಿಯ ರಾಷ್ಟ್ರೀಯ ವಾರ ಪತ್ರಿಕೆ.
ವೃದ್ಧಪಿತಾಮಹ ಎಂ. ವೆಂಕಟಕೃಷ್ಣಯ್ಯನವರ ಜ್ಞಾಪಕಾರ್ಥವಾಗಿ ಪ್ರಕಟಿಸಲ್ಪಡುವುದು.
ಸಂಪಾದಕರು ಅಗರಂ ರಂಗಯ್ಯ, ಬಿ ಎ
ಸಂಪುಟ ೧] MYSORE : MONDAY 15—6—36 ಮೈಸೂರು : ಸೋಮವಾರ ೧೫—೬—೩೬ [ಸಂಚಿಕೆ ೧೭

ಶ್ರೀ ಟಿ. ಎಸ್. ಸಿಂಹ.

ಬೆಂಗಳೂರಿನ ತರುಣ ಹಠಯೋಗಿ.

(ಬರದುಬಂದುದು)

ನಾವು ಪ್ರತಿದಿನವೂ ಹಠಯೋಗದ ವಿವಿಧ ಪ್ರಯೋಗಗಳನ್ನು ನೋಡುತ್ತಲೂ, ...ತ್ತಲೂ, ಇದ್ದೇವೆ ಇವುಗಳಲ್ಲಿ ವಿಶೇಷವಾಗಿ ಶರೀರ ದಂಡನೆಗೆ ಸಂಬಂಧಪಟ್ಟವುಗಳೇ ಹೆಚ್ಚು ಕೆಲವು ಹಠಯೋಗಿಗಳು ಸರ್ಪಭಕ್ಷಕರಾಗಿರುತ್ತಾರೆ ಹಾವು, ...ಳು, ವಿಷ ದ್ರಾವಕ, ಕಾಯಿಸಿದ ...ವು, ...ಜಿನ ಚೂರು ಮುಂತಾದುವನ್ನು ನಿರಾಯಾಸವಾಗಿ ತಿನ್ನುವರು ...ತ್ತಿ ಕಠಾರಿಗಳನ್ನು ಶರೀರದ ಅವಯವಗಳಲ್ಲಿ ಓಡಾಡಿಸಿ ಅಪಾಯ ಹೊಂದದವರು. ಮತ್ತು ಕೆಲವರು ದೇಹವನ್ನು ... ರೀತಿಯಲ್ಲಿ ಬಗ್ಗಿಸಿ ಘೋರವಾದ ...ಸನಗಳನ್ನು ಮಾಡುವರು.

...ಂಗಳೂರಿನ ತರುಣ ಹಠಯೋಗಿಗಳಾದ ಶ್ರೀ|| ಟಿ ಎಸ್ ಸಿಂಹರವರ ರೀತಿ ... ಇವೆಲ್ಲಕ್ಕಿಂತಲೂ ಬೇರೆಯಾಗಿದೆ ...ವರು ಕೇವಲ ತರುಣರು ಇನ್ನೂ ...ಪತ್ತೆರಡು ವರ್ಷ ವಯಸ್ಸು ಮದುವೆಯಾಗಿದ ಮಾತ್ರ ಮತಸ್ಥರು ಒಳ್ಳೆ ...ರ್ಣ್ವಗಳು. ಆಧುನಿಕ ವಿದ್ಯಾಭ್ಯಾಸವನ್ನು ತಕ್ಕಮಟ್ಟಿಗೆ ಮಾಡಿದ್ದಾರೆ ಕಾ...ಕ್ಕೆ ತಕ್ಕಂತೆ ವೇಷಭೂಷಣಗಳನ್ನೂ ...ಡತ್ತಾರೆ

ಇವರು ಮೈಸೂರು ಪ್ರಾಂತದವರೇ ಆ... ಒಬ್ಬ ಹಠಯೋಗಿಗಳಿಂದ ತಮ್ಮ ...ಸಾಧನೆಯನ್ನು ಕಲಿತರೆಂದು ಗೊ...ಗತ್ತದೆ ಅನೇಕ ಗಂಟೆಗಳಕಾಲ ...ರು ಭೂಮಿಯಲ್ಲಿ ಶ್ವಾಸಧಾರಣೆಮಾಡಿದುವ ಅಭ್ಯಾಸವನ್ನು ಮಾಡಿರುವರು ...ವರ ಅತಿ ಚಿಕ್ಕದಿರುವ ಪ್ರದೇಶ ...ಮೂರಡಿ ಆಳವಿರುವ ಹಳ್ಳದಲ್ಲಿ ಕುಳಿತುಕೊಳ್ಳುವರು ಪದ್ಮಾಸನ ಹಾಕುವುದು ಕುಕ್ಕುಟದಂತೆ ಕುಳಿತಿರುವರು ...ಳ್ಳದಲ್ಲಿ ಕುಳಿತನಂತರ ಮಣ್ಣು ...ಳಗೆ ಬೀಳದಂತೆ ಒಂದು ಮರದ ...ಗೆಯು ಮುಚ್ಚಲ್ಪಡುವುದು. ಗಾಳಿ ಪ್ರವೇಶಿಸದಂತೆ ಹಲಗೆಯ ಮೇಲೆ ... ಮುಚ್ಚಲ್ಪಡುವುದು ಅವರು ...ಲ್ಲಿ ಕುಳಿತುಕೊಳ್ಳುವುದಕ್ಕೆ ಮುಂಚೆ ...ರುಗಳು ಅವರ ದೇಹಸ್ಥಿತಿಯನ್ನು ಪರೀಕ್ಷಿಸುವರು ಅವರು ಹೊರಗೆ ಬಂದ ಮೇಲೆಯೂ ಪರೀಕ್ಷಿಸುವರು ಇದರಲ್ಲಿ ಯಾವ ವ್ಯತ್ಯಾಸವೂ ಕಂಡುಬರುವುದಿಲ್ಲ ನಾಡಿಯಲ್ಲಿ ಸ್ವಲ್ಪ ತಾಪ ಮಾತ್ರ ಉಂಟಾಗಿರುತ್ತದೆ. ಸ್ವಲ್ಪ ಬೆವರು ಸುರಿಯುತ್ತಿರುತ್ತದೆ ಯಾವ ಕಷ್ಟವನ್ನೂ ಪಡದ ಸುಖವಾಗಿ ಕುಳಿತಿದ್ದಂತೆ ಹಸನ್ಮುಖಿ ದಿಂದ ಎದ್ದು ಬರುವರು

ಇವರು ಒಂದಾವರ್ತಿ 18 ಗಂಟೆಗಳ ಕಾಲ ಹೀಗೆಯೇ ಶ್ವಾಸಧಾರಣೆ ಮಾಡಿದವರು ಈ ಸಣ್ಣ ವಯಸ್ಸಿನಲ್ಲೇ ಪ್ರದರ್ಶಿಸುವುದು ಬಹಳ ಪ್ರಶಂಸನೀಯವಾಗಿದೆ ಇಂತಹವರು ಪಾಶ್ಚಾತ್ಯ ದೇಶಗಳಲ್ಲಿದ್ದರೆ ಜನರು ವಿಶೇಷವಾಗಿ ಪ್ರೋತ್ಸಾಹಿಸುತ್ತಿದ್ದರು ನಮ್ಮಲ್ಲಿ ಬರೀ ಬಾಯಿಮಾತಿನ ಪ್ರೋತ್ಸಾಹ ಮಾತ್ರ ಇರುತ್ತದೆ ಇಂತಹ ಶಕ್ತಿಸಾಮರ್ಥ್ಯಗಳ ಪ್ರದರ್ಶನದಲ್ಲಿ ಆಸಕ್ತಿಯು ನಮ್ಮ ಜನರಿಗಿಂತಲೂ ವಿದೇಶೀಯರಲ್ಲಿ ವಿಶೇಷವಾಗಿರುತ್ತದೆ ಅದ್ದರಿಂದಲೇ ಅಲ್ಲಿ ಎಲ್ಲಾ ವಿಧವಾದ ಸಾಹಸಿ

ಶ್ರೀ|| ಟಿ. ಎಸ್. ಸಿಂಹ

ಬೆಂಗಳೂರಿನ ಸುಪ್ರಸಿದ್ಧ ತರುಣ ಹಠಯೋಗಿ

ಕುಳಿತಿದ್ದರು ಇನ್ನೊಂದಾವರ್ತಿ ಮೂರು ಗಂಟೆಗಳ ಕಾಲ ಕುಳಿತಿದ್ದರು. ಈ ಊರಿನಲ್ಲಿ ಎರಡು ಗಂಟೆಗಳಂತೆ ಎರಡು ದಿನಗಳು ಕುಳಿತಿದ್ದರು ಇವರು ಇನ್ನೂ ಹೆಚ್ಚುಕಾಲ ಕುಳಿತಿರಬಲ್ಲೆನೆಂದೂ ಇವರು ಹೇಳುವರು ಹೀಗೆ ಕುಳಿತಿರಲು ಏಕಾಗ್ರಚಿತ್ತತೆಯೇ ಮುಖ್ಯ ಕಾರಣವೆಂದು ಅವರು ಹೇಳುತ್ತಾರೆ ಮತ್ತು ಶ್ವಾಸ ನಿರೋಧವನ್ನು ನಡೆ ಮಾಡುವರು ಈ ಸಮಾಧಿಯನ್ನು ಮಾಡುವ ದಿವಸಗಳಲ್ಲಿ ಅವರು ಬೆಳಗಿನಿಂದ ಉಪವಾಸ ಮಾಡುವರು ರಾತ್ರಿ ಸ್ವಲ್ಪ ಮಿತವಾದ ಆಹಾರ ತೆಗೆದುಕೊಳ್ಳುವರು

ಈ ರೀತಿಯ ಯೋಗಶಕ್ತಿಯನ್ನು ಇಗಳಿಗೂ ಸದಾ ಕಾಲದಲ್ಲಿಯೂ ಸಹಾಯ ದೊರೆವು ಇದ್ದೇ ಇರುತ್ತದೆ.

ಶ್ರೀ ಸಿಂಹರವರು ಸದ್ಯದಲ್ಲಿಯೇ ಪಾಶ್ಚಾತ್ಯ ದೇಶಗಳಿಗೂ ಜರ್ಮನಿ ಮುಂತಾದ ಪ್ರದೇಶಗಳಿಗೂ ಹೋಗಿ ಬರಬೇಕೆಂದು ಉದ್ದೇಶಿಸಿರುತ್ತಾರೆ ಅಲ್ಲಿ ಅವರಿಗೆ ಹೆಚ್ಚಿನ ಕೀರ್ತಿ, ಪ್ರೋತ್ಸಾಹಗಳು ದೊರೆಯುವುದರಲ್ಲಿ ಸಂಶಯವಿಲ್ಲ ಅವರ ಖರ್ಚಿಗೆ ಅವರಿಗೆ ವಿಶೇಷ ಧನ ಸಹಾಯವು ಬೇಕು ನಮ್ಮ ದೇಶದ ಉದಾರಿಗಳು ಅವರಿಗೆ ತಕ್ಕ ಸಹಾಯವನ್ನು ಮಾಡಿ ಅವರು ಅಭಿವೃದ್ಧಿಗೆ ಬರುವಂತೆ ಮಾಡಬೇಕೆಂದು ಕೋರುತ್ತೇವೆ

ವಾರ್ಷಿಕೋತ್ಸವ.

ಶ್ರೀರಂಗಪಟ್ಟಣದ ಯುವಜನ ಸಂಘದ ವಾರ್ಷಿಕೋತ್ಸವವು ಕಳೆದ ಭಾನುವಾರ ಮಧ್ಯಾಹ್ನ ನಡೆಯಿತು ಮೈಸೂರು ವಿಶ್ವವಿದ್ಯಾನಿಲಯದ ಪ್ರೊಫೆಸರರಾದ ಶ್ರೀ ಎನ್ ಎಸ್ ಸುಬ್ಬರಾಯರು ಅಧ್ಯಕ್ಷತೆಯನ್ನು ವಹಿಸಿದ್ದರು

ದೇವತಾಪ್ರಾರ್ಥನೆಯಾದನಂತರ ಶ್ರೀ ನಾರಾಯಣಗೌಡರ ವಾರ್ಷಿಕವರದಿ ನಡೆಯಿತು ಕಾರ್ಯದರ್ಶಿಗಳಾದ ಶ್ರೀ ಎ ಜಿ ಎಂದಿಗೌಡರು ವರದಿಯನ್ನೊಪ್ಪಿಸಿದರು ಬೆಂಗಳೂರಿನ ಜಿಲ್ಲಾ ಬೋರ್ಡಿನ ಉಪಾಧ್ಯಕ್ಷರಾದ ಶ್ರೀ ವಿ ವೆಂಕಟಪ್ಪನವರೂ, ಕೋಲಾರದ ಜಿಲ್ಲಾ ಬೋರ್ಡಿನ ಅಧ್ಯಕ್ಷರಾದ ಶ್ರೀ ಕೆ ಚೆಂಗಲರಾಯರೆಡ್ಡಿಯವರೂ ಭಾಷಣಗಳನ್ನು ಮಾಡಿದರು

ಅಧ್ಯಕ್ಷರು ತಮ್ಮ ಭಾಷಣದಲ್ಲಿ ಸಂಘವು ನಡೆಸುತ್ತಿರುವ ಶ್ರೇಷ್ಠವಾದ ಕೆಲಸವನ್ನು ಪ್ರಶಂಸಿಸಿ ಉಪಯುಕ್ತವಾದ ಸಲಹೆಗಳನ್ನು ಕೊಟ್ಟರು ವಂದನಾಸಮರ್ಪಣೆಯಾದನಂತರ ಸಭೆ ಮುಗಿಯಿತು

ಸಕಲೇಶಪುರ

ಈ ಸ್ಥಳದ ಪ್ರಸಿದ್ಧ ವರ್ತಕರೂ ಮತ್ತು ಪ್ರಾಂತೀಯ ಜಮೀನುದಾರರೂ ಆಗಿದ್ದ ಚಲುವ ಶೆಟ್ಟರ ಸುಬ್ಬಶೆಟ್ಟರು ತಮ್ಮ ೬೦ನೇ ವಯಸ್ಸಿನಲ್ಲಿ ಈ ವಾರ ಶುಕ್ರವಾರ ಒಂದನೇ ಸೋಮವಾರ ಮಧ್ಯಾಹ್ನ ಸ್ವರ್ಗಸ್ಥರಾದರು ದಿವಂಗತರು ಈ ಊರಿನಲ್ಲಿ ಕೇವಲ ವೃದ್ಧರಾಗಿಯೂ, ಪರೋಪಕಾರಿಗಳಾಗಿಯೂ, ಅನೇಕ ಬಡಜನರಿಗೆ ಆಶ್ರಿತರಾಗಿಯೂ ಇದ್ದರು ಕಾಫಿ, ಏಲಕ್ಕಿ ಇತ್ಯಾದಿ ಸರಕುಗಳ ವ್ಯಾಪಾರದಲ್ಲಿ ಒಳ್ಳೆ ಹೆಸರುವಾಸಿಯೂ, ಜನಾನುರಾಗಿಗಳಾಗಿಯೂ ಇದ್ದರು ದಿವಂಗತರ ಆತ್ಮಕ್ಕೆ ಭಗವಂತನು ಶಾಂತಿಯನ್ನುಂಟು ಮಾಡಲಿ

ಬ್ರಿಟಿಷ್ ಯುದ್ಧ ಋಣ

ಬ್ರಿಟಿಷ್ ಸರ್ಕಾರವು ಅಮೆರಿಕಾ ಸಂಯುಕ್ತ ಸಂಸ್ಥಾನಗಳ ಸರ್ಕಾರಮೂಡನೆ ಯುದ್ಧಋಣದ ಬಗ್ಗೆ ನಡೆಸಿದ ಪತ್ರವ್ಯವಹಾರವು ಶ್ವೇತಪತ್ರ ರೂಪದಲ್ಲಿ ಪ್ರಕಟವಾಗಿದೆ ಬ್ರಿಟಿಷ್ ಸರ್ಕಾರವು ಅಮೆರಿಕಕ್ಕೆ ತೆರಬೇಕಾದ ಯುದ್ಧದ ಋಣವು ೮೫೭೬೦,೦೦೦ ಪೌಂಡುಗಳಾಗುತ್ತವೆ ಸದ್ಯಕ್ಕೆ ಋಣ ತೀರಿಸುವ ಪ್ರಯತ್ನ ಕೈಕೊಳ್ಳುವ ಸೂಚನೆಯಿಲ್ಲ

ವಿಜಯನಗರ ಸಾಮ್ರಾಜ್ಯ ಸ್ಮಾರಕೋತ್ಸವ.

ಹರಿಕಥಾ ವಿದ್ವಾನ್ ಶ್ರೀ|| ಬೇಲೂರು ಕೇಶವದಾಸರು ಈ ಕೆಳಗೆ ಕಂಡಂತೆ ಬರೆಯುತ್ತಾರೆ —

ವಿಜಯನಗರದ ಸಾಮ್ರಾಜ್ಯ ಸ್ಥಾಪನೆಯಾಗಿ ಕಳೆದ ವೈಶಾಖಕ್ಕೆ ಸರಿಯಾಗಿ ಆರು ಶತಮಾನಗಳಾಗಿವೆ ಅಶೋಕ ಚಕ್ರವರ್ತಿಯ ಸಾಮ್ರಾಜ್ಯದ ನಂತರ ಎರಡು ಶತಕಗಳಿಗಿಂತ ಹೆಚ್ಚು ಕಾಲ ಒಡೆದಾಗಿದ್ದ ಸಾಮ್ರಾಜ್ಯವಂದರ ವಿಜಯನಗರವನ್ನು ವರ್ಣಿಸಲು ಕಾಫಿ ಸ್ಥಾನ ಓದಿ ಪ್ರಯಾಣ ಸೌಕರ್ಯಗಳಿಲ್ಲದ ಆ ಕಾಲದಲ್ಲಿ ವಿಜಯನಗರದ ಕೀರ್ತಿಯು ಪ್ರಪಂಚದಲ್ಲಿ ವ್ಯಾಪಿಸಿ ದೇಶಾಂತರ ದ್ವೀಪಾಂತರಗಳಿಂದ ಯಾತ್ರಿಕರನ್ನು ಬರಮಾಡಿಕೊಂಡುದನು ಪ್ರತಿ ಭಾರತೀಯನಿಗೂ ಅಭಿಮಾನದ ಸಂಗತಿಯಾಗಿದೆ ಆ ಕಾಲದಲ್ಲಿ ವಿಜಯನಗರವನ್ನು ದೊಡ್ಡ ಪಟ್ಟಣವಾಗಲಿ, ವ್ಯಾಪಾರವಾಗಲಿ ಪ್ರಪಂಚದ ಬೇರೆ ಕಡೆ ಇಲ್ಲವೆಂದು ಗೊತ್ತಾಗುತ್ತದೆ ವಿಜಯನಗರವು ಬಿದ್ದರೂ ಆ ಮಹಾ ರಾಷ್ಟ್ರರು ತಮ್ಮದೇ ಸಾಮ್ರಾಜ್ಯವನ್ನು ಸ್ಥಾಪಿಸಿದ ಕರ್ನಾಟಕ ಚಕ್ರಾಧಿಪತ್ಯವಾಗಿತ್ತೆಂದು ಜನಜನಿತ ವಾರ್ತೆಯಾಗಿದೆ ವಿಜಯನಗರದಿಂದ ಆದ ರಾಷ್ಟ್ರಭಾವವೂ ಮಹಾರಾಷ್ಟ್ರ ಸ್ಥಾಪನೆಗೆ ಬೀಜವಾಯಿತೆಂದು ಆಲ್ಲಿನ ಇತಿಹಾಸಕಾರರು ತೋರಿಸಿರುವ ಕೃತಜ್ಞತೆಯು ಕನ್ನಡಿಗರಿಗೆ ಭೂಷಣವಾಗಿದೆ

ವಿದ್ಯಾರಣ್ಯ, ಅಕ್ಷೋಭ್ಯಮುನಿ, ಜಯತೀರ್ಥ, ವ್ಯಾಸರಾಜರಂಥಾ ಯತೀಶ್ವರರೂ, ಪುರಂದರ, ಕನಕರಂಥಾ ಹರಿದಾಸರೂ, ಅನಂತಭಟ್ಟ ಸೋಮನಾಥ, ಹಂಪೆಯ ಕುಮಾರ ವ್ಯಾಸರಂಥಾ ಮಹಾ ಕವಿಗಳೂ ವಿಜಯನಗರದ ಸಾಮ್ರಾಜ್ಯ ರತ್ನಗಳೆಂದರೆ ಏನಾಗ ಅಭಿಮಾನವಾಗದಿರುವುದಿಲ್ಲ. ತಾಮ್ರಶಾಸನ ಗ್ರಂಥರಚನೆ, ಚಿತ್ರಕಲೆ ಮೊದಲಾದವುಗಳು ವಿಜಯನಗರದ ಕಾಲದಲ್ಲಿ ಉನ್ನತಿಯ ಪರಮಾವಧಿಗೇರಿದ್ದವೆಂದರೆ ಯಾರ ಹೃದಯವು ಹಿಗ್ಗದೆ ಇರುವುದಿಲ್ಲ.

ದೇಶಾಭಿಮಾನ, ಭಾಷಾಭಿಮಾನ, ಸಂಸ್ಕೃತಿಯ ಪ್ರೇಮಗಳಿಂದ ಪ್ರೇರಿತರಾದ ಮಹಾರಾಷ್ಟ್ರರು ಶಿವಾಜಿ ಮಹಾಪ್ರಭುವಿನಿಂದ ಸ್ಥಾಪಿತವಾದ ಮಹಾರಾಷ್ಟ್ರ ಸಾಮ್ರಾಜ್ಯದ ಮುನ್ನೂರನೇ ಮಹೋತ್ಸವವನ್ನಾಚರಿಸಿ ಕೃತಕಾರ್ಯರಾಗಿದ್ದಾರೆ ಹಂಪೆ ಹಂಚಿದ ಕನ್ನಡಿಗರಾದರೂ ವಿಜಯನಗರದ ಆರನೂರನೇ ವರ್ಷದ ಮಹೋತ್ಸವವನ್ನು ಆ ಮಹಾಸಾಮ್ರಾಜ್ಯದ ಗೌರವಕ್ಕೆ ತಕ್ಕಂತ ಅದೇ ಪಂಪಾಕ್ಷೇತ್ರದಲ್ಲಿ ನಡೆಸಲು ಮಹಾಪ್ರಯತ್ನ ಮಾಡಿದ್ದಾರೆ ಕಳೆದ ಮೂರು ವರ್ಷಗಳಿಂದ ಕರ್ನಾಟಕ ಸಾಹಿತ್ಯ ಪರಿಷತ್ತು ಸೇರಿದ ಸ್ಥಳಗಳಲ್ಲಲ್ಲಾ ವಿಜಯನಗರ ಪರಿಷತ್ತನ್ನಾ ಕೂಡಿಸಿ ಸಿವಿಲ ಕನ್ನಡ ಮುಖಂಡರ ಬೆಂಬಲವನ್ನು ಪಡೆದಿದ್ದಾರೆ ಈ

ನಿಮಗೆ ಗೊತ್ತೇ ?

— —

ಲೇಖಕ—ಎಂ ವಿ ನಾರಾಯಣಮೂರ್ತಿ ಮೈಸೂರು

೧ **ಸರೋವರದಲ್ಲಿ ಬಿದ್ದ ಉಂಗುರ**—ಲಿನಾಕ್ಸಾ (Lenaxa) ಎಂಬ ಸ್ಥಳದ ಕಾನ್‌ಸಾಸ್ (Kansas) ಎಂಬಲ್ಲಿ ಒಬ್ಬನ ವಜ್ರದ ಉಂಗುರವು ಒಂದು ಸರೋವರದಲ್ಲಿ ಬಿದ್ದಾಗ ೨ ಲಕ್ಷ ಗ್ಯಾಲನ್ ಗಳಷ್ಟು ನೀರನ್ನು ತೋಡಿ, ಕೆರೆಯನ್ನು ಒತ್ತಿಸಿ, ಹುಡುಕಿ ಆ ಉಂಗುರವನ್ನು ತೆಗೆದರು !

೨ **ಪ್ರಪಂಚದಲ್ಲೆಲ್ಲಾ ದೊಡ್ಡ ಕ್ಯಾಮರಾ**—ಪ್ರಪಂಚದಲ್ಲಿರುವ ಎಲ್ಲಾ ಕ್ಯಾಮರಾಗಳಿಗಿಂತಲೂ ದೊಡ್ಡದು 31 ಅಡಿ ಉದ್ದವಾಗಿಯೂ 11 ಟನ್ ಭಾರವಾಗಿಯೂ ಇದೆ ! ಇದು ಇಂಗ್ಲಂಡಿನಲ್ಲಿದೆ

೩ **೮ ಪೌಂಡು ತೂಗುವ ಸೇಬುಗಳು**—ಜಪಾನಿನ ಒಂದು ತೋಟದಲ್ಲಿ ೮ ಪೌಂಡು ಭಾರವಿರುವ ಸೇಬು(Apple) ಗಳನ್ನು ಬೆಳೆಯಿಸುತ್ತಿದ್ದಾರೆ ! ಆದರೆ ಈ ಹಣ್ಣುಗಳು ದುಬಾರಿಯಾಗಿವೆಯಂತೆ

೪ **ಗಂಟೆಗೆ ೧೨೦ ಮೈಲಿ**—ಒಂದು ರಣಹದ್ದಿಗೆ ಗಂಟೆಗೆ 120 ಮೈಲಿಯಂತೆ ೩ ಗಂಟೆಗಳ ಕಾಲ ಹಾರುವ ಶಕ್ತಿ ಇದೆಯಂತೆ!

ತ್ವರೆ ಕರ್ನಾಟಕದ ಮುಖಂಡರಾಗಲೀ ಪ್ರತಿ ಜಿಲ್ಲೆಗಳಲ್ಲೂ ಪ್ರಚಾರ ಮತ್ತು ಧನ ಸಂಗ್ರಹ ಕಾರ್ಯಗಳಿಗಾರಂಭಿಸಿದ್ದಾರೆ ವಿಜಯನಗರದ ಮಾದರಿಯನ್ನನುಸರಿಸಿ ಆ ರಾಜ್ಯಾಂಗವಾದ ಮೈಸೂರು ಕನ್ನಡಿಗರಿಗಿಂತು ಉತ್ಸವ ಕಾರ್ಯದಲ್ಲಿ ಹೆಚ್ಚಿನ ಬಾಧ್ಯತೆ ಮತ್ತು ಒಗ್ಗಟ್ಟಾಗಿರುವುದೇ ಇವೆ ಸಾಮ್ರಾಜ್ಯೋತ್ಸವದಲ್ಲಿ ಯಾವ ರಾಜಕೀಯವಾಗಲಿ ಮತವಿಚಾರಗಳಾಗಲಿ ಇರದ ಕೇವಲ ಸಾಂಸ್ಕೃತಿಕವಿಚಾರಗಳು ಇರುವುದರಿಂದ ಅರಮನೆ ಗುರುಮನೆಗಳಿಂದಾರಂಭಿಸಿ ಅಧಿಕಾರಿ, ವ್ಯಾಪಾರಿ, ಸನಾತನಿ, ಸುಧಾರಕ ಹಿಂದೂ ಮುಸಲ್ಮಾನ, ಕ್ರೈಸ್ತರಲ್ಲರಿಗೂ 'ಇದು ನನ್ನದು' ಎಂಬ ಅಭಿಮಾನದಿಂದ ಕಾರ್ಯರಂಗಕ್ಕಿಳಿಯಲು ಸಂಪೂರ್ಣ ಅವಕಾಶವಿದೆ ಸಾಮ್ರಾಜ್ಯೋತ್ಸವವು ಕರ್ನಾಟಕದಲ್ಲಿ ಮಾತ್ರವಲ್ಲದೆ ಭರತಖಂಡದ ಎಲ್ಲ ಪ್ರಾಂತ್ಯಗಳಲ್ಲೂ ತಕ್ಕ ಪ್ರಮಾಣದಿಂದ ನಡೆಸುವ ಪ್ರಯತ್ನಗಳಾಗಿವೆ ಈ ಬಗೆಯ ಮಹೋತ್ಸವವು ಭರತಖಂಡ ಇತಿಹಾಸದಲ್ಲಿ ಇದು ಕಾಲದಿಂದ ನಡೆದಿಲ್ಲವೆನ್ನುವದಕ್ಕಂತೂ ಅಭ್ಯಂತರವಿರುವುದಿಲ್ಲ

ಈ ಎಲ್ಲ ವಿಚಾರಗಳನ್ನು ಮನ್ನಾಳುಗಳ ಮುಂದಾಗಿ ಯೋಚಿಸಿ ಕ್ಷಿಪ್ರದಲ್ಲೇ ಕಾರ್ಯರಂಗಕ್ಕಿಳಿದು ಮೈಸೂರಿಗ ಕೀರ್ತಿಯನ್ನುಂಟುಮಾಡುವರೆಂದು ಮಾತ್ರ ಕುತೂಹಲದ ನಿರೀಕ್ಷಣೆಯಾಗಿದೆ

೫ **ನಡೆಯುವುದರಿಂದ ಜೀವನ**—ಲಿವರ್‌ಪೂಲಿನಲ್ಲಿ ಇಬ್ಬರು ಹುಡುಗಿಯರು ದಿನವೂ ೧೨ ಮೈಲಿ ನಡೆಯುವುದರಿಂದ ತಮ್ಮ ಜೀವನವನ್ನು ಸಾಗಿಸುತ್ತಿರುವರು ಹೊಸ ಪಾದರಕ್ಷೆಗಳನ್ನು ಪರೀಕ್ಷೆ ಮಾಡುವುದು ಇವರ ಕೆಲಸ ಕಾಲಿಗೆ ಒಂದು ಪೀಡೋಮೀಟರನ್ನು (Pedometre) ಕಟ್ಟಿಕೊಂಡು 6 ಮೈಲಿ ನಡೆದು 6 ಮೈಲಿ ಹಿಂತಿರುಗಿ ಕಂಪೆನಿಯವರಿಗೆ ಪಾದರಕ್ಷೆಯನ್ನೂ ಪೀಡೋಮೀಟರನ್ನೂ ತೋರಿಸುವರು ಇವರು ಆದರಿಂದ ಪಾದರಕ್ಷೆಯ ಗುಣಗಳನ್ನು ಕಂಡುಹಿಡಿಯುವರಂತೆ!

೬ **ಪ್ರಾಣಿಗಳ ಆದಾರಶಕ್ತಿ**—ಒಂದು ಕೈಲುಗಾಡಿಯನ್ನು ಸಿಕ್ಕಿಸಲು ಸಂಪಾದಿಯನ್ನು ಎಳೆಯುವುದಲ್ಲದೆ ಇನ್ನೂ ಅನೇಕ ವಿಧಗಳಲ್ಲಿ ಪ್ರಾಣಿಗಳ ಹಿಂದೆ ಟೆಕ್ಸಾಸ್ (Texas) ಎಂಬಲ್ಲಿ ಎಕ ಪ ಭಾಗಗಳು ಕೈಲು ಕೆಂಪಿಗಳ ಮೇಲೆ ಬಿಟ್ಟು ಸೇರಿದವಂತೆ ಕೃಷಿ ಗಾಡಿಯ ಚಕ್ರಗಳು ಎಪ್ಪತ್ತನ್ನು ಹಿಡಿದು ತುಂಬಾ ಬಾರಿಯಾದರಿಂದ ಕೈಲನ್ನು ನಿಲ್ಲಿಸಬೇಕಾಯಿತಂತೆ ! ಪೆಟ್ಟಿಗೆಗಳು ಆನೆಗಳೂ ಕೈಲುಗಾಡಿಯನ್ನು ನಿಲ್ಲಿಸಲಿಲ್ಲವೇ ಪ್ರಾಣಿಗಳ ಮಹತ್ವವನ್ನು ನೋಡಿದಿರಾ ?

೭ **ನಾಲಿಗೆಯೇ ಒಂದು ಯಂತ್ರ**—ಇಂಗ್ಲಂಡಿನಲ್ಲಿ ಒಬ್ಬ ಮನುಷ್ಯನು ಇದುವರೆಗೂ ನಾಲಿಗೆಯಿಂದ ರುಚಿನೋಡಿ ವಿಸ್ಕಿ ಪ್ರಕೃತಿಯ ಪ್ರಮಾಣ ಮತ್ತು ಶಕ್ತಿಯನ್ನು ಹೇಳುತ್ತಿರುವನು ಇವನು ಯಾವುದಾದರೂ ಹುಳಿ ಪದಾರ್ಥವನ್ನು ತಿಂದರೆ ಆ ಶಕ್ತಿ ಹೋಗುವುದಂತೆ!

೮ **ನಿಮ್ಮ ಕಾಫಿ ಮೊದಲೆಲ್ಲಿತ್ತು?**—ಕಾಫಿಯು ಈಗ ಇಟಲಿಯನ್ನರ ಕೈ ಕೆಳಗ ನಡೆಯುತ್ತಿರುವ ಅಬಿಸೀನಿಯಾದಲ್ಲಿ ಬೆಳೆಯಲಾಗಿತ್ತು ೧೬ ನೆಯ ಶತಮಾನದ ಆದಿಯಲ್ಲಿ ಅರೇಬಿಯಕ್ಕೆ ಬಂದಿತು ೧೬೦೦ರಲ್ಲಿ ಕಾಫಿಯು ಇಂಡಿಯಾ ಬ್ರಿಟನ್ನುಗಳಿಗೆ ಬಂತೆನ್ನಬಹುದು !

೯ **೧೩೦೦೦ ಮೈಲಿ ಸೈಕಲ್ ಸವಾರಿ**—ಜನ ನೋಡಿ ಎಂಬ ಒಬ್ಬ ಬೊಂಬಾಯಿನ ರೋನರ್ ಸೌತು ಲಂಡನ್ನನ್ನು ಈಗ ತನ್ನ ೧೩೦೦೦ ಮೈಲಿ ಸೈಕಲ್ ಸವಾರಿಯಾದನಂತರ ಸೇರಿರುವನಂತೆ !

೧೦ **ಪ್ರಪಂಚಕ್ಕೆ ದೊಡ್ಡ ಪುಸ್ತಕ ಭಂಡಾರ**—ಮಾಸ್ಕೊ (Moscow) ಎನ್ನಲ್ಲಿರುವ ಲೆನಿನ್ ಸ್ಟೇಟ್ ಲೈಬ್ರರಿಯಲ್ಲಿ 60 ಲಕ್ಷ ಪುಸ್ತಕಗಳಿವೆ ನಮ್ಮ ಮೈಸೂರು ವಿಶ್ವವಿದ್ಯಾನಿಲಯದ ಲೈಬ್ರರಿಯಲ್ಲಿ 25000 ಪುಸ್ತಕಗಳಿವೆ ಎಲ್ಲಿಂದೆಲ್ಲಿಗೆ!

ಪ್ರಾಣಿ ಪ್ರದರ್ಶನ

ಮೈಸೂರು ಪಿಂಜ್ರಾಪೋಲ್ ಸೊಸೈಟಿ ಮತ್ತು ಪ್ರಾಣಿದಯಾ ಸಂಘದ ಸಹಾಯಾರ್ಥವಾಗಿ ಕಳೆದ ಸೋಮವಾರ ರಾಜಧಾನಿಯಲ್ಲಿ ಪ್ರಾಣಿಪ್ರದರ್ಶನ ನಡೆಯಿತು ಸಾಯಂಕಾಲ ಶ್ರೀಮನ್ಮಹಾರಾಜರವರು ಅಧ್ಯಕ್ಷತೆ ವಹಿಸಿ ಬಹುಮಾನಗಳನ್ನು ಹಂಚಿದರು

ಯುವಕರ ಧ್ಯೇಯ

——

ಸಾಹುಕಾರ ಸುಬ್ಬರಾಮಶೆಟ್ಟರ ಭಾಷಣ

ಮೈಸೂರಿನಲ್ಲಿರುವ ಶ್ರೀ ಕನ್ನಿಕಾ ಪರಮೇಶ್ವರೀ ಸಹಾಯ ಸಂಘದಲ್ಲಿ ವೈಶ್ಯ ಯುವಜನ ಸಂಘದ ಆಶ್ರಯದಲ್ಲಿ ಬೆಂಗಳೂರಿನ ಪ್ರಸಿದ್ಧ ವರ್ತಕರಾದ ಮ|| ಸಾಹುಕಾರ ಸುಬ್ಬರಾಮ ಶೆಟ್ಟರವರು ಇದೇ ತಿಂಗಳು ೮ ನೇ ತಾರೀಖು ಸೋಮವಾರ ಸಾಯಂಕಾಲ ಒಂದು ಉಪಯೋಗವಾದ ಭಾಷಣ ಮಾಡಿದರು ಮೈಸೂರು ಸರ್ಕಾರದ ಸಹಾಯಕ ಕಾರ್ಯದರ್ಶಿಗಳಾದ ಮ|| ಡಿ ಸುಬ್ಬರಾಯಪ್ಪ ಬಿ ಎ, ಎಲ್ ಎಲ್ ರವರು ಅಧ್ಯಕ್ಷತೆ ವಹಿಸಿದ್ದರು

ವೈಶ್ಯ ಯುವಜನ ಸಂಘದ ಉಪಾಧ್ಯಕ್ಷರಾದ ಮ|| ಸಿ ಗೋಪಾಲಕೃಷ್ಣಶೆಟ್ಟಿ ಬಿ ಎ, ಬಿ ಎಲ್, ರವರು ಅಧ್ಯಕ್ಷರನ್ನೂ ಸುಬ್ಬರಾಮ ಶೆಟ್ಟರವರ ಪರಿಚಯವನ್ನು ಸಭೆಗೆ ಮಾಡಿದರು

ಸುಬ್ಬರಾಮ ಶೆಟ್ಟರವರು ಭಾಷಣ ಮಾಡುತ್ತಾ ಹೀಗೆಂದು ಹೇಳಿದರು —ಸರ್ಕಾರಿ ಉದ್ಯೋಗಗಳಿಗಾಗಿ ವಿದ್ಯಾಭ್ಯಾಸವನ್ನು ಮಾಡಕೂಡದು, ಸಂಸ್ಕೃತಿಯ ಅಭಿವೃದ್ಧಿಗಾಗಿಯೇ ಮಾಡಬೇಕು ಪ್ರೌಢವಿದ್ಯಾಭ್ಯಾಸವು ಹಣಗಾರನಿಗಾಗಲಿ ಬಡವನಿಗಾಗಲಿ ಅನುಕೂಲವೇ ಹೊರತು ಎಲ್ಲರೂ ಅದನ್ನು ಅನುಸರಿಸಬೇಕಾಗಿರುವುದಿಲ್ಲ ವಿದ್ಯಾರ್ಥಿಗಳು ಸರ್ಕಾರಿ ಉದ್ಯೋಗಗಳಿಗಾಯಿಬಿಟ್ಟು ನಿಲ್ಲದೆ, ವ್ಯಾಪಾರಕ್ಕೆ ಹಾಕಬೇಕು ನಮ್ಮ ಹೆಣ್ಣು ಮಕ್ಕಳಿಗೂ ಸರಿಯಾದ ಶಿಕ್ಷಣ ಕೊಡಬೇಕು ನಮ್ಮ ಮಾತೃ ಭಾಷೆಯಾದ ತೆಲುಗನ್ನು ಪುರಸ್ಕರಿಸಿರಿ, ಅಂದರೆ ಇತರ ಭಾಷೆಗಳನ್ನು ನಾಶ್ರ ಎಲ್ಲದರಿಂದ ಕಾಣಬೇಡಿ ನಮ್ಮಲ್ಲಿ ಅನೇಕರು ಜರ್ಮನಿ ಮೊದಲಾದ ದೇಶಗಳಿಗೆ ಹೋಗಿ ಅದರಿಂದ ವಿಶೇಷ ಪ್ರಯೋಜನ ಪಡೆದಿರುವ ಅಂಶವನ್ನು ನೀವೂ ಅನುಸರಿಸಲು ಯೋಗ್ಯವಾಗಿದೆ ನಾವೆಲ್ಲರೂ "ದೇಶ ಸೇವೆಯೇ ಈಶ ಸೇವೆ" ಎಂಬ ವಾಕ್ಯಧ್ಯೇಯವನ್ನರಿತು ಎಲ್ಲಾ ಕೆಲಸಗಳನ್ನು ದೇವನೊಡನೆ ಸಹಕರಿಸಿ ಕಲಸ ಮಾಡೋಣ "ಧರ್ಮೋ ಜಯತಿ" ಎಂಬ ಮೃತಸಂಜೀವಿಯನ್ನು ಸ್ಮೃತಿ ಪಥಕ್ಕೆ ತಂದು ಸಹಕರಿಸಿ ಕಾರ್ಯವನ್ನಸಗಿದಲ್ಲಿ ನಮ್ಮ ದೇಶವು ಯಶಸ್ವಿಯಾಗುವುದರಲ್ಲಿ ಸಂದೇಹವಿಲ್ಲ

ಸಣ್ಣ ಅಧಿಕಾರಿಗಳು

ಇನ್ನು ಮೇಲೆ ರವಿನ್ಯೂ ಕಮಿಷನರಿಗೆ ಸಟಲ್ ಮೆಂಟ್ ಮತ್ತು ಲ್ಯಾಂಡ್ ರಿಕಾರ್ಡ್ಸ್ ಕಮಿಷನರೆಂದು ಹೆಸರಿಡಲಾಗುವುದೆಂದು ಇದರ ಅಧೀನದಲ್ಲಿ ಇರಾಮ ಅಂದಾಜು ನೋಡಿಕೊಳ್ಳಲು ಡಿಪ್ಯೂಟಿ ಕಮಿಷನರ್ ದರ್ಜೆಯ ಒಬ್ಬ ಅಧಿಕಾರಿಯನ್ನು ನೇಮಿಸಿ ಅವರಿಗೆ ಲ್ಯಾಂಡ್ ರಿಕಾರ್ಡ್ಸ್, ಸರ್ವೆ ಮತ್ತು ಸಟಲ್‌ಮೆಂಟ್‌ಗಳ ಸೂಪರಿಂಟೆಂಡೆಂಟರೆಂದು ಹೆಸರಿಡಲಾಗುವುದೆಂದೂ ಸರ್ಕಾರದ ಅಪ್ಪಣೆಯಾಗಿದೆ

ಮೈಸೂರು ಡಿಸ್ಟ್ರಿಕ್ಟ್ ಬೋರ್ಡ್ ಆಫೀಸು.

ಮೈಸೂರು ಡಿಸ್ಟ್ರಿಕ್ಟ್ ಬೋರ್ಡಿಗೆ ಇದುವರೆಗೆ ಒಂದು ಸ್ವತಂತ್ರವಾದ ಕಟ್ಟಡವಿರಲಿಲ್ಲ. ಅದರ ಕಚೇರಿಯು ಒಂದು ಭಾಗದಲ್ಲಿ ಇರುತ್ತಿತ್ತು. ಈ ಕೊರತೆಯನ್ನು ನಿವಾರಿಸಲು ಈಗ ಒಂದು ಹೊಸ ಕಟ್ಟಡವನ್ನು ಕಟ್ಟಿಸಲು ಏರ್ಪಾಡಾಗಿದೆ ಇದಕ್ಕೆ 60,000 ರೂ ಖರ್ಚಿನ ಅಂದಾಜು ಮಾಡಲ್ಪಟ್ಟಿದೆ ಮೈಸೂರು ವಾಣಿವಿಲಾಸ ಆಸ್ಪತ್ರೆಯ ಆವರಣದ ಒಂದು ಭಾಗದಲ್ಲಿ ಕಟ್ಟಡವು ಕಟ್ಟಲ್ಪಡುತ್ತದೆ. ಶ್ರೀಮನ್ಮಹಾರಾಜರವರು ಈ ದಿನ ಸದರಿ ಕಟ್ಟಡದ ಶಂಕುಸ್ಥಾಪನೆಯನ್ನು ಮಾಡುವರು. ಇದಕ್ಕಾಗಿ ಈ ದಿನ ಸಾಯಂಕಾಲ ಒಂದು ಸಮಾರಂಭವು ಏರ್ಪಾಡಾಗಿದೆ

ದಿವಂಗತ ಅಬ್ಬಾಸ್ ತಯ್ಯಬ್ಜಿಯವರು.

ಗುಜರಾತಿನ ವೃದ್ಧಪಿತಾಮಹರೆನಿಸಿದ್ದ ಅಬ್ಬಾಸ್ ತಯ್ಯಬ್ಜಿಯವರು ಕಳೆದವಾರ ಸ್ವರ್ಗಸ್ಥರಾದರು. ಇವರು ಪ್ರಧಾನ ನ್ಯಾಯಾಧೀಶರಾಗಿದ್ದರು. ಕೇವಲ ವೃದ್ಧರು. ಉಜ್ವಲ ದೇಶಾಭಿಮಾನಿಗಳು ಮಹಾತ್ಮರ ಪ್ರಿಯಮಿತ್ರರು ಹಿಂದೂ ಮುಸಲ್ಮಾನ ಸೌಹಾರ್ದವನ್ನು ವಿಶೇಷವಾಗಿ ವೃದ್ಧಿಪಡಿಸಿದರು. ಉಪ್ಪಿನ ಸತ್ಯಾಗ್ರಹದ ಸಮಯದಲ್ಲಿ ತಾವೂ ಸಹ ಕಾಯಕ್ಲೇಶಗಳನ್ನು ಮರೆತು ಕಾನೂನು ಭಂಗ ಮಾಡಿ ಕಾರಾಗೃಹವಾಸವನ್ನನುಭವಿಸಿದರು. ಇವರ ಮರಣದಿಂದ ದೇಶಕ್ಕೆ ಅಪಾರವಾದ ನಷ್ಟವುಂಟಾಗಿದೆ ಭಗವಂತನು ಇವರ ಆತ್ಮಕ್ಕೆ ಶಾಂತಿಯನ್ನೀಯಲಿ

ವಿಮಾನದಲ್ಲಿ ಸಿನಿಮಾ

ಇನ್ನು ಮುಂದೆ ವಿಮಾನಗಳಲ್ಲೂ ಟಾಕಿ ಚಲನಚಿತ್ರ ಮಂದಿರಗಳನ್ನು ಏರ್ಪಡಿಸುವುದು ಸಾಧ್ಯವೆಂದು ಹೇಳಲ್ಪಟ್ಟಿದೆ ಇದರ ಪ್ರದರ್ಶನವೊಂದನ್ನು ಲಂಡನ್ನಿನಲ್ಲಿ ನಡೆಸಲಾಯಿತು.

ಖೈದಿಯು ಅಧಿಕಾರಿಯು!

ಬರೋಜ್ ಎಂಬ ಹಳ್ಳಿಯಲ್ಲಿ ಕೋಲಿ ಜಾತಿಗೆ ಸೇರಿದ ಹೆಂಗುಸೊಬ್ಬಳ ಸಂಗಡ ಅತ್ಯಾಚಾರಮಾಡಿ ಅವಳ ಮಾನಹಾನಿಯನ್ನು ಮಾಡಿದುದರ ಪರಿಣಾಮವಾಗಿ ಶಂಕರ್‌ಲಾಲ್ ಎಂಬುವನಿಗೆ 1932 ನೇ ಇಸವಿಯಲ್ಲಿ 8 ವರ್ಷ ಕಠಿಣಶಿಕ್ಷೆ ವಿಧಿಸಿ ಜೈಲಿನಲ್ಲಿ ಕೂಡಿದರು. ಶಿಕ್ಷೆಯ ಅವಧಿಯಲ್ಲಿ ಅರ್ಧಕಾಲ ಕಳೆದನಂತರ ಅಪರಾಧಿಯ ಗುಣಗಳನ್ನೂ ಮತ್ತು ಅವನ ಒಳ್ಳೆಯ ನಡತೆಗಳನ್ನೂ ನೋಡಿ ಅಧಿಕಾರಿಗಳು ಖೈದಿಯನ್ನು ಖುಲಾಸೆ ಮಾಡಿದರು ಆ ಮೇಲೆ ಆತನು ಬರೋಡಾ ಸಂಸ್ಥಾನದ ದಿವಾನರಿಗೆ ಕೆಲಸಕ್ಕೆ ಅರ್ಜಿಹಾಕಿಕೊಂಡನು. 50 ರೂಪಾಯಿ ತಲಬಿನ ಕೆಲಸವೊಂದು ದೊರೆಯಿತು. ಅದೇ ಖೈದಿಯು ಈಗ ಜೈಲಿನ ಅಧಿಕಾರಿಯಾಗಿದ್ದಾನೆ!

ಹರಿಜನ ಸಮಸ್ಯೆ.

ಹರಿಜನರ ಉದ್ಧಾರವನ್ನು ಕುರಿತು ಪರ್ಯಾಲೋಚನೆಗಳನ್ನು ನಡೆಸಲು ಕೆಂಗೇರಿ ಗುರುಕುಲದಲ್ಲಿ ಕಳೆದವಾರ ಕಾರ್ಯಕರ್ತರ ದೊಡ್ಡ ಸಮ್ಮೇಳನವನ್ನು ಏರ್ಪಡಿಸಿದ್ದರು. ಮಹಾತ್ಮ ಗಾಂಧಿಯವರು ಅದರ ಅಧ್ಯಕ್ಷತೆಯನ್ನು ವಹಿಸಿದ್ದರು. ಮಹಾತ್ಮರ ಶಿಷ್ಯರಾದ ಸರ್ದಾರ್ ವಲ್ಲಭಭಾಯಿ ಪಟೇಲರೂ, ಮಹಾದೇವ ದೇಸಾಯಿಯವರೂ, ಜಿ. ಡಿ. ಬಿರ್ಲಾರವರೂ, ಇತರರೂ ಸೇರಿದ್ದರು. ಹರಿಜನರ ಸೇವೆಯಲ್ಲಿ ಸಂಪ್ರಾಪ್ತವಾಗುವ ತೊಡಕುಗಳನ್ನು ಕುರಿತು ಮಹಾತ್ಮರು ಭಾಷಣ ಮಾಡಿದರು. ಅಸ್ಪೃಶ್ಯತೆಯೆಂಬ ಕಳಂಕವನ್ನು ನಿವಾರಿಸಬೇಕೆಂದು ಸೂಚಿಸಿದರು ದೇವಸ್ಥಾನಗಳಿಗೆ ಹರಿಜನರನ್ನು ಬಿಡುವಂತೆ ಏರ್ಪಡಿಸಬೇಕೆಂದು ಅಭಿಪ್ರಾಯಪಟ್ಟರು ಇದರಿಂದ ಸವರ್ಣೀಯರ ಹೃದಯವು ವಿಶಾಲವಾಗುವುದು. ಹರಿಜನರ ಮನಸ್ಸು ಪರಿಶುದ್ಧವಾಗುವುದು. ಹರಿಜನರ ಪ್ರವೇಶವಿಲ್ಲದ ಸ್ಥಳಗಳಲ್ಲಿ ಹರಿಯು ಇರುವುದಿಲ್ಲ ಎಂಬಿವೇ ಮುಂತಾದ ಅಭಿಪ್ರಾಯಗಳನ್ನು ತಿಳಿಸಿದರು. ಅಸ್ಪೃಶ್ಯರ ನಿವಾರಣೆಗೆ ಸಂಬಂಧಪಟ್ಟ ಅನೇಕ ಅಂಶಗಳು ಪರ್ಯಾಲೋಚಿಸಲ್ಪಟ್ಟವು.

ನಂಜನಗೂಡಿನಲ್ಲಿ ಗಿರಿಜಾ ಕಲ್ಯಾಣ

ನಂಜನಗೂಡು ಶ್ರೀ ಶ್ರೀಕಂಠೇಶ್ವರ ಸ್ವಾಮಿಯವರ ದೇವಸ್ಥಾನದಲ್ಲಿ 1936ನೇ ಜುಲೈ ಮಾಹೆಯಲ್ಲಿ ನಡೆಯತಕ್ಕ ಗಿರಿಜಾ ಕಲ್ಯಾಣಮಹೋತ್ಸವದ ತಪಶೀಲು ಪಟ್ಟಿ:

ತಾ॥ 7-7-1936 ನೇ ಮಂಗಳವಾರ ರಾತ್ರಿ ಗಿರಿಜಾಕಲ್ಯಾಣ ಪ್ರಯುಕ್ತ ವರಪೂಜಾಮಹೋತ್ಸವ, ತಾ॥ 8 ನೇ ಬುಧವಾರ ಹಗಲು ನಾಂದೀ, ಗೃಹಯಜ್ಞ, ಸಂತರ್ಪಣೆ. ಮಧ್ಯಾಹ್ನ ಕಾಶೀಯಾತ್ರೆ ರಾತ್ರಿ 9 ಗಂಟೆಯ ಮೇಲೆ ಧಾರಾಮುಹೂರ್ತ. ತಾ॥ 9 ನೇ ಗುರುವಾರ ಕಲ್ಯಾಣೋತ್ಸವದ ಎರಡನೇ ದಿವಸ. ತಾ॥ 10 ನೇ ಶುಕ್ರವಾರ ಕಲ್ಯಾಣೋತ್ಸವದ ಮೂರನೇ ದಿವಸ ಪಾಕಿನಿ. ತಾ॥ 11 ನೇ ಶನಿವಾರ ನಾಕಬಲಿ, ಗೃಹಪ್ರವೇಶಮಹೋತ್ಸವ ತಾ॥ 12 ನೇ ಭಾನುವಾರ ಹಗಲು ತೀರ್ಥಸ್ನಾನ, ರಾತ್ರಿ ತೆಪ್ಪೋತ್ಸವ, ಅನಂತರ ಪಲ್ಲಕ್ಕೀ ಉತ್ಸವ

ಆನೆ ಮತ್ತು ಮನುಷ್ಯ—ಇವರ ಹೋಲಿಕೆ

ವಾಷಿಂಗ್‌ಟನ್ನಿನ ಡಾಕ್ಟರೊಬ್ಬರು ಈ ರೀತಿ ಹೇಳುತ್ತಾರೆ " ಆನೆಯ ದೇಹದ ಸರಾಸರಿ ಶಾಖವು ಮನುಷ್ಯನ ದೇಹದ ಶಾಖಕ್ಕಿಂತ ಎರಡು ಡಿಗ್ರಿ ಕಡಿಮೆಯಾಗಿದೆ; ಅದೂ ಅಲ್ಲದೆ, ಆನೆಯ ಹೃದಯವು ನಿಮಿಷಕ್ಕೆ 30 ಬಾರಿ ಮಿಡಿಯುತ್ತದೆ. ಆನೆಯು ಈ ವಿಷಯದಲ್ಲಿ ಎಲ್ಲಾ ಪ್ರಾಣಿಗಳಿಗಿಂತಲೂ ವಿಜಾತೀಯವಾಗಿದೆ.

ಹಿಂದೀ ಸಮಾರಂಭ

ಕಳೆದ ಶುಕ್ರವಾರ ಬೆಂಗಳೂರು ಪುರಭವನದಲ್ಲಿ ಒಂದು ಭಾರಿ ಹಿಂದೀ ಸಮಾರಂಭೋತ್ಸವವು ಜರಗಿತು. ಮಹಾತ್ಮ ಗಾಂಧಿಯವರು ಅಧ್ಯಕ್ಷರಾಗಿದ್ದರು. ಹಿಂದೀ ಪರೀಕ್ಷೆಯಲ್ಲಿ ಉತ್ತೀರ್ಣರಾದವರಿಗೆ ಪ್ರಶಸ್ತಿಗಳು ಕೊಡಲ್ಪಟ್ಟವು. ಸಾವಿರಾರು ಜನ ಮಾನ್ಯ ಮಹಿಳೆಯರೂ ಮಹನೀಯರೂ ನೆರೆದಿದ್ದರು. ಸರ್ ಸಿ. ವಿ. ರಾಮರವರ ಧರ್ಮಪತ್ನಿ ಶ್ರೀಮತಿ ಲೋಕಸುಂದರಿಯವರು ಹಿಂದಿಯಲ್ಲಿ ಸ್ವಾಗತ ಪತ್ರವನ್ನೋದಿ ಮಹಾತ್ಮರಿಗೆ ಅರ್ಪಿಸಿದರು ಗಾಂಧಿಜಿಯವರು ಅದಕ್ಕೆ ಉತ್ತರವೀಯುತ್ತ ರಾಷ್ಟ್ರ ಭಾಷೆಯ ಪ್ರಚಾರಕ್ಕಾಗಿ ನಮ್ಮವರು ಮಾಡುತ್ತಿರುವ ಪ್ರಯತ್ನಗಳನ್ನು ಕೊಂಡಾಡಿದರು. ಅಖಿಲ ಭಾರತದ ವ್ಯಾಪ್ತಿಯನ್ನು ಇಟ್ಟುಕೊಳ್ಳಲು ಭಾರತೀಯರೆಲ್ಲರೂ ದೇಶಭಾಷೆಯನ್ನು ಕಲಿಯಬೇಕೆಂದು ಹೇಳಿದರು. ಕನ್ನಡ ಭಾಷೆ ಅಥವಾ ಮತ್ಯಾವ ದೇಶದ ಭಾಷೆಯ ಏಳಿಗೆಗೂ ಹಿಂದೀ ಭಾಷೆಯು ಅಡ್ಡಿ ಪಡಿಸಲಾರದೆಂದು ಸ್ಪಷ್ಟಪಡಿಸಿದರು.

ಕ್ಷೌರದಲ್ಲೂ ನಿಪುಣತೆ.

ಪಂಜಾಬು ವಿಶ್ವವಿದ್ಯಾಲಯದ ಪದವೀಧರನಾದ ಡಬ್ಲ್ಯು. ಡಿ. ವಿಕ್ಟರ್ ಎಂಬುವನು ಇಂಗ್ಲೆಂಡ್, ಫ್ರಾನ್ಸ್ ಮತ್ತು ಇಟಲಿ ಮೊದಲಾದ ದೇಶಗಳಲ್ಲಿ ಕ್ಷೌರ ಕಾರ್ಯದಲ್ಲಿ ಪಂಡಿತನಾಗಬೇಕೆಂದು ಹೊರಟಿರುತ್ತಾನೆ. ಇವನು ಹಿಂದೆ ಅಮೃತಸರ ಮತ್ತು ಲಾಹೋರಿನಲ್ಲಿ ಕ್ಷೌರಕನಾಗಿದ್ದನು. ಮುಂದೆ ಪಾಶ್ಚಿಮಾತ್ಯ ದೇಶಗಳಲ್ಲೆಲ್ಲಾ ಸಂಚರಿಸಿ, ಕ್ಷೌರದ ಕೆಲಸದಲ್ಲಿ ಪ್ರವೀಣನಾಗಿ, ಪಂಜಾಬಿನಲ್ಲೆಲ್ಲಾ ಕ್ಷೌರದಂಗಡಿಗಳನ್ನು ಸ್ಥಾಪಿಸಬೇಕೆಂಬುದು ಇವನ ಆಕಾಂಕ್ಷೆಯಾಗಿದೆ.

ಎಂಟು ಕೈಗಳ ವಿಗ್ರಹ

ಅಮೃತಶಿಲೆಯಲ್ಲಿ ಕೆತ್ತಲ್ಪಟ್ಟ, ಎಂಟು ಕೈಗಳುಳ್ಳ, ದೇವತೆಯ ವಿಗ್ರಹವೊಂದು ಬೇಗಂಗಂಜ್ ಎಂಬಲ್ಲಿ ಸಿಕ್ಕಿದೆ ಈ ವಿಗ್ರಹವು ಒಂದು ಹಳೆ ಕೆರೆಯನ್ನು ದುರಸ್ತು ಮಾಡುತ್ತಿದ್ದಾಗ ಸಿಕ್ಕಿತೆಂದು ಹೇಳಲಾಗಿದೆ.

ಮಹಾತ್ಮರ ಪ್ರಯಾಣ

ಕಳೆದ ಮೂರು ವಾರಗಳಿಂದಲೂ ನಂದಿಬೆಟ್ಟದಲ್ಲಿ ಮಹಾತ್ಮ ಗಾಂಧಿಯವರು ವಿಶ್ರಾಂತಿ ತೆಗೆದುಕೊಳ್ಳುತ್ತಿದ್ದರು ಅವರದೇಹಾರೋಗ್ಯವು ಉತ್ತಮಗೊಂಡಿತು. ಮೂರು ಪೌಂಡು ತೂಕ ಹೆಚ್ಚಿತು. ಅನೇಕ ಕಾರ್ಯಕ್ರಮಗಳಲ್ಲಿ ಅವರು ಭಾಗಿಗಳಾಗಿದ್ದರು. ಅವರೊಡನೆ ಬಂದಿದ್ದ ಸರದಾರ್ ವಲ್ಲಭಭಾಯಿ ಪಟೇಲ್, ಮಹದೇವ ದೇಸಾಯಿ, ಮಣಿಬೇನ್ ಪಟೇಲ್, ಕಸ್ತೂರಿಬಾಯಿ ಗಾಂಧಿ, ಇವರುಗಳೂ ವಿಶ್ರಾಂತಿಯನ್ನು ತೆಗೆದುಕೊಂಡರು. ಎಲ್ಲರೂ ಕಳೆದ ಶುಕ್ರವಾರ ಬೆಂಗಳೂರಿನಿಂದ ಮದರಾಸಿನ ಮೂಲಕ ವಾರ್ಧಾಕ್ಕೆ ತೆರಳಿದರು.

ಚೀನಾದಲ್ಲಿ ಘೋರ ಕ್ಷಾ

ಮಕ್ಕಳು ಮರಿಗಳ ಮಾರಾಟ.

ಒಂದು ಕಾಲದಲ್ಲಿ ಚೀನದ ಚಿನ್ನದ ಕಣಜವೆಂದು ಹೆಸರುವಾಸಿಯಾಗಿದ್ದ ... ವಾನ್ ಪ್ರಾಂತ್ಯವು ಈಗ ಘೋರ ... ಮಕ್ಕೆ ತುತ್ತಾಗಿದೆ. ಇದು ನಾಂಗ್ಕಿ... ಗರದಿಂದ ಉತ್ತರಕ್ಕೆ ಒಂದು ನೂ... ಮೈಲಿ ದೂರದಲ್ಲಿ ಯಾಂಗ್ಟಿಸಿ ನದಿ... ವಡದಲ್ಲಿ ಇರುತ್ತದೆ ಸುಮಾರು ಒಂದು... ವರೆ ಕೋಟಿ ಪ್ರಜೆಗಳು ಅನ್ನವಸ್ತ್ರ... ಇಲ್ಲದೆ ಪರಿತಪಿಸುತ್ತಿದ್ದಾರೆ ಜನರು ನಿ... ಶರಾಗಿದ್ದಾರೆ. ಹಲವರು ಕೇವಲ ಒಂ... ರೂಪಾಯಿನ ಬೆಲೆಯ ಅಕ್ಕಿಗಾಗಿ ತಮ್ಮ... ಹೆಂಡಿರನ್ನು ಮಾರುತ್ತಿದ್ದಾರೆ ತಮ... ಹೆಣ್ಣುಮಕ್ಕಳನ್ನೂ ಸಹ ಹೀಗೆ ... ಬೆಲೆಗೆ ಮಾರುತ್ತಿರುವರು. ಇನ್ನು ಕೆ... ವರು ಲೂಟಿಕೋರರಾಗಿ ಪರಿಣಮಿ... ಗುಂಪು ಕಟ್ಟಿ ಒಂಟಿಯಾಗಿರುವ ಗ್ರಾಮ... ಗಳ ಮೇಲೆ ಬಿದ್ದು ಐಶ್ವರ್ಯವಂತರನ್ನು ಕೊಳ್ಳೆ ಹೊಡೆಯುತ್ತಿದ್ದಾರೆ. ಕಳೆದ ನಾಲ್ಕು ವರ್ಷಗಳಿಂದ ಇದ್ದ ಈ ಕ್ಷಾಮ... ಈಗ ಉಲ್ಬಣಿಸಿದೆ.

೧೮ ಕೆಲಸಕ್ಕೆ ಸಾವಿರ ಅರ್ಜಿ

ಸಂಯುಕ್ತ ಪ್ರಾಂತ್ಯದಲ್ಲಿ ಆಬ್ಕಾರಿ ಸ... ಕಾರದ ಕಾರ್ಯದರ್ಶಿಯ ಕಚೇರಿ ಗುಮಾಸ್ತೆ ಕೆಲಸಕ್ಕೆ ಪರೀಕ್ಷೆಯೊಂದು ನಡೆಯಿತು ಸುಮಾರು ಸಾವಿರ ಮಂದಿ ಪರೀಕ್ಷೆಗೆ ... ಜರಿದ್ದರು. ಅವರಲ್ಲಿ 18 ಜನರನ್ನು ಮಾತ್ರ ಕೆಲಸಕ್ಕೆ ತೆಗೆದುಕೊಳ್ಳಲಾಗಿ...

ಇಟಲಿಗೆ ಇಂಡಿಯದ ಮೇಲೂ ಕಣ್ಣು

ಇಟಲಿಯವರು ಇಂಡಿಯದ ಮೇಲ... ದೃಷ್ಟಿಯನ್ನಿಟ್ಟಿರುವರೆಂದು ಅಡೀಸ್ ಅ... ಬಾಬದಲ್ಲಿ ಒಬ್ಬ ಇಟಲಿ ಅಧಿಕಾರಿ... ಹೆಮ್ಮೆಯಿಂದ ಹೇಳಿದನು ಹಿಂದೂಸ್ಥಾನದಲ್ಲೂ ಶೀಘ್ರದಲ್ಲಿಯೇ ನಿಮ್ಮ ಮೇ... ರಾಜ್ಯಭಾರವನ್ನು ಚಲಾಯಿಸುತ್ತೇ... ಎಂದು ಅಲ್ಲಿನ ಭಾರತೀಯರಿಗೆ ಹೇಳಿ ಇಟಲಿಯವರಿಗೆ ಸಲಾಂ ಮಾಡುವಂತೆ ಕೋರಿದನು. ಅವರು ಉದಾಸೀನದಿಂದ ತಿರಸ್ಕರಿಸಿದರು

ಹಿಟ್ಲರನ ಯುದ್ಧ ಯೋಜನೆ

ಹಿಟ್ಲರನಿಗೆ ಯುದ್ಧದ ಮೂರು ಯೋಜನೆಗಳಿವೆ ಅಗಾಧವಾದ ಸೇನಾಬಲವೂ ವಿಪರೀತವಾದ ವಿಮಾನಬಲವೂ ... ವಿಷವಾಯು ಮತ್ತು ಇತರ ಸಾಮಗ್ರಿಗಳೊ... ಡನೆಯೂ ಸನ್ನದ್ಧವಾಗಿ, ಫ್ರಾನ್ಸಿನ ... ಕಟ್ಟಿನ ಕೋಟೆಗಳನ್ನು ಭೇದಿಸುವುದು ಅಥವಾ, ಎರಡನೆಯದಾಗಿ, ಲಿಥುವೇನಿ... ಯಾವನ್ನು ಮೊದಲು ಮುತ್ತಿ, ರಷ್ಯಾ ಸಮೀಪದಲ್ಲಿ ರಾಜ್ಯವನ್ನು ಮಾಡುವುದು ಅಥವಾ, ಮೂರನೆಯದಾಗಿ, ಜೆಕೋಸ್ಲೊವೇಕಿಯಾವನ್ನು ಜಯಿಸಿ, ಜರ್ಮನಿಯ ಸೇನಾಬಲವು ಯೂಕ್ರೈನ ಮೇಲೆ ಬೀಳು... ವುದು. ಜರ್ಮನಿಯ ಸೈನ್ಯವು ಸಿದ್ಧವಾಗಿದೆ. ಯುದ್ಧತಂತ್ರಗಳು ಗೋಪ್ಯವಾಗಿಡಲ್ಪಟ್ಟಿವೆ. ಹತ್ತು ಲಕ್ಷ ಸೈನಿಕರೂ, 7,500 ವಿಮಾನಗಳೂ ಸಿದ್ಧವಾಗಿವೆ

ಸಾಧ್ವಿ

೧೫-೬-೩೬ ನೇ ಸೋಮವಾರ

ನಿಸ್ಸಾರವಾದ ಅಧಿವೇಶನ.

ಈ ಸಾರಿಯ ಪ್ರಜಾಪ್ರತಿನಿಧಿ ಸಭೆಯ ಅಧಿವೇಶನವು ಕೇವಲ ನಿಸ್ಸಾರವಾಗಿತ್ತು. ವಿಶೇಷವಾದ ಕೋಲಾಹಲಗಳಾಗಲೀ, ಉತ್ಸಾಹವಾಗಲಿ ಕಾಣಬರಲಿಲ್ಲ. ಕೇವಲ ಕ್ಲುಪ್ತವಾದ ಕಾರ್ಯಕ್ರಮಗಳು ಮಾಮೂಲು ಮೇರೆಗೆ ನಡೆದವು. ಪದ್ಧತಿಪ್ರಕಾರ ದಿವಾನರು ಭಾಷಣ ಮಾಡಿದರು. ಸಂಸ್ಥಾನದ ಹಣಕಾಸಿನ ಸ್ಥಿತಿಗತಿಗಳನ್ನು ನಿರೂಪಿಸಿದರು. ಎಲ್ಲವೂ ತೃಪ್ತಿಕರವಾಗಿದೆಯೆಂದು ಸಂತೋಷಪಟ್ಟರು. ಸದಸ್ಯರೂ ಅದನ್ನು ಅನುಮೋದಿಸಿ ದಿವಾನರನ್ನು ಅಭಿನಂದಿಸಿದರು.

ಇದಲ್ಲದೆ ಪ್ರಶ್ನೋತ್ತರಗಳೂ, ಮಸೂದೆಗಳೂ, ನಿರ್ಣಯಗಳೂ ಎಂದಿನಂತೆ ಚರ್ಚಿಸಲ್ಪಟ್ಟು ತೀರ್ಮಾನವಾದವು. ಸಭಿಕರಲ್ಲಿ ಕಾರ್ಯಕ್ರಮದ ಬಗ್ಗೆ ಆಸ್ಥೆಯೂ ಚಟುವಟಿಕೆಯೂ ಕಾಣಬರುತ್ತಿರಲಿಲ್ಲ. ಎಲ್ಲಿ ನೋಡಿದರೂ ನಿರುತ್ಸಾಹ, ಉದಾಸೀನತೆಯೇ ಕಾಣುತ್ತಿತ್ತು. ಅದಕ್ಕೆ ತಕ್ಕಂತೆ ಯಾವಾಗಲೂ ಅರ್ಧಕ್ಕಿಂತ ಹೆಚ್ಚು ಜನ ಸದಸ್ಯರು ಹೊರಗಡೆಯೇ ಓಡಾಡುತ್ತಿದ್ದರು.

ಕಡೆಯಸಲ ಹೋದಸಾರಿಯಂತೆ ಯಾವುದಾದರೂ ಕೋಮುವಾರು ಪ್ರಶ್ನೆಯಾದರೂ ಇದ್ದಿದ್ದರೆ ಹೆಚ್ಚು ಜೀವಕಳೆಯು ಇರುತ್ತಿತ್ತೋ ಏನೋ! ಬ್ರಾಹ್ಮಣೇತರ ಕೌನ್ಸಿಲರುಗಳು ಬೇಕೆಂಬ ವಿಷಯದಲ್ಲಿ ದೊಡ್ಡ ಕೋಲಾಹಲವು ಕಳೆದ ಅಧಿವೇಶನದಲ್ಲಿ ಎದ್ದಿತ್ತು. ಈ ವಿಷಯದಲ್ಲಿ ಅಧಿವೇಶನದ ಹೊರಗಡೆಯಲ್ಲಿಯೂ ಚಳವಳಿ ನಡೆಯಿತು. ಆದರೆ ಅದು ಫಲಕಾರಿಯಾಗಲಿಲ್ಲ. ಶ್ಯಾನುಭೋಗರ ಹಕ್ಕುದಾರಿಯ ವಿಷಯವಾಗಿ ವಿಶೇಷ ಚರ್ಚೆಯಾಯಿತು. ಈ ಸಾರಿ ಅಂತಹ ಪ್ರಶ್ನೆಗಳಾವುವೂ ಇಲ್ಲ. ಮತ್ತು ವಿಶೇಷ ಚರ್ಚೆಯೇ ಇಲ್ಲದೆ ಒಂದೇ ದಿನದಲ್ಲಿ ನಾಲ್ಕಾರು ಮಸೂದೆಗಳು ಅಂಗೀಕರಿಸಲ್ಪಟ್ಟವು.

ಸದಸ್ಯರುಗಳು ಮಾಡಿದ ಟೀಕೆಗಳಿಗೆ ಸರ್ಕಾರದವರು ಪದ್ಧತಿ ಮೇರೆ 'ನೋಡೋಣ, ಆಗಲಿ, ನೋಟ್ ಮಾಡಿಕೊಂಡಿದ್ದೇವೆ" ಎಂಬುದಾಗಿ ಉತ್ತರ ಕೊಡುತ್ತಿದ್ದರು. ಅವಸರದ ಠರಾವಿನ ಚರ್ಚೆಗೆ ಅವಕಾಶ ದೊರೆಯಲಿಲ್ಲ.

ಪ್ರಜಾಪ್ರತಿನಿಧಿ ಸಭೆ ಮತ್ತು ನ್ಯಾಯವಿಧಾಯಕ ಸಭೆಗಳ ರಚನೆಗೆ ಸಂಬಂಧಪಟ್ಟ ಕೆಲವು ಬದಲಾವಣೆಗಳ ವಿಷಯದಲ್ಲಿ ವಿಶೇಷ ಚರ್ಚೆಯಾಯಿತು. ಒಂದು ಸಭೆಯಲ್ಲಿ ಸದಸ್ಯರಾಗಿರುವವರು ಮತ್ತೊಂದರಲ್ಲಿ ಇರಕೂಡದೆಂಬುದನ್ನು ಎಲ್ಲರೂ ಖಂಡಿಸಿದರು. ಈ ವಿಷಯದಲ್ಲಿ ಸರ್ಕಾರದವರು ಕೊಟ್ಟ ಉತ್ತರವು ಸಮರ್ಪಕವಾಗಿರಲಿಲ್ಲ.

ದಿವಾನರು ಮುಕ್ತಾಯ ಭಾಷಣದಲ್ಲಿ ಗ್ರಾಮಾಭಿವೃದ್ಧಿ ಕಾರ್ಯಕ್ಕಾಗಿ ಕೆಲವು ಸಾವಿರ ರೂಪಾಯಿಗಳನ್ನು ಹೆಚ್ಚಾಗಿ ಮಂಜೂರು ಮಾಡುವುದಾಗಿ ತಿಳಿಸಿದರು. ಅಳುವವರ ಕಣ್ಣು ಒರಸಿದಂತಾಯಿತು. ಇಷ್ಟಕ್ಕೆ ಹಲವು ಸದಸ್ಯರು ಸಂತುಷ್ಟರಾದರು. ಇಲ್ಲಿಗೆ ಬಜೆಟ್ ಅಧಿವೇಶನವು ಮುಗಿಯಿತು.

ವಿಮಾ ವಾಣಿಜ್ಯ

ಬೆಂಗಳೂರಿನಲ್ಲಿ ಪ್ರಕಟವಾಗುವ 'ವಿಮಾ ವಾಣಿಜ್ಯ' ಎಂಬ ಮಾಸಪತ್ರಿಕೆಯ ಸುಪ್ರಸಿದ್ಧ ಸಂಪಾದಕರೂ ಮತ್ತು ಸ್ಥಾಪಕರೂ ಆದ ಮ|| ಜೆ ವಿ ದೊಡ್ಡವೀರಪ್ಪನವರು ಶ್ರೀಮನ್ ಮಹಾರಾಜರವರ ವರ್ಧಂತಿ ಪ್ರಯುಕ್ತ ಹೊರಡಿಸಿರುವ 'ವಿಮಾ ವಾಣಿಜ್ಯ'ದ ವಿಶೇಷ ಸಂಚಿಕೆಯೊಂದನ್ನು ಸಾದರ ಪೂರ್ವಕ ಸ್ವೀಕರಿಸಿದ್ದೇವೆ.

ಈ ವಿಶೇಷ ಸಂಚಿಕೆಗೆ ಸರ್ ಎಂ ವಿಶ್ವೇಶ್ವರಯ್ಯನವರಿಂದಲೂ, ಸರ್ ಮಿರ್ಜಾರವರಿಂದಲೂ, ಸರ್ ಸಿ ವಿ ರಾಮನ್‌ರವರಿಂದಲೂ, ಸರ್ ಕೆ ಪಿ ಪುಟ್ಟಣ್ಣಚೆಟ್ಟಿಯವರಿಂದಲೂ ಮತ್ತು ಇನ್ನೂ ಅನೇಕ ಮಹನೀಯರುಗಳಿಂದಲೂ ಶುಭ ಸಂದೇಶಗಳು ಬಂದಿರುತ್ತವೆ.

ಉದಾತ್ತ ಧ್ಯೇಯಗಳನ್ನೊಳಗೊಂಡ ಅನೇಕ ವಿದ್ವಾಂಸರು, ವಾಗ್ಮಿಗಳ ಮತ್ತು ರಾಜಕಾರ್ಯ ಚತುರರ ವಿಮಾ, ವಾಣಿಜ್ಯ, ಮತ್ತು ಬ್ಯಾಂಕಿಂಗ್ ಮೊದಲಾದ ಹಲವು ವಿಷಯಗಳಿಂದ ಕೂಡಿದ ಪ್ರಸಿದ್ಧ ಲೇಖನಗಳಿವೆ. ಸರ್ ಎಂ ವಿಶ್ವೇಶ್ವರಯ್ಯನವರು, ಪಂಡಿತ ತಾರಾನಾಥರೂ, ಶ್ರೀ ಸಿ ನರಸಿಂಹಮೂರ್ತಿಯವರೂ, ಮತ್ತು ಇನ್ನೂ ಅನೇಕರು ಇಂದಿನ ಭರತಖಂಡಕ್ಕೆ ಆರ್ಥಿಕ ಸಂಬಂಧವಾದ ಹೊಸ ವಿಚಾರ—ವಿಮರ್ಶೆ ಸಮಸ್ಯೆಗಳನ್ನು ತೋರುವ ಶ್ಲಾಘನೀಯವಾದ ಲೇಖನಗಳನ್ನು ಈ ಸಂಚಿಕೆಗೆ ಕಳುಹಿಸಿದ್ದಾರೆ.

ಅನೇಕ ದೊಡ್ಡ ಮನುಷ್ಯರುಗಳ ಭಾವಚಿತ್ರಗಳಿಂದಲೂ ಮತ್ತು ೧೬ ಪುಟಗಳಿಂದಲೂ ಕೂಡಿರುವ ಅಂದವಾದ ಸಂಚಿಕೆ ಇದು ಸರ್ವರಿಗೂ ಗ್ರಾಹ್ಯವಾಗಿದೆ. ಬೆಲೆ ನಾಲ್ಕಾಣೆ ಮಾತ್ರ.

ಕಾಂಗ್ರೆಸ್ ಭವನ

ಕಡೆಗೆ ಬೆಂಗಳೂರು ನಗರದಲ್ಲಿ ಕಾಂಗ್ರೆಸ್ ಭವನವೊಂದು ನಿರ್ಮಾಣವಾಗುವುದು. ಬೆಂಗಳೂರು ಡಿಸ್ಟ್ರಿಕ್ಟ್ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಶ್ರೀ ಎಸ್. ಕೆ ವೆಂಕಟರಂಗಯ್ಯಂಗಾರ್ರವರು, ಗಾಂಧಿನಗರದಲ್ಲಿ ತಮಗೆ ಸೇರಿರುವ ನಾಲ್ಕು ಸಾವಿರ ರೂಪಾಯಿ ಬಾಳುವ ಜಮೀನನ್ನು ಇದಕ್ಕಾಗಿ ಕೊಡುವರು. ಸದ್ಯದಲ್ಲೇ ಮುಂದಿನ ಕೆಲಸಗಳು ಆರಂಭವಾಗುವುವು.

ಈ ಭವನಕ್ಕೆ ಶಂಕುಸ್ಥಾಪನೆ ಮಾಡಲು ಪ್ರಾರ್ಥಿಸುವುದಕ್ಕಾಗಿ ಬೆಂಗಳೂರಿನ ಹಲವು ಕಾಂಗ್ರೆಸ್ ಭಕ್ತರು ನಂದಿಗೆ ಹೋಗಿ ಮಹಾತ್ಮರನ್ನು ಕಂಡರು. ಅವರು ಕಾರಣಾಂತರದಿಂದ ಸಾಧ್ಯವಿಲ್ಲವೆಂದೂ ಶ್ರೀ|| ವಲ್ಲಭಭಾಯಿ ಪಟೇಲರನ್ನು ಈ ಕೆಲಸಕ್ಕೆ ನೇಮಿಸುವುದಾಗಿಯೂ ಹೇಳಿದರು. ಆದರೆ ಈ ಸಂಬಂಧದಲ್ಲಿ ಪತ್ರಿಕೆಗಳಲ್ಲಿ ಅನಾವಶ್ಯಕವಾದ ಕೋಲಾಹಲವು ಎದ್ದಿತು. ಉತ್ತರ ಪ್ರತ್ಯುತ್ತರಗಳಾದವು. ತತ್ಕಾಲದಲ್ಲಿ ಈ ಪ್ರಯತ್ನವು ವ್ಯರ್ಥವಾಗಿ ಅಪವಾದಕ್ಕೆ ಗುರಿಯಾಗುವುದೇನೋ ಎಂಬ ಶಂಕೆಯೂ ಇತ್ತು. ಅದಕ್ಕೆ ಶ್ರೀ|| ವೆಂಕಟರಂಗಯ್ಯಂಗಾರ್ಯರು ತಕ್ಕ ಉತ್ತರ ಕೊಟ್ಟಿದ್ದಾರೆ. ವಿಶಾಲವಾದ ಜಮೀನನ್ನು ಕೊಟ್ಟಿದ್ದಾರೆ. ಇದು ಮಹಾತ್ಮರ ಹೆಸರಿನಿಂದ ಇರುವ ಪ್ರದೇಶದಲ್ಲಿಯೇ ಇದೆ. ಗಾಂಧೀ ನಗರದಲ್ಲಿ ಕಾಂಗ್ರೆಸ್ ಭವನವು ಇರುವುದು ಉಚಿತವಾಗಿಯೇ ಇದೆ. ಏಕೆಂದರೆ, ಗಾಂಧಿಯವರೇ ಕಾಂಗ್ರೆಸ್ಸು, ಕಾಂಗ್ರೆಸ್ಸೇ ಗಾಂಧಿಯವರು. ಅವರು ಬಿಟ್ಟಿರುವುದಾಗಿ ಹೇಳಿದರೂ, ಕಾಂಗ್ರೆಸ್ಸು ಅವರನ್ನು ಬಿಟ್ಟಿರುವುದಿಲ್ಲ. ಕಾಂಗ್ರೆಸ್ಸಿನ ಮೇಲೆ ಅವರ ವರ್ಚಸ್ಸು ಕಡಿಮೆಯಾಗುವಂತಿಲ್ಲ. ಯಾವುದಾದರೂ ರೀತಿಯಲ್ಲಿ ಅವರ ಸಹಾಯವು ಕಾಂಗ್ರೆಸ್ಸಿಗೆ ಆಗುತ್ತಲೇ ಇದೆ.

ಇಂತಹ ಒಂದು ಕಟ್ಟಡವು ಅವಶ್ಯಕವೆಂಬುದನ್ನು ಹೆಚ್ಚು ಹೇಳಬೇಕಾಗಿಲ್ಲ. ಸಾರ್ವಜನಿಕ ಕಾರ್ಯಕ್ರಮಗಳಿಗೆಲ್ಲಾ ಇಂತಹ ಕಟ್ಟಡವು ಅತ್ಯಂತ ಪ್ರಯೋಜನಕರವಾಗುವುದು. ಎಲ್ಲಾ ನಗರಗಳಲ್ಲಿಯೂ ಕಾಂಗ್ರೆಸ್ಸಿನ ಕಟ್ಟಡಗಳಿವೆ. ಬೆಂಗಳೂರಿನಂತಹ ದೊಡ್ಡ ನಗರದಲ್ಲಿಯೂ ಇರುವುದು ಅವಶ್ಯಕ. ಬೆಂಗಳೂರಿನ ಮಹಾಜನರು ಉದಾರವಾಗಿ ಸಹಾಯಮಾಡಿ ಇಂತಹ ಶಾಶ್ವತವಾದ ಒಂದು ಸಂಸ್ಥೆಯು ಏರ್ಪಾಡಾಗಲು ಸಹಾಯಕರಾಗುವರೆಂದು ನಾವು ನಂಬಿದ್ದೇವೆ.

ಮಂಡ್ಯದಲ್ಲಿ ಹೈಸ್ಕೂಲು

ಮಂಡ್ಯದ ಪೌರಸಭೆಯವರು ತಮ್ಮ ಕೌನ್ಸಿಲ್‌ನಲ್ಲಿ ಠರಾವು ಮಾಡಿದಂತೆ ಕೆಲವು ಪುರ ಪ್ರಮುಖರುಗಳು ಹೈಸ್ಕೂಲ್ ಸ್ಥಾಪನೆಗೋಸ್ಕರ ವಿದ್ಯಾ ಇಲಾಖೆಯ ಡೈರೆಕ್ಟರು ಮತ್ತು ಡೆಪ್ಯುಟಿ ಕಮಿಷನರ್ ಮತ್ತು ದಿವಾನ್ ಸಾಹೇಬರಲ್ಲಿ ಡೆಪ್ಯುಟೇಷನ್ ಹೋಗಿರುವುದಾಗಿ ತಿಳಿದು ಬರುತ್ತದೆ.

ಚೂರಿಯಿಂದ ತಿವಿದ ಮೊಕದ್ದಮೆ.

ಅಪರಾಧಿಗೆ ಜೀವಾವಧಿ ಶಿಕ್ಷೆ

ಶ್ರೀಮನ್ಮಹಾರಾಜರವರ ಎ ಡಿ ಸಿ ಗಳಾದ ಲೆ|| ಕ|| ಎಸ್ ಗೋಪಾಲರಾಜ್‌ರನ್ನು ಅರಮನೆ ಮಾಜಿ ಕೋಚ್‌ಮನ್ ಮುನಿವೆಂಕಟಪ್ಪನೆಂಬಾತನು ಕಳೆದ ಫೆಬ್ರವರಿ ತಿಂಗಳಲ್ಲಿ ಖೂನಿ ಮಾಡಲೆತ್ನಿಸಿ ಚೂರಿಯಿಂದ ತಿವಿದನೆಂಬ ಆಪಾದನೆಯ ಮೇಲೆ ಬರಬೇಕಾಗಿದ್ದ ಸೆಷನ್ಸ್ ಮೊಕದ್ದಮೆ ವಿಚಾರಣೆಯಲ್ಲಿ ಆಪಾದನೆಯು ರುಜುವಾತಾದುದರಿಂದ, ಮೈಸೂರು ಸೆಷನ್ಸ್ ಜಡ್ಜರಾದ ಮಿ|| ಕೆ ಎಫ್ ಘನಿಯವರು ನಿನ್ನೆ ತೀರ್ಪನ್ನು ಹೇಳಿ, ಅಪರಾಧಿಗೆ ಒಂದು ಆಪಾದನೆಯಲ್ಲಿ ಜೀವಾವಧಿ ಶಿಕ್ಷೆ ಮತ್ತು ಇನ್ನೊಂದರಲ್ಲಿ ಹತ್ತು ವರ್ಷ ಕಠಿಣ ಸಜಾ [ಎರಡೂ ಒಟ್ಟಿಗೆ ನಡೆಯುವಂತೆ] ವಿಧಿಸಿದರು. ಕೋರ್ಟಿನಲ್ಲಿ ರಿಜರ್ವ್ ಪೋಲೀಸರು ಕಾವಲಿದ್ದರು. ಪ್ರಾಸಿಕ್ಯೂಷನ್ ಪರವಾಗಿ ಪಬ್ಲಿಕ್ ಪ್ರಾಸಿಕ್ಯೂಟರಾದ ಶ್ರೀ ಕೆ ರಾಮಸ್ವಾಮಿಯವರು ವಾದಿಸಿದರು. ಅಪರಾಧಿಯ ಕಡೆ ವಕೀಲರಿರಲಿಲ್ಲ.

ಶ್ರೀ|| ದೊಡ್ಡಬೆಲೆ ನಾರಾಯಣ ಶಾಸ್ತ್ರಿಗಳು.

ಬೆಂಗಳೂರು ಸೀಗೇಬೇಲಿಯಲ್ಲಿ ವಾಸವಾಗಿದ್ದ ಶ್ರೀಮಾನ್ ದೊಡ್ಡಬೆಲೆ ನಾರಾಯಣ ಶಾಸ್ತ್ರಿಗಳು ಕಳೆದ ಸೋಮವಾರ ದೈವಾಧೀನರಾದರೆಂದು ತಿಳಿಸಲು ವಿಷಾದವಾಗುವುದು. ಅವರು ವೆಸ್ಲಿಯನ್ ಮಿಷನ್ ಹೈಸ್ಕೂಲಿನಲ್ಲಿ ಅನೇಕ ವರ್ಷಗಳ ಕಾಲ ಕನ್ನಡ ಪಂಡಿತರಾಗಿದ್ದರು. ಅನೇಕ ಗ್ರಂಥಗಳನ್ನು ಬರೆದು ಭಾಷಾಸೇವೆ ಮಾಡಿದ್ದಾರೆ. ಟೀಕಾ ತಾತ್ಪರ್ಯಗಳೊಡನೆ ಪ್ರಕಟಿಸಿದ ಶ್ರೀಮದ್ರಾಮಾಯಣದ ಸುಂದರಕಾಂಡವು ಜನಪ್ರಿಯವಾಗಿದೆ. ಅವರ ಆತ್ಮಕ್ಕೆ ಭಗವಂತನು ಚಿರಶಾಂತಿಯನ್ನೀಯಲಿ.

೨೦ ಸಾವಿರ ರೂ ಗಳ ಫೋರ್ಜರಿ ನೋಟುಗಳು

೨೦,೦೦೦ ರೂ, ಗಳ ಫೋರ್ಜರಿ ನೋಟಿನ ಮೊಕದ್ದಮೆಯ ವಿಚಾರಣೆಯು ದಂಡಿನ ಮುನ್ಸಿಫ್ ಮ್ಯಾಜಿಸ್ಟ್ರೇಟರು ರಾವ್ ಬಹದ್ದೂರ್ ಕುಪ್ಪಿರಾಮನ್ ನಾಯರ್‌ರವರ ಮುಂದೆ ನಡೆಯುತ್ತಿರುವುದು. ಮೊಕದ್ದಮೆಯ ಅಪರಾಧಿಗಳು ಅಗಸ್ಟೀನ್, ಎಸ್ ಎಸ್ ನಾಯರ್ ಮತ್ತು ವಾಸುಕ್ಕಿ ಎಂಬುವರು. ಅಪರಾಧಿಗಳ ಪೈಕಿ ಕೊನೆಯವರಿಬ್ಬರೂ ಟ್ರಾವಂಕೂರಿನಲ್ಲಿ ದಸ್ತಗಿರಿ ಮಾಡಲ್ಪಟ್ಟು ಬೆಂಗಳೂರಿಗೆ ಕರೆತರಲ್ಪಟ್ಟರು. ಮತ್ತು ಇವರಿಬ್ಬರೂ ಮೊದಲನೇ ಅಪರಾಧಿಯೊಂದಿಗೆ ಫೋರ್ಜರಿ ನೋಟುಗಳನ್ನು ತಯಾರುಮಾಡುವುದಕ್ಕೆ ಆಪಾದಿತರಾಗಿದ್ದಾರೆ.

ಸ್ವದೇಶಿ ವಸ್ತುಪ್ರದರ್ಶನ.

ಕಳೆದ ತಿಂಗಳು 30ನೇ ತಾ॥ ನಿಂದ ಧಾರವಾಡದಲ್ಲಿ ನಡೆಯುತ್ತಿದ್ದ ನಾಲ್ಕನೇ ಸ್ವದೇಶಿ ವಸ್ತುಪ್ರದರ್ಶನವು ಕಳೆದ ಸೋಮವಾರಕ್ಕೆ ಪರಿಸಮಾಪ್ತಿಯಾಯಿತು. ಮೊದಲನೇ ಮೂರು ವರ್ಷಗಳಿಗಿಂತಲೂ ಈ ವರ್ಷ ಎಲ್ಲಾ ರೀತಿಯಿಂದಲೂ ಪ್ರದರ್ಶನವು ಹೆಚ್ಚು ಯಶಸ್ವಿಯಾಗಿ ನಡೆಯಿತು. ದೂರ ಪರಸ್ಥಳಗಳಿಂದ ಬೇಕಾಗಿ ಸ್ಟಾಲು ಗಳು ಬಂದಿದ್ದವು. ಪ್ರೇಕ್ಷಕರು ಹೇರಳವಾಗಿ ಬಂದಿದ್ದರು. ವಿವಿಧ ವಿನೋದ ಪ್ರದರ್ಶನಗಳು ವಿಶೇಷವಾಗಿ ಏರ್ಪಾಡಾಗಿದ್ದವು. ಜನರಲ್ಲಿ ಸ್ವದೇಶೀಭಾವನೆಯು ದಿನೇ ದಿನೇ ಹೆಚ್ಚುತ್ತಿರುವುದೆಂಬುವಕ್ಕೆ ಇದೇ ನಿದರ್ಶನವಾಗಿದೆ.

ಮೊದಲನೇ ಕೌನ್ಸಿಲರಾದ ಶ್ರೀ॥ ರಾಜಮಂತ್ರಪ್ರವೀಣ ಶ್ರೀ॥ ಎನ್. ಸಿ ರಾಜ ಗೋಪಾಲಾಚಾರಿಯವರು ಉದ್ಘಾಟನೆಯನ್ನು ನಡೆಸಿದರು. ಇಂತಹ ಪ್ರದರ್ಶನದ ಪ್ರಯೋಜನವನ್ನು ಒತ್ತಿ ಹೇಳಿದರು. ಜನರಲ್ಲಿ ಹೊಸಹೊಸ ಪದಾರ್ಥಗಳ ವಿಷಯವಾಗಿ ತಿಳುವಳಿಕೆಯನ್ನುಂಟುಮಾಡುವುದೇ ಪ್ರದರ್ಶನಗಳ ಮುಖ್ಯ ಉದ್ದೇಶವೆಂದು ಅವರು ತಿಳಿಸಿದರು. ಅದೇ ದಿವಸ ಸಾಯಂಕಾಲ ಶ್ರೀ॥ ಜ. ಸಿ. ಕುಮಾರಪ್ಪನವರು "ಭರತಖಂಡದ ಆರ್ಥಿಕ ಅಭಿವೃದ್ಧಿ" ಯ ವಿಷಯವಾಗಿ ಸ್ವಾರಸ್ಯವಾದ ಉಪನ್ಯಾಸ ಮಾಡಿದರು. ನಮ್ಮ ದೇಶದ ಹಳ್ಳಿಗಳಲ್ಲಿ ಎಷ್ಟೋ ವಿಧದ ಸಣ್ಣ ಸಣ್ಣ ಕೈಗಾರಿಕೆಗಳಿವೆ. ಅವುಗಳನ್ನು ಉದ್ಧರಣೆ ಮಾಡಿ ಅಭಿವೃದ್ಧಿಗೆ ತಂದರೆ ಜನರ ಜೀವನೋಪಾಯವು ಆಗುವುದೆಂದು ತಿಳಿಸಿದರು.

ಮೈಸೂರಿಗೆ ದಯಮಾಡಿಸಿದ್ದ ಶ್ರೀ ವಲ್ಲಭಾಯಿ ಪಟೇಲರು ಪ್ರದರ್ಶನಕ್ಕೆ ಬಂದಿದ್ದು, ಅಲ್ಲಿನ ಏರ್ಪಾಡುಗಳನ್ನು ನೋಡಿ ಬಹಳ ಸಂತೋಷಪಟ್ಟರು. ಕಡೇ ದಿನ ದಿವಾನ್ ಸರ್ ಮಿರ್ಜಾ ಇಸ್ಮಾಯಿಲರೂ ಭೇಟಿ ಕೊಟ್ಟರು. ಎಲ್ಲಾ ಸ್ಟಾಲುಗಳನ್ನೂ ಪರಿಶೀಲಿಸಿದರು. ಪರಸ್ಥಳದಿಂದ ಬಂದಿರುವ ಹೊಸ ಹೊಸ ಸಾಮಾನುಗಳನ್ನು ನೋಡಿ ಅವುಗಳನ್ನು ಇಲ್ಲಿಯೂ ತಯಾರು ಮಾಡಬೇಕೆಂದು ಅಭಿಪ್ರಾಯಪಟ್ಟರು. ಮೈಸೂರು ದೇಶದ ಗ್ರಾಮಾಂತರಗಳಲ್ಲಿ ಉತ್ಪತ್ತಿಯಾದ ಸಣ್ಣ ಪುಟ್ಟ ಕೈಗಾರಿಕೆಗಳ ವಸ್ತುಗಳು ಹೆಚ್ಚುಹೆಚ್ಚಾಗಿ ಪ್ರೋತ್ಸಾಹವನ್ನು ಪಡೆಯಬೇಕೆಂದು ಕೈಗಾರಿಕೆಯ ಡೈರೆಕ್ಟರಿಗೆ ತಿಳಿಸಿದರು. ಪ್ರದರ್ಶನವು ವ್ಯವಸ್ಥಿತವಾದ ರೀತಿಯಲ್ಲಿ ನಡೆಯುತ್ತಿರುವುದನ್ನು ನೋಡಿ ಸಂತೋಷಪಟ್ಟರು. ಎರಡು ವರ್ಷಗಳಿಂದ ಸರ್ಕಾರದ ಗ್ರಾಂಟು ಪ್ರದರ್ಶನಕ್ಕೆ ಬರಲಿಲ್ಲವೆಂದು ಕೇಳಿ ಇನ್ನು ಮುಂದೆಯಾದರೂ ಗ್ರಾಂಟನ್ನು ಕೊಡಬೇಕೆಂದು ಡೈರೆಕ್ಟರಿಗೆ ಸೂಚಿಸಿದರು.

ಆ ದಿನ ರಾತ್ರಿ ಡೆಪ್ಯೂಟಿ ಕಮೀಷನರ್ ಶ್ರೀ॥ ಟಿ. ಜಿ ರಾಮಯ್ಯರವರ ಅಧ್ಯಕ್ಷತೆಯಲ್ಲಿ ಬಹುಮಾನವಿನಿಯೋಗ ಸಮಾರಂಭವು ಜರುಗಿತು. ಜಯಶೀಲರಿಗೆ ಬೆಳ್ಳಿ ಬಟ್ಟಲುಗಳೂ, ನಗದು ಬಹುಮಾನಗಳೂ, ಪ್ರಶಸ್ತಿ ಪತ್ರಗಳೂ ಕೊಡಲ್ಪಟ್ಟವು. ಉತ್ತಮವಾದ ಸ್ಟಾಲು ಕೈಗಾರಿಕೆಗಾಗಿ ಶ್ರೀ ಕೃಷ್ಣರಾಜೇಂದ್ರ ಮಿಲ್ಲಿಗೂ, ಉತ್ತಮ ಗ್ರಾಮ ಕೈಗಾರಿಕೆ ಸಾಮಾನಿಗಾಗಿ ಶಿವಮೊಗ್ಗೆಯ ಸ್ವದೇಶೀ ಮಂದಿರಕ್ಕೂ, ಉತ್ತಮ ಪ್ರದರ್ಶನಕ್ಕಾಗಿ ನಂಜನಗೂಡು ತಾ॥ ಬಾಪು ಹೆಣೆಯುವವರಿಗೂ ಬೆಳ್ಳಿ ಬಟ್ಟಲುಗಳು ಕೊಡಲ್ಪಟ್ಟವು. ಸ॥ ಎಂ. ಆರ್ ಬೆಟ್ಟಪ್ಪನವರ ಉತ್ತಮವಾದ ಅಗರ್ ಬತ್ತಿಗಳಿಗೂ, ಸಂಡೇ ಟೈಮ್ಸ್ ಪತ್ರಿಕಾ ಸ್ಟಾಲಿಗೂ ಸ್ಪೆಷಲ್ ಬಹುಮಾನಗಳಾಗಿ ಬೆಳ್ಳಿ ಬಟ್ಟಲುಗಳು ಕೊಡಲ್ಪಟ್ಟವು.

ಬೆಂಗಳೂರಿನ ಹಠಯೋಗಿ ಶ್ರೀ॥ ಟಿ ಎಸ್ ಸಿಂಹರವರು ಪ್ರದರ್ಶನದಲ್ಲಿ ತಮ್ಮ 'ಸಜೀವ ಸಮಾಧಿ" ಯ ಯೋಗಪ್ರದರ್ಶನವನ್ನು ತೋರಿಸಿದರು. ಭೂಮಿಯೊಳಗೆ ಎರಡು ಗಂಟೆಗಳ ಕಾಲ ಶ್ವಾಸಧಾರಣ ಮಾಡಿ ಕುಳಿತಿದ್ದರು. ಮೇಲೆ ಮಣ್ಣಿನಿಂದ ಮುಚ್ಚಲಾಗಿತ್ತು. ಇದನ್ನು ಸಾವಿರಾರು ಜನ ಸ್ತ್ರೀ ಪುರುಷರು ನೋಡಿ ಆಶ್ಚರ್ಯಪಟ್ಟರು. ಇವರ ಅದ್ಭುತ ಶಕ್ತಿಯನ್ನು ಮೆಚ್ಚಿ ಪ್ರದರ್ಶನದವರು ಇವರಿಗೆ ಒಂದು ಬೆಳ್ಳಿ ಬಟ್ಟಲನ್ನೂ ನಗದನ್ನೂ ಬಹುಮಾನ ಮಾಡಿದರು.

ಅನಂತರ ರಾತ್ರಿ ಒಂಭತ್ತು ಗಂಟೆಗೆ ಒಂದು ಭೋಜನಕೂಟವು ನಡೆಯಿತು. ಇದರಲ್ಲಿ ಸ್ವಯಂಸೇವಕರೂ, ಸ್ಟಾಲು ಹೋಲ್ಡರುಗಳೂ, ಕಾರ್ಯಕರ್ತರೂ, ಆಹ್ವಾನಿತರೂ ಎಲ್ಲರೂ ಸೇರಿ ನೂರಾರು ಇನ್ನೂರು ಜನರು ಭಾಗಗೊಂಡಿದ್ದರು. ರಾತ್ರಿ ಹತ್ತು ಗಂಟೆಗೆ ಸಮಾರಂಭವು ಮುಕ್ತಾಯವಾಯಿತು.

ಪ್ರದರ್ಶನವು ಒಟ್ಟು ಹತ್ತು ದಿನಗಳು ನಡೆಯಿತು. 46 ಸ್ಟಾಲುಗಳು ಬಂದಿದ್ದವು. ಅರು ಜನರಲ್ ಸ್ಟಾಲುಗಳಿದ್ದವು. ಒಟ್ಟು 14,186 ಜನರು ಒಂದು ನೆಲದ ರ ಸುಮಾರು ಏಳು ಸಾವಿರ ರೂಪಾಯಿನ ವ್ಯಾಪಾರವಾಯಿತು.

ಈ ಕಳೆದ ಕಂತ ವಿಶೇಷ ಕಾರ್ಯಕ್ರಮಗಳು, ಜರುಗಿದವು. ಅವುಗಳನ್ನು ಪ್ರೇಕ್ಷಕರು ಬಹಳವಾಗಿ ಮೆಚ್ಚಿದರು — ಮೇ 30—ಆಸ್ಥಾನ ವಿದ್ವಾನ್ ಮ॥ ವೆಂಕಟೇಶಯ್ಯಂಗಾರ್ಯರವರ ಕೊಳಲು, ಮಾಸ್ಟರ್ ದೊರೆಸ್ವಾಮಿಯವರ ವೀಣೆ ಮತ್ತು ಗಾನ, ವಿದ್ವಾಂಸರುಗಳ ಕೃಷ್ಣಮೂರ್ತಿ ಮತ್ತು ಚಿಟ್ಟಿಬಾಬುರವರ ವೀಣೆ, ಹರ್. ವಿ ಕೃಷ್ಣಯ್ಯರ ಪಿಟೀಲು, ಅನಂತಸ್ವಾಮಿ ಮೃದಂಗ. ಇದಾದನಂತರ ಆರೋಗ್ಯ ಚಲನಚಿತ್ರ ಜೂ॥ ವಿದ್ವಾನ್ ಬಡುವಿ ಲಕ್ಷ್ಮೀನಾರಾಯಣಾಚಾರ್ಯರ ಜಲತರಂಗ್ ಕಚೇರಿ. ಜೂ ತಾ॥ ೨ ವ॥ ರಾಮಾಚಾರ್ಯರ ಅಧ್ಯಕ್ಷತೆಯಲ್ಲಿ, ಶ್ರೀ॥ ಎ. ಆರ್. ಭೋರೆಯವರ ವ್ಯಾಯಾಮ ಪ್ರದರ್ಶನ ತಾ॥ 3 ಮ॥ ನಾರಾಯಣಾಚಾರ್ಯರ ಅಧ್ಯಕ್ಷತೆ ತಾ॥ 4 ಕುರುಡು ಮೂಕರ ಶಾಲೆಯ ವಿದ್ಯಾರ್ಥಿಗಳ ಸಂಗೀತದ ಕಾನ್ಸರ್ಟ್. ತಾ॥ 5 ಬೆಂಗಳೂರಿನ ಹಠಯೋಗಿ ಶ್ರೀ॥ ಟಿ ಎಸ್. ಸಿಂಹರವರ "ಸಜೀವ ಸಮಾಧಿ" ಮತ್ತು ವೇ॥ ಗಮಕಿ ರಾಮಕೃಷ್ಣಶಾಸ್ತ್ರಿಗಳ ಹರಿಕಥೆ "ಭೀಷ್ಮ ಚರಿತ್ರೆ" ತಾ॥ 6 ವಿ॥ ಕೆ ಕೃಷ್ಣಯ್ಯರವರ ಹರಿಕಥೆ, ಮಿಸ್ ಹೇಮಾವತಿಯ ನರ್ತನ ತಾ॥ 7 ಶ್ರೀ॥ ಟಿ ಎಸ್. ಸಿಂಹರವರಿಂದ 'ಸಜೀವ ಸಮಾಧಿ" ಹಿಂದೀ ವಿದ್ಯಾರ್ಥಿನಿಯರ ನಾಟಕ ಬೇಲೂರುಗಳನ್ನು ಪ್ರೇಕ್ಷಕರ ಮನೆಗಾಗಿ ಹಂಚಲಾಯಿತು. ತಾ॥ 8 ಪ್ರಾತಃಕಾಲ ಸ್ತ್ರೀಯರಿಗೆ ಪ್ರವೇಶ ಉಚಿತ. ಸಾಯಂಕಾಲ ವಿವಿಧ ವೇಷ ಸ್ಪರ್ಧೆ ಕುಮಾರಿ ಕಮಲಮ್ಮನ ಗಾನ ಇತ್ಯಾದಿ.

ಪ್ರತಿ ದಿನವೂ ರಸಿಯೋ, ಸಂಗೀತವನ್ನು ಇಂಪಾಗಿ ನ್ಯಾಸನಲ್ ಪಬ್ಲಿಸಿಟಿಯವರು ಏರ್ಪಡಿಸಿದ್ದರು. ನಂಜನಗೂಡು ತಾಲ್ಲೂಕಿನ ಹಳ್ಳಿಯವರು ತೋರಿಸುತ್ತಿದ್ದ ಬಾಪು ಹೆಣೆಯುವುದು, ಬುಟ್ಟಿ ತಯಾರಿಸುವುದು, ಎಲೆ ಹಿಡಿಯುವುದೇ ಮೊದಲಾದ ವಿಧಾನಗಳು ಬಹಳ ಶ್ಲಾಘನೀಯವಾಗಿದ್ದವು. ಈ ಪ್ರದರ್ಶನವನ್ನು ಯಶಸ್ವಿಯಾಗಿ ನಡೆಸಲು ಕಾರಣಕರ್ತರಾದ ಸಮಿತಿಯ ಸದಸ್ಯರೂ, ಸ್ವಯಂಸೇವಕರೂ, ಸ್ಟಾಲು ಹೋಲ್ಡರುಗಳೂ ಇತರರೂ ಅಭಿನಂದನಾರ್ಹರು.

ಸ್ತ್ರೀಯರೂ ದೇಶೋನ್ನತಿಯೂ.

ಯಾವ ದೇಶದ ಇತಿಹಾಸದ ಪುಟಗಳನ್ನು ತಿರುವಿದರೂ ನಮಗೆ ಒಂದು ಮಾತು ನಿಶ್ಚಳವಾಗಿ ಒಡಮೂಡಿ ಕಾಣುತ್ತದೆ. ದೇಶವು ಒಳ್ಳೇ ಉತ್ಕೃಷ್ಟವಾದ ಅಭ್ಯುದಯಸ್ಥಿತಿಯಲ್ಲಿದ್ದಾಗ ಅಲ್ಲಿಯ ಸ್ತ್ರೀ ಸಮಾಜವೂ ಸುಸ್ಥಿತಿಯಲ್ಲಿಯೇ ಇರುತ್ತದೆ. ನಮ್ಮ ಪ್ರಾಚೀನ ಪುಸ್ತಕಗಳೂ ಇದನ್ನೇ ಸಾರುತ್ತಿವೆ. ಅನೇಕ, ಪ್ರಸ್ತುತದ ಪಾಶ್ಚಾತ್ಯ ರಾಷ್ಟ್ರಗಳೂ ಈ ಸತ್ಯಕ್ಕೆ ಸಾಕ್ಷಿಯಾಗಿವೆ. ಧಾರ್ಮಿಕೋನ್ನತಿಯು ತೆರೆಗಳ ದೇಶಗಳಲ್ಲಿ ವರವಿಕ್ರಮಗಳಲ್ಲಿಯೂ ಹಬ್ಬುತ್ತಿರುವಾಗ ಸ್ತ್ರೀಯರೂ ಹೆಚ್ಚಳವನ್ನು ಹೊಂದುತ್ತಲೇ ಬಂದಿದ್ದಾರೆ.

ಶ್ರೀ ಬಸವೇಶ್ವರನು ಅವತರಿಸಿ ನಮ್ಮ ಪ್ರಾಂತದಲ್ಲಿ ಧಾರ್ಮಿಕ ಉತ್ಕ್ರಾಂತಿಯನ್ನು ಮಾಡಿ, ಲಿಂಗವಂತ ಸಮಾಜವನ್ನು ಉತ್ತೇಜಿಸಿದಾಗ ಗುಪ್ತವಾಗಿದ್ದ ರಚನೆಗಳು ಚೈತನ್ಯಗೊಂಡು ಎಲ್ಲಾ ದರ್ಜೆಗಳಲ್ಲಿಯೂ ವಿಶೇಷ ತೀವ್ರತೆಯ ಪ್ರಗತಿಯು ಕಾಣಿಸಿತು. ಯೋಗಿಗಳಾದ ಊರ್ಧ್ವಗಾಮಿಯಾಯಿತೆಂದರೆ ಅವರ ಚಳವಳಿಯಿಂದ ಜನಸಾಮಾನ್ಯರ ಪ್ರಗತಿಗೆ ಅತ್ಯಂತ ಅಧಾರವಾಯಿತು. 'ಗುಹೇಶ್ವರ ಲಿಂಗದಲ್ಲಿ ಗೃಹ ಮೊಗಗಳ ಅರ್ಚನವಾಗಬೇಕು' ಎಂಬ ಮಾತಿನ ಸರ್ವಾಂಗದರ್ಶನವು ಆಗಮಾತ್ರ ಆಗುತ್ತದೆ. ಜೀವನದ ರಸವು ಸಮಾಜದ ಸರ್ವಾಂಗದಲ್ಲಿಯೂ ಸಮನಾಗಿ ಹರಿಯುತ್ತಿದ್ದ ಆ ಕಾಲದಲ್ಲಿಯ ಶಿವಶರಣ ವಚನಗಳಿಂದ ಸ್ತ್ರೀಯರ ಸ್ಥಿತಿಯು ಆಗ ಹೇಗಿತ್ತು ಎಂಬುದು ಚೆನ್ನಾಗಿ ತಿಳಿಯುತ್ತದೆ.

ಸ್ತ್ರೀಪುರುಷರಲ್ಲಿ ಹಿರಿಮೆ ಕಿರಿಮೆ ಎಂಬ ಭೇದಭಾವನೆಯನ್ನು ಅವರು ತೋರಿಸಲಿಲ್ಲ. ಆತ್ಮಸ್ವರೂಪದಲ್ಲಿ ಇಬ್ಬರೂ ಒಂದೇ ಎಂಬ ಸತ್ಯವನ್ನು ಅವರು ಈ ವಚನದಿಂದ ವ್ಯಕ್ತಪಡಿಸಿದ್ದಾರೆ.

'ಮಡದಿಯ ಪ್ರಾಣಕ್ಕೆ ಮೊಲೆಮುಡಿ ಇದ್ದೀತೆ? ಒಡೆಯನ ಪ್ರಾಣಕ್ಕೆ ಶಿಖಾಯಜ್ಞೋಪವೀತವಿದ್ದೀತೆ? ಕಡೆಯಲ್ಲಿದ್ದ ಅಂತ್ಯಜನು ಹಿಡಿದಿದ್ದನೇ ಪ್ರಾಣದಲ್ಲಿ ಹಿಡಿಗೋಲ? ನೀ ತೊಡಸ್ಕೊಟ್ಟ ತೊಡಕ ನೀಲೋಕದ ಜನರತ್ತ ಬಲ್ಲರೈ ರಾಮನಾಥ?'

ಬರೀ ಸ್ತ್ರೀಯರೇಕೆ, ಹೊಲೆಮಾದಿಗರನ್ನು ಸಹ ಅವರು ಕೀಳುತನದಿಂದ ನೋಡಲಿಲ್ಲ. ದಣ್ಣ, ಗಂಡು, ಹಾರವ ಮೊದಲಾದವೆಂದು ನೋಡೆಂದು ಕುಲ ಜಾತಿ ನಂಬು ಜಾತಿಯನ್ನುಂಟುಮಾಡಿ ಒಬ್ಬರಿಗೊಬ್ಬರು ದಾರಾಡುವ ಮಾಯೆಯ ಮುಸುಕನ್ನು ತೆರೆದು ನಾವು ನೋಡಬೇಕು. ತಾತ್ವಿಕವಾದ ದೃಷ್ಟಿಯಿಂದಲೇ ಸಾತ್ವಿಕವಾದ ತಾರತಮ್ಯ ವೃತ್ತಿಯನ್ನಷ್ಟೇ ಇಡಬೇಕು. ಸಮತೆ, ಸ್ವಾತಂತ್ರ್ಯ, ಸಮಾಧಾನಗಳ ಸಮಸ್ಯೆಗಳನ್ನು ಸತ್ಯತತ್ವಗಳ ಒರಗಲ್ಲಿಗೆ ಹಚ್ಚಿಯೇ ಬಿಡಿಸಬೇಕು. ಕಾಮವನ್ನು ಮುಟ್ಟಿ ಪ್ರೇಮವನ್ನ ಬಿಟ್ಟು ಪ್ರೇಮವನ್ನು ಮುಟ್ಟಿದವರಲ್ಲಿಯೂ ಅರಿವನರಿತು ಪ್ರಸನ್ನವ ತೋರಿದ ಹಸನಾದವರಲ್ಲಿಯೂ ಕುಲ ಜಾತಿಗಳ ದೃಷ್ಟಿಯಿಂದ ಹಿರಿಕಿರಿತನ ಕಿರಿದಿನ ಎಂಬ ಭೇದವೇ ಉಳಿಯುವುದಿಲ್ಲ.

ಈ ಪ್ರಕಾರದ ಪ್ರಾತಿಭಾ ದೃಷ್ಟಿಯ ಶಿವಶರಣರು ಹೆಂಗಸಿನ ಹಿರಿತನವನ್ನು ಹೀಗೆ ಹೊಗಳಿದ್ದಾರೆ,—ತಾ ಮಾಡಿದ ಹೆಣ್ಣು ತನ್ನ ತಲೆಯನೇರಿತ್ತು. ತಾಮಾಡಿದ ಹೆಣ್ಣು ತೊಡೆಯನೇರಿತ್ತು. ತಾಮಾಡಿದ ಹೆಣ್ಣು ಬ್ರಹ್ಮನ ನಾಲಿಗೆಯನೇರಿತ್ತು. ತಾ ಮಾಡಿದ ಹೆಣ್ಣು ಹರಿಯನೇರಿತ್ತು. ಅದಕಾರಣ ಹೆಣ್ಣು ಹೆಣ್ಣಲ್ಲ; ಹೆಣ್ಣು ರಾಕ್ಷಸಿಯಲ್ಲ; ಹೆಣ್ಣು ಪ್ರತ್ಯಕ್ಷ ಕಪಿಲಸಿದ್ಧ ಮಲ್ಲಿಕಾರ್ಜುನ ನೋಡಾ.

ಶಿವಶರಣರ ಕಾಲದ ಸಮಾಜದಲ್ಲಿ ಈ ರೀತಿಯಾದ ಪರಿಪೋಷಿತ ಪರಿಸ್ಥಿತಿಯುದ್ದರಿಂದಲೇ ಹೆಂಗಸರು ಅತ್ಯಂತ ಹೆಚ್ಚಿನ ಗಾರಿಕೆಯನ್ನು ಹೊಂದಿದ್ದರು. ಅವರಲ್ಲಿ ಆಧ್ಯಾತ್ಮ ಸಾಧನದಲ್ಲಿ ಉತ್ಕೃಷ್ಟಸ್ಥಿತಿಯನ್ನು ಪಡೆದ ಸಾಧ್ವಿಯರನೇಕರಿದ್ದರು. ಅವರ ಪ್ರೇರಣೆಯಿಂದ ಹೊರಹೊಮ್ಮಿದ ಹೊಸ್ಸನ್ನಂಥ ಕೆಲವು ವಚನಗಳು ಇಂದಿಗೂ ಕನ್ನಡ ನುಡಿಯಲ್ಲಿ ಕಸ್ತೂರಿಯಂತಿವೆ. ಬೆಳಗುರಲು ಸಾಧ್ವಿಯರ ಬಟ್ಟಾಬಯಲು ಬಂಜೆಭೂಮಿಯಲ್ಲಿ ಫಲಿಸೈರಾಗಳು ಬೆಳೆಯಬೇಕೆಂದರೆ ಅದು ಹೇಗ ಸಾಧ್ಯ? ಆದುದರಿಂದ ಇನ್ನು ಮೇಲಾದರೂ ಸ್ತ್ರೀಯರ ಬಗ್ಗೆ ನಮ್ಮ ಸಮಾಜದಲ್ಲಿ ಸುವ್ಯವಸ್ಥಿತ ಏರ್ಪಾಡುಗಳಾಗಿ ನಾವೂ ಸುವ್ಯಧರಾಗುವಂತೆ ಮಾಡುವುದೇ ಪ್ರತಿಯೊಂದು ವ್ಯಕ್ತಿಯ ಕರ್ತವ್ಯ ಕರ್ಮ.

—ಸ್ವದೇಶಾಭಿಮಾನಿ

ಚಾ. ಚಾ. (೧೩)

೧ 'ನಾನು ಮೊನ್ನೆ ನಾನು ...ನಿಂದ ಬಿಟ್ಟಾಗ ನನಗೆ ಪ್ರಜ್ಞೆ ...ಹೋಯಿತು ಅಂತ ಹೇಳುತ್ತಿದ್ದ ...ನ ಸ್ನೇಹಿತ ವೆಂಕ್ಟ್ರಗ, ಆದಿರ ...! ಮತ್ತೆ ಪ್ರಜ್ಞೆ ಬಂದಾಗ ಬರುತ್ತ, ...ತ ಡಾಕ್ಟರ್ ಬೇಕಾದಾರ?' ಎಂದು ...ಳಿದ್ದೆ!

೨ "ಬಹಳ ದಿನವಾಯಿತ, ನಿಮ್ಮ ...ನೋಡಿ!" ಅಂತ ಅವರು ಹೇಳಿದರೆ, ..., ಹೀಗೆಯೇ ನಡೆಯುತ್ತಾ ಇರಲಿ, ...ನಿ!" ಅಂತ ಹೇಳಿಬಿಡೋದ" ...ವ ನ್ಯಾಯ ಇನು?

೩ "ನಮ್ಮ ಮನೆಯಲ್ಲಿ ಇಪ್ಪ ಮೊ ...ನಾಯಿಯನ್ನು ನಾವು ಸಾಕುತ್ತಿದ್ದರೂ ...ದ, ಆ ದಿನ ರಾತ್ರಿ ಕಳ್ಳರು ಬಂದಾಗ ...ಸ್ಸಿಗೆ ನಿದ್ದೆ ಮಾಡುತ್ತಿತ್ತು, ನೋ ...ಗಾ!' ಎಂದರು ನಮ್ಮ ಮಿತ್ರರು ...ನಾನು "ಚಿಂತೆ ಇಲ್ಲ! ಈ ನಾಯಿ ... ಎಬ್ಬಿಸುವುದಕ್ಕೆ ಇನ್ನೊಂದು ...ಯಿ ಸಾಕಿದಿ ಅಗ ಎಲ್ಲವೂ ...ಗುತ್ತೆ' ಅಂದೆ ನ್ಯಾಯ ತಾನ?

೪ 'ನಿದ್ದೆ ಸರಿಯಾಗಿ ಬರುತ್ತದ ...ನಾ? ಕೆಮ್ಮಲು ಇದೆಯೇನು? ಎದೆ ...ನೆಯೇ? ಜ್ವರಬರುತ್ತಿದಿಯೇ? ...ಅಗುತ್ತಿದೆಯೆ' ಅಂತ ಒಂದಾದ ...ಂದಾಗಿ ಡಾಕ್ಟರು ಪ್ರಶ್ನೆಗಳನ್ನು ...ಕ್ಕಿದ್ದಕೆ, ಅವನಿಗ ತುಂಬಾ ರೇಗಿತು ..."ನಾನು ಕೇಳಿದೆ, ಮಾಡಿದ ರೋಗ ಎಂ ...ದ ಎಂದು ಪತ್ತೆಮಾಡಬೇಕು, ತಜ್ಞ, ...ಣತನ" ಎಂದು ಹೇಳಿಬಿಟ್ಟ ...ಕ್ಟರು ಹೇಳಿದರಂತೆ "ಓಹೋ! ...ಆ! ಹಾಗಾದರ, ನನ್ನ ಸ್ನೇಹಿತ ...ದಳ್ಳಿವೈದ್ಯನಿದ್ದಾನೆ. ಅವನನ್ನು ...ತ್ತೀನೆ ರೋಗಿಯನ್ನು ಕೇಳದ ...ಪತ್ತೆಮಾಡುವುದು ಅವರಿಗೆ ಗೊ ...ತ್ತಿದರಂತ

ನಾನು ಮೊನ್ನೆ ಮುದರಾಸಿನಿಂದ ...ಇದುವರೆಗೂ ಯಾರ ತಂಟೆಯೂ ...ಟ್ಟನೇ ಒಂದು ಗಾಡಿಯೊಳಗೆ ...ಲಿನಸ್ತಲ್ಲ ಬಂದೆ! ಹೇಗೆ ಗೊತ್ತೆ? ...ಟ್ಟ ನಿಮಗೂ ಹೇಳುತ್ತೀನೆ ...ಕಾದ ಉಪಾಯ. ಗಾಡಿಹತ್ತು ...ತ್ತಲೂ, ಪಕ್ಕದ ಗಾಡಿಯಲ್ಲಿರುವವರಿಗೆ ತ ...ಬಾ ನಾಲ್ಕಾಣೆ ಕೊಟ್ಟುಬಿಡುವುದು ನಮ್ಮ ಗಾಡಿ ಬಾಗಿಲ ಹತ್ತಿರ ಯಾರಾದರೂ ಬಂ ದರೆ, ಅವರ ಕೈಲಿ, 'ಇಲ್ಲಿ ಹತ್ತಬೇಡಿರಿ! ಅವನಿಗ ಹುಚ್ಚು ಕಚ್ಚಿಬಿಡುತ್ತಾನೆ!' ಅಂತ ಹೇಳಿಸುವುದ, ಅಷ್ಟೆ! ಒಂದು ಪ್ರಾಣಿಯೂ ಕೂಡ ತಲೆ ಹಾಕೋದಿಲ್ಲ!

೬ 'ಯಾವನೋ ಒಬ್ಬ ಬಂದ ನ ನ್ನ ಸಾಣೆ ಹಾರ್ಮೋನಿಯಮ್ಮನ್ನು ಕದ್ದು ಓಡಿ ಹೋಗುವಹಾಗೆ ನನಗೆ ಕನಸಾಯಿ ತ,' 'ಆಗ ನೀನೇನು ಮಾಡಿದ?' "ನಾನೇ? ಯಾಕೆ ಎಡುತ್ತೀಯೋ, ಮಂ ಕೇ! ನಿಧಾನವಾಗಿ ಹೋಗಪ್ಪೋ! ಇಂಥಾ ಉಪಕಾರಿಯನ್ನು ಯಾರೂ ಇಟ್ಟಿಸಿಕೊಂ ಡು ಬರುವುದಿಲ್ಲ' ಎಂದು ಕಿರಿಚುತ್ತಿದ್ದೆ

೭ "ನಿಮ್ಮ ತಂದೆಯ ವರು ಎಲ್ಲಿ? ಈ ಚಿಗ ಕಾಣಿಸುವುದೇ ಇಲ್ಲ!" ಎಂದು ವೈ ದಿಕರೊಬ್ಬರು ಕೇಳಿದರು ಆಗ ಹುಡುಗ 'ಅವರು ಹೊರಗೆ ಬರ್ತಾನೇ ಇಲ್ಲ. ಅವಾ ರ ಬಹಳ ಕಟ್ಟಬಿಟ್ಟು ತುಪ್ಪ, ಹಾಲು, ಮೊಸರು ಯಾವುದೂ ಇಲ್ಲ' ಎಂದ ವೈ ದಿಕರಿಗೆ ಗಾಬರಿಯಾಯಿತು "ಏನೋ! ಹಾಯಿಲ ಏನೋ?" ಎಂದರು ಹುಡುಗ, 'ಇಲ್ಲ, ಇಲ್ಲ! ಜಯಿಲು!' ಎಂದ!

೮ ನೋಟಾರಿಗೂ ಮೋಟಾರಿಗೂ ಡಿ ಕ್ಕಿ ಒಂದರ ಗಾಜು ಪುಡಿ ಪುಡಿ ಕೋರ್ಟಿ ನಲ್ಲಿ ಒವರ ಮಾಲೀಕನಿಗೆ ನಷ್ಟವನ್ನು ಕೊಡಿಸಿದರು ನಷ್ಟವನ್ನು ಲೆಕ್ಕ ಮಾಡು ತ್ತಿದ್ದಾಗ, ಅವರು ಹೇಳಿದರಂತೆ "ಮಹಾ ಸ್ವಾಮಿ! ನನಗ ಹೆಚ್ಚು ನಷ್ಟವಾಯಿತು. ಜಾಸ್ತಿ ಕೊಡಿಸಬೇಕು ನನ್ನ ಮೋಟಾರಿನ ಗಾಜು ಎಕ್ಸೆಲ್ Unbreakable Glass (ಒಡೆಯದ ಗಾಜು) ಅಂತ ಕಂ ಪನಿಯವರು ಖಾತ್ರಿ ಕೊಟ್ಟು ನನ್ನಿಂದ ಜಾಸ್ತಿ ಹಣ ತೆಗದು ಕೊಂಡಿದ್ದಾರೆ!

೯ ನಮ್ಮ ಪಾರ್ಟಿಯನ್ನು ಬಿಟ್ಟು, ಎ ದುರು ಪಾರ್ಟಿಗೆ ಸೇರಿದವನು—ಕಳ್ಳ, ಮೋಸಗಾರ, ವಿಶ್ವಾಸ ಘಾತುಕ, ಇತ್ಯಾದಿ. ಎದುರು ಪಾರ್ಟಿಯನ್ನು ಬಿಟ್ಟು ನಮ್ಮ ಪಾ ರ್ಟಿಗೆ ಸೇರಿದವನು—ಜಾಣ, ಬುದ್ಧಿವಂತ Gentleman ಯೋಗ್ಯ ಇತ್ಯಾದಿ! ನೋ ಡಿದಿರಾ, ಹೇಗಿದೆ?

ಆಯುರ್ವೇದ ಕಾಲೇಜ್

ಗುರು ಶಿಷ್ಯರ ಸಂವಾದ.

(ಬರೆದುಬಂದುದು)

ಗುರು—ವೃತ್ತ ಪತ್ರಿಕೆಗಳನ್ನು ನೀನು ಓದುವೆಯೋ?

ಶಿಷ್ಯ—ಹೌದು, ಓದುವೆನು

ಗುರು—ಈಗ ಅವುಗಳಲ್ಲಿ ಬರುವ ವಿ ಚಾರದಲ್ಲಿ ಮುಖ್ಯವಾದುದ ವುದು?

ಶಿಷ್ಯ—ನಮ್ಮ ಆಯುರ್ವೇದ ಕಾಲೇ ಜಿನ ವಿಚಾರ

ಪತ್ರವ್ಯವಹಾರವೆಂಬ ನಾನಾಂಕಿತದಿಂ ದ ಆಗಿಂದಾಗ್ಗ ಬರುತ್ತಲಿರುವ ಎವನ್ನು ನಾನು ಒಂದು ದೇವಸೇವೆ ಮಾಡುವ ವೃ ತ್ತ ಪತ್ರಿಕೆಯಲ್ಲಿ ಓದುತ್ತಿರುವೆನು.

ಗುರು—ಪತ್ರವ್ಯವಹಾರದ ಮುಖ್ಯ ಸಾರಾಂಶವೇನು?

ಶಿಷ್ಯ—ಈಗಿರುವ ಪ್ರಿನ್ಸಿಪಾಲರನ್ನು ಸ್ಥಾನಚ್ಯುತಿ ಮಾಡುವುದು ಮುಖ್ಯೋದ್ದೇಶ ವಾಗಿದ

ಗುರು—ಈ ಪತ್ರವ್ಯವಹಾರದ ಕರ್ತೃ "ಗುರು" ಮತ್ತು "ಕಾಲೇಜಿನ ಹಿತಚಿಂತ ಕನೆಂಬ" ಅವರ ಅಭಿಪ್ರಾಯವು ಸರಿ ಯಾದುದೇ?

ಶಿಷ್ಯ—ಈ ಪತ್ರ ವ್ಯವಹಾರವು ಸಾ ರ್ವಜನಿಕರ ಮತವಲ್ಲ ಅವರ ವ್ಯಕ್ತಿ ದ್ವೇ ಷಿಯ ಮತ್ತು ಸಂಕುಚಿತ ಮನೋಭಾವ ವುಳ್ಳವರ ಅಭಿಪ್ರಾಯ ಈತನಿಗ ಸ್ಪರ್ಧ ತೆಯೇ ಹೆಚ್ಚಿನ ಧ್ಯೇಯ. ಆಯುರ್ವೇದ ಮತ್ತು ಯುನಾನಿ ವಿದ್ಯಾರ್ಥಿಗಳ ಮನಸ್ಸಿ ನಲ್ಲಿ ಒಂದು ಕಳಂಕವನ್ನು ಉಂಟುಮಾಡುವ ಧ್ಯೇಯ ಅಲ್ಲದೆ ಜನರಿಗೆ ಮನಸ್ಸಿನಲ್ಲಿ ಆ ಯುರ್ವೇದ ಕಾಲೇಜಿನ ವಿಚಾರದಲ್ಲಿ ಬೇಸ ರಿಕೆಯನ್ನುಂಟುಮಾಡಿಸುವ ಧ್ಯೇಯ ಆ ದ್ದರಿಂದ ಈತನಿಗ ಈ ಒಪ್ಪರ್ಧೆಯಾದುವು ಸಲ್ಲುವುದಿಲ್ಲ

ಗುರು—ಪ್ರಿನ್ಸಿಪಾಲ್ ಸೀತಾರಾಮ ಶಾಸ್ತ್ರಿಗಳಲ್ಲಿ ವಿದ್ಯಾರ್ಥಿಗಳಿಗೆ ಸಮ್ಮತಿ ಇದ ಯೇ? ಅದು ಹೇಗೆ?

ಶಿಷ್ಯ—ಹೌದು ಇವರು ವಿದ್ಯಾರ್ಥಿಗ ಳ ಕುಂದು ಕೊರತೆಯನ್ನು ವಿಚಾರಿಸಿ, ಅ ವಕ್ಕೆ ತಕ್ಕ ಪರಿಹಾರ ಮಾಡುವುದರಲ್ಲಿ ಸಾ ಮರ್ಥ್ಯವುಳ್ಳವರಾಗಿರುವುದರಿಂದಲೂ, ಎ ರಡು ಶಾಸ್ತ್ರದಲ್ಲಿಯೂ, ಉಚ್ಚ ಪ್ರಾವೀಣ್ಯ ತೆಯನ್ನು ಪಡೆದು ಪಾಠಹೇಳುವುದರಲ್ಲಿ ದ ಕ್ಷತೆಯಿರುವುದರಿಂದಲೂ ಇವರನ್ನು ವಿದ್ಯಾ ರ್ಥಿಗಳು ಪ್ರೀತಿಸುವರು

ಗುರು—ಹಾಗಿದ್ದ ಪಕ್ಷದಲ್ಲಿ ದೇಶಸೇವೆ ಮಾಡುವ ವೃತ್ತ ಪತ್ರಿಕೆಯಲ್ಲಿ ಒಂದೇ ಸ ಮನಾಗಿ ಹೀಗೆ ವಿರೋಧವಾಗಿ ಪ್ರಕಟಿಸ ಬಹುದೆ?

ಶಿಷ್ಯ—ಇದಕ್ಕೆ ಅಂತರ್ಯವು ಎನಗೆ ತಿ ಳಿಯದು. ತಾವೇ ಹೇಳಬೇಕು.

ಗುರು—ಯಾವ ಸಂಸ್ಥೆಯಲ್ಲಿಂದೇ ಆ ಗಲಿ ಮೂರು ವರ್ಷಕ್ಕೆ ಒಮ್ಮೆಯಾದರೂ ನೌಕರರೆಲ್ಲರನ್ನೂ ಬದಲಾಯಿಸುವರು ಆ ದರೆ ಈ ಸಂಸ್ಥೆಯಲ್ಲಿ ಹಾಗಿಲ್ಲ ಅನೇಕ ಮಂದಿ ಹತ್ತು ವರ್ಷಗಳಿಂದ ಒಂದೇಕಡೆ ಇದ್ದು ಹೊಸದಾಗಿ ಬಂದ ಉತ್ಸಾಹಿಗಳಿಗ ಕಾರ್ಯವನ್ನು ನಿರ್ವಹಿಸಲು ಅವಕಾಶವನ್ನು ಕೊಡುವಂತೆ ಕಾಣುವುದಿಲ್ಲ ಅಲ್ಲದೆ ಆ ಯುರ್ವೇದ ಮತ್ತು ಯುನಾನಿ ಕಾಲೇಜು ಒಂದಡೆಯಲ್ಲಿದ್ದರೂ, ಯುನಾನಿ ಸೂಪರಿಂ ಟೆಂಡಂಟನ್ನು ಮಾತ್ರ ಮೂರು ವರ್ಷಕ್ಕೊ ಮ್ಮೆ ಬದಲಾಯಿಸಿ ಆಯುರ್ವೇದ ಕಾಲೇ ಜಿನ ಸೂಪರಿಂಟೆಂಡೆಂಟನ್ನು ಮಾತ್ರ ಹಾ ಗೆ ಮಾಡಿರುವುದಿಲ್ಲ ಆದ್ದರಿಂದಲೇ ಯು ನಾನಿ ವಿದ್ಯಾರ್ಥಿಗಳ ಮತ್ತು ನೌಕರರ ಅ ಸಮಾಧಾನಕ್ಕೆ ಕಾರಣವಾಗಿರುವಂತೆ ತೋರುತ್ತದ

ಇದನ್ನು ಸರಿಪಡಿಸುವತನಕ ಸ್ವಾಸ ಗೌರವ ಮತ್ತು ಅನ್ಯೋನ್ಯತೆಯು ಉಳಿಯು ವಂತಿಲ್ಲ ಅಲ್ಲದ ಕಾಲೇಜಿನ ಹಿತಚಿಂತ ಕನ ಸುಳಿವನ್ನಿತು ಪಂಚತಂತ್ರಾಂತರ್ಗತ ಕರಟಕ ದಮನಕ ಗೂಢ ವ್ಯವಹಾರವೆಲ್ಲ ಕ್ಕೂ ಬೇಗ ಹಾಕಿಸಬೇಕು

ಶಿಷ್ಯ—ಸರಿ ಗುರುಗಳೇ, ತಾವು ಒಳ್ಳೆ ಯ ಬುಸ ಸಂವಾದವನ್ನೇ ಮಾಡಿರುವಿರಿ ಇನ್ನು ನಿತ್ಯ ಕರ್ಮಕ್ಕೆ ಹೊತ್ತಾಯಿತು

"ಇತಿ ಗುರು ಶಿಷ್ಯ ಸಂವಾದೆ ಕರಟಕ ದಮನಕ ಗೂಢ ವ್ಯವಹಾರ ಬಹಿಷ್ಕರಣೋ ನಾಮ ಅಂಕುರಾರ್ಪಣ ಘಟ್ಟಃ ಪ್ರಥ ಮೋಧ್ಯಾಯಃ"

"ಸರ್ ಧಬ್ ಅಯ್ಂ"

ಕುರುಡು ಎಮ್ಮೆಯುದು ಮೇಯುತಲಿತ್ತು
ಭಟ್ಟರಬಾಯದು ಪಟಗಿ ಟುತಿತ್ತು ||

ಸರಭರ ಮಳೆಯು ಸುರಿಯುತಲಿತ್ತು |
ಕುರುಡ ಎಮ್ಮೆಯುದು ತೋಯುತಲಿತ್ತು ||

ಗಾಳಿಯು ರಭಸದಿ ಬೀಸುತಲಿತ್ತು |
ತೆಂಗಿನ ಮರವದು ಹೊಯ್ದಾಡ್ತಿತ್ತು ||

ಗಾಳಿಯಾದರೊ ತಡಯುದಾಗಿತ್ತು |
"ಸರ್" ಎಂಬ ಶಬ್ದವೋ ಹೊರಬಿತ್ತು ||

ತೆಂಗಿನಮರದಿ ಗರಿಯು ಮುರಿಯಿತು |
ಬೀಳೆ "ಧಬ್" ಎಂಬ ಶಬ್ದ ಮಾಡಿತು ||

ಎಮ್ಮೆಯು ಮೆಲ್ಲಗೆ ಸರಿಯುತಲಿತ್ತು |
ತೆಂಗಿನಗರಿಯದು ಮೈಮೇಲೆ ಬಿತ್ತು ||

ಎಮ್ಮೆಗೆ ಏಟದು ಬಲವಾಗಿತ್ತು |
ತಕ್ಷಣ "ಅಯ್ಂ" ಎಂದೊದರುತ ಬಿತ್ತು ||

ಭಟ್ಟರವನುನೋಡುತಲಿದ್ದರು |
ಥಟ್ಟನೆ ಕಲಿತರು "ಸರ್-ಧಬ್-ಅಯ್ಂ" ||

ಶ್ರೀಮನ್ಮಹಾರಾಜರವರ ಯೂರೋಪು ಪ್ರಯಾಣ.

ಶ್ರೀಮನ್ಮಹಾರಾಜರವರು ಈ ತಿಂಗಳ ಅಂತ್ಯದಲ್ಲಿ ಯೂರೋಪಿಗೆ ಪ್ರಯಾಣ ಮಾಡುವುದಾಗಿ ತಿಳಿದು ಬಂದಿದೆ ಅವರೊಡನೆ ದಿವಾನರೂ ಇತರ ಕೆಲವು ಅಧಿಕಾರಿಗಳೂ, ಪಂಡಿತರುಗಳೂ ಹೋಗುವರೆಂದೂ ಗೊತ್ತಾಗಿದೆ ದೇಹಾರೋಗ್ಯವನ್ನು ಸರಿಪಡಿಸಿಕೊಂಡು ಬರಲು ಶ್ರೀಮನ್ಮಹಾರಾಜರವರು ಪ್ರಯಾಣ ಬೆಳೆಸುವರೆಂದು ಹೇಳಲಾಗಿದೆ ನವರಾತ್ರಿಯ ಉತ್ಸವದ ಹೊತ್ತಿಗೆ ವಾಪಸು ಬರುವರೆಂದೂ ತಿಳಿದು ಬಂದಿದೆ. ಮಹಾಸ್ವಾಮಿಯವರು ಯೂರೋಪಿಗೆ ಪ್ರಯಾಣ ಮಾಡುವುದು ಇದೇ ಮೊದಲು ಇತರ ರಾಜರುಗಳ ಪೈಕಿ ಅನೇಕರು ಅನೇಕ ಬಾರಿ ಹೋಗಿ ಬಂದಿರುವರು

ಈ ಹವಾ ಬದಲಾವಣೆಯಿಂದ ಶ್ರೀಮನ್ಮಹಾರಾಜರಿಗೆ ದೇಹಾರೋಗ್ಯ ವುಂಟಾಗುವುದಲ್ಲದೆ ಪಾಶ್ಚಿಮಾತ್ಯ ದೇಶಗಳ ಸ್ಥಿತಿಗತಿಗಳ ಪ್ರತ್ಯಕ್ಷ ಅನುಭವವೂ ಉಂಟಾಗುವುದು ಅವುಗಳಲ್ಲಿ ಉತ್ತಮವಾದ ರೀತಿನೀತಿಗಳನ್ನೂ, ವಿಧಾನಗಳನ್ನೂ ನಮ್ಮಲ್ಲೂ ಜಾರಿಗೆ ತರಲು ಸಹಾಯವಾಗುವುದು ನಮ್ಮ ದೇಶದ ರಾಜ್ಯಭಾರ ಕ್ರಮದಲ್ಲಿಯೂ ನಗರ ಸೌಂದರ್ಯದಲ್ಲಿಯೂ, ಸಾಮಾಜಿಕ ವ್ಯವಹಾರಗಳಲ್ಲಿಯೂ ನಾವು ವಿಶೇಷವಾಗಿ ಪಾಶ್ಚಿಮಾತ್ಯರನ್ನು ಅನುಕರಿಸುತ್ತಿದ್ದೇವೆ ಅವುಗಳಲ್ಲಿ ಒಳ್ಳೆಯವು, ಕೆಟ್ಟವು, ಉಪಯುಕ್ತವಾದವು ಅನುಪಯುಕ್ತವಾದುವು, ಎಲ್ಲವೂ ಬರುತ್ತಿವೆ ಒಳ್ಳೆಯವನ್ನು ಮಾತ್ರ ಸ್ವೀಕರಿಸಿ ಕೆಟ್ಟದನ್ನು ತಿರಸ್ಕರಿಸುವುದು ನಮ್ಮ ಕರ್ತವ್ಯ

ಶ್ರೀಮನ್ಮಹಾರಾಜರವರ ಯೂರೋಪು ಪ್ರಯಾಣದಿಂದ ಅವರು ಸಂಪೂರ್ಣವಾದ ಆರೋಗ್ಯವನ್ನು ಹೊಂದಿ ನಮ್ಮ ದೇಶದ ಅಭಿವೃದ್ಧಿಗೆ ಸಾಧಕವಾದ ಅನೇಕ ಸಲಹೆಗಳನ್ನು ಕೊಡಲು ಅನುವಾಗಿ ಬರಲೆಂದು ನಾವು ಹಾರೈಸುತ್ತೇವೆ

ಮಂಡ್ಯ.

ಸರ್ದಾರ್ ವಲ್ಲಭಾಯಿ ಪಟೇಲರು, ಮಹದೇವ ದೇಸಾಯ್ ಮತ್ತು ಶ್ರೀಮತಿ ಮಣಿ ಪಟೇಲರು ಇಲ್ಲಿಗೆ ಭೇಟಿಯಿತ್ತರು ಅವರುಗಳು ಸಕ್ಕರೆ ಗಿರಣಿಯನ್ನು ನೋಡಬೇಕೆಂಬ ಉದ್ದೇಶ ಇತ್ತು ಗಿರಣಿಯು ಮುಚ್ಚಿತ್ತಾದ್ದರಿಂದ ಅವರು ನೋಡಲು ಇಚ್ಛಿಸಲಿಲ್ಲ ಇಲ್ಲಿನ ಪುರ ಭವನದ ಹತ್ತಿರ ಮ॥ ರಾ॥ ಬಿ ಎಸ್ ರಾಘವೇಂದ್ರರಾವ್, ಸಿ ಲಕ್ಷ್ಮಣರಾವ್, ಬಿ ವಿ ಕೃಷ್ಣ ಮತ್ತು ಇನ್ನೂ ಅನೇಕ ಪುರಪ್ರಮುಖರು ಸರ್ದಾರರನ್ನೂ ಮತ್ತು ಅವರ ಸಹಪಾಠಿಗಳನ್ನೂ ಭೇಟಿ ಮಾಡಿ ಹಾರ ತುರಾಯಿ, ಹಣ್ಣು ಮುಂತಾದುವುಗಳಿಂದ ಗೌರವಿಸಿ ಕಳುಹಿಸಿಕೊಟ್ಟರು

ಸಮತಾವಾದವೇ ಮದ್ದು.

"ಇಂಡಿಯಾ ಸರ್ಕಾರವು ಇತರ ನಾಗರೀಕ ದೇಶಗಳಂತೆ ನಿರುದ್ಯೋಗಿಗಳಿಗೆ ಅನ್ನ ಬಟ್ಟೆಗಳನ್ನು ಒದಗಿಸಬೇಕು, ಇಲ್ಲದಿದ್ದಲ್ಲಿ ಈ ಸಮಸ್ಯೆಯನ್ನು ಪರಿಹಾರಮಾಡುವ ವಿದ್ಯಾವಂತರಿಗ ಸ್ಥಾನಗಳನ್ನು ಕಲ್ಪಿಸಿ ಕೊಡಬೇಕು' ಎಂಬುದಾಗಿ ಪಂಡಿತ ಜವಹರರು ಲಖ್ನೋದಲ್ಲಿ ಸಂಯುಕ್ತ ಸಂಸ್ಥಾನದ ರಾಜಕೀಯ ಸಮ್ಮೇಳನದ ರಠಾವನ್ನು ಅನುಮೋದಿಸುತ್ತಾ ಮಾತನಾಡಿದರು ಸರ್ಕಾರವು ತನ್ನ ಕರ್ತವ್ಯವನ್ನು ಸರಿಯಾಗಿ ನಡಸಿಕೊಂಡು ಬರದಿದ್ದರಿಂದ ಈ ಠರಾವು ಸರ್ಕಾರವನ್ನು ಖಂಡಿಸಿದೆ ಮ॥ ಸಂಪೂರ್ಣಾನಂದರು ನಿರುದ್ಯೋಗ ಸಮಸ್ಯೆಗೆ ಸಪ್ರೂ ಸಮಿತಿಯವರು ಸೂಚಿಸಿರುವ ಅನೇಕ ಸಲಹೆಗಳು ಕಸದ ಬುಟ್ಟಿಗೆ ತಳ್ಳಲು ಯೋಗ್ಯವಾಗಿವೆ ಎಂದು ಹೇಳಿದರು ಇಂದಿನ ಸರ್ಕಾರವು ಈ ಸಮಸ್ಯೆಯನ್ನು ಪರಿಹರಿಸಲು ಸಾಧ್ಯವಿಲ್ಲವೆಂದು ಭಾಷಣಕರ್ತರಿಬ್ಬರೂ ಮಾತನಾಡಿದರು ಸಮತಾವಾದದ ತಳಹದಿಯನ್ನುಳ್ಳ ಸರ್ಕಾರದಿಂದಲೇ ಈ ಭಾರೀ ಸಮಸ್ಯೆಯನ್ನು ನಿವಾರಣೆ ಮಾಡುವುದು ಸಾಧ್ಯ ಎಂಬ ಸಲಹೆಯು ಅನುಮೋದಿಸಲ್ಪಟ್ಟಿತು

"ಮುಂದೆ ಇಂಡಿಯಾಕ್ಕೆ ಬರತಕ್ಕ ರಾಜ್ಯಾಂಗ ರಚನೆಯಿಂದ ಭಾರತಕ್ಕೆ ರಾಜಕೀಯ ಮತ್ತು ಆರ್ಥಿಕ ವಿಷಯದಲ್ಲಿ ಬ್ರಿಟಿಷರ ವಜ್ರ ಮುಷ್ಟಿಯ ಬಿಗಿಯು ಇನ್ನೂ ಹೆಚ್ಚಿ ದೇಶದ ಅನರ್ಥ ಪರಂಪರೆಯು ಇಮ್ಮಡಿಯಾಗುವುದರಲ್ಲಿ ಸಂದೇಹವಿಲ್ಲ ಆದ್ದರಿಂದ ಮುಂದೆ ಭಾರತಕ್ಕೆ ಬರುವ ರಾಜ್ಯಾಂಗ ರಚನೆಯನ್ನು ಏಕವಾಕ್ಯದಿಂದ ತಳ್ಳಿ ಮೂಲೆಗೆ ಸೇರಿಸಲೇಬೇಕು ಎಂಬ ನಿರ್ಣಯವು ಅಂಗೀಕರಿಸಲ್ಪಟ್ಟಿತು

'ಕಾಂಗ್ರೆಸ್ಸು ಸಂಪೂರ್ಣ ಸ್ವರಾಜ್ಯ ಕ್ಕೋಸ್ಕರ ಹೋರಾಡುವುದೇ ಹೊರತು ಅನ್ಯಥಾ ಅಲ್ಲ ಒದು ಸ್ವಾತಂತ್ರ್ಯ ಸಂಗ್ರಾಮದಲ್ಲಿ ಮುಂದುವರಿದು ಜಯಭೇರಿಯನ್ನು ಹೊಡೆಯುತ್ತಲಿದೆ ಜಮೀನ್ದಾರಿ ಪದ್ಧತಿಯು ಸಲಹೆಗಳನ್ನು ಒಪ್ಪುವುದೇ ಇಲ್ಲ ಆದರೆ ಬಡ ನಿರುದ್ಯೋಗಿಗಳಿಗೆ ಅನ್ನ ಒದಗಿಸಲು ಹಗಲಿರುಳು ಸೇವೆಮಾಡುತ್ತದೆ ಆದ್ದರಿಂದ ನೀವೆಲ್ಲರೂ ಕಾಂಗ್ರೆಸ್ಸಿನ ಪ್ರತಿನಿಧಿಗಳಿಗೆ ಸಹಾಯಕರಾಗಬೇಕು' ಎಂದು ಪಂಡಿತ ಗೋವಿಂದ ವಲ್ಲಭ್ ಪಂತ್ ರವರು ಭಾಷಣ ಮಾಡಿದರು ಸಾವಿರಾರು ಜನ ರೈತರು ಈ ಸಭೆಯಲ್ಲಿ ಭಾಗಿಗಳಾಗಿದ್ದರು

ದಸರಾ ವಸ್ತು ಪ್ರದರ್ಶನ

ಬರುವ ನವರಾತ್ರಿ ಉತ್ಸವ ಸಮಯದಲ್ಲಿ ನಡೆಯುವ ವಸ್ತು ಪ್ರದರ್ಶನದಲ್ಲಿ ಸ್ಟಾಲುಗಳಿಗೆ ಬಾಡಿಗೆಯನ್ನು ವಿಶೇಷವಾಗಿ ಹೆಚ್ಚಿಸುವರೆಂದೂ, ಪರದೇಶಿ ವಸ್ತುಗಳಿಗೆ ವಿಶೇಷವಾಗಿ ಅವಕಾಶ ಕೊಡಲಾಗುವುದೆಂದೂ ಒಬ್ಬ ಸ್ಟಾಲು ಹೋಲ್ಡರು ತಿಳಿಸುತ್ತಾರೆ ಈ ವಿಷಯದಲ್ಲಿ ಸ್ಟಾಲು ಹೋಲ್ಡರುಗಳಲ್ಲಿ ಅಸಮಾಧಾನ ವುಂಟಾಗಿರುತ್ತದೆ. ಸ್ಟಾಲುಗಳಿಗೆ ಈಗ ಇರುವ ಬಾಡಿಗೆಯೇ ಬಹಳ ಹೆಚ್ಚೆಂದು ಹೇಳಲಾಗಿದೆ. ವಿದೇಶಿ ವಸ್ತುಗಳಿಗೆ ಹೆಚ್ಚು ಪ್ರೋತ್ಸಾಹ ಕೊಡುವುದು ಸೂಕ್ತವಲ್ಲ ಸ್ವದೇಶಿ ವಸ್ತುಗಳನ್ನು ಪ್ರೋತ್ಸಾಹಿಸುವುದೇ ವಸ್ತು ಪ್ರದರ್ಶನಗಳ ಉದ್ದೇಶ ಅವುಗಳು ವಿದೇಶಿ ವಸ್ತುಗಳ ವಿಕ್ರಯದ ಮಾರ್ಕೆಟ್ಟುಗಳಾಗಿ ಪರಿಣಮಿಸಬಾರದು ಈ ವಿಷಯಗಳಿಗೆ ಪ್ರದರ್ಶನ ಸಮಿತಿಯವರು ತಮ್ಮ ಗಮನವನ್ನು ಕೊಡಬೇಕು

"ವ್ಯಕ್ತಿ ಪೂಜೆಗಿಂತ ಧ್ಯೇಯ ಸಾಧನೆ ಶ್ರೇಷ್ಠ."

ಫೈಜಾಪುರದಲ್ಲಿ ಜವಹರಲಾಲ್ ನೆಹ್ರೂರವರು ಸಾರ್ವಜನಿಕ ಸಭೆಯೊಂದರಲ್ಲಿ ಭಾಷಣಮಾಡುತ್ತಾ ಹೀಗೆಂದು ಹೇಳಿದರು —

"ವ್ಯಕ್ತಿಯ ಆರಾಧನೆಗಿಂತ ಧ್ಯೇಯ ಸಾಧನೆಗಳು ಶ್ರೇಷ್ಠ ನನಗೆ ನೀವು ಗೌರವತೋರಿಸಬೇಕಾದರೆ ನನ್ನ ಆದರ್ಶವನ್ನೂ ನೀವು ಗೌರವಿಸಬೇಕು ಭಿನ್ನ ಭಿನ್ನವಾದ ವ್ಯಕ್ತಿಗೌರವ ಪುರಸ್ಕಾರಗಳಿಂದ ಏನೂ ನಡೆಯದು ನಿಜವಾದ ಶಕ್ತಿ ಸಾಮರ್ಥ್ಯಗಳು ಜನಸಾಮಾನ್ಯದಲ್ಲಿ ಐಕ್ಯವಾಗಿರುವುವು, ಜನಸಾಮಾನ್ಯರೇ ಗೌರವಾರ್ಹರು"

ಪ್ರವಾಹ

ದಿಬ್ರುಘರದಲ್ಲಿ ಬ್ರಹ್ಮಪುತ್ರ ನದಿಯ ಪ್ರವಾಹದಿಂದ ಉಕ್ಕೇರಿ ಎರಡು ಹಳ್ಳಿಗಳನ್ನು ಮುಳುಗಿಸಿವೆ. ಅನೇಕ ಮನೆಗಳು ಮುಳುಗಿವೆ ಎಷ್ಟೋ ಪ್ರಾಂತ್ಯಗಳು ಜಲಗ್ರಸ್ತವಾಗಿವೆ ಅನೇಕ ಮಂದಿ ಆಶ್ರಯವಿಲ್ಲದ ಅನಾಥರಾಗಿದ್ದಾರೆ

ಬಿದ್ದು ಮರಣ

ಬರ್ಲಿನ್ ಸನೆಟ್ಟಿನ ಸದಸ್ಯರಾದ ಎ ಬೆಡಗ್ಗೇರವರು ಲಂಡನ್ನಲ್ಲಿ ಭಾಷಣಮಾಡುತ್ತಿದ್ದಾಗ ಆಕಸ್ಮಿಕವಾಗಿ ಬಿದ್ದು ಮರಣ ಹೊಂದಿದರು.

ಹೋಟೇಲುಗಳಿಗೆ ಹರಿಜನರು

ಪೂನಾದಲ್ಲಿನ ಅನೇಕ ಪ್ರಮುಖ ಹಿಂದೂ ಹೋಟೇಲುಗಳು ಹರಿಜನರ ಅರಿಕೆಯ ಫಲವಾಗಿ ಅವರಿಗೂ ಪ್ರವೇಶವನ್ನು ಕಲ್ಪಿಸಿವೆ

ಶ್ರೀರಾಮಕೃಷ್ಣಾಶ್ರಮ

ಶ್ರೀರಾಮಕೃಷ್ಣಾಶ್ರಮದ ೧೯೩೫ ನೇ ಸಾಲಿನ ವರದಿಯನ್ನು ಸ್ವೀಕರಿಸಿದ್ದೇವೆ. ಕಳೆದ ವರ್ಷದಲ್ಲಿ ಆಶ್ರಮವು ಬಹಳ ಕೆಲಸವನ್ನು ಮಾಡಿದೆ ಅನೇಕ ಸ್ಕೂಲುಗಳಲ್ಲಿಯೂ ವಿದ್ಯಾರ್ಥಿ ನಿಲಯಗಳಲ್ಲಿಯೂ ಧರ್ಮಬೋಧೆಯನ್ನು ನಡೆಸಿದೆ ಮತ್ತು ಶ್ರೀರಾಮಕೃಷ್ಣ ವಿವೇಕಾನಂದ, ಕ್ರೈಸ್ತ ಮುಂತಾದ ಮಹಾತ್ಮರ ಜನ್ಮ ದಿವಸಗಳನ್ನು ಅವರ ನಾಮಸ್ಮರಣ ಮತ್ತು ಗುಣಕಥನವನ್ನು ನಡೆಸಿದೆ ಶ್ರೀರಾಮಕೃಷ್ಣಾಶ್ರಮದಿಂದ ನಡೆಸಲ್ಪಡುತ್ತಿರುವ ವಿದ್ಯಾರ್ಥಿ ನಿಲಯವು ಅಭಿವೃದ್ಧಿ ಸ್ಥಿತಿಯಲ್ಲಿ ಇದೆ ಆಶ್ರಮವು ಒಂದು ಪುಸ್ತಕ ಭಂಡಾರವನ್ನು ನಡೆಸುತ್ತಿದೆ ಹಡವಾನಹಳ್ಳಿಯಲ್ಲಿ ಒಂದು ಸೇವಾ ಸಮಿತಿ' ಯನ್ನು ಆಶ್ರಮದವರು ಮಾಡಿ ಅಲ್ಲಿಯ ಜನಗಳಿಗೆ ಬಹಳ ಉಪಕಾರವನ್ನು ಮಾಡಿದ್ದಾರೆ 1935 ನೇ ಆದಾಯವು ರೂ 3,801 7 6 ವ್ಯಯವು ರೂ 3,352 9 8 ಆಗಿದೆ ಭಂಡಾರದಿಂದಲೇ ರೂ 3,206 ಬಂದಿದೆ ಇನ್ನು ಮುಂದೆಯೂ ಆಶ್ರಮವು ಹೀಗೆಯೇ ಅಭಿವೃದ್ಧಿ ಹೊಂದುವುದೆಂದು ನಂಬುತ್ತೇವೆ

ಉಚಿತ ಶಿಕ್ಷಣ.

ಮೈಸೂರಿನಲ್ಲಿ ನೂತನವಾಗಿ ಸ್ಥಾಪಿತವಾಗಿರುವ ಶ್ರೀ ಇಂದಿರಾ ಎಲೆಕ್ಟ್ರಿಕಲ್ ಕಂಪನಿಯ ಕಾರ್ಯನಿರ್ವಾಹಕ ಮಂಡಲಿಯವರು ಹಳೇ ಅಗ್ರಹಾರದಲ್ಲಿರುವ ತಮ್ಮ ಕಂಪನಿಯ ಕಟ್ಟಡದಲ್ಲಿ ಜುಲೈ ಒಂದನೇ ತಾರೀಖು ಲಾಗಾಯ್ತು ಒಂದು ಉಚಿತ ಶಿಕ್ಷಣ ಶಾಲೆಯನ್ನು ಪ್ರಾರಂಭಿಸಲು ನಿರ್ಧರಿಸಿರುತ್ತಾರೆ ಈ ಶಾಲೆಯು ಬೆಳಿಗ್ಗೆ 7 ರಿಂದ 9ರ ವರೆವಿಗೂ ಮತ್ತು ಸಾಯಂಕಾಲ 5 30ರಿಂದ 7ರ ವರೆವಿಗೂ ನಡೆಸಲ್ಪಡುತ್ತೆ. ಈ ಶಾಲೆಯಲ್ಲಿ ಎಸ್ ಎಸ್. ಎಲ್. ಸಿ ಮತ್ತು ಮಿಡಲ್ ನಾಲ್ಕನೇ ತರಗತಿಗಳಲ್ಲಿ ಓದುತ್ತಿರುವ ಬಡ ವಿದ್ಯಾರ್ಥಿಗಳಿಗೆ ಉಚಿತವಾಗಿ ಶಿಕ್ಷಣವು ಕೊಡಲ್ಪಡುವುದು ಈ ಶಾಲೆಗೆ ಸೇರಲಪೇಕ್ಷಿಸುವ ವಿದ್ಯಾರ್ಥಿಗಳು ಇದೇ ತಿಂಗಳು 25ನೇ ತಾರೀಖಿನ ಒಳಗಾಗಿ ಕಂಪನಿಯ ಸೆಕ್ರಿಟರಿಯವರಿಗೆ ಬರೆದುಕೊಳ್ಳಬೇಕಾಗಿರುತ್ತೆ.

ಲೋಕಲ್ ಸರ್ವೀಸ್ ಪರೀಕ್ಷೆ.

ತೇರ್ಗಡೆಯಾದವರ ನಂಬರುಗಳನ್ನು ಇಲ್ಲಿ ಕೊಟ್ಟಿದೆ

ಇಕಂಟ್ಯಾಕ್ಸ್—೫೫೪ ಒಟ್ಟಿಗೆ ಒಬ್ಬರು ಪಾಸು

ಕ್ರಿಮಿನಲ್ ಲೋಯರ್ —೧೦೫, ೧೩೦, ೩೭೩, ೫೧೨, ಒಟ್ಟಿಗೆ ನಾಲ್ವರು ಪಾಸು

ಎಕ್ಸೈಜ್ —೧೨೫, ೧೪೪, ೩೦೭, ೩೫೨, ೩೬೪, ೩೯೦, ೩೫೯, ೩೭೯, ೪೧೩, ೪೩೪, ೪೪೩, ೪೪೯, ೪೭೭, ೪೭೯, ೪೬೮, ೪೯೩, ೫೨೨, ೬೭೪, ೬೯೦, ೭೧೫, ೭೫೩, ೭೪೦, ೭೭೭, ೮೪೪

ಒಟ್ಟಿಗೆ ೨೪ ಮಂದಿ ಪಾಸು

೩೫೦ ವರ್ಷದ ಯೋಗಿ.

ಹಿಮಾಲಯ ಪ್ರಾಂತ್ಯದಲ್ಲಿ 350 ವರ್ಷದ ಯೋಗಿಯೊಬ್ಬನಿರುವನು ಶಿವಾಜಿ ಮಹಾರಾಜನ ಸೇನಾಪತಿಯಾಗಿ ಆತನು ಮೊಗಲಾಯರೊಡನೆ ಯುದ್ಧಮಾಡಿ ಕಾದಾಡಿದ್ದನು ಆಂಧ್ರ ದೇಶದ ನರಸಿಂಹ ಮೂರ್ತಿ ಎಂಬ ತರುಣನೊಬ್ಬನು ಹಿಮಾಲಯ ಪ್ರಾಂತ್ಯದಲ್ಲಿ ಸಂಚಾರ ಹೋಗಿದ್ದಾಗ ಈ ಯೋಗಿಯನ್ನು ಸಂದರ್ಶಿಸಿದನು ಆತನ ಪ್ರಯಾಣದಲ್ಲಿ ಅನೇಕ ತೊಂದರೆಗಳು ಒದಗಿದವು. ಒಂದು ಸಮಯದಲ್ಲಿ ಬದರೀನಾಥನ ಹತ್ತಿರ ಆತನು ಬೆಟ್ಟದಿಂದ ಜಾರಿ ಬೀಳುವುದರಲ್ಲಿದ್ದನು ಒಂದು ರಾತ್ರಿ ಆತನು ಚಳಿಯಿಂದ ನಡುಗುತ್ತಾ ಬಂಡೆಯೊಂದನ್ನು ಒರಗಿಕೊಂಡು ಕುಳಿತಿರಲು ದೂರದಲ್ಲಿ ಮಿನುಗುವ ಜ್ಯೋತಿಯೊಂದು ಕಾಣಬಂತು. ಅದರ ಕಡೆ ಹೊರಟನು ಅಲ್ಲಿ ಆ ಯೋಗಿಯು ಧ್ಯಾನಾರೂಢನಾಗಿದ್ದುದನ್ನು ಕಂಡನು. ತನಗೆ ಯೋಗವನ್ನು ಉಪದೇಶ ಮಾಡಬೇಕೆಂದು ಕೇಳಿದನು ಇವನ ಪ್ರಾರ್ಥನೆಯು ಈಡೇರಿಸಲ್ಪಟ್ಟಿತು. ಈ ಯೋಗಿಯು ತನಗೆ ಪುನರ್ಜನ್ಮವು ಉಂಟಾಗುವದಿಲ್ಲವೆಂಬ ಭರವಸ ಬಂದ ಮೇಲೆಯೇ ದೇಹತ್ಯಾಗ ಮಾಡುವುದಾಗಿ ನಿರ್ಣಯಿಸಿರುವನು —ಹಾಗೆಂಬುದಾಗಿ ಮೇಲ್ಕಂಡ ಯುವಕನು ಒಂದು ಭಾಷಣದಲ್ಲಿ ತಿಳಿಸಿದನು

ಗ್ರಾಮಾಫೋನಿಗಾಗಿ ಗ್ರಾಮಸ್ಥರೆಲ್ಲರ ದಸ್ತಗಿರಿ.

ಒಂದು ಗ್ರಾಮೋಫೋನ್ ಮತ್ತು ಒಂದು ಬೆಳ್ಳಿ ಸರ, ಇವುಗಳ ಕಳುವಿಗಾಗಿ ಒಬ್ಬ ಹಿಂದು ಗ್ರಾಮಸ್ಥರೆಲ್ಲರೂ ದಸ್ತಗಿರಿ ಮಾಡಿದರು. ಅನಂತರ ಜಾಮೀನಿನ ಮೇಲೆ ಎಲ್ಲರೂ ಬಿಡಲ್ಪಟ್ಟರು ಝಾನ್ಸಿಯಿಂದ ಎಂಟು ಮೈಲಿ ದೂರದಲ್ಲಿರುವ ಬರಾರಿ ಸರ್ಕಾರಿ ದನಗಳ ಫಾರಂನಲ್ಲಿ ಮೇಲ್ಕಂಡ ಸಾಮಾನುಗಳು ಕಳೆದುಹೋದವು ಪಕ್ಕದಲ್ಲಿರುವ ಈಶಘಡವೆಂಬ ಗ್ರಾಮದಲ್ಲಿ ಶೋಧನೆಗಳನ್ನು ನಡೆಸಿ ಪೋಲೀಸರು ಜನರೆಲ್ಲರನ್ನೂ ದಸ್ತಗಿರಿ ಮಾಡಿದರು ಎಲ್ಲಿ ಹುಡುಕಿದರೂ ಮಾಲು ಸಿಕ್ಕಲಿಲ್ಲ ಆದರೂ ದಸ್ತಗಿರಿ, ಜಾಮೀನು ಈ ನಾಟಕ ಮಾತ್ರ ನಡೆದುಹೋಯಿತು ಸರ್ಕಾರಿ ಸಾಮಾನುಗಳಾಗುವ ಹೊತ್ತಿಗೆ ಈ ನಾಟಕ! ಖಾಸಗಿ ಜನರದಾಗಿದ್ದರೆ?”

ಮೈಸೂರು ಪೌರಸಭೆ.

ಕಳೆದ ಶನಿವಾರ ಮಧ್ಯಾಹ್ನ ಮೈಸೂರು ಪೌರಸಭೆಯ ವಿಶೇಷ ಮೀಟಿಂಗು ನಡೆಯಿತು ಬಜೆಟ್ಟುಗಳನ್ನು ಪರ್ಯಾಲೋಚಿಸುವುದು ಮತ್ತು ಒಂದು ದೀರ್ಘಕಾಲದ ಸಾಲವನ್ನು ತೆಗೆಯುವುದು, ಇವೇ ಸಭೆಯಲ್ಲಿ ಚರ್ಚೆಗೆ ಇದ್ದ ಅಂಶಗಳು ಹದಿನೈದು ವರ್ಷಗಳ ಅವಧಿಯಲ್ಲಿ ದೀರ್ಘವಾದ ಸಾಲವನ್ನು ತೆಗೆದು ಈಗಿರುವ ಸಾಲಗಳನ್ನು ತೀರಿಸುವುದು ಮತ್ತು ಕೆಲವು ಮುಖ್ಯವಾದ ಅಭಿವೃದ್ಧಿ ಕಾರ್ಯಗಳನ್ನು ಕೈಕೊಳ್ಳುವುದು ಎಂಬ ತೀರ್ಮಾನವು ಅಂಗೀಕೃತವಾಯಿತು ಮ್ಯಾನೇಜಿಂಗ್ ಕಮಿಟಿಯವರು ಶಿಫಾರ್ಸ್ ಮಾಡಿದ್ದ ಕೆಲವು ಖರ್ಚಿನ ಭಾಗಗಳು ಚರ್ಚಿಸಲ್ಪಟ್ಟು ಸ್ವಲ್ಪ ಬದಲಾವಣೆಯೊಡನೆ ಅಂಗೀಕರಿಸಲ್ಪಟ್ಟವು

ಇದುವರೆಗೆ ಈ ಸಭೆಯು ಸಾಯಂಕಾಲದ ಹೊತ್ತು ಆಗುತ್ತಿತ್ತು ಆದರಿಂದ ಕೆಲಸವು ಸಾಕಾದಷ್ಟು ನಡೆಯುವುದಿಲ್ಲವೆಂದು ಕಂಡು ಬಂದಿತು ಬೆಳಗಿನ ಹೊತ್ತು ನಡೆಯುವಂತೆ ಏರ್ಪಾಡಾಯಿತು. ಇದೂ ಸದಸ್ಯರಿಗೆ ಅನುಕೂಲವಿಲ್ಲವೆಂದು ಕಂಡುದರಿಂದ ಮಧ್ಯಾಹ್ನದ ಹೊತ್ತು ಏರ್ಪಾಡಾಗಿದೆ ಸದಸ್ಯರ ಸಂಖ್ಯೆಯೇನೂ ಕಡಮೆಯಿರಲಿಲ್ಲ ಮೊನ್ನೆ ಸಭೆಯಲ್ಲಿ ಸ್ವಲ್ಪ ಬಿರುಸಿನ ಮಾತುಕತೆಗಳಾದವು. ಇವು ವಿಷಯಕ್ಕೆ ಸಂಬಂಧಪಟ್ಟವಲ್ಲ ಕಾರ್ಯಕ್ರಮದ ರೀತಿಗೆ ಸಂಬಂಧಪಟ್ಟವು ಉಪಹಾರಾನಂತರ ಕಾರ್ಯಕ್ರಮಗಳು ಸುಲಲಿತವಾಗಿ ನಡೆದವು

ಬೆಂಚುಕೋರ್ಟಿಗೆ ಬೆಂಕಿ.

ಶಿವಮೊಗ್ಗದ ಬೆಂಚು ಕೋರ್ಟಿಗೆ ಯಾರೋ ದುರಾತ್ಮರು ಕಿಟಿಕಿಯ ಸರಳುಗಳನ್ನು ಬಗ್ಗಿಸಿ, ನಡುರಾತ್ರಿಯಲ್ಲಿ ಬೆಂಕಿ ಹಚ್ಚಿದರು ಕೋರ್ಟಿನ ಅನೇಕ ಮುಖ್ಯ ಕಾಗದಪತ್ರಗಳೂ, ಮೇಜು, ಕುರ್ಚಿಗಳೂ ಭಸ್ಮೀಭೂತವಾದವು ಮುಂಭಾಗದಲ್ಲಿರುವ ವರಾಂಡದ ಗೋಡೆಗಳು ಮಾತ್ರ ಉಳಿದಿವೆ

ಆ ಊರಿನ ಪೋಲೀಸ್ ಮತ್ತು ಜಿಲ್ಲಾ ಅಧಿಕಾರಿಗಳು ಮಾರನೆಯ ದಿನ ಪ್ರಾತಃಕಾಲ ಕೋರ್ಟು ಹತ್ತಿರ ಹೋಗಿ ತನಿಖೆ ನಡೆಸಿದರು ಬೆಳಗಿನ ರೂವ ಪೋಲೀಸ್ ಜವಾನನೊಬ್ಬನು ಕೋರ್ಟು ಹತ್ತಿ ಉರಿಯುತ್ತಿದ್ದುದನ್ನು ಕಂಡು ಪೋಲೀಸ್ ಸ್ಟೇಷನ್ನಿಗೆ ವರ್ತಮಾನ ಕೊಟ್ಟನಂತರ ಪೋಲೀಸಿನವರು ಬಂದು ನೋಡಿದರು ಅಷ್ಟು ಹೊತ್ತಿಗೆ ಎಲ್ಲವೂ ಉರಿದುಹೋಗಿದ್ದಿತು. ರಿಕಾರ್ಡುಗಳಲ್ಲದೆ 800 ರೂಗಳ ನಷ್ಟವಾಗಿದೆ ಎಂದು ತಿಳಿದುಬಂದಿದೆ ಪ್ರಕೃತ ಕೋರ್ಟನ್ನು ಎಕ್ಸೈಜ್ ಆಫೀಸಿನಲ್ಲಿ ನಡೆಸಲಾಗುವುದು.

ಮಸೀದಿಯಲ್ಲಿ ಪ್ರಣಯ ಕಲಹ.

ಪವಿತ್ರವೆನಿಸಿದ ಮಸೀದಿಯಲ್ಲಿ ಅಸಂಗತವೊಂದು ನಡೆಯಿತು ಮಹಮದೀಯ ಯುವಕ ಮತ್ತು ಯುವತಿ ಇಬ್ಬರೂ ಮಸೀದಿಯಲ್ಲಿ ಪರಸ್ಪರ ಮುತ್ತಿಡುತ್ತಾ ಮಸೀದಿಯನ್ನು ಅಪವಿತ್ರಮಾಡಿದರೆಂದು ಫಿರೋಜ್ ಪುರದ ಒಂದು ಮಸೀದಿಯಲ್ಲಿ ಭಾರಿ ಕೋಲಾಹಲವು ಪ್ರಾರಂಭವಾಯಿತು ಇವರ ಪ್ರಣಯವನ್ನು ಕೆಲವು ಹುಡುಗರು ನೋಡಿ ಎಲ್ಲಾ ಕಡೆಗೂ ತಿಳಿಸಿಬಿಟ್ಟರು. ಸ್ವಲ್ಪ ಹೊತ್ತಿನಲ್ಲಿಯೇ ಒಂದು ದೊಡ್ಡ ಮುಸಲ್ಮಾನರ ಗುಂಪು ಪ್ರಣಯಿಗಳಿಬ್ಬರನ್ನೂ ಅಟ್ಟಿಸಿಕೊಂಡು ಹೋಯಿತು ಹುಡುಗಿಯ ತಂದೆ ತಾಯಿಗಳು ಹೆದರಿಕೆಯಿಂದ ಆ ಹುಡುಗಿಯನ್ನು ತಮ್ಮ ಸಂಗಡ ಕರೆದುಕೊಂಡು ಆ ಹಳ್ಳಿಯನ್ನು ಬಿಟ್ಟು ಪಲಾಯನಮಾಡಿದರು

ಹುಡುಗಿಯನ್ನು ಹಿಡಿಯಲು ಆಗದೆ ನಿರಾಶರಾಗಿ ಮಹಮ್ಮದೀಯರು ಯುವಕನನ್ನಾದರೂ ಹಿಡಿದು ಬಿಡಬೇಕೆಂದು ನಿರ್ಧರಿಸಿದರು ಮುಸಲ್ಮಾನ ಮೌಲ್ವಿಯೊಬ್ಬನು ಕುರಾನನ್ನು ಬಿಚ್ಚಿ ನೋಡಿ ಆ ಯುವಕನನ್ನು ಗಲ್ಲಿಗೆ ಹಾಕುವುದು ಸರಿಯಾದ ಶಿಕ್ಷೆ ಎಂದು ಘಂಟಾಘೋಷವಾಗಿ ಸಾರಿದನು ಅಂದಿನ ಮುಸಲ್ಮಾನರ ಗುಂಪು ಯುವಕನ ಮರಣವನ್ನೇ ಅಪೇಕ್ಷಿಸುತ್ತಿತ್ತು ಇದನ್ನು ನೋಡಿದೊಡನೆಯೇ ಯುವಕನು ಒಂದು ಮನೆಗೆ ಹೋಗಿ ಅವಿತುಕೊಂಡು ಬಾಗಿಲನ್ನು ಭದ್ರವಾಗಿ ಹಾಕಿಕೊಂಡನು ತರುವಾಯ ಪುರಪ್ರಮುಖರು ಆ ಗುಂಪನ್ನು ಬಹಳ ಪ್ರಯಾಸದಿಂದ ಚದುರಿಸಿದರು ಈಗಲೂ ಕೂಡ ಆ ಯುವಕನು ಸಮಾಜದಿಂದ ಬಹಿಷ್ಕೃತನಾಗಿದ್ದಾನೆ ಮಸೀದಿಗೆ ಪ್ರಾರ್ಥನೆಗೋಸ್ಕರ ಹೋಗುವುದಕ್ಕೂ ಮತ್ತು ಮಹಮ್ಮದೀಯ ವರ್ತಕರ ಅಂಗಡಿಯಲ್ಲಿ ವ್ಯಾಪಾರ ಮಾಡುವುದಕ್ಕೂ ನಿರ್ಬಂಧವಿದೆ

ಅಬ್ದುಲ್ಲಾ ಗಾಂಧಿ.

ಮಹಾತ್ಮರ ಹಿರೇಮಗನಾದ ಹೀರಾಲಾಲನು ಮುಸಲ್ಮಾನ ಮತಕ್ಕೆ ಸೇರಿ ಅಬ್ದುಲ್ಲಾ ಗಾಂಧಿಯಾಗಿರುವನಷ್ಟೆ. ಆತನನ್ನು ಮುಸಲ್ಮಾನ ಪ್ರತಿನಿಧಿಯಾಗಿ ಕೌನ್ಸಿಲ್ ಆಫ್ ಸ್ಟೇಟ್ ಚುನಾವಣೆಗೆ ನಿಲ್ಲಿಸುವರೆಂದೂ ಅವರ ಪೈಕಿ ಆತನಿಗೆ ಪ್ರತಿಯಾಗಿ ಯಾರೂ ಉಮೇದುವಾರರಾಗುವದಿಲ್ಲವೆಂದೂ ತಿಳಿದುಬಂದಿದೆ ಆದ್ದರಿಂದ ಆತನು ಚುನಾಯಿಸಲ್ಪಡುವ ಸಂಭವವಿದೆ ಇದಾದನಂತರ ಆತನು ಮಕ್ಕಾ ಯಾತ್ರೆಗೆ ಹೋಗಿ ಬರುವನೆಂದೂ ತಿಳಿಸಲಾಗಿದೆ ಆ ಮೇಲೆ ಆವನು ಹಾಜಿ ಅಬ್ದುಲ್ಲಾ ಆಗುವನು ಅಲ್ಲಿಗೆ ಆತನು ತನ್ನ ಇಷ್ಟಾರ್ಥವನ್ನು ಪೂರ್ಣವಾಗಿ ಈಡೇರಿಸಿಕೊಂಡಂತಾಗುತ್ತದೆ.

ನಂಜನಗೂಡು ವರ್ತಮಾ

ಕರ್ನಾಟಕ ಸಂಘ —ಬರುವ ೨
ಯ ತಾರೀಖಿನಿಂದ ಈ ಸಂಘದವರು
ವಿದ್ಯಾನಿಲಯದ ಉಪನ್ಯಾಸ ಸಪ್ತಾ
ನ್ನು ನೆರವೇರಿಸುವರೆಂದೂ ಮುಂದಿನ
ಗಳು ಶ್ರೀರಾಮಕೃಷ್ಣ ಪರಮಹಂಸ
ಶತಮಾನೋತ್ಸವ ಸಂಬಂಧವಾಗಿ
ದ ತತ್ವಶಾಸ್ತ್ರ ಮಹಾಸಭೆಯನ್ನೂ
ನೆರವೇರಿಸುವವರಾಗಿರುವರೆಂದೂ ವಿ
ದ್ಯಾನಿಲಯದ ಪದವೀಧರರೂ ವಿಶೇಷ
ಗಿ ಸಹಾಯ ಮಾಡುವರೆಂದೂ ಗೊ
ಗಿದೆ

ಮುನಸಿಫ್ ಕೋರ್ಟು —ಈಗ
ರು ಜಡ್ಜಿಗಳು ಒಬ್ಬರಮೇಲೊಬ್ಬರು
ದುಹಿನಿಂದ ಕೆಲಸ ಮಾಡುತ್ತಿರುವ
ಕ್ಷಿಗಾರರ ತಪ್ಪುಗಳು ಅತ್ಯಲ್ಪವಾಗಿ
ಕೆಲವು ಮೊಕದ್ದಮೆಗಳು ಯಾವ
ಯಿತಿಯೂ ಇಲ್ಲದೆ ವಜಾ ಆಗುತ್ತ
ಇದರಿಂದ ಅನೇಕ ಜನರಿಗೆ ನಷ್ಟಗಳು
ಗಿವೆಯೆಂದು ತಿಳಿದುಬರುತ್ತದೆ ಎ
ಇದೇ ಬೊಟ್ಟೆಯಾಗಿದೆ

ಗಿರಿಜಾ ಕಲ್ಯಾಣ —ಶ್ರೀಯವರ
ಜಾ ಕಲ್ಯಾಣ ಮಹೋತ್ಸವವು ಸ
ಸುತ್ತಿದೆ ಹೊಸ ಪೇಷ್ಕಾರರು, ಪ್ರಕ
ಅತಿಥಿ ಸತ್ಕಾರ, ಉತ್ಸವಾದಿಗಳ ಪ್ರೈ
ಇವುಗಳಿಗೆ ಗಮನಕೊಟ್ಟು ಮಹಾ
ಸಹಾಯದಿಂದ ಸಮರ್ಪಕವಾಗಿ ನ
ರಿಸಿ, ಊರಿಗೆ ಕೀರ್ತಿತರುವಂತಾಗ
ಕೋರಿಕೆ ಹೇಗೂ ಇವರ ಅಳ್ವಿಕೆ
ನೌಕರರ ಅಂತಃಕಲಹಗಳು ಕಡಿ
ಗಿರುವುದು ಬಹಳ ಸಂತೋಷಕರ

ಯಾತ್ರಿಕರಿಗೆ ತೆರಿಗೆ—ಬರುವ
ತಿಂಗಳಿಂದ ರೈಲ್ವೆ ಇಲಾ
ವರು ಈ ತೆರಿಗೆಯನ್ನು
ವಸೂಲ್ಮಾಡುವುದಿಲ್ಲವೆಂದು
ರಂತೆ! ಇದರ ಪರಿಣಾಮವನ್ನು
ಯಲು ಜನರು ಕುತೂಹಲಿಗ
ವರ—ಏಕೆಂದರೆ ಊರಿನವರೇ ಈ
ಯನ್ನು ವಿಶೇಷವಾಗಿ ಕೊಡುತ್ತಿರು

—ಹಿತ್ಬೈ

ಇಂಗ್ಲಿಷ್ ಪದಗಳು ಬೇ

“ದಿ ಅರ್ನೆಜೀವ್ರೋ ಎಂಬ ನ
ಪುರುಷನು ನಮಗೆ ಮಾರ್ಗದರ್ಶಕ
ದ್ದಾನೆ ಇನ್ನು ಮುಂದೆ ಇಂಗ್ಲಿಷ
ಗಳನ್ನು ಉಪಯೋಗಿಸಲೇ ಕೂಡ
ಎಂದು ವೃತ್ತಪತ್ರಿಕೆಗಳು ಇಟಲಿ
ಸಂತೋಷದಿಂದ ಸಾರಿದವು. ಇ
ಕವಿಯೂ ಮತ್ತು ಯುದ್ಧದ ಸೇನಾ
ಖನೂ ಆದ ದಿ ಅರ್ನೆಜೀವ್ರೋ
ವನು, ಪರದೇಶದಲ್ಲಿದ್ದು, ಆಗತಾನೆ
ನನ್ನು ಕಳೆದುಕೊಂಡ ಹೆಂಗಸೊ
ತಂತಿಯ ಮೂಲಕ ತನ್ನ ಅನು
ವನ್ನು ಸೂಚಿಸಿದಾಗ ಒಂದು ಇಂಗ್ಲಿ
ಪದವನ್ನೂ ಉಪಯೋಗಿಸುವುದಿಲ್ಲ
ಹಟಹಿಡಿದನಂತೆ ಅನರ ಪರಿಣಾ
ಇಷ್ಟು ಕೋಲಾಹಲಕ್ಕೆ ಕಾರಣ



A Reliable House for Repairs of
WATCHES & GRAMOPHONES
HIGH CLASS RUBBER STAMP
Suppliers,
M V N WATCH COY,
The General Commission Agency
Lansdowne Buildings,
MYSORE

ಗಡಿಯಾರ ಮತ್ತು ಗ್ರಾಮೋಫೋನುಗಳ ರಿಪೇರಿ
ಮತ್ತು ರಬ್ಬರ್ ಮೊಹರುಗಳ ತಯಾರಿ
ನಮ್ಮಲ್ಲಿ ನಡೆಯುತ್ತವೆ
ಎಂ ವಿ ಎನ್ ವಾಚ್ ಕಂಪೆನಿ, ಮೈಸೂರು

USE ALWAYS

DERMOTONE

(SASTRIC BATHING HERBAL PREPARATION)
THE UNIQUE PRODUCT
IN THE MARKET FOR SKIN HYGIENE

ಡರ್ಮೊಟೋನ್,

ಶಾಸ್ತ್ರೀಯವಾದ ಮತ್ತು ಆರೋಗ್ಯಕರವಾದ ಚರ್ಮರಕ್ಷಣೆ ಚೂರ್ಣ
ಡರ್ಮೊಟೋನ್ ವರ್ಕ್ಸ್, ಮೈಸೂರು

॥ ವಿಜಯಾಭವ ಶ್ರೀ ಕೃಷ್ಣ ಭೂಪಾಲ ॥
ಮೈಸೂರು ಶ್ರೀಮನ್ ಮಹಾರಾಜರವರ ಘನ ಕೃಪಾ ಕಟಾಕ್ಷಕ್ಕೆ ಪಾತ್ರರಾಗಿ ದೇಶದ
ದೊಡ್ಡ ಸ್ಥಾನಗಳಲ್ಲಿನ ಕಲಾ ಪ್ರೇಮಿಗಳ ಉದಾರ
ಪ್ರೋತ್ಸಾಹದಿಂದ ಬಹುಮಾನಿತರಾದ

ಶ್ರೀ ಗೌರೀ ಶಂಕರ ನಾಟಕ ಸಭಾ,
ಬೆಂಗಳೂರು.

ಈ ಸಂಘದವರು ಶೀಘ್ರದಲ್ಲಿಯೇ
(ಬಾಲಕೃಷ್ಣ ವಿರಚಿತ)

ಕರ್ತ

ಎಂಬ ಶ್ರೇಷ್ಠ ಸಾಮಾಜಿಕ ನಾಟಕವನ್ನು ಪ್ರದರ್ಶಿಸುವರು
ಪ್ರಥಮ ಪ್ರದರ್ಶನದ ಸ್ಥಳ ಮತ್ತು ತಾರೀಖನ್ನು ಗಮನಿಸಿ
ಸಿರಿತನದ ಬಾಳು! ನಿರುದ್ಯೋಗಿಯ ಜೀವನ ಸಮಸ್ಯೆ!
ಸುರೆಯ ಸಾಹಿತ್ಯ ಪ್ರಬಂಧ!

ಇತ್ಯಾದಿ ನೂತನ ಸನ್ನಿವೇಶಗಳ ಸಮಾರಂಭದಿಂದ ವಿಜೃಂಭಿಸುತ್ತಿರುವ
ಸಾಮಾಜಿಕ ರಂಗ ಚಿತ್ರ—ಗಮನಿಸಿ

ಟಿ ನೀಲಕಂಠಪ್ಪ,
ಪ್ರೊಪ್ರೈಟರ್

BETTER LIGHT-

LIGHTER BILLS

Use—

"BIJLEE"

ELECTRIC BULBS.

Made in INDIA.

ಸ್ವದೇಶಿ ಎಲೆಕ್ಟ್ರಿಕ್ ಬಲ್ಬುಗಳನ್ನೇ
ಉಪಯೋಗಿಸಿರಿ.

BIJLEE PRODUCTS (INDIA)
Bombay 8.

SOLE DISTRIBUTORS

THE STATES ENGINEERING COMPANY,
BANGALORE MYSORE SHIMOGA & COIMBATORE

THE SADHVI

A LEADING NATIONALIST WEEKLY
OF MYSORE

Recommended for Schools by the Department

No TI 3778-146—35 36
OFFICE OF THE DIRECTOR OF PUBLIC
INSTRUCTION IN MYSORE,
Bangalore Dated 20th April 1936.

MEMO.

The Newspaper "SADHVI" a Kannada Weekly is recommended to all Government High Middle and Normal School Reading Rooms in the State.

PARTICULARS

Name	The Sadhvi
Editor	Mr. Agaram Rangiah, B A
Place of Publication	Mysore

ANNUAL SUBSCRIPTION

Local Moffusil	Rs 2—4—0

DIRECTOR

"ಸಾಧ್ವಿ" ವಾರಪತ್ರಿಕೆ.

ವಿದ್ಯಾ ಇಲಾಖೆಯವರಿಂದ ಶಿಫಾರ್ಸು ಮಾಡಲ್ಪಟ್ಟಿದೆ
ಕೂಡಲೇ ಚಂದಾದಾರರಾಗಿ ಪ್ರೋತ್ಸಾಹಿಸಿರಿ.

RAJENDRA CINEMA,
NANJANGUD.

ತಾ॥ 15-6-36 ನೇ ಸೋಮವಾರದಿಂದ 17-6-36 ರ ವರೆಗೆ "ಏಸ್ ಆಫ್ ಸ್ಪೇಡ್ಸ್"	From 15-6-36 to 17-6-36 "ACE OF SPADES"
ತಾ॥ 18-6-36 ನೇ ಗುರುವಾರದಿಂದ 20-6-36 ರ ವರೆಗೆ "ಮೆಜಿಷಿಯನ್ ಆಫ್ ಬೆಂಗಾಲ್"	From 18-6-36 to 20-6-36 'MAGICIAN OF BENGAL'
ತಾ॥ 21-6-36 ನೇ ಭಾನುವಾರದಿಂದ 23-6-36 ರ ವರೆಗೆ "ಲಂಕಾ ಲಕ್ಷ್ಮಿ"	From 21-6-36 to 23-6-36 "LANKA LAXMI"

ರಾಜೇಂದ್ರ ಸಿನಿಮಾ, ನಂಜನಗೂಡು.

ದಯವಿಟ್ಟು ತಪ್ಪದೆ ನೋಡಿರಿ! ಆನಂದಪಡಿರಿ!

ASIATIC GOVERNMENT SECURITY LIFE ASSURANCE CO., LTD.

Head Office:
Asiatic Buildings, Bangalore City.

PURELY A NATIONAL CONCERN
Managed by Experts
Low Premiums and Liberal Policy Conditions

Apply for Agency —
To
Mr H Venkataramiah,
Divl Supdt ASIATIC BUILDINGS,
Bangalore City
OR
To
V RANGASAMI Esq, B A B L
General Manager

ಏಷ್ಯಾಟಿಕ್ ಲೈಫ್ ಇನ್ಷೂರೆನ್ಸ್ ಕಂಪೆನಿ ಲಿಮಿಟೆಡ್.

ಹೆಡ್ ಆಫೀಸ್: ಏಷ್ಯಾಟಿಕ್ ಬಿಲ್ಡಿಂಗ್ಸ್, ಬೆಂಗಳೂರು.

ಚೆನ್ನಾಗಿ ಅನುಭವಸ್ಥರ ಆಡಳಿತಕ್ಕೆ ಒಳಪಟ್ಟ, ಕಡಿಮೆ ಪ್ರೀಮಿಯ - ಮತ್ತು ಉದಾರವಾದ ಪಾಲಿಸಿ ಷರತ್ತುಗಳುಳ್ಳ ಶುದ್ಧ ಸ್ವದೇಶೀ ವಿಮಾ - ಏಜೆನ್ಸಿಗಾಗಿ ಕೆಳಗಿನ ವಿಳಾಸಕ್ಕೆ ಬರೆಯಿರಿ —
ಹೆಚ್ ವೆಂಕಟರಾಮಯ್ಯ,
ಡಿವಿಜನಲ್ ಸೂಪರಿಂಟೆಂಡೆಂಟ್, ಏಷ್ಯಾಟಿಕ್ ಬಿಲ್ಡಿಂಗ್ಸ್,
ಬೆಂಗಳೂರು ಸಿಟಿ
ಅಥವಾ
ಮ॥ ವಿ ರಂಗಸ್ವಾಮಿ, ಬಿ ಎ, ಬಿ ಎಲ್, ಜನರಲ್ ಮ್ಯಾನೇಜರ್

ಕಲೆಗಾಗಿ ಜೀವಕೊಡಲು ಸಿದ್ಧಳಾದ ಕನ್ನಡ ನಟಿ

"ಜನವಾಣಿ"

ಮಿಸ್ ರಾಜಮ್ಮ, ಬಿ. ಆರ್. ಪಂತಲು, ಎಂ ಎಸ್. ಮಾಧವರಾವ್, ಯಂ. ಮಾಧವರಾವ್

ಇವರು ಅಭಿನಯಿಸಿರುವ

ಸಂಸಾರ ನೌಕ

ಪ್ರಥಮ ಸಾಮಾಜಿಕ ಕನ್ನಡ ಚಲನಚಿತ್ರ

ನಾಟ್ಯಪ್ರಪಂಚದಲ್ಲಿ ವಿಖ್ಯಾತರಾದ ನಟವರ್ಗದವರ ಅಭಿನಯ. ಮಾನವನ ಜೀವನವನ್ನು ಯಥಾವತ್ತಾಗಿ ಚಿತ್ರಿಸುವ ಕಥಾವಸ್ತು

ಪ್ರೇಕ್ಷಕರನ್ನು ಮುಗ್ಧಗೊಳಿಸುವ ಉತ್ತಮ ಫೋಟೋಗ್ರಾಫಿ ಮತ್ತು ಸುಪ್ರಸಿದ್ಧ ವೇಲ್ ಪಿಕ್ಚರ್ಸ್ ಸ್ಟುಡಿಯೋದಲ್ಲಿ ತಯಾರಿಕೆ

ನಾಟಕ ಲೋಕದ ಉತ್ತಮ ನಟರೂ ಆದ ಸಿಂಹ ರವರೇ, ನಿರ್ದೇಶಕರು

ಅಪರಿಮಿತ ಹಣವೆಚ್ಚದಿಂದ ತಯಾರಿಸಿರುವ ಮನೋಹರ ಕೃತಿ

ಪ್ರತಿಯೊಬ್ಬ ಕಲಾಭಿಮಾನಿಯೂ ಉತ್ಸುಕತೆಯಿಂದ ಎದುರು ನೋಡುತ್ತಿರುವ ಚಲನಚಿತ್ರ

For Booking Apply to Devi Films Ltd, 501, Mint Street P T Madras

Edited, Printed & Published by Agaram Rangiah, B A, at Sri Rama Press, D Subbiah Road, Mysore

Registered No. M 3534



॥ ಸತ್ಯಮೇವೋದ್ಧರಾಮ್ಯಹಮ್ ॥
ರಾಜಧಾನಿಯ ರಾಷ್ಟ್ರೀಯ ವಾರ ಪತ್ರಿಕೆ.
ವೃದ್ಧಪಿತಾಮಹ ಎಂ. ವೆಂಕಟಕೃಷ್ಣಯ್ಯನವರ ಜ್ಞಾಪಕಾರ್ಥವಾಗಿ ಪ್ರಕಟಿಸಲ್ಪಡುವುದು.
ಸಂಪಾದಕರು: ಅಗರಂ ರಂಗಯ್ಯ, ಬಿ.ಎ.

Sadhvi: A Leading Nationalist Weekly of Mysore.

...DED IN MEMORY OF Mr. M. VENKATAKRISHNAYYA, THE GRAND OLD MAN OF MYSORE.

ಪುಟ ೧] MYSORE : MONDAY 22—6—36 ಮೈಸೂರು : ಸೋಮವಾರ ೨೨—೬—೩೬ [ಸಂಚಿಕೆ ೧೮

BY SHOWERS OF PUBLIC REQUESTS, I. S. OLYMPIA TALKIES, MYSORE.
Proudly Presents "CHAR DARVESH" from 26th June 1936.

A Reliable House for Repairs of
WATCHES & GRAMOPHONES.
HIGH CLASS RUBBER STAMP
Suppliers,
M V N WATCH COY,
The General Commission Agency.
Lansdowne Buildings,
MYSORE

ಗಡಿಯಾರ ಮತ್ತು ಗ್ರಾಮೋಫೋನುಗಳ ರಿಪೇರಿ
ಮತ್ತು ರಬ್ಬರ್ ಮೊಹರುಗಳ ತಯಾರಿ
ನಮ್ಮಲ್ಲಿ ನಡೆಯುತ್ತವೆ.
ಎಂ ವಿ ಎನ್ ವಾಚ್ ಕಂಪೆನಿ, ಮೈಸೂರು

USE ALWAYS
DERMOTONE
(SASTRIC BATHING HERBAL PREPARATION)
THE UNIQUE PRODUCT
IN THE MARKET FOR SKIN HYGIENE

ಡರ್ಮೊಟೋನ್,

ಶಾಸ್ತ್ರೀಯವಾದ ಮತ್ತು ಆರೋಗ್ಯಕರವಾದ ಚರ್ಮರಕ್ಷಣೆ ಚೂರ್ಣ
ಡರ್ಮೊಟೋನ್ ವರ್ಕ್ಸ್, ಮೈಸೂರು

॥ ವಿಜಯನಾಥನ ಶ್ರೀ ಕೃಷ್ಣ ಭೂಪಾಲ ॥
ಮೈಸೂರು ಶ್ರೀಮನ್ ಮಹಾರಾಜರವರ ಘನ ಕೃಪಾಕಟಾಕ್ಷಕ್ಕೆ ಪಾತ್ರರಾಗಿ ದೊಡ್ಡ
ದೊಡ್ಡ ಸ್ಥಾನಗಳಲ್ಲಿನ ಕಲಾ ಪ್ರೇಮಿಗಳ ಉದಾರ
ಪ್ರೋತ್ಸಾಹದಿಂದ ಬಹುಮಾನಿತರಾದ

ಶ್ರೀ ಗೌರೀ ಶಂಕರ ನಾಟಕ ಸಭಾ,
ಬೆಂಗಳೂರು.

ಈ ಸಂಘದವರು ಶೀಘ್ರದಲ್ಲಿಯೇ
(ಬಾಲಕೃಷ್ಣ ವಿರಚಿತ)

ಕರ್ತ

ಎಂಬ ಶ್ರೇಷ್ಠ ಸಾಮಾಜಿಕ ನಾಟಕವನ್ನು ಪ್ರದರ್ಶಿಸುವರು.

ಪ್ರಥಮ ಪ್ರದರ್ಶನದ ಸ್ಥಳ ಮತ್ತು ತಾರೀಖನ್ನು ಗಮನಿಸಿ

ಹಿರಿತನದ ಬಾಳು! ನಿರುದ್ಯೋಗಿಯ ಜೀವನ ಸಮಸ್ಯೆ!
ಸುರೆಯ ಸಾಹಿತ್ಯ ಪ್ರಬಂಧ!

ಇತ್ಯಾದಿ ನೂತನ ಸನ್ನಿವೇಶಗಳ ಸಮಾರಂಭದಿಂದ ವಿಜೃಂಭಿಸುತ್ತಿರುವ
ಸಾಮಾಜಿಕ ರಂಗ ಚಿತ್ರ—ಗಮನಿಸಿ

ಟಿ. ನೀಲಕಂಠಪ್ಪ,
ಪ್ರೊಪ್ರೈಟರ್

BETTER LIGHT.

LIGHTER BILLS

Use—

"BIJLEE"

ELECTRIC BULBS.

Made in INDIA.

ಸ್ವದೇಶಿ ಎಲೆಕ್ಟ್ರಿಕ್ ಬಲ್ಬುಗಳನ್ನೇ
ಉಪಯೋಗಿಸಿರಿ.

BIJLEE PRODUCTS (INDIA)
Bombay 8.

SOLE DISTRIBUTORS

THE STATES ENGINEERING COMPANY,
BANGALORE MYSORE SHIMOGA & COIMBATORE

THE SADHVI

A LEADING NATIONALIST WEEKLY
OF MYSORE

Recommended for Schools by the Department.

No T1 3778 14C—35 36
OFFICE OF THE DIRECTOR OF PUBLIC
INSTRUCTION IN MYSORE,
Bangalore Dated 20th April 1936.

MEMO.

The Newspaper "SADHVI" a Kannada Weekly is recommended to all Government High, Middle and Normal School Reading Rooms in the State

PARTICULARS

Name	The Sadhvi
Editor	Mr. Agaram Rangiah, B.A.
Place of Publication	Mysore

ANNUAL SUBSCRIPTION

Local	Rs 2—4—0
Moffusil	

DIRECTOR

"ಸಾಧ್ವಿ" ವಾರಪತ್ರಿಕೆ.

ವಿದ್ಯಾ ಇಲಾಖೆಯವರಿಂದ ಶಿಫಾರಸು ಮಾಡಲ್ಪಟ್ಟಿದೆ
ಕೂಡಲೇ ಚಂದಾದಾರರಾಗಿ ಪ್ರೋತ್ಸಾಹಿಸಿರಿ.

|| ಸತ್ಯಮೇವೋದ್ಧರಾಮ್ಯಹಮ್ ||
ರಾಜಧಾನಿಯ ರಾಷ್ಟ್ರೀಯ ವಾರ ಪತ್ರಿಕೆ.
ವೃದ್ಧ ಪಿತಾಮಹ ಎಂ. ವೆಂಕಟಕೃಷ್ಣಯ್ಯನವರ ಜ್ಞಾಪಕಾರ್ಥವಾಗಿ ಪ್ರಕಟಿಸಲ್ಪಡುವುದು.
ಸಂಪಾದಕರು ಅಗರಂ ರಂಗಯ್ಯ, ಬಿ. ಎ.

ಸಂಪುಟ ೧] MYSORE : MONDAY 22—6—36 ಮೈಸೂರು : ಸೋಮವಾರ ೨೨—೬—೩೬ [ಸಂಚಿಕೆ ೧೮

ಪರದೇಶದ ಬಾವುಟಗಳು ಬೇಡ.

—

ಲಾರ್ಡ್ ಡರ್ಬಿಯವರು ಲಂಡನ್ನಿನ ವ್ಯಾಪಾರ ಸಂಘದ ಅಧ್ಯಕ್ಷರಿಗೆ ಈ ರೀತಿ ಬರೆದಿದ್ದಾರೆ — ಮುಂದೆ ಬರಲಿರುವ ಚಕ್ರವರ್ತಿಯವರ ಕಿರೀಟ ಧಾರಣೆಯ ಮಹೋತ್ಸವವನ್ನು ಅಲಂಕಾರ ಮಾಡಲು ಪರದೇಶದ ಬಣ್ಣದ ಬಾವುಟಗಳನ್ನು ಆಮದು ಮಾಡುವ ಆವಶ್ಯಕವಿಲ್ಲ. ಎಷ್ಟು ಬೇಕಾದರೂ ಇಲ್ಲೇ ತಯಾರಿಸಬಹುದು. ಸಾಮಗ್ರಿ ಮತ್ತು ಸ್ವಂತ ಅಂದಕ್ಕೋಸ್ಕರ ಬೇಕಾದ ಸಾಮಗ್ರಿಗಳೆಲ್ಲಾ ಬ್ರಿಟಿಷ್ ನಿಂದಲೇ ಮಾಡಲ್ಪಟ್ಟಿರಬೇಕು.

ಸಿನಿಮಾ ಮಂದಿರದಲ್ಲಿ ಹೆಣಗಳು!

ಹೈದರಾಬಾದಿನ ಮೋತಿಮಹಲ್ ಎಂಬ ಟಾಕಿ ಮಂದಿರದಲ್ಲಿ ದುರಂತ ಪ್ರಕರಣವೊಂದು ನಡೆಯಿತು. ಮಂದಿರದ ಯಂತ್ರದ ಕೊಠಡಿಯೊಂದರಲ್ಲಿ ಬೆಂಕಿ ಹೊತ್ತಿಕೊಂಡಿತು. ಜ್ವಾಲೆಯು ಸರಸರನೆ ಹತ್ತಿ ಎಲ್ಲ ಕಡೆಗೂ ಹಬ್ಬಿ ಕಟ್ಟಡವನ್ನಾವರಿಸಿದುದರಿಂದ ಸುಮಾರು 20 ಮಂದಿ ಸುಟ್ಟು ಹೋದರು. ಅನೇಕ ಹೆಂಗಸರು ಮಕ್ಕಳು ಪ್ರಾಣದಾಸೆಗೋಸ್ಕರ ಬಾಗಿಲಿನಿಂದ ಧುಮುಕಿ ಗೊಂದಲದಲ್ಲಿ ಸಿಕ್ಕಿ ಪ್ರಾಣ ಬಿಟ್ಟರು. ಕಟ್ಟಡಕ್ಕೆ ಕಟ್ಟಡವೇ ಭಸ್ಮವಾಗಿದೆ. ಈ ಅನಾಹುತ ಸ್ಥಳಕ್ಕೆ ನೈಜಾಮರು ಬಂದು ಮರಣಹೊಂದಿದ ಸಂಬಂಧಿಗಳಿಗೆ ತಮ್ಮ ಅನುತಾಪವನ್ನು ಸೂಚಿಸಿದರು. ಅವರು ಇನ್ನು ಮುಂದೆ ಇಂಥಾ ಅಪಘಾತವನ್ನು ತಪ್ಪಿಸಲು ತಕ್ಕ ಸಲಕರಣೆಗಳನ್ನು ಸಿನಿಮಾ ಮಂದಿರಗಳಲ್ಲಿ ಮಾಡಬೇಕೆಂದು ಆಜ್ಞೆ ಮಾಡಿರುವರು.

ಖೈದಿಗಳಿಗೂ ಪತ್ರಿಕೆ

ಗ್ರೇಟ್‌ಬ್ರಿಟನಿನಲ್ಲಿರುವ ಎ ಮತ್ತು ಬಿ ದರ್ಜೆ ಖೈದಿಗಳಿಗೆ ವಾರ ಪತ್ರಿಕೆಯನ್ನು ಸರ್ಕಾರದವರು ಒದಗಿಸುವರೆಂದು ತಿಳಿದು ಬಂದಿದೆ. ಎ ದರ್ಜೆಯ ಖೈದಿಗಳು ತಮ್ಮ ಸ್ವಂತ ಖರ್ಚಿನಿಂದ ದಿನ ಪತ್ರಿಕೆಯನ್ನು ತರಿಸಿಕೊಳ್ಳಬಹುದೆಂದು ಅವಕಾಶ ಕೊಟ್ಟಿದ್ದಾರೆ.

೧೮ ಸಾವಿರ ಅನಾಥರು.

ಬ್ರಹ್ಮಪುತ್ರಾ ನದಿಯಲ್ಲಿ ಹುಚ್ಚು ಪ್ರವಾಹ ಬಂದು ದಿಬ್ರುಘರ್ ಎಂಬ ಪಟ್ಟಣವು ಜಲಗ್ರಸ್ತವಾಗಿತ್ತು. ತಿನ್ನಲು ಏನೂ ಇಲ್ಲದೆ ಹಾಗಿ, ೧೮,೦೦೦ ಮಂದಿ ಅನ್ನವಿಲ್ಲದೆ ಪರಿತಪಿಸುತ್ತಿದ್ದಾರೆ.

ಗಂಡನಿಗೆ ವಿಷಹಾಕಿದಳು

ದಿಬ್ರುಘರ್ ಎಂಬಲ್ಲಿ ಸೂಲ್ಮನಿ ಎಂಬ ಹೆಂಗಸು ತನ್ನ ಗಂಡನನ್ನು ವಿಷಹಾಕಿ ಕೊಂದಳೆಂಬುದು ರುಜುವಾತಾದ್ದರಿಂದ ನ್ಯಾಯಾಧೀಶರು ಅವಳಿಗೆ ಜೀವಾವಧಿ ಶಿಕ್ಷೆಯನ್ನು ವಿಧಿಸಿರುತ್ತಾರೆ.

ಚೆಂಡಿನ ಆಟ

ಬರೆದವರು :—ಎಸ್. ಶೈಲಂ.

[ಲಾವಣಿಯ ರೀತಿಯಲ್ಲಿ]

ಚೆಂಡಿನ ಆಟವ ಆಡಲು ನಾವು ಬಂದೆವು ಫೀಲ್ಡಿನ ಹತ್ತಿರಕೆ,
ಗಂಟೆಯು ಐದು ಆದರು ಹೆದರದೆ ಚಂದನು ಒದ್ದನು ಚೆಂಡನ್ನು,
ರಾಮನು ಚಂಡು ಕೈಯ್ಯಲಿ ತೆಗೆದು ಇಟ್ಟನು ಕಾಲಿನ ಸಂದಿಯಲಿ,
ಚಂಡನು ಏತಕೆ ಒದ್ದೆ ಎನ್ನುತ ಚಂದನ ಒದ್ದನು ಕೋಪದಲಿ || ೧ ||

ಹೆದರುತ, ಬೆದರುತ, ಮೌನವ ವಹಿಸುತ ಚಂದನು ನಿಂತನು ಫೀಲ್ಡಿನಲ್ಲಿ,
ಭೀಮನು, ಸೋಮನು ಪಾರ್ಟೀಸ್ ಮಾಡಲು ರಾಮನು ಕರೆದನು ತಕ್ಷಣವೆ,
ಇಬ್ಬರು ಸಂತಸದಿಂದಲಿ ಬಂದು ನಿಂತರು ರಾಮನ ಪಕ್ಕದಲಿ,
ರಾಮನು ಕಾಸನು ಜೋಬಿಂತೆಗದು 'ವಾಟ್‌ಡೂಯು ವಾಂಟ್' ಎಂದು ಕೇಳಿದನು||೨||

ಸೋಮನು ಕೇಳಿದ ಟಯಲ್ ಎನ್ನುತ ಭೀಮನು ಹೇಳಿದ ಹೆಡ್ಡೆಂದು,
ಎಲ್ಲರು ಆತುರದಿಂದಲಿ ನೋಡಲು ಟಯಲ್ ಬಿದ್ದಿತು ತಕ್ಷಣವೇ
ಮೊದಲಿನ ಕಾಲಿಂಗ್ ನಂದು ಎನ್ನುತ ಸೋಮನು ಕರೆದನು ಆದ್ರಿಯನು,
ಸೆಕೆಂಡ್ ಕಾಲಿಂಗ್ ನಂದು ಎನ್ನುತ ಭೀಮನು ಕರೆದನು ಬಾಪುವನು || ೩ ||

ಇಬ್ಬರ ಕಡೆಯೂ ಐವರು ಆಗಲು ಆಟವ ಹೂಡಲು ಕೂಗಿದರು,
ರಾಮನು ಬಾಲನು ಕೈಯಲಿ ತೆಗೆದು ಇಟ್ಟನು ಸೆಂಟರ್ ಪ್ಲೇಸಿನಲಿ,
ಶಿಳ್ಳಿಯ ಶಬ್ದವು ಕೇಳಿದ ತಕ್ಷಣ ಭೀಮನು ಒದ್ದನು ಬಾಲನ್ನು,
ಸೋಮನು ಬಾಲನು ಡ್ರಿಬ್ಲ್ ಮಾಡುತ ತಂದನು ಗೋಲಿನ ಹತ್ತಿರಕೆ || ೪ ||

ಶೈಲನು ಬಾಲನು ಕಟ್ಟನು ಮಾಡುತ ಒದ್ದನು ಗೋಲಿನ ಒಳಗಡೆಗೆ,
ಶಾಭಾಸ್, ಎನ್ನುವ ಏಟುಗಳೆಷ್ಟೋ ಬಿದ್ದಿತು ಬೆನ್ನಿನ ಮೇಲ್ಗಡೆಗೆ
ಎಂಗ್ ಬಾಯ್ಸ್‌ಗೆ ಕೀ, ಫುಟ್‌ಬಾಲ್ ಕ್ಲಬ್‌ಗೆ ಕೀ ಜೈ, ಜೈ ಎನ್ನುತ ಕಿರಿಚಿದೆವು,
ಚೆಂಡನು ಕಾಲಲಿ ಒದೆಯುತ ನಾವು ಹೋದೆವು ಎಮ್ಮಯ ಮನೆಗಳಿಗೆ || ೫ ||

ಪರ್ವತಾರೋಹಣವು ನಿಷ್ಫಲವಾಯಿತು

ಮುಂಗಾರು, ಗಾಳಿ, ಮಳೆ, ಇವುಗಳ ಹೊಡೆತಕ್ಕೆ ಸಿಕ್ಕಿ, ಹತ್ತಲು ಅತಿ ದುಸ್ಸಾಧ್ಯವಾದ ಎವರೆಸ್ಟ್ ಶಿಖರವನ್ನು ತಲುಪಲು ಹೋದ ಯೂರೋಪಿಯನ್ನರ ಪ್ರಯತ್ನವು ನಿಷ್ಫಲವಾದ್ದರಿಂದ ಅವರು ಭಗ್ನ ಮನೋರಥರಾಗಿದ್ದಾರೆ. ಅವರು ಎಡೆಬಿಡದೆ ಮುಂದಿನ ಸಾಹಸ ಕಾರ್ಯದಲ್ಲಿ ತೊಡಗುತ್ತೇವೆ, ಎಂಬ ಉತ್ಸಾಹದಿಂದಿರುತ್ತಾರೆ.

ಅಬಿಸೀನಿಯಾದ ಅಭಿವೃದ್ಧಿ

ಎರಡು ವರ್ಷಗಳಲ್ಲಿ ಸುಮಾರು 2,50,000 ಪೌಂಡುಗಳ ವೆಚ್ಚಮಾಡಿ 2,000 ಮೈಲಿಗಳಷ್ಟು ದೂರ ರಸ್ತೆಗಳನ್ನು ಹೊಸದಾಗಿ ರಚಿಸಲು ಮುಸೋಲಿನಿಯು ಯೋಚನೆಮಾಡುತ್ತಾನೆ. ವ್ಯವಸಾಯ ಕೈಗಾರಿಕೆಗಳಿಗೆ ವಿಶೇಷ ಪ್ರೋತ್ಸಾಹವನ್ನು ಅಬಿಸೀನಿಯದಲ್ಲಿ ಕೊಡಲಾಗುವುದು. ಇಟಲಿಯ ರೈತರಿಗೆ ಕೆಲವು ಪ್ರದೇಶಗಳು ಮುಫತ್ತಾಗಿ ಕೊಡಲ್ಪಡುತ್ತವೆ.

ದೇವಸ್ಥಾನದಲ್ಲಿ ಸಿನಿಮಾ.

ಮದರಾಸಿನ ಪಾರ್ಥಸಾರಥಿ ದೇವಾಲಯದಲ್ಲಿ ಒಂದು ಚಲನಚಿತ್ರವನ್ನು ತೆಗೆದುದರ ಸಂಬಂಧವಾಗಿ ಬಹಳ ಗೊಂದಲವಾಯಿತು. ಅನೇಕ ಭಕ್ತಾದಿಗಳು ಸಭೆಯಲ್ಲಿ ಈ ವಿಷಯವನ್ನು ಆಕ್ಷೇಪಣೆ ಮಾಡಿರುತ್ತಾರೆ. 'ಯಾವ ದೇಶದಲ್ಲೂ ಚರ್ಚುಗಳಲ್ಲೂ ಸಿನಿಮಾ ಚಲನಚಿತ್ರವನ್ನು ತೆಗೆಯಲು ಅವಕಾಶವೇ ಇಲ್ಲ. ಹೀಗಿರುವಲ್ಲಿ ಪವಿತ್ರವಾದ ದೇವಸ್ಥಾನದಲ್ಲಿ ಸಿನಿಮಾ ಚಲನಚಿತ್ರಗಳನ್ನು ತೆಗೆಯಲು ಅವಕಾಶ ಕೊಡಲೇ ಕೂಡದು' ಎಂದು ಮ|| ಶ್ರೀನಿವಾಸರಾಯರು ಮಾತನಾಡಿದರು.

ಶುದ್ಧಿ ಸಂಸ್ಕಾರ.

ಮಂಗಳೂರು ಆರ್ಯ ಸಮಾಜದಲ್ಲಿ ಇಬ್ರಾಹಿಂ ಎಂಬ ಮಹಮ್ಮದೀಯ ಯುವಕನ ಶುದ್ಧಿಸಂಸ್ಕಾರವಾಯಿತು. ಇವನು ಹಿಂದೆ ಬ್ರಾಹ್ಮಣನಾಗಿದ್ದು, ಮೂರು ವರ್ಷಗಳ ಹಿಂದೆ ಇಸ್ಲಾಂ ಮತಕ್ಕೆ ಸೇರಿದ್ದನು. ಸಂಸ್ಕಾರಾಂತ್ಯದಲ್ಲಿ ಶ್ರೀ|| ಮೋಹನಪ್ಪ ತಿಂಗಳಾಯರು ಯಜ್ಞೋಪವೀತವನ್ನು ಕೊಟ್ಟು, ಗಾಯತ್ರಿ ಮಂತ್ರೋಪದೇಶವಾಗಿ, ರಮೇಶರಾವ್ ಎಂಬ ಆತನ ಪೂರ್ವದ ಹೆಸರನ್ನೇ ಇಟ್ಟಿರುತ್ತಾರೆ.

ಕಾಲೇಜನ್ನು ಮುಚ್ಚಲಾಗುವುದು!

ಮಿರ್ಜಾಪುರದಲ್ಲಿ ಬಹಳ ಕಾಲದಿಂದಲೂ ಇದ್ದ ಕಾಲೇಜನ್ನು ಜೂನ್ ಆಖೈರಿನಲ್ಲಿ ಮುಚ್ಚುವರು. ಮೊದಲು ವಿದ್ಯಾರ್ಥಿಗಳ ಸಂಖ್ಯೆಯು 250 ಇದ್ದದ್ದು ಈಗ 50 ಕ್ಕೆ ಇಳಿದಿದೆ. ಕಡಿಮೆ ಸಂಖ್ಯೆ ವಿದ್ಯಾರ್ಥಿಗಳಿರುವುದರಿಂದ ಕಾಲೇಜನ್ನು ಮುಚ್ಚಬಹುದೆಂದು ವಿದ್ಯಾಭ್ಯಾಸದ ಇಲಾಖೆಯ ಡೈರೆಕ್ಟರವರು ಅಭಿಪ್ರಾಯಪಟ್ಟಿರುತ್ತಾರೆ.

ವಿಮಾನವು ಬೆಟ್ಟಕ್ಕೆ ಢಿಕ್ಕಿ ಹೊಡೆಯಿತು

ಬರ್ಗೆನ್ನಿಂದ ನಾರ್ದರ್ನ್ ಲೌನ್ಸ್‌ಗೆ 1500 ಅಡಿ ಎತ್ತರದಲ್ಲಿ ಹಾರುತ್ತಿದ್ದ ವಿಮಾನವು ಮಂಜುಮುಸುಕಿದುದರಿಂದ ಲೀಸ್ಟನ್ ಎಂಬ ಬೆಟ್ಟಕ್ಕೆ ಢಿಕ್ಕಿಹೊಡೆಯಿತು. ವಿಮಾನದಲ್ಲಿದ್ದ 7 ಮಂದಿಯೂ ಮೃತಪಟ್ಟಿರುತ್ತಾರೆ. ಎರಡು ಮೃತದೇಹಗಳು ಪರ್ವತದ ಪಕ್ಕದಲ್ಲಿ ಬಿದ್ದಿವೆ.

ಮೈಸೂರು ಡಿ॥ ಬೋರ್ಡ್ ಕಟ್ಟಡ

ಮೈಸೂರು ಡಿಸ್ಟ್ರಿಕ್ಟ್ ಬೋರ್ಡ್ ಕಟ್ಟಡದ ಶಂಕುಸ್ಥಾಪನೆಯನ್ನು ಶ್ರೀಮನ್ಮಹಾರಾಜರವರ ಪರವಾಗಿ ಅವರ ಮಕ್ಕಳಾದ ಶ್ರೀ ಜಯಚಾಮರಾಜ ಒಡೆಯರವರು ಕಳೆದ ಸೋಮವಾರ ಮಾಡಿದರು. ಈ ಕಟ್ಟಡವು ಇರ್ವಿನ್ ರಸ್ತೆಯಲ್ಲಿರುವ ವಾಣೀವಿಲಾಸ ಆಸ್ಪತ್ರೆಯ ವಾಯುವ್ಯ ಮೂಲೆಯಲ್ಲಿ ಕಟ್ಟಲ್ಪಡುವುದು. ಅದಕ್ಕೆ ೬0000 ರೂ ಖರ್ಚಿನ ಅಂದಾಜು ಹಾಕಲ್ಪಟ್ಟಿರುವುದು. ಶ್ರೀಮನ್ಮಹಾರಾಜರು ಕಾರಣಾಂತರದಿಂದ ಸಭೆಗೆ ಬರಲಾಗಲಿಲ್ಲ. ಶ್ರೀ ಜಯಚಾಮರಾಜ ಒಡೆಯರೂ ಅವರ ಉಪಾಧ್ಯಾಯರಾದ ಮಿ॥ ಟರ್ನರ್‌ರವರೂ ದಯಮಾಡಿಸಿದ್ದರು. ಅವರನ್ನು ಡಿಸ್ಟ್ರಿಕ್ಟ್ ಬೋರ್ಡ್ ಸದಸ್ಯರೂ, ಪ್ರೆಸಿಡೆಂಟರೂ ಮರ್ಯಾದೆಯೊಡನೆ ಬರಮಾಡಿಕೊಂಡರು. ಸ್ವಾಗತ ಪದ್ಯ ಪಠನವಾಯಿತು. ಅನಂತರ ಬೋರ್ಡಿನ ಅಧ್ಯಕ್ಷರಾದ ಶ್ರೀ ಬಿ ಎಸ್ ಪುಟ್ಟಸ್ವಾಮಿಯವರು ಶ್ರೀಮನ್ಮಹಾರಾಜರಿಗೆ ಅರ್ಪಿಸತಕ್ಕ ಬಿನ್ನವತ್ತಳೆಯನ್ನು ಓದಿ ಕ್ಯಾಸ್ಕೆಟ್ಟಿನೊಡನೆ ಶ್ರೀ ಜಯಚಾಮರಾಜ ಒಡೆಯರವರಿಗೆ ಒಪ್ಪಿಸಿದರು. ಡಿಸ್ಟ್ರಿಕ್ಟ್ ಬೋರ್ಡಿನವರು ಇದುವರೆಗೆ ಮಾಡಿರತಕ್ಕ ಅಭಿವೃದ್ಧಿ ಕಾರ್ಯಗಳನ್ನು ಅದರಲ್ಲಿ ನಿರೂಪಿಸಿದರು.

ಮಿ॥ ಟರ್ನರ್‌ರವರು ಶ್ರೀಮನ್ಮಹಾರಾಜರವರ ಭಾಷಣವನ್ನು ಓದಿದರು. ಅದರ ಸಾರಾಂಶವಿಷ್ಟು —

ಹಿಂದೂಸ್ಥಾನದ ಸ್ಥಳೀಯ ಸಂಸ್ಥೆಗಳ ಬೆಳವಣಿಗೆಯೂ ಇಂಗ್ಲಂಡಿನ ಸಂಸ್ಥೆಗಳ ಬೆಳವಣಿಗೆಯೂ ಒಂದಕ್ಕೊಂದು ವ್ಯತಿರೇಕವಾಗಿವೆ. ಸಣ್ಣ ಸಂಸ್ಥೆಗಳಿಂದ ದೊಡ್ಡ ಸಂಸ್ಥೆಗಳು ಅಲ್ಲಿ ಪುಷ್ಟೀಕರಿಸಲ್ಪಡುತ್ತವೆ. ಇಲ್ಲಿ ದೊಡ್ಡ ಸಂಸ್ಥೆಗಳಿಂದ ಸಣ್ಣ ಸಂಸ್ಥೆಗಳು ಅಧಿಕಾರವನ್ನು ತೆಗೆದುಕೊಳ್ಳುತ್ತವೆ. ತಮಗಿಂತ ಮೇಲ್ಪಟ್ಟವರಿಂದ ಸಹಾಯವನ್ನು ಅಪೇಕ್ಷಿಸುತ್ತವೆ. ಕೆಳಗಿರುವವರಿಗೆ ಕೃಪಾದೃಷ್ಟಿಯನ್ನು ನೀಡುತ್ತವೆ.

ನಿಮ್ಮ ಡಿಸ್ಟ್ರಿಕ್ಟ್ ಬೋರ್ಡು ನಾಲ್ಕು ಸಭೆಗಳನ್ನು ಕಳೆದ ವರ್ಷ ನಡೆಸಿದೆ. ಈ ಸಭೆಗಳು ಒಂದು ಸಣ್ಣ ಶಾಸನ ಸಭೆಯಂತೆ ಕಾರ್ಯವನ್ನು ನಡೆಸಿವೆ. ಅವುಗಳಲ್ಲಿ ಅನೇಕ ಪ್ರಶ್ನೋತ್ತರಗಳೂ ನಡೆದಿವೆ. ಅವುಗಳಿಂದ ಕಂದಾಯದಾರರಿಗೆ ಯಾವ ಪುರುಷಾರ್ಥವೂ ಆಗಿಲ್ಲ. ಬರೀ ಕಂಠಶೋಷಣೆ ಮಾತ್ರ ಆಗಿದೆ. ಒಂದೊಂದು ಸಭೆಯಲ್ಲೂ ನೂರು ನೂರೈವತ್ತು ಠರಾವುಗಳು ಚರ್ಚಿಸಲ್ಪಟ್ಟಿವೆ. ವಿಶೇಷ ಪ್ರಯಾಣದ ಭತ್ಯವನ್ನು ಹೊರಲಾರದೆ ಮೂರು ತಿಂಗಳಿಗೊಂದಾವರ್ತಿ ಮಾತ್ರ ಸಭೆಯು ಸೇರುತ್ತದೆಯಂದೂ, ಸದಸ್ಯರ ವಾಗ್ಝರಿಯೆಂಬ ಪ್ರವಾಹಕ್ಕೆ ಒಂದು ಅಡ್ಡಗಟ್ಟೆಯನ್ನು ಕಟ್ಟಿ ಮೂರು ತಿಂಗಳಿಗೊಂದು ಸಲ ಮಾತ್ರ ಅದನ್ನು ಹೊರಗ ಬಿಡಬೇಕಾಗಿದೆಯೆಂದೂ ಕೇಳುತ್ತೇನೆ. ಆದರೆ ಈ ವಿಧದಿಂದ ಸ್ಥಳೀಯ ಸರ್ಕಾರದ ಉದ್ದೇಶವು ನೆರವೇರುವುದಿಲ್ಲ. ಗ್ರಾಮಸಮಸ್ಯೆಗಳ ವಿಚಾರವಾಗಿ ಪಟ್ಟಣದ ಸದಸ್ಯರು ಸಣ್ಣ ಸಣ್ಣ ಪಾರ್ಲಿಮೆಂಟುಗಳನ್ನು ನಡೆಸುವುದು ನಮಗೆ ಸಮಾಧಾನವಿಲ್ಲ. ಗ್ರಾಮಗಳ ಅಭಿವೃದ್ಧಿಗೆ ಏನು ಬೇಕೆಂಬುದನ್ನು ಗ್ರಾಮಸ್ಥರೇ ಡಿಸ್ಟ್ರಿಕ್ಟ್ ಬೋರ್ಡಿಗೂ ಸರ್ಕಾರಕ್ಕೂ ಉತ್ಸಾಹದಿಂದ ತಿಳಿಸಬೇಕು.

ಜಮಾನಿನಲ್ಲಿ ಬೆಳೆದ ದಿವಸಿಗಳಿಗೆ ಸರಿಯಾದ ಬೆಲೆ ದೊರೆಯುವಂತೆ ಆಗಬೇಕು. ಉಪ್ರಯೋಜಕವಾದ ಪೈಪೋಟಿಯು ತಪ್ಪಬೇಕು ಮತ್ತು ಪರಿಗೆ ಆಸ್ಪತ್ರೆಗಳು ವಿಶೇಷವಾಗಿ ಏರ್ಪಾಡಾಗಬೇಕು. ಆದರೆ ಇದು ಒಂದು ಸಭೆಯಲ್ಲ ಯೋಜನೆ ಬಳಿ ಕುಳಿತು ಮಾಡುವ ಕೆಲಸವಲ್ಲ. ಎಲ್ಲರೂ ಅದರಲ್ಲಿ ಶ್ರದ್ಧೆಯನ್ನು ತೋರಿಸಬೇಕು.

ನೀವು ಕಟ್ಟಬೇಕೆಂದಿರುವ ಈ ನಗರ ಭವನಕ್ಕಾಗಿ ನಾನು ನಿಮ್ಮನ್ನು ಅಭಿನಂದಿಸುತ್ತೇನೆ. ಆದರೆ ನಿಮ್ಮ ಹೆಚ್ಚಿನ ಗಮನವನ್ನು ಗ್ರಾಮಗಳಿಗಾಗಿಯೇ ವಿನಿಯೋಗಿಸುವಿರೆಂದು ನಂಬುತ್ತೇನೆ. ಪಟ್ಟಣಗಳಲ್ಲಿ ನೀವೆಲ್ಲರೂ ಸೇರಬೇಕಾದಾಗಲೂ ನಿಮ್ಮ ನಿಮ್ಮ ಪ್ರಾಂತ್ಯಗಳಲ್ಲಿ ಯಾವ ಕಾರ್ಯಸಾಧನೆಗಳನ್ನು ಮಾಡಲು ನೀವು ಶಕ್ತರಾಗಿದ್ದೀರೆಂಬುದನ್ನು ಪರ್ಯಾಲೋಚಿಸಿರಿ. ಬಡ ಗುಮಾಸ್ತರುಗಳ ಲೋಪದೋಷಗಳ ಮೇಲೆ ಶುಷ್ಕವಾದ ಪ್ರಶ್ನೆಗಳನ್ನು ಹಾಕುತ್ತ ಕಾಲಕಳೆಯಬೇಡಿರಿ. ನಿಮ್ಮ ಕಟ್ಟಡದ ಶಂಕುಸ್ಥಾಪನೆಯನ್ನು ಅತ್ಯಾನಂದದಿಂದ ಮಾಡುತ್ತೇನೆ. ಮಹಾಜನರ ಹಿತಸಾಧನೆಗೆ ಅದು ಸಹಕಾರಿಯಾಗಲೆಂದು ಕೋರುತ್ತೇನೆ.

ಡಾಕ್ಟರಿಗೆ ಜುಲ್ಮಾನೆ

ಹಂಪಾಪುರದಲ್ಲಿರುವ ಸರ್ಕಾರಿ ಆಸ್ಪತ್ರೆಯ ಡಾಕ್ಟರಾಗಿದ್ದ ಶ್ರೀ॥ ಲಿಂಗಪ್ಪ ಎಂಬುವರು ಹೋದ ವರ್ಷ ಸುಮಾರು ಮಾರ್ಚಿ ತಿಂಗಳ ಮಧ್ಯಭಾಗದಲ್ಲಿ ಮೈಸೂರಿಂದ ಮಾನಂದವಾಡಿಗೆ ಪ್ರಯಾಣ ಮಾಡುತ್ತಿದ್ದರು. ಆ ಸಂದರ್ಭದಲ್ಲಿ ಇವರು ಇತರ ಪ್ರಯಾಣಿಕರೊಂದಿಗೆ ಡಿ॥ ಬೋ॥ ಮೆಂಬರಾದ ಶ್ರೀ॥ ಬಸಪ್ಪನವರನ್ನು ಮಾನನಷ್ಟಕರವಾಗತಕ್ಕ ರೀತಿಯಲ್ಲಿ ಬೈದರೆಂಬ ಆಪಾದನೆಯಮೇಲೆ ಶ್ರೀ॥ ಬಸಪ್ಪನವರು ಇಲ್ಲಿನ ಸ್ಪೆ॥ ಫಸ್ಟ್‌ಕ್ಲಾಸ್ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಮೊಕದ್ದಮೆ ಹೂಡಿದ್ದರು. ತತ್ಸಂಬಂಧವಾಗಿ ಶ್ರೀ॥ ಲಿಂಗಪ್ಪನವರಿಗೆ ನೂರು ರೂ ಜುಲ್ಮಾನೆ ತಪ್ಪಿದರೆ ಒಂದುವಾರ ಸಾದಾ ಸಜಾ ವಿಧಿಸಲಾಯಿತೆಂದೂ ಜುಲ್ಮಾನೆ ಯೇನಾದರೂ ವಸೂಲಾದಲ್ಲಿ ಅದು ಫಿರ್ಯಾದಿಗೆ ಕೊಡಿಸಲ್ಪಡಬೇಕೆಂದೂ ತೀರ್ಮಾನಿತೆಂದೂ ತಿಳಿಯಬರುತ್ತದೆ.

ಪೌರಸಭೆಗೆ ಸಾಲ

ಈ ತಿಂಗಳು ೧೩ ನೇ ತಾ॥ ಶುಕ್ರವಾರ ರಾಜಧಾನಿ ಪೌರಸಭೆಯ ಆಯವ್ಯಯದ ಮಾಟೆಂಗು ನಡೆಯಿತಷ್ಟೆ. ಅದರಲ್ಲಿ ಕೆಳಗೆ ಕಂಡ ಅಂಶಗಳು ತೀರ್ಮಾನಿಸಲ್ಪಟ್ಟಿವೆಂಬುದಾಗಿ ತಿಳಿಯಬರುತ್ತದೆ.

೧೯೩೬-೩೭ ನೇ ಸಾಲಿಗೆ ವರಮಾನ ೮,೩೦,೧೬೫ ರೂ ಗಳೂ, ವೆಚ್ಚವು ೭,೭೪,೮೩೮ ರೂ ಗಳೆಂದೂ ಅಂದಾಜಾಗಿದೆ.

ನಗರದ ರಸ್ತೆಗಳ ರಿಪೇರಿಗಾಗಿ ಮೂವತ್ತು ಸಾವಿರ ರೂ ಗಳೂ, ಕನ್ಸರ್‌ವೆನ್ಸಿ ಗಾಡಿಗಳನ್ನು ಕೊಳ್ಳುವ ಸಲುವಾಗಿ ಐನೂರು ರೂಪಾಯಿಗಳೂ, ಝಾಡಮಾಲಿಗಳಿಗೆ ಅಚ್ಚುಕಟ್ಟಾದ ಗಾರೆ ಮನೆಗಳನ್ನು ಕಟ್ಟಿಸಿ ಕೊಡುವುದಕ್ಕೆ ಎಂಟು ಸಾವಿರ ರೂಪಾಯಿಗಳೂ, ಮಲೇರಿಯಾ ರೋಗ ನಿವಾರಣಾ ಕಾರ್ಯಗಳಿಗಾಗಿ ಎಂಟು ಸಾವಿರದ ಆರುನೂರು ರೂ ಗಳೂ, ಇಲಿಗಳನ್ನು ಧ್ವಂಸ ಮಾಡುವುದಕ್ಕೆ ಎರಡು ಸಾವಿರದ ಎಂಟುನೂರ ಮೂವತ್ತೆರಡು ರೂ ಗಳನ್ನೂ ವೆಚ್ಚಕ್ಕೆ ಒದಗಿಸಬೇಕೆಂದು ತೀರ್ಮಾನವಾಯಿತು.

ಅಲ್ಲದೆ ಹೊಸದಾಗಿ ಹತ್ತು ಲಕ್ಷ ರೂ ಗಳನ್ನು ಸಾಲ ಪಡೆಯಬೇಕೆಂದೂ ಒಪ್ಪಲಾಯಿತು. ಆ ಮೊಬಲಗಿನ ವಿಲೇವಾರಿಯು ಈ ಕೆಳಗೆ ಕಂಡಂತೆ ಆಗಬಹುದೆಂದೂ ಪರ್ಯಾಲೋಚಿಸಲಾಯಿತು.

೧ ಈಗಾಗಲೇ ಪೌರಸಭೆಗಿರತಕ್ಕ ನಾಲ್ಕೂ ಮುಕ್ಕಾಲು ಲಕ್ಷ ರೂಪಾಯಿಗಳನ್ನು ತೀರಿಸಿಬಿಡುವುದು. ಬಾಕಿಯದು ಅಭಿವೃದ್ಧಿ ಕಾರ್ಯಗಳಿಗಂತೆ. ಅಂದರೆ —

೨ ಪಟ್ಟಣದ ನೀರಿನ ಸರಬರಾಯನ್ನು ಉತ್ತಮಪಡಿಸುವುದಕ್ಕೆ ಐವತ್ತು ಸಾವಿರ ರೂಪಾಯಿಗಳು.

೩ ಎರಡು ನೂರು ರೂ ಗಳಿಗೆ ಕಡಿಮೆ ಇಲ್ಲದಂತೆ ಬಾಡಿಗೆ ಬರಬಹುದೆಂದಿರುವ ಮನೆಗಳಿಗ ನಲ್ಲಿ ಮಾಟರುಗಳನ್ನು ಹಾಕಿಸುವುದಕ್ಕೆ ಐವತ್ತು ಸಾವಿರ ರೂ ಗಳು.

೪ ಅಂಡರ್ ಗ್ರೌಂಡ್ ಸೂಯರ್ ಲೈನ್ ಹಾಕುವುದಕ್ಕೆ ಒಂದು ಲಕ್ಷ ರೂ.

೫. ಪ್ರಾಮುಖ್ಯವಾದ ರಸ್ತೆಗಳಿಗೆ ಕೀಲಿಕಲ್ಲಿ ಹಾಕಲು ಎರಡು ಲಕ್ಷ ರೂಪಾಯಿ.

೬ ಮುನಿಸಿಪಲ್ ಫಾರಂ ಅಭಿವೃದ್ಧಿಗೆ ಇಪ್ಪತ್ತು ಸಾವಿರ ರೂಪಾಯಿ.

೭ ಮಳೆ ನೀರಿನ ಬಚ್ಚಲು ಕಾಲುವೆಗಳಿಗೆ ಇಪ್ಪತ್ತು ಸಾವಿರ ರೂಪಾಯಿ.

೮ ಸಾರ್ವಜನಿಕ ಶೌಚ ಗೃಹಗಳನ್ನೂ ಮೂತ್ರವಿಸರ್ಜನಾ ಸ್ಥಳಗಳನ್ನು ಕಟ್ಟಿಸುವುದಕ್ಕಾಗಿ ಇಪ್ಪತ್ತು ಸಾವಿರ ರೂಪಾಯಿ.

೯ ಈವನಿಂಗ್ ಬಜಾರ್ ಕಟ್ಟುವುದಕ್ಕೋಸ್ಕರ ಹದಿನೈದು ಸಾವಿರ ರೂ.

ಅಬಿಸೀನಿಯದ ದುರವಸ್ಥೆ.

ಅಬಿಸೀನಿಯವು ಇಟಲಿಯ ಅಧೀನಕ್ಕೆ ಒಳಪಟ್ಟ ಮೇಲೆ ಅನಾಗರೀಕ ಅಬಿಸೀನಿಯರ ಭವಣೆಯು ಅತ್ಯಂತ ದುರವಸ್ಥೆಯನ್ನು ಹೊಂದಿದೆ. ಕ್ರೂರಿಗಳಾದ ಇಟಲಿಯವರು ಅಬಿಸೀನಿಯರನ್ನು ಮೃಗಗಳಂತೆ ಸದೆಬಡಿಯುತ್ತಿದ್ದಾರೆ. ಹಿಂದೆ ಅಮೇರಿಕಾದಲ್ಲಿ ನೀಗ್ರೋ ಜನಗಳಿಗಾಗುತ್ತಿದ್ದ ದಂಡನೆಯು ಈಗ ಅಬಿಸೀನಿಯದಲ್ಲಾಗುತ್ತಿದೆ.

ಇದುವರೆಗೂ ಸ್ವತಂತ್ರರಾಗಿದ್ದ ಅಬಿಸೀನಿಯರು ಗುಲಾಮರಾಗಿರುತ್ತಾರೆ. ಅತಿ ಸಾಂಸ್ಕೃತಿಕ ಸೋಗನ್ನು ಹಾಕಿಕೊಂಡ ಈ ಯೂರೋಪಿಯನರನ್ನು ನಂಬುವುದು ಕನ್ನಡಿ ಹಾವನ್ನು ನಂಬಿದಂತೆಯೇ ಸರಿ. ಸಾಮ್ರಾಜ್ಯದಾಹಪೂರಿತನಾದ ಮುಸೋಲಿನಿಯು ಜಗತ್ತಿನಲ್ಲಿ ಯಾವಾಗ ಎಂತಹ ಭಯಂಕರ ಅನಾಹುತವನ್ನು ತರುವನೋ ಎಂಬುದು ತಿಳಿಯಲಶಕ್ಯವಾಗಿದೆ. ಅಂತರಾಷ್ಟ್ರಸಂಘವಾದರೋ ಧೂರ್ತ ಮುಸೋಲಿನಿಯ ಕೈಗೊಂಬೆಯೇ ಆಗಿಬಿಟ್ಟಿದೆ. ಅಂದಮೇಲೆ ಇಟಲಿಯು ಶಾಂತಿಸ್ಥಾಪನೆಯನ್ನು ಮಾಡಬೇಕೆನ್ನುವ ರಾಷ್ಟ್ರಗಳಿಗೆ ಸಹಕರಿಸುವುದೆಂತು? ಒಟ್ಟಿನಲ್ಲಿ ನೋಡಿದರೆ ಯೂರೋಪಿನ ರಾಷ್ಟ್ರಗಳು ಇಟಲಿಗೆ ಒಳಗಿಂದೊಳಗೇ ಸಹಾಯ ಮಾಡುತ್ತಿದ್ದವೆಂಬುದನ್ನು ಧಾರಾಳವಾಗಿ ಹೇಳಬಹುದು. ಅಬಿಸೀನಿಯಾದ ಚಕ್ರವರ್ತಿಯು ಅನಾಥನಾಗಿ, ರಾಷ್ಟ್ರಬಾಹಿರನಾಗಿ ಇಂಗ್ಲೆಂಡಿಗೆ ಹೋಗಿರುತ್ತಾನೆ. ಅಬಿಸೀನಿಯದ ಸ್ವಾತಂತ್ರ್ಯಸೂರ್ಯನು ಅಸ್ತಂಗತನಾಗಿರುವನು. ಪುನಃ ಉದಯಿಸುವನೋ ಇಲ್ಲವೋ ಹೇಳಲಾಗುವುದಿಲ್ಲ.

ಪುನಃ ಇಟಲಿಯ ಯುದ್ಧಸಿದ್ಧತೆ

ಮುಸೋಲಿನಿಯು ಇಟಲಿಯಲ್ಲಿ ಮಾಡುತ್ತಿರುವ ಯುದ್ಧಸಿದ್ಧತೆಯನ್ನು ಕಂಡು ಐರೋಪ್ಯ ರಾಷ್ಟ್ರಗಳಿಗೆಲ್ಲಕ್ಕೂ ದಿಗಿಲುಂಟಾಗಿದೆ. ದಂಡಾಳುಗಳ ಶಿಕ್ಷಣಕ್ಕಾಗಿ ಕ್ಯಾಂಪುಗಳನ್ನು ಹೊಂದಲು ದೇಶದ ಪಾಠಶಾಲೆಗಳನ್ನೆಲ್ಲಾ ಮುಚ್ಚಲಾಗಿದೆ. ವಿಮಾನಗಳು ನೌಕೆಗಳನ್ನೆಲ್ಲಾ ಸಿದ್ಧವಾಗಿರಲು ಮತ್ತು ಇತರ ಯಂತ್ರ ಸಾಮಗ್ರಿಗಳನ್ನು ಸಿದ್ಧಪಡಿಸಲು ಮುಸೋಲಿನಿಯು ಸುಗ್ರೀವಾಜ್ಞೆಯಾಗಿದೆ. ಫ್ರಾನ್ಸ್ ಮತ್ತು ಯುಗೋಸ್ಲೋವಿಯಾ ಗಡಿನಾಡುಗಳಲ್ಲಿ ಪಹರೆ ಕಾರ್ಯವನ್ನು ಪ್ರಾರಂಭ ಮಾಡಿದೆ.

ಅಬಿಸೀನಿಯದಲ್ಲಿದ್ದ ಮಾರ್ಷಲ್ ಬೋಗ್ಲಿಯವರು ಇಟಲಿಗೆ ಹಿಂತಿರುಗುವುದರಿಂದ ಐರೋಪ್ಯ ರಾಷ್ಟ್ರಗಳಿಗೆ ಸಂದೇಹವುಂಟಾಗಿದೆ. "ಬ್ರಿಟನ್ನು ಅಬಿಸೀನಿಯಾ ದೇಶದ ವಿಷಯವನ್ನು ಕೈಬಿಟ್ಟು ಅದರ ಪರವಾಗಿ ಮಾತನಾಡುವುದಿಲ್ಲ. ಫ್ರಾನ್ಸಿನೊಡನೆಯೂ ಸಂಗ್ರಾಮಕ್ಕೆ ಸಿದ್ಧನಿದ್ದೇನೆ" ಎಂದು ಜಪಾನಿನ ಪತ್ರಿಕಾ ಪ್ರತಿನಿಧಿಯೊಡನೆ ಮುಸೋಲಿನಿಯು ಹೇಳಿರುವ

ಚಾ ಚಾ (೧೪).

೧ ಪಾಶ್ಚಾತ್ಯ ದೇಶಗಳಲ್ಲಿರುವಂತೆಯೇ ನಮ್ಮ ದೇಶದಲ್ಲಿಯೂ ಫುಟ್ ಬಾಲ್ (Foot ball) ಆಟಗಳನ್ನು ನಡೆಸುವ ರೆಫರಿ (Referee) ಗಳ ಜೀವವಿಮೆ ಕಂತನ್ನು ಹೆಚ್ಚಿಸಬೇಕೆಂದು ಇನ್ಷೂರೆನ್ಸ್ ಕಂಪೆನಿಯವರು ಆಲೋಚಿಸುತ್ತಿರುವರಂತೆ

೨ ಉತ್ತರ ಇಂಡಿಯಾದ ಒಂದು ಪಟ್ಟಣದಲ್ಲಿ ಕೆಲವು ದಿವಸಗಳಿಂದ ಎಲ್ಲಾ ವೈದ್ಯರೂ ಕೆಲಸ ಮಾಡದೆ ಮುಷ್ಕರ ಹೂಡಿರುವರಂತೆ ಆದ್ದರಿಂದ, ಅಲ್ಲಿಯ ಜನರು ವೈದ್ಯರ ಸಹಾಯವಿಲ್ಲದೆ ಸಾಯಬೇಕಾಗಿ ಬಂದಿದೆ

೩ ಇಬ್ಬರು ಹುಡುಗರಿಗೆ ಜಗಳವಾಯಿತು ಒಬ್ಬ ಇನ್ನೊಬ್ಬನನ್ನ 'ಫೂಲ್!' ಎಂತ ಬೈದದ್ದೇ ಜಗಳಕ್ಕೆ ಕಾರಣ ಆ ಮಾತನ್ನ ಐದು ನಿಮಿಷಗಳಲ್ಲಿ ಹಿಂದಕ್ಕೆ ತೆಗೆದುಕೊಳ್ಳಬೇಕು ಎಂದು ಹೇಳಿ, ಬೈಸಿಕೊಂಡವನು ಗಡಿಯಾರ ಹಿಡಿದು ನಿಂತುಕೊಂಡ 'ಹಿಂದಕ್ಕೆ ತೆಗೆಯದಿದ್ದರೆ?' ಎಂದು ಬೈದವನು ಕೇಳಿದ 'ಇನ್ನೊಂದು ಐದು ನಿಮಿಷ ಕಾದು ನೋಡುತ್ತೇನೆ" ಎಂದು ಅವನು ಉತ್ತರ ಕೊಟ್ಟ ನೋಡಿದಿರಾ! ಹುಡುಗನ ಧೈರ್ಯ!"

೪ ಆಫೀಸ್ ರೂಮಿನಲ್ಲಿ ತಮ್ಮ ಮೇಜಿನ ಕೆಳಗೆ ಬಿದ್ದಿದ್ದ ಬೀಡಿ ಚೂರನ್ನು ಕಂಡು ಸಾಹೇಬರಿಗೆ ತುಂಬಾ ರೇಗಿತು "ಏನು ಬೋರ! ಇದು ಯಾರದು? ನಿನ್ನದಲ್ಲವೇನೋ?' ಎಂದು ಕೇಳಿದ ಬಳಿಕ ಅವನು, 'ಪರವಾಯಿಲ್ಲ, ಬುದ್ಧಿ, ಬೇಕಾದರೆ ತಾವು ತೆಗದು ಉಪಯೋಗಿಸಬಹುದು ಸಣ್ಣದಾದ ಮಾತ್ರಕ್ಕೆ ಬೇಕಾದರೆ ನನ್ನನ್ನು ತಾವು ಕೇಳಬಹುದು' ಅಂದ.

೫ "ಶ್ರೀಮಂತ, ಬಿ ಎ"—ಎಂಬ ಒಂದು ಪುಸ್ತಕವನ್ನು ಒಬ್ಬರು ಬರೆದಿದ್ದಾರೆ ಆ ಹೆಸರನ್ನು ನೋಡುತ್ತಲೇ ಅದು ಹಿಸ್ ಕಟ್ಟು ಕಥೆ ಎಂದು ಊಹಿಸ ಬಹುದಾಗಿದೆ

೬ ತಮಗೆ ಮದುವೆಯೂ ಆಗಿಹೋದ ಮೇಲೆ ಇನ್ನು ಲೈಫ್ ಇನ್ಷೂರ್ ಮಾಡಿಸಬೇಕು ಎಂದು ಏಜಂಟರು ಬಲವಂತ ಮಾಡಿದರು ಅದನ್ನು ಕೇಳಿ ಆ ಗೃಹಸ್ಥ, "ಏಕೆ! ಆಕೆ ಅಷ್ಟೇನೂ ಕ್ರೂರಿಯಾಗಿ ಕಾಣಿಸುವುದಿಲ್ಲವಲ್ಲಾ!" ಎಂದು ಹೇಳಿದನಂತೆ

೭ ಸಿಸಲ್‌ಫಾಟ್ ರಸ್ತೆ ಇಳಿಜಾರಲ್ಲಿ ವೇಗವಾಗಿ ಮೋಟರು ರಭಸದಿಂದ ಆ ಡ್ರೈವರು ಹಿಂದಕ್ಕೆ ತಿರುಗಿ, "ಜಮಾದಾರ ಸಾಬ್ ಬ್ರೇಕ್, ಯಾಕೋ ಹಿಡಿಯುತ್ತಾ ಇಲ್ಲ! ಏನು ಮಾಡಲಿ" ಎಂದು ಹೇಳಿದ. ಆತ, "ಓ ಹೌದಾ! ಹಾಗಾದರೆ ಕಾರು ನಿಲ್ಲಿಸು ನಾನು ನಡೆದು ಊರ ನಡೆಯುತ್ತೇನೆ ಕೂತು ಕೂತು ಬೇಜಾರಾಗಿದೆ,' ಅಂದನಂತೆ

೮ ಇಬ್ಬರು ಸಂಗೀತ ಮಹಾ ವಿದ್ವಾಂಸರು ಎಂದು ಗಂಟೆಕಾಲ ಕಛೇರಿ ಒದರಿದ ನಂತರ, "ಸಭಿಕರಲ್ಲಿ ವಿಜ್ಞಾಪನೆ! ತಮ್ಮಲ್ಲಿ ಯಾರಾದರೂ ಯಾವುದಾದರೂ ಹಾಡನ್ನು ಕೇಳಬೇಕೆನ್ನಿಸಿದರೆ, ಹಾಡಲು ಸಿದ್ಧನಾಗಿದ್ದೇನೆ ಎಂತ ಹೇಳಿದರು ಆಗ ಎಲ್ಲ ಇದ್ದವರೆಲ್ಲರೂ, ಏಕಕಂಠದಿಂದ, 'ಸ್ವಾಮಿ,' ಮಂಗಳ ಹಾಡಿ ಎಂತ ಕೂಗಿಕೊಂಡರಂತೆ!

೯ ಹಣವನ್ನು ಸಾಲವಾಗಿ ಸರ್ಕಾರದಿಂದಲೂ, ನೋಟು ಟಿಗಳಿಂದಲೋ ತಂದು ಹಾಕಿ, ಕಟ್ಟಿರುವ ಅನೇಕ ಮನೆಗಳಿರುವ ರಾಜಧಾನಿಯ ಒಂದು ಎಕ್ಸ್‌ಟೆನ್‌ಷನ್ನಿಗೆ "ಸಾಲಾಪುರ" ಎಂದು ಹೆಸರಿಡಬೇಕೆಂದು ಕೆಲವರು ಸದ್ಯದಲ್ಲೇ ಕೇಳಿಕೊಳ್ಳುವರಂತೆ

೧೦ ಜವಾನ ಕೋಪಿಸಿಕೊಂಡು ಹೊರಟುಹೋದ 'ಎಲ್ಲಾ, ಹೀನು, ನನ್ನನ್ನು ಬಾಯಿಗೆ ಬಂದಹಾಗೆ ಬೈಯ್ಯುವ ಹಾಗೆ ಅವನನ್ನ ಬೈಯ್ಯಬಹುದೇ!' ಎಂದು ಗಂಡ ಗೊಣಗಿದ ದೇವರ ದಯೆಯಿಂದ, ಹೆಂಡತಿಗೆ ಅದು ಕೇಳಿಸಲಿಲ್ಲ, ಅಷ್ಟೆ

೧೧ ಪಶ್ಚಿಮ ದೇಶದಲ್ಲಿ ಹೊಸತರದ ಒಂದು ಶಾಲೆ ಇದೆಯಂತೆ ಅದನ್ನು ಕುರಿತು ಬರೆಯುತ್ತಾ 'ವಿದ್ಯಾದಾಯಿನಿ' ಮಾಸಿಕೆಯಲ್ಲಿ—ಅವರು ತಮ್ಮ ಉಪಾಧ್ಯಾಯರನ್ನು 'ಸಾರ್' 'ಸಾರ್' ಎಂದು ಕೂಗುವುದಿಲ್ಲ ಅವರ, ಅವರ ಹೆಸರು ಹಿಡಿದು ಪ್ರೀತಿಯಿಂದ "ಕೇಸ್ ಕೇಸ್" ಎಂದು ಮಾತನಾಡಿಸುವರು—ಎಂದು ವಿವರಿಸಿದೆ ನಮಗೆ ಈ ಹೊಸತರದ ಸ್ವಲ್ಪವೂ ಹಿಡಿಯಲಿಲ್ಲ ಕೇಸ್, ಕೇಸ್—ಗಿಂತ—ಸಾರ್, ಸಾರ್, ಅನ್ನುವುದೇ ವಾಸಿ ಎಂದು ಅನ್ನಿಸುತ್ತದೆ

ಶ್ರೀಮನ್ಮಹಾರಾಜರಿಗೆ ಸುಖಪ್ರಯಾಣ.

ಕಳೆದ ಶನಿವಾರ ಮಧ್ಯಾಹ್ನ ಮೈಸೂರು ಪೌರ ಸಭೆಯ ವಿಶೇಷ ಮೀಟಿಂಗು ನಡೆಯಿತು ಶ್ರೀಮನ್ಮಹಾರಾಜರವರು ಪರಿವಾರಸಮೇತರಾಗಿ ಪಾಶ್ಚಾತ್ಯ ದೇಶಗಳ ಸಂಚಾರವನ್ನು ಕೈಗೊಂಡಿರುವುದರಿಂದ ಅವರಿಗೆ ಸುಖಪ್ರಯಾಣವನ್ನು ಬಯಸಿ ಅವರು ಸಂಪೂರ್ಣವಾಗಿ ಆರೋಗ್ಯವನ್ನು ಹೊಂದಿ ಬರಲೆಂದು ಹಾರೈಸುವ ನಿರ್ಣಯವನ್ನು ಮಾಡಲಾಯಿತು

ಬೈಸಿಕಲ್ ತೆರಿಗೆ ಜಾಸ್ತಿ

ಕಲ್ಲಿಕೋಟೆಯಲ್ಲಿ ಕೆಲವು ಬೈಸಿಕಲ್ ಮಾಲೀಕರು ಮ್ಯುನಿಸಿಪಲ್ ಕಮಿಷನರ ವರಿಗೆ ಇನ್ನು ಮುಂದೆ ಈ ತೆರಿಗೆಯನ್ನು ಸಂಪೂರ್ಣವಾಗಿ ತೆಗೆದುಹಾಕಿ ಇಲ್ಲವಾದಲ್ಲಿ ತೆರಿಗೆಯನ್ನು ಕಡಿಮೆಮಾಡಬೇಕು ಎಂದು ಅರ್ಜಿ ಕೊಟ್ಟಿದ್ದಾರೆ 15-20 ರೂಪಾಯಿ ಬೆಲೆಯುಳ್ಳ ಒಂದು ಬೈಸಿಕಲಿಗೆ 110 ರೂಪಾಯಿ ವರ್ಷಂಪ್ರತಿ ತೆರಿಗೆಯು ಬಹಳ ಹೆಚ್ಚು, ಈ ವಿಚಾರವನ್ನು ಶೀಘ್ರದಲ್ಲಿಯೇ ಪರ್ಯಾಲೋಚಿಸಬೇಕಾಗಿದೆ ಎಂದು ಕಮಿಷನರವರಿಗೆ ಬೈಸಿಕಲ್ ಮಾಲೀಕರು ಹೇಳಿದರು

ಶ್ರೀಮನ್ಮಹಾರಾಜರ ಪ್ರಯಾಣ.

ಕಾರ್ಯಕ್ರಮ

ಜೂನ್ ೨೦ನೇ ತಾರೀಖಿನ ದಿವಸ ಬೊಂಬಾಯಿ ಬ್ಯಾಲರ್ಡ್ ಪಿಯರಿನಿಂದ ಹೊರಡುವ ಎಸ್ ಎಸ್ "ರಾಜಪುತಾ" ಜಹಜಿನ ಮೂಲಕ ನಮ್ಮ ಶ್ರೀಮನ್ಮಹಾರಾಜರೂ, ದಿವಾನರೂ ಪರಿವಾರದವರೂ ಯೂರೋಪ ಖಂಡಕ್ಕೆ ಸುಖವಾಗಿ ಪ್ರಯಾಣ ಮಾಡುವರಷ್ಟೆ

ಪ್ರಭುಗಳು ಮೊದಲು ಮಾರ್ಸೇಲ್ಸ್‌ನಲ್ಲಿ ಇಳಿದು ಪಿ ಎಂಡ್ ಓ ಕಂಪೆನಿಯ ಓವರ್‌ಲೆಂಡ್ ಸ್ಪೆಷಲ್ ರೈಲಿನ ಮೂಲಕ ಪ್ಯಾರಿಸ್ ನಗರಕ್ಕೆ ದಯಮಾಡಿಸುವರೆಂದು ತಿಳಿದುಬಂದಿದೆ

ಈ ಸ್ಪೆಷಲ್ ರೈಲು ಮಾರ್ಸೇಲ್ಸ್‌ನಿಂದ ಪ್ರತಿ ಪಿ ಎಂಡ್ ಓ ಜಹಜು ಬಂದ ದಿವಸ ಲಂಡನ್ ಕಡೆಗೆ ಹೊರಡುತ್ತದೆ

ಪ್ರಭುಗಳು ಪ್ಯಾರಿಸ್ಸಿನಲ್ಲಿ ಸ್ವಲ್ಪ ದಿವಸಗಳಿದ್ದು ನಂತರ ಕೆಲೇ ಮಾರ್ಗವಾಗಿ ಲಂಡನ್ನಿಗೆ ದಯಮಾಡಿಸುವರು

ಲಂಡನ್ನಿನಲ್ಲಿ ಎಷ್ಟು ದಿವಸಗಳಿರುವರೋ ಇನ್ನೂ ಗೊತ್ತಾಗಿಲ್ಲ ಪ್ರಾಯಶಃ ಎರಡು ವಾರಗಳವರೆಗೆ ಲಂಡನ್ನಿನಲ್ಲಿಯೇ ಇರಬಹುದೆಂದು ಊಹಿಸಲಾಗಿದೆ ಲಂಡನ್ ಕಾರ್ಯಕ್ರಮವನ್ನು ಮುಗಿಸಿಕೊಂಡು ಪ್ರಭುಗಳವರೂ, ಪರಿವಾರದವರೂ, ಯೂರೋಪಿಗೆ ಬರುವರು

ಯೂರೋಪಿನಲ್ಲಿ ಮುಖ್ಯವಾಗಿ ಬರ್ಲಿನ್, ವಿಯನ್ನಾ, ಬುಡಾಪೆಸ್ಟ್, ಜಿನೀವಾ, ಮಾಂಟಿಕಾರ್ಲೊ, ನೈಸ್, ರೋಂ, ನೇಪಲ್ಸ್, ವೆನಿಸ್, ಮುಂತಾದ ನಗರಗಳಿಗೆ ಭೇಟಿಯಿತ್ತು ಅಲ್ಲಿನ ವೈಶಿಷ್ಟ್ಯವನ್ನು ನೋಡುವರೆಂದು ಗೊತ್ತಾಗಿದೆ

ಆತ್ಮಶಕ್ತಿಯ ಪ್ರಭಾವ

ಬೊಂಬಾಯಿನ ಬೂಗೆ ಸ್ವರೀ ಗವಿಗೆ ಹಿಂದೂ ಸನ್ಯಾಸಿಯೊಬ್ಬರು ತನ್ನ ಜೊತೆಯಲ್ಲಿ ನಾಲ್ಕು ವರ್ಷಗಳಿಂದಲೂ ಸಾಗಿದ ಒಂದು ಸಿಂಹದೊಡನೆ ವೈದ್ಯರನ್ನು ಭೇಟಿ ಮಾಡಿದರು ವೈದ್ಯರಾಯರು ಶ್ರೀ ಸ್ವಾಮಿಗಳಿಗೆ ಅಭೂತಪೂರ್ವವಾದ ಸ್ವಾಗತವನ್ನಿತ್ತರು ಲಕ್ಷಾಂತರ ಜನರು ಸ್ವಾಮಿಗಳ ಮತ್ತು ಸಿಂಹದ ದರ್ಶನಕ್ಕೋಸ್ಕರ ಹೋಗುತ್ತಿದ್ದಾರೆ 'ಆತ್ಮಿಕಬಲವೇ ಬಲವು' ಹಿಂದೂತತ್ವಜ್ಞಾನವು ಬೋಧಿಸುವ ಈ ಆಧ್ಯಾತ್ಮಿಕ ಪ್ರಭಾವದಿಂದ ಮೃಗಪ್ರಾಣಿಗಳನ್ನು ಸಾಧುಮಾಡಬಹುದು ಈ ಹೆಣ್ಣುಸಿಂಹವು ಪ್ರತಿ ಪ್ರಾತಃಕಾಲವೂ 'ರಾಮ' ಎಂಬ ದೇವರ ಹೆಸರನ್ನು ಉಚ್ಚರಿಸುತ್ತದೆ ಎಂದು ಸ್ವಾಮಿಯವರು ಹೇಳುವರು. ಹಿಂದೂತತ್ವಶಾಸ್ತ್ರಗ್ರಂಥಗಳು ಬರೀ ಕಟ್ಟುಕಥೆಯಲ್ಲ ಎಂಬುದನ್ನು ಇಂದಿಯಾದಲ್ಲೂ ಸಿದ್ಧಾಂತ ಮಾಡಬೇಕೆಂದಿರುವರು

ಕಂದಾಯದ ವಸೂಲಿಯಲ್ಲಿ ಗಲಭೆ.

ಅಮಲ್ದಾರರಿಗೂ ರೈತರಿಗೂ ಘರ್ಷಣೆ!

ಮೈಸೂರು ಡಿಸ್ಟ್ರಿಕ್ಟಿನ ಒಂದು ತಾಲ್ಲೂಕಿನಲ್ಲಿ ಗ್ರಾಮಾಂತರದ ಕಡೆ ಕಂದಾಯದ ಬಾಕೀ ವಸೂಲಿಗಾಗಿ ಅಮಲ್ದಾರರು ಹೋಗಿದ್ದರು ಆ ಸಂದರ್ಭದಲ್ಲಿ ಈ ಕೆಳಗೆ ಕಂಡಂತೆ ಪ್ರಸಂಗಗಳು ನಡೆದುವೆಂದು ತಿಳಿದುಬಂದಿದೆ—

ಕಂದಾಯದ ಬಾಕಿದಾರರೊಬ್ಬರ ಮನೆಗೆ ಜಪ್ತಿಮಾಡಲು ಶೇಕದಾರರೊಡನೆ ಅಮಲ್ದಾರರು ಹೋದರು ಮನೆಯಲ್ಲಿ ಭತ್ತದ ಕಣಜವಿತ್ತು ಅದರಿಂದ ಭತ್ತವನ್ನ ತೆಗೆಸಿ ಅಳೆಸಲು ಆರಂಭಿಸಿದರು ಭತ್ತವು ತನ್ನದಲ್ಲವೆಂದು ಮನೆಯ ಮಾಲೀಕನು ಹೇಳಿದನು ಕೇಳಲಿಲ್ಲ ಮಾಲೀಕನಾದ ಮತ್ತೊಬ್ಬನು ಬಂದು ತಕರಾರು ಮಾಡಿದನು ಅದಕ್ಕೂ ಏನೂ ಮಾಡಲಿಲ್ಲ ಭತ್ತವನ್ನು ಸರಿಯಾಗಿ ಅಳೆಯುತ್ತಿಲ್ಲ ನೆಂದು ಆತನು ಪುನಃ ತಕರಾರು ಮಾಡಿದನು. ಅಮಲ್ದಾರರು ಕೋಪಗೊಂಡು ಕೈಲಿದ್ದ ಕಮಿಚಿಯಿಂದ ಆತನನ್ನು ಬಾರಿಸಿದರು ಅಷ್ಟು ಹೊತ್ತಿಗೆ ಗಲಭೆಯಾಯಿತು ಅಕ್ಕಪಕ್ಕದವರೆಲ್ಲರಿಗೂ ಉದ್ರೇಕವಾಯಿತು ಗುಂಪು ಸೇರಿತು ಸ್ವಲ್ಪ ಕೈಮಿಲಾಯಿಸಿತೆಂದೂ ಹೇಳಲಾಗಿದೆ ಉಭಯತ್ರರಿಗೂ ಜಖಂ ಆಗಿ ಆಸ್ಪತ್ರೆಯಲ್ಲಿ ಚಿಕಿತ್ಸೆಯೂ ನಡೆಯಿತು ಇದರ ಮೇಲೆ ಜನಗಳಲ್ಲಿ ಬಹಳ ಅಸಮಾಧಾನವುಂಟಾಗಿದೆ

ಕಂದಾಯದ ವಸೂಲಿ ಕ್ರಮದಲ್ಲಿ ಈಗಾಗಲೇ ಎಷ್ಟೋ ಅಕ್ರಮಗಳು ನಡೆಯುತ್ತಿವೆ ಎಂದು ಸಾಲದೆ ಬಡ ರೈತರುಗಳನ್ನು ಕಮ್ಚಿಯಿಂದಲೂ ಇತರ ಉಪಕರಣಗಳಿಂದಲೂ ಬಾರಿಸುವುದೇ ಮುಂತಾದ ಪ್ರವರ್ತನೆಯು ಒಳ್ಳೆಯ ಪರಾಕಾಷ್ಠತೆಯು ಈ ವಿಷಯವನ್ನು ಮೇಲ್ಪಟ್ಟ ಅಧಿಕಾರಿಗಳು ವಿಚಾರಿಸಿ ಇಂತಹ ನಿರಂಕುಶ ಪ್ರವರ್ತನೆಗಳಿಗೆ ಅವಕಾಶವಾಗದಿರುವಂತೆ ಏರ್ಪಡಿಸಬೇಕೆಂದು ಕೋರುವ

ಪ್ರಜಾಹಿತೈಷಿ.

ಮೂರು ಮಕ್ಕಳು

ತಿರುವೇಲವಲ್ಲಿರುವ ಪುತುಪಲ್ಲಿ ಎಂಬಲ್ಲಿ ಒಬ್ಬ ಹೆಂಗಸು ಒಟ್ಟಿಗೆ ಮೂರು ಮಕ್ಕಳನ್ನು ಪ್ರಸವಿಸಿರುವಳು ಹಿಂದೆ ಇದೇ ಹೆಂಗಸು ಎರಡು ಹೆಣ್ಣು ಮಕ್ಕಳನ್ನು ಪ್ರಸವಿಸಿದ್ದಳು ಮಕ್ಕಳೆಲ್ಲಾ ಆರೋಗ್ಯವಾಗಿವೆ

ಹೆಂಗಸರು ಗಂಡಸರಾಗುತ್ತಿರುವರು

ಆಪರೇಷನ್ನಿನ ಮೂಲಕ ಹೆಂಗಸರು ಗಂಡಸರಾಗುತ್ತಿರುವ ನಿದರ್ಶನಗಳು ದಿನೇ ದಿನೇ ಹೆಚ್ಚುತ್ತಿವೆ ಸ್ಮಿಮತ್ ಏಂಪಲ್ಲಿ ಮಾರ್ಕ್ ವೆಸ್ಟ್ ಎಂಬುವನು ಈ ರೀತಿಯಾಗಿ ಹೊಸದಾಗಿ ಗಂಡಸಾದನು. ಈತನಿಗೆ ೨ ಸಾರಿ ಆಪರೇಷನ್ ಆಯಿತು ಮಿಸ್ ಜೋಲ್‌ತರ್ನ್ ಎಂಬ ಮತ್ತೊಬ್ಬ ವ್ಯಕ್ತಿಗೆ ಒಂದೇ ಆಪರೇಷನ್ನಲ್ಲಿ ಗಂಡಸಾಗಲು ಅವಕಾಶವಾಯಿತು. ಮೀಸೆಯು ಸದಾ ಬೆಳೆಗಿರುತ್ತದೆ ಗಡ್ಡವನ್ನು ಬೆಳಸಬೇಕೆಂಬ ಆಸೆಯು ಬಹಳವಾಗಿದೆ

ಸಾಧ್ವಿ

೨೨-೬-೩೬ ನೇ ಸೋಮವಾರ

ನ್ಯಾಯವಿಧಾಯಕ ಸಭೆ.

ಇಂದಿನಿಂದ ನಮ್ಮ ನ್ಯಾಯವಿಧಾಯಕ ಸಭೆಯ ಅಧಿವೇಶನವು ಬೆಂಗಳೂರಿನಲ್ಲಿ ನಡೆಯುವುದು. ಇದರಲ್ಲಿ ಅನೇಕ ಪ್ರಾಮುಖ್ಯ ವಿಷಯಗಳು ಚರ್ಚೆಗೆ ಬರುವವು.

ಇವುಗಳಲ್ಲಿ ಪತ್ರಿಕಾ ಕಾನೂನನ್ನು ರದ್ದು ಮಾಡಬೇಕೆಂಬುದೂ, ಪ್ರಾಣಿಬಲಿಯನ್ನು ತಪ್ಪಿಸಬೇಕೆಂಬುದೂ, ಸ್ಕೂಲು ಕಾಲೇಜುಗಳಲ್ಲಿ ವ್ಯಾಯಾಮ ಶಿಕ್ಷಣವನ್ನು ಬಲಾತ್ಕಾರದಿಂದ ಕಲಿಸಬೇಕೆಂಬುದೂ, ವ್ಯಭಿಚಾರ ವೃತ್ತಿಯನ್ನು ನಿರ್ಬಂಧಪಡಿಸಬೇಕೆಂಬುದೂ ಮುಖ್ಯವಾದವುಗಳು. ಇತರ ಉಪಯುಕ್ತವಾದ ನಿರ್ಣಯಗಳೂ ಇವೆ.

ವರ್ತಮಾನ ಪತ್ರಿಕಾ ಶಾಸನವನ್ನು ರದ್ದುಪಡಿಸಲು ನಿರ್ಣಯವನ್ನು ಶ್ರೀ॥ ಕೆ. ಟಿ. ಭಾಷ್ಯಂ ರವರು ತಂದಿರುವರು. ಇದಕ್ಕಾಗಿ ಇವರು ಅಭಿನಂದನೀಯರು. ಪತ್ರಿಕೆಗಳ ಪ್ರಾಮುಖ್ಯತೆಯು ಎಲ್ಲರಿಗೂ ಗೊತ್ತು. ಅವುಗಳಿಂದ ಎಲ್ಲರೂ ಪ್ರಯೋಜನ ಪಡೆದುಕೊಳ್ಳುವರು. ಸಮಯ ಬಂದಾಗ ಪತ್ರಿಕಾಕರ್ತರನ್ನು ಆಶ್ರಯಿಸಿ, ತಮ್ಮ ಕಾರ್ಯಸಾಧನೆ ಮಾಡಿಕೊಳ್ಳುವರು. ಆದರೆ ಪತ್ರಿಕೆಗಳಿಗಿರುವ ಕಷ್ಟನಿಷ್ಠುರಗಳನ್ನು ವಿಚಾರಿಸುವವರು ವಿರಳ. ವರ್ತಮಾನ ಪತ್ರಿಕಾ ಶಾಸನವನ್ನು ರದ್ದುಮಾಡಬೇಕೆಂದು ಶಾಸನ ಸಭೆಯಲ್ಲಿ ನಿರ್ಣಯವಾಗಿ ಹತ್ತು ವರ್ಷಗಳಮೇಲಾಯಿತು. ಸರ್ಕಾರದವರು ಅದಕ್ಕೆ ಒಪ್ಪಿದರು. ಶ್ರೀಮನ್ಮಹಾರಾಜರವರು ಅದನ್ನು ರದ್ದುಮಾಡಲು ಅನುಮತಿ ಇತ್ತಿದ್ದರು. ಆದರೂ ಇನ್ನೂ ಅದನ್ನು ರದ್ದುಮಾಡಿಲ್ಲ. ಶಾಸನ ಸಭೆಯ ಕಾರ್ಯನಿರ್ವಾಹಕರಿಗೆ ಇದು ತಕ್ಕುದಲ್ಲ. ಅಲ್ಲಿ ಗೊತ್ತಾದ ನಿರ್ಣಯವು ಹತ್ತು ವರ್ಷವಾದರೂ ಜಾರಿಗೆ ಬರದಿರುವುದು ಕೇವಲ ಶೋಚನೀಯ. ಈಗಲಾದರೂ ಈ ಕರಾಳ ಶಾಸನವನ್ನು ರದ್ದುಪಡಿಸಿ, ಪತ್ರಿಕೆಗಳು ಧಾರಾಳವಾಗಿ ದೇಶಸೇವೆ ಮಾಡುವಂತೆ ಅವಕಾಶ ಕಲ್ಪಿಸಲಾಗುವುದೆಂದು ನಂಬುತ್ತೇವೆ.

ಪ್ರಾಣಿಬಲಿಯು ಆಗದಂತೆ ತಪ್ಪಿಸುವುದು ಅತ್ಯವಶ್ಯಕ. ತಿರುವಾಂಕೂರಿನಲ್ಲಿ ಇಂತಹ ಕಾನೂನಾಗಿದೆ. ಇನ್ನೂ ಇತರ ಕೆಲವು ಕಡೆಗಳಲ್ಲಿ ಆಗಿದೆ. ಇದರಿಂದ ಯಾವ ಅನಾನುಕೂಲವೂ ಉಂಟಾಗಿಲ್ಲ. ಪ್ರಾಣಿ ಬಲಿಯನ್ನು ತಪ್ಪಿಸುವುದರಿಂದ ಜನರ ನೀತಿ ನಡತೆಗಳು ಉತ್ತೀರ್ಣಗೊಳ್ಳುತ್ತವೆ. ನಮ್ಮ ದೇಶದ ಅನೇಕ ಮುಖಂಡರೂ, ಪ್ರಾಣಿದಯಾಪ್ರಚಾರ ಸಂಘಗಳೂ ಈ ವಿಚಾರದಲ್ಲಿ ಚಳವಳಿ ಮಾಡುತ್ತಲೇ ಇರುವರು. ಈ ಕಾನೂನನ್ನು ಜಾರಿಗೆ ತರುವುದು ಸೂಕ್ತವಾಗಿದೆ.

ಬಲಾತ್ಕಾರವಾಗಿ ವ್ಯಾಯಾಮಶಿಕ್ಷಣವನ್ನು ವಿದ್ಯಾರ್ಥಿಗಳಿಗೆ ಕೊಡಿಸುವ ವಿಷಯವು ಸ್ವಲ್ಪ ತೊಡಕಿನದು. ವಿಶ್ವವಿದ್ಯಾಲಯದ ಸೆನೆಟ್ಟಿನಲ್ಲಿ ಈ ವಿಷಯವು ಒಂದು ಬಾರಿ ಚರ್ಚೆಗೆ ಬಂದು ಬಿದ್ದುಹೋಯಿತು. ಕಾರ್ಯತಃ ಯಾವ ರೀತಿಯಲ್ಲಿ ವ್ಯಾಯಾಮಶಿಕ್ಷಣವನ್ನು ಕೊಡಬೇಕೆಂಬ ಅಂಶವು ವಿಶದವಾಗಿರಲಿಲ್ಲ. ಆದ್ದರಿಂದ ಬಿದ್ದುಹೋಯಿತು. ಈ ಶಿಕ್ಷಣಕ್ಕೆ ಎಲ್ಲರೂ ಯೋಗ್ಯರಾಗಿರುವುದಿಲ್ಲ. ಆದರೂ ಹಲವರಿಗಾದರೂ ಶಿಕ್ಷಣವನ್ನು ಕೊಡುವುದು ಒಳ್ಳೆಯದು. ಇದಕ್ಕಾಗಿ ಬೇರೆ ಶಾಲೆಗಳನ್ನು ಸ್ಥಾಪಿಸಿದರೂ ಉಪಯುಕ್ತವೇ ಆಗಿದೆ.

ವ್ಯಭಿಚಾರವಿರೋಧ ಮಸೂದೆಯು ಅನೇಕಸಾರಿ ಚರ್ಚೆಗೆ ಬಂದಿದೆ. ಇದನ್ನು ಕಾರ್ಯರಂಗದಲ್ಲಿ ಜಾರಿ ಮಾಡುವಾಗ ಅನೇಕ ತೊಂದರೆಗಳು ಬರುತ್ತವೆ. ತತ್ತ್ವವೇನೋ ಒಳ್ಳೆಯದು. ಯಾರಿಗೂ ಬಾಧಕವಿಲ್ಲದಂತೆ ಕಾನೂನು ಮಾಡುವುದು ಅತ್ಯವಶ್ಯಕ.

ಸರಕಾರಿ ನೌಕರಿಯಲ್ಲಿ ಎಲ್ಲಾ ಕೋಮುಗಳಿಗೂ ಸರಿಯಾದ ಭಾಗವನ್ನು ದೊರಕಿಸಲು ಒಂದು ನಿರ್ಣಯವು ಬಂದಿದೆ. ಇಂತಹ ನಿರ್ಣಯಗಳು ಇನ್ನೂ ಬರುತ್ತಿರುವುದಕ್ಕಾಗಿ ನಾವು ವಿಷಾದಿಸುತ್ತೇವೆ. ಕೋಮುವಾರು ಭಾವನೆಯು ನಮ್ಮ ದೇಶದಲ್ಲಿ ಕಳೆದುಹೋಗುತ್ತಿದೆ. ಅದರ ಮಾತೃಸ್ಥಾನವಾದ ಮದರಾಸಿನಲ್ಲಿಯೇ ಅದು ನಿರ್ನಾಮವಾಗಿದೆ. ಮೈಸೂರಿನಲ್ಲೇಕೆ ಇರಬೇಕು?

ನಮ್ಮ ಶಾಸನಕಾರರು ಒಟ್ಟು ಸಂಸ್ಥಾನದ ಹಿತಸಾಧನೆಗೆ ಅವಶ್ಯಕವಾದ ಅಂಶಗಳನ್ನು ಚರ್ಚಿಸಿ ಗೊತ್ತುವಳಿಗಳನ್ನು ಮಾಡುವರೆಂದು ನಾವು ನಂಬುತ್ತೇವೆ.

ಜವಾಹಿರಲಾಲರ ದಕ್ಷಿಣ ಹಿಂದೂಸ್ಥಾನದ ಸಂಚಾರ

ಇಂಡಿಯಾದೇಶದ ಉಜ್ವಲ ಮೂರ್ತಿಯಾದ ಪಂಡಿತ ಜವಾಹರರು ಸಪ್ಟಂಬರ್ ತಿಂಗಳೇ ಎರಡನೇವಾರದಿಂದ ದಕ್ಷಿಣ ಹಿಂದೂಸ್ಥಾನದಲ್ಲೆಲ್ಲಾ ಒಂದೂವರೆ ತಿಂಗಳು ಕಾಲ ಪ್ರವಾಸ ಮಾಡುವರೆಂದು ಗೊತ್ತಾಗಿದೆ. ಈ ಸಂದರ್ಭದಲ್ಲಿ ಅವರು ಮೈಸೂರು ಮತ್ತು ಬೆಂಗಳೂರನ್ನು ಸಂದರ್ಶಿಸಲಿರುವರು.

ಮೈಸೂರು ನ್ಯಾಯ ವಿಧಾಯಕ ಸಭೆ.

೨೨ನೇ ತಾರೀಖಿನಿಂದ ಆರಂಭ

ಮೊದಲನೆ ಎರಡುದಿನಗಳಲ್ಲಿ ಸರ್ ಮಿರ್ಜಾರವರ ಅಧ್ಯಕ್ಷತೆ

ಇದೇ ಜೂನ್ ೨೨ ರಿಂದ ಇಲ್ಲಿ ನಡೆಯುವ ಮೈಸೂರು ನ್ಯಾಯವಿಧಾಯಕ ಸಭೆಯ ಬಡ್ಜೆಟ್ ಅಧಿವೇಶನವು ೭ ದಿನಗಳವರೆಗ ನಡೆಯುವುದು.

ನಿರೀಕ್ಷಣೆ ಇರುವಂತೆ ಶ್ರೀಮನ್ಮಹಾರಾಜರೊಂದಿಗೆ ದಿವಾನರು ಇದೇ ಮಾಹೆ ೨೫ ನೇ ತಾರೀಖಿನ ದಿವಸ ಯೂರೋಪಿಗೆ ಬೆಂಗಳೂರನ್ನು ಬಿಡುವರು. ಸಭೆಯ ಮೊದಲನೇ ಎರಡು ದಿನಗಳು ಮಾತ್ರ ಅಧ್ಯಕ್ಷತೆ ವಹಿಸುವರು. ಇವರ ಗೈರು ಹಾಜರಿಯಲ್ಲಿ ರಾಜ್ಯಮಂತ್ರಿ ಪ್ರವೀಣ ಶ್ರೀ ಎಸ್. ಪಿ. ರಾಜಗೋಪಾಲಾಚಾರಿಯವರೇ ಅಧ್ಯಕ್ಷತೆ ವಹಿಸುವರು.

ಬಡ್ಜೆಟ್ಟಿನಮೇಲೆ ಸಾಧಾರಣ ಚರ್ಚೆ ನಡೆಸಲು ಎರಡು ದಿವಸಗಳನ್ನು ಗೊತ್ತು ಮಾಡಿದೆ. ಸಭೆಯು ಕೂಡುವ ಮಾರನೇ ದಿವಸ (೨೩ ನೇ ತಾ॥) ನ್ಯಾಯ ವಿಧಾಯಕ ಸಭೆಯಿಂದ ಮೈಸೂರು ವಿಶ್ವವಿದ್ಯಾಲಯದ ಸೆನೆಟ್ಟಿಗೆ ಸದಸ್ಯರುಗಳನ್ನು ಚುನಾಯಿಸುವ ಕೆಲಸ ನಡೆಯುವುದು.

ಅಧಿವೇಶನದಲ್ಲಿ ಸುಮಾರು ೧೩೦ ಪ್ರಶ್ನೆಗಳು ಚರ್ಚೆಗೆ ಬಂದಿವೆ. ೪೩ ರೂವುಗಳೂ, ೯ ಸರ್ಕಾರಿ ಮಸೂದೆಗಳೂ, ಒಂದು ಖಾಸಗಿ ಮಸೂದೆಯೂ ಚರ್ಚೆಗೆ ಇವೆ.

ಮೈಸೂರು ಡಿಸ್ಟ್ರಿಕ್ಟ್ ಬೋರ್ಡು ರೆಗ್ಯುಲೇಷನ್, ಮೈಸೂರು ಮಠ ಮತ್ತು ಧರ್ಮ ಸಂಸ್ಥೆಗಳ ರೆಗ್ಯುಲೇಷನ್ನು, ಸಾಲ ತೀರ್ಮಾನ ಮಸೂದೆ, ವ್ಯಭಿಚಾರ ನಿರೋಧ ಮಸೂದೆ ಇವುಗಳನ್ನು ಚರ್ಚಿಸಲು ಎರಡು ದಿನಗಳನ್ನು ಮೀಸಲಾಗಿಡಲಾಗಿದೆ.

ಅಧಿವೇಶನದ ಎರಡನೇ ದಿವಸ ಆಯವ್ಯಯದ ಮೇಲೆ ಚರ್ಚೆಯಾಗುವುದು. ವಿಶೇಷ ಮಂಜೂರಾತಿಗಳ ಮೇಲೆ ಮತದಾನ ಮಾಡಲು ಮೂರು ದಿನಗಳ ಕಾಲವನ್ನು ಕೊಡಲಾಗಿದೆ. ಸದಸ್ಯರಿಂದ ಸೂಚಿಸಲಾದ ರೆಸೊಲ್ಯೂಷನ್‌ಗಳನ್ನು ಕೊನೆಯ ದಿನ ಕೈಗೊಳ್ಳಲಾಗುವುದು.

ಒಂದು ರೆಸೊಲ್ಯೂಷನ್ ಸಂಸ್ಥಾನದಲ್ಲಿ ವಿವಿಧ ಕೋಮುಗಳವರಿಗೆ ಸರಕಾರೀ ನೌಕರಿಯಲ್ಲಿ ಸರಿಯಾದ ಸ್ಥಾನ ದೊರೆಯುವಂತೆ ಮಾಡಲು ಒಂದು ಸಮಿತಿಯನ್ನು ಸ್ಥಾಪಿಸಬೇಕೆಂದು ಸೂಚಿಸಲಾಗಿದೆ.

ಒಂದು ರೆಸೊಲ್ಯೂಷನ್ ಪ್ರತಿ ಸ್ಕೂಲುಗಳಲ್ಲಿಯೂ, ಕಾಲೇಜುಗಳಲ್ಲಿಯೂ, ಬಲಾತ್ಕಾರದ ಸಮರ ಶಿಕ್ಷಣವನ್ನು ಕೊಡಬೇಕೆಂದು ಹೇಳುತ್ತದೆ.

ಬೆಂಗಳೂರು ನಗರದಲ್ಲಿ ಸಂಟ್ರಲ್ ಬ್ರಾಡ್ ಕ್ಯಾಸ್ಟಿಂಗ್ ಸ್ಟೇಷನ್ನನ್ನೂ, ಸಾಧ್ಯವಿರುವ ಹಳ್ಳಿಗಳಲ್ಲಿ ರೇಡಿಯೋಗಳನ್ನೂ ಸ್ಥಾಪಿಸಬೇಕೆಂದೂ, ಅಖಿಲ ಭಾರತದ ವಿಮಾನ ಅಂಚೆಗಳಿಗೆ ಸಂಬಂಧಿಸಿ ಬೆಂಗಳೂರಿನಲ್ಲೊಂದು ಏರ್ ಮೈಲ್ ಸ್ಟೇಷನ್ನನ್ನು ತೆರೆಯಬೇಕೆಂದೂ, ವಿದ್ಯುದ್ದೀಪದ ಖರ್ಚನ್ನು ಯೂನಿಟ್ಟಿಗೆ ನಾಲ್ಕಾಣೆಯಿಂದ ಮೂರಾಣೆಗೆ ಕಡಿಮೆ ಮಾಡಬೇಕೆಂದೂ ಸಲಹೆಗಳು ಬಂದಿವೆ. ಇನ್ನೊಂದು ರೆಸೊಲ್ಯೂಷನ್ ಸರಕಾರವು ೧೫ ಲಕ್ಷ ರೂಪಾಯಿಗಳನ್ನು ಕೊಟ್ಟು ಚಿಕ್ಕಮಗಳೂರಿನಲ್ಲಿ ಒಂದು ಕಾಫಿ ಕ್ಯೂರಿಂಗ್ ಕಾರ್ಖಾನೆಯನ್ನು ತೆರೆಯಬೇಕೆಂದು ಸೂಚಿಸಿದೆ.

ಪ್ರಾಣಿ ಬಲಿಯನ್ನು ನಿಷೇಧಿಸಿಯೂ, ಮುಜರಾಯಿ ಆಡಳಿತದಲ್ಲಿರುವ ಸಮಸ್ತ ದೇವಾಲಯಗಳನ್ನು ಸಮಸ್ತ ಹಿಂದುಗಳಿಗೆ ತೆರೆಯುವಂತೆಯೂ, ಆದಿಕರ್ನಾಟಕರಲ್ಲಿಯೂ ಇತರ ಕೆಲವು ಕೋಮಿನವರಲ್ಲಿಯೂ ಇರುವ ಅನೀತಿಯುತವಾದ ಬಸವೀ ಬಿಡುವ ಪದ್ಧತಿಯನ್ನು ತೊಡೆದುಹಾಕಬೇಕೆಂದೂ, ಸೂಚನೆಗಳು ಬಂದಿವೆ. ಮಿ॥ ಕೆ. ಟಿ. ಭಾಷ್ಯಂ ಅಯ್ಯಂಗಾರ್‌ರವರು ಮೈಸೂರು ವರ್ತಮಾನ ಪತ್ರಿಕಾ ಶಾಸನವನ್ನು ಶಾಸನ ಕಡತದಿಂದ ತೆಗೆದುಹಾಕಬೇಕೆಂಬ ರೆಸೊಲ್ಯೂಷನ್ನನ್ನು ಸೂಚಿಸಿದ್ದಾರೆ.

ದಿವಂಗತ ದರ್ಬಾರ್ ಭಕ್ಷಿಯವರು.

ಮೈಸೂರು ಅರಮನೆಯ ದರ್ಬಾರ್ ಭಕ್ಷಿಯವರಾಗಿದ್ದ ಶ್ರೀ ಎಚ್. ಲಿಂಗರಾಜೆ ಅರಸಿನವರು 14 ನೇ ಭಾನುವಾರ ರಾತ್ರಿ ಹೃದಯರೋಗದಿಂದ ಹಠಾತ್ತಾಗಿ ಸ್ವರ್ಗಸ್ಥರಾದರೆಂದು ತಿಳಿಸಲು ಅತ್ಯಂತ ವಿಷಾದವಾಗುತ್ತದೆ. ಇವರು ಕೇವಲ ಸಾತ್ವಿಕರು, ಸದ್ಗುಣಶಾಲಿಗಳು, ಭಗವದ್ಭಕ್ತರು, ನಯವಿನಯಗಳಿಂದ ಕೂಡಿದವರು. ಎಲ್ಲರಲ್ಲಿಯೂ ಬಹಳ ಗೌರವದಿಂದ ವರ್ತಿಸುತ್ತಿದ್ದರು. ತಾವು ಇದ್ದ ಆಸ್ಥಾನದ ಗೌರವಕ್ಕೆ ಸಂಪೂರ್ಣ ಅರ್ಹತೆಯುಳ್ಳವರಾಗಿದ್ದರು. ಈಚೆಗೆ ರಾಜಕವಿಭೂಷಣರಾದ ಅನಂತರ ಇವರು ಕರ್ನಾಟಕಸಾಹಿತ್ಯದ ಅಭಿವೃದ್ಧಿಯಲ್ಲಿ ಆಸಕ್ತಿಯನ್ನು ತೋರಿ ಕರ್ನಾಟಕ ಸಂಘದ ಅಧ್ಯಕ್ಷತೆಯನ್ನು ಸ್ವೀಕರಿಸಿದರು. ಸ್ವತಃ ಒಳ್ಳೇ ಕನ್ನಡ ಸಾಹಿತಿಗಳಾಗಿದ್ದರು. ಇಂತಹವರ ಮರಣದಿಂದ ಆಸ್ಥಾನಕ್ಕೂ ನಮ್ಮ ನಗರಕ್ಕೂ ದೊಡ್ಡ ನಷ್ಟವುಂಟಾಗಿದೆ. ದಿವಂಗತರ ಆತ್ಮಕ್ಕೆ ಭಗವಂತನು ಶಾಂತಿಯನ್ನೀಯಲಿ.

ಪ್ಲೇಗಿಗಾಗಿ ಗುಡಿಸಲನ್ನು ಸುಟ್ಟರು

ಇಲಿಗಳು ಪ್ಲೇಗ್‌ಜಾಡ್ಯವನ್ನು ಹರಡುವುವು ಎಂದು ಅವುಗಳನ್ನು ಕೊಂದುಹಾಕುತ್ತಿದ್ದರು. ಈಗ ಆಲಪ್ಪಿಯಲ್ಲಿ ಇದೇ ಜಾಡ್ಯವು ಹರಡುವುದೆಂದು ಅಲ್ಲಿನ ಅನೇಕ ಗುಡಿಸಲುಗಳನ್ನು ಸುಟ್ಟುಬೂದಿಮಾಡಿರುತ್ತಾರೆ. ಇನ್ನುಮುಂದೆ ಈ ಜಾಡ್ಯದ ಹೆದರಿಕೆಗೆ ಮತ್ತೂ ದೊಡ್ಡ ಕಟ್ಟಡಗಳನ್ನೂ ಧ್ವಂಸ ಮಾಡುವರೋ ಏನೋ! ನೋಡಬೇಕು.

"ಕನ್ಯಾ ಶುಲ್ಕ"

(ಸಿದ್ದಮ್ಮನ ಮದುವೆ)

ಎಂಗೆ ಸಮದಾರಂಗ ಸೌಂದರ್ಯದೊಳಗೆ।
ಮುನಿಗಳಾದರು ನೋಡಿ ಭ್ರಮಿಸುವರು
ಹೇಗೆ॥

ಎನ್ನ ಕಾಲವ ಕಳೆವುದಯ್ಯೊ ಬಲುಕಷ್ಟ।
ಚಿನ್ನಗನ ಸೇರದಿರೆ ನಿಜದಿ ಬಹುಕಷ್ಟ॥
ಮನವವೇಗೆಯ ಹೇಳಲದು ಸಾಧ್ಯವಿಲ್ಲ।
ಜಾಮಬರಿವಾಯ್ತಾಗ ಮದುವೆಯನಗಿಲ್ಲ
ಚಿನ್ನ ಚಲುವರು ಬಂದರವರಿಂದೆ ಧನವಂ।
ಹೊನ್ನುಗಳ ಸಾವಿರವ ಕೇಳ್ವ ಸಮ್ಮಪ್ಪಂ॥
ಎನ್ನ ತಮ್ಮನ ಮದುವೆಗಾಗಿ ಈ ಪ್ರಪ್ತಂ।
ಮುನ್ನವೇ ಕೊಡಿಯೆಂದು ಕೇಳ್ವ ನಮ್ಮ
ಪ್ಪಂ॥

ಒಡಿಗೆ ಮಾಡಬೇಕು ಕಸಗುಡಿಸಬೇಕು।
ಕಡೆ ಕಷ್ಟದುಡ್ಡು ಗವನೆರಿಮಾಡಬೇಕು॥
ಸೇವಕರ ಸಂತೈಸಿ ಮಾತಾಡಬೇಕು।
ಜನನಾನಮು ನಾನು ಹೇಗಿರಬೇಕು॥
ಎನಗಾಯ್ತು ಇಪ್ಪತ್ತು ವರ್ಷಗಳು ಜನನಿ।
ಮನುಮಥನ ಬೇಗೆಯೊಳ್ ಶಿಲುಕಿರ್ಪೆ
ಜನನಿ॥

ಮದುವೆಯಾ ಶಾಸ್ತ್ರವೊಂದಾದರೆ, ಸಾಕು।
ಪದುಕದಿಂಬಾಳುವೆನು ವೇದನೆ ಪರಾಕು॥
ಎಂದಿಗಾಹುದು ಮದುವೆ ಸಂದೇಹವೀಗ।
ಸುವಿಸಿಪುದು ನೋಡು ಹರಿಯು ನೀಂ
ಬೇಗ॥

ಪ್ಪಯಾ ಸಿದ್ದಮ್ಮ ಬಂದಳೊಂದುದಿನ।
ಕ್ಷತ್ರದಿಂದೂರ್ವರನೊಡನ ಪಟ್ಟಣಕೆ॥
ದ ಕಂಳ್ವವಬಿಸ್ತು ಕಾಣದಂದಲಿ।
ನರ ಮನೆನೋಡಿ ಹಿಗ್ಗಿದಳು ಮನದಿ॥
ಗೆ ವಳ್ಳಿತಾನು ಪಟ್ಟಣದ ಸೊಬಗ।
ರ ಕಂಡುದದ ಕೇಳದುದ ಬೆಡಗ॥
ಮ್ಮ ನೀರಿದಳು ಬಲು ರಮಣರನ್ನು।
ಟ್ಟವೂರೆ ಒಲುಪೋಕರನ್ನು॥
ಯ್ಗಳ ಮರತು ಮದುವಯಾಗ
ವಲ।
ಂದೆ ತಾಂಬಾಳಿದಳು ಅತಿಹೀನರೂಳಗೆ॥

ದ್ವರೇ ಚಂದ ಪಟ್ಟಣದವಾಸ।
ರಲ್ಲಿಲ್ಲೋಡವರ್ಗ್ಗ ನೆಳುಪವಾಸ॥
ಯಾವಾಸವೇ ಬಲುಚಂದವೆಂದು।
ಯಾ ಸಿದ್ದಮ್ಮ ಒಣ್ಣೆ ಸಿವಳಂದು॥
ಯಂದರೆ ಜನರು ಹಿಯ್ಯಾಳಿಸುವರು।
ಲಿ ಸುಖವಿಲ್ಲವೆಂದು ಹೇಳುವರು॥
ಡಿನ ಜನರು ಮೂಢರೆನ್ನುವರು।
ಸನಗ್ಗಿಂದು ಸೊಗದಿರ್ಕ ದೇವಾ
ಮಾಳೀನುಂಟು ಕಟ್ಟೆವರ್ತಕರು।
ತನದಿಂ ಕುಳಿತು ಲಾಭಹೊಂದುವರು
ರೆಯ ತೋರ್ವ ತಿರುಕರಿಲ್ಲಿಹರು
ವೇ ಜನರು ಬೀದಿಯಲೆಯುವರು॥
ಾರ ಮಂದಿರದಿ ತಿಂದುತೇಗುವರು।
ದ ವಿಟರು ಜನರಿಲ್ಲಿ ನೋಡಲ್
ಮಾತ್ರಕಿನ್ನು ಪಟ್ಟಣದ ಜನರು।
ಮನರು ನಾಟ್ಯವಾಡುತ್ತಲಿಹರು॥

ಹಳ್ಳಿಯಲಿ ಜನರೇಳ್ವರತಿಬೇಗದಿಂದ।
ಬಳ್ಳದಿಂ ಹಾಲನ್ನು ಕರವರದ್ದು ತನ॥
ಹಳ್ಳಿಗಳ ವಾಟತ್ತಲೇರುತ್ತ ಗಿಡವ।
ಪೊಳ್ಳುಹರಟಿಗಳನ್ನು ಆಡವವರಹಹಾ॥
ಓದುವರು ಮರದಲ್ಲಿ ಹೆಣ್ಮಕ್ಕಳಿಲ್ಲ।
ವಾದಿಸುವರಿದವುಂಟು ಪರವಿಲ್ಲವೆಂದು॥
ಹಾದಿಬೀದಿಯಲೆಲ್ಲ ತಿರುಗುತ್ತಲಿಹರು।
ಊದಿದಾಕೆಂಡದಂದದಿ ರಾಜಿಸುವರು॥
ಗೌಡನಿಗೆ ಕಂಬಳಿಯು ಬಲುಚೆನ್ನ ಉಡಿಗೆ
ಗೌಡನಿಗೆ ಅಂಬಲಿಯೆ ಬಲುಸವಿಯ ಅಡಿಗೆ
ಗೌಡಿತಿಗೆ ಚೆಂಡ್ಹುವ್ವು ತಲೆಯಲ್ಲಿ ಮುಡಿಗ
ಗೌಡಿತಿಗೆ ಶೃಂಗಾರ ಬಲುಜಣ್ಣ ಮುಡಿಗೆ॥
ಕೆಸರಿಲ್ಲ ಸಿಪ್ಪಿಲ್ಲ ಪೀಪೂರಿಸೂಳಗೆ।
ನಸುಗೆಂಪು ಮೊಗದವರು ಈ ಪೂರಿನೊಳಗೆ
ಕುಸುಮಶರನರಗಿಣಿಗಳೇ ಹೆಂಗಳೊಳಗ।
ಜನಮಾನವೇಷಮೊಳಗಿಹುದೊಂದುಗಳಿಗೆ
ಅಲಿಗೆ ಕನ್ನಡಕ ಕೈಯಲ್ಲಿ ಛತ್ರಿ।
ಕಾಲಲ್ಲಿ ಪಾದುಕೆಯು ನೋಡಬಲು ವಿಚಿತ್ರ
ವಾಲಾಡಿಬರುತಿಹಳು ಹೃದಯದೊಳು ಕತ್ರಿ
ಹೇಳಲಿದು ತರವಲ್ಲ ಪಟ್ಟಣದ ಸ್ತ್ರೈತ್ರಿ॥
ತರುಣರತಿಪೋಕರಿಗಳ ವಿಚಾರತರರು।
ತರುಣಿಯರು ನಿಂದ್ಯರೈ ಕೆಲರು ಭೀರುಗಳು॥
ಕರುಣವಿಲ್ಲದ ರಮಣರ ಕರದೊಳಗಿಹರು।
ಹರಹರಾ ಇದುನೋಡೆ ಹೃದಯಭೇದಕವು
ಸಾಕು ಪಟ್ಟಣವಾಸ ಹೇಸಿಗೆಯ ಬೀಡು।
ಸಾಕು ಸಿನಿಮಾ ನೋಟ ಸಾಕು ಬಲು
ಹಾಡು॥
ಸಾಕು ಹಳ್ಳಿಯೆ ನಮಗ ಪಟ್ಟಣವು ಬೇಡ।
ಬೇಕಾದ್ದು ನಾವು ಉಂಡು ನಲಿವಬಲನಾಥ
ಅಲ್ಲಿಗೋರ್ವನು ಒಂದ ಹಳ್ಳಿಯವ ರಂಗ।
ವಲ್ಲಭನು ಇವನೆಂದು ತನ್ನಂತರಂಗ॥
ಚೆನ್ನಾಗಿತಾಂ ತಿಳಿಸ ರಂಗನಿಗೆ ಆಗ।
ಹೊನ್ನಿಲ್ಲಡೆಲೆ ಮದುವೆಯಾಯಿತ್ತೈ ಬೇಗ।
ಮಲೆನಾಡುಗೌಡರಲಿ ಕನ್ಯೆಗಳ ಶುಲ್ಕ।
ಪಲವುತೆರದಿಂನೋಡೆ ನಿಂದ್ಯವಿದು ಶುಲ್ಕ॥

ಹುಲಿ—ಸಿಂಹದ ಹೋರಾಟ

ಅಗರ್ತಲ ಮೃಗಾಲಯದಲ್ಲಿ ಕೆಲಸ ಮಾಡುತ್ತಿದ್ದ ಜವಾನನೊಬ್ಬನು ಹುಲಿಯ ಮತ್ತು ಸಿಂಹದ ಬೋನುಗಳಿರದನ್ನು ತೊಳೆದನಂತರ, ಎರಡು ಬೋನುಗಳನೆ ಮಧ್ಯದಲ್ಲಿದ್ದ ಬಾಗಿಲನ್ನು ಹಾಕದೆ ಮರ ತನು ಬಾಗಿಲು ತೆರೆದಿದ್ದುದರಿಂದ ಹುಲಿಯು ಸಿಂಹದ ಬೋನಿಗೆ ಹಾರಿ ಎದರೂ ಡನೆ ಕೆಲಹೊತ್ತು ಹೋರಾಡಿ, ಅನಂತರ ಪ್ರಾಣ ಬಿಟ್ಟಿತು.

ತೇರ್ಗಡೆಯೊಂದದ ವಿದ್ಯಾರ್ಥಿಗಳ ಮುಷ್ಕರ.

ಮೆಟ್ರಿಕ್ಯುಲೇಷನ್ ಪರೀಕ್ಷೆಯಲ್ಲಿ ಈಸಲ ಬೊಂಬಾಯಿನಲ್ಲಿ ಅನೇಕ ವಿದ್ಯಾರ್ಥಿಗಳು ಉತ್ತೀರ್ಣರಾಗಿರುವುದಿಲ್ಲ ಅಲ್ಪ ಮಂದಿಗೇ ಮಾತ್ರ ತೇರ್ಗಡೆಯಾದ್ದರಿಂದ ಬಹಳ ಮಂದಿ ವಿದ್ಯಾರ್ಥಿಗಳೆಲ್ಲರೂ ಬೊಂಬಾಯಿ ವಿಶ್ವವಿದ್ಯಾನಿಲಯದ ಸನಟ್ ಹೌಸ್‌ನಲ್ಲಿ ಮಿಟಿಂಗ್ ನಡೆಯುವ ಕಾಲಕ್ಕೆ ಸರಿಯಾಗಿ ಅದನ್ನು ಸೇರುವರು

ಆಲಸ್ಯ.

"ಆಲಸ್ಯಮಮೃತಂ ವಿಷಂ' ಎಂಬುದರ ಅಭಿಪ್ರಾಯವನ್ನು ಎಲ್ಲರೂ ಸದಾ ಸ್ಮರಣೆಯಲ್ಲಿಟ್ಟರಬೇಕು ಪ್ರತಿಯೊಂದು ಕಾರ್ಯವನ್ನೂ ಕಾಲವರಿತು ಮಾಡಲೇಬೇಕು ಕಾಲಚಕ್ರಗಮನವನ್ನು ತಡೆಯಲು ಯಾರಿಂದಲೂ ಸಾಧ್ಯವಾಗಿಲ್ಲ—ಸಕಾಲದಲ್ಲಿ ಮಾಡದೆ ನಿಂತ ಕಾರ್ಯಕ್ಕೆ ಮತ್ತೆ ಕಾಲವೇ ದೊರೆಯಲಾರದು ಜನ್ಮ ಸಾರ್ಥಕವನ್ನು ಪಡೆಯಲು, ಎಲ್ಲರೂ ಕಾಲದ ಬೆಲೆಯನ್ನರಿತು, ವ್ಯರ್ಥಕಾಲಕ್ಷೇಪ ಮಾಡದೆ, ಸದುಪಯೋಗ ಪಡಿಸಬೇಕು ಹೊತ್ತಿಲ್ಲದೆ ಕೆಲಸ ಮಾಡಲಾಗಲಿಲ್ಲವೆನ್ನುವರು ಪ್ರಾಯಶಃ ಸೋಮಾರಿಗಳೇ ಸರಿ ಚಟುವಟಿಕೆಯುಳ್ಳ ಚತುರನಾದವನು ತನಗಿರುವ ಅವಕಾಶವನ್ನು ಕ್ರಮದಲ್ಲಿ ಉಪಯೋಗಿಸಿ, ಲಾಭವನ್ನು ಪಡೆಯುವನು ಇಹಪರ ಸಾಧನಗೆ ಅನುಕೂಲಿಸುವ ವಿಷಯಗಳನ್ನು ತಿಳಿಯಲು ಇದೀಗ ಅವಸಾನ ಸಾಲದೆನ್ನುವಾಗ, ಜಡನಾಗಿ ಕಾಲವನ್ನು ಕಳೆಯುವುದೇ' ಪಾಪಸಂಘಟಿಸುವುದೆಂದರೆ— ವೇದದ ನಮ್ಮ ದೇಶೀಯರು ವ್ಯರ್ಥಕಾಲಕ್ಷೇಪ ಮಾಡದಿರಲೆಂದು ಹಾರೈಸಿ ಪೂರ್ವಿಕರಾದ ಮಹನೀಯರು "ಸುಮ್ಮನ ಕೂತು ಕಡ್ಡಿಯನ್ನು ಮುರಿದರ ಪಾಪಸಂಭವಿಸುವುದು' ಎಂದು ಎಚ್ಚರಿಕೆಯನ್ನಿಟ್ಟರು ತಮಗೆ ದೊರೆತ ಅವಕಾಶವನ್ನು ಸರಿಯಾಗಿ ಉಪಯೋಗಿಸಿಕೊಂಡ ಜಾಣರೇ, ದೇಶೋದ್ಧಾರಕರಾಗಿ ಜನಾಂಗಕ್ಕೆ ಎಲ್ಲಾ ವಿಷಯದಲ್ಲೂ ಮಾದರಿಯಾಗಿದ್ದಾರ ಮಾಡಬೇಕಾದ ಕೆಲಸವನ್ನು ನಾಳೆಗ ತಳ್ಳುವವರಿಗೆ ಆ 'ನಾಳೆ' ಯು ಬರುವ ಸಂಭವವೇ ಇಲ್ಲ ಕಾರ್ಯದಲ್ಲಿ ಆಸಕ್ತಿಯುಂಟಾದರೆ ಪ್ರತಿಯೊಂದು ನಿಮಿಷವನ್ನೂ ಸರಿಯಾಗಿ ಉಪಯೋಗಿಸಲಾಗುವುದು ಪ್ರತಿನಿತ್ಯವೂ ಮಲಗುವಾಗ 'ಏನು ಹೊಸ ವಿಷಯವನ್ನು ಕಲಿತೆವು' ಇಂದು ಹೇಗ ಕಾಲವನ್ನು ಉಪಯೋಗಿಸಿದವು? —ಎಂದು ಎಲ್ಲ ತಾವೇ ಯೋಚಿಸುತ್ತ ಬಂದರ, ನಮ್ಮ ಭಾಗ್ಯಕ್ಕ ಕೊನೆಯೇ ಇಲ್ಲ ಇರುವ ಕಾಲವನ್ನು ಸರಿಯಾಗಿ ಉಪಯೋಗಿಸಿಕೊಳ್ಳಬಲ್ಲವನು ಬಹಳ ಕೆಲಸವನ್ನು ನಿರ್ವಹಿಸಬಲ್ಲನು ಇಂಗ್ಲೆಂಡಿನ ಅಮಾತ್ಯರಲ್ಲಿ ಶ್ರೇಷ್ಠನಾದ ಗ್ಲಾಡಸ್ಟನನು ರಾಜ್ಯಾಡಳಿತದ ಅಗಾಧಕಾರ್ಯ ನಿರ್ವಹಣ ಜತೆಗೆ ದಿನವೂ ನಾಲ್ಕಾರು ಗಂಟೆಯ ಕಾಲ ಹೊಸ ವಿಷಯವನ್ನು ವ್ಯಾಸಂಗ ಮಾಡುತ್ತಿದ್ದನು ನಮ್ಮಲ್ಲಿ ಅನೇಕರು ಕಾಲೇಜು ಬಿಡುತ್ತಲೇ ವ್ಯಾಸಂಗವನ್ನು ಕೊನಗಾಣಿಸುತ್ತಾರೆ ಇದು ಸರಿಯಲ್ಲ ಕಾಲೇಜಿನ ವಾರಕ್ರಮದಲ್ಲಿ ಬುದ್ಧಿಯು ವಿಕಸಿತವಾಗಿ ಮುಂದೆ ಜೀವನದುದ್ದಕ್ಕೂ ವ್ಯಾಸಂಗ ಮಾಡಲು ಆಸ್ತಿಭಾವವನ್ನು ಹಾಕಿದಂತಾಗುವುದು 'ಅಸಂತಪ್ತನಾಗದ ವಿದ್ಯಾರ್ಥಿಯು ನಷ್ಟನಾಗುವನು, ಎಂಬುದನ್ನು ಎಲ್ಲರೂ ನೆನಪಿಗೆ ಸದಾ ತಂದುಕೊಳ್ಳಬೇಕು ವ್ಯರ್ಥ ಕಾಲಕ್ಷೇಪ ಕೂಡದು, ಎಂದರೆ,— ಸದಾ ಪುಸ್ತಕವನ್ನು ಹಿಡಿದು ಕುಳಿತಿರಬೇಕು. ಆಟಪಾಟಗಳು ಕೂಡದೇ?" ಎಂದರೆ, "ಆಡದೆ ಓದಿದ ಮಗನು ಮೂಢನಾದನು" ಎಂಬ ಗಾಥೆಯನ್ನು ಉತ್ತರವಾಗಿ ಹೇಳಬೇಕಾಗುವುದು ಪ್ರತಿಯೊಂದು ಹೊತ್ತಿಗೂ ಸರಿಯಾದ ಕಾರ್ಯವನ್ನು ಏರ್ಪಡಿಸಿಕೊಂಡು, ಅದರಂತೆಯೇ, ಲಕ್ಷಣವಾಗಿ ಕೆಲಸವನ್ನು ಮಾಡಲೆತ್ನಿಸುವರು ಜಯಶಾಲಿಗಳಾಗುವರು ಓದುವಾಗ ಆಡುವ ಯೋಚನ ಇರಬಾರದು. ಆಡುವಾಗ ಪುಸ್ತಕದ ಚಿಂತೆಯು ಬಂದರ, ವ್ಯಾಯಾಮದ ಫಲವು ಸಿದ್ಧಿಸುವುದಿಲ್ಲ. ಏಕಕಾಲದಲ್ಲಿ ಎರಡು ಮೂರು ಕಾರ್ಯಗಳನ್ನು ಮಾಡಬೇಕೆಂದರ, ಯಾವದೂ ತೃಪ್ತಿಕರವಾಗಿ ಆಗುವುದಿಲ್ಲ 'ಗಿಡವಾಗಿ ಬೊಗ್ಗದ್ದು ಮರವಾಗಿ ಬಗ್ಗೀತೇ'" ಎಂಬಂತೆ, ಕ್ರಮವರಿತ ಕಾರ್ಯಸಾಧನೆ ಮಾಡುವುದನ್ನು ಚಿಕ್ಕಂದಿನಿಂದಲೂ ಅಭ್ಯಾಸ ಮಾಡಬೇಕು ಆಪತ್ತಿನ ಪಾಠವನ್ನು ಆಗಲೇ ಓದಿ, ಜಾಣನಾಗಿ-ಸಂತೋಷವಾಗಿ ಸುಲಭವಾಗಿ ತೇರ್ಗಡೆ ಹೊಂದುವ ಬಾಲಕನಿಗೂ ಯುದ್ಧಕಾಲದಲ್ಲಿ ಶಸ್ತ್ರಾಭ್ಯಾಸ ಮಾಡುವವನಂತೆ —ಪರೀಕ್ಷೆಯು ನಾಳ ಇರುವಾಗ ಪುಸ್ತಕವನ್ನು ಹುಡುಕುವವರಿಗೂ ಭೇದವನ್ನು ಯೋಚಿಸಿ ನೋಡಬಹುದು ಒಳ್ಳೆಯ ಕೆಲಸದಿಂದ ನಂಬಿಕೆಯಾದರೆ, ಇವತ್ತೇ ಮಾಡಬೇಕು ನಾಳೆ ಮಾಡಲು ನಮಗೆ ಆಯುಸ್ಸೂ ಅನುಕೂಲವೂ ಇರುವುದೆಂದು ಹೇಗ ಧೈರ್ಯವಾಗಿರಬಹುದು? ದೇಶವು ಅಭಿವೃದ್ಧಿಗೆ ಬರಲು ಪ್ರತಿಯೊಬ್ಬರೂ ತಮ್ಮ ಅನುಕೂಲಕ್ಕೆ ತಕ್ಕಂತೆ ಬುದ್ಧಿಶಕ್ತಿಯನ್ನು ಅಭಿವೃದ್ಧಿಪಡಿಸಿಕೊಳ್ಳಬೇಕು. ಬುದ್ಧಿಶಕ್ತಿಯು ವೃದ್ಧಿಯಾಗಲು ಕಾಲದ ಬೆಲೆಯನ್ನರಿತು, ವ್ಯಾಸಂಗವನ್ನು ಬಿಡಬಾರದು ವ್ಯರ್ಥಕಾಲಕ್ಷೇಪವನ್ನು ಮಾಡದಿರುವುದನ್ನು ಒಂದು ದಿನದಲ್ಲಿ ಕಲಿಯಲಾಗುವುದಿಲ್ಲ, ಬಾಲ್ಯದಿಂದಲೂ ಅಭ್ಯಾಸ ಮಾಡಿರಬೇಕು ತಾನೂ, ನನ್ನವರೂ, ತನ್ನ ದೇಶವೂ ಉತ್ಕೃಷ್ಟಸ್ಥಿತಿಗೆ ಬರಲೆಂದು ನಿಶ್ಚಯವಾಗಿ ಹಾರೈಸುವವರು ಕಾಲವನ್ನು ಸರಿಯಾಗಿ ಉಪಯೋಗಿಸುವ ರೀತಿಯನ್ನು ಮೊದಲು ಕಲಿಯಬೇಕಾದುದು ಧರ್ಮ

ಆಕಾಶವಾಣಿ ಕಾರ್ಯಕ್ರಮ

22 ನೇ ಸೋಮವಾರ—ರಾತ್ರಿ ಎಂಟರಿಂದ 9 ಗಂಟೆ ವರೆಗೆ ಯೂರೋಪಿಯನ್ ಸಂಗೀತ—ಮಂಗಳವಾರ 23 ಸಾ॥ 6 30 ರಿಂದ 9 ಕರ್ನಾಟಕಗಾನ ಮತ್ತು ಕನ್ನಡ ಸಾಹಿತ್ಯ ಪಠನ—24 ಬುಧವಾರ ರಾತ್ರಿ 8 ರಿಂದ 9 15 ಕರ್ನಾಟಕ ವಾದ್ಯ ಸಂಗೀತ 25 ಗುರುವಾರ ಸಾಯಂಕಾಲ 6 30 ರಿಂದ 8 ಕನ್ನಡ ನಾಟಕ ಉಪನ್ಯಾಸ (ನಗರ ರಾತ್ರಿ) 'ಸಾರ್ವಜನಿಕಾಭಿಪ್ರಾಯ' ಶ್ರೀ॥ ಎನ್ ಕಸ್ತೂರಿಯವರಿಂದ 26 ಶುಕ್ರವಾರ ರಾತ್ರಿ 8 ರಿಂದ 9 15 ಹಿಂದೂಸ್ತಾನಿ ಗಾನ ಉಪನ್ಯಾಸ (ಲೀಗ್ ಆಫ್ ನೇಷನ್ಸ್)

ಭಿಕ್ಷುಕರ ಸಂವಾದ

(ಕೇಳಿದವನಿಂದ)

ಒಂದು ಸಾಯಂಕಾಲ ಸುಮಾರು ಏಳೂವರೆ ಘಂಟೆ ಸಮಯ. ಒಬ್ಬ ಕುಂಟ. ಒಬ್ಬ ಹೆಳವ ಒಬ್ಬ ಕೈ ಇಲ್ಲದವನು ಮತ್ತೊಬ್ಬ ಕುರುಡ. ಮಗುದೊಬ್ಬ ಪಾರ್ಶ್ವವಾಯು ರೋಗಗ್ರಸ್ತ ಇವರಿಗೆ ಅನುರೂಪವಾದ ಪತ್ನೀಪುತ್ರರ ಸಮೂಹ ಹೀಗೆಯೇ ಗುಂಪುಸೇರಿವೆ ಹಾಗೂ ಹೀಗೂ ಅಲ್ಲಿ ಇಲ್ಲಿ ಎಂಜಲು ಗಿಂಜಲು ತಿಂದು, ಕತ್ತಲೆಯಾದ್ದರಿಂದ ಪಕ್ಷಿಗಳು ಗೂಡುಸೇರುವಂತೆ ಮಲಗಲು ಅನುವಾಗುತ್ತಿದ್ದಾರೆ. ಗೂಡು ಯಾವುದು? ಗೊತ್ತೇ ಇದೆಯಲ್ಲ ಪುಣ್ಯಾತ್ಮ ಜನರ ಛತ್ರದ ಜಗುಲಿ

ಒಬ್ಬರೊಬ್ಬರು ಸಂಭಾಷಣೆಗಾರಂಭಿಸಿದರು—

ಕೈ ಇಲ್ಲದವ —ಬೆಳಗಿನಿಂದ ಊರೆಲ್ಲಾ ಅಲೆದು ಅಲೆದು ಸುಸ್ತಾಗಿ ಹೋಗಿ ಕಾಲು ಎತ್ತೋಕೇ ಆಗದಂತಾಯಿತು ಅರೆಹೊಟ್ಟೆ ಕೂಡ ಅನ್ನ ಸಿಗಲಿಲ್ಲ

ಕುಂಟ ಮತ್ತು ಹೆಳವ.—ನೀನಾದರೂ ಇತ್ತೀಚೆಗೆ ಈ ಊರಿಗೆ ಬಂದವನು ನಮ್ಮ ಕಾಲದ ಮಾತು ಹೇಳುತೀವಿ ಅಂದರೆ, ಆಗಲೇ ಸುಮಾರು ಇಪ್ಪತ್ತು ಇಪ್ಪತ್ತೈದು ವರ್ಷದ ಮಾತು ಈ ಊರು ಇಷ್ಟು ದೊಡ್ಡದಾಗೂ ಇತ್ತಿಲ್ಲ ಅರಮನೆ ಸುತ್ತ ಇದ್ದ ಕೋಟೆ, ದೊಡ್ಡ ಪೇಟೆ ಇಷ್ಟೆ ಇದ್ದದ್ದು ಅರಮನೆ ಸುತ್ತ ಇದ್ದ ವೋತೀಖಾನಬೀದಿ, ಹಳೇ ಅಗ್ರಹಾರ, ಶಿವರಾಮಪೇಟೆ, ದೊಡ್ಡ ಪೇಟೆ ಇಷ್ಟೆ ಇದ್ದದ್ದು ಅರಮನೆ ಸುತ್ತ ಇದ್ದ ವೋತೀಖಾನಬೀದಿ ಒಂದು ಸುತ್ತು ಸುತ್ತಿಬಿಟ್ಟರೆ ಸಾಕು ನಾವು ಐದು ಜನ ತಿಂದು ಬಿಸಾಕೋ ಅಷ್ಟು ಕವಳ ಸಿಕ್ತಿಬಿಡುತ್ತಿತ್ತು

ಕುರುಡ —ಕವಳವೂ ಆಗುತ್ತಾ ಇತ್ತು ಅರಮನೆ ಮುಂದೆ ಇತ್ತಲ್ಲಾ ಹೂವಿನ ಅಂಗಡಿಬೀದಿ ಆ ಬೀದಿ ಒಂದರಲ್ಲೇ ನನಗೆ ಎಷ್ಟಿಲ್ಲ ಅಂದರೂ ಒಂದು ಮಧ್ಯಾಹ್ನದೊಳಗೇನೆ ಎಂಟಾಣೆ, ಹತ್ತಾಣೆ ಕಾಸು ಸಿಕ್ತಬಿಡತಾ ಇತ್ತು ಈಗ ಎಷ್ಟು ಪೇಟೆ, ಎಷ್ಟು ಬೀದಿ, ಅಲೆದರೂ ವಿಷತಗೊಳ್ಳೋಕೂ ಒಂದು ಕುರುಡು ಕಾಸೂ ದೊರಕುವುದಿಲ್ಲ

ಪಾರ್ಶ್ವವಾಯು ರೋಗಗ್ರಸ್ತ — ಕೋಟೆ ಹೋಯಿತು ಆ ಜನಗಳು ಹೋದರು ಆ ದಾನಧರ್ಮಗಳೂ ಹೋಯಿತು ಅವರ ಮೊತ್ತೇಲೇ ಇನ್ಯಾಕೆ ಆ ಮಾತು ಎಲ್ಲಾ ಹೋಯಿತು. ಈಗ ಉಳಿದಿರೋದು, ಛತ್ರದ ಎಂಜಲೆಲೆಗಳು, ಛತ್ರದ ಜಗುಲಿ ಇಷ್ಟೆ

ಅಷ್ಟರಲ್ಲೇ ಕುಂಟಿಯು ಮುಂದೆ ಬಂದು —ಅಪ್ಪೋ ಇದೇಯೇ' ಸುಮ್ಮನಿರು ಆ ಕಾಲಾನೂ ಹೋಗಿ ಎಷ್ಟೋ ದಿನ ಆಯಿತು ಈ ಛತ್ರದಾಗೆ ಮಧ್ಯಾಹ್ನದ ಹೊತ್ತಿಗೆ ಎರಡೋ ಪರಸ್ಥಳದವರಿಗಲ್ಲ ಅನ್ನ ಬೀಳತಾ ಇತ್ತು ನಮಗೂ ಅವರ ಎಂಜಲು ಕೂಳು ಸಿಗತಾ ಇತ್ತು ಈಗ ಪರಸ್ಥಳದವರಿಗಲ್ಲಾ ಆಯಿತು ಕುಂಬಳಕಾಯಿ ಅಲ್ಲಿ ಕೆಲಸ ಮಾಡೋರವರಿಗೇ ಸೊನ್ನೆ. ಖಾಯಂ ಆಗಿ ಊಟ ಮಾಡತಕ್ಕವರ ಎಂಜಲ ಹಾಳೆಗಳಲ್ಲೆಲ್ಲಾ ಎಂಜಲಿಗೇ ಪೂಜ್ಯ

ಹೆಳವ —ನಿತ್ಯಗಟ್ಲೆ ಹೀಗಾಯಿತು ಇನ್ನು ದಸರಾ ಹತ್ತು ದಿವಸ ವರ್ಧಂತಿ, ಇನ್ನು ಬಾಕಿ ವಿಶೇಷ ದಿನಗಳಲ್ಲಾದರೂ ಭಾರಿ ಕವಳ ಸಿಕ್ತಾ ಇತ್ತು ಈಗ ಅದಕ್ಕೂ ಚಕ್ಕರ್ ಆಗಿದೆ ನವರಾತ್ರಿ ಹತ್ತು ದಿನ ತಪ್ಪಿ ಮೂರು ದಿನ ಊಟ ಆಗುತ್ತಾ ಇದೆ ಅದೂ ಯಾವಾಗ ತಪ್ಪುತ್ತದೋ.

ಕುಂಟ —ಕವಳದ ಮಾತು ಹೀಗಾಯಿತು ಸಂಜೆಹೊತ್ತಿಗೆ ಮಳೆ ಗಾಳಿ ತಪ್ಪಿಸಿಕೊಂಡು ಜಗುಲಿ ಮೇಲೆ ಮಲಗುತಾ ಇದ್ದೇವಿ ಇನ್ನು ಮೇಲೆ ಅದೂ ಆಗೋಕಿಲ್ಲ ಅಂತಾ ಕಾಣುತದೆ ಯಾಕೆಂದರೆ, ಈಗ ಎಲ್ಲೆಲ್ಲೂ ರಸ್ತೆಗಳು, ಪಾರ್ಕುಗಳು ಆಗಬೇಕಂತ ಹುಚ್ಚು ಹಿಡಿದಿದೆಯಲ್ಲಾ ಈ ಛತ್ರದ ಎಫ್ ಹೋಗಿ ದವೇಲೆ ರಸ್ತೆ ಆಗಿ ರೇಸ್ ಕೋರ್ಸ್‌ಗೆ ಹೋಗುತ್ತೆ ಅಂತ ಯಾರ್‍ಯಾರೋ ಹೇಳತಾ ಇದಾರೆ

ಕುರುಡ —ಏನೋ ಕಟ್ಟಪ್ಪರಲ್ಲಿ ಮಧ್ಯಸ್ಥ ಅಂತ ಲಗ್ನಕಾಲದಲ್ಲಿ ಮದುವೆಗಳು ನಡೀತಾ ಇದೆ ಆ ಸಮಯದಲ್ಲಿ ನಾಕು ನಾಕು ದಿನ ಎಂಜಲು ಎಲೆ ಸಿಕ್ಕತ್ತಾ ಇದೆ

ಹೆಳವ —ಎಲ್ಲೀ ಮಾತ ಆಡತ್ತೀರಿ, ನೀವು ಈ ಊರಿಗ ದಸರಾ, ವರ್ಧಂತಿ ಸಮಯದಲ್ಲಾದರೂ ಒಂದಿಷ್ಟು ಮುಡಿ ಕಾಸು ಪರಸ್ಥಳದವರಿಂದ ದೂರೀತಾ ಇತ್ತು ಈಗಾಗಲೇ ನಮ್ಮಂಥವರು ಇಲ್ಲದ್ದರ ಚೆನ್ನಾಗಿಲ್ಲ ಎಲ್ಲರನ್ನೂ ಒಟ್ಟಿಗ ಸೇರಿಸಿ, ಒಂದು ಲಾರಿ ಮೇಲೆ ಊರಿಗೆ 10 50 ಮೈಲು ಬಿಟ್ಟು ಒಂದಿಷ್ಟು, ಮರೆತು ಬಿಟ್ಟರೆ ಈಗಲ್ಲಾ ಮೋಟಾರು, ಬೈಸಿಕಲ್ಲು, ಗಾಡಿಗಳಲ್ಲಿ ಹ್ಯಾಟ್, ಬೂಟುಗಳನ್ನು ಹಾಕ್ಕೊಂಡು ಸಿಗರೇಟು ಕಚ್ಚಿಕೊಂಡು ಓಡಾಡೋ ಜನರು ಇದ್ದರೇನೆ ನಮ್ಮೂರು ಲಂಡನ್, ಪ್ಯಾರಿಸ್ಸು ಮೊದಲಾದ ದೊಡ್ಡ ದೊಡ್ಡ ಪಟ್ಟಣಗಳಂತೆ ಆಗತದೆ, ಅಂತ ಸರ್ಕಾರದೋರು ತಿಳಕೊಂಡಿದ್ದಾರೆ

ಕುಂಟ —ಸಾಕು ಎಷ್ಟು ಹೇಳಿದರೂ ಅಷ್ಟೆ ಇನ್ಯಾಕ ಆ ಮಾತು ನಾವೆಲ್ಲಿಯೂ ಇಲ್ಲ ಬಿಟ್ಟು ನಾಟುಕೋಟೆ ಸೀನ್ಮೆಗಾದರೂ ಹೋಗೋಣ ಒಲ್ಲದಿದ್ದರೆ ನಾಟುಕೋಟೆ ಛತ್ರಗಳಿದಾವಂತ ಈಗ ರಾತ್ರಿ 9 ಗಂಟೆ ಆಯಿತು ನಾಳೆ ಏರ್ಪಾಟು ಮಾಡೋಣ

ಟ್ರೈನಿಂಗ್ ಉಪಾಧ್ಯಾಯರ ಕುಂದುಕೊರತೆಗಳು.

"ವಿ-ಟಿ-ಸಿ" ಅನೇಕ ಅನರ್ಥಗಳು!!

ಸ್ವಾಮಿ,

ಈಗ್ಗೆ ೨ ವರುಷಗಳ ಹಿಂದೆ VTC (Teachers Course) ತರಗತಿಯನ್ನು ಏರ್ಪಡಿಸಿದರು ಮೊದಲನೆಯ ವರುಷ ಇದು ಪೂರ್ತಿಯಾಗಿ ನಡೆಯಿತು ಎರಡನೆಯ ವರುಷ ಹಲವರು ಪರೀಕ್ಷೆಗೆ ಕುಳಿತರು ಇದರಲ್ಲಿ ಎಲ್ಲರೂ ತೇರ್ಗಡೆಯಾಗಲಿಲ್ಲ ತೇರ್ಗಡೆಯಾಗದವರು ಎರಡನೇ ವರುಷ ಮೂರನೆಯ ವರುಷದ ಪಾಠಗಳನ್ನು ಒಟ್ಟಿಗೇ ತೆಗೆದುಕೊಂಡು ಪ್ರಯತ್ನ ಮಾಡಿದರು ಈ ರೀತಿ ಒಂದು ವರುಷ ನಡೆಸಲ್ಪಟ್ಟಿತು

ತಾ॥ 16—6—1936 ರಲ್ಲಿ ವಿದ್ಯಾ ಇಲಾಖೆಯ ಅಧಿಕಾರಿಗಳು ಒಂದು ನಿರೂಪವನ್ನು ಹೊರಡಿಸಿ "ಯಾರ್‍ಯಾರು ಈ ವರುಷ V T C. ಯ ಎರಡನೇ ವರುಷದ ತರಗತಿಯಲ್ಲಿ ತೇರ್ಗಡೆಯಾಗಲಿಲ್ಲವೋ ಅಂಥವರು ವಾಪಸ್ಸು ತಮ್ಮ ಊರಿಗೆ ಹೋಗಬೇಕೆಂದು" ಆಜ್ಞೆ ಮಾಡಿರುವುದು ತುಂಬಾ ವಿಷಾದಕರ ಇದರಿಂದ ಅನೇಕ ಉಪಾಧ್ಯಾಯರೂ, ಅನೇಕ ಉಪಾಧ್ಯಾಯಿನಿಯರೂ ಇನ್ನು ಒಂದು ವಾರ ದೊಳಗೆ ತಮ್ಮ ತಮ್ಮ ಸ್ಥಳಗಳಿಗೆ ಹೋಗಬೇಕಾಗಿದೆ ಈ ಹೊಸ ಕ್ರಮದಿಂದ ಉಪಾಧ್ಯಾಯರಿಗೆ ಬಹಳ ನಷ್ಟ ಸಂಭವಿಸಿದೆ ವಿದ್ಯಾ ಇಲಾಖೆಯವರು ಏನೇ ಉಪಕಾರ ಮಾಡುವುದಕ್ಕೆ ಹೋದರೂ ಅದು ಅಪಕಾರವನ್ನೇ ಮಾಡಿದಂತಾಯಿತು ಸರಕಾರಕ್ಕೆ ನಷ್ಟ, ಉಪಾಧ್ಯಾಯರಿಗೆ ಕಷ್ಟ ಇದು ಸರ್ವರಿಗೂ ತಿಳಿದಿದ್ದೆ!

ಯಾವುದೇ ಒಂದು ನಿರ್ಧಾರವನ್ನು ಮಾಡಬೇಕಾದರೂ ಪೂರ್ವಾಪರಗಳನ್ನು ಯೋಚಿಸಿ ಮಾಡುವುದು ಒಳ್ಳೆಯದು ಹಿಂದಿನ ಕ್ರಮದಂತೆ ಎಲ್ಲರಿಗೂ ಸೆಕೆಂಡರಿ ಪರೀಕ್ಷೆಯು ಇರುವುದೇ ಉತ್ತಮವಾಗಿದೆ ಈಗ ಮನೆಗೆ ಕಳುಹಿಸುವುದರಿಂದ ಹೊರಡುವ ಉಪಾಧ್ಯಾಯರೂ ಉಪಾಧ್ಯಾಯಿನಿಯರೂ ಪಡುವ ತೊಂದರೆ ಹೇಳುವುದಕ್ಕಾಗುವುದಿಲ್ಲ

ಈ ವರುಷ ಶೇಕಡ 90 ರಂತೆ ತೇರ್ಗಡೆಯಾಗದವರು ಮನೆಗೆ ಹೋಗುವರು ಉಳಿದ ಎಂಟಾರು ಜನರಿಗೆ ಒಬ್ಬ ಪ್ರಿನ್ಸಿಪಾಲರೂ, ಹತ್ತಾರು ಉಪಾಧ್ಯಾಯರೂ ಇರುವುದಾದರೆ ಇದು ಸರ್ಕಾರಕ್ಕಾದರೂ ಲಾಭಪ್ರದವಾದುದೋ? ವಿದ್ಯಾ ಇಲಾಖೆಯವರು ಈ ಹೊಸ ಏರ್ಪಾಡನ್ನು ತಕ್ಷಣ ಬದಲಾಯಿಸುವುದು ಉತ್ತಮವಾಗಿದೆ

ರಾಜಧಾನಿಯಲ್ಲಿ ಈ ಬಗೆಯ ಶಿಕ್ಷಣಶಾಲೆಗಳು ಎರಡು ಒಂದು ಉಪಾಧ್ಯಾಯರಿಗೋಸ್ಕರವಾಗಿದೆ ಮತ್ತೊಂದು ಉಪಾಧ್ಯಾಯಿನಿಯರಿಗೋಸ್ಕರವಿದೆ ನಿದರ್ಶನಕ್ಕಾಗಿ ಈ ವರುಷ VTC ತರಗತಿಯ, ಸ್ತ್ರೀ ಶಿಕ್ಷಣಶಾಲೆಯಲ್ಲಿ 16 ಜನರು ಪರೀಕ್ಷೆಗೆ ಕುಳಿತಿದ್ದರು ನಾಲ್ಕುಜನ ತೇರ್ಗಡೆಯಾದರು ಗಂಡಸರು ಓದುತ್ತಿದ್ದ ಶಿಕ್ಷಣಶಾಲೆಯಲ್ಲಿ ಸುಮಾರು 60 ಜನಕ್ಕೆ 26 ಜನ ತೇರ್ಗಡೆಯಾದರು ಇದು ಏಕೆ ಇಷ್ಟು ಅಲ್ಪ ಫಲಿತಾಂಶ ಬರಲು ವಿದ್ಯಾರ್ಥಿಗಳು ಕಾರಣಕರ್ತರೋ? ಅಥವಾ ವಿದ್ಯೆ ಹೇಳಿಕೊಟ್ಟವರು ಕಾರಣಕರ್ತರುಗಳೋ? ಅಥವಾ ಇವರಿಬ್ಬರಿಗೂ ಬೇಗಬೇಗ ಹೊಸ ಏರ್ಪಾಡನ್ನು ಮಾಡಿದವರು ಕಾರಣಕರ್ತರೋ? ಈ ವಿಚಾರ ಸರ್ಕಾರ ಯೋಚಿಸಬೇಕಾಗಿದೆ ಸ್ತ್ರೀ ಶಿಕ್ಷಣಶಾಲೆಯಲ್ಲಿ ಕೆಲವು ಪಾಠಗಳಿಗೆ ಸ್ತ್ರೀಯರು ಅಧ್ಯಾಪಕಿಯರಾಗಿರುವರು ಇವರು ಸ್ವಲ್ಪ ಶ್ರಮವಹಿಸಿ ತಾವು ಪಾಠಗಳನ್ನು ಸಿದ್ಧಪಡಿಸಿ ವಿದ್ಯಾರ್ಥಿನಿಯರಿಗೆ ಪ್ರಯೋಜನ ಉಂಟಾಗುವಂತೆ ಶಿಕ್ಷಣಾಲಯದ ಪ್ರಿನ್ಸಿಪಾಲರು ಗಮನಕೊಡುವುದು ಉತ್ತಮವಾಗಿದೆ ಪ್ರತ್ಯಕ್ಷ ನಿದರ್ಶನಗಳಿಗೆ ಪೆಡ್‌ದ ವಿವರಣೆಯು ಆವಶ್ಯಕವಿರುವುದಿಲ್ಲ

ಉಪಾಧ್ಯಾಯರ ಹಿತಚಿಂತಕ

ಪ್ರಾಚೀನ ಕನ್ನಡ ವಚನ ಗ್ರಂಥಗಳು.

ಸೌಗಂಧಿಕಾಪರಿಣಯ.—ಪೂರ್ವದಲ್ಲಿ ದೇವೇಂದ್ರನಿಗೆ ದೂರ್ವಾಸಮುನಿಗಳಿಂದ ಆಶೀರ್ವಾದ ಪೂರ್ವಕವಾಗಿ ಕೊಡಲ್ಪಟ್ಟ ಕಮಲಮಾಲಿಕೆಯನ್ನು ಆನೆಯ ಕುಂಭಸ್ಥಳದಲ್ಲಿಟ್ಟ ಕೂಡಲೆ, ಆನೆಯು ಆ ಮಾಲಿಕೆಯನ್ನು ಕಾಲಿನಲ್ಲಿ ಹೊಸಕಿ ಹಾಕಲು ಋಷಿಗಳ ಶಾಪದಿಂದ ಭೂಲೋಕದಲ್ಲಿ ರತ್ನಪುರಿ ಎಂಬಲ್ಲಿ ಸುಗಂಧರಾಜನಾಗಿ ಹುಟ್ಟಿ, ಕಳಿಂಗದೇಶದ ರಾಜಪುತ್ರಿಯಾದ ಸೌಗಂಧಿಕಾದೇವಿಯನ್ನು ಸ್ವಯಂವರವಾಡಿಕೊಂಡ, ಬಹಳ ವಿನೋದಕರವಾದ ಕಥೆ

೧೮೦ ಪುಟಗಳು ಕ್ರಯ ರೂ ೧—೦—೦

ಸಹಸ್ರಾಯುಚರಿತ್ರೆ.—ಮಹಿಷ್ಮತೀ ಅರಸನ ಪ್ರಿಯಪತ್ನಿಯಲ್ಲಿ ಪಾರ್ವತಿದೇವಿ ವರಪ್ರಸಾದದಿಂದ ಜನಿಸಿ ಲೋಕಪ್ರಸಿದ್ಧನಾಗಿ ತನಗೆ ಇದಿರಾದ ಗಂಡಾಂತರಗಳನ್ನು ಪರಿಹರಿಸಿಕೊಂಡ ಒಬ್ಬ ಮಹಾಪುರುಷನ ಕಥೆ

೧೬೦ ಪುಟಗಳು ಕ್ರಯ ರೂ ೧—೦—೦

ಕಾಶೀಕ್ಷೇತ್ರಮಹಾತ್ಮೆ.—ಇದರಲ್ಲಿ ಲೋಕಗಳ ವರ್ಣನೆ ನದಿಗಳು ದೇವತೆಗಳು ಋಷಿಗಳು ಮುಂತಾದವರ ಉತ್ಪತ್ತಿಕ್ರಮ, ಗಂಗಾ ಸಹಸ್ರನಾಮವೇ ಮೊದಲಾದ ಅನೇಕ ವಿಷಯಗಳು ಅಡಕವಾಗಿರುತ್ತೆ

೩೦೦ ಪುಟಗಳು ಕ್ರಯ ರೂ ೨—೮—೦

ವಿಳಾಸ—

ಗುಂಡ್ಲು ಪಂಡಿತ ಲಕ್ಷ್ಮಣಾಚಾರ್ಯರ ಮಕ್ಕಳು

ಶ್ರೀನಿವಾಸ ದೇಶಿಕಾಚಾರ್,

ಕಾಡ್ಸೆ, ರಾಮವಿಲಾಸ ರಸ್ತೆ, ಮೈಸೂರು

ನಿಮಗೆ ಗೊತ್ತೇ ?

ಲೇಖಕರು ಎಂ. ವಿ. ನಾರಾಯಣಮೂರ್ತಿ, ಮೈಸೂರು.

೧ **ಹಿಂದಕ್ಕೆ ನೆಗೆತ:**—ನೀವು ಹಿಂದೆ ಹಿಂದಕ್ಕೆ ನೆಗೆಯಬಲ್ಲಿರಾ? ನೋಡಿ. ಜೆ. ಡಾರ್ಜ ಎಂಬ ಇಂಗ್ಲೆಂಡಿನ ಮಹಾಶಯ ನೊಬ್ಬನು ೧೨ ಅಡಿ ೧೧ ಅಂಗುಲ ದೂರ ಒಂದೇ ಸಾರಿ ಹಿಂದಕ್ಕೆ ಹಾರಿ ಪ್ರಪಂಚಕ್ಕೆ ದಾಖಲಾರ್ಜನ್ನು ಮಾಡಿರುವನು. ನೀವೂ ಪ್ರಯತ್ನ ಪಡಿ

೨ **ನೀರಿನಲ್ಲಿ ೬ ನಿಮಿಷ ೩೦ ಸೆ.**—1912 ನೆಯ ಇಸವಿಯಲ್ಲಿ ಪ್ಯಾರಿಸ್ಸನಲ್ಲಿ ಎಂ ಸಾಲಕ್ವೈನ್ ಎಂಬುವನು ಒಂದು ಸರೋವರದಲ್ಲಿ ಒಂದು ಮುಳುಗಿನಲ್ಲಿ 6 ನಿಮಿಷ 30 ಸೆಕೆಂಡುಗಳಕಾಲ ಇದ್ದನಂತೆ!

೩. **೪೦೦ ಗಂಡಂದಿರು!:**—ಇಂಡಿಯಾದಲ್ಲಿ ಕೆಲವು ಸುಲ್ತಾನರಿಗೆ ೩೦೦ ವರೆಗೂ ೪೦೦ ಹೆಂಡತಿಯರಿದ್ದುದನ್ನು ಚರಿತ್ರೆಯಲ್ಲಿ ವಾಚಕರೆಲ್ಲರೂ ಕೇಳಿಯೋ ಓದಿ ಬಹುದು. ಆದರೆ ನಮಗೆ ಈಗ ಇನ್ನೊಂದು ವಿಚಿತ್ರ ವಿಷಯವು ತಿಳಿಯಬಂದಿದೆ. ಆಫ್ರಿಕಾದಲ್ಲಿನ ಒಬ್ಬ ಒರ್ಬರ ರಾಣಿಗೆ ೪೦೦ ಜನ ಗಂಡಂದಿರು ಇದ್ದರಂತೆ! ಅವಳ ಹೆಸರು ಕೆಹಾನಾ ಎಂದು!

೪ **"ಸುಗಂಧ ಗೋಪುರ":**—ಈಗ್ಗೆ 750 ವರ್ಷಗಳ ಹಿಂದೆ ಆಫ್ರಿಕಾದ ಒಬ್ಬ ಸುಲ್ತಾನನು (ಸುಲ್ತಾನ್-ಯಾಕೂಬ್-ಎಲ್ ಮನ್ಸೂರ್ ಮೂಕ್) ಒಂದು ದೊಡ್ಡ ಗೋಪುರವನ್ನು ಕಟ್ಟಿಸಿದನು. ಇವನು ಇದರೊಳಗೆ ೯೬೦ ಚೀಲಗಳ ತುಂಬ ಪರಿಮಳದ ಗಂಧ ತುಂಬಿ ಈ ಮಂಟಪದ ಒಂದು ಕೊಠಡಿಯಲ್ಲಿದ್ದನಂತೆ. ಈಗ ಆ ಮಂಟಪದ ಹತ್ತಿರ ಹೋದರೆ ಎಲ್ಲೆಲ್ಲೂ ಸುಗಂಧದ ವಾಸನೆಯೇ ತುಂಬಿದೆಯಂತೆ!

೫. **ನಾಲಿಗೆಯಿಂದ ಓದುವುದು**—ಕಣ್ಣಿಲ್ಲದವರು ಬೆರಳುಗಳ ಸಹಾಯದಿಂದ ಓದುತ್ತಾರೆ. ಆದರೆ ಎರಡು ಕೈಗಳೂ ಇಲ್ಲದ ಇದ್ದರೆ ಆಗ ಕಷ್ಟ ತಾನೆ? ಅಮೆರಿಕಾದ ವಿಲಿಯಮ್ ಮೂಕ ಫರ್ಗ್ಯೂಸನ್ ಎಂಬುವನಿಗೆ ಕೈಯಿಗಳೂ ಇಲ್ಲ ಕಣ್ಣುಗಳೂ ಇಲ್ಲವಂತೆ! ಆದರೂ ಇವನು ಸಾಮಾನ್ಯ ಜನರು ಓದುವಂತೆಯೇ ಓದುವನು! ಇವನು ಒಂದು ದಿನ ಗಣಿಯಲ್ಲಿ ಕೆಲಸಮಾಡುತ್ತಿದ್ದಾಗ ಆದ ಆಸ್ಫೋಟನದಿಂದ ಮೋಕ್ಷ ಪಾರಿ ಕೈಗಳನ್ನು ಕಳೆದುಕೊಂಡನಂತೆ!

೬ **ಲಕ್ಷಾಧೀಶ-ತೆರಿಗೆ ಇಲ್ಲ!:**—ಜರ್ಮನಿಯ ಮಾಜಿ ಚಕ್ರವರ್ತಿ ವಿಲಿಯಮ್ ಹೋಹನ್ ಝೊಲ್ಲರ್ನ್ ಜಾಲರನ್ ಎಂಬುವನಿಗೆ ಸುಮಾರು ೩೦೦ ಕೋಟಿ ರೂಪಾಯಷ್ಟು ಆಸ್ತಿಯಿದೆಯಂತೆ! ಆದರೆ ಜರ್ಮನ್ ಸರ್ಕಾರದವರು ಇವನಿಂದ ಒಂದು ಬಿಡುಗಾಸೂ ತೆರಿಗೆ ತೆಗೆದುಕೊಳ್ಳುವುದಿಲ್ಲ!

೭. **ಊರಿಗೇ ತೆರಿಗೆ ಇಲ್ಲ!:**—ಮೊನಾಕೊ ಎಂಬ ದೇಶದಲ್ಲಿ ಬಡವ ಭಾಗ್ಯವಂತನೊಬ್ಬನಿಗೂ ತೆರಿಗೆ ಇಲ್ಲ. ಏಕೆಂದರೆ ಆ ದೇಶದಲ್ಲಿರುವ ಪ್ರಸಿದ್ಧ ಜೂಜು ನಗರವಾದ **ಕೆಸೀನೊ** ವನ್ನು ನೋಡ ಬರುವ ಪ್ರೇಕ್ಷಕರುಗಳಿಂದಲೇ ನಡೆಯುತ್ತಿರುವದಂತೆ! ಇದಲ್ಲದೆ ಈ ದೇಶದ ರಾಜನಾದ ಗ್ರಿಮಾಲ್ಡಿ ಎಂಬುವನಿಗೆ ವರ್ಷಕ್ಕೆ 15 ಲಕ್ಷ ರೂಪಾಯಿ ಕೊಡುತ್ತಿರುವರಂತೆ!

೮ **"ಕಾಲಿಲ್ಲದ ನರ್ತಕಿ":**—ಸಬಿನ್ ಸ್ಪೀರೋಲ ಎಂಬುವನಿಗೆ ತನ್ನ 11 ನೆಯ ವಯಸ್ಸಿನಲ್ಲೇ ತನ್ನ ಎರಡು ಕಾಲೂ ಸ್ವಾಧೀನವಿಲ್ಲದೆ ಹೋಯಿತಂತೆ! ಆದರೂ ಅವನು ಪ್ರಪಂಚದ ಮುಖ್ಯ ನರ್ತಕರಲ್ಲೊಬ್ಬನಾಗಿದ್ದನು. ಅವನು ಸ್ಪ್ರಿಂಗ್‌ನಲ್ಲಿ 16 ನೆಯ ಶತಮಾನದಲ್ಲಿ ಬಹಳ ಪ್ರಸಿದ್ಧಿ ಪಡೆದಿದ್ದನಂತೆ!

೯ **ಅಕ್ಕಿಕಾಳಿನಲ್ಲಿ ಪತ್ರ!:**—ಇಎಚ್ ಬ್ಲೆಸ್ಸನ್ ಎಂಬುವರು ಅಕ್ಕಿ ಕಾಳಿನ ಮೇಲೆ ಒಂದು ಕಾಗದವನ್ನು ಬರೆದು, ಇಂಗ್ಲೆಂಡಿನಿಂದ ಅಮೆರಿಕಾನಿಗೆ ಕಳುಹಿಸಿದರಂತೆ! ಇದರಲ್ಲಿ ೧೬೧೫ ಅಕ್ಷರಗಳಿದ್ದುವಂತೆ!

೧೦ **1½ ಪೌಂಡಿನ ಆಲೂಗೆಡ್ಡೆ**—ಹರ್ಬರ್ಟ್ ಎಂಬಲ್ಲಿನ ರಾಯನ್ನನ್ ತೋಟದಲ್ಲಿ ಎರಡೂವರೆ ಪೌಂಡು ತೂಗುವ ದೊಡ್ಡ ಆಲೂಗೆಡ್ಡೆಗಳನ್ನು ಬೆಳೆಯುತ್ತಿರುವರಂತೆ!

೧೧. **"ಪೀಕಿನ್ ಗೆಜೆಟ್" ಪತ್ರಿಕೆ:**—1561 ವರ್ಷಗಳ ಹಿಂದೆ ಪ್ರಕಟವಾಗುತ್ತಿದ್ದ 'ಪೀಕಿನ್ ಗೆಜೆಟ್' ಎಂಬ ಪತ್ರಿಕೆಯು ಈಗ ಸಿಕ್ಕಿದೆಯಂತೆ! ಇದು ಚೈನಾ ದೇಶದ ಚಕ್ರವರ್ತಿಯಾಗಿದ್ದ ತಿನ್ ಕಾನ್ ಎಂಬುವನ ಕಾಲದಲ್ಲಿ ಪ್ರಕಟವಾಗುತ್ತಿದ್ದಿತೆಂತಲೂ ಮತ್ತು ಅದು ಹಳೇ ರೇಷ್ಮೆ ಬಟ್ಟೆಗಳಮೇಲೆ ಪ್ರಕಟವಾಗುತ್ತಿತ್ತೆಂತಲೂ ಕಂಡು ಹಿಡಿದಿದ್ದಾರೆ!

ತರುಣ ನಿರುದ್ಯೋಗಿಗಳ ಉತ್ಸವ.

ಜುಲೈ ಮೊದಲನೇ ತಾರೀಖಿನಲ್ಲಿ 10 ಜನ ನಿರುದ್ಯೋಗಿಗಳು ಕನ್ಯಾಕುಮಾರಿಯಿಂದ ಮದ್ರಾಸಿಗೆ ಕಾಲ್ನಡಿಗೆಯಲ್ಲೇ ಹೊರಡುವರೆಂದು ಗೊತ್ತಾಗಿದ. ಇವರು ದಾರಿಯಲ್ಲಿ ಸಿಕ್ಕುವ ಅನೇಕ ಸ್ಥಳಗಳಲ್ಲಿ ಭಾಷಣವನ್ನು ಮಾಡುತ್ತಾ ಮುಂದುವರಿಯುವರು. ಮದರಾಸು ನ್ಯಾಯವಿಧಾಯಕ ಸಭೆಯ ಅಧಿವೇಶನದ ಪ್ರಾರಂಭಕ್ಕೆ ಸರಿಯಾಗಿ ತಲುಪಿ, ತಮ್ಮ ಘೋರ ಸಮಸ್ಯೆಯನ್ನು ಪರಿಹರಿಸಬೇಕೆಂದು ಕೇಳಲಿಚ್ಛೆಯುಳ್ಳವರಾಗಿದ್ದಾರೆ.

ಹುಣಸೂರು ವರ್ತಮಾನ.

ಕಳ್ಳಕಾಕರ ಹಾವಳಿ.

(ನಮ್ಮ ಬಾತ್ಮೀದಾರರಿಂದ)

ಹುಣಸೂರಿಗೆ ಸಮೀಪದಲ್ಲಿ ಒಡ್ಡಂಬಾಳೆಂಬ ಒಂದು ಗ್ರಾಮವಿದೆ. ಅದು ಚೆಗ್ಗದೇವನ ಕೋಟೆಗೆ ಹೋಗುವ ದಾರಿಯಲ್ಲಿ ಕಾಡಿನ ಮಧ್ಯದಲ್ಲಿದೆ. ಈಗ್ಗೆ ಸುಮಾರು ಹದಿನೈದು ದಿವಸಗಳ ಕೆಳಗೆ ಯಾರೋ ಒಬ್ಬ ದುರಾತ್ಮನು ಆ ಊರಿನ ಒಬ್ಬ ಗಾಣಿಗರವನ ಹತ್ತಿರಕ್ಕೆ ಹೋಗಿ, ಕೆಲವು ದಿವಸ ದಲ್ಲಿಯಲ್ಲಿ ಸಾಮಾನು ತುಂಬ ಬೇಕಾಗಿದ ಗಾಡಿ ಕಳುಹಿಸುವೆಯಾ, ಎಂದು ಕೇಳಿದನಂತೆ. ಅದಕ್ಕೆ ಗಾಣಿಗರವನು ಬರುವುದಿಲ್ಲವೆಂದು ಹೇಳಲು, ಹಾಗಾದರೆ ಹುಣಸೂರಿನವರಿಗಾದರೂ ಒಂದರ ಹನ್ನೆರಡು ಅಣೆ ಬಾಡಿಗೆ ಕೊಡುತ್ತೇನೆಂದು ಹೇಳಿದನು. ಅದಕ್ಕೆ ಆತನು ಒಪ್ಪಿ, ಮಧ್ಯರಾತ್ರಿಯಲ್ಲಿ ಗಾಡಿಯನ್ನು ಕಟ್ಟಿ ಹುಣಸೂರಿನ ಕಡೆಗೆ ಹೊರಟನು. ಎತ್ತುಗಳೂ ಗಾಡಿಯೂ ಬಹಳ ಚೆನ್ನಾಗಿದ್ದುವು. ಸೂರಾರು ರೂಪಾಯಿ ಬೆಲೆ ಬಾಳತಕ್ಕವುಗಳು. ಆ ರಾತ್ರಿ ಕಾಡಿನ ಮಧ್ಯದಲ್ಲಿ ಬರುವಾಗ ಕೆಲವರು ಸೇರಿ ಆ ಗಾಡಿಯವನ ಕೈಗಳನ್ನು ಕಾಲಿಗೆ ಸೇರಿಸಿ ಕಟ್ಟಿ ಅವನ ಕತ್ತನ್ನು ಸುಲಿದು ಅವನನ್ನು ಕೊಂದು ಬಿಸಾಡಿ ಎತ್ತು ಗಾಡಿಯನ್ನು ಎಲ್ಲಿಗೋ ಹೊಡೆದುಕೊಂಡು ಹೋಗಿರುತ್ತಾರೆಂದು ತಿಳಿಯಬಂದಿದೆ

ಈಗ್ಗೆ ಸುಮಾರು ಮೂರು ತಿಂಗಳ ಕೆಳಗೆ ಸದರಿ ತಾಲ್ಲೂಕು ಅಗ್ರಹಾರವೆಂಬ ಗ್ರಾಮದಲ್ಲಿಯೂ ಕೂಡ ಬಾಡಿಗೆಗೆ ಗಾಡಿ ಮಾತಾಡಿ ಹೊಡೆದುಕೊಂಡು ಹೋದ ಮನುಷ್ಯನೂ ಎತ್ತುಗಾಡಿಗಳೂ ಇನ್ನೂ ಪತ್ತೆ ಇಲ್ಲ. ಆತನ ಹೆಂಡತಿಮಕ್ಕಳೂ ಸ್ವಜನರೂ ಪೋಲೀಸಿಗೆ ರಿಪೋರ್ಟು ಮಾಡಿರುತ್ತಾರೆ. ಒಡ್ಡಂಬಾಳೆಂಬ ಗ್ರಾಮದ ಗಾಣಿಗರೆಲ್ಲರೂ ದೇಹಕೆ ಕಳು ಹುಣಸೂರು ಪೋಲೀಸ್ ಆಫೀಸಿನಲ್ಲಿ ರಿಪೋರ್ಟ್ ಮಾಡಲು ಪೋಲೀಸಿನವರು ಕಾಡಿನಲ್ಲಿ ಹೆಣವನ್ನು ಪತ್ತೆ ಮಾಡಿ, ಏನೇ ಎಲುಬು ಇದ್ದುದರಿಂದ ಎಲ್ಲೋ ಅದನ್ನು ಭೂಸ್ಥಾಪನೆ ಮಾಡಿ ಮಹಜರ್ ಮಾಡಿ ಕೊಂಡು ಬಂದಿರುತ್ತಾರೆ. ಈ ಕೃತ್ಯವನ್ನು ಮಾಡಿದವರನ್ನೂ ಎತ್ತುಗಾಡಿಗಳನ್ನೂ ಪೋಲೀಸಿನವರು ಪತ್ತೇತರಮಾಡು ಮಾಡುತ್ತಲಿದ್ದಾರೆಂದು ತಿಳಿಯುತ್ತದೆ.

ಇಂತಹ ಕೃತ್ಯವನ್ನು ಬಚ್ಚಿಟ್ಟಿರುವ ಮಾಡಲು ಸಾಧ್ಯವಿಲ್ಲ. ಒಂದಲ್ಲದೆ ಎರಡು ಕೇಸುಗಳು ಇದೇ ರೀತಿ ನಡದಿರುವುದರಿಂದ ಈ ಕೃತ್ಯವನ್ನು ಮಾಡುವುದಕ್ಕೆ ಒಂದು ಕಳ್ಳರ ಗುಂಪೇ ಇರಬಹುದು. ಇಂತಹ ದುಷ್ಕೃತ್ಯಗಳನ್ನು ಮಾಡಲು ಹೊರಟಿರುವವರು ಸಾಧಾರಣವಾದವರಲ್ಲ. ಜೂಜುಕೋರರಿರಬಹುದೆಂದು ಬಹು ಜನರ ಅಭಿಪ್ರಾಯವಾಗಿದೆ. ಜೂಜುಕೋರರು ಒಬ್ಬಿಬ್ಬರಿರುವುದಿಲ್ಲ. ಒಂದೊಂದು ತಾಂಡ್ಯವೇ ಇರುತ್ತದೆ. ಮೊದಲು ಪೋಲೀಸ್ ಇಲಾಖೆಯವರು ಇದನ್ನು ನಿರ್ನಾಮ ಮಾಡಲು ಪ್ರಯತ್ನಿಸಬೇಕಾಗಿದೆ. ಕೈಕರ ತಲೆಹೊಡೆದು ಎತ್ತುಗಾಡಿಗಳನ್ನು ಮಾರಿ ತಮ್ಮ ಕೃತ್ಯಗಳನ್ನು ಮಾಡುತ್ತಿದ್ದಾರೆಂದು ತಿಳಿಯಬರುತ್ತದೆ. ಮಲೆನಾಡು ಪ್ರಾಂತ್ಯದಲ್ಲಿ ರೈತರಿಗೂ ವರ್ತಕರಿಗೂ ಇದರಿಂದ ತುಂಬಾ ಭೀತಿಯೂ ತೊಂದರೆಯೂ ಉಂಟಾಗಿದೆ. ವರ್ತಕರು ಒಂದು ಕಡೆಯಿಂದ ಮತ್ತೊಂದು ಕಡೆಗೆ ಗಾಡಿಗಳ ಮೂಲಕ ಸರಕುಗಳನ್ನು ಸಾಗಿಸಿ ಹಗಲೂರಾತ್ರಿ ನಿರ್ಭಯವಾಗಿ ಸಂಚರಿಸುತ್ತಿದ್ದರು. ಈಗ ರೈತರಿಗೆ ವರ್ತಕರಲ್ಲಿಯೂ ವರ್ತಕರಿಗೆ ರೈತರಲ್ಲಿಯೂ ನಂಬಿಕೆಯು ಹೋಗಿ ಅವರು ಕಷ್ಟಗಳಿಗೆ ತುಂಬಾ ತೊಂದರೆಯಾಗಿರುತ್ತದೆ. ಘನ ಸರ್ಕಾರದವರು ಮೊದಲು ಈ ವಿಚಾರದಲ್ಲಿ ಹೆಚ್ಚು ಗಮನವನ್ನು ಕೊಟ್ಟು ಈ ಕೃತ್ಯಗಳನ್ನು ಮಾಡಿದವರನ್ನು ಕಂಡು ಹಿಡಿಯುವದಲ್ಲದೆ ಗ್ರಾಮಾಂತರಗಳಲ್ಲಿ ಉಂಟಾಗಿರುವ ಈ ವಿದವಾದ ಭೀತಿಯನ್ನು ಹೋಗಲಾಡಿಸುವರೆಂದು ನಂಬಲಾಗಿದೆ

ಹಿಂದೀ ಪ್ರಚಾರಕ್ಕೆ ಸಹಾಯ.

ಬೆಂಗಳೂರು ಪೌರಸಭೆಯವರು ಹಿಂದೀ ಪ್ರಚಾರಕ್ಕೋಸ್ಕರ ಮೊದಲು ಕೊಡುತ್ತಿದ್ದ 500 ರೂಗಳ ಜೊತೆಗೆ 250 ರೂಗಳ ಹೆಚ್ಚಿನ ಸಹಾಯವನ್ನು ಮಾಡಬೇಕೆಂದು ನಿರ್ಧರಿಸಿದ್ದರು. ಪೌರಸಭೆಯವರು ಹಿಂದೀ ಪ್ರಚಾರಕ್ಕೆ ಹೆಚ್ಚಾಗಿ ಕೊಡಬೇಕೆಂದಿದ್ದ 250 ರೂಗಳನ್ನು ಕೊಡಕೂಡದೆಂದು ಸರ್ಕಾರದವರು ಆಜ್ಞೆ ಮಾಡಿರುವುದಾಗಿ ಚೀಫ್ ಸೆಕ್ರೆಟರಿಯವರು ತಿಳಿಸಿದ್ದರಿಂದ, ಮ॥ ಸಿ. ಸುಬ್ಬರಾಮಶೆಟ್ಟರೂ ಮತ್ತು ಮ॥ ರಾಮಲಾಲ್ ತಿವಾರಿಯವರೂ ಹೆಚ್ಚಾಗಿ ಧನಸಹಾಯ ಮಾಡಬೇಕೆಂದು ನಿರ್ಧರಿಸಿದ್ದ ಅಂಶವನ್ನು ಪುನಃ ಸರ್ಕಾರದೊಂದಿಗೆ ಮನವಿ ಮಾಡಿಕೊಳ್ಳಬೇಕೆಂದು ಪೌರಸಭೆಯ ಅಧ್ಯಕ್ಷರಲ್ಲಿ ಅರಿಕೆ ಮಾಡಿದರು. ಅಧ್ಯಕ್ಷರು ತಾವು ಹಾಗೆ ಮಾಡುವುದಾಗಿ ಮಾತು ಕೊಟ್ಟಿರುತ್ತಾರೆ.

ವಿದ್ಯಾವಂತ ನಿರುದ್ಯೋಗಿಗಳು.

ನಿರುದ್ಯೋಗ ಸಮಸ್ಯೆಯನ್ನು ಕುರಿತು ಮದರಾಸಿನ ಅಡ್ವೋಕೇಟರಾದ ಮ॥ ಎಸ್. ಎಸ್. ರಾಜಗೋಪಾಲರವರು ಪಾಲಂಕೋಟೆ ಎಂಬಲ್ಲಿ ಈ ರೀತಿ ಭಾಷಣಮಾಡಿದರು—"ಪ್ರತಿ ವರ್ಷವೂ ವಿದ್ಯಾವಂತ ನಿರುದ್ಯೋಗಿಗಳ ಸಂಖ್ಯೆ ಬೆಳೆಯುತ್ತಿದೆ. ಸರ್ಕಾರವನ್ನಾಗಲೀ ಅಥವಾ ವಿಶ್ವವಿದ್ಯಾನಿಲಯವನ್ನಾಗಲೀ ಈ ವಿಷಯದಲ್ಲಿ ನಾವು ದೂಷಿಸುವುದು ಸರಿಯಲ್ಲ. ಪ್ರತಿ ವರ್ಷವೂ ವಿಶ್ವವಿದ್ಯಾಲಯದಿಂದ ಪದವಿಯನ್ನು ಹೊಂದಿ ಹೊರಹೊರಟು ಕೆಲಸವನ್ನು ಪಡೆಯದೆ, ನಿರುದ್ಯೋಗಿಗಳಾಗುವ ವಿದ್ಯಾವಂತರ ಸಂಖ್ಯೆಯನ್ನು ಸಂಪೂರ್ಣವಾಗಿ ಕಡಿಮೆ ಮಾಡಲೇಬೇಕಾಗಿದೆ."

ಭೋಗಾಪುರದಲ್ಲಿ ಶುದ್ಧಿಯು ನಡೆಯಲಿಲ್ಲ.

ಕ್ರೈಸ್ತರು ತಲೆತಪ್ಪಿಸಿಕೊಂಡು ಓಡಿಹೋದರು

ಪಾದ್ರಿಗಳು ಚರ್ಚುಗಳಲ್ಲಿ ಕಣ್ಣೀರು ಸುರಿಸುತ್ತಾ ಪ್ರಾರ್ಥಿಸಿಕೊಂಡರಂತೆ

ನಾಗಮಂಗಲದ ತಾಲ್ಲೂಕು ಭೋಗಾಪುರದಲ್ಲಿ ಇದೇ ಜೂನ್ 10ನೇ ತಾ॥ ದಿವಸ ಆರ್ಯರು ಕ್ರೈಸ್ತರನ್ನು ಶುದ್ಧಿಮಾಡಿ ವಾಪಸು ತರುವರೆಂದು ಪ್ರಕಟಿಸಿದ್ದರು. ಆ ದಿವಸ ಎಲ್ಲಾ ಸಿದ್ಧತೆಗಳನ್ನೂ ಮಾಡಿಕೊಂಡಿದ್ದರು. ಆದರೆ ವಾಪಸು ಬರಬೇಕೆಂದು ಇದ್ದವರಾಗಿದ್ದ ಕ್ರೈಸ್ತರು ಊರುಬಿಟ್ಟು ಹಿಂದಿನ ರಾತ್ರಿ ತಲೆತಪ್ಪಿಸಿಕೊಂಡು ಹೊರಟುಹೋದರು. ವಿರೋಧಿಸಿದ್ದ ಪಾದ್ರಿಗಳು ಗ್ರಾಮದ ಚರ್ಚುಗಳಲ್ಲಿ ಕಣ್ಣೀರು ಸುರಿಸುತ್ತಾ ಕ್ರೈಸ್ತರನ್ನು ಈ ರೀತಿಯಾಗಿ ಪ್ರಾರ್ಥಿಸಿಕೊಂಡರಂತೆ 'ನಮ್ಮ ಸಂಪತ್ತು ಇವರ ಉಪಯೋಗಕ್ಕೆ ಪ್ರಾಪ್ತಿಯಾಗುತ್ತಿದೆ. ಪಾಪಿ ವ್ಯವಹಾರದ ನಮ್ಮ ಕಡೆ ಇಗಲಿಲ್ಲ. ಕ್ರೈಸ್ತರು ನಮ್ಮನ್ನು ಬಿಟ್ಟು ಹಿಂದೂ ಮತಕ್ಕೆ ಹೋಗುತ್ತಿದ್ದಾರೆ. ಇರುವವರೂ ಹೊರಟುಹೋದರೆ ಬಹಳ ಅವಮಾನವಾಗುತ್ತದೆ. ಸಮಾಜದ ಏಗಿತಪ್ಪಿ ನಮ್ಮ ಗೌರವವು ಹೋಗುತ್ತದೆ. ಹೇಗಾದರೂ ಮಾಡಿ ಈಗ ವಾಪಸು ಹೋಗಬೇಕೆಂದಿರುವವರನ್ನು ನಮ್ಮ ಮತದಲ್ಲೇ ಇಟ್ಟುಕೊಳ್ಳುವ ಹಾಗೆ ಮಾಡಿ. ಅವರಿಗೆ ಒಳ್ಳೆಯ ಸಹಾಯ ಮಾಡೋಣ' ವೆಂದು ಹೇಳಿದರಂತೆ. ಹೀಗೆ ಆರ್ಯರನ್ನು ಬಿಟ್ಟು ಮಾಡಿದ ಮೇಲೆ ವಾಪಸು ಬರಲು ಸಿದ್ಧವಾಗಿದ್ದ ಕ್ರೈಸ್ತರು ಊರು ಬಿಟ್ಟು ಹೊರಟುಹೋದರು. ನಾವು ನಮ್ಮ ಕೆಲಸ ಕಾರ್ಯಗಳನ್ನು ನಿಲ್ಲಿಸಬೇಕಾಯಿತು.

ಆರ್ಯರು ಕ್ರೈಸ್ತರು ನಮ್ಮನ್ನು ಸಂಘಕ್ಕೆ ಸೇರಿಸಿಕೊಳ್ಳಬೇಕು ಎಂದು ಇಷ್ಟಪಟ್ಟಿದ್ದವರನ್ನು ನಾವು ಹಿಂದೂ ಮತಕ್ಕೆ ಸೇರಿಸಿಕೊಳ್ಳುವುದಿಲ್ಲ. ಬಲಾತ್ಕಾರದಿಂದ ಸೇರಿಸಿಕೊಳ್ಳುವುದಿಲ್ಲ. ಗುಂಪನ್ನು ಹೆದರಿಸಿ ಕರೆಸಿಕೊಳ್ಳುವ ಸಲುವಾಗಿ ಸೇರಿಸಿಕೊಳ್ಳುವುದಿಲ್ಲ. ದುರಾಶೆಯನ್ನುಂಟುಮಾಡಿ ಸೇರಿಸಿಕೊಳ್ಳುವುದಿಲ್ಲ. ಕಿರುಕುಳವನ್ನು ತಪ್ಪಿಸಿಕೊಡುತ್ತೇವೆಂದು ಹೇಳಿ ಸೇರಿಸಿಕೊಳ್ಳುವುದಿಲ್ಲ. ಅವರಾಗಿ ಇಷ್ಟಪಟ್ಟು ವಾಪಸು ಬರುತ್ತೇವೆಂದು ಕೇಳಿಕೊಂಡರೆ ಅವರುಗಳನ್ನು ಚನ್ನಾಗಿ ಪರೀಕ್ಷಿಸಿ ಅನಂತರ ವಾಪಸು ತೆಗೆದುಕೊಳ್ಳುತ್ತೇವೆ. ವಾಪಸು ಬರಲು ಸಿದ್ಧರಾಗಿದ್ದವರನ್ನು ಮೂರು ತಿಂಗಳ ಕಾಲ ಪರೀಕ್ಷಿಸಿ ಅನಂತರ ಶುದ್ಧಿಗೊಳಿಸುತ್ತೇವೆ. ಕ್ರೈಸ್ತರಾಗಿ ನಿಂತಿದ್ದು ಸಂತೋಷವಿಲ್ಲದವರು ಒಬ್ಬರೂ ಸಂತೋಷವಿಲ್ಲವೆಂದು ಹೇಳಿದ ಹಾಗೆ ಇಷ್ಟವೂ ಸಂತೋಷವೂ ಇಲ್ಲದ ಆಸೆಗಾಗಿ ಒಂದು ಮತದಿಂದ ಮತ್ತೊಂದು ಮತಕ್ಕೆ ಹೋಗುವುದು ನಿರಾಶೆಯಾಗಿ ಅವರನ್ನು ಬಿಡುವುದು ಇದೆಲ್ಲಾ ಬುದ್ಧಿ ತಪ್ಪು. ಕ್ರೈಸ್ತ ಜಾತಿಯವರೇ ಇವನ್ನು ಪ್ರಾಪ್ತಿಯಾಗಿರುವ ಕುಂದು ಕೊರತೆಗಳನ್ನು ತಪ್ಪಿಸಿಕೊಡಿ ಎಂದು ಕೇಳಿಕೊಂಡರೆ ನನ್ನ ಕೈಲಾದ ಎಲ್ಲಾ ಸಹಾಯವನ್ನು ಮಾಡಿಕೊಡಲು ಸಿದ್ಧನಾಗಿದ್ದೇನೆ. ಮತ ಬೋಧೆ ಮಾಡುತ್ತಲೂ ಇದ್ದೇನೆ. ಬೇರೆ ಕ್ರೈಸ್ತರ ಸಂಪತ್ತೇ ನನ್ನ ಗಂಟಲ್ಲ. ಈ ಸಹಕಾರವನ್ನು ಕೋರುತ್ತಿದ್ದೇನೆ. ಭೋಗಾಪುರದಲ್ಲಿ ವಾಪಸು ಬರಲು ಸಿದ್ಧರಾಗಿದ್ದ ಕ್ರೈಸ್ತರು ವಿಶೇಷವಾಗಿ ಪಶ್ಚಾತ್ತಾಪಪಟ್ಟು ಪರಿಶುದ್ಧರಾದರೆ ನಮ್ಮ ಧರ್ಮಕ್ಕೆ ಸರಿಯಾಗಿ ಸೇರಿಸಿಕೊಂಡು ಪರಿಶುದ್ಧಿ ಮಾಡುತ್ತೇವೆ. ಕ್ರೈಸ್ತರನ್ನು ವಶಮಾಡಿಕೊಳ್ಳುತ್ತೇವೆ.

ಕೆಗದೂರು ರಾಮಚಂದ್ರರಾವ್

ತುಮಕೂರು ವೃತ್ತಾಂತ

ಹೆಬ್ಬೂರಿನ ಕೆಲವರು ಗಾಡಿಯಲ್ಲಿ ಹೋಗುತ್ತಿದ್ದಾಗ, ಎದುರಿನಿಂದ ಬಂದ ಕೆಕ್ಕರು ಲಾರಿ ಗಾಡಿಗೆ ಡಿಕ್ಕಿ ಹೊಡೆದು ಒಬ್ಬ ಸತ್ತನು. ಇತರರಿಗೆ ಪೆಟ್ಟಾಯಿತು. ಡ್ರೈವರ್ ಸಿಕ್ಕಿದನು.

ಕುದಿಯುವ ಎಣ್ಣೆಯ ಮೇಲೆ ನೀರು.

ಪೇಟೆಯಲ್ಲಿ ಒಬ್ಬ ಸಿಹಿ ತಿಂಡಿಗಳನ್ನು ತಯಾರುಮಾಡುವ ಹಲವಾಯಿಯ ಎಣ್ಣೆಯಲ್ಲಿ ನೀರನ್ನು ಹುರಿಯುತ್ತಿದ್ದಾಗ ಸ್ವಲ್ಪ ಎಣ್ಣೆಯು ಒಲೆಯಲ್ಲಿ ಬಿದ್ದಿತು. ಇದರಿಂದ ಹಲವಾಯಿಗೆ ಗಾಬರಿಯಾಗಿ ಬಾಣಲೆಯನ್ನು ಕೆಳಗೆ ಇಳಿಸಲು ಯತ್ನಿಸಲು ಎಣ್ಣೆಯು ಸಿಡಿದು ಅಲ್ಲಿದ್ದ ಜನರೆಲ್ಲರಿಗೂ ಎಣ್ಣೆ ಬಿದ್ದುದರಿಂದ ಅನೇಕರಿಗೆ ಗಾಯಗಳಾಗಿವೆ. ಅವರನ್ನು ಆಸ್ಪತ್ರೆಗೆ ಸಾಗಿಸಲಾಗಿದೆ.

ನೀರಿನಲ್ಲಿ ಮುಳುಗಿದವರು

ಒಂದು ದೋಣಿಯು ಗಂಗಾನದಿಯಲ್ಲಿ ಹೋಗುತ್ತಿದ್ದಾಗ ಮುಳುಗಿಹೋಯಿತು. ೩ ಮಂದಿ ನೀರಿನ ಪಾಲಾದರು. ಮಿಕ್ಕವರು ಬದುಕಿಕೊಂಡಿದ್ದಾರೆ.

ಗಂಡನನ್ನು ಕೊಂದ ಹೆಂಡತಿ

ಅಮೃತಸರ ಜಿಲ್ಲೆಯ 22 ವರ್ಷದ ಹೆಂಗಸೊಬ್ಬಳು ನಿರ್ದಾಕ್ಷಿಣ್ಯದಿಂದ ಗಂಡನನ್ನು ಕತ್ತಿಯಿಂದ ಕತ್ತರಿಸಿದಳು. ಅವಳನ್ನು ನ್ಯಾಯಾಧೀಶರ ಮುಂದೆ ವಿಚಾರಣೆಗೆ ನಿಲ್ಲಿಸಿದಾಗ ತನ್ನ ಗಂಡನ ದುರ್ನಡತೆಗೋಸ್ಕರ ಅವನನ್ನು ಕೊಂದಿರುವೆ ಎಂದಳು.

ಹರಿಜನರೊಡನೆ ಭೋಜನ

ಬಿಹಾರದಲ್ಲಿರುವ ವಿದ್ಯಾರ್ಥಿ ಸಂಘದ ಸಮ್ಮೇಳನದಲ್ಲಿ ಕೆಳವರ್ಗದ ಪ್ರೀತಿ ಭೋಜನವು ವೈಭವದಿಂದ ಜರುಗಿತು. ಅನೇಕ ಸಾವಿರಾರು ಸವರ್ಣ ಹಿಂದುಗಳು ಹರಿಜನರೊಡನೆ ಸಹಪಂಕ್ತಿ ಭೋಜನ ಮಾಡಿದರು.

ಡಿ॥ ಬೋ॥ ಅಧ್ಯಕ್ಷರುಗಳ ಚುನಾವಣೆ.

ಈ ಕೆಳಗೆ ಕಂಡ ದೊಡ್ಡ ಮನುಷ್ಯರುಗಳು ಈಚೆಗೆ ನಡೆದಿರತಕ್ಕ ಜಿಲ್ಲಾ ಬೋರ್ಡು ಅಧ್ಯಕ್ಷರುಗಳ ಚುನಾವಣೆಗಳಲ್ಲಿ ಚುನಾಯಿತರಾಗಿರುತ್ತಾರೆ.

(೧) ಶ್ರೀ॥ ಹೆಚ್. ಬಿ. ಗುಂಡಪ್ಪಗೌಡರು, ಹಾಸನ ಡಿಸ್ಟ್ರಿಕ್ಟ್ (೨) ಶ್ರೀ॥ ಹೆಚ್. ವೆಂಕಟರಾಮಯ್ಯನವರು, ತುಮಕೂರು ಜಿಲ್ಲೆಗೆ (೩) ಶ್ರೀ॥ ಕೆ. ಹೆಚ್. ರಾಮಸ್ವಾಮಿಯವರು ಶಿವಮೊಗ್ಗ ಜಿಲ್ಲೆಗೆ (೪) ಶ್ರೀ॥ ಮಹಮದ್ ಇಮಾಂರವರು, ಚಿತ್ರದುರ್ಗ ಜಿಲ್ಲೆಗೆ (೫) ಶ್ರೀ॥ ಡಿ. ಹೆಚ್. ಚಂಗಪ್ಪಾಯ ರೆಡ್ಡಿಯವರು, ಕೋಲಾರ ಜಿಲ್ಲೆಗೆ (೬) ಶ್ರೀ॥ ಎಸ್. ಎನ್. ರಾಮಸ್ವಾಮಿಯವರು, ಕಡೂರು ಜಿಲ್ಲೆಗೆ.

ಸ್ಥಳೀಯ ವಾರ್ತೆ.

ಜನ್ಮಶತಮಾನೋತ್ಸವ:— ಮೈಸೂರು ಹೆಡ್ಮಾಸ್ಟರ್ ಶ್ರೀ॥ ಎಂ. ಆರ್. ಶ್ರೀನಿವಾಸಾಚಾರ್ಯ ಬಿ. ಎ. ರವರು ಸ್ಥಾಪಿಸಿರುವ ಶ್ರೀ ರಾಮಕೃಷ್ಣ ಪರಮಹಂಸರ ಜನ್ಮಶತಮಾನೋತ್ಸವವನ್ನು ಬಹಳ ವೈಭವದಿಂದ ನಡೆಸಿದರು. ಇದರಲ್ಲಿ ಹರಿಕಥೆ, ಪ್ರವಚನ, ಗೀತೆ, ಭಜನೆ ಮುಂತಾದವುಗಳು ನಡೆದವು. ಗುರು ಚರಿತ್ರೆ, ದೇವತಾರಾಧನೆ, ಉಪನ್ಯಾಸ ಮಾಲಿಕೆ, ಆರೋಗ್ಯ ನಿಯಮಗಳು, ಭಜನೆ, ಮಂಗಳ ಮಹೋತ್ಸವ, ಅನ್ನ ಸಂತರ್ಪಣೆ ಆರೋಗ್ಯ ದರ್ಶನ. ಇದೇ ಮೊದಲ ಸಲ ವಿಷಯಗಳು ಪಟ್ಟಣದಲ್ಲಿ ನಡೆದವು. ಸಾಂಸ್ಕೃತಿಕ ಶೈಲಿಯ ಬಂಡಿಯನ್ನು ಕಟ್ಟಿ ಪ್ರದರ್ಶಿಸಲಾಯಿತು. ಸಭೆಯಲ್ಲಿ ನೆರೆದ ಜನರಿಗೆ ಸಿಹಿ ಮತ್ತು ಹಣ್ಣು ಹಂಪಲುಗಳನ್ನು ಹಂಚಲಾಯಿತು.

ಕಡೂರು ಜಿಲ್ಲಾಧಿಕಾರಿಗಳಾದ ಶ್ರೀ॥ ಮಾಸ್ತಿ ವೆಂಕಟೇಶಯ್ಯಂಗಾರ್ಯರು, ಬೆಂಗಳೂರು ಚಾಮರಾಜೇಂದ್ರ ಸಂಸ್ಕೃತ ಕಾಲೇಜಿನ ಶ್ರೀ॥ ಎಮ್. ನ. ಗೋಪಾಲಾಚಾರ್ಯರು ಮತ್ತು ಬೆಂಗಳೂರು ಜಿಲ್ಲಾಧಿಕಾರಿಗಳಾದ ಶ್ರೀ॥ ಟಿ. ಬಿ. ಸುದರ್ಶನಂ ಅಯ್ಯಂಗಾರ್ಯರವರೂ ತಮ್ಮ ಸದಭಿಪ್ರಾಯಗಳನ್ನಿತ್ತಿರುವರು.

ಮುಕ್ತಾಯ:— ಹಿತವಿಂತಕರಾಗಿರುವ ಬಹುಜನಗಳ ಉಪಕಾರದಿಂದ ನಡೆದ ಈ ಉತ್ಸವ ಸರ್ವರಿಂದಲೂ ಪ್ರಶಂಸೆಗೆ ಪಾತ್ರವಾಯಿತು.

ಜಪಾನಿನಲ್ಲಿ ಸೋವಿಯೆಟ್ ಪ್ರಚಾರ

ಈ ಕಾರ್ಖಾನೆಗಳಿಗಾಗಿ ಒಂದೂವರೆ ಕೋಟಿ ರೂಪಾಯಿ ಖರ್ಚುಮಾಡುತ್ತಿದೆ. ಅನೇಕ ಕಟ್ಟಡಗಳು ಏಳುತ್ತಿವೆ. ಸಾವಿರಾರು ಜನ ಕೆಲಸಗಾರರಿಗೆ ಕೆಲಸ ಸಿಕ್ಕುತ್ತಿದೆ. ಇಂಗ್ಲೆಂಡ್ ಮತ್ತು ಅಮೇರಿಕಾ ಯಂತ್ರನಿಪುಣರನ್ನು ಕರೆಸಿ ಕೆಲಸ ಮಾಡಿಸಲಾಗುತ್ತಿದೆ.

ಕುಷ್ಠರೋಗಿಗಳಿಗೆ ರಿಯಾಯಿತಿ.

ಸರ್ಕಾರಿ ನೌಕರ ವರ್ಗದವರು ಕುಷ್ಠರೋಗದಿಂದ ಪೀಡಿತರಾದರೆ ಚಿಕಿತ್ಸೆಗಾಗಿ ರಜೆಯನ್ನು ತೆಗೆದುಕೊಳ್ಳುವ ಸೌಲಭ್ಯ, ತಮ್ಮ ಕೆಲಸ ಎಲ್ಲಿ ನಿಂತುಹೋಗುತ್ತದೋ ಎಂಬ ಭಯದಿಂದ ರಜೆ ಪಡೆಯಲು ಹಿಂಜರಿಯುತ್ತಿದ್ದರು. ಆದುದರಿಂದ ಅವರುಗಳ ಸಹಾಯಕ್ಕಾಗಿ ಸರ್ಕಾರದವರು ಕೆಲವು ರಿಯಾಯಿತಿಗಳನ್ನು ಕೊಟ್ಟಿರುತ್ತಾರೆ.

ಕುಷ್ಠರೋಗಗ್ರಸ್ತರಿಗೆ ಪ್ರಾರಂಭದಲ್ಲೇ ಚಿಕಿತ್ಸೆ ನಡೆಸಿದರೆ ಗುಣವಾಗಬಹುದು. ಆದ್ದರಿಂದ ಸರ್ಕಾರಿ ನೌಕರರು ಕುಷ್ಠರೋಗದಿಂದ ಬಾಧಿತರಾದರೆ ಅವರಿಗೆ ಉದ್ಯೋಗದಿಂದ ತೆಗೆದುಹಾಕುತ್ತೇವೆ ಎಂಬ ಭಯವಿಲ್ಲದೆ ಚಿಕಿತ್ಸೆ ಪಡೆದುಕೊಳ್ಳಬೇಕೆಂಬ ಉದ್ದೇಶದಿಂದ ಸರ್ಕಾರದವರು ರಜೆಯನ್ನು ಪರೀಕ್ಷಿಸಿ ನೀಡುವುದು. ನಂತರ ಸರ್ಕಾರದವರು ಪರಿಶೀಲಿಸಿ ಇತ್ತೀಚೆಗೆ ಹೊರಡಿಸಿರುವ ಆಜ್ಞೆಯ ಪ್ರಕಾರ ರೋಗಿಯು ವಿಷಯದಲ್ಲಿ ನಡೆದುಕೊಳ್ಳುವ ಕ್ರಮವನ್ನು ನಿಯಮಿಸಲಾಗಿದೆ. ವೈದ್ಯಾಧಿಕಾರಿಗಳು ಪರೀಕ್ಷಿಸಿ ರೋಗ ಗುಣವಾದ ನಂತರ ಸರ್ಟಿಫಿಕೇಟು ಕೊಡುವುದು. ಇದರಿಂದ ರೋಗಿಗೆ ಹೆಚ್ಚಿನ ರಜೆ ದೊರೆಯುವುದು ಮತ್ತು ಪೂರ್ಣ ಗುಣವಾದಲ್ಲಿ ಪುನಃ ಕೆಲಸಕ್ಕೆ ತೆಗೆದುಕೊಳ್ಳುವರು.

ಸ್ಥಳ ಬದಲಾವಣೆ

ಶಾಂತಿನಿಯ ದೇವೀರಮ್ಮಣ್ಣಿ ಹಾಸ್ಟೆಲ್ಲಿನ ಕಳೆದ ವಿದ್ಯಾರ್ಥಿ ನಿಲಯವು ಒಂದು ಕಟ್ಟಡದಲ್ಲಿ ನಡೆಸಲ್ಪಡುತ್ತಿದ್ದು ಈಗ ಸರಿಯಾದ ಸ್ಥಳ ಬೇಕಾಗಿದ್ದು ಶ್ರೀ ಸಿದ್ಧೇಶ್ವರ ದೇವಸ್ಥಾನದ ಸಮೀಪದಲ್ಲಿರುವ ಕಟ್ಟಡಕ್ಕೆ ವರ್ಗಾಯಿಸಲಾಗಿದೆ. ವಾಚನಾಲಯವೂ ಅಲ್ಲಿಯೇ ನಡೆಯುತ್ತದೆ.

ಇಸ್ಲಾಂ ಮತಕ್ಕೆ ಸೇರಿದರು

ಬೊಂಬಾಯಿ ಪ್ರಾಂತ್ಯದಲ್ಲಿ ೩೦ ಮಂದಿ ಇಸ್ಲಾಂ ಮತವನ್ನು ಸೇರಿದರಂತೆ. ಅವರಲ್ಲಿ ಒಬ್ಬನು ಹಿಂದೂ ಧರ್ಮವನ್ನು ಬಿಟ್ಟು ಮತಾಂತರ ಹೊಂದುವವರೂ ಪ್ರಾರ್ಥನೆಯಲ್ಲಿ ಭಾಗವಹಿಸಿದ್ದರು.

r Up-to-date and Efficient Medical Treatment

Go to—**Dr. A. J. RAM & SONS,**

Sayaji Rao Road, Mysore.

Physicians, Dentists, Opticians, etc.

ಡಾ|| ಎ ಜೆ ರಾಂ. ಅಂಡ್ ಸನ್ಸ್,

ಸಯ್ಯಾಜಿರಾವ್ ರೋಡ್, ಮೈಸೂರು ಸಿಟಿ.

ಔಷಧ ವ್ಯಾಪಾರಿಗಳು, ಚಿಕಿತ್ಸಕರು, ದಂತವೈದ್ಯರು,
ಮತ್ತು ಕನ್ನಡಕ ವ್ಯಾಪಾರಿಗಳು.

ಉತ್ತಮವಾದ ನವೀನ ಚಿಕಿತ್ಸೆಗಳಿಗೆ ನಮ್ಮಲ್ಲಿಯೇ ಬನ್ನಿರಿ.

ಪಂಡಿತ ಸಿ. ಎಚ್. ಚಂದ್ರಭಾನಸಿಂಗ್
ಇವರಿಂದ ತಯಾರಿಸಲ್ಪಟ್ಟ

ಫಲಪುಷ್ಪಸಾರ ರಸಾಯನ.

ಸುಖಕರ ಮಲಬಂಧನಿವಾರಣೇ ಕ್ರಯ.—1-8-0

ಗುಣ:—ಇದು ಜಾಪಾಳ ಮುಂತಾದ ಕಠಿಣ ವಿರೇಚನ ವಸ್ತುಗಳ ...ಗವಿಲ್ಲದ ಕೇವಲ ವಸ್ತುತೀಕರಣ ಪ್ರಯೋಗವು. ಕೇವಲ ಅನುಭವಸಿದ್ಧ ... ಇದನ್ನು ಉಪಯೋಗಿಸುವುದರಿಂದ ಎಲ್ಲಾ ವಿಧವಾದ ಮಲಬಂಧವೂ, ...ವ್ಯಾಧಿ, ಅಜೀರ್ಣ, ಉಷ್ಣವಾಯು, ಶೀಲವಾಯು, ಎದೆಯುರಿ, ಹೊಟ್ಟೆ ...ವು, ಕೆಮ್ಮು, ತಲೆತಿರುಗು ಮುಂತಾದ ರೋಗಗಳೆಲ್ಲವೂ ಖಂಡಿತ ಗುಣವಾಗು

ಬ್ರಾಂಚ್:—ಶ್ರೀಸತ್ಯನಾರಾಯಣ ಆಯುರ್ವೇದಿಕ್ ಫಾರ್ಮಸಿ,
ಜಗನ್ಮೋಹನ ಬಂಗ್ಲೆ ರಸ್ತೆ, ಮೈಸೂರು.

You Know

...R IDEAL ARRANGEMENTS & CHOICEST PREPARATIONS.

We need not tell you about it

COME & SEE OUR NOVEL

innovations and up-to-date Management.

SRI KRISHNA BHAVAN,

Mysore.

...NANDA SODA FACTORY,

DODDAPET, MYSORE.

...EST AERATED WATER SUPPLIERS.

COMPLETE REQUISITES FOR

AERATED WATER MANUFACTURERS

AVAILABLE.

ಆನಂದಾ ಸೋಡಾ ಫ್ಯಾಕ್ಟರಿ,

ದೊಡ್ಡಪೇಟೆ, ಮೈಸೂರು

ASIATIC GOVERNMENT SECURITY LIFE ASSURANCE CO., LTD.

Head Office:

Asiatic Buildings, Bangalore City.

PURELY A NATIONAL CONCERN

Managed by Experts

Low Premiums and Liberal Policy Conditions.

Apply for Agency:—

To,
Mr. H Venkataramiah,
Divl. Supdt ASIATIC BUILDINGS,
Bangalore City.

OR

To
V. RANGASAMI Esq., B.A., B.L., F.C.I.
General Manager.

ಏಸ್ಯಾಟಿಕ್ ಲೈಫ್ ಇನ್ಷೂರೆನ್ಸ್ ಕಂಪೆನಿ ಲಿಮಿಟೆಡ್.

ಹೆಡ್ ಆಫೀಸ್: ಏಸ್ಯಾಟಿಕ್ ಬಿಲ್ಡಿಂಗ್ಸ್, ಬೆಂಗಳೂರು.

ಚೆನ್ನಾಗಿ ಅನುಭವವುಳ್ಳವರ ಆಡಳಿತಕ್ಕೆ ಒಳಪಟ್ಟ, ಕಡಿಮೆ ಪ್ರಿಮಿಯಮ್ಮೂ ಮತ್ತು ಧಾರಾಳವಾದ ಪಾಲಿಸಿ ಷರತ್ತುಗಳೂ ಉಳ್ಳ ಶುದ್ಧ ಸ್ವದೇಶೀ ವಿಮಾಸಂಸ್ಥೆ.
ಏಜೆನ್ಸಿಗಾಗಿ ಕಳಿಸಬೇಕಾದ ವಿಳಾಸ —

ಹೆಚ್ ವೆಂಕಟರಾಮಯ್ಯ,
ಡಿವಿಜನಲ್ ಸೂಪರಿಂಟೆಂಡೆಂಟ್, ಏಸ್ಯಾಟಿಕ್ ಬಿಲ್ಡಿಂಗ್ಸ್,
ಬೆಂಗಳೂರು ಸಿಟಿ

ಅಥವಾ

ಶ್ರೀ ವಿ. ರಂಗಸ್ವಾಮಿ, ಬಿ.ಎ., ಬಿ.ಎಲ್., ಎಫ್.ಸಿ.ಐ. ಜನರಲ್ ಮ್ಯಾನೇಜರ್.

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ಬಾಲಸುಧಾ

ಮಕ್ಕಳ ಜ್ವರದ ಗೆಡ್ಡೆಯನ್ನು ಖಾತರಿ ಗುಣ ಪಡಿಸುತ್ತೆ. ಲಿವರ್ (ಪಿತ್ತ ಕೋಶ) ದಪ್ಪನಾಗಿ ಕಣ್ಣು ಹಳದಿ ಬಣ್ಣವಾಗಿದ್ದರೆ ಇದರ ಸೇವನೆಯಿಂದ ದಿನೇ ದಿನೇ ಗುಣವಾಗುತ್ತೆ. 20 ವರ್ಷಗಳಿಂದಲೂ ಅನುಭವ ಸಿದ್ಧವಾಗಿದೆ—ಮಕ್ಕಳ ಭೇದಿಗೆ ನಮ್ಮ ಬಾಲಸಂಜೀವಿನಿಯನ್ನು ಉಪಯೋಗಿಸಿ.

ಬಾಲಸುಧಾ ಬೆಲೆ 1 ರೂ. ಬಾಲಸಂಜೀವಿನಿ 4 ಆ

ಮೈಸೂರು, ಬೆಂಗಳೂರು, ಮದ್ರಾಸುಗಳಲ್ಲಿ ನಮ್ಮ ಏಜೆಂಟರಿದ್ದಾರೆ
ಸದ್ವೈದ್ಯಶಾಲಾ, ನಂಜನಗೂಡು.

ಎಂ. ವಿ. ನಾರಾಯಣರಾಯರ

ಶ್ರೀ ಸತ್ಯನಾರಾಯಣ ಪರಿಮಳ ಫ್ಯಾಕ್ಟರಿ,

ಜಗನ್ಮೋಹನ ಬಂಗ್ಲಾ ಬೀದಿ, ಮೈಸೂರು

ಪರಿಮಳ ಅಗರ್ ಬತ್ತಿ

ಉಪಯೋಗಿಸಿ ಪ್ರೋತ್ಸಾಹಿಸಿರಿ

RAJENDRA CINEMA,

NANJANGUD

The "BENEVOLENT BRAVERY"

ತಾ|| 24-6-36 ನೇ ಬುಧವಾರದಿಂದ

26-6-36 ರ ವರೆಗೆ

"ಮಿಸಿಂಗ್ ಬ್ರೇಸ್‌ಲೆಟ್"

—

ತಾ|| 27-6-36 ನೇ ಶನಿವಾರದಿಂದ

29-6-36 ರ ವರೆಗೆ

"ಬೆನಿವೊಲೆಂಟ್ ಬ್ರೇವರಿ"

Featuring
Miss GULAB
&
Mr. GANGARAM

Directed by M. D. SHAH.
Picturized by CHATURBHAI.

A Krishna Picture.

From 24-6-36 to 26-6-36

"MISSING BRACELET"

From 27-6-36 to 29-6-36

"BENEVOLENT BRAVERY"

ರಾಜೇಂದ್ರ ಸಿನಿಮಾ, ನಂಜನಗೂಡು.

ಪ್ರತಿದಿನವೂ ಎರಡು ಆಟಗಳು ತೋರಿಸಲ್ಪಡುವುವು.

ಕಲೆಗಾಗಿ ಜೀವಕೊಡಲು ಸಿದ್ಧಳಾದ ಕನ್ನಡ ನಟಿ

"ಜನವಾಣಿ"

ಮಿಸ್ ರಾಜಮ್ಮ, ಬಿ. ಆರ್. ಪಂತಲು, ಎಂ. ಎಸ್. ಮಾಧವರಾವ್, ಯಂ. ಮಾಧವರಾವ್

ಇವರು ಅಭಿನಯಿಸಿರುವ

ಸಂಸಾರ ನೌಕ

ಪ್ರಥಮ ಸಾಮಾಜಿಕ ಕನ್ನಡ ಚಲನಚಿತ್ರ

ನಾಟ್ಯಪ್ರಪಂಚದಲ್ಲಿ ವಿಖ್ಯಾತರಾದ ನಟವರ್ಗದವರ ಅಭಿನಯ. ಮಾನವನ ಜೀವನವನ್ನು ಯಥಾವತ್ತಾಗಿ ಚಿತ್ರಿಸುವ ಕಥಾವಸ್ತು.

ಪ್ರೇಕ್ಷಕರನ್ನು ಮುಗ್ಧಗೊಳಿಸುವ ಉತ್ತಮ ಫೋಟೋಗ್ರಾಫಿ ಮತ್ತು ಸುಪ್ರಸಿದ್ಧ ವೇಲ್ ಪಿಕ್ಚರ್ಸ್ ಸ್ಟುಡಿಯೋದಲ್ಲಿ ತಯಾರಿಕೆ.

ನಾಟಕ ಲೇಖಕರೂ, ಉತ್ತಮ ನಟರೂ ಆದ ಸಿಂಹ ರವರೇ. ನಿರ್ದೇಶಕರು

ಅಪರಿಮಿತ ಹಣವೆಚ್ಚದಿಂದ ತಯಾರಿಸಿರುವ ಆ ಮೋಹಕರ ಪ್ರತಿ

ಪ್ರತಿಯೊಬ್ಬ ಕಲಾಭಿಮಾನಿಯೂ ಉತ್ಸುಕತೆಯಿಂದ ಎದುರು ನೋಡುತ್ತಿರುವ, ಚಲನಚಿತ್ರ.

For Booking Apply to Devi Films Ltd., 501, Mint Street P. T. Madras

Edited, Printed & Published by Agaram Rangiah, B.A., at Sri Rama Press, D. Subbiah Road, Mysore.

Registered No. M. 3534

|| ಸತ್ಯಮೇವೋದ್ಧರಾಮ್ಯಹಮ್ ||

ರಾಜಧಾನಿಯ ರಾಷ್ಟ್ರೀಯ ವಾರ ಪತ್ರಿಕೆ.

ವೃದ್ಧ ಪಿತಾಮಹ ಎಂ. ವೆಂಕಟಕೃಷ್ಣಯ್ಯನವರ ಜ್ಞಾಪಕಾರ್ಥವಾಗಿ ಪ್ರಕಟಿಸಲ್ಪಡುವುದು.

ಸಂಪಾದಕರು: ಅಗರಂ ರಂಗಯ್ಯ, ಬಿ.ಎ.

Sadhvi: A Leading Nationalist Weekly of Mysore.

FOUNDED IN MEMORY OF Mr. M. VENKATAKRISHNAYYA, THE GRAND OLD MAN OF MYSORE.

ಸಂಪುಟ ೧] MYSORE : MONDAY 29—6—36 ಮೈಸೂರು : ಸೋಮವಾರ ೨೯—೬—೩೬ [ಸಂಚಿಕೆ ೧೯

Specially arranged for Prathama Ekadasi

The most befitting programme for the Sacred day, From 30—6—36

“MOHINI-RUKMANGADA”

(in Tamil)

Devotion is the principal object of this photoplay.

A melodious Drama for all; young and old; rich and poor; educated and uneducated.

We specially request you to book your seats for your family and friends to avoid rush and disappointment.

ಪ್ರಥಮೈಕಾದಶಿ ಪ್ರಯುಕ್ತ.

ಒಲಂಪಿಯಾ ಟಾಕೀಸ್, ಮೈಸೂರು.

ಇದೇ ೧೯೩೬ ನೇ ಜೂನ್ ೩೦ ನೇ ಮಂಗಳವಾರದಿಂದ

“ಮೋಹಿನಿ ರುಕ್ಮಾಂಗದ”

(ತಮಿಳು ಭಾಷೆಯಲ್ಲಿ)

ಈ ಪರಮ ಪವಿತ್ರವಾದ ಪುರಾಣದ ಕಥೆಯನ್ನು ನೋಡಿ ಪರಮಾತ್ಮನ ಧ್ಯಾನದಲ್ಲಿ ಲೀನರಾಗಿ, ಏಕಾದಶಿಯ ಮಹಾತ್ಮ್ಯೆ, ಇದರ ಆಚರಣೆಯ ಫಲಪ್ರಾಪ್ತಿಗಳನ್ನೆಲ್ಲಾ ತಿಳಿದುಕೊಳ್ಳಲು ಅಪೂರ್ವ ಸುಸಮಯ.

For Up-to-date and Efficient Medical Treatment

Go to—**Dr. A. J. RAM & SONS,**

Sayaji Rao Road, Mysore.

Physicians, Dentists, Opticians, etc.

ಡಾ॥ ಎ. ಜೆ. ರಾಂ. ಅಂಡ್ ಸನ್ಸ್,

ಸಯ್ಯಾಜಿರಾವ್ ರೋಡ್, ಮೈಸೂರು ಸಿಟಿ.

ಔಷಧ ವ್ಯಾಪಾರಿಗಳು, ಚಿಕಿತ್ಸಕರು, ದಂತವೈದ್ಯರು,
ಮತ್ತು ಕನ್ನಡಕ ವ್ಯಾಪಾರಿಗಳು.

ಉತ್ತಮವಾದ ನವೀನ ಚಿಕಿತ್ಸೆಗಳಿಗೆ ನಮ್ಮಲ್ಲಿಯೇ ಬನ್ನಿರಿ.

ಪಂಡಿತ ಪಿ. ಎಚ್. ಚಂದ್ರಭಾರ್ಗಸಿಂಗ್
ಇವರಿಂದ ತಯಾರಿಸಲ್ಪಟ್ಟ

ಫಲಪುಷ್ಪಸಾರ ರಸಾಯನ.

ಸುಖಕರ ಮಲಬಂಧನಿವಾರಿಣೀ. ಕ್ರಯ:—1-8-0

ಗುಣ:—ಇದು ಜಾಪಾಳ ಮುಂತಾದ ಕಠಿಣ ವಿರೇಚನ ವಸ್ತುಗಳ ಸಂಯೋಗವಿಲ್ಲದ ಕೇವಲ ಅಮೃತೀಕರಣ ಪ್ರಯೋಗವು. ಕೇವಲ ಅನುಭವಸಿದ್ಧವಾದದ್ದು. ಇದನ್ನು ಉಪಯೋಗಿಸುವುದರಿಂದ ಎಲ್ಲಾ ವಿಧವಾದ ಮಲಬಂಧವೂ, ಮೂಲವ್ಯಾಧಿ, ಅಜೀರ್ಣ, ಉಷ್ಣವಾಯು, ಶೂಲವಾಯು, ಎದೆಯುರಿ, ಹೊಟ್ಟೆನೋವು, ಕೆಮ್ಮು, ತಲೆತಿರುಗು ಮುಂತಾದ ರೋಗಗಳೆಲ್ಲವೂ ಖಂಡಿತ ಗುಣವಾಗುತ್ತವೆ.

ಬ್ರಾಂಚ್:—ಶ್ರೀಸತ್ಯನಾರಾಯಣ ಆಯುರ್ವೇದಿಕ್ ಫಾರ್ಮಸಿ,
ಜಗನ್ಮೋಹನ ಬಂಗ್ಲೆ ರಸ್ತೆ, ಮೈಸೂರು.

You Know

OUR IDEAL ARRANGEMENTS & CHOICEST PREPARATIONS.

We need not tell you about it.

COME & SEE OUR NOVEL

innovations and up-to-date Management.

SRI KRISHNA BHAVAN,

Mysore

ANANDA SODA FACTORY,

DODDAPET, MYSORE.

BEST AERATED WATER SUPPLIERS.

COMPLETE REQUISITES FOR

AERATED WATER MANUFACTURERS

AVAILABLE.

ಆನಂದಾ ಸೋಡಾ ಫ್ಯಾಕ್ಟರಿ,

ದೊಡ್ಡಪೇಟೆ, ಮೈಸೂರು.

ASIATIC GOVERNMENT SECURITY LIFE ASSURANCE CO., LTD.

Head Office:

Asiatic Buildings, Bangalore City.

PURELY A NATIONAL CONCERN

Managed by Experts.

Low Premiums and Liberal Policy Conditions.

Apply for Agency:—

To
Mr. H. Venkataramiah,
Divl. Supdt. ASIATIC BUILDINGS,
Bangalore City.

OR

To
V. RANGASAMI Esq., B. A. B. L., F. C. I.
General Manager.

ಏಷ್ಯಾಟಿಕ್ ಲೈಫ್ ಇನ್ಷ್ಯೂರೆನ್ಸ್ ಕಂಪನಿ ಲಿಮಿಟೆಡ್.

ಹೆಡ್ ಆಫೀಸ್: ಏಷ್ಯಾಟಿಕ್ ಬಿಲ್ಡಿಂಗ್ಸ್, ಬೆಂಗಳೂರು.

ಚೆನ್ನಾಗಿ ಅನುಭವವುಳ್ಳವರ ಆಡಳಿತಕ್ಕೆ ಒಳಪಟ್ಟ, ಕಡಿಮೆ ಪ್ರೀಮಿಯಮ್ಮು ಮತ್ತು ಧಾರಾಳವಾದ ಪಾಲಿಸಿ ಷರತ್ತುಗಳೂ ಉಳ್ಳ ಶುದ್ಧ ಸ್ವದೇಶೀ ವಿಮಾಸಂಸ್ಥೆ.

ಏಜಂಸಿಗಾಗಿ ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಹೆಚ್. ವೆಂಕಟರಾಮಯ್ಯ,
ಡಿವಿಜನಲ್ ಸೂಪರಿಂಟೆಂಡೆಂಟ್, ಏಷ್ಯಾಟಿಕ್ ಬಿಲ್ಡಿಂಗ್ಸ್,
ಬೆಂಗಳೂರು ಸಿಟಿ.

ಅಥವಾ

ಮ॥ ವಿ. ರಂಗಸ್ವಾಮಿ, ಬಿ.ಎ., ಬಿ.ಎಲ್., ಎಫ್.ಸಿ.ಐ. ಜನರಲ್ ಮ್ಯಾನೇಜರ್.

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ಬಾಲಸುಧಾ

ಮಕ್ಕಳ ಜ್ವರದ ಗೆಡ್ಡೆಯನ್ನು ಖಾತರಿ ಗುಣ ಪಡಿಸುತ್ತೆ. ಲಿವರ್ (ಪಿತ್ತಕೋಶ) ದಪ್ಪನಾಗಿ ಕಣ್ಣು ಹಳದಿ ಬಣ್ಣವಾಗಿದ್ದರೆ ಇದರ ಸೇವನೆಯಿಂದ ಬೇಗ ದಿನೇ ಗುಣವಾಗುತ್ತೆ. 20 ವರ್ಷಗಳಿಂದಲೂ ಅನುಭವ ಸಿದ್ಧವಾಗಿದೆ—ಮಕ್ಕಳ ಭೇದಿಗೆ ನಮ್ಮ ಬಾಲಸಂಜೀವಿನಿಯನ್ನೇ ಉಪಯೋಗಿಸಿರಿ.

ಬಾಲಸುಧಾ ಬೆಲೆ 1 ರೂ. ಬಾಲಸಂಜೀವಿನಿ 1 ರೂ.

ಮೈಸೂರು, ಬೆಂಗಳೂರು, ಮದ್ರಾಸುಗಳಲ್ಲಿ ನಮ್ಮ ಶಾಖೆಗಳಿವೆ.

ಸದ್ವೈದ್ಯಶಾಲಾ, ನಂಜನಗೂಡು.

ಎಂ. ವಿ. ನಾರಾಯಣರಾಯರ

ಶ್ರೀ ಸತ್ಯನಾರಾಯಣ ಪರಿಮಳ ಫ್ಯಾಕ್ಟರಿ,

ಜಗನ್ಮೋಹನ ಬಂಗ್ಲಾ ಬೀದಿ, ಮೈಸೂರು

ಪರಿಮಳ ಅಗರ್ ಬತ್ತಿ

ಉಪಯೋಗಿಸಿ ಪ್ರೋತ್ಸಾಹಿಸಿರಿ

॥ ಸತ್ಯಮೇವೋದ್ಧರಾಮ್ಯಹಮ್ ॥
ರಾಜಧಾನಿಯ ರಾಷ್ಟ್ರೀಯ ವಾರ ಪತ್ರಿಕೆ.
ವೃದ್ಧಪಿತಾಮಹ ಎಂ. ವೆಂಕಟಕೃಷ್ಣಯ್ಯನವರ ಜ್ಞಾಪಕಾರ್ಥವಾಗಿ ಪ್ರಕಟಿಸಲ್ಪಡುವುದು.
ಸಂಪಾದಕರು ಅಗರಂ ರಂಗಯ್ಯ, ಬಿ ಎ

ಸಂಪುಟ ೧] MYSORE : MONDAY 29—6—36 ಮೈಸೂರು : ಸೋಮವಾರ ೨೯—೬—೩೬ [ಸಂಚಿಕೆ ೧೯

ಅಷ್ಟಮ ಎಡ್ವರ್ಡರವರ ವರ್ಧಂತಿ.

ಬ್ರಿಟಿಷ್ ಚಕ್ರವರ್ತಿಗಳಾದ ಅಷ್ಟಮ ಎಡ್ವರ್ಡರ ವರ್ಧಂತಿ ಮಹೋತ್ಸವವು ಸಾಮ್ರಾಜ್ಯವೆಲ್ಲೆಲ್ಲಾ ಕಳೆದವಾರ ವಿಶೇಷ ವೈಭವದಿಂದ ಜರುಗಿತು. ಇಂಡಿಯಾದ ವೈಸರಾಯರು ಸೈನಿಕರ ಪ್ರದರ್ಶನವನ್ನು ಅಂದಿನ ದಿನ ತಪಾಸಿಸಿದರು.

ಹೆಂಡತಿಯ ಫಿರ್ಯಾದು

ನಾಸಿಕ್‌ನಲ್ಲಿ ಗಂಡಹೆಂಡರಿಬ್ಬರು ಹೆಂಡತಿಗೆ 13 ವರ್ಷ, ಗಂಡನಿಗೆ 11 ವರ್ಷ ಗಂಡನಿಗೆ ಶಾಲೆಗೆ ಹೋಗಲು ಬಹಳ ಕುತೂಹಲವಿತ್ತು. ತನ್ನೊಡನೆ ಗಂಡನು ಇರಬೇಕೆಂದು ಹೆಂಡತಿಯು ಕೋರ್ಟಿನಲ್ಲಿ ವ್ಯಾಜ್ಯ ಹೂಡಿದಳು. ಕೋರ್ಟಿನವರು ಗಂಡಹೆಂಡಿರ ಅಗಲಿಕೆ ಉಂಟಾಗಬೇಕೆಂದು ತೀರ್ಪನ್ನಿತ್ತರು.

ಮೊಸಳೆಗಳ ಬೇಟೆ

ಅಸ್ಸಾಂ ಪ್ರಾಂತ್ಯದಲ್ಲಿ ಮೊಸಳೆಗಳನ್ನು ಬೇಟೆಯಾಡಲು ಹೋಗಿದ್ದಾಗ, ಇಬ್ಬರು ಬಿಳಿಯರೂ, ಇಬ್ಬರು ಭಾರತೀಯರೂ ಬ್ರಹ್ಮಪುತ್ರಾ ನದಿಯಲ್ಲಿ ಬಿದ್ದು ಮರಣ ಹೊಂದಿದರು.

ಮಹಾತ್ಮರ ಭರವಸೆ

ತ್ರಿವೇಂಡ್ರಮ್ ಎಂಬಲ್ಲಿ 17 ವರ್ಷದ ಮೀನಾಕ್ಷಿ ಎಂಬ ತರುಣಿಯು ಮಹಾತ್ಮಾಗಾಂಧಿಯವರಿಗೆ ತನ್ನ ಎಲ್ಲ ಬೆಲೆ ಬಾಳುವ ಆಭರಣಗಳನ್ನು ಧಾರೆಯೆರೆದಳು. ಅದನ್ನು ನೋಡಿ ಆಕೆಯ ತಾಯಿಯು "ಒಡವೆಗಳನ್ನೆಲ್ಲಾ ಹೀಗೆ ನಿಮಗೆ ಕೊಟ್ಟರೆ, ಹುಡುಗಿಯನ್ನು ಯಾರು ತಾನೇ ಮದುವೆ ಮಾಡಿಕೊಳ್ಳುತ್ತಾರೆ?" ಎಂದು ಪ್ರಶ್ನಿಸಿದಾಗ "ಕಾಲು ಒಲಿದು, 50 ವರಗಳನ್ನು ನಾನು ಒದಗಿಸುತ್ತೇನೆ" ಎಂದು ಮಹಾತ್ಮಾಜೀಯವರು ಉತ್ತರವನ್ನಿತ್ತರು.

೧೦ ಸಾವಿರ ರೂಪಾಯಿನ ದಾನ

ದೇಶದ ಸುಪ್ರಸಿದ್ಧ ಕಾಂಗ್ರೆಸ್ಸಿನ ಮುಖಂಡರಾದ ಶ್ರೀ ಜಿ ಡಿ ಬಿರ್ಲಾರವರು ಕಲ್ಕತ್ತಾ ಹಿಂದೀ ಪ್ರಚಾರ ಸಭೆಗೆ 10,000 ರೂ ಉದಾರ ದಾನ ಮಾಡಿರುತ್ತಾರೆ.

ಸಂಸಾರ ಕ್ಲೇಶದಿಂದ ಆತ್ಮಹತ್ಯ

ಮಥುರಾ ಜಿಲ್ಲೆಯ ಒಂದು ಹಳ್ಳಿಯಲ್ಲಿ ಪರಮ ಸ್ನೇಹಿತರಾದ ಇಬ್ಬರು ಮದುವೆಯಾದ ಹೆಂಗಸರು ಸಂಸಾರ ತಾಪತ್ರಯವನ್ನು ಸಹಿಸಲಾರದೆ ಬಾವಿಗೆ ಇಬ್ಬರೂ ಧುಮುಕಿ ಆತ್ಮಹತ್ಯ ಮಾಡಿಕೊಂಡರು.

ಪತಂಗ ಹುಳುಗಳ ಸಂಗ್ರಹ

ಪ್ಯಾರಿಸ್ಸಿನ ಮ್ಯೂಸಿಯಂನಲ್ಲಿ ಒಂದು ಲಕ್ಷ ಪತಂಗ ಹುಳುಗಳು ಪ್ರದರ್ಶಿಸಲ್ಪಟ್ಟಿವೆ. ಇವುಗಳನ್ನು ಸ್ವಿಟ್ಜರ್‌ಲೆಂಡಿನ ಒಬ್ಬ ವಿದ್ವಾಂಸರು ಸಂಗ್ರಹಮಾಡಿದರೆಂದು ಗೊತ್ತಾಗಿದೆ.

ಎಂಟನೇ ಎಡ್ವರ್ಡ್
ಚಕ್ರವರ್ತಿಗಳು.

23 ನೇ ತಾರೀಖಿನ ದಿವಸ ಇವರ ವರ್ಧಂತಿ ಮಹೋತ್ಸವವು ಸಾಮ್ರಾಜ್ಯವೆಲ್ಲೆಲ್ಲಾ ಆಚರಿಸಲ್ಪಟ್ಟಿತು.

ಭಯಂಕರ ವ್ಯಾಪಾರ.

ಪ್ಯಾರಿಸ್ಸಿನ ಸಮೀಪದ ನಗರವೊಂದರಲ್ಲಿ ಜಾರ್ಜ್ ಸಾರಲ್ ಎಂಬುವನೂ, ಆತನ ಇಬ್ಬರು ಸಹೋದರಿಯರೂ ಎಷ್ಟೋ ಮಂದಿಯನ್ನು ಕೊಲೆಮಾಡಿದ್ದಾರೆ. ಇವರ ಕಸುಬೇನೆಂದರೆ ಅಲ್ಲಿ-ಇಲ್ಲಿ ಸಿಕ್ಕಿದವರನ್ನು ಹಿಡಿದು ದೊಡ್ಡ ಐಸಜಿಗೆ ವಿಷ ಮಾಡಿಸಿ ಕ್ರಮೇಣ ಕೊಲ್ಲುತ್ತಾ ಬರುವುದು. ಇದು ಕೋರ್ಟಿನಲ್ಲಿ ವಿಚಾರಣೆಯಾದನಂತರ ಗಂಡಸಿಗೆ ಫಾಸಿ ಶಿಕ್ಷೆ, ಹೆಂಗಸರಿಬ್ಬರಿಗೆ 10 ವರ್ಷ ಕಠಿಣಶಿಕ್ಷೆ ವಿಧಿಸಲ್ಪಟ್ಟಿತು.

ಅದ್ಭುತ ಮಂದಿರ

ಜಯಪುರದಲ್ಲಿರುವ 'ಮಹಾಮಿ ಪ್ರಸಾದ' ವು ಪ್ರಪಂಚದಲ್ಲೆಲ್ಲಾ ಅತ್ಯಂತ ಆಡಂಬರವುಳ್ಳ ವಿಲಾಸಮಂದಿರ. ಈ ಮಂದಿರವು ಅಮೃತಶಿಲೆಯಿಂದ ನಿರ್ಮಿಸಲ್ಪಟ್ಟು 10 ಕೋಟಿ ರೂಪಾಯಿಗಳ ವೆಚ್ಚವನ್ನು ಹೊಂದಿದೆ. ಈ ಅರಮನೆಯಲ್ಲಿರುವ 3162 ಕಿಟಿಕಿಗಳಲ್ಲಿ ಸಂಗೀತ ಸಾಮಗ್ರಿಗಳನ್ನು ಇಟ್ಟಿರುತ್ತಾರೆ. ಅವು ಗಾಳಿ ಬೀಸಿದಾಗಲೆಲ್ಲಾ ಸಂಗೀತ ಹಾಡುತ್ತವೆ.

ಸೆಕ್ರೆಟೆರಿಯಟ್ ಬದಲಾವಣೆಗಳು

ಬರುವ ಆಗಸ್ಟ್ ತಿಂಗಳು ೧ ರಿಂದ ಈಗ ಸರ್ಕಾರದ ಚೀಫ್ ಸೆಕ್ರೆಟರಿಗಳಾಗಿರುವ ಶ್ರೀ ಎ ವಿ ರಾಮನಾಥ್ ರವರು ಡೆವಲಪ್‌ಮೆಂಟ್ ಕಮಿಷನರ ಪದವಿಯ ಚಾರ್ಜನ್ನು ವಹಿಸಿಕೊಳ್ಳುವರೆಂದೂ, ಇವರ ಸ್ಥಾನಕ್ಕೆ ಶ್ರೀ ಬಿ. ಟಿ ಕೇಶವಯ್ಯಂಗಾರ್ಯರು ಬರುವರೆಂದೂ ತಿಳಿದುಬಂದಿದೆ.

ಶ್ರೀ ಅಬ್ದುಲ್ ವಾಜಿದ್‌ರವರು ಎಕ್ಸೈಜ್ ಕಮಿಷನರಾಗುವರೆಂದೂ ಶ್ರೀ ಎಸ್ ಜಿ ಶಾಸ್ತ್ರಿಗಳು ಕೈಗಾರಿಕೆ ಮತ್ತು ವಾಣಿಜ್ಯದ ಡೈರೆಕ್ಟರ ಸ್ಥಾನಕ್ಕೆ ನಿಯಮಿಸಲ್ಪಡುವರೆಂದು ಅನಧಿಕಾರಯುತವಾದ ಸುದ್ದಿ ಹರಡಿದೆ.

ಅರಕಲಗೂಡಿನ ವರ್ತಮಾನ

ಇದೇ ಕಸಬಾ ಹೋಬಳಿ ರೆವಿನ್ಯೂ ಇನ್ಸ್‌ಪೆಕ್ಟರ್ ಮ॥ ರಾ॥ ದೇವದಯ್ಯ ಎಂಬುವರು ಪ್ರಜಾಹಿತಕ್ಕಾಗಿ, ತನ್ನ ಸ್ವಂತ ಖರ್ಚಿನಿಂದ ಇದೇ ಸ್ಥಳದ ಮ॥ ಸೀತಾರಾಮಚಂದ್ರಸ್ವಾಮಿಯ ಪರ್ಜನ್ಯ ಜಪ ಪಸ್ಯರೆ ಈಗ್ಗೆ 10-12 ದಿನ್ನಗಳಿಂದ ನಡೆಸುತ್ತಿದ್ದಾರೆ. ಇದರು ಪ್ರಾರಂಭಿಸಿದಂದಿನಿಂದಲೂ ನಸಿಗಳಿಗೆ ತುಷಾರವೃಷ್ಟಿಯೂ ಮತ್ತು ಕೆಲವು ಕಡೆ ಸುವೃಷ್ಟಿಯೂ ಉಂಟಾಗುತ್ತಿದೆ. ಆದ್ದರಿಂದ ನಾವು ಇಂಥಾ ಮಹನೀಯರಿಗೆ ದೇವರು ಅನೇಕವಾದ ಸುಖಸೌಭಾಗ್ಯಗಳನ್ನು ಕೊಟ್ಟು ನಿರಂತರವೂ ಕಾಪಾಡಲೆಂದು ಭಗವಂತನನ್ನು ಪ್ರಾರ್ಥಿಸೋಣ.

೧೦ ತಿಂಗಳಲ್ಲಿ ೩ ಮದುವೆ

ಸ್ಪೇನ್ ದೇಶದ 11 ವರ್ಷದ ಹುಡುಗಿಯೊಬ್ಬಳಿಗೆ 10 ತಿಂಗಳಲ್ಲಿಯೇ ಮೂರು ಜನ ಗಂಡಂದಿರಾದರು. ಮೊದಲನೇ ಗಂಡ ಇಂಗ್ಲೀಷರವನು. ಅವನಿಗೆ ಮಂಕುಬೂದಿ ಎರಚಿ ಸಾವಿರಾರು ಪೌಂಡುಗಳನ್ನು ಕಸಿದುಕೊಂಡು ಪರಾರಿಯಾದಳು. ಆ ಮೇಲೆ ಇಬ್ಬರು ಫ್ರೆಂಚ್ ಗಂಡಂದಿರಾಗೂ ಹಾಗೆ ಮಾಡಿದಳು. ಕೊನೆಗೆ ನಾಲ್ಕನೆಯವನ ಸಂಗಡ ಪತ್ರವ್ಯವಹಾರ ನಡೆಸುತ್ತಿದ್ದಾಗ ಸಿಕ್ಕಿದಳು. ಆಕೆಯನ್ನು ವಶ್ಯಗಿರಿ ಮಾಡಿರುವರು.

ಬ್ರಿಟನ್ ಮತ್ತು ಲೀಗ್.

ಲೇಖಕರು—ಎ. ಎಂ. ಕೃಷ್ಣಮೂರ್ತಿ, ಮೈಸೂರು

ಮಾನವನ ಶಾಂತಿ, ರಕ್ಷಣೆ ಮತ್ತು ಅಭಿವೃದ್ಧಿಯನ್ನೇ ಕೋರುವ ಅಂತರರಾಷ್ಟ್ರೀಯ ಸಂಘಕ್ಕೆ (ಲೀಗಿಗೆ) ಬ್ರಿಟಿಷ್ ಸರ್ಕಾರವು ತನ್ನ ಸಂಪೂರ್ಣ ಸಹಾನುಭೂತಿಯನ್ನು ಸಲ್ಲಿಸುವುದು ಎಂದು ಪರಕೀಯ ರಾಷ್ಟ್ರದ ಕಾರ್ಯದರ್ಶಿಗಳಾದ ಮಿ॥ ಆಂಟನಿ ಈಡನ್ ರವರು ಹೇಳಿದರು. ಅಂತರ ರಾಷ್ಟ್ರೀಯ ಸಂಘದಲ್ಲಿ ಸದಸ್ಯತನವನ್ನು ಹೊಂದಿದ ಇಡೀ ಪ್ರಪಂಚದ ಎಲ್ಲಾ ರಾಷ್ಟ್ರಗಳೂ, ಅದರ ಮುಖ್ಯ ಧ್ಯೇಯವಾದ ಶಾಂತಿ ಸ್ಥಾಪನೆಯ ಕಾರ್ಯಕಲಾಪಗಳಲ್ಲಿ ಸಹಕರಿಸಿದ್ದಲ್ಲಿ ಈ ಸಂಘದ ಪ್ರಯೋಜನವು ತಿಳಿದು ಬರುತ್ತಿತ್ತು. ಆದರೆ ಈ ಸಂಘವು ತಮಗೆ ವಿರೋಧವಾಗಿದೆ ಎಂದು ಬಿಟ್ಟ ಪ್ರಾಮುಖ್ಯ ರಾಷ್ಟ್ರಗಳು ಹಲವು, ಇದಕ್ಕೆ ಸದಸ್ಯನಾದರೆ ನನಗೆ ಬರುವ ಲಾಭವೇನು ಎಂದು ಸುಮ್ಮನೆ ಕುಳಿತಿರುವ ದೇಶಗಳು ಕೆಲವು, ಮತ್ತೆ ಕೆಲವು ತಮ್ಮ ಸರ್ವಾಭೀಷ್ಟಗಳನ್ನೂ ಸಲ್ಲಿಸುವುದಾದರೆ, ಬೇಕಾದಲ್ಲಿ ಇದಕ್ಕೆ ಸೇರೋಣ ಎಂದು ಘೋಷಣೆಯಿಂದ ತಿರಸ್ಕಾರಯುತವಾಗಿ ಮಾತನಾಡುತ್ತಿರುವ ರಾಷ್ಟ್ರಗಳು ಹಲವು. ಪ್ರಪಂಚದ ಪ್ರಕೃತ ಸ್ಥಿತಿಯು ಹೀಗಿರುವಾಗ ಬಾಲ್ಯಾವಸ್ಥೆಯಲ್ಲಿ ಮನಸ್ಸು ಬಂದಂತೆ ಆಟವಾಡುತ್ತಲಿರುವ ಈ ಸಂಘವು ಜವಾಬ್ದಾರಿಯುತವಾದ ಕಾರ್ಯಗಳನ್ನು ಹೇಗೆ ನಡಸೀತು? ಎಲ್ಲ ದೇಶಗಳು ಸ್ವಾಭಿಮಾನ ಮತ್ತು ಸ್ವಾರ್ಥಪರತೆಯನ್ನೇ ಹೊಂದಿ ಅಕ್ಕಪಕ್ಕದ ರಾಷ್ಟ್ರಗಳನ್ನು ಸಂಗಲು ಆರ್ಭಟಿಸುತ್ತಿದ್ದಲ್ಲಿ ಈ ಬಡ ಸಂಘವು ಏನನ್ನು ತಾನೇ ಮಾಡುವುದು? ಶಸ್ತ್ರಸಜ್ಜಿತವಾದ ಸೈನ್ಯದಳವನ್ನು ಹೊಂದಿ, ಪರರಾಷ್ಟ್ರವನ್ನು ಆಕ್ರಮಣಮಾಡಲು ಹೊರಟ ದೇಶದ ಮೇಲೆ ಶಕ್ತಿ ಸಾಮರ್ಥ್ಯಗಳನ್ನು ಪ್ರಯೋಗಿಸಿ, ಅದನ್ನು ಮೂಲೆಯಲ್ಲಿ ಕೂರಿಸಿದಮೇಲೆ ತಾನೆ ಪ್ರಪಂಚದಲ್ಲಿ ಶಾಂತಿ ಸ್ಥಾಪನೆಯನ್ನು ಮಾಡುವ ಉದ್ದೇಶ—ಪ್ರಯತ್ನಗಳು ಸಫಲವಾದಾವು! ಅಂತರ ರಾಷ್ಟ್ರೀಯ ಸಂಘವು ತನಗೆ ಯಾವ ವಿಧದಲ್ಲೂ ಸಹಾಯ ಮಾಡಲಿಲ್ಲವೆಂದು ಯಾವ ರಾಷ್ಟ್ರವೂ ಖಂಡಿತವಾಗಿಯೂ ತಿಳಿಯಕೂಡದು. ಅದರ ಮುಖ್ಯ ಧ್ಯೇಯಗಳಿಗೆ ಪ್ರತಿಯೊಂದು ದೇಶವೂ ಹೃತ್ಪೂರ್ವಕವಾದ ಅಭಿನಂದನೆಗಳನ್ನು ಸಲ್ಲಿಸಬೇಕು. ತಾತ್ಕಾಲಿಕ ವಿಷಯಗಳಲ್ಲಿ ಈ ಸಂಘವು ಯಾವ ಮಹತ್ಕಾರ್ಯವನ್ನು ನೆರವೇರಿಸದಿದ್ದರೂ, ಅದರ ಧ್ಯೇಯವು ಶ್ಲಾಘನೀಯವಾಗಿದೆ. ಪ್ರಪಂಚದ ಎಲ್ಲಾ ರಾಷ್ಟ್ರಗಳೂ ತಮ್ಮ ತಮ್ಮ ವ್ಯವಹಾರಗಳನ್ನು ಶಾಂತತೆಯಿಂದ ಪರಿಹರಿಸಿಕೊಂಡು, ಒಂದು ನರಪ್ರಾಣಿಗೂ ತೊಂದರೆಯನ್ನು ಕಲ್ಪಿಸಲು ಪ್ರಯತ್ನಪಡದೆ, ಪರಸ್ಪರ ಸಹಕರಿಸಿ, ಇಡೀ ವಿಶ್ವದ ಪುರುಷ ಸ್ತ್ರೀಯರೆಲ್ಲರೂ ತಮ್ಮ ಭ್ರಾತೃ ಭಗಿನಿಯರೆಂಬ ಅಭಿಪ್ರಾಯದಿಂದ ಇದ್ದು, ಸರ್ವೋತ್ಕೃಷ್ಟವಾದ, ಶಕ್ತಿಸಾಮರ್ಥ್ಯಗಳನ್ನೂ ಹೊಂದಿದ. ಮತ್ತು ಅನೇಕ ಪ್ರಾಮುಖ್ಯ ರಾಷ್ಟ್ರಗಳ ಪ್ರತಿನಿಧಿಗಳಿಂದ ಕೂಡಿದ, ಅಂತರರಾಷ್ಟ್ರೀಯ ಸಂಘವು ಇಡೀ ಪ್ರಪಂಚದಲ್ಲಿ ಶಾಂತಿ, ರಕ್ಷಣೆ ಮತ್ತು ನವನಾಗರೀಕತೆಯ ಏಳಿಗೆ ಎಂಬ ಈ ಮೂರು ಉದಾತ್ತ ಧ್ಯೇಯಗಳನ್ನು ಕಾರ್ಯರಂಗಕ್ಕೆ ತಂದಲ್ಲಿ, ಅಂದು ಆ ಸಂಘದ ದಿವ್ಯಜ್ಯೋತಿಯು ನಿರಂತರವೂ ತಾಂಡವವಾಡುವ ವೈಭವದ ಸೊಬಗನ್ನು ಎಷ್ಟೆಂದು ಬಣ್ಣಿಸಿದರೆ ತಾನೆ ತೃಪ್ತಿಯಾದೀತು?

ಬ್ರಿಟಿಷ್ ಸರಕಾರವು ಅಂತರರಾಷ್ಟ್ರೀಯ ಸಂಘದ ಬೆನ್ನುಮೂಳೆಯಾಗಿದ್ದು, ಶಾಂತಿಸ್ಥಾಪನೆಗೆ ಪ್ರಯತ್ನಪಡುತ್ತಿರುವಾಗಲೇ ತನ್ನ ಸನಿಹವರ್ತಿಯಾದ ಜೇಕೊಂದು ರಾಷ್ಟ್ರವು ಸಾಮ್ರಾಜ್ಯದಾಹಪೂರಿತವಾಗಿ, ಸನ್ನಾಹಕ್ಕೆ ಸೊಂಟಕಟ್ಟಿ ನಿಂತು ಎಲ್ಲ ಪಾಶ್ಚಿಮಾತ್ಯ ದೇಶಗಳನ್ನೂ ಉಲ್ಲೋಲ ಕಲ್ಲೋಲ ಮಾಡಿ ಗೊಂದಲ ವನ್ನೆಬ್ಬಿಸಿ ಶಾಂತಿಸ್ಥಾಪನೆಯ ಪ್ರಯತ್ನಗಳ ಮೇಲೆ ತಣ್ಣೀರನ್ನು ಚುಮುಕಿಸಲಾರಂಭಿಸಿತು. ಜರ್ಮನಿಯು ರೈನ್ ಲ್ಯಾಂಡನ್ನು ಪುನಃ ಆಕ್ರಮಿಸಿಕೊಂಡನಂತರ, ಬ್ರಿಟಿಷ್ ಸರ್ಕಾರವು ಪಾಶ್ಚಿಮಾತ್ಯ ದೇಶಗಳೆಲ್ಲಾ ಪರಸ್ಪರ ಸಮಾನ ಜಾತಿಯಿಂದ ಇರಲು ಬಹಳ ಪ್ರಯತ್ನಮಾಡಿತು. ಅದೂ ಅಲ್ಲದೆ ಲೋಕಾರ್ನೋ ಒಪ್ಪಂದದ ಮೇರೆಗೆ ಫ್ರಾನ್ಸ್, ಜರ್ಮನಿ ಮತ್ತು ಬೆಲ್ಜಿಯಂ ಈ ದೇಶಗಳು ಶಾಂತಿಸ್ಥಾಪನೆಯ ಕಾರ್ಯಭಾರದಲ್ಲಿ ಸ್ಥಿರಮನಸ್ಸನ್ನು ಹೊಂದಲೆಂದು ಬ್ರಿಟಿಷ್ ಸರ್ಕಾರವು ಆಶಿಸುತ್ತಿತು. ಪ್ರಪಂಚದ ಶಾಂತಿಸ್ಥಾಪನೆಯೇ ತಮ್ಮ ಉದಾತ್ತ ಧ್ಯೇಯವೆಂದು ತಿಳಿದು ಕಾರ್ಯದ ಸೈಸಗಲು ಪ್ರಾರಂಭಮಾಡುವ ಇತರ ಐರೋಪ್ಯ ರಾಷ್ಟ್ರಗಳಿಗ ಬ್ರಿಟನ್ನಿನ ಸಂಪೂರ್ಣ ಭರವಸೆಯೂ ಮತ್ತು ಸಹಾನುಭೂತಿಯೂ ದೊರೆಯುತ್ತಲಿತ್ತು. ನಿರ್ದಿಷ್ಟವಾದಷ್ಟು ವಿಮಾನಗಳನ್ನು, ಹಡಗುಗಳನ್ನು ಮತ್ತು ಇನ್ನೂ ಅನೇಕ ಇತರ ಯಂತ್ರಗಳನ್ನು ಯಾವ ಯಾವ ರಾಷ್ಟ್ರವು ಎಷ್ಟೆಷ್ಟು ಹೊಂದಿರಬೇಕೆಂಬ ವಿಷಯವನ್ನು ಚರ್ಚಿಸಲು ಬ್ರಿಟನ್ನು ಆತುರವಾಗಿತ್ತು. ಆದರೆ ಈ ವಿಷಯದಲ್ಲಿ ಜರ್ಮನಿಯ ಅಭಿಪ್ರಾಯವು ನಿರ್ದಿಷ್ಟವಾದಂತೆ ಕಂಡುಬರಲಿಲ್ಲ. ಈ ಸಂದೇಹವನ್ನು ಸಂಪೂರ್ಣವಾಗಿ ತೊಲಗಿಸಲು ಬ್ರಿಟಿಷ್ ಸರ್ಕಾರವು ಜರ್ಮನಿಯನ್ನು ಕೇಳಿದಾಗ, ಜರ್ಮನಿಯು ತಾನು ಮಾಡಲಿಚ್ಛಿಸಿರುವ ಹೊಸ ಹೊಸ ಸುಧಾರಣೆಗಳೆಲ್ಲವನ್ನೇ ಕೊಡದೆ, ಮೌನದಿಂತಿದ್ದು, ಮುಂದ ಯಾವಾಗಲಾದರೂ ಉತ್ತರ ಕೊಟ್ಟರೆ ತನ್ನ ಕಾರ್ಯವು ಫಲಿಸೀತೆಂಬ ಅಭಿಪ್ರಾಯದಿಂದ ಕೂಡಿದ್ದರೆ, ಇದರಲ್ಲಿ ಬ್ರಿಟಿಷ್ ಸರ್ಕಾರದ ತಪ್ಪೇನಿದೆ?

ಒಟ್ಟಿನಲ್ಲಿ ನೋಡಿದರೆ ಅಂತರ ರಾಷ್ಟ್ರೀಯ ಸಂಘವು ಈಗ ಕಲ್ಪದ ಕೂಸಿನಂತ ಕಾಣುತ್ತದೆ. ಅದರ ಉದಾತ್ತಧ್ಯೇಯಗಳನ್ನು ಯಾರೂ ಹೇಯವಾಗಿ ಕಾಣಲಿಲ್ಲ. ಆದರೆ ಪ್ರಪಂಚದ ಎಲ್ಲ ರಾಷ್ಟ್ರಗಳೂ ಮೈತ್ರಿಭಾವದಿಂದ ಇರಬೇಕೆಂಬ ಮುಖ್ಯ ಅಪೇಕ್ಷೆಯನ್ನು ಹೊಂದಿ, ಸಹಕರಿಸಿ ವಿಶ್ವದ ಶಾಂತಿಸ್ಥಾಪನೆಯ ಕಾರ್ಯವನ್ನೇ ಸಗಿದಲ್ಲಿ, ಅಂತರ ರಾಷ್ಟ್ರೀಯ ಸಂಘದ ಉದಾತ್ತಧ್ಯೇಯವು ಕಾರ್ಯದ ಕೊನೆಯಲ್ಲಿ ಫಲಸಿದ್ಧಿಯನ್ನು ಪಡೆಯುವುದೆಂದು ಧಾರಾಳವಾಗಿ ಹೇಳಬಹುದಾಗಿದೆ.

ಜಪಾನ್ ದೇಶವು ಅಭಿವೃದ್ಧಿಯಾದುದು ಹೇಗೆ?

(ಮೂರ್ತಿ)

ಉಪನ್ಯಾಸ ಸಪ್ತಾಹದಲ್ಲಿ ನಡೆದ ಒಂದು ಭಾಷಣದ ಸಾರಾಂಶ

ಕಳೆದ 50 ವರ್ಷಗಳಲ್ಲಿ ನಾಗರಿಕತೆಯ ಉಚ್ಚಸ್ಥಾನವನ್ನು ಪಡೆದಿರುವ ದೇಶವು ಯಾವುದೆಂದರೆ ಜಪಾನ್ ದೇಶ. ಜಪಾನು ಸುಮಾರು ಕ್ರಿ. ಶ 1600 ರಿಂದ 1860 ರ ವರೆಗೆ ಹೊರದೇಶದ ಸಂಪರ್ಕವಿಲ್ಲದೆಯೇ ಕಾಲವನ್ನು ತಳ್ಳಿತು. ಆಗ ಬಹಳ ದೊಡ್ಡ ಹಡಗುಗಳನ್ನು ಕಟ್ಟಬಾರದೆಂದು ಕಟ್ಟಪ್ಪಣೆಯಾಗಿತ್ತು. ಅಂದರೆ ಸಮುದ್ರ ತೀರದಿಂದ ನಾಲ್ಕೈದು ಮೈಲಿದೂರ ಹೋಗುವಷ್ಟು ಸಣ್ಣ ದೋಣಿಗಳನ್ನು ಕಟ್ಟಬೇಕಾಗಿತ್ತು. ಇವರು ಹೊರದೇಶದವನೊಬ್ಬನನ್ನೂ ತಮ್ಮ ದೇಶದಲ್ಲಿ ಕಾಲಿಡಲು ಬಿಡುತ್ತಿರಲಿಲ್ಲ. ಒಂದುಸಲ ಯಾವನೋ ಒಬ್ಬ ಇಂಗ್ಲೀಷಿನವನು ಸಮುದ್ರದಲ್ಲಿ ದಾರಿತಪ್ಪಿ ಜಪಾನಿನ ಹತ್ತಿರ ಹಡಗಿನೊಂದಿಗೆ ಬಂದುಬಿಟ್ಟನಂತೆ. ತನ್ನ ಆಹಾರಕ್ಕೋಸ್ಕರ ತೀರವನ್ನು ಸೇರಿ, ಊರಿನೊಳಗೆ ಅಂಗಡಿಗೆ ಹೋಗಿ ಸಾಮಾನುಗಳನ್ನು ಕೊಂಡು ಹಡಗು ಹತ್ತಿ ಮತ್ತೆ ಹೊರಟುಹೋದನು. ಹೊರಟುಹೋದಮೇಲೆ ಆ ಊರಿನ ಗೌವರ್ನರರಿಗೆ ಈ ವಿಚಾರವು ತಿಳಿದಾಗ "ಅಯ್ಯೋ, ಸರ್ಕಾರದ ಅಪ್ಪಣೆಯನ್ನು ಮೀರಿ ಪರದೇಶೀಯರು ಕಾಲಿಟ್ಟದ್ದನ್ನು ತಡೆಯದೇ ಹೋದೆನಲ್ಲಾ" ಎಂದು ಚೂರಿಯನ್ನು ತೆಗೆದು ಹೊಟ್ಟೆಯನ್ನು ಬಗೆದುಕೊಂಡು ಸತ್ತನಂತೆ!

ಆದರೆ ಎಷ್ಟು ದಿವಸ ತಾನೆ ಜಪಾನ್ ದೇಶವು ಕೂಪಕೂರ್ಮ ನ್ಯಾಯವನ್ನನುಸರಿಸಲು ಸಾಧ್ಯ? ಹೀಗಿರಲು 1853 ರಲ್ಲಿ ಅಮೆರಿಕಾದೇಶದ ನಾವಿಕಸೇನೆಯ ಅಧಿಕಾರಿಯೊಬ್ಬನು ೧೦ ಯುದ್ಧದ ಹಡಗುಗಳನ್ನು ತಗದುಕೊಂಡುಬಂದು ಜಪಾನಿನಲ್ಲಿ ಅಮೆರಿಕಾದ ಸಾಮಾನುಗಳನ್ನು ಮಾರಲು ಸ್ಥಳ ಕೇಳಿದನು. ಮತ್ತು ತಾನು ಆರು ತಿಂಗಳು ಬಿಟ್ಟುಕೊಂಡು ಬರುವುದಾಗಿಯೂ ಆಗ ಜಪಾನ್ ದೇಶೀಯರು ಆಲೋಚಿಸಿ ಉತ್ತರವನ್ನು ತಿಳಿಸಬೇಕೆಂದೂ ಹೇಳಿದನು.

ಆಗ, ಜಪಾನ್ ದೇಶದಲ್ಲಿ ಉಲ್ಲೋಲಕಲ್ಲೋಲವಾಯಿತು. ಪ್ರತಿಯೊಬ್ಬರ ಬಾಯಲ್ಲೂ ಇದೇ ಮಾತು. ಜಪಾನಿನ ಚಕ್ರವರ್ತಿಗಳೇ ಮುಂದೆ ಒಂದು ದೇಶದ ನಾಯಕರಾಗಿ ನಿಂತರು. 1867 ರಲ್ಲಿ ಅವರು ಐದು ಮುಖ್ಯ ವಿಷಯಗಳನ್ನೊಳಗೊಂಡ ಒಂದು ಪ್ರಕಟಣೆಯನ್ನು ಮಾಡಿದರು. ಅದೇನೆಂದರೆ —

೧ "ರಾಜ್ಯಕ್ಕೆ ಸಂಬಂಧಪಟ್ಟ ಎಲ್ಲಾ ವಿಷಯಗಳನ್ನೂ ಜನಸಾಮಾನ್ಯರಿಂದ ಆರಿಸಲ್ಪಟ್ಟ ಸಭೆಗಳಲ್ಲಿ ಚರ್ಚೆಯಾದನಂತರ ಇತ್ಯರ್ಥ ಮಾಡುತ್ತೇವೆ

೨. ಚಕ್ರವರ್ತಿಯೂ ಪ್ರಜೆಗಳೂ ಒಟ್ಟುಸೇರಿ ಸಂಸ್ಥಾನದ ಎಲ್ಲಾ ವಿಷಯಗಳನ್ನೂ ನಡೆಸತಕ್ಕದ್ದು

೩. ರಾಜ್ಯದ ಎಲ್ಲಾ ಪ್ರಜೆಗಳೂ ಯಾವ ಭೇದವೂ ಇಲ್ಲದೆ ತಮ್ಮ ತಮ್ಮ ಜೀವನೋದ್ದೇಶಗಳನ್ನು ಸಾಧಿಸಲು ಅನುಕೂಲಗಳನ್ನು ಕೊಡುತ್ತೇವೆ

೪. ನಿರರ್ಥಕವಾದ ಮತ್ತು ಹಾನಿಕರವಾದ ಹಳೆಯ ಆಚಾರಗಳನ್ನು ನಿರ್ಮೂಲಮಾಡತಕ್ಕದ್ದು

೫. ಪ್ರಪಂಚದ ಎಲ್ಲಾ ಕಡೆಗಳಿಂದಲೂ ಜ್ಞಾನವನ್ನು ಸಂಪಾದಿಸಿ ತಂದು ನಮ್ಮ ಮಾತೃಭೂಮಿಯನ್ನು ಅಭಿವೃದ್ಧಿಗೊಳಿಸುತ್ತೇವೆ

ಅಂದು ಜಪಾನ್ ದೇಶಕ್ಕೆ ನವೋದಯವಾಯಿತು, ಪುನರ್ಜನ್ಮವಾಯಿತು. ತಮ್ಮ ದೇಶದಿಂದ ಹೊರದೇಶಗಳಿಗೆ ಸಾವಿರಾರು ಯುವಕ ಯುವತಿಯರನ್ನು ಕಳುಹಿ ಕೈಗಾರಿಕೆಯ ಎಲ್ಲಾ ಗುಟ್ಟುಗಳನ್ನೂ ತಿಳಿದುಕೊಂಡು ಕಾರ್ಖಾನೆಯ ಕೆಲಸಕ್ಕೆ ತೊಡಗಿದರು.

1867 ರಿಂದ 1936 ರ ಕೇವಲ ಎಪ್ಪತ್ತು ಕಾಲದಲ್ಲಿ ಜಪಾನ್ ದೇಶವು, ಪ್ರಪಂಚದಲ್ಲೆಲ್ಲಾ ಅತಿ ಮುಖ್ಯವಾದ ಒಂದು ಚಕ್ರಾಧಿಪತ್ಯವಾಗಿ ಪರಿಣಮಿಸಿದೆ. ಜಪಾನ್ ದೇಶದ ಕೈಗಾರಿಕೆಗಳು ಎಷ್ಟು ಹೆಚ್ಚಿವೆಯೆಂದರೆ, ಗಡಿಯಾರದ ತಯಾರಿಕೆಯಲ್ಲಿ ಪ್ರಸಿದ್ಧವಾದ ಸ್ವಿಟ್ಸರ್‌ಲೆಂಡಿನಲ್ಲಿ ಜಪಾನಿನವರು ಹೋಗಿ, ಸೇರಿನ ಲೆಕ್ಕದಂತೆ ತೂಕಮಾಡಿ ಗಡಿಯಾರಗಳನ್ನು ಕೊಡುತ್ತಿರುವರು. ಕೈಗಾರಿಕೆಯಲ್ಲಿ ಉಚ್ಚಾವಸ್ಥೆಯನ್ನು ಪಡೆದಿರುವರೆಂದು ನಾವು ತಿಳಿದುಕೊಂಡಿರುವ ಇಂಗ್ಲೆಂಡಿನಲ್ಲಿ ಜಪಾನಿನವರು ಹೋಗಿ ಏಳು ರೂಪಾಯಿಗೆ ಒಂದು ಬೈಸಿಕಲ್ಲನ್ನು ಮಾರುತ್ತಿರುವರು. ಪರದೇಶದವರು ಹೆಚ್ಚು ತೆರಿಗೆಯನ್ನು ಎಷ್ಟು ಹಾಕಿದಾಗ್ಯೂ ಜಪಾನಿನವರು ಇಷ್ಟು ಸುಲಭ ಬೆಲೆಗೆ ಪದಾರ್ಥಗಳನ್ನು ಮಾರುತ್ತಿರುವರು.

ಹೀಗೆ ಅವರು ಪ್ರಪಂಚವನ್ನೆಲ್ಲಾ ಬೆರಗಾಗಿಸಿ ತಮ್ಮ ಶಕ್ತಿಸಾಹಸಗಳನ್ನು ತೋರುತ್ತಿರುವುದು ಆಶ್ಚರ್ಯವೇ ಸರಿ

OI FICIAL CHANGES

G R Josyer, M A F R E S

The atmosphere is rife with rumours of important officil changes Who is to become I G of P, who is to become R C, who E C, who C S, and who D I, and incidentally, who is to ride over the Mysore District are conjectures which are flitting fr m mouth to mouth, on the foot paths and across club tables

P st experience has shown us that in the opinion of those who have the moving of these pawns on the offici al chess table, any place is good for any one, and any- one is good for any place Therefore it is difficult to orecast who becomes what n this mass movement. Nor, in the absence of inner nowledge, is it possible for he public to suggest who hould be made what (Since oing to press some of these ppointments have been nnounced) The "public oice' in Mysore is weak, nd it lacks the timbre and e sonance which should aracterise the "Voice of od,' and consequently ere is not much chance of being heeded

But with however weak a ice, one thing at any rate ist be protested against, dumpngin of superannu d European officers from tside on high salaries It ar too late in the day the Mysore Administra- n to set that vicious ex ple not only to itself but hose others whose princely lers come here to prepare their Rulership by watch- the way we are ruled rly 44 years ago, at the Indian National Con- s in 1892 to be exact, hale and Malavya, two d names of India, moved that "the great and inordi nate drain of India s money because of the inordinate employment of Europeans in the higher ranks of the public service" should be stopped Gokhale is happily dead, but Malavya and his Countrymen live to see with shame self governing model Indian States serving as plea sant pastures for spent up foreigners to graze and vegetate in The public are definitely against this, and so long as Indian administra tors indulge in this practice so long do they betray their own inferiority complex'

ಮೈಸೂರು ಬ್ಲ್ಯೂಸ್ ವಾರ್ಷಿಕೋತ್ಸವ.

ಮೇಲ್ಕಂಡ ಕ್ಲಬ್ಬಿನ ವಾರ್ಷಿಕೋತ್ಸವವು ಶ್ರೀರಂಗಪಟ್ಟಣದಲ್ಲಿ ನರವೇರಿಸಲ್ಪಟ್ಟಿತು ದೊಡ್ಡ ಮನುಷ್ಯರೂ, ವರ್ತಕರೂ ಒಂದು ಸೇರಿದ್ದರು ಮಧ್ಯಾಹ್ನ ಎಲ್ಲರಿಗೂ ಭೋಜನವಾಯ್ತು ಸಾಯಂಕಾಲ ಒಂದು ಸಭೆಯು ಸೇರಿ ಐದು ವರ್ಷಗಳ ವರದಿಯನ್ನು ಓದಿದರು ಅಧ್ಯಕ್ಷರನ್ನು ಮತ್ತು ಸಕ್ರಿಯಿರುವವರನ್ನು ಚುನಾಯಿಸಿದನಂತರ ಶ್ರೀಮನ್ ಮಹಾರಾಜರವರ ಶ್ರೇಯಃಪ್ರಾರ್ಥನೆ ಮಾಡಿ ಅಂದಿನ ಕಾರ್ಯಕ್ರಮವನ್ನು ಸಮಾಪ್ತಿ ಮಾಡಿದರು

ಮೈಸೂರು ಸಂಸ್ಥಾನದ ಕ್ರಿಕೆಟ್ ಟ್ರಾಲಿ

ಟ್ರಾಲಿ ಕಮಿಟಿಯವರು ಈ ನಯ ಸ್ಟೇಟ್ ಟ್ರ್ಯಾಲಿಯನ್ನು ಡಿಸೆಂಬರ್ ತಿಂಗಳ ಕೊನೆಯಲ್ಲಿ ದಾವಣಗೆರೆಯಲ್ಲಿ ನಡಸಲು ನಿರ್ಧರಿಸಿರುತ್ತಾರೆ

ಆಯುರ್ವೇದ ಪಂಡಿತರ ಕೈಪಿಡಿ.

ಈ ಕೈಪಿಡಿಯಲ್ಲಿ ಕರ್ನಾಟಕದ ಎಲ್ಲಾ ಭಾಗಗಳಲ್ಲಿನ ವೈದ್ಯರ ಹೆಸರು, ವಿಳಾಸ, ಮತ್ತು ಅವರ ಪರಿಚಯವನ್ನು ಕನ್ನಡದಲ್ಲಿ ಮುದ್ರಿಸಲಾಗುತ್ತ ಬೇರೆ ಬೇರೆ ಶಿಕ್ಷಣ ಪಡೆದು ವೈದ್ಯವೃತ್ತಿ ನಡೆಸುವರೆಲ್ಲರೂ ದಯವಿಟ್ಟು ತಮ್ಮ ಒಪ್ಪಿಗೆಯೊಡನೆ ತಮ್ಮ ವಿಳಾಸವನ್ನು ಮತ್ತು ಆಂತ್ಯದೊಳಗಾಗಿ ಅಖಿಲ ಕರ್ನಾಟಕ ಆಯುರ್ವೇದ ವೈದ್ಯ ಮಂಡಲಿ, ಹುಬ್ಬಳ್ಳಿಗೆ ಕಳುಹಿಸಿದಲ್ಲಿ ಅವರ ಹೆಸರುಗಳೂ ಪ್ರಕಟಿಸಲ್ಪಡುತ್ತದೆ ಕೈಪಿಡಿ ಬೆಲೆ 0—12—0 ಮಾತ್ರ

ಚೌ ಚೌ (೧೫).

---

೧ "ರಾಯರು ಮನೇಲಿಲ್ವೇನೋ?" "ಅವರೇ ಒಳಗೆ ಕೂತುಕೊಂಡು ಇಲ್ಲ ಅಂತ ಹೇಳುತ್ತಾರೆ, ಇನ್ನೇನು ತಮಗೆ ಅನುಮಾನವೇ ಬದ್ಧಿ!'

೨ ಪೆರಿಸ್ನ ಒಂದು ಮೋಟಾರ್ ಬಸ್ ಅನಾಹುತದಲ್ಲಿ ಒಬ್ಬನ ಕೈಕಾಲು ಮಾತ್ರ ಮುರಿದು ಹೋಯಿತಂತೆ ಆಸಾಮಿ ಬದುಕೊಂಡ ಇದನ್ನು ಕೇಳಿ, ಅನುಭವಸ್ಥರಾದ ಡ್ರೈವರುಗಳು ಆ ಬಸ್ಸಿನ ಡ್ರೈವರನ್ನು 'ನಿಮ್ಮ ಕಸಬಿಗೆ ಅಪಮಾನ ತಂದ ಮಂಕು' ಎಂದು ದೂರುತ್ತಿರುವರಂತೆ

೩ ಮಧ್ಯ ಇಂಡಿಯಾ ಪ್ರಾಂತ್ಯದಲ್ಲಿ ಈಚೆಗೆ ಕೆಲವು ಕಳ್ಳರು ಸಾಧುಗಳ ವೇಷ ಹಾಕಿಕೊಂಡು ಮಕ್ಕಳನ್ನು ಮರುಳ ಮಾಡಿ ಅವರ ಒಡವೆಗಳನ್ನು ಕಸಿದುಕೊಳ್ಳುತ್ತಿರುವರೆಂದು ಪತ್ರಿಕೆಗಳಲ್ಲಿದೆ ನಮ್ಮಲ್ಲಿ ವಯಸ್ಕರನ್ನೂ ವಿದ್ಯಾವಂತರನ್ನೂ ಮರುಳುಮಾಡಿ ನೂರಾರು ರೂಪಾಯಿ ಕಸಿದುಕೊಳ್ಳುವವರಿದಾರಲ್ಲಾ, ಮತ್ತೆ ಇದೇನು ಹೆಚ್ಚಿನ ವಿಷಯ!

೪ 'ಶ್ರೀಮಾನ್ ರು ಪಾಶ್ಚಾತ್ಯ ದೇಶಗಳಲ್ಲಿ ಸಂಚಾರಮಾಡಿ, ವಿದ್ಯಾವ್ಯಾಸಂಗಮಾಡಿ, ಕೀರ್ತಿಶೇಷರಾಗಿ ಬಂದಿದ್ದಾರೆ' ಅಂತ ಒಬ್ಬರು ಉಪನ್ಯಾಸದಲ್ಲಿ ಹೇಳಿದರು ಅಂತು, ಅವರು ಬಂದರಲ್ಲಾ, ಅದೇ ನಮ್ಮ ಸಂತೋಷ

೫ ಯಾರಮೇಲಾದರೂ ರೇಗಿದರೆ, ಅವರನ್ನು ಹೊಡಿಯಬೇಕೆನ್ನುವಷ್ಟು ಕೋಪ ಬಂದುಬಿಟ್ಟರೆ, ಕೂಡಲೇ, ನೀವು ನಿಧಾನವಾಗಿ ೧೦೦ ರ ವರಗೆ ಎಣಿಸಲು ಪ್ರಯತ್ನಪಡಬೇಕು, ಎಂದು ಒಂದು ನೀತಿ ಪುಸ್ತಕದಲ್ಲಿದೆ ಆಸಾಮಿ ಕೊಂಚ ಪೈಲ್ವಾನಾದರೆ, ೧೦೦೦ ತನಕ ಎಣಿಸುವುದೇ ವಾಸಿ

೬ "ನಿಮ್ಮ ಕೊಡೆ ಚೆನ್ನಾಗಿದೆ, ಶಾಸ್ತ್ರೀಗಳೇ!"
"ಇರಬಹುದು ಆದರೆ, ಇದು ನನ್ನದಲ್ಲ! ರಾಮಯ್ಯ" ನದು!
'ಯಾವ ರಾಮಯ್ಯ"?
"ಯಾರೋ, ಗೊತ್ತಿಲ್ಲ! ಅಂತು,' ರಾಮಯ್ಯ' ಅಂತ ಇದರ ಮೇಲೆ ಹೆಸರಿದೆ!"

೭. ಇಷ್ಟು ಹೇಳಿ ನನ್ನ ಉಪನ್ಯಾಸವನ್ನು ಮುಗಿಸುತ್ತೇನೆ ಕ್ಷಮಿಸಬೇಕು ತಮಗೆ ತುಂಬಾ ತೊಂದರೆಯಾಯಿತು ಅಂತ ಕಾಣುತ್ತೆ ನಾನು ಇಷ್ಟು ದೀರ್ಘಕಾಲಮಾತನಾಡಬೇಕೆಂದಿರಲಿಲ್ಲ ನನ್ನ ವಾಗ್ಝರಿ ಎಲ್ಲೆಲ್ಲಿಗೋ ಎಳೆಯಿತು ಕ್ಷಮಿಸಬೇಕು, ಈ ರೂಮಿನಲ್ಲಿ ಒಂದು ಗಡಿಯಾರಕ್ಕೂ ಗತಿಯಿಲ್ಲ ನಾನೂ ವಾಚು ತರಲು ಮರೆತುಬಿಟ್ಟೆ ಆದ್ದರಿಂದ

ಆಗ, ಸಭಿಕರಲ್ಲೊಬ್ಬರು, "ಗೋಡೆಯಲ್ಲಿ ಕ್ಯಾಲೆಂಡರಿದೆಯಲ್ಲಾ, ಅದನ್ನಾದರೂ ಆಗಾಗ್ಗೆ ನೋಡಬಾರದಾಗಿತ್ತೆ!" ಅಂದರಂತೆ

ಯಳಂದೂರು ಜಹಗೀರಿ ತಾಲ್ಲೂಕು ಸುದ್ದಿ,

(ಸ್ವಂತ ಸುದ್ದಿಗಾರರಿಂದ)

ಈ ತಾಲ್ಲೂಕಿನಲ್ಲಿ ಮಳೆಯಿಲ್ಲದೆ ಕೆರೆಗಳಿಗೆ ಸುವರ್ಣಾವತಿ ನದಿಯಿಂದ ನೀರು ಸರಭರಾಯಿ ಆಗಲು ಅವಕಾಶವಿಲ್ಲದೆ ರೈತರು ವ್ಯವಸಾಯದ ಕೆಲ್ಸಕ್ಕೆ ತರೀ ಫಸಲು ಮಾಡಲು ತಪ್ಪಿಸುತ್ತಿದ್ದಾರೆ ಈ ಪ್ರಾಂತ್ಯ ಹಾಕಿಂತಕ್ಕ ಬರಪತ್ರ ವಗೈರೆ ಚಿಲ್ಲರೆ ಫಸಲುಗಳಿಗೆ ಸಮಯವಿಲ್ಲದೆ ಮಳೆ ಎದುರು ನೋಡುತ್ತಲಿದ್ದಾರೆ

ಈ ತಾಲ್ಲೂಕು ಶ್ರೀ ಬಿಳಿಗಿರಿರಂಗಸ್ವಾಮಿಯವರಿಗೆ ಕಳೆದ ಪೌರ್ಣಮಿ ಇಂದ ಮಾಮೂಲ್ ಮೇರ ಬೆಟ್ಟದ ಸೋಮ ಅರಸಿನವರ ಕೆರೆಯಲ್ಲಿ ಪ್ರತಿನಿತ್ಯವೂ ತಪ್ಪೋತ್ಸವವು ಸೇವಾರ್ಥಿಗಾರರಿಂದ ನಡಿಸಲ್ಪಟ್ಟಿತು

ಇದೇ ಮಾಹೆ 12 ನೇ ತಾರೀಖು ಮಧ್ಯಾಹ್ನ 4 ಘಂಟೆಗಳ ಸಮಯದಲ್ಲಿ ಈ ಕಸಬಾಕ್ಕೆ 1 ಮೈಲಿ ಇರುವ ಕಂದಹಳ್ಳಿ ಮಾದೇಶ್ವರ ಸ್ವಾಮಿ ಗುಡಿ ಬಳಿ ತೋಪಿನಲ್ಲಿ ಹೊಸ ಆನೆಯನ್ನು ತಂದು ಈ ತಾಲ್ಲೂಕು ಫಾರೆಸ್ಟ್ ರೇಂಜರು ಆನೆಗಳಜಮೇದಾರ್ರು ಸಹಾ ಪಗ್ಗಿಸುತ್ತಿದ್ದರು ಈ ಕಾಲದಲ್ಲಿ ನಮ್ಮ ಘನವನ್ನು ಹೊಂದಿದ ಶ್ರೀಮಾನ್ ಮಹಾರಾಜ ರಾಜಾ ಸಾಹೇಬ್ ಬಹದ್ದೂರ್ ಮಹಾಸ್ವಾಮಿಯವರ ಸವಾರಿಯು ಇಲ್ಲಿಗೆ ಆಕಸ್ಮಾತ್ತಾಗಿ ಮೋಟಾರಿನಲ್ಲಿ ಚಿತ್ತೈಸಿ ಇಲ್ಲಿ ಇದ್ದ ಸುಮಾರು 10 ಅಡಿ ಎತ್ತರವಾಗಿಯೂ ಸುಂದರವಾಗಿಯೂ ಇರುವ ಹೊಸ ಆನೆಯನ್ನು ಪರಾಂಬರಿಸಿದರು ಸುಮಾರು ಪ್ರಭುಗಳವರು ಈ ಸ್ಥಳದಲ್ಲಿ 10–15 ನಿಮಿಷಗಳ ಸುಮಾರುನಲ್ಲಿ ವಾಪಸ್ ದಯಮಾಡಿಸಿದರಾಗಿ ಅಲ್ಲಿ ಇದ್ದ ಅಜೂಬಾಜೂ ಜನರು ಆ ಕಂದಹಳ್ಳಿ ಗ್ರಾಮದ ಜನರು ಮಹಾಪ್ರಭುಗಳನ್ನು ದರ್ಶನಮಾಡಿ ಸಂತೋಷಪಡುತ್ತಿದ್ದರು

ಈ ಕಸಬಾದಲ್ಲಿರುವ ಆಂಗ್ಲೋವರ್ನಾಕ್ಯುಲರ್ ಮಿಡಲ್ ಸ್ಕೂಲಿನಲ್ಲಿ ಈ ದಫಾ ಲೋವರ್ ಸಕೆಂಡರಿ ಪರೀಕ್ಷೆಗೆ ಹೋಗಿದ್ದ 21 ಜನ ವಿದ್ಯಾರ್ಥಿಗಳಿಗೆ 11 ಜನ ವಿದ್ಯಾರ್ಥಿಗಳು ಪ್ಯಾಸಾಗಿರುತ್ತಾರೆ

ಶ್ರೀ ಬಿಳಿಗಿರಿರಂಗಸ್ವಾಮಿ ಬೆಟ್ಟದ ಫಾರೆಸ್ಟ್ ರೇಂಜ್ ಆಫೀಸಿನವರು ತಲಾಷ್ ಮಾಡಿದ್ದ ಗಂಡು ದೊಡ್ಡ ಆನೆಯನ್ನು ಫಾರೆಸ್ಟ್ ರೇಂಜ್‌ರವರು ಮತ್ತು ಅರಮನೆ ಇಲಾಖೆಯವರು ಸಹ ಬಹು ಪ್ರಯಾಸದಿಂದ ಹಿಡಿದಿರುತ್ತಾರೆ.

ರೈಲಿನಲ್ಲಿ ದರೋಡೆ

ಶಸ್ತ್ರಸಜ್ಜಿತನಾದ ಒಬ್ಬ ಮನುಷ್ಯನು ಕಲ್ಕತ್ತಾ–ಪಂಜಾಬ್ ಮೇಲ್ ಗಾಡಿಯಲ್ಲಿ ಪ್ರಯಾಣಮಾಡುತ್ತಿದ್ದ ಒಬ್ಬ ರಜಪೂತ ಸ್ತ್ರೀಯಳ ಗಾಡಿಯೊಳಕ್ಕೆ ನುಗ್ಗಿ, ಅವಳನ್ನು ಹೆದರಿಸಿ, ಸುಮಾರು 16,000 ರೂ ಬೆಲೆಬಾಳುವ ನಗಗಳನ್ನೂ ಮತ್ತು ಹಣವನ್ನೂ ದರೋಡೆಮಾಡಿ, ಗಾರ್ಡ್ ಬರುವುದರೊಳಗಾಗಿ ಪರಾರಿಯಾಗಿರುತ್ತಾನೆ.

ಸಾಧ್ವಿ

೨೯-೬-೩೬ ನೇ ಸೋಮವಾರ

ನ್ಯಾಯವಿಧಾಯಕ ಸಭೆ.

ಈ ಸಾರಿಯ ನ್ಯಾಯವಿಧಾಯಕ ಸಭೆಯಲ್ಲಿ ಶಾಸನ ಸದಸ್ಯರಿಂದ ಒಂದು ಅಂಶವು ಸ್ಪಷ್ಟವಾಗಿ ಒತ್ತಾಯಮಾಡಲ್ಪಟ್ಟಿತು. ಅದೇನೆಂದರೆ, ಈ ಸಭೆಯ ಕಾರ್ಯಕಲಾಪಗಳಿಗೆ ಸರ್ಕಾರದವರು ಸಂಪೂರ್ಣವಾದ ಮನ್ನಣೆಯನ್ನು ಮಾಡಬೇಕು. ಅವುಗಳನ್ನು ಅವಶ್ಯವಾಗಿ ಜಾರಿಗೆ ತರಬೇಕು. ಅವುಗಳನ್ನು ಕಾಗದದ ಮೇಲೆ ಬರೆದು ಅನಂತರ ಕಸದ ಬುಟ್ಟಿಗೆ ಎಸೆಯಕೂಡದು. ಮತ್ತು ಅಧಿಕಾರಿ ವರ್ಗದ ಸದಸ್ಯರು ಈ ಸಭೆಯ ಕಾರ್ಯಕಲಾಪಗಳಿಗೆ ಅನುಸಾರವಾಗಿ ಪ್ರವರ್ತಿಸಬೇಕು.

ಇದು ಬಹಳ ಉಚಿತವಾದ ಅಭಿಪ್ರಾಯ. ನಮ್ಮ ಶಾಸನ ಸಭೆಯು ಈಗ ರಚಿಸಲ್ಪಟ್ಟಿರುವಂತೆ ಅಧಿಕಾರಿ ವರ್ಗದವರನ್ನೂ ಹೊರಗಿನ ಜನರನ್ನೂ ಇಬ್ಬರನ್ನೂ ಒಳಗೊಂಡಿರುತ್ತದೆ. ಅದರಲ್ಲಿ ಅನೇಕ ಪ್ರಾಮುಖ್ಯ ಅಂಶಗಳ ಚರ್ಚೆಗೆ ಅವಕಾಶ ದೊರೆಯದೆ ಹೋಗುವ ಸಂಭವವೂ ಇದೆ. ಹೀಗಿದ್ದೂ ಚರ್ಚೆಗೆ ಅವಕಾಶ ದೊರೆತು, ಬಹುಮತದಿಂದಲೋ, ಅಥವ ಸರ್ವಾನುಮತದಿಂದಲೋ ಗೊತ್ತಾಗತಕ್ಕ ನಿರ್ಣಯಗಳನ್ನು ಸಕಲ ಸದಸ್ಯರೂ ತಿರಸ್ಕರಿಸಿ ಆಚರಣೆಗೆ ತರತಕ್ಕದ್ದು ಧರ್ಮ. ಹಾಗೆ ಮಾಡಿದರೇ ಅವರು ಆ ಸಭೆಯಲ್ಲಿ ಸದಸ್ಯರಾಗಿದ್ದುದಕ್ಕೆ ಸಾರ್ಥಕ.

ಎಲ್ಲಾ ಸಾರ್ವಜನಿಕ ಸಂಸ್ಥೆಗಳಲ್ಲಿಯೂ ಇದೇ ರೀತಿಯೇ ಅನುಸರಿಸಲ್ಪಡುವುದು. ಆದರೆ ನಮ್ಮಲ್ಲಿ ಜವಾಬ್ದಾರಿ ಸರ್ಕಾರವು ಸ್ಥಾಪಿಸಲ್ಪಟ್ಟಿಲ್ಲವಾದುದರಿಂದ ಸರ್ಕಾರದವರು ಈ ಸಭೆಯ ನಿರ್ಣಯಗಳನ್ನು ಲಕ್ಷಿಸದೆ ಇರಲು ಅವಕಾಶವಿದೆ. ಇದುವರೆಗೆ ಹೀಗೆ ಎಷ್ಟೋ ನಿರ್ಣಯಗಳು ವ್ಯರ್ಥವಾಗಿವೆ. ಇಷ್ಟೇ ಅಲ್ಲದೆ ಶಾಸನ ಸದಸ್ಯರ ಅಭಿಪ್ರಾಯಗಳನ್ನು ನೌಕರ ವರ್ಗದವರು ಸ್ವಲ್ಪ ಉದಾಸೀನಭಾವದಿಂದ ನೋಡಲು ಅವಕಾಶವಿದೆ. ಇವನ್ನೆಲ್ಲಾ ತಪ್ಪಿಸಲು ನ್ಯಾಯವಿಧಾಯಕ ಸಭೆಯ ನಿರ್ಣಯಗಳನ್ನು ಪ್ರಭುತ್ವದವರು ಕಡ್ಡಾಯವಾಗಿ ಜಾರಿಗೆ ತರುವಂತೆ ಏರ್ಪಾಡಾಗಬೇಕು. ಇದು ಜವಾಬ್ದಾರಿ ಸರ್ಕಾರದ ಪ್ರಥಮ ಸೋಪಾನ.

ಪೌರಸಭೆಯ ಸಾಲ.

ಮೈಸೂರು ಪೌರಸಭೆಯವರು ದೀರ್ಘ ಕಾಲದ ಅವಧಿಯ ಮೇಲೆ ಹತ್ತು ಲಕ್ಷ ರೂಪಾಯಿನ ಸಾಲವನ್ನು ತೆಗೆಯುವುದಾಗಿ ನಿರ್ಣಯಿಸಿರುವರಷ್ಟೆ. ಸಾಲವನ್ನು ತೆಗೆಯುವುದೇನೋ ಸುಲಭ. ಪೌರಸಭೆಗೆ ಬೇರೆ ವಿಶೇಷವಾಗಿಯೇ ಇದೆ. ಸಾಲ ಸಿಕ್ಕುವವರೆಗೂ ತೆಗೆಯುತ್ತಿರಬಹುದು. ಈಗ ಹಣವೂ ಅಲ್ಪ ಬಡ್ಡಿ ದರದಮೇಲೆ ದೊರೆಯುತ್ತಿದೆ. ಸಾಲವು ಶೀಘ್ರದಲ್ಲಿಯೇ ಹುಟ್ಟುತ್ತದೆಯೆಂದೂ ನಂಬಬಹುದು.

ಆದರೆ ಈ ಸಾಲದ ಹೊರೆ ಇಷ್ಟರಿಂದ ಈ ಪ್ರಮಾಣಕ್ಕೆ ಹೇಗೆ ಬೆಳೆಯಿತು? ಇದನ್ನು ತೀರಿಸುವ ಮಾರ್ಗಗಳೇನು? ದಿನೇ ದಿನೇ ಸಾಲವು ಹೆಚ್ಚಾಗುವ ರೀತಿಯಿದೆಯೇ ಅಥವಾ ಇಳಿಯುತ್ತಿದೆಯೇ, ಮತ್ತು ಈಗ ಮಾಡುವ ಸಾಲವು ಹೇಗೆ ವಿನಿಯೋಗವಾಗುತ್ತದೆ ಎಂಬ ಅಂಶಗಳು ವಿಚಾರಣೀಯವಾಗಿವೆ.

ಹತ್ತು ವರ್ಷಗಳ ಕೆಳಗೆ ಮಿ॥ ನ್ಯಾಪತಿ ಮಾಧವರಾಯರು ಅಧ್ಯಕ್ಷರಾಗಿದ್ದ ಕಾಲದಲ್ಲಿ ಪೌರಸಭೆಗೆ ಸಾಲವೇ ಇರಲಿಲ್ಲ. ಹೆಚ್ಚು ಹಣ ಉಳಿತಾಯವೇ ಕಂಡು ಬಂದಿತ್ತು. ಹತ್ತು ವರ್ಷದಿಂದೀಚೆಗೆ ಈಗ ಹತ್ತು ಲಕ್ಷ ರೂಪಾಯಿನ ಸಾಲವನ್ನು ಮಾಡಬೇಕಾದ ಪರಿಸ್ಥಿತಿ ಒದಗಿದೆ. ಇದು ಒಂದೇ ದಿನ ಒದಗಿಂದು ಹೇಳಲಾಗುವುದಿಲ್ಲ. ಕ್ರಮ ಕ್ರಮವಾಗಿ ವರ್ಷವರ್ಷವೂ ಸಾಲದ ಹೊರೆಯು ಏರುತ್ತ ಬಂದಿದೆ. ಸರಾಸರಿ ವರ್ಷಕ್ಕೆ ಒಂದು ಲಕ್ಷ ರೂಪಾಯಿನ ಸಾಲವು ಹೆಚ್ಚಿಕೊಂಡು ಹೋಗುತ್ತಿದೆಯೆಂದು ಹೇಳಬಹುದು.

ಪ್ರತಿ ವರ್ಷದಲ್ಲಿಯೂ ಏರುತ್ತಲೂ ಯಾವ ವರ್ಷದಲ್ಲಿಯೂ ಕಡಿಮೆಯಾಗದೆಯೂ ಇರುವ ಇಂತಹ ಸಾಲಗಳು ಬಹಳ ಅಪಾಯಕರ. ಇವುಗಳಮೇಲಿನ ಬಡ್ಡಿಗಳನ್ನು ತೆರುವುದಕ್ಕಾಗಿಯೇ ಒಡನೆ ನಿವಾಸಿಗಳು ಕೊಡುವ ತೆರಿಗೆಯೆಲ್ಲಾ ವೆಚ್ಚವಾಗಿಬಿಡುತ್ತದೆ. ಮತ್ತು ಈ ಕಾರಣದಿಂದ ಹೊಸಹೊಸದಾಗಿ ತೆರಿಗೆಗಳನ್ನೂ ಹೊರಿಸಬೇಕಾಗುತ್ತದೆ.

ಈ ಸಾಲಗಳು ಇಷ್ಟುಮಟ್ಟಿಗೆ ಹೇಗೆ ಬೆಳೆದುಕೊಂಡು ಬಂದುವೆಂಬುದು ಒಂದು ಕೌತುಕದ ವಿಷಯ. ಮುಖ್ಯವಾಗಿ ಪಬ್ಲಿಕ್‌ವರ್ಕ್ಸ್ ಮತ್ತು ಸ್ಯಾನಿಟರಿ ಬಾಬುಗಳಿಗಾಗಿ ವಿಶೇಷ ವೆಚ್ಚವಾಗುತ್ತಿರುವುದಾಗಿ ತಿಳಿದುಬರುತ್ತದೆ. ಒಂದರಲ್ಲಿಯೂ ಒಂದು ರೂಪಾಯಿನ ಕೆಲಸಕ್ಕೆ ಎರಡು ರೂಪಾಯಿನ ವೆಚ್ಚವಾಗಿದೆಯೆಂದೂ ಹೇಳಲ್ಪಡುತ್ತಿದೆ. ಇತರ ಹಲವು ಬಾಬುಗಳಲ್ಲಿಯೂ ಅಂದ ವೆಚ್ಚಕ್ಕೆ ಎಡೆ ದೊರೆತಿದೆ.

ಇವುಗಳೆಲ್ಲಾ ಒಟ್ಟಿನಲ್ಲಿ ಸಾಲದ ಹೊರೆಯ ರೂಪದಲ್ಲಿ ಪುರನಿವಾಸಿಗಳ ತಲೆಯ ಮೇಲೆ ಬೀಳುತ್ತವೆ. ಇಂತಹ ಪರಿಸ್ಥಿತಿಯನ್ನು ಚೆನ್ನಾಗಿ ಗಮನಿಸಿ ಇನ್ನುಮುಂದೆ ಸಾಲವು ಹೆಚ್ಚದಂತೆಯೂ, ದುಂದು ವೆಚ್ಚಗಳು ಕಡಿಮೆಯಾಗುವಂತೆಯೂ ಏರ್ಪಡಿಸುವುದು ಪೌರಸಭಾಸದರ ಕರ್ತವ್ಯ.

ಶ್ರೀಮನ್ಮಹಾರಾಜರ ಯೂರೋಪಿನ ಯಾತ್ರೆ

ಪಂಡಿತ ಪರಿವಾರ

ಶ್ರೀ ಶಮಶಾಸ್ತ್ರಿಗಳು ಮತ್ತು ನಂಜುಂಡ ಶಾಸ್ತ್ರಿಗಳು.

ಉದಾತ್ತ ಭಾವನೆ

ನಮ್ಮ ಮಹಾರಾಜರ ಸಂಸ್ಥಾನದಲ್ಲಿ ನಂಜನಗೂಡು, ಶ್ರೀರಂಗಪಟ್ಟಣ, ಇವೆರಡು ಪ್ರಖ್ಯಾತವಾದ ಯಾತ್ರಾ ಸ್ಥಳಗಳು. ಬಹುಕಾಲದಿಂದಲೂ ಈ ಯಾತ್ರೆಗಳನ್ನು ಮಾಡುವ ಬಂತರುಗಳ ಪ್ರವಾಸ ಸ್ಥಳಗಳಲ್ಲಿ ಇಲ್ಲವೆನ್ನಬಹುದು. ಈಚೀಚೆಗೆ ('ಪಿಲ್‌ಗ್ರಿಮ್ ಟ್ಯಾಕ್ಸ್') ಯಾತ್ರಿಕರ ತೆರಿಗೆಯೆಂಬಲೂ ವರಮಾನಗಳಿಸಬೇಕೆಂಬ ಯೋಚನೆ ಹುಟ್ಟಿತು. ಒಹುತರ ತೆರಿಗೆಯು ಆಯಾ ಸ್ಥಳಗಳಲ್ಲಿ ಲೆವಿ ಬೀಳುತ್ತಿತ್ತು. ಸರಿ ರೈಲ್ವೆ ಟಿಕೇಟಿನ ಜೊತೆಯಲ್ಲೇ ಈ ತೆರಿಗೆಯ ವಸೂಲಿಗೂ ಆರಂಭವಾಯಿತು. ಕೆಲವು ಕಾಲದ ಅನುಭವದಿಂದ ಇದು ಅಪ್ರಯೋಜಕವೆಂಬ ಮತ ವ್ಯಕ್ತವಾಯಿತು. ನಾಳೆ ಗುರುವಾರದಿಂದ ಇದು ರದ್ದಾಗುವುದು. ಈ ತೆರಿಗೆಯನ್ನು ವಜಾ ಮಾಡಲಾಗಿದೆ ಎಂಬ ಜಾಹೀರ್ ಆಗಿದೆ. ಇದರಿಂದ ಆಯಾ ಮುನಿಸಿಪಾಲಿಟಿಗಳಿಗೆ ಹೆಚ್ಚಿನ ಉತ್ಪನ್ನವಿಲ್ಲವಾದರೂ ಯಾತ್ರಿಕರ ಮನಸ್ಸಿಗೆ ಸಮಾಧಾನವೆಂಬ, ಈ ಉದಾತ್ತ ಭಾವನೆಯು ಪ್ರಭುತ್ವಕ್ಕೆ ಉಂಟಾದುದು ಪ್ರಶಂಸನೀಯವಾಗಿದೆ.

ನ್ಯಾಯವಿಧಾಯಕ ಸಭೆ.

ಕಾರ್ಯಕಲಾಪಗಳು.

ನ್ಯಾಯವಿಧಾಯಕ ಸಭೆಯು ಕಳೆದ ಸೋಮವಾರ ಬೆಂಗಳೂರಿನಲ್ಲಿ ದಿವಾನ್ ಮಿರ್ಜಾ ಇಸ್ಮಾಯಿಲ್‌ರವರ ಅಧ್ಯಕ್ಷತೆಯಲ್ಲಿ ಪ್ರಾರಂಭವಾಯಿತು. ಪ್ರಶ್ನೋತ್ತರಗಳಾದ ಬಳಿಕ ಕೂಲಿಗಾರರ ಪರಿಹಾರ ತಿದ್ದುಪಡಿಯ ಮಸೂದೆಯು ಮೊದಲು ಚರ್ಚೆಗೆ ತೆಗೆದುಕೊಳ್ಳಲ್ಪಟ್ಟಿತು. ತೀವ್ರ ಚರ್ಚೆಯಾದಮೇಲೆ ಈ ಮಸೂದೆಯು ಒಪ್ಪಲ್ಪಟ್ಟಿತು. ಪ್ರಧಾನ ಸಚಿವರಾದ ಶ್ರೀ ... ಬಾಲಚಾರಿಯವರು ತಂದ ... ಕಂಪನಿಯ ಕಾನೂನು ತಿದ್ದುಪಡಿ ಮಸೂದೆಯು ಸದಸ್ಯರ ವಿಶೇಷ ಟೀಕೆಗಳಿಲ್ಲದೆ ಸಭೆಯಿಂದ ಅನುಮೋದಿಸಲ್ಪಟ್ಟಿತು. ಮೈಸೂರು ಜೋಡಿ ಕಾನೂನು ತಿದ್ದುಪಡಿ ಮಸೂದೆಯನ್ನು ದ್ವಿತೀಯ ಸಚಿವರು ... ದರು. ಈ ಮಸೂದೆಯಮೇಲೆ ... ಚರ್ಚೆಯು ಶ್ರೀ ಜಿ. ಚೆನ್ನಪ್ಪನವರ ... ತಿದ್ದುಪಡಿಗಳಿಂದ ಪ್ರಾರಂಭವಾಯಿತು. ಕೆಲವು ತಿದ್ದುಪಡಿಗಳು ಮಾತ್ರ ... ಮೋದಿಸಲ್ಪಟ್ಟವು.

ಮೈಸೂರು ಪೌರಸಭೆಯ ವಿ... ವನ್ನು ಸದಸ್ಯರೊಬ್ಬರು ಇಲ್ಲಿ ಎತ್ತಿ... ಇದೇ ವಿಷಯವು ಮೈಸೂರು ಪೌರ...ಯಲ್ಲೂ, ಪ್ರಜಾಪ್ರತಿನಿಧಿ ಮಂಡಲದ ... ನೇಕ ಸಭೆಗಳಲ್ಲೂ ಚರ್ಚಿಸಲ್ಪಟ್ಟಿತು. ಪೌರಸಭೆಯ ಉಪ... ಸರಿಯಾಗಿಯೇ ವರ್ತಿಸಿರುವರೆಂದು ... ದರು ಈ ಸಭೆಯಲ್ಲೂ ಉತ್ತರ ... ಟ್ಟರು.

ಎರಡನೆಯ ದಿನ ನ್ಯಾಯವಿಧಾಯಕ ಸಭೆಯಲ್ಲಿ ಬಜೆಟ್ಟಿನ ಚರ್ಚೆಯು ಪ್ರಾರಂಭವಾಯಿತು.

ಮಿ॥ ಗಂಗದ ... ವಿ. ಗುಂಡಪ್ಪನವರೂ, ಕೆ. ಟಿ. ಭಾಷ್ಯಂ ಅಯ್ಯಂಗಾರರೂ, ಮಿ॥ ಸಿದ್ಧಪ್ಪನವರೂ, ಮಿ॥ ಕೆ. ಆರ್. ಶ್ರೀನಿವಾಸಯ್ಯಂಗಾರ್, ... ಸಿ. ರಾಮಯ್ಯ, ಚೆಂಗಲರಾಯರೆಡ್ಡಿ ... ಇನ್ನೂ ಅನೇಕ ಮಹನೀಯರುಗಳು ಮಾರ್ಮಿಕವಾದ ಭಾಷಣಗಳನ್ನು ಮಾಡಿದರು. ಸಭೆಯು ಮುಂದಿನ ವಾರದ ... ನಾಳೆಯ ದಿನಕ್ಕೆ ಮುಂದೂಡಲ್ಪಟ್ಟಿತು.

ಉದಾರ ದಾನ

ಜಪಾನಿನಲ್ಲಿ ವ್ಯವಸಾಯದ ಅಭಿವೃದ್ಧಿಗಾಗಿಯೂ ಮತ್ತು ಸಾರ್ವಜನಿಕ ... ಉಪಯೋಗಕ್ಕಾಗಿಯೂ ಅಲ್ಲಿನ ಶ್ರೀಮಂತರಾದ ... ಮಿತವಾಯಿಯವರು 16 ಲಕ್ಷ ... ಗಳನ್ನು ದಾನ ಮಾಡಿದರು. ... ಇಂತಹವರೆಷ್ಟೋ ಮಂದಿ ... ನಮ್ಮಲ್ಲಿ ಇಂತಹವರು ಇಲ್ಲವೆ? ಇದ್ದರೂ ಕೈಬರಿಗೋಸ್ಕರ ...

ಹುಣಸೂರು ವರ್ತಮಾನ.

(ನಮ್ಮ ಬಾತ್ಮೀದಾರರಿಂದ)

ಹುಣಸೂರು ಟೌನಿನಲ್ಲಿ ಗೌ॥ ಪ್ರಾಥಮಿಕ ಪಾಠಶಾಲೆಯೊಂದಿರುತ್ತದೆ. ಸುಮಾರು ಎರಡು ವರುಷಗಳಿಂದೀಚೆಗೆ ಈ ಶಾಲೆಯು ತುಂಬಾ ಅಭಿವೃದ್ಧಿಸ್ಥಿತಿಯಲ್ಲಿರುತ್ತದೆ. ಈ ಗ್ರಾಮದಲ್ಲಿ ಆರೇಳು ಸಾವಿರ ಪ್ರಜೆಗಳ ಸಂಖ್ಯೆ ಇದ್ದರೂ ವಿದ್ಯಾರ್ಥಿಗಳ ಸಂಖ್ಯೆಯು ಕೇವಲ ಕಮ್ಮಿಯಾಗಿತ್ತು. ಇತ್ತೀಚೆಗೆ ಬಾಲಕ ಬಾಲಕಿಯರ ಸಂಖ್ಯೆಯು ಪಾಠಶಾಲೆಯಲ್ಲಿ ತುಂಬಾ ಹೆಚ್ಚಿರುವುದೇ ಶಾಲೆ ಮುನ್ನಡೆಯುತ್ತಿರುವುದಕ್ಕೆ ಸಾಕ್ಷಿ. ಈಗ ಪ್ರಾಥಮಿಕ ಸಂಖ್ಯೆಯು ಹೆಚ್ಚಿದಕ್ಕಾಗಿ ಆಧಿಕಾರಿಗಳು ಈ ಶಾಲೆ ಉಪಾಧ್ಯಾಯರ ಸ್ಥಾನಕ್ಕೆ ... ಒದಗಿಸಿಕೊಟ್ಟು ಪ್ರಾಥಮಿಕ ವಿದ್ಯಾರ್ಥಿಗಳಿಗೆ ತುಂಬಾ ಅನುಕೂಲಗಳನ್ನು ಮಾಡುತ್ತಿರುವುದು ಸ್ತೋತ್ರಾರ್ಹವಾಗಿರುತ್ತದೆ. ಸದರಿ ಪಾಠಶಾಲೆಗೆ ವು॥ ... ನವರು ಹೆಡ್ಮಾಸ್ಟರಾಗಿ ಸುಮಾರು ಎರಡು ವರುಷಗಳಿಂದ ಇದ್ದು ಇವರು ಇಲ್ಲಿಗೆ ಬಂದ ತರುವಾಯ ಶಾಲೆಯಲ್ಲಿದ್ದ ಕುಂದುಕೊರತೆಗಳನ್ನು ಹೋಗಲಾಡಿಸಲು ಯತ್ನಿಸಿದರು. ... ವ್ಯಾಸಂಗಕ್ಕೆ ಒಂದು ಅನುಕೂಲವಾದ ಕಟ್ಟಡವಿಲ್ಲದ ಪರಿಣಾಮದಿಂದ ... ಹೇಳಬೇಕಾಗಿದ್ದ ದುಸ್ಥಿತಿಯನ್ನು ಇವರು ಹೋಗಲಾಡಿಸಲು ತಮ್ಮ ಅಧಿಕಾರಿಗಳಿಗೆ ಪದೇ ಪದೇ ವರದಿ ಮತ್ತು ಒಂದೆರಡು ಧನಸಹಾಯದ ... ಕಟ್ಟಡದ ಕೊರತೆಯು ... ಯಿತು. ... ಗಳ ಸಂಖ್ಯೆಯನ್ನು ಹೆಚ್ಚಿಸಲು ... ಸಿದರು. ಈಗ ಸುಮಾರು ... ಕಾಲೇಜಿನಿಂದ ನಾಲ್ಕು ತರಗತಿ ... ಒಂಭತ್ತು ಸ್ಟ್ಯಾಂಡರ್ಡುಗಳಿದ್ದು ಮತ್ತು ... ಉಪಾಧ್ಯಾಯರುಗಳಿದ್ದು ... ಬಾಲಕರು ಓದುತ್ತಲೇ ... ಇರುವ ಉಪಾಧ್ಯಾಯರು ... ಶಾಲೆಯ ಇಲ್ಲಿನ ಉಪಾಧ್ಯಾಯರುಗಳು ಹೆಂಗಸರುಯಾಗಿ ಬರು... ಇರುವುದರಿಂದ ತರಗತಿ ... ಗಳು ಸುಲಲಿತವಾಗಿ ... ತುಂಬಾ ... ಸದರಿ ಪಾಠಶಾಲೆಗೆ ಒಂದು ನಲ್ಲಿ ... ಬೇಕಾಗಿರುತ್ತದೆ. ... ಬಾಲಕರಿರುವ ಒಂದು ಪಾಠಶಾಲೆ ... ದ್ದರಿಂದ ... ಕೆಲಸವನ್ನು ನಿರ್ವಹಿಸ ... ಆದುದರಿಂದ ... ಬಹಳ ಸಹಾಯವಾಗು ... ಈ ಪಾಠಶಾಲೆಯು ಇನ್ನೂ ... ಸ್ಥಿತಿಗೆ ಬರಲು ಸರ್ಕಾರದವರು ದಯಪಾಲಿಸಬೇಕೆಂದು ಭರವಸೆ ಇದೆ.

ಆಕಾಶವಾಣಿ ಕಾರ್ಯಕ್ರಮ.

ಸೋಮವಾರ—ರಾತ್ರಿ 8ರಿಂದ 9. ವಿರೋಧ್ಯ ಗಾನ ಮತ್ತು ಭಜನಾ, ಸ "ರೇಡಿಯೋ ವಿಚಾರ" ಮಂಗಳವಾರ—ಸಾ॥ 6-30ರಿಂದ 8. ... ರಿಂದ ಮಕ್ಕಳ ವಿನೋದ ಮತ್ತು ಕರ್ನಾಟಕ ಗಾನ, ಬುಧವಾರ ರಾತ್ರಿ 8ರಿಂದ 9-15ರ ವರೆಗೆ ಕರ್ನಾಟಕರಾದ ಶತಾವಧಾನಿ ವೆಂಕಟರಾಮಶಾಸ್ತ್ರಿಗಳಿಂದ ಗೀತಾ ಉಪನ್ಯಾಸ—ಗುರುವಾರ 6-30 ರಿಂದ 8—ರತ್ನಾವಳಿ ನಾಟಕ ಶ್ರೀ ಎನ್. ಕಸ್ತೂರಿಯವರ ಭಾಷಣ "ಸದಾರ್ತಿ" ಶುಕ್ರವಾರ 8 ರಿಂದ 9-15 ಹಿಂದೂಸ್ಥಾನಿ ಸಂಗೀತ

ಜೇನಾದಮೇಲೆ ಸೈನ್ಯ

ಜೇನಾದ ಸಂಬಳದ ಸರ್ಕಾರವನ್ನು ದಕ್ಷಿಣ (ಕ್ಯಾಂಟನ್) ಪ್ರಾಂತ್ಯಗಳು ದಾಳಿಯಿಡುತ್ತಿವೆ. ಆ ನೇರದವರೆಲ್ಲರೂ ನಾಯಿಗಳಿಗೊಂಡಿದ್ದಾರ ... ಸ ಮರ್ಪಕವಾಗಿಲ್ಲ

ಸಂಸ್ಥಾನಕ್ಕೆ ಮತ್ತೊಂದು ವಿದ್ಯುಚ್ಛಕ್ತಿ ಕೇಂದ್ರ.

ಶಿವಮೊಗ್ಗ ಡಿಸ್ಟ್ರಿಕ್ಟಿನಲ್ಲಿರುವ ಲಕ್ಕವಳ್ಳಿ ಎಂಬಲ್ಲಿ ಭದ್ರಾನದಿಗೆ ಅಣೆಕಟ್ಟು ಕಟ್ಟಿ ಅದರಿಂದ ವಿದ್ಯುಚ್ಛಕ್ತಿಯನ್ನು ಉತ್ಪತ್ತಿ ಮಾಡುವುದಕ್ಕೂ ಮತ್ತು ವ್ಯವಸಾಯವನ್ನು ಅಭಿವೃದ್ಧಿಗೊಳಿಸುವುದಕ್ಕೂ ಸರ್ಕಾರದವರು ಯೋಚನೆ ಮಾಡಿರುತ್ತಾರೆ. ಸರ್ಕಾರದವರಿಂದ ನೇಮಿಸಲ್ಪಟ್ಟ ಒಂದು ಸಮಿತಿಯು ಈ ಕೆಳಗೆ ನಮೂದಿಸಿರುವ ... ತೀರ್ಮಾನಿಸಿರುತ್ತೆ—

ಮೊದಲು ಭದ್ರಾನದಿಗೆ ಲಕ್ಕವಳ್ಳಿಯ ಬಳಿ ಒಂದು ದೊಡ್ಡ ಅಣೆಕಟ್ಟನ್ನು ಕಟ್ಟಬೇಕು. ಇದರಿಂದ ಸುಮಾರು 25,000 ಎಕರೆ ಜಮೀನು ವ್ಯವಸಾಯಕ್ಕೆ ಸಿದ್ಧವಾಗುವುದು ಮತ್ತು 10,000 ಅಶ್ವಶಕ್ತಿಗಳ ಪ್ರಮಾಣದ ವಿದ್ಯುಚ್ಛಕ್ತಿಯು ... ಅಣೆಕಟ್ಟು ಕಟ್ಟುವ ಕಸುಬಿಗೆ 197 ಲಕ್ಷ ರೂಪಾಯಿ ವೆಚ್ಚವಾಗುತ್ತದೆ.

ಪತ್ರಿಕೋದ್ಯೋಗಿಗಳ ಸಂಘ.

ಶ್ರೀ॥ ಜಿ ಆರ್ ಜೋಷ್ಯರವರ ಅಧ್ಯಕ್ಷತೆಯಲ್ಲಿ ರಾಜಧಾನಿಯ ಪತ್ರಿಕೋದ್ಯೋಗಿಗಳ ಸಂಘದ ಮೀಟಿಂಗ್ ನಡೆಯಿತು. ಯೂರೋಪ್ ಪ್ರವಾಸ ಹೊರಟಿರುವ ಶ್ರೀಮನ್ಮಹಾರಾಜರವರಿಗೂ, ಅವರ ಪರಿವಾರದವರಿಗೂ ಸಂತೋಷಕರವಾದ ಯಾತ್ರೆ ನಡೆದು, ಸುಖವಾಗಿ ಹಿಂತಿರುಗಿ ಬರಬೇಕೆಂತಲೂ ಬಯಸಿ ನಿರ್ಣಯಗಳನ್ನು ಮಾಡಿದರು. ಎಡ್ವರ್ಡ್ ಚಕ್ರವರ್ತಿಗಳು ಮತ್ತು ಗ್ವಾಲಿಯರ್ ಮಹಾರಾಜರವರ ಪಟ್ಟಾಭಿಷೇಕ ಪ್ರಯುಕ್ತ ಅಭಿನಂದನೆಗಳು ಕಳುಹಿಸಲ್ಪಟ್ಟವು.

ಅಯ್ಯಂಗಾರ್ರ ವಧು ಐರೋಪ್ಯ ಗಂಡ

ಮದ್ರಾಸಿನಲ್ಲಿ ಒಬ್ಬ ಅಯ್ಯಂಗಾರರ ಹುಡುಗಿಗೂ ಮತ್ತು ಐರೋಪ್ಯ ವರನಿಗೂ ವಿವಾಹ ನಡೆಯಿತು. ಅನೇಕ ಮಹನೀಯರು ಇಂದಾ ಮದುವೆಗೆ ... ಭಾಗ ಮಾಡಿದರು

ಪ್ರಭುಗಳವರೊಡನೆ ಯೂರೋಪಿಗೆ ಪ್ರಯಾಣ ಬೆಳೆಸಿದವರು.

ಎಡದಿಂದ ಬಲಕ್ಕೆ—ಶ್ರೀ ಎ ವೆಂಕಟಸುಬ್ಬಯ್ಯನವರು (ಅರಮನೆ ಕಚೇರಿಯ ಮ್ಯಾನೇಜರು) ಕರ್ನಲ್ ಎ ಪಿ ಸುಬ್ರಹ್ಮಣ್ಯರಾಜ ಅರಸ್ (ಎ ಡಿ ಸಿ) ಮೇಜರ್ ನಂಜುಂಡ (ಎ ಡಿ ಸಿ) ವಿ ಸುಬ್ರಹ್ಮಣ್ಯ ಅಯ್ಯರ್, ಕರ್ನಲ್ ಎಸ್ ಗೋಪಾಲರಾವ್ (ಎ ಡಿ. ಸಿ) ಕರ್ನಲ್ ಬಿ ಪಿ ಕೃಷ್ಣೇ ಅರಸ್ ಒಡೆಯರ್ ಮತ್ತು ಡಾ॥ ಜೆ ಎಫ್ ರಾಬರ್ಟ್ (ದರ್ಬಾರ್ ಸರ್ಜನ್)

ಶಾರದಾ ವಿಲಾಸ ಪಾಠಶಾಲೆಗೆ ದಾನ

ಮೈಸೂರಿನಲ್ಲಿರುವ ಶ್ರೀ ಎ ಡಿ ರಾಜಾರಾಂ ಮೊದಲಿಯಾರ್‌ರವರು ಶ್ರೀ ಶಾರದಾ ವಿಲಾಸ ಪಾಠಶಾಲೆಗೆ 2000 ರೂ. ದಾನ ಕೊಟ್ಟಿರುವರು

ಕಳ್ಳತನಕ್ಕೆ ತೆರಿಗೆ ಕೊಟ್ಟ

ಫ್ರೋಲೆಂಡಿನ ಒಬ್ಬ ಕಳ್ಳನು ತನ್ನ ಪ್ರತಿಗಾಗಿ "ಕಸುಬಿನ ತೆರಿಗೆ" ಬಾಬ್ತು 10 ಪೌಂಡುಗಳನ್ನು ಅಲ್ಲಿನ ಖಜಾನೆಗೆ ಕಳುಹಿಸಿರುವನು. ಕಳ್ಳರಲ್ಲಿ ಇವನೇ ಸಭ್ಯ.

ಪ್ರಪಂಚದಲ್ಲಿ ಸಣ್ಣ—ದೊಡ್ಡ ಪುಸ್ತಕಗಳು

ಪ್ರಪಂಚದಲ್ಲೆಲ್ಲ ದೊಡ್ಡದಾದ ಪುಸ್ತಕವು ಬ್ರಿಟಿಷ್ ಮ್ಯೂಸಿಯಂನಲ್ಲಿದೆ. ಅದು 6 ಅಡಿ ಎತ್ತರವಾಗಿಯೂ, 1 ಅಡಿ ಅಗಲವಾಗಿಯೂ, ... ಅಡಿ ದಪ್ಪವಾಗಿಯೂ ಇದೆ. ಅದನ್ನು ಒಂದು ಗೋಡೆಯಮೇಲೆ ಇರಿಸಿದೆ. ನೋಡಬೇಕಾದವರು ಅದು ಇದ್ದಲ್ಲಿಯೇ ಬಂದು ನೋಡಬೇಕಾಗಿದೆ. ಇದೇ ಮ್ಯೂಸಿಯಂನಲ್ಲಿ ಸಣ್ಣ ಪುಸ್ತಕಗಳೂ ಇವೆ. ಇವು ಪೋಸ್ಟ್ ಸ್ಟ್ಯಾಂಪಿನಷ್ಟಿವೆ

ಡಿ॥ ಬೋ॥ ನೂತನ ಕಟ್ಟಡ.

ಕಳೆದವಾರ ಬೆಂಗಳೂರಿನಲ್ಲಿ ಡಿ॥ ಬೋರ್ಡ್ ನೂತನ ಕಟ್ಟಡದ ಪ್ರಾರಂಭೋತ್ಸವವು ನಡೆಯಿತು. ಶ್ರೀಮನ್ಮಹಾರಾಜರವರು ಕೆಂಪೇಗೌಡರ ರಸ್ತೆಯಲ್ಲಿ ನಿರ್ಮಿತವಾಗಿರುವ ಬೋರ್ಡಿನ ನೂತನ ದಿವ್ಯ ಭವನವನ್ನು ಪುರ ಪ್ರಮುಖರ ಸಮ್ಮುಖದಲ್ಲಿ ತೆರೆದು, ನೂತನ ಭವನದ ಕಾರ್ಯ ಕಲಾಪಗಳು ಯಶಸ್ವಿಯಾಗಿ ನಡೆಯಲೆಂದು ಹರಸಿದರು

ಇಣುಕಪ್ಪನ ನೋಟ!

ಪ್ರಿಯ ವಾಚಕರೆ! ನಮಸ್ಕಾರ

ಇಷ್ಟು ದಿವಸಗಳೂ ತಮಗೆ ಕೆಲಸಗಳ ಮೇಲೆ ಕೆಲಸವಿತ್ತು. ವಿರಾಮ ಅನ್ನುವುದೇ ಇತ್ತಿಲ್ಲ. ವರ್ಧಂತಿ, ಪ್ರತಿನಿಧಿ ಸಭೆ, ಕುಸುರೆ ಜೂಜು, ಶ್ರೀಮನ್ಮಹಾರಾಜರವರ ಇಂಗ್ಲೆಂಡ್ ಪ್ರಯಾಣದ ಸಂಭ್ರಮ, ಈ ಗಲಾಟೆಯೆಲ್ಲಾ ಪೂರೈಸಿತು. ಆ ಸಂಭ್ರಮಗಳ ಮಧ್ಯೆ ನಾನು ತಮ್ಮ ಮನಸ್ಸನ್ನು ನನ್ನ ಕಡೆ ಎಳೆಯಲು ಇಷ್ಟಪಡಲಿಲ್ಲ.

† † †

ಚಿನ್ನದ ಬೀಡಾದರೂ ಲಭ್ಯ ಇರಬೇಡವೆ?

ನಮ್ಮ ಸೀಮೆಯಲ್ಲಿರುವ ಚಿನ್ನವನ್ನು ಇತರರು ಸೂರೆಗೊಳ್ಳುತ್ತಿರುವುದು ಸರಿಯಷ್ಟೆ. ಪುನಃ ಯಡತೊರೆ ತಾಲ್ಲೂಕಿನಲ್ಲಿ ಕೆರೆಯಲ್ಲಿ ಸಾರ್ವತ್ರಿಕ ಉಪಯೋಗಕ್ಕೆಂದು ಭಾವಿ ತೆಗೆಸುತ್ತಿದ್ದಾಗ ಚಿನ್ನದ ಅದುರುಗಳಿಂದ ಕೂಡಿದ ಒಂದು ತರಹ ಕಲ್ಲು ದೊರಕಿತಂತೆ. ಭೂಗರ್ಭಶಾಸ್ತ್ರಜ್ಞರು ಅಲ್ಲಿ ಚಿನ್ನ ದೊರೆಯಬಹುದೆಂದು ಅಭಿಪ್ರಾಯಪಟ್ಟಿರುವುದಾಗಿಯೂ ಸುದ್ದಿ ಇದೆ. ಸರಿ ಇದರ ಶೋಧನಾ ಕಾರ್ಯಕ್ಕೂ ಲಾಭಕ್ಕೂ ಮದರಾಸಿನವರೋ ಬೊಂಬಾಯಿನವರೋ ಯಾರು ಮೊಂಚುಹಾಕುತ್ತಿರುವರೋ ನೋಡಬೇಕು. ಮುಖ್ಯ ಲಭ್ಯ ಇರಬೇಕಲ್ಲಾ!

† † †

ಬಲವಂತ ಮೊಘಸ್ನಾನವೇ?

ಈ ಬೇಸಿಗೆ ರಜವು ಕಳೆದು ಶಾಲೆಗಳೆಲ್ಲಾ ಕೆಲಸಕ್ಕಾರಂಭಿಸುವ ಕಾಲ. ಹುಡುಗರು ಹೊಸ ಪುಸ್ತಕಗಳೊಡನೆ ಹೊಸ ಹೊಸ ಕಟ್ಟಡಗಳೂ, ದೊಡ್ಡ ಹೆಸರೂ ಇರತಕ್ಕ ಸ್ಕೂಲಿಗೇ ಸೇರಬೇಕೆಂಬ ಉತ್ಸಾಹದಿಂದಿರುವ ಸೀಜನ್. ಎಲ್ಲಾ ಪರೀಕ್ಷೆಗಳಿಗಿಂತಲೂ ಮಿಡಲ್ ಸ್ಕೂಲು ಪರೀಕ್ಷೆಯೇ ದೊಡ್ಡದು. ಅದರಲ್ಲಿಯೇ ಉತ್ಸಾಹ ಜಾಸ್ತಿ. ಯಾಕೆಂದರೆ ನಮ್ಮ ಮುಂದಿನ ಜನಾಂಗವಾಗಬೇಕಾದ ಇಂದಿನ ಹಸುಕಂದಗಳು ಕಣ್ಣು ತೆರೆಯಬೇಕೋ ಬೇಡವೋ ಎಂದು ಮಿಟಿಮಿಟಿ ನೋಡಲಾರಂಭಿಸುವುದು ಅಂದಿನಿಂದಲೇ. ಆದುದರಿಂದಲೇ ಸರ್ಕಾರದವರೂ ಸಹ ಎಲಿಜಿಬಲ್ ಮೊದಲಾದ ಹಲವು ರಿಯಾಯಿತಿಗಳನ್ನು ಪ್ಯಾಸ್ ಡಿಕ್ಲೇರ್ ಮಾಡುವಾಗ ಉಪಯೋಗಿಸುತ್ತಾರೆ. ನಮ್ಮೂರಿನಲ್ಲಿ ಇರೋ ಹುಡುಗರಿಗೆಲ್ಲಾ ಮಹಾರಾಜಾ ಹೈಸ್ಕೂಲಿನಲ್ಲೇ ಸೀಟು ಪಡೀಬೇಕೆಂಬ ಮಹತ್ ಕಾಂಕ್ಷೆ. ಅದಕ್ಕೆ ವಿಶ್ವ ಪ್ರಯತ್ನ. ಅದೂ ಭಗೀರಥ ಪ್ರಯತ್ನದಂತೆ ಆಯಿತ. ಅಂದರ ಮುಂದೆ ಗೊದಮಗಳು ಬೇರೆ ಶಾಲೆ ಇದೆ. ಇವೆ ಹೆಸರು ಚಂದಕ್ಕೆ ಸರಿಯಾಗಿ ನಾಲ್ಕೈದು ಸೆಕ್ಷನ್ನುಗಳು ನಾಲ್ಕನೇ ಫಾರಂನಲ್ಲಿ. ಈಗ ಕೆಲವು ಹೈಸ್ಕೂಲುಗಳಲ್ಲಿ ಪರೀಕ್ಷಾರ್ಥವಾಗಿ ಚರಿತ್ರೆ, ಭೂಗೋಳ, ಲೆಖ್ಖ ಮೊದಲಾದ ಕೆಲವು ಭಾಗಗಳನ್ನು ಕನ್ನಡ ಭಾಷೆಯಲ್ಲಿ ಶಿಕ್ಷಣ ಕೊಡಿಸುತ್ತಿರುವರಷ್ಟೆ. ಅದರಂತೆ ಇಲ್ಲೂ ಕನ್ನಡ ಸೆಕ್ಷನ್, ಇಂಗ್ಲೀಷ್ ಸೆಕ್ಷನ್‌ಗಳಾಗಿವೆಯಂತ. ಸೆಕ್ಷನ್‌ಗಳಿರಲಿ ಅದರಲ್ಲಿ ಹುಡುಗರ ಅಭಿಲಾಷೆಯಂತೆ ಸೆಕ್ಷನ್‌ಗಳ ಪ್ರವೇಶವಿಲ್ಲವೆಂದೂ ಕನ್ನಡ ಸೆಕ್ಷನ್‌ಗಳಿಗೇನೆ ಹುಡುಗರನ್ನು ಬಲವಂತ ಮಾಘ ಸ್ನಾನದಂತೆ ಒತ್ತಾಯ ಪಡಿಸುತ್ತಿರುವರೆಂದೂ ವದಂತಿ ಕೇಳಿಬರುತ್ತಿದೆ. ಇಲ್ಲವೆ ಇತರೇ ಸ್ಕೂಲುಗಳಲ್ಲಿರುವಂತೆ ಸಾರ್ವತ್ರಿಕವೂ ನಿಷ್ಪಕ್ಷಪಾತವೂ ಆದ ಮಾರ್ಗವನ್ನೇ ಇಲ್ಲೂ ಯಾಕೆ ಅನುಸರಿಸಬಾರದು ಎನ್ನುವುದು ನನ್ನ ಪ್ರಶ್ನೆ. ಇಲ್ಲವೇ ಹುಡುಗರ ಮನೋಭಿಲಾಷೆಯಂತೆ ಆಯಾ ಸೆಕ್ಷನ್‌ಗಳ ಪ್ರವೇಶಕ್ಕೆ ಅವಕಾಶಕೊಟ್ಟು ಸ್ಕೂಲಿನ ಹೆಸರಿಗೆ ತಕ್ಕ ಪ್ರಾಶಸ್ತ್ಯವುಂಟಾದೀತೆ ಎಂದು ಹಲವು ನಗರ ಪಿತೃಗಳು ಆಶಿಸುತ್ತಿರುವರು.

ಬೆಂಗಳೂರು ಲೇಬರ್ ಕಾಲೊನಿ

ದಿವಾನ್ ಸರ್ ಮಿರ್ಜಾ ಇಸ್ಮೇಲರು ಇದರ ಪ್ರಾರಂಭೋತ್ಸವವನ್ನು ನೆರವೇರಿಸಿದರು

ಶಾನೂ ಇಡ, ಭಿಕ್ಷಾನ್ನಾನೂ ಬೇಡಲೀಸ!

ಉದ್ಯಾನವನಗಳು ಬೆಚ್ಚಿ, ನಗರ ಸೌಂದರ್ಯವಾಗಬೇಕೆಂಬ ಉತ್ಕಟಾಕಾಂಕ್ಷೆಯಿಂದ ಇಷ್ಟಬಟ್ಟ ಕೆರೆಕುಂಟೆಗಳೆಲ್ಲಾ ಒಂದು ಕಡೆಯಿಂದ ನಿರ್ನಾಮವಾಗುತ್ತಿವೆ. ಮೈಸೂರು ದೊಡ್ಡ ಕೆರೆಯ ಕಲಶ ಮುಗಿಯಿತು. ಬೆಂಗಳೂರು ಸಂಪಿಗೆ ಮತ್ತು ಧರ್ಮಾಂಬುಧಿ ಕೆರೆಗಳು ಮುಚ್ಚಲ್ಪಡದಿರಲೆಂದು ಸಾರ್ವಜನಿಕ ಸಭೆಗಳು ನಡೆದವು. ನಮ್ಮ ಮೈಸೂರು ದೊಡ್ಡ ಕೆರೆ ಹೋಯಿತು. ಒಂದಿನಿಂದ ಸ್ವಾರಿಗೆ ಹೋದವರು ಸ್ನಾನಮಾಡಿಕೊಂಡು ವಾಪಸು ಬರೋದಕ್ಕೆ ನೀರಿಗೆ ಗೊಟ್ಟಿ. ನಮ್ಮ ಪೌರಸಭೆಯವರು ಸ್ನಾನ ಘಟ್ಟಗಳನ್ನು ಇನ್ನೂ ಏರ್ಪಾಡು ಮಾಡೋದರಲ್ಲೇ ಇದ್ದಾರೆ. ಮಾದರೀ ಪೌರಸಭೆ, ನೀರಾವರಿಯಾಗಿ ಮಾಡದೆ, ಕಾಲಬಂದಾಗ ತಾವೆ ಮಾಡದೇ ಜನರಿಗೆ ಲಭ್ಯವಾಗಬೇಕು? ಜನದ ಮಾತು ಹಾಗಿರಲಿ. ದನಕರುಗಳ ಗತಿಯೇನು, ಅನ್ನುವ ಯೋಚನೆಯಾದರೂ ಬೇಡವೆ? ಹೊಸ ಸೌಲಭ್ಯಗಳು ಬೇಡ. ಇರೋದನ್ನ ಹಾಗೇ ಇರಿಸಿದೋಣ ಅನ್ನೋದಾದರೂ ಬೇಡವೆ? ಫ್ಯಾಷನ್‌ಗಳು ಹೆಚ್ಚಾಗಿ, ಇದ್ದ ಭಾವಿಗಳೆಲ್ಲಾ ನಿರ್ನಾಮವಾದುವು. ಜೊತೆಗೆ ಸರ್ಕಾರದವರ ಸಹಾಯಬೇರೆ. ಅಂತೂ ಇಂತೂ ಚಕ್ಕಪ್ಪ ಶಾನೂ ಇಡ, ಭಿಕ್ಷಾನ್ನಾನೂ ಬೇಡಲೀಸ! ಎನ್ನುವುದು ಜ್ಞಾಪಕಕ್ಕೆ ಬರುತ್ತದೆ.

ವಿಯನ್ನಾ ನಗರದ ಸೌಂದರ್ಯ.

ನಮ್ಮ ಪ್ರಭುಗಳವರು ಅಲ್ಲಿಗೆ ದಯಮಾಡಿಸುವರು.

ನಮ್ಮ ಶ್ರೀಮನ್ಮಹಾರಾಜರವರು ತಮ್ಮ ಆಪ್ತೇಷ್ಟ ಪರಿವಾರದೊಡನೆ 27ನೇ ತಾರೀಖು ಶನಿವಾರದ ದಿವಸ ಬೊಂಬಾಯಿಂದ "ರಾಂಪೂರ್" ಎಂಬ ಜಹಜನ್ನು ಹತ್ತಿ ವಿಯನ್ನಾ ಪಟ್ಟಣವನ್ನು ಕುರಿತು ಪ್ರಯಾಣ ಮಾಡಿರುವರಷ್ಟೆ. ಈ ಪ್ರಯಾಣದ ಮುಖ್ಯ ಧ್ಯೇಯವಾದ ಆರೋಗ್ಯಭಾಗ್ಯವನ್ನು ಜಗದೀಶನು ನಮ್ಮ ಪ್ರಭುಗಳಿಗೆ ಕರುಣಿಸಲೆಂದು ಜನತೆಯು ಆಶಿಸುತ್ತಿದೆ. ಹಾಗಾದರೆ ಆ ಪಟ್ಟಣದ ಹೆಚ್ಚುಗಾರಿಕೆ ಏನೆಂಬುದನ್ನು ತಿಳಿಯುವುದೂ ಅವಶ್ಯವಾದುದೇ ಸರಿ! ಅದನ್ನು ಇಲ್ಲಿ ಸಂಕ್ಷಿಪ್ತವಾಗಿ ಕೊಟ್ಟಿದೆ.

ನೂರಾರು ವರ್ಷಗಳಕಾಲ ಘೋರ ಯುದ್ಧಗಳಿಗೆ ಸಿಲುಕಿ, ಆಯಾಯ ರಾಜ್ಯಭಾರಗಳ ಪ್ರತಿಭಾವನೆಗೆ ಒಳಗಾಗಿ, ಇತ್ತೀಚಿನ ಆರ್ಥಿಕ ದುಸ್ಥಿತಿಯಿಂದ ತಲ್ಲಣಗೊಂಡಿರುವುದಾದರೂ, ವೈಶಿಷ್ಟ್ಯವೂ ಐಶ್ವರ್ಯವೂ, ಸೊಬಗೂ, ಎನ್ನುವ ಕಾರಣಾತ್ತ ಪ್ರಪಂಚದ ರಾಜಧಾನಿಗಳಲ್ಲೆಲ್ಲಾ ಪ್ರಥಮಸ್ಥಾನವನ್ನು ಪಡೆದಿರುವ ವಿಯನ್ನಾ ನಗರವು ಆಸ್ಟ್ರಿಯಾ ದೇಶಕ್ಕೆ ರಾಜಧಾನಿ.

ಪ್ರೇಕ್ಷಕರಿಗೆ ನಂದನವನದಂತಿರುವ ಈ ಪಟ್ಟಣದಲ್ಲಿ ಪುರಾತನ ಅರಮನೆಗಳೂ, ಚರ್ಚುಗಳೂ, ಮ್ಯೂಸಿಯಂಗಳೂ, ಪಾರ್ಕುಗಳೂ ಹೇರಳವಾಗಿವೆ.

ಜನವಸತಿಯ ಏರ್ಪಾಡು —ಪೌರಸಭೆಯು 57794 ಫ್ಲಾಟುಗಳನ್ನೊಳಗೊಂಡ 5326 ಸೌಧಗಳನ್ನು ಕಟ್ಟಿದೆ. 5917 ಮನೆಗಳು ಮುನಿಸಿಪಾಲಿಟಿಯ ಆಡಳಿತದಲ್ಲಿದ. ಫ್ರೈಟರ್ ಸ್ಕ್ವೈರ್ ಚೌಕದಲ್ಲಿ 136,027 ಚದರ ಮೀಟರುಗಳಷ್ಟು ಪ್ರದೇಶದಲ್ಲಿ ಕಟ್ಟಿರುವ ಕಾರ್ಲ್‌ಮಾರ್ಕ್ಸ್ ಆಫ್ ಎಂಬ ಪ್ರಾಸಾದವೇ ಅಲ್ಲಿನ ಪೌರಸಭಾ ಭವನಗಳಲ್ಲೆಲ್ಲಾ ತುಂಬಾ ಭಾರಿ, ಯಾವದು (ಪುಟ್ಟ ಸಂಸಾರಗಳಿಗೆ ತಕ್ಕಂಥಾ ಹಲವು ವಾಸಗೃಹಗಳಿರುವ ಸ್ಥಳಕ್ಕೆ ಫ್ಲಾಟುಗಳೆಂದು ಅಲ್ಲಿ ಕರೆಯುತ್ತಾರೆ. ಅಂಥಾ ಸ್ಥಳಗಳನ್ನೇ ನಾವು ಇಲ್ಲಿ ಚಾಯಕೊಟ್ಟೆ, ಒಸ್ತ್ರಡಾರ ಎಂದು ಕರೆಯುತ್ತೇವೆ) ಈ ಭವನದಲ್ಲಿ ಅಂಥಾ 1362 ಫ್ಲಾಟುಗಳಿವೆ. ಈ ಪ್ರಾಸಾದದಲ್ಲಿ ಸುಮಾರು ಐದು ಸಾವಿರಕ್ಕೆ ಮೇಲ್ಪಟ್ಟ ಜನರು ವಾಸಿಸುವರು. ಅವಕ್ಕೆ ತಕ್ಕಂತೆ ಈ ಭವನದಲ್ಲಿಯೇ ಆಟ ಮೈದಾನಗಳೂ, ಉದ್ಯಾನವನಗಳೂ, ಶಿಶುವಿಹಾರ ಸ್ಥಾನಗಳೂ, ಎರಡು ಲಾಂಡ್ರಿಗಳೂ, ಎರಡು ಸ್ನಾನಘಟ್ಟಗಳೂ, ಎರಡು ಕಿಂಡರ್ ಗಾರ್ಟನ್‌ಗಳೂ, ವಾಚನಾಲಯ, ಸಾರ್ವಜನಿಕ ಸೇವಾ ಕೇಂದ್ರಗಳೂ ಸಹ ಇವೆ.

ಇದಲ್ಲದೆ 'ವಿಯನ್ನಾ ಸ್ಟೇಡಿಯಂ' ಎಂಬ ಭಾರಿ ಆಟದ ಮೈದಾನವಿದೆ. ಈ ಮೈದಾನದಲ್ಲಿ ಒಂಬತ್ತು ಸಾವಿರ ಮಂದಿ ಜನರು ಕುಳಿತುಕೊಳ್ಳಬಹುದು ಮತ್ತು ಐವತ್ತು ಸಾವಿರ ಮಂದಿ ಜನರು ನಿಂ... ದೃಶ್ಯಗಳನ್ನು ನೋಡಬಹುದು.

ಸ್ನಾನಘಟ್ಟಗಳು — ಸಾರ್ವಜನಿ... ಉಪಯೋಗಕ್ಕಾಗಿ ಇಪ್ಪತ್ತೊಂದು ಪಬ್ಲಿ... ಬಾತುಗಳೂ, ಹದಿಮೂರು ಸಾರ್ವಜ... ಸ್ನಾನಕೇಂದ್ರಗಳೂ, ಇಪ್ಪತ್ತೆರಡು (... ತ) ಮಕ್ಕಳ ಸ್ನಾನಕೇಂದ್ರಗಳೂ, ... ಹವೆಯ ಸ್ನಾನಕೇಂದ್ರಗಳೂ, ... ಬಿಸಿನೀರಿನ ಸ್ನಾನಕೇಂದ್ರಗಳೂ, ... ಈಜುವ ಕೊಳಗಳೂ, ಒಂದು ಆರ... ಸ್ನಾನ ಕೇಂದ್ರವೂ, ಎರಡು ಸೂರ್ಯರಶ್ಮಿ... ಸ್ನಾನಕೇಂದ್ರಗಳೂ ಸಹ ಇವೆ.

"ಸ್ಟೇಡಿಯನ್‌ಬಾತ್" ಎಂಬ ... ಸ್ನಾನಘಟ್ಟದಲ್ಲಿ ನಾಲ್ಕುಭಾಗವಿರುವ ಐವತ್ತು ಮೀಟರ್ ಉದ್ದ ಹದಿನೆಂಟು ಮೀಟರ್ ಅಗಲ ಉಳ್ಳ "ಸ್ಪ್ರಿಂಗ್‌ಬಾತ್" ಎಂಬ ಸ್ನಾನ ಕೇಂದ್ರವಿದೆ. ದೂರದಿಂದ ಬಂದು ... ನಲ್ಲಿ ಬೀಳುವುದಕ್ಕೆ ಇಲ್ಲಿ ಹೊಸ ಏರ್ಪಾ... ಗಿದೆ. ಪಕ್ಕದ ಸ್ಟ್ಯಾಂಡುಗಳಿಂದ ನಾ... ಸಾವಿರ ಮಂದಿ ಪ್ರೇಕ್ಷಕರು ಸ್ನಾನದ... ದೃಶ್ಯಗಳನ್ನು ನೋಡುತ್ತಲಬಹುದು. ... ಯೂರೋಪಿನ ಮತ್ತೆಲ್ಲಿಯೂ ಇಲ್ಲದಷ್ಟು ... ನಾದ "ಎಮಿಲಿಯನ್‌ಬಾತ್" ಎಂಬ ... ಸಿಪಲ್ ಸ್ನಾನ ಕೇಂದ್ರವೊಂದಿದೆ. ... ಆರು ಮಹಡಿಗಳಿವೆ. ಈ ಸ್ನಾನಘಟ್ಟ... ಆಧುನಿಕ ಸೌಕರ್ಯಗಳೆಲ್ಲಾ ದೊರೆ... ತ್ತವೆ.

ಕ್ರಿಸ್ತಶಕ 1307 ರಲ್ಲಿ ಕಟ್ಟಲ್ಪಟ್ಟ ... ಹಾಫ್‌ಬರ್ಗರ ಅರಮನೆ, ರೂಮನ್ ... ಮ್ರಾಜ್ಯದ ಅಮೂಲ್ಯ ಆಭರಣಗಳು ... ಶೇಖರಿಸಲ್ಪಟ್ಟಿರುವ "...ಕ್ಯುಲರ್ ಟ್ರೆಷ... 1628 ರಲ್ಲಿ ನಿರ್ಮಿತವಾದ ಸಂಟ್ ... ಸ್ಟೀಫೆನ್ ಕೆಥೆಡ್ರಿಲ್ ಎಂಬ ಚರ್ಚು, ... ರಿಯಲ್ ವಾಲ್ಟ್ ಎಂಬ ಗೋರಿಗಳು ... ಶ್ವವಿದ್ಯಾನಿಲಯದ ಕಟ್ಟಡಗಳೂ ಮ್ಯೂಸಿ... ಯಂಗಳೂ ಇವೇ ಮೊದಲಾದ ... ಪ್ರೇಕ್ಷಣೀಯ ಸ್ಥಳಗಳು ಇವೆ.

ಇತಿಹಾಸ ಪ್ರಸಿದ್ಧವಾದ ನೀಲಿ... ದ ಡ್ಯಾನ್ಯೂಬ್ ನದಿಯು ಇಲ್ಲಿ ಪ್ರವಹಿ... ಸುತ್ತದೆ.

ಇಂತಹ ಶ್ರೇಷ್ಠ ತರವಾದ ಪಟ್ಟಣ... ದಿಂದ ನಮ್ಮ ಪ್ರಭುಗಳವರಿಗೆ ಆರೋ... ಸಂಪತ್ತಿಯು, ಲಭಿಸುವುದರಲ್ಲಿ ಸ... ವಾದರೂ ಏನಿರುವುದು!

ತೆರಿಗೆಯು ರದ್ದಾಯಿತು

ನಂಜನಗೂಡು ಮತ್ತು ಶ್ರೀರಂಗ... ಣದಲ್ಲಿರುವ ಪೌರಸಭೆಗಳು ರೈಲಿ... ಮತ್ತು ರಸ್ತೆಗಳಲ್ಲೂ ಪ್ರಯಾಣ ಮಾ... ಯಾತ್ರಿಕರ ಮೇಲೆ ತೆರಿಗೆಯನ್ನು ... ದ್ದುದು ಸರಿಯಷ್ಟೆ. ಇದರಿಂದ ... ಇಲಾಖೆಗೆ ಬಹಳ ಕಷ್ಟನ... ಉಂಟಾಗಿರುವುದರಿಂದ, ನಮ್ಮ ... ಕಾರದವರು ಈ ವಿಷಯವನ್ನು ಪರ್ಯಾ... ಲೋಚಿಸಿ, ತೆರಿಗೆಯನ್ನು ಜುಲೈ ... ರಿಂದ ತೆಗೆದುಹಾಕಲು ಅಪ್ಪಣೆ ... ವ ಅಂಶವು ಅಧಿಕಾರಯುತವಾಗಿ ... ಬಂದಿದೆ.

ತಂಬೂರಿ ದಾಸ.

(ಲೇಖಕ —ವಿದ್ವಾನಹಿ.)

ನನಗೂ ವಯಸ್ಸಾಗ್ತಾ ಬಂತು ಅಷ್ಟೆ. ಇತ್ತೀಚೆಗೆ, ಮಧ್ಯಾಹ್ನ ಊಟವಾದ ಮೇಲೆ ಸ್ವಲ್ಪ ಹೊತ್ತು ಮಲಗೋ ದುರಭ್ಯಾಸ ಮಲಗಿದ್ದವನ್ನ ಮೇಲೆ ಸ್ವಲ್ಪ ಟೀ ನೋ ಕಾಫಿನೋ ಬೇಕಬೇಕು ತಿಂಡಿ ಗಿಂಡಿ ಸಿಕ್ಕದೇ ಹೋದ್ರೆ, ಟೀ, ಕಾಫಿ ಯಾನವಾದ್ರು ಒಗ್ಗ ತೀರಬೇಕು ಮೊನ್ನೆ ಮೈಸೂರಿಗೆ ಹೋಗಿದ್ದೆ ನಂಟ್ರಮನೇಲಿ ಕವಳ ದ್ವಂಸ ಆಯ್ತು. ಮಧ್ಯಾಹ್ನ ಅಲ್ಲೇ ಸ್ವಲ್ಪ ಹೊತ್ತು ತಲೆ ನೆಲಕ್ಕೆ ಕೊಟ್ಟಿದ್ದೆ. ಅವರು, ಪಾಪ, ವೈದೀಕರು ಅಲ್ಲದ ಬಡವರು ಕಾಫಿ ಗೀಫಿ ಇಲ್ಲ ಸರಿ, ಎದ್ದವ್ನೇ ಕಲ್ಸಿ ಬೊಂಬಾಯಿ ಆನಂದ ಭವನದಲ್ಲಿ ಫರ್ಥ ಕ್ಲಾಸ್ ಸ್ಪೆಷಲ್ ಕಾಫಿ ಹೊಡೆದ್ಬಿಟ್ಟು, ಹಾಗೇ ಟರ್ನ ಹಾಲ್ ಕಡ ಠರಾಯಿಸುತ್ತಾ ಹೊರಟೆ. ನನ್ನ ಒಪೇರಾ ಹೌಸ್‌ನಲ್ಲಿ ತಮಿಳು ಟಾಕಿ 'ಮಾಯಾ ಬಜಾರ್ ಅದಾ ಶಶಿರೇಖಾ ಪರಿಣಯ" ಅಂತ ಬೋರ್ಡು ಹೋಗಬೇಕು ಅನ್ನೋ ಕ್ವಾಲು ಸಂಟ ಇನ್ನೂ ಏ ಮರುವಾಗೋಕ ಇನ್ನೂ ಒಂದೂವರ ಘಂಟೆ ಕಾಲವಿತ್ತು ಟರ್ನ ಹಾಲ್ ಕಾಂಪೌಂಡಿನಲ್ಲಿ ಬೇರೋಜ್ಗಾರ್ ಸರ್ಮೊದ್ಗರ್‌ಗಳು ಒಂಟೊಂಟಿಯಾಗಿ, ಸಣ್ಣ ಸಣ್ಣ ಗುಂಪಾಗಿ ಮನಸ್ಸಿಗೆ ಕಷ್ಟಕ್ಕೊಂಡು ಕುರತ್ ಪದ ಹಾಡೋದು, ಹರಟೆ ಹೊಸಿಯೋ ಇ ಇತ್ಯಾದಿಗಳಲ್ಲಾ ಮಾಮೂಲಷ್ಟೆ ಒಂದು ಹಾವು ಗರ ನಾಗರಂ ಗಂಜಾಂ ಪುರಿ, ಕೆ ಕಾಸಿನ ಮಸಾಲು ಎರಡೂ ಬೆರಸ್ಕೊಂಡು ಒಂದೂ ಮನ್ಗಾಗಿ ಬಾಯಾಡಿಸ್ತಾ ನಾನೂ ಒಂದ ಕಡೆ ಒಾತ 'ರಾಮೇಶ್ವರಕ್ಕೆ ಹೋದರೂ ಶನಿಕಾಟ ತಪ್ಪದು' ಅಂತಾರಲ್ಲಾ ಹಾಗೆ, ಅಲ್ಲೂ ತಿರುಪೇವರು ಒಂದು ಸಿಡಿ ... ಎನ್ನೋದು ಗೂತ್ತು ಅಪ್ರೆ, ಬ್ರಾಹ್ಮರು, ಆವರಲ್ಲೂ ದಾಸರು ಬಂದದ್ದ ... ನಾ ಕಂಡೇ ಇರಲಿಲ್ಲ. ಅಂತೂ, ಅಲ್ಲಿ ... ಒಬ್ಬ ದಾಸರು ಬಂದು ಸೇರಿದರು ... ದೇವರನಾಮ ಈ ದೇವರನಾಮ ನಾ ... ನಾಶಿದ್ದ ಕಡೆ ಬಂದು 'ನಮಸ್ಕಾರ ... ಬರೇ' ಅಂದ್ರು.

ನಾನು, ದೇವತಿಗಿ ಇಂದಾ ಥೋರ್ಗ್ ... ಮಟ್ಟಿಗೆ ಜಿಜ್ಞಾಸನಾಡ್ತರಿಂದ, 'ನಮಸ್ಕಾರ ದೇವರಿಗ, ದಾಸ್ರೇ' ಅಂದೆ

ದಾ—ಏದ್ಯಾಕೆ ರಾಯ್ರೇ. ತಮಿಗಾಗ ... ವವನು?

ನಾ—ದಾಸ್ರೇ, ತಾವೆಷ್ಟವರು ನಾನೆ ... ನನಗಿ ನಮಸ್ಕಾರ ಅಂದರೇನು?

ದಾ—(ಮುಗುಳುನಗ ನಗುತ್ತಾ) ಓ ... ಹಾಗಾದ್ರೆ ತಂವು ನನ್ನನ್ನು ಮ ... ಗೆ ಕಾಣುತ್ತ?

ನಾ—(ಮರೆತಂತೆ ನಟಿಸುತ್ತಾ) ಹು ... ತಮ್ಮ ಮುಖ ಕಾಣ್ದ, ಅಂಥಾ ... ಮರಿಯೋದು ಅಂದ್ರೇನು ದಾಸ್ರೇ?

... ಜ್ಞಾಪಿಸಿಕೊಳ್ಳಿ! ಆ ... ಕರಂಗನ ಪಾತ್ರೆ ದಿವ್ಸ—

ದೇವರ ಸವಾರಿ ರಥಾರೋಹಣಕ್ಕೆ ಬಿಜಮಾಡಿಸ್ದಿದ್ದಾಗ, ಯಾವದೋ ಒಂದು ಪ್ರಸ್ಥ ಕೊಡೆ ಹಿಡ್ಕಿಕೊಂಡು ನೋಡ್ತಾ ನಿಂತಿರಲಿಲ್ವೆ? ಬಾಳೆಹಣ್ಣಿನ ಗುಡಾಣದ ಕೆಳಗಡೆ ಬೀದವರು ಎಳೆ ಬಿಸಲು ತಡೆಯುಲಾರದೇ ಕೊಡೆ ಹಿಡ್ಕಿಕೊಂಡಿದಾರ, ನಾಡ? ಮೈಸೂರು ಅರಮನ ಮುಂದ ತಿರುಗಾಡ ಬೇಕಾದ್ರೇನೇ ಛತ್ರಿ ಮುಚ್ಚಿ ಕೋಬೇಕು. ಅಂಥಾದ್ದರಲ್ಲಿ ದೇವರಮುಂದೆ ಛತ್ರಿಯಿಂದರೇನು? ಆಪ್ಪನಿಗ ಐಶ್ವರ್ಯ ಒಂದರ ತರ್ಕವಾದ್ರೀಲಿ ಕೊಡೆ ಒಡಿದಾ ಅಂತು ರಲ್ಲ ದಾಗಾಯ್ತು ಹೀಗೂ ಬಂತೀ ಅಂತಾ ಭಕ್ತಾಧಿಗಳು ಆಡ್ತಿದ್ದಾ ಎಲ್ಲಿ ನಿಂತಿದ್ದಾಗ ಮೆಲ್ಲಗೆ ಗಲಬೇಗೆ ಮರುವಾಯ್ತು. ೨-೩ ಜನ ಪಾಕೀಟ್‌ಹೊಟು, ಸೇಲಿ ಸೇಟಾಡನರು ಗಲಾಟೆ ಚನರಿಸಿದ್ದಾಗ, ಅದುಕೊಂಡು ತಿನ್ನೂ ಕೋರ್ಯ ಕಾಲ್ಮರೀತು ತಂದಾರಲ್ಲಾ ಹಾಗೆ ನನ್ನ ತಂಬೂರಿ ತಂತಿಯೇ ಕಿತ್ಕೊಯ್ತು ಆಮೇಲೆ ತಂಬೂರಿ ಸ್ವರವೇ ಇಲ್ಲದೇ ಕೃತಾಳ ಹಾಕ್ಕೊಂಡು ದೇವರನಾಮ ಪಾಡ್ತ ನಿಂತಿದ್ದೆ ಆವರಿವರು ಪುಣ್ಯಾತ್ಮರು ೬ ಕಾಸು ೮ ಕಾಸು ಕೂಟ್ರು ತಾವು ಒಬ್ರು ನನ್ನ ಅವಸ್ಥೆ ನೋಡಿ, ಕನಿಕರಪಟ್ಟು, ನನ್ನ ಊರುಕೇರಿ, ಯೋಗಕ್ಷೇಮ ವಿಚಾರ್ಸಿ, 6 ಮಡ್ಡಿನ ಸಿಕ್ಕಲ್ ಒಣಾ ಕೊಟ್ರಿ ಈ ಒಡದಾಸನನ್ನು ತಾವು ಮರತರೂ ನಾನು ತಮ್ಮನ್ನ ಮರತಿಲ್ಲ, ರಾಯ್ರು!

'ನಾ—ಓಹೋ! ಆದಾದ್ರೇ ತಾವು? ಗಮನಿಸಿ ನೋಡ್ಲಿಲ್ಲ ಕ್ಷಮಿಸಬೇಕು ಇಲ್ಲಿಗೆ ಬಂದೆಷ್ಟುದಿವ್ಸವಾಯ್ತು? ಇನ್ನೆಷ್ಟು ದಿವ್ಸ ಮೊಕ್ಕಾಂ?'

ದಾ—ಊರುಬಿಟ್ಟಿದ್ದು ಪಂಚಮಿ, ಅಲ್ಲಿ ಇಲ್ಲಿ ಸುತ್ತಿಕೊಂಡು ಈ ಊರಿಗೆ ಬಂದು 1 ದಿವಸವಾಯಿತು ತಳ್ಳಿದಷ್ಟು ದಿವಸ ಯಥಾಲಾಭ, ಲಕ್ಷ್ಮೀಣೋ ಭಿಕ್ಷುಕನೋ ಅಂತಾ ಈವತ್ತೇ ಪೂರು ಎಪ್ಪ ಮುಂದಿನೂರು ಅಂತೂ, ನನಿಗೂ ಸಾಕಾಗಿ ಹೋಗಿ, ಆ ಒಡರಿಗೇನೇ ಗೋವಿಂದಾ ಅಂತಾ ಕೈಮುಗಿದ್ಬಿಟ್ಟು ಬಂದ್ಬಿಟ್ರೆ ರಾಯ್ರು

ನಾ—ಅದ್ಯಾಕೆ ದಾಸ್ರೆ? ನಿಮ್ಮೂರು ಅಂದ್ರೆ ಪ್ರಸಿದ್ಧವಾದ ಸ್ಥಳ, ಭಂಗಾರದ ನಟು ಬ್ರಾಹ್ಮಣರ ಅಗ್ರಹಾರ, ಪ್ರಾಂತದ ವೇದಾಲಯ, ಬಹು ಫಲಪ್ರಾದ ಕೃಷ್ಣ ಭೂಮಿ, ಬೆಟ್ಟಕ್ಕೊ ಸಮೀಪ ಇಂಥ ಪುಣ್ಯ ಕ್ಷೇತ್ರ ಏಕ್‌ದಂಬಿಟ್ಬೇ ಬಿಡೋದೇ?

ದಾ—ಏನು ಪಲವತ್ತೋ! ಎಲ್ಲಾ ಮ್ರೊ ಹೋಗಿ ಒಡಕೋಬೇಕು ಏನಿವೆ ರಾಯ್ರೆ ಅಲ್ಲಿ? ಎರಿಮಾನಲ್ಲ ವರ್ಷೇ ವರ್ಷೇ ತಪ್ಪದೇ ಬೆಳೆ ಅಗ್ತಾ ಇದ್ರೆ ಭೂಮಿನಲ್ಲಿರೋ ಸಾರ ಕಡಿಮೆಯಾಗ್ತಾ ಬರುತ್ತೆ ಮೂಮ್ರೂ, ನಾಕೂ ವರ್ಷಕ್ಕೊಂದಾವರ್ತಿ ಬೆಳೆ ಆದ್ರೆ ನೆಲದ ಸಾರ ಕಡಿಮೆಯಾಗೋ ಪ್ರಮೇಯವೇ ಇಲ್ಲ ಎರಡೂ ಮೂರೂ ವರ್ಷ ಭೂದೇವಿಗೆವಿಶ್ರಾಂತಿ ಸಿಕ್ಕೋದರಿಂದ ಸ್ವಭಾವತಃ ಸ್ವಲ್ಪ ಫಲವತ್ತಾಗಿಯೇ ಇರುತ್ತೆ ಈ ಗುಟ್ಟು ತೀಳಿದೇನೇ, 'ಫಾಳ್ಗೇ ಭೂಮಿನ್ನ, ಫಲವತ್ತಾದ ಭೂಮಿ ಅಂತು ಕೂಕ್ಕೋತಾರೆ, ಅಷ್ಟೆ ಇಷ್ಟಾಯ್ತೋ, ನೀರಿನ ಸೌಕರ್ಯ ಕೇಳಲೇ ಬೇಡಿ ಕಂದಾಯ ಆಗಬೇಕೂ ಅಂತಾ ಮೂಲ್ಯಾಯಿಂದ ಅರ್ಜಿ ಹೋದರೂ, ಕಟ್ಟೋದ್ರೇ ದಿಕ್ಕಿಲ್ಲ ಕಂದಾಯದ ವಸೂಲಿಗೆ ಮಾತ್ರ ಎಲ್ಲರೂ ಬಹುಜೋರು ಈ ತಾಪತ್ರಯ ತಡಕೊಳ್ಳಲಾರದೇ ಒಬ್ಬೊಬ್ರಾಗಿ ಅಲ್ಲಿನ ಕಾಲ್ಕಿತ್ತೋಕೆ ಮಿ ... ಇಷ್ಟು, ತಂಬೂರಿ ಹಿಡಿಕೊಂಡು ದೇವಾವಾರ, ಇಸ್ಕೊಬ್ರು ಜವಳಿ ಅಂಗಡೀಲೋ ... ಲೇಕ್ಕಾಚಾರಾಗ್ದೂ ಬರಕೊಂಡು ಜೀವನ ಮಾಡೋಣ ಅಂತಾ ಮೈಸೂರಿಗ ವಿಶ್ವೇಶ್ವರು ಸಂಸಾರ ಮೈಸೂರಿಗೆ ಕರೆದುಕೊಂಡು ಹೋಗಿ ತವರು ಮನೆಯಲ್ಲಿ ಬಿಟ್ಟುಬಿಟ್ಟು, ಮೋಟಾರ್ ಡ್ರೈವಿಂಗ ಕಲಿತುಕೊಂಡ, ಒರೋಣಾ ಅಂತಾ ಬಂಗಳೂರಿ ಈ ಮೇರ ನಮ್ಮವರು ಒಬ್ಬಬ್ರು ಒಂದೇನಂದು ಕಡ ಚಮ್ಮಾಸ್ಸಿಲ್ಲೆಯಾಗಿ ಬೂಟು ಬಿಟ್ಟಿಸಾರ ಇತರೇ ಜಾತೀನವ ವೈಕ ಎಷ್ಟೋ ಸಂಸಾರ ಏಳ್ಗೇ ತೀರಟಕ್ಕೆ ಸವಾರಿ ಹೊಡೆದ್ರು, ಮತ್ತ ಕೆಲವರು ಮುಂಡ್ಯದಲ್ಲಿ ಹೊಸದಾಗಿ ಫಾರಿ ಫಾರಿ ಬಂಗ್ಲಾಗಳು ಕಟ್ಟಾರಂತಲ್ಲಾ ಅಲ್ಲಿಗೆ ಆರ್ಡ್ರಾಸ್ ತಕ್ಕೊಂಡು ಕೂಲಿ ಪಾಲ್ಗಾಗಿ ಎದ್ದುಬಿಟ್ರು 'ಕುಗ್ರಾಮವಾಸಾ, ಕುಲಹೀನ ಸೇವಾ' ಅಂತಾ, ನನಿಗೂ ಬೇಸ್ರಾಗಿ ಸಂಸಾರವನ್ನೂ ಕರೆದುಕೊಂಡು ಮೂರುಚು ಬಂದ್ಬಿಟ್ಟೆ, ರಾಯ್ರೆ

ನಾ—ಹಾಗಾದ್ರೆ ನಿಮ್ಮ ಕಡ ಏನೂ ಸ್ವಾರಸ್ಯವಿಲ್ಲ ಎನ್ನಿ!

ದಾ—ನಾನೇನು ಆರಿಕ ಮಾಡ್ಲಿ? ಬಾಯಿಬಿಟ್ರೆ ಒಂದಾಗೇದು, ಹೇಳಿದರೆ ಚೆನ್ನಾಗಿಲ್ಲ, ಹೆಚ್ಚೇ ಇದ್ರೆ ಆದೂ ಚೆನ್ನಾಗಿಲ್ಲ ಸಂಕ್ಷೇಪವಾಗಿ ಹೇಳ್ತಿದ್ದೀನಿ —

ರಾಗ—ಕಾಂಭೋಜಿ ತಾಳ—ಝಂಪೆ

ಈ ಪರಿಯ ಚಿತ್ರಗಳ!
ಕಾಣಿಸುವರಿಲ್ಲ ॥ ಪ ॥
ಪಾಪಿ ಮನುಜನರಿಂಕ।
ಕೂಪವೇರಿಲ್ಲ ॥ ಅನು ॥
ವರಣಿಗಿ ದಿನ ಯಿಲ್ಲ।
ಕರೆಕಟ್ಟೆ ಹದವಿಲ್ಲ।
ಸರಳಮಾರ್ಗದ ಕೇರವ್ಲ।
ಕುರುಹು ದೊರಿಸಲಿಲ್ಲ।
ಸಂಪದಯ ತೋರುವ।
ಒರವಣಿಗೆ ಫಲಿಯಿಲ್ಲ।
ಒರಪ ಬಿನ್ನವಗಳ।
ಸರಿತು ಅಲಿಸಲಿಲ್ಲ ॥
ವಿರಸದಿ ಕಿಯಿಂಕಾಗಿ।
ಸರಸ ಫಲವೃಕ್ಷಾನಿಲ್ಲ।
ಸರಸ ಮಾರ್ಗದಕೆರವು।
ಭರದಿನೋರುವನಿಲ್ಲ।
ಅರಿವಿಗೇ ಮೊದಲಿಲ್ಲ
ತಿರುಪೆ ಹುಟ್ಟುವುದಿಲ್ಲ।
ಕರೆಕರಗ ಕೊನೆಯಿಲ್ಲ।
ಹರಿಯು ತಾನಿದಬಲ್ಲ ॥
ಸವರಚ್ಚ ದಿರುವಿಕೆಯು।
ನವಚಿತ್ರ ಭೂಮಿಯೊಳು।
ಭವನದ ದೇವಲ್ಲದೇ।
ಭವ ಪೆಂದಿಸಿಸಿಹುದು।
ಭುವನಪಾಲಕ ನಹ।
ಭವನೊಬ್ಬ ತಾ ನಿಂತು।
ಸವನಿಸುತ್ತೆಲ್ಲರು।
ಜವದೇವಾಲಿಸುತಿರ್ದ ॥ ೩

ನಾ—ಭೇಷ್! ಕವಿತ್ವಾನೂ ಮಾಡ್ತೀರಿ ಅನ್ನೋದು ಗೊತ್ತಿರಲಿಲ್ಲ, ದಾಸ್ರೆ! ಈಗಿನ ಕಾಲದ ದಾಸ್ರು ಇಷ್ಟರಮಟ್ಟಿಗೆ ಕವಿತ್ವ ಮಾಡೋದು ಬಹಳ ಅಪರೂಪ, ಕವನ ಬಹಳ ಅರ್ಥಗರ್ಭಿತವಾಗಿದ ಪಾಮಾರಿಕೆಯು ಇಂಪಾಗಿತ್ತು ಮಟ್ಟೂ ಛಂದಾರಿ ಮಟ್ಟು. ಈ ಮಟ್ಟು ಕವಿತೆಗೆ ಬಿದ್ದಕೂಡ್ಲೆ ವಿಚಾರದ ಕೃಷ್ಣಪ್ಪನವರು ಬಾಪಾ ಇದ್ರಲ್ಲಾ 'ತಪಿಸಿಯು ಸೊಬಗ" ಆ ದೇವರನಾಮ ಜ್ಞಾಪಕಕ್ಕೆ ಬಂದು ಕ್ಷೇತ್ರಗಳಲ್ಲಿ ಸೀರೇ ಒಂದಿದ್ದು ಅಂತೂ ಜಿಟ್ಟಪ್ಪದ ಹಾಡಿದ್ದಕ್ಕಿಂತ ಹಸನಾಗಿ ಹಾಡಿ ಬಿಟ್ರಿ ನಿಮ್ಮ ಧ್ವನಿಯಿಂದ ಇನ್ನೊಂದು ರಾಗ-ನೀಲಾಂಬರಿಯೋ "ಸಾವದಾದ್ರೂ ಕೇಳ್ಬೇಕೂ ಅಂತ ಆಸೆ, ದಾಸ್ರ?

ದಾ—(ಸ್ವಲ್ಪ ಸಂಕೋಚದಿಂದ) ಆ ಗಾಯನು ಆದರ ಈ ದಿವಸ ನನ್ನು ಬಾಯಿರಿದ್ದಾರಲ್ಲಾ! ಹಾಗೂ ಬೇಳದಾಮ ದಾಯರು! ಎವರ ಮನೇಲಿ ಗ್ರಹಪ್ರವೇಶ, ಭೋಜನ ಬಹಳ ಹೊತ್ತಾಯ್ತು, ಮಜ್ಜಿಗೆಗ ನಿಂಬೆಹಣ್ಣು ಜಾಸ್ತಿ ಹಿಂಡ್ಬಿಟ್ಟಿದ್ರು. ಈ ಬೇಸಿಗೆಗೂ, ಅದಕ್ಕೂ ಬಹಳ ಹಿತವಾಗಿತ್ತು ಒಂದೇ ಉಸಿರಿಗ 3-4 ಲೋಟಾ ಗಟ್ಟಿಸ್ಬಿಟ್ಟೆ, ಒಡೇನಾಗಿವೆ (ಹುಡಿಗೆ ಮಲ್ಲು ಕೆಮ್ಮುತ್ತಾ) ತೊಂಡ ಕಟ್ಟಿಕೊಂಡ್ಬಿಟ್ಟಿದೆ ಇನ್ನೊಂದುದಿವ್ಸ ಅಗತ್ಯ ಆಗುಬುದು ತಮ್ಮಂಥವರು ಆಪ್ಪಣೆ ಕೊಡೋದು ಹೆಚ್ಚೋ, ನಾನು ಹಾಡೋದು ಹೆಚ್ಚೋ? ಎಷ್ಟಾದ್ರೂ ನಾನು ಪಾಮರ, ಸಂಗೀತ ವಿದ್ವಾಂಸನಲ್ಲ ಸಾಹಿತ್ಯ ತಿಳದವನಲ್ಲ ಕವಿತಾರಕ್ತಿ ಮೊದಲೇ ಇಲ್ಲ, 'ಉದರ ನಿಮಿತ್ತಂ ಬಹು ಕೃತ ವೇಷಂ' ಅಂತಾರಲ್ಲಾ ಹಾಗೆ, ಹೊಟ್ಟೇ ಪಾಡಿಗಾಗಿ ನಾಲ್ಕಾರು ದೇವರನಾಮ ಕಲಿತ್ಕೊಂಡು ತಮ್ಮಂಥವರ ಆಶ್ರಯದಲ್ಲಿ ಹೊತ್ತು ತುಂಬಿಸಿಕೊಂಡ. ಹೊಗ್ತಿರೋ ತಂಬೂರಿದಾಸ' ಅಷ್ಟೇ.

ತಂಬೂರಿ ದಾಸರಾದ ಮಾತ್ರಕ್ಕೇನೆ ಗುರುತ್ವಕ್ಕೆ ಸಾತ್ಪರ್ಯವೇನು? ಅವರವರಿಗೆ ತಕ್ಕ ಯೋಗ್ಯತೆ ಅವರವರಿಗೆ ಇದ್ದೇ ಇರುತ್ತೆ ಮುಖ್ಯ ತಮ್ಮ ಯೋಗ್ಯತೆಗೆ ತಕ್ಕ ಮರ್ಯಾದೆ ಮಾಡೋಕೆ ಬಗನಂತ ನಮಗೆ ಕೊಟ್ಟಿಲ್ಲ, ಇದನ್ನೇ ದೊಡ್ಡದು ಅಂತ ಭಾವಿಸಿ, ಇನ್ನೊಂದುದಿವ್ಸ ಅಗತ್ಯ ಭೇಟಿ ಕೊಡಬೇಕು, ದಾಸರೆ' ಎಂದು ಹೇಳಿ ಕೈಗೆ 1 ಆಣೆ ಕೊಟ್ಟೆ

'ಕೃಪಾ ಇರಬೇಕು, ಮಹಾರಾಯ, ಅಪ್ಪರರ ಟೈಗೆ ಹೇಳವ್ನಾರು' ಅಂತಾ ಹೇಳ್ತಾ, ದಾಸರು ಹೆಸನ್ನುಖಿಗಳ ಗಿ ಮುಂದಕ್ಕೆ ಹೆಜ್ಜೆ ಇಟ್ರು ನಾನು ಠಕೀಟ್‌ ಮಾರಾಟದ ಕಡೆಗೆ ... ಕೊರಟೆ

ರೈತರ ಸಾಲತೀರಿಸುವ ಮಸೂದೆ

ಕಾನೂನಿನ ಆವಶ್ಯಕತೆ

ರೈತನೇ ಸ್ವತಃ ಸಾಲತೀರಿಸಿಕೊಳ್ಳುವ ಶಕ್ತಿಯನ್ನು ಕಳಕೊಂಡಿದ್ದಾನೆ

ಗ್ರಾಮಾಂತರಗಳ ರೈತರ ಸ್ಥಿತಿಗತಿ ಗಂಡನ್ನು ಕೇಳಿ!

ಗ್ರಾಮಾಂತರಗಳಲ್ಲಿ ನೂರಕ್ಕೆ ತೊಂಬತ್ತರಷ್ಟು ಜನ ರೈತರು ಸಾಲಗಾರರಿದ್ದಾರೆ. ಸುಮಾರು ಹತ್ತು ಹನ್ನೆರಡು ವರುಷಗಳಿಂದೀಚೆಗಂತೂ ತಮ್ಮ ತಮ್ಮಗಳ ಶಕ್ತಿ ಮೀರಿ ಸಾಲಮಾಡಿದ್ದಾರೆ. ಬರದಿಂದ ಅರ್ಜಿ ಸಾಲಕ್ಕಾಗಿ ಅದಾವ ಕಾರಣಗಳಿಗೆ ಈ ಮುನ್ನಾದರೂ ರೈತರಲ್ಲಿ ಜಮೀನುಗಳಲ್ಲ ಮನೆಗಳಲ್ಲ ಅಥವ ಬೇರೆಬಾಳುವೆ ಇನ್ನಾವ ಚರಸ್ಥಿರ ಸ್ವತ್ತುಗಳ ಆಧಾರದಿಂದ ರೈತರು ಸಾಲಮಾಡುವ ಹಾಗೂ ಇಲ್ಲ ಶ್ರೀಮಂತರು ಕೊಡುವ ಹಾಗೂ ಇಲ್ಲ. ಸಾಮಾನ್ಯವಾಗಿ ಅಸಲಿಗೆ ಅಸಲಿನಷ್ಟು ಬಡ್ಡಿಯು ಏಳವರೆ ಈವಾಗಿರುವ ಸಕಲ ಆಸ್ತಿಗಳೂ ಶ್ರೀಮಂತನಿಗೆ ಸೇರಿಹೋಗುವ ಸ್ಥಿತಿಯಲ್ಲಿ ಸಾಲಮಾಡಿದ್ದಾರೆ. ಈಗ ಅಸಲಿಗಿಂತಲೂ ಬಡ್ಡಿಯೇ ಅಧಿಕವಾಗಿದೆ. ಭೂಮಿಯ ಬೆಲೆಯು ಅರ್ಧಕ್ಕಿಂತಲೂ ಕಡಿಮೆಹೋಗಿದೆ. ಆದುದರಿಂದ ಶ್ರೀಮಂತನೇ ಅಸಲು ಮತ್ತು ಬಡ್ಡಿ ಪೂರ್ತಿ ಕೇಳುವ ಸ್ಥಿತಿಯಲ್ಲಿಲ್ಲ. ಆಸ್ತಿಯನ್ನು ಸ್ವಾಧೀನಪಡಿಸಿಕೊಳ್ಳುವುದೊಂದೇ ಮಾರ್ಗವಾಗಿದೆ. ಈಗಿನ ಕಾನೂನಿನ ಪ್ರಕಾರ ರೈತರು ಮಾತನಾಡದೆ ಶ್ರೀಮಂತನಿಗೆ ಆಸ್ತಿಗಳನ್ನೆಲ್ಲಾ ಒಪ್ಪಿಸಿಬಿಡಬೇಕು. ಅತನು ಒಪ್ಪದಿದ್ದರೆ ಕೋರ್ಟಿಗೆ ಕೊಟ್ಟು ಕೊಡಿಸಿಬಿಡುತ್ತಾನೆ. ಹೀಗಿರುವಲ್ಲಿ ಅನೇಕ ಜನ ರೈತರು ಜಮೀನುಗಳನ್ನೆಲ್ಲಾ ಒಪ್ಪಿಸಿಬಿಟ್ಟಿದ್ದಾರೆ. ಮಿಕ್ಕ ಕೆಲವರು ಬಲಾತ್ಕಾರದಿಂದ ಬಿಟ್ಟು ಬಿಡುತ್ತಾರೆ.

ಉಳುವುದಕ್ಕಾಗಿ ಎತ್ತುಗಳನ್ನೂ, ರೇಷ್ಮೆ ಹುಳು ಸಾಕುವುದಕ್ಕಾಗಿ ಸೊಪ್ಪಿನ ತೋಟಗಳನ್ನೂ, ಗುತ್ತಿಗಾಗಿ ತೋಟ ಗದ್ದೆಗಳನ್ನೂ ರೈತನು ತೆಗೆದುಕೊಂಡರೆ ಅತನು ಸಕಾಲದಲ್ಲಿ ಕೊಡದಿದ್ದರೆ ಆ ಮೊಬಲಗುಗಳಿಗೆಲ್ಲಾ ಪ್ರೋನೋಟು ಬರೆಸಿಕೊಳ್ಳುತ್ತಾರೆ. ಬಡ್ಡಿಗಾಗಿಯೂ ಸಹ ಪ್ರೋನೋಟು ಬರೆಸಿಕೊಳ್ಳುತ್ತಾರೆ. ಈ ಪದ್ಧತಿಯಿಂದ ನಗದು ಹಣ ಸಾಲಕೊಟ್ಟದ್ದಕ್ಕಿಂತಲೂ ಎಸಲು, ರಾಸುಗಳು ಮತ್ತು ಬಡ್ಡಿಗಳಿಗಾಗಿ ಬರೆದುಕೊಟ್ಟ ಪ್ರೋನೋಟುಗಳು ಬಹಳ ಬೇಗ ಶ್ರೀಮಂತರಿಗೆ ದಕ್ಕಿಬಿಡುತ್ತವೆ. ರೈತನಿಗೆ ಕೈಗಾರಿಕೆಗಳಲ್ಲಿ, ವ್ಯಾಪಾರಗಳಲ್ಲಿ, ಅವನ ವ್ಯವಸಾಯದಲ್ಲಿ ರಕ್ಷಣೆಯಿಲ್ಲ. ರೈತನು ಮತ್ತು ಅತನ ಸಂಸಾರವು ವರ್ಷವೆಲ್ಲಾ ದುಡಿದು ವ್ಯವಸಾಯ ಮಾಡುತ್ತಿದ್ದರೂ ಅವನ ಕಷ್ಟಕ್ಕೆ ಬೆಲೆಯಿಲ್ಲ. ರೈತನು ಬೆಳೆದ ಪದಾರ್ಥಗಳಿಗೆ ಗೊತ್ತಾದ ಧಾರಣೆಯಿಲ್ಲ. ಹೀಗಾಗಿ ಅವನ ಬದುಕುವಿಕೆಯೇ ಅವನಿಗೆ ಬೇಜಾರಾಗಿ ಹೋಗಿದೆ. ಎಲ್ಲದರಲ್ಲಿಯೂ ಅವನು ಹೀನನಾಗಿದ್ದಾನೆ. ಅತನ ಕಷ್ಟಗಳನ್ನು ಕೇಳುವವರೇ ಇಲ್ಲ. ವಿದ್ಯಾವಂತರು ಬುದ್ಧಿವಂತಿಕೆಯಿಂದ ಜೀವಿಸುತ್ತಿದ್ದಾರೆ. ಶ್ರೀಮಂತರು ಕಾನೂನುಗಳ ರಕ್ಷಣೆಯಿಂದ ಬದುಕುತ್ತಿದ್ದಾರೆ.

ಅಧಿಕಾರಿಗಳಿಗೆ ಸರ್ಕಾರಿ ಕಂದಾಯ ಕೊಟ್ಟೇ ಕೊಡಬೇಕು. ಇಲ್ಲದಿದ್ದರೆ ಮನೆ, ತೋಟ, ಗದ್ದೆ ಮತ್ತು ರಾಸುಗಳನ್ನು ಹರಾಜು ಮಾಡುತ್ತಿದ್ದರು. ಅವೆಲ್ಲ ಪ್ರಯೋಜನವಿಲ್ಲವೆಂದು ಅಡಿಗೆ ಮನೆಯ ಬಾಗಿಲನ್ನು ಕೀಳುವುದು, ಹೆಂಚು ತೆಗೆಸುವುದು, ಬಾವಿಯಿಂದ ನೀರು ತರುವುದನ್ನು ಅಡ್ಡಿಪಡಿಸುವುದು, ವ್ಯವಸಾಯಕ್ಕೆ ಹೋಗುವ ರಾಸುಗಳನ್ನು ಹಿಡಿಸುವುದು, ಪ್ರಾಣಾಧಾರಕ್ಕಾಗಿ ಇಟ್ಟುಕೊಂಡಿರುವ ದವಸಧಾನ್ಯಗಳನ್ನು ಜಪ್ತಿ ಮಾಡಿಸುವುದು, ಜಮೀನಿನ ಮೇಲಿನ ಫಸಲನ್ನೂ ಅನಾಮತ್ತು ಫಸಲನ್ನು ಕತ್ತರಿಸಿ ಮಾರಿಗೊಗಿದ್ದರೆ ಅವುಗಳನ್ನೂ ಜಪ್ತಿ ಮಾಡಿಸಿ ಕಂದಾಯವನ್ನು ವಸೂಲಿ ಮಾಡುತ್ತಿದ್ದಾರೆ. ಕೃಷಿಕರ ವಿಷಯವು ಪ್ರತಿಯೊಬ್ಬ ಅಧಿಕಾರಿಗಳಿಗೂ ಪ್ರಜಾಪ್ರತಿನಿಧಿ ಸಭೆಯ ಸದಸ್ಯರಿಗೂ ಚೆನ್ನಾಗಿ ಗೊತ್ತಿದೆ. ಪ್ರಜಾಪ್ರತಿನಿಧಿ ಸಭೆ ಮತ್ತು ನ್ಯಾಯವಿಧಾಯಕ ಸಭೆಯ ಸದಸ್ಯರುಗಳಲ್ಲಿ ನೂರಕ್ಕೆ ತೊಂಬತ್ತರಷ್ಟು ಮಂದಿ ಶ್ರೀಮಂತರೇ ಇದ್ದಾರೆ. ಉಳಿದವರಲ್ಲಿ ಕೆಲವರು ವಿದ್ಯಾವಂತರೂ, ಅಧಿಕಾರಿಗಳೂ, ವಕೀಲರೂ ಇದ್ದಾರೆ. ಶ್ರೀಮಂತರುಗಳು ಸಾಲಕೊಟ್ಟು ವಸೂಲಿಕ್ರಮ ಜರುಗಿಸಿ ಸ್ವತಃ ರೈತರ ಶಕ್ತಿಯನ್ನು ತಿಳಿದುಕೊಂಡಿದ್ದಾರೆ. ಕಂದಾಯದ ವಸೂಲಿಗಾಗಿ ಹೋಗಿ ಅಧಿಕಾರಿಗಳು ಸ್ವತಃ ಮೇಲ್ಕಂಡ ಕ್ರಮಗಳನ್ನೆಲ್ಲಾ ಜರುಗಿಸಿ ರೈತರ ದುಸ್ಥಿತಿಯನ್ನು ತಿಳಿದುಕೊಂಡಿದ್ದಾರೆ. ವಕೀಲರಿಗಂತೂ ಎಲ್ಲಾ ವಿಷಯಗಳಲ್ಲಿಯೂ ವಾದಿಸಿ ಮನದಟ್ಟಾಗಿದೆ. ಆ ತಿಳುವಳಿಕೆಯ ಮತ್ತು ಅನುಭವದ ಮೇಲೆ ರೈತರು ಕಷ್ಟ ಪರಿಹಾರ ಮಸೂದೆಯನ್ನು ಮಾಡಿದರು. ಭೂಅಡಮಾನ ಬ್ಯಾಂಕುಗಳನ್ನು ನಿರ್ಮಿಸಬೇಕೆಂದು ಸಿದ್ಧಾಂತ ಮಾಡಿದರು. ಇನ್ನೂ ಸ್ವಲ್ಪವೆಂದು ಈಗ ಬೆಂಗಳೂರಿನಲ್ಲಿ ನಡೆದ ಪ್ರಜಾಪ್ರತಿನಿಧಿ ಸಭೆಯಲ್ಲಿ ಸಾಲ ತೀರಿಸುವ ಪಂಚಾಯಿತಿ ಬೋರ್ಡುಗಳ ಮಸೂದೆಯ ತತ್ವವನ್ನು ಅಂಗೀಕಾರಮಾಡಿದರು. ಆ ಕರಡು ವಿವರಗಳೆಲ್ಲಾ ಮುಂದಿನ ನ್ಯಾಯವಿಧಾಯಕ ಸಭೆಗಳಲ್ಲಿ ಚರ್ಚೆ ನಡೆದು ಕಾನೂನಾಗಿ ಜಾರಿಗೆ ಬರಬೇಕಾಗಿದೆ. ಈ ಕಾನೂನಿನ ವಿವರಣೆಗಳನ್ನು ಓದಿ ನೋಡಲಾಗಿ ಅದರಲ್ಲಿ ಯಾವ ಜವಾಬ್ದಾರಿಯೂ ಇಲ್ಲ. ಈ ಕಾನೂನಿನ ಉಪಯೋಗ ರೈತನಿಗೆ ಎಷ್ಟು ತೋರಿಸಲಾಗಿದ್ದರೂ ಕಾನೂನು ಆದ ಮೇಲೂ ರೈತನಿಗೆ ಅದರಿಂದ ಒಂದು ಕಾಸಿನಷ್ಟು ತೊಂದರೆಯೂ ಕಡಿಮೆಯಾಗುವುದಿಲ್ಲ. ಏಕೆಂದರೆ ಈ ಕಾನೂನು ಪ್ರಕಾರ ಪ್ರಜೆಗಳಿಗೆ ಸಹಾಯವಿಲ್ಲ.

ಜವಾಬ್ದಾರಿ ಅಧಿಕಾರಿಗಳೂ, ಪ್ರತಿನಿಧಿ ಸಭೆಯ ಸದಸ್ಯರುಗಳೂ, ರೈತರ ಜವಾಬ್ದಾರಿಯನ್ನು ತೆಗೆದುಕೊಳ್ಳದ ಬರೀ ಒಳ್ಳೆಯ ಮಾತುಗಳನ್ನಾಡುತ್ತಾ ಕಾನೂನುಗಳಿಗೆ ಒಳ್ಳೆ ಹೆಸರುಗಳನ್ನು ಕೊಡುತ್ತಾ ಹೊರಗಡೆಯ ಕೀರ್ತಿಯ ಕಡೆ ಗಮನಕೊಡುತ್ತಾ ಹೋದರೆ ರೈತರ ಕಷ್ಟವು ಪರಿಹಾರವಾಗುವುದಿಲ್ಲ. ಸಾಲ ತೀರುವುದಿಲ್ಲ. ಅವರು ಸಭ್ಯ ಪ್ರಜೆಗಳಾಗಿರಲು ಸಾಧ್ಯವಿಲ್ಲ. ಹಸಿವಿನ ಬಾಧೆಗಾಗಿ ಎಲ್ಲೆಲ್ಲೂ ಕಳುವುಗಳು ದರೋಡೆ, ದೊಂಬಿಗಳು ನಡೆಯುವುದು ಹೆಚ್ಚುತ್ತಿದೆ. ರೈತರು ನಿರುದ್ಯೋಗಿಗಳಾಗಿರುವುದರಿಂದಲೂ, ಹಸಿವಿನ ಬಾಧೆಯು ಅವರನ್ನು ಪೀಡಿಸುತ್ತಿರುವುದರಿಂದಲೂ ಸಹಜ ಮಾರ್ಗವು ದೊರೆಯದೆ ಇರುವುದರಿಂದಲೂ, ಪ್ರಾಣವು ತನ್ನಷ್ಟಕ್ಕೆ ತಾನೇ ಹಾರಿಹೋಗದೆ ಇರುವುದರಿಂದಲೂ ಪ್ರಾಣಾಧಾರಕ್ಕಾಗಿ ಇರುವ ಕಡೆ ತಂದು ತಿನ್ನುವುದೇ ಧರ್ಮವಾಗಿ ಪರಿಣಮಿಸುವುದು. ಈ ತತ್ವವು ಈಗಾಗಲೇ ಹಳ್ಳಿಗಳಲ್ಲಿ ಸಾಮಾನ್ಯವಾಗಿ ಅನುಷ್ಠಾನಕ್ಕೆ ಬರುತ್ತಿದೆ. ಇದು ವಿಪರೀತಕ್ಕೆ ಬಂದರೆ ಶಾಂತಿ ಭಂಗವಾಗುತ್ತದೆ. ಅದನ್ನು ತಪ್ಪಿಸಲು ಯಾರಿಂದಲೂ ಸಾಧ್ಯವಿಲ್ಲ. ಆಮೇಲೆ ರೈತರನ್ನು ತಿದ್ದಲು ಬಹಳ ಕಷ್ಟವಾಗುತ್ತದೆ. ಎಲ್ಲ ಆಶೆಗಳೂ ತನ್ನಷ್ಟಕ್ಕೆ ತಾನೇ ನಾಶವಾಗುವಾಗ ಸಾಯಲು ಹಿಂತೆಗೆಯುವುದಿಲ್ಲ. ಆ ಕಾಲಕ್ಕೆ ಕಾನೂನುಗಳೂ, ಮದ್ದು ಗುಂಡುಗಳೂ ಪ್ರಯೋಜನಕ್ಕೆ ಬರುವುದಿಲ್ಲ. ನಿರಪರಾಧಿಗಳಾದ ರೈತರು ಹಸಿವಿನ ಬಾಧೆಗಾಗಿ ಆಹಾರವನ್ನು ಹುಡುಕಿ ಹುಡುಕಿ ತೆಗೆದುಕೊಂಡು ಬರಲು ಬರಿದಾಗುತ್ತಿದ್ದರೆ ಅಂಥವರ ಮೇಲೆ ಗುಂಡು ಹಾರಿಸಿದರೆ ಪ್ರಭುತ್ವಕ್ಕೆ ಕೀರ್ತಿ ಬರುವುದಿಲ್ಲ. ಹೀಗಾದ ಮೇಲಾದರೂ ಯೋಗ್ಯವ್ಯವಸ್ಥೆಯನ್ನು ಮಾಡಬೇಕಾಗುತ್ತದೆ. ಅಷ್ಟು ಪರಿಸ್ಥಿತಿಯನ್ನು ಮಾಡದೆ ಈಗಲೇ ಅಧಿಕಾರಿಗಳು ಪ್ರತಿನಿಧಿಗಳು, ವಕೀಲರುಗಳು ಚೆನ್ನಾಗಿ ಆಲೋಚಿಸಬೇಕು. ಆಲೋಚಿಸಬೇಕು. ಗ್ರಾಮಾಂತರಗಳ ಸ್ಥಿತಿಗತಿಗಳನ್ನು ಚೆನ್ನಾಗಿ ತಿಳಿದುಕೊಳ್ಳಬೇಕು. ಆಗ ಎಲ್ಲವೂ ಸರಿಹೋಗುತ್ತದೆ. ಸರ್ಕಾರದವರೇ ಸಂಪೂರ್ಣ ಜವಾಬ್ದಾರಿಯಿಂದ ರೈತರ ಸಾಲವನ್ನು ತೀರಿಸಿ ಅವರ ಜಮೀನುಗಳನ್ನು ಅವರಿಗೆ ಬಿಡಿಸಿಕೊಡುವ ಮತ್ತು ಗ್ರಾಮ ಕೈಗಾರಿಕೆಗಳಿಗೆ ಪೂರ್ಣ ಬೆಂಬಲಕೊಟ್ಟು ಅವರ ವ್ಯಾಪಾರಕ್ಕೆ ಯೋಗ್ಯ ವ್ಯವಸ್ಥೆಯನ್ನು ಮಾಡುವ ಕಾನೂನನ್ನು ಮಾಡಿ ರೈತರಿಗೆ ಧೈರ್ಯವನ್ನು ಕೊಟ್ಟು, ಬಡತನದ ಬಾಧೆಯಿಂದಲೂ ಹಸಿವಿನ ಪೀಡೆಯಿಂದಲೂ ಪಾರು ಮಾಡಬೇಕೆಂದು ಪ್ರಾರ್ಥಿಸುತ್ತೇನೆ.

ವಗಡಂಬು ರಾಮಚಂದ್ರರಾವ್

ನೆಂಟರು ಯಾರು ?

("ಶ್ರೀರಾಮುಲು", ತುಮಕೂರು)

ನೆಂಟರು ಎಂಬರು ಎಲ್ಲಿಹರಣ್ಣ ?
ಹುಡುಕಿದೆ ನಾ ಬಲು ಕಾಲದಿ ಅಣ್ಣ
ಊರು ಊರುಗಳ ತಿರುಗಿದೆನಣ್ಣ
ಕೇರಿಕೇರಿಗಳ ಹುಡುಕಿದೆನಣ್ಣ
ಕಾಡ ಬಂಡೆಗಳ ಶೋಧಿಸಿದೆ, ನಾಡು
ನಾಡುಗುಂಟೆಯೊಳು ನಾ ಅಲೆಯುತಲಿ
ಹತ್ತುತ ಇಳಿಯುತ ಬೆಟ್ಟಗಳನ್ನು
ಕಿತ್ತುತ ಕಾಲ್ಗಳ ಮುಳ್ಳುಗಳನ್ನು
ಎಡವುತ ಹುಡುಕಿದೆ ನೆಂಟನ ನಾನು
ನಡೆಯುತ ಹುಡುಕಿದೆ ನೆಂಟನ ನಾನು

ನೆಂಟನು ಇವನೇ ಆಗಬೇಕೆಂದು
ಭಂಟನು ಎವನಾ ಬಯಸಿದೆ,
ಪ್ರೀತಿಯ ವಾಕ್ಯವ ನಾಡಿದನಾಗ
ಸಾಗಿಸೆ ಸಬಲವು ಅಂದವದಾಗ
ಆಡುತ ಹೋಗಲು ವರ್ಷವು ಮುಂದ
ಮೂಡಿತಲಕ್ಷ್ಯವು ನೆಂಟನ ಹಿಂದೆ
ಪ್ರೀತಿಯ ವಾಕ್ಯವು ಸರಿಯಿತು. ಹಿಂ
ಬಂತೆಯುವಾತನು ಉದುರಿತು
ಷ್ಟಿಗಳ ಸುರಿಮಳೆ ಹುಟ್ಟಿತು ಜಗ
ಗೂಗಿದ ಗತಿಯದು ಬಂದಿತು ಜಿ

ಎತ್ತದಿ ನೋಡುತ ಹೋದೆನಲ್ಲಿಗೊ
ರಾಕ್ಷಸ ಕಾಯುತ ನಿಂತಿತ್ತಲ್ಲಿಯೆ
ಹಿಂದಿನ ಗೆಳೆಯನು ನೆನೆಯುತಲೀಗ
'ಹಿಂದಿನ ಕನಸಲಿ ತಿಳಿದೆನು
ಹೆಣ್ಣಾಸೆಗಳಿನ ಉರಿಲಿ ಬೇಯಿತು
ಕಟ್ಟಿದ ಯೋಚಿಪ ಮನುಜ ನೆಂಟನೆ'
ಉದರ ಮಮತೆಗಳು ಹೊಡೆಯಲು
ತ ಭಾವವ ಕೆಡಿಸುವ ನರನು ನೆಂಟ
ನೀತಿಲಿ ಬಾಳುವ ಮನುಜನೆ ನೆಂಟ
ಪ್ರೀತಿಸಿ ಕಾಯುವ ಹೃದಯನೆ ನೆಂಟ"

ಕರ್ನಾಟಕ ಬಾಲಕ ಸಂಘ, ಮೈಸೂರು

ಪ್ರಾರಂಭೋತ್ಸವ

ಕೃಷ್ಣಮೂರ್ತಿಪುರದ ಕರ್ನಾಟಕ ಬಾಲಕ ಸಂಘದ ಪ್ರಾರಂಭೋತ್ಸವವು ಜೂನ್ ೨೭ನೇ ತಾರೀಖು ಸಾಯಂಕಾಲ ೬ ಗಂಟೆಗೆ ಶ್ರೀಮಾನ್ ಪಿ. ಎಂ. ಶ್ರೀ... ಯ್ಯನವರ ಅಧ್ಯಕ್ಷತೆಯಲ್ಲಿ ನೆರವೇರಿತು. ಮೊದಲು ಪ್ರಾರ್ಥನೆಯಾದ ಮೇಲೆ ಮಾ|| ಶ್ರೀಕಂಠಯ್ಯನವರ ಭಾರತ... ವೂ ಆಯಿತು. ಆಮೇಲೆ ಸಂಘದ ... ರಾದ ಜಿ. ವೆಂಕಟಸುಬ್ಬಯ್ಯನವರು ಸ್ವಾಗತಭಾಷಣವನ್ನು ಮಾಡಿದರು. ... ದು ಕರ್ನಾಟಕ ಸಂಘದ ಅಧ್ಯಕ್ಷರಾದ ಮಾ|| ಸುಬ್ರಹ್ಮಣ್ಯಯ್ಯನವರು ... ಸಂಘಕ್ಕೆ ಶುಭೋದ್ದೇಶವನ್ನು ... ರ ಸಂಘದ ಕಾರ್ಯದರ್ಶಿಗಳಾದ ಕೆ. ರಾಮಕೃಷ್ಣರವರು ಸಂಘದ ... ನ್ನು ವಿವರಿಸಿದರು. ಆಮೇಲೆ ಅಧ್ಯಕ್ಷರು ಒಂದು 'ಸ್ವಾರಸ್ಯವಾದ ಉಪದೇಶ ... ರು. ಕೊನೆಯದಾಗಿ ಕಾರ್ಯದರ್ಶಿ ಎಂ. ಎ. ನಾರಾಯಣಮೂರ್ತಿಯವರು ವಂದನಾರ್ಪಣೆ ಮಾಡಿದರು. ಸರಸ್ವತಿ ... ವಿಗೆ ಮಂಗಳಾರತಿಯಾದ ಮೇಲೆ ಸಭೆ ಮುಕ್ತಾಯವಾಯಿತು.

A Reliable House for Repairs of

WATCHES & GRAMOPHONES.

HIGH CLASS RUBBER STAMP

Suppliers,

M. V. N. WATCH COY.,

The General Commission Agency,

Lansdowne Buildings,

MYSORE.

ಗಡಿಯಾರ ಮತ್ತು ಗ್ರಾಮೋಫೋನುಗಳ ರಿಪೇರಿ

ಮತ್ತು ರಬ್ಬರ್ ಮೊಹರುಗಳ ತಯಾರಿ

ನಮ್ಮಲ್ಲಿ ನಡೆಯುತ್ತವೆ.

ಎಂ. ವಿ. ಎನ್. ವಾಚ್ ಕಂಪೆನಿ, ಮೈಸೂರು.

USE ALWAYS

DERMOTONE

(ANTISEPTIC BATHING HERBAL PREPARATION)

THE UNIQUE PRODUCT

IN THE MARKET FOR SKIN HYGIENE.

ಡರ್ಮೋಟೋನ್,

ಪ್ರಿಯವಾದ ಮತ್ತು ಆರೋಗ್ಯಕರವಾದ ಚರ್ಮರಕ್ಷಣೀ ಚೂರ್ಣ.

ಡರ್ಮೋಟೋನ್ ವರ್ಕ್ಸ್, ಮೈಸೂರು.

ಮರ್ಚೆಂಟ್ಸ್ ಬ್ಯಾಂಕ್ ಲಿಮಿಟೆಡ್,

(H.O.) ಮೈಸೂರು.

೧೯೩೨ ರಲ್ಲಿ ಸ್ಥಾಪಿತವಾದದ್ದು.

...ರುದಾರರಿಗೆ ಸನ್ ಸಾ|| 9 ರಂತೆ ಡಿವಿಡೆಂಡ್ ಕೊಟ್ಟಿರುತ್ತೆ. ನಮ್ಮ 5 ...ನ F.T.B. ಸರ್ಟಿಫಿಕೇಟಿಗೆ ಬೆನಿಫಿಟ್ 500 ರೂಪಾಯಿಗಳವರೆಗಿವೆ. ...ತ್ರಿಫಲದಾಯಕ ಸಹಾಯನಿಧಿ. ಈಗಾಗಲೇ ಸಾವಿರಾರು ಜನ ಮೆಂಬ...ತ್ತಾರೆ. ಅನೇಕರು ಬೆನಿಫಿಟ್ ಪಡೆದಿರುತ್ತಾರೆ. ಬೆನಿಫಿಟ್ ಹಂಚಿಕೆಯಲ್ಲಿ ...ಲೇ ವರ್ಷವೇ ಸರ್ಟಿಫಿಕೇಟ್ ಮೊಬಲಿಗಿನ ನಾಲ್ಕರಷ್ಟು ಬೆನಿಫಿಟ್ ಬಂದಿ...

...ಸನಕ್ಕೆ, ಉಪನಯನಕ್ಕೆ, ವಿವಾಹಕ್ಕೆ, ವಿದ್ಯಾಭ್ಯಾಸಕ್ಕೆ, ಮರಣಕ್ಕೆ ಮತ್ತು ...ಕುಟುಂಬಕ್ಕೆ ಧನಸಹಾಯ ಬೇಕೋ? ಹಾಗಾದರೆ ನಮ್ಮ ಬ್ಯಾಂಕಿನ T.I... ಸರ್ಟಿಫಿಕೇಟಿಗೆ 5 ರೂಪಾಯಿಗಳನ್ನು ಒಟ್ಟಾಗಿಯಾಗಲೀ, ಕಂತುಗಳ...ಲೀ, ಪಾವತಿಮಾಡಿ ಮೆಂಬರಾಗಿ. 15 ವರ್ಷಗಳೂ ಬೆನಿಫಿಟ್ ಪಡೆದ... ನಂತರ ಸರ್ಟಿಫಿಕೇಟ್ ಮೊಬಲಗು ಬೋನಸ್ ಸಮೇತ ವಾಪಸ್ ...ಡುತ್ತೆ. ಬೆನಿಫಿಟ್ ಪಡೆಯದ ಮೆಂಬರಿಗೆ 15 ವರ್ಷಗಳ ನಂತರ ಸರ್ಟಿ...ಟ್ ಮೊಬಲಗಿನ 2 ರಷ್ಟು ಮೊಬಲಗು ಕೊಡಲ್ಪಡುವದು. ಪ್ರವೇಶಧನ— ...ಫಿಕೇಟ್ 1 ಕ್ಕೆ 1 ರೂಪಾಯಿ. ಹೆಂಗಸು, ಗಂಡಸು, ಜಾತಿ ಮತ ಮತ್ತು ...ವ ಯಾವ ನಿರ್ಬಂಧವೂ ಇಲ್ಲ.

...ನೆ|| ಸಾ 6| ರಂತೆ 200 ತಿಂಗಳ ವಾಯಿದೆಯಿಂದ ಸ್ಥಿರಾಧಾರದ ಮೇಲೆ ...ಬೇಕೋ? ಹಾಗಾದರೆ, ನಮ್ಮ 15 ವರ್ಷಗಳ 250 ರೂಪಾಯಿನ ಪ್ರಾವಿ...ಡೆಂಟ್ ಫಂಡುಗಳನ್ನು ಪಡೆಯಿರಿ. ಇದಕ್ಕೆ ಕಂತು, ತಿಂಗಳೊಂದಕ್ಕೆ 1 ರೂಪಾ...ಯಿ. ಪ್ರವೇಶಧನ ಬಾಂಡ್ 1 ಕ್ಕೆ 1 ರೂಪಾಯಿ. ಪರಮಾವಧಿ ಸಾಲದ ...ರೂ. 5,000.

...ತಾಲ್ಲೂಕಿನಲ್ಲೂ ಮೈಸೂರು ಮತ್ತು ಬೆಂಗಳೂರು ನಗರಗಳ ಪ್ರತಿ ...ದಲ್ಲೂ ಬ್ಯಾಂಕಿನ ಕೆಲಸ ನಡೆಸಲು ಏಜಂಟರು ಮತ್ತು ಲೋಕಲ್ ಡೈರೆ...ಬೇಕಾಗಿದೆ. ಒಳ್ಳೇ ಕಮಿಷನ್ ಯಾ ತಿಂಗಳು ವಾಹಿಯಾನ 25 ರೂ... ರೂಪಾಯಿಯಿಂದ 100 ರೂಪಾಯಿ ಅಲೋಯನ್ಸು ದೊರೆಯುವದು. ...ಮತ್ತು ವಿಷಯುಗಳಿಗೆ 0-1-3 ಪೋಸ್ಟಲ್ ಸ್ಟಾಂಪು ಸಮೇತ ಕೆಳಗಿನ ವಿಳಾ...ಸಕ್ಕೆ ಬರೆಯಿರಿ.

ಮ್ಯಾನೇಜಿಂಗ್ ಏಜಂಟ್,

ಮರ್ಚೆಂಟ್ಸ್ ಬ್ಯಾಂಕ್ ಲಿಮಿಟೆಡ್, ಮೈಸೂರು.

BETTER LIGHT - - LIGHTER BILLS

Use—

"BIJLEE"

ELECTRIC BULBS.

Made in INDIA.

ಸ್ವದೇಶಿ ಎಲೆಕ್ಟ್ರಿಕ್ ಬಲ್ಬುಗಳನ್ನೇ

ಉಪಯೋಗಿಸಿರಿ.

BIJLEE PRODUCTS (INDIA)

Bombay 8.

SOLE DISTRIBUTORS:—

THE STATES ENGINEERING COMPANY,

BANGALORE, MYSORE, SHIMOGA & COIMBATORE.

THE SADHVI

A LEADING NATIONALIST WEEKLY
OF MYSORE.

Recommended for Schools by the Department.

No. TI. 3778-146—35-36.

OFFICE OF THE DIRECTOR OF PUBLIC INSTRUCTION IN MYSORE,

Bangalore, Dated 20th April 1936.

MEMO.

The Newspaper "SADHVI" a Kannada Weekly is recommended to all Government High, Middle and Normal School Reading Rooms in the State.

PARTICULARS.

Name	The Sadhvi.
Editor	Mr. Agaram Rangiah, B.A.
Place of Publication	Mysore.

ANNUAL SUBSCRIPTION.

Local	Rs. 2—4—0.
Moffusil	Rs. 2—4—0.

DIRECTOR.

"ಸಾಧ್ವಿ" ವಾರಪತ್ರಿಕೆ.

ವಿದ್ಯಾ ಇಲಾಖೆಯವರಿಂದ ಶಿಫಾರ್ಸು ಮಾಡಲ್ಪಟ್ಟಿದೆ.

ಕೂಡಲೇ ಚಂದಾದಾರರಾಗಿ ಪ್ರೋತ್ಸಾಹಿಸಿ.

ಕಲೆಗಾಗಿ ಜೀವಕೊಡಲು ಸಿದ್ಧಳಾದ ಕನ್ನಡ ನಟಿ

"ಜನವಾಣಿ"

ಮಿಸ್ ರಾಜಮ್ಮ, ಬಿ. ಆರ್. ಪಂತಲು, ಎಂ. ಎಸ್, ಮಾಧವರಾವ್, ಯಂ. ಮಾಧವರಾವ್

ಇವರು ಅಭಿನಯಿಸಿರುವ

ಸಂಸಾರ ನೌಕ

ಪ್ರಥಮ ಸಾಮಾಜಿಕ ಕನ್ನಡ ಚಲನಚಿತ್ರ

ನಾಟ್ಯಪ್ರಪಂಚದಲ್ಲಿ ವಿಖ್ಯಾತರಾದ ನಟವರ್ಗದವರ ಅಭಿನಯ. ಮಾನವನ ಜೀವನವನ್ನು ಯಥಾವತ್ತಾಗಿ ಚಿತ್ರಿಸುವ ಕಥಾವಸ್ತು.

ಪ್ರೇಕ್ಷಕರನ್ನು ಮುಗ್ಧಗೊಳಿಸುವ ಉತ್ತಮ ಫೋಟೋಗ್ರಾಫಿ ಮತ್ತು ಸುಪ್ರಸಿದ್ಧ ವೇಲ್ ಪಿಕ್ಚರ್ಸ್ ಸ್ಟುಡಿಯೋದಲ್ಲಿ ತಯಾರಿಕೆ.

ನಾಟಕ ಲೇಖಕರೂ, ಉತ್ತಮ ನಟರೂ ಆದ ಸಿಂಹರವರೇ, ನಿರ್ದೇಶಕರು.

ಅಪರಿಮಿತ ಹಣವೆಚ್ಚದಿಂದ ತಯಾರಿಸಿರುವ ಅಮೋಘಕರ ಸೃಷ್ಟಿ.

ಪ್ರತಿಯೊಬ್ಬ ಕಲಾಭಿಮಾನಿಯೂ ಉತ್ಸುಕತೆಯಿಂದ ಎದುರು ನೋಡುತ್ತಿರುವ, ಚಲನಚಿತ್ರ.

For Booking Apply to Devi Films Ltd., 501, Mint Street P. T. Madras.

ಪ್ರಾಚೀನ ಕನ್ನಡ ವಚನ ಗ್ರಂಥಗಳು.

ಸೌಗಂಧಿಕಾಪರಿಣಯ:—ಪೂರ್ವದಲ್ಲಿ ದೇವೇಂದ್ರನಿಗೆ ದೂರ್ವಾಸ ಮುನಿಗಳಿಂದ ಆಶೀರ್ವಾದ ಪೂರ್ವಕವಾಗಿ ಕೊಡಲ್ಪಟ್ಟ ಕಮಲಮಾಲಿಕೆಯನ್ನು ಆನೆಯ ಕುಂಭಸ್ಥಳದಲ್ಲಿಟ್ಟವನಿಗೆ, ಆನೆಯು ಆ ಮಾಲಿಕೆಯನ್ನು ಕಾಲಿನಲ್ಲಿ ಹೊಸಕಿ ವ್ಯರ್ಥಪಡಿಸಲು, ಮುನಿಗಳ ಶಾಪದಿಂದ ಭೂಲೋಕದಲ್ಲಿ ರತ್ನಪುರಿಯಲ್ಲಿ ಸುಗಂಧರಾಜನಾಗಿ ಹುಟ್ಟಿ, ಕಳಿಂಗದೇಶದ ರಾಜಪುತ್ರಿಯಾದ ಸೌಗಂಧಿಕಾದೇವಿಯನ್ನು ಸ್ವಯಂವರಮಾಡಿಕೊಂಡ, ಬಹಳ ವಿಷಯಗಳಿರುವ ಕಥೆ.

೧೫೦ ಪುಟಗಳು ಕ್ರಯ ರೂ. ೪—೪—೦

ಸಹಸ್ರಾಯುಚರಿತ್ರೆ:—ಮಾಹಿಷ್ಮತೀ ಅರಸನ ಪಟ್ಟಪತ್ನಿಯಲ್ಲಿ ದಾಕ್ಷಾಯಣಿ ವರಪ್ರಸಾದದಿಂದ ಜನಿಸಿ ಲೋಕಪ್ರಸಿದ್ಧನಾಗಿ ತನಗೆ ಇತರರಿಂದ ಬಂದ ಗಂಡಾಂತರಗಳನ್ನೆಲ್ಲಾ ಪರಿಹರಿಸಿಕೊಂಡ ಒಬ್ಬ ಮಹಾಪುರುಷನ ಕಥೆ.

೧೭೫ ಪುಟಗಳು ಕ್ರಯ ರೂ. ೨—೦—೦

ಕಾಶೀಕ್ಷೇತ್ರಮಹಾತ್ಮೆ:—ಇದರಲ್ಲಿ ೧೪ ಲೋಕಗಳ ವರ್ಣನೆ, ನದಿಗಳು, ದೇವತೆಗಳು, ಋಷಿಗಳೇ ಮುಂತಾದವರ ಉತ್ಪತ್ತಿಕ್ರಮ, ಗಂಗಾ ಸಹಸ್ರನಾಮವೇ ಮೊದಲಾದ ಅನೇಕ ವಿಷಯಗಳು ಅಡಕವಾಗಿರುತ್ತೆ.

೬೮೩ ಪುಟಗಳು ಕ್ರಯ ರೂ. ೨—೨—೦

ಅಡ್ರೆಸ್ಸು:—

ಗುಂಡ್ಲು ಪಂಡಿತ ಲಕ್ಷ್ಮಣಾಚಾರ್ಯರ ಮಕ್ಕಳು
ಶ್ರೀನಿವಾಸ ದೇಶಿಕಾಚಾರ್,
೩೦೩, ಕರುಹಟ್ಟಿ ಬೀದಿ, ಮೈಸೂರು.

RAJENDRA CINEMA
NANJANGUD.

Being Prathama Ekadasi
From 30th June—3 days Only.
'RUKMINI HARAN'
Special show at 12-30 a. m

ರಾಜೇಂದ್ರ ಸಿನಿಮಾ, ನಂಜನಗೂಡು
ಪ್ರಥಮೈಕಾದಶಿ ಪ್ರಯುಕ್ತ ಮಧ್ಯಾಹ್ನ ೧೨-೩೦ ಗಂ
ಪ್ರದರ್ಶನವು ಕೋರಿಸಲ್ಪಡುತ್ತದೆ.
'ರುಕ್ಮಿಣಿ ಹರಣ'
30—6—36 ರಿಂದ 3 ದಿನಗಳು ಮಾತ್ರ.

Edited, Printed & Published by Agaram Rangiah, B.A., at Sri Rama Press, D. Subbiah Road, Mysore.

...tered No. M 3534.



|| ಸತ್ಯಮೇವೋದ್ಧರಾಮ್ಯಹಮ್ ||

ರಾಜಧಾನಿಯ ರಾಷ್ಟ್ರೀಯ ವಾರ ಪತ್ರಿಕೆ.

ವೃದ್ಧಪಿತಾಮಹ ಎಂ. ವೆಂಕಟಕೃಷ್ಣಯ್ಯನವರ ಜ್ಞಾಪಕಾರ್ಥವಾಗಿ ಪ್ರಕಟಿಸಲ್ಪಡುವುದು.

ಸಂಪಾದಕರು ಅಗರಂ ರಂಗಯ್ಯ, ಬಿ. ಎ.

Sadhvi: A Leading Nationalist Weekly of Mysore.

(FO)UNDED IN MEMORY OF MR. M. VENKATAKRISHNAYYA, THE GRAND OLD MAN OF MYSORE.

ಪು. ೧] MYSORE : MONDAY 6-7-36 ಮೈಸೂರು : ಸೋಮವಾರ ೬-೭-೩೬ [ಸಂಚಿಕೆ ೨೦

ಧರ್ಮಪ್ರಕಾಶ, ರಾವ್ ಬಹದ್ದೂರ್

ಡಿ. ಬನುಮಯ್ಯನವರು.

(ಮೈಸೂರಿನ ದಾನ ವೀರರು)

ಇವರ ದಾನ ಚಿತ್ರವು ಮೈಸೂರು ಟೌನ ಸಭೆಯಲ್ಲಿ ಸ್ಥಾಪಿಸಲ್ಪಡುವುದು

A Reliable House for Repairs of
WATCHES & GRAMOPHONES
HIGH CLASS RUBBER STAMP
Suppliers,
M V N WATCH COY,
The General Commission Agency
Lansdowne Buildings,
MYSORE

ಗಡಿಯಾರ ಮತ್ತು ಗ್ರಾಮೋಫೋನುಗಳ ರಿಪೇರಿ
ಮತ್ತು ರಬ್ಬರ್ ಸ್ಟಾಂಪುಗಳ ತಯಾರಿ
ನಮ್ಮಲ್ಲಿ ನಡೆಯುತ್ತದೆ
ಎಂ. ವಿ. ಎನ್. ವಾಚ್ ಕಂಪೆನಿ, ಮೈಸೂರು

USE ALWAYS
DERMOTONE
(SASTRIC BATHING HERBAL PREPARATION)
THE UNIQUE PRODUCT
IN THE MARKET FOR SKIN HYGIENE
ಡರ್ಮೋಟೋನ್,
ಶಾಸ್ತ್ರೀಯವಾದ ಮತ್ತು ಆರೋಗ್ಯಕರವಾದ ಚರ್ಮರಕ್ಷಣೆಯ ಚೂರ್ಣ
ಡರ್ಮಟೋನ್ ವರ್ಕ್ಸ್, ಮೈಸೂರು

ASIATIC GOVERNMENT SECURITY
LIFE ASSURANCE CO., LTD.
Head Office
Asiatic Buildings Bangalore City
PURELY A NATIONAL CONCERN
Managed by Experts
Low Premiums and Liberal Policy Conditions
Apply for Agency —
To
Mr H Venkatramiah,
Divl Supdt ASIATIC BUILDINGS,
Bangalore City
OR
To
V RANGASAMI Esq, I A B I, F C I.
General Manager

ಏಷ್ಯಾಟಿಕ್ ಲೈಫ್ ಇನ್‌ಷ್ಯೂರೆನ್ಸ್ ಕಂಪೆನಿ
ಲಿಮಿಟೆಡ್.
ಹೆಡ್ ಆಫೀಸ್: ಏಷ್ಯಾಟಿಕ್ ಬಿಲ್ಡಿಂಗ್ಸ್, ಬೆಂಗಳೂರು.
[illegible] —
ಹೆಚ್. ವೆಂಕಟರಾಮಯ್ಯ,
ಡಿವಿಜನಲ್ ಸೂಪರಿಂಟೆಂಡೆಂಟ್, ಏಷ್ಯಾಟಿಕ್ ಬಿಲ್ಡಿಂಗ್ಸ್,
ಬೆಂಗಳೂರು ಸಿಟಿ.
ಅಥವಾ
ಮಿ|| ವಿ. ರಂಗಸ್ವಾಮಿ, ಐ.ಎ., ಬಿ.ಐ., ಎಫ್.ಸಿ.ಐ. ಜನರಲ್ ಮ್ಯಾನೇಜರ್

BETTER LIGHT
LIGHTER BILLS
Use—
"BIJLEE"
ELECTRIC BULBS.
Made in INDIA.
ಸ್ವದೇಶಿ ಎಲೆಕ್ಟ್ರಿಕ್ ಬಲ್ಬುಗಳನ್ನೇ
ಉಪಯೋಗಿಸಿರಿ.
BIJLEE PRODUCTS (INDIA)
Bombay 8.
SOLE DISTRIBUTORS -
THE STATES ENGINEERING COMPANY
BANGALORE, MYSORE SHIMOGA & COIMBATORE

THE SADHVI
A LEADING NATIONALIST WEEKLY
OF MYSORE
Recommended for Schools by t
Department
No TI 3778 140—35 36.
OFFICE OF THE DIRECTOR OF PUBLIC
INSTRUCTION IN MYSORE,
Bangalore Dated 20th April 1936
MEMO.
The Newspaper "SADHVI" a Kannada Weel
recommended to all Government High, Middle
Normal School Reading Rooms in the State
PARTICULARS
Name — The Sadhvi
Editor — Mr Agaram Rangiah
Place of Publication — Mysore
ANNUAL SUBSCRIPTION
Local / Moffusil — Rs 2—4—
DIRECTO

"ಸಾಧ್ವಿ" ವಾರಪತ್ರಿಕೆ.
ವಿದ್ಯಾ ಇಲಾಖೆಯವರಿಂದ ಶಿಫಾರಸು ಮಾಡಲ್ಪಟ್ಟಿ
ಕಂಡಲೇ ಚಂದಾದಾರರಾಗಿ ಪ್ರೋತ್ಸಾಹಿಸಿರಿ.

॥ ಸತ್ಯಮೇವೋದ್ಧರಾಮ್ಯಹಮ್ ॥
ರಾಜಧಾನಿಯ ರಾಷ್ಟ್ರೀಯ ವಾರ ಪತ್ರಿಕೆ.
ವೃದ್ಧಪಿತಾಮಹ ಎಂ ವೆಂಕಟಕೃಷ್ಣಯ್ಯನವರ ಜ್ಞಾಪಕಾರ್ಥವಾಗಿ ಪ್ರಕಟಿಸಲ್ಪಡುವುದು.
ಸಂಪಾದಕರು ಆಗರಂ ರಂಗಯ್ಯ, ಬಿ ಎ

ಸಂಪುಟ ೧] MYSORE : MONDAY 6—7—36 ಮೈಸೂರು : ಸೋಮವಾರ ೬—೭—೩೬ [ಸಂಚಿಕೆ ೨೦

ಪ್ರಭುಗಳವರ ಇಂಗ್ಲೆಂಡ್ ಪ್ರಯಾಣ.

ನಮ್ಮ ಶ್ರೀಮನ್ ಮಹಾರಾಜರವರು ಕ ...ಂಗಳು 27ನೇ ತಾ॥ ಶನಿವಾರ ...ಸಂಜೆ ಸಮಯದಲ್ಲಿ 'ರಾಣಿ ... ಹಡಗನ್ನು ಹತ್ತಿ ಯೂರೋಪಿನ ...ಯಾಗಿ ಪ್ರಯಾಣ ಬೆಳೆಸಿದರು ...ಊ—ಬೊಂಬಾಯಿ ಮಾರ್ಗದಲ್ಲಿ ... ಅಪರಿಮಿತವಾಗಿ ಸಮುದ್ರವು ...ಕಲ್ಲೋಲಸ್ಥಿತಿಯಲ್ಲಿದ್ದುದರಿಂದ ... ಸಂಜೆ ಐದುಘಂಟಗೆ ಹೊರಡಬೇ... ಹಡಗು ರಾತ್ರಿ ಒಂದುಗಂಟೆಯ ...ಗೂ ತಾಮಸಪಡಬೇಕಾಯಿತು

ಪ್ರಭುಗಳ ಪರಿವಾರ:—ಪ್ರಭುಗಳವ... ಶ್ರೀಮಾನ್ ಯುವರಾಜರೂ, ದಿವಾನ್ ...ಮಿರ್ಜಾರವರೂ, ಮಿ॥ ಗಳವ... ಮೇಜರ್ ನವೀಯಾನ್, ಪಿ ಸು...ಣ್ಯಯ್ಯರ್, ಎಸ್ ಗೋಪಾಲರಾ... ಬಲಕಂಠರಾಜ್, ಎ ವಿ ಸುಬ್ರಹ್ಮಣ್ಯ...ಯರ್, ಕರ್ನಲ್ ಬಿ ಪಿ ಕೃಷ್ಣ... ಡಾ॥ ರಾಬಿನ್‌ಸನ್, ಡಾ॥ ಬಾಲ... ಶ್ರೀ॥ ಪುತ್ತೂರ್ ರಾಮಾಶಾಸ್ತ್ರಿಗಳು, ...ಶಾಸ್ತ್ರಿಗಳು ಮುಂತಾದವರೂ ...ರೂ ಇತರ ಚಿಲ್ಲರೆ ಕೆಲಸದ ... ಪ್ರಯಾಣ ಬೆಳೆಸಿದರು ನಮ್ಮ ...ಗಳವರು ವಿದೇಶ ಯಾತ್ರೆಯಿಂದ ...ವಾಗಿ ಹಿಂತಿರುಗಲಿ ಎಂಬ ಆನಂದ... ಬೊಂಬಾಯಿಯಲ್ಲಿರುವ ಮೈಸೂರು... ಪ್ರಕೃತಿ ಬಹಳ ಮಂದಿ, ವಿಪರೀತ ...ವುದ್ದ ಮಳೆಯನ್ನೂ ಕೂಡ ... ಪ್ರಭುಗಳನ್ನು ಬೀಳ್ಕೊಡಲು ...ದ್ದರು

...ಪಾಧ್ಯಾಯ ಕೆ. ರಾಮಸ್ವಾಮಿ ... ಮೈಸೂರು ಅಸೋಸಿಯೇಷನ್ ... ಶ್ರೀಮನ್ಮಹಾರಾಜರವರಿಗೆ ಪು... ಅರ್ಪಿಸಿದರು

ಹಡಗಿನಲ್ಲಿ ಏರ್ಪಾಡುಗಳು

..."ರಾಣಿ" ಹಡಗು ಪಿ ಅಂಡ್ ...ಕಂಪನಿಯವರ ಹೆಸರುವಾಸಿಯಾದದ್ದು ... ನೌಕೆಯೆಂದೂ ಪ್ರತೀತಿ ... ನಯನಮನೋಹರವಾದ ... ವಿಶಾಲವಾದ "ಡೆಕ್" ... ವಿಶ್ರಾಂತಿ ಸುಖಮಯವಾದ "ಲಾಂ... ಉಳ್ಳ ಈ ಹಡಗಿನಲ್ಲಿ ಪ್ರಯಾಣಮಾಡುವುದೇ ಒಂದು ಸುಯೋಗ

ನಮ್ಮ ಪ್ರಭುಗಳವರ ಕುಲದೇವತೆಯಾದ ಶ್ರೀ ಚಾಮುಂಡೇಶ್ವರಿ ವಿಗ್ರಹವು ಹಡಗಿನ ಒಂದು ಭಾಗದಲ್ಲಿ ಪ್ರತಿಷ್ಠಿತವಾಗಿದೆ ಆ ಕೊಠಡಿಯು ಪ್ರಭುಗಳವರಿಗೆ ಮೀಸಲಾಗಿಟ್ಟಿದ್ದು ಪೂಜಾದಿ ಕಾಲಗಳಲ್ಲಿ ಪುರೋಹಿತರಿಗೆ ಮಾತ್ರ ಒಳಕ್ಕೆ ಪ್ರವೇಶ

ಪ್ರತಿ ದಿನವೂ ಶ್ರೀ॥ ಪಿ ಸುಬ್ರಹ್ಮಣ್ಯ ಅಯ್ಯರವರೂ, ಪುತ್ತೂರು ರಾಮಾಶಾಸ್ತ್ರಿಗಳವರೂ ತತ್ವಶಾಸ್ತ್ರದ ಹಲವು ಮುಖ್ಯ ಗ್ರಂಥಗಳನ್ನೂ ಇತರ ಉತ್ತಮೋತ್ತಮ ಗ್ರಂಥಗಳ ಭಾಗಗಳನ್ನೂ ಪ್ರಭುಗಳವರ ಸಮ್ಮುಖದಲ್ಲಿ ಓದುವರು

ಪ್ರತ್ಯೇಕವಾದ ಪಾಕಶಾಲೆಯೂ ಸಹ ಏರ್ಪಡಿಸಿದೆ

ಲಂಡನ್ನಿನಲ್ಲಿ ಏರ್ಪಾಟುಗಳು

ಶ್ರೀಮನ್ಮಹಾರಾಜರವರು ತಮ್ಮ ಪರಿವಾರದೊಡನೆ ಲಂಡನ್ನಿನಲ್ಲಿರುವ ಡಾರ್ಚೆಸ್ಟರ್ ಹೋಟೆಲಿನಲ್ಲಿ ಬಿಡಾರಮಾಡುವರು ಹಡಗಿನಲ್ಲಿದ್ದಂತೆಯೇ ಅಲ್ಲಿಯೂ ಕೂಡ ಪ್ರತ್ಯೇಕ ಪಾಕಶಾಲೆ ಮತ್ತು ಪೂಜಾಗೃಹಗಳು ಸಿದ್ಧವಾಗುವುವು

ಕಾರ್ಯಕ್ರಮ

ಪ್ರಭುಗಳು ಇಂಗ್ಲೆಂಡ್, ಫ್ರಾನ್ಸ್, ಸ್ವಿಜರ್ಲೆಂಡ್, ಜರ್ಮನಿ, ಇಟಲಿ, ಆಸ್ಟ್ರಿಯಾ, ಹಂಗೆರಿ ದೇಶಗಳಲ್ಲಿ ಸಂಚರಿಸುವರು

ಇಂಗ್ಲೆಂಡಿನ ಪ್ರವಾಸದಲ್ಲಿರುವಾಗ ಬೆಂಗಳೂರು ದಂಡಿನ ಪುನರ್ವಿಭಜನೆಯ ವಿಷಯವನ್ನೂ, ಅಧಿಕಾರಿವರ್ಗದೊಂದಿಗೆ ಪ್ರಸ್ತಾಪಿಸುವರೆಂದು ಒಂದು ರಾಜಕೀಯ ಸಮೂಹದಲ್ಲಿ ಒಂದು ವದಂತಿಯು ಹುಟ್ಟಿದೆ.

ಶ್ರೀಮನ್ಮಹಾರಾಜರವರು ಲಂಡನ್ನಿನಲ್ಲಿ ಒಂದು ತಿಂಗಳು ನಿಲ್ಲುವರು ಆಕ್ಸ್‌ಫರ್ಡ್ ಮತ್ತು ಕೇಂಬ್ರಿಡ್ಜಿಗೂ ಭೇಟಿಕೊಡುವರು ಯೂರೋಪಿನಲ್ಲಿ ಮೂರುವಾರಗಳ ಕಾಲ ಸಂಚರಿಸಿ ಬರುವಾಗ ಮಾರ್ಸೇಲ್ಸಿನಲ್ಲಿ "ಸ್ಟ್ರಾತ್ ನೇವರ್" ಹಡಗನ್ನು ಹತ್ತಿ ಸೆಪ್ಟಂಬರ್ ತಾ॥ 29 ಕ್ಕೆ ಬೊಂಬಾಯಿಗೆ ಬರುವರು

ಮೈಸೂರೇಕೆ ಹಿಂದುಳಿಯಬೇಕು ?

ನಮ್ಮ ದೇಶವು ಎಲ್ಲ ವಿಷಯಗಳಲ್ಲಿಯೂ ಗಾಂಧಿ ಎಂಬುದನ್ನು ... ಸಹಜವೇ ಸರಿ ... ಅದರಲ್ಲಿಯೂ ... ಈ ... ತರಗತಿಯನ್ನು ಪಡೆಯುವುದು ... ಕೆಲವು ವಿಷಯಗಳ ಹಿಂದೆ ಸೈದರಾಬಾದಿನ ಸಿನಿಮಾ ಮಂದಿರದಲ್ಲಾದ ಅನಾಹುತವು ಎಲ್ಲರನ್ನೂ ಎಚ್ಚರಗೊಳಿಸಿತು ಕೂಡಲೆ ನಮ್ಮ ಪ್ರದೇಶದವರು ಬೆಂಗಳೂರಿನಲ್ಲಿಯೂ, ಮತ್ತು ಮೈಸೂರು ಡಾ॥ ಎಸ ಪಿ ಯವರ ರಾಜವಾನಿಯಲ್ಲಿಯೂ ಸಿನಿಮಾ ಮಂದಿರಗಳ ವಿಷಯದಲ್ಲಿ ಇನ್ಸ್‌ಪೆಕ್ಟರನ್ನು ಮುಂಜಾಗ್ರತೆ ... ಅವರ ಇನ್ಸ್‌ಪೆಕ್ಷನ್ ... ವಿಗ ಪ್ರಯೋಜನವಾಗಿದೆ ಎಂದೇ ... ಇದರಂತೆಯೇ ಶಿವಮೊಗ್ಗ, ದಾವಣಗೆರೆ, ತುಮಕೂರು, ತಿಪಟೂರು ಮುಂತಾದ ಕಡೆಗಳಲ್ಲೂ ಅಧಿಕಾರಿವರ್ಗವು ಯಾವ ಜಾಗರೂಕತೆಯನ್ನು ವಹಿಸಿರುವರೋ ಎಂಬ ವಿಷಯ ಪ್ರಚಾರವಾಗಿಲ್ಲ

ಯಾರು ಮಾಡಲಿ ಮಾಡದಿರಲಿ, ಅಗ್ನಿದೇವನು ಮಾತ್ರ ಸನ್ನಾತನಾಧವೆ ತನ್ನ ಕಾರ್ಯವನ್ನು ಮಾಡಿಯೇ ಬಿಟ್ಟು ಪೂರ್ಣಾಹುತಿಯ ಗುರುತುಮಾಡಿದೆ ... ಅದೂ ಎಲ್ಲಿ? ತುಮಕೂರು ಜಿಲ್ಲಾ ತಿಪಟೂರು ಟೌನಿನಲ್ಲಿ ಜೂನ್ ತಾ॥ 21 ನೆಯ ರಾತ್ರಿ ಯಕ್ಷೇಶ್ವರನಿಗೆ ಸಿನೀಮಾ ಕ್ಯಾಬಿನ್ನಿನಲ್ಲಿದ್ದ ಇಬ್ಬರು ಆಪರೇಟರುಗಳೇ ಬೇಕಾಯಿತಂತೆ ... ಯಸ್ಥಿರತಕ

ಸಂಚಾರ ಕ್ರಮ

ರಾಣಿ ಹಡಗಿನ ಪ್ರಯಾಣದ ಅವಧಿ	13	ದಿವಸ
ಮಾರ್ಸೇಲ್ಸಿನಲ್ಲಿ ಬಿಡಾರ	1	,,
ಪ್ಯಾರಿಸ್ಸಿನಲ್ಲಿ ಬಿಡಾರ	6	,,
ಲಂಡನ್ನಿನಲ್ಲಿರುವುದು	15	,,
ಯೂರೋಪಿನಲ್ಲಿ ಸಂಚಾರ	22	,,
ಸ್ಟ್ರಾತ್ ನೇವರ್ ಹಡಗಿನ ಪ್ರಯಾಣದ ಅವಧಿ	13	,,

ಈ ರೀತಿ ಹಂಗಾಮಿ ಕಾರ್ಯಕ್ರಮವು ಗೊತ್ತಾಗಿದೆ

ಮತ್ತೊಬ್ಬನನ್ನಾದರೂ ಬಿಟ್ಟುಕೊಡುವನೋ ಇಲ್ಲವೋ ನೋಡಬೇಕು. ಅಂತು ಹೇಗಾದರೂ ಆಗಲಿ ಇತರರು ಹೇಳುವಂತೆ ಮಾಡಲಿ ಮೈಸೂರು ಎಂದೂ ಹಿಂದಾಗಬಾರದಲ್ಲವೆ ?

ಜಗ್ಗು ಸೇತುವೆಯ ಪಲ್ಲಿ.

ನಮ್ಮ ಶ್ರೀರಂಗಪಟ್ಟಣದ ವೆಲ್ಲೆಸ್ಲಿ ಸ್ವರ್ಗ ಬಳಿ ಇದ್ದ ಪ್ರಾಚೀನ ಜಗ್ಗು ಸೇತುವೆಯು ಕಳೆದ ಗುರುವಾರ ಬೆಳಿಗ್ಗೆ ಮುರಿದು ಬಿತ್ತು. ಇದು ಮೈಸೂರು ಹುಲಿಯಾಗಿದ್ದ ಟೀಪು ಸುಲ್ತಾನರ ಕಾಲದಲ್ಲಿ 'ಡಿ ಹ್ಯಾವಿಲ್ಯಾಂಡ್' ಎಂಬ ಫ್ರೆಂಚ್ ಇಂಜನಿಯರಿಂದ ಮಾಡಲಾಗಿ ಕಟ್ಟಲ್ಪಟ್ಟಿತ್ತು ಇದರ ಉದ್ದ 112 ಅಡಿ ಇದೆ ಕಾವೇರಿ ನದಿಗೆ ಇದೇ ಮಾದರಿಯ ಸೇತುವೆಯನ್ನು ಕಟ್ಟಬೇಕೆಂಬ ಸಂಕಲ್ಪವು ಆ ಶಿಲ್ಪಿಗೆ ಇತ್ತೆಂದು ತಿಳಿಯಬರುತ್ತದೆ ನಮ್ಮ ಸರ್ಕಾರದವರು ಈಗ ಎಲ್ಲೆಲ್ಲೂ ಹಳೆ ಕಟ್ಟಡಗಳನ್ನು ಉರುಳಿಸಿ, ನೆಲಸಮ ಮಾಡುವುದು ಕೂಡಲೇ ಅಲ್ಲೊಂದು ಪತ್ರವನ್ನು ನಿರ್ಮಿಸುವುದು, ಇಲ್ಲವೇ ಅದನ್ನೇ ಸ್ವಲ್ಪ ಜೋಪಾನಗಾರಿಕೆಯಿಂದ ತಳುಕು ಮಾಡುವುದು ಇನಲ್ಲಾ ನಾಮಮಾತ್ರಕ್ಕೆ ' ಅದರಂತೆ ಈ ಜಗ್ಗು ಸೇತುವೆಯು ಸರಕಾರದವರ ದೃಷ್ಟಿಗೆ ಬೀಳಲಿಲ್ಲ ಇನ್ನು ಎಷ್ಟು ದಿನಗಳ ಸುಮ್ಮನಿರಲಾದೀತು ? ಹೇಗೂ ಮಿಂದು ಪಲ್ಲಿನಾದರೂ ಹೊಡೆಯೋಣ ಅಂತ ಉಗ್ರಾಹಾಕಿತು' ಇನ್ನು ಮುಂದೆ ಅದರ ಪೂರ್ವೋತ್ತರದ ಪ್ರಸಂಗಾರಂಭವಾಗುತ್ತದೆ ಆದನ್ನೆ ಪೋಲೀಸು ಬ್ಯಾಂಡೇಜಾಗಿ ಮೊದಲಿನಂತೆ ಆರೋಗ್ಯ ಭಾಗ್ಯವನ್ನು ಪಡೆಯಲಿರುವ ... ಜಗದ್ವ್ಯಾಪ್ತಿಯಾದ ... ರಿಯಾಗಿ ... ಮುಕ್ತಿ ಸಾಮ್ರಾಜ್ಯವನ್ನು ಪಡೆಯಿಂದು ಜಲಾಧಿವಾಸಕ್ಕೆ ಹೋಗಲಿಕ್ಕೆ ಇರುವರೋ ನೋಡಬೇಕು

ಮಿ॥ ರೇಲಿಯವರು.

ಇಂಗ್ಲೆಂಡಿಗೆ ಹೋಗಿದ್ದ ಚೀಫ್ ಜಸ್ಟಿಸರಾದ ಮಿ॥ ರೇಲಿಯವರು ಕಳೆದ ತಿಂಗಳು 28 ನೇ ತಾ॥ನ ದಿವಸ, ಬದಲಿ ಕೆಲಸ ನೋಡುತ್ತಿದ್ದ ಶ್ರೀ॥ ಕೆ ಶಂಕರ ನಾರಾಯಣರಾಯರವರಿಂದ ಛಾರ್ಜನ್ನು ಪಡೆದರು

ನಿಮಗೆ ಗೊತ್ತೇ?

ಲೇಖಕರು —ಎಂ. ವಿ. ನಾರಾಯಣ ಮೂರ್ತಿ, ಮೈಸೂರು

೧ ಕುಣಿಯುವ ಬೆರಳುಗಳು —ಫ್ರಾನ್ಸಿನ ಜಾರ್ಜ್ ಆಂಡ್ರೆ ಮಾರ್ಟಿನ್ ಎಂಬುವನ ಹೆಸರು ಅವನ ಎರಡು ಬೆರಳುಗಳಿಂದ ಪ್ರಸಿದ್ಧಿಗೆ ಬಂದಿದೆ. ಇವನು ತನ್ನ ತನ್ನ ಬೆರಳುಗಳನ್ನೇ ಒಂದು ಬೊಂಬೆಗೆ ಕಾಲಿನ್ನಾಗಿ ಉಪಯೋಗಿಸಿ ಕುಣಿಸುತ್ತಾನೆ. ಹೀಗೆ ಕುಣಿಸಲು ಆತನಿಗೆ ಐದು ವರ್ಷಗಳ ಅಭ್ಯಾಸ ಬೇಕಾಯಿತಂತೆ! ಅವನ ಬೆರಳುಗಳನ್ನು ೩ ಲಕ್ಷ ರೂಪಾಯಿಗೆ ವಿಮೆ ಮಾಡಿರುವರು!

೨ ಗೋಧಿಕಾಳು —ಜಪಾನಿನ ಒಂದು ದೇವಾಲಯದಲ್ಲಿ ಒಂದು ಸಾವಿರ ವರ್ಷ ಹಳೆಯದಾದ ಪ್ರತಿಮೆಯನ್ನು ರಿಪೇರಿ ಮಾಡುವಾಗ ೧೬ ಬಿಕ್ಕಿಕಾಳುಗಳಿದ್ದವು. ಈ ಪ್ರತಿಮೆಯನ್ನು ವಾಯುಬಂಧನ ಮಾಡಿದ್ದರಿಂದ ಆ ಕಾಳುಗಳು ಕೆಡಲಿಲ್ಲವೆಂದು ಶಾಸ್ತ್ರಜ್ಞರು ಕಂಡು ಹಿಡಿದಿದ್ದಾರೆ.

೩ ೧೧೭ ನೇ ವರ್ಷದ ಹುಟ್ಟಿದಹಬ್ಬ —ಜಪಾನಿನ ಒಬ್ಬನು ತನ್ನ ನೂರೇಳನೆಯ ಹುಟ್ಟಿದ ಹಬ್ಬವನ್ನು ಮಾಡಿಕೊಂಡಿರುವನಂತೆ! ಇವನು ಟೀ ಕುಡಿಯುವುದರಿಂದಲೂ, ಹೊಗೆಸೊಪ್ಪನ್ನು ಸೇದುವುದರಿಂದಲೂ ತಾನು ಇಷ್ಟು ವರ್ಷ ಬದುಕಿರುವೆನೆಂದು ಹೇಳುತ್ತಾನೆ. ಇವನು ಈಗಲೂ ಗಾರ್ಡನ ಕೆಲಸವನ್ನು ಮಾಡುತ್ತಿರುವನು.

೪ ದಿನಕ್ಕೆ ೪ ಹೊಸ ಸ್ಟಾಂಪು —ಯೂರೋಪಿನಲ್ಲಿ ೧೯೩೪ ರಲ್ಲಿ ದಿನಕ್ಕೆ ೪ ರಂತೆ ಸ್ಟಾಂಪಿನ ಹೊಸ ಪ್ರತಿ (New issues of stamps) ಗಳನ್ನು ಹೊರಡಿಸುತ್ತಿದ್ದರು. ಯೂರೋಪು ಒಂದು ವರ್ಷದಲ್ಲಿ ೧೪೭೬ ಸ್ಟಾಂಪುಗಳನ್ನು ಹೊರಡಿಸಿದೆ. ಈಗ ಹೊರಡಿಸಿರುವ ಲಕ್ಷ [illegible]

೫ ೭೦೦ ವರ್ಷದ ಆಮೆ —ಲಂಡನ್ನಿನ ಒಂದು ಮೃಗ ಬಂಗಲೆಯಲ್ಲಿ (ZOO) ೭೦೦ ವರ್ಷದ ಒಂದು ಆಮೆಯು ಈಗ ೩ ಮರಿಗಳನ್ನು ಹಡೆದಿರುವುದಂತೆ.

೬ 'ತಿಂಡಿಪೋತರಾಜ'' —ಚಾರ್ಲ್ಸ್ ವಿಂಟರ್ ಎಂಬುವನಿಗೆ 'ತಿಂಡಿಪೋತರಾಜ' ನೆಂಬ ಹೆಸರು ಬಂದಿದೆ. ಇವನು ೩೬೬ ಪೌಂಡು ತೂಗುತ್ತಾನೆ.

೭ ನಾಲ್ಕು ವರ್ಷ ನಿದ್ರೆ —ವಿಲ್ಬರ್ ನೇವ್ ಎಂಬುವನು ತನ್ನ ನಾಲ್ಕು ವರ್ಷ ನಿದ್ರೆಯಿಂದ ಈಗ ಎದ್ದಿರುವನು. ಈತನು ಕೃಷಿ ಕೆಲಸದಲ್ಲಿದ್ದಾನೆ.

೮ ಅತಿಕುಳ್ಳ —ಪ್ರಪಂಚದಲ್ಲೆಲ್ಲಾ ಕುಳ್ಳನಾದ ಲಾಸಿಸು ಜಾಂಟ್ ಎಂಬುವನು ೨೦ ಇಂಚು ಎತ್ತರವಾಗಿದ್ದಾನೆ.

೯ ಬಹಳ ಹೆಚ್ಚು —ಇಂಗ್ಲೆಂಡಿನಲ್ಲಿ ಇದುವರೆಗೂ ಆದ ಅತಿ ಹೆಚ್ಚಾದ ಉಷ್ಣಾಂಶದ ರೆಕಾರ್ಡುಗಳಲ್ಲಿ 72° F ಉಷ್ಣಾಂಶವೇ ಅತಿ ಹೆಚ್ಚಂತೆ!

೧೦ 257,000 ಬೀಜ=1 ಪೌಂಡು — 2,7000 ಮೂಲಂಗಿ ಬೀಜಗಳನ್ನು ಒಂದು ತ್ರಾಸಿನಲ್ಲಿ ತೂಗಿದರೆ 1 ಪೌಂ ತೂಗುವುದು!

ಇಣುಕಪ್ಪನ ನೋಟ.

ನವವರ್ಷದ—ನರಕಯಾತನೆಗಳು.

ಸಾಮಾನ್ಯವಾಗಿ ಪ್ರತಿ ತಿಂಗಳು ಮೊದಲನೆ ವಾರದ 1, 2, 3, 4, 5,ನೇ ತಾ|| ಗಳು ಬರುತ್ತೆಂದರೇನೇ ಎಲ್ಲರ ಮನಸ್ಸಿಗೂ ಒಂದುತರದ ಉಲ್ಲಾಸ. ಹಣಕಾಸಿನ ಚಲಾವಣೆಗಳು ನಡೆದು ಲಕ್ಷ್ಮಿಯ ಪೂರ್ಣ ಪ್ರಸನ್ನತೆಯು ಅವರವರ ದರ್ಜಾನುಸಾರವಾಗಿ ಪ್ರತಿಯೊಬ್ಬರಿಗೂ ಉಂಟಾಗತಕ್ಕ ಸೀಜನ್ ಒಟ್ಟಿನಲ್ಲಿ ಸಾರ್ವತ್ರಿಕರ ಸಂತೋಷ ಸಮಾರಂಭದ ವಾರವೆಂದೇ ಕರೆದ ಬಹುದು. ಲಕ್ಷ್ಮಿಯು ಚಂಚಲೆಯಲ್ಲವೇ? ಭಾಗ್ಯ, ದೌರ್ಭಾಗ್ಯ ಎಂಬಂತೆ ಎಲ್ಲಾ ತಿಂಗಳುಗಳೂ ಒಂದೇಸಮನಾಗಿರುವುದು ಸಾಧ್ಯವೇ? ಇಲ್ಲ. ಇಂಗ್ಲೀಷ್ ಗಣನೆಯ ಪ್ರಕಾರ ಜೂನ್ ತಿಂಗಳು ಕಳೆದು ಜುಲೈ ತಿಂಗಳು ಹುಟ್ಟುತ್ತೆಂದರಂತೂ ಎಲ್ಲರಿಗೂ ಒಂದು ತರಹವಾದ ಕಂಪಾಯಮಾನವಾಗುವುದು.

ಮೊದಲು ಪ್ರಭುತ್ವದ ಕಡೆ ನೋಡೋಣ. ವಾರ್ಷಿಕ ಬಜೆಟ್ ಆಗಬೇಕು. ಆಗಬೇಕಾದ ಖರ್ಚುಗಳೆಲ್ಲಾ ಆಗಿ ಜಮಾವನ್ನು ಗಣಿಸುವುದಕ್ಕೆ ಬದಲು ಸಾಲ ಸೋಲಗಳಿಂದಲಾದರೂ ಹೆಸರುಮಾತ್ರಕ್ಕೆ ಸರ್‌ಪ್ಲಸ್ ಆದಾಯ ತೋರಿಸತಕ್ಕ ಕೈಚಳಕ ತೋರಬೇಕು. ಜಾಂಬವಂತರುಗಳು ಹೊಸಹೊಸದಾಗಿ ಎಕ್ಸ್‌ಪೆನ್ಷನ್‌ಗಳನ್ನು ಕೂಡಬೇಕು. ತಮಗೆ ಬೇಕಾದವರ ಸಾದರ ಪ್ರೋತ್ಸಾಹಗಳಿಗಾಗಿ ಹೊಸಹೊಸ ಉದ್ಯೋಗಗಳನ್ನು ಕಲ್ಪನೆ ಮಾಡಬೇಕು. ವರ್ಷಂಪ್ರತಿ ಧಾರಾಪೂರ್ವಕರಂತೆ ಆಗುತ್ತಿರುವ ಸಾಲ ಪತ್ರಗಳನ್ನು ಹೆಚ್ಚುಕಾಲಕ್ಕೆ ಪರಿವರ್ತನೆ ಮಾಡುವ ಏರ್ಪಾಡಾಗಬೇಕು. ಎಲ್ಲಕ್ಕಿಂತಲೂ ಮಿಗಿಲಾಗಿ ಅಭ್ಯಾಸದಿಂದಲೋ ಅಭ್ಯರ್ಥನೆಯಿಂದಲೋ ಮನೆಯ ಅಳಿಯಂದಿರಿಗಿಂತಲೂ ಹೆಚ್ಚಾಗಿ ಬಂದು ಹೋಗತಕ್ಕ ಅತಿಥಿ ಅಭ್ಯಾಗತರ ಉಡಿಕೆತೊಡಿಗೆಗಳೂ, ಊಟ, ಉಪಚಾರಗಳೂ ನಡೆಯಬೇಕು. ಅವರ ಮನಸ್ಸನ್ನಾಕರ್ಷಿಸತಕ್ಕಂತೆ ನಗರ ಸೌಂದರ್ಯಗಳು ಆಗುತ್ತಲೇ ಇರಬೇಕು. ಇವಕ್ಕೆಲ್ಲಾ ದುಡ್ಡಿನ ಮೊತ್ತಸ್ಸ ನೋಡು ಬಂದಿಲ್ಲದ ಗತ್ಯಂತರವಿಲ್ಲ. ಯಾರೇ ಬನೆಯೋನು? ಹರಕಲು ಕೂಳು ಕಲುಬಟ್ಟೆಯನ್ನುಟ್ಟು ಹಳಸಿದ ಹಸಿದ ಹೊಟ್ಟೆ, ಅಂಬಲಿ ತಿಂದು, ಗಾಳಿ ಮಳೆ ಆಸ್ಪೋಟ ಇಲ್ಲದೆ ಕಾಡುಮೇಡುಗಳಲ್ಲ ಅಲೆದು ಪರಿಶ್ರಮವನ್ನು ನಂಬಿರೋ ಬೋರೇಗೌಡರುಗಳು ಇದ್ದೇಇರಲಿಲ್ಲ. ಅವರ ಜೆನ್ನುಮೂಳೆಗಳು ಸ್ವಾಹೋಗುವವರೆಗೂ ಸರತಿ ಕಂದಾಯದ ಹೊರಗಳನ್ನು ಮಾರಿ, ಲಾಟರಿ, ನಾಯಕರುಗಳು, ಕಂಟ್ರಾಕ್ಟರು, ನೋಟರುಗಳಿಗೆ ಸುಲಿಗೆ ನೀಡುವ ಮಾತಿನ ಮೊನಚುಯುಕ್ತಿಗಳು.

ಇನ್ನು ಸಾರ್ವತ್ರಿಕವಾದ ವ್ಯಾಪಾರ ನೋಡೋಣ. ಆದಾಯ ತೆರಿಗೆಯು ಹೆಚ್ಚು ಹಾಕಿದ್ದಾರೆ. ಕಮ್ಮಿ ಮಾಡಿಕೊಳ್ಳಲು ಉಪಾಯ ತ ಬೇಕಾದವು. ಹೆಸರುಕೋಣಂಗಿ ಎಂಬಂತೆ ದೊಡ್ಡ ದೊಡ್ಡ ಬಸ್ ಸರ್ವೀಸುಗಳನ್ನಿಟ್ಟುಕೊಂಡು ನೂರಾರು ಬಡವರ ಪೋಷಣೆಗೆ ಆಶ್ರಯದಾತರಾಗಿರತಕ್ಕವರಿಗೆ, ಹೊಸ ಸೆಸ್ಸುಗಳ ಪ್ರವೇಶದಿಂದ ಇಕ್ಕಟ್ಟಿನ ಪ್ರಸಂಗಗಳು. ಕೈಗಾರಿಕೆಯ ಜೀವನಕ್ಕೆ ಆರ್ಥಿಕ ಮುಗ್ಗಟ್ಟಿನಿಂದಲೂ ವ್ಯಾಪಾರದ ಸ್ಪರ್ಧೆಗಳಿಂದಲೂ ಮುಜುಗರ. ಓದಿ ಪ್ಯಾಸುಗಳನ್ನು ಮಾಡಿ ಸರ್ಟಿಫಿಕೇಟುಗಳ ರಾಶಿ ಹಾಕಿಕೊಂಡಿರುವವರಿಗೆ ಕೆಲ್ಸ ದೊರೆಯಲಿಲ್ಲವಲ್ಲಾ ಎಂಬ ಮನೋಕ್ಲೇಶ ಮತ್ತು ತನ್ಮೂಲಕವಾದ ಆತ್ಮಹತ್ಯಗಳೂ, ಮತ್ತೆ ಕೆಲವರಿಗೆ ತಮ್ಮ ಮನೆಗಳನ್ನಾದರೂ ಮಾರಿ ಮಕ್ಕಳ ವಿದ್ಯಾಭ್ಯಾಸಂಗ ಮಾಡಿಸಬೇಕೆಂಬ ಉತ್ಕಟಾಕಾಂಕ್ಷೆ. ಕೆಲಸಕಾರ್ಯಗಳಿಲ್ಲದವರು ರಿಟೈರಾಗಿ ಮೊದಲಿನ ದರ್ಜೆಯಂತ ತೂಗಲಾರದ ತಲ್ಲಣಿಸುವರೆಷ್ಟು ಮಂದಿಯೋ? ಹೀಗೆಯೇ ಜುಲೈ ತಿಂಗಳು ಹಲವರಿಗೆ ಸಂತೋಷವನ್ನು ಬಹುತ್ರ ದುಃಖವನ್ನು ಉಂಟು ಮಾಡತಕ್ಕ ಕಾಲವಾಗಿದೆ.

ಬಡ ಹುಡುಗ

(ಪಾಠಿಯ ಮಹಿಮೆ)

ಎ. ನಾರಾಯಣ ಶಾಸ್ತ್ರಿಗಳಿಂದ.

'ಸ್ವಾಮಿದೇವನೆ" ಎಂಬಂತೆ

ಅಪ್ಪ ಮಡಿದನು ಅಮ್ಮ
ತೀರಿದ ಳಸ್ವರಾ ರಿನಗಿಲ್ಲವು।
ಬೆಪ್ಪ ಬಂದಿತು ಎನಗ ಉಡಿಗೆಯು
ದೈನ್ಯವಾಯಿತು ನೋಡಿನೋಲ್ ॥
ಸಪ್ಪ ಸವಗಳ ತಿಂದು ಜೀವಿಪೆ
ಭಿಕ್ಷನೀಯರು ಬೇಡಿದರ್।
ಅಪ್ಪ ಮೂಡಲತಿಮ್ಮ
ರಕ್ಷಿಪುದೀಗ ರಮಾಧವಾ ॥ ೧ ॥
ಶಾಲೆಯಲ್ಲಿನ ಬಾಲಕರ್ಸ್ಲಿರು
ನನ್ನ ನೀಕ್ಷಿಸಿ ನಗುವರೈ।
ಕಾಲು, ಕಂಟಕಯುಕ್ತನಾಗಿಹು
ದಯ್ಯೊ ನಡೆಯಲು ಸಾಧ್ಯವೇ।
ಜೋಲುಮೋರೆಯು ಬಂದಿತೀಗಳೆ
ಹರ್ಷವನುತಾಂ ದೂರವೈ।
ಪಾಲುವಪಾರಿಕೆ ಯನ್ನವಿಲ್ಲದ
ಕಾರಣದಿ ಎನಗೀಗಳೆ ॥ ೨ ॥
ಹೊತ್ತಿಗೆಯು ಎನಗಿಲ್ಲ ಒದು
ವುದೆತ್ತ ಒದೆಯುವುದತ್ತನಾಂ।
ಬತ್ತಿಯನ್ನದ ಸುಣ್ಣ ಬತ್ತ
ಮದಾಂಧ ಘನಿಕನಿರಬೇಡಿ ನಾಂ।
ಉತ್ತಮಾಂಗದಿ ನೀರಿನಿಯುವ
ದೆತ್ತ ಬಿಸಿನೀರೆತ್ತ ಹಾ।
ಸತ್ತು ಹೋದವರ ಸೊಗವು ಬರು
ವುದ ಕೃತ್ತಿವಾಸ ಮಹೇಶ್ವರಾ॥೩॥
ಪಾಲುವಾಲನ್ನವರು ಜನಗಳು
ಪಾಲು ಯಂತಿಮುದಾರ್ಯರೇ।
ಲೀಲೆಯಿಂದಲಿ ಕಾಲಕಳೆ
ಯುವುದೆಂದಿಗೊ ಮಾದೇವನೆ।
ಕಾಲು ಮಸ್ತಟ ಧರಿಸ ಸವ
ಯವು ದೊರವಾಗಿಹುದೆನ್ನನೆ।
ಮೇಲುಗರಿ ತಿನ್ನುತ್ತ ರಕ್ಷಸು
ದೆನ್ನ ನೀಗಳ ದೇವನ ॥ ೪ ॥
ಇಂತು ತಪಿಸುವ ಅಣುಗನಂ ನೆರೆ
ನೋಡಿ ಮರುಗಿದ ನೋರ್ವತಾಂ।
ಸ್ವಂತವಾಗಿಹ ರಾಟೆಯೊಂದನು
ಕೊಟ್ಟು ಕಲಿಸಿದ ಜಾಡನಾ।
ತಂತುಕಾರ್ಯವ ನೆಂತರಂಗದಿ
ಚಿಂತೆ ಹೋಯಿತು ಅವನಿಗೆ।
ಕಂತುಪಿತನದಯೆ ಯಾಯ್ತು ಎನ್ನುತೆ
ಕುಣಿದು ಕುಪ್ಪಿದ ಬಾಲಕಂ ॥ ೫ ॥
ರಾಟೆಯಲಿ ನೂಲನು ತಗೆವು
ದರಿಂದೆ ಜೀವನ ಮೆನ್ನಯಾ।
ನಾಟಿ ಯಾರಿಹದಯ್ಯ ರಾಟೆಯು
ತಂದೆ ತಾಯೊಡನಾಡಿಯು।
ಕೋಟಿ ಮಾತೇಕಿನ್ನು ಬಡ
ಕಲು ರಾಟೆಗೇ ಸರಿ ಸಾಟಿಯು।
ಭೇಟಿಯಾಗದು ಎನಗೆ ಜೀ
ವನ ದೇವನೇ ಮಾದೇವನೆ॥
ಖಾದಿ ಮೇಲ್ಮೆಗೆ ಹಾದಿ ಬಡ
ವರ ಭಾಗ್ಯನಿಧಿ ಸೌಭಾಗ್ಯವು।
ಖಾದಿ ಮಂಗಳಕಾದಿ ಧರಿ
ಸಲು ಹಾದಿಯಿಲ್ಲವೆ ಪುಣ್ಯಕೆ।
ವೇದಮೂರ್ತಿಗಳೆಲ್ಲ ನೋ
ಡಲು ಖಾದಿಯನ್ನಳೆಗರಿವರೇ।
ಭೇದ ಬುದ್ಧಿಯ ಬಿಟ್ಟು ಧರಿಸಿರಿ
ಖಾದಿಯಂ ಸೊಗದಾದಿಯಂ ॥೬॥
ಸಾಕು ಸಾಕಿನ್ನೀಗ, ದುಃಖವು
ದೂರವಾಯಿತು ದೇವನೆ।
ಬೇಕು ಬೇಕಾದುದನು ತಿನ್ನುವ
ಕಾಲ ಬಂದಿತು ಖಾದಿಯಿಂ।
ಶೋಕ ಬುದ್ಧಿಯು ಬಿಟ್ಟು ನೂ
ತರ ಎಡರುಬಾರದು ಎಂದಿಗೂ।
ಮೂಕ ವಾರಕನಾಗಿ ಬದುಕುವೆ
ಖಾದಿಯಿಂ ಸುಖವಾದಿಯಿಂ ॥೭॥

ಭಾರತೀಯನ ಯೋಗ ಪ್ರದರ್ಶನ

ಖುದಾಬಕ್ಷ್ ಎಂಬ ಭಾರತೀಯ ಯೋಗ ಪ್ರದರ್ಶನವು ಲಂಡನ್ನಿನಲ್ಲಿ ಏರ್ಪಡಿಸಲ್ಪಟ್ಟಿತು. ಇವನ ಸಜೀವ ನವಾಬಿಯ ಪ್ರದರ್ಶನವು ಅಲ್ಲಿ ಸದ್ಯದಲ್ಲಿ ತೋರಿಸಲ್ಪಡುವುದು. ಅನೇಕ ವೈದ್ಯ ಡಾಕ್ಟರುಗಳೆದುರಿಗೆ ಇವನು ವಿಷದ್ರಾವಕವನ್ನು ತಣ್ಣೀರಿನಂತೆ ಕುಡಿದರೂ ಜೀವಿತನಾಗಿದ್ದಾನೆ. ಉರಿಯುತ್ತಿದ್ದ ಒಂದು ಗ್ರಿಕುಂಡದಮೇಲೆ ಬಹಳದೂರ ಬರಿಗಾಲಿನಿಂದಲೇ ನಡೆದನು.

ರಾತ್ರಿಯಲ್ಲಿ ಕಾಮನ ಬಿಲ್ಲು

ಬರ್ಮಾದಲ್ಲಿರುವ ಪಾಬೋ ಎಂಬಲ್ಲಿ ಒಂದು ರಾತ್ರೆ ಕಾಮನ ಬಿಲ್ಲು ಕಾಣಿಸಿಕೊಂಡಿತು. ಸಿಡಿಲೊಡನೆ ಬಿರುಮಳೆಯು ಸುರಿದನಂತರ ಮೋಡಗಳೆಲ್ಲಾ ಸರಿದವು. ಸ್ವಲ್ಪ ಕಾಲದಲ್ಲೇ ಚಂದ್ರೋದಯವಾಯಿತು. ಒಂದು ಕಾಮನ ಬಿಲ್ಲು ಚಂದ್ರನಿಗೆ ಎದುರಾಗಿ ಕಾಣಿಸಿಕೊಂಡಿತು. ಅದು ಸುಮಾರು ಅರ್ಧ ಘಂಟೆ ಹಾಗೆಯೇ ಇತ್ತು.

ಶ್ರೀರಂಗದ ಗೋಪುರದ ಕಳಶ ಮುರಿದು ಬಿದ್ದು ಮರಣ.

ಶ್ರೀರಂಗಸ್ವಾಮಿ ದೇವಾಲಯದ ದಕ್ಷಿಣ ಪ್ರಾಕಾರದ ಗೋಪುರದ ಕಳಶವು ಸಡಿಲವಾಗಿ ಬಿದ್ದ ಪ್ರಯುಕ್ತ ರಸ್ತೆಯಲ್ಲಿ ಹೋಗುತ್ತಿದ್ದ ಇಬ್ಬರ ಪೈಕಿ ಒಬ್ಬನು ಸತ್ತು ಮತ್ತೊಬ್ಬನು ಗಾಯಪಟ್ಟಿರುವನು.

ಆಧುನಿಕ ಇಟಲಿ

ಎ. ಎಂ. ಕೃಷ್ಣಮೂರ್ತಿಯವರಿಂದ

ಪುರಾತನ ಪಾಶ್ಚಾತ್ಯ ಸಂಸ್ಕೃತಿಗೆ ಆವಾಸಸ್ಥಾನವಾಗಿಯೂ, ಹಾಗೂ, ಪ್ರಸಿದ್ಧವಾದ ಪುರಾತನ ಸಂಸ್ಕೃತಿಗೆ ಮಾತೃಸ್ಥಾನವಾದ ರೋಮನ್ ರಾಜ್ಯದ ಆಧುನಿಕ ಹೆಸರು ಇಟಲಿ ಎಂಬುದಾಗಿದೆ. ಪ್ರಾಚೀನ ಕಾಲದಿಂದಲೂ ಇಟಲಿಯು ಪರಕೀಯರ ದಂಡಯಾತ್ರೆಗಳಿಗೆ ಸಿಲುಕಿ, ಅವರಿಂದ ತುಳಿಯಲ್ಪಟ್ಟು ಅನರ್ಥಪರಂಪರೆಗಳನ್ನು ಅನುಭವಿಸಿತು, ಸುಮಾರು 19ನೇ ಶತಮಾನದ ಉತ್ತರಾರ್ಧದಲ್ಲಿ ಆ ದೇಶದಲ್ಲಿ ಒಂದು ದೊಡ್ಡ ಗೊಂದಲವು ಉಂಟಾಯಿತು. ಸ್ವಾತಂತ್ರ್ಯ ದಾಹಪೂರಿತನಾಗಿ ಇಟಲಿಯ ನಾಗರಿಕ ಮಜ್ಜಿನಿಯೂ ದೇಶದ ಪಾಲಿಗೆ ಸಿದ್ಧರು. ಕೆಚ್ಚೆದೆಯ ವೀರ ಗೆರಿಬಾಲ್ಡಿ ಮುಂತಾದವರು ಶಸ್ತ್ರಧಾರಿ ಹೋರಾಡಿ, ಇಟಲಿಯವರನ್ನು ಒಂದುಗೂಡಿಸಿದರು. ಇಟಲಿಯು ಸ್ವಾತಂತ್ರ್ಯವನ್ನು ಹೊಂದಿ ಪಟ್ಟಾಭಿಷಿಕ್ತವಾಯಿತು.

ಮಹಾಯುದ್ಧದ ಪರಿಣಾಮ

ಜರ್ಮನ್ ಮಹಾಯುದ್ಧದಲ್ಲಿ (1914–18) ಇಟಲಿಯು ಭಾಗಿಯಾಗಿದ್ದಿತು. ಸಂಯುಕ್ತಸಂಸ್ಥಾನದ ಅಧ್ಯಕ್ಷರಾದ ಪ್ರೆಸಿಡೆಂಟ್ ವಿಲ್ಸನ್ ಎಂಬುವರಿಂದ ರಾಜಿಮಾಡಿಸಲ್ಪಟ್ಟದ್ದರಿಂದ ಯುದ್ಧ ನಿಂತಿತು. ಶಾಂತಿಸ್ಥಾಪನಾನಂತರ, ಇಟಲಿಯ ರಾಜಕೀಯ, ನೈತಿಕ, ಆರ್ಥಿಕ ಮತ್ತು ಸಾಮಾಜಿಕ ರೀತಿಗಳಲ್ಲಿಯೂ ಉಪ್ಪಿಲವನ್ನು ಹೊಂದಿದವು. ಇಷ್ಟೇ ಅಲ್ಲ, ಜರ್ಮನ್ ಯುದ್ಧದಲ್ಲಿ ವಿಜಯಪತಾಕೆಯನ್ನು ಹಿಡಿದು, ಸಂಧಿಮಾಡಲೋಸುಗ ಕರಾರುಗಳನ್ನು ಮಾಡಿಕೊಳ್ಳಬೇಕೆಂದು ಹಂಬಲಿಸುವ ಜರ್ಮನ್ ದೇಶದವರ ಬೇಡಿಕೆಯನ್ನು ನಿರಾಕರಿಸಿದರೂ, ಇಟಲಿಯು ಮಹಾಭಿಲಾಷೆಗಳು ಪೂರ್ಣಫಲವನ್ನು ಹೊಂದಲು ಅಸಾಧ್ಯವಾದವು. ಇದಕ್ಕೆ ಇಟಲಿಯ ಅಸಮರ್ಥರಾದ ರಾಜನೀತಿವಿಶಾರದರೇ ಕಾರಣಭೂತರೆನ್ನಬಹುದು. ಈ ಕಾರಣಗಳಿಂದ ದೇಶದಲ್ಲಿ ಒಂದು ದೊಡ್ಡ ಗಲಭೆಯು ಉಂಟಾಗಿ ಅನೇಕ ಕ್ರಾಂತಿಕಾರರು ತಲೆ ಎತ್ತಲು ಪ್ರಾರಂಭಿಸಿದರು. ಈ ಕ್ರಾಂತಿಕಾಲದಲ್ಲಿ, ಕೆಲವು ತರುಣ ಸ್ವಯಂಸೇವಕರನ್ನು ಹೊಂದಿ ಮುಸ್ಸೋಲಿನಿ ಎಂಬ ಮಹಾಪುರುಷನು ದೇಶದಲ್ಲಿ ನಡೆಯುತ್ತಿದ್ದ ಈ ಗಂಡಾಂತರಗಳನ್ನು ನಿವಾರಿಸಿ ಶಾಂತಿಸ್ಥಾಪನ ಮಾಡಬೇಕೆಂಬ ಮಹದಾಕಾಂಕ್ಷೆಯಿಂದ ಮುಂದೆ ಬಂದನು.

ಸಮತಾವಾದ ಮತ್ತು ಫ್ಯಾಸಿಸಂ ತತ್ವ

ರಷಿಯಾದಿಂದ ಸಮತಾವಾದದ ತತ್ವದಲ್ಲಿ ತಲೆಗೆಡಿದ ಕೆಲವರು ಈ ದೇಶದ ಕ್ರಾಂತಿಯಲ್ಲಿ ಸೇರಿ ಗೊಂದಲವನ್ನೆಬ್ಬಿಸಲು ಪ್ರಾರಂಭಿಸಿದರು. ಈ ಸಮತಾವಾದದ ತತ್ವವನ್ನು ಪ್ರತಿಭಟಿಸಲು ಮತ್ತೊಂದು ತತ್ವವು ಹೊರಹೊರಟಿತು. ಅದೇ 'ಫ್ಯಾಸಿಸಂ' ಎಂಬ ತತ್ವ. ಈ ಹೊಸ ತತ್ವಗಳನ್ನು ಅವಲಂಬಿಸಿದ ಯುವಕರು, ಮಾಜಿ ಸೈನಿಕರು ಮತ್ತು ಸಾಮಾನ್ಯ ಜನರು ಸಾವಿರಗಟ್ಟಲೆ ಅಥವಾ ಲಕ್ಷಗಟ್ಟಲೆ ಸಂಖ್ಯೆಗಳಲ್ಲಿ ಸೇರಿ ಒಂದು ದೊಡ್ಡ ಗ್ರಂಥವನ್ನೇ ಬರೆಯಬಹುದು. ಈ ವಿಷಯವಾಗಿ ಸಮತಾವಾದವನ್ನು ಪ್ರತಿಭಟಿಸಲು ಹೊರಟ ಮುಸ್ಸೋಲಿನಿ ತತ್ವವನ್ನು (ಫ್ಯಾಸಿಸಂ) ಪ್ರಾರಂಭದಲ್ಲಿ ಎಲ್ಲರೂ ಅವಹೇಳನಕ್ಕೆ ಒಳಪಡಿಸಿದರು. ಆದರೆ ಈಗ ಅದೇ ತತ್ವವನ್ನು ಅವಲಂಬಿಸಿ ಕಾರ್ಯನಡೆಸುತ್ತಿರುವ ಸರ್ಕಾರವು ಜಗತ್ತಿನ ಇತರ ರಾಷ್ಟ್ರಗಳವರನ್ನು ಬೆರಗುಗೊಳಿಸಿದೆ. ನಾಗರಿಕತೆಯಲ್ಲಿ ಹಿಂದುಳಿದ ಅನೇಕ ರಾಷ್ಟ್ರಗಳು ಇದರ ಅನುಕರಣದಿಂದ ಮುಂದೆ ಬರಲು ಪ್ರಾರಂಭಿಸಿರುವುವು. ಇದಕ್ಕೆ ಕಾರಣವು ಇಟಲಿ ದೇಶದ ಉನ್ನತ ರಾಷ್ಟ್ರಗಳನ್ನು ಅನುಸರಿಸುತ್ತಿರುವ ಈ ತತ್ವವು ಆ ದೇಶವನ್ನು ಅಭಿವೃದ್ಧಿಗೆ ತಂದು ನಾಗರಿಕತೆಯಲ್ಲಿ ಮುಂದೆ ನಡೆಯುತ್ತಿರುವುದು.

ಇಟಲಿಯ ಸರ್ವಾಧಿಕಾರಿ.

ಸಿನ್ಯರ್ ಮುಸ್ಸೋಲಿನಿ

ಮುಸ್ಸೋಲಿನಿ

ಇಪ್ಪತ್ತನೇ ಶತಮಾನದ ರಾಜಕೀಯ ನೀತಿಯಲ್ಲಿ ಮುಂದುವರಿದ ಜಪಾನ್, ಜರ್ಮನಿ, ಅಮೇರಿಕಾ ಮತ್ತು ಇಂಗ್ಲೆಂಡ್ ಮೊದಲಾದ ದೇಶಗಳಂತೆ ಇಟಲಿಯನ್ನು ಸಹ ಪರಿಷ್ಕರಿಸಿ ಅಭಿವೃದ್ಧಿಗೆ ತರಲು ಇಟಲಿಯ ಸರ್ವಾಧಿಕಾರಿಯಾದ ಮುಸ್ಸೋಲಿನಿಯು ಸಾಹಸ, ಸ್ವಾರ್ಥತ್ಯಾಗ, ಸತತಪ್ರಯತ್ನ ಮೊದಲಾದ ಗುಣಗಳಿಂದ ವಿಮಾನಯಂತ್ರಗಳು ಮತ್ತು ಪ್ರಳಯಾಂತಕ ಬಾಂಬು ಯಂತ್ರಗಳ ಉತ್ಪತ್ತಿಯಲ್ಲಿ ಇಟಲಿಯು ಮುಂದೆ ಬಂದಿದೆ. ಇದಕ್ಕೆ ನಿದರ್ಶನವೇನೆಂದರೆ, ಇಟಲಿಯ ಒಂದು ವಿಮಾನವು ಅಟ್ಲಾಂಟಿಕ್ ಸಾಗರದಲ್ಲಿ ಹಾರಾಡುವ ಒಂದು ಸ್ಪರ್ಧೆಯಲ್ಲಿ ಪ್ರಥಮಸ್ಥಾನ ಪಡೆದು ಬಹುಮಾನ ಹೊಂದಿರುತ್ತದೆ.

ಇಟಲಿಯ ವೈಶಿಷ್ಟ್ಯ

ಪ್ರಾಚೀನ ಕಾಲದಿಂದಲೂ ಇಟಲಿಯು ಶ್ರೇಷ್ಠ ಕವಿಗಳಿಂದಲೂ, ಪ್ರಸಿದ್ಧ ವಾಗ್ಮಿಗಳಿಂದಲೂ, ಮಹಾ ತತ್ವಜ್ಞಾನಿಗಳಿಂದಲೂ ಶೋಭಿತವಾಗಲ್ಪಟ್ಟಿದೆ. ಈಗಲೂ ಸಹ ಅದರ ಪ್ರಕೃತಿ ಸೌಂದರ್ಯದ ಸೊಬಗಿನ ವೈಖರಿಗಾಗಿಯೂ, ಸಮಶೀತೋಷ್ಣವಾದ ವಾಯುಗುಣಕ್ಕಾಗಿಯೂ ಮತ್ತು ವಿಶೇಷವಾದ ಖನಿಜ ಸಂಪತ್ತಿಗಾಗಿಯೂ ಸ್ತೋತ್ರಾರ್ಹವಾಗಿದೆ. ಮನೋಹರವಾದ ಪ್ರಾಕೃತಿಕ ಸೌಂದರ್ಯವನ್ನು ಮತ್ತು ಉತ್ಕೃಷ್ಟವಾದ ವಾಸ್ತು, ಶಿಲ್ಪ ಮತ್ತು ಚಿತ್ರಗಳೆಂಬ ಕ್ರೀಡಾಸ್ಥಾನಗಳ ರಮಣೀಯ ಹಿರಿಮೆಯನ್ನೂ ನಿರೀಕ್ಷಿಸುವುದಕ್ಕಾಗಿ ಪ್ರವಾಸಿಗರು ಇಲ್ಲಿಗೆ ಬರುವರು. ಇದರ ಹೆಸರಾದ ರೋಮ್ ನಗರವು ತ್ಯಾಗಿಗಳಾದ ಮಹಾಪುರುಷರ ಮತ್ತು ಆಚಾರ್ಯರ ಸಕಲ ಸೌಭಾಗ್ಯಗಳ ಕೇಂದ್ರವೆನಿಸಿದೆ. ಅಲ್ಲದೆ ಸಮಸ್ತ ಕ್ರೈಸ್ತ ಮತದ ಹಾಗೂ ವಿಜ್ಞಾನ ಶಾಸ್ತ್ರದ ಬೆಳವಣಿಗೆಯೂ, ಕ್ರೈಸ್ತ ಆದರ್ಶ ತತ್ವಜ್ಞಾನಿಗಳ ಉಪದೇಶಗಳಿಂದ ಪ್ರಚಾರವಾದ ವಿದ್ಯಾಪೀಠಗಳೂ, ವಿಶ್ವವಿದ್ಯಾನಿಲಯದ ಮತ್ತು ಪುರಾತನ ಸಂಸ್ಕೃತಿಯ ಪ್ರಸಾರಕ್ಕೆ ಅದ್ವಿತೀಯವಾಗಿರುವ ಶಿಲ್ಪಕಲಾ ಕಾರ್ಯಗಳ ಕೇಂದ್ರವಾಗಿದೆ. ಸೈಂಟ್ ಪೀಟರ್ಸ್ ಮುಂತಾದ ಮಂದಿರಗಳಲ್ಲಿ ಸ್ವಾಭಾವಿಕ ಸೌಂದರ್ಯದಿಂದ ಕಂಗೊಳಿಸುತ್ತಿರುವ ಚಿತ್ರಕಲೆಗಳನ್ನೂ ಮತ್ತು ಕಲಾಭಿಮಾನಿಗಳಿಗೆ ಬೇಕಾದ ಶ್ರೇಷ್ಠ ಕೃತಿಗಳನ್ನು ವರ್ಣಿಸಲು ಅನೇಕ ಗ್ರಂಥಗಳು ಬೇಕು. ಹೀಗೆ ನ ಸಂಘದಿಂದ ಬಹಳ ಭಾಗಗಳಲ್ಲಿ ಮುದ್ರಿಸಲ್ಪಟ್ಟಿವೆ.

ವಿಚಿತ್ರ ಬುಗ್ಗೆಗಳು

ಇಟಲಿಯಲ್ಲಿ ಇನ್ನೊಂದು ವಿಶೇಷ. ಇಲ್ಲಿ ಖನಿಜ ಸಂಬಂಧವಾದ ಮತ್ತು ಕಲ್ಲು ರೋಗಗಳನ್ನು ಪರಿಹಾರ ಮಾಡುವ ನೀರಿನ ಬುಗ್ಗೆಗಳು ಹೇರಳವಾಗಿವೆ. ಪ್ರಾಕೃತಿಕ ಸೌಂದರ್ಯದಿಂದಲೂ, ಸಮಶೀತೋಷ್ಣವಾದ ವಾಯುಗುಣದಿಂದಲೂ, ರೋಗ ಪರಿಹಾರಕ ನೀರಿನ ಬುಗ್ಗೆಗಳಿಂದಲೂ ಇರುವ ಪ್ರದೇಶದಲ್ಲಿ ಯಾವ ಮನುಷ್ಯನಿಗೆ ತಾನು ವಾಸಿಸಲು ಮನಸ್ಸುಂಟಾಗುವುದಿಲ್ಲ? ಪುರಾತನ ಕಾಲದಿಂದಲೂ ಇಟಲಿಯವರಿಗೆ ನೀರಿನ ಬುಗ್ಗೆಗಳೇ ಸುಖಸಾಧನಗಳಾಗಿವೆ.

ಪ್ರಾಮುಖ್ಯತೆ

ಕಲೆ ವಿದ್ಯೆಗಳನ್ನು ಪ್ರಧಾನವಾಗಿ ಕಲಿಸುವ ವಿಶ್ವವಿದ್ಯಾನಿಲಯದಲ್ಲಿ ಸಾಹಿತ್ಯ, ವಿಜ್ಞಾನ ಮತ್ತು ವೈದ್ಯಶಾಸ್ತ್ರ—ಇವುಗಳನ್ನು ಕಲಿಯಲು ಬೇರೆ ದೇಶಗಳ ವಿದ್ಯಾರ್ಥಿಗಳು ನಾನಾ ದೇಶಗಳಿಂದ ತಂಡತಂಡವಾಗಿ ಬರುವರು. ಪ್ರಸಿದ್ಧ ಗ್ರಂಥಕರ್ತರ ಮತ್ತು ಕವಿಗಳ ಕೃತಿಗಳನ್ನು ಓದಲು ಮತ್ತು ಶ್ರೇಷ್ಠ ಸ್ಥಾನವನ್ನು ಹೊಂದಿರುವ ಹಾಗೂ ಆಸಕ್ತಿ ಬೆಳೆಸುವ ವಿದ್ಯಾವಿಧಾನಗಳನ್ನು ಕಲಿಯಲು ಈ ದೇಶದ ವಿಶ್ವವಿದ್ಯಾನಿಲಯದ ವಿದ್ಯಾರ್ಥಿಗಳು ತಮ್ಮಲ್ಲಿಯೇ ಒಂದು ಸಂಘವನ್ನು ಸ್ಥಾಪಿಸಿರುವರು. ಈ ಸಂಘದಲ್ಲಿ ಹೊರಗಿನಿಂದ ವ್ಯಾಸಂಗಕ್ಕಾಗಿ ಬರುವ ವಿದ್ಯಾರ್ಥಿಗಳಿಗೆ ಎಲ್ಲಾ ವಿಷಯಗಳಲ್ಲಿಯೂ ಸೌಕರ್ಯಗಳಿವೆ. ಇಲ್ಲಿನ ಪ್ರತಿಯೊಬ್ಬ ವಿದ್ಯಾರ್ಥಿಯಲ್ಲಿಯೂ ಧೈರ್ಯಸಾಹಸವಿದ್ದು ಪರಸ್ಪರ ಅನುರಾಗವೂ, ದೇಶಪ್ರೇಮವೂ ಮೂರ್ತಿಮತ್ತಾಗಿ ನೆಲಸಿದೆ. ಪರಕೀಯ ವಿದ್ಯಾರ್ಥಿಯೊಬ್ಬನು ಇಟಲಿಗೆ ಹೋದಲ್ಲಿ, ಆ ದೇಶದ ವಿದ್ಯಾರ್ಥಿಗಳ ವಿನಯ, ಪ್ರೇಮ ಮತ್ತು ಸುಹಾಗಮನದ ಕೋರಿಕೆ—ಇವೆಲ್ಲವನ್ನೂ ನೋಡುತ್ತ ನೋಡುತ್ತ ಸ್ತಬ್ಧನಾಗಿ ನಿಲ್ಲುವನು.

ವ್ಯಾಯಾಮ ಶಿಕ್ಷಣ

ಆ ದೇಶದ ವಿಶ್ವವಿದ್ಯಾಲಯಗಳಲ್ಲಿ ವಿದ್ಯಾರ್ಥಿಗಳಿಗೆ ಅಂಗಸಾಧನೆಯು ಪ್ರಧಾನ ಶಿಕ್ಷಣವಾಗಿದೆ. ಇದರ ಜೊತೆಯಲ್ಲೇ ವ್ಯಾಸಂಗದ ಏರ್ಪಾಡೂ ಸಹ ಇದೆ. ಶಾರೀರಕ ಮತ್ತು ಆಧ್ಯಾತ್ಮಿಕ ಸಾಧನೆಗಳಲ್ಲಿ ಇವರು ಮುಂದಾಳುಗಳು. ಪ್ರಾಚೀನ ಕಾಲದಿಂದಲೂ ವಿಸ್ಮಯವನ್ನುಂಟುಮಾಡುವ ಅದ್ಭುತ ಕಲಾ ಕೌಶಲಗಳನ್ನು ತೋರುತ್ತಲಿರುತ್ತಾರೆ. ಎಲ್ಲ ವಿದ್ಯಾಲಯಗಳಲ್ಲಿಯೂ ಕ್ರೀಡಾರಂಗಗಳು ಏರ್ಪಟ್ಟಿವೆ. ಪ್ರತಿಯೊಬ್ಬ ವಿದ್ಯಾರ್ಥಿಯೂ ಒಂದಲ್ಲ ಒಂದು ಆಟದಲ್ಲಿ ಭಾಗಿಯಾಗಿರುವನು. ಪ್ರತಿನಿತ್ಯವೂ ಕ್ರೀಡಾ ಸ್ಪರ್ಧೆಗಳು ನಡೆದು ಪೂರ್ಣ ಆರೋಗ್ಯವನ್ನು ಮತ್ತು ದೃಢಕಾಯವನ್ನೂ ಹೊಂದಿ ತನ್ಮೂಲಕ ನಿಷ್ಕಲ್ಮಷವಾದ ಜ್ಞಾನವನ್ನು ಪಡೆಯಬೇಕೆಂಬುದೇ ಅಲ್ಲಿನ ವಿದ್ಯಾರ್ಥಿಗಳ ಮುಖ್ಯಧ್ಯೇಯವಾಗಿದೆ. ಈ ವಿದ್ಯಾರ್ಥಿಗಳ ಉದಾತ್ತ ಧ್ಯೇಯವೇ ಸರ್ವಾಧಿಕಾರಿಯಾದ ಮುಸ್ಸೋಲಿನಿಯ ಜೀವನದ ಮಹದಾಕಾಂಕ್ಷೆಯಾಗಿದೆ.

ನಮ್ಮ ಪ್ರಭುಗಳ ಪ್ರಯಾಣ.

ಮೈಸೂರು ಸಂಸ್ಥಾನದ ಶ್ರೀಮನ್ಮಹಾರಾಜರವರು 26 ನೇ ತಾರೀಖಿನ ದಿನ ಮುಂಜಾನೆ (ಬೆಳಗಿನ 1 ಘಂಟೆ ಸಮಯದಲ್ಲಿ) ರಾ. ಪುರಾ ಜಹಜನ್ನು ಹತ್ತಿ ಯೂರೋಪಿನ ಕಡೆ ಮುಖವಾಗಿ ಪ್ರಯಾಣ ಬೆಳಸಿದರು.

ಪ್ರಭುಗಳ ಸಂದೇಶ

ಶ್ರೀಮನ್ ಮಹಾರಾಜರವರು ಜಹಜನ್ನು ಹತ್ತುವ ಮುನ್ನ ಮೈಸೂರು ಪ್ರಜೆಗಳಿಗೆ "ನಮ್ಮ ಪ್ರಜೆಗಳ ಸಂಪೂರ್ಣ ಕರುಣಾಭಾವದಿಂದಲೂ ಮತ್ತು ಅವರ ಸುಖಪ್ರಯಾಣ ಕೋರಿಕೆಗಳಿಂದಲೂ ನಾವು ಇನ್ನೇ ಮೊಟ್ಟಮೊದಲನೆಯ ಯೂರೋಪ್ ಸಂಚಾರವನ್ನು ಕೈಕೊಂಡಿದ್ದೇವೆ. ಅವರ ಶುಭಾಶಯಗಳಿಗಾಗಿ ನಮ್ಮ ವಂದನೆಗಳು" ಎಂಬುದಾಗಿ ಸಂದೇಶವನ್ನಿತ್ತರು.

ಪ್ರಭುಗಳ ಕಾರ್ಯಕ್ರಮ.

ಪ್ರಭುಗಳು ಇಂಗ್ಲೆಂಡ, ಫ್ರಾನ್ಸ್, ಸ್ವಿಟ್ಜರ್ಲೆಂಡ್, ಜರ್ಮನಿ, ಇಟಲಿ, ಆಸ್ಟ್ರಿಯಾ ಮತ್ತು ಹಂಗೇರಿ ದೇಶಗಳಲ್ಲಿ ಸಂಚರಿಸುವರು.

ಸಪ್ಟೆಂಬರ್ ೨೯ಕ್ಕೆ ಬೊಂಬಾಯಿಗೆ ಬರುವರು.

ಪ್ರಭುಗಳು ಹಿಂದಿರುಗುವಾಗ ಮಾರ್ಸೇಲ್ಸಿನಲ್ಲಿ ಸ್ಟ್ರಾತ್ ಮೋರ್ ಜಹಜನ್ನು ಹತ್ತಿ ಸೆಪ್ಟೆಂಬರ್ 29 ಕ್ಕೆ ಬೊಂಬಾಯಿಗೆ ಬರುವರು.

ಸಾಧ್ವಿ
೬-೭-೩೬ ನೇ ಸೋಮುವಾರ

ಕೋಮುವಾರು ಭೂತ

ನಮ್ಮ ಪ್ರತಿನಿಧಿ ಸಭೆ ಮತ್ತು ಶಾಸನ ಸಭೆಯ ಅಧಿವೇಶನಗಳಲ್ಲಿ ಮಾತ್ರವರೆ ಬ್ರಾಹ್ಮಣರಿಗೇ ಸಕಲ ವಿಧವಾದ ಸೌಲಭ್ಯಗಳುಂಟಾಗುತ್ತಿವೆ ಎಂದೂ ಹಿಂದುಳಿದವರಿಗೆ ತನ್ನ ವಾಗ್ದಾನದಂತೆ ಸರ್ಕಾರವು ಸೌಕರ್ಯಗಳನ್ನು ಕೊಡುತ್ತಿಲ್ಲವೆಂದೂ, ದೊಂಬರುಗಳು ಬಹಳ ದಿನಗಳಿಂದಲೂ ಕೂಗುತ್ತಿರುವುದು ಸರಿಯಷ್ಟೆ. ಇತ್ತೀಚಿನ ಅಧಿವೇಶನಗಳಲ್ಲಿ ಬ್ರಾಹ್ಮಣರ ಜೊತೆಗೆ ಮುಸಲ್ಮಾನ ಪಂಗಡವೂ ಕೂಡ ಸ್ವಲ್ಪ ಸ್ವಲ್ಪವಾಗಿ ಸೇರಿಸಲ್ಪಡುತ್ತಿದೆ. ಕೆಲವು ಸದಸ್ಯರು, ಮುಸಲ್ಮಾನ ಅಧಿಕಾರಿಗಳ ತಪ್ಪು ಹಾಗೆಯೇ ಮುಚ್ಚಲ್ಪಡಲು ಕಾರಣವೇನೆಂದು ಕೇಳಿರುವರು ಈ ಕೋಮುವಾರು ಭೂತವು, ಕೇವಲ ನಿಮ್ನ ವರ್ಗವೊಂದನ್ನೇ ಹಿಡಿದುಕೊಂಡಿರುವ, ಆದಿಕರ್ನಾಟಕ, ಆದಿದ್ರಾವಿಡ, ಕೊರಚ, ಕೊರಂಗ, ಒಡ್ಡ, ಇತರ ಜಾತಿಗಳನ್ನು ಬಿಟ್ಟು, ಉಳಿದ ಲಿಂಗಾಯತ, ಕ್ರಿಸ್ತ, ಮೊದಲಾದ ಮುಂಬರಿದ ಪಂಗಡಗಳನ್ನೂ ಆವರಿಸದೇ ಬಿಡುವುದೇ? ಒಂದು ಜಾತಿಯ ಮೇಲೆ ಬಿದ್ದ ಇಂತಹ ವಕ್ರದೃಷ್ಟಿಯು ಕ್ರಮೇಣ ಎಲ್ಲ ಜಾತಿಗಳ ಮೇಲೆಯೂ ಬಿದ್ದು, ಒಬ್ಬೊಬ್ಬರೂ ಮತ್ತೊಬ್ಬರನ್ನು ಕಂಡು ಮತ್ಸರಪಡಲು ಅವಕಾಶವಾಗುವುದು ಇದು ನಮ್ಮ ಸಾರ್ವಜನಿಕ ಜೀವನದಲ್ಲಿ ಕೇವಲ ಅಪಾಯಕರವಾದ ಪ್ರಸಂಗವು ಇದನ್ನು ಕೂಡಲೇ ತಡೆಗಟ್ಟುವುದು ಎಲ್ಲರ ಕರ್ತವ್ಯ

ಜಾಗರೂಕತೆಯಿಂದ ಜಾರಿ ಮಾಡಬೇಕು.

ಕಳೆದ ನ್ಯಾಯವಿಧಾಯಕ ಸಭೆಯಲ್ಲಿ ವ್ಯಭಿಚಾರವನ್ನು ನಿರೋಧಿಸುವ ಕಾನೂನು ಒಪ್ಪಿಗೆಯನ್ನು ಪಡೆಯಲ್ಪಟ್ಟಿತು ಈ ಕಾನೂನಿನ ಉದ್ದೇಶವೇನೋ ಘನತರವಾದುದು ಇದನ್ನು ಜಾರಿಮಾಡುವಾಗ ಅನೇಕ ತೊಡಕುಗಳು ಪ್ರಾಪ್ತವಾಗುವುವು ಇದು ಜನರ ಅಂತರಂಗಿಕ ಪ್ರವರ್ತನೆಗಳಿಗೆ ಸಂಬಂಧಪಟ್ಟಿದ್ದು ಖಾಸಗಿ ಜನರಲ್ಲಿ ಹೇಗೋ ಹಾಗೆ ಅಧಿಕಾರವರ್ಗದವರಲ್ಲಿಯೂ ಅದರ ಬಲೆಗೆ ಬೀಳುವವರು ಅನೇಕರಿರುವರು ಇಂತಹ ಗಹನವಾದ ವಿಷಯದಲ್ಲಿ ಬಹಳ ಜಾಗರೂಕತೆಯಿಂದ ಪ್ರವರ್ತಿಸುವಂತೆ ಅಧಿಕಾರಿಗಳನ್ನು ಗೊತ್ತುಮಾಡುವುದು ಅವಶ್ಯಕ

ಪೋಸ್ಟಲ್ ಸಮ್ಮೇಳನ

ನೆನ್ನೆ ದಿನ ಬೆಳಗ್ಗೆ ಮೈಸೂರು ಟವರ್ ಹಾಲಿನಲ್ಲಿ ಮದರಾಸು ಪ್ರಾಂತ್ಯದ ಪೋಸ್ಟಲ್ ಸಂಘದ ಸಮ್ಮೇಳನವು ನಡೆಯಿತು ಅನೇಕ ಜನ ಪ್ರತಿನಿಧಿಗಳು ಬಂದಿದ್ದರು ಮದರಾಸಿನ ' ಸ್ವದೇಶ ಮಿತ್ರನ್ ' ಪತ್ರಿಕಾ ಸಂಪಾದಕರಾದ ಶ್ರೀ|| ಸಿ ಆರ್ ಶ್ರೀನಿವಾಸನ್‌ರವರು ಉಪನ್ಯಾಸವನ್ನು ವಹಿಸಿದ್ದರು ಸ್ವಾಗತ ಗೀತವೊಡನೆ ಸಭೆ ಆರಂಭವಾಯಿತು ಸ್ವಾಗತಾಧ್ಯಕ್ಷರಾದ ಶ್ರೀ|| ಬಿ ಎಸ್ ಪುಟ್ಟಸ್ವಾಮಿಯವರು ಸ್ವಾಗತ ಭಾಷಣ ಮಾಡಿದರು ಅನಂತರ ಅಧ್ಯಕ್ಷರು ಒಂದು ಉಪಯುಕ್ತವಾದ ಭಾಷಣವನ್ನು ಮಾಡಿ ಒಕ್ಕಟ್ಟಿನಲ್ಲಿ ಬಲವಿದೆಯೆಂಬ ಅಂಶವನ್ನು ಒತ್ತಿ ಹೇಳಿದರು ಸಮ್ಮೇಳನದಲ್ಲಿ ನೌಕರರ ಅನುಕೂಲಕ್ಕೆ ಬೇಕಾದ ಅನೇಕ ಅಂಶಗಳು ಚರ್ಚಿಸಲ್ಪಡುವುವು

ಆಕಾಶವಾಣಿ ಕಾರ್ಯಕ್ರಮ.

6ನೇ ತಾ|| ಸೋಮವಾರ —ರಾತ್ರಿ 8 ರಿಂದ 9 15 ಯೂರೋಪಿಯನ್ ಸಂಗೀತ, ಮತ್ತು ಜಾರ್ ಕೆಸ್ಲರ್‌ರವರ ಚರಿತ್ರೆ, ಮಂಗಳವಾರ—ಸಾ|| 6–30ರಿಂದ 8 ವೀಣಾಗಾನ, ವಿದ್ವಾನ್ ಎನ್ ಆರ್ ಕೃಷ್ಣಮೂರ್ತಿಯವರಿಂದ ಮತ್ತು ಕನ್ನಡ ಸಾಹಿತ್ಯಪರಿಸ, ಮ|| ಎನ್ ಎಸ್ ನಾರಾಯಣಶಾಸ್ತ್ರಿಗಳಿಂದ ಬುಧವಾರ—ರಾತ್ರಿ 8 ರಿಂದ 9–15 ಕರ್ನಾಟಕ ಗಾನ, ಪ್ರಪಂಚದ ಪರಿಚಯ " ಮೆಡಿಟರೇನಿಯನ್ನಿನಲ್ಲಿ ಅಶಾಂತಿ ' ಗುರುವಾರ—6–30ರಿಂದ 8 ನಾಗಸ್ವರ, ಉಪನ್ಯಾಸ, ಶ್ರೀ|| ವಿಷಕಂಠರಾಯರಿಂದ, ಶುಕ್ರವಾರ—ರಾತ್ರಿ 7–30 ರಿಂದ 8–30 ಹಿಂದೂಸ್ತಾನೀ ಸಂಗೀತ

ಪಂಡಿತ ಜವಾಹರಲಾಲರು.

ಕಾಂಗ್ರೆಸ್ ಅಧ್ಯಕ್ಷರಾದ ಜವಾಹರಲಾಲ್ ನೆಹರೂರವರು 29ನೇ ತಾರೀಖಿನ ದಿವಸ ವಾರ್ಧಾಗೆ ಆಗಮಿಸಿದರು ನೇರವಾಗಿ ಮಹಾತ್ಮಾಗಾಂಧಿಯವರ ವಾಸಸ್ಥಾನಕ್ಕೆ ಹೋದರು ಆ ದಿನ ನಡೆದ ವರ್ಕಿಂಗ್ ಕಮಿಟಿಯಲ್ಲಿ ಅವರು, ಇನ್ನೂ ಕಾಂಗ್ರೆಸ್ಸು ಸಮತಾವಾದವನ್ನು ಅಂಗೀಕರಿಸಿಲ್ಲವೆಂದೂ ಅವರು ಮಾತ್ರ ವೈಯಕ್ತಿಕವಾಗಿಯೇ ಸೋಷಿಯಾಲಿಸಂ ಪ್ರಚಾರಕಾರ್ಯವನ್ನು ಮಾಡುತ್ತಿರುವುದಾಗಿಯೂ ಹೇಳಿದರು

ಮೈಸೂರು ಪೌರಸಭೆ.

ಕಳೆದ 27 ನೇ ತಾ|| ರಾಜಧಾನಿಯ ಪೌರಸಭೆಯ ಮೀಟಿಂಗ್ ನಡೆಯಿತು ಶ್ರೀ|| ಎಂ ಎ ಶ್ರೀನಿವಾಸನ್‌ರವರು ಅಧ್ಯಕ್ಷತೆಯನ್ನು ವಹಿಸಿದ್ದರು ಮಾಮೂಲಿನಂತೆ ಬೇರೆಬೇರೆ ಕಮಿಟಿಗಳ ಕಾರ್ಯಕ್ರಮಗಳನ್ನು ರಿಕಾರ್ಡ್ ಮಾಡಲಾಯಿತು 36–37ನೇ ಸಾಲಿಗೆ ವಾಣೀವಿಲಾಸ ವಾಟರ್ ವರ್ಕ್ಸಿನ ವೆಚ್ಚಕ್ಕಾಗಿ 1,76,113 ರೂ ಗಳ ಅಂದಾಜು ದೀರ್ಘ ಚರ್ಚೆಯಾದನಂತರ ಒಪ್ಪಲ್ಪಟ್ಟಿತು ಟೌನ್‌ಹಾಲಿನಲ್ಲಿ ರೇಡಿಯೋ ಸೆಟ್ಟನ್ನು ಕೊಂಡುಕೊಳ್ಳುವುದಕ್ಕೆ 1775 ರೂ ಅಂದಾಜು ಒಪ್ಪಲಾಯಿತು ದಿವಂಗತ ಧರ್ಮಪ್ರಕಾಶ ಸಾ|| ಬನುಮಯ್ಯನವರ ಫೋಟೋವನ್ನು ಪೌರಸಭಾ ಭವನದಲ್ಲಿ ಹಾಕಬಹುದೆಂದು ಒಪ್ಪಿ ಅವರ 'ಡೋನರ್'ರಿಗೆ ವಂದನೆಯೂ ಅರ್ಪಿಸಲ್ಪಟ್ಟಿತು ಬೇರೆಬೇರೆ ಸಮಿತಿಗಳ ಚುನಾವಣೆಯು ಕೆಳಗೆ ಕಂಡಂತೆ ಆಯಿತು.—

(1) ಮ್ಯಾನೇಜಿಂಗ್ ಕಮಿಟಿ —ಶ್ರೀಗಳಾದ ರಾವ್ ಸಾಹೇಬ್ ರಾಮಸ್ವಾಮಿ, ಮಾಧವರಾವ್ ಪವಾರ್, ಡಿ ಬಿ ವಿಶ್ವಂಭರಯ್ಯ, ಎ ವೆಂಕಟೇಶಯ್ಯ, ಸಿ ಸೀತಾರಾಮಯ್ಯ, ಎಂ ಕೆ ಕೃಷ್ಣರಾವ್, ಮಿ|| ಥಿಯೋಬಾಲ್ಡ್ ಮತ್ತು ಮಿ|| ಹಸೇನಾಲಿ

(2) ವರ್ಕ್ಸ್ ಸಮಿತಿ —ಶ್ರೀಗಳಾದ ಡಿ ಬಿ ವಿಶ್ವಂಭರಯ್ಯ, ಎಸ್ ಕೃಷ್ಣಸ್ವಾಮಿ ರಾವ್, ಕೆ. ಎನ್ ವೆಂಕಟಕೃಷ್ಣಯ್ಯ, ರಾವ್‌ಸಾಹೇಬ್ ಎಂ ರಾಮಸ್ವಾಮಿ

(3) ಹೆಲ್ತ್ ಕಮಿಟಿ —ಡಾ| ಎ ರಾಂ, ಬೆ| ನಾಡೆ, ಶ್ರೀ|| ಗಳಾದ ವೈ ವಿ ರೂಪಾಕ್ಷಯ್ಯ, ವಿ ಲಿಂಗಪ್ಪಯ್ಯ

(4) ಟೌನ್‌ಹಾಲ್ ಕಮಿಟಿ —ಶ್ರೀಗಳಾದ ಎಂ ಸಿ ತಮ್ಮಯ್ಯ, ಪಾಲಹಳ್ಳಿ ಸೀತಾರಾಮಯ್ಯ, ಎ ಲಿಂಗಪ್ಪಯ್ಯ, ಮತ್ತು ಥಿಯೋಬಾಲ್ಡ್

(5) ಲೀಗಲ್ ಕಮಿಟಿ —ಶ್ರೀಗಳಾದ ಹೆಚ್ ಸಿ ದಾಸಪ್ಪ, ಎಂ ಶಂಕರಯ್ಯ, ಮತ್ತು ಮಿ|| ವ ಹಮದ್ ವಲಿಯುಲ್ಲ

(6) ಆಡಿಟ್ ಕಮಿಟಿ —ಶ್ರೀಗಳಾದ ಎಂ ಕೆ ಕೃಷ್ಣರಾವ್, ಕೆ ಎನ್ ವೆಂಕಟಕೃಷ್ಣಯ್ಯ, ಮತ್ತು ಮಿ|| ಮಹಮದ್ ವಲಿಯುಲ್ಲ

ಮೈಸೂರು ಅನಾಥಾಲಯ.

ಮೈಸೂರು ಸುಬ್ಬರಾಯನಕೆರೆ ಎದುರಿಗಿರುವ ಅನಾಥಾಲಯದ ವಿದ್ಯಾರ್ಥಿಗಳು ಪ್ರತಿ ಭಾನುವಾರವೂ ಮಹಾಜನರು ಕೊಡುವ ಭಿಕ್ಷೆಯನ್ನೂ ಇತರ ಸಹಾಯವನ್ನೂ ಪಡೆಯಲು ಎಲ್ಲಾ ಮೊಹಲ್ಲಾಗಳಿಗೂ ಬರುತ್ತಾರೆ ಧರ್ಮಾತ್ಮರು ಯಥಾಶಕ್ತಿ ಸಹಾಯಮಾಡಿ ಪರಮೇಶ್ವರನ ಕೃಪಾಕಟಾಕ್ಷಕ್ಕೆ ಪಾತ್ರರಾಗಬೇಕಾಗಿ, ಆಲಯದ ಕಾರ್ಯದರ್ಶಿಗಳಾದ ಶ್ರೀ|| ಅಡ್ವೋಕೇಟ್ ಸಿ ನರಸಿಂಹಯ್ಯನವರು ಪ್ರಾರ್ಥಿಸುತ್ತಾರೆ

ತಿಪಟೂರಿನ ಸಿನಿಮಾ ಅನಾಹುತ.

ಮೈಸೂರು ಸರ್ಕಾರದ ಪ್ರಕಟನಾಧಿಕಾರಿಗಳು ಹೀಗೆ ಬರೆಯುತ್ತಾರೆ —

ತುಮಕೂರು ಡಿಸ್ಟ್ರಿಕ್ಟಿನ ತಿಪಟೂರಿನಲ್ಲಿರುವ ಸಿನಿಮಾ ಮಂದಿರದಲ್ಲಿ ... ತ್ತಾಗಿ ಬೆಂಕಿಯ ಅನಾಹುತವಾಗಿ ... ದೆಸೆಯಿಂದ ಮೂರುಮಂದಿ ಆಪರೇ... ಗಳಿಗೆ ಸುಟ್ಟು ಗಾಯಗಳಾದುವು ... ರಲ್ಲಿ ಇಬ್ಬರು ಮೃತಪಟ್ಟರು ... ಹುತದ ವಿಷಯದಲ್ಲಿ ಮೈಸೂರು ಸ... ನದ ಪೋಲೀಸ್ ಇನ್ಸ್‌ಪೆಕ್ಟರ್ ಜನ... ರವರು ಸರ್ಕಾರದವರಿಗೆ ಒಂದು ... ಯನ್ನು ಕಳುಹಿಸಿರುತ್ತಾರೆ

ಆ ವರದಿಯಲ್ಲಿರುವ ಅಂಶಗಳಿವು ... ಟೂರಿನಲ್ಲಿರುವ ಧನಲಕ್ಷ್ಮೀ ಟಾಕೀ... ನಲ್ಲಿ, 1936ನೆಯ ಇಸವಿ ಜೂನ್ 24ನೇ ತಾರೀಖಿನ ದಿವಸ, ಸಿನಿಮಾ ಪ್ರದರ್ಶನವು ನಡೆಯುತ್ತಿದ್ದ ಕಾಲದಲ್ಲಿ, ... ಸುಮಾರು 11–30 ಗಂಟೆಯ ವೇಳೆ... ಸಿನಿಮಾ ಯಂತ್ರವನ್ನು ನಡೆಯಿಸುವುದಕ್ಕಾಗಿ ಏರ್ಪಡಿಸಿರುವ ಕೊಠಡಿ... (...) ರೀತಿ ಬಿದ್ದಿತು ... ಯಂತ್ರವನ್ನು ನಡೆಯಿಸತಕ್ಕ ... ರೇಟರೂ ಮತ್ತು ಅವರಿಗೆ ಸಹಾಯಕ... ಕೆಲಸ ಮಾಡುತ್ತಿದ್ದ ಇಬ್ಬರು ಅಸಿಸ್ಟೆಂಟ... ರುಗಳೂ, ಈ ಮೂವರೂ ಬೆಂಕಿಯ ... ಲೆಗೆ ಸಿಕ್ಕಿಬಿದ್ದು ಅವರುಗಳಿಗೆ ಒಡನೆ ... ಗಾಯಗಳಾದುವು ಆ ಪೈಕಿ ಆಪರೇ... ವರಿಗೆ ಬಹು ಅಪಾಯಕರವಾದ ಗಾ... ಯಾದುವು ಈ ರೀತಿ ಬೆಂಕಿಯ ... ಸಿಕ್ಕಿಬಿದ್ದ ಮೂವರನ್ನೂ, 25ನೇ ತಾ... ರೀಖಿನ ದಿವಸ ಪ್ರಾತಃಕಾಲ 6 ಗಂಟೆ ... ಹೊತ್ತಿಗೆ ಆಸ್ಪತ್ರೆಗೆ ತೆಗೆದುಕೊಂಡು ... ಹೋದರು ಆ ದಿವಸವೇ ಒ... ಮಾರು 9 ಗಂಟೆಯ ಸಮಯದಲ್ಲಿ ... ಟರಾದ ನಾರಾಯಣರಾಯರವರೂ ... ಮಧ್ಯಾಹ್ನ 12 ಗಂಟೆಯ ಸಮಯ... ಅವರ ಅಸಿಸ್ಟೆಂಟರಾದ ಶಿವಣ್ಣ ... ಮರಣ ಹೊಂದಿದರು ಮೂರನೇ... ರಾದ ಕೃಷ್ಣಪ್ಪಯ್ಯನವರ ಸ್ಥಿತಿಯೂ ... ನಿರಾಶಜನಕವಾಗಿದೆ—ಹೀಗೆಂದು ... ಕ್ಟರ್ ಜನರಲ್‌ರವರು ತಮ್ಮ ... ಯಲ್ಲಿ ಸೂಚಿಸಿದ್ದಾರೆ

ತುಮಕೂರು ಡಿಸ್ಟ್ರಿಕ್ಟಿನ ಪೋಲೀಸ್ ಸೂಪರಿಂಟೆಂಡೆಂಟರು, ವಿವರವಾಗಿ ... ರಣೆ ನಡೆಯಿಸಿ, ವರದಿ ಮಾಡಬೇಕೆಂದು ಅವರಿಗೆ ಅಪ್ಪಣೆಯಾಗಿದೆ

ಬೈಸಿಕಲ್ ಫೀ ಇಳಿಕಾಯ

ತಿನ್ನವೆಲ್ಲಿಯಲ್ಲಿ ಬೈಸಿಕಲ್ಲಿಗೆ ವ... ರ್ಷಕ್ಕೆ 2 ರೂಪಾಯಿನಂತಿದ್ದ ... ಫೀಯನ್ನು 1 ರೂಪಾಯಿಗೆ ಇಳಿಸ... ದು ಪೌರಸಭೆಯು ತೀರ್ಮಾನಿಸಿ... ನಮ್ಮ ಪೌರ ಸಭೆಯವರೂ ಹೀ... ಮಾಡುವರೇ ?

ಮಾತೃಭಾಷಾಸೇವೆಗೂ ಕಾಮುಕವೇ ?

ಸ್ವಾಮಿ,

ನಮ್ಮ ಮಾತೃಭಾಷೆಯಾದ ಕನ್ನಡಕ್ಕೆ ಮತ್ತು ಪ್ರಾಶಸ್ತ್ಯವನ್ನು ಕೊಡುವ ಸಲುವಾಗಿ ನಮ್ಮ ಘನಸರ್ಕಾರದವರು ಎಲ್ಲಾ ಹೈಸ್ಕೂಲುಗಳಲ್ಲಿಯೂ ನಾಲ್ಕನೆಯ ಫಾರಮ್ಮಿನಿಂದಲೇ ಚರಿತ್ರೆ, ಭೂಗೋಳ, ಲೆಖ್ಖ ಈ ಭಾಗಗಳನ್ನು ಕನ್ನಡದಲ್ಲಿಯೇ ಕಲಿಸಿಕೊಡಬೇಕೆಂದು ವಿಧಾಯಕ ಮಾಡಿರುವರಷ್ಟೆ. ಪ್ರಾರಂಭದಲ್ಲಿ ಈ ರೀತಿ ಮಾಡುವುದರ ಸಾಧ್ಯಾಸಾಧ್ಯಗಳನ್ನು ಸಂಸ್ಥಾನದ ಕೆಲ ಸ್ಕೂಲುಗಳಲ್ಲಿ ಪರಿಶೀಲಿಸಿದನಂತರ, ಈಗ ಎಲ್ಲಾ ಸರ್ಕಾರಿ ಮತ್ತು ಖಾಸಗೀ ಸ್ಕೂಲುಗಳಲ್ಲಿಯೂ ಅದೇ ರೀತಿಯನ್ನು ಅನುಸರಿಸಬೇಕೆಂದು ನಿಯಮ ಮಾಡಿರುವರು.

ಇದರಲ್ಲಿ ಒಂದು ವಿನಾಯಿತಿ ಮಾತ್ರ ಇದೆ. ಕನ್ನಡ ಗಂಧವೇ ಇಲ್ಲದ ಇಂಗ್ಲಿಷ್, ಮರಾಟಿ, ಪರ್ಷಿಯನ್, ಹಿಂದೂಸ್ತಾನಿ, ತಮಿಳು ಮತ್ತು ತೆಲುಗು ಮೊದಲಾದ ಭಾಷೆಗಳನ್ನು ಐಚ್ಛಿಕವಾಗಿ (ಆಪ್ಷನಲ್ಸ್) ತಗದುಕೊಂಡಿರುವರೋ ಅವರಿಗೆ ಮಾತ್ರ ಇಂಗ್ಲೀಷಿನಲ್ಲಿ ಚರಿತ್ರೆ, ಭೂಗೋಳ, ಲೆಖ್ಖಗಳನ್ನು ಕಲಿಸಿಕೊಡತಕ್ಕದ್ದು. ಉಳಿದ ಕನ್ನಡ ಅಥವಾ ಸಂಸ್ಕೃತ ಭಾಷೆಯನ್ನು ಐಚ್ಛಿಕವಾಗಿ ತೆಗೆದುಕೊಂಡವರು ಕನ್ನಡದಲ್ಲಿಯೇ ಕಲಿಯತಕ್ಕದ್ದೆಂದೂ ಈ ಸೌಲಭ್ಯಗಳಿಗಾಗಿ ಎರಡು (ಕನ್ನಡ ಮತ್ತು ಇಂಗ್ಲಿಷ್) ಪ್ರತ್ಯೇಕ ಸೆಕ್ಷನ್‌ಗಳಿರಬೇಕೆಂದೂ ನಿಯಮವಿದೆ. ಅದರಂತೆ ಎಲ್ಲಾ ಸ್ಕೂಲುಗಳಲ್ಲೂ ಎರಡು ಸೆಕ್ಷನ್‌ಗಳೂ ಇವೆ. ಖಾಸಗೀ ಗ್ರಾಂಟ್ ಇನ್ ಏಡ್ ಸ್ಕೂಲುಗಳಲ್ಲಿ ಮಾತ್ರ ಈ ನಿಯಮವನ್ನು ಅಷ್ಟಾಗಿ ಲಕ್ಷ್ಯಕ್ಕೆ ತರದೆ ವಿದ್ಯಾರ್ಥಿಗಳ ಸ್ವಂತ ಅಭಿಲಾಷೆಯಂತೆ ಅವರಿಗೆ ಪ್ರವೇಶಕ್ಕೆ ಅವಕಾಶವು ಕೊಡಲ್ಪಟ್ಟಿದೆಯೆಂದೂ ಇದರ ಪರಿಣಾಮವಾಗಿ ಅವರು ಇಂಗ್ಲಿಷ್ ಸೆಕ್ಷನ್ನಿನ ಅವಕಾಶವನ್ನು ಹೊಂದುತ್ತಿರುವರೆಂದೂ ತಿಳಿಯುತ್ತದೆ. ಇದರಿಂದ ಸರ್ಕಾರದ ವಿಧಿ ಉಲ್ಲಂಘನೆಯಾಗುವುದರ ಜೊತೆಗೆ ಮಿಡಲ್ ಸ್ಕೂಲುಗಳಿಂದ ಹೊಸದಾಗಿ ಹೈಸ್ಕೂಲು ಪ್ರವೇಶಮಾಡಲಿರುವ ಹುಡುಗರಲ್ಲಿ ಅತೃಪ್ತಿ, ಅಸಮಾಧಾನಗಳು ಉಂಟಾಗುತ್ತಿವೆ.

ನ್ಯಾಯವಾಗಿ ಎಲ್ಲರಿಗೂ ಗ್ರಾಂಟ್ ಸ್ಕೂಲುಗಳಲ್ಲಿ ಓದಬೇಕೆಂಬ ಕಾಂಕ್ಷೆ ಇರುತ್ತದೆ. ಆ ಹುಡುಗರು ಗ್ರಾಂಟ್ ಇನ್ ಏಡ್ ಸ್ಕೂಲಿನಲ್ಲಿ ತನ್ನ ಸ್ವಂತ ಅಭಿಲಾಷೆಯಂತೆ ಇಂಗ್ಲಿಷಿನಲ್ಲಿಯೇ (ಚರಿತ್ರೆ, ಭೂಗೋಳ, ಲೆಖ್ಖ) ಓದುತ್ತಿರುವ ತನ್ನ ಸ್ನೇಹಿತನನ್ನು ನೋಡಿ ತನಗೆ ಅಂಥಾ ಸೌಲಭ್ಯ ದೊರಕಲಿಲ್ಲವಲ್ಲಾ ಎಂದು ಅಸಮಾಧಾನ ಉತ್ಪನ್ನವಾಗಲು ಕಾರಣವಾಗುವುದು. ಅಲ್ಲದೆ ಸರ್ಕಾರಿ ಸ್ಕೂಲಿಗೆ ಸೇರಿದ್ದರಿಂದ ತನಗೆ ಈ ರೀತಿ ತೊಂದರೆಯಾಯಿತೆಂಬ ಭಾವನೆಯೂ ಹುಟ್ಟಬಹುದು.

ಪ್ರಭುತ್ವದವರು ಮಾತೃಭಾಷೆಯಾದ ಕನ್ನಡವನ್ನು ಉಚ್ಛ್ರಂಗಿಯ ಮೇಲಕ್ಕೇರಿಸಿ ಅದರ ಅನಂದದ ವೈಭವವನ್ನು ಸಾರ್ವತ್ರಿಕವಾಗಿ ಉಂಟುಮಾಡಬೇಕೆಂದು ಆಶಿಸುತ್ತಿರುವಾಗ ಖಾಸಗೀ ಶಾಲೆಗಳು ಇಂತಹ ಪಕ್ಷಪಾತವನ್ನು ಮಾಡುತ್ತಿರುವುದು ಯಾವ ನ್ಯಾಯ ?

ನಮ್ಮ ವಿದ್ಯಾ ಇಲಾಖೆಯ ಮುಖ್ಯಾಧಿಕಾರಿಗಳು ಡಿಸಿಪ್ಲಿನ್ ಇಡುವುದರಲ್ಲಿ ಹೆಸರು ವಾಸಿಪಡೆದಿರುವರೆಂದು ಎಲ್ಲರೂ ಅಂದುಕೊಳ್ಳುತ್ತಾರೆ. ಅವರು ಈ ವಿಷಯದಲ್ಲಿಯೂ ಸಹ ತಕ್ಕ ನಿಗಾ ಕೊಟ್ಟು ಎಲ್ಲಾ ಸ್ಕೂಲುಗಳಲ್ಲಿಯೂ ಕಾರ್ಯಗಳು ನಿಯಮಬದ್ಧವಾಗಿ ನಡೆಯುವಂತೆ ಏರ್ಪಡಿಸುವರೆಂದು ನಂಬಲಾಗಿದೆ.

ನೊಂದವ

ಶಾರದಾ ವಿಲಾಸ ಹೈಸ್ಕೂಲು

ಮೇಲ್ಕಂಡ ಹೈಸ್ಕೂಲಿನಲ್ಲಿ ಸ್ಥಾಪಿತವಾಗಿರುವ ಬಡಹುಡುಗರ ಸಹಾಯ ಸಮಿತಿಯ 35-36 ನೇ ಸಾಲಿನ ವರದಿಯು ಕೆಳಗೆ ಕಂಡ ರೀತಿ ಇದೆ —

ಈ ಸಾಲಿನಲ್ಲಿ ಆರು ಜನ ವಿದ್ಯಾರ್ಥಿಗಳಿಗೆ ಉಚಿತ ಅನ್ನ ವಸತಿಗಳ ಏರ್ಪಾಡು ಮಾಡಿತ್ತು. ಇವರಲ್ಲಿ ಮೂವರು ಸ್ಕೂಲು ಫೈನಲ್ ಪರೀಕ್ಷೆಗೆ ಕಳುಹಿಸಿದ್ದರು. ಇಬ್ಬರಿಗೆ ಇ. ಸಿ. ಪಿ. ಎಸ್. ಆಯಿತು (ಈ ಪೈಕಿ ಒಂದು ಫಸ್ಟ್ ಕ್ಲಾಸ್) ಮೂರನೆಯವನಿಗೆ ಎ. ಪಿ. ಎಸ್. ಉಳಿದ ಮೂವರಿಗೂ ಕ್ಲಾಸ ಪರೀಕ್ಷೆಯು ಪಾಸಾಗಿರುತ್ತೆ.

ಪ್ರತಿ ದಿನವೂ ಮಧ್ಯಾಹ್ನದ ವಿರಾಮ ಕಾಲದಲ್ಲಿ ಒಂದು ನೂರು ವಿದ್ಯಾರ್ಥಿಗಳಿಗೆ ಮೇಲ್ಪಟ್ಟು ಉಚಿತ ಉಪಾಹಾರದ ಏರ್ಪಾಡು ಮಾಡಿದುತ್ತೆ. ಕೂಲಿಕಾರರು ಭೇದವಿಲ್ಲದೆ ಸಾರ್ವತ್ರಿಕವಾಗಿ ಎಲ್ಲ ವಿದ್ಯಾರ್ಥಿಗಳಿಗೂ ಈ ಉಚಿತ ಉಪಾಹಾರವು ಕೊಡಲಾಗುತ್ತಿದೆ. ಈ ಸಾಲಿನಲ್ಲಿ ಆದಾಯ ನಗದು 2514-9 ಗಳು ಅಕ್ಕಿ 765 ಸೇರು ಖರ್ಚು 1507-6-4 ಪೈ ಗೂ ಅಕ್ಕಿ 750 ಸೇರು ಜಾಸ್ತಿ 71-0-3 ಪೈ ನಗದಾಗಿಯೂ ಬಿಸಿ ಉಬ್ಬತ್ತು 15 ಸೇರು ಅಕ್ಕಿಯೂ ಸಹ ಉಳಿದಿರುತ್ತದೆ. ಈ ಸಾರಿ ಧನಧಾನ್ಯಾದಿಗಳಿಂದ ಸಹಾಯ ಮಾಡಿದವರೆಲ್ಲರಿಗೂ ಸಮಿತಿಯು ತನ್ನ ಕೃತಜ್ಞತೆಯನ್ನು ಅರ್ಪಿಸುವುದಲ್ಲದೆ ಮುಂದೆಯೂ ಸಹ ಮಹಾಜನರು ಸಹಾಯ ಹಸ್ತಗಳಿಂದ ಸಹಾಯಮಾಡಿ ಈ ಕಾರ್ಯವನ್ನು ಮತ್ತಷ್ಟು ಯಶಸ್ವಿಯಾಗಿ ಆಗಮಾಡಿಸಬೇಕೆಂದು ಸಮಿತಿಯ ಗೌ॥ ಕಾರ್ಯದರ್ಶಿಗಳಾದ ಶ್ರೀ॥ ಎನ್. ಲಕ್ಷ್ಮೀನಾರಾಯಣರವರು ಕೋರಿರುತ್ತಾರೆ.

ಅಂಚೆ ಸಮ್ಮೇಳನ

ಕಳೆದ ಮಾಹೆ 28 ನೇ ತಾ॥ ನ ದಿವಸ ಆಲ್ ಇಂಡಿಯಾ ಪೋಸ್ಟಲ್ ಮತ್ತು ಆರ್ ಎಂ ಎಸ್ ಯೂನಿಯನ್ನಿನ ಮೈಸೂರು ಶಾಖೆಯ ವಾರ್ಷಿಕ ಸಮ್ಮೇಳನವು ರಾಜಧಾನಿಯ ಅಂಚೆ ಕಛೇರಿಯಲ್ಲಿ ನಡೆಯಿತು. ಪೋಸ್ಟ್ ಮಾಸ್ಟರಾದ ಶ್ರೀ॥ ಎಂ. ಬಾಲಸುಬ್ರಹ್ಮಣ್ಯಂರವರು ಅಧ್ಯಕ್ಷರಾಗಿದ್ದರು. ಸಂಘದ ಕಾರ್ಯದರ್ಶಿಗಳಾದ ಶ್ರೀ॥ ಎನ್. ಸುಬ್ರಹ್ಮಣ್ಯಂರವರು ವಾರ್ಷಿಕ ವರದಿಯನ್ನು ಓದಿದರು. ಕಾರ್ಯಕ್ರಮದಂತೆ ಪೋಸ್ಟಲ್ ಸೂಪರಿಂಟೆಂಡೆಂಟ್ ಮಿ॥ ಲಿಂಕನ್ ಗಾರ್ಡನರ್ ರವರು ಅಧ್ಯಕ್ಷತೆಯನ್ನು ವಹಿಸಬೇಕಾಗಿತ್ತು. ಅವರು ಅನಿವಾರ್ಯದ ಸಲುವಾಗಿ ಬಾರದಿದ್ದುದರಿಂದ ಪೋಸ್ಟ್ ಮಾಸ್ಟರವರೇ ಅಧ್ಯಕ್ಷತೆಯನ್ನು ವಹಿಸಬೇಕಾಯಿತು. ಅಧ್ಯಕ್ಷರ ಭಾಷಣದಲ್ಲಿ ಕೆಳಗೆ ಕಂಡಿರುವ ಸಲಹೆಗಳಿದ್ದುವು —

ಕೊಡಗಿನ ಸಬ್ ಡಿವಿಜನ್ನನ್ನು ಪುನಃ ರಚಿಸುವುದು. ಪೋಸ್ಟ್‌ಮನ್‌ಗಳ ಪೈಕಿ ಅರ್ಹತೆಯುಳ್ಳವರನ್ನು ಕ್ಲಾರ್ಕಲ್ ಲೈನಿಗೆ ತೆಗೆದುಕೊಳ್ಳುವುದು. ಲೋ ಗ್ರೇಡಿನ ಗುಮಾಸ್ತರುಗಳಿಗೆ ಕಾಂಪೆನ್ಸೇಟರಿ ಅಲೋಯನ್ಸ್ ಕೊಡುವುದು. ಮೈಸೂರು ಅಂಚೆ ಕಚೇರಿಯಲ್ಲಿ ಕೆ. ವರ್ಗದ ನೌಕರರನ್ನು ಹೆಚ್ಚಿಸುವುದು ಮೊದಲಾದ ವಿಷಯಗಳು ಸಮರ್ಥನೆಯಾಗಿ ಠರಾವು ಮಾಡಲಾಯಿತು. ಅನಂತರ ಮುಂದಿನ ಚುನಾವಣೆಯು ನಡೆಯಿತು. ಮಿ॥ ಲಿಂಕನ್ ಗಾರ್ಡನರವರು ಪ್ರೆಸಿಡೆಂಟರು, ಮಿ॥ ಬಾಲಸುಬ್ರಹ್ಮಣ್ಯಂರವರು ವೈಸ್ ಪ್ರೆಸಿಡೆಂಟರವರು ಶ್ರೀ॥ ಎನ್. ಸುಬ್ರಹ್ಮಣ್ಯಂರವರು ಸಕ್ರೆಟರಿ, ಶ್ರೀ॥ ಎಂ. ಸಿ. ಕೃಷ್ಣಸ್ವಾಮಿಯವರು ಜಾ॥ ಸಕ್ರೆಟರಿ ಶ್ರೀ॥ ಎನ್. ಭಗವಂತರಾಯರು ಕೋಶಾಧ್ಯಕ್ಷರು.

೪ ಲಕ್ಷ ರೂ ಗಳ ಮಂಜೂರಾತಿ

ಶ್ರೀ ಕೃಷ್ಣರಾಜೇಂದ್ರ ಮಿಲ್ಸ್‌ನಲ್ಲಿ ಹಾಲಿ ನಡೆಯುತ್ತಿರುವ ನೂಲುವ ಮತ್ತು ನೇಗೆಯ ಕೆಲಸಗಳ ಜೊತೆಗೆ ನೇಯಿಗೆ ಕಲಸವನ್ನೂ ನಡೆಸಬೇಕೆಂದು ತೀರ್ಮಾನ ಮಾಡಿ ಪ್ರಭುತ್ವವು ನಾಲ್ಕು ಲಕ್ಷ ರೂಗಳನ್ನು ಮಂಜೂರ್ ಮಾಡಿರುತ್ತದೆ. ಅಗತ್ಯವಾದ ಮಗ್ಗಗಳು ಹಾಕಲ್ಪಡುವುವೆಂದು ತಿಳಿದುಬಂದಿದೆ.

ಪೋಲೀ ಸ್ಟೇಷನ್ ಕಟ್ಟಡ

ದೊಡ್ಡಪೇಟೆಯಲ್ಲಿರುವ ಪೋಲೀಸ್ ಸ್ಟೇಷನ್ ಬಳಿ ನೂತನ ಆಗಲಿದ ಸರ್ಕಲ್ ಒಂದು ಆಗುತ್ತದೆ. ಅಲ್ಲ ಪೋಲೀಸ್ ಇಲಾಖೆ, ಬ್ರಾಂಚ್ ಆಫೀಸುಗಳನ್ನಿಡಲು ಎಪ್ಪತ್ತು ಸಾವಿರ ರೂ ಅಂದಾಜಿನ ಹೊಸ ಕಟ್ಟಡವೊಂದು ತಯಾರಾಗುವುದು.

ಪ್ರಾರಂಭೋತ್ಸವ

8—7—36 ನೇ ಬುಧವಾರ ಬೆಂಗಳೂರು ಪೌರಸಭೆಯ ನೂತನ ಭವನದ ಪ್ರಾರಂಭೋತ್ಸವವು ಗ್ವಾಲಿಯರ್ ಮಹಾರಾಜರವರಿಂದ ನಡಿಸಲ್ಪಡುವುದೆಂದು ತಿಳಿಯಬರುತ್ತದೆ.

ಮೈಸೂರ್ ಎಂಪೋರಿಯಂ

ಶ್ರೀ॥ ಜಮ್ನಾದಾಸ್ ದ್ವಾರಕಾದಾಸರವರು ಬೊಂಬಾಯಿ ಪಟ್ಟಣದಲ್ಲಿ ಮೈಸೂರು ಸಂಸ್ಥಾನದ ಸುಪ್ರಸಿದ್ಧ ಗಂಧದ ಸಾಬೂನು, ರೇಷ್ಮೆ ಬಟ್ಟೆ, ಪೋರ್ಸಿಲೇನ್ ಮುಂತಾದ ಪದಾರ್ಥಗಳಿಗೆ ಸ್ವಲ್ಪ ವಿಜಂಟವಾಗಿ ಒಂದು "ಎಂಪೋರಿಯಂ" ಅನ್ನು ತೆರೆದಿರುವರಷ್ಟೆ. ದಿನೇ ದಿನೇ ವ್ಯಾಪಾರವು ಹೆಚ್ಚುತ್ತಾ ಬಂದು ಮತ್ತೊಂದು ಬ್ರಾಂಚನ್ನು ತೆರೆಯಬೇಕೆಂಬ ಆವಶ್ಯಕತೆಯುಂಟಾಯಿತು. ಕಳೆದ ತಿಂಗಳು 20 ನೇ ತಾ॥ ನ ದಿವಸ ಬೊಂಬಾಯಿ ನಗರದ ವ್ಯಾಪಾರ ಕೇಂದ್ರವಾದ ಕಾಲ್ಬಾದೇವಿಯಲ್ಲಿ ಮೈಸೂರು ಎಂಪೋರಿಯಂ ನ ಶಾಖೆಯು ತೆರೆಯಲ್ಪಟ್ಟಿತು. ಇದರ ಪ್ರಾರಂಭೋತ್ಸವವು ಜಿ. ಟಿ. ಹೈಸ್ಕೂಲ್ ಕಟ್ಟಡದಲ್ಲಿ ಇಂದಿಯಲ್ಲಿ ಪ್ರಮುಖ ವಾಣಿಜ್ಯ ಮುಖಂಡರೂ, ಶ್ರೀಮಂತರೂ ಆದ ಶ್ರೀ॥ ಸಾಸದ್ದಾಮದಾಸ್ ಬಿರ್ಲಾರವರಿಂದ ನಡೆಸಲ್ಪಟ್ಟಿತು.

ಚುನಾವಣೆ.

ಮೈಸೂರು ವಿಶ್ವವಿದ್ಯಾನಿಲಯದ ಸೆನೆಟ್ಟಿನಿಂದ ಕೆಳಗೆ ಕಂಡವರು ಅಕಡೆಮಿಕ್ ಕೌನ್ಸಿಲ್‌ಗೆ ಚುನಾಯಿಸಲ್ಪಟ್ಟಿರುವರು. ಶ್ರೀಯುತರಾದ ಎಚ್ ರಾಮರಾವ್, ವಿ. ಎಲ್. ಡಿಸೋಜಾ, ಕೆ. ಬಿ. ಮಾಧವ ಮತ್ತು ಡಾ॥ ಬಿ. ಎನ್. ಮಂಜನಾಥ್.

ಏಳು ಲಕ್ಷ ರೂಗಳ ಸಾಲ

ಮೈಸೂರು ಜಿಲ್ಲಾ ಬೋರ್ಡಿನವರು ಕೇಳಿದ ಪ್ರಕಾರ ಯಂತೆ ಏಳು ಲಕ್ಷ ರೂ ಗಳ ಸಾಲವನ್ನು ಕೊಡಬೇಕೆಂದಿರುವರಷ್ಟೆ. ಆ ಪೈಕಿ ಮೈಸೂರು ಅರಮನೆಯವರು ಎರಡು ಲಕ್ಷ ರೂ ಗಳನ್ನು ಸಾಲಕೊಡುವರೆಂದು ತಿಳಿಯಬರುತ್ತೆ.

ನಮ್ಮ ರಾಜ ಕುಮಾರರು.

ಈ ವರ್ಷದ ಇಂಟರ್ ಮೀಡಿಯೆಟ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವ ನಮ್ಮ ಪ್ರಿನ್ಸ್ ಜಯಚಾಮರಾಜ ಒಡೆಯರ್‌ರವರು ಮಹಾರಾಜಾ ಕಾಲೇಜಿನಲ್ಲಿ ಜೂನಿಯರ್ ಬಿ. ಎ. ತರಗತಿಗೆ ಸೇರಿರುವರು. ಚರಿತ್ರ ಮತ್ತು ಎಕನಾಮಿಕ್ಸ್‌ಗಳನ್ನು ಅಭ್ಯಾಸಮಾಡುವರು.

ಸ್ಟ್ಯಾಟಿಸ್ಟಿಕ್ಸ್ ಸಮಿತಿ.

ನಮ್ಮ ದೇಶದಲ್ಲಿ ಹೆಂಗೆ ಮತ್ತು ಆರೋಗ್ಯ ವಿಚಾರದಲ್ಲಿ ಸರಿಯಾದ ಲೆಖ್ಖ ಇಡಲು ಆವಶ್ಯಕವಾದ ವಿಷಯಗಳನ್ನು ಪರ್ಯಾಲೋಚಿಸಿ ತಿಳಿಸುವ ಸಲುವಾಗಿ ಸರ್ಕಾರದವರು ಕೆಳಗೆ ಕಂಡ ಸದಸ್ಯರುಗಳುಳ್ಳ ಸಮಿತಿಯೊಂದನ್ನು ನಿಯಮಿಸಿರುವರು— ಸರ್ ಚಾರ್ಲಸ್ ಟಾಡ್‌ಹಂಟರ್ ಪ್ರೊ॥ ಕೆ. ಬಿ. ಮಾಧವಾ ಮಿ॥ ಡಿಸೋಜಾ, ಡಾ॥ ಎಸ್ ಸುಬ್ಬರಾವ್, ಡಾ॥ ಪಾರ್ಥಸಾರಥಿ, ಶ್ರೀ ಕೆ. ವಿ. ಅನಂತರಾಮನ್, ಶ್ರೀ ಇ. ಸುಂದರರಾಜನ್. ಜನೋಪಯೋಗದಂತೆಯೇ ಇಲ್ಲೂ ಕೂಡ ಸ್ಟ್ಯಾಟಿಸ್ಟಿಕ್ಸ್ ಇಲಾಖೆಯು ನಿರ್ಮಾಣವಾಗುವುದು.

ವಾರ್ತಾವಾಹಿನಿ.

(ಅನಾಮಧೇಯನಿಂದ)

ಮೈಸೂರಿನವರು ಕುರಿಗಳೇ?

ಮಾತೆತ್ತಿದರ 'ಮೈಸೂರು ಕುರಿ' ಎಂದು ಇತರರು ಕರೆಯುವುದು ಈಗ ಎಲ್ಲೆಲ್ಲೂ ರೂಢಿಯಾಗಿಬಿಟ್ಟಿದೆ. ಅದರ ಅರ್ಥವೇನು ಎಂದಲ್ಲ, ನಾವು ಈಗ ಹೇಳುವುದು ಒಂದಲ್ಲಿ ಕೆಲವು ತಿಂಗಳುಗಳ ಹಿಂದೆ ಈ ಊರಿನಲ್ಲಿ "ಅದೃಷ್ಟ ಸರಣಿ" ಎಂಬ ಹೆಸರಿನ ವ್ಯಾಪಾರವು ಪ್ರಾರಂಭವಾಗಿತ್ತಷ್ಟೆ. ಯಾವನೋ ಒಬ್ಬ ದೇವ ದತ್ತನ ಅಂಥ ಮಾಡಿದ ತನ್ನ ಸ್ನೇಹಬಾಂಧವರನ್ನು ಕಟ್ಟಿಕೊಂಡ ಅವನಿಗೂ ಮತ್ತು ಪ್ರಾರಂಭದಲ್ಲಿಯೇ ಸೇರಿದ ಕೆಲವರಿಗೂ ಹಲವಾರು ಆಯ ತನ್ನೂ ಬಂದಿತು ಬಗೆ ಬಗೆಯ ಮತಿ ಕಾಣಿಕೆಗಳು ಲಕ್ಷ್ಮೀ ಯಲ್ಲಿ ಮೂರೆಯಿತು. ಜನಗಳನ್ನು ಮೋಸ ಎಷ್ಟೋ ಸಂಪಾದನ ಮಾಡುವವರು ಮಾಡಿದರು. ಅದಕ್ಕೆ ಅವಿಯೂ ಇಲ್ಲ. ಒಂತ್ರವೂ ಇಲ್ಲ. ಏನೇನೂ ಉಪಯೋಗವಿಲ್ಲದಂತೆ ಹೀಗವೂ ನಿಂತಾಯಿತು. ಏತನ್ಮಧ್ಯೆ ಇಂಥಾದ್ದೇ ಮತ್ತೊಂದು ಒಪಾಧ್ಯಾರಿಯನಿತವಾದ ಆಫೀಸು ಸ್ಥಾಪಿತವಾಯಿತು. ಇದಕ್ಕೆ ಪ್ರೋತ್ಸಾಹವೇನೋ ಬಲವಾಗಿಯೇ ದೊರೆಯಿತು. ಆದರೂ ಈಗ ಆ ಸಂಸ್ಥೆಯು ಸಹ ನೇ ಗೊತ್ತಿಲ್ಲದಂತೆ ಗಿದೆ. ಸಂಸ್ಥೆಯು ಹಾಗಿರಲಿ ಅದಕ್ಕೆ ಹಣವನ್ನು ತೆತ್ತ ಜನಂಬರುಗಳಾದರೂ ತಮ್ಮ ಉದ್ದಿಷ್ಟ ಕಾರ್ಯದ ಫಲಾಫಲಗಳ ಮೇಲೆ ಗಮನ ಇರಬೇಡವೇ? ಇದನ್ನು ನೋಡಿಯೇ ಹೊರಗಿನವರು ನಮ್ಮನ್ನು "ಮೈಸೂರು ಕುರಿ" ಗಳೆಂದು ಕರೆಯುತ್ತಾರೆಯೋ ಏನೋ ಹೀಗಿರಬಹುದೇ?

ಹೊಸ ಸಂಪ್ರದಾಯದ ಬಾವಲಿಗಳು.

ಜುಲೈ ತಿಂಗಳು ಹುಟ್ಟಿತೆಂದರೆ ಬೈಸಿಕಲ್, ಮೋಟಾರು, ಗಾಡಿ, ಮೊದಲಾದ ವಾಹನಗಳಿಗೆಲ್ಲಾ ಹೊಸ ವರ್ಷದ ಸಂಪ್ರದಾಯದ ಬಾವಲಿಗಳ ಅಲಂಕಾರವಾಗಬೇಕು. ಈ ಬಾವಲಿಗಳನ್ನು ಪಡೆಯಲು ಸಾಮಾನ್ಯವಾಗಿ ಈ ತಿಂಗಳ ಆಖೈರುವರೆವಿಗೂ ಅವಕಾಶ ಯಿದೆ. ಹಾಯಿದೆ ಕೀಳಿತಂದರೆ ಬೌಕ ಜನಕಗಳಲ್ಲೂ, ಸಿನೀಮಾ, ನಾಟಕಥಿಯೇಟರುಗಳ ಹತ್ತಿರ ಇನ್ಸ್‌ಪೆಕ್ಟರ್. ಆ ವೇಳೆಗಳಲ್ಲಿ ಸಿನಿಮಾಕ್ಕೋ ನಾಟಕಕ್ಕೋ ಅಥವಾ ಹೋಟಲಿಗೋ ನಿಗದಿಯಾಗಿಟ್ಟುಕೊಂಡಿರತಕ್ಕ ದುಡ್ಡು ಕೊಟ್ಟರೆ ಬಿಡಿಸಿದವರು ಬಿಡುವರೇ? ಬೈಸಿಕಲ್ ಒಪ್ಪಿಸಿದ್ದೀದು ಹ್ಯಾಪ್ ಮೋರೆ ಹಾಕ್ಕೊಂಡು ಹಿಂತಿರುಗೋದು ಇಲ್ಲವೆ ಕಡಗೆ ಸ್ಪೆಷಲ್ ಕೋರ್ಟ್ ಪ್ರವೇಶ ಜುಲ್ಮಾನೆ ತೆತ್ತು ಸಿಗ್ನಾಯ ಕೊಟ್ಟು ಬರೋದು ಇದೆಲ್ಲಾ ಮಾಮೂಲಷ್ಟೆ.

ಈ ಚೀಟಿಗ ಹೊಸ ರೂಲ್ಸು ಜೀರಿ ಆಗಿರುವಂತೆ ಬೈಸಿಕಲ್ಲಿಗ ಬೆಲ್ ಇಲ್ಲದಿದ್ದರೆ ಜುಲ್ಮಾನೆ ತೆರಬೇಕಂತೆ. ಸಾಮಾನ್ಯವಾಗಿ 'ಬೆಲ್' ಇಲ್ಲದಿರೋ ಬೈಸಿಕಲಗಳೇ ಇಲ್ಲ. ಒಪ್ಪಿತಪ್ಪಿ ರಿಪೇರಿ ಪ್ರಯುಕ್ತ ಬೆಲ್ ಕೆಲವು ಗಂಟೆಗಳ ಕಾಲ ಇಲ್ಲದಿದ್ದರೆ ಅದು ಮಹಾಪರಾಧ. ಈಗ ಜಾಡಿಗ ಬೈಸಿಕಲಗಳು ಹೆಚ್ಚಿ ಗಂಟೆಗೆ ಆರು ಮೈಲಿನಂತೆ ಬಾಡಿಗೆ ಸಿಗುತ್ತೆ. ವ್ಯಾಪಾರ ಆಗಲೆಂದು ಬೈಸಿಕಲ್ ಚೆನ್ನಾಗಿ ಇರಲಿ ಇಲ್ಲದಿರಲಿ, ೮—೧ ವರ್ಷದ ಹುಡುಗರಿಗೆಲ್ಲಾ ಮುರುಕಲು ಬೈಸಿಕಲ್ ಕೊಟ್ಟು ಅವರಿಂದ ಒಂದಕ್ಕೆರಡಾಗಿ ಹಣವನ್ನು ಕಟ್ಟಿಸಿಕೊಳ್ಳುವುದು, ಇನ್ನೂ ಕೆಲ ಸಂದರ್ಭಗಳಲ್ಲಿ ಹುಡುಗರು ರಸ್ತೆಯಲ್ಲಿ ಅನಾಹುತಕ್ಕೆ ಗುರಿಯಾಗುವುದೂ ಉಂಟು. ಸರ್ಕಾರದವರು ಬೈಸಿಕಲ್‌ಗಳು ಸರಿಯಾದ ರೀತಿಯಲ್ಲಿರುವುದೇ ಎಂಬುದನ್ನು ಪರಿಶೀಲಿಸಿ, ಸಣ್ಣ ಹುಡುಗರಿಗ ಬೈಸಿಕಲ್‌ಗಳನ್ನು ಕೊಡಬಹುದಂಬುದಕ್ಕೆ ತಕ್ಕ ನಿಬಂಧನೆಯನ್ನಾದರೂ ಮಾಡಬಾರದೇಕೆ? ಅಲ್ಲದೆ ಈಗಿರುವುದು ಬೈಸಿಕಲ್ಲಿಗೆ ವರ್ಷಕ್ಕೆ ನೂರು ರೂ ತೆರಿಗೆ. ಇದು ತುಂಬಾ ದುಬಾರಿ. ಮೂರು ರೂಪಾಯಿಂದ ಎರಡು ರೂಪಾಯಿಗಿಳಿಸಿದರ ಕಾರ್ಪೊರೇಟಕ್ಕೆ ಆನಕಾನವೂ ಇರುವುದಿಲ್ಲ. ಮದ್ರಾಸ್ ಪ್ರಾಂತದಲ್ಲೆಲ್ಲಾ ಹೀಗೆ ಮಾಡಿದ್ದಾರೆ. ಪ್ರತಿಯೊಬ್ಬರೂ ತಾವಾಗಿ ಕಂದಾಯದ ಬಾವಲಿಗಳನ್ನು ಪಡೆಯುವರು.

ಬ್ರಾಹ್ಮಣೇತರರಿಗೂ ಸಮಾರಾಧನೆಗಳು ನಡೆಯಲಿ!!

ಬ್ರಾಹ್ಮಣರಿಗೆ ಸರ್ಕಾರಿ ನೌಕರಿಗಳಿಲ್ಲವಾಯಿತು ಕುಂಬಳಕಾಯಿ ಸ್ಕಾಲರ್‌ಷಿಪ್‌ಗಳು ಕಾಲಕ್ಷೇಪಕ್ಕಾಗಿ ಪರಿಣಮಿಸಿವೆ. ಗಳಿಸಿದ ವಿದ್ಯಾ ಪ್ರಶಸ್ತಿ ಪತ್ರಿಕೆಗಳು ಕಸದ ಬುಟ್ಟಿಯ ಕಾಗದದ ಪಾಲಿಗಿಂತಲೂ ಕೀಳಾಯಿತು. ಅನನುಭವದ ವ್ಯವಸಾಯವು ಇವರ ಪಾಲಿಗೆ ಸಂಗನಾಮವಾಯಿತು. 'ಬ್ರಾಹ್ಮಣೋ ಭೋಜನ ಪ್ರಿಯಃ' ಎಂಬಂತೆ ಅಲ್ಲ ಇಲ್ಲಿ ಬಿಟ್ಟಿ ಕೂಳು ಹುಡುಕಬೇಕು ಕಾಲಸ್ಥಿತಿ ಸಂಭವಿಸಿತಾಯಿತು. ಅರಮನೆ, ಗುರುಮನೆ ಅಂತ ಇದೊ ಕಡೆಗಳಲ್ಲಾದರೂ ಸ್ವಲ್ಪ ದಿನ ಅನ್ನವಾದರೂ ದಿನಗಳವಳ ಸಿಕ್ಕುತ್ತೆ ಎಂತ ಎಲ್ಲರೂ ಹೊಟ್ಟೆ ಹೊರಕೊಳ್ಳುತ್ತಲಿದ್ದರು. ಈಗ ನಮ್ಮೂರು ಛತ್ರ ಇದೆಯಲ್ಲಾ, ಅದನ್ನೇ ಪೂರ್ಣಯ್ಯನ ಛತ್ರ ಅಂತ ಒಹಳ ಕಾಲದಿಂದ ಕರೆಯೋ ಪದ್ಧತಿ ಇದೆ. ಅಲ್ಲಿ ಪರಸ್ಥಳದವರಿಗೆ ದಿನ ದಿನ ಅನ್ನ ಹಾಕುತ್ತಿದ್ದರು. ವರ್ಧಂತಿ, ಎಡೆ ಹಬ್ಬಗಳು, ದಸರಾ ಹತ್ತು ದಿನಗಳು, ಹೀಗೆ ವಿಶೇಷ ಸಂದರ್ಭಗಳಲ್ಲೆಲ್ಲಾ ಅನ್ನ ಬೀಳುತ್ತಿತ್ತು. ಈಗ ಎಲ್ಲಾ ತಪ್ಪಿತು. ಸಾರಸಾಲಿ ಹುಡುಗರು, ಅದೂ 30—35 ಜನರಿಗೆ ಮಾತ್ರ ಅನ್ನ ಬೀಳುತ್ತಿದೆ. ಅಲ್ಲಿ ಕೆಲ್ಸದವರಿಗೇನ ಪೂರ್ಣ. ಇನ್ನು ಮೇಲೆ ವಿಶೇಷ ಸಂದರ್ಭಗಳ ಸಮಾರಾಧನೆಗಳೂ ಕ್ಯಾನ್ಸಲ್ಲಾಗಿ ಇತ್ತ ನನ್ನು ಹೊಂದಿಸಿದವರಿಗೆ ಮಾತ್ರ ಲಿಮಿಟ್ಟಾಗಿ ಊಟ ಆಗುತ್ತೆಂತ ವರ್ತಮಾನವಿದೆ.

ಹೀಗಿರುವಾಗ ಮೊನ್ನೆ ಶಾಸನ ಸಭೆಯಲ್ಲಿ ಯಾರೋ ಒಬ್ಬ ಸದಸ್ಯರು ಮೈಸೂರು ಮಹಾರಾಜರ ಛತ್ರದಲ್ಲಿ ಬ್ರಾಹ್ಮಣರಿಗೆ ವರ್ಷ 1ಕ್ಕೆ ಹನ್ನೆರಡು ಸಾವಿರ ರೂ ವೆಚ್ಚದಿಂದ ಊಟವಾಗುತ್ತಿದೆ, ಇದನ್ನು ತಪ್ಪಿಸಬೇಕೆಂದು ಆಂತಿಮಾಡಿಕೊಂಡರಂತೆ. ಇದಕ್ಕೆ ಬದಲಾಗಿ ಬ್ರಾಹ್ಮಣೇತರರಿಗೂ ಸಹ ವಿಶೇಷ ಸಂದರ್ಭಗಳಲ್ಲಿ ಸಮಾರಾಧನೆಗಳನ್ನು ಮೊದಲನೆ ದರ್ಜೆಯಲ್ಲಿ ನಡಿಸಿ ಕೊಡಬೇಕೆಂದು ಕೇಳಿಕೊಳ್ಳುವ ಸಹನೆಯಾದರೂ ಬಾರದಿದ್ದುದೇಕೆ?

ಅಧಿಕಾರಿವರ್ಗದ ಬದಲಾವಣೆ.

ಚೀಫ್ ಸೆಕ್ರೆಟರಿಗಳಾದ ಶ್ರೀ॥ ಎ ವಿ ರಾಮನಾಥನ್‌ರವರಿಗೆ ಈ ಮಾಹೆ 13ರಿಂದ 19 ದಿನಗಳ ಪ್ರಿವಿಲೇಜ್ ರಜಾ.

ಎಕ್ಸೈಜ್ ಕಮಿಷನರಾದ ಶ್ರೀ॥ ಬಿ ಟಿ ಕೇಶವಯ್ಯಂಗಾರ್ಯ ಚೀಫ್ ಸೆಕ್ರೆಟರಿಯವರ ಸ್ಥಾನಕ್ಕೂ, ಇಂಡಸ್ಟ್ರೀಸ್ ಅಂಡ್ ಕಾಮರ್ಸ ಇಲಾಖೆ ಡೈರೆಕ್ಟರಾದ ವಿ | ಎಸ್ ರಾಮಸ್ವಾಮಿರವರು ಎಕ್ಸೈಜ್ ಕಮಿಷನರ್‌ರವರ ಸ್ಥಾನಕ್ಕೂ ಶ್ರೀ॥ ಎನ ಜಿ ಶಾಸ್ತ್ರಿಗಳವರು ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ಡೈರೆಕ್ಟರ್‌ರವರ ಸ್ಥಾನಕ್ಕೂ ವರ್ಗಾಯಿಸಲ್ಪಟ್ಟಿರುವರು.

ಮೋಟಾರ್ ತೆರಿಗೆ

ಹೊರಗಿನಿಂದ ಬರತಕ್ಕ ನೋಟಕರು ನಮ್ಮ ಸಂಸ್ಥಾನದಲ್ಲಿ ಸ್ವಲ್ಪವೇ ದಿನಗಳು ಇರುವುದಾದಲ್ಲ ತಮ್ಮ ಮೋಟಾರಿಗೆ ಮೂರು ತಿಂಗಳವರೆಗಿನ ತೆರಿಗೆಯನ್ನು ಕೊಟ್ಟು ಲೈಸನ್ಸ್ ಪಡೆಯಬೇಕಾಗಿದ್ದಿತು. ಇನ್ನು ಮುಂದ ಒಂದು ವಾರದ ಮತ್ತು ಮೂವತ್ತು ದಿವಸಗಳವರಗೆ ಜಾರಿಯಲ್ಲಿ ಬರಬಹುದಾದ ಅಲ್ಪಕಾಲಾವಧಿಯ ಸ್ಪೆಷಲ್ ಲೈಸೆನ್ಸುಗಳನ್ನು ಅಂಥ ಪ್ರೇಕ್ಷಕರಿಗೆ ಕೊಡತಕ್ಕದ್ದೆಂದು ಸೂಚಿಸತಕ್ಕ ಬದಲಾವಣೆಯು ಮೋಟಾರ್ ವಾಹನಗಳಮೇಲೆ ಸುಂಕವನ್ನು ವಸೂಲುಮಾಡಲು ಸಹಾಯಕವಾಗಿರುವ ಕಾನೂನಿಗೆ ಸೇರಿಸಬೇಕೆಂಬ ಸೂಚನೆಯು ಗೆಜಟ್ಟಿನಲ್ಲಿ ಪ್ರಕಟವಾಗಿದೆ. ಈ ತರಹದ ಅಲ್ಪಕಾಲದ ಲೈಸನ್ಸ್ ಫೀಜೂ ಸಹ ಬಹಳ ಕಡಿಮೆಯಾಗಿರುತ್ತದೆ. ಇದು ಬೇರೆ ಒಂದಲ್ಲಿ ನಮ್ಮ ದೇಶದ ಸೊಬಗಿನ ವೈಖರಿಯನ್ನು ನೋಡಲು ಬರತಕ್ಕ ಪ್ರೇಕ್ಷಕರಿಗೆ ತುಂಬಾ ಸಹಾಯವಾಗುತ್ತದೆ.

ಹುಲಿ ಶಿಕಾರಿಗೆ ಪರವಾನಗಿ

ಕಡೂರು ಜಿಲ್ಲಾ ಚಿಕ್ಕಮಗಳೂರು ತಾ॥ ಲಕ್ಕಿಹೋಬಳಿಗ ಸೇರಿದ ಸುಂದನಕೆರೆ, ಕಲಸಾಪುರ, ಕುಪ್ಪರಹಳ್ಳಿಯ ಅಕ್ಕಪಕ್ಕಗಳಲ್ಲಿ ಹಾವಳಿಮಾಡುತ್ತಿರುವ ಹುಲಿಗಳನ್ನು ಯಾರುಬೇಕಾದರೂ ಶಿಕಾರಿ ಮಾಡಬಹುದೆಂದು ಸರ್ಕಾರದವರು ಮೂರು ತಿಂಗಳು ಅವಕಾಶ ಕೊಟ್ಟಿರುವರು.

ಗ್ರಾಮ ನೌಕರರಿಗೂ ಪ್ರಯಾಣದ ಭತ್ಯಗಳು.

ಗ್ರಾಮಾಂತರದ ಪಟೇಲರುಗಳೂ ಶಾನುಭೋಗರುಗಳೂ ತಮಗಿರುವ ಅಧಿಕಾರದ ದೆಸೆಯಿಂದ ಸಂಸ್ಥಾನದ ಕ್ರಿಮಿನಲ್ ಕೋರ್ಟುಗಳಲ್ಲಿ ಸಾಕ್ಷ್ಯ ಕೊಡಲು ಹೋದಾಗ ಅವರಿಗೆ ಪ್ರಯಾಣದ ಖರ್ಚನ್ನು ಭತ್ಯವನ್ನೂ ಕೆಳಗೆ ಕಂಡರೀತಿ ಕೊಡತಕ್ಕದ್ದೆಂದು ಪ್ರಭುತ್ವದವರು ಅಪ್ಪಣೆ ಮಾಡಿರುತ್ತಾರೆ. (1) ರೈಲ್ವೆ ಪ್ರಯಾಣ ಮಾಡಿದರೆ ಒಂದು ಮೂರನೇ ತರಗತಿ ಛಾರ್ಜು. ರಸ್ತೆಯ ಮೂಲಕವಾದರೆ ಆ ರಸ್ತೆಯಲ್ಲಿ ಬಸ್ಸು ಸಂಚರಿಸುತ್ತಿದ್ದರೆ ಬಸ್ ಛಾರ್ಜು ಬಸ್ ಇಲ್ಲದಿದ್ದಲ್ಲಿ ಮೈಲಿ 1ಕ್ಕೆ ಎರಡಾಣೆ ಮತ್ತು ದಿನ 1ಕ್ಕೆ ಎಂಟಾಣೆ ಭತ್ಯವನ್ನೂ ಕೊಡತಕ್ಕದ್ದು.

ವಿಲೇಜ್ ಪಂಚಾಯಿತಿಯ ಛೇರಮನರೂ ಮೆಂಬರುಗಳೂ ತಮಗಿರುವ ಅಧಿಕಾರದ ದೆಸೆಯಿಂದ ಕ್ರಿಮಿನಲ್ ಕೋರ್ಟುಗಳಲ್ಲಿ ಸಾಕ್ಷ್ಯ ನುಡಿಯಲು ಹೋಗಬೇಕಾಗಿದ್ದಲ್ಲಿ ಮೇಲ್ಕಂಡ ದರದಂತೆಯೇ ಅವರಿಗೂ ಖರ್ಚುವೆಚ್ಚಗಳನ್ನು ಕೊಡತಕ್ಕದ್ದು.

ಉದಾರ ದಾನ.

ಜಾನ್ ಹಾರ್ಡಿನ್ ಎಂಬ ಕೋಟ್ಯಾಧೀಶ್ವರನು ಈಗ ೬1 ವಯಸ್ಸುಳ್ಳವನಾಗಿದ್ದಾನೆ. ಅವನು ಆಗಲೆ 900,000 ಪೌಂಡುಗಳನ್ನು ಧರ್ಮಶಾಲೆ, ಸ್ಕೂಲು ಮತ್ತು ಇನ್ನೂ ಇತರ ಪರೋಪಕಾರಕ್ಕಾಗಿ ದಾನ ಮಾಡಿರುತ್ತಾನೆ. ಅವನು ಸಾಯುವುದರೊಳಗಾಗಿ ತನ್ನ ಆಸ್ತಿಯನ್ನೆಲ್ಲಾ ಹೀಗೆಯೇ ಸದ್ವಿನಿಯೋಗ ಮಾಡಬೇಕೆಂದು ನಿರ್ಧರಿಸಿರುತ್ತಾನೆ.

ಹೆಂಡತಿಯು ಗಂಡನಿಗೆ ಜೀವನಾಂಶ ಕೊಡಬೇಕು.

ಅಮೇರಿಕದ ಮಿಸೆಸ್ ಸಾಡಿ... ಎಂಬುವಳು ತನ್ನ ಗಂಡನು ನಿರುದ್ಯೋಗಿಯಾದುದರಿಂದ ಅವನಿಗೆ ಸೊನ್ನೆ ಮಾಡಿದಳು. ಗಂಡನು ಕೋರ್ಟಿಗೆ ಹೋಗಿ ತನಗೆ ಉದ್ಯೋಗ ದೊರೆಯುವ ತನಕ ಅವಳ ಆದಾಯದಿಂದ 25 ಷಿಲಿಂಗ್ ಜೀವನಾರ್ಥವನ್ನು ಹೆಂಡತಿಯಿಂದ ಪಡೆಯುವಂತೆ ತೀರ್ಪು ಪಡೆದನು.

ಮನುಷ್ಯನಂತೆ ಅತ್ತ ಮರ

ಮುಝಫರ್‌ಪುರ್ ಎಂಬಲ್ಲಿ ಒಂದು ಮಾವಿನ ಮರವು ಮನುಷ್ಯನಂತೆ ಅಳುವುದಕ್ಕೆ ಆರಂಭಿಸಿದ ಶಬ್ದವು ಅತ್ಯಂತ ಆಶ್ಚರ್ಯಕರವಾಗಿದೆ. ಅದು ಅರ್ಧ ರಾತ್ರಿಯಲ್ಲಿ ಅಳಲು ಪ್ರಾರಂಭಿಸಿ ಅನೇಕ ದಿನಗಳಾದುವು. ಜನರ ಗುಂಪುಗಳು ತಂಡ ತಂಡವಾಗಿ ಹೋಗಿ ನೋಡುತ್ತಿವೆ.

ಒಂದು ಕೊಂಬೆಯನ್ನು ಕತ್ತರಿಸಿದಾಗಲೂ ಅದು ಗೋಳಾಟವನ್ನು ನಿಲ್ಲಿಸಲಿಲ್ಲ.

"ಪಕ್ಷ ಪಾತ"

ದೃಶ್ಯ ೧

ಗಂ ಪಿನ ಪರ್ಣ ಶಾಲೆ ಹೊರಗಡೆ ಬಿಸಿಲು ವಿಪರೀತವಾಗಿ ಬೀಳುತ್ತಿರುವುದು ಗುರು ಪತ್ನಿಯೊಂದು ಬಳಿ—ಕೃಷ್ಣನೂ ಸುಧಾಮನೊಂದು ಬಳಿ ಬಿಸಿಲಿನಿಂದ ನಡುಗುತ್ತ ಮುದುರಿಕೊಂಡು ಮೂಲೆಯೊಂದರಲ್ಲಿ ಕುಳಿತಿರುವರು ಗುರು ಧ್ಯಾನಾಸಕ್ತನಾಗಿರುವನು

ಕೃಷ್ಣ —(ಸುಧಾಮನನ್ನು ಕುರಿತು) ಸುದಾಮ! ನಿನ್ನಲ್ಲಿರುವ ಈ ಒಡತ್ತವನ್ನು ಬಿಡುವುದಿಲ್ಲವೋ—ನಾನು ಬೇರೆ ಆ ...—ಏನು ಸುದಾಮ! ನಿನ್ನಲ್ಲಿ ಚಟುವಟಿಕೆಯೆಂಬ ಮಾತೇ ಕಾಣ ಬರುವುದಿಲ್ಲ ... ಹೂ ಎಷ್ಟಿದ್ದರೂ ಬ್ರಾಹ್ಮಣ ಪ್ರಾಣಿ

ಸುದಾಮ —ಇನ್ನೇನು ಮಾಡುವುದು ಕೃಷ್ಣ—ವ್ಯಾಸಂಗ ಕಾಲವು ಮುಗಿಯಿತಾ ... ಇನ್ನು ನಾನೂ ನೀನೂ ಬೇರೆ ಬೇರೆ ಆಗುವ ಕಾಲವು ಸಮೀಪಿಸಿತು—ಈ ... ನಲ್ಲಿ ನೀನು ನನ್ನನ್ನು ಎಷ್ಟೇ ದುಷ್ಟ ... ವರೂ—ನನಗೆ ಸಮ್ಮತವೇ ಸರಿ. ... ಆದರೂ ಸ್ನೇಹಿತ, ಮನ ತಿ ಕುಂದ ... ರ ಸರಿ

ಕೃಷ್ಣ —(ಸಿಟ್ಟುಸಿರು ಬಿಟ್ಟು) ಹಾಸ್ಯಕ್ಕಾಗಿ ಒಂದೆರಡು ಮಾತನಾಡಿದರೆ—ಆ ... ಬ್ರಹ್ಮಣ ಪ್ರಾಣಿ ವೇದಾಂತವನ್ನೇ ಪ್ರಾರಂಭ ಮಾಡುವುದಲ್ಲ—ಇದೀಗ ಸ್ನೇಹದ ... ನಾತೆ

ಗುರುಪತ್ನಿ —(ಕುಳಿತಿದ್ದ ಸ್ಥಳ ಬಿಟ್ಟೆದ್ದು ಒಂದು—ಮೂಲೆಯಲ್ಲಿ ಹಾಕಿದ್ದ ಸೌದೆ ... ಮು ನಾಮ ಹೋಗಿರುವುದನ್ನು ನೋಡಿ) ಕೃಷ್ಣನು ಗುರು ಪತ್ನಿಯ ಬಳಿ ... ಚಟುವಟಿಕೆಯಿಂದ ನಿಲ್ಲುವನು)

ಕೃಷ್ಣ —ತಾಯೀ! ತಾವೇಕೆ ಹೀಗೆ ... ಸೂಚಿಸಬೇಕು ಗುರುಗಳು ಆಸನ ... ಏಳುವ ಮುನ್ನ—ಕೆಲವು ಒಣಗಿದ ... ಗಳನ್ನು ತರುವೆ. ಚಿಂತಿಸಬೇಡಿ ... ವಾಗ್ರತೆಯಲ್ಲಿಯೇ ಒಂದು ಸೇರು ...

ಗುರುಪತ್ನಿ ಕೃಷ್ಣ! ಈ ಮಳೆಯಲ್ಲಿ ... ಗೆಂದು ಹೋಗುವೆ—ಒಣ ಪುರಳೆಗಳು ... ಬಗೆಯಾದರೂ ಎಂತು? ಛಳಿಯು ... ಅಸಾಧ್ಯವಾಗಿರುವುದು

ಕೃಷ್ಣ —ಇಲ್ಲಾ ತಾಯಿ! ಹಾಗೆನ್ನಬಾರ ... ವ ಛಳಿಯು ನಿಂತಿರುವುದು—ಕಾಡಿ ... ಇರುವುವರೊಳಗಾಗಿ ಬಿಸಿಲು ಒಂದೇ ... ದು ಆದಷ್ಟು ಒಣಪುರಳೆಗಳನ್ನು ... ವೆನು— (ಹೊರಡಲುದ್ಯುಕ್ತನಾಗುವ)

ಸುಧಾಮ —(ಕೃಷ್ಣನನ್ನು ಕುರಿತು) ... ! ನಾನೂ ಬರಬಹುದಾಗಿತ್ತು ಆ —ಹೊರಗಡೆಯಲ್ಲಿ ಛಳಿಯು ತಡೆಯ ... ನಾಗಿರುವುದು ಈ ನನ್ನ ದೇಹ ... ವನ್ನು ತಡೆಯುವುದೆಂತು

ಕೃಷ್ಣ —ಬೇಡ ಬೇಡ ಸುಧಾಮ, ನೀನೂ ಎಂದರೇನು? ಬರುವುದೂ ಎಂದರೇನು? ಸರಿ ಸರಿ! ಆಗದ ಹೋಗದ ಮಾತು ಪಾಪ! ಬೆಚ್ಚಗೆ ಮೂಲೆಯಲ್ಲಿ ಕುಳಿತು ವಿಶ್ರಮಿಸಿಕೊಳ್ಳುವುದನ್ನು ಬಿಟ್ಟು ನನ್ನ ಜೊತೆಯಲ್ಲಿ ಬಂದರೆ—ಎ—

ಸುಧಾಮ—(ಹಾಸ್ಯಕ್ಕೀಡಾಗಿ) ಹಾಗಾದರೆ ಕೃಷ್ಣಾ! ನಾನೆಂದೂ ನಿನ್ನ ಜೊತೆಯಲ್ಲಿ ಬಂದವನೇ ಅಲ್ಲ—ಸಹಾಯಮಾಡಿದವನೇ ಅಲ್ಲ—ಜೊತೆಯಲ್ಲಿ ಬಿಡು—ನಿನ್ನ ಬಳಿ ಸರಸವೇನು?

ಕೃಷ್ಣ —ಪಾಪ ಪಾಪ! ನಾನು ಯಾರು ಎಂದು—ನನ್ನ ಬಳಿ ನೀನು ಸರಸವಾಡವೇಕು ಸುಧಾಮ—ಕೈಗೆ ಕಾಲಿಗ ಬಾರದ ಮನುಷ್ಯರ ಬಳಿ ನಿನ್ನಂಥ ವೇದಾಂತ ಕೇಸರಿಗಳು—

ಸುಧಾಮ —ಸಾಕು ಕೃಷ್ಣ—ಸಾಕು ನಿನ್ನ ಪುರಾಣ—

ಕೃಷ್ಣ —ಸರಿ—ಹಾಗಾದರ ಸಾಕು—ಇನ್ನು ನಾನು ಹೊರಡುವೆನು—(ಹೆಗಲ ಮೇಲೆ ಕೊಡಲಿಯನ್ನು ಹಾಕಿಕೊಂಡು ಹೊರಡುವನು)

ಗುರುಪತ್ನಿ —(ಸುಧಾಮನ ಬಳಿ ಬಂದು) ಏನಿದು ಸುಧಾಮ! ಪಾಪ! ಕೃಷ್ಣನೊಬ್ಬನನ್ನೇ ಕಳುಹಿ ಬಿಟ್ಟೆಯಲ್ಲ ನಿನಗೆ ಛಳಿ—ಅವನಿಗೆ ಛಳಿಯಿಲ್ಲವೇ? ಆಥವಾ ನಿನಗೆ ಅಷ್ಟು ಛಳಿಯಾದರ ಸ್ವಲ್ಪ ಆವಲಕ್ಕಿಯನ್ನು ತಿನ್ನಲು ಕೊಡುವೆನು—(ಎಂದು ಒಳಕ್ಕೆ ಹೋಗುವಳು)—

ದೃಶ್ಯ ೨

(ಸುಧಾಮನು ನಡುಗುತ್ತ ಹೊರಗೆ ನಿಂತಿರುವನು ಗುರುಪತ್ನಿಯು ಕೈಯಲ್ಲಿ ಸ್ವಲ್ಪ ಅವಲಕ್ಕಿಯನ್ನು ಹಿಡಿದು ಬಂದು ಸುದಾಮನಿಗೆ ಕೊಡುವಳು—ಸುಧಾಮನು ಬಾಳ್ತು ಚೀಲದಿಯಿಂದ ಬಟ್ಟೆಯ ನಾನಾ ಮೂಲೆಗೂ ಕಟ್ಟುವನು

ಗುರುಪತ್ನಿ —ಸುದಾಮ! ನೀನೊಬ್ಬನೇ ತಿನ್ನಬೇಡ ಕೃಷ್ಣನಿಗೂ ಸ್ವಲ್ಪಕೊಟ್ಟು ನೀನೂ ತಿನ್ನು ಅವನಿಗೆ ಸಹಾಯಕನಾಗಿ ಒಣಗಿದ ಪುರಳೆಯನ್ನು ತೆಗೆದುಕೊಂಡು ಬಾ—ಎಚ್ಚರಿಕೆ ದಾರಿಯಲ್ಲಿ ದುಷ್ಟ ಮೃಗಗಳು ಓಡಿಸಿ (ಗುರುಪತ್ನಿಯು ಒಳಗೆ ಹೋಗುವಳು ಸುಧಾಮನು ದಾರಿಯಲ್ಲಿ ನಡೆದು ಬರುವನು)

ಸುದಾಮ —(ತನ್ನಲ್ಲಿತಾನೆ) ಒಳ್ಳೆಯ ಕಾರ್ಯವಾಯಿತು ಈಗ—ಮೋಯುತ್ತ ಮೇಯುತ್ತ ಅರ್ಧ ಅವಲಕ್ಕಿಯೇ ಮುಗಿದು ಬಿಟ್ಟಿತು (ಪುನಃ ತಿನ್ನುವನು) ದಾರಿ ಸವೆಯುವುದರಲ್ಲಿ ಪೂರ್ತ ಮುಗಿದರೂ ಮುಗಿಯಬಹುದು—ಆದ್ದರಿ? ಏನು ಛಳಿ—ಈ ಛಳಿಯಲ್ಲಿ ಗುರು ಪತ್ನಿಯು ಮಮತೆಯಿಂದ ಕೊಟ್ಟ ಈ ಅವಲಕ್ಕಿಯೂ ಇಲ್ಲದೆ ಹೇಗಿರುತ್ತಿತ್ತೋ—ನನ್ನ ಈ (ಕೃಶವಾದ ದೇಹವನ್ನು ನೋಡಿಕೊಳ್ಳುವನು) ಮೂಳೆ ಮೂಳೆಗಳೇ ಹೊರಗೆ ತಮ್ಮ ಸ್ವರೂಪವನ್ನು ತೋರ್ಪಡಿಸಿಕೊಳ್ಳುತ್ತಿರುವ ಈ ದೇಹವು ಬಹು ಬೇಗನೆ ಕುಸಿದು ಭೂಮಿಗೆ ಬೀಳುತ್ತಿತ್ತು (ದೂರದಲ್ಲಿ ಕೃಷ್ಣನನ್ನು ನೋಡುವನು) ಓಹೋ! ಬಹು ಬೇಗನೆ ಕೃಷ್ಣನ ಬಳಿ ಬಂದಿರುವೆನು ಛಳಿಯಿಂದಲೋ ಪರ್ಣಾದಿಯ ಹತ್ತಿರದ ಮರಕ್ಕೇ ಬಂದಿರುವನು—ಎಷ್ಟಿದ್ದರೂ ನನ್ನ ಧೈರ್ಯವು ಕೃಷ್ಣನಿಗೆ ಬರುವುದೇತು? ಇನ್ನೂ ಸ್ವಲ್ಪ ಅವಲಕ್ಕಿಯು ಉಳಿದಿರುವುದು—ಮರದ ಬುಡದಲ್ಲಿ ಕುಳಿತು ಕೃಷ್ಣನಿಗೆ ಕಾಣದಂತೆ ಇಲ್ಲಿರುವುದನ್ನು ಮುಗಿಸಿಬಿಡುವೆನು—(ಅಂತೆಯೇ ಮಾಡುವನು)

ಕೃಷ್ಣ —(ಪುರಳೆಗಳನ್ನು ಕಿತ್ತಿಡುತ್ತ— ಸುಧಾಮನನ್ನು ಕಂಡು) ಬಂದೇ ಏ ಟ್ಟಿಯಾ ಸುಧಾಮ! ಪಾಪ, ನಿನಗೆಷ್ಟೊಂದ ಬಹು ಕಷ್ಟವಾಯಿತು—ಏಕೆ ಈ ಛಳಿಯಲ್ಲಿ ಬಂದೆ ಸುಧಾಮ —

ಕೃಷ್ಣ —ಏನು ಸುದಾಮ! ಆಗಲೇ ನನ್ನ ಮೇಲೆ ಕೋಪಿಸಿಕೊಂಡಂತಿದೆ, ಆದರೂ ಕ್ಷಮಿಸು

ಸುದಾಮ —ಕೃಷ್ಣಾ ನಾನೇನು ಒಂದೆ ತಪ್ಪೇನು?

ಕೃಷ್ಣ —ಓ! ತಿಳಿಯಿತು—ಇದೇನು ಸುಧಾಮ ಏನು ಏನಿದು ಮಾತನಾಡುವೆ? ಛಳಿ—(ಸ್ವರ ಬೇಗ—ಇಥವಾ

ಸುಧಾಮ —ಅಂತ ಏತಕ್ಕೂ ಇಲ್ಲ ಕಷ್ಟ

ಕೃಷ್ಣ —ಅಥವಾ ಉಪದೋಪಚಾರದಿಂದಲೋ?—ಅಥವಾ

ಸುದಾಮ —(ಮಾತನ್ನು ಮರೆಸುತ್ತ) ಏನು ಕೃಷ್ಣ! ಪುರಳೆಗಳು ಒಣಗಿದಂತೆಯೇ ಇರುವುದು. ಇದು ಗುರುಪತ್ನಿಯ ಪುಣ್ಯವಿಶೇಷವೇ ಸರಿ

ಕೃಷ್ಣ —ಸುಧಾಮ! ನನಗೆ ಒಂದು ಸುಸ್ತಾಗುವುದು ನೋಡು—ಎಂದು ಕಡೆ ಹರಿವೆ, ಇತ್ತೊಂದು ಕಡೆ ಉಳಿ, ಏನಾದರೂ ಸ್ವಲ್ಪ ತಿನ್ನಲು ಇದ್ದರೆ

ಸುಧಾಮ —ಇದೇನು ಕೃಷ್ಣ ಹೀಗೆ ಕೇಳುವೆ ನನ್ನನ್ನು ಕೇಳುವದೆ ನಾನೆಲ್ಲಿಂದ ತರಲಿ ಅಥವಾ ನಿನ್ನನ್ನು ಬಿಟ್ಟು ನಾನೊಬ್ಬನೇ ಏನನ್ನಾದರೂ ತಿನ್ನುತ್ತಿದ್ದು ದ್ದನೇ? ಹೇಳು ಹಸಿವೆಯ ಬೇಸಿಯಿಂದ ನಿನಗೆ ಏನೇನೋ ಆಗುತ್ತಿರುವಂತೆ ಕಾಣುವುದು

ಕೃಷ್ಣ —ನಿಶ್ಚಯವಾಗಿಯೂ ನೀನು ಏನನ್ನೂ ತಿನ್ನುತ್ತಿರಲಿಲ್ಲವೇ ಸುಧಾಮ

ಸುಧಾಮ —ಖಂಡಿತವಾಗಿಯೂ ಇಲ್ಲವಯ್ಯಾ! ನನ್ನನ್ನು ಏಕೆ ಹೀಗೆ ಗೋಳು ಹುಯಿದುಕೊಳ್ಳುವೆ?

ಕೃಷ್ಣ —ಹಾಗಾದಲ್ಲಿ ಸುಧಾಮ

ಸುಧಾಮ ಏನನ್ನೂ ತಿನ್ನಲಿಲ್ಲವೆ ... ನಾನು ನಿನಗ ... ಯದಾಗಲು ಬಂದ ನಾನು ಬಾಯಿ ಆಡಿಸುತ್ತಿದ್ದಂತೆ ತೋರಿರಬಹುದು

ಕೃಷ್ಣ (ನಕ್ಕು) ಹೂ ಹೌದು, ಸುಧಾಮ! ಸ್ವಲ್ಪ ಕಾಲ ನಿನ್ನ ಜೀವಿತ ಕಾಲದಲ್ಲಿ ನಿನಗೆ ಏನೂ ಎಲ್ಲದಂತೆಯೇ ಆಗಲಿ ಎಂದು ನನ್ನ ಪಾಲನ್ನು ನ್ನಿತ್ತು ನೀನು ಸುಖಿಯಾಗು

ದೃಶ್ಯ ೩

(ಆಶ್ರಯ, ಗುರು, ಗುರುಪತ್ನಿಯರು ಪ್ರಸನ್ನದಿಂದ ಬಾಲಕರಿರ್ವರನ್ನೂ ನೋಡುತ್ತಾ ನಿಂತಿರುವರು—ಕೃಷ್ಣಸುಧಾಮರು ತಲೆಯನ್ನು ತಗ್ಗಿಸಿ ವಿನಯದಿಂದ ಸುಮ್ಮನೆ ನಿಂತಿರುವರು)

ಗುರು —ಕೃಷ್ಣ! ಸ್ನೇಹಮಾತ್ರಕ್ಕೆ ಪ್ರಾಣವನ್ನೇ ಕೊಡಬೇಕಾದುದು ನೀನು ಕ್ಷತ್ರಿಯಕ ಯೋಗ್ಯವೇ. ಭವಿಷ್ಯದಲ್ಲಿ ರಾಜ್ಯಗಳನ್ನಾಳತಕ್ಕವನು ಕೇವಲ ಬಿಕ್ಷೆಬೇಡಿ ಜೀವಿಸುವ ಸುಧಾಮನನ್ನೂ ನಿನ್ನನ್ನೂ ಮರೆಯದಿರು—ಸುಧಾಮ! ನಿನಗೆ ಯಾವಾಗ್ಲೂ ಸತ್ಸಂಗವೇ ದೊರೆಯಲಿ ದೇವರಲ್ಲಿ ಭಕ್ತಿಯು ನಿನಗೆ ಅನಂತವಾಗಿರಲಿ ಗುರುವನ್ನೂ, ಇದುವರೆಗೆ ಕಾಪಾಡಿದ ನನ್ನ ಪತ್ನಿಯನ್ನೂ ಮರೆಯಬೇಡ—ನನ್ನ ಆಶೀರ್ವಾದವು ನಿಮ್ಮೀರ್ವರಿಗೂ ಫಲಿಸಲಿ ಇನ್ನು ಸಂತೋಷದಿಂದ ಹೋಗಿಬನ್ನಿ

ಗುರು—ಗುರುಪತ್ನಿಯರಿಬ್ಬರಿಗೂ ನಮಸ್ಕರಿಸಿ ಅಂಜಲೀ ಬದ್ಧರಾಗಿ ನಿಲ್ಲುವರು

ಕೃಷ್ಣ —ಗುರುವರ್ಯ! ನಿಮಗೆ ನಾವು ಋಣಿಗಳು ನಿಮ್ಮ ಅಭೀಷ್ಟದಂತೇ ನಡೆಸುಕೊಳ್ಳುವೆನು

ಸುಧಾಮ —ಗುರುವರ್ಯ! ಅನಂತ ದಿವಸವೂ ತಮ್ಮ ಬಳಿಯಲ್ಲಿಯೇ ಇದ್ದು ಸೇವೆಯನ್ನೆಸಗಬೇಕೆನ್ನಿಸುವುದು ಆದರೆ ಆ ಕ್ರಮಗಳ ತೊಡಕಿನಿಂದ ನಾವು ಅಗಲುವೆವು ತಮ್ಮ ಆಶೀರ್ವಾದವೇ ನಮ್ಮ ಮುಖ್ಯ ಗುರಿ—ನಮ್ಮ ಮುಂದಿನ ಏಳಿಗೆಗೆ ತಾವು ಕಾರಣ ಕರ್ತರು ಇನ್ನು ನಾವು ಹೋಗಿ ಬರುವೆವು

(ಗುರು—ಗುರುಪತ್ನಿಯರೀರ್ವರು ಆಶೀರ್ವದಿಸಿ ನೋಡುತ್ತ ನಿಲ್ಲುವರು ಕೃಷ್ಣ ಸುದಾಮರು ಕಣ್ಣೀರ ಗಂಗೆಯಲ್ಲಿ ಮಿಂದು ಬರುತ್ತಲಿರುವರು)

ಕೃಷ್ಣ —ಸುಧಾಮ! ಇಲ್ಲಿಗೆ ನಮ್ಮ ದಾರಿಯು ತೀರಿತು ಇನ್ನು ಅಗಲಬೇಕಾದ ಸಂದರ್ಭವು ಸಮೀಪಿಸಿತು ನಾನು ಅಗಲುವೆನಾದರೂ ಮನವು ನಿನ್ನ ಹೃದಯದಲ್ಲಿ ನಾಟಿರುವುದು ದೇಹದಿಂದ ಮಾತ್ರ ಅಗಲುವೆನು ಅಷ್ಟೆ, ನಮ್ಮ ಸ್ನೇಹದ ದಿನಗಳಲ್ಲಿ ಕೆಲವು ವೇಳೆ ಹಾಸ್ಯಕ್ಕಾಗಿ ನಿನಗೆ ಕೋಪಬರುವ ಮಾತುಗಳನ್ನು ನಾನು ಆಡಿರಬಹುದು ನಿನಗೆ ಎಷ್ಟೋ ವೇಳೆ ಮನನೊಂದಿರುವುದು ನನಗೆ ತಿಳಿದಿರುವುದು ಅದನ್ನೆಲ್ಲಾ ಈಗ ಕ್ಷಮಿಸಿಬಿಡು ಕಷ್ಟಕಾಲದಲ್ಲಿ ನನ್ನನ್ನು ಸಹಾಯಕ್ಕೆ ಕರೆ. ಕೈಲಾದ್ದನ್ನು ಪ್ರೀತಿಪೂರ್ವಕವಾಗಿ ಮಾಡುವೆನು ಮುಖ್ಯವಾಗಿ ನನ್ನನ್ನು ಮರೆಯಬೇಡ ನಾನಿನ್ನು ಹೋಗಿಬರಲೆ

(ಮುಂದುವರಿಯುವುದು)

ದ್ರವ್ಯವು ಸಕಲ ಪಾಪಗಳ ಮೂಲ.

ಕ್ರೈಸ್ತ ಪಾದ್ರಿಗಳೂ, ದೇಶೀಯ ಕ್ರೈಸ್ತರು.

(ಬರೆದು ಬಂದುದು)

ಮಿಷನರಿಗಳು ತಾವು ಸತ್ಯವಂತರೂ ಧರ್ಮ ಸಂಸ್ಥಾಪಕರೂ ಎಂದು ಹೇಳಿಕೊಳ್ಳುವುದರಲ್ಲೇ ಮಗ್ನರಾಗಿದ್ದಾರೆಯೇ ವಿನಹ ಸತ್ಯಕಾರ್ಯಗಳನ್ನು ರಚಿಸುವುದರೂ ಅನುಷ್ಠಾನದಲ್ಲಿ ತಾರದೆಯಿರುವುದು ತುಂಬಾ ಶೋಚನೀಯವೂ ವ್ಯಸನವೂ ಆಗಿರುತ್ತದೆ. 'ಬೋಧನೆಯು ಸಾಧನೆಯಲ್ಲಿ ತೋರದಿದ್ದರೆ ಅಂಥಾ ಬೋಧನೆಯಿಂದ ಪ್ರಯೋಜನವೇನು?" ಉಪ್ಪು ಸಪ್ಪಗಾದರೆ ಅದು ಯಾತಕ್ಕೆ ಉಪಯೋಗವಾದೀತು? ಹಾಗೆಯೇ "ಕ್ರಿಯೆಯಿಲ್ಲದ ವಿಶ್ವಾಸವು ಸತ್ತದ್ದು' ಕ್ರಿಸ್ತನು ಬಡವರನ್ನು ಉದ್ಧಾರಮಾಡುತ್ತೇನೆಂದು ಶ್ರೀಮಂತನಾಗಿ ಅವತರಿಸಲಿಲ್ಲ. ಬಡವರಲ್ಲಿ ಬಡವನಾಗಿ ಉದ್ಭವಿಸಿದನು· ಚಿಂದಿ ವಸ್ತ್ರವನ್ನು ಧರಿಸಿದನು. ದನ ಕಟ್ಟುವ ಕೊಟ್ಟಿಗೆಯಲ್ಲಿ ಸಂಕುಚಿತವಾದ ಚರಣಿಯಲ್ಲಿ ಉದಯಿಸಿದನು ಇಂದು ಮಿಷನರಿಗಳಾದ ನೀವು ಏನಾಗಿದ್ದೀರಿ? ಕ್ರಿಸ್ತನ ಹಾಗೆ ಬಡವನಾಗಿದ್ದೀರೋ? ಬಡವರಿಗೋಸ್ಕರ ನೀವು ಬಡವರಾಗಿದ್ದೀರೊ? ಅಥವಾ ಸಾವಿರಾರು ರೂಪಾಯಿಗಳ ಮಹಲಿನ ಮನೆಗಳೂ, ಸುಪ್ಪತ್ತಿಗೆಗಳೂ, ಸೋಫಾಗಳೂ, ತೂಗುಮಂಚಗಳೂ, ಮೃಷ್ಟಾನ್ನ ಭೋಜನಗಳೂ, ಗೋಲ್ಡ್ ಫ್ಲೇಕ್ ಸಿಗರೇಟುಗಳೂ, ಅಲಂಕರಿಸಲ್ಪಟ್ಟ ಉದ್ಯಾನವನಗಳೂ, ಇವೆಲ್ಲವನ್ನೂ ಹೊಂದಿದ್ದೀರಾ? ಒಂಟೆಯು ಸೂಜಿಕಣ್ಣಿನಲ್ಲಿ ನುಗ್ಗುವುದು ಸುಲಭ, ಆದರೆ ಐಶ್ವರ್ಯವಂತನು ದೇವರರಾಜ್ಯದಲ್ಲಿ ಸೇರುವುದು ಕಷ್ಟ ಎಂಬ ಕ್ರಿಸ್ತನ ನೀತಿಯನ್ನು ಮರೆಯಬೇಡಿರಿ. ಕ್ರಿಸ್ತನು ಈ ಲೋಕದಲ್ಲಿರುವಾಗ ಆತನಿಗೆ ಸಂಬಳವೆಷ್ಟು· ಒಂದುವೇಳೆ ಸಂಬಳ ಕೊಟ್ಟಿದ್ದರೆ ಎಷ್ಟು ಕೊಡಬಹುದಾಗಿತ್ತು? ಸುವಾರ್ತಾ ಸೇವೆಗೆ ಕಳಿಸಲ್ಪಟ್ಟ ಶಿಷ್ಯರಿಗೆ ತಿಂಗಳಿಗೆ ಎಷ್ಟೆಷ್ಟು ಸಂಬಳ ಮಾತಾಡಿ ಕಳಿಸಿ ಕೊಟ್ಟ! ಅವರಲ್ಲಿ ಎಷ್ಟು ಮೋಟಾರು ಕಾರುಗಳಿದ್ದವು? ಎಷ್ಟು ಬೈಸಿಕಲ್ ಗಾಡಿಗಳಿದ್ದವು? ಎಷ್ಟು ಟಾಂಗಾಗಳಿದ್ದವು? ಒಂದು ಕಡೆಯಿಂದ ಮತ್ತೊಂದು ಕಡೆಗೆ ಹೋಗಲು ಅವರು ಮೈಲೇಜು, ಬ್ಯಾಟ ಎಷ್ಟು ತೆಗೆದುಕೊಳ್ಳುತ್ತಿದ್ದರು? ದೇವರಸೇವೆಗೆಂದು ಹೋದ ಕಡೆಗಳಲ್ಲಿ ಅವರು ಆಸ್ತಿ ಪಾಸ್ತಿಗಳನ್ನೂ ಮನೆ ಮಠಗಳನ್ನೂ ಎಷ್ಟು ಸಾವಿರಕ್ಕೆ ತಗೆದರು? ಎಷ್ಟು ಸಾವಿರಕ್ಕೆ ಕಟ್ಟಿಸಿದರು? ದೊಡ್ಡ ಬ್ಯಾಂಕುಗಳಲ್ಲಿಯೂ ಹೆಚ್ಚು ಆದಾಯ ಬರತಕ್ಕ ಇನ್ಸೂರೇನ್ಸು ಕಂಪೆನಿಗಳಲ್ಲಿಯೂ ಎಷ್ಟೆಷ್ಟು ಸಾವಿರ ಲಕ್ಷ ರೂಪಾಯಿಗಳನ್ನು ಗಳಿಸಿದರು? ಧರ್ಮ ಶಾಸ್ತ್ರದಲ್ಲಿ ಇವುಗಳ ವಿಚಾರದಲ್ಲಿ ಏನಾದರೂ ಆಧಾರವಿದೆಯೋ? ಈಗಿನ ಕಾಲದ ಬೋಧಕರು ಏನಾಗಿದ್ದಾರೆ? ಬಡ ಜನರನ್ನೂ ಅವರ ಆದಾಯಗಳನ್ನೂ ಜೀವಸಹಿತ ಸುಲಿದು ತಿನ್ನುವವರಾಗಿದ್ದಾರೆ

ಭಾರತೀಯ ಕ್ರೈಸ್ತ ಸಮಾಜದ ಏಳಿಗೆಗೆ ಈಗಿನ ಉಪದೇಶಕರೂ, ಪಾದ್ರಿಗಳೂ, ವಿನಾಶಕರಾಗಿದ್ದಾರಲ್ಲಾ. ಇವರಿಂದ ಎಷ್ಟು ಮನೆಗಳು ಮುರಿದುಹೋಗಿಲ್ಲ? ಎಷ್ಟು ಮಂದಿ ನಿರ್ಗತಿಕರಾಗಿಲ್ಲ? ಎಷ್ಟು ಮಂದಿ ಉಪವಾಸವಾಗಿಲ್ಲ? ಎಷ್ಟು ಮಂದಿ ನಿರುದ್ಯೋಗಿಗಳಾಗಿಲ್ಲ? ಜನರು ನಿಮ್ಮ ಕೈಗೆ ಸಿಕ್ಕಿ ನರಕದ ಹುಳುಗಳಂತೆ ನರಳುತ್ತಿರುವರಲ್ಲಾ! ನಿಮ್ಮ ನಿಮ್ಮ ಅಂತರಂಗ ಬರಹಗಳೂ, ಭೇದೋಪಾಯದ ಸಂಧಾನಗಳೂ ಬಡ ಕ್ರೈಸ್ತರ ಕೊರಳಿಗೆ ಉರುಳಿನಂತಿರುತ್ತದಲ್ಲಾ! ಬಡವರ ಕಾಣಿಕೆಕಪ್ಪಗಳೂ, ಬಡಜನರಿಗಾಗಿ ಕಳಿಸಿಕೊಟ್ಟ ಉದಾರ ಧನವೂ ನಿಮ್ಮೆಲ್ಲರನ್ನು ಈ ದುಷ್ಕಾರ್ಯದಲ್ಲಿ ನಡಿಸುತ್ತಾ ಇದೆ. ದೇವರ ಸೇವೆಯ ಮರೆಯಲ್ಲಿ ನೀವು ಮಾಡುತ್ತಿರುವ ಅನ್ಯಾಯಗಳು ಹೊರಬೀಳುವ ಕಾಲವು ಬಂದಿದೆ!

ಬಡ ಉಪಾಧ್ಯಾಯರುಗಳ ಗೋಳು ಗೋಳಲ್ಲ! ಎಷ್ಟು ಮಂದಿ ಹತ್ತು ವರ್ಷಗಳಾದರೂ ಹತ್ತು ರೂಪಾಯಿ ಸಂಬಳದಲ್ಲೇ ಇದ್ದಾರೆ ಎಷ್ಟು ಮಂದಿ ಈ ಅಲ್ಪ ವೇತನವು ಸಾಲದೆ ಬಡತನಕ್ಕೂ, ಕಷ್ಟನಷ್ಟಗಳಿಗೂ ಗುರಿಯಾಗಿ ಹಂಬಲಿಸುತ್ತಲಿದ್ದಾರೆ ಇಂಥಾ ದೌರ್ಭಾಗ್ಯಸ್ಥಿತಿಯಲ್ಲಿರುವ ಬಡ ಉಪಾಧ್ಯಾಯರು ಪ್ರಮೋಷನ್ ಕೇಳಿದರೆ ನಿಮ್ಮಲ್ಲಿ ಹಣವಿಲ್ಲ. ಬಡ ಕ್ರೈಸ್ತರಮೇಲೂ ಬಡ ಉಪಾಧ್ಯಾಯರಮೇಲೂ ದೊರೆತನ ಮಾಡಲು ಗ್ರಾಮಾಂತರಗಳಲ್ಲಿ ನೀವಿಟ್ಟಿರುವ ಉಪದೇಶಕರ ಕೆಲಸವೇನು? ತಮ್ಮ ಸಂಸಾರಕ್ಕೆ ಮನೆಗೆಲಸಕ್ಕೆ ಒತ್ತಾಸೆಕೊಡುವುದಕ್ಕಾಗಿಯೂ, ಮಕ್ಕಳಿರುವವರು ತಮ್ಮ ಮಕ್ಕಳನ್ನು ಆಡಿಸುವುದಕ್ಕೂ, ಬೀದಿಗಳಲ್ಲಿ ಹೊತ್ತುಕೊಂಡು ತಿರುಗಿಸುವುದಕ್ಕೂ, ಬೇಜಾರು ಕಳೆಯಲು ತಮ್ಮ ತಮ್ಮ ಮನೆಗಳಲ್ಲಿ 'ಕಾರ್ಡ್ಸ್ ಪ್ಲೇಯಿಂಗ್' (ಇಸ್ಪೀಟ್ ಆಟ) ಆಡುವುದಕ್ಕೂ, ಗುಂಡಸ್ತನ್ನು ಅರಗಿಸಲು ಮನೆಯಮುಂದೆ ತೋಟ ಮಾಡಿಕೊಂಡಿರುವುದಕ್ಕೂ ಕೋಳಿ ಮರಿ ನೋಡಿಯಾದರೆ ಸಿಕಾರಿಗೆ ಹೋಗಿ ಪ್ರಾಣಿಗಳನ್ನು ಕೊಲ್ಲುವುದಕ್ಕೂ, ನಲವತ್ತು ಐವತ್ತು ರೂಪಾಯಿಗಳನ್ನು ಪೆನ್ಷನಿನ ರೂಪದಲ್ಲಿ ಕೊಡುವುದಕ್ಕೆ ನಿಮ್ಮಲ್ಲಿ ಹಣವಿದೆ ಹಗಲಿಗೆ ಎಂಟು ತಾಸು ದುಡಿಯುವ ಬಡ ಉಪಾಧ್ಯಾಯರುಗಳಿಗೆ ಅವರ ಪ್ರಮೋಷನಿಗೆ ಹಣವಿಲ್ಲ ಸಾಲದ್ದಕ್ಕೆ ಇವರಿಗೆ ಗ್ರೇಡುಗಳು ಬೇರೆ, ಸೀನಿಯಾರ್ಟಿ ಮೇಲೆ ಇವರಿಗೆ ಬಡ್ತಿಗಳು ಬೇರೆ, ಸಪ್ಪಕ್ಷದಿಂದ ಬಡ ಜನರ ಸಂರಕ್ಷಣಾರ್ಥವಾಗಿ ಕಳುಹಿಸಲ್ಪಟ್ಟ ದ್ರವ್ಯವು ಸೂರೆಯಾಗುತ್ತಲಿರುವುದು ನಿಮ್ಮ ಮನಸ್ಸುಗಳಿಗೆ ಬರುವುದಿಲ್ಲವೊ? ಅವರ ಮನೆಯ ಮೇಲೊಗರಗಳೂ, ಅವರ ಥಳುಕು ಮಿಣುಕುಗಳೂ, ನಿಮ್ಮ ನ್ಯಾಯವನ್ನು ಕುರುಡುಮಾಡಿರುತ್ತವೆ. ನೀವು ಕ್ರಿಸ್ತನಂತೆ ಬಡವರಾಗದೆ ಹೋದರೆ "ನಿನ್ನನ್ನು ಪ್ರೀತಿಸುವಂತೆ ನಿನ್ನ ನೆರೆಯವನನ್ನು ಪ್ರೀತಿಸು" ಎಂಬ ವೇದೋಕ್ತಿಯಂತೆ ನಡೆಯದೆ ಹೋದರೆ ನೀವು ಕ್ರಿಸ್ತನ ಸೇವಕರೆಂದು ತಿಳಿಯಲು ಸಾಧ್ಯವಿಲ್ಲ

ಭಾರತೀಯ ಕ್ರೈಸ್ತರ ಉಪಯೋಗಕ್ಕಿರುವ ಸಹಾಯ ದ್ರವ್ಯವು ದುರ್ವಿನಿಯೋಗಿಸಲ್ಪಡುತ್ತಿರುವುದು ಹಿಂದುಗಳು ಸ್ವಾತಂತ್ರ್ಯದ ಪಥಕ್ಕೆ ಬರಲು ಮಿಷನರಿಗಳಿಗೆ ಮನಸ್ಸಿಲ್ಲವೆಂದು ಅವರ ಕಾರ್ಯಗಳಿಂದ ಕಂಡುಬರುತ್ತದೆ. ಕ್ರೈಸ್ತ ಸಮಾಜವನ್ನು ತಮ್ಮ ಹಿಡಿತದಲ್ಲಿಟ್ಟುಕೊಂಡಿರುವಂತೆ ಹಿಂದುಗಳನ್ನೂ ಒಂದೊಂದು ಮಾರ್ಗದಲ್ಲಿ ತಮ್ಮ ಹಿಡಿತದಲ್ಲಿಟ್ಟುಕೊಳ್ಳಬೇಕೆಂದು ಯತ್ನಿಸುತ್ತಿರುವರು ಇಂದು ಕ್ರೈಸ್ತ ಸಮಾಜದಲ್ಲಿ ಎಷ್ಟು ಮಂದಿ ನಿರ್ಗತಿಕರಿದ್ದಾರೆ, ಎಷ್ಟು ಮಂದಿ ಅನ್ನವಸ್ತ್ರಗಳಿಲ್ಲದೆ ಅವಸ್ಥೆ ಪಡುತ್ತಲಿದ್ದಾರೆ, ಎಷ್ಟು ಮಂದಿ ಅನಾಥರಿರುತ್ತಾರೆ, ಇವರ ಕೊರತೆಗಳನ್ನೂ, ಬಡತನಗಳನ್ನೂ ನೀಗಿಸಿದರೆ ಸಾಕಾಗಿದೆ ಇತರರನ್ನೂ ಈ ನರಕದ ನರಳುವಿಕೆಗೆ ಎಳೆಯಲು ಏನಾಕೆ ಯತ್ನಿಸುವಿರಿ? ನಿಮ್ಮ ಸಮಾಜದಲ್ಲಿರುವ ಮಕ್ಕಳಿಗೆ ಸಾಕಾದಷ್ಟು ವಿದ್ಯಾಭ್ಯಾಸವನ್ನು ಕೊಟ್ಟು ಉತ್ತಮಗೊಳಿಸಿದರೆ ಸಾಕಾಗಿದೆ ವಿದ್ಯಾಸಂಸ್ಥೆಗಳನ್ನಿಟ್ಟು ಇತರರನ್ನು ಉದ್ಧಾರಮಾಡುತ್ತೇವೆಂದೂ, ಉತ್ತಮಗೊಳಿಸುತ್ತೇವೆಂದೂ ಹೊರಟಿರುವ ಮರ್ಮವೇನು?

ಹುಣಸೂರು ಟೌನಿನಲ್ಲಿ ಮಹಾಜನರು ಒಂದು ನ್ಯಾಷನಲ್ ಸ್ಕೂಲನ್ನು ಏರ್ಪಡಿಸಿರುವರು. ಇದು ಸುಮಾರು ಆರು ತಿಂಗಳಿಂದಲೂ ಅಭಿವೃದ್ಧಿಯಿಂದ ನಡೆಯುತ್ತಿದೆ ತಾವು ಸ್ವತಂತ್ರವಾಗಿ ಈ ವಿದ್ಯಾಸಂಸ್ಥೆಯನ್ನು ಅಭಿವೃದ್ಧಿಗೆ ತರಬೇಕೆಂದು ಪ್ರಯತ್ನಿಸುತ್ತಿರುವಲ್ಲಿ, ಮಿಷನ್ ಇಲಾಖೆ ಸೂಪರಿಂಟೆಂಡೆಂಟರವರೂ, ಮತ್ತು ಅವರ ಕಡೆಯ ಏಜಂಟರವರೂ ಪ್ರತಿಯೊಬ್ಬ ವಿದ್ಯಾರ್ಥಿಗೂ ಎರಡೆರಡು ಆಣೆಯಂತೆಯೂ, ಹಣ್ಣು ಹಂಪಲುಗಳನ್ನೂ ಕೊಟ್ಟು ಯಾವಾಗಲೂ ಇಲ್ಲದ ಒಂದು ಹೊಸ ಹುರುಪಿನಿಂದ ಮಕ್ಕಳನ್ನು ಆಕರ್ಷಿಸುತ್ತಿರುವ ಮರ್ಮವೇನು? ಕೆಲವು ಮಕ್ಕಳ ತಂದೆಯರಿಗೆ ಒಂದೊಂದು ದೂಗಲನ್ನು ಕೊಟ್ಟಿರುವುದೂ ತಿಳಿಯ ಬಂದಿದೆ ಇಂತಹ ಧರ್ಮಕಾರ್ಯಗಳನ್ನು ಮಾಡಲೂ ಮಾಡಿಸಿಕೊಳ್ಳಲೂ ಕ್ರೈಸ್ತ ಸಮಾಜದಲ್ಲಿ ಎಷ್ಟು ಮಂದಿ ನಿರ್ಗತಿಕರಿಲ್ಲ, ಎಷ್ಟು ಮಂದಿ ಅನ್ನವಸ್ತ್ರಗಳಿಲ್ಲದೆ ಕೊರತೆಪಡುತ್ತಿಲ್ಲ? ಇವರ ಕೊರತೆಯನ್ನು ನಿವಾರಿಸಿದರೆ ಸಾಕಾಗಿದೆಯಷ್ಟು. ಒಬ್ಬೊಬ್ಬನಿಗೆ ಐವತ್ತು ರೂಪಾಯಿಗಳನ್ನು ವಿದ್ಯಾವೇತನವನ್ನು ಕೊಟ್ಟರೂ ಒಳ್ಳೆಯದೆ, ದಾನಮಾಡಿದರೂ ಧರ್ಮವಂತು ಮಾಡಿದರೆ ಮುಕ್ತಿ ಲಭ್ಯವಾದರೆ ಮತ್ತೊಂದು ಸಂಸ್ಥೆಯನ್ನು ತುಳಿಯಬೇಕೆಂದು ಮಾಡುವ ಯುಕ್ತಿ ಎಂದು ತಿಳಿಯಬೇಕಾಗಿದೆ.

ಎರಡು ಹೊಸ ಕನ್ನಡ ಮಾತುಗಳು.

ತಾಯ್ನುಡಿಗಾಗಿ ನಾವೆಲ್ಲರೂ ತೊ[..] ತ್ತಿರುವಾಗ ಮುದ್ರಣಾಲಯಗಳಲ್ಲಿ [..] ಗೊಂಡು ಅಲ್ಲಿ ಕೆಲಸಮಾಡುತ್ತಿರುವ ಮು[..] ದ್ರಾ ರಾಕ್ಷಸನೂ ಕೂಡ ಕನ್ನಡ ನು[..] ಯ ಸೇವೆಯನ್ನು ತಾನರಿಯದಂತೆ ಮಾ[..] ಡುವುದು ಶುಭಸುದ್ದಿ ಅಲ್ಲವೆ? ವೇ[..] 'ಸಾಧ್ವಿ' ಯನ್ನು ಓದುತ್ತಿದ್ದಾಗ, ಪ್ರಜಾ[..] ಪ್ರತಿನಿಧಿ ಸಭೆಯ ಕಾರ್ಯಕಲಾಪಗಳ[..] ವಿಮರ್ಶಿಸುವ ಲೇಖನದಲ್ಲಿ, ಸಂಪಾದ[..] ಕಣ್ಣಿಗೆ ಬೀಳದೆಯೇ, ಮುದ್ರಾ ರಾಕ್ಷಸ[..] ಒಂದು ಹೊಸ ಪದವನ್ನು ಸೃಷ್ಟಿ ಮಾ[..] ದ್ದುದನ್ನು ಕಂಡು ನನಗೆ ಮಹದಾನಂ[..] ವಾಯಿತು. ಅದು ಯಾವುದೆಂದ[..] 'ದೋಡೋಣ" ಅನ್ನುವುದು. ಸ್ವಾ[..] ಸ್ವಾಮಿ !—ಮಾತು ಎಷ್ಟುಚೆನ್ನಾಗಿದೆ[..] ಸಣ್ಣ ಪುಟ್ಟ ನಾವೆಲ್ಲರೂ ಹೇಳಿದರೆ "ನೋ[..] ಡೋಣ! ' ಅಂತ ಹೇಳಬಹುದು [..] ದರೆ, ದೂಡ್ಡ ದೊಡ್ಡವರು "ನೋಡೋ[..] ಅಂದರೆ, ಆಗ, ಈ ಹೊಸಮಾತನ್ನು [..] ಪಯೋಗಿಸಬಹುದು— 'ದೋಡೋಣ[..] ಅಂತ ಹೇಗಿದೆ ವ್ಯತ್ಯಾಸ" ಮಾ[..] ಸ್ವಾರಸ್ಯ ಹೇಗಿದೆ?

ಹಾಗೆಯೇ, ನಿನ್ನೆ ವಿಶ್ವಕರ್ಣಾಟಕ[..] ವಾರಪತ್ರಿಕೆಯನ್ನು ಓದಿದಾಗ ಅಲ್ಲ[..] ಮುದ್ರಾ ರಾಕ್ಷಸನ ಸೇವಾ ಕಾರ್ಯವ[..] ನ್ನಾಗಿ ನಡೆದಿದೆ ಎಂದು ತಿಳಿಯಿತು [..] ಯ ಹೊಸಮಾತು ಯಾವುದೆಂದರೆ, " ಲೋಚನೆ ಮಾಡುವುದು" ಇದರ [..] ಉಪಯೋಗ ಹೇಗೆ ಆದರೆ, ನಿಧಾನ[..] ಆಲೋಚಿಸುವುದಕ್ಕೆ ಆಲೋಚನ [..] ಡುವುದು," ಒಡನೆಯೇ ಆಲೋ[..] ಮಾಡಿದರೆ, ತ್ವರಿತದಲ್ಲೇ ಯೋಚಿ[..] ದಿದರೆ, 'ಆಲೋಚನೆ ಮಾಡುವುದ[..] ಅಂತ.

ಅಂತು, ಒಂದು ವಾರದಲ್ಲಿ ಕ[..] ಮಾತೆಯ ಜೋಕ್ಷಸಕ್ಕೆ ಎರಡು ರತ್ನ[..] ಹೊಸದಾಗಿ ಸೇರಿದಂತಾಯಿತು.

ಡಿ ಕ[..]

[ಕರ್ನಾಟಕದ ಮಾತೆಯು ಒ[..] ರತ್ನಗಳನ್ನು ತಾತ್ಕಾಲಿಕವಾಗಿ ಸ[..] ಕೊಂಡರೂ ಶಾಶ್ವತವಾದ ಆಶ್ರಯವ[..] ಕೊಡುವುದಿಲ್ಲವೆಂಬುವನ್ನು ನಾವ[..] ಳ್ಳೆವು [..]

ನಿರುದ್ಯೋಗಿಗಳ ನಗರ

ದಕ್ಷಿಣ ಅಮೇರಿಕದಲ್ಲಿರುವ ಅ[..] ಟಿನಾದಲ್ಲಿ ನಿರುದ್ಯೋಗಿಗಳಿಗೆ ಒ[..] ಹೊಸ ನಗರವು ನಿರ್ಮಾಣವಾಗಿದ[..] ರದಲ್ಲಿ ಸುಮಾರು ಮೂರು ಸಾವಿರ ಮ[..] ಜನರಿರುವರು ಅವರಲ್ಲಿಯೇ ನ್ಯಾ[..] ದೀಶರೂ, ಪೋಲೀಸಿನವರೂ ಹಲ[..] ತ್ತಾರೆ ಅವರದೇ ಒಂದು ವೃತ್ತ[..] ಪತ್ರಿಕೆಯೂ ಇದೆ. ಆದರೆ ಒಬ್ಬ [..] ನಿಗೂ ಅಲ್ಲಿ ಪ್ರವೇಶವಿಲ್ಲ. ಎ[..] ಉದ್ಯೋಗಿಗಳಾಗಿ ತಮ್ಮ ತಮ್ಮ [..] ಯಿಂದ ಜೀವಿಸುತ್ತಿರುವರಂತೆ!

For Up-to-date and Efficient Medical Treatment

Go to—**Dr. A. J. RAM & SONS,**

Sayaji Rao Road, Mysore.

Physicians, Dentists, Opticians, etc

ಡಾ|| ಎ ಜೆ ರಾಂ. ಅಂಡ್ ಸನ್ಸ್,

ಸಯ್ಯಾಜಿರಾವ್ ರೋಡ್, ಮೈಸೂರು ಸಿಟಿ.

ಔಷಧ ವ್ಯಾಪಾರಿಗಳು, ಚಿಕಿತ್ಸಕರು, ದಂತವೈದ್ಯರು,
ಮತ್ತು ಕನ್ನಡಕ ವ್ಯಾಪಾರಿಗಳು.

ಉತ್ತಮವಾದ ನವೀನ ಚಿಕಿತ್ಸೆಗಳಿಗೆ ನಮ್ಮಲ್ಲಿಯೇ ಬನ್ನಿರಿ

ಪಂಡಿತ ಪಿ. ಎಚ್. ಚಂದ್ರಭಾನ್‌ಸಿಂಗ್
ಇವರಿಂದ ತಯಾರಿಸಲ್ಪಟ್ಟ

ಫಲಪುಷ್ಪಸಾರ ರಸಾಯನ.

ಸುಖಕರ ಮಲಬಂಧನಿವಾರಿಣೀ ಕ್ರಯ —1-8-0

ಗುಣ:—ಇದು ಜಾಪಾಳ ಮುಂತಾದ ಕಠಿಣ ವಿರೇಚಕ ವಸ್ತುಗಳ ಸಂಯೋಗವಿಲ್ಲದ ಕೇವಲ ಆಪ್ಯಾಯನಕರ ಪ್ರಯೋಗವು. ಕೇವಲ ಅನುಭವಸಿದ್ಧವಾದ್ದು. ಇದನ್ನು ಉಪಯೋಗಿಸುವುದರಿಂದ ಎಲ್ಲಾ ವಿಧವಾದ ಮಲಬಂಧವೂ, ಮಂದಾಗ್ನಿ, ಅಜೀರ್ಣ, ಉಷ್ಣವಾಯು, ಕೀಲುವಾಯು, ಎದೆಉರಿ, ಹೊಟ್ಟೆನೋವು, ಕೆಮ್ಮು, ತಲೆತಿರುಗು ಮುಂತಾದ ರೋಗಗಳೆಲ್ಲವೂ ಖಂಡಿತ ಗುಣವಾಗುತ್ತವೆ.

ಬ್ರಾಂಚ್:—ಶ್ರೀಸತ್ಯನಾರಾಯಣ ಆಯುರ್ವೇದಿಕ್ ಫಾರ್ಮಸಿ,
ಜಗನ್ಮೋಹನ ಬಂಗ್ಲೆ ರಸ್ತೆ, ಮೈಸೂರು

You Know

OUR IDEAL ARRANGEMENTS & CHOICEST PREPARATIONS

We need not tell you about it.

COME & SEE OUR NOVEL

innovations and up-to-date Management.

SRI KRISHNA BHAVAN,

Mysore

ANANDA SODA FACTORY,

DODDAPET, MYSORE.

BEST AERATED WATER SUPPLIERS

COMPLETE REQUISITES FOR

AERATED WATER MANUFACTURERS

AVAILABLE.

ಆನಂದಾ ಸೋಡಾ ಫ್ಯಾಕ್ಟರಿ,

ದೊಡ್ಡಪೇಟೆ, ಮೈಸೂರು

ವಿಖ್ಯಾತ ಆಯುರ್ವೇದ ವಿದ್ವಾನ್ ಬಿ ಎ ಪಂಡಿತರ

ಬಾಲಸುಧಾ

ಮಕ್ಕಳ ಜ್ವರದ ಗೆಡ್ಡೆಯನ್ನು ಕರಗಿಸಿ ಗುಣಪಡಿಸುತ್ತೆ. ಲಿವರ್ (ಪಿತ್ತಕೋಶ) ದಪ್ಪನಾಗಿ ಕಣ್ಣು ಹಳದಿ ಬಣ್ಣವಾಗಿದ್ದರೆ ಇದರ ಸೇವನೆಯಿಂದ ದಿನೇ ದಿನೇ ಗುಣವಾಗುತ್ತೆ. 20 ವರ್ಷಗಳಿಂದಲೂ ಅನುಭವ ಸಿದ್ಧವಾಗಿದೆ—ಮಕ್ಕಳ ಭೇದಿಗೆ ನಮ್ಮ ಬಾಲ ಸಂಜೀವಿನಿಯನ್ನೇ ಉಪಯೋಗಿಸಿರಿ

ಬಾಲಸುಧಾ ಬೆಲೆ 1 ರೂ   ಬಾಲಸಂಜೀವಿನಿ 1 ರೂ

ಮೈಸೂರು, ಬೆಂಗಳೂರು, ಮದ್ರಾಸುಗಳಲ್ಲಿ ನಮ್ಮ ಏಜೆಂಟರು

ಸದ್ವೈದ್ಯಶಾಲಾ, ನಂಜನಗೂಡು.

ಎಂ ವಿ. ನಾರಾಯಣರಾಯರ

ಶ್ರೀ ಸತ್ಯನಾರಾಯಣ ಪರಿಮಳ ಫ್ಯಾಕ್ಟರಿ,

ಜಗನ್ಮೋಹನ ಬಂಗ್ಲಾ ಬೀದಿ, ಮೈಸೂರು

ಪರಿಮಳ ಅಗರ್ ಬತ್ತಿ

ಉಪಯೋಗಿಸಿ ಪ್ರೋತ್ಸಾಹಿಸಿರಿ

ಪ್ರಾಚೀನ ಕನ್ನಡ ವಚನ ಗ್ರಂಥಗಳು.

ಸೌಗಂಧಿಕಾಪರಿಣಯ.—ಪೂರ್ವದಲ್ಲಿ ಮಹೇಂದ್ರನಿಗೆ ದೂರ್ವಾಸ ಮುನಿಗಳಿಂದ ಆಶೀರ್ವಾದ ಪೂರ್ವಕವಾಗಿ ಕೊಡಲ್ಪಟ್ಟ ಕಮಲಮಾಲಿಕೆಯನ್ನು ಆನೆಯು ಕುಂಭಸ್ಥಳದಲ್ಲಿಟ್ಟುಕೊಂಡು, ಆನೆಯು ಆ ಮಾಲಿಕೆಯನ್ನು ಕಾಲಿನಲ್ಲಿ ಹೊಸಕಿ ವ್ಯರ್ಥಪಡಿಸಲು, ಋಷಿಗಳ ಶಾಪದಿಂದ ಭೂಲೋಕದಲ್ಲಿ ಕಲ್ಯಾಣದಲ್ಲಿ ಸುಗಂಧರಾಜನಾಗಿ ಹುಟ್ಟಿ, ಕಳಿಂಗದೇಶದ ರಾಜಪುತ್ರಿಯಾದ ಸೌಗಂಧಿಕಾದೇವಿಯನ್ನು ಸ್ವಯಂವರದಲ್ಲಿ ಮಾಡಿಕೊಂಡ, ಬಹಳ ವಿಷಯಗಳಿರುವ ಕಥೆ

೧೭೦ ಪುಟಗಳು ಕ್ರಯ ರೂ ೦—೮—೦

ಸಹಸ್ರಾಯುಚರಿತ್ರೆ:—ಮಾಹಿಷ್ಮತೀ ಪಟ್ಟಣದ ವೈಶ್ಯಪತ್ನಿಯಲ್ಲಿ ದಾಕ್ಷಾಯಣಿ ವರಪ್ರಸಾದದಿಂದ ಜನಿಸಿ ಲೋಕಪ್ರಸಿದ್ಧನಾಗಿ ತನಗೆ ಇತರರಿಂದ ಬಂದ ಗಂಡಾಂತರಗಳನ್ನೆಲ್ಲಾ ಪರಿಹರಿಸಿಕೊಂಡ ಒಬ್ಬ ಮಹಾಪುರುಷನ ಕಥೆ

೮೦೦ ಪುಟಗಳು ಕ್ರಯ ರೂ ೨—೦—೦

ಕಾಶೀಕ್ಷೇತ್ರಮಹಾತ್ಮೆ:—ಇದರಲ್ಲಿ ೧೪ ಲೋಕಗಳ ವರ್ಣನೆ, ನದಿಗಳು, ದೇವತೆಗಳು, ಋಷಿಗಳೇ ಮುಂತಾದವರ ಉತ್ಪತ್ತಿಕ್ರಮ, ಗಂಗಾಸಹಸ್ರನಾಮವೇ ಮೊದಲಾದ ಅನೇಕ ವಿಷಯಗಳು ಅಡಕವಾಗಿರುತ್ತೆ

೭೦೦ ಪುಟಗಳು ಕ್ರಯ ರೂ ೨—೨—೦

ಅಡ್ರೆಸ್ಸು —

ಗುಂಡ್ಲು ಪಂಡಿತ ಲಕ್ಷ್ಮಣಾಚಾರ್ಯರ ಮಕ್ಕಳು
ಶ್ರೀನಿವಾಸ ದೇಶಿಕಾಚಾರ್,
೩೦೦, ಕಮಾನ್ಸ್ಟ್ರೀಟ್, ಮೈಸೂರು

RUNNING FOR THE SECOND WEEK.

"MOHINI-RUKMANGADA"

(in Tamil)

Devotion is the principal object of this photo-play.

A melodious Drama for all, young and old rich and poor, educated and uneducated.

We specially request you to book your seats for your family and friends to avoid rush and disappointment



ಎರಡನೇ ವಾರ

ಒಲಂಪಿಯಾ ಟಾಕೀಸ್, ಮೈಸೂರು.

ಇದೇ ೧೯೩೬ ನೇ ಜೂನ್ ೩೦ ನೇ ಮಂಗಳವಾರದಿಂದ

"ಮೋಹಿನಿ ರುಕ್ಮಾಂಗದ"

(ತಮಿಳು ಭಾಷೆಯಲ್ಲಿ)

ಈ ಪರಮ ಪವಿತ್ರವಾದ ಪುರಾಣದ ಕಥೆಯನ್ನು ನೋಡಿ ಪರಮಾತ್ಮನ ಧ್ಯಾನದಲ್ಲಿ ಲೀನರಾಗಿ
ಏಕಾದಶಿಯ ಮಹಾತ್ಮ್ಯೆ ಇದರ ಆಚರಣೆಯ ಫಲಪ್ರಾಪ್ತಿಗಳನ್ನೂ ತಿಳಿಯಬೇಕಾದರೆ ಇದು ಅಪೂರ್ವ ಸುಸಮಯ.

Rajendra Cinema,

Nanjangud.

THE MOST UP-TO-DATE AND WELL-EQUIPPED PICTURE HOUSE.

Rare Shows of Highest Attraction Consisting of Splendid Romance, Thrill and Adventure.

SCREENED TWICE A DAY,

PLEASE PAY A VISIT AND ENJOY YOURSELF.

ಶ್ರೀ ರಂಗನಾಥ ಟೈಪ್ ಫೌಂಡ್ರಿ

ಚಿಕ್ಕಪೇಟೆ, ಬೆಂಗಳೂರು ಸಿಟಿ.

ಸುಂದರವಾದ ಅಕ್ಷರಗಳು, ಮುದ್ದುಮುದ್ದಾದ ಬಾರ್ಡರುಗಳು ಬಗೆಬಗೆಯ ...

ನಮಗೆ ಈ ಕೆಲಸದಲ್ಲಿ ೩೦ ವರ್ಷಗಳ ಕಾಲದ ಅನುಭವವಿದೆ ಆಧುನಿಕ ...

ತಕ್ಕಂತೆ ಅಕ್ಷರದ ಆಕಾರವನ್ನು ಬಹು ಸುಂದರವಾಗಿ ಸುಧಾರಿಸಿದ್ದೇವೆ

ನಮ್ಮಲ್ಲಿನ "ಕನ್ನಡ, ಇಂಗ್ಲೀಷ್" ಅಕ್ಷರಗಳಂತಹ ಸುಂದರವಾದ ಅಕ್ಷರಗ...

ಮತ್ತೆಲ್ಲಿಯೂ ನೋಡಲಾರಿರಿ ಮತ್ತು

ನೂರಾರು ಬಗೆಯ ಸುಂದರವಾದ ಬಾರ್ಡರುಗಳು ನಯನಮನೋಹರ...

೬ ಪಾಯಿಂಟಿನಿಂದ ೪೮ ಪಾಯಿಂಟಿನವರೆಗೆ ವಿಧವಿಧವಾದ ಸುಂದರಾಕ್ಷರಗ...

ನಮ್ಮ 'ರಂಗನಾಥ ಕನ್ನಡ ಡಾಮಿನಿಯನ್' ಅಕ್ಷರಗಳನ್ನು ನೋಡಲು ಮರೆಯ...

ನಾವು ಕಾಪರ್ ಅಲಾಯ್ (ತಾಮ್ರಮಿಶ್ರಿತ) ನಿಂದಿರುವ ಅಕ್ಷರಗಳನ್ನು

ತಯಾರಿಸುತ್ತೇವೆ ಸುಲಭ ಬೆಲೆ ಗ್ಯಾರಂಟಿಯಾದ ಬಾಳಿಕೆ

Edited, Printed & Published by Agaram Rangiah, B. A., at Sri Rama Press, D. Subbiah Road, Mysore.

Registered No M 3534

ವಾರ್ಷಿಕ ಚಂದಾ ವಿವರ.

ಸ್ಥಳೀ ಪರಸ್ಥಳಗಳಿಗೆ ಏಜೆಂಟರ ಮೂಲಕ 1—8—0
ಅಂಚೆ ಮೂಲಕ 1—4—0 ಬಿಡಿ ಪತ್ರಿಕೆ 0—0—6

0—1—0

॥ ಸತ್ಯಮೇವೋದ್ಧರಾಮ್ಯಹಮ್ ॥
ರಾಜಧಾನಿಯ ರಾಷ್ಟ್ರೀಯ ವಾರ ಪತ್ರಿಕೆ.
ವೃದ್ಧಪಿತಾಮಹ ಎಂ ವೆಂಕಟಕೃಷ್ಣಯ್ಯನವರ ಜ್ಞಾಪಕಾರ್ಥವಾಗಿ ಪ್ರಕಟಿಸಲ್ಪಡುವುದು
ಸಂಪಾದಕರು ಅಗರಂ ರಂಗಯ್ಯ, ಬಿ ಎ

Sadhvi: A Leading Nationalist Weekly of Mysore.

FOUNDED IN MEMORY OF Mr M VENKATAKRISHNAYYA THE GRAND OLD MAN OF MYSORE.

ಪುಟ ೧] MYSORE · MONDAY 13—7—36 ಮೈಸೂರು : ಸೋಮವಾರ ೧೩—೭—೩೬ [ಸಂಚಿಕೆ ೨೧

ಬೆಂಗಳೂರು ದಂಡಿನಲ್ಲಿರುವ ಹೊಗೇ ಸೊಪ್ಪಿನ ಕಾರ್ಖಾನೆಯ ಮುಷ್ಕರ.



ಕಳೆದವಾರ ಮುಷ್ಕರಕಾರರು ಗಿರಣಿ ಬಳಿ ಸಭೆ ಸೇರಿ ತಮ್ಮನ್ನು ಕೆಲಸದಮೇಲೆ ಸೇರಿಸಿಕೊಳ್ಳಬೇಕೆಂದು ಕೋರಿದರು

For Up to-date and Efficient Medical Treatment

Go to—Dr. A. J. RAM & SONS,

Sayaji Rao Road, Mysore.

Physicians, Dentists, Opticians, etc

ಡಾ|| ಎ ಜೆ. ರಾಂ. ಅಂಡ್ ಸನ್ಸ್,

ಸಯ್ಯಾಜಿರಾವ್ ರೋಡ್, ಮೈಸೂರು ಸಿಟಿ.

ಔಷದ ವ್ಯಾಪಾರಿಗಳು, ಚಿಕಿತ್ಸಕರು, ದಂತವೈದ್ಯರು,
ಮತ್ತು ಕನ್ನಡಕ ವ್ಯಾಪಾರಿಗಳು

ಉತ್ತಮವಾದ ನವೀನ ಚಿಕಿತ್ಸೆಗಳಿಗೆ ನಮ್ಮಲ್ಲಿಯೇ ಬನ್ನಿರಿ

ಪಂಡಿತ ಪಿ. ಎಚ್. ಚಂದ್ರಭಾನ್‌ಸಿಂಗ್

ಇವರಿಂದ ತಯಾರಿಸಲ್ಪಟ್ಟ

ಫಲ ಪುಷ್ಪ ಸಾರ ರಸಾಯನ.

ಸುಖಕರ ಮಲಬಂಧನಿವಾರಿಣೀ ಕ್ರಯ —1-8-0

ಗುಣ.—ಇದು ಬಜಾರ್ ಮುಂತಾದ ಕಠಿಣ ವಿರೇಚಕ ವಸ್ತುಗಳ ಸಂಯೋಗವಿಲ್ಲದ ಕೇವಲ ಅಸ್ವಾಭಾವಿಕರಣ ಪ್ರಯೋಗವು ಕೇವಲ ಅನುಭವಸಿದ್ಧವಾದದ್ದು. ಇದನ್ನು ಉಪಯೋಗಿಸುವುದರಿಂದ ಎಲ್ಲಾ ವಿಧವಾದ ಮಲಬಂಧವೂ, ಮೂಲವ್ಯಾಧಿ, ಅಜೀರ್ಣ, ಉಷ್ಣವಾಯು, ಕೀಲುವಾಯು ಎದೆಯುರಿ, ಹೊಟ್ಟೆನೋವು, ಕೆಮ್ಮು, ತಲೆತಿರುಗು ಮುಂತಾದ ರೋಗಗಳೆಲ್ಲವೂ ಖಂಡಿತ ಗುಣವಾಗುತ್ತವೆ

ಬ್ರಾಂಚ್:—ಶ್ರೀಸತ್ಯನಾರಾಯಣ ಆಯುರ್ವೇದಿಕ್ ಫಾರ್ಮಸಿ,

ಜಗನ್ಮೋಹನ ಬಂಗ್ಲೆ ರಸ್ತೆ, ಮೈಸೂರು

You Know

OUR IDEAL ARRANGEMENTS & CHOICEST PREPARATIONS

We need not tell you about it

COME & SEE OUR NOVEL

innovations and up-to-date Management.

SRI KRISHNA BHAVAN,

Mysore

ANANDA SODA FACTORY,

DODDAPET, MYSORE.

BEST AERATED WATER SUPPLIERS.

COMPLETE REQUISITES FOR

AERATED WATER MANUFACTURERS

AVAILABLE

ಆನಂದಾ ಸೋಡಾ ಫ್ಯಾಕ್ಟರಿ,

ದೊಡ್ಡಪೇಟೆ, ಮೈಸೂರು

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ಬಾಲಸುಧಾ

ಮಕ್ಕಳ ಜ್ವರದ ಗೆಡ್ಡೆಯನ್ನು ಖಾತರಿ ಗುಣ ಪಡಿಸುತ್ತೆ. ಲಿವರ್ (ಪಿತ್ತಕೋಶ) ದಪ್ಪನಾಗಿ ಕಣ್ಣು ಹಳದಿ ಬಣ್ಣವಾಗಿದ್ದರೆ ಇದರ ಸೇವನೆಯಿಂದ ದಿನೇ ದಿನೇ ಗುಣವಾಗುತ್ತೆ 20 ವರ್ಷಗಳಿಂದಲೂ ಅನುಭವ ಸಿದ್ಧವಾಗಿದೆ—ಮಕ್ಕಳ ಭೇದಿಗೆ ನಮ್ಮ ಬಾಲ ಸಂಜೀವಿನಿಯನ್ನೇ ಉಪಯೋಗಿಸಿರಿ

ಬಾಲ ಸುಧಾ ಬೆಲೆ 1 ರೂ   ಬಾಲ ಸಂಜೀವಿನಿ ೪ ಆ

ಮೈಸೂರು, ಬೆಂಗಳೂರು, ಮದ್ರಾಸುಗಳಲ್ಲಿ ನಮ್ಮ ಶಾಖೆಗಳಿವೆ

ಸದ್ವೈದ್ಯಶಾಲಾ, ನಂಜನಗೂಡು.

ಎಂ. ವಿ. ನಾರಾಯಣರಾಯರ

ಶ್ರೀ ಸತ್ಯನಾರಾಯಣ ಪರಿಮಳ ಫ್ಯಾಕ್ಟರಿ,

ಜಗನ್ಮೋಹನ ಬಂಗ್ಲಾ ಬೀದಿ. ಮೈಸೂರು

ಪರಿಮಳ ಅಗರ್ ಬತ್ತಿ

ಉಪಯೋಗಿಸಿ ಪ್ರೋತ್ಸಾಹಿಸಿರಿ

ಪ್ರಾಚೀನ ಕನ್ನಡ ವಚನ ಗ್ರಂಥಗಳು

ಸೌಗಂಧಿಕಾಪರಿಣಯ:—ಪೂರ್ವದಲ್ಲಿ ಪರಮೇಶ್ವರನಿಗೆ ದೂರ್ವಾಸಮುನಿಗಳಿಂದ ಆಶೀರ್ವಾದ ಪೂರ್ವಕವಾಗಿ ಕೊಡಲ್ಪಟ್ಟ ಕಮಲಮಾಲಿಕೆಯನ್ನು ಆನೆಯ ಕುಂಭಸ್ಥಳದಲ್ಲಿಟ್ಟಿರುವಾಗ, ಆನೆಯು ಆ ಮಾಲಿಕೆಯನ್ನು ಕಾಲಿನಲ್ಲಿ ಹೊಸಕಿ ವ್ಯರ್ಥಪಡಿಸಲು, ಋಷಿಗಳ ಶಾಪದಿಂದ ಭೂಲೋಕದಲ್ಲಿ ರತ್ನಪುರಿಯಲ್ಲಿ ಸುಗಂಧರಾಜನಾಗಿ ಹುಟ್ಟಿ, ಕಳಿಂಗದೇಶದ ರಾಜಪುತ್ರಿಯಾದ ಸೌಗಂಧಿಕಾದೇವಿಯನ್ನು ಸ್ವಯಂವರದಲ್ಲಿ ಕೈಗೊಂಡ, ಬಹಳ ವಿಷಯಗಳಿರುವ ಕಥೆ

೧೬೦ ಪುಟಗಳು ಕ್ರಯ ರೂ ೪—೮—೦

ಸಹಸ್ರಾಯುಚರಿತ್ರೆ:—ಮಾಹಿಷ್ಮತೀ ಅರಸನ ಜ್ಯೇಷ್ಠಪತ್ನಿಯಲ್ಲಿ ನಾರಾಯಣ ವರಪ್ರಸಾದದಿಂದ ಜನಿಸಿ ಲೋಕಪ್ರಸಿದ್ಧನಾಗಿ ತನಗೆ ಇತರರಿಂದ ಬಂದ ಗಂಡಾಂತರಗಳನ್ನೆಲ್ಲಾ ಪರಿಹರಿಸಿಕೊಂಡ ಒಬ್ಬ ಮಹಾಪುರುಷನ ಕಥೆ

೪೭೫ ಪುಟಗಳು ಕ್ರಯ ರೂ ೨—೦—೦

ಕಾಶೀಕ್ಷೇತ್ರಮಹಾತ್ಮೆ:—ಇದರಲ್ಲಿ ೧೪ ಲೋಕಗಳ ವರ್ಣನೆ, ನದಿಗಳು, ದೇವತೆಗಳು, ಋಷಿಗಳೇ ಮುಂತಾದವರ ಉತ್ಪತ್ತಿಕ್ರಮ, ಗಂಗಾ ಸಹಸ್ರನಾಮವೇ ಮೊದಲಾದ ಅನೇಕ ವಿಷಯಗಳು ಅಡಕವಾಗಿರುತ್ತೆ

೬೮೩ ಪುಟಗಳು ಕ್ರಯ ರೂ ೨—೮—೦

ಅಡ್ರೆಸ್ಸು —

ಗುಂಡ್ಲು ಪಂಡಿತ ಲಕ್ಷ್ಮಣಾಚಾರ್ಯರ ಮಕ್ಕಳು
ಶ್ರೀನಿವಾಸ ದೀಕ್ಷಿತಾಚಾರ್,
೩೦೭, ಕರುವಟ್ಟಿಬೀದಿ, ಮೈಸೂರು.

॥ ಸತ್ಯಮೇವೋದ್ಧರಾಮ್ಯಹಮ್ ॥
ರಾಜಧಾನಿಯ ರಾಷ್ಟ್ರೀಯ ವಾರ ಪತ್ರಿಕೆ.
ವೃದ್ಧಪಿತಾಮಹ ಎಂ. ವೆಂಕಟಕೃಷ್ಣಯ್ಯನವರ ಜ್ಞಾಪಕಾರ್ಥವಾಗಿ ಪ್ರಕಟಿಸಲ್ಪಡುವುದು.
ಸಂಪಾದಕರು: ಅಗರಂ ರಂಗಯ್ಯ, ಬಿ.ಎ.

ಸಂಪುಟ ೧] MYSORE : MONDAY 13-7-36 ಮೈಸೂರು : ಸೋಮವಾರ ೧೩—೭—೩೬ [ಸಂಚಿಕೆ ೨೧

ಹೊಗೇಸೊಪ್ಪಿನ ಕಾರ್ಖಾನೆಯ ಮುಷ್ಕರ.

ಕೆಲಸಗಾರರನ್ನು ನೇಮಿಸಿಕೊಳ್ಳಲಾಗುವುದು.

ಕಳೆದ ೮ ರ ದಂಡಿನ ಹೊಗೇಸೊಪ್ಪಿನ ಕಾರ್ಖಾನೆಯ ಮುಷ್ಕರ ಹೂಡಿರುವ ...ಸಗಾರರು ಸಭೆ ಸೇರಿ ಕಾರ್ಖಾನೆಯ ...ಬಳಿ ಬಂದುಸೇರಿದರು

ಈ ಸುದ್ದಿ ದಂಡಿನ ಪೋಲೀಸಿನವರಿಗೆ ...ದೊಡನೆ ಪೋಲೀಸು ಕಮೀಷನರು ... ಪೋಲೀಸ್ ಸಿಬ್ಬಂದಿಯನ್ನು ಕ...ಹಿಸಿದರು

ಕಾರ್ಖಾನೆಯ ಬಾಗಿಲಿನಮುಂದೆ ಸೇರಿ...ದ ಪೈಕಿ ಅನೇಕರು ಹೆಂಗಸರು

ಕಾರ್ಖಾನೆಯ ಅಧಿಕಾರಿಗಳು ಆ ದಿನ ...ನಾಳೆ ೧೦೦ ಮಂದಿ ಕೆಲಸಗಾರರನ್ನು ...ಲಸಕ್ಕೆ ಪುನಃ ಸೇರಿಸಿಕೊಳ್ಳಲಾಗುವು...ದೂ, ಸಂದರ್ಭವೊದಗಿದಂತೆ ಇತರ ...ನ್ನು ಕರೆಯಲಾಗುವುದೆಂದೂ ತಿಳಿಯಪ...ಡಿಸಿದರು

ಮುಷ್ಕರಕಾರರು ಸರದಿಮೇರೆ ಕೆಲಸಕ್ಕೆ ...ಸಿಕೊಳ್ಳಬೇಕೆಂದೂ ನಾವು ಹೊಟ್ಟೆ...ಗೆ ತೊಂದರೆಪಡುತ್ತಿರುವುದಾಗಿಯೂ ...ಕೊಂಡರು

ಅದಕ್ಕೆ ಮುಷ್ಕರ ಹೂಡಿರುವವರು ಉ...ನ ಮಾಡುತ್ತಿದ್ದರೆ ಅದಕ್ಕೆ ಸಂಪೂ...ರ್ಣವಾಗಿ ಅವರದೇ ತಪ್ಪೆಂದೂ, ಸರದೀ...ರ ಎಲ್ಲರನ್ನು ಕೆಲಸಕ್ಕೆ ಸೇರಿಸಿಕೊಳ್ಳ...ಲಾಗದೆಂದೂ ಪ್ರತ್ಯುತ್ತರ ಕೊಡಲ್ಪ...ಟ್ಟು 500 ಜನರನ್ನು ಮಾತ್ರ ಸೇರಿಸಿ...ಕೊಳ್ಳಲಾಗುವುದೆಂದು ಈಚೆಗೆ ತಿಳಿದು ಬಂದಿದೆ.

...೨ ಗಂಟೆಗಳ ಕಾಲ ನೀರಿನಲ್ಲಿದ್ದರು.

...ರ್ ಚಾಟರ್ಜಿಯವರ ಸಾಹಸ.

...ರ್ ಚಾಟರ್ಜಿಯವರು ೬೨ ಗಂಟೆ ...ಲ ನೀರಿನಲ್ಲಿದ್ದು ಈಚೆಗೆ ಬಂದರು ... ಹೊರಕ್ಕೆ ಬಂದಾಗ ಎರಡುಸಾವಿರ ...ಜನರಿಗ ಜಯಕಾರ ಮಾಡಿದರು. ...ನ್ನು ಕಟ್ಟಿಕೊಂಡು ನೀರಿನಲ್ಲಿ ಈ ...ಸಾಹಸದಲ್ಲಿ ಇವರು ಪ್ರಪಂಚದ ...ವನ್ನು ಪಡೆದಿರುವರು

ಮೈಸೂರು ಸಿವಿಲ್ ಸರ್ವಿಸ್.

ಮೈಸೂರು ಸಿವಿಲ್ ಸರ್ವಿಸ್ ಪರೀಕ್ಷೆಗೆ ಕುಳಿತುಕೊಳ್ಳಲು ೧೧೩ ಉಮೇದುವಾರರು ಅರ್ಜಿ ಹಾಕಿರುವರು ಇಷ್ಟು ಅರ್ಜಿಗಳು ಹಿಂದೆಂದೂ ಬಂದಿರಲಿಲ್ಲವೆಂದು ಗೊತ್ತಾಗಿದೆ ಕೆಲವು ವರ್ಷಗಳಿಂದೀಚೆಗೆ ಈ ಪರೀಕ್ಷೆಯು ನಡೆಯದಿದ್ದು ಈ ವರ್ಷ ನಡೆಯುವುದೇ ಇಷ್ಟು ಅರ್ಜಿಗಳಿಗೆ ಕಾರಣವಿರಬೇಕು

೨೦ ಲಕ್ಷ ರೂ. ಗಳ ಖೋಟಾ ನೋಟುಗಳು

ಹೈದರಾಬಾದಿನ ಸಿಟಿಮ್ಯಾಜಿಸ್ಟ್ರೇಟರು ಕೃತಕ ನೋಟುಗಳನ್ನು ತಯಾರುಮಾಡುತ್ತಿದ್ದ 9 ಜನರ ಒಂದು ಭಾರಿ ಗುಂಪನ್ನು ಕಳೆದವಾರ ವಿಚಾರಣೆ ಮಾಡಿದರು ಇವರು 100, 1000 ರೂ ಗಳ ನೋಟನ್ನು ಒಟ್ಟು 20 ಲಕ್ಷಗಳವರೆಗೂ ತಯಾರುಮಾಡಿದ್ದರು

ಅಬ್ದುಲ್ಲಾ ಗಾಂಧಿ.

ಇವರು ಭಾರತ ಶಾಸನ ಸಭೆಯಲ್ಲಿ ಮುಸ್ಲಿಂ ಪ್ರತಿನಿಧಿಗಳಾಗುವರು

ಬಿದ್ದಮರವು ಎದ್ದು ನಿಂತಿತು.

ಚಿಕ್ಕಮಗಳೂರು ಸಮೀಪದಲ್ಲಿರುವ ಆಲ್ದೂರೆಂಬಲ್ಲಿ ಒಂದು ದೊಡ್ಡ ಗೋಣೀಮರವು ಬುಡಸಹಿತ ಕೆಳಕ್ಕೆ ಬಿದ್ದಿತ್ತು ಅದರ ಕೊಂಬೆಗಳೆಲ್ಲವನ್ನೂ ತುಂಡರಿಸಿದ್ದರು ಒಂದುವಾರದ ಹಿಂದೆ ಬಿದ್ದ ಮರವು ಈಗ ಎದ್ದು ನಿಂತುಕೊಂಡಿರುತ್ತದೆ ಆಶ್ಚರ್ಯಕರವಾದ ಈ ದೃಶ್ಯವನ್ನು ನೋಡಲು ಜನರು ತಂಡ ತಂಡವಾಗಿ ಹೋಗುತ್ತಿದ್ದಾರೆ.

ವಿದ್ಯಾರ್ಥಿಗಳ ಸಂಘ.

ಈ ಸಂಘವು ಮೈಸೂರಿನಲ್ಲಿ ಹೊಸದಾಗಿ ಪ್ರಾರಂಭಿಸಲ್ಪಟ್ಟಿತು ಮಹಾರಾಜಾ ಹೈಸ್ಕೂಲಿನ ಮುಖ್ಯೋಪಾಧ್ಯಾಯರಾದ ಮ॥ ಆರ್. ಕೆ ಸಂಗಮೇಶ್ವರರವರು ಅಗ್ರಾಸನವನ್ನು ವಹಿಸಿದ್ದರು ಮ॥ ರಾ॥ ಸಪ್ತಋಷಿ ಅಯ್ಯರ್ ಮತ್ತು ಮ॥ ಶೇಷಯ್ಯಂಗಾರ್ಯರೂ ಭಾಷಣಮಾಡಿದರು ಈ ಸಂಘಕ್ಕೆ ಶ್ರೀ ಶೈಲಂ ಮತ್ತು ಎಂ ಕೆ. ನಾರಾಯಣಯ್ಯಂಗಾರ್ಯರು ಕಾರ್ಯದರ್ಶಿಗಳಾಗಿ ಚುನಾಯಿಸಲ್ಪಟ್ಟಿರುವರು

ಗುಡಿಸುವವರ ಮುಷ್ಕರ.

ತಮಗೆ ಉಂಟಾಗಿದ್ದ ಕೆಲವು ಕುಂದುಕೊರತೆಗಳನ್ನು ನಿವಾರಿಸಿಕೊಳ್ಳಲು ಇಂದೂರಿನ ಗುಡಿಸುವವರು ಮುಷ್ಕರ ಹಿಡಿದರು ಊರಿನಲ್ಲೆಲ್ಲಾ ಕಶ್ಮಲವೂ, ಅನಾರೋಗ್ಯವೂ ಹೆಚ್ಚಿತು ಪೌರಸಭೆಯವರು ದಿಗ್ಭ್ರಾಂತರಾದರು. ಗುಡಿಸುವವರು 10 ಷರತ್ತುಗಳನ್ನು ಹಾಕಿದ್ದರು ಅವುಗಳ ಪೈಕಿ ಅನೇಕ ಷರತ್ತುಗಳಿಗೆ ಒಪ್ಪಿಕೊಂಡ ಮೇಲೆಯೇ ಮುಷ್ಕರವು ಮುಕ್ತಾಯಮಾಡಲ್ಪಟ್ಟಿತು ಗುಡಿಸುವವರಿಗೆ ಮೇಸ್ತ್ರಿಗಳು ಬಹಳವಾಗಿ ಕಿರುಕುಳಕೊಡುತ್ತಿದ್ದರು. ಅವರುಗಳಲ್ಲಿ ಕೆಲವರನ್ನು ಕೆಲಸದಿಂದ ವಜಾಮಾಡಲಾಯಿತು. ಸಂಬಳಗಳನ್ನು ಕ್ರಮವಾಗಿ ಸಲ್ಲಿಸುವುದು, ಸಂತೇ ದಿನಗಳಲ್ಲಿ ಒಪ್ಪತ್ತು ರಜಾಕೊಡುವುದು, ಹೆಂಗಸರಿಗೆ ಹೆರಿಗೆಕಾಲದಲ್ಲಿ ರಜಾ ಕೊಡುವುದೇ ಮುಂತಾದ ಸೌಕರ್ಯಗಳು ಮಾಡಿಕೊಡಲ್ಪಟ್ಟವು ಒಗ್ಗಟ್ಟಿನಲ್ಲಿ ಬಲವಿದೆ ಎಂಬುದು ಇದರಿಂದ ಗೊತ್ತಾಗುವುದು

"ವಿಶ್ವವಾಣಿ"

ಸುಪ್ರಸಿದ್ಧ ಕನ್ನಡ ಸಾಹಿತಿಗಳಾದ ಶ್ರೀ॥ ಅ. ನ ಕೃಷ್ಣರಾಯರು ಬೆಂಗಳೂರಿನಿಂದ ಹೊರಡಿಸುತ್ತಿರುವ "ವಿಶ್ವವಾಣಿ" ಮಾಸಪತ್ರಿಕೆಯ ಪ್ರಥಮಸಂಚಿಕೆಯನ್ನು ನಾವು ಆದರದಿಂದ ಸ್ವೀಕರಿಸಿರುತ್ತೇವೆ ಅದರಲ್ಲಿ ಕರ್ನಾಟಕದ ಹೆಸರುಗೊಂಡ ಅನೇಕ ಲೇಖಕರ ರಸಭರಿತವಾದ ಲೇಖನಗಳೂ, ಪಾಶ್ಚಾತ್ಯ ಲೇಖಕರ ಅನುವಾದಗಳೂ ಪ್ರಕಟವಾಗಿವೆ. ವಿಶ್ವವಾಣಿಯಲ್ಲಿ ರಸಿಕರಿಗೆ ಬೇಕಾದ ನಾಟಕ, ಸಂಗೀತ, ಚಿತ್ರಕಲಾ, ನಾಟ್ಯಕಲಾ, ಶಿಲ್ಪ, ಚಲನಚಿತ್ರ ಕಲಾ ಸಂಬಂಧ ಲೇಖನಗಳೂ, ಕಥೆ, ಕಾದಂಬರಿ, ಜೀವನಚರಿತ್ರೆ, ಕವಿತೆಗಳೂ ಇವೇ ಮುಂತಾದ ಉಪಯುಕ್ತ ಅಂಶಗಳು ಪ್ರಕಟವಾಗುವುವು. ಶ್ರೀ॥ ಅ ನ ಕೃಷ್ಣರಾಯರು ಸಾಹಿತ್ಯಸೇವೆಯಲ್ಲಿ ಚೆನ್ನಾಗಿ ಅರಿತು ನುರಿತವರಾದುದರಿಂದ ಅವರ ಈ ಪ್ರಯತ್ನವು ಸಂಪೂರ್ಣವಾಗಿ ಯಶಸ್ವಿಯಾಗುವುದರಲ್ಲಿ ಸಂಶಯವಿಲ್ಲ ಅವರಿಗೆ ಮಂಗಳವುಂಟಾಗಲೆಂದು ನಾವು ಕೋರುತ್ತೇವೆ

"ಮನೆ ಪಾಠವು ಶಿಶು ಹಿಂಸೆ."

ಬ್ರಿಟಿಷ್ ಪಾರ್ಲಿಮೆಂಟಿನ ಅಭಿಪ್ರಾಯ.

ಬ್ರಿಟಿಷ್ ಚಕ್ರಾಧಿಪತ್ಯದ ಆಡಳಿತವನ್ನು ನಡೆಸುತ್ತಿರುವ ಪಾರ್ಲಿಮೆಂಟು ಸಭೆಯಲ್ಲಿ ನಾನಾ ದೇಶಗಳ, ನಾನಾ ವಿಷಯಗಳ, ಚರ್ಚೆಗಳಾಗುವುದು ಸಹಜವಾಗಿದೆ ಆದರ ಒಂದೇ ಒಂದು ದಿನದ ಕಾರ್ಯಕ್ರಮವನ್ನು ನಾವು ಪರೀಕ್ಷಿಸಿದರೂ ಕೂಡ ಇಂಗ್ಲೆಂಡಿಗೆ ಸಂಬಂಧಪಟ್ಟ ಅನೇಕ ಕಾನೂನುಗಳೂ, ಮಸೂದೆಗಳೂ, ಪ್ರಶ್ನೆಗಳೂ ಅಲ್ಲದೆ, ಪ್ರಪಂಚದ ಎಲ್ಲಾ ಜನಾಂಗಗಳಿಗೂ ಸಂಬಂದಪಟ್ಟ ಅನೇಕ ವಿಷಯಗಳು ಅಲ್ಲಿ ವಿಮರ್ಶಿಸಲ್ಪಡುತ್ತವೆ ಕಳೆದ ತಿಂಗಳಲ್ಲಿ ಪಾರ್ಲಿಮೆಂಟು ಸಭೆಯವರು ಚರ್ಚೆಗೆ ತೆಗೆದು ಕೊಂಡ ಒಂದು ಮಸೂದೆಯು ವಿದ್ಯಾಭ್ಯಾಸದಲ್ಲಿ ಭಾಗವಹಿಸುವ ಪ್ರತಿಯೊಬ್ಬರಿಗೂ, ಅನ್ವಯಿಸುವುದರಿಂದ ಆ ದಿನದ ಕಾರ್ಯಕಲಾಪವನ್ನು ಸಂಕ್ಷೇಪವಾಗಿ ಇಲ್ಲಿ ಕೊಡಲು ಕಾತುರನಾಗಿದ್ದೇನೆ

ಅಂದು, ಮ್ಯಾಂಚೆಸ್ಟರ್ ನಗರದ ಪ್ರತಿನಿಧಿಯಾದ ಮಿ॥ ರಾಡ್‌ಪೋರ್ಡ್ ಎಂಬುವರು ಅಧ್ಯಕ್ಷರ ಅನುಮತಿಯನ್ನು ಪಡೆದು, 'ಶಾಲೆಗಳಲ್ಲಿ ಓದುವ ವಿದ್ಯಾರ್ಥಿಗಳಿಗೆ, ಅವರ ಆಟಕ್ಕೂ ಆರೋಗ್ಯಕ್ಕೂ ಹಾನಿಯಾಗುವ ಹಾಗೆ, 'ಮನೆಯಲ್ಲಿ ಮಾಡಿತರಬೇಕಾದ ಪಾಠ' ಗಳನ್ನು ಕೊಡುವ ಪದ್ಧತಿ ಕೆಟ್ಟದ್ದೆಂದೂ, ಸಾಧ್ಯವಾದ ಮಟ್ಟಿಗೆ ಎಲ್ಲಾ ಪಾಠಗಳನ್ನೂ ಶಾಲೆಗಳಲ್ಲೇ ಮಾಡಿಬಿಡಬೇಕೆಂದೂ, ಈ ಸಭೆಯ ಅಭಿಮತ" ಎಂಬ ಮಸೂದೆಯನ್ನು ತಂದರು ಅದನ್ನು ಸಮರ್ಥಿಸುತ್ತಾ ಅವರು, "ನಾನು ಮೊದಲು ಸೇರಿದ ಶಾಲೆಯನ್ನು ಇಬ್ಬರು ಉಪಾಧ್ಯಾಯಿನಿಯರು ನಡೆಸುತ್ತಿದ್ದರು ನನಗೆ ಐದು ವರ್ಷಗಳು ತುಂಬಿದಾಗ, ನನ್ನ ತಾಯಿತಂದೆಯರು ನನ್ನನ್ನು ಅಲ್ಲಿಗೆ ಕರೆದುಕೊಂಡುಹೋಗಿ, "ಇವನಿಗೆ ಪಾಠವೆಲ್ಲವನ್ನೂ ಶಾಲೆಯಲ್ಲೇ ಮಾಡಿಸಿ, ಮನೆ ಪಾಠ ಕೊಡ ಬೇಡಿ!" ಅಂತ ಹೇಳಿ, ನನ್ನನ್ನು ಸೇರಿಸಿದರು ಆದರೂ ಕೂಡ, ನಾನು ನನಗೆ ಮನೆ ಪಾಠ ಕೊಡಲೇಬೇಕೆಂದು ಅವರನ್ನು ಕಾಡಿಸಿದೆ ಆಗ, ತಂದೆಯವರಿಗೆ, ಇಷ್ಟು ಉತ್ಸಾಹಿಯಾದ ಮಗನನ್ನು ಹೆತ್ತೆನಲ್ಲಾ, ಎಂದು ಆನಂದವಾಯಿತು. ಆದರೆ ಒಂದುವಾರದೊಳಗೆ ನಾನು ಗೊಣಗಲು ಪ್ರಾರಂಭಮಾಡಿದೆ ಮನೆಯಲ್ಲಿ ಪಾಠಗಳನ್ನು ಓದಿ, ಲೆಕ್ಕಗಳನ್ನು ಮಾಡುವುದಿಲ್ಲವೆಂದು ಕೂಗಿಕೊಂಡೆ ಆಗ, ತಂದೆಯವರು, "ಮೊದಲು ಏಕೆ 'ಮಾಡುತ್ತೇನೆ ಎಂದು ಹೇಳಿದೆ?' ಎಂದರು ಕಾರಣವೇನೆಂದರೆ, ನನಗೆ ಒಂದು ಚೀಲ ಪುಸ್ತಕಗಳನ್ನು ಅಕಡೆ ಈಕಡೆ ಹೊರಬೇಕು ಎಂಬ ಆಸೆ ಇತ್ತು ಬರಬರುತ್ತಾ, ಆ ಜಂಬ ಹೋಗಿ, ಕಷ್ಟ ಮಾತ್ರ ಉಳಿಯಿತು ಮನೆಯಲ್ಲಿ ಮಕ್ಕಳಿಗೆ ಶಾಲೆಯ ಕೆಲಸವನ್ನು ಕೊಡುವುದು ಕೇವಲ ತುಚ್ಛವಾದ ವಿಷಯ ಪಾರ್ಲಿಮೆಂಟಿನವರು ಅದಕ್ಕೆ ಗಮನಕೊಟ್ಟು ಕಾಲಕಳೆಯುವುದರಲ್ಲಿ ಅರ್ಥವಿಲ್ಲವೆಂದು ನಿಮ್ಮಲ್ಲಿ ಕೆಲವರು ಅಭಿಪ್ರಾಯಪಡುವ ಹಾಗೆ ಕಾಣುತ್ತೆ. ಆದರೆ, ಇದು ಲಕ್ಷಾಂತರ ಮಕ್ಕಳ ದೇಹ, ಬುದ್ಧಿ, ಇವುಗಳ ಬೆಳವಣಿಗೆಗೆ ಸಂಬಂಧಿಸಿದ್ದು. ಎರಡು ವರುಷಗಳ ಹಿಂದೆ, ನಾನು ವಿದ್ಯಾ ಇಲಾಖೆಯ ಮಂತ್ರಿಗೆ ಈ ವಿಷಯವನ್ನು ಕುರಿತು ಒಂದು ಪ್ರಶ್ನೆ ಕೇಳಿದಾಗ ಅವರು ಅದಕ್ಕೆ ಉತ್ತರವಾಗಿ "ಉಪಾಧ್ಯಾಯರುಗಳಿಗೂ, ಇನ್ಸ್‌ಪೆಕ್ಟರುಗಳಿಗೂ ಈ ವಿಷಯದಲ್ಲಿ ಹೆಚ್ಚು ಗಮನ ಕೊಡುವಂತೆ ಹೇಳಿದೆ" ಎಂದು ಉತ್ತರವಿತ್ತರು. ಅಂದಿನಿಂದೀಚೆಗೆ, ತಾಯಿತಂದೆಗಳಿಂದಲೂ, ಉಪಾಧ್ಯಾಯರಿಂದಲೂ, ನನಗೆ ಸಾವಿರಾರು ಕಾಗದಗಳು ಬಂದಿವೆ ಅವುಗಳಿಂದ ಸ್ಪಷ್ಟವಾಗುವುದೇನೆಂದರೆ —'ಮನೆಪಾಠವನ್ನು ಮಾಡಿಸುವ ಕ್ರಮ ವಿಪರೀತ ಹೆಚ್ಚಿಹೋಗಿದೆ'. ಈ ಪದ್ಧತಿಯಿಂದ ಮಕ್ಕಳ ಬೆಳವಣಿಗೆಗೆ ತುಂಬಾ ಅಡಚಣೆಯಾಗಿದೆ' ಬಡವರ ಮನೆಗಳಲ್ಲಿ ಮಕ್ಕಳಿಗೆ ನೆಮ್ಮದಿಯಾಗಿ ಕೂತು ಪಾಠವನ್ನು ಓದಲು ಜಾಗವೆಲ್ಲಿ? ಆ ಗಲಭೆಯಲ್ಲಿ, ಗೊಂದಲದಲ್ಲಿ, ಹಸಿವಿನಲ್ಲಿ, ಕತ್ತಲೆಯಲ್ಲಿ, ಅವು ಹೇಗೆ ಲೆಕ್ಕಗಳನ್ನು ಮಾಡುವುವು? ಈ ವಿಷಯಗಳನ್ನು ನಾವು ಗಮನಕ್ಕೆ ತಂದುಕೊಳ್ಳಬೇಡವೆ? ಮಿಲ್ಲುಗಳಲ್ಲಿ ಮಕ್ಕಳಿಂದ ಹೆಚ್ಚು ಹೊತ್ತು ಕೆಲಸ ಮಾಡಿಸಬಾರದೆಂದು ಕಾನೂನುಗಳನ್ನು ತರುವ ನಾವುಗಳು ಅವರ ಮೆದುಳಿಗೂ ಹೆಚ್ಚು ಕೆಲಸಕೊಡಬಾರದು ಎಂದು ಹೇಳುವುದು ನ್ಯಾಯವಾಗಿಯೇ ಇದೆ" ಎಂದು ತಮ್ಮ ಭಾಷಣವನ್ನು ಮುಗಿಸಿದರು

ಮಿ॥ ಬೆಲಿಂಗರಂಬುವರು ಮಸೂದೆಯನ್ನು ಸಮರ್ಥಿಸುತ್ತಾ, "ಈ ದಿನ ಬೆಳಿಗ್ಗೆ ನಾನು ಇಲ್ಲಿಗೆ ಬರುವುದಕ್ಕೆ ಮೊದಲು ನನ್ನ ಮಗ ಬಂದು ಬಾಗಿಲಲ್ಲೇ ಅಡ್ಡಗಟ್ಟಿದ ಅಬ್ಸೀನಿಯಾದಲ್ಲಿ ಗುಲಾಮಗಿರಿ ನಿಲ್ಲಿಸುವ ನಿಮ್ಮ ಪಾರ್ಲಿಮೆಂಟಿನವರು ಈ ಶಾಲೆ ಗುಲಾಮಗಿರಿ ಏಕೆ ನಿಲ್ಲಿಸಬಾರದು?" ಎಂದು ಹೇಳಿದ ಅವನ ಪ್ರಶ್ನೆ ನ್ಯಾಯವಾಗಿದೆ ಎಂದು ನನಗೆ ತೋರುತ್ತೆ ಅದೂ ಅಲ್ಲದೆ ಮಕ್ಕಳಿಗೆ ಮನೆಯಲ್ಲಿ ಮಾಡುವಂತೆ ಲೆಕ್ಕಗಳನ್ನು ಕೊಟ್ಟರೆ, ಉಪಾಧ್ಯಾಯನು ಹುಡುಗನ ಸಾಮರ್ಥ್ಯವನ್ನು ಪರೀಕ್ಷಿಸುವುದಕ್ಕೆ ಬದಲಾಗಿ, ತಂದೆಯ ಬುದ್ಧಿಯನ್ನು ಪರೀಕ್ಷಿಸಿದಹಾಗಾಯಿತು! 'ತನ್ನ ತಂದೆ ಶುದ್ಧ ಪೆದ್ದು" ಎಂದು ಹುಡುಗನಿಗೆ ತಿಳಿಯಪಡಿಸಿದ ಹಾಗಾಯಿತು, ಅಷ್ಟೆ! 'ಕರ್ಣದ ಮೇಲಿನ ಚತುರ್ಭುಜ' ಅಂದರೆ ಏನು, ಎಂದು ನಮ್ಮ ಮಕ್ಕಳು ಕೇಳಿದರೆ ನಾವು ಏನುತಾನೆ ಹೇಳಬಲ್ಲೆವು? ಎಂದು ಮುಂತಾಗಿ ಹೇಳಿದರು ಲಂಡನ್ ವಿಶ್ವವಿದ್ಯಾಲಯದ ಪ್ರತಿನಿಧಿಯಾದ ಸರ್ ಎರ್ನೆಸ್ಟ್ ಗ್ರಾಹಂಲಿಟ್ಲರ್ ಎಂಬುವರು ಆರೋಗ್ಯಶಾಸ್ತ್ರರೀತ್ಯಾ ಮಕ್ಕಳು ಹೇಗೆ ಕುಳಿಕೊಂಡು ಓದುಬರಹವನ್ನು ಕಲಿಯಬೇಕೆಂದು ವಿವರಿಸಿ, ಮನೆಗಳಲ್ಲಿ ಬೆಳಕು, ಬೆಂಚು ಮುಂತಾದವುಗಳಿಗೆ ಶಾಲೆಗಳಷ್ಟು ಅನುಕೂಲವಿಲ್ಲದೆಕಡೆ ಮನೆ ಪಾಠಗಳಿಂದಾಗುವ ಅನಾಹುತಗಳನ್ನು ವಿವರಿಸಿದರು

ಸ್ಕಾಟ್‌ಲೆಂಡ್ ದೇಶದ ವಿಶ್ವವಿದ್ಯಾನಿಲಯಗಳ ಪ್ರತಿನಿಧಿಯಾದ ಮಿ॥ ಮಾರಿಸರವರು ಮಸೂದೆಯನ್ನು ಬಹಳ ಸ್ವಾರಸ್ಯವಾಗಿ ಸಮರ್ಥಿಸಿದರು. ಮೊದಲನೆಯದಾಗಿ, ಶಾಲೆಗಳಲ್ಲಿ ಮಾಡಿಸುವ ಲೆಕ್ಕಗಳಿಗಿಂತಲೂ ಕಠಿಣವಾದ ಲೆಕ್ಕಗಳನ್ನು ಮನೆಯಲ್ಲಿ ಒಬ್ಬನೇ ಕೂತು ಮಾಡಿ ತರಬೇಕೆಂದೆನ್ನುವ ಏರ್ಪಾಟು ಶುದ್ಧ ತಪ್ಪು ಎಂದು ಅವರು ಅಭಿಪ್ರಾಯಪಟ್ಟರು. ಅಂತಹದೊಂದು ಲೆಕ್ಕವನ್ನು ಉದಹರಿಸಿ, ಆ ದಿನ ತಾವು ಅದೇ ಲೆಕ್ಕವನ್ನು ಮಂತ್ರಿಮಂಡಳದವರಲ್ಲಿ ಕೆಲವರಿಗೆ ಹಾಕಿದರೆಂದೂ ಸರಿಯಾದ ಉತ್ತರವನ್ನು ಯಾರೂ ಕೊಡಲಿಲ್ಲವೆಂದೂ ಹೇಳಿ ಸಭಿಕರನ್ನು ತುಂಬಾ ನಗಿಸಿದರು ಆ ಲೆಕ್ಕವೇನೆಂದರೆ, "ಯಾವನೋ ಒಬ್ಬನು ಜೋಡಿನಂಗಡಿಗೆ ಹೋಗಿ 16 ಷಿಲಿಂಗ್ ಬೆಲೆಬಾಳುವ ಒಂದು ಜೊತೆಯನ್ನು ಕೊಂಡುಕೊಂಡು ಒಂದು ಪೌಂಡನ್ನು ಕೊಟ್ಟು, ಬಾಕಿ ಚಿಲ್ಲರೆ ಕೇಳಿದನು ಅಂಗಡಿಯವನ ಹತ್ತಿರ ಚಿಲ್ಲರೆ ಇರಲಿಲ್ಲ ಪಕ್ಕದ ಮಾಂಸದಂಗಡಿಯವನು ಚಿಲ್ಲರೆ ಕೊಟ್ಟ ಅದನ್ನು ತಂದು, ಜೋಡನ್ನೂ, 1 ಷಿಲಿಂಗ್ ಬಾಕಿಯನ್ನೂ ಕೊಟ್ಟುಬಿಟ್ಟನು ಕೊಂಚ ಹೊತ್ತಿನಮೇಲೆ, ಮಾಂಸದಂಗಡಿಯವನು ಬಂದು 'ನೀನು ತಂದ ಪೌಂಡು ಒಳ್ಳೆಯ ನಾಣ್ಯವಲ್ಲ' ಎಂದ ಜೋಡಿನಂಗಡಿಯವನು, ಪಾಪ, ಒಂದು ಹೊಸ ನಾಣ್ಯವನ್ನು ಕೊಡಬೇಕಾಯಿತು ಅವನಿಗೆ ಈ ವ್ಯಾಪಾರದಿಂದ, ಎಷ್ಟು ನಷ್ಟವಾಯಿತು?' ಮಿ॥ ಮಾರಿಸರವರು ಲೆಕ್ಕವನ್ನು ಹೇಳುತ್ತಿದ್ದಾಗ, ಅನೇಕರು, ಉತ್ತರ ಹೇಳಿದರು" ಒಬ್ಬರು, "16 ಷಿಲಿಂಗ್' ಅಂದರು "ತಪ್ಪು! ಶುದ್ಧ ತಪ್ಪು" ಅಂತ ಹೇಳಿ, ಅವರು ಭಾಷಣವನ್ನು ಮುಂದುವರಿಸಿದರು ಎರಡನೆಯದಾಗಿ, ಮನೆ ಪಾಠಗಳನ್ನು ಜಾಸ್ತಿ ಮಾಡುವುದರಿಂದ, ಹೆಣ್ಣುಮಕ್ಕಳಿಗೆ ಹೆಚ್ಚು ತೊಂದರೆಯೆಂದು ವಿವರಿಸಿ ಹೇಳಿದರು,

ಸರ್ಕಾರದ ಪರವಾಗಿ, ವಿದ್ಯಾ ಮಂತ್ರಿಯಾದ ಮಿ॥ ಸ್ಟಾನ್ಲಿ ಎಂಬುವರು ಮಾತನಾಡಿದರು ಇದೇ ವಿಷಯವಾಗಿ ಸರ್ಕಾರದವರು ಆಗಲೇ ಒಂದು ವಿಚಾರಣೆಯನ್ನು ನಡೆಸುತ್ತಿರುವರು ಎಂದು ತಿಳಿಸಿದರು ಪರೀಕ್ಷೆಗಳನ್ನು ಪಾಸುಮಾಡುವುದೇ ಪರಮಪುರುಷಾರ್ಥ ಎಂದು ತಂದೆತಾಯಿಗಳೂ, ಚಾಕರಿಗಳನ್ನು ಕೊಡುವ ಸಾಹುಕಾರರೂ ಸರ್ಕಾರದವರೂ ಸಂಸ್ಥೆಗಳೂ ತಿಳಿದಿರುವುದೇ ಈ ತೆರನಾದ ಶಿಶುಹಿಂಸೆಗೆ ಮುಖ್ಯ ಕಾರಣವೆಂದು ಅವರು ಹೇಳಿದರು ಸ್ವಪ್ರೇರಿಯಿಂದ ಪುಸ್ತಕಗಳನ್ನು ತಾವು ಓದುವುದು, ಆಟಗಳಲ್ಲಿ ಭಾಗ ವಹಿಸುವುದು, ನಾಟಕ, ಸಂಗೀತ, ತೋಟದ ಕೆಲಸ, ಮುಂತಾದವುಗಳಲ್ಲಿ ಸೇರುವುದು—ಇವುಗಳಿಗೆ ಮನೆ ಪಾಠಗಳು ತುಂಬಾ ಅಡಚಣೆ ಮಾಡುತ್ತವೆ, ಎಂದು ಒಪ್ಪಿಕೊಂಡರು ವಿದ್ಯಾ ಇಲಾಖೆಯವರೂ ಜನಗಳ ಪ್ರತಿನಿಧಿಗಳವರೂ ಈ ವಿಷಯದಲ್ಲಿ ಒಂದೇ ಅಭಿಪ್ರಾಯವುಳ್ಳವರಾಗಿದ್ದಾರೆ ಎಂದು ಹೇಳಿ, ಮಂತ್ರಿಗಳು ಮಸೂದೆಗೆ ಸ್ವಾಗತವಿತ್ತರು ಯಾರೊಬ್ಬರ ಖಂಡನೆಯೂ ಇಲ್ಲದೆ, ಮಸೂದೆಯು ಪಾಸಾಯಿತು

ನಮ್ಮ ದೇಶದಲ್ಲಿಯೂ ಈ ಪದ್ಧ[illegible] ಷ್ಟರಮಟ್ಟಿಗೆ ಹುಡುಗರ ದೇಹ[illegible] ಬೆಳವಣಿಗೆಗೆ ಅಡ್ಡಿ ಬರುತ್ತದೆಂದು ಎ[illegible] ಯೋಚಿಸಬೇಕಾಗಿದೆ

ಮೇಷ

ಮಗು ಮತ್ತು ಚೀಲಿ.

(ಗೋವಿನ ಹಾಡಿನಂತೆ)

ಲೇಖಕ—ಮಕ್ಕಳ ಬಂಧು.

ಅಮ್ಮ ಚೀಲಿಗೆ ಹಸಿವವಾಗಿದೆ।
ಕಮ್ಮನಿಹ ಹಾಲನ್ನು ತಂದಿಡು।
ಅಮ್ಮ ಅದು ಮ್ಯಾವೆಂದು ಕೂ।
ಗುವುದಮ್ಮ ಸುಮ್ಮನೆ ಇರದದು ॥

ಎನ್ನ ಮುದ್ದಿನ ಚೀಲಿ ಸಿಕ್ಕಿದ।
ಸಣ್ಣ ಇಲಿಗಳ ಹಿಡಿದ ಪಂಜದ।
ಬಣ್ಣದವನು ನಾನೆಂತು ಬಣ್ಣಿಪೆ।
ನಮ್ಮ ಬಾ ಬಾರಮ್ಮ ನೀಂ ॥

ಎತ್ತಿಕೊಳ್ಳುವೆನಿವನು ನೋಡಿದ।
ನೊತ್ತಿ ನೊಸಲಿಗೆ ಮುಂದೆ ಬಿಡು।
ವೆನು ಸುತ್ತುವುದು ನನ್ನನ್ನು।
ಚಕ್ರಾಕಾರದಲಿ ಬಲುವೇಗದಿ ॥

ಬಾರ, ಬಾ, ಬಾ ರನ್ನಮಗುವೇ।
ಬಾರ ಬಾ ಬಾ ಚಿನ್ನರನ್ನವೆ।
ಬಾರಬಾ ಬಾಬಾರ ಚೀಲಿಯೆ।
ಬಾರಬಾ ನನ್ನೊಂದಿಗೆ ॥ ೪

ಜೊತೆಯಲಾಡುವ ಮಿತ್ರನಿವನು।
ಕತೆಯ ಹೇಳುವ ತಂದೆಯಿವನು।
ಮತಿಯ ಹೇಳುವ ಮಾನ್ಯನಿವನು।
ಅತಿಶಯದ ಬೇತಾಳನು ॥ ೫

ಹಸುವ ಕಟ್ಟಿದೆ ಹಾಲ ಕುಡಿ।
ಯುವೆ ಮೊಸರು ಬೆಣ್ಣೆಯ ಕದ್ದು।
ತಿನ್ನುವೆ ವಿಷಮ ಕಾಲದೊಳಿಲಿ।
ಗಳನ್ನರೆ ಆಶನಗೈಯುವೆ ಚೀಲಿಯೆ ॥ ೬

ಪುಟ್ಟ ಚಂಡನು ಕೊಡುವೆ ನಿನಗೆ।
ಪುಟ್ಟ ದಾಂಡನು ಕೊಡುವೆನಂ।
ತೆಯೆ ಅಪ್ಪುತಲಿ ಬಾರೆನ್ನ ಚೀ।
ಲಿಯೆ ಪುಟ್ಟಚಂಡನು ನಿಮಿಷದಿ ॥ ೭

ಹಸಿವುಇಲ್ಲದೆ ಉಣಲಿಬೇಡ।
ಕಸದಮೇಲ್ಗಡೆ ಮಲಗಬೇಡ।
ಬಸವನಂದದಿ ತಿರುಗಬೇಡ।
ಹಸುಳೆ ನಿನಗಿದು ಮಂಗಳ ॥ ೮

ಗಿಣಿಯ ಮರಿಯನು ಹಿಡಿಯಬೇಡ।
ಕಣದ ಕೋಳಿಯ ಹಿಡಿಯಬೇಡ।
ಮಣಿಮ ನೆಲುವಿಗೆ ಹಾರಬೇಡ।
ಉಣಲು ಬಾರೆನ್ನೊಂದಿಗೆ ॥ ೯

ಚೀಲಿಯಲ್ಲಿದೆ ನನ್ನ ಪ್ರಾಣವು।
ಚೀಲಿಯಲ್ಲಿದೆ ನನ್ನ ಮಾನಸ।
ಚೀಲಿಯಲ್ಲಿದೆ ಸರ್ವಸೌಖ್ಯವು।
ಚೀಲಿಯಿಲ್ಲದರೆ ಅಳಿವೆನಾಂ ॥ ೧೦

ಪಾಲಿಸ್ಟೈನಿನ ಪರಿಸ್ಥಿತಿ.

ಯೆಹೂದೀಯರ ಮತ್ತು ಅರಬ್ಬಿಯವರ ಘರ್ಷಣ.

ಲೇಖಕರು—ಮ॥ ರಾ॥ ಎ. ಎಂ. ಕೃಷ್ಣಮೂರ್ತಿಯವರು.

ಅನಾದಿಯಿಂದಲೂ ಅರಬ್ಬಿ, ಕ್ರಿಶ್ಚಿಯನ್ ಮತ್ತು ಯಹೂದಿ ಮುಂತಾದ ಸಂಗತಗಳಿಗೆ ಪವಿತ್ರ ಕ್ಷೇತ್ರವಾಗಿದ್ದ ಪಾಲ್ಸ್ಟೈನ್ ರಾಜ್ಯವು ಇಂದು ನರಕದ ಬೀಡಾಗಿದೆ. ಕೋಮುವಾರು ವೈಷಮ್ಯದಿಂದ ಪರಸ್ಪರ ದುರಭಿಮಾನವೂ ಮತ್ತು ಅಪ್ರೀತಿಯೂ ಹೆಚ್ಚಿ, ದೇಶದಲ್ಲೆಲ್ಲಾ ಕ್ರಾಂತಿಯುಂಟಾಗುತ್ತಿದೆ. ಅನರ್ಥಪರಂಪರೆಗಳ ಸಾಗರದ ತರಂಗಗಳೋಪಾದಿಯಲ್ಲಿ ದೇಶವನ್ನು ಹೊಡೆದಪ್ಪಳಿಸುತ್ತಿವೆ. ಎಲ್ಲಿ ನೋಡಿದರೂ ಸಿಡಿಮದ್ದುಗುಂಡುಗಳ ಆಟ, ಭೀಕರ ದೃಶ್ಯಗಳು. ನೆಮ್ಮದಿ, ಶಾಂತಿ ಇಲ್ಲದಿರುವ ಕಾರಣ ಹೆಂಗಸರು ಮಕ್ಕಳೂ ಬಹಳ ಕಳವಳಗೊಂಡಿರುತ್ತಾರೆ. ಇಟಲಿ ಅಬಿಸೀನಿಯಾ ದುರಂತ ಪ್ರಕರಣವು ರಕ್ತದ ಕಾಲುವೆಗಳನ್ನು ಹರಿಸಿತು. ಈ ಗೊಂದಲವು ಒಂದುರೀತಿ ಕೊನೆಗೊಳ್ಳಲು ಮುಂಚೆಯೇ ಪಾಲಸ್ಟೈನಿನಲ್ಲಿ ದೊಡ್ಡ ಗಲಭೆಯುಂಟಾಗಿದೆ. ಅಬಿಸೀನಿಯದಲ್ಲಾದಂತೆ ಇಲ್ಲೂ ನೆತ್ತರಿನ ಪ್ರವಾಹವು ಹರಿಯಲಾರಂಭಿಸಿದೆ.

ಪ್ರಾಚೀನಕಾಲದಿಂದಲೂ ಯಹೂದಿಗಳಿಗೆ ಈ ದೇಶವು ಏಕಮಾತ್ರ ಸ್ವತಂತ್ರ ರಾಜ್ಯವಾಗಿದೆ. 9000 ಚ. ಮೈ. ಗಳ ವಿಸ್ತೀರ್ಣಗೊಂಡ ಈ ದೇಶದಲ್ಲಿರುವ 13 ಲಕ್ಷ ಪ್ರಜೆಗಳು ಬ್ರಿಟಿಷರ ಮೇಲ್ವಿಚಾರಣೆಗೆ ಒಳಪಟ್ಟಿರುತ್ತಾರೆ. ಈ ರಾಜ್ಯವು ಅರೇಬಿಯಾಕ್ಕೆ ಉತ್ತರದಲ್ಲಿದೆ. ಜರ್ಮನಿಯ ಮಹಾಯುದ್ಧಕ್ಕೆ ಮುಂಚೆ ಇದು ತುರ್ಕ ರಾಜ್ಯಕ್ಕೆ ಅಧೀನವಾಗಿದ್ದಿತು. ಮಹಾಸಂಗ್ರಾಮವು ಕೊನೆಗೊಂಡಮೇಲೆ ಅಂತರ ರಾಷ್ಟ್ರೀಯಸಂಘದ ಮುಖಾಂತರ ಈ ದೇಶವು ಬ್ರಿಟಿಷರ ಮೇಲ್ವಿಚಾರಣೆಗೆ ಸೇರಿರುತ್ತದೆ. ಈಸಾಯಿಗಳ ಪುಣ್ಯಭೂಮಿಗಳಿಗೆ ಮಾತೃಪ್ರಾಯವಾಗಿದ್ದ ಜೆರುಸಲೇಂ ನಗರವು ಇಂದು ಮೃತಪ್ರಾಯವಾಗಿದೆ.

ಗಲಭೆಗೆ ಕಾರಣಗಳು.

ಮಹಾ ಸಂಗ್ರಾಮವು ಕೊನೆಗೊಂಡ ಮೇಲೆ ಬ್ರಿಟಿಷರು ಈ ದೇಶವನ್ನು ತಮ್ಮ ಅಧೀನಮಾಡಿಕೊಂಡುದೂ ಸರಿಯಷ್ಟೆ. ಆಗ ಆಂಗ್ಲೇಯರು ಅಲ್ಲಿನ ನಿವಾಸಿಗಳಾದ ಅರಬ್ಬೀ ಮತ್ತು ಯಹೂದಿ ಪಂಗಡಗಳಿಗೆ ಸಂಪೂರ್ಣರಕ್ಷಣೆಯ ಭರವಸೆ ಕೊಟ್ಟರು. ಅಲ್ಲಿ ಸ್ವಾಸ್ಥ್ಯಗಳನ್ನು ಕಟ್ಟಿಕೊಂಡು, ನೆಲೆಯಾಗಿ ನಿಂತು, ಸ್ವತಂತ್ರರಾಗಲು ಯಹೂದಿಗಳಿಗೆ ಅವಕಾಶವನ್ನು ಕೊಟ್ಟರು. ಹಾಗೆಯೇ ಅರಬ್ಬಿಯವರ ಹಕ್ಕುಬಾಧ್ಯತೆಗಳಿಗೆ ಕುಂದು ಬಾರದಂತೆ ನೋಡಿಕೊಳ್ಳುವುದಾಗಿ ಅರಬ್ಬಿಯವರನ್ನು ಸಮಾಧಾನಪಡಿಸಿದರು. ಇಷ್ಟಾದರೂ ಗಲಭೆ ಏಕೆ ಉಂಟಾಯಿತು ಎಂಬ ಅಂಶವು ಕುತೂಹಲವನ್ನು ಹೆಚ್ಚಿಸುವುದು. ಯಹೂದಿಗಳ ಸಂಖ್ಯೆಯು ಪ್ರತಿದಿನವೂ ಹೆಚ್ಚುತ್ತಿದೆ. ಇವರನ್ನು ಜರ್ಮನಿಯವರು ತಿರಸ್ಕರಿಸಿ ತಮ್ಮ ರಾಷ್ಟ್ರದಿಂದ ಹೊರದೂಡಿದರು. ಆದಕಾರಣ ದೇಶಭ್ರಷ್ಟರಾದ ಅನೇಕರು ಇಲ್ಲಿಗೆ ಬಂದು ನೆಲೆಸಲಾರಂಭಿಸಿದರು. ಇದೂ ಅಲ್ಲದೆ ಇಡೀ ಪ್ರಪಂಚದ ನಾನಾ ಮೂಲೆಗಳಿಂದ ಯಹೂದ್ಯರು ಬರುತ್ತಿರುವರು. ಮಹಾಯುದ್ಧದ ಅಂತ್ಯದಲ್ಲಿ ಈ ದೇಶದಲ್ಲಿ ಅರ್ಧಲಕ್ಷ ಯಹೂದಿಗಳಿದ್ದರು. ಈಗ ಅವರ ಜನಸಂಖ್ಯೆಯು ನಾಲ್ಕುಲಕ್ಷ ಮೀರಿರುತ್ತದೆ.

ಅರಬ್ಬಿಯವರೂ ಕೂಡ ಹೆಚ್ಚುತ್ತಿದ್ದಾರೆ. 1919 ರಲ್ಲಿ ಸುಮಾರು 1½ ಲಕ್ಷ ಇದ್ದ ಅರಬ್ಬಿಯವರ ಜನಸಂಖ್ಯೆಯು ಈಗ ದ್ವಿಗುಣವಾಗಿದೆ. ಆದರೆ ಯಹೂದಿಗಳು ಬುದ್ಧಿವಂತರು ಮತ್ತು ಐಶ್ವರ್ಯವಂತರು ಬಡವರೂ, ಅಲ್ಪಮತಿಗಳೂ ಆದ ಅರಬ್ಬಿಯವರು ಯಹೂದಿಗಳ ಬೆಳವಣಿಗೆಯನ್ನು ನೋಡಿ ಭಯಭ್ರಾಂತರಾಗಿದ್ದಾರೆ. ಅರಬ್ಬಿಯವರ ಈ ಬುದ್ಧಿಯೇ ಈ ತರಹ ಗಲಭೆಗಳಿಗೆ ಕಾರಣವಾಗಿದೆ.

ಬ್ರಿಟಿಷ್ ಸರ್ಕಾರವು, ಎಂದು ಪಾಲಸ್ಟೈನ್ ನಗರವು ಯಹೂದಿಗಳಿಗೆ ರಾಷ್ಟ್ರೀಯ ನಿವಾಸವೆಂದು ಪ್ರಕಟನ ಮಾಡಿತೋ, ಅಂದಿನಿಂದಲೂ ಅವರು ದೇಶೋನ್ನತಿಗೋಸುಗ ತನು, ಮನ, ಧನಗಳನ್ನರ್ಪಿಸಿರುವರು. ಬಂಜರುಕ್ಷೇತ್ರವನ್ನೆಲ್ಲಾ ಯಹೂದಿಗಳು ಸಾಗುವಳಿಮಾಡಿ ಫಲಭರಿತ ಭೂಮಿಯನ್ನಾಗಿ ಮಾಡಿದ್ದಾರೆ. ಅವರು ಕಾರ್ಯಸಾಧನೆಯಲ್ಲಿ ತೊಡಗುವುದೇ ತಡ ಅದು ಮುಗಿಯುವವರೆವಿಗೂ ತಮ್ಮ ಸ್ಥಿರಸಂಕಲ್ಪವನ್ನು ಬದಲಾಯಿಸುವುದೇ ಇಲ್ಲ.

ಯಹೂದಿಗಳು ಅನರ್ಘ ಶ್ರೀಮಂತರು. ಇವರು ಕಾರ್ಯ ಪಟುಗಳು, ಕಷ್ಟಸಹಿಷ್ಣುಗಳು. ಇವರ ಅಮೋಘವಾದ ಶಕ್ತಿ, ಸಾಹಸಗಳಿಂದ ದೇಶದಲ್ಲಿ ವ್ಯವಸಾಯ ಮತ್ತು ಕೈಗಾರಿಕೆಗಳು ವಿಶೇಷವಾಗಿ ಅಭಿವೃದ್ಧಿಯನ್ನು ಹೊಂದಿವೆ.

ಪಾಲಸ್ಟೈನಿನಲ್ಲಿ ಯಹೂದಿಯವರಿಗೆ ವಿಶೇಷವಾಗಿ ಹಣ್ಣು ಹಂಪಲ ಗಳ ತೋಟಗಳಿವೆ. ಇವರು ತಮಗೆ ಸೇರಿದ ಅನೇಕ ಬಂಜರು ಭೂಮಿಗಳನ್ನು ಒಂದಕ್ಕ ನೂರಾಗಿ ಮಾಡಿ ಧನಿಕರಾಗುತ್ತಿದ್ದಾರೆ. ರಾಜ್ಯದ ಈ ಏಳಿಗೆಯನ್ನು ನೋಡಿ ಅರಬ್ಬಿಯವರು ಭ್ರಾಂತರಾಗಿದ್ದಾರೆ. ಹಣವಂತರೂ, ವಿಜ್ಞಾನವೇತ್ತರೂ, ಸಹನಶೀಲರೂ ಮತ್ತು ಕಾರ್ಯಪಟುಗಳೂ ಆದ ಯಹೂದಿಗಳು ಅಭಿವೃದ್ಧಿಗೆ ಬಂದು ಎಂದು ತಮ್ಮನ್ನು ದೇಶದಿಂದ ಹೊರದೂಡುವರೋ ಎಂಬ ಶಂಕೆಯು ಅಲ್ಪಮತಿಗಳಾದ ಅರಬ್ಬಿಯವರಿಗೆ ಉಂಟಾಗಿದೆ. ಈ ಅಂಶವು ನಿಜವಲ್ಲವೆಂದು ಬ್ರಿಟಿಷರು ಅನೇಕ ಬಾರಿ ಹೇಳಿದರೂ ಅರಬ್ಬಿಯವರು ತಮ್ಮ ಮೊಂಡತನವನ್ನು ಬಿಡಲೇ ಇಲ್ಲ. "ಯಹೂದಿಗಳು ನಮ್ಮ ದೇಶಕ್ಕೆ ಕಾಲಿಡಕೂಡದು" ಎಂದು ಹಟಹಿಡಿದಿರುತ್ತಾರೆ. ಬ್ರಿಟಿಷರ ಅಭಿಪ್ರಾಯವು ಇವರಿಗೆ ಸರಿ ಬೀಳದಿರುವುದೇ ಈ ಗಲಭೆಗಳಿಗೆ ಮುಖ್ಯಕಾರಣವಾಗಿದೆ. ಇದರ ಜೊತೆಗೆ ಸ್ವಾರ್ಥಪರರಾದ ಮತ್ತು ಕುತಂತ್ರಿಗಳಾದ ಇಟಲಿಯವರೂ, ಜರ್ಮನರೂ ಅರಬ್ಬಿಯವರನ್ನು ಯಹೂದಿಗಳ ಮೇಲೆ ಬೀಳುವಂತೆ ಹುರಿದುಂಬಿಸಲು ವಿಷಬೀಜವನ್ನು ನೆಟ್ಟರು. ಅದು, ಈಗ ಮೊಳೆತು, ಮರವಾಗಿ, ಫಲ ಬಿಡುತ್ತಿದೆ.

ಇಂದಿನ ಪರಿಸ್ಥಿತಿ

ಬ್ರಿಟಿಷರು ಅಬಿಸೀನಿಯಾದವರಿಗೆ ಸ್ವಲ್ಪ ಸಹಾನುಭೂತಿಯನ್ನು ತೋರಿಸಿದರೆಂಬ ಆಕ್ರೋಶದ ಮೇರೆ ಇಟಲಿಯವರು ಮುಯ್ಯಿಗೆ ಮುಯ್ಯಿ ಮಾಡಲು ಬ್ರಿಟಿಷರ ಆಳ್ವಿಕೆಗೆ ಒಳಪಟ್ಟ ಪಾಲಸ್ಟೈನಿನಲ್ಲಿ ಯಹೂದಿಗಳಮೇಲೆ ಅರಬ್ಬಿಯವರನ್ನು ಎತ್ತಿಕಟ್ಟಿ ಒಂದು ದೊಡ್ಡ ಗೊಂದಲವನ್ನೆಬ್ಬಿಸಿದರು. ಅರಬ್ಬಿಯವರಿಗೆ ಬ್ರಿಟಿಷರಮೇಲೆ ಇಲ್ಲದ ಸಲ್ಲದ ದೋಷಾರೋಪಣೆಗಳನ್ನು ಘೋಷಿಸಿದರು. ಅವರಿಗೆ ಮತ್ತಷ್ಟು ರೇಗಿತು. ಇದಕ್ಕೆ ಅನುವಾಗಿ ಜರ್ಮನಿಯವರು ಯಹೂದಿಗಳನ್ನು ಒಂದು ಕಡೆಯಿಂದ ನಿರ್ಮೂಲನಮಾಡುತ್ತಾ ಬಂದರು. ಅವರನ್ನು ಜರ್ಮನರು ರಾಷ್ಟ್ರಬಹಿಷ್ಕೃತರನ್ನಾಗಿ ಮಾಡಿದರು. ಒಟ್ಟಿನಲ್ಲಿ ಇಟಲಿಯವರ ಕುತಂತ್ರಕ್ಕೆ ಜರ್ಮನರೂ ಸಹಾಯ ಮಾಡಿದರು. ತಮ್ಮ ಕಾರ್ಯವು ಫಲಿಸಿತಲ್ಲಾ ಎಂದು ಇಟಲಿ ಮತ್ತು ಜರ್ಮನಿಯು ಮಹದಾನಂದ ಪಡುತ್ತಿವೆ. ಆತ್ತ ಕಡೆ ಬಂದೂಕಗಳ ಶಬ್ದ, ಕೊಲೆಗಡುಕರ ಧ್ವನಿ ಮತ್ತು ಮನೆ ಮಠಗಳ ದಹನ; ಸಂತೆಯ ಒಂದು ಕಡೆ ಬಾಂಬುಗಳ ಆಸ್ಫೋಟನ, ಸಿಡಿಮದ್ದು ಗುಂಡುಗಳ ಸುರಿಮಳೆ, ಮತ್ತೊಂದು ಕಡೆ ಮೃತ್ಯುದ್ವಾರದಲ್ಲಿ ನರಳುತ್ತಿರುವ ಭೀಕರ ದೃಶ್ಯ, ಗಾಯಗಳಿಂದ ಕೂಡಿ ಕೊರಗುವ ವ್ಯಕ್ತಿಯ ಪರಿಸ್ಥಿತಿ ಇವೆಲ್ಲವನ್ನೂ ನೋಡಿ ಇಟಲಿಯ ವೃತ್ತಪತ್ರಿಕೆಗಳು ಪ್ರತಿ ದಿನವೂ ಪ್ರಶಂಸಿಸುತ್ತಿವೆ.

ದೇಶದಲ್ಲಿ ಎಲ್ಲವೂ ಅವ್ಯವಸ್ಥೆಯನ್ನು ಹೊಂದಿವೆ, ಅನಾಯಕತ್ವ ವುಂಟಾಗಿದೆ. ಯಾವ ರಕ್ಷಕರಿಗೂ ಸರಿಯಾದ ಕ್ರಮವಿಲ್ಲ. ಎಲ್ಲಿ ನೋಡಿದರೂ ಗೊಂದಲ, ಕೊಲೆಗಡುಕರು, ಬೆಚ್ಚಿಬಿದ್ದು ಕೊರಗುವರ ಹೃದಯ ವಿದ್ರಾವಕ ಧ್ವನಿ. ಗಲಭೆಯನ್ನಡಗಿಸಲು ಸರಕಾರವಿದ್ದರೂ ದೇಶದಲ್ಲಿ ಭಯ, ಬೆಂಕಿ ಮತ್ತು ಕೊಲೆ ಇವು ತಪ್ಪಿಲ್ಲ. ಪೊಲೀಸಿನವರ ಮುತುವರ್ಜಿ ವಹಿಸಿ ಸಾಧ್ಯವಾದವನ್ನು, ಗಲಭೆಯನ್ನು ಕಡಿಮೆ ಮಾಡುತ್ತಿದ್ದಾರೆ. ವಾಹನಗಳು ರಸ್ತೆಯಲ್ಲಿ ಸರಿಯಾಗಿ ಓಡಾಡುವಂತಿಲ್ಲ. ಬೀದಿಗಳಲ್ಲೆಲ್ಲಾ ಕಬ್ಬಿಣದ ಆಯುಧಗಳು ಮತ್ತು ಗಾಜಿನ ಚೂರುಗಳು. ದೊಡ್ಡ ದೊಡ್ಡ ಮಂದಿರಗಳಮೇಲೆ ಮತ್ತು ದೇವಸ್ಥಾನಗಳಮೇಲೆ ಬಾಂಬುಗಳ ಸುರಿಮಳೆ. ಕಲ್ಲುಗಳ ಹೊಡೆತ, ಬಂದೂಕಿನ ಶಬ್ದವು ಎಲ್ಲರ ಹೃದಯವನ್ನು ಭೇದಿಸುತ್ತಿದೆ. ಅಲ್ಲಿನವರ ಎದೆಗಳು ಡವಡವನೆ ಹೊಡೆದುಕೊಳ್ಳಲಾರಂಭಿಸಿವೆ. ಟೆಲಿಫೋನ್ ತಂತಿಗಳನ್ನೆಲ್ಲಾ ತುಂಡರಿಸಲ್ಪಟ್ಟಿವೆ. ರೇವು ಪಟ್ಟಣಗಳಲ್ಲಿಯೂ ಮುಖ್ಯ ಪ್ರದೇಶಗಳಲ್ಲಿಯೂ ಇರುವ ಆಯುಧ ಠಾಣೆಗಳಾದ ಪೋಲೀಸಿನವರಿಗೆ ಪ್ರತಿಯಾಗಿ ಯುದ್ಧ ಸಾಮಗ್ರಿಗಳನ್ನುಳ್ಳ ಕ್ರಾಂತಿಕಾರರ ತಂಡಗಳು ಮುಂದೆ ನುಗ್ಗುತ್ತಲಿವೆ.

ಹಾಜ್ ಎಮಿಲ್ ಹುಸೇನಿ

ಪಾಲಸ್ಟೈನಿನ ಗಲಭೆಗಳಲ್ಲಿ ಈತನೇ ಅರಬ್ಬಿಯವರ ಮುಖಂಡನಾಗಿರುತ್ತಾನೆ. ಇವನು ಆ ದೇಶದ ಅರಬ್ಬೀ ಸಂಘದ ಅಧ್ಯಕ್ಷ. ಇವನ ವಯಸ್ಸು 42. ಇವನಲ್ಲಿ ಸ್ವಮತಾಭಿಮಾನವೂ ಪರಮತ ದ್ವೇಷವೂ ಬಹಳ ಮಟ್ಟಿಗೆ ಇರುತ್ತದೆ. ಇವನು 1920 ರಲ್ಲಿ ನಡೆದ ಕ್ರಾಂತಿಯೊಂದರಲ್ಲಿ ಮುಖಂಡನಾಗಿದ್ದನು. ಆದಕ್ಕೋಸ್ಕರ ಇವನಿಗೆ ಕಾರಾಗೃಹ ಶಿಕ್ಷೆ ವಿಧಿಸಲ್ಪಟ್ಟಿತ್ತು. ಆದಾಗ್ಯೂ ಜೈಲಿನಿಂದ ಕದ್ದು ಹೋಗಿದ್ದನು. ಈಗ ಇವನು ಪ್ರಧಾನ ಅರಬ್ಬೀ ಸಂಘದ ಅಧ್ಯಕ್ಷ. ಇವನ ಮಾತೆಂದರೆ ಸಾಕು, ಅರಬ್ಬಿಯವರು ಏನು ಬೇಕಾದರೂ ಮಾಡಲು ಸಿದ್ಧರಿದ್ದಾರೆ. ಇವನ ಪ್ರಭಾವವು ಅರಬ್ಬೀ ಜನರಮೇಲೆ ಅಸಾಧಾರಣವಾಗಿದೆ. ಬರೀ ಕೋರಿಕೆಗಳಿಂದಲೂ ಮತ್ತು ಮನವಿಗಳಿಂದಲೂ ಕಾರ್ಯ ಫಲಿಸುವುದಿಲ್ಲವೆಂಬುದು ಈತನಿಗೆ ಚೆನ್ನಾಗಿ ಗೊತ್ತು. ಆದುದರಿಂದಲೇ ಅವನು ಈ ರೀತಿ 'ಗೊರಿಲ್ಲಾ' ಯುದ್ಧಕ್ಕೆ ಪ್ರಾರಂಭಮಾಡಿಸಿರುವುದು.

ಇಷ್ಟೇ ಅಲ್ಲ, ಇವರಿಗೆ ಜರ್ಮನರೂ ಮತ್ತು ಕುತಂತ್ರಿಗಳಾದ ಇಟಲಿಯವರೂ ಸಹಾಯಕರಾಗಿರುತ್ತಾರೆ. ಧನಸಹಾಯವು ಬೇಕಾದಾಗ ಒದಗಿಸಲ್ಪಡುತ್ತದೆ. ಅರಬ್ಬಿಯವರು ಲೂಟಿ ಮಾಡಲು ಹೊರಟಿರುತ್ತಾರೆ. ಹಳ್ಳಿಗಳಲ್ಲಿಯೂ, ಪಟ್ಟಣಗಳಲ್ಲಿಯೂ ಕೊಳ್ಳೆ ಹೊಡೆದು ಧನಶೇಖರ ಮಾಡಿರುತ್ತಾರೆ. ಈ ಕಲಹಕ್ಕೆ ತಗುಲಿರುವ ಖರ್ಚಿನಲ್ಲಿ ಶೇಕಡಾ 95 ರಷ್ಟನ್ನು ಇಟಲಿಯವರು ವಹಿಸಿ ಕೊಂಡಿರುತ್ತಾರೆಂಬ ವದಂತಿಯು ಪ್ರಬಲವಾಗಿದೆ. ಸಾಲದುದಕ್ಕೆ ಅರಬ್ಬೀ ವೃತ್ತಪತ್ರಿಕೆಗಳಿಗೆ ಹಾಕಿರುವ ಬಂಡವಾಳವೆಲ್ಲವೂ ಇಟಲಿಯದೇ ಆಗಿದೆ. ಬ್ರಿಟಿಷರಮೇಲೆ ಅರಬ್ಬಿಯವರನ್ನು ಎತ್ತಿ ಕಟ್ಟಿ, ಪವಿತ್ರ ಭೂಮಿ ಪಾಲಸ್ಟೈನನ್ನು ತನ್ನ ಅಧೀನಮಾಡಿಕೊಳ್ಳುವುದು ಮುಸೋಲಿನಿಯ ಮಹದಾಕಾಂಕ್ಷೆಯಾಗಿದೆ. ಇಂತಹ ವಿಷಮ ಸನ್ನಿವೇಶದಲ್ಲಿ ಬ್ರಿಟಿಷರು ಒಳಹೊಕ್ಕು, ಆತನ ವಿಧ್ವಂಸಗಳನ್ನೆಲ್ಲಾ ಕ್ರಮವಾಗಿ ಪರಿಶೀಲಿಸಿ ದೇಶದಲ್ಲುಂಟಾಗುತ್ತಿರುವ ಈ ಗೊಂದಲವನ್ನು ಕೊನೆಮಾಡಿ, ಶಾಂತಿಸ್ಥಾಪನೆಮಾಡಬೇಕೆಂಬುದು ಅವರ ಪ್ರಧಾನ ಕರ್ತವ್ಯವಾಗಿದೆ.

ಇಟಲಿಯು ಬರುವುದಿಲ್ಲ.

ಡಿಸೆಂಬರ್ ತಿಂಗಳಿನಲ್ಲಾದ ಮೆಡಿಟರೇನಿಯನ್ ಪರಸ್ಪರ ಸಹಾಯ ಒಪ್ಪಂದವು ಜಾರಿಯಲ್ಲಿರುವವರೆಗೆ ಇಟಲಿಯು ಸಮ್ಮೇಳನದಲ್ಲಿ ಭಾಗವಹಿಸುವುದಿಲ್ಲವೆಂದು ಅಧಿಕಾರಯುತವಾಗಿ ತಿಳಿಸಿದೆ. ಇತರ ರಾಷ್ಟ್ರಗಳಿಗೆ ಎಚ್ಚರಿಕೆಯನ್ನು ಕೊಟ್ಟಿದೆ.

ಸಾಧ್ವಿ
೧೩-೭-೩೬ ನೇ ಸೋಮವಾರ

ಪ್ರಜಾಪ್ರತಿನಿಧಿ ಮತ್ತು ನ್ಯಾಯವಿಧಾಯಕ ಸಭೆಗಳ ರಚನೆ.

ನಮ್ಮ ಶಾಸನಸಭೆ ಮತ್ತು ಪ್ರಜಾಪ್ರತಿನಿಧಿ ಸಭೆಗಳ ರಚನೆ ಮತ್ತು ಕಾರ್ಯಕಲಾಪಗಳ ರೀತಿಯನ್ನು ಗೊತ್ತು ಮಾಡಲು ಒಂದು ಸಮಿತಿಯು ನೇಮಕವಾಗಿತ್ತು. ಅವರು ಕೆಲವು ಸಲಹೆಗಳನ್ನು ಮಾಡಿರುವರು. ಅದರಮೇಲೆ ಕಳೆದ ಅಧಿವೇಶನಗಳಲ್ಲಿ ವಿಶೇಷ ಚರ್ಚೆ ನಡೆಯಿತು. ನಮ್ಮ ಸಭೆಗಳಿಗೆ ಪ್ರಕೃತದಲ್ಲಿ ಯಾವ ಸ್ವಾತಂತ್ರ್ಯವೂ ಇಲ್ಲ. ಅವುಗಳ ತೀರ್ಮಾನಗಳು ಯಾರನ್ನೂ ಬಂಧಿಸುವುದಿಲ್ಲ. ಈ ಕಾರಣಗಳಿಂದ ಈ ಸಭೆಗಳು ಬರೀ ಚರ್ಚಾಸಂಘಗಳಾಗಿ ಪರಿಣಮಿಸಿವೆ. ಸಂಘಗಳಲ್ಲಿ ಯಾದರೂ ಕೆಲವುವೇಳೆ ಸ್ವತಂತ್ರವಾಗಿ ಮಾತನಾಡಲು ಅವಕಾಶವಿದೆ. ಈ ಸಭೆಗಳಿಗೆ ಅದೂ ಇಲ್ಲ.

ಮುಖ್ಯವಾಗಿ ಈ ಸಭೆಗಳು ಪಾರ್ಲಿಮೆಂಟಿನಂತೆ ಯತ್ಕಿಂಚಿತ್ತಾದರೂ ಜವಾಬ್ದಾರಿಯನ್ನು ಹೊಂದಿದವುಗಳಾಗಬೇಕು. ದೇಶದ ಬಡ್ಜೆಟ್ಟನ್ನು ಗೊತ್ತುಮಾಡಲು ಈ ಸಭೆಗಳಿಗೆ ಹಕ್ಕಿರಬೇಕು. ಮಂತ್ರಿಮಂಡಲದವರ ಕಾರ್ಯಕಲಾಪಗಳನ್ನು ಇವುಗಳು ಗೊತ್ತುಮಾಡಿ ಹೆಚ್ಚು ಕಡಿಮೆ ಇದ್ದರೆ ಟೀಕಿಸಬೇಕು. ಈ ಸಭೆಗಳಲ್ಲಿ ಆಗತಕ್ಕ ತೀರ್ಮಾನವನ್ನು ಸರ್ಕಾರದವರು ನಿರಾಕರಿಸಲು ಅವಕಾಶವಿರಕೂಡದು. ದೇಶದ ಉನ್ನತಿಗೆ ಸಂಬಂಧಪಟ್ಟ ಎಲ್ಲಾ ವಿಷಯಗಳನ್ನೂ ಚರ್ಚಿಸಲು ಇವುಗಳಿಗೆ ಅಧಿಕಾರವಿರಬೇಕು. ಸಭೆಗಳ ಅಧ್ಯಕ್ಷರು ಖಾಸಗಿಯವರಾಗಿರಬೇಕು. ಸರ್ಕಾರಿ ಸದಸ್ಯರಾಗಿರಕೂಡದು. ಸರ್ಕಾರಿ ನೌಕರರ ಕಾರ್ಯಕಲಾಪಗಳನ್ನು ಅನೇಕವೇಳೆ ಚರ್ಚಿಸಬೇಕಾಗಿರುವುದರಿಂದ ಅಧಿಕಾರಿ ವರ್ಗದವರು ಅಧ್ಯಕ್ಷರಾಗಿರಕೂಡದು. ಇವುಗಳನ್ನು ಮಾಡಿದರೆ ನಮ್ಮ ಸಭೆಗಳು ನಿಜವಾಗಿಯೂ ಪ್ರಜಾಭಿಪ್ರಾಯವನ್ನು ಪ್ರತಿಬಿಂಬಿಸುವುವು. ಇಲ್ಲದಿದ್ದರೆ ಬರೀ ಅರ್ಜಿದಾರರ ಕೂಟಗಳಾಗಿ ಪರಿಣಮಿಸುವುವು.

ಎತ್ತಿಗೆ ಜ್ವರ, ಎಮ್ಮೆಗೆ ಬರೆ!

ಈಗಿನ ವಿಪ್ಲವಮಾನಗಳಲ್ಲಿ ಎತ್ತಿಗೆ ಜ್ವರ ಬಂದರೆ ಎಮ್ಮೆಗೆ ಬರೆಹಾಕಲ್ಪಡುವುದು. ದವಸ ಧಾನ್ಯಗಳು ಮತ್ತು ಭೋಗ್ಯ ವಸ್ತುಗಳು ವಿಶೇಷವಾಗಿ ತಯಾರಿಸಲ್ಪಟ್ಟು ಅವುಗಳ ಬೆಲೆಯು ಬಹಳವಾಗಿ ಇಳಿದು ಹೋದರೆ ಆ ಸಾಮಗ್ರಿಗಳನ್ನೇ ಬೆಂಕಿಯಲ್ಲಿ ಹಾಕಿ ಸುಟ್ಟು ಬಿಡುವರು. ಅಮೆರಿಕದಲ್ಲಿ ಗೋಧಿ ಬೆಳೆಯು ಒಂದಾವರ್ತಿ ಬಹಳವಾಗಿ ಆಯಿತು. ಮಾರ್ಕೆಟ್ಟಿನಲ್ಲಿ ಬೆಲೆಯು ಸಿಗದಂತಾಯಿತು. ಆಗ ಕೋಟ್ಯಾಂತರ ರೂಪಾಯಿನ ಗೋಧಿಯನ್ನು ಬೆಂಕಿಯಲ್ಲಿ ಹಾಕಿ ಸುಟ್ಟರು. ಇದರಿಂದ ಉಳಿದ ಗೋಧಿಯ ಬೆಲೆಯು ತಕ್ಕಮಟ್ಟಿಗೆ ಉತ್ತಮವಾಯಿತು. ಇದಾದಮೇಲೆ ಹತ್ತಿಯು ವಿಪರೀತವಾಗಿ ಬೆಳೆಯಿತು. ಅದನ್ನೂ ಹಾಗೆಯೇ ಸುಟ್ಟರು. ಇದೇ ರೀತಿ ಹಾಲೆಂಡಿನಲ್ಲಿ ಈಗ ಅನೇಕ ಸಾಮಗ್ರಿಗಳು ಸುಡಲ್ಪಟ್ಟವು.

ಆಹಾರ ಪದಾರ್ಥಗಳನ್ನು ಹೀಗೆ ವಿನಾಶ ಮಾಡುವ ವಿಷಯವನ್ನು ನಾವು ಕೇಳುತ್ತಿದ್ದೆವು. ಈಗ ಮೂಕ ಪ್ರಾಣಿಗಳನ್ನು ಸಂಹರಿಸುವ ಪ್ರಯತ್ನವು ಆಗುತ್ತಿದೆ. ಆ ಪರಲ್ಲಿಯೂ ಅಸಂಖ್ಯಾತವಾದ ಗೋಹತ್ಯದ ಕ್ರಿಯೆಯು ಕೈಗೊಳ್ಳಲ್ಪಟ್ಟಿದೆ.

ಹಾಲೆಂಡಿನಲ್ಲಿ ಹಾಲು, ಮೊಸರು, ಬೆಣ್ಣೆಗಳು ಬಹಳವಾಗಿ ಸಿಕ್ಕುತ್ತಿವೆ. ಇದರಿಂದ ಅವುಗಳ ಧಾರಣೆಧಾರಣೆಗಳು ಕಡಿಮೆ ಬಿದ್ದು ಹೋಗಿವೆ. ಅವುಗಳ ಬೆಲೆಯನ್ನು ಹೆಚ್ಚಿಸಲು ಒಂದು ಲಕ್ಷ ಗೋವುಗಳನ್ನು ಸಂಹರಿಸಲು ನಿರ್ಧರಿಸಿರುವರು.

ಮನುಷ್ಯನಿಗೆ ಅತ್ಯವಶ್ಯಕವಾದ ಪದಾರ್ಥಗಳನ್ನು ಕೊಡುವುದು ಗೋವು. ಬೆಲೆಯು ಕಡಿಮೆಯಾಯಿತೆಂಬ ನೆಪದಿಂದ ಇಂತಹ ಉಪಯುಕ್ತ ಪ್ರಾಣಿಯನ್ನು ಕೊಲ್ಲುವ ಯೋಚನೆ ಮಾಡುವುದು ಮನುಷ್ಯನ ಕೃತಘ್ನತೆ, ನಿರ್ದಯತೆಗಳನ್ನು ಸೂಚಿಸುತ್ತದೆ.

ಬೆಂಕಿಯಮೇಲೆ ನಡೆದರು.

ಕ್ವೆಟ್ಟಾದ ಪ್ರಸಿದ್ಧ ಷೇಕ್ ಫಜಲ್ ಎಂಬುವನು ಕರಾಚಿಯಲ್ಲಿ ತನ್ನೊಂದಿಗೆ 6 ಮಂದಿಯನ್ನು ಬೆಂಕಿಯಮೇಲೆ ನಿರಾಯಾಸವಾಗಿ ನಡೆಸಿಕೊಂಡು ಹೋದನು. ಈ ಅದ್ಭುತ ಕೌಶಲ್ಯವನ್ನು ನೋಡಲು ಅನೇಕರು ಬಂದಿದ್ದರು.

ಗಂಡಸು ಹೆಂಗಸಾದನು.

ಇಂಗ್ಲೆಂಡಿಗೆ ಸೇರಿದ ಬಾತ್ ಎಂಬ ಪಟ್ಟಣದಲ್ಲಿರುವ 42 ವಯಸ್ಸಿನ ನಾರ್ಮನ್ ಫಿಷರ್ ಎಂಬುವನು ಕ್ರಮೇಣ ಹೆಂಗಸಿನ ಚಿಹ್ನೆಗಳನ್ನು ಹೊಂದುತ್ತಾ ಬಂದನೆಂದು ಆರೋಗ್ಯ ಶಾಖೆಯ ಅಧಿಕಾರಿಗಳು ತಿಳಿಸಿರುತ್ತಾರೆ. ಆರೋಗ್ಯ ಶಾಖೆಯ ಅಧಿಕಾರಿಗಳು ಇವನಿಗೆ ವಿಶೇಷ ಶಸ್ತ್ರ ಚಿಕಿತ್ಸೆ ಮಾಡುವುದು ಉಚಿತವೆಂದು ನಿರ್ಧರಿಸುತ್ತಾರೆ. ಇದಾದನಂತರ ಇವನು ಗಂಡಸಾಗುವನೋ ಅಥವಾ ಹೆಂಗಸಾಗುವನೋ ನೋಡಬೇಕು!

ಮಿಷನರಿಗಳ ಮೌಢ್ಯ.

"ಮತಪ್ರಸಾರಣೆಯ ಕಾರ್ಯವನ್ನು ಕೈಗೊಂಡಿರುವ ಮಿಷನರಿಗಳ ಮತಿ ಭ್ರಾಂತಿಯು ಇಡೀ ವಿಶ್ವದ ಸಹೋದರ ಪ್ರೇಮವನ್ನೇ ತೊಲಗಿಸುತ್ತದೆ. ಅವರು ಹೇಳಿದಂತೆ ಕುಣಿದರೆ ಸರ್ವಾಭೀಷ್ಟಗಳೂ ಫಲಿಸುವುವಂತೆ! ಅವರು ಹೇಳಿದ ಮತವನ್ನು ಅನುಸರಿಸಿದರೆ ಎಲ್ಲರಿಗೂ ಸ್ವರ್ಗ ಸುಖವುಂಟಾಗುತ್ತದೆ, ಇಲ್ಲದಿದ್ದಲ್ಲಿ ಘೋರ ನರಕವು ಪ್ರಾಪ್ತಿಯಾಗುವುದಂತೆ! ಹೀಗೆಹೇಳುವ ಮಿಷನರಿಗಳ ಅಭಿಪ್ರಾಯವು ಶುದ್ಧ ಮೂರ್ಖತನವಲ್ಲವೇ? ಅವರ ಅವಿವೇಕವು ವರ್ಣನಾತೀತವಾದುದು! ಅವರ ಮತ ಪ್ರಸಾರಣೆಯ ರೀತಿಯು ಅತ್ಯಂತ ಹೇಯವಾದುದು! ಜಗತ್ತಿನ ಶಾಂತಿಗೆ ಕಂಟಕಪ್ರಾಯರಾಗಿ, ಸೌಹಾರ್ದಭಾವವನ್ನುಂಟುಮಾಡುವ ಬದಲಾಗಿ ವಿಷ ಬೀಜವನ್ನು ನೆಡುತ್ತಲಿದ್ದಾರೆ" ಎಂದು ಜೇನ್‌ಗ್ರಹಾಮ್ ಮೋ ಎಂಬುವರು ಪ್ರತಿಪಾದಿಸಿರುತ್ತಾರೆ.

ಜರ್ಮನಿಯಲ್ಲಿ ಮೃತರಾದ ಮೈಸೂರಿನವರು

ಶ್ರೀಮಾನ್ ಸಂಗಪುರಂ ವೆಂಕಟೇಶಯ್ಯಂಗಾರ್ಯರ ಮಕ್ಕಳೂ ಚಿತ್ರದುರ್ಗದ ಜಿಲ್ಲಾಧಿಕಾರಿಗಳಾದ ಶ್ರೀಮಾನ್ ಎಸ್. ಸುಂದರರಾಜಯ್ಯಂಗಾರ್ಯರ ಸಹೋದರರೂ ಆದ ಶ್ರೀ ಎಸ್. ಅನಂತಯ್ಯಂಗಾರ್ಯರು ಜರ್ಮನಿಗೆ ಪ್ರೌಢವಿದ್ಯಾಭ್ಯಾಸಕ್ಕೆ ಹೋಗಿದ್ದರು. ಅವರು ೪-೧೧-೧೯೩೫ ನೆಯ ತಾರೀಖು ಪರ್ವತಪ್ರಾಂತಗಳಲ್ಲಿ ನಡೆಗೆಟ್ಟರೆಂಬ ವಾರ್ತೆ ಬಂದಿತ್ತು. ಅವರನ್ನು ಆಗ್ಗ ಎಷ್ಟು ಹುಡುಕಿದರೂ ಸಿಕ್ಕಿರಲಿಲ್ಲ. ಈಚೆಗೆ ಜರ್ಮನಿಯಿಂದ ಬಂದ ಸುದ್ದಿಯಂತೆ ಶ್ರೀ ಅನಂತಯ್ಯಂಗಾರ್ಯರ ಶವವು ೮ ತಿಂಗಳಾದ ಮೇಲೆ ಸಿಕ್ಕಿತೆಂದು ಗೊತ್ತಾಗಿದೆ

ಎಬಿಸೀನಿಯಾಗೆ ೩೦ ಲಕ್ಷ ಪೌಂಡು

ಲಂಡನ್ನಿನಲ್ಲಿರುವ ಎಬಿಸೀನಿಯನ್ ಡೆಲಿಗೇಷನ್ನಿನವರು ಒಂದು ಸಾರ್ವಜನಿಕ ಮನವಿಯನ್ನು ಹೊರಡಿಸುತ್ತಾ 'ಅಬ್ಸೀನಿಯಾದ ಪಶ್ಚಿಮಪ್ರಾಂತ್ಯಗಳು ಇನ್ನೂ ಇಟಲಿಯ ವಶವಾಗಿಲ್ಲ. ಅದ್ದರಿಂದ ಆ ಪ್ರದೇಶಗಳನ್ನು ರಕ್ಷಿಸಿಕೊಂಡು ಅಲ್ಲಿ ಆಳ್ವಿಕೆಯನ್ನು ನಡೆಸುವುದಕ್ಕೆ ಅಬ್ಸೀನಿಯನರಿಗೆ ಎರಡು ಮಿಲಿಯನ್ (೩೦ ಲಕ್ಷ) ಸ್ಟರ್ಲಿಂಗ ಪೌಂಡುಗಳ ನಿಧಿಯನ್ನು ಎತ್ತಿ ಕೊಡಿಸಬೇಕು' ಎಂದು ಆ ಮನವಿಯಲ್ಲಿ ಪ್ರಾರ್ಥಿಸಲಾಗಿದೆ.

ಯಳಂದೂರು ತಾಲ್ಲೂಕಿನ ರೆವಿನ್ಯೂ ಆಡಳಿತ

ಯಳಂದೂರು ತಾಲ್ಲೂಕು ಸರಕಾರದ ಆಡಳಿತದಲ್ಲಿರುವ ಪರ್ಯಂತರದವರೆಗೂ ಸದರೀ ತಾಲ್ಲೂಕಿನ ರೆವಿನ್ಯೂ ಆಡಳಿತವನ್ನು ನಂಜನಗೂಡಿನ ಸಬ್‌ಡಿವಿಜನ್ ಛಾರ್ಜಿನಲ್ಲಿರುವ ಅಸಿಸ್ಟೆಂಟ್ ಕಮಿಷನರವರೇ ನೋಡುವುದಾಗಿ ಸೂಚಿಸಿದ್ದಾರೆ

ಮುಷ್ಕರ ಸಂಭವ.

(ಇಣಕಪ್ಪನ ನೋಟ)

ಸಧ್ಯದಲ್ಲಿಯೇ ಮೈಸೂರಿನಲ್ಲಿ ಒ[illegible] ದೊಡ್ಡ ಮುಷ್ಕರವಾಗುವ ಸಂಭವ[illegible] ಮಾರ್ಕೆಟ್ಟಿನ ವರ್ತಕರಿಗೆ ಬಾಡಿಗೆ ಹೆ[illegible] ಸಿರುವ ವಿಷಯದಲ್ಲಿ ಅಸಮಾಧಾನ[illegible] ಟಾಗಿದೆ ಪರಿಹಾರ ದೊರೆಯದಿದ್ದರೆ [illegible] ಷ್ಕರವು ಆರಂಭವಾಗಬಹುದು.

ಜಾಮೀನು ಮುಚ್ಚಳಿಕೆ.

ಮೈಸೂರಿನ ಉಡುಪಿ ಆನಂದಭವ[ನ] ಪ್ರೊಪ್ರೈಟರಾದ ಮಿ|| ಕೆ. ಗುರುರಾಜಾ[ಚಾ]ರ್ಯರು ತಮ್ಮ ಸಹೋದರರೂ ಮಾಡ[ರ್ನ್] ಹೋಟೆಲ್ ಪ್ರೊಪ್ರೈಟರೂ ಆದ ಮ[illegible] ಸೀತಾರಾಮರಾಯರಿಗೆ ಜೀವಭಯವು[ಂಟಾ]ಗುವಂತೆ ಕಾಗದ ಬರೆದರೆಂಬ ಆಪಾದ[ನೆಯ] ಮೇಲೆ ಸಿಟಿ ಮ್ಯಾಜಿಸ್ಟ್ರೇಟರು ವಿಚಾರ[ಣೆ ನ]ಡೆಸಿ 250 ರೂ ಬೆಲೆಯುಳ್ಳ ಜಾಮೀ[ನು] ಮುಚ್ಚಳಿಕೆಯನ್ನು ಕೊಡಬೇಕೆಂದು [ಆ]ಜ್ಞೆ ಮಾಡಿರುವರು

ಆರ್ಯ ರಕ್ಷಾವಳೀ ನಾಟಕ ಸಭಾ.

ಮೇಲ್ಕಂಡ ಸಂಘದವರು ಅನೇಕ [ನಾ]ಟಕಗಳನ್ನು ಆಡುತ್ತಿರುವರು. ಕಂಪೆನಿ[ಯ] ಮಾಲೀಕರಾದ ಶ್ರೀ ಜಿ. ನಾಗೇಶರಾ[ವ್ ಅವರು] ಗಳಿಸಿದ ಶ್ರೀ ವರದಾಚಾರ್ಯರ ಅಭಿ[ನಯ]ಗಳನ್ನೇ ಅನುಸರಿಸುತ್ತಿರುವರು. ಈ[ಸಭೆಯ] ನಾಟಕದಲ್ಲಿ ಬರುವ ಪಾತ್ರಗಳೆಲ್ಲ[ವೂ] ಬಹಳ ಚೆನ್ನಾಗಿವೆ.

ಹೊಸ ಮುನ್‌ಸೀಫರು.

ಹಾಸನದ ವಕೀಲರಾದ ಶ್ರೀ|| ಎ[ಸ್.] ವೆಂಕಟಕೃಷ್ಣಶೆಟ್ಟಿಯವರನ್ನು ಮುನ್[ಸೀ]ಫರನ್ನಾಗಿ ನೇಮಿಸಿ ಅವರನ್ನು ನರಸಿ[ಂಹ]ರಾಜಪುರಕ್ಕೆ ಹಾಕಿದ್ದಾರೆ.

ಉದ್ಯೋಗ ತೆರಿಗೆ.

ತುಮಕೂರು ಪೌರಸಭೆಯವರು ಹಾ[ಕಿ]ರುವ ಉದ್ಯೋಗ ತೆರಿಗೆಯ ವಸೂ[ಲಿಗೆ] ಸಂಬಂಧವಾಗಿ ತುಮಕೂರಿನ ಕೆಲ[ವು] ನಿವಾಸಿಗಳು ಪೌರಸಭೆಯಮೇಲೆ ದಾ[ವೆ] ಮಾಡಿರುವಂತೆ ತಿಳಿಯಬರುತ್ತದೆ.

೩೦೦ ಮಂದಿ ಮುಸಲ್ಮಾನರಾದರು.

ಬೆಳಗಾಂ ಜಿಲ್ಲೆಯಲ್ಲಿರುವ ಕಾ[illegible] ಎಂಬ ಹಳ್ಳಿಯಲ್ಲಿ ಸುಮಾರು 300 ಮ[ಂದಿ] ಹರಿಜನರು ಇಸ್ಲಾಂ ಮತಕ್ಕೆ ಸೇ[ರಿದ್ದಾ]ರೆ. ಇನ್ನೂ 200 ಜನರು ಸೇ[ರಲು] ಸಿದ್ಧರಾಗಿರುವರು

ಬೆಂಗಳೂರು ಪೌರ ಸಭಾ ಭವನ.

ರಾಜಮಂತ್ರ ಪ್ರವೀಣ ಶ್ರೀ|| ಎ[ನ್.] ರಾಜಗೋಪಾಲಾಚಾರಿಯವರು 9 ನೇ [ತಾರೀಖು] ಪ್ರಾತಃಕಾಲ ಬೆಂಗಳೂರು ಪೌರಸಭೆ[ಯ] ನೂತನ ಭವನ ಪ್ರವೇಶೋತ್ಸವವ[ನ್ನು] ನಡೆಸಿದರು

ಅಬಿಸೀನಿಯದ ಮೊರೆ.

ಇಥಿಯೋಪಿಯದ ಪ್ರಾರ್ಥನೆಗಳನ್ನು ಲೀಗಿನ ೫೨ ರಾಷ್ಟ್ರಗಳ ನಿರ್ಲಕ್ಷಿಸಿದುವು '

ಲೀಗ್ ಅಸೆಂಬ್ಲಿಯಲ್ಲಿ ನೀಗಸರ ಭಾಷಣ.

'ಮನುಷ್ಯರನ್ನು ಈ ರೀತಿಯಲ್ಲಿ ನಿರ್ನಾಮಗೊಳಿಸಲಾಗದು ಅಂತಹ ರಾಷ್ಟ್ರೀಯ ನೀತಿಗೆ ಗಂಡಾಂತರವೊದಗಿದೆ ಲೀಗಿಗೆ ನಾನು ಪ್ರಾರ್ಥನೆಯನ್ನು ಸಲ್ಲಿಸಿ ಕೇಳಬೇಕಿದ್ದ ನನ್ನ ಜನರನ್ನು ಹಿಡಿದೆತ್ತಬೇಕೆಂದು ಬೇಡುವೆನು ದೈವವೂ ಇತಿಹಾಸವೂ ನಿಮ್ಮ ತೀರ್ಮಾನವನ್ನು ನೆನಪಿನಲ್ಲಿಡುವುವು' ಎಂದು ಮೊನ್ನೆ ಇಥಿಯೋಪಿಯನ್ ಚಕ್ರವರ್ತಿ ಹೈಲಿ ಸೆಲಾಸಿಯವರು ಜಿನೀವದಲ್ಲಿ ಲೀಗ್ ಅಸಂಬ್ಲಿಯಲ್ಲಿ ಹೇಳಿಕೆಯನ್ನು ಕೊಡುತ್ತಾ ತಿಳಿಸಿದರು.

ಇಟಲಿಯು ೧೪ ವರ್ಷಗಳಿಂದ ಯುದ್ಧಸನ್ನದ್ಧತೆಯಲ್ಲಿ ಮುಳುಗಿತ್ತು. ಯಾವುದೋ ಒಂದು ಯುರೋಪಿಯನ್ ರಾಷ್ಟ್ರವು ಇಟಲಿಯ ಸ್ನೇಹವನ್ನು ಗುಪ್ತವಾಗಿ ಬಯಸಿ ಒಪ್ಪಂದಮಾಡಿಕೊಳ್ಳದೆ ಇದ್ದಿದ್ದರೆ ಇಟಲಿಯು ಇಷ್ಟು ಕಮುತ್ತಿರಲಿಲ್ಲ. ಗುಪ್ತವಾದ ಒಪ್ಪಂದವು ಪರಿಸ್ಥಿತಿಯನ್ನು ಕೋಂದಿತು.'

ನನ್ನ ಉಪಯೋಗಕ್ಕಾಗಿಯೂ ನನ್ನ ಸರಕಾರ ದ್ರೋಹ ಒಗರುಳ್ಳ ಒಂದೆ ಇಟಲಿಯ ಸಲಹೆಗಳನ್ನು ನಿರಾಕರಿಸಿದೆನು. ನಾನು ಸಣ್ಣ ರಾಷ್ಟ್ರಗಳ ನ್ಯಾಯಕ್ಕಾಗಿ ಹೋರಾಡಿದೆ ಮಾತ್ರೇನ.

"ಪ ರಾರು ಯುರೋಪಿಯನ್ ರಾಷ್ಟ್ರಗಳ ಸ್ಯಾಂಕ್ಷನ್ಸ್ ಪ್ರಯೋಗವಾಡಲಿಲ್ಲ. ಸರಕಾರಗಳು ಲೀಗ್ ಕವೆನಂಟಿಗೆ ಬಲವಾಗಿದ್ದರೂ ಧ್ಯೇಯಗಳನ್ನು ಕಾರ್ಯಾಂಗದಲ್ಲಿ ತರುವ ಬಗ್ಗೆ ತಡೆಗಳನ್ನು ಒಡ್ಡಿದುವು. ನಮ್ಮ ಭಾಂಡಾರಿಕ ಪ್ರಾರ್ಥನೆಗಳೂ ನಿರ್ಲಕ್ಷಿಸಲ್ಪಟ್ಟುವು"

ಎಂದು ಎಂಥ ಕಲ್ಲೆದೆಯನ್ನೂ ಕರಗಿಸುವ ಭಾವಪೂರ್ಣವಾದ ಭಾಷಣವನ್ನು ಮಾಡಿ ಲೀಗ್ ಕವೆನೆಂಟು ಇಥಿಯೋಪಿಯಕ್ಕೆ ಕೊಟ್ಟ ರಕ್ಷಣೆಯೇನೆಂಬ ಪ್ರಶ್ನೆಯನ್ನು ಹಾಕಿದರು.

ಗ... ರಲ್ಲಿ ಲೀಗ್ ಅಸಂಬ್ಲಿಯ ಅಧ್ಯಕ್ಷರಾಗಿದ್ದ ಸ್ವಿಸ್ ನ್ಯಾಯವಾದಿಗಳೂ ರಾಜನೀತಿಪಟುಗಳೂ ಆದ ಪಾಗ್ಯುಸೆಪ್ಪರ ಲೀಗ್ ನಲ್ಲಿ ಹೈಲಿ ಸೆಲಾಸಿಯವರು ಭಾಷಣಮಾಡಕೂಡದೆಂದು ವಿರೋಧಿಸಿ ... ಆದರೆ ಐರಿಷ್ ಫ್ರೀ ಸ್ಟೇಟಿನ ... ಕರ್ನು ಡಿವಾಲರವರು ನೀಗಸರು ಭಾಷಣಮಾಡಬಹುದೆಂದು ಸಮರ್ಥಿಸಿ ... ಷಣ ಮಾಡುವ ಬಗ್ಗೆ ತೀರ್ಮಾನವಾದುದನ್ನು ಚಕ್ರವರ್ತಿಗಳಿಗೆ ...

ಆರ್ಜೆಂಟೈನ್ ರಿಪಬ್ಲಿಕ್‌ನ ಸಿನಾರ್ ಕ್ಯಾಂಟಿಲೋರವರು ಆವೇಶವಾಗಿ ಭಾಷಣ ಮಾಡುತ್ತ ಪಾಶವೀಶಕ್ತಿಯಿಂದ ಆಕ್ರಮಿಸಿದ ವಿಷಯವನ್ನು ಲೀಗ್ ಮನ್ನಿಸಿದರೆ ಆರ್ಜೆಂಟೈನವು ಲೀಗನ್ನು ಬಿಟ್ಟು ಹೊರಡುವುದಾಗಿ ಸೂಚಿಸಿದರು.

ಚಕ್ರವರ್ತಿಗಳ ಭಾಷಣ

ನೀಗಸರು ಘನಗಂಭೀರವಾಗಿ ಭಾಷಣ ಮಾಡಿದರು.

(ಮಲ್ಟಿ ಫೋನಿನಲ್ಲಿ ಅವರ ಭಾಷಣವು ಭಾಷಾಂತರ ಮತ್ತು ರಕಾರ್ಡಿಂಗ್ ನಡೆಯುತ್ತಿತ್ತು) ಇಟಲಿ ಮತ್ತು ಲೀಗ್‌ಗಳನ್ನು ಒಂದೇ ಸಮನಾಗಿ ಅವರು ಜರಿದರು.

ಕಲ್ಲೆದೆ ಕರಗುವಂತ ಕಣ್ಣು ಹನಿಗೂಡುವಂತೆ ಭಾವಪರವಶರಾಗಿ ನೀಗಸರರು ಇಥಿಯೋಪಿಯದ ಗ್ರಾಮಾಂತರಗಳ ಮೇಲೆ ವಿಷವಾಯುವನ್ನು ಒಂಭತ್ತರಿಂದ ೧೮ ರ ವರೆಗೆ ಇಟಲಿ ವಿಮಾನಗಳು ಸೂಸಿದುದಿ ಸಿದ್ದು ಸೈನಿಕರು, ಪ್ರಜೆಗಳು ದನಕರುಗಳು ನಾಶವಾದುದನ್ನು, ಫಲವತ್ತಾದ ಭೂಮಿ ನಷ್ಟವಾದುದನ್ನೂ, ಕುಡಿಯುವ ನೀರು ವಿಷವಾದುದನ್ನೂ ವರ್ಣಿಸಿದರು.

'ಈ ಘೋರವಾದ ಯುದ್ಧ ತಂತ್ರಗಳನ್ನು ಖಂಡಿಸಲು ನನ್ನ ಮತ್ತು ನನ್ನ ಜೊತೆಯಲ್ಲಿ ಕಾದಿದ ವೀರಭಟರ ಹೊರತು ಇನ್ನಾರಿಗೂ ಶಕ್ತಿಯಿಲ್ಲ. ಅದಕ್ಕಾಗಿ ನನ್ನ ಜನರ ಮೇಲೆ ನಡೆದ ಅತ್ಯಾಚಾರದ ಬಗ್ಗೆ ಸಾಕ್ಷ್ಯ ಕೊಡಲು ನಾನೇ ಪ್ರತ್ಯಕ್ಷವಾಗಿ ಬಂದಿದ್ದೇನೆ.

ಶಸ್ತ್ರ ಬಹಿಷ್ಕಾರ

ಆಕ್ಟೋಬರ್ ತಿಂಗಳಲ್ಲಿ ಪ್ರಪಂಚದ ಮಹಾ ಶಕ್ತಿವಂತ ರಾಷ್ಟ್ರಗಳೂ ಸೇರಿ ೫೨ ಸದಸ್ಯ ರಾಷ್ಟ್ರಗಳು ಮುತ್ತಿಗೆಕಾರ ರಾಷ್ಟ್ರವು ಇಲ್ಲವೆಂದು ಘೋಷಿಸಿದಾಗ ಲೀಗ್ ಗೆಲ್ಲುವುದೆಂದು ಭರವಸೆಯಿಂದ ಇದ್ದೆನು.

ಬಹಿಷ್ಕಾರಗಳ ಬಗ್ಗೆ ಹೊಕ್ಕಿನಲ್ಲಿ ನೀಗಸರು ಹೇಳಿದ್ದು ಇಥಿಯೋಪಿಯಕ್ಕೆ ಶಸ್ತ್ರವಿಲ್ಲದಿರುವಾಗ ಇಟಲಿಗೆ ಸಮೃದ್ಧಿಯಾಗಿರುವಾಗ ಲೀಗ್ ಆಫ್ ನೇಷನ್ಸಿನ ಕವೆನಂಟಿನ ರಕ್ಷಣೆಯನ್ನು ೫೨ ರಾಷ್ಟ್ರಗಳು ಇಥಿಯೋಪಿಯಕ್ಕೆ ಕರುಣಿಸಿದುವೆ? ಎಂದು ನೀಗಸರು ಪ್ರಶ್ನೆಯನ್ನು ಹಾಕಿದರು.

ಕವೆನೆಂಟಿನ ೧೬ ನೇ ಸೂತ್ರವೆಲ್ಲಿ ಹೋಯಿತು! ಡ್ಜಿಬೌತಿ, ಅಡಿಸ್ ಅಬಾಬ ರೈಲ್ವೆಯ ಉಪಯೋಗವು ನಮಗೆ ನಿರಾಕರಿಸಲ್ಪಟ್ಟಿತು ಈಗ ಇಟಲಿಯು ತನ್ನ ಸೈನ್ಯವನ್ನು ಸಾಗಿಸುತ್ತಿದೆ. ಇದು ತಟಸ್ಥ ಭಾವದ ನೀತಿಯೇ?

ಗಾಢವಾದ ಮೌನ

"ಸಮುದ್ರವನ್ನು ಈ ರೀತಿ ವಿವೇಚನೆ ಮಾಡಿದರೆ ಆಗದು. ಇಡೀ ಅಂತರರಾಷ್ಟ್ರೀಯ ಶಾಂತಿಗೆ ಗಂಡಾಂತರವೊದಗಿದೆ ನನ್ನ ಮುರಿದುಬಿದ್ದ ಜನರನ್ನು ಹಿಡಿದೆತ್ತಲು ಲೀಗ್ ಏನ್ನ ಒದಬೇಕೆಂದು ಭಿನ್ನವಿಸುವೆನು. ನಿಮ್ಮ ತೀರ್ಮಾನವನ್ನು ದೈವವೂ ಇತಿಹಾಸವೂ ನೆನಪಿನಲ್ಲಿಡುವುವು"

"ನನ್ನ ಜನಕ್ಕೆ ನಿಮ್ಮ ಯಾವ ಉತ್ತರವನ್ನು ಕೊಂಡೊಯ್ಯಲಿ?' ಎಂದು ಕೇಳಿದ ನೀಗಸರು ಭಾಷಣವನ್ನು ಮುಕ್ತಾಯಗೊಳಿಸುವವರೆಗೆ ಲೀಗ್ ಅಸೆಂಬ್ಲಿಯಲ್ಲಿ ಗಾಢಮೌನವು ಆಳುತ್ತಿತ್ತು. ಚಕ್ರವರ್ತಿಗಳು ಸಭೆಯಿಂದ ಹೊರ ಹೊರಟಮೇಲೆ ಕರತಾಡನಗಳು ದಿಗಂತವ್ಯಾಪ್ತವಾದುವು.

ಇಟಲಿ ವೃತ್ತಪತ್ರಿಕಾ ಕರ್ತನೊಬ್ಬನೂ ಇವರ ಮೂವರು ನಾಲ್ವರೂ ನೀಗಸರ ಬಗ್ಗೆ ಅಸಭ್ಯತೆಯಿಂದ ವರ್ತಿಸಿದುದಕ್ಕೆ ಅವರನ್ನು ಅಂತರರಾಷ್ಟ್ರೀಯ ಪೋಲೀಸರು ದಸ್ತಗಿರಿ ಮಾಡಿದರು.

ಜನಾರ್ದನ ಕಛೇರಿ?

(ಕಛೇರಿ ಸದಸ್ಯನಿಂದ)

[ಪ್ರಿಯ ಬಂಧು ಭಗಿನಿಯರೇ? ಇದರಲ್ಲಿ ಬರತಕ್ಕ ಹೆಸರುಗಳು ಯಾವ ವ್ಯಕ್ತಿಗೂ ಯಾವುದೊಂದು ಗೊತ್ತಾದ ಕಾಲದೇಶ ವರ್ತಮಾನಗಳಿಗೂ ಸಂಬಂಧಪಡುವುದಿಲ್ಲವೆಂದೂ, ಇವರಲ್ಲಿ ಉಂಟಾಗತಕ್ಕ ಸಂದರ್ಭಗಳೆಲ್ಲಾ ಬಹುತರವಾಗಿ ಕಾಲ್ಪನಿಕ ಅಲ್ಲವೆ ಗತವೈಭವಕ್ಕೆ ಸಂಬಂಧಪಡುವುದಾದಕಾರಣ ಯಾರೂ ಯಾವ ತರದಲ್ಲೂ ಮನನೋಯಬಾರದಾಗಿ ವಿನಂತಿ]

ತಲೆಗೆ ಮೇಲಿನ ಹೆಸರು ನೋಡಿ ಒಂದೇ ಕ್ಷಣದಲ್ಲಿ ಆಶ್ಚರ್ಯವೂ ದುಃಖವೂ ಉಂಟಾಗಬಹುದು. ಮಾತಿಗೆ ಮೊದಲೇ ಹೇಳೊಲ್ಲವೇ ಜನಸಾಸೇವೆಯೇ ಜನಾರ್ದನನ ಸೇವೆ ಅಂತ? ಅಲ್ಲಿಗೆ ಪ್ರತ್ಯುಪಕಾರ ನಿರೀಕ್ಷೆಯಿಲ್ಲದೆ ನಿಸ್ವಾರ್ಥತೆಯಿಂದ ಕೂಡಿದ ಪರೋಪಕಾರದಲ್ಲಿ ಆ ಜಗಜ್ಜನಕನಾದ ಚಿನ್ಮಯ ಮೂರ್ತಿ ಇದ್ದಾನೆ. ಆ ಮೂರ್ತಿಯ ಆರಾಧನೆಯೇ ಮುಕ್ತಿಗೆ ಪರಮ ಪವಿತ್ರ ಸೋಪಾನ. ಅಂತಹ ಪರಮಪದವನ್ನು ಪಡೆಯುವುದು ತಿರ್ಯಗ್ಜಂತುಗಳಲ್ಲಿ ಅತ್ಯಂತ ಶ್ರೇಷ್ಠತರವಾದ ಮನುಷ್ಯ ಜನ್ಮವನ್ನು ತಾಳಿದ ಪ್ರತಿಯೊಂದು ವ್ಯಕ್ತಿಯ ಮುಖ್ಯ ಕರ್ತವ್ಯ. ಇದು ನಾವು ಬಾಯಿಂದ ಹೇಳುವಷ್ಟು ಅಥವಾ ಕೈಯಿಂದ ನಾಲ್ಕಕ್ಷರ ಬರೆದು ಬಿಡುವಷ್ಟು ಸುಲಭಸಾಧ್ಯವಾದ ಕಾರ್ಯವಲ್ಲ. ಏಕೆಂದರೆ, ಆ ಚಿನ್ಮಯನು ಅಗೋಚರನು, ಅವನಿಗೆ ಇಂಥದೇ ಸ್ಥಳ ನಿಗದಿಯಿಲ್ಲ.

ಜಾಣ್ಮ ವಿಲ್ಲದಂತೆ ದೇಹದಂಡನೆಯಾಗಬೇಕು. ಅರಿಷಡ್ವರ್ಗಗಳು ಜಯಿಸಲ್ಪಡಬೇಕು. ಜಿತೇಂದ್ರಿಯನಾಗಿ ಬಾಹ್ಯ ಪ್ರಪಂಚದಿಂದ ದೂರವಾಗಿ ದಿವ್ಯಜ್ಞಾನದ ಕಡೆಗೆ ಮನವನ್ನೆಳೆಯಬೇಕು. ಆಗಲೀಗ ಚಿದಾನಂದನ ಅಥವಾ ಜನಾರ್ದನನ ಸೇವೆಯೂ ತನ್ಮೂಲಕ ಅಪರಿಮಿತ ಆನಂದ ಸಾಮ್ರಾಜ್ಯವು ಲಭಿಸುವುವು.

ನೀಗಸರ ಭಾಷಣವು ಲೀಗ್‌ನ ಇತಿಹಾಸದಲ್ಲೇ ಅತ್ಯಂತ ಹೃದಯವಿದ್ರಾವಕವಾದುದು.

ಹೀಗಿರುವಲ್ಲಿ ಅಂದರೆ ಜನಾರ್ಧನನನ್ನು ಹೀಗಟ್ಟು ಮುಂಗಟ್ಟಾಗಿ ಹಿಡಿತಂದು ಒಂದು ಆವರಣ ಸಂಸ್ಥೆಯಲ್ಲಿ ಕಟ್ಟಿಹಾಕಿ ನಮ್ಮೆಲ್ಲರಿಗೂ ಆತನ ದರ್ಶನಲಾಭ ಮಾಡಿಸಲಾಗುವುದೇ ಎಂದು ಪ್ರಥಮದಲ್ಲಿ ಭಾಸವಾಗಬಹುದು.

ಲೌಕಿಕ ರೀತಿಯಲ್ಲಿ ನೋಡಿದರೆ — ಒಂದುಹಿಡಿ ಕವಳಹಾಕಲಿಕ್ಕೂ ಕೂಡ ಸಾಧ್ಯವಾಗದ ರೀತಿಯಲ್ಲಿ ಕಾಲ ಸಾಗೋಕಾಗಿದೆ. ಅಂಥದ್ದರಲ್ಲಿ ಇಂತಹ ದೊಡ್ಡ ಕಛೇರಿ ನಡೆಸೋದು ಹ್ಯಾಂಗಪ್ಪ ಅಂತ ಕೇಳಬಹುದು. ಅಲ್ಲದೆ ಒಂದು ಆಫೀಸ್ ಸಿಬ್ಬಂದಿ ಅಂದರೆ ಏನಾಯಿತು? ಅದರ ಟಿ.ಎ. ಏನಾಯಿತು? ಮಾರ್ಜಾಲಮಹಾಶಿಗಳನ್ನೇ ಸಂಟ್ರಿಡ್ಯೂಟಿಗೆ ಹಾಕಿದರೂ ಅಥವಾ ಬಲವಾದ ಎಲೆಕ್ಟ್ರಿಕ್ ಷಾಕಿನ ಹೆದರಿಕೆ ಇಟ್ಟರೂ, ಎಂಥ ಖುಸ್ತುವಾರಿ ಇಟ್ಟರೂ, ಭಾರಿ ಭಾರಿ ಸ್ವಿಚ್ ಆಫ್ (ವಂಗಮಾಯಾ) ಆಗಿಹೋಗುತ್ತಿದೆಯಲ್ಲ. ಅಂದಮೇಲೆ ನಿಜವಾಗಿಯೂ ಆ ನಮ್ಮ ಜಗದೀಶ ಜನಾರ್ದನಪ್ಪನ ಕಚೇರಿ ನಡೇಸೋದು ಸುಲಭಸಾಧ್ಯವೇ? ಎಂದು ಕೇಳುತ್ತಾರೆ.

ಅಂತು ಯಾರು ಏನು ಬೇಕಾದರೂ ಹೇಳಿಕೊಳ್ಳಲಿ ಜನಾರ್ದನನ ಕಚೇರಿಗಳು ಎಲ್ಲಿರುವುವೋ ಅಲ್ಲೆಲ್ಲಾ ಹುಡುಕಿಕೊಂಡು ಅಲ್ಲಿ ನಡೆಯುವ ವಿಚಾರಗಳನ್ನೆಲ್ಲಾ ನಿಮಗೂ ಸ್ವಲ್ಪ ಆಗಾಗ್ಗೆ ತಿಳಿಸುತ್ತಾ ಇರುವೆನು. ಅದರಲ್ಲೂ ಕೂಡ ಮಕ್ಕಳಾಟಿಕೆ ಹೇಗೋ ಹಾಗೆ ನಗು, ಅಳು, ಆಟ, ಊಟ, ಓಟ ಎಲ್ಲಾ ಇರುತ್ತವೆ. ಅದನ್ನೆಲ್ಲಾ ಗಮನಿಸಿಕೊಂಡು ನಿಮ್ಮ ಕೈಲಾದರೆ ನೀವೂ ಅಲ್ಲಿಗೆ ಮೆಂಬರಾಗಿ ಪಾತ್ರವಹಿಸಿ. ನಾನು ಕೇಳೋದೂ ಅಷ್ಟೇ ತಮ್ಮನ್ನು.

ಜನಾರ್ದನನ ಕಟ್ಟೆ

ಈಗಲೋ! ಎಲ್ಲಿ 8-9 ಜನ ಮಾತಿಗೆ ಸೇರಿರಲಿ. ಅವರು ಯಾವುದೊಂದು ಕಾರ್ಯದಲ್ಲಿ ತೊಡಗಿರಲಿ, ಇಲ್ಲವೇ ಏನಾದರೂ ಉಪಾಹಾರ ಮಾಡುತ್ತಿರಲಿ ಹತ್ತನೆ ಮನುಷ್ಯ ಬಂದು "ಏನು ಜನಾರ್ದನನ ಕಟ್ಟೆ ಸೇರಿಬಿಟ್ಟಿದೆ! ಎನ್ನುವುದೂ, ಇನ್ನೇನಾದರೂ ಆ ರೂಲ್ಸು ಹೀಗಾಗಿದೆಯಂತೆ. ಅದು ಹಾಗೆ ಪಾಸಾಯಿತು ಇದೂ ಮೂಲೆಗೆ ಹೋಯಿತಂತೆ ಎಂದು ಪ್ರಸ್ತಾಪಿಸುತ್ತಿದ್ದರೆ ಏನು ಕಛೇರಿ! ಅನ್ನುವುದೂ ಇನ್ನೇನಾದರೂ ವರ್ತಮಾನ ಹಬ್ಬಿದ್ದರೆ ಅದು ಜನಾರ್ದನ ಕಛೇರಿಯು ತಾನೆ ಎಂದ ಉದ್ಘಾಟನೆಮಾಡಿ ಹೋಗುವುದು ಇದೆಲ್ಲಾ ಮಾಮೂಲುತಾನೆ. ನಿಜವಾಗಿಯೂ ನೋಡಿದರೆ ಅಂಥ ಸ್ಥಳಗಳಲ್ಲಿ ನಮ್ಮ ಜನಾಂಗದ ಪರಿಸ್ಥಿತಿ, ನಮ್ಮ ದೇಶದ ಸಂತೃಪ್ತಿ ಅಥವಾ ಕ್ಷೋಭೆ, ಸಮಾಜದ ವೈಪರೀತ್ಯಗಳ ಅಂತರಾಳ, ಜನತೆಯ ಆವಶ್ಯಕತೆ ಏನು, ಜನತೆಯ ಆರ್ತನಾದವನ್ನು ಕೂಗಿ ಜನಾರ್ದನನ ಪರಮಪದವನ್ನು ಹೊಂದುವುದು ಹೇಗೆ ಎಂಬುವೇ ಮೊದಲಾದ ಹಲವು ವಿಷಯಗಳು ತಿಳಿಯಲವಕಾಶವಾಗುವುದು. ಒಟ್ಟಿನಲ್ಲಿ ಜನಾರ್ದನನ ಕಚೇರಿಗಳು ನಿಜವಾಗಿಯೂ ಜನತೆಯ ಸೇವೆಯನ್ನು ಮಾಡಿ ತನ್ಮೂಲಕ ನಾವ ಜನಾರ್ದನನ ಪ್ರೀತ್ಯಾದರಗಳನ್ನು ಗಳಿಸಲಿ.

ಶುಂಠರ ಸಂಘ.

(ಒಂದು ಪ್ರಹಸನ)

(ಮೊದಲನೆ ದೃಶ್ಯ)

[ಮಧ್ಯಾಹ್ನ ಮೂರು ಘಂಟೆ ಇರಬಹುದು. ಒಂದು ಅಗ್ರಹಾರದ ಜಗುಲಿ ದೊಡ್ಡ ದೊಡ್ಡ ಎರಡು ಚಾಪೆಗಳು ಹಾಸಿವೆ. ಚಾಪೆಯೊಂದರಲ್ಲಿ ಒಂದು ವ್ಯಕ್ತಿಯು ಸುಖಭೋಜನಮಾಡಿ ಉರುಳಾಡುತ್ತಿದೆ. ಮಗ್ಗುಲಲ್ಲೇ ಶುಭ್ರವಾದ ದೊಡ್ಡ ತಾಮ್ರದ ಚಂಬಿನ ತುಂಬಾ ಇದ್ದ ಸೀನೀರಿನಲ್ಲಿ ಅರ್ಧ ಖರ್ಚಾಗಿ ಅರ್ಧ ಹಾಗೇ ಇದೆ ಪಕ್ಕದಲ್ಲೇ ಸುಮಾರು ಅಳತೆ ಅರ್ಧ ಸೇರು ಹಿಡಿಯುವಂಥ ಪಂಚಪಾತ್ರೆಯೂ ಇದೆ ತಲೆಯಹತ್ತಿರ ಸುಮಾರು ದಪ್ಪ ನಿಂಬೆಕಾಯಿ ಗಾತ್ರ ಹರಳ ಕಾಯಿಯೂ ರು ಚೌಕಳಿ ಉಂಡೆ ನೆಶ್ಯದ ಪೊಟ್ಟಣ, ಸುಣ್ಣ ಎಲೆ ಇವೂ ಬಿದ್ದಿವೆ.

ಮಾಧವಾಚಾರ್ರು ಒಂದು ಕೈಯಲ್ಲಿ ಒಂದು ಚಾಪೆ, ಮತ್ತೊಂದು ಕೈಯಲ್ಲಿ ಪಂಚಪಾತ್ರೆ ಉದ್ಧರಣೆ ಹಿಡಿದುಕೊಂಡು ಪ್ರವೇಶಿಸಿದರು ಮಲಗಿರುವ ವ್ಯಕ್ತಿಗೆ ಯಾರು ಬಂದರು ಎಂದು ತಿರುಗಿ ನೋಡುವುದಕ್ಕೂ ಪ್ರಯಾಸ, ಅಷ್ಟೊಂದು ಹೊಟ್ಟೆ ಭಾರ]

ಬಾಯಲ್ಲಿ ಅಡಿಕೆಲೆಯನ್ನು ತುಂಬಿಕೊಂಡು, ಏನು! ರಾಮಾಚಾರ್ರೇ! ಅಷ್ಟೊಂದು ಯಾಕರೀ ಊಟ ಮಾಡಿದಿರಿ? ಏಳಿ. ಭಗವದ್ಗೀತೆಯ ಪಾರಾಯಣ ಮಾಡೋಣ ಎಲ್ಲಾ ಸರಿಹೋಗುತ್ತೆ. ವೆಂಕೋಬರಾಯರೂ ಅಪರೂಪವಾಗಿ ಈ ವತ್ತು ಹೊತ್ತಿಗೆ ಮುಂಚೆ ಬಂದಿದ್ದಾರೆ. ಓಹೊ! ಕಿಟ್ಟೂನೂ ಬಂದುಬಿಟ್ಟ. ನಾಲ್ಕು ಜನ ಆಯಿತು ಜಾಕೀ ಆಟ ನಾಲ್ಕು ಜನಕ್ಕೆ ಪ್ರಾರಂಭ ಆಗಲಿ ಆಮೇಲೆ ಜನ ಮಾಮೂಲಿನಂತೆ ಯಾರಾದರೂ ಬಂದೇ ಬರ್ತಾರೆ.

ಎರಡಾಟ ಆಗಿ ಮೂರನೆ ಆಟದ ಹೊತ್ತಿಗೆ ರಂಗದಾಸರೂ, ವೆಂಕಟರಾಯರೂ, ಶಾಮಯ್ಯಂಗಾರ್ರೂ, ಅಕ್ಕಸಾಲೆ ಶಾಮಾಚಾರ್ರೂ, ಸುಂಕದ ಕಟ್ಟೆ ತಮ್ಮಣ್ಣನವರೂ, ಜನನಮರಣದ ಸಬ್‌ರಿಜಿಸ್ಟ್ರಾರ್ ವೇದಾಂತಯ್ಯಂಗಾರ್ರೂ, ಕಂದಾಯದ ಗುಮಾಸ್ತೆ ತಿಂಗ್ರಯ್ಯನವರೂ, ದೇವಸ್ಥಾನದ ಅರ್ಚಕರು ಅಪ್ಪಾವಧಾನಿಗಳೂ, ಹೀಗೇನೆ ಅರಮನೆಯವರು, ಗುರುಮನೆಯವರು, ಕೆಂಡದವರು, ಕಾಣದವರು, ಕೇಳದವರು ಹೀಗೆ ಎಲ್ಲಾ ಒಬ್ಬೊಬ್ಬರಾಗಿ ಬಂದು ಸೇರಿದರು.

ಪ್ರತಿಯೊಬ್ಬರಿಗೂ ಅವರವರ ಕಷ್ಟವೇನು? ಅಂದಿನ ಆನಂದವೆಂತಹುದು ಅನ್ನುವುದು ಅವರವರಿಗೇ ಗೊತ್ತು ಹತ್ತರಕೂಡ ಹನ್ನೊಂದು! ಗುಂಪಿನ ಕೂಡ ಗೋವಿಂದ ಅನ್ನುವುದಿಲ್ಲವೇ? ಹಾಗೆ ಎಲ್ಲರೂ ಈ ಕಚೇರಿಯಲ್ಲಿ ಸ್ವಲ್ಪ ಆನಂದದ ಸೊಬಗನ್ನು ಅನುಭವಿಸಲ್ಕು ಬಂದು ಸೇರುವುದು.

ಈ ಆನಂದ ವೈಭವ ಸಂಸ್ಥೆಗೆ ಸೇರಲು ಪ್ರವೇಶಧನವಿಲ್ಲ. ಶಿಫಾರಸು ಬೇಕಿಲ್ಲ. "ಕಟ್ಟೆ ಬಿಟ್ಟಲ್ಲೇ ಪಟ್ಟಣ" ಎಂಬಂತೆ ಪಾಳುದೇವಸ್ಥಾನಗಳು, ಪಾರ್ಕುಗಳು, ಇಲ್ಲ ಜಗುಲಿಗಳು ಇವೇ ಆಫೀಸು ಬಾಡಿಗೆ ಬಂಕವಿಲ್ಲ. ಮೆಂಬರುಗಳೇ ಜುನಾರ್ದಾರರಾಗುವಾಗ ಜವಾನರಂತೂ ಬೇಕೇ ಇಲ್ಲ ಹೆಚ್ಚೇನು! ಬರುವರು ಬರಬಹುದು ಯಾರನ್ನೂ ಯಾರೂ ಹೇಗೂ ಆಕ್ಷೇಪಿಸುವ ಹಾಗಿಲ್ಲ

ಮೇಲಿನ ಕಛೇರಿಯಲ್ಲಿ ಇಸ್ಪೀಟ್ ಪಾರಾಯಣವಾಗುತ್ತಿದೆ ಏತನ್ಮಧ್ಯೆ ಆಟಗಾರರಲ್ಲಿ ಕೆಲವರು ತಮ್ಮ ಪಾರ್ಟಿಯವರು ಸರಿಯಾಗಿ ಆಟವಾಡಲಿಲ್ಲವೆಂದು ಮೂದಲಿಸುತ್ತಿದ್ದಾರೆ ಮತ್ತೆ ಕೆಲವರು ತಾವು ತಾವು ಆದಿನ ಮಾಡಿಕೊಂಡ ಭಕ್ಷಭೋಜ್ಯಗಳ ವರ್ಣನೆಮಾಡಿಕೊಂಡು ಸಂಪಾದನೆ ಯಾಮದನ್ನು ಹೇಳಿಕೊಳ್ಳುತ್ತಿದ್ದಾರೆ. ಇನ್ನು ಕೆಲವರಿಗೆ ತಮ್ಮತಮ್ಮ ಗೃಹಕೃತ್ಯಗಳ ಯೋಚನೆ. ಇನ್ನೂ ಕೆಲವು ಬಂಗುಲಗಾಮುಗಳಿಲ್ಲದ ಹುಡುಗರಿಗೆ ಕುಚೋದ್ಯ, ಕುಚೇಷ್ಟೆ ಇಂತಹ ಪ್ರಸಂಗವಾಗುತ್ತಿದೆ

ಆ ಪೈಕಿ ಭೀಮರಾಯರು —ಆರೂವರೆ ಘಂಟೆಯಾಯಿತು ಸೊಸೈಟಿಗೆ ಹೋಗಿ ನನ್ನ ಸಾಲದ ಅಪ್ಲಿಕೇಷನ್ ಏನಾಯಿತೋ ನೋಡಬೇಕು, ಎಂದು ಹೊರಟರು.

ಅವರ ಮಿತ್ರರು ಆಟಬಿಟ್ಟು ಹೋಗಬೇಡಿರೆಂದು ತಡೆಯುವರು ಮನೆ ಕಂದಾಯಕ್ಕೆ ನೋಟೀಸು ಬಂದಿದೆ ಈಗೇನು, ಮಾತೆತ್ತಿದರೆ ರೂಲ್ಸು ರೆಗ್ಯುಲೇಷನ್ನು ಅಂತ ಹೇಳಿ ಮನೆ ತಪ್ಪಲೆ ಚಂಬು ಹರಾಜು ಆಗಿಹೋದರೆ ಏನಪ್ಪ ಮಾಡುವುದು? ಎಂದು ಪುನಃ ಹೊರಡಲೆತ್ನಿಸುವರು.

ಆಗ ನಾರಾಯಣರಾಯರು — ನೀವು ಹಿಂದಿನಕಾಲದವರು. ಯಾಕೆ ಹೆದರಕೋತೀರಿ ಸುಮ್ಮನಿರಿ ಮುನಿಸಿಪಲ್ ಕೌನ್ಸಿಲರ್ ಗಳೇನ ಆರ್ಡಿನರಿ ನೋಟೀಸು, ಸ್ಪೆಷಲ್ ನೋಟೀಸುಗಳನ್ನು ಕಾಲುಕೆಳಗೆ ಹಾಕ್ಕೊಂಡು ವರ್ಷಾಂತರಗಟ್ಲೆ ಇರುವಾಗ ಅವರಿಗೆಲ್ಲಾ ಏನಾಯಿತು ಹೇಳಿ. ನಮ್ಮಂಥ ಪಾಪಿ ಪರದೇಶಿಗಳನ್ನು ಗೋಳುಹುಯ್ಯಿಕೊಳ್ಳೋಕೆ ಬರ್ತಾರೆ. ನಾವು ಇನ್ನೇನು ಮಾಡೋದು? ಕಾಸು ಹುಟ್ಟೊಲ್ಲ. ಮಾಡೋದೆಲ್ಲಾ ಮಾಡಲಿ.

ಇನ್ನೇನರಿ ಯೋಚನೆ? ನಿಮ್ಮ ಮೊಹರ್ಕರ್ಾ ಮುತ್ಸದ್ದಿಯವರು ಇಲ್ಲೇ ಬಂದರಲ್ಲಾ, ರಂಗನಾಥನ್‌ರವರ. ಕೇಳಿ, ವಿಷಯ ತಿಳಿದುಕೊಳ್ಳಿ

ಏನುಸ್ವಾಮಿ ಮುತ್ಸದ್ದಿಗಳೇ, ನಮ್ಮ ಭೀಮರಾಯರಮೇಲೇಕೆ ವಕ್ರವಾಗಿದ್ದೀರಿ? ಎಷ್ಟು ಬಾಕಿ ಇವೆ ಅವರದ್ದು?

ಆಗ ಅವರು ತಮ್ಮ ಜೇಬಿನಲ್ಲೇ ಇದ್ದ ಕಡತವನ್ನು ತೆಗೆದು ನಾಲ್ಕುವರ್ಷದ ಬಾಕಿ ಒಟ್ಟು 12–7–6 ಅದರಲ್ಲಿ ಎಂಟೂ ಚಿಲ್ಲರೆ ಬಂದಿದೆ. ನಾಲ್ಕು ರೂ. ಬಾಕಿ ಇದೆ. ನಾನೇನುಮಾಡಲಿ, ಸ್ವಾಮಿ? ದಿನಂಪ್ರತಿ ಬಂದು ತಗೊಂಡುಬಾ. ಜಪ್ತಿಮಾಡಿಸು ಶೀಕದಾರರನ್ನು ಕರಕೊಂಡುಹೋಗು. ಎಂದು ಪತ್ತಾಯಪಡಿಸುತ್ತಾರೆ.

ನಿಮ್ಮ ಕೌನ್ಸಿಲರುಗಳೆಲ್ಲಾ ಕಂದಾಯ ಬೇಬಾಕ್‌ಮಾಡಿದ್ದಾರೆಯೇ? ಸ್ವಾಮಿ!

ದೇವರೂ, ಸುಮ್ಮನೆ ನನ್ನನ್ನು ಯಾಕೆ ಚಂಪಿಸುತ್ತೀರಿ? ಕೌನ್ಸಿಲರುಗಳಮೇಲೆ ನಾವು ರೂಲ್ಸು ರೆಗ್ಯುಲೇಷನ್ ಪ್ರಕಾರ ಹೋಗಲು ಶಕ್ತರೇ? ದೊಡ್ಡಮನುಷ್ಯರ ಬಾಗಿಲಿಗೆ ಹೋದರೆ ಕಾಲಭೈರವರ ಭೇಟಿ ನಿತ್ಯ ಕಲೆಕ್ಷನ್ ಇರಸಾಲ್ ಮಾಡದಿದ್ದರೆ ಜುಲ್ಮಾನೆ ತೆರಬೇಕು. ಅದೂ ಎಷ್ಟು? 4, 5, 8, 10, 20 ಹೀಗೆ ರೂ ಗಳಲ್ಲಿ. ನಮ್ಮ ಮುತ್ಸದ್ದೀರ ಪೈಕಿ ಯಾವನು ಜುಲ್ಮಾನೆಯಿಲ್ಲದೆ ಸಂಬಳ ಕೈಗೆ ಹಾಕ್ಕೊಂಡು ಬರುತ್ತಾನೋ ಅವನೇ ಅವತಾರಪುರುಷ ಮುಖ್ಯ ನಮ್ಮಂತಹವರು ತತ್ರಾಪಿ ಈ ಪಾಪಿ ಮೊಹರ್ರಫ್ಕರ್ಾಕ್ಕೆ ಸೇರಬಾರದು ಸ್ವಾಮಿ! ಹೊರಡಿ ರಾತ್ರಿ 8 ಘಂಟೆಯಾಯಿತು ನಾಳೆ ಬೆಳಗಿನ ಬರಸಾಲಿಗೆ ಯಾರನ್ನಾದರೂ ನೋಡಿಬರುತ್ತೇನೆ. ಅಲ್ಲಿಂದ 10 ಘಂಟೆಗೆ ಮನೆಗೆ ಬಂದು ಬಾಣಂತಿಗೆ ಅನ್ನ ಬೇಯಿಸಿಹಾಕಬೇಕು. ನನ್ನಮೇಲೆ ಕೋಪ ಮಾಡಬೇಡಿ ನಮ್ಮಂತಹ ಬಡಪಾಯಿಗಳಲ್ಲಿ ಒಬ್ಬಾಡಿ ಈ ಪಾಪಿ ಹೊಟ್ಟೆ ಹೊರೆಯಬೇಕು ಇರಲಿ, ಮತ್ತೊಂದು ಸಾರಿ ದರ್ಶನ ತೆಗೆದುಕೊಳ್ಳುತ್ತೇನೆ.

ಹುಣಸೂರು ವರ್ತಮಾನ.

(ನಮ್ಮ ಬಾತ್ಮೀದಾರರಿಂದ)

ತಾ॥ 5–7–36ನೇ ಭಾನುವಾರ ರಾಜಧಾನಿಯಿಂದ ದ್ವಿತೀಯ ಸಚಿವರಾದ ಶ್ರೀಮಾನ್ ಎ. ಮಾಧವರಾವ್ ಬಿ. ಎ. ಬಿ. ಎಲ್‌ರವರು ಹುಣಸೂರಿಗೆ ಚಿತ್ತೈಸಿದ್ದರು ಅಗ್ರಿಕಲ್ಚರಲ್ ಫಾರಂ ಪಕ್ಕದಲ್ಲಿರುವ ಒಂಟೆಪಾಳ್ಯವೆಂಬ ಬೋರೆಯನ್ನು ಸೇರಿಸಿಕೊಂಡು ಸುಮಾರು 45 ಎಕರೆಯಷ್ಟು ಜಮೀನನ್ನು ಹೊಗೆಸೊಪ್ಪನ್ನು ಬೆಳೆಯುವುದಕ್ಕೂ ಅಲ್ಲಿಯೇ ಒಂದು ಹೊಗೇಸೊಪ್ಪಿನ ಕಾರ್ಖಾನೆಯನ್ನು (ಫ್ಯಾಕ್ಟರಿ) ಕಟ್ಟುವುದಕ್ಕೂ ಮೇಲ್ಕಂಡ ಜಮೀನನ್ನು ಸರಕಾರಕ್ಕೆ ಸೇರಿಸಿಕೊಳ್ಳಬೇಕೆಂದು ತಿಳಿಸಿದರು. ಹುಣಸೂರು ಟೌನಿನ ಪೌರಸಭೆಯವರು ಈ ಗ್ರಾಮದ ದನಗಳೆಲ್ಲಾ ಈ ದಿಣ್ಣೆಯಲ್ಲಿ ಬಂದುನಿಂತು ಅನಂತರ ಕಾಡಿಗೆ ಹೋಗುತ್ತವೆ ತಾವು ಈ ಸ್ಥಳವನ್ನೂ ಕೂಡ ಸೇರಿಸಿಕೊಂಡಪಕ್ಷದಲ್ಲಿ ರೈತರ ದನಗಳಿಗೆ ತುಂಬಾ ತೊಂದರೆಯುಂಟಾಗುತ್ತದೆಂದೂ, ಆದಕಾರಣ ಈ ಗೋಮಾಳವನ್ನು ರೈತರ ಸೌಕರ್ಯಕ್ಕಾಗಿ ಬಿಟ್ಟುಕೊಡಬೇಕೆಂದೂ ವಿಜ್ಞಾಪಿಸಿಕೊಳ್ಳಲು, ದನಗಳು ನಿಲ್ಲುವಷ್ಟು ಸ್ಥಳವನ್ನು ಮಾತ್ರ ಬಿಟ್ಟು ಉಳಿದುದನ್ನು ಸೇರಿಸಿಕೊಳ್ಳುವಂತೆ ತೀರ್ಮಾನವಾಯಿತು

ಹುಣಸೂರು ಟೌನಿನಲ್ಲಿ ಪ್ರಕೃತದಲ್ಲಿರುವ ವಾಟರ್ ಟ್ಯಾಂಕಿನಲ್ಲಿ ಶೇಖರಿಸಲ್ಪಡುತ್ತಿರುವ ನೀರು ಟೌನಿನ ಎಲ್ಲಾ ಭಾಗಕ್ಕೂ ಒದಗಿಸಲು ಸಾಕಾಗುವುದಿಲ್ಲವೆಂದು ಮತ್ತು ಕಲ್ಲುಕುಣಿಕೆ ಗ್ರಾಮಕ್ಕೆ ನೀರು ರವೆ ಅಲ್ಲಿನ ಜನರಿಗೆ ನೀರಿನ ಅಭಾವ ಬಹಳವಾಗಿರುತ್ತದೆಂದೂ ಪ್ರಜಾಸೌಕರ್ಯಕ್ಕಾಗಿ ನಮ್ಮ ಪ್ರೆಸಿಡೆಂಟರವರೂ, ವೈ[ಸ್]ಪ್ರೆಸಿಡೆಂಟರವರೂ ಮತ್ತು ಪ್ರಜಾಹಿತೈಷಿಗಳಾದ ನಮ್ಮ ಕೌನ್ಸಿಲರುಗಳು ಮತ್ತೊಂದು ವಾಟರ್ ಟ್ಯಾಂಕನ್ನು ನದಿಯ ಸಮೀಪದಲ್ಲೇ ಕಟ್ಟಿಸಿ ಎಲ್ಲಾ ಭಾಗಕ್ಕೂ ನಿರ[ಂ]ಧಾರಾಳವಾಗಿ ಒದಗಿಸಲ್ಪಡಬೇಕೆಂದು ಮಾಡುತ್ತಿರುವ ಪ್ರಯತ್ನವೂ, ಸರ್ಕಾರದವರಿಂದ ಅಪೇಕ್ಷಿಸಲ್ಪಟ್ಟಿದ್ದ ಧನಸಹಾಯವೂ ನಮ್ಮ ಕೌನ್ಸಿಲರವರ ಒಗ್ಗಟ್ಟಿನಿಂದ ಫಲದಾಯಕವಾಯಿತೆಂದು ಕೇಳಿ ತುಂಬಾ ಸಂತೋಷಪಡುತ್ತೇವೆ ಇಂತಹ ಸಂದರ್ಭಗಳಲ್ಲಿ ಸ್ಥಳೀಯ ಮುಖಂಡರು ದೇಶಭಾಷೆಯಲ್ಲೇ ಭಾಷಣಗಳನ್ನು ಮಾಡಿದರೆ ಜನಸಾಮಾನ್ಯರಿಗೆ ಸಂಪೂರ್ಣ ಪ್ರಯೋಜನವಾಗುವುದು. ಸಾರ್ವಜನಿಕ ಹಿತಕಾರ್ಯಗಳಲ್ಲಿ ನಮ್ಮ ಪೌರಸಭೆಯವರು ಸದಾ ಚಿಂತಿಸಿ ಹೋರಾಡಿ ಅನುಷ್ಠಾನದಲ್ಲಿ ತರುತ್ತಿರುವುದು ತುಂಬಾ ಸ್ತೋತ್ರಾರ್ಹವಾಗಿರುತ್ತೆ.

ಮೋಸದ ಆಪಾದನೆ.

ಹುಣಸೂರು ಟೌನಿನಲ್ಲಿರುವ ನಾರಾಯಣಸ್ವಾಮಿಪಿಳ್ಳೆ ಎಂಬುವರ ಸೈಕಲ್ ಅಂಗಡಿಗೆ ಹೋಗಿ ಮಾಲೀಕರು ಇದ್ದಾಗ ಅಲ್ಲಿದ್ದ ಹುಡುಗನಿಗೆ ತಾವು ಮಾಲೀಕರಿಗೆ ಪರಿಚಿತರೆಂದು ಹೇ[ಳಿ] ವೀರಶೆಟ್ಟಿ ಎಂಬುವರು ಒಂದು ಬೈಸಿಕಲ್ ತೆಗೆದುಕೊಂಡು ಹೋಗಿ ಹಿಂದಕ್ಕೆ ಕೊಡದೆ ಮೋಸಮಾಡಿದರೆಂಬ ಆಪಾದನೆ ಮೇಲೆ ಪೋಲೀಸಿನವರು ಇಲ್ಲಿನ ಸ್ಪೆಷಲ್ ಫಸ್ಟ್‌ಕ್ಲಾಸ್ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಒಂದು ಮೊಕದ್ದಮೆ ಹೂಡಿದ್ದ[ರು] ಅದು ರುಜುವಾತಾದುದರಿಂದ ಮ್ಯಾಜಿಸ್ಟ್ರೇಟರಾದ ಶ್ರೀ. ಕೆ. ಶ್ರೀನಿವಾಸರವರು ಅಪರಾಧಿಗೆ 3 ತಿಂಗಳು ಕಠಿಣ ಸಜಾ [...] ರೂಪಾಯಿ ಜುಲ್ಮಾನೆ ತಪ್ಪಿದರೆ ಮತ್ತೆ [...] ದು ತಿಂಗಳು ಸಜಾ ವಿಧಿಸಿದರು

ಶ್ರೀ ಚಾಮುಂಡೇಶ್ವರಿ ಉತ್ಸವ

ಮೈಸೂರು ನಗರದಲ್ಲಿ ಪ್ರತಿವರ್ಷ ಗ್ರಾಮದೇವತೆಯಾದ ಶ್ರೀ ಚಾಮುಂಡೇಶ್ವರೀ ಅಮ್ಮನವರ ಪೂಜಾ ಮಹೋತ್ಸವವನ್ನು ನಡೆಸಬೇಕೆಂದು ಮೈಸೂರು ನಿವಾಸಿಗಳಿಗೆ ಸಂಕಲ್ಪ ಉಂಟಾಗಿ ಪ್ರತಿವರ್ಷವೂ ನಡೆಸುತ್ತಿರುವುದು ಸರಿಯಷ್ಟೆ. ಅದೇ ರೀತಿಯಾಗಿ ಈ ವರ್ಷವೂ ಶ್ರೀ ಧಾತು ನಾಮಸಂವತ್ಸರದ ಆಷಾಢ ಬಹುಳ [...] (ತಾ॥ 15–7–36) ನೇ ಬುಧವಾರ ಶುಭದಿವಸ ಶಿಲ್ಪಸಿದ್ಧಾಂತಿ ಶ್ರೀಸಿದ್ಧಲಿಂಗಸ್ವಾಮಿಗಳ ಶ್ರೀ ಮಠದಿಂದ ದೇವರ ಬಿಜಯಂಗೈಸಿ ಉತ್ಸವಪೂರ್ವಕ [...] ಮಂಡಿಮೊಹಲ್ಲಾ ರೈಲ್ವೇ ರೋಡಿನಲ್ಲಿ [...] ಪರ್ಣಮಂದಿರದಲ್ಲಿ ಮುಹೂರ್ತಮಾಡಿ ಪೂಜಾರಂಭವನ್ನು ಬೆಳೆಸುವುದಲ್ಲದೆ ಸಾವಿರಾರು ಜನ ಬಡಬಗ್ಗರಿಗೆ ಅನ್ನ[ದಾನ] ಮತ್ತು ಬ್ರಾಹ್ಮಣ ಸಂತರ್ಪಣೆ ನಡೆ[ಸುವ]ವು.

ನಾಲ್ಕು ಬಡ ಮಕ್ಕಳು.

(ಮಕ್ಕಳ ಕಥೆ)

ಬರೆದವರು —"ಮೂರ್ತಿ"

ಒಂದೂರಿನಲ್ಲಿ ಒಬ್ಬ ಬಡವನಿಗೆ ನಾಲ್ಕು ಜನ ಮಕ್ಕಳಿದ್ದರು. ಒಂದು ದಿನ ಅವನು ಮಕ್ಕಳನ್ನು ಕುರಿತು, "ಮಕ್ಕಳೇ ನೀವು ಇಲ್ಲಿಂದ ಹೋಗಿ ಊರೂರು ನಿಮ್ಮ ಸಂಪಾದನೆಯ ಮಾರ್ಗವ ಹುಡುಕಿಕೊಂಡು ಬನ್ನಿ," ಎಂದು ಕಳುಹಿಸಿಕೊಟ್ಟನು. ಅವರು ಪ್ರಯಾಣ ಮಾಡುತ್ತಿರುವಾಗ ಒಂದೆಡೆ ನಾಲ್ಕು ದಾರಿಗಳು ಕವಲೊಡೆದಿದ್ದುದನ್ನು ಕಂಡು ನಾಲ್ವರೂ ತಾವುಗಳು ನಾಲ್ಕು ವರ್ಷದ ನಂತರ ಅಲ್ಲಿಯೇ ಬಂದು ಸೇರಬೇಕೆಂದು ನಿರ್ಬಂಧನೆಯನ್ನು ಮಾಡಿಕೊಂಡು ಒಬ್ಬೊಬ್ಬರು ಒಂದೊಂದು ದಾರಿಯ ಹಿಡಿದು ಹೊರಟರು.

ಮೊದಲನೆಯವನಿಗೆ ಕೊಂಚ ದೂರದಲ್ಲಿ ಒಬ್ಬ ಕಳ್ಳನು ಸಿಕ್ಕಿದನು. ಅವನ ಸ್ನೇಹವನ್ನು ಮಾಡಿ ಅವನಿಂದ ಕಳ್ಳತನವನ್ನು ಚೆನ್ನಾಗಿ ಕಲಿತನು. ಎರಡನೆಯವನಿಗೆ ಒಬ್ಬ ನಕ್ಷತ್ರ ದರ್ಶಕನು ಸಿಕ್ಕಿದನು. ಅವನನ್ನು ಹಿಂಬಾಲಿಸಿ ಹೋದನು. ಆ ಜ್ಯೋತಿಷ್ಯದಲ್ಲಿ ಉತ್ತೀರ್ಣನಾಗಿ ಒಂದು ಒಳ್ಳೆಯ ದೂರ ದರ್ಶನಿಯನ್ನೂ ಪಡೆದನು.

ಮೂರನೆಯವನನ್ನು ಒಬ್ಬ ಬೇಟೆಗಾರನು ಕರೆದುಕೊಂಡು ಹೋಗಿ, ಅವನಿಗೆ ಬಿಲ್ಲುವಿದ್ಯೆಯ ಗುಟ್ಟನ್ನು ಕಲಿಸಿ ಒಂದು ಒಳ್ಳೆಯ ಬಿಲ್ಲನ್ನು ಸನ್ಮಾನಿಸಿದನು. ನಾಲ್ಕನೆಯವನು, ಜೀವನದ ಮಾರ್ಗವನ್ನು ಕಾಣದೆ ಸುತ್ತುತ್ತಿರಲು, ಅದೃಷ್ಟವಶಾತ್ ಒಬ್ಬ ಬಡಗಿಯವನನ್ನು ಕಂಡು, ಅವನ ಸಂಗಡ ಅಭ್ಯಾಸಮಾಡಿ ಆ ಕೆಲಸವನ್ನು ಚೆನ್ನಾಗಿ ಕಲಿತನು.

ಹೀಗೆ ಎಲ್ಲರೂ ಒಂದೊಂದು ವಿದ್ಯೆಯನ್ನು ಚೆನ್ನಾಗಿ ಕಲಿತು, ನಿಬಂಧನೆಯ ಪ್ರಕಾರ ನಾಲ್ಕು ವರ್ಷಗಳನಂತರ ಅದೇ ಜಾಗದಲ್ಲಿ ಸೇರಿ ಮನೆಗೆ ಬಂದರು. ತಂದೆಯ ಸಂತೋಷಕ್ಕೆ ಪಾರವೇ ಇರಲಿಲ್ಲ.

ಅದೇವೇಳೆಗೆ ಆ ರಾಜ್ಯದ ರಾಜನ ಮಗಳನ್ನು ಸಮುದ್ರದಾಚೆಗೆ ಯಾವನೋ ರಾಕ್ಷಸನು ಹಠತ್ತಾಗಿ ಎತ್ತಿಕೊಂಡು ಹೋದನು. ರಾಜನು ದಿಕ್ಕು ತೋಚದೆ ಪ್ರಜೆಗಳನ್ನು ಯಾರು, ಹುಡುಕಿ ತರುವರೋ ಅವರಿಗೆ ಅವಳನ್ನು ಮದುವೆ ಮಾಡಿಕೊಡುವೆನು" ಎಂದು ಊರಲ್ಲೆಲ್ಲಾ ಡಂಗುರ ಹೊಡೆದು ಸಾರಿಸಿದನು.

ನಾಲ್ಕು ಜನ ಸಹೋದರರು ಹುಡುಕಲು ಹೊರಟರು ಎರಡನೆಯವನು ದೂರದರ್ಶಿನಿಯಿಂದ ಆ ರಾಕ್ಷಸನಿದ್ದ ದ್ವೀಪವನ್ನು ಪತ್ತೆ ಹಿಡಿದನು. ಆ ಮೇಲೆ ನಾಲ್ವರೂ ಅಲ್ಲಿಗೆ ಹೋದರು. ತಸ್ಕರ ಶಾಸ್ತ್ರವನ್ನು ಕಲಿತವನು ಉಪಾಯದಿಂದ ಅವಳನ್ನು ಕದ್ದುಕೊಂಡು ಹಡಗಿನಲ್ಲಿ ಕೂರಿಸಿದನು. ಸ್ವಲ್ಪ ಕಾಲಾನಂತರ ಆ ರಾಕ್ಷಸನು ಎದ್ದು ಆಕಾಶ ಮಾರ್ಗದಲ್ಲಿ ಹಾರಿ ಬಂದು ದೋಣಿಯ ಮೇಲೆ ಆರ್ಭಟಿಸಿದನು. ಆಗ ಮೂರನೆಯವನು ಅವನನ್ನು ಒಂದೇ ಬಾಣದಿಂದ ಕೆಳಕ್ಕೆ ಬೀಳಿಸಿದನು.

ಆದರೆ, ಅವನು ಪ್ರಾಣ ಕಳೆದುಕೊಂಡು ಬೀಳುವಾಗ ಅವರ ದೋಣಿಯ ಮೇಲೆಯೇ ಬಿದ್ದನು. ಆದುದರಿಂದ ದೋಣಿಯ ಹಲಗೆಗಳೆಲ್ಲವೂ ಕಳಚಿ ನೀರು ತುಂಬಲು ಪ್ರಾರಂಭವಾಯಿತು. ಆಗ ನಾಲ್ಕನೆಯವನು ಹಲಗೆಗಳನ್ನೆಲ್ಲಾ ಅತಿ ವೇಗದಿಂದ ಸೇರಿಸಿ ಎಲ್ಲರನ್ನೂ ಕಾಪಾಡಿದನು.

ಹೀಗೆ ರಾಜಕುಮಾರಿಯನ್ನು ಸುರಕ್ಷಿತವಾಗಿ ಮತ್ತೆ ಅರಮನೆಗೆ ತಂದು ಅವಳ ತಂದೆಗೆ ಒಪ್ಪಿಸಿದರು.

ಯಾರಿಗೆ ಅವಳನ್ನು ಮದುವೆಮಾಡಿಕೊಡಬೇಕೆಂಬ ಪ್ರಶ್ನೆಯು ರಾಜನನ್ನು ಪೀಡಿಸಿತು ಎಲ್ಲರೂ ಸಮವಾಗಿ ಕಷ್ಟಪಟ್ಟಿದ್ದರು. ಒಬ್ಬರನ್ನೊಬ್ಬರು ಅಗಲಿದ್ದರೆ ಅವಳನ್ನು ರಾಕ್ಷಸನ ಸೆರೆಯಿಂದ ತಪ್ಪಿಸಲು ಸಾಧ್ಯವಾಗುತ್ತಿರಲಿಲ್ಲ. ಕೊನೆಗೆ ರಾಜನು ತನ್ನ ರಾಜ್ಯವನ್ನೇ ನಾಲ್ಕು ಭಾಗಮಾಡಿ ಸಹೋದರರಿಗೆ ಹಂಚಿದನು. ಅಂದಿನಿಂದ ಅವರು ಬಹಳ ಸುಖವಾಗಿ ಇದ್ದರು. ಅವರ ತಂದೆಯು ಕೂಡ ಮಕ್ಕಳ ಶ್ರೀಯನ್ನಿನಲ್ಲಿ ಭಾಗಿಯಾಗಿ ಬಹಳಕಾಲ ಬದುಕಿದ್ದನು.

ಪಕ್ಷಪಾತ.

(ಏಕಾಂಕ ನಾಟಕ)

(ಮುಕ್ತಾಯಭಾಗವು)

ಲೇಖಕರು —ಮ॥ ಎಸ್. ಗೋಪಾಲ ಶಾಸ್ತ್ರಿಗಳು, ಮೈಸೂರು.

ಸುಧಾಮ —ಕೃಷ್ಣ! ನನಗೆ ಕಟ್ಟಿದ್ದ ಕಟ್ಟೆಯನ್ನು ಒಡೆದು ರಭಸದಿಂದ ನೀರು ನುಗ್ಗುವಂತೆ—ಹೃದಯದ ಕಟ್ಟೆಯನ್ನು ಕಿತ್ತು ಕಣ್ಣಿನಲ್ಲಿ ನೀರು ಧಾರಾಕಾರವಾಗಿ ಸುರಿಯುತ್ತದೆ. ನಾನು ಬ್ರಾಹ್ಮಣ, ದಿಕ್ಕಿಲ್ಲದವನಾಗಿರುವೆನು ನೀನು ರಾಜ್ಯಗಳನ್ನಾಳುವವನು. ಆ ಸಂತೋಷದಲ್ಲಿ ಮರೆತರೆ ನೀನು ನನ್ನನ್ನು ಮರೆಯಬೇಕು ಸಹಾಯವನ್ನು ಯಾವ ದಿವಸದಲ್ಲಿ ಕೋರಬೇಕಾಗುವುದೋ ಎಂದು ಪರಿತಪಿಸುತ್ತಲಿರುವ ನಾನು ನಿನ್ನನ್ನು ಮರೆಯುವುದೆಂತು? ಇನ್ನು ನಾನು ಅಗುಲುವೆನು ಸ್ನೇಹದ ಅಂತರ್ಯವನ್ನು ಕಂಡವರು ಯಾರು ಕೃಷ್ಣ! ಇದೋ ನನ್ನ ಕಡೆಯ ನಮಸ್ಕಾರವು (ಒಬ್ಬರನ್ನೊಬ್ಬರು ಬಹು ದುಃಖದಿಂದ ಅಗುಲುವರು)

ದೃಶ್ಯ 1

(ಕೃಷ್ಣನ ಅಂತಃಪುರ. ಕೃಷ್ಣನು ಆಸನದಲ್ಲಿ ಮಂಡಿಸಿರುವನು ಸತ್ಯಭಾಮೆ—ರುಕ್ಮಿಣಿಯರು ಪತ್ರಿಕ(?)ವಿರುವರು ಸುಧಾಮನು ಆಸನದ ಬಳಿ ಮತ್ತೊಂದರ ಮೇಲೆ ಕುಳಿತಿರುವನು ಕೈಯ್ಯಲ್ಲಿ ಅವಲಕ್ಕಿಯ ಗಂಟೊಂದು ಇರುವುದು)

ಕೃಷ್ಣ —ಸುಧಾಮ! ಬಹಳ ದಿವಸಗಳಿಗೆ ನಿನ್ನ ದರ್ಶನವಾಯಿತು. ಈ ಸಮಯದಲ್ಲಿ ನೀನು ನನ್ನನ್ನು ಸ್ಮರಿಸಿಕೊಂಡಿದುದಾದರೂ ಏಕೆ? ದೇಶದಲ್ಲಿ ಸುಭಿಕ್ಷ ಉಂಟಷ್ಟೆ. ಮನೆಯಲ್ಲಿ ಎಲ್ಲರೂ ಸೌಖ್ಯದಿಂದ ಇರುವರೇ? (ರುಕ್ಮಿಣಿ ಸತ್ಯಭಾಮೆಯರು ಸುಧಾಮನನ್ನು ಉಪಚರಿಸತೊಡಗುವರು)

ಸುಧಾಮ —ಹೇ! ಕೃಷ್ಣ! ಏನೆಂದು ನಿನ್ನಲ್ಲಿ ಬಿನ್ನವಿಸಲಿ? ಬಡತನವು ಪ್ರಬಲವಾಗಿ ಕಾಲಿಕ್ಕಿತು ಅದರಲ್ಲೂ ದುಃಖದಿಂದ ಕೂಡಿದ ಬಡತನವಾಗಿದೆ ಬಾಲ್ಯಸ್ನೇಹಿತನಾದ ನಿನ್ನನ್ನು ಬಹು ದಿವಸಗಳಾದಮೇಲೆ ನೋಡುವಾಗ—ಏನಾದರೂ ಕೊಡಲು ನನ್ನಲ್ಲಿ ಇಲ್ಲವಾಯಿತು—ಇದೋ ನನ್ನ ಪತ್ನಿಯು ಇದನ್ನು ಕೊಟ್ಟು ಕಳುಹಿಸಿರುವಳು—ಕೃಷ್ಣ! ಬಹು ಸಂಕೋಚದಿಂದ ಇದನ್ನು ನಿನಗೆ ನಾನು ಕೊಡುವೆನು ಅವಲಕ್ಕಿಯನ್ನು ಕೊಡುವನು ಕೃಷ್ಣನು ಸಂತೋಷದಿಂದ ಪರಿಗ್ರಹಿಸಿ—ಎಲ್ಲರೂ ಆದರದಿಂದ ತಿನ್ನುವರು

ಕೃಷ್ಣ —(ತಿನ್ನುತ್ತ ತಿನ್ನುತ್ತಲೇ) ಸುಧಾಮ! ಜ್ಞಾಪಕವಿದೆಯಷ್ಟೆ

ಸುಧಾಮ —(ಸ್ವಲ್ಪ ಆಲೋಚಿಸಿ) ಏನು ಕೃಷ್ಣ! ನನಗೇನೂ ತೋರಲಿಲ್ಲ ಬಡತನದ ದೆಸೆಯಿಂದಲೂ—ದುಃಖದ ದೆಸೆಯಿಂದಲೂ ನನಗೆ ಮರವೂ ಸಹ ಕಾಲಿಕ್ಕಿರುವುದು

ಕೃಷ್ಣ —ಇನ್ನು ನನ್ನ ಪಾಲವು ತೀರಿತು ಪಕ್ಷಪಾತವು ಕೊನೆಮುಟ್ಟಿತು

ಸುಧಾಮ —(ಮನಸ್ಸೊಂದು ಏನೂ ತಿಳಿಯದಂತಾಗುವನು) ಕೃಷ್ಣ! ನನಗೆ ಏನೂ ತಿಳಿಯುವುದಿಲ್ಲ ಯಾವ ಋಣ—ಯಾವ ಪಕ್ಷಪಾತ? ನಾನು ನಿನ್ನನ್ನು ಬೇಡಲು ಬಂದೆನಷ್ಟೆ

ಕೃಷ್ಣ (ನಕ್ಕು) ಸುಧಾಮ! ಸ್ನೇಹದ ಗಣಿ—ಅಂತರ್ಯ ಹೃದಯರತ್ನ, ನೀನು ನನ್ನನ್ನು ಬೇಡುವುದು ಎಂದರೇನು? ಸರ್ವಸ್ವವೂ ನಿನ್ನದೇ ಆಗಿರುವುದು. ಹೃದಯ ಒಂದಕ್ಕೆ ಬೇಡಿಕೆ ಎಲ್ಲಿಂದ ಬಂತು?

ಸುಧಾಮ —ಕೃಷ್ಣ! ಬಡತನದಿಂದ ಕಂಗೆಟ್ಟಿರುವೆನು ಏನಾದರೂ ದಯಪಾಲಿಸು

ಕೃಷ್ಣ —ಈಗ ನೀನು ನನಗೆ ದಯಪಾಲಿಸಿದ ಅವಲಕ್ಕಿಯಲ್ಲಿ ಏನಿತ್ತು ಬಲ್ಲೆಯಾ! ಸುಧಾಮ!

ಸುಧಾಮ —(ಏನೂ ತಿಳಿಯದಂತೆ ಅಭಿನಯಿಸುವನು)

ಕೃಷ್ಣ —ಮೊದಲು ಪಕ್ಷಪಾತ ಈಗ ಸ್ನೇಹದ ರುಚಿ

ಸುಧಾಮ —ಕೃಷ್ಣ! ನಿನ್ನ ಮಾತುಗಳು ನನ್ನನ್ನು ಹುಚ್ಚು ಹಿಡಿಸಿದವು

ಕೃಷ್ಣ —ಹಾಗಲ್ಲ ಸುಧಾಮ! ಹುಚ್ಚು ಹಿಡಿಯುವ ಸಂದರ್ಭವೇ ಇಲ್ಲ. ಇನ್ನು ನಿಶ್ಚಿಂತನಾಗಿರು ನೀನು ನನ್ನ ಪರಮ ಭಕ್ತ ಸ್ನೇಹದ ಗೂಡು—ಹೃದಯ ಅಂತರ್ಯ ರತ್ನ ಮೊದಲು ಗುರುವಿನ ಬಳಿ ನಾವು ವ್ಯಾಸಂಗ ಮಾಡುತ್ತಿರುವಾಗ ನನಗೆ ಅವಲಕ್ಕಿಯನ್ನು ಕೊಡದೆ ನೀನೊಬ್ಬನೇ ಅದನ್ನು ತಿಂದು ಉನ್ನತವನ್ನಾಡಿದೆಯಲ್ಲವೇ? ಆ ನನ್ನ ಪಾಲಿನದನ್ನೇ ಈಗ ನೀನು ನನಗೆ ಒಪ್ಪಿಸಿದ್ದು. ಗುರುಪತ್ನಿಯು ಇಬ್ಬರಿಗೆಂದು ಕೊಟ್ಟ ವಸ್ತುವನ್ನು ನೀನೊಬ್ಬನೇ ಅನುಭವಿಸಿದುದೆಂತು ಸುಧಾಮ?

ಸುಧಾಮ —(ಜ್ಞಾಪಿಸಿಕೊಂಡು ದುಃಖಿಸುವನು) ಕೃಷ್ಣ! ನನ್ನದು ಮಹಾಪರಾಧವಾಯಿತು ಕ್ಷಮಿಸು ಇನ್ನು ನಾನು ಹೋಗಿಬರುವೆನು—ನಿನ್ನ ಬಳಿ ಕುಳಿತುಕೊಳ್ಳುವ ಯೋಗ್ಯತೆಯೂ ನನಗೆ ಇಲ್ಲವಾಯಿತು

(ಕೃಷ್ಣನು ಸಮಾಧಾನಿಸುವನು)

ಕೃಷ್ಣ —ಇಷ್ಟಕ್ಕೆಲ್ಲಾ ದುಃಖವೇ ಸುಧಾಮ! ನಿನ್ನವನಲ್ಲವೇ ನಾನು—ನಾನು ಮಾತನಾಡಲೂ ಬಾರದೆ—ಹಿಂದಿನ ದೃಶ್ಯವೊಂದನ್ನು ನಿನ್ನ ಮುಂದಿಟ್ಟೆ—ಇನ್ನು ನೀನು ಬಡತನದಿಂದ ಪಾರಾದೆ. ನೀನು ನನಗಿಂತಲೂ ಹಿರಿಯವನು ನನ್ನ ಅಪರಾಧಗಳನ್ನು ಕ್ಷಮಿಸು (ಎಂದು ನಮಸ್ಕರಿಸುವನು) ವಿಳಂಬ ಬೇಡ ಒಳಗೆ ದಯಮಾಡು ಸುಧಾಮ! ನಿನ್ನ ಸೇವೆಯು ನನಗೆ ದೊರಕುವುದು ಬಹು ದುರ್ಲಭ.

ಸುಧಾಮ —ಇದೇನೀ ಉಪಚಾರಗಳು ಕೃಷ್ಣ! ಪಕ್ಷಪಾತ ತೋರಿದ ನನ್ನಲ್ಲಿ ನೀನು ಹೀಗೆ ವರ್ತಿಸಬಾರದು ನಾನು ಇವೊಂದಕ್ಕೂ ಅರ್ಹನಲ್ಲ ನನ್ನ ಹೃದಯವು ಘಾಯವನ್ನು ಹೊಂದಿತು ನಾಚಿಕೆಯು ದೇಹವನ್ನೇ ವ್ಯಾಪಿಸಿತು. ಇನ್ನು ನಿನಗೆ ನಾನು ಮುಖವನ್ನು ತೋರಿಸಬಾರದು

ಕೃಷ್ಣ —(ನಗುತ್ತ) ಭ್ರಾಂತು ಭ್ರಾಂತು. ಇದೇನಿದು ಸುಧಾಮ? ಕೇವಲ ಅಜ್ಞಾನಿಗಳಂತೆ ಅಭಿನಯಿಸುವೆಯಲ್ಲ—ಸ್ನೇಹಮಾತ್ರಕ್ಕೆ ಇಷ್ಟು ಅಧಿಕಾರವಿಲ್ಲವೇ—ದಯಮಾಡು ಸುಧಾಮ. ಒಳಗೆ ದಯಮಾಡು ಉಪಚರಿಸಿಕೊಳ್ಳುವೆಯಂತೆ.

(ಎಲ್ಲರೂ ಹೊರಡುವರು)

—ಸಂಪೂರ್ಣಂ—

ಗಿರಿಜಾ ಕಲ್ಯಾಣ.

ಮೈಸೂರು ದೊಡ್ಡಪೇಟೆ ಶ್ರೀಮತ್ಕನ್ಯಕಾಪರಮೇಶ್ವರಿ ಅಮ್ಮನವರ ದೇವಸ್ಥಾನದಲ್ಲಿರುವ ಶ್ರೀ ಚಂದ್ರಶೇಖರ ಸ್ವಾಮಿಯವರಿಗೆ ಗಿರಿಜಾ ಕಲ್ಯಾಣ ಮಹೋತ್ಸವದ ಉತ್ಸವಗಳು ಕ್ರಮವಾಗಿ ತಾ॥ 9-7-36 ರಿಂದ 13-7-36 ರ ವರೆವಿಗೆ ನಡೆಯುತ್ತಿದೆ

ಶಾಸನ ಸಭಾ ಕಾನೂನಿನ ಬದಲಾವಣೆ.

ಶ್ರೀ|| ಡಿ. ವಿ. ಗುಂಡಪ್ಪನವರ ಸೂಚನೆ

ನಮ್ಮ ಸಂಸ್ಥಾನದ ಲೆಜಿಸ್ಲೆಟಿವ್ ಕೌನ್ಸಿಲ್‌ನ ಕಾರ್ಯಕ್ರಮದ ಶಾಸನಗಳಲ್ಲಿ ಕೆಲವು ಮಾರ್ಪಾಡುಗಳನ್ನು ಮಾಡುವ ಉದ್ದಿಶ್ಯವಾಗಿ ಒಂದು ಸಲಹಾ ಸಮಿತಿಯು ನಿಯಮಿತವಾಗಿತ್ತು. ಆ ಸಮಿತಿಯ ರಿಪೋರ್ಟಿನಮೇಲೆ ಶ್ರೀ|| ಡಿ. ವಿ ಗುಂಡಪ್ಪನವರು ತಮ್ಮ ಅಭಿಪ್ರಾಯವನ್ನು ಸೂಚಿಸಿ ಒಂದು ಪತ್ರ ಬರೆದಿರುತ್ತಾರೆ. ಅದರ ಸಾರಾಂಶವು ಈ ಕೆಳಗೆ ಕಂಡಂತೆ ಇದೆ:— ಪ್ರತಿನಿಧಿ ಸಭೆಯಿಂದ ಎಂಟುಜನ ಸದಸ್ಯರನ್ನು ಕೌನ್ಸಿಲ್ಲಿಗೆ ಚುನಾಯಿಸುತ್ತಿದ್ದ ಪದ್ಧತಿಯನ್ನು ನಿಲ್ಲಿಸಬೇಕೆಂದು ಕಮಿಟಿಯು ತಿಳಿಸುತ್ತದೆ. ಇದಕ್ಕೆ ಹಲವು ಕಾರಣಗಳನ್ನು ಕೊಟ್ಟಿದೆ. ಈ ಕಾರಣಗಳೆಲ್ಲವೂ ತಮಗೆ ಒಪ್ಪಿಗೆ ಇಲ್ಲವಾದರೂ ಶ್ರೀ|| ಗುಂಡಪ್ಪನವರು ಕಮಿಟಿಯ ತೀರ್ಮಾನಕ್ಕೆ ಮಾತ್ರ ತಮ್ಮ ಅಭಿಮತವನ್ನು ವ್ಯಕ್ತಪಡಿಸಿದ್ದಾರೆ.

ಪ್ರತಿನಿಧಿ ಸಭೆಯು ಸಂಸ್ಥಾನದ ಶಾಸನ ಸಭೆಗಳಲ್ಲಿ ಒಂದು ಮುಖ್ಯ ಭಾಗವಾಗಿರಬೇಕು. ನ್ಯಾಯವಿಧಾಯಕ ಸಭೆಗೂ ಪ್ರತಿನಿಧಿಸಭೆಗೂ ಸಂಬಂಧವಿಲ್ಲವೆಂಬ ಮನೋಭಾವ ಬರಕೂಡದು. ಈ ಎರಡು ಸಭೆಗಳಿಗೂ ಪರಸ್ಪರ ಸಂಬಂಧವನ್ನೇರ್ಪಡಿಸಲು ಪ್ರಯತ್ನಿಸಬೇಕು.

ಪ್ರತಿನಿಧಿ ಸಭೆಯಿಂದ ಚುನಾವಣೆಯಾದ ಸದಸ್ಯರು ನ್ಯಾಯವಿಧಾಯಕ ಸಭೆಗೆ ಹೋಗುವುದರಿಂದ ಕೌನ್ಸಿಲಿನ ಗೌರವವು ಕಡಿಮೆಯಾಯಿತೆಂದು ಹೇಳಬಾರದು.

ಆದರೂ ಈ ತೀರ್ಮಾನಕ್ಕೆ ಒಪ್ಪಲು ನಾನು ಕೊಡುವ ಮೂರು ಕಾರಣಗಳವು

1. ಶಾಸನಸಭೆಯು ಪ್ರತಿನಿಧಿಸಭೆಯ ನಕಲುಮಾತ್ರವಾಗಕೂಡದು.

2 ನೇರವಾಗಿ ಚುನಾವಣೆ ನಡೆಯುವುದರಿಂದ ಸಾರ್ವಜನಿಕ ಅಭಿಪ್ರಾಯವು ಇನ್ನೂ ಚೆನ್ನಾಗಿ ಸ್ಪಷ್ಟವಾಗುವುದು.

3. ನ್ಯಾಯವಿಧಾಯಕಸಭೆಗೂ ಕೂಡ ಸಂಪೂರ್ಣವಾಗಿ ನೇರವಾದ ಚುನಾವಣೆ ನಡೆಯುವುದರಿಂದ ಖಾಸಗೀ ಸದಸ್ಯರು ಅದಷ್ಟು ಜಾಸ್ತಿಯಾಗಿ ಶಾಸನ ಸಭೆಗಳಿಗೆ ಬರಲು ಸಾಧ್ಯವಾಗುವುದು

ಪ್ರತಿನಿಧಿಸಭೆಗೂ ನ್ಯಾಯವಿಧಾಯಕ ಸಭೆಗೂ ಭಾಷಣ ಸ್ವಾತಂತ್ರ್ಯವು ಸರಿಸಮಾನವಾಗಿರಬೇಕು. ಅದರ ಜೊತೆಗೆ ಎರಡು ಸಭೆಗಳೂ ಒಟ್ಟಿಗೆ ಒಬ್ಬ ಅಧ್ಯಕ್ಷರನ್ನು ಚುನಾಯಿಸುವ ಅವಕಾಶಬೇಕು ವಾಕ್‌ಸ್ವಾತಂತ್ರ್ಯವಿಲ್ಲದೆ, ಎಲ್ಲ ಸದಸ್ಯರೂ ಪರಸ್ಪರ ಸಮಾಲೋಚನೆ ಹೊಂದದಿದ್ದಲ್ಲಿ ಪಾರ್ಲಿಮೆಂಟರಿ ಸಭೆಗಳಲ್ಲಿ ಸರಿಯಾದ ತೀರ್ಪಿಗೆ ಬರುವುದು ಕಷ್ಟ. ಆದ್ದರಿಂದ ಭಾಷಣ ಸ್ವಾತಂತ್ರ್ಯವು ಅವಶ್ಯಕ.

ಆದರೆ ಆ ಭಾಷಣ ಸ್ವಾತಂತ್ರ್ಯವನ್ನು ಸದಸ್ಯರುಗಳು ದುರುಪಯೋಗಪಡಿಸಿಕೊಳ್ಳದಂತೆ ಪ್ರತಿಬಂಧಕವನ್ನಿಡಬೇಕು. ಈ ಅಧಿಕಾರವು ಅಧ್ಯಕ್ಷರಿಗಿರಬೇಕು. ಅಧ್ಯಕ್ಷರೂ ಕೂಡ ನಿಷ್ಪಕ್ಷಪಾತತೆಯಿಂದಲೂ ಜಾಗರೂಕತೆಯಿಂದಲೂ ಕೆಲವು ಶಾಸನಗಳ ನಿಬಂಧನೆಯ ಪ್ರಕಾರ ನಡೆಯಬೇಕು.

ಸದಸ್ಯರುಗಳು ಹೇಗೆ ಅಧ್ಯಕ್ಷರ ಅಧಿಕಾರಕ್ಕೆ ಒಂದು ರೀತಿಯಲ್ಲಿ ಒಳಪಟ್ಟಿರುವರೋ ಹಾಗೆಯೇ ಅಧ್ಯಕ್ಷರೂಸಹ ಸದಸ್ಯರುಗಳ ಅಧಿಕಾರಕ್ಕೊಳಪಟ್ಟಿರಬೇಕು ಭಾಷಣ ಸ್ವಾತಂತ್ರ್ಯಕ್ಕೆ ಒಂದು ರೀತಿಯ ಕಾನೂನಿರಬೇಕು.

ನಾವು ಒಂದು ವ್ಯವಸ್ಥೆಯನ್ನು ಏರ್ಪಡಿಸುತ್ತಿರುವಾಗ ಅದನ್ನು ಆದಷ್ಟುಮಟ್ಟಿಗೆ ಶ್ರೇಷ್ಠವಾದುದನ್ನಾಗಿ ಮಾಡಬೇಕು

ನ್ಯಾಯವಿಧಾಯಕ ಸಭೆಯಲ್ಲಿ ಒಬ್ಬ ಸದಸ್ಯರು ಹುಚ್ಚಾಪಟ್ಟೆ ವರ್ತಿಸಿದ್ದೇ ಆದರೆ ಅವರನ್ನು ಹೊರಕ್ಕೆ ಕಳುಹಿಸಲು ಒಂದು ಕಾನೂನಾಗಬೇಕಾದುದು ಅವಶ್ಯಕ. ಇದರ ಜೊತೆಗೆ ಅಧ್ಯಕ್ಷರೂ ಕೂಡ ಸರಿಯಾಗಿ ವರ್ತಿಸದಿದ್ದಲ್ಲಿ ಅವರನ್ನೂ ಸಹ ಆಕ್ಷೇಪಿಸಲು ಸಭೆಗೆ ಅಧಿಕಾರವಿರಬೇಕೆಂದು ನಾನು ಕೇಳುತ್ತೇನೆ.

ಮಂಡ್ಯದ ವರ್ತಮಾನ.

(ಒಬ್ಬ ಏಜೆಂಟರಿಂದ)

ನಾಟಕಸಭೆಯವರಿಗೆ ಬಹುಮಾನಗಳು.—

ಮೈಸೂರು ಶ್ರೀಮನ್ಮಹಾರಾಜರವರಿಂದ ಅಭಿನವಭಕ್ತಶಿರೋಮಣಿಯೆಂದು ಬಿರುದಾಂಕಿತವನ್ನು ಪಡೆದು ಕೊಂಡಿರುವ ಚಿಕ್ಕನಾಯಕನಹಳ್ಳಿ ಸಿ. ಬಿ. ಮಲ್ಲಪ್ಪನವರ ನಾಟಕದವರು ಮಂಡ್ಯಕ್ಕೆ ಬಂದು ಸುಮಾರು 2½ ತಿಂಗಳಾದರೂ ಇಲ್ಲಿಯ ಜನರು ಪ್ರೇಮದಿಂದ ಬಂದು ಈ ಕಂಪೆನಿಯವರನ್ನು ಪ್ರೋತ್ಸಾಹಿಸುತ್ತಿರುವರು. ಮ|| ರಾ|| ಸಿ. ಬಿ. ಮಲ್ಲಪ್ಪನವರು ಕರ್ಣಾಟಕ ಸಂಘಕ್ಕೂ, ಒಕ್ಕಲಿಗರ ಹಾಸ್ಟಲಿಗೂ, ಯುವಕ ಕ್ಲಬ್ಬಿನವರಿಗೂ ಬೆನಿಫಿಟ್ ಡ್ರಾಮಗಳಿಂದ ಉದಾರವಾಗಿ ಸಹಾಯಮಾಡಿರುವರು. ಕೆಲವರು ಇವರ ನಾಟಕಕ್ಕೆ ತುಂಬಾ ಮುತುವರ್ಜಿಯಿಂದ ಸಹಾಯಕರಾಗಿದ್ದರು. ಮೇಲ್ಕಂಡ ಮೂರು ಸಂಘದವರೂ ತಾ|| 6 ರ ರಾತ್ರಿ ಮ|| ರಾ|| ಸಿ. ಬಿ. ಮಲ್ಲಪ್ಪ ಮತ್ತು ಮ|| ರಾ|| ರಂಗಪ್ಪನವರಿಗೆ ಮೆಡಲುಗಳನ್ನು ಮಂಡ್ಯದ ಸಬ್‌ಡಿವಿಜನ್ ಸಾಹೇಬರ ಮೂಲಕ ಕೊಡಿಸಿದರು. ಒಕ್ಕಲಿಗರ ಸಂಘದವರು ಕೊಟ್ಟ ಮೆಡಲು ಬಹು ಸೊಗಸಾಗಿದೆ ಮಂಡ್ಯದ ವೈಸ್‌ಪ್ರೆಸಿಡೆಂಟ್ ಮ|| ರಾ|| ದೊಡ್ಡಗೌಡರೂ, ಮ|| ರಾ|| ಲಿಂಗೇಗೌಡರೂ ಮ|| ರಾ|| ಉಪದೇಶಿಗಳಾದ ಸಾಧುರಾಮ ವೇಲ್‌ರವರೂ ಅನೇಕವೇಳೆ ತುಂಬಾ ಮುತುವರ್ಜಿಯಿಂದ ಕೆಲಸಮಾಡಿದ್ದು ಸ್ತೋತ್ರಾರ್ಹವಾಗಿದೆ

ದೇಶೋನ್ನತಿ.

ಭಾಮಿನಿ ಷಟ್ಪದಿ.

(ಮ|| ಎ ನಾರಾಯಣಶಾಸ್ತ್ರಿಗಳಿಂದ.)

ಜಾತಿಯನು ಬೇರಿಟ್ಟು ಲೋಕದ|
ನೀತಿ ಸಮವೆಂದೆನುತ ಮಾಸ್ಟರ|
ಮಾತಕೇಳುತೆ ಸತ್ಯ ಶಾಂತಿ ದಯಾದಿ
ಗುಣದಿಂದಂ|
ಉತ್ತಮರು ನೀವಾಗಿ ದೇವರ|
ಭೃತ್ಯರೆನ್ನುತ ತಿಳಿದುನಿಮ್ಮನು|
ಸತ್ಯದಿಂದಿರೆ ದೇವರದು ಸೊಗದಿಂದೆ
ಕಾಯ್ವುದು || ೧ ||

ಯಲ್ಲರುತಮೊಳು ಸಾಮ್ಯವಾಗಿಹ|
ಸೊಲ್ಲ ನೀನರಿತಾರ್ಯ ಧರ್ಮದ|
ಸುಲ್ಲಸದಿ ಚರಿಸಲ್ಕೆ ದೇಶೋನ್ನತಿಯು
ಮುಂದಿಹುದು |
ಬಲ್ಲಿದನು ಬಡವಾಯಿ ಸಮವೆಂ|
ದಲ್ಲಿಗಲಿಯದೆ ಇರಲು ತಿಳಿದರ|
ಪಲ್ಲವಿತಲತೆಯಂತೆ ವರ್ಧಿಪುದಯ್ಯ ಸಿರಿ
ನಿಮಗಂ || ೨ ||

ಬುದ್ಧಿಬಲದಿಂ ಬಹುಕಲಪ್ಪುದು|
ಹೃದ್ಯವಿದ್ಯೆಯನೋದಲಪ್ಪುದು|
ಪದ್ಯಗದ್ಯದ ಸೊಬಗ ಜನರಿಗೆ ಪೇಳಲ
ಪ್ಪುದು ನೀಂ
ನಿಷ್ಠೆಯನು ದೂಡುತ್ತೆ ಕೆಲಸದ|
ಸೊಷ್ಠತೆಯ ಬಲದಿಂದೆ ನ್ಯಾಯಲು|
ಸಷ್ಟದಲಿ ದೇಶಕ್ಕೆ ಬರ್ಪುದು ಸರ್ವಸಂ
ಪದವು || ೩ ||

ಮಡಿಯಲಾರದ ಮನುಜಗೇತಕೆ|
ನಿಡುಸೊಬಗಿನಂಗನೆಯು, ಹೇಡಿಗೆ|
ಬಿಡುಕವೇತಕೆ ನಿರತವಾಗಿಹ ಬಾಣತತಿ
ಯೇಕೆ|
ಒಡೆಯನಪ್ಪಣೆ ಮೀರಿ ನಡೆಯುವ ಬಿಡಿ
ನುಡಿಯ ನರಗೇಕೆ ದಾಸ್ಯವು|
ಬಡವರನು ಕಾಪಾಡದಿಹ ದೊರೆತೇಕೆ
ಧರೆಯೊಳಗೆ || ೪ ||

ಎಲ್ಲಿ ಪ್ರಜೆಗಳ ಸಾಮ್ಯ ಬಡವರ|
ನಿಲ್ಲಿಪಾಲಿಸದಾಕ್ಷ್ಯವುನ್ನತ|
ರೆಲ್ಲ ಕೈಗಾರಿಕೆಯ ಗೆಯ್ವರೋ ಬೆಳೆಯ
ಬೆಳೆಯುವರೋ|
ಎಲ್ಲಿ ವರ್ತಕ ರನ್ಯದೇಶಕೆ|
ಸಲ್ಲಲಿತ ವಸ್ತುಗಳ ಕಳುಹುವ|
ರಲ್ಲಿ ಬಿಷ್ಟಿಗೆ ತೌರಮನೆ ಯಲ್ಲುಂಟು ಸು
ವಿಸಾರಂ || ೫ ||

ಹುಣಸೂರು ನೀರು ಸರಬರಾಯಿ.

ಹುಣಸೂರಿಗೆ ನೀರನ್ನು ಸರಬರಾಯಿ ಮಾಡಲು 10,000 ರೂ ಅಂದಾಜಿನ ಮೇಲೆ ಎರಡು ಟ್ಯಾಂಕುಗಳನ್ನಿಡಬೇಕೆಂದು ಸರ್ಕಾರದವರು ಯೋಚಿಸಿದ್ದಾರೆ. ಅಲ್ಲಿ ನೀರಿಗೆ ಬಹಳ ಅಭಾವವಾಗಿದೆ. ಆದ್ದರಿಂದ ಸರ್ಕಾರದವರು ಆದಷ್ಟು ಜಾಗ್ರತೆಯಾಗಿ ಏರ್ಪಾಡುಮಾಡುತ್ತಾರೆಂದು ನಂಬಿದೆ.

ವಿವಿಧ ವರ್ತಮಾನಗಳು.

ಪಿ. ಎಚ್. ರಂಗಸ್ವಾಮಯ್ಯಂಗಾರ್, ಮೈಸೂರು.

(೧) ಅಮೆರಿಕಾ ದೇಶದಲ್ಲಿರುವ ನ್ಯೂ ಹ್ಯಾಮ್‌ಸ್‌ಷೈರ್ ಎಂಬ ಹಳ್ಳಿಯಲ್ಲಿ ೬೦ ಮನೆಗಳಿವೆ. ಅದರಲ್ಲಿರುವವರೆಲ್ಲರೂ 90 ವರ್ಷದ ಮೇಲ್ಪಟ್ಟವರಾಗಿದ್ದು ಇನ್ನೂ ಚೆನ್ನಾಗಿ ಕಷ್ಟಪಟ್ಟು ಕೆಲಸಮಾಡುತ್ತಲಿದಾರೆ.

(೨) ಅಮೆರಿಕಾದೇಶದಲ್ಲಿ ಒಬ್ಬನು ಹತ್ತು ವರ್ಷಗಳಿಂದಲೂ ತನಗೆ ಬಿಡುವಾದ ಕಾಲದಲ್ಲಿ ರಸ್ತೆಯ ಎರಡು ಪಕ್ಕಗಳಲ್ಲಿಯೂ ಸಾಲುಮರಗಳನ್ನೂ ಮತ್ತು ಹೂಗಿಡಗಳನ್ನೂ ಹಾಕುತ್ತಿರುವನು. ಅವನು ಈಗ 25 ಮೈಲಿಗಳ ದೂರದವರೆವಿಗೂ ಗಿಡಗಳನ್ನು ಹಾಕಿರುವನು.

(೩) ಆಫ್ರಿಕದಲ್ಲಿ ಒಂದುವಿಧವಾದ ಇರುವೆಗಳು ಮಳೆಹೊಯ್ಯುವಾಗ, ಎಲೆಗಳನ್ನೂ ಹೂವುಗಳನ್ನೂ ಕೊಡೆಗಳಂತೆ ಉಪಯೋಗಿಸುತ್ತವೆ. ಸಮಯಬಂದರೆ ಅವುಗಳನ್ನೇ ದೋಣಿಯಂತೆ ಉಪಯೋಗಿಸಿಕೊಳ್ಳುತ್ತವೆ.

(೪) ಪೋರ್ಚುಗೀಸ್ ಯುವಕನೊಬ್ಬನಿಗೆ ಮದುವೆಯಾದ ಬೆಳಿಗ್ಗೆ ಹಾಸಿಗೆಯಿಂದ ಎದ್ದಾಗ ಮಾತನಾಡುವ ಶಕ್ತಿಯೇ ನಿಂತುಹೋಯಿತು. ಹೀಗಾಗಲು ಅವನು ನಾಚಿಕೆಪಟ್ಟುಕೊಂಡಿದ್ದುದೇ ಕಾರಣವೆಂದು ಡಾಕ್ಟರುಗಳು ಹೇಳಿದರಂತೆ

ಬಾವಿ ನೀರನ್ನೇ ಉಪಯೋಗಿಸುವ ರಾಜರು.

ಬೊಂಬಾಯಿನ ಭುಲೇಶ್ವರ ಎಂಬಲ್ಲಿ ವಾಸಿಸುವ ಮಹಾರಾಜ ಗೋವರ್ಧನ ಲಾಲ್ಜಿಯವರ ಮನೆಯಲ್ಲಿ ಒಂದು ಬಾವಿ ಇದೆ. ಅದನ್ನು ಪೌರಸಭೆಯು ಕಾನೂನಿನ ಮುಚ್ಚಬೇಕೆಂದು ಆರೋಗ್ಯಾಧಿಕಾರಿ ಅವರಿಗೆ ತಿಳಿಸಿದರು. ಆದರೆ ಮನೆ ... ಲನಗಳಿಗೂ, ಶಾಸ್ತ್ರ ವಿಧಿಗಳಿಗೂ ... ಬಾವಿ ನೀರನ್ನಲ್ಲದೆ ಬೇರೆ ಯಾವ ... ನ್ನೂ ಉಪಯೋಗಿಸುವುದಿಲ್ಲ. ಹೊರ... ದ ನೀರನ್ನು ತರುವುದೂ ಸಾಧ್ಯವಿಲ್ಲ ... ವಿಷಯಗಳನ್ನು ಸೂಚಿಸಿ ತಮ್ಮ ವಕೀ... ಮೂಲಕ ಅವರು ಪೌರಸಭೆಗೆ ಪ್ರಾ... ನಾ ಪತ್ರವನ್ನು ಬರೆದಿರುವರು. ಭಾ... ರನ್ನು ಶುದ್ಧವಾಗಿಯೂ ಆರೋಗ್ಯಕ... ಗಿಯೂ ಇಡುವುದಾಗಿ ಭರವಸೆ ಕೊಟ್ಟ... ವರು ತಮ್ಮ ಮೇಲೆ ಹಾಕಿರುವ ... ಧವನ್ನು ರದ್ದು ಮಾಡಬೇಕೆಂದು ... ಕೊಂಡಿರುವರು. ಅವರ ಆಚಾರ ... ಪೌರ ಸಭೆಯ ಕಟ್ಟು ಕಾನೂನು ... ಷ್ಟು ಅವಕಾಶ ಕೊಡುತ್ತದೋ ... ಬೇಕು

A Reliable House for Repairs of
WATCHES & GRAMOPHONES
HIGH CLASS RUBBER STAMP
Suppliers,
M·V·N· WATCH COY,
The General Commission Agency.
Lansdowne Buildings,
MYSORE.

ಗಡಿಯಾರ ಮತ್ತು ಗ್ರಾಮೋಫೋನುಗಳ ರಿಪೇರಿ
ಮತ್ತು ರಬ್ಬರ್ ಮೊಹರುಗಳ ತಯಾರಿ
ನಮ್ಮಲ್ಲಿ ನಡೆಯುತ್ತವೆ.
ಎಂ ವಿ ಎನ್ ವಾಚ್ ಕಂಪೆನಿ, ಮೈಸೂರು

USE ALWAYS

DERMOTONE

ASTRIC BATHING HERBAL PREPARATION)
THE UNIQUE PRODUCT
IN THE MARKET FOR SKIN HYGIENE.

ಡರ್ಮೊಟೋನ್,

ಸ್ನಾನಯೋಗ್ಯವಾದ ಮತ್ತು ಆರೋಗ್ಯಕರವಾದ ಚರ್ಮರಕ್ಷಣೀ ಚೂರ್ಣ
ಡರ್ಮೊಟೋನ್ ವರ್ಕ್ಸ್, ಮೈಸೂರು

SIATIC GOVERNMENT SECURITY LIFE ASSURANCE CO., LTD.
Head Office.
Asiatic Buildings, Bangalore City
PURELY A NATIONAL CONCERN
Managed by Experts
Low Premiums and Liberal Policy Conditions
pply for Agency —
To
Mr H Venkataramiah,
Divl Supdt, ASIATIC BUILDINGS,
Bangalore City
OR
V RANGASAMI Esq, B.A., B L, I C I.
General Manager

ಏಷ್ಯಾಟಿಕ್ ಲೈಫ್ ಇನ್ಸೂರೆನ್ಸ್ ಕಂಪೆನಿ
ಲಿಮಿಟೆಡ್.

ಹೆಡ್ ಆಫೀಸ್: ಏಷ್ಯಾಟಿಕ್ ಬಿಲ್ಡಿಂಗ್ಸ್, ಬೆಂಗಳೂರು.
...ಗಿ ಅನುಭವವುಳ್ಳವರ ಆಡಳಿತಕ್ಕೆ ಒಳಪಟ್ಟು, ಕಡಿಮೆ ಪ್ರಿಮಿಯಮ್ಮೂ
...ರಾಳವಾದ ಪಾಲಿಸಿ ಷರತ್ತುಗಳೂ ಉಳ್ಳ, ಶುದ್ಧ ಸ್ವದೇಶೀ ವಿಮಾಸಂಸ್ಥೆ
...ಜೆನ್ಸಿಗಾಗಿ ಕೆಳಗಿನ ವಿಳಾಸಕ್ಕೆ ಬರೆಯಿರಿ —
ಹೆಚ್. ವೆಂಕಟರಾಮಯ್ಯ,
ಡಿವಿಜನಲ್ ಸೂಪರಿಂಟೆಂಡೆಂಟ್, ಏಷ್ಯಾಟಿಕ್ ಬಿಲ್ಡಿಂಗ್ಸ್,
ಬೆಂಗಳೂರು ಸಿಟಿ
ಅಥವಾ
ವಿ ರಂಗಸ್ವಾಮಿ, ಬಿ.ಎ, ಬಿ ಎಲ್, ಐ.ಸಿ.ಐ ಜನರಲ್ ಮ್ಯಾನೇಜರ್

BETTER LIGHT

- - LIGHTER BILLS

Use—

"BIJLEE"

ELECTRIC BULBS.

Made in INDIA.

ಸ್ವದೇಶಿ ಎಲೆಕ್ಟ್ರಿಕ್ ಬಲ್ಬುಗಳನ್ನೇ
ಉಪಯೋಗಿಸಿರಿ.

BIJLEE PRODUCTS (INDIA)
Bombay 8.

SOLE DISTRIBUTORS ·

THE STATES ENGINEERING COMPANY,
BANGALORE MYSORE, SHIMOGA & COIMBATORE.

FOR ALL KINDS OF ADVERTISEMENTS

PLEASE CONSULT

The Commercial, Advertising and Publicity Service.

Head Office —
BALEPET, BANGALORE CITY.

BRANCHES AT MYSORE AND ALL
OVER INDIA

Experts in:—

WALL POSTERS

Agents —

'SADHVI',

A LEADING ILLUSTRATED WEEKLY IN
MYSORE

The long awaited Picture is at last on the Silver Screen of

OLYMPIA TALKIES,

THE PREMIER TALKIE HOUSE IN MYSORE

From 11th July 1936 & Onwards

"MAHATMA"

Featuring Balagandharva, Chandra Mohan Buwa Saheb, Narayan Kale, Ratna Prabha, (The Nightingale of Maharatha Stage) Vasanti (Girl Prodigy) & a host of other Selected Stars

Come & See! Don't be Disappointed!!

ಒಲಂಪಿಯಾ ಟಾಕೀಸ್, ಮೈಸೂರು

ಬಹು ದಿನಗಳಿಂದ ನಿರೀಕ್ಷಿಸಲ್ಪಡುತ್ತಿದ್ದ ...
ಕುತೂಹಲತೆಯನ್ನು ಕೃಣಾಪಿಸುವ

"ಮಹಾತ್ಮ"

ಇದೇ ೧೯೩೬ ನೇ ಜುಲೈ ೧೧ ನೇ ಶನಿವಾರದಿಂದ

ರತ್ನಪ್ರಭಾ, ವಸಂತಿ ಬಾಲಗಂಧರ್ವ, ಚಂದ್ರಮೋಹನ
ನಾರಾಯಣ ಕಾಳೆ ಎಂಬುವರು ಮುಖ್ಯ
ಪಾತ್ರವಹಿಸಿರುವರು

ಶ್ರೀ ರಂಗನಾಥ ಟೈಪ್ ಫೌಂಡ್ರಿ,

ಚಿಕ್ಕಪೇಟೆ, ಬೆಂಗಳೂರು ಸಿಟಿ.

ಸುಂದರವಾದ ಅಕ್ಷರಗಳು, ಮುದ್ದುಮುದ್ದಾದ ಬಾರ್ಡರುಗಳು ಬಗೆಬಗೆಯ ಆಕಾರ

ನಮಗೆ ಈ ಕೆಲಸದಲ್ಲಿ ೨೦ ವರ್ಷಗಳ ಕಾಲದ ಅನುಭವವಿದೆ ಆಧುನಿಕ ಕಾಲಕ್ಕೆ
ತಕ್ಕಂತೆ ಅಕ್ಷರದ ಆಕಾರವನ್ನು ಬಹು ಸುಂದರವಾಗಿ ಸುಧಾರಿಸಿದ್ದೇವೆ

ನಮ್ಮಲ್ಲಿನ "ಕನ್ನಡ, ಇಂಗ್ಲೀಷ್" ಅಕ್ಷರಗಳಂತಹ ಸುಂದರವಾದ ಅಕ್ಷರಗಳನ್ನು
ಮತ್ತೆಲ್ಲಿಯೂ ನೋಡಲಾರಿರಿ ಸತ್ಯ

ನೂರಾರು ಬಗೆಯ ಸುಂದರವಾದ ಬಾರ್ಡರುಗಳು ನವ ನವನಾಗರಿಕವಾಗಿವೆ

೬ ಪಾಯಿಂಟಿನಿಂದ ೪೮ ಪಾಯಿಂಟಿನವರೆಗೆ ವಿಧವಿಧವಾದ ಸುಂದರಾಕ್ಷರಗಳಿವೆ

ನಮ್ಮ "ರಂಗನಾಥ ಕನ್ನಡ ..." ಅಕ್ಷರಗಳನ್ನು ನೋಡಲು ಮರೆಯಬೇಡಿರಿ

ನಾವು ಕಾಪರ್ ಮೆಟ್ರಿಯ (ತಾಮ್ರಮುದ್ರಿತ) ಗಳಿಂದ ಅಕ್ಷರಗಳನ್ನು
ತಯಾರಿಸುತ್ತೇವೆ ಸುಲಭ ಬೆಲೆ ಗ್ಯಾರಂಟಿಯಾದ ಬಾಳಿಕೆ

THE SADHVI

Recommended for Schools by th[e] Department

No TI 3778 1-6—35 36

OFFICE OF THE DIRECTOR OF PUBLIC INSTRUCTION IN MYSORE,

Bangalore, Dated 20th April 1936.

MEMO.

The Newspaper "SADHVI" a Kannada Weekly recommended to all Government High, Middle [&] Normal School Reading Rooms in the State

PARTICULARS

Name	The Sadhvi
Editor	Mr. Agaram Rangiah
Place of Publication	Mysore

ANNUAL SUBSCRIPTION

Local & Moffusil **Rs 2-4**

DIRECTOR

Edited Printed & Published by Agaram Rangiah, B A., at Sri Rama Press, D Subbiah Road Mysore

Registered No. M. 3339.

ವಾರ್ಷಿಕ ಚಂದಾ ವಿವರ.

ಸ್ಥಳ ವರಸ್ಥಳಗಳಿಗೆ ಏಜೆಂಟರ ಮೂಲಕ 1—8—0
ಅಂಚೆ ಮೂಲಕ ೪—೪—0 ಬಿಡಿ ಪತ್ರಿಕೆ 0—0—6

ಜಾಹೀರಾತು ಚಂದಾ ವಿವರ.

[illegible] 0—1—0

॥ ಸತ್ಯಮೇವೋದ್ಧರಾಮ್ಯಹಮ್ ॥

ರಾಜಧಾನಿಯ ರಾಷ್ಟ್ರೀಯ ವಾರ ಪತ್ರಿಕೆ.

ವೃದ್ಧಪಿತಾಮಹ ಎಂ. ವೆಂಕಟಕೃಷ್ಣಯ್ಯನವರ ಜ್ಞಾಪಕಾರ್ಥವಾಗಿ ಪ್ರಕಟಿಸಲ್ಪಡುವುದು.

ಸಂಪಾದಕರು. ಅಗರಂ ರಂಗಯ್ಯ, ಬಿ ಎ

Sadhvi: A Leading Nationalist Weekly of Mysore.

FOUNDED IN MEMORY OF Mr M VENKATAKRISHNAYYA, THE GRAND OLD MAN OF MYSORE

ಸಂಪುಟ ೧] MYSORE : MONDAY 20—7—36 ಮೈಸೂರು : ಸೋಮವಾರ ೨೦—೭—೩[illegible] [ಸಂಚಿಕೆ ೨೨

OLYMPIA TALKIES, MYSORE

"MAHATMA"

Grand glorious Second Week from Saturday the 18th July 1936



ಒಲಿಂಪಿಯಾ ಟಾಕೀಸ್, ಮೈಸೂರು.

"ಮಹಾತ್ಮ"

ಇದೇ ೧೯೩೬ ನೇ ಜುಲೈ ೧೮ ನೇ ಶನಿವಾರದಿಂದ ಎರಡನೆಯ ವಾರದ ಪ್ರಾರಂಭ ಮಹೋತ್ಸವ.

ನೂರಾರು ಮಹಾಜನಗಳು ಭಗ್ನ ಮನೋರಥರಾಗಿ ಹಿಂದಿರುಗಿರುವರು ನೀವು
ಅವರಲ್ಲೊಬ್ಬರಾಗಬೇಡಿ

THE SADHVI

A LEADING NATIONALIST WEEKLY OF MYSORE

Recommended for Schools by the Department

No TI 3778 146—35 36

OFFICE OF THE DIRECTOR OF PUBLIC INSTRUCTION IN MYSORE,

Bangalore Dated 20th April 1936.

MEMO.

The Newspaper "SADHVI" a Kannada Weekly is recommended to all Government High, Middle and Normal School Reading Rooms in the State

PARTICULARS

Name	The Sadhvi
Editor	Mr. Agaram Rangiah, B.A
Place of Publication	Mysore

ANNUAL SUBSCRIPTION

Local & Moffusil **Rs 2—4—0**

DIRECTOR

"ಸಾಧ್ವಿ" ವಾರಪತ್ರಿಕೆ.

ವಿದ್ಯಾ ಇಲಾಖೆಯವರಿಂದ ಶಿಫಾರಸು ಮಾಡಲ್ಪಟ್ಟಿದೆ

ಕೂಡಲೇ ಚಂದಾದಾರರಾಗಿ ಪ್ರೋತ್ಸಾಹಿಸಿರಿ.

Drakshamrutha

ದ್ರಾಕ್ಷಾಮೃತ

ಈ ದ್ರಾಕ್ಷಾಮೃತವು ಸಹ್ಯಾದ್ರಿ ಪರ್ವತದಲ್ಲಿ ಅನೇಕ ವನಸ್ಪತಿಗಳ ರಸವರ್ಗಗಳೊಂದಿಗೆ ದ್ರಾಕ್ಷಾರಸವನ್ನು ಮಿಶ್ರಮಾಡಿ ಸ್ವದೇಶಿ ಯಂತ್ರದಿಂದ ಶಾಸ್ತ್ರೋಕ್ತ ಪದ್ಧತಿ ಪ್ರಕಾರ ತಯಾರು ಮಾಡಿರುವದರಿಂದ ಸ್ವಾದಿಷ್ಟವು ಮತ್ತು ಮಧುರವು ಆಗಿದೆ

ಇದರ ಸೇವನೆಯಿಂದ ಶರೀರದೊಳಗಿನ ಹಳೆ ಕಫಕಿ (ಗರಮಿ) ಸಂಪೂರ್ಣ ನಾಶವಾಗುತ್ತದೆ ಮತ್ತು ಧಾತುಸ್ರಾವ, ಸ್ವಪ್ನಾವಸ್ಥೆಯಿಂದ ಅಥವಾ ಬೇರೆ ಯಾವದೇ ಕಾರಣದಿಂದ ಬಂದ ಅಶಕ್ತತೆಯಿಂದ ಕೈಕಾಲು, ಕಣ್ಣೊಳಗೆ ಉರುಪು ಬೀಳೋಣ, ಶೌಚಕ್ಕೆ ಸಾಫ ಆಗದೆ ಇರೋಣ, ಮುಂತಾದ ಎಲ್ಲ ವಿಕಾರಗಳು ನಷ್ಟವಾಗಿ ಕ್ಷುಧಾಗ್ನಿ ಬೆಳೆಯುತ್ತದೆ ಮತ್ತು ಅನ್ನ ಚೆನ್ನಾಗಿ ಪಚನವಾಗಿ ಶೌಚಕ್ಕೆ ಸಾಫವಾಗುತ್ತದೆ ಇದರ ಸೇವನೆಯಿಂದ ತರುಣರಿಗೆ ವ್ಯಭಿಚಾರದಿಂದ ಅಥವಾ ಬೇರೆ ಕಾರಣದಿಂದ ಬಂದ ಧಾತುಕ್ಷೀಣತೆ, ನಪುಂಸಕತ್ವ ಇದ್ದರೆ ಅದು ಹೋಗಿ ಪುನಃ ಯೌವನವಂತರಾಗಿ, ಶರೀರ ಬಲಿಷ್ಠವಾಗಿ ಮಕ್ಕಳು ಪುಷ್ಟಿವಂತರಾಗುವರು ಹೆಂಗಸರಿಗೂ ಮತ್ತು ಮಕ್ಕಳಿಗೂ ಈ ಔಷಧವು ಗುಣಕಾರಿ ಇದೆ ಮುಟ್ಟಾಗದಿದ್ದರೆ ಮತ್ತು ಉಷ್ಣ ಗರ್ಭ ಸಂಬಂಧವಾದ ರೋಗಗಳಿದ್ದರೂ ಅವೆಲ್ಲ ಗುಣವಾಗಿ ಹೆಂಗಸರಿಗೆ ಸಂತತಿ ವೃದ್ಧಿಯಾಗುವದು ಈ ಔಷಧದ ಮೂರು ಬಾಟ್ಲಿಗಳನ್ನು ಸೇವನೆ ಮಾಡಿದರೆ ಪೂರ್ಣ ಗುಣಬರುತ್ತದೆ ಇದರ ಅನುಭವ 1 ಬಾಟ್ಲಿ ಸೇವನೆ ಮಾಡಿದ ಅನಂತರ ನಿಮಗೆ ತಿಳಿದೀತು

ಪ್ರಮಾಣ: ಬೆಳಿಗ್ಗೆ ಒಂದು ತೊಲೆ ಮತ್ತು ರಾತ್ರಿ ಮಲಗುವಾಗ ಒಂದು ತೊಲೆ ಸೇವನೆ ಮಾಡಬೇಕು.

1 ಬಾಟ್ಲಿ ಬೆಲೆ ರೂ 1-4-0, 3 ಬಾಟ್ಲಿ 3-8-0,

1 ಡಜನ್ ಬಾಟ್ಲಿ ಬೆಲೆ 12-0-0

ಮ್ಯಾನೇಜರ್—ದ್ರಾಕ್ಷಾಮೃತ ಡಿಪೋ.

ಪೋಸ್ಟ್ ನಿಪ್ಪಾಣಿ, ಜಿಲ್ಲಾ ಬೆಳಗಾವಿ

ಮೈಸೂರು ಸ್ಟಾಕಿಸ್ಟ್ಸ್ —ಪಿ ಸಿ ನಟರಾಜ್, ಸಯ್ಯಾಜಿರಾವ್ ರೋಡು

FOR ALL KINDS OF ADVERTISEMENTS

PLEASE CONSULT

The Commercial, Advertising and Publicity Service.

Head Office —

BALEPET, BANGALORE CITY

BRANCHES AT MYSORE AND ALL OVER INDIA

Experts in:—

WALL POSTERS

Agents —

'SADHVI',

A LEADING ILLUSTRATED WEEKLY IN MYSORE

USE ALWAYS

DERMOTONE

(SASTRIC BATHING HERBAL PREPARATION

THE UNIQUE PRODUCT

IN THE MARKET FOR SKIN HYGIENE

ಡರ್ಮೊಟೋನ್,

ಶಾಸ್ತ್ರೀಯವಾದ ಮತ್ತು ಆರೋಗ್ಯಕರವಾದ ಚರ್ಮರಕ್ಷಣೆ ಚೂರ್ಣ

ಡರ್ಮಟೋನ್ ವರ್ಕ್ಸ್, ಮೈಸೂರು.

ಶ್ರೀ ರಂಗನಾಥ ಟೈಪ್ ಫೌಂಡ್ರಿ

ಚಿಕ್ಕಪೇಟೆ, ಬೆಂಗಳೂರು ಸಿಟಿ.

ಸುಂದರವಾದ ಅಕ್ಷರಗಳು, ಮುದ್ದುಮುದ್ದಾದ ಬಾರ್ಡರುಗಳು ಬಗೆಬಗೆಯ ಆಕ

ನಮಗೆ ಈ ಕೆಲಸದಲ್ಲಿ ೩೦ ವರ್ಷಗಳ ಕಾಲದ ಅನುಭವವಿದೆ ಆಧುನಿಕ ಶ ...

ತಕ್ಕಂತೆ ಅಕ್ಷರದ ಆಕಾರವನ್ನು ಬಹು ಸುಂದರವಾಗಿ ಸುಧಾರಿಸಿದ್ದೇವೆ

ನಮ್ಮಲ್ಲಿನ "**ಕನ್ನಡ, ಇಂಗ್ಲೀಷ್**" ಅಕ್ಷರಗಳಂತಹ ಸುಂದರವಾದ ಅಕ್ಷರಗಳ ...

ಮತ್ತೆಲ್ಲಿಯೂ ನೋಡಲಾರಿರಿ ಮತ್ತು

ನೂರಾರು ಬಗೆಯ ಸುಂದರವಾದ ಬಾರ್ಡರುಗಳು ನಯನಮನೋಹರವಾಗಿವೆ

... ಪಾಯಿಂಟಿನಿಂದ ೭೨ ಪಾಯಿಂಟಿನವರಿಗೆ ವಿಧವಿಧವಾದ ಸುಂದರಾಕ್ಷರಗಳು

ನಮ್ಮ "ರಂಗನಾಥ ಕನ್ನಡ ಟಾಯಿಪಿನ" ಅಕ್ಷರಗಳನ್ನು ನೋಡಲು ಮರೆಯಬೇಡಿ

ನಾವು ಕಾಪರ್ ಅಲಾಯ್ಸ್ (ತಾಮ್ರಮಿಶ್ರಿತ) ಸೀಸದಿಂದ ಅಕ್ಷರಗಳನ್ನು

ತಯಾರಿಸುತ್ತೇವೆ ಸುಲಭ ಬೆಲೆ ಗ್ಯಾರಂಟಿಯಾದ ಬಾಳಿಕೆ

॥ ಸತ್ಯಮೇವೋದ್ಧರಾಮ್ಯಹಮ್ ॥

ರಾಜಧಾನಿಯ ರಾಷ್ಟ್ರೀಯ ವಾರ ಪತ್ರಿಕೆ.

ವೃದ್ಧಪಿತಾಮಹ ಎಂ. ವೆಂಕಟಕೃಷ್ಣಯ್ಯನವರ ಜ್ಞಾಪಕಾರ್ಥವಾಗಿ ಪ್ರಕಟಿಸಲ್ಪಡುವುದು.

ಸಂಪಾದಕರು ಅಗರಂ ರಂಗಯ್ಯ, ಬಿ. ಎ.

ಸಂಪುಟ ೧] MYSORE : MONDAY 20—7—36 ಮೈಸೂರು : ಸೋಮವಾರ ೨೦—೭—೩೬ [ಸಂಚಿಕೆ ೨೨

ಚಕ್ರವರ್ತಿಗಳ ಕೊಲೆ ಪ್ರಯತ್ನ.

ಚಕ್ರವರ್ತಿಯವರ ಪ್ರಾಣಾಪಹಾರ ಪ್ರಯತ್ನವು ಲಂಡನ್ನಿನಲ್ಲೆಲ್ಲಾ ಕೋಲಾಹಲವನ್ನುಂಟುಮಾಡಿದೆ. ಎಡ್ವರ್ಡ್ ಚಕ್ರವರ್ತಿಯವರು ಮೊನ್ನೆ ಹೈಡ್ ಪಾರ್ಕಿನ ಗಾರ್ಡ್‌ಗಳಿಗೆ ಬಣ್ಣಗಳ ಬಹುಮಾನವನ್ನು ಕೊಡಲು ಮೆರವಣಿಗೆಯಲ್ಲಿ ಹೋಗುತ್ತಿದ್ದಾಗ ಒಂದು ವಿಷಾದ ಘಟನೆಯು ನಡೆಯಿತು ಮೆರವಣಿಗೆಯ ಮಧ್ಯೆ ಮೆಕಮಹನ್ ಎಂಬ ಪತ್ರಿಕೋದ್ಯೋಗಿಯು ಮುಂದೆ ನುಗ್ಗಿಬಂದು ತನ್ನಲ್ಲಿದ್ದ ಒಂದು ರಿವಾಲ್ವರ್ ಎಸೆಯಲು ಅದು ನೆಲ್ಲಿಗೆ ಹೋಗಿ ಚಕ್ರವರ್ತಿಯವರ ಕುದುರೆ ಕಾಲಿಗೆ ಹೊಡೆಯಿತು. ನಂತರ ಚಕ್ರವರ್ತಿಗಳು ಶಾಂತಚಿತ್ತರಾಗಿಯೇ ಮೆರವಣಿಗೆಯಲ್ಲಿ ಮುಂದುವರಿದರು. ತಕ್ಷಣವೇ ಪೋಲೀಸಿನವರು ಕೆಳಗಿಳಿದು ಆಕೃತ್ಯಕಾರನನ್ನು ವಶಗಿರಿ ಮಾಡಿದರು. ಚಕ್ರವರ್ತಿಯವರು ಸುರಕ್ಷಿತರಾಗಿ ಮೆರವಣಿಗೆಯಲ್ಲಿ ಮುಂದುವರಿದುದರಿಂದ ಅವರಿಗೆ ಅನೇಕ ಅಭಿನಂದನೆಗಳು ಬಂದವು ಅವರಿಗೆ ಮೊದಲು ಮೇರಿ ರಾಣಿಯವರಿಂದಲೂ ನಂತರ ಹಿಟ್ಲರ್ ಮತ್ತು ಮುಸ್ಸೋಲಿನಿ ಮೊದಲಾದವರುಗಳಿಂದಲೂ ಅಭಿನಂದನೆಗಳು ಬಂದವು. ಥಿಯೇಟರುಗಳಲ್ಲಿಯೂ ಮತ್ತು ಚರ್ಚುಗಳಲ್ಲಿಯೂ ಎಡ್ವರ್ಡರನ್ನು ದೇವರು ಕಾಪಾಡಲೆಂಬ ಸ್ತೋತ್ರಗಳು ನಡೆದವು

ಶ್ರೀ ಚಾಮುಂಡೇಶ್ವರೀ ಪೂಜಾ ಮಹೋತ್ಸವ.

ಕಳೆದ ಬುಧವಾರ ಶ್ರೀ ಶಿಲ್ಪಿ ಸಿದ್ಧಾಂತಿ ಸಿದ್ಧಲಿಂಗಸ್ವಾಮಿಗಳವರ ಮಠದಿಂದ ಗ್ರಾಮದೇವತೆಯಾದ ಶ್ರೀ ಚಾಮುಂಡೇಶ್ವರೀ ಅಮ್ಮನವರನ್ನು ಬಹು ವಿಜೃಂಭಣೆಯಿಂದ ಮಂಡಿ ಮೊಹಲ್ಲಾ ಫೈಲ್ಸ್ ರಸ್ತೆಯಲ್ಲಿ ತಳಿರುತೋರಣಗಳಿಂದಲೂ ಮತ್ತು ವಿದ್ಯುಚ್ಛಕ್ತಿ ದೀಪಗಳಿಂದಲೂ ಅಲಂಕೃತವಾಗಿದ್ದ ಮಂಟಪಕ್ಕೆ ಬಿಜಯಮಾಡಿಸಿದರು ಅಮ್ಮನವರಿಗೆ, ಚಾಮುಂಡೇಶ್ವರೀ ಮಹಿಷಾಸುರ ಮರ್ದಿನಿ ಮತ್ತು ಗಜಲಕ್ಷ್ಮಿ ಅಲಂಕಾರಗಳನ್ನು ಮಾಡಿದ್ದರು. ಅನೇಕ ಭಕ್ತಾದಿಗಳು ಅಮ್ಮನವರ ದರ್ಶನಕ್ಕೆ ಬಂದಿದ್ದರು.

ಬೈಸಿಕಲ್ ಬಾವಲಿಗಳು.

ವರ್ಷವು ಕಳೆದಂತೆಲ್ಲಾ ಹೊಸ ಬಾವಲಿಗಳನ್ನು ಬೈಸಿಕಲ್‌ಗಳಿಗೆ ಹಾಕಿಕೊಂಡು ಓಡಾಡುವ ನಿಯಮ ಈ ವರ್ಷವೂ ಕೂಡ ಮಾಮೂಲಿನಂತೆ ಹೊಸ ಬಾವಲಿಗಳನ್ನು ಬೈಸಿಕಲ್ ಮಾಲೀಕರು ಹೊಂದುತ್ತಿರುವರು, ಮತ್ತೆ ಕೆಲವರು ಹೊಂದಬೇಕೆಂದಿರುವರು ಬಾವಲಿಗಳನ್ನು ವರ್ಷಕ್ಕೆ ಎರಡು ಬಾರಿ ತೆಗೆದುಕೊಳ್ಳಬಹುದೆಂಬ ಕಾನೂನು ಇದೆ. ಹಣವನ್ನು ಎರಡು ಕಂತಿನಲ್ಲಿ ಕೊಡಬಹುದು. ಅಥವಾ ಒಟ್ಟಿಗೆ ಬೇಕಾದರೂ ಕೊಡಬಹುದು.

ಆದರೆ ನಮ್ಮ ಪೌರಸಭೆಯ ಕೆಲವು ಅಧಿಕಾರಿಗಳು ಪೂರ್ತಿ ಒಂದು ವರ್ಷದ ಹಣವನ್ನು ಕೊಡಲೇಬೇಕೆಂದು ಒತ್ತಾಯಪಡಿಸುತ್ತಿರುವುದಾಗಿ ಜನರು ಗೊಣಗುಟ್ಟುತ್ತಿದ್ದಾರೆ. ನೌಕರರು ಕಾನೂನಿಗೆ ವಿರೋಧವಾಗಿ ಏಕೆ ವರ್ತಿಸಬೇಕು? ಜನರು ಅನುಕೂಲವಿದ್ದಂತೆ 6 ತಿಂಗಳಿಗೋ ಅಥವಾ 1 ವರ್ಷಕ್ಕೋ ಬೈಸಿಕಲ್ ತೆರಿಗೆಯನ್ನು ಕೊಡುವರು. ಹಾಲಿ ರಾಜಧಾನಿಯಲ್ಲಿ ಬೈಸಿಕಲ್ ತೆರಿಗೆಯು ಬಹಳ ಹೆಚ್ಚಾಗಿದೆ. ಮದರಾಸು ಆಧಿಪತ್ಯದಲ್ಲೆಲ್ಲಾ ಇದನ್ನು ಕಡಿಮೆ ಮಾಡಿರುವರು ತೆರಿಗೆಯು ಹೇಗಾದರೂ ಇರಲಿ. ಕಾನೂನಿನಂತೆ ಪೌರಸಭೆಯ ಅಧಿಕಾರಿಗಳು ವರ್ಷಕ್ಕೆರಡು ಬಾರಿ ಏಕೆ ಬಾವಲಿಗಳನ್ನು ಕೊಡಬಾರದು? ತೆರಿಗೆಯನ್ನು ಕೊಟ್ಟು ಬಿಲ್ಲೆಯನ್ನು ಹಾಕಿಸಿಕೊಂಡು ಬರೋಣವೆಂದಿದ್ದ ಅನೇಕರಿಗೆ ಈ ವರ್ತನೆಯು ಜುಗುಪ್ಸೆಯನ್ನುಂಟುಮಾಡಬಹುದು. ಆದ್ದರಿಂದ ಪೌರಸಭೆಯ ಮುಖ್ಯಾಧಿಕಾರಿಗಳು ಈ ವಿಷಯವನ್ನು ಪರಿಶೀಲಿಸಿ, ಇನ್ನು ಮುಂದೆ ಪ್ರಜೆಗಳಿಗೆ ಇಂತಹ ಕಿರುಕುಳಗಳನ್ನು ಕೊಡಕೂಡದೆಂದು ಕೂಡಲೇ ಏರ್ಪಡಿಸಬೇಕು.

ಶುಷ್ಕ ಪರಿತಾಪ.

ಮಂಡ್ಯದ ಸಮೀಪದಲ್ಲಿರುವ ಇಂಡುವಾಳು ಎಂಬಲ್ಲಿ ಎಲೆಕ್ಟ್ರಿಕ್ ತಂತಿಯು ಕತ್ತರಿಸಿಕೊಂಡು ಒಂದು ಕಬ್ಬಿನ ಗದ್ದೆಯ ಮೇಲೆ ಬಿದ್ದು ಅದರಿಂದ ಸುಮಾರು 300 ರೂಪಾಯಿಗಳ ನಷ್ಟವೂ, ಮತ್ತು ನಾಲ್ಕು ಜನರ ಪ್ರಾಣಹಾನಿಯೂ ಆಗಿರುವುದು ಸರಿಯಷ್ಟೆ ಈ ವಿಷಯದಲ್ಲಿ ಸರ್ಕಾರದವರು ಒಂದು ಪ್ರಕಟನೆಯನ್ನು ಹೊರಡಿಸಿದುವರು. ಸರ್ಕಾರವು ಪ್ರಕಟನೆಯಲ್ಲಿ ಶುಷ್ಕ ಪರಿತಾಪವನ್ನು ಸೂಚಿಸಿರುವುದಕ್ಕಾಗಿ ನಾವು ವಿಷಾದಿಸುವೆವು. ಮರಣ ಹೊಂದಿದವರ ಹೆಸರು ವಿಳಾಸಗಳೊಂದನ್ನೂ ಪ್ರಕಟಿಸಿಲ್ಲ ಈ ಪ್ರಕಟನೆಯಲ್ಲಿ ನಾಲ್ವರ ಮರಣಕ್ಕೆ ಸರಿಯಾದ ಕಾರಣಗಳನ್ನು ಹೊರಪಡಿಸಿರುವುದಿಲ್ಲ ಪ್ರಾಯಶಃ ವಿದ್ಯುಚ್ಛಕ್ತಿಯ ಒಂದು ಉಪಕರಣವು ಮುರಿದು ಹೋದದ್ದರಿಂದ ಹೀಗಾಗಿರಬಹುದು ಎಂದು ತಿಳಿಸಿರುತ್ತಾರೆ ಸರಿಯಾದ ತನಿಖೆ ಕ್ರಮಗಳನ್ನು ವಿದ್ಯುಚ್ಛಕ್ತಿಯ ಇಲಾಖೆಯವರು ನಡೆಸುತ್ತಲಿರುವರೆಂದೂ ಪ್ರಕಟಿಸಿದೆ. ಒಂದಲ್ಲ, ಎರಡಲ್ಲ ನಾಲ್ಕು ಬಡ ರೈತರ ಪ್ರಾಣಹಾನಿಯಾಗಿದೆ. ಈ ಅಪಾರ ನಷ್ಟಕ್ಕೆ ಸರ್ಕಾರದವರು ಜವಾಬ್ದಾರಿಯನ್ನು ವಹಿಸಲೇಬೇಕು ಸರ್ಕಾರದವರು ಉಪಚಾರದ ಮತ್ತು ಸಂತಾಪ ಸೂಚನೆಯ ನಾಲ್ಕು ಮಾತುಗಳನ್ನು ಹೊರಪಡಿಸಿದಲ್ಲಿ ಅದು ಶುಷ್ಕ ಪರಿತಾಪವಾಗಿ ಪರಿಣಮಿಸುತ್ತೆ ಜವಾಬ್ದಾರಿಯನ್ನು ವಹಿಸಿ, ಮುಳುಗಿ ಹೋಗುವ ನಾಲ್ವರು ಬಡ ರೈತರ ಕುಟುಂಬವನ್ನು ಉದ್ಧರಿಸಲು ಸರ್ಕಾರದವರು ಉದಾರವಾಗಿ ಸಹಾಯ ಮಾಡಿದಲ್ಲಿ ಆಗ ಅವರು ಪರಿತಾಪಪಟ್ಟುದುದು ಸಾರ್ಥಕವಾಗುವುದು

ಡೆಪ್ಯುಟಿ ಕಮೀಷನರಿಂದ ಅಸಿಸ್ಟೆಂಟ್ ಕಮೀಷನರಿಗೆ ಏಟು!

ಚಿತ್ರದುರ್ಗದ ಡೆಪ್ಯುಟಿಕಮೀಷನರಾದ ಶ್ರೀ ಸುಂದರರಾಜಯ್ಯಂಗಾರ್ರವರು ಅಲ್ಲಿನ ಅಸಿಸ್ಟೆಂಟು ಕಮೀಷನರಾದ ಶ್ರೀ॥ ಟಿ. ಎಲ್ ಕಾಂತರಾಜರವರನ್ನು ಹೊಡೆದರೆಂಬ ವಿಷಯವಾಗಿ ವಿಶೇಷ ಕೋಲಾಹಲವುಂಟಾಗಿದೆ ಶ್ರೀ॥ ಕಾಂತರಾಜರವರು ಒಂದು ಮೊಕದ್ದಮೆಯಲ್ಲಿ ಸಾಕ್ಷ್ಯವನ್ನು ಕೊಡಲು ಕೋಲಾರಕ್ಕೆ ಹೋಗಬೇಕಾಗಿತ್ತು. ಎರಡು ದಿನ ರಜವನ್ನು ಕೇಳಲು ಡೆಪ್ಯುಟಿ ಕಮೀಷನರಲ್ಲಿ ಹೋದಾಗ ಈ ಪ್ರಸಂಗವು ನಡೆಯಿತೆಂದು ಹೇಳಲ್ಪಟ್ಟಿದೆ ಈ ವಿಷಯದಲ್ಲಿ ಈ ಕೆಳಗೆ ಕಂಡ ವಿವರಗಳೂ ನಡೆಯಿತೆಂದು ಹೇಳಲಾಗಿದೆ. ಶ್ರೀ॥ ಕಾಂತರಾಜರವರು ಡೆ॥ ಕಮೀಷನರನ್ನು ನೋಡಬೇಕೆಂದು ಅಪೇಕ್ಷಿಸಿದರು ಅವಕಾಶ ದೊರೆಯಲಿಲ್ಲ ತಾವೇ ಖುದ್ದಾಗಿ ಮನೆಗೆ ಹೋದರು ಡೆ॥ ಕಮೀಷನರು ಕೋಪಗ್ರಸ್ತರಾಗಿ ಬಂದು ಅವರನ್ನು ಬಲವಾಗಿ ನೂಕಿದರು ಕಾಂತರಾಜರವರಿಗೆ ಬಹಳ ಪೆಟ್ಟುಬಿತ್ತು. ಡಾಕ್ಟರ ಸರ್ಟಿಫಿಕೇಟನ್ನು ಮಾಡಿಸಿರುವರು ಡೆ॥ ಕಮೀಷನರಮೇಲೆ ಮೊಕದ್ದಮೆ ಹೂಡಲು ಸರ್ಕಾರದ ಅನುಮತಿ ಕೇಳಿರುವರೆಂದೂ ವದಂತಿ ಇದೆ

ಗೂಳಿಗಳಿಗೆ ಗುಂಡಿನೇಟು.

ಮೈಮನ್‌ಸಿಂಗ್ ಎಂಬಲ್ಲಿನ ಕಲೆಕ್ಟರವರು ಗೂಳಿಗಳನ್ನು ರಸ್ತೆಯಲ್ಲಿ ಕಂಡರೆ ಬಂದೂಕದಿಂದ ಹೊಡೆದು ಕೊಲ್ಲಬೇಕೆಂಬ ಸುಗ್ರೀವಾಜ್ಞೆ ಮಾಡಿರುವರು. ಇದನ್ನು ಇದುವರೆವಿಗೂ ನಾವು ಕೇಳಿಯೇ ಇರಲಿಲ್ಲ. ಸೊಳ್ಳೆಗಳನ್ನ ಹಾಳು ಮಾಡುವ ವಿಧಾನವನ್ನು ಕಂಡುಹಿಡಿದರು. ಇಲಿಗಳನ್ನು ನಾಶಪಡಿಸುವ ರೀತಿಯನ್ನು ತೋರ್ಪಡಿಸಿದರು. ಬೆಕ್ಕು ಮತ್ತು ಬೀದಿಯ ನಾಯಿಗಳಿಂದ ತುಂಬಾ ಅಪಾಯವೆಂದು ಅವೆಲ್ಲವನ್ನೂ ವಿದ್ಯುಚ್ಛಕ್ತಿಯ ಕೊಠಡಿಗೆ ನುಗ್ಗಿಸಿ ಸಂಹರಿಸುವ ನೂತನ ವಿಧಾನವನ್ನು ಸೃಷ್ಟಿಸಿದರು ಇದುವರೆವಿಗೂ ಸಣ್ಣ ಪ್ರಾಣಿಗಳ ಮಾತಾಯಿತು, ಇನ್ನು ಮುಂದೆ ಈ ಕಲೆಕ್ಟರವರು ದೇವರಿಗೋಸ್ಕರ ಮೀಸಲಾದ ಕೆಲವು ಗೂಳಿಗಳನ್ನು ಗುಂಡಿನೇಟಿನಿಂದ ಹೊಡೆದು ಕೊಲ್ಲಿರಿ ಎಂದು ಹೇಳಿರುತ್ತಾರೆ. ಅವುಗಳಲ್ಲಿ ಕೆಲವು ಹಿಂದುಗಳಿಂದಲೂ ಮತ್ತು ಮುಸಲ್ಮಾನರಿಂದಲೂ ದೇವರಿಗೋಸ್ಕರ ಮೀಸಲಾಗಿ ಬಿಡಲ್ಪಟ್ಟಿವೆ ಚಿಗಟ, ಇಲಿ, ಬೆಕ್ಕು ಮತ್ತು ನಾಯಿ ಇವುಗಳಿಗಿಂತ ಗೂಳಿಗಳು ಸ್ಥೂಲ ಪ್ರಕೃತಿಗಳಲ್ಲವೆ?

ಮೊನ್ನೆ ತಾನೆ ಇಂಡಿಯಾದ ವೈಸರಾಯರು ಭಾರತೀಯರೆಲ್ಲರಿಗೂ ಗೂಳಿಗಳನ್ನು ವ್ಯವಸಾಯದ ಅಭಿವೃದ್ಧಿಗೆ ವರಪ್ರದಾನ ಮಾಡಿರುವರು. ಆದರ ಮೇಲ್ಭಾಂಡ ಕಡೆಯಲ್ಲಿ ಗೂಳಿಗಳಿಗೆ ಉಳಿಗಾಲವಿಲ್ಲ ವೈಸರಾಯರಿಗೆ ಈ ವಿಷಯದಲ್ಲಿ ಫಿರ್ಯಾದು ಹೋಗಿರುತ್ತದೆ.

ಈ ಸಂಗತಿಯು ವಿಚಿತ್ರವಾಗಿದೆ ಇನ್ನು ಮುಂದೆ ಇದಕ್ಕಿಂತಲೂ ಸ್ಥೂಲ ಶರೀರವನ್ನು ಹೊಂದಿರುವ ಆನೆ ಮುಂತಾದುವುಗಳಿಗೂ ಏನು ಬರುವುದೋ ತಿಳಿಯದು!

ಜಪಾನ್ ಸಾಮ್ರಾಜ್ಯ

ಜಪಾನು ಮಹಾಯುದ್ಧವನ್ನು ತ್ವರೆಪಡಿಸುತ್ತಿರುವುದು.

ಅದಕ್ಕೆ ಇಂಡಿಯದ ಮೇಲೂ ಕಣ್ಣು!

"ಇಡೀ ಪ್ರಪಂಚದ ಎಲ್ಲ ರಾಷ್ಟ್ರಗಳೂ ನಮ್ಮ ಚಕ್ರವರ್ತಿಯ ಅಧೀನದಲ್ಲಿ ಆಳಲ್ಪಡುತ್ತವೆ" ಎಂದು 1858 ರಲ್ಲಿ ಆಧುನಿಕ ಜಪಾನಿನ ಸ್ಥಾಪಕರಲ್ಲೊಬ್ಬರಾದ ಲಾರ್ಡ್ ಹೊಟ್ಟಾರವರು ಹೇಳಿದ್ದರು

"20 ನೇ ಶತಮಾನದ ಮಧ್ಯದಲ್ಲಿ ಜಪಾನು ಏಷ್ಯಾವನ್ನೂ ಮತ್ತು ಯೂರೋಪಿನ ಕೆಲವು ಪ್ರದೇಶವನ್ನೂ ಆಕ್ರಮಿಸುವುದು" ಎಂದು ಜಪಾನಿನ ಪ್ರಧಾನಮಂತ್ರಿಗಳು 1915 ರಲ್ಲಿ ನುಡಿದಿದ್ದರು

'ಬಿಳಿಯರಿಂದ ಆಳಲ್ಪಡುತ್ತಿರುವ ಅನೇಕ ರಾಷ್ಟ್ರಗಳನ್ನು ನಮ್ಮ ದೇಶವು ತೊಂದರೆಯಿಂದ ಪರಿಹಾರಮಾಡಿ ಶಾಂತಿ ಸ್ಥಾಪನೆ ಮಾಡುವುದು" ಎಂದು ಜಪಾನಿನ ಸೈನ್ಯಾಧಿಕಾರಿಗಳಾದ ಅರಾಕಿಯವರು 1936 ರಲ್ಲಿ ತಿಳಿಸಿದರು

ಆದರೆ, ಸುಮಾರು 80 ವರ್ಷಗಳ ಹಿಂದೆ ನುಡಿದಿದ್ದ ವಾಕ್ಯವು ಸಂಪೂರ್ಣವಾಗಿ ಫಲಿಸಿಲ್ಲವಾದರೂ ಜಪಾನು ಮುಂದೆ ನುಗ್ಗುತ್ತ, ಎಡವುತ್ತ, ಬೀಳುತ್ತ, ಏಳುತ್ತ ಮುಂದ ಸಾಗುತ್ತಿದೆ ಅನೇಕ ಕಷ್ಟಗಳನ್ನು ಅನುಭವಿಸಿ ದೇಶವು ಇಷ್ಟು ಅಭಿವೃದ್ಧಿಗೆ ಬಂದಿತು ಜಪಾನು 1895 ರಲ್ಲಿ ಫಾರ್ಮೋಸ ಮತ್ತು ಪೆಸ್ಕಾಡರ್ ಎಂಬುವುಗಳನ್ನು ಸ್ವಾಧೀನಪಡಿಸಿಕೊಂಡಿತು ಲೈಟಂಗ್ ದ್ವೀಪವನ್ನೂ ಮತ್ತು ಕೊರಿಯಾವನ್ನೂ ಕ್ರಮವಾಗಿ 1905 ರಲ್ಲೂ ಮತ್ತು 1910 ರಲ್ಲೂ ತನ್ನ ಅಧೀನ ಮಾಡಿಕೊಂಡಿತು ಇವೆಲ್ಲಕ್ಕಿಂತಲೂ ದೊಡ್ಡದಾದ ಮಾಂಚೂರಿಯಾ, ಜೆಹೊಲ್ ಮತ್ತು ಚಾಹರ್ ಎಂಬುವುಗಳನ್ನು 1931 ರಲ್ಲಿ ಸ್ವಾಧೀನಪಡಿಸಿಕೊಂಡಿತು ಜಪಾನು ಈಗ ಯೂರೋಪಿನ ಅರ್ಧ ಭಾಗದಷ್ಟು ಪ್ರದೇಶವನ್ನೂ ಮತ್ತು ಜರ್ಮನಿಯಷ್ಟು ಜನಸಂಖ್ಯೆಯನ್ನೂ ಹೊಂದಿರುತ್ತದೆ

ಜಪಾನು ಆಕ್ರಮಿಸಿರುವ ರಾಜ್ಯಗಳೊಂದಿಗೆ ಮುಸೋಲಿನಿಯು ಗೆದ್ದಿರುವ ಅಬ್ಸೀನಿಯವನ್ನು ಹೋಲಿಸಿದಲ್ಲಿ ಇಟಲಿಯ ಸಾಮರ್ಥ್ಯವು ತೀರ ಅಲ್ಪವಾಗಿ ಕಾಣುತ್ತದೆ ಜಪಾನಿನ ಶಕ್ತಿಸಾಮರ್ಥ್ಯಗಳು ಈಗ ಒಂದೊಂದಾಗಿ ಪ್ರದರ್ಶಿಸಲ್ಪಡುತ್ತವೆ ಇನ್ನೂ ಅದು ತಾಳ್ಮೆಯನ್ನು ತಾಳುತ್ತಿದೆ ಆಗಲೇ ಜಪಾನು ಚೀನಾವನ್ನೂ ಪೂರ್ವ ಏಷ್ಯಾವನ್ನೂ ಆಕ್ರಮಿಸಬೇಕೆಂಬ ಅಭಿಲಾಷೆಯಿಂದ ಮುಂದೆ ನುಗ್ಗುತ್ತಿದೆ ಹಾಗೆಯೇ ಜಪಾನಿಗೆ ಇಂಡಿಯದ ಮೇಲೂ ಸಹ ಕಣ್ಣಿರುತ್ತದೆ ಮಂಗೋಲಿಯವನ್ನೂ, ಸಿಕಿಯಾಂಗನ್ನೂ ತನ್ನ ಅಧಿಕಾರಕ್ಕೆ ಒಳಪಡಿಸಿಕೊಳ್ಳಬೇಕೆಂಬ ಬಯಕೆಯಿದೆ. ಇದರ ಅಭಿಲಾಷೆಯು ಇಷ್ಟೇ ಅಲ್ಲ ಜಪಾನಿನ ರಾಜಕೀಯ ಮತ್ತು ಆರ್ಥಿಕ ಸಮಸ್ಯೆಗಳ ಪ್ರಭಾವವು ಇಡೀ ಪ್ರಪಂಚವನ್ನೇ ಬೆರಗುಮಾಡಿದೆ ಅತ್ಯಲ್ಪಕಾಲದಲ್ಲಿಯೇ ಜಪಾನು ಏಷ್ಯಾಖಂಡದ ಎಲ್ಲ ರಾಷ್ಟ್ರಗಳನ್ನೂ ಅಧೀನಮಾಡಲು ಪ್ರಯತ್ನಿಸಿದರೆ ಅಥವಾ ಇಡೀ ವಿಶ್ವದ ಮತ್ತೊಂದು ಮಹಾಯುದ್ಧವನ್ನು ಹೂಡಬಹುದು

ನಂಜನಗೂಡು ವರ್ತಮಾನ

ದೇವಸ್ಥಾನ:— ಹೊಸ ಪೇಶ್ಕಾರರು ಶ್ರೀಯವರ ಕಲ್ಯಾಣೋತ್ಸವವನ್ನು ವಿಶೇಷ ವೈಭವದಿಂದ ನೆರವೇರಿಸಲು ಉತ್ಸಾಹದಿಂದ ಕೆಲಸವನ್ನು ಮಾಡಿದರು, ಸ್ಥಳದ ಮಹಾಜನರೇ ಒಟ್ಟೊಟ್ಟಾಗಿ ಶಿವಕೊಟಕ್ಕೆ ಉಕಾಲದಲ್ಲಿ ಬಂದು ಅನ್ನಕ್ಕಾಗಿ ಕುಳಿತ, ತೊಂದರೆ ಕೊಡುತ್ತಿದ್ದಾರೆಂದು ಕೇಳುತ್ತೇವೆ ಆಳುವ ಮಹಾಸ್ವಾಮಿಯವರು ಸ್ವದೇಶವನ್ನು ಸೇರುವವರಿವಿಗೂ ಶ್ರೀಯವರಿಗೆ ಏಕವಾರ ರುದ್ರಾಭಿಷೇಕ ನಾಗುತ್ತಿರುವದು

ಮುನ್ಸಿಫ್ ಕೋರ್ಟು:— ಎಂದಿನಂತೆ ಹಿಂದಿನ ಹೊರೆಯನ್ನು ಕಳೆಯುವ ಆತುರದಲ್ಲಿ ಹಲವು ವ್ಯತ್ಯಾಸಗಳಾಗುತ್ತಿರುವುವಂತೆ! ಒಂದು ಕೇಸಿನಲ್ಲಿ 'ಫೆಬ್ರವರಿ ತಿಂಗಳಿನಲ್ಲಿ ಫಾಲ್ಗುಣ ಬಹುಳ ಅಮಾವಾಸ್ಯೆಯು ಆಗಿಹೋಗಿದೆ, ಎಂದು ಬರದಿರುವರಂತೆ! ಇಂತಹ ಹಲವು ವಿಷಯಗಳನ್ನು ತಿಳಿಸಲು ಹಲವರು ಮುಂದೆ ಬರುತ್ತಿದ್ದಾರೆ ಮೇಲಧಿಕಾರಿಗಳು ಒಂದು ವರ್ಷಕ್ಕಿಂತ ಹೆಚ್ಚಾಗಿ ಯಾವ ವೊಖದ್ದಮೆಯೂ ನಿಲ್ಲಿ ಕೂಡದೆಂದು ಹೇಳುವಂತೆ, ಕಾನೂನನ್ನು ಕಣ್ಣಿಟ್ಟು ನೋಡಬೇಕೆಂದೂ, ನಿವಾಸಿಗಳ ಹಕ್ಕು ಬಾಧ್ಯತೆಗಳು ಪವಿತ್ರವಾದುವುಗಳೆಂದೂ ತಿಳಿಸಬಾರದೆ? ಆತುರದಲ್ಲಿಯೂ ಕಾತರಕ್ಕೀಡಾಗದಂತಹ ಸಮರ್ಥರನ್ನೇ ಕೆಲಸಕ್ಕೆ ನಿಯಮಿಸಿದರಾದಿತು' ತಮ್ಮ ಶಿಕ್ಷಿಗಾರದ ಮಾತ್ರವಲ್ಲ, ಪ್ರಜಾಸಾಮಾನ್ಯದ ಹಕ್ಕುಬಾಧ್ಯತೆಗಳಿಗಾಗಿ ಹೋರಾಡಬೇಕಾದುದು ಲಾಯರುಗಳ ಕರ್ತವ್ಯವಲ್ಲವೆ?

ಕರ್ಣಾಟಕ ಸಂಘ:— ಈ ಸಂಘವು ಸ್ವಲ್ಪ ಎಚ್ಚೆತ್ತದಾಗಿ ಕಾಣುತ್ತಿದೆ ಇತ್ತೀಚೆನ ದಿನಗಳಲ್ಲಿ ವಿಶ್ವವಿದ್ಯಾಲಯದ ಉಪನ್ಯಾಸ ಸಂಘದವರು ಉಪನ್ಯಾಸ ಸಪ್ತಾಹವನ್ನು ನೆರವೇರಿಸಿದರು ಬಹುಮಂದಿ ಪ್ರತಿದಿನವೂ ಕೇಳಿ ಸಂತೋಷಿಸುತ್ತಿದ್ದರು ಈ ಸಂಘದವರು ಇಷ್ಟರಲ್ಲಿಯೇ ಯಾವ ನಿರ್ಬಂಧವೂ ಇಲ್ಲದೆ ಎಲ್ಲಾ ವಿಧವಾದ ಸಭೆಗಳಿಗೂ ದೊರೆಯುವಂತಹ ಒಂದು ಪುರಭವನವನ್ನು ಕಟ್ಟುವವರಾಗಿರುವರೆಂದೂ, ಸುಪ್ರಸಿದ್ಧರಾದ ಒಬ್ಬ ಸಮಾಜ ಸೇವಕರು ಒಂದು ಸಾವಿರ ರೂಪಾಯಿಗಳನ್ನು ಕೊಡುವವರಾಗಿರುವರೆಂದೂ, ವರ್ತಮಾನವಿದೆ

ಸಬ್ ಡಿವಿಜನ್ ಆಫೀಸರವರು:— ಶ್ರೀ ಮಾನ್ ಸಿ ಎಚ್. ಕೃಷ್ಣರಾಯರವರು

ಮಂಡ್ಯದ ಬಳಿ ಅನಾಹುತ

ನಾಲ್ಕು ಮಂದಿ ಹಸರಾದರು

ಮಂಡ್ಯಕ್ಕೆ 24 ಮೈಲಿ ದೂರದಲ್ಲಿರುವ ಇಂಡುವಾಳು ಎಂಬಲ್ಲಿ ಎಲೆಕ್ಟ್ರಿಕ್ ತಂತಿಯು ಬಿದ್ದುದರ ಫಲವಾಗಿ ನಾಲ್ವರು ಮೃತರಾದರು ಜುಲೈ ತಾ॥ 10 ರಲ್ಲಿ ಎಲೆಕ್ಟ್ರಿಕ್ ತಂತಿಯು ಒಂದು ಕಬ್ಬಿನ ತೋಟದ ಮೇಲೆ ಬಿತ್ತು ತಕ್ಷಣವೇ ಕಬ್ಬಿನ ಗದ್ದೆ ಎಲ್ಲವೂ ಹತ್ತಿ ಉರಿಯಲಾರಂಭಿಸಿತು. ನಾಲ್ಕು ಮಂದಿ ಉರಿಯನ್ನು ಆರಿಸಲು ನುಗ್ಗಿದರು ಆದರೆ ತಂತಿಯು ತಗುಲಿದ್ದರಿಂದ ಮೃತಪಟ್ಟರು ಜಿಲ್ಲಾಧಿಕಾರಿಗಳು ಮಹಜರ್ ಪ್ರಮುಖ ನಡೆಸುತ್ತಿದ್ದಾರೆಂದು ತಿಳಿದುಬಂದಿದೆ 300 ರೂ ಕಬ್ಬು ನಷ್ಟವಾಗಿದೆಯೆಂದು ಹೇಳಲ್ಪಟ್ಟಿದೆ

ಹಳದಿ ಬಣ್ಣವು ಸೊಳ್ಳೆಯ ವೈರಿ

ಸೊಳ್ಳೆಗಳ ತೊಂದರೆಯನ್ನು ಪರಿಹಾರ ಮಾಡಿಕೊಳ್ಳಲು ಹಳದಿ ಬಣ್ಣವು ಸಹಾಯಕವೆಂದು ಬೌದ್ಧಭಿಕ್ಷುವೊಬ್ಬರು ಹೇಳುತ್ತಾರೆ "ನಾನು ಬಹಳ ದಿನಗಳಿಂದಲೂ ಹಳದಿ ಬಟ್ಟೆಯನ್ನು ಧರಿಸುತ್ತಿದ್ದೇನೆ. ಸೊಳ್ಳೆಗಳು ನನ್ನನ್ನು ಸಮೀಪಿಸುವುದೇ ಇಲ್ಲ ಇದನ್ನು ಅನೇಕದು ಪರೀಕ್ಷೆಮಾಡಿ ನಿಜವೆಂದು ಒಪ್ಪಿರುತ್ತಾರೆ ಹಳದಿ ಬಟ್ಟೆಯನ್ನು ಧರಿಸಿದಲ್ಲಿ ಸೊಳ್ಳೆಯು ಯಾವ ಕಾಲದಲ್ಲೂ ಕೂಡ ಮನುಷ್ಯನ ಹತ್ತಿರ ಹೋಗುವುದಿಲ್ಲ" ಎಂದು ತಿಳಿಸುತ್ತಾರೆ

ಬೈಸಿಕಲ್ ಕಳುವಾಗಿದೆ.

ಪತ್ತೆ ಮಾಡಿದವರಿಗೆ 5 ರೂಪಾಯಿ ಬಹುಮಾನ.

ಶ್ರೀ ರಾಜರಾಜೇಶ್ವರೀ ಹಾಲ್‌ನಲ್ಲಿಟ್ಟಿದ್ದ ಒಂದು ಹೊಸ ಬೈಸಿಕಲ್ ಕಳವಾಗಿದ ಮಾಲನ್ನು ಪತ್ತೆಮಾಡಿ ಮೇಲ್ಕಂಡ ಅಂಗಡಿಗೆ ಕೊಟ್ಟರೆ, ಪತ್ತೆಮಾಡಿದವರಿಗೆ 5 ರೂಪಾಯಿ ಬಹುಮಾನ ಕೊಡುವುದಾಗಿ ಮೇಲ್ಕಂಡ ಅಂಗಡಿಯ ಪ್ರೊಪ್ರೈಟರು ತಿಳಿಸಿರುತ್ತಾರೆ

ಒಂದು ತಿಂಗಳ ರಜವನ್ನುಪಯೋಗಿಸಿಕೊಂಡಿರುವರು ಇವರ ಅಲ್ಪಾವಧಿಯು ಮುನಿಸಿಪಾಲಿಟಿಯ ಅಧ್ಯಕ್ಷತೆಯು ಎಷ್ಟೋ ಹೆಚ್ಚಾಗಿಯೇ ಕೆಲಸಗಳನ್ನು ನಿರ್ವಹಿಸಿರುವುದು.

ಕಾಲಸ್ಥಿತಿ — ಕಪಿಲಾ ಪ್ರವಾಹವು ಇಳಿಯುತ್ತಿದೆ ತುಂತುರು ಜಡಿ ಮಳೆಯು ನಿಂತಿದೆ ಗದ್ದೆಗಳಲ್ಲಿ ಬಿತ್ತನೆಯೂ ವ್ಯವಸಾಯವೂ ಜೋರಾಗಿ ಸಾಗುತ್ತಿದೆ ಸಾಂಕ್ರಾಮಿಕ ರೋಗಗಳಿಲ್ಲದೆ ಊರು ಆರೋಗ್ಯವಾಗಿದೆ

ಹಿತೈಷಿ

ಗಿಣಿ

ಬಾರಲೆ ಗಿಣಿ
ಸಂತಸದ ಣಿ
ಬಾ ಎನ್ನೊಡೆ ಕುಣಿ
ಗಾನವಹಾಡ.
ಸಂತಸನೀಡು
ಎನ್ನೊಡೆ ನೀ ಕೂಡು
ನಿನ್ನನ್ನೆಯ ಬಣ್ಣ
ಕವಿಯ ಕಣ್ಣ
ನೋಡಲು ನೀ ಬಲು ಸೊಗಸಣ್ಣ
ನಿನ್ನಯ ನೋಟ
ನೋಜಿಗದಾಟ
ಹುಡುಗರಿಗೆಲ್ಲಾ ಕುಣಿದಾಟ
ಬಾರೆಲೆ ಗಿಣಿ
ಸಂತಸಮಣಿ
ಬಾ ನಿನ್ನೊಡೆ ಕುಣಿ

ಶೈಲ

ವೈಶ್ಯ ಯುವಜನ ಸಂಘ.

ಮೇಲ್ಕಂಡ ಸಂಘವು ಮೈಸೂರಿನಲ್ಲಿ 22—5—36 ರಲ್ಲಿ ಸ್ಥಾಪಿಸಲ್ಪಟ್ಟು ಅಭಿವೃದ್ಧಿಯನ್ನು ಹೊಂದುತ್ತಿದೆ ಈ ಸಂಘದ ಅಧ್ಯಕ್ಷರೂ, ಪೋಷಕರೂ ಮತ್ತು ಸದಸ್ಯರೂ ಈ ಸಂಘದ ಏಳಿಗೆಗೆ ಬೇಕಾದ ಸಹಾಯಗಳನ್ನು ಮಾಡುತ್ತಲಿದ್ದಾರೆ. ವೈಶ್ಯ ಯುವಕರಿಗೆ ಮುಖ್ಯವಾಗಿ ಬೇಕಾದ ವಾಚನಾಲಯ, ಪುಸ್ತಕ ಭಂಡಾರ ಮತ್ತು ಆಟಪಾಟಗಳಿಗೆ ಅನುಕೂಲವಾದ ಕ್ಷೇತ್ರ ಇವೆಲ್ಲವನ್ನೂ ಈ ಸಂಘವು ಏರ್ಪಡಿಸಿರುವ ಅಂಶವು ಬಹಳ ಸಂತೋಷಕರವಾದ ಸಂಗತಿ ಅವರಿಗೆ ಸಂಬಂಧಪಟ್ಟ ಎಲ್ಲಾ ವಿಚಾರಗಳನ್ನೂ ಪರಿಶೀಲಿಸಿ ಅವರನ್ನು ಸತ್ಪ್ರಜೆಗಳನ್ನಾಗಿ ಮಾಡಲು ಈ ಸಂಘವು ಘನ ಉದ್ದೇಶಗಳನ್ನು ಹೊಂದಿದೆ. ಇವರ ಉದ್ದೇಶವು ಫಲಿಸಲೆಂದು ನಮ್ಮ ಆಶಯ

ಹೊಗೆಸೊಪ್ಪಿನಲ್ಲಿ ವಿಷವಿದೆ

ಇದುವರೆವಿಗೂ ಹೊಗೆಸೊಪ್ಪಿನ ಸೇವನೆಯಿಂದ ಕೊಂಚ ಅಪಾಯವುಂಟಾಗುವುದೆಂಬ ಅಭಿಪ್ರಾಯವಿತ್ತು. ಈಗ ಅದರಲ್ಲಿ ಅನೇಕ ತರಹ ವಿಷಪದಾರ್ಥಗಳು ಸೇರಿರುವುದೆಂದು ಗೊತ್ತಾಗಿದೆ ಈ ಹೊಗೆಸೊಪ್ಪಿನ ಸೇವನೆಯಿಂದ ಮನುಷ್ಯನ ಇಂದ್ರಿಯ ಶಕ್ತಿಯು ಕಡಿಮೆಯಾಗುತ್ತದೆ ಸಿಗರೇಟು ಸೇದುವುದರಿಂದ ಬಾಯಿಯಲ್ಲಿ ಉತ್ಪತ್ತಿಯಾಗುವ ಹಲವು ರಸದೊಡನೆ ವಿಷವು ಸೇರಿ ಅದರಿಂದ ಜೀರ್ಣಶಕ್ತಿ ಕೆಡಕುಂಟಾಗುವುದೆಂದೂ ಮತ್ತು ಕೆಲವೇಳೆ ಇದರಿಂದ ಪ್ರಾಣಾಪಾಯವೂ ಕೂಡ ಉಂಟೆಂದೂ ತಿಳಿದು ಬಂದಿದೆ

ಡಿಸ್ಟ್ರಿಕ್ಟ್ ಬೋರ್ಡ್ ಮೀಟಿಂಗ್

ಮೈಸೂರು ಡಿ॥ ಬೋ॥ ಮೀಟಿಂಗನ್ನು ಈ ತಿಂಗಳು 29ನೇ ತಾರೀಖು ಬುಧವಾರ ದಿವಸ ಮಧ್ಯಾಹ್ನ 12 ಘಂಟೆಗೆ ಸರಿಯಾಗಿ ಮೈಸೂರು ಆಫೀಸು ಕಚೇರಿಯಲ್ಲಿ ನಡೆಯಿಸಲು ಏರ್ಪಾಡುಮಾಡಿದೆ

ಜನಾರ್ದನ ಕಛೇರಿ.

(ಕಚೇರಿ ಸದಸ್ಯನಿಂದ)

ಪ್ರಾತಃಕಾಲ 6 ಘಂಟೆ. ಕಾಶ್ಮೀರ ಶಾಲನ್ನು ಹೊದ್ದು ಒಂದು ಕೈಯಲ್ಲಿ ಉದ್ದವಾದ ದೊಣ್ಣೆಯನ್ನು ಹಿಡಿದು ಮತ್ತೊಂದು ಕೈಯಲ್ಲಿ ಹೊಬುಟ್ಟೆಯನ್ನು ಹಿಡಿದು ಒಂದು ವ್ಯಕ್ತಿಯು ಕೋಟೆ ಉತ್ತರ ಬಾಗಿಲು ಆಂಜನೇಯನ ಗುಡಿ ಗರುಡಗಂಬದ ಹತ್ತಿರ ನಿಂತಿತ್ತು. ಆಂಜನೇಯನಿಗೆ ಮೂರು ಪ್ರದಕ್ಷಿಣೆ ನಮಸ್ಕಾರ ಹೊಡೀತು. ಅಷ್ಟರಲ್ಲಿಯೇ ದೊಡ್ಡಪೇಟೆ ಕಡೆಯಿಂದ ಬೈಸಿಕಲ್ ಮೇಲೆ ಓರ್ವ ತರುಣನು ಭರ್ರನೆ ಬಂದು ನಿಂತನು. ಹೀಗೆ ಪ್ರಶ್ನಿಸಿದನು —

ಏನು ಸಾಹುಕಾರ್ ನಂಜಪ್ಪನವರೇ? ಸಂಚಾರ ಮುಗೀತೇ. ದೇವರ ದರ್ಶನಕ್ಕೆ ಬಂದಿದ್ದಿರೆಂದು ಕಾಣುತ್ತೆ.

ಅಷ್ಟರಲ್ಲೇ ಅಂಚೆ ಅಣ್ಣಪ್ಪನವರೂ, ಜಿಲ್ಲದ ಬಸಪ್ಪನವರೂ, ಅಗ್ರಹಾರದ ನಂಜುಂಡಯ್ಯನವರೂ ಬಂದು ಸೇರಿದರು.

ಆಗ ಬೈಸಿಕಲ್ ವ್ಯಕ್ತಿಯು, ತನ್ನ ಬೈಸಿಕಲ್ ದಾರಿಹಿಡಿಯಲು ಪಕ್ರಮಿಸಿತು.

ಹಿಕ್ಕವರುಗಳು :—ಶ್ರೀ ಸೋಮೇಶ್ವರನ ಗುಡಿಗೆ ಹೋಗಿ ನವಗ್ರಹ ದರ್ಶನವೂ ಆಗಲಿ. ಹೀಗೆ ಬನ್ನಿ. ಎಲ್ಲಾ ಹೋಗೋಣ ಒಟ್ಟಿಗೆ, ಅಂದರು.

ಬೈಸಿಕಲ್ ಯುವಕನು:—ಇಲ್ಲ. ನನಗೆ ತುರ್ತು ಕೆಲಸ ಇದೆ. ಹೊರಡುತ್ತೇನೆ.

ನಂಜುಂಡಯ್ಯ :—ಬೈಸಿಕಲ್ ಇರೋದು ಯಾಕೆ ಹೀಗಾಡುತೀರಿ, ಸ್ವಾಮಿ? ನಮ್ಮ ಮಾರ್ನಿಂಗ್ ಎಂಗೇಜ್‌ಮೆಂಟುಗಳು ಇಲ್ಲಿ ಅಂದರೆ ಅಲ್ಲಿ ಆಗಬಹುದಲ್ಲ. ಆದೇ ಉಗ್ರಹಾರದ ಕಾಂತರಾಜೇಶ್ವರ ಹಿಂದಕ್ಕೆ ಹೋಗಬೇಕೆಂಬ ನಿಯಮವೇ? ಬನ್ನಿರಿ ಹೀಗೇನೆ. ಸ್ವಾಮಿ ಸೇವೆ ದೊರೆಯಲಿ.

ಯುವಕ —ಇಲ್ಲೂ ತ್ರಿನಯನೇಶ್ವರನ ಗುಡಿ ಸಿಕ್ಕುವುದಿಲ್ಲವೇ.

ಅಂಚೆ ಅಣ್ಣಪ್ಪ :—ತ್ರಿನೇಶ್ವರನ ದೇವಸ್ಥಾನವೂ ಸಿಕ್ಕುತ್ತೆ. ಅದರ ಮಗ್ಗುಲಲ್ಲೇ ನಾಯಿ ದೇವಸ್ಥಾನವೂ ಸಿಕ್ಕುತ್ತೆ. ಇದರ ಮುಂದೆ ದಾರಿಲಿ ಯಾರಾದರೂ ಉಟಿಪ್ರೋತ್ಸವಕ್ಕೆ ಸಿಕ್ಕಿದರೆ ಸಿಪಾಯಿ ಸ್ಥಾನದ ಹತ್ತಿರವಾದರೂ ಸ್ವಲ್ಪ ನಿಲ್ಲಿರಿ ಇಲ್ಲಿ ನವಗ್ರಹಗಳ ಜೊತೆ ವಿಶೇಷವಾಗಿ ಪ್ರತಿಷ್ಠಿಸಲ್ಪಟ್ಟಿರುವ ಗಣಾಧಿಪತಿಯನ್ನೂ ದರ್ಶನಮಾಡೋಗುವದರಂತೆ, ಬನ್ನಿ.

ಯುವಕ —ತ್ರಿನಯನೇಶ್ವರನು ನಾವು ಬೈಸಿಕಲ್ ಮೇಲೆ ಹೋಗುವಾಗ ಬರುವಲೆಲ್ಲಾ ಸಿಕ್ಕುತ್ತಾನೆ. ಅವನಿಗೋಸ್ಕರ ಯಾರೂ ಕಷ್ಟಪಡಬೇಕಾಗಿಲ್ಲ. ಬೈಸಿಕಲ್ ಇಳಿಯಲೂ ಬೇಕಾಗಿಲ್ಲ. ಮೊದಲು ಪಟ್ಟಾನೆ ಇದ್ದಾಗ ಅರಮನೆ ಮುಂದೆ ಇಳಿಯಬೇಕಾಗಿತ್ತು. ಈಗ ಆ ತೊಂದರೆಯೂ ಇಲ್ಲ. ಸೀದಾ ಹೊರಟು ಹೋಗುತ್ತೇವೆ.

ಶಾಸ್ತ್ರಿಗಳು :—ಆಗ ಅರಮನೆ ಮುಂದೆ ಮಾಡುತ್ತಿದ್ದ ಮುಜರೆಯನ್ನು ಈಗ ಎರಡು ದಿಡ್ಡಿ ಬಾಗಿಲುಗಳಿಗೆ ಸಲ್ಲಿಸುತ್ತಿದೀರಿ.

ಯುವಕ.—ಈ ಬಾಗಿಲುವರೆಗೂ ಬಂದ ಕಾಲು ಸೋಮೇಶ್ವರನ ಗುಡಿ ವರೆಗೆ ಹೋಗೊಲ್ಲ ಅನ್ನುತ್ತೆ ಯಾಕೆಂದರೆ ಬೈಸಿಕಲ್ ಮೇಲೆ ಹೋಗೋ ಹಾಗಿಲ್ಲ. ಇಲ್ಲನಿದ್ದರೆ ಒಂದೆರಡು ಪೆಡಲ್ ಮಾಡೋ ಕಡಲ್ಲಿ ನವಗ್ರಹದರ್ಶನವಾಗುತ್ತಾ ಇತ್ತು. ಬೈಸಿಕಲ್ ಹತ್ತಕೂಡದಂತೆ ಆ ರಸ್ತೇಲಿ.

ಶಾಸ್ತ್ರಿಗಳು —ಅರಮನೆ ಮುಂದೆ, ಪೇಟೆಗೇ ಬರಬಹುದಂತೆ. ಈ ಒತೇರಿ ಮಗ್ಗುಲಲ್ಲೇ ಹೋದರೆ ಆಕ್ಷೇಪಣೆಯೇನು ಸ್ವಾಮಿ? ಇಲ್ಲದಿದ್ದರೆ ಆ ಸಿಪಾಯಿ ದೇವಸ್ಥಾನದ ಹಿಂಭಾಗದ ರಸ್ತೆಯಿಂದ ಕೋಟೆ ಬಾಗಿಲು ಮೂಲಕ ನವಗ್ರಹ ದೇವಸ್ಥಾನದ ಸುತ್ತುಹಾಕಿಕೊಂಡು ಮಾಮೂಲು ದಿಡ್ಡೀಬಾಗಿಲಿಗೆ ಬರೋಹಾಗೆ ಮಾಡಬಾರದೆ?

ಯುವಕ —ಶಾಸ್ತ್ರಿಗಳೇ ತಾವು ಹೇಳುದು ನಿಜ. ಆ ರೀತಿ ಮಾಡಿದರೆ ಬಲವಂತವಾಗಿ ನವಗ್ರಹ ಸೇವೆ ಎಲ್ಲರಿಗೂ ಲಭ್ಯವಾಗಿ ಗ್ರಹಚಾರವೂ ಪರಿಹರವಾಗುತ್ತೆ. ಆದರೆ ನಮ್ಮ ನಿಮ್ಮ ಮಾತು ಕೇಳುವರ್ಯಾರು ದೇವರು?

ಶಾಸ್ತ್ರಿಗಳು:—ಸರಿಯೇ, ಹಿಂದೆ ಈ ನವಗ್ರಹ ದೇವಸ್ಥಾನವನ್ನೇ ಎತ್ತಿಹಾಕಬೇಕು ಅಂತಿದ್ದಾಗ ಎಲ್ಲರೂ ಒಟ್ಟಿನಲ್ಲಿ ಸೇರಿ ದೇವಸ್ಥಾನ ಉಳಿಯುವ ಹಾಗೆ ಏರ್ಪಾಡು ಮಾಡಲಿಲ್ಲವೇ? ಆ ಮೇಲೆ ತಾನೇ ಈ ದೇವಸ್ಥಾನದ ಅಭಿವೃದ್ಧಿ ಇಷ್ಟಾಗಿರುವುದು?

ಯುವಕ.—ಯಾವುದಕ್ಕೂ ಈ ದಿನ ಶುಕ್ರವಾರ. ಮತ್ತೊಂದು ದಿನ ನಿಧಾನವಾಗಿ ಮಾತನಾಡೋಣ. ಹತ್ತುಜನಕ್ಕೆ ಸೇರಿದ ಕೆಲಸವ್ಯಾವುದೂ ಇಲ್ಲ. ಯೋಗಿಬರುತ್ತೇನೆ. ನಾಳೆ ಸಾಯಂಕಾಲ ಮಾಮೂಲ್ ಪ್ರಕಾರ ಪಾರ್ಕ್‌ನಲ್ಲ ಸೇರಬಹುದಷ್ಟೆ. ವಿಶ್ವಾಸವಿರಲಿ.

ಒಲಂಪಿಯಾ ಟಾಕೀಸ್



“ಮಹಾತ್ಮ”

ತಾರೆಯ ತಿಳುವು.

ಲೇಖಕರು.—ಎಂ. ವಿ. ನಾರಾಯಣ ಮೂರ್ತಿ ಮೈಸೂರು.

ಆಕಾಶದಲ್ಲಿ ಮೋಡಗಳ ಸುಳಿವಾಟವಿಲ್ಲದೆ ಸ್ವಚ್ಛವಾಗಿರುವ ಒಂದು ರಾತ್ರಿ ನಾವು ತಲೆಯೆತ್ತಿ ನೋಡಿದರೆ ನಮ್ಮ ಬರಿಗಣ್ಣಿಗೆ ಸಾವಿರಾರು ತಾರೆಗಳು ಕಾಣಬರುತ್ತವೆ. ಬಹುಶಃ ಆ ತಾರೆಗಳೊಂದರಿಂದ ನಮ್ಮ ಭೂಮಿಯನ್ನು ನೋಡಿದರೂ ನಾವು ಇಷ್ಟೇ ಚಿಕ್ಕದಾದ ಸೂಜಿಯಂತೆ ಕಾಣಿಸಬಹುದಲ್ಲವೆ! ನಾವಿರುವ ಭೂಮಿಗೆ ೮೦೦೦ ಮೈಲಿ ವ್ಯಾಸವಿದೆ. ಇದನ್ನು ಈ ಇಡೀ ವಿಶ್ವದೊಡನೆ ಹೋಲಿಸಿದರೆ ಬರಿಯ ಒಂದು ಧೂಳಿನ ಕಣದಂತೆ ತೋರುತ್ತದೆ.

ವಿಶ್ವವನ್ನು ತುಂಬಿಕೊಂಡಿರುವ ಈ ತಾರೆಗಳ ಸ್ವರೂಪವೇನು, ತಾರೆಗಳೆಂದರೇನು, ಅವುಗಳ ಜನನ ಮರಣಗಳು ಯಾವಾಗ ಎಂದು ಕೊಂಚ ಆಲೋಚಿಸೋಣ. ಆಗ ದೇವರು ನಮಗೆ ಕೊಟ್ಟಿರುವ ಕಣ್ಣು ಮತ್ತು ಮಿದುಳುಗಳು ಸಾರ್ಥಕವಾಗುತ್ತವೆ.

ಹಿಂದಿನ ಕಾಲದಲ್ಲಿ ನಕ್ಷತ್ರಗಳಿಗೆ ಜನನವೇ ಇಲ್ಲ, ಅವು ಮೊದಲಿಂದಲೂ ಬಾಂದಳದಲ್ಲೇ ಇದ್ದವು ಎಂದು ತಿಳಿದಿದ್ದರು. ಆದರೆ ಈಗ ಅವೆಲ್ಲಕ್ಕೂ ಜನನ ಮರಣಗಳವೆಯೆಂದು ಶಾಸ್ತ್ರಜ್ಞರು ಕಂಡುಹಿಡಿದಿದ್ದಾರೆ.

ಹಿಂದಿನ ಕಾಲದ ನಕ್ಷತ್ರಗಳಲ್ಲಿ, ಕೆಲವು ಧ್ರುವ ಮೊದಲಾದ ಭಕ್ತರ ಆತ್ಮಗಳೆಂದೂ, ಕೆಲವು ಋಷಿಗಳೆಂದೂ, ಮತ್ತೆ ಕೆಲವು ದೇವ, ದಾನವ, ದೈತ್ಯ, ಮೃಗಗಳೆಂದೂ ನಂಬಿದ್ದರು. ಆದರೆ ಇವೆಲ್ಲವೂ ಮೂಢನಂಬಿಕೆಯೇ ಹೊರತು, ಕಟ್ಟುಕಥೆಗಳೇ ಹೊರತು ನಿಜವಲ್ಲ. ಕೆಲವರು, ಶಿಲಾ ವಿಶೇಷಗಳು ಉರಿದು ಬೀಳುವುದನ್ನು ಕಂಡು ತಾರೆಗಳು ನೆಲಕ್ಕೆ ಉರುಳುವುದೆಂದು ಭಯಪಟ್ಟು, ಅರ್ಜುನನ ಹೆಸರುಗಳನ್ನು ಹೇಳಿ ಹೃದಯವನ್ನು ಶಾಂತಪಡಿಸಿಕೊಳ್ಳುವರು. ಆದರೆ ನಾವು ಈ ತಾರೆಗಳ ಗಾತ್ರವನ್ನು ಗಮನಕ್ಕೆ ತೆಗೆದುಕೊಂಡರೆ ನಮ್ಮ ಭೂಮಿಗಿಂತ ಸಾವಿರ, ಕೋಟಿ ಪಾಲು ದೊಡ್ಡದಾದ ನಕ್ಷತ್ರಗಳಿವೆ. ಹಾಗಾದರೆ ಅವು ಭೂಮಿಯಮೇಲೆ ಬೀಳುವುದು ತಾನೆ ಹೇಗೆ? ಬಿದ್ದರೆ ಉಳಿವುಂಟೆ? ಅರ್ಜುನನಲ್ಲ ಭೀಮ ಬಂದರೂ ಬದುಕುವಹಾಗಿಲ್ಲ.

ದೂರದರ್ಶಿನಿ

ನಾವು ರಾತ್ರಿಸಮಯದಲ್ಲಿ ಕಾಣುವ ತಾರೆಗಳ ನಿಜವಾದ ಸಂಖ್ಯೆ, ಗಾತ್ರ, ದೂರ, ಮುಂತಾದವುಗಳನ್ನು ತಿಳಿಯಬೇಕಾದರೆ ದೂರದರ್ಶಿನಿಯ ಸಹಾಯಬೇಕು. ಬಾಂದಳದಲ್ಲಿ ನಮ್ಮ ಬರಿಗಣ್ಣಿಗೆ ಸುಮಾರು 2000 ನಕ್ಷತ್ರಗಳು ಮಾತ್ರ ಕಾಣಬರುವುವು. ಆದರೆ ಈಗ ನಾವು ತಯಾರಿಸಿರುವ 100 ಅಂಗುಲ ವ್ಯಾಸದ ದೂರದರ್ಶಿನಿಯಿಂದ, 200 ಕೋಟಿಗೂ ಹೆಚ್ಚಾಗಿ ತಾರೆಗಳು ಇವೆಯೆಂದು ಗೊತ್ತಾಗುತ್ತದೆ. ಈಗ 200 ಅಂಗುಲ ವ್ಯಾಸದ ಒಂದು ಹೊಸ ದೂರದರ್ಶಿನಿಯನ್ನು ತಯಾರಿಸುತ್ತಿರುವರು. ಆಗ ಎಷ್ಟು ತಾರೆಗಳು ಕಾಣುವುವೋ ಎಂಬುದು ತಿಳಿಯದಾಗಿದೆ.

ಎಂದು ನಕ್ಷತ್ರಗಳು ನಮಗೆ ಬಹಳ ಹತ್ತಿರ ಬಂದಂತೆ ಕಾಣುತ್ತವೆ. ಆದರೆ ದೂರದರ್ಶಿನಿಯಿಂದ ನೋಡಿದರೆ ಅವುಗಳು ೫ ಅಥವಾ ೬ ಕೋಟಿ ಮೈಲುಗಳಷ್ಟು ಅಂತರದಲ್ಲಿರುತ್ತವೆ. ಯಾವಾಗಲೂ ಈ ನಕ್ಷತ್ರಗಳ ದೂರವನ್ನು ಜ್ಯೋತಿವತ್ಸರ (Light years) ಗಳಲ್ಲಿ ಲೆಕ್ಕ ಮಾಡುತ್ತಾರೆ ಬೆಳಕು, ನಿಮಿಷಕ್ಕೆ ೧೮೬,೦೦೦ ಮೈಲಿಯಂತೆ ಸಂಚರಿಸಬಲ್ಲುದು. ನಮ್ಮ ಭೂಮಿಗೆ ಬಹಳ ಹತ್ತಿರದಲ್ಲಿರುವ ನಕ್ಷತ್ರವು ನಮ್ಮಿಂದ ೧೩೦,೦೦೦ ಜ್ಯೋತಿವತ್ಸರದ ದೂರವಿದೆಯಂತೆ. ಹಾಗೆಂದಮೇಲೆ ಎಷ್ಟು ಮೈಲಿ ಅಂತರವಿರಬೇಕು?

(ಮುಂದುವರಿಯುವುದು)

ಆಫೀಸರುಗಳ ಪರೀಕ್ಷೆ.

ಕಳೆದ ಜುಲೈ ತಾ॥ 11 ರಲ್ಲಿ ನಡೆದ ಗೆಜೆಟೆಡ್ ಆಫೀಸರುಗಳ ಕನ್ನಡ ಪರೀಕ್ಷೆಯಲ್ಲಿ ಆಕ್ಟಿಂಗ್ ಅಮಲ್ದಾರರಾದ ಮಿ॥ ವಜೀರ್ ಅಹಮದ್ ಮೆಕ್ಕೆಯವರೂ ಮಿ॥ ಸೈಯದ್ ಅಬ್ದುಲ್ ಗನಿಯವರೂ ತೇರ್ಗಡೆ ಹೊಂದಿರುವರೆಂದು ತಿಳಿದು ಬಂದಿದೆ.

ಕಳೆದ ತಿಂಗಳು 25 ನೇ ತಾರೀಖಿನಿಂದ ಒಂದು ತಿಂಗಳು ಪ್ರಿವಿಲೇಜ್ ರಜವನ್ನು ಹೊಂದಿರುವ ಅಸಿಸ್ಟೆಂಟ್ ಕಂಟ್ರೋಲರ್ ಮಿ॥ ಎಸ್. ರಾಘವಾಚಾರ್ಯರ ಸ್ಥಾನದಲ್ಲಿ, ಸೀನಿಯರ್ ಮೊದಲನೆ ದರ್ಜೆಯ ಸೂಪರಿಂಟೆಂಡೆಂಟರಾದ ಮ॥ ಹೆಚ್. ವಿ. ವೆಂಕಟರಾಮಯ್ಯಂಗಾರ್ಯರು ಅಸಿಸ್ಟೆಂಟ್ ಕಂಟ್ರೋಲರಾಗಿ ಕೆಲಸ ಮಾಡಲು ಪ್ರಭುತ್ವದ ಆಜ್ಞೆಯಾಗಿದೆ.

ರಸ್ತೆಗೆ ಹತ್ತಿ ಬಟ್ಟೆಗಳು.

ಜಲ್ಲಿ ಕಲ್ಲಿಗೆ ಬದಲಾಗಿ ಅಮೇರಿಕಾದ ಸಂಯುಕ್ತ ಸಂಸ್ಥಾನದಲ್ಲಿ ರಸ್ತೆಗಳಿಗೆ ಹತ್ತಿ ಬಟ್ಟೆಗಳನ್ನು ಉಪಯೋಗಿಸುತ್ತಿರುವರು. ರಸ್ತೆಗಳಮೇಲೆ ಹತ್ತಿ ಬಟ್ಟೆಯನ್ನು ಹಾಸಿ, ಅದರಮೇಲೆ ಕಲ್ಲರಗನ್ನು ಸುರಿದು, ಅವೆಲ್ಲವೂ ಗಟ್ಟಿಯಾಗಿ, ಒಣಗಿದನಂತರ ಪುನಃ ಹತ್ತಿ ಬಟ್ಟೆಯನ್ನು ಅದರಮೇಲೆ ಇನ್ನೊಂದು ಪದರ ಹಾಸಿ, ಮರಳನ್ನು ಚೆಲ್ಲಿ ರೋಡುಗಲ್ಲನ್ನು ಎಳೆಯಿಸಿದರೆ ರಸ್ತೆಯು ಬಹಳಕಾಲ ಕೆಡುವುದಿಲ್ಲವೆಂಬುದು ಅಮೇರಿಕಾದವರ ಪ್ರಯೋಗದ ಸಿದ್ಧಾಂತ. ಹೀಗೆ ಮಾಡುವುದರಿಂದ ಹಣದ ಖರ್ಚೂ ಬಹಳ ಕಡಮೆಯಾಗುವುದು.

ಸಾಧ್ವಿ
೨೦-೭-೩೬ ನೇ ಸೋಮವಾರ

ಮಾರ್ಕೆಟ್ ವರ್ತಕರ ತೊಂದರೆಗಳು

ಮೈಸೂರು ದೇವರಾಜ ಮಾರ್ಕೆಟ್ ವರ್ತಕರು ತಮ್ಮ ಅಂಗಡಿಗಳಿಗೆ ಕೊಡಬೇಕಾಗಿರುವ ಬಾಡಿಗೆ ದರಗಳು ಬಹಳ ಮಟ್ಟಿಗೆ ಹೆಚ್ಚು ಮಾಡಲ್ಪಟ್ಟಿವೆಯೆಂದು ಅಸಮಾಧಾನಗೊಂಡಿರುವರು. ಇವರುಗಳ ಪೈಕಿ ಹಲವರಿಗೆ ಒಂದಕ್ಕೆ ಎರಡರಷ್ಟು ಬಾಡಿಗೆಯೂ ಏರಿಸಲ್ಪಟ್ಟಿದೆ. ಉದಾಹರಣೆಗಾಗಿ ಮಾರ್ಕೆಟ್ಟಿನ ಪೂರ್ವಭಾಗದಲ್ಲಿ ಸಯ್ಯಾಜಿರಾವ್ ರಸ್ತೆಗೆ ಸೇರಿದಂತಿರುವ ಅನೇಕ ಅಂಗಡಿಗಳಿಗೆ ಶೇಕಡಾ 90 ರಂತೆ ಬಾಡಿಗೆ ದರವು ಹೆಚ್ಚಿಸಲ್ಪಟ್ಟಿದೆ ಮತ್ತು ಮಾರ್ಕೆಟ್ಟಿನೊಳಗೆ ಸೊಪ್ಪು, ತರಕಾರಿ ಮುಂತಾದುವುಗಳನ್ನು ಮಾರುವವರಿಗೂ ಬಾಡಿಗೆಯು ಹೆಚ್ಚಿಸಲ್ಪಟ್ಟಿದೆ. ವ್ಯಾಪಾರವು ಕೇವಲ ಹೀನಸ್ಥಿತಿಯಲ್ಲಿರುವ ಈ ಕಾಲದಲ್ಲಿ ಇದುವರೆವಿಗೆ ಕೊಡುತ್ತಿದ್ದ ಬಾಡಿಗೆಗಳನ್ನೇ ಕೊಡಲು ಶಕ್ತಿಸಾಲದೆಂದು ವರ್ತಕರು ಗೊಣಗುಟ್ಟುತ್ತಿದ್ದರು. ಹೀಗಿರುವಲ್ಲಿ ಹೆಚ್ಚಿನ ಬಾಡಿಗೆಯನ್ನು ಕೊಡಲು ಸಾಧ್ಯವಿಲ್ಲವೆಂದು ಅವರು ಅಧಿಕಾರಿಗಳಿಗೆ ಅರಿಕೆ ಮಾಡಿಕೊಂಡರು. ಕಳೆದವಾರ ವರ್ತಕ ಸಂಘದಲ್ಲಿ ಡಾ|| ಟಿ. ಸಿ. ನಟರಾಜರವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ತಮ್ಮ ಕುಂದುಕೊರತೆಗಳನ್ನು ಪ್ರಭುತ್ವದವರಿಗೆ ಅರಿಕೆ ಮಾಡಬೇಕೆಂದು ತೀರ್ಮಾನಿಸಿದರು ಮತ್ತು ಸಮಯಬಂದರೆ ವರ್ತಕರಿಗೆ ಉಂಟಾಗಬಹುದಾದ ತೊಂದರೆಗಳನ್ನು ಪರಿಹರಿಸಲು ಸುಮಾರು 600 ರೂ ಚಂದಾ ವಸೂಲಿ ಮಾಡಿದರು.

ಪ್ರಕೃತದಲ್ಲಿ ವಾಸ್ತವವಾಗಿಯೂ ಅನೇಕ ವರ್ತಕರು ಹೆಚ್ಚಿನ ಬಾಡಿಗೆಯನ್ನು ಕೊಡಲು ಸಮರ್ಥರಾಗಿಲ್ಲ ಆದ್ದರಿಂದ ಹಠಾತ್ತಾಗಿ ಬಾಡಿಗೆಗಳನ್ನು ಬಹಳ ಮಟ್ಟಿಗೆ ಹೆಚ್ಚಿಸುವುದು ಸರಿಯಲ್ಲ ವರ್ತಕರಿಗೆ ನಿರಾಶೆಯನ್ನುಂಟುಮಾಡಿ ಅವರ ಸೌಹಾರ್ದವನ್ನೂ, ಸಹಕಾರವನ್ನೂ ತಿರಸ್ಕರಿಸುವುದು ಉಚಿತವಲ್ಲ ಈ ವಿಷಯವನ್ನು ಪುನಃ ಪರ್ಯಾಲೋಚಿಸಿ ಆವಶ್ಯಕವಾದ ಏರ್ಪಾಡುಗಳನ್ನು ಮಾಡಲು ಪೌರಸಭೆಯ ಒಂದು ವಿಶೇಷ ಅಧಿವೇಶನವನ್ನು ನಡೆಸಲು ಹಲವು ಸದಸ್ಯರು ಪ್ರಯತ್ನಿಸುತ್ತಿರುವುದಾಗಿ ಕೇಳುತ್ತೇವೆ ಅದರಲ್ಲಿ ಸಮಾಧಾನಕರವಾದ ಒಂದು ವ್ಯವಸ್ಥೆಯು ಆಗಲೆಂದು ಹಾರೈಸುತ್ತೇವೆ.

ಇನ್ನೂ ಅಗ್ರಮರ್ಯಾದೆಗಳೇಕೆ?

ಅಗ್ರಮರ್ಯಾದೆಗಳ ಕಾಲವು ಮಾಯವಾಗುತ್ತಿದೆ. ಇರತಕ್ಕ ಮಾಮೂಲುಗಳೂ ಕಾಲಕ್ರಮದಲ್ಲಿ ಕಳಚಿಬೀಳುತ್ತಿವೆ. ಹೀಗಿರುವಲ್ಲಿ ಇಲ್ಲದ ಮರ್ಯಾದೆಗಳನ್ನು ಕಲ್ಪಿಸುವುದು ಅನುಚಿತವೇ ಸರಿ. ಅದರಲ್ಲಿಯೂ ಅವಶ್ಯಕವಾದ ಏರ್ಪಾಡುಗಳೇ ಸಾಕಾದಷ್ಟು ಇಲ್ಲದಿರುವಾಗ ಅಪ್ರಕೃತವಾದ ವ್ಯವಸ್ಥೆಗಳನ್ನು ಮಾಡುವುದು ಶುದ್ಧ ತಪ್ಪು.

ನಮ್ಮ ಸರ್ಕಾರದವರು ಮೈಸೂರು ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ ಯೂರೋಪಿಯನರಿಗಾಗಿಯೇ ಪ್ರತ್ಯೇಕವಾದ ಒಂದು ವಾರ್ಡನ್ನು ಕಟ್ಟಬೇಕೆಂದು ಆಲೋಚಿಸಿರುವರು. ಅದಕ್ಕಾಗಿ 3500 ರೂ. ಗಳನ್ನು ಮಂಜೂರು ಮಾಡಿರುವರು. ಈ ಪ್ರತ್ಯೇಕ ಸಲಕರಣೆಯ ನೀತಿಯು ನಮಗೆ ಒಪ್ಪುವುದಿಲ್ಲ. ಆಸ್ಪತ್ರೆಗಳು ಧರ್ಮ ಸಂಸ್ಥೆಗಳು. ಅಲ್ಲಿ ಜಾತಿ, ಮತಗಳ ಭೇದಗಳಿಗೆ ಅವಕಾಶವಿಲ್ಲ. ಎಲ್ಲಾ ಜನರಿಗೂ ಭೂತದಯಾ ಪಕ್ಷಪಾತದಿಂದ ಸಾಮಾನ್ಯವಾದ ಚಿಕಿತ್ಸೆಯು ಅಲ್ಲಿ ದೊರೆಯಬೇಕು. ಯೂರೋಪಿಯನರಿಗೂ ದೊರೆಯಬಹುದು. ಆದರೆ ಯಾರಿಗೂ ಪ್ರತ್ಯೇಕವಾದ ಸೌಲಭ್ಯಗಳಿಗೆ ಅಧಿಕಾರವಿರುವುದಿಲ್ಲ.

ನಮ್ಮ ದೇಶದ ಆಸ್ಪತ್ರೆಗಳಲ್ಲಿ ನಮ್ಮ ಜನರಿಗೆ ಸಾಕಾದಷ್ಟು ಚಿಕಿತ್ಸೆಯ ಸೌಕರ್ಯಗಳಿರುವುದಿಲ್ಲ. ಆಸ್ಪತ್ರೆಗೆ ದಾಖಲಾದವರಿಗೆ ಹಲವುವೇಳೆ ತೃಪ್ತಿಕರವಾದ ಸೌಲಭ್ಯಗಳು ದೊರಕುವುದಿಲ್ಲವೆಂಬ ಆಕ್ಷೇಪಣೆಗಳು ಕೇಳಿಬರುತ್ತಿವೆ. ಅನೇಕ ಆಸ್ಪತ್ರೆಗಳಲ್ಲಿ ಸಾಕಾದಷ್ಟು ಔಷದ ಸಾಮಗ್ರಿಗಳಿಲ್ಲವೆಂದೂ ಹೇಳಲ್ಪಡುತ್ತಿದೆ. ಹೀಗಿರುವಲ್ಲಿ ಯೂರೋಪಿಯನರಿಗಾಗಿಯೇ ಬೇರೆ ಏರ್ಪಾಡು ಮಾಡುವುದು ಸೂಕ್ತವಲ್ಲ

ಯೂರೋಪಿಯನರು ಸಾಮಾನ್ಯವಾಗಿ ಅನುಕೂಲಸ್ಥರಾಗಿರುವರು. ಅವರು ನಮ್ಮ ಆಸ್ಪತ್ರೆಗಳ ಈಗಿನ ಸ್ಪೆಷಲ್ ವಾರ್ಡುಗಳಲ್ಲಿ ಹಣವನ್ನು ಕೊಟ್ಟು ಇರಬಹುದು. ಇಲ್ಲವೇ ಖಾಸಗಿ ವೈದ್ಯಶಾಲೆಗಳಲ್ಲಿ ಹಣವನ್ನು ಕೊಟ್ಟು ಚಿಕಿತ್ಸೆ ಪಡೆಯಬಹುದು. ಅಥವಾ ಕೇವಲ ಅನಾನುಕೂಲವುಳ್ಳರಾಗಿದ್ದರೆ ಎಲ್ಲರಂತೆಯೇ ಅವರು ಸಾಮಾನ್ಯ ವಾರ್ಡುಗಳಲ್ಲಿ ಚಿಕಿತ್ಸೆ ಪಡೆಯಬಹುದು. ಪ್ರತ್ಯೇಕ ಸೌಲಭ್ಯಗಳಿಗೆ ಕಾರಣವಿಲ್ಲ.

ಯೂರೋಪಿಯನರಿಗಾಗಿಯೇ ಮೀಸಲಾಗಿಡಲ್ಪಡುತ್ತಿದ್ದ ಸೌಲಭ್ಯಗಳು ಈಚೀಚಿಗೆ ಕಡಿಮೆಯಾಗುತ್ತ ಬಂದಿವೆ. ಸುಮಾರು ಇಪ್ಪತ್ತು ವರ್ಷಗಳ ಹಿಂದೆ ರೈಲುಗಳಲ್ಲಿ ಯೂರೋಪಿಯನರಿಗಾಗಿಯೇ ಒಂದು ಗಾಡಿಯು ಪ್ರತ್ಯೇಕವಾಗಿಡಲ್ಪಡುತ್ತಿತ್ತು. ಸ್ಟೇಷನ್ನುಗಳಲ್ಲಿ ಪ್ರತ್ಯೇಕವಾದ ವಿಶ್ರಾಂತಿ ಗೃಹಗಳಿರುತ್ತಿದ್ದವು. ಈಗ ಅವುಗಳು ಮಾಯವಾಗುತ್ತಿವೆ.

ಯೂರೋಪಿಯನರಿಗಾಗಿ ಚಿಕಿತ್ಸಾ ಸೌಕರ್ಯಗಳನ್ನೊದಗಿಸುವುದರಲ್ಲಿ ಯಾರಿಗೂ ಭಿನ್ನಾಭಿಪ್ರಾಯವಿರುವುದಿಲ್ಲ. ಅವರೂ ಮನುಷ್ಯರು, ನಮ್ಮ ಸಹೋದರರು, ಆದರೆ ಅವರು ನಮ್ಮ ದೇಶದವರಲ್ಲ. ನಮ್ಮ ದೇಶಕ್ಕೆ ಕಂದಾಯವನ್ನು ಕೊಡುವುದಿಲ್ಲ. ಆದ್ದರಿಂದ ನಮ್ಮ ದೇಶದವರಿಗೇ ಸಲ್ಲದ ಸೌಕರ್ಯಗಳಿಗೆ ಅವರು ಪಾತ್ರರಾಗುವುದಿಲ್ಲ. ತನಗಿಲ್ಲದ ದೇವರು ತಮ್ಮಡಿಗೆ ವರವನ್ನು ಕೊಡಲಾರದು.

ಅಂತರ ರಾಷ್ಟ್ರ ಸಂಘಕ್ಕೆ ಧಿಕ್ಕಾರ.

ರಾಷ್ಟ್ರ ಸಂಘವು ಇಟಲಿ—ಅಬಿಸೀನಿಯಾ ಸಮಸ್ಯೆಯಲ್ಲಿ ಅನುಸರಿಸಿದ ನೀತಿಯನ್ನೂ ಮತ್ತು ಈ ವಿಷಯದಲ್ಲಿ ಬ್ರಿಟನ್ನಿನ ಘೋರಣೆಯನ್ನೂ ಖಂಡಿಸುವ ಠರಾವುಗಳು ಕಾಂಗ್ರೆಸ್ ಸೋಷಿಯಲಿಸ್ಟ್ ಸಭೆಯಿಂದ ಅಲಹಾಬಾದಿನಲ್ಲಿ ಅಂಗೀಕೃತವಾದವು.

'ಅಂತರ ರಾಷ್ಟ್ರೀಯ ಸಂಘವು ಬರೇ ತೋರಿಕೆಯ ರಕ್ಷಣೆಯನ್ನು ಕೊಡುತ್ತಾ ದ್ರೋಹವನ್ನುಂಟುಮಾಡುತ್ತಿದೆ" ಎಂದು ಬೊಂಬಾಯಿನ ಕಾಂಗ್ರೆಸ್ ಸೋಷಿಯಲಿಸ್ಟ್ ಪಕ್ಷದ ಆಶ್ರಯದಲ್ಲಿ ಒಂದು ಭಾರಿ ಸಾರ್ವಜನಿಕ ಸಭೆಯು ಕಳೆದವಾರ ತೀರ್ಮಾನಿಸಿತು.

ಇದೇ ರೀತಿ ರಾಷ್ಟ್ರ ಸಂಘಕ್ಕೆ ಧಿಕ್ಕಾರವು ಮದರಾಸಿನಲ್ಲಿಯೂ ನಡೆಯಿತೆಂದು ಗೊತ್ತಾಗಿದೆ.

ರೈಲ್ವೆ ಮತ್ತು ರಸ್ತೆಗಳ ಅಭಿವೃದ್ಧಿ

ಸಿಮ್ಲಾದಲ್ಲಿ ಮೊನ್ನೆ ನಡೆದ ಟ್ರಾನ್ಸ್‌ಪೋರ್ಟ್ ಅಡ್ವೈಸರೀ ಕೌನ್ಸಿಲ್‌ನಲ್ಲಿ ಇಂಡಿಯಾದ ಎಲ್ಲಾ ಮುಖ್ಯಭಾಗಗಳನ್ನೂ ಸಂಬಂಧಿಸುವ ರಸ್ತೆಗಳನ್ನು ಕಲ್ಪಿಸಿ ಪ್ರಯಾಣಿಕರಿಗೆ ಸೌಕರ್ಯಗಳನ್ನುಂಟುಮಾಡಬೇಕೆಂದು ತೀರ್ಮಾನವಾಗಿದೆ ಇದಕ್ಕೋಸ್ಕರ ಅನೇಕ ಪ್ರಾಂತ್ಯಗಳ ಪ್ರತಿನಿಧಿಗಳ ಸಲಹೆಗಳನ್ನು ತೆಗೆದುಕೊಳ್ಳಲಾಯಿತು.

ಮೋಟಾರುಗಳ ಸಂಚಾರಕ್ಕೆ ಸರಿಯಾದ ಏರ್ಪಾಡುಗಳನ್ನು ಮಾಡಲಾಗುವುದು. ಕಲ್ಕತ್ತಾದಿಂದ ಡೆಲ್ಲಿ ಮಾರ್ಗವಾಗಿ ಪೆಷಾವರ್ ವರವಿಗೂ, ಬೊಂಬಾಯಿಂದ ಕಲ್ಕತ್ತಾವಿಗೂ ಮತ್ತು ನಾಗಪುರದಿಂದ ಹೈದರಾಬಾದ್ ಮಾರ್ಗವಾಗಿ ಬೆಂಗಳೂರಿಗೂ ಮುಖ್ಯ ಮಾರ್ಗಗಳನ್ನೇರ್ಪಡಿಸುವ ವ್ಯವಸ್ಥೆಯು ಮಾಡಲ್ಪಟ್ಟಿದೆ ಪ್ರತ್ಯೇಕವಾಗಿಯೇ ಬೊಂಬಾಯಿ, ಪೂನಾ, ಬೆಂಗಳೂರು ಮತ್ತು ಮದ್ರಾಸನ್ನು ಸಂಧಿಸುವ ಮುಖ್ಯ ರಸ್ತೆಯನ್ನು ರಚಿಸಬೇಕೆಂದಿರುತ್ತಾರೆ.

ಕೆಲವು ಹಣ್ಣುಗಳ ಉಪಯೋಗ.

ಲೇಖಕ:—ರಂಗಸ್ವಾಮಿ ಅಯ್ಯಂಗಾರ

ಕಿತ್ತಳೆ ಹಣ್ಣು:—ಆರೋಗ್ಯಕರ ಹಣ್ಣುಗಳಲ್ಲಿ ಕಿತ್ತಳೆ ಹಣ್ಣು ಹೆಸ ಹೊಂದಿದೆ. ಇಂಗ್ಲೆಂಡಿನಲ್ಲಿ ಡಾ|| ಜಾ ಸನ್ನನು ತನ್ನ ಜೇಬಿನಲ್ಲಿ ಯಾವಾಗ ಒಣಗಿದ ಕಿತ್ತಳೆ ಹಣ್ಣಿನ ಸಿಪ್ಪೆಯನ್ನು ಇಟ್ಟುಕೊಳ್ಳುತ್ತಿದ್ದನಂತೆ ಯಾತಕ್ಕೆಂದರೆ ಒಣಗಿದ ಸಿಪ್ಪೆಯು ಅಜೀರ್ಣವ್ಯಾಧಿಗೆ ಮುಖ್ಯ ಔಷಧ. ಕಿತ್ತಳೆ ಹಣ್ಣು ರಕ್ತಶೋಧಕವಾಗಿಯೂ ಇದೆ. ಹೇಗಂದ ಇವರಲ್ಲಿ ಅಮಶಂಕೆ ರೋಗವನ್ನು ಹೋಗಲಾಡಿಸಲು ಬೇಕಾದ ಕಬ್ಬಿಣದ ಅಂಶ ಕಿತ್ತಳೆ ಹಣ್ಣಿನ ರಸದಲ್ಲಿದೆ.

ದ್ರಾಕ್ಷಿ ಹಣ್ಣು.—ಮಲೇರಿಯಾ ಜ್ವರದ ಬಾಧೆ ಇದ್ದವರು ಇವುಗಳನ್ನು ಯಾವಾಗಲೂ ತಿನ್ನುವುದು ಒಳ್ಳೆಯದು ಇದರಲ್ಲಿ ಆ ಜ್ವರವನ್ನು ಹೋಗಲಾಡಿಸುವ ಶಕ್ತಿ ಇದೆ.

ಚಪ್ಪರದ ಬದನೆ ಹಣ್ಣು —ಅಲ್ಪ ರಕ್ತದವರಿಗೂ, ಅಜೀರ್ಣ ವ್ಯಾಧಿಗೂ ಒಳ್ಳೆಯದು ರಕ್ತವನ್ನು ಶೋಧಿಸಿ, ಜೀರ್ಣಶಕ್ತಿಯನ್ನು ವೃದ್ಧಿಸಿ, ಸುಪುಷ್ಟಿಯನ್ನು ಉಂಟುಮಾಡುತ್ತದೆ. ಮೂತ್ರ ವ್ಯಾಧಿಯವರಿಗೆ ಬಹಳ ಒಳ್ಳೆಯದು

ಸೇವುಹಣ್ಣು —ಮಿದುಳಿಗೂ ನರಗಳಿಗೂ ಬಲಕಾರಿ. ಪಿತ್ತಕೋಶವನ್ನು ಚುರುಕುಗೊಳಿಸುವುದು

ಅನಾನಸು.—ಜೀರ್ಣಶಕ್ತಿಯನ್ನು ಹೆಚ್ಚಿಸಿ ಕಂಠಸಂಬಂಧವಾದ ಕಿರುಕುಳಗಳನ್ನು ಗುಣಪಡಿಸುವುದು.

ಬಾಳೆ ಹಣ್ಣು:—ಇದು ಮೆದುಳನ್ನು ಬಲಪಡಿಸುವುದು. ಹೆಚ್ಚು ಓದುವ ಮತ್ತು ಬರೆಯುವವರು ಇದನ್ನು ತಿಂದರೆ ಒಳ್ಳೆಯದು. ಇದು ಅನೇಕ ಗುಣಗಳಿಂದ ಕೂಡಿದೆ.

ನಿಂಬೆಹಣ್ಣು:—ಇದು ಬಹು ಉಪಯುಕ್ತವಾದ ಹಣ್ಣು. ರಕ್ತವನ್ನು ಶುದ್ಧಿ ಮಾಡುವುದು. ವಾತರೋಗದವರು ಇದರ ರಸವನ್ನು ಉಪಯೋಗಿಸಿದರೆ ಒಳ್ಳೆಯದು

ಪರಂಗಿ ಹಣ್ಣು:—ಅಜೀರ್ಣಕ್ಕೆ ಒಳ್ಳೆಯದು. ಹೊಟ್ಟೆಯೊಳಗಿನ ಕ್ರಿಮಿಗಳನ್ನು ಹೊರಗೆ ತಳ್ಳುವುದು. ಮಾಂಸವನ್ನು ಹೆಚ್ಚಿಸುವುದು. ಧಾತು ಕ್ಷೀಣರಾದವರು ತಿಂದರೆ ಬಹಳ ಒಳ್ಳೆಯದು.

ಹೆಂಗಸು ೨೬ ಮೈಲಿ ಓಡಿದಳು

ಹೆಂಗಸರೂ ಗಂಡಸರಂತೆಯೇ ಸಾಮರ್ಥ್ಯಗಳನ್ನು ಹೊಂದಿ, ಕೂಡ ಓಡಬಹುದೆಂಬುವನ್ನು ಸಿದ್ಧ ಮಾಡಲೋಸುಗ, ತರುಣಿಯೊಬ್ಬಳು ಟ್ಸರ್ ಎಂಬಲ್ಲಿಂದ ಲಂಡನಿಗೆ ಇರುವ ಮೈಲಿ ದೂರವನ್ನು 4 ಘಂಟೆ 25 ಮಿ ಷದಲ್ಲಿ ಒಂದೇಸಾರಿ ಓಡಿರುತ್ತಾಳೆ.

ವರ್ತಮಾನ ಸಂಗ್ರಹ!

ಭದ್ರಾವತಿ ಕಾರ್ಖಾನೆ.

ರಾಜಮಂತ್ರಪ್ರವೀಣ ದಿವಾನ್ ಬಹದ್ದೂರ್ ಮಿ॥ ಕ ಮಾಧವರಾಯರವರು ಭದ್ರಾವತಿಯಲ್ಲಿರುವ ಕಬ್ಬಿಣ ಮತ್ತು ಉಕ್ಕಿನ ಕಾರ್ಖಾನೆಗಳ ಕಾರ್ಯನಿರ್ವಾಹಕ ಸಮಿತಿಯ ಅಧ್ಯಕ್ಷರಾಗಿದ್ದರು ಅವರು ಇದೇ ತಿಂಗಳ 1936ನೇ ಇಸವಿ ಆ... 1ನೇ ತಾರೀಖಿನ ಲಾಗಾಯಿತು ರಾಜೀನಾಮೆಯನ್ನು ಕೊಡುವ ವಿಷಯದಲ್ಲಿ ... ತಿಯನ್ನು ಸರ್ಕಾರದವರು ಕೊಟ್ಟಿರುತ್ತಾರೆ ಆ ತಾರೀಖಿನ ಲಾಗಾಯಿತು ಸರ್ಕಾರದ ಚೀಫ್ ಸಕ್ರೆಟರಿಗಳಾದ, ಮಿ॥ ... ರಾಮನಾಥನ್ ರವರನ್ನು ಮೇಲಿನ ಕಾರ್ಯನಿರ್ವಾಹಕ ಸಮಿತಿಗೆ ಅಧ್ಯಕ್ಷರನ್ನಾಗಿ ನೇಮಕಮಾಡಲಾಗಿದೆ

ಸರ್ಕಾರದ ಪಿಂಗಾಣಿ ಕಾರ್ಖಾನೆಯ ... ಮತ್ತು ಸರ್ಕಾರದ ವಿದ್ಯುಚ್ಛಕ್ತಿಯ ... ಗಳನ್ನೂ ಮಿ॥ ಎ ವಿ ರಾಮ... ರವರ ಮೇಲ್ವಿಚಾರಣೆಗೆ ಒಳಪಡಿಸಲಾಗುತ್ತದೆ.

ಪೌರಸಭೆಯ ಸದಸ್ಯರು.

... ಪಿ ಎಚ್ ಮರಿಗೌಡರವರು ... ಮೈಸೂರು ಸಿಟಿ ಪೌರಸಭಾ ಸದಸ್ಯರಾಗಿದ್ದರು ಪೌರಸಭೆಗೆ ಕೊಡಬೇಕಾದ ಕಂದಾಯದ ಬಾಕಿ ಹಣವನ್ನು ... ಕೊಡದಿದ್ದುದರಿಂದ ... ಪೌರಸಭೆಯ ಸದಸ್ಯತನವನ್ನು ಕಳೆದುಕೊಂಡಿರುತ್ತಾರೆ ಅವರ ಬದಲು ... ಅಧಿಕಾರಿ ಪುರದ ಮಿಡ ... ಹೆಡ್ಮಾಸ್ಟರಾದ ಮಿ॥ ರಂಗ ... ರವರನ್ನು ಮೈಸೂರು ಪೌರಸಭಾ ಸದಸ್ಯರನ್ನಾಗಿ ನಾಮಕರಣ ಮಾಡಲಾಗಿದೆ

ಹೆಂಡತಿಯನ್ನು ಕೊಂದನು

ಶಿವಮೊಗ್ಗಾದಲ್ಲಿರುವ ಫಕೀರ ಎಂಬ ... ತನ್ನ ಹೆಂಡತಿಯ ನಡತೆಯು ಸರಿಯಾಗಿಲ್ಲವೆಂದು ತಿಳಿದುಬಂದುದರಿಂದ ಅವಳನ್ನು ಏಪ್ರಿಲ್ 24ನೇ ... ಕೊಲೆ ಮಾಡಿದನು ಅವನ ... ಇನ್ನೊಬ್ಬನ ಸಂಗಡ ಇದ್ದು ... ಒಂದು ಕಡಿಂದ ಹೊಡೆದುದರಿಂದ ಅವನನ್ನು ಕೋರ್ಟಿಗೆ ... ಲೈಸನ್ಸ್ ... ಬಂದೂಕವನ್ನು ಹೊಂದಿದ್ದರಿಂದ ... ಮತ್ತು ಹೆಂಡತಿಯನ್ನು ಕೊಲೆ ಮಾಡಿದುದರಿಂದಲೂ ಸೆಷನ್ಸ್ ಜಡ್ಜರು ... 3 ವರ್ಷಗಳ ಕಠಿಣ ಶಿಕ್ಷೆಯನ್ನು ವಿಧಿಸಿರುತ್ತಾರೆ ಮತ್ತು ಲೈಸನ್ಸ್ ... ಬಂದೂಕವನ್ನಿಟ್ಟುಕೊಂಡಿದ್ದರಿಂದ ... 5 ರೂಪಾಯಿಗಳ ಜುಲ್ಮಾನೆಯನ್ನು ವಿಧಿಸಿರುವರು.

ಅಡ್ವೊಕೇಟರಮೇಲೆ ಕೈ ಮಾಡಿದ್ದು

"ಅಡ್ವೊಕೇಟರ ಫಿರ್ಯಾದು ಆಧಾರ ರಹಿತವಾದುದು"

ತಮ್ಮನ್ನು ಹೊಡೆದು ರುಮಾಲನ್ನು ಹಾರಿಸಿದರೆಂದು ಬೆಂಗಳೂರು ಆಡ್ವೊಕೇಟ್ ಶ್ರೀ ಎಸ್ ಕೃಷ್ಣಪ್ಪನವರು ಶೇಷಾದ್ರಿಪುರದ ನಿವಾಸಿಗಳಾದ ಕೃಷ್ಣಸ್ವಾಮಿ ಪಿಳ್ಳೆ ಮತ್ತು ರಾಮಚಂದ್ರರಾವ್ ಎಂಬುವರ ಮೇಲೆ ಬೆಂಗಳೂರಿನ ಎರಡನೇ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಮೊಕದ್ದಮೆಯನ್ನು ಹೂಡಿದ್ದರು ಅಡ್ವೊಕೇಟರ ಫಿರ್ಯಾದು ಆಧಾರರಹಿತವೆಂದು ನ್ಯಾಯಾಧೀಶರು ತೀರ್ಮಾನಿಸಿ ಇಬ್ಬರು ಅಪರಾಧಿಗಳನ್ನೂ ಖುಲಾಸೆ ಮಾಡಿರುತ್ತಾರೆ

ಧನಾಪಹಣೆ.

ಕ್ಯಾಷಿಯರ್‌ನ ದಸ್ತಗಿರಿ.

ಬೆಂಗಳೂರಿನಲ್ಲಿರುವ ಸರ್ಕಾರದ ಕೈಗಾರಿಕೆ ಕಾರ್ಖಾನೆಯಲ್ಲಿ ಸುಮಾರು 2600 ರೂ ಗಳ ಧನಾಪಹಣೆ ನಡೆದಿದೆ ಎಂದು ಸೂಪರಿಂಟೆಂಡೆಂಟರಾದ ಮಿ॥ ಬಿ ಜಿ ಇಸ್ಪಾಯಿಲ್ ಮುದಲಿಯಾರ್ ರವರು ಪೋಲಿಸಿನವರಿಗೆ ತಿಳಿಸಿರುತ್ತಾರೆ ಈ ಬಗ್ಗೆ ಮೇಲ್ಕಂಡ ಕಾರ್ಖಾನೆಯಲ್ಲಿರುವ ಕ್ಯಾಷಿಯರ್ ಕ ಸಿ ಸಾಂಬಮೂರ್ತಿ ಎಂಬುವರನ್ನು ಪೋಲೀಸಿನವರು ದಸ್ತಗಿರಿ ಮಾಡಿರುತ್ತಾರೆ ಅವರಮೇಲೆ ತನಿಖೆ ಕ್ರಮ ವು ನಡೆಯುತ್ತಿದೆ

ವಿಮಾನಗಳ ಅಪಘಾತ

ಒಂದು ವಿಮಾನವು ಛಿದ್ರವಾಗಿ ಅದರಲ್ಲಿದ್ದ 7 ಮಂದಿ ಸುಟ್ಟು ಭಸ್ಮವಾದರೆಂದು ಬೆಲ್‌ಗ್ರೇಡಿನಿಂದ ಸಮಾಚಾರವು ತಿಳಿದು ಬಂದಿದೆ ಈ ವಿಮಾನವು ಮಂಜಿನಲ್ಲಿ ಸಿಕ್ಕಿಕೊಂಡು ಒಂದು ಬೆಟ್ಟದ ಬಂಡೆಗೆ ತಗುಲಿದ್ದರಿಂದ ಅಪಘಾತವುಂಟಾಯಿತು

ಮತ್ತೊಂದು ವಿಮಾನವು ಸಮುದ್ರದೊಳಕ್ಕೆ ಬಿದ್ದು ಅದರಲ್ಲಿದ್ದ ಪೈಲಟ್ ಆಫೀಸರರು ಮರಣಹೊಂದಿರುವರು

ಆರ್ ಎ ಎಫ್ ಎಂಬ ಇನ್ನೊಂದು ವಿಮಾನವು ಥಿಡಲ್‌ತ್ರ್ಯಾಜ್ ಎಂಬಲ್ಲಿ ಒಡೆದು ಚೂರಾಗಿ ಅದರಲ್ಲಿದ್ದ ಇಬ್ಬರು ಮರಣ ಹೊಂದಿರುತ್ತಾರೆ

ಶ್ರೀ ಜಯಚಾಮರಾಜ ಒಡೆಯರವರು.

ಚಿಕ್ಕಬಳ್ಳಾಪುರದಲ್ಲಿ ಶಿಶು ಸಂರಕ್ಷಣಾ ಕೇಂದ್ರದ ಪ್ರಾರಂಭೋತ್ಸವ ನಡೆಸಿದರು

ಮಹಾರಾಜರಿಗೆ ಲಂಡನ್ "ಟೈಂಸ್" ಪತ್ರಿಕೆಯ ಸ್ವಾಗತ.

ಇಂಗ್ಲೆಂಡಿಗೆ ಶ್ರೀಮನ್ಮಹಾರಾಜರವರ ಆಗಮನವು ಒಂದು ಮಹಾ ಸಂಭ್ರಮವೆಂದು ಇಂಗ್ಲೆಂಡಿನ 'ಟೈಂಸ್' ಪತ್ರಿಕೆಯು ಅಭಿಪ್ರಾಯಪಡುತ್ತದೆ

ಅವರ ಆಗಮನವು ಪರದೇಶದಲ್ಲಿರುವ ಭಾರತೀಯರಿಗೂ ಮತ್ತು ಅಲ್ಲಿಯೇ ಇರುವ ಅನೇಕ ಆಂಗ್ಲೇಯರಿಗೂ ಬಹಳ ಹೆಮ್ಮೆಯನ್ನುಂಟುಮಾಡಿದೆ ಮಹಾರಾಜರವರು ರಾಜಕೀಯ ವಿಷಯಗಳಲ್ಲಿ ಚರ್ಚೆ ನಡಸುವುದಿಲ್ಲವೆಂದೂ ಅವೆಲ್ಲವನ್ನೂ ಸಂಪೂರ್ಣವಾಗಿ ದಿವಾನ್ ಮಿರ್ಜಾರವರಿಗೆ ಒಪ್ಪಿಸಿ ಮಹಾರಾಜರವರು ವಿಶ್ರಾಂತಿ ಹೊಂದುವರೆಂದೂ ತಿಳಿದುಬಂದಿದೆ ಮಹಾರಾಜರವರು ಬ್ರಿಟಿಷ್ ಸಾರ್ವಜನಿಕ ಜೀವನದಲ್ಲಿ ಪ್ರಸಿದ್ಧರಾಗಿರುವ ಕೆಲವು ಮಂದಿಯೊಡನೆ ಮಾತ್ರ ಸಂಭಾಷಣೆ ಮಾಡುವರೆಂದು ಗೊತ್ತಾಗಿದೆ

ಮೈಸೂರು ವಿಶ್ವವಿದ್ಯಾನಿಲಯ ಸಂಘ.

ವಿಶ್ವವಿದ್ಯಾನಿಲಯದಲ್ಲಿ ಅಧ್ಯಾಪಕರಾದ ಮತ್ತು ಕನ್ನಡ ಭಾಷಾವಿಶಾರದರಾದ ಶ್ರೀ ಮಾನ್ ಟಿ ಎಸ್ ವೆಂಕಣ್ಣಯ್ಯನವರನ್ನು ವಿಶ್ವವಿದ್ಯಾನಿಲಯ ಸಂಘದ ಅಧ್ಯಕ್ಷರನ್ನಾಗಿ ನೇಮಿಸಿರುತ್ತಾರೆ

ಬೆಂಚ್ ಕೋರ್ಟಿಗೆ ಬೆಂಕಿ

ಶಿವಮೊಗ್ಗಾ ಬೆಂಚ್ ಕೋರ್ಟಿಗೆ ಜೂನ್ ತಿಂಗಳು 7ನೇ ತಾರೀಖು ಬೆಂಕಿ ಹಾಕಿದರೆಂಬ ಅಪಾದನೆ ಮೇಲೆ ಇಬ್ರಾಹಿಂ ಖಾನ್, ಬುಡನ್‌ಷರೀಫ್, ಕುಂಜ, ಪುಟ್ಟ ಮತ್ತು ಆರ್ಯಮಪ್ರ ಈ ಐವರ ಮೇಲೆ ಇದ್ದ ಮೊಕದ್ದಮೆಯಲ್ಲಿ ಅಪಾದಿತರು ಸೆಷನ್ಸಿಗೆ ಕಮಿಟ್ ಮಾಡಲ್ಪಟ್ಟರು. ಶಿವಮೊಗ್ಗಾ ಸ್ಪೆಷಲ್ ಮೊದಲನೇ ಮ್ಯಾಜಿಸ್ಟ್ರೇಟರಾದ ಶ್ರೀ ಸಿ ಬಿ ನಾಗಭೂಷಣರಾಯರು ತೀರ್ಪನ್ನಿತ್ತರು

ಗೃಹ ಲಕ್ಷ್ಮಿ

ಒಂದು ಸಣ್ಣ ಕಥೆ

(ಲೇಖಕಿ.—ಲಲಿತಮ್ಮ)

ರಾಮು ನನ್ನ ಚಿಕ್ಕಪ್ಪನ ಮಗ. ಅವನು ಸರ್ವದಲ್ಲಿ ಅದೃಷ್ಟವಂತನೆಂದೇ ನಾವೆಲ್ಲಾ ಭಾವಿಸುತ್ತಿದ್ದೆವು ಏಕೆನ್ನುವಿರಾ? ಅವನು ಪಾಸಾದ ವರ್ಷವೇ ಕೆಲಸಕ್ಕೆ ಸೇರಿಕೊಂಡ ನಮ್ಮಂತೆ ಅವರಿವರ ಮನೆ ಬಾಗಿಲಿಗೆ ಹೋಗಿ ಆಫೀಸಿನ ಬಾಗಿಲಲ್ಲಿ ನಿಂತು "ಜಯವಿಜಯರ ಕೈಗೆ ಬೆಚ್ಚಗೆ ಮಾಡಿ ಪ್ರೇಮನ್ನ ಹಾವಿಷ್ಣುವನ್ನು ಸಂದರ್ಶಿಸಿ ನಮ್ಮ ಅದೃಷ್ಟಕ್ಕನುಸಾರವಾಗಿ "ಆಗ ಬಾ, ಈಗ ಬಾ, ಹೋಗಿ ಬಾ' ಎಂಬ ವರಪ್ರದಾನದಿಂದ ಒಂದೆರಡು ವರ್ಷ ಅಲೆದಾಡಿ 'ಅವತಾರವೆತ್ತಿ" ನೌಕರಿಯನ್ನು ಸಂಪಾದಿಸುವ ಘನ ಯೋಗ್ಯತೆಯನ್ನು ನಮ್ಮ ರಾಮುವು ಪಡೆಯದೆ ಕೇವಲ ಒಂದೆರಡು ತಿಂಗಳಲ್ಲಿಯೇ ನೌಕರಿಗೆ ಸೇರಿದ್ದನು

† † † †

ಮದುವೆಯ ಕಾಲ ಹತ್ತಿರವಾದಂತೆಲ್ಲ "ಜೇನು" ಮುತ್ತಿಗೆ ಪ್ರಾರಂಭಿಸುತ್ತೆ ಹೆದರಬೇಡಿ ಜೇನು ಮುತ್ತಿಗೆ ಎಂದರೆ ವರಾನ್ವೇಷಣೆಯವರ ಗೊಂದಲ ಹೆಣ್ಣು ಹೆತ್ತವರ ಹಂಬಲ ನಮ್ಮ ರಾಮುವಿಗೂ ಈ ಮುತ್ತಿಗೆ ಬಂದೇ ಬಂತು ಅವನು ನನ್ನೊಡನೆ ಹೇಳಿದ—ತನ್ನ ಅರಸಿತಿಯಾಗುವವಳು ಹೀಗೆಲ್ಲಾ ಇರಬೇಕೆಂದು —"ವಿದ್ಯಾವತಿ-ತಿಳುವಳಿಕೆಯುಳ್ಳವಳು-ಅತಿ ಸುಂದರಿ ನಾಗರಿಕತೆಯ ನಾಜೂಕಿನವಳು ಅತ್ತೆ ಮಾವ ಅನುಕೂಲಸ್ಥರು ದೊಡ್ಡಸ್ತಿಕೆಯುಳ್ಳವರಾಗಿರಬೇಕು ತಾನು ಕಲ್ಕತ್ತೆಗೆ ಹೋಗಿ ಓದಬೇಕೆಂದಿರುವುದಕ್ಕೆ ಆಗುವ ಖರ್ಚುವೆಚ್ಚಗಳನ್ನು ವಹಿಸಿಕೊಳ್ಳುವರಾಗಿರಬೇಕು ವರದಕ್ಷಿಣೆಯನ್ನು ಕೊಡಬೇಕು ಇವಕ್ಕೆಲ್ಲ ಒಪ್ಪಿಕೊಳ್ಳೋ ಹಾಗಿದ್ರೆ ಸರಿ"

ನನಗೇನೋ ನಗು ಬಂದಿತು ನಗುತ್ತ "ರಾಮೂ, ನಿನಗೆ ಬರುವ ಸಂಬಳಕ್ಕೆ ಇಂಥಾ ಹೆಣ್ಣು ಯಾತಕ್ಕಪ್ಪ! ನಿನ್ನನ್ನು ಹರಾಜು ಮಾಡಿಕೊಂಡು ಬರುವುದಕ್ಕ?' ಅವನಿಗೆ ಕೋಪ ಬಂತು "ನನಗ್ಯಾಕೆ ಆದಲ್ಲ! ಮದುವೆ ಆಗೋನು ನಾನು"

"ನಿನ್ನ ಅಕ್ಕನ ಮಗಳು ಸುಶೀಲ ಏನಾಗಿದ್ದಾಳೆ ರಾಮು? ಒಳ್ಳೆ ಹುಡುಗಿ ಕಣ್ಣು ಮೂಗು ನೇರವಾಗಿದೆ"

"ಹೂ, ಅದೊಂದು ಹಳ್ಳಿ ಗಮಾರ್, ಹೈಸ್ಕೂಲಿನ ಹೆಸರೂ ಕಾಣದು ಬಣ್ಣ ನೋಡು! ನಾನೊಪ್ಪಿರೋ ಹುಡುಗಿಯ ಬಣ್ಣ ಗುಲಾಬಿಯನ್ನು ಮೀರಿಸುತ್ತದೆ ಒಳ್ಳೆ ಸುಂದರಿಯಾದ ಹೆಣ್ಣು ಸಾಹುಕಾರರು ನಾನು ಹೇಳಿದ್ದಕ್ಕೆಲ್ಲ ಒಪ್ಪಿಕೊಂಡಿದಾರೆ ಹುಡುಗಿ ಕಾನ್ವೆಂಟಿನಲ್ಲಿ ವಿದ್ಯಾಭ್ಯಾಸ ಪಡೆದಿದ್ದಾಳೆ. ಬೆಂಗಳೂರಿನಲ್ಲಿ ಓದುತ್ತಿದ್ದಳಂತೆ ನಾನೇನೊ ಒಪ್ಪಿದ್ದೇನೆ'

"ಹೆಸರು?"

"ರಂಗರಾಯರ ಮಗಳು ಲೀಲಾವತಿ" ನನಗ ಆಶ್ಚರ್ಯವಾಯ್ತು 'ಲೀಲಾವತಿ? ಒಪ್ಪಿರುವೆಯಾ?"

"ಮಾತೂ ಕೊಟ್ಟುಬಿಟ್ಟೆ. ಏನಾಶ್ಚರ್ಯ ಅದರಲ್ಲಿ! ಅಂತಹ ಹುಡುಗಿ ಸಿಕ್ಕುವುದು ಕಷ್ಟ.

ಮನಸ್ಸಿನಲ್ಲಿ ನಾನು "ನೀನು ಹಳ್ಳಕ್ಕೆ ಬಿದ್ದಿದ್ದು ಹೆಚ್ಚೋ?" ಎಂದುಕೊಂಡೆ

† † † †

ರಂಗರಾಯರ ವಿಷಯ ನಾನು ಸ್ವಲ್ಪಸ್ವಲ್ಪವಾಗಿ ಕೇಳಿ ತಿಳಿದಿದ್ದೆ ಅವರು ಕೊಂಕಣದ ಕಡೆಯವರು. ದುಂದುಗಾತಿಯಾದ ಹೆಂಡತಿಯಿಂದಲೂ ಮತ್ತು ತಮ್ಮ ಸ್ವಂತ ಅವಿವೇಕದಿಂದಲೂ ಅಪಾರವಾದ ಸಾಲಸೋಲಗಳಿಗೆ ಈಡಾಗಿದ್ದರು. ಅವರು ಇಲ್ಲಿಗೆ ಬಂದು ಕೆಲವು ಕಾಲವಾಗಿತ್ತು. ಅವರಿಗೆ ಮೂರು ಹೆಣ್ಣು ಮಕ್ಕಳು. ಇಬ್ಬರಿಗೆ ಮದುವೆಯಾಗಿತ್ತು ಕೊನೆಯವಳೇ ಲೀಲೆ. ರಂಗರಾಯರ ಮನೆ ಆಡಳಿತ "ಪ್ರಮೀಳಾ ರಾಜ್ಯ" ಸಾಲಗಾರರಾಗಿದ್ದರೂ ಮನೆಯಲ್ಲಿನ ಬಿಂಕ ಬಿಗುಮಾನಗಳಿಗೇನೂ ಅಭಾವವಿರಲಿಲ್ಲ. ಕೋಟೀಶ್ವರರೆಂಬ ಭಾವನೆಯು ಮರೆಯಾಗಿರಲಿಲ್ಲ ಮಕ್ಕಳೆಲ್ಲ ದೊಡ್ಡ ದೊಡ್ಡ ಸ್ಥಳಗಳಲ್ಲೇ ವಿದ್ಯಾವತಿಯರಾದರೆಂಬ ಹಮ್ಮು. ಊರಲ್ಲಿ ಅಪಾರ ಆಸ್ತಿಯುಂಟೆಂದೂ ಲೀಲೆಯನ್ನು ವಿವಾಹಿತರಾದವರಿಗೆ ಅರ್ಧವು ವರದಕ್ಷಿಣೆ ರೂಪದಲ್ಲಿ ಕೊಡಲ್ಪಡುವುದೆಂದೂ ವರ್ತಮಾನ ಹಬ್ಬಿಸಿದ್ದರು ಇನ್ನು ಕೆಲವರು ಆಸ್ತಿಯು ಸಾಲಕ್ಕೆ ಆಧಾರವೆಂದೂ ಹರಡಿದ್ದರು ಆ ವಿಚಾರವೆಲ್ಲಾ ಹೋಗಲಿ

ಲೀಲೆ ಅಷ್ಟೇನೂ ವಿದ್ಯಾವತಿಯಲ್ಲ. ಆದರೂ ಅಲ್ಪವಿದ್ಯಾ ಮಹಾಗರ್ವ! ಸುಂದರಿಯೆಂದೇನೋ ಹೇಳುತ್ತಿದ್ದರು ಆದರೆ ಮನ್ಮಣಿಯ ಸೌಂದರ್ಯವನ್ನು ಮಾತ್ರ ಲೀಲೆ ಹೊಂದಿರಲಿಲ್ಲ ತಾಯಿತಂದೆಗಳ ಡಾಂಭಿಕ ಜೀವನದ ಮಾರ್ಗವನ್ನೇ ಅನುಸರಿಸಿದ್ದ ಲೀಲೆಯು ರಾಮುವನ್ನು ಮದುವೆಯಾದಳು. ಮದುವೆಯೇನೋ ವಿಜೃಂಭಣೆಯಿಂದ ನೆರವೇರಿತು ನಮ್ಮ ತಾಯಿ ಮದುವೆಯಲ್ಲಿ ಓಡಾಡುತ್ತಿದ್ದವರಷ್ಟೆ ಅವರು ನನ್ನ ಹತ್ತಿರ ಬಂದು ಅಂದರು,—

'ಏನೋ ಶ್ರೀಕಂಠಿ, ಆ ಹೆಣ್ಣು ನಾಟಕ, ಸಿನಿಮಾದಲ್ಲಿ ಪಾರ್ಟು ಮಾಡುತ್ತಾಳೇನೋ!'

"ಏಕಮ್ಮಾ?"

"ನಿಜವಾದ ಬಣ್ಣ ನಮ್ಮಂತೆಯೇ ಹೊಳೆಯುತ್ತಿದೆ, ಪೌಡರ್‌ನ್ನೋ ಬಣ್ಣ ಹೀಗಾದರೆ ಹೇಗೋ,' ಲಕ್ಷಣವಾಗಿ ಅರಿಸಿನ ಕುಂಕುಮ

'ನೀವು ಪೂರ್ವಾಚಾರದವರು ಈಗಿನ ಕಾಲದಲ್ಲಿ "

'ಕಾಲಕ್ಕೆ ಅಷ್ಟು ಬೆಂಕಿ ಹಾಕು! ಇಷ್ಟಕ್ಕೂ ನಮ್ಮ ರಾಮೂ ಸಂಬಳ ಈ ಅಲಂಕಾರಕ್ಕೇ ಸಾಲದು'

'ಕಲ್ಕತ್ತಾಕ್ಕೆ ಹೋಗಿ ಪಾಸುಮಾಡಿದ ಮೇಲೆ ಬೇಕಾದ ಹಾಗೆ ತರುತ್ತಾನೆ ಸಂಬಳ'

ಹುಚ್ಚು! ಕಲ್ಕತ್ತಾಕ್ಕೆ ಮಾವನ ಮನೆಯವರು ತಾನೆ ಕಳುಹಿಸುವುದು" ತಾಲ ಕಟ್ಟುವವರೆಗೆ ಹಾಗಿರಲಿ ಆ ಮೇಲೆ ಅವನ ದಾರಿ ಅವನಿಗೆ, ನಮ್ಮ ದಾರಿ ನಮಗೆ. ಕಟ್ಟಿಕೊಂಡ ಹೆಂಡತಿಯನ್ನು ಬಿಟ್ಟು ಬಿಡುತ್ತಾನೆಯೇ? ಎಂದು ಮಾತಾಡಿಕೊಳ್ಳುತ್ತಿದ್ದರು

† † † †

ರಾಮುವಿನ ಮದುವೆಯಾದ ಎರಡು ತಿಂಗಳಿಗೆ ಸುಶೀಲೆಯ ಮದುವೆಯೂ ಆಯಿತು. ರಾಮು ಸುಶೀಲೆಯರು ಈಗ ಸಂಸಾರಿಗಳು ಸುಶೀಲೆಯು ಅತ್ತೆಯ ಮನೆಯಲ್ಲಿ ಸುಖವಾಗಿದ್ದಳು ನಮ್ಮ ತಾಯಿ ಹೇಳಿದಂತೆ ರಾಮು ಕಲ್ಕತ್ತೆಗೆ ಹೋಗಲಿಲ್ಲ ರಾಮು ಲೀಲೆಯೊಡನೆ ಸಂಸಾರವನ್ನು ಹೂಡಿದನು

ಕಷ್ಟಸುಖಗಳಿಗೆ ಹೊಂದಿಕೊಂಡು ಹೋಗುವಂತಹ ಶಕ್ತಿಯನ್ನು ಪಡೆದಿರಲಿಲ್ಲ. ಡಾಂಭಿಕಜೀವನದ ಪರಮಾವಧಿಯನ್ನು ಸೇರಿದ್ದ ಲೀಲೆಯು ತನ್ನ ಪತಿಯ ಸಂಪಾದನೆಯನ್ನು ಗಣನೆಗ ತರುತ್ತಿರಲಿಲ್ಲ ಮುಂದಿನ ದೃಷ್ಟಿಯು ಇಲ್ಲವೆಂದು ರಾಮುವೇ ಆಗಾಗ ಹೇಳುತ್ತಿದ್ದನಂತೂ ರಾಮು ದಿನ ದಿನಕ್ಕೆ ಮಾವನ ಬುಡಕಟ್ಟಿಗೆ (ಸಾ-ಲ) ಸೇರುತ್ತಿದ್ದಂತೆ ಸುದ್ದಿ

ಸುಶೀಲೆಯು ಪತಿಭಕ್ತಿ, ಪ್ರೇಮ, ಗೃಹಕಾರ್ಯದಕ್ಷತೆ, ವಿನಯ ಇವುಗಳನ್ನು ರಾಮು ಕೇಳುತ್ತಲೂ ಕಣ್ಣಾರೆ ನೋಡುತ್ತಲೂ ಇದ್ದ ಅವಳ ಸಂತೃಪ್ತಭಾವದ ನಗುಮುಖವನ್ನು ರಾಮು ನೋಡಿದಾಗ ಲಜ್ಜಿತನಾಗುತ್ತಿದ್ದ.

ಒಂದಾವರ್ತಿ ಸುಶೀಲೆಯು ಮಾವನ (ರಾಮು) ಮನೆಗ ಬಂದಿದ್ದಳು ಆವಳು ರಾಮುವಿನ ಉಲ್ಲಾಸ ಹೀನಮುಖವನ್ನು ನೋಡಿ 'ಏಕ ಮಾವ, ಹೀಗೆ ಕೊರಗಿದ್ದೀಯೆ'' ಎಂದಳು

ರಾಮು ಉತ್ತರ ಕೊಡಲಿಲ್ಲ ಏನೋ ಯೋಚಿಸುತ್ತಿದ್ದ.

"ಮಾವ, ನೀನು ಗಂಡಸಾಗಿ ಹುಟ್ಟಿ, ಮತ್ತೊಬ್ಬರನ್ನು ಸಾಕುವ ಶಕ್ತಿಯನ್ನು ಹೊಂದಿ, ಹೆಣ್ಣು ಹೆತ್ತವರನ್ನು ವರದಕ್ಷಿಣೆ ಕೇಳಿ ತನ್ನನ್ನು ತಾನು ಮಾರಿಕೊಂಡು, ಹಣಕ್ಕಾಗಿ ಹೆಣ್ಣನ್ನು ಮದುವೆಯಾಗುವವರಿಗೆ ನಿಜವಾಗಿ ಆತ್ಮಾಭಿಮಾನವಿರುತ್ತದೆಯೇ ಮಾವ? ಹಣಕ್ಕೂ ರೂಪಕ್ಕೂ ಪ್ರಾಶಸ್ತ್ಯಕೊಟ್ಟರೆ ಗುಣವೆಲ್ಲಬಂದೀತು' ಸುಖವೆಲ್ಲಿ? ಮದುವೆಯಾಗಿ ಮನೆಗೆ ಬಂದವಳಿಗೂ ಅತ್ತೆ ಮನೆಯವರೆಂದರ ಗೌರವವಿರುತ್ತದೆಯೇ' "ನಮ್ಮಪ್ಪ ಅಷ್ಟು ಕೊಡದಿದ್ದರೆ—ಓದಿಸದ ಇದ್ದರೆ ನೀನು ಎಲ್ಲಿ ಬಿದ್ದಿರುತ್ತಿದ್ದೆಯೋ. ನಿನ್ನನ್ನು ಕೇಳುತ್ತಿದ್ದವರಾರು' ಅಂತಾ ಕೂಗಿಲ್ವೋ?'

ರಾಮು ಸ್ವಲ್ಪಹೊತ್ತು ಸುಮ್ಮನಿದ್ದು ಮುಗುಳ್ನಗೆಯಿಂದ ಏನು ಬೇಕಾದರೂ ಹೇಳಮ್ಮ ಸುಶೀಲೆ ಎಂದನು

"ಅಷ್ಟು ಬುದ್ಧಿ ನನಗಿಲ್ಲಿ ಬರಬೇಕು ಮಾವ" ನಾನೊಂದು 'ಹಳ್ಳಿ ಗಮಾರ್' ಇಂಗ್ಲಿಷು ಗಿಂಗ್ಲೀಷು ಪಡೆದ ಹೆಣ್ಣನ್ನು ಮದುವೆಯಾಗಿ ಹಳ್ಳಿಗಾಡಿನ ಹುಡುಗಿಯ ಮಾತನ್ನು ಕೇಳಲು ಆಸೆಯೇ ಮಾವ?"

'ಕ್ಷಮಿಸು ಸುಶೀಲ, ನೀನೆ ನಿಜವಾದ ಗೃಹಶಿಕ್ಷಣವನ್ನು ಪಡೆದ ಗೃಹಲಕ್ಷ್ಮಿ'

ಮುಸ್ಲಿಂ ಸಭೆಯಲ್ಲಿ ಪಾದ ರಕ್ಷೆಗಳ ಸುರಿಮಳೆ.

ಕಳೆದವಾರ ಲಾಹೋರಿನಲ್ಲಿ ಷಾಹಿದ್ ಗಂಜ್ ಮಸೀದಿಯ ವಿಷಯವಾಗಿ ಮುಸ್ಲಿಮರ ಒಂದು ಸಭೆಯಲ್ಲಿ ವಿಶೇಷ ಗೊಂದಲವುಂಟಾಯಿತು ಬ್ಲೂಷರ್ಟಗಳ ಮುಖಂಡರಾದ ಮೌಲಾನಾಜಾಫರ್ ಅಲಿಖಾನರವರು ಅಹರಾರು ಪಂಗಡದ ಕಾರ್ಯಗಳನ್ನು ವಿರೋಧಿಸಿ ಮಾತನಾಡಿದ ಕ್ಷಣವೇ ಸಭೆಯಲ್ಲಿ ಗಲಭೆಯು ಪ್ರಾರಂಭವಾಯಿತು ಹಲವರು ಅತಿ ಹೇಯವಾಗಿ ವರ್ತಿಸತೊಡಗಿದರು ಪಾದರಕ್ಷೆಗಳು, ಚಾಕುಗಳು, ಲಾಠೀಗಳು ಮತ್ತು ಕಲ್ಲು, ಇಟ್ಟಿಗೆಗಳ ಸುರಿಮಳೆಗೆ ಪ್ರಾರಂಭವಾಯಿತು ಜನರೆಲ್ಲರೂ ಗಾಬರಿಯಿಂದ ದಿಕ್ಕಾಪಾಲಾಗಿ ಓಡಲಾರಂಭಿಸಿದರು ಈ ವಿಷಯವು ತಿಳಿದಕೂಡಲೇ ಶಸ್ತ್ರಸಜ್ಜಿತವಾದ ಪೋಲೀಸ್ ದಳವು ಗಲಭೆಯನ್ನು ತಗಿಸಲು ಸ್ಥಳಕ್ಕೆ ಬಂದಿತು ಅನೇಕ ಪೋಲೀಸಿನವರಿಗೂ ಬಲವಾಗಿ ಏಟುಗಳು ಬಿದ್ದವು ಸಬ್ ಇನ್‌ಸ್ಪೆಕ್ಟರಿಗೂ ಮತ್ತು ಒಬ್ಬ ಕಾನ್‌ಸ್ಟೇಬಲ್‌ಗೂ ವಿಶೇಷ ಗಾಯವುಂಟಾಗಿದ

ನಿದ್ರಿಸುತ್ತಿದ್ದಾಗ ಕೊಲೆ.

ಫಕೀರಪುರದ ಜಮೀನ್ದಾರರಾದ ವಾಘಸಿಂಗ್ ಎಂಬುವರು ನಿದ್ರಿಸುತ್ತಿದ್ದಾಗ ಯಾರೋ ದುರಾತ್ಮರು ಅವರ ತಲೆಯನ್ನು ಕತ್ತರಿಸಿ ಯಾರಿಗೂ ತಿಳಿಯದಂತೆ ಪರಾರಿಯಾಗಿರುತ್ತಾರೆ ಪೋಲೀಸರು ತನಿಖೆ ಮಾಡುತ್ತಿರುವರು

ದೀರ್ಘಕಾಲ ಬದುಕಬಹುದು

ಇಂಗ್ಲೆಂಡಿನಲ್ಲಿ ಸುಮಾರು 96 ವರ್ಷಸ್ಸಿನ ಒಬ್ಬ ಮುದುಕನು ತನ್ನ ಆಯುಸ್ಸಿನಲ್ಲಿ ಒಂದು ದಿನವೂ ಬಿಸಿ ಪದಾರ್ಥವನ್ನು ತಿನ್ನಲಿಲ್ಲವೆಂದೂ, ಅದರಿಂದಲೇ ತಾನು ಇಷ್ಟು ದಿವಸ ಬದುಕಿರುವುದಾಗಿಯೂ ತಿಳಿಸಿದ್ದಾನೆ. ಅವನು ಪ್ರತಿನಿತ್ಯವೂ ಹಣ್ಣು ಹಂಪಲುಗಳನ್ನೂ ಮತ್ತು ಮದ್ಯವನ್ನು ಸೇವಿಸುವನು.

ಮೈಸೂರಿನ ಭಾಗ್ಯ

ಈವರೆಗೆ ನಮ್ಮ ಸೀಮೆಯು 'ಗಂಧದ ಗುಡಿಯದು ಮೈಸೂರು" 'ಚಿನ್ನದ ಗಣಿಯದು ಮೈಸೂರು" ಆಗಿದ್ದುದು "ಸ ... ಕ್ಷತ ಸವಿಯದು ಮೈಸೂರು" ... ಬೆಳುಸಿದು ಮೈಸೂರೂ' ಆಯಿತು ... ರೇಗೌಡನ ಭಾಗ್ಯಕ್ಕೆ ಎಣೆಯಿಲ್ಲ ... ಸೂರು ಬೆಳುಬರುತ್ತ ಕೈಗಾರಿಕೆಯ ಕೇಂದ್ರವಾಗಿ ಪರಿಣಮಿಸಿ ಸುತ್ತುಮುತ್ತಲಿನ ... ರಿಸಿಕೊಂಡಿರುವ ನೆರೆನಾಡುಗಳವರಿಗೆ ಮಾತ್ರವೇ ಅಲ್ಲದೆ ಅನೇಕಾನೇಕ ಪರದೇಶಿ ... ರಿಗೂ ಆಶ್ರಯ ಕೊಡುತ್ತಿದೆ ಜನ ... ಕೊಡುತ್ತಿದೆ ಯಾವುದಾದರೊಂದು ಮಾ ... ರ್ಗದಿಂದ ಆರ್ಥಿಕ ದುರವಸ್ಥೆ, ನಿರುದ್ಯೋಗ ... ಗ ಸಮಸ್ಯೆಗಳು ಕೊನೆಗಂಡು ದೇಶವು ... ಭಿಕ್ಷವಾಗಿ ಬೆಳಗಲಿ!

[ಸ ನ- ...

ವಿದ್ಯಾ ಇಲಾಖೆಯ ವರದಿ.

1935ನೇ ಜೂನ್ ತಿಂಗಳಿನ ಅಂತ್ಯದವರೆಗಿನ ವಿದ್ಯಾ ಇಲಾಖೆಯ ವರದಿಯು ನಮ್ಮ ಹಸ್ತಗತವಾಗಿದೆ. ಆರ್ಥಿಕ ಮುಗ್ಗಟ್ಟು ಪ್ರಬಲವಾಗಿದ್ದುದರಿಂದ ಹೆಚ್ಚು ವಿದ್ಯಾಶಾಲೆಗಳನ್ನು ತೆರೆಯಲು ಅನಾನುಕೂಲವುಂಟಾಯಿತು. ಆದರೂ ಈ ಇಲಾಖೆಯು ಹಾಲಿ ಇರುವ ವಿದ್ಯಾಶಾಲೆಗಳ ಕುಂದುಕೊರತೆಗಳನ್ನು ಹೋಗಲಾಡಿಸುವ ಪ್ರಯತ್ನಗಳನ್ನು ಮಾಡಿರುತ್ತದೆ. 33-34 ರಲ್ಲಿ 6761 ವಿದ್ಯಾಶಾಲೆಗಳಿದ್ದವು. ಅವು 34-35 ರಲ್ಲಿ 6752 ಕ್ಕೆ ಇಳಿದರೂ ಕೂಡ ಕಳೆದ ವರ್ಷದಲ್ಲಿ 297,608 ವಿದ್ಯಾರ್ಥಿಗಳ ಸಂಖ್ಯೆಗಿಂತ ಈ ಸಾರಿ 303,274 ಮಂದಿ ವಿದ್ಯಾರ್ಥಿಗಳಿದ್ದರು. ವಿಶ್ವವಿದ್ಯಾನಿಲಯದ ವಿದ್ಯಾಭ್ಯಾಸದ ವೆಚ್ಚವೂ ಸೇರಿ 63 60,131 ರೂ ಖರ್ಚಾಗಿದೆ. ವಿದ್ಯಾಪ್ರಚಾರದ ಖರ್ಚು ಸಂಸ್ಥಾನದ ಒಬ್ಬ ಪ್ರಜೆಗೆ 0-15-11 ಪೈ ಬೀಳುವುದು. ಸರ್ಕಾರವು ಆರ್ಥಿಕ ಮುಗ್ಗಟ್ಟಿನಿಂದ ಹೆಚ್ಚು ಹಣವನ್ನು ವಿದ್ಯಾ ಇಲಾಖೆಗೆ ಖರ್ಚು ಮಾಡಲು ಸಾಧ್ಯವಾಗಲಿಲ್ಲವೆಂದೂ ವಿದ್ಯಾ ಇಲಾಖೆಯ ಅಧಿಕಾರಿಗಳಾದ ಶ್ರೀಮಾನ್ ಎನ್ ಎನ್ ಸುಬ್ಬರಾಯರ ಮೇಲ್ವಿಚಾರಣೆಯಲ್ಲಿ ತುಂಬಾ ಅಭಿವೃದ್ಧಿಗೆ ಬಂದಿರುವುದು ಬಹಳ ಸಂತೋಷಕರವಾದ ಅಂಶವೆಂದೂ ಸರ್ಕಾರದ ಕಾರ್ಯದರ್ಶಿಗಳು ತಿಳಿಸಿರುತ್ತಾರೆ.

ನಮ್ಮ ದೇಶದಲ್ಲಿ ವಿದ್ಯಾ ಪ್ರಚಾರವು ಬಹಳ ಮಟ್ಟಿಗೆ ಕಡಿಮೆಯಾಗಿದೆ. 100 ಕ್ಕೆ 5 ಮಂದಿ ಅಕ್ಷರಸ್ಥರಿರುತ್ತಾರೆ. ಉಳಿದ ಶೇಕಡಾ 95 ಮಂದಿ ನಿರಕ್ಷರ ಕುಕ್ಷಿಗಳು. ಹೀಗಿರಲು ಈ ಮಧ್ಯೆ ದೇಶದಲ್ಲಿ ನಿರುದ್ಯೋಗ ಸಮಸ್ಯೆಯ ಪ್ರಭಾವವು ಏರಲು ಈಗಿನ ವಿದ್ಯಾಶಾಲೆಗಳಲ್ಲಿ ಕೊಡುವ ಶಿಕ್ಷಣ ಕ್ರಮವೇ ಮುಖ್ಯಕಾರಣವಾಗಿದೆ. ಆದುದರಿಂದ ಆದಷ್ಟು ಬೇಗ ಈಗಿನ ವಿದ್ಯಾಭ್ಯಾಸದ ಜೊತೆಗೆ ವೃತ್ತಿ ಶಿಕ್ಷಣವನ್ನು ಪ್ರೌಢ ಪಾಠಶಾಲೆಗಳಲ್ಲಿ ವಿದ್ಯಾರ್ಥಿಗಳಿಗೂ ಮತ್ತು ವಿದ್ಯಾರ್ಥಿನಿಯರಿಗೂ ಕೊಡುವುದು ಅತ್ಯವಶ್ಯಕವಾಗಿದೆ.

ಮಾಧ್ಯಮಿಕ ಶಾಲೆಗಳಲ್ಲಿ ಹೆಚ್ಚಿನ ಉಪಾಧ್ಯಾಯರ ಸಂಖ್ಯೆಯೂ ಮತ್ತು ಇತರ ಸೌಕರ್ಯಗಳೂ ಅಗತ್ಯವಾಗಿ ಬೇಕೆಂದೂ ಮತ್ತು ಗ್ರಾಮಾಂತರಗಳಲ್ಲಿ ಮಾಧ್ಯಮಿಕ ಶಾಲೆಗಳನ್ನು ಸ್ಥಾಪಿಸಲು ಸರ್ಕಾರದವರು ಸಹಾಯಮಾಡಬೇಕೆಂದೂ ಅನೇಕ ಕಡೆಯಿಂದ ಸರ್ಕಾರಕ್ಕೆ ಪ್ರಾರ್ಥನೆಗಳು ಬಂದಿರುತ್ತವೆ. ವಿದ್ಯಾ ಇಲಾಖೆಯ ಅಧಿಕಾರಿಗಳು ಮಾಧ್ಯಮಿಕ ಪಾಠಶಾಲೆಗೆ 390 ಮಂದಿ ಉಪಾಧ್ಯಾಯರ ಅಗತ್ಯವಿದೆಯೆಂದು ಅನೇಕಬಾರಿ ಅರಿಕೆಮಾಡಿಕೊಂಡರೂ ಸರ್ಕಾರದವರು 40 ಮಂದಿ ಉಪಾಧ್ಯಾಯರನ್ನು ಮಾತ್ರ ಒದಗಿಸಿರುತ್ತಾರೆ.

ಈ ಮುಖ್ಯವಾದ ವಿಷಯವನ್ನು ಸರ್ಕಾರದವರು ಶೀಘ್ರವಾಗಿ ಪರಿಶೀಲಿಸಿ ತಕ್ಕ ಏರ್ಪಾಡು ಮಾಡುವರೆಂದು ಆಶಿಸುತ್ತೇವೆ.

ಇದ್ದಿಲಿನ ಸುದ್ದಿ.

ಮಿತವ್ಯಯದ ಮಾರ್ಗ

ಇದ್ದಿಲು ಏನೆಂಬುದು ಎಲ್ಲರಿಗೂ ತಿಳಿದೇ ಇದೆ. ಇದ್ದಿಲಿನ ಉಪಯೋಗವೇನೆಂದು ನಿಧಾನವಾಗಿ ಯೋಚಿಸಿ ನೋಡುವುದಾದರೆ, ರೈತರ ಆರಂಬಕ್ಕೆ ಬೇಕಾಗುವ ಗುದ್ದಲಿಯೇ ಮೊದಲಾದ ಸಾಮಾನುಗಳನ್ನು ಹದಮಾಡಿಕೊಡುವ ಕಮ್ಮಾರರು ಮೊದಲುಗೊಂಡು ಪಟ್ಟಣಗಳಲ್ಲಿ ಸಾವಿರಾರು ರೂಪಾಯಿ ಆದಾಯಗಳಿಸುವ ಮಿಠಾಯಿ ಅಂಗಡಿಯವರೂ ಸಹಾ ಇದ್ದಿಲಿಲ್ಲದೆ ಅವರವರ ಕೆಲಸವನ್ನು ಸರಿಯಾಗಿ ನಡೆಸಲಾರರು. ಇನ್ನು ಮನೆಯ ಬಳಕೆಯ ಮಾತು ಸಂಸಾರಿಗಳಂತೂ ಸದಾ ಒಂದು ಮೂಟೆಯ ಇದ್ದಿಲು ಇಟ್ಟೇ ಇರುವರು. ಇದರ ಬೆಲೆ ಹದಿನಾಲ್ಕು ಆಣೆಯಿಂದ, ಮಳೆಗಾಲದಲ್ಲಿ, ಒಂದು ರೂಪಾಯಿ ನಾಲ್ಕಾಣೆಯವರಿಗೆ ಇರುವುದು. ಒಂದು ಮೂಟೆಯ ಇದ್ದಿಲನ್ನು ಸುಮಾರು ಒಂದು ತಿಂಗಳು ಕೇವಲ ತಿಂಡಿತೀರ್ಥಗಳಿಗೆ ಮಾತ್ರ ಉಪಯೋಗಿಸುವರು. ಉಳಿದ ಅಡಿಗೆ, ಸ್ನಾನದ ಬಿಸಿನೀರಿಗಂತು ಒಡೆಯುವ ಕೂಲಿ ಸೇರಿ ಆರು ರೂಪಾಯಿನ ಒಂದು ಗಾಡಿ ಸೌದೆಯನ್ನು ಉಪಯೋಗಿಸುವರು. ಇದರಲ್ಲಿ ತೀರ ಬಡವರಂತೂ ಸ್ನಾನಕ್ಕೆ ಬಿಸಿನೀರನ್ನು ಬಿಟ್ಟು ಅರೆವಾಸಿಯನ್ನಾದರೂ ಉಪಯೋಗಿಸುವರು. ಸೌದೆಯಿಂದ ತುಂಬಾ ಹೊಗೆಯು ಹೊರಟು, ಕಣ್ಣುಗಳಿಗೆ ತುಂಬಾ ಅಪಾಯವನ್ನು ಕೊಡುವುದು. ಉಪಯೋಗಿಸುವ ಪಾತ್ರೆಗಳು ಕಪ್ಪುಹಿಡಿದು. ಅನೇಕಸಲ ತೊಳೆದರೂ, ಕಪ್ಪು ಹೋಗದೆ, ತೊಳೆಯುವವರಂತೂ ಬೇಜಾರಾಗಿ ಕಲ್ಲು, ಮರಳು ಇವುಗಳಿಂದ ಉಜ್ಜಿ ಪಾತ್ರೆಗಳು ಆರು ತಿಂಗಳಿಗೆ ಸವೆಯುವ[illegible]ವರೂ, ಮೂರೇ ತಿಂಗಳಿಗೆ ತೂತಾಗುತ್ತವೆ.

ಗಾಳಿ, ಬೆಳಕಿಲ್ಲದ ಅನೇಕ ಬಡವರ ಮನೆಗಳಲ್ಲಂತೂ, ಈ ಹೊಗೆಯ ಹೊಲಸು ಹೇಳಲಾರದಷ್ಟು ಇರುವುದು. ಇದರ ಗುರುತು ಇಲ್ಲದೆ ತಿಳಿದವರಂತೂ ಎರಡು ಮೂರು ಒಲೆಗಳಿದ್ದರೂ, ಪ್ರತಿಯೊಂದರ ಬಳಿ ಸುಮಾರು ನೂರು ರೂಪಾಯಿ ಅಂದಾಜಿನ ಒಂದೊಂದು ಕೊಳವೆಯಿಟ್ಟಿರುವರು. ಅಂಗಡಿಗಳಲ್ಲೂ ಇನ್ನೂ ದೊಡ್ಡ ಕೊಳವೆಗಳನ್ನು ಇಟ್ಟಿರುವರು. ಅಂತೂ ಹೇಗೆ ಇರಲಿ, ಏನೆ ಆಗಲಿ, ಹೊಗೆಯು ತುಸವಾದರೂ ತನ್ನ ಕೆಲಸವನ್ನು ಮಾಡದೆಬಿಡದು. ಅಂದಮೇಲೆ ಎಲ್ಲರೂ ಇದ್ದಿಲನ್ನೇ ಉಪಯೋಗಿಸಬಾರದೇಕೆ? ಇದರಲ್ಲಿ ಒಂದು ಸಂಗತಿ. ಇದ್ದಿಲನ್ನು ಪೂರಾ ಕೊಂಡು ಅದರ ಬೆಲೆ ಕೊಟ್ಟು ಉಪಯೋಗ ಹೊಂದಲಾರರು ಎಂಬ ಅಡ್ಡಿ ಬರಬಹುದು. ಆದರೆ, ನಿಜವಾಗಿಯೂ ಇದ್ದಿಲಿನ ಬೆಲೆಯೊಂದೇ ಅಲ್ಲ, ಅನೇಕರು ಹೊಗೆ ಇಂದ ಆಗುವ ಕೇಡಿನ ಕಡೆಗೆ ಕಣ್ಣುಬಿಟ್ಟು ನೋಡಿಲ್ಲ. ಯಾರೂ ಇದನ್ನು ಬಿಡಿಸಿ, ಅವರಿಗೆ ತಿಳಿಯ ಹೇಳಿಲ್ಲ.

ಸೌದೆ, ಇದ್ದಿಲು ಎರಡನ್ನೂ ಉಪಯೋಗಿಸುವ ಬದಲು, ಅವುಗಳ ಬೆಲೆಯ ಅರೆವಾಸಿ ದುಡ್ಡಿನಲ್ಲಿ ಬರಿಯ ಇದ್ದಿಲನ್ನೇ ಕೊಂಡು ಈ ಇದ್ದಿಲಿನಿಂದ ಆಗಬಹುದಾದ ಪೂರಾ ಉಪಯೋಗ ಹೊಂದುವ ರೀತಿಯನ್ನೂ ಸಹ ಯಾರೂ ತಿಳಿಸಿಲ್ಲ. ಮತ್ತೆ ಇದ್ದಿಲಿನಲ್ಲಿ ಉರಿಯಲು ಕಾರಣವಾದ ಸಾಮಾನು ಯಾವದು? ಅದರ ಕೆಲಸವೇನು? ಅದರ ಬೆಲೆಯೇನು? ಇದನ್ನು ಯಾರೂ ವಿವರವಾಗಿ ಎಲ್ಲರಿಗೂ ತಿಳಿಯಪಡಿಸಿರುವುದಿಲ್ಲ. ಇದ್ದಿಲಿನಲ್ಲಿರುವ ಇಂಗಾಲಾಮ್ಲ ಎನ್ನುವದೇ ಇದು. ಇದರ ಬೆಲೆ ಕಟ್ಟಲು ತಿಳಿದವರಿಗೆ ಸಹಾ ಅವಕಾಶವಿಲ್ಲ. ಏಕೆಂದರೆ ವಿಷಯ ಸಂಶೋಧಕರಾದ ಅನೇಕ ಪಂಡಿತೋತ್ತಮರು ಸಹ ಲೋಕದಲ್ಲಿರುವ ಅತಿ ಉತ್ತಮವಾದ ಬೆಲೆ ಕಟ್ಟಲು ಆಗಲಾರದ ರತ್ನಗಳಲ್ಲಿ ಮೊದಲನೆಯದಾದ ವಜ್ರ ಎಂಬುವದು ಇಂಗಾಲವು ಲೆಕ್ಕವಿಲ್ಲದ ಕಾಲ ಬಲಿತು ಅದರ ಬೀಜಾಕಾರವಾಗಿದೆಯೆಂದು ಕಂಡುಹಿಡಿದಿದ್ದಾರೆ. ಅಲ್ಲದೆ ಒಪ್ಪಿಯೂ ಇರುವರು.

ಇನ್ನು ಪ್ರತಿದಿನವೂ ಬಳಸುವ ಇದ್ದಿಲಿನಲ್ಲಿರುವ ಪೂರಾ ಇಂಗಾಲವನ್ನು ಯಾವರೀತಿ ಉಪಯೋಗಕೊಡುವಂತೆ ಮಾಡಬಹುದು ಎಂಬ ಸಂಗತಿ. ಈ ವಿಷಯದಲ್ಲಿ ನಾನು ಐದು ವರ್ಷಗಳ ಕಾಲ ಬಿಡದೆ ಕೆಲಸದಲ್ಲಿ ಕೈ ಹಾಕಿ ಸಾವಿರಾರು ರೂಪಾಯಿಗಳನ್ನು ಕಳೆದು ಕಡೆಗೆ ಒಂದು ಪುಡಿಯನ್ನು ಕಂಡುಹಿಡಿದು ಇದರ ಗುರುತು ಮೊದಲಾದುವನ್ನು ಹಿಂದೂಸ್ಥಾನದ ಸರ್ಕಾರದಿಂದ ಹಕ್ಕು ದಾಖಲುಮಾಡಿ ಕಾದಿಟ್ಟಿದ್ದೇನೆ. ಇದನ್ನು ಉಪಯೋಗಿಸುವ ವಿಧಾನ ಬಹು ಸುಲಭವಾದುದು. ಇದರ ಉಪಯೋಗದಿಂದ ಇದ್ದಿಲಿನಲ್ಲಿನ ಉಪಯೋಗ ಪೂರಾ ಪಡೆಯುವದೇ ಅಲ್ಲ. ಇದ್ದಿಲು ಉರಿಯುವಾಗ ಚಟ ಪಟ್ ಎಂದು ಒಡೆದು ಬಹು ಸಣ್ಣ ಕಿಡಿಗಳು ಹಾರಿ ಸುಡುವ ಅಪಾಯಗಳಿಲ್ಲ. ತಾವೇ ದೂರವಾಗುವವು. ಉಪಯೋಗಿಸುವ ಪಾತ್ರೆಗಳಂತು ಎಷ್ಟಾದರೂ ಬಹು ಜಾಗ್ರತೆ ತೊಳೆದಿಡಬಹುದು. ತೊಳೆಯಲು ಸೋಡಾ, ಮಣ್ಣು, ಮರಳು, ಕಲ್ಲುಗಳು ಯಾವುವೂ ಬೇಕಿಲ್ಲ. ಅಲ್ಲದೆ ಇದನ್ನು ಉಪಯೋಗಿಸಿ ಆ ಇದ್ದಿಲಿಂದ ಅಡಿಗೆ ಮಾಡಿ ಊಟ ಮಾಡಿ ನೋಡಿದರೆ ತಾನೆ ತಿಳಿಯುವುದು. ವಿದ್ಯುತ್ ಕಾವಿನಿಂದ ಆದ ಊಟ, ತಿಂಡಿಗಳು ಹೆಚ್ಚಿನ ಕಾವು ಉಂಟುಮಾಡಿ ಒಗ್ಗುವವರೆಗೂ ಕಣ್ಣು, ಕರುಳು ಇವುಗಳಿಗೆ ಮಾರಿದ ಕೊಂಪದ ಕೊಡುವುವು. ಇದರಲ್ಲಿ ಆ ತೆರನಾದ ಅಪಾಯಗಳೊಂದೂ ಇಲ್ಲ. ಅಲ್ಲದೆ ಒಂದು ಮೂಟೆಯ ಇದ್ದಿಲನ್ನು ಉಪಯೋಗಿಸುವ ಬದಲು ಅರ್ಧ ಮೂಟೆ ಇದ್ದಿಲೇ ಒಂದು ಮೂಟೆಯ ಕೆಲಸವನ್ನು ಮಾಡುವ ಬಲವನ್ನೂ ಕೊಡುವುದು. ಇದರಿಂದ ಅಪಾಯಗಳು. ಅನಾನುಕೂಲಗಳು ಕಡಿಮೆಯಾಗುವುದಲ್ಲದೆ ಆರು ಮೂಟೆಯ ಇದ್ದಿಲನ್ನು ಕೊಳ್ಳುವ ಬದಲು ಮೂರು ಮೂಟೆ ಕೊಂಡರೆ ಸಾಧಾರಣ ಮೂರು ರೂಪಾಯಿ ಉಳಿದು. ಈಗಿನ ಮುಗ್ಗಿನ ಬರಗಾಲದಲ್ಲಿ ಬಹಳವಾಗಿ ತೊಂದರೆಯು ಕಡಿಮೆಯಾಗುವುದು.

ಇದರ ಬೆಲೆಯಂತೂ ಉಪಯೋಗದೊಡನೆ ಹೋಲಿಸಿ ನೋಡಿದರೆ ಅತ್ಯಲ್ಪವಾಗಿ ಕಂಡುಬರುವುದು. ಇದನ್ನು ದೊಡ್ಡ ವ್ಯಾಪಾರಿಗಳ ಮೂಲಕ ಬಿಕರಿಗೆ ಕೊಡುವುದಾದರೆ, ಅನೇಕ ಅನಾನುಕೂಲದವರಿಗೂ ಸಾಮಾನ್ಯ ಎಲ್ಲಾ ಸಂಸಾರಿಗಳಿಗೂ ಸರಿಯಾದ ಬೆಲೆಯಿಂದ ದೊರೆಯದೆ ಹೋಗುವುದು. ನಾನು ಈ ಸೀಮೆಯವನೇ. ನಿಮ್ಮ ಒಡನಾಡಿ. ನಾನು ಕಂಡುಹಿಡಿದ ಸಣ್ಣ ಸಾಮಾನು ನಿಮ್ಮ ಸಾವಿರಾರು ಮಂದಿಗಳ ಬಳಕೆಯಲ್ಲಿ ಕೆಲಸಕ್ಕೆ ಬರುವುದಾದರೆ ನಾನು ಧನ್ಯ. ಒಂದು ವರ್ಷ ಪೂರಾ ಬಿಡದೆ ಉಪಯೋಗಿಸಲು ಮನಮಾಡಿ ನಂಬಿಕೆಯಿಡುವ ಸಂಸಾರಿಗಳು ಯಾರೇ ಆದರೂ ಇಲವಾಲ ರಸ್ತೆ 1740 ನೆ ನಂಬರು ಮನೆಯಲ್ಲಿರುವ ನನಗೆ ತಿಳಿಸುವದಾದರೆ ನಾನಾಗಿ ಬಂದು, ನಿಮ್ಮ ಇದ್ದಿಲನ್ನು ನೀವೆ ಉಪಯೋಗಿಸುವಂತೆಯೂ, ಮತ್ತು ಯಾವ ಬೆಲೆಯಿಲ್ಲದೆ ನಾನು ಕಂಡುಹಿಡಿದಿರುವದು ಏನು ಎಂಬುದನ್ನೂ ಕೈಯಾರ ಮಾಡಿ ತೋರಿಸುತ್ತೇನೆ.

ಮಹಾ ಜನರು ಪ್ರೋತ್ಸಾಹಿಸುವದಾದರೆ ಸಾವಿರಾರು ಜನರು ಸೇರುವ ಜಾಗದಲ್ಲಿ ನನಗೆ ತಿಳಿದಮಟ್ಟಿಗೆ ಹೇಳಿ ಕೈಯಾರ ಮಾಡಿತೋರಿಸಿ. ಅನೇಕರು ಕೇವಲ ಸುಲಭ ದರದಿಂದ ಉಪಯೋಗಿಸಲು ಮಾತ್ರ ಒದಗಿಸಿ ಈ ರೀತಿ ದೇಶಸೇವೆಯ ಮೂಲಕ ಈಶ ಸೇವೆ ಮಾಡಬೇಕೆಂಬುದೇ ನನ್ನ ಕೋರಿಕೆ. ಈ ಕೋರಿಕೆಗೆ ನೆರವಾಗುವವರು ಯಾರಾಗಲಿ ಚಿರಕಾಲ ನಾನು ಅವರಿಗೆ ಋಣಿಯಾಗಿರುವೆನು.

ಲೋಕಸೇವಕರ ಸೇವಕ
ಸು. ದಾ. ಕಣೇಕ.
ಮೈಸೂರು.

ಗಿಡದ ಕೂಸು.

೧

ಕಣ್ಣನಾಳದಿ ಕನಸಕಾಣುತ
ಮಣ್ಣನಡಿಯಲಿ ಹಾಸಿ ಬೆಚ್ಚಗೆ
ಪುಟ್ಟಕೂಸು ಕಾಳಿನೊಳಗಡೆ
ಹೊಟ್ಟೆಹೊದ್ದು ನಿದ್ದೆ ಮಾಡಿತು.

೨

ನೇಸರಲ್ಲೇ ಕಿವಿಯಲುಸುರಿದ
‘ಹಸಿವೆ’ ತಮ್ಮಾ, ಎದ್ದು ಬಾ!’
ಮಳೆಯ ಹನಿಗಳು ಬಳಿಗೆ ಬಂದು
‘ಏಳು, ಕಂದನೆ’ ಎಂದುವು

೩.

ಸವಿದ ಸ್ವಪ್ನದ ಸಿಹಿಯುದಳಿಯಿತು.
ಎವೆಯ ಮೆಲ್ಲಗೆ ತೆರೆಯುತಾ,
ಬಿಸಿಲು ಮಳೆಗಳ ಕೂಡೆ ನಲಿಯಲು,
ಹಸುರುಸೆಲೆಗಳ ನೀಡಿತು

ಕಿಟ್ಟಣ್ಣ.

ಚಂದ್ರಗುಪ್ತ.

[ಬಂಗಾಳದ ಸರ್ವೋಚ್ಚ ನಾಟಕ ಲೇಖಕ ಮತ್ತು ಕವಿಶ್ರೇಷ್ಠ ದ್ವಿಜೇಂದ್ರಬಾಬು ರಚಿತ 'ಚಂದ್ರಗುಪ್ತ' ನಾಟಕದ ಒಂದು ದೃಶ್ಯದ ಭಾವಾನುವಾದವಿದು]

ಅನುವಾದಕ — ಎನ್. ಎಸ್. ಶಾನುಣ್ಣ, ಮೈಸೂರು

(ಯವನ-ಸಾಮ್ರಾಟ ಸೆಲ್ಯೂಕಸ್ ಮತ್ತು ಆತನ ಪ್ರಿಯಪುತ್ರಿ ಹೆಲೇನ್ ರಮಣಿ)

ಸೆಲ್ಯೂಕಸ್—ಅನಾಗರಿಕ ಚಂದ್ರಗುಪ್ತನೊಡನೆ ಯವನ ಸಾಮ್ರಾಟನ ಪುತ್ರಿಯ ವಿವಾಹವೇ! ನಾನೀ ತುಚ್ಛಕರಾರ್ಗೊಪ್ಪಿ ಸೆರೆಯಿಂದ ಪಾರಾಗಲಿಚ್ಛಿಸುವುದಿಲ್ಲ. ನಾನು ಹಾಗೆಂದಿಗೂ ಮಾಡಲಾರೆನು

ಹೆಲೇನ್—ಅಪ್ಪಾ, ಈಗ ತಮ್ಮ ದರ್ಪವಾವುದೂ ಹ್ರಾಸವಾಗಿ ಅಮಿತ ಅವಮಾನ ಪ್ರಾಪ್ತವಾಗಿದೆ ಹಾಗೂ ತಮ್ಮ ಅಹಂಕಾರಭಂಗವಾಗಿಲ್ಲ!

ಸೆಲ್ಯೂಕಸ್—ದಿಗ್ವಿಜಯಕ್ಕಾಗಿ ಹೋರಾಡಿದ್ದಾಯಿತು, ವಿಫಲವಾಯಿತು ಇದರಲ್ಲಿ ಲಜ್ಜೆಯಾತರದು?

ಹೆಲೇನ್—ಯುದ್ಧಮಾಡುವಂತೆ ತಮ್ಮನ್ನು ಪ್ರೇರೇಪಿಸಿದವರಾರು? ಚಂದ್ರಗುಪ್ತ ಸಾರ್ವಭೌಮನು ತಮಗೆ ಯಾವ ಅಪರಾಧ ಮಾಡಿದ್ದನು? ಸ್ವತಃ ಅವನೇನೂ ಯವನರೊಂದಿಗೆ ಹಗೆತನ ಗಳಿಸಲಿಲ್ಲವಲ್ಲಾ! ಆತನಾವರೂ ಯಾರ ಗೋಜಿಗೂ ಹೋಗದೆ ಸಿಂಧು ನದಿಯಿಂದೀಚೆ ರಾಜ್ಯವಾಳುತ್ತಿದ್ದನು ಅದನ್ನು ತಾವು ಸಹಿಸಲಿಲ್ಲ! ನಾನು ಆರಂಭದಲ್ಲೇ ತಮ್ಮನ್ನಾಕ್ಷೇಪಿಸಿದ್ದೆ ಒಳ್ಳೆಯದೇ ಆಯಿತು

ಸೆಲ್ಯೂಕಸ್—ಯವನಳಾಗಿ ಪರದೇಶೀಯರ ವಿಜಯ ಗೌರವದಿಂದ ಪ್ರಸನ್ನಳಾಗಿರುವೆಯಾ?

ಹೆಲೇನ್—ಯಾತಕ್ಕಾಗಬಾರದು? ಯವನರೇನೋ ಪರಾಜಿತರಾದರು, ಆದರೆ ಧರ್ಮಕ್ಕೆ ಜಯ ಲಭಿಸಿಯೇ ಇದೆ ಅಪ್ಪಾ, ಯಾವಾತನು ಒಂದು ಪ್ರತಿಷ್ಠಿತ ರಾಜ್ಯದ ಶಾಂತಿಭಂಗಮಾಡಲೆತ್ನಿಸುವನೋ, ಅವನು ಹೊರಗಿನ ವೈರಿಯಾಗಲಿ ಅಥವಾ ಅದೇ ರಾಜ್ಯದೊಳಗಿನ ಪ್ರಜೆಯಾಗಲಿ, ಮಹಾಪಾತಕಿಯೆನಿಸುವನು

ಸೆಲ್ಯೂಕಸ್—ಒಹುದು, ಅಂಥವ ನೀಚನೇ ಸರಿ!

ಹೆಲೇನ್—ಅದರ ಫಲವನ್ನೇ ಈಗ ಸವಿಯುತ್ತಿರುವಿರಿ

ಸೆಲ್ಯೂಕಸ್—ಯುದ್ಧದಲ್ಲಿ ಸೋಲು-ಗೆಲುವು ಪ್ರಾಪ್ತವಾಗುತ್ತಲೇ ಇರುತ್ತವೆ ಈ ಬಾರಿ ಪರಾಜಯವಾಯಿತು ಈಗಲೂ ಈ ಬಂಧನದಿಂದ ಪಾರುವಪ್ಪೇ ಆದರೆ

ಹೆಲೇನ್—ಏನು? ಈ ಅಸಹ್ಯ ದಯಾಪಾತ್ರರಾಗಿ ಜೀವದಾನಪಡೆದುಬಾಳುತಿರುವಿರಾ? ತಮ್ಮ ಪೂರ್ವದ ಆ ಪ್ರತಿಜ್ಞೆ ಎಲ್ಲಿಹೋಯಿತು? — "ಕೀರ್ತಿ ಅಥವಾ ವೀರಸ್ವರ್ಗ" ಆಹಾ! ತಮಗಿನ್ನೂ ನಾಚಿಕೆಯಾಗುವುದಿಲ್ಲವೇ?

ಸೆಲ್ಯೂಕಸ್—ಹೆಲೇನ್, ನಿನ್ನ ಬಾಯಿಂದ ಇಂತಹ ಬಿರುನುಡಿಗಳು! ಇವೆಲ್ಲಾ ನನ್ನ ದುರ್ದೈವದ ವಿಪರೀತಫಲ! ವಿಧವಿಧವಾದ ಲಾಲನೆ ಪಾಲನೆಗಳಿಂದ ಪೋಷಿಸಿರುವ ಯಾವ ಮಾತೃಹೀನ ಪುತ್ರಿಯಿಂದ ಇಂದು ಈ ನಿಂದನೆ! (ಮುಖವನ್ನು ತಗ್ಗಿಸುವನು.)

ಹೆಲೇನ್—ಇಲ್ಲಾ ತಂದೆ, ನನ್ನಿಂದ ಮಹದಪರಾಧವಾಯಿತು ಕ್ಷಮೆ ಬೇಡುವೆನು

ಸೆಲ್ಯೂಕಸ್—ಹಾಗಲ್ಲಾ, ಹೆಲೇನ್, ಅಪರಾಧ ನನ್ನದೇ, ನನ್ನನ್ನು ಮನ್ನಿಸು

ಹೆಲೇನ್—ಇಲ್ಲ ತಂದೆ, ನಾನೇ ಅಪರಾಧಿನಿ. ತಾವೀಗ ಬಂಧನವಿಮುಕ್ತರಾಗಿ ಯವನರ ಈ ಅಪಮಾನದ ಪ್ರತೀಕಾರ ಸಾಧಿಸಿ ನಾನು ತಮ್ಮನ್ನು ಬಿಡುಗಡೆ ಮಾಡುವೆನು, ಚಂದ್ರಗುಪ್ತನನ್ನು ವರಿಸಿ

ಸೆಲ್ಯೂಕಸ್—ಅದಾಗದು ಮಗಳೇ, ನನ್ನ ಬಿಡುಗಡೆಗಾಗಿ ನಿನ್ನನ್ನು ಬಲಿದಾನ ಮಾಡಲಾರೆ

(ಚಂದ್ರಗುಪ್ತನ ಪ್ರವೇಶ)

ಚಂದ್ರಗುಪ್ತ—ಹೌದು ವೀರವರಾ, ಯಾವ ತ್ಯಾಗವನ್ನೂ ಮಾಡಬೇಕಾಗಿಲ್ಲ ಯವನ ಸಾಮ್ರಾಟಾ, ತಾವು ಮುಕ್ತರು. ನಾನು ತಮಗೆ ಸ್ವಾತಂತ್ರ್ಯವಿತ್ತಿರುವೆನು ಬೇಕಾದರೆ ಪುನಃ ಮಗಧರಾಜ್ಯದಮೇಲೆ ಆಕ್ರಮಣಮಾಡಿರಿ, ಚಂದ್ರಗುಪ್ತನು ಅದಕ್ಕಾಗಿ ಸಿದ್ಧನಾಗಿರುವನು ತೆರಳಿ, ವೀರವರಾ, ತೆರಳಿ ಹೊರಡು ರಾಜಪುತ್ರಿ ನೀವು ಸ್ವತಂತ್ರರು. ಮಹನೀಯರೇ

ಸೆಲ್ಯೂಕಸ್—ಇದೇನಿದು!

ಚಂದ್ರಗುಪ್ತ—ಸೆಲ್ಯೂಕಸ್, ಭಾರತೀಯರು ಕರ್ತವ್ಯಭ್ರಷ್ಟರಲ್ಲ, ಕೃತಘ್ನರಲ್ಲ ಅವರು ಭುವನ-ವಿಜಯಿಯಾದ ಸಿಕಂದರ್ ಷಾಹನು ರಾಜಾ ಪೌರವನ ಮೇಲೆ ತೋರಿಸಿದ ಸೌಜನ್ಯತೆಯ ಉತ್ತರವೀಯಲರಿತಿಹರು ನೀವೀಗ ಸ್ವತಂತ್ರರು ಯಾರಲ್ಲಿ?

(ಕಾವಲುಗಾರನ ಆಗಮನ)

ಚಂದ್ರಗುಪ್ತ—ಇವರನ್ನು ಬಿಟ್ಟುಬಿಡು ಒಳ್ಳೆಯದು, ಸಾಮ್ರಾಟರೇ, ನಾನು ಹೋಗುವೆನು

(ಹೊರಡಲು ಪ್ರಯತ್ನ)

ಸೆಲ್ಯೂಕಸ್—(ಆಶ್ಚರ್ಯದಿಂದ) ಚಂದ್ರಗುಪ್ತಾ, ಶತ್ರುವಾಗಿಯೂ ನೀನೊಬ್ಬ ಪರಮಪುರುಷ ಹಿಂದೊಮ್ಮೆ ನನ್ನ ರಕ್ಷಿಸಿದ್ದೆ, ನಾನದನ್ನು ಮರೆತಿಲ್ಲ ಇಂದೂ ನೀನು ಯಾವ ಷರತ್ತೂ ಇಲ್ಲದೇ ನನ್ನ ಸ್ವಾತಂತ್ರ್ಯವಿತ್ತಿರುವೆ, ಇದನ್ನೂ ನಾನು ಮರೆಯುವಂತಿಲ್ಲ ಇಂದು ಯಾವ ದೇಶಗಳು ನನ್ನ ಸ್ವಾಧೀನ ತಪ್ಪಿರುವುವೋ, ಸಾಧ್ಯವಾದರೆ ಅವನ್ನು ನನ್ನ ಬಾಹುಬಲದಿಂದ ಮತ್ತೆ ಜಯಿಸುವೆನು. ಆದರೆ ನಿನಗೆ ನನ್ನ ಪುತ್ರಿಯನ್ನೀಯಲಾರೆ—ಕಾರಣ ನೀನೊಬ್ಬ ಅನಾಗರಿಕ ಭಾರತೀಯ

ಹೆಲೇನ್—ಈ ಭಾರತೀಯರೂ ಸಹ ಆ ಪರಮಪಿತನಾದ ಪರಮೇಶ್ವರನ ಸಂತಾನವಲ್ಲವೇ?

ಸೆಲ್ಯೂಕಸ್—ಹೆಲೇನ್! (ವಿಸ್ಮಯದಿಂದ ಅವಳಕಡೆ ನೋಡುತ್ತಾನೆ, ಅವಳು ಅಧೋಮುಖಿಯಾಗುತ್ತಾಳೆ)

ಚಂದ್ರಗುಪ್ತ—ಹೆಲೇನ್, ತಿಳಿಯಿತು ನಾನು ಈ ಮಹಾ ಸನ್ಮಾನವನ್ನು ಆತ್ಮಾದರದಿಂದ ಸ್ವೀಕರಿಸುವೆನು (ಸೆಲ್ಯೂಕಸ್‌ನನ್ನು ಕುರಿತು) ಆದರೆ ಎಲೈ ವೀರಾ, ನಾನೀ ಭಿಕ್ಷೆಯನ್ನು ಸ್ವೀಕರಿಸಲಸಮರ್ಥನು. ಮೊದಲಿಂದಲೂ ನಾನು ತಮ್ಮ ಪುತ್ರಿಯಮೇಲೆ ಅನುರಾಗವುಳ್ಳವನೆಂಬುದೇನೋ ನಿಜ ಆದರೆ ಇಂದು ನಾನು ಒಂದು ಕರ್ತವ್ಯ ಪಾಲನೆ ಮಾಡಬೇಕಾಗಿದೆ. ನನ್ನ ಆಪ್ತ-ಬಂಧು ಚಂದ್ರಕೇತುವು ತನ್ನ ಅಂತ್ಯ ಸಮಯದಲ್ಲಿ ತನ್ನ ಪ್ರಿಯಭಗಿನಿಯಾದ ಛಾಯಾ ರಮಣಿಯನ್ನು ನನಗೊಪ್ಪಿಸಿರುವನು ಮೇಲಾಗಿ ಇವಾತನ ಅಂತ್ಯದಶಾಲದ ಅತಿಶಯ ಪ್ರಾರ್ಥನೆ ನನಗೆ ಬೇರೊಂದ ಮಾರ್ಗವಿಲ್ಲ ಭಾರತದೇಶದ ಭವಿಷ್ಯಚಕ್ರವರ್ತಿನಿ ಆ ಮಲಯರಾಜ-ಕುಮಾರಿ ಛಾಯಾದೇವಿ

(ಒಡನೆಯೇ ಛಾಯಾದೇವಿಯ ಪ್ರವೇಶ)

ಛಾಯಾ—ಇದು ಭಾರತ ಸಾರ್ವಭೌಮರ ಅನುಪಮ ಅನುಗ್ರಹ ಆದರೆ ಛಾಯಾ ಈ ಅನುಗ್ರಹದತ್ತ ಸನ್ಮಾನದ ತಿರುಕಳಲ್ಲ ಭಾರತ ಸಾಮ್ರಾಟರ ಯೋಗ್ಯವಧು ಈ ಯವನ ಸಾಮ್ರಾಟರ ಕುಮಾರಿ ಹೆಲೇನ್‌ದೇವಿ (ಹೆಲೇನ್ ಕುರಿತು) ತಂಗೀ ನೀನು ಪರಮ ಸೌಭಾಗ್ಯವತಿ ನಿನ್ನ ಪ್ರೇಮದ ಆರಾಧ್ಯದೇವ ಈ ಭಾರತ ಸಾಮ್ರಾಟ ನಾನು ನಿರ್ಮಲಚಿತ್ತದಿಂದ ನನ್ನ ಹೃದಯ ನಿಧಿಯನ್ನು ನಿನಗ ದಾನಮಾಡುವೆನು (ಹೆಲೇನಳ ಕೈಯನ್ನು ಸ್ವರ ಮೂರ್ತಿ ಚಂದ್ರಗುಪ್ತನ ಹಸ್ತದಲ್ಲಿಟ್ಟು) ಈ ಅಮೂಲ್ಯ ರತ್ನವನ್ನು ಸದಾ ನಿಮ್ಮ ವಕ್ಷಸ್ಥಲದಲ್ಲಿ ಧರಿಸಿ, ಇದು ನನಗೆ ವಿಶೇಷ ಗೌರವಮುಹೂರ್ತ. (ನಯನಗಳನ್ನು ವಸ್ತ್ರದಿಂದ ಮುಚ್ಚಿಕೊಂಡು ಶೀಘ್ರಪ್ರಸ್ಥಾನ)

ಚಂದ್ರಗುಪ್ತ—(ಸ್ವಪ್ನದಿಂದ ಎಚ್ಚೆತ್ತವನಂತೆ ಅರ್ಧ ಸ್ವಗತ) ಅದಾಗದು, ಇದಸಾಧ್ಯ ಪ್ರಿಯಬಂಧು ಚಂದ್ರಕೇತು! (ಚಿಂತಿತಭಾವದಿಂದ ತೆರಳುವನು)

ಸೆಲ್ಯೂಕಸ್—ಹೆಲೇನ್, ಇದೆಲ್ಲಾ ಏನು?

ಹೆಲೇನ್—ಸ್ವಲ್ಪವೂ ತಿಳಿಯುವುದಿಲ್ಲ

ಸೆಲ್ಯೂಕಸ್—ನೀನು ಚಂದ್ರಗುಪ್ತನನ್ನು ಲಗ್ನವಾಗುವಿಯಾ?

ಹೆಲೇನ್—ಹೌದು ತಂದೆ ಅನುಮತಿ ಕೊಡಿ

ಸೆಲ್ಯೂಕಸ್—ಅನುಮತಿ ಈಯುವೆನು ಆದರ ಹೀಗಾಗುವುದೆಂದು ನಾನೆಂದೂ ಸ್ವಪ್ನದಲ್ಲೂ ಸಹ ನೆನೆದಿರಲಿಲ್ಲ ದೈವವಿಲಾಸವನ್ನಾರು ತಪ್ಪಿಸಬಲ್ಲರು?

(ಚಿಂತಾಭಾವನೆಯಿಂದ ತೆರಳುವನು)

ಹೆಲೇನ್—ತಂದೆ, ನಾನೀವಿವಾಹವಾಗಲೇಕೆ ಇಷ್ಟು ಒಪ್ಪುವೆನೆಂದು ತಾವು

ಯಳಂದೂರು ವರ್ತಮಾನ.

(ಸ್ವಂತ ಸುದ್ದಿಗಾರರಿಂದ)

ಈ ತಾಲ್ಲೂಕಿನಲ್ಲಿ ಈ ವಾರ ಸ್ವಲ್ಪ ಸ್ವಲ್ಪ ಗಾಳಿಮಿಶ್ರವಾದ ಮಳೆ ಆಗಿ, ಪೈರುಗಳಿಗೆ ಅನುಕೂಲವಾಗಿರುತ್ತೆ ಜನಾರೋಗ್ಯವು ಚೆನ್ನಾಗಿದೆ ಸುವರ್ಣಾವತಿ ನದಿಯಲ್ಲಿ ನೀರು ಬಂದಿಲ್ಲ ಈ ತಾಲ್ಲೂಕಿನಲ್ಲಿ ಕ್ಯಾಟಲ್ ಸೆನ್ಸಸ್ ಪ್ರಕಾರ 13 ಸಾವಿರ ಜನಗಳು, ಎತ್ತುಗಳು ಸೇರಿ ಇರುತ್ತೆ. ಕುರಿ ಮತ್ತು ಮೇಕೆಗಳು ಬಹಳವಾಗಿರುತ್ತವೆ. ಅನೇಕ ವರ್ಷಗಳಿಂದ ಈ ಮೂಕಪ್ರಾಣಿಗಳಿಗೆ ರೋಗವು ಪ್ರಾಪ್ತವಾದಲ್ಲಿ ಚಿಕಿತ್ಸೆ ನಡಿಸಲು ವೈದ್ಯರು ಯಾರೂ ಇಲ್ಲದೆ ರೈತಾಪಿ ಜನಗಳ ಆರಂಭ ವಗೈರೆ ವ್ಯವಸಾಯದ ಕೆಲಸಗಳಿಗೆ ಬಹಳ ತೊಂದರೆಯಾಗಿತ್ತು ಕಳೆದ ಸೆಪ್ಟಂಬರ್ ಮಾಹೆಯಿಂದ ಬೊಂಬಾಯಿ ಪಶುವೈದ್ಯಶಾಲೆಯಲ್ಲಿ ಉತ್ತೀರ್ಣರಾಗಿರುವ ಮ|| ಹೆಚ್ ಆರ್ ಚಂದ್ರಶೇಖರಯ್ಯನವರು ಪಶುವೈದ್ಯದ ಕೆಲಸವನ್ನು ನೆರವೇರಿಸಲು ಸರಕಾರದವರು ಚುನಾಯಿಸಿದ ಲಾಗಾಯಿತು ಈ ಹೆಡ್‌ಕ್ವಾರ್ಟರಿನಲ್ಲಿಯೂ ಈ ತಾಲ್ಲೂಕುಗ್ರಾಮಾಂತರಗಳಲ್ಲಿಯೂ ಸಂಚಾರಮಾಡಿ ತಳಿಗಳ ಅಭಿವೃದ್ಧಿ ಮತ್ತು ದನಗಾಡಿಗಳ ಚಿಕಿತ್ಸೆ ಮೊದಲಾದವುಗಳನ್ನು ಚೆನ್ನಾಗಿ ನಡಿಸುತ್ತಾ ಈ ಮೂಕ ಪ್ರಾಣಿಗಳಿಗೆ ತುಂಬಾ ಸಹಾಯಕವಾಗಿರುವುದು ರೈತಾಪಿ ಜನಗಳಿಗೆ ತುಂಬಾ ಅನುಕೂಲವಾಗಿರುತ್ತೆ ಇದಕ್ಕೆ ಸರಕಾರದವರು ಮತ್ತು ಡಿಸ್ಟ್ರಿಕ್ಟ್ ಬೋರ್ಡಿನವರು ಇಲ್ಲಿ ಪಶುವೈದ್ಯ ಕೆಲಸಕ್ಕೆ ಸಾಕಾದಷ್ಟು ಔಷಧಿಗಳನ್ನೂ ಮತ್ತು ಈ ಕೆಲಸದ ದಾಕ್ಷಿ ತಕ್ಕ ವೇತನವನ್ನೂ ಸಹಾಯಮಾಡಿ ಈ ತಾಲ್ಲೂಕಿನ ಪಶುವೈದ್ಯವನ್ನು ಅಭಿವೃದ್ಧಿಪಡಿಸಬೇಕಾಗಿ ಕೋರಿದೆ

ಬೇಲೂರು ಹಳೇ ಬೀಡು ದೇವಸ್ಥಾನಗಳ ಜೀರ್ಣೋದ್ಧಾರ

ಮೈಸೂರು ದೇಶದಲ್ಲಿ ಪುರಾತನಕಾ ದಿಂದಲೂ ಪ್ರಸಿದ್ಧವಾಗಿರುವ ಬೇಲೂ ಮತ್ತು ಹಳೇ ಬೀಡು ದೇವಸ್ಥಾನಗಳ ದುರಸ್ತುಮಾಡಿಸಿ ಸರಿಯಾದ ಸ್ಥಿತಿಯ ಡಲು ಸ್ಟೇಟ್ ಸರ್ಕಾರದವರು 50 ಸಾ ರೂಪಾಯಿಗಳನ್ನು ಮಂಜೂರು ಮಾ ರುವರು

ಕೊಂಚವಾದರೂ ಊಹಿಸಬಲ್ಲಿರಾ? ಷ್ಟು ತರ್ಕ ವಿತರ್ಕ ಮತ್ತು ಅನುನ ವಿನಯಗಳಿಂದ ಯಾವ ಸಾಧನೆ ಪ್ರಾ ವಾಗಲಿಲ್ಲವೋ, ಅದನ್ನೇ ಈ ವಿವಾ ದ್ವಾರ ಸಾಧಿಸುವೆನು ಇದು ವಿವಾಹ ಆತ್ಮಬಲಿ ಇಂದು ರಕ್ತದಾಹವುಳ್ಳ ರಡು ದೂರರಾಷ್ಟ್ರಗಳು ಶಾಂತಿಯು ಪರಸ್ಪರ ಆಲಂಗಿಸುವುವು —ಹೇ ಈಶ್ವ ಹೃದಯದಲ್ಲಿ ಶಕ್ತಿಯನೀಡು

— ಪ್ರಸ್ಥಾನ —

For Up-to-date and Efficient Medical Treatment

Go to—**Dr. A. J. RAM & SONS,**

Sayaji Rao Road, Mysore.

Physicians, Dentists, Opticians, etc.

ಡಾ॥ ಎ ಜೆ. ರಾಂ. ಅಂಡ್ ಸನ್ಸ್,

ಸಯ್ಯಾಜಿರಾವ್ ರೋಡ್, ಮೈಸೂರು ಸಿಟಿ.

ಔಷಧ ವ್ಯಾಪಾರಿಗಳು, ಚಿಕಿತ್ಸಕರು, ದಂತವೈದ್ಯರು,
ಮತ್ತು ಕನ್ನಡಕ ವ್ಯಾಪಾರಿಗಳು.

ಉತ್ತಮವಾದ ನವೀನ ಚಿಕಿತ್ಸೆಗಳಿಗೆ ನಮ್ಮಲ್ಲಿಯೇ ಬನ್ನಿರಿ.

ಪಂಡಿತ ಸಿ. ಎಚ್. ಚಂದ್ರಭಾಗಸಿಂಗ್
ಇವರಿಂದ ತಯಾರಿಸಲ್ಪಟ್ಟ

ಫಲಪುಷ್ಪಸಾರ ರಸಾಯನ.

ಸುಖಕರ ಮಲಬಂಧನಿವಾರಿಣೀ ಕ್ರಯ —1-8-0

ಗುಣ:—ಇದು ಜಾಪಾಳ ಮುಂತಾದ ಕಠಿಣ ವಿರೇಚನ ವಸ್ತುಗಳ ಯೋಗವಿಲ್ಲದ ಕೇವಲ ಅಮೃತೀಕರಣ ಪ್ರಯೋಗವು. ಕೇವಲ ಅನುಭವಸಿದ್ಧವಿದು. ಇದನ್ನು ಉಪಯೋಗಿಸುವುದರಿಂದ ಎಲ್ಲಾ ವಿಧವಾದ ಮಲಬಂಧವೂ, ಜಲವ್ಯಾಧಿ, ಅಜೀರ್ಣ, ಉಷ್ಣವಾಯು, ಕೀಲುವಾಯು, ಎದೆಯುರಿ, ಹೊಟ್ಟೆನೋವು, ಕೆಮ್ಮು, ತಲೆತಿರುಗು ಮುಂತಾದ ರೋಗಗಳೆಲ್ಲವೂ ನಿಂದಿತ ಗುಣವಾಗುತ್ತವೆ

ಬ್ರಾಂಚ್:—ಶ್ರೀಸತ್ಯನಾರಾಯಣ ಆಯುರ್ವೇದಿಕ್ ಫಾರ್ಮಸಿ,
ಜಗನ್ಮೋಹನ ಬಂಗ್ಲೆ ರಸ್ತೆ, ಮೈಸೂರು

You Know

OUR IDEAL ARRANGEMENTS & CHOICEST PREPARATIONS

We need not tell you about it

COME & SEE OUR NOVEL

innovations and up-to-date Management.

SRI KRISHNA BHAVAN, Mysore

ANANDA SODA FACTORY,

DODDAPET, MYSORE.

BEST AERATED WATER SUPPLIERS.

COMPLETE REQUISITES FOR AERATED WATER MANUFACTURERS AVAILABLE.

ಆನಂದಾ ಸೋಡಾ ಫ್ಯಾಕ್ಟರಿ,
ದೊಡ್ಡ ಪೇಟೆ, ಮೈಸೂರು

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ಬಾಲಸುಧಾ

ಮಕ್ಕಳ ಜ್ವರದ ಗೆಡ್ಡೆಯನ್ನು ಜಾತಾ ಗುಣ ಪಡಿಸುತ್ತೆ. ಲಿವರ್ (ಪಿತ್ತಕೋಶ) ದಪ್ಪನಾಗಿ ಕಣ್ಣು ಹಳದಿ ಬಣ್ಣವಾಗಿದ್ದರೆ ಇದರ ಸೇವನೆಯಿಂದ ದಿನೇ ದಿನೇ ಗುಣವಾಗುತ್ತೆ 20 ವರ್ಷಗಳಿಂದಲೂ ಅನುಭವ ಸಿದ್ಧವಾಗಿದೆ—ಮಕ್ಕಳ ಭೇದಿಗೆ ನಮ್ಮ ಬಾಲ ಸಂಜೀವಿಯನ್ನೇ ಉಪಯೋಗಿಸಿ

ಬಾಲಸುಧಾ ಬೆಲೆ 1 ರೂ — ಬಾಲಸಂಜೀವಿನಿ 1 ಆ

ಮೈಸೂರು, ಬೆಂಗಳೂರು, ಮದ್ರಾಸುಗಳಲ್ಲಿ ನಮ್ಮ ಶಾಖೆಗಳಿವೆ
ಸದ್ವೈದ್ಯಶಾಲಾ, ನಂಜನಗೂಡು

ಎಂ. ವಿ. ನಾರಾಯಣರಾಯರ
ಶ್ರೀ ಸತ್ಯನಾರಾಯಣ ಪರಿಮಳ ಫ್ಯಾಕ್ಟರಿ,
ಜಗನ್ಮೋಹನ ಬಂಗ್ಲಾ ಬೀದಿ, ಮೈಸೂರು

ಪರಿಮಳ ಅಗರ್ ಬತ್ತಿ

ಉಪಯೋಗಿಸಿ ಪ್ರೋತ್ಸಾಹಿಸಿರಿ

ಪ್ರಾಚೀನ ಕನ್ನಡ ವಚನ ಗ್ರಂಥಗಳು

ಸೌಗಂಧಿಕಾಪರಿಣಯ:—ಪೂರ್ವದಲ್ಲಿ ದೇವೇಂದ್ರನಿಗೆ ದೂರ್ವಾಸ ಮುನಿಗಳಿಂದ ಆಶೀರ್ವಾದ ಪೂರ್ವಕವಾಗಿ ಕೊಡಲ್ಪಟ್ಟ ಕಮಲಮಾಲಿಕೆಯನ್ನು ಆನೆಯ ಕುಂಭಸ್ಥಳದಲ್ಲಿಟ್ಟಪೊಡನೆ, ಆನೆಯು ಆ ಮಾಲಿಕೆಯನ್ನು ಕಾಲಿನಲ್ಲಿ ಹೊಸಕಿ ವ್ಯರ್ಥಪಡಿಸಲು, ಋಷಿಗಳ ಶಾಪದಿಂದ ಭೂಲೋಕದಲ್ಲಿ ರತ್ನಪುರಿಯಲ್ಲಿ ಸುಗಂಧರಾಜನಾಗಿ ಹುಟ್ಟಿ, ಕಳಿಂಗದೇಶದ ರಾಜಪುತ್ರಿಯಾದ ಸೌಗಂಧಿಕಾದೇವಿಯನ್ನು ಸ್ವಯಂವರಮಾಡಿಕೊಂಡ, ಬಹಳ ವಿಷಯಗಳಿರುವ ಕಥೆ.

೧೮೦ ಪುಟಗಳು ಕ್ರಯ ರೂ ೪—೮—೦

ಸಹಸ್ರಾಯುಚರಿತ್ರೆ:—ಮಾಹಿಷ್ಮತೀ ಅರಸನ ಜ್ಯೇಷ್ಠಪತ್ನಿಯಲ್ಲಿ ದಾಕ್ಷಾಯಣಿ ವರಪ್ರಸಾದದಿಂದ ಜನಿಸಿ ಲೋಕಪ್ರಸಿದ್ಧನಾಗಿ ತನಗೆ ಇತರರಿಂದ ಬಂದ ಗಂಡಾಂತರಗಳನ್ನೆಲ್ಲಾ ಪರಿಹರಿಸಿಕೊಂಡ ಒಬ್ಬ ಮಹಾಪುರುಷನ ಕಥೆ.

೪೭೫ ಪುಟಗಳು ಕ್ರಯ ರೂ. ೨—೦—೦

ಕಾಶೀಕ್ಷೇತ್ರಮಹಾತ್ಮೆ:—ಇದರಲ್ಲಿ ೧೪ ಲೋಕಗಳ ವರ್ಣನೆ, ನದಿಗಳು, ದೇವತೆಗಳು, ಋಷಿಗಳೇ ಮುಂತಾದವರ ಉತ್ಪತ್ತಿಕ್ರಮ ಗಂಗಾಸಹಸ್ರನಾಮವೇ ಮೊದಲಾದ ಅನೇಕ ವಿಷಯಗಳು ಅಡಕವಾಗಿರುತ್ತೆ.

೭೮೩ ಪುಟಗಳು ಕ್ರಯ ರೂ ೩—೩—೦

ಅಡ್ರೆಸ್ಸು —

ಗುಂಡ್ಲು ಪಂಡಿತ ಲಕ್ಷ್ಮಣಾಚಾರ್ಯರ ಮಕ್ಕಳು
ಶ್ರೀನಿವಾಸ ದೀಕ್ಷಿತಾಚಾರ್,
೩೦೭, ಕರುಪಟ್ಟಿಬೀದಿ, ಮೈಸೂರು

ಅಬಿಸೀನಿಯಾ



ಮೂರನೆಯ ಮೆನಲಿಕ್ ಎಂಬುವನು ಅಬಿಸೀನಿಯಾ ರಾಜ್ಯಾಧಿಕಾರವು ತನಗೆ ಸಲ್ಲತಕ್ಕದೆಂದು ಹೇಳುತ್ತಿರುವನು

ಸುಸಮಯ ! ಬಿಡಬೇಡಿ !!

ಆರು ಮಕ್ಕಳಿಗೆ ಮಾತ್ರ !!

1937 ನೇ ಮಿಡಲ್ ಸ್ಕೂಲ್ ಪರೀಕ್ಷೆಗೆ ಮನೆಗೆ ಒಂದು ಪಾ[illegible] ಹೇಳುತ್ತೇನೆ ಒಂದು ಮಗುವಿಗೆ ಒಂದು ಘಂಟೆಗೆ ರೂ. 5 ಪಾತ್ರ ಪಾಠ ಹೇಳುವ ರೀತಿ ನೋಡಿ ನಂತರ ವೇತನ ಕೊಡಬಹುದು. [illegible] 1 ನೆಯ ತಾರೀಖಿನೊಳಗೆ

T. C/o ಸಾಧ್ವಿ, ಮೈಸೂರು ಇವರಿಗೆ ಬರೆಯಿರಿ

ALL KINDS OF PAINTINGS
UNDERTAKEN BY

VISWAKALA MANDIRAM,

Sign Board Painters,

No 220. Bandikere, Mysore

K. V Viswarupachar
Artist

"ಬ್ರೇಕ್ ಪಿಲ್ಸ್"

Invented by a Himalayan Sage.

● ಸ್ತ್ರೀಪುರುಷರಿಗೆ ಆನಂದವನ್ನುಂಟುಮಾಡುವುದು ಈ ಮಾತ್ರೆಗಳೆ ಮದಿಸಿದ ಸ್ತ್ರೀಯರ ಗರ್ವಭಂಗಮಾಡಲು ಕಂಡುಹಿಡಿದಿರುವ ಮಾತ್ರೆಗಳಿವು ಇವರಲ್ಲಿ ರಸ ವಿಷಾದಿಗಳು ಸೇರಿಲ್ಲ ಕಸ್ತೂರಿ, ಚಿನ್ನ, ಹಿಮಾಲಯ ಪರ್ವತದ ವನಮೂಲಿಕೆಗಳು ಮುಂತಾದುವುಗಳಿಂದ ದೊಡ್ಡ ಯೋಗೀಶ್ವರರ ಹತ್ತಿರ ಸಂಗ್ರಹಿಸಿ, ಮುದುಕತನವನ್ನು ಲೋಕದಲ್ಲಿ ಇಲ್ಲದಂತೆ ಮಾಡುವುದು ಅರ್ಧ ಘಂಟೆಯೊಳಗಾಗಿ ವೀರ್ಯವನ್ನು ಕಲ್ಲಿನಂತೆಮಾಡಿ ರಮಿಸಲು ಉಲ್ಲಾಸವನ್ನು ಮಾಡುವುದು ಗುಣವಿಲ್ಲದಿದ್ದಲ್ಲಿ ಹಣ ವಾಪಸು

೬೦ ಮಾತ್ರೆಗಳು ರೂ ೫—೦—೦

೩೦ ಮಾತ್ರೆಗಳು ರೂ ೩—೦—೦

(ರೋಗದ ಪತ್ರಗಳು ಇಂಗ್ಲೀಷಿನಲ್ಲಿರಲಿ)

ಡಾ|| ಎ. ಎಸ್. ಮೂರ್ತಿ,
ಚಿಕಾಕೋಲ್, ಗಂಜಾಮ್ ಡಿಸ್ಟ್ರಿಕ್ಟ್

SADHVI,

BEST MEDIUM FOR ADVERTISEMENTS

-- ADVERTISEMENT TARIFF --

Full Page	Per Insertion	Rs	20
Half Page	"	"	12
Per Column	"	"	6

Special Rates for Contract Advertisements.

25 per cent extra for Cover Pages and Prominent Plac

For Particulars apply to.—

The Manager
SADHVI Office, Mysoi

Edited, Printed & Published by Agaram Rangiah B. A., at Sri Rama Press, D Subbiah Road, Mysore.

Registered No M 3534

॥ ಸತ್ಯಮೇವೋದ್ಧರಾಮ್ಯಹಮ್ ॥

ರಾಜಧಾನಿಯ ರಾಷ್ಟ್ರೀಯ ವಾರ ಪತ್ರಿಕೆ.

ವೃದ್ಧ ಪಿತಾಮಹ ಎಂ. ವೆಂಕಟಕೃಷ್ಣಯ್ಯನವರ ಜ್ಞಾಪಕಾರ್ಥವಾಗಿ ಪ್ರಕಟಿಸಲ್ಪಡುವುದು.

ಸಂಪಾದಕರ ಅಗರಂ ರಂಗಯ್ಯ, ಬಿ ಎ

Sadhvi: A Leading Nationalist Weekly of Mysore.

FOUNDED IN MEMORY OF Mr M VENKATAKRISHNAYYA, THE GRAND OLD MAN OF MYSORE

ಸಂಪುಟ ೧] MYSORE : MONDAY 27—7—36 ಮೈಸೂರು : ಸೋಮವಾರ ೨೭—೭—೩೬ [ಸಂಚಿಕೆ ೨೪

OLYMPIA TALKIES, MYSORE — ಒಲಂಪಿಯಾ ಟಾಕೀಸ್, ಮೈಸೂರು

"MAHATMA" "ಮಹಾತ್ಮ"

೧೯೩೬ ಜುಲೈ ೨೫ ನೇ ಶನಿವಾರದಿಂದ ಮೂರನೆಯ ವಾರದ ಪ್ರಾರಂಭ ಮಹೋತ್ಸವ.

For Up to date and Efficient Medical Treatment

Go to—Dr. A. J. RAM & SONS,

Sayaji Rao Road Mysore.

Physicians Dentists, Opticians, etc

ಡಾ|| ಎ ಜೆ. ರಾಂ. ಅಂಡ್ ಸನ್ಸ್,

ಸಯ್ಯಾಜಿರಾವ್ ರೋಡ್, ಮೈಸೂರು ಸಿಟಿ.

ಔಷಧ ವ್ಯಾಪಾರಿಗಳು, ಚಿಕಿತ್ಸಕರು, ದಂತವೈದ್ಯರು,
ಮತ್ತು ಕನ್ನಡಕ ವ್ಯಾಪಾರಿಗಳು

ಉತ್ತಮವಾದ ನವೀನ ಚಿಕಿತ್ಸೆಗಳಿಗೆ ನಮ್ಮಲ್ಲಿಯೇ ಬನ್ನಿರಿ.

ಪಂಡಿತ ಸಿ. ಎಚ್. ಚಂದ್ರಭಾನಸಿಂಗ್

ಇವರಿಂದ ತಯಾರಿಸಲ್ಪಟ್ಟ

ಫಲಪುಷ್ಪಸಾರ ರಸಾಯನ.

ಸುಖಕರ ಮಲಬಂಧನಿವಾರಿಣೀ ಕ್ರಯ —1-6 0

ಗುಣ —ಇದು ಜಾಪಾಳ ಮುಂತಾದ ಕಠಿಣ ವಿರೇಚನ ವಸ್ತುಗಳ ಸಂಯೋಗವಿಲ್ಲದ ಕೇವಲ ಪುಷ್ಪ ಶೀತರಣ ಪ್ರಯೋಗವು ಕೇವಲ ಅನುಭವಸಿದ್ಧವಾದದ್ದು ಇದನ್ನು ಉಪಯೋಗಿಸುವುದರಿಂದ ಎಲ್ಲಾ ವಿಧವಾದ ಮಲಬಂಧವೂ, ಮೂಲವ್ಯಾಧಿ, ಅಜೀರ್ಣ, ಉಷ್ಣವಾಯು, ಶೀಲವಾಯು, ಎದೆಯುರಿ, ಹೊಟ್ಟೆನೋವು, ಕೆಮ್ಮು, ತಲೆತಿರುಗು ಮುಂತಾದ ರೋಗಗಳೆಲ್ಲವೂ ಖಂಡಿತ ಗುಣವಾಗುತ್ತವೆ

ಬ್ರ್ಯಾಂಚ್ —ಶ್ರೀಸತ್ಯನಾರಾಯಣ ಆಯುರ್ವೇದಿಕ್ ಫಾರ್ಮಸಿ,

ಜಗನ್ಮೋಹನ ಬಂಗ್ಲ ರಸ್ತೆ, ಮೈಸೂರು

You Know

OUR IDEAL ARRANGEMENTS & CHOICEST PREPARATIONS

We need not tell you about it

COME & SEE OUR NOVEL

innovations and up-to-date Management.

SRI KRISHNA BHAVAN,

Mysore

ANANDA SODA FACTORY,

DODDAPET, MYSORE.

BEST AERATED WATER SUPPLIERS

COMPLETE REQUISITES FOR

AERATED WATER MANUFACTURERS

AVAILABLE

ಆನಂದಾ ಸೋಡಾ ಫ್ಯಾಕ್ಟರಿ,

ದೊಡ್ಡ ಪೇಟೆ, ಮೈಸೂರು

"ಬ್ರೇಕ್ ಪಿಲ್ಸ್"

Invented by a Himalayan Sage.

● ಸ್ತ್ರೀಪುರುಷರಿಗೆ ಆನಂದವನ್ನುಂಟುಮಾಡುವುದು ಈ ಮಾತ್ರೆಗಳೆ ಮದಿಸಿದ ಸ್ತ್ರೀಯರ ಗರ್ವಭಂಗಮಾಡಲು ಕಂಡುಹಿಡಿದಿರುವ ಮಾತ್ರೆಗಳು

ಇದರಲ್ಲಿ ರಸ ವಿಷಾದಿಗಳು ಸೇರಿಲ್ಲ ಕಸ್ತೂರಿ, ಚಿನ್ನ, ಹಿಮಾಲಯ ಪರ್ವತದ ವನಮೂಲಿಕೆಗಳು ಮುಂತಾದುವುಗಳಿಂದ ದೊಡ್ಡ ಯೋಗೀಶ್ವರರ ಹತ್ತಿರ ಸಂಗ್ರಹಿಸಿ, ಮುದುಕತನವನ್ನು ಲೋಕದಲ್ಲಿ ಇಲ್ಲದಂತೆ ಮಾಡುವುದು ಇದ ಪಂಟಿಯೊಳಗಾಗಿ ವೀರ್ಯವನ್ನು ಕಲ್ಲಿನಂತೆಮಾಡಿ ರಮಿಸಲು ಉಲ್ಲಾಸವನ್ನು ಮಾಡುವುದು ಗುಣವಿಲ್ಲದಿದ್ದಲ್ಲಿ ಹಣ ವಾಪಸು

೬೦ ಮಾತ್ರೆಗಳು ರೂ. ೫—೦—೦

೩೦ ಮಾತ್ರೆಗಳು ರೂ ೩—೦—೦

(ಕಾಗದ ಪತ್ರಗಳು ಇಂಗ್ಲೀಷಿನಲ್ಲಿಯೇ)

ಡಾ|| ಎ. ಎಸ್. ಮೂರ್ತಿ,

ಚಿಕಾಕೋಲ್, ಗಂಜಾಮ್ ಡಿಸ್ಟ್ರಿಕ್ಟ್

ಸುಸಮಯ ! ಬಿಡಬೇಡಿ!

ಆರು ಮಕ್ಕಳಿಗೆ ಮಾತ್ರ !!

1937 ನೇ ಮಿಡಲ್ ಸ್ಕೂಲ್ ಪರೀಕ್ಷೆಗೆ ಮನೆಗೆ ಬಂದು ಪಾಠ ಹೇಳುತ್ತೇನೆ ಒಂದು ಮಗುವಿಗೆ ಒಂದು ಘಂಟೆಗೆ ರೂ 5 ಮಾತ್ರ ಪಾಠ ಹೇಳಿ ಪರೀಕ್ಷೆ ನೋಡಿ ನಂತರ ವೇತನ ಕೊಡಬಹುದು ಬರುವ 1 ನೆಯ ತಾರೀಖಿನೊಳಗೆ

T C/o ಸಾಧ್ವಿ, ಮೈಸೂರು ಇವರಿಗೆ ಬರೆಯಿರಿ

ಪ್ರಾಚೀನ ಕನ್ನಡ ವಚನ ಗ್ರಂಥಗಳು

ಸೌಗಂಧಿಕಾಪರಿಣಯ—ಪೂರ್ವದಲ್ಲಿ ದೇವೇಂದ್ರನಿಗೆ ದೂರ್ವಾಸ ಮುನಿಗಳಿಂದ ಆಶೀರ್ವಾದ ಪೂರ್ವಕವಾಗಿ ಕೊಡಲ್ಪಟ್ಟ ಕಮಲಮಾಲಿಕೆಯನ್ನು ಆನೆಯ ಕುಂಭಸ್ಥಳದಲ್ಲಿಟ್ಟಕೂಡಲೆ, ಆನೆಯು ಆ ಮಾಲಿಕೆಯನ್ನು ಕಾಲಿನಲ್ಲಿ ಹೊಸಕಿ ವ್ಯರ್ಥಪಡಿಸಲು, ಋಷಿಗಳ ಶಾಪದಿಂದ ಭೂಲೋಕದಲ್ಲಿ ರತ್ನಪುರಿಯಲ್ಲಿ ಸುಗಂಧರಾಜನಾಗಿ ಹುಟ್ಟಿ, ಕಳಿಂಗದೇಶದ ರಾಜಪುತ್ರಿಯಾದ ಸೌಗಂಧಿಕಾದೇವಿಯನ್ನು ಸ್ವಯಂವರಮಾಡಿಕೊಂಡ, ಬಹಳ ವಿಷಯಗಳಿರುವ ಕಥೆ

೧೬೦ ಪುಟಗಳು ಕ್ರಯ ರೂ ೪—೮—೦

ಸಹಸ್ರಾಯುಚರಿತ್ರೆ:—ಮಾಹಿಷ್ಮತೀ ಅರಸನ ಜ್ಯೇಷ್ಠಪತ್ನಿಯಲ್ಲಿ ದಾಕ್ಷಾಯಿಣಿ ವರಪ್ರಸಾದದಿಂದ ಜನಿಸಿ ಲೋಕಪ್ರಸಿದ್ಧನಾಗಿ ತನಗೆ ಇತರರಿಂದ ಬಂದ ಗಂಡಾಂತರಗಳನ್ನೆಲ್ಲಾ ಪರಿಹರಿಸಿಕೊಂಡ ಒಬ್ಬ ಮಹಾಪುರುಷನ ಕಥೆ

೪೭೫ ಪುಟಗಳು ಕ್ರಯ ರೂ ೧—೦—೦

ಕಾಶೀಕ್ಷೇತ್ರಮಹಾತ್ಮೆ:—ಇದರಲ್ಲಿ ೧೪ ಲೋಕಗಳ ವರ್ಣನೆ, ನದಿಗಳು, ದೇವತೆಗಳು, ಋಷಿಗಳೇ ಮುಂತಾದವರ ಉತ್ಪತ್ತಿಕ್ರಮ, ಗಂಗಾ ಸಹಸ್ರನಾಮವೇ ಮೊದಲಾದ ಅನೇಕ ವಿಷಯಗಳು ಅಡಕವಾಗಿರುತ್ತೆ

೬೮೩ ಪುಟಗಳು ಕ್ರಯ ರೂ ೨—೮—೦

ಅಡ್ರೆಸ್ಸು —

ಗುಂಡ್ಲು ಪಂಡಿತ ಲಕ್ಷ್ಮಣಾಚಾರ್ಯರ ಮಕ್ಕಳು

ಶ್ರೀನಿವಾಸ ದೇಶಿಕಾಚಾರ್,

೩೦೭, ಕರುಹಟ್ಟಿಬೀದಿ, ಮೈಸೂರು

|| ಸತ್ಯಮೇವೋದ್ಧರಾಮ್ಯಹಮ್ ||

ರಾ ಜ ಧಾ ನಿ ಯ ರಾ ಷ್ಟ್ರೀ ಯ ವಾ ರ ಪ ತ್ರಿ ಕೆ.

ವೃದ್ಧ ಪಿತಾಮಹ ಎಂ. ವೆಂಕಟಕೃಷ್ಣಯ್ಯನವರ ಜ್ಞಾಪಕಾರ್ಥವಾಗಿ ಪ್ರಕಟಿಸಲ್ಪಡುವುದು

ಸಂಪಾದಕರು ಅಗರಂ ರಂಗಯ್ಯ, ಬಿ ಎ

ಸಂಪುಟ ೧] MYSORE : MONDAY 27—7—36 ಮೈಸೂರು : ಸೋಮವಾರ ೨೭—೭—೩೬ [ಸಂಚಿಕೆ ೨೩

ಮೈಸೂರು ಪೌರಸಭೆ

———

ನಾಳೆಯ ದಿನ ಮೈಸೂರು ಪೌರಸಭೆಯ ... ಮೀಟಿಂಗ್ ನಡೆಯುವುದು ... ಧರ್ಮಸಂಸ್ಥೆಗಳಿಂದ ನೀರಿನ ... ವಸೂಲು ಮಾಡಬಾರದೆಂ ... ಗವಾದ ಹೆಚ್ ಸಿ ದಾಸಪ್ಪನವ ... ಹತ್ತು 19 ಜನ ಸದಸ್ಯರೂ ಕೊಟ್ಟಿ ... ನಿರ್ಣಯವು ಪರಿಶೀಲಿಸಲ್ಪಡುವುದು

... ದಿನ ಸಾಯಂಕಾಲ ಹಟಾತ್ತಾಗಿ ... ಆನೇಕ ನಲ್ಲಿಗಳಲ್ಲಿ ನೀರು ... ನಿಂತುಹೋಯಿತು ಪುನಃ ... ನೀರು ನಿಲ್ಲಿಸುವ ವಿಚಾರವಾಗಿ ... ತಿಳುವಳಿಕೆ ಕೊಟ್ಟಿರ ... ಇದರಿಂದ ಬಹಳ ತೊಂದರೆಯುಂ ... ತು ಈ ವಿಷಯಕ್ಕೆ ಪೌರಸಭಾ ... ಗಮನವು ಕೊಡಲ್ಪಡ ಪುದೆಂದು ... ರುತ್ತೇವೆ

ದೇವರಾಜ ಮಾರ್ಕೆಟ್ಟಿನ ಮಳಿಗೆಗಳಿಗೆ ... ಗಿರುವ ಹೆಚ್ಚಿನ ಬಾಡಿಗೆಗಳನ್ನು ... ವಸೂಲು ಮಾಡದಂತೆಯೂ ಮತ್ತು ... ವಜಾಮಾಡಿಸಬೇಕೆಂಬುದಾಗಿ ... ಸಿ ವಿ ಲಿಂಗಪ್ಪಯ್ಯ ... ಇತರ 12 ಮಂದಿ ಸದಸ್ಯರೂ ... ವನ್ನು ಸೂಚಿಸಿರುವರು ಮಾ ... ವರ್ತಕರಿಗೆ ಈ ಹೊಸ ಬಾಡಿಗೆ ... ಗಳನ್ನು ಕೊಡಲು ಅಸಾಧ್ಯವೆಂದು ... ಸೂಚಿಸಿರುತ್ತಾರೆ ಇದರಿಂದ ... ವರ್ತಕರಿಗೆ ಏನಾದರೂ ಪ್ರಯೋಜನ ... ವೆಂದು ಹಾರೈಸುತ್ತೇವೆ

ಅಪಮಾನಕ ಮೊಕದ್ದಮೆ

... ಇಲಾಖೆಯ ಅಪಮಾನಕ ಮೊ ... ಬೆಂಗಳೂರು ನಗರದ ಮ್ಯಾ ... ಮುಂದೆ ವಿಚಾರಣೆಗೆ ಬಂದು ... ಸಾಕ್ಷ್ಯದೊಡನೆ ವಾಟೀಸ ... ಮುಂದುವರಿಯುತ್ತಾ ಇದೆ ಆಪ ... ಪರ ವಕಾಲತ್ತು ವಹಿಸಿರುವ ... ರಂಗಸ್ವಾಮಿಯವರು ಎಲ್ಲ ... ಎಂಜಿನಿಯರಾದ ಮ|| ಅಹಮ್ಮದ್ ... ರವರ ವಾಟೀಸವಾಲು ನಡೆಸಿದ ... ರಣೆಯು ಮುಂದುವರಿಯುತ್ತಿದೆ

ಹೊಸ ಪೋಸ್ಟಲ್ ಸೂಪರಿಂಟೆಂಡೆಂಟ್

ತಿರುಚನಾಪಳ್ಳಿಯಿಂದ ಮೈಸೂರಿಗೆ ವರ್ಗಾಯಿಸಲ್ಪಟ್ಟ ಸಿ ವಿ ರಾಜಾರವರು 23 ನೇ ತಾರೀಖು ಮ|| ಲಿಂಕ ಗಾರ್ಡನ್ ರವರಿಂದ ಛಾರ್ಜು ತೆಗೆದುಕೊಂಡರು ಮಿ|| ಲಿಂಕ್‌ಗಾರ್ಡನ್‌ರವರನ್ನು ರಾಜಧಾನಿಯಿಂದ ಬೆಂಗಳೂರಿಗೆ ವರ್ಗಾಯಿಸಿರುತ್ತಾರೆ

ಮಗು ಮಾರಾಟಕ್ಕಿದೆ

ವಿಯನ್ನಾನಗರದಲ್ಲಿ ಒಬ್ಬ ಗರ್ಭಿಣಿ ಹೆಂಗಸು ತನ್ನ ಹೊಟ್ಟೆಯಲ್ಲಿ ಜನಿಸಲಿರುವ ಮಗುವನ್ನು ಯಾರಾದರೂ ಮಕ್ಕಳಿಲ್ಲದ ಪತಿಪತ್ನಿಯರು ತೆಗೆದುಕೊಳ್ಳಬಹುದೆಂದು ಇದಕ್ಕೆ ಪ್ರತಿಫಲವಾಗಿ 5000 ಷಿಲಿಂಗ್ ಗಳನ್ನು ಕೊಡಬೇಕೆಂದೂ ಪ್ರಕಟಿಸಿರುವಳು

ಅಡಾಲ್ಫ್ ಹಿಟ್ಲರ್

ಜರ್ಮನಿಯ ಸರ್ವಾಧಿಕಾರಿ

ಮತಾಂತರ ಪ್ರಯತ್ನ.

ಮೈಸೂರುಜಿಲ್ಲಾ ರಾಸನ ಹಳ್ಳಿಯಲ್ಲಿರುವ ರಜಪೂತ ಜಾತಿಯ ಅಣ್ಣಾಜಿರಾವ್ ಎಂಬುವರ ಪತ್ನಿ ರಾಜಾಬಾಯಿಯನ್ನೂ ಅವಳ 11, 7, 9ನೆ ವಯಸ್ಸಿನ 3 ಮಂದಿ ಹೆಣ್ಣು ಮಕ್ಕಳನ್ನೂ ಮತ್ತು ಅವಳ ಇಬ್ಬರು ಗಂಡು ಮಕ್ಕಳನ್ನೂ "ಧಾರಾ' ಎಂಬ ರಾಜ್ಯದಲ್ಲಿ ಬೇಗಂ ಎಂಬ ಮುಸಲ್ಮಾನ ಹೆಂಗಸು ಪುಸಲಾಯಿಸಿಕೊಂಡು ಇಟ್ಟಿದ್ದಾಳೆ ಇಬ್ಬರು ಹೆಣ್ಣು ಮಕ್ಕಳನ್ನು ತನ್ನ ಮತಕ್ಕೆ ಸೇರಿಸಿ ಅವರನ್ನು ತನ್ನ ಮಕ್ಕಳಿಗೆ ಮದುವೆಮಾಡಿಕೊಳ್ಳಲು ಪ್ರಯತ್ನಿಸುತ್ತಿದ್ದಾಳೆ ಈ ವಿಚಾರವನ್ನು ರಾಜಾಬಾಯಿಯು ಇಂದೋರಿನ ಮಧ್ಯಭಾರತ ಹಿಂದೂ ಧರ್ಮ ಸಂರಕ್ಷಣಾ ಸಭೆಗೆ ತಿಳಿಸಿರುತ್ತಾಳೆ ಯಾರಾದರೂ ಇವನ್ನು ಪತ್ತೆ ಹಚ್ಚಿ ಆಕೆಯ ವಾರಸುದಾರರಿಗಾಗಲಿ ಅಥವಾ ಆಕೆಯ ಪತಿಗಾಗಲಿ ಶೀಘ್ರವಾಗಿ ತಿಳಿಸಬೇಕೆಂದು ಇಂದೋರಿನ ಮಧ್ಯಭಾರತ ಹಿಂದೂ ಧರ್ಮ ಸಂರಕ್ಷಣಾ ಸಭೆಯವರು ಮೈಸೂರಿನ ಆರ್ಯ ಸಮಾಜದ ಕಾರ್ಯದರ್ಶಿಗಳಿಗೆ ಬರೆದಿರುತ್ತಾರೆ

ಚಿಕ್ಕ ಅಧಿಕಾರಿಗಳನ್ನು ದೊಡ್ಡ ಅಧಿಕಾರಿಗಳು ಹೊಡೆದ ಅಪಾದನೆ

———

ಚಿತ್ರದುರ್ಗ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮೀಷನರಾದ ಮ|| ಸುಂದರರಾಜ ಅಯ್ಯಂಗಾರ್ಯರವರು ಅಲ್ಲಿನ ಅಸಿಸ್ಟೆಂಟ್ ಕಮೀಷನರಾದ ಮ|| ಟಿ ಎಚ್ ಕಾಂತರಾಜರವರನ್ನು ಹೊಡೆದರೆಂಬ ಅಪಾದನೆಯು ಆಗಲೇ ಪತ್ರಿಕೆಗಳಲ್ಲಿ ಪ್ರಕಟವಾಗಿದ್ದುದು ಸರಿಯಷ್ಟೆ ಇದಾದಮೇಲೆ ಇಬ್ಬರು ಅಧಿಕಾರಿಗಳೂ ಬೆಂಗಳೂರಿಗೆ ಹೋಗಿ ಒಂದರು ಸ್ಥಳದಲ್ಲೇ ವಿದ್ಯಮಾನಗಳನ್ನು ವಿಚಾರಣೆಮಾಡಲು ಸರ್ಕಾರದ ರವೆನ್ಯೂ ಕಮೀಷನರಾದ ಮ|| ಕೆ ವಿ ಅನಂತರಾಮ ರವರು ಚಿತ್ರದುರ್ಗ ಟ್ರಾವೆಲರ್ಸ್ ಬಂಗಲೆಯಲ್ಲಿ ಇಳಿದು ಗುಪ್ತವಾಗಿ ಅಧಿಕಾರಿಗಳನ್ನು ವಿಚಾರ ಮಾಡಿದರೆಂಬುದಾಗಿ ತಿಳಿದುಬಂದಿದೆ ಮುಂದೆ ಏನಾಗುತ್ತೆಂಬ ವಿಷಯದಲ್ಲಿ ಬಹಳ ಕುತೂಹಲ ವುಂಟಾಗಿದೆ

ಒನುಮಯ್ಯನವರ ಸ್ಮಾರಕೋತ್ಸವ

ಧರ್ಮಪ್ರಕಾಶ ಸಾಹುಕಾರ್ ಡಿ ಬನುಮಯ್ಯನವರ ಹೈಸ್ಕೂಲಿನಲ್ಲಿ ಕಳೆದ 25ನೇ ತಾರೀಖು ಸಾಯಂಕಾಲ ಶಾಲಾಸ್ಥಾಪಕರ ಸ್ಮಾರಕೋತ್ಸವವು ವಿಶೇಷ ವೈಭವದಿಂದ ಜರುಗಿತು ವಿದ್ಯಾರ್ಥಿಗಳ ಕಲಾಕೌಶಲ್ಯ ಪ್ರದರ್ಶನವೊಂದು ಜರುಗಿತು ಡಾ| ಇ ಪಿ ಮೆಟ್ಕಾಫರವರ ಅಧ್ಯಕ್ಷತೆಯಲ್ಲಿ ಸಭೆಯು ನಡೆಯಿತು ಪ್ರಾರ್ಥನೆಗಳಾದ ಮೇಲೆ ಶಾಲೆಯ ಮುಖ್ಯೋಪಾಧ್ಯಾಯರಾದ ಮ|| ರಂಗಣ್ಣನವರು ಶಾಲೆಯ ವರದಿಯನ್ನೊಪ್ಪಿಸಿದರು ಅಧ್ಯಕ್ಷರ ಭಾಷಣವಾಯಿತು 'ಕೋರ್ಟ್‌ಮ್ಯಾನ್ಸ್ ಡಾಟರ್' ಎಂಬ ನಾಟಕವು ಶಾಲೆಯ ವಿದ್ಯಾರ್ಥಿಗಳಿಂದ ಸ್ವಾರಸ್ಯವಾಗಿ ಅಭಿನಯಿಸಲ್ಪಟ್ಟು ಸಭೆಯು ಮುಕ್ತಾಯವಾಯಿತು

ಓಟು ಕೊಡದಿದ್ದರೆ ಖೂನಿ

ಲಾಹೋರ್ ಜಿಲ್ಲಾ ಬೋರ್ಡು ಚುನಾವಣೆಯಲ್ಲಿ ಚುನಾವಣೆಗೆ ನಿಂತಿದ್ದ ಒಬ್ಬ ಸದಸ್ಯನಿಗೆ ತಾನು ಓಟು ಕೊಡುವುದಾಗಿ ಭರವಸೆ ಕೊಟ್ಟು ಬೇರೆಯವರಿಗೆ ಕೊಟ್ಟನೆಂಬ ವೈಷಮ್ಯದ ಮೇಲೆ ಉಮೇದುವಾರನು ಆತನನ್ನು ಚಾಕೆನಿಂದ ಇರಿದು ಕೊಂದನು

ಆಧುನಿಕ ಜರ್ಮನಿಯ ಸ್ಥಾಪಕನು ಯಾರು?

ಅಡಾಲ್ಫ್ ಹಿಟ್ಲರ್.

ಲೇಖಕರು—ಮಿ॥ ರಾ॥ ಎ. ಎಂ. ಕೃಷ್ಣಮೂರ್ತಿ, ಮೈಸೂರು

ಇಡೀ ಪ್ರಪಂಚದ ಪ್ರಳಯಾಂತಕ ಘೋರಸಂಗ್ರಾಮವು ೧೯೧೮ ನೆ ಸಂವತ್ಸರದಲ್ಲಿ ಕೊನೆಗೊಂಡಿತು. ಆ ಪ್ರಚಂಡ ಯುದ್ಧದಲ್ಲಿ ಯೂರೋಪಿನ ಅನೇಕ ರಾಷ್ಟ್ರಗಳು ಭಾಗಿಗಳಾಗಿದ್ದವು. ಸಂಗ್ರಾಮದ ಅಂತ್ಯದಲ್ಲಿ ಜಯವು ಬ್ರಿಟಿಷ್ ಮತ್ತು ಫ್ರೆಂಚರ ಕೈಸೇರಿತು. ಅಂದು ಒಂದು ಕಡೆ ವಿಜಯೋನ್ಮತ್ತರಾದ ಇಂಗ್ಲೀಷ್ ಮತ್ತು ಫ್ರೆಂಚರ ಅಪರಿಮಿತ ಆನಂದ, ಮತ್ತೊಂದು ಕಡೆ ಸೋತು, ಶರಣಾಗತರಾದ ಜರ್ಮನರ ಶೋಚನೀಯವಾದ ಪರಿಸ್ಥಿತಿ. ಯುದ್ಧದ ಆರಂಭದಲ್ಲಿ ಜರ್ಮನ್ ವೀರ ರಣಾಗ್ರಣಿಗಳು ವೀರಾವೇಶದಿಂದ ಜಯಭೇರಿಯನ್ನು ಹೊಡೆಯಲು ಭುಜ ತಟ್ಟಿ ನಿಂತರೂ, ಅಂತಹ ಮಹಾಸನ್ನಿವೇಶದ ಅಂತ್ಯದಲ್ಲಿ ಅವರು ಗಾರುಡಿಗನ ಕೈಗೆ ಸಿಕ್ಕಿದ ಮಹಾ ಸರ್ಪದಂತೆ ಸುಮ್ಮನೆ ಬುಸುಗುಟ್ಟಬೇಕಾಯಿತು. ತನ್ನ ರಾಷ್ಟ್ರವು ಸೋತುದದನ್ನು ನೋಡಿ ಚಕ್ರವರ್ತಿಯಾದ ಕೈಸರನು ತಲೆತಪ್ಪಿಸಿಕೊಂಡು ಎಲ್ಲಿಯೋ ಓಡಿಹೋದನು. ಜರ್ಮನಿಯು ವರ್ಸೇಲ್ಸ್ ಒಪ್ಪಂದದ ನಿರೀಕ್ಷಣೆಯಲ್ಲಿ ಕಾತುರವಾಗಿತ್ತು. ಪ್ರತ್ಯೇರನ್ನು ತುಳಿ ಮಹಾಕಿರಿ ಎನ್ನುತ್ತಾ ಜಯಶೀಲರಾದ ಫ್ರೆಂಚರು ಜರ್ಮನ್ ಸಾಮ್ರಾಜ್ಯದ ಮಧ್ಯದಲ್ಲಿ ತಂಡ ತಂಡವಾಗಿ ಬಂದು ನಿಂತರು. ಜರ್ಮನರು ಭಯಭ್ರಾಂತರಾದರು. ದೇಶವನ್ನು ಕಾಪಾಡಿಕೊಳ್ಳಲು ರಾಜನೀತಿವಿಶಾರದರೊಬ್ಬರೂ ಇಲ್ಲದಂತೆ ಆದುದರಿಂದ ದೇಶದಲ್ಲೆಲ್ಲಾ ಅನಾಯಕತ್ವವುಂಟಾಯಿತು. ಅಲ್ಲೋಲಕಲ್ಲೋಲವಾದ ಇಂತಹ ಭಯಂಕರ ಸನ್ನಿವೇಶದಲ್ಲಿ ಆರ್ಥಿಕ ಮುಗ್ಗಟ್ಟು ದೇಶವನ್ನೆಲ್ಲಾ ಆಕ್ರಮಿಸಿತು. ಇದರಿಂದ ಅನರ್ಥ ಪರಂಪರೆಗಳು ಇಮ್ಮಡಿಯಾದವು. ಇಷ್ಟೇ ಅಲ್ಲ, ದೇಶದಲ್ಲೆಲ್ಲಾ ಕ್ರಾಂತಿಕಾರರು ತಲೆ ಎತ್ತಲು ಪ್ರಾರಂಭಿಸಿದರು. ಸಮತಾವಾದಿಗಳೂ ಮತ್ತು ಕೋಪವಾರು ಪಂಗಡದವರೂ ರಾಜ್ಯದ ಆಡಳಿತ ಸೂತ್ರವು ತಮಗಿರಲಿ ಎಂದು ಹೊಡೆದಾಡಲು ಪ್ರಾರಂಭಿಸಿದರು. ಪ್ರೆಸಿಡೆಂಟ್ ಈಬರ್ಟರವರು ಈ ವಿಷಮ ಪರಿಸ್ಥಿತಿಯಲ್ಲಿ ಮುಂದೆ ನಿಂತು, ಸಮತಾವಾದಿಗಳ ಬಹುಮತವನ್ನು ಅಂಗೀಕರಿಸಿ, ಒಂದು ವ್ಯವಸ್ಥೆಯನ್ನು ಮಾಡಿದರು. ಅಷ್ಟರಲ್ಲಿಯೇ ವರ್ಸೇಲ್ಸ್ ಒಪ್ಪಂದದ ಷರತ್ತುಗಳು ಹೊರಬಿದ್ದವು. ತಕ್ಷಣವೇ ಜರ್ಮನ್ ಸಾಮ್ರಾಜ್ಯದ ನಾನಾ ಮೂಲೆಗಳಲ್ಲಿಯೂ ಹಾಹಾಕಾರವುಂಟಾಯಿತು. ಸೋಲನ್ನು ಒಪ್ಪಿಕೊಂಡ ಕೌಲುಗಳನ್ನ ದುಮಿಸಲು ಜರ್ಮನರೆಲ್ಲರೂ ಸಿದ್ಧರಾದರು. ಆದರೆ, ಜರ್ಮನಿಯ ಪ್ರಧಾನ ಸೇನಾನಾಯಕನು ಜಯಶೀಲರಾದ ಇಂಗ್ಲೀಷ್ ಮತ್ತು ಫ್ರೆಂಚರ ಬಲವಂತದಿಂದಲೂ ಮತ್ತು ಅವರ ಗಂಡಿನೇಟಿನ ಭೀತಿಯಿಂದಲೂ ಬಹು ಪ್ರಯಾಸದಿಂದ ವರ್ಸೇಲ್ಸ್ ಷರತ್ತುಗಳನ್ನೊಪ್ಪಿಕೊಳ್ಳಲೇ ಬೇಕಾಯಿತು.

ಅನಂತರ ಜರ್ಮನ್ ಸಾಮ್ರಾಜ್ಯವು ಛಿನ್ನ ಭಿನ್ನವಾಗಿ ವಿಭಾಗಿಸಲ್ಪಟ್ಟಿತು. ಖನಿಜಗಳಿಂದ ತುಂಬಿ ತುಳುಕುತ್ತಿದ್ದ ಅನೇಕ ಬೆಲೆಯುಳ್ಳ ಪ್ರದೇಶಗಳು ವೈರಿಗಳ ವಶವಾಯಿತು. ಈ ಮಧ್ಯೆ ಬವೇರಿಯಾ ದೇಶದ ಪ್ರಜೆಗಳು ತಮ್ಮ ದೇಶದ ಸ್ವಾತಂತ್ರ್ಯವನ್ನು ಹೊಂದಲು ಸೊಂಟಕಟ್ಟಿದರು. ಅವರಲ್ಲಿ ಹಲವರು ಪ್ರಜಾಪ್ರಭುತ್ವವನ್ನಪೇಕ್ಷಿಸಿದರು. ಇನ್ನೊಂದು ಪಂಗಡವು ಸಾಮ್ರಾಜ್ಯ ಸ್ಥಾಪನೆಯ ವಿಷಯದಲ್ಲಿ ಬಹಳ ಕಾತುರವಾಗಿದ್ದಿತು. ಸಾಧಾರಣ ಪಂಗಡವು ಪ್ರಾಟೆಸ್ಟೆಂಟ್ ಮನೆತನದವನು ರಾಜನಾಗಲು ಅಸಮ್ಮತಿಯನ್ನು ಸೂಚಿಸುತ್ತಿತ್ತು.

ಇತ್ತ ವಿರುದ್ಧ ಪಂಗಡವು ಸಾಮ್ರಾಜ್ಯ ದಾಹಪೂರಿತವಾಗಿ ಜರ್ಮನ್ ಸಾಮ್ರಾಜ್ಯವನ್ನೆಲ್ಲಾ ಕತ್ತರಿಸಿ ಸ್ವಾಧೀನಪಡಿಸಿಕೊಳ್ಳಬೇಕೆಂಬ ಕಾರ್ಯದಲ್ಲಿ ನಿರತವಾಯಿತು. ಪರಾಜಯವನ್ನು ಹೊಂದಿ ಜರ್ಮನರು ದಿಗ್ಭ್ರಮೆಗೊಂಡಿದ್ದರು. ಇಂತಹ ಭಯಂಕರ ಮತ್ತು ವಿಷಮ ಸನ್ನಿವೇಶದಲ್ಲಿ ಒಂದು ನೂತನ ಪಂಗಡದ ಪ್ರಧಾನ ವ್ಯಕ್ತಿಯು ಗಂಭೀರದಿಂದ ಮುಂದೆ ಬಂದು ನಿಂತಿತು— ಆ ವ್ಯಕ್ತಿಯೇ ಇಂದು ಜರ್ಮನಿಯ ಸರ್ವಾಧಿಕಾರಿಯಾದ **ಅಡಾಲ್ಫ್ ಹಿಟ್ಲರ್!**

ಹಿಟ್ಲರನ ಬಾಲ್ಯ ಮತ್ತು ತೊಂದರೆಗಳು

ಬಾಲ್ಯದಲ್ಲಿಯೇ ಮಾತಾಪಿತೃಗಳನ್ನು ತ್ಯಜಿಸಿ ಹಿಟ್ಲರನು ವಿಯನ್ನಾಕ್ಕೆ ಹೊರಟನು. ಆಗ ವಿಯನ್ನಾದಲ್ಲಿ ಧನಿಕರ ಅಟ್ಟಹಾಸವೂ ಮತ್ತು ಸುಖಸಂಪತ್ತುಗಳೂ ಹೆಚ್ಚಿ, ದರಿದ್ರರ ಮತ್ತು ನಿರುದ್ಯೋಗಿಗಳ ತೊಂದರೆಗಳೂ ಮತ್ತು ಬಡತನವೂ ವಿಶೇಷವಾಗಿದ್ದವು. ಈ ಶೋಚನೀಯವಾದ ಸ್ಥಿತಿಯನ್ನು ನೋಡಿ ಹಿಟ್ಲರನಿಗೆ ವಿಶೇಷ ವ್ಯಾಕುಲವುಂಟಾದುದರಿಂದ ಸಮತಾವಾದಿಯಾದನು. ಹೊಟ್ಟೆಗಿಲ್ಲದೆ, ಒಂದು ಹೊತ್ತು ಊಟವಿದ್ದರೆ ಮತ್ತೊಂದು ಹೊತ್ತು ಇಲ್ಲದೆ, ಬಹು ಕಷ್ಟದಿಂದ ಕಾಲಕಳೆದನು. ದೇಶದ ಈ ವೈಭವ, ವಿಲಾಸಗಳಿಗೂ ಮತ್ತು ಅನರ್ಥಪರಂಪರೆಗಳಿಗೂ ಯಹೂದ್ಯರೇ ಮುಖ್ಯ ಕಾರಣ ಕರ್ತರೆಂಬುದು ಅವನಿಗೆ ಮನವರಿಕೆಯುಂಟಾಯಿತು. ಕೂಲಿ ಕೆಲಸಗಳನ್ನು ಮಾಡುತ್ತಿರುವಾಗಲೇ ಅವನು ಜರ್ಮನಿಯ ಸಂದಿಗ್ಧ ಪರಿಸ್ಥಿತಿಯನ್ನು ಪರ್ಯಾಲೋಚಿಸತೊಡಗಿದನು. ಅಷ್ಟರಲ್ಲಿಯೇ ಅವನು ಬ್ರಿಟಿಷರ ದಬ್ಬಾಳಿಕೆಯನ್ನು ನೋಡಿ ಸಹಿಸಲಾರದೆ ಬವೇರಿಯಾ ಸೈನ್ಯದೊಂದಿಗೆ ಸೇರಿದನು. ಸ್ವಲ್ಪ ಕಾಲದಲ್ಲೇ ಅವನನ್ನು ಮ್ಯುನಿಚ್‌ಗೆ ಕಳುಹಿಸಿದರು. ಜರ್ಮನಿಯು ಪರಾಭವವನ್ನು ಹೊಂದಿದ ಮೇಲೆ, ಅವನು ದೇಶದಲ್ಲಿದ್ದ ಸಮತಾವಾದಿಗಳ ಪಂಗಡವೊಂದನ್ನು ಎದುರಿಸಲು ಹೊರಹೊರಟನು. ರಾಜಕೀಯ ಚಲನವಲನಗಳಲ್ಲಿ ಭಾಗಿಯಾಗಬೇಕೆಂದೇ ಅವನ ಹೃದಯದ ಅಂತರಾಳವು ಸರ್ವದಾ ಸ್ಫುರಿಸುತ್ತಲಿದ್ದಿತು. ಅವನಿಗೆ ಫ್ರೆಂಚರ ಮೇಲೂ ಮತ್ತು ಯಹೂದ್ಯರ ಮೇಲೂ ಇರುವಷ್ಟು ಆಕ್ರೋಶ ಮತ್ತು ತುಚ್ಛಭಾವನೆಯು ಮತ್ತಾರಲ್ಲಿಯೂ ಇರಲಿಲ್ಲ.

ಮ್ಯುನಿಚ್ ಎಂಬಲ್ಲಿ ಇವನೆಮುರಿಗೆ ಕೆಲವರು ಕ್ರಾಂತಿಯನ್ನೆಬ್ಬಿಸುವ ಕಾರ್ಯಗಳನ್ನೂ ಮತ್ತು ಪಿತೂರಿಗಳನ್ನೂ ನಡೆಸಲು ಆರಂಭಿಸಿದರು. ಧೈರ್ಯ ಮತ್ತು ಸ್ವಾತಂತ್ರ್ಯತೆಯನ್ನೇ ಮೂರ್ತಿಮತ್ತಾಗಿ ಹಿಟ್ಲರನು ಜೇಬಿನಿಂದ ಒಂದು ಪಿಸ್ತೂಲನ್ನು ತೆಗೆದು, ಕೈಲಿ ಹಿಡಿದುಕೊಂಡು, ಅವರ ಕಡೆಗೆ ತೋರಿಸುತ್ತಾ 'ನಾಳೆಯದಿನ ನಾವೆಲ್ಲರೂ ಒಂದು ನೂತನ ಸರ್ಕಾರವನ್ನು ಹೊಂದಲೇಬೇಕು, ಇಲ್ಲದಿದ್ದಲ್ಲಿ ನಾವು ಜೀವಚ್ಛವಗಳು" ಎಂದನು. ತಕ್ಷಣವೇ ಸಿಡಿಮದ್ದು ಗುಂಡುಗಳ ಸುರಿಮಳೆಯುಂಟಾಯಿತು. ಹಿಟ್ಲರನು ಕೂಡಲೇ ಕಣ್ಮರೆಯಾದನು. ಅದರೂ ಅವನನ್ನು ಹಿಡಿದು, ದೇಶದ ಶಾಂತಿಗೆ ಕಂಟಕಪ್ರಾಯನೆಂದು ಅವನಿಗೆ 1 ವರ್ಷಕಾಲ ಕಾರಾಗೃಹವಾಸವನ್ನು ವಿಧಿಸಿದರು.

ಜರ್ಮನಿಯಲ್ಲಿ ಅನಾಯಕತೆ

ಇತ್ತ ಕಡೆ ಜರ್ಮನಿಯಲ್ಲಿ ಅವ್ಯವಸ್ಥೆಗಳುಂಟಾದವು. ಅದರ ಆರ್ಥಿಕ ಪರಿಸ್ಥಿತಿಯು ಗಾಳಿಯಲ್ಲಿ ಗೋಪುರಗಳನ್ನು ನಿರ್ಮಿಸುವ ರೀತಿಯಲ್ಲಿತ್ತು. ದೇಶವನ್ನೆಲ್ಲಾ ಒಂದು ತಹಬಂದಿಗೆ ತರಲು ಪ್ರಯತ್ನಗಳು ಮಾಡಲ್ಪಟ್ಟವು. ಫ್ರಾನ್ಸ್ ಮತ್ತು ಬೆಲ್ಜಿಯಂ ದೇಶಗಳು ರೂಹರ್ ಪ್ರದೇಶವನ್ನು ಆಕ್ರಮಿಸಿಕೊಂಡವು. ವ್ಯಾಪಾರವು ಹೀನಸ್ಥಿತಿಗೆ ಬಂದಿತು. ಕೈಗಾರಿಕೆ ಕಾರ್ಯಗಳ ಸರಿಯಾದ ಆಡಳಿತ ಕ್ರಮ ಕೈಕೊಳ್ಳಲ್ಪಟ್ಟಿರಲಿಲ್ಲ. ಪರದೇಶದ ವ್ಯವಹಾರದಲ್ಲಿ ಜರ್ಮನಿಯು ಎಲ್ಲ ರಾಷ್ಟ್ರಗಳಿಗೂ ಪ್ರತಿಯಾಗಿ ನಿಂತಿತು. ಫ್ರಾನ್ಸ್, ಇಂಗ್ಲೆಂಡ್, ಇಟಲಿ ಮತ್ತು ಪೋಲೆಂಡ್ ಮೊದಲಾದ ರಾಷ್ಟ್ರಗಳ ಮೇಲೆ ಜರ್ಮನಿಯು ವಿಶೇಷ ಹಗೆತನವನ್ನು ಗಳಿಸಿಕೊಂಡಿತು. ಆದರೂ, ಜರ್ಮನಿಯ ಸ್ಟ್ರೇಸ್‌ಮಾನ್, ಮಾರ್ಕ್ಸ್ ಮತ್ತು ಲೂಥರ್ ಎಂಬುವರು ಜರ್ಮನಿಯ ಗೌರವವನ್ನು ಕೊಂಚವಷ್ಟಾದರೂ ಉಳಿಸಿದರು. ಇಷ್ಟೆಲ್ಲಾ ಆದರೂ, ದೇಶದಲ್ಲೇ ಯಾದವೀಕಲಹವು ಪ್ರಾರಂಭವಾಯಿತು.

ಸುಮಾರು 1921—25ರಲ್ಲಿ ಹಿಟ್ಲರನನ್ನು ಕಾರಾಗೃಹವಾಸದಿಂದ ಬಿಡುಗಡೆ ಮಾಡಿದರು. 1925 ರಲ್ಲಿ 12 ಮಂದಿ ಮಾತ್ರ ನಾಜಿಗಳ ಕಡೆ ಸೇರಿದರು. ಆದರೆ, ಪ್ರೆಸಿಡೆಂಟ್ ಈಬರ್ಟರ ಮರಣವು ನಾಜಿಗಳಿಗೆ ವಿಶೇಷ ಸಹಾಯವನ್ನುಂಟುಮಾಡಿತು. ಹಿಂಡನ್ ಬರ್ಗ್ ಎಂಬುವರ ಅಧ್ಯಕ್ಷತೆಯಲ್ಲಿ ಮಿಲಿಟರಿಯವರು ನಾಜಿಗಳ ಪಕ್ಷ ಸೇರಿದರು. ಆಗ ಹಿಟ್ಲರನಿಗೆ ವಿಶೇಷ ಪ್ರ
ಸ್ನಣೆಯು ದೊರಕಿತು ಮತ್ತು ಅವನ ಪಂ
ಗಡವು ಹೆಚ್ಚುತ್ತಾ ಬಂದಿತು. [illegible]
ಯೂ ಮತ್ತು ನಿರಾಶಾಜನಕವೂ ಆಗು
ಗುತ್ತಿದ್ದ ಅಂತಹ ಭೀಕರ ಸನ್ನಿವೇಶ
ಮಂತ್ರಿಯಾದ ಬ್ರೂಯನಿಂಗ್ ಎಂಬುವ
ನು ವಿಶೇಷ ಅಧಿಕಾರಗಳನ್ನು ಹೊಂದಲೇ
ಬೇಕೆಂದು ಒತ್ತಾಯಪಡಿಸಿತು. 193
ರಲ್ಲಿ ವಾನ್ ಹಿಂಡನ್ ಬರ್ಗ್‌ನು ಬ್ರೂ
ನಿಂಗ್‌ನನ್ನು ಕೆಲಸದಿಂದ ತೆಗೆದು ವಾ
ವಾನ್‌ಪಪೆನ್ ಎಂಬುವನನ್ನು ಛಾನ್ಸಲ
ನ್ನಾಗಿ ಮಾಡಿದನು. ಆಗ ನಾಜಿಗ
ಸುಮಾರು 230 ಮಂದಿಯನ್ನು ತಮ್ಮ
ಅಧೀನದಲ್ಲಿಟ್ಟುಕೊಂಡಿದ್ದರು. ಹಿಟ್ಲ
ವಾನ್‌ಪೇಪನ್‌ನೊಡನೆ ಸಹಕರಿಸುವು
ದಿಲ್ಲವೆಂದು ತಿರಸ್ಕರಿಸಿದನು. ಕೊನೆಗೆ 1933
ನೆ ಜನವರಿಯಲ್ಲಿ ಹಿಂಡನ್ ಬರ್ಗ್‌ನು ಹಿ
ಟ್ಲರನನ್ನೂ, ವೈಸ್ ಛಾನ್ಸಲರಾದ ವಾನ್
ಪೇಪನ್ ಎಂಬುವನನ್ನೂ ಮತ್ತು ಅಂತ
ರಾಷ್ಟ್ರದ ಡೆಪ್ಯುಟಿ ಕಮೀಷನರಾದ ಗೋ
ಯರಿಂಗ್ ಎಂಬುವನನ್ನೂ ಒಟ್ಟುಗೂಡಿ
ಒಂದು ಮಂತ್ರಿ ಮಂಡಲವನ್ನು ಸ್ಥಾಪ
ಲೆತ್ನಿಸಿದನು. ಜರ್ಮನಿಯಲ್ಲಿ ಪ್ರಜಾ ಪ್ರ
ಭುತ್ವವು ಅಂತ್ಯವಾಯಿತು.

ಅಲ್ಪಕಾಲದಲ್ಲಿಯೇ ನಾಜಿ
ದೇಶದಲ್ಲೆಲ್ಲಾ ಪ್ರಬಲರಾದ
ಇವರೆಲ್ಲರೂ ದೇಶವನ್ನು
ವ್ಯವಸ್ಥೆಗೆ ತರಲು ಇಡೀ ರಾಷ್ಟ್ರವನ್ನ
ಒಬ್ಬ ಮಹಾ ವ್ಯಕ್ತಿಯ ಪಾದ ತಲ
ಇರಿಸಿ, ಅವನು ಹೇಳಿದುದನ್ನು ಶಿರಸಾ
ವಹಿಸಿ ಕಾರ್ಯಸಾಧನೆ ಮಾಡಲು ಸಿದ್ಧ
ರು. ಆ ಮಹಾ ವ್ಯಕ್ತಿಯೇ ಹಿಟ್ಲರ್
ಹೀಗೆ ಹಿಟ್ಲರನು ಕಷ್ಟಪರಂಪರೆಗ
ನುಗ್ಗಿ, ತನ್ನ ಜೀವನದ ಮಹದಾಶೆ
ಯನ್ನು ನೆರವೇರಿಸಿಕೊಂಡು, ಇಂದು ಜ
ರ್ಮನಿಯ ಸರ್ವಾಧಿಕಾರಿಯಾಗಿರುವ

ಸರ್ವಾಧಿಕಾರಿ ಹಿಟ್ಲರ್

ಹಲ್ಲನ್ನುಜ್ಜುವ ಬ್ರಷ್‌ನಷ್ಟು ದಪ್ಪ
ರುವ ಮೀಸೆಗಳನ್ನು ಇರ್ಕಡೆಗಳಲ್ಲಿ
ಹೊಂದಿ, ಬರೀ ತಲೆಬುಲ್ಲಿರುವ, ಪಂಚೇ
ದ್ರಿಯಗಳ ಉದ್ವೇಗಗಳಿಗೆ ಹೊಸ ಹು
ಸ್ಸಂಟುಮಾಡುತ್ತಿರುವ ಹಿಟ್ಲರನು ಮ
ಕಾನೆ ಬೀದಿಯಲ್ಲಿ ಅಲೆಯುತ್ತಿದ್ದನು. ಆ
ರೆ ಇಂದು ಅವನು ಜರ್ಮನಿಯ ಸರ್ವಾ
ಕಾರಿ. ಅವನ ವಾಕ್ಯವು ಜರ್ಮನರೆ
ಲ್ಲಾ ಕಾರ್ಯದಲ್ಲಿಯೂ ನಿರತರ
ಮಾಡುವುದು ಅವನ ಪ್ರಾಮಾಣಿಕತೆ
ಅವನನ್ನು ಪೂಜ್ಯತೆಗೆ ಏರಿಸಿರುವುದು
ಗುಳ್ಳೆಗೆಯಿಂದ ಕೂಡಿದ ಹಿಟ್ಲರನು
ಣ ಮಾಡುತ್ತಿದ್ದರೆ ಹೆಂಗಸರೆಲ್ಲರೂ
ನಿಮಂಬುವರು, ಬಾಲಕರು ಮೊಣ
ರಿ ನಮಸ್ಕರಿಸುವರು ಸೈನಿಕರು ಒ
ಷವನ್ನು ಮಾಡುವರು!

ಚಕ್ರವರ್ತಿಯವರ ಪ್ರಾಣಾಪಹಾರ ಪ್ರಯತ್ನದ ವಿವರಗಳು

ಅತ್ಯಾಚಾರಿಯ ಪೂರ್ವೋತ್ತರಗಳು

ಎಡ್ವರ್ಡ್ ಚಕ್ರವರ್ತಿಯವರು ಸೋಮವಾರ ಹೈಡ್‌ಪಾರ್ಕ್‌ನಿಂದ ಗಾರ್ಡ್ ಸೈನ್ಯಗಳ ಬಹುಮಾನವನ್ನು ಕೊಟ್ಟು ಮೆರವಣಿಗೆಯಲ್ಲಿ ಹೋಗುತ್ತಿದ್ದಾಗ ಜನರ ಗುಂಪಿನಲ್ಲಿದ್ದ ಒಬ್ಬನು ಮುಂದೆ ಬಂದು ಒಂದು ರಿವಾಲ್ವರನ್ನು ಚಕ್ರವರ್ತಿಗಳ ಕಡೆಗೆ ಎಸೆದನಷ್ಟೆ. ಅದು ಅವರ ಕುದುರೆಯ ಕಾಲಿಗೆ ಒಂದು ಬಡಿಯಿತು. ಆದರೂ ಚಕ್ರವರ್ತಿಗಳು ಶಾಂತಚಿತ್ತರಾಗಿ ಮೆರವಣಿಗೆಯಲ್ಲಿ ಮುಂದುವರಿದರು.

ಕುದುರೆಯ ಮೇಲಿದ್ದ ಒಬ್ಬ ಪೋಲೀಸಿನವನು ತಕ್ಷಣವೆ ಕೆಳಗಿಳಿದು ನಾಲ್ಕಾರು ಜನರ ಸಹಾಯದಿಂದ ಕೊಲೆಮಾಡಲೆತ್ನಿಸಿದ ಮನುಷ್ಯನನ್ನು ದಸ್ತಗಿರಿ ಮಾಡಿದನು. ಈ ಕೃತ್ಯಕಾರನನ್ನು ಪೋಲೀಸಿನವರು ಹಿಡಿದುಕೊಂಡು ಹೋಗುತ್ತಿದ್ದಾಗ ಇನ್ನೊಬ್ಬನು ವಿಶೇಷ ಗಲಭೆಯನ್ನು ಮಾಡಲು ಪ್ರಾರಂಭಿಸಿದುದರಿಂದ ಅವನನ್ನೂ ದಸ್ತಗಿರಿ ಮಾಡಲಾಯಿತು.

ಚಕ್ರವರ್ತಿಯವರ ಮೇಲೆ ದುರಂತ ಕಾರ್ಯವನ್ನು ನಡೆಸಲೆತ್ನಿಸಿದವನ ಹೆಸರು ಜಾರ್ಜ್ ಆಂಡ್ರ್ಯೂ ಮೋರ್ಹ್ ಎಂಬುವನು ಸ್ಕಾಟ್ಲೆಂಡಿನ ನಿವಾಸಿ, ವಯಸ್ಸು ... ಅನೇಕ ವರ್ಷಗಳಿಂದಲೂ ಲಂಡನ್ನಿನಲ್ಲಿದ್ದವನು. ಆತನು ಉಪಯೋಗಿಸಿದ ರಿವಾಲ್ವರಿನ ನಾಲ್ಕು ಚೇಂಬರುಗಳಲ್ಲಿ ಗುಂಡು ತುಂಬಿತ್ತೆಂದು ತಿಳಿದುಬಂದಿದೆ. ... ವಿತನು ಸಂದೇಹದವನಲ್ಲ.

ಆ ಘಟನೆಯನ್ನು ನೋಡಿದವರು ಹೀಗೆ ಹೇಳುತ್ತಾರೆ —ಒಬ್ಬ ಮನುಷ್ಯನು ಪೋಲೀಸ್ ಸವಾರನ ಕುದುರೆಯ ಪಾರ್ಶ್ವದಲ್ಲಿ ಕಾಣುವಂತೆ ಒಂದು ರಿವಾಲ್ವರನ್ನು ಚಕ್ರವರ್ತಿಯವರ ಕಡೆಗೆ ಎಸೆದನು. ತಕ್ಷಣವೇ ಚಕ್ರವರ್ತಿಯವರು ತಮ್ಮ ಹಿಂದೆ ಇದ್ದ ಮೇಜರ್ ಜನರಲ್‌ರವರ ಕಡೆ ನೋಡಿದರು. ಕೂಡಲೆ ಒಬ್ಬ ಅಂಗುಷ್ಟ ತನ್ನ ಕುದುರೆಯನ್ನು ತಿರುಗಿಸಿ ... ಹೋಗಲು ಒಬ್ಬ ಹೆಂಗಸು ಈ ರೀತಿ ಹೇಳಿದಳು —

' ಕೃತ್ಯಕಾರನು ನಮ್ಮ ಹಿಂದೆ ಇದ್ದ ನನ್ನನ್ನು ತಳ್ಳಿಕೊಂಡು ಫುಟ್‌ಪಾತ್ ... ದಾರಿಮಾಡಿಕೊಂಡು ಬಂದನು. ... ವರು ಅವನನ್ನು ಹಿಡಿಯಿರಿ ಎಂದು ಕೂಗಲಾರಂಭಿಸಿದರು. ಆಗ ಅ... ತಪ್ಪಿಸಿಕೊಂಡು ಓಡಿ ಹೋಗಲು ಯತ್ನಿಸಿದನು. ತಕ್ಷಣವೇ ಒಬ್ಬ ಹೆಂಗಸು ಅವನನ್ನು ಅನುಸರಿಸಿ ಓಡಿದಳು. ಇ... ಹೆಂಗಸೂ ಪೋಲೀಸಿನವನೂ ಅ... ವನನ್ನು ಹಿಡಿದು ಅವನಲ್ಲಿದ್ದ ರಿ... ವರು ಕೆಳಗೆ ಬೀಳುವಂತೆ ಬಲವಾಗಿ ... ದರು.

ಇನ್ನೊಬ್ಬನು ಈ ಕೆಳಗೆ ಕಂಡಂತೆ ಸಾಕ್ಷ್ಯ ಕೊಟ್ಟನು —ಕೃತ್ಯಕಾರನ ರಿವಾಲ್ವರನ್ನು ಹೊಡೆದು ಬೀಳಿಸಿದಮೇಲೆ ಜನರು ತಂಡ ತಂಡವಾಗಿ ಅವನಿದ್ದ ಸ್ಥಳಕ್ಕೆ ಕೂಗುತ್ತಾ ಓಡಿದರು. ಕೊಲೆಮಾಡಲೆತ್ನಿಸಿದ ಮನುಷ್ಯನು ರಿವಾಲ್ವರಿನಿಂದ ಹೊಡೆಯಲು ಮೇಲಕ್ಕೆ ಕೈಯೆತ್ತಿದೊಡನೆಯೇ ಒಬ್ಬ ಪೋಲೀಸಿನವನು ಅವನನ್ನು ಹೊಡೆದನು. ತಕ್ಷಣವೇ ಎಲ್ಲಿದೂ ಅವನ ಮೇಲೆ ಬಿದ್ದು ತಳ್ಳಲಾರಂಭಿಸಿದರು. ಚಕ್ರವರ್ತಿಗಳ ಅನುಯಾಯಿಗಳಾದ ಯಾರ್ಕಿನ ಡ್ಯೂಕರು ಈ ಘಟನೆಗಳೆಲ್ಲವನ್ನೂ ನೋಡುತ್ತಿ...

ಪ್ರಾಣಾಪತ್ತಿನಿಂದ ಪಾರಾದ

ಲನೇ ಎಡ್ವರ್ಡ್ ಚಕ್ರವರ್ತಿಯವರು

8ನೇ ಎಡ್ವರ್ಡರ ಮೇಲೆ ರಿವಾಲ್ವರ್ ಎಸೆದವನು

ಇವನೇ ಜಾರ್ಜ್ ಆಂಡ್ರ್ಯೂ ಮೆಕ್ ಮಹೋನ್

ದ್ದರು. ಆದರೆ ಚಕ್ರವರ್ತಿಗಳು ಶಾಂತಚಿತ್ತರಾಗಿದ್ದು ಹಲವು ರಾಜಕಾರ್ಯಗಳನ್ನು ವಿಮರ್ಶಿಸಲು ಬಕಿಂಗ್ಹ್ಯಾಮ್ ಅರಮನೆಗೆ ಹೋದರು.

ಕೃತ್ಯಕಾರನ ಹೇಳಿಕೆ.

ಚಕ್ರವರ್ತಿಯವರನ್ನು ಕೊಲ್ಲಬೇಕೆಂಬ ಉದ್ದೇಶದಿಂದಾಗಲೀ ಅಥವಾ ಅವರಿಗೆ ಹಿಂಸೆಯನ್ನುಂಟುಮಾಡುವ ಅಭಿಲಾಷೆಯಿಂದಾಗಲೀ ಪ್ರಯತ್ನ ನಡೆಸಿಲ್ಲವೆಂದು ಅಪಾದಿತನಾದ ಜಾರ್ಜ್ ಆಂಡ್ರ್ಯೂ ಮೋರ್ಹ್ ಎಂಬುವನು ಹೇಳಿದನು. ಇವನು ತಾನು ಒಬ್ಬ ಪತ್ರಿಕೋದ್ಯೋಗಿ ಎಂದು ಹೇಳಿಕೊಂಡು ಲಂಡನ್ನಿನಲ್ಲಿರುವ ಬೋ ಸ್ಟ್ರೀಟ್ ಪೋಲೀಸ್ ಠಾಣೆಗೆ ಪ್ರವೇಶಿಸಿದನು. ಈ ಮನುಷ್ಯನು ಸರ್ ಜಾನ್ ಸೈಮನ್ನರು ಮಾಡಿರುವುದಿಲ್ಲಾ ತಪ್ಪೆಂದು ಒಬ್ಬ ಗುಪ್ತಚಾರನಿಗೆ ಹೇಳಿದನು. ಮತ್ತು ತಾನು ಚಕ್ರವರ್ತಿಯವರಿಗೆ ತೊಂದರೆ ಕೊಡುವ ಉದ್ದೇಶದಿಂದ ಕಾರ್ಯವನ್ನು ನಡೆಸಲಿಲ್ಲವೆಂದೂ ತನ್ನ ಅಭಿಪ್ರಾಯವನ್ನು ತೋರ್ಪಡಿಸಲು ಹೀಗೆ ಮಾಡಿರುವುದಾಗಿಯೂ ತಿಳಿಸಿದನು. ಇವನನ್ನು ಎಂಟು ದಿನಗಳು ರಿಮ್ಯಾಂಡಿನಲ್ಲಿ ಟ್ಟಿದ್ದಾರೆ.

ಚಕ್ರವರ್ತಿಯವರು ಶಾಂತಚಿತ್ತರಾಗಿಯೇ ಇರುವರು. ಅವರಿಗೆ ಒದಗಿದ್ದ ಆಪತ್ತಿನಿಂದ ಪಾರಾದೊಡನೆಯೇ ಇಡೀ ಪ್ರಪಂಚದ ನಾನಾ ಮೂಲೆಗಳಿಂದಲೂ ಶುಭಸಂದೇಶಗಳು ಬಂದವು. ಚರ್ಚುಗಳಲ್ಲಿ ಅವರ ಕ್ಷೇಮಪ್ರಾರ್ಥನೆಗಳು ನಡೆದವು. ಮತ್ತು ಅನೇಕ ಕಡೆಗಳಲ್ಲಿ ಸಾರ್ವಜನಿಕ ಸಭೆಗಳೂ ಜರುಗಿದವು.

ಆರೋಗ್ಯ ಪ್ರದರ್ಶನ

ರೆಡ್‌ಕ್ರಾಸ್ ಸೊಸೈಟಿಯ ಮಂಡ್ಯದ ಶಾಖೆಯವರು ಮಂಡ್ಯದ ಜಯಚಾಮರಾಜೇಂದ್ರ ಟೌನ್‌ಹಾಲಿನಲ್ಲಿ ಮಕ್ಕಳ ಪ್ರದರ್ಶನವನ್ನೂ ಮತ್ತು ಆರೋಗ್ಯ ಪ್ರದರ್ಶನವನ್ನೂ ನೆರವೇರಿಸಿದರು. ಮೈಸೂರಿನ ಡಾ॥ ಟಿ ಜಿ ರಾಮಯ್ಯರ್‌ರವರು ಅಧ್ಯಕ್ಷತೆ ವಹಿಸಿದ್ದರು. ಹೆಲ್ತ್ ಡೈರೆಕ್ಟರ್‌ರವರು ಪ್ರದರ್ಶನದ ಪ್ರಾರಂಭೋತ್ಸವವನ್ನು ನೆರವೇರಿಸಿದರು. ವಂದನೆಗಳ ಸಮರ್ಪಣೆಯಾದಮೇಲೆ ಸಭೆ ಮುಕ್ತಾಯ ಮಾಡಿದರು.

ಅಧಿಕಾರ ಜೀವದಾನ

ಶ್ರೀಮನ್ಮಹಾರಾಜರವರು ಜಾರು ಸರ್ಕ್ಯೂಟಿರಿಗಳಾದ ರಾಜಸಭಾಭೂಷಣ ತಂಬೂಚೆಟ್ಟಿಯವರಿಗೆ 1936ರ ಜುಲೈ ತಿಂಗಳಿಂದ ಒಂದುವರ್ಷ ಅಧಿಕಾರ ಅವಧಿಯನ್ನು ಹೆಚ್ಚಿಸಿರುವರು.

ಸ್ವಾತಂತ್ರ್ಯ ಪ್ರೇಮ.

ಎ. ನಾರಾಯಣಶಾಸ್ತ್ರಿ, ಸಕಲೇಶಪುರ.

" ಮಲಗು ಮಲಗೆಲೆ ಬೊಂಬೆ"

ಎಂಬಂತೆ

ಏಳು ಏಳೆಲೊ ಮೂಢ ಏತಕ್ಕೆ ಅಳುವೆ !
ಆಳಾಗಿ ಇರಲವನು ಬಯಸಲದು ತರವೆ !!
ವಿದ್ಯೆಯಲಿ ಚತುರತೆಯು ಪಾಪಕ್ಕೆ ಅಲ್ಲ
ವಿದ್ಯೆಗಳ ಒರಯುವುದು ಪಣವಾಸಿಗಲ್ಲ !!
ಕಣ್ಣು ಕೈಕಾಲ್ಗಳಿರಲೇತಕ್ಕೆ ಚಿಂತೆ !
ಮಣ್ಣು ಪಾಲಾಯಿತೀ ಬುದ್ಧಿಯಾಕಂತೆ !!
ಬಣ್ಣಗೆಯನು ಮಾಡಿ ದಾಸ್ಯತನಿಲ್ಲ !
ಲೇಸಿನಿಂ ವ್ಯಾಪಾರ ಮಾಡಲದು ಇಲ್ಲ !!
ಕೈಗಾರಿಕೆಯನಾಡೆ ಕಾಸಿಲ್ಲವೇನೊ !
ನೇಯ್ಗೆಯನು ಮಾಡಿದರ ಸಣಸಿಲ್ಲವೇನೊ
ಒಬ್ಬಗೆ ನೀನಾಗೆ ಪಡ್ಡಿಲ್ಲವೇನೊ !
ಬೆನ್ನಾಗಿ ಕುಳಿತರೆ ಅವರ ಫಲವೇನೊ !!
ನಾಚಿಕೆಯು ನಿನಗಿಲ್ಲ ಯಾಚನೆಯ ಮಾಡಿ
ಬೋಚಿ ಅನ್ಯರ ಧನವ ಸರೆವನಯ.
ಕೂಡಿ !!
ಬನ್ನಿಗಳನೋಗವರೆ ಹಿಟ್ಟಿಗೇಂ ಕೊರತೆ !
ಕಣ್ಣಾಳು ನೀನಾಗ ಪಣಕಿಲ್ಲ ಕೊರತೆ !!
ಜಾತಿಯಾ ಪಣವಿಲ್ಲ ಕೈಗಲಸದವಗೆ
ನೀತಿಯ ದು ಬೇರಿಲ್ಲ ಸರ್ವಮತದವರ್ಗೆ !!
ಉನ್ನತದ ಪದವಿಗಳ ಧರಿಸಲದು ಮೇಲು
ಚಿನ್ನದ ಸ್ವಾತಂತ್ರ್ಯದಿಂದಿರಲು ಮೇಲು !!
ಪವಿಪಂದನು ನೀನು ದಾಸನಾಗಿರಲು !
ಹದಮಾಡಿ ಪೆದ ಈ ' ಮೂಢ ' ಹಗಲಿರುಳು !!
ಮಂಗಳವು ನಿನಗಕ್ಕು ಸ್ವಾತಂತ್ರ್ಯ ದಿಂದೆ!
ಹಿಂಗದೀ ಧನ ಕೀರ್ತಿ ಕೈಗಲಸದಿಂದೆ !!

—

೧೦೦ ರೂ. ಬಹುಮಾನ.

ಮೈಸೂರಿನ ಅಡ್ಮಿನಿಸ್ಟ್ರೇಷನ್ ಡಿಪಾರ್ಟ್‌ಮೆಂಟಿನ ಪೋಲೀಸ್ ಇನ್ಸ್‌ಪೆಕ್ಟರ್ ಶ್ರೀ॥ ಜಿ ಯಸ್ ಪುಟ್ಟಣ್ಣನವರು ಮೋಟಾರು ವಾಹನ ಕಾನೂನಿಗೆ ಸಂಬಂಧಿಸಿದ ಕೇಸುಗಳನ್ನು ಪತ್ತೆ ಮಾಡಿ ಸರಕಾರಕ್ಕೆ ... ರೂ ವರಮಾನ ಬರುವಂತೆ ಮಾಡಿದ್ದರಿಂದ ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್‌ರವರು ಅವರಿಗೆ 100 ರೂ ಬಹುಮಾನವನ್ನು ಮಂಜೂರ್ಮಾಡಿರುವರು.

ಹೊಸ ಗುಲಾಬಿ ಗಿಡಗಳು.

ಬೆಂಗಳೂರು ಲಾಲ್‌ಬಾಗಿಗೆ ಅತಿ ನವೀನವಾದ ಗುಲಾಬಿ ಹೂ ಗಿಡಗಳನ್ನು ಇಂಗ್ಲೆಂಡಿನಿಂದ ತರಿಸಲಾಗಿದೆ. ಪ್ರಸಿದ್ಧ ಗುಲಾಬಿ ಬೆಳೆಗಾರರಾದ ಮಿ॥ ಬಿ ಆರ್ ಕ್ಯಾಂಟ್ ಮತ್ತು ಎಲಿಸ್ಸಾ ಹಿಕ್ಸ್ ಇವರುಗಳು ಅಲ್ಲಿಂದ ತಂದಿದ್ದಾರೆ. ಒಟ್ಟು ೮೯ ತರದ ಹೊಸ ಗುಲಾಬಿ ಗಿಡಗಳು ಬಂದಿವೆ.

ಸಾಧ್ವಿ

೨೭-೭-೩೬ ನೇ ಸೋಮವಾರ

ನಮ್ಮ ಸ್ಥಿತಿ

ನಾವೆಂದರೆ ಮೈಸೂರು ನಿವಾಸಿಗಳು. ನಮ್ಮ ಸಂಖ್ಯೆಯು ಅರವತ್ತೈದು ಲಕ್ಷ. ನಮ್ಮದೊಂದು ವ್ಯವಸ್ಥಿತವಾದ ಸಂಸ್ಥಾನವೆಂದು ಹೆಸರಾಗಿದೆ. ನಮ್ಮ ಸ್ಥಿತಿಗತಿಗಳೇನೆಂಬುದನ್ನು ಮಹಾ ಜನರ ಮತ್ತು ಸರ್ಕಾರದ ಮುಂದಿಡುವೆವು. ಇರುವ ಭೂಮಿ ಎಲ್ಲವನ್ನೂ ಸೇರಿಸಿದರೆ ತಲೆ ಒಂದಕ್ಕೆ ಮೂರೆಕರೆಯಷ್ಟಾಗುತ್ತೆ. ಧಾನ್ಯವನ್ನು ಬೆಳೆಯುವ ಪ್ರದೇಶಗಳು ತಲೆ ಒಂದಕ್ಕೆ 1 2 ಎಕರೆ ಮಾತ್ರ. ವ್ಯವಸಾಯವೇ ಮುಖ್ಯ ಕಸಬಾಗುಳ್ಳ ನಮ್ಮ ದೇಶಕ್ಕೆ ಆಹಾರ ದಿನಸಿಗಳು ಹೊರಗಿನಿಂದ ಬರಬೇಕಾಗಿದೆ. ಇರುವ ಕಾಡುಗಳು ಸಮರ್ಪಕವಾಗಿರುವುವೆಂದು ಒಪ್ಪುವುದಾದರೂ ಒಟ್ಟು ವಿಸ್ತೀರ್ಣದಲ್ಲಿ ಐದನೆಯ ಒಂದು ಭಾಗವಷ್ಟಿಲ್ಲ. ವಿಸ್ತಾರವಾದ ಪ್ರದೇಶಗಳು ಬೇಂದಿ ರಿಸರ್ವಿಗಾಗಿ ಕಾದಿಡಲ್ಪಟ್ಟಿವೆ ಗೋಮಾಳ, ಯಾ ಹುಲ್ಲುಗಾವಲನ್ನು ಲೆಕ್ಕಹಾಕಿದರೆ ಐವತ್ತು ದನಗಳಿಗೆ ಒಂದೆಕರೆಯಷ್ಟೂ ಆಗುವುದಿಲ್ಲ

ವ್ಯವಸಾಯದ ವೆಚ್ಚವು ಒಂದೆಕರೆಗೆ ಸರಾಸರಿ 20—25 ರೂಪಾಯಿಗಳಾದರೆ ಹುಲ್ಲಿನ ಬೆಲೆಯೂ ಸೇರಿ ಉತ್ಪತ್ತಿಯು ಸುಮಾರು 32–33 ರೂಪಾಯಿಗಳಾಗುತ್ತೆ. ಬೆಳೆಯು ಒಂದೆಕರೆಗೆ ಸರಾಸರಿ ಮೂರು ಅಥವಾ ನಾಲ್ಕು ಪಲ್ಲಗಳು. ಒಂದೆಕರೆಯ ಭೂಮಿಯ ಮೇಲಿನ ಸರಾಸರಿ ಸಾಲವು 40 ರೂಪಾಯಿಗಳಿರಬಹುದು ಇದಿರಲಿ

ಮತ್ತೊಂದು ರೀತಿ ವಿವೇಚನೆ ಮಾಡೋಣ. ಒಬ್ಬನ ಕೂಲಿಯು ಒಂದು ದಿನಕ್ಕೆ ನಾಲ್ಕಾಣೆ ತಿಂಗಳಿಗೆ ಏಳೂವರೆ ರೂಪಾಯಿಗಳು. ಒಬ್ಬನ ಸಂಕ್ಷೇಪವಾದ ಹೊಟ್ಟೆಯ ಪಾಡಿಗೆ ಐದು ರೂಪಾಯಿಗಳಿಗಿಂತ ಕಮ್ಮಿಯಾಗುವುದಿಲ್ಲ. ಇನ್ನು ಇವನ ಅನುಯಾಯಿಗಳಾದ ಹೆಂಡಿರು ಮಕ್ಕಳ ಪಾಡೇನು? ಒಬ್ಬನ ಸರಾಸರಿ ವರಮಾನವು ಅರವತ್ತು ರೂಪಾಯಿಗಳು ವರುಷಕ್ಕಂತೆ. ಆಳರಸರ ಲೆಕ್ಕದಂತೆ ಸರಾಸರಿಯ ತೆರಿಗೆ 5 ರೂಪಾಯಿಗಳು. ಸಾಲದ ಬಡ್ಡಿ 3 ರೂ. ಮುನಸಿಪಲ್ ತೆರಿಗೆ 2 ರೂ. ಜುಮ್ಲ ಹತ್ತು ರೂಪಾಯಿ. ಬಾಕಿ ಐವತ್ತು ರೂಪಾಯಿಗಳು ಒಂದು ವರ್ಷಕ್ಕೆ ಸಾಕೆ? ಪ್ರತಿಮನುಷ್ಯನೂ ತನ್ನ ಸಂಪಾದನೆಯ ಮೂರನೆಯ ಒಂದು ಭಾಗವನ್ನು ನಮ್ಮ ದೇಶದಿಂದ ಹೊರಕ್ಕೆ ಕೊಟ್ಟು, ಮಿಕ್ಕುವದರಲ್ಲಿ ಜೀವನವನ್ನು ತಳ್ಳಬೇಕಾಗಿದೆ

ಮಿಕ್ಕ ದೇಶಗಳಲ್ಲಿ ತನ್ನ ದೇಶದ ಅವಶ್ಯಕತೆಯನ್ನು ಕಳೆದು ಉಳಿದುದನ್ನು ಪರದೇಶಗಳ ಉಪಭೋಗ ಸಾಮಗ್ರಿಯಗಳಿಗಾಗಿ ವೆಚ್ಚ ಮಾಡಬಹುದು ನಮ್ಮ ಸ್ಥಿತಿಯೇ ಬೇರೆ. ಪರದೇಶಕ್ಕೆ ತೆರಬೇಕಾದುದನ್ನು ತೆತ್ತು ಮಿಕ್ಕುದರಲ್ಲಿ ನಾವು ಬಾಳಬೇಕು. ಉದಾಹರಣೆಗಾಗಿ ಹೊಗೆದಿಯನ್ನು ಕೊಟ್ಟು, ಉಳಿದುದರಲ್ಲಿ ನಮ್ಮ ದೇಶದ ವೆಚ್ಚವು ಸಾಗಬೇಕು

ನಮ್ಮ ವಿಶ್ವವಿದ್ಯಾನಿಲಯದವರು ಪ್ರಪಂಚದ ಸಮಸ್ತ ದೇಶಗಳ ಮೇಲೂ ಧಾರಾಳವಾಗಿ ಭಾಷಣಮಾಡಬಲ್ಲರು. ಮೈಸೂರನ್ನು ಕುರಿತಲ್ಲ ನಮ್ಮ ಪ್ರತಿನಿಧಿ ಸಭಾ ಸದಸ್ಯರು ಬಹು ಜೋರಾದ ವೀರಾವೇಶದ ಭಾಷಣಗಳನ್ನು ಮಾಡುವುದೆಂದರೆ, ಸರ್ಕಾರಿ ನೌಕರಿಗಳ ಹಂಚಿಕೆಯಲ್ಲಿ. ಜನಾಂಗದಲ್ಲಿ ಬಹು ಬುದ್ಧಿವಂತರೆನ್ನಿಸಿಕೊಂಡ ಮುಂದುವರಿದವರೆಂಬುವರು ಅಧಿಕಾರವನ್ನು ಸಂಪಾದಿಸುವುದು ಅದನ್ನು ಉಳಿಸಿಕೊಳ್ಳುವುದು ಇಷ್ಟುಮಾತ್ರವೇ.

ನಮ್ಮ ದೇಶದ ಮುಖ್ಯ ಬಂಡವಾಳಗಳು ಎರಡೇ. ಒಂದು ಭೂಮಿ. ಮತ್ತೊಂದು ಜನರು. ಭೂಮಿಯ ಸ್ಥಿತಿಯನ್ನು ಮೇಲೆ ತಿಳಿಸಿರುವೆವು. ಇನ್ನು ಜನರಲ್ಲಿ ದುಡಿಯುವುದಕ್ಕೆ ಅರ್ಹರಾದವರು ನಲವತ್ತು ಲಕ್ಷ ಮಾತ್ರ. ನಿರುದ್ಯೋಗಿಗಳು ಮೂರು ಲಕ್ಷಕ್ಕೆ ಮೇಲ್ಪಟ್ಟಿದ್ದಾರೆ. ಕಾಫಿ ತೋಟ ವಗೈರೆಗಳಿಗೆ ದಿಕ್ಕುಟ್ಟು ಹೋಗಿರುವವರು ಅನೇಕ ಸಹಸ್ರ ಜನರಿದ್ದಾರೆ.

ಇಂದಿನ ಪರಿಸ್ಥಿತಿಯಲ್ಲಿ ಸರ್ಕಾರದ ವಿದ್ಯುತ್ತಿನ ಇಲಾಖೆಯು ಬಹುಶೈತನ ಸೀಮೆ ಎಣ್ಣೆಯ ವೆಚ್ಚವನ್ನು ಉಳಿಸಲಿಲ್ಲ. ಪೆಟ್ರೋಲೂ, ಕಾರುಗಳೂ ಅಧಿಕಾರಿಗಳ ಜೀವವನ್ನೇ ಹೀರುತ್ತಿವೆ. ಏಳಿಗೆ ಹೊಂದುತ್ತಿರುವ ಕೈಗಾರಿಕೆಗಳು ಪರದೇಶದ ಕೂಲಿಗಳನ್ನು ನಮ್ಮ ದೇಶಕ್ಕಾಕರ್ಷಿಸುವಂತಾಗಿದೆಯಲ್ಲದೆ ನಮ್ಮ ರೈತನಿಗೆ ಸಹಕಾರಿಯಾಗಿಲ್ಲ ಮಹಾಶಯರೂ, ಮುಂದಾಳುಗಳು ಈ ವಿಷಯದಲ್ಲಿ ಏನು ಮಾಡುತ್ತಾರೆಂಬುದನ್ನು ದೇಶವು ನಿರೀಕ್ಷಿಸುತ್ತಿದೆ

ವಿದ್ಯಾರ್ಥಿಯ ಪ್ರಶಸ್ತಿ

ಮೈಸೂರು ವಿದ್ಯಾಶಾಖೆಯ ಶ್ರೀ॥ ಎಸ್. ಬಿ. ಅಯ್ಯಂಗಾರ್ಯರವರ ಮಕ್ಕಳಾದ ಶ್ರೀ॥ ಎಸ್. ಬಿ. ಕೇಶವನ್ ರವರು ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದ ಲಿಟರೇಚರ್ ಆನರ್ಸ್‌ನಲ್ಲಿ ಓದುತ್ತಿದ್ದರು ಅವರು ಆ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದ ಪ್ರಯುಕ್ತ 40 ಪೌಂಡುಗಳ ನಾರ್ತ್‌ಬ್ರೂಕ್ ವಿದ್ಯಾ ವೇತನವು ದೊರೆತಿದೆ.

ನಂಜನಗೂಡು ವರ್ತಮಾನ

ಕೋ-ಆಪರೇಟಿವ್ ಕ್ರೆಡಿಟ್‌ಬ್ಯಾಂಕ್— ಈ ಸಾರಿಯೂ ಡೈರೆಕ್ಟರುಗಳೂ, ಕಾರ್ಯದರ್ಶಿಗಳೂ ಸಹ ಮೆಹನತ್ತಿನಿಂದ ಕೆಲಸ ಮಾಡಿ, ಎಂದಿನಂತೆ ಸಾಕಾದಷ್ಟು ಒಡ್ಡಿ ವಸೂಲ್ಮಾಡಿ ಸಮರ್ಪಕವಾದ ಸ್ಥಿತಿಯಲ್ಲಿಟ್ಟಿರುವುದಕ್ಕಾಗಿ ವಂದನೀಯರು. ಆದರೆ ಎಲ್ಲ ಲೇವಾದೇವಿಗಳಮೇಲೂ ಬಡ್ಡಿ ದರವನ್ನು ಕಡಿಮೆಮಾಡಬೇಕೆಂದೂ, ಅಡ್ವಾನ್ಸಿನ ಬಡ್ಡಿಯನ್ನು-ಒಂದು ತಿಂಗಳಿಗಿಂತ ಹೆಚ್ಚಾಗಿ ಹಿಡಿದುಕೊಳ್ಳದಂತೆಯೂ ಏರ್ಪಡಿಸಬೇಕಾಗಿದೆ. ಸಿಲ್ವರ್ ಜೂಬಿಲೀ ವಗೈರೆಗಳನ್ನು ನಡೆಸುವವರಾಗಿರುವರೆಂದು ಜನಗಳು ನಂಬಿರುತ್ತಾರೆ

ಮುನಿಸಿಪಾಲಿಟಿ—ಯಾತ್ರಿಕರ ತೆರಿಗೆಯು ನಿಂತು ಹೋದದ್ದು ಅಷ್ಟೇನೂ ಒಳ್ಳೆಯದಲ್ಲ ಚೀಫ್ ಆಫೀಸರು, ಭಾರೀ ಸಂಬಳದ ಸ್ಯಾನಿಟರಿ ಇನ್ಸ್‌ಪೆಕ್ಟರು ವಗೈರೇ ವೆಚ್ಚವನ್ನು ಮಾತ್ರ ಕಡ್ಡಾಯಪಡಿಸುತ್ತಿರುವ ಸರ್ಕಾರವು ಉತ್ಪತ್ತಿಗೇಕೆ ಬಾಗಿಲು ಮುಚ್ಚಬೇಕು? ರೈಲ್ವೆಯವರು ಹೇಳುವ ಕಾರಣವು ಸುತರಾಂ ಸಮಂಜಸವಲ್ಲ ಈ ತೆರಿಗೆ ಹಾಕಿದ ಮೇಲೂ ಯಾತ್ರಿಕರ ಸಂಖ್ಯೆಯು ಹೆಚ್ಚಿದೆಯಲ್ಲದೆ ಕಡಿಮೆಯಾಗಿಲ್ಲ. ಮುಂದೆ ಬರುವ ಅಧ್ಯಕ್ಷರು ಸಾಮರ್ಥ್ಯವನ್ನವಲಂಬಿಸಿ, ದೇವಸ್ಥಾನವೂ, ಪುರ ಸಭೆಯೂ ಕ್ರಮಪಟ್ಟು, ಊರಿಗೆ ಮೇಲಾಗಬೇಕಾಗಿದೆ.

ಹೈಸ್ಕೂಲು—ಪರೀಕ್ಷೆಗಳ ಫಲಿತಾಂಶವು ಸಮರ್ಪಕವಾಗಿದೆ ಹೊಸ ಉಪಾಧ್ಯಾಯರುಗಳು ಹುರುಪಿನಿಂದ ಕೆಲಸಮಾಡಲೆಂದು ಹಾರೈಸುತ್ತೇವೆ. ಬಡ ಹುಡುಗರ ವಿದ್ಯಾರ್ಥಿನಿಧಿಗೆ ಮತ್ತಷ್ಟು ಸಹಾಯವು ಅವಶ್ಯಕವಾಗಿದೆ.

ಪಬ್ಲಿಕ್ ಲೈಬ್ರರಿ—ಇದು ಸರಿಯಾಗಿ ತನ್ನ ಕೆಲಸವನ್ನು ಮಾಡುತ್ತಿಲ್ಲ. ಹಳೆಯ ಲೈಬ್ರೇರಿಯನ್ನರು ಬಂದಿರುತ್ತಾರೆ. ದರ್ಶನವೇ ದುರ್ಲಭ. ಇನ್ನೂ ಹೊಸ ಪತ್ರಿಕೆಗಳಿಗೆ ಇಂಡೆಂಟ್ ಕೊಟ್ಟೇ ಇಲ್ಲವಂತೆ! ಇಲ್ಲಿನ ಸ್ಥಿತಿ ಎಂದರೆ ಶಿಬ್ಬಂದಿಯ ವೆಚ್ಚಕ್ಕೇ ನಾಲ್ಕುನೂರು ರೂಪಾಯಿಗಳು. ಪತ್ರಿಕೆಗಳಿಗೆ ಒಂದುನೂರು ರೂಪಾಯಿಗಳು ಇದು ಸರಿಯೆ? ಇದಕ್ಕಿಂತಲೂ ಚೆನ್ನಾಗಿ, ಮಹಾಜನರು ನಿರ್ವಹಿಸಬಲ್ಲರು ಅರ್ಧದಷ್ಟೇ ವೆಚ್ಚವು ಸಾಕು ಬರುವ ಪುರ ಸಭೆಯ ಅಧ್ಯಕ್ಷರು ಗಮನ ಕೊಡಬೇಕಾಗಿದೆ.

—ಹಿತೈಷಿ

ಗ್ವಾಲಿಯರ್ ಮಹಾರಾಜರು

ಗ್ವಾಲಿಯರ್ ಮಹಾರಾಜರು ಈ ಮಾಹೆ 22ನೇ ತಾರೀಖು ರಾಜಧಾನಿಗೆ ದಯಮಾಡಿಸಿದರು. ಅವರ ಗೌರವಾರ್ಥವಾಗಿ 21 ತೋಪುಗಳು ಹಾರಿಸಲ್ಪಟ್ಟವು. ಅವರು ರಾಜಾತಿಥಿಗಳಾಗಿದ್ದರು. ಅವರು ಚಾಮರಾಜೇಂದ್ರ ಟೆಕ್ನಿಕಲ್ ಇನ್ಸ್‌ಟಿಟ್ಯೂಟ್, ವಿಶ್ವವಿದ್ಯಾನಿಲಯ ಮುಂತಾದ ಸ್ಥಳಗಳಿಗೆ ಭೇಟಿ ಯಿತ್ತರು. ಅರಮನೆಯೆಲ್ಲಾ ಅವರು ಬಂದ ದಿವಸ ವಿದ್ಯುದ್ದೀಪಗಳಿಂದ ಅಲಂಕರಿಸಲ್ಪಟ್ಟಿತ್ತು. ಅವರು ಮೈಸೂರು ಜನದ ಚೆಂದಗಳನ್ನು ನೋಡಿ ಮೆಚ್ಚಿದರು.

ಶ್ರೀ ಮನ್ಮಹಾರಾಜರು ಯೂರೋಪಿನಲ್ಲಿ.

ಜುಲೈ 10ನೇ ತಾರೀಖು ರಾಪ್ವ ಜಹಜಿನಲ್ಲಿ ನಮ್ಮ ಪ್ರಭುಗಳು ಮಾರ್ಸೇಲ್ಸ್‌ಗೆ ಬಂದು ಅಲ್ಲಿಂದ ನೇರವಾಗಿ ಪ್ಯಾರಿಸ್ಸಿಗೆ ದಯಮಾಡಿಸಿದರು. ಅಲ್ಲಿ ವರ್ಸೇಲ್ಸ್ ಮತ್ತು ಫಾಂಟೈನ್‌ಬ್ಲೋಗಳಿಗೆ ಭೇಟಿ ಇತ್ತರು. ಅಲ್ಲಿನ ಪ್ರಮುಖ ಸಾಮಾಜಿಕ ಮತ್ತು ಸಾಂಸ್ಕೃತಿಕ ಕೇಂದ್ರಗಳನ್ನು ಸಂದರ್ಶಿಸಿ 16ನೇ ತಾರೀಖಿನ ದಿವಸ ಲಂಡನ್ನಿಗೆ ಪ್ರಯಾಣಮಾಡಿದರು.

ಇದೇ ಮಾಹೆ ೨೩ನೇ ತಾರೀಖು ಬ್ರಿಟಿಷ್ ಚಕ್ರವರ್ತಿಗಳಾದ ಎಂಟನೆ ಎಡ್ವರ್ಡರನ್ನು ಭೇಟಿಮಾಡಿದರು. ಅಲ್ಲಿನ ಮುಖ್ಯ ಸ್ಥಳಗಳನ್ನೂ ಮತ್ತು ಮುಖ್ಯ ಮನುಷ್ಯರನ್ನೂ ನೋಡುತ್ತಿರುವುದಾಗಿ ತಿಳಿದುಬಂದಿದೆ. ಅವರು ಆರೋಗ್ಯವಾಗಿಯೂ ಪ್ರಸನ್ನಮುಖಿಗಳಾಗಿಯೂ ಇದ್ದಾರೆಂದು ತಿಳಿದುಬಂದಿದೆ.

ಆದರ್ಶ ಮುನಿಸಿಪಾಲಿಟಿ

ಕನ್‌ಸರ್ವೆನ್ಸಿಗಳು.

ಎಲ್ಲರ ಬಾಯಲ್ಲೂ ಮಾಡೆಲ್ ಸ್ಟೇಟ್ ಮಾಡಲ್ ಮೈಸೂರು, ಮಾಡಲ್ ಮುನಿಸಿಪಾಲಿಟಿ ಎಂಬ ಮಾತೇ ಕೇಳಬರುತ್ತಿದೆ. ನಿಜವಾಗಿಯೂ ಇಲ್ಲಿನ ಟಾರು ರೋಡುಗಳು ಪಾರ್ಕುಗಳು ಫೌಂಟನ್‌ಗಳು ಆರ್ನಮೆಂಟಲ್ ದೀಪಗಳು ಆಕರ್ಷಣೀಯವಾದ ಹೋಟಲುಗಳನ್ನು ನೋಡಿ ಹೀಗೆ ಅಂದುಕೊಂಡಿರಬಹುದು ವಾಸ್ತವವಾಗಿಯೂ ಹಾಗೆ ಇಲ್ಲವೇ ಇ... ಇಲ್ಲಿನ ಕನ್‌ಸರ್ವೆನ್ಸಿಗಳ ಹೊಲಸು, ಬ್ಲೀಚ್ ಕಕ್ಕಸು ಇಡಲ್ಪಟ್ಟಿರುವ ರೀತಿ, ಬ... ಜನಗಳು ವಾಸಿಸುವ ರಸ್ತೆ ರಿಪೇರಿ, ಸಂದಿಗೊಂದಿಗಳಲ್ಲಿರುವ ಕೊಚ್ಚೆ, ದೀಪಗಳ ಅವಸ್ಥೆ ಇವಿಷ್ಟನ್ನು ನೋಡಿದರಾಯಿತು ಇಲ್ಲಿನ ಆದರ್ಶವು ಹೊರಬೀಳುವುದು ... ಷ್ಟೋ ರಸ್ತೆಗಳು ಇವರ ರಿಪೇರಿಯ... ಒಂದು ಸಣ್ಣ ಮಳೆ ಬಿತ್ತೆಂದರೆ ಸರಿ, ದಾರಿಗೆ ಸೊಗಸಾದ ಮೇಜೋಡನ್ನು ಕೊಡುತ್ತವೆ. ಪೌರಸಭೆಯವರು ಪುನಃ 10-1... ದಿನಲ ರಸ್ತೆ ತಂಟೆಗೆ ಹೋಗೋದೇ ಇ... ಸೂರ್ಯದೇವನಿಗೆ ದಯ ಬರಬೇಕು. ಅ... ಕಿರಣಗಳಿಂದ ರಸ್ತೆ ಒಣಗಿ ಗಾಡಿ... ಗಳು ಉರುಳಿ ರಸ್ತೆ ನೆಟ್ಟಗಾಗಬೇ... ಎಷ್ಟೋ ರಸ್ತೆಗಳು ಜಲ್ಲಿ ಮುಖವನ್ನೇ... ರೂ ಜನ್ಮಾರಭ್ಯ ಕಂಡಿವೆಯೋ ಇಲ್ಲವೋ? ಈ ರಸ್ತೆಗಳ ಪಾಡು ಹೀಗೆ. ದೊಡ್ಡ ಮೋಟಾರುಗಳ ರಸ್ತೆಗಳಲ್ಲಿ ಸ್ವಲ್ಪ ನೆಲ ಕಿ... ಹೋಗುವುದೇ ತಡ, ಕೂಡಲೆ ಟಾರ್ ... ಪಾಯೀ ಬಂದುಬಿಡುತ್ತದೆ. ಎಷ್ಟೋ ... ಷಯಗಳಲ್ಲಿ ಪೌರಸಭೆಯ ಆದರ್ಶವನ್ನು ನೋಡಬಹುದು.

ಸ್ಪೈಯಿನಿನಲ್ಲಿ ರಕ್ತಪ್ರವಾಹ

ಸಾವಿರಾರು ಜನರ ಮರಣ

ಸ್ಪೇನ್ ದೇಶದಲ್ಲಿ ಅತಿ ಭಯಂಕರವಾದ ಪರಿಸ್ಥಿತಿಯುಂಟಾಗಿದೆ. ರಾಜಧಾನಿಯಾದ ಮ್ಯಾಡ್ರಿಡ್‌ನಿಂದ ಎಲ್ಲಾ ಕಡೆಗೂ ಕಟ್ಟಿದ್ದ ಟೆಲಿಫೋನ್ ತಂತಿಗಳೆಲ್ಲವೂ ಕತ್ತರಿಸಿ ಹಾಕಲ್ಪಟ್ಟಿವೆ. ಅಲ್ಲಿನ ರಾಜಕೀಯ ಪರಿಸ್ಥಿತಿಯು ಬಹಳ ಬಿಗಡಾಯಿಸಿಕೊಂಡಿದೆ. ಮ್ಯಾಡ್ರಿಡ್‌ಗೆ 90 ಮೈಲಿಗಳ ದೂರದಲ್ಲಿರುವ ಕ್ಯಾಯೆಸ್‌ಸಾಲ್‌ನಲ್ಲಿ ನಡೆದ ಹೃದಯ ವಿದ್ರಾವಕವಾದ ಘಟನೆಗಳಲ್ಲಿ ಸತ್ತವರ ಮತ್ತು ಗಾಯಗೊಂಡವರ ಸಂಖ್ಯೆಯು ತಿಳಿದುಬಂದಿಲ್ಲ. ಸರಕಾರವು ಯಾವ ತರಹ ಸಮಾಚಾರಗಳನ್ನೂ ಪ್ರಕಾಶಕ್ಕೆ ತರುತ್ತಿಲ್ಲ. ದಂಗೆ ಕೋರರು ಸ್ಪೇಯಿನ ಉತ್ತರದ ಅನೇಕ ಪ್ರಾಂತ್ಯಗಳು ಅವರ ವಶವಾಗಿವೆ. ಸರಗೋಸ್ಸಾ, ನವಾ, ಜಾಂ. ವೆಲ್ಲೆಡಿಯಾ, ಬರಗಾಸ್ ಮೊದಲಾದ ಪ್ರಾಂತ್ಯಗಳು ದಂಗೆಕೋರರ ಆಧೀನಕ್ಕೊಳಪಟ್ಟಿವೆ. ಅನೇಕ ಪ್ರದೇಶಗಳ ಗಾರ್ಡಿಗಳೂ ದಂಗೆಯಲ್ಲಿ ಭಾಗವಹಿಸಿರುವುದಾಗಿ ತಿಳಿದು ಬಂದಿದೆ. ದಂಗೆ ಕೋರರಲ್ಲದೆ ಸಿವಿಲ್ ಗಾರ್ಡಿಗಳೂ ಹಸ್ತಗತಮಾಡಿಕೊಂಡು ಅಲ್ಲಿನ ವೈರ್‌ಲೆಸ್ ಸ್ಟೇಷನ್‌ನನ್ನು ತಮ್ಮ ವಶವರ್ತಿಯಾಗಿ ಮಾಡಿಕೊಂಡಿದ್ದಾರೆ. ಕ್ಯೂಟಾ ಎಂಬಲ್ಲಿ ದಂಗೆ ಕೋರರು ಸರ್ಕಾರಿ ಹಡಗುಗಳಮೇಲೆ ಬಾಂಬುಗಳನ್ನೆಸೆಯುವುದಾಗಿ ಎಚ್ಚರಿಕೆ ಕೊಟ್ಟಿದ್ದಾರೆ. ಅಲ್ಲಿರುವ ಅನೇಕ ಪ್ರಜೆಗಳು ಸ್ಪೇಯಿನವರೊಡನೆಯೂ ಮತ್ತು ದಂಗೆಕೋರರೊಡನೆಯೂ ಸೇರದೆ ತಾಟಸ್ಥ್ಯದಿಂದಿದ್ದುದರಿಂದ ಅವರೆಲ್ಲರನ್ನೂ ಬಂದರಿನಿಂದ ದಂಗೆಕೋರರು ಹೊರಕ್ಕೋಡಿಸಿರುವರು. ಸ್ಪೇಯಿನಿನಲ್ಲಿರುವ ಅನೇಕ ಸರ್ಕಾರಿ ಹಡಗುಗಳ ಯಂತ್ರಗಳಿಗೆ ಬೇಕಾದ ಸಾಮಾನುಗಳು ಸಿಕ್ಕದೆ ಅವೆಲ್ಲವೂ ನಿಂತು ಹೋಗಿವೆ. ದಂಗೆಕೋರರು ಇಷ್ಟೆಲ್ಲಾ ಸಾಹಸಗಳನ್ನು ಮಾಡಿದರೂ ಬ್ರಿಟಿಷರ ಸ್ಪೈಟ್ ಫೀಲ್ ಎಂಬ ವಿನಾಶಕ ನೌಕೆಯು ಇಲ್ಲಿನ ಬಂದರಿನಲ್ಲಿಯೇ ಇದೆ.

ಇತ್ತ ಕಡೆ ಸ್ಪೈಯಿನ್ ಸರಕಾರವೂ ಕೊಂಚ ಪ್ರಯೋಜನವಾದ ಕಾರ್ಯಗಳನ್ನು ನಡೆಸುತ್ತಿದೆ. ಸರಕಾರವು ದಂಗೆ ಕೋರರನ್ನು ಹಿಡಿಯಲು ವಿಶ್ವಪ್ರಯತ್ನಗಳನ್ನು ಮಾಡಿತು. ಸರ್ಕಾರಕ್ಕೂ ಮತ್ತು ದಂಗೆಕೋರರಿಗೂ ಉಗ್ರ ಕದನವಾರಂಭವಾಯಿತು. ಮ್ಯಾಡ್ರಿಡ್‌ನಲ್ಲಿ ಸರ್ಕಾರವು ಎಲ್ಲ ಭಾಗಗಳನ್ನೂ ತನ್ನ ಅಧೀನ ಮಾಡಿಕೊಂಡ ಪಕ್ಷದ ಸುಮಾರು 17 ಮಂದಿ ದಂಗೆಯ ಮುಖಂಡರು ತಮ್ಮ ಆಗಾಧ ಪ್ರಯತ್ನಗಳೆಲ್ಲವೂ ವಿಫಲವಾದುದಕ್ಕಾಗಿ ವಿಶೇಷ ನಿರಾಶೆಪಟ್ಟು ಆತ್ಮಹತ್ಯ ಮಾಡಿಕೊಂಡಿದ್ದಾರೆ. ಸರ್ಕಾರಿ ಸೈನಿಕರು ಪ್ರತಿಪಕ್ಷದವರನ್ನು ಸೋಲಿಸಿದರು. ಸರಕಾರವು ಅನೇಕ ಪತ್ರಿಕಾಲಯಗಳನ್ನು ವಶಮಾಡಿಕೊಂಡಿದೆ. ಕೆಲವು ಕಡೆಗಳಲ್ಲಿ ಸರ್ಕಾರವು ಇನ್ನೂ ಪರಿಸ್ಥಿತಿಯನ್ನು ಚೆನ್ನಾಗಿ ಉಸ್ತುವಾರಿಮಾಡುತ್ತಿದೆ. ಸುಮಾರು ಐದು ಸಹಸ್ರ ಕೂಲಿಗಳೂ ಮತ್ತು ಅನೇಕ ರೈತರೂ ಶಸ್ತ್ರಾಸ್ತ್ರ ಸಜ್ಜಿತರಾಗಿ ಸರಗೋಸಾ ಕಡೆಗೆ ಹೊರಟಿರುತ್ತಾರೆ. ಸ್ಪೇನಿನಿಂದ ಬರುವ ಸುದ್ದಿಗಳಿಗೆಲ್ಲಾ ವಿಶೇಷ ಪ್ರತಿಬಂಧ ಕವಿರುವುದು. ಆದರೂ ಸರ್ಕಾರವು ಎಲ್ಲವನ್ನೂ ಪರಿಶೀಲಿಸುತ್ತಿದೆ ಮತ್ತು ಹತೋಟಿಯಲ್ಲಿಟ್ಟುಕೊಂಡಿದೆ. ಅನೇಕ ಪ್ರಮುಖ್ಯ ಪ್ರಾಂತ್ಯಗಳನ್ನು ಸರಕಾರವು ಅಧೀನದಲ್ಲಿಟ್ಟುಕೊಂಡಿದ್ದರೂ ದಂಗೆಕೋರರ ಶಕ್ತಿಯು ಹೆಚ್ಚುತ್ತಲಿದೆ. ಅನೇಕ ಪ್ರಾಂತ್ಯಗಳನ್ನು ಹತೋಟಿಯಲ್ಲಿಟ್ಟುಕೊಂಡಿರುವ ದಂಗೆ ಕೋರರು ಇನ್ನೂ ಸರಕಾರಕ್ಕೆ ಅಧೀನರಾಗಿಲ್ಲವೆಂದು ತಿಳಿದುಬಂದಿದೆ. ಸರ್ಕಾರಕ್ಕೂ ಮತ್ತು ದಂಗೆಕೋರರಿಗೂ ಗೊಂದಲವುಂಟಾಗಿ 60 ಮಂದಿ ಹತರಾಗಿದ್ದಾರೆ. ಅನೇಕ ಪ್ರಸಿದ್ಧ ಮುಖಂಡರು ಮರಣ ಹೊಂದಿರುವುದರಿಂದ ದಂಗೆಕೋರರ ಶಕ್ತಿಯು ಬಹಳಮಟ್ಟಿಗೆ ಕುಗ್ಗಿ ಹೋಗಿದೆ. ಜನರಲ್ ಜರ್ಜಾರವರು ವಿಮಾನ ಅಪಘಾತದಿಂದ ಮರಣಹೊಂದಿದರು. ಜನರಲ್ ಡೀಲಾರ್ಬರವರು ಸರ್ಕಾರಿ ಸೈನಿಕರಿಂದ ಹತ್ಯ ಮಾಡಲ್ಪಟ್ಟರು. ಅನೇಕ ಸ್ಪ್ಯಾನಿಷ ಯುದ್ಧದ ಹಡಗುಗಳು ಅಲ್ಜಿಸಿರಾಸ್‌ಗೆ ಪ್ರಯಾಣಮಾಡುತ್ತಿವೆ. ಹಡಗಿನಲ್ಲಿದ್ದವರೂ ಕೂಡ ದಂಗೆ ಎದ್ದಿದ್ದಾರೆ. ಇದರ ಪರಿಣಾಮವಾಗಿ ಒಬ್ಬ ಅಧಿಕಾರಿಯೂ, 7 ಮಂದಿ ಪ್ರಯಾಣಿಕರೂ ಹತರಾಗಿರುವರು. ಅಲ್ಜಿಸಿರಾಸ್‌ನಿಂದ ಅನೇಕ ವ್ಯಕ್ತಿಯರನ್ನು ರಕ್ಷಿಸಲಾಯಿತು. ಮೆಡಿಟರೇನಿಯನ್ ಸಮುದ್ರಕ್ಕೆ ಎರಡು ದೊಡ್ಡ ಹಡಗುಗಳು ಹೋಗಬೇಕೆಂದು ಅಮೇರಿಕಾದ ಸಂಯುಕ್ತ ಸಂಸ್ಥಾನವು ಆಜ್ಞೆಮಾಡಿದೆ. ಚರ್ಬರ್ಗ್‌ನಲ್ಲಿರುವ ಯುದ್ಧದ ಹಡಗು ಸಾರ್ಸೊಸ್ಸಿಯಾನ್‌ಗೆ ಹೋಗಿ ಅಲ್ಲಿರುವ ಅಮೇರಿಕಾ ದೇಶದವರನ್ನು ರಕ್ಷಿಸಬೇಕೆಂದು ಅಪ್ಪಣೆಮಾಡಿದೆ.

ಇತ್ತ ಕಡೆ ಸ್ಪೈಯಿನ್‌ನಲ್ಲಿ ಕ್ರಮವಾಗಿ ಸರಕಾರವು ಹೆಚ್ಚು ಶಕ್ತಿಯನ್ನು ಹೊಂದುತ್ತಿದೆ. ರಸ್ತೆಗಳಲ್ಲಿ ತಿರುಗಾಡುವ ಪ್ರಯಾಣಿಕರ ಮೇಲೆ ದಂಗೆಕೋರರು ಗುಂಡು ಹಾರಿಸುತ್ತಿದ್ದಾರೆ. ಬಾರ್ಸಿಲೋನಾವನ್ನು ಆಧೀನ ಮಾಡಿ ಕೊಳ್ಳಲು ಸರ್ಕಾರವು ಬಹಳ ಹೆಣಗಾಡಿತು. ಈ ಭಯಂಕರ ಕದನದಲ್ಲಿ 50 ಮಂದಿ ಮರಣವೂ ಮತ್ತು 3000 ಜನರಿಗೆ ಗಾಯವೂ ಉಂಟಾಗಿದೆ. ಸರಗೋಸಾದಲ್ಲಿರುವ ದಂಗೆ ಕೋರರೆಲ್ಲರೂ ಶರಣಾಗತರಾಗದಿದ್ದಲ್ಲಿ ಅವರಮೇಲೆ ಬಾಂಬುಗಳ ಸುರಿಮಳೆಯಾಗುವುದೆಂದು ಸರ್ಕಾರವು ಎಚ್ಚರಿಕೆ ಕೊಟ್ಟಿರುತ್ತದೆ. ನಡೆದ ಕದನದಲ್ಲಿ ಜನರಲ್ ಮೋಲಾಗರವರು ಮರಣವನ್ನೈದಿರುತ್ತಾರೆ. ದಂಗೆಕೋರರ ವಿಮಾನ ಧಾಳಿಯಿಂದ ಮೂರು ಸರಕಾರಿ ಯುದ್ಧದಹಡಗುಗಳು ನೀರಿನಲ್ಲಿ ಮುಳುಗಿಸಲ್ಪಟ್ಟಿವೆ. ಇತ್ತ ಕಡೆ ಸಾನ್‌ಸೆಬಾಸ್ಟಿಯಾನ್ ನನ್ನು ಸರ್ಕಾರವು ತನ್ನ ವಶವರ್ತಿಯನ್ನಾಗಿ ಮಾಡಿಕೊಂಡಿದೆ. ಜಿಬ್ರಾಲ್ಟರ್ ಸಮೀಪದಲ್ಲಿ ದಂಗೆಕೋರರ ವಿಮಾನಗಳ ಮೇಲೆ ಗುಂಡನ್ನು ಹಾರಿಸಲಾರಂಭಿಸಲಾಯಿತು. ಇನ್ನು ಕೆಲವು ಬಾಂಬುಗಳ ಆಸ್ಫೋಟನೆಗಳು ನಡೆದವು. ಜಿಬ್ರಾಲ್ಟರಿನಲ್ಲಿ ಸ್ಪ್ಯಾನಿಷ್ ಹಡಗುಗಳಿಗೆ ಸಹಾಯವು ದೊರಕಲಿಲ್ಲ. ಯೂರೋಪಿನ ಅವ್ಯವಸ್ಥಿತ ಪರಿಸ್ಥಿತಿಯನ್ನು ನೋಡಿ ಅಮೇರಿಕಾದ ಸಂಯುಕ್ತ ಸಂಸ್ಥಾನವು ಮೆಡಿಟರೇನಿಯನ್ ಸಮುದ್ರದ ಸಮೀಪದಲ್ಲಿ ಸೈನ್ಯವನ್ನಿಡಬೇಕಾದ ಅವಶ್ಯಕವಿದೆ ಎಂದು ಹೇಳಿರುತ್ತದೆ.

ಸ್ಪೇನಿನಲ್ಲಿ ನಡೆಯುತ್ತಿರುವ ಉಗ್ರ ಕದನಗಳಲ್ಲಿ ಸಾಮಾನ್ಯಜನರು ಸರ್ಕಾರದ ಕಡೆಗೆ ಸಹಾಯಮಾಡುತ್ತಿದ್ದಾರೆ. ಅನೇಕ ದಂಗೆ ಕೋರರು ಶರಣಾಗತರಾಗುತ್ತಿದ್ದಾರೆ. ದೇಶದಲ್ಲಿನ ಎಲ್ಲಾ ಅಂಗಡಿಗಳೂ ಮುಚ್ಚಲ್ಪಟ್ಟಿವೆ ರಸ್ತೆಗಳೆಲ್ಲವೂ ಹಾಳುಬಿದ್ದಿವೆ. ಬ್ಯಾರ್ಕನಲ್ಲಿ ಉಂಟಾದ್ದ ದಂಗೆಯ ಪರಿಣಾಮವು ಬಹಳ ವಿಷಾದಕರವಾಗಿದೆ. 110 ಮಂದಿ ಅಧಿಕಾರಿಗಳನ್ನೂ ಮತ್ತು 200 ಜನ ಫ್ಯಾಸಿಸ್ಟ ಯುವಕರನ್ನೂ ಮಷಿನ್ ಗನ್ನಿನಿಂದ ಹೊಡೆಯಲಾಯಿತು. ಸೆವಿಲಿಯಲ್ಲಿರುವ ಕೆಥಿಡ್ರಲ್ ಚರ್ಚಿನಮೇಲೆ ಸರ್ಕಾರಿ ವಿಮಾನಗಳು ಬಾಂಬುಗಳನ್ನೆಸೆದು ನಾಶಮಾಡಿವೆ. ಕಾಡೀಜಿನಲ್ಲಿ ಅನೇಕ ದಂಗೆಕೋರರು ಶರಣಾಗತರಾಗುತ್ತಿರುವರು. ಜಿಬ್ರಾಲ್ಟರ್‌ಮೇಲೆ ಬಾಂಬುಗಳನ್ನು ಎಸೆಯಕೂಡದೆಂದೂ, ಎಸೆದಲ್ಲಿ ಯುದ್ಧದಗೂಡುಗಳಿಂದ ಸ್ಪೈಯಿನ್ ದೇಶದ ಹಡಗುಗಳು ನಾಶವಾಗುವುವೆಂದೂ ಜಿಬ್ರಾಲ್ಟರಿನ ಅಧಿಕಾರಿಗಳು ತಿಳಿಸುತ್ತಾರೆ. ಸ್ಪೈಯಿನಿನ ಇಂತಹ ಭೀಕರ ಪರಿಸ್ಥಿತಿಯಲ್ಲಿ ಅಸಂಖ್ಯಾತ ಜನರು ಹತರಾಗಿರುತ್ತಾರೆ. ದಂಗೆಯನ್ನಡಗಿಸಲು ಫ್ರಾನ್ಸ್ ಸರ್ಕಾರವು ಸಹಾಯಮಾಡುತ್ತದೆ.

ಶ್ರೀ ಪಿ. ಜಿ. ಶ್ರೀನಿವಾಸನ್

(ತಾಯಿನಾಡು ಉಪಸಂಪಾದಕರು)

ಇವರು ಪತ್ರಿಕಾ ವೃತ್ತಿ ಶಿಕ್ಷಣಕ್ಕಾಗಿ ಇಂಗ್ಲೆಂಡಿಗೆ ಪ್ರಯಾಣ ಮಾಡಿದರು.

ಯಳಂದೂರು ವರ್ತಮಾನ

(ನಮ್ಮ ವಿಶೇಷ ಬಾತ್ಮಿದಾರರಿಂದ)

ಈ ಮಾಹೆ 22ನೇ ತಾರೀಖು ಸಾಯಂಕಾಲ ಮೈಸೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮೀಷನರವರ ಸವಾರಿಯು ಈ ಊರಿಗೆ ದಯಮಾಡಿಸಿತ್ತು. ಆಗ್ಯೆ ಅವರು ಈ ತಾಲ್ಲೋಕು ಯಳಂದೂರು, ಅಂಬಳೆ ಮತ್ತು ಬರಿಯೂರು ಕೆರೆ ನಾಲಾ ಕಾಂಗಾರಿಗಳಿಗಾಗಿ ಪ್ರಕೃತ ಸುಮಾರು ೨೬ ಸಾವಿರ ರೂಪಾಯಿಗಳ ವರಿಹಿಗೆ ಸರ್ಕಾರದಿಂದ ಮಂಜೂರಾಗಿರುತ್ತೆ. ಸಂಬಂಧಪಟ್ಟ ರೈತರು ಮೊಬಲಗು ಪೈಕಿ ಮೂರನೇ ಒಂದು ಭಾಗ ಕಂಟ್ರಿಬ್ಯೂಷನ್ ಮೊಬಲಗನ್ನು ಕೆಲಸ ಪ್ರಾರಂಭಿಸುವುದಕ್ಕೆ ಮುಂಚೆಯೇ ಪಾವತಿ ಮಾಡಬೇಕೆಂತಲೂ, ಅಪ್ಪಣೆ ಕೊಡಿಸಿದರು. ಮಾರನೇ ದಿನ ಬೆಳಿಗ್ಗೆ ಆಗರ ಮಾಂಬಳ್ಳಿ ಪ್ರಾಂತ ಇನ್‌ಸ್ಪೆಕ್ಷ ಮಾಡಿಕೊಂಡು ತಾಲ್ಲೋಕಾಮಳೆ ವಸೂಲಿಗಾಗಿ ತನಿಖೆ ಮಾಡಿಕೊಂಡು ವಾಪಸ್ ದಯಮಾಡಿಸಿದರು. ಆದರೆ ಈಗ ಸುಮಾರು ೨ ತಿಂಗಳ ಕೆಳಗೆ ನಮ್ಮ ಶ್ರೀಮಂತ ಜಹಗೀರ್‌ದಾರ್ರವರು ಮಿ॥ ನವರತ್ನ ರಾಮರಾಯರವರೊಡನೆ ಯಳಂದೂರಿಗೆ ದಯಮಾಡಿಸಿದ್ದಾಗ ಮೇಲ್ಕಂಡ ಕಾಂಗಾರಿಗಳನ್ನು ಕಂಟ್ರಾಕ್ಟ್ ಮೂಲಕ ನಡೆಸಿದಲ್ಲಿ ಜಾಸ್ತಿ ಖರ್ಚಾಗುವುದರಿಂದ ಈಗಿನ ರೈತರ ಒಡಸ್ಥಿತಿಗೂ ತಮಗೂ ಇದರಿಂದ ಹೆಚ್ಚು ಅನಾನುಕೂಲವಾಗುವುದೆಂಬ ಯಿರಾದಮೇಲೆ ಸರ್ಕಾರದ ನೌಕರರ ಮತ್ತು ಮುಖಂಡ ರೈತರುಗಳ ಕಮಿಟಿ ಮೂಲಕ ಕೆಲ್ಸಗಳನ್ನು ಅಮಾನಿಯಲ್ಲೇ ನಡೆಸಬೇಕೆಂತಲೂ ಇದಕ್ಕೆ ತಗಲುವ ಖರ್ಚಿನ ಮೂರನೇ ಒಂದು ಭಾಗವನ್ನು ಅಡ್ವಾನ್ಸಾಗಿ ರೈತರು ತಾಲ್ಲೋಕು ಅಮಲ್ದಾರ್ರವರಲ್ಲಿ ಡಿಪಾಜಿಟ್ ಮಾಡಿ ತಮಗೆ ತಿಳಿಸಿದಲ್ಲಿ ತಮ್ಮ ಭಾಗವನ್ನೂ ಆ ಒಡನೆ ಪಾವತಿಮಾಡಲು ಏರ್ಪಡಿಸಿ ಕೆಲ್ಸ ನಡೆಸುವಂತೆ ಏರ್ಪಡಿಸುವುದಾಗಿ ತೀರ್ಮಾನಿಸುವವಾಗಿ ಅಪ್ಪಣೆ ಕೊಟ್ಟು ವಾಪ್ಸು ದಯಮಾಡಿಸಿದರು. ಹಾಲಿ ಸ್ಥಿತಿಗೆ ಬಹಳ ಅನಾನುಕೂಲವಾಗಿರುತ್ತೆ. ಬಹು ದಿವಸಗಳಿಂದಲೂ ಫಸಲು ಇಲ್ಲದೆ ಇರುವವರಿಂದ ಪ್ರಜೆಗಳಿಗೆ ತಿನ್ನುವುದಕ್ಕೆ ಮಾರ್ಗವಿಲ್ಲದೆ ಸಲೀಸು ಕಂದಾಯವನ್ನೇ ಪಾವತಿಮಾಡಲು ಸಾಧ್ಯವಿಲ್ಲದೆ ನಾನಾ ವಿಧವಾದ ತೊಂದರೆ ಪಡುತ್ತಿರುವ ಕಾಲದಲ್ಲಿ ಒಂದೇದಫ ಪೂರ್ತಿ ಕಂಟ್ರಿಬ್ಯೂಷನ್ ಮೊಬಲಗೂ ಕೊಡಬೇಕೆಂತಲೇ ತೀರ್ಮಾನಿಸುವದಾದರೆ ಸರ್ಕಾರದವರ ಸಹಾಯವಿಲ್ಲದೆ ಸಾಧ್ಯವಿಲ್ಲವಾಗಿ ಈ ತಾಲ್ಲೋಕಿನ ಪ್ರಜೆಗಳಿಗೆ ತಕಾವಿ ವಗೈರೆ ಸಾಲವಾಗಲಿ ಕೋ-ಆಪರೇಟಿವ್ ಸೊಸೈಟಿಗಳ ಮೂಲಕ ಸಾಲ ಒದಗಿಸಲು ಸಾಕಾದಷ್ಟು ಬಂಡವಾಳವಾದರೂ ಒದಗಿಸುವದರ ಮೂಲಕವಾಗಿಯಾಗಲಿ ಧಾರಾಳವಾದ ಸಹಾಯವಾಗುವಂತೆ ಏರ್ಪಡಿಸಿ ಜಾಗ್ರತೆ ಕಾಂಗಾರಿ ನಡೆಸುವುದು ಸರ್ವೋತ್ತಮವಾಗಿರುತ್ತೆ.

MYSORE FOR MYSOREANS.

G R JOSYER, M A, F R E S

A hundred and fifty years ago, when Mysore had its own Mussolinis in the person of Nawabs Hyder Ali and Tippu Sultan, there was a sudden Muslimisation of the services On the restoration of Sri Krishnaraja Wodeyar the tide turned in favour of the sons of the soil Again, on the establishment of the British Commission, there was an inroad of the Whites, and the reduction of Mysoreans to the position of "Native Assistants" After the Rendition, Indianisation no doubt returned, but it was Indianisation Tamilised, not indigenous Indianisation Quick witted and adept Iyers and Iyengars from the lower valley of the Cauvery quietly filtered into cushy official jobs, and left the local aspirants staring. That gave rise to the cry, "Mysore for Mysoreans!" It was nearly a generation ago It was not an aggressive battle cry like that of the Arabs against Jews, but the plaintive out cry of the dispossessed for their birth-right. Possibly it had effect at the time in stemming the tide of the Southern invasion

Once again to day foreignisation is raging. The official bloc is almost a League of Nations The great spending Departments, Military, Police, Judicial, Railways, Electrical and University are presided over by big wig non Mysoreans, mostly super annuated, and without exception 'Birds of Passage" They are paid 25 to 50 % more than local men, and are mostly above check and above criticism They may be gems of men in their own countries They may make beautiful administrators But here they do not fit the setting Their motive is not to serve Mysore and be one with Mysoreans, but to make as much money as possible in Mysore and get out of the country I am sure that not one of them has got shares in the Krishnarajendra Mills, or even the Sugar Company, or the 3 % Government Loan

At a time when educated unemployment is eating the vitals of the country, even the bringing in of young men from outside, a Doctor from the North or a Munsiff from the South, is objectionable and is resented But the bringing in of superannuated old men from outside over the heads of indigenous men of approved service, is an unjustifiable error, to put it mildly. It is a thing which is seen in no civilized country, I shall not say, 'no other civilized country', because I do not claim that Mysore is civilized One cannot imagine Great Britain appointing a Mysorean on its Cabinet, even "Without Port folio", and even on its paltry £ 2000 annuity! One cannot imagine Ireland, U S A, South Africa, Denmark, Japan, or any other Sovereign State appointing foreign nationals to internal administrative posts We of Mysore claim Sovereignty of internal administration, and it is conceded to us also tacitly And yet neither our self respect, *amour propre* or obligations to the people prevents us from providing easy entry to our Civil Lists to any foreigner with money sense who may care to step across for a pleasant and profitable time One irony of it is that our Model Government can indulge in such a thing without feeling a qualm! Another and worse irony of it is that there are so-called public men among us who misuse public occasions to lay thick flatteries on such high placed foreigners "on behalf of the Public"! God alone knows when the awakening will come to Government as well as to the people and this enormity will cease!

ವಿವಿಧ ವಿಷಯಗಳು

(ಪಿ. ಎಸ್. ರಂಗಸ್ವಾಮಿಅಯ್ಯಂಗಾರ್)

ಆಂಸ್ಟರ್ಡಾಮಿನಲ್ಲಿ ಒಬ್ಬನ 28 ಪೌಂಡುಗಳ ಕರೆನ್ಸಿ ನೋಟುಗಳನ್ನು ಒಂದು ಆಡು ನುಂಗಲು, ಅವನು ಕೂಡಲೆ ಆ ಆಡನ್ನು ಕೊಂದು ಅದರ ಹೊಟ್ಟೆಯನ್ನು ಬ್ಯಾಂಕಿಗೆ ತೆಗೆದುಕೊಂಡು ಹೋಗಿ, ಅದರೊಳಗಿದ್ದ ನೋಟುಗಳ ನಂಬರನ್ನು ತೋರಿಸಿ ಬೇರೆ ಹೊಸ ನೋಟುಗಳನ್ನು ಪಡೆದನು

ಅಮೇರಿಕ ದೇಶದಲ್ಲಿ 12 ವರ್ಷದ ಬಾಲಕಿಯು ಮೂರು ಹೇರಿದ್ದ ಕೋಸ್ತ ... ವರ್ಷದ ಒಬ್ಬ ಬಾಲಿಕೆಯನ್ನು ಕೊಂದುಹಾಕಿದಳು

ಅಮೇರಿಕ ದೇಶದಲ್ಲಿರುವ ಆಲ್ಟನ್ ಎಂಬ ಪಟ್ಟಣದಲ್ಲಿ ರಾಬರ್ಟ್ ವ್ಯಾಡ್ಲೋ ಎಂಬುವನು ಪ್ರಪಂಚದಲ್ಲೆಲ್ಲಾ ಅತ್ಯೆತ್ತರವಾದ ಮನುಷ್ಯನು ಅವನು 8 ಅಡಿ 4½ ಅಂಗುಲ ಎತ್ತರವಾಗಿಯೂ 390 ಪೌಂಡು ತೂಕವುಳ್ಳವನಾಗಿಯೂ ಇದ್ದಾನೆ ಅವನಿಗೆ ಇನ್ನೂ 18 ವರ್ಷವಂತೆ

ಇಟಲಿ ದೇಶದ ಮಂತ್ರಿಯಾದ ಮುಸಲೋನಿಯು ತಿಂಗಳಿಗೆ ಪದಿನೆಂಟುನೂರು ರೂಪಾಯಿ ಸಂಬಳವನ್ನು ತೆಗೆಯುವನು ನಮ್ಮ ದೇಶದ ವೈಸರಾಯರ, ಗೌರ್ನರುಗಳು, ಕಲೆಕ್ಟರುಗಳು ಮುತ್ತಾದಿವರುಗಳ ಸಂಬಳಗಳನ್ನು ಹೋಲಿಸಿ ನೋಡಿರಿ?

ಈಗಾಗಲೆ ಅಮೇರಿಕಾದೇಶದವರ ಮನೆಗಳಲ್ಲಿ 10,30,000 ವಿದ್ಯುಚ್ಛಕ್ತಿಯಿಂದ ಬಟ್ಟೆ ಒಗೆಯುವ ಯಂತ್ರಗಳು ಉಪಯೋಗದಲ್ಲಿವೆ

ಮೃತ್ಯುಸರೋವರದ ದಕ್ಷಿಣ ಭಾಗದಲ್ಲಿ ಪ್ಯಾಲಸ್ಟೈನ್ ಎಂಬ ಊರಿನಲ್ಲಿ ಒಂದು ಉಪ್ಪಿನ ಬೆಟ್ಟವು ಇದೆ ಅದು 6 ಮೈಲಿ ಉದ್ದವಾಗಿಯೂ 3 ಮೈಲಿ ಅಗಲವಾಗಿಯೂ 1000 ಅಡಿ ಎತ್ತರವಾಗಿಯೂ ಇದೆ

ತರುಣರ ದಂಡು, ಮೈಸೂರು

ತಾ|| ೨೩—೭—೩೬ನೆಯ ಬುಧ... ಸಾಯಂಕಾಲ ಇಂಟರ್ ಮೀಡಿಯೆಟ್ ಕಾಲೇಜಿನ ಭವನದಲ್ಲಿ ಶ್ರೀಮಾನ್ ಟಿ. ... ನರಸಿಂಹಾಚಾರ್ಯರವರು, ದಂಡಿನ ... ಭಾಷಣವನ್ನು ಮಾಡಿದರು ಶ್ರೀಮಾನ್ ಎಚ್ ಎಸ್ ನಂಜುಂಡಯ್ಯನವ... ಪ್ರಾರ್ಥನೆಯಾದನಂತರ ಅಧ್ಯಕ್ಷರು ... ರ್ಭಿತವಾದ ಮಾತುಗಳಿಂದ, ಸಂಘದ ... ಯಗಳನ್ನೂ ವಿದ್ಯಾರ್ಥಿಗಳು ... ಮಾಡತಕ್ಕ ಕಾರ್ಯವನ್ನೂ ವಿವ... ದರು

ಅಧ್ಯಕ್ಷರ ಭಾಷಣವಾದನಂತರ ಸಂ... ಗೌರವಾಧ್ಯಕ್ಷರಾದ ಶ್ರೀಮಾನ್ ಓ. ... ಶ್ರೀಕಂಠಯ್ಯನವರು, ದಂಡು ಸ್ಥಾ... ವಾದಂದಿನಿಂದ ಅದರ ಚರಿತ್ರೆಯನ್ನು ... ಳಿಯಪಡಿಸಿ, ಅದು ಹಿಂದಿನ ವರ್ಷ... ವೇಗ ಕುಗ್ಗಿಹೋಯಿತೆಂಬುದನ್ನು ... ಸಿ, ದಂಡು ಯಾವ ಉದ್ದೇಶಗಳನ್ನಿಟ್ಟುಕೊಂ... ಡು ಜನ್ಮವೆತ್ತಿತೋ, ಆ ಉದ್ದೇಶಗಳ... ತರುಣರು ಮುಂದೆ ಬಂದು ಕೆಲಸವ... ನರವೇರಿಸಬೇಕೆಂದು ನಂಬರವತ್ತಾದ ... ಪೆಯಲ್ಲಿ ಹೃದಯಂಗಮವಾಗಿ ತಿಳಿ... ಡಿಸಿದರು

ಕೊನೆಯಲ್ಲಿ ಶ್ರೀಮಾನ್ ಎಚ್ ... ರಂಕರನಾರಾಯಣರಾಯರು ದಂಡಿ... ಕ ಸಾಹಿತ್ಯ ಪರಿಷತ್ತಿನವರಿಗೂ ಮ... ವೃದೆಂದೂ, ಕಳೆದ ಕರ್ನಾಟಕ ಸ... ಸಮ್ಮೇಳನಕ್ಕೆ ದಂಡಿನ ಪರವಾ... ಪ್ರತಿನಿಧಿಗಳನ್ನು ಕಳುಹಿಸಲಾಗಿತ್ತೆ... ದನ್ನೂ ವಿಶದಪಡಿಸಿ, ದಂಡು ಮ... ಕೈಕೊಳ್ಳಬೇಕೆಂದಿರುವ ಕಾರ್ಯಕ್ರಮ... ನ್ನು ವ್ಯಕ್ತಮಾಡಿ, ದಂಡಿನ ... ಅಧ್ಯಕ್ಷರಿಗೂ, ಗೌರವಾಧ್ಯಕ್ಷರಿಗೂ ... ನೆಗಳನ್ನು ಅರ್ಪಿಸಿದರು

ದಂಡಿನ ಕಾರ್ಯಕ್ರಮಗಳು ಸುಸೂ... ವಾಗಿ ನೆರವೇರುವಂತೆ 1936 37ನೆ ಸ... ಗೆ ಈ ಕೆಳಗೆ ಕಂಡ ಅಧಿಕಾರಿಗಳನ್ನು ... ನಾಯಿಸಲಾಯಿತು. ಗೌರವಾಧ್ಯಕ್ಷರು ... ಮಾನ್ ಟಿ ಎನ್ ಶ್ರೀಕಂಠಯ್ಯ ಎ ... ಅಧ್ಯಕ್ಷರು ಶ್ರೀಮಾನ್ ? ಎಚ್ ... ಸಿಂಹಾಚಾರ್, ಎಂ ಎ, ಉಪಾಧ್ಯಕ್ಷ... ಶ್ರೀಮಾನ್ ಹೆಚ್ ಅನಂತರಾವ್ ... ಎಸ್ ಸಿ, ರೋಹಿಣಿಯ ಸಂಪಾ... ಶ್ರೀಮಾನ್ ಹೆಚ್ ಎಂ ಶಂಕರನಾ... ಯಣರಾವ್, ಬಿ ಎ (Hons), ... ಕಾರ್ಯದರ್ಶಿಗಳ ಶ್ರೀಮಾನ್ ... ಬ್ಬರಾಯರು, ಗ್ರಂಥ ಪ್ರಕಟನೆಯ ... ಯ ಸದಸ್ಯರು ಶ್ರೀಮಾನ್ ... ಟಿ ಸುಬ್ಬಯ್ಯ ಬಿ ಎ (Hons) ... ಮಾನ್ ಎಸ್ ವಿ ಪರಮೇಶ್ವರಭಟ್ಟ...

ಉಜ್ವಲಕುಮಾರಿ

[ಒಂದು ಸಣ್ಣ ಕಥೆ]

[ಬರೆದವರು :—ಎಸ್. ಶ್ರೀ ಶೈಲಂ, ಮೈಸೂರು.]

೧ ನೇ ಭಾಗ.

ಸೂರ್ಯೋದಯದ ಕಾಲ. ಪ್ರಪಂಚ [illegible] ನಿಶ್ಚಲವಾಗಿದ್ದಿತು. ತಂಗಾಳಿಯು [illegible]ದ್ದಿತು. ಸೂರ್ಯನು, ಉದ[illegible] ಪರ್ವತದ ಹಿಂಭಾಗದಲ್ಲಿ, ಪ್ರಕಾಶಮಾನವಾದ ರತ್ನದೋಪಾದಿಯಲ್ಲಿ ಉಜ್ವಲಿಸುತ್ತಿರಲು, ಭೂಮಾತೆಯು ಜನಸಮೂಹಕ್ಕೆ [illegible]ರ್ವದಿಸಿ, ಸುವರ್ಣ ಗೃಹವನ್ನು ಹೊ[illegible] ಅಂಬರದಲ್ಲಿ ಕೆಂಪೇರಿತು. ಸೂರ್ಯದೇವನು ತನ್ನ ಪ್ರಕಾಶವನ್ನು ತೋರಿಸಲು ಉಪಕ್ರಮಿಸಿದನು. ತಾವರೆಗಳು [illegible]ಯಾದವು. ಮರಗಳೆಲ್ಲವೂ ಕಲ[illegible] ಶಬ್ದಮಾಡಲು ಉಪಕ್ರಮಿಸಿದವು. [illegible]ಗಳು ಸುಗಂಧವನ್ನು ಬೀರುತ್ತಿದ್ದವು.

ಇಂತಹ ಸಮಯದಲ್ಲಿ ಓರ್ವ ರಾಜಕುಮಾರನು ಅರಮನೆಯನ್ನು ಬಿಟ್ಟು, [illegible]ರೂಢನಾಗಿ ಬೇಟೆಯಾಡಲು ಹೊರಟನು. ಮಧ್ಯಾಹ್ನವಾಯಿತು. 12 ಗಂಟೆ ಸಮಯದಲ್ಲಿ ಸೂರ್ಯದೇವನು ತನ್ನ ಪ್ರತಾಪವನ್ನು ತೋರಿಸುತ್ತಿದ್ದನು. ರಾಜಕುಮಾರನ ಮುಖದಲ್ಲಿ, ಮುಂಜಾನೆಯ [illegible]ಜಿನಂತೆ ಬೆವರು ಕಾಣುತ್ತಿತ್ತು. ರಾಜಕುಮಾರನು ಆಯಾಸದಿಂದ, ಒಂದು ಮ[illegible]ದ ನೆರಳಿನಲ್ಲಿ, ನಗುತ್ತಲಿರುವ ಹುಲ್ಲಿನ [illegible] ಮೇಲೆ, ಕುದುರೆಯಿಂದ ಇಳಿದು ಕುಳಿತುಕೊಂಡನು. ಕುದುರೆಯೂ ಸಹಾ ಸಂತೋಷದಿಂದ, ಹುಲ್ಲಿನ ಗರಿಗಳನ್ನು ನೋಡಿ ಅದನ್ನು ಮೇಯಲು ಉಪಕ್ರಮಿಸಿತು. ಕುದುರೆಯು ಸಂತೋಷದಿಂದ ಮೇಯುತ್ತಿರುವುದನ್ನು ನೋಡಿ, ರಾಜಕುಮಾರನು, ತನ್ನ ಜನನಿಯು ಹಸಿವಾದರೆ ತಿನ್ನುವುದಕ್ಕೆ ಕೊಟ್ಟಿದ್ದ ಪ್ರೀತಿಪೂರ್ವಕವಾದ ರೊಟ್ಟಿಗಳನ್ನು, ತನ್ನ [illegible]ವಾದ ಚೀಲದಿಂದ ಹೊರಕ್ಕೆ ತೆಗೆದನು.

[illegible]ವನ್ನು ಬಿಚ್ಚಿ ನೋಡಿದಲ್ಲಿ ಮೊದಲ [illegible] ರೊಟ್ಟಿಯಲ್ಲಿ ಒಂದು ಇರುವೆ ಇದ್ದಿತು [illegible]ದನೆ ರೊಟ್ಟಿಯಲ್ಲಿ ಎರಡು ಇರುವೆಗಳಿ[illegible] ಮೂರನೆಯದರಲ್ಲಿ ಮೂರು; ಈ [illegible] ಪ್ರತಿಯೊಂದು ರೊಟ್ಟಿಯಲ್ಲಿಯೂ [illegible]ವನ್ನಂತಲೂ ಒಂದು ಹೆಚ್ಚಾಗಿದ್ದಿತು [illegible] ನೆಯ ರೊಟ್ಟಿಯಲ್ಲಿ 6 ಇರುವೆ[illegible] ಮತ್ತು ಇರುವೆಗಳ ರಾಜನೂ ಇದ್ದ[illegible] ಇದನ್ನು ನೋಡಿ ರಾಜಕುಮಾರನು [illegible]ಶ್ಚರ್ಯಗೊಂಡನು. ಕೊನೆಯಲ್ಲಿ ರಾಜ[illegible]ಮಾರನು "ಇದು ನಿಮಗೆ ಸೇರಿದ್ದು, [illegible]ವನ್ನು ನೀವು ತಿನ್ನಬಹುದು" ಎಂದು [illegible] ನಿದ್ರೆಮಾಡಲು ಉಪಕ್ರಮಿಸಿದನು.

[illegible]ವನ ಕನಸಿನಲ್ಲಿ ಇರುವೆಗಳ ರಾಜನು, [illegible]ಜಕುಮಾರನ ಹತ್ತಿರ ಬಂದು "ನಾವು ರೊಟ್ಟಿಗಳನ್ನು ತಿಂದೆವು ಮತ್ತು ನಿನಗೆ ನಮ್ಮ ವಂದನೆಗಳನ್ನು ಅರ್ಪಿಸುವೆವು. ನಮ್ಮಿಂದ ನಿನಗೆ ಏನಾದರೂ ಸಹಾಯವಾಗಬೇಕೆ?" ಎಂದು ಕೇಳಿತು. ನಿದ್ರೆಯಲ್ಲಿ ರಾಜನು "ನನ್ನಲ್ಲಿ ಬೇಕಾದಷ್ಟು ಐಶ್ವರ್ಯವಿದೆ; ಬೇಕಾದಷ್ಟು ಒಡವೆಗಳಿವೆ ಮತ್ತು ಬೇಕಾದಷ್ಟು ಜನ ಸೇವಕರೂ ಕೂಡಾ ಇದ್ದಾರೆ. ಆದ್ದರಿಂದ ನನಗೆ ಏನೂ ಬೇಡ" ಎಂದು ಹೇಳಿದನು. ಅದಕ್ಕೆ ಇರುವೆಯ ರಾಜನು, "ಕುಸುಮಮಾಲಿನಿ" ಎಂಬ ರಾಜಕುಮಾರಿಯನ್ನು ನೋಡು: ಅವಳು ಸೂರ್ಯನಷ್ಟು ಕಳೆ ಪೂರ್ಣಳಾಗಿದ್ದಾಳೆ; ಅವಳನ್ನು ನೀನು ಮದುವೆಯಾಗಬೇಕು, ಎಂದು ಹೇಳಿ ಹೊರಟು ಹೋಯಿತು. ರಾಜಕುಮಾರನು ನಿದ್ರೆಯಿಂದ ಎದ್ದಮೇಲೆ ಕನಸೆಲ್ಲವನ್ನೂ ಜ್ಞಾಪಿಸಿಕೊಂಡು, ಸುತ್ತಲೂ ನೋಡಿದನು. ಆವನು, ಒಂದು ಇರುವೆಯನ್ನೂ ಕಾಣಲಿಲ್ಲ. ಇರುವೆಗಳ ರಾಜನೂ ಇರಲಿಲ್ಲ. ಆಮೇಲೆ ರಾಜಕುಮಾರನು ತನಗಾದ ಕನಸನ್ನು ಪರೀಕ್ಷಿಸಬೇಕೆಂದು ಕುದುರೆಯ ಮೇಲೆ ಕುಳಿತು ಜೋರಾಗಿ ಓಡಿಸುತ್ತಾ ಹೊರಟನು. ಸೂರ್ಯಾಸ್ತವಾಗಲು ಪ್ರಾರಂಭಿಸಿತು. ಕಡೆಗೆ ರಾಜಪುತ್ರನು ಒಂದು ಕೊಳದ ಬಳಿಗೆ ಬಂದನು.

ಆ ಸ್ಥಳದಲ್ಲಿ ಒಂದು ಗಂಡು ಹುಲಿಯು ಘರ್ಜಿಸುತ್ತಿದ್ದಿತು. ಇದನ್ನು ರಾಜಕುಮಾರನು ನೋಡಿ "ನಿನಗೆ ಏನಾಗಿದೆ ಹೇಳು" ಎಂದು ಹುಲಿಯನ್ನು ಕೇಳಿದನು. ಅದಕ್ಕೆ ಹುಲಿಯು 'ನನ್ನ ಕಾಲಿಗೆ ಮುಳ್ಳು ಚುಚ್ಚಿದೆ' ಎಂದು ಹೇಳಿತು. ಇದನ್ನು ಕೇಳಿದ ತಕ್ಷಣವೇ ರಾಜನು ಕುದುರೆಯಿಂದ ಕೆಳಕ್ಕೆ ಇಳಿದು ಆ ಹುಲಿಯ ಹತ್ತಿರಕ್ಕೆ ಬಂದನು. ರಾಜಕುಮಾರನು ತನ್ನ ಕೈಯಿಂದ ಆ ಮುಳ್ಳನ್ನು ಹೊರಕ್ಕೆ ತೆಗೆದು, ಆ ಗಾಯಕ್ಕೆ ಔಷಧಿಯನ್ನು ಹಾಕಿ, ತನ್ನ ರುಮಾಲನ್ನು ಹರಿದು, ಆ ಬಟ್ಟೆಯನ್ನು ಅದರ ಕಾಲಿಗೆ ಸುತ್ತಿದನು. ಆಮೇಲೆ ಅವನು ಕುದುರೆಯ ಹತ್ತಿರಕ್ಕೆ ಬಂದು ಅದನ್ನು ಹತ್ತುವಹೊತ್ತಿಗೆ ಸರಿಯಾಗಿ ಇದ್ದಕ್ಕಿದ್ದಹಾಗೆ (ಮಾವು ಉರುಳಿದ ಶಬ್ದವಾಯಿತು) ಭೂಕಂಪವೇ [illegible]ಗಿಹೋಗುವುದೋ ಎನ್ನುವಹಾಗೆ ಒಂದು ಹೆಣ್ಣು ಹುಲಿಯು ವಾಯುವೇಗದಲ್ಲಿ ಓಡಿಬಂದು ಓಹೋ! ಅಬಬಾ! ಸಿಕ್ಕಿತು, ಇಲ್ಲೊಂದು ನರಪಿಶಾಚಿ ಇದೆ; ಇದನ್ನು ಛಿದ್ರ ಛಿದ್ರವಾಗಿ ಕತ್ತರಿಸಿ ಇದರ ರಕ್ತವನ್ನು ಹೀರುವದಿಲ್ಲವೋ? ಎಂದು ತನ್ನ ಗಂಡನಾದ ಆ ಗಂಡುಹುಲಿಗೆ, ಹೇಳಿತು. ಇಲ್ಲ; ನಾನು ಇವನನ್ನು ತಿನ್ನುವುದಿಲ್ಲ; ಇವನು ನನ್ನ ಕಾಲಲ್ಲಿದ್ದ ಮುಳ್ಳನ್ನು ತೆಗೆದು ನೋವನ್ನು ಹೋಗಲಾಡಿಸಿದ್ದಾನೆ. ಆದ್ದರಿಂದ ಇವನಿಗೆ ನನ್ನ ಪ್ರೀತಿಪೂರ್ವಕವಾದ ವಂದನೆಯನ್ನು ಅರ್ಪಿಸುವೆನು. ಅವನು ನಮ್ಮಿಂದ ಸಹಾಯವನ್ನು ಕೇಳಿದರೆ ಸಹಾಯವನ್ನು ಮಾಡುವೆನು ಎಂದು ಹೇಳಿತು.

ರಾತ್ರಿಗೆ ತಿನ್ನುವುದಕ್ಕೆ ಆಹಾರವಿಲ್ಲದ[illegible]ದರಿಂದ "ಇವನನ್ನು ತಿಂದುಬಿಡುವುದೇ ಮೇಲು" ಎಂದು ಗೊಣಗಿತು.

ಇಲ್ಲ! ಎಂದು ಒಂದುಸಾರಿ ಘರ್ಜಿಸಿ, ಆ ಹೆಣ್ಣು ಹುಲಿಗೆ ತನ್ನ ಕಾಲಿನಿಂದ ಒಂದುಸಾರಿ ಒದೆಯಿತು. ಹೆಣ್ಣುಹುಲಿಯು ಹೆದರಿ, ಓಡಿಹೋಗಿ ತನ್ನ ಪೊದರಿನಲ್ಲಿ ಅವಿತುಕೊಂಡಿತು. ರಾಜಕುಮಾರನು ಹೋಗುವವರಿಗೂ ಅದು ಬರಲೇ ಇಲ್ಲ.

ಆಮೇಲೆ ಆ ಗಂಡುಹುಲಿಯು, **ಕುಸುಮಮಾಲಿನಿ** ಗೆ ಜನಗಳೆಲ್ಲರೂ ಸೇರಿ ಇಟ್ಟಿರುವ **'ಉಜ್ವಲ ಕುಮಾರಿ'** ಎಂಬ ಹೆಸರನ್ನು ಹೇಳಿತು, ಮತ್ತು ಅಲ್ಲಿಗೆ ಹೋಗಲು ಹತ್ತಿರದ ದಾರಿಯನ್ನು ಹೇಳತೊಡಗಿತು 7 ಕಾಡುಗಳು ಮತ್ತು ಮೂರು ಪರ್ವತಗಳನ್ನು ದಾಟಿ ಹೋದರೆ ರಾಜಕುಮಾರಿಯ ಪಟ್ಟಣವು ಸಿಕ್ಕುವುದು ಆ[illegible]ದರ ಇದರ ಮುಂದಿರುವ [illegible]ನಲ್ಲಿ ಒಬ್ಬ ಫಕೀರನು ವಾಸಿಸುತ್ತಿದ್ದಾನೆ. ಅವನ ಹತ್ತಿರ ಒಂದು ಮಂತ್ರದ ಮಂಚ, ಮಂತ್ರದ ಚೀಲ ಮತ್ತು ಮಂತ್ರದ ಕಲ್ಲಿನ ಲೋಟವೂ ಇರುವುವು ಆ ಮಂಚವು ಎಲ್ಲಿಗೆ ಬೇಕಾದರೂ ಕರೆದುಕೊಂಡು ಹೋಗುವುದು ಆ ಚೀಲವು ಏನು ಕೇಳಿದರೂ ಕೊಡುವುದು. ಆ ಲೋಟವು ನೀರನ್ನು ಬೇಕಾದಷ್ಟು ಕೊಡುವುದು. [illegible] ಪದಾರ್ಥಗಳನ್ನು ತೆಗೆದು ಕೊಂಡರೆ ಸುಲಭವಾಗಿ ಆ ರಾಜಪುತ್ರಿಯ ದೇಶವನ್ನು ಸೇರಬಹುದು, ಎಂದು ಹೇಳಿತು.

ಇದನ್ನು ಕೇಳಿ ರಾಜಪುತ್ರನು, "ತನ್ನ ಕುದುರೆಯನ್ನು ಅವನಿಗೆ ಕೊಟ್ಟು ಆ ಸಾಮಾನುಗಳನ್ನು ಸಾಲವಾಗಿ ತೆಗೆದುಕೊಳ್ಳುವೆನೆಂದು" ಹೇಳಿ, ಅಶ್ವಾರೂಢನಾಗಿ ಸಂತೋಷದಿಂದ ಹೊರಟನು.

[ಇದೇ ಕಥೆಯ ೨ ನೇ ಭಾಗವು ಮುಂದುವರಿಯುವುದು.]

ತಿರೆಯ ತಿಳುವು.

ಲೇಖಕರು —ಎಂ. ವಿ. ನಾರಾಯಣ ಮೂರ್ತಿ, ಮೈಸೂರು.

(ಮುಂದುವರಿದುದು)

ನಕ್ಷತ್ರದ ಜನನ.

ನಮ್ಮ ವಿಶ್ವದ ಅಂತರಿಕ್ಷದಲ್ಲಿ ಅನೇಕ ವಾಯುಮೋಡ (Gaseous Clouds) ಗಳು ತಿರುಗಾಡುತ್ತಿವೆ. ಈ ವಾಯುಮೋಡಗಳನ್ನು 'ನೆಬುಲೆ' ಗಳೆಂದು ಕರೆಯುತ್ತಾರೆ ನೆಬುಲೆಗಳಿಗೆ ಆಕಾರವು ಯಾವುದೂ ಇಲ್ಲ. ನಕ್ಷತ್ರಗಳೆಲ್ಲವೂ ಈ ನೆಬುಲೆಗಳಿಂದಲೇ ಉತ್ಪತ್ತಿಯಾಗುತ್ತವೆ ಜ್ಯೋತಿಶ್ಶಾಸ್ತ್ರಜ್ಞರು ಈ ನೆಬುಲೆಗಳೆಲ್ಲವೂ ಒಂದು ಅಂತರ್ಬೀಜ (Neucleus) ದ ಸುತ್ತಲೂ ತಿರುಗುತ್ತಿವೆಯೆಂದು ಸಿದ್ಧಾಂತ ಮಾಡಿದ್ದಾರೆ. ನೆಬುಲೆಗಳು ಪರಸ್ಪರ ಸೆಳೆತದಿಂದೊಡಗೂಡಿ ಸುತ್ತುವಾಗ ವಾಯುವು ಕೆಲವುಕಡೆ ಒಟ್ಟುಗೂಡಿ ಗಟ್ಟಿಯಾಗುತ್ತದೆ. ಆಗ, ವಸ್ತು ಸಂಕುಚಿತವಾಗಿ ದಾಹವು ಉತ್ಪತ್ತಿಯಾಗುತ್ತದೆ

ಹೀಗೆ ಗಟ್ಟಿಯಾಗಿ, ಗುಂಡಾಗಿ, ಉರಿಯುವ ಪದಾರ್ಥಗಳಾಗಿ ತಾರೆಗಳು ಪ್ರಕಾಶಿಸುತ್ತವೆ ಸೂರ್ಯನೂ ಈ ತೆರನ ಒಂದು ನಕ್ಷತ್ರ. ಅದೂ ಕೂಡ ಒಂದು ವಾಯುಮೋಡ ಅಥವಾ ನೆಬುಲೆಯಿಂದಲೇ ಉದ್ಭವಿಸಿರಬೇಕು.

ನಕ್ಷತ್ರಗಳ ಮರಣ.

ಹೀಗೆ ಜನಿಸಿದ ನಕ್ಷತ್ರಗಳಿಗೆ ಮರಣವೂ ಉಂಟೆಂದು ಶಾಸ್ತ್ರಜ್ಞರು ಕಂಡು ಹಿಡಿದಿದ್ದಾರೆ.

ಎರಡು ನಕ್ಷತ್ರಗಳು ಸಮೀಪಿಸಿದರೆ ಅವು ಹತ್ತಿರಕ್ಕೆ ಸೆಳೆಯಲ್ಪಟ್ಟು ಆಗಿನ ದಾಹದಿಂದ ಕರಗಿ ಪುನಃ ವಾಯು ಮೋಡವಾಗುತ್ತವೆ. ಅವು ತಾವೇ ತಿರುಗುತ್ತ ಕಾಲಕ್ರಮದಲ್ಲಿ ಮತ್ತೆ ಒಂದೊಂದು ನಕ್ಷತ್ರಗಳಾಗುತ್ತವೆ. ಹೀಗೆಯೇ ಒಂದು ಶತಮಾನದಲ್ಲಿ ಸಾವಿರಾರು ನಕ್ಷತ್ರಗಳು ಹುಟ್ಟಿ ಸಾಯುತ್ತವೆ ಸೂರ್ಯನೇ ನಮಗೆ ಎಲ್ಲಾ ನಕ್ಷತ್ರಗಳಿಗಿಂತ ದೊಡ್ಡದಾಗಿ ಕಾಣಿಸುವುದಾದರೂ ಇತರ ನಕ್ಷತ್ರಗಳೆಲ್ಲವೂ ಸೂರ್ಯನಿಗಿಂತ ಆಕಾರದಲ್ಲಿ ಹೆಚ್ಚಿನವು. ಅವುಗಳಲ್ಲನೇಕ ಸೂರ್ಯರೆಂದೂ ಕರೆಯಬಹುದು. ಭೂಮಿ ಮತ್ತು ಇತರ ಗ್ರಹಗಳನ್ನು ಬಿಟ್ಟು, ನಕ್ಷತ್ರಗಳೆಲ್ಲವೂ ಸ್ವಂತವಾಗಿ ಪ್ರಕಾಶಿಸುತ್ತವೆ

ವಿವಿಧ ಬಣ್ಣದ ಸೂರ್ಯರು.

ಹೊಸ ನಕ್ಷತ್ರ ಅಥವಾ ಸೂರ್ಯರುಗಳು ಕೆಂಪು ಬಣ್ಣದಿಂದ ಕೂಡಿರುತ್ತವೆ, ಬಹಳ ಶಾಖವನ್ನೂ ಹೊಂದಿರುತ್ತವೆ. ಆದುದರಿಂದ ಅವು ಸಾವಿರಾರು ವರ್ಷ ಬೆಳಗುತ್ತವೆ. ಉರಿದ ಹಾಗೆಲ್ಲಾ, ಅವು ಸಣ್ಣದಾಗಿ, ಗಟ್ಟಿಯಾಗಿ, ಸಂಕುಚಿತವಾಗಿ, ಪರಿಣಮಿಸುತ್ತವೆ. ಸಣ್ಣದಾಗುತ್ತ ಬರುತ್ತವೆ. ಸಣ್ಣದಾಗುತ್ತ ಅದರ ಶಾಖವು ಮತ್ತಷ್ಟು ಹೆಚ್ಚಾಗುತ್ತದೆ. ಆದರಿಂದ ಬಣ್ಣವು ಕೆತ್ತಳೆಯಾಗುತ್ತದೆ. ಹೀಗೆಯೇ ಬಣ್ಣ ವ್ಯತ್ಯಾಸವಾಗಿ ಕೊನೆಗೆ ಕೆಂಪಾಗಿ ಒಂದು ಸತ್ತ ನಕ್ಷತ್ರವಾಗುತ್ತದೆ.

ಹೀಗೆಯೇ ಈ ವಿಶ್ವದಲ್ಲಿ ಅನೇಕ ವಿಧದ ಸೂರ್ಯರುಗಳು ಇದ್ದಾರೆ.

ಬ್ರಿಟಿಷರ ಖಂಡನೆ.

ಸಂಯುಕ್ತ ಪ್ರಾಂತಗಳ ಪ್ಯಾಲಿಸ್ಟೀನ್ ಸಮ್ಮೇಳನವು ಅಲಹಾಬಾದಿನಲ್ಲಿ ನಡೆಯಿತು ಮೌಲಾನಾ [illegible] ಮೌಲಾನ ಷೌಕತ್ ಅಲಿಯವರೇ ಮುಂತಾದವರು ಸೇರಿ ಕೆಳಗೆ ಕಂಡ ಠರಾವುಗಳನ್ನು ಗೊತ್ತುಮಾಡಿದರು.

೧ ಬ್ರಿಟಿಷರ ತಯಾರಿಕೆಯ ಸಾಮಾನುಗಳನ್ನೆಲ್ಲಾ ಬಹಿಷ್ಕರಿಸುವುದು. ೨. ಕಿಂಗ್ ಎಡ್ವರ್ಡರ ದರ್ಬಾರಿನಲ್ಲಿ ಮುಸಲ್ಮಾನರು ಭಾಗವಹಿಸಕೂಡದು. ೩. ಚಕ್ರಾಧಿಪತ್ಯದ ಯುದ್ಧಗಳಲ್ಲಿ ಮುಸ್ಲಿಮರು ಯಾವ ತರಹದಲ್ಲಿಯೂ ಸಹಾಯ ಮಾಡಕೂಡದು.

ವಾರ್ತಾವಾಹಿನಿ.

(ಅನಾಮಧೇಯನಿಂದ)

ತರಾತುರಿ ವ್ಯಾಪಾರ

ತರಾತುರಿ ವ್ಯಾಪಾರ—ಎಂದರೆ ನಮ್ಮ ಮಾದರಿ ಪೌರಸಭೆಗೇ ಹೇಳಬೇಕು 1936ನೇ ಸಾಲಿನಲ್ಲಿ ಜೂನ್ ಕಳೆದು ಜುಲೈ ತಿಂಗಳು ಕಳೆಯುಹೋಗುವ ಕಾಲ ಬಂತು. ವಾಮಾಮೂಲಿನಂತೆ ಎಲ್ಲ ವಾಹನಗಳಿಗೂ ಬಿಲ್ಲೆಯಲಂಕಾರವಾಗಬೇಕು ಈಗ ಸಾಮಾನ್ಯವಾಗಿ ವೆಹತರ್ಕ ಮುಷ್ಟದ್ದಿಗಳು ಪಸನಾಲಾತಿಗಾಗಿ ಆಲಿಸು ಆ ಬಿಡು ಕತ್ತಿಕಾಯಾಗಿ ಇರಸಾಲ್ ಇಲ್ಲವೆಂಬ ಕಾರಣದಿಂದ ರೂಪಾಯಿಗಟ್ಲೆ ಜುಲ್ಮಾನೆ ತೆತ್ತು ಹೊಟ್ಟೆಗೆ ಒದ್ದೆಬಟ್ಟೆ ಹಾಕ್ಕೊಂಡು ಹೋಗಲಾ ಇಷ್ಟೋದು ಮಾಮೂಲ್ ಇದ್ದೇ ಇದೆ ಈ ಬ್ಯಾಡ್ಜುಗಳ ವಿಷಯ ಒಸರು ತಾವಾಗಿ ಬಿಲ್ಲೆ ಮಡ್ಡು ತಗೊಳ್ಳೋಣ ಅಂತ ಹೋದಾಗ ಆರು ತಿಂಗಳಿಗೆ ಹಾಕೋಲ್ಲಾ ಒಟ್ಟಿಗ ವರ್ಷದ್ದುಡ್ಡೇ ಕೊಡಿ ಅಂತ ಜನರನ್ನು ಮೂಡಿ ಕಳುಹಿಸುತ್ತಿದ್ದರು ಈಗ 6–7 ದಿನದಿಂದ ಈಚೆಗೆ ಅವರು ಕಾನೂನುಕಡೆಗೆ ನೋಡಿದರೂ ಅಂತ ಕಾಣುತ್ತೆ ಈಗ ಅರ್ಧ ವರ್ಷಕ್ಕೇನೇ ಬಿಲ್ಲೆ ಕೊಡುತ್ತಿದ್ದಾರೆ ಆದರಲ್ಲಿ ಮುಖನೋಡಿ ಮಣೆ ಹಾಕುತ್ತಿದ್ದಾರೆ ಇದಕ್ಕೆ ಆಫೀಸ್ ಕಾಲ ಬೆಳಗ್ಗೆ 8–11 ಮಧ್ಯಾಹ್ನ 2ರಿಂದ 5 ಎಂದು ಬೋರ್ಡ್ ಹಾಕಿದೆತ್ತೆ. ಐದು ಗಂಟೆಯಾದನಂತರ ಐದು ನಿಮಿಷವಾಗಿ ಹೋದರೂ ಟೈಂ ಆಗಿಹೋಯಿತು ಎಂದು ಕಳುಹಿಸಿಬಿಡುತ್ತಾರೆ ಬೆಳಗ್ಗೆ ಹೊತ್ತು ಎಂಟಕ್ಕೆ ಸರಿಯಾಗಿ ಹೋದರೆ ಅಲ್ಲಿ ಯಾರೂ ಇರುವುದೇ ಇಲ್ಲ ಜವಾನರು ಬರುವುದೇ ಎಂಟೂವರೆ ಒಂಭತ್ತು. ಹೇಗೋ ಎಂದರಟ್ಟೆ ಗುಮಾಸ್ತರು ಒಬ್ಬರು ಬಂದಿದ್ದರೂ ಸಹ ಅವರು ಇನ್ಸ್‌ಪೆಕ್ಟರ್ ಬರಲಿ ಎಂದು ಜನರನ್ನು ಕೂರಿಸಿಬಿಡುವರು 9–9½ ಗಂಟೆ ಯಾದರೂ ಇನ್ಸ್‌ಪೆಕ್ಟರ್ ಬರುವಂತಿಲ್ಲ ಅವರಿಗೆ ಇತರ ಕೆಲಸಗಳು ಇವೆ ಎಂಬ ನೆಪವಿರಬಹುದು ಹಾಗಿದ್ದಲ್ಲಿ ಬೋರ್ಡು ಏತಕ್ಕಾಗಿ ಹಾಕಸಬೇಕು? ಮಾತೆತ್ತಿದರೆ ಅವರೇನು ಕರಾಚೂರಾ ರಂಜರಾಜ ಒಡೆಯರ್ ವಂಶೀಕರು ಎಂದು ಹೇಳುತ್ತಿದ್ದರು ಈಗ ಅದು ನಮ್ಮ ಮಾದರೀ ಪೌರಸಭೆಯ ಟ್ರ್ಯಾಫಿಕ್ ಇನ್ಸ್‌ಪೆಕ್ಟರ್ ಇನ್ಸ್‌ಪೆಕ್ಟರ್‌ರವರ ಆಫೀಸಿನಲ್ಲಿ ನೋಡಬಹುದು

ಇನ್ನೂ ಎಷ್ಟು ಅಪಘಾತಗಳಾಗಬೇಕು?

ಚಾಮರಾಜಪೇಟೆಯಲ್ಲಿ, ಮುನಿಸಿಪಲ್ ಬಾಲಬೋಧಿನಿ ಸ್ಕೂಲಿರುವ ಸ್ಥಳದಲ್ಲಿ ಒಬ್ಬ ಪೋಲೀಸಿನವನೂ ಜೌಕದಲ್ಲಿರುವುದೇ ಇಲ್ಲ ಕೇವಲ ಸ್ಕೂಲ ಮಕ್ಕಳುಗಳು ಓಡಾಡುವ ಜಾಗ ಮೇಲಿಂದ ಗಾಡಿಗಳು ಮೋಟಾರುಗಳು ಬರುವ ಇಳಿಜಾರು ಜಾಗ ಹಿಂದೆ ಇದೇ ರಸ್ತೆಯಲ್ಲಿಯೇ ಒಬ್ಬ ಅಧಿಕಾರಿಗಳ ಮೋಟಾರಿಗೆ ಒಂದು ಹುಡುಗನು ಆಹುತಿಯಾದನು ನಾವೆನಾರೂಢರಿಗೆ ತಮ್ಮ ಸ್ಪೀಡ್, ತಮ್ಮ ಡ್ರೈವಿಂಗ್ ಕೈಚಳಕ ತೋರತಕ್ಕ ಮೆರವಾಟವಲ್ಲಿ ರಸ್ತೆಯಲ್ಲಿ 9 ಘಂಟೆಗೆ ಬಿಡತಕ್ಕ ಆಟದ ಹೊತ್ತಿನಲ್ಲೋ, ಸ್ಕೂಲ್ ಬಿಟ್ಟ ಮೇಲೋ, ಜೋಬಿನಲ್ಲಿನ ತಿಂಡಿಯನ್ನು ಕುರುಕುತ್ತಾ ಎಲ್ಲೋ ನೋಡುತ್ತಾ ರಸ್ತೆಯಲ್ಲಿ ಓಡಾಡುವ ಹಸುಮಕ್ಕಳ ಪ್ರಾಣದ ಮೇಲೆ ನಿಗಾವಾದರೂ ಇರುತ್ತದೆಯೋ? ಇಲ್ಲ ಅಲ್ಲಿ ಸ್ಕೂಲು ತಪ್ಪಿಸಬೇಕು ಇಲ್ಲ ದಿವ್ಯರ ಸರಿಯಾದ ಪೋಲೀಸ್ ಬಸ್ತುವಾರಿ ಇರಬೇಕು ಹಿಂದಿನ ಘಟನೆಯಾದಾಗಿನಿಂದ ಈಚೆಗೆ ಎಷ್ಟೊಂದು ಬರವರೂ ಅವೆಲ್ಲಾ ಅರಣ್ಯರೋದನವಾಯಿತು ಈಗ ಲಾದರೂ ಪ್ರಭುತ್ವಕ್ಕೆ ಎಚ್ಚರವಾಗುವುದೋ ಅಥವಾ ಹಿಂದಿನಂತೆ ಅಪಘಾತಗಳು ಪ್ರಾಪ್ತವಾಗಿಯೇ ಎಚ್ಚರಗೊಳಿಸಬೇಕೋ ನೋಡಬೇಕು

ಮಂತ್ರಕ್ಕಿಂತ ಉಗುಳು ಹೆಚ್ಚು

ಮುನಿಸಿಪಾಲಿಟಿಯವರು ನಾಕಷ್ಟು (ಪಬ್ಲಿಕ್ ಯೂರಿನಲ್ಸ್) ಸಾರ್ವಜನಿಕ ಮೂತ್ರವಿಸರ್ಜನಾ ಸ್ಥಳಗಳನ್ನು ಕಲ್ಪಿಸಿರುವುದಿಲ್ಲವೆಂಬುದು ನಿರ್ವಿವಾದವ ಸಂಗತಿ ತಾನೆ? ನಮ್ಮ ಟ್ರ್ಯಾನ್ಸ್‌ಫರ್ ಬಜಾರ್ ಅಂಗಡಿಗಳ ಮುಂದೆ ರಸ್ತೆ ಮಗ್ಗುಲಲ್ಲಿ ಕಟಕಟಿ ಹಾಗವಯಲ್ಲಾ, ಆ ಗೋಡೆ ಕೆಳಗಡೆ ಉದ್ದಕ್ಕೂ ಜನಗಳು ಮೂತ್ರವಿಸರ್ಜನಾಗಿ ಕೂರುತ್ತಿರುವುದು ಬಹಳ ಕಾಲದಿಂದಲೂ ಅನುಸರಿಸಿ ಬರುತ್ತಿದೆಯಷ್ಟೆ? ವಿಚಾರಮಾಡಿದರೆ ಇದು ಕೇವಲ ಅಸಹ್ಯವಾದದ್ದೇ ಸರಿ ಈ ಪದ್ಧತಿಯನ್ನು ತಪ್ಪಿಸಲು ಕೇಂದ್ರಪ್ರದೇಶದಲ್ಲಿ ಒಂದು ಮೂತ್ರವಿಸರ್ಜನೆಯ ಜಾಗವನ್ನು ಕಟ್ಟಿಸಿ ಅನಂತರ ಒಂದು ಕಾನೂನು ವಿಧಾಯಕ ಮಾಡುವುದು ಸಾಧುವಾದುದು ಅದೇನೂ ಇಲ್ಲದೇ ಇಲ್ಲ ಕೆಲದಿನಗಳ ಹಿಂದೆ ಯಾವುದೋ ಒಂದು ಮಗುವು ಅಕಸ್ಮಾತ್ ದೇಹಬಾಧೆಯನ್ನು ತೀರಿಸಿಕೊಂಡ ಕಾರಣಕ್ಕೆ ಆ ಮಗುವಿನ ತಾತನಿಗ ಜುಲ್ಮಾನೆಯಾಯಿತಂತ ಇದೂ ಅಲ್ಲದೆ ಈಗಾಗಲೇ ಮೂತ್ರವಿಸರ್ಜನೆ ಮಾಡಿದ ತಪ್ಪಿತಕ್ಕಾಗಿ ಕೆಲವರಿಗೆ ಜುಲ್ಮಾನೆಗಳು ಬಿದ್ದವು

ಒಳದೇಶದ ವರ್ತಮಾನ.

ವ್ಯವಸಾಯಾಭಿವೃದ್ಧಿ

ಮೈಸೂರು ವ್ಯವಸಾಯ ಇಲಾಖೆಯ ಮೈಕಾಲಾಜಿಸ್ಟರಾದ ಮ॥ ಎಂ ಜೆ ನರಸಿಂಹಯ್ಯಂಗಾರ್ಯರನ್ನು ವ್ಯವಸಾಯಕ್ಕೆ ಸಂಬಂಧಪಟ್ಟ ಶೋಧನೆಗಳನ್ನು ನಡೆಸಿ ಹೆಚ್ಚಿನ ಸಂಶ್ರಮ ಪಡೆಯಲು ಸುಮಾರು 1 ವರ್ಷ ಕಾಲ ಯೂರೋಪಿಗೆ ಸರ್ಕಾರದವರು ಡೆಪ್ಯುಟೇಷನ್ ಮೇಲೆ ಕಳುಹಿಸಿರುವರು. ಇದಕ್ಕೆ 10,000 ರೂ ಮಂಜೂರಾಗಿದೆ ಇವರು ಜರ್ಮನಿ, ರಷ್ಯ, ಇಂಗ್ಲೆಂಡ್ ಮುಂತಾದ ಕಡೆ ಕೆಲಸಮಾಡಿ ಬರುವರು

ಸಂಗೀತ ಕಾಲೇಜು

ಬೆಂಗಳೂರು ಬಸವನಗುಡಿಯಲ್ಲಿ ಹೈಕೋರ್ಟಿನ ನ್ಯಾಯಾಧೀಶರಾದ ಎ ಎಸ್ ಆರ್ ಚಾರಿಯವರು ಸಂಗೀತ ಕಾಲೇಜಿನ ಪ್ರಾರಂಭೋತ್ಸವವನ್ನು ನೆರವೇರಿಸಿದರು ಇಂತಹ ಕಾಲೇಜನ್ನು ಏರ್ಪಾಡುಮಾಡಲು ಮ॥ ಗಳಾದ ಎ ಎಸ್ ರಾಜಕುಮಾರ್ ಮತ್ತು ವಿ ಶ್ರೀನಿವಾಸರಾವ್ ರವರೇ ಕಾರಣರು ಕಾಲೇಜಿಗೆ ಶ್ರೀ॥ ಎ ಎಸ್ ರಾಜಕುಮಾರರವರನ್ನು ಗೌರವ ಕಾರ್ಯದರ್ಶಿಗಳಾಗಿ ಚುನಾಯಿಸಲ್ಪಟ್ಟರು ಅನೇಕ ಸಂಗೀತ ವಿದ್ವಾಂಸರುಗಳು ಮತ್ತು ಕಾಲೇಜಿನ ವಿದ್ಯಾರ್ಥಿಗಳು ತಮ್ಮ ಕಲೆಗಳಿಂದ ಸಭಿಕರನ್ನು ಆನಂದಗೊಳಿಸಿದರು

ಉಪನ್ಯಾಸ.

ಮೈಸೂರು ವಿಶ್ವವಿದ್ಯಾನಿಲಯದವರು ಪ್ರತಿವರ್ಷವೂ ನಡೆಸುವ ಅಪ್ಪೂರಾವ್ ನಾಮಾಂಕಿತ ಉಪನ್ಯಾಸವು ಈ ಸಾರಿ ಮದ್ರಾಸಿನ ಮ॥ ಎ ರಾಮದಾಸ್ ಪಂತಲುರವರಿಂದ ಸಹಕಾರ ಎಂಬ ವಿಷಯದ ಮೇಲೆ ಇಂಗ್ಲೀಷಿನಲ್ಲಿ ಆಗಸ್ಟ್ 1ನೇ ತಾರೀಖಿನ ದಿನ ಮಹಾರಾಜಾ ಕಾಲೇಜಿನಲ್ಲಿ ನಡೆಯುವುದು

ಸರ್ಕಾರಿ ಡೈರೆಕ್ಟರ

ಆಗಸ್ಟ್ ಒಂದರಿಂದ ಡೈರೆಕ್ಟರ್ ಆಫ್ ಇಂಡಸ್ಟ್ರೀಸ್‌ರವರು ಶ್ರೀ ಕೃಷ್ಣರಾಜೇಂದ್ರ ಮಿಲ್ಲಿನ ಬೋರ್ಡಿನಿಂದ ಬೇರೆಯಾಗುವುದರಿಂದ ಅವರ ಸ್ಥಾನಕ್ಕೆ ಶ್ರೀ॥ ಎ ವಿ ರಾಮನಾಥರವರನ್ನು ಸರ್ಕಾರಿ ಡೈರೆಕ್ಟರೊಬ್ಬರಾಗಿ ನೇಮಕಮಾಡಿದೆ



ಶ್ಯಾನುಭೋಗರ ದಸ್ತಗಿರಿ.

ಕಂದಾಯದ ಹಣದ ದುರುಪಯೋಗ

ಬೆಂಗಳೂರು ಬಸವನಗುಡಿಯಲ್ಲಿ ವಾಸಿಸುತ್ತಿರುವ ಶ್ಯಾನುಭೋಗ ಶ್ರೀ॥ ಕೃಷ್ಣರಾವ್ ವೆಂಕಟದಾಸ್ ಎಂಬುವರನ್ನು ಕಳೆದ ಬುಧವಾರ ಪೋಲೀಸಿನವರು ದಸ್ತಗಿರಿ ಮಾಡಿರುತ್ತಾರೆ ಕೃಷ್ಣರಾಯರು 117—14—4 ರೂಗಳನ್ನು ದುರುಪಯೋಗ ಪಡಿಸಿಕೊಂಡರೆಂದು ಬೆಂಗಳೂರು ತಾಲ್ಲೋಕು ಅಮಲ್ದಾರರವರು ಪೋಲೀಸಿನವರಿಗೆ ತಿಳಿಸಿದ ಮೇಲೆ ಶ್ಯಾನುಭೋಗರನ್ನು ದಸ್ತಗಿರಿ ಮಾಡಿರುತ್ತಾರೆ ಕೃಷ್ಣರಾಯರು ಎಡಿಯೂರು, ನಾಗಸಂದ್ರ ಶ್ಯಾನುಭೋಗರೆಂದು ತಿಳಿದು ಬಂದಿದೆ ಮುಂದಿನ ತನಿಖೆ ಕ್ರಮಗಳನ್ನು ಅಧಿಕಾರಿಗಳು ನಡೆಸುತ್ತಿರುವರು

ಲಂಚದ ಆಪಾದನೆ.

ಫ್ರೆಂಚ್‌ರಾಕ್ಸ್‌ನ ವೆಂಕೋಬರಾವ್ ಎಂಬುವರು ಅಲ್ಲಿನ ಸಬ್‌ಇನ್ಸ್‌ಪೆಕ್ಟರ್ ಮತ್ತು ಕಾನ್ಸ್‌ಟೇಬಲ್‌ರಾದ ಅಬ್ದುಲ್ ಜಾಕ್ ಮತ್ತು ಅಬ್ದುಲ್ ಸತ್ತಾರ್ ಎಂಬುವರಮೇಲೆ 15 ರೂಪಾಯಿ ಪಕ್ಷ ತೆಂಗಿನಕಾಯಿ, ಸೌದೆಯನ್ನು ಲಂಚ ತೆಗೆದುಕೊಂಡರೆಂಬದಾಗಿ ಮೊಕದ್ದಮೆ ಹೂಡಿದ್ದರು ಮೈಸೂರು ಸ್ಪೆಷಲ್ ಫಸ್ಟ್‌ಕ್ಲಾಸ್ ಮ್ಯಾಜಿಸ್ಟ್ರೇಟರಾದ ಶ್ರೀ॥ ಶ್ರೀನಿವಾಸರರವರು ವಿಚಾರಣೆಮಾಡಿ ಆಪಾದನೆ ರುಜುವಾತಾಗದೇ ಇದ್ದುದರಿಂದ ಇಬ್ಬರನ್ನೂ ಖುಲಾಸೆಮಾಡಿದರು

ರೇಷ್ಮೆ ಅಭಿವೃದ್ಧಿ

ಮೈಸೂರು ಸರ್ಕಾರದವರು ರೇಷ್ಮೆ ಕೈಗಾರಿಕೆಯನ್ನು ಬೆಳೆಸಲು 13000 ರೂಪಾಯಿಗಳನ್ನು ಹೆಚ್ಚಾಗಿ ಗ್ರಾಂಟ್ ಮಾಡುವರು

ಕನ್ನಡ ಪಂಡಿತರಿಗೆ ಪ್ರೋತ್ಸಾಹ

ಮೈಸೂರು ಟ್ರೈನಿಂಗ್ ಕಾಲೇಜು ಕನ್ನಡ ಪಂಡಿತರಾದ ಶ್ರೀ॥ ಚಿನ್ನಕರಿಯ್ಯಂಗಾರ್ಯರನ್ನು ಮದ್ರಾಸು ವಿಶ್ವವಿದ್ಯಾನಿಲಯದವರು ಕನ್ನಡ ಉಪನ್ಯಾಸಕರಾಗಿ ನೇಮಿಸಿರುತ್ತಾರೆ

ವಸ್ತು ಪ್ರದರ್ಶನ

ಮೈಸೂರು ದಸರಾ ವಸ್ತುಪ್ರದರ್ಶನದ ಕಾರ್ಯದರ್ಶಿಗಳಾಗಿದ್ದ ಶ್ರೀ॥ ಎಸ್ ಶಾಸ್ತ್ರಿಗಳನ್ನು ಕೈಗಾರಿಕೆಯ ಡೈರೆಕ್ಟರ್ ನೇಮಕಮಾಡಿರುವುದರಿಂದ ರೇಷ್ಮೆ ಸಹಾಯಕ ಸೂಪರಿಂಟೆಂಡೆಂಟರಾದ ಶ್ರೀ॥ ಎಸ್ ಎಸ್ ಗೋವಿಂದರಾಯರನ್ನು ಪ್ರದರ್ಶನದ ಕಾರ್ಯದರ್ಶಿಗಳಾಗಿ ನೇಮಿಸಲಾಗಿದೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ಬಾಲಸುಧಾ

ಮಕ್ಕಳ ಜ್ವರದ ಗೆಡ್ಡೆಯನ್ನು ಖಾತರಿ ಗುಣ ಪಡಿಸುತ್ತೆ. ಲಿವರ್ (ಪಿತ್ತ ಕೋಶ) ದಪ್ಪನಾಗಿ ಕಣ್ಣು ಹಳದಿ ಬಣ್ಣವಾಗಿದ್ದರೆ ಇದರ ಸೇವನೆಯಿಂದ ದಿನೇ ದಿನೇ ಗುಣವಾಗುತ್ತೆ. 20 ವರ್ಷಗಳಿಂದಲೂ ಅನುಭವ ಸಿದ್ಧವಾಗಿದೆ—ಮಕ್ಕಳ ಕೆಮ್ಮಿಗೆ ನಮ್ಮ ಬಾಲ ಸಂಜೀವಿನಿ ಯನ್ನೇ ಉಪಯೋಗಿಸಿ.

ಬಾಲಸುಧಾ ಬೆಲೆ 1 ರೂ. ಬಾಲಸಂಜೀವಿನಿ 4 ಅ.

ಮೈಸೂರು, ಬೆಂಗಳೂರು, ಮದ್ರಾಸುಗಳಲ್ಲಿ ನಮ್ಮ ಶಾಖೆಗಳಿವೆ

ಸದ್ವೈದ್ಯಶಾಲಾ, ನಂಜನಗೂಡು.

ಎಂ. ವಿ. ನಾರಾಯಣರಾಯರ

ಶ್ರೀ ಸತ್ಯನಾರಾಯಣ ಪರಿಮಳ ಫ್ಯಾಕ್ಟರಿ,

ಜಗನ್ಮೋಹನ ಬಂಗ್ಲಾ ಬೀದಿ, ಮೈಸೂರು

ಪರಿಮಳ ಅಗರ್ ಬತ್ತಿ

ಉಪಯೋಗಿಸಿ ಪ್ರೋತ್ಸಾಹಿಸಿರಿ.

Drakshamrutha

ದ್ರಾಕ್ಷಾಮೃತ

ಈ ದ್ರಾಕ್ಷಾಮೃತವು ಸಹ್ಯಾದ್ರಿ ಪರ್ವತದಲ್ಲಿ ಅನೇಕ ವನಸ್ಪತಿಗಳ ರಸವರ್ಗದೊಡನೆ ದ್ರಾಕ್ಷಾರಸವನ್ನು ಮಿಶ್ರಮಾಡಿ ಸ್ವದೇಶಿ ಯಂತ್ರದಿಂದ ಶಾಸ್ತ್ರೋಕ್ತ ರೀತಿ ಪ್ರಕಾರ ತಯಾರು ಮಾಡಿರುವದರಿಂದ ಸ್ವಾದಿಷ್ಟವು ಮತ್ತು ಮಧುರವು ಇದೆ.

ಇದರ ಸೇವನೆಯಿಂದ ಶರೀರದೊಳಗಿನ ಹಳೆ ಕಡಕಿ (ಗರಮಿ) ಸಂಪೂರ್ಣ ನಾಶವಾಗುತ್ತದೆ ಮತ್ತು ಧಾತುಸ್ರಾವ, ಸ್ವಪ್ನಾವಸ್ಥೆಯಿಂದ ಅಥವಾ ಬೇರೆ ಯಾವದೇ ಕಾರಣದಿಂದ ಬಂದ ಅಶಕ್ತತೆಯಿಂದ ಕೈಕಾಲು, ಕಣ್ಣೊಳಗೆ ಉರುಪು ಬರೋಣ, ಶೌಚಕ್ಕೆ ಸಾಫ ಆಗದೆ ಇರೋಣ, ಮಂಡಾದ ಎಲ್ಲ ವಿಕಾರಗಳು ಸ್ವಸ್ಥವಾಗಿ ನಿಲ್ಲುವಾಗ್ಗಿ ಬೆಳೆಯುತ್ತವೆ ಮತ್ತು ಅನ್ನ ಚೆನ್ನಾಗಿ ಪಚನವಾಗಿ ಶೌಚಕ್ಕೆ ಸಾಫವಾಗುತ್ತದೆ. ಇದರ ಸೇವನೆಯಿಂದ ತರುಣರಿಗೆ ವ್ಯಭಿಚಾರದಿಂದ ಅಥವಾ ಬೇರೆ ಕಾರಣದಿಂದ ಬಂದ ಧಾತುಕ್ಷೀಣತೆ, ನಪುಂಸಕತ್ವ ಇದ್ದರೆ ಅದು ಹೋಗಿ ಯೌವನವಂತರಾಗಿ, ಶರೀರ ಬಲವಾಗಿ ಮಕ್ಕಳು ಪುಷ್ಟಿವಂತರಾಗುವರು. ಸ್ತ್ರೀಯರಿಗೂ ಮತ್ತು ಮಕ್ಕಳಿಗೂ ಈ ಔಷಧವು ಗುಣಕಾರಿ ಇದೆ. ಮುಟ್ಟಾಗದಿರುವ ಮತ್ತು ಉಷ್ಣ ಗರ್ಭ ಸಂಬಂಧವಾದ ರೋಗಗಳಿದ್ದರೂ ಅವೆಲ್ಲ ಗುಣವಾಗಿ ಸ್ತ್ರೀಯರಿಗೆ ಸಂತತಿ ವೃದ್ಧಿಯಾಗುವದು. ಈ ಔಷಧವ ಮೂರು ಬಾಟ್ಲಿಗಳನ್ನು ಸೇವನ ಮಾಡಿದರೆ ಪೂರ್ಣ ಗುಣಬರುತ್ತದೆ. ಇದರ ಅನುಭವ 1 ಬಾಟ್ಲಿ ಸೇವನ ಮಾಡಿದನಂತರ ನಿಮಗೆ ತಿಳಿದೀತು.

ಪ್ರಮಾಣ: ಬೆಳಿಗ್ಗೆ ಒಂದು ತೊಲೆ ಮತ್ತು ರಾತ್ರಿ ಮಲಗುವಾಗ ಒಂದು ತೊಲೆ ಸೇವನೆ ಮಾಡಬೇಕು.

1 ಬಾಟ್ಲಿ ಬೆಲೆ ರೂ 1-4-0, 3 ಬಾಟ್ಲಿ 3-8-0,

1 ಡಜನ್ ಬಾಟ್ಲಿ ಬೆಲೆ 12-0-0

ಮ್ಯಾನೇಜರ್—ದ್ರಾಕ್ಷಾಮೃತ ಡಿಪೋ.

ಪೋಸ್ಟ್ ನಿಪ್ಪಾಣಿ, ಜಿಲ್ಲಾ ಬೆಳಗಾವಿ

ಮೈಸೂರು ಸ್ಟಾಕಿಸ್ಟರು —ಟಿ. ಸಿ. ನಟರಾಜ್, ಸಯ್ಯಾಜಿರಾವ್ ರೋಡ್

FOR ALL KINDS OF ADVERTISEMENTS

PLEASE CONSULT

The Commercial, Advertising and Publicity Service.

Head Office —

BALEPET, BANGALORE CITY

BRANCHES AT MYSORE AND ALL OVER INDIA

Experts in:—

WALL—POSTERS

Agents —

'SADHVI',

A LEADING ILLUSTRATED WEEKLY IN MYSORE

USE ALWAYS

DERMOTONE

(SASTRIC BATHING HERBAL PREPARATION)

THE UNIQUE PRODUCT

IN THE MARKET FOR SKIN HYGIENE.

ಡರ್ಮೊಟೋನ್,

ಶಾಸ್ತ್ರೀಯವಾದ ಮತ್ತು ಆರೋಗ್ಯಕರವಾದ ಚರ್ಮರಕ್ಷಣೆ ಚೂರ್ಣ

ಡರ್ಮೊಟೋನ್ ವರ್ಕ್ಸ್, ಮೈಸೂರು

ಶ್ರೀ ರಂಗನಾಥ ಟೈಪ್ ಫೌಂಡ್ರಿ,

ಚಿಕ್ಕಪೇಟೆ, ಬೆಂಗಳೂರು ಸಿಟಿ.

ಸುಂದರವಾದ ಅಕ್ಷರಗಳು, ಮುದ್ದುಮುದ್ದಾದ ಬಾರ್ಡರುಗಳು ಬಗೆಬಗೆಯ ಆಕಾರ

ನಮಗೆ ಈ ಕೆಲಸದಲ್ಲಿ ೩೦ ವರ್ಷಗಳ ಕಾಲದ ಅನುಭವವಿದೆ. ಆಧುನಿಕ ಕಾಲಕ್ಕೆ ತಕ್ಕಂತ ಅಕ್ಷರದ ಆಕಾರವನ್ನು ಬಹು ಸುಂದರವಾಗಿ ಸಮಾಯಿಸಿದ್ದೇವೆ

ನಮ್ಮಲ್ಲಿನ "ಕನ್ನಡ, ಇಂಗ್ಲೀಷ್" ಅಕ್ಷರಗಳಂತಹ ಸುಂದರವಾದ ಅಕ್ಷರಗಳನ್ನು ಮತ್ತೆಲ್ಲಿಯೂ ನೋಡಲಾರಿರಿ ಮತ್ತು

ನೂರಾರು ಬಗೆಯ ಸುಂದರವಾದ ಬಾರ್ಡರುಗಳು ನಯನಮನೋಹರವಾಗಿ

ಆಯಾ ಪಾಯಿಂಟಿನಿಂದ ೭೨ ಪಾಯಿಂಟಿನವರೆಗಿನ ವಿವಿಧವಾದ ಸುಂದರಾಕ್ಷರಗಳಿವೆ

ನಮ್ಮ "ರಂಗನಾಥ ಕಸ್ಟದ ಪಾಮಿಗ" ಅಕ್ಷರಗಳನ್ನು ನೋಡಲು ಮರೆಯಬೇಡಿರಿ

ನಾವು ಕಾಪರ್ ಟಿಫಾನ್ಸ್ (ಮಿಶ್ರಿತ) ಸೀಸದಿಂದ ಅಕ್ಷರಗಳನ್ನು ತಯಾರಿಸುತ್ತೇವೆ. ಸೂಕ್ತ ಬೆಲೆ. ಗ್ಯಾರಂಟಿಯಾದ ಬಾಳಿಕೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ಬಾಲಸುಧಾ

ಮಕ್ಕಳ ಜ್ವರದ ಗೆಡ್ಡೆಯನ್ನು ಖಾತರಿ ಗುಣ ಪಡಿಸುತ್ತೆ ಲಿವರ್ (ಪಿತ್ತ ಕೋಶ ಸಪ್ಪರಾಗಿ ಕಣ್ಣು ಹಳದಿ ಬಣ್ಣವಾಗಿದ್ದರೆ ಇದರ ಸೇವನೆಯಿಂದ ದಿನೇ ದಿನೇ ಗುಣವಾಗುತ್ತೆ 20 ವರ್ಷಗಳಿಂದಲೂ ಅನುಭವ ಸಿದ್ಧವಾಗಿದೆ— ಮಕ್ಕಳ ಭೇದಿಗೆ ನಮ್ಮ ಬಾಲ ಸಂಜೀವಿನಿ ಮಾತ್ರೆ ಉಪಯೋಗಿಸಿರಿ

ಬಾಲ ಸುಧಾ ಬೆಲೆ 1 ರೂ ಬಾಲ ಸಂಜೀವಿನಿ 4 ಆ

ಮೈಸೂರು, ಬೆಂಗಳೂರು, ಮದ್ರಾಸುಗಳಲ್ಲಿ ನಮ್ಮ ಶಾಖೆಗಳಿವೆ

ಸದ್ವೈದ್ಯಶಾಲಾ, ನಂಜನಗೂಡು

ಎಂ. ವಿ. ನಾರಾಯಣರಾಯರ

ಶ್ರೀ ಸತ್ಯನಾರಾಯಣ ಪರಿಮಳ ಫ್ಯಾಕ್ಟರಿ,

ಜಗನ್ಮೋಹನ ಬಂಗ್ಲಾ ಬೀದಿ, ಮೈಸೂರು

ಪರಿಮಳ ಅಗರ್ ಬತ್ತಿ

ಉಪಯೋಗಿಸಿ ಪ್ರೋತ್ಸಾಹಿಸಿರಿ

Drakshamrutha

ದ್ರಾಕ್ಷಾಮೃತ

ಈ ದ್ರಾಕ್ಷಾಮೃತವು ಸಹ್ಯಾದ್ರಿ ಪರ್ವತದಲ್ಲಿ ಅನೇಕ ವನಸ್ಪತಿಗಳ ರಸವರ್ಗಗಳೊಂದಿಗೆ ದ್ರಾಕ್ಷಾರಸವನ್ನು ಮಿಶ್ರಮಾಡಿ ಸ್ವದೇಶಿ ಯಂತ್ರದಿಂದ ಶಾಸ್ತ್ರೋಕ್ತ ಪದ್ಧತಿ ಪ್ರಕಾರ ತಯಾರು ಮಾಡಿರುವದರಿಂದ ಸ್ವಾದಿಷ್ಟವು ಮತ್ತು ಮಧುರವು ಆಗಿದೆ

ಇದರ ಸೇವನೆಯಿಂದ ಶರೀರದೊಳಗಿನ ಹಳೆ ಕಡಕಿ (ಗರಮಿ) ಸಂಪೂರ್ಣ ನಾಶವಾಗುತ್ತದೆ ಮತ್ತು ಧಾತುಸ್ರಾವ ಸ್ವಪ್ನಾವಸ್ಥೆಯಿಂದ ಅಥವಾ ಬೇರೆ ಯಾವದೇ ಕಾರಣದಿಂದ ಬಂದ ಅಶಕ್ತತೆಯಿಂದ ಕೈಕಾಲು, ಕಣ್ಣುಗಳ ಉರಿ ಹುಳಿತೇಗು, ಶೌಚಕ್ಕೆ ಸಾಫ ಆಗದ ಇರೋಣ, ಮುಂತಾದ ಎಲ್ಲ ವಿಕಾರಗಳು ನಷ್ಟವಾಗಿ ಕ್ಷುಧಾಗ್ನಿ ಬೆಳೆಯುತ್ತದೆ ಮತ್ತು ಅನ್ನ ಚೆನ್ನಾಗಿ ಪಚನವಾಗಿ ಶೌಚಕ್ಕೆ ಸಾಫವಾಗುತ್ತದೆ ಇದರ ಸೇವನೆಯಿಂದ ತರುಣರಿಗೆ ವ್ಯಭಿಚಾರದಿಂದ ಅಥವಾ ಬೇರೆ ಕಾರಣದಿಂದ ಬಂದ ಧಾತುಕ್ಷೀಣತೆ, ನಪುಂಸಕತ್ವ ಇದ್ದರೆ ಅದು ಹೋಗಿ ಪುನಃ ಯೌವನವಂತರಾಗಿ, ಶರೀರ ಬಲವಾಗಿ ಮಕ್ಕಳು ಪುಷ್ಟಿವಂತರಾಗುವರು ಹೆಂಗಸರಿಗೂ ಮತ್ತು ಮಕ್ಕಳಿಗೂ ಈ ಔಷಧವು ಗುಣಕಾರಿ ಇದೆ ಮುಟ್ಟಾಗದಿದ್ದರೆ ಮತ್ತು ಇನ್ನು ಗರ್ಭ ಸಂಬಂಧವಾದ ರೋಗಗಳಿದ್ದರೂ ಅವೆಲ್ಲ ಗುಣವಾಗಿ ಹೆಂಗಸರಿಗೆ ಸಂತತಿ ವೃದ್ಧಿಯಾಗುವದು ಈ ಔಷಧದ ಮೂರು ಬಾಟ್ಲಿಗಳನ್ನು ಸೇವನೆ ಮಾಡಿದರೆ ಪೂರ್ಣ ಗುಣವಾಗುತ್ತದೆ ಇದರ ಅನುಭವ 1 ಬಾಟ್ಲಿ ಸೇವನೆ ಮಾಡಿದ ಅನಂತರ ನಿಮಗೆ ತಿಳಿದೀತು

ಪ್ರಮಾಣ ಬೆಳಿಗ್ಗೆ ಒಂದು ತೊಲೆ ಮತ್ತು ರಾತ್ರಿ ಮಲಗುವಾಗ ಒಂದು ತೊಲೆ ಸೇವನೆ ಮಾಡಬೇಕು.

1 ಬಾಟ್ಲಿ ಬೆಲೆ ರೂ 1-4-0, 3 ಬಾಟ್ಲಿ 3-೩-0,
1 ಡಜನ್ ಬಾಟ್ಲಿ ಬೆಲೆ 12-0 0

ಮ್ಯಾನೇಜರ್—ದ್ರಾಕ್ಷಾಮೃತ ಡಿಪೋ.

ಪೋಸ್ಟ್ ನಿಪ್ಪಾಣಿ, ಜಿಲ್ಲಾ ಬೆಳಗಾವಿ

ಮೈಸೂರು ಸ್ಟಾಕಿಸ್ಟ್ಸ್ —ಟಿ ಸಿ ನಟರಾಜ್, ನಯ್ಯಾಜರಾವ್ ರೋಡ್

FOR ALL KINDS OF ADVERTISEMENTS

PLEASE CONSULT

The Commercial, Advertising and Publicity Service.

Head Office —
BALEPET, BANGALORE CITY

BRANCHES AT MYSORE AND ALL OVER INDIA

Experts in:—
WALL—POSTERS

Agents —
'SADHVI',

A LEADING ILLUSTRATED WEEKLY IN MYSORE

ಕನ್ನಡ ಆತ್ಮ ಪುರಾಣ.

ಇದು ಮುಮುಕ್ಷುಗಳ ಮುಖದರ್ಪಣ.

ಈ ಗ್ರಂಥವು ೧೮ ಅಧ್ಯಾಯಗಳುಳ್ಳದ್ದು ಇದರಲ್ಲಿ ಐತರೇಯಾದಿ ಉಪನಿಷತ್ತುಗಳ ವಿಸ್ತಾರವಾದ ಅರ್ಥವಿರುವದು ಇದು ಶ್ರೀ ಶಂಕರಾನಂದರು ದೇವಭಾಷೆಯಲ್ಲಿ ತಮ್ಮ ಶಿಷ್ಯನಿಗೆ ಉಪದೇಶಿಸಿದ ಪರಮ ಅದ್ವೈತ ಗ್ರಂಥವಾಗಿರುವುದು ಆತ್ಮವಿದ್ಯಾ ವಿಷಯದಲ್ಲಿ ಇದಕ್ಕೆ ಸಮಾನವಾದ ಗ್ರಂಥ ಜಗತ್ತಿನಲ್ಲಿಯೇ ಇಲ್ಲವೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು ಈ ಗ್ರಂಥ ಹಿಂದೀಭಾಷೆಯಲ್ಲಿದ್ದು ಕೊಂಡು ಉತ್ತರದೇಶದೊಳಗೆಲ್ಲಾ ಬಹು ಪ್ರಸಿದ್ಧವಾಗಿರುವದು ನಮ್ಮ ದಕ್ಷಿಣ ಕರ್ಣಾಟಕದಲ್ಲಿ ಇದರ ನ್ಯೂನತೆಯಂ ನೋಡಿ ಸನ್ನಿಧಾನದಲ್ಲಿ ಭಾಷಾಂತರಮಾಡಲ್ಪಟ್ಟಿತು ಇದನ್ನು ಎರಡು ವಿಭಾಗವಾಗಿ ಎರಡು ಬುಕ್ಕುಗಳಾಗಿ ಮಾಡಬೇಕೆಂದು ಆಲೋಚಿಸಿ, ಆ ಪ್ರಯುಕ್ತ ... ಉಳ್ಳ ಈ ಮೊದಲನೇ ಭಾಗ ಮುದ್ರಾಪಿಸಿ ಬೈಂಡಿಂಗ್ ಸಹಾ ಕಟ್ಟಿಸಿ ... ಮಾಡಲ್ಪಟ್ಟಿರುವದು ಇದರ ಕ್ರಯ ೨—೮—0 ರೂ। ಇದನ್ನಪೇಕ್ಷಿಸುವವರು ರೂಪಾಯಿ ಮುಂಗಡ ಕಳುಹಿಸಬೇಕು ಉಳಿದ ಹತ್ತು ಅಧ್ಯಾಯಗಳುಳ್ಳ ಭಾಗವು ಶೀಘ್ರದಲ್ಲಿಯೇ ತಯಾರಾಗುವದು ಇದನ್ನಪೇಕ್ಷಿಸುವವರು ... ಗಳನ್ನು ತಡ್ವಾಗಾಗಿ ದಯವಿಟ್ಟು ಕಳುಹಿಸಿಕೊಟ್ಟಲ್ಲಿ ಪುಸ್ತಕವು ... ಮುದ್ರಾಪಿಸಿ ಬೈಂಡಿಂಗ್ ಸಹಾ ಕಟ್ಟಿಸಿ ಅವರವರ ವಿಳಾಸಕ್ಕೆ ಪುಸ್ತಕದ ... ಅಡ್ವಾನ್ಸ್ ಹಣಮಾಡಿ ಉಳಿದ ಮೊಬಲಗಿಗೆ ಬುಕ್ಕನ್ನು ವಿ ಪಿ ಮಾಡಲ್ಪ...

ಗ್ರಂಥಕರ್ತ:—
ಶಿವಾನಂದ ಸುಬ್ರಹ್ಮಣ್ಯ (ವೇದಾಂತ ಸುಬ್ಬ...
ಲಕ್ಷ್ಮೀವಿಲಾಸ ಅಗ್ರಹಾರ, ಮೈಸೂರು

Wanted.

A clerk to look after the shop and service acco...
Cash security essential

Apply for further particulars with 4 as stamp...

GANAGANOOR BROTHERS.

Mysore Bank Buildings, MYSORE

|| ಸತ್ಯಮೇವೋದ್ಧರಾಮ್ಯಹಮ್ ||

ರಾಜಧಾನಿಯ ರಾಷ್ಟ್ರೀಯ ವಾರ ಪತ್ರಿಕೆ.

ವೃದ್ಧಪಿತಾಮಹ ಎಂ. ವೆಂಕಟಕೃಷ್ಣಯ್ಯನವರ ಜ್ಞಾಪಕಾರ್ಥವಾಗಿ ಪ್ರಕಟಿಸಲ್ಪಡುವುದು.

ಸಂಪಾದಕರು: ಅಗರಂ ರಂಗಯ್ಯ, ಬಿ.ಎ.

ಸಂಪುಟ ೧] MYSORE : MONDAY 3—8—36 ಮೈಸೂರು : ಸೋಮವಾರ ೩—೮—೩೬ [ಸಂಚಿಕೆ ೨೪

ಸಹಕಾರ.

—

ಮದ್ರಾಸ್ ಆಧಿಪತ್ಯದ ಸುಪ್ರಸಿದ್ಧ ಸಹಕಾರ ಪ್ರಚಾರಕರಾದ ಶ್ರೀ|| ವಿ. ರಾಮದಾಸ್ ಪಂತಲುರವರು ಮೊನ್ನೆ ದಿನ ಸಾಯಂಕಾಲ ವಿಶ್ವವಿದ್ಯಾಲಯದ ಆಶ್ರಯದಲ್ಲಿ ಮಹಾರಾಜರವರ ಕಾಲೇಜಿನಲ್ಲಿ "ಸಹಕಾರ" ಎಂಬ ವಿಚಾರವಾಗಿ ಸ್ವಾರಸ್ಯವಾದ ಭಾಷಣವನ್ನು ಮಾಡಿದರು. ಅನೇಕ ಜನ ಮಹನೀಯರೂ, ಮಹಿಳೆಯರೂ ಬಂದಿದ್ದರು. ಪ್ರೊ|| ಜೆ. ಸಿ. ರೋಲೋರವರು ಅಧ್ಯಕ್ಷತೆಯನ್ನು ವಹಿಸಿದ್ದರು. ಉಪನ್ಯಾಸಕರು ಸಹಕಾರ ತತ್ವವು ಪಾಶ್ಚಾತ್ಯ ದೇಶಗಳಲ್ಲಿ ಹುಟ್ಟಿ ಜನರಿಗೆ ಮಾಡಿರುವ ಪ್ರಯೋಜನಗಳನ್ನು ವಿವರವಾಗಿ ವಿವರಿಸಿದರು. ಭರತ ಖಂಡದಲ್ಲಿ ಸುಮಾರು 30 ವರ್ಷಗಳ ಕೆಳಗೆ ಸಹಕಾರ ಚಳುವಳಿಯು ಪ್ರಾರಂಭವಾಯಿತು. ಕೇವಲ ಅಲ್ಪರೀತಿಯಲ್ಲಿ ಆರಂಭವಾದ ಚಳುವಳಿಯು ಈಗ ಮಹತ್ತರವಾದ ಸ್ಥಾನವನ್ನು ಹೊಂದಿರುತ್ತದೆ. ಕೋಟ್ಯಂತರ ರೂಪಾಯಿನ ಬಂಡವಾಳವನ್ನೂ ಲಕ್ಷಾಂತರ ಜನ ಸದಸ್ಯರನ್ನೂ ಒಳಗೊಂಡಿರುತ್ತದೆ. ಬಡ ಜನರ ಸಾಲದ ಹೊರೆಯನ್ನು ತಕ್ಕಮಟ್ಟಿಗೆ ಕಡಿಮೆ ಮಾಡಿ ಅವರ ಆರ್ಥಿಕಸ್ಥಿತಿಯನ್ನು ಉತ್ತೇಜನಗೊಳಿಸಲು ಸಹಕಾರಿಯಾಗಿದೆ. ಜನರಲ್ಲಿ ಐಕ್ಯಮತವನ್ನೂ, ಅನ್ಯೋನ್ಯ ಭಾವನೆಯನ್ನೂ ಹೆಚ್ಚಿಸಲು ಪ್ರಯತ್ನಪಟ್ಟಿದೆ. ಈ ಚಳುವಳಿಯಿಂದ ಇನ್ನೂ ಹೆಚ್ಚು ಹೆಚ್ಚಿನ ಪ್ರಯೋಜನಗಳು ಆಗಬೇಕಾಗಿದೆ. ಗ್ರಾಮಾಂತರಗಳ ಸಹಕಾರ ಸಂಘಗಳು ಈ ನಮ್ಮಿಗೆ ಹೀನಸ್ಥಿತಿಗೆ ಬಂದಿರುತ್ತವೆ. ಆದರೂ ಪಟ್ಟಣಗಳಲ್ಲಿರುವ ಸಂಘಗಳು ದಿನೇ ದಿನೇ ಅಭಿವೃದ್ಧಿಯಾಗುತ್ತಾ ಬಂದಿವೆ. ಸಿಬ್ಬಂದಿಗಳನ್ನು ತಕ್ಕಷ್ಟಿಗೆ ಹೆಚ್ಚಿಸಿದ ವಿಶೇಷ ಶಿಕ್ಷಣಗಳಿಗೆ ಉತ್ತೇಜನವನ್ನು ಕೊಡುವ ಕೆಲಸಗಳ ಮುಖ್ಯ ಉದ್ದೇಶವಾಗಿರಬೇಕು. ಜಾಗರೂಕತೆಯಿಂದಲೂ, ಹಿತಿಮಿತಿಯಿಂದಲೂ ನಡೆಸಿಕೊಂಡು ಬಂದರೆ ಈ ಸಹಕಾರ ಸಂಘಗಳು ದೇಶದ ಅಭ್ಯುದಯಕ್ಕೆ ವಿಶೇಷ ಪ್ರಯೋಜನಕಾರಿಯಾಗುವವು, ಎಂಬುದರಲ್ಲಿ ಸಂದೇಹವಿಲ್ಲವೆಂದು ಅಪ್ಪಣೆ ಕೊಡಿಸಿದರು.

ಹೊಸ ಕೈರಾಟಿ.

ಗಂಟೆಗೆ 1400 ಗಜ ದಾರವನ್ನು ತೆಗೆಯುವ ಹೊಸ ಮಾದರಿಯ ಕೈರಾಟಿಯನ್ನು ಮುಜಫರ ಪುರದ ಒಬ್ಬ ಉಪಾಧ್ಯಾಯರು ಕಂಡುಹಿಡಿದಿರುವರು. ಮಿಲ್ಲಿಗೆ ಯಂತ್ರದಲ್ಲಿ ಉಪಯೋಗಿಸುವ ದಾರವನ್ನು ಅದರಿಂದ ತೆಗೆಯಬಹುದು.

ಲೋಕಮಾನ್ಯರ ಸ್ಮರಣೆ.

ಮೊನ್ನೆಯದಿನ ಭರತಖಂಡದಲ್ಲೆಲ್ಲಾ ಲೋಕಮಾನ್ಯ ಬಾಲ ಗಂಗಾಧರ ತಿಲಕರವರ ಪುಣ್ಯದಿನವು ಆಚರಿಸಲ್ಪಟ್ಟಿತು. ಲೋಕಮಾನ್ಯರು ರಾಷ್ಟ್ರೀಯ ಜಾಗ್ರತೆಗಾಗಿ ತನುಮನಗಳನ್ನು ಧಾರೆಯೆರೆದು 1920ನೇ ಇಸವಿಯಲ್ಲಿ ಸ್ವರ್ಗಸ್ಥರಾದರು.

ಶ್ರೀ|| ಜೆ. ಎಂ. ಸೇನ ಗುಪ್ತರವರು.

ಇವರ ದಿನಾಚರಣೆಯು ಭರತ ಖಂಡದಲ್ಲೆಲ್ಲಾ ನೆರವೇರಿತು.

ಮೆಕ್ ಮಹೋನನ ವಿಚಾರಣೆ

—

ಚಕ್ರವರ್ತಿಯವರ ಮೇಲೆ ಕೈಮಾಡಿದ ಮೆಕ್ ಮಹೋನನ ಮೇಲೆ ಮೂರು ಚಾರ್ಜುಗಳನ್ನು ಹಾಕಿರುತ್ತಾರೆ. ಈ ಚಾರ್ಜುಗಳಿಗೆ ಮೆಕ್ ಮಹೋನನು ಹೀಗೆ ಹೇಳುತ್ತಾನೆ. "ಕಾನ್ಸ್ಟಿಟ್ಯೂಷನಲ್ ಸಮಾಪದಲ್ಲಿ ನನ್ನನ್ನು ನಾನೇ ಗುಂಡಿನಿಂದ ಹೊಡೆದುಕೊಳ್ಳಬೇಕೆಂಬುದ್ದೇಶವಿತ್ತು. ಆದರೆ ರಾಜರ ಮೆರವಣಿಗೆಯು ಹತ್ತಿರ ಬರುವುದನ್ನು ಕಂಡು, ನನ್ನ ಕೊರತೆಯನ್ನು ಅವರಿಗೆ ನಿವೇದಿಸಬೇಕೆಂದು ನನ್ನ ರಿವಾಲ್ವರನ್ನು ಆಕಾಶಕ್ಕೆ, ಎಸೆದು ನನ್ನ ಕಡೆಗೆ ಚಕ್ರವರ್ತಿಗಳವರ ಗಮನವನ್ನು ಎಳೆಯೋಣವೆಂದು ಉದ್ದೇಶಿಸಿದೆನು."

ಪಾಂಡಿಚೆರಿ ಮುಷ್ಕರ.

ಪುದುಚೇರಿ ಗಿರಣಿ ಕೂಲಿಗಾರರು ತಮ್ಮ ಮಾಲಿಕರು ಹಲವು ಬಗೆಗಳಿಂದ ಅನ್ಯಾಯ ಮಾಡುತ್ತಿರುವರೆಂದು ಮುಷ್ಕರ ಹಿಡಿದಿದ್ದಾರೆ. ಸವನ ಮತ್ತು ಪ್ರೋಡಿಯರ್ ಗಿರಣಿಗಳಲ್ಲಿ ಕೂಲಿಗಾರರು ಅಧಿಕಾರಿಗಳನ್ನು ಕೋಣೆಯಲ್ಲಿ ಕೂಡಿ ಬೀಗಹಾಕಿದ್ದರು. ಅದನ್ನು ಬಿಡಿಸಲು ಪೋಲೀಸರು ಸಶಸ್ತ್ರರಾಗಿ ಹೋಗಿ ಬಂದೂಕಗಳನ್ನು ಹಾರಿಸಿ ಕೂಲಿಗಾರರನ್ನು ಚದುರಿಸಿದರು. ಗುಂಡಿನ ಬಾಯಿಗೆ 8 ಜನರು ತುತ್ತಾದರು. ಇನ್ನೂ ಅನೇಕರಿಗೆ ಗಾಯಗಳಾಗಿವೆ. ಗಿರಣಿಗಳೊಳಗೆ ಮೃತಪಟ್ಟವರ ದೇಹಗಳು ಹಾಗೆಯೇ ಬಿದ್ದಿವೆ. ಮುಷ್ಕರವನ್ನು ತಡೆಗಟ್ಟಲು ಸೈನಿಕರು ಸಶಸ್ತ್ರರಾಗಿ ಗಿರಣಿಬಳಿಯಲ್ಲಿ ಕಾವಲಿದ್ದಾರೆ. ಕೂಲಿಗಾರರೊಬ್ಬರೂ ಕೆಲಸಕ್ಕೆ ಹಿಂತಿರುಗಿಲ್ಲ.

"ಕಥಾಕುಂಜ" ಕಾರರ ಬಿನ್ನಹ

ಈಗ ಹದಿನೇಳು ವರುಷಗಳಿಂದಲೂ ಕರ್ನಾಟಕ ಮಾತೆಯ ಸೇವೆಯನ್ನು ಮಾಡುತ್ತಿರುವ ಮತ್ತು "ಕಥಾಕುಂಜ" ಎಂಬ ಮಾಸಪತ್ರಿಕೆಯನ್ನು ಹೊರಡಿಸುತ್ತಿರುವ ಶ್ರೀ|| ಹ್ಯಾಟಿ ರಾಮರಾಯರು ಈಗ ಆರ್ಥಿಕ ವಿಪತ್ತುಗಳಿಗೆ ಈಡಾಗಿದ್ದಾರೆ. ಈ ವಿಷಮ ಪರಿಸ್ಥಿತಿಯನ್ನು ಹೋಗಲಾಡಿಸಲು ಶ್ರೀಯುತರು ಮಹಾಜನಗಳನ್ನು ದ್ರವ್ಯ ಸಹಾಯಮಾಡಬೇಕೆಂದು ಕೋರಿದ್ದಾರೆ.

ವಾಲೀಬಾಲ್

ಸುಬ್ಬಕೃಷ್ಣಯ್ಯ ಮೆಮೋರಿಯಲ್ ಟೋರ್ನಮೆಂಟ್.

ಕಳೆದ ಶುಕ್ರವಾರ ಮೈಸೂರು ಮರಿಮಲ್ಲಪ್ಪನವರ ಹೈಸ್ಕೂಲಿಗೂ ಮತ್ತು ಬನುಮಯ್ಯನವರ ಸ್ಕೂಲಿಗೂ ವಾಲಿಬಾಲ್ ಪಂದ್ಯವು ನಡೆದು ಬನುಮಯ್ಯನವರ ಸ್ಕೂಲಿನವರು 5-21, 21-17, 21-11, 11-21, 21-18 ರಿಂದ ಜಯಶಾಲಿಗಳಾದರು. ಸಾವಿರಾರು ಜನ ಪ್ರೇಕ್ಷಕರು ನೆರದಿದ್ದರು. ಆದರೆ ಆಟದಲ್ಲಿ ಕೊಂಚ ಅನ್ಯಾಯಗಳು ನಡೆದು ಬಂದಂತೆ ಗೊತ್ತಾಗುತ್ತದೆ

೧೪೦ ದಿನ ಉಪವಾಸ.

ಮುನಿ ಶ್ರೀ ಮಿಶ್ರೀಲಾಲ್‌ಜಿ ಎಂಬ ಜೈನ ಮುನಿಗಳೊಬ್ಬರು ಬೊಂಬಾಯಿನಲ್ಲಿ ಕಳೆದ 140 ದಿನಗಳಿಂದ ಉಪವಾಸ ಮಾಡುತ್ತಿರುವರು. ನೀರನ್ನೂ ಸಹ ಕುಡಿಯುವುದಿಲ್ಲ. ತಮ್ಮ ಜನಾಂಗದ ಮುನಿಗಳಲ್ಲಿ ಐಕಮತ್ಯವನ್ನು ತರಲು ಅವರು ಉಪವಾಸವನ್ನಾಚರಿಸುತ್ತಿರುವರು

ನಡೆಯುವ ವಿಮಾನ

ಸಯಾಂನಲ್ಲಿ ಲನಾಬಸ್ ಎಂಬ ಒಂದು ಜಾತಿ ಮೀನಿದೆ. ಅದು ಭೂಮಿಯಮೇಲೆ 30 ನಿಮಿಷಗಳಲ್ಲಿ 300 ಅಡಿ ನಡೆಯುತ್ತದೆ. ಸಾಮಾನ್ಯವಾಗಿ ಅದು ರಾತ್ರಿಯವೇಳೆಯಲ್ಲಿ ನಡೆಯುವುದು ಹೆಚ್ಚು.

ಭಾರತದಲ್ಲಿ ಸಂಸ್ಕೃತಿಗಳ ಸ್ಪರ್ಧೆ.

ಲೇಖಕ—ಎ. ಎಂ. ಕೃಷ್ಣಮೂರ್ತಿ.

ಪಾಶ್ಚಿಮಾತ್ಯ ರಾಷ್ಟ್ರಗಳ ಉಜ್ವಲ ನಾಗರೀಕತೆಯ ವೈಭವದ ಪ್ರಭಾವವು ಇಡೀ ಭಾರತವನ್ನೆಲ್ಲಾ ಸಂಪೂರ್ಣವಾಗಿ ಆವರಿಸಿ, ಅವರ ಪ್ರಧಾನ ಸ್ವರೂಪವನ್ನು ಮಾರ್ಪಾಡುಮಾಡುತ್ತ ಒಂದು ನೂತನ ತೇಜಸ್ಸನ್ನು ಕೊಟ್ಟು, ಅಪ್ರತಿಹತವಾದ ಶಕ್ತಿಯಿಂದ ಭಾರತದ ಸಂಸ್ಕೃತಿಯನ್ನು ಫಲಕಾರಿಯನ್ನಾಗಿ ಮಾಡುತ್ತಾ ಅಭಿವೃದ್ಧಿಯಾಗುತ್ತಿದೆ. ರಾಜಕೀಯ, ಸಾಮಾಜಿಕ ಮತ್ತು ಆರ್ಥಿಕ ಮೊದಲಾದ ಹಲವು ಪ್ರಧಾನ ಸಮಸ್ಯೆಗಳು ಸಂಪೂರ್ಣವಾಗಿ ಪಾಶ್ಚಾತ್ಯ ಪ್ರಪಂಚದ ನೀತಿಗೆಯ ಸಹಕಾರವನ್ನೂ ಮತ್ತು ಸಹಾನುಭೂತಿಯನ್ನೂ ಹೊಂದುತ್ತಿವೆ. ಕವೀಂದ್ರ ರವೀಂದ್ರ ಠಾಕೂರ್ ರವರು ಯೂರೋಪಿನ ಹಲವು ಪ್ರಾಮುಖ್ಯ ಪಟ್ಟಣಗಳನ್ನು ಸಂಚರಿಸಿ, ಅನೇಕ ಕಡೆಗಳಲ್ಲಿ ಸ್ವಾರಸ್ಯವಾಗಿ ಉಪನ್ಯಾಸಗಳನ್ನು ಮಾಡಿದರು. ಪಾಶ್ಚಾತ್ಯ ಮತ್ತು ಪೌರ್ವಾತ್ಯ ಪ್ರಪಂಚಗಳ ಒಟ್ಟುಗೂಡುವಿಕೆಯೇ ನವನಾಗರೀಕತೆಯ ವಿಶೇಷ ವೈಭವದಲ್ಲಿ ತಲ್ಲೀನವಾದ ಇಪ್ಪತ್ತನೆ ಶತಮಾನದ ಪ್ರಸಿದ್ಧ ಇತಿಹಾಸದ ಪ್ರಾಮುಖ್ಯ ಅಂಶವಾಗಿದೆ ಎಂದು ಅವರು ಹೇಳುತ್ತಾರೆ. ಪೌರ್ವಾತ್ಯ ಮತ್ತು ಪಾಶ್ಚಿಮಾತ್ಯ ರಾಷ್ಟ್ರಗಳ ಈ ನಿಕಟ ಸಂಬಂಧವು ಸಮಸ್ತ ವಿಷಯಗಳಲ್ಲೂ ಶಾಂತಿ, ರಕ್ಷಣೆ, ಅಭಿವೃದ್ಧಿ—ಈ ಉದಾತ್ತ ಧ್ಯೇಯಗಳನ್ನೇ ನಿರಂತರವೂ ಸಾಧಿಸುವ ಮಹದಾಕಾಂಕ್ಷೆಯಲ್ಲಿ ಮಗ್ನವಾಗಿರಲಿ, ಜಗತ್ತಿನ ಕಲ್ಯಾಣ ಮಹೋತ್ಸವದ ಸಂಸ್ಥಾಪನೆಯು ವೈಭವದಿಂದ ಜರುಗಿದಂತಾಗುವುದು.

ಪ್ರಾಚೀನ ಪ್ರಭಾವ

ಪರಕೀಯರ ಸಾಹಿತ್ಯ ಮತ್ತು ಸಂಸ್ಕೃತಿಯ ವ್ಯಾಪ್ತಿಯು ಇಂಡಿಯಾ ದೇಶಕ್ಕೆ ಹೊಸದಲ್ಲ. ಕ್ರಿಸ್ತ ಮಹಾ ಪುರುಷನು ಜನ್ಮವೆತ್ತುವುದಕ್ಕೆ ಮೊದಲೇ, ಅಂದರೆ ಈಗ್ಗೆ ಸುಮಾರು ಎರಡು ಸಹಸ್ರ ವರ್ಷಗಳಿಗಿಂತ ಮುಂಚೆಯೇ, ಭರತಖಂಡದಲ್ಲಿ ವಾಸಿಸುತ್ತಿದ್ದ ದ್ರಾವಿಡರನ್ನು ಯುದ್ಧದಲ್ಲಿ ಸೋಲಿಸಿ, ಆರ್ಯರು ಅವರನ್ನೆಲ್ಲಾ ತಮ್ಮ ಅಧೀನಕ್ಕೊಳಪಡಿಸಿಕೊಂಡು ತಮ್ಮ ಸಾಮಾಜಿಕ ಮತ್ತು ಸಾಂಸ್ಕೃತಿಕ ಪ್ರಭಾವವನ್ನು ದಕ್ಷಿಣ ಇಂಡಿಯಾದ ಅಂತ್ಯದವರೆವಿಗೂ ಬೀರಿದರು. ಕಾಲಾಂತರದಲ್ಲಿಯೇ ಪ್ರಖ್ಯಾತ ಅಲೆಕ್ಸಾಂಡರನ ದಿಗ್ವಿಜಯದ ಕಾಲದ ಹಲವು ಭಾವನೆಗಳನ್ನು ವ್ಯಾಪಿಸಿತು. ಆ ಕಾಲದಲ್ಲಿ ಪುರಾತನ ನಾಗರೀಕತೆಗೆ ಮಾತೃಪ್ರಾಯವಾದ ಗ್ರೀಸ್ ಮತ್ತು ರೋಮ್ ರಾಷ್ಟ್ರಗಳು ಇಂಡಿಯಾವನ್ನು ಒಮ್ಮೆ ಗೆದ್ದಿದ್ದವು. ಭರತಖಂಡಕ್ಕೆ ಅಲೆಕ್ಸಾಂಡರನ ಮುತ್ತಿಗೆಯು ವಿಶೇಷ ಕ್ರಾಂತಿಯನ್ನುಂಟುಮಾಡಿದುದರಿಂದ ಆರ್ಯರ ಜೀವನದ ಹಲವು ರೀತಿ ನೀತಿಗಳು ಮಾರ್ಪಾಡು ಹೊಂದಿದವು.

ಸ್ವಲ್ಪ ಕಾಲದಲ್ಲಿಯೇ ದಿವ್ಯ ಪುರುಷ ಬುದ್ಧನ ಅಮೃತವಾಣಿಯು ಭಾರತದ ನಾನಾ ಮೂಲೆಗಳಲ್ಲೂ ಸಂಚರಿಸಿ ಸನಾತನ ಮತ್ತು ವೈದಿಕ ಧರ್ಮಗಳಿಗೆ ಒಂದು ಹೊಸ ಹುರುಪನ್ನುಂಟುಮಾಡಿತು. ಅನಂತರ ಪಶ್ಚಿಮ ಏಷ್ಯಾದಿಂದ ಅನೇಕ ಜಾತಿಯ ಜನರು ಇಂಡಿಯಾವನ್ನು ಮುತ್ತಿ ಸೂರೆಮಾಡುತ್ತಾ ಬಂದರು. ಆದರೆ ಆರ್ಯಾವರ್ತದ ಧರ್ಮದ ಪ್ರಭಾವದ ವ್ಯಾಪ್ತಿಯನ್ನು ಬಿಡಲು ಶಕ್ತರಾಗದೆ ಅವರೂ ದಿನೇ ಕಾಲಕ್ರಮದಲ್ಲಿ ಬೆರೆತುಹೋದರು.

ಮಹಮ್ಮದೀಯರು

ಕೆಲವು ಕಾಲ ಕಳೆದ ಮೇಲೆ ಮಹಮ್ಮದೀಯರು ರಾಜ್ಯಸ್ಥಾಪನ ಮಾಡಬೇಕೆಂಬ ಆಕಾಂಕ್ಷೆಯುಳ್ಳವರಾಗಿ ಇಡೀ ಇಂಡಿಯಾವನ್ನೇ ನಡುಗಿಸಿ ಅದರ ಸಾಮಾಜಿಕ ಮತ್ತು ಧಾರ್ಮಿಕ ವ್ಯವಹಾರಗಳನ್ನೆಲ್ಲಾ ಅಲ್ಲೋಲಕಲ್ಲೋಲಮಾಡಿದರು. ಹಿಂದೂ ಸಂಸ್ಕೃತಿಯ ಅಗಾಧ ಪ್ರವಾಹವು ಅನೇಕ ಅಪಾಯಗಳನ್ನು ಹೊಂದುತ್ತಾ ಮತ್ತಷ್ಟು ವೇಗವಾಗಿ ಪ್ರವಹಿಸಲಾರಂಭಿಸಿತು. ಮತ್ತು ಇತರ ಜಾತಿಗಳ ಸಾರವನ್ನು ಸಂಗ್ರಹಿಸಿ ವಿಶೇಷ ಉಜ್ವಲ ಕಾಂತಿಯಿಂದ ಭೋರ್ಗರೆಯಲಾರಂಭಿಸಿತು. ಕಾಲಕ್ರಮದಲ್ಲಿ ಪಾಶ್ಚಾತ್ಯರೂ ಭಾರತಕ್ಕೆ ಕಾಲಿಟ್ಟರು.

ಪಾಶ್ಚಾತ್ಯ ಸಂಸ್ಕೃತಿಯ ವ್ಯಾಪ್ತಿ

ಪಾಶ್ಚಿಮಾತ್ಯರ ಸಂಸ್ಕೃತಿ ಮತ್ತು ಸಾಹಿತ್ಯದ ಪ್ರಭಾವವು ಭರತಖಂಡದಲ್ಲಿ ಅಗಾಧವಾಗಿ ನಿಂತಿತು. ಸುಮಾರು ಎರಡು ಶತಮಾನಗಳಿಂದಲೂ ಅವರ ಸಾಹಿತ್ಯ ಮತ್ತು ಸಂಸ್ಕೃತಿ ಇವುಗಳ ಪ್ರಭಾವವು ಹಿಂದೆ ಯಾವ ಸ್ಥಿರವಾದ ರಾಜ್ಯಗಳಿಂದಲೂ ವ್ಯಾಪಿಸಲ್ಪಟ್ಟಿಲ್ಲ. ಹಿಂದೂ ಜನ ಜೀವನದ, ನೈತಿಕ ಮತ್ತು ಧಾರ್ಮಿಕ ತತ್ವಗಳಿಗೆ ಪಾಶ್ಚಾತ್ಯ ಪ್ರಪಂಚವು ಸುಮಾರು ವಿರೋಧಿಯೆಂದೇ ಹೇಳಬಹುದಾಗಿದೆ. ಹಾಗಾದರೂ ಕೂಡ ಅವರ ವ್ಯಾಪ್ತಿಯು ವಿಶೇಷ ಉತ್ಸಾಹದಿಂದ ಭಾರತದ ನಾನಾ ಮೂಲೆಗಳಲ್ಲೂ ಉಂಟಾಗುತ್ತಿದೆ. ಕೆಲವರು ಬ್ರಿಟಿಷರ ಬರುವುದಕ್ಕೆ ಮುಂಚೆ ಸಂಪೂರ್ಣ ಇಂಡಿಯಾವನ್ನು ಜಯಿಸಿದ್ದರು. ಆದರೆ ಅವರೆಲ್ಲರೂ ರಾಜ್ಯಾಭಿಲಾಷೆಯಿಂದ ಇಲ್ಲಿನ ಜನರೊಡನೆ ಸಹಕರಿಸಿ, ಕಾಲಕ್ರಮದಲ್ಲಿ ಭಾರತೀಯರ ನಡೆ, ನುಡಿಗಳನ್ನು ಅನುಸರಿಸುತ್ತ ಬಂದರು. ಆಂಗ್ಲೇಯರೂ ಭಾರತವನ್ನು ಸಂಪೂರ್ಣವಾಗಿ ಸೂರೆಮಾಡಿದರೂ ಅವರು ಇಂಡಿಯಾ ದೇಶದವರ ಸಾಮಾಜಿಕ ವಿಷಯಗಳಲ್ಲಿ ಸಹಕರಿಸದೆ, ದೂರ ಬೇರೆಯಾಗಿ, ಹಿಂದೂ ಸಮಾಜದ ಎಲ್ಲೆಯಿಂದ ಹೊರಗೆ ನಿಂತರು.

ಭಾರತೀಯ ಸಂಸ್ಕೃತಿ

ಭಾರತ ಸಂಸ್ಕೃತಿಯು ಅತಿ ಪುರಾತನವೂ ಮತ್ತು ಸಚೇತನವೂ ಆಗಿದೆ. ದೇಶ ವಿದೇಶಗಳ ಇತಿಹಾಸಗಳಲ್ಲಿ ಭಾರತೀಯ ಇತಿಹಾಸವು ಪ್ರಾಚೀನದಿಂದಲೂ ಪ್ರಸಿದ್ಧಿ ಪಡೆದಿದೆ. ಅವರು ತಮ್ಮ ಸ್ಥಿತಿಗತಿಗಳಿಗನುಸಾರವಾಗಿ ಜ್ಞಾನ ವಿಜ್ಞಾನ ಕ್ಷೇತ್ರಗಳಲ್ಲಿಯೂ, ಶಾಸ್ತ್ರಾದಿಗಳಲ್ಲಿಯೂ, ಭೋಗವೈಭವಗಳಲ್ಲಿಯೂ ಮತ್ತು ವಿವಿಧ ಕಲಾರಂಗಗಳಲ್ಲಿಯೂ ಪರಿಶ್ರಮ ಹೊಂದಿ ಇಡೀ ಜಗತ್ತನ್ನೇ ಬೆರಗುಮಾಡಿದ್ದರು. ಹಿಂದಿನವರು ಹೇಗಿದ್ದರೆಂಬ ಹೆಮ್ಮೆಯೊಂದಿದ್ದರೆ ಸಾಲದು, ಅಂತಹ ಸನ್ನಿವೇಶವನ್ನು ಪುನಃ ಹೊಂದಲು ಸಂಕಲ್ಪ ಮಾಡುವುದು ನಮ್ಮೆಲ್ಲರ ಪ್ರಧಾನ ಕರ್ತವ್ಯವಾಗಿದೆ.

ಭಾರತ ಸಂಸ್ಕೃತಿಯ ಮೂಲ ತತ್ವಗಳಾದ ಸನಾತನ ವಸ್ತು ಸ್ವಾತಂತ್ರ್ಯ— ಇವುಗಳು ನಮ್ಮೆಲ್ಲರನ್ನೂ ಸಚೇತನರನ್ನಾಗಿ ಮಾಡಿವೆ ಎಂಬುದನ್ನು ಮರೆಯಕೂಡದು. ಈ ಸಂಸ್ಕೃತಿಯ ಪ್ರಭಾವ, ಪುರಾತನ ಕಾಲದಿಂದಲೂ ಆಚರಣೆಯಲ್ಲಿದ್ದ ಅವಿಭಕ್ತ ಕುಟುಂಬ ಪದ್ಧತಿಯನ್ನೂ ಮತ್ತು ಕೋಮುವಾರು ಸಂಘಗಳನ್ನೂ ಹೊಡೆದುಹಾಕಲೆತ್ನಿಸುತ್ತಿದೆ. ಈಗ ಪ್ರತಿಯೊಬ್ಬನೂ ತನ್ನ ಹಕ್ಕುಬಾಧ್ಯತೆಗಳಿಗಾಗಿ ಹೋರಾಡಲು ಕಾತರನಾಗಿದ್ದಾನೆ. ಭಾರತದಲ್ಲಿ ಗ್ರಾಮ ಜೀವನವು ಅನಾದಿಯಿಂದಲೂ ಕಾಪಾಡಲ್ಪಟ್ಟಿತು. ಅನೇಕ ರಾಜ್ಯಗಳು ಸ್ಥಾಪನೆಯಾದವು ಮತ್ತು ಕೆಲವು ನಾಶವಾದವು. ಆದರೆ ರಾಜ್ಯಗಳ ಈ ವೈಭವ ಅಥವಾ ಪರಸ್ಪರ ಸ್ಪರ್ಧೆಯ ದಕ್ಕೆಯು ಈ ಗ್ರಾಮ ಜೀವನಕ್ಕೆ ತಗುಲದೆ ಅದು ಪ್ರಾಚೀನದಿಂದಲೂ ಜನಸೇವೆ ಮಾಡುತ್ತಿದೆ.

ಬಿಳಿಯರು ಭಾರತವನ್ನು ಸೂರೆಗೊಂಡ ಮೇಲೆ, ದೇಶವು ದಾರಿದ್ರ್ಯವನ್ನು ಹೊಂದಿತು. ಆಡಂಬರಮಯವಾದ ಜೀವನ ಕ್ರಮವನ್ನು ಅನುಸರಿಸಲಾರಂಭಿಸಿತು. ಗ್ರಾಮ ಕೈಗಾರಿಕೆಗಳೂ ಮತ್ತು ವ್ಯವಸಾಯವೂ ಮೂಲೆಗೆ ಬಿದ್ದವು. ಆರ್ಯ ಸಂಸ್ಕೃತಿಗೂ ಮತ್ತು ಪಾಶ್ಚಾತ್ಯ ಸಂಸ್ಕೃತಿಗೂ ಘರ್ಷಣೆಯೊದಗಿತು. ಆರ್ಯ ಸಂಸ್ಕೃತಿಯು ಲೋಕವಿಖ್ಯಾತವಾದ ಧರ್ಮ ಮತ್ತು ಮತದ ಒಡಿಗಲ್ಲಿನ ಮೇಲೆ ಬೇರೂರಿ ನಿಂತಿದೆ. ಯಾವ ರಾಷ್ಟ್ರವು ಎಷ್ಟೇ ಸಾಹಸ ಪ್ರಯತ್ನಗಳನ್ನು ಮಾಡಿದಾಗ್ಯೂ ಇದನ್ನು ಕದಲಿಸಲು ಅಸಾಧ್ಯವಾಗಿದೆ. ಸುಮಾರು ಒಂದೂವರೆ ಶತಮಾನದಿಂದ ಪಾಶ್ಚಾತ್ಯ ಸಂಸ್ಕೃತಿಯನ್ನೂ ಮತ್ತು ಸಾಹಿತ್ಯವನ್ನೂ ಭಾರತೀಯರು ಕಲಿಯಲಾರಂಭಿಸಿದರು. ಇದರಿಂದ ಅವರಿಗೆ ವಿಶೇಷ ಪ್ರಯೋಜನವುಂಟಾಗಿದ್ದರೂ ಶಿಕ್ಷಣ ಕ್ರಮವು ಸರಿಯಾದ ಮಾರ್ಪಾಡು ಹೊಂದದಿರುವುದರಿಂದ ದೇಶವು ಅವನತಿಯನ್ನು ಹೊಂದಿದೆ. ಮಹಾತ್ಮ ಗಾಂಧಿ, ಠಾಕೂರ ಮತ್ತು ಬೋಸ್ ರವರು ಪಾಶ್ಚಾತ್ಯ ಸಂಸ್ಕೃತಿಯಿಂದ ನಮ್ಮ ದೇಶಕ್ಕೆ ಅತ್ಯವಶ್ಯಕವಾದ ಸ್ವಾತಂತ್ರ್ಯ, ವಿಶ್ವಪ್ರೇಮ ಮತ್ತು ಜೀವನ ಕ್ರಮವನ್ನು ಅಭಿವೃದ್ಧಿಪಡಿಸುವ ವಿಜ್ಞಾನ ಇವುಗಳನ್ನು ಆರಿಸಿಕೊಂಡು ಅನುಸರಿಸುವಂತೆ ಭಾರತೀಯರಾದ ನಾವೆಲ್ಲರೂ ಪಾಶ್ಚಾತ್ಯ ಸಂಸ್ಕೃತಿಯಿಂದ ನಮಗೆ ಪ್ರಯೋಜನವಾಗುವ ವಿಷಯಗಳನ್ನು ಮಾತ್ರ ವಿಮರ್ಶಿಸಿ ಇಡೀ ಪ್ರಪಂಚವೇ ಹೊಗಳುತ್ತಿರುವ ಭಾರತೀಯ ವಿಶ್ವಪ್ರೇಮವು ಮತ್ತಷ್ಟು ಕೀರ್ತಿ ಶಾಂತಿಯಿಂದ ನಿರಂತರವೂ ಬೆಳಗುವಂತೆ ಮಾಡಬೇಕೆಂಬುದೇ ನಮ್ಮ ಹಾರೈಕೆ.

ಬದನಗುಪ್ಪೆಯಲ್ಲಿ ಖಾದಿ ಕೇಂದ್ರ.

ಹೊಸ ಕಟ್ಟಡದ ಪ್ರವೇಶೋತ್ಸವ

ಶ್ರೀ ತಗಡೂರು ರಾಮಚಂದ್ರರಾಯರು ಹೀಗೆ ಬರೆಯುತ್ತಾರೆ —

ತಗಡೂರು ಖಾದಿ ಕೇಂದ್ರದ ಉಪಶಾಖೆಯು ನಾಲ್ಕೈದು ವರ್ಷಗಳಿಂದಲೂ ಬದನಗುಪ್ಪೆಯಲ್ಲಿದೆ. ಉಪಕೇಂದ್ರವು ಶಾಶ್ವತವಾಗಿ ನಡೆದುಕೊಂಡು ಬರಲು ಶ್ರೀ ಬೀರೂರು ಸತ್ಯನಾರಾಯಣಶೆಟ್ಟರವರು ಅವರ ಖರ್ಚಿನಿಂದಲೇ ಒಂದು ಹೊಸ ಕಟ್ಟಡವನ್ನು ಕಟ್ಟಿಸಿಕೊಟ್ಟಿದ್ದಾರೆ. ಅದರ ಪ್ರವೇಶೋತ್ಸವವು 7—8—36ನೇ ಶುಕ್ರವಾರದ ದಿವಸ ನಡೆಯುತ್ತದೆ. ಕ್ರಮಪ್ರಕಾರವಾಗಿ ತಳಿರು ತೋರಣಗಳಿಂದ ಅಲಂಕರಿಸಲ್ಪಟ್ಟು ಮಂಗಳ ವಾದ್ಯದೊಡನೆ ಹವನ ಹೋಮವೇ ಮುಂತಾದ ನೂತನ ಗೃಹಪ್ರವೇಶದ ಕರ್ಮಗಳೆಲ್ಲವೂ ಸಾಂಗವಾಗಿ ನಡೆದಮೇಲೆ ಪ್ರವೇಶೋತ್ಸವವು ನಡೆಯುತ್ತದೆ. ತಗಡೂರು, ಬದನವಾಳು, ನಂಜನಗೂಡು ಮತ್ತು ಮೈಸೂರುಗಳಿಂದ ಅನೇಕ ಜನ ಖಾದಿ ಪ್ರೇಮಿಗಳು ದಯಮಾಡಿಸುತ್ತಾರೆ. ಮೈಸೂರಿಂದ ಮಧ್ಯಾಹ್ನ 12 ಗಂಟೆಗೆ ಹೊರಡುವ ರೈಲಿನಲ್ಲಿ ಹೊರಟು 2½ ಗಂಟೆಗೆ ಬದನಗುಪ್ಪೆಯನ್ನು ಸೇರುತ್ತಾರೆ. ಉತ್ಸವ ಕಾರ್ಯಗಳನ್ನೆಲ್ಲಾ ಮುಗಿಸಿಕೊಂಡು ಸಾಯಂಕಾಲ 7 ಗಂಟೆಗೆ ಬದನಗುಪ್ಪೆಯಿಂದ ಹೊರಡುವ ರೈಲಿನಲ್ಲಿ ಹೊರಟು ರಾತ್ರಿ 9¼ ಗಂಟೆಗೆ ಮೈಸೂರನ್ನು ಸೇರುತ್ತಾರೆ. ನಂಜನಗೂಡಿನ ಸುಪ್ರಸಿದ್ಧ ವಕೀಲರಾದ ಶ್ರೀ|| ಎಸ್. ನಾರಾಯಣರಾಯರವರನ್ನು ಈ ಪ್ರವೇಶೋತ್ಸವವನ್ನು ನೆರವೇರಿಸಿಕೊಡಬೇಕೆಂದು ಪ್ರಾರ್ಥಿಸಿಕೊಂಡಿದ್ದೇನೆ. ಈ ಕಾರ್ಯದಲ್ಲಿ ಆಸಕ್ತಿ ಇರತಕ್ಕ ಮಹಾ ಜನರೆಲ್ಲಾ ದಯಮಾಡಿಸಬೇಕಾಗಿ ಪ್ರಾರ್ಥಿಸುತ್ತೇನೆ.

ಟೆಲಿಫೋನ್ ಏರ್ಪಾಡು

ಮೈಸೂರಿನಿಂದ ಮದರಾಸಿಗೆ ಸಾರ್ವಜನಿಕ ಉಪಯೋಗಾರ್ಥವಾಗಿ ಟೆಲಿಫೋನ್ ಸಂಬಂಧವನ್ನು ಸ್ಥಾಪಿಸಲು ಏರ್ಪಾಡಾಗುತ್ತಿದೆ. ಈ ಸಂಬಂಧದಲ್ಲಿ ನಡೆದ ಪ್ರಯೋಗಗಳು ಜಯಪ್ರದವಾಗಿ ಕಂಡುಬಂದವು. ಶೀಘ್ರದಲ್ಲಿಯೇ ಏರ್ಪಾಡು ಆಗುವುದು.

ಮಾದರಿ ರಾಜ್ಯದ ಭವಿಷ್ಯ ಚಿತ್ರ.

ಗ್ರಾಮೋದ್ಧಾರದ ಆದರ್ಶ.

(ಭಾವಿಕನಿಂದ)

ಸಾವಿರದ ಒಂಭೈನೂರ ನಲವತ್ತನೆಯ ಇಸವಿಯ ಮಾತು. ಈಗಿನಹಾಗೆ ರಾಜರುಗಳು ಮಾತ್ರವಲ್ಲ, ಅಧಿಕಾರಿಗಳೂ ಶಿಕ್ಷಣಕ್ಕಾಗಿ ಹಳ್ಳಿಗೆ ಬರುತ್ತಿದ್ದರು. ಗ್ರಾಮೋದ್ಧಾರಕ್ಕಾಗಿ ಪ್ರತ್ಯೇಕವಾಗಿಯೇ ಒಂದು ಇಲಾಖೆಯು ಏರ್ಪಟ್ಟು, ಒಂದೊಂದು ಡಿಸ್ಟ್ರಿಕ್ಟಿಗೂ ಒಬ್ಬೊಬ್ಬ ಪ್ರತ್ಯೇಕ ಅಧಿಕಾರಿಗಳಿದ್ದರು. ಅಧಿಕಾರಿಗಳ ನಂಚುವಿಕೆಯಲ್ಲಿಯೂ ಬಹು ನಿಷ್ಪಕ್ಷಪಾತವಾಗಿ ಮೂವರು ಹಿಂದುಗಳು, ಮೂವರು ಮಹಮ್ಮದೀಯರು ಇಬ್ಬರು ಕ್ರೈಸ್ತರು ಹೀಗೆ ನಿಯಮಿಸಲ್ಪಟ್ಟಿದ್ದರು. ಬ್ರಾಹ್ಮಣರನ್ನು ಮರೆಯಲಿಲ್ಲ. ಮತ್ತೊಂದು ಬಾರಿ ಒಬ್ಬ ಬ್ರಾಹ್ಮಣನ್ನೂ ಅಧಿಕಾರಕ್ಕೆ ನಿಯಮಿಸಲು [illegible]ಗಳವು ಭರವಸೆ ಇತ್ತಿದ್ದಿತು. ಗ್ರಾಮೋದ್ಧಾರದಲ್ಲಿ ಮನಃಪೂರ್ವಕವಾಗಿ, [illegible]ಸಿ ಅಧಿಕಾರಿಗಳ ಮೆಚ್ಚುಗೆಯನ್ನು [illegible]ವರಿಗೆ ಈಗಿನ ವೈಸರಾಯರವರ [illegible] ಶೀಲ್ಡುಗಳು ಮೀಸಲಾಗಿದ್ದುವು. ಗ್ರಾಮೋದ್ಧಾರ ಕಾರ್ಯದಲ್ಲಿ ಅಖಿಲ [illegible]ದ ಬಹುಮಾನವನ್ನು ಸಂಪಾದಿಸಿ[illegible], ಈಗಾಗಲೇ ಪ್ರಪಂಚದ ಬಹು[illegible]ವನ್ನು ಪಡೆಯುವುದಕ್ಕಾಗಿ 'ಲೀಗ್ [illegible] ಮಹಾಸಭೆಯ ಮೂಲಕ [illegible]ಸುತ್ತಿದ್ದಿತು. ಗಂಡಾಳಿನ ಕೂಲಿಯು ಮಾದರಿಯ ಗ್ರಾಮಗಳಲ್ಲಿ ನಾಲ್ಕಾಣೆ [illegible] ನಾಲ್ಕಾಣೆ ಮೂರುಕಾಸಿಗೆ ಹೆಚ್ಚಿಸ[illegible] ನ್ಯಾಯವಿಧಾಯಕ ಸಭೆಯಲ್ಲಿ ಬಹು [illegible]ದಿಂದ ಘೋಷಣೆ ಮಾಡಿದ ಬ್ರಹ್ಮ[illegible]ಗೂ, ಸಂಧಾನ ನಡೆಸಿದ ಅಯ್ಯಂ[illegible] ಗ್ರಾಮೋದ್ಧಾರ ಕರ್ತರೆಂಬ ಬಿರುದ[illegible] ಕೊಡಲು ಆಲೋಚಿಸುತ್ತಿದ್ದಿತು.

[illegible]ವು ಒಂದು ಗ್ರಾಮವನ್ನು ನೋಡಿದೆ[illegible] ಬೀದಿಗಳೆಲ್ಲವೂ ನೇರವಾಗಿ, ಚೊಕ್ಕ[illegible]ವು. ಅಲ್ಲಲ್ಲಿ ಸುಂದರವಾದ [illegible]ಗಳು, ಲಂಡನ್ನಿನ ಗುಲಾಬಿ ಗಿಡ[illegible]ಳೂ, ಆಸ್ಟ್ರೇಲಿಯದ ಹಣ್ಣಿನ ಗಿಡ[illegible]ಳೂ, ಅಲಂಕೃತವಾಗಿದ್ದುವು. ಜ[illegible] ಒಂದೇ ವಿಧವಾದ ಉಡಿಗೆಯನ್ನು [illegible]ದ್ದರು ರೇಡಿಯೋ, ವೃತ್ತಪತ್ರಿ[illegible] ಸ್ಕೂಲು, ಪರಸ್ಪರ ಸಹಾಯ ಸಂ[illegible] ಆಫೀಸು, ಆಸ್ಪತ್ರೆ, ಎಲ್ಲವೂ [illegible]ಭಿವೃದ್ಧಿ ಸ್ಥಿತಿಯಲ್ಲಿದ್ದುವು ಯೂ[illegible] ದಮೆಂಕೆಗಳಿಂದಲೂ ಹಲವು [illegible]ಕಾರ ವಿಮರ್ಶೆಗಳಿಗಾಗಿ ಒದು[illegible]ದ್ದರು. ವರ್ತಕರುಗಳೇ ಅಲ್ಲಿರಲಿ[illegible] ನಾಯಿಯವರೆಲ್ಲವೂ ಯಂತ್ರಶಕ್ತಿ[illegible].

[illegible] ವಿಚಾರ ಮಾಡಿದುದರಲ್ಲಿ, ಆ ಗ್ರಾ[illegible]ಗಳೆಲ್ಲವೂ, ಸಾಹುಕಾರರಿಗೆ ಸೇರಿಹೋಗಿ ಗ್ರಾಮದ ಜನರಿಗೆ ಅಂಗೈಯಗಲವೂ ಉಳಿದಿರಲಿಲ್ಲ ಅಲ್ಲಲ್ಲಿ ಕಾಣುತ್ತಿದ್ದ ಮಂಗಳೂರು ಹೆಂಚಿನ ಮನೆಗಳು, ಸಾಹುಕಾರರ ಕಣಜಗಳು, ಸರ್ಕಾರದ ಕಚೇರಿಗಳು. ನಿವಾಸಿಗಳಿಗೆ ಸ್ವಂತಮನೆ ಎಂಬುದು ಇದ್ದಂತೆ ಕಾಣಲಿಲ್ಲ. ಜನರೆಲ್ಲರೂ ಸರ್ಕಾರದಿಂದ ಏರ್ಪಟ್ಟ ದರದಂತೆ ಕೂಲಿ ಮಾಡಿ ಜೀವಿಸಬೇಕಾಗಿದ್ದಿತು. ಕೂಲಿಯಲ್ಲಿ ಸರ್ಕಾರದವರು ಕೊಟ್ಟಿರುವ ದೀಪ, ವಗೈರೆ ಸೌಕರ್ಯಕ್ಕಾಗಿ ನಾಲ್ಕನೆಯ ಒಂದು ಭಾಗವನ್ನು ಹಿಡಿದುಕೊಳ್ಳುತ್ತಿದ್ದರು. ಮಿಕ್ಕುದೆಲ್ಲವನ್ನೂ ಪರಸ್ಪರ ಸಹಾಯ ಸಂಘಕ್ಕೆ ಕೊಟ್ಟು, ಹಿಟ್ಟು ಬಟ್ಟೆಗಳನ್ನು ಪಡೆಯುತ್ತಿದ್ದರು. ಮದುವೆ ಮುಂತಾದವುಗಳಲ್ಲಿ ಮಿತವ್ಯಯವೇ ಇದ್ದಿತು. ಈ ಸುವ್ಯವಸ್ಥೆಗಾಗಿ ನಮ್ಮ ಸರ್ಕಾರವನ್ನು ಪ್ರಪಂಚವೇ ಹೊಗಳುತ್ತಿದ್ದಿತು. ಇಂತಹ ಅನೇಕ ಗ್ರಾಮಗಳು ಪ್ರತಿ ತಾಲ್ಲೋಕಿನಲ್ಲಿಯೂ ಇನ್ನು ಮುಂದೆ ಆಗುವುದರಲ್ಲಿದ್ದುವು. ಗಂಡಾಳಿಗೆ ನಾಲ್ಕಾಣೆ, ಹೆಣ್ಣಾಳಿಗೆ ಮೂರಾಣೆ, ಮಕ್ಕಳಿಗೆ ಎರಡಾಣೆ ಕೂಲಿ ದರಗಳು ನಿಷ್ಕರ್ಷಿಸಲ್ಪಟ್ಟಿದ್ದುವು. ನಮ್ಮ ಸರ್ಕಾರದ ಈ ಬಗೆಯ ಗ್ರಾಮೋದ್ಧಾರವನ್ನು ನೋಡಿ ಅಭಿನಂದಿಸಲು ನಾವೂ ಒಂದು ಸಾವಿರದ ಒಂಭೈನೂರ ನಲವತ್ತನೆಯ ಇಸವಿಯನ್ನು ಕಾದಿರುವೆವು.

ಹರಿಜನರ ಏಳಿಗೆ.

ನಮ್ಮ ಸಂಸ್ಥಾನದ ಹರಿಜನರ ಏಳಿಗಾಗಿ ಮ॥ ತಗಡೂರು ರಾಮಚಂದ್ರರಾಯರು ಮೈಸೂರು ಸಂಸ್ಥಾನದ ಹರಿಜನ ಸಂಘದ ಅಧ್ಯಕ್ಷರಿಗೆ ಈ ಕೆಳಗೆ ಕಂಡ ಸಲಹೆಗಳನ್ನು ಕೊಟ್ಟಿರುತ್ತಾರೆ.—

(1) ಮೈಸೂರ ಸರ್ಕಾರದವರು ಕೆರೆಗಳಲ್ಲಿ ಹರಿಜನರು ನೀರು ತೆಗೆದುಕೊಳ್ಳುವುದಕ್ಕೆ ಆರ್ಡರು ಮಾಡಿದ್ದರೂ ಜನರಿಗೆ ಸರಿಯಾದ ತಿಳುವಳಿಕೆ ಇಲ್ಲದೆ ಬಹಳ ತೊಂದರೆಯಾಗಿದೆ. ಆದುದರಿಂದ ಪ್ರತಿಯೊಂದು ಕೆರೆಯ ಮೇಲೆಯೂ ಬೋರ್ಡು ಹಾಕಿಸುವಂತೆ ಏರ್ಪಾಡು ಮಾಡಬೇಕು

(2) ರಸ್ತೆ, ಭಾವಿ, ಕೊಳಗಳಿಗೂ ಸರ್ಕಾರದವರು ಆರ್ಡರು ಮಾಡುವಂತೆ ಏರ್ಪಾಡು ಮಾಡಿಸಬೇಕು ಮತ್ತು ಸತ್ತ ದನಗಳನ್ನು ಹೂಳಲು ಮೈನರ್ ಮುನ್ಸಿಪಾಲಿಟಿಗಳಿಗೆ ಕೊಟ್ಟಿರುವ ಆರ್ಡರು ಗ್ರಾಮ ಪಂಚಾಯಿತಿಗಳಿಗೂ ಅನ್ವಯಿಸುವಂತೆ ಮಾಡಬೇಕು

(3) ಪ್ರತಿಯೊಂದು ಗ್ರಾಮಪಂಚಾಯಿತಿ ಛೇರ್ಮನರವರೂ ಪ್ರತಿಯೊಂದು ಗ್ರಾಮದಲ್ಲಿಯೂ ಕೆರೆ, ಕೊಳ, ಭಾವಿ ಮತ್ತು ರಸ್ತೆಗಳನ್ನು ಯಾವ ವಿಧವಾದ ಜಾತಿ ಕುಲಗಳ ವ್ಯತ್ಯಾಸವಿಲ್ಲದೆ ಉಪಯೋಗಿಸಬಹುದೆಂಬೂ ಸತ್ತ ದನಗಳನ್ನು ತಮ್ಮ ಗಮನಕ್ಕೆ ತಂದೇ ಹೂಳಬೇಕೆಂದೂ ಸಹ ಬೋರ್ಡು ಹಾಕುವಂತೆ ಏರ್ಪಾಡು ಮಾಡಿಸಬೇಕು.

ಮೈಸೂರು ಡಿಸ್ಟ್ರಿಕ್ಟ್ ಬೋರ್ಡಿನ ಚುನಾವಣೆಗಳು.

ಸಾರ್ವಜನಿಕ ಸೇವಾ ಕಾರ್ಯಗಳನ್ನು ವ್ಯವಸ್ಥಿತವಾಗಿ ನಡಿಸುವುದಕ್ಕೂ, ಗ್ರಾಮಾಭಿವೃದ್ಧಿಯ ಕಾರ್ಯಗಳನ್ನು ಸ್ವತಂತ್ರವಾಗಿ ನಿರ್ವಹಿಸಿ ಸರಕಾರದ ಸಹಾಯವನ್ನು ಪ್ರಜಾ ಸಮುದಾಯಕ್ಕೆ ಒದಗಿಸಿಕೊಡುವುದಕ್ಕೂ ಏರ್ಪಡಿಸಲ್ಪಟ್ಟಿರುವ ಸಂಸ್ಥೆಗಳಲ್ಲಿ ಡಿಸ್ಟ್ರಿಕ್ಟ್ ಬೋರ್ಡ್ ಎಂಬುದು ಒಂದು ಮುಖ್ಯ ಸಂಸ್ಥೆಯಾಗಿದೆ.

ಡಿಸ್ಟ್ರಿಕ್ಟ್ ಬೋರ್ಡ್ ಅಧಿಕಾರಯುತವಾದ ಸಂಸ್ಥೆಯಾಗಿದೆ. ಸರಕಾರದ ಜವಾಬ್ದಾರಿಯನ್ನು ನಿರ್ವಹಿಸುವ ಸಹಾಯ ಸಂಸ್ಥೆಯಾಗಿದೆ. ಪ್ರತಿ ಮೂರು ವರುಷಗಳಿಗೊಂದುಸಾರಿ ಡಿ॥ ಬೋರ್ಡಿನ ಚುನಾವಣೆಯು ನಡೆಸಲ್ಪಡುವುದು. ಈ ಸಾರಿ ಮೈಸೂರು ಡಿಸ್ಟ್ರಿಕ್ಟ್ ಬೋರ್ಡಿಗೆ ಈ ಡಿಸ್ಟ್ರಿಕ್ಟಿನ ಎಲ್ಲಾ ತಾಲ್ಲೂಕುಗಳಿಂದಲೂ ತಾ॥ 25—7—1936ರಲ್ಲಿ ಚುನಾವಣೆಯು ನಡೆಸಲ್ಪಟ್ಟಿತು. ಈ ಚುನಾವಣೆಯಲ್ಲಿ ವಿಜಯಪಡೆದ ನೂತನ ಸದಸ್ಯರು ಯಾರು ಯಾರೆಂದರೆ —

ಶ್ರೀ॥ ಜಿ. ಮಲ್ಲಣ್ಣನವರು, ಶಿವನಂಜೇಗೌಡರು, ಮೈಸೂರು ತಾಲ್ಲೂಕು. ಶ್ರೀ॥ ನಗರ್ಲೇ ಸಿದ್ದಪ್ಪನವರು, ತುಂಬುನೇರಲೆ ಮಾದಪ್ಪನವರು, ನಂಜನಗೂಡಿನಿಂದ. ಶ್ರೀ॥ ಬಸಪ್ಪನವರೂ, ಪುಟ್ಟಸ್ವಾಮಿಯವರೂ ಹೆಗ್ಗಡದೇವನಕೋಟೆ ತಾಲ್ಲೂಕು. ಶ್ರೀ॥ ಎಚ್. ಕೆ. ಮಾದಯ್ಯನವರೂ, ಗುರುಮಲ್ಲಯ್ಯನವರೂ ಮಳವಳ್ಳಿ ತಾಲ್ಲೂಕಿನಿಂದ. ಶ್ರೀ॥ ಶೀಳನೆರೆ ತಿಮ್ಮೇಗೌಡರೂ, ಅಕ್ಕಿ ಹೆಬ್ಬಾಳು ರಂಗೇಗೌಡರೂ ಕೃಷ್ಣರಾಜಪೇಟೆ. ಶ್ರೀ॥ ಬಂದೀಗೌಡರೂ, ಮಾತಯ್ಯನವರೂ ಶ್ರೀರಂಗಪಟ್ಟಣದ ತಾಲ್ಲೂಕು. ಶ್ರೀ ಕೆ. ಕೃಷ್ಣಪ್ಪಗೌಡರೂ, ಟಿ. ಮರಿಯಪ್ಪನವರೂ ನಾಗಮಂಗಲದ ತಾಲ್ಲೂಕು. ಶ್ರೀ॥ ಕೆ. ವಿ. ವೀರಣ್ಣನವರೂ, ಬಿ. ಎಸ್. ವೆಂಕಟನಾಗಪ್ಪಶೆಟ್ಟರೂ ಚಾಮರಾಜನಗರದ ತಾಲ್ಲೂಕು. ಶ್ರೀ॥ ಇಬ್ರಾಹಿಂ ಖಾನರವರೂ, ನಂಜಯ್ಯನವರೂ ಹುಣಸೂರು ತಾಲ್ಲೂಕು. ಶ್ರೀ॥ ಬಿ. ಎಸ್. ಪುಟ್ಟಸ್ವಾಮಿಯವರು (ಸ್ಪರ್ಧೆಯಿಲ್ಲದೆ) ಯಳಂದೂರು ತಾಲ್ಲೂಕು. ಶ್ರೀ॥ ತಲಕಾಡು ಸಾಹುಕಾರರಾದ ಶಿವಲಿಂಗಸ್ವಾಮಿಗಳೂ, ವೀರರಾಜೆ ಅರಸಿನವರೂ ಟಿ. ನರಸೀಪುರದಿಂದ. ಶ್ರೀ॥ ಸಾಹುಕಾರ್ ಕೆ. ಸಿ. ಸುಬ್ಬಣ್ಣನವರೂ, ಗುರುಕಾರ್ ನಂಜಪ್ಪನವರೂ ಗುಂಡಲಪೇಟೆ ತಾಲ್ಲೂಕಿನಿಂದ. ಶ್ರೀ॥ ಬಳೇ ಸಿದ್ದಲಿಂಗಶೆಟ್ಟರೂ, ಪಟೇಲ್ ಚಿನ್ನಪ್ಪನವರೂ ಎಡತೊರೆ ತಾಲ್ಲೂಕಿನಿಂದ. ಶ್ರೀ॥ ಎಸ್. ಸಿ. ಮಲ್ಲಯ್ಯನವರೂ, ಎಚ್. ಕೆ. ವೀರಣ್ಣಗೌಡರೂ ಮದ್ದೂರು ತಾಲ್ಲೂಕಿನಿಂದ ಚುನಾವಣೆಯಲ್ಲಿ ವಿಜಯಶಾಲಿಗಳಾದರು.

ಮೇಲ್ಕಂಡ ಎಲ್ಲಾ ಮಹನೀಯರೂ ಜಾತಿ, ಕುಲ ಭೇದಗಳನ್ನು ಬಿಡು ಪ್ರಜಾಹಿತ ಚಿಂತಕರಾಗಿ ಒಡವರ ಬಂಧುಗಳಾಗಲಿ ಧರ್ಮ ಕಾರ್ಯಗಳಲ್ಲಿ ನಿರತರಾಗಲಿ. ದೇಶಸೇವಾ ಕಾರ್ಯಗಳಲ್ಲಿ ದಿವ್ಯಜ್ಯೋತಿಗಳಾಗಲಿ. ಮಾದರಿ ಮೈಸೂರಿನ ಪುರೋಭಿವೃದ್ಧಿಯಲ್ಲಿ ನಿರತರಾಗಲಿ. ಕರ್ತವ್ಯದಲ್ಲಿ ಲೋಪವಿಲ್ಲದವರಾಗಲಿ. ಸಾರ್ವಜನಿಕ ಸೇವಾ ಕ್ಷೇತ್ರದಲ್ಲಿ ತಮ್ಮ ತನುಮನಧನಗಳನ್ನು ಸಮರ್ಪಿಸಲಿ

ಪ್ರಜಾ ಹಿತಚಿಂತಕ,

ಜೆ. ಸ್ವಾಮಿದಾಸ್

ಸರ್ದಾರ್ ವಲ್ಲಭಾಯಿ ಪಟೇಲರು.

ಇವರಿಗೆ ಮೂಗಿನ ಶಸ್ತ್ರ ಚಿಕಿತ್ಸೆ ನಡೆಯಿತು.

ರೈಲಿನಿಂದ ಗಾಡಿ ನೊಗಚಿತು

ಕಳೆದ ಶುಕ್ರವಾರ ಮಧ್ಯಾಹ್ನ ನಂಜನಗೂಡಿಗೆ ಹೋಗುತ್ತಿದ್ದ ರೈಲಿನ ಎಂಜಿನ್ನು ಕಪಿನೀ ಸೇತುವೆಯ ಬಳಿ ಕೂಗಲಾಗಿ ಸೇತುವೆಯ ದಕ್ಷಿಣಭಾಗದ ಮೂಲೆಯಲ್ಲಿ ಹೋಗುತ್ತಿದ್ದ ಒಂದು ಗಾಡಿಯ ಎತ್ತುಗಳು ಬೆದರಿದುದರಿಂದ ಗಾಡಿಯು ಅನಾಮತ್ತಾಗಿ ಮಗುಚಿಕೊಂಡು ತಲೆಕೆಳಗಾಗಿ ಹಳ್ಳಕ್ಕೆ ಬಿದ್ದಿತು. ಗಾಡಿ ಮುರಿದುಹೋಯಿತು. ಎತ್ತುಗಳಿಗೂ ಗಾಡಿಯವನಿಗೂ ಘಾಯಗಳಾದುವು. ಇಂತಹ ಆನಾಹುತಗಳು ಆಗಾಗ್ಗೆ ಉಂಟಾಗುತ್ತಿವೆ. ಇಲ್ಲಿ ಒಂದು ಕಟಕಟೆಯನ್ನಾದರೂ ಏರ್ಪಡಿಸುವುದು ಅತ್ಯಾವಶ್ಯಕ.

ಸನ್ಮಾನ.

ಮೈಸೂರು ಸುಪ್ರಸಿದ್ಧ ಅಡ್ವೋಕೇಟರವರಾದ ಶ್ರೀ॥ ಕೆ. ಶೇಷಾದ್ರಿಯವರು ತಮ್ಮ ಜನಾಂಗಕ್ಕೆ ಮಾಡಿರುವ ವಿಶೇಷವಾದ ಪ್ರಯೋಜನಗಳಿಗಾಗಿ ಕೃತಜ್ಞತೆಯನ್ನು ಸೂಚಿಸಲು ಮೈಸೂರು ಭಾವಸಾರ ಕ್ಷತ್ರಿಯ ಯುವಕ ಸಂಘದವರು ಅವರನ್ನು ಬರಮಾಡಿಕೊಂಡು ಪಾಂಡುರಂಗವಿಠಲ ದೇವಸ್ಥಾನದಲ್ಲಿ ಅವರಿಗೆ ಒಂದು ಬಿನ್ನವತ್ತಳೆಯನ್ನು ಅರ್ಪಿಸಿ ಸತ್ಕರಿಸಿದರು. ಶ್ರೀ॥ ಟಿ. ಕೃಷ್ಣರಾಯರವರು ಅಗ್ರಾಸನವನ್ನು ವಹಿಸಿದ್ದರು.

ಸಾಧ್ವಿ

೩-೮-೩೬ ನೇ ಸೋಮವಾರ

ಇದಕ್ಕೆ ಅಂತ್ಯವೆಲ್ಲಿ?

ರಾಷ್ಟ್ರೀಯ ಧ್ವಜದ ಮೇಲೆ ನಮ್ಮ ಅಧಿಕಾರಿಗಳು ಹಲವು ವರ್ಷಗಳಿಂದ ಹಾಕುತ್ತಿರುವ ನಿರ್ಬಂಧವನ್ನು ತೆಗೆದು ಹಾಕುವರೆಂಬ ವದಂತಿಯು ಕೆಲವು ದಿನಗಳ ಹಿಂದೆ ಹರಡಿತ್ತು. ಈ ಪ್ರತಿ ಬಂಧಕದ ಅನವಶ್ಯಕತೆಯು ಈಗೇನೂ ಇಲ್ಲವೆಂದೂ ಸುಮ್ಮನೆ ನಿಷ್ಪ್ರಯೋಜಕ ಕಟ್ಟಳೆಯನ್ನು ಕೊಬ್ಬು ಕೊಟ್ಟ ಅಧಿಕಾರಿಗೆ ಬೇಸರವಾಗಿರುವುದೆಂದೂ ನಂಬಲರ್ಹವಾದ ಕಡೆಗಳಿಂದ ತಿಳಿದು ಬಂದಿತ್ತು. ಇನ್ನು ಮುಂದೆ ಧ್ವಜವನ್ನು ಪ್ರತಿಬಂಧಿಸುವುದಿಲ್ಲವೆಂದೂ ನಾವು ನಂಬಿದ್ದೆವು. ಆದರೂ ಮೈಸೂರು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು ರಾಷ್ಟ್ರೀಯ ಧ್ವಜದ ಮೇಲೆ ನಿರೋಧವನ್ನು ಮತ್ತೆ ಆರು ತಿಂಗಳ ಕಾಲ ಹೆಚ್ಚಿಸಿರುತ್ತಾರೆ.

ಇದನ್ನು ನಾವು ವಿಶೇಷವಾಗಿ ಖಂಡಿಸಬೇಕಾಗಿಲ್ಲ. ಇನ್ನು ಮೇಲೆಯೂ ಇಂತಹ ಆಜ್ಞೆಗಳನ್ನು ಹೊರಡಿಸುವುದು ಕೇವಲ ಅನುಚಿತವಾಗಿದೆ. ಬ್ರಿಟಿಷ್ ಇಂಡಿಯದಲ್ಲಿ ಇಲ್ಲದ ಈ ನಿರ್ಬಂಧವು ಮೈಸೂರಿನಲ್ಲೇಕೆ? ಬ್ರಿಟಿಷ್ ಇಂಡಿಯದಲ್ಲಿಯೂ ಬ್ರಿಟಿಷರ ರಾಜ್ಯಭಾರವಿದೆ ಆದಿಕಾರವರ್ಗವಿದೆ. ಕಾನೂನು ಕಟ್ಟಳೆಗಳಿವೆ. ಅಲ್ಲಿ ಯಾವ ತಡೆಯೂ ಇಲ್ಲದೆ ಬಹಿರಂಗವಾಗಿ ಧ್ವಜವನ್ನು ಪ್ರದರ್ಶಿಸುವರು. ಅದಕ್ಕೆ ಯಾವ ಅಡಚಣೆಯೂ ಇರಕೂಡದೆಂದು ಹೈ ಕೋರ್ಟುಗಳಲ್ಲಿಯೂ ಸಹ ತೀರ್ಮಾನಗಳನ್ನು ಕೊಟ್ಟಿರುವರು. ಅಲ್ಲಿ ಯಾವ ಅನಾಹುತಗಳೂ ಸಂಭವಿಸಿಲ್ಲ. ಹೀಗಿರುವಲ್ಲಿ ನಮ್ಮ ಅಧಿಕಾರಿಗಳ ಈ ಮಿತಿಮೀರಿದ ಉತ್ಸಾಹವು ಆಭಾಸಕರವಾಗಿದೆ.

ಇದುವರೆಗೆ ಈ ಆಜ್ಞೆಯು, ಆರು ತಿಂಗಳಿಗೊಮ್ಮೆ ಸುಮಾರು ಹತ್ತಾವರ್ತಿ ಮುಂದುವರಿಸಲ್ಪಟ್ಟಿದೆ. ಅನೇಕ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರುಗಳು, ಸಿಟಿ ಮ್ಯಾಜಿಸ್ಟ್ರೇಟರುಗಳ ರುಜುವಿನಿಂದ ಹೊರಬಿದ್ದಿದೆ. ಇದಕ್ಕೆ ಇನ್ನೂ ಎಷ್ಟು ದಿನಗಳ ಯೋಗವಿದೆಯೋ ನೋಡಬೇಕು. ಒಟ್ಟಿನಲ್ಲಿ ಇದು ಕೇವಲ ಅರ್ಥವಿಲ್ಲದ ಮತ್ತು ಅನುಚಿತವಾದ ನಿರ್ಬಂಧವಾಗಿದೆ.

ಈ ಧ್ವಜವನ್ನು ಗೌರವಿಸುವವರು ದೇಶಾಭಿಮಾನಿಗಳು ಮೈಸೂರುದೇಶದಲ್ಲಿಯೂ ಮೈಸೂರು ಶ್ರೀಮನ್ಮಹಾರಾಜರಲ್ಲಿಯೂ ಅವರಿಗೆ ಸಂಪೂರ್ಣವಾದ ಗೌರವವಿದೆ. ಧ್ವಜಕ್ಕೆ ವಿರುದ್ಧವಾದ ಅರ್ಥವನ್ನು ಕಲ್ಪಿಸುವುದು ಯೋಗ್ಯವಲ್ಲ. ಅಂತೂ ಒಂದಾನೊಂದು ದಿನ ತಮಗೇ ಬೇಸರವಾಗಿ ಈ ಆಜ್ಞೆಯನ್ನು ಅಧಿಕಾರಿಗಳು ತೆಗೆದು ಹಾಕುವರು. ಇದು ಮತ್ತಷ್ಟು ಪರಿಹಾಸ್ಯಕರವಾಗಿ ಪರಿಣಮಿಸುವ ಮುಂಚೆಯೇ ಹಾಗೆ ಮಾಡಲೆಂದು ನಾವು ಹಾರೈಸುತ್ತೇವೆ.

ಪರ್ವತ ಪ್ರಸವ—ಮೂಷಕ ಜನನ

ಕಳೆದ ಮಂಗಳವಾರ ಮೈಸೂರು ಪೌರಸಭೆಯ ಒಂದು ವಿಶೇಷ ಅಧಿವೇಶನವು ಜರುಗಿತು. ಛತ್ರ, ಮಠ, ದೇವಸ್ಥಾನ ಮುಂತಾದ ಧರ್ಮಸಂಸ್ಥೆಗಳಿಂದ ಹಳೇ ಬಾಕಿ ಬಾಬ್ತು ನೀರಿನ ತೆರಿಗೆಯನ್ನು ವಸೂಲ್ಮಾಡಬಾರದೆಂಬುದೊಂದು ಚರ್ಚಿಸಲ್ಪಟ್ಟ ವಿಷಯ. ಇಂತಹ ಸಂಸ್ಥೆಗಳಿಗೆ ಈ ತೆರಿಗೆಯನ್ನು ವಿನಾಯಿತಿ ಮಾಡಬೇಕೆಂಬುದು ಚರ್ಚೆಗಿಟ್ಟ ಮತ್ತೊಂದು ವಿಷಯ. ಮತ್ತು ದೇವರಾಜ ಮಾರ್ಕೆಟ್ ಮಳಿಗೆಗಳಿಗೆ ಹೊಸದಾಗಿ ಹೆಚ್ಚಿಸಲ್ಪಟ್ಟಿರುವ ಬಾಡಿಗೆ ದರಗಳು ಬಹಳ ದುಬಾರಿಯಾಗಿರುವುದರಿಂದ ಅದನ್ನು ಸದ್ಯಕ್ಕೆ ವಸೂಲ್ಮಾಡದೆ ತಟಸ್ಥವಾಗಿರಬೇಕೆಂಬುದು ಮತ್ತೊಂದು ವಿಷಯ.

ಮಾರ್ಕೆಟ್ ವರ್ತಕರು ತಮ್ಮ ಕಷ್ಟಸುಖಗಳನ್ನು ಹಲವು ರೀತಿಯಿಂದ ಅಧಿಕಾರಿಗಳಿಗೆ ವ್ಯಕ್ತಪಡಿಸಿರುವರು. ಮತ್ತು ಅವರ ಕುತೂಹಲವನ್ನು ಸೂಚಿಸಲು ವರ್ತಕರು ತಂಡ ತಂಡವಾಗಿ ಪೌರಸಭೆಯ ತುಂಬಾ ಬಂದು ಸೇರಿದ್ದರು. ತಮಗೇನಾದರೂ ಪ್ರಯೋಜನವಾದೀತೇನೋ ಎಂದು ಬಹಳ ಕಾತುರರಾಗಿದ್ದರು. ಆದರೆ ಸಭೆಯ ಕಾಲವೆಲ್ಲವೂ ಮೊದಲನೇ ಅಂಶಕ್ಕೆ ವಿನಿಯೋಗವಾಗಿ ಹೋಯಿತು. ಕೇವಲ ಎರಡು ಮೂರು ಸಾವಿರ ರೂಪಾಯಿಗಳ ಸಂದೇಹಾಸ್ಪದವಾದ ತೆರಿಗೆಯನ್ನು ವಜಾಮಾಡುವ ವಿಷಯದಲ್ಲಿ ಸಭೆಯ ಅಮೂಲ್ಯವಾದ ಮೂರುವರೆ ಗಂಟೆಗಳ ಕಾಲದ ಅವಧಿಯು ಕಳೆಯಲ್ಪಟ್ಟಿತು. ತರ್ಕವಿತರ್ಕಗಳು ವಿಪರೀತವಾಗಿ ಆದವು. ಅಳಿದೂ ಸುರಿದೂ ನಾಲ್ಕಾರು ಎಮೆಂಡ್‌ಮೆಂಟುಗಳು ಬಂದುವು. ಪಾಯಿಂಟ್ ಆಫ್ ಆರ್ಡರುಗಳ ಸುರಿಮಳೆಯು ಆಯಿತು. ಅಧ್ಯಕ್ಷರಿಗೂ, ಕೆಲವು ಸದಸ್ಯರಿಗೂ ಬಿರುಸಾದ ಮಾತುಕತೆಗಳು ನಡೆದವು. ಸ್ಥಳೀಯ ಸರ್ಕಾರದ ರತ್ನನಿರೂಪಣೆಗಳೂ, ಜರುಗಿದವು.

ಪರಿಣಾಮದಲ್ಲಿ ಮೊದಲಿಂದ ನೀರಿನ ತೆರಿಗೆಯನ್ನು ವಜಾ ಮಾಡಬೇಕೆಂದು ತೀರ್ಮಾನವಾಯಿತು. ಯಾವ ನಿಘವಾದ ಬಾಡಿಗೆ ಬಂಕಗಳನ್ನೂ ಪಡೆಯದಿರುವ ಧರ್ಮ ಸಂಸ್ಥೆಗಳಿಗೆ ಮಾತ್ರ ಇದು ಅನ್ವಯಿಸುವುದು. 1933ನೇ ಇಸವಿ ಜೂನ್ ಆಖೈರುವರೆಗೆ ಈ ತೆರಿಗೆಯನ್ನು ಕೇಳಲು ಕಾನೂನಿನ ಪ್ರಕಾರ ಅವಕಾಶವೇ ಇಲ್ಲ. ಅಲ್ಲಿಂದೀಚೆಗೆ ಕೇಳಲು ಕಾನೂನಿನ ಎಲ್ಲಾ ವಿಧಿಗಳನ್ನೂ ಪಾಲಿಸಿ ಈ ತೆರಿಗೆಯನ್ನು ಡಿಮ್ಯಾಂಡ್ ಮಾಡಿಲ್ಲ. ಅಂತೂ ಇಂತೂ ತೆರಿಗೆಯನ್ನು ಕೇಳುವಂತಿಲ್ಲ, ಎಂಬ ಕಾರಣದ ಮೇಲೆ ಮೇಲ್ಕಂಡರೀತಿ ತೀರ್ಮಾನವಾಯಿತು.

ಬಳಿಕ ಹೊತ್ತಾದುದರಿಂದ ಮಿಕ್ಕ ವಿಷಯಗಳನ್ನು ಚರ್ಚಿಸಲಾಗಲಿಲ್ಲ. ಮಾರ್ಕೆಟ್ ವಿಷಯವು ಚರ್ಚೆಗೆ ಬರಲಿಲ್ಲ. ವರ್ತಕರು ಭಗ್ನಮನೋರಥರಾದರು. ಬಂದದಾರಿಗೆ ಸುಂಕವಿಲ್ಲವೆಂದು ತಿಳಿದು ಅವರು ತಮ್ಮ ದಾರಿ ಹಿಡಿದು ತೆರಳಿದರು.

ಭವಿಷ್ಯ ವಾಣಿ.

ಮ್ಯಾಡಂ ಶೈಲಾ ಪಮೋವಾ ಎಂಬಾಕೆಯು ಪ್ರಪಂಚದ ಹಲವು ಪ್ರಾಮುಖ್ಯ ವಿಷಯಗಳ ಮೇಲೆ ವಿಚಿತ್ರವಾದ ಭವಿಷ್ಯವನ್ನು ಹೇಳಿರುವಳು. ಆಕೆಯು ಹಿಂದೆ ಅನೇಕಾವರ್ತಿ ಹೀಗೆಯೇ ಭವಿಷ್ಯಗಳನ್ನು ಹೇಳಿದ್ದಳು. ಕೆಲವು ನಿಜವಾದುವು ಮತ್ತೆ ಕೆಲವು ಸುಳ್ಳಾದುವು. ಅಂತೂ ಆಕೆಯು ಇತರ ಭವಿಷ್ಯಕಾರರಂತೆ ಪ್ರಸಿದ್ಧಿಗ ಬಂದಿರುವಳು. ಆಕೆಯು ಈ ರೀತಿ ಹೇಳಿರುವಳು —

ಅಬಿಸೀನಿಯಾ ಚಕ್ರವರ್ತಿಯಾದ ನೆಗಸನ ಆಟ ಮುಗಿಯಿತು. ಆದರೆ ಅಬಿಸೀನಿಯವು ಇಟಲಿಯ ಅಧೀನವಾಗಿದೆಯೆಂದು ಭಾವಿಸಕೂಡದು. ಇನ್ನೂ ಯುದ್ಧ ಮತ್ತು ಅಶಾಂತಿಯ ಮೋಡಗಳು ಆಡುತ್ತಲೇ ಇವೆ. ಇನ್ನೊಬ್ಬ ಹೊಸ ಚಕ್ರವರ್ತಿಯು ಮುಂದೆ ಬಂದು ಇಟಲಿಯನ್ನು ಪ್ರತಿಭಟಿಸಿ ಅಬಿಸೀನಿಯವನ್ನು ವಶಪಡಿಸಿಕೊಳ್ಳುವನು. ಇಟಲಿಯವರು ಇನ್ನೂ ಅನೇಕ ಭಾಗಗಳಿಗೆ ಪ್ರವೇಶಿಸಿಲ್ಲ. ಅಡಿಸ್ ಅಬಾಬಾ ನಗರದ ಮೇಲೆ ಇಟಲಿಯ ಬಾವುಟವು ಹಾರಾಡುತ್ತಿದೆ. ಇದರಿಂದಲೇ ಇಟಲಿಗೆ ಸಂಪೂರ್ಣ ವಿಜಯವಾಯಿತೆಂದು ಹೇಳಬಾರದು. ಇಟಲಿಗೆ ಇನ್ನೂ ಕಷ್ಟ ಪರಂಪರೆಗಳು ವಿಪರೀತವಾಗಿವೆ.

ಹಿಟ್ಲರ್ ಮತ್ತು ಮುಸ್ಸೋಲಿನಿಯವರುಗಳ ವಿಷಯವಾಗಿ ಮಾತು ಬಂದಿತು. ಆಕೆಯು ಬಹಳವಾಗಿ ರೇಗಿದಳು. ಯೂರೋಪಿನಲ್ಲಿ ಇವರು ನಿರಂಕುಶ ಪ್ರಭುಗಳೆಂದು ಆಕೆಯು ಅಭಿಪ್ರಾಯಪಟ್ಟಳು. ಹಿಟ್ಲರನು ಪಾತಾಳಕ್ಕೆ ಬೀಳುವನು. ಅವನು ಅಸಮ್ಮತ್ತಿಗೆ ಗುರಿಯಾಗುವನು. ಮುಸ್ಸೋಲಿನಿಗೆ ಈಗಿನ ದೆಸೆಯು ಸ್ವಲ್ಪಕಾಲ ಮಾತ್ರ ನಡೆಯುತ್ತದೆ. ಅನಂತರ ಅವನು ನಾಶವಾಗುವನು, ಎಂದು ಹೇಳಿದಳು.

ಮಹಾತ್ಮರು ಕಾಂಗ್ರೆಸ್ ಸಭೆಗೆ ಪುನಃ ಪ್ರವೇಶಿಸುತ್ತಾರೆಂದು ಆಕೆಯು ನುಡಿದಿರುವಳು. ಕಾಂಗ್ರೆಸ್ಸಿಂದಲೇ ಮಹಾತ್ಮರಿಗೆ ಪ್ರಾಣ. ಭಾರತ ದೇಶದಲ್ಲಿ ಯಾವಾಗಲೂ ಸಂತೋಷಕರವಾದ ಆಶಾವಾದವು ತುಂಬಿದೆಯೆಂದು ಹೇಳಿ ಸಂತೋಷಪಟ್ಟಳು.

ಬಡ ಹುಡುಗರಿಗೆ ಸಹಾಯ.

ಮೈಸೂರು ಶಾರದಾವಿಲಾಸ ಹೈಸ್ಕೂಲಿನವರು ಬಡ ವಿದ್ಯಾರ್ಥಿಗಳ ಸಹಾಯಾರ್ಥವಾಗಿ ಒಂದು ಸಮಿತಿಯನ್ನು ಏರ್ಪಡಿಸಿರುವರು. ಅವರು ಮಹಾಜನರಿಂದ ಧನಧಾನ್ಯ ರೂಪದಲ್ಲಿ ಚಂದಾ ಎತ್ತಿ ಮಧ್ಯಾಹ್ನದ ವಿರಾಮಕಾಲದಲ್ಲಿ ಸುಮಾರು ನೂರು ಜನ ವಿದ್ಯಾರ್ಥಿಗಳಿಗೆ ಉಪಾಹಾರವನ್ನು ಕೊಡುತ್ತಿರುವರು. ಯಾವ ಭೇದ ಭಾವವನ್ನೂ ಇಟ್ಟಿರುವುದಿಲ್ಲ. ಇದು ಅತ್ಯಂತ ಶ್ಲಾಘ್ಯವಾದ ಏರ್ಪಾಡು. ವಿದ್ಯಾರ್ಥಿಗಳ ಸಂಖ್ಯೆಯು ದಿನೇ ದಿನೇ ಹೆಚ್ಚುತ್ತಿದೆ. ಮಹಾಜನರು ಉದಾರವಾಗಿ ಸಹಾಯಮಾಡಬೇಕಾಗಿ ಕೋರಲಾಗಿದೆ.

ವಸ್ತು ಪ್ರದರ್ಶನ.

ನವರಾತ್ರಿ ಉತ್ಸವದ ಸಂದರ್ಭದಲ್ಲಿ ನಡೆಯುವ ವಸ್ತು ಪ್ರದರ್ಶನದ ಏರ್ಪಾಡುಗಳು ಬಿರುಸಿನಿಂದ ನಡೆಯುತ್ತಿವೆ. ಹೊಸ ಕಟ್ಟಡವು ಬಹಳ ಆಕರ್ಷಣೀಯವಾಗಿ ಕಟ್ಟಲ್ಪಡುತ್ತಿದೆ. ವಿಸ್ತಾರವಾದ ಪ್ರದೇಶವು ಮನೋಹರವಾಗಿ ಶೃಂಗರಿಸಲ್ಪಡುತ್ತಿದೆ. ಸ್ಥಳಪರಸ್ಥಳಗಳಿಂದ ಬರತಕ್ಕ ಪ್ರದರ್ಶಕರಿಗೆ ಎಲ್ಲಾ ಸೌಕರ್ಯಗಳನ್ನೂ ಒದಗಿಸಲು ಏರ್ಪಾಡುಗಳು ಆಗುತ್ತಿವೆ. ಪ್ರದರ್ಶನ ಸಮಿತಿಗೆ ದ್ವಿತೀಯ ಸಚಿವರಾದ ಶ್ರೀ ಎನ್. ಮಾಧವರಾಯರು ಅಧ್ಯಕ್ಷರಾಗಿಯೂ, ಮ॥ ಎಸ್. ಜಿ. ಶಾಸ್ತ್ರಿಗಳವರು ಉಪಾಧ್ಯಕ್ಷರಾಗಿಯೂ, ಮ॥ ಎಚ್. ಎಸ್. ಗೋವಿಂದರಾಯರು ಕಾರ್ಯದರ್ಶಿಗಳಾಗಿಯೂ ನೇಮಿಸಲ್ಪಟ್ಟಿರುವರು.

ಹುಲಿಯ ಹಾವಳಿ

ಶಿವಮೊಗ್ಗಾ ಡಿಸ್ಟ್ರಿಕ್ಟಿನ ಶಿಕಾರಿಪುರ ಸೀಮೆಯಲ್ಲಿ ಕಳೆದ ಆರು ತಿಂಗಳಿಂದ ಹುಲಿಗಳು ಹಾವಳಿ ಮಾಡುತ್ತಾ ದನಗಳನ್ನು ಹಿಡಿದುಕೊಂಡು ಹೋಗುತ್ತಿವೆ. ಅವುಗಳನ್ನು ಯಾರು ಬೇಕಾದರೂ ಗುಂಡು ಹಾಕಬಹುದೆಂದು ಸರ್ಕಾರದವರು ಪ್ರಕಟಿಸಿರುವರು.

ದಿವಾನರು

ದಿವಾನ್ ಇಂಚಾರ್ಜ್ ಆದ ರಾಜಮಂತ್ರಪ್ರವೀಣ ಎಸ್. ಸಿ. ರಾಜಗೋಪಾಲಾಚಾರಿಯವರು ಕಳೆದ ತಾ॥ ೩೦ರಲ್ಲಿ ಶಿವಸಮುದ್ರಕ್ಕೆ ಭೇಟಿಕೊಟ್ಟರು. ವಿದ್ಯುಚ್ಛಕ್ತಿ ಕಾರ್ಯಾಲಯವನ್ನು ಪರಿಶೀಲಿಸಿ ವಾಪಸು ಬಂದರು.

ಸೇನಗುಪ್ತರ ಸ್ಮರಣೆ.

ಕಳೆದ 23 ನೇ ತಾ॥ ಬಂಗಾಳದ ಮುಖ್ಯ ಭಾಗಗಳಲ್ಲಿಯೂ ಮತ್ತು ಹಿಂದೂಸ್ಥಾನದ ಅನೇಕ ಭಾಗಗಳಲ್ಲಿಯೂ ದಿವಂಗತ ದೇಶಭಕ್ತ ಜೆ. ಎಂ. ಸೇನಗುಪ್ತರ ನಾಚರಣೆಯು ಶ್ರದ್ಧಾ ಭಕ್ತಿಗಳಿಂದ ನೆರವೇರಿತು. ಅವರ ಸ್ವಾರ್ಥತ್ಯಾಗ ಧೈರ್ಯ ಸಾಹಸಗಳು ಕೊಂಡಾಡಲ್ಪಟ್ಟವು.

ಉಪಾಕರ್ಮ.

ಈ ಕರ್ಮವು ನಿನ್ನೆಯದಿನ ಕೆಲವರಿಂದ ಆಚರಿಸಲ್ಪಟ್ಟಿತು. ಈದಿನ ಕೆಲವರಿಂದ ಆಚರಿಸಲ್ಪಡುತ್ತದೆ. ಇನ್ನೂ ಕೆಲವರು ಇದೇ ಬಾದ್ರಪದ ಬಿದಿಗೆ ಸೋಮವಾರವೂ ಆಚರಿಸುವರು. ಈ ಕರ್ಮದ ಮಹತ್ವವೇನು? ಇದರ ಆಚರಣೆಯ ಸಲ್ಲಕ್ಷಣವು ಎಂಬುದರ ವಿಷಯವಾಗಿ ಪಂಡಿತರೊಬ್ಬರ ಅಭಿಪ್ರಾಯವನ್ನು ಈ ಕೆಳಗೆ ಕೊಡಲಾಗಿದೆ —

ಇದು ಸ್ಮಾರ್ತ, ವೈಷ್ಣವ, ಶ್ರೀ ವೈಷ್ಣವ ಮುಂತಾದ ತ್ರಿಮತಸ್ಥ ಬ್ರಾಹ್ಮಣರಿಂದಲೂ ವರ್ಷಂಪ್ರತಿ ಆಚರಿಸಲ್ಪಡತಕ್ಕ ಕರ್ಮವಾಗಿದೆ. ಉಪಾಕರ್ಮ ಅಂದರೆ ವೇದಾರಂಭ ಎಂದು ಅರ್ಥವಾಗುತ್ತದೆ. ಇದನ್ನು ಆಚರಿಸತಕ್ಕವರಲ್ಲಿ ಆಪಸ್ತಂಭ, ಅಶ್ವಲಾಯನ, ದ್ರಾಹ್ಯಾಯಣ ಬೋಧಾಯನ ಎಂಬ ಹಲವು ಭೇದವುಂಟು. ಈ ಉಪಾಕರ್ಮವನ್ನು ಆಚರಿಸಲು ಕೆಲವರು ಶ್ರಾವಣ ಪೌರ್ಣಿಮೆಯನ್ನೂ, ಮತ್ತೆ ಕೆಲವರು ಶ್ರವಣ ನಕ್ಷತ್ರವು ಬರತಕ್ಕ ದಿನವನ್ನೂ ಪ್ರಶಸ್ತವಾಗಿಟ್ಟುಕೊಂಡಿರುತ್ತಾರೆ.

ಪೂರ್ವೋಕ್ತ ಕರ್ಮಕ್ಕೆ ಅಂಗಭೂತವಾಗಿ ಮಹಾ ಸಂಕಲ್ಪ, ಮಹಾ ನದೀಸ್ನಾನ, ವೇದೋತ್ಸರ್ಜನೆ, ನೂತನ ಯಜ್ಞೋಪವೀತಧಾರಣ, ಋಷಿತರ್ಪಣ, ಋಷಿಪೂಜೆ, ವ್ಯಾಸಪೂಜೆ, ವೇದಾರಂಭ, ಇವುಗಳೇ ಈ ಕರ್ಮದಲ್ಲಿ ಪ್ರಾಮುಖ್ಯವಾದವು. ಇವನ್ನು ಆಚರಿಸಬೇಕಾದ ಉದ್ದೇಶವೇನು? ಎಂದು ಪರ್ಯಾಲೋಚಿಸಬೇಕು.

ದ್ವಿಜರಿಗೆ ಮುಖ್ಯವಾಗಿ ಬೇಕಾದ ಧನ ಯಾವುದೆಂದರೆ—ವೇದ. ಆ ವೇದವನ್ನು ಸೃಷ್ಟಿ ಮೊದಲುಗೊಂಡು ಪ್ರಳಯದ ಪರ್ಯಂತರ ಗುರುಪರಂಪರೆಯಲ್ಲಿ ಅಕ್ಷರ, ಸ್ವರ, ಆನುಪೂರ್ವಿ ಇವೇ ಮುಂತಾದುವ ಕ್ರಮ ಲೋಪವಿಲ್ಲದಂತೆ ಪರಿಪಾಲನೆಮಾಡುವುದು ದ್ವಿಜರ ಕರ್ತವ್ಯವಾಗಿದೆ. ಆ ವೇದದಿಂದ ಐಹಿಕಾಮುಷ್ಮಿಕ ಸೌಖ್ಯಗಳೆಲ್ಲವೂ ಪ್ರಾಪ್ತವಾಗುವುವು. ಮನುಷ್ಯರಿಗೆ ಮುಖ್ಯವಾಗಿ ಬೇಕಾದದ್ದು ಸುಖ ಮತ್ತು ದುಃಖನಿವೃತ್ತಿ. ಇವೆರಡೂ ವೇದದಿಂದ ಪ್ರಾಪ್ತವಾಗುತ್ತೆಂದು ಸರ್ವರಿಗೂ ನಂಬಿಕೆಯಿದೆ. ಆ ವೇದ ನಿಯಮಪೂರ್ವಕವಾಗಿ ಗುರುಮುಖದಿಂದ ಅಧ್ಯಯನವೆಂಬುದು ಶ್ರಾವಣ ಪೌರ್ಣಮಿ ಮೊದಲು ಪುಷ್ಯ ಪೌರ್ಣಮಿಯವರೆಗೂ ಮಾಡಲ್ಪಡಬೇಕೆಂದು ಶಾಸ್ತ್ರದಲ್ಲಿ ಮಹರ್ಷಿಗಳಿಂದ ಹೇಳಲ್ಪಟ್ಟಿದೆ. ಅಂಥ ವೇದದ ಆರಂಭವೇ ಉಪಾಕರ್ಮ ಶಬ್ದದ ಅರ್ಥ.

ಉಪಾಕರ್ಮದ ದಿನ ಪ್ರಾಜ್ಞರಾಗಿರುವ ವೇದಾಚಾರ್ಯರನ್ನು ಮುಂದಿಟ್ಟುಕೊಂಡು ಈ ಕರ್ಮವನ್ನು ವೇದೋಕ್ತವಾಗಿ ಪ್ರತಿ ವರ್ಷದಲ್ಲೂ ನಡೆಸುವುದು ಅನಾದಿಯಾಗಿ ಬಂದ ಪದ್ಧತಿ. ಈ ಕರ್ಮಾಚರಣೆಯಿಂದ ಬ್ರಹ್ಮತೇಜ

ದನಗಳಿಗಾದರೂ ರಕ್ಷಣೆ ಬೇಡವೆ.

ದನಗಳ ನೀರಿಗೆ ಆಸರವಾಗಿದ್ದ ದೊಡ್ಡಕೆರೆ ಬಟ್ಟಬಯಲಾಯಿತು. ಅವುಗಳು ಮನೆಯಿಂದ ಹೊರಗೆ ಕಾಲಾಡುವುದಕ್ಕೆಂದು ಹೊರಡುವುದೇ ತಡ ಅವನ್ನು ದೊಡ್ಡಿಗೆ ಕೂಡಿಬಿಡುವ, ದೊಡ್ಡಿಯಲ್ಲಿ ನಿಯೋಜಕ ರುಸುಂ ವಸೂಲೀಕರ ತಲೆಯಮೇಲೆ ಬೀಳುವುದು ತಪ್ಪಿದ್ದಲ್ಲ. ಅಲ್ಲಿ ಅವಕ್ಕೆ ಒಂದು ತೊಟ್ಟು ನೀರಿರುವುದಿಲ್ಲ. ಒಂದು ಹುಲ್ಲುಕಡ್ಡಿಯು ದೊರಕುವುದಿಲ್ಲ. ಒಟ್ಟಿನಲ್ಲಿ ಜಾನುವಾರುಗಳಿಗೆ ದೊಡ್ಡಿಯ ವಾಸವನ್ನು (ಲಿವಿಂಗ್ ಸ್ಲಾಟರ್ ಹೌಸ್ ಎಂದು) ಸಜೀವ ಕಟುಕರ ಗೃಹವೆಂದು ಧಾರಾಳವಾಗಿ ಕರೆಯಬಹುದು. ಯಾರಾದರೂ ಪುಣ್ಯಾತ್ಮರು ಅಲ್ಲಲ್ಲಿ ದನಕರುಗಳಿಗೆ ಕುಡಿಯುವುದಕ್ಕೆ ನೀರಿನ ತೊಟ್ಟಿಯನ್ನು ನಿರ್ಮಿಸಿದರೆ ಬೇಗಾಗುವುದೇ ತಡ ಆ ತೊಟ್ಟಿಗಳ ನೀರು ಸಿಕ್ಕದ ಹಾಗೆ ಗಲೀಜು ಆಗಿಬಿಡುತ್ತದೆ. ಹಾಗೆ ಗಲೀಜಾಗದಿರುವಂತೆ ತಕ್ಕ ಏರ್ಪಾಟನ್ನಾದರೂ ಮಾಡಬೇಡವೆ?

ಸಂಚಾರೋಪನ್ಯಾಸಗಳು

(ಒಬ್ಬ ಬಾತ್ಮೀದಾರರಿಂದ)

ಚಾಮರಾಜನಗರದ 'ಕಾದಂಬರೀ ಸಂಗ್ರಹ' ಮಾಸಪತ್ರಿಕೆಯ ಸಂಪಾದಕರಾದ ಶ್ರೀ॥ ಸಿ. ವೆಂಕಟರಮಣಶಾಸ್ತ್ರಿಗಳವರು ಕಳೆದ ತಿಂಗಳಲ್ಲಿ ಕ್ಲೋಸ್ಪೇಟೆ ಪ್ರೈಮರಿ ಸ್ಕೂಲಿನಲ್ಲಿ ಮನುಷ್ಯ "ಜೀವನದ ಗುರಿ" ಎಂಬ ವಿಚಾರವಾಗಿ ಸ್ವಾರಸ್ಯವಾದ ಉಪನ್ಯಾಸ ಮಾಡಿದರು. ಅಮಲ್ದಾರ್ ಮ॥ ಬಿ. ರಾಮಸ್ವಾಮಯ್ಯನವರು ಅಗ್ರಾಸನವನ್ನು ವಹಿಸಿದ್ದರು. ಮನುಷ್ಯ ಜೀವಮಾನವು ಜ್ಞಾನಸಂಪಾದನೆಯ ಗುರಿಯಿಂದಲೇ ಮುಂದರಿಯಬೇಕೆಂಬ ಸಂಗತಿಯನ್ನು ಉಪನ್ಯಾಸಕರು ಅನೇಕ ವೇದಶಾಸ್ತ್ರ ಉಪನಿಷದಾಧಾರಗಳಿಂದ ನಿರೂಪಿಸಿದರು. ಮಾರನೇ ದಿನ ಶ್ರೀ ಶಾಸ್ತ್ರಿಗಳವರು ಚನ್ನಪಟ್ಟಣದ ಟವನ್‌ಹಾಲಿನಲ್ಲಿ ಮತ್ತೊಂದು ಉಪನ್ಯಾಸವನ್ನು ಮಾಡಿದರು. ಇದೇ ರೀತಿ ಶಾಸ್ತ್ರಿಗಳು ಪ್ರತಿ ತಿಂಗಳೂ ಬೇರೆ ಬೇರೆ ಊರುಗಳಿಗೆ ಹೋಗಿ ಉಪನ್ಯಾಸಗಳನ್ನು ಮಾಡುವರು. ಆಗಸ್ಟ್ ತಿಂಗಳಲ್ಲಿ ಅರಸೀಕೆರೆ ಪ್ರಾಂತ್ಯಕ್ಕೆ ದಯ ಮಾಡಿಸುವರು.

ರೋಡ್‌ಸೆಸ್ಸು ಹೆಚ್ಚಿಸಬೇಕಂತೆ!

ಈಗಿರುವ ರೋಡ್‌ಸೆಸ್ ಫಂಡು ಸಾಲದೆಂದೂ ಅದನ್ನು ಹೆಚ್ಚಿಸಬೇಕೆಂದೂ ಕಳೆದ ವಾರ ಬೆಂಗಳೂರಿನಲ್ಲಿ ನಡೆದ ಏಜನ್ಸಿಯವರುಗಳ ಸಮ್ಮೇಳನದಲ್ಲಿ ತೀರ್ಮಾನಿಸಿಲಾಯಿತು.

ಸ್ಸು ಹೆಚ್ಚಿ ಆರೋಗ್ಯ ಸಂಪದಗಳು ಪ್ರಾಪ್ತವಾಗುವುದರಲ್ಲಿ ಲೇಶವೂ ಸಂಶಯವಿಲ್ಲವೆಂದು ಆಸ್ತಿಕರೆಲ್ಲರೂ ಮನಗಂಡಿರುವ ವಿಷಯವಾಗಿದೆ.

ಶಿವಮೊಗ್ಗಾ ಪೌರಸಭೆ?

ದ್ವಿತೀಯ ಸಚಿವರಾದ ಶ್ರೀ॥ ಎನ್. ಮಾಧವರಾಯರು ಕಳೆದ ತಿಂಗಳು ಶಿವಮೊಗ್ಗಾಕ್ಕೆ ದಯಮಾಡಿಸಿದರು. ಅವರು ಡಾ॥ ಕೆ॥ ಎಸ್. ನಾರಾಯಣರಾಯರೊಡನೆ ಮೆಗ್ಗಾನ್ ಆಸ್ಪತ್ರೆಯನ್ನೂ ಮತ್ತು ಇತರ ಸಂಸ್ಥೆಗಳನ್ನೂ ಪರಿಶೀಲಿಸಿದರು. 23ನೆ ತಾರೀಖು ಅವರಿಗೆ ಪೌರಸಭೆಯವರು ಒಂದು ಸಂತೋಷಕೂಟವನ್ನೇರ್ಪಡಿಸಿದ್ದರು. ಪೌರಸಭೆಯವರು ಶಿವಮೊಗ್ಗಾ ನಗರವನ್ನು ಅಭಿವೃದ್ಧಿಪಡಿಸಲು 15,000 ರೂಪಾಯಿಗಳ ಗ್ರಾಂಟನ್ನೂ ನೀರಿನ ಸರಬರಾಜಿಗಾಗಿ 1½ ಲಕ್ಷ ರೂಗಳ ಸಾಲವನ್ನೂ ಕೇಳಿದರು ಮತ್ತು ಡಾ॥ ಅನಂತಸ್ವಾಮಿಯವರ ಸಲಹೆಗಳಂತೆ ಮಲೇರಿಯಾ ರೋಗನಿವಾರಣೆಯ ಕಾರ್ಯಗಳನ್ನು ಶೀಘ್ರದಲ್ಲಿಯೇ ಕೈಕೊಳ್ಳಬೇಕೆಂದು ತಿಳಿಸಿದರು. ಈ ಪೌರಸಭೆಯ ಚೀಫ್ ಆಫೀಸರವರು ಎಂಜನಿಯರಿಂಗ್‌ನಲ್ಲಿ ಸಂಪೂರ್ಣ ಅನುಭವವನ್ನು ಹೊಂದಿರಬೇಕೆಂದೂ ಮತ್ತು ಪೌರಸಭೆಯ ಅಧ್ಯಕ್ಷರು ಚುನಾಯಿತ ಅಧ್ಯಕ್ಷರಾಗಿರಬೇಕೆಂದೂ ಹಾಗಿಲ್ಲದಿದ್ದಲ್ಲಿ ಡಾ॥ ಕೆ॥ ರಾಮರ ಪೌರಸಭೆಯ ಆಡಳಿತ ಸೂತ್ರವನ್ನು ವಹಿಸಬೇಕೆಂದೂ ದ್ವಿತೀಯ ಸಚಿವರಲ್ಲಿ ಕೋರಿದರು. ಆದಿಕರ್ಣಾಟಕರ ಮತ್ತು ಹಿಂದುಳಿದಿರುವ ವರ್ಗದವರಿಗಾಗಿ ಮ॥ ಅನಂತಯ್ಯನವರು 15,000 ರೂಗಳ ಗ್ರಾಂಟನ್ನು ಕೊಟ್ಟು ಅವರೆಲ್ಲರಿಗೂ ಸರಿಯಾದ ವಸತಿಯನ್ನೇರ್ಪಡಿಸಬೇಕೆಂದು ಅರಿಕೆಮಾಡಿದರು. ಪೌರಸಭೆಯ ಆಯವ್ಯಯದ ವರದಿಯನ್ನು ಸರ್ಕಾರಕ್ಕೆ ಕಳುಹಿಸಿದಲ್ಲಿ ಸರ್ಕಾರವು ಗ್ರಾಂಟಿನ ವಿಷಯವನ್ನು ಪರಿಶೀಲಿಸುವುದೆಂದು ಶ್ರೀ॥ ಮಾಧವರಾಯರು ತಿಳಿಸಿದರು. ಸಿಂಗಪೂರಿನಿಂದ ಬರುತ್ತಿರುವ ಅಡಕೆ ವ್ಯಾಪಾರದ ಸ್ಪರ್ಧೆಯನ್ನು ಎದುರಿಸಲು ಇಲ್ಲಿನ ಅಡಿಕೆ ವ್ಯಾಪಾರಿಗಳಿಗೆ ಸಾಕಾದಷ್ಟು ರಕ್ಷಣೆಯನ್ನು ಏರ್ಪಡಿಸಬೇಕೆಂದು ಪೌರಸಭೆಯವರು ಅರಿಕೆಮಾಡಿಕೊಂಡರು. ಕಾಫಿ ವ್ಯಾಪಾರಿಗಳಿಗೆ 3 ಲಕ್ಷ ರೂ ಸಾಲ ಕೊಟ್ಟಂತೆಯೇ ಅಡಿಕೆಯ ವ್ಯವಸಾಯಗಾರರಿಗೂ ಸಾಲವನ್ನು ಕೊಟ್ಟು ಅಡಿಕೆ ವ್ಯಾಪಾರವನ್ನು ಅಭಿವೃದ್ಧಿಪಡಿಸಬೇಕೆಂದು ಒತ್ತಾಯಪಡಿಸಿದರು. ಶೀಘ್ರದಲ್ಲಿಯೇ ಒಂದು ಅಡಿಕೆ ವ್ಯಾಪಾರದ ಕೋ ಆಪರೇಟಿವ್ ಸೊಸೈಟಿಯನ್ನು ಪ್ರಾರಂಭಿಸುವ ಬಗ್ಗೆ ಆಲೋಚನೆ ಮಾಡಲಾಯಿತು. ದ್ವಿತೀಯ ಸಚಿವರಾದ ಶ್ರೀ॥ ಮಾಧವರಾಯರು ಈ ಸೊಸೈಟಿಯನ್ನು ಅಭಿವೃದ್ಧಿಪಡಿಸಲು ಸಹಕಾರವನ್ನು ಮಾಡುವುದಾಗಿಯೂ ಮತ್ತು ವ್ಯಾಪಾರಿಗಳ ಪ್ರಾರ್ಥನೆಯಂತೆ ಮೈಸೂರು ರೈಲ್ವೆಯಲ್ಲಿ ಸಾಮಾನುಗಳಿಗೆ ತರಬೇಕಾದ ಸುಂಕವನ್ನು ಕಡಿಮೆ ಮಾಡುವ ವಿಷಯವನ್ನು ಪರಿಶೀಲಿಸುವುದಾಗಿಯೂ ಭರವಸೆ ಇತ್ತರು.

ಮಕ್ಕಳ ಕಥೆ

(ಕೆ. ಎಸ್. ರಾಧಾಕೃಷ್ಣನ್)

ಯಾರು ಹೆಚ್ಚು?

ಮಗೂ,

ಒಂದು ದಿನ ನಾಲಿಗೆಗೂ; ಹಲ್ಲುಗಳಿಗೂ "ನಾನು ಹೆಚ್ಚು ನಾನು ಹೆಚ್ಚು" ಎಂಬುದಾಗಿ ಜಗಳ ಬಂತು. ಹಲ್ಲುಗಳು ಒಂದು ದಿನ ಆಹಾರ ಅಗಿದು ಪುಡಿಮಾಡದ ಹಾಗೆಯೇ ನುಂಗಿಬಿಟ್ಟವು. ಆಗ ಗಂಟಲಿನಲ್ಲಿ ಆಹಾರ ಸಿಕ್ಕಿಕೊಂಡಿತು. ನಾಲಿಗೆಗೆ ಬಹಳ ಕಷ್ಟವಾಯಿತು. ಅದಕ್ಕೆ ಬಹಳ ಅವಮಾನ ಆಯಿತು. ಹಲ್ಲುಗಳು 'ಆಹಾ ಇದು ನನಗಿಂತ ಹೆಚ್ಚಂತೆ ಅಯ್ಯೋಪಾಪ' ಎಂದು ಹಾಸ್ಯಮಾಡಿದವು.

ನಾಲಿಗೆ "ಇರಲಿ ಇದಕ್ಕೆ ಮಾಡ್ತೀನಿ" ಎಂದುಕೊಂಡಿತು.

ಒಂದು ದಿನ ಯಾವನೋ ಒಬ್ಬ ಬೀದಿಯಲ್ಲಿ ಹೋಗುತ್ತಿದ್ದ. ಈ ನಾಲಿಗೆ ಅವನ ಸುಮ್ಮನೆ ಬಯ್ಯುತ್ತಾ ಇತ್ತು. ನಿಲ್ಲಿಸಲೇ ಇಲ್ಲ. ಕೋಪ ಬಯ್ಯಿಸಿಕೊಂಡವನು ಕೆನ್ನೆಗೆ ಏಟೊಂದು ಬಲವಾಗಿ ಕೊಟ್ಟುಬಿಟ್ಟ. ಪಾಪ ಎಲ್ಲಾ ಹಲ್ಲುಗಳೂ ಉದುರಿಬಿಟ್ಟವು. ಕೆಳಗೆ ಬಿದ್ದ ಹಲ್ಲುಗಳನ್ನು ನೋಡಿ "ನೋಡಿದಿರಾ"? ನನ್ನನ್ನು ಹಾಸ್ಯಮಾಡ್ತೀರಾ ಈವಾಗ ನಾನೆ ಹೆಚ್ಚು! ಎಂದಿತು.

ಮಗೂ, ನೀನು ಹೇಳು ನೋಡೋಣ" ಯಾರು ಹೆಚ್ಚು ಅಂತ.

ಖೈದಿಗಳು ಓಡಿ ಹೋದರು.

ಕಾಶಿಯ ಕಲೆಕ್ಟರ್ ಆಫೀಸಿನ ಕಚೇರಿಯ ಲಾಕಪ್ಪಿನಿಂದ ಮೂರು ಜನ ಖೈದಿಗಳು ಪರಾರಿಯಾಗಿರುವರು. ಹೇಗೆ ಪರಾರಿಯಾದರೆಂಬುದು ಗೊತ್ತಾಗಿಲ್ಲ. ಪೋಲೀಸರು ಹುಡುಕುತ್ತಿರುವರು. ಪೋಲೀಸಿನವರ ಅಜಾಗರೂಕತೆಗಾಗಿ ಅವರ ಪೈಕಿ ಹನ್ನೆರಡು ಜನರನ್ನು ಸಸ್ಪೆಂಡು ಮಾಡಲಾಗಿದೆ.

ಪ್ರವಾಹದ ಅನಾಹುತ.

ಸಂಯುಕ್ತ ಪ್ರಾಂತ್ಯದ ಪೂರ್ವಭಾಗದಲ್ಲಿ ಪ್ರವಾಹದ ಪರಿಸ್ಥಿತಿಯು ಅತ್ಯಂತ ವಿಷಾದಕರವಾಗಿದೆ. ಅನೇಕ ಪ್ರಾಣಹಾನಿಯುಂಟಾಗಿದೆ. ನೂರಾರು ಮನೆಗಳು ನೀರಿನಲ್ಲಿ ಮುಳುಗಿವೆ. ಹಲವು ಗ್ರಾಮಗಳೂ ಸಹ ನೀರಿನಲ್ಲಿ ಕೊಚ್ಚಿ ಹೋಗಿವೆ.

ಮೈಸೂರು ಇನ್ಷೂರೆನ್ಸ್ ಕಂಪೆನಿ.

ಈ ಕಂಪನಿಯ ಉಪಶಾಖೆಯು ತುಂಕೂರಿನಲ್ಲಿ ಇದೇ ಮಾಹೆ 6ನೇ ತಾರೀಖು ಅಲ್ಲಿನ ಡೆಪ್ಯುಟಿ ಕಮೀಷನರಾದ ಮ॥ ಟಿ. ಅಬ್ದುಲ್ ಖಾದರ್ ರವರಿಂದ ಪ್ರಾರಂಭಿಸಲ್ಪಡುತ್ತದೆ. ಇದಕ್ಕಾಗಿ ಒಂದು ದೊಡ್ಡ ಸಮಾರಂಭವು ಏರ್ಪಾಡಾಗಿದೆ.

ತಿರೆಯ ತಿಳಿವು

ಲೇಖಕರು—ಎಂ. ವಿ. ನಾರಾಯಣ ಮೂರ್ತಿ, ಮೈಸೂರು

ಭೂಮಿ.

ಮೊದಲು ನಮ್ಮ ಜನ್ಮ ಭೂಮಿಯನ್ನು ಒಳಗೊಂಡಿರುವ ಭೂಮಿಯ ವಿಚಾರವನ್ನು ಪರ್ಯಾಲೋಚಿಸೋಣ. ಇವುಗಳಲ್ಲಿ ಕೆಲವು ವಿಚಾರಗಳೆಲ್ಲವೂ ತಿಳಿದೇ ಇವೆ. ನಾವೆಲ್ಲರೂ ಎಲ್ಲಾ ಖಂಡದ ಭೂ ರಚನೆ, ಮೇಲ್ಮೆಯ ಮುಂತಾದ ಲಕ್ಷಣಗಳನ್ನು ಭೂಗೋಳದಲ್ಲಿ ಕಲಿತಿದ್ದೇವೆ.

ನಮ್ಮ ಭೂಮಿಯಲ್ಲಿ ೬ ಖಂಡಗಳಿವೆ. ಅತಿ ದೊಡ್ಡ ಸಾಗರವಾದ ಶಾಂತಿ ಸಾಗರವೂ, ಅತಿ ದೊಡ್ಡ ಪರ್ವತವಾದ ಹಿಮಾಲಯ ಪರ್ವತವೂ ಇವೆ. ಈ ಭೂಮಿಯು ಮುನ್ನೂರ ಅರವತ್ತೈದು ದಿನಗಳಿಗೊಂದು ಸಾರಿ ಸೂರ್ಯನ ಸುತ್ತಲೂ ಒಂದು ಸಲ ಸುತ್ತುತ್ತದೆ. ಇದನ್ನು ನಾವು ಒಂದು ವರ್ಷವೆಂದು ಕರೆಯುತ್ತೇವೆ. ಆದರೆ ನೆಪ್ಚೂನ್ ಎಂಬ ಇನ್ನೊಂದು, ಅತಿ ದೂರದಲ್ಲಿರುವ ಗ್ರಹವು, 168 ಭೂಮಿಯ ವರ್ಷ (Earth Years) ಗಳನ್ನು ಸೂರ್ಯನ ಸುತ್ತ ಒಂದು ಸಾರಿ ತಿರುಗಲು ತೆಗೆದುಕೊಳ್ಳುತ್ತದೆ. ಅಂದಮೇಲೆ ಆ ಗ್ರಹದಲ್ಲಿ ಜೀವಿಗಳಿದ್ದಿದ್ದರೆ (ಈಗ ಇಲ್ಲ) ಅವರ ಋತುಗಳೆಲ್ಲವೂ ಎಷ್ಟು ವರ್ಷಗಳ ಕಾಲ ಇರಬೇಕು? ಹಗಲು ರಾತ್ರಿಗಳ ಕಾಲ ವೆಷ್ಟಾಗುವುದು?

ಮೊದಲು ನಮ್ಮ ಭೂಮಿಯೂ ಒಂದು ಸಣ್ಣ ಉರಿಯುವ ಸೂರ್ಯನಾಗಿದ್ದಿತು. ಆದರೆ ಅದು ಸಣ್ಣನಾಗಿರುವುದರಿಂದ ಅದರ ಉರಿಯುವ ಶಕ್ತಿ, ಕಾವು ಮುಂತಾದುವುಗಳನ್ನು ಕಳೆದುಕೊಂಡು ತಣ್ಣಗಾಯಿತು. ಭೂಮಿಯಮೇಲೆಲ್ಲಾ ಹೆಪ್ಪುಕಟ್ಟಿಕೊಂಡಿತು. ಆ ಮೇಲೆ ಖಂಡಗಳೂ, ಸಾಗರಗಳೂ ಉತ್ಪನ್ನವಾದುವು. ನಮ್ಮ ಭೂಮಿಯ ಹೊರಗಿನ ವ್ಯಾಸವು 7927 ಮೈಲಿಗಳೆಂದು ಶಾಸ್ತ್ರಜ್ಞರು ಅಂದಾಜು ಮಾಡಿದ್ದಾರೆ. ನಾವು ಒಂದು ಧ್ರುವದಿಂದ ಇನ್ನೊಂದು ಧ್ರುವದ ವ್ಯಾಸವನ್ನು ಗಣನೆಗೆ ತೆಗೆದುಕೊಂಡರೆ ವ್ಯಾಸವು 7900 ಮೈಲಿ ಮಾತ್ರವಾಗುವುದು.

ಭೂಮಿಯು ಚಪ್ಪಟೆಯಾಗಿದೆಯೆ?

ಹಿಂದಿನ ಕಾಲದಲ್ಲಿ ಭೂಮಿಯು ಗುಂಡಗಿಲ್ಲವೆಂದೂ ಮತ್ತೂ ಚಪ್ಪಟೆಯಾಗಿದೆಯೆಂದೂ ತಿಳಿದಿದ್ದರು. ಆದರೆ ಆ ಮೂಢ ನಂಬಿಕೆಗಳೆಲ್ಲವೂ ಶುದ್ಧ ಸುಳ್ಳೆಂದು ನಮಗೆ ಈಗ ಗೊತ್ತಾಗುತ್ತದೆ. ಹಿಂದಿನ ಕಾಲದಲ್ಲಿ ಹಗಲು ರಾತ್ರಿಗಳು ಸೂರ್ಯ ಮತ್ತು ಇತರ ನಕ್ಷತ್ರಗಳ ಚಲನದಿಂದ ಆಗುತ್ತಿರುವುವೆಂದು ಪ್ರಾಚೀನಕಾಲದ ಶಾಸ್ತ್ರಜ್ಞರು ತಿಳಿದಿದ್ದರು. ಯಾರಾದರೂ ಭೂಮಿಯು ಗುಂಡಗಿದೆಯೆಂದು ಹೇಳಿದರೆ ಅವನನ್ನು ಕೊಲ್ಲಲೂ ಹೇಸುತ್ತಿರಲಿಲ್ಲ. ಉದಾಹರಣೆಗೆ ಒಬ್ಬಾನೊಬ್ಬ ಯೂರೋಪಿನ ಶಾಸ್ತ್ರಜ್ಞನು ಭೂಮಿಯು ಗುಂಡಾಗಿದೆ ಎಂದು ಹೇಳಿದನೆಂಬ ಆಪಾದನೆಯಮೇಲೆ ಅವನನ್ನು ಇತರ ಶಾಸ್ತ್ರಜ್ಞರು ಕೊಂದು ಹಾಕಿದ್ದರು. ಪ್ರಾಚೀನ ಕಾಲದಲ್ಲಿ ಈ ತೆರನ ಅನೇಕ ಮೂಢ ನಂಬಿಕೆಗಳು ಇದ್ದವು. ಆದರೆ ನವೀನ 'ಭವಿಷ್ಕರು (Astronomers) ಭೂಮಿಯು ಗುಂಡಾಗಿದೆ ಎಂದು ಸಾಧಿಸಿದ್ದಾರೆ. ಹೇಗೆಂದರೆ ಸೂರ್ಯನಿಗೂ, ಭೂಮಿಗೂ 93,000,000 ಮೈಲು ಅಂತರವಿದೆ. ಹಾಗೆಂದ ಮೇಲೆ ಸೂರ್ಯನು ಭೂಮಿಯ ಸುತ್ತಲೂ ಈ ೨೪ ಗಂಟೆಗಳ ಕೇವಲ ಅಲ್ಪ ಕಾಲದಲ್ಲಿ ಸುತ್ತುವುದು ಹೇಗೆ ತಾನೆ ಸಾಧ್ಯ? ಹಾಗೆ ಸುತ್ತಿದರೆ ಅಸಾಧ್ಯವಾದ ವೇಗದಿಂದ ಸೂರ್ಯನು ಸಂಚಾರ ಮಾಡಬೇಕು.

ಧ್ರುವಗಳಲ್ಲಿ ಚಪ್ಪಟೆ ಯೇಕೆ?

ಭೂಮಿಯು ೨೪ ಗಂಟೆಯಲ್ಲಿ (ಈಗಿನ ವೇಗದಂತೆ) 25,000 ಮೈಲಿ (ಭೂಮಿಯ ಸುತ್ತಳತೆ) ದೂರ ತಿರುಗುವುದು. ಹಾಗೆಂದರೆ ಗಂಟೆಗೆ ಸಾವಿರ ಮೈಲಿಗೂ ವೇಗವಾಗಿ ತಿರುಗಿದಂತಾಯ್ತು. ಧ್ರುವ ಪ್ರದೇಶಗಳಲ್ಲಿ ಭೂಮಿಯ ಸುತ್ತಳತೆಯು ಕಡಿಮೆ. ಆದುದರಿಂದ ಇಂಥಾ ಪ್ರದೇಶಗಳಲ್ಲಿ ಭೂಮಿಯ ಚಲನದ ವೇಗವು ಕಡಿಮೆಯಾಗುತ್ತದೆ. ತಿರುಗುವಾಗ ಯಾವಾಗಲೂ ವಸ್ತುಗಳು ಭೂಮಿಯ ಕೇಂದ್ರದಿಂದ ಹೊರಕ್ಕೆ ಸಿಡಿಯುವುವು. ಭೂಮಿಯಲ್ಲಿ ಈ ಶಕ್ತಿಯಿಂದ ನಡುವು ತುಸು ಹೆಚ್ಚಾಗಿ ಹೊರಕ್ಕೆ ಉಬ್ಬುವುದು. ಆಗ ಧ್ರುವದ ಭಾಗಗಳು ಒಳಕ್ಕೆ ಎಳೆಯಲ್ಪಟ್ಟವು.

ಹಗಲು ರಾತ್ರಿಗಳಾಗುವ ಬಗೆ ಹೇಗೆ?

ಹಗಲು ರಾತ್ರಿಗಳು ಭೂಮಿಯ ಸುತ್ತುವಿಕೆಯಿಂದಲೇ ಉಂಟಾಗುತ್ತವೆ. ಭೂಮಿಯು ತನ್ನನ್ನು ತಾನೇ ೨೪ ತಾಸಿಗೆ ಒಂದು ಸಾರಿ ಸುತ್ತುವುದು. ಆಗ ಹಗಲು ರಾತ್ರಿಗಳಾಗುತ್ತವೆ. ಹಾಗೆಯೇ ಭೂಮಿಯು ಸುತ್ತಲೂ ವರ್ಷಕ್ಕೊಮ್ಮೆ ಸುತ್ತುವುದರಿಂದ ನಮ್ಮ ಋತುಗಳು ಉಂಟಾಗುತ್ತವೆ. ಹೀಗೆ ಹಗಲು ರಾತ್ರಿಗಳೂ ವಸಂತ ಮೊದಲಾದ ಋತುಗಳೂ ಉಂಟಾಗುತ್ತವೆ.

ಭೂಮಿಯ ಕಾವು.

ಭೂಮಿಯು ಮೊದಲು ಒಂದು ಸಣ್ಣ ಸೂರ್ಯನಾಗಿತ್ತೆಂದೂ ಆಮೇಲೆ ತನ್ನ ಕಾವು, ಉರಿ, ಮುಂತಾದುವುಗಳನ್ನು ಕಳೆದುಕೊಂಡು ಈಗಿನ ಸ್ಥಿತಿಗೆ ಬಂದಿದೆಯೆಂದೂ ನಮಗೆ ಗೊತ್ತಾಯಿತು. ಇದು ಪೂರ್ತಿಯಾಗಿ ಆರಿದೆಯೋ ಇಲ್ಲವೋ ಎಂಬುವನ್ನು ನಾವು ಈಗ ತಿಳಿದುಕೊಳ್ಳಬೇಕಾದರೆ ಭೂಮಿಯ ಒಳಕ್ಕೆ ತೋಡುತ್ತಾ ಹೋಗಬೇಕು. ನಾವು ಈಗ ಆಗಲೇ ಈ ಕೆಲಸವನ್ನು ಮಾಡತೊಡಗಿದ್ದೇವೆ. ಗಣಿಗಳಲ್ಲಿ ಆಗಲೇ 7–8 ಮೈಲಿ ತೋಡಿದ್ದಾರೆ. ಆದರೆ ಇದು ಸಾಲದು. ಭೂಮಿಯ ವ್ಯಾಸದಿಂದ 8000 ಮೈಲಿಯನ್ನು ತೋಡಬೇಕು. ಆದರ ಇದು ಅಸಾಧ್ಯವಾದ ಕೆಲಸ. ನವೀನ ಶಾಸ್ತ್ರಜ್ಞರು ಅಲ್ಲಿನ ಕಾವಿನ ಪರಿಣಾಮವನ್ನು ಕಂಡುಹಿಡಿದಿದ್ದಾರೆ. ಭೂಮಿಯ ದಟ್ಟಣೆ (Density) ಯು ನೀರಿಗಿಂತ 5 ಪಟ್ಟಿದೆಯೆಂದು ನಿರ್ಣಯಿಸಿದ್ದಾರೆ.

ವೃದ್ಧಪಿತಾಮಹರ ಸ್ಮಾರಕ ಸಂಘ

ಅನಾಥಾಲಯ, ಮೈಸೂರು.

ವೃದ್ಧ ಪಿತಾಮಹ, ದಯಾಸಾಗರ, ಶ್ರೀಮಾನ್ ಎಂ. ವೆಂಕಟಕೃಷ್ಣಯ್ಯನವರ ಸ್ಮಾರಕ ಸಾಹಿತ್ಯ ಸಂಘದ ಆರಂಭೋತ್ಸವವು ಕಳೆದ ತಾ॥ 31 ನೇ ಶುಕ್ರವಾರ ದಿವಸ ಅನಾಥಾಲಯದಲ್ಲಿ, ವಿಶೇಷ ವಿಜೃಂಭಣೆಯಿಂದ ಜರುಗಿತು. ಮೊದಲು ಅಧ್ಯಕ್ಷರ ಮತ್ತು ಗೌರವ ಕಾರ್ಯದರ್ಶಿಗಳ ಚುನಾವಣೆ ನಡೆಯಿತು. ಶ್ರೀ ಎಸ್. ಲಕ್ಷ್ಮೀನರಸಿಂಹನ್‌ರವರು ಸಂಘದ ಅಧ್ಯಕ್ಷರಾಗಿಯೂ ಮತ್ತು ಶ್ರೀಮಾನ್ ಎಚ್. ಎಂ. ಕೃಷ್ಣಮೂರ್ತಿ ಮತ್ತು ಟಿ. ಎಂ. ಲಕ್ಷ್ಮೀನಾರಾಯಣರಾವ್ ಇವರುಗಳು ಗೌರವ ಕಾರ್ಯದರ್ಶಿಗಳಾಗಿಯೂ ಚುನಾಯಿಸಲ್ಪಟ್ಟರು. ಈ ಆಲಯದಲ್ಲೇ ವ್ಯಾಸಂಗಮಾಡುತ್ತಿರುವ ವಿದ್ಯಾರ್ಥಿಗಳ ಪೈಕಿ ಕಾಲೇಜಿನಿಂದ ಇಬ್ಬರನ್ನೂ, ಹೈಸ್ಕೂಲ್ ತರಗತಿಗೊಬ್ಬರಂತೆ ಮೂವರು ವಿದ್ಯಾರ್ಥಿಗಳನ್ನೂ ಈ ಸಂಘದ ಸದಸ್ಯರನ್ನಾಗಿ ಚುನಾಯಿಸಿರುತ್ತಾರೆ. ಪೂಜ್ಯ ತಾತಯ್ಯನವರ ಸ್ಮಾರಕದಿನಾಚರಣೆಯು ಸನ್ನದಲ್ಲಿಯೇ ಬರಲಿರುವುದರಿಂದ, ಅವರ ಸ್ಮಾರಕ ದಿನವನ್ನು ಈ ಆಲಯದಲ್ಲಿಯೂ ಕೂಡ ಕೊಂಚವಾದರೂ ವೈಭವದಿಂದ ನಡೆಸಬೇಕೆಂದು ಕಾರ್ಯದರ್ಶಿಗಳೂ ಮತ್ತು ಸದಸ್ಯರೂ ಆಶಿಸಿರುತ್ತಾರೆ.

ಸಾರ್ವಜನಿಕ ಸಂಸ್ಥೆಗಳಿಗೂ ಮತ್ತು ಪ್ರಜೆಗಳ ಹಕ್ಕುಬಾಧ್ಯತೆಗಳಿಗೂ ಸರ್ವದಾ ದುಡಿದ ಆ ಮಹಾತ್ಮರ ಆತ್ಮವು ಚಿರಸ್ಥಾಯಿಯಾದ ಶಾಂತಿಯನ್ನು ಹೊಂದಲೆಂದು ಪ್ರಾರ್ಥಿಸುತ್ತೇವೆ.

ಮೇಲ್ಕಂಡ ಈ ಸಂಘದಲ್ಲಿ ತಳೆದ ವರು ಷದಂತೆಯೇ ಚರ್ಚಾಕೂಟಗಳೂ ಮತ್ತು ಉಪನ್ಯಾಸಗಳೂ ಪ್ರಸಿದ್ಧವಾಗ್ಮಿಗಳ ಸಹಕಾರ ಮತ್ತು ಸಹಾನುಭೂತಿಯಿಂದ ಅಭಿವೃದ್ಧಿ ಹೊಂದಲೆಂದು ಕೋರುತ್ತೇವೆ.

ಆಕಾಶವಾಣಿ ಕಾರ್ಯಕ್ರಮ

ಸೋಮವಾರ-ರಾತ್ರಿ 8 ರಿಂದ 9–15 ಐರೋಪ್ಯ ಸಂಗೀತ ಮತ್ತು ಜನಪ್ರಿಯ ವಿಜ್ಞಾನ ಉಪನ್ಯಾಸ ಕೇಳಿಸದ... ಮಂಗಳವಾರ—6–30 ರಿಂದ 8 ಕರ್ನಾಟಕ ಸಂಗೀತ ಮತ್ತು ಮ॥ ಎನ್. ಎನ್. ನಾರಾಯಣಶಾಸ್ತ್ರಿಗಳಿಂದ ಬೇಂದ್ರೆಯವ... ಪದ್ಯಪಠನ. ಬುಧವಾರ—8 ರಿಂದ 9–15 ಕರ್ನಾಟಕ ವಾದ್ಯ ಸಂಗೀತ. ಗುರುವಾರ—6–30 ರಿಂದ 7–30 ... ಚಾಮುಂಡೇಶ್ವರಿ ನಾಟಕ ಮಂಡಳಿಯವ... ಮಹಾತ್ಮ ಕಬೀರ್‌ದಾಸ್ ನಾಟಕ. ಶುಕ್ರವಾರ—6–30 ರಿಂದ 7–45 ವಿದ್ವಾನ್ ಶಾಮರಾವ್ ಜಾದವ್‌ರವರಿಂದ ಹಿಂದೂಸ್ಥಾನಿ ಸಂಗೀತ. ಶನಿವಾರ—6–30 ರಿಂದ 7–30 ಮ॥ ಕೆ. ಕೃಷ್ಣರಾಜ... ಭಾರತ ಪಠನ. ಭಾನುವಾರ—... ಸೋಮವಾರ—8 ರಿಂದ 9–15 ಐರೋಪ್ಯ ಸಂಗೀತ ಮತ್ತು ಪುಸ್ತಕ ವಿಮ... ಮಂಗಳವಾರ—6–30 ರಿಂದ 7–... ಕರ್ನಾಟಕ ಸಂಗೀತ ಮತ್ತು ಮ॥ ... ಎನ್. ಮೂರ್ತಿರಾಯರವರಿಂದ ಅಧ್ಯ... ಕನ್ನಡ ನಾಟಕ ಪಠನ.

ರೇಷ್ಮೆ ಅಭಿವೃದ್ಧಿ.

ಮೈಸೂರು ಸಂಸ್ಥಾನದ ರೇಷ್ಮೆ ಕೈಗಾರಿಕೆಯನ್ನು ಅಭಿವೃದ್ಧಿ ಪಡಿಸಲು 1936–37 ನೇ ಸಾಲಿಗೆ 25000 ರೂಗಳು ವೆಚ್ಚ ಮಾಡಲ್ಪಡುತ್ತದೆ. ಮೈಸೂರು ಮತ್ತು ಚನ್ನಪಟ್ಟಣದ ಹಿಪ್ಪನೇರಳೆ ಫಾರಂಗಳನ್ನು ಅಭಿವೃದ್ಧಿ ಪಡಿಸಲಾಗುತ್ತದೆ. ... ವರ್ಷಕ್ಕೆ 300 ಲಕ್ಷ ಗೂಡುಗಳು ಬೇಕಾಗುತ್ತವೆಂದು ಗೊತ್ತಾಗಿದೆ. ಈ ಸಾಲಿನ ಗೂಡುಗಳ ಸರಬರಾಯಿ 51 ಲಕ್ಷದಿಂದ ... ಲಕ್ಷಕ್ಕೆ ಹೆಚ್ಚಿಸಲಾಗಿದೆ ಎಂದು ಗೊತ್ತಾಗಿದೆ.

ಟಿ. ಸಿ. ನಟರಾಜ್ ಔಷಧಾಲಯ

ಸಯ್ಯಾಜಿರಾವ್ ರೋಡು, ಮೈಸೂರು.

ಇವರಲ್ಲಿ ನೇತ್ರಪರೀಕ್ಷೆಯು ಉಚಿತವಾಗಿ ಮಾಡಲ್ಪಡುತ್ತದೆ

ಅತ್ಯಗತ್ಯವಾಗಿ ಬೇಕಾದ ಎಲ್ಲಾ ಇಂಜಕ್ಷನ್ ಔಷಧಿಗಳೂ ಸದಾ ಇ... ಲ್ಲಿಯೂ ದೊರಕುವುವಲ್ಲದೆ ಸಮಸ್ತ ವ್ಯಾಧಿಗಳಿಗೂ ಚಿಕಿತ್ಸೆಯು ಬಹು ಸಮ... ಧಾರ್ಜನಿಂದ ಮಾಡಲ್ಪಡುತ್ತದೆ.

ಝಂಡೂರವರ ಆಯುರ್ವೇದೀಯ ಸಿದ್ಧೌಷಧಗಳೆಲ್ಲವೂ ಸದಾ ದೊರಕುತ್ತ...

ಉಜ್ವಲ ಕುಮಾರಿ.

ಬರೆದವರು.—ಎಸ್. ಶ್ರೀ ಶೈಲಂ, ಮೈಸೂರು.

(2 ನೆಯ ಭಾಗ.)

ನಮ್ಮ ಪ್ರಿಯಸ್ನೇಹಿತ ರಾಜಕುಮಾರನ ಮನಸ್ಸಿನಲ್ಲಿ ಏನೇನೋ ಯೋಚನೆ. ಕುದುರೆಯೋ ವಾಯುವೇಗದಲ್ಲಿ ಹೋಗುತ್ತಿತ್ತು. ಅದು ಹೋಗುವ ರಭಸಕ್ಕೆ ಮರಗಳೆಲ್ಲವೂ ಓಡುವಂತಿತ್ತು. ಕುದುರೆಯು ಇಷ್ಟು ವೇಗದಲ್ಲಿ ಹೋಗುತ್ತಿರುವಲ್ಲಿ, ಇದ್ದಕ್ಕಿದ್ದ ಹಾಗೆಯೇ ಒಂದು ಬಯಲು ಸಿಕ್ಕಿತು ಆ ಬಯಲಿನಲ್ಲಿ ದೊಡ್ಡಮರ, ಆ ಮರದ ಸ್ವಲ್ಪ ದೂರದಲ್ಲಿ ಸೊಂಪಾದ ಬತ್ತದ ತೆನೆಗಳು ಬೆಳೆದಿದ್ದವು ಕುದುರೆಯು ಆ ದೊಡ್ಡ ಮರದಹತ್ತಿರ ಬಂದು ಥಟ್ಟನೆ ನಿಂತಿತು; ರಾಜಕುಮಾರನು, ಕುದುರೆಯು ನಿಂತ ದನ್ನು ಕಂಡು ಗಾಬರಿಯಾದನು. ಆದರೆ ಕುದುರೆಗೂ ಕೂಡ, ...ಹುಲಿಗೂ, ರಾಜಕುಮಾರನಿಗೂ ಆದ ಸಂಘಟನೆಗಳು ಗೊತ್ತು. ನೀವೇ ಅದು ಏನೆಂಬುದನ್ನು ಯೋಚಿಸಿ, ಅದು ಎಂಥಃ ಕುದುರೆ ಎಂಬುದನ್ನು ತಿಳಿದುಕೊಳ್ಳಿ

ಇದ್ದಕ್ಕಿದ್ದ ಹಾಗೆಯೇ ರಾಜನು ತನ್ನ ಎಡ ಪಾರ್ಶ್ವದಲ್ಲಿ ನೋಡಿದನು. ಫಕೀರನು ತನ್ನ ಮಂಚ, ಚೀಲ ಮತ್ತು ಕಲ್ಲಿನ ಪಾತ್ರೆಯನ್ನು ಒಂದು ಪಕ್ಕದಲ್ಲಿ ಇಟ್ಟುಕೊಂಡು ಏನನ್ನೋ ನೋಡುತ್ತಲಿದ್ದನು ಫಕೀರನ ಮನಸ್ಸಿನಲ್ಲಿಯೂ, ಮುಖದಲ್ಲಿ ಏನೋ ಒಂದುತರದ ಆನಂದವು ಉಕ್ಕುತ್ತಿದ್ದಿತು. ರಾಜಕುಮಾರನು, ಆ ದೃಷ್ಟಿ ಹರಿದ ಕಡೆಯನ್ನೇ ಹಿಡಿದು ನೋಡಿದನು ಮುಖವು ಅರಳಿತು, ಆನಂದಮುಖ, ಆ! ಎಂತಹುದು? ರಾಮಾ! ಜಿಂಕೆ! ಜಿಂಕೆ! ಎಂಥಃ ಅದ್ಭುತದೃಶ್ಯ? ಕುದುರೆಯು ತನ್ನ ಸನ್ನೆಯಿಂದ ಏನದು ಎಂದು ಕೇಳಿತು. ಏನೆ? ಏನುಹೇಳಲಿ; ಅಲ್ಲಿನೋಡು ಜಿಂಕೆ! ಅದು ತನ್ನ ಕಾಲನ್ನು, ಒಂದರಮೇಲೆ ಒಂದನ್ನು ಹಾಕುತ್ತಾ, ಕುಣಿಯುತ್ತಾ ಹೋಗುತ್ತಿರುವುದನ್ನು ನೋಡು. ಆ ಎಳೆಸಾದ ಬತ್ತದ ತೆನೆಗಳ ಪಕ್ಕದಲ್ಲಿ ಕುಣಿಕುಣಿದಾಡುತ್ತಾ ಹೋಗುತ್ತಿದೆ ನೋಡು, ಆ ಸೂರ್ಯನ ನಸುಗೆಂಪಾದ ಬಿಂಬವು, ತೆನೆಗಳನ್ನು ಒತ್ತಿಕೊಂಡು ಜಿಂಕೆಯಮೇಲೆ ಬೀಳುತ್ತಿದೆ ನೋಡು. (ಆ ದೃಶ್ಯವನ್ನು ನಿಮ್ಮ ಮನಸ್ಸಿನಲ್ಲಿಯೇ ಯೋಚಿಸಿಕೊಳ್ಳಿರಿ.) ಎಂಥಃ ದೃಶ್ಯ! ಹೀಗೆ ನೋಡುತ್ತಿದ್ದ ಹಾಗೆಯೇ ಜಿಂಕೆಯು ಕುಣಿಯುತ್ತಾ ಕಣ್ಮರೆಯಾಯಿತು

ಆಮೇಲೆ ರಾಜಕುಮಾರನು ತಾನು ಮಾಡುವ ಕೆಲಸವನ್ನು ಜ್ಞಾಪಿಸಿಕೊಂಡು ಫಕೀರನಮುಂದೆ ಹೋಗಿ ನಮಸ್ಕಾರ ಮಾಡಿದನು ಫಕೀರನಿಗೆ ಆ ಜಿಂಕೆಯ ಮೇಲಿನ ಧ್ಯಾನವು ಇನ್ನೂ ಹೋಗೇ ಇರಲಿಲ್ಲ ಫಕೀರನು ರಾಜಕುಮಾರನನ್ನು ಕುರಿತು ನೋಡಿದೆಯಾ ಜಿಂಕೆಯನ್ನು? ಅದರ ಆಟವನ್ನು? ನೋಡಿದೆನು ಎಂದು ರಾಜನು ಹೇಳಿದನು. 'ಹೇಗೆ ಇದ್ದಿತು'? ಎಂದು ಫಕೀರನು ಕೇಳಿದನು. ಅದಕ್ಕೆ ರಾಜಪುತ್ರನು ಹೇಳತೊಡಗಿದನು

ನಸುಗೆಂಪು ಮೂಡಲಲಿ।
ಧರಣಿಯೊಳು ಪಸರುತಿನೆ।
ರವಿಬಿಂಬ ನುಗ್ಗುತಲಿ।
ಬೀಳುತಿರೆ ನೋಡಲ್ಲಿ. ॥೧॥

ನಟನವೀಯುವ ಜಿಂಕೆಯದು।
ಪಸರು ತೆನೆಗಳ ಪಕ್ಕದೊಳ್।
ಕುಣಿ ಕುಣಿದಾಡುತ ಪೋಗುತಿರೆ।
ಕಣ್ಮನಮಾನಂದ ವೆಂತಹುದು.॥೨॥

ಎಂದು ಹೇಳಿ ತನ್ನ ಕಾರ್ಯವನ್ನು ಜ್ಞಾಪಿಸಿಕೊಂಡು ಅದನ್ನು ಆ ಫಕೀರನಿಗೆ ಹೇಳಿದನು

ಆ ಫಕೀರನು ಸ್ವಲ್ಪಹೊತ್ತು ಯೋಚಿಸಿ, ಆ .. . .ಉಜ್ವಲಕುಮಾರಿಯನ್ನು ಏಕೆ ನೋಡಬೇಕು? ಎಂದು ಕೇಳಿದನು. ಅದಕ್ಕೆ ರಾಜಪುತ್ರನು ಅವಳನ್ನು ಮದುವೆಯಾಗಬೇಕೆಂದು ಹೇಳಿದನು. ಆಗ ಫಕೀರನು 'ಎಲ್ಲಿ ನಿನ್ನ ಕೈಯನ್ನು ತೋರಿಸು' ಎಂದನು ರಾಜಕುಮಾರನು ತನ್ನ ಕೈಯನ್ನು ತೋರಿಸಿದನು. ಫಕೀರನು ದಿಟ್ಟಿಸಿನೋಡಿ, ಮೇಘ, ಪುಷ್ಯ . .. ಎಂದು, ಏನನ್ನೋ ತನ್ನ ಬೆರಳುಗಳಿಂದ ಎಣಿಸಿದನು. ಆಮೇಲೆ ಫಕೀರನು ಅವನ ಕಣ್ಣನ್ನು ದಿಟ್ಟಿಸಿನೋಡಿ, ಇವನು ಸತ್ಯವಂತನೆಂದು ತಿಳಿದು, 'ನಾನು ನಿನ್ನ ಕುದುರೆಯನ್ನು ನೋಡಿಕೊಳ್ಳುತ್ತೇನೆ ಈಗ ನೀನು ಮಂಚದಮೇಲೆ ಮಲಗಿಕೊಂಡು ಆ ಉಜ್ವಲಕುಮಾರಿಯ ಪಟ್ಟಣವನ್ನು ಜ್ಞಾಪಿಸಿಕೊ' ಎಂದನು. ರಾಜಕುಮಾರನು ಆ ಮಂತ್ರದ ಚೀಲವನ್ನೂ, ಆ ಕಲ್ಲಿನ ಮಂತ್ರದ ಪಾತ್ರೆಯನ್ನೂ ಒಂದು ಪಕ್ಕದಲ್ಲಿಟ್ಟುಕೊಂಡು ಆ ಪಟ್ಟಣವನ್ನು ಜ್ಞಾಪಿಸಿಕೊಂಡನು ಜೊಯ್, ಜೊಯ್ ಎಂದು ಶಬ್ದಮಾಡುತ್ತಾ ಆ ಮಂಚವು, ಆಕಾಶವನ್ನೇ ಮುಟ್ಟಿಬಿಡುವುದೋ ಎನ್ನುವಷ್ಟು ಮೇಲಕ್ಕೆ ಹೋಗಿ ಇದ್ದಕ್ಕಿದ್ದಹಾಗೆಯೇ ಕೆಳಕ್ಕೆ ಕುಸುಮಮಾಲಿನಿಯ ಪಟ್ಟಣದ ಹೊರಗಡೆ ಇಳಿಯಿತು.

ರಾಜಾ ಕುಲೀನ್ ಕುಮಾರನು ಆ ದೇಶದ ರಾಜನಾಗಿದ್ದನು. ಇವನೇ ಕುಸುಮಮಾಲಿನಿಯ ತಂದೆಯು. ಅವನು ತನ್ನ ಜನಗಳಿಗೆ ಒಂದು ನಿಬಂಧನೆಯನ್ನು ಹೇಳಿದ್ದನು. ಅದೇನೆಂದರೆ "ತನ್ನ ಯಾವ ಪ್ರಜೆಗಳೂ ಕೂಡ ಹೊರಗಿನ ದೇಶದವರಿಗೆ ಇಳಿದುಕೊಳ್ಳುವುದಕ್ಕೆ ಸ್ಥಳವನ್ನು ಒಂದುರಾತ್ರಿಯೂ . ಕೂಡಾ ಕೊಡಕೂಡದೆಂದು". ತನ್ನ ಕಟ್ಟಳೆಯನ್ನು ಜಾರಿಗೆ ತಂದಿದ್ದನು ಅನೇಕ ಅನೇಕ ಜನ ರಾಜರು ಇವಳನ್ನು ಮದುವೆಯಾಗಲು ಪ್ರಯತ್ನಿಸಿದರು, ಆದರೆ ಅದು ಸಾಗಲಿಲ್ಲ

ಕಡೆಗೆ ನಮ್ಮ ರಾಜಕುಮಾರನು ಸ್ವಲ್ಪ ದೂರದಲ್ಲಿರುವ ಒಂದು ಮುದುಕಿಯ ಮನೆಗೆ ಹೋದನು ಮತ್ತು ಅಲ್ಲಿ ಇಳಿದುಕೊಳ್ಳಲು ಸ್ಥಳ ಕೇಳಿದನು ಆದರೆ ಅವಳು ತಿರಸ್ಕರಿಸಿದಳು ಮತ್ತು ಆ ದೇಶದ ರಾಜನ ನಿಬಂಧನೆಯನ್ನು ಹೇಳಿದಳು ಕಡೆಗೆ ರಾಜಕುಮಾರನು ತುಂಬಾ ವಿನಯವಾಗಿ ಕೇಳಿದ್ದರಿಂದ ತನ್ನ ಮನೆಯಲ್ಲಿ ಸ್ಥಳವನ್ನು ಕೊಟ್ಟಳು

ರಾಜಕುಮಾರನು ತನ್ನ ಪದಾರ್ಥಗಳನ್ನು ಒಂದು ಪಕ್ಕದಲ್ಲಿ ಇಟ್ಟುಕೊಂಡು ಚೀಲವನ್ನು ತೆಗೆದು 'ನನಗೆ ಹಸಿವಾಗಿದೆ, ಅದ್ದರಿಂದ ಏನಾದರೂ ತಿಂಡಿ ಕೊಡು' ಎಂದು ಕೇಳಿದನು ತಕ್ಷಣವೇ ಆ ಚೀಲದ ಬಾಯಿಯು, ತೆಗೆದುಕೊಂಡಿತು ಅದರೊಳಗಿನಿಂದ ತಿಂಡಿಯನ್ನು ಹೊರಕ್ಕೆ ತೆಗೆದನು, ಆ ತಿಂಡಿಯು ಇಬ್ಬರಿಗೆ ಸರಿಯಾಗಿದ್ದಿತು. ಮುದುಕಿಯೂ ತೆಗೆದುಕೊಂಡು ತಿಂದಳು. ಅಲ್ಲಿ ರೊಟ್ಟಿ, ಹಣ್ಣುಗಳು, ಮತ್ತು ಅನೇಕ ರುಚಿಕರವಾದ ಪದಾರ್ಥಗಳು ಇವೆಲ್ಲವೂ ಚಿನ್ನದ ತಟ್ಟೆಯಲ್ಲಿದ್ದವು ಅವರು ಅದೆಲ್ಲವನ್ನೂ ತಿಂದ ಮೇಲೆ ಮುದುಕಿಯು, ನೀರು ತರುವುದಕ್ಕೆ ಬಾವಿಗೆ ಹೋಗಿ ಬರುವೆನೆಂದು ಹೇಳಿದಳು. "ಹೋಗಬೇಡ ಎಲ್ಲಿಗೂ ಹೋಗಬೇಡ" ಎಂದು ಹೇಳಿ ತನ್ನ ಪಾತ್ರೆಯನ್ನು ತೆಗೆದು ನೀರನ್ನು ಕೇಳಿದನು ತಕ್ಷಣವೇ ಅದರ ತುಂಬಾ ನೀರು ತುಂಬಿತು. ಆ ನೀರಿನಿಂದ ತಟ್ಟೆಯನ್ನು ತೊಳಿ ಎಂದು ಮುದುಕಿಯ ಕೈಗೆ ನೀರು ಕೊಟ್ಟನು. ಆಮೇಲೆ ಅವನು ತನ್ನ ಕೈಗಳನ್ನು ಆ ನೀರಿನಲ್ಲಿ ತೊಳೆದುಕೊಂಡು ತನ್ನ ಕೈಯನ್ನು ಒರೆಸಿಕೊಂಡನು

ಆಮೇಲೆ ಅವರಿಬ್ಬರೂ ಮಂಚದ ಮೇಲೆ ಕುಳಿತುಕೊಂಡರು. ರಾಜಕುಮಾರನು ಆ ಫಕೀರನ ವೃತ್ತಾಂತವನ್ನು ಹೇಳಿ ಅವಳಿಗೆ 12 ಚಿನ್ನದ ತಟ್ಟೆ, 12 ಚಂಬವನ್ನು ಕೊಟ್ಟನು ಅವಳು ಅದನ್ನು ಅದನ್ನು ಜಾಗರೂಕತೆಯಿಂದ ನೋಡಿಕೊಳ್ಳುತ್ತಿದ್ದಳು. 'ನೀನು ಇಲ್ಲೇ ಇರಬಹುದು, ಆದರೆ ಇಲ್ಲಿ ಇದ್ದೀಯೆ ಎಂಬ ವಿಚಾರವು ರಾಜನಿಗೇನಾದರೂ ತಿಳಿದೀತು' ಎಂದು ಹೇಳಿ ಹೊರಗೆ ಹೋದಳು

[ಈ ಕಥೆಯ 3 ನೆಯ ಭಾಗವು ಮುಂದುವರಿಯುತ್ತದೆ.]

ನಾಟ್ಯಕಲೆಯ ದುರವಸ್ಥೆ

(೩)

(ನಾಟ್ಯಕಲಾಭಿಮಾನಿಯಿಂದ)

ಈಗ ಸರಿಯಾಗಿ ಎರಡು ದೇವರನಾದರೂ ಹಾಡೋದಿಕ್ಕೆ ಬರದಿದ್ದರೂ ನಾಟಕ ಕಂಪನಿಗಳನ್ನು ನಡಿಸೋದರೇ! ಒಂದು ಪಟ್ಟಣದಲ್ಲಿ ಯಾವುದಾದರೂ ಸಣ್ಣ ವಿಷಯಕ್ಕೆ ಮನಸ್ತಾಪವುಂಟಾಯಿತೋ ಸರಿ ಇನ್ನೊಂದು ತಿಂಗಳೊಳಗೆ ಮತ್ತೆರಡು ಕಂಪನಿಗಳು ನಿರ್ಮಾಣವಾಯಿತೆನ್ನಿ. ಇರೋ ಪುಡಿಕಾಸನ್ನು ಎರಚಿಬಿಡುವುದು ಹೊಟ್ಟೆಗೆ ಒದ್ದೆಬಟ್ಟೆ ಹಾಕಿಕೊಳ್ಳೋದು ಜನರನ್ನು ಮರುಳುಮಾಡೋದಕ್ಕೆ "ಬೆನಿಫಿಟ್" ಎಂಬ ಹೆಸರು ಇಟ್ಟುಬಿಡುವುದು ಕಲೆಕ್ಷನ್ 20-25 ರೂಪಾಯಿ. ಖರ್ಚು 80-90 ರೂಪಾಯಿ. "ಟ" ಎನ್ನುವುದು ಬರಹೇ ಇರೋ ಥಿಯೇಟರನ್ನೆಲ್ಲಾ ಪಾರ್ಟಿ ಮಾಡಿರೆಂದು ಅಂಗಲಾಚಿ ಬೇಡಿಕೊಳ್ಳುವುದು. ದಾಕ್ಷಿಣ್ಯಕ್ಕೆ ಮೊದಲು ಕೌಂಟರ್ ಹಾಕಿಕೊಳ್ಳೋದು ಬಂದರಲ್ಲವೇ? ನೋಡಿದವರಲ್ಲಿ ನಗಪಾಟ್ಲು ಆಡಿದರೂ ಹೊಸ ಮಾದರಿಯೇ? ಅಲ್ಲ! ಹಿಂದಿನವರ ಕಾಪಿಯೇ. ಪ್ರೇಕ್ಷಕರ ಮನದಲ್ಲಿ ಹಿಂದಿನ ವೈಭವದ ನೆನಪು ಆಗ ಇಲ್ಲಿನ ಅಸಹ್ಯ, ಅಸಂಬದ್ಧ ಪ್ರಲಾಪಗಳೆಲ್ಲಾ ಮುಂದೆ ಬಂದು ನಿಲ್ಲುತ್ತವೆ. ತತ್ಕಾರಣ ಸಿನಿಮಾ, ಟಾಕಿ ಒಂದಷ್ಟರಲಂತೂ ನಾಟಕಗಳೆಂದರೆ ಕುಚೋದ್ಯ, ಕುಚೇಷ್ಟೆಗಳಿಗೆ ಆಸ್ಪದವಾಗಿ ಹೋಯಿತು

ನಿಜವಾಗಿಯೂ ಸಮಾಜವನ್ನು ಉದ್ಧರಿಸುವುದಕ್ಕಾಗಿಯೇ ಉತ್ಪನ್ನವಾಗಿರುವ ನಾಟ್ಯಕಲೆಯು ಕೇವಲ ಪಾಮರರ ಕೈಗೆ ಸಿಕ್ಕಿಬಿದ್ದು, ಸಿಂಬಳದಲ್ಲಿ ಬಿದ್ದ ನೊಣದಂತೆ ಸ್ಮೃತರಣೆಯಲ್ಲಿದೆಯಲ್ಲಾ ಎಂದು ಎಷ್ಟು ಸಂತಾಪಪಟ್ಟರೂ ಕಮ್ಮಿಯೇ! ಇದಕ್ಕೆಲ್ಲಾ ಪ್ರಭುವರ್ಯರು ಗಮನವೀಯಬೇಕು. ಶ್ರೀ ಚಾಮರಾಜೇಂದ್ರ ಕರ್ಣಾಟಕ ನಾಟಕ ಸಭೆ ಇರಲಿಲ್ಲವೆ? ಅದರ ಆಡಳಿತವೇನು ಕಮ್ಮಿ ಇತ್ತೆ? ಎಂತೆಂತಹ ಕಲಾಭಿಮಾನಿಗಳೂ, ಕಲಾಪ್ರವೀಣರೂ, ಇರಲಿಲ್ಲ? ಎಂತೆಂತಹ ನೀತಿಬೋಧಕ ನಾಟಕಾಭಿನಯವು ನಡೆಯುತ್ತಿತ್ತು? ಈಗ ಅದೆಲ್ಲಾ ಸ್ವಪ್ನಾವಸ್ಥೆಯಾಗಿಬಿಟ್ಟಿದೆ. ಜನಗಳಿಗೆ ನಿಜವಾಗಿಯೂ ಸಾಮಾಜಿಕ ಮತ್ತು ಧಾರ್ಮಿಕ ವಿಷಯಗಳನ್ನು ಬೋಧಿಸಲು ನಾಟಕಗಳಿಗಿಂತಲೂ ಉತ್ತಮಸಾಧನವು ಬೇರೊಂದಿಲ್ಲ ಇಂತಹ ಉತ್ತಮ ಕಲೆಯ ಜೀರ್ಣೋದ್ಧಾರ ಕಾರ್ಯವು ಪ್ರಭುಗಳವರೊಬ್ಬರು ವಿನಹ ಮತ್ತಾರಿಂದಲೂ ಸಾಗುವಹಾಗಿಲ್ಲ ಮೊದಲು ಇಂದು ಹುಟ್ಟಿ ಬೆಳೆಯುತ್ತಿರುವುದರ ಹಾಗೆ ಮುತ್ತಿಕೊಂಡತಕ್ಕ ಚಿಲ್ಲರೆ ಕಂಪನಿಗಳನ್ನು ವಿನಾಶಮಾಡಬೇಕು. ಅದಕ್ಕೆ ಒಂದು ಪ್ರಮಾಣವನ್ನು ಇಡುವಂತೆ ಮಾಡಬೇಕು. ಸರಿಯಾದ ಗೌರವಸ್ಥರುಗಳಿಂದ ಸುವ್ಯವಸ್ಥೆಯಲ್ಲಿ ನಡೆಯಲು ತಕ್ಕ ಬಂದೋಬಸ್ತಾಗಬೇಕು ಅದಕ್ಕೆ ತಕ್ಕ ಪ್ರೋತ್ಸಾಹವು ದೊರೆಯುವಂತಾಗಬೇಕು ಮಾದರೀ ಮೈಸೂರಿನಲ್ಲಿ ಸರಿಯಾದ ಶಿಸ್ತಿಲ್ಲದೆ ಇನ್ನೂ ಗತವೈಭವದಲ್ಲೇ ಇರುವುದು ಎಷ್ಟುಮಾತ್ರವೂ ಗೌರವವಲ್ಲ.

ಎಂಭತ್ತು ಅಡಿ ಮೇಲಿನಿಂದ ಧುಮುಕಿದ

ಟೋಕಿಯೋನಲ್ಲಿ ಮಿನೋರು ಮಿಟಾ ಎಂಬ 19 ವರ್ಷದ ಹುಡುಗನು ತನ್ನ ಪ್ರಿಯತಮೆ ತನ್ನನ್ನು ಬಿಟ್ಟು ಹೋದದ್ದರಿಂದ ಮನಸ್ತಾಪ ಹೊಂದಿ ಮಹಡಿಯ 7 ನೇ ಅಂತಸ್ತಿನಿಂದ ಕೆಳಕ್ಕೆ ಧುಮುಕಿಬಿಟ್ಟನು ಅವನು ಧುಮುಕಿದಮೇಲಿನ ಸ್ಥಳಕ್ಕೂ ಕೆಳಕ್ಕೂ 80 ಅಡಿ ಅಂತರವಿತ್ತು ಅವನು ಅದೃಷ್ಟವಶಾತ್ ನೆಲದಮೇಲೆ ಬೀಳದೆ ಒಂದು ಮೋಟಾರುಕಾರಿನ ಮೇಲೆ ಬಿದ್ದನು ಈಗ ಇಬ್ಬರಿಗೂ ರಾಜಿಯಾಗಿದೆ.

ನೀರೆಯರ ಮಾತು!

(ನಿರೀಕ್ಷಕನಿಂದ)

ಶ್ರಾವಣ ಶುದ್ಧ ವಿದಿಗೆ ಸೋಮವಾರ ಪಟಪಟ ಮಧ್ಯಾಹ್ನ 12 ಘಂಟೆಯಾಗಿದೆ ಮೈಸೂರು ದೊಡ್ಡಕೆರೆಯ ಅಂಗಳದಲ್ಲಿ ಸ್ತ್ರೀಯರ ಗುಂಪೊಂದು ಸೇರಿದೆ ಅಲ್ಲಿ ಅಗ್ರಹಾರದ ಪೋಕನ ಸ್ವನ್ನೂ, ಎಕ್ಸ್‌ಟೆನ್ಷನ ಸೀತಾಬಾಯಿಯವರೂ, ಚಿಕ್ಕಪೇಟೆ ರಮಾದೇವಿಯವರೂ ಗೊಲ್ಲರ ವೆಂಕಮ್ಮ, ಕಾವಡಿಟ ಕಲ್ಲದ ನಂಜಮ್ಮ ಇತ್ಯಾದಿಯವರೆಲ್ಲಾ ಸೇರಿದ್ದಾರೆ ಕೆಲವರು ಬಿಂದು, ಸ್ನಾನಿಯನ್ನು ಮತ್ತೆ ಕೆಲವರು ಬರೀ ಸೀರೆ ಎಷ್ಟಗಳನ್ನೂ ಮತ್ತೆ ಕೆಲವರು ಪನಕಾಯುವ ಮೊಗ್ಗುಗಳನ್ನು ತಂದಿದ್ದಾರೆ ಈ ರೀತಿ ಸಂಭಾಷಣೆಗಾರಂಭವಾಯಿತು —

ವೆಂಕಮ್ಮ — ಏನಮ್ಮ ಸೀತಾಬಾಯಿಯವರೇ? ನಾಡಿದ್ದು ಜ್ಯೋತಿ ತನಿ ಎರಯಲು ಎಲ್ಲಿಗ ಹೋಗುತ್ತೀರಿ?

ಸೀತಾಬಾಯಿ — ಸುಮಾರು 20 22 ವರುಷಗಳಿಂದಾಯಿತು ಈ ದೊಡ್ಡ ಕೆರೆಗೇ ಒರತಲಿದ್ದ ಈಗ್ಲೂಗ ಬರುವುದು? ಎಷ್ಟು ನೌಕರಿ ಮಿತ್ರೋ ಅಷ್ಟು ಆಷ್ಟು ಕಾಲಗೆಟ್ಟುಹೋಯಿತು ಸ್ನಾನಕ್ಕೆ ಪಡದ ಜೊತೆಲಿ ಮೋದವರೂ ಸ್ನಾನಮಾಡಿಕೊಂಡು ಹೋಗುತ್ತಲಿದ್ದರು ಈಗ ಅಲ್ಲಿಗ ಹೋದವರೆಲ್ಲಾ ಸ್ನಾನವಿಲ್ಲದ ಹಿಂತಿರುಗೋ ಬಗ ಬಂದ ಬಂದಾದ್ದರಲ್ಲಿ ತನಿ ಬರಿಯೋಕ ಸ್ನಾನದ ಯೋಚನೆ ನಿಮಗ?

ರಮಾದೇವಿ — ಅಲ್ಲ ಈ ಕೆರೆ ಈವತ್ತಿನದೇ? ನಮ್ಮ ಮನೆಯಿಂದವರೆಲ್ಲಾ ಹೇಳುತ್ತಾರೆ ಈಗ ನೀವು ನೋಡಿದರಲ್ಲಾ ಇದರ ಎರಡರಷ್ಟು ಮೂರರಷ್ಟು ಈ ಕೆರೆ ಇತ್ತಂತೆ ನೋಡಿ ಆ ಬಿರುಗೇಟ್ ಹತ್ತಿರ ಕೃಷ್ಣಣ್ಣನ ಕೊಳ ಅಂತ ಇತ್ತಲ್ಲಾ ಈಗ ಸಿಪಾಯಿಗಳೆಲ್ಲಾ ಕವಾತ್ ಮಾಡೋಲ್ಲವೇ? ಇಷ್ಟಗೇಗೂಡು ವರಿಗೆ, ಆ ಮೇಲೆ ಹೆಚ್ಚು ಕಮ್ಮಿ ಪಾಸ್ ಬಂಗಲಿ ವರಗಿರುವ ಬಾಗ ವಲ್ಲೆಲ್ಲಾ ನೀರು ಭರ್ತಿ ಇರುತ್ತಾ ಇತ್ತು ಬಿಪನ್ನೇ ಪೇವರಾಜ ಸಾಗರ ಅಂತ ಕರೀತಾ ಇದ್ದರಂತೆ ಅಷ್ಟೇಕೆ? ಎಲ್ಲಾ ಮುಚ್ಚಿ ಬಿಟ್ಟಿದ್ದಾರೆ ಅಂತ ಪಕರು ಮೊನ್ನೆ ನೂಸ್ಪಸರಿಗೆ ಇವರು—ಮುನಿಸಿಪಾಲಿಟಿಯವರು ಎಷ್ಟೇ ಕಷ್ಟಪಟ್ಟು ನೀರು ಹಿಗದಿದ್ದರೂ ಕೂಡ ಒಂದು ಹದ ಮಳೆ ಬಿತ್ತೆಂದರೆ ಅರ್ಧ ಕೆರೆ ತುಂಬಿಹೋಗುತ್ತಿತ್ತು ಇದೇ ಪರೀಕ್ಷೆ ಮಾಡಿದವಾಗ ಪಸರು ಹೊತ್ತಿಗೆ ಸರಿ ಹಾಗಿ ನೀರು ಬರುತಾ ಇತ್ತು

ಇಂಥಾ ಕೆರೇನ ವಿಪರೀತ ದಷ್ಟು ಮುರ್ಜನಿಂದ ಕಾಲುವೆಗನ್ನು ತಗೆದು ಸಾಬದ ಕಡೆಗ ಪಂಪಿಟ್ಟು ಪಾಸ ನೀರನ್ನೆಲ್ಲಾ ಸಾಗಿಸಿ ಈರೀತಿ ನಾರಿಸಿ ಗುಡಿಸಿ ಪಂಗೋಲಿ ಹಾಕುವುದು ಅಂತ ಹೇಳುತ್ತಾರೆ

ಗೊಲ್ಲರ ಕಮಾಕ್ಷಮ್ಮ — ಈ ಸಂಪತ್ತಿನೋಷ್ಟದ ಕೆರೆ ನೀರು ಪಾಸನ ಬಂದಿದೆ ಅಂತ ಸಿಪಾಯಿ ಪೇಪಾಯಿಗಳಲ್ಲಿ ವ್ಯವಹಾರ ತಕ್ಕ ಹರಿಸಿ, ಅವನ್ನೆಲ್ಲಾ ವಾರ್ಡುಗಳಲ್ಲಿ ಕಟ್ಟಿಸಿ ನೀರನ್ನೆಲ್ಲಿ ಬಿಡಿಸಿ ನೀರನ್ನು ಕ್ಲೀನ್ ಮಾಡಿಸಿದರು ಸಾಲದ ಕಡೆಗೆ ನಳಗಳ ತೆಪ್ಪಕಟ್ಟಿಸಿ ಎಷ್ಟೊಂದಿನ ಎಷ್ಟು ಜನ ಕೂಲಿಗಳನ್ನು ಈ ಕೆಲಸಕ್ಕೆ ಬಿಟ್ಟಿದ್ದಿಲ್ಲ? ಒದಲ್ಲಾ ನೀರಿನಲ್ಲಿ ಮಾಡಿದ ಹೋದವರಂತ ತಾನೆ ಆಯಿತು

ಕಾವಡಿಟ ನಂಜಮ್ಮ — ಇನ್ನೇನು ಹೊಸದಾಗಿ ಕೆರೆ, ಕಟ್ಟೆ, ಬಾವಿಗಳನ್ನು ಮಾಡಿಸೋದು ದರ್ಬಾರ್ತ್ಸರ ಕೆಲಸ ಈ ಮು ಪಾರ್ಥಕವಾಗಿ ನಡೆಸಿಕೊಂಡು ಬರಬೇಕಾದ್ದು ಇತರ ಜನರ ಕೆಲಸ ಅಂಥವರಲ್ಲಿ ಇರೋವನ್ನು ನಿರ್ಮೂಲಮಾಡಿ ಎಲ್ಲರ ಬಾಯಲ್ಲೂ ಉಪ್ಪಿಟ್ಟೆ! ಎನ್ನುವ ಹೆಸ್ರನ್ನು ಪಡಿಸಿಕೊಂಡು, ಮೂಗಿಕೊಳ್ಳುವುದೂ ಒಂದು ಯೋಗ ಮಾತಿಗೆ ಮೂವರಿಂ ಬೇಳೋಣವೇ! ಮಾಡಿದ್ದಕ್ಕೆ ಮನವೇ ಸಾಕ್ಷಿ ಹೋದದ್ದಕ್ಕೆ ಜಲವೇ ಸಾಕ್ಷಿ ಅಂತ?

ನಾಗರೀ ರತ್ನಮ್ಮಯವರೇ, ಈ ಅಕ್ಕಿತ್ತ ಗುಡದ ಕೆರೆಗೆ ಇನ್ನೊಂದು ನಾಗಪ್ಪ ಗಳು ಹೋದಂತಿಲ್ಲ ಆ ಪ್ಯಾ ಯಾವ ನಾಗಪ್ಪನೂ ಸ್ವಲ್ಪ ವಿಚಾರಿಸಿಕೊಳ್ಳಲಿಲ್ಲವಲ್ಲಾ ಯಾಕೆ?

ಕಂಠಮ್ಮ — ಆ ನಾಗಪ್ಪಗಳು ಇವರಲ್ಲಾ ಈ ಸಣ್ಣ ವಿಷಯಕ್ಕೆಲ್ಲಾ ನಾನು ನಿಕ ಕೊಳ್ಳಲ್ಲ ಇರಲಿ ನೋಡೋಣ ಒಂದ ಬಾಯಲ್ಲಿ ಕೂಡಿದ ಎಲ್ಲಾ ಸುರಿಸಿಕೊಂಡು ಒಂದೊರಾರಿ ಒಂದೇ ಒಂದು ಸಟು ಕೊಬ್ಬರ ತತ್ತರಿಸಿಯೋಗಿಲಾ ಎಂಬೇಕು ನಿವರ್ತನ ಕೇಳಿ ಹೇಕೋ—ಸುಮಾರು 7—8 ವರುಷದ ಹಿಂದ ಒಬ್ಬ ಒಕ್ಕಲಿಗರ ಹುಡುಗ ಬಂದು ನಾಗಪ್ಪನಿಗೆ ಕೆತ್ತಕ್ಕೆ ಬದ ಫಲ ಯಾರಿಗ ಗೊತ್ತಿಲ್ಲ ತೀಕ್ಷ್ಣವಾಗಿಲ್ಲಯೇ ಮ ಬ್ರಹ್ಮಣ್ಯ ಸ್ವಾಮಿ ಮೇಲ ಬಂತು ಆ ಹುಡುಗನು ಹಾವಿನಂತೆಯೇ ಹೊಟ್ಟೆಯಿಂದ ಹರಿ ಹೋಗುತ್ತಿದ್ದನ ಸರ್ಪದಂತೆ ಕೇವಲ ಸಣ್ಣ ಕನ್ನದಲ್ಲಿಯಾದರೂ ನುಗ್ಗಿ ಬರುತ್ತಿದ್ದುದು ಯಾರಿಗೆ ತಾನ ತಿಳಿಯದು' ಕಡೆಗ ಅವನು ಮಡಿ ಮೈಲಿಗೆಯನ್ನ ಬಿಡುದರ ಫಲವಾಗಿ ಕೇವಲ ಕೃಪಣನಾಗಿ ಪ್ರಾಣವನ್ನೇ ಬಿಟ್ಟನಲ್ಲವೆ ಇದಕ್ಕೂ ಹೆಚ್ಚಿನ ಸಾಕ್ಷಿ ಯಾಕಿರಬೇಕಮ್ಮಾ?

ಸೀತಾಬಾಯಿ — ಒಹೋ ಅದಕ್ಕೇ ಇರಬಹುದು ಈ ನಾಗರಕಲ್ಲುಗಳ ಪೂಜೆಗೆ ಮಾತ್ರ ಇನ್ನೂ ಹೋಗಿಲ್ಲ

ಮುಖ್ಯ ಮಾಡಿದ್ದಿನ್ನೋ ಮಹಾರಾಯ! ಅನ್ನೋನಾಗ

ಕೆರೆ ಇದ್ದಿದ್ದರೆ ತನಿ ಯಾರಿಯೋವರೂ ಎರೀಬಹುದಾಗಿತ್ತು ನಾವು ನಮ್ಮಂಥವರೂ ಒಂದು ಮೊತ್ತ ತಳಕೊಂಡು ಒಟ್ಟಿಗಿಷ್ಟೆ ಒಬ್ಬೊಂದು ಹೋಗಬಹುದಾಗಿತ್ತು ಊರಿಂದೆಲ್ಲಾ ಕಾದಾಗಿ ಕಡೆಲ್ಲಾ ಖಾರಾಗಬೇಕಾದ ಕಾಲ ತಾನೆ ಇಷ್ಟರಲ್ಲಿ ಮನೆಗ ಹೋಗೋಣ ನಾಲ್ಕು ಘಂಟೆಯಾಯಿತು

ಸೀಸೆಯಲ್ಲಿ ತೋಟ!

ಸೀಸೆಗಳಲ್ಲೇ ತೋಟ ಮಾಡಬಹುದು ರಸಾಯನ ಶಾಸ್ತ್ರದ ಪ್ರಯೋಗಗಳಿಂದ ಕೃತಕವಾಗಿ ಗಿಡಗಳು ಬೆಳೆಸಲ್ಪಡುತ್ತಿವೆ ಸ್ವಾಭಾವಿಕವಾದ ಗಿಡಗಳಿಗೂ ಈ ಗಿಡಗಳಿಗೂ ಏನೂ ವ್ಯತ್ಯಾಸವಿರುವುದಿಲ್ಲ ಅಮೆರಿಕದ ನ್ಯೂಜರ್ಸಿಯಲ್ಲಿ ಇದು ಒಬ್ಬ ಪಂಡಿತನಿಂದ ಮಾಡಿತೋರಿಸಲ್ಪಟ್ಟಿದೆ ಸೀಸೆಗಳಲ್ಲಿ ಅಗರ್ ಅಗರ್ ಎಂಬ ಪಸಾರಿಯ ದಿನಸಿಯೊಡನ ಇತರ ರಸಾಯನ ಸಾಮಾನುಗಳನ್ನು ಸುರಿಸುವುದು ಈ ಸಾಮಾನುಗಳು ಬೇರುಬಿಟ್ಟದಂತಾದ ಮೇಲೆ, ಬೀಜಗಳನ್ನು ಪ್ಲಾಟಿನಮ್ ಲೋಹದ ಸೂಜಿಯಿಂದ ಅದರೊಳಗೆ ತೂರುವುದು ಆ ಮೇಲ ಸೀಸೆಯ ಬಾಯಿಗ ಹತ್ತಿಯಬಿರಡಿ ಹಾಕುವುದು ನಂತರ ಗಾಳಿ ಹೋಗದಂತೆ ಬೀಗ ಮುದ್ರೆ ಮಾಡುವುದು ಯಾರೀತಿಯಿಂದ ಗಿಡಗಳು ಬೆಳೆಯುವುದಕ್ಕೆ ನೀರಿನ ಅವಶ್ಯಕತೆಯಿಲ್ಲವೆ ತ ಪೇ ಬೆಳೆಯುವುದು, ಒಣಗುವದಿಲ್ಲ ಆದರೆ ಬಿಸಿಲು ಮಾತ್ರ ಬೇಕೇಬೇಕು ಇದಕ್ಕಾಗಿ ಗಿಡಗಳಿಂದ ಸೀಸೆಗಳನ್ನು ಬೆಳಿಗಿಂದ ಸಂಜೆಯವರಿಗ ಬಯಲಲ್ಲಿಡಬೇಕು ಈ ರೀತಿ ಬೆಳೆಯುತ್ತಿರುವ ನ್ಯಾ ನಮ್ಮ ಪ್ರನಾಯಕರು ಇಲ್ಲಿಯವರು ಅನುಸರಿಸಿ ನೋಡಬಾರದೇ?

ಮುಗೂರಿನಲ್ಲಿ ವಿಚುಪ್ರದರ್ಶನ

(ಒಬ್ಬ ಬಾತ್ಮೀದಾರನಿಂದ)

ಕಳೆದ ತಿಂಗಳು 28 ನೇ ತಾರೀಖಿನದ ತಾಲ್ಲೂಕು ಮುಗೂರಿನಲ್ಲಿ ಚಿತ್ರಪ್ರದರ್ಶನವು ಸೈಹಲು ಡಿ! ಡಿ! ಕರ್ಮೀಷನರಾದ ಮ|| ಟಿ ವಿ ರಾಮಯ್ಯರವರ ಅಧ್ಯಕ್ಷತೆಯಲ್ಲಿ ಅತಿ ವಿಜೃಂಭಣೆಯಿಂದ ನಡೆಯಿತು ಆ ಗ್ರಾಮದಲ್ಲಿ ಒಂದು ಹೆರಿಗೆ ಆಸ್ಪತ್ರೆಯನ್ನು ತೆರೆಯಲು ಅನೇಕ ಮಹನೀಯರು ಉದಾರವಾಗಿ ಸಹಾಯಮಾಡಿದರು. ಮ|| ರಾ| ಶ್ರೀನಿವಾಸರಾವ್ ಫೈರ್‌ಸೆಟ್ ಮತ್ತು ಸೀತಾರಾಮರಾವ್ ಪಬ್ಲಿಸಿಟಿ ಆಫೀಸರೂ, ಮತ್ತು ವಿ ಕೃಷ್ಣಯ್ಯಂಗಾರ್ರೂ ಆರೋಗ್ಯ ವಿಷಯವಾಗಿ ಬಹಳ ಸ್ವಾರಸ್ಯವಾದ ಭಾಷಣಮಾಡಿದರು ಹೆಲ್ತ್ ಡಿಪಾರ್ಟ್‌ಮೆಂಟಿನವರು ಆರೋಗ್ಯ ವಿಚಾರಕ್ಕೆ ಸಂಬಂಧಪಟ್ಟ ಸಿನಿಮಾ ಪ್ರದರ್ಶನವನ್ನು ಏರ್ಪಡಿಸಿದ್ದರು ಮಹಾ ಪ್ರಭುಗಳವರ ಜಯಘೋಷವಾದನಂತರ ಸಭೆಯು ಮುಕ್ತಾಯವಾಯಿತು ಇಂತಹ ಒಳ್ಳೆಯ ಕೆಲಸಗಳನ್ನು ನಡೆಸಲು ಮತ್ತು ಜನಗಳ ಆರೋಗ್ಯ ಭಾಗ್ಯವನ್ನು ಹೆಚ್ಚಿಸಲು ಈ ತಾಲ್ಲೂಕಿನ ಅಮಲ್ದಾರರಾದ ಮ|| ಬಿ ವಿ ರಂಗಯ್ಯನವರ ಉತ್ಸಾಹವೇ ಮುಖ್ಯ ಕಾರಣವಾಗಿದ

ಓ! ಮರಕಡಿವನೇ ಆ ಮರವ ನುಳುಹು!

ಓ! ಮರ ಕಡಿವನೇ ಆ ಮರವನುಳುಹು
ಮುಟ್ಟದಿರದರೊಂದು ಕೊನೆಯ
ಯೌವನದೊಳೆನ್ನ ಸಲಹಿತಾಮರವು
ಸಲಹುವೆನು ಇಂದು ನಾನದನು
ಗುಡಿಸಿಲದರೊಳಮ್ಮ ಅಜ್ಜನಾದಿನದಿ
ನೆಟ್ಟ ನೀಮರವ ತಾ ತಂದು!
ಅಲ್ಲ ಆದಿರಲಿ, ತೆಗ ನಿನ್ನ ಕೊಡಲಿಯನು
ಮುಟ್ಟದಿರದರೊಂದು ಕೊನೆಯ!
ಹೇರ ಪೇರಗಳಲಿ ಹಬ್ಬಿಹುದು ಹೆಸರು
ಎಲ್ಲೆಡೆಯೊಳಿಹುದದರ ಖ್ಯಾತಿ
ಕಡಿದು ಕೆಡಹುವಿಯಾ ಈಗ ನೀನದನು!
ತರ ಆ ಕೂಡಲಿ ಘಾತವನು!
ತಿರುಗಿ ಬಿಗಿದಿರುವೀ ಬೇರಕಡಿಯದಿರು,
ಓ ಉಳಿಸು ಆ ಮುದಿ ಮರವ!
ಹುಡುಗುತನದೆನ್ನ ಬಿಡುವಿನಾಸರೆಯ,
ತಿಂಗಾಡುದೀಮರವೆನಗೆ
ಸಂತಸದೊಳಿರದಿಯಾಡಿದರು ಎನ್ನ
ಒಡನಾಡಿಗಳು ನೋಡಿದರು!
ಮಾತೆನುಡಿದಿರುವಳೀಯೆಡೆಯೊಳೆನ್ನ
ಅಪ್ಪದನು ತಾತನನು ಇಲ್ಲಿ!
ಮನ್ನಿಸುತ ಕೀಳಗೇಡಿಸಿ ಕಂಬನಿಯ
ಉಳಿಸು ನೀನಾ ಮುದಿಮರವನು
ಎಲ್ಲ ಎದವಲ್ಲಿ ಬಿಗಿದಿಹುದು ಸಹಿಸ
ನಿನ್ನ ನಾ ತೊಗಬಯಿಂದವಲಿ
ಕೂಗಿ ಕೋಗಿಲೆಯು ಹಾಗಿಸುತಿರಲು,
ಕೊಂ
ನವಿ ಮರವೆ ಉಳಿಗಾಲಿಯನು
ಎಮರ ಕಡಿವನೇ ತೊರೆಯಾ ಎಡೆಯ
ನಾನೀ ಮರವ ತಡೆಯಲಿರುವನಕ
ಕೊಡಲಿ ಘಾತಿಸದಿರಲೆನ್ನೀಮರವನು!

ಪಿ ಎಸ್ ಒಸ್

ಯಳಂದೂರು ವರ್ತಮಾನ

(ಸ್ವಂತ ಸುದ್ದಿಗಾರರಿಂದ)

ಈ ತಾಲ್ಲೂಕು ಗ್ರಾಮಾಂತರಗಳ ನಿ ತರು ದಾಗಿ ಬಿತ್ತಲು ಜಮೀನುಗಳನು ಉತ್ತು ಪಾಕ್‌ಮಾಡಿಕೊಂಡು ಮಳೆಯನ್ನು ಎದುರುನೋಡುತ್ತಾ ಚಾತಕ ಪಕ್ಷಿಗಳಂ ಬಾಯಿ ಬಿಟ್ಟುಕೊಂಡಿದ್ದಾರೆ ಈ ಕಸಬಾ ಬಳೇಪೇಟೆಯಲ್ಲಿ ಕೆಲವು ಮನೆಗಳು ಬೀಳು ಸಾಯುತ್ತಾ ಇವೆ ಅಂತಹ ಮನೆಗಳನ್ನು ಬಿಡಿಸಿ ಮುನಿಸಿಪಾಲಿಟಿಯಿಂದ ಡಿಸ್ಇನ್‌ಫೆಕ್ಷನ್ ನಡೆಯುತ್ತಾ ಇವೆ ಈ ತಾಲ್ಲೂಕ್ ಕೊನಾರ್ಕ ಪುರದಲ್ಲಿ ಪಶುಗಳಿಗ ಕಾಲು ರೋಗವಿರುವಂತೆ ತಿಳಿದುಬರುತ್ತದೆ

ಈ ತಾಲ್ಲೂಕು ಮಲಾರ್‌ಪಾಳ್ಯದ ಮುದಲ್ಲಿ ಚೇನಪ್ಪ ಎಂಬುವನನ್ನು ಕೋ ಹೊಲದಲ್ಲಿ ಕೊಂದುಹಾಕಿದ ನ್ನು ಪೋಲೀಸಿನವರು ವಿಚಾರಣೆ ಶೀಲ್ ಜರುಗಿಸುತ್ತಿರುವಂತೆ ಕೇಳುತ್ತೇವೆ

For Up to-date and Efficient Medical Treatment

Go to—**Dr. A. J. RAM & SONS,**

Sayaji Rao Road, Mysore.

Physicians Dentists Opticians, etc

ಡಾ॥ ಎ ಜೆ. ರಾಂ. ಅಂಡ್ ಸನ್ಸ್,

ಸಯ್ಯಾಜಿರಾವ್ ರೋಡ್, ಮೈಸೂರು ಸಿಟಿ.

ಔಷಧ ವ್ಯಾಪಾರಿಗಳು, ಚಿಕಿತ್ಸಕರು, ದಂತವೈದ್ಯರು,
ಮತ್ತು ಕನ್ನಡಕ ವ್ಯಾಪಾರಿಗಳು

ಉತ್ತಮವಾದ ನವೀನ ಚಿಕಿತ್ಸೆಗಳಿಗೆ ನಮ್ಮಲ್ಲಿಯೇ ಬನ್ನಿರಿ

ಪಂಡಿತ ಸಿ. ಎಚ್. ಚಂದ್ರಭಾನಸಿಂಗ್
ಇವರಿಂದ ತಯಾರಿಸಲ್ಪಟ್ಟ

ಫಲಪುಷ್ಪಸಾರ ರಸಾಯನ.

ಸುಖಕರ ಮಲಬಂಧನಿವಾರಿಣೀ ಕ್ರಯ —1-8-0

ಗುಣ:—ಇದು ಜಾಪಾಳ ಮುಂತಾದ ಕಠಿಣ ವಿರೇಚಕ ವಸ್ತುಗಳ ಸಂಯೋಗವಿಲ್ಲದ ಕೇವಲ ಅನ್ನಶೀಕರಣ ಪ್ರಯೋಗವು ಕೇವಲ ಅನುಭವಸಿದ್ಧವಾದ್ದು. ಇದನ್ನು ಉಪಯೋಗಿಸುವುದರಿಂದ ಎಲ್ಲಾ ವಿಧವಾದ ಮಲಬಂಧವೂ, ಮೂಲವ್ಯಾಧಿ, ಅಜೀರ್ಣ, ಉಷ್ಣವಾಯು, ಶೀಲವಾಯು, ಎದೆಯುರಿ, ಹೊಟ್ಟೆನೋವು, ಕೆಮ್ಮು, ತಲೆತಿರುಗು ಮುಂತಾದ ರೋಗಗಳೆಲ್ಲವೂ ಖಂಡಿತ ಗುಣವಾಗುತ್ತದೆ

ಬ್ರಾಂಚ್:—ಶ್ರೀಸತ್ಯನಾರಾಯಣ ಆಯುರ್ವೇದಿಕ್ ಫಾರ್ಮಸಿ,

ಜಗನ್ಮೋಹನ ಬಂಗ್ಲೆ ರಸ್ತೆ, ಮೈಸೂರು

You Know

OUR IDEAL ARRANGEMENTS & CHOICEST PREPARATIONS

We need not tell you about it

COME & SEE OUR NOVEL

innovations and up-to-date Management.

SRI KRISHNA BHAVAN, Mysore

ANANDA SODA FACTORY,

DODDAPET, MYSORE.

BEST AERATED WATER SUPPLIERS.

COMPLETE REQUISITES FOR

AERATED WATER MANUFACTURERS

AVAILABLE

ಆನಂದಾ ಸೋಡಾ ಫ್ಯಾಕ್ಟರಿ,

ದೊಡ್ಡ ಪೇಟೆ, ಮೈಸೂರು

"ಬ್ರೇಕ್ ಪಿಲ್ಸ್"

Invented by a Himalayan Sage.

● ಸ್ತ್ರೀಪುರುಷರಿಗೆ ಆನಂದವನ್ನುಂಟುಮಾಡುವುದು ಈ ಮಾತ್ರೆಗಳೇ ಮದಿಸಿದ ಸ್ತ್ರೀಯರ ಗರ್ವಭಂಗಮಾಡಲು ತಂದುಕೊಡಲ್ಪಟ್ಟ ಮಾತ್ರೆಗಳಿವು

ಇವುಗಳಲ್ಲಿರುವ ವಿಶಾದಿಗಳು ಇಲ್ಲ ಕಸ್ತೂರಿ, ಅಫೀಮು, ಹಿಮಾಲಯ ಪರ್ವತದ ವನಮೂಲಿಕೆಗಳು ಮುಂತಾದವುಗಳಿಂದ ಮೊದಲು ಯೋಗೀಶ್ವರರ ಶಕ್ತಿಯ ಸಂಗ್ರಹಿಸಿ ಮುದಿತನವನ್ನು ಲೋಕದಲ್ಲಿ ಇಲ್ಲವಂತೆ ಮಾಡುವುದು ಅರ್ಧ ಘಂಟೆಯೊಳಗಾಗಿ ವೀರ್ಯವನ್ನು ಕಟ್ಟಿನಿಂತಿಸಿ ರಮಿಸಲು ಉಲ್ಲಾಸವನ್ನು ಮಾಡುವುದು ಗುಣವಿಲ್ಲದಿದ್ದಲ್ಲಿ ಹಣ ವಾಪಸು

೬೦ ಮಾತ್ರೆಗಳು ರೂ ೨—೦—೦

೩೦ ಮಾತ್ರೆಗಳು ರೂ ೧—೦—೦

(ಕಾಗದ ಪತ್ರಗಳು ಇಂಗ್ಲೀಷಿನಲ್ಲಿರಲಿ)

ಡಾ॥ ಎ. ಎಸ್. ಮೂರ್ತಿ,

ವಿಕಾರ್ಸ್ ಗಂಪಾಸ್ ತ್ರಿಶ್ಸ್

ಪ್ರಾಚೀನ ಕನ್ನಡ ವಚನ ಗ್ರಂಥಗಳು

ಸೌಗಂಧಿಕಾಪರಿಣಯ—ಪೂರ್ವದಲ್ಲಿ ದೇವೇಂದ್ರನಿಗೆ ದೂರ್ವಾಸ ಮುನಿಗಳಿಂದ ಒಲಿದಿದ್ದ ಪ್ರಸಾದವಾಗಿ ಕೊಡಲ್ಪಟ್ಟ ಕಮಲಮಾಲಿಕೆಯನ್ನು ಆನೆಯ ಕುಂಭಸ್ಥಳದಲ್ಲಿಟ್ಟಾದನೆ, ಆನೆಯು ಆ ಮಾಲಿಕೆಯನ್ನು ಕಾಲಿನಲ್ಲಿ ಹೊಸಕಿ ಸ್ಪರ್ಶಮಾಡಲು, ಮುನಿಗಳ ಶಾಪದಿಂದ ಭೂಲೋಕದಲ್ಲಿ ಸತ್ಯಪುರಿಯಲ್ಲಿ ಸುಗಂಧರಾಜನಾಗಿ ಹುಟ್ಟಿ, ಕಳಿಂಗದೇಶದ ರಾಜಪುತ್ರಿಯಾದ ಸೌಗಂಧಿಕಾದೇವಿಯನ್ನು ಸ್ವಯಂವರನಾಗಿ ಕೈಗೊಂಡ, ಬಹು ವಿಷಯಗಳುಳ್ಳ ಕಥೆ

೧೨೦ ಪುಟಗಳು ಕ್ರಯ ರೂ ೧—೦—೦

ಸಹಸ್ರಾಯುಚರಿತ್ರೆ—ಮಾರ್ಕಂಡೇಯ ಋಷಿಗಳ ಸ್ತುತ್ಯವಲ್ಲದೆ ದಾಕ್ಷಾಯಣಿ ಪ್ರಸಾದದಿಂದ ಜನಿಸಿ ಲೋಕಪ್ರಸಿದ್ಧನಾಗಿ ತನಗೆ ಇತರರಿಂದ ಒಂದ ಗಂಡಾಂತರಗಳನ್ನೆಲ್ಲಾ ಪರಿಹರಿಸಿಕೊಂಡ ಒಬ್ಬ ಮಹಾಪುರುಷನ ಕಥೆ

೪೭೫ ಪುಟಗಳು ಕ್ರಯ ರೂ ೨—೦—೦

ಕಾಶೀಕ್ಷೇತ್ರಮಹಾತ್ಮೆ—ಇದರಲ್ಲಿ ೧೪ ಲೋಕಗಳ ವರ್ಣನೆ, ನದಿಗಳು, ದೇವತೆಗಳು, ಋಷಿಗಳೇ ಮುಂತಾದವರ ಉತ್ಪತ್ತಿಕ್ರಮ, ಗಂಗಾ ಸಹಸ್ರನಾಮವೇ ಮೊದಲಾದ ಅನೇಕ ವಿಷಯಗಳು ಅಡಕವಾಗಿರುತ್ತೆ

೬೦೩ ಪುಟಗಳು ಕ್ರಯ ರೂ ೩—೮—೦

ವಿಳಾಸ —

ಗುಂಡ್ಲು ಪಂಡಿತ ಲಕ್ಷ್ಮಣಾಚಾರ್ಯರ ಮಕ್ಕಳು
ಶ್ರೀನಿವಾಸ ದೇಶಿಕಾಚಾರ್,
೨೦೭, ಕರುಪಟ್ಟಿಬೀದಿ, ಮೈಸೂರು

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ಬಾಲಸುಧಾ

ಮಕ್ಕಳ ಜ್ವರದ ಗೆಡ್ಡೆಯನ್ನು ಖಾತರಿ ಗುಣ ಪಡಿಸುತ್ತೆ. ಲಿವರ್ (ಪಿತ್ತ ಕೋಶ) ದಪ್ಪನಾಗಿ ಕಣ್ಣು ಹಳದಿ ಬಣ್ಣನಾಗಿದ್ದರೆ ಇದರ ಸೇವನೆಯಿಂದ ದಿನೇ ದಿನೇ ಗುಣವಾಗುತ್ತೆ. 20 ವರ್ಷಗಳಿಂದಲೂ ಅನುಭವ ಸಿದ್ಧವಾಗಿದೆ—ಮಕ್ಕಳ ಭೇದಿಗೆ ನಮ್ಮ ಬಾಲ ಸಂಜೀವಿಯನ್ನೇ ಉಪಯೋಗಿಸಿರಿ

ಬಾಲಸುಧಾ ಬೆಲೆ 1 ರೂ ಬಾಲ ಸಂಜೀವಿನಿ 1 ಆ.

ಮೈಸೂರು, ಬೆಂಗಳೂರು, ಮದ್ರಾಸುಗಳಲ್ಲಿ ನಮ್ಮ ಶಾಖೆಗಳಿವೆ.

ಸದ್ವೈದ್ಯಶಾಲಾ, ನಂಜನಗೂಡು.

ಎಂ. ವಿ. ನಾರಾಯಣರಾಯರ

ಶ್ರೀ ಸತ್ಯನಾರಾಯಣ ಪರಿಮಳ ಫ್ಯಾಕ್ಟರಿ,

ಜಗನ್ಮೋಹನ ಬಂಗ್ಲಾ ಬೀದಿ, ಮೈಸೂರು

ಪರಿಮಳ ಅಗರ್ ಬತ್ತಿ

ಉಪಯೋಗಿಸಿ ಪ್ರೋತ್ಸಾಹಿಸಿರಿ

ದ್ರಾಕ್ಷಾಮೃತ

ಈ ದ್ರಾಕ್ಷಾಮೃತವು ಸಹ್ಯಾದ್ರಿ ಪರ್ವತದಲ್ಲಿ ಅನೇಕ ವನಸ್ಪತಿಗಳ ರಸವರ್ಗಗಳೊಂದಿಗೆ ದ್ರಾಕ್ಷಿರಸವನ್ನು ಮಿಶ್ರಮಾಡಿ ಸ್ವದೇಶಿ ಯಂತ್ರದಿಂದ ಶಾಸ್ತ್ರೋಕ್ತ ಪದ್ಧತಿ ಪ್ರಕಾರ ತಯಾರು ಮಾಡಿರುವದರಿಂದ ಸ್ವಾದಿಷ್ಟವು ಮತ್ತು ಮಧುರವು ಆಗಿದೆ

ಇದರ ಸೇವನೆಯಿಂದ ಶರೀರದೊಳಗಿನ ಹಳೆ ಕಡಕಿ (ಗರಮಿ) ಸಂಪೂರ್ಣ ನಾಶವಾಗುತ್ತದೆ ಮತ್ತು ಧಾತುಸ್ರಾವ, ಸ್ವಪ್ನಾವಸ್ಥೆಯಿಂದ ಅಥವಾ ಬೇರೆ ಯಾವದೇ ಕಾರಣದಿಂದ ಬಂದ ಅಶಕ್ತತೆಯಿಂದ ಕೈಕಾಲು, ಕಣ್ಣೊಳಗೆ ಉರಿವು ಬೀಳೋಣ, ಶೌಚಕ್ಕೆ ಸಾಫ ಆಗದೆ ಇರೋಣ, ಮುಂತಾದ ಎಲ್ಲ ವಿಕಾರಗಳು ನಷ್ಟವಾಗಿ ಕ್ಷುಧಾಗ್ನಿ ಬೆಳೆಯುತ್ತದೆ ಮತ್ತು ಅನ್ನ ಚೆನ್ನಾಗಿ ಪಚನವಾಗಿ ಶೌಚಕ್ಕೆ ಸಾಫವಾಗುತ್ತದ ಇದರ ಸೇವನೆಯಿಂದ ತರುಣರಿಗೆ ವ್ಯಭಿಚಾರದಿಂದ ಅಥವಾ ಬೇರೆ ಕಾರಣದಿಂದ ಬಂದ ಧಾತುಕ್ಷೀಣತೆ, ನಪುಂಸಕತ್ವ ಇದ್ದರೆ ಅದು ಹೋಗಿ ಪುನಃ ಯೌವನವಂತರಾಗಿ, ಶರೀರ ಬಲವಾಗಿ ಮಕ್ಕಳು ಪುಷ್ಟಿವಂತರಾಗುವರು. ಹೆಂಗಸರಿಗೂ ಮತ್ತು ಮಕ್ಕಳಿಗೂ ಈ ಔಷಧವು ಗುಣಕಾರಿ ಇದೆ. ಮುಟ್ಟಾಗದಿದ್ದರೆ ಮತ್ತು ಉಷ್ಣ ಗರ್ಭ ಸಂಬಂಧವಾದ ರೋಗಗಳಿದ್ದರೂ ಅವೆಲ್ಲ ಗುಣವಾಗಿ ಹೆಂಗಸರಿಗೆ ಸಂತತಿ ವೃದ್ಧಿಯಾಗುವದು ಈ ಔಷಧದ ಮೂರು ಬಾಟ್ಲಿಗಳನ್ನು ಸೇವನೆ ಮಾಡಿದರೆ ಪೂರ್ಣ ಗುಣಬರುತ್ತದೆ ಇದರ ಅನುಭವ 1 ಬಾಟ್ಲಿ ಸೇವನೆ ಮಾಡಿದ ಅನಂತರ ನಿಮಗೆ ತಿಳಿದೀತು

1 ಬಾಟ್ಲಿ ಬೆಲೆ ರೂ. 1-4-0, 3 ಬಾಟ್ಲಿ 3-8-0.
1 ಡಜನ್ ಬಾಟ್ಲಿ ಬೆಲೆ 12-0-0

ಮ್ಯಾನೇಜರ್—ದ್ರಾಕ್ಷಾಮೃತ ಡಿಪೋ.

ಪೋಸ್ಟ್ ನಿಪ್ಪಾಣಿ, ಜಿಲ್ಲಾ ಬೆಳಗಾವಿ

ಮೈಸೂರು ಸ್ಟಾಕಿಸ್ಟ್ಸ —ಟಿ ಸಿ. ನಟರಾಜ್, ಬೊಂಬಾಯಿ ಆನಂದ ಭವನ, ಮಾಡರ್ನ್ ಫಾರ್ಮಸಿ, ಸಯ್ಯಾಜಿರಾವ್ ರೋಡ್ ಬೆಂಗಳೂರು ಸಿಟಿ —ಸಿ.ವಿ ದಾಸ್ತ್ರಿ ಅಂಡ್ ಸನ್ಸ್, ಚಿಕ್ಕಪೇಟೆ ತುಂಕೂರು—ಟಿ ಆರ್. ಗುರು ಚನ್ನಬಸಪ್ಪ ಅಂಡ್ ಬ್ರದರ್ಸ್. ಚಿಕ್ಕಮಗಳೂರು—ಎಂ ಎಚ್ ಮಂಜಯ್ಯಶೆಟ್ಟಿ ಶಿವಮೊಗ್ಗ—ಶ್ರೀಕೃಷ್ಣ ಟ್ರೇಡಿಂಗ್ ಕಂಪನಿ ಮತ್ತು ಸಿಂಧೇರಾವ್ ಬ್ರದರ್ಸ್ ದಾವಣಗೆರೆ—ಮುಪ್ಪೀರಪ್ಪ ಮತ್ತು ಕ ಭೋಜಯ್ಯಶೆಟ್ಟಿ ಅಂಡ್ ಬ್ರದರ್ಸ್

"ಬ್ರೇಕ್ ಪಿಲ್ಸ್"

Invented by a Himalayan Sage.

● ಸ್ತ್ರೀಪುರುಷರಿಗೆ ಆನಂದವನ್ನುಂಟುಮಾಡುವುದು ಈ ಮಾತ್ರೆಗಳ ಮದಿಸಿದ ಸ್ತ್ರೀಯರ ಗರ್ವಭಂಗಮಾಡಲು ಕಂಡುಹಿಡಿದಿರುವ ಮಾತ್ರೆಗಳು

ಇದರಲ್ಲಿ ರಸ ವಿಷಾದಿಗಳು ಸೇರಿಲ್ಲ ಕಸ್ತೂರಿ, ಚಿನ್ನ, ಹಿಮಾಲಯ ಪರ್ವತದ ವನಮೂಲಿಕೆಗಳು ಮುಂತಾದುವುಗಳಿಂದ ಮೊನ್ನ ಯೋಗೀಶ್ವರರ ಹತ್ತಿರ ಸಂಗ್ರಹಿಸಿ ಮುದುಕರನ್ನು ಲೋಕದಲ್ಲಿ ಇಲ್ಲದಂತೆ ಮಾಡುವುದು ... ಹಂಬೆಯೊಳಗಾಗಿ ವೀರ್ಯವನ್ನು ಕಲ್ಲಿನಂತೆ ಮಾಡಿ ರಮಿಸಲು ಉಲ್ಲಾಸವನ್ನು ಮಾಡುವುದು. ಗುಣವಿಲ್ಲದಿದ್ದಲ್ಲಿ ಹಣ ವಾಪಸು

೬೦ ಮಾತ್ರೆಗಳು ರೂ. ೫—೦—೦.

೩೦ ಮಾತ್ರೆಗಳು ರೂ. ೩—೦—೦

(ಕಾಗದ ಪತ್ರಗಳು ಇಂಗ್ಲೀಷಿನಲ್ಲಿಯೇ)

ಡಾ॥ ಎ. ಎಸ್. ಮೂರ್ತಿ,

ಚಿಕಾಕೋಲ್, ಗಂಜಾಮ್ ಡಿಸ್ಟ್ರಿ

ಪ್ರಾಚೀನ ಕನ್ನಡ ವಚನ ಗ್ರಂಥಗಳು

ಸೌಗಂಧಿಕಾಪರಿಣಯ:—ಪೂರ್ವದಲ್ಲಿ ದೇವೇಂದ್ರನಿಗೆ ದೂರ್ವಾಸ ಮುನಿಗಳಿಂದ ಆಶೀರ್ವಾದ ಪೂರ್ವಕವಾಗಿ ಕೊಡಲ್ಪಟ್ಟ ಕಮಲಮಾಲಿಕೆಯನ್ನು ಆನೆಯ ಕುಂಭಸ್ಥಳದಲ್ಲಿಟ್ಟಿದ್ದಾಗ, ಆನೆಯು ಆ ಮಾಲಿಕೆಯನ್ನು ಕಾಲಿನಲ್ಲಿ ಹೊಸಕಿ ವ್ಯರ್ಥಪಡಿಸಲು, ಋಷಿಗಳ ಶಾಪದಿಂದ ಭೂಲೋಕದಲ್ಲಿ ರತ್ನಪುರಿಯಲ್ಲಿ ಸುಗಂಧರಾಜನಾಗಿ ಹುಟ್ಟಿ, ಕಳಿಂಗದೇಶದ ರಾಜಪುತ್ರಿಯಾದ ಸೌಗಂಧಿಕಾದೇವಿಯನ್ನು ಸ್ವಯಂವರಮಾಡಿಕೊಂಡ, ಬಹಳ ವಿಷಯಗಳಿರುವ ಕಥೆ

೧೧೭೦ ಪುಟಗಳು ಕ್ರಯ ರೂ. ೪—೮—೦

ಸಹಸ್ರಾಯುಚರಿತ್ರೆ:—ಮಾಹಿಷ್ಮತೀ ಅರಸನ ಜ್ಯೇಷ್ಠಪತ್ನಿಯಲ್ಲಿ ದಾಕ್ಷಾಯಣಿ ವರಪ್ರಸಾದದಿಂದ ಜನಿಸಿ ಲೋಕಪ್ರಸಿದ್ಧನಾಗಿ ತನಗೆ ಇತರರಿಂದ ಬಂದ ಗಂಡಾಂತರಗಳನ್ನೆಲ್ಲಾ ಪರಿಹರಿಸಿಕೊಂಡ ಒಬ್ಬ ಮಹಾಪುರುಷನ ಕಥೆ

೪೭೫ ಪುಟಗಳು ಕ್ರಯ ರೂ. ೨—೦—೦

ಕಾಶೀಕ್ಷೇತ್ರಮಹಾತ್ಮೆ:—ಇದರಲ್ಲಿ ೧೪ ಲೋಕಗಳ ವರ್ಣನೆ, ನದಿಗಳು, ದೇವತೆಗಳು, ಋಷಿಗಳೇ ಮುಂತಾದವರ ಉತ್ಪತ್ತಿಕ್ರಮ, ಗಂಗಾಸಹಸ್ರನಾಮವೇ ಮೊದಲಾದ ಅನೇಕ ವಿಷಯಗಳು ಅಡಕವಾಗಿರುತ್ತೆ.

೬೮೩ ಪುಟಗಳು ಕ್ರಯ ರೂ. ೨—೨—೦

ಅಡ್ರೆಸ್ಸು —

ಗುಂಡ್ಲು ಪಂಡಿತ ಲಕ್ಷ್ಮಣಾಚಾರ್ಯರ ಮಕ್ಕಳು
ಶ್ರೀನಿವಾಸ ದೇಶಿಕಾಚಾರ್,
೩೦೭, ಕಠುಹಟ್ಟಿಬೀದಿ, ಮೈಸೂರು



॥ ಸತ್ಯಮೇವೋದ್ಧರಾಮ್ಯಹಮ್ ॥
ರಾಜಧಾನಿಯ ರಾಷ್ಟ್ರೀಯ ವಾರಪತ್ರಿಕೆ.
ವೃದ್ಧಪಿತಾಮಹ ಎಂ. ವೆಂಕಟಕೃಷ್ಣಯ್ಯನವರ ಜ್ಞಾಪಕಾರ್ಥವಾಗಿ ಪ್ರಕಟಿಸಲ್ಪಡುವುದು.
ಸಂಪಾದಕರು: ಆಗರಂ ರಂಗಯ್ಯ, ಬಿ. ಎ.

ಸಂಪುಟ ೧] MYSORE : MONDAY 10—8—36 ಮೈಸೂರು : ಸೋಮವಾರ ೧೦—೮—೩೬ [ಸಂಚಿಕೆ ೨೫

ಶ್ರೀಮನ್ ಮಹಾರಾಜರವರ ಪಾಶ್ಚಾತ್ಯ ಪ್ರವಾಸ.

ಶ್ರೀಮನ್ ಮಹಾರಾಜರವರು ಕಳೆದ ಕೆಲವು ವಾರಗಳಿಂದ ವಿಲಾಯಿತಿಯಲ್ಲಿ ಸಂಚರಿಸುತ್ತಿರುವರಷ್ಟೆ. ಅವರು ಅಲ್ಲಿನ ಅನೇಕ ಪ್ರಮುಖ ಸ್ಥಳಗಳಿಗೆ ಭೇಟಿಇತ್ತು ಚಕ್ರವರ್ತಿನಿ ಮೇರಿ ಮತ್ತು ಎಡ್ವರ್ಡ್ ಪ್ರಭುಗಳವರ ದರ್ಶನವನ್ನು ತೆಗೆದುಕೊಂಡರು. ಇಂಗ್ಲೆಂಡಿನ ದೊಡ್ಡಮನುಷ್ಯರನ್ನು ಒಂದು ಸಂತೋಷಕೂಟಕ್ಕೆ ಆಹ್ವಾನಿಸಿದರು. ಅಲ್ಲಿಯೇ ವಿದ್ಯುಚ್ಛಕ್ತಿ ರೀತಿಯಲ್ಲಿ ಉಪಾಕರ್ಮವನ್ನು ನಡೆಸಿದರು. ಅವರನ್ನು ನೋಡಲು ಅನೇಕಜನ ಭಾರತೀಯರು ಮತ್ತು ಇತರರು ಬಂದು ಹೋಗುತ್ತಿರುವರು. ಅವರ ಪ್ರವಾಸದಿಂದ ಪ್ರಭುಗಳವರ ಆರೋಗ್ಯವು ಅನುಕೂಲಸ್ಥಿತಿಯಲ್ಲಿದೆಯೆಂದು ತಿಳಿಯಬರುತ್ತೆ. ಶ್ರೀಮದ್ ಯುವರಾಜರವರೂ, ದಿವಾನ್ ಸರ್. ಮಿರ್ಜಾ ಎಂ ಇಸ್ಮೈಲ್‌ರವರೂ ಪ್ರಭುಗಳನ್ನು ಎಲ್ಲರಿಗೂ ಪರಿಚಯಮಾಡಿಕೊಡುತ್ತಿರುವರು. ರಾಜಪರಿವಾರವೂ ಕೂಡ ಪ್ರಭುಗಳವರ ಜೊತೆಯಲ್ಲಿ ವಿಲಾಯಿತಿಯ ಪ್ರಕೃತಿ ಸೌಂದರ್ಯವನ್ನು ಕಣ್ಣಾರ ನೋಡಿ ದಣಿಯುತ್ತಿದೆ. ಪ್ರಭುಗಳವರು ಪೆನ್ಸನ್ಸ್ ಯದಿನ ಸ್ಪೆಷಲ್ ಟ್ರೈನಿನಲ್ಲಿ ಪರಿವಾರದೊಡನೆ ಸ್ಕಾಟ್ಲೆಂಡಿಗೆ ಪ್ರಯಾಣ ಬೆಳಸಿದರು. ಈ ಮಾಹೆ 19ನೇ ಬರ್ಲಿನ್ನಿಗೆ ಪ್ರಯಾಣ ಬೆಳಸಿ, ಅಲ್ಲಿ ಸ್ವಲ್ಪಕಾಲ ಡಾಕ್ಟರುಗಳ ಸಲಹೆಯಂತೆ ಬುಡಾಪೆಸ್ಟ್, ಪ್ರೇಗ್, ಮೊದಲಾದ ಸ್ಥಳಗಳನ್ನು ನೋಡಿಕೊಂಡು ಸೆಪ್ಟೆಂಬರ್ 12ನೇ ತಾ॥ "ಮಾರ್ಸೇಲ್ಸ್" ನಲ್ಲಿ ಹಡಗನ್ನು ಹತ್ತಿ ಇಂಡಿಯಾಕ್ಕೆ ಹಿಂತಿರುಗುವುದೆಂತೆ ಈಗಿನ ಕಾರ್ಯಕ್ರಮವು ತಿಳಿದಿದೆ.

ಚಿತ್ರದುರ್ಗದ ಡೆಪ್ಯುಟಿ ಕಮೀಷನರಿಗೆ ರಜ.

ಚಿತ್ರದುರ್ಗದ ಡೆಪ್ಯುಟಿಕಮೀಷನರಾದ ಮಿ॥ ಸುಂದರರಾಜಯ್ಯಂಗಾರ್ಯರಿಗೆ ತಿಂಗಳು ಪ್ರಿವಿಲೇಜ್ ರಜ ಕೊಡಲಾಗಿದೆ. ಸೀನಿಯರ್ ಅಸಿಸ್ಟೆಂಟ್ ಕಮೀಷನರಾದ ಶ್ರೀ॥ ಬಿ ಎಸ್ ರಾಘವೇಂದ್ರರಾಯರವರ ಸ್ಥಾನದಲ್ಲಿ ಹಂಗಾಮಿ ಡೆಪ್ಯುಟಿ ಕಮೀಷನರಾಗಿ ನೇಮಿಸಲ್ಪಟ್ಟಿದ್ದಾರೆ.

ಮಾದರಿ ಗ್ರಾಮಾಭಿವೃದ್ಧಿ.

ಮೈಸೂರು ಡಿಸ್ಟ್ರಿಕ್ಟಿನ ಗ್ರಾಮಾಭಿವೃದ್ಧಿ ಕಾರ್ಯವನ್ನು ಕೈಕೊಳ್ಳಲು ಸಬ್‌ಡಿವಿಜನ್ ಆಫೀಸರಾದ ಶ್ರೀ॥ ರಣಜೋಡಸಿಂಗರವರು ಮಾದರಿಗಾಗಿ 12 ಗ್ರಾಮಗಳನ್ನು ಚುನಾಯಿಸಿದ್ದಾರೆ. ಅಲ್ಲಿ ನೀರು ಸರಬರಾಜು, ಏತ್ತೊಟ್ಟಿ ಕಟ್ಟಿಸುವುದು, ರಸ್ತೆ ಪಾಕ್‌ಮಾಡಿಸುವುದು, ಭಾವಿ ತೋಡಿಸುವುದು, ರೀಡಿಂಗ್‌ರೂಂ, ಹೆರಿಗೆ ಮನೆ, ಸ್ಕೂಲು ಇವೇ ಮುಂತಾದ ಸೌಲಭ್ಯಗಳನ್ನು ಕಲ್ಪಿಸುವರು. ಗ್ರಾಮಗಳ ಹೆಸರು —ಜೋಗಾದಿ, ನಾಗಮಂಗಲ, ಚಟ್ಟನಹಳ್ಳಿ, ಹೆಬ್ಬಾಳ್, ಚಂದಗಾಲು, ಹಂಪಾಪುರ, ಬಿಳಿಕೆರೆ, ಹೊಮ್ಮರಹಳ್ಳಿ, ಅಂತರಸಂತೆ, ಮಲ್ಲಹಳ್ಳಿ ಮತ್ತು ತಿಮ್ಮಾಪುರ

ಚೈಟೋ ಇನ್ಸ್ಟಿಟ್ಯೂಟ್.

ಮೈಸೂರಿನ ಚೈಟೋ ಇನ್ಸ್ಟಿಟ್ಯೂಟ್ ಆಫ್ ಕಾಮರ್ಸ್ ಸಂಸ್ಥೆಯ ೧೧ನೇ ವಾರ್ಷಿಕೋತ್ಸವವು ಕಳೆದ ಶನಿವಾರ ಸಾಯಂಕಾಲ ಟೌನ್‌ಹಾಲಿನಲ್ಲಿ ನಡೆಯಿತು. ಪೌರಸಭಾಧ್ಯಕ್ಷರಾದ ಶ್ರೀ॥ ಎಂ ಎ ಶ್ರೀನಿವಾಸನ್‌ರವರು ಅಗ್ರಾಸನವನ್ನು ವಹಿಸಿದ್ದರು. ಅನೇಕ ಜನ ಮಹನೀಯರೂ ಮಹಿಳೆಯರೂ ನೆರೆದಿದ್ದರು. ಅನಂತರ ದೇವತಾ ಪ್ರಾರ್ಥನೆಯೂ ಕೃತಜ್ಞತಾಪತ್ರಗಳ ಪ್ರದರ್ಶನವೂ ನಡೆದವು. ಸಂಘದ ವರದಿಯನ್ನೋದಲಾಯಿತು. ಬಹುಮಾನವಿನಿಯೋಗವಾದನಂತರ ಅಧ್ಯಕ್ಷರು ಹಿತೋಪದೇಶವನ್ನು ಮಾಡಿದರು. ಆಸ್ಥಾನ ಸಂಗೀತ ವಿದ್ವಾನ್ ಮು॥ ರಾ॥ ಟಿ ಕೃಷ್ಣಯ್ಯಂಗಾರ್ಯರ ಸುಶ್ರಾವ್ಯವಾದ ಸಂಗೀತವಾಯಿತು. ಅನಂತರ "ಮದುವೆಯೋ ಮನೆ ಹಾಳೋ" ಎಂಬ ನಾಟಕವು ಅಭಿನಯಿಸಲ್ಪಟ್ಟಿತು.

ಪದವೀದಾನ ಸಮಾರಂಭ.

ಮೈಸೂರು ವಿಶ್ವವಿದ್ಯಾಲಯದ ಪದವೀದಾನ ಸಮಾರಂಭವು ಅಕ್ಟೋಬರ್ ತಿಂಗಳಿನಲ್ಲಿ ನಡೆಯುವುದು. ಸರಿಯಾದ ಕಾಲ ಮತ್ತು ಸ್ಥಳಗಳನ್ನು ಮುಂದೆ ತಿಳಿಸಲಾಗುವುದು. ಪದವಿಗಳನ್ನು ಪಡೆಯುವವರು 15 ದಿನಗಳ ಮುಂಚಿತವಾಗಿ ಅರ್ಜಿ ಹಾಕಿಕೊಳ್ಳಬೇಕು, ಎಂಬುದಾಗಿ ರಿಜಿಸ್ಟ್ರಾರ್‌ರವರು ತಿಳಿಯಪಡಿಸುತ್ತಾರೆ.

ಆಶ್ಚರ್ಯಕರವಾದ ಚಿಕಿತ್ಸೆ.

ಹುಬ್ಬಳ್ಳಿಯ ಶ್ರೀ ಸಿದ್ಧಾರೂಢಸ್ವಾಮಿಗಳ ಶಿಷ್ಯರಾದ ಶ್ರೀ॥ ಬಿ ರಾಮದಾಸ್ ಎಂಬುವರು ಕೇವಲ ಹಸ್ತ ಸ್ಪರ್ಶದಿಂದಲೇ ಎಲ್ಲಾ ವ್ಯಾಧಿಗಳನ್ನು ಗುಣಪಡಿಸುವರೆಂದೂ, ಇವರು ಈಗ ಮೈಸೂರು ಪಟ್ಟಣಕ್ಕೆ ಬಂದು ನಾರಾಯಣಶಾಸ್ತ್ರಿ ರಸ್ತೆಯಲ್ಲಿ ಇರುವ ಮಹದೇಶ್ವರನ ದೇವಸ್ಥಾನದ ಎದುರಿಗೆ ಸಿದ್ಧಾಶ್ರಮ ಎಂಬ ಸ್ಥಳದಲ್ಲಿ ಬಿಡಾರ ಮಾಡಿರುವರೆಂದೂ ಎಲ್ಲರಿಗೆ ಉಚಿತವಾಗಿ ಚಿಕಿತ್ಸೆ ಮಾಡುತ್ತಿರುವರೆಂದೂ ತಿಳಿದುಬಂದಿದೆ

ಮರ್ಚಂಟ್ಸ್ ಬ್ಯಾಂಕಿನಲ್ಲಿ ಫೋರ್ಜರಿಯೇ?

ಬೆಂಗಳೂರು ಸಿಟಿ ಮರ್ಚಂಟ್ಸ್ ಬ್ಯಾಂಕಿನ ಮ್ಯಾನೇಜರವರು ಸೈಕಲ್ ವ್ಯಾಪಾರಿಯಾದ ಸೈಯದ್ ಸುಲ್ತಾನ್ ಮಹಮ್ಮದ್ ಎಂಬಾತನ ಕರೆಂಟ್ ಡಿಪಾಸಿಟ್ ಅಕೌಂಟಿನಿಂದ ಫೋರ್ಜರಿನಿಂದ 200 ರೂಗಳನ್ನು ಪಡೆದಿರುವರೆಂಬ ಕಾರಣದಿಂದ ಸದರಿ ಸೈಕಲ್ ವ್ಯಾಪಾರಿಯು ಬ್ಯಾಂಕಿನ ಮ್ಯಾನೇಜರವರ ಮೇಲೆ ಫಿರ್ಯಾದು ಮಾಡಿರುವುದಾಗಿ ತಿಳಿದುಬರುತ್ತದೆ

ಇರ್ವಿನ್ ನಾಲೆ ಮುಂದುವರಿಯುವುದು.

ಇರ್ವಿನ್ ಕಾಲುವೆಯು ಕಾವೇರಿ ನದಿಯು 26 ಮೈಲಿ ಫಾಸಲೆ ಉಳ್ಳದ್ದಾಗಿದೆ. ಈ ಮೈಕೆರೆಯ ಮೈಲಿಯವರಿಗೆ ವ್ಯವಸಾಯದ ಕೆಲಸ ಮುಗಿದಿದೆ. ಅಲ್ಲಿಂದ ಮುಂದೆ ಕೆಲಸ ನಡೆಯಲು 36-37 ನೇ ಸಾಲಿನಲ್ಲಿ 4,64,700 ರೂಗಳು ಮಂಜೂರಾಗಿದೆ. ಇದೇ ರೀತಿ ಇನ್ನೆರಡು ವರ್ಷಗಳ ಕಾಲದಲ್ಲಿ ಉಳಿದ ಕೆಲಸವೂ ಪೂರ್ಣವಾಗುವುದೆಂದು ತಿಳಿಯಬರುತ್ತದೆ

ಹುಲ್ಲಿನಿಂದಲೇ ದೀರ್ಘಾಯುಷ್ಯ.

ವೆಲಿಕೆ ಕಾಬ್ಲಿಚ್ ಎಂಬಲ್ಲಿ ನ್ಯಾಕ್ಸಿಂಮೋಷ ಎಂಬ ನೂರೈದು ವರ್ಷದ ವೃದ್ಧನಿದ್ದಾನೆ. ಒಣ ಹುಲ್ಲೇ ಆತನ ಆಹಾರ. ಇವನ ಅಂಗಾಂಗಗಳೆಲ್ಲವೂ ಗಟ್ಟಿ ಮುಟ್ಟಾಗಿವೆ. ಒಂದು ಹಲ್ಲಾದರೂ ಬಿದ್ದಿಲ್ಲ. ಹುಲ್ಲು ಗರಿಕೆಯನ್ನು ತಾನೇ ಆಯ್ದು ತಂದು ಬೇಯಿಸಿ ತಿನ್ನುತ್ತಾನೆ. ಅದು ಬೇಡವಾದಾಗ ಒಂದೊಂದು ತಡವೆ ಒಣ ಹುಲ್ಲನ್ನು ತಿನ್ನುತ್ತಾನೆ

ಮುನಿಸಿಪಾಲಿಟಿಯ ಮೇಲೆ ಮೊಖದ್ದಮೆ.

ಬೆಂಗಳೂರು ಜನರಲ್ ಮತ್ತು ರೆವಿನ್ಯೂ ಸೆಕ್ರೆಟೇರಿಯೆಟ್ ಆಫೀಸಿನ ಗುಮಾಸ್ತರಾದ ಮ॥ ವಿಶ್ವನಾಥರಾಯರು ಸಿಟಿ ಮಾರ್ಕೆಟ್ಟಿನಬಳಿ ಸ್ಟ್ಯಾಂಡಿನಲ್ಲಿ ಬೈಸಿಕಲ್ ಇಟ್ಟು ಮುನಿಸಿಪಲ್ ಜವಾನನಿಂದ ಬಿಲ್ಲೆ ತೆಗೆದುಕೊಂಡು ಒಳಗೆ ವ್ಯಾಪಾರಕ್ಕೆ ಹೋದರು. ವ್ಯಾಪಾರಮಾಡಿಕೊಂಡು ವಾಪಸ್ಸು ಬರುವಾಗ್ಯೆ ಸೈಕಲ್ ಇರಲಿಲ್ಲವೆಂದು 100 ರೂ ಪರಿಹಾರಕೊಡಬೇಕೆಂದು ಮುನಿಸಿಪಾಲಿಟಿಯವರಮೇಲೆ ದಾವ ಹೂಡಿದರು. ಅದು ವಿಚಾರಣೆಯಾಗಿ 45 ರೂ ಪರಿಹಾರ ಕೊಡಬೇಕೆಂದು ತೀರ್ಮಾನವಾಯ್ತು

ಶಿವಮೊಗ್ಗ ಮಹಾಜನ ಸಭೆ.

ಶಿವಮೊಗ್ಗದಲ್ಲಿ ಮನೆ ಕಂದಾಯಗಳನ್ನು ಜಾಸ್ತಿ ಮಾಡಿರುವ ವಿಷಯವನ್ನು ಚರ್ಚಿಸಲು ಕಳೆದವಾರ ಶ್ರೀ ಸಾ॥ ದೇವಂಗಿ ರಾಮಣ್ಣಗೌಡರವರ ಅಧ್ಯಕ್ಷತೆಯಲ್ಲಿ ಒಂದು ಮಹಾ ಜನ ಸಭೆ ಸೇರಿತ್ತು. ಶ್ರೀ ಮಾಳೂರು ಸುಬ್ಬರಾಯರು ಜನರ ಕಷ್ಟಸುಖದ ವಿಷಯದಲ್ಲಿ ಪೌರಸಭೆಯೂ ಭಾಗವಹಿಸಬೇಕೆಂದು ಭಾಷಣ ಮಾಡಿದರು. ಊರಿನಲ್ಲಿರುವ ಮನೆಗಳ ಕಂದಾಯದ ದರಗಳನ್ನು ಪುನರ್ವಿಮರ್ಶೆ ಮಾಡಬೇಕೆಂದು ನಿರ್ಣಯ ಮಾಡಲ್ಪಟ್ಟಿತು.

ಪರೀಕ್ಷಾ ಕೇಂದ್ರ.

1937ನೇ ಇಸವಿಯಿಂದ ಮೈಸೂರು ಡಿಸ್ಟ್ರಿಕ್ಟ್ ಚಾಮರಾಜನಗರವನ್ನು ಮಿಡಲ್ ಮತ್ತು ಅಪ್ಪರ್‌ಸೆಕೆಂಡರಿ ಪರೀಕ್ಷಾ ಕೇಂದ್ರವಾಗಿ ಏರ್ಪಡಿಸಲಾಗುವುದೆಂದು ಪ್ರಕಟವಾಗಿದೆ

ಮೂರು ಮಕ್ಕಳ ತಾಯಿಗೆ ಪ್ರಾಯಶ್ಚಿತ್ತವಂತೆ

ಕೆಂಚನ್ಕಸ ಬಳಿ ಓರ್ವ ಬ್ರಾಹ್ಮಣ ಸ್ತ್ರೀಯು ಮೂರು ಮಕ್ಕಳನ್ನು ಪ್ರಸವಿಸಿದಳು. ಇದು ಕೇವಲ ಅಶುಭ ಸೂಚನೆಯೆಂದು ಆಕೆಯು ಬಹಿಷ್ಕರಿಸಲ್ಪಟ್ಟಳು ಮತ್ತು ಆಕೆಗೆ ಸಮಾಜದಿಂದ ಒಂದು ಪ್ರಾಯಶ್ಚಿತ್ತವು ವಿಧಿಸಲ್ಪಟ್ಟಿದೆ.

ಭಾರತೀಯರ ರಾಷ್ಟ್ರೀಯತೆ.

ಭಿನ್ನ ಭಿನ್ನ ಸಂಸ್ಕೃತಿಗಳ ಸಮನ್ವಯ.

ಲೇಖಕರು:—ಎ. ಎಂ. ಕೃಷ್ಣಮೂರ್ತಿ, ಮೈಸೂರು.

ಯಾವ ದೇಶವನ್ನೇ ಆಗಲಿ ಸರ್ವತೋಮುಖವಾಗಿ ಉನ್ನತಸ್ಥಿತಿಗೆ ತರಬೇಕಾದರೆ ಪ್ರಜೆಗಳೆಲ್ಲರೂ ಪರಸ್ಪರ ಸಹಕರಿಸಿ, ಕಾರ್ಯರಂಗದಲ್ಲಿ ಸೋಲು ಗೆಲವುಗಳನ್ನು ಲಕ್ಷಿಸದ, ದೇಶಾಭಿವೃದ್ಧಿಯೇ ತಮ್ಮ ಪ್ರಧಾನಕರ್ತವ್ಯವೆಂದರಿತು ಆಸಕ್ತಿಕವಾಗಿ ಕಾರ್ಯಸಾಧನೆಯಲ್ಲಿ ತೊಡಗಬೇಕಾಗಿದೆ. ಅವರು ಕೈಗೊಳ್ಳುವ ಕಾರ್ಯಗಳೆಲ್ಲವೂ ಮೇಘಗಳ ಆಕಾರದಂತೆಯೂ, ಮಿಂಚಿನ ಹೊಳಪಿನಂತೆಯೂ ಮತ್ತು ನೀರಿನ ಗುಳ್ಳೆಗಳಂತೆಯೂ ಪರಿಣಮಿಸಬಾರದು. ದೇಶವನ್ನು ಉನ್ನತಸ್ಥಿತಿಗೆ ಒಯ್ಯಬೇಕಾದಲ್ಲಿ ಶ್ರೀಮಂತನು ತನ್ನ ಧನವನ್ನು ಉದಾರವಾಗಿ ದಾನ ಮಾಡಬೇಕು, ಬುದ್ಧಿವಂತನು ತನ್ನ ವಿದ್ಯಾಬಲದ ಚಾತುರ್ಯದಿಂದ ಕಾರ್ಯವನ್ನು ಶೀಘ್ರದಲ್ಲಿಯೇ ಸಫಲಕಾರಿಯಾಗಿ ಮುಕ್ತಾಯಮಾಡುವ ಕುತೂಹಲವುಳ್ಳವನಾಗಿರಬೇಕು, ಅಪಾರ ಧನವನ್ನೂ, ವಿಶೇಷ ಬುದ್ಧಿಬಲವನ್ನೂ ಹೊಂದದ ಇರುವ ಪ್ರಜೆಯು ದೇಹಶ್ರಮ ಪಟ್ಟು ತನ್ನ ದೇಶಕ್ಕೆ ಕಿಂಚಿತ್ತಾದರೂ ಸೇವೆ ಮಾಡಬೇಕು. ದೇಶಾಭಿಮಾನಿಯು ಜನಸಮೂಹದ ಬಿನ್ನಹವನ್ನು ಸಂಪಾದಿಸಬೇಕು. ಅವನಿಗೆ ಕರತಲಾಮಲಕವಾದ ಸಂಪೂರ್ಣ ಜ್ಞಾನವಿರಬೇಕು. ಅವನು ಸ್ವಾರ್ಥಪರತೆಯನ್ನು ದೂರಮಾಡಿ, ಪರೋಪಕಾರ ಬುದ್ಧಿಯನ್ನೂ, ಭ್ರಾತೃಪ್ರೀತಿಯನ್ನೂ ಮತ್ತು ಉತ್ಸಾಹವನ್ನೂ ಹೊಂದಬೇಕು. ಅವನು ತನ್ನ ರಾಷ್ಟ್ರಕ್ಕೋಸ್ಕರ ತನು, ಮನ, ಧನ—ಇವೆಲ್ಲವನ್ನೂ ಮತ್ತು ಸಮಯಬಂದಾಗ ತನ್ನ ಹೆಂಡತಿ ಮಕ್ಕಳನ್ನೂ ತ್ಯಜಿಸಬೇಕು. ತನ್ನ ರಾಷ್ಟ್ರಕ್ಕಾಗಿ ದುಡಿಯುವ ದೇಶಾಭಿಮಾನಿಯು, ದೇಶೋದ್ಧಾರವೆಂಬ ಕಾರ್ಯದಲ್ಲಿ ಸೂತ್ರಧಾರನಾಗಬೇಕೆಂದರೆ, ಆ ಮಹಾತ್ಮನ ಅಪ್ರತಿಹತವಾದ ಬುದ್ಧಿ ಮತ್ತು ಸದ್ಗುಣಗಳನ್ನು ವರ್ಣಿಸಲು ಅಸಾಧ್ಯ. ಅಂತಹ ಮಹಾತ್ಮರ ಶಿರೋಮಣಿಗಳ ಸನ್ನೆಯಿಂದ ಅನೇಕ ಅಗಾಧಕಾರ್ಯಗಳು ಶೀಘ್ರದಲ್ಲಿಯೇ ಲೀಲಾಜಾಲವಾಗಿ ನಡೆದು ಹೋಗುವುವು. ರಾಷ್ಟ್ರಭೀಮಾನಿಗಳ ಪ್ರಭು ಅಥವಾ ಸ್ವಾಮಿಯು, ಪ್ರಜಾಹಿತಕ್ಕಾಗಿ ಬೇಕಾದ ಸಕಲ ಕಾರ್ಯವನ್ನೂ ತನ್ನ ಅನುಯಾಯಿಗಳ ಸಹಕಾರದಿಂದ ನಿರ್ವಹಿಸಿ, ಜಾತಿ, ಮತಭೇದಗಳಿಲ್ಲದ ನ್ನು ಲಕ್ಷಿಸದೆ ದೇಶವನ್ನು ಅಭಿವೃದ್ಧಿಗೈದು, ಕೀರ್ತಿವಂತನಾಗಬೇಕಾಗಿದೆ.

ಪವಿತ್ರ ಭಾರತ ಭೂಮಿ

ಭರತಖಂಡವು ಬಹಳ ವಿಸ್ತಾರವಾದ ದೇಶ. ಇದು ಪರ್ವತಗಳಿಂದ ರಕ್ಷಿಸಲ್ಪಟ್ಟು ಸಮುದ್ರದಿಂದ ಸಾಧಿಸಲ್ಪಟ್ಟಿದೆ. ಈ ದೇಶವು ಸ್ವಾಭಾವಿಕವಾಗಿ ಏಷ್ಯಾ ಖಂಡದಿಂದ ಪ್ರತ್ಯೇಕಿಸಲ್ಪಟ್ಟು, ವಿವಿಧ ಪ್ರಾಕೃತಿಕ ಲಕ್ಷಣಗಳನ್ನು ಹೊಂದಿದ ಅನೇಕ ಸಣ್ಣ ಸಣ್ಣ ರಾಷ್ಟ್ರಗಳನ್ನು ಹೊಂದಿದ್ದರೂ, ವಿಶಾಲವಾದ ಒಂದೇ ದೇಶವಾಗಿ ನಿಂತಿದೆ. ಎತ್ತರ, ಮಳೆ, ಉಷ್ಣ, ಭೂಗುಣ, ಸಸ್ಯಸಂಪತ್ತು ಮತ್ತು ಪ್ರಾಣಿ ಜಾತಿಗಳಲ್ಲಿ ನಾನಾರೀತಿಯ ಪ್ರಮಾಣಗಳನ್ನು ಪಡೆದಿದ್ದರೂ, ಯೂರೋಪ್ ಮೊದಲಾದ ದೇಶಗಳಲ್ಲಿ ಸಂಚಾರಕ್ಕೆ ಪ್ರಬಲವಾದ ಪ್ರತಿಬಂಧಕಗಳಿರುವಂತೆ ಭಾರತ ಭೂಮಿಯಲ್ಲಿ ಅಂತಹ ವಿಶೇಷ ಅಡಚಣೆಗಳು ಇಲ್ಲದುದರಿಂದ ಏಕ ದೇಶವಾದರೂ ಪ್ರಸಿದ್ಧಿಯನ್ನು ಪಡೆದಿದೆ. ಭೂಖಂಡವಷ್ಟು ವಿಶಾಲವಾಗಿದ್ದರೂ, ಭ್ರಾಂತಿಗೊಳಿಸುವ ವೈವಿಧ್ಯವನ್ನು ತೋರಿಸುತ್ತಿದ್ದರೂ, ಅಗಣ್ಯವಾದ ಸಂಪತ್ತಿನಿಂದ ಯುಕ್ತವಾಗಿದ್ದರೂ ಬಹು ಜನಭರಿತವಾಗಿದ್ದರೂ ಭರತ ವರ್ಷವೆಂಬುದು ಒಂದೇ ದೇಶ! ಪ್ರಕೃತಿ ಮಾತೆಯೇ ಐಕ್ಯತೆಯನ್ನು ನಿರ್ಮಿಸಿದ್ದಾಳೆ. ಆ ಗ್ರಗಣ್ಯವಾಗಿ ಶ್ರೇಷ್ಠವೂ, ಜ್ಯೇಷ್ಠವೂ ಎನಿಸಿದ ಭಾರತವು ಏಕ ದೇಶವಲ್ಲದೆ ಬೇರೆಯಲ್ಲ, ನಾವು ಎಲ್ಲರೂ ಭಾರತೀಯರಲ್ಲದೆ ಬೇರೆಯಲ್ಲ!'

ಅದ್ಭುತ ವೈವಿಧ್ಯ.

ದೇಶವಿದೇಶಗಳಲ್ಲಿ ಕಾಣಬಾಗದ ಜಗತ್ತಿನ ಮುಖ್ಯ ಮತಗಳೆಲ್ಲವೂ ಭಾರತ ಭೂಮಿಯಲ್ಲಿ ಗೋಚರವಾಗುತ್ತವೆ. ಭಾರತೀಯರು ಸಾಮಾನ್ಯರಂತೆ ವಿಪರೀತಿಯಲ್ಲಿ ತೋರುವುದಿಲ್ಲ. ಸ್ವಾಭಾವಿಕ ವಿಭಾಗಗಳಲ್ಲಿ ಭಿನ್ನ ಭಿನ್ನ ಗುಣಗಳಿರುವಂತೆಯೇ ಭಾರತೀಯರಲ್ಲಿಯೂ ಅದ್ಭುತವಾದ ವೈವಿಧ್ಯವುಂಟು. ಈ ದೇಶದಲ್ಲಿ ಅನೇಕರೀತಿಯ ಜನಾಂಗಗಳಿವೆ, ವಿಧವಿಧ ಭಾಷೆಗಳಿವೆ, ಭಿನ್ನಭಿನ್ನವಾದ ಪಂಗಡಗಳೂ ಆಚಾರಗಳೂ ಇವೆ. ಅನೇಕತರದ ಬಣ್ಣದ ಜನಗಳೂ ಮತ್ತು ಅನೇಕ ವಿಧವಾದ ಉಡಿಗೆ, ತೊಡಿಗೆ, ನಡೆ, ನುಡಿ, ಆಚಾರಗಳ ಪ್ರದರ್ಶನ ಶಾಲೆಯಂತಿದೆ ಈ ದೇಶದ ಮೇಲ್ನೋಂದ ಸ್ಥಿತಿಗತಿಗಳನ್ನು ನೋಡಿದ ಪರಕೀಯರಿಗೆ ಇಂಡಿಯಾದಲ್ಲಿ ಐಕ್ಯತೆಗೆ ಅವಕಾಶವಿಲ್ಲವೆಂಬ ಅಭಿಪ್ರಾಯವು ಮೂಡಬಹುದು. ಸರಿಯಾಗಿ ಎಲ್ಲವನ್ನೂ ಪರಿಶೀಲಿಸಿದರೆ ಈ ವಿಧವಾದ ಭಾವನೆಗಳಿಗೆ ಅವಕಾಶವಿರುವುದಿಲ್ಲ. ಅದ್ಭುತವಾದ ವೈವಿಧ್ಯದಿಂದ ಯುಕ್ತವಾದ ದೇಶಕ್ಕೆ ಪ್ರಕೃತಿ ದೇವಿಯೇ ಅದ್ಭುತವಾದ ಮೇರೆಗಳನ್ನು ನಿರ್ಮಿಸಿ ದೇಶದ ಐಕ್ಯತೆಯನ್ನು ಸಿದ್ಧಗೊಳಿಸಿರುವಂತೆಯೇ ಭಾರತೀಯರು ವಿಸ್ಮಯಕಾರಕವಾದ ವೈವಿಧ್ಯವನ್ನು ತೋರುತ್ತಿದ್ದರೂ ಅಂತರಂಗದಲ್ಲಿ ಪರಸ್ಪರ ಬಾಂಧವ್ಯವನ್ನು ಕಟ್ಟಿಕೊಂಡು ಏಕಜನವಾಗಿ ರೂಪುಗೊಂಡಿರುವರು.

ಈ ದೇಶದಲ್ಲಿ ದ್ರಾವಿಡ, ಆರ್ಯ ಮತ್ತು ಮಂಗೋಲ ಎಂಬ ವಂಶ ಭೇದಗಳಿವೆ. ಭಾಷಾಭೇದಗಳೂ ವಿಶೇಷವಾಗಿವೆ. ಹೀಗೆಯೇ ಹಿಂದೂ, ಇಸ್ಲಾಮ ಮತ್ತು ಕ್ರೈಸ್ತ ಮತಗಳಿವೆ. ಭಾರತೀಯರು ಆಚಾರ ಮತ್ತು ಉಡಿಗೆ ತೊಡಿಗೆಗಳಲ್ಲಿಯೂ ಏಕರೀತಿಯಾಗಿಲ್ಲ. ಕೆಲವರು ಶಾಕಾಹಾರಿಗಳು, ಮತ್ತೆ ಕೆಲವರು ಮಾಂಸಾಹಾರಿಗಳು. ತಲೆಯಲ್ಲಿ ಶಿಖೆ ಬೆಳೆಸುವರೊಂದುಕಡೆ, ಮುಂಡನ ಮಾಡಿಸಿ ಗಡ್ಡವನ್ನು ಬೆಳೆಸುವರಿನ್ನೊಂದುಕಡೆ. ಮೇಲೆ ಹೇಳಿದ ಎಲ್ಲಾ ವಿಷಯಗಳಲ್ಲಿಯೂ ಭಿನ್ನಭಿನ್ನವಾದ ಅಂಶಗಳು ತೋರಿಬಂದರೂ ಮತ್ತು ಭಿನ್ನಾಂತಿಯನ್ನುಂಟುಮಾಡುವವು. ವಿಧವಿಧವಾಗಿ ಭಾರತೀಯರು ಬಹಿರಂಗದಲ್ಲಿ ಕಾಣಿಸಿಕೊಂಡರೂ ಅಂತರಂಗದಲ್ಲಿ ಅನ್ಯೋನ್ಯತೆಯನ್ನು ಬೆಳಸಿಕೊಂಡಿರುವ ಏಕಜನವಾಗಿಯೇ ಇರುತ್ತಾರೆ. ಈ ದೇಶದ ಮತ ಮೊದಲಾದ ಅನೇಕ ಪಂಗಡಗಳಲ್ಲಿ ಭಿನ್ನಾಭಿಪ್ರಾಯವು ಕಂಡುಬಂದರೂ, ಆ ಮತವೆಲ್ಲವೂ ಒಂದೇ ಸಂಸ್ಕೃತಿಯೆಂಬ ವೃಕ್ಷದ ನಾನಾ ರೀತಿಗಳಾಗಿ ತೋರಿಬರುವುವು.

ಹಿಂದೂ ಮತವು ಅನೇಕ ಪಂಗಡಗಳನ್ನೂ ಭಾವನೆಗಳನ್ನೂ, ಆಚಾರ ವ್ಯವಹಾರಗಳನ್ನೂ ಹೊಂದಿದ್ದರೂ, ಹಿಂದುಗಳಿಲ್ಲರ ಐಕ್ಯತೆಗೆ ಕಾರಣಗಳಾದ ಅಂಶಗಳು ಅನೇಕವಾಗಿವೆ. ಗೋ ಪೂಜೆ, ತ್ರಿಮೂರ್ತಿ ಪೂಜೆ, ವೇದಗಳಲ್ಲಿಯೂ ಮತ್ತು ಪುನರ್ಜನ್ಮದಲ್ಲಿಯೂ ನಂಬಿಕೆ, ಸಂಸ್ಕೃತ ಭಾಷೆಯಲ್ಲಿ ಪೂಜ್ಯತೆ, ರಾಮಾಯಣ ಮತ್ತು ಮಹಾಭಾರತ ಮೊದಲಾದ ಪುರಾಣಗಳಲ್ಲಿ ದೃಢವಾದ ನಂಬಿಕೆ, ದಸರಾ, ದೀಪಾವಳಿ ಮೊದಲಾದ ಸಾಮಾನ್ಯ ಹಬ್ಬಗಳ ಆಚರಣೆ ಮತ್ತು ತೀರ್ಥಯಾತ್ರೆಗಳಲ್ಲಿ ಅಗಾಧವಾದ ಭಕ್ತಿ ಮತ್ತು ಪೂಜ್ಯತೆ—ಇವೆಲ್ಲವೂ ಪ್ರತಿಯೊಬ್ಬ ಹಿಂದುವಿನಲ್ಲಿಯೂ ಕಾಣುವುವು. ಈ ಮತವು ಒಂದು ನಾಗರೀಕತೆಯಂತೆ ಅಭಿವೃದ್ಧಿಗೆ ಬರುತ್ತಾ, ನೂತನ ಮಾರ್ಗಗಳನ್ನು ಹೊಂದಿ ಇಡೀ ವಿಶ್ವದ ಎಲ್ಲ ತತ್ವಗಳನ್ನೂ ತನ್ನವನ್ನಾಗಿ ಮಾಡಿಕೊಂಡು ಬರುತ್ತಾ ಸಂಸ್ಕೃತಿಯ ಐಕ್ಯತೆಯನ್ನು ಹೊಂದಿರುತ್ತದೆ.

ಮಹಮ್ಮದೀಯರಲ್ಲಿಯೂ ಕೂಡ ಅನೇಕ ವಿಧದ ಸಂಪ್ರದಾಯಗಳು ಆಚರಣೆಯಲ್ಲಿವೆ. ಆದರೂ, ಅನೇಕ ವಿಷಯಗಳು ಹಿಂದೂ ಸಂಸ್ಕೃತಿಗೆ ಐಕ್ಯತೆಯನ್ನು ತಂದಂತೆಯೇ ಮಹಮ್ಮದೀಯ ಸಂಸ್ಕೃತಿಗೂ ಐಕ್ಯವನ್ನು ತಂದಿರುತ್ತವೆ.

ಹಿಂದೂ ಮಹಮ್ಮದೀಯರ ಐಕ್ಯತೆ

ಭಾರತಭೂಮಿಯಲ್ಲಿರುವ ಮಹಮ್ಮದೀಯರೂ ಭಾರತೀಯರೇ ಆಗಿರುವರು. ಹಿಂದುಗಳಿಗಿರುವಂತೆ ಮಹಮ್ಮದೀಯರಿಗೂ ಭರತಖಂಡದ ಮೇಲೆ ಅಸಾಧಾರಣ ವಾತ್ಸಲ್ಯವಿದೆ. ಅನೇಕ ಶತಮಾನಗಳಿಂದಲೂ ಭಾರತೀಯರಾಗಿಯೇ ಇದ್ದಾರೆ. ಅವರ ಭಾಷೆಯಾದ ಹಿಂದೂಸ್ತಾನಿ ... ಸಾಮಾನ್ಯವಾಗಿ ಎಲ್ಲರಿಗೂ ತಿಳಿದ ಭಾ... ಯಾಗಿದೆ. ಹಿಂದೂ ಮಹಮ್ಮದೀ... ಸಂಸ್ಕೃತಿಗಳು ವಿಧ ವಿಧವಾಗಿ ತೋ... ಬಂದರೂ ಶತಮಾನಗಳ ಸಂಪರ್ಕದಿ... ಬೆರತು, ಒಕ್ಕಟ್ಟಾಗಿ ಕಲೆತು ಬರುತ್ತಿ... ಹಿಂದೂ, ಮುಸಲ್ಮಾನರಲ್ಲಿ ಸೌ... ಭಾವವೂ ಮತ್ತು ಮೈತ್ರಿಯೂ ನೆಲ... ಡಿರುವ ಅನೇಕ ವಿಷಯಗಳು ಕಾ... ತ್ತವೆ. ಮೇಲ್ಕಂಡ ಭಿನ್ನ ಭಿನ್ನ ... ಸ್ಕೃತಿಗಳ ಐಕ್ಯತೆಗೆ ದೇಶಪ್ರೇಮ... ಮುಖ್ಯ ಕಾರಣವಾಗಿದೆ.

ಮುಂದಿನ ಮಾರ್ಗ.

ಬ್ರಿಟಿಷರು ಭಾರತವನ್ನು ಸೂರೆ... ದರು. ದೇಶವು ದರಿದ್ರವಾಯಿತು ... ತೀಯರಾದ ಹಿಂದೂ ಮುಸಲ್ಮಾ... ಹೊಟ್ಟೆ ಬಟ್ಟೆಗಾಗಿ ತಲ್ಲಣಿಸುತ್ತಿದ್ದಾ... ವಿತ್ರ ಭಾರತ ಭೂಮಿಯು ಎರ... ಜನರಿಗೆ ಸೇರಿರುವುದಿಲ್ಲ. ದೇಶವು ... ಬೇಗುಲದಲ್ಲಿ ಕೊಳೆಯುತ್ತಿದೆ. ... ಪರದೇಶಕ್ಕೆ ಹೊನ್ನಿನ ಹೊಳೆಯು ... ವಾಗಿ ಪ್ರವಹಿಸುತ್ತದೆ. ಬ್ರಿಟಿಷ... ತ್ವದಿಂದ ಭಾರತೀಯರಲ್ಲಿಯ... ದಭಾವನೆಯನ್ನು ಉಂಟುಮಾ... ದ್ದಾರೆ. ಭಾರತೀಯರು ಎಲ್ಲಿಯ... ಗುಲಾಮರಾಗಿರುವರೋ ಅಲ್ಲಿ... ಗೂ ಅವರಿಗೊದಗಿರುವ ಅನರ್ಥ ... ರೆಗಳು ನಾಶವಾಗುವುದಿಲ್ಲ. "... ಪಾಲಯವೀ ಭಾರತ ಭೂ... ಎಂಬುದನ್ನು ನಿನಾದ ಮಾ... "ಸ್ವಾತಂತ್ರ್ಯ ದಾಲಯವೀ ಭಾರತ ... ಎಂಬುದನ್ನು ಭಾರತೀಯ... ನಾವೆಲ್ಲರೂ ಅನವರತವೂ ಭ... ದಿಂದ ಗಾನಮಾಡೋಣ.

ಡೆಪ್ಯುಟೀಕಮಿಷನರ್ ಮಗನೆಂದು ಮೋಸ

ಜೇನ್ ಪುರದಲ್ಲಿ ಒಂದು ಗ್ರಾಮದ ಮುಖ್ಯಾಧಿಕಾರಿಯ ಮನೆಗೆ ಒಂದು ರಾತ್ರಿ ಟ್ಯಾಕ್ಸಿಯಿಂದ ಒಬ್ಬನು ಒಳ್ಳೆಯ ಬಟ್ಟೆಗಳನ್ನು ಹಾಕಿಕೊಂಡು ಬಂದನು. ಅತನು ಬಂದನಂತರ ಮುಖ್ಯಾಧಿಕಾರಿಯನ್ನು ನಾನು ಡೆಪ್ಯುಟೀಕಮೀಷನರ್ ಮಗ ನನ್ನ ತಂದೆಗೆ ಸ್ವಲ್ಪ ಹಣ ಬೇಕಾಗಿದೆ ಅದಕ್ಕೆ ನನ್ನನ್ನು ಕಳುಹಿಸಿದ್ದಾರೆ, ಎಂದು ಹೇಳಿದನು. ಆ ಗ್ರಾಮಾಧಿಕಾರಿಯು ಏನನ್ನೂ ಯೋಚಿಸದೆ ಹಣವನ್ನು ಕೊಟ್ಟುಬಿಟ್ಟನು. ಅವನು ಅದನ್ನು ತೆಗೆದುಕೊಂಡು ಪರಾರಿಯಾಗಿದ್ದಾನೆ. ಆಮೇಲೆ ಗ್ರಾಮಾಧಿಕಾರಿಯು ವಿಚಾರಿಸಲು ಪರದಲ್ಲಿ ಡೆಪ್ಯುಟೀಕಮೀಷನರು ಕಾಲ್ಪನಿಕವೆಂದು ಗೊತ್ತಾಗಿದೆ.

ಕೃಷ್ಣಜನ್ಮಾಷ್ಟಮಿ—ಜಯಂತೀ.

ವೇ|| ಬ್ರ|| ಚೀಮನಹಳ್ಳಿ ರಘುನಾಥಾಚಾರ್ಯರಿಂದ.

ಭಗವಾನ್ ಸರ್ವೋತ್ತಮನಾದ ನಾರಾಯಣನು ಬ್ರಹ್ಮಾದಿದೇವತೆಗಳಿಂದ ಪ್ರಾರ್ಥಿತನಾಗಿ, ಭೂಭಾರವನ್ನು ಪರಿಹಾರ ಮಾಡಿ ಧರ್ಮಸಂಸ್ಥಾಪನೆಯಿಂದ ಸಜ್ಜನರನ್ನು ಉದ್ಧರಿಸಲು ಶ್ರೀ ಕೃಷ್ಣರೂಪದಿಂದ ವಸುದೇವರಾಜನ ಪತ್ನಿಯಾದ ದೇವಕೀದೇವಿಯಲ್ಲಿ ಅವತಾರಮಾಡಿದ ದಿನದ ಸ್ಮರಣಾರ್ಥವಾಗಿ ಪರಮಾತ್ಮನ ಪೂಜಾವಿಧಿಗಳನ್ನು ಮಾಡುವ ವ್ರತಗಳಲ್ಲಿ ಒಂದು

ಸರ್ವದೋಷದೂರನೂ, ಸಕಲಗುಣಪರಿಪೂರ್ಣನೂ ಆದ ಪರಮಾತ್ಮನಿಗೆ ಹಸಿವು, ಬಾಯಾರಿಕೆ, ಶೋಕ, ಮೋಹ, ರೋಗ, ಲೇಪ, ಜರಾ, ಮರಣಾದಿಗಳಾವುವೂ ಇಲ್ಲ. ಇವನು ದಶರಥರಾಜನ ಮಗನಾದಾಗಲಿ, ವಸುದೇವರಾಜನ ಮಗನಾದಾಗಲಿ, ತಾಯಿಯ ಗರ್ಭವಾಸಜನಿತ ದುಃಖಾದಿಗಳನ್ನು ಅನುಭವಿಸಲು ಸಾಮಾನ್ಯ ಕರ್ಮಬದ್ಧರಾದ ಜೀವರಂತೆ ಹುಟ್ಟಿದವನಲ್ಲ. ಸರ್ವ ಕರ್ಮಸ್ವಾಮಿಯೂ, ಕರ್ಮ ಫಲದಾತನೂ, ಪರಮ [illegible], ಪರಮ ಚೇತನನೂ, ಚೇತನರೆಲ್ಲರಿಗೂ ಅಂತರ್ಯಾಮಿಯಾಗಿ ಚೈತನ್ಯವನ್ನು ಕೊಟ್ಟವನೂ, ಸರ್ವಜ್ಞನೂ, ಸ್ವತಂತ್ರನೂ ಆದ ದೇವೋತ್ತಮನು ನೃಸಿಂಹ ರೂಪದಿಂದ ಕಂಬದಲ್ಲಿ ಅವತರಿಸಿದಾಗ ತಂದೆತಾಯಿಗಳಾರು?

ಹೀಗೆ ಅವತರಿಸುತ್ತಿದ್ದಂತೆಯೇ ಜೀವಪ್ರಪಂಚದಿಂದ ವಿಲಕ್ಷಣವಾದ, ಅಪ್ರಾಕೃತವಾದ, ಜ್ಞಾನಾನಂದಾದಿ ಕರಚರಣಾದ್ಯವಯವಗಳಿಂದ ಕೂಡಿದ ಕಿರೀಟ, ಹಾರ, ಕೇಯೂರ, ಕುಂಡಲ, ವನಮಾಲೆ, ಶ್ರೀವತ್ಸ, ಕೌಸ್ತುಭಾದಿ ನಾನಾ ಆಭರಣಗಳಿಂದ ಮಂಡಿತನಾಗಿ ತೇಜೋಮಯವಾದ ನೀಲಮೇಘಶ್ಯಾಮಲ ವರ್ಣಯುಕ್ತವಾದ ದೇಹಕಾಂತಿಯಿಂದ ಪ್ರಕಾಶಿಸುತ್ತ ಶಂಖ, ಚಕ್ರ, ಗದಾಪದ್ಮಗಳಿಂದ ಕೂಡಿದ ಚತುರ್ಭುಜಗಳುಳ್ಳವನಾಗಿ ಮಾತಾಪಿತೃ, ಬ್ರಹ್ಮಾದಿ ದೇವೋತ್ತಮರ ಮತ್ತು ಮುನಿ ಮೊದಲಾದವರಿಂದ ಸ್ತುತನಾದನೆಂಬುದು ವಟುರೂಪಿಯಾದ ವಾಮನ, ರಾಮ, ಕೃಷ್ಣಾದಿ ಚರಿತ್ರೆಗಳಲ್ಲಿ ಸುವಿದಿತ ವಿಷಯವಾಗಿದೆ.

ಪರಮಾತ್ಮನು ಅವತಾರಮಾಡಿದ ದಿನಕ್ಕೆ ಜಯಂತಿ ಎಂದು ನಾಮ. ಹಯಗ್ರೀವ ಜಯಂತಿ, ಮತ್ಸ್ಯಜಯಂತಿ, ವಾಮನ,ನೃಸಿಂಹಾದಿ ಸರ್ವ ಜಯಂತಿಗಳಲ್ಲೂ ಈ ಕಲಿಯಲ್ಲಿ ನಮಗೆ ಸನ್ನಿಹಿತವಾದದ್ದರಿಂದ ಕೃಷ್ಣಾಷ್ಟಮಿ, ಕೃಷ್ಣಜಯಂತಿಯೇ ಶ್ರೇಷ್ಠವು. ಆ ದಿವಸ ವ್ರತೋಪವಾಸಾದಿಗಳನ್ನು ವಿಧ್ಯುಕ್ತಪ್ರಕಾರ ಮಾಡಬೇಕೆಂಬುದು ಭರದ್ವಾಜಸಂಹಿತೆಯೇ ಮೊದಲಾದ ಧರ್ಮಶಾಸ್ತ್ರಪ್ರಮಾಣ

ಕೃಷ್ಣಜನ್ಮಾಷ್ಟಮೀ ವ್ರತವು ಜಯಂತಿ ವ್ರತದಿಂದ ಬೇರೆಯಾದದ್ದು—ಜನ್ಮಾಷ್ಟಮೀವ್ರತವು ಕೇವಲ ನಿತ್ಯ ಜಯಂತಿಯು, ನಿತ್ಯ ಕಾಮ್ಯವ್ರತವು ಎಂದು ವಚನಗಳಿವೆ

ಕೃಷ್ಣಜನ್ಮಾಷ್ಟಮೀ.

ಶ್ರಾವಣ ಬಹುಳ ಕೃಷ್ಣಜನ್ಮಾಷ್ಟಮೀ ವ್ರತಾನುಷ್ಠಾನಮಾಡದಿರುವ ಮಾನವನು ಬ್ರಹ್ಮರಾಕ್ಷಸನಾಗುವನೆಂತಲೂ, ಜನ್ಮಾಷ್ಟಮಿಯನ್ನು ತ್ಯಜಿಸಿ ಇತರ ಯಾವುದೋ ಒಂದು ವ್ರತೋಪವಾಸವನ್ನು ಮಾಡಿದರೂ, ಇಷ್ಟಾಪೂರ್ತಗಳಿಂದ ಬರುವ ಸುಕೃತ ಫಲಗಳೆಲ್ಲವೂ ನಾಶವಾಗುವುದೆಂತಲೂ ಪ್ರತಿ ವರ್ಷದಲ್ಲೂ ಯಾವ ನಾರಿಯು ಕೃಷ್ಣಾಷ್ಟಮಿಯನ್ನು ಮಾಡುವುದಿಲ್ಲವೋ ಅಂಥವಳು ಮಹಾ ಪಾಪಿಯಾಗಿ, ಸರ್ಪವಾಗಿ ಅರಣ್ಯದಲ್ಲಿ ಜನಿಸುವಳೆಂತಲೂ **ಭವಿಷ್ಯೋತ್ತರದಲ್ಲಿ** ನಿರೂಪಿಸಿದೆ ಯಾರು ಕೃಷ್ಣಾಷ್ಟಮಿಯನ್ನು ತಿಳಿದೂ, ವ್ರತಾನುಷ್ಠಾನ ಮಾಡುವುದಿಲ್ಲವೋ ಅವರು ಹುಲಿ, ಸರ್ಪಗಳಾಗಿ ಹುಟ್ಟುವರೆಂದು **ಸ್ಕಾಂದಪುರಾಣದಲ್ಲಿ** ಉಕ್ತವಾಗಿದೆ ಎಲೈ ಮುನಿಶ್ರೇಷ್ಠನೇ, ಕೃಷ್ಣಾಷ್ಟಮಿ ಭೋಜನಮಾಡುವುದು, ಹದ್ದು, ಕಾಗೆ, ಶ್ಯೇನಪಕ್ಷಿ ಅಥವಾ ದ್ವಿಪಾದ ಪಶುಗಳ ಮಾಂಸವನ್ನು ತಿಂದಂತೆ ಕೃಷ್ಣಾಷ್ಟಮಿಯಲ್ಲಿ ಯಾವ ಬ್ರಾಹ್ಮಣರು ಭೋಜನಮಾಡುವರೋ ಅವರು ತ್ರೈಲೋಕ್ಯದಲ್ಲಿ ಉದಯಿಸುವ ಪಾಪಗಳನ್ನು ಅನುಭವಿಸುವರು ಎಂದು ಸ್ಮೃತಿವಚನವಿದೆ

ಜಯಂತೀ

ಕೃಷ್ಣಾಷ್ಟಮಿ ಅರ್ಧರಾತ್ರಿಯಲ್ಲಿ ರೋಹಿಣಿ ನಕ್ಷತ್ರ ಸಂಬಂಧವಿರುವುದೇ ಕೃಷ್ಣಜಯಂತಿ ಎಂದು ಜಯಂತೀ ನಿರ್ಣಯದಲ್ಲಿ ಹೇಳಲ್ಪಟ್ಟಿದೆ

ಜಯಂತಿ ವ್ರತಾನುಷ್ಠಾನ ಉಪವಾಸವು ಏಳು ಜನ್ಮಗಳಲ್ಲಿ ಕೃತವಾದ ಪಾಪಗಳೂ, ಅಧಿಭೂತಾಧ್ಯಾತ್ಮಾಧಿದೈವಿಕ ಪಾಪಗಳೂ ನಾಶವಾಗುವುವು ವಿಧ್ಯುಕ್ತ ರೀತಿಯಲ್ಲಿ ಈ ದಿನಾಚರಣೆಯು ಮಹಾ ಪಾತಕಗಳನ್ನೂ ನಾಶಮಾಡುವುದು, ಎಂದು **ವಹ್ನಿ ಪುರಾಣ** ವಚನ ಶ್ರಾವಣಮಾಸ ಕೃಷ್ಣಾಷ್ಟಮಿಯಲ್ಲಿ ರೋಹಿಣೀ ಲಾಭವಾದಾಗ ಜಯಂತಿ ಎನಿಸುವುದು, ಎಂದು **ಸನತ್ಕುಮಾರ ಸಂಹಿತೆ.** ಶ್ರಾವಣ ಬಹುಳ ಅಷ್ಟಮಿಯಲ್ಲಿ ಯಾವಾಗ ಪ್ರಜಾಪಾತ್ಯ (ರೋಹಿಣೀ) ನಕ್ಷತ್ರ ಸೇರುತ್ತದೆಯೋ ಅದೇ ಸರ್ವ ಪಾಪ ಪರಿಹಾರಕವಾದ ಪುಣ್ಯಕರವೂ ಜಯ ಪ್ರದವೂ ಆದ "ಜಯಂತಿ" ಎಂದು **ಸ್ಕಾಂದವಚನ** ಇತ್ಯಾದಿ ನಾಮಭೇದಗಳಿಂದ ಹೇಳಲ್ಪಟ್ಟಂತ ಎರಡು ವ್ರತವೂ ಬೇರೆ ಬೇರೆ ಎಂಬುದು ಸಿದ್ಧ.

ಜಯಂತಿಯು ಈ ವರ್ಷ ಭಾದ್ರಪದ ಮಾಸದಲ್ಲಿ ಬರುವುದು ಆಗ ಇದನ್ನು ಹೇಳುವೆವು. ಕೃಷ್ಣಾಷ್ಟಮಿಯು ಯಾವಾಗಲೂ ಚಾಂದ್ರಮಾನದಿಂದ ಶ್ರಾವಣ ಬಹುಳ ಅಷ್ಟಮಿ ಬರುತ್ತದೆ

ಚಾಂದ್ರಮಾನ ಶ್ರಾವಣ ಕೃಷ್ಣಾಷ್ಟಮಿಯಲ್ಲೇ ರೋಹಿಣಿ ನಕ್ಷತ್ರವೂ ಒಂದು ಜಯಂತಿಯು ಲಭಿಸುವುದು ಬಹು ಉತ್ತಮ ವ್ರತವು ಮತ್ತು ದುರ್ಲಭವು—ಜನ್ಮಾಷ್ಟಮಿಯು ಅರ್ಧರಾತ್ರಿಗೆ ಪೂರ್ವದಲ್ಲಿ ಸಪ್ತಮೀ ಸಹಿತವಾದದ್ದು ವಿದ್ಧವೆಂತಲೂ, ಅಷ್ಟಮೀ ಸಂಬಂಧವಿಲ್ಲದ್ದು ಶುದ್ಧವೆಂತಲೂ ಹೇಳಿದೆ ಅರ್ಧ ರಾತ್ರಿಯಲ್ಲಿ ಅಷ್ಟಮಿ ಇರುವ ದಿನವೇ ಈ ವ್ರತಾನುಷ್ಠಾನ ಇದರ ವಿಸ್ತಾರವನ್ನು ಶಾಸ್ತ್ರದಿಂದ ತಿಳಿಯಬೇಕು ಜನ್ಮಾಷ್ಟಮೀ ವ್ರತ ಮಾಡದಿದ್ದರೆ ಪ್ರತ್ಯವಾಯವೂ, ಪ್ರಾಯಶ್ಚಿತ್ತವೂ ಉಕ್ತವಾಗಿದೆ. ಜನ್ಮಾಷ್ಟಮೀ, ಜಯಂತೀ ಶಿವರಾತ್ರಿ, ಚತುರ್ದಶಿಗಳಲ್ಲಿ ಉಪವಾಸವನ್ನು ಪೂರ್ವವಿದ್ಧ ಮಾಡಬೇಕೆಂತಲೂ. ಉಪವಾಸಾಂತರ ತಿಥಿ ಕಳೆದನಂತರ, ತಿಥಿ ನಕ್ಷತ್ರ ಕಳೆದ ನಂತರ, ಪಾರಣೆ ಮಾಡತಕ್ಕದ್ದೆಂದು, ಪ್ರಮಾಣಾನುಸಾರಿಗಳಾದ ಸಂಪ್ರದಾಯಗಳೂ ಇವೆ ಸರ್ವಜಾತಿಯವರೂ ಜನ್ಮಾಷ್ಟಮೀ ಉಪವಾಸಮಾಡಬೇಕೆಂದು **ಶಿವಪುರಾಣ** ದಲ್ಲಿ ಹೇಳಿದೆ ಬ್ರಾಹ್ಮಣರು ವಿಶೇಷವಾಗಿ ಮಾಡತಕ್ಕದ್ದೆಂದು **ವಿಷ್ಣು ತೀರ್ಥೀಯ** ವಚನವೂ, ಅಂಬರೀಷ, ಸಗರ, ಮಾಂಧಾತಾದಿ ಕ್ಷತ್ರಿಯರುಗಳು ಉಪವಾಸಮಾಡಿದರೆಂದು **ಭವಿಷ್ಯೋತ್ತರಾದಿ** ಪುರಾಣಗಳಲ್ಲೂ, ಸ್ತ್ರೀ ಶೂದ್ರಾದಿಗಳು ವ್ರತಮಾಡಬೇಕೆಂತಲೂ ಹೇಳಿದೆ.

ಕೃಷ್ಣಾಷ್ಟಮಿಯಲ್ಲಿ ಪ್ರಾತಃಕಾಲದಿಂದ ನಿಯತ ಸ್ನಾನಸಂಧ್ಯಾದಿ ನಿತ್ಯಕರ್ಮ ಮುಗಿಸಿ, ಉಪವಾಸಮಾಡಿ, ಅರ್ಧರಾತ್ರಿಯಲ್ಲಿ ಯಶೋದಾ ಸಹಿತನಾದ, ಶಂಖ ಚಕ್ರಾದಿ ಧಾರಿಯೂ ಜ್ಞಾನಸ್ವರೂಪಿಯೂ ಆದ ಶ್ರೀ ಕೃಷ್ಣನನ್ನು, ಆವಹನಾಸನಾದಿ ಕಲ್ಪೋಕ್ತ ರೀತಿಯಿಂದ ಷೋಡಶೋಪಚಾರ ಪೂಜೆಯನ್ನು ಕ್ಷೀರ, ಪಾಯಸ, ಮಧು, ಆಜ್ಯ, ಭಕ್ಷ್ಯ ಭೋಜ್ಯಾದಿ ಮಹಾ ವಿಭವಗಳಿಂದ ಪೂಜಿಸಿ ಬಲಭದ್ರ, ವಸುದೇವ, ದೇವಕೀ. ನಂದಗೋಪ, ಯಶೋದಾದಿಗಳನ್ನು ಪರಿವಾರತಯಾ ಪೂಜಿಸಿ, ಶ್ರೀ ಕೃಷ್ಣನಿಗೂ ಚಂದ್ರನಿಗೂ ಅರ್ಘ್ಯವನ್ನು ಕೊಟ್ಟು ಪುರಾಣ, ಹಾರ, ಭಜನಾದಿಗಳಿಂದ ಜಾಗರ ಮಾಡಿ, ತನ್ನ ಯೋಗ್ಯತಾನುಗುಣವಾಗಿ, ಬ್ರಾಹ್ಮಣ, ಸುವಾಸಿನೀ, ಅತಿಥಿ, ಅಭ್ಯಾಗತ,ಇಷ್ಟ,ಮಿತ್ರ, ಬಂಧುಗಳೊಡನೆ ಭೋಜನವನ್ನಾಚರಿಸಿ, ದಾನ, ಧರ್ಮ, ದಕ್ಷಿಣಾದಿಗಳನ್ನು ಕೊಟ್ಟು ಶ್ರೀ ಕೃಷ್ಣನಲ್ಲಿ ಪೂಜಾ ಫಲವನ್ನೂ ಅರ್ಪಿಸಿ ಇಹಪರ ಸುಖಭೋಗ ಭಾಗಿಗಳಾಗುವರು

ಹೆಚ್ಚಿಗೆ ವಿಷಯವನ್ನು ಕೃಷ್ಣಾಷ್ಟಮೀ ಜಯಂತೀ ನಿರ್ಣಯ ಶ್ರೀ ರಾಮನವಮೀ ನಿರ್ಣಯವೆಂಬ ಸವಿಸ್ತಾರವಾದ ಗ್ರಂಥವನ್ನು ಪ್ರಮಾಣಗಳ ಉದಾಹರಣೆಯೊಡನೆ ಕನ್ನಡದಲ್ಲಿ ಅದನ್ನು ಬರೆದಿರುವೆವು ಬೆಲೆ ೦—೧—೦ ಮಾತ್ರ. ಓದಿ ತಿಳಿಯಬಹುದು

ನಂಜನಗೂಡು ವರ್ತಮಾನ

ಪುರಸಭೆ:— ಇಂದಿನ ಇದರ ಪರಿಸ್ಥಿತಿಯು ಚಿಂತಾಜನಕವಾಗಿದೆ. ಶ್ರೀ ಜಿ. ನಂಜುಂಡಪ್ಪನವರು ಹೂಡಿದ್ದ ವ್ಯಾಜ್ಯದಲ್ಲಿ ಮುನಿಸಿಪಾಲಿಟಿಯು ಸಿಗರೇಟ್ ಬೀಡಿಗಳ ಮೇಲಿನ ಸುಂಕವನ್ನು ವಸೂಲ್ಮಾಡುತ್ತಿದ್ದುದು ಸರಿಯಲ್ಲವೆಂದೂ, ವಸೂಲ್ಮಾಡಿರುವುದರಲ್ಲಿ ವಾಯಿದೆಯೊಳಗಿರುವ ಹಣವನ್ನು ವಾಪಸುಕೊಡಬೇಕೆಂದೂ ತೀರ್ಮಾನವಾಗಿರುವುದಂತೆ ಮ್ಯಾಜಿಸ್ಟ್ರೇಟರವರು ಮನೆಗಂದಾಯದ ವಿಮರ್ಶೆಯು ನಿಯಮ ಬದ್ಧವಾಗಿಲ್ಲವೆಂದು ಅಭಿಪ್ರಾಯ ಕೊಟ್ಟಿರುವರಂತೆ ಯಾತ್ರಿಕರ ತೆರಿಗೆಯು ವಜಾಯಿತು. ಕೆಲವು ಕಂದಾಯದ ದಾವೆಗಳಾದರೂ ವಿಫಲವಾಗಿವೆ ಇದಕ್ಕೆಲ್ಲ ಕಾರಣರಾರು? ನೂರು ರೂಪಾಯಿಗಳನ್ನು ಸಂಬಳ ತಿನ್ನುವ ಭಾರಿ ಅಧಿಕಾರಿಯು ಇದ್ದೂ, ಕಾನೂನಿಗನುಗುಣವಾಗಿ ಈ ಸಭೆಯ ಕೆಲಸಗಳು ನಡೆಯುತ್ತಿಲ್ಲವೆಂಬುದು ನಿಜವಾದರೆ ಇದಕ್ಕೆ ಜವಾಬ್ದಾರರಾರು? ಸಭೆಯ ಸದಸ್ಯರೆ? ಬಾರೀ ಸಂಬಳದ ಅಧ್ಯಕ್ಷರೆ? ಈಗ ಜನರು ಆಡಿಕೊಳ್ಳುವ ಗುಮಾಸ್ತರ ಸರ್ಕಾರವೆ? ಹೇಗೂ ಡೆಪ್ಯುಟಿ ಕಮೀಷನರ್‌ರವರು ಕೂಡಲೆ ನಿಗಾವಣೆಯಿಂದ ಕ್ರಮಪಡಿಸುವರೆಂದೂ, ಹೊಸ ಅಧ್ಯಕ್ಷರು ಗಮನ ಕೊಡುವರೆಂದೂ ನಂಬೋಣ

ವಿದ್ಯಾಭ್ಯಾಸದ ಇಲಾಖಾ ರೇಂಜ್ ಆಫೀಸರವರು:— ಶ್ರೀ ಸುಬ್ಬರಾಯರವರಿಗೆ ಮೈಸೂರು ಡಿಸ್ಟ್ರಿಕ್ಟಿನ ಆಫೀಸರಾಗಿ ವರ್ಗವಾಗಿರುತ್ತೆ. ಇವರು ಸಭ್ಯರು ಜನಾನುರಾಗಿಗಳು.

ಶ್ರೀ ರಾಮಕೃಷ್ಣ ಶತಮಾನೋತ್ಸವ:— ಈ ತಿಂಗಳ ಕೊನೆಯ ಭಾಗದಲ್ಲಿ ನೆರವೇರುವುದಾಗಿ ವರ್ತಮಾನವಿರುತ್ತೆ.

ಹಿತೈಷಿ.

ಅರ್ಘ್ಯಪ್ರದಾನ ಮಂತ್ರಗಳು.

ಕೃಷ್ಣನಿಗೆ.

ಜಾತಃ ಕಂಸವಧಾರ್ಥಾಯ ।
ಭೂಭಾರೋತ್ತಾರಣಾಯ ಚ ॥
ಕೌರವಾಣಾಂ ವಿನಾಶಾಯ ।
ದೈತ್ಯಾನಾಂ ನಿಧನಾಯ ಚ ॥
ಪಾಂಡವಾನಾಂ ಹಿತಾರ್ಥಾಯ ।
ಧರ್ಮ ಸಂಸ್ಥಾಪನಾಯ ಚ ॥
ಗೃಹಾಣಾರ್ಘ್ಯಂ ಮಯಾ ದತ್ತಂ ।
ದೇವಕ್ಯಾ ಸಹಿತೋ ಹರೇ ॥

ಚಂದ್ರನಿಗೆ.

ಕ್ಷೀರೋದಾರ್ಣವಸಂಭೂತ ।
ಅತ್ರಿನೇತ್ರ ಸಮುದ್ಭವ ॥
ಗೃಹಾಣಾರ್ಘ್ಯಂ ಶಶಾಂಕೇದಂ ।
ರೋಹಿಣ್ಯಾ ಸಹಿತೋ ಮಮ ॥

ಸಾಧ್ವಿ

ೞ-೮-೩೬ ನೇ ಸೋಮವಾರ

ಗಾಂಧಿ ಟೋಪಿಯ ಭೂತ.

ಅಧಿಕಾರಿ ವರ್ಗದವರಿಗೆ ಆಗಿಂದಾಗ್ಗೆ ಉಂಟಾಗುವ ಮತಿ ಭ್ರಾಂತಿಯು ವಿಚಿತ್ರತರವೂ, ವಿನೋದಕರವೂ, ಆಗಿರುತ್ತದೆ. ದೇಶೀಯ ಸಂಸ್ಥಾನಗಳ ಅರಸರು ಅನೇಕ ಬಾರಿ ತಮ್ಮ ಬ್ರಿಟಿಷ್ ಇಂಡಿಯಾದ ಸಹಪಾಠಿಗಳನ್ನು ಮೀರಿಸುವರು " ಕುದುರೆಗಿಂತ ಲದ್ದಿ ಬಿಸಿ ' ಎಂಬ ನಾಣ್ಣುಡಿಯಂತೆ ಇವರು ಪ್ರವರ್ತಿಸುವರು. ಸತ್ಯಾಗ್ರಹ ಸಮರದ ಸಂದರ್ಭದಲ್ಲಿ ಬ್ರಿಟಿಷ್ ಇಂಡಿಯದ ನೌಕರ ವರ್ಗದವರು ಆಚರಿಸದ ಅತ್ಯಾಚಾರಗಳೇ ಇಲ್ಲ. ನಿರಪರಾಧಿಗಳೂ, ಅನಾಯಕರರೂ ಆದ ದೇಶ ಸೇವಕರ ಮೇಲೆ ಇವರು ನಡಸಿದ ದಬ್ಬಾಳಿಕೆಯು ಇತಿಹಾಸ ಪ್ರಸಿದ್ಧವಾಗಿದೆ. ಆ ಕಾಲದಲ್ಲಿ ಅನೇಕ ವಿಧವಾದ ನಿರ್ಬಂಧಗಳನ್ನೂ, ನಿಷೇಧಗಳನ್ನೂ ಅವರು ಹೂಡಿದರು. ಅವುಗಳಲ್ಲೈಕೆ ಗಾಂಧಿ ಟೋಪಿಗಳ ಮೇಲಿನ ಗದಾ ಪ್ರಹಾರವೂ ಒಂದು. ಆದರೆ ಸತ್ಯಾಗ್ರಹವು ನಿಂತಮೇಲೆ ಈ ನಿರ್ಬಂಧಗಳೆಲ್ಲವೂ ತೆಗೆದು ಹಾಕಲ್ಪಟ್ಟಿವೆ. ಗಾಂಧಿ ಟೋಪಿಯನ್ನು ಮಧ್ಯಪ್ರಾಂತ್ಯದ ಗೌರ್ನರೂ ಸಹ ಈಗ ಸದಾಕಾಲದಲ್ಲಿಯೂ ಧರಿಸುತ್ತಾರೆ. ಇನ್ನೂ ಅನೇಕ ನೌಕರ ಮಾನೇಜರುಗಳೂ, ಲಾಯರುಗಳೂ, ನಿರಾತಂಕವಾಗಿ ಹಾಕಿಕೊಳ್ಳುವರು. ಭಾರತ ಕೇಂದ್ರಶಾಸನ ಸಭೆಯ ಕಾಂಗ್ರೆಸ್ ಪಕ್ಷದ ಸದಸ್ಯರೆಲ್ಲರೂ ಖಾದಿ ಟೋಪಿಯಲ್ಲಿಯೇ ಆ ಸಭೆಯನ್ನಲಂಕರಿಸುವರು. ಶ್ರೀ|| ವಿಠಲಭಾಯಿ ಪಟೇಲರು ಜಾರ್ಜ್ ಚಕ್ರವರ್ತಿಗಳನ್ನು ಸಂದರ್ಶಿಸಿದಾಗ ಗಾಂಧಿ ಟೋಪಿಯಲ್ಲಿಯೇ ಹೋಗಿದ್ದರು. ಈಗ ಈ ಟೋಪಿಗೆ ಸಾಮಾನ್ಯವಾಗಿ ಎಲ್ಲಿಯೂ ಅಡ್ಡಿ ಇರುವುದಿಲ್ಲ. ಖಾದಿ ಬಟ್ಟೆಗಂತೂ ಸರ್ಕಾರದವರುಗಳೇ ಪ್ರತ್ಯಕ್ಷವಾಗಿ ಪ್ರೋತ್ಸಾಹ ಕೊಡುತ್ತಿದ್ದಾರೆ. ಸಮಸ್ತ ದೇಶದ ಪೋಲಿಸಿನವರಿಗೂ, ಆಫೀಸು ಸೇವಕರಿಗೂ, ಖಾದಿ ಬಟ್ಟೆಯ ಯೂನಿಫಾರಂಗಳನ್ನು ಕೊಡಲಾಗುತ್ತಿದೆ.

ಹೀಗಿರುವಲ್ಲಿ ಖೈರ್‌ಪುರ್ ಸಂಸ್ಥಾನದ ಆಳರಸರು ಗಾಂಧಿ ಟೋಪಿಯಮೇಲೆ ಗದಾಪ್ರಹಾರವನ್ನು ಹೂಡಿರುವದು ಕೇವಲ ಹಾಸ್ಯಾಸ್ಪದವಾಗಿದೆ. ಟೋಪಿಗಳನ್ನು ತಯಾರುಮಾಡುವ ದರ್ಜಿಯವರು ಗಾಂಧಿ ಟೋಪಿಗಳನ್ನು ತಯಾರಿಸಿದರೆ ಹೇರಳವಾದ ದಂಡವನ್ನು ಕೊಡಬೇಕೆಂದು ಅಲ್ಲಿ ಆಜ್ಞೆಯಾಗಿದೆ. ಮೊನ್ನೆತಾನೇ ಖೈರ್‌ಪುರದ ನವಾಬರು ರಾಜಕೀಯ ಶಿಕ್ಷಣವನ್ನು ಪಡೆಯಲು ಮೈಸೂರಿಗೆ ಬಂದುಹೋದರು. ಆದರೆ ಈ ಪ್ರಸಂಗದಲ್ಲಿ ಮೈಸೂರಿನ ಗಾಳಿಯು ಖೈರ್‌ಪುರದಮೇಲೆ ಬೀಸಿಲ್ಲವೆಂದು ನಾವು ಊಹಿಸುತ್ತೇವೆ.

ಕಾಂಗ್ರೆಸ್ಸೂ, ಮೈಸೂರು ಸಂಸ್ಥಾನವೂ.

ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯಲ್ಲಿ ಈ ಸಾರಿ ಮೈಸೂರಿನ ಪ್ರತಿನಿಧಿಗಳು ಒಬ್ಬರೂ ಇಲ್ಲವೆಂದು ಪರಿತಾಪಪಟ್ಟು ಡಾ|| ಹರ್ಡೀಕರ್‌ರವರು ಪತ್ರಿಕೆಗಳಲ್ಲಿ ತೀವ್ರವಾದ ಒಂದು ಲೇಖನವನ್ನು ಬರೆದಿರುತ್ತಾರೆ. ಮೈಸೂರಿನವರು ಕಳೆದ ಹದಿನಾರು ವರುಷಗಳಿಂದಲೂ ಕಾಂಗ್ರೆಸ್ ಸಭೆಯ ಕಾರ್ಯಕಲಾಪಗಳಲ್ಲಿ ಸಂಪೂರ್ಣ ಉತ್ಸಾಹದಿಂದ ಭಾಗವಹಿಸಿರುತ್ತಾರೆಂದೂ ವಿಶೇಷವಾದ ತ್ಯಾಗವನ್ನು ಮಾಡಿರುತ್ತಾರೆಂದೂ ಅವರು ಹೇಳಿರುವರು. ಆದರೂ ಈ ಸಾರಿ ಪ್ರಾಂತಿಕ ಕಮಿಟಿಯಲ್ಲಿ ಒಬ್ಬ ಪ್ರತಿನಿಧಿಯೂ ಇಲ್ಲದುದಕ್ಕಾಗಿ ಬಹಳ ವಿಷಾದಿಸಿರುವರು.

ರಾಷ್ಟ್ರೀಯ ಮಹಾ ಸಭೆಯಲ್ಲಿ ಭಾರತೀಯರೆಲ್ಲರಿಗೂ ಗೌರವವಿದೆ, ಅಭಿಮಾನವಿದೆ. ಅದರ ಆಜ್ಞೆಯನ್ನು ಶಿರಸಾವಹಿಸಲು ಎಲ್ಲರೂ ಮನಃಪೂರ್ವಕವಾಗಿ ಮುಂದೆ ಬರುವರು. ಮೈಸೂರಿನವರೂ ಸಹ ಹಾಗೆಯೇ ಮುಂದೆ ಬಂದಿರುವರು. ಇನ್ನು ಮೇಲೆಯೂ ತಮ್ಮ ಕೈಲಾದ ಸೇವೆಯನ್ನು ಸಲ್ಲಿಸುವರು. ಆದರೆ ಪ್ರಕೃತದಲ್ಲಿ ಸ್ವಲ್ಪಮಟ್ಟಿನ ತಾಟಸ್ಥ್ಯ ಭಾವನೆಯು ಉಂಟಾಗಿರುವುದೇನೋ ನಿಜ. ಇದಕ್ಕೆ ಮಹಾ ಸಭೆಯು ದೇಶೀಯ ಸಂಸ್ಥಾನದ ವಿಷಯವಾಗಿ ತೋರಿಸಿರುವ ನೀತಿಯು ಬಹಳ ಮಟ್ಟಿಗೆ ಕಾರಣವಾಗಿರಬಹುದು. ಆದರೆ ನಮ್ಮ ಕರ್ನಾಟಕ ಪ್ರಾಂತಿಕ ಕಮಿಟಿಯ ಉದಾಸೀನತೆಯು ಮತ್ತಷ್ಟು ಹೆಚ್ಚಿನ ಕಾರಣವಾಗಿದೆಯೆಂದು ನಾವು ನಂಬುತ್ತೇವೆ. ಇದು ಗೃಹಚ್ಛಿದ್ರದ ವಿಷಯ. ಆದ್ದರಿಂದ ನಾವು ಹೆಚ್ಚು ಬರೆಯಲು ಬಯಸುವುದಿಲ್ಲ.

ಭಾರತೀಯರೆಲ್ಲರೂ ಒಂದೇ. ಭರತಖಂಡದ ಸ್ವಾತಂತ್ರ್ಯವೇ ದೇಶೀಯ ಸಂಸ್ಥಾನದ ಪ್ರಜೆಗಳ ಅಭ್ಯುದಯ. ಆದ್ದರಿಂದ ನಮ್ಮ ದೇಶಬಾಂಧವರು ಕಾಂಗ್ರೆಸ್ ಮಹಾಸಭೆಯನ್ನು ಸೇರಿ ಭರತಖಂಡದ ಸ್ವಾತಂತ್ರ್ಯಸಾಧನೆಯಲ್ಲಿ ಸಂಪೂರ್ಣವಾಗಿ ಸಹಕರಿಸಬೇಕೆಂದು ನಾವು ಬೇಡಿಕೊಳ್ಳುತ್ತೇವೆ.

ಹೊಸ ಖಾದೀ ಕೇಂದ್ರದ ಕಟ್ಟಡ

ತಗಡೂರು ಖಾದಿ ಕೇಂದ್ರದ ಶಾಖೆಯಾಗಿ ಇದುವರೆಗೆ ನಂಜನಗೂಡು ತಾಲ್ಲೂಕು ಬದನಗುಪ್ಪೆಯಲ್ಲಿ ನಡೆಸುತ್ತಿದ್ದ ಖಾದಿ ಉಪಕೇಂದ್ರಕ್ಕೆ ಈಗ ಒಂದು ಹೊಸ ಕಟ್ಟಡವು ಕಟ್ಟಿಸಲ್ಪಟ್ಟಿದೆ. ಇದನ್ನು ಕಟ್ಟಿಸಲು ಅನೇಕ ಜನ ಮಹನೀಯರು ಸಹಾಯಮಾಡಿರುತ್ತಾರೆ. ಮುಖ್ಯವಾಗಿ ಆ ಊರಿನ ಮ|| ರಾ|| ಸಿದ್ಧವೀರಪ್ಪನವರೂ ಮತ್ತು ಬೀದರೂರಿನ ಮ|| ರಾ|| ಕೆಟಿ ಸತ್ಯನಾರಾಯಣಶೆಟ್ಟರೂ ವಿಶೇಷವಾಗಿ ಸಹಾಯಮಾಡಿರುತ್ತಾರೆ. ಈ ಕಟ್ಟಡದ ಪ್ರಾರಂಭೋತ್ಸವವು ಕಳೆದ ಶುಕ್ರವಾರ ಬಹಳ ವೈಭವದಿಂದ ಜರುಗಿತು. ಮೈಸೂರು, ನಂಜನಗೂಡು, ಬದನವಾಳು, ತಗಡೂರು, ಚಾಮರಾಜನಗರ ಮುಂತಾದ ಕಡೆಗಳಿಂದ ಅನೇಕ ಜನ ಖಾದೀ ಪ್ರೇಮಿಗಳು ದಯಮಾಡಿಸಿದ್ದರು. ಮಂಗಳವಾದ್ಯದೊಡನೆ ಪುರಪ್ರವೇಶ; ಆದನಂತರ ಹೊಸಕಟ್ಟಡದ ಬಳಿ ರಾಷ್ಟ್ರೀಯ ಧ್ವಜಾರೋಹಣವು ನಡೆಯಿತು. ನೂತನ ಕಟ್ಟಡದ ಪ್ರವೇಶವಾದ ಮೇಲೆ ಸಭೆ ಸೇರಿತು. ನೂರಾರು ಜನರು ಬಂದಿದ್ದರು. ನಂಜನಗೂಡಿನ ಸುಪ್ರಸಿದ್ಧ ವಕೀಲರಾದ ಶ್ರೀ ಎಸ್ ನಾರಾಯಣರಾಯರವರು ಅಗ್ರಾಸನವನ್ನು ವಹಿಸಿದ್ದರು. ರಾಷ್ಟ್ರಗೀತೆಗಳಾದುವು. ಶ್ರೀ|| ತಗಡೂರ್ ರಾಮಚಂದ್ರರಾಯರು ಸದರಿ ಕಟ್ಟಡವನ್ನು ಸ್ಥಾಪಿಸಲು ಸಹಾಯಮಾಡಿದ ಮಹನೀಯರಿಗೆ ಧನ್ಯವಾದಗಳನ್ನು ಸಲ್ಲಿಸಿದರು. ಅಧ್ಯಕ್ಷರು ಸ್ವಾರಸ್ಯವಾದ ಭಾಷಣವನ್ನು ಮಾಡಿ ಸಕಲರೂ ಖಾದಿ ಕೈಗಾರಿಕೆಗೆ ಪ್ರೋತ್ಸಾಹಕೊಡಬೇಕೆಂದು ಕೋರಿದರು. ಶ್ರೀ|| ಗಳಾದ ಪಿ ಆರ್ ಸಂಗಪ್ಪನವರೂ, ಎ. ಸೂರ್ಯನಾರಾಯಣ ಪಂಡಿತರೂ ಇದೇ ವಿಷಯವಾಗಿ ಸ್ವಾರಸ್ಯವಾದ ಭಾಷಣಗಳನ್ನು ಮಾಡಿದರು. ಜಯಘೋಷದಿಂದ ಸಭೆಯು ಮುಕ್ತಾಯವಾಯಿತು.

ರಾಜಧಾನಿಯ ಸ್ಟ್ಯಾಂಪ್ ವೆಂಡರುಗಳು

(ಒಬ್ಬ ಬಾತ್ಮೀದಾರರಿಂದ)

ಮೈಸೂರು ನಗರದಲ್ಲಿ ಈಗಾಗಲೆ 16 ಜನ ಸ್ಟ್ಯಾಂಪ್‌ವೆಂಡರುಗಳಿರುವರು. ಅವರ ಪೈಕಿ 7–8 ಜನರುಮಾತ್ರ ಕ್ಲುಪ್ತವಾಗಿ ಕೆಲಸಮಾಡುತ್ತಿರುವರು. ಅವರಿಗೇ ಸಾಕಾದಷ್ಟು ವ್ಯಾಪಾರ ನಡೆಯುತ್ತಿಲ್ಲ. ಇದಲ್ಲದೆ ಒಂದೇ ಕಡೆ ಒಬ್ಬರಿಗೊಬ್ಬರು ಬಹಳ ಸಮೀಪದಲ್ಲಿರುವಂತೆ ಲೈಸನ್ಸ್ ಕೊಡಲಾಗಿದೆ. ಇದು ಕಾನೂನಿಗೆ ವಿರುದ್ಧವಾಗಿದೆ. ಇದು ಸಾಲದೆ ಈಗ ವೆಂಡರುಗಳಿರುವ ಪ್ರದೇಶದಲ್ಲಿಯೇ ಇನ್ನೂ ಕೆಲವರಿಗೆ ಅವಕಾಶಕೊಡುವುದಾಗಿ ವರ್ತಮಾನವಿದೆ. ಇದರಿಂದ ಯಾರಿಗೂ ಪ್ರಯೋಜನವಿಲ್ಲ. ಎಲ್ಲರೂ ಉದಾಸೀನರಾಗಲು ಅವಕಾಶವಾಗುವುದು. ಇದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಈ ಅಂಶವನ್ನು ಗಮನಿಸಬೇಕಾಗಿ ಕೋರಿದೆ.

ತರುಣರ ದಂಡು, ಮೈಸೂರು

(ಬರೆದು ಬಂದುದು)

ಇಂಟರ್‌ಮೀಡಿಯೆಟ್ ಪರೀಕ್ಷೆಗೆ ಹೋ
ಗತಕ್ಕ ವಿದ್ಯಾರ್ಥಿಗಳ ಉಪಯೋಗಕ್ಕಾಗಿ
ನೀತಿಮಂಜರಿಯ ಮೇಲೆ ವ್ಯಾಸಂಗಗೋ
ಷ್ಠಿಯನ್ನು ದಂಡಿನ ಪರವಾಗಿ ಏರ್ಪ
ಸಿದೆ ಇದಕ್ಕೆ ಪ್ರವೇಶಧನ ಕೇವಲ
ನಾಲ್ಕಾಣೆ ಮಾತ್ರ ತಾ|| 9-8-36
ಭಾನುವಾರ ಸಾಯಂಕಾಲ 5-30ಕ್ಕೆ
ಯಾಗಿ ಇಂಟರ್‌ಮೀಡಿಯೇಟ್ ಕಾಲೇ
ನ ಭವನದಲ್ಲಿ ಶ್ರೀಮಾನ್ ಎಚ್ ಎ
ಶಂಕರನಾರಾಯಣರಾವ್ ಬಿ ಎ, ಆನ
ಇವರು ವ್ಯಾಸಂಗಗೋಷ್ಠಿಯ
ಭಾಷಣವನ್ನು ಮಾಡಿದರು ಮುಂ
ವಾರದಿಂದ ಶ್ರೀಮಾನ್ ಜಿ ವೆಂಕಟಸು
ಯ್ಯ ಬಿ ಎ. ಆನರ್ಸ್ ಇವರು ವ್ಯಾ
ಮಾಡುವರು ಪ್ರಶ್ನೆಗಳನ್ನು ಕೇ
ಅವಕಾಶವುಂಟು ವಿದ್ಯಾರ್ಥಿಗಳಿಗೆ
ರಿಂದ ತುಂಬಾ ಅನುಕೂಲವಾಗುವುದ
ಸಂದೇಹವಿಲ್ಲ

ತಾ|| 9–8 36 ರಲ್ಲಿ ಇಂಟರ್ ಕಾ
ಜಿನ ಅಧ್ಯಾಪಕರಾದ ಶ್ರೀಮಾನ್
ನಾಗೇಶರಾವ್, ಎಂ ಎ ಅವರು
ಇಂಗ್ಲೀಷಿನಿಂದ ಕನ್ನಡಕ್ಕೆ ತರ್ಜು
ಮಾಡಿದ ಪ್ರಬಂಧಗಳನ್ನು ಓದಿ
ಪ್ರಬಂಧಗಳ ಮೇಲೆ ವಿಮರ್ಶೆ ನ
ತು. ಸಭೆ ಪ್ರಾತಃಕಾಲ 9 ಗ
ಶಾರದಾವಿಲಾಸ ಹೈಸ್ಕೂಲಿನಲ್ಲಿ ಸೇರಿ

" ಭಾಗ್ಯ ಚಕ್ರ "

ಇದು ಒಂದು ಪುಟ್ಟ ಕಾದಂಬರಿ
ಯ 2 ಆಣೆ ಇದರಲ್ಲಿ ಮನುಷ್ಯ
ಷ್ಟವೇ ಆಗಲಿ ಸುಖವೇ ಆಗಲೀ ದ
ವಲ್ಲ ಯಾರನ್ನೂ ಯಾರೂ ಯಾವ
ಯಿಂದಲೂ ಧಿಕ್ಕಾರ ಮಾತಬಾ
ಯಾವುದೊಂದು ಕಾರ್ಯ ಮಾಡಬೇ
ರೂ ದೂರಾಲೋಚನೆ, ವಿಷಯ ಪ
ನೆ, ತಾಳ್ಮೆ ಇವನ್ನು ಹೊಂದಿರಬೇಕು
ಪಿ ನಮ್ಮ ಆರ್ಯ ಮಹಿಳೆಯರಿಗೆ ಇರ
ಗಿ ಇರಬೇಕಾದ ಕಷ್ಟ ಸಹಿಷ್ಣು
ಕಸನಶೀಲತೆ, ಬಂಧು ಪ್ರೇಮ,—ಇ
ದಲಾದ ಉಚ್ಚ ಆದರ್ಶಗಳು ಚಿ
ತ್ರಿಸಲ್ಪಟ್ಟಿವೆ ಕನ್ನಡ ಭಾಷಾ
ಗಳೆಲ್ಲರೂ ಇದನ್ನು ಒಂದು ಸಾ
ಲಿಸುವುದುತ್ತಮ ಇದರ ಗ್ರಂಥ
ರಾ ಭಾ ವಿಶಾರದರಾದ ಶ್ರೀ|| ಯೋ
ಹಾಸನದ ಪುಸ್ತಕ ವ್ಯಾಪಾ
ಮೆಸರ್ಸ್ ಎ. ಎನ್. ಕೃಷ್ಣಪ್ಪ
ಸನ್ಸ್ ರವರು ಇದರ ಪ್ರಕಾಶಕರು
ಕಾದಂಬರಿಯು ನಮ್ಮ ಆದ
ಕವಾಗಿ ಸ್ವೀಕರಿಸಲ್ಪಟ್ಟಿದೆ

ತಿರೆಯ ತಿಳಿವು.

ಲೇಖಕರು —ಎಂ ವಿ. ನಾರಾಯಣ ಮೂರ್ತಿ, ಮೈಸೂರು.

ಚಂದ್ರ

ಹಿಂದಿನಕಾಲದಲ್ಲಿ ಜನರು ಚಂದ್ರನನ್ನೂ ಸೂರ್ಯನಂತೆ ಒಂದು ಗ್ರಹವೆಂದು ಭಾವಿಸಿದ್ದರು. ಆದರೆ ಚಂದ್ರನಿಗೆ ಸೂರ್ಯನಂತೆ ಬೆಳಕು, ಸುತ್ತು, ಕಾವು, ಇವೆಲ್ಲವೂ ಎಲ್ಲಿಂದ ಬರಬೇಕು ? ಸೂರ್ಯನ ಸುತ್ತ ನಮ್ಮ ಭೂಮಿ ತಿರುಗುವಹಾಗೆ ನಮ್ಮ ಚಂದ್ರನು ಭೂಮಿಯ ಸುತ್ತಲೂ ತಿರುಗುತ್ತಾನೆ. ಆ ... ಭೂಮಿಯ ಮರಿ, ಅದು ಭೂಮಿಯಿಂ ... ಬೇರೆಯಾದ ಗೋಳ

ಚಂದ್ರನು ನಮ್ಮ ಭೂಮಿಯ ಕಾಲು ... ಲಿನಷ್ಟಿರುವನು ಅವನ ವ್ಯಾಸವು 2613 ... ಎಂದು ಅಂದಾಜು ಮಾಡಿದ್ದಾರೆ ... ಯನ್ನು ಸುತ್ತಲೂ 210,000 ಮೈಲು ... ದಲ್ಲಿ ಸಂಚರಿಸುತ್ತಾನೆ ಕೆಲವು ... ಭೂಮಿಯ ತೀರ ಸಮೀಪಕ್ಕೆ ಬಂ... 220,000 ಮೈಲು ದೂರದಲ್ಲಿರ... ... ದೂರದಲ್ಲಿರುವುದೆಂದರೆ 53,000 ಮೈಲು ದೂರದಲ್ಲಿರುತ್ತಾನೆ ... ವಾಗೆಂದಮೇಲೆ ಚಂದ್ರನು ಸೂರ್ಯ... ಸಮನಾಗುವ ಬಗೆ ಹೇಗೆ ! ಈಗ ಗಂ... 100 ಮೈಲಿಯಂತೆ ಹಾರುವ ವಿಮಾ... ... ನಾವು ಹೊರಡುವುದಾದರೆ ಚಂದ್ರ... ನಿಗೆ ಸೇರಲು 100 ದಿನಗಳು ಹಿಡಿಯು... ವು !

ಚಂದ್ರನ ಮೈ.

ನಾವು ಪೂರ್ಣಿಮೆಯ ದಿವಸ ಚಂದ್ರನ... ನೋಡಿದರೆ ಅವನ ಮಧ್ಯದಲ್ಲಿ ಕೆಲವು ... ಗಳು ನಮ್ಮ ಕಣ್ಣಿಗೆ ಕಾಣುತ್ತವೆ. ಇ... ನಮ್ಮ ದೇಶದ ಕವಿಗಳೂ, ವಿದ್ವಾಂ... ... ಜಿಂಕೆಯೆಂದೂ, ಪಾಶ್ಚಾತ್ಯ ದೇಶ... ... ಮೊಲನೆಂದೂ, ಮುದುಕಿಯೆಂದೂ ... ನರು ಆದರೆ ನಾವು ನವೀನ ... ಶಾಸ್ತ್ರ ರೀತಿಯಾಗಿ ನೋಡುವು... ... ಜಿಂಕೆಯೂ ಇಲ್ಲ, ಮುದುಕಿ ... ಇಲ್ಲ **ಅವೆಲ್ಲವೂ ಚಂದ್ರನ ಮೇ... ನ ಪರ್ವತಾವಳಿಗಳು** ಈ ಪರ್ವತ... ಕೆಲವು ತಣ್ಣಗಾದ ಜ್ವಾಲಾಮುಖಿ ... ಕೆಲವು ಜ್ವಾಲಾಮುಖಿಗಳ ... 100 ಮೈಲು ವ್ಯಾಸವುಳ್ಳ ... ಕೆಲವು ಶಿಖರಗಳು ನಮ್ಮ ಹಿ... ಮಾಲಯ ಪರ್ವತಕ್ಕಿಂತ ಅಂದರೆ ... 00 ಅಡಿ ಎತ್ತರವಾಗಿವೆ

ಹವಾ.

...ರು ಚಂದ್ರನು ಸಸ್ಯಗಳ ಬೆಳವಣಿ... ... ಉಪಕಾರಿಯೆಂದು ಹೇಳು... ... ಆದರೆ ನಾವು ಆಲೋಚನೆಮಾಡಿ... ಚಂದ್ರನ ಮೈಮೇಲೆ ಸಸ್ಯಗಳ ಬೆಳೆ... ... ಇವೇ ಇಲ್ಲ ಚಂದ್ರನಲ್ಲಿ ... ಬೇಕಾದ ನೀರು, ಗಾಳಿ ... ಇಲ್ಲದ್ದರಿಂದ ಈ ಗ್ರಹದ ... ನ ಸಸ್ಯವೂ ಇಲ್ಲ. ಇದರಿಂದ ಚಂದ್ರನಿಗೊಂದು ಲಾಭವೆಂದೇ ಹೇಳಬೇಕು ಆತನ ಮೈ, ಛಳಿ ಗಾಳಿ ಮಳೆಗಳಿಂದ ಕೊರೆಯುವುದೇ ಇಲ್ಲ

ಚಂದ್ರನಲ್ಲಿನ ಒಂದು ದಿವಸವು ಅಂದರೆ ಅವನು ತನ್ನನ್ನು ತಾನು ಒಂದುಸಾರಿ ಸುತ್ತಲು ತೆಗೆದುಕೊಳ್ಳುವ ಕಾಲ ನಮ್ಮ 30 ದಿವಸಕ್ಕೆ ಸಮ ಅಂದರೆ 15 ದಿನ ಹಗಲು 15 ದಿನ ರಾತ್ರಿ ಆದಹಾಗಾಯ್ತು. ಹಗಲಿನ 15 ದಿನಗಳಲ್ಲಿ ಸೂರ್ಯನಿಂದ ಚಂದ್ರನು ಬಹಳವಾಗಿ ಕಾದು ಉಷ್ಣತೆಯು 200 ರಿಂದ 300 ಡಿಗ್ರಿವರೆಗೆ ಏರುವುದು ಆದರೆ ರಾತ್ರಿಯ 15 ದಿನಗಳಲ್ಲಿ 200 ರಿಂದ 300 ಡಿಗ್ರಿವರೆಗೆ ಇಳಿಯುವುದು ಆದುದರಿಂದ ಇಲ್ಲಿಯ ಬಂಡೆಗಳೆಲ್ಲವೂ ಪುಡಿ ಪುಡಿಯಾಗ ವುವು ಈ ತೆರನ ಶೈತ್ಯೋಷ್ಣಗಳ ವ್ಯತ್ಯಾಸವನ್ನು ಚಂದ್ರಗ್ರಹವು ಒಳಗೊಂಡಿರುವುದರಿಂದ ಅಲ್ಲಿ ಸಸ್ಯಜೀವನಕ್ಕೂ ಜನಜೀವನಕ್ಕೂ ಅವಕಾಶವಿಲ್ಲ

ಚಂದ್ರನ ಬೆಳಕು

ಚಂದ್ರನಿಗೆ ಸ್ವತಃ ಬೆಳಕು ಕೊಡುವ ಶಕ್ತಿ ಇರುವುದೇ ಇಲ್ಲವೇ ಎಂಬುದನ್ನು ನಾವು ಸ್ವಲ್ಪ ಆಲೋಚಿಸೋಣ ನಾವು ವಿಜ್ಞಾನಶಾಸ್ತ್ರದ ರೀತಿಯಾಗಿ ನೋಡಿದರೆ ಚಂದ್ರನಿಗೆ ಸ್ವತಃ ಬೆಳಕೆಂಬುದೇ ಇಲ್ಲ, ಅವನು ನಮಗೆ ಕೊಡುವ ಬೆಳಕೆಲ್ಲವೂ ಸೂರ್ಯನಿಂದ ಪ್ರತಿಬಿಂಬಿತವಾದದ್ದು. ಸೂರ್ಯನ ರಶ್ಮಿಯು ಚಂದ್ರನಮೇಲೆ ಬಿದ್ದು ಅದು ನಮ್ಮ ಭೂಮಿಯ ಮೇಲೆ ಬೀಳುತ್ತದೆ ಚಂದ್ರನ ಬೆಳಕು, ತಂಪಾಗಿ, ಇಂಪಾಗಿರುವುದಕ್ಕೆ ಇದೇ ಕಾರಣ

ಚಂದ್ರನು ಭೂಮಿಯ ಸುತ್ತಲೂ ತಿರುಗುವಾಗ 15 ದಿನಗಳಿಗೊಮ್ಮೆ ಸೂರ್ಯನಿಗೂ ಭೂಮಿಗೂ ನಡುವೆ ಬರುತ್ತಾನೆ ಆಗ ಅವನು ಕಾಣಿಸುವುದಿಲ್ಲ ನಮಗೆ ಅಂದು ಅಮಾವಾಸ್ಯೆಯಾಗುವುದು ಅಮಾವಾಸ್ಯೆಯಾದನಂತರ ಪ್ರತಿ ದಿನವೂ ಸ್ವಲ್ಪ ಸ್ವಲ್ಪ ಕಾಣಿಸಿಕೊಳ್ಳುತ್ತಾ ಬರುತ್ತಾನೆ. ಕೊನೆಗೆ 15 ದಿನದನಂತರ ಸಂಪೂರ್ಣವಾಗಿ ಕಾಣಿಸಿಕೊಳ್ಳುತ್ತಾನೆ

ನಾವು ಒಂದು ಅಷ್ಟಮಿಯ ದಿನ ಚಂದ್ರನನ್ನು ನೋಡಿದರೆ ನಮಗೆ ಅರ್ಧಭಾಗ ಚೆನ್ನಾಗಿ ಬೆಳಕುಳ್ಳದ್ದಾಗಿಯೂ, ಇನ್ನರ್ಧವು ಮಂಕಾಗಿಯೂ ಕಾಣುತ್ತದೆ ಇದು ಏಕೆಂದರೆ, ಚಂದ್ರನ ಮೇಲೆ ಸೂರ್ಯನ ಬೆಳಕು ಮಾತ್ರ ಬೀಳುವುದಿಲ್ಲ ಸೂರ್ಯನ ಬೆಳಕು ಭೂಮಿಯ ಮೇಲೂ ಬೀಳುತ್ತದೆ ಅದು ಭೂಮಿಯಿಂದ ಪ್ರತಿಬಿಂಬಿಸಿ ಅಲ್ಪ ಸೌಮ್ಯವಾಗಿ ಚಂದ್ರನ ಮೇಲೆ ಬೀಳುತ್ತದೆ ಆಗ ಚಂದ್ರನ ಕತ್ತಲಾದ ಭಾಗವು ನಮಗೆ ನಸುಕಪ್ಪಾಗಿ ಕಾಣುತ್ತದೆ

ವರ್ಣಮಾಲಾ.

ಅಜರಾಮರ ನಾನೆಂದು ಸತ್ಕಾರ್ಯ ಪರ
ನಾಗಿರಯ್ !
ಆನಂದ ಮೂಲಾಧಾರ ವಾಗಲಾರೋಗ್ಯ ಸುಖ
ವಂತನಯ್ ॥
ಇಂಗಿತ ಜ್ಞಾನಮಂ ತಾಳ್ದು ಇಷ್ಟನಾಗಿರ
ಎಲ್ಲರೊಳ್ !
ಈಶ್ವರಾರಾಧನೆ ನಿಮ್ಮ ರಕ್ಷಕಂಸರ್ವ
ಕಾಲಮೊಳ್ ॥
ಉಕ್ತಕಾರಿಯೆನಿಪ್ಪಾತಂ ಉತ್ತಮ
ಸ್ಥಿತಿಗೇರುವಂ !
ಊಟ ಬಟ್ಟೆಯಾಗಿರ್ಪಂ ರೋಗ ಮಿಲ್ಲದೆ
ಬಾಳ್ವನು ॥
ಋಣಮಿಲ್ಲದವಂ ಪೊತ್ತು ಪಣಗಾರನೆ
ನಿಪ್ಪನಯ್ !
ಋೂಪೊಂದೇ ಸರ್ವಲೋಕಕ್ಕೆ ಭೋಗ
ಸಾಧನ ಜೀವನಂ ॥
ಒ ಒ ಕನ್ನಡದಲ್ಲೆಲ್ಲಿಂ ಕ್ಲಿಷ್ಟಂ ಸಂಸ್ಕೃತ
ವಾಪ್ಪುಗುಂ !
ಎಲ್ಲರೊಳ್ ಸ್ನೇಹ ಭಾವಕ್ಕೆ ಮಹೋ
ಲ್ಲಾಸ ಮನಾಂತಿರ್ಪೆ ॥
ಏಕ ಪತ್ನೀವ್ರತದೊಳ್ಪಾತಂ ಸಂತರೊಳ್
ಬಾಳು ಸಂತತಂ !
ಐಕಮತ್ಯ ಮಹೈಶ್ವರ್ಯಂ ಸಂಸಾರ
ಕ್ಕೆ ಹಿತೆಲ್ಲಕಂ ॥
ಒಪ್ಪಿ ಮಾಡಿದ ಕಾರ್ಯಕ್ಕೆ ತಪ್ಪಿ ಹೋ
ಗದೆ ನಿಂತಿರ್ಪೆ !
ಓದಿ ನಲ್ಲಾನೆಮೋ ನೀನ್ನ ನಾಗರಿಕತ್ವಂ ಜಗ
ಜ್ಜನಂ ॥
ಔನ್ನತ್ಯಮಂ ತೋರುತಿರ್ಪಂ ಸೌಗುಣ್ಯ
ಸ್ಥಿತಿಯಿಲ್ಲರೊಳ್ ॥
ಅಂತಃಕರಣ ಶುದ್ಧಂ ನೀಂ ಸಂತೋಷಂ
ಬರುತಿರ್ದಪಯ್ ॥
ಅಃ! ಎಂಬೀವಾಕ್ಯಕಷ್ಟಕ್ಯಂ ತೋರಿಕುಂಗದ!
ಕಷ್ಟದೊಳ್ ಸಹನಂ ದೋರ್ವ ಕಷ್ಟ
ಯೊಳ್ ಕೃಪೆನಾನಿಪ್ಪೆ ॥
ಖತಿಯಂ ಮಾಡದಿರ ಮೂರ್ಖ ಬದ್ದ
ಮುಖಕೆ ಸಿಕ್ಕದಿರ್ !
ಗರ್ವವಂ ಕೆಡು ಪಾತಾಳಿ ಗಣ್ಯನಾಗಿರ
ಲೋಕದೊಳ್ ॥
ಘಟ್ಟಿಸೊಳ್ ಬಯ್ಗುಳಂ ಪೇಳ್ವ ಪಾತಕ
ಪ್ರವೃತಿಯೊಂದದಿರ್ !
ಙವರ್ಣವಂತ ಸತ್ಸೇವಾ ಶೃಂಗಾರದಂದಾಳ್ದು
ಪೊಂಗಿರ್ಪೆ ॥
ಚತುರತ್ವಂದಾಳ್ದು ಒಳ್ಳ ಚಾಕಚಕ್ಯದಿ
ನೊಪ್ಪಿರ್ಪೈ !
ಛತ್ರಿಯಂ ಗ್ರೀಷ್ಮವರ್ಷಾ ಕಾಲಂಗಳೊಳ್
ಸೊಗಮಂದುವಂ ॥
ಜನ ದೌರ್ಜನ್ಯಕ್ಕೆ ಸಿಲ್ಕಿ ಪೋಗದಿರ್ ವಿ
ಪ್ರಶ್ನೆದೆಯಿಂ !
ಝಣಝಣತ್ಕಾರಕ್ಕೆ ಪಕ್ಕಾಗಿ ಧೈರ್ಯದೊಳ್
ಕಳೆಗುಂದದಿರ್ ॥
ಜ್ಞಾನ ಸಾಧನಂ ಮಾಡ್ವೆ ಜ್ಞಾನಿಯೇ ಪೂ
ಜ್ಯನಾಗುವಂ ॥
ಟಗರಾಟಂಗಳ್ಗೆ ಸಿಕ್ಕಿ ಟಗರಂತೆಯೇ ಸಾ
ಯದಿರ್ ॥
ಠಕ್ಕರಾ ಟಿಂಗಳ್ಪೇಳೆ ಪುಟಿಮೊಂದು ವು
ದೇ ಫಲಂ !
ಡಂಬ ಕರ್ಮಕ್ಕೆ ಸಿಕ್ಕಿರ್ದ ವ್ಯರ್ಥವಾಗುವೆ
ಯಲ್ಲವೆ ॥
ಢಿಲ್ಲಿಯಿಂದ ಪ್ರಸ್ಥವರೆಗೆ ರಾಜಧಾನಿ ಜಗ
ತ್ತಿನೊಳ್ !
ಣಾಣಿಲ್ ವರ್ಣಯೆಂದರ್ಥಂ ಜಾಣನಾ
ಗದರಿಂದನೀಂ ॥
ತತ್ತ್ವ ಜಿಜ್ಞಾಸುವಾಗಿರ್ದು ಸತ್ತ್ವಮಂ
ಸಾಧಿಸುತ್ತಿರ್ದೈ !
ಥೂ ಎಂಬಿಲ್ಲರಿಂ ನಾಡಿ ಬಾರದೋ
ರದ ನೀತಿಸಲ್ ॥
ದಯಾ ಧರ್ಮಂಗಳಿಂದೆಲ್ಲಾ ಕಡೆಯೊಳ್
ಕ್ಷೇಮಹೊಪ್ಪುಗುಂ !
ಧನಧಾನ್ಯ ಸಮೃದ್ಧಿಗೆ ಸರ್ವರುಂ ವರ
ರಾಗುವರ್ ॥
ನಯಕ್ಕೆ ಸರ್ವರುಂ ಬರ್ಪರ್ ಭಯಕ್ಕೆ
ಪಗೆದೆಕೇಳುವರ್ !
ಪರ ಪುರುಷತನಂ ಪದ್ಯಂಗಳ್ಗೆ ಕೊಂ
ಡಾಡು ಗುಂಜನಂ ॥
ಫಲಾಪೇಕ್ಷೆಯಿನ್ನೆಲ್ಲಿರ್ಗೆ ಪರಸ್ಪರ ಸಹಾ
ಯಮೈ !
ಬಲಾಧಿಕಂಗೆ ಬನರಂ ದುರ್ಬಲಂಗೆ ಪಲಾ
ಯನಂ ॥
ಭಕ್ತಿ ವಿಶ್ವಾಸಗಳಿಂದೆ ಭುಕ್ತಿ ಮುಕ್ತಿಗಳಿ
ಪ್ಪಿಮುಂ !
ಮರಣಂ ಪೂರ್ಜಿತಮಹೋ ಮಾನವೇ
ಸುಖಜೀವನಂ ॥
ಯಥೋಚಿತ ಕ್ರಿಯಾಸಕ್ತನ ಭೋಗತಗೆ
ಬಾರಸ್ಥೆ !
ರಕ್ಷಕಂ ಕ್ಷಮೆಯೊಂದೇ ಕೇಳ್ ಕ್ಷಮೆ ವಿ
ಶ್ವಂಭರಸ್ಥಿತಿ ॥
ಲಕ್ಷಣಂ ಒಳ್ಳಿದಂಗೆಲ್ಲಂ ಲಕ್ಷ್ಯಂ ಸ್ವಾಧೀನ
ಮಾಪ್ಪುಗುಂ !
ವಾಲ್ಮೀಕಿರಾಮಾಯಣಂ ಒವಕುರಗೆ ವೇಲ್ದ
ನಾಚರಿತಂ ॥
ಶಕ್ತಿ ಸಂಪಾದಿಸ್ವೆ ನಿನ್ನ ಯುಕ್ತಿಯಿಂ
ಬುಕ್ತಿ ಮುಕ್ತಿಯೊಳ್ ॥
ಷಡ್ಗುಣೈಶ್ವರ್ಯವಂ ಕಾಂಬಂ ಷಣ್ಮುಖಾ
ರಾಧಕಂ !
ಸತ್ಯ ಸಂರಕ್ಷಣಂ ಮಾಡ್ವೆ ಸಂಸಾರಕ್ಕಮು
ಸಾರಮೈ ॥
ಹರ್ಷಮೋ ಸರ್ವ ಸಾಮ್ರಾಜ್ಯಂ ಪಾಪಿ
ಯೋ ವ್ಯರ್ಥ ಚಿಂತನಂ ॥
ಳಲಬೇಡ ಕಾಲವಲ್ಲಿ ಕಾಳಂ ತಿಂಬುದೆ
ಕಾಣಿಕಂ !
ಕ್ಷಣೆರಂಕ್ಷಣಕೆಂ ಯೋಗಂ ಕಾಮಕ್ಕಾಯ
ಮೋಕ್ಷಿಸ್ವೆ ॥
ಬಾಲಸ್ವಾಮಿ ರಂಗಸ್ವಾಮಿ ಬಾಲಕರ್ಗೆಲ್ಲ
ಮಂಗಳಂ !
ಬಾಲೆಯರ್ ಲಲಿತಾಮುಖ್ಯರ್ ಲೀಲೆಯಿಂ
ದೋಮತಿರ್ಪನಂ ॥
ಇವನಾರ್ ಬರೆದಂ ಕೇಳ್ವಂ ಮನನಂ
ಮಾಡುತೋದುವರ್ !
ಪದುಳಂ ಬಾಳ್ವೆವೈ ಮೃತ್ಯಂ ಜಯನಿಂದ
ಯವೊಂದುವರ್ ॥

(ಪಿ. ಎಲ್ ಆರ್)

ನವೀನ ವಿದ್ಯಾಭ್ಯಾಸ.

ಲೇಖಕಿ.—ಶ್ರೀಮತಿ ಲಲಿತಮ್ಮ, ಚಾಮುಂಡಿ ಬಡಾವಣೆ, ಮೈಸೂರು

ಈ ಪ್ರಪಂಚದಲ್ಲಿ ವಿದ್ಯೆಯೆಂಬುದು ಸರ್ವ ಸಾಮಾನ್ಯವಾಗಿ ಸರ್ವರಿಗೂ ಬೇಕಾದ ವಸ್ತುವು. ಈ ವಿದ್ಯೆಗೆ ಪಾರವಿಲ್ಲ. ಬಾಲ್ಯಾರಭ್ಯ ಮರಣ ಪರ್ಯಂತರವೂ ವಿದ್ಯಾಭ್ಯಾಸವನ್ನು ಮಾಡಿದರೂ ಇನ್ನೂ ಅನೇಕಾನೇಕ ವಿದ್ಯೆಗಳು ಉಳಿದೇ ಇರುವುವು. ಪ್ರತಿಯೊಬ್ಬ ಸ್ತ್ರೀಪುರುಷರ ವಿದ್ಯಾಭ್ಯಾಸಕ್ಕೂ ಒಂದೊಂದು ಉದ್ದೇಶವು ಇದ್ದೇ ಇರಬೇಕು. ಉದ್ದೇಶಗಳು ಅನೇಕ ವಿಧವಾಗಿರುವುವು. ಅವುಗಳಲ್ಲಿ ಯಾವುದರಿಂದ ಸಭ್ಯ ಮರ್ಯಾದೆಯೂ, ಉತ್ತಮ ನಡತೆಗಳೂ, ಇಹ ಪರಗಳಲ್ಲಿ ಸೌಖ್ಯವೂ, ಜನಾನುರಾಗವೂ, ದೇಹ—ಮನೋಧರ್ಮಗಳಿಗೆ ಅನುಗುಣವೂ, ತನ್ನ ಜೀವಿತ ಕಾಲದಲ್ಲಿ ಸುಖ ಪಟ್ಟು, ಇತರರನ್ನು ಸಾಧ್ಯವಾದಷ್ಟು ಮಟ್ಟಿಗೆ ಕಾಪಾಡುವ ಶಕ್ತಿಯೂ, ಉಂಟಾಗಿ ತನ್ಮೂಲಕ ಮೋಕ್ಷ ಸಂಪಾದನೆ [illegible]ಗುವುದೋ ಅದೇ ನಿಜವಾದ ವಿದ್ಯೆ ಎನಿಸುವುದು

ನಮ್ಮ ಭರತ ಭೂಮಿಯು ಬಹು ಪುರಾತನ ಕಾಲದಿಂದಲೂ ನಾಗರಿಕತೆಗೆ ಪ್ರಥಮ ಸ್ಥಾನವನ್ನು ಪಡೆದು ಮೆರೆಯುತ್ತಿರುವುದು. ಈಗ ನಮಗಿಂತಲೂ ನಾಗರೀಕರೆಂದೂ, ಬುದ್ಧಿಶಾಲಿಗಳೆಂದೂ, ನಾವೇ ಹೇಳುತ್ತಿರುವ ಜನಾಂಗಗಳೂ, ಕಾಡು ಜನಗಳಂತೆ ಚರ್ಮ ವಸ್ತ್ರ ಯುಕ್ತರಾಗಿ, ವಿದ್ಯೆಯ ಗಂಧವನ್ನೇ ಅರಿಯದ ಪಶುಗಳಂತೆ ಅರಣ್ಯವಾಸಿಗಳಾಗಿ ಯಾವ ಕಾಲದಲ್ಲಿದ್ದರೋ ಆ ಕಾಲಕ್ಕೆ ನೂರಾರು ವರ್ಷಗಳ ಹಿಂದೆಯೇ ನಮ್ಮ ಭಾರತ ಪುತ್ರರು ಸಕಲ ವಿದ್ಯಾ ಪಾರಂಗತರಾಗಿ ಶ್ರೇಷ್ಠ ನಾಗರೀಕರೆಂದು ಹೊಗಳಿಸಿಕೊಳ್ಳುತ್ತಾ ತಮ್ಮ ಕೀರ್ತಿ ಧ್ವಜವನ್ನು ದಶದಿಕ್ಕುಗಳಲ್ಲಿಯೂ ಪ್ರಸರಿಸಿ ಪ್ರಸಿದ್ಧರಾಗಿದ್ದರೆಂದು ಅನೇಕ ಗ್ರಂಥಾಧಾರಗಳಿಂದ ಧೃಢವಾಗಿ ಹೇಳುವಷ್ಟು ಸ್ವತಂತ್ರ್ಯವು ನಮಗಿದೆ! ಆದರೇನು ಈಗ ಅದಕ್ಕೆಲ್ಲಾ ಅರಣ್ಯ ರೋದನವಾಗಿದೆ!

ಇದೂ ಅಲ್ಲದೆ ಶೌರ್ಯ, ವೀರ್ಯ, ದಾತೃತ್ವ, ಧಾರ್ಮಿಕ, ನೈತಿಕ, ಸಾಮಾಜಿಕ, ರಾಜಕೀಯ, ಕಲಾಕೌಶಲ್ಯ ಮುಂತಾದ ನಾನಾ ವಿಧವಾದ ಅತ್ಯುಚ್ಚ ಗುಣಗಳುಳ್ಳ ಮಹರ್ಷಿಯರನೇಕರು ಯಾವುದು ಆತ್ಮೋನ್ನತಿಗೂ ಇಹಪರ ಸುಖ ಸಾಧನವೂ ಆಗಿರುವುದೋ ಅಂತಹ ವಿದ್ಯೆಯನ್ನೇ ಅಭ್ಯಾಸ ಮಾಡುತ್ತಾ ಅದರಿಂದ ಶಾಶ್ವತವಾದ ಯಶಸ್ಸನ್ನು ಸಂಪಾದಿಸಿರುವರು. ವಿದ್ಯಾಭ್ಯಾಸವು ಯಾವ ರೀತಿಯಲ್ಲಿ—ಯಾವ ಕಾಲದಲ್ಲಿ—ಯಾರ್ಯಾರಿಗೆ ಹೇಗೆ ಹೇಗೆ ನಡೆಸಲ್ಪಡುವುದೋ ಹಾಗೆ ಹಾಗೆ ಅವರವರ ಬುದ್ಧಿಶಕ್ತಿಗಳು ಬೆಳೆಯುತ್ತ ಬರುವುದು ಸ್ವಾಭಾವಿಕವಾಗಿರುವುದು. ಬೋಧಕರಾದವರೂ ದೇಶಕಾಲಾನುಗುಣವಾಗಿ ಆಯಾಯ ವಿದ್ಯೆಗಳನ್ನೇ ಕ್ರಮವಾಗಿ ಬೋಧಿಸುವುದು ಶ್ರೇಯಸ್ಕರವು.

ಈಗಿನ ಕಾಲದ ವಿದ್ಯಾಭ್ಯಾಸವನ್ನು ವಿಮರ್ಶಿಸಿದರೆ ಮೇಲ್ಕಂಡ ಯಾವ ವಿಷಯಕ್ಕೂ ಅನುಕೂಲವಾಗಿಲ್ಲವೆಂದು ಹೇಳಬಹುದು. ಅದು ಹೇಗೆಂದರೆ.—ಈಗ ನಾವು ಪ್ರತ್ಯಕ್ಷವಾಗಿ ನೋಡುತ್ತಲಿರುವ ವಿದ್ಯಾರ್ಥಿಗಳೇ ಇದಕ್ಕೆ ಉದಾಹರಣ ಸ್ವರೂಪರಾಗಿರುವರು. ಯಾವ ವಿದ್ಯಾರ್ಥಿಯನ್ನು ನೋಡಿದರೂ, ಕಾಯಪುಷ್ಟಿ, ಇಂದ್ರಿಯನಿಗ್ರಹ, ಶುಚಿತ್ವ, ಭೂತದಯಾ, ಪಶ್ಚಾತ್ತಾಪ, ದೇಶಭಕ್ತಿ, ಕಾರ್ಯತತ್ಪರತೆ, ಸ್ವಾರ್ಥತ್ಯಾಗ, ಮಾತೃಭಾಷಾಭಿಮಾನ, ದೈವಭಕ್ತಿಯೇ ಮುಂತಾದ ಸದ್ಗುಣಗಳು ಒಹುದು. ಇಲ್ಲವೆಂತಲೇ ಹೇಳಬೇಕಾಗಿದೆ. ಪ್ರಾತಃಕಾಲದಲ್ಲಿಯೇ ಎದ್ದು ಸ್ನಾನವಾದಿ ನಿತ್ಯಕರ್ಮಗಳನ್ನು ಆಚರಿಸುವವರು ಎಷ್ಟು ಜನರಿದ್ದಾರೆ? ಹಾಸಿಗೆಯಿಂದೇಳುವಾಗಲೇ "ಕಾಫಿ" ನಾಮಸ್ಮರಣೆಯನ್ನು ಮಾಡದಿರುವವರು ಎಷ್ಟು" ಲಕ್ಷವಾಕಿನೋಡಿದರೆ ಶತಮಾನಕ್ಕೊಬ್ಬರೋ ಸಾವಿರಕ್ಕೊಬ್ಬರೋ ಸಿಕ್ಕಿದರೂ ಸಿಕ್ಕಬಹುದು! ಈಗಿನ ವಿದ್ಯೆಗ ಗುರಿ ಯಾವುದು" ಯಾವುದೂ ಇಲ್ಲ! ಒಂದು ಮಾತ್ರವೇ ಇದೆ! ಯಾವುದೆಂದರೆ "ಗುಲಾಮಗಿರಿ!" ಯಾವಾತನೊಬ್ಬರು ಯಾವುದಾದರೊಂದು ಪರೀಕ್ಷೆಯಲ್ಲಿ ಉತ್ತೀರ್ಣನಾದನೆಂದರೆ ಸರಿ. ಅರ್ಜಿಗಳ ಮೇಲೆ ಅರ್ಜಿಗಳು! ಅವರಿಗೆ ಯಾವುದಾದರೊಂದು ಇಲಾಖೆಯಲ್ಲಿ ಒಂದು ನೌಕರಿಯನ್ನು ಕೊಟ್ಟರೆಂದರೆ ಸರಿ. ಅವರಿಗೆ ಸ್ವರ್ಗಸೌಖ್ಯವೇ ಲಭಿಸಿದಂತಾಗುವುದು. ಅಯ್ಯೋ! ತಮ್ಮ ಅತ್ಯಮೂಲ್ಯವಾದ ಬುದ್ಧಿಯನ್ನು ಖರ್ಚುಮಾಡಿ ವಿದ್ಯೆಯನ್ನು ಸಂಪಾದಿಸಿ, ದುರ್ಲಭವಾದ ಈ ಮಾನವ ದೇಹವನ್ನು ತಿಂಗಳಿಗೆ ಕೆಲವು ರೂಪಾಯಿಗಳ ಸಂಬಳಕ್ಕಾಗಿ ಪರಾಧೀನ ಮಾಡಿ ತಮ್ಮ ಉತ್ಕರ್ಷವನ್ನು ತಾವೇ ಹಾಳುಮಾಡಿಕೊಳ್ಳಬಹುದೇ" ಎಂದಿಗೂ ಇಲ್ಲ! ಹೀಗೆ ದೇಹವನ್ನು ಮಾರಿಕೊಂಡವರ ಸ್ಥಿತಿಯನ್ನು ವಿಚಾರಿಸುತ್ತಾ ಹೋದರೆ ಬಹಳ ಶೋಚನೀಯವಾಗಿರುವುದು "ಕುಲಗೆಟ್ಟರೂ ಸುಖವಿರಬೇಕು" ಎಂಬ ಗಾದೆಯಂತೆ ದೇಹವಿಕ್ರಯವಾದರೂ ಸುಖವಿದೆಯೇ? ಸ್ವಪ್ನದಲ್ಲಿಯೂ ಇಲ್ಲ. ಯಾವ ಕಾಲಕ್ಕೆ ವಿನುಬರುವುದೋ ಎಂದು ಹಗಲಿರುಳೂ ಚಿಂತಿಸಬೇಕಾಗಿರವುದು. ಒಂದುವೇಳೆ ನೌಕರಿಗೆ ಸೇರಿದರೂ ಚಿಂತೆಯುಳ್ಳ. ಹಾಗೆ ಸೇರಿದವರಲ್ಲಿ ಎಷ್ಟು ಮಂದಿ ಸ್ವಾರ್ಥತ್ಯಾಗಿಗಳಾಗಿ "ತಾವು ಮಾಡುವ ಕೆಲಸವು ಸ್ವಾರ್ಥಕ್ಕಲ್ಲ, ದೇಶೋದ್ಧಾರಕ್ಕಾಗಿ" ಎಂದು ಕಾಯಾವಾಚಾಮನಸಾ ಆಚರಿಸತಕ್ಕವರಿರುವರೋ ಹೇಳಲಸಾಧ್ಯ!

ದೇಹದಲ್ಲಿ ಬಲವಿಲ್ಲ. ತಿಂದರ ಜೀರ್ಣಿಸಿಕೊಳ್ಳುವ ತ್ರಾಣವಿಲ್ಲ. ಕೇವಲ ಬಾಲ್ಯಾವಸ್ಥೆಯಲ್ಲಿಯೇ ಉಪನೇತ್ರಗಳ ಅಲಂಕಾರ! "ಕಾಫಿ, ಚಹಾ' ಕುಡಿದು ಕುಡಿದು, ತಾವು ಸಂಪಾದಿಸಿದ ದ್ರವ್ಯವೆಲ್ಲಾ ಉಪಹಾರ ಗೃಹಗಳಿಗೆ ಉಪಕಾರ! ಅಲ್ಲದೆ ಪ್ರೌಢವಿದ್ಯಾರ್ಜನೆಗೆಂದು ತಮ್ಮ ಹಿರಿಯರು ಕಷ್ಟದಿಂದ ಸಂಪಾದಿಸಿದ ಆಸ್ತಿಪಾಸ್ತಿಗಳಿಗೆ ಶೂನ್ಯಾಕಾರ! ಮುಂದೆ ತಾವು ಕಲಿತ ವಿದ್ಯೆಯಿಂದ ಬೇಕಾದಷ್ಟು ದ್ರವ್ಯ ಸಂಪಾದನೆ ಮಾಡುವೆವೆಂಬ ಅಹಂಕಾರ! ನಿಂತಿರಲು ಮನೆಮಟಗಳಿಲ್ಲದೆ ಇದ್ದ ಮನೆಯನ್ನು ಮಾರಿ, ಬಾಡಿಗೆಯ ಮನೆಯಲ್ಲಿ ವಾಸಮಾಡುತ್ತಾ ಸರಕಾರದ ದೊಡ್ಡ ಅಧಿಕಾರಿಗಳಲ್ಲಿ ಹೋಗಿ ಅಂಗಲಾಚಿಕೊಂಡರೂ ಪ್ರಯೋಜನವಿಲ್ಲದೆ ಅವರಿಂದ ಹೊಂದಿರುವ ತಿರಸ್ಕಾರ! ಕಡೆಗೆ ವಿದ್ಯೆಗೆ ನಮಸ್ಕಾರ! ಯಾಚನಾವೃತ್ತಿಯ ಪುರಸ್ಕಾರ!

ಅಗಣಿತವಾದ ಧನವ್ಯಯದಿಂದ ವಿದ್ಯೆಯನ್ನು ಸಂಪಾದಿಸಿದುದಕ್ಕೆ ಇದೇ ಫಲವೇ? ಪರರ ಬಾಗಲಿಗೆ ಹೋಗಿ "ಸ್ವಾಮಿ! ನನಗೊಂದು "ಗುಲಾಮಗಿರಿ" ಯನ್ನು ದಯಪಾಲಿಸಬೇಕು" ಎಂದು ಮುವತ್ತಿರಡು ಹಲ್ಲುಗಳನ್ನು ಬಿಟ್ಟುಕೊಂಡು ತಮಗಿರುವ ವ್ಯಕ್ತಿಸ್ವಾತಂತ್ರ್ಯವನ್ನು ಕಳೆದುಕೊಳ್ಳುವುದಕ್ಕಾಗಿಯೇ ವಿದ್ಯೆಯನ್ನು ಕಲಿಯಬೇಕೇ? ಒಂದುವೇಳೆ ಆವುದಾದರೊಂದು ಕೆಲಸವು ದೊರಕಿದರಂತೂ ಸರಿಯೆ. ಅದು ದೊರಕದಿದ್ದರೆ ಜೀವಚ್ಛವದಂತೆ ಜೋಲುಮುಖಹಾಕಿಕೊಂಡು ಬೀದಿಗಳಲ್ಲಿ ತಿರುಗುವುದೇ ಈಗಿನ ವಿದ್ಯಾಭ್ಯಾಸದ ಧ್ಯೇಯವಾಗಿದೆ.

ಈಗಿನ ವಿದ್ಯಾವಂತರ ಸಂಖ್ಯೆಯೇನೋ ಅಧಿಕವಾಗುತ್ತಿರುವುದು. ಆದರೆ ಅವರಲ್ಲಿ ಅತ್ಯಲ್ಪ ಜನರು ಮಾತ್ರ ಪರಾಶ್ರಯವಿಲ್ಲದೇ ಉದರನಿರ್ವಾಹಮಾಡಿಕೊಳ್ಳಲು ಸಮರ್ಥರಾಗಿರುವರು, ಉಳಿದವರೆಲ್ಲರೂ ಪರಾಶ್ರಯವನ್ನೇ ಹುಡುಕುತ್ತಲಿರುವರು ಹಾಗೆ ಹುಡುಕಿದರೂ ಅವರವರು ಸಂಪಾದಿಸಿರುವ ವಿದ್ಯೆಯ ಯೋಗ್ಯತೆಗೆ ತಕ್ಕ ಗೌರವವಾದರೂ ದೊರೆಯುವುದೋ? ಅದೂ ಇಲ್ಲ—"ಬಿ.ಎ., ಎಂ.ಎ., ಇತ್ಯಾದಿ ಪದವೀಧರರಾಗಿದ್ದಾಗ್ಯೂ ತಿಂಗಳೊಂದಕ್ಕೆ 20 ರೂ. ಗಳ ವರಮಾನವು ದೊರೆಯುವಂತಹ ಉದ್ಯೋಗವು ಸಿಕ್ಕುವುದೇ ದುಸ್ತರವಾಗಿದೆ. ಇಂತಹವರನೇಕರನ್ನು ನಾವು ಈಗ ನೋಡಬಹುದು.

ಯಾವ ವಿದ್ಯೆಯು ತನ್ನ ಆತ್ಮವನ್ನು ಶುದ್ಧೀಕರಿಸಿ, ಇಹ ಜೀವನದಲ್ಲಿ ಯಾವ ತೊಂದರೆಗಳೂ ಇಲ್ಲದಂತೆ ಧನಾರ್ಜನೆ ಮಾಡಲು ಸಹಕಾರಿಯೂ, ಸತ್ಯದಿಂದಲೂ ಧರ್ಮ ಸೂಕ್ಷ್ಮದಿಂದಲೂ ನಡೆಯುವಂತೆ ಬುದ್ಧಿ ಪ್ರದಾಯಕವೂ ಜನೋಪಕಾರಕ್ಕೂ ದೇಶ ಹಿತಕ್ಕೂ ಆಧಾರ ಭೂತವಾದುದೂ, ಸರ್ವ ಸಮ್ಮತವಾದುದೂ, ಮಾನಸಿಗೆ ಮುಖ್ಯವಾಗಿರಬೇಕಾದ, ಸ್ವಾತಂತ್ರ್ಯ, ದೈವಭಕ್ತಿ, ದೇಶಭಕ್ತಿ, ಗುರುಹಿರಿಯರಲ್ಲಿ ಭಕ್ತಿ, ಸದ್ಧರ್ಮಾನುಷ್ಠಾನ, ಸದಾಚರಣೆ ಮುಂತಾದ ಸದ್ಗುಣಗಳಿಗೆ ಆಧಾರಸ್ತಂಭ ಸ್ವರೂಪವಾದುದೂ ಆಗಿರುವುದೋ ಅಂತಹ ಸದ್ವಿದ್ಯೆಯನ್ನೇ ಸರ್ವದಾ ಸರ್ವ ಪ್ರಯತ್ನದಿಂದಲೂ ಸಂಪಾದಿ[illegible]ಬೇಕು.

ಈಗಿನ ಸ್ತ್ರೀ ವಿದ್ಯಾಭ್ಯಾಸವು [illegible] ಸೂಕ್ಷ್ಮವಾದ ಧರ್ಮ, ನಡತೆ, ನೀತಿ, [illegible] ಕೃತ್ಯ, ಕೌಶಲ್ಯ, ದೈವಭಕ್ತಿಯನ್ನುಳ್ಳ [illegible] ಗೀತ, ಮಕ್ಕಳ ಪೋಷಣೆ, ಮುಂತಾದ [illegible]ದ್ಗುಣ ಪ್ರಧಾನವಾದುದಾಗಿರುವುದು, [illegible] ತ್ಯಾವಶ್ಯಕ ರಾಜಕೀಯ ವಿಷಯಗಳ[illegible] ವರಿಗೆ ಅಷ್ಟೇನೂ ಅವಶ್ಯಕವಿಲ್ಲ. [illegible] ಬಾಲ್ಯದಿಂದಲೂ ನಿರ್ದಿಷ್ಟವಾದ ವಿದ್ಯಾಭ್ಯಾಸವೇ ನಡೆಯಬೇಕು. ಆದರೆ ಈ[illegible]ನ ಕಾಲದಲ್ಲಿ ಪುರುಷರಿಗೆ ಯಾವ[illegible]ಲ್ಲಿ ವಿದ್ಯಾಭ್ಯಾಸವು ಪರದೇಶದ ಪದ್ಧ[illegible]ಯಂತೆ ನಡೆಯುತ್ತಲಿರುವುದೋ ಸ್ತ್ರೀ[illegible]ರಿಗೂ ಅದೇ ರೀತಿಯಲ್ಲಿ ನಡೆಯುತ್ತಿರು[illegible]ದರಿಂದ ಅದು ಸರ್ವಸಮ್ಮತವಾದುದೆಂ[illegible] ಹೇಳಲಾಗುವುದಿಲ್ಲ. ದೇಶ ಕಾಲಾನುಗುಣ[illegible]ವಾಗಿ ಅವರೂ ಕೆಲವು ಸಂದರ್ಭಗಳ[illegible] ರುಷರಂತೆ ವರ್ತಿಸಬೇಕಾದ ಸಂಭವವು[illegible] ಬಹುದು. ಆದರೆ ಚಿಕ್ಕಂದಿನಿಂದಲೂ[illegible] ಸ್ವೇಚ್ಛೆಯಾಗಿ ಮನಸ್ಸಿಗೆ ಬಂದ ವಿದ್ಯೆ[illegible]ನ್ನು ಕಲಿತು, ಪುರುಷರನ್ನು ಅತಿಕ್ರಮಿಸಿ[illegible] ಡುಬೀರಿಗಳಾಗಬೇಕೆಂಬುದು ಅವರ [illegible]ದ್ದೇಶವಲ್ಲ. ಸಭೆಯಲ್ಲಿ ನಿಂತುಕೊಂ[illegible] ಭಾಷಣ ಮಾಡುವುದು, ನಾನಾ ವಿಧ[illegible] ಅಲಂಕಾರ ವಿನ್ಯಾಸ ವಸ್ತುಗಳಿಗಾಗಿ ದ್ರವ್ಯ[illegible]ವನ್ನು ವಿನಿಯೋಗಮಾಡುವುದು, [illegible]ಳನ್ನು ದುರ್ಲಕ್ಷಿಸುವುದು, ಉದ್ಯಾನ[illegible] ಗಳಿಗೆ ವಿಹಾರಾರ್ಥವಾಗಿ ಕಂಡ ಕಂಡ[illegible]ರೊಂದಿಗೆ ಹೋಗಿ ಕಾಲ ಕಳೆಯುವುದು, ತಮ್ಮ ಇಷ್ಟ ದೈವವಾದ ಪತಿಗಳನ್ನು [illegible]ಲಿಯಾಳಿಗಿಂತಲೂ ನಿಕೃಷ್ಟವಾಗಿ [illegible] ವುದು .... ಇವೇ ಮೊದಲಾದ ಸ್ತ್ರೀ ಧರ್ಮಕ್ಕೆ ವಿರೋಧವಾದ ನಡತೆಗಳ[illegible] ನಡೆಯುವುದು ಸ್ತ್ರೀ ವಿದ್ಯಾಭ್ಯಾಸದ [illegible]ದ್ದೇಶವಲ್ಲ.

ವಿದ್ಯಾರ್ಥಿನಿಯರಾಗಿರುವ ಮಾತೃ[illegible] ಮುಂದೆ ಆಗಬಹುದಾದ ಆರ್ಯ ಭಗಿನಿ[illegible]ರೇ! ಸದ್ವಿದ್ಯೆಯಾವುದೋ ಅದನ್ನು ಕಲಿ[illegible]ತು, ಪತಿವ್ರತಾ ಶಿರೋಮಣಿಯರಾಗಿಯೂ ವೀರಮಾತೆಯರಾಗಿಯೂ, ಈ ಪುಣ್ಯತಮವಾದ ಭಾರತ ಭೂಮಿಯ ಪವಿತ್ರ ನಾರೀ ರತ್ನಗಳಾಗಿಯೂ ಬಾಳಿರಿ. ನಿಮ್ಮಿಂದಲೇ ಈ ಮಾತೃ ಭೂಮಿಯನ್ನು ಉದ್ಧಾರ[illegible]ಡಿರಿ. ಆದುದರಿಂದ ಈ ಮಾತೃ ಭೂದೇವಿಯ ಸೇವೆಯಲ್ಲಿ ಬದ್ಧಕಂಕಣರಾಗಿ [illegible]ಶೀಲರಾಗಿರುವ ಅಶೋಕ, ವಿಕ್ರಮಾದಿತ್ಯ, ಭೋಜರಾಜ, ಶ್ರೀ ವಿದ್ಯಾರಣ್ಯ, [illegible] ಕನಕದಾಸ, ಮುಂತಾದ ಮಹಾತ್ಮರಿಗೆ [illegible] ದೈಶ್ಯರಾದ ಪುತ್ರ ರತ್ನಗಳನ್ನೂ, ಸಾವಿತ್ರಿ ಅನುಸೂಯೆ, ಅರುಂಧತಿ, ಮೊದಲಾದ ಪ[illegible]ತಿವ್ರತಾ ಶಿರೋಮಣಿಯರನ್ನು [illegible]ಲುವ ಸ್ತ್ರೀ ರತ್ನಗಳನ್ನೂ [illegible] ನಿಮ್ಮ ನಮ್ಮ ಜನ್ಮ ಭೂಮಿ[illegible]ನ್ನು ಇನ್ನೂ ಊರ್ಜಿತ ಸ್ಥಿತಿಗೆ [illegible]ವ ಪ್ರಯತ್ನವನ್ನು ಕೈ ಕೊಳ್ಳಿರಿ.

ಉಜ್ವಲ ಕುಮಾರಿ.

ಬರೆದವರು:—ಎಸ್. ಶ್ರೀ ಶೈಲಂ, ಮೈಸೂರು.

(3 ನೆಯ ಭಾಗ.)

ಘಣ್, ಘಣ್, ಘಣ್ ಎಂದು ಗಂಟೆಯ ಸದ್ದು. ನಮ್ಮ ರಾಜಕುಮಾರನು ಶಬ್ದ ಕೇಳಿದ ತಕ್ಷಣವೇ ವಾರೆಗಣ್ಣಿನಿಂದ ನೋಡಿದನು. ಅಬ್ಬಹಾಸ! ಅತಿ ವೈಭವ! **ಉಜ್ವಲ ರಾಜಕುಮಾರಿಯು** ಥಳಥಳಿಸುತ್ತಿರುವ ಒಡವೆಗಳಿಂದ ಒಡಗೂಡಿ, ತನ್ನ ಸಖಿಗಳ ಜೊತೆಯಲ್ಲಿ ಸರಸ ಸಲ್ಲಾಪದೊಡನೆ ಬಂದು ಅರಮನೆಯ ಶಿಖರದ ಒಂದು ಪಾರ್ಶ್ವದಲ್ಲಿ ಇರುವ, ಶೋಭಾಯಮಾನವಾದ ಕನಕಮಣಿಗಳಿಂದಲಂಕರಿಸಲ್ಪಟ್ಟ, ಸ್ಥಳದಲ್ಲಿ ಒಂದು ದಿಂಬಿನ ಮೇಲೆ ಕುಳಿತಳು. ರಾಜನು ಈ ಸಂತೋಷ ಸನ್ನಿವೇಶವನ್ನು ನೋಡಿ ಅಪಾರ ಆನಂದದಿಂದ ವಿಸ್ಮೃತನಾಗಿ ಎದ್ದು ನಿಂತನು. ಕಣ್ಣು ಕುಕ್ಕುವ ಬೆಳಕು ಇವನಮೇಲೆ ಬೀಳತೊಡಗಿತು. ರಾಜನು ಸಂತೋಷದಿಂದ "ಇದೇ ಕಾರಣಕ್ಕಾಗಿಯೇ ನೀನು ದೀಪವನ್ನು ಉರಿಸುತ್ತಿಲ್ಲವೆಂದು ಕಾಣುತ್ತದೆ" ಎಂದು ಮುದುಕಿಗೆ ಕೇಳಿದನು. ಅದಕ್ಕೆ ಮುದುಕಿಯು "ಅಹುದು; ರಾಜನು ಈ ದೇಶದಲ್ಲಿ ರಾತ್ರಿ ದೀಪವನ್ನು ಉರಿಸಬಾರದೆಂದು ಆಜ್ಞೆ ಮಾಡಿದ್ದಾನೆ. ಆದ್ದರಿಂದ ನಾವು ರಾತ್ರಿ ದೀಪವನ್ನು ಉರಿಸುತ್ತಿಲ್ಲ" ಎಂದು ಹೇಳಿದಳು. ರಾಜಕುಮಾರನು ಅವಳನ್ನೇ ದಿಟ್ಟಿಸಿ ನೋಡುತ್ತಿದ್ದನು. ಅವಳ ಸೀರೆಯು ಬೆಳ್ಳಿಯಿಂದಲೇ ಮಾಡಲ್ಪಟ್ಟಿದೆಯೋ ಎನ್ನುವಷ್ಟು ಪ್ರಕಾಶಮಾನವಾಗಿತ್ತು. ಅವಳ ಬೆಳಕು ಚಂದ್ರನ ಬೆಳಕನ್ನು ಮೀರಿಸುತ್ತಿದ್ದಿತು.

ರಾತ್ರಿ 11 ಗಂಟೆ ಹೊಡೆಯಿತು, ರಾಜಕುಮಾರಿಯು ತನ್ನ ಪರಿವಾರಸಮೇತವಾಗಿ ಎದ್ದು ತನ್ನ ಕೊಠಡಿಗೆ ಹೊರಟುಹೋದಳು. ಜನರೆಲ್ಲರೂ ನಿದ್ದೆಮಾಡಬಿಟ್ಟಿದ್ದರು. ರಾಜಕುಮಾರಿಯು ತನ್ನ ಶಯನ ಮಂದಿರಕ್ಕೆ ಹೋಗಿ, ಬಾಗಿಲು ಹಾಕಿಕೊಂಡು ಹಂಸ ತೂಲಿಕಾತಲ್ಪದಲ್ಲಿ ಮಲಗಿಕೊಂಡಳು. ಬೇಗ ನಿದ್ರೆಯು ಬಂದಿತು.

ಪ್ರಪಂಚವು ನಿಶ್ಚಲವಾಗಿದ್ದಿತು. ಮೋಡಗಳು ಆಕಾಶದಲ್ಲಿ ಕವಿದದ್ದರಿಂದ ಚಂದ್ರನು ಮೋಡಗಳ ಮಧ್ಯೆ ಕಾಣಿಸುತ್ತಲೂ ಕಣ್ಮರೆಯಾಗುತ್ತಲೂ ಇದ್ದನು. ಮರಗಳು ಕಲಕಲ ಶಬ್ದ ಮಾಡುತ್ತಲಿದ್ದವು. ಗೂಗೆಗಳು ಒಂದು ಪಾರ್ಶ್ವದಲ್ಲಿ ಕೂಗುತ್ತಿದ್ದುವು. ಹುಲಿ, ಸಿಂಹ ಮೊದಲಾದ ದುಷ್ಟಮೃಗಗಳು ಘರ್ಜಿಸುತ್ತಿದ್ದವು. ಸೃಷ್ಟಿಯು ಬಹಳ ಘೋರವಾಗಿಯೂ ಭಯಂಕರವಾಗಿಯೂ ಇದ್ದಿತು. ಇಂತಹ ಸಮಯದಲ್ಲಿ ರಾಜಕುಮಾರನು ಹೆದರದೆ ಮಂಚದಮೇಲೆ ಕುಳಿತುಕೊಂಡು, ಮಂಚಕ್ಕೆ "ಆ ರಾಜಪುತ್ರಿ ಮಲಗಿರುವ ಸ್ಥಳಕ್ಕೆ ಕರೆದುಕೊಂಡು ಹೋಗು" ಎಂದನು. ತಕ್ಷಣವೇ ಕುಸುಮಮಾಲಿನಿಯ ಶಯನ ಮಂದಿರಕ್ಕೆ ಕರೆತಂದು ಬಿಟ್ಟಿತು. ರಾಜಕುಮಾರನು ಮಂಚದಿಂದ ಎದ್ದು, ಚೀಲವನ್ನು ಕುರಿತು "ನನಗೆ ಒಳ್ಳೆಯ ಸೊಗಸಾದ ಒಂದು ದುಪಟಿಯನ್ನು ಕೊಡು" ಎಂದು ಕೇಳಿದನು. ತಕ್ಷಣವೇ ಚಿನ್ನದ ಚಿಟ್ಟಿಗಳಿಂದ ಕೂಡಿರುವ ಒಂದು ಸೊಗಸಾದ ದುಪಟಿಯು ಬಂದಿತು. ಅದನ್ನು ರಾಜಕುಮಾರನು ಕುಸುಮಮಾಲಿನಿಯ ಮೇಲೆ ಹೊದಿಸಿ, ಹೊರಟುಹೋದನು.

ಮಾರನೆಯ ದಿವಸ ಅವನು ತನ್ನ ಊಟವನ್ನು ಆ ಚೀಲದ ಸಹಾಯದಿಂದ ತೀರಿಸಿಕೊಂಡನು. ರಾತ್ರಿಯಾಯಿತು. ಯಥಾಪ್ರಕಾರ ಕುಸುಮಮಾಲಿನಿಯು, ಆ ಅರಮನೆಯ ಶಿಖರದ ಒಂದು ಪಾರ್ಶ್ವದಲ್ಲಿ ಕುಳಿತಳು. ಇವಳು ಚಿನ್ನದ ಚಿಟ್ಟಿಗಳಿಂದ ಕೂಡಿರುವ ಬಿಳಿಯ ಸೀರೆಯನ್ನು ಉಟ್ಟಿದ್ದಳು. ಈ ಸೀರೆಯಿಂದ ಇವಳ ಕಾಂತಿಯು ಮೊದಲಿಗಿಂತಲೂ ಹೆಚ್ಚಾಗಿದ್ದಿತು. ರಾಜಪುತ್ರಿಯು ಯಥಾರೀತಿಯಲ್ಲಿ 11 ಗಂಟೆಗೆ ಮಲಗುವುದಕ್ಕೆ ಹೊರಟುಹೋದಳು. ನಿದ್ದೆ ಬೇಗ ಹತ್ತಿತು.

ಮೊದಲಿನಂತೆಯೇ ರಾಜನು ಅವಳ ಶಯನ ಮಂದಿರಕ್ಕೆ ತನ್ನ ಮಂಚದ ಸಹಾಯದಿಂದ ಹೋದನು. ತನ್ನ ಚೀಲವನ್ನು ಕುರಿತು "ನನಗೆ ಪ್ರಕಾಶಮಾನವಾದ ಒಂದು ವಜ್ರದ ಉಂಗುರವನ್ನು ಕೊಡು" ಎಂದು ಕೇಳಿದನು. ತಕ್ಷಣವೇ ಸೂರ್ಯನಷ್ಟು ಪ್ರಕಾಶಮಾನವಾದ ಒಂದು ವಜ್ರದ ಉಂಗುರವು ಬಂದಿತು. ರಾಜಕುಮಾರನು ಅದನ್ನು ತೆಗೆದುಕೊಂಡು, ಉಜ್ವಲಕುಮಾರಿಯ ಕೋಮಲವಾದ ಬೆರಳಿಗೆ ಹಾಕಿದನು.

ಅಷ್ಟರಲ್ಲಿ ರಾಜಕುಮಾರಿಯು ಗಾಬರಿಯಿಂದ ಎದ್ದಳು. ರಾಜಕುಮಾರನು ಸ್ತಬ್ಧನಾಗಿ ನಿಂತನು. ಕುಸುಮಮಾಲಿನಿಯು ಇವನನ್ನು ನೋಡಿ, ಭಯಪಡುತ್ತಾ, "ನೀನು ಯಾರು? ಇಲ್ಲಿ ಏತಕ್ಕೆ ಬಂದೆ?" ಎಂದು ಕೇಳಿದಳು. ಅದಕ್ಕೆ ರಾಜನು "ಭಯಪಡಬೇಡ" ಎಂದು ಅವಳ ಕೈಯನ್ನು ಹಿಡಿದು, "ನಾನು ನಿನ್ನನ್ನು ಮದುವೆಯಾಗಬೇಕು" ಎಂದು ಹೇಳಿದನು. ಆಗ ಕುಸುಮಮಾಲಿನಿಯು ಮನಸ್ಸಿನಲ್ಲಿ ಇವನು ಎಂತಹ ಗುಣಾಢ್ಯನು ಎಂದು ಯೋಚಿಸಿ, ಅವರ ತಂದೆಯು ದೊಡ್ಡ ರಾಜನೆಂಬುದನ್ನೂ ಮತ್ತು ಮಾರನೆಯ ದಿವಸ ಆ ಚಿನ್ನದ ದುಪಟಿಯನ್ನು ಹಾಸಿದವನು ಇವನೇ ಎಂಬುದನ್ನೂ ತಿಳಿದಮೇಲೆ ಅವಳು, ಅವರ ತಂದೆತಾಯಿಯರಿಗೆ ತಿಳಿಸಿ ಇವನನ್ನೇ ಮದುವೆಯಾಗಬೇಕೆಂದು ಆಲೋಚಿಸಿ ಮಲಗಿಕೊಂಡಳು. ಆಮೇಲೆ ರಾಜಕುಮಾರನು ಹಿಂತಿರುಗಿ ಮನೆಗೆ ಹೊರಟುಹೋದನು.

[ಈ ಕಥೆಯ ಕಡೇ ಭಾಗವು ಮುಂದೆ ಬರುವುದು.]

ಸುಲಭ ಚಿಕಿತ್ಸೆಗಳು

ಲೇಖಕರು:—ಆಯುರ್ವೇದ ಭಿಷಕ್ ಪಂಡಿತ, ಡಿ. ಶ್ರೀಕಂಠಯ್ಯನವರು, ಕೆಂಗಾಕಿ.

1 ಜ್ವರಕ್ಕೆ—ಕಪ್ಪುಜೀರಿಗೆಯನ್ನು ತಣ್ಣೀರಿನಲ್ಲಿ ತೇಯ್ದು ಮೈಅಂಗಾಂಗಳಿಗೆಲ್ಲಾ ಲೇಪಹಾಕುವುದು.

2 ಕೆಮ್ಮಲಿಗೆ:—ಅಳಲೆಕಾಯಿ ತೊಕ್ಕನ್ನು ಹರಳೆಣ್ಣೆ ದೀಪದಲ್ಲಿ ಬೆಚ್ಚಗೆ ಮಾಡಿ ಪತ್ತರಿಸಿಕೊಂಡು ಬಂದ ನೀರು ನುಂಗುವುದು.

3 ತಲೆಶೂಲೆಗೆ:—ಕವಡೆಸಾಂಬ್ರಾಣಿಯನ್ನು ನಿಂಬೇ ಹುಳಿಯಲ್ಲಿ ಅರೆದು ಹಣೆಗೆ ಲೇಪಮಾಡುವುದು.

4 ಅಗ್ನಿಮಾಂದ್ಯಕ್ಕೆ—ಹುರಿದ ಕೊಂರಿಯನ್ನು ಪುಡಿಮಾಡಿ ಬೆಲ್ಲ ಮಿಶ್ರಮಾಡಿ ತಿನ್ನುವುದು.

5 ಅತಿಸಾರಕ್ಕೆ:—ತತಿಬಣೆಯನ್ನು ನುಣ್ಣಗೆ ಪುಡಿಮಾಡಿ ಜೇನುತುಪ್ಪದಲ್ಲಿ ಕಲಸಿ ತೆಗೆದುಕೊಳ್ಳುವುದು.

6 ಕಣ್ಣುನೋವಿಗೆ:—ಅಳಲೆಕಾಯಿ ಗಂಧ ತೇಯ್ದು ಕಣ್ಣು ಸುತ್ತಣ ಚರ್ಮದ ಮೇಲೆ ಲೇಪಹಾಕುವುದು.

7 ಹೊಟ್ಟೆನೋವಿಗೆ.—ನಿಂಬೆಹಣ್ಣಿನ ರಸದಲ್ಲಿ ಸೋಡಾಪುಡಿಹಾಕಿ ತೆಗೆದುಕೊಳ್ಳುವುದು.

8 ಚರ್ಮದ ಮೇಲಣ ಗಾಯಗಳಿಗೆ—ತಂಗಡಿ ಹೂವಿನ ಒಣಗಿದ ಪುಡಿಯನ್ನು ಕೊಬ್ಬರಿ ಎಣ್ಣೆಯಲ್ಲಿ ಕಲಸಿ ಸವರುವುದು.

9 ವಾಂತಿಯಾಗುತ್ತಿದ್ದರೆ:—ಮಾದಳದ ಹಣ್ಣಿನ ರಸ ಹಸುವಿನ ತುಪ್ಪ ಸಮ ಮಿಶ್ರಮಾಡಿ ತೆಗೆದುಕೊಳ್ಳುವುದು.

10 ಬಾಣಂತಿ ದಾಹಕ್ಕೆ:—೬ ತೊಲ ಮೆಣಸನ್ನು ಒಳತ ೧ ಸೇರು ನೀರುಹಾಕಿ ¼ ಭಾಗವುಳಿಯುವಂತೆ ಕಷಾಯ ಕಾಯಿಸಿ ಕೊಡುವುದು.

11 ಅಕಸ್ಮಾತ್ ಪೆಟ್ಟು ತಗಲಿದ್ದಕ್ಕೆ—ತಣ್ಣೀರಿನ ಬಟ್ಟೆ ಸುತ್ತುವುದು.

12 ಮೂತ್ರಕಟ್ಟುವಿಕೆಗೆ:—ಕಪ್ಪು ಸೌತೇಬೀಜ ಸಹ ಸೇರಿಸಿ ಅರೆದು ಹೊಕ್ಕಳಿಗೆ ಲೇಪಹಾಕುವುದು.

13 ಸುಟ್ಟಗಾಯಕ್ಕೆ.—ಕೊಬ್ಬರಿಯ ಎಣ್ಣೆಯಲ್ಲಿ ಸುಣ್ಣದ ತಿಳಿನೀರು ಬೆರೆಸಿ ಹಾಕುವುದು.

14 ಎಡವಿ ಕತ್ತರಿಸಿ ರಕ್ತಸೋರುತ್ತಿದ್ದರೆ:—ತುಂಬೆ ಸೊಪ್ಪಿನ ರಸ ಹಾಕುವುದು.

15 ಕಣ್ಣಿಗೆ ಕಳ್ಳಿಹಾಲು ಬಿದ್ದರೆ:—ನಾಯಿತುಳಸೀ ಬೀಜವನ್ನು ಕಣ್ಣಿಗೆ ಹಾಕಲು ಸ್ವಲ್ಪ ಹೊತ್ತಿಗೆ ಹಾಲು ಬೀಜಕ್ಕೆ ಅಂಟಿಕೊಂಡು ಬರುತ್ತೆ.

16 ವಿಷಸರ್ಪಕ್ಕೆ:—ಊಗನಿ ಹಾಲು ಸವರುವುದು.

17 ಸಂಜುಮೋಹಕ್ಕೆ:—ಮದಾಳ (ಕಾಸಿಗಿಡ)ದ ಹಾಲು ಕುಡಿಸುವುದು.

18 ತುರಿಕಜ್ಜಿಗೆ:—ಕಪಿಲೆ ಪುಡಿಯನ್ನು ಕೊಬ್ಬರಿ ಎಣ್ಣೆಯಲ್ಲಿ ಕಲಸಿ ಹಚ್ಚಿಕೊಂಡು ಸ್ನಾನಮಾಡುವುದು.

19 ಉಷ್ಣಕ್ಕೆ:—ಅತ್ತಿ ಮರದ ಬುಡದ ನೀರನ್ನು ಕುಡಿಯುವುದು.

20 ಗದ್ದಮಾರಿಗೆ:—ಶ್ರೀಗಂಧ ತೇಯ್ದು ಲೇಪಹಾಕಿ ಸಾಂಬ್ರಾಣಿ ಹೊಗೆ ಕೊಡುವುದು.

21 ನಾಲಿಗೆ ಅಕ್ರಕ್ಕೆ:—ಹೊಮ್ಮಗಳನ್ನು ಪತ್ತರಿಸುವುದು

22 ಕರ್ಣಶೂಲೆಗೆ:—ಬೆಳ್ಳುಳ್ಳಿ ಬೇಳೆಯನ್ನು ಸ್ವಲ್ಪ ಬೆಚ್ಚಗೆ ಮಾಡಿ ರಸ ತೆಗೆದು ಕಿವಿಗೆ ಬಿಡುವುದು.

23 ಚರ್ಮರೋಗಕ್ಕೆ.—ಮುಳ್ಳುಉಮ್ಮತ್ತದ ಹಾಲು ಹಚ್ಚುವುದು.

24 ನಾಲಿಗೆ ಹೋಪಕ್ಕೆ:—ಗೋಣಿ ಮರದ ಹಾಲು ಲೇಪಿಸುವುದು.

25 ಕುರುವಿಗೆ:—ಇಂಗನ್ನು ಆವರೆ ಬೇಳೆ ಸಹ ತೇಯ್ದು ಲೇಪಹಾಕುವುದು.

26 ಮೂಗಿನ ವಳಗಡೆ ಹುಣ್ಣಿಗೆ:—ದಾಳಿಂಬದ ಹೂವಿನ ರಸ ಗರಿಕೆ ರಸ ಸಹ ಮಿಶ್ರಮಾಡಿ ಹಾಕುವುದು.

27 ಮುಖದ ಮೇಲಣ ಮಡಿಮೆ ಬೊಕ್ಕೆಗಳಿಗೆ:—ಪುನಗು ಸವರುವುದು.

28 ಹುಳುಕಡ್ಡಿಗೆ:—ಮುತ್ತುಗದ ಬೀಜ ನಿಂಬೆ ಹುಳಿಯಲ್ಲಿ ತೇಯ್ದು ಲೇಪಹಾಕುವುದು.

29 ವಾಯುವಿಗೆ:—ಚಚ್ಚಹರಳೆಣ್ಣೆಯಲ್ಲಿ ಕರಿಲಕ್ಕಿ ಸೊಪ್ಪಿನ ರಸ ಹಿಂಡಿ ಕಾಸಿ ತಿಕ್ಕುವುದು.

30 ಪಿತ್ತಕ್ಕೆ:—ಕೈಹಿರಕೆ ಹಣ್ಣಿನ ರಸಕ್ಕೆ ಜೀರಿಗೆಪುಡಿ ಸಕ್ಕರೆ ಮಿಶ್ರಮಾಡಿ ತೆಗೆದುಕೊಳ್ಳುವುದು.

31 ಕಾಲಪ್ರವರ್ತನೆಗೆ:—೧ ತೊಲ ದ್ರಾಕ್ಷಿ ಹಣ್ಣನ್ನು ತಿಂದು ¼ ಪಾವು ಹಸುವಿನ ಹಾಲು ಕುಡಿಯುವುದು.

32 ಚೇಳು ಕಚ್ಚಿದ್ದಕ್ಕೆ:—ನವಾಸಾಗರವನ್ನೂ ಸುಣ್ಣವನ್ನೂ ಸೇರಿಸಿ ತಿಕ್ಕುವುದು.

33 ಮಕ್ಕಳ ಏಳವು, ಶೀತಗಳಿಗೆ;—ನಾಗವಾಳಿ ಸೊಪ್ಪಿನ ರಸ ಹಿಂಡಿ ಬೆಚ್ಚಗೆ ಮಾಡಿ ಮೈಗೆ ಲೇಪ ಹಾಕುವುದು. ಸ್ವಲ್ಪ ಹೊಟ್ಟೆಗೂ ಕೊಡುವುದು.

34 ಮಕ್ಕಳ ಕೆಂಬುರುವಿಗೆ.—ಹೂವಂತಿ ಚಕ್ಕೆಯನ್ನು ತಂದು ಹರಳೆಣ್ಣೆಯೊಳಗೆ ಹಾಕಿ ಕುದಿಸಿ ನಂತರ ಕೆಂಬುರು ಗಾಯಕ್ಕೆ ಸವರುವುದು.

35 ಮಕ್ಕಳ ಕೆಮ್ಮಲಿಗೆ—ಕೆಂಪು ಬೆಳ್ಳಗಣಿಕೆ ಸೊಪ್ಪಿನ ರಸದಲ್ಲಿ ಜೇನುತುಪ್ಪ ಮಿಶ್ರ ಮಾಡಿ ಕೊಡುವುದು.

36 ಮಕ್ಕಳ ಜ್ವರಕ್ಕೆ:—ಸಹದೇವಿ ಸೊಪ್ಪಿನ ರಸದಲ್ಲಿ ಕಟುಕ ರೋಹಿಣಿ ಅರೆದು ಲೇಪಹಾಕುವುದು.

Join the Congress Organization.!

By Dr N S HARDIKER, Hubli.

At no time during the 15 years' existence of the Karnatak Provincial Congress Committee we have seen a zero membership from the entire State of Mysore. But this year there is none on that body from that quarter It has not only left us wondering but has pained us immensely. We will revolt if any one tells us that the people of Mysore lack enthusiasm. We know them well We have worked with them and we are convinced that the people of that state are full of enthusiasm for the Congress. By their sufferings and their sacrifice during the two Satyagraha movements they have shown their patriotic fervour and have proved their mettle. Who can forget it?

Is it the attitude of the Indian National Congress towards the states that makes them sit idle like this and remain unconcerned about the Congress activities? And why should it? They should well understand that the leaders at the helm of Congress affairs today are not purposely handling the question of states in the manner in which it has been done. They have reasons for it Possibly the circumstances in the country demand such an attitude from them. There is statesmanship in it It is not for us to question the why of it. As followers we must go on working if we mean to gain substantial results for the whole of the country. Whether a part of the country is paid attention to or not, should not bother us in the least.

Moreover we ought to attract the attention of our leaders by our own action and persistant efforts If we increase the strength of the Congress by enroling large membership in the province we shall be showing our real sincerity and genuineness in the cause and eagerness for getting the results that we are after Instead of that, if we sit idle shedding tears and blaming others we shall be proving our own incapacity not only to the leaders but to the world, and will be unnecessarily harming our own cause. That's exactly what Mysore has done last year by not sending even one representative to the Karnatak Provincial Congress Committee It is a pity

We want Mysoreans to awaken and realise the need of the hour. Next year we must see at least a dozen young men from the state of Mysore representing their state and taking part in the Karnatak Congress politics. We hope it is not too much to expect.

As per Congress constitution 250 members can send one representative as a delegate to the Congress. The same delegate becomes a member of the Provincial Congress Committee. 3000 Congress members, therefore, can send one dozen representatives as we have said above. Is it not possible for 60 lakhs of people who are spread in the eight districts of Mysore to enrol 3000 Congress members each paying 4 As and signing the Congress creed before the 31st of August this year? We refuse to think that Mysoreans are so stupid as not to take part in the Congress Organization which is moulding the life of the Indian Nation today.

ಆಶಾನಿರಾಶಾ (ಪತಿಭಕ್ತಿ)

ನಾಟಕ ವಿಮರ್ಶೆ.

ಕಳೆದ ಸೋಮವಾರ ಟೌನ್‌ಹಾಲಿನಲ್ಲಿ "ಕರ್ನಾಟಕ ಸಮಾಜ ಸೇವಾ" ಸಂಘದವರು ತಮ್ಮ ಪ್ರಸಿದ್ಧವಾದ "ಆಶಾನಿರಾಶಾ" ಅಥವಾ "ಪತಿಭಕ್ತಿ" ಎಂಬ ಸಾಮಾಜಿಕ ನಾಟಕವನ್ನು ಅಭಿನಯಿಸಿದರು

ಈ ನಾಟಕವು ಒಂಟಿಕೊಪ್ಪಲಿನ ಮ|| ರಾ|| ಜಿ ಪಿ ರಾಮಸ್ವಾಮಯ್ಯಂಗಾರ್ಯರವರಿಂದ ಬರೆಯಲ್ಪಟ್ಟಿದೆ ಕಥಾರಚನೆಯು ವರ್ತಮಾನ ಕಾಲದ ಸನ್ನಿವೇಶಗಳನ್ನು ಅನುಸರಿಸಿರುತ್ತದೆ 'ಸಿನಿಮಗಳು' ಅತ್ಯುನ್ನತಸ್ಥಾನದಲ್ಲಿರುವ ಈ ಕಾಲದಲ್ಲಿ ನಾಟಕಗಳು ಉಳಿದಿರುವುದೇ ಕಷ್ಟವಾಗಿದೆ ಆದರೂ ನಾಟಕಾಭಿಮಾನಿಗಳು ರಂಗಭೂಮಿಯ ಸೇವೆಯನ್ನು ಮಾಡುತ್ತಿರುವುದು ಅಭಿನಂದನೀಯವಾದುದು "ಆಶಾನಿರಾಶಾ" ಎಂಬುದು ಸಂಪೂರ್ಣವಾಗಿ ಸಾಮಾಜಿಕ ನಾಟಕ. ಕಥಾ ರಚನೆಯಲ್ಲಿ ಗ್ರಂಥಕರ್ತರು ಕೆಲವು ಮೂಲತತ್ವಗಳನ್ನು ಪಾತ್ರಗಳಲ್ಲಿ ಚಿತ್ರಿಸಿರುತ್ತಾರೆ. ಕಥಾಸಾರಾಂಶವನ್ನು ನಾಲ್ಕು ಮಾತುಗಳಲ್ಲಿ ಹೇಳುವುದಾದರೆ ಹೀಗೆ ಹೇಳಬಹುದು

ಪ್ರಭಾಕರ ರಾಯನೆಂಬ ಯೌವನಸ್ಥನು ವಿದ್ಯಾಪಾರಂಗತನಾದ ವಕೀಲನು. ಇವನಿಗೆ ಸುಲೋಚನೆಯೆಂಬ ಪತ್ನಿಯೂ ಒಂದು ಮಗುವೂ ಇರುತ್ತಾರೆ ಪ್ರಭಾಕರನ ಅಣ್ಣ ತಾರಾನಾಥನು ವಿದ್ಯಾಗುಣಸಂಪನ್ನನಾದ ವರ್ತಕನಾಗಿರುತ್ತಾನೆ ಸದಾನಂದನೆಂಬ ಗುಮಾಸ್ತನು ಲಕ್ಷಾಧೀಶ್ವರನಾಗಿದ್ದು ಕುಡಿತದ ದುರಭ್ಯಾಸದಿಂದ ಪಟ್ಟದರಿದ್ರನಾಗಿರುತ್ತಾನೆ. ಸದಾನಂದನು ಒಂದಾನೊಂದು ದಿನ ತನ್ನ ದಣಿಯ ಪತ್ನಿಯು ತೌರುಮನೆಗೆ ಹೋಗಿರುವ ಸಂದರ್ಭದಲ್ಲಿ, ಔಷಧ ರೂಪದಲ್ಲಿ ಪ್ರಭಾಕರನಿಗೆ ಮದ್ಯಪಾನಾಭ್ಯಾಸವನ್ನು ಮಾಡಿಸುತ್ತಾನೆ. ಪ್ರಭಾಕರರಾಯನು ಈ ದುರಭ್ಯಾಸದಲ್ಲಿ ಮಗ್ನನಾಗಿ ಹುದ್ದೆಯನ್ನೂ ಬಿಟ್ಟು ಬಿಡುತ್ತಾನೆ. ಸಾಂಸಾರಿಕ ಕ್ಲೇಶಪರಂಪರೆಗಳು ಇವನ ಕುಟುಂಬವನ್ನು ಕಂಡು ಬಡತನಕ್ಕೆ ಗುರಿಮಾಡುತ್ತವೆ ತೌರುಮನೆಯಿಂದ ಬಂದ ಪತ್ನಿಯೂ, ವಿದೇಶಕ್ಕೆ ವ್ಯಾಪಾರಾರ್ಥವಾಗಿ ಹೋಗಿ ವಾಪಸ್ಸು ಬಂದ ಅಣ್ಣನಾದ ತಾರಾನಾಥನೂ ಪ್ರಭಾಕರನ ಸ್ಥಿತಿಯನ್ನು ಕಂಡು, ಬಹಳ ವ್ಯಸನಪಡುತ್ತಾರೆ. ಸದಾನಂದನೂ ಪ್ರಭಾಕರನೂ ಮದ್ಯಪಾನದಿಂದ ಮತ್ತರಾಗಿರುತ್ತಾರೆ. ಇವರಿಬ್ಬರ ಸಂಸಾರಗಳೂ ಬಡತನಗಳಿಂದ ಕಷ್ಟಗಳನ್ನು ಅನುಭವಿಸುತ್ತಿರುತ್ತವೆ ಸೇವಕನಾದ ಸದಾನಂದನು ಮದ್ಯಪಾನದಿಂದಲೇ ಪ್ರಾಣವನ್ನು ಬಿಡುತ್ತಾನೆ ಪ್ರಭಾಕರನು ಬಡತನದ ಪರಮಾವಧಿಯಲ್ಲಿ ಬಿಕ್ಷುಕನಂತೆಯೂ, ಹುಚ್ಚನಂತೆಯೂ ವರ್ತಿಸುತ್ತಾ ಸ್ನೇಹಿತರ ಸಹಾಯವನ್ನು ಅಪೇಕ್ಷಿಸಿ ಅವರಿಂದ ತಿರಸ್ಕೃತನಾಗಿರುತ್ತಾನೆ. ಕಡೆಯಲ್ಲಿ ತನ್ನ ಮಗುವಿನ ಮತ್ತು ಪತ್ನಿಯ ಮರಣಕ್ಕೆ ಕಾರಣನಾಗಿ ತಾನೂ ಪ್ರಾಣತ್ಯಾಗಮಾಡುತ್ತಾನೆ,

ನ್ಯಾಯಸ್ಥಾನದ ವಿಚಿತ್ರ

(ಹಿತೈಷಿಯಿಂದ)

ಒಂದು ಮುನ್ಸಿಫ್ ಕೋರ್ಟಿನ ವ್ಯ ದ್ದಮಾದಲ್ಲಿ ಪ್ರತಿವಾದಿಗಳ ಪೈಕಿ, ವ ದೇವ, ಸುಬ್ಬಮ್ಮ ಎಂಬ ಇಬ್ಬರ ಹೆಸ ಕಳೆದ ಶನಿವಾರ ಬಾಗಿಲಿನಲ್ಲಿದ್ದ ಹೆಸರಿನ ಇಬ್ಬರು ಕೋರ್ಟಿನ ಪಾಲಿಗೆ ದರು ಕೂಡಲೆ ನಿನ್ನ ಜವಾನ ಯಾತಕ್ಕೆ ಹಾಜರು ಮಾಡಿಸಬ ಎಂದು ಗುಮಾಸ್ತರು ಹೇಳಿದರು ನ ಲಾಯರು ಆ ಕೋರ್ಟಿನಲ್ಲಿದ್ದಾರೆ ಕ ಕ್ಕೊಂಡು ಬರುತ್ತೇವೆ ಎಂದು ಹೇ ರೂ ಕೊಡದೆ ಅವಕಾಶಕೊಡಲಿಲ್ಲ ಮತ್ತೊಂದು ಕೋರ್ಟೆಂಬುದು ಕೋರ್ಟಿನ ಒಂದು ಕೊಠಡಿ ಗುಮಾಸ್ತರು ಆ ತಾಯಿಮಕ್ಕಳ ಹೆಬ್ಬೆಟ್ಟಿನ ಗುರ್ತನ್ನು ಬಲಾತ್ಕಾರ ತೆಗೆದುಕೊಂಡು ಕಳುಹಿಸಿಬಿಟ್ಟರು ಬಾಗಿಲಲ್ಲಿ ತಮ್ಮ ಲಾಯರು ಬರುವ ವಿಗೂ, ಕಾದಿದ್ದು ನಡೆದ ಸಂಗತಿಯ ತಿಳಿಸಿದರು ಅವರು ಆ ಮೊಬದ ನೀವು ಪಾರ್ಟಿಯಲ್ಲವೆಂದು ತಿ ಹೀಗೆ ಒಬ್ಬರಿಗೆ ಪ್ರತಿಯಾಗಿ ಆದೇ ರಿನ ಮತ್ತೊಬ್ಬರಿಂದ ರುಜು ಮಾಡಿಸಿ ಳ್ಳುವಂತಹ ಪ್ರಮಾದಕ್ಕೆ ಕಾರಣವೇ ಅತುರವಲ್ಲವೆ? ಮೇಲ್ಕಂಡ ವಿದ್ಯಮಾ ವು ನಡೆದ ಬಗ್ಗೆ ಕೋರ್ಟಿಗೆ ತಯಾ ಒಂದು ಅರ್ಜಿಯ ಪ್ರತಿಯು ನಮಗೆ ದಕಿತು. ಇದು ನಿಜವಿದ್ದಲ್ಲಿ ಇಂತಹ ತುರದಿಂದ ಕಕ್ಷಿಗಾರರಿಗೆ ಎಷ್ಟು ಕಷ್ಟ ಗಳಾಗುತ್ತವೆಂಬುದನ್ನು ಪ್ರಧಾನ ಯಸ್ಥಾನದವರು ಪರಿಶೀಲಿಸುವರೆ?

ಕಥೆಯಲ್ಲಿ ಅಭಿನಯಿಸಿದ ರಾಮ ರ್ತಿ, ರಂಗ, ರಾಜು, ವಿಶ್ವೇಶ್ವರಯ್ಯ, ದರರಾಜು, ಸಂಪತ್ತು, ರಾಮರಾವ್, ಧಕರ್ತರ ಮೊದಲಾದವರು ತಮ್ಮ ಗಳನ್ನು ಮನರಂಜಿಸುವ ರೀತಿಯಲ್ಲಿ ನಯಿಸಿ ಪ್ರೇಕ್ಷಕರ ಮೆಚ್ಚಿಗೆಯನ್ನು ದರು. ಅಭಿನಯ ಕೌಶಲ್ಯವನ್ನು ಕರ ಮನರಂಜಿಸುವ ರೀತಿಯಲ್ಲಿ ರ್ಶಿಸಿದ ಮ|| ರಾಮರಾಯರಿಗೂ ವರ್ತನವಮಾಡಿದ ನವಕುಮಾರ ಎ ಗೂ ,ಮೊದಲುಗಳು ಕೊಡಲ್ಪಟ್ಟಿವೆ ಸಾಮಾಜಿಕ ನಾಟಕದಲ್ಲಿ ಹಾಸ್ಯ ರಸಗಳು ಸಂಮಿಳಿತವಾಗಿವೆ. ಡುಗುವ ಮಾತುಗಳಿಂದಲೂ ಅ ಪ್ರತಿಬಿಂಬದಿಂದಲೂ, ವೀರ ಪತ್ನಿ ವಾಣಿಗಳಿಂದಲೂ ಪ್ರೇಕ್ಷಕರ ಮ ಮೇಲೆ ಪರಿಣಾಮಗಳನ್ನುಂಟುಮಾಡ ದಾಗಿದೆ ಈ ನಾಟಕವು ಅತ್ಯದ್ಭು ಸೀನರಿಗಳಿಂದ ಜನರ ಮನಸ್ಸನ್ನು ಬುದಿದ್ದರೂ ವಸ್ತ್ರಾಭರಣಗಳ ಮೇ ದ್ದರೂ ಕಲಾಸೃಷ್ಟಿಯಿಂದ ಪ್ರೇಕ್ಷ ಮನಸ್ಸಿನಮೇಲೆ ತೀವ್ರವಾದ ಪರಿ ಯನ್ನುಂಟುಮಾಡುವ ಯೋಗ್ಯತೆ ಹೊಂದಿದೆ

ಈ ಕಂಪನಿಯು ಇನ್ನೂ ಬಾ ಯಲ್ಲಿರುವುದರಿಂದ ಮಹಾಜನರ ಹಕ್ಕೆ ಯೋಗ್ಯವಾಗಿದೆ

ಅನೇಕ ಸುಸ್ವರ್ಣ ವಿದ್ಯೆಗಳಿಂದೊಡಗೂಡಿದ

ಚಿಂತಾರತ್ನ

ವರಲ್ಲಿ ಜಾತಕ ಫಲ, ಕೈಗಾರಿಕೆಯ ವಿಷಯು, ಇಂದ್ರಜಾಲ ಮಹೇಂದ್ರಜಾಲ, ಯಕ್ಷಿಣಿ ಮೊದಲಾದ ವಿದ್ಯೆಗಳು ಇರುತ್ತವೆ.

ಒಂದೊಂದು ವಿಷಯಕ್ಕೆ ವಿಷ್ಟು ಬೆಲೆ ಕೊಟ್ಟರೂ ಸಾಲದು

೧ ಸಬಕಾರವನ್ನು ತಯಾರಿಸುವ ರೀತಿ ೨ ಮೇಣಬತ್ತಿ ತಯಾರಿಸುವದು ೩ ಕಾಸ್ಟಿಕ್ ಸೋಡಾ ತಯಾರಿಸುವದು ೪ ಬಿಸ್ಕ್ಯೂಟ ತಯಾರ ಮಾಡುವದು ೫ ದರಾಂಗ ತಯಾರ ಮಾಡುವದು ೬ ಪಪ್ಪರ್‌ಮೆಂಟ ಮಾಡುವದು ೭ ... ೮ ದೂಪದ ಬತ್ತಿ ಮಾಡುವದು ೯ ಬಂಗಾರ ಮಾಡುವದು ೧೦ ಬೆಳ್ಳಿ ... ಮಾಡುವದು ೧೦ ಜರ್ಮನ್ ಸಿಲ್ವರ ಧಾತು ಮಾಡುವದು ೧೧ ... ತಯಾರ ಮಾಡುವದು ೧೨ ತಗಡಿನಪಾಟಿ ತಯಾರ ಮಾಡುವದು ೧೩ ಕುಂಕುಮವನ್ನು ತಯಾರಿಸುವದು ೧೪ ಹಸಿ ಕುಂಕುಮ ತಯಾರಿಸುವದು ೧೫ ... ಕೆಡದಂತೆ ಮಾಡುವದು ೧೬ ಬುಕ್ಕಿಟ್ಟು ಮಾಡುವದು ೧೭ ... ಯಾವಾಗಲೂ ಸೀದಾಗಿರುವಂತೆ ಮಾಡುವದು ೧೮ ಅಷ್ಟಗಂಧ ಸಾ... ೧೯ ಛರ್ಪ ತಯಾರ ಮಾಡುವದು ೨೦ ಕಟ್ಟಿಗೆ ಲೋಹಗಳಿಗೆ ... ಬಣ್ಣ ಮಾಡುವದು ೨೧ ಕಾಗದವನ್ನು ಮಾಡುವದು ೨೨ ಮಂಬೇ... ತಯಾರಿಸುವದು ೨೩ ಕನ್ನಡಿಯಮೇಲೆ ಬರೆಯುವದು ೨೪ ದಂತ... ಮಾಡುವದು ೨೫ ರಕ್ತಶುದ್ಧಿ ಔಷಧ ೨೬ ಕಸ್ತೂರಿಮಾತ್ರೆ ಮಾಡುವದು ೨೭ ಬಾಲಾಮೃತ ಮಾಡುವದು ೨೮ ಮರಬತ್ತು ಮಾಡುವದು ೨೯ ...ಜ್ವರದ ಗುಳಿಗೆ ಮಾಡುವುದು ೩೦ ಬೂಟ ಪಾಲೀಸ ಮಾಡುವದು ೩೧ ... ಅಂಗಡಿ ಮೊದಲಾದವುಗಳಿಗೆ ಗೆದ್ದಲಿ ಹತ್ತದಂತೆ ಮಾಡುವದು ... ಕಜ್ಜಿ ಮಲಾಮು ೩೩ ನಾಸ್ತ್ಯುಡಿ ಮಾಡುವದು ೩೪ ... ಅಂಗಡಿಗಳಲ್ಲಿ ಇಲಿ, ಹೆಗ್ಗಣ ಮೊದಲಾದವುಗಳು ಇರದಂತೆ ಮಾಡುವದು ... ತಂಬಾಕ ಮಾಡುವದು ೩೬ ಬದನೆ, ಕುಂಬಳ ಮೊದಲಾದ ಕಾಯಿ ... ಮಾವು ಲೇಬು ಮುಂತಾದ ಹಣ್ಣುಗಳಿಗೂ ಬೀಜವಿಲ್ಲದ ದೊಡ್ಡವಾಗುವದು ... ಮಿಂಟ ತಯಾರಿಸುವದು ೩೮ ಬಿಳೀ ಹೂಗಳು ಕೆಂಪಾಗುವಂತ ಗಿಡಗಳ ತಯಾರಿಸುವದು ೩೯ ಕೆಂಪು ಹೂಗಳು ಬಿಳಿಗಾಗುವಂತೆ ಗಿಡಗಳನ್ನು ತಯಾರಿಸುವದು ೪೦ ಇಸ್ಪೀಟಿನ ಚಮತ್ಕಾರ ೪೧ ಮುಖನೋಡಿಕೊಳ್ಳುವ ಕನ್ನಡಿ ಮಾಡುವದು ೪೨ ಸುವಾಸನ ಎಣ್ಣೆ ತಯಾರಿಸುವದು ೪೩ ಕೇದಿಗೆ ದವನ ... ಮಾಡುವದು ೪೪. ಯಾವಗಿಡವಾದರೂ ಹುಟ್ಟುತ್ತಲೆ ಹೂವು ಬಿಡುವಂತೆ ಮಾಡುವದು ೪೫ ಗಂಧಕದ ಬತ್ತಿಲ ತಯಾರಿಸುವದು ೪೬ ಕರ್ಪೂರ ಮಾಡುವದು ೪೭ ಬ್ರೆಡ್ಡು ತಯಾರಿಸುವದು ೪೮ ನೂಲು ಬಟ್ಟೆಗೆ ಬಣ್ಣಾಹಾಕುವದು ಕಪ್ಪು, ಕೆಂಪು, ಹಸರು ಹಳದಿ ಬಣ್ಣ ತಯಾರಿಸುವದು ೫೦ ಅರಗಿನ ಬಣ್ಣ ತಯಾರಿಸುವದು ೫೧ ಗಿಲೀಟ ಮಾಡುವದು ೫೨ ತಾಮ್ರದ ಮೇಲೆ ಭಂಗಾರದ ... ಮಾಡುವದು ೫೩ ತಾಮ್ರ ಹಿತ್ತಾಳಿಗಳಿಗೆ, ಬೆಳ್ಳಿ ಗಿಲೀಟು ಮಾಡುವದು ... ಪೆಟ್ಟಿಗೆ ತಯಾರಿಸುವದು ೫೫ ರೋಜವಾಟರ ತಯಾರಿಸುವದು ೫೬ ... ಗಿಡವು ಬಳ್ಳಿಯಾಗುವದು ೫೭ ವಾರ್ನಿಸ ತಯಾರಿಸುವದು. ೫೮ ಲವೆಂ... ತಯಾರಿಸುವದು ೫೯ ಬಾಯಿಂದ ಉರಿ ತೋರಿಸುವದು ೬೦ ದೀವ... ೬೧ ಫೌಂಟನ್‌ಪೆನ್ನಿನ ಇಂಕ ತಯಾರಿಸುವದು ೬೨ ಕತ್ತಲೆಯಲ್ಲಿ ... ಇಂಕ ೬೩ ಸ್ಲೇಟ ಪೆನ್ಸಿಲ್ ತಯಾರಿಸುವದು ೬೪ ಕರ್ಪೂರದಗ್ಲಾಸ ತಯಾರಿಸುವದು ೬೫ ಕಾಜಿನಬಳೆ ತಯಾರಿಸುವದು ೬೬ ಕನಡಿ ಲೋಬಾನ ತಯಾರಿಸುವದು. ೬೭ ಗಂಧದ ಬಿಲ್ಲೆಗಳನ್ನು ತಯಾರಿಸುವದು ೬೮ ಚರ್ಮಕ್ಕೆ ... ಕಪ್ಪುವಾರ್ನಿಸ ತಯಾರಿಸುವದು. ೬೯ ಸೋಡಾವಾಟರ ತಯಾರಿಸುವದು, ... ಕಟ್ಟಿಗೆಯ ಮೇಲೆ ಅಕ್ಷರಗಳನ್ನು ಮೂಡಿಸುವದು ೭೧ ಪಾಲಿಷ ಒಡೆ ಚಾಕ ... ತಯಾರಿಸುವದು ೭೨ ಕೋಳಿತತ್ತಿ ಕೆಡದಂತೆ ಇಡುವದು, ೭೩ ಬೆಳ್ಳಿ ... ಸಾಮಾನುಗಳ ಮೇಲೆ ಅಕ್ಷರಗಳನ್ನು ಮೂಡಿಸುವದು ೭೪ ಬಟ್ಟೆಯಮೇಲೆ ... ಗಳನ್ನು ಮೂಡಿಸುವದು ೭೫ ವಜ್ರವನ್ನು ತಯಾರಿಸುವದು ೭೬ ಪಾಲಿಸ ತಯಾರಿಸುವದು ೭೭ ಸಾರ್ಸಾಪರಿಲ ತಯಾರಿಸುವದು ೭೮ ಚೇಳು ಕಡಿದ ... ೭೯ ಕಾರ್ಬನ ಪೇಪರ ತಯಾರಿಸುವದು ೮೦, ಗಿಡ-ಮರಗಳನ್ನು ಒಣ... ೮೧ ಮಣ್ಣಿನ ಪಾತ್ರೆಯಲ್ಲಿ ಉಪ್ಪಿನಕಾಯಿ ಹಾಕಿದರೆ ಹುಳಗಳು ಬೀಳ... ಮಾಡುವದು ೮೨ ಪುಷ್ಪಗಳ ಬಣ್ಣವನ್ನು ಬದಲಾಯಿಸುವದು ೮೩ ಲಿಂಬಿ ... ಬಹಳ ದಿವಸಗಳ ವರೆಗೆ ಕೆಡದಂತೆ ಇಡುವದು ೮೪ ಮಾವಿನ ಹಣ್ಣು ... ವರೆಗೆ ಕೆಡದಂತೆ ಇಡುವದು ೮೫ ಒಂದೇ ಗಿಡದಲ್ಲಿ ೨ ಬಣ್ಣದ ... ಬರುವಂತೆ ತಯಾರಿಸುವದು ೮೬ ಸಾಣೆಯ ಗಾಲಿಯನ್ನು ತಯಾರಿಸುವ ೮೭ ... ಸಪೆನ್ಸಿಲ್ ತಯಾರಿಸುವದು ೮೮ ಕೇಕ್ಸ ತಯಾರಿಸುವದು ೮೯ ಸುಗಂಟ ತಯಾರಿಸುವದು ೯೦ ಕಬ್ಬಿಣವನ್ನು ಕರಗಿಸುವದು

೧೦೦ ವಿಷಯಗಳಿವೆ ಸ್ಥಳ ಸಂಕೋಚ ಮೂಲಕ ಎಲ್ಲವನ್ನೂ ಕೊಟ್ಟಿಲ್ಲ

ಬೆಲೆ ೧ ರೂಪಾಯಿ (ವಿ ಪಿ ಖರ್ಚ ಬೇರೆ)

ಸಿ. ಎಸ್ ಸಾಲಿಮಠ, ಪ್ರಿಂಟರ, ಗದಗ ಇವರಿಂದ ಬರೆಯಲ್ಪಟ್ಟ

ಕಾಮಕಳಾ ಶಾಸ್ತ್ರ

ಪ್ರತಿ ಒಬ್ಬ ರಸಿಕರು ಅವಶ್ಯ ಓದಬೇಕಾದ ಈ ಪುಸ್ತಕದೊಳಗಿನ ವಿಷಯಗಳು

೧ ಪುರುಷ ಸಾಮುದ್ರಿಕ ಲಕ್ಷಣ ೨ ಸ್ತ್ರೀ ಸಾಮುದ್ರಿಕ ಲಕ್ಷಣ ೩ ಶಶಕ ಜಾತಿ ಪುರುಷನ ಲಕ್ಷಣ ೪ ಮೃಗಜಾತಿ ಪುರುಷನ ಲಕ್ಷಣ ೫ ವೃಷಭ ಜಾತಿ ಪುರುಷನ ಲಕ್ಷಣ ೬ ಅಶ್ವಜಾತಿ ಪುರುಷನ ಲಕ್ಷಣ ೭ ಪದ್ಮಿನಿ ಜಾತಿ ಸ್ತ್ರೀಯಳ ಲಕ್ಷಣ ೮ ಚಿತ್ರಿಣಿ ಜಾತಿ ಸ್ತ್ರೀಯಳ ಲಕ್ಷಣ ೯ ಶಂಖಿನಿ ಜಾತಿ ಸ್ತ್ರೀಯಳ ಲಕ್ಷಣ ೧೦ ಹಸ್ತಿನಿ ಜಾತಿ ಸ್ತ್ರೀಯಳ ಲಕ್ಷಣ ೧೧ ಯಾವ ಯಾವ ಜಾತಿ ಪುರುಷನಿಗೆ ಯಾವ ಯಾವ ಜಾತಿ ಸ್ತ್ರೀಯಳು ಯೋಗ್ಯ ೧೨ ಮತ್ತು ಅವರಿಂದ ಹುಟ್ಟಿದ ಮಕ್ಕಳ ಫಲವಿಚಾರ (ಜಾತಕ) ೧೩ ಯಾವ ಯಾವ ಜಾತಿ ಸ್ತ್ರೀಯರಿಗೆ ಯಾವ ಯಾವ ತಿಥಿಯ ದಿವಸ ಭೋಗೇಚ್ಛೆ ಉಂಟಾಗುತ್ತದೆಂಬುದನ್ನು ತಿಳಿಯುವದು ೧೪ ಯಾವ ಯಾವ ಸ್ತ್ರೀಯರಿಗೆ ಎಷ್ಟೆಷ್ಟು ಹೊತ್ತಿಗೆ ಭೋಗೇಚ್ಛಾ ಉಂಟಾಗುತ್ತದೆಂಬುದನ್ನು ತಿಳಿಯುವದು ೧೫ ಯಾವ ಯಾವ ಜಾತಿ ಸ್ತ್ರೀಯರಿಗೆ ಯಾವ ಯಾವ ತಿಥಿಯ ದಿವಸದ ಯಾವ ಯಾವ ಅವಯವದಲ್ಲಿ ಕಾಮವು ಇರುತ್ತದೆಂಬುದನ್ನು ತಿಳಿಯುವ ಕ್ರಮವು ೧೬ ದಂಪ್ರಕಲೆಯ ಸ್ಥಾನಗಳು ೧೭. ಸ್ತ್ರೀವಶೀಕರಣ ೧೮ ಪುರುಷವಶೀಕರಣ ೧೯ ಪದ್ಮಿನಿ ಸ್ತ್ರೀಯಳನ್ನು ವಶಮಾಡಿಕೊಳ್ಳುವ ಉಪಾಯ ೨೦ ಚಿತ್ರಿಣಿ ಸ್ತ್ರೀಯಳನ್ನು ವಶಮಾಡಿಕೊಳ್ಳುವ ಉಪಾಯ ೨೧ ಶಂಖಿನಿ ಸ್ತ್ರೀಯಳನ್ನು ವಶಮಾಡಿಕೊಳ್ಳುವ ಉಪಾಯ ೨೨ ಹಸ್ತಿನಿ ಸ್ತ್ರೀಯಳನ್ನು ವಶಮಾಡಿಕೊಳ್ಳುವ ಉಪಾಯ ೨೩ ಭೋಗಕ್ಕೆ ಯೋಗ್ಯ ಸ್ಥಳ ೨೪ ಭೋಗಕ್ಕೆ ಅಯೋಗ್ಯ ಸ್ಥಳ ೨೫ ಮೈಥುನಕ್ಕೆ ಅಯೋಗ್ಯವಾದ ವೇಳೆ ೨೬ ಮೈಥುನಕ್ಕೆ ಅಯೋಗ್ಯ ಸ್ತ್ರೀಯರು ೨೭ ಪರಸ್ತ್ರೀಗಮನದಿಂದಾಗುವ ಹಾನಿ ೨೮ ಸುಗಂಧ ದ್ರವ್ಯ ೨೯ ಕಂಕುಳದೊಳಗಿನ ದುರ್ಗಂಧ ಹೋಗುವುದಕ್ಕೆ ೩೦ ಬಾಯಿ ದುರ್ಗಂಧ ಹೋಗುವುದಕ್ಕೆ ೩೧ ಮುಡಿ ಬೆಳೆಗೆ ೩೨ ಕೇಶರಂಜನಕ್ಕೆ ೩೩ ತಿಗಣಿ ನಿಕ್ಕೆದಕ್ಕೆ ೩೪ ಕೂದಲು ಉದುರುವದಕ್ಕೆ ೩೫ ಶರೀರದ ಕಪ್ಪು ಎಣ್ಣೆಕ್ಕೆ ೩೬ ಕುಚವೃದ್ಧಿಗೆ ೩೭ ಸ್ತ್ರೀಯರಲ್ಲಿಯ ಅವಸ್ಥೆಗಳು ೩೮ ಅವಸ್ಥೆ ಮೇಲಿಂದ ಪ್ರೇಮದ ಇರುವಿಕೆ ೩೯ ಮೈಥುನದ ಸುಖದಲ್ಲಿ ಅಂತರ ಬೀಳುವ ಕಾರಣ ೪೦ ದಂಪತಿಗಳು ಕೂಡುವ ದಿಕ್ಕಿನ ಫಲವು ೪೧ ಪತಿಪತಿಗಳು ಕೂಡುವ ದಿವಸ ಫಲ ೪೨ ಗರ್ಭ ನಿಂತದಿವಸ ಫಲ ೪೩. ಗರ್ಭನಿಂತ ಕಾಲ ಫಲ ೪೪ ಸ್ತ್ರೀಯರ ... ಲಕ್ಷಣ ೪೫ ವಿಕಾರಯೋನಿಗೆ ಉಪಾಯ ೪೬ ಯೋನಿ ಸಂಕೋಚಕ್ಕೆ ೪೭ ಶಿಶ್ನ ವೃದ್ಧಿಗೆ ೪೮ ಸ್ತ್ರೀಯರಿಗೆ ಮೈಥುನವು ಬೇಗನೆ ಸಾಕಾಗ ವಂತೆ ಮಾಡುವ ಉಪಾಯ ೪೯ ಪುರುಷರಿಕ್ಕಿಂತ ಮೊದಲು ಸ್ತ್ರೀಯರ ರೇತಸ್ಖಲನವಾಗುವ ಉಪಾಯ ೫೦ ಪುರುಷರ ರೇತಸ್ಸು ಬೇಗ ಬೀಳಬಾರದಂಬುದಕ್ಕೆ ಉಪಾಯ ೫೧ ವಾಜೀಕರಣ ಪ್ರಯೋಗ ೫೨ ಸ್ತ್ರೀಯರನ್ನು ಜಯಿಸುವದಕ್ಕೆ ೫೩ ಬಹಳ ಮುಟ್ಟಾಗುತ್ತಿದ್ದರೆ ೫೪ ಸಂತತಿ ಪ್ರತಿಬಂಧಕ ಉಪಾಯ ೫೫ ಮುಟ್ಟು ತಡೆದಿದ್ದರೆ ೫೬ ಗರ್ಭಾಶಯ ಶುದ್ಧಿಗೆ ೫೭ ಗರ್ಭಧಾರಣಕ್ಕೆ ೫೮ ಗರ್ಭಪಾತಕ್ಕೆ ಉಪಾಯ ೫೯ ... ಉಪಾಯ ೬೦ ನಪುಂಸಕ ದೋಷಕ್ಕೆ ಉಪಾಯ ೬೧ ಸ್ತ್ರೀ ಪುರುಷರ ಪ್ರೀತಿಯ ವರ್ಣನೆ ೬೨ ಸ್ತ್ರೀಯರು ವಶವಾಗುವ ಮತ್ತು ಗರ್ಭಧರಿಸುವ ಕಾಲ ೬೩ ಹೆಂಗಸರು ಯಾವ ಕಾರಣದಿಂದ ಕೆಡುತ್ತಾರೆ ೬೪ ಪತಿಯು ವಿಷಯಕ್ಕೆ ಸತಿಯು ಒಪ್ಪದೆ ಇಟ್ಟಿರುವಳೆಂಬುದನ್ನು ತಿಳಿಯುವದು ೬೫ ಉಪಾಸಿಂಪತಿ ಪ್ರಾಪ್ತವಾಗುವ ಕಾರಣ ೬೬ ಭೋಗೇಚ್ಛಾ ವುಂಟಾದ ಸ್ತ್ರೀಯ ಲಕ್ಷಣ ೬೭ ನಿರಂತರ ಸುರತಯೋಗವಿರುವ ಸ್ತ್ರೀಯ ಲಕ್ಷಣ ೬೮ ವಿರಹಿಣೀ ಸ್ತ್ರೀಯ ಲಕ್ಷಣ ೬೯ ಭೋಗೇಚ್ಛಾ ಪೂರ್ಣವಾದ ವೇಳೆ ತೋರುವ ಸ್ತ್ರೀ ಲಕ್ಷಣ ೭೦ ಉಷ್ಣರೋಗಕ್ಕೆ ೭೧ ರಕ್ತ ಉಷ್ಣಕ್ಕೆ ೭೨ ಮೇಹ ಉಷ್ಣಕ್ಕೆ ೭೩ ಉಷ್ಣ ಕೈಯೊಳಗೆ ಒಡೆದರೆ ೭೪ ಉಷ್ಣಹುಣ್ಣಿನ ಘಾಯಕ್ಕೆ ೭೫ ಚೇರಿಗೆ ೭೬ ಉಪದಂಶಕ್ಕೆ ೭೭ ಬಿಳೀ ಉಷ್ಣಕ್ಕೆ ೭೮ ತರದ ಪ್ರಮೇಹಕ್ಕೆ ೭೯ ಪ್ರಮೇಹಕ್ಕೆ ೮೦ ಗರ್ಮಿ ರೋಗಕ್ಕೆ ೮೧ ಪುಷ್ಟಿಗೆ ೮೨ ಧಾತು ಪುಷ್ಟಿಗೆ ೮೩ ರೇತು ಸಂಚಯಕ್ಕೆ ೮೪ ವೀರ್ಯವೃದ್ಧಿಗೆ ೮೫ ಕಾಮೋತ್ತೇಜನಕ್ಕೆ ೮೬ ದೇಹಶಕ್ತಿ ಬರುವದಕ್ಕೆ. ೮೭ ಮುಷ್ಟಿಮೈಥುನದಿಂದಾಗುವ ಅಶಕ್ತತೆಗೆ ೮೮ ಗಂಡಸುತನಕ್ಕೆ (ಷಂಡತ್ವಕ್ಕೆ) ೮೯ ಸ್ವಪ್ನೇಂದ್ರಿಗೆ ೯೦ ಇಂದ್ರಿಯ ಸ್ತಂಭನಕ್ಕೆ ೯೧ ಶುಕ್ಲ ಸ್ತಂಭನಕ್ಕೆ ೯೨ ಧಾತು ನಷ್ಟಕ್ಕೆ ೯೩ ಹತ್ತುಣ್ಣಿಗೆ ೯೪ ಜಲಮಲ ಕಟ್ಟಿದರೆ ೯೫ ರಸಾಯನ ಮೈಯಲ್ಲಿ ಒಡೆದಿದ್ದರೆ ೯೬ ಗೂದಿಗೆ ೯೭ ಮೂಲವ್ಯಾಧಿಗೆ ೯೮ ಅಂಗಸಾಮುದ್ರಿಕೆ ೯೯ ದೇವ ಪುರುಷನ ಲಕ್ಷಣ ೧೦೦ ಗಂಧರ್ವ ಪುರುಷನ ಲಕ್ಷಣ ೧೦೧ ಯಕ್ಷಪುರುಷನ ಲಕ್ಷಣ ೧೦೨ ಪಿಶಾಚ ಪುರುಷನ ಲಕ್ಷಣ ೧೦೩ ದೇವಸತ್ವಾ ಸ್ತ್ರೀಯ ಲಕ್ಷಣ ೧೦೪ ಗಂಧರ್ವಸತ್ವಾ ಸ್ತ್ರೀಯ ಲಕ್ಷಣ ೧೦೫ ಯಕ್ಷಸತ್ವಾ ಸ್ತ್ರೀಯ ಲಕ್ಷಣ ೧೦೬ ಪಿಶಾಚಸತ್ವಾ ಸ್ತ್ರೀಯ ಲಕ್ಷಣ ಇತ್ಯಾದಿ

ಬೆಲೆ ೧ ರೂಪಾಯಿ (ವಿ ಪಿ ಖರ್ಚ ಬೇರೆ)

ವಿಳಾಸ:— ಎಸ್. ಸಿ. ಸಾಲಿಮಠ ಅಂಡ್ ಸನ್ಸ್, ಗದಗ ಸಿಟಿ



ಟಿ. ಸಿ. ನಟರಾಜ್ ಔಷಧಾಲಯ,

ಸಯ್ಯಾಜಿರಾವ್ ರೋಡು, ಮೈಸೂರು.

ಇವರಲ್ಲಿ ನೇತ್ರಪರೀಕ್ಷೆಯು ಉಚಿತವಾಗಿ ಮಾಡಲ್ಪಡುತ್ತದೆ.

ಅತ್ಯಗತ್ಯವಾಗಿ ಬೇಕಾದ ಎಲ್ಲಾ ಇಂಜಕ್ಷನ್ ಔಷಧಿಗಳೂ ಸದಾ ಕಾಲದಲ್ಲಿಯೂ ದೊರಕುವುವಲ್ಲದೆ ಸಮಸ್ತ ವ್ಯಾಧಿಗಳಿಗೂ ಚಿಕಿತ್ಸೆಯು ಬಹು ಸುಲಭ ಛಾರ್ಜಿನಿಂದ ಮಾಡಲ್ಪಡುತ್ತದೆ.

ಝಂಡೂರವರ ಆಯುರ್ವೇದೀಯ ಸಿದ್ಧೌಷಧಗಳೆಲ್ಲವೂ ಸದಾ ದೊರಕುತ್ತವೆ.

ANANDA SODA FACTORY,

DODDAPET, MYSORE.

BEST AERATED WATER SUPPLIERS.
COMPLETE REQUISITES FOR
AERATED WATER MANUFACTURERS
AVAILABLE.

ಆನಂದಾ ಸೋಡಾ ಫ್ಯಾಕ್ಟರಿ,
ದೊಡ್ಡ ಪೇಟೆ, ಮೈಸೂರು.

ದ್ರಾಕ್ಷಾಮೃತ

ಈ ದ್ರಾಕ್ಷಾಮೃತವು ಸಹ್ಯಾದ್ರಿ ಪರ್ವತದಲ್ಲಿ ಅನೇಕ ವನಸ್ಪತಿಗಳ ರಸವರ್ಗಗಳೊಂದಿಗೆ ದ್ರಾಕ್ಷಾರಸವನ್ನು ಮಿಶ್ರಮಾಡಿ ಸ್ವದೇಶಿ ಯಂತ್ರದಿಂದ ಶಾಸ್ತ್ರೋಕ್ತ ಪದ್ಧತಿ ಪ್ರಕಾರ ತಯಾರು ಮಾಡಿರುವದರಿಂದ ಸ್ವಾದಿಷ್ಟವು ಮತ್ತು ಮಧುರವು ಆಗಿದೆ.

ಇದರ ಸೇವನೆಯಿಂದ ಶರೀರದೊಳಗಿನ ಹಳೆ ಕಡಕಿ (ಗರಮಿ) ಸಂಪೂರ್ಣ ನಾಶವಾಗುತ್ತದೆ. ಮತ್ತು ಧಾತುಸ್ರಾವ, ಸ್ವಪ್ನಾವಸ್ಥೆಯಿಂದ ಅಥವಾ ಬೇರೆ ಯಾವದೇ ಕಾರಣದಿಂದ ಬಂದ ಅಶಕ್ತತೆಯಿಂದ ಕೈಕಾಲು, ಕಣ್ಣೊಳಗೆ ಉರಿವು ಬೀಳೋಣ, ಶೌಚಕ್ಕೆ ಸಾಫ ಆಗದೆ ಇರೋಣ, ಮುಂತಾದ ಎಲ್ಲ ವಿಕಾರಗಳು ನಷ್ಟವಾಗಿ ಕ್ಷುಧಾಗ್ನಿ ಬೆಳೆಯುತ್ತದೆ. ಮತ್ತು ಅನ್ನ ಚೆನ್ನಾಗಿ ಪಚನವಾಗಿ ಶೌಚಕ್ಕೆ ಸಾಫವಾಗುತ್ತದೆ. ಇದರ ಸೇವನೆಯಿಂದ ತರುಣರಿಗೆ ವ್ಯಭಿಚಾರದಿಂದ ಅಥವಾ ಬೇರೆ ಕಾರಣದಿಂದ ಬಂದ ಧಾತುಕ್ಷೀಣತೆ, ನಪುಂಸಕತ್ವ ಇದ್ದರೆ ಅದು ಹೋಗಿ ಪುನಃ ಯೌವನವಂತರಾಗಿ, ಶರೀರ ಬಲವಾಗಿ ಮಕ್ಕಳು ಪುಷ್ಟಿವಂತರಾಗುವರು. ಹೆಂಗಸರಿಗೂ ಮತ್ತು ಮಕ್ಕಳಿಗೂ ಈ ಔಷಧವು ಗುಣಕಾರಿ ಇದೆ. ಮುಟ್ಟಾಗದಿದ್ದರೆ ಮತ್ತು ಉಷ್ಣ ಗರ್ಭ ಸಂಬಂಧವಾದ ರೋಗಗಳಿದ್ದರೂ ಅವೆಲ್ಲ ಗುಣವಾಗಿ ಹೆಂಗಸರಿಗೆ ಸಂತತಿ ವೃದ್ಧಿಯಾಗುವದು. ಈ ಔಷಧದ ಮೂರು ಬಾಟ್ಲಿಗಳನ್ನು ಸೇವನೆ ಮಾಡಿದರೆ ಪೂರ್ಣ ಗುಣಬರುತ್ತದೆ. ಇದರ ಅನುಭವ 1 ಬಾಟ್ಲಿ ಸೇವನೆ ಮಾಡಿದ ಅನಂತರ ನಿಮಗೆ ತಿಳಿದೀತು.

1 ಬಾಟ್ಲಿ ಬೆಲೆ ರೂ. ೧-೪-೦, 3 ಬಾಟ್ಲಿ ೩-೮-೦, 1 ಡಜನ್ ಬಾಟ್ಲಿ ಬೆಲೆ ೧೨-೦-೦,

ಮ್ಯಾನೇಜರ್—ದ್ರಾಕ್ಷಾಮೃತ ಡಿಪೋ. ಪೋಸ್ಟ್ ನಿಪ್ಪಾಣಿ, ಜಿಲ್ಲಾ ಬೆಳಗಾವಿ

ಮೈಸೂರು ಸ್ಟಾಕಿಸ್ಟ್ಸ್—ಟಿ. ಸಿ. ನಟರಾಜ್, ಬೊಂಬಾಯಿ ಆನಂದ ಭವನ, ಮಾಡರ್ನ್ ಫಾರ್ಮಸಿ, ಸಯ್ಯಾಜಿರಾವ್ ರೋಡ್. ಬೆಂಗಳೂರು ಸಿಟಿ—ಸಿ. ವಿ. ಶಾಸ್ತ್ರಿ ಅಂಡ್ ಸನ್ಸ್, ಚಿಕ್ಕಪೇಟೆ. ತುಂಕೂರು—ಟಿ. ಆರ್. ಗುರು ಚನ್ನಬಸಪ್ಪ ಅಂಡ್ ಬ್ರದರ್ಸ್. ಚಿಕ್ಕಮಗಳೂರು—ಎಂ. ಎಲ್. ಮಂಜಪ್ಪ ಶೆಟ್ಟಿ. ಶಿವಮೊಗ್ಗ—ಶ್ರೀಕೃಷ್ಣ ಟ್ರೇಡಿಂಗ್ ಏಜನ್ಸಿ ಮತ್ತು ಪಂಡರಿನಾಥ್ ಬ್ರದರ್ಸ್. ದಾವಣಗೆರೆ—ಮಲ್ಲೇಶಪ್ಪ ಮತ್ತು ಕೆ. ಭೋಜಪ್ಪಶೆಟ್ಟಿ ಅಂಡ್ ಬ್ರದರ್ಸ್.

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ಬಾಲಸುಧಾ

ಮಕ್ಕಳ ಜ್ವರದ ಗೆಡ್ಡೆಯನ್ನು ಪಾತರಿ ಗುಣ ಪಡಿಸುತ್ತೆ. ಲಿವರ್ (ಪಿತ್ತಕೋಶ) ದಪ್ಪನಾಗಿ ಕಣ್ಣು ಹಳದಿ ಬಣ್ಣವಾಗಿದ್ದರೆ ಇದರ ಸೇವನೆಯಿಂದ ದಿನೇ ದಿನೇ ಗುಣವಾಗುತ್ತೆ. 20 ವರ್ಷಗಳಿಂದಲೂ ಅನುಭವ ಸಿದ್ಧವಾಗಿದೆ—ಮಕ್ಕಳ ಭೇದಿಗೆ ನಮ್ಮ ಬಾಲ ಸಂಜೀವಿನಿಯನ್ನೇ ಉಪಯೋಗಿಸಿರಿ.

ಬಾಲ ಸುಧಾ ಬೆಲೆ 1 ರೂ. ಬಾಲ ಸಂಜೀವಿನಿ ೪ ಆ.

ಮೈಸೂರು, ಬೆಂಗಳೂರು, ಮದ್ರಾಸುಗಳಲ್ಲಿ ನಮ್ಮ ಶಾಖೆಗಳಿವೆ.

ಕಲ್ಪತರುವೈದ್ಯಶಾಲಾ, ನಂಜನಗೂಡು.

ಎಂ. ವಿ. ನಾರಾಯಣರಾಯರ

ಶ್ರೀ ಸತ್ಯನಾರಾಯಣ ಪರಿಮಳ ಫ್ಯಾಕ್ಟರಿ,
ಜಗನ್ಮೋಹನ ಬಂಗ್ಲಾ ಬೀದಿ, ಮೈಸೂರು

ಪರಿಮಳ ಅಗರ್ ಬತ್ತಿ

ಉಪಯೋಗಿಸಿ ಪ್ರೋತ್ಸಾಹಿಸಿರಿ

ಪ್ರಾಚೀನ ಕನ್ನಡ ವಚನ ಗ್ರಂಥಗಳು

ಸೌಗಂಧಿಕಾಪರಿಣಯ:— ಪೂರ್ವದಲ್ಲಿ ದೇವೇಂದ್ರನಿಗೆ ದೂರ್ವಾಸಮುನಿಗಳಿಂದ ಆಶೀರ್ವಾದ ಪೂರ್ವಕವಾಗಿ ಕೊಡಲ್ಪಟ್ಟ ಕಮಲಮಾಲಿಕೆಯನ್ನು ಆನೆಯ ಕುಂಭಸ್ಥಳದಲ್ಲಿಟ್ಟವೊಡನೆ, ಆನೆಯು ಆ ಮಾಲಿಕೆಯನ್ನು ಕಾಲಿನಲ್ಲಿ ಹೊಸಕಿ ವ್ಯರ್ಥಪಡಿಸಲು, ಋಷಿಗಳ ಶಾಪದಿಂದ ಭೂಲೋಕದಲ್ಲಿ ರತ್ನಪುರಿಯಲ್ಲಿ ಸುಗಂಧರಾಜನಾಗಿ ಹುಟ್ಟಿ, ಕಳಿಂಗದೇಶದ ರಾಜಪುತ್ರಿಯಾದ ಸೌಗಂಧಿಕಾದೇವಿಯನ್ನು ಸ್ವಯಂವರಮಾಡಿಕೊಂಡ, ಬಹಳ ವಿಷಯಗಳಿರುವ ಕಥೆ.

೧೮೦ ಪುಟಗಳು ಕ್ರಯ ರೂ. ೪—೮—೦

ಸಹಸ್ರಾಯುಚರಿತ್ರೆ:— ಮಾಹಿಷ್ಮತೀ ಅರಸನ ಜ್ಯೇಷ್ಠಪತ್ನಿಯಲ್ಲಿ ದ್ರಾಕ್ಷಾಯಣಿ ವರಪ್ರಸಾದದಿಂದ ಜನಿಸಿ ಲೋಕಪ್ರಸಿದ್ಧನಾಗಿ ತನಗೆ ಇತರರಿಂದ ಬಂದ ಗಂಡಾಂತರಗಳನ್ನೆಲ್ಲಾ ಪರಿಹರಿಸಿಕೊಂಡ ಒಬ್ಬ ಮಹಾಪುರುಷನ ಕಥೆ.

೪೭೫ ಪುಟಗಳು ಕ್ರಯ ರೂ. ೨—೦—೦

ಕಾಶೀಕ್ಷೇತ್ರಮಹಾತ್ಮೆ:— ಇದರಲ್ಲಿ ೧೪ ಲೋಕಗಳ ವರ್ಣನೆ, ನದಿಗಳು, ದೇವತೆಗಳು ಋಷಿಗಳೇ ಮುಂತಾದವರ ಉತ್ಪತ್ತಿಕ್ರಮ, ಗಂಗಾಸಹಸ್ರನಾಮವೇ ಮೊದಲಾದ ಅನೇಕ ವಿಷಯಗಳು ಅಡಕವಾಗಿರುತ್ತೆ.

೭೮೩ ಪುಟಗಳು ಕ್ರಯ ರೂ. ೨—೨—೦

ಅಡ್ರೆಸ್ಸು:—

ಗುಂಡ್ಲು ಪಂಡಿತ ಲಕ್ಷ್ಮಣಾಚಾರ್ಯರ ಮಕ್ಕಳು
ಶ್ರೀನಿವಾಸ ದೇಶಿಕಾಚಾರ್,
೩೦೭, ಕರುಹಟ್ಟಿ ಬೀದಿ, ಮೈಸೂರು.

॥ ಸತ್ಯಮೇವೋದ್ಧರಾಮ್ಯಹಮ್ ॥
ರಾಜಧಾನಿಯ ರಾಷ್ಟ್ರೀಯ ವಾರಪತ್ರಿಕೆ.
ವೃದ್ಧಪಿತಾಮಹ ಎಂ. ವೆಂಕಟಕೃಷ್ಣಯ್ಯನವರ ಜ್ಞಾಪಕಾರ್ಥವಾಗಿ ಪ್ರಕಟಿಸಲ್ಪಡುವುದು
ಸಂಪಾದಕರು ಅಗರಂ ರಂಗಯ್ಯ, ಬಿ ಎ
ಸಂಪುಟ ೧] MYSORE : MONDAY 17-8-36 ಮೈಸೂರು : ಸೋಮವಾರ ೧೭—೮—೩೬ [ಸಂಚಿಕೆ ೨೬

ಇದೂ ಒಂದು ಸುಧಾರಣೆ.

ದೇಶೀಯ ಸಂಸ್ಥಾನಗಳಲ್ಲಿ ನಾನಾ ಮಾರ್ಗವಾಗಿ ಒಳ್ಳೆಯದಕ್ಕೂ ಸುಧಾರಣೆಗಳು ನಡೆಯುತ್ತವೆ ಕೆಟ್ಟದಕ್ಕೂ ಹೇರಳವಾಗಿ ನಡೆಯುತ್ತವೆ ಕೆಲವು ಕಡೆ ತಕ್ಕಮಟ್ಟಿನ ಪ್ರಜಾಪ್ರಭುತ್ವವಾದ ಆಡಳಿತವಿದೆ ಇನ್ನು ಕೆಲವು ಕಡೆ ಸ್ವೇಚ್ಛಾಪ್ರವರ್ತನೆಯು ಪರಂಪರೆಯಾಗಿದೆ ಕಪೂರ್ತಲಾ ಸಂಸ್ಥಾನದಲ್ಲಿ ಎಸ್. ಕರ್ತಾರ್‌ಸಿಂಗ್ ಎಂಬುವರು ಕೌನ್ಸಿಲಿನ ಚುನಾವಣೆಯ ಸಂದರ್ಭದಲ್ಲಿ ರಾಜಭಕ್ತಿಹೀನತೆಯನ್ನು ಆಕ್ಷೇಪಣೆಯಾಗಿ ತೋರಿಸಿದರಂತೆ ಅದಕ್ಕಾಗಿ ಅವರು ಸಂಸ್ಥಾನದ ಎಲ್ಲೆಯನ್ನು ಬಿಟ್ಟುಹೋಗಬೇಕೆನ್ನು ಆಜ್ಞೆಯಾಗಿದೆ ವಾಕ್‌ಸ್ವಾತಂತ್ರ್ಯವನ್ನು ವಿಚಾರಮಾಡುವುದು ಒಂದು ಮಹಾಪರಾಧವಲ್ಲವೆ?

ಮೆರವಣಿಗೆ ಹಕ್ಕು

ಮೈಸೂರು ಡಿಸ್ಟ್ರಿಕ್ಟ್ ಸರ್ವಮಾನ್ಯ ಸಹಳ್ಳಿಯಲ್ಲಿ ಆದಿಕರ್ನಾಟಕರು ಮದುವೆಯಲ್ಲಿ ಗ್ರಾಮದ ಎಲ್ಲಾ ರಸ್ತೆಯಲ್ಲೂ ಮೆರವಣಿಗೆ ಮಾಡುವ ಪದ್ಧತಿಯಿಂದು ತಿಳಿಸಿ ತಮ್ಮ ಹಕ್ಕನ್ನು ಕೋರಿದರು ಅಮಲ್ದಾರರು ಅಪ್ಪಣೆ ಕೊಡಲಿಲ್ಲ ನಂತರ ಮೈಸೂರು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಅಪೀಲು ಹೂಡಿದರು ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರಾದ ಶ್ರೀ ಜಿ ರಾಮಯ್ಯರವರು ವಿಚಾರಣೆಮಾಡಿ ಸಾರ್ವಜನಿಕ ರಸ್ತೆಯಲ್ಲಿ ಮೆರವಣಿಗೆ ತೆಗೆದುಕೊಂಡು ಹೋಗುವ ಹಾಗಿಲ್ಲವೆಂದು ಅಪೀಲನ್ನು ವಜಾಮಾಡಿದರು

ಪ್ರಚಂಡ ಬಾಲಕ

ಮೈಸೂರು ಸಂಸ್ಥಾನದ ಒಬ್ಬ ರಿಟೈರ್ಡ್ ಸ್ಕೂಲ್ ಮಾಸ್ಟರ ಮಗ 14 ವರ್ಷದ ಕೆ. ನಾಗರಾಜ್ ಎಂಬುವನು ಉಪನ್ಯಾಸ ಮಾಡುವದಕ್ಕೋಸ್ಕರ ಸಿಂಗಪೂರಿಗೆ ಹೋಗಲು ಬೊಂಬಾಯಿಗೆ ಬಂದಿದ್ದಾನೆ ಈತನ ಭಾಷಣಗಳು ರಾಜಕೀಯದಿಂದಲೂ ಭಾರತೀಯ ಮಹಾಪುರುಷರ ಜೀವನಗಳಿಂದಲೂ ಎತ್ತಿಕೊಂಡ ವಿಷಯಗಳು ವಿಶ್ವಭ್ರಾತೃತ್ವವನ್ನು ಪ್ರಪಂಚದಲ್ಲಿ ಸ್ಥಾಪಿಸುವುದೇ ಇವನ ಜೀವನದ ಮುಖ್ಯ ಆಶಯ ಈತನು ಕಾಠಿಯವಾಡ, ಸಂಯುಕ್ತ ಪ್ರಾಂತ್ಯ, ಮಧ್ಯಪ್ರಾಂತ್ಯಗಳಲ್ಲಿ ಪ್ರವಾಸ ಮಾಡಿದ್ದಾನೆ

ವೈಟ್‌ಫೀಲ್ಡ್‌ನವರ ಅರಿಕೆ

ವೈಟ್‌ಫೀಲ್ಡ್ ಜಮೀನ್ದಾರರು ಈ ಮಾಹೆ 11 ನೇ ತಾರೀಖು ಮಧ್ಯಾಹ್ನ ದಿವಾನರಲ್ಲಿ ತಮ್ಮ ಸಂಘದ ಕೆಲವು ಕೋರತೆಗಳನ್ನು ಅರಿಕೆಮಾಡಿಕೊಂಡರು. ಉಚಿತ ಕಾರ್ಯಕ್ರಮವನ್ನು ಕೈಕೊಳ್ಳುವುದಾಗಿ ದಿವಾನರು ತಿಳಿಸಿದರು

ಬಸ್ಸಿನಿಂದ ಬಿದ್ದು ಮರಣ

ನೀಲಗಿರಿಯಿಂದ ಬರುತ್ತಿದ್ದ ಸಿ ಪಿ ಸಿ ಬಸ್ಸಿನಲ್ಲಿ ಈ ಮಾಹೆ 5 ನೆ ತಾರೀಖು ಸಂಟ್ ಫಿಲೋಮಿನ ಉತ್ಸವವನ್ನು ನೋಡುವುದಕ್ಕೆ ಬರುತ್ತಿದ್ದ ಒಬ್ಬ ಕ್ರಿಶ್ಚಿಯನ್ ಪ್ರಯಾಣಿಕಳು ಬಿದ್ದು ಮರಣ ಹೊಂದಿದಳು ಅಧಿಕಾರಿಗಳು ವಿಚಾರಣೆ ನಡೆಸುತ್ತಿದ್ದಾರೆ

ಶ್ರೀ ವಿಠಲಭಾಯಿ ಪಟೇಲರು.



ವಿದ್ಯುಚ್ಛಕ್ತಿ ಅಪಾಯಗಳ ನಿವಾರಣೆ.

ಮಂಡ್ಯದ ತಾಲ್ಲೂಕಿನಲ್ಲಿ ಕೆಲವು ವಾರಗಳ ಹಿಂದೆ ವಿದ್ಯುಚ್ಛಕ್ತಿಯ ತಂತಿಯು ಕೆಳಗೆ ಬಿದ್ದು 4 ಜನರು ಸತ್ತರೆಂಬುದು ಹಿಂದೆಯೇ ಪ್ರಕಟಿಸಲಾಗಿತ್ತಷ್ಟೆ ಇನ್ನು ಮೇಲೆ ಇಂತಹ ಅನಾಹುತಗಳನ್ನು ತಪ್ಪಿಸಲು ಚೀಫ್ ಎಲೆಕ್ಟ್ರಿಕ್ ಇಂಜಿನಿಯರು ಈ ರೀತಿ ಸಲಹೆಗಳನ್ನಿತ್ತಿರುತ್ತಾರೆ — ಹಳ್ಳಿಯಲ್ಲಿರುವ ಜನರಿಗೆ ಎಲೆಕ್ಟ್ರಿಕ್ ಟ್ರಾನ್ಸ್‌ಮಿಷನ್‌ಗಳನ್ನು ಮುಟ್ಟುವುದರಿಂದಾಗುವ ಅಪಾಯಗಳನ್ನು ಟಾಂ ಟಾಂ ಮೂಲಕ ತಿಳಿಸುವುದು, ಈ ವಿಚಾರದಲ್ಲಿ ಹಸ್ತಪತ್ರಿಕೆಗಳನ್ನು ಅಚ್ಚುಹಾಕಿಸಿ ಹಂಚುವುದು ಮತ್ತು ತಂತಿಗಳನ್ನು ಮುಟ್ಟುವುದರಿಂದ ಆಗುವ ಅಪಾಯಗಳನ್ನು ತಿಳಿಸಿ ವೃತ್ತಪತ್ರಿಕೆಗಳಲ್ಲಿ ಪ್ರಕಟಿಸುವುದು

ಆನೆಗಳು ಅಗ್ಗವಾದವು

ತಿರುವಾಂಕೂರಿನಲ್ಲಿ ಆನೆಗಳ ಸ್ಥಾನವನ್ನೆಲ್ಲಾ ಮೋಟಾರುಗಳು ಆಕ್ರಮಿಸಿಕೊಂಡಿವೆ ಕಳೆದ ವರ್ಷ 1,150 ರೂಪಾಯಿಗಳಿಗೆ ಬಿಕರಿಯಾದ ಆನೆಗಳು ಈ ವರ್ಷ 900 ರೂಪಾಯಿಗಳಿಗೆ ಇಳಿದುಹೋಗಿವೆ

ಆಟಗಳಿಂದ ಕಣ್ಣಿನ ದೃಷ್ಟಿ ಹೆಚ್ಚುವುದು

ಲಂಡನ್ನಿನ ಪ್ರಸಿದ್ಧ ಡಾಕ್ಟರೊಬ್ಬರು ಟೆನ್ನಿಸ್ ಮತ್ತು ಕ್ರಿಕೆಟ್ ಆಡುವುದರಿಂದ ಕಣ್ಣಿನ ದೃಷ್ಟಿಯು ಹೆಚ್ಚುವುದೆಂದು ಹೇಳುತ್ತಾರೆ. ವೇಗದಿಂದ ಬರುವ ಚೆಂಡುಗಳನ್ನು ಗುರಿಯಿಟ್ಟು ಹೊಡೆಯುವುದರಿಂದ ದೃಷ್ಟಿ ಹೆಚ್ಚುತ್ತದೆ.

ಯುದ್ಧದ ಭವಿಷ್ಯವಾಣಿ

ವಾಷಿಂಗ್ಟನ್ನಿನ ಹಂಗೇರಿಯನ್ ಜ್ಯೋತಿಷ್ಯರೊಬ್ಬಳು ಯೂರೋಪಿನಲ್ಲಿ ಯಾವ ಕ್ಷಣದಲ್ಲಾದರೆ ಆಗ ಯುದ್ಧವು ಪ್ರಾರಂಭವಾಗುವುದು, 1937 ನೆ ವರ್ಷದ ಅಂತ್ಯದಲ್ಲಿ ಅಮೇರಿಕಕ್ಕೂ ಜಪಾನಿಗೂ ಯುದ್ಧವಾಗುತ್ತದೆ, ರಂಗೂನಿಗೆ ಸಮೀಪದಲ್ಲಿ ಪಕ್ಷಿ ಮತ್ತು ಪ್ರಾಣಿಗಳು ಸಿಕ್ಕುತ್ತವೆ ಜರ್ಮನಿಯು ಬಹಳ ಅಭಿವೃದ್ಧಿಗೆ ಬರುತ್ತದೆ, ಮತ್ತು ಮುಂದಿನ ಯುದ್ಧದಲ್ಲಿ ಬ್ರಿಟನ್ನು ಮಧ್ಯಸ್ಥಗಾರಿಕೆಯಲ್ಲಿ ಹೇರಳ ಸಹಾಯವನ್ನು ಪಡೆಯುವುದು ಎಂದು ಹೇಳುವಳು

ಗೀತೆಯು ಜ್ಞಾನದ ಬೆಳಕು.

"ಹಿಂದೂ ಮತದ ಮುಖ್ಯಸಾರವನ್ನು ತೋರಿಸುವ ಗೀತೆಯು ಕರ್ಮಯೋಗದ ತತ್ವವನ್ನು ಪ್ರಕಾಶಿಸದಿದ್ದಲ್ಲಿ ನಾನು ಹುಚ್ಚನಾಗುತ್ತಿದ್ದೆ" ಎಂದು ಮಹಾತ್ಮಾ ಗಾಂಧಿಯವರು ಶ್ರೀ ಕೃಷ್ಣ ಜನ್ಮಾಷ್ಟಮಿಯ ದಿನ ಡೆಲ್ಲಿಯಲ್ಲಿ ಹೊರಡುವ "ವೀರ ಭಾರತ" ವೆಂಬ ಪತ್ರಿಕೆಗೆ ಸಂದೇಶವನ್ನು ಕಳುಹಿಸಿದರು. "ಶ್ರೀ ರಾಮನು ನನ್ನನ್ನು ಕಾಪಾಡುವನು, ಶ್ರೀ ಕೃಷ್ಣನು ನನ್ನ ಗುರು. ನಾನು ರಾಮಾಯಣವನ್ನು ಪ್ರೀತಿಸುತ್ತೇನೆ ಆದರೆ ತೊಂದರೆಗೆ ಸಿಕ್ಕಿಕೊಂಡಾಗ ಮತ್ತು ನಿರಾಶನಾದಾಗ ಗೀತೆಯನ್ನು ಪಠಿಸುತ್ತೇನೆ ಆಗ ನನಗೆ ಜ್ಞಾನದೀಪವು ಕಾಣುವುದು" ಎಂದು ಬರೆದಿದ್ದಾರೆ

ಮೆಟ್ರಿಕ್ ವಿದ್ಯಾರ್ಥಿಗೆ ೬ ಆಣೆ ಕೂಲಿ

ಪಂಜಾಬ್ ವಿಶ್ವವಿದ್ಯಾಲಯದಲ್ಲಿ ಮೆಟ್ರಿಕ್ಯುಲೇಷನ್ ಪ್ಯಾಸುಮಾಡಿರುವ ಶ್ರೀ ಸಾಲಿಗ್ರಾಮ ಎಂಬುವರು ದಿನ ಒಂದಕ್ಕೆ 6 ಆಣೆ ಕೂಲಿಯಂತೆ ಕಾಲಿವಾರಿ ಎಕ್ಸ್‌ಟೆನ್ಷನ್ನಿನಲ್ಲಿ ಕೆಲಸಮಾಡುತ್ತಿದ್ದಾರೆ

೪ ಗಂಟೆಗಳಲ್ಲಿ ಇಂಗ್ಲೆಂಡಿನಿಂದ ಅಮೆರಿಕಾಕ್ಕೆ.

ಬ್ರಿಸ್ಟಲ್ ಏರೊಪ್ಲೇನ್ ಕಂಪೆನಿಯವರು ಒಂದು ಹೊಸ ವಿಮಾನವನ್ನು ತಯಾರಿಸಿದ್ದಾರೆ ಅದು ಲಂಡನ್ನಿನಿಂದ 4 ಗಂಟೆಗಳಲ್ಲಿ ನ್ಯೂಯಾರ್ಕನ್ನು ಸೇರುವುದು ಮೊದಲಿನ ವಿಮಾನಗಳಿಗಿಂತಲೂ ವೇಗ ಗೌರವ ಹೆಚ್ಚಿಸಿದ್ದಾರೆ

ಉಜ್ವಲ ಕುಮಾರಿ.

ಬರೆದವರು —ಎಸ್. ಶ್ರೀ ಶೈಲಂ, ಮೈಸೂರು.

(4 ನೆಯ ಭಾಗ)

ಬೆಳಗಾಯಿತು. ರಾಜ ಕುಮಾರಿಯು ಎದ್ದು ತನ್ನ ತಂದೆಯಾದ **ರಾಜಾಕುಲಿನ್ ಕುಮಾರನಿಗೆ** ರಾತ್ರಿ ನಡೆದುದನ್ನೆಲ್ಲಾ ಹೇಳಿದಳು ತಕ್ಷಣವೇ ರಾಜನು ತನ್ನ ಆಳುಗಳಿಗೆ ಆ ರಾಜಕುಮಾರನನ್ನು ಕರೆದುಕೊಂಡುಬರಲು ಕಳುಹಿಸಿದನು ರಾಜಕುಮಾರನು, ರಾಜನೆದುರಿಗೆ ಬಂದು ತಲೆ ಬಾಗಿ ನಿಂತನು ರಾಜನು ಇವನ ಗುಣಗಳನ್ನು ನೋಡಿ ಆಶ್ಚರ್ಯ ಚಿತ್ತದಿಂದ, 'ನೀನು **ಕುಸುಮಮಾಲಿನಿ** ಯನ್ನು ಮದುವೆಯಾಗಬಹುದು ಆದರೆ ಅವಳನ್ನು ಮದುವೆಯಾಗುವುದಕ್ಕೆ ಮೊದಲು, ನಾನು ಹೇಳುವ ಕೆಲವು ಕೆಲಸಗಳನ್ನು ನಡಿಸಬೇಕು" ಎಂದು ಹೇಳಿದನು

"ಅದಕ್ಕೆ ರಾಜಕುಮಾರನು ಅವೇನು" ಎಂದು ಕೇಳಿದನು. ರಾಜನು ತನ್ನ ಪಕ್ಕದಲ್ಲಿ ಇಟ್ಟಿದ್ದ 60 ಪೌಂಡು ತೂಕದ ಸಾಸುವೆ ಕಾಳುಗಳನ್ನು ತೋರಿಸಿ, ಇದನ್ನು ಒಂದು ಕಾಳನ್ನು ಬಿಡದೆ ಎಣ್ಣೆ ತೆಗೆಯಬೇಕೆಂದು ಹೇಳಿ, ನಾಳೆ ತರಬೇಕೆಂದು ಆಜ್ಞೆ ಮಾಡಿ ಹೊರಟುಹೋದನು ರಾಜಕುಮಾರನು ವ್ಯಸನಾಕ್ರಾಂತನಾಗಿ ಮನೆಗೆ ಹೋಗಿ ಮುದುಕಿಯನ್ನು ಕರೆದು ನಡೆದ ಸಮಾಚಾರವನ್ನು ಹೇಳಿ "ಈ ಸಾಸುವೆಯಲ್ಲಿ ಹೇಗೆ ಎಣ್ಣೆ ತೆಗೆಯಲಿ?" ಎಂದು ಕೇಳಿದನು ಇದನ್ನು ಕೇಳಿ ಆ ಮುದುಕಿಯು ಸ್ವಲ್ಪಹೊತ್ತು ಆಲೋಚಿಸಿಕೊಂಡು, ಆ ನಂತರದಲ್ಲಿ ನೀನು ಆ ದಿವಸ ಇರುವೆಗಳು ನಿನಗೆ ನೆನೆಸಿಕೊಂಡಾಗ ಸಹಾಯಮಾಡುವುವು ಎಂದು ಹೇಳಿದ್ದವಲ್ಲಾ, ಈಗ ಅದನ್ನು ಜ್ಞಾಪಿಸಿಕೊ" ಎಂದು ಹೇಳಿದಳು. ಅದನ್ನು ಕೇಳಿದ ತಕ್ಷಣವೇ ಸಂತೋಷದಿಂದ ರಾಜನು, ತನಗೆ ಹಿಂದೆ ಸಹಾಯ ಮಾಡುತ್ತೇನೆಂದು ಹೇಳಿದ್ದ ಇರುವೆಗಳನ್ನು ಜ್ಞಾಪಿಸಿಕೊಂಡನು

ತಕ್ಷಣವೆ ಇರುವೆಗಳ ರಾಜನು ತನ್ನ ಗುಂಡಿನೊಡನೆ ರಾಜಕುಮಾರನ ಹತ್ತಿರಕ್ಕೆ ಬಂದು ನನ್ನಿಂದ ನಿನಗೇನು ಸಹಾಯವಾಗಬೇಕು? ಎಂದು ಕೇಳಿದನು ರಾಜಕುಮಾರನು ಇದನ್ನು ನೋಡಿ ಆಶ್ಚರ್ಯದಿಂದ ಚಕಿತ ಚಿತ್ತನಾಗಿ "ನನಗೆ ನಾಳೆ ಸೂರ್ಯೋದಯದೊಳಗೆ ಈ ಸಾಸುವೆಕಾಳನ್ನು ಒಂದನ್ನೂ ಬಿಡದೆ ಹಿಂಡಿ ಎಣ್ಣೆ ತೆಗೆಯಬೇಕೆಂದು ಹೇಳಿ ತನ್ನ ಮಂಚದಮೇಲೆ ಮಲಗಿಕೊಂಡು ನಿದ್ರೆಮಾಡಿದನು ರಾತ್ರಿ ಇರುವೆಗಳ ರಾಜನು ಮತ್ತು ಇರುವೆಗಳ ಸೈನ್ಯವೂ ಒಂದು ರಾತ್ರಿಯೆಲ್ಲಾ ಕೆಲಸಮಾಡಿ ಒಂದು ಕಾಳನ್ನೂ ಬಿಡದೆ ಎಣ್ಣೆ ತೆಗೆದು ಒಂದು ಪಾತ್ರೆಯಲ್ಲಿಟ್ಟು ಹೊರಟುಹೋದವು ಬೆಳಿಗ್ಗೆ ರಾಜ ಕುಮಾರನು ಎದ್ದು ನೋಡಲು ಅಲ್ಲಿ ಒಂದು ಕಾಳು ಸಾಸುವೆಯೂ ಇರಲಿಲ್ಲ. ಒಂದು ಇರುವೆಯೂ ಇರಲಿಲ್ಲ. ರಾಜಕುಮಾರನು, ಆ ಎಣ್ಣೆಯನ್ನು ತೆಗೆದುಕೊಂಡು ಹೋಗಿ ರಾಜನಿಗೆ ತಲುಪಿಸಿದನು

ಇದನ್ನು ರಾಜನು ನೋಡಿ ಸಂತೋಷದಿಂದ 'ನೀನು ಇನ್ನೊಂದು ಕೆಲಸವನ್ನು ಮಾಡಬೇಕಾಗಿದೆ" ಎಂದು ಹೇಳಿದನು ಅದನ್ನು ಕೇಳಿ ರಾಜಕುಮಾರನು ಧೈರ್ಯದಿಂದ "ಅದೇನು ಹೇಳು,' ಎಂದು ಕೇಳಿದನು ರಾಜನು ಹೀಗೆ ಹೇಳಿದನು — 'ನಾನು ಬೇಟೆಯಾಡುವುದಕ್ಕೆ ಹೋಗಿದ್ದಾಗ ಎರಡು ಭಯಂಕರವಾದ ಹುಲಿಗಳನ್ನು ಕಂಡೆನು ಅವುಗಳು ನಮ್ಮ ಊರಿಗೆ ಬಹಳ ಹಾನಿಮಾಡುತ್ತಿದ್ದುವು ಅದನ್ನು ಬಹಳ ಕಷ್ಟಪಟ್ಟು ಹಿಡಿದು ಈ ಊರಿನ ಹೊರಗಡೆ ಒಂದು ಬೋನಿನಲ್ಲಿ ಬಂಧಿಸಿ ಇಟ್ಟಿದ್ದೇನೆ. ಅದನ್ನು ಕೊಂದುಬಿಟ್ಟರೆ ನೀನು ನನ್ನ ಮಗಳಾದ ಕುಸುಮಮಾಲಿನಿಯನ್ನು ಮದುವೆಯಾಗಬಹುದು ಎಂದು ಹೇಳಿದನು. ರಾಜನು ದುಃಖದಿಂದ ಮನೆಗೆ ಹಿಂತಿರುಗಿದನು.

ಮುದುಕಿಗೆ ರಾಜನು ಮಾಡಿದ ಅಪ್ಪಣೆಯನ್ನು ಹೇಳಿದನು ಇದನ್ನು ಕೇಳಿ ಮುದುಕಿಯು ಈ ಕೆಲಸ ಒಂದು ಗಂಡು, ಒಂದು ಹೆಣ್ಣು ಹುಲಿಗಳ ಸಹಾಯವಿಲ್ಲದೆ ಆಗುವುದಿಲ್ಲ ಎಂದು ಹೇಳಿದಳು. ಹಿಂದೆ ನಡೆದ ವೃತ್ತಾಂತವನ್ನು ಜ್ಞಾಪಿಸಿಕೊಂಡು, ತಾನು ಸಹಾಯಮಾಡಿದ ಹುಲಿಯನ್ನು ನೆನೆಸಿಕೊಂಡನು ತಕ್ಷಣವೇ ಹೊರಗಿನಿಂದ ಘರ್ಜಿಸುತ್ತಾ ಆ ಹುಲಿಯು, ರಾಜಕುಮಾರನನ್ನು ಪ್ರೀತಿಯಿಂದ ನೆಕ್ಕುತ್ತಾ ನನ್ನಿಂದ ನಿನಗೆ ಏನಾಗಬೇಕು ಎಂದು ಕೇಳಿತು. ಅದಕ್ಕೆ ರಾಜಕುಮಾರನು ಅದರ ತಲೆಯನ್ನು ತಂಕುಳಲ್ಲಿರಿಸಿ ತಲೆಯನ್ನು ಸವರುತ್ತಾ, ತಾನು ಮಾಡಬೇಕಾದ ಕೆಲಸವನ್ನು ಹೇಳಿದನು ಆ ಹುಲಿಯು ಒಪ್ಪಿಕೊಂಡಿತು ರಾಜಕುಮಾರನು ಹುಲಿಯನ್ನು ಕರೆದುಕೊಂಡು ರಾಜನ ಹತ್ತಿರಕ್ಕೆ ಬಂದು "ನೀನು ತಂದ ಹುಲಿಯನ್ನು ಕೊಲ್ಲುತ್ತೇನೆ" ಎಂದು ಹೇಳಿದನು. ರಾಜನು ಒಪ್ಪಿದನು. ಒಂದು ಮೈದಾನದಲ್ಲಿ ಜನವು ಸೇರಿತು ರಾಜನೂ ಬಂದಿದ್ದನು. ರಾಜನು ತನ್ನ ಹುಲಿಯನ್ನು ಬೋನಿನಿಂದ ಬಿಟ್ಟನು ಘರ್ಜಿಸುತ್ತ ಹುಲಿಯು ಹೊರಕ್ಕೆ ಹಾರಿತು ರಾಜಕುಮಾರನ ಹುಲಿಯೂ ರಣರಂಗಕ್ಕೆ ಹಾರಿತು. ಆಗ ಇವೆರಡಕ್ಕೂ ಜಗಳವು ಪ್ರಾರಂಭವಾಯಿತು

ಕಡೆಗೆ ಆ ಕುಲಿನ್ ಕುಮಾರನು ತಂದಿದ್ದ ಹುಲಿಯನ್ನು ರಾಜಕುಮಾರನ ಕಡೆ ಹುಲಿಯು ಕೊಂದು, ಅದೃಶ್ಯವಾಯಿತು ರಾಜಕುಮಾರನು ತಕ್ಷಣವೇ ರಾಜಾ ಕುಲಿನ್ ಕುಮಾರನ ಹತ್ತಿರ ಬಂದು "ಈಗ ನಿನ್ನ ಮಗಳನ್ನು ನನಗೆ ಮದುವೆ ಮಾಡಿಕೊಡು" ಎಂದು ಕೇಳಿದನು ಅದಕ್ಕೆ ರಾಜನು ಇನ್ನು ಒಂದೇ ಒಂದು ಕೆಲಸವಿರುವುದು ಅದೇನೆಂದರೆ — 'ಆಕಾಶದಲ್ಲಿರುವ ನನ್ನ ಚಿನ್ನದ ತಬಲವನ್ನು ಬಾರಿಸಬೇಕು" ಎಂದು ಹೇಳಿದನು

ಇದನ್ನು ಕೇಳಿ ರಾಜಕುಮಾರನು ಆಶಾಭಂಗವುಳ್ಳವನಾಗಿ ಈ ಕೆಲಸವು ತನ್ನ ಕೈಲಿ ಆಗಲಾರದೆಂದು, ಮುದುಕಿಗೆ ತಿಳಿಸಿದನು. ಮುದುಕಿಗೆ ಬಹಳ ರೇಗಿತು ಕಡೆಗೆ ಮುದುಕಿಯು ಅವನ ಮಂತ್ರದ ಮಂಚವನ್ನು ಜ್ಞಾಪಿಸಲು, ರಾಜಕುಮಾರನು ಅಪಾರ ಆನಂದದಿಂದ ಒಡಗೂಡಿದವನಾಗಿ, ತಕ್ಷಣವೇ ಆ ಮಂಚದ ಮೇಲೆ ಕುಳಿತುಕೊಂಡು, ಮಂಚವನ್ನು ಕುರಿತು "ಆ ಚಿನ್ನದ ತಬಲವಿರುವ ಕಡೆಗೆ ಕರೆದುಕೊಂಡು ಹೋಗಿಬಿಡು" ಎಂದನು. ತಕ್ಷಣವೇ ಮಂಚವು ಇವನನ್ನು ಮೇಲಕ್ಕೆ ಎತ್ತಿಕೊಂಡು ಹೋಗಿ ಮೋಡಗಳನ್ನು ಕತ್ತರಿಸಿ, ಮೇಲಕ್ಕೆ ಹೋಗಿ ಒಂದು ಸ್ಥಳದಲ್ಲಿ ಇಳಿಯಿತು ಅಲ್ಲಿ ರಾಜಕುಮಾರನು ಚಿನ್ನದ ತಬಲವನ್ನು ನೋಡಿದನು ಅದರ ಪಕ್ಕದಲ್ಲಿ ಚಿನ್ನದ ಕೋಲೂ ಇದ್ದಿತು ಅವೆರಡನ್ನೂ ರಾಜಕುಮಾರನು ತೆಗೆದುಕೊಂಡು ಮಂಚದ ಮೇಲೆ ಕುಳಿತು ತಬಲವನ್ನು ಜೋರಾಗಿ ಹೊಡೆಯುತ್ತಾ ಮಂಚಕ್ಕೆ ರಾಜಾ ಕುಲಿನ್ ಕುಮಾರನ ಅರಮನೆಗೆ ಕರೆದುಕೊಂಡು ಹೋಗು ಎಂದು ಹೇಳಿದನು. ಮಂಚವು ಕರೆದುಕೊಂಡು ಬಂದಿತು ರಾಜಕುಮಾರನು ಜೋರಾಗಿ ತಬಲವನ್ನು ಬಾರಿಸಿದನು. ರಾಜನು ತನ್ನ ತಬಲದ ಶಬ್ದವನ್ನು ಕೇಳಿ ಸಂತೋಷದಿಂದ ರಾಜಕುಮಾರನನ್ನು ಒಳಕ್ಕೆ ಬರಮಾಡಿಸಿಕೊಂಡು, ಕುಸುಮಮಾಲಿನಿಯನ್ನು ಕೊಟ್ಟು ರಾಜಕುಮಾರನಿಗೆ ಮದುವೆಮಾಡಿ ಬಿಟ್ಟನು ರಾಜಕುಮಾರನು ಘರ್ವಾಸಿಗೆ ಅವನು ಕೊಟ್ಟಿದ್ದ ಸಾಮಾನುಗಳನ್ನು ಹಿಂತಿರುಗಿ ತಲುಪಿಸಿದನು. ಕುಸುಮಮಾಲಿನಿಯನ್ನು ತನ್ನ ದೇಶಕ್ಕೆ ಕರೆದುಕೊಂಡು ಹೋದನು. ಅಲ್ಲಿಯ ಜನರು ಅವಳ ಸೌಂದರ್ಯವನ್ನು ನೋಡಿ ಬಹಳ ಸಂತೋಷಪಟ್ಟರು ಇವಳೇ ಕಥಾನಾಯಕಿ, ಪ್ರಸಿದ್ಧಳಾದ **ಉಜ್ವಲ ಕುಮಾರಿ.**

ಸಂಪೂರ್ಣಂ

ಟಿ. ಕ. ಗೋಪಾಲರಾಯರನ್ನು ಚೂರಿಯಿಂದ ತಿವಿದ ಮೊಖದ್ದಮೆ.

ಮೈಸೂರು ಶ್ರೀಮನ್ಮಹಾರಾಜರ ಎ. ಡಿ. ಸಿ. ಗಳಾದ ಶ್ರೀ॥ ಟಿ. ಕ. ಗೋಪಾಲ ರಾಯರನ್ನು ಕೋಚ್‌ಮ್ಯಾನ್ ಆದ ಮುನಿವೆಂಕಟನೆಂಬುವನು ಚೂರಿಯಿಂದ ತಿವಿದ ಮೊಕದ್ದಮೆ ಹಿಂದೆ ಸೆಷನ್ಸ್ ಜಡ್ಜರು ವಿಚಾರಿಸಿ ಗಡೀಪಾರು ಮತ್ತು ೧೦ ವರ್ಷಗಳ ಸಕ್ರಮ ಶಿಕ್ಷೆಯನ್ನು ವಿಧಿಸಿದ್ದರಷ್ಟೆ ಈ ವಿಚಾರವಾಗಿ ಅಪರಾಧಿಯು ಅಪೀಲು ಮಾಡಿಕೊಂಡಿದ್ದನು ಇದು ಇದೇ ಮಾಹೆ ೧೧ನೇ ತಾರೀಖು ಬೆಂಗಳೂರು ಹೈಕೋರ್ಟಿನಲ್ಲಿ ಚೀಫ್ ಜಸ್ಟಿಸ್ ಜೆಚ್॥ ಡಿ॥ ಸಿ ರೈಲಿ ಮತ್ತು ಮ॥ ಕೆ ಶಂಕರನಾರಾಯಣ ರಾಯರ ಸಮ್ಮುಖದಲ್ಲಿ ವಿಚಾರಣೆಯಾಗಿ ಶಿಕ್ಷೆಯು ಖಾಯಂ ಆಯಿತು

ನಂಜನಗೂಡು ವರ್ತಮಾ[ನ]

ಕಾಲಸ್ಥಿತಿ:— ನಾಲಾ ಚೈಲಿನ ಕ್ರೈ[...]
ಚಟುವಟಿಕೆಯಿಂದ ವ್ಯವಸಾಯವ[...]
ದ್ದಾರೆ. ಜೋಳದ ಕಟಾವು ಆಗುತ್ತಿದೆ
ಲವು ಗ್ರಾಮಗಳಲ್ಲಿ ವಿನಾ ಸಾಮಾನ್ಯ[...]
ಜೋಳವು ಒಳ್ಳೆಯ ಬೆಳೆಯೇ ಆಗಿದೆ
ರೆಯ ಚೈಲಿನಲ್ಲಿ ಒಟ್ಟು ಹುಯಿದಿದ್ದ
ರೆಲ್ಲವೂ ಒಣಗಿಹೋಗಿವೆ ಹೆಡತಲೆ
ಮದ ರೈತರ ಹಕ್ಕನ್ನು ಮೂಲೆಗೊತ್ತಿ
ಲೆ ಗ್ರಾಮಗದವರನ್ನು ಪ್ರೋತ್ಸಾಹಿಸ[...]
ವುದು ಸರಿಯಲ್ಲ ಇದರಿಂದ ಎ[...]
ಗ್ರಾಮಗಳವರಿಗೂ ಬೆಳೆಗೆ ಅನಾನುಕೂ[...]
ಕಂದಾಯದ ವಸೂಲಿಗೆ ಜಪ್ತಿ ವಗ್ಯೆ[...]
ಮ ಜರುಗಿಸುವುದರಲ್ಲಿ ಅಧಿಕಾರಿಗಳ[...]
ವ ಕಾಠಿಣ್ಯದಲ್ಲಿ ಹತ್ತರಲ್ಲಿ ಒಂದು ಪಾ[...]
ನವ್ವು ಈ ನೀರಿನ ಸರಪರಾಯಿಗೆ ನಿಷ್ಪ[...]
ಪಾತವಾಗಿ ಗಮನಕೊಟ್ಟರೂ ಸಾಕು
ಚೈಲಿನಲ್ಲಿ ನಾಲ್ಕು ವರ್ಷಗಳಿಂದಲೂ [...]
ಯಿಲ್ಲ ಪೂರ್ತಾ ಕಂದಾಯವನ್ನು ತೆ[...]
ದ್ದಾರೆ

ದೇವಸ್ಥಾನ:— ಲಕ್ಷಬಿಲ್ವಾರ್ಚನೆ[...]
ವಿಶೇಷ ವೈಭವದಿಂದ ನೆರವೇರಿತು [...]
ಲು ಮಣೇಗಾರ್ ಶ್ರೀ ಕಾಳಿಂಗಯ್ಯನ[...]
ವಿಶೇಷ ಮುತುವರ್ಜಿವಹಿಸಿದ್ದಂತ ಕಾ[...]
ತ್ತೆ. ಬಹುಮಂದಿ ಭಕ್ತಾದಿಗಳು ದ[...]
ಮಾಡಿದರು ಶ್ರೀ ನಾರಾಯಣಸ್ವಾ[...]
ವರಿಗೆ ದಶಾವತಾರದ ಅಲಂಕಾರ[...]
ಪ್ರತಿ ದಿನವೂ ಗೋಕುಲಾಷ್ಟಮಿಯ[...]
ಡೆಸುತ್ತಿರುತ್ತಾರೆ. ಇವರ ಮೇಲ್ಪಂಕ್ತಿ[...]
ನ್ನೇ ಮುಂದಿನ ಸರದೀದಾರರಾದ [...]
ರಂಗಯ್ಯಂಗಾರ್ಯರವರೂ ನಡೆಸುತ್ತಾರೆ[...]
ನಂಜೋಣ ತಟ್ಟೆಯ ಅನ್ನವು [...]
ಸ್ವಲ್ಪ ಮೇಲಾಗಿರುವುದಾದರೂ ಗು[...]
ಯೂ ಗಾತ್ರದಲ್ಲಿಯೂ ಮತ್ತಷ್ಟು [...]
ಲಾಗುವಂತೆ ಜನಾನುರಾಗಿಗಳಾದ ಪ[...]
ರರು ಏರ್ಪಡಿಸಬಾರದೆ? ತಿನ್ನುವ ಪ[...]
ಬಹು ಜನರ ಜೀವನ ಚೆನ್ನಾಗಿ[...]
ಒಳ್ಳೆಯ ಪದಾರ್ಥವನ್ನು ತಾವೂ ತಿ[...]
ಇತರರಿಗೂ ಕೊಡಬಾರದೆ?

ಜಗಳ:— ಇಲ್ಲಿನ ಕಂಬಳ್ಳಿಯಲ್ಲಿ [...]
ಗಳನಾರ ಬೆಳಗ್ಗೆ ಹರಿಜನರು ದೊ[...]
ಒಬ್ಬನಿಗೆ ಪೂರಾ ಏಟು ಬಿದ್ದಿದೆ

ಒಂದು ಆಫೀಸು— ಇಲ್ಲಿನ ಒಂ[...]
ಫೀಸಿನಲ್ಲಿ ಬಹು ನಿಸ್ಪೃಹರಾದ ಅ[...]
ಗಳಿದ್ದರು. ಗುಮಾಸ್ತರುಗಳು ಪ[...]
ಅವಕಾಶವಿಲ್ಲದಂತೆ ಬಹುಮಿತವಾಗಿ [...]
ಮೂಲನ್ನು ಅನುಭವಿಸುತ್ತಾ ಒಂದ[...]
ಧಿಕಾರಿಗಳು ಹಿಸ್ಸೆಗೆ ಬರುತ್ತಿರಲಿ[...]
ಗುಮಾಸ್ತರಿಗೂ ಅಷ್ಟರಲ್ಲಿಯೇ ತೃಪ್ತಿ[...]
ಗಿದ್ದಿತು ಗೃಹಚಾರಕ್ಕೆ ಅವರಿಗೆ ವ[...]
ಗಿ ಬೇರೊಬ್ಬ ಆಫೀಸರು ಬಂದರು [...]
ಗೆ ಮಾಮೂಲು ಮಿತವಾಗಿ ದವಸ[...]
ರೂಢಿಗೆ ಬಂದು ಹೋಗಿದೆಯಾಗಿ [...]
ರಿಗಳಿಗೆ ಮಾಮೂಲು ಸಾಕಾದಷ್ಟು [...]
ಯಲು ಅನಾನುಕೂಲವಾಗಿ ಬಿಟ್ಟಿ[...]
ರಿಂದ ಗುಮಾಸ್ತರಮೇಲೆ ಅಸಮಾಧಾ[...]
ಸರಿ ಗುಮಾಸ್ತರ ಅಸಮಾಧಾನಕ್ಕೆ [...]
ರಂಭ ಪರಿಣಾಮವಲ್ಲಿ ಜನಗಳಿಗೆ [...]
—[...]

ಮೈಸೂರು ಇನ್ಷೂರೆನ್ಸ್ ಕಂಪೆನಿ.

ತುಮಕೂರು ಡಿಸ್ಟ್ರಿಕ್ಟ್ ಶಾಖೆ.

(ಒಬ್ಬ ಬಾತ್ಮೀದಾರರಿಂದ)

ಮೈಸೂರು ಇನ್ಷ್ಯೂರೆನ್ಸ್ ಕಂಪೆನಿಯ ತುಮಕೂರು ಡಿಸ್ಟ್ರಿಕ್ಟ್ ಶಾಖೆಯ ಆರಂಭೋತ್ಸವವು 1936 ನೇ ಆಗಸ್ಟ್ ...ನೇ ತಾರೀಖು ನಡೆಯಿತು ಅಂದು ...ಧ್ಯಾಕಾಲ ತುಮಕೂರು ಪೌರಸಭಾ ...ನವು ತಳಿರುತೋರಣಗಳಿಂದ ಅಲಂಕೃತವಾಗಿ ಕಂಗೊಳಿಸುತ್ತಿತ್ತು. ಭವ್ಯಾಲಂಕೃತವಾದ ಈ ಮಂದಿರದಲ್ಲಿ ಅನೇಕ ...ಥಿಗಳು ಕಿಕ್ಕಿರಿದು ಸೇರಿದ್ದರು.

ಕಂಪೆನಿಯವರು ಅತಿಥಿಗಳೆಲ್ಲರಿಗೂ ಫಲ...ರವನ್ನೇರ್ಪಡಿಸಿದ್ದರು ಫಲಹಾರಾನಂ... ಸಭಾಕಾರ್ಯಕ್ರಮವು ಆರಂಭವಾಯಿ... ತುಮಕೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕ...ಷನರಾದ ಮಿ॥ ಅಬ್ದುಲ್ ಖಾದರ್‌ರ... ಅಧ್ಯಕ್ಷಸ್ಥಾನವನ್ನು ಅಲಂಕರಿಸಿ...ರು

...ಆರ್ಯ ಬಾಲಿಕಾ ಪಾಠಶಾಲೆಯವರು ...ಮಧುರ ಕಂಠದಿಂದ ದೇವತಾಪ್ರಾರ್ಥನೆ ...ಡಿದರು. ಅನಂತರ ಚಳ್ಳಕೆರ ಶ್ರೀ ಸೀತಾರಾಮಶಾಸ್ತ್ರಿಗಳು ಮೈಸೂರು ...ಷ್ಯೂರೆನ್ಸ್ ಕಂಪೆನಿಯನ್ನು ಕುರಿತು ...ತವನ್ನು ಹಾಡಿದರು. ತುಮಕೂರಿನ ಪ್ರಸಿದ್ಧ ಅಡ್ವೊಕೇಟರಾದ ಶ್ರೀ॥ ಕೆ. ...ಯ್ಯಂಗಾರ್ಯರು, ಶ್ರೀ॥ ಟಿ. ಸುಬ್ರ...ಹ್ಮಣ್ಯಂರವರು, ಶ್ರೀ॥ ಗುರುನಂಜಯ್ಯ...ನ, ತುಮಕೂರು ಡಿಸ್ಟ್ರಿಕ್ಟ್ ಎಜ್ಯುಕೇ...ಷನ್ ಆಫೀಸರಾದ ಶ್ರೀ॥ ಸಿ. ರಾಮಾ...ಯ್ಯಂಗಾರ್ಯರವರು ಶ್ರೀ॥ ಮುದ್ದಪ್ಪ...ರು, ತುಮಕೂರು ಡಿಸ್ಟ್ರಿಕ್ಟ್ ಬೋರ್ಡು ...ಧ್ಯಕ್ಷರಾದ ಶ್ರೀ॥ ಹೆಚ್. ವೆಂಕಟರಾಮ...ನವರು ಈ ಸಮಾರಂಭದ ವ್ಯವಸ್ಥಾಪ... ಪ್ರಾರ್ಥನೆಯಂತೆ ಭಾಷಣಮಾಡಿದರು. ...ಂತರ ಕಂಪೆನಿಯ ಜನರಲ್ ಮ್ಯಾನೇ...ಜರಾದ ಶ್ರೀ॥ ಟಿ. ವಿ. ದೊಡ್ಡವೀರ...ನವರು ಒಂದು ಸ್ವಾರಸ್ಯವಾದ ಭಾಷಣ...ವನ್ನು ಮಾಡಿ ಮೈಸೂರು ಇನ್ಷ್ಯೂರೆನ್ಸ್ ...ಪೆನಿಯ ಅಭಿವೃದ್ಧಿಯನ್ನು ಸೂಚಿಸಿದ... ಅನಂತರ ಕಂಪೆನಿಯ ಅಧ್ಯಕ್ಷ ...ಎಂ. ವಿ. ವೆಂಕಟಪ್ಪನವರು ಸ್ವಾರಸ್ಯವಾ...ದ ಭಾಷಣಮಾಡಿದರು ಅನಂತರ ಸಭಾ...ಧ್ಯಕ್ಷರಾದ ಅಬ್ದುಲ್‌ಖಾದರ್‌ರವರು ಮೈ...ಸೂರು ಇನ್ಷ್ಯೂರೆನ್ಸ್ ಕಂಪೆನಿಯು ಸ್ಥಾಪ...ವಾದದ್ದು ಮೈಸೂರು ಸಂಸ್ಥಾನದವರ ...ಯೋಗವೆಂದೇ ತಿಳಿಸಿದರು ಮತ್ತು ...ಕಂಪೆನಿಯಿಂದ ಮೈಸೂರು ಸಂಸ್ಥಾನದ ...ಜನಗಳು ಬಹಳಷ್ಟು ಲಾಭ ಹೊಂದಬೇ...ಕೆಂದು ಹೇಳಿದರು. ಅಧ್ಯಕ್ಷರು ...ಪಾಲಿಸಿದಾರರಾದವರಿಗೆ ಪಾ...ಲಿಸಿ ಪತ್ರಗಳನ್ನು ಕೊಟ್ಟರು.

...ಸಕಲರಿಗೂ ಪುಷ್ಪಗಳ ವಿನಿಯೋಗ ...ನಂತರ ಶ್ರೀಮನ್ಮಹಾರಾಜರ ಶ್ರೇಯಃ ...ಪ್ರಾರ್ಥನೆಯೊಡನೆ ಸಭೆಯು ಮುಕ್ತಾಯ...ವಾಯಿತು.

ವಿನೋದ ವಿಹಾರ.

ಮಗ—ಅಪ್ಪಾ, ಒಂಟೆಯು ಹದಿನೈದು ದಿನ ಕುಡಿಯದೆ ಕೆಲಸ ಮಾಡಬಲ್ಲುದಂತೆ. ಏನು ಆಶ್ಚರ್ಯ! ನೋಡಿ. ನಮ್ಮ ಉಪಾಧ್ಯಾಯರು ಇದನ್ನು ನಮಗೆ ತಿಳಿಸಿದಾಗ ನಮಗೆಲ್ಲರಿಗೂ ತುಂಬಾ ಆಶ್ಚರ್ಯವಾಯಿತು.

ತಂದೆ—ಅದರಲ್ಲೇನು ಆಶ್ಚರ್ಯ? ನಾನು ಹದಿನೈದು ದಿನ ಕೆಲಸಮಾಡದೆ ಕುಡಿಯಬಲ್ಲೆನು! ಅದಕ್ಕೇನು ಹೇಳುವರು ನಿಮ್ಮ ಉಪಾಧ್ಯಾಯರು?

† † †

ಅಂತಪ್ಪ—ಡಾಕ್ಟರರೇ, ಹಲ್ಲುನೋವು, ವಿಪರೀತ! ಔಷಧ ಬೇಕಾ ದೆ

ಹಲ್ಲು ವೈದ್ಯ—ಕೊಡಬಹುದಯ್ಯಾ ಅದಕ್ಕೇನು ಅಡ್ಡಿ?

ಅಂತಪ್ಪ—ಪಥ್ಯವೇನಾದರೂ ಇದೆಯೇ?

ಹಲ್ಲು ವೈದ್ಯ—ಇದೆ, ದುಡ್ಡು ತಿನ್ನಬಾರದಯ್ಯಾ, ಅಷ್ಟೇ.

† † †

ಹೊಸ ನೌಕರ—ಸ್ವಾಮಿ, ಕಸ ಗುಡಿಸುವಾಗ, ತಮ್ಮ ಪೆಟ್ಟಿಗೆಯ ಬಳಿಯಲ್ಲಿ ದೊರಕಿತು ಈ ರೂಪಾಯಿ. ಇಗೋ ತೆಗೆದುಕೊಳ್ಳಿ.

ಯಜಮಾನ—ಶಭಾಸ್! ನಿನ್ನ ಪ್ರಾಮಾಣಿಕತನಕ್ಕೆ ತುಂಬಾ ಮೆಚ್ಚಿದೆ. ನಿನ್ನ ಪರೀಕ್ಷೆಗಾಗಿಯೇ ಅದನ್ನಲ್ಲಿ ಹಾಕಿಬಿಟ್ಟಿದ್ದೆನು.

ನೌಕರ—ಒಳ್ಳೇದಾಯಿತು ಮಹಾಸ್ವಾಮಿ, ನಾನು ಕೂಡಾ ಹಾಗೆಯೇ ಭಾವಿಸಿಕೊಂಡಿದ್ದೆ ಬುದ್ಧೀ!

† † †

ರಾಯಣ್ಣನು—ಬಾಡಿದ ಮುಖದಿಂದ ಮನೆಗೆ ಹೋಗುತ್ತಿದ್ದನು. ಅವನ ಅಜ್ಜಿಯು ದಾರಿಯಲ್ಲಿ ಎದುರಾಗಿ ಬಂದಳು.

ಅಜ್ಜಿ—ಅಪ್ಪಾ, ರಾಯಣ್ಣ, ನಿನ್ನ ಮುಖವೇಕೆ ಬಾಡಿದೆ?

ರಾಯಣ್ಣ—ಕ್ಷಯ!

ಅಜ್ಜಿ ಏನು "ಕ್ಷಯವೇ"?

ರಾಯಣ್ಣ—ಹೌದು, ಪಾಠಶಾಲೆಯಲ್ಲಿ ಉಪಾಧ್ಯಾಯರು "ಕ್ಷಯ" ವೆಂಬುದನ್ನು ಬರಿ ಎಂದರು. ನಾನು ಕಷಾಯ ಎಂದು ಬರೆದೆ. ಅದಕ್ಕಾಗಿ ಬಿತ್ತು ಬೆನ್ನಿನಮೇಲೆ ಏಟು! ಕ್ಷಯದ ಪ್ರಭಾವ ನೋಡಿ!

† † †

ಜಾಲ ವಿದ್ಯೆಗಾರ—ನಾನೊಬ್ಬ ಜಾಲವಿದ್ಯೆಗಾರ. ನಾನು ಒಂದು ನಿಮಿಷದೊಳಗೆ ಒಂದು ಬಿಂದಿಗೆ ಜಲವನ್ನು ಒಂದು ಬಿಂದಿಗೆ ಹಾಲಾಗಿ ಮಾರ್ಪಡಿಸಬಲ್ಲೆನು.

ಹೋಟೆಲ್‌ಗಾರ—ಶಭಾಸ್! ಬಹಳ ಸಂತೋಷ ನಿನ್ನಂಥವನೇ ನಮ್ಮ ಹೋಟೇಲಿಗೆ ಅತ್ಯಾವಶ್ಯಕ.

ಜಾಲವಿದ್ಯೆಗಾರ—ಅದ್ಯಾಕೆ? ಹೋಟೇಲಿಗೆ ಬರುವವರಿಗೆ ನನ್ನ ಮಂತ್ರತಂತ್ರ ಜಾಲವಿದ್ಯೆಯನ್ನೆಲ್ಲಾ ತೋರಿಸಿ ಸಂತೋಷಪಡಿಸುವದಕ್ಕೋ?

ಹೋಟೆಲ್‌ಗಾರ—ಅಲ್ಲ, ಅಲ್ಲ, ಅಂಥಾದ್ದೇನೂ ಅವಸರವಿಲ್ಲ, ಅವರೆ ನಮ್ಮಲ್ಲಿರುವ ಹತ್ತಿಪ್ಪತ್ತು ಬಿಂದಿಗೆ ಜಲವನ್ನೆಲ್ಲಾ ಹಾಲಾಗಿ ಮಾರ್ಪಡಿಸಿಕೊಡುವುದಕ್ಕೆ!

(ಜೇ ತಿ ದೂ)

ವರ್ತಮಾನ ಸಂಗ್ರಹ.

ಆಕಾಶವಾಣಿ ಕಾರ್ಯಕ್ರಮ.

17-8-36ನೇ ಸೋಮವಾರ ರಾತ್ರಿ 8—9 ಪಿಯಾನೊ ವಾದ್ಯಗಾರಿಕೆ ಮಂಗಳವಾರ 6-30ರಿಂದ 7-45 ಕರ್ನಾಟಕ ಸಂಗೀತ ಮಿ॥ ಎನ್. ಎಸ್. ವೆಂಕಟಸುಬ್ಬರಾಯರಿಂದ ಆಧುನಿಕ ಕನ್ನಡ ಕವಿತೆಗಳ ಪಠನ. ಬುಧವಾರ 8—9. ಕರ್ನಾಟಕ ವಾದ್ಯಸಂಗೀತ "ನಿಮ್ಮ ಮಗುವು ಚೆನ್ನಾಗಿ ನಿದ್ರೆ ಮಾಡುತ್ತಿದೆಯೇ" ಎಂಬ ವಿಷಯವಾಗಿ ಭಾಷಣ ಗುರುವಾರ 6-30 ರಿಂದ 7-45. ಸುಮುಖಸುಂದರಿ ಎಂಬ ತಮಿಳು ನಾಟಕ, ಯುದ್ಧನಿರೋಧದ ಪ್ರಚಾರ. ಶುಕ್ರವಾರ 8ರಿಂದ 9-15 ಹಿಂದೂಸ್ಥಾನಿ ಸಂಗೀತ, ಜನಪದ ವಿಜ್ಞಾನ ಶನಿವಾರ 6-30ರಿಂದ 8-30. ವಿದ್ವಾನ್ ಬೆಳಕವಾಡಿ ವರದರಾಜಯ್ಯಂಗಾರ್ ಮತ್ತು ಮಂಡಳಿಯ ಸಂಗೀತ.

ದೊಂಬಿ ಮೊಕದ್ದಮೆ

ಕಳೆದ ನವಂಬರ್ ತಿಂಗಳಲ್ಲಿ ರಾಜಧಾನಿಯ ಕನ್ನೇಗೌಡನ ಕೊಪ್ಪಲಿನ ಹಿಂದೂಗಳಿಗೂ ಮಹಮ್ಮದೀಯರಿಗೂ ಜಗಳವುಂಟಾಯಿತಷ್ಟೆ ಇದರ ಪರಿಣಾಮವಾಗಿ ಪೋಲೀಸಿನವರು 16 ಜನ ದೊಂಬಿ ನಡಿಸಿದರೆಂಬ ಆಪಾದನೆಯ ಪ್ರಕಾರ ಇಲ್ಲಿನ ಸಿಟಿ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಮೊಕದ್ದಮೆ ಹೂಡಿದ್ದರು ಸಿಟಿ ಮ್ಯಾಜಿಸ್ಟ್ರೇಟರಾದ ಶ್ರೀ॥ ಕೆ ಗುರುವತ್ತರವರು 7 ಜನಗಳನ್ನು ಖುಲಾಸೆಮಾಡಿ ಉಳಿದ 9 ಜನರಮೇಲೆ ಚಾರ್ಜನ್ನು ಹಾಕಿರುವರು.

ಮ್ಯಾಜಿಸ್ಟ್ರೇಟರಮೇಲೆ ಅತ್ಯಾಚಾರ.

ಬೊಂಬಾಯಿಯಾದಿಪತ್ಯದ ಮಾರ್ಗಾ ಪೋಲಿಸ್ ಕೋರ್ಟಿನ ಚೀಫ್ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರಾದ ಮಿ॥ ಹಾಜಿಯವರ ಮೇಲೆ ಅಬ್ದುಲ್ ಗನಿ ವಲೀ ಮಹಮ್ಮದ್ ಎಂಬ ಒಬ್ಬ ಶಿಕ್ಷಿತ ಅಪರಾಧಿಯು ಒಂದು ಶೀಸೆಯನ್ನು ಎಸದನು. ಅದರಮೇಲೆ ವಿಷ ಎಂದು ಬರೆದಿತ್ತು ಅದು ಮ್ಯಾಜಿಸ್ಟ್ರೇಟರಮೇಲೆ ಬೀಳದೆ ಒಂದು ಲ್ಯಾಂಪಿನ ಮೇಲೆ ಬಿದ್ದು ಚೂರಾಯಿತು. ಕೋರ್ಟನ್ನು ಕೂಡಲೆ ಅಡ್‌ಜರ್ನ್ ಮಾಡಿದರು

ಭದ್ರಾವತಿ ಕಾರ್ಖಾನೆ.

ಭದ್ರಾವತಿ ಕಬ್ಬಿಣ ಕಾರ್ಖಾನೆಯ ಮ್ಯಾನೇಜಿಂಗ್ ಬೋರ್ಡಿನ ಅಧ್ಯಕ್ಷರಾದ ಶ್ರೀ॥ ಎ. ವಿ. ರಾಮನಾಥನವರು ಭದ್ರಾವತಿಗೆ ಭೇಟಿಯಿತ್ತರು. ಅಲ್ಲಿ ದಿನಕ್ಕೆ 30 ಟನ್ನು ಉಕ್ಕು ತಯಾರಾಗುತ್ತದೆಂದೂ, ಇಂಡಿಯಾದಲ್ಲಿ ತಯಾರಾಗುವ ಎಲ್ಲಾ ಉಕ್ಕುಗಳಿಗಿಂತಲೂ ಇದು ಶ್ರೇಷ್ಠವಾದದ್ದೆಂದೂ, ಇದು ಹೆಚ್ಚು ಬಿಚಾರಗುಳ್ಳದರಿಂದ ಬೆಲೆಯೂ ಹೆಚ್ಚಿದಯೆಂದೂ, ಗಿರಾಕಿಗಳೂ ಹೆಚ್ಚಾಗಿದ್ದಾರೆಂದೂ ತಿಳಿಸಿದರು.

ಭೂಮಿಯ ಹಂಚಿಕೆ.

ಭದ್ರಾ ವ್ಯವಸಾಯ ಕ್ಷೇತ್ರದ ವ್ಯವಸ್ಥೆಯ ಮೀಟಿಂಗು ಇದೇ ಮಾಹೆ 9ನೇ ತಾರೀಖು ನಡೆಯಿತು. ಭೇಟಿಗಾಗಿ ಕರೆಸಲಾಗಿದ್ದ 6 ಜನ ಉಮೇದುವಾರರನ್ನು ಕಂಡು ಅವರಿಗೆ ಕೊಡಲಾಗುವ ಜಮೀನನ್ನು ತಾವೇ ಸ್ವಂತವಾಗಿ ವ್ಯವಸಾಯ ಮಾಡಿ ಸರಿಯಾಗಿಟ್ಟುಕೊಳ್ಳುವರೇ ಎಂದು ಪ್ರಶ್ನಿಸಲು ಅವರಿಂದ ತೃಪ್ತಿಕರವಾದ ಉತ್ತರವು ಬಂದಿತು ಒಬ್ಬೊಬ್ಬರಿಗೂ 10 ಎಕರೆ ಭೂಮಿಯು ಕೊಡಲ್ಪಡುತ್ತದೆ.

ಮೈಸೂರಿಗೆ ವಿದ್ಯುಚ್ಛಕ್ತಿಯ ರೈಲು

ಮೈಸೂರು ರೈಲ್ವೆಯವರು 1937 ನೇ ವರ್ಷದ ನಂತರ ಮೈಸೂರು ಬೆಂಗಳೂರು ಮಾರ್ಗದಲ್ಲಿ ವಿದ್ಯುಚ್ಛಕ್ತಿಯನ್ನುಪಯೋಗಿಸಿ ರೈಲಿನ ವೇಗವನ್ನು ಹೆಚ್ಚಿಸುವರು. ನಿಮಿಷ ಒಂದಕ್ಕೆ 1 ಮೈಲಿಯಂತೆ ಹೋಗುತ್ತದೆ. ದರವನ್ನೂ ಕೊಂಚ ಕಡಿಮೆ ಮಾಡಲಾಗುವುದೆಂದು ತಿಳಿದು ಬರುತ್ತದೆ.

ಪ್ರಾಣಿದಯಾ ಪ್ರಚಾರಕ ಮಾಸಪತ್ರಿಕೆ

ಶ್ರೀಮಾನ್ ಖಾದ್ರಿ ಗುಂಡೂರಾಯರು "ಪ್ರಾಣಿದಯಾ ಪ್ರಚಾರಕ" ಎಂಬ ಮಾಸಪತ್ರಿಕೆಯನ್ನು ಹೊರಡಿಸಲು ಮೈಸೂರು ಸರ್ಕಾರದಿಂದ ಅಪ್ಪಣೆ ಪಡೆದಿರುತ್ತಾರೆ. ಈ ಪತ್ರಿಕೆಯು ಪ್ರಾಣಿದಯಾ ವಿಷಯದಲ್ಲಿ ಹೆಚ್ಚು ಸಹಕಾರಿಯಾಗುವುದರಲ್ಲಿ ಸಂಶಯವಿಲ್ಲ.

ಕ್ರೈಸ್ತರ ಶುದ್ಧಿ

ಚಿಕ್ಕಮಗಳೂರಿನಿಂದ ಮೈಸೂರಿಗೆ ಬಂದಿದ್ದ ಕ್ರಿಶ್ಚಿಯನ್ ಮತದ ಸುಂದರರಾಜ್ ಮತ್ತು ಅವರ ಪತ್ನಿ ಮೇರಿಯಮ್ಮ ಮತ್ತು ಅವರ ಮಗುವನ್ನು ಆರ್ಯಸಮಾಜದ ಧರ್ಮದೇವ ವಿದ್ಯಾವಾಚಸ್ಪತಿಯವರು ಈ ಮಾಹೆ 12 ನೇ ತಾರೀಖು ವೈದೀಕ ಧರ್ಮಾನುಸಾರವಾಗಿ ಶುದ್ಧಿ ಮಾಡಿ ಹಿಂದೂ ಮತಕ್ಕೆ ಸೇರಿಸಿಕೊಂಡರು. ಅವರುಗಳಿಗೆ ಮಂಜುನಾಥ, ಮೀರಾಬಾಯಿ ಮತ್ತು ಧರ್ಮವೀರ ಎಂಬ ಹೆಸರುಗಳನ್ನಿಡಲಾಯಿತು.

ಶತಮಾನ ಪುರುಷನ ಮರಣ

117 ವರ್ಷ ವಯಸ್ಸಿನ ಹಾಜಿ ನೋತಿ ಇಬ್ರಾಹಿಂ ಮೆನನ್ ಎಂಬ ಮುಸ್ಲಿಂ ಶತಮಾನ ಪುರುಷನಿಗೆ ಬುದ್ಧಿಭ್ರಮಣೆಯುಂಟಾಗಿ ಬೊಂಬಾಯಿ, ನಾರಾಯಣ ಧಾರು ರಸ್ತೆಯಲ್ಲಿರುವ ಒಂದು ಮನೆಯ 5 ನೆ ಅಂತಸ್ತಿನಿಂದ ಕೆಳಗೆ ಧುಮುಕಿ ಬಿದ್ದು ಮರಣಹೊಂದಿದನು

ರೈತರಿಗೆ ಪರಿಹಾರ.

ಕೃಷ್ಣರಾಜಸಾಗರದಲ್ಲಿ ನೀರಿನ ಮಟ್ಟವನ್ನು 124 ಅಡಿಗಳಿಗೆ ಏರಿಸುವುದರಿಂದ ಏಳು ಹಳ್ಳಿಗಳೂ, ಫಸಲಿರುವ ಅನೇಕ ಜಮೀನುಗಳೂ ಮುಳುಗಿ ಹೋಗುವುದರಿಂದ ಅವುಗಳ ರೈತರಿಗೆ ಪರಿಹಾರ ಕೊಡಲು 4 ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಲಾಗಿದೆ.

ಸಾಧ್ವಿ

೧೭-೮-೩೬ ನೇ ಸೋಮವಾರ

ನೆಮ್ಮದಿಯೇ ಇಲ್ಲ.

ಒಂದು ಅಬ್ಬೀನಿಯದ ಆಕ್ರಮಣ ಇಂದು ಸ್ಪೈಯಿನಿನ ಅಂತರ್ಯುದ್ಧ ಇಲ್ಲಿ ಚೀನದ ಅಶಾಂತಿ ಜಪಾನಿನ ಒತ್ತಾಯದ ನೀತಿ ಇವೆಲ್ಲವೂ ನಮಗೆ ಸಂಬಂಧವಿಲ್ಲವೆಂಬ ಕಾಲವು ಕಳೆದುಹೋಯಿತು ಸಾಮ್ರಾಜ್ಯವಾದ, ನಬಾಬೀ ದವಲತ್ತು ಧನಿಕರ ಅಧಿಕಾರ ಈ ತತ್ವಗಳು ಪರಸ್ಪರ ಹೊಡೆದಾಡುತ್ತಿವೆ ಅದರ ಪರಿಣಾಮವೇ ಇದು ಬ್ರಿಟಿಷರು ಸಾಮ್ರಾಜ್ಯವಾದಿಗಳೂ ಧನದ ದವಲತ್ತಿಗಾಗಿ ನಾಗರಿಕತೆಯ ಹೆಸರಿನಿಂದ ಕಾದಾಡುವವರೂ ಆಗಿದ್ದಾರೆ ಮುಸ್ಸೋಲಿನಿಯೂ, ಹಿಟ್ಲರನೂ ತಮ್ಮ ನಬಾಬಿ ದವಲತ್ತಿಗಾಗಿ ಹೊಡೆದಾಡುತ್ತಿರುವರು ಇವರೆಲ್ಲರಿಗೂ ಯುದ್ಧ ಸಾಮಗ್ರಿಗಳನ್ನು ಹೆಚ್ಚಿಸುವುದೂ ಯುದ್ಧ ಶಿಕ್ಷಣವನ್ನು ಕೊಡುವುದೂ, ಶಸ್ತ್ರಾಸ್ತ್ರಗಳ ಸಂಗ್ರಹದಲ್ಲಿ ಒಬ್ಬರನ್ನೊಬ್ಬರು ಮೀರಿಸಿರುವೆವೆಂದು ಜಗತ್ತಿಗೆ ಸಾರುವುದೂ ದಿನಚರಿಯ ಪಾಠವಾಗಿದೆ ಈ ದೇಶಗಳ ಯುದ್ಧದ ವೆಚ್ಚವು ಜನ ಜೀವನವನ್ನೇ ಹೀರುತ್ತಿದೆ

ಇಂದು ಅಬ್ಬೀನಿಯದ ಪಾಡಾಯಿತು ನಾಳೆ ಪತ್ತಾವ ದುರ್ಬಲ ದೇಶದ ಪಾಡೇನಾಗುವುದೋ ಚಿಂತಾಸ್ಪದವಾಗಿದೆ ಸ್ಪೈಯಿನ್ ದೇಶವು ಈಗ ಸಾಮ್ರಾಜ್ಯವಾದವನ್ನು ತಳ್ಳಿ ಜನತಾವಾದದ ಕಡೆಗೆ ಎಳೆದೊಯ್ಯಲೆತ್ನಿಸಿತು. ಇದು ನಬಾಬೀ ದವಲತ್ತಿನ ರಾಷ್ಟ್ರಗಳಿಗೆ ಸರಿಬೀಳಲಿಲ್ಲ ಈ ಎಲ್ಲ ರಾಷ್ಟ್ರಗಳೂ ಒಟ್ಟಾಗಿ ಸ್ಪೈನ್ ದೇಶದ ಈ ಅಂತಃಕಲಹದಲ್ಲಿ ತಾವು ಕೈಹಾಕುವುದಿಲ್ಲವೆಂದು ಸಾರುತ್ತಲೇ ಒಳ ಒಳ ಎಲ್ಲರೂ ತಮ್ಮ ಧನಗಳಿಂದ ದಂಗೆಗಾರರಿಗಾಗುತ್ತಲೇ ಇರುವರು. ಈ ಯೂರೋಪಿನ ರಾಜನೀತಿ ಅಬ್ಬೀನಿಯದ ಕದನದಲ್ಲಿ ಇಟಲಿಯೊಡನೆ ವ್ಯವಹಾರವನ್ನೆಲ್ಲಾ ನಡೆಸುತ್ತಿದ್ದರೂ, ಎಲ್ಲರೂ ನಿಲ್ಲಿಸಿರುವೆವೆಂದೇ ಹೇಳುತ್ತಿದ್ದರು

ಇಂದು ಪ್ರಪಂಚದಲ್ಲಿ ಸಾಮ್ರಾಜ್ಯ ತತ್ವವೆ ಸಮತಾವಾದವೇ ನಬಾಬೀ ದವಲತ್ತೇ ಯಾವುದು ಗೆಲ್ಲುವದು? ಇದು ವಿಚಾರಾಸ್ಪದವಾದುದೇ ಸರಿ ನಬಾಬೀ ದವಲತ್ತಿನಲ್ಲಿಯಾಗಲೀ, ಸಾಮ್ರಾಜ್ಯದಲ್ಲಿಯಾಗಲೀ ಹೊಟ್ಟೆಯೇ ಹೊರೆಯಾಗಿ ಧನಿಕರ ಮದದಿಂದ, ಅಧಿಕಾರಿಗಳ ಅತ್ಯಾಚಾರದಿಂದ ಜನರು ಬೇಸತ್ತು ಹೋಗಿರುವರು ಮನುಷ್ಯನನ್ನು ಪಶುವನ್ನಾಗಿ ಮಾಡಿ, ಆಳುತ್ತಿರುವುದು ವಿನಾಶಕರವಾದ ಯಂತ್ರಶಕ್ತಿ. ಡನ್ಮಾರ್ಕ್ ದೇಶವನ್ನು ಒಂದೇ ಘಂಟೆಯ ಕಾಲದಲ್ಲಿ ಪ್ರಾಣಿ ಮಾತ್ರದ ಹೆಸರಿಲ್ಲದಂತೆ ಹಿಟ್ಲರನು ಮನಸ್ಸುಮಾಡಿದರೆ ತೊಡೆದು ಬಿಡಬಲ್ಲನು ಒಂದೇ ಒಂದು ವಿಮಾನದಿಂದ ದ್ರವರೂಪವಾದ ಮಳೆ ಹನಿಗಳನ್ನು ಸುರಿಸುತ್ತಿದ್ದರೆ ಸಾಕು ಆ ಹನಿಗಳಲ್ಲಡಗಿರುವ ಸ್ಫೋಟಕ ವಸ್ತುಗಳೂ, ಅದರಿಂದ ಹುಟ್ಟುವ ವಿಷಗಾಳಿಯೂ ಸುತ್ತಲಿನ ಎಲ್ಲ ಪ್ರದೇಶಗಳನ್ನೂ ಬೂದಿಯ ರಾಶಿಯನ್ನಾಗಿ ಮಾಡಿಬಿಡುವುದು ಮೃತ್ಯುಕಿರಣದ ಮಹಿಮೆಯು ಹೀಗೆಂದು ಹೇಳಲಶಕ್ಯ. ಹಿಂದಿನ ಯುದ್ಧದಲ್ಲಿ ಅಸಾಧ್ಯವೆಂದು ತಿಳಿದಿದ್ದುವು ಇಂದು ಸರ್ವಸಾಧಾರಣಗಳು ವಿಷವಾಯುವಿನ ಕೆಲಸಗಳೆಂದರೆ ಅಬಿಸೀನಿಯದ ಕದನದಲ್ಲಿ ಬಹು ಭಯಂಕರವು ಕೆಲವರು ಗಾಳಿಯಿಂದ ಸತ್ತರು. ಅನೇಕರು ಜೀವಾವಧಿ ಶ್ವಾಸಕೋಶಗಳ ಮತ್ತು ಕಣ್ಣಿನ ರೋಗಗಳಿಗೆ ತುತ್ತಾದರು ಬಹು ಅದೃಷ್ಟಶಾಲಿಗಳಾದವರು ಬಟ್ಟೆ ಎಲ್ಲವೂ ಬೆಂದು ಉಳಿದವರು ಚಿತ್ತಲೆಯಾದ ದೇಶೀಯ ಹೆಂಗಸರ ಮಕ್ಕಳ ಪಾಡುಗಳನ್ನು ಸ್ವೀಡನ್ನು ದೇಶದ ಡಾಕ್ಟರುಗಳು ಬರೆದಿದ್ದಾರೆ.

ಇದು ಸಮತಾವಾದದ ಯುಗ ಆದರೆ ಯಂತ್ರಯುಗವು ತನ್ನ ಸ್ಥಾನವನ್ನು ಬಿಟ್ಟುಕೊಡಲು ಬಲಿದಾನವನ್ನು ಕೇಳುತ್ತಿದೆ. ಯಾವ ಯಾವ ದೇಶಗಳು ಬಲಿ ಬೀಳುವುವೋ ಅದನ್ನು ಈಗಾಗಲೇ ಹೇಳಬರುವಂತಿಲ್ಲ ಹೇಗೂ ಯೂರೋಪಿನ ಈ ಕಾಡ್ಗಿಚ್ಚಿನಿಂದ ಭಾರತ ಭೂಮಿಯು ತಪ್ಪಿಸಿಕೊಳ್ಳಲು ಸಾಧ್ಯವಿಲ್ಲ

ಸಿ. ರಾಜಗೋಪಾಲಾಚಾರಿಯವರ ರಾಜೀನಾಮೆ.

ತಿರುಚನಾಪಳ್ಳಿ ಮುನಿಸಿಪಲ್ ಕೌನ್ಸಿಲ್ ಅಧ್ಯಕ್ಷ ಚುನಾವಣೆಗೆ ಮಿ|| ತಿವಾರಿ ಮತ್ತು ಮಿ|| ಪೊನ್ನಯ್ಯಪಿಳ್ಳೆ ಎಂಬ ಇಬ್ಬರು ಕಾಂಗ್ರೆಸ್ಸಿನವರೇ ಉಮೇದುವಾರರಾಗಿದ್ದರು ತಮಿಳುನಾಡು ಪ್ರಾಂತಿಕ ಕಾಂಗ್ರೆಸ್ ಕಮಿಟಿಯು ಮಿ|| ತಿವಾರಿಯವರೇ ಚುನಾವಣೆಗೆ ನಿಲ್ಲಬೇಕೆಂದು ಸೂಚಿಸಿತು. ಆದರೆ ಸ್ಥಳೀಯ ಕಾಂಗ್ರೆಸ್ಸಿನವರು ತಿವಾರಿಯವರು ನಿಲ್ಲಕೂಡದೆಂದು ಒತ್ತಾಯಪಟ್ಟಿದ್ದರು ಡಾ|| ರಾಜನ್‌ರವರು ಪೊನ್ನಯ್ಯಪಿಳ್ಳೆಯವರನ್ನೇ ಸೂಚಿಸಿದರು ಮತ್ತು ಪೊನ್ನಯ್ಯಪಿಳ್ಳೆಯವರಿಗೇ ಹೆಚ್ಚು ಓಟು ದೊರೆತು ತಿವಾರಿಯವರು ಸೋತುಹೋದರು ಈ ವಿಧವಾದ ಭೇದಭಾವಗಳು ಉಂಟಾಗಿರುವುದಕ್ಕಾಗಿ ಶ್ರೀ|| ಸಿ ರಾಜಗೋಪಾಲಾಚಾರಿಯವರು ತಮಗೂ ಕಾಂಗ್ರೆಸ್ಸಿಗೂ ಯಾವ ಸಂಬಂಧವೂ ಇಲ್ಲವೆಂದು ರಾಜೀನಾಮೆ ಪತ್ರವನ್ನು ಕಳುಹಿಸಿರುವರು

ಕಾಂಗ್ರೆಸ್ ಸಭೆಯನ್ನು ಆಗಾಗ್ಗೆ ಬಿಡುವುದು, ಮತ್ತೆ ಮತ್ತೆ ಸೇರುವುದು, ಇದೂ ಒಂದು ಪದ್ಧತಿಯಾಗಿ ಹೋಗಿದೆ. ಮಹಾತ್ಮರೇ ಹೀಗೆ ಮಾಡುತ್ತಾರೆ ಅಂದಮೇಲೆ ಬಾಕಿಯವರೇನು? ರಾಜಗೋಪಾಲಾಚಾರಿಯವರು ಹೀಗೆ ನಿವೃತ್ತರಾಗುವ ಆಲೋಚನೆ ಮಾಡಿರುವುದು ಇದೇ ಮೊದಲನೇ ಸಾರಿಯಲ್ಲ. ಮೊನ್ನೆ ತಾನೆ ಒಂದುಬಾರಿ ಅವರು ವಿಶ್ರಾಂತರಾಗಲು ಪ್ರಯತ್ನಿಸಿದರು ಮುಖಂಡರ ಸಲಹೆಯಂತೆ ಅವರು ತಟಸ್ಥರಾದರು

ಮಹಾತ್ಮರೇನೋ ಆಗಾಗ್ಗೆ "ಅಂತರಾತ್ಮನ ಪ್ರೇರಣೆ" ಯಂತೆ ನಿರ್ಧಾರಗಳನ್ನು ಮಾಡುವರು ಅವನ್ನು ಯಾರೂ ಪ್ರಶ್ನಿಸಲು ಸಾಧ್ಯವಿಲ್ಲ ಆದರೆ ಶ್ರೀ|| ರಾಜಗೋಪಾಲಾಚಾರಿಯವರು ಎಲ್ಲಾ ಕೆಲಸಗಳನ್ನೂ ಸಂಪೂರ್ಣವಾದ ಪೂರ್ವಾಪರ ಪರ್ಯಾಲೋಚನೆಯಿಂದ ಮಾಡುವರು ಬಹಳ ಮೇಧಾವಿಗಳು. ಇಂತಹವರು ಈ ರೀತಿ ವರ್ತಿಸುವುದು ವಿಷಾದಕರ. ತಿರುಚನಾಪಳ್ಳಿಯ ಒಂದು ಸಣ್ಣ ಚುನಾವಣೆಯ ಪ್ರಸಂಗದ ಭೇದಭಾವಗಳು ರಾಷ್ಟ್ರೀಯ ಮಹಾಸಭೆಯ ಪ್ರಭಾವಕ್ಕೂ ಯಶಸ್ಸಿಗೂ ಕಳಂಕವನ್ನು ತರಲಾರವು ಅದಕ್ಕಾಗಿ ರಾಜಗೋಪಾಲಾಚಾರಿಯವರಂತಹ ಅದ್ಭುತ ವ್ಯಕ್ತಿಗಳು ತಲ್ಲಣಗೊಳ್ಳುವುದೂ ಅನುಚಿತವು ಕಾಂಗ್ರೆಸ್ ಮಹಾಸಭೆಯು ಈಗ ಪ್ರಪಂಚದಲ್ಲಿಯೇ ಒಂದು ಮಾನ್ಯಸ್ಥಾನವನ್ನು ಪಡೆದಿದೆ ಅದಕ್ಕೆ ಎಲ್ಲಾ ವ್ಯಕ್ತಿಗಳಿಗಿಂತಲೂ ಹೆಚ್ಚಿನ ಗೌರವವಿದೆ ಆದ್ದರಿಂದ ಪ್ರತಿಯೊಬ್ಬ ಭಾರತೀಯನೂ ತನ್ನ ಗೌರವಕ್ಕಿಂತ ಕಾಂಗ್ರೆಸ್ಸಿನ ಗೌರವವು ಹೆಚ್ಚಿನದೆಂದು ತಿಳಿದು ವರ್ತಿಸಬೇಕು

ಆಯುರ್ವೇದ ಮಹಾ ಪಾ
ಶಾಲಾ, ಮೈಸೂರು.

ಮೈಸೂರು ಆಯುರ್ವೇದಿಕ್ ಕಾ
ಜಿನ ಸ್ಥಾನಪತಿತ್ವಕ್ಕೆ ಡಾ|| ಚೊಕ್ಕಂ
ಬಂದಿರುವುದು ಸರಿಯಷ್ಟೆ ಇವರು
ಸೂರು, ಶಿವಮೊಗ್ಗ, ಮತ್ತು ಬೆಂಗಳೂ
ಇವೇ ಮೊದಲಾದ ದೊಡ್ಡ ದೊಡ್ಡ ಆ
ತ್ರೆಗಳಲ್ಲಿ ಕೆಲಸ ಮಾಡಿ ಒಳ್ಳೆ ಹೆಸ
ಪಡೆದಿರುತ್ತಾರೆ ಇವರು ಬಹಳ ಕಾ
ಯಿಂದ ಇಲ್ಲಿಯ ವಿದ್ಯಾರ್ಥಿಗಳ ಮ
ವಿದ್ವಾಂಸರುಗಳ ಕುಂದುಕೊರತೆಗಳ
ರಿತು ಅವನ್ನು ಪರಿಹರಿಸುವುದಲ್ಲದೆ
ಕಾಲೇಜಿನ ಅಭಿವೃದ್ಧಿಗಾಗಿ ಕೆಲಸಮಾ
ವರೆಂದು ನಂಬಿರುತ್ತೇವೆ

ಆಯುರ್ವೇದಾಭ್ಯಾಸ ಮಾಡಬೇಕಾ
ಅಷ್ಟಾಂಗ ಹೃದಯ (The Princip
of Medicine) ಇದು ಮುಖ್ಯ
ದ್ದು ಇದನ್ನು ಸರಿಯಾಗಿ ವಿದ್ಯಾ
ಳಿಗೆ ಮುಂದಟ್ಟಾಗುವಂತೆ ಹೇಳಬೇ
ಹೀಗೆ ಮಾಡಬೇಕಾದರೆ ಒಳ್ಳೆ ಸ
ಜ್ಞಾನವುಳ್ಳ ಮತ್ತು ಆಯುರ್ವೇದಾಭ್ಯಾ
ಮಾಡಿ ಪಾಠ ಪ್ರವಚನದಲ್ಲಿ ಅನುಭ
ಳ್ಳವರಾಗಿರಬೇಕು ಶಾರೀರ (Anatom
and Physiology) ಮತ್ತು ಚಿಕಿ
ಕಿತ್ಸಾ (The Practice of Medi
cine), ಇವು ಬಹಳ ಕಷ್ಟತರವಾದ ಗ್ರಂ
ಥಗಳು ಇದನ್ನು ಸ್ಫುಟವಾಗಿ ಅ
ರಮಾಡತಕ್ಕವರಾಗಿಯೂ ಮತ್ತು ಸ್ವ
ಭವದೊಡನೆ ವಿದ್ಯಾರ್ಥಿಗಳ ಸಂದೇ
ವೃತ್ತಿ ಮಾಡತಕ್ಕವರಾಗಿಯೂ ಇರು
ವಿದ್ವಾಂಸರುಗಳಿಂದ ಪಾಠ ಪ್ರವಚ
ವಾಗಬೇಕು D Gopalachar
'Professor of Ayurveda' ಇ
ರನ್ನು ನೇಮಿಸಿರುವುದು ಕಷ್ಟತರ
ಗ್ರಂಥಗಳನ್ನು ಪಾಠ ಹೇಳುವುದಕ್ಕಾ
ಯೇ ಆದರೆ ಇದುವರೆವಿಗೆ ಇವರು
ಶ್ಚಾತ್ಯ ಶಾಸ್ತ್ರ ಪ್ರವಚನದಲ್ಲಿ ಹೆಚ್ಚು
ಕ್ತಿ ತೋರಿಸುತ್ತಿರುವಂತಿದೆ. ಇವ
ನ್ನು ಮುಂದೆ ಹೀಗೆ ಮಾಡದೆ, ಮೇಲ್ಕಂ
ಗ್ರಂಥಗಳನ್ನು ಆಸಕ್ತಿಯಿಂದ ಪಾಠ
ಳಿದರೆ ವಿದ್ಯಾರ್ಥಿಗಳಿಗೂ ಮತ್ತು ಅ
ನ್ನು ನೇಮಿಸಿದವರಿಗೂ ಎಷ್ಟೋ ಪ್ರಯೋ
ಜನವಾಗದೆ ಇರಲಾರದು

ಮ|| T ಕೃಷ್ಣಶಾಸ್ತ್ರಿಗಳು ಮ
T. ಶ್ರೀನಿವಾಸಯ್ಯಂಗಾರ್ ಇವರುಗಳ
ಈಗ 6 ವರ್ಷದಿಂದ 'ಹಂಗಾಮಿ ಅ
ಪಕರನ್ನಾಗಿ' ಸರ್ಕಾರದವರು ನಿಯಮಿ
ದ್ದರು ಈಗ ನಿಯಮಾನುಸಾರ ಇವ
ವಿಶ್ರಾಂತಿ ಕೊಟ್ಟಿರುತ್ತಾರೆ ಇವ
ಧನ್ವಂತರಿಯು ಆಯುರಾರೋಗ್ಯ ಭಾ
ಗಳನ್ನಿತ್ತು ಕಾಪಾಡಲೆಂದು ಪ್ರಾರ್ಥಿ
ಕ್ತೇವೆ ಈ ಕಾಲೇಜಿನಲ್ಲಿ ಖಾಲಿ ಇರು
ಮತ್ತು ಬೀಳಬಹುದಾದ ವಿದ್ವಾಂಸರ
ಸ್ಥಾನಕ್ಕೆ, ಇದೇ ಕಾಲೇಜಿನಲ್ಲಿ ಸ್ವಾ
ರುವ ಮತ್ತು ಸರಿಯಾದ ಅರ್ಹತೆ ಇ

(ಹಿಂದಿನ ಕಾಲಂ ನೋಡಿ)

ಯೌವನಸ್ಥರನ್ನು ಚುನಾಯಿಸಬೇಕು ಇನ್ನು ಮುಂದಾದರೂ ಹೀಗೆ ಮಾಡದಿದ್ದರೆ ಪ್ಯಾಸಾದ ವಿದ್ವಾಂಸರುಗಳ ಮನಸ್ಸಿನಲ್ಲಿ ಸಮಾಧಾನವು ನೆಲಸಲಾರದು. ಈಗ 7 ವರ್ಷಗಳಿಂದ 'ಕಾಲೇಜ್ ಡೇ' ನಡೆಯದೆ ಈ ಸಮಾರಂಭದಲ್ಲಿ ನಡೆಯಬೇಕಾದ 'ಪದವೀದಾನ ಸಮಾರಂಭವು' ತಟಸ್ಥವಾಗಿ, ಪ್ಯಾಸಾದ ವಿದ್ವಾಂಸರುಗಳಿಗೆ ಪದವಿಗಳು ದೊರೆಯದಂತಾಗಿವೆ ಇದರಿಂದ ದೂರ ಪ್ರದೇಶಗಳಲ್ಲಿ ಆಯುರ್ವೇದಾಭ್ಯಾಸ ಮಾಡತಕ್ಕ ವಿದ್ವಾಂಸರುಗಳು ವಿವಿಧ ತೊಂದರೆಗಳಿಗೆ ಈಡಾಗಿದ್ದಾರೆ ಮುನಿಸಿಪಾಲಿಟಿಗಳ ಮತ್ತು ಡಿಸ್ಟ್ರಿಕ್ಟ್ ಬೋರ್ಡಿನಿಂದ ನಡೆಸುತ್ತಿರುವ ಆಯುರ್ವೇದ ಆಸ್ಪತ್ರೆಗಳಲ್ಲಿ ಕೆಲಸಮಾಡುತ್ತಿರುವ ವೈದ್ಯರುಗಳ ಕುಂದುಕೊರತೆಗಳನ್ನು ವಿಚಾರಿಸಲು ಓರ್ವ ಆಯುರ್ವೇದ ವೈದ್ಯ ಅಧಿಕಾರಿಯನ್ನು ನೇಮಿಸುವಂತೆ ನಮ್ಮ ಘನ ಸರ್ಕಾರವನ್ನು ಪ್ರಾರ್ಥಿಸಬೇಕು

ಆಯುರ್ವೇದ ವೈದ್ಯ.

ನಾವು ಕತ್ತೆಗಳಿಗಿಂತ ಕಡೆಯೇ?

ಅಬ್ದುಲ್ ಗಫೂರ್‌ಖಾನರ ಹೇಳಿಕೆ.

"ಮನುಷ್ಯರೆಂದು ಹೇಳಿಕೊಳ್ಳಲು ನಾವು ನಾಚಿಕೆ ಪಡುತ್ತೇನೆ ಆದರೆ ನಮ್ಮನ್ನು ಪರೋಟೆಯಲ್ಲಿಟ್ಟುಕೊಂಡಿರುವಂತೆ 35 ಕೋಟಿ ಕತ್ತೆಗಳನ್ನು ಇಟ್ಟುಕೊಳ್ಳುವುದೂ ಕೂಡ ಅಲ್ಪ ಸಂಖ್ಯಾತರಾದ ಕೆಲವು ಜನರಿಗೆ ಸಾಧ್ಯವಿಲ್ಲ ನಾವು ಹಿಂದೂ, ಮುಸಲ್ಮಾನ್ ಎಂದು ವಿಧವಿಧವಾಗಿ ಕರೆದುಕೊಳ್ಳುತ್ತೇವೆ ಗುಲಾಮರಿಗೆ ಜಾತಿಯೇ ಇಲ್ಲವೆಂದು ನಾನು ಸ್ಪಷ್ಟವಾಗಿ ಹೇಳುತ್ತೇನೆ. ಕಾಂಗ್ರೆಸ್ಸು ಕೇವಲ ಹಿಂದೂ ಸಂಸ್ಥೆಯೆಂದು ಕೆಲವರು ಹೇಳುವರು ಇದು ಕುಹಕದಿಂದ ಕೂಡಿದ ಅಸತ್ಯ ವಾಯುವ್ಯ ಪ್ರಾಂತದಲ್ಲಿ ಹಿಂದೂಗಳು ಕಾಂಗ್ರೆಸ್ಸಿಗೆ ಬೆಂಬಲ ಕೊಟ್ಟರೆ ಅವರು ಮುಸಲ್ಮಾನರ ಗುಲಾಮರಾಗಬೇಕಾಗುವುದೆಂದು ಹೇಳಲ್ಪಡುತ್ತಿದೆ ಜನರ ನನಗೆ ಇದರಿಂದ ಏನೂ ಬಾಧಕವಿರುವಂತೆ ಕಾಣುವುದಿಲ್ಲ ಹೊಟ್ಟೆಗಿಲ್ಲದ ಪರಿತಪಿಸುತ್ತಿರುವ ಮುಸಲ್ಮಾನರು ಹಿಂದೂ ರಾಜ್ಯದಲ್ಲಿಯೂ, ಹಿಂದೂಗಳು ಮುಸಲ್ಮಾನ್ ರಾಜ್ಯಭಾರದಲ್ಲಿಯೂ ತಮ್ಮ ಆಸ್ತಿಗಳನ್ನು ಸಂಪಾದಿಸಿಕೊಳ್ಳುವಂತಾದರೆ ಏನೂ ಅಡ್ಡಿಯಿಲ್ಲ. ವಿದೇಶೀಯರ ಗುಲಾಮರಾಗಿರುವುದಕ್ಕಿಂತಲೂ ಸ್ವದೇಶದ ಬಹುಸಂಖ್ಯಾತ ಪಂಗಡದವರ ಅಧೀನದಲ್ಲಿರುವುದು ಸರ್ವೋತ್ತಮವು. ಆದ್ದರಿಂದ ಕಾಂಗ್ರೆಸ್ ಕಾರ್ಯಕ್ರಮಕ್ಕೆ ಎಲ್ಲರೂ ನೆರವಾಗಬೇಕು ಅದರಲ್ಲೂ ಮುಸಲ್ಮಾನರು ಅಗತ್ಯವಾಗಿ ಸಹಕರಿಸಬೇಕು. ಏಕೆಂದರೆ ಅವರ ಮತವು ಗುಲಾಮಗಿರಿಯನ್ನು ನಿಷೇಧಿಸುತ್ತದೆ ಸ್ವಾತಂತ್ರವನ್ನೇ ಬೋಧಿಸುತ್ತದೆ"—ಹೀಗೆಂದು ವಾಯುವ್ಯ ಪ್ರಾಂತ್ಯದ ಗಾಂಧಿಯೆಂದು ಸುಪ್ರಸಿದ್ಧರಾದ ಖಾನ್ ಅಬ್ದುಲ್ ಗಫೂರ್ ಖಾನರು ಮೊನ್ನೆ ಒಂದು ಉಜ್ವಲ ಭಾಷಣದಲ್ಲಿ ಹೇಳಿದರು

ಸಪ್ಪೂಡನೆ ಇಸ್ಪೀಟ್ ಆಟ.

ಸತ್ತವನ ಉದ್ಯೋಗ

ಲ್ಯಾಂಕಾಷೈರಿನ ಕಂದಾಯದ ಅಧಿಕಾರಿ ಎಂ ಕ್ಲೆಮನ್ ಎಂಬುವನು ಹೆಂಗಸಿಗೆ ಅವಳ ಗಂಡನ ಕಂದಾಯವನ್ನು ಅವನಿಂದ ಸ್ವೀಕರಿಸಲು ವಿಳಾಸವನ್ನು ಕೊಡಬೇಕೆಂದು ಬರೆದನು ಅವಳು ಕಾಗದವನ್ನು ನೋಡಿ ಈ ಉತ್ತರಕೊಟ್ಟಳು—ಅವನ ಈ ವಿಳಾಸ—ಫ್ರೆಡ್ ಸಿಮೆಟ್ರಿ! ಅವನ ಸ್ವರ್ಗ—ಸ್ವರ್ಗದಲ್ಲಿದ್ದರೆ ಸುಖಸಾಗರ ಸಂಘದ ಸದಸ್ಯ, ನರಕದಲ್ಲಿದ್ದರೆ ಸೈತಾನನೊಡನೆ ಇಸ್ಪೀಟ್ ಆಟ ಈ ಎರಡು ಸ್ಥಳಗಳಿಂದಲೂ ಅವನು ಕಂದಾಯ ವಸೂಲಿ ಮಾಡುವವರ ಹಾವಳಿಯಿಂದ ಪಾರಾಗಿದ್ದಾನೆ!

ಕಿವಿಯ ನೋವಿಗೆ ಹಬೆಯ ಚಿಕಿತ್ಸೆ.

ಕಿವಿನೋವಿಗೆ ನೀರಿನ ಹಬೆಯ ಶಾಖದಿಂದಾಗುವಷ್ಟು ಗುಣವು ಮತ್ತಾವುದರಿಂದಲೂ ಕಂಡುಬರುವುದಿಲ್ಲ ಎರಡುಮೂರು ಪಾತ್ರೆಗಳಲ್ಲಿ ಚೆನ್ನಾಗಿ ನೀರು ಕುದಿಯುವವರೆವಿಗೂ ಕಾಯಿಸಬೇಕು ಮತ್ತು ಅದೇ ಕಾಲದಲ್ಲಿ ಸಿಂಜೇಕಾಯಿ ಗಾತ್ರ ಎರಡು ಮೂರು ಕಲ್ಲುಗಳನ್ನು ಒಲೆಯಲ್ಲಿ ಹಾಕಿ ಕೆಂಡದಂತೆ ಕೆಂಪಗಾಗುವವರೆವಿಗೂ ಇಡಬೇಕು. ಕಲ್ಲುಗಳು ಚೆನ್ನಾಗಿ ಕಾದನಂತರ ಒಂದನ್ನು ಕುದಿಯುವ ನೀರಿನೊಳಕ್ಕೆ ಇಟ್ಟಲ್ಲಿ ಹಬೆಯು ಹೊರ ಹೊರಡುವುದು ಆಗ ನೋವಿರುವ ಕಿವಿಯನ್ನು ಆ ಹಬೆಯ ಶಾಖಕ್ಕೆ ಸರಿಯಾಗಿ ಹಿಡಿಯಬೇಕು ಹಬೆಯು ಕಿವಿಯೊಳಕ್ಕೆ ನುಗ್ಗುತ್ತದೆ. ಅದು ಮುಗಿದ ನಂತರ ಮತ್ತೊಂದು ಕಾದ ಕಲ್ಲನ್ನು ಇನ್ನೊಂದು ಪಾತ್ರೆಯಲ್ಲಿ ಕುದಿಯುತ್ತಿರುವ ನೀರಿಗೆ ಹಾಕಿದಲ್ಲಿ ಹಬೆಯು ಪುನಃ ಬರುತ್ತದೆ.

ಶರೀರವನ್ನು ಮಂದವಾದ ಬಟ್ಟೆಯಿಂದ ಸಂಪೂರ್ಣವಾಗಿ ಮುಚ್ಚಿಕೊಂಡು ಹಬೆಯ ಶಾಖಕ್ಕೆ ಮಾತ್ರ ಕಿವಿಯನ್ನು ಬಿಡಬೇಕು ಆಗ ದೇಹದಲ್ಲಿ ವಿಶೇಷ ಸೆಕೆಯುಂಟಾಗಿ, ಬೆವರು ಸುರಿಯಲಾರಂಭಿಸುವುದು

ಕೆಂಪಗೆ ಕಾದ ಎರಡು ಅಥವಾ ಮೂರು ಕಲ್ಲುಗಳು ಸಾಕು. ಹೆಚ್ಚಿಗೆ ಅನಾವಶ್ಯಕ ಮನುಷ್ಯನು ತಡೆಯುವುದಕ್ಕಿಂತ ಹೆಚ್ಚಾದ ಶಾಖ ಕೊಡಕೂಡದು.

ಮುಸ್ಲಿಂ ಕನ್ಯಾಪಹಾರಿ.

ಮಹಮ್ಮದ್‌ಗೌಸ್ ಎಂಬುವನು ಮಹಮ್ಮದ್ ಷಾ ಎಂಬುವನ ರಕ್ಷಣೆಯಲ್ಲಿದ್ದ 14 ವರ್ಷದ ತರುಣಿಯನ್ನು ಅಪಹಾರ ಮಾಡಿದನೆಂದು ಫಿರ್ಯಾದು ಕೊಟ್ಟಮೇಲೆ ಬೆಂಗಳೂರು ಚಾಮರಾಜಪೇಟೆ ಪೋಲೀಸಿನವರು ಅಪರಾಧಿಯನ್ನು ದಸ್ತಗಿರಿ ಮಾಡಿ ವಿಚಾರಣೆ ನಡೆಸುತ್ತಿದ್ದಾರೆ.

ಅರಕಲಗೂಡು ವರ್ತಮಾನ.

(ನಮ್ಮ ಬಾತ್ಮೀದಾರರಿಂದ)

ಅರಕಲಗೂಡಿನಲ್ಲಿ ಪ್ಲೇಗ್ ಜಾಡ್ಯವು ಪ್ರಾರಂಭವಾಗಿದೆ ಆಗಲೇ ಒಬ್ಬನಿಗೆ ತಗಲಿ ಮರಣಹೊಂದಿದನು. ಮತ್ತೊಬ್ಬನಿಗೆ ತಗಲಿದೆ. ಗ್ರಾಮನಿರ್ಮಲೀಕರಣ ಸಭೆಯವರು ಗ್ರಾಮ ಪರಿಶುದ್ಧತೆಗೆ ಹೆಚ್ಚು ನಿಗಾ ಕೊಡುತ್ತಾರೆಂದು ನಂಬಿದ್ದೇವೆ

ಇದೇ ಊರಿನ ಒಬ್ಬ ನೌಕರರು 4-8-36 ರಲ್ಲಿ ಒಂದು ಮಗುವಿನಮೇಲೆ ಬೈಸಿಕಲ್ಲು ಬಿಟ್ಟರು ಆ ಮಗುವಿಗೆ ಘಾಯಗಳಾಗಿ ಔಷಧಿ ಹಾಕಿಸುತ್ತಿದ್ದಾರೆ ಇನ್ನೂ ಗುಣವಾಗಿಲ್ಲ ಬೈಸಿಕಲ್ಲಿನಮೇಲೆ ಪ್ರಯಾಣ ಮಾಡುವವರು ನಿಧಾನವಾಗಿಯೂ ಎಚ್ಚರಿಕೆಯಾಗಿಯೂ ನಡಿಸುತ್ತಾರೆಂದು ನಂಬುತ್ತೇವೆ

ಪಾರ್ಲಿಮೆಂಟಿನಲ್ಲಿ ದುರ್ಗಾಂಧ

ಕಳೆದತಿಂಗಳು ಬ್ರಿಟಿಷ್ ಪಾರ್ಲಿಮೆಂಟ್ ಸಭೆಯಲ್ಲಿ ಇದ್ದಕ್ಕಿದ್ದಹಾಗೆಯೇ ದುರ್ವಾಸನೆ ಹೊರಟಿತು ಸಭಿಕರೆಲ್ಲರೂ ತಳಮಳಗೊಂಡರು ಅನೇಕರು ಕೆಮ್ಮುವುದಕ್ಕೂ ಸೀನುವುದಕ್ಕೂ ಆರಂಭಿಸಿದರು. ಮಿಸ್ ವಿಲ್ಕಿನ್ಸನ್ ಎಂಬ ಸ್ತ್ರೀ ಸದಸ್ಯರು ಕಣ್ಣಿನಲ್ಲಿ ನೀರಿಡುತ್ತಾ ಓಡಿಹೋದರು ತಪ್ಪಿಸಿಕೊಂಡರು ಸದಸ್ಯರು ಒಟ್ಟಾಗಿ ಹೊರಹೊರಟರು ಕಾರಣವು ಬಹಳಹೊತ್ತಿನವರೆಗೆ ಗೊತ್ತಾಗಲಿಲ್ಲ ಕಡೆಯಲ್ಲಿ ಒಂದು ಹಡಗು ಥೇಮ್ಸ್ ನದಿಯಮೇಲೆ ಬರುತ್ತಿದ್ದುದು ಕಂಡುಬಂತು ಅದರಲ್ಲಿ ಕೆಲವು ದುರ್ವಾಸನೆಯ ಪದಾರ್ಥಗಳು ಇದ್ದವೆಂದು ತಿಳಿಯಿತು ಅವುಗಳು ಕೊಳೆತು ಈ ವಾಸನೆಯು ಬಂದಿತೆಂದು ತಿಳಿದುಬಂತು ಸಭೆಯು ಅಲ್ಲಿಗೇ ಮುಕ್ತಾಯವಾಗಬೇಕಾಯಿತು

ಹೆಂಗಸಿಗೆ ಸೂಜಿ ಚುಚ್ಚುವಿಕೆ

ಗುಂಡುಸೂಜಿಗಳಿಂದ ಹೆಂಗಸೊಬ್ಬಳ ಶರೀರವನ್ನೆಲ್ಲಾ ಚುಚ್ಚಿದುದರ ಪರಿಣಾಮವಾಗಿ ಪ್ಯಾರಿಸ್‌ನಲ್ಲಿ ಆಗಸ್ಟ್ ಪಾನ್ಸೆಟ್ ಎಂಬುವನನ್ನು ಪೋಲೀಸಿನವರು ದಸ್ತಗಿರಿ ಮಾಡಿರುತ್ತಾರೆ ಅವನು ಹೆಂಗಸರಿಗೆಲ್ಲಾ ರಾಕ್ಷಸ ಅವನು ಒಬ್ಬಳನ್ನು ತನ್ನ ಮನೆಗೆ ಕರೆದುಕೊಂಡು ಹೋಗಿ ಬಲವಂತದಿಂದ ಅವಳಿಗೆ ಔಷಧ ಕುಡಿಸಿ, ಅವಳ ಶರೀರವನ್ನೆಲ್ಲಾ ಸೂಜಿಗಳಿಂದ ಚುಚ್ಚಿದನು. ಆ ಹೆಂಗಸು ಜ್ಞಾನಹೊಂದಿದ ಮೇಲೆ ಈ ಅಕೃತ್ಯವನ್ನು ಪೋಲೀಸರಿಗೆ ತಿಳಿಸಿದಳು

ಜಪಾನ್ ರಾಜಪುತ್ರಿಯ ಆತ್ಮಹತ್ಯೆ

ಟೋಕಿಯೋ ನಗರದಲ್ಲಿದ್ದ ಬ್ಯಾರೊನೆಸ್ ಸೋನೆ ಎಂಬಾಕೆಯಮೇಲೆ ಅಪಮಾನಕರವಾದ ಆಪಾದನೆಗಳು ಹೊರಟವು ಅಲ್ಲಿನ ಮುತ್ತಿನ ವ್ಯಾಪಾರಿ ಮಿಕಿಮೋಟೊ ಎಂಬುವನೊಡನೆ ಸ್ನೇಹ ಬೆಳೆಸುತ್ತಿದ್ದಳೆಂದು ವದಂತಿ ಹುಟ್ಟಿತು. ಇದನ್ನು ಸಹಿಸಲಾರದೆ ಆಕೆಯು ವಿಷ ಕುಡಿದು ಮೃತಪಟ್ಟಳು ತನ್ನ ಮರಣದಿಂದ ಯಾವರೂ ಮೇಲ್ಕಂಡ ಆಪಾದನೆಗಳು ಸುಳ್ಳುಗಳೆಂದು ಬಯಸಿ ಒಂದು ಸಂದೇಶವನ್ನು ಬರೆದಿಟ್ಟಿದ್ದಳು.

ಒಂದು ಕಾಸು ಜುಲ್ಮಾನೆ

ಡೆಗ್ಗದದೇವನಕೋಟೆ ತಾ॥ ಹುಂಪಾಪುರದ ನಾರಾಯಣಸಿಂಗ್ ಎಂಬ ಬಾಲಕನು ದೀಪವಿಲ್ಲದ ಗಾಡಿಹೊಡೆದನೆಂದು ಪೋಲೀಸಿನವರು ಮೈಸೂರು ಸ್ಪೆಷಲ್ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಮೊಕದ್ದಮೆ ಹೂಡಿದ್ದರು ಹುಡುಗನು ತಪ್ಪನ್ನು ಒಪ್ಪಿಕೊಂಡನು ಅವನಿಗೆ ಒಂದು ಕಾಸು ಜುಲ್ಮಾನೆ ಹಾಕಲ್ಪಟ್ಟಿತು ಪೋಲೀಸಿನವರು ಸುಮ್ಮನೆ ಎಚ್ಚರಿಕೆ ಕೊಟ್ಟು ಬಿಟ್ಟಿದ್ದರೂ ಸಾಕಾಗಿತ್ತೆಂದು ಮ್ಯಾಜಿಸ್ಟ್ರೇಟರು ಹೇಳಿದರು

ಹಣವನ್ನು ಸುಡುವ ಬ್ಯಾಂಕು

ನಂಬಿದರೆ ನಂಬಿ, ಬಿಟ್ಟರೆಬಿಡಿ ಇಂಗ್ಲೆಂಡ್ ಬ್ಯಾಂಕು ಆಗಿಂದಾಗ್ಗೆ' ಹಣವನ್ನು ಸುಟ್ಟುಹಾಕುತ್ತಲೇ ಇದೆ ಇದು ಉತ್ಪ್ರೇಕ್ಷೆಯಲ್ಲ ನೋಟುಗಳನ್ನು ಯಜ್ಞೇಶ್ವರನಿಗೆ ಆಹುತಿಯಾಗಿ ಅರ್ಪಿಸುತ್ತದೆ ಇದಕ್ಕಾಗಿ ಒಂದು ವಿಶೇಷ ತೆರದ ಅಗ್ನಿ ಕುಂಡವೂ ಏರ್ಪಾಡಾಗಿದೆ ಪ್ರತಿವಾರವೂ ಸುಮಾರು ಐದು ಲಕ್ಷ ನೋಟುಗಳ ಕಂತೆಗಳು ಅಗ್ನಿಯಲ್ಲಿ ಹೋಮಮಾಡಲ್ಪಡುವುವು. ಇಂಗ್ಲೆಂಡಿನಲ್ಲಿ ನಮ್ಮ ದೇಶದಂತಲ್ಲ ಎರಡು ತಿಂಗಳಮೇಲೆ ಅಲ್ಲಿ ನೋಟುಗಳು ಇಡಲ್ಪಡುವುದಿಲ್ಲ ಅಷ್ಟರಲ್ಲಿ ಮಾಸಿಹೋಗುತ್ತವೆ ಕೈಯಿಂದ ಕೈಗೆ ಚಲಾವಣೆ ಹೆಚ್ಚು ಅಲ್ಲದೆ ಜನರು ಅದರಮೇಲೆ ಸಿಕ್ಕಾಬಟ್ಟೆ ಸಂದೇಶಗಳನ್ನು ಬರೆದು ಹಾಳುಮಾಡುತ್ತಾರೆ ಇಂತಹ ನೋಟುಗಳು ಬ್ಯಾಂಕಿಗೆ ಬಂದೊಡನೆ ಅವುಗಳನ್ನು ಹರಿದುಹಾಕಿ ಕಸದಬುಟ್ಟಿಗೆ ಒಯ್ಯುವರು ಕ್ರಮೇಣ ಯಜ್ಞೇಶ್ವರನಿಗೆ ಅರ್ಪಿಸುವರು

ಹುಣಸೂರು ವರ್ತಮಾನ.

(ನಮ್ಮ ಬಾತ್ಮೀದಾರರಿಂದ)

ಮೈಸೂರು ಡಿಸ್ಟ್ರಿಕ್ಟ್ ಹುಣಸೂರಿನಲ್ಲಿ ಒಂದು ಗೌರ್ನಮೆಂಟ್ ಗರ್ಲ್ಸ್ ಸ್ಕೂಲಿಲ್ಲದಿರುವುದು ಬಹಳ ತೊಂದರೆಯಾಗಿದೆ ಕೆಲವರು ತಮ್ಮ ಹೆಣ್ಣುಮಕ್ಕಳನ್ನು ಮಿಷನ್ ಸ್ಕೂಲಿಗೆ ಕಳುಹಿಸಲು ಇಷ್ಟಪಡುವುದಿಲ್ಲ. 60 ಹೆಣ್ಣುಮಕ್ಕಳು ಗೌರ್ನಮೆಂಟ್ ಬಾಯ್ಸ್‌ಸ್ಕೂಲಿಗೇ ಬರುತ್ತಾರೆ ಆದಕಾರಣ ಘನ ಸರಕಾರದವರು ಹೆಣ್ಣುಮಕ್ಕಳ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹಕೊಟ್ಟು ಒಂದು ಗರ್ಲ್ಸ್ ಸ್ಕೂಲು ಸ್ಥಾಪಿಸುತ್ತಾರೆಂದು ನಂಬಿದ್ದೇವೆ ಗೌರ್ನಮೆಂಟ್ ಪ್ರೈಮರಿ ಸ್ಕೂಲು ಈಗ ಸಂದಲಕೋಠಿಯಲ್ಲಿ ನಡಿಯುತ್ತಿದೆ ಅಲ್ಲಿ ಗಾಳಿ ಬೆಳಕು ಇಲ್ಲದೆ ತೊಂದರೆಪಡುತ್ತಾರೆ ನೆಲದಮೇಲೆ ಬಹಳ ಧೂಳು ತುಂಬಿದೆ ಹುಡುಗರ ಬಟ್ಟೆಗಳು ಕೆಟ್ಟುಹೋಗುತ್ತವೆ ಆದುದರಿಂದ ದಯವಿಟ್ಟು ಘನಸರ್ಕಾರದವರು ಒಂದು ಕಟ್ಟಡ ಒದಗಿಸಲು ಅನುಕೂಲಪಡಿಸುತ್ತಾರೆಂದು ನಂಬಿದ್ದೇವೆ

ಹುಣಸೂರು ಟೌನ್ ರಾಮಸ್ವಾಮಣ್ಣನವರ ಗರಡಿಯಲ್ಲಿ ಕಳೆದ ಬುಧವಾರ ಬಹಳ ವಿಜೃಂಭಣೆಯಿಂದ ಅಂಬಾ ಪೂಜೆಯು ನಡೆಯಿತು ಅನೇಕ ಪೈಲ್ವಾನ್‌ಗಳ ಕುಸ್ತಿ ಮತ್ತು ಸಂಗೀತ ಕಛೇರಿಯೂ ಆಯಿತು ಅನಂತರ ಗಂಧಪುಷ್ಪ ತಾಂಬೂಲಗಳನ್ನು ವಿನಿಯೋಗಿಸಿ ಮಹಾಸ್ವಾಮಿಗಳ ಶ್ರೇಯಃ ಪ್ರಾರ್ಥನೆಯಿಂದ ಸಭೆಯು ಮುಕ್ತಾಯವಾಯಿತು

CONGRESS & MYSOREANS.

Reply to

Dr. N S Hardiker

Dr. N S Hardiker, in a statement to the Press rebukes Mysore as going backward in the Congress rank, that she has not a single membership on the K P C C., and has been idle and so on In a lengthy reply Mr M N Jois, Secretary, Congress Committee, Mysore writes that Mysoreans are as active as they were, if not more They are in rank in any constructive work of the Congress with any other part of India and invites Dr Hardiker to go round Tagadur and Badanaguppe Village centres and to convince himself whether Mysore is lazy or active. Regarding the other activities he quotes Dr Hardiker's own tribute to Mysore for the splendid work she did in the Sathyagraha Campaign "By their sufferings and sacrifices they (Mysoreans) have shown their patriotic fervour and proved their mettle Who can forget it?" The membership of K.P C C, is not certainly the barometer to measure sympathy in the Congress. If Mysore is indifferent about K P C C it is not because she is lazy, inactive, pacing backward, but she is tired of the Karnataka leaders Mysore was the Karnataka hunters' forest, but unfortunately, when the prey is at bay, the hunter is in the mire If Mysore is to back up Karnataka leaders, let them give up their dual policy, let them be true Gandhites, let them cast off their borrowed feathers and show themselves in their true colours

ಸುಲಭ ಚಿಕಿತ್ಸೆಗಳು

ಲೇಖಕರು :—ಆಯುರ್ವೇದ ಭಿಷಕ್ ಪಂಡಿತ, ಬಿ ಶ್ರೀಕಂಠಯ್ಯನವರು, ಕೆಂಗಾಕಿ.

37 ಮಕ್ಕಳ ಹಳದೋಡೆ ಸುಲಿದುಕೊಂಡರೆ—ಗೊಬ್ಬಳಿ ಬೆಗರನ್ನು ಅರೆದು ಲೇಪಹಾಕುವುದು

38 ಮಕ್ಕಳ ಹೊಟ್ಟೆ ಉಬ್ಬರಕ್ಕೆ — ಪೆರಣಿಯೂರಿ ಹೊಟ್ಟೆಯಮೇಲೆ ಸವರುವುದು

39 ಮಕ್ಕಳ ಭೇದಿಗೆ —ಬಜೆಯನ್ನು ಸುಟ್ಟು ಭಸ್ಮಮಾಡಿ ಜೇನುತುಪ್ಪದಲ್ಲಿ ಕಲ್ಕಿಸುವುದು

40 ಮಕ್ಕಳ ನೆಗಡಿಗೆ—ರಾಸ್ನೆಯನ್ನು ಸ್ತನ್ಯದಲ್ಲಿ ತೇಯ್ದು ಲೇಪ ಹಾಕುವುದು

41 ಮಕ್ಕಳ ಮಲಬಂಧವಾದರೆ — ಕೊನ್ನೆ ಬೇರನ್ನು ಮಲದ್ವಾರದಲ್ಲಿ ಬಿಡಲು ಒಡನೇ ಮಲಬಿಡುತ್ತೆ

42 ಮಕ್ಕಳ ಕಂಣುನೋವಿಗೆ—ಸ್ತನ್ಯ, ಹರಳೆಣ್ಣೆ ಮಿಶ್ರಮಾಡಿ ಮಸಮ ಹಚ್ಚುವುದು

43 ಮಕ್ಕಳ ತಲೆನೋವಿಗೆ —ಅರಿಸಿನ ಪುಡಿಯನ್ನು ಸ್ತನ್ಯದಲ್ಲಿ ಲೇಪಹಾಕುವುದು

44 ಮಕ್ಕಳ ಜಲ ಕಟ್ಟಿದರೆ—ಇಲಿ ಹಿಕ್ಕೆಯನ್ನು ಗಂಧ ತೇಯ್ದು ಹೊಕ್ಕಳಿಗೆ ಲೇಪಹಾಕುವುದು

45 ಮಕ್ಕಳ ಮೈತುರಿಗೆ —ಕಜೋರ, ಕಸ್ತೂರಿ ಅರಿಸಿನ,ಪುಡಿ ಮಾಡಿಕೊಂಡು ಉಜ್ಜಿ ಸ್ನಾನಮಾಡಿಸುವುದು

46 ಮದ್ದೀಡು ಹಾಕಿದ್ದಕ್ಕೆ —ಅಂಕೋಲೆ ಬೇರಿನ ತೊಕ್ಕನ್ನು ಆಡಿನಹಾಲಲ್ಲಿ ಅರೆದು ಕುಡಿಸುವುದು

47 ಸರ್ಪ ಕಚ್ಚಿದ್ದಕ್ಕೆ —ಉಗಡಿಬೇರಿನ ತೊಕ್ಕಿನ ರಸ ಕುಡಿಸುವುದು

48 ಧನುರ್ವಾಯುವಿಗೆ —ಬೇವಿನ ಎಣ್ಣೆ ಚಿಕ್ಕಲು ಗುಣ

49 ಬಿಳಪು ಹೋಗುವುದಕ್ಕೆ —ಗೂಳದಸಪ್ಪು ಜೀರಿಗೆ ಸಹ ಅರೆದು ಮಜ್ಜಿಗೆಯಲ್ಲಿ ಕದರಿ ಕುಡಿಯುವುದು

50 ಗಂಟಲುನೋವಿಗೆ —ಬಾಳೆಮೊಸನ್ನು ಬಾಯಲ್ಲಿ ಹಾಕಿಕೊಂಡು ಬಂದ ನೀರು ನುಂಗುವುದು

ಮರಿಗಳಿಗೆ.

(ಬರೆದವರು —ಯೋಗಿ, ಹಾಸನ)

ಹಾರಾಡುತಲೋಳ ಓಡಾಡು ।
ಹಾರಗಳೋಡುತ ನಲಿದಾಡು ।
ಆಟಗಳಾಡುತ ಕುಣಿದಾಡು ।
ಕೂಟಗಳೊಡನೆ ನೀ ಕೂಡು ।
ಜೇಬಿನ ಮಕ್ಕಳ ನೋಡದಾಡು ।
ಮಕ್ಕಳ ಗುಂಪಿಗೆ ಜೈ ಜೈ ಜೈ ॥೧॥
ಹಿರಿಯಕಾಲದಿ ಬೀಡನು ಬೇಡಿ ।
ಸರಾಗದಿಂದಲಿ ಹಾಡಿರಿ ಹಾಡಿ ।
ಮರಣದ ಭಯವನೀವಿಡಬೇಡಿ ।
ಮರಿಗಳೆ ಕುಂಗಳ ಹಾಗಿರಬೇಡಿ ।
ಧೈರ್ಯಸಾಹಸಾ ಬಿಡಬೇಡಿ ।
ಮರಿಗಳೆ ಮರಿಗಳೆ ಜೈ ಜೈ ಜೈ ॥೨॥

ಕಂಟ್ರಿಬ್ಯೂಷನ್ ವಸೂಲೀ ಅಕ್ರಮ

ನಂಜನಗೂಡು ತಾಲ್ಲೂಕು ರಾಂಪುರ, ಹುಲ್ಲಹಳ್ಳೀ ನಾಲಾ ಏರ್ಪಡಿಸಿ 50 ವರ್ಷವಾಗಿದೆ ಆಗ ಇಂಜನೀಯರಿಂಗ್ ಇಲಾಖೆಯವರು ರೆವಿನ್ಯೂ ಇಲಾಖೆಗೆ ಇಷ್ಟು ಎಕರೆ ತರೀಯಾಗುತ್ತೆಂದೂ, ಹುಲ್ಲಹಳ್ಳೀ ನಾಲೆ ಜಮೀನಿಗೆ ಎಕರೆ 1 ಕ್ಕೆ 22-8-0 ರೂ ಯಂತೆಯೂ. ರಾಂಪುರ ನಾಲಾ ಜಮೀನಿಗೆ 25 ರೂ ಕಂಟ್ರಿಬ್ಯೂಷನಂತೆಯೂ ವಾಯಿದ್ದಾ ಜನಗಳಿಂದ ಮಿಸ್ತ ಪ್ರಕಾರ ಹಾನಕಿಯಾಗಿದೆ ರೆವಿನ್ಯೂ ಇಲಾಖೆಗೆ ತರೀ ಪೆಷ್ಟಿಗೆ ತರಲಿಲ್ಲಾ

1929 ನೇ ಇ ಸರ್ವೆಯವರು ಸದರಿ ಜಮೀನುಗಳನ್ನು ತರೀ ಪೆಷ್ಟಿಗೆ ತಂದರು. ಈಗ ಎಕರೆಗೆ 100 ರೂ ಕಂಟ್ರಿಬ್ಯೂಷನ್ ಕ್ರಮ ನಡಿಸುತ್ತಿದ್ದಾರೆ ಕೆಲವರು ಹಿಂದೆ ಕಂಟ್ರಿಬ್ಯೂಷನ್ 22-8-0, 25 ರೂ ರಶೀತಿ ಹಾಜರ್ಮಾಡಿದವರಿಗೆ ತಗಾದಾ ತಪ್ಪಿದೆ

ಈ ಜಮೀನುಗಳಲ್ಲಿ 4-5 ಕ್ಕೆ ಕಳದು ಕ್ರಯ ಮೂಲಕ ಅನುಭವಿಸುತ್ತಿದ್ದಾರೆ ಕೊನೆ ಕ್ರಯದಾರನಿಗೆ ಈ ಕಂಟ್ರಿಬ್ಯೂಷನ್ ರಶೀತಿ ಆಗ ಅಪ್ರಕೃತವಾಗಿತ್ತು, ಈಗ ಸರಕಾರದವರ ತಗಾದಾ ಜಾಸ್ತಿಯಾಗಿದೆ

ಈ ನಾಲಾ ಆದಲಾಗಾಯತು ಎಷ್ಟು ಅಮಲ್ದಾರರು, ಜಮಾಬಂದೀ ಆಫೀಸರು ಕೆಲಸ ಮಾಡಿ ವರ್ಗವಾಗಿರುತ್ತಾರೆ ' ಈಗ ದ್ವಿತಪಿಯಾಗಿ ಕಂಟ್ರಿಬ್ಯೂಷನ್ ವಸೂಲ್ಮಾಡಲು ಕಾರಣವಿಲ್ಲಾ

ಪ್ರಜಾಪ್ರತಿನಿಧಿಸಭೆ, ಲೆಜಸ್ಲೆಟೀವ್ ಸಭೆ ಸದಸ್ಯರುಗಳು ಚರ್ಚೆಯಿಂದ, ನ್ಯಾಯದೊರೆಯುವಂತೆ ಪ್ರಜಾ ಸೌಕರ್ಯ ಮಾಡುವರೆಂತ ನಂಬಿದೆ

ಪ್ರಜಾ ಹಿತೈಷಿ

ಸ್ವೀಕಾರ.

" ದೇವವಸ್ತ್ರನ ಮರಣ "

ಮಧುಗಿರಿ ಡಿಸ್ಟ್ರಿಕ್ಟ್ ಕರ್ನಾಟಕ ಸಂಘದವರು ಕಳುಹಿಸಿಕೊಟ್ಟಿರುವ ಮೇಲ್ಕಂಡ ಹೆಸರಿನ ಪುಸ್ತಕವನ್ನು ನಾವು ಕೃತಜ್ಞತೆಯಿಂದ ಸ್ವೀಕರಿಸಿದ್ದೇವೆ ಶ್ರೀ ಮಲ್ಲಾರಿ ರಾಜಾಚಾರ್ಯರು ಅಂಬಾದಾಸ ಎಂಬ ಅಂಕಿತದಿಂದ ಇದನ್ನು ಪದ್ಯರೂಪದಲ್ಲಿ ಬರೆದು ಪ್ರಕಟಿಸಿರುವರು ಆಂಗ್ಲ ಕವಿ ಶ್ರೇಷ್ಠನಾದ ಟೆನಿಸನ್ನಿನ ಮಾರ್ಟೆ ಡಿ ಆರ್ಥರ್ ಎಂಬ ಕವನದ ಅನುವಾದವಿದು ಸ್ಕೂಲ್ ಫೈನಲ್ ಪರೀಕ್ಷೆಗೆ ಈಸಾರಿ ಮೂಲಪದ್ಯವನ್ನು ಪಠ್ಯಪುಸ್ತಕವನ್ನಾಗಿಟ್ಟಿರುವರು ವಿದ್ಯಾರ್ಥಿಗಳಿಗೆ ಇದರಿಂದ ಆ ಪದ್ಯದ ಅರ್ಥಸ್ವಾರಸ್ಯವು ಸುಲಭವಾಗಿ ತಿಳಿಯಬಹುದು

ಯಳಂದೂರು ವರ್ತಮಾನ

(ನಮ್ಮ ವಿಶೇಷ ವಾರ್ತಾದಾರರಿಂದ)

ಈ ತಾಲ್ಲೂಕಿನ ಜಮೀನುಗಳು ಬಹಳ ಫಲವತ್ತಾದವು ಆದರೆ ಇಲ್ಲಿನ ಖು ಮತ್ತು ಬಾಗಾಯತು ಜಮೀನುಗಳ ಸ್ಥಿತಿಯು ಬಹಳ ಶೋಚನೀಯ ಹಾಲಿ ಇಲ್ಲಿನ ಯಾವ ಕೆರೆಯಲ್ಲೂ ನೀರೇ ಇಲ್ಲ. ಈ ಕೆರೆಗಳು ಜಾಸ್ತಿಯಾಗಿ ಜೀವನದಿಯಲ್ಲಿದ ಸುವರ್ಣಾವತಿ ನದಿ ಆ ನದಿಗೆ ಹಳಪಟ್ಟಿದ್ದ ಈ ತಾಲ್ಲೂಕಿನ ಬಾಕಿ ಚಾಮರಾಜನಗರದ ತಾಲ್ಲೂಕು ಕೆಲವು ಕರೆಗಳಿಗೆ ನೀರು ಭರ್ತಿಯಾದನಂತರ ಉಳಿಯುವ ನೀರೇ ಈ ಕೆರೆಗಳಿಗೆ ಬರತಕ್ಕದ್ದು. ಅಲ್ಲಿನ ಜಮೀನುದಾರರುಗಳಿಗೆ ಕಂದಾಯ ರಿಮಿಷನ್ ಆಗುತ್ತಿದೆ ಇಲ್ಲಿನವರಿಗೆ ಮಾತ್ರ ಆ ಸೌಕರ್ಯವಿಲ್ಲ. ಸಾಲೇ ಸಾಲು ಸಲೀಸ ತರಿ ಫಸಲಿಲ್ಲದೆ ಪ್ರಜೆಗಳಿಗೆ ಕಂದಾಯ ಕೊಡುವ ಭಾರವೇ ಜಾಸ್ತಿಯಾಗಿ ತಾಲ್ಲೂಕಿನ ಮೇಲೆ ಭಾರಿ ಬಾಕಿ ನಿಂತಿದೆ ಇದರ ವಸೂಲಿ ವಿಚಾರದಲ್ಲಿ ಮಾತ್ರ ಇಲ್ಲಿನ ಅಧಿಕಾರಿಗಳು ಬಹಳ ಚುರುಕಾದ ನಡವಳಿ ನಡಿಸುತ್ತಾರೆ. ಆದರೆ ನೀರಿನ ಸೌಕರ್ಯದ ವಿಚಾರದಲ್ಲಿ ಮಾತ್ರ ಸರಿಯಾದ ನಿಗಾ ಕೊಡಲು ಸಾಕಾದಷ್ಟು ಅಲಾಟ್‌ಮೆಂಟ್ ಇಲ್ಲದೆ ನೌಕರರನ್ನು ಏರ್ಪಡಿಸಿರುವದರಿಂದ ಪ್ರಜೆಗಳಿಗೆ ಪ್ರಯೋಜನವಿಲ್ಲದೆ ಮದೆ ಹಾಲಿ ರಾಂಗಾರಂಗಾಗಿ ಮಂಜೂರಾಗಿ ಇರುವ ಮೊಬಲಿಗಿನಿಂದಲಾದರೂ, ಕೆಲಸ ನಡೆಸೋಣವೆಂದರೆ ರೈತರು ಕೊಡಬೇಕಾದ ಮೂರನೆ ಒಂದು ಭಾಗ ಕಂಟ್ರಿಬ್ಯೂಷನ್ ಕೊಟ್ಟವಿನ ಸಾಧ್ಯವಿಲ್ಲವೆಂತ ಡಿ॥ ಡೆಪ್ಯುಟಿ ಕಮಿಷನರ್ ಸಾಹೇಬರವರು ಆಪ್ಪಣೆ ಕೊಡಿಸಿದ್ದರಿಂದ ಶ್ರೀಮಂತ ಜಹಗೀರ್‌ದಾರ್ರವರ ಏರ್ಪಾಡಿನಂತೆ ಕೆಲಸ ನಡಿಸಲು ರೈತರಿಂದ ಮುಖಂಡ ರೈತರು ವಸೂಲು ಮಾಡಿದ ಮೊಬಲಗು ಉಪಯೋಗಿಸಲು ಸದರಿ ... ಕಾರ ತಪ್ಪಿತು ಇದಕ್ಕೆ ಮುಂಚೆ ಈ ಕಂಟ್ರಿಬ್ಯೂಷನ್ ಮೊಬಲಗನ್ನು ಕೆಲಸ ಪೂರೈಸಿದನಂತರ ಐದ ನಾಲುಗಳಲ್ಲಿ ಕೊಡಲು ಏರ್ಪಾಡಾಗಿ ಮುಚ್ಚಳಿಕೆ ಬರಸಿ ಪ್ರಕಾರ ನಡಿಸಿದ್ದಲ್ಲಿ ಜಾಗ್ರತೆ ಕೆಲಸ ನಡೆಸಲು ಅವಕಾಶವಾಗಿತ್ತು ಈ ಏರ್ಪಾಡಿನಿಂದ ಇದು ನಿಂತು ಹೋಯಿತು ಈ ಒಂದೇಕಿತ್ತು ಕೊಡಲು ಸಾಧ್ಯವಿಲ್ಲ ... ಕೆಲಸ ನಡಿಯುವ ತೊಂದರೆ ಹೆಚ್ಚು ಅವಕಾಶವಾಗಿದೆ ಇಲ್ಲಿನ ರೈತರ ಬಡತನಸ್ಥಿತಿಯು ಮೇಲಿನ ಅಧಿಕಾರಿಗಳಿಗೆ ಚೆನ್ನಾಗಿ ವ್ಯಕ್ತವಾಗಿರುವದರಿಂದ ಜಾಗ್ರತೆ ಕೆಲಸ ನಡಿಸಲು ಮತ್ತು ಕಂಟ್ರಿಬ್ಯೂಷನ್ ಪಾವತಿಗೆ ತಕ್ಕ ಸೌಕರ್ಯ ರೈತರಿಗೆ ಉಂಟಾಗುವಂತೆ ಸರ್ಕಾರದವರೇ ಸೌಕರ್ಯ ಕಲ್ಪಿಸಿ ಕ್ರಮಪಡಿಸುವದೇ ಸರಿಯುತ್ತಮವಾಗಿರುತ್ತೆ

ಇಟಲಿಯ ಸರ್ವಾಧಿಕಾರಿ ಮುಸೋಲಿನಿ.

ಲೇಖಕ:- ಎಗ. ಎಸ್. ಶಾಮಣ್ಣ, ಮೈಸೂರು.

ಇಂದು ಇಟಲಿಯ ಅಭ್ಯುದಯವು ಸ್ವದೇಶಾಭಿಮಾನದ ಮೂರ್ತಿಯಾದ ಮುಸೋಲಿನಿಯ ಕೈಯಲ್ಲಿದೆ. ಅವನು ಇಟಲಿಯ ವೀರದೇಶಾಭಿಮಾನಿಗಳಲ್ಲಿ ಅಗ್ರಶ್ರೇಷ್ಠನು. ಅವನು ಯುವಕರಿಗೆ ಯುವಕನು, ಹಿರಿಯರಿಗೆ ಹಿರಿಯನು. ಆಧುನಿಕ ರಾಜನೀತಿ ನೈಪುಣ್ಯಗಳು ಆತನಿಗೆ ಕರತಲಾಮಲಕವಾಗಿವೆ. ಮೊನ್ನೆತಾನೆ ಇಟಲಿಯವರು ತಮ್ಮ ಅಧಿಕವಾದ ಸೈನ್ಯ ಮತ್ತು ಯುದ್ಧಸಾಮಗ್ರಿಗಳ ಬಲದಿಂದ ಸ್ವತಂತ್ರವಾಗಿ ಅಬ್ಸೀನಿಯನರ ಮೇಲೆ ದಾಳಿನಡೆಸಿದರಷ್ಟೆ. ಅವರ ಧಾಳಿಯು ಅನ್ಯಾಯಯುಕ್ತವಾದುದಾದರೂ ವಿಜಯಲಕ್ಷ್ಮಿಯು ಇಥೋಪಿಯನರ ಕೈಬಿಟ್ಟಳು. ...ಗನನ ಶಾಂತಿ, ರಕ್ಷಣೆ ಮತ್ತು ಅಭಿವೃದ್ಧಿಯನ್ನೇ ಕೋರುವ ಅಂತರರಾಷ್ಟ್ರೀಯ ಸಂಘವನ್ನೇ ಧಿಕ್ಕರಿಸಿರುವ ಈ ಸರ್ವಾಧಿಕಾರಿಯ ವ್ಯವಹಾರದಿಂದ ಸಮಸ್ತ ಯೂರೋಪಿನ ರಾಷ್ಟ್ರಗಳ ರಾಜತಂತ್ರಜ್ಞರೆಲ್ಲರೂ ತಲ್ಲಣಗೊಂಡಿರುವರು. ಈಗ್ಗೆ ...-15 ವರ್ಷಗಳ ಹಿಂದೆ ಅನಾಮಧೇಯನಾಗಿದ್ದ ಇವನಿಗೆ ಅತ್ಯಲ್ಪಕಾಲದಲ್ಲೇ ದೇಶವನ್ನು ಅತ್ಯಂತ ವಿಪುಲ ಅಂತಸ್ತಿಗೆ ...ಸಲು ಒದಗಿದ ಸನ್ನಿವೇಶ, ಕೈಗೊಂಡ ...ನೆ ಮತ್ತು ಅವನ ಸತತ ಮನೋಧೈರ್ಯ ಇವುಗಳನ್ನು ವ್ಯಕ್ತಪಡಿಸುವುದೇ ಈ ...ಖನದ ಮುಖ್ಯೋದ್ದೇಶವಾಗಿದೆ.

...ಗಿನ ಪ್ರಪಂಚದಲ್ಲಿ ಬಹು ವಿಖ್ಯಾತನಾದ ಸಿನಾರ್ ಮುಸೋಲಿನಿಯು ...3 ರಲ್ಲಿ ಜನಿಸಿದನು. ಅವನ ತಂದೆ ಕಮ್ಮಾರ, ಧರ್ಮದಲ್ಲಿ ಅವನಿಗೆ ಆಸಕ್ತಿಯಿರಲಿಲ್ಲ. ಆದರೆ ಆತನ ಪತ್ನಿ ಪರಮ ...ನಿರಾಯಣೆ. ಒಂದು ಶಾಲೆಯಲ್ಲಿ ಉಪಾಧ್ಯಾಯಿನಿಯಾಗಿದ್ದಳು.

ಮುಸೋಲಿನಿಯ ಪ್ರಾರಂಭ ಶಿಕ್ಷಣವು ...ಸಾಧಾರಣ ಗ್ರಾಮಶಾಲೆಯಲ್ಲಿ ನಡೆಯಿತು. ವ್ಯಾಸಂಗದಲ್ಲಿ ಅವನದು ತುಂಬ ತೀಕ್ಷ್ಣಬುದ್ಧಿ. ತರುವಾಯ ಅಧ್ಯಾಪಕ ಶಿಕ್ಷಣಕ್ಕಾಗಿ ನಾರ್ಮಲ್ ಸ್ಕೂಲಿಗೆ ಸೇರಿದನು, 18 ನೇ ವಯಸ್ಸಿನಲ್ಲೇ ಶಿಕ್ಷ...ಪತ್ರ ಪಡೆದು ಕೂಡಲೇ ಅಧ್ಯಾಪಕನಾದನು. ಅವನಿಗೆ ಸಾಹಿತ್ಯದಲ್ಲಿ ಅಭಿರುಚಿ; ಅವಕಾಶ ದೊರತಾಗ ಸಾಹಿತ್ಯಾಮೃತಪಾನದಲ್ಲಿ ನಿರತ... ಮತ್ತು ಸಾಮ್ಯವಾದಿ ಆಂದೋಲನಕ್ಕೆ ಸಂಪೂರ್ಣ ಸಹಾನುಭೂತಿ ...ಯಿತು.

...ಲ್ಪ ದಿವಸಗಳಲ್ಲೇ ಅವನಿಗೆ ಬೋಧಕವೃತ್ತಿಯು ಬೇಸರವಾಗಿ ನೌಕರಿಗೆ ...ಮೆಯನ್ನಿತ್ತನು. ಪ್ರೌಢಶಿಕ್ಷಣಕ್ಕಾಗಿ ಸ್ವಿಟ್ಜರ್ಲೆಂಡಿಗೆ ಹೋಗಿ ಲೂಸನ್ ಜಿನೀವಾ ವಿಶ್ವವಿದ್ಯಾನಿಲಯಗಳಲ್ಲಿ ...ಸಂಗಮಾಡಿದನು. ಅವನ ಹತ್ತಿರ ಹಣವೂ ಇರಲಿಲ್ಲ, ನಿರ್ವಾಹಕ್ಕಾಗಿ ಕೂಲಿನಾಲಿ ಮಾಡಬೇಕಾಯಿತು. 12 ಗಂಟೆತನಕ ಕಾರ್ಖಾನೆಯಲ್ಲಿ ಚಾಕರಿ ಮಾಡುತ್ತಿದ್ದನು. ಅಲ್ಲಿರುವಾಗ ಕೂಲಿಗಾರರ ಮಧ್ಯ ವಾಸಿಸುತ್ತಿದ್ದನು. ಸಂಘಟನಾಶಕ್ತಿಯು ಅವನ ಹುಟ್ಟುಗುಣ. ಆದ್ದರಿಂದ ರೈತರ ಸಂಘಗಳನ್ನು ಸ್ಥಾಪಿಸಿ, ಸಮಯ ಒದಗಿದಾಗ ಹರತಾಳಗಳನ್ನೂ ಮಾಡಿಸಿದನು. ಇದರ ಪರಿಣಾಮವಾಗಿ ಅವನಿಗಲ್ಲಿಂದ ಉಚ್ಚಾಟನೆಯಾಯಿತು.

ಆ ಬಳಿಕ 'ರೊಮಾಗ್ನಾ' ದಲ್ಲಿ ಗ್ರಾಮಸ್ಥರು ಆಚರಿಸಿದ ರಾಜಕೀಯ ಕ್ರಾಂತಿಯಲ್ಲಿ ಇವನೂ ಭಾಗವಹಿಸಿದ್ದನು, ಮೊಕದ್ದಮೆ ನಡೆದು ಶಿಕ್ಷೆಯಾಯಿತು. ಅಂದಿನಿಂದಲೂ ಅವನ ಮೇಲೆ ಪೋಲೀಸಿನವರ ನಿಗವಿದ್ದೇ ಇತ್ತು. ಅವನೂ ಕ್ರಾಂತಿಕಾರಿಯೆಂದೇ ಅವರ ಭಾವನೆ. ಸ್ವಲ್ಪ ದಿನಗಳಾದ ಮೇಲೆ 'ಟ್ರೆಂಟೋ' ಕೂಲಿಗಾರರ ಸಂಘದ ಕಾರ್ಯದರ್ಶಿಯಾದನು. ಆಗ ಇವನಿಗೆ ಜರ್ಮನ್ ಸಾಹಿತ್ಯದ ಸಂಪೂರ್ಣ ಜ್ಞಾನವುಂಟಾಯಿತು. ದರ್ಶನಶಾಸ್ತ್ರದಲ್ಲಿ ವಿಶೇಷ ಮಮತೆಯುಂಟಾಗಿ ತತ್ಸಂಬಂಧವಾದ ಗ್ರಂಥಗಳನ್ನೂ ಮನನ ಮಾಡಿದನು. ವಿರೋಧಕರವಾದ ಲೇಖನಗಳನ್ನು ಬರೆದುದಕ್ಕಾಗಿ ಆಸ್ಟ್ರಿಯಾ ಸರಕಾರಕ್ಕೆ ತುಂಬಾ ಅಸಮಾಧಾನವುಂಟಾಗಿ ಕೂಡಲೆ ಅಲ್ಲಿಂದ ಗಡೀಪಾರಾದನು.

ಇಟಲಿಗೆ ವಾಪಸು ಬಂದಮೇಲೆ ಸಾಮ್ಯವಾದ ಆಂದೋಲನದಲ್ಲಿ ಇವನು ಪ್ರಧಾನ ಪಾತ್ರವನ್ನು ವಹಿಸಿದನು. ಈ ಚಳುವಳಿ ಸಂಬಂಧವಾಗಿ ತನ್ನ ಪರಿಷ್ಕೃತವಾದ ಅಭಿಪ್ರಾಯಗಳನ್ನು ಪ್ರಚಾರಿಸಲು ನೂತನ ಪತ್ರಿಕೆಯೊಂದನ್ನು ಹೊರಡಿಸಿದನು.

ಕೆಲವು ಕಾಲದ ಮೇಲೆ ಒಂದು ನಿರ್ದಿಷ್ಟ ಪ್ರದೇಶದಲ್ಲಿ ಸಾಮ್ಯವಾದಿಗಳ ಕಾಂಗ್ರೆಸ್ ಸೇರಿತು. ಈ ಕೂಟದಲ್ಲಿ ಪ್ರಧಾನ ನಾಯಕರಲ್ಲಿ ತುಂಬಾ ಮನಸ್ತಾಪವುಂಟಾಗಿ ಕೇವಲ ಮುಸೋಲಿನಿ ಹೊರತಾಗಿ ಉಳಿದವರೆಲ್ಲರೂ ಹೊರಬಿದ್ದರು. ಸಾಮ್ಯವಾದಿ ಪ್ರಮುಖರು ಮತ್ತೆ 1914 ರಲ್ಲಿ ಮುಸೋಲಿನಿಯ ನಾಯಕತ್ವದಲ್ಲಿ ಕ್ರಾಂತಿ ಎದ್ದು ಎದುರಾಳಿಗಳನ್ನು ಹಲವು ಗಾವುದಗಳಿಂದಾಚೆಗೆ ಒಡಿದೋಡಿಸಿದರು. ಅನೇಕರು ಮಡಿದರು.

ಆದರೆ ಯೂರೋಪಿನಲ್ಲಿ ಮಹಾಯುದ್ಧ ಪ್ರಾರಂಭವಾದಮೇಲೆ ಮುಸೋಲಿನಿಯ ವ್ಯವಹಾರ ಮತ್ತು ಅಭಿಪ್ರಾಯಗಳಲ್ಲಿ ತುಂಬಾ ಪರಿವರ್ತನೆಯುಂಟಾಯಿತು. ಯುದ್ಧದಲ್ಲಿ ಇಟಲಿಯು ಜರ್ಮನಿಗೆ ವಿರುದ್ಧವಾಗಿ ನಿಲ್ಲುವುದರಿಂದ ಅಂತರರಾಷ್ಟ್ರೀಯ ಕ್ಷೇತ್ರದಲ್ಲಿ ಅದರ ಪ್ರತಿಷ್ಠೆಯು ಹೆಚ್ಚುವುದೆಂಬುದೇ ಅವನ ಅಭಿಪ್ರಾಯ. ಏತನ್ಮಧ್ಯೆ 1915 ರಲ್ಲಿ ಇಟಲಿಯೂ ರಣಘೋಷ ಮಾಡಿತು. ಆಗ ಮುಸೋಲಿನಿಯೂ ಸ್ವೇಚ್ಛೆಯಿಂದ ರಣರಂಗಕ್ಕಿಳಿದು ಅತ್ಯುತ್ಸಾಹಭರಿತ ಸಾಹಸದಿಂದ ಕಾದಾಡಿದನು.

1919 ರಲ್ಲಿ ಜರ್ಮನಿಯು ಮಹಾಯುದ್ಧದಲ್ಲಿ ಸೋತು ಗೆದ್ದ ರಾಷ್ಟ್ರಗಳೊಂದಿಗೆ ಸಂಧಿಗೊಪ್ಪಬೇಕಾಯಿತು. ಆಗ ಇಟಲಿಯಲ್ಲಿ "ಬಹುಮತ" ಆಂದೋಲನವು ವಿಶೇಷ ಜಾಗೃತಿಹೊಂದಿತು. ಕ್ರಮವಾಗಿ ಈ ಚಳುವಳಿಗಾರರು ಕಾರ್ಖಾನೆಗಳಮೇಲೆ ತಮ್ಮ ಅಧಿಕಾರವನ್ನು ಜಾರಿಮಾಡಲೆತ್ನಿಸಿದರು ಮತ್ತು ಮುಸೋಲಿನಿಯ ಪ್ರಗತಿಯನ್ನು ಭಂಗಪಡಿಸಲು ಸರ್ವವಿಧದಲ್ಲಿಯೂ ಸೊಂಟಕಟ್ಟಿ ನಿಂತರು. ಆದರೆ ಮುಸೋಲಿನಿಯು ತನ್ನ ಆಪ್ತ 'ಫ್ಯಾಸಿಸ್ಟ' ದಂಡನ್ನು ಅತ್ಯಂತ ಸಿದ್ಧತೆಯಿಂದ ತರಬೇತು ಪಡಿಸಿ ಎದುರಾಳಿಗಳನ್ನು ಸಂಪೂರ್ಣವಾಗಿ ಸೋಲಿಸಿದ್ದೇ ಅಲ್ಲದೆ ಅವರ ಪ್ರತಿಭೆಗೇ ಕಳಂಕವುಂಟಾಗುವಂತೆ ಮಾಡಿದನು. ಈ ರೀತಿಯಲ್ಲಿ ವರ್ಗವಾದಿಗಳೊಂದು ಬಗೆವರ ದೈವವೊಂದೆಸಿಸಿತು. ಅವರು ಕೈಗೊಂಡ ಉದ್ಯಮಗಳೆಲ್ಲಾ ಬೂದಿಯಲ್ಲಿ ಹೋಮಮಾಡಿದಂತಾಯಿತು! ಆಗ ಇಡೀ ರಾಜಕೀಯ ಕ್ಷೇತ್ರವಲ್ಲಾ ಮುಸೋಲಿನಿ ಮತ್ತು ಆತನ ಫ್ಯಾಸಿಸ್ಟ ಪಡೆಯ ಅಧಿಕಾರಕ್ಕೊಳಪಟ್ಟಿತು. ದಂಗೆಕೋರರ ಆ ಹಂಕಾರವನ್ನು ಮುರಿಯಲು ತೋರಿಸಿದ ಅಗಾಧ ಸಾಹಸಗಳಿಂದ ಮುಸೋಲಿನಿಯು ಅತ್ಯಂತ ಜನಾನುರಾಗಿಯಾಗಿದ್ದನು. ಮತ್ತು ರಾಜತಂತ್ರವನ್ನು ಸಂರಕ್ಷಿಸುವಂತೆ ವಚನವನ್ನಿತ್ತಿದ್ದರಿಂದ ರಾಜಭಕ್ತರೆನಿಸಿದ್ದವರೂ ಇವನಿಗೆ ಹೃತ್ಪೂರ್ವಕವಾದ ಸ್ವಾಗತವನ್ನು ಬಯಸಿದರು.

ಆ ಬಳಿಕ ಮುಸೋಲಿನಿಯು ತನ್ನ ದಂಡುಸಹಿತವಾಗಿ ರೋಮಿನಮೇಲೆ ಧಾಳಿ ಮಾಡಿದನು. ಆಗ ಪ್ರಧಾನ ಮಂತ್ರಿಯು ಭೀತಿಗೊಂಡು ನಿರುಪಾಯನಾಗಿ 'ಮಿಲಿಟರಿ' ಕಾನೂನನ್ನು ಜಾರಿಗೆ ತಂದನು. ಆದರೆ ಬಾದಷಹನಿಗೆ ಇದು ಸರಿಬೀಳಲಿಲ್ಲವಾಗಿ ಆವನು ತನ್ನ ಪದವಿಯನ್ನು ತ್ಯಜಿಸಿದನು. ಕೂಡಲೆ ಚಕ್ರವರ್ತಿಯು ಯತ್ನವಿಲ್ಲದೆ ಮುಸೋಲಿನಿಗೆ ಮಂತ್ರಾಕ್ಷತೆಯನ್ನಿತ್ತನು. ಇನ್ನಾವರೋ 7 ಘಂಟೆಗಳೊಳಗಾಗಿ ತನ್ನ ನೂತನ ಮಂತ್ರಿಮಂಡಲವನ್ನು ರಚಿಸಿ ಇಟಲಿಯ ಸುಪ್ರಸಿದ್ಧ ಪ್ರಧಾನಾಮಾತ್ಯನಾದನು. ಆಗಿನಿಂದಲೂ ಈ ಮಹಾ ಪುರುಷನೇ ಇಟಲಿಯ ಭಾಗ್ಯವಿಧಾತನಾಗಿರುವನು. ಇಟಲಿಯಾದರೂ ಈತನ ಶಾಸನ ಕಾಲದಲ್ಲಿ ಅಭೂತಪೂರ್ವ ಸರ್ವತೋಮುಖವಾದ ಉನ್ನತಿಯನ್ನೈದಿದೆ. ಈಗಲೂ ಅದು ಪ್ರಾಚೀನ ರೋಮಿನ ಗೌರವ ಗೀತೆಗಳನ್ನು ಇಂಪಾಗಿ ಗಾನಮಾಡುತ್ತಲಿದೆ. ಈ ಸಕಲ ಸೌಭಾಗ್ಯಗಳೆಲ್ಲಾ ಅದರ ಪಥಪ್ರದರ್ಶಕನೂ, ಜಗದ್ವಿಖ್ಯಾತನೂ ಆದ ಕೇವಲ ಸಿನಾರ್ ಮುಸೋಲಿನಿಯವನೊಬ್ಬನಿಗೇ ಸೇರಿದ್ದಾಗಿದೆ. ಇಟಲಿಯ ಭವಿಷ್ಯ ರಾಜ್ಯಲಕ್ಷ್ಮಿಯು ಆತನ ಅಡಿದಾವರೆಗಳಲ್ಲಿ ತಾಂಡವಾಡುತ್ತಲಿರುವಳು. ಆತನ ರಾಜಕೀಯ ನೀತಿ ಹೇಗಾದರೂ ಇರಲಿ. ಆತನೊಬ್ಬ ಅದ್ಭುತ ಶಕ್ತಿಯುಳ್ಳ ವ್ಯಕ್ತಿಯೇ ಹೌದು

ನಗರಾಭಿವೃದ್ಧಿ.

ಮೈಸೂರಿನ ಇಂಪ್ರೂವ್‌ಮೆಂಟ್ ಟ್ರಸ್ಟ್ ಬೋರ್ಡಿನ ಮೀಟಿಂಗು ಮಾಮೂಲ್ ಮೇರೆ ಮುನಿಸಿಪಲ್ ಕಛೇರಿಯಲ್ಲಿ ಶ್ರೀ|| ಎಂ. ಎ. ಶ್ರೀನಿವಾಸನ್‌ರವರ ಅಧ್ಯಕ್ಷತೆಯಲ್ಲಿ ನಡೆದು ಕೆಲವು ವಿಷಯಗಳು ಇತ್ಯರ್ಥವಾದುವು. ಇವು ಯಾವುವೆಂದರೆ ಕ್ಷಯರೋಗಿಗಳ ಆಸ್ಪತ್ರೆಗೆ ಹೊರಗಿನಿಂದ ಬರುವ ರೋಗಿಗಳ ಸಂಬಂಧಿಕರು ಇಳಿದುಕೊಳ್ಳುವುದಕ್ಕೆ ವಾಣಿವಿಲಾಸ ಮೊಹಲ್ಲಾದಲ್ಲಿ ೨ ಕೊಠಡಿಗಳಿರುವಂಥ ೧೦ ಮನೆಗಳನ್ನು ಕಟ್ಟಿ ಬಾಡಿಗೆಗೆ ಕೊಡಬೇಕು. ಒಂಟಿಕೊಪ್ಪಲು ಬಡಾವಣೆಯಲ್ಲಿ ಸಿಟಿಮಿಲ್ಕ ಸಪ್ಲೆಯವರಿಗೆ ಹಾಲುಕರೆಯುವ ಮನೆ ಮುಂತಾದ್ದನ್ನು ಕಟ್ಟಿಕೊಳ್ಳಲು ೫ ಎಕರೆ ಜಮೀನನ್ನು ಗಜಕ್ಕೆ ಎರಡಾಣೆಯಂತೆ ವಿಕರಿ ಮಾಡಬೇಕೆಂದು, ವಾಣಿವಿಲಾಸ ಮೊಹಲ್ಲಾದಲ್ಲಿ ಕ್ಲಬ್ಬನ್ನು ಕಟ್ಟಿಕೊಳ್ಳುವುದಕ್ಕೆ ಕ್ಲಬ್ ಸಕ್ರೇಟರಿಗೆ ನಿವೇಶನವನ್ನು ಗಜ ಒಂದಕ್ಕೆ ೧ ಆಣೆಯಂತೆ ಕೊಡಬೇಕು. ಸಯ್ಯಾಜಿರಾವ್ ರೋಡಿನಲ್ಲಿರುವ ಚಾಮುಂಡೇಶ್ವರಿ ಸಿನಿಮಾ ಕಟ್ಟಡದ ಹಿಂಭಾಗದ ಮನೆಗಳನ್ನು ಒಡೆಯಬೇಕೆಂದೂ, ಮ|| ಯಾಲಕ್ಕಪ್ಪಾಚಾರ್ಯರು ಅದರ ಖರ್ಚನ್ನು ವಹಿಸುವುದಾಗಿ ತೀರ್ಮಾನವಾಯ್ತು.

ಆರ್ಯಸಮಾಜ, ಮೈಸೂರು.

ಪಂಡಿತ ಧರ್ಮದೇವ ವಿದ್ಯಾವಾಚಸ್ಪತಿಯವರು ಕಳೆದ ಮಂಗಳವಾರ ಮೈಸೂರು ಟೌನ್‌ಹಾಲಿನಲ್ಲಿ ಆರ್ಯಸಮಾಜದ ಪರವಾಗಿ ಶ್ರೀ ಕೃಷ್ಣಸಂದೇಶ ಮತ್ತು ವೈದಿಕ ಭಕ್ತಿಯೋಗ ಎಂಬ ವಿಷಯವಾಗಿ ಸ್ವಾರಸ್ಯವಾದ ಭಾಷಣಮಾಡಿದರು. ಶ್ರೀ|| ಬಿ. ನಾಗೇಶರಾಯರು ಅಗ್ರಾಸನವನ್ನು ವಹಿಸಿದ್ದರು. ಉಪನ್ಯಾಸಕರು ಶ್ರೀ ಕೃಷ್ಣನ ಅದ್ಭುತ ಗುಣಗಳನ್ನು ವರ್ಣಿಸಿದಲ್ಲದೆ ನಿಜವಾದ ಭಕ್ತಿಯ ಸ್ವರೂಪವೆಂತಹುದೆಂಬುದನ್ನು ಹೃದಯಂಗಮವಾಗಿ ತಿಳಿಸಿದರು.

ಕೆರೆಗಳ ಜೀರ್ಣೋದ್ಧಾರ.

ಮೈಸೂರು ಸಂಸ್ಥಾನದಲ್ಲಿ ೩೨೦೦೦ ಮೈನರ್ ಕೆರೆಗಳಿವೆಯೆಂದೂ ಅವುಗಳಲ್ಲಿ ೫೦೦೦ ಕೆರೆಗಳು ಮಾತ್ರ ಉತ್ತಮಸ್ಥಿತಿಯಲ್ಲಿವೆ. ಈ ವರ್ಷದ ಬಡ್ಜೆಟ್ಟಿನಲ್ಲಿ ಕೆರೆಗಳ ದುರಸ್ತಿಗಾಗಿ ಕೊಟ್ಟಿರುವ ಹಣವು ಕಡಿಮೆ, ಆ ಗ್ರಾಂಟ್ ಮೊಬಲಗನ್ನೇ ವಿಶೇಷ ಪ್ರಯೋಜನಕರವಾದ ರೀತಿಯಲ್ಲಿ ಉಪಯೋಗಿಸಬೇಕು. ರಸ್ತೆಗಳ ಕಾಮಗಾರಿಗಾಗಿ ಮಂಜೂರುಮಾಡಿರುವ ಮೊಬಲಗು ಕಡಿಮೆ, ರೋಡ್ ಫಂಡ್ ಬಹಳ ಉಪಕಾರವಾಗುತ್ತದೆಂದೂ, ಕಳೆದ ಮಂಗಳವಾರ ಬೆಂಗಳೂರು ಇಂಜನಿಯರುಗಳ ಸಮ್ಮೇಳನದಲ್ಲಿ ತೀರ್ಮಾನವಾಯ್ತು,

ಬಾಡಿದ ಕುಸುಮ.

ಲೇಖಕ—ಕೆ. ಎನ್ ಕೃಷ್ಣಮೂರ್ತಿರಾವ್

ಕಳೆದ ಭಾನುವಾರ ಪ್ಲಾಟನಿ ಪೋಷ್ಟೃಸಿಟೂಂದು ಮನೆಯ ಕಡೆಗೆ ಹೊರಟೆ ದಾರಿಯುದ್ದಕ್ಕೂ ಮನಸ್ಸಿನಲ್ಲಿ ಚಿತ್ರವೇ ಪ್ರತಿಬಿಂಬಿಸುತ್ತಿತ್ತು. ಆಂಗ್ಲರ ಜೀವನವೇ ಜೀವನ ಅವರ ಉಲ್ಲಾಸವೇನು! ವಿಲಾಸವೇನು! ಎಲ್ಲಕ್ಕೂ ಮೇಲಾಗಿ ಆಂಗ್ಲ ಮಹಿಳೆಯರ ಸ್ವಾತಂತ್ರ್ಯವೆಷ್ಟು!

ಇಂದ್ರಭವನದ ಆಕರ್ಷಣೆ ಬಹುವಾಗಿತ್ತು ...ಕ್ಕೆ ಹೊ ದೆ ಕೆಳಗೆಲ್ಲೂ ಜಾಗವಿರಲಿಲ್ಲ ಮೇಲಕ್ಕೆ ಹೋದೆ, ಅಲ್ಲಿಯೂ ಸ್ಥಳವಿರಲಿಲ್ಲ ಒಂದು ಮೂಲೆಯಲ್ಲಿ ಮಾತ್ರ ಒಂದು ...ಟು ಖಾಲಿ ಇತ್ತು ನನ್ನೆಡ ಬಗೆ ಕುಳಿತಿದ್ದವರು ವಯೋವೃದ್ಧರು ಅಷ್ಟೇ ಅಲ್ಲ ಜ್ಞಾನವೃದ್ಧರೆಂದೂ ತೋರಿತು.

ಮೊದಲು ಅವರೇ ಮಾತಿಗೆ ಪ್ರಾರಂಭಿಸಿದರು ಆ ಮಾತು ಈ ಮಾತಾಗಿ ಕೊನೆಗೆ ಹೆಣ್ಣುಮಕ್ಕಳ ಮದುವೆಯ ಮಾತಿಗೆ ಬಂದಿತು ನಾನೂ ಅವರೂ ಪ್ರತಿಕಕ್ಷಿಗಳಾಗಿ ನಿಲ್ಲಬೇಕಾಯಿತು ಮೊದಲೇ ನನ್ನಲ್ಲಿ ಬೇರೂರಿದ್ದ ಅಭಿಪ್ರಾಯ, ಎದುರಿನ ತೆರೆಯ ಮೇಲೆ ಎದನ್ನು ಪುಷ್ಟೀಕರಿಸಲು ನನ್ನ ಮೇಲೆ ಚೆನ್ನಾಗಿ ಪ್ರಭಾವಗೊಂಡಿದ್ದ ಆಂಗ್ಲ ಚಲನ ಚಿತ್ರಗಳು ನನ್ನ ವಾದ ಪ್ರೌಢಾವಿವಾಹ ಇನ್ನೂ ಒಂದ ಹೆಜ್ಜೆ ಮುಂದ, ಸ್ವಯಂವರ ಅವರು ಅದಕ್ಕೆ ಪ್ರತಿವಾದಿಗಳು ವಾದ ಬಹು ಬಿರುಸಾಗಿ ಸಾಗಿತು ಅವರು ಕೊನೆಗೆ ಬೇಸತ್ತು ತಮ್ಮ ಜೇಬಿನಲ್ಲಿದ್ದ ಡೈರಿಯೊಂದನ್ನು ತಗೆದು ಕೆಲವೆಡೆಗಳಲ್ಲಿ ಗುರ್ತಿನ ಚೀಟಿಗಳನ್ನಿಟ್ಟು ನನ್ನಮುಂದಿಡುವರು ಕುತೂಹಲವಿಮ್ಮಡಿಸಿ ಹೊರಟೆ

ಆಗಸ್ಟು, 16

ಈದಿನ ಸಾಯಂಕಾಲ ನಮ್ಮ ಕಾಲೇಜಿನಲ್ಲಿ ಪ್ರತಿವಾದಿಗಳೊಬ್ಬರ ಉಪನ್ಯಾಸ ವಿಷಯ ಬಹಳ ಕಠಿಣ ವದ್ದು ಉಪನ್ಯಾಸಕರು ವಿಷಯವನ್ನು ಬಹಳ ಕುಶಲತೆಯಿಂದ ವಿಭಜಿಸಿದರು ತರುವಾಯ ವಾಗ್ಝರಿಯ ಪ್ರಚಂಡ ಪ್ರವಾಹ ಹರಿಯತೊಡಗಿತು ಪ್ರತಿಯೊಬ್ಬರೂ ಮೈಮರೆತು ಕುಳಿತಿದ್ದರು ಉತ್ಸಾಹ ಪೂರಿತರಾಗಿ ಚಪ್ಪಾಳೆಗಳನ್ನು ತಟ್ಟುತ್ತಿದ್ದರು ಅನೇಕವೇಳೆ ತಾವಿರುವ ಸ್ಥಾನವನ್ನೂ ಮರೆತು ತಮ್ಮ ಆನಂದೋಲ್ಲಾಸಗಳನ್ನು ನಾಲಗೆಯ ಮೂಲಕ ಹರಿಸುತ್ತಿದ್ದರು ನಾನು ಇತರರನ್ನು ಹುರಿದುಂಬಿಸಿದನೆಂದೆ ಅಷ್ಟೇ ಅಲ್ಲ ನನ್ನಂತಹ ಪರಿಮಳ ಪುಷ್ಪದ ಮಕರಂದ ಪಾನಕ್ಕೆ ಇವನೇ ಯೋಗ್ಯ ದುಂಬಿ ಎನ್ನಿಸಿತು —ವೆ.

ಡಿ 6

ಈದಿನ ನಮ್ಮ ಕಾಲೇಜಿನಲ್ಲಿ ನಾಟಕ —ದ ನಾಯಕನ ಪಾತ್ರ ಅವನು ನನ್ನ ಸಹಪಾಠಿ ಬಹುಜನ್ನು ಶ್ಲಾಘಿಸಿದರು ಪ್ರಶಂಸೆಗಳು ಹೇಳತೀರದು ನಾನು ಅವನನ್ನು ದಿನವೂ ನೋಡುತ್ತಿದ್ದರೂ ಇಂದು ಅವನಲ್ಲಿ ಕಂಡದ್ದನ್ನು ಹಿಂದೆ ಅವನಲ್ಲಿ ನೋಡಿರಲಿಲ್ಲ ಅವನ ನಡೆವಳಿಗಳಲ್ಲಿ ಕೆಲವು ನನಗೆ ಸಹ್ಯವಾಗುತ್ತಿರಲಿಲ್ಲ, ಇಂದು ಅವುಗಳಿಗೆ ಬೇರೆಯ ಅರ್ಥಗಳು ತೋರಿದವು ಅವು ಸಹ್ಯವಾದುವು, ಅಲ್ಲ! ಸ್ತ್ರೀತ್ವಾಸ್ಪದವಾದುವು. ನನ್ನ ಪ್ರೀತಿಯ ವಸ್ತು ಇಷ್ಟು ಹತ್ತಿರವಲ್ಲಿರುವಾಗ ನನ್ನ ಪ್ರೀತಿಯನ್ನು ಬೇರೆಯ ಕಡೆ ಹರಿಸುವುದು ನನಗೇ ನಾಚಿಗಗೇಡೆಂದು ತೋರಿತು —ಮ.

ಜ 18

ಈ ದಿವಸ ವೃತ್ತಪತ್ರಿಕೆಯನ್ನೋದುವುದರಲ್ಲಿ ಮಗ್ನಳಾಗಿದ್ದೆ ನನ್ನ ದೃಷ್ಟಿ ಒಂದು ಲೇಖನದ ಕಡೆಗೆ ಹೊರಳಿತು ಆ ಲೇಖಕನ ಲೇಖನಗಳನೇಕವನ್ನು ಓದಿದ್ದೇನೆ ಬಹು ಶ್ರೇಷ್ಠತರವಾದವು ಎಲ್ಲರ ಬಾಯಿಯಲ್ಲೂ ಅವನ ಮಾತೇ ಆದರೂ ಅವನು ಗುಪ್ತನಾಮಿ ಆ ಲೇಖನವನ್ನು ಕೊನೆಯವರೆವಿಗೂ ಓದಿದೆ ಅಷ್ಟು ಕಾಲವೂ ನನ್ನನ್ನು ನಾನೇ ಮರೆತಿದ್ದೆ ಅವನ ರೂಪಲ್ಲ (ಏಕೆಂದರೆ ನಾನು ಅವನನ್ನು ನೋಡಿರಲಿಲ್ಲ) ಅವನ ಪ್ರತಿಭೆ ಎಂದಿಗಿಂತಲೂ ಇಂದು ನನ್ನ ಮನಸ್ಸನ್ನು ಅವನ ಕಡೆಗೆ ಎಳೆಯಿತು ಅವನ ವಿಷಯದಲ್ಲಿ ಕುತೂಹಲ ಹೆಚ್ಚಿತು ಸಂಪಾದಕರಿಗೆ ಅವನ ವಿಷಯವನ್ನು ದಯವಿಟ್ಟು ತಿಳಿಸುವಂತೆ ಪತ್ರ ಬರೆದೆ —ಮ.

ಜ 22

ಇಂದು ಸಂಪಾದಕರಿಂದ ಪತ್ರ ಬಂತು. ಹೆಚ್ಚಿನ ಮಾಹಿತಿ ತಿಳಿಯಲಾಗಲಿಲ್ಲ ನನ್ನ ಆಸೆಯ ಕುಸುಮ ಬಾಡಿತು —ವ.

ಮಾ 14

ಇಂದು ಸ್ವಾಮಿ ... ದ ಮತ್ತು ಅವರ ಅನುಯಾಯಿಗಳ ಕಾಯಶಕ್ತಿ ಪ್ರದರ್ಶನ. ಥಿಯೇಟರು ತುಂಬಿತ್ತು ಸಾಹಸಗಳ ಅದ್ಭುತ ಪ್ರದರ್ಶನ ಜನಗಳು ಉತ್ಸಾಹಪೂರಿತರಾಗಿ ಕೂಗುತ್ತಿದ್ದರು ಅವರಲ್ಲೊಬ್ಬನ ಕಡೆಗೆ ಕಣ್ಣುಹರಿ ನನ್ನ ಕಣ್ಣೋಟ ಹರಿಯುತ್ತಿತ್ತು ಅಹುದು ಪ್ರದರ್ಶನದಲ್ಲಿ ಬಹುಪಾತ್ರ ಅವನದು ಉಕ್ಕಿನಂತಹ ಮೈ, ಉಬ್ಬಿದ ಮಾಂಸಖಂಡಗಳು ದೃಢಪ್ರತಿಜ್ಞೆಯೇ ಮೂರ್ತಿವೆತ್ತಂತಿರುವ ಮುಖ ಮೊದಲಿನಿಂದ ಕೊನೆಯವರೆವಿಗೂ ಮಿಂಚಿನಂತಹ ಓಡಾಟ ನನ್ನ ಮೆಚ್ಚು, ಅಷ್ಟಿಲ್ಲ, ನನ್ನ ದೃಢವಾದ ಪ್ರೀತಿ ಅವನಲ್ಲಿ ನಟ್ಟಿತು. ಹಿಂದೆ ನನ್ನ ಪ್ರೀತಿಗೆ ಭಾಗಿಗಳಾಗಿದ್ದವರೊಬ್ಬೊಬ್ಬರನ್ನೂ ಇವನೊಡನೆ ತುಲನೆ ಮಾಡಿದೆ ಇಲ್ಲ, ಒಬ್ಬರೂ ಇವನಿಗೆ ಸರಿಸಮರಲ್ಲ! ಖಂಡಿತ ಇಲ್ಲ ನನ್ನ ಪ್ರೀತಿಯ ವಸ್ತು ಎಂದಿಗೆ ನನ್ನ ಕೈವಶವಾದೀತೋ! ಅದೊಂದೇ ನನ್ನ ಕೊರತೆ ನನ್ನನ್ನು ನಾನೇ ಮರೆತ ಸುಖದ ಸ್ಥಳ ದುಃಖದಿಂದ ಆಸ್ಪತವಾಯಿತು —ಮ.

ಮಾ 29

ಇಂದು ಅವರಿಂದ ಕಾಗದ ಬಂತು ಕಾಗದದಲ್ಲಿ ಉಪನ್ಯಾಸ ಮೊದಲೇ ಸ್ವಾಮಿಗಳ ಶಿಷ್ಯ! "ತಂಗಿ" ಎಂದು ಸಂಬೋಧನೆ. ನನ್ನ ಪ್ರಣಯ ಪತ್ರಕ್ಕೆ ತಕ್ಕ ಸಂಬೋಧನೆ ಬುದ್ಧಿವಾದಗಳ ಸುರಿಮಳೆ. ಮಧ್ಯಮಧ್ಯೆ ಉದಾಹರಿಸಿರುವ ತತ್ವವೇತ್ತರ ಉದಾರ ಘೋಷಣೆ ಕೊನೆಯಲ್ಲಿ "ಅಣ್ಣನ ನಮಸ್ಕಾರ" ಇಷ್ಟೆ, ನನ್ನೆದೆ ಬೇಯುತ್ತಿದೆ, ಸಿಡಿದೊಡೆಯುತ್ತಿದೆ. ಪುನಃ ಓದಲಾರೆ. ಕೋಳಿಗೆ ರತ್ನವೇಕೆ! ಜೋಳದ ಕಾಳು ಸಾಕು. ಲತೆ ಕೊನೆಯಸಾರಿ ಕಟ್ಟಿ ಕೊನೆಯಸಾರಿ ಒಣಗುತ್ತದೆ. ಪಾತಿ ಪೂರೈಸಿತು ಪ್ರೇಮವೆಂಬ ಧಾರಾವಾಹಿನಿ ಮಾತ್ರ ಒಣಗುತ್ತಿದ್ದ ಲತೆಯನ್ನು ಬದುಕಿಸಲು ಹಿಂದುಮುಂದು ನೋಡಿತು ಆದರೂ ನನ್ನ ಹೃದಯವನ್ನು ಅಲ್ಲಿಂದ ಜರುಗಿಸಲಾರೆ ಅಯ್ಯೋ ಕೆಟ್ಟೆ! ನನ್ನ ಪ್ರೇಮವೆಂಬ ಚೆಂಡನ್ನು ಮನಸ್ಪೋಲಿದ ಹೃದಯಕ್ಕೆ ಗುರಿಯಿಟ್ಟು ಎಸೆದೆ ಆದರೆ ಅದಕ್ಕೆ ಅಲ್ಲಿ ಸ್ಥಳವಿಲ್ಲ ಹಿಂದಕ್ಕೆ ಪುಟಹಾರಿತು!

ಈ ಕುಸುಮ ಕಟ್ಟ ಕೊನೆಯಸಾರಿ ಬಾಡಿತು ಇನ್ನಿದು ಪ್ರಫುಲ್ಲವಾಗಲಾರದು ಇದೇ ನನ್ನ ಧೃಢನಂಬಿಕೆ ಎಂದೆ ಬರೆಯಲಾರೆ 11 ಮ

ನನಗೆ ಇದರ ಸಂಪೂರ್ಣ ಅರ್ಥವಾಗಲಿಲ್ಲ ಇದು ಅವರಿಗೆ ತಿಳಿಯಿತೆಂದು ತೋರುತ್ತದೆ. ಅವರು ಹೇಳತೊಡಗಿದರು

ರಮೆ ನನ್ನ ಮುದ್ದಿನ ಮಗಳು (ಅದೇಕೋ ಮುಂದುವರಿಸಿದಂತೆಲ್ಲ ಅವರ ಧ್ವನಿ ಮೂರ್ಛಾಗುತ್ತಿತ್ತು ಮಧ್ಯೆ ಗದ್ಗದಿಸುತ್ತಿದ್ದರು) ಅವಳ ಒಂಬತ್ತನೆಯ ವಯಸ್ಸಿನಿಂದ ಅವಳ ತಾಯಿ ರಮೆಯ ಮದುವೆಗಾಗಿ ನನ್ನನ್ನು ಪೀಡಿಸುತ್ತಿದಳು ನನ್ನದು ಮುಂದಾಲೋಚನೆ ನೋಟ. ನನ್ನ ಗುರಿ ಪ್ರೌಢಾವಿವಾಹ, ಜೊತೆಗೆ ಸ್ವಯಂವರ. ಅವಳ ತಾಯಿ ಇದಕ್ಕೊಪ್ಪಳು ದಿನವೂ ಇದಕ್ಕಾಗಿ ವಾಗ್ಯುದ್ಧ ಕೊನೆಗೆ ರಮೆಯ ಹತ್ತನೇ ವಯಸ್ಸಿನಲ್ಲಿ ಅವಳ ತಾಯಿ ಬೇನೆಯಿಂದ ತೀರಿದಳು. ರಮೆಯನ್ನು ನಾನೇ ಸಾಕತೊಡಗಿದೆ ಅವಳೆನ್ನ ಕೂರ್ಮೆಯ ಮುದ್ದುಗುವರಿ ಚೆಂಬಾಳೆ ಮೈವಣ್ಣ. ಎಳೆವಳರನಣಕಿಸುವ ಮೃದುವಾದ ನಡನುಡಿ ಎಲ್ಲಕ್ಕೂ ಮೇಲಾಗಿ ಕುಶಾಗ್ರಮತಿ. ಎಲ್ಲವೂ ಸರಿಯೆ ಪುಷ್ಪವು ಪರಿಮಳಪೂರಿತವೇ ಅಹುದು. ಸೌಂದರ್ಯರಾಶಿಯೇ ಅಹುದು ಪ್ರಭಾತದ ಮಂಜುಹನಿ ಮುತ್ತಿಟ್ಟಿಲ್ಲದೆ ಅದರ ಸೌಂದರ್ಯವಿಮ್ಮಡಿಸಲುಂಟು ಅವಳಾಗ ಬಿ ಎ ತರಗತಿಯಲ್ಲಿ ಓದುತ್ತಿದ್ದಳು ಮುಂದಿನ ಕಥೆ ಡೈರಿಯಲ್ಲಿ ನವಾಡಿದಾಗಿದ ತಿಂಗಳ ಕೆಳಗ (ಅವರ ತುಟಿ ನಡುಗುತ್ತಿತ್ತು) ರಮೆ, ನನ್ನ ಮುದ್ದು ರಮೆ (ಕಣ್ಣುಗಳಲ್ಲಿ ನೀರೂರುತ್ತಿತ್ತು) ನನ್ನನ್ನೊಂಟಿಯಾಗಿ ಬಿಟ್ಟು ತನ್ನ ತಾಯಿ ಬಳಿಗ ನಡೆದಳು. (ಮುಂದೆ ಹೇಳಲಾರದೆ ಹೋದರು ಬಿಕ್ಕಳಿಸುತ್ತಾ ಹೇಳತೊಡಗಿದರು) ಕು .ಸು . ..ಮ, ಬಾ ಡಿ ತು

ಅವರನ್ನು ಸಮಾಧಾನಮಾಡುವುದು ವಿಶ್ವಪ್ರಯತ್ನವಾಯಿತು

ಪುನಃ ಹೇಳತೊಡಗಿದರು ಪ್ರೀತಿಗಾಗಲಿ, ಭಕ್ತಿಗಾಗಲಿ ಒಂದು ಉಪಾಧಿ, ಒಂದು ಗುರಿ ಬೇಕು ಇಲ್ಲದಿದ್ದಲ್ಲಿ ಚಾಂ... ಹೆಚ್ಚು. ಹರಿದಾಟ ಬಹಳ ಕಡಿ... ಲ್ಲದ ಕುದುರೆಯಂತೆ! ನಮ್ಮ ಪೂ... ಮೂರ್ತಿ ಪೂಜೆಯ ಗುಟ್ಟು ಇದೇ ... ದೇಶದಲ್ಲಿ ಎಲ್ಲರ ಬಾಯಿಯಲ್ಲೂ ... ಸಮಸ್ಯೆ. ಘೋರ್ಗರೆವ ಪ್ರಚಂಡ ... ಗಳ ಸುರಿಮಳೆ ಬದಲಾವಣೆ, ... ಎಲ್ಲರ ಬಯಸೇ ಅಹುದು ಆದ... ಳ್ಳಿಲ್ಲದ ಗುಲಾಬಿಯಿಲ್ಲ' ಕಮಲದ... ಗೃಹ ಕೆಸರು' ಮೊರದ ಬೆಟ್ಟ ... ಸ್ವಾಮಿ! ಎಂದರು

ನನ್ನ ವಾದವನ್ನು ಮುಂದರಿಸಿ... ತಪ್ಪನ್ನೆತ್ತಿ ತೋರಿಸುವ ಬಯಕೆ ... ತಿಯಾಗಿದ್ದರೂ ನೊಂದ ಮ... ಪುನಃ ನೋಯಿಸಲಾರದೆ ನಿರುತ್ತ...

ಆಶ್ಚರ್ಯವಾದ ಚಿಕಿ...

॥ ಶ್ರೀ ಸದ್ಗುರು ಪರಬ್ರಹ್ಮಣೇನಃ

ಹುಬ್ಬಳ್ಳಿ ಶ್ರೀ ಸದ್ಗುರು ಶ್ರೀ ... ರೂಢ ಸ್ವಾಮಿಗಳ ಆಶೀರ್ವಾದ ಬಲದಿಂದ, ಚೈತನ್ಯಂ ಬಿ ರಾಮದಾಸನು ... ನೀಯರಿಗೆ ತಿಳಿಯಪಡಿಸುವುದೇನೆಂ...

ಸಮಸ್ತ ವ್ಯಾಧಿಗಳನ್ನೂ ಔಷಧನೆ ಇಲ್ಲದೆ ಕೇವಲ ಹಸ್ತಸ್ಪರ್ಶದಿ... ಗುಣಪಡಿಸಲು ನನಗೆ ಶ್ರೀ ಸದ್ಗು... ಅನುಗ್ರಹ ಉಂಟಾಗಿದೆ ಇದ... ನೂರಾರು ಗ್ರಾಮಗಳಲ್ಲಿ ಸಂಚರಿಸಿ ... ಧಿಗ್ರಸ್ತರಿಗೆ ಚಿಕಿತ್ಸೆಮಾಡಿ ಗುಣ... ಲಾಗಿದೆ. ಮುಖ್ಯವಾಗಿ, ತಲೆ ನ... ಶೀವು ಸೋರುವುದು, ತಲೆ ನಡುಗು... ಕಣ್ಣಿನಲ್ಲಿ ನೀರು ಸುರಿಯುವುದು, ... ಳಗೆ ಕಣ್ಣಿನಲ್ಲಿ ಹೂವು ಇರುವುದು, ... ನೋವು, ಊದಲು, ಚಳಕು, ... ನೋವು, ಗಡ್ಡೆ, ಉಸುರುಹಿಡಿದಿರು... ಎಲ್ಲಾ ಜ್ವರಗಳು, ರಕ್ತಭೇಧಿ, ... ಚೇಷ್ಟೆ, ಗ್ರಹಚೇಷ್ಟೆ, ತೊನ್ನು, ... ಶೂಲ, ಕ್ಷಯ ಮುಂತಾದ ವ್ಯಾ... ಕ್ರಮ ಕ್ರಮವಾಗಿ ಗುಣವಾಗು... ಬಹಳ ದಿನಗಳಿಂದಲೂ ಅನುಭವಿಸು... ರೋಗಿಗಳು ಸಂಪೂರ್ಣ ಗುಣಹೊಂ... ಖಶಾಂತಿಯಿಂದ ಆನಂದಪಡುತ್ತಿರು... ಜೇಳುಕಡಿದಿದ್ದರೆ ತಕ್ಷಣ ಗುಣವಾ...

ಮೈಸೂರು ಮಂಡಿ ಮೊಹಲ್ಲಾ ನವಾಬ್ ಬೀದಿಯಲ್ಲಿರುವ 1323ನೇ ... ಮನೆಯನ್ನು ಬೋರಣ್ಣನ ಹೆಂ... ತಿಮ್ಮಮ್ಮ ಎಂಬುವರು ತಮ್ಮ ... ಗುಣವಾದುದಕ್ಕಾಗಿ ಈಶ್ವರಾರ್ಪಣ ... ದಾನಮಾಡಿರುತ್ತಾರೆ ಬೆಂಗಳೂರು ... ಳೇಪೇಟೆ ಮುನಿಬೈರಪ್ಪನ ಮಗಳು ... ಮ್ಮನವರೂ, ಸಹಾ ಇದೇ ರೀತಿ... ಮಾಗಡಿ ರಸ್ತೆಯಲ್ಲಿ ಒಂದು ನಿವೇ... ನ್ನು ದಾನರೂಪವಾಗಿ ಕೊಟ್ಟಿರುತ್ತಾ...

ರೋಗಗ್ರಸ್ತರಾದವರು ಈ ಸ... ದ ಚಿಕಿತ್ಸೆಯ ಪ್ರಯೋಜನವನ್ನು ... ದುವುದಲ್ಲದೆ ಶ್ರೀ ಗುರುಸೇವಾರೂಪ... ಸಿದ್ಧಾಶ್ರಮಸ್ಥಾಪನೆಗೂ ಸಹಾಯ... ಬೇಕಾಗಿ ಕೋರಲ್ಪಟ್ಟಿದೆ "ಬಡ... ಉಚಿತವಾಗಿ ಚಿಕಿತ್ಸೆಮಾಡಲ್ಪಡುವು...

ಚೈತನ್ಯಂ ಬಿ ರಾಮದಾ...

ಅನೇಕ ಮರ್ಮ ವಿದ್ಯೆಗಳಿಂದೊಡಗೂಡಿದ

ಚಿಂತಾರತ್ನ

...ಪಲ್ಲಿ ಜಾತಕ ಫಲ, ಕೈಗಾರಿಕೆಯ ವಿಷಯ, ಇಂದ್ರಜಾಲ ಮಹೇಂದ್ರಜಾಲ, ಯಕ್ಷಿಣಿ ಮೊದಲಾದ ವಿದ್ಯೆಗಳು ಇರುತ್ತವೆ.

ಒಂದೊಂದು ವಿಷಯಕ್ಕೆ ಎಷ್ಟು ಬೆಲೆ ಕೊಟ್ಟರೂ ಸಾಲದು.

೧ ಸಬಕಾರವನ್ನು ತಯಾರಿಸುವ ರೀತಿ ೨ ಮೇಣಬತ್ತಿ ತಯಾರಿಸುವ... ೩ ಕಾಸ್ಟಿಕ್ ಸೋಡಾ ತಯಾರಿಸುವದು ೪ ಬಿಸ್ಕೂಟ ತಯಾರ...ವದು ೫ ಪಟಾಂಗ ತಯಾರ ಮಾಡುವದು ೬. ಪೆಪ್ಪರಮೆಂಟ ಮಾಡು... ೭ ದೇವರ ಫಟ್ಟ ಮಾಡುವದು. ೮ ಭಂಗಾರ ಮಾಡುವದು. ೯ ಜೆ... ಮಾಡುವದು ೧೦ ಜರ್ಮನ್ ಶಿಲ್ವರ ಧಾತು ಮಾಡುವದು. ೧೧ ...ವತ್ತಿ ತಯಾರ ಮಾಡುವದು ೧೨ ತಗಡಿನಪಾಟಿ ತಯಾರ ಮಾಡುವದು. ...ಂಕುಮವನ್ನು ತಯಾರಿಸುವದು ೧೪ ಹಸಿ ಕುಂಕುಮ ತಯಾರಿಸುವದು ...ಯಾವಾಗಲೂ ಕೆಡದಂತೆ ಮಾಡುವದು. ೧೬ ಬಿಸ್ಕಿಟ್ಟು ಮಾಡುವದು. ೧೭ ...ಯಾವಾಗಲೂ ...ಆಗಿರುವಂತೆ ಮಾಡುವದು ೧೮ ಅಶ್ವಗಂಧ ಸಾ...ಗಳು ೧೯ ಭರ್ಸ ತಯಾರ ಮಾಡುವದು ೨೦ ಕಬ್ಬಿಣ ಲೋಹಗಳಿಗೆ ...ರ ಬಣ್ಣ ಮಾಡುವದು ೨೧ ಕಾಗದವನ್ನು ಮಾಡುವದು. ೨೨. ಮೆಂಥೀ... ತಯಾರಿಸುವದು ೨೩ ಕನ್ನಡಿಯಮೇಲೆ ಬರೆಯುವದು. ೨೪. ದಂತ... ಮಾಡುವದು ೨೫ ರಕ್ತಶುದ್ಧಿ ಔಷಧ ೨೬. ಕಸ್ತೂರಿಮಾತ್ರೆ ಮಾ... ೨೭ ಬಾಲಾಮೃತ ಮಾಡುವದು ೨೮ ಪಡಬತ್ತಿ ಮಾಡುವದು. ೨೯. ...ರಸ ಗುಳಿಗೆ ಮಾಡುವದು ೩೦ ಬೂಟ ಪಾಲೀಸ ಮಾಡುವದು. ೩೧. ...ಗಳು, ಅಂಗಡಿ ಮೊದಲಾದವುಗಳಿಗೆ ಗೆದ್ದಲಿ ಹತ್ತದಂತೆ ಮಾಡುವದು ...ರಾಜ ಮುಲಾಮು ೩೩ ನಾಸಿಪುಡಿ ಮಾಡುವದು ೩೪ ಮನೆ, ಅಂಗಡಿಗಳಲ್ಲಿ ಇಲಿ, ಹೆಗ್ಗಣ ಮೊದಲಾದವುಗಳು ಇರದಂತೆ ಮಾಡುವದು. ...ತಂಬಾಕ ಮಾಡುವದು ೩೬. ಬದನೆ, ಕುಂಬಳ ಮುಂತಾದ ಕಾಯಿ... ...ಮಾವು, ಲಿಂಬು ಮುಂತಾದ ಹಣ್ಣುಗಳಿಗೂ ಬೀಜವಿಲ್ಲದ ದೊಡ್ಡವಾಗುವ... ...ಂಟೆ ತಯಾರಿಸುವದು ೩೭ ಬಿಳೇ ಹೂಗಳು ಕೆಂಪಾಗುವಂತೆ ಗಿಡಗಳ... ...ರಿಸುವದು ೩೮. ಕೆಂಪು ಹೂಗಳು ಬೆಳ್ಳಗಾಗುವಂತೆ ಗಿಡಗಳನ್ನು ತ... ...ವದು ೪೦ ಇಸ್ಪೀಟಿನ ಚಮತ್ಕಾರ ೪೧ ಮುಖನೋಡಿಕೊಳ್ಳುವ ಕನ್ನ... ...ವದು ೪೨ ಸುವಾಸನ ಎಣ್ಣೆ ತಯಾರಿಸುವದು ೪೩. ಕೇದಿಗೆ ದವ... ...ಮಾಡುವದು ೪೪ ಯಾವಗಿಡವಾದರೂ ಹುಟ್ಟಿದ ತಕ್ಷಣ ಹೂವು ಬಿಡುವಂತೆ ...ವದು. ೪೫ ಗಂಧಕದ ಬಟ್ಟಲ ತಯಾರಿಸುವದು. ೪೬. ಕರ್ಪೂರ ಮಾ... ೪೭ ...ಪ್ಸ ತಯಾರಿಸುವದು ೪೮ ಗೋಲಿ ಬಟ್ಟೆಗೆ ಬಣ್ಣ ಹಾಕುವದು ... ಕೆಂಪು, ಹಸರು ಹಳದಿ ಬಣ್ಣ ತಯಾರಿಸುವದು ೫೦ ಅರಗಿನ ಬಣ್ಣ... ...ವದು ೫೧ ಗಿಲೀಟ ಮಾಡುವದು ೫೨. ತಾಮ್ರದ ಮೇಲೆ ಭಂಗಾರದ ...ಮಾಡುವದು ೫೩. ತಾಮ್ರ ಹಿತ್ತಾಳೆಗಳಿಗೆ, ಬೆಳ್ಳಿ ಗಿಲೀಟು ಮಾಡುವದು ...ಪೆಟ್ಟಿಗೆ ತಯಾರಿಸುವದು ೫೫ ರೋಜವಾಟರ ತಯಾರಿಸುವದು ೫೬. ...ವು ಬಿಳ್ಳಿಯಾಗುವದು ೫೭. ವಾರ್ನಿಸ ತಯಾರಿಸುವದು. ೫೮ ಲವಂ... ...ರ ತಯಾರಿಸುವದು ೫೯ ಬಾಯಿಂದ ಉರಿ ತೋರಿಸುವದು. ೬೦ ದೇವ... ೬೧ ಫೌಂಟನ್ನಪೆನ್ನ ಇಂಕ ತಯಾರಿಸುವದು. ೬೨. ಕತ್ತಲೆಯಲ್ಲಿ... ...ವ ಇಂಕ ೬೩ ಸ್ಲೇಟಿ ಪೆನ್ಸಿಲ್ ತಯಾರಿಸುವದು ೬೪ ಕರ್ಪೂರಗ್ಲಾಸ ತ... ...ವದು ೬೫ ಕಾಜಿನಬಳಿ ತಯಾರಿಸುವದು ೬೬ ಕವಡಿ ಲೋಬಾನ ತ... ...ವದು ೬೭ ಗಂಧದ ಬಿಲ್ಲೆಗಳನ್ನು ತಯಾರಿಸುವದು ೬೮. ಚರ್ಮಕ್ಕೆ ...ವಾರ್ನಿಸ ತಯಾರಿಸುವದು, ೬೯ ಸೋಡಾವಾಟರ ತಯಾರಿಸುವದು. ...ದ ಮೇಲೆ ಅಕ್ಷರಗಳನ್ನು ಮೂಡಿಸುವದು ೭೧. ಹಾಲಿನ ಒಡೆ ...ತಯಾರಿಸುವದು ೭೨ ಕೋಳಿತತ್ತಿ ಕೆಡದಂತೆ ಇಡುವದು ೭೩. ಬೆಳ್ಳಿ ...ಗಳ ಮೇಲೆ ಅಕ್ಷರಗಳನ್ನು ಮೂಡಿಸುವದು ೭೪ ಬಟ್ಟೆಯಮೇಲ... ...ಮೂಡಿಸುವದು ೭೫. ವಜ್ರವನ್ನು ತಯಾರಿಸುವದು. ೭೬. ಹಾಲಿನ ...ಸುವದು ೭೭. ಸಾರ್ಸಾಪರಿಲ ತಯಾರಿಸುವದು ೭೮. ಚೇಳು ಕಡಿದ... ...ಕಾರ್ಬನ ಪೇಪರ ತಯಾರಿಸುವದು ೮೦. ಗಿಡ-ಮರಗಳನ್ನು ಒಣ... ೮೧. ಮಣ್ಣಿನ ಪಾತ್ರೆಯಲ್ಲಿ ಉಪ್ಪಿನಕಾಯಿ ಹಾಕಿದರೆ ಹುಳಗಳು ಬೀಳ... ...ವದು. ೮೨ ಪುಷ್ಪಗಳ ಬಣ್ಣವನ್ನು ಬದಲಾಯಿಸುವದು. ೮೩. ಲಿಂಬೆ ...ಹಳ ದಿವಸಗಳ ವರೆಗೆ ಕೆಡದಂತೆ ಇಡುವದು ೮೪. ಮಾವಿನ ಹಣ್ಣು ...ದ ವರೆಗೆ ಕೆಡದಂತೆ ಇಡುವದು ೮೫ ಒಂದೇ ಗಿಡದಲ್ಲಿ ೨ ಬಣ್ಣದ ...ವಂತೆ ತಯಾರಿಸುವದು. ೮೬ ನಾಣೆಯ ಗುಳಿಯನ್ನು ತಯಾರಿಸುವ... ...ಪೆನ್ಸಿಲ್ ತಯಾರಿಸುವದು. ೮೮. ಕೇಕ್ಸ ತಯಾರಿಸುವದು ೮೯. ಸ... ...ಬ ತಯಾರಿಸುವದು. ೯೦ ಕಬ್ಬಿಣವನ್ನು ಕರಗಿಸುವದು

೯೧ ವಿಷಯಗಳಿವೆ ಸ್ಥಳ ಸಂಕೋಚ ಮೂಲಕ ಎಲ್ಲವನ್ನೂ ಕೊಟ್ಟಿಲ್ಲ.

ಬೆಲೆ ೧ ರೂಪಾಯಿ (ವಿ ಪಿ. ಪೋಷ್ಟ ಬೇರೆ)

ಸಿ. ಎಸ್. ಸಾಲಿಮಠ, ಪ್ರಿಂಟರ, ಗದಗ ಇವರಿಂದ ಬರೆಯಲ್ಪಟ್ಟ

ಕಾಮಕಳಾ ಶಾಸ್ತ್ರ

ಪ್ರತಿ ಒಬ್ಬ ರಸಿಕರು ಅವಶ್ಯ ಓದಬೇಕಾದ ಈ ಪುಸ್ತಕದೊಳಗಿನ ವಿಷಯಗಳು.

೧ ಪುರುಷ ಸಾಮುದ್ರಿಕ ಲಕ್ಷಣ. ೨ ಸ್ತ್ರೀ ಸಾಮುದ್ರಿಕ ಲಕ್ಷಣ ೩. ಶಶಕ ಜಾತಿ ಪುರುಷನ ಲಕ್ಷಣ ೪ ಮೃಗಜಾತಿ ಪುರುಷನ ಲಕ್ಷಣ ೫ ವೃಷಭ ಜಾತಿ ಪುರುಷನ ಲಕ್ಷಣ ೬ ಅಶ್ವಜಾತಿ ಪುರುಷನ ಲಕ್ಷಣ. ೭. ಪದ್ಮಿನೀ ಜಾತಿ ಸ್ತ್ರೀಯಳ ಲಕ್ಷಣ ೮. ಚಿತ್ರಿಣಿ ಜಾತಿ ಸ್ತ್ರೀಯಳ ಲಕ್ಷಣ ೯ ಶಂಖಿನಿ ಜಾತಿ ಸ್ತ್ರೀಯಳ ಲಕ್ಷಣ ೧೦ ಹಸ್ತಿನಿ ಜಾತಿ ಸ್ತ್ರೀಯಳ ಲಕ್ಷಣ. ೧೧ ಯಾವ ಯಾವ ಜಾತಿ ಪುರುಷನಿಗೆ, ಯಾವ ಯಾವ ಜಾತಿ ಸ್ತ್ರೀಯಳು ಯೋಗ್ಯ. ೧೨. ಮತ್ತು ಅವರಿಂದ ಹುಟ್ಟಿದ ಮಕ್ಕಳ ಫಲವಿಚಾರ (ಜಾತಕ) ೧೩. ಯಾವ ಯಾವ ಜಾತಿ ಸ್ತ್ರೀಯರಿಗೆ ಯಾವ ಯಾವ ತಿಥಿಯ ದಿವಸ ಭೋಗೇಚ್ಛಾ ಉಂಟಾಗುತ್ತದೆಂಬುವನ್ನು ತಿಳಿಸುವದು ೧೪ ಯಾವ ಯಾವ ಸ್ತ್ರೀಯರಿಗೆ ಎಷ್ಟೆಷ್ಟು ಹೊತ್ತಿಗೆ ಭೋಗೇಚ್ಛಾ ಉಂಟಾಗುತ್ತದೆಂಬುವದನ್ನು ತಿಳಿಸುವದು. ೧೫ ಯಾವ ಯಾವ ಜಾತಿ ಸ್ತ್ರೀಯರಿಗೆ ಯಾವ ಯಾವ ತಿಥಿಯ ದಿವಸ ಯಾವ ಯಾವ ಅವಯವದಲ್ಲಿ ಕಾಮವು ಇರುತ್ತದೆಂಬುವದನ್ನು ತಿಳಿಯುವ ಕ್ರಮವು ೧೬. ಚಂದ್ರಕಲೆಯ ಸ್ಥಾನಗಳು ೧೭. ಸ್ತ್ರೀವಶೀಕರಣ ೧೮ ಪುರುಷವಶೀಕರಣ ೧೯ ಪದ್ಮಿನಿ ಸ್ತ್ರೀಯಳನ್ನು ವಶಮಾಡಿಕೊಳ್ಳುವ ಉಪಾಯ ೨೦ ಚಿತ್ರಿಣಿ ಸ್ತ್ರೀಯಳನ್ನು ವಶಮಾಡಿಕೊಳ್ಳುವ ಉಪಾಯ. ೨೧ ಶಂಖಿನಿ ಸ್ತ್ರೀಯಳನ್ನು ವಶಮಾಡಿಕೊಳ್ಳುವ ಉಪಾಯ ೨೨ ಹಸ್ತಿನಿ ಸ್ತ್ರೀಯಳನ್ನು ವಶಮಾಡಿಕೊಳ್ಳುವ ಉಪಾಯ. ೨೩. ಭೋಗಕ್ಕೆ ಯೋಗ್ಯ ಸ್ಥಳ ೨೪ ಭೋಗಕ್ಕೆ ಅಯೋಗ್ಯ ಸ್ಥಳ ೨೫ ಮೈಥುನಕ್ಕೆ ಅಯೋಗ್ಯವಾದ ವೇಳೆ ೨೬. ಮೈಥುನಕ್ಕೆ ಅಯೋಗ್ಯ ಸ್ತ್ರೀಯರು ೨೭. ಪರಸ್ತ್ರೀಗಮನದಿಂದಾಗುವ ಹಾನಿ ೨೮ ಸುಗಂಧ ದ್ರವ್ಯ ೨೯ ಕಂಕುಳದೊಳಗಿನ ದುರ್ಗಂಧ ಹೋಗುವುದಕ್ಕೆ ೩೦ ಬಾಯಿ ದುರ್ಗಂಧ ಹೋಗುವುದಕ್ಕೆ ೩೧ ಮಾಡಿಬಕ್ಕೆಗೆ ೩೨. ಕೇಶರಂಜನಕ್ಕೆ ೩೩. ತಿಗಣೆ ನಶ್ಯಕ್ಕೆ ೩೪. ಕೂದಲು ಉದುರದಕ್ಕೆ. ೩೫ ಶರೀರದ ಕೆಪ್ಪು ಬಣ್ಣಕ್ಕೆ ೩೬. ಕುಚವೃದ್ಧಿಗೆ ೩೭ ಸ್ತ್ರೀಯರಲ್ಲಿಯ ಅವಸ್ಥೆಗಳು ೩೮ ಅವಸ್ಥೆ ಮೇಲಿಂದ ಪ್ರೇಮದ ಗುರುತು ೩೯ ಮೈಥುನದ ಸುಖದಲ್ಲಿ ಅಂತರ ಬೀಳುವ ಕಾರಣ ೪೦ ದಂಪತಿಗಳು ಕೂಡುವ ದಿಕ್ಕಿನ ಫಲವು ೪೧. ಸತಿಪತಿಗಳು ಕೂಡುವ ದಿವಸ ಫಲ ೪೨. ಗರ್ಭ ನಿಂತದಿವಸ ಫಲ ೪೩. ಗರ್ಭನಿಂತ ಕಾಲ ಫಲ ೪೪ ಸ್ತ್ರೀಯರ ಜಾತಿವರ್ಣಿಸಿದ ಲಕ್ಷಣ ೪೫ ಏಕ ಶಯನಿಗೆ ಉಪಾಯ ೪೬. ಯೋನಿ ಸಂಕೋಚಕ್ಕೆ ೪೭. ಶಿಶ್ನ ವೃದ್ಧಿಗೆ. ೪೮. ಸ್ತ್ರೀಯರಿಗೆ ಮೈಥುನವು ಬೇಗನೆ ಸಾಕಾಗುವಂತೆ ಮಾಡುವ ಉಪಾಯ ೪೯ ಪುರುಷರಿಕ್ಕಿಂತ ಮೊದಲು ಸ್ತ್ರೀಯರ ರೇತಸ್ಖಲನವಾಗುವ ಉಪಾಯ ೫೦ ಪುರುಷರ ರೇತಸ್ಸು ಬೇಗ ಬೀಳಬಾರದೆಂಬುವದಕ್ಕೆ ಉಪಾಯ ೫೧ ವಾಜೀಕರಣ ಪ್ರಯೋಗ ೫೨ ಸ್ತ್ರೀಯರನ್ನು ಜಯಿಸುವದಕ್ಕೆ ೫೩. ಬಹಳ ಮುಟ್ಟಾಗುತಿದ್ದರೆ ೫೪ ಸಂತತಿ ಪ್ರತಿಬಂಧಕ ಉಪಾಯ. ೫೫. ಮುಟ್ಟು ತಡೆದಿದ್ದರೆ, ೫೬. ಗರ್ಭಾಶಯ ಶುದ್ಧಿಗೆ ೫೭. ಗರ್ಭಧಾರಣಕ್ಕೆ ೫೮ ಗರ್ಭಪಾತಕ್ಕೆ ಉಪಾಯ. ೫೯ ಬೇಗ ಹಡಿಯಲಿಕ್ಕೆ ಉಪಾಯ ೬೦ ನಪುಂಸಕ ದೋಷಕ್ಕೆ ಉಪಾಯ ೬೧ ಸ್ತ್ರೀ ಪುರುಷರ ಪ್ರೀತಿಯ ವರ್ಣನೆ ೬೨ ಸ್ತ್ರೀಯರು ವಶವಾಗುವ ಮತ್ತು ಗರ್ಭಧರಿಸುವ ಕಾಲ ೬೩. ಹೆಂಗಸರು ಯಾವ ಕಾರಣದಿಂದ ಕೆಡುತ್ತಾರೆ ೬೪. ಪತಿಯು ವಿಷಯಕ್ಕೆ ಸತಿಯು ಬೇಸರ ಪಟ್ಟರುವಳೆಂಬುದನ್ನು ತಿಳಿಯುವದು ೬೫ ಉದಾಸೀನತೆ ಪ್ರಾಪ್ತವಾಗುವ ಕಾರಣ ೬೬ ಭೋಗೇಚ್ಛಾವುಂಟಾದ ಸ್ತ್ರೀಯ ಲಕ್ಷಣ. ೬೭ ನಿರಂತರ ಸುರತಯೋಗವಿರುವ ಸ್ತ್ರೀಯ ಲಕ್ಷಣ. ೬೮ ವಿರಹಿಣೀ ಸ್ತ್ರೀಯ ಲಕ್ಷಣ ೬೯ ಭೋಗೇಚ್ಛಾ ಪೂರ್ಣವಾದ ಮೇಲೆ ತೋರುವ ಸ್ತ್ರೀ ಲಕ್ಷಣ ೭೦. ಉಷ್ಣರೋಗಕ್ಕೆ ೭೧ ರಕ್ತ ಉಷ್ಣಕ್ಕೆ ೭೨ ಮೇಹ ಉಷ್ಣಕ್ಕೆ ೭೩. ಉಷ್ಣ ಕೈಯೊಳಗೆ ಒಡೆದರೆ ೭೪ ಉಷ್ಣಹುಣ್ಣಿನ ಗಾಯಕ್ಕೆ ೭೫ ಜೇರಿಗೆ ೭೬. ಉಪದಂಶಿಗೆ ೭೭ ಬಿಳೇ ಉಷ್ಣಕ್ಕೆ ೭೮ ತರದ ಪ್ರಮೇಯಕ್ಕೆ ೭೯ ಪ್ರಮೇಯಕ್ಕೆ ೮೦ ಗುರ್ಮರೋಗಕ್ಕೆ ೮೧ ಪುಷ್ಟಿಗೆ ೮೨ ಧಾತು ಪುಷ್ಟಿಗೆ ೮೩. ರೇತು ಸಂಚಯಕ್ಕೆ. ೮೪. ವೀರ್ಯವೃದ್ಧಿಗೆ ೮೫ ಕಾಮೋತ್ತೇಜನಕ್ಕೆ ೮೬. ಜೀರ್ಣಶಕ್ತಿ ಬರುವದಕ್ಕೆ. ೮೭. ಮುಷ್ಟಿಮೈಥುನದಿಂದಾಗುವ ಅಶಕ್ತಿಗೆ ೮೮. ಗಂಡಸಾತನಕ್ಕೆ (ಷಂಡತ್ವಕ್ಕೆ) ೮೯ ಸ್ವಪ್ನೇಂದ್ರಿಗೆ ೯೦ ಇಂದ್ರಿಯ ಸ್ತಂಭನಕ್ಕೆ. ೯೧ ಶುಕ್ರ ಸ್ತಂಭನಕ್ಕೆ. ೯೨ ಧಾತು ನಷ್ಟಕ್ಕೆ ೯೩ ಹತ್ತುಣ್ಣಿಗೆ ೯೪ ಜಲಮಲ ಕಟ್ಟಿದರೆ ೯೫ ರಸಾಯನ ಮೈಯಲ್ಲಿ ಒಡೆದಿದ್ದರೆ ೯೬ ಗೂದಿಗೆ ೯೭ ಮೂಲವ್ಯಾಧಿಗೆ. ೯೮ ಅಂಗಸಾಮುದ್ರಿಕೆ ೯೯ ದೇವ ಪುರುಷನ ಲಕ್ಷಣ ೧೦೦. ಗಂಧರ್ವ ಪುರುಷನ ಲಕ್ಷಣ ೧೦೧ ಯಕ್ಷಪುರುಷನ ಲಕ್ಷಣ ೧೦೨. ಪಿಶಾಚ ಪುರುಷನ ಲಕ್ಷಣ ೧೦೩. ದೇವಸತ್ವಾ ಸ್ತ್ರೀಯ ಲಕ್ಷಣ ೧೦೪ ಗಂಧರ್ವಸತ್ವಾ ಸ್ತ್ರೀಯ ಲಕ್ಷಣ ೧೦೫. ಯಕ್ಷಸತ್ವಾ ಸ್ತ್ರೀಯ ಲಕ್ಷಣ ೧೦೬. ಪಿಶಾಚಸತ್ವಾ ಸ್ತ್ರೀಯ ಲಕ್ಷಣ ಇತ್ಯಾದಿ

ಬೆಲೆ ೧ ರೂಪಾಯಿ.. (ವಿ ಪಿ ಪೋಷ್ಟ ಬೇರೆ)

ಖಾಸ:— ಎಸ್. ಸಿ. ಸಾಲಿಮಠ ಅಂಡ್ ಸನ್ಸ್, ಗದಗ ಸಿಟಿ.

ಕನ್ನಡ ಆತ್ಮ ಪುರಾಣ.

ಇದು ಮುಮುಕ್ಷುಗಳ ಮುಖದರ್ಪಣ.

ಈ ಗ್ರಂಥವು ೧೮ ಅಧ್ಯಾಯಗಳುಳ್ಳದ್ದು ಇದರಲ್ಲಿ ಐತರೇಯಾದಿ ೯ ಉಪನಿಷತ್ತುಗಳ ವಿಸ್ತಾರವಾದ ಅರ್ಥವಿರುವದು ಇದು ಶ್ರೀ ಶಂಕರಾನಂದಮುನಿಗಳು ದೇಶಭಾಷೆಯಲ್ಲಿ ತಮ್ಮ ಶಿಷ್ಯನಿಗೆ ಉಪದೇಶಿಸಿದ ಪರಮ ಅದ್ಭುತ ಪುರಾತನ ಗ್ರಂಥವಾಗಿರುವುದ ಆತ್ಮವಿದ್ಯಾ ವಿಷಯದಲ್ಲಿ ಇದಕ್ಕೆ ಸಮಾನವಾದ ಗ್ರಂಥವು ಈ ಜಗತ್ತಿನಲ್ಲಿಯೇ ಇಲ್ಲವೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು ಈ ಗ್ರಂಥವು ಹಿಂದೀಭಾಷೆಯನ್ನಿದ್ದುಕೊಂಡು ಉತ್ತರದೇಶದೊಳಗೆಲ್ಲಾ ಬಹು ಪ್ರಸಿದ್ಧಿಗೊಂಡಿರುವದು ನಮ್ಮ ದಕ್ಷಿಣ ಕರ್ನಾಟಕದಲ್ಲಿ ಇದರ ನ್ಯೂನತೆಯಂ ನೋಡಿ ನನ್ನಿಂದ ಕನ್ನಡದಲ್ಲಿ ಭಾಷಾಂತರಮಾಡಲ್ಪಟ್ಟಿತು ಇದನ್ನು ಎರಡು ವಿಭಾಗವಾಗಿ ವಿಂಗಡಿಸಿ ಎರಡು ಬುಕ್ಕುಗಳಾಗಿ ಮಾಡಬೇಕೆಂದು ಆಲೋಚಿಸಿ ಆ ಪೈಕಿ ೮ ಅಧ್ಯಾಯಗಳುಳ್ಳ ಈ ಮೊದಲನೇ ಭಾಗ ಮುದ್ರಾಪಿಸಿ ಬೈಂಡಿಂಗ್ ಸಹಾ ಕಟ್ಟಿಸಿ ತಯಾರ್ ಮಾಡಲ್ಪಟ್ಟಿರುವದು ಇದರ ಕ್ರಯ ೧—೮—0 ರೂ, ಇದನ್ನಪೇಕ್ಷಿಸುವವರು ೨ ರೂಪಾಯಿ ಮುಂಗಡ ಕಳುಹಿಸಬೇಕು ಉಳಿದ ಹತ್ತು ಅಧ್ಯಾಯಗಳುಳ್ಳ ಎರಡನೇ ಭಾಗವು ಶೀಘ್ರದಲ್ಲಿಯೇ ತಯಾರಾಗುವದು ಇದನ್ನಪೇಕ್ಷಿಸುವವರು ೩ ರೂಪಾಯಿಗಳನ್ನು ಅಡ್ವಾನ್ಸಾಗಿ ದಯವಿಟ್ಟು ಕಳುಹಿಸಿಕೊಟ್ಟಲ್ಲಿ ಪುಸ್ತಕವು ಶೀಘ್ರದಲ್ಲಿಯೇ ಮುದ್ರಾಪಿಸಿ ಬೈಂಡಿಂಗ್ ಸಹಾ ಕಟ್ಟಿಸಿ ಅವರವರ ವಿಳಾಸಕ್ಕೆ ಪುಸ್ತಕದ ಕ್ರಯದಲ್ಲಿ ಅಡ್ವಾನ್ಸ್ ಹಣವನ್ನು ಕಳೆದು ಉಳಿದ ಮೊಬಲಿಗೆಗೆ ಬುಕ್ಕನ್ನು ವಿ. ಪಿ. ಮಾಡಲ್ಪಡುವದು ಇದಲ್ಲದೆ ಗ್ರಂಥಕರ್ತರಿಂದ ಇನ್ನೂ ಅನೇಕ ವೇದಾಂತ ಗ್ರಂಥಗಳು ರಚಿಸಲ್ಪಟ್ಟು ಅಚ್ಚಿಗೆ ಸಿದ್ಧವಾಗಿದೆ

ಗ್ರಂಥಕರ್ತ:—ಶಿವಾನಂದ ಸುಬ್ರಹ್ಮಣ್ಯ (ವೇದಾಂತ ಸುಬ್ಬಯ್ಯ)
ಲಕ್ಷ್ಮೀವಿಲಾಸ ಅಗ್ರಹಾರ, ಮೈಸೂರು

ಪ್ರಾಚೀನ ಕನ್ನಡ ವಚನ ಗ್ರಂಥಗಳು

ಸೌಗಂಧಿಕಾಪರಿಣಯ:—ಪೂರ್ವದಲ್ಲಿ ದೇವೇಂದ್ರನಿಗೆ ದೂರ್ವಾಸ ಮುನಿಗಳಿಂದ ಆಶೀರ್ವಾದ ಪೂರ್ವಕವಾಗಿ ಕೊಡಲ್ಪಟ್ಟ ಕಮಲಮಾಲಿಕೆಯನ್ನು ಆನೆಯ ಕುಂಭಸ್ಥಳದಲ್ಲಿಟ್ಟೊಡನೆ, ಆನೆಯು ಆ ಮಾಲಿಕೆಯನ್ನು ಕಾಲಿನಲ್ಲಿ ಹೊಸಕಿ ವ್ಯರ್ಥಪಡಿಸಲು, ಋಷಿಗಳ ಶಾಪದಿಂದ ಭೂಲೋಕದಲ್ಲಿ ರತ್ನಪುರಿಯಲ್ಲಿ ಸುಗಂಧರಾಜನಾಗಿ ಹುಟ್ಟಿ, ಕಳಿಂಗದೇಶದ ರಾಜಪುತ್ರಿಯಾದ ಸೌಗಂಧಿಕಾದೇವಿಯನ್ನು ಸ್ವಯಂವರಮಾಡಿಕೊಂಡು, ಬಹಳ ವಿನೋದವಾಗಿರುವ ಕಥೆ

೧೬೦ ಪುಟಗಳು ಕ್ರಯ ರೂ ೪—೮—೦

ಸಹಸ್ರಾಯುಚರಿತ್ರೆ—ಸಾರ್ವಭೌಮ ಅರಸನ ಜ್ಯೇಷ್ಠಪತ್ನಿಯಲ್ಲಿ ದಾಕ್ಷಾಯಣಿ ವರಪ್ರಸಾದದಿಂದ ಜನಿಸಿ ಲೋಕಪ್ರಸಿದ್ಧನಾಗಿ ತನಗೆ ಶತರಿಂದ ಒಂದ ಗಂಡಾಂತರಗಳನ್ನೆಲ್ಲಾ ಪರಿಹರಿಸಿಕೊಂಡ ಒಬ್ಬ ಮಹಾಪುರುಷನ ಕಥೆ

೮೦ ಪುಟಗಳು ಕ್ರಯ ರೂ ೩—೦—೦

ಕಾಶೀಕ್ಷೇತ್ರಮಹಾತ್ಮೆ—ಇದರಲ್ಲಿ ೧೪ ಲೋಕಗಳ ವರ್ಣನೆ, ನದಿಗಳು, ದೇವತೆಗಳು ಋಷಿಗಳೇ ಮುಂತಾದವರ ಉತ್ಪತ್ತಿಕ್ರಮ, ಗಂಗಾ ಮಹಾತ್ಮೆ ಮೊದಲಾದ ಅನೇಕ ವಿಷಯಗಳು ಅಡಕವಾಗಿರುತ್ತೆ.

೭೦ ಪುಟಗಳು ಕ್ರಯ ರೂ ೨—೨—೦

ವಿಳಾಸ,—

ಗುಂಡ್ಲು ಪಂಡಿತ ಲಕ್ಷ್ಮಣಾಚಾರ್ಯರ ಮಕ್ಕಳು
ಶ್ರೀನಿವಾಸ ದೇಶಿಕಾಚಾರ್,
೧೦೭ ಕರುಹಟ್ಟಿ ಬೀದಿ, ಮೈಸೂರು



ಟಿ. ಸಿ. ನಟರಾಜ್ ಔಷಧಾಲಯ,

ಸಯ್ಯಾಜಿರಾವ್ ರೋಡು, ಮೈಸೂರು.

ಇವರಲ್ಲಿ ನೇತ್ರಪರೀಕ್ಷೆಯು ಉಚಿತವಾಗಿ ಮಾಡಲ್ಪಡುತ್ತದೆ.

ಅತ್ಯಗತ್ಯವಾಗಿ ಬೇಕಾದ ಎಲ್ಲಾ ಇಂಜಕ್ಷನ್ ಔಷಧಿಗಳೂ ಸದಾ ಕಾಲದಲ್ಲಿಯೂ ದೊರಕುವುದಲ್ಲದೆ ಸಮಸ್ತ ವ್ಯಾಧಿಗಳಿಗೂ ಚಿಕಿತ್ಸೆಯು ಬಹು ಸುಲಭ ಛಾರ್ಜಿನಿಂದ ಮಾಡಲ್ಪಡುತ್ತದೆ

ಝಂಡೂರವರ ಆಯುರ್ವೇದೀಯ ಸಿದ್ಧೌಷಧಗಳೆಲ್ಲವೂ ಸದಾ ದೊರಕುತ್ತವೆ

"ಬ್ರೇಕ್ ಪಿಲ್ಸ್"

INVENTED BY A HIMALAYAN SAGE

● ಸ್ತ್ರೀಪುರುಷರಿಗೆ ಆನಂದವನ್ನುಂಟುಮಾಡುವುದು ಈ ಮಾತ್ರೆಗಳ ವಿಧಿ ಸಿದ್ಧ ಸ್ತ್ರೀಯರ ಗರ್ವಭಂಗಮಾಡಲು ಕಂಡುಹಿಡಿದಿರುವ ಮಾತ್ರೆಗಳಿವು. ಇದರಲ್ಲಿ ರಸ ವಿಷಾದಿಗಳು ಸೇರಿಲ್ಲ ಕಸ್ತೂರಿ, ಚಿನ್ನ, ಹಿಮಾಲಯ ಪರ್ವತದ ವನದ ಮೂಲಿಕೆಗಳು ಮುಂತಾದುವುಗಳಿಂದ ದೊಡ್ಡ ಯೋಗೀಶ್ವರರ ಹತ್ತಿರ ಸಂಗ್ರಹಿಸಿ ಮುದುಕತನವನ್ನು ಲೋಕದಲ್ಲಿ ಇಲ್ಲದಂತೆ ಮಾಡುವುದು ಅರ್ಧ ಘಂಟೆಯೊಳಗಾಗಿ ವೀರ್ಯವನ್ನು ಕಲ್ಲಿನಂತೆಮಾಡಿ ರಮಿಸಲು ಉಲ್ಲಾಸವನ್ನು ಮಾಡುವುದು ಗುಣವಿಲ್ಲದಿದ್ದಲ್ಲಿ ಹಣ ವಾಪಸು.

೬೦ ಮಾತ್ರೆಗಳು ರೂ ೫—೦—೦ ೩೦ ಮಾತ್ರೆಗಳು ರೂ ೩—೦—೦

(ಕಾಗದ ಪತ್ರಗಳು ಇಂಗ್ಲೀಷಿನಲ್ಲಿಯೇ)

ಡಾ|| ಎ. ಎಸ್. ಮೂರ್ತಿ, ಚಿಕಾಕೋಲ್, ಗಂಜಾಮ್ ಡಿಸ್ಟ್ರಿಕ್ಟ್

ದ್ರಾಕ್ಷಾಮೃತ

ಈ ದ್ರಾಕ್ಷಾಮೃತವು ಸಹ್ಯಾದ್ರಿ ಪರ್ವತದಲ್ಲಿ ಅನೇಕ ವನಸ್ಪತಿಗಳ ರಸಗಳೊಂದಿಗೆ ದ್ರಾಕ್ಷಾರಸವನ್ನು ಮಿಶ್ರಮಾಡಿ ಸ್ವದೇಶಿ ಯಂತ್ರದಿಂದ ಶಾಸ್ತ್ರೋಕ್ತ ಪದ್ಧತಿ ಪ್ರಕಾರ ತಯಾರು ಮಾಡಿರುವದರಿಂದ ಸ್ವಾದಿಷ್ಟವು ಮತ್ತು ಮನೋಜ್ಞ ಆಗಿದೆ

ಇದರ ಸೇವನೆಯಿಂದ ಶರೀರದೊಳಗಿನ ಹಳೆ ಉಷ್ಣತೆ (ಗರಮಿ) ಸಂಪೂರ್ಣ ನಾಶವಾಗುತ್ತದೆ ಮತ್ತು ಧಾತುಸ್ರಾವ, ಸ್ವಪ್ನಾವಸ್ಥೆಯಿಂದ ಅಥವಾ ಬೇರೆ ಯಾವದೇ ಕಾರಣದಿಂದ ಬಂದ ಅಶಕ್ತತೆಯಿಂದ ಕೈಕಾಲು, ಕಣ್ಣೊಳಗೆ ಉರಿ, ಬೇಸರೋಣ, ಶೌಚಕ್ಕೆ ಸಾಫ ಆಗದೆ ಇರೋಣ, ಮುಂತಾದ ಎಲ್ಲ ವಿಕಾರಗಳು ನಷ್ಟವಾಗಿ ಕ್ಷುಧಾಗ್ನಿ ಬೆಳೆಯುತ್ತದೆ ಮತ್ತು ಅನ್ನ ಚೆನ್ನಾಗಿ ಪಚನವಾಗಿ ಶೌಚಕ್ಕೆ ಸಾಫವಾಗುತ್ತದೆ ಇದರ ಸೇವನೆಯಿಂದ ತರುಣರಿಗೆ ವ್ಯಭಿಚಾರದಿಂದ ಅಥವಾ ಬೇರೆ ಕಾರಣದಿಂದ ಬಂದ ಧಾತುಕ್ಷೀಣತೆ, ನಪುಂಸಕತ್ವ ಇದ್ದರೆ ಅದು ದೂರಾಗಿ ಪುನಃ ಯೌವನವಂತರಾಗಿ, ಶರೀರ ಬಲವಾಗಿ ಮಕ್ಕಳು ಪುಷ್ಟಿವಂತರಾಗುವರು ಹೆಂಗಸರಿಗೂ ಮತ್ತು ಮಕ್ಕಳಿಗೂ ಈ ಔಷಧವು ಗುಣಕಾರಿ ಇದೆ ಮುಟ್ಟಿನ ಬಾಧೆ ಮತ್ತು ಉಷ್ಣ ಗರ್ಭ ಸಂಬಂಧವಾದ ರೋಗಗಳಿದ್ದರೂ ಎಲ್ಲಾ ಗುಣವಾಗಿ ಹೆಂಗಸರಿಗೆ ಸಂತತಿ ವೃದ್ಧಿಯಾಗುವದು ಈ ಔಷಧದ ಮೂರು ಬಾಟ್ಲಿಗಳನ್ನು ಸೇವನೆ ಮಾಡಿದರೆ ಪೂರ್ಣ ಗುಣಬರುತ್ತದೆ ಇದರ ಅನುಭವ 1 ಬಾಟ್ಲಿ ಸೇವನೆ ಮಾಡಿದ ಅನಂತರ ನಿಮಗೆ ತಿಳಿದೀತು

1 ಬಾಟ್ಲಿ ಬೆಲೆ ರೂ ೧-೪-೦, 3 ಬಾಟ್ಲಿ ೩-೨-೦, 1 ಡಜನ್ ಬಾಟ್ಲಿ ಬೆಲೆ ೧೨-೦-೦

ಮ್ಯಾನೇಜರ್—ದ್ರಾಕ್ಷಾಮೃತ ಡಿಪೋ ಪೋಸ್ಟ್ ನಿಪ್ಪಾಣಿ, ಜಿಲ್ಲಾ ಬೆಳಗಾವಿ

ಮೈಸೂರು ಸ್ಟಾಕಿಸ್ಟ್ಸ್—ಟಿ. ಸಿ. ನಟರಾಜ್, ಬೊಂಬಾಯಿ ಆನಂದ ಭವನ, ಮಾಡರ್ನ್ ಫಾರ್ಮಸಿ, ಸಯ್ಯಾಜಿರಾವ್ ರೋಡ್ ಬೆಂಗಳೂರು ಸಿಟಿ—ಸಿ. ಶಾಸ್ತ್ರಿ ಅಂಡ್ ಸನ್ಸ್, ಚಿಕ್ಕಪೇಟೆ ತುಮಕೂರು—ಟಿ ಆರ್ ಗುರು ಚನ್ನಬಸವ ಅಂಡ್ ಬ್ರದರ್ಸ್ ಚಿಕ್ಕಮಗಳೂರು—ಎಂ ಎಸ್ ಮಂಜಯ್ಯಶೆಟ್ಟಿ ಶಿವಮೊಗ್ಗ—ಶ್ರೀಕೃಷ್ಣ ಟ್ರೇಡಿಂಗ್ ಏಜನ್ಸಿ ಮತ್ತು ಕುಂಡೇರಾವ್ ಬ್ರದರ್ಸ್ ದಾವಣಗೆರೆ—ಮುಪ್ಪಿನಪ್ಪ ಮತ್ತು ಕೆ. ಭೀಮಯ್ಯಶೆಟ್ಟಿ ಅಂಡ್ ಬ್ರದರ್ಸ್

|| ಸತ್ಯಮೇವೋದ್ಧರಾಮ್ಯಹಮ್ ||
ರಾಜಧಾನಿಯ ರಾಷ್ಟ್ರೀಯ ವಾರ ಪತ್ರಿಕೆ.
ವೃದ್ಧ ಪಿತಾಮಹ ಎಂ. ವೆಂಕಟಕೃಷ್ಣಯ್ಯನವರ ಜ್ಞಾಪಕಾರ್ಥವಾಗಿ ಪ್ರಕಟಿಸಲ್ಪಡುವುದು.
ಸಂಪಾದಕರು ಆಗರಂ ರಂಗಯ್ಯ, ಬಿ ಎ

ಸಂಪುಟ ೧] MYSORE : MONDAY 24—8—36 ಮೈಸೂರು : ಸೋಮವಾರ ೨೪—೮—೩೬ [ಸಂಚಿಕೆ ೨೭

ಕಬ್ಬಿನ ವ್ಯವಸಾಯಗಾರರಿಗೆ ಬಹುಮಾನ.

ಸಕ್ಕರೆ ಕೈಗಾರಿಕೆಯು ಹೆಚ್ಚು ಅಭಿವೃದ್ಧಿ ಹೊಂದದಿರಲು ಅದಕ್ಕೆ ತಗಲುವ ವೆಚ್ಚವೇ ಮುಖ್ಯ ಕಾರಣವಾಗಿದೆ ...ವಾದಲ್ಲಿ ಆಗುವ ಎರಡರಷ್ಟು ಖರ್ಚು ...ಸೂರು ಸಕ್ಕರೆ ಕಾರ್ಖಾನೆಯಲ್ಲಿ ಆಗುತ್ತದೆ. ಇದನ್ನು ಪರಿಹರಿಸಲು ಸರಾಸರಿ ...ನ ಬೆಳೆಯನ್ನು ಹೆಚ್ಚಿಸಬೇಕಾಗಿದೆ ...ರಿಂದ ಇರ್ವಿನ್ ನಾಲೆಯ ಜಮೀನು...ಲ್ಲಿ ಒಂದು ಎಕರೆಗೆ 40 ಟನ್ನುಗಳಿ...ತ ಜಾಸ್ತಿಯಾಗಿ ಕಬ್ಬನ್ನು ಉತ್ಪತ್ತಿ ಮಾಡುವ 6 ಮಂದಿ ರೈತರಿಗೆ 100 ರೂ ... 6 ಬಹುಮಾನವನ್ನೂ ಮತ್ತು 5 ...ರಗಳಿಗೆ ಕಡಿಮೆಯಿಲ್ಲದ ಭೂಮಿಯಲ್ಲಿ ...ಸರಿ 35 ಟನ್ನುಗಳಿಗೆ ಕಡಿಮೆಯಿಲ್ಲದೆ ...ನ್ನು ಬೆಳೆಯುವ ರೈತರಿಗೆ 500 ರೂ ...ಗಳ ಬಹುಮಾನವನ್ನೂ ಕೊಡಲು ...ಸೂರು ಸಕ್ಕರೆ ಕಾರ್ಖಾನೆಯು ನಿಷ್ಕರ್ಷಿಸಿರುವುದು

ಕೃಷ್ಣರಾಜ ಸಾಗರ

ಕೃಷ್ಣರಾಜ ಸಾಗರದಲ್ಲಿ ನೀರಿನ ಮಟ್ಟವನ್ನು 124 ಅಡಿಗಳಿಗೇರಿಸುವ ಕೆಲಸವು ಕಳೆದ ಶುಕ್ರವಾರ ಆರಂಭವಾಯಿತು ಮಟ್ಟವು ಪೂರ್ತಿಯಾಗಿದೆಯೆಂದೂ ಗೊತ್ತಾಗಿದೆ ಸುತ್ತಮುತ್ತಣ ಹಳ್ಳಿಯವರಿಗೆ ಎಚ್ಚರಿಕೆ ಕೊಡಲಾಗಿದೆ

ವಿದ್ಯಾರ್ಥಿನಿಯರಿಗೆ ವಯಸ್ಸಿನ ನಿರ್ಬಂಧ

ಪಂಜಾಬ್ ವಿಶ್ವವಿದ್ಯಾಲಯದಲ್ಲಿ 14 ವರ್ಷಕ್ಕೆ ಮೀರದ ಹುಡುಗಿಯರು ಮೆಟ್ರಿಕ್ಯುಲೇಷನ್ ಪರೀಕ್ಷೆಗೆ ಕಳುಹಿಸಲು ಅರ್ಹತೆ ಪಡೆದಿಲ್ಲವೆಂಬುದಾಗಿ ಪಂಜಾಬ್ ವಿಶ್ವವಿದ್ಯಾಲಯದ ರಿಜಿಸ್ಟ್ರಾರರವರು ತಿಳಿಸಿರುತ್ತಾರೆ

ಭೂಮಿಯಿಲ್ಲದೆ ಬೆಳೆ.

ಲಂಡನ್ನಿನ ಕಿಂಗ್ಸ್ ಕ್ರಾಸ್ ಎಂಬಲ್ಲಿ ಇಬ್ಬರು ಆಂಗ್ಲೇಯರು ಭೂಮಿಯ ಸಹಾಯವೇ ಇಲ್ಲದೆ ತರಕಾರಿ, ಹುಲ್ಲು ಮುಂತಾದವುಗಳನ್ನು ಬೆಳೆಯುತ್ತಿರುವರು ಕಬ್ಬಿಣದ ತಟ್ಟೆಗಳಲ್ಲಿ ಒಂದು ಬಗೆಯ ದ್ರಾವಕವನ್ನು ಹಾಕಿ ಅವುಗಳಲ್ಲಿ ಗಿಡಗಳನ್ನು ಬೆಳೆಸುವರು ನಲ್ಲಿಯ ನೀರಿನಮೂಲಕ ಮಳೆ ಹನಿಯಂತೆ ನೀರು ಸುರಿಸಲ್ಪಡುವುದು. ಹತ್ತು ದಿನಗಳೊಳಗೆ ಸೊಗಸಾದ ಹುಲ್ಲು ಬೆಳೆಯುವುದು ಇದೇ ರೀತಿಯಲ್ಲಿ ಕಾಯಿ ಪಲ್ಯಗಳೂ ಸಹ ಬೆಳೆಯುವುವು ಆದರೆ ಈ ವ್ಯವಸಾಯದಿಂದ ಬಿತ್ತನೆಗೆ ಸಹಾಯವಾಗುವುದಿಲ್ಲ

ಶ್ರೀ ಅರವಿಂದ ಘೋಷ್.

ಪುದುಚೇರಿಯಲ್ಲಿ ಕಳೆದ ಇಪ್ಪತ್ತೈದು ವರ್ಷಗಳಿಂದ ಪರಮಾತ್ಮನ ಸಾಕ್ಷಾತ್ಕಾರಕ್ಕಾಗಿ ಯೋಗನಿರತರಾಗಿರುವವರು

ಸೂರ್ಯನಿಗಿಂತ ಹೆಚ್ಚು ಪ್ರಕಾಶ

ಹಾಲೆಂಡಿನ ಫಿಲಿಪ್ಸ್ ರಿಸರ್ಚ್ ಲ್ಯಾಬರೇಟರಿಯವರು ಪಾದರಸದ ಆವಿಯ ದೀಪವನ್ನು ಕಂಡುಹಿಡಿದಿರುವರು ಈ ದೀಪವು ಸುಮಾರು ¾ ಅಂಗುಲ ಉದ್ದವಾಗಿಯೂ ⅛ ಅಂಗುಲ ಅಗಲವಾಗಿಯೂ ಇರುತ್ತದೆ ಇದರ ಬೆಳಕು ಸೂರ್ಯನಿಗಿಂತಲೂ ಹೆಚ್ಚು ಪ್ರಕಾಶವಾನವಾಗಿರುತ್ತದೆ ಸೂರ್ಯನ ರಶ್ಮಿಯು 60000 ಕ್ಯಾಂಡಲ್ ಪವರ್ ಉಳ್ಳದ್ದಾಗಿರುತ್ತದೆಂದೂ, ಈ ದೀಪವು 180000 ಕ್ಯಾಂಡಲ್ ಪವರ್ ಉಳ್ಳದ್ದಾಗಿರುತ್ತದೆಂದೂ ಗೊತ್ತುಮಾಡಲ್ಪಟ್ಟಿದೆ

ರಕ್ತದಿಂದ ಚಿಕಿತ್ಸೆ

...ನಾರು ಅನಾಹುತ; ವಿದ್ಯುಚ್ಛಕ್ತಿಯ ಅನಾಹುತ ಮತ್ತು ನೀರಿನಲ್ಲಿ ಮುಳುಗುವುದು ಈ ಕಾರಣದಿಂದ ಸತ್ತವರ ರಕ್ತವನ್ನು ರಷ್ಯಾದೇಶದ ಆಸ್ಪತ್ರೆಯಲ್ಲಿ ಶೇಖರಿಸುತ್ತಿದ್ದಾರೆ ರಕ್ತವನ್ನು ಸತ್ತ ...ಯ ಒಳಗೆ ತೆಗೆದುಕೊಳ್ಳುತ್ತಾರೆ ...ವನ್ನು 3 ವಾರಗಳತನಕ ಬಹಳ ...ವಾದ ಕಡೆ ಇಟ್ಟು ರಕ್ತಹೀನತೆಯುಳ್ಳ ರೋಗಿಗಳಿಗೆ ಇಂಜಕ್ಷನ್ ಮೂಲಕ ಚಿಕಿತ್ಸೆ ಮಾಡುತ್ತಿರುವರು

ಬೈಸಿಕಲ ವೇಗಕ್ಕೆ ಮಿತಿಯಿಲ್ಲ

ಇಂಗ್ಲೆಂಡಿನಲ್ಲಿ ಬೈಸಿಕಲ್ ಸವಾರಿಯ ವೇಗಕ್ಕೆ ಯಾವ ಮಿತಿಯೂ ಇರಬೇಕಾದುದಿಲ್ಲವೆಂದು ಬರ್ಮಿಂಗ್ ಹ್ಯಾಮಿನ ನ್ಯಾಯಾಧೀಶರಾದ ಮಿ|| ಸ್ಮಿತ್ ಎಂಬುವರು ಒಂದು ತೀರ್ಪಿನಲ್ಲಿ ಹೇಳಿರುವರು ಒಂದು ಬೈಸಿಕಲ್ಲು ಎಷ್ಟು ಚುರುಕಾಗಿ ಹೋಗಬಲ್ಲದೋ ಅಷ್ಟು ಚುರುಕಿನಲ್ಲಿ ಹೋಗಬಹುದೆಂದು ಅವರು ಅಭಿಪ್ರಾಯಪಟ್ಟಿರುವರು

ತಾಯಿ ಮಗನನ್ನು ಕೊಂದಳು

ಲಾಹೋರಿನಲ್ಲಿ ಒಬ್ಬ ತಾಯಿಯು ತನ್ನ 11 ವಯಸ್ಸಿನ ಮಗನನ್ನು ಕೊಲೆ ಮಾಡಿದಳು ಗಂಡಸಿಲ್ಲದ ಆ ಹೆಂಗಸು ವ್ಯಭಿಚಾರ ವೃತ್ತಿಯಲ್ಲಿ ಪ್ರವರ್ತಿಸುತ್ತಿದ್ದದರಿಂದ ಅವಳ ಮಗನು ಅವಳನ್ನು ದೂಷಿಸಿದನು. ಇದನ್ನು ಕೇಳಿ ಅವನ ತಾಯಿಯು ಆಗ್ರಹಗೊಂಡು ಮಗನನ್ನು ಕೊಲೆ ಮಾಡಿದಳು. ಈಗ ಆಕೆಯನ್ನೂ ಆಕೆಯ ಪ್ರೀತಿಪಾತ್ರನಾದ ಉಪಪತಿಯನ್ನೂ ಪೋಲೀಸಿನವರು ದಸ್ತಗಿರಿ ಮಾಡಿರುತ್ತಾರೆ.

ಆಸ್ಪತ್ರೆಯ ವಾರ್ಷಿಕೋತ್ಸವ

ಮೈಸೂರಿನಲ್ಲಿರುವ ಹೋಲ್ಡ್ಸ್‌ವರ್ತ್ ಸ್ಮಾರಕ ಮಿಷನ್ ಆಸ್ಪತ್ರೆಯ ಮೂವತ್ತನೇ ವಾರ್ಷಿಕೋತ್ಸವವು ಕಳೆದ 21 ನೇ ತಾರೀಖು ಶುಕ್ರವಾರ ಮಿಸೆಸ್ ಮೆಗಾನ್ಸ್ ರವರ ಅಧ್ಯಕ್ಷತೆಯಲ್ಲಿ ನಡೆಯಿತು

ಮೈಸೂರಿನಲ್ಲಿ ಭಾರಿ ಪ್ಲೇಗ್ ಉಪದ್ರವವು ತಲೆದೋರಿ ಜನಗಳಿಗೆ ವಿಶೇಷ ತೊಂದರೆಯುಂಟಾಗುತ್ತಿದ್ದಾಗ ಹೋಲ್ಡ್ಸ್‌ವರ್ತ್ ದಂಪತಿಗಳು 30 ವರ್ಷಗಳ ಕೆಳಗೆ ಒಂದು ಆಸ್ಪತ್ರೆಯನ್ನು ಸ್ಥಾಪಿಸಬೇಕೆಂದು ನಿರ್ಧರಿಸಿದರು ಅವರ ಮರಣಾನಂತರ ಅವರ ಬಂಧುಗಳೂ ಮತ್ತು ಇನ್ನೂ ಅನೇಕ ಮಹನೀಯರೂ ಉದಾರವಾಗಿ ದಾನಮಾಡಿದ್ದರಿಂದ ಈ ಆಸ್ಪತ್ರೆಯು ಕಟ್ಟಲ್ಪಟ್ಟಿತು ಮತ್ತು 30 ವರ್ಷಗಳಿಂದಲೂ ಇದು ಜನರಿಗೆ ವಿಶೇಷ ಪ್ರಯೋಜನವನ್ನುಂಟುಮಾಡುತ್ತಿದೆ ಈ ಆಸ್ಪತ್ರೆಯ ವಾರ್ಷಿಕೋತ್ಸವದಲ್ಲಿ ಅನೇಕ ದೊಡ್ಡ ಮನುಷ್ಯರುಗಳು ಭಾಷಣಮಾಡಿದರು

ನಾಲ್ಕು ತಿಂಗಳ ಉಪವಾಸ

ಕಪೂರ್ತಲ ಜಮೀನ್ದಾರರ ಸಂಘದ ಕಾರ್ಯದರ್ಶಿಗಳಾಗಿದ್ದ ಶ್ರೀ|| ಸರ್ದಾರ್ ಚರಣ್‌ಸಿಂಗ್‌ರವರು ರಾಜಬಂದಿಗಳಾಗಿ ಸುಲ್ತಾನ್‌ಪುರದ ಜೈಲಿನಲ್ಲಿ ಇರುವರು 4 ತಿಂಗಳಿಂದ ಉಪವಾಸ ಮಾಡುತ್ತಿರುವರು ಅವರ ಉಪವಾಸವನ್ನು ನಿಲ್ಲಿಸಲು ಪ್ರಯತ್ನಪಟ್ಟ ಕೆಲವರಿಗೆ ಅವಕಾಶವು ದೊರೆತಿಲ್ಲ

ಅಸ್ಪೃಶ್ಯರ ಇಸ್ಲಾಮೀಕರಣ.

ಹರಿಜನರನ್ನು ಮುಸಲ್ಮಾನರನ್ನಾಗಿ ಮಾಡಬೇಕಂತೆ!

(ಮೈಸೂರು ಆರ್ಯಸಮಾಜದ ಹಿಂದೂ ಏಕೀಕರಣ ಶಾಖೆಯಿಂದ)

ಮಿ॥ ರಬೀಬ್ ಅಹಸೀನ್, ಎಂ ಎ., ರವರು ಹರಿಜನರನ್ನು ಮುಸಲ್ಮಾನರನ್ನಾಗಿ ಮಾಡಲು ಒಂದು ಕಾರ್ಯಕ್ರಮವನ್ನು ತಯಾರ್ಮಾಡಿರುವರು ಕಲ್ಕತ್ತೆಯ "ಸ್ಟಾರ್ ಆಫ್ ಇಂಡಿಯಾ" ಎಂಬ ಮುಸ್ಲಿಂ ಪತ್ರದಲ್ಲಿ ಪ್ರಕಾಶಿತವಾಗಿದ್ದ ಈ ಕಾರ್ಯಕ್ರಮವನ್ನು ಇಂದ್ರಪ್ರಸ್ಥದ (ಡೆಹಲಿಯ) "ಶುದ್ಧಿ ಪತ್ರಿಕಾ" ಎಂಬ ಹಿಂದೀ ಪತ್ರದಲ್ಲಿ ಅದರ ಪ್ರಕಾಶಕರು ಹಿಂದುಗಳ ಉಪಯೋಗಾರ್ಥವಾಗಿ ಪುನಃ ಪ್ರಕಾಶಿಸಿರುತ್ತಾರೆ ಅವರ ಸರಳ ಅನುವಾದವನ್ನು ಇದರಡಿ ಕೊಟ್ಟಿರುತ್ತೆ ಹಿಂದುಗಳು ಇದನ್ನು ಓದಿ ಸ್ವಧರ್ಮೀಯರಾದ ತಮ್ಮ ಹರಿಜನ ಬಂಧುಗಳನ್ನು ಮತಾಂತರಗೊಳಿಸಲು ಪರಮತೀಯರು ಎಂತೆಂತಹ ಷಡ್ ಮಂತ್ರಗಳನ್ನು ರಚಿಸುತ್ತಿರುವರೆಂದು ತಿಳಿದುಕೊಳ್ಳಬಹುದು ಈಚೆಗೆ ಹರಿಜನರನ್ನು ಮತಾಂತರಗೊಳಿಸುವುದೊಂದು ದೊಡ್ಡ ಸಾಂಕ್ರಾಮಿಕ ರೋಗವಾಗಿ ಪರಿಣಮಿಸಿದೆ ಪ್ಲೇಗು, ಕಾಲರಾ ಮುಂತಾದ ಎಲ್ಲಾ ಸಾಂಕ್ರಾಮಿಕ ರೋಗಗಳಿಗೆ ಔಷಧಿಯು ಇರುವುದು ಆದರೆ ಈ ಮತಾಂತರದ ಮಾರಿಗೆ ಔಷಧವಿಲ್ಲವೇ ? ಖಂಡಿತವಾಗಿಯೂ ಇದೆ ಪೂಜ್ಯ ಹಿಂದೂ ಬಾಂಧವರೇ—ಎಚ್ಚರಗೊಳ್ಳಿರಿ, ವಿಚಾರಮಾಡಿರಿ, ತಿಳಿದು ನೋಡಿರಿ ಗೊತ್ತಾಗುವುದು ನಿದ್ರಿಸಿದಷ್ಟೂ ಜಡತ್ವವು ಹೆಚ್ಚುವುದು, ಎದ್ದು ಜಡತ್ವವನ್ನು ಒದರಿ, ಧರ್ಮಬಂಧುಗಳನ್ನು ಕಾಪಾಡಲು ಸೊಂಟಕಟ್ಟಿ ಕಾರ್ಯರಂಗಕ್ಕೆ ಇಳಿಯಿರಿ

(ಸವರಿ ಲೇಖನದ ಅನುವಾದ)

ಹರಿಜನ ಮುಸ್ಲಿಂ ಮಿಷನ್.

ಲೇಖಕರು - ರಬೀಬ್ ಅಹಸೀನ್, ಎಂ ಎ

ಹರಿಜನ ಸಮಸ್ಯೆಯು ಒಂದು ಮಹತ್ವದ ವಿಷಯವಾಗಿದೆ ಇದಕ್ಕೋಸ್ಕರ ಒಂದು ವಿಶಾಲ ಅಥವ ವಿಶೇಷತರದ ಇಸ್ಲಾಮಿ ಮಿಷನ್ ಸ್ಥಾಪಿಸುವುದು ಅವಶ್ಯಕವಾಗಿದೆ ನಮಗೆ ಭಾರತದಂಥ ವಿಸ್ತಾರವಾದ ದೇಶದಲ್ಲಿ ಮಿಷನ್ನಿನ ಧ್ಯೇಯವು ಬಹಳ ಅವಶ್ಯಕವಾದದ್ದೆಂದು ನಾವು ಅನುಭವಿಸಿರುತ್ತೇವೆ ಈ ಕೇಂದ್ರೀಯ ಮಂಡಲದ ಹೆಸರು "ಮುಸ್ಲಿಂ ಮಿಷನ್' (ಭಾರತೀಯ ಅಸ್ಪೃಶ್ಯರ ಸ್ವತಂತ್ರತೆಗೋಸ್ಕರ) ಇದರ ಶಾಖೆಗಳ ನೀತಿ ನಿರ್ಧಾರ ಮತ್ತು ಆರ್ಥಿಕ ವ್ಯವಸ್ಥೆಯು ಪ್ರಧಾನ ಕಾರ್ಯಾಲಯದ ಅಡಳಿತಕ್ಕೆ ಒಳಪಟ್ಟಿರಬೇಕು ಈ ಪ್ರಧಾನ ಕಾರ್ಯಾಲಯವು ಬೊಂಬಾಯಿ ಅಥವಾ ಮದ್ರಾಸಿನಲ್ಲಿರಬೇಕು

೫೦ ವರ್ಷಗಳ ಕಾರ್ಯಕ್ರಮ

ಭರತಖಂಡದ ಬೇರೆ ಬೇರೆ ಭಾಗಗಳಲ್ಲಿ ಎಂಟು ಕೋಟಿ ಅಸ್ಪೃಶ್ಯರು ಹರಡಿಕೊಂಡಿರುವರು. ಇವರ ವಿಶಾಲ ಸಂಖ್ಯಾ ಪರಿಮಾಣಕ್ಕೆ ತಕ್ಕಂತೆ ಇಸ್ಲಾಮಿ ಸಂಸ್ಕೃತಿಯ ವಿಜಯಕ್ಕೋಸ್ಕರವಾಗಿ ತಎಲೀಗಿನ ಐವತ್ತು ವರ್ಷಗಳ ಕಾರ್ಯಕ್ರಮವನ್ನು ತಯಾರ್ಮಾಡಬೇಕು ಈ ಕಾರ್ಯವು ಅತಿ ದೊಡ್ಡದಾಗಿರುವುದರಿಂದ ಈ ಸಮಯವನ್ನು ಇದೊಂದು ಕಾರ್ಯಕ್ಕೆ ಮಾತ್ರ ಉಪಯೋಗಿಸಬೇಕಾಗುತ್ತದೆ

ಇಸ್ಲಾಮೀಕರಣದ ಅರ್ಥ

ಹರಿಜನರಿಂದ "ಕಲ್ಮಾ" ಹೇಳಿಸಿ ಮುಸಲ್ಮಾನರಲ್ಲಿ ಸೇರಿಸಿಕೊಳ್ಳುವುದು ಇಸ್ಲಾಮೀಕರಣದ ಅರ್ಥವಲ್ಲ. ಮತ್ತು ಅವರು ಕೇವಲ ಇಸ್ಲಾಂ ಧರ್ಮ ಸ್ವೀಕರಿಸಿದ ಮಾತ್ರಕ್ಕೆ ಪೂರೈಸಲಿಲ್ಲ ಅವಶ್ಯಕವಾಗಿ ಇವರನ್ನು ಮುಸ್ಲಿಂ ಜಾತಿಯ ನಿಶ್ಚಯವಾದ ಸದಸ್ಯರನ್ನಾಗಿ ಮಾಡಬೇಕು ಮತ್ತು ಇಸ್ಲಾಮಿ ಸಂಸ್ಕೃತಿಗೆ ಸಮಸ್ತ ಲಾಭಗಳ ಉಪಯೋಗ ಮಾಡುವುದರ ಅವಸರವನ್ನು ಕಲ್ಪಿಸಬೇಕು ಪಾಠಶಾಲೆ, ಮಸೀದಿ, ಶುಕ್ರವಾರದ ಪ್ರಾರ್ಥನೆ ಮತ್ತು ಸಭೆಗಳ ದ್ವಾರ ಅವರಲ್ಲಿ ಇಸ್ಲಾಮಿ ಸಂಸ್ಕೃತಿಯು ಅಂಕುರಿಸುವಂತೆ ಮಾಡಬೇಕು. ಹರಿಜನರ ಆರ್ಥಿಕ ದುಸ್ಥಿತಿಗೆ ಹಿಂದೂ ಜಮೀನ್ದಾರರೂ ಮತ್ತು ಸಾಹುಕಾರರೂ ಕಾರಣರಾಗಿರುತ್ತಾರೆ. ಇಸ್ಲಾಂ ಧರ್ಮ ಸ್ವೀಕರಿಸಿದಮೇಲೆ ಅನೇಕರು ಈಗ ಮಾಡುತ್ತಿರುವ ಸಣ್ಣ ಸಣ್ಣ ಕೆಲಸಗಳನ್ನೂ ಕಳೆದುಕೊಳ್ಳಬೇಕಾಗುತ್ತದೆ. ಆದ್ದರಿಂದ ಅವರಿಗೆ ಆರ್ಥಿಕ ಸ್ವಾತಂತ್ರತೆಯನ್ನು ಪಡೆಯಲು ತರಬೇತುಮಾಡುವ ಕಾರ್ಯವು ಮುಸಲ್ಮಾನ ಜಾತಿಗೆ ಸೇರಿದ್ದಾಗಿದೆ

ಸಂಕ್ಷೇಪವಾಗಿ ಇಸ್ಲಾಮೀಕರಣದ ಅರ್ಥ ಹೇಳಬೇಕಾದರೆ ಇಸ್ಲಾಮಿ ಧರ್ಮ ಮತ್ತು ಇಸ್ಲಾಮಿ ಸಂಸ್ಕೃತಿಯ ಆದೇಶದಂತೆ ಹರಿಜನರನ್ನು ಶಿಕ್ಷಿತರನ್ನಾಗಿ ಮಾಡಬೇಕು ಮತ್ತು ಅವರನ್ನು ಪೂರ್ಣ ಮುಸಲ್ಮಾನರನ್ನಾಗಿ ಮಾಡಿ ಅವರೊಂದಿಗೆ ಭ್ರಾತೃಸಂಬಂಧವನ್ನು ಸ್ಥಾಪಿಸಿ ಹಿಂದೂ ಜಮೀನ್ದಾರರ ಮತ್ತು ಮಹಾಜನರ ಹಿಡಿತದಿಂದ ಅವರನ್ನು ಬಿಡಿಸಲು ಆರ್ಥಿಕ ಬಲವನ್ನು ಕೊಡಬೇಕು

ಮುಸ್ಲಿಂ ಮಿಷನ್‌ಗೋಸ್ಕರ ಒಂದು ಸಾಹಸಿ ದಳವೂ, ಧರ್ಮಪರಾಯಣರಾದ ಕೆಲಸಗಾರರ ಸಂಘಟನಮಾಡುವುದೂ ಮಹತ್ವಪೂರ್ಣವಾದ ಮೂರನೇ ವಿಷಯವಾಗಿದೆ ಈ ಮಿಷನ್‌ಗೋಸ್ಕರ ಒಂದು ಸಾವಿರ ಕಾರ್ಯಪಟುಗಳಾದ ಮಿಷನರಿಗಳು ಅವಶ್ಯಕವಾಗಿ ಬೇಕಾಗುವರು ಈ ಧರ್ಮಪರಾಯಣರಾದ ನವಯುವಕರು ದೇವರ ಹೆಸರಿನಲ್ಲಿ ತಮ್ಮ ಜೀವನದಾನದ 20 ವರ್ಷಗಳನ್ನಾದರೂ ಈ ಕಾರ್ಯದಲ್ಲಿ ವ್ಯತೀತಗೊಳಿಸಲು ಪ್ರತಿಜ್ಞೆ ಮಾಡಬೇಕು ಇವರಿಗೆ ರೂ 100 ರಿಂದ 200 ರ ವರೆಗೆ ಸಂಬಳವೂ, ಮನೆ ಬಾಡಿಗೆ, ಪ್ರಯಾಣದ ಖರ್ಚು ಮತ್ತು ವೃದ್ಧಾಪ್ಯದಲ್ಲಿ ಪೆನ್ಷನ್ ಸಹ ಕೊಡಲ್ಪಡಬೇಕು.

ಕಾರ್ಯಕರ್ತರ ಶ್ರೇಣಿಗಳು

ಕಾರ್ಯಕರ್ತರಲ್ಲಿ ಐದು ವರ್ಗಗಳಿರಬೇಕು

1. ನಜೀಮ್—ಮಿಷನ್ನಿನ ಸಂಘಟನ ಕರ್ತ ಮತ್ತು ಶಾಸನಕರ್ತ

2 ನಸೀರ್—ಮಿಷನ್ನಿನ ಸದಸ್ಯರು ಮತ್ತು ಸವರ್ಧಕರು

3 ಮೌಲ್ವಿಯ—ಮೌಲ್ವಿ ವರ್ಗದ ಆಜೀವ ಮಿಷನರಿ ಇಸ್ಲಾಮಿ ಶಿಕ್ಷಣದ ಪ್ರಚಾರಮಾಡುವುದು ಇವರ ಕೆಲಸ. ಇಂಥವರು ಇಸ್ಲಾಮಿ ಮಹಾ ವಿದ್ಯಾಲಯದ ಪದವೀಧರ (ಗ್ರಾಜ್ಯುಯೇಟ್) ರಾಗಿರಬೇಕು

4 ಮುನಾಜರ್—ಈ ಆಜೀವ ಮಿಷನರಿಗಳು ವಿಶೇಷ ಶಿಕ್ಷಿತ ಕೇಂದ್ರಗಳಿಗೋಸ್ಕರ ಇರಬೇಕು

5 ಮುವಲ್ಲಿಗ್—ಈ ಮಿಷನರಿಗಳು ಅಸ್ಪೃಶ್ಯ ವರ್ಗದಲ್ಲಿಯೇ ನಿರತರಾಗತಕ್ಕದ್ದು

ಮೇಲ್ಕಂಡ ಎಲ್ಲಾ ಮಿಷನರಿಗಳಿಗೆ ಅವಶ್ಯಕವಾಗಿ ಅವರವರ ಕಾರ್ಯದಲ್ಲಿ ಶಿಕ್ಷಣ ಕೊಡಬೇಕು ಇದಕ್ಕೋಸ್ಕರ ಬೇರೆ ಬೇರೆ ಕ್ಷೇತ್ರಗಳಲ್ಲಿ ಶಿಕ್ಷಣಾಲಯ (Training Schools) ಗಳು ತೆರೆಯಲ್ಪಡಬೇಕು ಬೇರೆ ಬೇರೆ ಸ್ಥಳಗಳಲ್ಲಿನ ಅಸ್ಪೃಶ್ಯರ ಭಾಷೆ, ಅವರ ಮನೋವಿಜ್ಞಾನ, ಇತಿಹಾಸ ಮತ್ತು ಅವರ ಗ್ರಾಮ ಗೀತಗಳನ್ನ ಈ ಮಿಷನರಿಗಳು ಕಲಿತು ಇವರಿಂದ ಹರಿಜನರ ದುಸ್ಥಿತಿ, ಅವರ ಸಾಮಾಜಿಕ ದುರ್ಗುಣಗಳು ಮತ್ತು ಅವರ ಆರ್ಥಿಕ ಪರತಂತ್ರಗಳ ವಿಷಯದಲ್ಲಿ ವಿಚಾರಮಾಡಿ ಒಳ್ಳೇ ಪ್ರಭಾವಿಕರನ್ನಾಗಿ ಮಾಡಬೇಕಾಗುತ್ತದೆ

ಒಂದು ಲಕ್ಷ ಆಜೀವ ಸದಸ್ಯರು

ಈ ಮಿಷನ್ ಕಾರ್ಯಕ್ಕೆ ಒಂದುಲಕ್ಷ ಆಜೀವ ಸದಸ್ಯರಿರಬೇಕು ಇವರು ರೂ 5 ಪ್ರವೇಶಧನವನ್ನೂ ವರ್ಷ ಒಂದಕ್ಕೆ ಒಂದು ರೂಪಾಯಿಯನ್ನೂ ಕೊಡಬೇಕಾಗುತ್ತದೆ ಒಂದು ಸಾವಿರ ಧನಿಕ ಮುಸಲ್ಮಾನರು ಈ ಸಂಸ್ಥೆಯ ಆಜೀವ ಸಂರಕ್ಷಕರಾಗಬೇಕು ಇವರಲ್ಲಿ ಪ್ರತಿಯೊಬ್ಬರೂ ಒಂದೇ ಕಿಸ್ತಿನಲ್ಲಿ ರೂ 1000 ಯನ್ನೂ ವರ್ಷ ಒಂದಕ್ಕೆ ರೂ 100 ಗಳನ್ನೂ ಕೊಡಬೇಕು ಮತ್ತು ಯಾರಾದರೂ ಒಂದು ಸಾವಿರ ರೂಪಾಯಿ ನಗದು ಅಥವ ಬೇರೆ ಯಾವ ರೀತಿಯಲ್ಲಾದರೂ ಕೊಟ್ಟರೆ ಅವರನ್ನು ಆಜೀವ ಸದಸ್ಯರನ್ನಾಗಿ ತಗೆದುಕೊಳ್ಳಲಾಗುವುದು.

"ಮುಸ್ಲಿಂ ಮಿಷನ್ ಆರ್ಥಿಕ ಟ್ರಸ್ಟ್' ಎಂಬ ನಾಮದಿಂದ ಒಂದು ಕೇಂದ್ರೀಯ ಟ್ರಸ್ಟ್ ಸ್ಥಾಪಿಸಿ ಅದನ್ನು ರೆಜಿಸ್ಟರ್ ಮಾಡಲಾಗುವುದು ಬೇರೆ ಬೇರೆ ಶಾಖೆಗಳು ಪಾಠಶಾಲೆಗಳು ಮತ್ತು ಸಂಸ್ಥೆಗಳನ್ನು ಸ್ಥಾಪಿಸುವುದು ಇವರ (ಟ್ರಸ್ಟಿನ) ಕೆಲಸವಾಗಿರುತ್ತೆ ಈ ಆರ್ಥಿಕ ಟ್ರಸ್ಟಿಗೆ ಧೈರ್ಯ ಮತ್ತು ಮೆಂಬರುಗಳು —ಹಿಸ್ ಹೈನೆಸ್ ಆಗಾಖಾನ್, ನವಾಬ ಸರ್ ಅಮೀ ಜಂಗ್, ನವಾಬ ಸರ್ ನಿಜಾಮತ್ ಜ ೯, ನವಾಬ್ ಬಹದ್ದೂರ್ ಸರ್ ಮುಹಮ ಉಲ್ಲಾ ಖಾನ್, ಸೇಟ್ ಹಾಜೀ ಅಬ್ದುಲ್ಲಾ ಹರೂನ್ ಸರ್ಕಾರ್, ಎ ಅಬ್ದುಲ್ ಕ ರೀಂ (ಮದ್ರಾಸು), ಸೇಟ್ ಜಮಾಲ ಮೊಹಮ್ಮದ್, ಜೀವನ್ ಬಕ್ಷ್ ಫಿರೋ ಜುದ್ದೀನ್, ಸೇಟ್ ಆದಮುಜಿ ಹಾಜೀ ದ ವೂದ್, ಮತ್ತು ಅನ್ಯಪ್ರಸಿದ್ಧ ಮುಸಲ್ಮಾನರು.

ಈ ಟ್ರಸ್ಟಿನ ಮೆಂಬರುಗಳಲ್ಲಿ ಐದು ಜನರಿಗೆ ವೇತನವು ಕೊಡಲ್ಪಡಬೇಕು ಮಿಷನ್ನಿನ ಕಾರ್ಯ ಸಫಲತೆಗೋಸ್ಕರ ಶಿಯಾ ಮತ್ತು ಸುನ್ನಿ ಪಂಗಡಗಳ ಸಹಾಯವು ಅವಶ್ಯಕವಾಗುವುದು ಆದರೆ ಇವರಲ್ಲಿ ಇ ದಿಯಾನ್ ಪಂಗಡದವರನು ಸದಸ್ಯರನ್ನಾಗಿ ರನು

ಈ ಮಿಷನ್ನು ಯಾವ ಪ್ರಕಾರದ ಪ್ರಚಾರದಲ್ಲಾಗಲೀ ರಾಜನೀತಿಯಲ್ಲಾಗಲೀ ಭಾಗವಹಿಸುವುದಿಲ್ಲ ಇದು ತನ್ನ ಪೂರ್ಣ ಶಕ್ತಿಯನ್ನು ಹರಿಜನರ ಇಸ್ಲಾಮೀಕರಣದಲ್ಲಿ ಉಪಯೋಗಿಸುವುದು. ಇದರಲ್ಲಿ ಭಾಗವಹಿಸುವ ಪ್ರತಿಯೊಬ್ಬನೂ ತನ್ನ ತಮ್ಮ ಪವಿತ್ರತಮ ಆದೇಶವನ್ನು ದೇವರ ಹೆಸರಿನಲ್ಲಿ ಮಾಡುವನು.

ಚಲನ ಚಿತ್ರಗಳು.

1936 ನೇ ಜುಲೈ 14 ನೇ ತಾರೀಖಿನಿಂದ ಎರಡು ವರ್ಷಗಳಕಾಲ ಮೈಸೂರು ಮತ್ತು ಕೋಲಾರ ಚಿನ್ನದ ಗಣಿಯ ಚಲನ ಚಿತ್ರಗಳ ಬೋರ್ಡುಗಳು ಪುನಃ ಸ್ಥಾಪಿಸಲ್ಪಟ್ಟಿದೆ ಚಲನ ಚಿತ್ರಗಳ ಪ್ರದರ್ಶನದ ಬಗ್ಗೆ ಈ ಬೋರ್ಡುಗಳಿಗೆ ಸರ್ಟಿಫಿಕೇಟ್ ಕೊಡುವ ಅಧಿಕಾರವು ಕೊಡಲಾಗಿದೆ ಈ ಕೆಳಗೆ ಕಂಡಂತೆ ಬೋರ್ಡುಗಳನ್ನು ನಿರ್ಮಿಸಿರುತ್ತಾರೆ

ಮೈಸೂರು ಡಿಸ್ಟ್ರಿಕ್ಟು — ಮೈಸೂರು ಡಿಸ್ಟ್ರಿಕ್ಟು ಡಿ॥ ಕಿ॥ ರವರು ಅಧ್ಯಕ್ಷರು ಮೈಸೂರು ಡಿಸ್ಟ್ರಿಕ್ಟ್ ಪೊ॥ ಸೂ॥ ರವರು ಕಾರ್ಯದರ್ಶಿಗಳು

ಸದಸ್ಯರುಗಳು — ಮೈ॥ ಡಿ॥ ವಿದ್ಯಾಭ್ಯಾಸದ ಇಲಾಖೆಯ ಆಫೀಸರು, ರಾವ್ ಸಾಹೇಬ್ ಎಂ ರಾಮಸ್ವಾಮಿ. ಮಿ॥ ಎಸ್. ಅಜ್ಗೀಪಾ ಮತ್ತು ಶ್ರೀಮಾನ್ ಹೆಚ್ ಸಿ ದಾಸಪ್ಪನವರು

ಕೋಲಾರದ ಚಿನ್ನದ ಗಣಿ—ಕೋಲಾರದ ಡಿ॥ ಕಿ॥ ರವರು ಅಧ್ಯಕ್ಷರು ಚಿನ್ನದ ಗಣಿಯ ಪೊ॥ ಸೂ॥ ರವರು ಕಾರ್ಯದರ್ಶಿಗಳು.

ಸದಸ್ಯರುಗಳು.—ಕೋಲಾರದ ಡಿಸ್ಟ್ರಿಕ್ಟ್ ಎಜುಕೇಷನಲ್ ಆಫೀಸರು, ಮಿ॥ ಗ ಜೆ ಎಫ್ ಕ್ರಾಲಿ, ಫಿಟ್ಸ್ ಮಾರಿಸ್ ಮತ್ತು ಕಾಂಡೋಣಿಯವರು

ವರ್ತಮಾನ ಸಂಗ್ರಹ.

ಶ್ರೀಮನ್ಮಹಾರಾಜರವರ ಪ್ರಯಾಣ.

ಶ್ರೀ ಮನ್ಮಹಾರಾಜರು ಈ ಮಾಹೆ 19ನೇ ... ಒಂದು ಸ್ಪೆಷಲ್ ವಿಮಾನದಲ್ಲಿ ...ರು ಮತ್ತು ಇನ್ನೂ 10 ಜನರೊ ... ಬಿನ್ನಿಗೆ ಪ್ರಯಾಣ ಬೆಳೆಸಿದರು. ...ನಲ್ಲಿ ಮೂರು ದಿನಗಳಿದ್ದು ನಂ... ಪಾಸಿನ್ನು ಕಡೆಗೆ ಪ್ರಯಾಣ ಬೆಳೆ... ಅವರು ಆಡ್ಮಿರಲ್ ಎಂಬ ಹೋ... ...ನ್ಲಿ ವಿಹಾರ ಮಾಡಿದ್ದಾರೆ ಅವರು ... ಯ ಛಾನ್ಸಿಲರಾದ ಹೆರ್ ಹಿಟ್ಲ... ರವರನ್ನು ಭೇಟಿ ಮಾಡಿ ಜರ್ಮನಿಯ ... ಮುಗಳನ್ನು ಸಂದರ್ಶಿಸಿಕೊಂಡು ... ಪ್ರಯಾಣ ಮಾಡುವರು ಇವರು ... ಗ ವಾಪಸ್ಸು ಬರುವಾಗ ಕಾಶಿಗೆ ... ಅನಂತರ ರಾಜಧಾನಿಗೆ ಬರುವ ... ವವಂತೆ ಇದೆ

ಮೈಸೂರು ಸಿಟಿ ಬಸ್ ಸರ್ವಿಸ್

...ಂಗಳೂರು ನಗರದಂತೆ ಮೈಸೂರಿನಲ್ಲಿ ... ಸಿಟಿ ಬಸ್ ಸರ್ವಿಸ್ ಇಡಲು ಇಲ್ಲಿನ ... ಪ್ರಮುಖ ವರ್ತಕರು ಪ್ರಯತ್ನ ಪ... ...ರುವುದಾಗಿ ಗೊತ್ತಾಗಿದೆ

ಹೊಸ ಸಕ್ಕರೆ ಕಾರ್ಖಾನೆ.

ಶಿವಮೊಗ್ಗ ಜಿಲ್ಲೆಯ ಭದ್ರಾವತಿ ಕೈವ... ...ವ ಕಾಲೊನಿಯಲ್ಲಿ ಒಂದು ಸಣ್ಣ ಸ... ...ಕಾರ್ಖಾನೆಯು ಸ್ಥಾಪಿತವಾಗುವ ... ಈ ಸಂಬಂಧದಲ್ಲಿ ಸರ್ಕಾರ ... ಆಧಿಕಾರಿಯನ್ನು ಕೆಲ್ಕತ್ತಾ ... ಟೇಷನ್ ಮೇಲೆ ಕಳುಹಿಸುವರು

ಕಣ್ಣನ್ನು ಕಿತ್ತು ಹಾಕಿದವನು

...ನಾಯಕನೆಂಬುವನು ಚಿಕ್ಕೇಗೌ... ...ನ್ನು ಕಿತ್ತುಹಾಕಿದ್ದನು ಮೊ... ...ಯಲ್ಲಿ ಸಂಜನಗೂಡು ಮ್ಯಾಜಿ... ...ಈ ಕೃತ್ಯಕಾರನಿಗೆ ಎರಡುವರ್ಷ ... ವಿಧಿಸಿದ್ದರು ಅಪರಾಧಿಯು ... ಅಪೀಲ್ ಮಾಡಿದನು ಅಪ... ಕೃತ್ಯವು ಅಮಾನುಷವಾದ ... ಅವನಿಗೆ ವಿಧಿಸಿದ ಶಿಕ್ಷೆಯು ನ್ಯಾ... ...ವೆಂದು ಸೆಷನ್ಸ್ ಜಡ್ಜಿಯ... ...ಲನ್ನು ವಜಾಮಾಡಿದರು

ಶಿವಮೊಗ್ಗಾ ಮಹಿಳಾ ಸಮಾಜ

ಶಿವಮೊಗ್ಗಾ ಮಹಿಳಾ ಸಮಾಜದವರು ... 16ನೆ ತಾರೀಖು ಅವರ ಅಧ್ಯ... ಶ್ರೀಮತಿ ಎಸ್ ನಾರಾಯಣರಾ... ...ಧ್ಯಕ್ಷತೆಯಲ್ಲಿ ಶ್ರೀಮತಿ ನಾರಾ... ...ರವರನ್ನು ಸಂಗೀತ ನಡೆಸಿ ಸತ್ಕರಿ... ಈ ಸಮಾಜವು ತನ್ನದೇ ಸ್ವಂತ ...ವನ್ನು ಪಡೆಯುವುದಾಗಿದೆ ಈ ...ದ ಶಂಕುಸ್ಥಾಪನೆಯನ್ನು ದಿವಾನ್ ... ರವರು ನೆರವೇರಿಸುವರು ವಂ... ...ರ್ಪಣೆಯಾದನಂತರ ಸಮಾರಂ... ...ಪ್ತಾಯವಾಯ್ತು

ಆಕಾಶವಾಣಿ ಕಾರ್ಯಕ್ರಮ.

ತಾ|| 24—8—36ನೇ ಸೋಮವಾರ ರಾತ್ರಿ 8 ರಿಂದ 9–15 ಐರೋಪ್ಯ ಸಂಗೀತ ಮತ್ತು ಅಂತರ ರಾಷ್ಟ್ರೀಯ ಸಭೆಯ ಪ್ರಚಾರ ಮಂಗಳವಾರ 6 30 ರಿಂದ 7–15 ಕರ್ನಾಟಕ ಸಂಗೀತ ಮತ್ತು ಎನ್ ಎಸ್ ನಾರಾಯಣಶಾಸ್ತ್ರಿಗಳಿಂದ ಶ್ರೀನಿವಾಸರ ಪದ್ಯಪಠನ ಬುಧವಾರ 8 ರಿಂದ 9–30 ಕರ್ನಾಟಕ ವಾದ್ಯ ಸಂಗೀತ ಮತ್ತು ಪ್ರೊ ವಿ ಎಲ್ ಡಿಸೋಜಾರವರ 'ನೂತನ ರಾಜ್ಯಾಂಗರಚನೆ' ಗುರುವಾರ 6–30 ರಿಂದ 7—15 ಕನ್ನಡ ನಾಟಕ ಮತ್ತು ಶ್ರೀ|| ಎನ ಕಸ್ತೂರಿಯವರ ಉಪನ್ಯಾಸ, 'ಸಮಾಜಸುಧಾರಕ" ಶುಕ್ರವಾರ 8 ರಿಂದ 9 ಹಿಂದೂಸ್ತಾನಿ ಸಂಗೀತ ಮತ್ತು ಶ್ರೀ|| ಅಬ್ದುಲ್ ಗಲೀಂ ರವರ ಇಕ್ಬಾಲ್ ಪರ್ರ ಶನಿವಾರ 6–30 ರಿಂದ 8–30 ಆನ್ನಾನ ವಿದ್ಯಾರ್ಥಿ ಸ್ವರಮೂರ್ತಿ ಮತ್ತು ಮಂಡಳಿಯವರ ಸಂಗೀತ

ಮಗುವನ್ನು ಹೊಳೆಗೆ ಬಿಸಾಡಿದಳು

ಹೊಳೇನರಸೀಪುರದ ನಿವಾಸಿ ಜೇವರ ನಂಜಪ್ಪನೆಂಬುವನ ಹೆಂಡತಿ ಈರಮ್ಮನು ಹೇಮಾವತಿ ನದಿಯಲ್ಲಿ ತನ್ನ ಮಗುವನ್ನು ಬಿಸಾಡಿ ಹೋದಳೆಂಬುದು ಅತಿ ವಿಷಾದಕರವಾಗಿದೆ ಈ ಕೃತ್ಯವು ಕೆಳಗೆ ಕಂಡಂತೆ ಹೇಳಲಾಗಿದೆ—ಈರಮ್ಮನು ಕಳೆದ 13 ನೇ ತಾರೀಖು ಮಧ್ಯಾಹ್ನ ಎರಡು ವರುಷದ ಹೆಣ್ಣುಮಗುವನ್ನು ಹೊಳೆಯಲ್ಲಿ ಬಿಸಾಡಿದಳು ಹೊಳೆಯ ಪಕ್ಕದಲ್ಲಿ ಆಡುತ್ತಿದ್ದ ಕೆಲವು ಹುಡುಗರು ಅತಿ ಪ್ರಯಾಸದಿಂದ ಆ ಮಗುವನ್ನು ದಡಕ್ಕೆ ಎಳೆದುಹಾಕಿದರು ಆನಂತರ ಆ ಮಗುವನ್ನು ಸೈಯದ್ ಹೈದರ್ ಎಂಬುವರು ಆಸ್ಪತ್ರೆಗೆ ಸೇರಿಸಿದರು ಲೇಡಿ ಡಾಕ್ಟರ್ ಮಿಸ್ ಸುಂದರಮ್ಮನವರು ಮುತುವರ್ಜಿಯಿಂದ ಚಿಕಿತ್ಸೆಗಳನ್ನು ನಡೆಸಿ ಮಗುವನ್ನು ಬದುಕಿಸಿರುತ್ತಾರೆ ಮಗುವಿನ ತಾಯಿಯು ಪೋಲೀಸರ ವಶದಲ್ಲಿರುತ್ತಾಳೆ

ಬೆಂಚುಕೋರ್ಟಿಗೆ ಬೆಂಕಿ

ಶಿವಮೊಗ್ಗಾ ಬೆಂಚುಕೋರ್ಟಿಗೆ ಬೆಂಕಿ ಹಾಕಿದರೆಂಬ ಅಪಾದನೆಯಮೇಲೆ ಇಬ್ರಾಹಿಂ, ಹಾರಾಲ್, ಬುರ್ಡಸರ್ಫ್, ಕಾಂಜಕುಟ್ಟಿ, ಮತ್ತು ಒತೀರಪ್ಪ ಎಂಬುವರುಗಳು ಅಪರಾಧಿಗಳೆಂದು ಅವರ ಮೇಲೆ ಚಾರ್ಜು ಮಾಡಲ್ಪಟ್ಟ ಮೊಖದ್ದಮೆಯು ಅಸಿಸ್ಟೆಂಟ್ ಸೆಷನ್ಸ್ ಜಡ್ಜರಾದ ಶ್ರೀ ಟಿ ರಾಮಯ್ಯಂಗಾರ್‌ರವರ ಸಮ್ಮುಖದಲ್ಲಿ ತಗೆದುಕೊಳ್ಳಲ್ಪಟ್ಟಿತು ಮತ್ತು ಮೇಲೆ ಹೇಳಿದ ಅಪಾದಿತರುಗಳು ತಪ್ಪಿತಸ್ಥರಲ್ಲವೆಂದು ತೀರ್ಮಾನಿಸಿ ಅವರನ್ನು ಖುಲಾಸ ಮಾಡಲಾಯಿತು ಅಪಾದಿತರ ಪರವಾಗಿ ಶ್ರೀ|| ... ಕೆ ಸೀತಾರಾಮಶಾಸ್ತ್ರಿಗಳೂ, ಹೆಚ್ ಭವಾನಿಶಂಕರರಾವ್‌ರವರೂ ವಕಾಲತ್ತು ವಹಿಸಿದ್ದರು

ತರುಣರ ದಂಡು, ಮೈಸೂರು.

20—8—36 ನೆಯ ಗುರುವಾರ ಸಾಯಂಕಾಲ 5 ಘಂಟೆಗೆ ಇಂಟರ್‌ಕಾಲೇಜ್ ಭವನದಲ್ಲಿ ಮಹಾರಾಜಾ ಕಾಲೇಜಿನ ಕನ್ನಡಭಾಷಾ ವಿಭಾಗದ ಶ್ರಿ ಟಿ ಎಸ್ ವೆಂಕಣ್ಣಯ್ಯ, ಎಂ, ಎ,ರವರ ಅಧ್ಯಕ್ಷತೆಯಲ್ಲಿ ಶ್ರಿ ಎಸ್ ವಿ ಪರಮೇಶ್ವರಭಟ್ಟರು ತಮ್ಮ ಹೊಸ ಕವನಗಳನ್ನು ಓದಿದರು ಕವನಗಳ ಮೇಲೆ ಟೀಕ್ಕೆ ವಿಮರ್ಶೆಯಾಯಿತು. ಕೊನೆಯಲ್ಲಿ ಅಧ್ಯಕ್ಷರು ಸರಳಭಾಷೆಯಲ್ಲಿ ವಸನಕ್ಕೆ ಯೋಗ್ಯವಾದ ನಿರ್ಮಾಣತತ್ವಗಳನ್ನು ಹೇಳಿ ತರುಣ ಕವಿಯನ್ನು ಅಭಿನಂದಿಸಿ, ಅವರಿಗೆ ಉತ್ಸಾಹವನ್ನಿತ್ತರು ಕಾರ್ಯದರ್ಶಿಗಳ ಪರವಾಗಿ ಶ್ರೀಮಾನ್ ಎಚ್ ಎಂ ಶಂಕರನಾರಾಯಣರಾವ್ ಇವರು ಅಧ್ಯಕ್ಷರಿಗೂ ಕವಿಗಳಿಗೂ ವಂದನೆಯನ್ನರ್ಪಿಸಿದನಂತರ ಸಭೆಯು ಕೊನೆಗಂಡಿತು

ದ್ವಿತೀಯ ಸಚಿವರು.

ಮೈಸೂರು ಸಂಸ್ಥಾನದ ದ್ವಿತೀಯ ಸಚಿವರಾದ ಶ್ರೀ|| ಎಸ್ ಮಾಧವರಾಯರು ಸಿಮ್ಲಾದಲ್ಲಿ ಈ ಮಾಹೆ 26 ಮತ್ತು 29 ರಲ್ಲಿ ನಡೆಯುವ ಇಂಪೀರಿಯಲ್ ಅಗ್ರಿಕಲ್ಚರಲ್ ರಿಸರ್ಚ ಕೌನ್ಸಿಲ್ಲಿನಲ್ಲಿ ಭಾಗವಹಿಸುವರ

ಹಾಸನ ಜಿಲ್ಲಾ ಬೋರ್ಡು.

ಕಳೆದವಾರ ಹಾಸನ ಜಿಲ್ಲಾಬೋರ್ಡಿನ ಉಪಾಧ್ಯಕ್ಷರ ಚುನಾವಣೆ ನಡೆಯಿತು ಶ್ರೀ ಕಪ್ಪಣ್ಣಗೌಡರು ಉಪಾಧ್ಯಕ್ಷರಾಗಿ ಚುನಾಯಿತರಾದರು

ಸಿಂಹಾಸನಾರೋಹಣೋತ್ಸವ

ಗ್ವಾಲಿಯರ್ ಮಹಾರಾಜರವರು ಮುಂದಿನ ನವಂಬರ್ ಹೊತ್ತಿಗೆ ಗಾದಿಯಮೇಲೆ ಕೂಡುವ ಮಹೋತ್ಸವವನ್ನು ವಿಜೃಂಭಣೆಯಿಂದ ನಡೆಸುವರು ಇದಕ್ಕೆ ವೈಸ್‌ರಾಯರೂ ಬರುವರು

"ಟೀ" ಪಾನ

ಪ್ರತಿ ಗ್ರೇಟ್‌ಬ್ರಿಟನಿನ್ನ, ಗಂಡಸು, ಹೆಂಗಸು, ಮಗುವೂ ವರ್ಷಕ್ಕೆ ಸುಮಾರು 70 ಪೌ ಟೀ ಯನ್ನು ಸೇವಿಸುತ್ತಾರ ಜನವರಿ 1ನೇ ತಾರೀಖಿನಿಂದ ಡಿಸೆಂಬರ್ 31ನೇ ತಾರೀಖಿನವರೆಗೆ ಪ್ರತಿ ಮನೆಯ ಯಜಮಾನನು ಸಹ 36 ಪೌ ಟೀ ಯನ್ನು ಕೊಳ್ಳುತ್ತಾನೆ ಇಂಗ್ಲೀಷರು ಸುಮಾರು ,00000000 ಪೌ ಟಿಯನ್ನು ಪ್ರತಿವರ್ಷವೂ ಕೊಳ್ಳುತ್ತಾರೆ ಪ್ರಪಂಚದ ಜನಾಂಗವೆಲ್ಲವೂ ಸೇರಿ ವರ್ಷಕ್ಕೆ ಸುಮಾರು 1,000,000,000, ಪೌ ಟಿಯನ್ನು ಸೇವಿಸುತ್ತದೆ ಬ್ರಿಟನ್ನರು ಪ್ರಪಂಚಕ್ಕೆ ಸರಬರಾಜು ಮಾಡುವುದರಲ್ಲಿ ಸೇಕಡ 60 ಪಾಲನ್ನು ಉಪಯೋಗಿಸಿಕೊಂಡು ಉಳಿದ ಸೇಕಡ 20 ಪಾಲನ್ನು ಇತರರಿಗೆ ಉಪಯೋಗಿಸಲು ಬಿಡುತ್ತಾರ

ಹುಣಸೂರು ತಾಲ್ಲೂಕು ವರ್ತಮಾನ.

(ಒಬ್ಬ ಬಾತ್ಮೀದಾರರಿಂದ)

ಹುಣಸೂರು ತಾಲ್ಲೂಕು ವಿದ್ಯಾ ಸಂಸ್ಥೆಯ ಅಧಿಕಾರಿಗಳಾಗಿ ಬಂಗಳೂರಿನಲ್ಲಿದ್ದ ಶ್ರೀಮಾನ್ ವೈ ವಿ ಚಂದ್ರಶೇಖರಯ್ಯನವರನ್ನು ಈ ದಿವಸ ಬಾಯ್ಸ್ ಸ್ಕೂಲ್ ಬೋರ್ಡ್ ಅಫೀಸರನ್ನಾಗಿ ವರ್ಗಮಾಡಿರುತ್ತಾರೆ ತಾ| 16–8–36 ರಲ್ಲಿ ಅವರು ಹುಣಸೂರಿಗೆ ದಯಮಾಡಿಸಿದರು ಒಡನೆ ಚಾರ್ಜು ಕೊಡ ಒಪ್ಪಿಸಲ್ಪಟ್ಟಿರಬೇಕು ವಿದ್ವನ್ಮಣಿಗಳಾದ ಇವರು ನಮ್ಮ ಗ್ರಾಮದ ಎಲಿಮೆಂಟರಿ ವಿದ್ಯಾಭ್ಯಾಸಕ್ಕೆ ಪ್ರೇರಣೆಯನ್ನೂ, ವಿದ್ಯಾಭಿವೃದ್ಧಿಗೆ ಅನುಕೂಲಗಳನ್ನೂ ಸಾಕಾದಷ್ಟು ಒದಗಿಸಿಕೊಡುವರೆಂದೂ, ಈ ಗ್ರಾಮದಲ್ಲಿಯೂ, ಗ್ರಾಮಾಂತರಗಳಲ್ಲಿಯೂ ಬಾಲಕಿಯರ ವಿದ್ಯಾಭಿವೃದ್ಧಿಗೆ ಇರುವ ಅಡಚಣೆಗಳನ್ನು ಪರಿಹರಿಸಿ, ಬಾಲಕರಿಗಿರುವಂತೆಯೇ ಬಾಲಕಿಯರಿಗೂ ಅನುಕೂಲಗಳನ್ನು ಒದಗಿಸಿಕೊಡುವರೆಂದೂ ನಂಬಿದೆ ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾಗಿರುವ ಕಡೆ ಉಪಾಧ್ಯಾಯರುಗಳು ಕಮ್ಮಿಯಾಗಿಯೂ, ಬಾಲಕರ ಸಂಖ್ಯೆ ಕಮ್ಮಿಯಾಗಿರುವಕಡೆ ಉಪಾಧ್ಯಾಯರುಗಳು ಹೆಚ್ಚಾಗಿಯೂ ಇರುವುದರಿಂದ ಪಾಠ, ಪ್ರವಚನಗಳಿಗೆ ಕೆಲವುಕಡೆ ಅನುಕೂಲಗಳೂ ಕೆಲವುಕಡೆ ಅನಾನುಕೂಲಗ ಉಂಟಾಗಬಹುದ ಹೊಸಬರು ಇವನ್ನು ಕ್ರಮಪಡಿಸಬೇಕಾಗಿದೆ

ಹುಣಸೂರಿಗೆ ಸಮೀಪದಲ್ಲಿ ಸುಮಾರು ಎರಡುಮೈಲಿ ದೂರದಲ್ಲಿ ಬೀಜಗನಹಳ್ಳಿ ಎಂಬ ಗ್ರಾಮವಿದೆ ಇಲ್ಲಿ ಸುಮಾರು ಎಂಭತ್ತು ಕುಟುಂಬಗಳಿರುತ್ತವೆ ಇಲ್ಲಿ ಒಂದು ಪಾಠಶಾಲ ಇದೆ ಇದರಲ್ಲಿ ಸುಮಾರು ನಲವತ್ತುಮಂದಿ ವಿದ್ಯಾರ್ಥಿಗಳು ಓದುತ್ತಲಿದ್ದಾರೆ ಈ ಶಾಲೆಯ ಉಪಾಧ್ಯಾಯರು ಗ್ರಾಮಸ್ಥರ ಪ್ರೀತಿಗೆ ಪಾತ್ರರಾಗಿ, ಬಾಲಕರನ್ನು ಪ್ರೀತಿಸಿ ತುಂಬಾ ಉತ್ಸಾಹಶಾಲಿಗಳಾಗಿ ಕೆಲಸಮಾಡುತ್ತಾರ ಈ ಉಪಾಧ್ಯಾಯರು ಬಂದಮೇಲೆ ತಮ್ಮ ಸ್ಕೂಲು ಅಭಿವೃದ್ಧಿಗೆ ಬಂತೆಂದು ಗ್ರಾಮಸ್ಥರು ಹೇಳುತ್ತಾರೆ ವಿಲೇಜ್ ಪಂಚಾಯಿತಿ ಚೇರ್ಮೇನರವರೂ ನವರಿ ಗ್ರಾಮದಲ್ಲಿರುವ ಮು|| ಲಿಂಗಣ್ಣನವರೂ, ಗುರುಬಸಪ್ಪನವರೂ ಇನ್ನೂ ಅನೇಕ ಮಹನೀಯರೂ ತಮ್ಮ ಸ್ಕೂಲಿನವಿಚಾರದಲ್ಲಿಯೂ ಉಪಾಧ್ಯಾಯರ ವಿಚಾರದಲ್ಲಿಯೂ ತುಂಬಾ ಸಹಾಯಕರಾಗಿರುವುದು ಸ್ತೋತ್ರಾರ್ಹವಾಗಿದೆ

ಆದರೆ ಪಾಠಶಾಲೆಯ ಮುಂದುಗಡೆ ಮೋರಿ ನೀರು ಬಂದು ಹಳ್ಳಮಾಡಿ ಸಣ್ಣ ಕರೆಯಂತೆ ನಿಂತುಕೊಳ್ಳುತ್ತದೆ ಇದರಿಂದ ವಿದ್ಯಾರ್ಥಿಗಳಿಗೆ ಅನಾರೋಗ್ಯವಾಗುವುದಲ್ಲದೆ ಶಾಲೆಗೆ ಹೋಗಿಬರುವ ಮಕ್ಕಳು ಬಿದ್ದುಹೋಗುವುದು ಮೋಸ್ಕಂದ ಗ್ರಾಮದ ಮುಖಂಡರು ಈ ನ್ಯೂನತೆಯನ್ನು ಹೋಗಲಾಡಿಸಿ ಬಾಲಕರಿಗೆ ಸೌಖ್ಯವನ್ನುಂಟುಮಾಡುವರೆಂದು ಕೋರಿದೆ

ಸಾಧ್ವಿ

೨೪-೮-೩೬ ನೇ ಸೋಮವಾರ

ಗ್ರಾಮೋದ್ಧಾರ ತರಂಗ.

ಈಗ ಎಲ್ಲೆಲ್ಲೂ ಗ್ರಾಮೋದ್ಧಾರದ ಮಾತೇ ಮಾತು. ಮೈಸೂರಿನ ಸರ್ಕಾರದವರು ಮೊದಲುಗೊಂಡು ಸಣ್ಣ ಪುಟ್ಟ ಅಧಿಕಾರಿಗಳೂ ಖಾಸಗೀ ಜನರೂ ಗ್ರಾಮಾಭಿವೃದ್ಧಿಯ ಮಾತನ್ನೇ ಆಡುತ್ತಿರುವರು. ಕಾಂಗ್ರೆಸ್ ಮಹಾಸಭೆಗಂತೂ, ಮಹಾತ್ಮ ಗಾಂಧಿಯವರು ಪ್ರವೇಶಿಸಿದಮೇಲೆ ಗ್ರಾಮಗಳ ಕಡೆ ಸಂಪೂರ್ಣವಾದ ದೃಷ್ಟಿಯು ತಿರುಗಿರುವುದು. ಭರತ ಖಂಡಕ್ಕೆ ಗ್ರಾಮಗಳೇ ಆಸ್ತಿಭಾರವೆಂದು ಎಲ್ಲರೂ ಚೆನ್ನಾಗಿ ಅರಿಯುತ್ತಿರುವರು. ಇಷ್ಟು ಪ್ರಯತ್ನಗಳೂ ನಿಜವಾದ ಗ್ರಾಮಾಭಿವೃದ್ಧಿಯಲ್ಲಿ ಪರಿಣಮಿಸಿದರೆ ನಮ್ಮ ಹಳ್ಳಿಗಳ ಪುಣ್ಯಕ್ಕೆ ಎಣೆಯೇ ಇಲ್ಲ.

ಆದರೆ ಇತರ ಅನೇಕ ಚಳವಳಿಗಳಂತೆ ಈ ಗ್ರಾಮೋದ್ಧಾರ ಪ್ರಸಂಗವೂ ಕೇವಲ ಆಡಂಬರದಲ್ಲಿ ಪರಿಸಮಾಪ್ತಿಯಾಗುವ ಸಂಭವವೇ ಹೆಚ್ಚಾಗಿದೆ. ನಿಜವಾದ ಗ್ರಾಮಾಭಿವೃದ್ಧಿಯು ಯಾವರೀತಿ ಆಗುವುದೆಂಬುದನ್ನು ಅರಿಯದೆ ಹಲ ಕೆಲವು ನವನಾಗರಿಕತೆಯ ಏರ್ಪಾಡುಗಳನ್ನು ಮಾಡಿದರೆ ನಮ್ಮ ಹಳ್ಳಿಗಳು ಉದ್ಧಾರವಾಗುವುದಿಲ್ಲ. ಈಗಿನ ಕಾಲಕ್ಕೆ ತಕ್ಕಂತೆ ಹಳ್ಳಿಗಳಲ್ಲಿ ಗ್ರಾಮ ನೈರ್ಮಲ್ಯ, ವೈದ್ಯ ಸೌಕರ್ಯ, ಶಿಕ್ಷಣಶಾಲೆಗಳು, ಸಹಕಾರ ಸಂಘಗಳು, ವಾಚನಾಲಯಗಳು, ಒಳ್ಳೆ ರಸ್ತೆಗಳು, ಇವೇ ಮುಂತಾದವುಗಳನ್ನು ಏರ್ಪಡಿಸುವುದೇನೋ ಒಳ್ಳೆಯದೇ. ಆದರೆ ಹಳ್ಳಿಗಳ ಈಗಿನ ಸ್ಥಿತಿಗೆ ಅವುಗಳ ಆರ್ಥಿಕ ದುಸ್ಥಿತಿಯೇ ಮುಖ್ಯಕಾರಣ. ಮಳೆ ಬೆಳೆಗಳಿಲ್ಲದೆ, ತಿನ್ನಲು ಅನ್ನವಿಲ್ಲದೆ, ಉಡಲು ಬಟ್ಟೆಯಿಲ್ಲದೆ, ಜನರು ಪರಿತಪಿಸುತ್ತಿರುವರು. ಕಂದಾಯದ ಹೊರೆಯನ್ನು ಹೊತ್ತು ಹೊತ್ತು ಜೀವಚ್ಛವರಾಗಿ ಸಾಲ ಸೋಲಗಳ ಸಾಗರದಲ್ಲಿ ಮುಳುಗಿ ಹೋಗಿರುವರು. ಗ್ರಾಮಕೈಗಾರಿಕೆ ಮತ್ತು ಜೀವನೋಪಾಯಗಳು ಮೂಲೆಗೆ ಸೇರಿರುವುದು ಆದ್ದರಿಂದ ಹಳ್ಳಿಗಳ ಕೈಗಾರಿಕೆಗಳನ್ನು ಜೀರ್ಣೋದ್ಧಾರ ಮಾಡುವುದಕ್ಕೂ ಕಂದಾಯಗಳ ಹೊರೆಯನ್ನು ಇಳಿಸುವುದಕ್ಕೂ ಮುಖ್ಯವಾಗಿ ಪ್ರಯತ್ನಿಸಬೇಕು. ಈ ವಿಷಯಗಳಿಗೆ ಗ್ರಾಮೋದ್ಧಾರಕರು ಗಮನ ಕೊಡುವರೆಂದು ನಂಬುತ್ತೇವೆ.

ಪೌರಸಭಾಸದರು ಗಮನಿಸಲಿ

ರಾಜಧಾನಿಯ ನಿವಾಸಿಗಳ ಕುಂದುಕೊರತೆಗಳ ವಿಷಯವಾಗಿ ದೀರ್ಘವಾದ ಲೇಖನವನ್ನು ಬೇರೆ ಕಡೆ ಮುದ್ರಿಸಿರುತ್ತೇವೆ. ಈ ರೀತಿಯ ಇನ್ನೂ ಅನೇಕ ಆಕ್ಷೇಪಣೆಗಳು ನಮ್ಮಲ್ಲಿ ಬರುತ್ತಿವೆ. ನಗರ ಸೌಂದರ್ಯ, ಅಂದಚಂದಗಳ ಹೆಸರಿನಲ್ಲಿ ಬಡಜನರಿಗೆ ಕಿರುಕುಳವುಂಟಾಗದಂತೆ ನೋಡಿಕೊಳ್ಳುವುದು ಅತ್ಯಾವಶ್ಯಕ. ಈ ವಿಷಯಕ್ಕೆ ಪೌರಸಭಾಸದಸ್ಯರ ಗಮನವು ಕೊಡಲ್ಪಡಲೆಂದು ಪ್ರಾರ್ಥಿಸುತ್ತೇವೆ.

ಲಂಡನ್ನಿನಲ್ಲಿ

ಶ್ರೀಮನ್ಮಹಾರಾಜರೂ ಸಾಹೇಬರೂ

ಮೈಸೂರು ಡಿಸ್ಟ್ರಿಕ್ಟ್ ಟ್ರೆಜರಿ.

(ಒಬ್ಬ ಬಾತ್ಮೀದಾರರಿಂದ)

ಮೇಲ್ಕಂಡ ಟ್ರೆಜರಿಯಲ್ಲಿ ಪೂರ್ವದಲ್ಲಿ ಪಾರ್ಟಿಗಳು ಹೋದಾಗ ಚಲಾವಣೆಗಳು ಸುಲಭವಾಗಿ ನಡೆಯುತ್ತಿದ್ದವು. ಆದರೆ ಈಗಿನ ನವೀನ ಏರ್ಪಾಡಿನಲ್ಲಿ ಟಿಕೆಟ್ಟು ಮುಂತಾದುವುಗಳನ್ನು ಹಾಕಿರುವುದರಿಂದಲೂ ನೌಕರವರ್ಗದವರ ನಾಮಕಾವಾಸ್ತೆಯಿಂದಲೂ ಜನರಿಗೆ ಬಹಳ ಅನಾನುಕೂಲವುಂಟಾಗಿದೆ. ಬಿಲ್ಲುಗಳು, ಚೆಕ್ಕುಗಳು, ಇಂಡೆಂಟುಗಳು, ಮೊದಲಾದವನ್ನು ತೆಗೆದುಕೊಂಡು ವಿಲೆ ಮಾಡುವ ಹೊತ್ತಿಗೆ ಒಬ್ಬೊಬ್ಬರೂ ಮೂರು ನಾಲ್ಕು ಗಂಟೆಗಳ ಕಾಲ ಕಾಯಬೇಕಾಗುವುದು. ಯಾವ ಬ್ಯಾಂಕುಗಳಲ್ಲಿಯೂ ಪೋಸ್ಟಾಫೀಸಿನಲ್ಲಿಯೂ ಇಷ್ಟು ನಾಮಕಾವಾಸ್ತೆ ಆಗುವುದಿಲ್ಲ. ಟ್ರೆಜರಿಗೆ ಹೋದವರು ದಿನವನ್ನೆಲ್ಲಾ ಅಲ್ಲಿಯೇ ಕಳೆಯಬೇಕಾಗುತ್ತದೆ. ಈಗ ಹೊಸದಾಗಿ ಬಂದಿರುವ ಆಫೀಸರು ಅನುಭವಸ್ಥರೂ, ದಕ್ಷರೂ ಆಗಿರುವರು. ಅವರು ಈ ಅಂಶಗಳಿಗೆ ಗಮನಕೊಟ್ಟು ಜನರ ತೊಂದರೆಯನ್ನು ನಿವಾರಿಸುವರೆಂದು ನಂಬಲಾಗಿದೆ.

ಶ್ರೀ ಅರವಿಂದ ಯೋಗಿಗಳು.

ಕಳೆದ 15ನೇ ತಾ॥ ಶ್ರೀ ಅರವಿಂದ ಘೋಷರ 65ನೇ ವರ್ಷ ವರ್ಧಂತಿಯು ಪುದುಚೇರಿಯ ಅವರ ಆಶ್ರಮದಲ್ಲಿ ಆಚರಿಸಲ್ಪಟ್ಟಿತು. ಸುಮಾರು 900 ಜನರು ಅವರ ದರ್ಶನವನ್ನು ತೆಗೆದುಕೊಂಡು ತಮ್ಮ ಭಕ್ತಿಯನ್ನು ಸಲ್ಲಿಸಿದರು. ಅವರ ಪೈಕಿ ಸುಮಾರು ಇನ್ನೂರು ಜನರು ಅವರ ಶಿಷ್ಯರು ಉಳಿದವರು ಭಕ್ತರು. ಆ ದಿನ ಬೆಳಗ್ಗೆ ಏಳರಿಂದ ಮಧ್ಯಾಹ್ನ ಮೂರು ಗಂಟೆವರೆಗೆ ಮಾತ್ರ ಶ್ರೀ ಅರವಿಂದರು ಮೇಲ್ಕಂಡ ಜನರಿಗೆ ದರ್ಶನವಿತ್ತರು.

ಇವರು ಬಂಗಾಳದವರಾದರೂ ಪುದುಚೇರಿಗೆ ರಾಜಕೀಯ ಕಾರಣಗಳಿಂದ ದಯಮಾಡಿಸಿ 25 ವರ್ಷಗಳಾದವು. ಅಲ್ಲಿ ಯೋಗಸಾಧನೆಯಲ್ಲಿ ನಿರತರಾದರು. ಅನೇಕ ಶಿಷ್ಯರಿಗೆ ಯೋಗಮಾರ್ಗವನ್ನುಪದೇಶಿಸಿದರು. ಬರುಬರುತ್ತ ಏಕಾಂತವಾಸವನ್ನೂ ಮೌನವನ್ನೂ ತಾಳಿದರು. ಈಚೆಗೆ ವರ್ಷದಲ್ಲಿ ಮೂರು ದಿನಗಳು ಮಾತ್ರ ತಮ್ಮ ಪ್ರಿಯಶಿಷ್ಯರಿಗೆ ದರ್ಶನವನ್ನು ಕೊಡುವರು. ಉಳಿದ ದಿನಗಳಲ್ಲಿ ಮನುಷ್ಯ ಸಂಪರ್ಕವನ್ನೇ ಇಟ್ಟಿರುವುದಿಲ್ಲ. ಸದಾ ಮೌನದಿಂದಲೇ ಇರುವರು. ಇವರ ಯೋಗಮಾರ್ಗವು ಪ್ರಪಂಚದ ತತ್ವಜ್ಞಾನಿಗಳಲ್ಲಿ ವಿಶೇಷ ಮನ್ನಣೆಯನ್ನು ಪಡೆದಿದೆ. ಇವರ ತಪಶ್ಚರ್ಯೆಯಿಂದ ಭರತಖಂಡಕ್ಕೂ, ಇಡೀ ಪ್ರಪಂಚಕ್ಕೂ ಕಲ್ಯಾಣವುಂಟಾಗುವುದೆಂದು ನಂಬಲ್ಪಟ್ಟಿದೆ.

ಕ್ರಿಕೆಟ್ ಟೆಸ್ಟ್ ಪಂದ್ಯಗಳು.

ನಮ್ಮ ಇಂಡಿಯಾ ಕ್ರಿಕೆಟ್ ಟೀಮಿನವರು ಇಂಗ್ಲೆಂಡಿನ ಪ್ರವಾಸದಲ್ಲಿ 3 ಟೆಸ್ಟ್ ಮ್ಯಾಚುಗಳನ್ನಾಡಿದರು. ಮೊದಲನೆಯ ಟೆಸ್ಟ್ ಮ್ಯಾಚಿನಲ್ಲಿ ಇಂಗ್ಲೆಂಡಿನವರು 9 ವಿಕೆಟ್ಟುಗಳಿಂದ ಗೆದ್ದರು. 2ನೇ ಟೆಸ್ಟ್ ಮ್ಯಾಚಿನಲ್ಲಿ ಸಮವಾಯಿತು. 3 ನೆಯ ಟೆಸ್ಟ್ ಮ್ಯಾಚಿನಲ್ಲಿ ಇಂಗ್ಲೆಂಡಿನವರು 9 ವಿಕೆಟ್ಟುಗಳಿಂದ ಗೆದ್ದರು. ಶ್ರೀ॥ ದಿಲೀಪ್ ಸಿಂಗರವರು ಸೆಪ್ಟಂಬರಿನಲ್ಲಿ ನ್ಯೂಜಿಲೆಂಡ್ ಮತ್ತು ಆಸ್ಟ್ರೇಲಿಯಾಗಳಿಗೆ ಈ ಟೀಮನ್ನು ಕರೆದುಕೊಂಡು ಹೋಗುವರು.

ಸಮುದ್ರದಲ್ಲಿ ಸುರಂಗ.

ಜಪಾನ್ ಮತ್ತು ಚೀನಾ ಸಮುದ್ರದ ಮಧ್ಯೆ ನೀರಿನಲ್ಲಿ 3600 ಅಡಿ ಉದ್ದ ಮತ್ತು 60 ಅಡಿ ಆಳ ಉಳ್ಳ ಒಂದು ಭಾರಿ ಸುರಂಗವನ್ನು ತೋಡಲಿದ್ದಾರೆ. ಸಮುದ್ರದಲ್ಲಿ ಆಗಾಗ್ಗೆ ಸಂಭವಿಸುತ್ತಿರುವ ಅನಾಹುತಗಳನ್ನು ತಪ್ಪಿಸುವುದೇ ಅದರ ಉದ್ದೇಶ. ಸಮುದ್ರ ಮಧ್ಯದಲ್ಲಿರುವ ಅನೇಕ ಬಂಡೆಗಳನ್ನು ಕೊರೆಯಲಾಗುವುದು. ಪ್ರತಿವರ್ಷವೂ ಜಪಾನಿನಲ್ಲಿ ಉಂಟಾಗುವ ಸುಮಾರು 4000 ಭೂಕಂಪದ ಅನಾಹುತಕ್ಕೆ ಸಿಕ್ಕದಂತೆ ಈ ಸುರಂಗವು ನಿರ್ಮಾಣವಾಗುವುದು.

ಔಷಧಿಯಿಲ್ಲದೆ ಚಿಕಿತ್ಸೆ.

ಮೈಸೂರು ನಾರಾಯಣಶಾಸ್ತ್ರಿ ರಸ್ತೆಯಲ್ಲಿ ಸಿದ್ಧಾಶ್ರಮದಲ್ಲಿರುವ ಹುಬ್ಬಳ್ಳಿ ಶ್ರೀ॥ ಸಿದ್ಧಾರೂಢಸ್ವಾಮಿಗಳವರ ಶಿಷ್ಯರಾದ ಶ್ರೀ ಚೈತನ್ಯಂ ಬಿ. ರಾಮದಾಸ್‌ರವರು ತಿಳಿಸುವುದೇನೆಂದರೆ —

ಈ ಕೆಳಗೆ ಕಂಡ ಮಹನೀಯರು ನಮ್ಮಲ್ಲಿ ಬಂದು ಔಷಧಿ ಸೇವನೆಯಿಲ್ಲದೆ ವ್ಯಾಧಿಗಳನ್ನು ಗುಣಪಡಿಸಿಕೊಂಡು ಸುಖವಾಗಿರುತ್ತಾರೆಂದು ತಿಳಿಸಲು ಸಂತೋಷಿಸುತ್ತೇನೆ—

(1) ಗೊಲ್ಲಗೇರಿ ಓವರ್ಸಿಯರ್ ... ಮುದಲಿಯಾರ್ ಹೆಂಡತಿ ಧನಕೋಟಿ... ಮ್ಮಾಳ್ 1 ತಿಂಗಳಿಂದ ಉಸಿರು ಬಿಗಿದಿ... 3 ದಿನಗಳಲ್ಲಿ ವಾಸಿಯಾಗಿದೆ. (2) ... ಮುಂಡಿ ಬಡಾವಣೆ ಚಲುವರಾಯರ ... ಪತಿ ಅನ್ನಪೂರ್ಣಮ್ಮನವರಿಗೆ 7-8 ವರ್ಷ... ದಿಂದ ಇದ್ದ ಕ್ಷಯ, ಬೇಧಿ ಗುಣವಾಗಿವೆ. (3) ತೊಗರಿ ಬೀದಿ ಬೊಮ್ಮೆಗೌಡರ ... ವೆಂಕಟಪ್ಪನಿಗೆ 3 ವರ್ಷದಿಂದ ಒ... ಸುತ್ತಿದ್ದ ಕ್ಷಯರೋಗ ಗುಣವಾಗಿದೆ. (4) ... ವೀವರ್ಸ್ಲೈನ್ ವೆಂಕಟರಾಯರ ... ರಾಮರಾಯರಿಗೆ 2-3 ತಿಂಗಳಿಂದ ... ಹಿಡಿದಿದ್ದುದು 4 5 ದಿನದಲ್ಲಿ ... (5) ರಾಮಶಾಸ್ತ್ರಿಗಳ ಮಗ ಅನಂತ... ಮಯ್ಯನವರಿಗೆ 1½ ತಿಂಗಳಿಂದ ಒ... ದ್ದ ಭೇದಿ, ಜ್ವರ ಗುಣವಾಗಿದೆ (6) ... ಸಾಮಿ ಮುದಲಿಯಾರ್ ಹೆಂಡತಿ ... ಬರಿಗೆ 6 ತಿಂಗಳಿಂದ ಆಗುತ್ತಿದ್ದ ... ಗಾಳಿ ಚೇಷ್ಟೆ ಗುಣವಾಗಿದೆ. (7) ... ರಾಮರಾವ್ ಹೆಂಡತಿ ರಾಜಮ್ಮನಿಗೆ ... ವರ್ಷದ ಗಾಳಿ ಚೇಷ್ಟೆ ಗುಣವಾ... (8) ಹಳೇಅಗ್ರಹಾರದ ಅಸ್ಪತ್ರೆ ... ರಾಮರಾವ್‌ರವರಿಗೆ ಹಲ್ಲುನೋವು ... ಲು ಚಳಕು ಗುಣವಾಗಿದೆ (9) ಕೊ... ರಸ್ವಾಮಿ ಮೊದಲಿಯಾರ್ರ ಮಗ ... ರಾಮ್‌ಗೆ ನಿಶ್ಶಕ್ತಿ, ಕಾಲು ನವೆ ... ವಾಗಿವೆ

ಮಕ್ಕಳ ಆತ್ಮಹತ್ಯೆ

ಬೊಂಬಾಯಿನ ಕಿಸ್ಮತವಾಡಿಯಲ್ಲಿ ... ದದ ಶ್ರೀನಿವಾಸ ನಾಡಕರಣಿ ಮತ್ತು ... ಲಾಭಾಯಿ ನಾಡಕರಣಿ ಎಂಬಿಬ್ಬರ... ಲಕರು ವಿಷಪಾನಮಾಡಿ ಆತ್ಮ... ಮಾಡಿಕೊಂಡರು. ಇವರ ತಂದೆ... ಮಧುಕರನೆಂಬುವನು ಹಣಕಾಸಿನ ... ದರೆಯಿಂದ ನರಳುತ್ತಿದ್ದು 1 ವಾ... ನಕ ಮನೆಯಕಡೆಯೇ ಬರಲಿಲ್ಲ ... ತಂದೆಗಾಗಿ ಕಾದು ಸಾಕಾಗಿ ತಿನ್ನಲು ... ವಿಲ್ಲದೆ ಸಾಲಗಾರರ ಕಾಟದಿಂದ ... ಗೊಂಡು ವಿಷಪಾನಮಾಡಿದರು

ರಿಕಾರ್ಡ್ ಓಟ.

ಅಮೇರಿಕನಾದ ಕನ್ನಿಂಗ್... ಎಂಬಾತನು 1 ನಿಮಿಷ 49 7 ... ಳಲ್ಲಿ 800 ಮೀಟರುಗಳ ದೂರವನ್ನು ... ದ್ದಾನೆ. ಇದು ಪ್ರಪಂಚದ ರಿಕಾರ್ಡ್...

ಮೈಸೂರು ನಗರ ನಿವಾಸಿಗಳ ಕುಂದುಕೊರತೆಗಳು.

ಲೈಸೆನ್ಸುಗಳ ಗೊಂದಲ, ಜುಲ್ಮಾನೆಗಳ ಸುರಿಮಳೆ.

ಮೈಸೂರು ಸಿಟಿಯಲ್ಲಿ ಗೌರವಸ್ಥರೂ, ಸ್ವಂತ ಮನೆ ಕಟ್ಟಿಕೊಂಡು ಇರುವವರೂ, ಮತ್ತು ಕಷ್ಟಪಟ್ಟು ಮೈಬೆವರು ತೆಗೆದು ಸ್ವತಂತ್ರವಾಗಿ ಜೀವಿಸತಕ್ಕ ಸಾಧುಜನರೂ ಅವರವರಿಗೆ ಬಾಳುವುದೇ ಬಹಳ ಕಷ್ಟವಾಗಿದೆ. ಮೈಸೂರು ಮುನಿಸಿಪಾಲಿಟಿಯವರು ಅಂದರೆ ಹೆಲ್ತ್ ಡಿಪಾರ್ಟ್‌ಮೆಂಟಿನವರು ಆರೋಗ್ಯದ ನೆಪದಿಂದ ಸೋಡಾ ಅಂಗಡಿಯವರು, ಕ್ಷೌರದ ಅಂಗಡಿಯವರು, ದೋಸೆ, ಕಡುಬು ವಗೈರೆ ಸಣ್ಣ ಸಣ್ಣ ಹೋಟಲಿನವರುಗಳು ಮೊದಲಾದ ಸಣ್ಣಪುಟ್ಟ ವ್ಯಾಪಾರಿಗಳಿಗೆ ಇಂಗ್ಲೆಂಡಿನ ದೊಡ್ಡ ದೊಡ್ಡ ಭಾರಿ ಭಾರಿ ಹೋಟೆಲು ಅಂಗಡಿಗಳಂತೆ ನಿರ್ಬಂಧಗಳನ್ನು ಇಟ್ಟು ಕೇಳುವ ಹಾಗೆ ಹಿಂಸೆಪಡಿಸುತ್ತಿದ್ದಾರೆ ಮತ್ತು ಅವರುಗಳ ಮೇಲೆ ಕೇಸುಹಾಕಿ ಜುಲ್ಮಾನೆ ಸಹ ಆಗುತ್ತಿದೆ.

ಮೈಸೂರಿನಲ್ಲಿ ಅನೇಕ ಜನ ಬಡವರುಗಳು ಸಾಲಸೋಲವನ್ನು ಮಾಡಿ ಮನೆ ಕಟ್ಟಿಕೊಂಡು ಬಹುಕಷ್ಟದಿಂದ ಜೀವನ ಮಾಡುತ್ತಿದ್ದಾರೆ. ಇಂಥ ಬಡವರ ಮನೆಗಳವರಿಗೆ ಆರೋಗ್ಯದ ಇಲಾಖೆಯವರು ನಿಮ್ಮ ಮನೆಗಳಲ್ಲೆಲ್ಲಾ "ಪ್ಲೆಯಿನ್ಸ್" ಅನ್ನು ಇಡಿಸಿಕೊಳ್ಳಬೇಕು ಇಲ್ಲವಾದರೆ ನಿಮ್ಮಗಳ ಮೇಲೆ ಕೇಸು ಹಾಕುತ್ತೇವೆ" ಎಂದು ಹೇಳಿ ಹೆದರಿಸುತ್ತಾ ಅನೇಕ ಬಡ ಜನಗಳು ಮತ್ತು ಗೌರವಸ್ಥರುಗಳ ಮೇಲೆಯೂ, ಕೇಸುಗಳನ್ನು ಮಾಡಿರುತ್ತಾರೆ. ಕೆಲವು ಕೇವಲ ಬಡ ಜನಗಳು 10–15 ರೂಪಾಯಿಗಳ ಬಂಡವಾಳದಿಂದ ಸಣ್ಣ ಸಣ್ಣ ಬಾಡಿಗೆ ಮನೆಗಳಲ್ಲಿ, ಕ್ಷೌರದ ಅಂಗಡಿ, ದೋಸೆ, ಕಡುಬು ವಗೈರೆ ಅಂಗಡಿಗಳನ್ನು ಇಡಲು ಆರೋಗ್ಯದ ಇಲಾಖೆಯವರುಗಳಲ್ಲಿ ಲೈಸೆನ್ಸ್ ಕೇಳಿದರೆ ಲೈಸೆನ್ಸ್ ಕೊಡುವುದಿಲ್ಲವೆಂದು ಹೇಳುತ್ತಾರೆ. ಇವುಗಳಿಂದ ಆರೋಗ್ಯಕ್ಕೆ ವ್ಯತಿರಿಕ್ತವಾಗುವುದರಿಂದ ಆರೋಗ್ಯದ ಇಲಾಖೆಯ ಅಧಿಕಾರಿಗಳು ಲೈಸೆನ್ಸ್ ಕೊಡುವುದಿಲ್ಲವೆಂದು ಹೇಳಬಹುದು. ಆದರೆ ಈಗಿನ ನಾಗರಿಕ ಕಾಲದಲ್ಲಿ ಪ್ರತಿಯೊಬ್ಬ ಹೋಟಲಿನವನೂ ತನ್ನ ಹೋಟೆಲನ್ನು ಸ್ವಚ್ಛವಾಗಿಯೂ ಶೃಂಗಾರವಾಗಿಯೂ ಇಟ್ಟುಕೊಳ್ಳದಿದ್ದರೆ ಅವನಿಗೆ ಗಿರಾಕಿಯೇ ಬಾರದೆ ವ್ಯಾಪಾರವೇ ನಿಂತುಹೋಗುತ್ತದೆ. ಇಂಥಾದ್ದರಲ್ಲಿ ಮೇಲ್ಕಂಡ ಇಲಾಖೆಯವರು ವೃಥಾ ತೊಂದರೆಕೊಡಬೇಕಾದ ಆವಶ್ಯಕತೆಯೇ ಇಲ್ಲದೇ ಇರುವಾಗ ಇಲಾಖೆಯವರು ಕೇವಲ ದರ್ಪವನ್ನು ತೋರಿಸುವುದಕ್ಕಾಗಿ ಬಡ ಪ್ರಜೆಗಳಿಗೆ ಅನಾವಶ್ಯಕವಾದ ಹಿಂಸೆಗಳನ್ನು ಕೊಡುತ್ತಾರೆ. ಲೈಸೆನ್ಸು ಇಲ್ಲದೆ ಇವರುಗಳು ಅಂಗಡಿ ಇಟ್ಟರೆ ಕೇಸುಹಾಕಿ ಇವರುಗಳ ಮೇಲೆ ಜುಲ್ಮಾನೆ ಹಾಕಿಸುತ್ತಾರೆ. ಅಂಗಡಿ ಇಡದೇ ಹೋದರೆ ಇವರುಗಳಿಗೆ ಜೀವನೋಪಾಯಕ್ಕೆ ಬೇರೆ ಮಾರ್ಗವೇ ಇಲ್ಲ. ಇಂಥಾದ್ದರಲ್ಲಿ ಈ ಬಡಪ್ರಜೆಗಳ ಮತ್ತು ಇವರುಗಳ ಹೆಂಡತಿ, ಮಕ್ಕಳ ಗತಿ ಏನಾಗಬೇಕು. ಈ ಬಡ ಜನಗಳ ಗೋಳಾಟವನ್ನು ಪ್ರತ್ಯಕ್ಷ ಮೈಸೂರು ಸಿಟಿ ಕೋರ್ಟಿನಲ್ಲಿ ಹೋಗಿ ನೋಡಿದರೆ ಚೆನ್ನಾಗಿ ವ್ಯಕ್ತವಾಗುತ್ತದೆ.

ಮೈಸೂರು ಸಿಟಿಯಲ್ಲಿ ಹೆಲ್ತ್ ಆಫೀಸರಂತು ಮೈಸೂರಿನ ಡಿಕ್ಟೇಟರುಗಳೇ ಆಗಿಬಿಟ್ಟಿದ್ದಾರೆ ಮತ್ತು ಸ್ಯಾನಿಟರೀ ಇನ್ಸ್‌ಪೆಕ್ಟರುಗಳಾದರೋ ಸಿಟಿಯ ಒಂದೊಂದು ಮೊಹಲ್ಲಾಕ್ಕೆ ಗೌರ್ನರುಗಳೇ ಆಗಿಬಿಟ್ಟಿದ್ದಾರೆ. ಅವರುಗಳು ಪ್ರತಿದಿನವೂ ತಾವು ಮಾಡಬೇಕಾದ ಆರೋಗ್ಯ ವಿಷಯದ ತಮ್ಮ ಕರ್ತವ್ಯವನ್ನೇ ಬಿಟ್ಟುಬಿಟ್ಟು ಸಭ್ಯ ಪ್ರಜೆಗಳಮೇಲೆ ದಿನವೂ ಚಿತ್ರವಿಚಿತ್ರವಾದ ಹಿಂಸೆಗಳನ್ನು ಕೊಡುತ್ತಿದ್ದಾರೆ. ನಮ್ಮ ಮೈಸೂರು ಜನಗಳಾದರೋ ಬಹಳ ಸಭ್ಯರಾಗಿಯೂ ಮತ್ತು ಮುಗ್ಧರಾಗಿಯೂ ಇರೋಣದರಿಂದ ಅಧಿಕಾರಿಗಳಿಗೆ ಇದೂ ಒಂದು ಅದೃಷ್ಟವೆಂದೇ ಹೇಳಬೇಕು.

ಅದು ಹಾಗಿರಲಿ. ಮೊದಲು ಆರೋಗ್ಯದ ಇಲಾಖೆಯವರು ತಮ್ಮ ಕರ್ತವ್ಯಗಳನ್ನು ಸರಿಯಾಗಿ ಮಾಡುತ್ತಾರೆಯೋ, ಇಲ್ಲವೇ ಎಂಬುವನ್ನು ವಿಚಾರಮಾಡಿ ನೋಡಿದರೆ 'ಅಕ್ಕಿ ಒಡದ ಪಾತ್ರೆಗೆ ಬೆಲೆಯಿಲ್ಲ" ಎಂಬ ಗಾದೆಯಂತೆ ಅನೇಕ ಮನೆಗಳಲ್ಲಿಯೂ ಮತ್ತು ಅನೇಕ ಕನ್ಸರ್ವೆನ್ಸಿಗಳಲ್ಲಿಯೂ ತಿಂಗಳುಗಟ್ಟಲೆ ಹೊಲಸಿನಿಂದ ತುಂಬಿ ದುರ್ಗಂಧದಿಂದ ಕೂಡಿದ್ದರೂ, ಅವುಗಳನ್ನು ಸ್ವಚ್ಛಮಾಡತಕ್ಕಂಥವರೇ ಗತಿಯಿಲ್ಲದಾಗಿದೆ. ಮೈಸೂರು ಸಿಟಿ ಕಸ್ಬಲದ ಭರ್ತಿ ಗಾಡಿಗಳು ಮುಚ್ಚಳವನ್ನು ತೆರೆದುಕೊಂಡು ಸುತ್ತಮುತ್ತಲೂ ದುರ್ಗಂಧವನ್ನು ಬೀರುತ್ತಾ ಸಾಧಾರಣವಾಗಿ ಮಧ್ಯಾಹ್ನ ೧೦-೨ಗಂಟೆ ಹೊತ್ತಿನಲ್ಲಿಯೂ ಊರುಮಧ್ಯೆ ಒಂದರೆ ಆಹಾರಸಾಮಗ್ರಿಗಳು, ಜನಸಂದಣಿ, ಮತ್ತು ತರಕಾರಿ ಇರತಕ್ಕ ಅಂಗಡಿ ಬೀದಿಗಳಲ್ಲಿ ಹೋಗುವುದನ್ನು ನೋಡಿದರೆ ಸಾಧಾರಣ ಪಾಮರನಿಗೂ ಕೂಡ ಆರೋಗ್ಯದ ಇಲಾಖೆಯವರು ಆರೋಗ್ಯದ ವಿಷಯವಾಗಿ ಎಷ್ಟು ಮುತುವರ್ಜಿಯಿಂದ ಕೆಲಸಮಾಡುತ್ತಾ ಇದ್ದಾರೆಂಬುದು ಚೆನ್ನಾಗಿ ಗೊತ್ತಾಗುತ್ತದೆ. ಅಯ್ಯೋ ಪಾಪ! ನಮ್ಮ ಹೆಲ್ತ್ ಆಫೀಸಿನವರು ಈ ಕಸ್ಬಲಗಳಿಂದ ಅನೇಕ ಕ್ರಿಮಿಗಳು ಉತ್ಪನ್ನವಾಗುತ್ತವೆ, ಆದರಮೇಲೆ ಕೂತ ನೊಣಗಳು ಆಹಾರ ಸಾಮಗ್ರಿಗಳು, ತರಕಾರಿ, ತಿಂಡಿ ವಗೈರ ಪದಾರ್ಥಗಳು ಇವುಗಳಮೇಲೆ ಕುಳಿತರೆ ರೋಗ ಉತ್ಪತ್ತಿಯಾಗುತ್ತೆ, ಇದರಿಂದ ಸಾಂಕ್ರಾಮಿಕ ರೋಗಗಳು ಹೆಚ್ಚಾಗುತ್ತವೆ ಎಂಬುದನ್ನು ಅರಿಯರ?

ನಾವು ವಾಸಮಾಡತಕ್ಕ ಮೊಹಲ್ಲಾ ಕಿಲ್ಲೇ ಮೊಹಲ್ಲಾ, ನೋಡಿದರಂತೂ ನರಕಲೋಕವಾಗಿರುತ್ತೆ. ಈ ಕೃಷ್ಣರಾಜಮೊಹಲ್ಲಾ ಮತ್ತು ಕಿಲ್ಲೇ ಮೊಹಲ್ಲಾದಲ್ಲಿ ಒಂದು ಪಬ್ಲಿಕ್ ಕನ್ಸರ್ವೆನ್ಸಿ ಸಹ ಇಲ್ಲ. ಪಬ್ಲಿಕ್ ಜನಗಳು ಕಕ್ಕಸ್ಸುಗಳು ಇಲ್ಲದೇ ಇರುವುದರಿಂದ ದಾರಿಯ ಅಕ್ಕಪಕ್ಕಗಳಲ್ಲಿಯೇ ಶೌಚ ಮಾಡುತ್ತಾರೆ. ದುರ್ಗಂಧದಿಂದ ತುಂಬಿರತಕ್ಕ ಇಂತಹ ರಸ್ತೆಗಳಲ್ಲಿ ತಿರುಗಾಡುವುದೇ ಅಸಾಧ್ಯವಾಗಿದೆ. ನಾಲಾದ ಒಳಗಡೆಯಲ್ಲಿ ನೀರು ನಿಂತು ತಿಂಗಳು ಗಟ್ಟಲೆಯಾದರೂ ಅವುಗಳನ್ನು ಸ್ವಚ್ಛ ಮಾಡುವವರೇ ಗತಿಯಿಲ್ಲವಾಗಿದೆ. ಇವುಗಳಲ್ಲಿ ಹುಳುಗಳು ಬಂದು ಮಲೇರಿಯಾ ಕ್ರಿಮಿಗಳು ಉತ್ಪನ್ನವಾಗಿ ಈ ಮೊಹಲ್ಲಾದಲ್ಲೆಲ್ಲಾ ಜನಗಳು ಮಲೇರಿಯಾ ವಗೈರೆ ರೋಗಗಳಿಂದ ಬಹಳ ತೊಂದರೆಗಳನ್ನು ಅನುಭವಿಸುತ್ತಿದ್ದಾರೆ. ಇಂಥಹ ದುರ್ಗಂಧದಿಂದಲೂ, ಹುಳುಗಳಿಂದಲೂ ಮತ್ತು ಇತರ ಹಿಂಸೆಯಿಂದಲೂ ಇರುವ ಈ ಸಿಟಿಯ ವಾಸಕ್ಕಿಂತ ಹಳ್ಳಿಗಾಡಿನ ವಾಸವೇ ಸುಖವಾಗಿ ಕಾಣುತ್ತದೆ.

ಒಂದುಲಕ್ಷಕ್ಕಿಂತ ಹೆಚ್ಚಿನ ಜನ ಸಂಖ್ಯೆಯುಳ್ಳ ಮೈಸೂರು ಸಿಟಿಯ ಯೋಗಕ್ಷೇಮವನ್ನು ನೋಡುವ ಕೆಲಸಕ್ಕೆ ಲೋಕಾನುಭವವಿಲ್ಲದ, ಜವಾಬ್ದಾರಿಯ ಮತ್ತು ಸ್ವತಂತ್ರವಾಗಿ ಜೀವಿಸತಕ್ಕ ಜನಗಳ ಜವಾಬ್ದಾರಿಯನ್ನು ಅರಿಯದ ತರುಣರನ್ನು ನೇಮಿಸುವುದು ಬಹಳ ವಿಷಾದಕರವಾದ ಸಂಗತಿಯಾಗಿದೆ. ಸತ್ಯವಾದ ವಿಷಯವನ್ನು ವಿನಂತಿಮಾಡಿಕೊಂಡಿರುತ್ತೇವೆ. ಮೇಲ್ಕಂಡ ವಿಷಯಗಳೆಲ್ಲಾ ಸತ್ಯವಾಗಿಯೂ, ಮತ್ತು ಪ್ರತ್ಯಕ್ಷವಾಗಿಯೂ ಇರುವುವೆಂದು ರುಜುವಾತು ಕೊಡಲು ನಾವು ಸಿದ್ಧವಾಗಿರುತ್ತೇವೆ. ಸರ್ಕಾರದವರೂ, ಪೌರ ಸಭಾಸದಸ್ಯರೂ, ಸಂಯಾಗಿ ವಿಚಾರಮಾಡಿ ಜನಗಳಿಗೆ ಒದಗಿರುವ ಈ ತೊಂದರೆಗಳನ್ನು ನಿವಾರಣೆ ಮಾಡಿ ಬಡ ಪ್ರಜೆಗಳನ್ನು ಕಾಪಾಡುತ್ತಾರೆಂದು ನಂಬಿದ್ದೇವೆ. ಈ ವಿಷಯವಾಗಿ ತಪಶೀಲು ವಿವರಗಳನ್ನು ಮುಂದೆ ಪ್ರಕಟಿಸುತ್ತೇವೆ.

ಆರ್ ರಂಗಯ್ಯ,
ಟಿ ಯಸ್. ಸುಬ್ಬಣ್ಣ,
ಪ್ರಜಾಸೇವಕರು, ಕಿಲ್ಲೇ ಮೊಹಲ್ಲಾ,
ಮೈಸೂರು

ಶ್ರೀಮನ್ಮಹಾರಾಜರು.

THE MAHARAJA OF MYSORE photographed in London

ಲಂಡನ್ನಿನ "ಡೈಲಿ ಸ್ಕೆಚ್" ನಲ್ಲಿ ಪ್ರಕಟವಾಗಿರುವ ಛಾಯಾಚಿತ್ರವು.

ಅರಕಲಗೂಡು ವರ್ತಮಾನ.

(ನಮ್ಮ ಸ್ವಂತ ಬಾತ್ಮೀದಾರರಿಂದ)

20–8–36

3 4 ದಿನಗಳಿಂದ ಮಳೆ ಹಿಡಿದುಕೊಂಡು ಸೂರ್ಯನ ಬೆಳಕೇ ಇಲ್ಲವಾಗಿರುತ್ತದೆ. ಮಧ್ಯೆ ಮಧ್ಯೆ ಸೂರ್ಯನು ಕೊಂಚ ಕಾಣಿಸಿಕೊಳ್ಳುತ್ತಿದ್ದನು ತಿರುಗಿ ಮಳೆ ಶುರುವಾಗುತ್ತದೆ. ಹೀಗಿರುವುದರಿಂದ ಪ್ಲೇಗ್ ಬಾಧ್ಯವು ಹೆಚ್ಚುತ್ತದೆ. ಕೋಟೆ ಬ್ರಾಹ್ಮಣರ ಬೀದಿಯಲ್ಲಿ 2 3 ಮನೆಯಲ್ಲಿ ಇಲಿಬಿದ್ದು ಆ ಮನೆಯನ್ನು ಬಿಡುತ್ತಿದ್ದಾರೆ. ಪ್ರತಿಯೊಬ್ಬರೂ ಇನಾಕ್ಯುಲೇಷನ್ ಮಾಡಿಸಿ ಕೊಳ್ಳುತ್ತಿದ್ದಾರೆ. ಈ ಊರಿನ ಕೆರೆ 2 ಮೈಲಿ ಸುತ್ತಳತೆಯುಳ್ಳದ್ದಾಗಿದೆ. ಈ ಊರಿಗ ಇದೊಂದೇ ಕೆರೆ. ಈ ಕೆರೆಯಲ್ಲೆಲ್ಲಾ ತಾವರೆ ಹೊಂದು ಬೆಳೆದಿರುತ್ತದೆ. ಹಿಂದೆ ಇವುಗಳನ್ನು ತೆಗೆಸಲು ಯೋಚಿಸಿ ತೆಪ್ಪವನ್ನು ಇಟ್ಟಿದ್ದರು. ಮೊದಲಿದ್ದಂತೆ ಈಗ ಪೋಲೀಸರ ಕಾವಲಿಲ್ಲ. ಬಟ್ಟೆ ಒಗೆದು ಕೆರೆ ನೀರನ್ನು ಕೆಡಿಸುತ್ತಿದ್ದಾರೆ. ಬಾವಿಗಳಲ್ಲಿ ನೀರು ಇಲ್ಲ. ತಾಲ್ಲೂಕು ಕಛೇರಿ ಬಳಿ ತಗೆಸಿರುವ ಬೋರ್ ವೆಲ್ ಬಾವಿಯ ನೀರು ಬಹಳ ಉಪ್ಪಾಗಿರುತ್ತದೆ. ಅದನ್ನು ಕುಡಿಯುವುದಕ್ಕೆ ಆಗುವುದಿಲ್ಲ. ಜನಗಳು ವಿಧಿಯಿಲ್ಲದೆ ಕೆರೆಯ ಕೊಳೆತ ನೀರನ್ನೇ ಉಪಯೋಗಿಸುತ್ತಿದ್ದಾರೆ. ಇದರಿಂದ ಅನಾರೋಗ್ಯ ಉಂಟಾಗುತ್ತದೆ. ಆದ್ದರಿಂದ ಮುನಿಸಿಪಾಲಿಟಿಯವರು ಮೇಲ್ಕಂಡ ಕೆರೆಯ ಕಶ್ಮಲಗಳನ್ನು ತೆಗೆಸಲು ಏರ್ಪಡಿಸುವುದಲ್ಲದೆ ಬಟ್ಟೆ ಮುಂತಾದವುಗಳನ್ನು ಒಗೆಯುವುದನ್ನು ತಪ್ಪಿಸುವರೆಂದು ನಂಬಲಾಗಿದೆ.

ತಿರೆಯ ತಿಳಿವು.

ಲೇಖಕರು:—ಎಂ. ವಿ. ನಾರಾಯಣ ಮೂರ್ತಿ, ಮೈಸೂರು.

ಸೂರ್ಯ.

ನಾವು ಭೂಮಿಯಿಂದ ಸೂರ್ಯ ಚಂದ್ರರನ್ನು ನೋಡಿದರೆ ಒಂದೇ ಗಾತ್ರವಿರುವಂತೆ ತೋರುತ್ತದೆ. ಆದರೆ ನಿಜವಾಗಿಯೂ ಸೂರ್ಯನು ಚಂದ್ರನಿಗಿಂತ 60,000,000 ಪಾಲು ದೊಡ್ಡವನಾಗಿದ್ದಾನೆ. ಸೂರ್ಯನು ಭೂಮಿಗಿಂತ 1,280,000 ಪಾಲು ದೊಡ್ಡವನಾಗಿದ್ದಾನೆ. ಸೂರ್ಯನು ಭೂಮಿಗಿಂತ 320,000 ಪಾಲು ದೂರವುಳ್ಳವನಾಗಿದ್ದಾನೆ. ನಾವು ಒಂದು ದೂರದರ್ಶಿನಿಯಿಂದ ನೋಡಿದರೆ ಬರಿಯ ಕಣ್ಣಿಗೆ ಎಷ್ಟು ಶಾಂತನಾಗಿ ಸೂರ್ಯನು ಕಾಣುತ್ತಾನೋ ಅಷ್ಟು ಶಾಂತನಾಗಿ ನಿಜವಾಗಿಯೂ ಇಲ್ಲವೆಂದು ಗೊತ್ತಾಗುತ್ತದೆ. ಅವನು ಬೆಂಕಿಯನ್ನು ಕಾರುವ ಒಂದು ಉಷ್ಣವಾದ ಉರಿಯುವ ಗೋಳ.

ಸೂರ್ಯನ ಮೈ.

ಬೆಂಕಿಯ ತಾಪದಿಂದ ಉಳಿಸುವ ಅಂಗಿಗಳನ್ನು ತೊಟ್ಟು ನಾವು ಈಗ ಒಂದು ವಿಮಾನದಲ್ಲಿ ಕುಳಿತು ಸೂರ್ಯನಲ್ಲಿಗೆ ಹೋಗೋಣ! 93,000,000 ಮೈಲಿಯ ಅಂತರವನ್ನು ದಾಟಿದೊಡನೆ ಸೂರ್ಯನ ಹೊರಗಣ ಪ್ರದೇಶಕ್ಕೆ ಬರುತ್ತೇವೆ. ಈ ಪ್ರದೇಶವನ್ನು ಪರಿಧಿ ಎಂದು ಕರೆಯುತ್ತಾರೆ. (Corona) ಇದು ಕೋಟ್ಯಾಂತರ ಮೈಲುಗಳನ್ನು ಆವರಿಸಿದೆ. ನಾವು ಭೂಮಿಯಿಂದ ಈ ಪರಿಧಿಯನ್ನು ನೋಡಿದಾಗ ಇದನ್ನೂ ಸೂರ್ಯ ರಶ್ಮಿಯೆಂದೇ ತಿಳಿದಿದ್ದೆವು. ನಾವು ಇನ್ನು ಸ್ವಲ್ಪ ಮುಂದೆ ಹೋದರೆ ಒಂದು ಬೆಂಕಿಯ ಮಹಾ ಸಮುದ್ರವು ನಮ್ಮ ಕಣ್ಣಿಗೆ ಕಾಣಬರುತ್ತದೆ. ಈ ಸಮುದ್ರದ ಬೆಂಕಿಯ ಜ್ವಾಲೆಗಳು ಹಾರುತ್ತಿರುತ್ತವೆ. ಇವು ಒಂದು ಸಾರಿ ಹಾರಿದರೆ ಕೋಟ್ಯಂತರ ಮೈಲುಗಳ ದೂರ ನೆಗೆಯುತ್ತವೆ. ಕೆಲವು ಕಿಡಿಗಳು ನಿಮಿಷಕ್ಕೆ 60,000 ಮೈಲಿಯ ವೇಗದಲ್ಲಿ ಸಂಚರಿಸುತ್ತವೆ.

ಸೂರ್ಯನಲ್ಲಿ 5000 ಅಥವಾ 10,000 ಮೈಲುಗಳ ದಪ್ಪವಾದ ಜ್ವಾಲೆಗಳ ಮಂಡಲವೊಂದಿದೆ. ಇದು ವರ್ಣಮಂಡಲ (Chromo sphere)ವು. ಜಲಜನಕ (Hydrogen) ಮತ್ತು ಇತರ ವಾಯುಗಳಿಂದ ಉಂಟಾಗಿದ ಆಗ್ನೇಯದಿಂದ ಇದು ಬರಿಗಣ್ಣಿಗೆ ಕಾಣಿಸುವುದಿಲ್ಲ. ಏಕೆಂದರೆ ಸೂರ್ಯನ ಒಳಭಾಗದಿಂದ ಬರುವ ಜ್ವಾಲೆಯು ಇದನ್ನು ನಮ್ಮ ಕಣ್ಣಿಗೆ ಕಾಣದ ಹಾಗೆ ಮಾಡುತ್ತದೆ. ನಾವು ಈಗ ನಮ್ಮ ಮಾಯಾ ಕವಚಗಳನ್ನು ತೊಟ್ಟು ಸೂರ್ಯನ ತೀರ ಒಳಗಣ ಭಾಗಕ್ಕೆ ಹೋಗೋಣ. ವರ್ಣ ಮಂಡಲವಾದ ಮೇಲೆ ಮತ್ತೊಂದು ಉಷ್ಣವಾಯು ಮಂಡಲವು ಸಿಗುತ್ತದೆ. ಇದನ್ನು ಪ್ರಭಾ ಗೋಳವೆಂದು ಕರೆಯುತ್ತಾರೆ (Protosphere) ಇದು ಸೂರ್ಯನನ್ನು ಮುಚ್ಚಿಕೊಂಡಿರುವ ಒಂದು ಪ್ರಭಾ ಕವಚವೆಂದೇ ಹೇಳಬಹುದು. ಈ ಕವಚದ ಹೊರಗೆ 500-1000 ಮೈಲು ದಪ್ಪವಾಗಿ ಇರುವ ಜ್ವಾಲೆಗಳನ್ನು ಕಾರುವ ಇನ್ನೊಂದು ಪ್ರದೇಶವಿದೆ. ಇಲ್ಲಿಂದಲೇ ನಮ್ಮ ಭೂಮಿಗೂ ಚಂದ್ರನಿಗೂ ಇತರಗ್ರಹಗಳಿಗೂ ಬೆಳಕುಬರುತ್ತದೆ.

ಪ್ರಭಾ ಗೋಳದಲ್ಲಿ ಲೋಹ ಸಮುದ್ರವನ್ನು ನಾವು ಕಾಣಬಹುದು. ಎಂಥಾ ಗಟ್ಟಿಯಾದ ಲೋಹವಾದರೂ ಇಲ್ಲಿ ಕರಗಿ ಹೋಗುತ್ತದೆ. ಕೆಲವು ಸಾರಿ ಈ ಪ್ರಭಾ ಗೋಳದಲ್ಲಿ ಪ್ರಭಾ ಲೇಪಗಳು (Sun-spots) ಉಂಟಾಗುತ್ತವೆ. ಇವುಗಳಲ್ಲಿ ನಮ್ಮ ಭೂಮಿಯಂತಹ ಗೋಳವೇ ಮುಳುಗಬಹುದು. ಪ್ರೊ॥ ಯಂಗ್ ಎಂಬ ಪಂಡಿತನು 1871 ರಲ್ಲಿ ಈ ಪ್ರಭಾ ಗೋಳವನ್ನು ಪರಿಶೀಲಿಸಿದಾಗ ಅಲ್ಲಿಂದ ಒಂದು ಬೆಂಕಿಯ ನಾಲಗೆಯು ತಾಸಿಗೆ 43,000,000 ಮೈಲಿಯಂತೆ ಒಂದು ಲಕ್ಷ ಮೈಲು ಹಾರುತ್ತಿತ್ತಂತೆ. ಈ ರೀತಿಯ ಅನೇಕ ನಾಲಗೆಗಳು ಸೂರ್ಯನ ಪ್ರಭಾ ಗೋಳದಿಂದ ಹಾರುತ್ತಿರುತ್ತವೆ. ಗ್ರಹಣ ಕಾಲಗಳಲ್ಲಿ ಸೂರ್ಯನ ನಡುಭಾಗವು ಮಸುಕು ಮಸುಕಾಗಿ ಕಾಣುತ್ತದೆ. ಆಗ ನಮಗೆ ಸೂರ್ಯನ ಅಂಚು ಸ್ಪಷ್ಟವಾಗಿ ಕಾಣುತ್ತದೆ.

ಸೂರ್ಯನ ಬೆಳಕು.

ಸೂರ್ಯನು ನಮ್ಮ ಭೂಮಿಯಿಂದ 93,000,000 ಮೈಲಿ ದೂರದಲ್ಲಿದ್ದಾನೆ. ಆದರೂ ನೋಡಿ ನಮಗೆ ಎಷ್ಟು ಕಾವು ಮತ್ತು ಬೆಳಕು ಇರುತ್ತದೆ. ಅಂದಮೇಲೆ ಅವನೆಂಥಾ ದೊಡ್ಡ ಉರಿಯುವ ಗ್ರಹವಾಗಿರಬೇಕು? ಸೂರ್ಯನ ಬೆಳಕಿನಲ್ಲಿ ಆರೋಗ್ಯಕ್ಕೆ ಉಪಯೋಗವಾದ ಅಲ್ಟ್ರಾ ವಯಲೆಟ್ ರೇಸ್ (Ultra-Violet Rays) ಎಂಬ ಒಂದು ತೆರನ ರಶ್ಮಿಯಿರುತ್ತದೆ. ಆದುದರಿಂದ ಸೂರ್ಯನ ಬೆಳಕು ಆರೋಗ್ಯಕ್ಕೂ ಉತ್ತಮವಾದದ್ದು. ಸೂರ್ಯನ ಬೆಳಕಿಗೆ ಸಮಾನವಾದ, ಮಾನವ ನಿರ್ಮಿತವಾದ ಬೆಳಕೆಂದರೆ ಆರ್ಕ್ ದೀಪವು. ಆದರೆ ಸೂರ್ಯನ ಬೆಳಕು ಇದಕ್ಕಿಂತ 4 ಪಾಲು ಹೆಚ್ಚಿನದು.

ಸೂರ್ಯನ ಅಪಾರ ಶಕ್ತಿ

ಸೂರ್ಯನ ಶಕ್ತಿಯು ಅಪಾರವಾದದ್ದು. ನಮ್ಮ ಭೂಮಿಯಮೇಲೆ ಬೀಳುತ್ತಿರುವ ಶಕ್ತಿಯು ಗಡಕ್ಕೆ ೪ ಅಶ್ವಶಕ್ತಿಯಾಗುವುದು. ಸೂರ್ಯನಿಂದಲೇ ನಮಗೆ ಬೆಳೆ ಎಲ್ಲವೂ ಬರುತ್ತದೆ. ನಾವು ತಿನ್ನುವ ಆಹಾರವೂ ಅವನಿಂದಲೇ. ನಮ್ಮ ಭೂಮಿಯ ಮೇಲೆ ಬೀಳುವ ಶಕ್ತಿಯನ್ನು ಭೂಮಿಯ ಜನಸಂಖ್ಯೆಯಿಂದ ವಿಭಾಗಿಸಿದರೆ ಪ್ರತಿಯೊಬ್ಬನ ಪಾಲಿಗೆ ಅವನ ಜೀವಮಾನದಲ್ಲಿ 160,000, ಅಶ್ವ ಶಕ್ತಿಯನ್ನು ಪಡೆಯುತ್ತದೆ. ಆದುದರಿಂದಲೇ ನಾವು ಸೂರ್ಯನನ್ನು ದೇವರೆಂದು ನಂಬಿದ್ದೇವೆ. ಸೂರ್ಯನ ಮೈಯ ಪ್ರತಿ ಚದರ ಗಜದಿಂದ 70,000 ದಷ್ಟು ಅಶ್ವಶಕ್ತಿ ಉತ್ಪತ್ತಿಯಾಗುತ್ತದೆ. ಅವನ ಹೊರ ಮೈಯ ಉಷ್ಣವು 12000° F ಇರುವುದು. (ಮನುಷ್ಯನ ಮೈಯ ಉಷ್ಣಾಂಶ 98.21) ಒಳಗಿನಿಂದ ಇದಕ್ಕಿಂತ ಎಷ್ಟು ಹೆಚ್ಚಿರಬೇಕು. ಸೂರ್ಯನಂತಿರುವ ಇನ್ನಿತರ ನಕ್ಷತ್ರಗಳು 70,000 ಡಿಗ್ರಿ F ನಷ್ಟು ಉಷ್ಣವಾಗಿವೆ. ಅಂತು, ಸೂರ್ಯನಾರಾಯಣನ ಶಕ್ತಿಯು ಅಪರಿಮಿತವಾದುದು.

ಮೈಸೂರಲ್ಲಿ ಕಾಂಗ್ರೆಸ್ಸಿನ ಆವಶ್ಯಕತೆ.

ಡಾ॥ ನಾ. ಸು. ಹರ್ಡೀಕರ.

ಈ ಅಂತರರಾಷ್ಟ್ರೀಯ ಯುಗದಲ್ಲಿ ಮಾನವ ಜಾತಿಯ ಉನ್ನತಿಗೆ ಮುಖ್ಯ ಸಾಧನಗಳಾದ ಪೂರ್ಣ ಸುಖಶಾಂತಿಗಳನ್ನು ಪಡೆಯಬೇಕೆಂಬ ಇಚ್ಛೆಯಿದ್ದರೆ ಅವುಗಳನ್ನು ಸಾಧಿಸುವ ಮಾರ್ಗದಲ್ಲಿ ಯಾವುದೆ ರಾಷ್ಟ್ರ ಅಥವಾ ಜನಾಂಗವು ಪ್ರಪಂಚದ ಇತರ ಭಾಗಗಳಿಂದ ಅಲಿಪ್ತವಾಗಿರಲು ಶಕ್ಯವಿಲ್ಲ. ವಿಜ್ಞಾನವು ತನ್ನ ಹೊಸ ಹೊಸ ಪ್ರಾಕೃತಿಕ ಶೋಧಗಳಿಂದ ಎಲ್ಲಾ ಜನಾಂಗಗಳನ್ನೂ ಹತ್ತಿರ ತರುತ್ತಿರುವುದು. ಅದು ಮಾನವರೆಲ್ಲರನ್ನೂ ಉನ್ನತಿಯ ಮಾರ್ಗವನ್ನು ಹಿಡಿಯುವ ಒಂದೇ ಕಾರ್ಯದಲ್ಲಿ ಒಟ್ಟುಗೂಡಿಸಿದೆ. ಪ್ರಪಂಚದ ಒಂದು ಮೂಲೆಯಲ್ಲಿನ ಜನಾಂಗದ ಸುಖದುಃಖಗಳು ಇನ್ನೊಂದು ಮೂಲೆಯಲ್ಲಿರುವ ಜನಾಂಗಕ್ಕೆ ಕೂಡ ತಾಕುವಂತೆ ಮಾಡಿದೆ. ತನ್ನ ದೇಶದ ಹೆಗ್ಗಳಿಕೆಯನ್ನೇ ಸಾಧಿಸುತ್ತಿರುವ ಒಂದು ರಾಷ್ಟ್ರದ ಕಾರ್ಯಗಳು ಇನ್ನೊಂದು ರಾಷ್ಟ್ರದವರನ್ನು ತಮ್ಮ ಹಕ್ಕು ಸ್ಥಾನ ಭದ್ರತೆಗಳನ್ನು ಕಾಪಾಡಿಕೊಳ್ಳಲು ಹೋರಾಡುವಂತೆ ಮಾಡುತ್ತವೆ. ಪ್ರತಿಯೊಂದು ಜನಾಂಗವೂ ಇತರ ಜನಾಂಗಗಳಿಗಿಂತ ಆಚಾರ ವಿಚಾರ ನಡೆನುಡಿಗಳಲ್ಲಿ ಎಷ್ಟೇ ಭೇದವಿರಲಿ ಒಟ್ಟು ಮಾನವ ಜಾತಿಯು ಒಂದೇ ಪಥವನ್ನು ಹಿಡಿಯತೊಡಗಿದೆ. ಬೇರೊಂದು ಜನಾಂಗವು ಹೊಂದಿದ ಫಲಾನುಭವಗಳನ್ನು ನೆನಪಿನಲ್ಲಿಟ್ಟುಕೊಳ್ಳದೆ ತನ್ನ ರಾಷ್ಟ್ರದ ತೊಡಕುಗಳನ್ನು ಸುಲಭವಾಗಿ ನಿವಾರಿಸಲು ಯಾವುದೇ ರಾಷ್ಟ್ರಕ್ಕೂ ಸಾಧ್ಯವಿಲ್ಲ.

ಹೀಗಿರುವಾಗ ಹಿಂದೂಸ್ಥಾನವು ಪ್ರಪಂಚದಿಂದ ಬೇರೆ ಒತ್ತಟ್ಟಿಗೆ ಉಳಿಯುವುದು ಹೇಗೆ ಸಾಧ್ಯ? ತನ್ನ ಉದ್ಧಾರಕ್ಕೆ ಹೋರಾಡುವ ಸಮಯದಲ್ಲಿ ಇತರ ಭಾಗಗಳು ಪಡೆದ ಅನುಭವಗಳನ್ನು ತಾನು ತನ್ನ ಮನಸ್ಸಿನಲ್ಲಿಡಬೇಕಾಗುವುದು. ಭರತಖಂಡವು ತನ್ನ ಪ್ರಕೃತಿಗಳನ್ನು ಬಿಡಿಸುತ್ತ ಮುಂದಿನ ತನ್ನ ಜೀವನವನ್ನು ಸರಿಪಡಿಸತೊಡಗಿರುವಾಗ ಹಿಂದೂಸ್ಥಾನದ ಒಂದು ಭಾಗವಾದ ಮೈಸೂರು ಸಂಸ್ಥಾನವು ಇದೇ, ದೇಶದ ರಾಜಕೀಯ ವಾತಾವರಣದಿಂದ ಹೇಗೆ ಬೇರೆಯಾಗಿರಬಲ್ಲದು? ಹಿಂದೆ ಇಲ್ಲದಿದ್ದರೂ ಈಗ-ಅಧುನಿಕ ಯುಗದಲ್ಲಿ ಮಾನವ ಜಾತಿಯೇ ಒಂದಾಗುತ್ತಿರುವಾಗ ವೃದ್ಧಿಯನ್ನು ಭಿನ್ನ ಭಿನ್ನ ಮಾಡಿರುವ ರಾಜಕೀಯ ವಿಭಾಗಗಳು ಇರುವುದು ಅಸ್ವಾಭಾವಿಕ. ಆದುದರಿಂದ ಈ ರಾಜಕೀಯ ಎಲ್ಲೆಗಳು ಜನತೆಯ ಭಾವನೆಯಿಂದ ಅಳಿಸಿ ಹೋಗಬೇಕಾದುದು ಅತ್ಯವಶ್ಯಕ. ಭಾರತವರ್ಷದ ಯಾವುದೇ ಮೂಲೆಯಲ್ಲಿ ಮೂಡಿದ ಜ್ವಾಲೆಯು ಮೈಸೂರನ್ನು ಮುಟ್ಟದೇ ಇರಲಾರದು. ಬ್ರಿಟಿಷ್ ಹಿಂದುಸ್ಥಾನದಲ್ಲಿ ಹಬ್ಬಿದ ಕಾಡ್ಗಿಚ್ಚು ತನ್ನ

ಬ್ಯಾಂಕಿನಲ್ಲಿ ಭಪಾವಣೆ.

ಬೆಂಗಳೂರು ಇಂಡಿಯನ್ ಮರ್ಚೆಂಟ್ಸ್ ಬ್ಯಾಂಕಿನಲ್ಲಿ ಸುಮಾರು 40 ಸಾವಿರ ರೂಪಾಯಿಗಳ ಭಪಾವಣೆಯು ನಡೆದಿರುವುದಾಗಿ ತಿಳಿದುಬಂದಿದೆ. ಬ್ಯಾಂಕಿನ ಮ್ಯಾನೇಜಿಂಗ್ ಡೈರೆಕ್ಟರಾಗಿದ್ದರೆಂದು ಹೇಳಲ್ಪಟ್ಟಿರುವ ಮಿ॥ ಪಿ ಘಾಕೂರ್ ರವರನ್ನು ದಸ್ತಗಿರಿ ಮಾಡಲಾಗಿದೆ. ಮದ್ರಾಸಿನ ಬಾಲಕೃಷ್ಣ ನಾಯ್ಡು ರವರು ಸಲ್ಲಿಸಿದ 40000 ರೂ. ಗಳ ಬೆಲೆಯುಳ್ಳ 16 ಹುಂಡಿಗಳ ಬಗ್ಗೆ ಪಾರ್ಟಿಗಳಿಗೆ ಹಣವನ್ನು ಸಲ್ಲಿಸದೆ ಸದರಿ ಹಣವನ್ನು ಪುಸ್ತಕಗಳಲ್ಲಿ ಲೆಕ್ಕಕ್ಕೆ ಸೇರಿಸಿ ದುರುಪಯೋಗ ಪಡಿಸಿಕೊಂಡರೆಂಬುದೇ ಅವರ ಮೇಲೆ ಬ್ಯಾಂಕಿನ ಮ್ಯಾನೇಜಿಂಗ್ ಡೈರೆಕ್ಟರಾದ ಡಾ॥ ಎಸ್. ವೆಂಕಟಯ್ಯಂಗಾರ್ ರು ಪೋಲೀಸರಿಗೆ ಕೊಟ್ಟ ಫಿರ್ಯಾದಿನ ಸಾರಾಂಶ. ಇದೇ ಮಾಹೆ 16 ನೇ ತಾರೀಖು ಸಿಟಿ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಮಿ॥ ಘಾಕೂರ್ ರವರ ಪರ ವಕಾಲತ್ತು ವಹಿಸಿರುವ ಶ್ರೀ॥ ಎಸ್. ವೆಂಕಟಪತಯ್ಯನವರು ಹಾಜರಿದ್ದು ಮ್ಯಾಜಿಸ್ಟ್ರೇಟರ ಮುಂದೆ ಜಾಮೀನು ಅರ್ಜಿ ಹಾಕಿ ವಾದಿಸಿದರು. ಮಿ॥ ಘಾಕೂರ್ ರವರನ್ನು [illegible]ನ್ನೂ ಜಾಮೀನಿನಮೇಲೆ ಬಿಟ್ಟಿಲ್ಲ.

ಉದಾರ ದಾನ.

ಮೈಸೂರಿನ ವರ್ತಕರಾದ ಶ್ರೀ ಬಿ. [illegible] ರಾಜಾರಾಂ ಮೊದಲಿಯಾರ್ ರವರು ತಮ್ಮ ತಾಯಿ ಶ್ರೀಮತಿ ಬೀನಾಂಬಾಳ್ ರವರ ಸ್ಮಾರಕವಾಗಿ ನಜರ್ ಬಾದ್ ನಲ್ಲಿ ಒಂದು ಗರ್ಭಿಣಿ ಶಿಶು ಸಂರಕ್ಷಣಾ ಕೇಂದ್ರವನ್ನು ಕಟ್ಟಿಸುವುದಕ್ಕಾಗಿ 15 ಸಾವಿರ ರೂಗಳನ್ನು ಉದಾರವಾಗಿ ದಾನ ಮಾಡಿರುತ್ತಾರೆ.

ಲ್ಲಿಯೇ ಇರುವ ಒಂದು ಸಂಸ್ಥಾನವನ್ನು [illegible]ರೂ ಸುಟ್ಟು ಬೂದಿಮಾಡದಿರಲಾರ[illegible] ಇದನ್ನು ನಾವು ಎಷ್ಟು ಬೇಗ ತಿ[illegible] ಅಷ್ಟು ಉತ್ತಮ. ಮೈಸೂರು ಹಿಂ[illegible]ಸ್ಥಾನದ ಒಂದು ಅಂಗ. ದೇಶದ ಇ[illegible] ಭಾಗಗಳ ಬಿಸಿ ಹೋಗುಗಳು ಮೈಸ[illegible]ಗೂ ತಟ್ಟುತ್ತವೆ. ಆದುದರಿಂದ [illegible]ದಲ್ಲಿ ಕಾಂಗ್ರೆಸಿನ ಮುಖಾಂತರವಾಗ[illegible]ರುವ ಪ್ರಚಂಡ ಆಂದೋಳನವನ್ನು [illegible]ಸೂರು ಅಸಡ್ಡೆ ಮಾಡಬಾರದು. [illegible] ಹಿಂದೂಸ್ಥಾನದ ಜೀವಾಳದಂತಿರುವ [illegible]ಗ್ರೆಸ್ಸಿನ ಸಂಸ್ಥೆಗಳಲ್ಲಿ ಮೈಸೂರು ಮೊ[illegible]ನಂತ ಅಧಿಮಾನವಿಡಬೇಕು ಮತ್ತು [illegible]ಗ್ರೆಸ್ಸಿನ ಕಾರ್ಯಕ್ರಮಗಳಲ್ಲಿ ಉ[illegible]ದಿಂದ ಭಾಗವಹಿಸಬೇಕು. ದೇಶಕ್ಕೆ [illegible] ನಿಕಾರಕವಾದ ಕೂಪ ಮಂಡೂಕ[illegible]ವನ್ನು ತ್ಯಜಿಸಿ ಪರಸ್ಪರ ಸಂಬಂಧ[illegible] ಬೆಳಸಬೇಕು. ತನ್ನಿಂದ ಆರಿಸ[illegible] ಪ್ರತಿನಿಧಿಗಳ ಮೂಲಕ ಕಾಂಗ್ರೆಸ್ಸಿನ[illegible] ರ್ಯಗಳಲ್ಲಿ ಮನಸ್ಸಿಟ್ಟು ಕೆಲಸ [illegible]ದಾಗ ಮಾತ್ರ ದೇಶದ ಉಳಿದ ಭ[illegible]ಲ್ಲಿ ರಾಷ್ಟ್ರದ ಏಳಿಗೆಗಾಗಿ ದುಡಿಯುತ್ತಿ[illegible] ಕಾರ್ಯಕರ್ತರ ಜೊತೆಗೆ ಮೈಸೂರು [illegible] ಕೊಟ್ಟು ತನ್ನ ಗೌರವವನ್ನೂ [illegible]ವನ್ನೂ ಕಾಪಾಡಿಕೊಳ್ಳಬಲ್ಲದು.

ಮಲಮಾಸ ಅಥವಾ ಅಧಿಕಮಾಸ.

(ಒಬ್ಬ ಪಂಡಿತೋತ್ತಮರಿಂದ)

ಯಾವ ತಿಂಗಳಲ್ಲಿ ಸಂಕ್ರಾಂತಿ ಇಲ್ಲ ವೋ ಅಥವಾ ಎರಡು ಸಂಕ್ರಾಂತಿಗಳು ಬ ರುವವೋ ಅವಕ್ಕೆ ಮಲಮಾಸವೆಂತಲೂ, ಆ ಸಂವತ್ಸರದಲ್ಲಿ ಹದಿಮೂರು ತಿಂಗಳು ಗಳಾಗುವುದೆಂತಲೂ "ಕಾಠಕಗೃಹ್ಯದಲ್ಲಿ" ಹೇಳಿದೆ. ಸಂಕ್ರಾಂತಿಯಿಲ್ಲದ ಚಾಂದ್ರ ಮಾಸವು ಮಲಮಾಸವೆಂದು "ಬ್ರಹ್ಮಸಿ ದ್ಧಾಂತದಲ್ಲಿ" ನಿರೂಪಿಸಲ್ಪಟ್ಟಿದೆ. ಕಾ ಲಾಧಿಕ್ಯಕ್ಕೆ ಮಲವೆಂದು ಹೆಸರು ಕಾಲವಿ ದರು 'ಅಧಿಕಮಾಸಕ್ಕೆ ಮಲಮಾಸವೆನ್ನು ವರು' ಎಂದು "ಗೃಹ್ಯಪರಿಶಿಷ್ಟದಲ್ಲಿ" ಉಕ್ತವಾಗಿದೆ.

ಸಂವತ್ಸರವು ಆಯುರ್ವೇದಾದಿಗಳಲ್ಲಿ ಚಾಂದ್ರಮಾನ, ಸಾವನಮಾನ, ಸೌರಮಾ ನ, ನಕ್ಷತ್ರಮಾನ, ಬಾರ್ಹಸ್ಪತ್ಯಮಾನ ವೆಂಬ ಐದು ವಿಧಗಳಾಗಿದ್ದರೂ ನಕ್ಷತ್ರ ಮಾನ, ಬಾರ್ಹಸ್ಪತ್ಯ ಸಂವತ್ಸರಗಳು ಜ್ಯೋತಿಶ್ಶಾಸ್ತ್ರೋಪಯೋಗಿಗಳು ಧರ್ಮ ಶಾಸ್ತ್ರೋಪಯೋಗಿಗಳಲ್ಲವೆಂದು ಉಳಿದ ಮೂರನ್ನೇ 'ಬ್ರಹ್ಮಸಿದ್ಧಾಂತದಲ್ಲಿ' ಹೇಳಿದೆ. ಚೈತ್ರ ಶುಕ್ಲ ಪಾಡ್ಯವನ್ನು ಪ್ರಾರಂಭಿಸಿ ಫಾಲ್ಗುಣ ಬಹುಳ ಅಮಾವಾಸ್ಯೆವರೆಗಾಗುವ ಸಂವ ತ್ಸರವು 'ಚಾಂದ್ರಮಾನ' ವೆಂತಲೂ, ಮೇ ಷಮಾಸವನ್ನಾರಂಭಿಸಿ ಮೀನಮಾಸ ದವರೆಗೆ ಅಥವಾ ಕೆಲವರ ಅಭಿಪ್ರಾಯಾನು ಸಾರವಾಗಿ ಮೀನವನ್ನು ಆರಂಭಿಸಿ ಮೇಷ ದಪೂರ್ತಿ "ಸೌರಮಾನ" ಸಂವತ್ಸ ರವೆಂತಲೂ, ("ಮೀನಮೇಷಯೋಃ ಮೇ ಷವೃಷಭಯೋರ್ವಾ ವಸಂತಃ" ಎಂತ ಸಾಯಣರ ಉಕ್ತಿ) ಮುನ್ನೂರ ಅ ರವತ್ತು ಅಹೋರಾತ್ರಿಗಳಿಂದ ಕೂಡಿದ ದಾಗಿ ಸಾವನಮಾನ ವರ್ಷವೆಂತಲೂ ವಿದ್ವಾಂಸರು' ಎಂಬ ಗ್ರಂಥದಲ್ಲಿ ಹೇ

ಳಿದೆ. ಈ ಹೇಳಲ್ಪಟ್ಟ ಮೂರು ವಿಧ ಸಂವ ತ್ಸರಗಳಲ್ಲಿ ಸೌರಮಾನದಿಂದ ಒಂದು ವ ರ್ಷವಾಗ ಸಾವನಮಾನದಿಂದ ಆರು ದಿನವಾದರೂ ಸಾವನಮಾನಕ್ಕಿಂತಲೂ ಚಾಂದ್ರಮಾನಕ್ಕೆ ಐದುದಿನ ಕಡಿಮೆ ಎಂ ದರೆ ವರ್ಷವೊಂದಕ್ಕೆ ಸೌರಮಾನಕ್ಕಿಂತ ಚಾಂದ್ರಮಾನಕ್ಕೆ ಹನ್ನೊಂದು ದಿನಗಳು ಕಡಿಮೆಯಾಗುತ್ತದಾಗಿ ಸೌರಮಾನದಿಂದ ವರ್ಷ ಎಂಟು ತಿಂಗಳು ಅಥವಾ ಮೂವತ್ತು ತಿಂಗಳು ಹದಿನಾರುದಿನ ದಿನಗಳಾಗುವಾಗ ಚಾಂದ್ರಮಾ ನಕ್ಕೆ ಮೂವತ್ತು ದಿನಗಳು ಕಡಿಮೆ ಯಾಗುವ ಚಾಂದ್ರಮಾನದಂತೆ ಸಂ ವತ್ಸರ ಪೂರ್ಣಮಾಡಲು ಈ ಅಧಿ ಕಮಾಸ ಬರುವುದು. "...ಸ್ಮೃತಿಧರ್ಮೋ ..." ಎಂಬ ಗ್ರಂಥದಲ್ಲೂ, ಸಿದ್ಧಾಂತದ ಲ್ಲಿಯೂ ತಿಥಿವೃದ್ಧಿಯಿಂದ ಬರುವ ಮಾಸಕ್ಕೆ ನಪುಂಸಕ ಮಾಸವೆಂದು ಶಾಸ್ತ್ರದಲ್ಲಿ ಹೇಳಿದೆ. ಮಾಘಮಾ ಸವನ್ನಾರಂಭಿಸಿ ಕ್ರಮವಾಗಿ ಹನ್ನೆರಡು ಮಾಸಗಳಿಗೆ ವರುಣ, ಸೂರ್ಯ, ಭಾನು, ತ ಪನ, ಇಂದ್ರ, ರವಿ, ಗಭಸ್ತಿ, ಅರ್ಯಮ, ಹಿ ರಣ್ಯರೇತ, ದಿವಾಕರ, ಮಿತ್ರ, ವಿಷ್ಣು ಎಂಬ ದ್ವಾದಶಾದಿತ್ಯರು ಉದಯಿಸುವರೆಂ ತಲೂ, ಅಧಿಕಮಾಸ ಅಥವಾ ಮಲಮಾ ಸದಲ್ಲಿ ಸೂರ್ಯರಹಿತವಾಗಿ ಕೇವಲ ರವಿಯ ಮಂಡಲವೇ ತಪಿಸುತ್ತಾಗಿ ಅದು ಪಾಪ ಕರ ಮತ್ತು ನಪುಂಸಕವೆಂತಲೂ ಹೇಳಿದೆ. ಸಂವತ್ಸರಗಳ ಮಧ್ಯದಲ್ಲಿ ಬರುವ ಈ ಮ ಲಮಾಸ ಅಥವಾ ಪಾಪವು ಯಜ್ಞಫಲಗ ಳನ್ನು ನಾಶಮಾಡುವ ನೈಋತೀಯರೇ ಮೊದಲಾದ ರಾಕ್ಷಸರಿಂದಲೂ ವಿನಾಶಕ ರಾದ ಯಾತುಧಾನ (ಪಿಶಾಚಿ) ಗಳಿಂದ ಲೂ ಆಕ್ರಮಿಸಲ್ಪಟ್ಟಿರುತ್ತಾಗಿ ಈ ಸೂರ್ಯ ಸಂಕ್ರಾಂತಿ ರಹಿತವೂ ನಿಂದ್ಯವೂ ಆದ ಮಲಮಾಸದಲ್ಲಿ ಸತ್ಕರ್ಮಗಳನ್ನು (ಬಿಡ ಬೇಕು) ಮಾಡಬಾರದು ಎಂದು ಶತಾತ ಪರೆಂಬ ಮಹರ್ಷಿಗಳು ಹೇಳಿರುವರು.

"ದ್ವಾದಶ ಮಾಸಾಃ ಸಂವತ್ಸರಃ" ಎಂ ಬ ಶ್ರುತಿಯಂತೆ ಹನ್ನೆರಡು ತಿಂಗಳುಗಳಿದ್ದು ಒಂದು ವರ್ಷವೆಂದಿರುವಾಗ ಹದಿಮೂರು ತಿಂಗಳಿರುವುದು ಹೇಗೆ? ಎಂದರೆ ಯಾವ ಎರಡು ತಿಂಗಳುಗಳ ಮಧ್ಯದಲ್ಲಿ ಮಲ ಮಾಸ ಬರುತ್ತದೆಯೋ ಅದರಲ್ಲಿ ಮುಂದಿನ ತಿಂಗಳಲ್ಲಿ ಆ ಅಧಿಕಮಾಸದ ಅಂತರ್ಭಾ ವವು—ಹಾಗೆ 60 ದಿನಗಳಿಂದ ಕೂಡಿದ ಮಲಿನ ಶುದ್ಧವೆಂಬ ಎರಡು ಭಾಗವುಳ್ಳ ಒಂದು ತಿಂಗಳಾಗುತ್ತದೆಯಾದ್ದರಿಂದ ಅ ದಕ್ಕೆ ಬೇರೆ ತಿಂಗಳೆಂಬ ಶಂಕೆಗೆ ಅವಕಾಶ ವಿಲ್ಲವೆಂತಲೂ, ಪೂರ್ವಾರ್ಧ ಎಂದರೆ ಮೊದಲನೆಯ ಮೂವತ್ತು ದಿನಗಳನ್ನು ಬಿಟ್ಟು ಉತ್ತರಾರ್ಧ ಮೂವತ್ತು ದಿನಗಳಲ್ಲಿ ಪ್ರಶಸ್ತ ಕಾರ್ಯಗಳನ್ನು ಮಾಡಬೇಕೆಂತಲೂ ಬಾದರಾಯಣರಿಂದ ಹೇಳಿದೆಯೆಂದು ಜ್ಯೋತಿಃಪಿತಾಮಹರು ನಿರೂಪಿಸಿದ್ದಾರೆ.

ಅಧಿಕಮಾಸದಲ್ಲಿ ಕರ್ತವ್ಯ.

ಅಧಿಕಮಾಸದಲ್ಲಿ, ಅಗ್ನಿಹೋತ್ರ ಮೊದ ಲಾದ ನಿತ್ಯಕರ್ಮಗಳನ್ನೂ, ಸೋದಕುಂಭ ಮುಂತಾದ ನೈಮಿತ್ತಿಕಗಳನ್ನೂ ಮಾಡಬ ಹುದು, ಎಂದು ಬೃಹಸ್ಪತಿಗಳ ಅಭಿಪ್ರಾ ಯ. ಸಪಿಂಡಾಂತವಾದ ದ್ವಾದಶಾಹದ ಕ ರ್ಮವನ್ನು ಮಾಡಬಹುದೆಂತಲೂ, ಸೀ ಮಂತ, ಪುಂಸವನ, ಶ್ರಾದ್ಧ, ಜಾತಕರ್ಮಗ ಳನ್ನೂ, ರೋಗಶಾಂತಿ, ಕ್ಷಾಂತವ್ರತಗಳ ನ್ನು, ನಿಮಿತ್ತದ ಪ್ರಾಯಶ್ಚಿತ್ತವನ್ನು ಆ ಚರಿಸಬಹುದೆಂದು ಕಾಲಾದರ್ಶದಲ್ಲಿ ನಿರೂ ಪಿಸಿದೆ. ನಿಮಿತ್ತದ ಲೋಪಪ್ರಾಯಶ್ಚಿತ್ತ ವೆಂದರೆ ಸಂಧ್ಯಾವಂದನೆಯೇ ಮೊದಲಾದ ಅತಿ ಕ್ರಮ ದೋಷಪ್ರಾಯಶ್ಚಿತ್ತವೆಂದು ಅರ್ಥ. ಅಬ್ದಿಕ ಉದಕುಂಭ, ಮನ್ವಾದಿ ಮಹಾಲಯಗಳಲ್ಲಿ ಶ್ರಾದ್ಧ, ದರ್ಶದಲ್ಲಿ ಮತ್ತು ನಿತ್ಯದಲ್ಲಿ ಆಚರಿಸುವ ಶ್ರಾದ್ಧ, ಊನಾದಿಮಾಸಿಕ, ಮಲಮಾಸವಲ್ಲದ ಇ ತರ ತಿಂಗಳಲ್ಲಿ ಮೃತರಾದವರ ಶ್ರಾದ್ಧ, ಊನಾದಿಮಾಸಿಕ, ಮಲಮಾಸದಲ್ಲಿದೆ ಇ ತರ ತಿಂಗಳಲ್ಲಿ ಮೃತರಾದವರ ಶ್ರಾದ್ಧ, ಅಬ್ದಿಕಶ್ರಾದ್ಧ, ಪೂರ್ವಪೃಷ್ಟತೀರ್ಥಗಳಲ್ಲಿ, ಯುಗಾದಿ, ಮನ್ವಾದಿಗಳಲ್ಲಿ ಕೊಡುವ ದೈನಂದಿನ ದಾನ, ಎಂದರೆ ತಿಲ, ಭೂ, ಗೋ, ಹಿರಣ್ಯ ದಾನಗಳು, ಸಂಧ್ಯೋಪಾಸ ನಾಕ್ರಿಯೆಗಳು, ಪೂರ್ವಹೋಮ, ಆಗ್ರಾ ಯಣ, ಅಗ್ನಿಕಾರ್ಯ, ಇಷ್ಟಿ, ಪರ್ವಗಳಲ್ಲಿ ನಿತ್ಯಾಗ್ನಿಹೋತ್ರ, ಹೋಮ, ದೇವತೆಗಳ, ಅತಿಥಿಗಳ ಪೂಜೆ, ಸ್ನಾನ, ಅಪಕ್ವಾನ್ನಭ ಕ್ಷ್ಯತ್ಯಾಗ, ನಿತ್ಯತರ್ಪಣ, ಮತ್ತು ನೈ ಮಿತ್ತಿಕ ತರ್ಪಣಗಳನ್ನು ಉಭಯಮಾಸ ಗಳಲ್ಲೂ ಎಂದರೆ 60 ದಿನಗಳಲ್ಲೂ ಮಾ ಡಬಹುದು.

ಅಧಿಕಮಾಸದಲ್ಲಿ ವರ್ಜ್ಯ.

ನಿತ್ಯವಲ್ಲದ ಪ್ರತಿನಿತ್ಯ ಮಾಡುವ ದಾ ನವಲ್ಲದ ಅನಿಮಿತ್ತ ಮಹಾದಾನಾದಿಗಳು, ಅಗ್ನ್ಯಾಧಾನ, ಅಧ್ವರ, ಯಜ್ಞ, ಅಪೂರ್ವ ತೀರ್ಥಯಾತ್ರೆ, ಕ್ಷೇತ್ರಗಳ, ದೇವರ, ವಿಗ್ರ ಹಗಳ ದರ್ಶನ, ದೇವರ ಉದ್ಯಾನವ, ಭಾವಿ, ಕೆರೆ, ಕುಂಟೆಗಳ ಪ್ರತಿಷ್ಠೆ, ಉಪನಯನ, ವಿವಾಹ, ಅಗ್ನಿಸಂಸ್ಕಾರ, ಕಾಮ್ಯವೃ ಷೋತ್ಸರ್ಗ, ರಾಜ್ಯಾಭಿಷೇಕ ಪ್ರಥಮ ಚೂಡಾಕರ್ಮ, ಅನ್ನಪ್ರಾಶನವನ್ನು ಆ ರಂಭಿಸಿ ಗೃಹಪ್ರವೇಶದವರೆಗಿನ ಶುಭಕಾ ರ್ಯಗಳು, ಮಂಗಳಸ್ನಾನ, ಅವಭೃತ, ನಾಮಕರಣ, ರಥೋತ್ಸವ ಮುಂತಾದ ದೇ ವಮಹೋತ್ಸವ, ಪಾಪಪರಿಹಾರಾರ್ಥವಾ ಗಿ, ಇಷ್ಟಸಿದ್ಧಿಗಾಗಿ ಜ್ಯೋತಿಷ್ಟೋಮವೇ ಮುಂತಾದ ಕಾಮ್ಯಕರ್ಮ ಪ್ರಾರಂಭ ಪರಿಸಮಾಪ್ತಿಗಳು ಮೂರುವರ್ಷಕ್ಕೊಮ್ಮೆ ಅಥವಾ ಆರುವರ್ಷಕ್ಕೊಂದುಸಲ ಮಾಡು ವ ಸರ್ವ ಪ್ರಾಯಶ್ಚಿತ್ತಾದಿಗಳು, ಇವೆಲ್ಲವ ನ್ನೂ ಮಲಮಾಸದಲ್ಲಿ ವರ್ಜಿಸಬೇಕು, ಎಂದು ಅದೇ ಕಾಲಾದರ್ಶದಲ್ಲಿ ಹೇಳಿದೆ.

ಜೀವಾವಧಿ ಶಿಕ್ಷೆ.

ಕೆಲವು ದಿನಗಳ ಹಿಂದೆ ಅಣಾಬಿ ಎಂ ಬಾತೆಯು ದಾಸರಹಳ್ಳಿ, ಎಂಬ ಗ್ರಾಮದಲ್ಲಿ ತನ್ನ ಶಿಶುವನ್ನು ಕೊಂದಳೆಂಬುದು ರುಜು ವಾತಾದ್ದರಿಂದ ತುಮಕೂರಿನ ಸೆಷನ್ಸ್ ಜ ಡ್ಜರು ಅವಳಿಗೆ ಜೀವಾವಧಿ ಶಿಕ್ಷೆಯನ್ನು ವಿ ಧಿಸಿದ್ದರು. ಕಳೆದವಾರ 17 ನೇ ತಾರೀಖಿ ನಲ್ಲಿ ಚೀಫ್ ಕೋರ್ಟಿನಲ್ಲಿ ಪ್ರಧಾನ ನ್ಯಾ ಯಾಧೀಶರೂ ಮತ್ತು ಶ್ರೀ ಶಂಕರ ನಾರಾ ಯಣರಾಯರೂ ಅರ್ಜಿ ಅಪರಾಧಿನಿಯ ಅ ಪೀಲನ್ನು ಪರಾಂಬರಿಸಿ ಸೆಷನ್ಸ್ ಜಡ್ಜರು ವಿಧಿಸಿದ್ದ ಜೀವಾವಧಿ ಶಿಕ್ಷೆಯನ್ನು ಖಾಯಂ ಮಾಡಿದರು. ಈ ಶಿಕ್ಷೆಯನ್ನು ಕಡಿಮೆಮಾ ಡಬೇಕೆಂದು ಹೈಕೋರ್ಟಿನಿಂದ ಸರ್ಕಾರ ಕ್ಕೆ ಶಿಫಾರಸು ಹೋಗಿರುತ್ತದೆ.

ವಿಶ್ವವಿದ್ಯಾಲಯವು ಮುಚ್ಚಲ್ಪಡುವುದು.

ಆಲಿಘರ್ ವಿಶ್ವವಿದ್ಯಾಲಯದ ವಿದ್ಯಾ ರ್ಥಿಗಳು ಮುಷ್ಕರವನ್ನು ಹಿಡಿದಿರುವುದರಿಂ ದಲೂ, ಮುಷ್ಕರವು ವಿಷಮಾವಸ್ಥೆಯಲ್ಲಿರು ವುದರಿಂದಲೂ ವಿಶ್ವವಿದ್ಯಾಲಯವನ್ನು 1 ತಿಂಗಳು ಕಾಲ ಮುಚ್ಚಲ್ಪಡುವುದಾಗಿ ವೈ ಸ್ ಛಾನ್ಸಲರಾದ ಡಾ|| ಜಿಯಾಯುದ್ದೀ ನ್ ರವರು ತಿಳಿಸಿರುತ್ತಾರೆ.

ಪಂಜರದ ಗಿಳಿ.

ಸೆರೆಯೇಕೆ ಗೈದಿಹರು ಕಂದ?
ಮುದ್ದು ಗಿಳಿ ನಾನೆಂದು
ನನ್ನ ದೂಷೀ ನನಗೆ ಮತ್ತು

ಕೂಗುತಿಹೆ ನೀನೇಕೆ ಕಂದ?
ಸಂಗಡಿಗರ ಸೇರಬೇಕೆಂದು
ಅಕ್ಕರೆಯ ನಲ್ಮಾತ ಕೇಳಬೇಕೆಂದು.

ಸಕ್ಕರೆಯ ಹಾಲನ್ನ ಒಲ್ಲೆ ಏಕೆ ಕಂದ!
ಚಕ್ಕೆಯಿಂ ಅಡವಿ ಫಲವನು ತಿನ್ನ
ಬೇಕೆಂದು
ಮರದಿಂದ ಜೋತಿರುವ ದೋರ್ಹಣ್ಣ
ಕುಕ್ಕಬೇಕೆಂದು.

ಬಿಸಿನೀರ ಸ್ನಾನ ಹಿತವಲ್ಲವೇಕೆ ಕಂದ?
ಕೊಳದೆಡೆಯ ಅಲೆಯಿಂದ ಪೊರಮಡುವ
ತುಂತುರಿನ ಸ್ನಾನ ಬೇಕೆಂದು
ಸ್ವೇಚ್ಛೆಯಲಿ ಹರಿಯುತಿಹ ತಿಳಿನೀರ
ಸೀಯಬೇಕೆಂದು

ಪಂಜರದ ಎಡಬಿಡದೆ ಕುಕ್ಕುತಿಹೆ
ಏಕೆ ಕಂದ?
ಸೆರೆಯಿಂದ ಬಿಡಿರೆನ್ನ ಸಾರುವೆನು
ಸ್ವಾತಂತ್ರ್ಯ ಭೂಮಿಗೆಂದು
ದೇವಲೋಕದ ಸುಖದ ಮನವಾರೆ
ಹೀರಬೇಕೆಂದು.

ರೆಕ್ಕೆಗಳ ಬಿತ್ತರಿಪೆ ಏಕೆ ಕಂದ?
ಭಾಸ್ಕರನ ಹೊಂಗಿರಣ ರಾಶಿಯಲಿ
ಮೀಯಬೇಕೆಂದು
ಮನದಾಸೆ ತಣಿವನ್ನ ಮೋಡಗಳ
ಮೀರುತ್ತ ಹಾರಬೇಕೆಂದು
ರವಿ ಮುಳುಗೆ ನಾಲೆಟ್ಟು ಹಾರುತ್ತ ಬಾನ
ಬೆಳಗಬೇಕೆಂದು.

ಮುಮುಡಿ ಮೂಲೆಯಲೇಕೆ ಕುಳಿ
ತಿಹೆಯೊ ಕಂದ?
ಸ್ವಾತಂತ್ರ್ಯ ಬಯಕೆಯಲಿ ತಪಸ್ಸೈಯು
ತಿಹೆನು
ಸೆರೆಯಿಟ್ಟ ಮಾನವನ ಶಪಿಸುತಿಹೆನು
ಆಸ್ವಾದಿಪಿಸ್ಕುದು ದೇವನಂ
ಮೊರೆಯಿಟ್ಟು ಕೂಗುವೆನು

ಕೆ ಎನ್. ಕೃಷ್ಣಮೂರ್ತಿ ರಾವ್.

ಬಾಲಕನಿಗೆ ಬೀಡಿ ಮಾರಿದ್ದಕ್ಕೆ ಶಿಕ್ಷೆ.

ಮೈಸೂರು ಸಿಟಿ ಮ್ಯಾಜಿಸ್ಟ್ರೇಟರು ವೆಂ ಕಟರಾಮಯ್ಯನೆಂಬುವನಿಗೆ 3 ರೂ ದಂ ಡವನ್ನೂ ತಪ್ಪಿದಲ್ಲಿ 3 ದಿನಗಳ ಸಜಾವ ನ್ನೂ ವಿಧಿಸಿರುತ್ತಾರೆ. ಅವನು 12 ವರ್ಷ ವಯಸ್ಸಿನೊಳಗಿರುವ ಹುಡುಗನಿಗೆ ಬೀಡಿ ಯನ್ನು ಮಾರಿದನೆಂಬುದೇ ಅಪಾದನೆ.

ಶೃಂಗೇರಿ ಜಗದ್ಗುರುಗಳು.

ಶ್ರಿಂಗೇರಿ ಮಠದ ಚಿಕ್ಕಸ್ವಾಮಿಗಳವರು ಶಾಸ್ತ್ರಾಭ್ಯಾಸಮಾಡಲು ಬೆಂಗಳೂರಿನ ಶಂ ಕರಮಠಕ್ಕೆ ದಯಮಾಡಿಸಿರುತ್ತಾರೆ.

ಜಯಚಾಮರಾಜ ಒಡೆಯರವರು

ರಾಜಕುಮಾರ ಜಯಚಾಮರಾಜ ಒಡೆ ಯರವರು ಕಳೆದವಾರ ಮದರಾಸಿಗೆ ದಯ ಮಾಡಿಸಿ ವಾಪಸು ಬಂದಿರುವರೆಂದು ಗೊತ್ತಾಗಿದೆ.

ಮಿಷನರಿಗಳ ಆಂದೋಲನ.

ಲೇಖಕ—ಎಸ್ ಚಾರ್ಲಿಸ್ ವೆಸ್ಲಿ

ಯಾವುದೇ ಒಂದು ಸಮಾಜದ ಕಾರ್ಯಗಳಲ್ಲಿ ನಡೆಯಬೇಕಾದರೂ ಆ ಕಾರ್ಯಕ್ಕೆ ಪತ್ರಿಕಾ ಸಂಪಾದಕರು ಮಾರ್ಗದರ್ಶಕರೂ ನಾಯಕರೂ ಆಗಿದ್ದಾರೆಂಬುದು ಸ್ವತಸ್ಸಿದ್ಧಪ್ರಮಾಣವಾಗಿದೆ. ನಾಡಿನ ಪೇಟೆಯನ್ನು ಕೇರಳದ ರಾಷ್ಟ್ರೀಯ ಪತ್ರಿಕೆಗಳು ನಾಡಿನ ಜನಾಂಗದ ತಿರಸ್ಕಾರಕ್ಕೆ ತಕ್ಕವುಗಳಾಗಿವೆ. ಭಾರತ ಧರ್ಮವನ್ನು ರಕ್ಷಿಸುವ ಸೇವೆಯನ್ನೂ ಪರಮಪವಿತ್ರವೆಂದೂ ಆದ್ಯಕರ್ತವ್ಯವೆಂದೂ ತಿಳಿದಿರುವ ನಮ್ಮ ನಾಡಿನ ಸಂಪಾದಕರಲ್ಲಿ ನನ್ನ ವಿಜ್ಞಾಪನೆ ಏನೆಂದರೆ ಕ್ರೈಸ್ತ ಮಿಷನರಿಗಳ ಕಾರ್ಯಕ್ರಮಗಳು ಎಲ್ಲರಂಗಕ್ಕೆ ವಿಮರ್ಶಾತ್ಮಕವಾಗಿ ಬರುವದಿಲ್ಲವೋ ಅಂದಿನ ಪರಿಯಂತರವೂ ಜನರ ಜಾಗ್ರತೆಯಾಗುವುದಿಲ್ಲ. ಕ್ರೈಸ್ತ ಮಿಷನರಿಗಳು ನಮ್ಮ ನಾಡಿನಲ್ಲಿ ಅರಣ್ಯದಲ್ಲಿ ಮೃಗವಿಹಾರಿಗಳಾದ ಸಿಂಹಗಳಂತೆ ಬಡಜನರನ್ನು ಮತಾಂತರಕ್ಕಾಗಿ ಬೇಟೆಯಾಡುತ್ತಿರುವರು. ಮತಾಂತರದ ಬೇಟೆಗೆ ವಿವಿಧ ಸಾಧನಗಳಿಂದ ವಿದ್ಯಾ, ವೈದ್ಯ, ಕೈಗಾರಿಕೆಯ ಮತ್ತು ಪ್ರಕಟನಾ ಪ್ರಚಾರಗಳನ್ನು ಏರ್ಪಡಿಸಿರುವರು. ಯಾವುದೇ ಒಂದು ಸಮುದಾಯವು ಒಂದರೆ ನಮ್ಮ ನಾಡಿನ ಎಂದರೆ ಮುಖ್ಯವಾಗಿ ಸ್ವದೇಶೀಯರಾದ ಸಂಪಾದಕರು ಏಕವಾಗಿ ತಮ್ಮ ಸಹಕಾರವನ್ನು ಪ್ರದರ್ಶಿಸುವಂತೆ ಇಂದೇ ತಮ್ಮಲ್ಲಿ ನಾನು ಬೇಡುತ್ತೇನೆ. ಮಾನ್ಯರಾದ ಸಂಪಾದಕರೇ, ತಮ್ಮ ಶರೀರಾತ್ಮಗಳು ರಾಷ್ಟ್ರಸೇವೆಯಲ್ಲಿ ಧಾರೆಯೆರೆಯಲ್ಪಟ್ಟಿವೆ. ತಮ್ಮ ಲೇಖನಗಳು ಸಂಸ್ಥಾನಾಧಿಪರ ರಾಜದಂಡದಂತಿವೆ.

ರಾಷ್ಟ್ರೀಯ ಜೀವನಾಂಗದಲ್ಲಿ ಮಿಷನರಿ ವಿರೋಧ ಚಳುವಳಿಯು ಅತ್ಯಾವಶ್ಯಕವಾಗಿದೆ. ಮಿಷನರಿಗಳಿಂದ ಜಾತೀಯರ ಧಾರ್ಮಿಕ ಬಂಧನಗಳು ಪ್ರತಿದಿನವೂ ನೂರಾರು ನಡೆಯುತ್ತವೆ. ಈ ನರಕವು ದೊರೆತಂತಲ್ಲ. ಮಿಷನರಿಗಳ ಜಾಲಗಳನ್ನು ಜನಸಾಮಾನ್ಯಕ್ಕೆ ಒತ್ತಿ ತೋರಿಸುತ್ತಿರಬೇಕು ಮತ್ತು ಮಿಷನರಿಗಳಿಗೆ ಯಾವುದೇ ಒಂದು ರೀತಿಯಲ್ಲಾದರೂ ಉತ್ತೇಜನವನ್ನು ಕೊಡಬಾರದು. ಮತ ಪ್ರಚಾರಕರಾಗಿಯೂ, ಭಾರತ ಧರ್ಮನಿಂದಕರಾಗಿಯೂ, ಸ್ವದೇಶ ಸ್ವಧರ್ಮಾಭಿಮಾನಿಗಳನ್ನು ನಿರ್ಮೂಲನಮಾಡುವ ಸಂಕಲ್ಪವುಳ್ಳವರಾಗಿಯೂ ಇರುವ ಮಿಷನರಿ ಸಂಸ್ಥೆಗಳವರಿಗೆ ಪ್ರೋತ್ಸಾಹಕೊಡುವುದು ಅಥವಾ ಕೊಡಿಸುವುದು ಸ್ವಪಕ್ಷಕ್ಕೆ ಆತ್ಮಸಂಹಾರಮಾಡಿಕೊಂಡಂತಾಗುವುದು. ಬಲವಾದ ಮಾರ್ಗಗಳನ್ನು ಸಂರಕ್ಷಿಸುವ ಆಲೋಚನೆಯಂತೆ ಸಿದ್ಧರಾಗಿರಬೇಕು. ಭಾರತ ಧರ್ಮವನ್ನು ಸಂರಕ್ಷಣೆಮಾಡುವ ಧರ್ಮಾಭಿಮಾನಿಗಳೂ ರಾಷ್ಟ್ರೀಯ ಭಾವನಾಯುಕ್ತ ದೇಶಾಭಿಮಾನಿಗಳೂ, ನಮ್ಮ ನಾಡಿನ ಸಂಸ್ಕೃತರಾದ ಏಕಸ್ಫೂರ್ತರ ಮತ್ತು ಆಸ್ತಿಕರ ಹಿತಚಿಂತನೆಯುಳ್ಳ ಮುಂದಾಳು ಸುಪ್ರಸಿದ್ಧರಾದ ವರ್ತಕರೂ, ವಕೀಲರೂ ಶ್ರೇಷ್ಠ ವಿದ್ವನ್ಮಣಿಗಳೇ ಮೊದಲಾದವರು ಮಿಷನರಿಗಳ ಚಳುವಳಿಯನ್ನು ಕಡಿಮೆ ಮಾಡಲು ತಮ್ಮಿಂದಾದ ಸರ್ವ ಪ್ರಯತ್ನಗಳನ್ನೂ ಎಡೆಬಿಡದ ಮಾಡಲು ಆಗಿಂದಾಗ್ಗೆ ತಕ್ಕ ಕಾರ್ಯಕ್ರಮಗಳನ್ನು ನಿರ್ಧರಿಸುವುದಲ್ಲದೆ ಯಾರು ಮಿಷನರಿಗಳ ವಿಚಾರದಲ್ಲಿ ಕೇವಲ ಅನುಭವ ಹೊಂದಿ ಪ್ರಕಟನಾದ್ವಾರ ಎಚ್ಚರಿಸುತ್ತಾರೋ ಅಂತಹವರಿಗೆ ನಾನಾವಿಧದಲ್ಲಿ ಬೆಂಬಲವನ್ನೂ, ಪ್ರೇರಣೆಯನ್ನೂ ಒದಗಿಸಿಕೊಡುವಂತೆ ವಿಜ್ಞಾಪನೆ.

ಲಕ್ಷಾಂತರ ಜನರನ್ನು ಮಿಷನರಿಗಳು ತಮ್ಮ ಮಾಯಾ ಜಾಲಕ್ಕೆ ಸಿಲುಕಿಸಿ ನರಕದ ಮಡುವಿನಂತೆ ನರಳಿಸುತ್ತಲಿದ್ದಾರೆ. ಈ ಮಾಯೋಪಜಾಲವು ಸದಾ ಸಿದ್ಧವಾಗಿರುತ್ತದೆ. ವರ್ಷಒಂದಕ್ಕೆ ಸಾವಿರಾರುಮಂದಿ ಆ ಕೂಪ ನರಕಕ್ಕೆ ಬೀಳುತ್ತಲಿದ್ದಾರೆ. ಮಿಷನರಿ ಹಿಡಿತಕ್ಕೆ ಸಿಕ್ಕಿ ನರಳುತ್ತಿರುವ ದೇಶೀಯ ಕ್ರೈಸ್ತರನ್ನು ಬಿಡುಗಡೆಮಾಡುವುದಕ್ಕೂ ಈ ನರಕಕ್ಕೆ ಬೀಳಲು ಇರುತ್ತಿರುವ ಭಾರತೀಯ ಬಾಂಧವರನ್ನು ಎಚ್ಚರಿಸುವುದಕ್ಕೂ ಕಂಕಣಬದ್ಧರಾಗಿರುವವರಿಗೆ ಸಾಕಾದಷ್ಟು ಬೆಂಬಲವನ್ನು ಕೊಡಬೇಕೆಂದು ವಿಜ್ಞಾಪನೆ.

(1) ಮಿಷನರಿ ಕಾರ್ಯಕ್ರಮಗಳನ್ನು ಜನಸಾಮಾನ್ಯಕ್ಕೆ ತಿಳಿಸುವ ವಿಮರ್ಶಕರಿಗೂ ಲೇಖಕರಿಗೂ ತಾವು ಪ್ರೋತ್ಸಾಹ ಕೊಡಬೇಕು.

(2) ಮಿಷನರಿಗಳು ಹಿಂದೂ ಜನಾಂಗದಲ್ಲಿ ಉಂಟುಮಾಡುತ್ತಿರುವ ಕ್ರಾಂತಿಗಳಿಗೆ ಸಂಬಂಧಿಸಿದ ವಿಷಯಗಳನ್ನು ವಿಮರ್ಶಿಸುವ ಪ್ರಸಿದ್ಧ ಲೇಖನಗಳಿಗೆ ಆಗಿಂದಾಗ್ಗೆ ಅವಕಾಶವನ್ನು ಕಲ್ಪಿಸಿಕೊಡಬೇಕು.

(3) ಮಿಷನರಿಗಳು ಆಗಿಂದಾಗ್ಗೆ ನಮ್ಮ ಜನಾಂಗದಲ್ಲಿ ನಡಿಸುತ್ತಿರುವ ವಿರುದ್ಧಾಭಿಪ್ರಾಯಗಳನ್ನು ನಿರೋಧಿಸುವುದಕ್ಕೂ ಮತಾಂತರದ ಹಾನಿಯನ್ನು ಜನಾಂಗದ ಮನಸ್ಸಿನಮೇಲೆ ಪರಿಣಾಮಗೊಳಿಸುವಂತೆಯೂ ಆಗಿಂದಾಗ್ಗೆ ಬರಹಗಳ ಮೂಲಕ ವಿಮರ್ಶಿಸುವುದೂ ಮತ್ತು ಮಿಷನರಿಗಳ ಕಾರ್ಯಕ್ರಮಗಳನ್ನು ವಿರೋಧಿಸುವ ಮಂಡಲಿಗಳಿಗೆ ಬೆಂಬಲ ಕೊಡುವುದು.

(1) ರಾಷ್ಟ್ರೀಯ ಹಿತಚಿಂತನೆಯಿಂದ ದೇಶಸೇವೆಯೇ ಈಶಸೇವೆಯೆಂದು ನಂಬಿರುವ ನಮ್ಮ ಕನ್ನಡನಾಡಿನ ಪತ್ರಿಕಾ ಸಂಪಾದಕರು ಈ ಮಹಾ ಕಾರ್ಯದಲ್ಲಿ ಸಹಕರಿಸಿ ಕೆಲಸಮಾಡಿ ಕೀರ್ತಿಸಂಪಾದಿಸುವಂತೆ ಈ ಮೂಲಕ ವಿಜ್ಞಾಪಿಸುತ್ತೇನೆ.

ಆಚಾರ ಮತ್ತು ಆರೋಗ್ಯ.

ವೇ|| ಬ್ರ|| ಚೀಮನಹಳ್ಳಿ ರಘುನಾಥಾಚಾರ್ಯರಿಂದ

ಕಣ್ಣಿಗೆ ಕಾಣುವ ಲಕ್ಷೋಪಲಕ್ಷ ಪ್ರಾಣಿ ಶರೀರಗಳಲ್ಲಿ ಇಹಲೋಕದ ಅಭ್ಯುದಯಕ್ಕೂ ಪರಲೋಕದ (ಮೋಕ್ಷ) ಶ್ರೇಯಸ್ಸಿಗೂ ಶ್ರೇಷ್ಠವಾದ ಮುಖ್ಯಸಾಧನವು ಮಾನವ ಶರೀರ ಲಾಭವೆಂಬುದು ಸಿದ್ಧವಾದ ವಿಷಯವು. ಈ ವಿಷಯದಲ್ಲಿ ಶ್ರುತಿಗಳೂ, ಸ್ಮೃತಿಗಳೂ ಪುರಾಣ ವಾಕ್ಯಗಳೂ ಆಧಾರವಾಗಿವೆ. ಪುರುಷ ಶಬ್ದವಾಚ್ಯವಾದ ಮಾನವ ಶರೀರಕ್ಕೇ ಸರ್ವಪುರುಷಾರ್ಥಸಾಧನತ್ವದಿಂದ ಸರ್ವೋತ್ತಮತ್ವವು ಹೇಳಲ್ಪಟ್ಟಿದೆ. ಈ ಮನುಷ್ಯ ಶರೀರವು ಪೂರ್ವಜನ್ಮಗಳ ಕರ್ಮಾಚರಣೆಯಿಂದ ಸಂತುಷ್ಟನಾದ ಜಗತ್ತಿನ ಸೃಷ್ಟಿಕರ್ತನಿಂದ ಕೊಡಲ್ಪಟ್ಟು ಕ್ಷಣಭಂಗುರದಂತಿದ್ದರೂ, ವಿಚಕ್ಷಣರು ಧರ್ಮಾರ್ಥಕಾಮಮೋಕ್ಷಗಳೆಂಬ ಚತುರ್ವಿಧ ಪುರುಷಾರ್ಥಸಾಧನೆಯನ್ನು ಈ ದೇಹದಿಂದ ಸಾಧಿಸುವರು. ಸತ್ಕೀರ್ತಿ, ಪರೋಪಕಾರ ಮೊದಲಾದ ಕಾರ್ಯಸಮೂಹಗಳನ್ನೂ ಗಳಿಸುತ್ತಾರೆ. ಪ್ರಾಚೀನ ಶುಭಕರ್ಮಗಳಿಂದ ದೇವಾದಿ ಶರೀರಗಳಲ್ಲೂ ಜನಿಸುವರು. ಇಂಥಾ ಉತ್ತಮ ದೇಹವು ದೊರೆತಿರುವಾಗ ದೇಶ, ಕಾಲ, ಜಾತಿ ಮೊದಲಾದುವನ್ನು ಅನುಸರಿಸಿ ದೇಹರಕ್ಷಣೆಯನ್ನು ಅತ್ಯಾವಶ್ಯಕವಾಗಿ ಮಾಡಬೇಕು. ಶರೀರವು ಧರ್ಮಾರ್ಥ ಕಾಮ ಮೋಕ್ಷ ಲಾಭಕ್ಕೆ ಮುಖ್ಯ ಸಾಧನವಾದ್ದರಿಂದಲೂ ರೋಗಾದ್ಯುಪದ್ರವಗಳಿಲ್ಲದಂತೆ ಆಹಾರ ಪಾಲನೆಯೂ, ಮಂಗಳ ಕಾರ್ಯಸಾಧನೆಗೆ ಮುಖ್ಯವಾದ್ದರಿಂದ ಇತರ ಸರ್ವ ಕಾರ್ಯಗಳನ್ನಾದರೂ ವರ್ಜಿಸಿ ದೇಹವನ್ನು ಅತ್ಯಾವಶ್ಯಕವಾಗಿ ಕಾಪಾಡಬೇಕಾದದ್ದು ಮೊದಲನೆಯ ಕರ್ತವ್ಯವು.

ಶರೀರ ರಕ್ಷಣೆಯೂ ಅದರಿಂದ ಸಾಧ್ಯವಾಗಬಹುದಾದ ವ್ಯವಹಾರ ಸಮೂಹವೂ, ಪುರುಷ ಪ್ರಯತ್ನ ಸಾಧ್ಯವಾದದ್ದೇ ಅಥವಾ ದೈವಾಯತ್ತವಾದುದೇ? ಎಂದು ಶಂಕೆ ಬರಬಹುದು. ಪುರುಷಪ್ರಯತ್ನದಿಂದ ಅದೃಷ್ಟವೂ, ತದನುಗುಣವಾದ ಪ್ರಯತ್ನವೂ, ಆಶಾಧೀನ ಫಲವೂ, ಲಭಿಸುವುದೆಂದು ತಿಳಿದು, ದೈವಾಯತ್ತವೆಂದು ಸುಮ್ಮನಿರದೆ, ಭಗವಂತನಿಂದ ದತ್ತವಾದ ದೇಹೇಂದ್ರಿಯಾದಿಗಳ ಸಾಧನ ಸಂಪತ್ತನ್ನು ಅನುಸರಿಸಿ ಪುರುಷಕಾರ್ಯ ನಡಿಸಿ ಪರಮಾತ್ಮನ ಅನುಗ್ರಹದಿಂದ, ಯಥಾಯೋಗ್ಯವಾಗಿ ಫಲಭಾಗಿಯಾಗತಕ್ಕದ್ದು. ಹಾಗಿಲ್ಲವಾದರೆ, ರೋಗಾದ್ಯುಪದ್ರವಗಳು ಪ್ರಾಪ್ತವಾಯಿತೆಂದರೆ — ತಚ್ಛಾಂತಿರೌಷಧೈರ್ದಾನೈಃ ಜಪಹೋಮಸುರಾರ್ಚನೈಃ ‘ ರೋಗಪರಿಹಾರವಾಗಲು ಔಷಧ, ದಾನ, ಜಪ, ಹೋಮ, ದೇವಪೂಜೆಗಳಿಂದ ಪ್ರಯತ್ನಿಸಬೇಕು. ದೈವಾಯತ್ತವೆಂದು ಕುಳಿತರೆ ಋಷಿವಾಕ್ಯಗಳಿಗೆ ನಿರರ್ಥಕತೆಯನ್ನು ತಿಳಿದಂತೆಯೇ.

ಯಥಾಮಯಾಂಗೇ ಸಮುಪೇಕ್ಷಿತೋಽಸ್ಯ ನಶಕ್ಯತೇ ರೂಢಪದಶ್ಚಿಕಿತ್ಸಿತುಂ ||

ಜನರು ದೇಹದಲ್ಲಿರುವ ರೋಗವನ್ನು ಉಪೇಕ್ಷಿಸಿದರೆ (ರೂಢವಾಗಿ) ಬೇರೂರಿದ ಉಪದ್ರವವನ್ನು ಚಿಕಿತ್ಸೆಯಿಂದ ಗುಣಪಡಿಸಲು ಶಕ್ಯವಲ್ಲವೆಂಬ ಪುರಾಣಾದಿಗಳ ವಾಕ್ಯಗಳೂ ನಿರರ್ಥಕವಾಗುವುವು.

ವಿಷ, ಅಗ್ನಿ, ದುಷ್ಟಪ್ರಾಣಿಗಳಿಂದ (ಹಲ್ಲಿನಿಂದ) ಕಚ್ಚಿಸಿಕೊಳ್ಳುವುದು, ಶಸ್ತ್ರದ (ಕತ್ತಿ ಮೊದಲಾದುಗಳ) ಹೊಡೆತ, ಬೆಟ್ಟ, ಒಟ್ಟಿ ಮೊದಲಾದ ಉನ್ನತ ಪ್ರದೇಶಗಳಿಂದ ಉರುಳುವುದು, ನೀರಿನಲ್ಲಿ ಬಿದ್ದು ಮುಳುಗುವುದು ಮುಂತಾದ ವಿಪತ್ತುಗಳಿಂದ ಉದಾಸೀನ ಮಾಡಿದರೆ ಕ್ಷಣದಲ್ಲಿ ಪ್ರಾಣಹೋಗುವುದು, ಚಿಕಿತ್ಸೆಗಳಿಂದ ಆಪತ್ತು ಪರಿಹಾರವಾಗುವುದು ಪ್ರತ್ಯಕ್ಷವಾಗಿ ಅನುಭವದಲ್ಲಿರುವುದರಿಂದ ಪುರುಷಕಾರ ದೈವಗಳೆರಡೂ ಸಾಧನವು. ಅತಿ ಭಾರವನ್ನು ಹೊರುವವನ ದೇಹ ಬಗ್ಗಿರುವುದನ್ನು ಚಿಕಿತ್ಸೆಗಳಿಂದ ಸರಿಪಡಿಸುವರು. ದೈವಿಕವಾಗಿ ಜನ್ಮಾಂತರ ಕರ್ಮಾನುಗುಣವಾಗಿ ವಕ್ರ ದೇಹವುಳ್ಳವನಿಗೆ ಚಿಕಿತ್ಸೆಯಿಂದ ಸರಿಪಡಿಸಲು ಸಾಧ್ಯವೆ? ಕಾಲಮೃತ್ಯುವು ದೈವಾಯತ್ತವಾದರೂ, ಅಕಾಲಮೃತ್ಯುವಿನಿಂದ ಸಕಾಲದಲ್ಲಿ ಚಿಕಿತ್ಸಾದಿಗಳನ್ನು ಪಡೆದು ದೈವಾನುಗ್ರಹದಿಂದ ಅಪಮೃತ್ಯು ನಾಶಮಾಡಿ ಶರೀರ ರಕ್ಷಣೆ ಮಾಡುವುದು ಆವಶ್ಯಕವು.

“ಕೊಚ್ಚೆಯನ್ನು ತುಳಿದು ತೊಳೆದುಕೊಳ್ಳುವುದಕ್ಕಿಂತಲೂ ಪಂಕಸಂಪರ್ಕವಿಲ್ಲದಿರುವುದು ಶ್ರೇಷ್ಠ” ಎಂಬಂತೆ ಪಥ್ಯಾಪಥ್ಯಗಳ ವಿಚಾರವಿಲ್ಲದೆ ಸ್ವೇಚ್ಛೆಯಿಂದ ಆಹಾರವಿಹಾರಗಳನ್ನು ಮಾಡಿ ಉಪದ್ರವ ಭಯದಿಂದ ವೈದ್ಯ ಮತ್ತು ರಸಾಯನಗಳ ಸೇವನೆಯಿಂದ ಶರೀರಸಂರಕ್ಷಣೆ ಮಾಡುವುದಕ್ಕಿಂತಲೂ ಮೊದಲೇ ಸದ್ವರ್ತನೆ, ಸದಾಚಾರಗಳಿಂದ ಆರೋಗ್ಯವಾಗಿ ಶರೀರ ಸ್ವಾಸ್ಥ್ಯದಿಂದಿರುವುದು ಉತ್ತಮವಲ್ಲವೆ?’

ಸ್ವಾಸ್ಥ್ಯ ಅಥವಾ ಆರೋಗ್ಯದ ಲಕ್ಷಣವನ್ನೂ ಅದಕ್ಕೆ ಅನುಕೂಲವಾದ ಸಾಧನವನ್ನೂ ವಿಚಾರಮಾಡಿ ತಿಳಿದು ಆಚರಣೆ ಮಾಡುವುದು ಆವಶ್ಯಕವು.

ದಿವಾನರ ಸಂಚಾರ

ಇಜಾರ್ಜ್ ದಿವಾನರಾದ ಶ್ರೀ ಎಸ್. ಪಿ. ರಾಜಗೋಪಾಲಾಚಾರ್ಯರು ಮುಂದಿನ ತಿಂಗಳು ೯ ನೇ ತಾರೀಖಿನಿಂದ ಒಂದುವಾರ ಶಿವಮೊಗ್ಗ, ಹಾಸನ ಮತ್ತು ಕಡೂರು ಡಿಸ್ಟ್ರಿಕ್ಟುಗಳಲ್ಲಿ ಸಂಚಾರ ಮಾಡುವರು. ಮೇಲ್ಕಂಡ ಟೂರ್ ಹಾಕಿರುವ ಹಿನ್ನೆಲೆ ದೀಪದ ... ಘೋತ್ಸವ ನಡೆಸುವರ

ಅನೇಕ ಮರ್ಮ ವಿದ್ಯಗಳಿಂದೊಡಗೂಡಿದ

ಚಿಂತಾರತ್ನ

ಪಲ್ಲಿಪಾತಕ ಫಲ, ಕೈಗಾರಿಕೆಯ ವಿಷಯ, ಇಂದ್ರಜಾಲ ಮಹೇಂದ್ರಜಾಲ, ಯಕ್ಷಿಣಿ ಮೊದಲಾದ ವಿದ್ಯಗಳು ಇರುತ್ತವೆ.

ಒಂದೊಂದು ವಿಷಯಕ್ಕೆ ವಿಷ್ಟು ಬೆಲೆ ಕೊಟ್ಟರೂ ಸಾಲದು.

೧ ಸಬಕಾರವನ್ನು ತಯಾರಿಸುವ ರೀತಿ ೨ ಮೇಣಬತ್ತಿ ತಯಾರಿಸುವದು ೩ ಕಾಸ್ಟಿಕ್ ಸೋಡಾ ತಯಾರಿಸುವದು ೪. ಬಿಸ್ಕ್ಯುಟ ತಯಾರಿಸುವದು ೫ ದಶಾಂಗ ತಯಾರಮಾಡುವದು ೬ ಪೆಪ್ಪರಮೆಂಟ ಮಾಡುವದು ೭ ಮೊಸರ ಪೆಟ್ಟಿ ಮಾಡುವದು ೮ ಭಂಗಾರ ಮಾಡುವದು ೯ ಬೆಳ್ಳಿ ಬಂಗಾರ ಮಾಡುವದು ೧೦ ಜರ್ಮನ್ ಸಿಲ್ವರ ಧಾತು ಮಾಡುವದು ೧೧ ಬೆಂಕಿಕಡ್ಡಿ ತಯಾರ ಮಾಡುವದು ೧೨ ಕಗದಿನಪಾಟಿ ತಯಾರ ಮಾಡುವದು ೧೩ ಕುಂಕುಮವನ್ನು ತಯಾರಿಸುವದು ೧೪ ಹಸಿ ಕುಂಕುಮ ತಯಾರಿಸುವದು ೧೫ ದೀಸರಿ ಕೆಡದಂತೆ ಮಾಡುವದು ೧೬ ಬುಕ್ಕಿಟ್ಟು ಮಾಡುವದು ೧೭ ಕಸರಿ ಯಾವಾಗಲೂ ನೀರಾಗಿರುವಂತೆ ಮಾಡುವದು ೧೮ ಅಷ್ಟಗಂಧ ಸಾಮಗ್ರಿ ೧೯ ಭರ್ಮ ತಯಾರ ಮಾಡುವದು ೨೦ ಕಬ್ಬಿಣಕ್ಕೆ ಲೋಹಗಳಿಗೆ [illegible] ಮಾಡುವದು ೨೧ ಕಾಗದವನ್ನು ಮಾಡುವದು ೨೨ ಮೆಂಥೇಪತ್ರ ತಯಾರಿಸುವದು ೨೩ ಕನ್ನಡಿಯಮೇಲೆ ಬರೆಯುವದು ೨೪ ದಂತಪುಡಿ ಮಾಡುವದು ೨೫ ರಕ್ತಶುದ್ಧಿ, ಔಷಧ ೨೬ ಕಸ್ತೂರಿಮಾತ್ರೆ ಮಾಡುವದು ೨೭ ಬಾಲಾಮೃತ ಮಾಡುವದು ೨೮ ಷರಬತ್ತು ಮಾಡುವದು ೨೯. [illegible]ದ ಗುಳಿಗೆ ಮಾಡುವುದು ೩೦ ಬೂಟ ಪಾಲೀಸ ಮಾಡುವದು ೩೧. ಬಂಗಾರ, ಅಂಗಡಿ ಮೊದಲಾದವುಗಳಿಗೆ ಗೆದ್ದಲಿ ಹತ್ತದಂತೆ ಮಾಡುವದು ೩೨ ಹುರುಕು ಕಜ್ಜಿ ಮುಲಾಮು ೩೩ ನಾಸೀಪುಡಿ ಮಾಡುವದು ೩೪ ಮನೆ, ಅಂಗಡಿಗಳಲ್ಲಿ ಇಲಿ, ಹೆಗ್ಗಣ ಮೊದಲಾದವುಗಳು ಇರದಂತೆ ಮಾಡುವದು ೩೫ [illegible] ತಂಬಾಕ ಮಾಡುವದು ೩೬ ಬದನೆ, ಕುಂಬಳ ಮುಂತಾದ ಕಾಯಿ [illegible] ಮಾವು, ಲಿಂಬು ಮುಂತಾದ ಹಣ್ಣುಗಳಿಗೂ ಬೀಜವಿಲ್ಲದೆ ದೊಡ್ಡವಾಗುವದು ೩೭ [illegible]ಟಿ ತಯಾರಿಸುವದು ೩೮ ಬಿಳೀ ಹೂಗಳು ಕೆಂಪಾಗುವಂತೆ ಗಿಡಗಳ ತಯಾರಿಸುವದು ೩೯. ಕೆಂಪು ಹೂಗಳು ಬೆಳ್ಳಗಾಗುವಂತೆ ಗಿಡಗಳನ್ನು ತಯಾರಿಸುವದು ೪೦ ಇಸ್ಪೇಟಿನ ಚಮತ್ಕಾರ ೪೧ ಮುಖನೋಡಿಕೊಳ್ಳುವ ಕನ್ನಡಿ ಮಾಡುವದು ೪೨ ಸುವಾಸನೆ ಎಣ್ಣೆ ತಯಾರಿಸುವದು. ೪೩. ಕೇದಿಗೆ ದವನ ಮಾಡುವದು ೪೪. ಯಾವಗಿಡವಾದರೂ ಹುಟ್ಟುತ್ತಲೆ ಹೂವು ಬಿಡುವಂತೆ ಮಾಡುವದು ೪೫ ಗಂಧಕದ ಬಟ್ಟಲ ತಯಾರಿಸುವದು. ೪೬ ಕರ್ಪೂರ ಮಾಡುವದು ೪೭ ಬ್ರೆಡ್ಡು ತಯಾರಿಸುವದು ೪೮ ನೂಲು ಬಟ್ಟೆಗೆ ಬಣ್ಣ ಹಾಕುವದು ೪೯ ಕಪ್ಪು, ಕೆಂಪು, ಹಸರು ಹಳದಿ ಬಣ್ಣ ತಯಾರಿಸುವದು ೫೦ ಅರಗಿನ ಬಣ್ಣ ತಯಾರಿಸುವದು ೫೧ ಗಿಲೀಟ ಮಾಡುವದು ೫೨ ತಾಮ್ರದ ಮೇಲೆ ಭಂಗಾರದ ಗಿಲೀಟ ಮಾಡುವದು ೫೩ ತಾಮ್ರ ಹಿತ್ತಾಳಿಗಳಿಗೆ, ಬೆಳ್ಳಿ ಗಿಲೀಟು ಮಾಡುವದು ೫೪ [illegible] ಪೆಟ್ಟಿಗೆ ತಯಾರಿಸುವದು ೫೫ ರೋಜವಾಟರ ತಯಾರಿಸುವದು ೫೬ [illegible]ಗದವು ಬಳ್ಳಿಯಾಗುವದು ೫೭ ವಾರ್ನಿಸ ತಯಾರಿಸುವದು. ೫೮ ಲವಂಗದ ಸಾರ ತಯಾರಿಸುವದು ೫೯ ಬಾಯಿಂದ ಉರಿ ತೋರಿಸುವದು ೬೦. ದವನ [illegible] ೬೧ ಫೌಂಟನ್ನಪೆನ್ನ ಇಂಕ ತಯಾರಿಸುವದು ೬೨ ಕತ್ತಲೆಯಲ್ಲಿ [illegible] ಇಂಕ ೬೩ ಸ್ಲೇಟ ಪೆನ್ಸಿಲ್ ತಯಾರಿಸುವದು ೬೪ ಕರ್ಪೂರಗ್ಲಾಸ ತಯಾರಿಸುವದು ೬೫ ಕಾಜಿನಬಳೆ ತಯಾರಿಸುವದು ೬೬ ಕವಡಿ ಲೋಬಾನ ತಯಾರಿಸುವದು, ೬೭ ಗಂಧದ ಬಿಲ್ಲೆಗಳನ್ನು ತಯಾರಿಸುವದು ೬೮ ಚರ್ಮಕ್ಕೆ [illegible] ಕರೀವಾರ್ನಿಸ ತಯಾರಿಸುವದು ೬೯ ಸೋಡಾವಾಟರ ತಯಾರಿಸುವದು ೭೦ ಕಬ್ಬಿಣದ ಮೇಲೆ ಅಕ್ಷರಗಳನ್ನು ಮೂಡಿಸುವದು ೭೧ ಹಾಲಿನ ಒಡೆ (ಖಾಕ[illegible]) ತಯಾರಿಸುವದು ೭೨ ಕೋಳಿತತ್ತಿ ಕೆಡದಂತೆ ಇಡುವದು ೭೩ ಬೆಳ್ಳಿ ಸಾಮಾನುಗಳ ಮೇಲೆ ಅಕ್ಷರಗಳನ್ನು ಮೂಡಿಸುವದು ೭೪ ಬಟ್ಟೆಯಮೇಲೆ ಚಿತ್ರ ಮೂಡಿಸುವದು. ೭೫. ವಜ್ರವನ್ನು ತಯಾರಿಸುವದು ೭೬ ಹಾಲಿನ ಕೋವಾ ತಯಾರಿಸುವದು ೭೭. ಸಾರ್ಸಾಪರಿಲ ತಯಾರಿಸುವದು ೭೮. ಚೇಳು ಕಡಿದದ್ದಕ್ಕೆ ೭೯ ಕಾರ್ಬನ ಪೇಪರ ತಯಾರಿಸುವದು ೮೦. ಗಿಡ-ಮರಗಳನ್ನು ಒಣಗಿಸುವದು ೮೧ ಮಣ್ಣಿನ ಪಾತ್ರೆಯಲ್ಲಿ ಉಪ್ಪಿನಕಾಯಿ ಹಾಕಿದರ ಹುಳಗಳು ಬೀಳದಂತೆ ಮಾಡುವದು ೮೨ ಪುಷ್ಪಗಳ ಬಣ್ಣವನ್ನು ಬದಲಾಯಿಸುವದು ೮೩ ಲಿಂಬೆಹಣ್ಣು ಬಹಳ ದಿವಸಗಳ ವರೆಗೆ ಕೆಡದಂತೆ ಇಡುವದು ೮೪. ಮಾವಿನ ಹಣ್ಣು ಬಹಳ ದಿವಸದ ವರೆಗೆ ಕೆಡದಂತೆ ಇಡುವದು ೮೫ ಒಂದೇ ಗಿಡದಲ್ಲಿ ೨ ಬಣ್ಣದ ಹೂವು ಬಿಡುವಂತೆ ತಯಾರಿಸುವದು. ೮೬ ಸಾಣೆಯ ಗಾಲಿಯನ್ನು ತಯಾರಿಸುವದು ೮೭ [illegible]ಪೆನ್ಸಿಲ್ ತಯಾರಿಸುವದು. ೮೮ ಕೇಕ್ಸ ತಯಾರಿಸುವದು ೮೯ ಸು[illegible] ತಯಾರಿಸುವದು ೯೦ ಕಬ್ಬಿಣವನ್ನು ಕರಗಿಸುವದು

ಇನ್ನೂ ೧೦೦ ವಿಷಯಗಳಿವೆ ಸ್ಥಳ ಸಂಕೋಚ ಮೂಲಕ ಎಲ್ಲವನ್ನೂ ಕೊಟ್ಟಿಲ್ಲ

ಬೆಲೆ ೧ ರೂಪಾಯಿ (ವಿ ಪಿ ವೆಚ್ಚ ಬೇರೆ)

ಸಿ ಎಸ್. ಸಾಲಿಮಠ, ಪ್ರಿಂಟರ, ಗದಗ ಇವರಿಂದ ಬರೆಯಲ್ಪಟ್ಟ

ಕಾಮಕಳಾ ಶಾಸ್ತ್ರ

ಪ್ರತಿ ಒಬ್ಬ ರಸಿಕರು ಅವಶ್ಯ ಓದಬೇಕಾದ ಈ ಪುಸ್ತಕದೊಳಗಿನ ವಿಷಯಗಳು

೧ ಪುರುಷ ಸಾಮುದ್ರಿಕ ಲಕ್ಷಣ ೨ ಸ್ತ್ರೀ ಸಾಮುದ್ರಿಕ ಲಕ್ಷಣ ೩ ಶಶಕ ಜಾತಿ ಪುರುಷನ ಲಕ್ಷಣ ೪ ಮೃಗಜಾತಿ ಪುರುಷನ ಲಕ್ಷಣ ೫ ವೃಷಭ ಜಾತಿ ಪುರುಷನ ಲಕ್ಷಣ ೬ ಅಶ್ವಜಾತಿ ಪುರುಷನ ಲಕ್ಷಣ ೭ ಪದ್ಮಿನಿ ಜಾತಿ ಸ್ತ್ರೀಯಳ ಲಕ್ಷಣ ೮ ಚಿತ್ರಿಣಿ ಜಾತಿ ಸ್ತ್ರೀಯಳ ಲಕ್ಷಣ ೯ ಶಂಖಿನಿ ಜಾತಿ ಸ್ತ್ರೀಯಳ ಲಕ್ಷಣ ೧೦ ಹಸ್ತಿನಿ ಜಾತಿ ಸ್ತ್ರೀಯಳ ಲಕ್ಷಣ ೧೧ ಯಾವ ಯಾವ ಜಾತಿ ಪುರುಷನಿಗೆ, ಯಾವ ಯಾವ ಜಾತಿ ಸ್ತ್ರೀಯಳು ಯೋಗ್ಯ. ೧೨ ಮತ್ತು ಅವರಿಂದ ಹುಟ್ಟಿದ ಮಕ್ಕಳ ಫಲವಿಚಾರ (ಜಾತಕ) ೧೩ ಯಾವ ಯಾವ ಜಾತಿ ಸ್ತ್ರೀಯರಿಗೆ ಯಾವ ಯಾವ ತಿಥಿಯ ದಿವಸ ಭೋಗೇಚ್ಛಾ ಉಂಟಾಗುತ್ತದೆಂಬದನ್ನು ತಿಳಿಯುವದು ೧೪ ಯಾವ ಯಾವ ಸ್ತ್ರೀಯರಿಗೆ ಎಷ್ಟೆಷ್ಟು ಹೊತ್ತಿಗೆ ಭೋಗೇಚ್ಛಾ ಉಂಟಾಗುತ್ತದೆಂಬುವದನ್ನು ತಿಳಿಯುವದು ೧೫ ಯಾವ ಯಾವ ಜಾತಿ ಸ್ತ್ರೀಯರಿಗೆ ಯಾವ ಯಾವ ತಿಥಿಯ ದಿವಸ ಯಾವ ಯಾವ ಅವಯವದಲ್ಲಿ ಕಾಮವು ಇರುತ್ತದೆಂಬುದನ್ನು ತಿಳಿಯುವ ಕ್ರಮವು ೧೬ ಚಂದ್ರಕಲೆಯ ಸ್ಥಾನಗಳು ೧೭. ಸ್ತ್ರೀವಶೀಕರಣ ೧೮ ಪುರುಷವಶೀಕರಣ ೧೯ ಪದ್ಮಿನಿ ಸ್ತ್ರೀಯಳನ್ನು ವಶಮಾಡಿಕೊಳ್ಳುವ ಉಪಾಯ ೨೦ ಚಿತ್ರಿಣಿ ಸ್ತ್ರೀಯಳನ್ನು ವಶಮಾಡಿಕೊಳ್ಳುವ ಉಪಾಯ ೨೧ ಶಂಖಿನಿ ಸ್ತ್ರೀಯಳನ್ನು ವಶಮಾಡಿಕೊಳ್ಳುವ ಉಪಾಯ ೨೨ ಹಸ್ತಿನಿ ಸ್ತ್ರೀಯಳನ್ನು ವಶಮಾಡಿಕೊಳ್ಳುವ ಉಪಾಯ ೨೩ ಭೋಗಕ್ಕೆ ಯೋಗ್ಯ ಸ್ಥಳ ೨೪ ಭೋಗಕ್ಕೆ ಅಯೋಗ್ಯ ಸ್ಥಳ ೨೫ ಮೈಥುನಕ್ಕೆ ಅಯೋಗ್ಯವಾದ ವೇಳೆ ೨೬ ಮೈಥುನಕ್ಕೆ ಅಯೋಗ್ಯ ಸ್ತ್ರೀಯರು ೨೭ ಪರಸ್ತ್ರೀಗಮನದಿಂದಾಗುವ ಹಾನಿ ೨೮ ಸುಗಂಧ ದ್ರವ್ಯ ೨೯ ಕಂಕುಳದೊಳಗಿನ ದುರ್ಗಂಧ ಹೋಗುವುದಕ್ಕೆ ೩೦ ಬಾಯಿ ದುರ್ಗಂಧ ಹೋಗುವುದಕ್ಕೆ ೩೧ ಮುಡಿ ಒಕ್ಕಗೆ ೩೨ ಕೇಶರಂಜನಕ್ಕೆ ೩೩ ತಿಗಣಿ ನೆಕ್ಕಿದಕ್ಕೆ ೩೪ ಕೂದಲು ಉದುರುವದಕ್ಕೆ ೩೫ ಶರೀರದ ಕಪ್ಪು ಬಣ್ಣಕ್ಕೆ ೩೬ ಕುಚವೃದ್ಧಿಗೆ ೩೭ ಸ್ತ್ರೀಯರಲ್ಲಿಯ ಅವಸ್ಥೆಗಳು ೩೮ ಅವಸ್ಥೆ ಮೇಲಿಂದ ಪ್ರೇಮದ ಇರುವಿಕೆ ೩೯ ಮೈಥುನದ ಸುಖದಲ್ಲಿ ಅಂತರ ಬೀಳುವ ಕಾರಣ ೪೦ ದಂಪತಿಗಳು ಕೂಡುವ ದಿಕ್ಕಿನ ಫಲವು ೪೧ ಸತಿಪತಿಗಳು ಕೂಡುವ ದಿವಸ ಫಲ ೪೨ ಗರ್ಭ ನಿಂತದಿವಸ ಫಲ ೪೩ ಗರ್ಭನಿಂತ ಕಾಲ ಫಲ ೪೪ ಸ್ತ್ರೀಯರ ಜಾತಿಮೇಲಿಂದ ಕೂಡಿಸಿದ ಲಕ್ಷಣ ೪೫ ವಿಕಾರಯೋನಿಗೆ ಉಪಾಯ ೪೬ ಯೋನಿ ಸಂಕೋಚಕ್ಕೆ ೪೭ ಶಿಶ್ನ ವೃದ್ಧಿಗೆ ೪೮ ಸ್ತ್ರೀಯರಿಗೆ ಮೈಥುನವು ಬೇಗನೆ ಸಾಕಾಗುವಂತೆ ಮಾಡುವ ಉಪಾಯ ೪೯ ಪುರುಷರಿಕ್ಕಿಂತ ಮೊದಲು ಸ್ತ್ರೀಯರ ರೇತಸ್ಖಲನವಾಗುವ ಉಪಾಯ ೫೦ ಪುರುಷರ ರೇತಸ್ಸು ಬೇಗ ಬೀಳಬಾರದೆಂಬುದಕ್ಕೆ ಉಪಾಯ ೫೧ ವಾಜೀಕರಣ ಪ್ರಯೋಗ ೫೨ ಸ್ತ್ರೀಯರನ್ನು ಜಯಿಸುವದಕ್ಕೆ ೫೩ ಬಹಳ ಮಕ್ಕಳಾಗುತಿದ್ದರೆ ೫೪ ಸಂತತಿ ಪ್ರತಿಬಂಧಕ ಉಪಾಯ ೫೫ ಮುಟ್ಟು ತಡೆದಿದ್ದರ ೫೬ ಗರ್ಭಾಶಯ ಶುದ್ಧಿಗೆ ೫೭ ಗರ್ಭಧಾರಣಕ್ಕೆ ೫೮ ಗರ್ಭಪಾತಕ್ಕೆ ಉಪಾಯ ೫೯ ಬೇಗ ಹಡಿಯಲಿಕ್ಕೆ ಉಪಾಯ ೬೦ ನಪುಂಸಕ ರೋಗಕ್ಕೆ ಉಪಾಯ ೬೧ ಸ್ತ್ರೀ ಪುರುಷರ ಪ್ರೀತಿಯ ವರ್ಣನೆ ೬೨ ಸ್ತ್ರೀಯರು ವಶವಾಗುವ ಮತ್ತು ಗರ್ಭವರಿಸುವ ಕಾಲ ೬೩ ಹೆಂಗಸರು ಯಾವ ಕಾರಣದಿಂದ ಕೆಡುತ್ತಾರ ೬೪ ಪತಿಯ ವಿಷಯಕ್ಕೆ ಸತಿಯು ಬೇಸರ ಪಟ್ಟಿರುವಳೆಂಬುದನ್ನು ತಿಳಿಯುವದು ೬೫ ಉದಾಸೀನತೆ ಪ್ರಾಪ್ತವಾಗುವ ಕಾರಣ ೬೬ ಭೋಗೇಚ್ಛಾವುಂಟಾದ ಸ್ತ್ರೀಯ ಲಕ್ಷಣ ೬೭ ನಿರಂತರ ಸುರತಯೋಗವಿರುವ ಸ್ತ್ರೀಯ ಲಕ್ಷಣ ೬೮ ವಿರಹಿಣೀ ಸ್ತ್ರೀಯ ಲಕ್ಷಣ ೬೯ ಭೋಗೇಚ್ಛಾ ಪೂರ್ಣವಾದ ವೇಳೆ ತೋರುವ ಸ್ತ್ರೀ ಲಕ್ಷಣ ೭೦ ಉಷ್ಣರೋಗಕ್ಕೆ ೭೧ ರಕ್ತ ಉಷ್ಣಕ್ಕೆ ೭೨ ದೇಹ ಉಷ್ಣಕ್ಕೆ ೭೩ ಉಷ್ಣ ಕೈಯೊಳಗೆ ಒಡೆದರೆ ೭೪ ಉಷ್ಣಹುಣ್ಣಿನ ಘಾಯಕ್ಕೆ ೭೫ ಪೇರಿಗೆ ೭೬ ಉಪದಂಶಿಗೆ ೭೭ ಬಿಳೀ ಉಷ್ಣಕ್ಕೆ ೭೮ ತರದ ಪ್ರಮೇಯಕ್ಕೆ ೭೯ ಪ್ರಮೇಯಕ್ಕೆ ೮೦ ಗರ್ಮಿ ರೋಗಕ್ಕೆ ೮೧ ಪುಷ್ಟಿಗೆ ೮೨ ಧಾತು ಪುಷ್ಟಿಗೆ ೮೩ ರೇತು ಸಂಚಯಕ್ಕೆ ೮೪ ವೀರ್ಯವೃದ್ಧಿಗೆ ೮೫ ಕಾಮೋತ್ತೇಜನಕ್ಕೆ ೮೬ ದೇಹಶಕ್ತಿ ಬರುವದಕ್ಕೆ. ೮೭ ಮುಷ್ಟಿಮೈಥುನದಿಂದಾಗುವ ಅಶಕ್ತಿಗೆ ೮೮ ಗಂಡಸುತನಕ್ಕೆ (ಷಂಡತ್ವಕ್ಕೆ) ೮೯ ಸ್ವಪ್ನೇಂದ್ರಿಗೆ ೯೦. ಇಂದ್ರಿಯ ಸ್ತಂಭನಕ್ಕೆ. ೯೧ ಶುಕ್ಲ ಸ್ತಂಭನಕ್ಕೆ ೯೨ ಧಾತು ನಷ್ಟಕ್ಕೆ ೯೩ ಹತ್ತುಣ್ಣಿಗೆ ೯೪ ಜಲಮಲ ಕಟ್ಟಿದರೆ ೯೫ ರಸಾಯನ ಪ್ರಯೋಗದಲ್ಲಿ ಒದೆದಿದ್ದರ ೯೬ ಗೂನಿಗೆ ೯೭ ಮೂಲವ್ಯಾಧಿಗೆ ೯೮ ಅಂಗಸಾಮುದ್ರಿಕ ೯೯ ದೇವ ಪುರುಷನ ಲಕ್ಷಣ ೧೦೦ ಗಂಧರ್ವ ಪುರುಷನ ಲಕ್ಷಣ ೧೦೧ ಯಕ್ಷಪುರುಷನ ಲಕ್ಷಣ ೧೦೨ ಪಿಶಾಚ ಪುರುಷನ ಲಕ್ಷಣ ೧೦೩ ದೇವಸತ್ವಸ್ತ್ರೀಯ ಲಕ್ಷಣ ೧೦೪ ಗಂಧರ್ವಸತ್ವಸ್ತ್ರೀಯ ಲಕ್ಷಣ ೧೦೫ ಯಕ್ಷಸತ್ವಸ್ತ್ರೀಯ ಲಕ್ಷಣ ೧೦೬ ಪಿಶಾಚಸತ್ವಸ್ತ್ರೀಯ ಲಕ್ಷಣ ಇತ್ಯಾದಿ

ಬೆಲೆ ೧ ರೂಪಾಯಿ (ವಿ ಪಿ ವೆಚ್ಚ ಬೇರೆ)

ವಿಳಾಸ:— ಎಸ್. ಸಿ. ಸಾಲಿಮಠ ಅಂಡ್ ಸನ್ಸ್, ಗದಗ ಸಿಟಿ.



ಟಿ. ಸಿ. ನಟರಾಜ್ ಔಷಧಾಲಯ,

ಸಯ್ಯಾಜಿರಾವ್ ರೋಡು, ಮೈಸೂರು.

ಇವರಲ್ಲಿ ನೇತ್ರಪರೀಕ್ಷೆಯು ಉಚಿತವಾಗಿ ಮಾಡಲ್ಪಡುತ್ತದೆ.

ಅತ್ಯಗತ್ಯವಾಗಿ ಬೇಕಾದ ಎಲ್ಲಾ ಇಂಜಕ್ಷನ್ ಔಷಧಿಗಳೂ ಸದಾ ಕಾಲದ ಲ್ಲಿಯೂ ದೊರಕುವುದಲ್ಲದೆ ಸಮಸ್ತ ವ್ಯಾಧಿಗಳಿಗೂ ಚಿಕಿತ್ಸೆಯು ಬಹ ಸುಲಭ ಧಾರಣೆಯಿಂದ ಮಾಡಲ್ಪಡುತ್ತದೆ

ಝಂಡೂರವರ ಆಯುರ್ವೇದೀಯ ಸಿದ್ಧೌಷಧಗಳೆಲ್ಲವೂ ಸದಾ ದೊರಕುತ್ತವೆ

"ಬ್ರೇಕ್ ಪಿಲ್ಸ್"

INVENTED BY A HIMALAYAN SAGE

● ಸ್ತ್ರೀಪುರುಷರಿಗೆ ಆನಂದವನ್ನುಂಟುಮಾಡುವುದು ಈ ಮಾತ್ರೆಗಳ ಮಹಿಮೆ ಸಿದ ಸ್ತ್ರೀಯರ ಗರ್ವಭಂಗಮಾಡಲು ಕಂಡುಹಿಡಿದಿರುವ ಮಾತ್ರೆಗಳಿವು ಇದರಲ್ಲಿ ರಸ

ವಿಷಾದಿಗಳು ಸೇರಿಲ್ಲ ಕಸ್ತೂರಿ, ಚಿನ್ನ ಹಿಮಾಲಯ ಪರ್ವತದ ವನಮೂಲಿಕೆಗಳು ಮುಂತಾದುವುಗಳಿಂದ ದೊಡ್ಡ ಯೋಗೀಶ್ವರರ ಹತ್ತಿರ ಸಂಗ್ರಹಿಸಿ ಮದುಕರನವನ್ನು ಲೋಕದಲ್ಲ ಇಲ್ಲದಂತೆ ಮಾಡುವುದು ಅರ್ಧ ಘಂಟೆಯೊಳಗಾಗಿ ವೀರ್ಯವನ್ನು ಕಲ್ಲಿನಂತೆಮಾಡಿ ರಮಿಸಲು ಉಲ್ಲಾಸವನ್ನು ಮಾಡುವುದು ಗುಣವಿಲ್ಲದಿದ್ದಲ್ಲಿ ಹಣ ವಾಪಸು

೬೦ ಮಾತ್ರೆಗಳು ರೂ ೫—೦—೦ ೩೦ ಮಾತ್ರೆಗಳು ರೂ ೩—೦—೦

(ಕಾಗದ ಪತ್ರಗಳು ಇಂಗ್ಲೀಷಿನಲ್ಲಿಯೇ)

ಡಾ॥ ಎ ಎಸ್ ಮೂರ್ತಿ, ಚಿಕಾಕೋಲ್, ಗಂಜಾಮ್ ಡಿಸ್ಟ್ರಿಕ್ಟ್

ದ್ರಾಕ್ಷಾಮೃತ

ಈ ದ್ರಾಕ್ಷಾಮೃತವು ಸಹ್ಯಾದ್ರಿ ಪರ್ವತದಲ್ಲಿ ಅನೇಕ ವನಸ್ಪತಿಗಳ ರಸವರ್ಗಗಳೊಡನೆ ದ್ರಾಕ್ಷಾರಸವನ್ನು ಮಿಶ್ರಮಾಡಿ ಪ್ರವೇಶಿ ಯಂತ್ರದಿಂದ ಶಾಸ್ತ್ರೋಕ್ತ ವಿಧಿ ಪ್ರಕಾರ ತಯಾರು ಮಾಡಿರುವದರಿಂದ ಸ್ವಾದಿಷ್ಟವು ಮತ್ತು ಮಧುರವೂ ಆಗಿದೆ

ಇದರ ಸೇವನೆಯಿಂದ ಶರೀರದೊಳಗಿನ ಹಳೆ ಕಡಕಿ (ಗರಮಿ) ಸಂಪೂರ್ಣ ನಾಶವಾಗುತ್ತದೆ ಮತ್ತು ಧಾತುಸ್ರಾವ, ಸ್ವಪ್ನಾವಸ್ಥೆಯಿಂದ ಅಥವಾ ಬೇರೆ ಯಾವದೇ ಕಾರಣದಿಂದ ಬಂದ ಅಶಕ್ತತೆಯಿಂದ ಕೈಕಾಲು, ಕಣ್ಣೊಳಗೆ ಉರುವು ಒಸಡಿಗೆ ಶೌಚಕ್ಕೆ ಹೋಗ ಆಗದ ಇರೋಣ, ಮುಂತಾದ ಎಲ್ಲ ವಿಕಾರಗಳು ನಷ್ಟವಾಗಿ ಕ್ಷುಧಾಗ್ನಿ ವೃದ್ಧಿಯಾಗುತ್ತದೆ ಮತ್ತು ಅನ್ನ ಚೆನ್ನಾಗಿ ಪಚನವಾಗಿ ಶೌಚಕ್ಕೆ ಸಾಫಾಗುತ್ತದೆ ಇದರ ಸೇವನೆಯಿಂದ ತರುಣರಿಗೆ ವ್ಯಭಿಚಾರದಿಂದ ಅಥವಾ ಬೇರೆ ಕಾರಣದಿಂದ ಬಂದ ಧಾತುಕ್ಷೀಣತೆ, ನಪುಂಸಕತ್ವ ಇದ್ದರೆ ಅದು ಹೋಗಿ ಪುನಃ ಯೌವನಸಂಚಾರ ಆಗಿ, ಶರೀರ ಬಲವಾಗಿ ಮಕ್ಕಳು ಪುಷ್ಟಿವಂತರಾಗುವರು ಹೆಂಗಸರಿಗೂ ಮತ್ತು ಮಕ್ಕಳಿಗೂ ಈ ಔಷಧವು ಗುಣಕಾರಿ ಇದೆ ಮುಟ್ಟಾಗದಿದ್ದರೆ ಮತ್ತು ಬಸ್ಸು ಗರ್ಭ ಸಂಬಂಧವಾದ ರೋಗಗಳಿದ್ದರೆ ಅವೆಲ್ಲ ಗುಣವಾಗಿ ಹೆಂಗಸರಿಗೆ ಸಂತತಿ ವೃದ್ಧಿಯಾಗುವದು ಈ ಔಷಧದ ಮೂರು ಬಾಟ್ಲಿಗಳನ್ನು ಸೇವನ ಮಾಡಿದರೆ ಪೂರ್ಣ ಗುಣಬರುತ್ತದೆ ಇದರ ಅನುಭವ 1 ಬಾಟ್ಲಿ ಸೇವನೆ ಮಾಡಿದ ನಂತರ ನಿಮಗೆ ತಿಳಿದೀತು

1 ಬಾಟ್ಲಿ ಕಿಂಮತ್ತು ರೂ ೧—೪—೦, ೩ ಬಾಟ್ಲಿ ೩—೮—೦, 1 ಡಜನ ಬಾಟ್ಲಿ ೧೨—೦—೦,

ಮ್ಯಾನೇಜರ್—ದ್ರಾಕ್ಷಾಮೃತ ವರ್ಕ್ಸ್ ಪೋಸ್ಟ್ ನಿಪ್ಪಾಣಿ, ಜಿಲ್ಲಾ ಬೆಳಗಾವಿ

ಮೈಸೂರು ಸ್ಟಾಕಿಸ್ಟರು —ಟಿ ಸಿ ನಟರಾಜ್, ಜೆಂಬಾಯ ಆನಂದ ಭವನ, ಮಾಡರ್ನ್ ಫಾರ್ಮಸಿ, ಸಯ್ಯಾಜಿರಾವ್ ರೋಡ್ ಬೆಂಗಳೂರು ಸಿಟಿ —ಸಿ ವಿ ಶಾಸ್ತ್ರಿ ಅಂಡ್ ಸನ್ಸ್, ಚಿಕ್ಕಪೇಟೆ ತುಂಕೂರು—ಟಿ ಆರ್ ಗುರು ಚನ್ನಬಸಪ್ಪ ಅಂಡ್ ಬ್ರದರ್ಸ್ ಚಿಕ್ಕಮಗಳೂರು—ಎಂ ಎಲ್ ಮಂಜಯ್ಯಶೆಟ್ಟಿ ಶಿವಮೊಗ್ಗ—ಶ್ರೀಕೃಷ್ಣ ಟ್ರೇಡಿಂಗ್ ಕಂಪನಿ ಮತ್ತು ಹಿಂದೂರಾವ್ ಬ್ರದರ್ಸ್ ದಾವಣಗೆರೆ—ಮರುಳಪ್ಪ ಮತ್ತು ಕೆ ಪೀರಬಸ್ಯಶೆಟ್ಟಿ ಅಂಡ್ ಬ್ರದರ್ಸ್

ಪ್ರಾಚೀನ ಕನ್ನಡ ವಚನ ಗ್ರಂಥಗಳು

ಸೌಗಂಧಿಕಾಪರಿಣಯ:— ಪೂರ್ವದಲ್ಲಿ ದೇವೇಂದ್ರನಿಗೆ ದೂರ್ವಾಸ ಮುನಿಗಳಿಂದ ಆಶೀರ್ವಾದ ಪೂರ್ವಕವಾಗಿ ಕೊಡಲ್ಪಟ್ಟ ಕಮಲಮಾಲಿಕೆಯನ್ನು ಆನೆಯ ಕುಂಭಸ್ಥಳದಲ್ಲಿಟ್ಟೊಡನೆ ಆನೆಯು ಆ ಮಾಲಿಕೆಯನ್ನು ಕಾಲಿನಲ್ಲಿ ಹೊಸಕಿ ವ್ಯರ್ಥಪಡಿಸಲು, ಋಷಿಗಳ ಶಾಪದಿಂದ ಭೂಲೋಕದಲ್ಲಿ ರತ್ನಪುರಿಯಲ್ಲಿ ಸುಗಂಧರಾಜನಾಗಿ ಹುಟ್ಟಿ, ಕಳಿಂಗದೇಶದ ರಾಜಪುತ್ರಿಯಾದ ಸೌಗಂಧಿಕಾದೇವಿಯನ್ನು ಸ್ವಯಂವರಮಾಡಿಕೊಂಡ, ಬಹಳ ವಿಷಯಗಳಿರುವ ಕಥೆ

೧೫೦ ಪುಟಗಳು ಕ್ರಯ ರೂ ೪—೮—೦

ಸಹಸ್ರಾಯುಚರಿತ್ರೆ:— ಮಹಾಹಸ್ತೀ ಅರಸನ ಜ್ಯೇಷ್ಠಪುತ್ರಿಯಲ್ಲಿ ದಾಕ್ಷಾಯಣಿ ವರಪ್ರಸಾದದಿಂದ ಜನಿಸಿ ಲೋಕಪ್ರಸಿದ್ಧನಾಗಿ ತನಗೆ ಇತರರಿಂದ ಬಂದ ಗಂಡಾಂತರಗಳನ್ನೆಲ್ಲಾ ಪರಿಹರಿಸಿಕೊಂಡ ಒಬ್ಬ ಮಹಾಪುರುಷನ ಕಥೆ

೪೭೫ ಪುಟಗಳು ಕ್ರಯ ರೂ ೨—೦—೦

ಕಾಶೀಕ್ಷೇತ್ರಮಹಾತ್ಮೆ:— ಇದರಲ್ಲಿ ೧೪ ಲೋಕಗಳ ವರ್ಣನೆ, ನದಿಗಳು, ದೇವತೆಗಳು ಋಷಿಗಳೇ ಮುಂತಾದವರ ಉತ್ಪತ್ತಿಕ್ರಮ, ಗಂಗಾ ಸಹಸ್ರನಾಮವೇ ಮೊದಲಾದ ಅನೇಕ ವಿಷಯಗಳು ಅಡಕವಾಗಿರುತ್ತೆ

೮೮೩ ಪುಟಗಳು ಕ್ರಯ ರೂ ೨—೨—೦

ಅಡ್ರೆಸ್ಸು —

ಗುಂಡ್ಲು ಪಂಡಿತ ಲಕ್ಷ್ಮಣಾಚಾರ್ಯರ ಮಕ್ಕಳು

ಶ್ರೀನಿವಾಸ ದೇಶಿಕಾಚಾರ್,

೩೦೭, ಕರುಹಟ್ಟಿಬೀದಿ, ಮೈಸೂರು.

ಕನ್ನಡ ಆತ್ಮ ಪುರಾಣ.

ಇದು ಮುಮುಕ್ಷುಗಳ ಮುಖದರ್ಪಣ.

ಈ ಗ್ರಂಥವು ೧೮ ಅಧ್ಯಾಯಗಳುಳ್ಳದ್ದು ಇದರಲ್ಲಿ ಐತರೇಯಾದಿ ಉಪನಿಷತ್ತುಗಳ ವಿಸ್ತಾರವಾದ ಅರ್ಥವಿರುವದು ಇದು **ಶ್ರೀ ಶಂಕರಾನಂದಮುನಿಗಳು** ದೇವಭಾಷೆಯಲ್ಲಿ ತಮ್ಮ ಶಿಷ್ಯನಿಗೆ ಉಪದೇಶಿಸಿದ ಪರಮ ಅದ್ಭುತ ಪುರಾತನ ಗ್ರಂಥವಾಗಿರುವುದು ಆತ್ಮವಿದ್ಯಾ ವಿಷಯದಲ್ಲಿ ಇದಕ್ಕೆ ಸಮಾನವಾದ ಗ್ರಂಥವು ಜಗತ್ತಿನಲ್ಲಿಯೇ ಇಲ್ಲವೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು ಈ ಗ್ರಂಥವು ಹಿಂದೀಭಾಷೆಯಲ್ಲಿದ್ದುಕೊಂಡು ಉತ್ತರದೇಶದೊಳಗೆಲ್ಲಾ ಬಹು ಪ್ರಸಿದ್ಧಿಗೆ ಬಂದಿರುವದು ನಮ್ಮ ದಕ್ಷಿಣ ಕರ್ನಾಟಕದಲ್ಲಿ ಇದರ ನ್ಯೂನತೆಯಂ ನೋಡಿ ನಮ್ಮ ಕನ್ನಡದಲ್ಲಿ ಭಾಷಾಂತರಮಾಡಲ್ಪಟ್ಟಿತು ಇದನ್ನು ಎರಡು ವಿಭಾಗವಾಗಿ ... ಎರಡು ಬುಕ್ಕುಗಳಾಗಿ ಮಾಡಬೇಕೆಂದು ಆಲೋಚಿಸಿ, ಆ ಪ್ರಕಾರ ೮ ಅಧ್ಯಾಯಗಳುಳ್ಳ ಈ ಮೊದಲನೇ ಭಾಗ ಮುದ್ರಾಪಿಸಿ ಬೈಂಡಿಂಗ್ ಸಹಾ ಕಟ್ಟಿಸಿ ತಯಾರು ಮಾಡಲ್ಪಟ್ಟಿರುವದು ಇದರ ಕ್ರಯ ೧—೮—0 ರೂ ಇದನ್ನಪೇಕ್ಷಿಸುವವರು ... ರೂಪಾಯಿ ಮುಂಗಡ ಕಳುಹಿಸಬೇಕು ಉಳಿದ ಹತ್ತು ಅಧ್ಯಾಯಗಳುಳ್ಳ ಎರಡನೇ ಭಾಗವು ಶೀಘ್ರದಲ್ಲಿಯೇ ತಯಾರಾಗುವದು ಇದನ್ನಪೇಕ್ಷಿಸುವವರು ೩ ರೂಪಾಯಿಗಳನ್ನ ಅಡ್ವಾನ್ಸಾಗಿ ದಯವಿಟ್ಟು ಕಳುಹಿಸಿಕೊಟ್ಟಲ್ಲಿ ಪುಸ್ತಕವು ಶೀಘ್ರದಲ್ಲಿ ಮುದ್ರಾಪಿಸಿ ಬೈಂಡಿಂಗ್ ಸಹಾ ಕಟ್ಟಿಸಿ ಅವರವರ ವಿಳಾಸಕ್ಕೆ ಪುಸ್ತಕದ ... ಅಡ್ವಾನ್ಸ್ ವಜಾಮಾಡಿ ಉಳಿತ ಹೊಲಿಗೆ ಬುಕ್ಕನ್ನು ವಿ. ಪಿ. ಮಾಡಲ್ಪಡುವದು ಇಗಲ್ಲದೆ ಗ್ರಂಥಕರ್ತರಿಂದ ಇನ್ನೂ ಅನೇಕ ವೇದಾಂತ ಗ್ರಂಥಗಳು ... ಬೇಕರಿಗೆ ಸಿದ್ಧವಾಗಿವೆ

ಗ್ರಂಥಕರ್ತ.—ಶಿವಾನಂದ ಸುಬ್ರಹ್ಮಣ್ಯ (ವೇದಾಂತ ಸುಬ್ಬಯ್ಯ)

ಲಕ್ಷ್ಮೀವಿಲಾಸ ಅಗ್ರಹಾರ, ಮೈಸೂರು



॥ ಸತ್ಯಮೇವೋದ್ಧರಾಮ್ಯಹಮ್ ॥
ರಾಜಧಾನಿಯ ರಾಷ್ಟ್ರೀಯ ವಾರ ಪತ್ರಿಕೆ.
ವೃದ್ಧಪಿತಾಮಹ ಎಂ. ವೆಂಕಟಕೃಷ್ಣಯ್ಯನವರ ಜ್ಞಾಪಕಾರ್ಥವಾಗಿ ಪ್ರಕಟಿಸಲ್ಪಡುವುದು.
ಸಂಪಾದಕರು ಅಗರಂ ರಂಗಯ್ಯ, ಬಿ ಎ

ಸಂಪುಟ ೧] MYSORE : MONDAY 31-8-36 ಮೈಸೂರು : ಸೋಮವಾರ ೩೧—೮—೩೬ [ಸಂಚಿಕೆ ೨೮

ಶ್ರೀಮನ್ಮಹಾರಾಜರವರ ಪ್ರಯಾಣ.

ಶ್ರೀಮನ್ಮಹಾರಾಜರವರು ಈ ಮಾಹೆ ...ನೇ ತಾರೀಖು ತಮ್ಮ ಪರಿವಾರದ ಸಹಿತ ಬರ್ಲಿನ್ನಿನಿಂದ ವಿಯನ್ನಾ ನಗರಕ್ಕೆ ಪ್ರಯಾಣ ಬೆಳೆಸಿದರು. ಅವರು ಬರ್ಲಿನ್ನಲ್ಲಿದ್ದಾಗ ಜರ್ಮನಿಯ ಸಂಗೀತವನ್ನು ಕೇಳಿ ಆನಂದಪಟ್ಟರು. ಬುಡಾಪೆಸ್ಟಿನಲ್ಲಿ ಒಂದುವಾರ ಇದ್ದರು ಅಲ್ಲಿಂದ ವಿಯನ್ನಾ ನಗರಕ್ಕೆ ಪ್ರಯಾಣ ಬೆಳೆಸಿದರು ಅಲ್ಲಿ ಹಂಗೇರಿಯಾ ಗಾಯಕಶಿರೋಮಣಿಯಾದ ಟ್ಸಿಗೇನ್ ಎಂಬುವರ ಸಂಗೀತವನ್ನು ಕೇಳಿದರು. ಈ ಬಗ್ಗೆ ಶ್ರೀಮನ್ಮಹಾರಾಜರವರಿಗೆ ಪ್ರತ್ಯೇಕ ಏರ್ಪಾಟಾಗಿತ್ತು ಅನಂತರ ಪ್ರಭುಗಳು ಸ್ವಿಜರ್ಲೆಂಡಿಗೆ ದಯಮಾಡಿಸಿ ಅಲ್ಲಿ ಒಂದುವಾರ ತಂಗುವರು ಅಲ್ಲಿ ಹವಾಗುಣವು ಬಹಳ ಹಿತಕರವಾದದ್ದು ನಮ್ಮ ಪ್ರಭುಗಳವರ ದೇಹಸ್ಥಿತಿಯು ತೃಪ್ತಿಕರವಾಗಿದೆ ತಮ್ಮ ಪರಿವಾರದೊಡನೆ ಜೂರಿಚ್, ಜಿನೀವ, ಲಾಸೇನ್ ಮತ್ತು ಪ್ರೇಗ್ ನಗರಗಳಿಗೆ ಪ್ರಯಾಣ ಬೆಳೆಸಿ ಅನಂತರ ರಿವೇರದಲ್ಲಿ ಒಂದುವಾರ ವಿಹಾರಮಾಡುವರೆಂದು ತಿಳಿದುಬಂದಿದೆ

...ನಗರ ಕ್ಷತ್ರಿಯ ಯುವಕ ಸಂಘ.

ಈ ಸಂಘದ ಆಶ್ರಯದಲ್ಲಿ ಈ ಮಾಹೆ ...ನೇ ತಾರೀಖು ವಿರಲಸ್ವಾಮಿ ದೇವಸ್ಥಾನದಲ್ಲಿ ಒಂದು ಸಭೆ ಸೇರಿದ್ದಿತು. ಶ್ರೀ ... ಎಸ್. ತಪ್ಪಣ್ಣಯ್ಯಂಗಾರ್, ಬಿ ಎ. ...ಲ್, ರಿಟೈರ್ಡ್ ಡೆಪ್ಯುಟಿ ಕಮಿಷನರವರು ಅಗ್ರಾಸನವನ್ನು ವಹಿಸಿದ್ದರು. ...ನ ಟಿ. ಕೃಷ್ಣರಾಯರು, ಮತ್ತು ...ಶೇಷಾದ್ರಿ ಯವರು ಮತ್ತು ಅನೇಕ ...ರು ಸಂಘದ ಅಭಿವೃದ್ಧಿಗೋಸ್ಕರ ... ಸ್ವಾರಸ್ಯವಾದ ಭಾಷಣಗಳನ್ನು ಮಾಡಿ... ಕೊನೆಯಲ್ಲಿ ಅಧ್ಯಕ್ಷರು ಹಿತೋಪದೇಶವನ್ನು ಮಾಡಿದರು. ಶ್ರೀಮನ್ಮಹಾರಾಜರವರ ಶ್ರೇಯ. ಪ್ರಾರ್ಥನೆಯಿಂದ ಸಭೆ ಮುಕ್ತಾಯಗೊಂಡಿತು

ಅಕಡೆಮಿಕ್ ಕೌನ್ಸಿಲ್.

...ನ್ನೆ ದಿನ ನಡೆದ ವಿಶ್ವವಿದ್ಯಾಲಯದ ಸೆನೆಟ್ ಕೌನ್ಸಿಲ್ ಸಭೆಯಲ್ಲಿ ಯೂ... ಕೌನ್ಸಿಲ್ಲಿಗೆ ಡಾ॥ ಗಳಾದ ಬಿ ಕೆ. ...ನಾರಾಯಣರೂ, ಎ ಸುಬ್ಬರಾಯರವರೂ ... ವಾಗಿ ಚುನಾಯಿಸಲ್ಪಟ್ಟರು

ಆಕಾಶವಾಣಿ ಕಾರ್ಯಕ್ರಮ.

31-8-36 ನೇ ಸೋಮವಾರ ರಾತ್ರಿ 8-9 15 ವಾದ್ಯಸಂಗೀತ ಜನಪದ ವಿಜ್ಞಾನ. ಮಂಗಳವಾರ 6 30—7. 45 ಶ್ರೀ ಎನ್. ಸುಬ್ರಹ್ಮಣ್ಯಯ್ಯನವರಿಂದ ಶ್ರೀ ಸದಾಶಿವರಾಯರ ಜೀವನಚರಿತ್ರೆಯ ಉಪನ್ಯಾಸ. ಕರ್ಣಾಟಕ ಸಂಗೀತ. ಬುಧವಾರ 8-9.15 ಕರ್ಣಾಟಕ ವಾದ್ಯ ಸಂಗೀತ ಡಾ॥ ಎಂ ವಿ ಗೋಪಾಲಸ್ವಾಮಿಯವರ "ಬುದ್ಧಿಶಕ್ತಿಯನ್ನು ನಾವು ಅಳೆಯಬಹುದೆ ಎಂಬ ಭಾಷಣ ಗುರುವಾರ 6. 30-7. 45 ಪಾಶುಪತಂ ಎಂಬ ತಮಿಳು ನಾಟಕ ಎನ್ ಎಸ್. ನಾರಾಯಣಶಾಸ್ತ್ರಿಗಳವರ "ಸುಖಸಂಚಾರ" ಎಂಬ ಭಾಷಣ. ಶುಕ್ರವಾರ 6. 30-7 45 ಹಿಂದೂಸ್ಥಾನಿ ಸಂಗೀತ ಸೊಹ್ರಾಬ್ ಮತ್ತು ರುಸ್ತುಮ್ಮನ ಮರಣ ಶನಿವಾರ 6. 30—9 ಗಮಕಿ ರಾಮಕೃಷ್ಣಶಾಸ್ತ್ರಿಗಳ ಸತ್ಯಸಂಧ ಭೀಷ್ಮ ಎಂಬ ಹರಿಕಥೆ.

ಕರ್ಣಾಟಕ ಬಾಲಕ ಸಂಘ.

ಮೈಸೂರಿನಲ್ಲಿ ಈ ಸಂಘವು ಸ್ಥಾಪನೆಯಾಗಿ ಬಹು ಸ್ವಲ್ಪ ದಿನಗಳಾದರೂ ಅನೇಕ ಕಾರ್ಯಕ್ರಮಗಳನ್ನು ಉತ್ಸಾಹದಿಂದ ಜರುಗಿಸುತ್ತಿದೆ ಈ ಸಂಘಕ್ಕೆ ಒಂದು ಪುಸ್ತಕ ಭಂಡಾರದ ಆವಶ್ಯಕತೆ ತೋರಿದೊಡನೆಯೇ ಅನೇಕ ಮಹನೀಯರ ಸಹಾನುಭೂತಿಯಿಂದ 250 ಪುಸ್ತಕಗಳು ದೊರೆತಿವೆ. ಈ ಸಂಘದ ಕಾರ್ಯಗಳು ಕೃಷ್ಣಮೂರ್ತಿಪುರದ ಬಾಲಕರ ಶಾಲೆಯಲ್ಲಿ ನಡೆಯುತ್ತಿರುವುವು ಹೈಸ್ಕೂಲು ವಿದ್ಯಾರ್ಥಿಗಳ ಉಪಯೋಗಕ್ಕೋಸ್ಕರ 5 ಮತ್ತು 6 ನೇ ತರಗತಿಗಳ ಗದ್ಯಪದ್ಯಗಳ ಪಾಠಗಳ ಮೇಲೆ ವ್ಯಾಸಂಗಗೋಷ್ಠಿಯನ್ನು ಏರ್ಪಡಿಸಬೇಕೆಂದಿರುವರೆಂದೂ ಮಹಾಜನರು ಪ್ರೋತ್ಸಾಹಕೊಟ್ಟು ಸಹಾಯಮಾಡಬೇಕೆಂದೂ ಕಾರ್ಯದರ್ಶಿಗಳು ಕೋರುತ್ತಾರೆ

"ಸತ್ಯವಾಣಿ"

ಚಿತ್ರದುರ್ಗದ ಸುಪ್ರಸಿದ್ಧ ಕವಿಗಳೂ, ಗ್ರಂಥ ಲೇಖಕರೂ ಆದ ಶ್ರೀ॥ ಕೆ. ಎಂ ರಾಜಶೇಖರಯ್ಯ ಎಂಬುವರು ಮುಂದಿನ ಮಾಹೆ 7ನೇ ತಾರೀಖಿನಿಂದ "ಸತ್ಯವಾಣಿ" ಎಂಬ ವಾರಪತ್ರಿಕೆಯನ್ನು ಹೊರಡಿಸುವ ದಾಗಿ ತಿಳಿದುಬಂದಿದೆ.

ಔಷಧಿಯಿಲ್ಲದೆ ಚಿಕಿತ್ಸೆ.

ಈ ಕೆಳಗೆ ಕಂಡ ಮಹನೀಯರು ಮೈಸೂರು ನಾರಾಯಣಶಾಸ್ತ್ರಿ ರಸ್ತೆಯಲ್ಲಿ ಶ್ರೀ ಸಿದ್ಧಾರೂಢಸ್ವಾಮಿಗಳ ಶಿಷ್ಯರಾದ ಶ್ರೀ ಚೈತನ್ಯಂ ಬಿ ರಾಮದಾಸ್‌ರವರ ಹಸ್ತಸ್ಪರ್ಶದಿಂದಲೇ ತಮ್ಮ ಖಾಯಿಲೆಗಳು ಗುಣವಾಯಿತೆಂದು ತಿಳಿಸುವರು —

(1) ಸೀತಾವಿಲಾಸ ಅಗ್ರಹಾರದ 256 ನೇ ನಂ ಮನೆಯಲ್ಲಿರುವ ಎಂ ಕೃಷ್ಣಸ್ವಾಮಿಯವರಿಗೆ 4-5 ವರ್ಷಗಳಿಂದ ಇದ್ದ ನಿಶ್ಶಕ್ತಿ, ಹಲ್ಲಿನಲ್ಲಿ ರಕ್ತ ಬರುವುದು 7 ದಿನಗಳಲ್ಲಿ ಗುಣವಾದವು (2) ಬಿ ಸುಬ್ಬಯ್ಯನ ರಸ್ತೆ ನಾಗೋಜಿರಾಯರ ಮಗ ನಾಗೇಶರಾಯರಿಗೆ ಮಂಡಿ ಹಿಡಿದು ವ್ರಣವಾಗಿ ಕೊಡೆ ನೀಡಲು ಸಹ ಆಗದೇ ಇದ್ದುದು ವಾಸಿಯಾಗಿದೆ (3) ಹಳೇ ಅಗ್ರಹಾರದ ಈರಾಚಾರಿ ಮಗ ರಾಮಲಿಂಗೇಶ್ವರ ಎಂಬ ಮಗುವಿಗೆ 15 ದಿನದಿಂದ ಬರುತ್ತಿದ್ದ ಎಳಷ, ಜ್ವರವು 1-5 ದಿನಗಳಲ್ಲಿ ಗುಣವಾಗಿರುತ್ತದೆ.

ವೈಶ್ಯ ಯುವಜನ ಸಂಘ.

ಈ ಸಂಘದ ವಾರ್ಷಿಕ ವರದಿಯನ್ನು ನಾವು ಕೃತಜ್ಞತೆಯಿಂದ ಸ್ವೀಕರಿಸಿದ್ದೇವೆ. ಇದರಲ್ಲಿ 88 ಮೆಂಬರುಗಳಿದ್ದಾರೆ ಒಂದು ಪುಸ್ತಕ ಭಂಡಾರ, ವಾಚನಾಲಯ, ಆಟಪಾಟಗಳ ಕ್ಲಬ್, ಮತ್ತು ವ್ಯಾಯಾಮ ಶಾಲೆಯೂ ಇವೆ ಇದರ ಆಶ್ರಯದಲ್ಲಿ ಅನೇಕ ಸ್ವಾರಸ್ಯವಾದ ಉಪನ್ಯಾಸಗಳಾದವು. ಇದು ಇನ್ನೂ ಅಭಿವೃದ್ಧಿಸ್ಥಿತಿಗೆ ಬರಲೆಂದು ನಾವು ಹಾರೈಸುತ್ತೇವೆ.

ಟಾಂಗಾ ಗಾಡಿಯವರ ಕಷ್ಟಗಳು

ಮೈಸೂರಿನ ಟಾಂಗಾ ಗಾಡಿಯವರು ತಮಗೆ ಲೈಸೆನ್ಸ್ ವಗೈರ ಕೊಡದೆ ತೊಂದರೆಯಾಗುತ್ತಿರುವ ವಿಷಯದಲ್ಲಿ ಸುಮಾರು ಮುನ್ನೂರು ಗಾಡಿಗಳನ್ನು ಮೂರು ದಿನಗಳ ಕೆಳಗೆ ಮುನಿಸಿಪಲ್ ಆಫೀಸ್ ಬಳಿ ನಿಲ್ಲಿಸಿಕೊಂಡು ಮುಷ್ಕರ ಮಾಡುವುದಾಗಿ ತಿಳಿಸುತ್ತಿದ್ದರು ಮೇಲಿನ ಅಧಿಕಾರಿಗಳು ವಿಚಾರಿಸುವುದಾಗಿ ಭರವಸೆ ಇತ್ತಿರುವರು

ಮಿ॥ ಮಹಮದ್ ಸೇಟರ ದುರದೃಷ್ಟ.

ಮೈಸೂರು ಪೌರಸಭೆಯ ಉಪಾಧ್ಯಕ್ಷರಾದ ಮಿ॥ ಮಹಮದ್ ಸೇಟರಿಗೆ ತಮ್ಮ ಸ್ಥಾನದಲ್ಲಿ ಏನಾದರೊಂದು ಕೊರತೆಯು ಬರುತ್ತಲೇ ಇದೆ ಮೊನ್ನೆ ತಾನೆ ಅವರು ತಮ್ಮ ಸದಸ್ಯತ್ವವನ್ನು ಕಳೆದುಕೊಂಡು ವಿಶ್ವ ಪ್ರಯತ್ನದಿಂದ ಪುನಃ ಸದಸ್ಯರಾಗಿ ಬಂದರು. ಈಗ ಅವರು ತಮ್ಮ ಕರ್ತವ್ಯಗಳನ್ನು ಸರಿಯಾಗಿ ಮಾಡುತ್ತಿಲ್ಲವಾದುದರಿಂದ ಅವರಿಗೆ ಮಾಹೆಯಾನಾ ಕೊಟ್ಟಿರುವ ಒಂದು ನೂರು ರೂಪಾಯಿನ ವಾಹನ ಭತ್ಯವನ್ನೇ ವಾಪಸು ತೆಗೆದುಕೊಳ್ಳಲು ಕ್ರಮ ಜರುಗಿಸಬೇಕೆಂದು ಮೊನ್ನೆ ನಡೆದ ಪೌರಸಭೆಯಲ್ಲಿ ತೀರ್ಮಾನವಾಗಿದೆ ಇದು ಹೇಗೆ ಪರಿಣಮಿಸುವುದೋ ನೋಡಬೇಕು

ಪೂರ್ಣಬೋಧ.

ರಾಜಧಾನಿಯಲ್ಲಿ ಶ್ರೀಮಾನ್ ಕಾಶೀ ಪ್ರಾಣೇಶಾಚಾರ್ಯರಿಂದ ಪ್ರಕಟವಾಗುತ್ತಿರುವ 'ಪೂರ್ಣ ಬೋಧ" ಎಂಬ ಮಾಸಪತ್ರಿಕೆಯ ಪ್ರಥಮ ವಾರ್ಷಿಕೋತ್ಸವವು ಮೊನ್ನೆ ದಿನ ಸಂಸ್ಕೃತ ಪಾಠಶಾಲೆಯಲ್ಲಿ ಪ್ರೊ॥ ಬಿ. ವೆಂಕಟೇಶಾಚಾರ್ಯರವರ ಅಧ್ಯಕ್ಷತೆಯಲ್ಲಿ ನಡೆಯಿತು

ಅಪಾದನೆಯಿಂದ ಪಾರಾದರು.

ಶ್ರೀ ಸೋಸಲೆ ವ್ಯಾಸರಾಯ ಪೀಠಾಧ್ಯಕ್ಷರಾದ ಟಿ ವಿ ನರಸಿಂಹಾಚಾರ್ (ಪೂರ್ವಾಶ್ರಮದ ಹೆಸರು) ರವರಮೇಲೆ ಗೋಪಾಲರಾಯರೆಂಬುವರಿಂದ ಆಪಾದಿಸಲ್ಪಟ್ಟಿದ್ದ 194 ನೇ ಸೆಕ್ಷನ್ ಅಪಾದನೆಯು ನಿರಾಧಾರವಾದದ್ದೆಂದು ವಜಾಮಾಡಲ್ಪಟ್ಟಿತಲ್ಲದೆ ಫಿರ್ಯಾದಿ ಗೋಪಾಲರಾಯರು ಶ್ರೀಗಳವರಿಗೆ 100 ರೂ. ದಂಡ ಕೊಡಬೇಕೆಂದು ಸಿಟಿ ಮ್ಯಾಜಿಸ್ಟ್ರೇಟರಾದ ಶ್ರೀ ಗುರುದತ್ತರವರು ಈ ಮಾಹೆ 28ನೇ ತಾರೀಖು ತೀರ್ಮಾನಿಸಿರುತ್ತಾರೆ.

ಪದವೀದಾನೋತ್ಸವ.

ಮೈಸೂರು ವಿಶ್ವವಿದ್ಯಾಲಯದಲ್ಲಿ ಈ ವರ್ಷ ನಡೆದ ಪರೀಕ್ಷೆಗಳಲ್ಲಿ ಉತ್ತೀರ್ಣರಾದವರಿಗೆ ಪದವೀದಾನ ಮಾಡಲು ಮುಂದಿನ ಅಕ್ಟೋಬರ್ 29 ನೇ ತಾರೀಖು ಗುರುವಾರ ಪ್ರಾತಃಕಾಲ 9 ಘಂಟೆಗೆ ಮೈಸೂರು ಜಗನ್ಮೋಹನ ಬಂಗಲೆಯಲ್ಲಿ ಕಾನ್ವೊಕೇಶನ್ ಸಭೆ ನಡೆಯುವುದು.

ಬ್ರಹ್ಮಶ್ರೀ ವೇದಾಂತ ಶಿವರಾಮ ಶಾಸ್ತ್ರಿಗಳು.

(ಚನ್ನರಾಯಪಟ್ಟಣದ ಮ॥ ರಾ॥ ಶ್ರೀನಿವಾಸಯ್ಯನವರಿಂದ)

ಇವರು ಕನ್ನಡಿಗರಿಗೆ ಮಾಡಿರುವ ಉಪಕಾರವು ಓವೋ(ಘವಾದುದು ಇವರ ಗ್ರಂಥಗಳನ್ನು ಪ್ರತಿಯೊಂದು ಮನೆಯಲ್ಲಿಯೂ ಇಟ್ಟುಕೊಂಡು ಓದಲು ಅಗತ್ಯವಾಗಿದೆ

ಈ ಮಹನೀಯರ ಚರಿತ್ರೆಯನ್ನು ಚಾಮರಾಜನಗರದ ತಾಲ್ಲೂಕು ಆಲೂರು ಹೊನ್ನಹಳ್ಳಿರುವ ಬ್ರಹ್ಮಶ್ರೀ ಸುಬ್ರಹ್ಮಣ್ಯ ಶಿವರಾಮದಾಸರು ಸಂಕ್ಷೇಪವಾಗಿ ಬರೆದು ಲೋಕೋಪಕಾರಮಾಡಿರುತ್ತಾರೆ ಕರ್ನೂಲಿನಲ್ಲಿದ್ದ ಕೌಂಡಿನ್ಯಸಗೋತ್ರ ಆಪಸ್ತಂಭಸೂತ್ರ, ಯಜುಶ್ಶಾಖಾನುವರ್ತಿಗಳಾದ ಮಿಡಚನಮುಕ್ಕ ಅಪ್ಪಾಶಾಸ್ತ್ರಿಗಳವರೇ ಈ ವಂಶಕ್ಕೆ ಮೂಲಪುರುಷರೆಂದೂ, ಮುಮ್ಮಡಿ ಕೃಷ್ಣರಾಜಒಡೆಯರವರ ಕಾಲದಲ್ಲಿ ಇವರ ವಂಶೀಕರು ಮೈಸೂರು ದೇಶಕ್ಕೆ ಆಗಮಿಸಿದರೆಂದೂ, ಶೇಷಾದ್ರಿ ಶಾಸ್ತ್ರಿಗಳವರ ಉದರದಲ್ಲಿ ನಮ್ಮ ಶಿವರಾಮಶಾಸ್ತ್ರಿಗಳವರು ಶಾಲೀವಾಹನ ಶಕ 1783 ನೇ ರೌದ್ರಿ ಸಂವತ್ಸರ ಫಾಲ್ಗುಣ ಶುದ್ಧ ದ್ವಾದಶೀ ದಿನ ಜನ್ಮವೆತ್ತಿದರೆಂದೂ, ನೇಪಾಳ ವಿಂಧ್ಯಪರ್ವತ ಮೊದಲಾದ ಪ್ರದೇಶಗಳಲ್ಲಿ ಇವರು ಸಂಚರಿಸಿ ನಿಜಾನಂದರೆಂಬ ಸದ್ಗುರುಗಳ ಸೇವೆಮಾಡಿ ವೇದ ವೇದಾಂತ ಪಾರಂಗತರಾಗಿ ಅನೇಕ ಶಿಷ್ಯರುಗಳಿಗೆ ಅನುಗ್ರಹಮಾಡಿ ಆದವಾನಿ ಸಮೀಪದಲ್ಲಿರುವ ಬಿನಸಹಳ್ಳಿ ಎಂಬ ಸ್ಥಳದಲ್ಲಿ ಸಾಧಾರಣ ಸಂವತ್ಸರದ ಶ್ರಾವಣ ಬಹುಳ ಪಂಚಮಿ ದಿನ ಪರಂಧಾಮವನ್ನೈದಿದರೆಂದೂ ಈ ಗ್ರಂಥದಿಂದ ತಿಳಿಯಬರುತ್ತೆ

ಶಿವರಾಮಶಾಸ್ತ್ರಿಗಳವರ ಗ್ರಂಥಗಳಲ್ಲಿ ಅವರ ಅಚಲಿತ ಬ್ರಹ್ಮನಿಷ್ಠೆಯು ಎದ್ದು ಕಾಣುತ್ತಿದೆ ಜ್ಞಾನಾಧಿಕ್ಯವನ್ನು ಅವರು ಎಷ್ಟು ವಿಧಗಳಲ್ಲಿ ವರ್ಣನೆ ಮಾಡಿದರೂ ಇನ್ನೂ ಕಡಿಮೆಯೇ ಎಂದು ಭಾವಿಸುವಂತಿದೆ ಪ್ರಮಾಣ ಸಾಗರ ಮತ್ತು ಮುಕ್ತಿಮಾರ್ಗ ಪ್ರದೀಪಿಕೆಯ ತುಂಬ ಈ ಅಭಿಪ್ರಾಯವೇ ವ್ಯಕ್ತವಾಗುತ್ತೆ ಅವರ ಈ ಅಭಿಪ್ರಾಯವನ್ನು ಸಾಧಿಸಲು ವೇದವೇದಾಂತಗಳಿಂದಲೂ ಮತ್ತು ಇತರ ಗ್ರಂಥಗಳಿಂದಲೂ ಪ್ರಮಾಣ ವಚನಗಳನ್ನು ವಿಸ್ತಾರವಾಗಿ ಉದಹರಿಸುತ್ತಾರೆ ಅಜ್ಞಾನಿಗಳಿಗೂ ಕೂಡ ಎತ್ತಿ ತೋರುವಂತೆ ಮುಕ್ತಿಮಾರ್ಗ ಪ್ರದೀಪಿಕೆಯಲ್ಲಿ ಈ ರೀತಿ ಹೇಳಿರುತ್ತಾರೆ — " ಸಂಪೂರ್ಣ ಸುಖವನ್ನು ಬಯಸುವವರು ಆತ್ಮನನ್ನು ಪೂರ್ಣನನ್ನಾಗಿ ಭಾವಿಸಬೇಕು "ಅರಳ ಮರವು ತ್ರಿಮೂರ್ತಿ ಸ್ವರೂಪವಾದರೋಲಿ ಸೃಷ್ಟಿ, ಸ್ಥಿತಿ, ಸಂಹಾರಗಳನ್ನು ಏಕೆ ಮಾಡಲೊಲ್ಲದು" ' ' ಸರ್ಪವು ಸುಬ್ರಹ್ಮಣ್ಯೇಶ್ವರನಾದರೋಲಿ ಸುಬ್ರಹ್ಮಣ್ಯನು ಸಿಕ್ಕಿದವರನ್ನೆಲ್ಲ ಕೊಲ್ಲುತ್ತಿದ್ದನೆ? ಸುಬ್ರಹ್ಮಣ್ಯೇಶ್ವರನು ನರರಿಗೆ ದರ್ಶನ ಕೊಟ್ಟರೆ ಜನಗಳು ಕಂಡು ನಡುಗಿ ಓಡುತ್ತಿದ್ದರೆ?" ಜಡಪದಾರ್ಥಗಳೆಲ್ಲವೂ ಮನುಷ್ಯನ ಭಾವನೆಯಿಂದ ದೇವರಾದವು ಆದರೆ ತನ್ನ ಭಾವನೆಯಿಂದ ಅಚೇತನ ಪದಾರ್ಥವೇ ದೇವರಾಗುವಲ್ಲಿ ತನ್ನ ಭಾವನೆಯಿಂದ ಚೇತನ ಸ್ವರೂಪವಾದ ತಾನು ದೇವರಾಗಲಾರನೆ? ' ಮತ್ತೊಂದುಸಲ ಬ್ರಹ್ಮಾನಂದ ಬೋಧೆಯಲ್ಲಿ—

ರಾಮನಲ್ಲದ ತನಗೆ ತಂದೆಯು! ನಾಮವಿಡಲಿದನಂಬಿ ಲೋಕದಿ! ರಾಮನಾನೆಂದುಸುರುತಲಿ ಸ್ಮರಿಸಿ ಹೊಂದುವೆಲೆ॥ ಪ್ರೇಮ ಸಚ್ಚಿದ್ರೂಪನೀನಂ! ಬಾಮಹೋಕ್ತಿಯ ನಂಬ ಚಿತ್ಸುಖ! ಧಾಮ ನಿಜ ಚಿಜ್ಜ್ಯೋತಿಯೇ ನಾನೆಂದು ನಿಶ್ಚೈಸು

ಇವರು ಒಂದೊಂದು ಗ್ರಂಥದಲ್ಲಿ ಒಂದೊಂದು ಉಪದೇಶ ಭಾಗವನ್ನು ವಿಸ್ತಾರವಾಗಿ ಹೇಳಿದ್ದಾರೆ ಪರಮಾರ್ಥಸಾರ ಗ್ರಂಥದಲ್ಲಿ ಸಚ್ಚಿದಾನಂದ ಸ್ವರೂಪ ಮತ್ತು ಪರಿಪೂರ್ಣ ಭಾವವನ್ನೂ, ಓಮನಸ್ಕ ರಾಜಯೋಗ ಗ್ರಂಥದಲ್ಲಿ ಪಂಚಕೋಶ ವಿವರಣೆಯನ್ನೂ, ಈ ಮೇರೆಗೆ ಒಂದೊಂದು ಗ್ರಂಥದಲ್ಲಿಯೂ ವಿಷಯಗಳ ವಿಮರ್ಶೆ ಚನ್ನಾಗಿ ಮಾಡಿರುತ್ತಾರೆ ಇನ್ನೂ, ಕೆಲವು ಗ್ರಂಥಗಳಲ್ಲಿ ತತ್ವವಿಲ್ಲದ ಪೊಳ್ಳು ಆಚಾರ ವ್ಯವಹಾರಗಳನ್ನು ಖಂಡಿಸಿದ್ದಾರೆ ಆದರೂ ನಿಜತತ್ವವನ್ನು ನಿರೂಪಣ ಮಾಡುವ ಉದ್ದೇಶವೇ ಇವುಗಳಲ್ಲಿ ತುಂಬಿ ತುಳುಕುತ್ತಿದೆ

ಇವರು ನಿಜಗುಣ ಶಿವಯೋಗಿಗಳನ್ನು ಶಂಕರಾವತಾರವೆಂದು ಭಾವಿಸಿ ಅವರಿಗೆ ಪೂಜ್ಯಭಾವವನ್ನು ಸಾಧ್ಯವಾದಷ್ಟೆಲ್ಲ ವ್ಯಕ್ತಪಡಿಸಿರುತ್ತಾರೆ ' ನಿಜಗುಣ ಶಿವಯೋಗೀಂದ್ರ ವಿರಚಿತ ವಿವೇಕ ಚಿಂತಾಮಣಿ ಮೊದಲಾದ ಗ್ರಂಥಗಳೇ ವೇದಕ್ಕೂ ಸೂತ್ರಭಾಷ್ಯಾದಿ ಮಹಾಗ್ರಂಥಗಳಿಗೂ ವ್ಯತ್ಯಾಸವಿಲ್ಲದೆ ಮುಮುಕ್ಷುಗಳಿಗೆ ಸ್ವಾನುಭಾವವನ್ನುಂಟುಮಾಡುವ ಗ್ರಂಥಗಳಾಗಿರುತ್ತವೆ ' ಎಂಬುದೇ ಶಾಸ್ತ್ರಿಗಳ ಅಭಿಪ್ರಾಯ ಅಲ್ಲದೆ ಶಂಕರದಾಸರೆಂಬ ಅನ್ವರ್ಥ ನಾಮದಿಂದ ತನ್ನ ಪ್ರತಿ ಗ್ರಂಥಕ್ಕೂ ಗುರುಶಂಕರರೇ ಒಡೆಯರೆಂದು ಹೇಳಿ " ಶಂಕರ" ಅಂಕಿತವನ್ನೇ ಎಲ್ಲಕ್ಕೂ ಹಾಕುತ್ತಿದ್ದಾರೆ ಹೀಗಿರುವಲ್ಲಿ ತನ್ನ ಇಷ್ಟದೇವತೆಯಾದ " ಶಂಕರಗುರು" ವಿಲಾಸವನ್ನು ಎಷ್ಟು ಗಂಭೀರವಾಗಿ ಬರೆದಿರಬಹುದೋ ಎಲ್ಲರೂ ಊಹಿಸಬಹುದು

" ಶಂಕರ ಗುರುವಿಲಾಸ 'ದಲ್ಲಿ ಕಥಾಭಾಗವನ್ನು ಅಗತ್ಯವಾದಷ್ಟು ಮಾತ್ರವೇ ಇಟ್ಟುಕೊಂಡು ಅದ್ವೈತ ಸ್ಥಾಪನಾಚಾರ್ಯ ಮೂರ್ತಿಯನ್ನು ಪ್ರಪಂಚಸ್ಪರ್ಶವಿಲ್ಲದಂತೆ ವರ್ಣನೆಮಾಡಿರುವರು. ' ಶಂಕರ ' ನೆಂಬ ಒಬ್ಬ ಮೂರ್ತಿಯನ್ನು ನೆಪಮಾತ್ರಕ್ಕೆ ಇಟ್ಟುಕೊಂಡು ಗ್ರಂಥದ ಎಲ್ಲಾ ಕಡೆಯಲ್ಲಿಯೂ ಜ್ಞಾನ ಭಾಗವನ್ನೇ ವಿಧವಿಧವಾಗಿ ಅಮೋಘವಾದ ಸರಳ ಶೈಲಿಯಲ್ಲಿ ಉಪದೇಶಮಾಡಿ ಅವತಾರದ ಉದ್ದೇಶ್ಯವನ್ನು ಚೆನ್ನಾಗಿ ವರ್ಣಿಸಿದೆ ಈ ಗ್ರಂಥವು ಪೂರ್ಣವಾಗದೆ ನಿಂತಿರುವದು ಮುಮುಕ್ಷುಗಳಿಗೆಲ್ಲಾ ಮನಸ್ಸಿಗೆ ಕಳವಳವನ್ನುಂಟುಮಾಡಿದೆ ಶಾಸ್ತ್ರಿಗಳವರ ಗಂಭೀರ ಶೈಲಿಯಲ್ಲಿ ಮಂಡನ ಮಿಶ್ರರ ವಾದವನ್ನು ನೋಡಿದ್ದರೆ ನಮ್ಮ ಆನಂದಕ್ಕೆ ಮೇರೆ ಇರುತ್ತಿತ್ತೆ "

ಶಂಕರದಾಸರು ನಡೆಸುತ್ತಿದ್ದ ಶಂಕರ ಜಯಂತಿ ಮಹೋತ್ಸವ ಸಮಾರಂಭವನ್ನು ನಂದಿ, ಪಾಲಹಳ್ಳಿ, ಪಶ್ಚಿಮವಾಹಿನಿ ನಿವಾಸಿಗಳು ಇನ್ನೂ ನೆನಪಿನಲ್ಲಿಟ್ಟಿರುತ್ತಾರೆ ಪ್ರತಿಯೊಬ್ಬನೂ ಶಂಕರಜಯಂತಿ ಮಹೋತ್ಸವವನ್ನು ಆಚರಣೆಗೆ ತರಲು ಮನ್ಮಥ ಸಂವತ್ಸರದಲ್ಲಿ " ಜನ್ಮಹರ ಮಹೋತ್ಸವ ಪತ್ರಿಕೆ" ಎಂಬ ಪತ್ರಿಕೆಯನ್ನು ಪ್ರಚಾರಕ್ಕೆ ತಂದರು

ಈರೀತಿ ಆಹರ್ನಿಶಿಯಲ್ಲಿಯೂ ಅಜ್ಞಾನಿಗಳ ಮೇಲೆ ಇದ್ದು ಅವರ ಉದ್ಧಾರಕ್ಕೆ ಪ್ರಯತ್ನ ಮಾಡುತ್ತಿದ್ದ ಶಾಸ್ತ್ರಿಗಳವರು ಆದಷ್ಟು ಪ್ರಯತ್ನಪಟ್ಟು ಮಾತನಾಡುವ ಶೈಲಿಯಲ್ಲಿಯೇ ಬಹಳ ಸುಲಭವಾಗಿ ಗಹನವಾದ ತತ್ವಗಳನ್ನೆಲ್ಲಾ ಬೋಧಿಸಿರುತ್ತಾರೆ ಇವರ ಅಭಿಪ್ರಾಯಗಳನ್ನು ಹೇಳಬೇಕೆಂದು ಪ್ರಯತ್ನಪಟ್ಟರೆ ಕನ್ನಡ ಮಾತೆಯು ತಕ್ಷಣವೇ ಸುಲಭ ಪದಗಳ ಗಣಿಯನ್ನು ಇವರಿಗೆ ಒದಗಿಸುತ್ತಿದ್ದಂತೆ ತೋರುತ್ತೆ ಪರಿಪೂರ್ಣಭ ವನ್ನು ವರ್ಣನೆ ಮಾಡುವಲ್ಲಿ " ಜಠರೊಳಗೆ ಬ್ರಹ್ಮಾಂಡಕೋಟಿ ಧರಿಸಿಹನು " ಎಂದು ಹೇಳಿದ್ದಾರೆ ಇವರು " ಶಂಕರಾನಂದ ಪದ್ಧತಿ ' ಮತ್ತು ' ಶಂಕರಾನಂದ ತತ್ವ ' ದಲ್ಲಿ ಏಕನಾದಕ್ಕೆ ಜೊತೆಸಿ ಹೇಳುವಂಥ ತತ್ವಗಳು ತುಂಬಿವೆ ಕಂದ, ರಗಳೆ, ಸಾಂಗತ್ಯ, ಶಾರ್ದೂಲವೃತ್ತ, ಇಂದ್ರವಜ್ರಾ ವೃತ್ತಗಳು ಇವರಿಂದ ಲೀಲಾಜಾಲವಾಗಿ ಹೊರಡುತ್ತವೆ

[ಚೆನ್ನರಾಯಪಟ್ಟಣದ ಕರ್ನಾಟಕ ಸಂಘದಲ್ಲಿ 7—8—36ನೇ ಶುಕ್ರವಾರ ಮೈಸೂರು ವೇದಾಂತಿ ಶಿವರಾಮಶಾಸ್ತ್ರಿಗಳವರ ಸ್ಮಾರಕ ದಿನವು ಆಚರಿಸಲ್ಪಟ್ಟಾಗ ಮಾಡಿದ ಭಾಷಣದ ಸಾರಾಂಶ]

ವಿದ್ಯುದ್ದೀಪೋತ್ಸವ.

ದಿವಾನರಾದ ಶ್ರೀ ಎಸ್. ಪಿ ರಾಜಗೋಪಾಲಾಚಾರಿಯವರು ಮುಂದಿನತಿಂಗಳು 5, 7, 9 ಮತ್ತು 11ನೇ ತಾರೀಖುಗಳಲ್ಲಿ ಶಿವಮೊಗ್ಗಾ, ಚಿಕ್ಕಮಗಳೂರು, ಹಾಸನ ಮತ್ತು ಹೊಳೇನರಸೀಪುರಗಳಲ್ಲಿ ಕ್ರಮವಾಗಿ ವಿದ್ಯುದ್ದೀಪಗಳ ಪ್ರಾರಂಭೋತ್ಸವವನ್ನು ನಡೆಸುವರು

ಪೈಗಂಬರ್ಧರಿಗೆ ಅವಮಾನವೇ?

ಕಳೆದವಾರ ಬೆಂಗಳೂರಿನಲ್ಲಿರುವ ನಾಲಬಂದವಾಡಿ ಮಸೀದಿಯಲ್ಲಿ ಜನಾಬ್ ಅಬ್ದುಲ್ ವಾಹಿದ್ ಸಾಹೇಬರ ಅಧ್ಯಕ್ಷತೆಯಲ್ಲಿ ಮುಸಲ್ಮಾನರ ಮಹಾಸಭೆ ಸೇರಿತ್ತು. ಮೈಸೂರು ವಿಶ್ವವಿದ್ಯಾನಿಲಯದ ಸಂಘದ ಆಶ್ರಯದಲ್ಲಿ ಹೊರಡುವ "ಯೂನಿಯನ್" ಎಂಬ ಪತ್ರಿಕೆಯಲ್ಲಿ ಪ್ರಕಟವಾದ ಒಂದು ಲೇಖನವು ಮಹಮ್ಮದ್ ಪೈಗಂಬರ್‌ರವರಿಗೆ ಅವಮಾನವನ್ನುಂಟು ಮಾಡಿದ ಎಂದು ಈ ಸಭೆಯು ತೀರ್ಮಾನಿಸಿ ಕೆಲವು ಠರಾವುಗಳು ಈ ಕೆಳಗೆ ನಮೂದಿಸಿರುವಂತೆ ನಿರ್ಣಯ ಮಾಡಿತು —" ಯೂನಿಯನ್ " ಪತ್ರಿಕೆಯ ಫೆಬ್ರವರಿ ಸಂಚಿಕೆಯಲ್ಲಿ ಪ್ರಕಟವಾದ " ಕೊರವಂಜಿ " ಎಂಬ ಲೇಖನದಲ್ಲಿ ಮಹಮ್ಮದ್ ಪೈಗಂಬರ್‌ರವರ ಗೌರವಕ್ಕೆ ಕುಂದನ್ನುಂಟುಮಾಡುವ ಕೆಲವು ವಾಕ್ಯಗಳಿರುವುದರಿಂದ ಅವರ ಮೇಲೆ ಕಾರ್ಯಕ್ರಮವನ್ನು ಜರುಗಿಸುವುದು. ಮಹಮ್ಮದೀಯರಿಗೆ ವಿರುದ್ಧವಾಗಿ ಯಾವ ಲೇಖನವೂ ಪ್ರಕಟವಾಗದಂತೆ ನೋಡಿಕೊಳ್ಳಲು ಸರ್ಕಾರವನ್ನೂ ವಿಶ್ವವಿದ್ಯಾಲಯದ ಅಧಿಕಾರಿಗಳನ್ನೂ ಪ್ರಾರ್ಥಿಸುವುದು ಫೆಬ್ರವರಿ ಸಂಚಿಕೆಯ ... ಮತ್ತು ... ಸಂಖ್ಯೆಗಳನ್ನು " ಜಪ್ತಿ " ಮಾಡಲು ಮತ್ತು ನಾಶಮಾಡಲು ಸರ್ಕಾರವನ್ನು ಪ್ರಾರ್ಥಿಸುವುದು ಈ ನಿರ್ಣಯಗಳನ್ನು ಮಹಾರಾಜರವರ ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ವಿಶ್ವವಿದ್ಯಾಲಯದ ಸ್ಥಾನಾಧಿಪತಿಗಳು, ವಿಶ್ವವಿದ್ಯಾಲಯದ ಸಂಘದ ಅಧಿಕಾರಿ ಮತ್ತು ಪತ್ರಿಕೆಯ ಸಂಪಾದಕರಿಗೂ ಕಳುಹಿಸಲು ಬೆಂಗಳೂರಿನಲ್ಲಿ ಅಡ್ವೋಕೇಟರಾದ ಮಿ॥ ಎ ಜೆ ಖಲೀಲ್‌ರವರಿಗೆ ಅಧಿಕಾರ ವಹಿಸಿರುವುದಾಗಿ ತಿಳಿದುಬಂದಿದೆ

ಮೋಟಾರು ಸುಟ್ಟು ಭಸ್ಮವಾಯಿತು

ಬೆಂಗಳೂರು ದಂಡಿನ ನಿವಾಸಿ ಪಿ ಎಚ್ ಆಪ್ಪರ್‌ರವರು ತಮ್ಮ ಬಾಡಿಗೆ... ಇದ್ದ ಮಿ॥ ಕ್ಸೇವಿಯರ್ ರವರನ್ನು ಅವರ ಮನೆಗೆ ಬಿಟ್ಟುಬರಲು ಆಸ... ಖು ರಾತ್ರಿ ಸುಮಾರು 11½ ಗಂಟೆಗೆ ತಮ್ಮ ಕಾರನ್ನು ದಂಡಿನಿಂದ ಡ್ರೈವು ಮಾಡಿಕೊಂಡು ಹೋದರು ... ಯರನ್ನು ಮನೆಗೆ ಬಿಟ್ಟು ವಾಪಸ್ಸು ... ಗೆ ಕರೆ ಏರಿಮೇಲೆ ಹೋಗುತ್ತಿದ್ದಾಗ ಯಾರೋ ಒಬ್ಬರು ಅಡ್ಡಲಾಗಿ ... ಕೆಂತುಬಂದದ್ದರಿಂದ ಮಿ॥ ಆಪ್ಪರ್ ಕಾರನ್ನು ಎಡಗಡೆಗೆ ತಿರುಗಿಸಿದರು ... ಅದು ಪಕ್ಕದಲ್ಲಿದ್ದ ಒಂದು ಹೋ... ಕ್ಕೆ ದಿಕ್ಕಿ ಹೊಡೆಯಿತು. ತಕ್ಷಣವೇ ಪೆಟ್ರೋಲ್ ಕರೆಂಟಿಗೆ ಹತ್ತಿ ಉರಿ... ಗಿತು ಕ್ಷಣಮಾತ್ರದಲ್ಲಿಯೇ ಕಾರು ಸಂಪೂರ್ಣವಾಗಿ ಭಸ್ಮೀಭೂತವಾಯಿತು ಮಿ॥ ಆಪ್ಪರ್‌ರವರಿಗೆ ಕೊಂಚ ಗಾಯ... ದಿಂದ ಅವರನ್ನು ಆಸ್ಪತ್ರೆಗೆ ಸಾಗಿಸ... ಯಿತು

ವರ್ತಮಾನ ಸಂಗ್ರಹ.

ಹಿಂದೀ ಶಿಕ್ಷಣ.

ಚಿಕ್ಕಮಗಳೂರು ಹೈಸ್ಕೂಲಿನಲ್ಲಿ ಹಿಂದಿ ಭಾಷೆಯನ್ನು ಐಚ್ಛಿಕ ಭಾಷೆಯಾಗಿ ತೆಗೆದುಕೊಳ್ಳಲು ಅನುಮತಿ ಇತ್ತಿದ್ದಾರೆ. ಸುಮಾರು 10 ಜನರು ಈ ಭಾಷೆಯನ್ನು ತೆಗೆದುಕೊಂಡಿದ್ದಾರೆ. ರಾಷ್ಟ್ರಭಾಷಾ ವಿಶಾರದರಾದ ಶ್ರೀ ಸಿ ಆರ್. ರಾಮಣ್ಣನವರು ಕಲಿಸುತ್ತಿದ್ದಾರೆ. ಈ ಊರಿನ ಮಹಿಳಾ ಸಮಾಜದಲ್ಲಿ ಹಿಂದಿ ಭಾಷೆಯನ್ನು ಕಲಿಸುತ್ತಿದ್ದುದು ಈಗ ನಿಂತಿದೆ. ಪುನಃ ಕಲಿಸಲು ಸಮಾಜದವರು ಏರ್ಪಾಡು ಮಾಡುತ್ತಾರೆ.

ಉಪನ್ಯಾಸ.

ಸರ್ ಟಿ ವಿಜಯರಾಘವಾಚಾರ್ಯರವರು ಬೆಂಗಳೂರಿನಲ್ಲಿ ಸೆಪ್ಟೆಂಬರ್ 12ನೇ ತಾರೀಖು ಸಾಯಂಕಾಲ ಅಂತರ ರಾಷ್ಟ್ರೀಯ ಸಭೆ ಮತ್ತು ಅದರ ಭವಿಷ್ಯ ಎಂಬ ವಿಷಯವಾಗಿ ಭಾಷಣಮಾಡುವರು. ಈ ವಿಷಯವಮೇಲೆ ಸ್ಯೆಸೂರಿನ ಲ್ಲಿ ಸೆಪ್ಟೆಂಬರ್ 11ನೇ ತಾರೀಖು ಭಾಷಣಮಾಡುವರು.

ಭದ್ರಾ ಪ್ರಾಜೆಕ್ಟ್.

ಭದ್ರಾ ಪ್ರಾಜೆಕ್ಟಿನ ಒಟ್ಟು ಖರ್ಚು 6½ ಕೋಟಿ ರೂಗಳಾಗುವುವೆಂದು ಗೊತ್ತಾಗಿದೆ. ಇದರಿಂದ ಸುಮಾರು 2 ಲಕ್ಷ ಎಕರೆ ಜಮೀನುಗಳು ಸಾಗುವಳಿಯಾಗುವುದೆಂದೂ ನೀರಾವರಿ ಕೆಲಸವೇ ಅದರ ಮುಖ್ಯ ಉದ್ದೇಶವೆಂದೂ, 17000 ಅಶ್ವಶಕ್ತಿಯ ವಿದ್ಯುಚ್ಛಕ್ತಿ ಉತ್ಪತ್ತಿ ಮಾಡುವುದು, ಮಾಡಿ 2 ಮೈಲಿ ಉದ್ದ ಸುರಂಗ ಮಾರ್ಗವನ್ನು ಏರ್ಪಡಿಸುವುದು, ಇದಕ್ಕೆ ಸುಮಾರು 75 ಲಕ್ಷ ರೂಗಳು ಖರ್ಚಾಗುವುದೆಂದೂ ಗೊತ್ತಾಗಿದೆ.

ಬ್ಯಾಂಕ್ ಅಪರಾಧಿಗಳು ಸೆಷನ್ಸಿಗೆ

ಬೆಂಗಳೂರು ಅನೆಕ್ಸ್ ಬ್ಯಾಂಕಿನ ...000 ರೂಗಳ ಫೋರ್ಜರಿ ಮೊಕದ್ದಮೆಯಲ್ಲಿ ಬೆಂಗಳೂರು ಸಿಟಿ ಮ್ಯಾಜಿಸ್ಟ್ರೇಟರು ಈ ಮಾಹೆ 21 ನೇ ತಾರೀಖು ಅಪರಾಧಿಗಳಾದ ವೆಂಕಟಸುಬ್ಬಯ್ಯ, ರಾಜಯ್ಯಂಗಾರ್ ಇವರುಗಳನ್ನು ಸೆಷನ್ಸ್ ವಿಚಾರಣೆಗೆ ಕಮಿಟ್ ಮಾಡಿದರು.

ಉಪ ಚುನಾವಣೆ

ಬೆಂಗಳೂರು ಬಸವನಗುಡಿ ಉಪ ಚುನಾವಣೆ ಈ ಮಾಹೆ 27ನೇ ತಾರೀಖು ನಡೆದು, ಕೂಲಿಗಾರರ ಮುಖಂಡರಾದ ಸ್ವತಂತ್ರ ರ. ವಿಜಯರಾಮಲಿಂಗಾಚಾರರು ...

ಸೇತುವೆಯ ರಕ್ಷಣೆ.

ಶ್ರೀರಂಗಪಟ್ಟಣದಲ್ಲಿ ಮುರಿದು ಬಿದ್ದಿರುವ ವೆಲ್ಲೆಸ್ಲಿ ಸೇತುವೆಯನ್ನು ಏನ್ಶಿಯೆಂಟ್ ಮಾನ್ಯುಮೆಂಟ್ ಎಂದು ಘೋಷಿಸಿ ಸುತ್ತಲೂ ಕಬ್ಬಿಣದ ಕಟ್ಟೆ ಹಾಕಿ ರಕ್ಷಿಸುವಂತೆ ಅಪ್ಪಣೆಯಾ...

ಮರಣ ದಂಡನೆ

ಬೆಂಗಳೂರು ಕುಂಬಾರಪೇಟೆ ವಾಸಿ ಯಲ್ಲಮ್ಮ ಎಂಬುವನು ತನ್ನ ಅತ್ತಿಗೆ ಪಾರ್ವತಮ್ಮ ಎಂಬುವಳನ್ನೂ, ಹೋಟಲು ಕೆಲಸದವನಾದ ಶ್ರೀನಿವಾಸಮೂರ್ತಿ ಎಂಬುವನನ್ನೂ ಒಂದು ಪ್ರಣಯ ಪ್ರಸಂಗದಲ್ಲಿ ಕಂಡು ಅವರೀರ್ವರನ್ನೂ ಕೊಲೆಮಾಡಿ ಮೊಕದ್ದಮೆಯ ತೀರ್ಪನ್ನು ಈ ಮಾಹೆ 26 ನೇ ತಾರೀಖು ಬೆಂಗಳೂರು ಡಿಸ್ಟ್ರಿಕ್ಟ್ ಮತ್ತು ಸೆಷನ್ಸ್ ಜಡ್ಜರು ಇತ್ತು ಅಪರಾಧಿಗೆ ಮರಣದಂಡನೆಯನ್ನು ವಿಧಿಸಿದರು.

ಅಂತರರಾಷ್ಟ್ರೀಯ ಸಮ್ಮೇಳನಕ್ಕೆ ಕಮಲಾದೇವಿಯವರು.

ಅಖಿಲ ಭಾರತ ಕಾಂಗ್ರೆಸ್ ಸೋಷಿಯಲಿಸ್ಟ್ ಪಾರ್ಟಿಯವರು ಈ ಮಾಹೆ 21ನೇ ತಾರೀಖು ಸಭೆ ಸೇರಿ ಕೆಳಗೆ ಕಂಡ ನಿರ್ಧಾರಗಳನ್ನು ಮಾಡಿದರು. 1) ಕಾಂಗ್ರೆಸ್ಸು ಪ್ರಸಿದ್ಧಪತ್ರಿಕೆಗೆ ಸಹಕಾರವನ್ನೀಯುವುದು 2) ರವೊಲ್ಯೂಷನರಿ ಸೋಷಿಯಲಿಸ್ಟ್ ಯೂನಿಟ್ಟಿನ ಅಂತರರಾಷ್ಟ್ರೀಯ ಸಮಿತಿಯಿಂದ ಬಂದಿರುವ ಆಹ್ವಾನವನ್ನು ಸ್ವೀಕರಿಸಿ ಶ್ರೀ ಕಮಲಾದೇವಿ ಚಟ್ಟೋಪಾಧ್ಯಾಯರವರನ್ನು ಮುಖ್ಯ ಪ್ರತಿನಿಧಿಯಾಗಿಯೂ ಲಂಡನ್ನಿನ ಕಾರ್ಯದರ್ಶಿಗಳನ್ನು ಪ್ರತಿನಿಧಿಯಾಗಿಯೂ ಚುನಾಯಿಸಲಾಯಿತು.

ಜರ್ಮನ್ ಶಸ್ತ್ರಾಸ್ತ್ರಗಳ ವಿಸ್ತಾರ.

ಸೋವಿಯಟ್ ರಾಷ್ಟ್ರ ಪ್ರಭುತ್ವ ನೀತಿಯನ್ನೂ, ಅದರ ಮಿಲಿಟರಿ ಭಯೋತ್ಪಾದನೆಯನ್ನೂ ಎದುರಿಸಲು ಜರ್ಮನಿಯು ತನ್ನ ಮೂರು ಶಸ್ತ್ರ ಸಜ್ಜಿತ ಪಡೆಯವರೂ ಎರಡು ವರ್ಷಗಳವರೆಗೆ ಸಿದ್ಧರಾಗಿರಬೇಕೆಂದು ನಿರ್ಧಾರಮಾಡಿರುತ್ತದೆ. ಜರ್ಮನಿಯ ಹೆರ್ ಹಿಟ್ಲರನು ಬಲಾತ್ಕಾರವಾದ ಸೈನ್ಯ ಸೇವೆಯನ್ನು ಒಂದು ವರ್ಷದಿಂದ ಎರಡು ವರ್ಷಕ್ಕೆ ಹೆಚ್ಚಿಸಿರುತ್ತಾನೆ. ಜರ್ಮನ್ ಸೈನ್ಯಶಕ್ತಿಯನ್ನು 10 ಲಕ್ಷಕ್ಕೆ ಹೆಚ್ಚಿಸುತ್ತಾನೆ.

ಭೌತಿಕ ಶಾಸ್ತ್ರ ವ್ಯಾಸಂಗಕ್ಕೆ ಸಹಾಯ

ಸರ್ ಸಿ ವಿ ರಾಮನ್‌ರವರು ಆಂಧ್ರ ವಿಶ್ವ ವಿದ್ಯಾನಿಲಯದ ಭೌತಿಕ ಶಾಸ್ತ್ರದಲ್ಲಿ ಪರಿಶೋಧನೆ ನಡೆಸಲು ಅನುಕೂಲವಾಗುವಂತೆ ಪ್ರತಿ ತಿಂಗಳೂ 100 ರೂಗಳ ಸಹಾಯ ಮಾಡುವುದಾಗಿ ಸ್ಥಾನಪತಿಗಳಾದ ಶ್ರೀ ಸಿ ಆರ್. ರೆಡ್ಡಿಯವರಿಗೆ ತಿಳಿಸಿರುತ್ತಾರೆ. ಈ ಸಹಾಯದಲ್ಲಿ 2 ಸಂಶೋಧಕರಿಗೆ ತಲಾ 50 ರೂಗಳ ವಿದ್ಯಾರ್ಥಿ ವೇತನವನ್ನು ಕೊಡಲಾಗುವುದು.

ದೇಶಭಾಷೆಯ ಪ್ರೋತ್ಸಾಹ.

ಆಂಧ್ರ ವಿಶ್ವವಿದ್ಯಾಲಯದಲ್ಲಿ ಕಾಲೇಜುಗಳಲ್ಲಿಯೂ ತೆಲುಗು ಭಾಷೆಯಲ್ಲಿಯೇ ಶಿಕ್ಷಣಕೊಡಬೇಕೆಂದು ಏರ್ಪಾಡಾಗುತ್ತಿದೆ. ಅದಕ್ಕಾಗಿ ಪುಸ್ತಕಗಳನ್ನು ತಯಾರುಮಾಡಬೇಕೆಂದು ನಿರ್ಧರಮಾಡಿದ್ದಾರೆ. ಸರಿಯಾದ ಪಠ್ಯ ಪುಸ್ತಕ ಬರೆದವರಿಗೆ ಬಹುಮಾನ ಕೊಡಲಾಗುವುದು.

ಕೂಲಿಗಳ ಮೆರವಣಿಗೆ.

ಬೊಂಬಾಯಿನ ರೈಲ್ವೆ ಕೂಲೀಕಾರರಾದ 3,000 ಜನರು ಅಖಿಲ ಭಾರತ ರೈಲ್ವೆ ಕೆಲಸಗಾರರ ಸಂಘದ ಅಧ್ಯಕ್ಷರಾದ ಶ್ರೀ ಜಮ್ನಾದಾಸ್ ಮೆಹತಾರವರ ಮುಖಂಡತ್ವದಲ್ಲಿ ಈ ಮಾಹೆ 23ನೇ ತಾರೀಖು ಕಾಮಗಾರ್ ಮೈದಾನದಿಂದ ಮೆರವಣಿಗೆ ಹೊರಟರು. ಮೆರವಣಿಗೆಯು ಮುಗಿದ ಮೇಲೆ ಮೆಹತಾರವರ ಅಧ್ಯಕ್ಷತೆಯಲ್ಲಿ ಸಭೆ ಸೇರಿತು. ಪಂಡಿತ ಜವಾಹರ ಆಚಾರ್ಯ ಕೃಪಾಲಿನಿ ಮುಂತಾದವರು ಸಭೆಯಲ್ಲಿ ಹಾಜರಿದ್ದರು. ಪಂಡಿತ ಜವಾಹರರು ಸಭೆಯಲ್ಲಿ ಭಾಷಣಮಾಡುತ್ತಾ ದೇಶದ ಸ್ವಾತಂತ್ರ್ಯವನ್ನು ಗಳಿಸದೇ ಕೆಲಸಗಾರರ ಗೋಳು ಕೊನೆಗಾಣಲಾರದು ಎಂದು ತಿಳಿಸಿದರು.

ಕಮಲಾ ನೆಹರೂರವರ ಸ್ಮಾರಕ

ಬೊಂಬಾಯಿ ರಾಷ್ಟ್ರೀಯ ಸ್ತ್ರೀ ವ್ಯಾಪಾರಸಂಘದವರು ಮತ್ತು ಮಹಿಳಾ ಸಂಘದವರು ಈ ಮಾಹೆ 23ನೇ ತಾರೀಖು ಪಂಡಿತ ಜವಾಹರಲಾಲರನ್ನು ಸ್ವಾಗತಿಸಿ ಕಮಲಾ ಸ್ಮಾರಕ ನಿಧಿಗೆ 12,250 ರೂಗಳನ್ನು ಸಲ್ಲಿಸಿ ಒಂದು ಮಾನಪತ್ರವನ್ನೂ ಅರ್ಪಿಸಿದರು.

ರಾಜದ್ರೋಹಕ್ಕೆ ಗುಂಡಿನೇಟು.

ರಷ್ಯದಲ್ಲಿ ರಾಜದ್ರೋಹದ ಅಪಾದನೆಗೆ ಗುರಿಯಾಗಿದ್ದ 16 ಜನರಿಗೆ ಮರಣದಂಡನೆಯನ್ನು ವಿಧಿಸಲಾಗಿತ್ತು. ಅವರು ಕಾರ್ಯನಿರ್ವಾಹಕ ಮಂಡಲಿಯ ಅಧ್ಯಕ್ಷರಲ್ಲಿ ಅಪೀಲು ಮಾಡಿದರು. ಅವರ ಅಪೀಲು ತಿರಸ್ಕೃತವಾಗಿ 16 ಜನರನ್ನೂ ಗುಂಡಿನಿಂದ ಸುಟ್ಟರು.

೩೦ ವರ್ಷಗಳ ಬಂಧನ

ಸಯಾಮ ಕೋರ್ಟಿನಲ್ಲಿ ಒಬ್ಬ ರೈಲ್ವೆ ಪ್ರಯಾಣಿಕನ ಜೇಬಿನಿಂದ ಹತ್ತು ರೂಪಾಯಿ ಕದ್ದದ್ದಕ್ಕಾಗಿ ಒಬ್ಬ ರೈಲ್ವೆ ಸಿಪಾಯಿಗೆ 3 ವರ್ಷಗಳ ಕಠಿಣ ಶಿಕ್ಷೆ ಮತ್ತು 27 ವರ್ಷಗಳಕಾಲ ತನ್ನ ಗ್ರಾಮದಲ್ಲೇ ಇರಬೇಕೆಂಬ ನಿರ್ಬಂಧವೂ ಮಾಡಲ್ಪಟ್ಟಿದೆ.

ವಿಶೋಧ್ರೋಂ ನಿರ್ನಾಮ

ಮ್ಯಾಡ್ರಿಡ್ ವಿಮಾನ ನಿಲ್ದಾಣಕ್ಕೆ ಕ್ರಾಂತಿಕಾರರ 21 ವಿಮಾನಗಳು 100 ಬಾಂಬುಗಳನ್ನು ಎಸೆದು ಆ ಪ್ರದೇಶವನ್ನು ಧ್ವಂಸಮಾಡಿರುತ್ತವೆ.

ಇಟಲಿಗೆ ಹೆಚ್ಚು ಸೈನಿಕರು ಬೇಕಂತೆ!

ಇಟಲಿಯ ಮಿಲಿಟರಿ ಅಧಿಕಾರಿಗಳು ಕಲೋನಿಯಲ್ ಸೈನ್ಯದಲ್ಲಿ ಭಾಗವಹಿಸಲು ವಾಲಂಟಿಯರುಗಳು ಬೇಕಾಗಿದೆ ಎಂದು ಪ್ರಕಟಿಸಿದ್ದಾರೆ. ಇದರಿಂದ ರಜಾದಲ್ಲಿರುವ ಸೈನಿಕರು, ದಿನ್ಸಾರ್ಜ್ ಆದ ಸೈನಿಕರು ಮುಂತಾದವರಿಗೂ ಅವಕಾಶವಿದೆ. ಈ ಸೈನ್ಯವು ಅಬಿಸೀನಿಯ, ಎರಿಟ್ರಿಯ ಮತ್ತು ಸೋಮಾಲೀ ಲ್ಯಾಂಡಿನಲ್ಲಿ ಕೆಲಸಮಾಡುತ್ತದೆ.

ಮಸೀದಿಯಲ್ಲಿ ನೆಗಸ್ಸರು

ಅಬಿಸೀನಿಯಾ ಚಕ್ರವರ್ತಿಯಾದ ನೆಗಸ್‌ರವರು ಲಂಡನ್ನಿನ ವೋಕಿಂಗ್ ಮಸೀದಿಗೆ ಭೇಟಿಯಿತ್ತು ಅಲ್ಲಿ ಒಂದು ಸ್ವಾರಸ್ಯವಾದ ಭಾಷಣವನ್ನು ಮಾಡಿದರು. ನೆಗಸ್ಸರು ತಮಗೆ ಅರ್ಪಿಸಿದ ಬಿನ್ನವತ್ತಳೆಗೆ ಉತ್ತರವೀಯುತ್ತ ಇಸ್ಲಾಂ ಮತಾನುಯಾಯಿಗಳ ಸಹಾನುಭೂತಿಯ ಪ್ರಯತ್ನಗಳನ್ನು ಹೊಗಳಿದರು. ಮಸೀದಿಯ ಇಮಾಂರವರು ನೆಗಸ್ಸರವರಿಗೆ ಒಂದು ಕೊರಾನಿನ ಪ್ರತಿಯನ್ನೂ, ಪೈಗಂಬರ್‌ರವರ ಚರಿತ್ರೆಯನ್ನೂ ಅರ್ಪಿಸಿದರು.

ಆಂಗ್ಲೋ—ಈಜಿಪ್ಟ್ ಒಪ್ಪಂದ

ಆಂಗ್ಲೋ—ಈಜಿಪ್ಟಿನ ಒಪ್ಪಂದಕ್ಕೆ ಲೋಕಾರ್ನೊ ಭವನದಲ್ಲಿ ಈ ಮಾಹೆ 26ನೇ ತಾರೀಖು ಸಹಿ ಹಾಕಲ್ಪಟ್ಟಿತು. ಇದಕ್ಕಾಗಿ ಈಜಿಪ್ಟಿನ ಮುಖ್ಯ ಮಂತ್ರಿಗಳಾದ ನಾಹಸ್ ಪಾಷಾರವರ ನಾಯಕತ್ವದಲ್ಲಿ ಕೆಲವು ರಾಜಕೀಯ ಧುರೀಣ ಅಧಿಕಾರಿಗಳು ಲಂಡನ್ನಿಗೆ ಹೋಗಿದ್ದರು.

ಗೌರವ ಪ್ರಶಸ್ತಿಗಳು.

ಆಂಧ್ರವಿಶ್ವವಿದ್ಯಾಲಯದ ಸೆನೆಟ್ ಮೀಟಿಂಗಿನಲ್ಲಿ ಬೊಬ್ಬಿಲಿ ರಾಜರು, ಸಿ ಆರ್. ರೆಡ್ಡಿ, ಸರ್ ಕೆ ವಿ ರೆಡ್ಡಿ, ಮತ್ತು ಡಾಕ್ಟರ್ ಎ ಲಕ್ಷ್ಮಣಸ್ವಾಮಿ ಮೊದಲಿಯಾರ್ ರವರುಗಳಿಗೆ ಗೌರವ ಡಿ. ಲಿಟ್ ಡಿಗ್ರಿಗಳನ್ನು ಕೊಡಬೇಕೆಂದು ನಿರ್ಧಾರವಾಯಿತು.

೨೪॥ ಲಕ್ಷ ರೂಪಾಯಿ ಸಾಲ

ಬೊಂಬಾಯಿ ಕಾರ್ಪೊರೇಷನ್ನಿನವರು ಇತರ ಸಾಲಗಳನ್ನು ತೀರಿಸುವುದಕ್ಕೂ ಇತರ ಮುಖ್ಯವಾದ ಉದ್ಯಮಗಳನ್ನು ಮಾಡುವುದಕ್ಕೂ ತಮ್ಮ ನಿಧಿಯಿಂದಲೇ 24½ ಲಕ್ಷ ರೂಪಾಯಿಗಳನ್ನು ಸಾಲವಾಗಿ ಶೀಘ್ರದಲ್ಲಿಯೇ ತೆಗೆದುಕೊಳ್ಳುವರು.

ಯೆಹೂದ್ಯರಿಗೆ ಜುಲ್ಮಾನೆ.

ಸರ್ ಹರ್ಬರ್ಟ್ ಸ್ಯಾಮ್ಯುಯಲ್ ಗ್ರಾಮದಲ್ಲಿ ಒಬ್ಬ ಒರಬ್ಬ ಹೆಂಗಸನ್ನು ಕೊಂದದ್ದರಿಂದ ಆ ಗ್ರಾಮದ ಯಹೂದ್ಯ ಜನಗಳು ಒಟ್ಟಿಗೆ 250 ಪೌಂಡುಗಳನ್ನು ದಂಡವಾಗಿ ಕೊಡಬೇಕೆಂದು ಆಜ್ಞೆಯಾಗಿದೆ.

ಮದ್ರಾಸಿಗೆ ಜವಾಹಿರರು

ಪಂಡಿತ ಜವಾಹಿರಲಾಲ ನೆಹರೂರವರು ಬಾಬು ರಾಜೇಂದ್ರ ಪ್ರಸಾದರವರೊಡನೆ ತಮಿಳುನಾಡು ಕಾಂಗ್ರೆಸ್ ಸಮಿತಿಯವರ ಆಹ್ವಾನವನ್ನು ಮನ್ನಿಸಿ ಮುಂದಿನ ಅಕ್ಟೋಬರ್ ಮಾಹೆಯಲ್ಲಿ ಮದ್ರಾಸಿಗೆ ಆಗಮಿಸುವರು. ಅಲ್ಲಿ ಎರಡುವಾರಗಳವರೆಗೆ ಪ್ರವಾಸಮಾಡುವರು.

ಕಾಂಗ್ರೆಸ್ ಸದಸ್ಯರು ಸೆಪ್ಟೆಂಬರ್ ೩೦ ರ ವರೆಗೆ.

ಕಾಂಗ್ರೆಸ್ ವರ್ಕಿಂಗ್ ಸಮಿತಿಯು ಈ ಮಾಹೆ 23ನೇ ತಾರೀಖು ನಡೆದ ಬೊಂಬಾಯಿ ಅಧಿವೇಶನದಲ್ಲಿ ಸೆಪ್ಟೆಂಬರ್ 30 ರೊಳಗೆ ಸದಸ್ಯರಾಗುವವರಿಗೆ ಪ್ರಾಂತಿಕ ಪ್ರತಿನಿಧಿಗಳ ಚುನಾವಣೆಯಲ್ಲಿ ಓಟಿನ ಅಧಿಕಾರವುಂಟೆಂದು ತೀರ್ಮಾನಿಸಿರುತ್ತದೆ.

ಸಾಧ್ವಿ

೩೧-೮ ೩೬ ನೇ ಸೋಮವಾರ

ಖಾಸಗಿ ಅಧ್ಯಕ್ಷರು ಅವಶ್ಯಕ.

ಪ್ರಜಾ ಪ್ರತಿನಿಧಿ ಸಭೆಯ ಅಧ್ಯಕ್ಷರು ಖಾಸಗಿ ಮನುಷ್ಯರಾಗಿರಬೇಕು. ಸರ್ಕಾರಿ ಅಧಿಕಾರಿಗಳಾಗಕೂಡದು ಈ ವಿಷಯವಾಗಿ ಅನೇಕ ದಿನಗಳಿಂದಲೂ ಕೋರಿಕೆಯು ಸೂಚಿಸಲ್ಪಡುತ್ತಿದೆ. ಮುಂದಿನ ಪ್ರಜಾ ಪ್ರತಿನಿಧಿ ಸಭೆಯಲ್ಲಿ ಸೂಚಿಸಲು ಈ ವಿಷಯವಾಗಿ ಮ॥ ಕೆ. ಎಂ. ಕೃಷ್ಣಪ್ಪನವರು ಒಂದು ರಿಜಲ್ಯೂಷನ್ನು ಮುಂದಿಟ್ಟಿರುವರು. ಇದಕ್ಕಾಗಿ ನಾವು ಅವರನ್ನು ಅಭಿನಂದಿಸುತ್ತೇವೆ. ಈ ನಿರ್ಣಯವು ಸರ್ಕಾರದವರಿಂದ ಅಂಗೀಕರಿಸಲ್ಪಡುವುದೆಂದು ನಾವು ನಂಬುತ್ತೇವೆ.

ನಮ್ಮ ಪ್ರಜಾ ಪ್ರತಿನಿಧಿ ಸಭೆಗೆ ಖಾಸಗಿ ಅಧ್ಯಕ್ಷರಿಲ್ಲದಿರುವುದು ಒಂದು ದೊಡ್ಡ ಕೊರತೆ. ಎಲ್ಲಾ ದೇಶಗಳಲ್ಲಿಯೂ ಶಾಸನ ಸಭೆಗಳಿಗೆ ಜನರಿಂದ ಚುನಾಯಿಸಲ್ಪಟ್ಟ ಖಾಸಗೀ ಜನರೇ ಅಧ್ಯಕ್ಷರಾಗಿರುವರು. ಬ್ರಿಟಿಷ್ ಇಂಡಿಯಾದಲ್ಲೆಲ್ಲಾ ಇದೇ ಪದ್ಧತಿಯೇ ಜಾರಿಯಲ್ಲಿರುವುದು. ಮಾದರಿ ಸಂಸ್ಥಾನವಾದ ನಮ್ಮ ದೇಶದಲ್ಲಿ ಇದು ಇನ್ನೂ ಜಾರಿಯಾಗದಿರುವುದು ಒಂದು ನ್ಯೂನತೆಯೇ ಸರಿ.

ಇದರಲ್ಲಿ ವ್ಯಕ್ತಿಗಳ ವಿಷಯ ಮುಖ್ಯವಲ್ಲ. ಸರ್ಕಾರಿ ಅಧ್ಯಕ್ಷರು ಅರ್ಹರಾದವರು ಬರಬಹುದು. ಅನರ್ಹರಾದವರೂ ಬರಬಹುದು. ಈ ಸಭೆಯಲ್ಲಿ ಸರ್ಕಾರದ ಎಲ್ಲಾ ವಿಷಯಗಳ ಮೇಲಿನ ಚರ್ಚೆಗಳೂ ಬರುವುವು. ಅನೇಕವೇಳೆ ಅಧಿಕಾರಿಗಳ ನಡವಳಿಕೆಗಳನ್ನು ಖಂಡಿಸಬೇಕಾಗುವುದು. ಅಧಿಕಾರಿವರ್ಗದ ಅಧ್ಯಕ್ಷರಿದ್ದರೆ ಹಲವುವೇಳೆ ಇದಕ್ಕೆ ಅವಕಾಶ ದೊರೆಯಲಾರದು. ದೊರೆತರೂ ನಿರ್ದಾಕ್ಷಿಣ್ಯವಾಗಿ ಮಾತನಾಡಲು ಅವಕಾಶವಿಲ್ಲದೆ ಹೋಗಬಹುದು. ಅಂತೂ, ಈ ಸಭೆಗಳು ಸ್ಥಾಪಿಸಲ್ಪಟ್ಟ ಉದ್ದೇಶವು ನೆರವೇರುವುದಿಲ್ಲ. ಇದಕ್ಕೆ ಉದಾಹರಣೆಯಾಗಿ ಈಗಿನ ಪ್ರಜಾಪ್ರತಿನಿಧಿ ಸಭೆಯ ಕೆಲಸಗಳನ್ನು ನೋಡಬಹುದು. ಅಧಿಕಾರಿಗಳು ಪ್ರಶ್ನೆಗಳ ಮೇಲೆ "ಆಗಲಿ, ನೋಡೋಣ, ಪರಿಶೀಲಿಸುತ್ತೇವೆ" ಮುಂತಾಗಿ ಕೊಡುವ ಉದಾಸೀನದ ಉತ್ತರಗಳು ಖಾಸಗಿ ಅಧ್ಯಕ್ಷರಿದ್ದರೆ ತಕ್ಕಮಟ್ಟಿಗೆ ಕಡಿಮೆಯಾಗುವವು. ಸಭೆಯ ಪಕ್ಷ ನಿರ್ದಾಕ್ಷಿಣ್ಯವಾದ ಟೀಕೆಗಳಿಗೂ ಅವಕಾಶವಾಗುವುದು. ನಮ್ಮ ಪ್ರತಿನಿಧಿಗಳು ಈ ವಿಷಯಕ್ಕೆ ಏಕವಾಕ್ಯತೆಯಿಂದ ಸಮ್ಮತಿಸಿ ಶೀಘ್ರದಲ್ಲಿಯೇ ಖಾಸಗಿ ಅಧ್ಯಕ್ಷರನ್ನು ಪಡೆಯಲೆಂದು ಹಾರೈಸುತ್ತೇವೆ.

ಸಹಕಾರವೂ ವ್ಯವಸಾಯಾಭಿವೃದ್ಧಿಯೂ.

ಜನ ಸಾಮಾನ್ಯದಲ್ಲಿ [illegible]ಯನ್ನು ಕಾಪಾಡುವುದಕ್ಕಾಗಿಯೇ ಇರುವ ಕಾಲವು ಕಳೆದುಹೋಯಿತು. ಜನಾಂಗದ ಆರ್ಥಿಕೋನ್ನತಿಗಾಗಿಯೇ ಲಭಿಸಬೇಕಾದ ಕಾಲವು. ಆರ್ಥಿಕೋನ್ನತಿಯಲ್ಲಿ ಸಹಕಾರ ತತ್ವಕ್ಕೆ ಬಹು ಮುಖ್ಯ ಸ್ಥಾನವಿದೆ. ನಮ್ಮ ದೇಶದ ಸಹಕಾರವು ಯಾವ ಸ್ಥಿತಿಯಲ್ಲಿರುವುದೆಂಬುದನ್ನು ಕುರಿತು ವಿವೇಚಿಸಿ, ಸಲಹೆಗಳನ್ನು ಕೊಡಲು, ಶ್ರೀಯುತ ದಿವಾನ್ ಬಹದ್ದೂರು [illegible] ಅಯ್ಯರವರ ಅಧ್ಯಕ್ಷತೆಯಲ್ಲಿ ಒಂದು ಸಭೆಯನ್ನು ಸಕಾಲದಲ್ಲಿ ಸರ್ಕಾರದವರು ನಿಯಮಿಸಿದುದೂ, ಸಭೆಯು ಒಂದು ವರದಿಯನ್ನು ಒಪ್ಪಿಸಿರುವುದೂ ಜನಸಾಮಾನ್ಯಕ್ಕೆ ತಿಳಿದಿರುವುದೆಂದು ಭಾವಿಸುವೆವು.

ದೇಶದ [illegible] ಪಟ್ಟಿ, ಸಾಮಾನ್ಯವಾಗಿ ಈ ಸಭೆಯವರಿಗಿಂತಲೂ ಈ ಕಾರ್ಯಕ್ಕೆ ಹೆಚ್ಚು ಸಮರ್ಥರಾದವರನ್ನು ಆರಿಸುವುದು ಶಕ್ಯವಲ್ಲ. ಅವರಾದರೂ ಸಾಕಾದಷ್ಟು ಕೆಲಸಮಾಡಿರುವಂತೆಯೇ ತೋರುವುದು. ಸಹಕಾರ ತತ್ವವು ಪ್ರವಹಿಸುತ್ತಿರುವ ದಾರಿಯಲ್ಲಿ ಸಿಕ್ಕುವ ಅಡಚಣೆಗಳೆಲ್ಲವನ್ನೂ ಸಮಗ್ರವಾಗಿಯೇ ಈ ಸಭೆಯು ವಿವೇಚಿಸಿರುವುದೆಂದು ನಂಬಬಹುದು. ಜನಾಭಿಪ್ರಾಯವನ್ನಾದರೂ ತನಗೆ ತೋಚಿದಂತೆ ಪಡೆದಿದೆ, ಎಲ್ಲೆಲ್ಲ ಸಂಚಾರವನ್ನೂ ಮುಗಿಸಿದೆ. ಎಲ್ಲವೂ ಸರಿಯೆ. ದೇಶದ [illegible] ದೃಷ್ಟಿ, ಸಹಕಾರ ಪ್ರವಾಹವು ನಮ್ಮ ದೇಶದ ಏಳಿಗೆಯ ಮಾರ್ಗದಲ್ಲಿ ಪ್ರವಹಿಸುತ್ತಿಲ್ಲವೆಂದು ಬಹು ವಿಷಾದದಿಂದ ತಿಳಿಸಬೇಕಾಗಿದೆ. ಅದು ಅನುಕರಣ ತಾತ್ಕಾಲಿಕ ಅವಶ್ಯಕತೆಯನ್ನು ಪೂರೈಸಲು ನೆರವಾಗುತ್ತಿದೆ ಮಾತ್ರ.

ಹಿಂದಿನ ರಿಜಿಸ್ಟ್ರಾರರವರ ಕಾಲದಲ್ಲಿ ಸಹಕಾರ ತತ್ವವು ಹರಡಿದುದು ಸತ್ಯ. ಆದರೆ ಅದು ಕ್ರಮಪಡುತ್ತಿರುವುದು ಈಗಿನ ರಿಜಿಸ್ಟ್ರಾರರ ಕಾಲದಲ್ಲಿ. ಈ ಇಲಾಖೆಯ ಅಭಿವೃದ್ಧಿ ಕಾರ್ಯಗಳನ್ನೂ ಕಾರಣರಾದವರನ್ನೂ ಕೋರ್ಟಿನ ದೃಷ್ಟಿಯಿಂದ ನೋಡಿದರೆ ಈಗಿನ ರಿಜಿಸ್ಟ್ರಾರರಿಗೆ ಕೃತಜ್ಞತೆ ಸಲ್ಲಬೇಕು. ಈಗಿನ ಸಭೆಯು ಹಲವು ಉಪಯುಕ್ತ ಸೂಚನೆಗಳನ್ನು ಕೊಟ್ಟು ಉಪಕರಿಸಿದೆ. ಕೂಲಿಕಾರರ ಸಂಘಗಳನ್ನು ಸ್ಥಾಪಿಸಿ, ಅವರಿಗೆಯೇ ಸರ್ಕಾರದ ಕೆಲಸಗಳನ್ನು ವಹಿಸುವುದರ ಮೂಲಕ ಅವರ ಉನ್ನತಿಗೆ ನೆರವಾಗಬೇಕೆಂದು ಸೂಚಿಸಿರುವುದು ಇದು ಅತ್ಯುತ್ತಮ ಸಲಹೆ.

ಇಂದು ದೇಶಕ್ಕೆ ಬೇಕಾದುದೇನು? ಮುಖ್ಯವಾಗಿ ಹಳ್ಳಿಗಾಡಿನ ನೀರಾವರಿಯ ಪ್ರಶ್ನೆ. ಕುಡಿಯುವುದಕ್ಕಾಗಲೀ ವ್ಯವಸಾಯಕ್ಕಾಗಲೀ ದೇವದತ್ತವಾದ ನೀರನ್ನು ಆರ್ಥಿಕೋನ್ನತಿಗೆ, ಜೀವನ ನಿರ್ವಹಣಕ್ಕೆ ತಕ್ಕಂತೆ ವಿನಿಯೋಗಿಸುವ ಸಮಸ್ಯೆ. ಜೀವನದಿಗಳ ದಡದಲ್ಲಿ ನಾಲೆಗಳ ಮೂಲಕ ಈ ಸಮಸ್ಯೆಯು ನಮ್ಮ ಸರ್ಕಾರದವರಿಂದ ಕೂಡಿನ ಮಟ್ಟಿಗೆ ಸಮರ್ಪಕವಾಗಿಯೇ ಪೂರೈಸಲ್ಪಟ್ಟಿರುವುದುಂಟು. ಆದು ದೇಶದ ದಾಹಕ್ಕೆ ಸಾಲದು. ಸರ್ವತ್ರ ಹರಡಿರುವ ಕೆರೆಕುಂಟೆಗಳನ್ನು ಸಮರ್ಪಕವಾಗಿಟ್ಟಿಲ್ಲದೆ ಈ ಸಮಸ್ಯೆಯು ಪ್ರಗತಿದಾಯಕವಾಗದು. ಈ ಸಭೆಯವರು ನೀರಾವರಿಯ ಸಹಕಾರ ಸಂಘಗಳನ್ನು ಕುರಿತು ಏನೊಂದನ್ನೂ ಬರೆದಿಲ್ಲ. ಕ್ಷೀಣವಾಗುತ್ತಿರುವ, ಒಡೆದು ಹೋಗಿ ರಿಪೇರಿ ಇಲ್ಲದಿರುವ ಕೆರೆಗಳ ಜೀರ್ಣೋದ್ಧಾರಕ್ಕೆ ಈ ಸಹಕಾರ ತತ್ವವನ್ನು ಹೇಗೆ ಉಪಯೋಗಿಸಬೇಕೆಂಬ ಬಗ್ಗೆ ಸರ್ಕಾರದವರ ಮತ್ತು ಮಹಾಜನರ ಗಮನವು ಅವಶ್ಯಕವಾಗಿ ಕೊಡಲ್ಪಡಬೇಕಾಗಿದೆ.

ನಮ್ಮಲ್ಲಿ ರಾಜನೀತಿ ಚಳವಳಿಗೆ ಅಭಾವವಿಲ್ಲ. ಅರ್ಥಶಾಸ್ತ್ರಜ್ಞರಿಗೆ ಕುಂದಿಲ್ಲ. ಕೇವಲ ನಾಲೆಗಳಿಂದ ಅಂದರೆ ಜೀವನದಿಗಳಿಂದಲೇ ದೇಶವೆಲ್ಲವನ್ನೂ ತೃಪ್ತಿಪಡಿಸಲು ಸಾಧ್ಯವಿಲ್ಲವೆಂಬುದಂತೂ ಮಕ್ಕಳಿಗೂ ತಿಳಿದ ಮಾತು. ಜೀವನಾಧಾರಗಳಾದ ಕೆರೆಕುಂಟೆಗಳೇ ಇಂದಿಗೂ ಜೋಳೇಗೌಡನ ಬೆನ್ನೆಲುಬು. ಅವುಗಳ ಸ್ಥಿತಿಯು ಶೋಚನೀಯವಾಗಿರುವುದೆಂದೂ ಬಳಕೆಯಲ್ಲಿ ಜನಾಂಗಕ್ಕೂ ಅನುಭವವಿರುವ ಅಂಶ. ಮನಸ್ಸುಮಾಡಿದರೆ ಸಹಕಾರ ತತ್ವವನ್ನು ಈ ಸಮಸ್ಯೆಗೆ ಹೊಂದಿಸುವುದು ಆಗದ ಕಾರ್ಯವಲ್ಲ.

ಈಗಿನ ನಮ್ಮ ಹೆಲ್ತ್ ಆಫೀಸರ್‌ರವರೂ ಸಹ, ಆಗಿನ ಅಧ್ಯಕ್ಷರಾಗಿದ್ದ ಶ್ರೀ॥ ಮಾಧವರಾಯರ ಪದ್ಧತಿಯನ್ನೇ ಅಂಗೀಕರಿಸಬಾರದೇಕೆ?

ಇಷ್ಟೇನು! ಒಳ್ಳೆ ಪ್ಲಾನುಗಳನ್ನು ಮಾಡಿ ಕಾನೂನು ನೋಡತಕ್ಕವರಿಗಿಂತ ಸಂಸಾರದಲ್ಲಿ ಸುಡುಗಿ, ಬಡಜನರ ಕಷ್ಟನಿಷ್ಠುರಗಳನ್ನರಿತು ಪೂರ್ವಾಪರಗಳನ್ನು ಬಲ್ಲ ವಯೋವೃದ್ಧರುಗಳೇ ಇಂತಹ ಸಾರ್ವಜನಿಕ ಕೆಲಸಗಳಿಗೆ ಹೆಚ್ಚು ಅರ್ಹರು. ಅಂಥವರನ್ನು ಇಂದಿನ ಹರೆಯದವರು "ವೃದ್ಧಜಂಬುಕಗಳೆಂದು" ಕರೆದರೂ ಅವರಿಂದ ನಗರ ರಕ್ಷಣೆಯೂ, ಹಿತವೂ ಎಷ್ಟೋ ಆಗುತ್ತದೆ.

ಇನ್ನೂ ಎಷ್ಟೋ ವಿಷಯಗಳಿವೆ, ಇದೊಂದರಲ್ಲೇ ನಿಮ್ಮ ಕಾಲಹರಣ ಮಾಡಿಸುವುದು ಸರಿಯಲ್ಲ. ಅವಕಾಶಮಾಡಿಕೊಂಡು ಮತ್ತೊಮ್ಮೆ ದರ್ಶನ ತೆಗೆದುಕೊಳ್ಳುತ್ತೇನೆ. ಪ್ರೀತಿ ಇರಲಿ.

ನಮ್ಮ ಪೌರಸಭೆಯ ಕಾರ್ಯದಕ್ಷತೆ.

(ಇಣುಕಪ್ಪನ ನೋಟ)

ಮೊನ್ನೆ ಶುಕ್ರವಾರ ಮಧ್ಯಾಹ್ನದವೇಳೆ ಹಾಗೇ ಹೊರಟೆ. ಸುಮಾರು ಎರಡು ಗಂಟೆ ಇರಬಹುದು. ಹಾರ್ಡಿಂಜ್ ಸರ್ಕಲ್, ಹಸುವಿನ ಕಲೋನಿ ಬೀದಿ, ಹಾಗೂ ಉತ್ತರಾಜಿಮಠದ ಬೀದಿ ಕಡೆಗೂ ಹೋದೆ. ನಾನು ಇಷ್ಟುದಿನ ಊರಲ್ಲಿಲ್ಲದೆ ಇದ್ದೇ ಹೊರಟಿದ್ದಕ್ಕೆ ತಕ್ಕಹಾಗೆ ಹೊಸನೋಟ, ಹೊಸಜನರು, ಹೊಸ[illegible], ಹೊಸ ಅರ್ಬ್. ಅದೂ ಎಲ್ಲಿ? ಶಂಕರಾಲಯದ (ದಕ್ಷಿಣದ) ಹಿಂಬದಿ ಮತ್ತು ಛತ್ರದವರಿಗೆ ಇರತಕ್ಕ ಶ್ರೀರಾಮ ಬೀದಿಯಿಂದ ಕೆರೆ ಏರಿ ಕೆಳಗಿನವರೆಗಿನ ರಸ್ತೆ.

ಅಲ್ಲಾನ್ ಮಮಾಲಿನವರೂ, (ರಸ್ತೆಯ) ಜಾಮರಸತಿಗಳೂ ಬೈಸಿಕಲ್ ಸವಾರರಾದ ಉದ್ಯೋಗಿಗಳೂ ಓಡಾಡಿದ್ದು ಓಡಾಡಿದ್ದು. ಹಾಗೇ ದಿಟ್ಟಿಸಿ ನೋಡಿದೆ. ಅವರೆಲ್ಲಾ ನಮ್ಮ ಪೌರಸಭೆಯ ಆರೋಗ್ಯ ಶಾಖೆಗೆ ಸೇರಿದವರೆಂದು ತಿಳಿಯಿತು. ಆಫೀಸರುಗಳ ಇನ್‌ಸ್ಪೆಕ್ಷನ್ ಇದೆ ಎಂದು ಗೊತ್ತಾಯಿತು.

ವರ್ಷಾಂತರದ ಹೊಲಸು ಒಂದು ಹೊತ್ತಿನಲ್ಲಿ ಹಾಳಾಗುವುದೇ? ಇನ್ಸ್‌ಪೆಕ್ಷನ್ ಮಾಡುವ ಕ್ರಮವಾದರೂ ಈ ರೀತಿಯೇ? ಇನ್ಸ್‌ಪೆಕ್ಷನ್ ನೋಟೀಸನ್ನೇ ಕೊಡಬಾರದು. ಇದ್ದಕ್ಕಿದ್ದಂತೆಯೇ ಮನಬಂದರೀತಿಯಲ್ಲಿ ಕ್ಷೇತ್ರಸ್ಸಿನಲ್ಲಿ ಯಾರಿಗೂ ತಾವು ಬಂದವರೆಂಬ ತಿಳಿಯದ ರೀತಿಯಲ್ಲಿ ನಗರದ ಗಲ್ಲಿಗಲ್ಲಿಗಳನ್ನೂ, ಸಂದಿಗೊಂದಿಗಳನ್ನೂ ಅಜಮಾಯಿಷಿ ಮಾಡಬೇಕು.

ಆರೋಗ್ಯಾಧಿಕಾರಿಗಳೇ ಆಗಲಿ, ಪೌರಸಭಾಧ್ಯಕ್ಷರೇ ಆಗಲಿ, ಇಲ್ಲವೇ ಪೌರಸಭೆಯ ಸದಸ್ಯರೇ ಆಗಲಿ ವಾಹನಗಳನ್ನು ಬಿಟ್ಟು ಕಾಲ್ನಡಗೆಯಲ್ಲಿ ಪರೀಕ್ಷಿಸಿ [illegible]ವನ್ನಿಟ್ಟುಕೊಳ್ಳುವುದು ಪ್ರಜಾ ಹಿತದೃಷ್ಟಿಯಿಂದ ಬಹು ಶ್ರೇಯಸ್ಕರ. ಯಾವಾಗಲೂ ಹೀಗೆ ಮಾಡಬೇಕೆಂದು ಹೇಳುವುದಿಲ್ಲ. ಅದು ಸಾಧ್ಯವೂ ಅಲ್ಲ. ಕಡೆಪಕ್ಷ ತಿಂಗಳಿಗೋ, ಎರಡು ತಿಂಗಳಿಗೋ ಒಂದೊಂದು ಸಲವಾದರೂ ಒಂದು ಚಕ್ಕರ್ ಹಾಕಿ ಬರಬೇಕು.

ಇಂತಹ ಉದಾಹರಣೆಬೇಕೆಂದರೆ, ಈಗ ಮಂತ್ರಿ ಮಂಡಲದಲ್ಲಿ ದ್ವಿತೀಯ ಸದಸ್ಯರಾಗಿರುವ ಶ್ರೀ॥ ನ್ಯಾಪತಿ ಮಾಧವರಾಯರು ಪೌರಸಭಾಧ್ಯಕ್ಷರಾಗಿದ್ದಾಗ, ಅವರ ಎಷ್ಟೋ ಉದಾತ್ತ ಗುಣಗಳು [illegible]ತ್ತಿದ್ದುವು. ಅವರನ್ನು ಕಛೇರಿಯ ನೌಕರರುಗಳ ಕೈಕೆಳಗಾಗಲಿ, ಪ್ರ[illegible]ಗರದವರ ಕೈಕೆಳಗಾಗಲಿ ಹುಡುಕುವ[illegible]ನ್ನು ಕಾಣುವುದು ದುರ್ಲಭವಾಗಿತ್ತು. ಪೌರಸಭೆಯ ಹಣಕಾಸಿನ ಸ್ಥಿತಿ ತಾನೇ [illegible] ಇರಲಿಲ್ಲವೇ? ಈಗ ಅವೆಲ್ಲಾ [illegible]ದ ಮಾತಾಗಿದೆ. ಪೌರಸಭೆಗೆ [illegible]ನಾದರೂ ಇತ್ತೇ?

(ಹಿಂದಿನ ಕಾಲಂ ನೋಡಿ)

ಶ್ರೀ ಅರವಿಂದ ಘೋಷ್

ದೇಶಸೇವೆಯಿಂದ ಪರಮಾತ್ಮನ ಸಾಕ್ಷಾತ್ಕಾರ.

ಲೇಖಕ — ಎ. ಎಂ. ಕೃಷ್ಣಮೂರ್ತಿ.

ಶ್ರೇಷ್ಠವೂ, ಜ್ಯೇಷ್ಠವೂ ಎನಿಸಿ, ಸುಸಂಸ್ಕೃತಿಯ ಅಮೋಘ ಪ್ರಾಚೀನತೆಯನ್ನೂ ಮತ್ತು ನಿರಂತರ ಚೈತನ್ಯವನ್ನೂ ಹೊಂದಿ [illegible]ವೇದಗಳ ಇತಿಹಾಸಗಳಲ್ಲಿ ಸ್ವರ್ಣಾಕ್ಷರಗಳಿಂದ ಕಂಗೊಳಿಸಲ್ಪಟ್ಟ ಪವಿತ್ರ ಭಾರತ ಭೂಮಿಯು ಮಹಾ ಮಹಿಮೆಯುಳ್ಳ ಶ್ರೀ ಅರವಿಂದರವರ ಜನನದಿಂದ ಮತ್ತಷ್ಟು ಉಜ್ವಲ ಕೀರ್ತಿಯುತ ಕಾಂತಿಯೂ [illegible]ಗಳಿಸಲಾರಂಭಿಸಿತು.

೬೫ ವರ್ಷಗಳ ಹಿಂದೆ ಅರವಿಂದರು ಭಾರತ ಭೂಮಿಯಲ್ಲಿ ಜನ್ಮವೆತ್ತಿದರು. ಅವರ ಬಾಲ್ಯವೆಲ್ಲವೂ ಇಂಗ್ಲೆಂಡಿನಲ್ಲಿಯೇ ಕಳೆಯಿತು. ಅವರಿಗೆ ಮೊದಲು ಮಾತೃಭಾಷೆಯ ಅರಿವೇ ಇರಲಿಲ್ಲ. ಇಂಗ್ಲಂಡಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದ ಶ್ರೀ ಘೋಷರಿಗೆ ಐ. ಸಿ ಎಸ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಅಧಿಕಾರದ ಸೂತ್ರಗಳನ್ನು ಹಿಡಿಯಬೇಕೆಂಬುದೇ ಜೀವನದ ಮಹದಾಕಾಂಕ್ಷೆಯಾಗಿದ್ದಿತು. ಆದರೆ ಅವರಿಗೆ ಕುದುರೆ ಸವಾರಿಯು ಬಾರದಿದ್ದ ಕಾರಣ ಉಳಿದ ಎಲ್ಲಾ ಭಾಗಗಳಲ್ಲಿಯೂ ಉತ್ತಮ ದರ್ಜೆಯಲ್ಲಿ ತೇರ್ಗಡೆ ಹೊಂದಿದರೂ ಪರೀಕ್ಷೆಯಲ್ಲಿ ಉತ್ತೀರ್ಣರಾಗಲು ಅವಕಾಶ ದೊರಕಲಿಲ್ಲ.

ನಂತರ ಅರವಿಂದರವರು ಸ್ವದೇಶಕ್ಕೆ ಹಿಂತಿರುಗಿದರು. ಅವರಿಗೆ ಬರೋಡಾ ಗಾಯಕವಾಡರೊಡನೆ ಪರಿಚಯವಾಯಿತು. ಗಾಯಕವಾಡರು ಅವರಿಗೆ ತಮ್ಮ ರಾಜ್ಯದ ಒಂದು ಸಣ್ಣ ಹುದ್ದೆಯನ್ನು ಕೊಟ್ಟರು. ಅವರು ಅಧಿಕಾರವರ್ಗದಲ್ಲಿ ಮುಂದುವರಿಯುತ್ತಾ ಬಂದು, ಕೊನೆಗೆ ಬರೋಡಾ ವಿದ್ಯಾಲಯದ ಸ್ಥಾನಾಧಿಪತಿಗಳಾದರು. ಐ ಸಿ ಎಸ್ ಪರೀಕ್ಷೆಯಲ್ಲಿ ತೇರ್ಗಡೆಯನ್ನು ಹೊಂದಿ ಒಂದು ಸಾಮಾನ್ಯ ಸ್ಥಾನವನ್ನು ಪಡೆಯುವುದಕ್ಕಿಂತ ಅವರ ಈ ಸ್ಥಾನವೇ ವಿಶೇಷ ಖ್ಯಾತಿಯನ್ನು ಗಳಿಸಿತು.

ವಂಗ ವಿಭಜನೆ

ಇಪ್ಪತ್ತನೆಯ ಶತಮಾನದ ಆದಿಯಲ್ಲಿ ನಡೆದ ಬಂಗಾಳೀಯರ ಶೋಚನೀಯ ಸ್ಥಿತಿಯು ಶ್ರೀ ಘೋಷರ ಚಿತ್ತಾಕರ್ಷಣೆ ಮಾಡಿತು. ಬ್ರಿಟಿಷರು ಭಾರತೀಯರ ಶಕ್ತಿಯನ್ನು ಸಡಿಲಿಸುವ ದುರಭಿಪ್ರಾಯದಿಂದ ವೈಸರಾಯ್ ಕರ್ಜನನ ನೇತೃತ್ವದಲ್ಲಿ ಬಂಗಾಳ ದೇಶವನ್ನು ಇಬ್ಭಾಗ ಮಾಡುವ ಹಟ ಹಿಡಿದರು. ಇಂತಹ ವಿಷಮ ಪರಿಸ್ಥಿತಿಯಲ್ಲಿ ಶ್ರೀ ಅರವಿಂದರು ತಮ್ಮ ಅಧಿಕಾರಾಕಾಂಕ್ಷೆಗೆ ತಿಲಾಂಜಲಿಯನ್ನಿತ್ತು ರಾಷ್ಟ್ರಸೃಷ್ಟಿ ನೂತನ ಸಹಕರಿಸಲು ಸಂಕಲ್ಪ ಮಾಡಿದರು. ಭಾರತೀಯ ಬಾಲಕರು ಹೊಂದುತ್ತಿದ್ದ ನವೀನ ವಿದ್ಯಾಭ್ಯಾಸ ಕ್ರಮವನ್ನು ತೊಡೆದುಹಾಕಿ ಸರಿಯಾದ ಶಿಕ್ಷಣವನ್ನು ಕೊಡಬೇಕೆಂಬುದನ್ನು ಅರಿತರು. ಇನ್ನುಮುಂದೆ ಭಾರತೀಯ ಬಾಲಕರಿಗೆ ಈ ದೇಶದ ಸಾಹಿತ್ಯ ಮತ್ತು ಸಂಸ್ಕೃತಿಗನುಸಾರವಾಗಿ ರಾಜಕೀಯ, ಸಾಮಾಜಿಕ, ಆರ್ಥಿಕ, ನೈತಿಕ ಮತ್ತು ಧಾರ್ಮಿಕ ವಿಷಯಗಳೆಲ್ಲವನ್ನೂ ಮನದಟ್ಟಾಗುವಂತೆ ದೇಶೀಯ ಭಾಷೆಯಲ್ಲಿಯೇ ಬೋಧಿಸಬೇಕೆಂದು ನಿರ್ಧರಿಸಿದರು. ಇದೇ ಕಾಲದಲ್ಲಿ ಶ್ರೀ ಘೋಷರು ಭಾರತದ ದುಸ್ಥಿತಿಗಳನ್ನೂ ಮತ್ತು ಅವುಗಳ ಪರಿಹಾರ ಸಾಧನೆಗಳನ್ನೂ “ವಂದೇ ಮಾತರಂ” ಎಂಬ ಪ್ರಸಿದ್ಧ ಪತ್ರಿಕೆಯಲ್ಲಿ ತಮ್ಮ ಅಮೋಘವಾದ ಲೇಖನಗಳ ಮೂಲಕ ಸೂಕ್ಷ್ಮವಾಗಿ ವಿವರಿಸುತ್ತಾ ಬಂದರು.

ಮಹದಾಕಾಂಕ್ಷೆ.

ಶ್ರೀ ಘೋಷರವರ ಉದಾತ್ತ ಧ್ಯೇಯಗಳ ಪ್ರಭಾವವು ಬೆಳೆಯುತ್ತ ಬಂತು. ಪರಮೇಶ್ವರನ ಸಾಕ್ಷಾತ್ಕಾರವನ್ನು ಹೊಂದಬೇಕಾದರೆ ಪ್ರತಿಯೊಬ್ಬನೂ ಸರ್ವವನ್ನೂ ತ್ಯಾಗ ಮಾಡಲು ಸಿದ್ಧವಿರಬೇಕೆಂಬ ಅಮೂಲ್ಯ ಸಾಧನವನ್ನು ಸಾರಿ ಹೇಳಿದರು. ವೀರ ಭಾವನೆಯಿಂದ ಭಾರತಾಂಬೆಯ ದಾಸ್ಯವನ್ನು ನಿವೃತ್ತಿ ಮಾಡಿ ಸ್ವಾತಂತ್ರ್ಯವೆಂಬ ಮಹಾಭೀಷ್ಟವನ್ನು ಪಡೆಯಬೇಕೆಂದು ಸೊಂಟ ಕಟ್ಟಿದವರಲ್ಲಿ ಶ್ರೀ ಘೋಷರೇ ಜ್ಯೇಷ್ಠರು ಮತ್ತು ಶ್ರೇಷ್ಠರು. ೧೯೦೮ನೇ ಇಸವಿ ಮೇ ತಿಂಗಳು ೩ನೇ ತಾರೀಖು ಪ್ರಾತಃಕಾಲ ಅವರನ್ನು ಪೋಲೀಸಿನವರು ಬಂದೀಖಾನೆಗೆ ಸೆರೆದೊಯ್ದರು. ಶ್ರೀ ಅರವಿಂದರು ಅನೇಕರೊಂದಿಗೆ ಒಳಸಂಚು ನಡೆಸುತ್ತಿದ್ದರೆಂಬ ಅಪಾದನೆಯಮೇಲೆ ಅವರ ಅನುಯಾಯಿಗಳಿಗೂ ತೊಂದರೆ ಕೊಡಲ್ಪಟ್ಟಿತು. ಶ್ರೀ ಘೋಷರು ನಿರಪರಾಧಿಯೆಂದು ತೀರ್ಮಾನಿಸಲ್ಪಟ್ಟರೂ ಒಂದು ತಿಂಗಳವರಿವಿಗೂ ಜೈಲಿನಲ್ಲಿರಬೇಕಾಯಿತು. ಆಗಲೇ ಅರವಿಂದರಿಗೆ ಆತ್ಮಿಕ ಪ್ರಭಾವದ ಅರಿವುಂಟಾಯಿತು.

ಸಾಕ್ಷಾತ್ಕಾರ.

ಶ್ರೀ ಅರವಿಂದ ಘೋಷರವರು ತಮ್ಮದೊಂದು ಉಜ್ವಲ ಭಾಷಣದಲ್ಲಿ ತಮ್ಮ ಜೀವನದ ಮಹಾನ್ವೇಷಣೆಯನ್ನು ಈ ರೀತಿ ವರ್ಣಿಸಿದ್ದಾರೆ—“ನನ್ನನ್ನು ಅಮಾನುಷ ರೀತಿಯಲ್ಲಿ ಜೈಲಿಗೆ ಸೆಳೆದುಕೊಂಡು ಹೋಗುತ್ತಿದ್ದಾಗ ಬೆಚ್ಚಿ ಬೆದರಿದೆ. ನನ್ನೆದೆಯು ಡವಡವನೆ ಹೊಡೆದುಕೊಳ್ಳಲಾರಂಭಿಸಿತು, ಶರೀರವು ಕಂಪಿಸಿ ಬೆವರು ಧಾರಾಕಾರವಾಗಿ ಸುರಿಯತೊಡಗಿತು. ನನ್ನ ಹೃದಯದ ಅಂತರಾಳದಿಂದ ಅನೇಕ ಪ್ರಶ್ನೆಗಳು ಭೇದಿಸಿಕೊಂಡು ಹೊರಗೆ ಬಂದವು! ದೇಶಸೇವೆಗೆ ಸರ್ವವನ್ನೂ ತ್ಯಾಗಮಾಡಬೇಕೆಂಬ ಉದಾತ್ತ ಧ್ಯೇಯದಿಂದಿದ್ದ ನಾನು ಇಲ್ಲಿಗೇಕೆ ಬಂದೆ ಎಂದು ನನ್ನಲ್ಲಿಯೇ ಪ್ರಶ್ನಿಸಿದೆ. ಜೈಲಿನಲ್ಲಿ ಒಂದೆರಡು ದಿನಗಳು ಕಳೆದವು. ಹೀಗೆಯೇ ಏಕಾಂತವಾಗಿ ಯೋಚಿಸುತ್ತಿದ್ದಾಗ ಒಂದು ವಾಣಿಯು ಕೇಳಿಬಂತು. “ನಿಧಾನಿಸಿ ಯೋಚಿಸಿ ನೋಡು” ಎಂದು ಅದು ಪ್ರತಿಧ್ವನಿ ಮಾಡಿತು! ಆಗ ಅನೇಕ ವಿಷಯಗಳು ಸಾಗರದ ತರಂಗಗಳೋಪಾದಿಯಲ್ಲಿ ನನ್ನ ಬುದ್ಧಿಗೆ ಒಂದೊಂದಾಗಿ ಗೋಚರವಾದವು. ನನ್ನ ದಸ್ತಗಿರಿಗೆ ಪೂರ್ವಭಾವಿಯಾಗಿ ಒಂದು ಅಪ್ಪಣೆ ಬಂದಿದ್ದಿತು. ನಾನು ನನ್ನ ಕರ್ತವ್ಯಗಳೆಲ್ಲವನ್ನೂ ತ್ಯಜಿಸಿ ನಿರ್ಜನಪ್ರದೇಶಕ್ಕೆ ಹೋಗಬೇಕೆಂದೂ, ಅದರಿಂದ ಫಲಸಿದ್ಧಿಯಾಗುವುದೆಂದೂ, ಆ ಅಪ್ಪಣೆಯು ನಿರೂಪಿಸಿದ್ದಿತು. ಅದನ್ನು ಗಣನೆಗೆ ತಾರದೆ ನನ್ನ ಕರ್ತವ್ಯಗಳಲ್ಲೇ ಹೆಚ್ಚು ಆಸಕ್ತಿ ವಹಿಸಿದೆ. “ನೀನು ಹಲವು ಸಮಸ್ಯೆಗಳನ್ನು ಅಧಿಕವಾಗಿ ಅರಿಯಬೇಕಾಗಿದ್ದುದರಿಂದ ನಿನ್ನನ್ನು ನಾನೇ ಜೈಲಿಗೆ ಕರೆತರಲು ಹಾಗೆ ಪ್ರೇರೇಪಿಸಿದೆ” ಎಂದು ಹಿಂದೆ ಅಪ್ಪಣೆ ಮಾಡಿದ ವ್ಯಕ್ತಿಯು ಪುನಃ ಗೋಚರವಾಗಿ ಹೇಳಿತು. ಅನಂತರ ಆ ವ್ಯಕ್ತಿಯು (ಶ್ರೀ ಕೃಷ್ಣ ಪರಮಾತ್ಮ) ಹಿಂದೂ ಮತದ ಸರ್ವಸಾರವನ್ನು ಹೊಂದಿರುವ ಭಗವದ್ಗೀತೆಯನ್ನು ನನ್ನ ಹಸ್ತಗಳಲ್ಲಿಟ್ಟಿತು! ತಕ್ಷಣವೇ ಅಪೂರ್ವ ವಿಶೇಷ ಶಕ್ತಿ ಮತ್ತು ಜ್ಞಾನವು ಮೂಡಿಬಂದುದು ಗೋಚರವಾಯಿತು. ಆ ಅಪ್ರತಿಹತವಾದ ಶಕ್ತಿ ಮತ್ತು ಸ್ಫೂರ್ತಿಯಿಂದ ಶ್ರೀ ಕೃಷ್ಣನು ಅರ್ಜುನನಿಗೆ ಉಪದೇಶಿಸಿದ ಮಹಾ ತತ್ವಗಳನ್ನು ಅರಿಯಲನುವಾದೆ ಮತ್ತು ಒಡನೆಯೇ ಅವುಗಳನ್ನು ಸಾಧನ ಮಾಡತೊಡಗಿದೆ. ಜೈಲಿನಿಂದ ಹೊರಗೆ ಸುತ್ತಾಡುತ್ತಿದ್ದಾಗ ಪುನಃ ಆ ಶಕ್ತಿಯು ಮಿಂಚಿನಂತೆ ನನ್ನ ಹೃದಯವನ್ನು ಪ್ರವೇಶಿಸಿತು. ತಕ್ಷಣವೇ ಅಮಾನುಷ ದೃಶ್ಯಗಳು ಕಂಡುಬಂದವು. ನನ್ನನ್ನು ಕೂಡಿದ್ದ ಜನನಿಬಿಡವಾದ ಜೈಲು ಕಾಣಿಸಲೇ ಇಲ್ಲ, ಎಲ್ಲಿ ನೋಡಿದರೂ ಶ್ರೀ ವಾಸುದೇವನ ಮೂರ್ತಿಯೇ ಗೋಚರವಾಗತೊಡಗಿತು. ಜೈಲಿನ ಮುಂದೆ ಇದ್ದ ಮರಗಳ ಸಮೂಹದಲ್ಲಿ ತಿರುಗಾಡಲನುವಾದೆನು. ಆದರೆ ನನಗೆ ಕಂಡದ್ದು ಹಿಂದೆ ನೋಡಿದ ಗಿಡ, ಮರಗಳಲ್ಲ, ಶ್ರೀವಾಸುದೇವನ ಮೂರ್ತಿಗಳು! ನಾನಿದ್ದ ಜೈಲಿನ ಕೊಠಡಿಯನ್ನು ಕಾಯುತ್ತಿದ್ದವನೂ ಶ್ರೀ ಕೃಷ್ಣಪರಮಾತ್ಮನೆ! ನನಗೆ ಕೊಟ್ಟ ಕೆಲವು ಚಿಂದಿ ಬಟ್ಟೆಗಳನ್ನು ಹಾಸಿ, ಹೊದ್ದುಕೊಂಡು ಮಲಗಿದೆ. ಆಗ ನನಗೆ ಆ ಹರಕು ಬಟ್ಟೆಗಳು ಕಾಣಲಿಲ್ಲ! ಕಾರುಣ್ಯಸಿಂಧುವೂ ಮತ್ತು ಆಪ್ತಬಂಧುವೂ ಆದ ಶ್ರೀ ಕೃಷ್ಣಪರಮಾತ್ಮನ ಪ್ರೇಮ ಬಾಹುಗಳು ನನ್ನನ್ನು ಆಲಂಗಿಸಿದ್ದವು! ಇದೇ ಆ ಅಮೃತ ಶಕ್ತಿಯ ಪ್ರಥಮ ಮಹಿಮೆ! ಬಂದೀಖಾನೆಯಲ್ಲಿದ್ದ ಕಳ್ಳರೆಲ್ಲರೂ ನನ್ನ ಕಣ್ಣಿಗೆ ವಾಸುದೇವನ ಆಕಾರವನ್ನು ಹೊಂದಿದ್ದರು! ಹಿಂದೆ ನ್ಯಾಯಾಧೀಶರ ಆಸ್ಥಾನದಲ್ಲಿ ಎಲ್ಲರೂ ನನ್ನ ದೃಷ್ಟಿಗೆ ಶ್ರೀ ಕೃಷ್ಣನ ರೂಪವನ್ನು ತಾಳಿದ್ದರು. ನ್ಯಾಯಸ್ಥಾನದಲ್ಲಿ ನಾನು ಸುಮ್ಮನಿರಬೇಕೆಂದೂ ನನ್ನ ಪರವಾಗಿ, ವಾಗ್ವಾದಕ್ಕೆ ಹೊರಟ ಶ್ರೀಯುತ ಚಿತ್ತರಂಜನದಾಸರವರಿಂದ ತಾನು ಸರ್ವವನ್ನೂ ಹೇಳಿಸುವುದಾಗಿಯೂ ದಿವ್ಯವಾಣಿಯು ನನ್ನ ಹೃದಯದಲ್ಲಿ ಕಿರುದನಿ ಮಾಡಿತು! ಆ ಸಲಹೆಯನ್ನೇ ಶಿರಸಾ ವಹಿಸಿದೆ!

“ಅನಂತರ ಆ ಕೊಠಡಿಯಲ್ಲಿ ಪರಮಾತ್ಮನು ನನಗೆ ಸಾಕ್ಷಾತ್ಕಾರ ಕೊಟ್ಟುದರ ಉದ್ದೇಶವನ್ನೂ ಮತ್ತು ನಾನು ಮಾಡತಕ್ಕ ಕಾರ್ಯಗಳೆಲ್ಲವನ್ನೂ ವಿಶದವಾಗಿ ತಿಳುಪಬೇಕೆಂದು ಬೇಡಿಕೊಂಡೆನು. ಎರಡು ಅಮೋಘ ಸಂದೇಶಗಳು ಹೊರಬಿದ್ದವು. ದಾಸ್ಯದೇಗುಲದಲ್ಲಿ ಕೊಳೆಯುತ್ತಿರುವ ಪವಿತ್ರ ಭಾರತವನ್ನು ಉದ್ಧರಿಸುವುದೇ ಮೊದಲನೆಯ ಮಹಾ ಸಂದೇಶ! ಎರಡನೆಯ ಸಂದೇಶವು ಹೀಗಿದ್ದಿತು. ನಿನ್ನಲ್ಲಿ ಹಿಂದೂ ಮತ ಮತ್ತು ಧರ್ಮ—ಇವುಗಳ ವಿಷಯದಲ್ಲಿದ್ದ ಅನೇಕ ಸಂಶಯಗಳು ನೀನು ಏಕಾಂಗಿಯಾಗಿ ಇಲ್ಲಿ ಬಂದಮೇಲೆ ತೊಲಗಿ ಹೋಗಿವೆ! ಹಿಂದೂ ಮತದ ಸತ್ಯ ತತ್ವಗಳು ಅವತಾರಗಳ ಮೂಲಕವೂ ಮತ್ತು ಮಹಾ ಋಷಿಗಳ ಮೂಲಕವೂ ಶಾಶ್ವತವಾಗಿ ಇಡೀ ವಿಶ್ವವೆಲ್ಲಾ ಮೆರೆಯುವಂತೆ ಸ್ಥಾಪನೆಮಾಡಿದ್ದೇನೆ. ಭಾರತೀಯರು ಸ್ವಾತಂತ್ರ್ಯವನ್ನು ಹೊಂದಲೆಂದೇ ನನ್ನ ಸಂದೇಶಕ್ಕನುಸಾರವಾಗಿ ಶಕ್ತಿಯನ್ನಿತ್ತಿದ್ದೇನೆ, ಮತ್ತು ಅಂತ್ಯದಲ್ಲಿ ನಾನೇ ಭಾರತೀಯರ ಮಹಾಭೀಷ್ಟವನ್ನು ಸಫಲಗೊಳಿಸುವೆನು.”

ಇಂದಿನ ಮಹಾಮಹಿಮೆ

ಶ್ರೀ ಅರವಿಂದ ಘೋಷರವರು ಜೈಲಿನಿಂದ ನಿವೃತ್ತರಾದಮೇಲೂ ರಾಜಕೀಯ ಚಳುವಳಿಗಳಲ್ಲಿ ಭಾಗಿಯಾಗಲು ಪ್ರಾರಂಭಿಸಿ ಒಂದು ವಾರಪತ್ರಿಕೆಯನ್ನು ಹೊರಡಿಸಿದರು. ಆದರೆ ಅಲ್ಪಕಾಲದಲ್ಲಿಯೇ ಮತ್ತೊಂದು ಸಂದೇಶವು ಬಂದದ್ದರಿಂದ ಅವರು ಆಂಗ್ಲೇಯರಿಗೆ ಸೇರಿದ ಭೂಮಿಯನ್ನು ತ್ಯಜಿಸಿ, ಆತ್ಮಿಕ ಶಕ್ತಿಯ ಸಾಧನೆಮಾಡಲು ಏಕಾಂಗಿಯಾಗಿ ಹೊರಟು ಯಾರಿಗೂ ತಿಳಿಯದಂತೆ ಪುದುಚೇರಿಯಲ್ಲಿ ನಿವಾಸವನ್ನು ಸ್ಥಾಪಿಸಿದರು! ದೇಶಸೇವೆಯ ಮೂಲಕ ಪರಮೇಶ್ವರನ ಸಾಕ್ಷಾತ್ಕಾರವನ್ನು ಪಡೆಯಬಹುದೆಂದು ಹೇಳಿದ ಸ್ವಾಮಿ ವಿವೇಕಾನಂದರ ಅಮೋಘ ಸಿದ್ಧಾಂತವನ್ನು ಶ್ರೀ ಅರವಿಂದರವರು ಆಚರಣೆಗೆ ತಂದು, ಫಲಸಿದ್ಧಿಯನ್ನು ಪಡೆದಿರುವರು! ಮತ್ತು ಅದನ್ನೇ ತಮ್ಮ ಭ್ರಾತೃಭಗಿನಿಯರಿಗೂ ಉಪದೇಶಿಸುತ್ತಿರುವರು.

ಉಪನ್ಯಾಸ.

ವಿಶ್ವವಿದ್ಯಾನಿಲಯದ ಆರ್ಥಿಕ ಸಂಘದ ಆಶ್ರಯದಲ್ಲಿ ಮುಂದಿನ ಮಾಹೆ ೪ನೆಯ ತಾರೀಖಿನ ದಿನ ಶ್ರೀ ಎಸ್. ಜಿ. ಶಾಸ್ತ್ರಿಗಳು, “ಜರ್ಮನ್ ದೇಶದ ಕೈಗಾರಿಕೆಗಳ ಅಭಿವೃದ್ಧಿ” ವಿಚಾರವಾಗಿ ಮೈಸೂರು ಮಹಾರಾಜಾ ಕಾಲೇಜು ಮಂದಿರದಲ್ಲಿ ಉಪನ್ಯಾಸ ಮಾಡುವರೆಂದು ತಿಳಿದುಬಂದಿದೆ.

ಕನ್ನಡಭಾಷೆಯ ಪುನರುಜ್ಜೀವನ

ಲೇಖಕರು:—ಹೆಚ್. ಎಂ. ಶಂಕರನಾರಾಯಣರಾವ್. ಬಿ. ಎ. ಆನರ್ಸ್.

ಪಾಶ್ಚಾತ್ಯ ಸಂಸರ್ಗದಿಂದ ಉಂಟಾಗಿರುವ, ಸಾಹಿತ್ಯ ಪುನರುಜ್ಜೀವನದ ಪ್ರಭಾವವನ್ನು ಭರತಖಂಡದ ಎಲ್ಲಾ ಭಾಷೆಗಳಲ್ಲಿ ಕಾಣುವಂತೆ ಕನ್ನಡ ಭಾಷೆಯಲ್ಲಿಯೂ ನೋಡಬಹುದಾಗಿದೆ. ಇದರ ಫಲವಾಗಿ, ಸಾಹಿತ್ಯದ ಹೊಳೆಯನ್ನು ಹೊಸ ಕಾಲುವೆಗಳಲ್ಲಿ ತಿರುಗಿಸಿಕೊಳ್ಳುವುದಕ್ಕೆ, ಸಾವಿರಾರು ವರ್ಷಗಳಿಂದ ನಮ್ಮ ಹಿರಿಯರು ಸಂಪಾದಿಸಿಟ್ಟ ಸಾಹಿತ್ಯ ನಿಧಿಯನ್ನು ಕಾಪಾಡಿಕೊಂಡು ಬರುವುದಕ್ಕೆ, ಎಲ್ಲಕ್ಕೂ ಮಿಗಿಲಾಗಿ, ಜನಸಾಮಾನ್ಯಕ್ಕೆ ಜ್ಞಾನ ಪ್ರಸಾರ ಮಾಡುವುದಕ್ಕೂ ಕನ್ನಡ ನಾಡಿನ ನಾನಾ ಮೂಲೆಗಳಲ್ಲಿಯೂ ಕರ್ಣಾಟಕ ಸಂಘಗಳು ಜನ್ಮತಾಳುತ್ತಾ ಇವೆ. ಈ ಸಂಘಗಳು ಹೊಸದಾಗಿ ಜನ್ಮತಾಳಿದಾಗ ಇರುವ ಹುರುಪು, ಉತ್ಸಾಹಗಳು ಬರಬರುತ್ತಾ ಕುಗ್ಗುತಿರುವುದನ್ನು ಕಂಡು ಯಾವ ಕನ್ನಡಿಗನಿಗೆ ಯೋಚನೀಯವೆನಿಸುವುದಿಲ್ಲ? ಇದರ ಪರಿಹಾರಕ್ಕಾಗಿ ಕೆಲವು ಸಲಹೆಗಳನ್ನು ಕೊಡಲು ಈ ಲೇಖನದಲ್ಲಿ ಪ್ರಯತ್ನ ಮಾಡಿದೆ.

ಈಗಿನ ಪರಿಸ್ಥಿತಿಯನ್ನು ನೋಡಿದರೆ ನಮ್ಮಲ್ಲಿ ಹಲವರಿಗೆ ತಾಯ್ನುಡಿಯ ಮೇಲೆ ಅಕ್ಕರೆ ಇಲ್ಲದಾಗಿದೆ. ಇದಕ್ಕೆ ಕಾರಣಗಳಿಲ್ಲದೆ ಹೋಗಿಲ್ಲ. ನಮ್ಮ ಹಿರಿಯರು ಸಂಸ್ಕೃತವು ದೇವಭಾಷೆಯೆಂಬ ಕುರುಡು ನಂಬಿಕೆಗೆ ಸಿಕ್ಕಿ ಅದಕ್ಕೆ ತಮ್ಮ ಜೀವಿತವನ್ನೇ ಮಾರುಗೊಂಡಿದ್ದಾರೆ. ಮತ್ತೆ ಕೆಲವರು, ಆಂಗ್ಲಸಾಹಿತ್ಯವೆಂಬ ಉದ್ಯಾನವನದಲ್ಲಿ ಬಹುದೂರ ಹೋಗಿ, ಅಲ್ಲಿಯ ಸುಗಂಧ ಪುಷ್ಪಗಳ ವಾಸನೆಯನ್ನು ಆಘ್ರಾಣಿಸಿ, ಎಲ್ಲ ಗಿಡ ಮರಗಳಲ್ಲಿ ಕಾಣಬರುವ ಪುಷ್ಪ ಫಲಗಳನ್ನು ತಿಂದು, ಅಲ್ಲಿಯೇ ವಿಶ್ರಮಿಸಿಕೊಳ್ಳುತ್ತಾ, ಆ ಆರಾಮದ ಸೊಗಸಿಗೆ ಮನಸೋತು, ಕಸಕಡ್ಡಿ, ಹುಲ್ಲು ಪೊದೆಗಳಿಂದ ಅಸ್ತವ್ಯಸ್ತವಾದ, ಬಹುದೂರ ಹೋದರೆ ಆಕಾಶದಲ್ಲಿ ಮಿಂಚು ಬಂದು ಕ್ಷಣಕಾಲವಿದ್ದು ಮಾಯವಾಗುವಂತಿರುವ ವೃಕ್ಷಗಳನ್ನು ಒಳಗೊಂಡಿರುವ ಕನ್ನಡ ಸಾಹಿತ್ಯ ಕಾಡನ್ನು ಹೊಗಲು ಅವರಿಗೆ ಸಮ್ಮತವಿಲ್ಲ. ಈ ಭಾಷೆಗಳ ಮಧ್ಯೆ ಕನ್ನಡವನ್ನು ಕೇಳುವರಾರು? ಭಾಷೆಗಳನ್ನು ಅಭ್ಯಾಸ ಮಾಡಬಾರದೆಂದು ಮೇಲಿನ ವಾಕ್ಯಗಳ ಅಭಿಪ್ರಾಯವಲ್ಲ. ಆದರೆ ಮೊದಲು ನಮ್ಮ ಭಾಷೆ, ನಮ್ಮ ಜನರು, ನಮ್ಮ ಸಾಹಿತ್ಯ, ನಮ್ಮ ಗ್ರಂಥ, ಮನೆ ಗೆದ್ದು ಮೇಲೆ ಉಳಿದ ಪರಮಾತು. ಈ ಕಾರ್ಯವನ್ನು ಕರ್ಣಾಟಕ ಸಂಘಗಳು ಕೈಕೊಳ್ಳಬೇಕು.

ಅಜ್ಞಾನಾಂಧ ಕೂಪದಲ್ಲಿ ಬಿದ್ದಿರುವ ಹಳ್ಳಿಗರಿಗೆ ಜ್ಞಾನಬೋಧಕವಾದ ವಿಷಯಗಳನ್ನು ತಾಯ್ನುಡಿಯ ಮೂಲಕ ತಿಳಿಸಬೇಕೆಂಬ ವಿಷಯವನ್ನು ಹಲವರು, ಏಕೆ ಎಲ್ಲರೂ ಒಪ್ಪಿಕೊಂಡಿರುತ್ತಾರೆ. ಈ ಧ್ಯೇಯವಾದ ಸಮುದ್ದೇಶವು ಸಫಲವಾಗಬೇಕಾದರೆ, ವಿದ್ವಾಂಸರ ಹಳ್ಳಿಗರ ಸಹಾಯ ಸಹಕಾರಗಳು ಬೇಕಾಗುತ್ತವೆ. ವಿವಿಧ ವಿಷಯಗಳನ್ನು ಪ್ರೌಢ ವಿದ್ಯಾಭ್ಯಾಸಮಾಡಿದವರು ಒಂದು ಪಟ್ಟಣದಲ್ಲಿ ಹಲವರಿರುತ್ತಾರೆ. ಇಂಥವರನ್ನು ಕರ್ಣಾಟಕ ಸಂಘದ ಕಾರ್ಯದರ್ಶಿಗಳು ಪ್ರಾರ್ಥಿಸಿಕೊಂಡು ಪ್ರತಿ ಭಾನುವಾರ ಅಥವ ಇತರ ವಿರಾಮ ದಿನಗಳಲ್ಲಿ ಅಕ್ಕಪಕ್ಕದ ಹಳ್ಳಿಗಳಿಗೆ ಹೋಗಿ ಪ್ರಾಚೀನ ಮತ್ತು ಆಧುನಿಕ ಸಾಹಿತ್ಯದ ಚಲನೆಗಳು, ಆರೋಗ್ಯ ವಿಜ್ಞಾನ ಮತ್ತು ಇತರ ಕಲೆಗಳು ಇವುಗಳ ಮೇಲೆ ಉಪನ್ಯಾಸಗಳನ್ನು ಕೊಡಬೇಕು. ಈ ಬಗೆಯ ಸಂತೋಷ ಕೂಟಗಳಿಗೆ ಹೆಚ್ಚು ಹಣದ ಅವಶ್ಯಕತೆ ಇಲ್ಲ.

ಕರ್ಣಾಟಕ ಸಂಘಗಳ ಎರಡನೆಯ ಕರ್ತವ್ಯ ಪುಸ್ತಕ ಭಂಡಾರಗಳನ್ನೂ ವಾಚನಾಲಯಗಳನ್ನೂ ಸ್ಥಾಪಿಸುವುದು. ಇದರಿಂದ ಎರಡು ವಿಧಗಳಲ್ಲಿ ಪ್ರಯೋಜನವುಂಟು. ಹಳ್ಳಿಗಳಿಗೆ ಜ್ಞಾನಪ್ರಚಾರಕ್ಕಾಗಿ ಹೋಗುವವರಿಗೆ ಅನುಕೂಲವಾಗುವುದಲ್ಲದೆ, ಸಾಮಾನ್ಯ ಜನರಿಗೂ, ಸ್ತ್ರೀಯರಿಗೂ ಓದಿಕೊಳ್ಳುವುದಕ್ಕೆ ಒಳ್ಳೆಯದಾಗುವುದು. ಆದ್ದರಿಂದ ಈ ಕೆಲಸವನ್ನು ಪೌರಸಭೆಯವರು ಕರ್ಣಾಟಕ ಸಂಘಗಳೊಂದಿಗೆ ಸಹಕರಿಸಿ, ಮಾಡಬಹುದಾಗಿದೆ.

ಜನರು ಅಜ್ಞಾನ, ಅಂಧಶ್ರದ್ಧೆ, ಕುರುಡು ಗೌರವಗಳಿಂದ ಓಲೆಯ ಪುಸ್ತಕಗಳನ್ನು ಇತರರಿಗೆ ಕೊಡುವುದಿಲ್ಲ. ತಾವೂ ಅದರ ಉಪಯೋಗವನ್ನು ಹೊಂದುವುದಿಲ್ಲ. ಇದರ ಫಲವಾಗಿ ಓಲೆಯ ಪುಸ್ತಕಗಳು ಜಿರಲೆಯ ಪಾಲೂ, ನದಿಯ, ಕೆರೆಯ, ಬಾವಿಯ ಪಾಲೋ ಆಗುತ್ತಿರುವುದು ತುಂಬಾ ಶೋಚನೀಯವಾಗಿದೆ. ಇದನ್ನು ಉಪಾಯವಾಗಿ ತಪ್ಪಿಸಬೇಕಾಗಿದೆ. ವಿದ್ವಾಂಸರುಗಳು—ಏಕೆಂದರೆ ಅವರ ಮಾತಿನಲ್ಲಿ ಎಲ್ಲರಿಗೂ ಹೆಚ್ಚು ಗೌರವವಿದೆ, ತಾವು ಉಪನ್ಯಾಸ ಮಾಡುವುದಕ್ಕೆ ಹೋದಾಗ ತಿಳಿಯದವರಿಗೆ ಬೋಧಿಸಿ, ಓಲೆಯ ಪ್ರತಿಗಳನ್ನು ಸಂಪಾದಿಸಿ ಸಂಗ್ರಹಿಸಬೇಕಾಗಿದೆ.

ಇದೆಲ್ಲಾ ಪ್ರೌಢ ಸಾಹಿತ್ಯದ ಮಾತಾಯಿತು. ಇನ್ನುಳಿದಿರುವುದು ಜನಪದ ಸಾಹಿತ್ಯ. ಪೂರ್ವದಿಂದಲೂ ನಮ್ಮ ಸಾಹಿತ್ಯವು ರಾಜಾಶ್ರಯದಲ್ಲಿ ಬೆಳೆದುಬಂದುದರಿಂದಲೂ, ವಿದ್ವಾಂಸರೆನಿಸುವವರು ಸಾಹಿತ್ಯಕ್ಷೇತ್ರದಲ್ಲಿ ಹೆಚ್ಚು ಕೆಲಸ ಮಾಡಿದುದರಿಂದಲೂ, ತನ್ನ ಸ್ವಾತಂತ್ರ್ಯವನ್ನು ಮಾರಿಗೊಳ್ಳದೆ ಜನರಿಗೆ ರಂಜನೆಯನ್ನುಂಟುಮಾಡುತ್ತಿದ್ದ ಜನಪದ ಸಾಹಿತ್ಯದ ಕಡೆ ಜನರ ಮನಸ್ಸು ಹೆಚ್ಚು ಒಲಿಯಲಿಲ್ಲ.

ಹಳ್ಳಿಯ ಸಾಹಿತ್ಯವನ್ನು ಕಡೆಗಣಿಸದೆ ಲಾವಣಿ, ಯಕ್ಷಗಾನ, ಕೀರ್ತನೆಗಳು ಇವನ್ನು ಸಂಗ್ರಹಿಸಿ ಪ್ರಕಟಿಸುವುದು ಕರ್ಣಾಟಕ ಸಂಘಗಳ ಕೆಲಸಗಳಲ್ಲಿ ಒಂದಾಗಿದೆ.

ಮೇಲೆ ಹೇಳಿದ ಕಾರ್ಯಗಳನ್ನು ಕೈಕೊಳ್ಳಬೇಕಾದರೆ ದ್ರವ್ಯಸಹಾಯವು ಹೆಚ್ಚು ಬೇಕಾಗುವುದಿಲ್ಲವೆ? ಹೌದು ನಿಶ್ಚಯ. ಇದಕ್ಕೆ ತಕ್ಕ ಉಪಾಯಗಳನ್ನು ಕರ್ಣಾಟಕ ಸಂಘಗಳೇ ಹುಡುಕಬೇಕಾಗಿದೆ. ಕೈಕಟ್ಟಿಕೊಂಡು ಕುಳಿತರೆ ಹಣವನ್ನು ಕೊಡುವವರಾರು? ಮೇಲೆ ಹೇಳಿದಂತೆ ನಾಡಿನ ಮುಖ್ಯ ಹಬ್ಬಗಳಲ್ಲಿ ಕರ್ಣಾಟಕ ಸಂಘದವರು ಪ್ರಾಚೀನ ಮತ್ತು ಆಧುನಿಕ ನಾಟಕಗಳನ್ನೂ, ವಿನೋದಾವಳಿಗಳನ್ನೂ ಪ್ರದರ್ಶಿಸಿದರೆ ದ್ರವ್ಯಾರ್ಜನೆಯಾಗುವುದಲ್ಲದೆ, ಆಧುನಿಕ ಸಾಹಿತ್ಯ ಚಲನವಲನಗಳು ಜನರಿಗೆ ಗೋಚರವಾಗುವುವು.

ಪ್ರಾಚೀನ ಸಾಹಿತ್ಯದ ವ್ಯಾಸಂಗ ವಿಮರ್ಶೆಗಳಿಗಾಗಿ ವ್ಯಾಸಂಗ ಗೋಷ್ಠಿಗಳನ್ನೂ ಕಾವ್ಯಗಳ ಹಾಡುವಿಕೆಗೆ ವಿದ್ಯಾರ್ಥಿಗಳನ್ನು ತರಬೇತು ಮಾಡುವುದಕ್ಕೆ ಗಮಕ ಕಲಾಗೋಷ್ಠಿಗಳನ್ನೂ ಕರ್ಣಾಟಕ ಸಂಘಗಳು ಸ್ಥಾಪಿಸಬೇಕಾಗಿದೆ. ವಾರಕ್ಕೊಮ್ಮೆ ನಿಯಮವಾಗಿ ಹಳಗನ್ನಡ ಗ್ರಂಥವೊಂದನ್ನು ವ್ಯಾಸಂಗಕ್ಕಾಗಿ ತೆಗೆದುಕೊಂಡು ವಿದ್ವಾಂಸರ ಸಹಾಯದಿಂದ ಅದನ್ನು ಅಭ್ಯಾಸಮಾಡಿ ವಿಮರ್ಶೆ ಮಾಡಬಹುದಾಗಿದೆ. ಇಂಥ ವಿಮರ್ಶೆಯಿಂದ ಸಾಹಿತ್ಯಾಭಿರುಚಿಯು ಉತ್ತಮಗೊಳ್ಳುವುದರಲ್ಲಿ ಸಂದೇಹವಿಲ್ಲ.

ಅದರೆ ಹಲವುಬಾರಿ ನಾನು ಯೋಚನೆ ಮಾಡಿದ ವಿಷಯಗಳನ್ನು ಈ ಲೇಖನದಲ್ಲಿ ನಿರೂಪಿಸಲು ಪ್ರಯತ್ನಮಾಡಿದ್ದೇನೆ. ಇವೇ ಕೊನೆಯ ಸಲಹೆಗಳಲ್ಲ, ಸೂಚನೆಗಳೂ ಅಲ್ಲ. ಸಾಹಿತ್ಯ ಪರಿಷತ್ತಿನ ಕೆಲಸದೊಂದಿಗೆ ಮೈಸೂರು ವಿಶ್ವವಿದ್ಯಾನಿಲಯದ ಕೆಲಸದೊಂದಿಗೆ ಕರ್ಣಾಟಕ ಸಂಘಗಳು ಸಹಕರಿಸಿದರೆ ದೇಶದಲ್ಲಿ ನವಚೈತನ್ಯವುಂಟಾಗಿ, ಹಿಂದಿನ ಗತ ವೈಭವವು ಮರಳಿ, ನವಭಾರತದಲ್ಲಿ ಕರ್ಣಾಟಕವು ಶ್ರೇಷ್ಠ ಸ್ಥಾನವನ್ನು ಹೊಂದುವುದರಲ್ಲಿ ಸಂದೇಹವಿಲ್ಲ. ಸಂದೇಹವೇಕೆ? ಹಿಂದಿನ ಆಚಾರ್ಯರು 'ಮಾತೃದೇವೋ ಭವ' ಎಂದು ಮೊದಲು ಸಾರಿದರು. ಮಾತೃಸೇವೆಗಿಂತ ಹಿರಿದಾದ ಸೇವೆಯುಂಟೆ? ಆ ಸೇವೆ ಲಭಿಸಿದರೆ ನಾವೇ ಕೃತಾರ್ಥರಲ್ಲವೆ? ಇಂದಿನಿಂದ ಬದ್ಧಕಂಕಣರಾಗಿ ಮಾತೃಸೇವೆ ಮಾಡಿ ಜನ್ಮಸಾರ್ಥಕ ಮಾಡಿಕೊಳ್ಳೋಣ. ಅದೇ ನಮಗೆ ಶಕ್ತಿ. ಅದೇ ನಮಗೆ ಮುಕ್ತಿ.

ಉದಾರ ದಾನ.

ಬೆಂಗಳೂರಿನಲ್ಲಿರುವ ದೀನಕಾರುಣ್ಯಾಭಿವೃದ್ಧಿ ಸಂಘದ ಸಹಾಯಾರ್ಥವಾಗಿ ಸಾಗರ್ ಟಾಕೀಸಿನಲ್ಲಿ "ವೇಣದಾಸಿ' ಎಂಬ ಚಲನಚಿತ್ರವು ಪ್ರದರ್ಶಿಸಲ್ಪಟ್ಟಿತು. ಈ ಪ್ರದರ್ಶನದಿಂದ 1000 ರೂಗಳಿಗೆ ಮೇಲ್ಪಟ್ಟು ಹಣ ಬಂದಿರುವುದಾಗಿ ತಿಳಿದುಬಂದಿದೆ. ಈ ಹಣವನ್ನು ಪ್ರದರ್ಶನಾಧಿಕಾರಿಗಳು ಮೇಲ್ಕಂಡ ಸಂಘಕ್ಕೆ ಉದಾರವಾಗಿ ದಾನಮಾಡಿರುವರು.

ಚಲನ ಚಿತ್ರಗಳಿಗೆ ಸಂಬಂ ಪಟ್ಟ ಕಾನೂನು.

ಚಲನ ಚಿತ್ರಗಳಿಗೆ ಸಂಬಂಧಪಟ್ಟ
ಗ್ಯುಲೇಷನೂ ಮತ್ತು ಅದಕ್ಕನುಸಾ
ಗಿ ಏರ್ಪಟ್ಟ ನಿಬಂಧನೆಗಳೂ ಜಾರಿ
ದ್ದುದನ್ನು ಕುರಿತು ನಾನಾ ಡಿಸ್ಟ್ರಿಕ್ಟ್
ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರುಗಳಿಂದ
1935-36ನೆಯ ಸಾಲಿನ ವರದಿಗ
ಸರ್ಕಾರದವರು ಈಗತಾನೆ ವಿಮರ್ಶಿ
ತ್ತಾರೆ 1935-36ನೆಯ ಸಾಲಿನ
ಯಲ್ಲಿ, ಸಂಸ್ಥಾನದಲ್ಲಿ ಖಾಯಂ ಆಗಿ ಸ್ಥಾ
ಪಿಸಲ್ಪಟ್ಟ ಚಲನ ಚಿತ್ರ ಪ್ರದರ್ಶನ
ಟ್ಟ 20 ಯಂತ್ರಗಳೂ ಮತ್ತು ಹಂಗಾ
ಯಾಗಿ ಸ್ಥಾಪಿಸಲ್ಪಟ್ಟ ಚಲನ ಚಿತ್ರ ಪ್ರ
ದರ್ಶನದ ಏಳು ಯಂತ್ರಗಳೂ ಕೆಲಸ ಮಾ
ಡುತ್ತಿದ್ದುವು.

ಚಲನ ಚಿತ್ರಗಳ ಸಂಬಂಧದಲ್ಲಿ ಏ
ಟ್ಟ ನಿಬಂಧನೆಗಳ ಮೇರೆಗೆ ಚಲನಚಿತ್ರ
ಳ ಯಂತ್ರ ಸ್ಥಾಪನೆಯು ಸರಿಯಾಗಿದೆ
ಎಂಬುದನ್ನು ಕುರಿತು, ಅದಕ್ಕೆ ಲೈಸೆ
ಕೊಡತಕ್ಕ ಅಧಿಕಾರ ವರ್ಗದವರಿಗೆ ಸ
ಹಾಯ ಮಾಡುವ ಎಲೆಕ್ಟ್ರಿಕಲ್ ಇನ್ಸ್ಪೆಕ್ಟ
ರು ಪ್ರತಿಯೊಂದು ಚಲನ ಚಿತ್ರದ ಯಂ
ತ್ರವನ್ನೂ ವರ್ಷಕ್ಕೊಂದಾವರ್ತಿ ತ
ಮಾಡತಕ್ಕದೆಂಬ ನಿಬಂಧನೆಯನ್ನು
ರಿಗೆ ತರುವಂತೆ ಮಾಡುವ ವಿಷಯಕ್ಕೆ
ಯಾವ ಗಮನಕೊಡಬೇಕೆಂದು ಡಿಸ್ಟ್ರಿ
ಗಳ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರುಗ
ಕೋರಲಾಗಿದೆ. ಅಲ್ಲದೆ, ಜನಗಳಿಗೆ ತೊ
ದರೆಯುಂಟಾಗದಂತೆ ನೋಡಿಕೊಳ್ಳುವ
ಕ್ಕಾಗಿ ಏರ್ಪಟ್ಟ ನಿಬಂಧನೆಗಳಲ್ಲಿನ ನಿ
ಯಮಗಳನ್ನು ಸರಿಯಾಗಿ ಜಾರಿಯಲ್ಲಿ ತ
ರಲಾಗಿದೆಯೋ ಎಂಬುದನ್ನು ನೋಡುವ
ಕ್ಕಾಗಿ, ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು
ಸ್ವತ ಆಗಾಗ್ಗೆ ಚಲನಚಿತ್ರಗಳ ಪ್ರದರ್ಶ
ನ ಶಾಲೆಗಳನ್ನು (ಥಿಯೇಟರುಗಳನ್ನು)
ನಿಜ ಮಾಡುವುದು ಸೂಕ್ತವೆಂದು ಸರ್ಕಾ
ರದವರು ಭಾವಿಸುತ್ತಾರೆ.

ಆತ್ಮ ಹತ್ಯೆ.

ಬೆಂಗಳೂರು ಲಾಲ್‌ಬಾಗ್ ರಸ್ತೆಯ
ರುವ ಪಂಚಕೋಡಿರಾಯ್ ಎಂಬುವ
ತನ್ನ ಸಂಸಾರ ತಾಪತ್ರಯಗಳ ಸಂ
ನಾಗಿ ವಿಶೇಷ ನೊಂದುಕೊಂಡು ಕೆ
ದಿವಸಗಳ ಹಿಂದೆ ಆತ್ಮ ಹತ್ಯ ಮಾಡಿ
ಳ್ಳಲು ಪ್ರಯತ್ನ ಪಟ್ಟಿದ್ದನು
ಮಾಡುವ ಫ್ಯಾಕ್ಟರಿಯಲ್ಲಿ ಕೆಲಸದ
ಬಂಗಾಳೀ ಯುವಕನು ತನ್ನ ಕತ್ತನ್ನು
ನೇ ಕೊಯ್ದುಕೊಳ್ಳಲು ಯತ್ನಿಸಿದ್ದನು
ಕತ್ತಿಹೊಂದಲು ಅವನನ್ನು ಸಂಟ್
ಥಾಮಸ್ ಆಸ್ಪತ್ರೆಗೆ ಸಾಗಿಸಲಾಯಿತು.
ಬಾಧೆ ಹೊಂದುತ್ತಿದ್ದ ಈ ತರು
ಕಳೆದ ಮಂಗಳವಾರ ಮರಣಹೊಂದಿ

ನಿರ್ಭಾಗ್ಯ ಕಮಲೆ.

ಒಂದು ಸಣ್ಣ ಕಥೆ.

ಬರೆದವರು —ಎಚ್. ವಾಮನಮೂರ್ತಿ.

...ಂದು ಸಂಧ್ಯಾಕಾಲ, ಸುಮಾರು ೬ ...ಗಳ ಸಮಯ. ಬಿರುಗಾಳಿಯು ಭ...ಂಕರ ಜೋರಾಗಿ ಬೀಸುತ್ತಿತ್ತು! ಒ... ಸಿಡಿಲು ಮಿಂಚುಗಳ ಆರ್ಭಟ ...ದನೆ ಬಿಡದ ಮಳೆಯು ಸುರಿಯುತ್ತಿ...ದಿತು.

ಇಂತಹ ಭೀಕರ ಸಮಯದಲ್ಲಿ ಒಂದು ...ಸ್ತ್ರೀವ್ಯಕ್ತಿಯು ಗಡಗಡನೆ ನಡುಗುತ್ತ ...ರಾಜ ಹೊರಟಿತು. ಅವಳ ಮುಖ...ನ್ನು ನೋಡಿದೊಡನೆಯೇ ಹೃದಯವು ...ನೀರಾಗುತ್ತಿತ್ತು, ಸಹಜವಾದ ...ಯು ಹೃದಯದಿಂದ ಚಿಮ್ಮುತ್ತಿತ್ತು, ...ವಳ ವಯಸ್ಸು ಸುಮಾರು 16 ವರ್ಷ ...ರಬಹುದು; ಅಂದಿನ ಸ್ಥಿತಿಯಲ್ಲಿ ಆ...ಗೆ ಯು ತಡುಭಿಕ್ಷುಕಿ ಎಂದು ತೋರಿ...ದರೂ ಅವಳ ಸೌಂದರ್ಯಾತಿಶಯದ ...ಚಿಹ್ನೆಗಳು ಮಾಯವಾಗಿರಲಿಲ್ಲ. ಅ...ಳ ಶರೀರವು ಕಂಪಿಸುತ್ತಿತ್ತು. ಹಸಿವು ...ಳಿಗಳ ಬಾಧೆಗೊಳಪಟ್ಟಿದ್ದರಿಂದ ಅವಳು ...ಸೊರಗಿ ಹೋಗಿದ್ದಳು.

...ಮಳೆಯು ನಿಲ್ಲುವ ಸೂಚನೆಗಳು ತೋ...ರಿದ ತಕ್ಷಣವೇ ಅವಳ ಮುಖದ ಮೇಲೆ ...ಸು...ಗೆಯ ಭಾವಗಳು ಮೂಡಿ...ದವು.

ಮಳೆಯು ನಿಂತಿತು. ಅಲ್ಪ ಸಂತೋ...ವನ್ನು ಹೊಂದಿದರೂ ಶೋಕಸಾಗರದ ...ರ ತರಂಗಗಳಿಂದ ಅಪ್ಪಳಿಸಲ್ಪಟ್ಟವ...ಳಂತೆ ನಿಟ್ಟುಸಿರುಬಿಡುತ್ತಾ ಹೊರ...ಟು ಊರನ್ನು ಪ್ರವೇಶಿಸಿದಳು.

...ನು ಅಂದಿನ ಗುಡುಗು, ಮಿಂಚು ...ತ್ತ ಮಳೆಯ ರಭಸವನ್ನು ನೋಡು...ತ್ತ ಮನೆಯ ಮುಂದಲ ಅಂಗಳದಲ್ಲಿ ...ನು ಕುರ್ಚಿಯ ಮೇಲೆ ಸುಮ್ಮನೆ ...ದ್ದೆ. ಒಂದು ಸ್ತ್ರೀ ವ್ಯಕ್ತಿಯು ...ನ್ನ ಮುಂದೆ ಮೆಲ್ಲಗೆ ನನ್ನನ್ನು ನೋ...ಡುತ್ತ ಮುಂದೆ ಸಾಗುತ್ತಿತ್ತು. ಆಶ್ಚರ್ಯ...ದ ನಾನು ಅವಳನ್ನೇ ದಿಟ್ಟಿಸಿ ನೋಡ...ಲಾಗಿ ಅವಳೂ ಕ್ಷಣಕಾಲ ನನ್ನನ್ನೇ ...ನೋಡಿದಳು. ಏನೋ ಮಾತನಾಡಬೇ...ಕೆಂದು ಬಂದಿದ್ದಂತೆ ಕಂಡುಬರುತ್ತಿತ್ತು. ...ದರೆ ಗದ್ಗದ ಸ್ವರದಿಂದ ಅವಳ ಶಬ್ದ...ವು ವಾಯುವನ್ನು ಭೇದಿಸಲೇ ಇಲ್ಲ. ...ಳ ಕಣ್ಣಿನಿಂದ ಅಶ್ರುಬಿಂದುಗಳು ...ಉದುರಲಾರಂಭಿಸಿದವು!

...ಈ ವಿಚಿತ್ರವನ್ನು ನೋಡಿ ಬೆರಗಾದೆ. ...ನ್ನ ನನ್ನ ಹೃದಯವು ಡವಡವನೆ ...ಹೊಡೆದುಕೊಳ್ಳಲಾರಂಭಿಸಿತು. ಅವಳ ...ನು ನೋಡಿದಂತೆಲ್ಲಾ ದಯೆಯು ಹೃದ...ಯಾಂತರಾಳದಿಂದ ಉಕ್ಕೇರಿ ಬರು...ತ್ತಿತ್ತು. ಆಶ್ಚರ್ಯ, ಕನಿಕರ, ಪ್ರೇಮ...ಗಳು ನನ್ನ ಮನದಲ್ಲಿ ಒಂದಾದನಂತರ ಮತ್ತೊಂದು ಕಡಲಿನ ಅಲೆಗಳಂತೆ ಹಾದು ಹೋಗುತಲಿದ್ದವು.

ಅಷ್ಟುಹೊತ್ತಿಗೆ ಕತ್ತಲು ಕವಿದಿತ್ತು. ಸುಮಾರು 11 ಘಂಟೆಗಳಾಗಿರಬಹುದು. ಊರಿನ ರಸ್ತೆಗಳಲ್ಲಿ ಒಂದು ನರಪಿಳ್ಳೆಯೂ ಸಂಚರಿಸುತ್ತಿರಲಿಲ್ಲ. ಆವೇಳೆ, ನಿರ್ಜನತೆ ಸುತ್ತ ನೀರವತೆ—ಇವು ತಾಂಡವವಾಡುತ್ತಿದ್ದವು!

ನಾನು ಎಲ್ಲಿಯೋ ನಡೆದು ಹೋಗುತ್ತಿದ್ದೆನು. ಭ್ರಾಂತನಾಗಿದ್ದವನು ಕ್ಷಣಕಾಲ ನಿಧಾನಿಸಿ ಸುತ್ತಲೂ ನೋಡಿ ಯೋಚಿಸಿದೆ. ಒಂದು ಸ್ತ್ರೀ ವ್ಯಕ್ತಿಯು ಮುಂದೆ ಸಾಗುತ್ತಿದ್ದುದು ಅರಿವಾಯಿತು. ಅನಂತರ ಏನೇನೋ ಯೋಚನೆಗಳು ಹೊಳೆದವು. ಆದರೂ ಅದೇ ವ್ಯಕ್ತಿಯನ್ನೇ ಅನುಸರಿಸಿದೆ.

ಆ ಸ್ತ್ರೀ ವ್ಯಕ್ತಿಯು ನಡೆದು ಸಾಕಾಗಿ ಹೋದ್ದರಿಂದ ಹಠಾತ್ತಾಗಿ ಕೆಳಕ್ಕೆ ಬಿದ್ದುಬಿಟ್ಟಿತು. ತುಸಹೊತ್ತಾದನಂತರ ಚೇತರಿಸಿಕೊಂಡು ಮುಂದುವರಿದು ಊರಾಚೆ ಇದ್ದ ಸರೋವರದ ಕಡೆ ಹೊರಟಿತು. ಆಶ್ಚರ್ಯ ಭಯಗಳಿಂದ ಚಕಿತನಾಗಿ ನಾನೂ ಅದೇ ವ್ಯಕ್ತಿಯನ್ನು ಹಿಂಬಾಲಿಸಿ ಹೊರಟೆ. ಕೊನೆಗೆ ಆ ವ್ಯಕ್ತಿಯು ಆ ಸರೋವರದ ಒಂದು ಸೋಪಾನದ ಮೇಲೆ ಕುಳಿತುಕೊಂಡಿತು. ನಿಟ್ಟುಸಿರುಗಳನ್ನು ಬಿಡುತ್ತಾ ಚಿಂತಿಸತೊಡಗಿತು. ಹೃದಯದಿಂದ ದುಃಖವು ಮೇಲೇರಿ ಬರಲಾರಂಭಿಸಿತು. ಕಂಬನಿಗಳು ಅವಳ ಶರೀರವನ್ನು ತೋಯಿಸಿದವು. ಬಹಳ ಸಂಕಟದೊಡನೆ ಅವಳು ಹೇಳಿದ ಕೆಲವು ಶಬ್ದಗಳು ನನ್ನ ಕಿವಿಯನ್ನು ಸೇರಲಾರಂಭಿಸಿದವು!

ಅವಳು "ಹಾಯ್! ಪರಮೇಶ್ವರ! ನನ್ನನ್ನು ಈ ದುಸ್ಥಿತಿಗ ತರಲೋಸುಗ ಸೃಷ್ಟಿಸಿದೆಯಾ? ನನ್ನಂತಹ ಜೀವಜಂತುಗಳ ಮೇಲೆ ನಿನಗೇಕೆ ಕರುಣೆಬಾರದು" ನೀನು ನನ್ನನ್ನು ಸುಖಸಾಮ್ರಾಜ್ಯದ ಭೋಗ ವೈಭವಗಳನ್ನು ಅನುಭವಿಸಲು ಕಳುಹಲಿಲ್ಲ; ದಾರುಣ ಸಂಕಟ ಭೀಕರ ಚಿತ್ರಹಿಂಸೆಗಳನ್ನು ಅನುಭವಿಸಲು ನೂಕಿದೆ! ಅಯ್ಯೋ! ಹಾಳು ಸಮಾಜವೇ! ನಿನ್ನ ಅಗ್ನಿ ಕುಂಡದಲ್ಲಿ ನನ್ನಂತಹ ಅನೇಕ ಹಸುಳೆಗಳು ಬೆಂದು ಹೋಗಿರುವರಲ್ಲಾ! ನನ್ನನ್ನು ಕ್ರೂರ ವೈಧವ್ಯ ನರಕಕ್ಕೆ ತಳ್ಳಿದ ಆ ವಿಧಿಯನ್ನು ಹೇಗ ದೂಷಿಸಲಿ! ಈ ಸಮಾಜಕ್ಕೆ ಕಾರುಣ್ಯ ಹೃದಯವಿಲ್ಲ, ಪ್ರೇಮವಿಲ್ಲ! ದಯಾಶೂನ್ಯವಾದ ಈ ಸಮಾಜವು ಘೋರನರಕದಂತೆ ಪರಿಣಮಿಸಿದೆ! ಹೇ! ಜಗನ್ನಿಯಾಮಕ! ಭಾರತಮಾತೆಯ ಸುಪುತ್ರಿಯರನ್ನು ಶೋಕಕೂಪಕ್ಕೆ ತಳ್ಳುವುದೆ? ನಿನ್ನ ಆಜ್ಞೆಯಂತೆ ಸಮಾಜವನ್ನು ಸೇರಿದೆ. ಈಗ ಆ ಕ್ರೂರ ಶಾಸನವು ಅನರ್ಹಳೆಂದು ನನ್ನನ್ನು ಸಮಾಜ ಬಾಹಿರಳನ್ನಾಗಿ ಮಾಡಿತು. ನಿನ್ನ ಅಪ್ಪಣೆಯನ್ನು ಶಿರಸಾವಹಿಸಿ, ಪರಿಪಾಲಿಸಿದೆ. ಈ ಸಮಾಜವು ಪ್ರಳಯ ಭೈರವನಂತಿದೆ, ಪ್ರಪಂಚವೇ ಶೂನ್ಯವಾಗಿ ಸ್ಮಶಾನದಂತೆ ಕಾಣುತ್ತಿದೆ. ಹೇ! ಪರಮೇಶ್ವರಾ! ದೀನದಯಾಪರಾ! ಆರ್ತಜನಸಂರಕ್ಷಕಾ! ಇನ್ನು ಕ್ಷಣಕಾಲವೂ ಈ ಸಮಾಜದ ಕಠೋರ ಶಾಸನವನ್ನು ಅನುಭವಿಸಲಾರೆ. ಇನ್ನು ನಿನ್ನ ಪಾದಾರವಿಂದವನ್ನು ಸೇರುವೆನು" ಎಂದು ಸಮಾಜದ ಹೃದಯವಿದ್ರಾವಕ ದೃಶ್ಯಗಳನ್ನು ಚಿತ್ರಿಸುತ್ತಾ ನಿಂತಿದ್ದಳು.

ಈ ಭಯಂಕರ ದೃಶ್ಯಗಳು ನನ್ನ ಹೃದಯವನ್ನು ಭೇದಿಸಿದವು. ಗದ್ಗದಸ್ವರದಿಂದ ಕಣ್ಣು ತುಂಬ ನೀರು ತುಂಬಿಕೊಂಡಿತು. ಏನೋ ಯೋಚಿಸುತ್ತಿರುವಲ್ಲಿ 'ಘುಂ' ಎಂಬ ಶಬ್ದವು ನನ್ನೆದೆಯನ್ನೊಡೆಯಿತು!

ಸ್ತ್ರೀ ವ್ಯಕ್ತಿಯು ಕುಳಿತ ಸ್ಥಳವನ್ನು ನೋಡಿದೆ. ಅಲ್ಲಿ ಯಾರೂ ಕಾಣಿಸಲಿಲ್ಲ. ಉದ್ವೇಗದೊಡನೆ ಅವಳಿದ್ದ ಸ್ಥಳಕ್ಕೆ ಓಡಿಬಂದೆ, ಕಾಣಲಿಲ್ಲ! "ಅಯ್ಯೋ!" ಎನ್ನುತ್ತ ಒಡನೆಯೇ ನೀರಿಗೆ ಧುಮುಕಿದೆ! ಕೋಮಲಪುಷ್ಪದ ಬಳ್ಳಿಯೊಂದು ಸಿಕ್ಕಿದಂತಾಯಿತು! ಬಲವಾಗಿ ಹಿಡಿದೆಳೆದ ಅತಿಪ್ರಯಾಸದಿಂದ ಅದನ್ನು ದಡಕ್ಕೆಳೆದ ಕೊಂಡು ಬಂದೆ.

ನನ್ನ ಆಶ್ಚರ್ಯ ಮತ್ತು ಸಂತೋಷಕ್ಕೆ ಪಾರವೇ ಇರಲಿಲ್ಲ! ಆ ವಸ್ತುವು ಹಿಂದೆ ಅದೃಶ್ಯವಾದ ಸ್ತ್ರೀ ವ್ಯಕ್ತಿಯೇ ಆಗಿದ್ದಿತು. ನನ್ನ ಉತ್ತರೀಯವನ್ನು ಹಾಸಿ ಅದರ ಮೇಲೆ ಅವಳನ್ನು ಮೆಲ್ಲಗೆ ಮಲಗಿಸಿ ಶೈತ್ಯೋಪಚಾರವಮಾಡಿದೆ. ಸ್ವಲ್ಪ ಹೊತ್ತಿನಲ್ಲಿಯೇ ಅವಳ ಹೃದಯದಲ್ಲಿ ನೀರು ತುಂಬಿದ್ದರಿಂದ ಪ್ರಜ್ಞೆ ತಪ್ಪಿ ಹೋಗಿತ್ತು. ಆದರೂ ಜೀವಂತಳಾಗಿರುವಳಲ್ಲ ಎಂಬುದೇ ನನ್ನ ಅಪಾರ ಆನಂದ!

ಸ್ವಲ್ಪ ಹೊತ್ತಿನಲ್ಲಿಯೇ ಅವಳ ಬಾಡಿದ ಕೋಮಲ ನಯನಗಳು ತೆರೆಯಲ್ಪಟ್ಟವು. ನನ್ನನ್ನು ಆಶ್ಚರ್ಯ ಭಯದೊಡನೆ ನೋಡಿದಳು! ಅವಳಿಗೆ ಒಂದು ಕಡೆ ಅಪಾರ ವ್ಯಸನ, ಮತ್ತೊಂದು ಕಡೆ ವಿಶೇಷ ಸಂತೋಷ. ವೈಧವ್ಯವನ್ನು ಹೊಂದಿ ಈ ಕ್ರೂರ ಸಮಾಜ ಶಾಸನದಿಂದ ಪಾರಾಗಿದ್ದವಳು ಪುನಃ ಹೊರಗೆ ಬಂದೆನಲ್ಲಾ ಎಂಬ ಅಗಾಧ ಶೋಕ ಮತ್ತು ವ್ಯಸನ. ಅನಂತರ ನನ್ನನ್ನು ನೋಡಿದೊಡನೆಯೇ ಮಹದಾನಂದವನ್ನು ಪಡೆದವಳಂತೆ ಕಾಣುತ್ತಿದ್ದಳು. ಹೀಗ ಸುಖದುಃಖಗಳ ಪ್ರತಿಸ್ಪರ್ಧೆಯು ಮುಂದುವರೆಯಿತು.

ಕೊಂಚಕಾಲ ಕಳೆಯಿತು. ಅವಳು ಜ್ಞಾನವನ್ನು ಸಂಪೂರ್ಣವಾಗಿ ಹೊಂದಿದಳು. ಮಾತನಾಡಲು ಕೊಂಚ ಶಕ್ತಿ ಬಂದಿತು. "ರಾಮಾ! ಈ ಹತಭಾಗಿನಿಯನ್ನೇಕೆ ಮತ್ತೆ ಜೀವಸಹಿತ ಉಳಿಸಿದೆ? ಈ ಹಾಳು ಸಮಾಜದ ಉಗ್ರಶಾಸನಕ್ಕೊಳಪಡಲು ಪುನಃ ನನ್ನನ್ನೇಕೆ ಸೆಳೆದುತಾರಿದೆ? ಈಗಲೇ ನನ್ನನ್ನು ಕೆರೆಗೆ ನೂಕಿ ಪುಣ್ಯಸಂಪಾದಿಸಿಕೋ; ಇಲ್ಲದಿದ್ದಲ್ಲಿ ನಾನೇ ಬೀಳುವೆನು. ನೀನು ಇಲ್ಲಿದ್ದುದನ್ನು ನೋಡಿದರೆ ಯಾರಾದರೂ ನಿನ್ನನ್ನು ಅಪಹಾಸ್ಯಮಾಡಿಯಾರು! ಅಪವಾದಕ್ಕೆ ಗುರಿಯಾಗಬೇಡ, ನನ್ನನ್ನು ಬಿಟ್ಟುಬಿಡು" ಎಂದು ಮನಮರುಗುವ ಮಾತುಗಳಿಂದ ಎದ್ದು ಮುಂದೆ ಸಾಗುತ್ತಿದ್ದಳು.

ನನ್ನಲ್ಲಿ ಅವುದೋ ಒಂದು ವೇದನೆಯು ಹೃದಯವನ್ನು ಕೊರೆಯುತ್ತಿದ್ದಿತು. ಅಗಾಧ ಯೋಚನೆಯ ಪ್ರವಾಹದಲ್ಲಿ ಸಿಕ್ಕಿ ಹುಚ್ಚನಂತಾದೆ. ಕಣ್ಣರಳಿಸಿ ಮುಂದೆ ನೋಡಿದೆ. ಪುನಃ ಘೋರದೃಶ್ಯ! ಓಡಿಹೋಗಿ ಅವಳನ್ನು ಹಿಡಿದೆ. ಗದ್ಗದ ಸ್ವರದಿಂದ ಕೆಲವು ಮಾತುಗಳನ್ನಾಡಿದೆ. 'ಕಮಲಾ! ನಿನ್ನ ಹಠವನ್ನು ಬಿಡು; ನನ್ನೊಡನೆ ಬಾ. ಆತ್ಮಹತ್ಯಮಾಡಿಕೊಳ್ಳುವುದು ಮಹಾ ದೋಷವೆಂದರಿಯೆಯಾ?' ಎಂದು ಕೆಲವು ಸಮಾಧಾನದ ಮಾತುಗಳನ್ನಾಡಿ ಅವಳು ನನ್ನ ಸಂಗಡ ಬರುವಂತೆ ಒಡಂಬಡಿಸಿದೆ.

ಅಷ್ಟುಹೊತ್ತಿಗೆ ೧ ಘಂಟೆ ಹೊಡೆದಿತ್ತು. ಕಾಳರಾತ್ರಿಯಲ್ಲಿ ನಾವಿಬ್ಬರೂ ಅತಿ ಪ್ರಯಾಸದಿಂದ ಮನೆಯನ್ನು ತಲುಪಿದೆವು. ಅಂದಿನಿಂದ ಅವಳ ಆರೋಗ್ಯ ಭಾಗ್ಯವನ್ನು ನೋಡುವುದೇ ನನ್ನ ಪ್ರಧಾನ ಕರ್ತವ್ಯವೆಂದರಿತೆ. ಅವಳನ್ನು ನನ್ನ ಸಹೋದರಿಗಿಂತಲೂ ಹೆಚ್ಚಾಗಿ ಕಾಣುತ್ತಿದ್ದೆ.

ಕೆಲವು ದಿನಗಳು ಕಳೆದವು. ಒಂದು ದಿನ ಕಮಲೆಯು ತಿರುಗಾಡಲು ಕೊಂಚ ಶಕ್ತಿ ಹೊಂದಿದ್ದರಿಂದ ಮನೆಯ ಅಂಗಳದಲ್ಲಿ ನಿಂತಿದ್ದಳು. ಸಾಯಂಕಾಲ ಸುಮಾರು ೫ ಘಂಟೆಗಳಿರಬಹುದು. ಅವಳ ಬಾಲ್ಯಸ್ನೇಹಿತೆಯಾದ ಲಲಿತೆಯು ಅವಳಿದ್ದ ಸ್ಥಳಕ್ಕೆ ಬಂದಳು. ಅವಳು ಕಮಲೆಯನ್ನು ನೋಡಿ "ಕಮಲಾ! ಇದೇನು? ನೀನು ಒಬ್ಬಳೇ ರಾಮುವಿನ ಸಂಗಡ ಹೀಗೆ ಇರಬಹುದೆ?" ಎಂದಳು. ಇದನ್ನು ಕೇಳಿದೊಡನೆಯೇ ಆ ದುರದೃಷ್ಟದ ಕಮಲೆಯು ಎದೆಗೆ ಶೂಲವಿರಿದಂತಾಯಿತು. ಗಾಸಿಯಾದ ಪೆಟ್ಟಿಗ ಪುನಃ ನೋವು ಉಂಟಾಯಿತು. ಆದರೂ ಮರುತ್ತರ ಕೊಡದೆ ಮನೆಯ ಕೊಠಡಿಯನ್ನು ಪ್ರವೇಶಿಸಿದಳು.

ಕೊಠಡಿಯನ್ನು ಪ್ರವೇಶಿಸಿ ಮೂಲೆಯಲ್ಲಿದ್ದ ಹಗ್ಗವನ್ನು ಒಂದು ತೊಲೆಗೆ ಕಟ್ಟಿ ನೇಣುಹಾಕಿಕೊಂಡಳು. ಅವಳ ಪ್ರಾಣಪಕ್ಷಿಯು ಕ್ಷಣಮಾತ್ರದಲ್ಲಿಯೇ ಹಾರಿ ಹೋಯಿತು!

ಎಲ್ಲಿಯೋ ಹೊರಗೆ ಹೋಗಿದ್ದವನು ಮನೆಗೆ ಬಂದು ಕಮಲೆಯನ್ನು ಹುಡುಕಿದೆ. ಅವಳ ಕೊಠಡಿಗೆ ಕಾಲಿಟ್ಟೊಡನೆಯೇ ಎದೆಯೊಡೆಯಿತು! ಭೀಕರ ದೃಶ್ಯ! "ನಿನ್ನ ಮೇಲಿನ ಅಪವಾದವನ್ನು ಕಳೆಯಲು ಪರಮಾತ್ಮನ ಸಮೀಪಕ್ಕೆ ಹೋಗುತ್ತೇನೆ!— ಇತಿ ನಿರ್ಭಾಗ್ಯ ಕಮಲೆ" ಎಂದು ಬರೆದಿದ್ದ ಕಾಗದವನ್ನು ನೋಡಿದೊಡನೆಯೇ "ಅಯ್ಯೋ! ಹಾಳು ಸಮಾಜವೇ" ಎನ್ನುತ್ತ ನೆಲದಮೇಲೆ ನಿಶ್ಚೇಷ್ಟಿತನಾಗಿ ಬಿದ್ದುಬಿಟ್ಟೆನು.

ಆಚಾರ ಮತ್ತು ಆರೋಗ್ಯ.

ವೇ|| ಬ್ರ|| ಚೀಮನಹಳ್ಳಿ ರಘುನಾಥಾಚಾರ್ಯರಿಂದ.

ಎರಡನೆಯ ಭಾಗ

ಆರೋಗ್ಯ ಅಥವಾ ಸ್ವಾಸ್ಥ್ಯದ ರಕ್ಷಣೆಗೆ ಅಭ್ಯಂತರ ಮತ್ತು ಬಾಹ್ಯವೆಂದು ಎರಡು ಉಪಾಯಗಳಿವೆ

ಅಭ್ಯಂತರೋಪಾಯ.

ವೇದೋಕ್ತಾರ್ಥಗಳಿಗೆ ವಿರುದ್ಧವಿಲ್ಲದ ಸದಾಗಮಗಳಲ್ಲಿ ನಿರೂಪಿಸಿದ ಅರ್ಥವನ್ನು ಯಥಾಸ್ಥಿತವಾಗಿ ತಿಳಿದು ಅವುಗಳಲ್ಲಿ ಅಸಂಭಾವನೆಯಿಲ್ಲದೆ ನಂಬಿಕೆಯಿಂದ ವಿಪರೀತ ಭಾವನೆಯನ್ನು ತ್ಯಾಗಮಾಡಿ, ಆಸ್ತಿಕ್ಯ ಬುದ್ಧಿಯಿಂದ ಕೂಡಿ ತಮ್ಮ ತಮ್ಮ ವರ್ಣಾಶ್ರಮ, ದೇಶ, ಕಾಲ, ಪುರುಷಾಧಿಕಾರ, ಶಕ್ತಿಯನ್ನು ಅನುಸರಿಸಿ, ಶ್ರುತಿ, ಸ್ಮೃತಿಗಳಲ್ಲಿ ಹೇಳಿರುವ ಸತ್ಕರ್ಮಾನುಷ್ಠಾನ ಮಾಡಬೇಕೆಂಬ ಬುದ್ಧಿ ಮೊದಲಾದವು "ಅಭ್ಯಂತರ" ಉಪಾಯವು. ಈ ಆಂತರ ರಕ್ಷಣೆಯು ಅಂತಃಕರಣದಲ್ಲಿ ಸಮೀಚೀನವಾದ ಸಂಸ್ಕಾರವನ್ನು ಉತ್ಪಾದನೆ ಮಾಡುವುದು.

ಇನ್ನು **"ಬಾಹ್ಯೋಪಾಯವು"** ಈ ರೀತಿಯಾಗಿರುವುದು. ಪ್ರತಿನಿತ್ಯವೂ ಜನಾಪವಾದ ವಿಷಯವನ್ನು ಬಿಟ್ಟು, ಸೂರ್ಯೋದಯಕ್ಕೆ ಮುಂಚೆ ನಾಲ್ಕು ಘಳಿಗೆ ಎಂದರೆ ಉಷಃಕಾಲದಲ್ಲೇ ನಿದ್ರೆಯಿಂದ ಎದ್ದು ಇಷ್ಟದೇವತೆಗಳ ಸ್ಮರಣೆಯನ್ನು ಮಾಡಿ, ಹಸು, ಮೊಸರು, ತುಪ್ಪ, ಕನ್ನಡಿ, ಸಾಸುವೆ, ಬಿಲ್ವಪತ್ರೆ, ಬಿಳೀ ಹೂ, ತುಳಸಿ, ಸೂರ್ಯ, ಭೂಪತಿ, ಆಚಾರ್ಯ, ಮುತ್ತೈದೆ, ಗೋವು ಮೊದಲಾದುವನ್ನು ನೋಡಿ, ಅಥವಾ ಸ್ಪರ್ಶ ಮಾಡಿ, ಕರಗಿದ ತುಪ್ಪದಲ್ಲಿ ಮುಖದರ್ಶನ ಮಾಡುವುದು ಇದು ದೀರ್ಘಾಯಸ್ಸನ್ನು ಕೊಡುವುದು

ನಂತರ ಗ್ರಾಮದಿಂದ ಆಚೆಗೆ ನೈರುತ್ಯ ದಿಕ್ಕಿಗೆ ಹೋಗಿ ತಲೆಗೆ ವಸ್ತ್ರವನ್ನು ಸುತ್ತಿ, ಹುಲ್ಲಿನಿಂದ ಆಚ್ಛಾದಿತವಾದ ಭೂಮಿಯಲ್ಲಿ ಮೂತ್ರ ಪುರೀಷವನ್ನು ತ್ಯಜಿಸುವುದು. ಅರುಣೋದಯ ಅಥವಾ ಉಷಃಕಾಲದಲ್ಲಿ ಮಲೋತ್ಸರ್ಜನೆಯು ಹೊಟ್ಟೆ ನೋವು ಮೊದಲಾದ ಉದರ ರೋಗ ಉಂಟಾಗದಂತೆ ಅನುಕೂಲಿಸುವುದು ಮಲ ವಿಸರ್ಜನೆ ಮಾಡಬೇಕೆಂದು ಇಚ್ಛೆಯುಂಟಾದಾಗ ಅದರ ವೇಗವನ್ನು ತಡೆಯಬಾರದು ಅದರ ವೇಗವಿಲ್ಲದಿರುವಾಗ ಬಲಾತ್ಕಾರದಿಂದ ವಿಸರ್ಜನೆಗೆ ಪ್ರಯತ್ನಪಡಬಾರದು. ಅಂಥಾ ಪ್ರಯತ್ನವು ನಾನಾವಿಧ ರೋಗಗಳನ್ನು ಪ್ರಕೋಪ ಮಾಡುವುದು

ಶತಂ ವಿಹಾಯ ಭೋಕ್ತವ್ಯಂ ।
ಸಹಸ್ರಂ ಸ್ನಾನಮಾಚರೇತ್ ॥
ಲಕ್ಷಂ ವಿಹಾಯ ಸ್ಪ್ರಷ್ಟವ್ಯಂ ।
ಕೋಟಿಂ ತ್ಯಕ್ತ್ವಾ ಹರಿಂ ಭಜೇತ್ ॥

"ನೂರು ಕಾರ್ಯವಿದ್ದರೂ ಬಿಟ್ಟು ಸಕಾಲಕ್ಕೆ ಭೋಜನ ಮಾಡಬೇಕು. ಸಹಸ್ರ ಕೆಲಸವಿದ್ದರೂ ಬಿಟ್ಟು ಕಾಲಕ್ಕೆ ಸ್ನಾನವನ್ನು ಮಾಡುವುದು ಲಕ್ಷ ಕೆಲಸವಿದ್ದರೂ ಅಲಕ್ಷ್ಯ ಮಾಡಿ ಸ್ಪರ್ಶಿಸಬೇಕು ಕೋಟಿ ಕಾರ್ಯವನ್ನಾದರೂ ತ್ಯಜಿಸಿ ಮುಕ್ತಿ ಪ್ರದನಾದ ಶ್ರೀ ಹರಿಯನ್ನು ಭಜಿಸಬೇಕು" ಎಂದು ಹೇಳಿದಂತೆ, ಸ್ನಾನ ಕಾಲಕ್ಕೆ ಪೂರ್ವದಲ್ಲಿ ಆಚರಿಸಬೇಕಾದ ಮಲವಿಸರ್ಜನಾದಿಗಳೂ ಸ್ನಾನಾಂಗವಾದ್ದರಿಂದ ಸಹಸ್ರಾರು ಕಾರ್ಯ ಜಾಲವನ್ನಾದರೂ ವರ್ಜಿಸಿ, ಮಲವಿಸರ್ಜನೆ ಮಾಡಬೇಕು. ಇದರಂತೆಯೇ ಅಧೋವಾಯು (ಅಪಾನ ವಾಯು) ವೇಗ, ಹಸಿವು, ಬಾಯಾರಿಕೆ, ಆಕಳಿಕೆ, ಮೂಗಿನ ಸಂಬಂಧವಾದ ಸೀನು, ಸಿಂಬಳ ಮುಂತಾದವುಗಳ ವೇಗಗಳನ್ನು ನಿರೋಧ ಮಾಡಬಾರದು. ಹಾಗೆ ಮಾಡಿದರೆ, ಶೂಲರೋಗ, ಅಗ್ನಿಮಾಂದ್ಯ, ಅಜೀರ್ಣ, ಪೀನಸ, ಮೊದಲಾದ ರೋಗಗಳು ಹುಟ್ಟುವುವು

ಮಲವಿಸರ್ಜನೆಯಾದನಂತರ ಮಲನಿರ್ಗಮ ದ್ವಾರಗಳನ್ನು ಮಣ್ಣು ನೀರುಗಳಿಂದ ಶುದ್ಧಿಮಾಡಬೇಕು ಈ ಶೌಚವು ಬಲ, ಕಾಂತಿ ಮತ್ತು ಪಾವಿತ್ರ್ಯಗಳನ್ನು ಕೊಡುವವು ಅನಂತರ ಶುದ್ಧವಾದ ಜಲದಿಂದಲೂ, ಮಣ್ಣಿನಿಂದಲೂ (ಅಂಗೈ) ಕೈಕಾಲುಗಳನ್ನು ಉಜ್ಜಿ ತೊಳೆಯಬೇಕು. ಇದರಿಂದ ದುರ್ಗಂಧ ಪರಿಹಾರವಾಗುವುದಲ್ಲದೆ ಕಣ್ಣಿಗೆ ಹಿತವೂ, ಮಲವಿಸರ್ಜನೆಯಿಂದಾಗುವ ಶ್ರಮ ಪರಿಹಾರವೂ ಆಗುವುದು.

ಆಮೇಲೆ ದಂತಧಾವನವನ್ನು ಮಾಡಬೇಕು ಹಲ್ಲಿಗೆ ಸಂಬಂಧಿಸಿದ ವಸಡು, ಮಾಂಸಖಂಡಗಳಿಗೆ ಬಾಧೆಯಾಗದಂತೆ ರಕ್ತ ಬಂದು ವ್ರಣವಾಗದಂತೆ ಹಲ್ಲನ್ನು ದಂತಕಾಷ್ಠದಿಂದ ಉಜ್ಜಬೇಕು. ಕಿರುಬೆರಳಿನಷ್ಟು ದಪ್ಪವೂ, ಹನ್ನೆರಡು ಅಂಗುಲ ಉದ್ದವೂ ಉಳ್ಳ ಎಳ್ಳು, ಎಕ್ಕ, ಆಲ, ಕರಂಜ, ಪ್ಲಕ್ಷ ಬದರಿ, ಖದಿರ, ಬಿಲ್ವ, ಅತ್ತಿ, ಮಾವು, ಸಂಪಿಗೆ, ಶಿರೀಷ, ಉತ್ತರಾಣಿ, ದಾಳಿಂಬದ ಕಡ್ಡಿಗಳಲ್ಲಿ ಯಾವುದಾದರೂ ಹಸಿಯಾಗಿರುವ ಕಡ್ಡಿಯಿಂದ ದಂತಧಾವನ ಮಾಡಬೇಕೆಂದು ನಿರೂಪಿಸಲ್ಪಟ್ಟಿದೆ. ಈ ಮೇಲ್ಕಂಡ ಗಿಡಗಳ ಕಡ್ಡಿಯಿಂದ ಹಲ್ಲುಗಳನ್ನು ಉಜ್ಜಿ ತೊಳೆಯುವುದರಿಂದ ಕ್ರಮವಾಗಿ ವೀರ್ಯ, ದೀಪ್ತಿ, ವಿಜಯ, ಅರ್ಥಲಾಭ, ಇಷ್ಟಾನ್ನ ಭೋಜನ, ಸೌಗಂಧ್ಯ, ಧನಪ್ರಾಪ್ತಿ, ವಾಕ್‌ಸಿದ್ಧಿ, ಸ್ವಾಸ್ಥ್ಯ, ಮೇಧಾ, ಭಾಷಣ ದಾರ್ಢ್ಯ, ಸುರೂಪ, ಕೀರ್ತಿ ಸೌಖ್ಯಗಳು ಲಭಿಸುವುವೆಂದು ಫಲವು ಹೇಳಿದೆ ದಂತಧಾವನದಿಂದ ಹಲ್ಲಿನ ಕೊಳೆಯು ನಾಶವಾಗಿ ಶುಭ್ರವಾಗುವುದಲ್ಲದೆ, ಬಾಯಿ ದುರ್ಗಂಧ ಪರಿಹಾರವೂ, ರೋಗೋತ್ಪತ್ತಿಗಳ ಕಾರಣ ನಾಶವೂ, ಆಗುವುದೆಂಬುದು ಸಾಮಾನ್ಯವಾಗಿ ತಿಳಿಯುವುದು

ದಂತಧಾವನೆಯಾದಮೇಲೆ ಬಂಗಾರದ ಅಥವಾ ಬೆಳ್ಳಿಯ, ಇಲ್ಲದೆ ಹಿತವುಂಟಾಗುವ ವೃಕ್ಷಗಳ ಕಡ್ಡಿಯಿಂದ ಮೆಲ್ಲಗೆ ನಾಲಿಗೆಯ ಮೇಲಿನ ಮಾಲಿನ್ಯವನ್ನು ತೆಗೆಯಬೇಕು. ಇದರಿಂದ ನಾಲಗೆಯ ಸಂಬಂಧವಾದ ರೋಗಾದ್ಯುಪದ್ರವವು ಜನಿಸುವುದಿಲ್ಲ.

ನಂಜನಗೂಡು ವರ್ತಮಾನ.

ರೈಲ್ವೆ:—ರಾತ್ರಿ ರೈಲಿನಲ್ಲಿ ಮದ್ಯಪಾಯಿಗಳು ಬಹು ಗಲಾಟೆ ಮಾಡುತ್ತಾರೆಂದೂ, ಪ್ರಯಾಣಿಕರಿಗೆ ಬಹು ತೊಂದರೆಯಾಗಿರುವುದೆಂದೂ ಕೇಳುತ್ತೇವೆ.

ಗ್ರಾಮಪಂಚಾಯತಿ:—ಬಿಲಿಗೆರೆ ಹೋಬಳಿ ಸರಗೂರು ಗ್ರಾಮಪಂಚಾಯತಿಯು ಬಹು ಸಮರ್ಪಕವಾಗಿ ಕೆಲಸಮಾಡುತ್ತಿರುವುದೆಂದೂ ರವಿನ್ಯೂ ಇನ್ಸ್‌ಪೆಕ್ಟರು ಶ್ರೀ|| ಟಿ. ವಿ ರಾಮಯ್ಯರವರು ವಿಶೇಷ ಶ್ರಮವಹಿಸಿ ಕೆಲಸಮಾಡುತ್ತಿರುವರೆಂದೂ ತಿಳಿದುಬಂದಿದೆ. ಗ್ರಾಮನೈರ್ಮಲ್ಯವು ಒಂದೇ ಅಲ್ಲ ಗ್ರಾಮನಿವಾಸಿಗಳ ಆರ್ಥಿಕೋನ್ನತಿಗೂ ಇವರು ಗಮನಕೊಡುತ್ತಿರುವರು. ಇವರ ಯತ್ನವು ಸಫಲವಾಗಲೆಂದು ಕೋರುತ್ತೇವೆ.

ಅಮಲ್ದಾರರವರು:—ಎಗನೆಯ ತಾರೀಖಿನ ದಿನ ದೇವಸ್ಥಾನಕ್ಕೆ ಅನಿರೀಕ್ಷ್ಯವಾಗಿ ಭೇಟಿ ಕೊಟ್ಟರೆಂದೂ, ಹಲವು ಲೋಪಗಳು ಕಣ್ಣಿಗೆ ಬಿದ್ದವೆಂದೂ ಗೊತ್ತಾಗಿದೆ. ತಪ್ಪೆ ಅನ್ನವು ಉತ್ತಮಗೊಂಡುದು ಪೇಷ್ಕಾರರಿಗೇ ಕೀರ್ತಿ ತರುವಂತಹುದು. ಮೇಲಿಂದ ಮೇಲೆ ಅಮಲ್ದಾರರವರು ಹೀಗೆ ಮಾಡುತ್ತಿದ್ದರೆ ಬಹುಮಟ್ಟಿಗೆ ಆಡಳಿತವೆಲ್ಲವೂ ಕ್ರಮಪಡಬಹುದು.

ಅಸ್ಪೃಶ್ಯತೆ ಸಭೆ.—ಈಗಿನ ಕಾರ್ಯದರ್ಶಿಗಳು ದಯವಿಟ್ಟು ಇದನ್ನು ಜೀರ್ಣೋದ್ಧಾರ ಮಾಡಬಾರದೆ? ಹೊಸ ಸಬ್ ಡಿವಿಷನ್ ಸಾಹೇಬರವರಾದರೂ ಇದಕ್ಕೆ ನಿಗಾ ಕೊಡಬಾರದೆ? ಮುಚ್ಚಿದ್ದರೂ ಉಪಯೋಗಿಸಿಕೊಂಡು ಕೆಲಸಮಾಡಬಾರದುದಕ್ಕೇನೆನ್ನಬೇಕು?

ಸಬ್ ರಿಜಿಸ್ಟ್ರಾರ್‌ರವರು:—ಹೊಸಬರಾದರೂ ವಿಶೇಷ ಚಾಕಚಕ್ಯತೆಯಿಂದ ಕೆಲಸಮಾಡುತ್ತಿರುವರೆಂದೂ ಇಷ್ಟರಲ್ಲಿಯೇ ಪುನಃ ಅಮಲ್ದಾರಿಗೆ ಹೊರಟುಹೋಗುವ ಪ್ರಸರದಲ್ಲಿರುವರೆಂದೂ ವರ್ತಮಾನವಿದೆ.

ಮುನಿಸಿಪಾಲಿಟಿ—ಬೀದಿಗಳ ರೊಚ್ಚು ಒಂಭತ್ತು ಗಂಟೆಗಳ ಕಾಲವಾದರೂ ಬೆಳಗಿನ ಹೊತ್ತು ಕೆಲವು ಬೀದಿಗಳಲ್ಲಿ ಸಾಗುತಲಿಲ್ಲ. ತರೇಘಾರವಾದ ನೌಕರಿ ಚಾರಕ ಸಿಬ್ಬಂದಿಯನ್ನು ಹೊತ್ತಿದ್ದರೂ ಬಹು ಮುಖ್ಯವಾದ ಕಚರಾ ಸಾಗಿಸುವುದೂ ಸಮರ್ಪಕವಾಗಿಲ್ಲದಿರುವುದು ಊರಿನವರ ದುರದೃಷ್ಟವಲ್ಲವೆ? ಮಕ್ಕಳನ್ನು ಬೀದಿಯಲ್ಲಿ ಪಾಯಿಖಾನೆಗೆ ಕೂರಿಸಿ ತಿರುಗಾಡುವವರಿಗೆ ಅಸಹ್ಯವನ್ನುಂಟುಮಾಡುವ ದುಷ್ಟ ಪದ್ಧತಿಯನ್ನು ತಪ್ಪಿಸಲು ನಿವಾಸಿಗಳು ಯತ್ನಿಸಬೇಕು

ಹಿತೈಷಿ.

ಹುಣಸೂರು ವರ್ತಮಾನ

ಹುಣಸೂರು ಟೌನಿನಲ್ಲಿರುವ
ಶ್ವರ ಕ್ಲಬ್ಬಿನವರಿಗೂ, ಲಾಯರು
ಉಪಾಧ್ಯಾಯರುಗಳು ಮತ್ತು ಇತರ
ದ್ಯೋಗಸ್ಥರಿಗೂ ಹಿಂದಿನ ಶನಿವಾರ
ಬಾಲ್ ಪಂದ್ಯವು ನಡೆಯಿತು ಈ
ದ್ಯದಲ್ಲಿ ಜಯವೀರರಿಗೆ ಬಹುಮಾನ
ಡುವುದಾಗಿ ಮ|| ಜಿ. ಕೃಷ್ಣಮೂರ್ತಿ
ಯರವರು ಭರವಸೆಕೊಟ್ಟಿದ್ದರು
ಪಾರ್ಟಿಯವರೂ ಒಬ್ಬರಿಗಿಂತೊಬ್ಬ
ಮೇಲಾಗಿ ಆಡುವುದಕ್ಕೆ ಪ್ರಾರಂಭಿಸಿ
ಎರಡು ಕಡೆಯವರೂ ಎರಡೆರಡು ಗೋ
ಗಳನ್ನು ಮಾಡಿ ಪಂದ್ಯವು ಸಮಾಪ್ತ
ತು. ಚರ್ಖಾಸಂಘ ಮುಂತಾದ
ಗಳನ್ನೂ ಇನ್ನೂ ಇತರ ಆಟಗ
ಕಲ್ಪಿಸಿಕೊಟ್ಟು ಯುವಕರನ್ನು ಈ
ಕ್ಕೆ ತಕ್ಕಂತೆ ಪ್ರೋತ್ಸಾಹಿಸಬೇಕೆ
ಗ್ರಾಮ ಮುಖಂಡರಲ್ಲಿ ವಿಜ್ಞಾಪಿಸ

ಹುಣಸೂರು ಫಾರೆಸ್ಟ್ ಕಂಟ್ರಾಕ್ಟ
ಹಾ|| ಮಹಬೂಬ್ ಹುಸೇನ್‌ಸಾಹೇಬ
ಹಳ್ಳಿಗಳ ರೈತರ ಗಾಡಿಗಳಿಗೆ
ಸೌದೆ ಹೊಡುವ ಕೆಲಸಗಳನ್ನು ಕೊ
ಅವರ ಬಾಡಿಗೆ ವಗೈರೆಗಳನ್ನು ಕ್ರಮ
ಗಿ ಪಾವತಿಮಾಡುತ್ತಾ ಬರುತ್ತಿದ್ದುದ
ಅವರ ಪ್ರೀತಿವಿಶ್ವಾಸಗಳಿಗೆ ಪಾ
ತ್ರರಾಗಿರುವರು ಕಳೆದ ಭಾನುವಾ
ರದ ಸಾಹೇಬರಿಗೆ ವೀರ ಹೊಸಳ್ಳಿ
ನಿಂದ ಮೈಸೂರಿಗೆ ಸೌದೆ ಸಾಗಿಸಬೇ
ಸಮಯ ಒದಗಲು ಗ್ರಾಮಾಂತರದ
ರಿಗೆ ತಿಳಿಸಲು ಕೂಡಲೆ ಅವರ ಸಹಾ
ಕ್ಕಾಗಿ ಸುಮಾರು ಮುನ್ನೂರು ಗಾ
ಗೂ ಜಾಸ್ತಿಯಾಗಿ ವೀರನ ಹೊಸಳ್ಳಿ
ದಿನದಲ್ಲಿ, ಇಷ್ಟು ಗಾಡಿಗಳಿಗೂ ಒಂದೆ
ವಸ ಸೌದೆ ತುಂಬಿಸಿ, ಅದೇ ಸ್ಥ
ಗಾಡಿಯವರಿಗೂ, ಕಾದುಕುಡುಬರಿಗ
ನ್ನೂ ಇತರರಿಗೂ ಸುಮಾರು 500
ರಿಗೆ ಮೃಷ್ಟಾನ್ನ ಫಲಾಹಾರ
ಕೂಡಿದ ವನಭೋಜನವನ್ನು ಮಾಡಿ
ಗ್ರಾಮನಿವಾಸಿಗಳನ್ನೂ ಕಾದುನಿಂತಿ
ನ್ನೂ ಸಂತೋಷಪಡಿಸಿ ಕಾಡಿನಿಂದ ಗಾ
ಗಳು ಒಂದೊಂದಾಗಿ ಹೊರಟವು ಗಾಡಿ
ಸಾಲು ಸುಮಾರು ಒಂದುವರೆ ಮೈಲಿಗಿಂತ
ಜಾಸ್ತಿಯಾಗಿ ಹುಣಸೂರಿನ ಒಳಗೆ ಹ
ಗುತ್ತಿರುವುದನ್ನು ನೋಡಿ ತಂಡೋಪತಂ
ಡವಾಗಿ ಜನರು ಜಾತ್ರೆಯಂತೆ ಸೇರಿ
ಳ ಸಂತೋಷದಿಂದ ನೋಡುತ್ತಿದ್ದ
ದವರೆಗೆ ಯಾರೂ ಇಂಥಾ ಕಾರ್ಯ
ಮಾಡಿರಲಿಲ್ಲ. ಜನಸಾಮಾನ್ಯಕ್ಕೆ
ಯಮಾಡುವ ಯಾರಿಗೇ ಆಗಲಿ ಪ್ರೋ
ವು ದೊರೆಯದೆ ಇರುವುದಿಲ್ಲ.

ಮುದ್ದಗಿರಿ ಲಕ್ಷ್ಮಣಶೆಟ್ಟಿ,
ಸೆಕ್ರೆಟರಿ, ಹಿಂದೂ ಸ

ಅನೇಕ ಮರ್ಮ ವಿದ್ಯೆಗಳಿಂದೊಡಗೂಡಿದ

ಚಿಂತಾರತ್ನ

ಪಲ್ಲಿ-ಜಾತಕ ಫಲ, ಶೃಂಗಾರಿಕೆಯ ವಿಷಯ, ಇಂದ್ರಜಾಲ ಮಹೇಂದ್ರಜಾಲ, ಯಕ್ಷಿಣಿ ಮೊದಲಾದ ವಿದ್ಯೆಗಳು ಇರುತ್ತವೆ.

ಒಂದೊಂದು ವಿಷಯಕ್ಕೆ ಎಷ್ಟು ಬೆಲೆ ಕೊಟ್ಟರೂ ಸಾಲದು.

೧ ಸಬಕಾರವನ್ನು ತಯಾರಿಸುವ ರೀತಿ ೨ ಮೇಣಬತ್ತಿ ತಯಾರಿಸುವ(ದು) ೩ ... ಕಾಸ್ಟಿಕ್ ಸೋಡಾ ತಯಾರಿಸುವದು ೪ ಬಿಸ್‌ಕ್ಯೂಟ ತಯಾರ ಮಾಡುವದು ೫ ದಶಾಂಗ ತಯಾರ ಮಾಡುವದು ೬ ಪೆಪ್ಪರ್‌ಮೆಂಟ ಮಾಡು(ವದು) ೭ ಮೂಷಕ ಘಟ್ಟಿ ಮಾಡುವದು ೮. ಭಂಗಾರ ಮಾಡುವದು ೯ ಬೆಳ್ಳಿ ... ಮಾಡುವದು ೧೦ ಜರ್ಮನ್ ಶಿಲ್ವರ ಧಾತು ಮಾಡುವದು ೧೧ ... ತಯಾರ ಮಾಡುವದು ೧೨ ತಗಡಿನಪಾಟಿ ತಯಾರ ಮಾಡುವದು ... ಕುಂಕುಮವನ್ನು ತಯಾರಿಸುವದು ೧೪ ಹಸಿ ಕುಂಕುಮ ತಯಾರಿಸುವದು ... ಬಹಳ ದಿವಸ ಕೆಡದಂತೆ ಮಾಡುವದು ೧೬ ಬುಕ್ಕಿಟ್ಟು ಮಾಡುವದು ೧೭ ... ಯಾವಾಗಲೂ ಸೀದಾಗಿರುವಂತೆ ಮಾಡುವದು ೧೮ ಅಷ್ಟಗಂಧ ಸಾ... ೧೯ ಭರ್ಪ ತಯಾರ ಮಾಡುವದು ೨೦ ಕಟ್ಟಿಗೆ ಲೋಹಗಳಿಗೆ ... ಬಣ್ಣ ಮಾಡುವದು ೨೧ ಕಾಗದವನ್ನು ಮಾಡುವದು ೨೨ ಮೆಂಥೇ... ತಯಾರಿಸುವದು ೨೩ ಕನ್ನಡಿಯಮೇಲೆ ಒಡೆಯುವದು ೨೪ ದಂತ ... ಮಾಡುವದು ೨೫ ರಕ್ತಶುದ್ಧಿ ಔಷಧ ೨೬ ಕಸ್ತೂರಿಮಾತ್ರೆ ಮಾ(ಡುವದು) ೨೭ ಬಾಲಾಮೃತ ಮಾಡುವದು ೨೮ ಪಡಿತ್ತು ಮಾಡುವದು ೨೯ ... ಜರದ ಗುಳಿಗೆ ಮಾಡುವದು ೩೦ ಬೂಟ ಪಾಲೀಸ ಮಾಡುವದು ೩೧ ... ಸಾರ, ಅಂಗಡಿ ಮೊದಲಾದವುಗಳಿಗೆ ಗೆದ್ದಲಿ ಹತ್ತದಂತೆ ಮಾಡುವದು ... ಕಜ್ಜಿ ಮುಲಾಮು ೩೩ ನಾಸೀಪುಡಿ ಮಾಡುವದು ೩೪. ಮನೆ, ... ಅಂಗಡಿಗಳಲ್ಲಿ ಇಲಿ, ಹೆಗ್ಗಣ ಮೊದಲಾದವುಗಳು ಇರದಂತೆ ಮಾಡುವದು. ... ತಂಬಾಕ ಮಾಡುವದು ೩೬ ಬದನೆ, ಕುಂಬಳ ಮುಂತಾದ ಕಾಯಿ... ಮಾವು, ಲಿಂಬು ಮುಂತಾದ ಹಣ್ಣುಗಳಿಗೂ ಬೀಜವಿಲ್ಲದೆ ದೊಡ್ಡವಾಗುವದು ... ತಯಾರಿಸುವದು ೩೮ ಬಿಳೇ ಹೂಗಳು ಕೆಂಪಾಗುವಂತೆ ಗಿಡಗಳ(ನ್ನು) ತಯಾರಿಸುವದು ೩೯. ಕೆಂಪು ಹೂಗಳು ಬೆಳ್ಳಗಾಗುವಂತೆ ಗಿಡಗಳನ್ನು ತ(ಯಾರಿ)ಸುವದು ೪೦ ಇಸ್ಪೇಟಿನ ಚಮತ್ಕಾರ ೪೧ ಮುಖನೋಡಿಕೊಳ್ಳುವ ಕನ್ನ(ಡಿ ಮಾ)ಡುವದು ೪೨ ಸುವಾಸನೆ ಎಣ್ಣೆ ತಯಾರಿಸುವದು. ೪೩ ಕೇದಿಗೆ ದವನ ... ಮಾಡುವದು ೪೪ ಯಾವಗಿಡವಾದರೂ ಹುಟ್ಟುತ್ತಲೆ ಹೂವು ಬಿಡುವಂತೆ ... ೪೫ ಗಂಧಕದ ಬಟ್ಟಲ ತಯಾರಿಸುವದು ೪೬ ಕರ್ಪೂರ ಮಾ(ಡು)ವದು ೪೭ ಬ್ರೆಡ್ಡು ತಯಾರಿಸುವದು ೪೮ ನೂಲು ಬಟ್ಟೆಗೆ ಬಣ್ಣ ಹಾಕುವದು ... ಕಪ್ಪು, ಕೆಂಪು, ಹಸರು ಹಳದಿ ಬಣ್ಣ ತಯಾರಿಸುವದು ೫೦ ಅರಗಿನ ಬಣ್ಣ ... ಮಾಡುವದು ೫೧ ಗಿಲೀಟ ಮಾಡುವದು ೫೨ ತಾಮ್ರದ ಮೇಲೆ ಭಂಗಾರದ ... ಮಾಡುವದು ೫೩ ತಾಮ್ರ ಹಿತ್ತಾಳಿಗಳಿಗೆ, ಬೆಳ್ಳಿ ಗಿಲೀಟು ಮಾಡುವದು ... ಪೆಟ್ಟಿಗ ತಯಾರಿಸುವದು ೫೫ ರೋಜವಾಟರ ತಯಾರಿಸುವದು ೫೬ ... ಗಿಡವು ಬಳ್ಳಿಯಾಗುವದು ೫೭ ವಾರ್ನಿಸ ತಯಾರಿಸುವದು. ೫೮ ಲವಂ(ಗ) ... ತಯಾರಿಸುವದು ೫೯ ಬಾಯಿಂದ ಉರಿ ತೋರಿಸುವದು ೬೦ ದೆವ(ತೆ) ... ೬೧ ಫೌಂಟನ್ನಪೆನ್ನ ಇಂಕ ತಯಾರಿಸುವದು ೬೨ ಕತ್ತಲೆಯಲ್ಲಿ ... ಇಂಕ ೬೩ ಸ್ಲೇಟ ಪೆನ್ಸಿಲ್ ತಯಾರಿಸುವದು ೬೪ ಕರ್ಪೂರಗ್ಲಾಸ ತ(ಯಾರಿ)ಸುವದು ೬೫ ಕಾಜಿನಬಳೆ ತಯಾರಿಸುವದು ೬೬ ಕವಡಿ ಲೋಬಾನ ತ(ಯಾರಿ)ಸುವದು ೬೭ ಗಂಧದ ಬಿಲ್ಲೆಗಳನ್ನು ತಯಾರಿಸುವದು ೬೮ ಚರ್ಮಕ್ಕೆ ... ವಾರ್ನಿಸ ತಯಾರಿಸುವದು. ೬೯ ಸೋಡಾವಾಟರ ತಯಾರಿಸುವದು ... ಮೇಲೆ ಅಕ್ಷರಗಳನ್ನು ಮೂಡಿಸುವದು ೭೧ ಹಾಲಿನ ಒಡೆ (ಚಾಕ...) ತಯಾರಿಸುವದು ೭೨ ಕೋಳಿತತ್ತಿ ಕೆಡದಂತೆ ಇಡುವದು ೭೩ ಬೆಳ್ಳಿ ... ಗಳ ಮೇಲೆ ಅಕ್ಷರಗಳನ್ನು ಮೂಡಿಸುವದು. ೭೪ ಬಟ್ಟೆಯಮೇಲೆ ... ಮೂಡಿಸುವದು ೭೫ ವಜ್ರವನ್ನು ತಯಾರಿಸುವದು ೭೬ ಹಾಲಿನ ... ಸುವದು. ೭೭. ಸಾಸಾರ್‌ಸರಿಲ ತಯಾರಿಸುವದು ೭೮ ಚೇಳು ಕಡಿದ ... ೭೯ ಕಾರ್ಬನ ಪೇಪರ ತಯಾರಿಸುವದು. ೮೦. ಗಿಡ-ಮರಗಳನ್ನು ಒಣ... ೮೧ ಮಣ್ಣಿನ ಪಾತ್ರೆಯಲ್ಲಿ ಉಪ್ಪಿನಕಾಯಿ ಹಾಕಿದರೆ ಹುಳಗಳು ಬೀಳ(ದಂತೆ) ಮಾಡುವದು ೮೨ ಪುಷ್ಪಗಳ ಬಣ್ಣವನ್ನು ಬದಲಾಯಿಸುವದು ೮೩ ಲಿಂಬಿ ... ಬಹಳ ದಿವಸಗಳ ವರೆಗೆ ಕೆಡದಂತೆ ಇಡುವದು ೮೪ ಮಾವಿನ ಹಣ್ಣು ... ದಿವಸದ ವರೆಗೆ ಕೆಡದಂತೆ ಇಡುವದು ೮೫ ಒಂದೇ ಗಿಡದಲ್ಲಿ ೨ ಬಣ್ಣದ ... ಸುವಂತೆ ತಯಾರಿಸುವದು. ೮೬ ಸಾಣೆಯ ಗಾಲಿಯನ್ನು ತಯಾರಿಸುವ(ದು) ... ಸಪೆನ್ಸಿಲ್ ತಯಾರಿಸುವದು. ೮೮ ಕೇಕ್ಸ ತಯಾರಿಸುವದು ೮೯ ಸು... ಗುಳಿಟ ತಯಾರಿಸುವದು ೯೦. ಕಬ್ಬಿಣವನ್ನು ಕರಗಿಸುವದು

... ೧೨೦ ವಿಷಯಗಳಿವೆ ಸ್ಥಳ ಸಂಕೋಚ ಮೂಲಕ ಎಲ್ಲವನ್ನೂ ಕೊಟ್ಟಿಲ್ಲ

ಬೆಲೆ ೧ ರೂಪಾಯಿ (ವಿ ಪಿ ವೆಚ್ಚ ಬೇರೆ)

ಸಿ. ಎಸ್. ಸಾಲಿಮಠ, ಪ್ರಿಂಟರ, ಗದಗ ಇವರಿಂದ ಬರೆಯಲ್ಪಟ್ಟ

ಕಾಮಕಳಾ ಶಾಸ್ತ್ರ

ಪ್ರತಿ ಒಬ್ಬ ರಸಿಕರು ಅವಶ್ಯ ಓದಬೇಕಾದ ಈ ಪುಸ್ತಕದೊಳಗಿನ ವಿಷಯಗಳು.

೧ ಪುರುಷ ಸಾಮುದ್ರಿಕ ಲಕ್ಷಣ ೨ ಸ್ತ್ರೀ ಸಾಮುದ್ರಿಕ ಲಕ್ಷಣ ೩ ಶಶಕ ಜಾತಿ ಪುರುಷನ ಲಕ್ಷಣ ೪ ಮೃಗಜಾತಿ ಪುರುಷನ ಲಕ್ಷಣ ೫ ವೃಷಭ ಜಾತಿ ಪುರುಷನ ಲಕ್ಷಣ ೬ ಅಶ್ವಜಾತಿ ಪುರುಷನ ಲಕ್ಷಣ ೭ ಪದ್ಮಿನಿ ಜಾತಿ ಸ್ತ್ರೀಯಳ ಲಕ್ಷಣ ೮ ಚಿತ್ರಿಣಿ ಜಾತಿ ಸ್ತ್ರೀಯಳ ಲಕ್ಷಣ ೯ ಶಂಖಿನಿ ಜಾತಿ ಸ್ತ್ರೀಯಳ ಲಕ್ಷಣ ೧೦ ಹಸ್ತಿನಿ ಜಾತಿ ಸ್ತ್ರೀಯಳ ಲಕ್ಷಣ ೧೧ ಯಾವ ಯಾವ ಜಾತಿ ಪುರುಷನಿಗೆ, ಯಾವ ಯಾವ ಜಾತಿ ಸ್ತ್ರೀಯರು ಯೋಗ್ಯ. ೧೨ ಮತ್ತು ಅವರಿಂದ ಹುಟ್ಟಿದ ಸಂತತಿ ಫಲವಿಚಾರ (ಜಾತಕ) ೧೩ ಯಾವ ಯಾವ ಜಾತಿ ಸ್ತ್ರೀಯರಿಗೆ ಯಾವ ಯಾವ ತಿಥಿಯ ದಿವಸ ಭೋಗೇಚ್ಛಾ ಉಂಟಾಗುತ್ತದೆಂಬುದನ್ನು ತಿಳಿಯುವದು ೧೪ ಯಾವ ಯಾವ ಸ್ತ್ರೀಯರಿಗೆ ಎಷ್ಟೆಷ್ಟು ಹೊತ್ತಿಗೆ ಭೋಗೇಚ್ಛಾ ಉಂಟಾಗುತ್ತದೆಂಬುದನ್ನು ತಿಳಿಯುವದು ೧೫ ಯಾವ ಯಾವ ಜಾತಿ ಸ್ತ್ರೀಯರಿಗೆ ಯಾವ ಯಾವ ತಿಥಿಯ ದಿವಸ ಯಾವ ಯಾವ ಅವಯವದಲ್ಲಿ ಕಾಮವು ಇರುತ್ತದೆಂಬುದನ್ನು ತಿಳಿಯುವ ಕ್ರಮವು ೧೬ ಚಂದ್ರಕಲೆಯ ಸ್ಥಾನಗಳು ೧೭ ಸ್ತ್ರೀವಶೀಕರಣ ೧೮ ಪುರುಷವಶೀಕರಣ ೧೯ ಪದ್ಮಿನಿ ಸ್ತ್ರೀಯಳನ್ನು ವಶಮಾಡಿಕೊಳ್ಳುವ ಉಪಾಯ ೨೦ ಚಿತ್ರಿಣಿ ಸ್ತ್ರೀಯಳನ್ನು ವಶಮಾಡಿಕೊಳ್ಳುವ ಉಪಾಯ ೨೧ ಶಂಖಿನಿ ಸ್ತ್ರೀಯಳನ್ನು ವಶಮಾಡಿಕೊಳ್ಳುವ ಉಪಾಯ ೨೨ ಹಸ್ತಿನಿ ಸ್ತ್ರೀಯಳನ್ನು ವಶಮಾಡಿಕೊಳ್ಳುವ ಉಪಾಯ ೨೩ ಭೋಗಕ್ಕೆ ಯೋಗ್ಯ ಸ್ಥಳ ೨೪ ಭೋಗಕ್ಕೆ ಅಯೋಗ್ಯ ಸ್ಥಳ ೨೫ ಮೈಥುನಕ್ಕೆ ಅಯೋಗ್ಯವಾದ ವೇಳೆ ೨೬ ಮೈಥುನಕ್ಕೆ ಅಯೋಗ್ಯ ಸ್ತ್ರೀಯರು ೨೭ ಪರಸ್ತ್ರೀಗಮನದಿಂದಾಗುವ ಹಾನಿ ೨೮ ಸುಗಂಧ ದ್ರವ್ಯ ೨೯ ಕಂಕುಳದೊಳಗಿನ ದುರ್ಗಂಧ ಹೋಗುವದಕ್ಕೆ ೩೦ ಬಾಯಿ ದುರ್ಗಂಧ ಹೋಗುವುದಕ್ಕೆ ೩೧ ಮಸಿ ಬಕ್ಕೆಗೆ. ೩೨ ಕೇಶರಂಜನಕ್ಕೆ ೩೩ ತಿಗಳಿ ಸಕ್ರದಕ್ಕೆ ೩೪ ಕೂದಲು ಉದುರುವದಕ್ಕೆ ೩೫ ಶರೀರದ ಕಪ್ಪು ಬಣ್ಣಕ್ಕೆ ೩೬ ಕುಚವೃದ್ಧಿಗೆ ೩೭ ಸ್ತ್ರೀಯರಲ್ಲಿಯ ಅವಸ್ಥೆಗಳು ೩೮ ಅವಸ್ಥೆ ಮೇಲಿಂದ ಪ್ರೇಮದ ಇರುವಿಕೆ ೩೯ ಮೈಥುನದ ಸುಖದಲ್ಲಿ ಅಂತರ ಬೀಳುವ ಕಾರಣ ೪೦ ದಂಪತಿಗಳು ಕೂಡುವ ದಿಕ್ಕಿನ ಫಲವು ೪೧. ಸತಿಪತಿಗಳು ಕೂಡುವ ದಿವಸ ಫಲ ೪೨ ಗರ್ಭ ನಿಂತದಿವಸ ಫಲ ೪೩ ಗರ್ಭನಿಂತ ಕಾಲ ಫಲ ೪೪ ಸ್ತ್ರೀಯರ ಜಾತಿವೇಲಿಂದ ಕೂಸಿನ ಲಕ್ಷಣ ೪೫. ವಿಕಾಶಯೋನಿಗೆ ಉಪಾಯ ೪೬ ಯೋನಿ ಸಂಕೋಚಕ್ಕೆ ೪೭ ಶಿಶ್ನ ವೃದ್ಧಿಗೆ ೪೮ ಸ್ತ್ರೀಯರಿಗೆ ಸ್ತನಗಳು ಬೇಗನೆ ಸಾಕಾಗುವಂತೆ ಮಾಡುವ ಉಪಾಯ ೪೯ ಪುರುಷರಿಕ್ಕಿಂತ ಮೊದಲು ಸ್ತ್ರೀಯರ ರೇತಸ್ಸ ಬಿಡವಾಗುವ ಉಪಾಯ ೫೦ ಪುರುಷರ ರೇತಸ್ಸು ಬೇಗ ಬೀಳಬಾರದೆಂಬುದಕ್ಕೆ ಉಪಾಯ ೫೧ ವಾಜೀಕರಣ ಪ್ರಯೋಗ ೫೨ ಸ್ತ್ರೀಯರನ್ನು ಜಯಿಸುವದಕ್ಕೆ ೫೩ ಬಹಳ ಮುಟಾಗುತಿದ್ದರೆ ೫೪ ಸಂತತಿ ಪ್ರತಿಬಂಧಕ ಉಪಾಯ. ೫೫ ಮುಟ್ಟು ಪಡೆದಿದ್ದರೆ ೫೬ ಗರ್ಭಾಶಯ ಶುದ್ಧಿಗೆ ೫೭ ಗರ್ಭಧಾರಣಕ್ಕೆ ೫೮ ಗರ್ಭಪಾತಕ್ಕೆ ಉಪಾಯ ೫೯ ಬೇಗ ಹಡಿಯಲಿಕ್ಕೆ ಉಪಾಯ ೬೦ ನಪುಂಸಕ ರೋಗಕ್ಕೆ ಉಪಾಯ ೬೧ ಸ್ತ್ರೀ ಪುರುಷರ ಪ್ರೀತಿಯ ವರ್ಣನೆ ೬೨ ಸ್ತ್ರೀಯರು ವಶವಾಗುವ ಮತ್ತು ಗರ್ಭಧರಿಸುವ ಕಾಲ ೬೩ ಹೆಂಗಸರು ಯಾವ ಕಾರಣದಿಂದ ಕೆಡುತ್ತಾರೆ ೬೪ ಪತಿಯ ವಿಷಯಕ್ಕೆ ಸತಿಯು ಬೇಸರ ಪಟ್ಟಿರುವಳೆಂಬುದನ್ನು ತಿಳಿಯುವದು ೬೫ ಉದಾಸೀನತೆ ಪ್ರಾಪ್ತವಾಗುವ ಕಾರಣ ೬೬ ಭೋಗೇಚ್ಛಾವುಂಟಾದ ಸ್ತ್ರೀಯ ಲಕ್ಷಣ ೬೭ ನಿರಂತರ ಸುರತಯೋಗವಿರುವ ಸ್ತ್ರೀಯ ಲಕ್ಷಣ ೬೮ ವಿರಹಿಣೀ ಸ್ತ್ರೀಯ ಲಕ್ಷಣ ೬೯ ಭೋಗೇಚ್ಛಾ ಪೂರ್ಣವಾದ ವೇಳೆ ತೋರುವ ಸ್ತ್ರೀ ಲಕ್ಷಣ ೭೦ ಉಷ್ಣರೋಗಕ್ಕೆ ೭೧ ರಕ್ತ ಉಷ್ಣಕ್ಕೆ ೭೨ ಮೇಹ ಉಷ್ಣಕ್ಕೆ. ೭೩. ಉಷ್ಣ ಕೈಯೊಳಗೆ ಒಡೆದರೆ ೭೪ ಉಷ್ಣಹುಣ್ಣಿನ ಘಾಯಕ್ಕೆ ೭೫ ಚೀರಿಗೆ ೭೬ ಉಪದಂಶಕ್ಕೆ ೭೭ ಬಿಳೀ ಉಷ್ಣಕ್ಕೆ ೭೮. ತರದ ಪ್ರಮೇಯಕ್ಕೆ ೭೯. ಪ್ರಮೇಯಕ್ಕೆ ೮೦ ಗರ್ಮಿ ರೋಗಕ್ಕೆ ೮೧ ಪುಷ್ಟಿಗೆ ೮೨. ಧಾತು ಪುಷ್ಟಿಗೆ. ೮೩ ರೇತು ಸಂಚಯಕ್ಕೆ ೮೪ ವೀರ್ಯವೃದ್ಧಿಗೆ ೮೫ ಕಾಮೋತ್ತೇಜನಕ್ಕೆ. ೮೬ ದೇಹಶಕ್ತಿ ಬರುವದಕ್ಕೆ. ೮೭. ಮುಷ್ಟಿಮೈಥುನದಿಂದಾಗುವ ಅಶಕ್ತಿಗೆ ೮೮. ಗಂಡಸುತನಕ್ಕೆ (ಷಂಡತ್ವಕ್ಕೆ). ೮೯. ಸ್ವಪ್ನೇಂದ್ರಿಗೆ ೯೦ ಇಂದ್ರಿಯ ಸ್ತಂಭನಕ್ಕೆ. ೯೧ ಶುಕ್ಲ ಸ್ತಂಭನಕ್ಕೆ ೯೨ ಧಾತು ನಷ್ಟಕ್ಕೆ ೯೩ ಹತ್ತುಣ್ಣಿಗೆ ೯೪ ಜಲಮಲ ಕಟ್ಟಿದರೆ ೯೫ ರಸಾಯನ ಮೈಯಲ್ಲಿ ಒಡೆದಿದ್ದರೆ ೯೬ ಗೂದಿಗೆ ೯೭ ಮೂಲವ್ಯಾಧಿಗೆ ೯೮ ಅಂಗಸಾಮುದ್ರಿಕೆ ೯೯. ದೇವ ಪುರುಷನ ಲಕ್ಷಣ ೧೦೦ ಗಂಧರ್ವ ಪುರುಷನ ಲಕ್ಷಣ ೧೦೧ ಯಕ್ಷಪುರುಷನ ಲಕ್ಷಣ ೧೦೨ ಪಿಶಾಚ ಪುರುಷನ ಲಕ್ಷಣ ೧೦೩ ದೇವಸತ್ವಾಸ್ತ್ರೀಯ ಲಕ್ಷಣ ೧೦೪ ಗಂಧರ್ವಸತ್ವಾಸ್ತ್ರೀಯ ಲಕ್ಷಣ ೧೦೫ ಯಕ್ಷಸತ್ವಾ ಸ್ತ್ರೀಯ ಲಕ್ಷಣ ೧೦೬ ಪಿಶಾಚಸತ್ವಾ ಸ್ತ್ರೀಯ ಲಕ್ಷಣ ಇತ್ಯಾದಿ

ಬೆಲೆ ೧ ರೂಪಾಯಿ (ವಿ ಪಿ ವೆಚ್ಚ ಬೇರೆ)

ವಿಳಾಸ:— ಎಸ್. ಸಿ. ಸಾಲಿಮಠ ಅಂಡ್ ಸನ್ಸ್, ಗದಗ ಸಿಟಿ.

ಕಿಕ್ಕಿರಿದ ಜನಸಂದಣಿ—ಎಲ್ಲರ ಬಾಯಲ್ಲೂ 'ಸಂಸಾರನೌಕ' ಚಲನಚಿತ್ರ ಪ್ರಶಂಸೆಯೇ

ಈಗ ಬೆಂಗಳೂರು ಸಾಗರ ಟಾಕೀಸಿನಲ್ಲಿ ದ್ವಿತೀಯ ವಾರ.

ದೇವಿ ಫಿಲಂಸ್‌ರವರ ಪ್ರಥಮ ಸಾಮಾಜಿಕ ಚಿತ್ರ.

ವೇಲ್ ಸ್ಟುಡಿಯೋ ತಯಾರಿಕೆ

ಸಂಸಾರ ನೌಕ

ಹಾಸ್ಯ, ಕರುಣ, ಶೃಂಗಾರ, ರಸಪೂರಿತ ಕಥಾವಸ್ತು

ಮೈಸೂರು

ಒಲಂಪಿಯಾ ಟಾಕೀಸ್‌ನಲ್ಲಿ

ಶೀಘ್ರದಲ್ಲಿಯೇ ಪ್ರದರ್ಶಿಸಲ್ಪಡುವುದು.

ಸರ್. ಕೆ ಪಿ ಪುಟ್ಟಣ್ಣಚೆಟ್ಟಿ, ಜಸ್ಟಿಸ್, ಕೆ. ಪಿ ಲಕ್ಷ್ಮಣರಾವ್ ಇವರುಗಳು ಮುಕ್ತ ಕಂಠದಿಂದ ಈ ಚಲನಚಿತ್ರವನ್ನು ಪ್ರಶಂಸಿಸಿರುವರು.

ತಯಾರಿಸಿದವರು:—

ದೇವೀ ಫಿಲಂಸ್ ಲಿಮಿಟೆಡ್.

೪೫. ಮಿಂಟ್ ಸ್ಟ್ರೀಟ್, : : ಮದರಾಸು.

OLYMPIA TALKIES, MYSORE.

From 9-9-1936

A MIGHTY JUNGLE SERIAL IN TWO INSTALMENTS

31 Reels 31 Reels.

ಒಲಂಪಿಯಾ ಟಾಕೀಸ್, ಮೈಸೂರು.

9—9—36 ರಿಂದ

"ಡಾರ್ಕೆಸ್ಟ್ ಆಫ್ರಿಕಾ"

ಎಂಬ ಭಯಂಕರವಾದ ಕಾಡು ಮೃಗಗಳಿಂದ ತುಂಬಿ ತುಳುಕಾಡುವ ಅದ್ಭುತ ಸೀರಿಯಲ್ಲನ್ನು ೨ ಒದಲುವರೆಗಳಲ್ಲಿ ಪ್ರದರ್ಶಿಸಲ್ಪಡುವುದು

THE SADHVI

RECOMMENDED FOR SCHOOLS BY THE DEPARTMENT

No. TL 3778-146—35-36

OFFICE OF THE DIRECTOR OF PUBLIC INSTRUCTION IN MYSORE

Bangalore, Dated 20th April 1936.

ANNUAL SUBSCRIPTION

Local } **Rs. 2—4—0**
Moffusil }

ಎರಡೇ ಸುಖಸಾಧನಗಳು!!

ಕಿನೋಸೊ—(ಗಂಡಸರಿಗೆ) ಅತ್ಯುತ್ತಮವಾದ ರಬ್ಬರು ಸಾಧನ ... ಡಿಗೆ ಆತಂಕವಿಲ್ಲ ಗರ್ಭೋತ್ಪತ್ತಿಯ ಭಯಕೆಯಿಲ್ಲ. ಮೇಹರೋಗ ... ಯಿಲ್ಲ. ಬೆಲೆ ೧—೮—೦

ಪ್ಯಾರಗನ್.—(ಹೆಂಗಸರಿಗೆ) ಹೆಂಗಸರ ಗರ್ಭನಿವಾರಣೆಗೆ ಅತ್ಯುತ್ತಮ ಸಾಧನ. ಕ್ರೀಡಾ ಸಮಯದಲ್ಲುಪಯೋಗಿಸತಕ್ಕದ್ದು ಬೆಲೆ ೩—೮—೧

ಕೇಟಲಾಗು ಉಚಿತ
ಆಂಧ್ರಾ ಪ್ರಿಂಟಿಂಗ್ ಕಂಪೆನಿ
ಕೃಷ್ಣಪ್ಪನಾಯಕನ ಬೀದಿ, ಮದರಾ...

|| ಸತ್ಯಮೇವೋದ್ಧರಾಮ್ಯಹಮ್ ||

ರಾಜಧಾನಿಯ ರಾಷ್ಟ್ರೀಯ ವಾರ ಪತ್ರಿಕೆ.

ವೃದ್ಧ ಪಿತಾಮಹ ಎಂ. ವೆಂಕಟಕೃಷ್ಣಯ್ಯನವರ ಜ್ಞಾಪಕಾರ್ಥವಾಗಿ ಪ್ರಕಟಿಸಲ್ಪಡುವುದು

ಸಂಪಾದಕರು ಆಗರಂ ರಂಗಯ್ಯ, ಬಿ.ಎ.

ಸಂಪುಟ ೧] MYSORE : MONDAY 7—9—36 ಮೈಸೂರು : ಸೋಮವಾರ ೭—೯—೩೬ [ಸಂಚಿಕೆ ೨೯

ಸಂಪಗಾಮಿಗಳಿಗೆ ಮಂಗಳಾರತಿ

ಲಿಬರಲ್ ಸಂಗಡದವರಿಗೆ ಆರಂಭಕ್ಕೇ ಮಂಗಳಾರತಿಯಾಯಿತು

ಪೂನಾ ಸಭೆಯೊಂದರಲ್ಲಿ ಸರ್ ಕವಾಸ್ಜಿ ಯವರು ಮಾತನಾಡುತ್ತಾ ಕಾಂಗ್ರೆಸ್ಸನ್ನು ಹೊಗಳಿ ಜವಹರಲಾಲರನ್ನು "ಕಾಂಗ್ರೆಸ್ಸಿನ ಮುದ್ದಿನ ಮಗು" ಎಂದರು

ಕೂಡಲೇ ಕೋಳಿ ಮೊಟ್ಟೆಗಳ ಸುರಿಮಳೆಯಾಯಿತು ಮಾನ್ಯ "ಸರ್" ಗಳ ಮೇಲೆ

ಬಾಯಿ ಶುದ್ಧವಾಗಿರದಿದ್ದುದರಿಂದ ಮೈ ಎಲ್ಲ ಕಶ್ಮಲವಾಯಿತು.

* * *

ಶ್ರೈ ಆಡಳಿತದ ಶಿಸ್ತು.

ಭಾರತ ಕೇಂದ್ರ ಶಾಸನ ಸಭೆಯಲ್ಲಿ ಸರ್ಕಾರೀ ಸಚಿವರು

'ರೈಲಿನಲ್ಲಿ ಟಿಕೀಟನ್ನು ತೆಗೆದುಕೊಳ್ಳದೆಯೇ ವಾರ್ಷಿಕವಾಗಿ 17 ಲಕ್ಷ ಜನರು ಪ್ರಯಾಣ ಮಾಡುತ್ತಿದ್ದಾರೆ'

ಎಂದು ಹೇಳಿರುವರು

ಎಷ್ಟು ಚೆನ್ನಾಗಿದೆ ರೈಲ್ವೆ ನೌಕರರ ಶಿಸ್ತು!

* * *

"ಬೋ ರಾಜಾ . ."

ಶಾಸನ ಸಭೆಯ ಒಬ್ಬ ಸದಸ್ಯರು ರೈಲ್ವೆ ಮೂರನೆಯ ತರಗತಿಯ ಪ್ರಯಾಣಿಕರಿಗೆ ಹೆಚ್ಚು ಅನುಕೂಲವನ್ನು ಕಲ್ಪಿಸುವುದಕ್ಕೆ ಅಡಿಗಳನ್ನು ಎಂದಿನಿಂದ ಜಾರಿಗೆ ತರುವಿರೆಂದು ಕೇಳಿದರು

ಉತ್ತರವೇನು ಗೊತ್ತೇ? "ಹಣ ಅನುಕೂಲವಾದಾಗ"

ಹಣ ಅನುಕೂಲವಾಗುವುದು ಹೊಟ್ಟೆ ತುಂಬಿದಾಗ!

ಅದರ ಮೇಲೆ ಹಣ ಅನುಕೂಲವಾಗುವುದು ಮೂರನೇ ತರಗತಿ ತಿಗಣೆ ಸಿಕ್ಕುವುದೇ ಇಲ್ಲ. ಅಲ್ಲವೇ?

ಸದ್ಯ "ಹಣ ಅನುಕೂಲವಾದಾಗ" ಎಂದು ಉತ್ತರ ಬರಲಿಲ್ಲ

ಯಾವ ಪುಣ್ಯದ ಫಲವಿದು?

* * *

ಪೂರ್ವಪುಣ್ಯ!

ಸಭೆಯಲ್ಲಿ ಮಿ|| ಅನಂತಶಯನಂ ಅಯ್ಯಂಗಾರ್ರು—"ಕಿಂಗ್ ಎಡ್ವರ್ಡ್ ಸ್ಮಾರಕವು ಡೆಲ್ಲಿಯಲ್ಲಿ ಯಾವಾಗ ಬರುವುದು?" ಎಂದು ಕೇಳಿದರು

ಬರೀ ಬಾಯಿಮಾತು!

ಲೀಗ ಸಭೆಗೆ ಒಂದು ಒಂಟರ್ನ್ಯಾಷನಲ್ ಸೈನ್ಯವಿರಬೇಕೆಂದು ಸದಸ್ಯ ರಾಷ್ಟ್ರ

ಚಾ — ಚಾ

ಕೋಮುವಾರು ಪ್ರಾತಿನಿಧ್ಯದ ಫಲ.

ಗುರುವಿಗೇ ತಿರುಮಂತ್ರ ಹಾಕಿದ್ದಾರೆ ಅಹ್ರಾರ್ ಸಂಗಡದ ಮುಸಲ್ಮಾನರು.

ಮುಸಲ್ಮಾನ್ ಸಂಗಡದಲ್ಲಿ ತಮಗೆ ಸರಿಯಾದ ಪ್ರಾತಿನಿಧ್ಯ ಸಿಕ್ಕುವುದಿಲ್ಲವೆಂದು ಹೇಳಿ, ತಪ್ಪದೇ ಅಹ್ರಾರ್ ಮುಸಲ್ಮಾನ್ ಸಂಗಡವನ್ನು ಸ್ಥಾಪಿಸಬೇಕೆಂದು ನಿಶ್ಚೈಸಿದ್ದಾರೆ

ಹೊಂದು ಸೂಚನೆ ಕಳುಹಿಸಿ

ಸೂಚನೆಯು ಹೊಸದಲ್ಲ ಹದಿನೈದು ವರ್ಷಗಳಿಂದಲೂ ಆಗಾಗ ಬರುತ್ತಲೇ ಇದೆ

ಆದರೆ ಇದನ್ನು ಸಾಧಿಸುವುದು ?

ಡಿಪ್ಲೊಮೆಟಿಕ್ ಸೂಸೈಟಿಯಿಂದ ಕೆಲಸ ಕಾರ್ಯವೇನಾದರೂ ಆದೀತೇ?

ಛೀ ಎಂತಹ ಮಾತು!

ಮಹಾತ್ಮಾ ಗಾಂಧಿಯವರು.

ಜ್ವರದಿಂದ ಪೀಡಿತರಾಗಿದ್ದಾರೆ.

ಕೋಮುವಾರು ಪ್ರಾತಿನಿಧ್ಯದ ತತ್ತ್ವವನ್ನು ಕೊನೆಯವರಗೆ ಸಾಧಿಸಿದ್ದಾರೆ ಸಂಗಡದಲ್ಲಿ ಸಂಗಡ, ಜಾತಿಯಲ್ಲಿ ಜಾತಿ— ಹೀಗೆ ವಿಭಾಗ ಮಾಡುವ ತತ್ತ್ವದ ಸರಿಯಾದ ಫಲವನ್ನು ನಿರ್ಣಯಿಸಿ ತೋರಿದ್ದಾರೆ

ಇತರ ಮುಸ್ಲಿಂ ನಾಯಕರು ಕಕ್ಕಾಬಿಕ್ಕಿಯಾಗಿರುವರೆಂದು ಹೇಳಬೇಕೇ?

ಕಂಕುಳಲ್ಲಿ ದೊಣ್ಣೆ: ಕೈಯಲ್ಲಿ.........?

ಬ್ರಿಟಿಷ್ ಸರ್ಕಾರದವರು ಈ ವಾರದಿಂದ "ಆರ್ಮಿ ಸಪ್ಲಿಮೆಂಟರಿ ರಿಜರ್ವ್"ಗೆ ಸೈನಿಕರನ್ನು ಸೇರಿಸಿ ಬಲಪಡಿಸಲು ಆರಂಭಿಸಿದ್ದಾರೆ ಎರಡು ಹೊಸ ಪಡೆಗಳನ್ನು ಏರ್ಪಡಿಸಿದ್ದಾರೆಂದು ಗೊತ್ತಾಗಿದೆ—

ಆದರೆ ಶಾಂತಿಸ್ಥಾಪನೆಯನ್ನು ಸಾಧಿಸುವೆವೆಂಬ ಮಾತು ಮಾತ್ರ ಬಿಟ್ಟಿಲ್ಲ

ಬಾಯಿಗೂ ಕೈಗೂ ಸಂಬಂಧ ಉಂಟೇ?

ಅಸೆಂಬ್ಲಿ ಫುಟ್‌ಬಾಲ್ ಪಂದ್ಯ

ಅಸೆಂಬ್ಲಿಯಲ್ಲಿ ಈ ವಾರ ಒಂದು 'ವಾಕೌಟ್' ನಡೆಯಿತು

ಬ್ರಿಟಿಷ್ ಹತ್ತಿ ಬಟ್ಟೆಯ ಆಮದಿನ ಮೇಲೆ ಹಾಕಿರುವ ತೆರಿಗೆಯನ್ನು ಕಡಿಮೆ ಮಾಡಕೂಡದೆಂಬ ವಿಷಯವು ಚರ್ಚೆಗಿತ್ತು.

ಹೊತ್ತಾದ ಮೇಲೆ ವಿಷಯವನ್ನು ಚರ್ಚೆಗೆ ತೆಗೆದುಕೊಂಡು, ಅನಾಯಾಸವಾಗಿ ಸರಕಾರದ ಪ್ರತಿಯೊಬ್ಬರೂ ಕಾಲ್ಕಿತ್ತರು

ಅನಂತರ ಅದು "ಬ್ಲಾಕ್ ಔಟ್" ಆಯಿತೆಂದು ಅಧ್ಯಕ್ಷರು ನಿರ್ಣಯಿಸಿದರು.

ಅಂತೂ ಸರ್ಕಾರಕ್ಕೆ ಆಗುತ್ತಿದ್ದ ಸೋಲನ್ನು ಈ ಮೂಲಕ ಪರಿಹಾರಮಾಡಿಕೊಂಡರು

ಸೋಲುವ ಫುಟ್‌ಬಾಲ್ ಟೀಮಿನವರು ಫೌಲ್ ಹೊಡೆಯುವ ಹಾಗೆ

* * *

ದೇಶೀಯರಿಗೆ ಮೋಸಲಲ್ಲ!

ಪ್ಯಾಲೆಸ್ಟೈನ್ ರಾಷ್ಟ್ರವು ಅರಬರ ರಾಜ್ಯ ಒಂದಾನೊಂದು ಕಾಲದಲ್ಲಿ ಹೇಗಿದ್ದರೂ ಅರಬರೇ ಈಗ ಹತ್ತು ವರ್ಷಗಳವರೆಗೂ ಆ ರಾಷ್ಟ್ರದಲ್ಲಿ ಬಹುಸಂಖ್ಯಾತರಾಗಿದ್ದರು

ಬ್ರಿಟಿಷರ ಮೇಲ್ವಿಚಾರಣೆಗೆ ರಾಷ್ಟ್ರವು ಒಂದಂದಿನಿಂದ ಜ್ಯೂಗಳು ಅಲ್ಲಿ ಬಂದು ನೆಲೆಸಲು ಆರಂಭಿಸಿದರು

ಆದುದರಿಂದಲೇ ಧಾಂದಲೆಗೆ ಆರಂಭವಾಯಿತು

ಈಚೆಗೆ ಹೈಕಮಿಷನರ ಜ್ಯೂಗಳು ಬರಗೊಡುವುದಿಲ್ಲವೆಂದು ಜರವಸೆ ಇತ್ತಿರುವುದಾಗಿ ವದಂತಿ ಎಂದಿತ್ತು

ವದಂತಿಗೆ ಆಧಾರವಿಲ್ಲವೆಂದು ಬ್ರಿಟಿಷ್ ಸಚಿವರು ಹೇಳಿದ್ದಾರೆ

ನಿಜ ರಾಷ್ಟ್ರಗಳನ್ನು ದೇಶೀಯರಿಗೆ ವಿಶ್ವಾಸಲಾಗಿಡುವುದು ಬ್ರಿಟಿಷ್ ರಾಜನೀತಿಗೆ ವಿರುದ್ಧವಾದುದೇ

* * *

ಕಾರಾಗೃಹಗಳು ಕಿಕ್ಕಿರಿದಿವೆಯಂತೆ!

ಬಂಗಾಳಾ ಜೈಲಿನಲ್ಲಿ ಒಟ್ಟು ಸರಾಸರಿ 22,721 ಜನ ಖೈದಿಗಳಿದ್ದರಂತೆ! ಇಷ್ಟು ಜನ ಖೈದಿಗಳು ಹಿಂದೆಯಾವಾಗಲೂ ಇರಲೇ ಇಲ್ಲವಂತೆ

"ಈಗಿರುವಷ್ಟು ನಿರ್ಬಂಧಗಳೂ ಹಿಂದೆಂದಾದರೂ ಇತ್ತೇ?" ಎಂಬುದೇ ನಮ್ಮ ಪ್ರಶ್ನೆ

ಬಾಳ ದಹನ.

ಒಂದು ಸಣ್ಣಕಥೆ.

ಲೇಖಕರು—ಕೆ ಎನ್. ಕೃಷ್ಣಮೂರ್ತಿರಾವ್.

"ಮಗೂ'

ಆ ಕೂಗು ಕರುಳು ಕುಯ್ಯುವಂತಿತ್ತು. ಅದನ್ನು ಕೇಳಿ ನನಗೆ ಸಂಕಟವಾಯಿತು "ಏನಮ್ಮಾ" ಎಂದೆ ಗಾಬರಿಯಿಂದ

'ಜಾನಕಿಯನ್ನ ಈ ದಿವಸ ಕೊಂದು ಕೊಂಡು ಬಂದರಪ್ಪಾ'

ಜಾನಕಿ ಎಂಬ ಶಬ್ದವನ್ನು ಕೇಳಿ ನನಗೆ ಮೊದಲು ರೋಮಾಂಚವಾಯಿತು ಮನಸ್ಸು ಉರಿಯುತ್ತಿತ್ತು ಕಣ್ಣುಗಳು ಕೆಂಡ ಉಗುಳುವಂತಾದವು ಕಿವಿ ಒಯ್ಯಹತ್ತಿತು.

"ಆ ಪಾಪಿ ತಂದೆಯೂ ಬಂದರೇನಮ್ಮಾ" ಎಂದೆ "ಬರದೆ ಇನ್ನೇನು ಮಾಡುತ್ತಾರೆ ಮಗು" ಅಜ್ಜಿಯಮ್ಮ ನರಳುತ್ತಿದ್ದ ಮಂಗನಿಗೆ ಅಪ್ಸರೆಯಂತಹ ಹುಡುಗಿಯನ್ನು ಕಟ್ಟಿದವರಲ್ಲಮ್ಮಾ

"ಏನು ಮಾಡುತ್ತಾರೆ ಮಗು, ಜನಗಳ ಬಾಯಿ!

ಯಾವ ಜನ ಈ ಬಂದವರಮ್ಮಾ ಅವಳ ಗಂಡನಿಗೆ ಜೀವನಾಶ ಮಾಡುವುದಕ್ಕೆ ಜನಗಳ ಬಾಯಿ ಕಟ್ಟುವುದಕ್ಕೆ ಆ ಒತ್ತದೇ ನಮ್ಮ ಮದುವೆ ಎಂದರೆ ಕಡಲ ಪ್ರತಿ ಆಟವೇನಮ್ಮಾ! ಒಂದು ಹೆಣ್ಣು, ಒಂದು ಗಂಡು, ಆಜೀವ ಪರ್ಯಂತ ಸ್ನೇಹದಿಂದ, ವಿಶ್ವಾಸದಿಂದ, ಸಂತೋಷದಿಂದ, ಬಾಳುವುದಲ್ಲವೇನಮ್ಮಾ? ಹೀಗಿರುವಾಗ ಇವರ ತಿಳುವಳಿಕೆಯಲ್ಲಿ ಕಾಮಸಾಧಕ ಯಂತ್ರ"ವೆಂದು ಮುದುಕರು, ಆಗಲೋ, ಈಗಲೋ ಎನ್ನುವ ಮುದಿಗೊಡ್ಡುಗಳು, ಅಸ್ಥಿಪಂಜರಕ್ಕೆ ಒಂದು ಸುಕ್ಕು ಕಟ್ಟಿರುವ ಚರ್ಮದ ಚೀಲ ಹೊದಿಸಿದಂತಿರುವ ಪ್ರೇತಗಳಿಗೂ ಕಾಮುಕಾವೇಶವಿಲ್ಲವೆ! ಅವರಿಗೂ ಆಗ ತಾನೇ ಅರಳುತ್ತಿರುವ ಮೊಗ್ಗು ಬೇಕಲ್ಲ! ಅಂತಹವರು ಮನುಷ್ಯರ ಜಾತಿಗೆ ಸೇರುವುದಕ್ಕೆ ಯೋಗ್ಯರೊ, ಮೃಗಗಳ ಜಾತಿಗೆ ಯೋಗ್ಯರೊ ಬಗೆಹರಿಯದಾಗಿದೆಯಮ್ಮಾ

ಈ ಮಧ್ಯೆ ಜಾನಕಿಯ ವಿಷಯ ಸ್ವಲ್ಪ ಹೇಳುತ್ತೇನೆ ನಾನೂ ಜಾನಕಿ ಸಹಪಾಠಿಗಳು ಮುದ್ದಾದ ಮುಖ, ತುಂಬು ಕೆನ್ನೆಗಳು, ಕೆಂಪನೆಯ ಎಳೆಯ ತುಟಿಗಳು ಮಾಟಕೆಡಿಸುವ ರೂಪವನ್ನು ಡಿಸುವ ಬಗೆಬಗೆಯ ಕಣ್ಣುಗಳು ಒಂದೇ ಮಾತಿನಲ್ಲಿ ಎಂತಹ ಆತ್ಮಸಂಯಮಿಯಾದವನೂ ಮಂತ್ರಮುಗ್ಧನಾದಂತೆ ಒಂದು ಕ್ಷಣ ನಿಂತು ಆಹಾ! ಎನ್ನುವ ರೂಪ ನಾನೂ ಅವಳೂ ಅನೇಕವೇಳೆ ಸ್ವಪ್ನರಾಜ್ಯದಲ್ಲಿ ವಿಹರಿಸಿದ್ದೇವೆ. ಮುಗಿಲು ಮುಟ್ಟುವ ಗಾಳಿಗೋಪುರಗಳನೇಕವನ್ನು ಕಟ್ಟಿದ್ದೇವೆ ಒಟ್ಟಿನಲ್ಲಿ ನನ್ನ ನನ್ನ ಹೃದಯದಲ್ಲಿ ಇಬ್ಬರಿಗೂ ಒಬ್ಬರು ರತ್ನಸಿಂಹಾಸನಗಳನ್ನು ಹಾಸಲಿರಿಸಿದ್ದೆವು

ಆಗ ಅವಳಿಗೆ ಸುಮಾರು ಹನ್ನೆರಡರ ಸಮಯ ಜನಗಳೆಲ್ಲರ ಬಾಯಲ್ಲೂ ಅವಳನ್ನು ಕನ್ಯಾಪನ್ನುಯಲ್ಲಿರುವ ಮಾತೇ! ಎಷ್ಟೋ ಜನಗಳು ಅವಳ ಕಡೆ ಬೊಟ್ಟು ತೋರಿಸಿ ಪಿಸಿಪಿಸಿ ಮಾತನಾಡುತ್ತಿದ್ದುದನ್ನು ಅನೇಕವೇಳೆ ನೋಡಿದ್ದೇನೆ ಇವರ ಜೊತೆಗೆ ಶಾಸ್ತ್ರಧಾರಿಗಳ ಒತ್ತಾಯ ಗುರುವರಗಳ ಎಷ್ಟಾದರ ಗೊಡ್ಡು ಬೆದರಿಕೆ

ನನಗೆ ಕೊಡುವುದಕ್ಕೆ ಜಾತಕ ಒಪ್ಪಬೇಕಲ್ಲ! ಗೋತ್ರಗಳು ಕೂಡಬೇಕಲ್ಲ! ಅವರ ತಂದೆ ಹುಡುಕಿ ಬೇಸತ್ತರು ವರದಕ್ಷಿಣೆಯ ಸಿಡಿಲಿನ ಪೆಟ್ಟನ್ನು ತಾಳಲಾರದೆ ಕುಗ್ಗಿದರು ಕೊನೆಗೆ ಶಾಸ್ತ್ರಧಾರಿಗಳ, ಕುಲಾಳ ನರರೂಪಿಗಳ ಒತ್ತಾಯದಿಂದ ಹಳ್ಳಿಯ ತಮ್ಮ ನೆಂಟರೊಬ್ಬರ ಒಬ್ಬನೇ ಮಗನಿಗೆ ಮದುವೆಮಾಡಿಕೊಟ್ಟರು ಆ ಹುಡುಗನು ಕ್ಷಯದಿಂದ ನರಳುತ್ತಿದ್ದನು ಅವರೂ ದುಶ್ಚಾರಿಗಳ ಎತ್ತುಸುಕ್ಕೆ ಸಿಕ್ಕಿ ತಂದೆಯು ಮತ್ತುಮುಖನಲ್ಲದ್ದ ವರನಿಗೂ, ರತಿಯನ್ನಣಕಿಸುವ ಆ ಕೋಮಲ ತರಳೆಗೂ ಜೊತೆಗೂಡಿಸಿ ಮಂತ್ರಘೋಷದಿಂದ ಆ ವಿವಾಹಕ್ಕೆ ಸಹಿಹಾಕಿದರು

ಮುಂದೆ ಮೂರು ತಿಂಗಳು ಹಗಲಿರುಳೆನ್ನದೆ ಆ ಮಂಗನ ಸೇವೆ ಮಾಡಿದಳು ಅಷ್ಟಾಗಿ ಅವಳ ಕಟ್ಟು ಹರಿಯಿತು ಮಾಂಗಲ್ಯಸೂತ್ರ ಸಡಲಿತು ಕಠೋರ ಸೂರ್ಯನ ಕರಾಳದೇಗಿಯಲ್ಲಿ ಆ ಮುಗುಳು ಸಿಕ್ಕಿ ಬಾಡಿತು ಪಾವನವಾತೆ, ಪವಿತ್ರ ಭೂಮಿ, ಭರತಮಾತೆಯ ಪುತ್ರಿಯರೆಷ್ಟೊಬ್ಬರು ತಮ್ಮ ಜೀವನವನ್ನು ಇದೇ ಘೋರ ತಾಂಡವ ಉದರದಲ್ಲಿ ಹೊರಟಿಸ್ವ, ಪೇಡಿಯೊಬ್ಬನ, ತಂದೆಯಾದವನ ಕುರುಡು ನಂಬಿಕೆಗೆ ತುತ್ತಾದಳು ಆಚಾರವೆಂಬ ಅನಾದಿ ಕಾಲದ ರಕ್ತಪಾನಾಸಕ್ತಿಯ ಭಯಂಕರ ಪಿಶಾಚಕ್ಕೆ ಬಲಿಯಾದಳು.

"ಜೀವನಾಂಶವೇನಾದರೂ ಕೊಡುತ್ತಾರೇನಮ್ಮ" ಎಂದೆ 'ಅಯ್ಯೋ, ಆ ಹಳೆ ಪಿಶಾಚ ರೂಪ ತಾಳಿದರೆ ಕೊಡುತ್ತಾರಂತೆ ಮಗು'

'ಏನು' ಸ್ವೇಚ್ಛೆಯಿಂದ ಬೆಳೆದಿರುವ ಪ್ರಮಾದದ ಕೇಶರಾಶಿಗಳನ್ನು ಕತ್ತರಿಯ ನಿಷ್ಕರುಣತೆಗೆ ಅರ್ಪಿಸಬೇಕಂತೆ! ಹಾಳಾದ ಆ ಕೆಂಪು ವಸ್ತ್ರವನ್ನುಡಬೇಕಂತೆ! ಎಳೆಕುಂದದರಿಯದ, ಮುಖದಿಂದ ಕಾಂತಿತ ಪ್ಪದ, ಹನ್ನೆರಡು ವರ್ಷದ ಆ ಎಳೆ ಬಾಲೆ ಅತಿಕಠೋರದಿಂದ ತನ್ನ ಜೀವನವನ್ನೆಲ್ಲಾ ಸವೆಸಬೇಕಂತೆ! ಇದಕ್ಕಿಂತ ಇನ್ನು ಮೃಗೀಯವಾದ ಆಚರಣೆ, ಇದೆಯೇನಮ್ಮ?'

"ಏನೋ, ಹಾಗಂತ ಶಾಸ್ತ್ರದಲ್ಲಿದೆಯಂತೆ ಮಗು'

ಯಾವ ಶಾಸ್ತ್ರವಮ್ಮ, ಯಾವ ಶಾಸ್ತ್ರದಲ್ಲೂ ಇಲ್ಲ ಇದೆಲ್ಲಾ ಇಚೀಬಿನ ಈ ಲೋಭಿಗಳ ಕೊಂಕು ಉದರಂಭರಣದ ಹೊಸ ಮಾರ್ಗ ಹಾಗೂಂದುಪಕ್ಷ ಶಾಸ್ತ್ರದಲ್ಲಿ ಇದ್ದರೂ ಆ ಶಾಸ್ತ್ರವನ್ನು ಬರೆದ ಕಾಲಕ್ಕೂ ಈಗ್ಗೂ ಎಷ್ಟು ವ್ಯತ್ಯಾಸವಾಗಿದೆಯಮ್ಮಾ! ತಮಗೆ ಬೇಕಾದಲ್ಲಿ ಅದೇ ಶಾಸ್ತ್ರಿಗಳೇ ಶಾಸ್ತ್ರದಲ್ಲಿ ನವೀನ ಕಾನೂನುಗಳನ್ನು ಸಿದ್ಧಪಡಿಸಿಕೊಳ್ಳುತ್ತಾರಮ್ಮಾ

(೯ ನೇ ಪುಟವನ್ನು ನೋಡಿ)

ಗೃಹಿಣೀ ಗೃಹಮುಚ್ಯತೆ.

ಲೇಖಕರು—ಶ್ರೀ॥ ಲಲಿತಮ್ಮ, ಮೈಸೂರು

ಸ್ತ್ರೀ ಜಾತಿಗೆ ಯಾವ ರೀತಿಯಿಂದಲೂ ಮೋಕ್ಷಸಾಧನೆ ಇಲ್ಲವೆಂದೂ ಪಾತಿವ್ರತ್ಯ ಮಹಿಮೆಯಿಂದಲೇ ಪರಮಾತ್ಮನು ಅಬಲೆಯರ ಆತ್ಮಾರಾಮನನ್ನು ತನ್ನಲ್ಲಿ ಐಕ್ಯಗೊಳಿಸುವನೆಂದೂ ಪೂರ್ವ ಗ್ರಂಥಗಳಲ್ಲಿ ಹೇಳಿರುವುದು

ನಮ್ಮ ನಮ್ಮ ಪಾಪ ಪುಣ್ಯಗಳಿಗನುಸಾರವಾಗಿ ನವ್ಯ ಚಂಚಲ ಮನವುಳ್ಳ ದೇಹಗಳಿಗೆ ಒಡೆಯರೆಂದೆನಿಸಿದ ನಮ್ಮ ನಮ್ಮ ಪತಿಗಳು, ಕುರೂಪಿಗಳಾಗಲಿ, ದುರ್ಬಲರಾಗಲಿ, ಮತ್ಸರರಾಗಲಿ, ಚಂಚಲಾತ್ಮಕರಾಗಲಿ, ಕಡೆಗೆ ಬಲಿಷ್ಠರ ಆಗಲಿ, ಅಯೋಗ್ಯರಾಗಿಯೇ ಇರಲಿ, ಅವರನ್ನು ನಮ್ಮ ನಮ್ಮ ಸೌಜನ್ಯ ಸ್ವಭಾವದಿಂದಲೂ, ಗುರುಹಿರಿಯರಿಂದಲೂ ವಿವೇಕಕ್ಕೆ ತರುವ ನಮ್ಮ ಬುದ್ಧಿ ಜ್ಞಾನದಿಂದಲೂ ನಮ್ಮ ಪತಿಗಳ ಮನಸ್ಸೂ ನಮ್ಮಗಳ ಮನಸ್ಸೂ ಏಕೀಭವಿಸಿ ಲೋಕ ಯಾತ್ರೆಯನ್ನು ಮಾಡುವುದರಲ್ಲಿ ಸಂದೇಹವಿಲ್ಲ

ಗೃಹಿಣೀ ಗೃಹಮುಚ್ಯತೆ ಎಂಬ ನೀತಿ ಸ್ವರ್ಣವಾಕ್ಯವು ಭಾರತ ರಮಣಿಯ ಪುತ್ರ ಪುತ್ರಿಯರಲ್ಲಿ ಪ್ರತಿಬಿಂಬಿಸುವುದರಲ್ಲೇನೂ ಸಂದೇಹವಿಲ್ಲ ಮತ್ತು ವರ್ಣಕ್ಕೂ, ಸತ್ಯತೆಗೂ ಪಾತ್ರ ಭೂಮಿಯಾದ ನಮ್ಮ ಹಿಂದೂಸ್ಥಾನದಲ್ಲಿ ಏಕಮತ್ಯ ಪರವಶರಾಗಿ, ಸ್ವಜನ ಮತ್ಸರ ಬಹಳವಾಗಿ ಪರ ರಾಜ್ಯಗಳ ಐಶ್ವರ್ಯಕ್ಕೆ ಕರಬುತ್ತಾ ಧರ್ಮ ದೇವಿಯಾದ ನಮ್ಮ ಭಾರತ ಮಾತೆಯಲ್ಲಿ ಪ್ರೇಮವನ್ನಿಡದೆ ನಡೆಯುತ್ತಿರುವ ಆಧುನಿಕರು ಅನೇಕರಿರುವುದು ಗೊತ್ತೇ ಇದೆ ಇವರುಗಳ ಮನೋಧರ್ಮವು ಹೀಗಾಗುವುದಕ್ಕೆ ಕಾರಣವೇನೆಂದರೆ, ತಮ್ಮ ಮನೋಭೀಷ್ಟ ಸಂಕಲ್ಪವನ್ನು ತಾವರಿಯದೆ ಪಶುವಿನ ಕೆಚ್ಚಲಿನಲ್ಲಿ ವಾಸಮಾಡುವ ಉಣ್ಣೆಯು ಕೆಚ್ಚಲಿನಲ್ಲಿರುವ ಅಮೃತದ ಸವಿಯನ್ನು ಹೇಗೆ ಕಾಣದೋ ಹಾಗೆ ನಮ್ಮ ಮನೋಮಂದಿರವೆಂಬ ಹೃತ್ಕಮಲದಲ್ಲಿ, ನಿರಾಧಾರನೂ, ನಿರ್ವಿಕಾರನೂ ನಿರ್ಮಲನೂ, ಸಚ್ಚಿತ್ತ ಸ್ವರೂಪನೂ, ಸರ್ವ ಚೈತನ್ಯನೂ, ಸ್ತ್ರೀ ಪುರುಷ ಜಾತಿಗಳಿಗೆ ಅವರವರ ಕರ್ಮಾನುಸಾರವಾಗಿ ನಿಯಮ ಕರ್ತಾರನೂ, ಆದಂಥಾ ಆ ಜ್ಞಾನ ಜ್ಯೋತಿಯನ್ನರಿಯಲು ಯೋಗ್ಯರಾಗದೆ, ಸ್ವದೇಶ ವಾತ್ಸಲ್ಯವನ್ನಿಡದೆ, ಅಲಂಕಾರವೂ, ಐಶ್ವರ್ಯವೂ, ವಾಗ್ದೇವಿಯ ಶಂಕಿತರಿಂದ ನಡೆದು ಯೌವನ ಮದ ಐಶ್ವರ್ಯಮದವೆಂಬ ದುರಹಂಕಾರದಿಂದಲೆ ಕ್ರಮಿಸಿ, ವಿಧಿ ರಮಣಿಯು ಯಾತಕ್ಕೋಸ್ಕರ ತನ್ನ ವಿದ್ಯೆಯನ್ನು ಸ್ತ್ರೀ ಕುಲಕ್ಕೆ ಧಾರೆಯನ್ನೆರೆದಿರುವಳೆಂದು ಅರಿಯದೆ ನೀರ ಮೇಲಣ ಗುಳ್ಳೆಯಂತೆ ಹುಟ್ಟಿಹುಟ್ಟಿ ಸಾಯುವ ಈ ದೇಹದಲ್ಲಿ ಸೌಜನ್ಯವೆಂಬ ಯೋಗ ಮಂತ್ರವನ್ನು ಜಪಿಸುತ್ತಾ ಧರ್ಮವೆಂಬ ಮೆಟ್ಟಿಲುಗಳನ್ನು ಹತ್ತಿ ಸತ್ಯವೆಂಬ ಅಸಮಾನ ಪಾಂಡಿತ್ಯದಿಂದ ಹೃತ್ಕಮಲದಲ್ಲಿ ದೇದೀಪ್ಯಮಾನ ಪರಮಾತ್ಮನನ್ನು ಜ್ಞಾನ ಚಕ್ಷುಸ್ಸಿನಿಂದ ನಿರೀಕ್ಷಿಸಿ ನಮ್ಮ ಚಂಚಲ ಮನಸ್ಸನ್ನು ಪರಮಾತ್ಮನಲ್ಲಿ ಲೀನಮಾಡಿ ಯೋಗ ಸಾಮ್ರಾಜ್ಯವನ್ನನುಭವಿಸದೆ ಅಜ್ಞಾನದಿಂದ ಪಾಮರ ಮೃಗದಂತೆ ಜನ್ಮವನ್ನು ನೀಗುವುದು ಬಹಳ ಅನರ್ಥವಲ್ಲವೆ?

ಸರ್ಪವಮನಗಳೂ ಚಲಿಸುವುದಂದ ಉದರ ಪೋಷಣೆಯಾಗಿ ಸರಳೇಂದ್ರಿಯಗಳನ್ನೂ ರಕ್ತಧಾರೆಯಿಂದ ಉಡುಗ್ಯಾಗ ಕಾಪಾಡುವುದೋ, ಹಾಗೆ ನಾವುಗಳು ನಮ್ಮ ಪತಿಗಳಿಗ ಮನೋವ್ಯಾಕುಲಗಳಿಗವಕಾಶಕೊಡದೆ ದಾರಿದ್ರ್ಯದಲ್ಲೂ, ಐಶ್ವರ್ಯದಲ್ಲೂ ಒಂದೇ ಸಮನಾಗಿ ಮನೋವಿಕಲ್ಪವನ್ನು ಮಾಡಿಕೊಳ್ಳದೆ ನಮ್ಮ ನಮ್ಮ ಪೂರ್ವಾರ್ಜಿತ ಪಾಪಪುಣ್ಯಗಳಿಗನುಸಾರವಾಗಿ ಬಂದಿರತಕ್ಕ ಕಷ್ಟ, ದಾರಿದ್ರ್ಯಗಳಿಗಂಜದೆ, ಏಕ ಮನಸ್ಕರಾಗಿ ನಡೆಯುವುದಾದರೆ ನಮ್ಮ ಪತಿಗಳಿಗೆ ಅನುರಾಗವೂ ಆನಂದವೂ ಹೊರಬೀಳದೆ? ನಮ್ಮ ತಮ್ಮ ಮಕ್ಕಳನ್ನೂ ಪಕ್ಷಿಯು ಹೇಗೆ ತನ್ನ ಮರಿಗಳನ್ನು ರೆಕ್ಕೆಯೊಳಿಟ್ಟು ಕಾಪಾಡುವುದೋ ಹಾಗೆ ನಮ್ಮ ಪತಿಗಳು ನಮ್ಮನ್ನು ಕಾಪಾಡುವುದರಲ್ಲಿ ಸಂದೇಹವಿಲ್ಲ ಅನೇಕ ಸಾಧ್ವೀಮಣಿಯರು ಪಾತಿವ್ರತ್ಯ ಮಹಿಮೆಯಿಂದ ಚಂಚಲಮನವಿದ್ದರೂ ಸತ್ಯಮೇವ ಜಯತೆ ಎಂಬ ಸತ್ಯ ಮಾರ್ಗದಿ ಸಂಸಾರ ಚಕ್ರದಲ್ಲಿ ಧೈರ್ಯಗೆಡದೆ ಪುತ್ರ ಮಿತ್ರ, ಕಳತ್ರ ಬಾಂಧವರನ್ನು ಪರಿ ಸಿಸಿ ತಮ್ಮ ದೇಹವನ್ನು ಭಸ್ಮವ ಮಾಡಿಕೊಂಡು ತಮ್ಮ ಪಾತಿವ್ರತ್ಯ ಮಹಿಮೆಯಿಂದ ಇಹಪರ ಲೋಕಗಳಲ್ಲಿ ಪ್ರಖ್ಯಾತಿಯನ್ನು ಹೊಂದಲಿಲ್ಲವೆ? ಹಾಗೆ ಈ ಕಲಿಯುಗದ ನವನಾಗರೀಕತೆಯ ವಿದ್ಯಾಭಾಗಿನಿಯರು ವಿದ್ಯಾ ಸಾಗರಕ್ಕೆ ಹರಿವ ಶ್ರೇಷ್ಠವಾದ ಮೋಕ್ಷಸಾಧನ ಗಂಗಾ ನದಿಯಲ್ಲಿ ಮಿಂದು ಪತಿ ಸೇವೆ ಸ್ವಲ್ಪ ವಿದ್ಯೆಯು ಸಾಕೆಂದು ಜೀವ ಸಾಧನವಿಲ್ಲದೆ ಅನರ್ಥದೇಹವನ್ನು ಸುಷ್ಠವಕ್ಕಿಂತ ಪಾತಿವ್ರತ್ಯ ಮಹಿಮೆ ನಡೆದುಕೊಂಡು ಹೋದಂಥವರಿಗೆ ಇಹ ಪರ ಲೋಕಗಳಲ್ಲಿ ಸುಖವು ಲಭಿಸುವುದರಲ್ಲಿ ಏನೂ ಸಂದೇಹವಿಲ್ಲ

ವರ್ತಮಾನ ಸಂಗ್ರಹ.

ಸ್ವಯಂವರವಿಲ್ಲವೆಂದು ಆತ್ಮಹತ್ಯೆ.

ಪಶ್ಚಿಮ ಫ್ರಾಂಕ್ಯದ ಫುಜೇಂಗ್ ಎಂಬ …ನಲ್ಲಿ ಸುಮಾರು 16 ವಯಸ್ಸಿನ 9 …ಹುಡುಗಿಯರಿಗೆ ತಮ್ಮ ಗಂಡಂದಿರನ್ನು …ರಿಸಿಕೊಳ್ಳಲು ತಂದೆತಾಯಿಗಳು …ಪ್ಪಗೆ ಕೊಡಲಿಲ್ಲ. ಅದ್ದರಿಂದ ಆ 9 ಹು…ಗಿಯರೂ ಒಂದು ಕೊಠಡಿಗೆ ಹೋಗಿ …ಗಾಗಿ ಅಫೀಮು ಮತ್ತು ದ್ರಾಕ್ಷಾರಸ …ನ್ನು ಕುಡಿದರು. ತಕ್ಷಣವೇ ಎಲ್ಲರೂ …ಜ್ಞೆಯಿಲ್ಲದೆ ಬಿದ್ದರು. ಕೊಂಚಹೊತ್ತಿನ …ಲೆ ಜನಾನು ಈ ಪರಿಸ್ಥಿತಿಯನ್ನು …ಡಿ ಎಲ್ಲರನ್ನೂ ಆಸ್ಪತ್ರೆಗೆ ಸಾಗಿಸಿದ… ಆಸ್ಪತ್ರೆಯಲ್ಲಿಯೇ ಎಲ್ಲರೂ ಸತ್ತರು. …ಯಲ್ಲಿ 2 ವರ್ಷದಹಿಂದೆ 11 ಹು…ಗಿಯರು ಬಾವಿಯಲ್ಲಿ ಬಿದ್ದು ಸತ್ತರು.

ಚಕ್ರವರ್ತಿಗಳ ಹೊಸ ತಲೆ ಚೀಟಿ

…ಡ್ವರ್ಡರ ತಲೆ ಚಿತ್ರವುಳ್ಳ ಹೊಸ …ಚೀಟಿಗಳು ಈ ಮಾಹೆ ಸೆಪ್ಟಂಬರ್ …ನೇ ತಾರೀಖು ಲಂಡನ್ನಿನ ಟಪಾಲು ಕ…ಗಳಲ್ಲಿ ಮಾರಲ್ಪಟ್ಟವು. ಜನರು ಬ…ತೂಹಲರಾಗಿ ಕೊಂಡುಕೊಂಡರು.

ಚುನಾವಣೆ.

…ರಾಜಧಾನಿಯ ಪೌರಸಭಾ ಚುನಾವಣೆ …ಅವಧಿಯು ಈ ವರ್ಷಕ್ಕೆ ಮುಗಿಯು…ದರಿಂದ ಡಿಸೆಂಬರ್ 22 ನೇ ತಾರೀಖು …ಸ ಚುನಾವಣೆ ನಡೆಯುವುದೆಂದು ತಿಳಿ…ಬಂದಿದೆ

ಔಷಧಿ ಯಿಲ್ಲದೆ ಚಿಕಿತ್ಸೆ.

…ಕೆಳಗೆ ಕಂಡ ಮಹನೀಯರು ಮೈ…ಸು ನಾರಾಯಣ ಶಾಸ್ತ್ರಿ ರಸ್ತೆಯಲ್ಲಿ ಶ್ರೀ …ಕೃಷ್ಣನುವಲ್ಲಿರುವ ಶ್ರೀ ಸದ್ಗುರು ಸಿಧ್ಧಾ…ಸ್ವಾಮಿಗಳ ಶಿಷ್ಯರಾದ ಚೈತನ್ಯಂ ಬಿ. …ನಿವಾಸ ರವರ ಹಸ್ತ ಸ್ಪರ್ಶದಿಂದ ತ…ರೋಗಗಳು ನಿವಾರಣೆಯಾದವೆಂದು …ನುವುದಾಗಿ ಅವರು ತಿಳಿಸುತ್ತಾರೆ — …ಮೈಸೂರು ಸುಣ್ಣದ ಕೇರಿ ನಂಜುಂಡ…ರ ಮಗ ಸಿದ್ದಯ್ಯನೆಂಬುವನಿಗೆ 3 ವ…ರ್ಷದಿಂದಿದ್ದ ಉಬ್ಬಸವು 15 ದಿನಗಳಲ್ಲಿ …ವಾಗಿದೆ (2) ಸುಣ್ಣದಕೇರಿ ವೆಂಕ…ಟು ಮೊದಲಿಯಾರ್ರ ಮಗ ವೆಂಕಟಾ…ಚಲ ಮೊದಲಿಯಾರರವರಿಗೆ ನಿಶ್ಶಕ್ತಿಯು …12 ದಿನಗಳಲ್ಲಿ ವಾಸಿಯಾಗಿದೆ (3) …ಕೇರಿ ನರಸಿಂಹಯ್ಯನ ಮಗನಿಗೆ …ದಿನಗಳಿಂದ ಇದ್ದ ರಕ್ತಭೇದಿಯು ಗು…ಣವಾಗಿದೆ (4) ಲ್ಯಾನ್ಸ್‌ಡೌನ್ ಬಜಾರಿ…ನ ನಂಜಪ್ಪನ ಹೆಂಡತಿ ಪಾರ್ವತಮ್ಮ…ನಲ್ಲಿ ಇದ್ದ ಹೂ ಗುಣವಾಗಿದೆ. (5) …ಬಿಚೆಟ್ಟಿಪಲ್ಲಿರುವ ನಂಜಪ್ಪನ ಹೆಂ…ಡತಿ ಸಣ್ಣಮ್ಮನಿಗೆ ಮೈ ಚಳಕು, ಕಣ್ಣು …ಗಳು ಗುಣವಾಗಿವೆ.

ರೈಲ್ವೆ ಸಮಿತಿ.

ಮೈಸೂರು ಸ್ಥಳೀಯ ರೈಲ್ವೆ ವಿಚಾರಣಾ ಸಮಿತಿಯವರು ಈ ಮಾಹೆ 24 ನೇ ತಾರೀಖು ಒಂದು ಸಭೆಸೇರಿದ್ದರು. ಅರಸೀಕೆರೆ-ಹೊಳೆನರಸೀಪುರ, ಮೈಸೂರು—ಹೊಸತ ಗ್ರಹಾರದ ಪಟಲು ಟ್ರೈನುಗಳಲ್ಲಿ ಪ್ರಯಾಣಿಕರ ಸಂಚಾರವು ತೃಪ್ತಿಯಾಗಿಲ್ಲವೆಂದೂ, ಆ ರೈಲುಗಳು ಹೊಳೇನರಸೀಪುರ-ಹೊಸ ಅಗ್ರಹಾರಗಳ ಮೂಲಕ ಸಂಚರಿಸಬೇಕೆಂದೂ, ಬಿಡದಿಯಲ್ಲಿ ಮೇಲ್ ರೈಲನ್ನು ನಿಲ್ಲಿಸಕೂಡದೆಂದೂ, ಬಿಡದಿ-ಬೆಂಗಳೂರು ಮಾರ್ಗದಲ್ಲಿ ದಿನವಹಿ ರಿಟರ್ನ್ ಟಿಕೀಟುಗಳನ್ನು ಕೊಡ ಕೂಡದೆಂದೂ ತೀರ್ಮಾನವಾಯಿತು.

ಜವಾಹರರು ಸಂಪಾದಕರಾಗುವರು.

ಪಂಡಿತ ಜವಾಹರಲಾಲರು ಸದ್ಯದಲ್ಲಿಯೇ ತಮ್ಮ ಸಂಪಾದಕತ್ವದಲ್ಲಿ ಲಕ್ನೋ ನಗರದಿಂದ ಇಂಗ್ಲೀಷ್ ದಿನ ಪತ್ರಿಕೆಯನ್ನು ಹೊರಡಿಸುವುದಾಗಿ ತಿಳಿದು ಬಂದಿದೆ. ಕಾಂಗ್ರೆಸ್ ಮಹಾ ಸಭೆಯ ಧ್ಯೇಯಗಳನ್ನು ಪ್ರಚಾರ ಮಾಡುವುದೇ ಅವರ ಉದ್ದೇಶವೆಂದು ಹೇಳಲಾಗಿದೆ.

ಮೈಸೂರಿನ ಪಿಕ್ಚರ್ ಪೋಸ್ಟ್ ಕಾರ್ಡುಗಳು.

ಇನ್ನುಮುಂದೆ ಮೈಸೂರು ಅರಮನೆಯೇ ಮುಂತಾದ ಮೈಸೂರಿನ ಪ್ರಖ್ಯಾತ ಸ್ಥಳಗಳ ಚಿತ್ರವುಳ್ಳ ಪಿಕ್ಚರ್ ಪೋಸ್ಟ್ ಕಾರ್ಡುಗಳು ಅಂಚೆಯ ಕಛೇರಿಗಳಲ್ಲಿ ಮಾರಲ್ಪಡುವುವು. ವಾಯುವ್ಯ ಸರಹದ್ದಿನ ಪ್ರಾಂತದಲ್ಲಿ ಈ ತರಹೆಯ ಪಿಕ್ಚರ್ ಪೋಸ್ಟ್ ಕಾರ್ಡುಗಳು ಮೊದಲು ಜಾರಿಗೆ ಬಂದವು.

ಆಗಮನ.

ಡಾಕ್ಟರ್ ಎನ್. ಎಸ್. ಹರ್ಡೀಕರ್ ರವರು ಸೆಪ್ಟಂಬರ್ 8 ನೇ ತಾರೀಖು ಬೆಂಗಳೂರಿಗೆ ಆಗಮಿಸುವರು. ಮೈಸೂರು ಸಂಸ್ಥಾನದ ಮುಖ್ಯ ಸ್ಥಳಗಳಿಗೆಲ್ಲಾ ಹೋಗುವರು. ಕಾಂಗ್ರೆಸ್ ಮಹಾಸಭೆಗೆ ಸದಸ್ಯರನ್ನು ಕೂಡಿಸಲು ಏರ್ಪಾಟುಮಾಡುವರು

ತಿದ್ದುಪಡಿ.

ನಮ್ಮ 13–7–36 ನೆಯ ಸಂಚಿಕೆಯಲ್ಲಿ ಉಡುಪಿ ಆನಂದಭವನದ ಪ್ರೊಪ್ರೈಟರವರಾದ ಶ್ರೀ|| ಕೆ. ಗುರುರಾಜಾಚಾರ್ಯರವರಿಂದ ಮೈಸೂರು ಸಿಟಿ ಮ್ಯಾಜಿಸ್ಟ್ರೇಟರು ಒಂದು ಜಾಮೀನು ಮುಚ್ಚಳಿಕೆಯನ್ನು ಕೇಳಿದರೆಂದು ಒಂದು ಪ್ರಕಟಣೆಯನ್ನು ಮುದ್ರಿಸಲಾಗಿತ್ತು. ಸ|| ಆಚಾರ್ಯರಿಗೆ ಸಮನ್ಸ್ ಸಹ ಬಂದಿಲ್ಲನೆಂದೂ ಈ ಮೊಕದ್ದಮೆಯ ವಿಷಯವೇ ಗೊತ್ತಿಲ್ಲವೆಂದೂ ತಿಳಿದು ಬಂದಿದೆ. ಈ ಪ್ರಕಟಣೆಗಾಗಿ ನಾವು ವಿಷಾದಿಸುತ್ತೇವೆ.

ಮಹಾರ್ಬುದಕ್ಕೆ ಚಿಕಿತ್ಸೋಪಾಯ.

(Treatment of Cancer)

"ನಾಗಬಲಿ" ಮೂಲಿಕೆಯ ವಿಶೇಷ ಗುಣ

ಮಹಾರ್ಬುದ ರೋಗದಿಂದ ಉಂಟಾಗುವ ತೊಂದರೆಗಳನ್ನೂ, ದುಷ್ಪರಿಣಾಮಗಳನ್ನೂ ಹೇಗೆ ನಿವಾರಿಸಿಕೊಳ್ಳಬೇಕೆಂಬ ವಿಷಯದಲ್ಲಿ ಅನೇಕ ಡಾಕ್ಟರ್ ಜನರೂ, ಜನಸಾಮಾನ್ಯರೂ ಕೂಡಿಯೇ ಪ್ರಯತ್ನ ಮಾಡುತ್ತಿದ್ದಾರೆ ಈ ರೋಗದ ವಿಷಯದಲ್ಲಿ ನಡೆಸಿದ ಶೋಧನೆಗಳ ಮೂಲಕ ಅದಾರದಲ್ಲಿಯ ದೋಷದ ಫಲವಾಗಿ ಶರೀರದ ಗಳ್ಳುಂಟಾಗುವ ವಿಷದಿಂದಲೇ ಮಹಾರ್ಬುದವು (Cancer) ಉಂಟಾಗುವದು. ಒಮ್ಮೆ ಪ್ರಾರಂಭವಾದರೆ ಇದರ ಬೆಳವಣಿಗೆಯನ್ನು ನಿಲ್ಲಿಸುವದು ಕಷ್ಟಸಾಧ್ಯ. ಶಸ್ತ್ರಚಿಕಿತ್ಸೆಯಿಂದ ಒಂದುಸಲ ಬೆಳವಣಿಗೆಯನ್ನು ನಿಲ್ಲಿಸಬಹುದು. ಆದ್ದೇ ಆದರೆ ಅದು ಕೂಡಲೆ ಪುನಃ ಬೆಳೆದುಬರುವುದು ಇದರ ಮೂಲ ಕಾರಣವು ರಕ್ತ ಮತ್ತು ಶರೀರದಲ್ಲಿರುವುದರಿಂದ, ಎಷ್ಟೇಸಲ ಅದರ ಬೆಳವಣಿಗೆಯನ್ನೂ, ಅದರ ಪರಿಣಾಮವನ್ನೂ ಹಿಂದಾಗಿಸಿದರೂ, ರೋಗವು ನಿರ್ಮೂಲವಾಗುವುದಿಲ್ಲ ಕೊನೆಗೆ ಮರಣವು ಸಂಭವಿಸುವುದು.

ಮಹಾರ್ಬುದದ ವಿಷಯವಾಗಿ ಮೇಲಿನ ವಿವರವು ನಿಜವಾದರೆ (ಅದು ನಿಜವೆಂದು ನನ್ನ ನಂಬಿಕೆ) ಬಹು ಸಂಭವತರದಲ್ಲಿ ಈ ರೋಗವನ್ನು ಗುಣಮಾಡಬಹುದೆಂದು ನನಗನಿಸುತ್ತದೆ. ರೋಗವು ಬಲಿತು ನಿರಾಶೆಯಾದಾಗ ಸಹ ನಾಗಬಲಿ ಎಂಬ ಮೂಲಿಕೆಯನ್ನು ಉಪಯೋಗಿಸುವುದು ಹಿತಕರವಾಗಿದೆ ಇದು ವಿಷರಹಿತ, ನಿರುಪದ್ರವಿ ಆಗಿದ್ದು, ಕ್ರಿಸ್ತಪೂರ್ವದಲ್ಲಿ ೧೦೦೦ ವರ್ಷಗಳ ಮೊದಲು ಬರೆದ ಒಂದು ಹಿಂದು ವೈದ್ಯ ಗ್ರಂಥದಲ್ಲಿ ಇದರ ಉಲ್ಲೇಖವಿದೆ ಇದರ ವಿಷಯವಾಗಿ ಕ್ರಿ. ಪೂ ೫೦೦ ವರ್ಷಗಳ ಹಿಂದಿನ ಒಂದು ಸಂಸ್ಕೃತ ಗ್ರಂಥದಲ್ಲಿ (ಅದು ಈಗ ಯುನೈಟೆಡ್ ಸ್ಟೇಟ್ಸ್ ಆಫ್ ಅಮೇರಿಕೆಯ ವಸ್ತು ಸಂಗ್ರಹಾಲಯದಲ್ಲಿದೆ) ಈ ಮೂಲಿಕೆಯ ಮಹತ್ವವನ್ನು ಕುರಿತು ಬರೆದಿದ್ದಾರೆ. ಅರೇಬಿಯನರ ಪ್ರಖ್ಯಾತವಾದ ವೈದ್ಯ ಗ್ರಂಥಗಳಲ್ಲಿ ೧ ನಾಗಬಲಿ ಮೂಲಿಕೆಯನ್ನು ಮಹಾರ್ಬುದದ ಚಿಕಿತ್ಸೆಗಾಗಿ ಹೇಳಿದ್ದಾರೆ. ಗ್ರೀಕ್‌ಭಾಷೆಯಿಂದ ಭಾಷಾಂತರಿಸಲ್ಪಟ್ಟ "ಸೆವೆನ್ ಬುಕ್ಸ್ ಆಫ್ ಪೋಲಸ್ ಅಜೆನಿಟ್" ಎಂಬ ಪುಸ್ತಕದಲ್ಲಿಯೂ ಈ ಮೂಲಿಕೆಯ ಗುಣದವಿಚಾರವಾಗಿ ಬರೆದಿದೆ. ಜೊನ್ ಪಾರ್ಕಿನ್ ಅವರು ಬರೆದ "ಥಿಯೇಟರಮ್ ಬೊಟೆನಿಕಮ್" ಎಂಬ ಪುಸ್ತಕದಲ್ಲಿ ಈ ಮೂಲಿಕೆಯ ಉಲ್ಲೇಖವಿದ್ದು ಅದರ ಗುಣವರ್ಣನೆಯೂ ಇದೆ. ಹಣ್ಣಿನ ರಸದಲ್ಲಿ ದಿನಕ್ಕೆ ನಾಲ್ಕುಸಲ ಒಂದು ಟೀ ಚಮಚೆಯಷ್ಟು ಈ ಮೂಲಿಕೆಯ ರಸವನ್ನು ಕುಡಿಯಬೇಕು. ಮೊದಲಿನ ಮೂರು ದಿನಗಳಲ್ಲಿ ಸ್ವಚ್ಛ ನೀರು ವಿನಾ ಬೇರೆ ಏನೂ ಆಹಾರ ಕೊಡಕೂಡದು.

ಸ್ಥಳದ ಅಭಾವದ ಮೂಲಕ ಇಲ್ಲಿ ಇನ್ನು ಹೆಚ್ಚಿನ ವಿವರವನ್ನು ಕೊಡಲು ಸಾಧ್ಯವಿಲ್ಲ ಯಾರಾದರೂ ಆ ವಿಷಯವಾಗಿ ತಿಳಿಯಲಪೇಕ್ಷಿಸಿದರೆ ನನಗೆ ಬರೆದುಕೊಳ್ಳಬಹುದು

ಪಿ ಎಸ್. ಓ ನೇಲ್.

C/o ಫೈಬರ್ ಎಕ್ಸ್‌ಪರ್ಟ್, ದೇವಘರ, ಸಂತಾಲ್ ಪರ್ಗನಾಸ್ ಬಿಹಾರ್.

(ಪ್ರೇಮ ಪತ್ರಿಕೋದ್ಯಮಬಾಬೆಯಿಂದ,ತುಂಗಭದ್ರಾ, ಬೊಂಬಾಯಿ ಕ್ರಾನಿಕಲ್ ಪತ್ರಿಕೆಯಿಂದ ಅನುವಾದ)

ವೈಶ್ಯ ಯುವಜನಸಂಘ, ಮೈಸೂರು.

ತಾ|| 30–8–36 ನೆಯ ಭಾನುವಾರ ಮೈಸೂರು ಶ್ರೀ ಕನ್ಯಕಾಪರಮೇಶ್ವರೀ ಕೋ-ಆಪರೇಟಿವ್ ಸೊಸೈಟಿ ಸಭಾಂಗಣದಲ್ಲಿ ಮೇಲ್ಕಂಡ ವೈಶ್ಯ ಯುವಜನ ಸಂಘದ ಪ್ರಥಮ ವಾರ್ಷಿಕ ಮಹಾಸಭೆಯು ಮೈಸೂರು ಸರ್ಕಾರದ ಮುದ್ರಣಾಲಯದ ಅಸಿಸ್ಟೆಂಟ್ ಸೂಪರಿಂಟೆಂಡೆಂಟರವರಾದ ಶ್ರೀಯುತ ಬಿ. ಕೃಷ್ಣಸ್ವಾಮಿಶ್ರೇಷ್ಠಿಯವರ ಅಧ್ಯಕ್ಷತೆಯಲ್ಲಿ ನಡೆಸಲಾಯಿತು. ಫಲಹಾರ ಪಾನನಂತರ ಅಲಂಕೃತವಾಗಿದ್ದ ಸಭಾಂಗಣದಲ್ಲಿ ಸಭೆ ಕೂಡಿತು. ನೂರಾರು ಜನರು ದಯಮಾಡಿಸಿದ್ದರು. ದೇವತಾ ಪ್ರಾರ್ಥನೆಯಾದಮೇಲೆ ಸ್ವಾಗತ ಪದ್ಯಗಳು, ಸಂಸ್ಕೃತ, ಕನ್ನಡ ಮತ್ತು ಇಂಗ್ಲೀಷ್ ಪದ್ಯ ಪಠನಮಾಡಲಾಯಿತು. ಕಮಿಟಿಯವರ ವರದಿಯು ಓದಲ್ಪಟ್ಟು ಅಂಗೀಕೃತವಾಯಿತು. 1936–37ನೇ ಸಾಲಿಗೆ ಆಡಿಟರ್ ಮತ್ತು ಕಮಿಟಿ ಮೆಂಬರುಗಳ ಚುನಾವಣೆ ನಡೆಯಿತು. ಸಾಹಿತ್ಯ ಮತ್ತು ಆಟಪಾಟಗಳಲ್ಲಿ ಉತ್ತೀರ್ಣರಾದವರಿಗೆ ಅಧ್ಯಕ್ಷರು ಬಹುಮಾನಗಳನ್ನು ಹಂಚಿದರು. ನಂತರ Lucky dip ಎಂಬ ಅದೃಷ್ಟಪರೀಕ್ಷೆಯ ಪ್ರಸಂಗವೂ ಬಹಳ ಸ್ವಾರಸ್ಯವಾಗಿ ನಡೆಯಿತು.

ಸಂಘದ ಅಭಿವೃದ್ಧಿಗೆ ಬೇಕಾದ ಕೆಲವು ಸಲಹೆಗಳನ್ನೊಳಗೊಂಡ ಭಾಷಣಗಳನ್ನು ಅಧ್ಯಕ್ಷರೂ ಇತರ ಮಹನೀಯರೂ ಅಪ್ಪಣೆ ಕೊಡಿಸಿದರು

ಸಂಡರ್ಲೆಂಡರ ಮರಣ.

ಭಾರತದ ಸೇವಕರೂ, "ಬಂಧನದಲ್ಲಿರುವ ಭಾರತ" ಎಂಬ ಪುಸ್ತಕವನ್ನು ಬರೆದವರೂ ಆದ ಡಾ|| ಜೆ ಟಿ ಸಂಡರ್‌ಲೆಂಡರವರು ಕಳೆದ ಮಾಹೆ 14 ನೇ ತಾರೀಖು ಅಮೆರಿಕದಲ್ಲಿ ಪರಂಧಾಮವನ್ನೈದಿದರು. ಇವರು ಭರತಖಂಡದ ವಿಷಯವಾಗಿ ಅನೇಕ ಉಪಯುಕ್ತವಾದ ಗ್ರಂಥಗಳನ್ನು ಬರೆದಿರುವರು. ಪಾಶ್ಚಾತ್ಯ ದೇಶಗಳಲ್ಲಿ ವಿಶೇಷ ಪ್ರಚಾರ ಮಾಡಿರುವರು ಇವರ ಮರಣದಿಂದ ಭರತ ಖಂಡಕ್ಕೆ ಅಪಾರ ನಷ್ಟವುಂಟಾಗಿದೆ.

ಸಾಧ್ವಿ

೭-೯-೩೬ ನೇ ಸೋಮವಾರ

ಕಾಂಗ್ರೆಸ್ಸಿಗೆ ಸದಸ್ಯರಾಗಿರಿ.

ಕಾಂಗ್ರೆಸ್ ಮಹಾಸಭೆಯ ಸದಸ್ಯರಾಗುವವರಿಗೆ ಈ ತಿಂಗಳ ಕಡೆಯವರೆಗೂ ಅವಕಾಶವು ಕೊಡಲ್ಪಟ್ಟಿದೆ ನಮ್ಮ ಸಂಸ್ಥಾನದಲ್ಲಿ ಬೆಂಗಳೂರು ನಗರದಲ್ಲಿಯೂ, ಇತರ ಕೆಲವು ಜಿಲ್ಲೆಗಳಲ್ಲಿಯೂ ಕಾಂಗ್ರೆಸ್ಸಿಗೆ ಸದಸ್ಯರನ್ನು ಸೇರಿಸುವ ಪ್ರಯತ್ನವು ನಡೆಯುತ್ತಿದೆ ಕಡೆಯಪಕ್ಷ ಮೂರುಸಾವಿರ ಜನರನ್ನಾದರೂ ಸೇರಿಸಬೇಕೆಂಬ ಪರ್ಯಾಲೋಚನೆಯಿರುವುದು ಇದೇನೂ ಹೆಚ್ಚಲ್ಲ ಹಿಂದೆ ಅನೇಕ ವರ್ಷಗಳಲ್ಲಿ ಮೂರು ಸಾವಿರಕ್ಕಿಂತಲೂ ಹೆಚ್ಚಾಗಿ ಸದಸ್ಯರಾಗಿದ್ದರು

ಈಚೆಗೆ ಕಾಂಗ್ರೆಸ್ ಸಭೆಯ ಕಾರ್ಯಕ್ರಮಗಳಲ್ಲಿ ಸ್ವಲ್ಪ ಉತ್ಸಾಹವು ಕಡಿಮೆಯಾಗಿರುವುದೇನೋ ನಿಜ ಆದರೆ ಹೀಗೆಯೇ ಇರುವುದು ಸರಿಯಲ್ಲ ಬ್ರಿಟಿಷ್ ಇಂಡಿಯಾ ಮತ್ತು ದೇಶೀಯ ಸಂಸ್ಥಾನಗಳ ಎಲ್ಲಾ ಸಮಸ್ಯೆಗಳೂ ಕಾಂಗ್ರೆಸ್ ಮಹಾಸಭೆಯಿಂದಲೇ ಬಗೆಹರಿಯಬೇಕು ಬೇರೆ ಯಾವ ಸಂಸ್ಥೆಗೂ ಆ ಅಸ್ತಿತ್ವವೂ, ಆ ಅಧಿಕಾರವೂ ಶಕ್ತಿಯೂ ಇರುವುದಿಲ್ಲ. ಈಗ ನಮ್ಮ ದೇಶದಲ್ಲಿ ಉಂಟಾಗಿರುವ ಜಾಗ್ರತಿಯೂ, ಪ್ರಗತಿಯೂ ಕಾಂಗ್ರೆಸ್ ಸಭೆಯ ಕಾರ್ಯಕ್ರಮಗಳಿಂದಲೇ ಉಂಟಾದುವು ಇನ್ನು ಮುಂದೆಯೂ ಹೀಗೆಯೇ ಆಗಬೇಕು. ಕಾಂಗ್ರೆಸ್ಸಿಗೆ ಬ್ರಿಟಿಷ್ ಇಂಡಿಯಾ ಮತ್ತು ದೇಶೀಯ ಸಂಸ್ಥಾನಗಳೆಂಬ ಭೇದವಿಲ್ಲ ಎಲ್ಲ ಭಾರತೀಯರ ಹಿತಕ್ಕಾಗಿಯೇ ಅದು ದುಡಿಯುವುದು ಆದ್ದರಿಂದ ನಮ್ಮ ದೇಶಬಾಂಧವರೆಲ್ಲರೂ ಈ ಸಭೆಗೆ ಸೇರಿ ದೇಶದ ಸ್ಥಿತಿಗತಿಗಳನ್ನು ಅಭಿವೃದ್ಧಿಗೊಳಿಸಲು ನೆರವಾಗಬೇಕೆಂದು ನಾವು ಕೋರುವೆವು

ಮೈಸೂರು ಪೌರಸಭೆಯ ಉಪಾಧ್ಯಕ್ಷತೆ.

ಮೈಸೂರು ಪೌರಸಭೆಯ ಉಪಾಧ್ಯಕ್ಷರಾದ ಮಿ॥ ಮಹಮದ್‌ಸೇಟರ ವಿಚಾರವಾಗಿ ಕಳೆದ ಮೀಟಿಂಗಿನಲ್ಲಿ ಒಂದು ನಿರ್ಣಯವಾಯಿತಷ್ಟೆ ಅವರು ತಮ್ಮ ಕೆಲಸಗಳನ್ನು ಸರಿಯಾಗಿ ಮಾಡುತ್ತಿಲ್ಲವಾದುದರಿಂದ ಅಧ್ಯಕ್ಷರು ಅವರಮೇಲೆ ಕಾನೂನು ಪ್ರಕಾರ ಕಾರ್ಯಕ್ರಮ ನಡೆಸಬೇಕೆಂದು ತೀರ್ಮಾನವಾಯಿತು ಸ್ಥಳೀಯ ಸಂಸ್ಥೆಗಳ ಪ್ರಮುಖ ಸದಸ್ಯರೊಬ್ಬರ ಮೇಲೆ ಅದೇ ಸಂಸ್ಥೆಯ ಸದಸ್ಯರುಗಳೇ ಈರೀತಿ ಕಾರ್ಯಭಾಗ ನಡೆಸುವುದರ ಔಚಿತ್ಯವನ್ನು ಕುರಿತು ವಿಶೇಷವಾದ ಜಿಜ್ಞಾಸೆ ನಡೆದಿರುತ್ತದೆ ಮತ್ತು ಚುನಾಯಿತ ಸದಸ್ಯರುಗಳೂ ಸಹ ಕಾನೂನು ಕಟ್ಟಳೆಗಳನ್ನನುಸರಿಸದೆ ಸ್ವೇಚ್ಛಾಪ್ರವರ್ತನೆಯಿಂದಲೂ, ಬೇಜವಾಬ್ದಾರಿಯಿಂದಲೂ ಪ್ರವರ್ತಿಸಿದರೆ ಅವರಮೇಲೆ ತಕ್ಕ ಬಂದೋಬಸ್ತು ಮಾಡುವುದು ಅಗತ್ಯವೆಂದೂ ಸಹ ವಾದಿಸಲ್ಪಡುತ್ತಿದೆ

ಮಿ॥ ಮಹಮದ್‌ಸೇಟರೇನೋ ಗಟ್ಟಿಗರು ಪೌರಸಭೆಯಲ್ಲಿ ಹಳಬರು ಉತ್ಸಾಹಶಾಲಿಗಳು ಆದರೆ ದಾರಿತಪ್ಪಿ ನಡೆಯುವರು ಮೊಲ್ದಂಡ ಪ್ರಸಂಗದಲ್ಲಿ ಹೀಗೆ ಮಾಡಿದ್ದರಿಂದಲೇ ಅವರ ಸಹಪಾಟಿಗಳೂ ಅವರನ್ನು ಕೈಬಿಟ್ಟರು

ತನ್ನ ಸಹೋದ್ಯೋಗಿಗಳನ್ನು ತಿರಸ್ಕರಿಸಿದವರ ಪಾಡೆಲ್ಲಾ ಹೀಗೆಯೇ

ವಿದ್ಯುದ್ದೀಪೋತ್ಸವ.

ಹಾಸನದಲ್ಲಿ ವಿದ್ಯುದ್ದೀಪೋತ್ಸವದ ಕಾರ್ಯಗಳು ವೇಗವಾಗಿ ಜರುಗುತ್ತಿವೆ. ಊರಿಗೆಲ್ಲಾ ದೀಪಗಳನ್ನು ಸಪ್ಟಂಬರ್ 9 ನೇ ತಾರೀಖಿನಲ್ಲಿ ಕೊಡುವುದಾಗಿ ಪೌರ ಸಭೆಯವರು ಹೇಳಿರುತ್ತಾರೆ ಹಾಸನದ ಪೌರ ಸಭೆಯವರು ಮುತುವರ್ಜಿವಹಿಸಿ ರಸ್ತೆಗಳನ್ನೂ, ಚರಂಡಿಗಳನ್ನೂ ಸರಿಪಡಿಸುತ್ತಿದ್ದಾರೆ ಈ ಊರಿನಲ್ಲಿರುವ ಪೀಸ್ ಪಾರ್ಕ್ ಎಂಬುದನ್ನು ಅಂಗಡಿಗಳಿಗಾಗಿ ಉಪಯೋಗಿಸಿ ಇದರ ಮುಂದಿರುವ ಮಳಿಗೆಗಳನ್ನು ಪೀಸ್ 'ಪಾರ್ಕ್' ಮಾಡಬೇಕೆಂದು ನಿರ್ಧರಿಸಿರುವ ಪೌರಸಭೆಯ ಆಡಳಿತವನ್ನು ನೋಡಿ ಅನೇಕರಿಗೆ ಅಸಮಾಧಾನವುಂಟಾಗಿದೆ ಪೌರಸಭೆಯವರು ವಿದ್ಯುಚ್ಛಕ್ತಿಯ ಸಹಾಯದಿಂದ ಪಟ್ಟಣದ ಎಲ್ಲಾ ಭಾಗಗಳಿಗೂ ನೀರನ್ನು ಒದಗಿಸಬೇಕೆಂದು ಜನರು ಆಶಿಸುತ್ತಾರೆ

ಹಜಾಮನ ಫಜೀತಿ

ಚೀಣಾದಲ್ಲಿರುವ ತಾಯುರ್ವಾ ಎಂಬಲ್ಲಿ ಒಬ್ಬ ಹಜಾಮನು ಪ್ರತಿನಿತ್ಯವೂ ಮಿಲಿಟರಿ ಅಧಿಕಾರಿಗಳಿಗೆ ಕ್ಷೌರ ಮಾಡಬೇಕಾಗಿದೆ ಇವನು ಅಧಿಕಾರಿಗಳಿಗೆ ಕ್ಷೌರಮಾಡುವಾಗ ಅವರಿಗೆ ಏನಾದರೂ ಅಪಾಯವನ್ನುಂಟುಮಾಡಿಯಾನೆಂದು ಅಧಿಕಾರಿಗಳ ಅನುಯಾಯಿಗಳು ಆ ಹಜಾಮನ ಮುಖಕ್ಕೆ ಸರಿಯಾಗಿ ಪಿಸ್ತೂಲನ್ನು ಹಿಡಿದಿರುತ್ತಾರೆ ಹಜಾಮನು ಜೀವದಲ್ಲಿ ಜೀವವಿಲ್ಲದೆ ಕ್ಷೌರಮಾಡುತ್ತಾನೆ

ವಿದ್ಯುಚ್ಛಕ್ತಿಯ ಅಪಾಯ ನಿವಾರಣೆ.

ವಿದ್ಯುಚ್ಛಕ್ತಿಯಿಂದ ಪ್ರಾಣಕ್ಕೂ ಪದಾರ್ಥಗಳಿಗೂ ಅಪಾಯ ಉಂಟಾಗದಂತೆ ಎಚ್ಚರಿಕೆಯಿಂದಿರಲು, ಅನುಸರಿಸಬೇಕಾದ ಈ ಕೆಳಗೆ ಕಂಡ ನಿಬಂಧನೆಗಳನ್ನು ಜನರ ತಿಳಿವಳಿಕೆಗಾಗಿ ಸರ್ಕಾರದ ಪ್ರಕಟನಾಶಾಖೆಯವರು ಸೂಚಿಸಿರುತ್ತಾರೆ.—

(1) ವಿದ್ಯುಚ್ಛಕ್ತಿಯ ತಂತಿಗಳಿರುವ ಕಂಬಗಳನ್ನು ಮುಟ್ಟಕೂಡದು ಮತ್ತು ಒರಗಿಕೊಳ್ಳಕೂಡದು (2) ದನಕರುಗಳನ್ನೂ ಕುರಿ ಮೇಕೆಗಳನ್ನೂ ಅಥವಾ ಇತರ ಯಾವ ಜಾನುವಾರುಗಳನ್ನೇ ಆಗಲಿ ವಿದ್ಯುಚ್ಛಕ್ತಿಯ ಕಂಬಗಳಿಗೆ ಕಟ್ಟಕೂಡದು (3) ವಿದ್ಯುಚ್ಛಕ್ತಿಯ ತಂತಿಗಳ ಕೆಳಗೆ ನಡೆಯಕೂಡದು ಅವುಗಳ ಕೆಳಗಡೆ ಹೋಗಬೇಕಾದ ಸಂದರ್ಭ ಒದಗಿದಾಗ ಸಾಧ್ಯವಾದಷ್ಟು ಬೇಗನೆ ಆ ಸ್ಥಳವನ್ನು ದಾಟಿ ಮುಂದಕ್ಕೆ ಹೋಗಬೇಕು (4) ನೆಲದ ಮೇಲೆ ಬಿದ್ದಿರಬಹುದಾದ ವಿದ್ಯುಚ್ಛಕ್ತಿಯ ತಂತಿಗಳನ್ನು ಎಂದಿಗೂ ಮುಟ್ಟಕೂಡದು, ಏಕೆಂದರೆ, ಅವುಗಳಲ್ಲಿ ಕೆಲವುವೇಳೆ ವಿದ್ಯುಚ್ಛಕ್ತಿಯು ಇದ್ದರೂ ಇದ್ದೀತು (5) ವಿದ್ಯುಚ್ಛಕ್ತಿಯಿಂದ ಅಪಾಯಕ್ಕೆ ಈಡಾಗಿರುವ ಮನುಷ್ಯರನ್ನಾಗಲಿ ಅಥವಾ ಪ್ರಾಣಿಗಳನ್ನಾಗಲಿ ಕಾಪಾಡುವ ಉದ್ದೇಶದಿಂದ ಮುಂದೆ ನುಗ್ಗಿ ಯಾರೂ ತಮ್ಮ ಕೈಗಳಿಂದ ಮುಟ್ಟಕೂಡದು ಹಾಗೆ ಮಾಡುವುದು ಪ್ರಾಣಕ್ಕೆ ಅತ್ಯಂತ ಅಪಾಯಕರ (6) ವಿದ್ಯುಚ್ಛಕ್ತಿಯ ತಂತಿಗಳ ಕೆಳಗೆ ಬೆಂಕಿ ಉರಿಯುತ್ತಿರುವುದು ಕಂಡು ಬಂದಾಗ ಸುತ್ತಮುತ್ತಲು ವಿದ್ಯುಚ್ಛಕ್ತಿಯ ತಂತಿಗಳು ಬಿದ್ದಿಲ್ಲವೆಂಬುದನ್ನು ನಿಸ್ಸಂಶಯವಾಗಿ ತಿಳಿಯದೆ, ಆ ಬೆಂಕಿಯನ್ನು ಆರಿಸಲು ಆತುರಪಟ್ಟು ನುಗ್ಗಕೂಡದು. (7) ವಿದ್ಯುಚ್ಛಕ್ತಿಯ ತಂತಿಗಳ ಕೆಳಗಡೆ ಆ ತಂತಿಗಳಿಂದ ಹತ್ತು ಅಡಿಗಳಿಗಿಂತ ಸಮೀಪದಲ್ಲಿರುವಂತೆ ಪೈರುಗಳು ಬೆಳೆಯಲು ಅವಕಾಶ ಕೊಡಕೂಡದು (8) ವಿದ್ಯುಚ್ಛಕ್ತಿಯ ತಂತಿಗಳ ಸಮೀಪದಲ್ಲಿರುವ ಮರಗಳನ್ನು ಹತ್ತಕೂಡದು (9) ವಿದ್ಯುಚ್ಛಕ್ತಿಯ ತಂತಿಗಳ ಮೇಲೆ ಚಾಚಿಕೊಂಡಿರುವ ಮರದ ಕೊಂಬೆಗಳನ್ನು ಕತ್ತರಿಸಲು ಪ್ರಯತ್ನಿಸಕೂಡದು (10) ವಿದ್ಯುಚ್ಛಕ್ತಿಯ ತಂತಿಗಳ ಕೆಳಭಾಗದಲ್ಲಿ ತಿರುಗಾಡುವ ಗಾಡಿಗಳ ಕಮಾನಿನ ಮೇಲಾಗಲಿ ಅಥವಾ ಭರ್ತಿಮಾಡಿರುವ ಸಾಮಾನುಗಳ ಮೇಲಾಗಲಿ ಕುಳಿತುಕೊಂಡು ಹೋಗಕೂಡದು (11) ವಿದ್ಯುಚ್ಛಕ್ತಿಯ ತಂತಿಗಳಿಗೆ ದಾರ, ಹುರಿ, ಬೊಂಬು ಮುಂತಾದುವುಗಳನ್ನು ಎಸೆಯಲು ಅಥವಾ ವಿದ್ಯುಚ್ಛಕ್ತಿಯ ತಂತಿಗಳು ಇರುವ ಅಕ್ಕಪಕ್ಕ ಪ್ರದೇಶಗಳಲ್ಲಿ ಪಟಗಳನ್ನು ಆಡಿಸಲು ಹುಡುಗರಿಗೆ ಅವಕಾಶ ಕೊಡಕೂಡದು

ಆಕಾಶವಾಣಿ ಕಾರ್ಯಕ್ರಮ

7-9-36 ನೆಯ ಸೋಮವಾರ ರಾತ್ರಿ 8 ರಿಂದ 9-15 ಐರೋಪ್ಯ ಸಂಗೀತ ಮಂಗಳವಾರ 6-30 ರಿಂದ 7-4 ಕರ್ನಾಟಕವಾದ್ಯ, ಸಂಗೀತ ಎ ಎ ಮೂರ್ತಿರಾಯರಿಂದ ಕನ್ನಡ ಸಾಹಿತ್ಯ ಪಠನ ಬುಧವಾರ 8 ರಿಂದ 9-1 ಕರ್ನಾಟಕ ಸಂಗೀತ, ಪ್ರೊ॥ ಎ ಎಚ್ ಡಿಸೋಜಾರವರ ಪ್ರಾಂತ್ಯಗಳು ಮತ್ತು ದೇಶ ಎಂಬ ಭಾಷಣ ಗುರುವಾರ 6-30 ರಿಂದ 8 ವಿದ್ಯಾವಂತರುದ್ಯೋಗ ವ್ಯವಸಾಯಕ್ಕೆ ಹಿಂತಿರುಗಿ ಹೋಗುವ ಎಂಬ ಚರ್ಚೆ ಕೃಷ್ಣಲೀಲಾ ಕನ್ನಡ ನಾಟಕ ಶುಕ್ರವಾರ 6-3 ರಿಂದ 7-45 ಹಿಂದೂಸ್ಥಾನಿ ಸಂಗೀತ ಜನಪದ ವಿಜ್ಞಾನ ಶಾಸ್ತ್ರದ ಭಾಷಣ ಶನಿವಾರ 6-30 ರಿಂದ 8 ಆಸ್ಥಾನ ವಿದ್ವಾನ್ ಶಿವರಾಮಯ್ಯ ಮತ್ತು ನಾಗರಾಜ ಯವರ ವಾದ್ಯ ಸಂಗೀತ

ಶಾಲಾ ಪ್ರಾರಂಭೋತ್ಸವ

ಅರ್ಕಲ್‌ಗೂಡು ತಾಲ್ಲೂಕು ಕೇರಳಾಪುರದಲ್ಲಿ ಮಾಧ್ಯಮಿಕ ಶಾಲಾ ಪ್ರಾರಂಭೋತ್ಸವವು ಕಳೆದ ತಿಂಗಳಿನಲ್ಲಿ ವಿಶೇಷ ವೈಭವದಿಂದ ಜರುಗಿತು ಶಾಲೆಯ ಕಟ್ಟಡ ಮಿ॥ ಎಂ. ಮಾಳಪ್ಪಶೆಟ್ಟಿ ಅಂಡ್ ಬ್ರದರ್ಸ್ ಇವರಿಂದ ಧರ್ಮಾರ್ಥವಾಗಿ ಕಟ್ಟಲ್ಪಟ್ಟಿದೆ ಹಾಸನದ ಡೆಪ್ಯುಟಿಕಮಿಷನರವರಾದ ಮಿ॥ ಅಬ್ದುಲ್ ಅಜೀಸ್‌ಖಾನ್ ಸಾಹೇಬರವರು ಪ್ರಾರಂಭೋತ್ಸವವ ನೆರವೇರಿಸಿದರು ಈ ಮಹೋತ್ಸವಕ್ಕೆ ಅನೇಕ ಮಹನೀಯರುಗಳು ದಯಮಾಡಿದ್ದರು

ಶಾರದಾವಿಲಾಸ ಹೈಸ್ಕೂಲು

ಶಾರದವಿಲಾಸ ಹೈಸ್ಕೂಲಿನ ಹಳೆ ವಿದ್ಯಾರ್ಥಿಗಳ ಸಂಘದವರು ಮೂರನೇ ... ಲಾ ಮಹೋತ್ಸವವನ್ನು ಮುಂದಿನ ಸ... ಬರ್ ತಿಂಗಳಿನಲ್ಲಿ ಆಚರಿಸುವರೆಂದು ... ಳೇ ವಿದ್ಯಾರ್ಥಿಗಳೆಲ್ಲಾ ಸಹಕರಿಸಿ ಸ... ದ ಕಾರ್ಯದರ್ಶಿಗಳವರಿಗೆ ಚಂದಾ ... ಹಿಸಿಕೊಡಬೇಕೆಂದೂ ತಿಳಿಸಿಯತ್ತಾರೆ

ಕಾಳಿಗೂ ಹೆದರಲಿಲ್ಲ ಕಳ್ಳರು!

ತ್ರಿಪುರಾ ಸಂಸ್ಥಾನದಲ್ಲಿ ಒಂದು ... ತನ ಕಾಳೀ ದೇವಾಲಯ, ಉಗ್ರ... ತಲಾಂತರದಿಂದ ಭಕ್ತರು ದೇವಿಯ ... ತ್ಯರ್ಥವಾಗಿ ಲಕ್ಷಾಂತರ ರೂಪಾ... ಆಭರಣವನ್ನು ಕೊಟ್ಟಿದ್ದರು

ಈ ವಾರ ದೇವಸ್ಥಾನದ ಖಜಾನೆ... ಲ್ಲಿಗೆ ಕಳ್ಳರು ನುಗ್ಗಿದರು ಸುಮಾರು ... ದುಲಕ್ಷ ರೂಪಾಯಿ ಬೆಲೆ ಬಾಳುವ ಸಾ... ನುಗಳನ್ನು ಪಾರಿಸಿದ್ದಾರೆಂದು ವರ... ಗಿದೆ

ಮಹಾರಾಜರು ಈಗ ಲಂಡನ್ನಿನಿ... ನ್ನೊಂದು ದೇವಸ್ಥಾನವನ್ನು ಕಟ್ಟ... ಹೋಗಿದ್ದಾರೆ

ವೈರಾಗಿಯೇ ಮೊಸಳೆ ಯಾಗಿದ್ದಾನೆ.

ಪತರಾಮ್ ಎಂಬ ಹಳ್ಳಿಯ ಹೀರಾ ಲಾಲ್ ಎಂಬುವನು ಆ ಊರನ್ನು ಕೆಲವು ಕಾಲ ಬಿಟ್ಟು ಸನ್ಯಾಸಿಯಾಗಿ ಪುನಃ ಅಲ್ಲಿಗೆ ಬಂದನು ಅವನು ವೈರಾಗಿಗಳಿಂದ ತನ್ನ ರೂಪುಗಳನ್ನು ಬದಲಾಯಿಸಿಕೊಳ್ಳುವುದನ್ನು ಕಲಿತಿರುವುದಾಗಿ ತಿಳಿಸಿದನು.

ಅವನು ಒಂದು ಸಾರಿ ತನ್ನ ಮಂತ್ರ ಶಕ್ತಿಯಿಂದ 2 ಸೀರೆಗಳ ಬಟ್ಟಲುಗಳನ್ನು ತಯಾರುಮಾಡಿ ಅದರಲ್ಲಿ ಮೊದಲನೆಯ ಬಟ್ಟಲಿನ ಸೀರೆಯನ್ನು ತನ್ನ ಮೇಲೆ ಚುಮುಕಿಸಬೇಕೆಂದು ಹೇಳಿದನು ಅದೇ ರೀತಿಯಲ್ಲಿ ನೀರು ಸೀರೆಯನ್ನು ಚುಮುಕಿಸಿದರು ತಕ್ಷಣವೇ ಅವನು ಮೊಸಳೆಯಾಗಿ ಅತ್ರೇಯೀ ನದಿಯಲ್ಲಿ ಸೇರಿಕೊಂಡು ಈಗಲೂ ಅಲ್ಲೇ ಮೊಸಳೆಯಾಗಿ ಇದ್ದಾನೆ ಅವನ ಮೊಸಳೆ ರೂಪವನ್ನು ನೋಡಿ ಹೆದರಿ ಎಲ್ಲರೂ ಓಡಿ ಹೋದರು ತನ್ನ ಮೊದಲಿನ ರೂಪಕ್ಕೆ ಬರಲು ಮತ್ತೊಂದು ಬಟ್ಟಲಿನ ಸೀರೆಯನ್ನು ಚಿಮುಕಿಸಿ ಚೆಲ್ಲಬೇಕೆಂದು ಹೇಳಿದ್ದನು ಆದರೂ ಆ ಸೀರೆಯನ್ನು ಬಟ್ಟರು ಎಷ್ಟೋ ಜನರು ಮೊಸಳೆಯನ್ನು ಕೊಲ್ಲಲು ಪ್ರಯತ್ನಪಟ್ಟರು ಆದರೆ ಅವನ ಸಂಬಂಧಿಕರು ಯಾರಾದರೂ ವೈರಾಗಿಗಳನ್ನು ಕರೆಸಿ ತಿರುಗಿ ಅವನು ರೂಪಕ್ಕೇ ಬರುವ ಹಾಗೆ ಮಾಡಲು ಪ್ರಯತ್ನಪಡುತ್ತಿದ್ದಾರೆ

ಮಗ ಸತ್ತನೆಂದು ತಾಯಿಯೂ ಸತ್ತಳು

ಮೈಸೂರು ತಾ॥ ಕೂಡನಹಳ್ಳಿಯಲ್ಲಿ ಬಸವಮಾದಯ್ಯ ಮತ್ತು ಕುಂಟೆ ಎಂಬ ಇಬ್ಬರು ಹುಡುಗರಿಗೆ ಜಗಳವಾಗಿ ಕಾಯಿಯು ಹುಡುಗನ ಹೊಟ್ಟೆಯ ಮೇಲೆ ಒಂದು ಏಟನ್ನು ಹೊಡೆದನು ಹುಡುಗನು ನೆಲದ ಮೇಲೆ ಮೂರ್ಛೆ ಬಿದ್ದನು. ತಾಯಿಯು ಆಗ ಮಗನು ಸತ್ತನೆಂದು ತಿಳಿದು ಭಾವಿಯಲ್ಲಿ ಬಿದ್ದು ಆತ್ಮಹತ್ಯ ಮಾಡಿಕೊಂಡಳು ಸ್ವಲ್ಪ ಹೊತ್ತಿನ ಮೇಲೆ ಮಗನು ಚೇತರಿಸಿಕೊಂಡು ಎದ್ದನು

ಕೋತಿಗಳ ರಫ್ತು.

1935 36 ನೇ ಸಾಲಿನಲ್ಲಿ ಇಂಡಿಯಾದಿಂದ ಅಮೆರಿಕಾ, ಬೆಲ್ಜಿಯಂ, ಜರ್ಮನಿ ಮುಂತಾದ ಕಡೆಗೆ ಅನೇಕ ಕೋತಿಗಳನ್ನು ರಫ್ತು ಮಾಡಲಾಯಿತು ಎಂದು ಅಸೆಂಬ್ಲಿಯಲ್ಲಿ ಪಂಡಿತ ಲಕ್ಷ್ಮೀಕಾಂತಮಾಳವೀಯರ ಪ್ರಶ್ನೆಗೆ ಸರಕಾರದವರು ಉತ್ತರ ಕೊಡುತ್ತಾ ತಿಳಿಸಿದರು

ಶಿವನ ದರ್ಶನವಿಲ್ಲವೆಂದು ಆತ್ಮಹತ್ಯ

ಹೈದರಾಬಾದಿನಲ್ಲಿ ಶಿವನಾರಾಯಣ ಎಂಬ ಬ್ರಾಹ್ಮಣನಿಗೆ ತನ್ನನ್ನು ಶಿವಪೂಜೆ ಮಾಡಿಸಿದಹಾಗೆ ಕನಸಾಗಲು ಅವನು ತನ್ನ ಉದ್ಯೋಗಕ್ಕೆ ರಾಜೀನಾಮೆ ಕೊಟ್ಟು ಹೆಂಡತಿ ಮಕ್ಕಳನ್ನು ಬಿಟ್ಟು ತಪಸ್ಸಿಗೆ ಕುಳಿತನು ಶಿವದರ್ಶನವೇ ಆಗಲಿಲ್ಲ ಕಡೆಗೆ ತನ್ನನ್ನು ತಾನೇ ಗುಂಡಿನಿಂದ ಹೊಡೆದುಕೊಂಡು ಸತ್ತನು

ಸತ್ತಹುಡುಗ ಬದುಕಿದ.

ಬಿಜನೂರ್ ಡಿಸ್ಟ್ರಿಕ್ಟಿನಲ್ಲಿ ಲಕ್ಷ್ಮಣ್ ಎಂಬ ಒಬ್ಬ ಹುಡುಗನು ತನ್ನ ತಂದೆಯ ಹತ್ತಿರ ಒಂದು ರಾತ್ರಿ ಮಲಗಿದ್ದನು ಆಗ ಅವನ ಕಣ್ಣಿನ ಹತ್ತಿರ ಏನೋ ಕಡಿದಂತಾಯಿತು. ಅನಂತರ ಅದು ಹಾವು ಕಡಿದದ್ದೆಂದು ಊಹಿಸಲಾಯಿತು 2-3 ಘಂಟೆಯೊಳಗಾಗಿ ಅವನು ಜ್ಞಾನ ತಪ್ಪಿ ಬಿದ್ದನು ಜನರ ಅಭಿಪ್ರಾಯದಂತೆ ಆ ಹುಡುಗನನ್ನು ನದಿಯಲ್ಲಿ ಹೂತು ಹಾಕಿದರು ಪಂಚಾಯಿತಿ ಜನರಿಂದ ಹುಡುಗ ಸತ್ತನೆಂದು ತೀರ್ಮಾನವೂ ಆಯಿತು ಅವನನ್ನು ಹೂತ ತಿಂಗಳನಂತರ ಆ ಹುಡುಗನು ಹಾವಾಡಿಗರ ಹತ್ತಿರ ಇದ್ದಾನೆಂಬ ಸಮಾಚಾರವು ಎಲ್ಲೆಲ್ಲೂ ಹರಡಿತು. ಕೊನೆಗೆ ಆ ಹುಡುಗನ ತಂದೆಯು ಹುಡುಕಿ ಮಗನನ್ನು ಗುರುತು ಮಾಡಿದನು ಆದರೆ ಹಾವಾಡಿಗರು ಹುಡುಗನನ್ನು ಬಿಡಲು ಇಷ್ಟಪಡಲಿಲ್ಲ ಪೋಲೀಸಿನವರು ಅವರನ್ನು ದಸ್ತಗಿರಿಮಾಡಿ ವಿಚಾರವನ್ನು ಪರಿಶೀಲಿಸುತ್ತಿದ್ದಾರೆ

ಮಾನನಷ್ಟದ ಮೊಕದ್ದಮೆ ಪ್ರತಿಧ್ವನಿ.

ಸೋಸಲೆ ಶ್ರೀನಿವಾಸರಾಯ ಮಠದ ಈಗಿನ ಸ್ವಾಮಿಗಳಾಗಿರುವ ಶ್ರೀ॥ ತೀರ್ಥ ಸ್ವಾಮಿಗಳವರ (ಹಿಂದೆ ಅಡ್ವೋಕೇಟ್ ಶ್ರೀ॥ ಟಿ ವಿ ನರಸಿಂಹಾಚಾರ್) ಮೇಲೆಯೂ ಅವರ ಸಹಾಯಕರಾಗಿದ್ದರೆಂದು ಮ॥ ನಾಗೇಶರಾಯರಮೇಲೆಯೂ ಆಯುರ್ವೇದ ಪಂಡಿತರಾದ ಮ॥ ಗೋಪಾಲರಾವ್ ಹೆಗ್ಗಡೆಯವರು ಅತ್ಯಾಚಾರದ ಮೊಕದ್ದಮೆಯೊಂದನ್ನು ಹೂಡಿ ಅದು ವಜಾ ಆಯಿತಷ್ಟೆ ಈ ಸುಳ್ಳು ಮೊಕದ್ದಮೆಯನ್ನು ಮಾಡಿ ಸಭ್ಯರಾದವರಿಗೆ ಅವಮಾನ ಮಾಡಲು ಪ್ರಯತ್ನಿಸಿದ್ದರಿಂದ ಆಪಾದಿತರಿಗೆ ೧೦೦ ರೂ ಪರಿಹಾರವನ್ನೇಕೆ ಫಿರ್ಯಾದಿಯು ಕೊಡಕೂಡದೆಂಬ ಕಾರಣವನ್ನು ಮ್ಯಾಜಿಸ್ಟ್ರೇಟರು ಕೇಳಿರುವರು.

ಎತ್ತಿನ ಗಾಡಿಗಳ ಸುಂಕ

ಎತ್ತಿನ ಗಾಡಿಗಳಿಗೆ ಪ್ರತಿಸಲವೂ ಕೊಡಬೇಕಾದ ಸುಂಕಗಳನ್ನು ಒಟ್ಟುಗೂಡಿಸಿ ಒಂದೇಸಾರಿ ಕೊಡಲು ಸೌಕರ್ಯವಾಗುವಂತೆ ಏರ್ಪಡಿಸಿ ಸರ್ಕಾರದವರು ನಿಬಂಧನೆಯನ್ನು ಮಾಡಿರುವರು ಈ ರೀತಿ ಪಾವತಿಮಾಡಲು ಅಪೇಕ್ಷಿಸುವ ಗಾಡಿಗಳ ಮಾಲೀಕರು ಆಮಲ್ದಾರರಲ್ಲಿ ಗಾಡಿಗಳನ್ನು ಹಾಜರುಮಾಡಿ, ದರಖಾಸ್ತು ಒಪ್ಪಿಸಿ ಅನುಮತಿ ಪಡೆಯಬಹುದು.

ವಿಶ್ವವಿದ್ಯಾಲಯದ ಪದವೀದಾನ

ಮೈಸೂರು ವಿಶ್ವವಿದ್ಯಾಲಯದ ಪದವೀದಾನ ಸಮಾರಂಭವು ಅಕ್ಟೋಬರ್ 29ನೇ ಗುರುವಾರ ಬೆಳಿಗ್ಗೆ ಮೈಸೂರು ಜಗನ್ಮೋಹನ ಭವನದಲ್ಲಿ ನಡೆಯುವುದು ವೈಸ್ ಛಾನ್ಸಲರಾದ ಡಾ॥ ಇ ಪಿ ಮೆಟ್ಕಾಫ್‌ರವರು ಭಾಷಣಮಾಡುವರು

ಪುರನಿವಾಸಿಗಳ ಕುಂದು ಕೊರತೆಗಳು.

ಪೌರಸಭಾಧ್ಯಕ್ಷರ ಹೇಳಿಕೆ.

ನಮ್ಮ 24-8-36 ನೇ ಸಂಚಿಕೆಯಲ್ಲಿ ಮೇಲ್ಕಂಡ ವಿಷಯವಾಗಿ ಮೈಸೂರು ಪೌರಸಭಾಧ್ಯಕ್ಷರಾದ ಶ್ರೀ॥ ಎಂ ಎ ಶ್ರೀನಿವಾಸರವರು ಒಂದು ದೀರ್ಘವಾದ ಹೇಳಿಕೆಯನ್ನು ಕಳುಹಿಸಿರುತ್ತಾರೆ ಅದರಲ್ಲಿ ನಾವು ಪ್ರಕಟಿಸಿದ್ದ ಪುರನಿವಾಸಿಗಳ ಸಂಬಂಧ ಪಟ್ಟ ಅನೇಕ ಪ್ರಾಮುಖ್ಯವಾದ ಅಂಶಗಳಿಗೆ ಉತ್ತರವಿದೆ ಅದನ್ನು ಸಂಪೂರ್ಣವಾಗಿ ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಸ್ಥಳ ಸಂಕೋಚದಿಂದ ಈ ಸಾರಿ ಪ್ರಕಟಿಸಲಿಲ್ಲ

"ಸ್ವೇಚ್ಛಾ ದಿನಾಚರಣೆಯು ಕೂಡದು"

ಜಿಂದ ನಾವಾದಿನ ಕೂಲಿಗಾರರೆಲ್ಲರೂ ಸೇರಿ ಸ್ಪೇನ್ ಸರ್ಕಾರಕ್ಕೆ ಸಹಾನುಭೂತಿಯನ್ನು ತೋರಲು 'ಸ್ಪೇನ್ ದಿನಾಚರಣೆಯನ್ನು' ನಡೆಸಬೇಕೆಂದು ನಿರ್ಧರಿಸಿದ್ದರು.

ಎಲ್ಲವೂ ಸಿದ್ಧವಾಗಿತ್ತು.

ಆದರೆ ಪೋಲೀಸರ ಕಟ್ಟಾಜ್ಞೆಯೊಂದು ಹೊರಟಿತು ಸ್ಪೇನ್ ವಿಷಯವಾಗಿ ಸಹಾನುಭೂತಿಯನ್ನು ತೋರಿಸುವ ಈ ಆಚರಣೆಯು ನಡೆಯಕೂಡದೆಂದು

ಏನೆಂದರೂ ಬಂಡವಾಳಸ್ಥರ ಸರಕಾರ!

ಮುಟ್ಟಿದರೇ ಸುವಾಸನೆ.

ಅಲಪ ಬಾದಿನಲ್ಲಿ ಒಬ್ಬ ಹೆಂಗಸು ತಾನು ಯಾರನ್ನೇ ಆಗಲಿ ಮುಟ್ಟಿದರೆ ಅವರ ಅಂಗಾಂಗಗಳೆಲ್ಲವೂ ಸುವಾಸನೆಯಾಗುತ್ತವಂತೆ ಪ್ರತಿ ನಿತ್ಯವೂ ಅವಳನ್ನು ನೋಡಲು ಸಾವಿರಾರು ಜನರು ಬರುತ್ತಿರುವರು ಅವಳು ಒಂದು ದಿನ ಕ್ರಿಸ್ತ ವೈಷ್ಣವ ಗರ್ಲ್ಸ್ ಕಾಲೇಜಿಗೆ ಹೋಗಿ ಅಲ್ಲಿ ಹುಡುಗರನ್ನು ಕೂಗಿ ತನ್ನ ಶಕ್ತಿ ನೋಡಬೇಕೆಂದು ಹೇಳುತ್ತಿದ್ದಳು ಆದರೆ ಆ ಕಾಲೇಜಿನ ಪ್ರಿನ್ಸಿಪಾಲರು ಗಲಿಬಿಲಿಯಾಗುವುದೆಂದು ಅವಳ ಜೊತೆಯಲ್ಲಿ ವಾದಮಾಡಕೂಡದೆಂದು ಆಜ್ಞೆ ಹೊರಡಿಸಿರುವರು

ಯುವರಾಣಿಯವರ ಸಹೋದರಿಯ ಮರಣ

ಗತಿಸಿದ ದಳವಾಯಿ ದೇವರಾಜೇ ಅರಸಿನವರ ಕುಮಾರ್ತಿಯೂ, ಶ್ರೀಮದ್ಯುವರಾಣಿಯವರ ಸಹೋದರಿಯೂ ಆದ ಶ್ರೀಮತಿ ಲಕ್ಷಮ್ಮಣ್ಣಿಯವರು ಕಳೆದ ಗುರುವಾರ ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದಿಸುತ್ತೇವೆ

ಸಾಹಿತ್ಯ ನಾಟಕಸಂಘ, ಮೈಸೂರು.

ಮೇಲ್ಕಂಡ ಸಂಘದವರು 13-9-36 ನೇ ಭಾನುವಾರ ಸಾಯಂಕಾಲ ಆರೂವರೆ ಗಂಟೆಗೆ ರತ್ನಾವಳಿ ಥಿಯೇಟರಿನಲ್ಲಿ ಉತ್ತರ ರಾಮಚರಿತ್ರೆ (ಲವಕುಶ) ಎಂಬ ನಾಟಕವನ್ನು ಅಭಿನಯಿಸುವರು

ಕಲ್ಲಿನ ಪಕ್ಷಿಯಿಂದ ಮಳೆಯ ನಿರ್ಧಾರ.

ಕಲ್ಲಿನ ಗರುಡಪಕ್ಷಿಯೊಂದು ಮಳೆ ಬರುವ ವಿಷಯವನ್ನು ತಿಳಿಸುತ್ತದೆ ಹಿರಿಯೂರು ತಾಲ್ಲೂಕು ಅಂಬಲಗೆರೆ ಗ್ರಾಮದಲ್ಲಿ ಶ್ರೀ ರಂಗನಾಥಸ್ವಾಮಿ ದೇವಸ್ಥಾನವಿದೆ ಈ ದೇವಸ್ಥಾನವು ಅಮೃತಶಿಲೆಯಿಂದ ಕಟ್ಟಲ್ಪಟ್ಟಿದೆ. ಈ ದೇವಾಲಯದ ಮುಂಭಾಗದಲ್ಲಿ ಒಂದೆ ಗರುಡಗಂಭವಿದೆ ಆ ಕಂಭದಮೇಲೆ ಒಂದೆ ಕಲ್ಲಿನಿಂದ ಮಾಡಿದ ಗರುಡಪಕ್ಷಿ ಇದೆ ಸಂಜೆಯತ್ತ ಅದನ್ನು ಪೂಜೆಮಾಡಲು ಸಾಧ್ಯವಿಲ್ಲ ಆ ಸ್ವಾಮಿಯು ಮಳೆಯ ಗುರುತನ್ನು ಹೇಳುತ್ತದೆ ಆ ಪಕ್ಷಿಯು ಆಕಾಶವನ್ನು ನೋಡಿ ನೆಟ್ಟಗೆ ಕುಳಿತುಕೊಂಡರೆ ತಕ್ಷಣ ಮಳೆ ಬರುತ್ತದೆ ಆಕಾಶವನ್ನು ನೋಡುತ್ತಿದ್ದರೆ ಮಳೆ ಬರುವ ಗುರುತನ್ನು ಸೂಚಿಸುತ್ತದೆ. ಭೂಮಿಯನ್ನು ನೋಡಿದರೆ ಕ್ಷಾಮಬರುತ್ತದೆ ಗಟ್ಟಿಗೆ ಇಂತಾಗ ಆ ಸ್ವಾಮಿಗೆ ಹಣ್ಣು ಹಂಪಲುಗಳನ್ನು ತೆಗೆದುಕೊಂಡು ಹೋಗಿ ಪೂಜೆಮಾಡುವ ಪದ್ಧತಿಯನ್ನಿಟ್ಟಿದ್ದಾರೆ ಆ ಪ್ರಾಂತ್ಯದಲ್ಲಿ ಮಳೆ ಬಾರದಿದ್ದರೆ ಅಂಬಲಗೆರೆ ಸ್ವಾಮಿ ಹೇಗೆ ಕೂತಿದ್ದಾನೆ ಎಂದು ಜನರು ಕೇಳುವ ವಾಡಿಕೆ ಇದೆ ಇದೊಂದು ಅದ್ಭುತ ವಿಷಯವೇ ಸರಿ ನಮ್ಮ ಹಿರಿಯರ ಕೌಶಲ್ಯವು ಇದರಿಂದ ವೇದ್ಯವಾಗುತ್ತದೆ

ಶ್ರೀಮನ್ಮಹಾರಾಜರ ಪ್ರಯಾಣ.

ನಮ್ಮ ಪ್ರಭುಗಳು ಕಳೆದ ಗುರುವಾರ ಬಾರ್ಸಗ ಪ್ರಯಾಣಮಾಡಿದರು ಅವರು ನವರಾತ್ರಿ ಮಹೋತ್ಸವದ ವೇಳೆಗೆ ಹಿಂತಿರುಗಿ ಬರುವರೆಂದು ಗೊತ್ತಾಗಿದೆ

ರೂಸ್ವೆಲ್ಟರಿಗೆ ಪ್ರಾಣಾಪಾಯ.

ಜೋಸೆಫ್ ಕೂಪ್ನರ್ ಎಂಬಾತನು ಅಮೇರಿಕಾ ಸಂಯುಕ್ತ ಸಂಸ್ಥಾನದ ಅಧ್ಯಕ್ಷರಾದ ರೂಸ್ವೆಲ್ಟರನ್ನು ಕೊಂದು ತಾನೂ ಆತ್ಮಹತ್ಯ ಮಾಡಿಕೊಳ್ಳಬೇಕೆಂದು ಮನೆಯಲ್ಲಿಯೇ ಮದ್ದಿನ ಕೋವಿಯನ್ನಿಟ್ಟುಕೊಂಡಿದ್ದನು ಇವನನ್ನು ಪೋಲೀಸರು ಪತ್ತೆಮಾಡಿ ದಸ್ತಗಿರಿಮಾಡಿರುತ್ತಾರೆ

ತನ್ನನ್ನು ತಾನೇ ಸುಟ್ಟುಕೊಳ್ಳಲು ಪ್ರಯತ್ನ.

ಒಬ್ಬ ಪಂಜಾಬಿ ಮುಸಲ್ಮಾನನು ಹಾಜ್ ಯಾತ್ರೆಯಿಂದ ಹಿಂತಿರುಗಿದನು ಅವನು ಒಂದು ದಿನ ಚಿತೆಯನ್ನು ತಯಾರುಮಾಡಿಕೊಂಡು ತನ್ನನ್ನು ತಾನೇ ಸುಟ್ಟುಕೊಳ್ಳಲು ಪ್ರಯತ್ನಮಾಡಿದನು. ಆದರೆ ಅಷ್ಟರಲ್ಲೇ ಅವನನ್ನು ಕೆಲವರು ಬಿಡಿಸಿ ಆಸ್ಪತ್ರೆಗೆ ಸಾಗಿಸಿ ಈಗ ಗುಣವಾಗುತ್ತಿದೆ 'ನಿನ್ನ ಜೀವನ ಯಾತ್ರೆಯು ಮುಗಿಯಿತು ನಿನ್ನ ದೇಹವನ್ನು ಸುಟ್ಟುಕೋ" ಎಂದು ಅವನಿಗೆ ಒಂದು ರಾತ್ರಿ ಕನಸಾಗಿತ್ತು

ಮೈಸೂರು ಗಾನಕಲೆಯ ಮೂಲಪುರುಷರು.

ಶ್ರೀ ಸದಾಶಿವರಾಯರವರು

(ಶ್ರೀ॥ ಸುಬ್ರಹ್ಮಣ್ಯಯ್ಯನವರಿಂದ)

ನಿಮಗೆ ಹೆಮ್ಮೆಯೆನಿಸುವುದಿಲ್ಲವೆ? ನಾನು ಮೈಸೂರಿನವನು ಎಂದು ಹೇಳಿಕೊಳ್ಳಲು ಮೈಸೂರು ಭಾರತ ಸಂಸ್ಕೃತಿಯಲ್ಲಿ, ಕರ್ಣಾಟಕದ ಇರುವಿಕೆಯಲ್ಲಿ, ತನ್ನದೇ ಆದ ಅಪೂರ್ವ ರೀತಿಯಲ್ಲಿ ಮೆರೆಯುತ್ತಿದೆ. ಜನಾಂಗದ ನಾನಾ ಕಲೆಗಳಲ್ಲಿ ಹಿಂದಿನವರು ನಮಗಾಗಿ ಸಂಪಾದಿಸಿರುವ ಆ ಮೂಲ್ಯವಾದ ಸಂಪತ್ತುಗಳಾವುವೆಂದು ನಾವು ತಿಳಿದುಕೊಳ್ಳಬೇಕು, ಅವನ್ನು ಅಭಿವೃದ್ಧಿ ಪಡಿಸಿ ಕೊಳ್ಳಬೇಕು. ಶ್ರೀ ಸದಾಶಿವರಾಯರವರು ಗಾನವಿದ್ಯಾ ಪಾರಂಗತರು. ಸಂಗೀತಶಾಸ್ತ್ರನಿಪುಣರು.

ಜನಾಂಗದ ಸಂಸ್ಕೃತಿಯಲ್ಲಿ ಲಲಿತಕಲೆಗಳಿಗೆ ಅಗ್ರಸ್ಥಾನವು; ಗಾನವಿದ್ಯೆಗಂತೂ ಅತಿಪೂಜ್ಯಸ್ಥಾನವು. ಸುಲ್ತಾನರ ಕಾಲದಲ್ಲಿ ನಾಮಾವಶೇಷವಾಗಿದ್ದ, ಶ್ರೀ ಮುಮ್ಮಡಿ ಕೃಷ್ಣರಾಜೇಂದ್ರ ಮಹಾಪ್ರಭುಗಳವರ ಕಾಲದಲ್ಲಿ ಕರ್ಣಾಟಕ ರತ್ನ ಸಿಂಹಾಸನದ ಸಂಗಡಲೇ ಸಂಸ್ಕೃತಿಯೇ ತಲೆ ಎತ್ತಿತಷ್ಟೆ ಎಂದಿನಂತೆ ಇಂದಿನವರೆಗೂ, ಎಲ್ಲವುಗಳಲ್ಲಿಯೂ ಮೈಸೂರು ತನ್ನದೇ ಒಂದು ವೈಶಿಷ್ಟ್ಯವನ್ನು ಗಳಿಸಿಕೊಂಡು ಬಂದಿದೆ. ಸಂಗೀತದಲ್ಲಿ ಮೈಸೂರಿನ ವೈಶಿಷ್ಟ್ಯವನ್ನು ಗಳಿಸಿಕೊಂಡು ಬಂದವರಲ್ಲಿ ಶ್ರೀ ಸದಾಶಿವರಾಯರೇ ಅದ್ವಿತೀಯರು. ಈಗಿನ ವೈಣಿಕಪ್ರವೀಣರೂ, ಅವರ ಶಿಷ್ಯಕೋಟಿಯೂ ಈ ರಾಯರ ಶಿಷ್ಯಪರಂಪರೆಗೆ ಸೇರಿದವರೆನ್ನಬಹುದು. ಮೈಸೂರಿನ ಅಸಮಾನ ಗಾನಪಟುವಾದ ಶ್ರೀ ಚಿಕ್ಕರಾಮರಾಯರವರಲ್ಲಿ ಶ್ರೀ ರಾಯರ ಗಾನವೈಖರಿಯನ್ನು ಈಗಲೂ ಕಾಣಬಹುದು. ಮೈಸೂರಿನ ಸಂಸ್ಕೃತಿಯನ್ನು ಮೆಚ್ಚುವುದೆಂದರೆ ರಾಜಕುಲದ ಔದಾರ್ಯವನ್ನು ಮೆಚ್ಚಿದಂತೆಯೇ. ಈ ಉದಾರ ಪರಂಪರೆಯು ಕರ್ಣಾಟಕ ಸಂಸ್ಕೃತಿಯ ಶೀಲಸಂಪ್ರದಾಯಗಳುಳ್ಳವರಾದರೂ ಇತರ ಸಂಸ್ಕೃತಿಯ ಪುರಸ್ಕರ್ತರೂ ಆಗಿದ್ದಾರೆ. ಮೈಸೂರು ಆಸ್ಥಾನದಲ್ಲಿ ಇದೊಂದು ವಿಶೇಷಗುಣ.

ಆಸ್ಥಾನದಲ್ಲಿ ಒಬ್ಬ ಪ್ರಸಿದ್ಧ ಸಂಗೀತಗಾರನ ವಿನಿಕೆಯಾಯಿತು. ಆಸ್ಥಾನ ವಿದ್ವಾಂಸರುಗಳೆಲ್ಲರೂ ನೆರೆದಿದ್ದರು. ಒಬ್ಬೊಬ್ಬರನ್ನಾಗಿ ಅಭಿಪ್ರಾಯ ಕೇಳಿದಾಗ ಮಹಾಸ್ವಾಮಿಯವರ ಆಸ್ಥಾನದಲ್ಲಿರುವ ಒಬ್ಬೊಬ್ಬರೂ ಇವರಿಗಿಂತಲೂ ಚೆನ್ನಾಗಿ ಗಾನಮಾಡಬಲ್ಲರು. ಇವರಲ್ಲೇನು ಹಿತವಿತ್ತು? ಎಂದು ಎಲ್ಲರೂ ಒಕ್ಕಟ್ಟಾಗಿ ಹೇಳಿಬಿಟ್ಟರು. ಶ್ರೀ ರಾಯರು ಮಾತ್ರ, ಎಲ್ಲರೂ ಸ್ವಭಾವದ ಅನ್ಯಪ್ರಭಾವದಿಂದ ಪಾಂಡಿತ್ಯದಲ್ಲಿ ಮಿಗಿಲಾದವರು. ತಮ್ಮ ಪಾಂಡಿತ್ಯದ ಹೆಮ್ಮೆಯಲ್ಲಿ ಸಂಗೀತರಸಾಸ್ವಾದನಾನಂದವನ್ನು ಯಾರೂ ಅನುಭವಿಸಲಿಲ್ಲ. ಗಾನದೇವಿಯ ಸಾನ್ನಿಧ್ಯವನ್ನು ತಿಳಿಯುವ ಯೋಗ್ಯತೆಯು ಹೋಗಿತ್ತು ಎಂದು ಹೇಳಿದರಂತೆ. ಇದೆಂತಹ ನಿಸರ್ಗ. ಸಂಗೀತಗಾರರು ಮಾತ್ರವೇಕೆ ಪ್ರತಿಯೊಬ್ಬ ಪಂಡಿತನೂ ಇದನ್ನು ನೆನಪಿನಲ್ಲಿಡಬೇಕಾದುದು.

ಇವರ ಕಾಲದಲ್ಲಿ ಮೆರೆದಿದ್ದ ಇಬ್ಬರು ಗಟ್ಟಿಗರಾದ ಗಾನಪಟುಗಳಿಗೆ ಯಾರು ಹೆಚ್ಚೆಂಬ ಬಗ್ಗೆ ವಿವಾದವು ಹುಟ್ಟಿತು. ತೀರ್ಮಾನಿಸುವರಾರು? ಎಂಬುದು ಗೊತ್ತಾಗಬೇಕಾಯಿತು. ಈಗಿನ ಹಾಗೆ ಕೇವಲ ಪರದೇಶದವರ ಮೆಚ್ಚುಗೆಗಾಗಿ ಬಾಯ್ಬಿಡುವ ಕಾದುಕುಳಿತಿರಬೇಕಾಗಿರಲಿಲ್ಲ. ಮೈಸೂರಿನವರ ಮೆಚ್ಚುಗೆಗಾಗಿ ಇತರರು ಹಾತೊರೆಯುತ್ತಿದ್ದ ಕಾಲವದು. ಸಂಗೀತಕ್ಕಾಗಲೀ ಸಾಹಿತ್ಯಕ್ಕಾಗಲೀ ಮೈಸೂರಿನ ಪಂಡಿತರೂ, ಆಸ್ಥಾನವೂ, ಮೆಚ್ಚಿದಲ್ಲದೆ ಮನ್ನಣೆ ಇರಲಿಲ್ಲ. ವಿಷಯವು ಶ್ರೀ ರಾಯರ ಒಪ್ಪಿಗೆಗಾಗಿ ಕಾದಿಡಲ್ಪಟ್ಟಿತು. ಒಬ್ಬರು ಸ್ವರಸರಸ್ವತಿ, ಮತ್ತೊಬ್ಬರು ತಾಳಬ್ರಹ್ಮ ಎಂದು ರಾಯರು ಅನ್ವರ್ಥವಾಗಿ ನಿರ್ಧರಿಸಿದರಂತೆ. ಇಂದಿನ ಮೈಸೂರಿನ ಸ್ಥಿತಿಯು ಶೋಚನೀಯವಾಗಿದೆ. ಪರದೇಶದವರಿಗೆ ಈ ಕಾರಣವೂ ಆಸ್ಥಾನವೂ ತೆರೆದ ಬಾಗಿಲಾದ ಹಾಗಿಲ್ಲ, ನಾವು ಪರದೇಶದವರಿಂದ ಕಲಿಯಬೇಕಾದುದನ್ನು ಕಲಿಯುತಲಿಲ್ಲ. ಅವರ ಗುಣಗಾನಕ್ಕಾಗಿ ತನ್ನ ಬಿಟ್ಟುಬಿಡುತ್ತಲೇ ಆಯುಕ್ತಿಷವನ್ನು ಕಳೆಯುತಲಿರುವೆವು. ಅಂದು ಶ್ರೀ ರಾಯರು ಯಾವ ಪದವಿಯನ್ನು ತಮ್ಮ ಪಾಂಡಿತ್ಯದಿಂದ ಪಡೆದಿದ್ದರು. ಆ ಪದವಿಯು ನಮ್ಮ ದೇಶಕ್ಕೆ ಇಂದು ಇರುವುದೇ? ಇಲ್ಲದಿದ್ದರೆ ಅದಕ್ಕೆ ಕಾರಣವಾವು? ನಾವೆಲ್ಲರೂ ಯೋಚಿಸಬೇಕಾದುದಿಲ್ಲವೆ?

ಮೈಸೂರು ಆಸ್ಥಾನದಲ್ಲಿ ಈಗಿನ ಹಾಗೆಯೇ ಆಗಲೂ ಸಂಗೀತ,ಸಾಹಿತ್ಯ, ವೇದ ಶಾಸ್ತ್ರಗಳಲ್ಲಿ ಪ್ರಖ್ಯಾತರಾದ ಪಂಡಿತರುಗಳಿದ್ದರು. ಸಾಹಿತ್ಯ ವಿದ್ವಾಂಸರಿಗೂ ಶ್ರೀ ರಾಯರಿಗೂ ಒಂದೆರಡುಬಾರಿ ಜರುಗಿದ ಸಂಭಾಷಣೆಯನ್ನು ವೃದ್ಧರೊಬ್ಬರು ನಮಗೆ ತಿಳಿಸಿರುವರು. ಸಂಭಾಷಣೆಯು ನಿಜ, ಸುಳ್ಳು ಎಂಬುದನ್ನು ವಿಮರ್ಶಿಸುವುದಕ್ಕಿಂತ ಅದರಲ್ಲಿ ಅಡಗಿರುವ ತತ್ವವನ್ನು ವಿವೇಚಿಸುವುದು ನಮ್ಮ ಕರ್ತವ್ಯವೆಂದು ತಿಳಿದಿರುವೆವು. ಶ್ರೀ ರಾಯರು ಒಬ್ಬ ಸಾಹಿತ್ಯ ವಿದ್ವನ್ಮಣಿಗಳ ಮನೆಯಲ್ಲಿ ಭೈರವಿ ಒಂದೇ ರಾಗವನ್ನು ಬಹುಹೊತ್ತು ಆಲಾಪನೆ ಮಾಡಿದರಂತೆ. ಪ್ರೌಢಿಮೆಗೆ ಮೆಚ್ಚಿ ಪಂಡಿತರ ರಾಗವು ಹೆಸರಿಗೆ ತಕ್ಕಂತಿಲ್ಲವೆಂದರು. ಮತ್ತೊಬ್ಬರು ಅವಾರ್ಥವೂ, ಅನರ್ಥವೂ ಸಂಗೀತಕ್ಕೆ ಸಾಮಾನ್ಯ ಧರ್ಮಗಳು. ಎಂದು ವ್ಯಂಗ್ಯವಾಗಿ ನುಡಿದು ಕ್ಷೀರಸಾಗರ ಶಯನನು, ಕ್ಷೀರ-ಸಾ-ಗರಾ-ಶಯನ-ನಾ ಸಾಗುತ್ತಾನೆ. ತನನಾರಿತನನು ತ-ನನಾ- ರಿತ-ನನು ಎಂದಾಗುತ್ತೆ. ಪದವೂ, ಅರ್ಥವೂ ಸಾಹಿತ್ಯಕ್ಕೆ. ಪ್ರಧಾನ ಸಂಗೀತಕ್ಕಲ್ಲ. ಎಂದು ಮತ್ತೊಬ್ಬರು ವಿವೇಚಿಸಿಬಿಟ್ಟರು. ರಾಯರು ಗಂಭೀರವಾಗಿ ಗಾನವು ಹೃದಯದ ಭಾಷೆ, ಧ್ವನಿಪ್ರಾಧಾನ್ಯ ಅಕ್ಷರಗಳು ಬೇಕಿಲ್ಲ ಧ್ವನಿಯಿಂದಲೇ ನವರಸಗಳನ್ನು ಸೃಷ್ಟಿಸಿ ಆನಂದಸಾಗರದಲ್ಲಿ ಮುಳುಗಿಸಬಲ್ಲುದು, ಎಂದು ಹೇಳಿದರಂತೆ. ತಾವು ಕೋಪಿಸಬಾರದು ರಾಯರು-- ಗುಣವನ್ನನುಸರಿಸಿ ಹೆಸರಿಡಬೇಕು. ವಹಿಸುವ ಗುಣವಿರುವುದರಿಂದ ವಾಯುವೆಂಬ ಹೆಸರು. ನಿಮ್ಮ ಸಂಗೀತದಲ್ಲಿ ಹಾಗಿಲ್ಲ

(ಹತ್ತನೇ ಪುಟವನ್ನು ನೋಡಿ)

ಇಂಡಿಯಾಕ್ಕೆ ಹಾಕಿಯಲ್ಲಿ ಅಗ್ರಸ್ಥಾನ.

ಬರ್ಲಿನ್ನಿನಲ್ಲಿ ನಡೆದ ಅಂತರ ರಾಷ್ಟ್ರೀಯ ಒಲಂಪಿಕ್ ಪಂದ್ಯಗಳಾದನಂತರ ಅಧಿಕಾರಿಗಳು ಪರಿಶೀಲಿಸಿ ಪ್ರಪಂಚದಲ್ಲಿ ಹಾಕಿ ಕ್ರೀಡೆಯಲ್ಲಿ ಇಂಡಿಯಾಕ್ಕೆ ಅಗ್ರಸ್ಥಾನ ಕೊಟ್ಟಿರುತ್ತಾರೆ. ಜರ್ಮನಿಗೆ ದ್ವಿತೀಯ ಸ್ಥಾನವನ್ನು ಕೊಡಲಾಗಿದೆ.

ಅದೃಶ್ಯವಾಗಿ ಕಲ್ಲುಗಳು ಬೀಳುತ್ತಿವೆ.

ಗುರುವಾಯೂರಿನ ಸತ್ಯಾಂಗ ಗಲ್ಲಿಯಲ್ಲಿ ಒಬ್ಬ ಬ್ರಾಹ್ಮಣ ಪೂಜಾರಿಯು ವಾಸಿಸುತ್ತಿದ್ದನು. ಅವನ ಮನೆಯ ಅಂಗಳದಲ್ಲಿ ರಾತ್ರಿಯವೇಳೆ ಇಟ್ಟಿಗೆ, ಕಲ್ಲುಗಳು ಬೀಳುವುದಕ್ಕೆ ಪ್ರಾರಂಭವಾಯಿತು. ಪೂಜಾರಿಯು ಹೆದರಿ ಮನೆಯ ಒಳಗಡೆ ಅವಿತುಕೊಂಡನು. ಇವುಗಳನ್ನು ಅಕ್ಕಪಕ್ಕದವರೂ ಪೋಲೀಸಿನವರೂ ಎಲ್ಲರೂ ನೋಡುತ್ತಿದ್ದರು. ಆದರೆ ಆ ಕಲ್ಲು ಎಲ್ಲಿಂದ ಬೀಳುತ್ತಿತ್ತೆಂಬುದು ಮಾತ್ರ ಒಬ್ಬರಿಗೂ ಗೊತ್ತಾಗಲಿಲ್ಲ. ಕಲ್ಲುಗಳು ಇವನ ಮನೆ ಅಂಗಳಕ್ಕೆ ಮಾತ್ರ ಅಂತರಿಕ್ಷದಿಂದ ಬೀಳುತ್ತಿದ್ದವು ಇದು ಮಾಟದ ಮಹತ್ವವೊ, ದೇವ್ವದ ಲೀಲೆಯೋ ಎಂದು ಅಲ್ಲಿನ ಜನರು ಭ್ರಾಂತರಾಗಿದ್ದಾರೆ.

ಫ್ರೆಂಚ್ ಮತ್ತು ಜರ್ಮನರ ಸ್ನೇಹ.

ಫ್ರಾನ್ಸಿನ ಬ್ಯಾಂಕ್ ಗೌರ್ನರಾದ ಮಿ॥ ಎಂ. ಶಾಚ್ಚೈರಿಯವರು ಬರ್ಲಿನ್ನಿಗೆ ಪ್ರಯಾಣಮಾಡಿ, ಪ್ರಮುಖರನ್ನು ಭೇಟಿ ಮಾಡಿದರು. ಈ ಭೇಟಿಯಿಂದ ಫ್ರೆಂಚರು ಅಂತರ ರಾಷ್ಟ್ರೀಯ ಶಾಂತಿಗಾಗಿ ಮಾಡುತ್ತಿರುವ ಪ್ರಯತ್ನಗಳಲ್ಲಿ ಜರ್ಮನಿಯು ಸಹಾನುಭೂತಿಯುತವಾಗಿರುವದೆಂಬುದನ್ನು ಪ್ರಕಾಶಿಸುವುದಾಗಿದೆ. ಈ ಪರಿಸ್ಥಿತಿಯಲ್ಲಿ ಶಾಂತಿಯನ್ನು ಪ್ರಕಾರಗೊಳಿಸಲು ನಡೆಯುತ್ತಿರುವ ಪ್ರಯತ್ನಗಳಲ್ಲಿ ಜರ್ಮನಿಯು ಪಾತ್ರ ವಹಿಸುವುದು.

ವಿನೋದಲಹರಿ.

ಗಂಡ :—ಏನೇ! ಈ ಅಲೂಗಡ್ಡೆಗೆ ಅರ್ಧ ಬೆಂದೂ ಬೇಯದೆಯೂ ಇರುವ ದಲ್ಲ!

ಹೆಂಡತಿ :—ಓ ಹೋ! ಇದಕ್ಕೆ ಇಷ್ಟು ಅವಾಂತರವೇ? ಬೆಂದ ಭಾಗವನ್ನು ತಿಂದು ಬೇಯದ ಭಾಗವನ್ನು ಬಿಟ್ಟರಾಯಿತು.

† † †

ಮಗ —ಅಪ್ಪಾ! ನನಗೊಂದು "ಪೀಪೀ" ಯನ್ನು ಕೊಂಡುಕೊಡು!

ತಂದೆ —ಇಲ್ಲ! ಆಗಲಾರದು! ನೀನು ಅದನ್ನು ಯಾವಾಗಲೂ ಊದುತ್ತಿರುವೆ!

ಮಗ :—ಇಲ್ಲಪ್ಪಾ ಇಲ್ಲ! ನಾನು ಎಲ್ಲ ವೇಳೆಯಲ್ಲಿಯೂ ಊದುವುದಿಲ್ಲ! ನೀನು ಮಲಗಿರುವಾಗ ಮಾತ್ರ ಊದುತ್ತಿರುತ್ತೇನೆ.

† † †

ಪ್ರಯಾಣಿಕ :—ಇಲ್ಲಿಂದ ಬೆಂಗಳೂರಿಗೆ ಎಷ್ಟು ಛಾರ್ಜು.

ಕಂಡಕ್ಟರ್ .—ಇಬ್ಬರಿಂದ ಐದು ರೂಪಾಯಿಗಳು.

ಪ್ರಯಾಣಿಕ .—ಅದು ಬಲು ಹೆಚ್ಚು! ಅನ್ಯಾಯ ಮಾಡಬೇಡ!

ಕಂಡಕ್ಟರ್ —ಹಾಗಾದರೆ ತಲೆಗೆ ಎರಡೂವರೆ ರೂಪಾಯಿಗಳಂತೆ ಕೊಟ್ಟುಬಿಡಿರಿ!

ಪ್ರಯಾಣಿಕ —ಹಾಗೆ ಹೇಳಪ್ಪ! ನ್ಯಾಯವಾದ ಛಾರ್ಜು ಹೇಳಿದರೆ ನಾನು ಒಪ್ಪುತ್ತೇನೆ

† † †

ರಂಗ —ಏನು ತಿಮ್ಮ, ಬಹಳ ಅನುಕೂಲವಾಗಿರುವೆಯಲ್ಲ! ಏತರಿಂದ ಜೀವನ ನಡೆಯುವುದು?

ತಿಮ್ಮ .—ಪಾರಿವಾಳದ ಹಕ್ಕಿಗಳನ್ನು ಸಾಕುವುದು—ಮಾರುವುದು. ಇದೇ ಈ ವ್ಯಾಪಾರವು ಚೆನ್ನಾಗಿಯೂ ನಿಯಾಸವಾಗಿಯೂ ನಡೆಯುವುದರಿಂದ ನಾನು ಸುಖವಾಗಿದ್ದೇನೆ!

ರಂಗ .—ಅದು ಹೇಗಪ್ಪ! ಅಷ್ಟು ಅನುಕೂಲ

ತಿಮ್ಮ :—ನಾನು ಬೆಳಗ್ಗೆ ಪಾರಿವಾಳಗಳನ್ನು ಮಾರಿಕೊಂಡು ಬರುತ್ತೇನೆ. ಸಾಯಂಕಾಲವಾಯಿತೆಂದರೆ ಅವೆಲ್ಲವೂ ಪುನಃ ನನ್ನ ಮನೆಗೆ ಹಿಂತಿರುಗಿ ಬಂದುಬಿಡುತ್ತವೆ. ಮತ್ತೆ ಮಾರನೆಯ ದಿನ ಅವುಗಳನ್ನೇ ನಾನು ಮಾರುತ್ತೇನೆ.

† † †

ಗುರು :—ಬೋ ಕಿಟ್ಟು ಕನ್ನಡಿಯನ್ನು ಯಾವ ಯಾವ ವಸ್ತುವಿನಿಂದ ಮಾಡುತ್ತಾರೆಯೋ?

ಶಿಷ್ಯ —ನೀರಿನಿಂದ ಸಾರ್.

ಗುರು :—ಹೇಗೊ, ಕತ್ತೆ.

ಶಿಷ್ಯ :—ನೀರಿನಲ್ಲಿಯೂ ನಮ್ಮ ಪ್ರತಿಬಿಂಬ ಕಾಣುತ್ತೆ. ಕನ್ನಡಿಯಲ್ಲಿಯೂ ನಮ್ಮ ಪ್ರತಿಬಿಂಬ ಕಾಣುತ್ತೆ. ಆದ್ದರಿಂದ ದ್ರವರೂಪದಲ್ಲಿದ್ದ ನೀರು ಘನವಾಗಿ ಕನ್ನಡಿಯಾಗುತ್ತದೆ ಸಾರ್.

(೪ ನೇ ಪುಟದಿಂದ ಮುಂದುವರಿದುದು)

"ಏನೋ ಅಪ್ಪ, ಈಬೀದಿನ ಹುಡು ಗು, ನಿಮ್ಮಂಥವರು ಕೆಲವರು ನಮ್ಮನ್ನು ಕಂಡರೆ ಕನಿಕರಿಸುತ್ತೀರಿ. ಹಿಂದಿನವರು ನಮ್ಮನ್ನು ಎಷ್ಟು ತುಚ್ಛವಾಗಿ ಕಾಣುತ್ತಿ ದ್ದರು? ಇಂದರೆ ಹೆಂಗಸರು ಕೊಯ್ದ ಹೂವು ದೇ ವರ ಪೂಜೆಮಾಡುವುದಕ್ಕಿಲ್ಲವಂತೆ. ಗುರು ಗಳು! ಇವರೆಲ್ಲಾ ಗುರುಗಳೇ(ನಪ್ಪಾ! ... ಶತ್ರುಗಳು! ರಾಮಕೃಷ್ಣ ಪರಮಹಂಸರಿಗಿಂತ ಇನ್ನು ಜ್ಞಾನಿಗಳೇ? ಸ್ತ್ರೀಯರೆಲ್ಲರೂ ಜಗನ್ಮಾತೆಯ ಪ್ರತಿಬಿಂ ಬವೆಂದು ಹೇಳಿದ್ದಾರೆ ಅವರು. ಈಗಿನ ಗುರುಗಳಿಗೆಲ್ಲಾ ಆತ್ಮಜ್ಞಾನವಿಲ್ಲ ... ನಾಲ್ಕು ಜನರಮೇಲೆ ಮೆರ ... ಹೊರಡುವುದು, ಮೋಟಾರುಗಳಲ್ಲಿ ಸಂಚಾರ, ಪಾದಪೂಜೆಯಲ್ಲಿ ಚೌಕಾಶಿ ... ಇಷ್ಟಕ್ಕೆ ಇಳಿದುಹೋಗಿದೆ ಈಗ ಗುರುಮಠಗಳ ಉದ್ದೇಶ ಎಲ್ಲಾ ಮರೆತುಹೋಗಿದೆ. ಆತ್ಮನಾಶವಾಗಿ ದೇಹಮಾತ್ರ ಉಳಿದಿದೆ! ಸತ್ವ ಹೋಗಿ ... ಮಾತ್ರ ಉಳಿದಿದೆ!

ಹಾಗಿರಲಿ ಜಾನಕಿಗೆ ಪುನಃ ಮದು ವೆ(ಕೆ ಮಾಡಬಾರದಪ್ಪಾ?"

"...! ಹಾಗೆಂದರೆ ಆಗುತ್ತದೆ ... ? ಶಾಸ್ತ್ರ ಒಪ್ಪಬೇಕಲ್ಲಾ!"

"... ಒಪ್ಪತ್ತದಪ್ಪಾ, ಪಂಡಿತರ ... ಈಶ್ವರಚಂದ್ರ ವಿದ್ಯಾಸಾಗರರು ... ಗಳನ್ನೆಲ್ಲಾ ಸಂಶೋಧಿಸಿ, ಶಾಸ್ತ್ರವೂ ... ಪ್ರತಿಕೂಲಿಸುವುದನ್ನು ತೋರಿ ... ನಮ್ಮ ಇವರಿಗೂ ಶಾಸ್ತ್ರಗಳ ... ಗಳೇ!

ನಷ್ಟೇ ಮೃತೇ ಪ್ರವ್ರಜಿತೇ ಕ್ಲೀಬೇಚ
ಪತಿತೇ ಪತೌ।
ಪಂಚಸ್ವಾಪತ್ಸು ನಾರೀಣಾಂ ಪತಿ
ರನ್ಯೋ ವಿಧೀಯತೇ॥
—ಪರಾಶರ
... ಮೃತೇ(ಬಾಲಾ ಕೇವಲಂ
ಮಂತ್ರಸಂಸ್ಕೃತಾ।
... ಪುನಸ್ಸಂ
ಸ್ಕಾರಮರ್ಹತಿ॥
—ವಸಿಷ್ಠ

ಹೀಗಿದ್ದರೂ ಆಗಬಾರದೇನಪ್ಪಾ?

... ತಾಯಿಗೆ ಅಪ್ಪುಹೊತ್ತಿಗಾಗಲೇ ... ನಾನೂ ಯೋಚಿಸುತ್ತಾ ... ಹಿಮಕರನ ಪ್ರಶಾಂತ ... ಕಿಟಕಿಯಲ್ಲಿ ಹಾಯ್ದು ... ನಾರಿಯೊಂದು ನನ್ನನ್ನೇ ... ಹಾಸ್ಯಮಾಡುತ್ತಿರು ... ನನ್ನನ್ನು ನೋಡಿ ... ಹೇಳುತ್ತಿರುವಂತೆ ಭಾಸ ...

... ಶಿಖರಕ್ಕೇರಿದ ಚಕ್ರಾಧಿಪತ್ಯ ... ನ್ನು ನೋಡಿದ್ದೇವೆ. ಸ್ವಾರ್ಥತ ... ದಿಂದ ಅವುಗಳೆಲ್ಲಾ ನಿರ್ನಾ ... ಹಿಂದೂ ಮತದಂತಹ ಆದ ... ಬೇರೂರಿದ್ದನ್ನು ನಾವಿಂದಿನವರೆ ... ಇಲ್ಲ ಆದರೆ ಸ್ವಾರ್ಥಿಗಳು ...

ಸರ್ಕಾರಿ ಕಟ್ಟಡಗಳಿಗೂ ಕಂದಾಯವಿದ್ದೇ ಇರಬೇಕು.

ಡೆಹಲಿ ಪೌರಸಭಾ ಕಾರ್ಯದರ್ಶಿ ಗಳ ಸೂಚನೆ.

"ನಗರದಲ್ಲಿ ಅನೇಕಾನೇಕ ಕಟ್ಟಡಗಳ ಮಾಲೀಕರಾಗಿ ಅವುಗಳಿಗಾಗಿ ಗ್ರಾಮಪಿ ರ್ಮಲೀಕರಣ ಶಾಖೆಯವರಿಂದ ಸರ್ವ ಕೆಲಸ ತೆಗೆದುಕೊಳ್ಳುತ್ತಿರುವ ಸರ್ಕಾರದ ವರೇ ಪೌರಸಭೆಯ ಕಂದಾಯವನ್ನು ಕೊಡಕೂಡದೆಂಬ ನಿಯಮವಿರ ವಾಗ ಇ ತರ ಕಂದಾಯದಾರರುಗಳನ್ನು ಒತ್ತಾಯ ಪಡಿಸುವುದು ಶುದ್ಧ ಅನ್ಯಾಯ'—

ಹೀಗೆಂದು ಡಹಲಿಯ ಪೌರಸಭಾ ಕಾ ರ್ಯದರ್ಶಿಗಳು ವರದಿ ಮಾಡಿದ್ದಾರೆ.

ಮೈಸೂರಿನಲ್ಲಿರುವಂತೆಯೇ ಭರತಖಂ ಡದ ಕೇಂದ್ರ ನಗರವಾದ ಡೆಹಲಿಯಲ್ಲಿ ಯೂ ಸರ್ಕಾರದವರಿಗೆ ನೂರಾರು ಕಟ್ಟಡ ಗಳು ಸೇರಿವೆ. ಇವುಗಳ ನಿರ್ಮಲೀಕರಣ ಕ್ಕಾಗಿಯೇ ಪೌರಸಭೆಯವರ 25,000 ರೂಪಾಯಿಗಳಷ್ಟು ಹಣವನ್ನು ವೆಚ್ಚ ಮಾಡುತ್ತಿರುವರು. ಈ ಹಣವನ್ನು ಸ ರ್ಕಾರದವರು ಗ್ರಾಂಟಿನಮೂಲಕವಾಗಿ ಕೊಡಬೇಕೆಂದು ಪೌರಸಭೆಯವರು ಮನ ವಿ ಮಾಡಿಕೊಂಡಿದ್ದರು. ಅದರೆ ಸರ್ಕಾರದ ವರು ಇದಕ್ಕೊಪ್ಪಲಿಲ್ಲ.

ಆದುದರಿಂದ ಪೌರಸಭೆಯವರು ಸರ್ಕಾ ರಿ ಕಟ್ಟಡಗಳಿಗೂ ಇತರ ಕಟ್ಟಡಗಳಿಗಿರು ವಂತೆಯೇ ಕಂದಾಯ ವಿಧಿಸಬೇಕೆಂದು ಮುನಿಸಿಪಲ್ ಕಾನೂನನ್ನು ಬದಲಾಯಿ ಸಲು ಯೋಚಿಸುತ್ತಿದ್ದಾರೆ.

ನೀಡಿಸೇ ಹೆಚ್ಚುತ್ತಿದ್ದಾರೆ. ಸ್ವಾರ್ಥ ಪಿಶಾ ಚಕ್ಕೆ ಬಲಿಬಿದ್ದ ಮತವೊಂದೂ ಉಳಿದಿಲ್ಲ. ನಿಮ್ಮ ಮತಕ್ಕೂ ಆ ರೋಗವು ತಗುಲಿ ಬ ಹುದೂರ ಹರಡಿದೆ. ಆಚಾರಿಕೊಳ್ಳುವ ಇ ನ್ನಾದರೂ ಪ್ರಯತ್ನಮಾಡಿ ನಿಶಾಚ ಹೃ ದಯರಾಗಿ ನಿಸ್ವಾರ್ಥತೆಯ ಜ್ಯೋತಿಯನ್ನು ಮೇಲೇರಿಸಿ ಕುರುಡು ನಂಬಿಕೆಗಳಿಗೆ ಇನ್ನಾ ದರೂ ಹಚಿ ಸಂಸ್ಕರಣದಡಿ ವಿವೇಕಮಾ ರ್ಗದಲ್ಲಿ ನಡೆಯಿರಿ. ಆತ್ಮಜ್ಞಾನಜ್ಯೋತಿ ಯಿಂದ ಪ್ರಪಂಚವನ್ನು ಬೆಳಗಿಸಿರಿ! ಸ್ವ ತಂತ್ರಾಲೋಚನೆಯ ತವರೂರ ನಯಿಂಬ ಕೀರ್ತಿಯನ್ನು ಇನ್ನಾದರೂ ಉಳಿಸಿ ನ ಮ್ಮ ಹಿಂದಿನವರ ಶ್ರಮವನ್ನು ಸಾರ್ಥಕ ಪಡಿಸಿ. ಮಹಾಮಹಿಮರಾದ ಅಗಸ್ತ್ಯ, ಭೀಷ್ಮ, ಶಂಕರಾಚಾರ್ಯರನ್ನು ಒಮ್ಮೆಯಾ ದರೂ ಸ್ಮರಿಸಿ. ಹಿಂದಿನವರೊಡನೆಯೇ ಆ ತ್ಮಜ್ಞಾನವನ್ನೂ, ಆತ್ಮಸಂಶಯವನ್ನೂ ನೀಗದಿರಿ. ಇನ್ನಾದರೂ ವರ್ತಮಾನ ಪತ್ರಿ ಕಗಳಲ್ಲಿ ವಿಶಪೂ ಅಸಂಖ್ಯಾತವಾಗಿ ಬರು ತ್ತಿರುವ "ಕನ್ಯಾಪಹಾರ" ವೆಂಬ ಶಿರೋ ನಾಮೆಯನ್ನು ತೊಡೆಯಲು ದೃಢಸಂಕಲ್ಪ ರಾಗಿ. ಇನ್ನಾದರೂ ಮುಂದ ಬಂದು ಮಿ ಕ್ಕವರಿಗೆ ಮೇಲ್ಪಂಕ್ತಿಯಾಗಿ.

"ಇದು ನಿಜವಾಗಿಯೂ ಸಾಧ್ಯವೇ" ಎನ್ನುತ್ತಾ ಹಾಗೆಯೇ ಕಣ್ಣುಮುಚ್ಚಿದೆ.

ಬ್ರಹ್ಮಚಾರಿ ಹಿಟ್ಲರನಿಗೆ ಬಲ ವಂತದ ಆಲಿಂಗನ.

ಹಿಟ್ಲರನು ಅಜನ್ಮ ಬ್ರಹ್ಮಚಾರಿ. ಸ್ತ್ರೀ ಯರ ಸಹವಾಸ ಇದೇ ವರೆಗೂ ಹೊರ ತು ಇನ್ನಾವುದೂ ಇಲ್ಲವೆಂದು ಅವನ ವೃತ್ತಾಂತ ವಾದ ನಂಬಿಕೆ.

ಕಳೆದ ಒಲಿಂಪಿಕ್ ಪಂದ್ಯದಲ್ಲಿ ಒಂದು ವಿಚಿತ್ರ ಸನ್ನಿವೇಶವು ನಡೆಯಿತು.

ಒಬ್ಬ ಹೆಂಗಸು ಸಾವಿರಾರು ಜನ ಪ್ರೇ ಕ್ಷಕರಮುಂದೆ ಹರ್ ಹಿಟ್ಲರನನ್ನು ಇದ್ದಕ್ಕಿ ದ್ದ ಹಾಗೆಯೇ ತಬ್ಬಿ ಕೊಂಡ್ ಮುತ್ತಿಟ್ಟಳು. ಹಿಟ್ಲರನು ದಿಗ್ಭ್ರಾಂತನಾದನು.

ಆ ಹೆಂಗಸು ನಾರ್ತ ಸೀಟನವಳೆ. ಆ ವಳು ಈಜುವ ಪಂದ್ಯಕ್ಕೆ ಬಂದಿದ್ದವಳಾ ಗಿದ್ದಳು. ಈ ಪವಿನೋದದಿಂದ ಪ್ರೇಕ್ಷಕರೆಲ್ಲರೂ ನಕ್ಕು ನಕ್ಕು ಬಗ್ಗ ಹೊಟ್ಟೆ ಬಿಗಿಯಾಗಿ ಬೇನೆಪಡುವಂತಾಯಿತು.

ಭರತನಾಟ್ಯಕ್ಕೆ ಜಗತ್ಪ್ರಶಸ್ತಿ.

ಒಲಿಂಪಿಕ್ ಪಂದ್ಯಗಳಲ್ಲಿ ಪ್ರಥಮ ಬಹುಮಾನ.

ಬರ್ಲಿನ್‌ನಲ್ಲಿ ನಡೆದ ಒಲಿಂಪಿಕ್ ಪಂದ್ಯ ಗಳಲ್ಲಿ ವಿವಿಧ ಜನಾಂಗಗಳಲ್ಲಿರುವ ನೃತ್ಯ ಕಲೆಯೂ ಒದರ ಪ್ರಾಶಸ್ತ್ಯವೂ ಎಂದ ಗ ...

ಈ ಪಂದ್ಯದಲ್ಲಿ ಬೊಂಬಾಯಿಯ ಸುಪ್ರ ಸಿದ್ಧ ನರ್ತಕಿ ಮಿಸ್ ಮೇನಕಾ ಎಂಬು ವರೂ ಅವಳ ಪರಿವಾರದವರೂ ಭಾಗವಹಿಸಿ ಜಗತ್ಪ್ರಶಸ್ತಿಯನ್ನು ಹೊಂದಿದರು.

ತಮ್ಮ ನೃತ್ಯ ಕಲೆಯಿಂದ ಪ್ರೇಕ್ಷಕರ ಮನಸೂರೆಗೊಂಡ ಇವರು ಮೊದಲ ಬಹುಮಾ ನವನ್ನು ಹೊಂದಿದವರು.

ಪಂದ್ಯದಲ್ಲಿ ಜಗತ್ಪ್ರಸಿದ್ಧ ನರ್ತಕಿಯ ರಾದ ಮಿಸ್ ಮೇರಿ ವಿಗ್ಮನ್, ಮಿಸ್ ಪಿ ... ಮಿಸ್ ... ಇವರ ಗಳೂ ಭಾಗವಹಿಸಿದ್ದ ರಂಗದಮೇಲೆ ನೃತ್ಯ ಪರೀಕ್ಷೆಯು ಅಂತಸ್ತು ಹೆಗಿತ್ತೆಂಬು ದು ವಿಶದವಾಗುವುದು.

ಕೊಡಲಿನಿಂದ ಪಾಪುಟ.

"ಕೇಶಾ ಉಂಬು ರಕ್ಷೇಹಮಾಡಾ"

ಜಪಾನ್‌ದೇಶದ ಅನೇಕಾನೇಕ ಸ್ತ್ರೀ ಪುರುಷರ ತಲೆ ಕೂದಲುಗಳೇ ರಾಷ್ಟ್ರಧ್ವಜ ವಾಗಿ ಹಾರಾಡುತ್ತಿವೆ.

ಇದರಲ್ಲೇನೂ ಸರಿ ತಮ್ಮ ನ ತಾ ಬಣ್ಣ ದ ಕೂದಲುಗಳಿಂದಲೆ ತಮ್ಮ ರಾಷ್ಟ್ರಧ್ವಜ ವನ್ನು ನೇಯ್ದು ಸೈನ್ಯಾಧಿಕಾರಿಗಳಿಗೆ ಕೊಟ್ಟಿರುತ್ತಾರೆ. ಮುಂದಿನ ಯುದ್ಧದಲ್ಲಿ ಸೈನ್ಯಾಧಿಪರು ಪ್ರಮುಖ ಭಾಗದವರು ಇದನ್ನೇ ರಾಷ್ಟ್ರಧ್ವಜವನ್ನಾಗಿ ಉಪಯೋಗಿ ಸುವರು.

THE UNIVERSITY UNION, MYSORE

MAHAMED'S NOSE EPISODE

The Secretary writes —

At an emergency meeting of the Managing Committee of the University Union held on Tuesday the 1st Sept 1936, the following resolutions were passed —

1) In the last issue of "The Union" there appeared, through oversight, an absurd reference to the Propret Mohamed. This, and the annoyance caused to the Muslim community, is greatly regretted, and the utmost care will be taken to avoid, in the future, anything of this kind.

2) All copies of "The Union" containing the reference in the possession of the Union shall be destroyed and the members shall be requested to destroy the copies in their possession.

ಅರಕಲಗೂಡು ವರ್ತಮಾನ.

(ನಮ್ಮ ವಾರ್ತಾಹರರಿಂದ)

ಅರಕಲಗೂಡಿನಿಂದ 16 ಮೈಲಿ ದೂರ ವಿರುವ ನರಸೀಪುರಕ್ಕೆ ಹೋಗುವ S. R. T. ಬಸ್ ಸರ್ವಿಸಿನವರು ಈಗ್ಗೆ ಗು ದಿನ ಗಳಿಂದ ದರವನ್ನು ಕಡಿಮೆಮಾಡಿರುತ್ತಾ ರೆ. ಇದರಿಂದ ಇಲ್ಲಿಂದ ಹೋಗುವ ಹಾಸ ನದ ಸರ್ವಿಸು, ರಾಮನಾಥಪುರದ ಸರ್ವಿಸಿ ನವರೂ ದರವನ್ನು ಕಡಿಮೆ ಮಾಡಿದ್ದಲ್ಲಿ ಜನಗಳಿಗೆ ಬಹಳ ಅನುಕೂಲಮಾಡಿಕೊ ಟ್ಟಂತಾಗುತ್ತದೆ. ಈಗ್ಗೆ 6–7 ದಿನಗಳಿಂ ದಲೂ ಮಳೆಯಿಲ್ಲದೆ ರಾಗಿಪೈರು ಬತ್ತದ ಪೈರು ಒಣಗಿಹೋಗುತ್ತಿದೆ. ಈ ವರ್ಷ ಜನಗಳಿಗೆ ಬಹಳ ತೊಂದರೆಯಾಗಿದೆ.

ಸತ್ಕಾರ.

ಮದ್ರಾಸು ರಾಜ್ಯಾಂತರದಿಂದ ಡಿಸ್ಟ್ರಿಕ್ಟ್ ಬೋರ್ಡಿಗೆ ಚುನಾಯಿಸಲ್ಪಟ್ಟಿರುವ ಶ್ರೀ ಎಚ್. ಕೆ. ವೀರಣ್ಣಗೌಡರಿಗೆ ಆ ಪ್ರಾಂತ್ಯ ದವ ಹಾಸನದ ಡಿಸ್ಟ್ರಿಕ್ಟ್ ಬೋ ರ್ಡ್ ಪ್ರೆಸಿಡೆಂಟರಾದ ಶ್ರೀ ಕೆ. ಎಂ. ಕೃಷ್ಣಪ್ಪಗೌಡರ ಅಧ್ಯಕ್ಷತೆಯಲ್ಲಿ ಈ ಹೊಸೆ ...ರು ಕಾರ್ಯ ಕೊಟ್ಟ ಹೊಸ ... ಮಹನೀಯರು ... ದೇವಸ್ಥಾನ ದಲ್ಲಿ ಒಂದು ಸಭೆ ನಡೆಸಿ ಮಾನಪತ್ರವ ನ್ನು ಅರ್ಪಿಸಿದರು.

(೮ ನೇ ಪುಟದಿಂದ ಮುಂದುವರಿದುದು)

ಆದರೆ ಯಾವ ಅರ್ಥ, ಯಾವ ಗುಣ ಹೇಳಿ ಎಂದು ಮಗದೊಬ್ಬರು ಮೂದಲಿಸಿಬಿಟ್ಟರು. "ಕೇಳಿ, ನಿಮ್ಮ ಸಾಹಿತ್ಯವು ಬರಿ ಮಾತು. ಜೀವವಿಲ್ಲ

ನಿಮ್ಮ ಅಲಂಕಾರಗಳೆಲ್ಲವೂ ಅರ್ಥಕ್ಕನುಸಾರವಾಗಿವೆಯೆ? ಸ ಸ್ವ ಯವೂ ಒಂದು ಅಲಂಕಾರವಾಗಬಹುದೆ? ಸಂಗೀತವು ಭಾವಶಾಸ್ತ್ರ. ಧ್ವನಿಯೇ ಅದಕ್ಕೆ ಜೀವ. ಹೊಸ ಭಾವನೆಗಳೆಲ್ಲವನ್ನೂ ನವರಸಗಳಲ್ಲಿಯೇ ಕಟ್ಟಿಹಾಕಲು ಸಾಧ್ಯವಿಲ್ಲ. ಸಂಗೀತವು ಪ್ರಾಣವುಳ್ಳದು. ಸಾಹಿತ್ಯಕ್ಕೆ ಜೀವದಾನಮಾಡುವುದೇ ಸಂಗೀತದ ಕೆಲಸ ಎಂದು ಹೇಳಿದರಂತೆ. ನಾನಂತೂ ಈಗ ಸಂಗೀತ ಸಾಹಿತ್ಯಗಳ ಅನ್ಯೋನ್ಯತೆಯನ್ನು ಬಯಸುವವರು ಆದುದರಿಂದ ಎರಡೂ ಪ್ರಾಮುಖ್ಯವೆಂದೇ ಸುಮ್ಮನಿದ್ದೇನೆ. ಮತ್ತೊಂದು ದಿನ ಅದೇ ವಿದ್ವಾಂಸರ ಮನೆಯಲ್ಲಿ ಒಂದೇ ರಾಗವನ್ನು ನವರಸಗಳೂ ಅನುಭವವಾಗುವಂತೆ ಆಲಾಪನೆ ಮಾಡಿದರಂತೆ. ಇವರನ್ನು ಮಹಾನುಭಾವರೆಂದು ಹೇಳುವುದರಲ್ಲಿ ಒಪ್ಪಿಗೆಯೇನು? ಈ ಸಂಗತಿಯನ್ನು ನಮಗೆ ತಿಳಿಸಿದಾಗ ನಮ್ಮೊಡನೆ ಇದ್ದ ಮಿತ್ರರೊಬ್ಬರು ಬೀಭತ್ಸವನ್ನೂ, ಎಂದು ಕೇಳಿದರು. ಆ ರಸಕ್ಕೆ ಆ ಕಾಲದಲ್ಲಿ ಅಷ್ಟೊಂದು ಪ್ರಾಶಸ್ತ್ಯವಿದ್ದಂತೆ ಕಾಣೆ. ಈಗಿನ ಹಲವು ಸಂಗೀತ ಕಛೇರಿಗಳಲ್ಲಿ ಆ ರಸಕ್ಕೆ ಸಾಧಾರಣ ಸ್ಥಾನವುಂಟು ಎಂದು ಹೇಳಿದರು—ಇದಿರಲಿ—

ಇವರಂತೆಯೇ ಆಸ್ಥಾನವಿದ್ವಾಂಸರಾಗಿದ್ದವರೊಬ್ಬರು ಶ್ರೀ ರಾಯರ ಕೀರ್ತನೆಗಳನ್ನು ವೀಣೆಯಲ್ಲಿ ಬಾರಿಸಿ, ರಾಯರೆ! ಇವೆಲ್ಲವೂ ತಮ್ಮ ಕೀರ್ತನೆಗಳು. ಇದರಿಂದ ದೊರೆಯುವ ಆನಂದವು ತಮಗೆ ಸೇರಿದ್ದು ಎಂದು ಹೇಳಿದರಂತೆ. ಕೀರ್ತನೆಗಳಲ್ಲಿಯೂ ಪದಗಳನ್ನು ಜೋಡಿಸಿದವರಲ್ಲಿ ಹಾಡುವವರಿಗೆ ಸೇರಿದುದು ರಾಗವೂ ನನ್ನದಲ್ಲ. ಮಾತುಗಳೂ ನನ್ನವಲ್ಲ. ಪದಗಳನ್ನು ಜೋಡಿಸಿದಾಗಲೇ ಹಾಡುವವರಿಗೆ ಸಮರ್ಪಿಸಲ್ಪಟ್ಟುವು. ಆನಂದವು ಅನುಭವಿಸುವವನದು. ಯಾರು ಹಾಡಿ ಕೀರ್ತನೆಯ ಸಾಹಿತ್ಯಕ್ಕೆ ಜೀವದಾನಮಾಡುವರೋ ಅವರೇ ಆನಂದಕ್ಕೆ ಕಾರಣರು. ನನ್ನದಲ್ಲದ ರಾಗದಲ್ಲಿ, ನನ್ನದಲ್ಲದ ಮಾತುಗಳನ್ನು ಜೋಡಿಸಿದ ನನಗೆ ಒಂದಕ್ಕೂ ಬಾಧ್ಯತೆ ಇಲ್ಲವೆಂದರು. ನಾನು ಕೀರ್ತನಕಾರನೆಂದು ಹೆಮ್ಮೆ ಪಡುವವರು ಶ್ರೀ ರಾಯರ ಈ ವಾಕ್ಯಗಳನ್ನು ನೆನಪಿನಲ್ಲಿಡಬೇಕಲ್ಲವೆ?

ಶ್ರೀ ಸದಾಶಿವರಾಯರವರ ಜೀವನದಲ್ಲಿ ಹಲವು ಸಂಗತಿಗಳು ನಾವು ತಿಳಿದುಕೊಳ್ಳಬೇಕಾದವು ನಡೆದಿವೆ. ಶ್ರೀ ರಾಯರು ಬಹಳ ಮತಶ್ರದ್ಧೆಯುಳ್ಳವರು. ನರಸಿಂಹೋಪಾಸಕರು. ಹಿಂದಿನ ಕಾಲದಲ್ಲಿ ಸಾಮಾನ್ಯವಾಗಿ ಪ್ರಖ್ಯಾತರಾದ ಪಂಡಿತರೂ ಪಾಂಡಿತ್ಯದೊಡನೆ ದೇವತಾನುಗ್ರಹವನ್ನು ಪಡೆದಿದ್ದರು. ಈಗಿನ ಹಲವರಿಗೆ ಎರಡೂ ಹಾಗಾಗಿಯೆ. ಶ್ರೀ ರಾಯರು ಭಾರತದ ಪ್ರಮುಖ ಕ್ಷೇತ್ರಗಳೆಲ್ಲವನ್ನೂ ಸುತ್ತಿದವರು

ಅಲ್ಲಲ್ಲಿನ ದೇವರುಗಳ ಅಂಕಿತದಿಂದ ಒಂದೊಂದು ಕೀರ್ತನೆಯನ್ನು ಮಾಡಿರುವರು. ಇವರ ಸ್ನೇಹಿತರಾದ ವೇದಾಂತಿಗಳೊಬ್ಬರಿಗೆ ಇವರ ಈ ರೀತಿಯು ಸರಿದೋರಲಿಲ್ಲ. ವೈರಾಗ್ಯವಿಲ್ಲದೆ ಮುಮುಕ್ಷುತ್ವವೂ ಇಲ್ಲ, ಮೋಕ್ಷವೂ ಇಲ್ಲ. ಸುಮ್ಮನೆ ಕ್ಷೇತ್ರಗಳಲ್ಲಿ ಅಲೆದು ಕೀರ್ತನೆಗಳನ್ನು ಬರೆದು ಹಂಬಲಿಸಬೇಡಿರಿ ಎಂದು ಉಪದೇಶಿಸಿದರು. ಸ್ವಾಮಿ, ನಾನು ಸಂಗೀತಗಾರ, ನನ್ನ ದೇವತೆಯು ನಾದಬ್ರಹ್ಮ, ನನ್ನ ಮತವು ಭಕ್ತಿಪ್ರೇಮಗಳು, ವೈರಾಗ್ಯವಲ್ಲ. ಪರಮಾತ್ಮನ ಹೆಸರಿನಲ್ಲಿ ಸಮಸ್ತ ಭೋಗಗಳನ್ನೂ ಅನುಭವಿಸಿ ಅವನಿಗೆ ಸಮರ್ಪಣೆ ಮಾಡುವುದೇ ನನ್ನ ಧ್ಯೇಯ. ತಾವು ಹೇಳುವ ಮಹಾಮಹಿಮೋಪೇತರನ್ನು ಹಾಡ್ಗಿಳಿಯಲ್ಲಿ ಹುಡುಕುವುದೇ ನನಗೆ ಗುರು ಕಲಿಸಿಕೊಟ್ಟುದು ಎಂದು ನುಡಿದ ಉತ್ತರ.. ಇವರು ತಮ್ಮ "ಪೆದ್ದ ದೇವುಡವು ನನ್ನು ನೆರಿತ್ತಿರಾ" ಎಂಬ ಕೀರ್ತನೆಯಲ್ಲಿ "ಮತದಲ್ಲಿ ಶಾಂತಿಯಿಲ್ಲ, ಕೃತಿಗಳ ಅರ್ಥವೇ ನನಗಾಗುವುದಿಲ್ಲ ! ತ್ಯಾಗರಾಜ ಕರುಣಾಮೂರ್ತಿ ಎಂದರೆ ನೀನೇ" ಎಂದು ತಮ್ಮ ಅಭಿಪ್ರಾಯವನ್ನು ಹೇಳಿರುವರು

ಮತ್ತೊಂದುವೇಳೆ ಶ್ರೀ ರಾಯರು ಗಾನಮಾಡುತಲೇ ತಲ್ಲೀನರಾಗಿ ಆನಂದಾನುಭವದಲ್ಲಿ ಗಾನವನ್ನು ಮುಂದುವರಿಸಲೂ ತೋರದಾದರು. ಸಂಗೀತವೆಲ್ಲವೂ ಪೂರೈಸಿದ ಮೇಲೆ ಒಬ್ಬರು—ನಮ್ಮ ಸ್ವಾಮಿ ತಮ್ಮ ಗಾನವನ್ನು ತಾವೇ ಮೆಚ್ಚಿಕೊಳ್ಳುವುದೂ ಉಂಟೆ? ತಾವೇನೋ ಬಹು ಆನಂದವಾಗಿಯೇ ಹಾಡಿದಿರಿ. ಸರಿ ಎಂದರು. ಕೀರ್ತನಕಾರನಾಗುವುದೂ ಸಂಗೀತಕ್ಕೆ ಸಾರ್ಥಕವಲ್ಲ. ಆನಂದಪಡುವುದೂ, ಆನಂದವನ್ನು ಇತರರಿಗೆ ಹಂಚುವುದೂ ಸಾರ್ಥಕ್ಯಗಳು—ಎಂದು ರಾಯರು ಹೇಳಿದರು. ತಾವೂ ಸುಖಪಟ್ಟು ಇತರರನ್ನೂ ಸುಖಪಡಿಸುವ ಸಂಗೀತಗಳು ಈಚೆಗೆ ಅಲ್ಲೊಂದು ಇಲ್ಲೊಂದು ದೊರಕುವುದೇ ದುರ್ಲಭವಾಗಿ ಪಾಂಡಿತ್ಯದ ಪ್ರತಿಷ್ಠೆ! ವಾದ್ಯಗಳ ಹುಯಿಲು! ತುಂಡುತುಂಡಾಗಿ ಕತ್ತರಿಸಲ್ಪಟ್ಟು, ಜೆಲ್ಲಾಪಿಲ್ಲಿಯಾಗಿ ಓಡುತ್ತಿರುವ ಸ್ವರಗಳ ಹಾರಾಟ! ಎಲ್ಲ ಒಟ್ಟಾಗಿ ಸೇರಿ ಸಭೆಯನ್ನು ಅಲ್ಲೋಲಕಲ್ಲೋಲವಮಾಡುವ ಅದ್ಭುತ ಸಂಗೀತಕಛೇರಿಗಳೇ ಈಗ ನಮಗೆ ಎಲ್ಲೆಲ್ಲಿಯೂ ದೊರಕುತ್ತಿರುವುವು

ತ್ಯಾಗಯ್ಯನವರ ಹಾಗೆಯೇ ಶ್ರೀ ರಾಯರಾದರೂ ಭಗವದ್ಭಕ್ತರು, ಅನೇಕ ಕೀರ್ತನೆಗಳನ್ನು ಮಾಡಿರುವರು. ಶ್ರೀ ತ್ಯಾಗಯ್ಯನವರ ಕೀರ್ತನೆಗಳಲ್ಲಿ ಲಾಲಿತ್ಯವಿದೆ. ಶ್ರೀ ರಾಯರ ಕೀರ್ತನೆಗಳಲ್ಲಿ ಗಾಢವಾದ ಪಾಂಡಿತ್ಯದೊಂದಿಗೆ ಸಂಗೀತಶಾಸ್ತ್ರದ ಹಿಡಿತವೂ, ನವನವ ಇದೆ ರಾಗದ ಜೀವಸ್ವರವನ್ನೇ ಹಿಡಿದು ರಾಗಾಭಿಪ್ರಾಯ ಭೇದತೆಯನ್ನು ಶ್ರೀ ರಾಯರು ಸಾಧಿಸಿಬಿಟ್ಟಿದ್ದಾರೆ. ಸರ್ಟಿಫಿಕೇಟಿನ ವಿದ್ವಾಂಸರು ಶ್ರೀ ರಾಯರ ಕೀರ್ತನೆಗಳನ್ನು ಮನವಪ್ಪುವಂತೆ ತಾವಡಲಾರರು. ಹೆಚ್ಚು ಸಾಧಕವೇ ಬೇಕು. ಮೈಸೂರಿನ ಒಬ್ಬ ಮರ್ಮಸೀಘರ ಮನೆಯಲ್ಲಿ ಲಕ್ಷ್ಮೀಸ್ತೋತ್ರವನ್ನು ಗಾನಮಾಡುತಲಿದ್ದ ಹಾಗೆಯೇ ದೂರದಲ್ಲಿದ್ದ ಲಕ್ಷ್ಮೀದೇವಿಯ ವರದ ಹಾರವು ರಾಯರ ಸಮೀಪಕ್ಕೆ ಬಂದು ಬಿದ್ದಿತಂತೆ. ಸಭಿಕರೆಲ್ಲರೂ ಪರಮಾಶ್ಚರ್ಯಪಟ್ಟರೆಂದು ಕೇಳುವೆವು. ಶ್ರೀರಂಗನಲ್ಲಿ ಪರಮಾದ್ಭುತವೈನ ನೀಸೇವ ದೊರಕುಗಮಾ ಎಂಬ ಕೀರ್ತನೆಯನ್ನು ಹಾಡಿ ವ್ಯಾಧಿರೋಗದಿಂದ ವಿಮುಕ್ತರಾದರು. ಈಗಿನ ವೈಣಿಕ ಪ್ರವೀಣರಾತರ ಶಿಷ್ಯರನ್ನೇ ಪಡೆದವರೋ ಲೆ ಹೇಳಬೇಕಾದುದೇನು? ಶ್ರೀ ರಾಯರ ಮರವ್ಯಕ್ತವೆಂದರೆ ನಮ್ಮ ನಡುವೆ ಮೈಸೂರಲ್ಲಿ ಬಂದು ನೆಲಸಿದುದು. ನಾವು ಅಭಿಮಾನಶೂನ್ಯರು ಉತ್ತಮರನ್ನು ಗೌರವಿಸುವುದನ್ನು ಕಲಿತವರಲ್ಲ. ಗುರುಭಕ್ತಿಯನ್ನು ಮುಂದಿಟ್ಟು, ವೈಣಿಕ ಪ್ರವೀಣರು ಶ್ರೀ ರಾಯರ ಕೀರ್ತನೆಗಳನ್ನು ಹೊರಗೆಡಹಬೇಕಾಗಿದೆ. ಪಠಾಪೋಟಿಯಿಲ್ಲದೆ ನಾಡಿಗೂ, ನುಡಿಗೂ ತನ್ನಿಂದಾದ ಸೇವೆಯನ್ನು ಸಲ್ಲಿಸಿ ಕೀರ್ತಿಜ್ಯೋತಿಯನ್ನು ಬೆಳಗಿಸುವ ನಿನ್ನ ಸಹಜಗುಣವನ್ನೆಂದಿಗೂ ಮರೆಯಬೇಡ ಕಂಡೆಯಾ! ಮೈಸೂರು ಧನ್ಯ!

[ನಂಜನಗೂಡು ಕರ್ನಾಟಕ ಸಂಘದ ಅಧ್ಯಕ್ಷರಾದ ಶ್ರೀ|| ಎನ್. ಸುಬ್ರಹ್ಮಣ್ಯಯ್ಯನವರು ಆಕಾಶವಾಣಿಯಲ್ಲಿ ಮಾಡಿದ ಭಾಷಣ]

Congress & Indian States.

Dr Pattabhi on the Problem.

Enrol in large numbers and Organise Congress Committees.

Dr. N. S Hardiker writes:-

On his way to Kundagol, a Taluka in Jamkhandi State Dr Pattabhi Sitaramaiah halted at Hubli and delivered a speech. As he is the President of the All-India State's Peoples Conference this year and as he was on a tour of the States, I asked him about the work to be done in a State by the Congress. I drew his special attention to the utterances of some of our leaders who had visited Mysore during the last three years and told him about the objections raised by the workers in the State. Replying, he said that he had read the speeches of the leaders concerning the relation of the Congress with the State and opined that he was not at all in agreement with them He did not want the people of the State of Mysore to take the remarks of the said Leaders seriously. He wanted Mysore to organise the Congress and said that he would like to see a large number enrolled as Congress members all over the eight Districts of the State. He did not want them to forget that the attitude or the Congress towards the States all along has been the same from the very beginning and that it will not be otherwise Asked about a visit to the State of Mysore he said that he was thinking of touring the same very soon.

Dr. Pattabhi was a member of the Working Committee of the Congress for several years. He is a Congress Historian. He has been party to the resolutions passed by the Congress regarding States and as such he understands the problems of the States in the country. He is such an authority who is emphatic on our forgetting the injurious remarks made by some of our elders in the past, regarding the relation of the Congress with the States

As I am just now interested in the enrolment of Congress members and organisation of Congress Committees in the State of Mysore, I interviewed Dr. Pattabhi and sought his replies. I hope his replies are enough to clear the doubts in the minds of some of our friends in the State of Mysore

ಕನ್ನಡ ಆತ್ಮ ಪುರಾಣ.

ಇದು ಮುಮುಕ್ಷುಗಳ ಮುಖದರ್ಪಣ.

ಈ ಗ್ರಂಥವು ೧೮ ಅಧ್ಯಾಯಗಳುಳ್ಳದ್ದು ಇದರಲ್ಲಿ ಐತರೇಯಾದಿ ೩೩ ಉಪನಿಷತ್ತುಗಳ ವಿಸ್ತಾರವಾದ ಅರ್ಥವಿರುವದು. ಇದು ಶ್ರೀ ಶಂಕರಾನಂದಮುನಿಗಳು ದೇವಭಾಷೆಯಲ್ಲಿ ತಮ್ಮ ಶಿಷ್ಯನಿಗೆ ಉಪದೇಶಿಸಿದ ಪರಮ ಅದ್ಭುತ ಪುರಾತನ ಗ್ರಂಥವಾಗಿರುವುದು. ಆತ್ಮವಿದ್ಯಾ ವಿಷಯದಲ್ಲಿ ಇದಕ್ಕೆ ಸಮಾನವಾದ ಗ್ರಂಥವು ಈ ಜಗತ್ತಿನಲ್ಲಿಯೇ ಇಲ್ಲವೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಈ ಗ್ರಂಥವು ... ಭಾಷೆಯಲ್ಲಿದ್ದುಕೊಂಡು ಉತ್ತರದೇಶದೊಳಗೆಲ್ಲಾ ಬಹು ಪ್ರಸಿದ್ಧಿಗೊಂಡಿ... ನಮ್ಮ ದಕ್ಷಿಣ ಕರ್ನಾಟಕದಲ್ಲಿ ಇದರ ನ್ಯೂನತೆಯಂ ನೋಡಿ ನನ್ನಿಂದ ಕ... ಭಾಷಾಂತರಮಾಡಲ್ಪಟ್ಟಿತು ಇದನ್ನು ಎರಡು ವಿಭಾಗವಾಗಿ ವಿಂಗಡಿಸಿ ... ಮುಕ್ತಿಗಳಿಗೆ ಮಾಡಬೇಕೆಂದು ಆಲೋಚಿಸಿ, ಆ ಪೈಕಿ ... ಅಧ್ಯಾಯಗ... ಮೊದಲನೇ ಭಾಗ ಮುದ್ರಿಸಿ ಬೈಂಡಿಂಗ್ ಸಹಾ ಕಟ್ಟಿಸಿ ತಯಾರ್ ... ಲ್ಪಟ್ಟಿರುವದು. ಇದರ ಕ್ರಯ 5—8—0 ರೂ ಇದನ್ನಪೇಕ್ಷಿಸುವವರು ... ಮುಂಗಡ ಕಳುಹಿಸಬೇಕು ಉಳಿದ ಹತ್ತು ಅಧ್ಯಾಯಗಳುಳ್ಳ ಎರಡನೇ ... ಶೀಘ್ರದಲ್ಲಿಯೇ ತಯಾರಾಗುವವು ಇದನ್ನಪೇಕ್ಷಿಸುವವರು ೩ ರೂಪಾಯಿ ... ಅಡ್ವಾನ್ಸಾಗಿ ಮುಟ್ಟಿಸಿ ಕಳುಹಿಸಿಕೊಟ್ಟಲ್ಲಿ ಪುಸ್ತಕವು ಶೀಘ್ರದಲ್ಲಿಯೇ ... ಬೈಂಡಿಂಗ್ ಸಹಾ ಕಟ್ಟಿಸಿ ಅವರವರ ವಿಳಾಸಕ್ಕೆ ಪುಸ್ತಕದ ಕ್ರಯದಲ್ಲಿ ... ವಜಾಮಾಡಿ ಉಳಿದ ಮೊಬಲಿಗಿಗೆ ಬುಕ್ಕನ್ನು ವಿ. ಪಿ. ಮಾಡಲ್ಪಡುವದು ... ಗ್ರಂಥಕರ್ತರಿಂದ ಇನ್ನೂ ಅನೇಕ ವೇದಾಂತ ಗ್ರಂಥಗಳು ರಚಿಸಲ್ಪಟ್ಟು ... ಸಿದ್ಧವಾಗಿವೆ

ಗ್ರಂಥಕರ್ತ:—ಚಿದಾನಂದ ಸುಬ್ರಹ್ಮಣ್ಯ (ವೇದಾಂತ ಸುಬ್ಬಯ್ಯ)
ಲಕ್ಷ್ಮೀವಿಲಾಸ ಅಗ್ರಹಾರ, ಮೈಸೂರು

ಪ್ರಾಚೀನ ಕನ್ನಡ ವಚನ ಗ್ರಂಥಗಳು

ಸೌಗಂಧಿಕಾಪರಿಣಯ:—ಪೂರ್ವದಲ್ಲಿ ದೇವೇಂದ್ರನಿಗೆ ದೂರ್ವಾಸ ಮುನಿಗಳಿಂದ ಆಶೀರ್ವಾದ ಪೂರ್ವಕವಾಗಿ ಕೊಡಲ್ಪಟ್ಟ ಕಮಲಮಾಲಿಕೆಯನ್ನು ಆನೆಯ ಕುಂಭಸ್ಥಳದಲ್ಲಿಟ್ಟೊಡನೆ, ಆನೆಯು ಆ ಮಾಲಿಕೆಯನ್ನು ಕಾಲಿನಲ್ಲಿ ಹೊಸಕಿ ವ್ಯರ್ಥಪಡಿಸಲು, ಋಷಿಗಳ ಶಾಪದಿಂದ ಭೂಲೋಕದಲ್ಲಿ ರತ್ನಪುರಿಯಲ್ಲಿ ಸುಗಂಧರಾಜನಾಗಿ ಹುಟ್ಟಿ, ಕಳಿಂಗದೇಶದ ರಾಜಪುತ್ರಿಯಾದ ಸೌಗಂಧಿಕಾದೇವಿಯನ್ನು ಸ್ವಯಂವರಮಾಡಿಕೊಂಡ, ಬಹಳ ವಿಷಯಗಳಿರುವ ಕಥೆ

೧೮೦ ಪುಟಗಳು ಕ್ರಯ ರೂ ೧—೮—೦

ಸಹಸ್ರಾಯುಚರಿತ್ರೆ:—ಮಾಹಿಷ್ಮತೀ ಅರಸನ ಜ್ಯೇಷ್ಠಪತ್ನಿಯಲ್ಲಿ ದೇವಿಯ ವರಪ್ರಸಾದದಿಂದ ಜನಿಸಿ ಲೋಕಪ್ರಸಿದ್ಧನಾಗಿ ತನಗೆ ಶಾಪದಿಂದ ಬಂದ ಗಂಡಾಂತರಗಳನ್ನೆಲ್ಲಾ ಪರಿಹರಿಸಿಕೊಂಡ ಒಬ್ಬ ರಾಜಪುರುಷನ ಕಥೆ

೪೭೫ ಪುಟಗಳು ಕ್ರಯ ರೂ ೨—೦—೦

ಕಾಶೀಕ್ಷೇತ್ರಮಹಾತ್ಮೆ:—ಇದರಲ್ಲಿ ೧೪ ಲೋಕಗಳ ವರ್ಣನೆ, ನದಿಗಳು, ದೇವತೆಗಳು ಋಷಿಗಳು, ಮುಂತಾದವರ ಉತ್ಪತ್ತಿ ಕ್ರಮ, ಗಂಗಾ ಸಹಸ್ರನಾಮವೇ ಮೊದಲಾದ ಅನೇಕ ವಿಷಯಗಳು ಅಡಕವಾಗಿರುತ್ತೆ

೭೮೩ ಪುಟಗಳು ಕ್ರಯ ರೂ ೨—೨—೦

ಅಡ್ರೆಸ್ಸು —

ಗುಂಡ್ಲು ಪಂಡಿತ ಲಕ್ಷ್ಮಣಾಚಾರ್ಯರ ಮಕ್ಕಳು
ಶ್ರೀನಿವಾಸ ದೇಶಿಕಾಚಾರ್,
೩೦೭, ಕರುಹಟ್ಟಿಬೀದಿ, ಮೈಸೂರು

ದ್ರಾಕ್ಷಾಮೃತ

ಈ ದ್ರಾಕ್ಷಾಮೃತವು ಸಹ್ಯಾದ್ರಿ ಪರ್ವತದಲ್ಲಿ ಅನೇಕ ವನಸ್ಪತಿಗಳ ರಸವರ್ಗಗಳೊಂದಿಗೆ ದ್ರಾಕ್ಷಾರಸವನ್ನು ಮಿಶ್ರಮಾಡಿ ಸ್ವದೇಶಿ ಯಂತ್ರದಿಂದ ಶಾಸ್ತ್ರೋಕ್ತ ಪದ್ಧತಿ ಪ್ರಕಾರ ತಯಾರು ಮಾಡಿರುವದರಿಂದ ಸ್ವಾದಿಷ್ಟವು ಮತ್ತು ಮಧುರವು ಆಗಿದೆ

ಇದರ ಸೇವನೆಯಿಂದ ಶರೀರದೊಳಗಿನ ಹಳೆ ಕಡಕಿ (ಗರಮಿ) ಸಂಪೂರ್ಣ ನಾಶವಾಗುತ್ತದೆ ಮತ್ತು ಧಾತುಸ್ರಾವ, ಸ್ವಪ್ನಾವಸ್ಥೆಯಿಂದ ಅಥವಾ ಬೇರೆ ಯಾವದೇ ಕಾರಣದಿಂದ ಬಂದ ಅಶಕ್ತತೆಯಿಂದ ಕೈಕಾಲು, ಕಣ್ಣೊಳಗೆ ಉರಿಯು ಬೀಳೋಣ, ಶೌಚಕ್ಕೆ ಸಾಫ ಆಗದೆ ಇರೋಣ, ಮುಂತಾದ ಎಲ್ಲ ವಿಕಾರಗಳು ನಷ್ಟವಾಗಿ ಕ್ಷುಧಾಗ್ನಿ ಬೆಳೆಯುತ್ತದೆ ಮತ್ತು ಅನ್ನ ಚೆನ್ನಾಗಿ ಪಚನವಾಗಿ ಶೌಚಕ್ಕೆ ಸಾಫವಾಗುತ್ತದೆ. ಇದರ ಸೇವನೆಯಿಂದ ತರುಣರಿಗೆ ವ್ಯಭಿಚಾರದಿಂದ ಅಥವಾ ಬೇರೆ ಕಾರಣದಿಂದ ಬಂದ ಧಾತುಕ್ಷೀಣತೆ, ನಪುಂಸಕತ್ವ ಇದ್ದರ ಅದು ಹೋಗಿ ಪುನಃ ಯೌವನವಂತರಾಗಿ, ಶರೀರ ಬಲವಾಗಿ ಮಕ್ಕಳು ಪುಷ್ಟಿವಂತರಾಗುವರು ಹೆಂಗಸರಿಗೂ ಮತ್ತು ಮಕ್ಕಳಿಗೂ ಈ ಔಷಧವು ಗುಣಕಾರಿ ಇದೆ ಮುಟ್ಟಾಗದಿದ್ದರೆ ಮತ್ತು ಉಷ್ಣ ಗರ್ಭ ಸಂಬಂಧವಾದ ರೋಗಗಳಿದ್ದರೂ ಅವೆಲ್ಲ ಗುಣವಾಗಿ ಹೆಂಗಸರಿಗೆ ಸಂತತಿ ವೃದ್ಧಿಯಾಗುವದು. ಈ ಔಷಧದ ಮೂರು ಬಾಟ್ಲಿಗಳನ್ನು ಸೇವನೆ ಮಾಡಿದರೆ ಪೂರ್ಣ ಗುಣಬರುತ್ತದೆ ಇದರ ಅನುಭವ 1 ಬಾಟ್ಲಿ ಸೇವನೆ ಮಾಡಿದ ಅನಂತರ ನಿಮಗೆ ತಿಳಿದೀತ.

1 ಬಾಟ್ಲಿ ಬೆಲೆ ರೂ ೧—೪—೦, 3 ಬಾಟ್ಲಿ ೩—೪—೦, 1 ಡಜನ್ ಬಾಟ್ಲಿ ಬೆಲೆ ೧೨—೦—೦,

ಮ್ಯಾನೇಜರ್—ದ್ರಾಕ್ಷಾಮೃತ ಡಿಪೋ ಪೋಸ್ಟ್ ನಿಪ್ಪಾಣಿ, ಜಿಲ್ಲಾ ಬೆಳಗಾವಿ

ಮೈಸೂರು ಸ್ಟಾಕಿಸ್ಟ್ —ಟಿ ಸಿ ನಟರಾಜ್, ಬೊಂಬಾಯಿ ಆನಂದ ಭವನ, ಮಾಡರ್ನ್ ಫಾರ್ಮಸಿ, ಸಯ್ಯಾಜಿರಾವ್ ರೋಡ್ ಬೆಂಗಳೂರು ಸಿಟಿ —ಸಿ.ವಿ ಶಾಸ್ತ್ರಿ ಅಂಡ್ ಸನ್ಸ್, ಚಿಕ್ಕಪೇಟೆ ತುಮಕೂರು—ಟಿ ಆರ್. ಗುರು ಚನ್ನಬಸಪ್ಪ ಅಂಡ್ ಬ್ರದರ್ಸ್ ಚಿಕ್ಕಮಗಳೂರು—ಎಂ ಎಲ್ ಮಂಜಯ್ಯಶೆಟ್ಟಿ ಶಿವಮೊಗ್ಗ—ಶ್ರೀಕೃಷ್ಣ ಟ್ರೇಡಿಂಗ್ ಏಜನ್ಸಿ ಮತ್ತು ಹಿಂಡೇರಾವ್ ಬ್ರದರ್ಸ್ ದಾವಣಗೆರೆ—ಮಲ್ಲೇಶಪ್ಪ ಮತ್ತು ಕೆ. ಬೋಜಯ್ಯಶೆಟ್ಟಿ ಅಂಡ್ ಬ್ರದರ್ಸ್.

"ಬ್ರೇಕ್ ಪಿಲ್ಸ್"

INVENTED BY A HIMALAYAN SAGE.

● ಸ್ತ್ರೀಪುರುಷರಿಗೆ ಆನಂದವನ್ನುಂಟುಮಾಡುವುದು ಈ ಮಾತ್ರೆಗಳೆ ಮದಿಸಿದ ಸ್ತ್ರೀಯರ ಗರ್ವಭಂಗಮಾಡಲು ಕಂಡುಹಿಡಿದಿರುವ ಮಾತ್ರೆಗಳಿವು ಇದರಲ್ಲಿ ರಸ

ವಿಷಾದಿಗಳು ಸೇರಿಲ್ಲ ಕಸ್ತೂರಿ, ಚಿನ್ನ, ಹಿಮಾಲಯ ಪರ್ವತದ ವನದ ಗುಲಿಕೆಗಳು ಮುಂತಾದುವುಗಳಿಂದ ದೊಡ್ಡ ಯೋಗೀಶ್ವರರ ಹತ್ತಿರ ಸಂಗ್ರಹಿಸಿ ಮುದುಕತನವನ್ನು ಲೋಕದಲ್ಲಿ ಇಲ್ಲದಂತೆ ಮಾಡುವುದು ಅರ್ಧ ಘಂಟೆಯೊಳಗಾಗಿ ವೀರ್ಯವನ್ನು ಕಲ್ಲಿನಂತೆಮಾಡಿ ರಮಿಸಲು ಉಲ್ಲಾಸವನ್ನು ಮಾಡುವುದು ಗುಣವಿಲ್ಲದಿದ್ದಲ್ಲಿ ಹಣ ವಾಪಸು.

೬೦ ಮಾತ್ರೆಗಳು ರೂ ೫—೦—೦ ೩೦ ಮಾತ್ರೆಗಳು ರೂ ೩—೦—೦

(ಕಾಗದ ಪತ್ರಗಳು ಇಂಗ್ಲೀಷಿನಲ್ಲಿಯೇ)

ಡಾ॥ ಎ ಎಸ್. ಮೂರ್ತಿ, ಚಿಕಾಕೋಲ್ ಗಂಜಾಮ್ ಡಿಸ್ಟ್ರಿಕ್ಟ್.



ಟಿ. ಸಿ. ನಟರಾಜ್ ಔಷಧಾಲಯ,

ಸಯ್ಯಾಜಿರಾವ್ ರೋಡು, ಮೈಸೂರು.

ಇದರಲ್ಲಿ ನೇತ್ರ ಪರೀಕ್ಷೆಯು ಉಚಿತವಾಗಿ ಮಾಡಲ್ಪಡುತ್ತದೆ.

ಅತ್ಯಗತ್ಯವಾಗಿ ಬೇಕಾದ ಎಲ್ಲಾ ಇಂಜಕ್ಷನ್ ಔಷಧಿಗಳೂ ಸದಾ ಕಾಲದಲ್ಲಿಯೂ ದೊರಕುವುದಲ್ಲದೆ ಸಮಸ್ತ ವ್ಯಾಧಿಗಳಿಗೂ ಚಿಕಿತ್ಸೆಯು ಬಹು ಸುಲಭ ಛಾರ್ಜಿನಿಂದ ಮಾಡಲ್ಪಡುತ್ತದೆ

ಝಂಡೂರವರ ಆಯುರ್ವೇದೀಯ ಸಿದ್ಧೌಷಧಗಳೆಲ್ಲವೂ ಸದಾ ದೊರಕುತ್ತವೆ

OLYMPIA TALKIES, MYSORE.
From 11-9-1936
"CHANDRASENA"
(in Tamil)

ಒಲಂಪಿಯಾ ಟಾಕೀಸ್, ಮೈಸೂರು.
11—9—36 ನೇ ಶುಕ್ರವಾರದಿಂದ ಪ್ರಾರಂಭ
"ಚಂದ್ರಸೇನ"
(ತಮಿಳು ಭಾಷೆಯಲ್ಲಿ)

ಎರಡೇ ಸುಖಸಾಧನಗಳು!

ಕಿನೋಸೊ — (ಗಂಡಸರಿಗೆ) ಅತ್ಯುತ್ತಮವಾದ ರಬ್ಬರು ಸಾಧನ ರತ್ಯ... ಡಿಗೆ ಆತಂಕವಿಲ್ಲ ಗರ್ಭೋತ್ಪತ್ತಿ... ಬೆವರಿಕೆಯಿಲ್ಲ ಮೇಹರೋಗದ ... ಯಿಲ್ಲ ಬೆಲೆ ೧—೮—೦

ಪ್ಯಾರಗಸ್ — (ಹಂಗಸರಿಗೆ) ... ಸರ ಗರ್ಭನಿವಾರಣೆಗೆ ಅತ್ಯುತ್ತಮ ... ಸಾಧನ ಕ್ರೀಡಾ ಸಮಯದಲ್ಲಿ ... ಸತಕ್ಕದ್ದು ಬೆಲೆ ೩—೮—೦

ಕೇಳಬೇಕಾದ ವಿಳಾಸ
ಆಂಧ್ರಾ ಟ್ರೇಡಿಂಗ್ ಕಂಪೆನಿ,
ಕೃಷ್ಣಪ್ಪನಾಯಕರ ಬೀದಿ, ಮ...

THE SADHVI
RECOMMENDED FOR SCHOOL
BY THE DEPARTMENT
No TI 3778 146—35 36
OFFICE OF THE DIREC
TOR OF PUBLIC
INSTRUCTION
IN MYSORE

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ ವಿ ಪಂಡಿತರ
ಬಾಲಸುಧಾ

ಮಕ್ಕಳ ಜ್ವರದ ಗೆಡ್ಡೆಯನ್ನು ಬಾತರು ಗುಣಪಡಿಸುತ್ತೆ ಲಿವರ್ (ಪಿತ್ತಕೋಶ) ದೊಡ್ಡದಾಗಿ ಕಣ್ಣು ಬಿಳಿ ಬಣ್ಣವಾಗಿದ್ದರೆ ಇದರ ಸೇವನೆಯಿಂದ ದಿನೇ ದಿನೇ ಗುಣವಾಗುತ್ತೆ 30 ವರ್ಷಗಳಿಂದಲೂ ಅನುಭವ ಸಿದ್ಧವಾಗಿದೆ—ಮಕ್ಕಳ ಭೇದಿಗೆ ನಮ್ಮ ಬಾಲ ಸಂಜೀವಿನಿಯನ್ನೇ ಉಪಯೋಗಿಸಿರಿ

ಬಾಲಸುಧಾ ಬೆಲೆ 1 ರೂ. ಬಾಲಸಂಜೀವಿನಿ 4 ಆ

ಮೈಸೂರು, ಬೆಂಗಳೂರು, ಮದ್ರಾಸುಗಳಲ್ಲಿ ನಮ್ಮ ಶಾಖೆಗಳಿವೆ
ಸದ್ವೈದ್ಯಶಾಲಾ, ನಂಜನಗೂಡು

ಎಂ. ಎ. ಸಾರಾಯ, ನಾರಾಯಣ
ಶ್ರೀ ಸತ್ಯನಾರಾಯಣ ಪರಿಮಳ ಫ್ಯಾಕ್ಟರಿ,
ಜಗನ್ಮೋಹನ ಬಂಗ್ಲಾ ಬೀದಿ, ಮೈಸೂರು
ಪರಿಮಳ ಅಗರ್ ಬತ್ತಿ
ಉಪಯೋಗಿಸಿ ಪ್ರೋತ್ಸಾಹಿಸಿರಿ

ANANDA SODA FACTORY,
BEST AERATED WATER SUPPLIERS
COMPLETE REQUISITES FOR
AERATED WATER MANUFACTURERS
AVAILABLE
ಆನಂದಾ ಸೋಡಾ ಫ್ಯಾಕ್ಟರಿ,
ದೊಡ್ಡ ಪೇಟೆ, ಮೈಸೂರು

HARD DAYS!
HAVE YOU SEEN THE MIRACULOUS EFFECTS OF ?
:: :: ATTRACTIVE :: ::
POSTERS
FROM
ANANTHA PRESS,
P O TURUVEKERE
—o—
(Poster Printers to Gubbi Theatrical Co
Chamundeswari Talkies and other leading Co s)
IF NOT, TRY THEM TO-DAY
—: FOR SERVICE CALL ON —
V Subba Rao C/o SADHVI OFFICE,
(Sri Rama Press, D Subbiah Road, Mysore)

|| ಸತ್ಯಮೇವೋದ್ಧರಾಮ್ಯಹಮ್ ||

ರಾಜಧಾನಿಯ ರಾಷ್ಟ್ರೀಯ ವಾರ ಪತ್ರಿಕೆ.

ವೃದ್ಧಪಿತಾಮಹ ಎಂ. ವೆಂಕಟಕೃಷ್ಣಯ್ಯನವರ ಜ್ಞಾಪಕಾರ್ಥವಾಗಿ ಪ್ರಕಟಿಸಲ್ಪಡುವುದು

ಸಂಪಾದಕರು ಅಗರಂ ರಂಗಯ್ಯ, ಬಿ ಎ

ಸಂಪುಟ ೧] MYSORE : MONDAY 14–9–36 ಮೈಸೂರು : ಸೋಮವಾರ ೧೪–೯–೩೬ [ಸಂಚಿಕೆ ೪೦

...ನರು ಹೆಚ್ಚು ?

...ಂಟೂರಿನ ಸ್ಥಳೀಯ ಸಂಸ್ಥೆಯೊಂದ ...ಒಂದು ದಸ್ತು ಪೇಪರಿಗೆ ಒಂದು ..., ನಾಲ್ಕಾಣೆ, ಆರು ಕಾಸನ್ನು ...ಟ್ಟರಂತೆ

...ಂದಾಣಗೆ ಬರುತ್ತಿದ್ದ ಖಾಮಾನಿಗೆ ... ರೂಪಾಯಿಯನ್ನು ಕೊಟ್ಟ...

...ವರಲಿ ನಮ್ಮ ಸಂಸ್ಥಾನದಲ್ಲಿಯೇ ...ದಿಮಲ್ಲಿ ಒಂದಾಣೆಯ ಪಾಲೀ ಸೀಸೆ ...ರು ರೂಪಾಯಿ ಛಾರ್ಜು ಮಾಡಿ ...ತಿಂಡಿರುವರಂತೆ!

...ಾರು ಹೆಚ್ಚು ?

* * *

...ಗ ಚೇದನೆ ?

...ಲ್ಲಿಯಲ್ಲಿ ಮಾತನಾಡುವಾಗ ಟಾ... ...ರವರು ಹೇಳಿದುದಿದು —

'ಬ್ರಿಟಿಷ್ ಅಧಿಕಾರಿಗಳಿಗೆ ಬ್ರಿಟಿಷ್ ವೈದ್ಯರಿಂದಲೇ ಚಿಕಿತ್ಸೆಯನ್ನು ದೊರಕಿಸಬೇಕೆಂಬ ತತ್ವವನ್ನು ಅನುಸರಿಸಲಾಗಿದೆ '

...ಯೇ ಭಾರತೀಯ ಜನರಿಗೆ ಭಾರ...ಯ ಅಧಿಕಾರಿಗಳಿಂದಲೇ ಆಡಳಿತವಾ...ಬೇಕು ತತ್ವವನ್ನೇಕೆ ಅಂಗೀಕರಿಸ...ದು '

* * *

...ಕರಿಗೂ ಬಹಿಷ್ಕಾರ ನೀತಿ.

...ಂಡಿನ ಗಾಂಧಿಯವರ ವಿಚಾರ...ಹಾಕಿರುವ ನಿರ್ಬಂಧಗಳನ್ನು ವಿಮ...ಲು ಕಾಂಗ್ರೆಸ್ಸಿನವರು ಅಸಂಬ್ಲಿಯಲ್ಲಿ ...ಯ ಸೂಚನೆಯನ್ನು ತಂದರು ...ವಕ್ಕೆ ಅನುಮತಿಯೇ ದೊರೆಯಲಿಲ್ಲ. ...ಗಿಯೇ ತಕರಾರು ಬರುವ ಸೂಚನೆ...ಗೆಲ್ಲಾ ಬಹಿಷ್ಕಾರ ಹಾಕಬೇಕೆಂಬ ...ವಂದ ಇದೆಯೇ ?

* * *

...ವ್ಯಾಪ

...ಗೇ ಮುಸ್ಲಿಂ ಲೀಗಿನಿಂದ ಅವರ ...ಗಿದ್ದ ಪ್ರಜಾಪಕ್ಷದವರು ಮಿ|| ...ಲ್ ಹಾಕ್ ರವರ ನಾಯಕತ್ವದಲ್ಲಿ ...ಹೊರಟರು.

...ವನ್ನು ಛಿದ್ರಮಾಡಲು ಹೊರಟ ...ತಾವೇ ಛಿದ್ರವಾಗುತ್ತಿರುವುದೇ ...ಸಿತ್ತು.

ಊರಸೂರೆ ಹೆಬ್ಬಾಗಿಲಭದ್ರ

ಅಬ್ಸೀನಿಯದ ಕಥೆಯೆಲ್ಲಾ ಪೂರೈಸಿದ್ದರೂ ಬಾಯ್ಬಡುಕ ಲೀಗಿನವರ ಚರ್ಚೆ ಮುಗಿದಿಲ್ಲ

ಅಬ್ಸೀನಿಯಾ ದೇಶದ ಪ್ರತಿನಿಧಿಯನ್ನು ಒಂದು ರಾಷ್ಟ್ರ ಪ್ರತಿನಿಧಿಯೆಂದು ಪರಿಗಣಿಸಬೇಕೇ, ಬೇಡವೇ ಎಂಬುದನ್ನು ಈಗ ಚರ್ಚಿಸುತ್ತಿದ್ದಾರ

ಇವರೇನು ನಿರ್ಧರಿಸಿದರೂ ಮುಸೋಲಿನಿಗೆ ಒಂದೇ ಅವನಂತೂ ತಾನು ಹಿಡಿದಿರುವ ಪಟ್ಟನ್ನು ಬಿಡುವುದಿಲ್ಲ

ಆದದ್ದಾಯಿತು, ಇನ್ನು ಮೇಲೆ ಬೇಡ

ಅಸ್ಸಾಂ ಸರ್ಕಾರದವರು ಒದುವ ಚು ನಾವಣೆಯ ವಿಷಯವಾಗಿ ಒಂದು ಆಜ್ಞೆಯನ್ನು ಹೊರಡಿಸಿದ್ದಾರೆ

ಯಾವ ಸರ್ಕಾರೀ ಅಧಿಕಾರಿಗಳೂ ಚುನಾವಣೆಯಲ್ಲಿ ಭಾಗವಹಿಸಕೂಡದೆಂದು ಅವರು ತಿಳಿಸಿರುವರು

ಹಾಗಾದರೆ ಇಲ್ಲಿಯವರೆಗೂ ಅಧಿಕಾರಿಗಳು ಭಾಗವಹಿಸುತ್ತಿದ್ದರೆಂದು ಅರ್ಥವೋ ?

: ಚಾ — ಚಾ :

ನಾಚಾ ಪ್ರವೃತ್ತಿ, ನಾಚಾ ನಿವೃತ್ತಿ

ಸ್ಪೇನ್ ದೇಶದಲ್ಲಿ ದಂಗೆಕೋರರು ವಿಷವಾಯು ಪ್ರಯೋಗವನ್ನು ಮಾಡಕೂಡದೆಂದು ಎಚ್ಚರಿಕೆಯನ್ನು ಬ್ರಿಟಿಷ್ ಸರಕಾರದವರು ಕಳುಹಿಸಿದ್ದಾರೆ

ಅಬ್ಸೀನಿಯಾ ಯುದ್ಧವಾಗುತ್ತಿದ್ದಾಗಲೂ ಮುಸೋಲಿನಿಗೆ ಇಂತಹ ಎಚ್ಚರಿಕೆಯನ್ನು ಕಳುಹಿಸಿದ್ದರು

ಅದರ ಕೃತಜ್ಞತೆ ಮಾಡಿದುದೇನು ?

* * *

ಅಧಿಕಾರ ದರ್ಪ.

ಗಾಂಧಿಟೋಪಿ ಹಾಕಿದ್ದರೂ ಗವರ್ನರ್‌ಗಳ ಜಂಭ ತಪ್ಪುವಂತೆ ತೋರಲಿಲ್ಲ

ಮಧ್ಯಪ್ರಾಂತ್ಯದ ಹಂಗಾಮಿ ಗವರ್ನರಾದ ಶ್ರೀ ರಾಘವೇಂದ್ರರಾಯರನ್ನು ಅವರ ಹಳೆಯ ಪ್ರೀತಿಸ್ನೇಹಿತನಾಗಿದ್ದ ಠಪ್ಪಲ್ ಅಧಿಕಾರಿಯೊಬ್ಬನು "ಯುವರ್ ಎಕ್ಸಲೆನ್ಸಿ" ಎಂದು ಸಂಬೋಧಿಸದೆ ಮಾತನಾಡಿಸಿದ ನಷ್ಟೆ.

ಆ ಅಧಿಕಾರಿಗೆ ನೋಟೀಸಿಲ್ಲದೆ ಕೆಲಸದಿಂದ ವಜಾ ಮಾಡಿದ್ದಾರ

ದೌಲತ್ತಿನ ಫಲಶ್ರುತಿ! ಇವರಿಗೆ ಆಗಲೇ ತಮ್ಮ ಹಂಗಾಮಿ ಗೌರ್ನರ್ ಪದವಿಯೂ ನಿವೃತ್ತಿಯಾಯಿತು

ಪುರಾಣ ವೈರಾಗ್ಯ.

ಕಳೆದ ಪೌರಸಭೆಯ ಮೀಟಿಂಗಿನಲ್ಲಿ ಚರ್ಚೆಯ ಬಿರುಸಿನಲ್ಲಿ ಮಿ|| ಎಚ್. ಸಿ ದಾಸಪ್ಪನವರು—' ಸಾಕು, ಸ್ವಾಮಿ, ಈ ಕೌನ್ಸಿಲ್ಲು ಸಾಕಾಗಿದೆ"

ಅಧ್ಯಕ್ಷರು--' ಅಯ್ಯೋ, ಅಯ್ಯೋ ಎಲ್ಲಿಯಾದರೂ ಉಂಟೆ ' ನಿಮ್ಮ ಸೇವೆ ಇನ್ನೂ ಪರಂಪರೆಯಾಗಿ ನಡೆಯಬೇಕಾಗಿದೆ " ಎಂದರು

ಇನ್ನೇನು ಚುನಾವಣೆಗಳು ಬಂತಲ್ಲ ಆಳಿಯನ ಕುರುಡು ಬೆಳಗಾದಮೇಲೆ

* * *

ದ್ವಿಮುಖ ಸರ್ಕಾರ

ಶ್ರೀ ಸತ್ಯನಾರಾಯಣ ಸಿಂಹಾರವರು ಬೀಹಾರ್ ಗವರ್ನರ ಕೃತ್ಯಗಳ ವಿಷಯವಾಗಿ ಕೇಂದ್ರ ಶಾಸನ ಸಭೆಯಲ್ಲಿ ಒಂದು ಪ್ರಶ್ನೆಯನ್ನು ಕೇಳಿದರು

ಅದಕ್ಕೆ ಅನುಮತಿ ದೊರೆಯಲಿಲ್ಲ. ಅದು ಪ್ರಾಂತಿಕ ಪ್ರಶ್ನೆಯೆಂದು ಕಾರಣವನ್ನು ಕೊಟ್ಟರು

ಆದರೆ ಪ್ರಾಂತಿಕ ಶಾಸನ ಸಭೆಯವರೂ ಇದನ್ನು ಕೇಳಲು ಅಧಿಕಾರವಿಲ್ಲದುದರಿಂದ ಗವರ್ನರರನ್ನು ಕೇಳುವವರೇ ಇಲ್ಲ.

ಅಂತೂ ದ್ವಿಮುಖ ಸರ್ಕಾರದ ವ್ಯಾಘ್ರಮುಖವು ಇಲ್ಲಿ ಹೊರಕಾಣುತ್ತಿದೆ.

ಎಲ್ಲಾ ಅಂಧರ ದರ್ಬಾರು

ಮೆಕ್ಸಿಕೋ ದೇಶದ ಟೆಪ್ಪೆಪೆಕ್ ಎಂಬಲ್ಲಿ ವಾಸಿಸುವ ಪ್ರತಿಯೊಬ್ಬರೂ ಕುರುಡರೇ ಆಗಿರುವರು

ಇವರಿಗೆ ಮಕ್ಕಳು ಹುಟ್ಟಿದಲ್ಲಿ, ಅವರೂ ಆಜನ್ಮ ಕುರುಡರಾಗಿರುತ್ತಾರೆ ಆಕಸ್ಮಾತ್ ಕಣ್ಣು ಸರಿಯಾಗಿದ್ದಲ್ಲಿ ಒಂದೆರಡು ತಿಂಗಳಲ್ಲಿಯೇ ಇಂಗಿ ಹೋಗುವುವು

ಜನರು ಈ ಅಂಧತ್ವವು " ಲಾವೆಗ್ಸ್ಟಿಂಜಾ " ಎಂಬ ಅಲ್ಲಿನ ಮೂಲಿಕೆಯ ವಿಷವಾಯು ಪ್ರಭಾವವೆಂದು ಹೇಳುವರು

* * *

ಸಂಬಂಧವೋ ಅಸಂಬದ್ಧವೋ!

ಹೌರಾ ಸೇತುವೆಯ ನಿರ್ಮಾಣ ಕಾರ್ಯವನ್ನು ಭಾರತೀಯ ಕಂಪೆನಿಗೆ ಕೊಡದೆ, ಬ್ರಿಟಿಷ್ ಕಂಪೆನಿಗೆ ಕೊಟ್ಟ ವಿಷಯವಾಗಿ ಅಸಂಬ್ಲಿಯಲ್ಲಿ ಪ್ರಶ್ನೆ ಬಂದಿತ್ತು

ಅದು " ನಮಗೆ ಸಂಬಂಧಪಟ್ಟುದಲ್ಲ " ಎಂದು ಹೇಳಿ ಅದನ್ನು ತಳ್ಳಿಹಾಕಲಾಯಿತು

ಬ್ರಿಟಿಷ್ ಕಂಪೆನಿಗೆ ಕೊಡದ ಜರ್ಮನಿಯ ಕಂಪೆನಿಗೆ ಕೊಟ್ಟಿದ್ದರ

ಖಂಡಿತ ಆಗ ಸರ್ಕಾರಕ್ಕೆ ಸಂಬಂಧಪಡುತ್ತಿತ್ತಲ್ಲವೆ ?

* * *

ಬಿಳಿ ಖೈದಿಗಳ ಯೋಗ.

ಚೆಂಡಾ ಗ್ರಾಮಸ್ಥರಮೇಲೆ ಅತ್ಯಾಚಾರಗಳನ್ನು ನಡಸಿದ ಕೆಲವು ಬ್ರಿಟಿಷ್ ಸೋಲ್ಜರುಗಳನ್ನು ಕಾರಾಗೃಹ ವಾಸಕ್ಕೆ ನ್ಯಾಯಾಧೀಶರು ಗುರಿಮಾಡಿದ್ದರು

ಅವರಿಗೆಲ್ಲಾ "ಬಿ' ತರಗತಿಯ ಸೌಕರ್ಯವನ್ನು ನೀಗಿಸಿದ್ದಾರೆಯಂತೆ!

ಮಾಡಿರುವುದು ಮಹಾಪರಾಧ—ಅದರೂ ಅವರಿಗೆ ಉಪಚಾರ!

* * *

ಸ್ವೀಕಾರ

ಚಿತ್ರದುರ್ಗದಲ್ಲಿ ಕೆ ಎಂ ರಾಜಶೇಖರಯ್ಯನವರ ಸಂಪಾದಕತ್ವದಲ್ಲಿ ಹೊರಡುವ " ಸತ್ಯವಾಣಿ " ಎಂಬ ವಾರಪತ್ರಿಕೆಯ ಪ್ರಥಮ ಸಂಚಿಕೆಯನ್ನು ಆನಂದಾದರದಿಂದ ಸ್ವೀಕರಿಸಿದ್ದೇವೆ ಈ ಪತ್ರಿಕೆಯ ವಾರ್ಷಿಕ ಚಂದಾ ಎರಡು ರೂಪಾಯಿಗಳು ಮಾತ್ರ ಈ ರಾಷ್ಟ್ರೀಯ ಪತ್ರಿಕೆಯು ನಿರಂತರವೂ ಪ್ರಜಾಸೇವೆ ಮಾಡಲೆಂದು ಆಶಿಸುತ್ತೇವೆ

OLYMPIA TALKIES, MYSORE.
From 11-9-1936.
"CHANDRASENA"
(in Tamil)

ಒಲಂಪಿಯಾ ಟಾಕೀಸ್, ಮೈಸೂರು.
11—9—36 ನೇ ಶುಕ್ರವಾರದಿಂದ ಪ್ರಾರಂಭ
“ಚಂದ್ರಸೇನ”
(ತಮಿಳು ಭಾಷೆಯಲ್ಲಿ)

ಎರಡೇ ಸುಖಸಾಧನಗಳು

ಕಿಮೋನೊ — (ಗಂಡಸರಿಗೆ) ಅತ್ಯುತ್ತಮವಾದ ರಬ್ಬರು ಸಾಧನ. ರತ್ತಿ ... ಡೆಗೆ ಆತಂಕವಿಲ್ಲ. ಗರ್ಭೋತ್ಪತ್ತಿ ... ಚಡಂಕೆಯಿಲ್ಲ ಮೇಹರೋಗದ ... ಯಿಲ್ಲ. ಬೆಲೆ ೧—೮—೦

ಪ್ಯಾರಗನ್ — (ಹೆಂಗಸರಿಗೆ) ... ಸರ ಗರ್ಭನಿವಾರಣೆಗೆ ಅತ್ಯುತ್ತಮ ಸಾಧನ. ಕ್ರೀಡಾ ಸಮಯದಲ್ಲಿ ... ಸತಕ್ಕದ್ದು ಬೆಲೆ ೩—೮—೦

ಕೇಟಲಾಗು ಉಚಿತ.
ಆಂಧ್ರಾ ಟ್ರೇಡಿಂಗ್ ಕಂಪೆನಿ,
ಕೃಷ್ಣಪ್ಪನಾಯಕನ ಬೀದಿ, ಮದರಾ(ಸು)

THE SADHVI
RECOMMENDED FOR SCHOOL
BY THE DEPARTMENT
No. TI 3778-146—35 36
OFFICE OF THE DIRECTOR OF PUBLIC INSTRUCTION IN MYSORE

ಭಿಷಗ್ರತ್ನ ಆಯುರ್ವೇದ ಸಿದ್ಧಾಂತ ಬಿ. ವಿ. ಪಂಡಿತರ
ಬಾಲಸುಧಾ

ಮಕ್ಕಳ ಜ್ವರದ ಗೆಡ್ಡೆಯನ್ನು ಬೇಗನೆ ಗುಣ ಪಡಿಸುತ್ತೆ. ಲಿವರ್ (ಪಿತ್ತಕೋಶ) ದೊಡ್ಡದಾಗಿ ಕಣ್ಣು ಹಳದಿ ಬಣ್ಣವಾಗಿದ್ದರೆ ಇದರ ಸೇವನೆಯಿಂದ ದಿನೇ ದಿನೇ ಗುಣವಾಗುತ್ತೆ. 30 ವರ್ಷಗಳಿಂದಲೂ ಅನುಭವ ಸಿದ್ಧವಾಗಿದೆ—ಮಕ್ಕಳ ಬೇದಿಗೆ ನಮ್ಮ ಬಾಲ ಸಂಜೀವಿನಿಯನ್ನೇ ಉಪಯೋಗಿಸಿರಿ

ಬಾಲಸುಧಾ ಬೆಲೆ 1 ರೂ ಬಾಲಸಂಜೀವಿನಿ 4 ಆ

ಮೈಸೂರು, ಬೆಂಗಳೂರು, ಮದ್ರಾಸುಗಳಲ್ಲಿ ನಮ್ಮ ಶಾಖೆಗಳಿವೆ.
ಸದ್ವೈದ್ಯಶಾಲಾ, ನಂಜನಗೂಡು

ಎಂ. ವಿ. ನಾರಾಯಣರಾಯರ
ಶ್ರೀ ಸತ್ಯನಾರಾಯಣ ಪರಿಮಳ ಫ್ಯಾಕ್ಟರಿ,
ಜಗನ್ಮೋಹನ ಬಂಗ್ಲಾ ಬೀದಿ, ಮೈಸೂರು
ಪರಿಮಳ ಅಗರ್ ಬತ್ತಿ
ಉಪಯೋಗಿಸಿ ಪ್ರೋತ್ಸಾಹಿಸಿರಿ

ANANDA SODA FACTORY,
BEST AERATED WATER SUPPLIERS.
COMPLETE REQUISITES FOR
AERATED WATER MANUFACTURERS
AVAILABLE
ಆನಂದಾ ಸೋಡಾ ಫ್ಯಾಕ್ಟರಿ,
ದೊಡ್ಡ ಪೇಟೆ, ಮೈಸೂರು

HARD DAYS!
HAVE YOU SEEN THE MIRACULOUS EFFECTS OF ?
:: :: ATTRACTIVE :: ::
POSTERS
—— FROM ——
ANANTHA PRESS,
P. O TURUVEKERE
—o—
(Poster Printers to Gubbi Theatrical Co., Chamundeswari Talkies and other leading Co s.)
IF NOT, TRY THEM TO-DAY.
—: FOR SERVICE CALL ON —
V Subba Rao C/o SADHVI OFFICE,
(Sri Rama Press, D. Subbiah Road, Mysore)

॥ ಸತ್ಯಮೇವೋದ್ಧರಾಮ್ಯಹಮ್ ॥

ರಾಜಧಾನಿಯ ರಾಷ್ಟ್ರೀಯ ವಾರ ಪತ್ರಿಕೆ.

ವೃದ್ಧ ಪಿತಾಮಹ ಎಂ. ವೆಂಕಟಕೃಷ್ಣಯ್ಯನವರ ಜ್ಞಾಪಕಾರ್ಥವಾಗಿ ಪ್ರಕಟಿಸಲ್ಪಡುವುದು

ಸಂಪಾದಕರು ಅಗರಂ ರಂಗಯ್ಯ, ಬಿ ಎ

ಸಂಪುಟ ೧] MYSORE : MONDAY 14-9-36 ಮೈಸೂರು : ಸೋಮವಾರ ೧೪-೯-೩೬ [ಸಂಚಿಕೆ ೩೦

...ರು ಹೆಚ್ಚು ?

...ಟೋರಿನ ಸ್ತ್ರೀಯ ಸಂಸ್ಥಾನದ ... ಒಂದು ವಸ್ತ್ರ ... ಒಂದು ..., ನಾಲ್ಕಾಣೆ, ಆರು ಕಾಸನ್ನು ...ಟ್ಟರಂತೆ

...ಗ ಬರುತ್ತಿದ್ದ ಸಾಮಾನ್ಯ ... ರೂಪಾಯಿಯನ್ನು ಕೊಟ್ಟ...

...ಲಿ ನಮ್ಮ ಸಂಸ್ಥಾನದಲ್ಲಿಯೋ ...ಯಲ್ಲಿ ಒಂದಾಣೆಯ ... ಸೀಸ ...ದು ರೂಪಾಯಿ ... ಮಾಡಿ ...ಕೊಂಡಿರುವರಂತೆ!

...ರು ಹೆಚ್ಚು ?

* * *

ಮಗೆ ಬೇಡವ?

...ಯಲ್ಲಿ ಮಾತನಾಡುವಾಗ ಓ... ...ರವರು ಹೇಳಿದುದಿದು —

ಬ್ರಿಟಿಷ್ ಅಧಿಕಾರಿಗಳಿಗೆ ಬ್ರಿ... ...ರ್ ವೈದ್ಯರಿಂದಲೇ ಚಿಕಿತ್ಸೆಯ... ...ನ್ನು ದೊರಕಿಸಬೇಕೆಂಬ ತತ್ವವ... ...ನ್ನು ಅನುಸರಿಸಲಾಗಿದ'

...ಯ ಭಾರತೀಯ ಜನರಿಗೆ ಭಾರ... ...ಅಧಿಕಾರಿಗಳಿಂದಲೇ ಆಡಳಿತವಾ... ...ತವ ತತ್ವವನ್ನೇಕೆ ಅಂಗೀಕರಿಸ... ...ವು

* * *

...ರಿ ಹೊ ಬಹಿಷ್ಕಾರ ನೀತಿ

...ದಿನ ಗಾಂಧಿಯವರ ವಿಚಾರ... ...ರುವ ನಿರ್ಬಂಧಗಳನ್ನು ಕಿಮು... ...ಕಾಂಗ್ರೆಸ್ಸಿನವರು ಅಸಂಬ್ಲಿಯಲ್ಲಿ ... ಸೂಚನೆಯನ್ನು ತಂದರು ...ಕ್ಕೆ ಅನುಮತಿಯೇ ದೊರಯಲಿಲ್ಲ ...ಯ ತಕರಾರು ಬರುವ ಸೂಚನೆ ...ಲ್ಲ ಬಹಿಷ್ಕಾರ ಹಾಕಬೇಕೆಂಬ ...ಎಂದು ಇದಯೇ?

* * *

ವ್ಯಾಜ

... ಮುಸ್ಲಿಂ ಲೀಗಿನಿಂದ ಆದರ... ...ಗಿದ್ದ ಪ್ರಜಾಪಕ್ಷದವರು ಮಿ॥ ...ರ್ ಹಾಕ್‌ರವರ ನಾಯಕತ್ವದಲ್ಲಿ ...ದ್ದಾರೆ ...ನ್ನು ಛಿದ್ರಮಾಡಲು ಹೊರಟ ...ವರೇ ಛಿದ್ರವಾಗುತ್ತಿರುವುದೇ ...ಗುತ್ತಿತ್ತು.

ಊರಸೂರೆ ಹೆಬ್ಬಾಗಿಲಭದ್ರ

ಅಬ್ಸೀನಿಯದ ಕಥೆಯೆಲ್ಲಾ ಪೂರೈಸಿದ್ದರೂ ಬಾಯ್ಬಡುಕ ಲೀಗಿನವರ ಚರ್ಚೆ ಮುಗಿದಿಲ್ಲ

ಅಬ್ಸೀನಿಯಾ ದೇಶದ ಪ್ರತಿನಿಧಿಯನ್ನು ಒಂದು ರಾಷ್ಟ್ರ ಪ್ರತಿನಿಧಿಯೆಂದು ಪರಿಗಣಿಸಬೇಕೇ, ಬೇಡವೇ ಎಂಬುದನ್ನು ಈಗ ಚರ್ಚಿಸುತ್ತಿದ್ದಾರೆ

ಅವರೇನು ನಿರ್ಧರಿಸಿದರೂ ಮುಸೋಲಿನಿಗೆ ಬಂದೇ? ಅವನಂತೂ ತಾನು ಹಿಡಿದಿರುವ ಪಟ್ಟನ್ನು ಬಿಡುವುದಿಲ್ಲ

ವಾಚಾ ಪ್ರವೃತ್ತಿ, ವಾಚಾ ನಿವೃತ್ತಿ

ಸ್ಪೇನ್ ದೇಶದಲ್ಲಿ ದಂಗೆಕೋರರು ವಿಷವಾಯು ಪ್ರಯೋಗವನ್ನು ಮಾಡಕೂಡದೆಂದು ಎಚ್ಚರಿಕೆಯನ್ನು ಬ್ರಿಟಿಷ್ ಸರಕಾರದವರು ಕಳುಹಿಸಿದ್ದಾರೆ

ಅಬ್ಸೀನಿಯಾ ಯುದ್ಧವಾಗುತ್ತಿದ್ದಾಗಲೂ ಮುಸೋಲಿನಿಗೆ ಇಂತಹ ಎಚ್ಚರಿಕೆಯನ್ನು ಕಳುಹಿಸಿದ್ದರು.

ಅವರೆ ಕೃತಃ ಮಾಡಿದುದೇನು ?

* * *

ಅಧಿಕಾರ ದರ್ಪ.

ಗಾಂಧಿಟೋಪಿ ಹಾಕಿದ್ದರೂ ಗವರ್ನರ್‌ಗಳ ಜಂಭ ತಪ್ಪುವಂತೆ ತೋರಲಿಲ್ಲ

ಮಧ್ಯಪ್ರಾಂತ್ಯದ ಹಂಗಾಮಿ ಗವರ್ನರಾದ ಶ್ರೀ ರಾಘವೇಂದ್ರರಾಯರನ್ನು ಅವರ ಹಳೆಯ ಪ್ರೀತಿಸ್ನೇಹಿತನಾಗಿದ್ದ ಸೈನ್ಯ ಅಧಿಕಾರಿಯೊಬ್ಬನು 'ಯುವರ್ ಎಕ್ಸೆಲೆನ್ಸಿ' ಎಂದು ಸಂಬೋಧಿಸದೆ ಮಾತನಾಡಿಸಿದ ನಷ್ಟೆ.

ಆ ಅಧಿಕಾರಿಗೆ ನೋಟೀಸಿತ್ತದ ಕೆಲಸದಿಂದ ವಜಾ ಮಾಡಿದ್ದಾರೆ

ದೌಲತ್ತಿನ ಫಲಿತಾಂಶ! ಇವರಿಗೆ ಆಗಲೇ ತಮ್ಮ ಹಂಗಾಮಿ ಗೌರ್ನರ ಪದವಿಯೂ ನಿವೃತ್ತಿಯಾಯಿತು

ಆದದ್ದಾಯಿತು, ಇನ್ನು ಮೇಲೆ ಬೇಡ

ಅಸ್ಸಾಂ ಸರ್ಕಾರದವರು ಒರುವ ಚುನಾವಣೆಯ ವಿಷಯವಾಗಿ ಒಂದು ಆಜ್ಞೆಯನ್ನು ಹೊರಡಿಸಿದ್ದಾರೆ

ಯಾವ ಸರ್ಕಾರೀ ಅಧಿಕಾರಿಗಳೂ ಚುನಾವಣೆಯಲ್ಲಿ ಭಾಗವಹಿಸಕೂಡದೆಂದು ಅವರು ತಿಳಿಸಿರುವರು

ಹಾಗಾದರೆ ಇಲ್ಲಿಯವರೆಗೂ ಅಧಿಕಾರಿಗಳು ಭಾಗವಹಿಸುತ್ತಿದ್ದರೆಂದು ಅರ್ಥವೋ ?

ಪುರಾಣ ವೈರಾಗ್ಯ.

ಕಳೆದ ಪೌರಸಭೆಯ ಮೀಟಿಂಗಿನಲ್ಲಿ ಚರ್ಚೆಯ ವಿದುಸಿನಲ್ಲಿ ಮಿ॥ ಎಲ್ ಸಿದಾಸಪ್ಪನವರು—'ಸಾಕು, ಸ್ವಾಮಿ, ಈ ಕೌನ್ಸಿಲ್ಲು ಸಾಕಾಗಿದೆ'

ಅಧ್ಯಕ್ಷರು — 'ಅಯ್ಯೋ, ಅಯ್ಯೋ ಎಲ್ಲಿಯಾದರೂ ಉಂಟೆ! ನಿಮ್ಮ ಸೇವೆ ಇನ್ನೂ ಪರಂಪರೆಯಾಗಿ ನಡೆಯಬೇಕಾಗಿದೆ' ಎಂದರು

ಇನ್ನೇನು ಚುನಾವಣೆಗಳು ಬಂತಲ್ಲ ಆಳಿಯನ ಕುರುಡು ಬೆಳಗಾದಮೇಲೆ

* * *

ದ್ವಿಮುಖ ಸರ್ಕಾರ

ಶ್ರೀ ಸತ್ಯನಾರಾಯಣ ಸಿಂಹಾರವರು ಬೀಹಾರ್ ಗವರ್ನರ ಕೃತ್ಯಗಳ ವಿಷಯವಾಗಿ ಕೇಂದ್ರ ಶಾಸನ ಸಭೆಯಲ್ಲಿ ಒಂದು ಪ್ರಶ್ನೆಯನ್ನು ಕೇಳಿದರು

ಅದಕ್ಕೆ ಅನುಮತಿ ದೊರೆಯಲಿಲ್ಲ ಅದು ಪ್ರಾಂತಿಕ ಪ್ರಶ್ನೆಯೆಂದು ಕಾರಣವನ್ನು ಕೊಟ್ಟರು

ಆದರೆ ಪ್ರಾಂತಿಕ ಶಾಸನ ಸಭೆಯವರೂ ಇದನ್ನು ಕೇಳಲು ಅಧಿಕಾರವಿಲ್ಲದುದರಿಂದ ಗವರ್ನರರನ್ನು ಕೇಳುವವರೇ ಇಲ್ಲ

ಅಂತೂ ದ್ವಿಮುಖ ಸರ್ಕಾರದ ವ್ಯಾಘ್ರ ಮುಖವು ಇಲ್ಲಿ ತೋರಕಾಣುತ್ತಿದೆ

ಎಲ್ಲಾ ಅಂಧರ ದರ್ಬಾರು

ಮೆಕ್ಸಿಕೋ ದೇಶದ ಚಿಪ್ಪೆವೆರ್ ಎಂಬಲ್ಲಿ ವಾಸಿಸುವ ಪ್ರತಿಯೊಬ್ಬರೂ ಕುರುಡರೇ ಆಗಿರುವರು

ಇವರಿಗೆ ಮಕ್ಕಳು ಹುಟ್ಟಿದಲ್ಲಿ, ಅವರೂ ಆಜನ್ಮ ಕುರುಡರಾಗಿರುತ್ತಾರೆ ಅಕಸ್ಮಾತ್ ಕಣ್ಣು ಸರಿಯಾಗಿದ್ದಲ್ಲಿ ಒಂದೆರಡು ತಿಂಗಳಿನಲ್ಲಿಯೇ ಇಂಗಿ ಹೋಗುವುವು

ಜನರು ಈ ಅಂಧತ್ವವು 'ಲಾವಿಗ್ರೆಂಜಾ" ಎಂಬ ಅಲ್ಲಿನ ಮೂಲಿಕೆಯ ವಿಷವಾಯು ಪ್ರಭಾವವೆಂದು ಹೇಳುವರು

* * *

ಸಂಬಂಧವೋ ಅಸಂಬದ್ಧವೋ!

ಹೌರಾ ಸೇತುವೆಯ ನಿರ್ಮಾಣ ಕಾರ್ಯವನ್ನು ಭಾರತೀಯ ಕಂಪೆನಿಗೆ ಕೊಡದೆ, ಬ್ರಿಟಿಷ್ ಕಂಪೆನಿಗೆ ಕೊಟ್ಟ ವಿಷಯವಾಗಿ ಅಸಂಬ್ಲಿಯಲ್ಲಿ ಪ್ರಶ್ನೆ ಬಂದಿತ್ತು

ಅದು "ನಮಗೆ ಸಂಬಂಧಪಟ್ಟುದಲ್ಲ" ಎಂದು ಹೇಳಿ ಅದನ್ನು ತಳ್ಳಿಹಾಕಲಾಯಿತು

ಬ್ರಿಟಿಷ್ ಕಂಪೆನಿಗೆ ಕೊಡದೆ ಜರ್ಮನಿಯ ಕಂಪೆನಿಗೆ ಕೊಟ್ಟಿದ್ದರೆ ?

ಖಂಡಿತ ಆಗ ಸರ್ಕಾರಕ್ಕೆ ಸಂಬಂಧ ಪಡುತ್ತಿತ್ತಲ್ಲವೆ ?

* * *

ಬಿಳಿ ಖೈದಿಗಳ ಯೋಗ

ಬೆಂಗಾಲ ಗ್ರಾಮಸ್ಥರಮೇಲೆ ಅತ್ಯಾಚಾರಗಳನ್ನು ನಡಸಿದ ಕೆಲವು ಬ್ರಿಟಿಷ್ ಸೋಲ್ಜರುಗಳನ್ನು ಕಾರಾಗೃಹ ವಾಸಕ್ಕೆ ನ್ಯಾಯಾಧೀಶರು ಗುರಿಮಾಡಿದ್ದರು.

ಅವರಿಗೆಲ್ಲಾ "ಬಿ ತರಗತಿಯ ಸೌಕರ್ಯವನ್ನೂ ನೀಡಿರುವರಂತೆ!

ಮಾಡಿರುವುದು ಮಹಾಪರಾಧ—ಆದರೂ ಅವರಿಗೆ ಉಪಚಾರ!

* * *

ಸ್ವೀಕಾರ

ಚಿತ್ರದುರ್ಗದಲ್ಲಿ ಕೆ ಎಂ ರಾಜಶೇಖರಯ್ಯನವರ ಸಂಪಾದಕತ್ವದಲ್ಲಿ ಹೊರಡುವ "ಸತ್ಯವಾಣಿ" ಎಂಬ ವಾರಪತ್ರಿಕೆಯ ಪ್ರಥಮ ಸಂಚಿಕೆಯನ್ನು ಆತ್ಮಾದರದಿಂದ ಸ್ವೀಕರಿಸಿದ್ದೇವೆ ಈ ಪತ್ರಿಕೆಯ ವಾರ್ಷಿಕ ಚಂದಾ ಎರಡು ರೂಪಾಯಿಗಳು ಮಾತ್ರ ಈ ರಾಷ್ಟ್ರೀಯ ಪತ್ರಿಕೆಯು ನಿರಂತರವೂ ಪ್ರಜಾಸೇವೆ ಮಾಡಲೆಂದು ಆಶಿಸುತ್ತೇವೆ

ಮಿಡಿದ ವೀಣೆ.

ಲೇಖಕ:—ಕೆ. ಎಸ್. ಕೃಷ್ಣಮೂರ್ತಿರಾವ್.

ಮಿಡಿದ ವೀಣೆ.

———

ನಾನು ಈ ದಿವಸ ಎದ್ದಾಗ ಏಳುಗಂಟೆ. ನೋಡಿದ ಶಾರಿ ಅಲ್ಲಿರಲಿಲ್ಲ. ಬಹಳ ಹೊತ್ತಿಗೇ ಎದ್ದು ಬಹಳಹೊತ್ತು ಆಗಿರಬೇಕು ಮುಖ ತೊಳದವನು ದಿವಾನಖಾನೆಯಲ್ಲಿ ಕುಳಿತೆ.

ಹಾಗಯೇ ಏನೇನೋ ಯೋಚಿಸುತ್ತಾ ನನ್ನನ್ನು ನಾನೇ ಮರೆತಿದ್ದೆ. ಇದ್ದಕ್ಕಿದ್ದಂತಯೇ "ಕಾಫಿ ಆರಿಹೋಗುತ್ತದೆ" ಎಂಬ ಧ್ವನಿ ನನ್ನ ಕಿವಿಗೆ ಬಂದು ಬಡಿಯಿತು. ಹೌದು, ಅದು ನನ್ನ ಶಾರಿಯ ಧ್ವನಿ.

ಬಾ, ಶಾರಿ ಕುಳಿತುಕೊ.

ಇಲ್ಲ ನೀವು ಕುಡಿಯಿರಿ, ನನಗೆ ಒಳಗೆ ಕೆಲಸವಿದೆ ಹೋಗುತ್ತೇನೆ

ಹಾಗಲ್ಲ ನೀನೂ ಕುಳಿತುಕೋ. ನಿನ್ನದು ಕಾಫಿ ಆಯಿತ?

ಇಲ್ಲ, ಒಳಗಿಟ್ಟಿದ್ದೇನೆ, ತೆಗೆದುಕೊಳ್ಳುತ್ತೇನೆ

ನೀನೇ ಕುಳಿತುಕೊ ನಾನೇ ಹೋಗಿ ತರುತ್ತೇನೆ

ಬೇಡಿ, ನಾನೆ, ತರುತ್ತೇನೆ, ಎಂದು ಅವಳನ್ನು ಹೇಳಿದರೂ ಕೇಳದೆ ಒಳಗೆಹೋಗಿ ನೋಡುತ್ತೇನೆ! ಅಲ್ಲೇನಿದೆ? ಬರಿಯ ಪಾತ್ರೆ?

ಶಾರಿ, ನನಗೆ ಸುಳ್ಳು ಹೇಳುತ್ತೀಯಲ್ಲಾ?

ಸುಳ್ಳೇನು, ನೀವು ಹೊರಗೆ ಹೋಗುವವರು ಕುಡಿಯಿರಿ. ನನಗೇಕೆ ಮನೆಯಲ್ಲಿರುವವಳಿಗೆ?

ಹಾಗಲ್ಲ ಶಾರಿ. ನಿನ್ನದು ಜೀವವಲ್ಲವೇನು? ನೀನು ಕುಡಿಯಲೇಬೇಕು. ನೆನ್ನೆ ರಾತ್ರಿ ಬೇರೆ ಊಟವಿಲ್ಲ

ಸುಮ್ಮನೆ ಬಲವಂತ ಮಾಡಬೇಡಿ ನೀವು ಕುಡಿಯಿರಿ

ನನ್ನಾಣೆ ಶಾರಿ. ನೀನು ಕುಡಿಯದಿದ್ದರೆ ನಾನೂ ಕುಡಿಯುವುದಿಲ್ಲ

ಹೋಗಲಿ ಬಿಡಿ, ಸ್ವಲ್ಪ ಕೊಡಿ

ಹಾಗೆಯೇ ಮಾತನಾಡುತ್ತಾ ಕುಳಿತೆವು

ಎಷ್ಟಿತ್ತು ಶಾರಿ ಕಾಫಿ ಪುಡಿ?

ಪಕ್ಕದಮನೆ ರಂಗಮ್ಮನವರನ್ನು ಕೇಳಿದೆ ಮೊನ್ನೆತಾನೆ ಕೊಟ್ಟಿದ್ದರು, ನೋಡಿದ್ದೆ ಆದರೂ, "ಪುಡಿ ಮುಗಿದೇಹೋಗಿದೆ ಇಂದ್ರೆ ನಾವೂ ಐವತ್ತು ಕೊಟ್ಟಬೇಕು" ಎಂದರು ಬಹಳ ಸಂಕಟವಾಯ್ತು. ಏನ ವರನ್ನು ಕಂಡರೆ ಎಲ್ಲರಿಗೂ ಹೀಗೇ ಎಂದು ಕೊಂಡು ಹಿಂದಕ್ಕೆ ಬಂದ್ಬಿಟ್ಟೆ. ಎದುರು ಮನೇಲಿ ಬಾಡಿಗೆಗಿರೋ ಸಾವಿತ್ರಮ್ಮನವರು ಕರೆದು ನಾಲ್ಕು ಚಮಚ ಪುಡಿ ಕೊಟ್ಟರು. ಸಕ್ಕರೆಯೂ ಸ್ವಲ್ಪ ಇತ್ತು. ಅದಕ್ಕೇ ಒಂದೇ ಬಟ್ಟಲು ಕಾಯಿಸಿದೆ

ಏನೋ ಬಹಳ ತೊಂದರೆ ಶಾರಿ ನಿನ್ಗೆ ಆದರೆ ಮನೆಯವನು ಬಾಡಿಗೆಗ ಹೇಳಿ ಕಳುಹಿಸಿದ್ದ

"ಹೌದು ನೋಡಿ, ಹಾಲಿನವನೂ ಬಂದು ಕೇಳಿದ. ಏನುಮಾಡುವುದು ಶಾರಿ, ಎಲ್ಲಾ ಒಟ್ಟಿಗೇ ಬರುತ್ತವ. ಅಂಗಡಿಯವನ ಬಾಕಿ ಏರಿಹೋಗಿದೆ. ಅವನಿನ್ನೂ ಇನ್ನು ಸಾಮಾನು ಕೊಡುವುದಿಲ್ಲ . .

ಅಷ್ಟರಲ್ಲೇ ಬಾಗಿಲಿನ ಹತ್ತಿರ ಯಾರೋ ತಟ್ಟಿದಂತಾಯಿತು ಶಾರಿ ಒಳಗೆ ಹೋದಳು. ನಾನು ಬಾಗಿಲು ತೆಗೆದೆ. ಬಂದಿದ್ದವನು ಸೀತಾರಾಮು. ನಾನೂ ಅವನೂ ಸಹಪಾಠಿಗಳು ಒಟ್ಟಿಗೇ ಡಿಗ್ರಿ ತೆಗೆದುಕೊಂಡಿದ್ದವು. ಅವನಿಗೆ ಶಿಫಾರಸ್ಸಿತ್ತು. ಪೂನಾದಲ್ಲಿ ದೊಡ್ಡ ಹುದ್ದೆಯೂ ಸಿಕ್ಕಿತು. ನಾನೂ ಒಂದು ದೊಡ್ಡ ಉದ್ಯೋಗದಲ್ಲಿರಬಹುದು ಎಂದು ಊಹಿಸಿದ್ದ

ಯಾಕಯ್ಯಾ ಬಹಳ ಇಳಿದು ಹೋಗಿದ್ದಿ ರಾಜು

ನನ್ನೆಯಿಂದ ಮೈಗೆ ಸ್ವಲ್ಪ ಚೆನ್ನಾಗಿರಲಿಲ್ಲ ಅಷ್ಟೆ ರಾಮು

ಅಂದವಾಗೇ ಏನು ಮಾಡುತ್ತಿದಿಯಯ್ಯಾ, ಈಗ ನೀನು ಎಂಬ ಸ್ವಲ್ಪ ಮಾತುಕಥೆ ನಡೆದ ಮೇಲೆ,

ಬೆಂಗ್ಳೂರಲ್ಲಿ ಆಗ ಕ್ಲಾರ್ಕ್ ಆಗಿದ್ದನಪ್ಪ ಮನ್ನೆ ಒಂದು ತಿಂಗಳ ಕೆಳಗ ಒಮೂ ನೀನಾಯಿತು

'ಹೇಂ, ಹೇಂ," ಅಷ್ಟಯ್ಯಾ ಬಿ. ಎ., ನಾನು ಮೂಡಿ ಇಪ್ಪತ್ತು ರೂಪಾಯಿ ಕೆಲಸಕ್ಕೆ ಹೋಗುವುದೇನಯ್ಯಾ?

ಇಷ್ಟು ಹೊತ್ತಿಗೆ ನನ್ನ ಸಂಗಡ ಬೇಸರವಾಗಿರಬಹುದು, ತುಂಬಾ ಕೆಲಸವಿದೆ ಯೆಂದು ಹೇಳಿ ಹೊರಟೇ ಹೋದ

ಅಷ್ಟು ಹೊತ್ತಿಗೆ ಶಾರಿ ಬಂದಳು ಸ್ವಲ್ಪ ಹೊತ್ತು ಸೀತಾರಾಮು ಮಾತು ಆಯಿತು ಹಿಂದಿನದನ್ನೆಲ್ಲಾ ನೆನಸಿಕೊಂಡು ಅತ್ತಿದ್ದಾಯಿತು ಏನಾದರೇನು ಹೊಟ್ಟೆ ಸಂಕಟ ಇವಕ್ಕೆಲ್ಲಾ ಆರುತ್ತದೆಯೇ? ಹಸಿವು ಬಲವಾಯಿತು

ಇವತ್ತೇನು ಮಾಡುವುದು ಶಾರಿ"

ಹೀಗೆಯೇ ಮಾತನಾಡುತ್ತಾ ಕುಳಿತದಾಯಿತು.

ಅಯ್ಯೋ ಮಾತನಾಡುತ್ತಾ ಕುಳಿತರೆ ಹೊಟ್ಟೆ ತುಂಬುತ್ತದೆಯೇ ಶಾರಿ? ನೀನು ಉಪವಾಸಮಾಡುವುದನ್ನು ನಾನು ನೋಡಲಾರೆ ನೀನು ನನ್ನ ಮದುವೆಯಾಗ ಬಾರದಾಗಿತ್ತು ಶಾರಿ ನಾನೊಬ್ಬ ಪಾಪಿ

ಶಾರಿ ಕಣ್ಣೀರು ಸುರಿಸುತ್ತಾ ನನ್ನಾಣೆ ನೀವು ಹೀಗೆಲ್ಲಾ ಹೇಳಬಾರದು ಈಗೇನು ನನಗೆ ಕಮ್ಮಿ?

ಊಟ, ತಿಂಡಿ ಇಲ್ಲದೆ ಇದ್ದೀಯೆ ಆದರೂ ನನಗೇನು ಕಮ್ಮಿ ಎನ್ನುತ್ತೀಯ ನಿನ್ನ ಪ್ರೀತಿ ಅಳತೆ ಮೀರಿದ್ದು ಶಾರಿ' ಒಂದು ತುತ್ತು ಅನ್ನ ಸಂಪಾದಿಸಿ ಹಾಕಲು ನನ್ನ ಕೈಯಲ್ಲಾಗಲಿಲ್ಲ ನಾನು ಹುಟ್ಟಬಾರದಾಗಿತ್ತು, ಶಾರಿ . .

ಶಾರಿ ಬಿಕ್ಕಿ ಬಿಕ್ಕಿ ಅಳುತ್ತಾ ನನ್ನ ಕೈಗಳೆರಡನ್ನೂ ಹಿಡಿದುಕೊಂಡು ಹೇಳಿದಳು. ದಮ್ಮಯ್ಯ ಹಾಗೆಲ್ಲಾ ಹೇಳಬೇಡಿ ನೀವು ಅಷ್ಟು ಸಂಕಟಪಟ್ಟುಕೊಂಡರೆ ಹೇಗೆ? ಇಂದಲ್ಲ ನಾಳೆ ದೇವರಿಗೆ ದಯಬರುತ್ತದೆ ಮನುಷ್ಯನಿಗಲ್ಲದೆ ಮರಕ್ಕೆ ಬರುತ್ತದೆಯೆ? ಇದು ಒಂದು ಪರೀಕ್ಷೆ. ..

ಮೂರು ತಿಂಗಳುಗಳು ಉರುಳಿದವು. ಇಂದು ಭಾನುವಾರ. ನನ್ನ ಸಂಕಟವು ಮೇರೆ ಮೀರಿದೆ ಭೀಕರ ಜ್ವರದಿಂದ ತಪ್ತನಾಗಿ ಮಲಗಿದ್ದೇನೆ. ಯಾರೋ ಬಾಗಿಲನ್ನು ತಟ್ಟಿದರು. ಬಹಳ ಸಂಕಟದಿಂದ ಎದ್ದುಹೋಗಿ ತೆರೆದೆ. ಒಳಗೆ ಬಂದವನು ಗುಂಡು ನನ್ನ ಆಪ್ತ ಗೆಳೆಯ. ಜಬ್ಬಲ್ ಪುರದಲ್ಲಿ ರೈಲ್ವೆ ಇಲಾಖೆಯಲ್ಲಿ ದೊಡ್ಡ ಉದ್ಯೋಗದಲ್ಲಿದ್ದ

ಇದೇನಿದು ರಾಜು, ಮಲಗಿದ್ದೀ? ಈಗ ನಾಲ್ಕೈದು ತಿಂಗಳಿಂದ ಕಾಗದವನ್ನೇ ಬರೆಯಲಿಲ್ಲ. ನನ್ನ ಕಾಗದಗಳೊಂದಕ್ಕೂ ಜವಾಬ್ ಕೊಡಲಿಲ್ಲ ನನಗೆ ಹೆದರಿಕೆಯಾಯಿತು ನೋಡಿಕೊಂಡು ಹೋಗೋಣವೆಂದು ಬಂದೆ. ಇದೇನಿದು ಬಹಳ ಕೃಶವಾಗಿಹೋಗಿದ್ದಿ? ಎಷ್ಟು ದಿವಸಗಳಿಂದ ಖಾಯಿಲೆ? ನನಗೆ ತಿಳಿಸಬೇಡವೆ? ಎಂದ

ಈಗ ನಾಲ್ಕೈದು ದಿನಗಳಿಂದ ಬಹಳ ಜ್ವರ, ಗುಂಡು ನೀನು ಬಂದದ್ದು ಬಹಳ ಸಂತೋಷ ನಿನ್ನಂಥ ಸ್ನೇಹಿತರು ಅಪರೂಪ ಗುಂಡೂ . .

ಇರಲಿ ನೀನು ಬಹಳ ಮಾತನಾಡಬೇಡ ಜ್ವರ ಹೆಚ್ಚಾದೀತು. ಎಲ್ಲಿ ಶಾರದಮ್ಮ ಕಾಣುವುದಿಲ್ಲವಲ್ಲ ಎಂದ.

ನನಗೆ ಕಣ್ಣೀರು ತುಂಬಿತು, ಬಿಕ್ಕಿ ಬಿಕ್ಕಿ ಅಳಲಾರಂಭಿಸಿದೆ. ಗುಂಡನಿಗೆ ಅರ್ಥವಾಗಿದ್ದಿರಲಾರದು ಅವನೂ ಅಳತೊಡಗಿದ. ಕೊನೆಗೆ ಧೈರ್ಯಮಾಡಿ ಮನಸ್ಸನ್ನು ಕಲ್ಲುಮಾಡಿ ಹೇಳತೊಡಗಿದೆ

ಗುಂಡು, ಹೇಳಲಾರೆ. ನನ್ನನ್ನು ಮದುವೆಯಾದಂದಿನಿಂದ ಅವಳಿಗೆ ಸುಖವಿಲ್ಲ. ಗುಮಾಸ್ತೆಯಾಗಿದ್ದೇನೆ ಎಂದು ಕಾಗದ ಬರೆದಿದ್ದುದು ನಿನಗೆ ಜ್ಞಾಪಕವಿರಬಹುದು "ಅಲ್ಲಿಗೇ ಬಂದುಬಿಡು ಅಥವಾ ದುಡ್ಡು ಸಾಲದಿದ್ದರೆ ಕಾಗದ ಬರಿ' ಎಂದು ನೀನು ಬರೆದಿದ್ದುದನ್ನು ನೋಡಿ ನನಗೂ ಶಾರಿಗೂ ಬಹಳ ಸಂತೋಷವಾಯಿತು. ನಿನ್ನಂತಹ ಸ್ನೇಹಿತರು ಅಪೂರ್ವ ಎಂದು ದಿನವೂ ಮಾತನಾಡಿಕೊಳ್ಳುತ್ತಿದ್ದೆವು. ನನ್ನ ದುರದೃಷ್ಟಕ್ಕೆ ಎರಡು ತಿಂಗಳುಗಳಿಗೆ ಆ ಕೆಲಸವೂ ಹೋಯಿತು. ಶಾರಿ ತನ್ನ ಒಡವೆಗಳನ್ನೆಲ್ಲಾ ಕೊಟ್ಟಳು. ದೇವರಿಗೆ ಅದೂ ಸರಿಬರಲಿಲ್ಲವೆಂದು ಕಾಣುತ್ತದೆ . •

ಇನ್ನು ಮುಂದುವರಿಸಲಾಗಲಿಲ್ಲ. ಕಣ್ಣೀರು ತುಂಬಿಬಂತ. ಗುಂಡು ಒಂದೇ ಸಮನೆ ಅಳುತ್ತಿದ್ದ ನಾನು ಮುಂದುವರಿಸಿದೆ.

ಹೋದ ಸೋಮವಾರ ಸಂಜೆ ಶಾರಿ ಬಹಳ ಹೊಟ್ಟೆನೋವು ಎಂದು ಸಂಕಟಪಟ್ಟಳು ಯಾರನ್ನಾದರೂ ನೋಡೋಣ ಎಂದು ಹೊರಟೆ. ಇಲ್ಲೇ ಹಿಂದೆ ನಾನು ಕೆಲಸಮಾಡುತ್ತಿದ್ದ ಆಫೀಸು ಜವಾನನ ಹೆಂಡತಿ ಮಲ್ಲಮ್ಮ ಹೋಗುತ್ತಿದ್ದಳು ಕರೆಯುತ್ತಲು ಬಂದು ಎಲ್ಲಾ ವಿಚಾರಿಸಿದಳು ಕೊನೆಗೆ "ಆಸ್ಪತ್ರೆಗೆ ಹೋದರೆ ಕ್ಷೇ... ಬುದ್ಧಿ" ಎಂದಳು.

"ಗಾಡಿಗೆ ಕಾಸಿಲ್ಲ, ಮಲ್ಲಮ್ಮ" ಎಂದೆ

"ಹಂಗಾದರೆ ಮನೇಗೆ ಇರಲಿ, ನಾನು ನೋಡ್ಕಾತೀನಿ ಸುಮ್ಗಿರಿ ಬುದ್ಧಿ" ಎಂದಳು. ಗುಂಡೂ ಯಾವ ಜನವೇ ಆಗಲಿ ಸಮಯಕ್ಕಾದವರೇ ನಂಟರು. ಕುಲವೇನು ಗೋತ್ರವೇನು, ಜನವೇನು? ಇದೆಲ್ಲಾ ನಮ್ಮ ಭ್ರಾಂತಿ.

ಮಲ್ಲಮ್ಮ ಎಷ್ಟೋ ಕಷ್ಟಪಟ್ಟಳು ಫಲವಾಗಲಿಲ್ಲ. ಕೊನೆಗೆ ಶಾರಿ ಒಂದು ಮಗುವನ್ನು ಹೆತ್ತು ಸತ್ತಳು.. .. . . ನಾನು ಪಾಪಿ, ಗುಂಡೂ. ನನಗೆ ಕಣ್ಣೀರು ತುಂಬಿತು ಗುಂಡನ ಅವಸ್ಥೆ ಹೇಳತೀರದು ... ವನ ಸಂಕಟದಲ್ಲಿ ನನ್ನ ಸಂಕಟ ಮರೆತುಹೋಯಿತು . .

ನನಗೆ ಪ್ರಜ್ಞೆ ಬಂದಾಗ ನಾನು ಗುಂಡನ ತೊಡೆಯಮೇಲಿದ್ದೆ. ಮಲ್ಲಮ್ಮನೂ ಅಲ್ಲಿಯೇ ಕುಳಿತಿದ್ದಳು ವೈದ್ಯರು ಬಂದು ಪರೀಕ್ಷಿಸುತ್ತಿದ್ದರು. . . ..

ಮಾರನೆಯದಿನ ಭೀಕರ ಜ್ವರವು ಒಂದು ಮುಚ್ಚಿತ್ತು ಗುಂಡು ಶುಶ್ರೂಷೆ ಮಾಡುತ್ತಿದ್ದ. ಯಾರೋ ಬಾಗಿಲನ್ನು ತಟ್ಟಿದರು. ಗುಂಡು ಹೋಗಿ ನೋಡಿದ ಅಂಚೆ ಜವಾನ—ಒಂದು ಲಕ್ಕೋಟೆ—ಗುಂಡು ಓದಿ ಹೇಳಿದ—ನೂರಿಪ್ಪತ್ತು ರೂಪಾಯಿಗಳ ಖಾಯಂ ಕೆಲಸ—ಎಂದೋ ಹಾಕಿದ ಅಪ್ಲಿಕೇಷನ್‌ಗೆ ಇಂದು ಉತ್ತರ. ನನಗೆ ಶಾರಿಯ ನೆನಪು ಬಂದಿತು ಸಂಕಟ ವಿಪರೀತವಾಯ್ತು. ಗುಂಡು ನನ್ನ ಪಕ್ಕದಲ್ಲೇ ಕುಳಿತಿದ್ದ. ಹಾಗೇ ಸ್ವಲ್ಪ ನಿದ್ರೆ ಹತ್ತಿತು - . ಭವ್ಯ ಮಂದಿರ... ಕೋಣೆ. ಕುರ್ಚಿಯ ಮೇಲೆ ಕುಳಿತಿದ್ದೆ ಯಾರೋ ಹಿಂದಿನಿಂದ ಕಣ್ಣು ಮುಚ್ಚಿದರು. ನೋಡುತ್ತೇನೆ ನನ್ನ ಶಾರಿ! ಪೀತಾಂಬರವನ್ನುಟ್ಟಿದ್ದಳು. ಹೂ ಮುಡಿದಿದ್ದಳು ನಗುತ್ತಾ ಬಂದು ನನ್ನ ಬಳಿ ಕುಳಿತಳು

"ಶಾರಿ, ಇದೇಕೆ ಇಷ್ಟು ಹೊತ್ತು

"ಹಾಲು ಕಾಯುವುದು ಸ್ವಲ್ಪ ತಡವಾಯಿತು."

"ಶಾರಿ, ನೀನಿಲ್ಲದಿದ್ದರೆ ಪ್ರಪಂಚ ಶೂನ್ಯ. ನೀನು ಬರುವುದು ಸ್ವಲ್ಪ ತಡವಾದರೆ ಒಂದು ನಿಮಿಷವು ಒಂದು ಯುಗವಾಗುತ್ತದೆ" ಎಂದು ಹೇಳಿ ಮೆಲ್ಲನೆ .. . ಕೊಟ್ಟೆ ಶಾರಿ ಕೋಪವನ್ನು ನಟಿಸುತ್ತಾ ಎದ್ದು ಹೊರಟಳು

"ಶಾರೀ, ನನ್ನ ಶಾರೀ" ಎಂದು ಕೂಗುತ್ತಾ ಅವಳ ಹಿಂದೆಯೇ ಓಡಿದೆ

"ಇದೇಕೋ, ರಾಜು, ಹುಚ್ಚು ಹುಚ್ಚಾಗಿ ಆಡುತ್ತೀ" ಎನ್ನುತ್ತಾ ದಿಗ್ಗನೆ ಹಿಡಿದು ನಿಂತಿದ್ದ, ಗುಂಡು

ಗಂಡಸು ಮಗುವನ್ನು ಹೆತ್ತನು !

ಗಂಡಸರು ಹೆಂಗಸರಾಗುತ್ತಿರುವುದೂ, ಹೆಂಗಸರು ಗಂಡಸರಾಗುತ್ತಿರುವುದೂ ಇತ್ತೀಚಿಗೆ ಬಹಳ ಸಾಮಾನ್ಯವಾಗಿಹೋಗಿದ್ದರೂ ಆದರೂ, ಪಾರ್ಸದಲ್ಲಿ ಒಬ್ಬ ಮನುಷ್ಯನು ಹೇಗೆ ಸ್ತ್ರೀಯಾದನೆಂಬ ವಿಷಯ ಮಾತ್ರ ಅತ್ಯಂತ ಆಶ್ಚರ್ಯಕರವಾಗಿದೆ ಪೋಲೆಂಡ್ ದೇಶದಲ್ಲಿರುವ ತಾರ್ನ ಎಂಬಲ್ಲಿನ ನಿವಾಸಿಯಾದ 21 ವರ್ಷದ ಟೆನೆನ್‌ಬಾಮ್ ಎಂಬಾತನು ಒಂದು ಮಗುವನ್ನು ಪ್ರಸವಿಸಿರುತ್ತಾನೆ. ಈತನು ಕೆಲವು ವರ್ಷಗಳ ಹಿಂದೆ ಸೈನ್ಯದಲ್ಲಿ ಸೇರಿ ಅತ್ಯಲ್ಪ ಕಾಲದಲ್ಲಿಯೇ ಬಹುಮಾನಗಳನ್ನು ಪಡೆದನು. ಸೈನ್ಯಕ್ಕೆ ಸೇರಿದಾರಭ್ಯ ಇವನ ಶರೀರ ಪ್ರಕೃತಿಯು ಸ್ತ್ರೀ ಶರೀರದಂತೆ ಮಾರ್ಪಡಲು ಪ್ರಾರಂಭಿಸಿತು. ಈತನು ಪೂರ್ಣವಾಗಿ ಸ್ತ್ರೀ ಅವಯವಗಳನ್ನು ಹೊಂದಿದ ಮೇಲೆ ಒಬ್ಬ ಕಲಾಕೋವಿದನನ್ನು ಪ್ರೀತಿಸಲಾರಂಭಿಸಿದನು. ಕೆಲವು ದಿನಗಳಲ್ಲಿಯೇ ಈತನು ಒಂದು ಮಗುವನ್ನು ಪ್ರಸವಿಸುವುದಾಗಿ ಹೇಳಿದ ಸಂಗತಿಯು ವೈದ್ಯರನ್ನೆಲ್ಲಾ ಆಶ್ಚರ್ಯ ಚಕಿತರನ್ನಾಗಿ ಮಾಡಿತು.

ಈ ವಿಚಿತ್ರ ಮನುಷ್ಯನು ತನಗೋಸ್ಕರ ಒಂದು ಹಾಸಿಗೆಯನ್ನು ಆಸ್ಪತ್ರೆಯಲ್ಲಿ ಹಿಡಿಸಿಕೊಂಡನು ನಾಲ್ಕಾರು ದಿನಗಳನ್ನು ಕಳೆದನಂತರ 9 ಪೌಂಡು ತೂಕವುಳ್ಳ ಲಕ್ಷಣವಾದ ಒಂದು ಗಂಡುಮಗುವನ್ನು ಪ್ರಸವಿಸಿದನು ಈ ವಿಚಿತ್ರ ವರ್ತಮಾನವನ್ನು ಕೇಳಿದೊಡನೆಯೇ ಆ ಕಲಾಕೋವಿದನು "ಅವಳು ಸಂಪೂರ್ಣ ಆರೋಗ್ಯ ಹೊಂದಿದಮೇಲೆ ಅವಳನ್ನು ಮದುವೆಯಾಗುತ್ತೇನೆ" ಎಂದು ಬಹಳ ಸಂತೋಷದಿಂದ ಹೇಳಿದನು.

...ದು ಸೀಟಿಗೆ ೭೫೦ ರೂ.

...ರ್ಜ್ ಚಕ್ರವರ್ತಿಯವರ ಕಿರೀಟಧಾರಣೆ

1937ನೆ ಮೆ 12ನೆ ತಾರೀಖಿನಲ್ಲಿ ಎಡ್ವರ್ಡ್ ಚಕ್ರವರ್ತಿಯವರ ಕಿರೀಟಧಾರಣಾ ಮಹೋತ್ಸವವು ವಿಜೃಂಭಣೆಯಿಂದ ನೆರವೇರುವದು. ಬೀದಿಯಲ್ಲಿ ನೋಡುವದಕ್ಕಾಗಿ ಈಗಿನಿಂದಲೂ ಸೀಟು ರಿಸರ್ವೇಷನ್ನಿನಲ್ಲಿ ಅಪ್ಲಿಕೇಷನ್‌ಗಳು ಬರುತ್ತಿವೆ. ಇದುವರೆಗೆ ಸುಮಾರು 60,000 ಜನರು ರಿಸರ್ವ್ ಮಾಡುವ ಪತ್ರಗಳನ್ನು ಬರೆದಿರುತ್ತಾರೆ. ಕೆಲವು ಶ್ರೀಮಂತರು ಯಾವುದಾದರೂ ಒಂದು ಸೀಟಿಗಾಗಿ 750 ರೂಪಾಯಿ ಕೊಡಲು ಸಿದ್ಧರಾಗಿದ್ದಾರೆ

ವರ್ತಮಾನ ಸಂಗ್ರಹ.

ಸ್ಲೇಟು ಕಲ್ಲು ಗಣಿ.

ಚಿತ್ರದುರ್ಗ ಡಿಸ್ಟ್ರಿಕ್ಟಿನಲ್ಲಿರುವ ಹಿರಿಯೂರಿನ ಸಮೀಪದಲ್ಲಿ ಸ್ಲೇಟ್ ಕಲ್ಲಿನ ಗಣಿಯೊಂದು ಸಿಕ್ಕಿರುವದಾಗಿ ತಿಳಿಯ ಬಂದಿದೆ ಇದರ ಕೆಲಸವನ್ನು ನಡಸಲು ಹೆಚ್ಚು ಅನುಭವವನ್ನು ಪಡೆಯುವದಕ್ಕಾಗಿ ಕಡಪಾಜಿಲ್ಲೆಗೆ ನಮ್ಮ ಸಂಸ್ಥಾನದ ಒಬ್ಬ ಅಧಿಕಾರಿಯನ್ನು ಕಳುಹಿಸಿರುವರೆಂದು ಗೊತ್ತಾಗಿದೆ.

ಪೌರಸಭೆ

ಪೌರಸಭೆಗೆ ಮೈಸೂರು ವರ್ತಕ ಸಂಘದಿಂದ ಕೊಡಲಾಗಿದ್ದ ಒಂದು ಸ್ಥಾನವನ್ನು ಸರ್ಕಾರದವರು ಈಗ ತೆಗೆದು ಹಾಕಿರುವರು ಮತ್ತು ದೇವರಾಜ ಮೊಹಲ್ಲಾ ದಿಂದ ಒಬ್ಬ ಪ್ರತಿನಿಧಿಯನ್ನು ತೆಗೆದುಕೊಳ್ಳಬೇಕೆಂದು ಪರ್ಯಾಲೋಚಿಸಿರುವರು

ಹಾವಿನ ವಿಷಕ್ಕೆ ಮೃತ್ತಿಕೆಯ ಚಿಕಿತ್ಸೆ

ಕಾಂಗ್ರಾ ಪ್ರಾಂತ್ಯದ ಪಾಲಂಪೂರ್ ಎಂಬಲ್ಲಿರುವ ಸಲೋಹಿ ಗುಗ ದೇವಸ್ಥಾನದ ಮೃತ್ತಿಕೆಯಿಂದ ಹಾವಿನ ವಿಷಕ್ಕೆ ಚಿಕಿತ್ಸೆ ನಡೆಯುತ್ತಿದೆ ಈಚೆಗೆ ಐವತ್ತು ಜನರು ಗುಣಹೊಂದಿರುವರು ದೇವಸ್ಥಾನದ ಮಹಂತನು ಸ್ವಲ್ಪ ಮೃತ್ತಿಕೆಯನ್ನು ನೀರಿನಲ್ಲಿ ಕಲೆಸಿ ಕಚ್ಚಿದ ಸ್ಥಳಕ್ಕೆ ಹಚ್ಚುವನು. ಅದೇ ಮೃತ್ತಿಕೆಯನ್ನು ತಿನ್ನುವುದಕ್ಕೂ ಕೊಡುವನು ಮತ್ತು ಸ್ವಲ್ಪ ನೀರನ್ನೂ ಮಂತ್ರಿಸಿ ಕೊಡುವನು ರೋಗಿಯು ಸಾಮಾನ್ಯವಾಗಿ ಗುಣಹೊಂದುತ್ತಾನೆ.

ಸಂತೋಷಕೂಟ.

ಮೈಸೂರು ಪೌರಸಭಾಧ್ಯಕ್ಷರಾದ ಶ್ರೀ॥ ಎಂ. ಎ ಶ್ರೀನಿವಾಸನ್‌ರವರು ಶ್ರೀಕೃಷ್ಣ ಜಯಂತಿ ಉತ್ಸವದ ಸಂಬಂಧವಾಗಿ ಮೊನ್ನೆದಿನ ರಾಜಧಾನಿಯ ಪ್ರಮುಖ ನೌಕರರುಗಳನ್ನೂ, ಪೌರಸಭಾಸದರನ್ನೂ, ಹಾಗೆಯೇ ದೊಡ್ಡ ಮನುಷ್ಯರನ್ನೂ ಒಡಗೂಡಿಕೊಂಡು ಉಪಾಹಾರ, ಸಂಗೀತ ಮುಂತಾದುವುಗಳೊಡನೆ ಸತ್ಕರಿಸಿದರು

ಮಹಾತ್ಮ ಗಾಂಧಿಯವರು ಉತ್ತಮಗೊಳ್ಳುತ್ತಿರುವರು

ಮಹಾತ್ಮಾ ಗಾಂಧಿಯವರು ಗುಣವನ್ನು ಹೊಂದುತ್ತಿದ್ದಾರೆ ಅವರು ಸಂಪೂರ್ಣ ವಿಶ್ರಾಂತಿಯನ್ನು ಹೊಂದಬೇಕೆಂದು ವೈದ್ಯರು ಸಲಹೆ ಮಾಡಿರುತ್ತಾರೆ. ಅವರಿಗೆ ಜ್ವರವು ಬರುತ್ತಿಲ್ಲ, ಆದರೆ ಯಾವಾಗಲೂ ಇರುವಷ್ಟು ಉಷ್ಣವು ಇದ್ದೇ ಇದೆ

ಮೈಸೂರು ಕೈಪಿಡಿ.

ಬೆಂಗಳೂರು ಮಲ್ಲೇಶ್ವರದಲ್ಲಿರುವ ಕರ್ನಾಟಕ ಸಾಹಿತ್ಯ ಕಾರ್ಯಾಲಯದ ಚಾಲಕರಾದ ಶ್ರೀ॥ ಜೆ. ಶ್ರೀಕಂಠಯ್ಯನವರು ಸಧ್ಯದಲ್ಲಿಯೇ ಇಂಗ್ಲಿಷ್ ಮತ್ತು ಕನ್ನಡ ಭಾಷೆಗಳಲ್ಲಿ ಮೈಸೂರು ಕೈಪಿಡಿಯೆಂಬ ಒಂದು ಗ್ರಂಥವನ್ನು ಪ್ರಕಟಿಸುವವರಾಗಿದ್ದಾರೆ ಇದರಲ್ಲಿ ಮೈಸೂರು ದೇಶಕ್ಕೆ ಸಂಬಂಧಪಟ್ಟ ಎಲ್ಲಾ ವಿಷಯಗಳೂ ದೊಡ್ಡ ಮನುಷ್ಯರುಗಳ ಪರಿಚಯವೂ ಕೊಡಲ್ಪಡುವುವು ಮೈಸೂರು ದೇಶದ ವಿಷಯಗಳನ್ನು ಈ ರೀತಿಯಲ್ಲಿ ಪ್ರಕಟಿಸಲು ಪ್ರಯತ್ನಿಸಿರುವುದು ಇದೇ ಮೊದಲನೇ ಸಾರಿಯೆಂದು ತಿಳಿಯಬರುತ್ತದೆ ಇದರಲ್ಲಿ ಮಹಾಜನರು ಸಂಪೂರ್ಣ ಸಹಾನುಭೂತಿಯನ್ನು ತೋರಿಸುವರೆಂದು ನಾವು ನಂಬಿದ್ದೇವೆ

ಉಪನ್ಯಾಸ

"ಅಂತರ ರಾಷ್ಟ್ರೀಯ ಸಂಘದ ಭವಿಷ್ಯ" ಎಂಬ ವಿಷಯವಾಗಿ ಮಹಾರಾಜಾ ಕಾಲೇಜಿನ ಆಶ್ರಯದಲ್ಲಿ ದಿವಾನ್ ಬಹದ್ದೂರ್ ಸರ್ ಟಿ ವಿಜಯರಾಘವಾಚಾರ್ಯರವರು 16 ನೇ ತಾರೀಖು ಬುಧವಾರ ಸಾಯಂಕಾಲ 6 ಘಂಟೆಗೆ ಉಪನ್ಯಾಸಮಾಡುವರು

ಬಹುಮಾನ

ದಾವಣಗೆರೆಯಲ್ಲಿರುವ ವೀರಶೈವ ವಿದ್ಯಾವರ್ಧಕ ಸಂಘದವರು ಭಗವಾನ್ ಶ್ರೀ ಬಸವೇಶ್ವರನ ವಚನಗಳನ್ನು ಇಂಗ್ಲಿಷಿನಲ್ಲಿ ಅತ್ಯುತ್ತಮವಾಗಿ ಬರೆದವರಿಗೆ 200 ರೂಗಳ ಬಹುಮಾನವನ್ನು ಕೊಡುವುದಾಗಿ ತೀರ್ಮಾನಿಸಿದ್ದಾರೆ

ನಗರ ಭವನವೋ ಸಿನಿಮಾ ಭವನವೋ ?

ಬೆಂಗಳೂರಿನಲ್ಲಿ ಸರ್ ಪುಟ್ಟಣ್ಣಚೆಟ್ಟಿರ ಉದಾರ ದಾನದಿಂದ ಕಟ್ಟಲ್ಪಟ್ಟ ನಗರ ಭವನವು ಸಿನಿಮಾ ಮಂದಿರಕ್ಕೆ ಕೊಡಲ್ಪಡುವಂತೆ ಸರ್ಕಾರದವರು ಪರ್ಯಾಲೋಚಿಸುವರು ಈ ಭಾರಿ ಕಟ್ಟಡದ ಉಸ್ತುವಾರಿಗಾಗಿ ಖರ್ಚನ್ನು ದುಕ್ಕಿಸಲು ಈ ಯೋಚನೆ ಮಾಡಿರುವಂತೆ ತಿಳಿದುಬಂದಿದೆ ಇಷ್ಟುಬಿದ್ದ ಹಣವನ್ನೆಲ್ಲಾ ಕಟ್ಟಡಕ್ಕೆ ಹಾಕಿ ಅದರ ಉಸ್ತುವಾರಿಗೆ ಮಾರ್ಗವಿಲ್ಲದೆ ಪರದಾಡುವುದು ಈಗಿನ ರೀತಿ ಸರ್ ಚೆಟ್ಟಿರ ಉದ್ದೇಶವು ಇದರಿಂದ ಎಷ್ಟರಮಟ್ಟಿಗೆ ಸಾರ್ಥಕವಾಗುವುದೋ? ಹೀಗಾದರೆ ಇದು ನಗರ ಭವನವು ನಗರ ಭವನವೆ?

ನಂಜನಗೂಡು

ಶ್ರೀ ರಾಮಕೃಷ್ಣ ಪರಮಹಂಸರ ಶತಮಾನೋತ್ಸವ

ತಾ॥ 20–9–1936 ನೇ ಭಾನುವಾರ ನಂಜನಗೂಡಿನಲ್ಲಿ ಪೆಳವಾಯಿಯವರ ಕಟ್ಟಡದಲ್ಲಿ ಶ್ರೀ ರಾಮ ಕೃಷ್ಣ ಪರಮಹಂಸರವರ ಶತಮಾನೋತ್ಸವವು ನೆರವೇರುವುದು ಈ ಸಮಾರಂಭದಲ್ಲಿ ಶ್ರೀಮಾನ್ ನವರತ್ನ ರಾಮರಾಯರವರು ಅಗ್ರಾಸನವನ್ನು ವಹಿಸಲು ದಯಪಟ್ಟು ಒಪ್ಪಿರುತ್ತಾರೆ ಮಧ್ಯಾಹ್ನ ೩ ಗಂಟೆಗೆ ಬಡವರಿಗೆ ಅನ್ನಸಂತರ್ಪಣೆ ನಡೆಯುವುದು ಸಂಜೆ 5 ಗಂಟೆಯಿಂದ 7 ಗಂಟೆವರೆಗೆ ಮೈಸೂರಿನ ಸುಪ್ರಸಿದ್ಧ ಗಮಕಿ ವೇ॥ ರಾಮಕೃಷ್ಣಶಾಸ್ತ್ರಿಗಳವರು "ದಾನವೀರ ಕರ್ಣ" ಎಂಬ ಹರಿಕಥೆ ನಡೆಸುವರು ನಂಜನಗೂಡು ಮ್ಯಾಜಿಸ್ಟ್ರೇಟರಾದ ಶ್ರೀಮಾನ್ ಜಿ ರುದ್ರಪ್ಪನವರು, ಮೈಸೂರು ಶ್ರೀಮಾನ್ ಎಲ್ ಕಸ್ತೂರಿ, ಎಂ ಎ ಬಿ ಎಲ್. ರವರು, ಸ್ವಾಮಿ ಪ್ರೇತಿಕಾನಂದಜೀಯವರು, ಭಾಷಣಮಾಡುವರು ಶ್ರೀಯುತ ಕೆ ವಿ ಪುಟ್ಟಪ್ಪನವರ ಕವನಪಠನವು ನಡೆಯುವುದು. ಸರ್ವರೂ ಇಷ್ಟಮಿತ್ರರೊಡನೆ ದಯಮಾಡಿಸಬೇಕಾಗಿ ಪ್ರಾರ್ಥಿಸಲ್ಪಟ್ಟಿದೆ

ಜೋದಾಪುರ ರಾಜರ ಸಾಮ್ರಾಜ್ಯ ಭಕ್ತಿ.

ಜೋದ್‌ಪುರ ಮಹರಾಜರು ಬ್ರಿಟಿಷ್ ಚಕ್ರಾಧಿಪತ್ಯದಲ್ಲಿಟ್ಟಿರುವ ರಾಜಭಕ್ತಿಯು ಅಗಾಧವಾಗಿದೆ

ತಮ್ಮ ಅರಮನೆಗೆ ಬೇಕಾದ ಸಮಸ್ತ ಸಾಮಾಗ್ರಿಗಳೂ ಇಂಗ್ಲೆಂಡಿನಿಂದಲೇ ಬರಬೇಕೆಂದು ಅವರ ಇಚ್ಛೆ ಊಟಮಾಡಲು ಒಂದು ಭೋಜನವನ್ನು ಅವರು ಈಚೆಗೆ ಲಂಡನ್ನಿನ ಆಸ್ಟಿನ್ ಕಂಪೆನಿಯಲ್ಲಿ ಮಾಡಿಸಿದ್ದಾರೆ ಹಲವು ಕುರ್ಚಿಗಳನ್ನೂ ಮಾಡಿಸಿದ್ದಾರೆ ಇದಕ್ಕೆಲ್ಲಾ ವಿಶೇಷ ಹಣವನ್ನು ಸುರಿದಿದ್ದಾರೆ ಅವರ ಅರಮನೆಯ ಒಂದು ಅಂಗಳವನ್ನು ಶೃಂಗರಿಸಲು ಮೇಪಲ್ಸ್ ಕಂಪೆನಿ ನೂರಾರುಜನ ಸೇವಕರು ಆರುತಿಂಗಳಿಂದಲೂ ಕೆಲಸಮಾಡುತ್ತಿರುವರು ಭರತಖಂಡದ ಐಶ್ವರ್ಯವು ಸೂರೆಯಾಗುತ್ತಿರುವ ಮಾರ್ಗಗಳಲ್ಲಿ ಇದೂ ಒಂದು

ಯಕೀಂದೂರು ವಿದ್ಯಾರ್ಥಿನಿಧಿ

ಮೇಲ್ಕಂಡ ನಿಧಿಯಿಂದ ಸಹಾಯ ಪಡೆದಿರುವ ವಿದ್ಯಾರ್ಥಿಗಳ ಪೈಕಿ ಯಾರು ಯಾರು ತಮ್ಮ ಹೆಸರು ವಿಳಾಸಗಳನ್ನು ಇನ್ನೂ ಕಾರ್ಯದರ್ಶಿಗಳಿಗೆ ತಿಳಿಸಿರುವುದಿಲ್ಲವೋ ಅವರು ದಯವಿಟ್ಟು ಕೂಡಲೇ ತಿಳಿಸಬೇಕಾಗಿ ಕೋರಲ್ಪಟ್ಟಿದೆ ಮೈಸೂರು ಒಂಟಿಕೊಪ್ಪಲಿನಲ್ಲಿರುವ ಕಾರ್ಯದರ್ಶಿಗಳಿಗೆ ಬರೆಯಬೇಕು

ಸಾಧ್ವಿ

೧೪-೯-೩೬ ನೇ ಸೋಮವಾರ

ಮೈಸೂರು ಪೌರಸಭೆಯ ಸಾಲ.

ರಾಜಧಾನಿಯ ಪೌರಸಭೆಯವರು ಶ್ರೀ॥ ಮಹಾರಾಜರವರ ಅನುಮತಿಯಂತೆ ಹತ್ತು ಲಕ್ಷ ರೂ ಸಾಲವನ್ನು ತೆಗೆಯತಕ್ಕದೆಂದು ಕಳೆದ ಮಂಗಳವಾರ ನಡೆದ ಪೌರಸಭೆಯ ವಿಶೇಷ ಮೀಟಿಂಗಿನಲ್ಲಿ ತೀರ್ಮಾನಿಸಿದರು. ಈಗಿರುವ ಹೆಚ್ಚು ದರದ ಬಡ್ಡಿಯ ಸಾಲವನ್ನು ತೀರಿಸುವುದು, ನೀರಿನ ವಸತಿಯನ್ನು ಅಭಿವೃದ್ಧಿಪಡಿಸುವುದು, ರಸ್ತೆಗಳನ್ನು ಉತ್ತಮಪಡಿಸುವದು. ಸೂಯೆಜ್ ಫಾರಮ್ಸನ್ನು ವಿಸ್ತರಿಸುವದು. ದೊಡ್ಡ ದೊಡ್ಡ ಮನೆಗಳ ನಲ್ಲಿಗಳಿಗೆ ಮೀಟರುಗಳನ್ನು ಇಡಿಸುವದು —ಇವೇ ಮುಂತಾದ ಉದ್ದೇಶಗಳಿಗಾಗಿ ಈ ಸಾಲವು ಮಾಡಲ್ಪಡುವದು. ಈ ಸಾಲವು ಹದಿನೈದು ವರ್ಷಗಳ ಕಂತಿನಲ್ಲಿ ತೀರಿಸಲ್ಪಡುವುದು. ಸರ್ಕಾರದವರೇ ನಾಲ್ಕು ಲಕ್ಷ ರೂ ಗಳ ಸಾಲವನ್ನು ಹೆಚ್ಚು ಬಡ್ಡಿ ದರದ ಮೇಲೆ ಮಾಡಿರುವರು. ಈ ಸಾಲವು ತೀರಿಸಲ್ಪಡುವದು ಈ ಹೊಸ ಸಾಲಕ್ಕೆ ಅರಮನೆಯವರು ಎರಡು ಲಕ್ಷ ರೂ ಕೊಡುವರ ಮದರಾಸಿನ ಚಿದಂಬರಂ ಚೆಟ್ಟಿಯಾರ್ರವರು ಎರಡೂವರೆ ಲಕ್ಷವನ್ನೂ ಬೆಂಗಳೂರಿನ ಇಂಡಿಯನ್ ಬ್ಯಾಂಕಿನವರು ಐದೂವರೆ ಲಕ್ಷವನ್ನೂ ಕೊಡುವರು. ಈ ಸಾಲಗಳು ಪೌರಸಭಾಧ್ಯಕ್ಷರ ಪ್ರಯತ್ನದಿಂದ ದೊರೆಯುವಂತಾಗಿದೆ. ಇದಕ್ಕಾಗಿ ಸದಸ್ಯರು ಅಧ್ಯಕ್ಷರನ್ನು ವಂದಿಸಿದರು.

ಇನ್ನು ಮೇಲಾದರೂ ಪೌರಸಭೆಯ ಖರ್ಚು ವೆಚ್ಚಗಳು ಮಿತಿಯಿಂದ ನಡೆದು, ಒಟ್ಟಿಗೆ ಸಮರ್ಪಕವಾಗಿ ಹೊಸ ಸಾಲಗಳನ್ನು ಮಾಡದಂತೆಯೂ ಹೊಸ ತೆರಿಗೆಗಳನ್ನು ವಿಧಿಸದಂತೆಯೂ ಆಗುವುದೆಂದು ನಂಬೋಣ

ಮೈಸೂರು ಜಿಲ್ಲಾ ಬೋರ್ಡ್ ಅಧ್ಯಕ್ಷರು

ಕಳೆದ ಹತ್ತನೇ ತಾ॥ ನಡೆದ ಮೈಸೂರು ಜಿಲ್ಲಾ ಬೋರ್ಡ್ ಅಧ್ಯಕ್ಷರ ಚುನಾವಣೆಯಲ್ಲಿ ಶ್ರೀ॥ ಬಿ ಎಸ್ ಪುಟ್ಟಸ್ವಾಮಿಯವರೇ ಬಹು ಮತದಿಂದ ಚುನಾಯಿಸಲ್ಪಟ್ಟರು. ಇವರ ಪ್ರತಿ ಸ್ಪರ್ಧಿಗಳಾದ ಮಿ॥ ಜಿ ಸುಬ್ಬಣ್ಣನವರಿಗ ಮೂರು ಓಟುಗಳು ಕಡಿಮೆಬಂದು ಪರಾಜಿತರಾದರು.

ಶ್ರೀ ಪುಟ್ಟಸ್ವಾಮಿಯವರ ವಿಜಯಕ್ಕಾಗಿ ನಾವು ಅವರನ್ನು ಅಭಿನಂದಿಸುತ್ತೇವೆ ಇವರು ಕಳೆದ ಆರು ವರ್ಷಗಳಿಂದಲೂ ಡಿ॥ ಬೋರ್ಡಿಗೆ ಅಧ್ಯಕ್ಷರಾಗಿ ಕೆಲಸ ಮಾಡುತ್ತಿರುವರು. ಪಾಶ್ಚಾತ್ಯ ದೇಶಗಳಲ್ಲಿಯೂ ಸಂಚರಿಸಿ ಅಲ್ಲಿನ ಸ್ಥಳೀಯ ಸಂಸ್ಥೆಗಳ ಕಾರ್ಯ ಕ್ರಮಗಳನ್ನು ಅರಿತುಕೊಂಡಿರುವರು ಮುಂದಿನ ಮೂರು ವರ್ಷಗಳಲ್ಲಿ ಇವರು ಈ ಡಿಸ್ಟ್ರಿಕ್ಟಿನ ಜನರ ಸೌಕರ್ಯಕ್ಕೆ ಅನುಕೂಲವಾಗುವ ಕಾರ್ಯಗಳನ್ನು ನಡೆಸಿ ಯಶಸ್ಸನ್ನು ಹೊಂದಲೆಂದು ಹಾರೈಸುತ್ತೇವೆ

"ಸುಮತಿ ಶತಕ"

ಒಕ್ಕಲಿಗರ ಸಂಘದ ಸೆಂಟ್ರಲ್ ಜಯಿಲ್‌ನಲ್ಲಿ ಅಧ್ಯಾಪಕರಾಗಿರುವ ಭಾಷಾಚತುಷ್ಟಯ ಪಂಡಿತರಾದ, ವೇ ಸು. ಬಾಲಸುಬ್ರಹ್ಮಣ್ಯ ಶಾಸ್ತ್ರಿಗಳವರು ನಮಗೆ ಕಳುಹಿಸಿರುವ 'ಸುಮತಿ ಶತಕ" ವೆಂಬ ಗ್ರಂಥವನ್ನು ಆದರದಿಂದ ಸ್ವೀಕರಿಸಿದ್ದೇವೆ ರಸಭರಿತವಾದ ತೆಲುಗು ಗ್ರಂಥವೊಂದನ್ನು ಗ್ರಂಥಕರ್ತರು ಕನ್ನಡ ಕಂದ ಪದ್ಯಗಳಲ್ಲಿ ಸ್ವಾರಸ್ಯವಾಗಿ ತರ್ಜುಮೆಮಾಡಿದ್ದಾರೆ. ಈ ಪುಸ್ತಕದ ಒಟ್ಟು ಮಾರಾಟದಿಂದ ಬಂದ ಹಣದಲ್ಲಿ ಆರನೇ ಒಂದುಭಾಗವನ್ನು "ಖುಲಾಸೆ ಮಾಡಲ್ಪಟ್ಟ ಖೈದಿಗಳ ಸಹಾಯಸಂಘಕ್ಕೆ' ಕೊಡಲಾಗುವುದು. ಈ ಪುಸ್ತಕದ ಬೆಲೆ ೩ ಆಣೆಗಳುಮಾತ್ರ, ಇದು ಸರ್ವರಿಗೂ ಗ್ರಾಹ್ಯವಾಗಿದೆ.

ಹಾರ್ಡ್‌ವಿಕ್ ಶಾಲೆಯ ಸಾಹಿತ್ಯ ಸಂಘ, ಮೈಸೂರು

ಈ ಸಂಘವು ಅನೇಕ ವರ್ಷಗಳಿಂದಲೂ ಯಶಸ್ವಿಯಾಗಿ ನಡೆಯುತ್ತಿರುತ್ತಿದೆ ಮಿ॥ ಡಿ. ಸುಮಿತ್ರ ಎಂಬುವರ ಅಧ್ಯಕ್ಷತೆಯಲ್ಲಿ ಡಾಕ್ಟರ್ ರಾಮಣ್ಣನವರು ಆರೋಗ್ಯ ವಿಷಯವಾಗಿಯೂ, ಟ್ರೈನಿಂಗ್ ಕಾಲೇಜಿನ ಪ್ರಿನ್ಸಿಪಾಲರಾದ ಮಿ॥ ಸುಂದ್ರರವರು, ಮಿ॥ ಡಿ ಗುರುಪುತ್ರಪ್ಪ ಎಂಬವರ ಅಧ್ಯಕ್ಷತೆಯಲ್ಲಿ ವಂಶಪಾರಂಪರ್ಯ ಎಂಬ ವಿಷಯದಲ್ಲಿಯೂ ಸ್ವಾರಸ್ಯವಾಗಿ ಭಾಷಣ ಮಾಡಿದರೆಂದು ಕಾರ್ಯದರ್ಶಿಗಳು ಬರೆದಿರುತ್ತಾರೆ.

ಪುರನಿವಾಸಿಗಳ ಕುಂದು ಕೊರತೆಗಳು.

ಪೌರಸಭಾಧ್ಯಕ್ಷರ ಹೇಳಿಕೆ.

ನಮ್ಮ 24-8-36 ನೆಯ ಪಂಚಿಕೆಯಲ್ಲಿ ಪ್ರಕಟವಾದ ಪುರನಿವಾಸಿಗಳ ಕುಂದು ಕೊರತೆಗಳ ವಿಷಯವಾಗಿ ಪೌರಸಭಾಧ್ಯಕ್ಷರಾದ ಶ್ರೀಯುತ ಎಂ ಎ ಶ್ರೀನಿವಾಸನ್ ರವರು ಈ ಕೆಳಗೆ ಕಂಡ ಹೇಳಿಕೆಯನ್ನು ಕಳುಹಿಸಿರುತ್ತಾರೆ —

ಸುಮಾರು ಇಪ್ಪತ್ತುಸಾವಿರ ಮನೆಗಳನ್ನೊಳಗೊಂಡ ಈ ರಾಜಧಾನಿಯಲ್ಲಿ 3500 ಗುಂಡಿ ಕಕ್ಕಸುಗಳೂ, ಪ್ರತಿದಿನವೂ ಶುದ್ಧಿ ಮಾಡುವ 5162 ಕಕ್ಕಸುಗಳೂ ಮತ್ತು 1364 ಫ್ಲಷಿಂಗ್ ಕಕ್ಕಸುಗಳೂ ಇವೆ. ಮೇಲ್ಕಂಡ ಗುಂಡೀ ಕಕ್ಕಸುಗಳು ಹೊಲಸಾಗಿಯೂ, ದುರ್ಗಂಧಪೂರಿತವಾಗಿಯೂ ಇರುವುದರಿಂದ ಇವು ಇಡೀ ರಾಜಧಾನಿಗೇ ಬಹಳ ಹಾನಿಯನ್ನುಂಟುಮಾಡುತ್ತಿವೆ. ರಾಜಧಾನಿಯ ಅಭಿವೃದ್ಧಿ ಇಲಾಖೆಯೂ ಮತ್ತು ಪೌರಸಭೆಯೂ ಸೇರಿ ಅಂಡರ್‌ಗ್ರೌಂಡ್ ಸ್ಕ್ವಯರ್ಸ್ (ಒಳಚರಂಡಿ) ಗಳಿಗಾಗಿ ಲಕ್ಷಾಂತರ ರೂ. ಗಳನ್ನು ಖರ್ಚುಮಾಡಿ ನಗರ ನೈರ್ಮಲ್ಯವನ್ನು ಕಾಪಾಡುತ್ತಿವೆ ಸ್ಕ್ವಯರ್ಸ್‌ಗಳನ್ನು ಹಾಕಿರುವ ಕಡೆಗಳಲ್ಲಿ ವಾಸಿಸುವ ಜನಗಳಿಗೆ ತಮ್ಮ ಮನೆಗಳಿಗೂ ಮತ್ತು ಕಕ್ಕಸುಗಳಿಗೂ ಸ್ಕ್ವಯರ್ಸ್‌ಗಳ ಕನೆಕ್ಷನ್‌ಗಳನ್ನು ಕಲ್ಪಿಸಿಕೊಳ್ಳಬೇಕೆಂದು ಒತ್ತಾಯಪಡಿಸಲಾರಂಭಿಸಿದೆ. ಇದಕ್ಕೆ ಜನರನ್ನು ಪ್ರೇರೇಪಿಸಲು ಸರಾಸರಿ 20 ರೂ. ಬೆಲೆಯುಳ್ಳ ಒಂದು ಕನೆಕ್ಷನ್ ಉಚಿತವಾಗಿ ಹೊಂದಲು ಅವಕಾಶ ಕಲ್ಪಿಸಲಾಗಿದೆ ಪೌರಸಭೆಯವರು ನಗರದಲ್ಲಿರುವ ಹಾಲೀ ಗುಂಡಿ ಕಕ್ಕಸುಗಳನ್ನೂ ಮತ್ತು ಪ್ರತಿನಿತ್ಯವೂ ಶುದ್ಧಿ ಮಾಡುವ ಕಕ್ಕಸುಗಳನ್ನೂ ಫ್ಲಷಿಂಗ್ ಕಕ್ಕಸುಗಳಂತೆ ಪರಿವರ್ತಿಸಲು ತಿಳುವಳಿಕೆಗಳನ್ನು ಕೊಡುತ್ತಲೇ ಇರುವರು.

ಪುರನಿವಾಸಿಗಳು ತಮ್ಮ ಅನಿವಾರ್ಯಗಳನ್ನು ಹೇಳಿಕೊಂಡಲ್ಲಿ ಅಥವಾ ಕೊಂಚ ಕಾಲವನ್ನು ಕೇಳಿಕೊಂಡಲ್ಲಿ ರಿಯಾಯಿತಿ ತೋರಿಸಲಾಗುತ್ತಿದೆ. ಎಚ್ಚರಿಕೆಗಳನ್ನು ಹಲವುಬಾರಿ ಕೊಟ್ಟು ಅನೇಕ ತಿಂಗಳಾದರೂ ಗಮನಕ್ಕೆ ತಾರದೆ ತಮ್ಮ ಕಷ್ಟಗಳನ್ನೂ ವ್ಯಕ್ತಪಡಿಸದೆ ಇರುವವರಮೇಲೆ ಮಾತ್ರ ನ್ಯಾಯಾಸ್ಥಾನದಲ್ಲಿ ಮೊಕದ್ದಮೆಯನ್ನು ಹೂಡಲಾಗಿದೆ. ಆರೋಗ್ಯ ಶಾಖೆಯ ಅಧಿಕಾರಿಗಳು ನಿವಾಸಿಗಳ ಅಭ್ಯುದಯಕ್ಕಾಗಿಯೇ ಹೇಳುವ ಕೆಲವು ಸಲಹೆಗಳನ್ನು ಮನಕ್ಕೆ ತಾರದೆ ಇರುವವರು ನ್ಯಾಯಾಸ್ಥಾನಕ್ಕೆ ಹಾಜರಾಗಬೇಕಾದ ಕಾಲದವರೆಗೂ ನಮ್ರನಿದ್ದು ಅನಂತರ ಕಣ್ಣು ತೆರೆಯುವರು ಆಗಲೂ ಸಹ ಬಡತನದಲ್ಲಿರುವ ನಿವಾಸಿಗಳ ಅರಿಕೆಗಳನ್ನು ಪರಿಶೀಲಿಸಲಾಗುವುದು ಆರೋಗ್ಯಶಾಖೆಯವರು ಅನೇಕಬಾರಿ ಸೂಚಿಸಿದರೂ ಗಮನಕ್ಕೆ ತಾರದೆ ಅಜಾಗರೂಕರಾದ 3 ಮಂದಿ ಮಾ

ತ್ರ 1935 36 ರಲ್ಲಿ ಶಿಕ್ಷೆಗೆ ಗುರಿಯಾ...

ಇನ್ನು ಹೋಟಲುಗಳ ವಿಷಯ, ... ಧಾನಿಯಲ್ಲಿ ಮೊದಲನೆಯ ದರ್ಜೆಯ 9 ಹೋಟೇಲುಗಳೂ, ಎರಡನೆಯ ದರ್ಜೆಯಲ್ಲಿ 67 ಹೋಟೇಲುಗಳೂ ಮತ್ತು ... ಟೀ ಮತ್ತು ಮಿಠಾಯಿ ಅಂಗಡಿಗಳೂ ಇ... ತ್ತವೆ. ಮಿಠಾಯಿ ಅಂಗಡಿಗಳಲ್ಲೂ ಮತ್ತು ಎರಡನೆ ದರ್ಜೆಗೆ ಸೇರಿದ ಅನೇಕ ಹೋಟೇಲುಗಳಲ್ಲೂ ಸ್ಥಿತಿಗತಿಗಳು ಅಸ್ವಚ್ಛ... ವನ್ನು ಹೊಂದಿವೆ. ಈ ಮೇಲ್ಕಂಡ ಹೋಟೇಲು ಮತ್ತು ಮಿಠಾಯಿ ಅಂಗಡಿಯವರು ಆರೋಗ್ಯ ಶಾಖೆಯವರ ಮೇಲೆ ದೂ... ತರುವರು ಈ ಹೋಟೇಲುಗಳಿಂದ ಜನ... ನಾನಾ ರೀತಿಯ ರೋಗಗಳು ಬಲಿತು ... ಷ್ಟ ಪರಿಣಾಮ ಉಂಟಾಗುವುದು

ಆರೋಗ್ಯಶಾಖೆಯವರು ಮುತುವರ್ಜಿ ವಹಿಸಿ ಕೆಲಸಮಾಡಿದುದರ ಪರಿಣಾಮವಾಗಿ ಸುಮಾರು 231 ಗುಂಡಿ ಕಕ್ಕಸುಗಳು ಪ್ರತಿನಿತ್ಯವೂ ಶುದ್ಧಿಯನ್ನು ಹೊಂದುವ ಕಕ್ಕಸುಗಳಾಗಿವೆ ಇಷ್ಟೇ ... 181 ಗುಂಡಿ ಕಕ್ಕಸುಗಳು ಫ್ಲಷಿಂಗ್ ಕಕ್ಕಸುಗಳಾಗಿವೆ. ಸುಮಾರು ಒಟ್ಟು ... ಫ್ಲಷಿಂಗ್ ಕಕ್ಕಸುಗಳು ಕಟ್ಟಲ್ಪಟ್ಟವೆ ಮತ್ತು 713 ಬಚ್ಚಲುಗಳಿಗೆ ಕನೆಕ್ಷನ್ ಒಂದು ವರ್ಷದಲ್ಲಿ ಕೊಡಲ್ಪಟ್ಟಿವೆ ... ವರ್ಷದಲ್ಲಿ ನಗರ ನೈರ್ಮಲ್ಯವನ್ನು ... ನ್ನು ಹೆಚ್ಚಿಸಲು 20,000 ರೂ ಗಳ... ಸಾರ್ವಜನಿಕ ಕಕ್ಕಸುಗಳಿಗಾಗಿಯೂ ... ತ್ತು ಒಂದುಲಕ್ಷ ರೂ ಗಳಿಗಿಂತಲೂ ಹೆಚ್ಚಿನ ಹಣದಿಂದ ಬಚ್ಚಲುಗಳನ್ನು ಸುಸ್ಥಿತಿಗೆ ತರುವುದಕ್ಕಾಗಿಯೂ ಹಣವನ್ನು ಪ್ರತ್ಯೇಕವಾಗಿಟ್ಟು ಕಾರ್ಯಕ್ರಮಗಳನ್ನು ... ರುಗಿಸಲಾಗುವುದು. ಆರೋಗ್ಯ ಶಾಖೆ ಯಾವ ನಗರದಲ್ಲೂ ಯಾವಾಗಲೂ ... ವಾದವನ್ನು ಹೊಂದುವುದಾಗಿದೆ ಆರೋಗ್ಯಶಾಖೆಯು ನಗರದಲ್ಲಿ ವಾಸಿಸುವ ಪ್ರತಿಯೊಬ್ಬ ಪ್ರಜೆಯ ಸಹಕಾರವನ್ನೂ ... ತ್ತದೆ ಮತ್ತು ಸಭ್ಯ ಪ್ರಜೆಗಳ ಸಹಾಯದಿಂದ ಎಲ್ಲಾ ಕಡೆಯಲ್ಲಿಯೂ ... ನಗರವೆಂದು ಖ್ಯಾತಿಸಲ್ಪಟ್ಟ ರಾಜಧಾನಿಯನ್ನು ಇನ್ನೂ ಹೆಚ್ಚು ಅಭಿವೃದ್ಧಿಪಡಿಸುವುದು ಆರೋಗ್ಯಶಾಖೆಯ ಉದಾತ್ತ... ಯವೂ ಮತ್ತು ಪ್ರಧಾನ ಕರ್ತವ್ಯವೂ ಗಿರುತ್ತದೆ.

ಸಭ್ಯ ಪ್ರಜೆಗಳ ಪುಕಾರುಗಳಿ... ಲೀ ಅಥವಾ ಸಮಂಜಸವಾದ ಟೀಕೆ... ನಾಗಲೀ ಸಂಪೂರ್ಣ ಗಮನ ಕೊಡ... ಟ್ಟಿದೆ. ಮತ್ತು ಇನ್ನುಮುಂದೆಯೂ ಕೊ... ಲ್ಪಡುತ್ತದೆ. ಕಸ್ಮಲ ಗಾಡಿಗಳ ಮು... ಳನ್ನು ಮುಚ್ಚಿಕೊಂಡು ತಿರುಗಾಡು... ತೆ ತಕ್ಕ ತಿಳುವಳಿಕೆ ಕೊಡಲಾಗಿದೆ

ಸರ್ಕಾರದ ಅಪ್ಪಣೆ ಪ್ರಕಾರ ... ಗಳನ್ನು ಕ್ಷೌರದಂಗಡಿಗಳಲ್ಲಿ ... ತರುವುದು ಅವಶ್ಯಕವಾಗಿ ಕಂಡು... ರುತ್ತವೆ ಕ್ಷೌರದಂಗಡಿಯವರನ್ನು ... ನ್ನು ಪಡೆಯಲು ಇದುವರೆಗೆ ಒತ್ತಾಯ... ಡಿಸಿರುವ ಅಂಶವು ನಿಜವಲ್ಲ

ಶ್ರೀ ರಮಣ ಮಹರ್ಷಿಗಳು.

ಲೇಖಕ —" ಪಂಡಿತ "

ಪ್ರಪಂಚ, ...ಣ ಮಹರ್ಷಿಗಳು.

...ಲ್ಲಿ ಘಟನೆಗಳು ನದಿಯ ಪ್ರವಾಹದಂತೆ ಸಂತತವಾಗಿ ಹರಿದು ಹೋಗುತ್ತಿರುವವು. ಕೆಲವು ಘಟನೆಗಳು ಮಾತ್ರ ಆಕಾಶದ ನಕ್ಷತ್ರಗಳಂತೆ ನಮ್ಮ ಸ್ಮೃತಿಪಥದಲ್ಲಿ ಪ್ರಜ್ವಲಿಸುವವು. ಕೆಲವು ಸಂದರ್ಭಗಳಲ್ಲಿ ಸಾಮಾನ್ಯ ವಿಷಯಗಳು ಮನಸ್ಸಿನಲ್ಲಿ ಅಪೂರ್ವವಾದ ಪರಿಣಾಮವನ್ನುಂಟುಮಾಡುವವು ... ಪ್ರಕೃತಿ ಸಮಯ, ಸನ್ನಿವೇಶಗಳೇ ಇದಕ್ಕೆ ... 'ಹರಿಯುವ ಹೊಳೆಯು ವೇದಾಂತ ತತ್ವಗಳನ್ನು ಉಪದೇಶಿಸುವವು' ... ಇಂಗ್ಲಿಷ್ ಕವಿಯು ಹೇಳಿರುವಂತೆ ಮಹಾತ್ಮರ ಸಾನ್ನಿಧ್ಯದಲ್ಲಂತೂ ಪ್ರಕೃತಿ ನಮ್ಮ ಅನುಭವಕ್ಕೆ ... ಚಿಕ್ಕ ಪುಟ್ಟ ವಿಷಯಗಳೂ ಕೂಡ ಉತ್ಕೃಷ್ಟವಾದ ಪರಿಣಾಮವನ್ನುಂಟುಮಾಡುವವು.

ಕೆಲವು ದಿವಸಗಳ ಹಿಂದೆ ನಾನು ರಮಣ ಮಹರ್ಷಿಗಳ ದರ್ಶನಕ್ಕಾಗಿ ಹೋಗಿದ್ದೆ. ಅವರ ಸಾನ್ನಿಧ್ಯದಲ್ಲಿ ನಡೆದ ಕೆಲವು ಚಿಕ್ಕ ಪುಟ್ಟ ವಿಷಯಗಳು, ಅವು ನನ್ನ ಮನಸ್ಸಿನಲ್ಲಿ ಮಾಡಿದ ಪರಿಣಾಮ, ಇವುಗಳನ್ನು ಇಲ್ಲಿ ತಿಳಿಸುವೆನು. ಮೊದಲು ... ಪ್ರಮುಖ ವಿಚಾರವನ್ನು ಸ್ವಲ್ಪ ತಿಳಿಸಿ ... ನಂತರ ಇತರ ವಿಷಯಗಳನ್ನು ತಿಳಿಸುವೆ.

ಮಹರ್ಷಿಗಳು ಊಟವನ್ನು ಮುಗಿಸಿ ... ಸೋಫಾದಿನಮೇಲೆ ಕುಳಿತಿದ್ದರು. ... ನಾಲ್ಕೈದು ಭಕ್ತರು ಮಾತ್ರ ಧ್ಯಾನ ಮಗ್ನರಾಗಿದ್ದರು. ಅವರಲ್ಲಿ ನಾನೊಬ್ಬ. ಬಿಸಿಲ ತಾಪವು ಬಹಳವಾಗಿದೆ. ಒಬ್ಬ ಭಕ್ತನು ಪಂಕ ಬೀಸುತ್ತಿದ್ದಾನೆ. ಊದಬತ್ತಿಯಿಂದ ಸುವಾಸನೆಯು ಹೊಗೆಯು ಏಳುತ್ತಲಿತ್ತು ಇದೆ. ಮಹರ್ಷಿಗಳು ಶಾಂತರಾಗಿ ಕುಳಿತಿದ್ದಾರೆ. ನೆಲದಮೇಲೆ ಯಾವುದೋ ಒಂದು ಪ್ರಾಣಿಯು ಓಡಾಡುತ್ತಿದೆ. ಅದೇನು! ಅದರ ಎಂಟು ಕಾಲುಗಳು ಸುಂದರವಾಗಿವೆ, ಹೊಳೆಯುವ ... ಸೋಫಾದಿನ ಹತ್ತಿರ ಓಡಿ ಬಂದು ಮೇಲಕ್ಕೆ ಹತ್ತಿತು. ಮಹರ್ಷಿಗಳ ಮೈಮೇಲೆ ನಿರ್ಭಯವಾಗಿ ಓಡಾಡಿತು. ... ಒಂದು ಚೀಲಿನ ಮರಿ... ಮೇಲೆ ಬಂದಿರುವ ಅದನ್ನು ಕೈನಿಂದ ... 'ಅಂದರು. ಅದು ಅವರ ... ಹತ್ತಿತು "ಇದಕ್ಕೆ ಆಹಾರ ಕೊಟ್ಟಿರಾ" ಎಂದು ಕೇಳಿದರು ... ಸಮಯ. ಹಸುಗಳಿಗೆ ಕರು ... ನಿಸುರುಗೊಳ್ಳುವ ಸಡಗರ ಆಕಾಶದಲ್ಲಿ ... ಗೀತ ಅಪರಂಜಿಯ ... ರವಿಮಣಿಯು ಮೆಲ್ಲಮೆಲ್ಲನೆ ಮುಳುಗುವನು. ಪ್ರಕೃತಿಸತಿಯು ತನ್ನ ... ಗಳನ್ನು ಎಲ್ಲೆಲ್ಲೂ ಆಕಾಶದಲ್ಲಿ ... ಸಾಗಿ ಬಣ್ಣಗಳನ್ನು ಎರಚಿರು ... ಆಕಾಶದಲ್ಲಿ ಮನಸ್ಸನ್ನು ಸೂರೆ ... ವ ಹೊಂಬಣ್ಣ, ಕೆಂಪು, ಬಗೆ ಬಣ್ಣಗಳ ಚೆಲ್ಲಾಟ. ಅವರೆ ... ಹಕ್ಕಿಗಳ ಶ್ರೇಣಿ ಮಂದ ... ನೂಗಕೊಡನೆ ಆಟವಾಡು

ತಾ ಸುವಾಸನೆಯನ್ನು ಬೀರುತ್ತಿರುವವು. ಕೃತಕನು ನೇರಿಗಳನ್ನು ಹೆಗಲ ಮೇಲೆ ಹಾಕಿಕೊಂಡು ಮನೆಗೆ ಹಿಂದಿರುಗುತ್ತಿರುವನು. ಕುರಿಯ ಕೊರಳ ಗಂಟೆಯ ಶಬ್ದವಾಹಿತ್ತಾ ದೊಡ್ಡಿಗ ... ಎಲ್ಲೆಲ್ಲಿಯೂ ಶಾಂತಿ.

ಈ ಸಮಯದಲ್ಲಿ ಎಲ್ಲೆಲ್ಲಿಯೂ ನಿಶ್ಶಬ್ದ. ಒಬ್ಬ ಕೌಪೀನಧಾರಿಯು ... ನಾಗಿ ಪ್ರಕೃತಿಯ ಸೊಬಗಿನಲ್ಲಿ ಲೀನನಾಗಿರುವನು. ಸುವಾಸನೆಯಲ್ಲಿ ನಿಶ್ಚಲನಾಗಿರುವನು. ಸುತ್ತಲೂ ಭಕ್ತವೃಂದ ಕಲ

ವಕ್ಕದಲ್ಲಿ ಒಬ್ಬ ಭಕ್ತನು ಕೈಕಟ್ಟಿಕೊಂಡಿರುವನು. ಭಕ್ತರು ಪ್ರಸಾದವನ್ನು ತಂದು ಸ್ವಾಮಿಗಳ ಮುಂದಿಟ್ಟ ... ನ್ನು ಎಲ್ಲರಿಗೂ ವಿನಿಯೋಗಿಸುವರು ... ಹೊಟ್ಟೆ ಹಸಿದಿದೆಯೇನು?' ಎಂದು ... ಅದಕ್ಕೆ ಒಂದು ಮಾವಿನಹಣ್ಣಿನ ಚೂರನ್ನು ಕೊಡುತ್ತಾರೆ. ... ಮತ್ತೊಂದು ಪುನಃ ಒದುತ್ತದೆ. ಪುನಃ ಮಹರ್ಷಿಗಳು '... ಮಾವಿನ ಹಣ್ಣನ್ನು ತಿನ್ನು' ಅನ್ನುತ್ತಾರೆ. ಪುನಃ ಅದು ಒರಟ ಹೆ ಮಹರ್ಷಿಗಳು ಅದನ್ನು ನೋಡಿ 'ಚಿಕ್ಕ ಮಕ್ಕಳ ಹಾಗೆ' ಎಂದು ನಗುತ್ತಾ

ವರು ಅವರ ಕಡೆ ದೃಷ್ಟಿಯನ್ನಿಟ್ಟು ಧ್ಯಾನಾಸಕ್ತರಾಗಿರುವರು. ನಿಶ್ಶಬ್ದ.

ವಿಶಾಲವಾದ ಹಣೆ, ದೃಢಕಾಯ, ಶಾಂತಿಯನ್ನು ಚೆಲ್ಲುತ್ತಿರುವ ಕಣ್ಣುಗಳು, ಹೊಂಬಣ್ಣದ ಮೈ. ಕಡೆದ ಕಲ್ಲಿನಂತೆ ಕುಳಿತಿರುವ ಮೂರ್ತಿ. ಕುಳಿತಿರುವುದು ಸೋಫಾದಿನಮೇಲೆ. ಅದರಲ್ಲಿ ಬಿಳಿಯ ದಿಂಬುಗಳು. ನೆಲದಮೇಲೆ ಒಂದು ಪಾತ್ರೆಯಲ್ಲಿ ಧೂಪ, ಮತ್ತೊಂದರಲ್ಲಿ ಊದಗಡ್ಡಿ. ಭಕ್ತರು ಬಂದು ಅಡ್ಡಬೀಳುವರು, ಮತ್ತೆ ಕೆಲವರು ನಮಸ್ಕಾರಮಾಡಿ ಎದ್ದುಹೋಗುವರು. ಮೂರ್ತಿಯುಮಾತ್ರ ಸಮಾಧಿಯಲ್ಲಿರುವರು.

ನ ನುಡಿ ರೊಡನೆ ಮಿತಭಾಷಿಗಳಾದ ಮಹರ್ಷಿಗಳಿಗೆ ಅವರೊಡನೆ ಎಷ್ಟು ಸಲುಗೆ! ಅವರಲ್ಲಿ ಅವರಿಗೆ ಎಷ್ಟು ಪ್ರೇಮ! ಜೀವಜಂತುಗಳಿಗೂ ಪ್ರೇಮಬಂಧನವೇ! ಮಕ್ಕಳನ್ನು ಪ್ರೀತಿಸುವ ತಾಯಿಗಳ, ಆಳುಗಳನ್ನು ಪ್ರೀತಿಸುವ ಮಹರ್ಷಿಗಳಿಗೂ ಏನು ವ್ಯತ್ಯಾಸ!

ತಾಯಿಯುಬಂದು ಮಗನಮುಂದೆ ಅಶ್ರುಧಾರೆಗಳನ್ನು ಸುರಿಸಿ "ನನಗೆ ಗತಿ ಯಾರು ಮಗು? ನಿನ್ನ ದೌರ್ಭಾಗ್ಯವಾದ ನಾನು ಘೋಷಾವಾಗಿದ್ದೇನೆ. ಮಗೂ, ಸಾಕು ನಿನ್ನ ತಪಸ್ಸು. ನಾವು ಮನೆಗೆ ಬಾ ನನ್ನ ಮನೋವೇದನೆಯನ್ನು ಕಡಿ

ಮಾಡು." ಎಂದು ಗೋಳಿಟ್ಟಳು. ಹಿಮವತ್ಪರ್ವತದಂತೆ ಗಂಭೀರವಾಗಿ ತಾಯಿಯ ಮಾತಿಗೆ ಉತ್ತರವನ್ನೇ ಕೊಡದ ಈ ಮಹರ್ಷಿಗಳಿಗೆ ಒಂದು ಚೀಲಿನಲ್ಲಿ ಎಷ್ಟು ಪ್ರೇಮ! ಮಹಾತ್ಮರ ನಡತೆಯೇ ವಿಚಿತ್ರ. ಈ ಆಶ್ರಮದಲ್ಲಿ ನಾಯಿ, ಗಿಣಿ, ಬೆಕ್ಕು, ಕೋತಿ, ಹಸು ಮೊದಲಾದ ಪ್ರಾಣಿಗಳನ್ನು ಮಕ್ಕಳಂತೆ ಸಾಕುವ ಮಹನೀಯರು ... ಸಿಂಹವನ್ನು ಮಗುವಿನಂತೆ ಸಾಕಿ ಮೈಸೂರು ... ಹತ್ತಿರ ಕರೆದುಕೊಂಡು ಹೋಗಿದ್ದರೆಂಬುದು ವೃತ್ತಪತ್ರಿಕೆಗಳನ್ನು ಓದುವವರಿಗೆ ತಿಳಿದ ವಿಷಯವೇ. ಮಹರ್ಷಿಗಳು ಸ್ವಲ್ಪ ಹೊತ್ತಾದಮೇಲೆ ಅಳಿಲು ತನ್ನ ಪಂಜರಕ್ಕೆ ಹೊರಟುಹೋಯಿತು. ಮಹರ್ಷಿಗಳು ಸಮಾಧಿಗ್ರಸ್ತರಾದರು.

... ಸೌಂದರ್ಯದ ... ಶಾಂತ ಪರಿಸರದ ಶಕ್ತಿಯೋ, ನನ್ನ ಮನಸ್ಸು ಧ್ಯಾನದಲ್ಲಿ ಮಗ್ನವಾಯಿತು. ಭಾವನೆಯು ಕ್ರಮೇಣ ಬದಲಾಯಿಸುತ್ತಾ ಬಂತು. ಒಂದು ಗಂಟೆಯ ಶಾಂತಿಯು ಆವರಿಸಿತು ... ಕಣ್ಣುಗಳು ಮುಚ್ಚಿ ಹೋದವು. ಮಹರ್ಷಿಗಳು? ನಾನಾರು? ... ಯಾರು? ಸ್ವಲ್ಪ ಹೊತ್ತು ನಮ್ಮಲ್ಲಿ ನಾನೂ ಇಲ್ಲ, ಮಹರ್ಷಿಗಳೂ ಇಲ್ಲ, ಅಳಿಲೂ ಇಲ್ಲ. ವಿಚಿತ್ರವಾದ ಅನುಭವ. ಈ ಅನುಭವದ ಅರ್ಥವು ನನ್ನ ಮನಸ್ಸಿಗೆ ಇನ್ನೂ ತಿಳಿದಿಲ್ಲ. ಶಬ್ದಗಳಿಂದ ವರ್ಣಿಸುವುದು ಹೇಗೆ? ಸ್ವಲ್ಪಹೊತ್ತು ನಿದ್ರೆಯೋ, ಸ್ವಪ್ನವೋ ಏನೋ ಆಯಿತು. ಕಣ್ಣುಗಳು ತೆರೆದಾಗ ಎಲ್ಲವೂ ಶಾಂತಿ. ಸಾಯಂಕಾಲ ನನ್ನ ಸ್ನೇಹಿತರೊಡನೆ ಗಾಳಿ ಸಂಚಾರಕ್ಕೆ ಹೊರಟೆ. ಅವರಲ್ಲೊಬ್ಬರು 'ಸ್ವಾಮಿ, ನಿಮ್ಮ ಧೈರ್ಯವೇ ಧೈರ್ಯ. ಕಠಿಣ ನೀವು ಮಹರ್ಷಿಗಳ ಸಾನಿಧ್ಯದಲ್ಲಿ ಸುಖವಾಗಿ ನಿದ್ದೆಹೋದಿರಿ' ಎಂದರು. ವಿಮರ್ಶಕರ ಹೇಳುವುವೋ ತಿಳಿಯಲಿಲ್ಲ.

ಮುದಿನೇ ಬಕ್ಕೆ ಎಷ್ಟಿವೆ!

ಅವಕ್ಕೂ ಒಂದು ಪಂದ್ಯವು ನಡೆಯಿತು.

ಅಮೇರಿಕಾದ ಅಟ್ಲಾಂಟಿಕ್ ಸಿಟಿಯಲ್ಲಿ ಒಂದು ಪಂದ್ಯವು ಏರ್ಪಡಿಸಲ್ಪಟ್ಟಿತ್ತು. ಅದರಲ್ಲಿ ಯಾರಿಗೆ ವಿಶೇಷ ಮುದುವೇ ಬಕ್ಕೆಗಳು ಮುಖದಲ್ಲಿ ಕಾಣಬಂದವೋ, ಅವನಿಗೆ ಒಂದು ಬಹುಮಾನವನ್ನು ಕೊಟ್ಟರು.

ಜನ್ಮೊಂಬೇವರ್ಷ ವಯಸ್ಸಿನ ಜಾರ್ಜ್ ... ಎಂಬುವನ ಮುಖದಮೇಲೆ 1695 ಮುದುವೇ ಬಕ್ಕೆಗಳಿವೆಯೆಂದು ಎಣಿಸಿ ಪರೀಕ್ಷಕರು ಅವನಿಗೆ ಮೊದಲನೇ ಬಹುಮಾನ ಕೊಟ್ಟಿದ್ದಾರೆ.

ಗವ್ವಲಿನ ಗೂಡಿನ ಜನರು ವಾಸಿಸುತ್ತಾರೆ!

ಬೆಲ್ಜಿಯಂ ಕಾಂಗೋವಿನಲ್ಲಿರುವ ಅನೇಕ ಗವ್ವಲಿನ ಗೂಡುಗಳಲ್ಲಿ ಅಲ್ಲಿನ ಕಾಡು ಜನರು ಮನೆ ಮಾಡಿಕೊಂಡಿದ್ದಾರೆ.

ಕೆಲವು ಗೂಡುಗಳು 30 ಅಡಿಯಷ್ಟು ಎತ್ತರವಿದ್ದು, ಗೋಡೆಗಳು ಮಳೆ ಗಾಳಿಗಳಿಗೆ ಜಗ್ಗುವುದಿಲ್ಲವೆಂದಮೇಲೆ ಅಲ್ಲಿನ ಜನರು ಅದರಲ್ಲಿ ವಾಸಿಸುವುದೇನೂ ಆಶ್ಚರ್ಯವಲ್ಲ.

ಪತ್ರ ವ್ಯವಹಾರ.

ಪತ್ರ ೧

ಸ್ವಾಮಿ—ಹತ್ತಾರು ವರ್ಷಗಳಿಂದ ಕಡಬು, ದೋಸೆ ಮಾರಿಕೊಂಡು ದಿನಕ್ಕೆ **ಎರಡು ಮೂರಾಣೆ** ಗಳನ್ನು ಸಂಪಾದಿಸಿಕೊಂಡು ಇನ್ನೂ ಚಿಕ್ಕವರಾದ ಎರಡು ಮೂರು ಮಕ್ಕಳನ್ನು ಸಾಕಿಕೊಂಡು ಇರುತ್ತೇನೆ. ಮೈಸೂರು ಹೆಲ್ತ್ ಆಫೀಸಿನವರು ನನ್ನ ವ್ಯಾಪಾರಕ್ಕೆ ಲೈಸೆನ್ಸ್ ಬಗ್ಗೆ ಐದು ರೂಪಾಯಿಗಳನ್ನು ಛಾರ್ಜು ಮಾಡಿರುತ್ತಾರೆ. ಸದ್ಯಕ್ಕೆ ಮೊಲ್ಬಂಡ ವ್ಯಾಪಾರವನ್ನು ನಿಲ್ಲಿಸಿ ಉಪವಾಸಾದಿಗಳಿಂದ ತೊಂದರೆ ಪಡುತ್ತಿರುತ್ತೇನೆ.

—ಬಾಲಮ್ಮ,
ಚರ್ಮ ಮರದ ಬೀದಿ, ಮೈಸೂರು

ಪತ್ರ ೨.

ಸ್ವಾಮಿ— ಅನೇಕ ವರ್ಷಗಳಿಂದ ನಮ್ಮ ಅಂಗಡಿಯ ಮುಂಭಾಗದಲ್ಲಿ ಗಾಳಿ, ಮಳೆ, ಬಿಸಿಲುಗಳನ್ನು ನಿವಾರಿಸುವ ಸಲುವಾಗಿ ಒಂದು ತಗಡಿನ ಛಾವಣಿಯನ್ನು ಹಾಕಿಸಿದ್ದೇವೆ. ಅದು ಮುನಿಸಿಪಲ್ ಚರಂಡಿಯ ಮೇಲೆ ಆವರಿಸಿದ್ದರಿಂದ ಅದನ್ನು ಕೂಡಲೇ ಕಿತ್ತುಹಾಕಬೇಕೆಂದೂ, ಇಲ್ಲದಿದ್ದಲ್ಲಿ ಕೋರ್ಟಿನಲ್ಲಿ ಮೊಕದ್ದಮೆಯನ್ನು ದಾಖಲ್ಮಾಡುವುದಾಗಿಯೂ ಮುನಿಸಿಪಾಲಿಟಿಯಿಂದ ನೋಟೀಸ್ ಬಂದಿದೆ. ಆ ಛಾವಣಿಯನ್ನು ತಗದುಹಾಕಿದಲ್ಲಿ ಅಂಗಡಿಯನ್ನು ನಡೆಸಿಕೊಂಡು ಹೋಗುವುದೇ ಅಸಾಧ್ಯವಾಗುವುದು. ಹೀಗೆಯೇ ದೊಡ್ಡಪೇಟೆಯ ಅನೇಕ ಅಂಗಡಿಯವರಿಗೆ ನೋಟೀಸ್ ಬಂದಿದೆ. ಆದ್ದರಿಂದ ವಿಶೇಷವಾಗಿ ಕೋಲಾಹಲವೆದ್ದಿದೆ.

—ವರ್ತಕ.

ಪತ್ರ ೩

ಸ್ವಾಮಿ—ನನಗೆ ಬರುತ್ತಿರುವ ಆದಾಯವು ಕೇವಲ 1¼|– ರೂಪಾಯಿ ಮಾತ್ರ. ಇದನ್ನು ಉಪಯೋಗಿಸಿಕೊಂಡು ತಲಾಂತರದಿಂದ ಬಂದ ಮನೆಯಲ್ಲಿ ವಾಸಿಸುತ್ತಿದ್ದೇವೆ. ಈಗ ಮುನಿಸಿಪಾಲಿಟಿಯವರು ನಮ್ಮ ಮನೆಯಲ್ಲಿನ ಡ್ರಾಪ್ ಕಕ್ಕಸನ್ನು ತೆಗೆದುಹಾಕಿ ಫ್ಲಷ್ ಕಕ್ಕಸನ್ನು ಕಟ್ಟಿಸಿರೆಂದು ನೋಟೀಸ್ ಕಳಿಸಿದ್ದಾರೆ. ಡ್ರಾಪ್ ಕಕ್ಕಸು ಚೊಕ್ಕಟವಾಗಿಲ್ಲವೆಂದು ಹೇಳಿದ್ದಾರೆ. ಆದರೂ ನಮಗೆ ಹಾಕುತ್ತಿರುವ ಕನ್ಸರ್ವೆನ್ಸಿ ತೆರಿಗೆಯನ್ನು ಮಾತ್ರ ಸ್ವಲ್ಪವೂ ಕಡಿಮೆ ಮಾಡಿಲ್ಲ.

ಕಕ್ಕಸನ್ನು ತಾವೇ ಚೊಕ್ಕಟಮಾಡುವವೆಂದು ಕಕ್ಕಸು ತೆರಿಗೆಯನ್ನು ಏರಿಸಿದರು. ಈಗ ಇನ್ನೂ ಗೋಳಿಯಾಗಿ ಪರಿಣಮಿಸಿಬಿಟ್ಟು ಫ್ಲಷ್ ಕಟ್ಟಿಸಿರೆನ್ನುತ್ತಿರುವರು. ಆಮೇಲೆ ಅದಕ್ಕೆ ನೀರು ಖರ್ಚುಮಾಡಿರುವಿರೆಂದು ಮೀಟರ್ ಇಡುವರು.

ಇದಕ್ಕೆ ಕೊನೆಯುಂಟೆ?

—ನಿವಾಸಿ

ಶ್ರೀಮನ್ಮಹಾರಾಜರವರು.

ಶ್ರೀಮನ್ಮಹಾರಾಜರವರು ಬೊಂಬಾಯಿ ನಗರಕ್ಕೆ ಈ ತಿಂಗಳು 28 ನೇ ತಾ|| ದಯಮಾಡಿಸುವರು. ಅಲ್ಲಿ ಎರಡು ದಿನಗಳಿರುವರು. ಮುಂದಿನ ತಿಂಗಳು 1 ನೇ ತಾ|| ಸ್ಪೆಷಲ್ ಟ್ರೈನಿನಲ್ಲಿ ಹೊರಟು ಮೂರನೇ ತಾ|| ರಾಜಧಾನಿಗೆ ಬರುವರೆಂದು ತಿಳಿದುಬಂದಿದೆ

ಶಿವಸಮುದ್ರದ ದೇವಸ್ಥಾನ.

ಶಿವನ ಸಮುದ್ರದಲ್ಲಿರುವ ಶ್ರೀ ರಂಗನಾಥಸ್ವಾಮಿ ದೇವಸ್ಥಾನದ ಆಡಳಿತವು ಬಹಳ ದಿನಗಳಿಂದ ಅತ್ಯಸ್ಥಿರವಾಗಿತ್ತು. ಇದನ್ನು ನಮ್ಮ ಸರ್ಕಾರದ ಆಡಳಿತಕ್ಕೆ ವಹಿಸಿಕೊಳ್ಳಬೇಕೆಂದು ಪ್ರಯತ್ನ ನಡೆಯುತ್ತಿತ್ತು. ಈ ವಿಷಯದಲ್ಲಿ ಮದರಾಸ್ ಸರ್ಕಾರದವರೊಡನೆ ವ್ಯವಹಾರ ಬೆಳೆದು ಅವರೂ ಅದಕ್ಕೆ ಒಪ್ಪಿದರು. ಆದ್ದರಿಂದ ಮೈಸೂರು ಡೆಪ್ಯೂಟಿ ಕಮೀಷನರವರು ಈ ದೇವಸ್ಥಾನದ ಒಡವೆ ವಸ್ತುಗಳನ್ನು ಸ್ವಾಧೀನಕ್ಕೆ ತೆಗೆದುಕೊಂಡು ಅದರ ಆಡಳಿತವನ್ನೂ ಸಹ ವಹಿಸಿರುತ್ತಾರೆ.

ಅಳತೆ ತೂಕಗಳ ಮೋಸ.

ನಮ್ಮ ಡಿಸ್ಟ್ರಿಕ್ಟಿನ ಕೆಲವು ಸಂತೆಗಳಲ್ಲಿ ಅಳತೆ ತೂಕಗಳ ಮೋಸಗಳು ವಿಶೇಷವಾಗಿ ನಡೆಯುತ್ತಿದೆಯೆಂದು ತಿಳಿದು ಬರುತ್ತದೆ. ಸೇರುಗಳನ್ನೂ ತಕ್ಕಡಿಗಳನ್ನೂ ಬದಲಾಯಿಸಿ, ಅಳತೆ ಮತ್ತು ತೂಕ ಮಾಡುತ್ತಿರುವರೆಂದೂ, ಇದರಿಂದ ಜನರಿಗೆ ಬಹಳ ನಷ್ಟವಾಗುತ್ತಿರುವುದಾಗಿಯೂ ಹೇಳಲಾಗಿದೆ. ಮುಖ್ಯವಾಗಿ ಮಂಡ್ಯ ಮತ್ತು ಎಡತೊರೆ ಸಂತೆಗಳಲ್ಲಿ ಇದು ವಿಶೇಷವಾಗಿ ನಡೆಯುತ್ತಿದೆಯಂತೆ. ಇದಕ್ಕೆ ಅಧಿಕಾರಿಗಳು ತಕ್ಕ ಗಮನ ಕೊಡುವರೆಂದು ಕೋರಲಾಗಿದೆ.

ಪತ್ರ ೪

ಸ್ವಾಮಿ—ದೊಡ್ಡಪೇಟೆಯಲ್ಲಿರುವ ನಮ್ಮ ಅಂಗಡಿಯ ಮುಂದೆ ಕಾಲುವೆಯ ಬಚ್ಚಲನ್ನು ದಾಟಲು ಅನುಕೂಲಿಸುವಂತೆ ನಮ್ಮ ಸ್ವಂತ ಖರ್ಚಿನಿಂದಲೇ ಹಾಸುಗಲ್ಲನ್ನು ಹಾಕಿಸಿದ್ದೆವು. ಅದು ಮುನಿಸಿಪಲ್ ಸ್ಥಳವಾದುದರಿಂದ ಮುನಿಸಿಪಲ್ ನೌಕರರು ಬಂದು ನಮ್ಮ ಆಕ್ಷೇಪಣೆಯನ್ನೇ ಕೇಳದೆ ನಮ್ಮ ಹಾಸುಗಲ್ಲನ್ನೆಲ್ಲವನ್ನೂ ತೆಗೆದುಹಾಕಿರುವರು. ಗಿರಾಕಿಗಳು ಬಂದು ಅಂಗಡಿಯಲ್ಲಿ ವ್ಯಾಪಾರವಾಗದೆ ಬಹಳ ಅನಾನುಕೂಲವಾಗಿರುವುದು. ಅನಾದಿಕಾಲದಿಂದಲೂ ಬಂದಿರುವ ಈ ಅವಶ್ಯಕವಾದ ಅನುಕೂಲಗಳನ್ನು ಈಗಿನ ಅಧಿಕಾರಿಗಳು ನಿಷೇಧಿಸುವುದು ಶೋಚನೀಯವಾಗಿದೆ.

—ಒಬ್ಬ ವರ್ತಕನು.

ಅಲ್ಲಿಂದ ಪಾರಾಗಿ ಇಲ್ಲಿ ಸಿಕ್ಕಿದರು.

ಜರ್ಮನ್ ಜ್ಯೂಗಳ ಶೋಚನೀಯಾವಸ್ಥೆ

ಸ್ಪೇನ್ ಗಲಭೆಗಳಲ್ಲಿ ಸಿಕ್ಕಿದ್ದ ಸಾವಿರಾರು ಜರ್ಮನರನ್ನು ಜರ್ಮನ್ ರಾಯಭಾರಿಗಳು ಇತ್ತೀಚೆಗೆ ಜರ್ಮನಿಗೆ ಸಾಗಹಾಕಿಸಿದರಷ್ಟೆ. ಇವರಲ್ಲಿ ನೂರಾರು ಜನ ಜ್ಯೂಗಳಿದ್ದರು

ಇವರೆಲ್ಲರನ್ನೂ ಬರ್ಲಿನಿಗೆ ಬಂದಕೂಡಲೇ ಹಿಟ್ಲರನು ಬಂಧಿಸಿದನು. ಅವರನ್ನು ಜ್ಯೂ ಕಾನ್ಸೆಂಟ್ರೇಷನ್ ಕ್ಯಾಂಪಿನಲ್ಲಿ ಕೂಡಿಹಾಕಿದ್ದಾರೆ.

ಗಲಭೆಯಿಂದ ಪಾರಾಗಿ, ಕಾರಾಗೃಹದಲ್ಲಿ ಸಿಕ್ಕಿದ್ದಾರೆ ಜರ್ಮನಿಯ ಜ್ಯೂಗಳು

ಗೆರೆ ಎಳೆದರೆ ಆಸ್ತಿ ಹೋಗುತ್ತೆ !

ಮ್ಯಾಂಚೆಸ್ಟರಿನ ಬಳಿ ವಿ|| ವಿಲಿಯಂ ಜ್ಯೋ ಗರ್ನಿಕೊಲಿನ್ಸ್ ಎಂಬುವನಿದ್ದಾನೆ. ಇವನಿಗೆ ಇವನ ಚಿಕ್ಕಮ್ಮನು 2500 ಪೌಂಡು ಆಸ್ತಿಯನ್ನು ಕೊಟ್ಟಿದ್ದಾಳೆ.

ಆದರೆ ಒಂದು ಪುಟ್ಟ ಷರತ್ತು. "ಗರ್ನಿ ಕೊಲಿನ್ಸ್" ಎಂದು ಸಹಿ ಹಾಕುವಾಗ ಈತನು ಮಧ್ಯೆ ಗೆರೆಯನ್ನು ಬರೆಯಕೂಡದೆಂದು. ಎಲ್ಲಿಯಾದರೂ ಕೈತಪ್ಪಿ "ಗರ್ನಿ–ಕೊಲಿನ್ಸ್" ಎಂದು ಸಹಿ ಮಾಡಿದಲ್ಲಿ ಆಸ್ತಿಯೆಲ್ಲಾ ಹೋಗುತ್ತದೆ.

ಅವನಿಗೆ ಸಹಿ ಮಾಡುವಾಗ ತುಂಬಾ ಭಯವಾಗುತ್ತಿದೆ ಈಗ.

ಒಂದೇ ಒಂದು ಕುರುಡುಕಾಸಿಗೆ ೧,೬೫,೦೦೦ ರೂಪಾಯಿಗಳು !

ಲಂಡನ್ನಿನಲ್ಲಿ ಅಂತರ್ರಾಷ್ಟ್ರೀಯ ನ್ಯೂಮಿಸ್ಮ್ಯಾಟಿಕ್ಸ್ ಸಮ್ಮೇಳನವೊಂದು ನಡೆಯುತ್ತಲಿದೆ. ಅದರ ಸಂಬಂಧವಾಗಿ ಪ್ರಪಂಚದ ಹಿಂದಿನ ಕಾಲದ ನಾಣ್ಯಗಳನ್ನೆಲ್ಲಾ ಪ್ರದರ್ಶಿಸಿ ಒಂದು ವಸ್ತುಸಂಗ್ರಹಾಲಯದಲ್ಲಿ ಇರಿಸಿದ್ದಾರೆ.

ಇವುಗಳಲ್ಲಿ ಒಂದು ನಾಣ್ಯವು ಪ್ರಾಚೀನ ಸಿರಾಕ್ಯೂಸ್ ದೇಶಕ್ಕೆ ಸೇರಿದುದು. ಇದು ಕೇವಲ ಕುರುಡುಕಾಸಿನ ಪ್ರಮಾಣದಷ್ಟಿದ್ದರೂ, ಪ್ರವೀಣರು ಅದನ್ನು ಈಗ 1,65,000 ರೂಪಾಯಿಗೆ ಕೊಳ್ಳಲು ಸಿದ್ಧರಾಗಿದ್ದಾರೆ.

ಪುತ್ರವಂತರಾಗಲು ಕಲ್ಲು ಧರಿಸುವರು.

ಕೊಲ್ಲಾಡ್ಜರ್ ಎಂಬಲ್ಲಿ ನಾಲ್ಕು ವರ್ಷಗಳ ಕೆಳಗೆ ಡೈವಾರ್ ಎಂಬ ವಂಶದಲ್ಲಿ ಐದು ಮಕ್ಕಳು ಒಟ್ಟಿಗೆ ಒಬ್ಬಳಿಗೆ ಹುಟ್ಟಿದವು.

ಈಗ ಆ ಊರಿನ ಕಲ್ಲುಗಳಿಗೂ ದೆರೆ ತಿರುಗಿವೆ.

ಅಮೇರಿಕಾ ದೇಶದ ನಾನಾ ಕಡೆಗಳಿಂದ ಮಕ್ಕಳಿಲ್ಲದ ದಂಪತಿಗಳು ಆ ಊರಿನ ಕಲ್ಲುಗಳನ್ನು ತೆಗೆದುಕೊಂಡು ಹೋಗಿ ಧರಿಸುತ್ತಿರುವರು. ಇದರ ಫಲವಾಗಿ ಮಕ್ಕಳಾಗುತ್ತಿರುವುವಂತೆ!

ಅಂತೂ ಆ ಊರಿನ ಕಲ್ಲುಗಳನ್ನು ವಿಪಿ ಮುಖಾಂತರ ಕಳುಹಿಸಿ ಒಬ್ಬನು ದೊಡ್ಡ ವ್ಯಾಪಾರ ಮಾಡುತ್ತಿದ್ದಾನೆ

ತಾನೇ ದೇವರಂತೆ!

ನ್ಯೂಯಾರ್ಕಿನ 'ಸ್ವರ್ಗ'ದಲ್ಲಿ ಇವನ ನಿವಾಸ.

ರಾವಣನ ಹೊಟ್ಟೆ, ಕೋಳಿದ ಕೆಂಪು ಬಣ್ಣ, ಒರಟು ಕೂದಲು, ದಪ್ಪ ತುಟಿ ಕುಳಿತರೆ ಏಳುವುದು ಕಷ್ಟ, ಎದ್ದರೆ ಕೂರುವುದು ಕಷ್ಟ—ಹೀಗಿದ್ದಾನೆ ಅಮೇರಿಕಾದಲ್ಲಿ ಈಗ ಕಾಣಿಸಿಕೊಂಡಿರುವ ಸಾಕ್ಷಾತ್ಪರಮಪುರುಷ

ಇವನೇ ದೇವರೆಂದು ನೂರಾರು ಜನ ನಂಬಿದ್ದಾರೆ. ಇವನಿಗೆ ತಾವು ದುಡಿದ ಹಣವನ್ನೆಲ್ಲಾ ಒಪ್ಪಿಸುತ್ತಾರೆ. ... ಛತ್ರದಲ್ಲಿ ಅವನು ಹಾಕಿದ್ದನ್ನು ತಿಂ... "ನಮ್ಮ ಗುರುವೇ ದೇವರು, ಅವರೇ ... ವರ ಸಾಕ್ಷಾತ್ಕಾರ" ಎಂದು ಸರ್ವದಾ ... ಪಿಸುತ್ತಿದ್ದಾರೆ

ಈ ದೇವನ ಹೆಸರು 'ಜಾರ್ಜ್ ಬೇಕರ್' ಎಂದು. ನೀಗ್ರೋ ಜನಾಂಗಕ್ಕೆ ಸೇರಿದವನು. 1889 ರಲ್ಲಿ ಇವನು ಬೇರಿ ... ರಿಸುವುದು, ಬಗೆಯುವುದು ಮುಂತಾದ ... ಷ್ಟ ಜೀವನಗಳಿಂದ ಹೊಟ್ಟೆ ಹೊರೆ... ತ್ತಿದ್ದನು.

ಹೀಗೆಯೇ ನಡೆಸುತ್ತಾ 1914 ... ಜಾರ್ಜ್ ಬೇಕರನು ಒಮ್ಮಿಂದೊಮ್ಮೆ ... ದಲಾಯಿಸಿ ಹೋದನು. ಅಲ್ಲಲ್ಲಿ ಜನ... ಕೂಡಿಸಿ, ತಾನೇ ಅಮೇರಿಕಾ ದೇಶವನ್ನು ... ಉದ್ಧರಿಸಲು ಬಂದಿರುವ ಪರಮ ಪು... ನೆಂದು ಹೇಳಲಾರಂಭಿಸಿದನು. ... ಹೇಳಿದುದನ್ನು ಒಪ್ಪಲು ಒಬ್ಬ ಶಿಷ್ಯ... ದೊರಕಿದನು

ಪೋಲೀಸರಿಗೆ ಸಂಶಯ ಬಂ... 'ದೇವರ'ನ್ನು ಹುಚ್ಚಾಸ್ಪತ್ರೆಗೆ ಸಾ... ಕಿದರು. ಅಲ್ಲಿ ಅವನು ಹುಚ್ಚನಾಗಿ... ಸಾರ್ವಜನಿಕ ತೊಂದರೆ ಮಾಡಲಾ... ದು ತಿಳಿದಿದ್ದರಿಂದ ಅವನನ್ನು ಸಿ... ದಿಂದ ಬಿಟ್ಟು ಬಿಟ್ಟರು. ಅಂದಿನಿಂದ ... ವರ ಪ್ರತಾಪ" ಪುನಃ ಆರಂಭವಾ...

ದಿನೇ ದಿನೇ ಶಿಷ್ಯರು ಹೆಚ್ಚಾದರು... ಗ 1500 ಕ್ಕಿಂತಲೂ ಹೆಚ್ಚು ಜನ... ದೇವರ ನೆಲೆಯಲ್ಲಿ—ಅದಕ್ಕೆ "ಸ್ವ... ಎಂದು ನಾಮಕರಣವೂ ಆಗಿದೆ—... ತ್ತಿದ್ದಾರೆ. ದೇವರಿಗೆ ಈಗ ಅನೇಕ... ನೆಗಳೂ, ನೂರಾರು ಎಕರೆ ... ಕೂಡಾ ಸೇರಿವೆ

ದೇವರು ಈಗ ಕೂಲಿ ಮಾಡು... ಶ್ಯಕತೆಯೇ ಇಲ್ಲ

ಆಸ್ಪತ್ರೆಗಳಲ್ಲಿ ಕೊಡಬೇಕಾದ ...

ಐವತ್ತು ರೂಪಾಯಿಗಿಂತ ಹೆ... ಮಾಸವಿರುವವರಿಂದ ಶಸ್ತ್ರ ಚಿ... ಫೀಜನ್ನು ವಸೂಲುಮಾಡಲು ಸ... ವರು ಹುಕುಂಮಾಡಿರುತ್ತಾರೆ. ... ಸ್ಥಾನದಲ್ಲಿರುವ ಕೆಲವು ಭಾರಿ ಆ... ಗೆ ಮಾತ್ರ ಅನ್ವಯಿಸುವುದು ... ಅನುಗುಣವಾಗಿ ಫೀಜು ವಸೂ... ಲ್ಪಡುವುದು. ಬೆಂಗಳೂರು, ... ಕೋಲಾರದ ಆಸ್ಪತ್ರೆಗಳಿಗೆ ಮಾ... ಅನ್ವಯಿಸುವದು

ನಗರ ಜೀವನ.

ಇಣಕಪ್ಪನ ನೋಟ.

99 ಜನ ಪೌರರ ಮೇಲೆ ಪೌರಸಭಾಧಿಕಾರಿಗಳು ಕಳೆದವಾರ ಮೊಕದ್ದಮೆಯನ್ನು ಹೂಡಿರುವರು

ಅಂತಹ ಸಹಕಾರವನ್ನು ಬೇಡುವ ಅಧಿಕಾರಿಗಳು ದಬ್ಬಾಳಿಕೆಯನ್ನು ಕೈಯಾರ ತೋರಿಸುತ್ತಿರುವರು ಜನರು ಕುಯ್ಯೋ ಮರ್ರೋ ಎಂದು ಕೂಗಿದರೆ ಕಾನೂನನ್ನು ತೋರುವರು. ಜನರಿಗಾಗಿ ಕಾನೂನುಗಳಿರುವವೆಂಬುದನ್ನು ಮರೆತು, ಕಾನೂನಿಗಾ ಜನರಿರುವರೆಂದು ತಿಳಿದಿರುವರು. ದ ...ಕೆಗಳು ನಾನಾ ತರಹವಾಗಿವೆ.

ಕನ್ಸರ್ವೆನ್ಸಿ ಪ್ರಶ್ನೆ ಮೊದಲನೆಯದು. ...ಅಂಗಡಿಗಳ ಮುಂಚಾವಣಿಯ ಪ್ರಶ್ನೆಯು ...ಎರಡನೆಯದು ಬಿಟ್ಟಲು ಕಲ್ಲುಗಳದು ...ಮೂರನೆಯದು ಅಸಾಧ್ಯ ಲೈಸೆನ್ಸ್ ಫೀಸ ...ನಾಲ್ಕನೆಯದು—ಇವುಗಳೆಲ್ಲಾ ಮುಖ್ಯ ...ಕುಂದು ಕೊರತೆಗಳು.

ನರಸಿಂಹರಾಜ ಮೊಹಲ್ಲಾ ರಸ್ತೆಗಳ ...ವನ್ನು, ಶೀವರ್ಸ್ ಲೈನ್ಸಿನ ಜಲಾಭಾವ ...ಮೊಹಲ್ಲಾದ ಸ್ಯಾನಿಟರಿ ಅವ್ಯವಸ್ಥೆ, ...ಅಗ್ರಹಾರದ ಮಲೇರಿಯಾ—ಇವೆ ...ಹಳೆಯ ಜಾಡ್ಯಗಳು. ಇವುಗಳು ಇ...ಚಿನವಲ್ಲವಾದ್ದರಿಂದ ಅವುಗಳನ್ನು ...ಪ್ರಸ್ತಾಪಿಸುವುದಿಲ್ಲ

ಕಕ್ಕಸು ಗಲಾಟೆ.

ಈಗ ಕೆಲವು ವರ್ಷಗಳ ಕೆಳಗೆ ಕಕ್ಕಸ್ಸುಗಳನ್ನು ಗುಡಿಸುತ್ತಿದ್ದವರು ಖಾಸಗಿ ...ಜಲಗಾರರು ಜನರು ಅವರಿಗೆ ಪ್ರತ್ಯೇಕವಾಗಿ ಹಣವನ್ನು ಕೊಟ್ಟು ಕಕ್ಕಸುಗಳ ...ಚೊಕ್ಕಟಮಾಡಿಸುತ್ತಿದ್ದರು.

...ಪೌರಸಭೆಯವರಿಗೆ ಖುಷಿ ಹತ್ತಿತು. ಜನರೆಲ್ಲರಮೇಲೆಯೂ ಕನ್ಸರ್ವೆನ್ಸಿ ತೆ...ರಿಗೆಯನ್ನು ಹೇರಿ, ಕಕ್ಕಸುಗಳನ್ನು ತಾವೇ ...ಚೊಕ್ಕಟಮಾಡಿಸುವೆವೆಂದರು. ತೆರಿಗೆಯು...ನ್ನೂ ವಸೂಲ್ಮಾಡಿದರು.

...ಕೆಲವಾರು ದಿನ ಜಲಗಾರರು ಹಠ ಹಿಡಿ...ದು ಪೌರರೆಲ್ಲಾ ಹಣಕೊಟ್ಟು ತಿಪ್ಪನೆ ...ಸುಮ್ಮನಿಟ್ಟುಕೊಂಡು ತಿರುಗಾಡಿದುದು ...ಬೀದಿ ಮನೆಯ ದುರ್ಗಂಧವನ್ನು ಸಹಿಸದೆ ಅನೇಕರು ಮಾಹೆಯಾನಾ ಹಣ ...ಜಲಗಾರರಿಗೆ ಪ್ರತ್ಯೇಕವಾಗಿ ಕೊ...ಡು—ಇವುಗಳೆಲ್ಲವೂ ಹಳೆಯ ಪು...

...ಈಗ ಪ್ರತಿ ಮನೆಯವರೂ ...ವನ್ನು ಚೊಕ್ಕಟವಾಗಿಡಲು ಇಬ್ಬಂದಿ ...ಯನ್ನು ಕೊಡುತ್ತಿರುವರು. ಒಂದು ...ಮ್ಯುನಿಸಿಪಾಲಿಟಿಯವರಿಗೆ, ಇನ್ನೊಂದು ...ಜಲಗಾರರಿಗೆ.

...ತೆರಿಗೆಗಳು ಸಾಲದೋ ಎಂಬಂತೆ ...ಅಧಿಕಾರಿಗಳು ಹೊಸ ಹೊಸ ತರ...ನೋಟೀಸುಗಳನ್ನು ಹೊರಡಿಸಿದ್ದಾರೆ.

"ನಿಮ್ಮ ಕಕ್ಕಸುಗಳು ಚೊಕ್ಕಟವಾಗಿಲ್ಲ. ಅವುಗಳನ್ನು ತೆಗೆದು "ಫ್ಲಷ್" ಕಕ್ಕಸುಗಳನ್ನು ಕಟ್ಟಿಸಿ" ಎಂಬರ್ಥವಾಗುವಂತೆ ನೋಟೀಸು ಕಳುಹಿಸಿದರು.

ನೋಟೀಸಿಗೆ ಜಗ್ಗದಿದ್ದರೆ ಕೇಸು ದಾಖಲಾಗುತ್ತೆ. ಅನ್ಯಕ್ಯಾ ಕಟ್ಟಿಸದಿದ್ದರೆ ಜುಲ್ಮಾನೆಗಳಾಗುತ್ತವೆ

ಈ ವಿಚಾರದಲ್ಲಿ ನಮ್ಮ ಪ್ರಶ್ನೆಗಳಿವು.

---

(1) ಕಕ್ಕಸುಗಳು ಇದಿನ ಕೊಳೆಯಾಗಿದ್ದರೆ ಆ ತಪ್ಪು ಯಾರದು? ಮ್ಯುನಿಸಿಪಾಲಿಟಿಯವರದೇ ಅಥವಾ ಜನಗಳದೇ ?

(2) ಜನಗಳಾದವಾಗಿದ್ದರೆ, ಅವುಗಳನ್ನು ಚೊಕ್ಕಟಮಾಡಿಸಿರುವೆವೆಂಬ ನೆಪದಿಂದ ಕನ್ಸರ್ವೆನ್ಸಿ ತೆರಿಗೆಯನ್ನೇಕೆ ವಸೂಲ್ಮಾಡುವಿರಿ?

(3) ಮ್ಯುನಿಸಿಪಾಲಿಟಿಯ ಮೇಲಾಗಿದ್ದರೆ ನೀವೇ ತಪ್ಪು ಮಾಡಿದ್ದಕ್ಕೆ ನಿರಪರಾಧಿಗಳನ್ನು ದಂಡಕ್ಕೇಕೆ ಗುರಿಮಾಡುವಿರಿ?

(4) ಈಗ ಫ್ಲಷ್ ಕಟ್ಟಿಸಿರೆಂದು ಬಲವಂತಮಾಡಿ ಕಟ್ಟಿಸಿದಮೇಲೆ ನೀವು ಅದಕ್ಕೆ ಬೇಕಾದ ನೀರಿನಮೇಲೆ ಪುನಃ ಮೀಟರ್ ಇಟ್ಟು ಛಾರ್ಜ ಮಾಡುವುದಿಲ್ಲವೇ?

(5) ಒಂದುಕಡೆ ಫ್ಲಷ್ ಕಟ್ಟಿಸಬೇಕೆಂದು ಬಲಾತ್ಕಾರ, ಮತ್ತೊಂದುಕಡೆ ವಿಾಟರ್ ಇಡಲು 50,000 ರೂಪಾಯಿಗಳನ್ನು ಲೆಕ್ಕಹಾಕುವುದು—ಇವನ್ನು ನೋಡಿದರೆ ಹೆಚ್ಚು ತೆರಿಗೆಗಾಗಿ ಹೊಂಚಿರುವಂತೆ ತೋರುವುದಿಲ್ಲವೇ ?

(6) ಇಷ್ಟೆಲ್ಲಾ ಆದಮೇಲೆ ಮತ್ತೊಂದು "ಅಂಡರ್ ಗ್ರೌಂಡ್ ಡ್ರೇನೇಜ್ ತೆರಿಗೆ" ಎಂಬುವನ್ನು ಹಾಕದಿರುವಿರೆಂಬ ಭರವಸೆ ಯಾರಿಗಾದರೂ ಉಂಟಾಗುವುದೇ ?

(7) ಇಂಥಾ ದೊಡ್ಡ ನಗರದಲ್ಲಿ ಫ್ಲಷ್ ಕಕ್ಕಸುಗಳು ಬಹಳ ಕಡಿಮೆಯೆಂದು ಹೇಳಿರುವಿರಿ. ಅವನ್ನು ಹೆಚ್ಚು ಮಾಡಿಸಲು ನೀವು ಬಲಾತ್ಕಾರದಿಂದ ಹೊರತು ಬೇರೆ ಬಗೆಯಾಗಿ ಪ್ರಯತ್ನಿಸಿರುವಿರಾ? ಅವನ್ನು ಕಟ್ಟಿಸಲು ಸಿದ್ಧರಾದವರಿಗೆ ನೀರಿನ ತೆರಿಗೆ ಹೆಚ್ಚಿಸುವ ಬೆದರಿಕೆಯನ್ನು ತೆಗೆದಿದ್ದೀರಾ? ಅಥವಾ ಕನ್ಸರ್ವೆನ್ಸಿ ತೆರಿಗೆಯಿಂದ ವಿನಾಯಿತಿ ಕೊಟ್ಟಿರುವಿರಾ? ಅಥವಾ 'ಕ್ಯಾಪಿಟಲ್ ಎಕ್ಸ್‌ಪೆಂಡಿಚರ್'ಗಾಗಿ ಮೊದಲು ಹಣಕೊಟ್ಟು ಅವನ್ನು ಇನ್‌ಸ್ಟಾಲ್‌ಮೆಂಟಿನಲ್ಲಿ ತಗೆದುಕೊಳ್ಳುವ ಏರ್ಪಾಟು ಮಾಡಿದ್ದೀರಾ?

ಛೇ ಅದೊಂದೂ ಇಲ್ಲ.

ಇವುಗಳ ಗಂಧವೇ ನಮ್ಮ ಪೌರಸಭೆಯವರುಗಳಿಗೆ ಇದ್ದಂತೆ ತೋರುವುದಿಲ್ಲ.

ಕಂಡಿರುವುದು ಕೋರ್ಟು, ಕಛೇರಿ.

ಹೀಗಾದಮೇಲೆ ಜನರು ನೋಯುವರೆಂದರೆ ಆದೇನು ಹೆಚ್ಚು?

ಛಾವಣಿಯ ಗಲಾಟೆ.

ಅದೆಲ್ಲಾ ಬಿಟ್ಟು ಎರಡನೆಯ ಪ್ರಶ್ನೆಗೆ ಬರೋಣ ಇದು ಅಂಗಡಿಗಳ ಮುಂಚಾವಣಿಗೆ ಸಂಬಂಧಪಟ್ಟುದು

ದೊಡ್ಡ ಪೇಟೆಯ ಅಂಗಡಿಗಳ ಮಾಲೀಕರಿಗೆಲ್ಲಾ ಮುಂಛಾವಣಿಯನ್ನು ತೆಗೆದುಹಾಕಿರೆಂದು ನೋಟೀಸುಗಳನ್ನು ಜಾರಿ ಮಾಡಿದ್ದಾರೆಯಂತೆ.

ಈ ಆಜ್ಞೆಗೆ ಮೂಲಕಾರಣರು ಯಾರೇ ಇರಲಿ—ಅವರಿಗೆ ಪುರದ ವರ್ತಕರು ಕಾಷ್ಟ್ರಯುಗಳ ಕಡೆ ಗಮನವೇ ಬಂದಿಲ್ಲವೆಂಬುದು ಖಂಡಿತ

ಚಾವಣಿಗಳು ಈಗ ಹಾಕಿದವುಗಳಲ್ಲ. ಮುತ್ತಾತನ ಕಾಲದಿಂದಲೂ ಬಂದವುಗಳು ಅವುಗಳಿಲ್ಲದಿದ್ದಲ್ಲಿ ಅಂಗಡಿಗಳ ಒಳಭಾಗಗಳೆಲ್ಲಾ ಗಾಳಿ, ಮಳೆ, ಬಿಸಿಲುಗಳ ಹೊಡೆತದಿಂದ ತಪ್ಪಿಸಿಕೊಳ್ಳುವುದು ಅಸಾಧ್ಯ

ಚಾವಣಿಗಳಿರುವುದೇನೋ ಮುನಿಸಿಪಲ್ ಜಾಗದಲ್ಲಿ ಎಂಬುದು ನಿಜ ಆದರೆ ಇವನ್ನು ತೆಗೆದುಹಾಕಿರೆಂದು ಹೇಳುತ್ತಿರುವ ಅಧಿಕಾರಿಗಳು ಅದೇ ತರ್ಕವನ್ನನುಸರಿಸಿ ಮನೆಗಳ ಕಿಟಕಿಗಳಿಗೆ ಹೊರಗಡೆ ಹಾಕಿರುವ ಪ್ರೊಟೆಕ್ಟರುಗಳನ್ನು ಕಿತ್ತುಹಾಕಿರೆಂದರೆ

ಅದೂ ಸಾಧ್ಯವಲ್ಲವೆ ಮತ್ತೇನು?

ಚಾವಣಿಗಳು ಯಾರಿಗೇನೂ ಅಪಚಾರ ಮಾಡುತ್ತಿಲ್ಲ. ಅಂಥಹ ಸ್ವೆಂಥವರು ಸದ್ಯಕ್ಕಂತೂ ನೈಸೂರಿನಲ್ಲಿ ಜನಿಸಿಲ್ಲ.

ಅವು ಪುರದ ಅಂದವನ್ನು ಕೆಡಿಸುತ್ತವೆ ಎಂದು ವಾದಿಸಿದಲ್ಲಿ ನಾವು ಹೇಳುವುದಿಷ್ಟೆ ಹಿಂದಿನಿಂದ ಬಂದ ಮಾಮೂಲನ್ನು ಅಂದದ ನೆಪದಲ್ಲಿ ಕಿತ್ತುಹಾಕಿದಲ್ಲಿ, ಯಾರಾದರೂ ಇಂಜಂಕ್ಷನ್ ಇತ್ಯಾದಿಗಾಗಿ ಕೋರ್ಟು ಹತ್ತಿದಲ್ಲಿ, ಮುಂದೆ

ಇವತ್ತು ಅಂದಕ್ಕಾಗಿ ಚಾವಣಿಯನ್ನು ಕಿತ್ತಿಸಿದವರು, ನಾಳೆ ಗೋಡೆಗೆ ಬರುವುದೇನೂ ಹೆಚ್ಚಲ್ಲ

[ವೈಸ್ರಾಯರು ಬಂದಾಗ ಅದಕ್ಕೂ ಗ್ರಹಚಾರ ವಕ್ರಿಸುವದೆಂಬುದು ಒತ್ತಟ್ಟಿಗಿರಲಿ]

ಅಂತೂ ಅಂದದ ನೆಪದಲ್ಲಿ ಹೊಟ್ಟೆಗೆ ಹಿಟ್ಟುತಪ್ಪಿ ಕಲ್ಲು ಬೀಳುವಂತಿವೆ ಅಂಗಡಿಗಳನ್ನು ಖಾಲೀ ಮಾಡುವುದೊಂದೇ ಬಾಕಿಯಾಗಿದೆ

ಇದಕ್ಕಿಂತಲೂ ಅನ್ಯಾಯ.

ಮೇಲಿಂದ ಚಾವಣಿಯನ್ನು ಕಿತ್ತುದಲ್ಲದೆ, ಬುಡದಲ್ಲಿರುವ ಹಾಸುಗಲ್ಲುಗಳನ್ನೂ ಕಿತ್ತುತ್ತಿದ್ದಾರೆ. ಈ ಕೆಲಸಕ್ಕೆ ನೋಟೀಸುಕೂಡಾ ಅನವಶ್ಯಕವೆಂದು ಅಧಿಕಾರಿಗಳು ತಿಳಿದಂತಿದೆ

ಹೇಳದೆ ಕೇಳದೆ ಹಮಾಲರು ಬಂದು ಅಂಗಡಿಗಳ ಮುಂದೆ ಚರಂಡಿಯಮೇಲೆ ಹಾಕಿರುವ ಕಲ್ಲುಗಳನ್ನು ಕಿತ್ತು ಹಾಕುತ್ತಿದ್ದಾರೆ.

ಕಲ್ಲುಗಳು ಮ್ಯುನಿಸಿಪಾಲಿಟಿಯವಲ್ಲ. ಅಂಗಡಿಯ ಮಾಲೀಕರದು.

ಆದರೆ ಮ್ಯುನಿಸಿಪಲ್ ಸ್ಥಳದಲ್ಲಿದೆ ಎಂದು ಮ್ಯುನಿಸಿಪಾಲಿಟಿಯವರು ತೆಗೆಯುತ್ತಿರುವಂತೆ ತೋರುತ್ತದೆ

ಅಂಗಡಿಗೆ ಹೋಗುವವರು ಮುಗ್ಗರಿಸಿದರೆ ಪೌರಸಭೆಯ ತಪ್ಪೇ?

ಚರಂಡಿಯಲ್ಲಿ ಉರುಳಿದರೆ ಪೌರಸಭೆಯವರೇನು ಮಾಡಿಯಾರು?

ಅವರ ಸ್ಥಳದಲ್ಲಿರುವ ಕಲ್ಲನ್ನು ಅವರು ಸಾಗಿಸುವರು.

ಗಿರಾಕಿಗಳು ಒರದೆ ಆರ್ಥಿಕ ಮುಗ್ಗಟ್ಟಿನಿಂದ ನರಳುತ್ತಿರುವ ಅಂಗಡಿಯವರಿಗೆ ಮ್ಯುನಿಸಿಪಾಲಿಟಿಯು ಮೂರು "ಸಹಾಯಗಳ"ನ್ನು ಕೊಟ್ಟಿದೆ ಅವೇನು ಗೊತ್ತೇ?

ಒಂದು, ಹೆಚ್ಚಿಗೆ ಆಕ್ಟ್ರಾಯಿ ತೆರಿಗೆ
ಎರಡು, ಹೆಚ್ಚಿಗೆ ಮನೆಗಂದಾಯ.
ಮೂರು, ಮೇಲಿನಿಂದ ಚಾವಣಿ ಮಾಯ, ಕೆಳಗೆ ಚರಂಡಿ ಪ್ರತ್ಯಕ್ಷ!

ಭಲೇ! ಭಲೇ! ಭಲೆ!

ವಿದೇಶೀಯರ ಪ್ರತಿಷ್ಠೆ

ಚೀನಾದೇಶದಲ್ಲಿ ಇದುವರಿಗೆ ವಿದೇಶೀಯರಿಗೆ ಆದಾಯದ ತೆರಿಗೆ ಇರಲಿಲ್ಲ. ಆದರೆ ಇವರಿಗೇ ಆದಾಯವು ವಿಶೇಷವಾಗಿತ್ತು.

ಇನ್ನುಮೇಲೆ ವಿದೇಶೀಯರೂ ಕೂಡಾ ಆದಾಯದ ತೆರಿಗೆಯನ್ನು ಕೊಡಬೇಕೆಂದು ಸರ್ಕಾರದವರು ನಿಶ್ಚಯಿಸಿದ್ದಾರೆ.

ವಿದೇಶೀಯರಲ್ಲೆಲ್ಲಾ ಕೋಲಾಹಲವೆದ್ದಿದೆ

"ಪೌರ್ವಾತ್ಯ ರಾಷ್ಟ್ರಗಳು ಹಣನೆರಲು ಇವೆಯೇ ಹೊರತು ಹಣ ಕೊಡುವುದಕ್ಕಲ್ಲ" ಎಂಬುದೇ ಚೀನಾ ದೇಶದಲ್ಲಿ ನೆಲೆಸಿರುವ ವಿದೇಶೀಯರ ನೀತಿ ಎಂಬಂತೆ ತೋರುವುದು

ಪರಿಶೀಲನೆಯಲ್ಲಿಯೇ ಪರ್ಯವಸಾನ

ತುಂಗಭದ್ರಾ ಜಲಾಶಯ ನಿರ್ಮಾಣದ ವಿಷಯವನ್ನು ಪರಿಶೀಲಿಸಲು ಮತ್ತೊಂದು ಉಪಸಮಿತಿಯನ್ನು ಕೇಂದ್ರ ಸರ್ಕಾರದವರು ನಿಯಮಿಸಿರುವರಂತೆ

ನಲವತ್ತು ವರುಷಗಳಿಂದಲೂ ಈ ಜಲಾಶಯ ನಿರ್ಮಾಣವು ಪರಿಶೀಲಿಸಲ್ಪಡುತ್ತಲೇ ಇದೆ.

ಅಂತೂ ಪರಿಶೀಲನೆಯಲ್ಲಿಯೇ ಪರ್ಯವಸಾನವಾಗುತ್ತಿದೆ ಜನರುಮಾತ್ರ ನೀರಾವರಿಯಿಲ್ಲದೆ ಕ್ಷಾಮದಿಂದ ಬಳಲುತ್ತಿದ್ದಾರೆ

ಕಾಂಗ್ರೆಸ್ ಸಭೆಯ ಪುನರ್ರಚನೆ.

ಮೈಸೂರಿನಲ್ಲಿ ಕಾಂಗ್ರೆಸ್ ಸಭೆಯನ್ನು ಪುನರ್ವ್ಯವಸ್ಥೆ ಮಾಡುವ ಏರ್ಪಾಡುಗಳಾಗುತ್ತಿವೆ. ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಸದಸ್ಯರಾದ ಶ್ರೀಮತಿ ಕಮಲಾದೇವಿಯವರು ರಾಜಧಾನಿಗೆ ದಯಮಾಡಿಸಿದ್ದರು. ಅವರೊಡನೆ ಸ್ಥಳೀಯ ಕಾಂಗ್ರೆಸ್ ಕೆಲಸಗಾರರು ಮಾತುಕತೆಗಳನ್ನು ನಡೆಸಿದರು.

ಕಳೆದ ಹತ್ತನೇ ತಾ॥ ಇದಕ್ಕಾಗಿ ಮೈಸೂರು ಟೌನ್‌ಹಾಲಿನಲ್ಲಿ ಒಂದು ದೊಡ್ಡ ಬಹಿರಂಗ ಸಭೆ ನಡೆಯಿತು. ಸಾವಿರಾರು ಜನರು ಬಂದಿದ್ದರು. ಹೊಸಹಳ್ಳಿ ಮ॥ ವೀರಣ್ಣಗೌಡರು ಅಧ್ಯಾಸನವನ್ನು ವಹಿಸಿದ್ದರು. ಶ್ರೀಮತಿ ಕಮಲಾದೇವಿಯವರು ರಾಷ್ಟ್ರೀಯ ಸಭೆಯ ಸಂದೇಶದ ವಿಚಾರವಾಗಿ ಸ್ವಾರಸ್ಯವಾದ ಭಾಷಣವನ್ನು ಮಾಡಿದರು. ದೇಶೀಯ ಸಂಸ್ಥಾನಗಳಿಗೂ ಬ್ರಿಟಿಷ್ ಇಂಡಿಯಾಕ್ಕೂ ಯಾವ ಭೇದವೂ ಇಲ್ಲವೆಂದು ತಿಳಿಸಿದರು. ಪ್ರಪಂಚವನ್ನೆಲ್ಲಾ ಆಕ್ರಮಿಸಿರುವ ಆರ್ಥಿಕ ಮುಗ್ಗಟ್ಟಿಗೆ ಸಾಮ್ರಾಜ್ಯವಾದ ಮತ್ತು ಬಂಡವಾಳಗಾರರ ಸ್ವಾರ್ಥಪರತೆಗಳೇ ಮೂಲಕಾರಣವೆಂದೂ ಇವುಗಳನ್ನು ಪ್ರತಿಭಟಿಸುವ ಸಲುವಾಗಿಯೇ ಕಾಂಗ್ರೆಸ್ ಸಭೆಯು ಸ್ಥಾಪಿಸಲ್ಪಟ್ಟಿದೆಯೆಂದೂ ತಿಳಿಸಿದರು.

ಪಂಡಿತ ಜವಾಹರಲಾಲರಿಂದ ಬಂದಿದ್ದ ಸಂದೇಶವನ್ನು ಮ॥ ಪಿ. ಎಸ್. ಸಂಗಪ್ಪನವರು ಓದಿ ಹೇಳಿದರು. ಮಹಾಜನರು ಕಾಂಗ್ರೆಸ್ಸಿಗೆ ಸದಸ್ಯರಾಗಿ ಸೇರಬೇಕೆಂದು ಪ್ರಾರ್ಥಿಸಲಾಯಿತು. ಈಗಾಗಲೇ ನೂರಾರು ಜನರು ಸದಸ್ಯರಾಗಿ ಸೇರಿರುವರೆಂದು ಗೊತ್ತಾಗಿದೆ. ಈ ವರ್ಷಕ್ಕೆ ಈ ತಿಂಗಳ ಆಖೈರಿನವರೆಗೆ ಸದಸ್ಯರಾಗಲು ಅವಧಿಯಿರುತ್ತದೆ. ಅಷ್ಟರಲ್ಲಿ ಎಲ್ಲರೂ ವಾರ್ಷಿಕ ಚಂದಾ ನಾಲ್ಕಾಣೆ ಕೊಟ್ಟು, ಕಾಂಗ್ರೆಸ್ಸಿನ ಸಂಪೂರ್ಣ ಸ್ವರಾಜ್ಯ ಧ್ಯೇಯಕ್ಕೆ ರುಜು ಮಾಡಿ ಸದಸ್ಯರಾಗಬೇಕಾಗಿ ಕೋರಲ್ಪಟ್ಟಿದೆ.

ಟೊರಂಟೋವಿನಲ್ಲಿ ಹೆರಿಗೆಯ ಪಂದ್ಯ.

ಗೆದ್ದವರಿಗೆ ಹದಿನೈದು ಲಕ್ಷ
ರೂಪಾಯಿ ಬಹುಮಾನ

ಬರುವ ಅಕ್ಟೋಬರ್ ಮೂವತ್ತೊಂದನೆಯ ತಾರೀಖಿಗೆ ಟೊರಂಟೋ ನಗರದಲ್ಲಿ ಒಂದು ಪಂದ್ಯದ ಫಲಿತಾಂಶವು ಹೊರಬೀಳುವುದು. ಈ ಪಂದ್ಯದಲ್ಲಿ ಗೆದ್ದವರಿಗೆ ಒಂದುಲಕ್ಷ ಪೌಂಡು ಬಹುಮಾನವಾಗಿ ದೊರೆಯುತ್ತದೆ. ಮಿ॥ ಚಾರ್ಲ್ಸ್ ವಾನ್ಸ್ ಮಿಲ್ಲರ್ ಎಂಬೊಬ್ಬ ಪ್ರಖ್ಯಾತನಾದ ವಕೀಲನು 1926 ರಲ್ಲಿ ಸತ್ತುಹೋದನು. ಇವನು ತನ್ನ ಆಸ್ತಿಯನ್ನೇ ಬಹುಮಾನವಾಗಿಟ್ಟು ತನ್ನ ಉಯಿಲಿನಲ್ಲಿ ಒಂದು ವಿಚಿತ್ರ ಪಂದ್ಯವನ್ನೇರ್ಪಡಿಸಿದ್ದನು.

ಆ ಪಂದ್ಯದಲ್ಲಿ ಭಾಗವಹಿಸುವವರಿಗೆ ಷರತ್ತುಗಳು—

(1) ಮಿಲ್ಲರನು ಸತ್ತ ಹತ್ತು ವರ್ಷಗಳ ಒಳಗಾಗಿಯೇ ಟೊರಂಟೋ ನಗರದೊಳಗೆ ಹೆಚ್ಚು ಶಿಶುಗಳನ್ನು ಹೆರಬೇಕು

(2) ಭಾಗವಹಿಸುವವರು ಅಮೇರಿಕದವರಾಗಿರಬೇಕು.

ಈಗಾಗಲೇ ಬಹುಮಾನಕ್ಕಾಗಿ ಐದು ಜನ ತಾಯಂದಿರು ಹಾತೊರೆಯುತ್ತಿದ್ದಾರೆ. ಒಬ್ಬಾಕೆಗೆ ಹತ್ತು ಮಕ್ಕಳಿದ್ದು (ಎಲ್ಲರೂ ಈ ಹತ್ತು ವರ್ಷದಲ್ಲಿಯೇ ಹುಟ್ಟಿದ್ದಾರೆ.) ಪುನಃ ಗರ್ಭಿಣಿಯಾಗಿರುವಳು. ಈ ಬಾರಿ ಅವಳಿಮಕ್ಕಳು ಹುಟ್ಟಬೇಕೆಂದು ಇವಳು ಪ್ರಾರ್ಥಿಸುತ್ತಿರುವಳು

ಒಂದಡಿ ಮನುಷ್ಯ

(ನಮ್ಮ ಬಾತ್ಮೀದಾರರಿಂದ)

ಹಾಸನದಲ್ಲಿ ಸುಮಾರು 40 45 ವರ್ಷದ ಮನುಷ್ಯನು ಒಂದಡಿ ಮಾತ್ರವೇ ಇರುತ್ತಾನೆ. ಗಾತ್ರದಲ್ಲಿ ಮಾತ್ರ ದಪ್ಪವಾಗಿಯೇ ಇರುತ್ತಾನೆ. ಈತನು ಪ್ರತಿ ಸಂತೆಯಲ್ಲಿಯೂ, ಪ್ರತಿಯೊಬ್ಬ ವ್ಯಾಪಾರಸ್ಥನಲ್ಲಿಯೂ ಹೋಗಿ ನಮಸ್ಕಾರಗಳನ್ನು ಮಾಡಿ, ವ್ಯಾಪಾರಸ್ಥನ ಹತ್ತಿರವಿರುವ ಪದಾರ್ಥಗಳನ್ನು ಬೇಡಿ ತೆಗೆದುಕೊಂಡು ಇದರಿಂದ ಜೀವನ ಮಾಡುತ್ತಿರುತ್ತಾನೆ. ಪ್ರೇಕ್ಷಕರು ಈತನನ್ನು ನೋಡಲು ಹೋಗುತ್ತಾರೆ. ಈತನಿಗೆ ಕೈಕಾಲುಗಳಿಲ್ಲವೂ ಇವೆ. ಬಹಳ ಜೋರಾದ ಮಾತುಗಳೂ ಸಹ ಇವೆ. ಈತನು ಇಷ್ಟರವರೆಗೆ ಇರುವುದು ಬಹಳ ಆಶ್ಚರ್ಯವೇ ಸರಿ

ಲಾಯರ ಮೇಲೆ ಮೊಕದ್ದಮೆ

ಹೊಳೇನರಸೀಪುರದಲ್ಲಿರುವ ಒಬ್ಬ ಪ್ಲೀಡರರು ನಾಲ್ಕಾಣೆ ಬಾಬ್ತು ಸ್ಟಾಂಪು ಉಪಯೋಗಿಸಿದುದನ್ನೇ ಪುನಃ ಉಪಯೋಗಿಸಿದ್ದುದರ ಆಪಾದನೆಮೇಲೆ ಅರಕಲಗೂಡು ಪೋಲೀಸಿನವರು ಐ. ಪಿ. ಸಿ. 263 ನೇ ಸೆಕ್ಷನ್ ಪ್ರಕಾರ ಹೊಳೇನರಸೀಪುರದ ಮುನಿಸೀಫ್ ಕೋರ್ಟಿನಲ್ಲಿ ಕೇಸ್ ದಾಖಲ್ಮಾಡಿರುತ್ತಾರೆ. ಕೇಸು ನಡಿಯುತ್ತಿದೆ.

ಹಾಸನದಲ್ಲಿ ಎಲೆಕ್ಟ್ರಿಕ್ ದೀಪ

ಹಾಸನದಲ್ಲಿ ತಾ॥ 8-9-1936 ನೇ ಮಂಗಳವಾರ ತಮ್ಮ ಪರಿವಾರಸಮೇತ ಇನ್‌ಛಾರ್ಜು ಡಿವಿಜನಲ್ ಆಫೀಸರ್ ಎಸ್. ಪಿ. ರಾಜಗೋಪಾಲಾಚಾರ್ಯರವರು ಬಂದು ತಾ॥ 9-9-36 ನೇ ಬುಧವಾರ ಇಲ್ಲಿ ಹೊಸದಾಗಿ ಏರ್ಪಡಿಸಿರುವ ಎಲೆಕ್ಟ್ರಿಕ್ ದೀಪೋತ್ಸವವನ್ನು ಪ್ರಾರಂಭಮಾಡಿದರು. ಆ ಕಾಲಕ್ಕೆ ಬಹುಜನ ಸರ್ಕಾರಿ ನೌಕರರೂ ಇತರ ದೊಡ್ಡ ಮನುಷ್ಯರೂ ಹಾಜರಿದ್ದರು

ಹುಣಸೂರು ವರ್ತಮಾನ

(ನಮ್ಮ ಬಾತ್ಮೀದಾರರಿಂದ)

ಹುಣಸೂರು ಟವನ್ ಮುನೇಶ್ವರ ಕ್ಲಬ್ಬಿನ ಯುವಕಮಂಡಲಿಯವರಿಗೂ ಗುಬ್ಬಿ ಕಡೆಯಿಂದ ಬಂದಿರುವ ವೆಸ್ಲಿಯನ್ ಮಿಷನ್ ಕ್ರೈಸ್ತ ಉಪದೇಶಿ ಮಂಡಲಿಗೂ ಹಿಂದಿನ ಶನಿವಾರ ಸಾಯಂಕಾಲ ಫುಟ್‌ಬಾಲ್ ಪಂದ್ಯವು ನಡೆಯಿತು. ಈ ಪಂದ್ಯದಲ್ಲಿ ಮುನೇಶ್ವರ ಕ್ಲಬ್ಬಿನ ಯುವಕರು ತುಂಬಾ ಉತ್ಸಾಹದಿಂದ ಆಡುತ್ತಾ ಮೂರು ಗೋಲುಗಳನ್ನು ಹೊಡೆದರು

ಈ ಉಪದೇಶಿಗಳ ಗುಂಪೊಂದು ಹುಣಸೂರಿಗೆ ಮೂರು ಮೈಲಿ ದೂರದಲ್ಲಿರುವ ಬೀಜಗನಹಳ್ಳಿ ಎಂಬ ಗ್ರಾಮಕ್ಕೆ ಹೋಗಿ ಅಲ್ಲಿ ಮ್ಯಾಜಿಕ್ಲೇಂಟ್ರ್ನ (ಭೂತಕನ್ನಡಿಯ) ಪ್ರದರ್ಶನದ ಮೂಲಕ ಮೂಢಜನರ ಮನಸ್ಸನ್ನು ತಮ್ಮ ಕಡೆಗೆ ಸೆಳೆಯಬೇಕೆಂದು ಹೋಗಿದ್ದರಂತೆ. ಅಲ್ಲಿನ ಜನರಿಗೆ ಸಾರುವುದಕ್ಕೆ ಉಪಕ್ರಮಿಸಲು ಆ ಜನರು ಇವರ ರೀತಿನೀತಿಗಳನ್ನು ಮೊದಲೇ ತಿಳಿದವರಾಗಿದ್ದುದರಿಂದ ಇವರು ಮುಂದಕ್ಕೆ ಉಸಿರು ಎತ್ತದಂತೆ ನಾಚಿಸಿ ಕಳುಹಿಸಿ ಬಿಟ್ಟರೆಂದು ತಿಳಿಯಬಂದಿದೆ.

ಮೊದಲು ನಿಮ್ಮನ್ನು ನೀವು ಕ್ರಮಪಡಿಸಿಕೊಂಡರೆ ಸಾಕಾಗಿದೆ. ಸಮಾಜದಲ್ಲಿ ನಾರುತ್ತಿರುವ ಅನ್ಯಾಯಗಳನ್ನೂ ಅಧರ್ಮಗಳನ್ನೂ ಸರಿಪಡಿಸಿ ಕೊಂಡರೆ ಸಾಕು. ನಮ್ಮ ಜನರನ್ನೂ ನಿಮ್ಮ ಬೋಧನೆಯಿಂದ ಕೆಡಿಸಬೇಕೆಂದು ಬಂದಿದ್ದೀರೋ? ಇಲ್ಲಿ ನಿಮಗೆ ಅವಕಾಶವಿಲ್ಲ. ನಿಮ್ಮ ಕಂತೆಗಳನ್ನು ಮುದರಿಕೊಂಡು ಹೊರಡಿರಿ ಎಂದು ಜನಸಮೂಹವು ಗಲಾಟೆಮಾಡಿ ಕಳುಹಿಸಿಬಿಟ್ಟಿತು.

ವಾಚಕ ಮಹನೀಯರೇ, ಈ ಜನರು ನಮ್ಮ ಜನಾಂಗದ ಮನಸ್ಸನ್ನು ಕೆಡಿಸಿ ವಿವಿಧ ನಾಮಧಾರಿಗಳಾಗಿ ಮತಾಂತರದ ಬೇಟೆಗಾಗಿ ಬಂದಿದ್ದಾರೆ. ತುಂಬಾ ಎಚ್ಚರಿಕೆಯಿಂದಿರಿ. ಇವರ ಚಳವಳಿಯನ್ನು ಸದಾ ನಿರೋಧಿಸುತ್ತಿರಬೇಕು. ಇವರು ಎಲ್ಲೇ ಹೋದರೂ ಇವರ ಕಾರ್ಯಗಳಿಗೆ ಅವಕಾಶವನ್ನು ಕೊಡಬಾರದು.

ಸೋಮಾರಿತನವು ತಪ್ಪಲ್ಲ

ಅದು ಕೇವಲ ಖಾಯಿಲೆಯು ಮಾತ್ರ

"ಸೋಮಾರಿತನವು ಜನರಲ್ಲಿ ದುರ್ಗುಣವೆಂದು ಹೇಳಕೂಡದು. ಸೋಮಾರಿಗಳಿಗ ಒಂದು ತರಹದ ಖಾಯಿಲೆ ಇರುವುದೇ ಹೊರತು ಬೇಕಾಗಿ ಅವರು ಹಾಗೆ ಮಾಡುವುದಿಲ್ಲ" ಎಂದು ಜರ್ಮನ್ ಡಾಕ್ಟರೊಬ್ಬರು ಅಭಿಪ್ರಾಯಪಟ್ಟಿದ್ದಾರೆ.

ಅನೇಕ ಶೋಧನೆಗಳನ್ನು ನಡೆಯಿಸಿ ಮೆದುಳಿನಲ್ಲಿ ಕೆಲವು ಭಾಗಗಳು ಸರಿಯಾಗಿ ಕೆಲಸ ಮಾಡದಿರುವುದೇ ಸೋಮಾರಿತನಕ್ಕೆ ಕಾರಣವೆಂದು ಇವರು ನಿರ್ಣಯಿಸಿದ್ದಾರೆ

ಸೋಮಾರಿ ಎಂದು ಬೈಯ್ಯಬೇಡಿರಿ!

ವಿನೋದಲಹರಿ!

ಹೆಂಡತಿ:—ಡಾಕ್ಟರು ನನಗೆ ಹವಾ ಬದಲಾಯಿಸಬೇಕು ಅಂತ ಹೇಳಿದ್ದಾರೆ.

ಗಂಡ —ಜೋಯಿಸರು ನಾಳೆಯಿಂದ ಮಳೆ ಬರುತ್ತೆ ಅಂತ ಹೇಳಿದ್ದಾರೆ.

* * *

ಕಿಟ್ಟು:—ನೀನು ಯಾವಾಗಲಾದರೂ ಕುಸ್ತಿ ನೋಡಿದ್ದೀಯೇನೋ?

ರಾಮು:—ಬೇಕಾದಷ್ಟು ಸಾರಿ

ಕಿಟ್ಟು:—ಯಾವಾಗ.

ರಾಮು:—ಅಮ್ಮನಿಗೆ ಅಪ್ಪ ಸೀ[ರೆ] ತಂದು ಕೊಡೊಲ್ಲ ಅಂದಾಗ.

* * *

ತಾಯಿ:—ರಾಮೂ, ನೀನು ಗ[ಲಾಟೆ] ಮಾಡಿದರೆ ಪೋಲೀಸಿನವನ್ನ ಕರೀ[ತೀನಿ]

ರಾಮೂ:—ಅವನು ಬಂದರೆ ನೀ[ನು] ಮುಚ್ಚಿಟ್ಟಿರುವ ಬಳೆ ಮಗ್ಗಲು ಪ[...] ಮಗುಚಿದನು ಎಂದು ಹೇಳಿಬಿಡುತ್ತೇನೆ

* * *

ಅವಳು:—ಆ ನಾಯಿಯನ್ನು [...] ಯಾಗಿಟ್ಟುಕೊಳ್ಳುವುದು ಕಷ್ಟವಾಗುತ್ತ[...] ಯಲ್ಲವೇ?

ಇವಳು:—ಏನಿಲ್ಲ. ನಮ್ಮ ಯ[...] ಮಾನರೂ ಹೀಗೆಯೇ ಇದ್ದರು. ಕ[...] ಸರಿಹೋಗಿದ್ದಾರೆ

* * *

ತಿನ್ನುವ ಪಂದ್ಯದಲ್ಲಿ 10 ಮಸಾ[ಲೆ] ದೋಸೆ ತಿಂದು ಮೊದಲನೇ ಬಹುಮಾ[ನ]ವನ್ನು ಗಿಟ್ಟಿಸಿದ ರಾಮುವು, ಬ[...] ಹೊಡೆದಕೂಡಲೇ ಸ್ನೇಹಿತರನ್ನು ಕ[...] "ಗಲಾಟೆ ಮಾಡಬೇಡಿ ನಮ್ಮ ಮ[...]ಲ್ಲಿ ಹೇಳಬೇಡಿ" ಎಂದನು.

ಸ್ನೇಹಿತ. ಯಾತಕ್ಕೆ, ರಾಮು?

ರಾಮು. ನಮ್ಮಮ್ಮನಿಗೆ ಗೊತ್ತಾ[ದರೆ] ರಾತ್ರಿ ನನಗೆ ಉಪವಾಸವಾಗುತ್ತೆ

* * *

ವೆಂಕೋಬರಾವ್:—ನಾಗರಾಜ[...]ಗೆ ಮದುವೆಯಂತೆಕಣೋ.

ಶ್ರೀನಿವಾಸರಾವ್.—ಅವನಿಗೆ [...]ಯೇ ಆಗಬೇಕು. ಅವನ್ನ ತಂದೆ[...]ಗೆ ಆಗೊಲ್ಲ.

* * *

ಯಜಮಾನಿ.—ನೋಡಿದೆಯಾ, [...]ಲ್ಲಿರುವ ಕಸ ಆರು ತಿಂಗಳಿಂದ[...] ಬಿದ್ದಿದೆ.

ಸೇವಕಿ:—ಹಾಗಾದರೆ ನಾನು [...] ಅದನ್ನು. ನಾನು ಕೆಲಸಕ್ಕೆ ಸೇರಿ [...] ವಾರವಾಯಿತು.

* * *

ಅವಳು.—ನಿಮ್ಮ ಮಗ ಸಿನಿ[ಮಾ] ನೋಡುತ್ತಾನೆಯೇ?

ಇವಳು.—ಇಲ್ಲ.

ಅವಳು.—ಸಿನೀಮಾಕ್ಕೆ ಹೋಗ[...]ನೆಯೇ?

ಇವಳು:—ಇಲ್ಲರನ್ನ.

ಅವಳು —ಹಾಗಾದರೆ ಒಳ್ಳೆ[...] ಹುಡುಗನಿರಬೇಕು ಅವನಿಗೆಷ್ಟು [...]

ಇವಳು.—ನಾಳೆ ಬುಧವಾರ[ಕ್ಕೆ] ತಿಂಗಳು ತುಂಬುತ್ತೆ.

ದ್ರಾಕ್ಷಾಮೃತ

ಈ ದ್ರಾಕ್ಷಾಮೃತವು ಸಹ್ಯಾದ್ರಿ ಪರ್ವತದಲ್ಲಿ ಅನೇಕ ವನಸ್ಪತಿಗಳ ರಸವರ್ಗ ಗಳೊಂದಿಗೆ ದ್ರಾಕ್ಷಾರಸವನ್ನು ಮಿಶ್ರಮಾಡಿ ಸ್ವದೇಶಿ ಯಂತ್ರದಿಂದ ಶಾಸ್ತ್ರೋಕ್ತ ಪದ್ಧತಿ ಪ್ರಕಾರ ತಯಾರು ಮಾಡಿರುವದರಿಂದ ಸ್ವಾದಿಷ್ಟವು ಮತ್ತು ಮಧುರವು ಆಗಿದೆ.

ಇದರ ಸೇವನೆಯಿಂದ ಶರೀರದೊಳಗಿನ ಹಳೆ ಕಡಕಿ (ಗರಮಿ) ಸಂಪೂರ್ಣ ನಷ್ಟವಾಗುತ್ತದೆ ಮತ್ತು ಧಾತುಸ್ರಾವ ಸ್ವಪ್ನಾವಸ್ಥೆಯಿಂದ ಅಥವಾ ಬೇರೆ ಯಾವದೇ ಕಾರಣದಿಂದ ಬಂದ ಅಶಕ್ತತೆಯಿಂದ ಕೈಕಾಲು, ಕಣ್ಣೊಳಗೆ ಉರಿಯು ಹತ್ತಿರಿ... ಬೌಜಕ್ಕ ಸಾಕು ಆಗದೆ ಇರೋಣ, ಮುಂತಾದ ಎಲ್ಲ ವಿಕಾರಗಳು ನಷ್ಟ ವಾಗಿ ಕ್ಷುಧಾಗ್ನಿ ಬೆಳೆಯುತ್ತದೆ ಮತ್ತು ಅನ್ನ ಚೆನ್ನಾಗಿ ಪಚನವಾಗಿ ರೌಚಕ್ಕೆ —ಬರಾಗುತ್ತದೆ. ಇದರ ಸೇವನೆಯಿಂದ ತರುಣರಿಗೆ ವ್ಯಭಿಚಾರದಿಂದ ಅಥವಾ ಬೇರೆ ಕಾರಣದಿಂದ ಬಂದ ಧಾತುಕ್ಷೀಣತೆ ನಪುಂಸಕತ್ವ ಇದ್ದರೆ ಅದು ಹೋಗಿ ಅವರು ಯೌವನವಂತರಾಗಿ, ಶರೀರ ಬಲವಾಗಿ ಮತ್ತು ಪುಷ್ಟಿವಂತರಾಗುವರು. ಹೆಂಗಸರಿಗೂ ಮತ್ತು ಮಕ್ಕಳಿಗೂ ಈ ಔಷಧವು ಗುಣಕಾರಿ ಇದೆ. ಮುಟ್ಟಾಗದಿ ದ್ದ ಮತ್ತು ಉಷ್ಣ ಗರ್ಮಿ ಸಂಬಂಧವಾದ ರೋಗಗಳಿದ್ದರೂ ಅವೆಲ್ಲ ಗುಣವಾಗಿ ಹೆಂಗಸರಿಗೆ ಸಂತತಿ ವೃದ್ಧಿಯಾಗುವದು. ಈ ಔಷಧದ ಮೂರು ಬಾಟ್ಲಿಗಳನ್ನು ಸೇವನ ಮಾಡಿದರೆ ಪೂರ್ಣ ಗುಣಬರುತ್ತದೆ. ಇದರ ಅನುಭವ 1 ಬಾಟಿ ಸೇವನ ಮಾಡಿದ ಆನಂತರ ನಿಮಗೆ ತಿಳಿದೀತು.

1 ಬಾಟ್ಲಿ ಬೆಲೆ ರೂ ೧—೪—೦, 3 ಬಾಟ್ಲಿ ೩—೪—೦, 1 ಡಜನ್ ಬಾಟ್ಲಿ ಬೆಲೆ ೧೫—೦—೦

ಮ್ಯಾನೇಜರ್—ದ್ರಾಕ್ಷಾಮೃತ ಡಿಪೋ ಫೋರ್ಟ್ ನಿಪ್ಪಾಣಿ, ಜಿಲ್ಲಾ ಬೆಳಗಾವಿ,

ಮೈಸೂರು ಸ್ಟಾಕಿಸ್ಟ್ಸ —ಟಿ ಸಿ ನಟರಾಜ, ಬೊಂಬಾಯಿ ಆನಂದ ಭವನ, ... ಫಾರ್ಮಸಿ, ಸಯ್ಯಾಜಿರಾವ್ ರೋಡ್. ಬೆಂಗಳೂರು ಸಿಟಿ —ಸಿ ವಿ ... ಅಂಡ್ ಸನ್ಸ್, ಚಿಕ್ಕಪೇಟೆ ತುಂಕೂರು—ಟಿ ಆರ್ ಗುರು ಚನ್ನಬಸಪ್ಪ ... ಬ್ರದರ್ಸ್. ಚಿಕ್ಕಮಗಳೂರು—ಎಂ. ಎಲ್ ಮಂಜಪ್ಪಶೆಟ್ಟಿ ಶಿವ ... ಟ್ರೇಡಿಂಗ್ ಏಜನ್ಸಿ ಮತ್ತು ಖಂಡೇರಾವ್ ಬ್ರದರ್ಸ್ ದಾವ ಣಗೆರೆ—ನುಚ್ಚೀರಪ್ಪ ಮತ್ತು ಕೆ ಭೋಜಯ್ಯಶೆಟ್ಟಿ ಅಂಡ್ ಬ್ರದರ್ಸ್.

"ಬ್ರೇಕ್ ಪಿಲ್ಸ್"

INVENTED BY A HIMALAYAN SAGE

ಸ್ತ್ರೀಪುರುಷರಿಗೆ ಆನಂದವನ್ನುಂಟುಮಾಡುವುದು ಈ ಮಾತ್ರೆಗಳೆ. ಮದಿ ಸ್ತ್ರೀಯರ ಗರ್ವಭಂಗಮಾಡಲು ಕಂಡುಹಿಡಿದಿರುವ ಮಾತ್ರೆಗಳಿವು. ಇದರಲ್ಲಿ ರಸ

ವಿಷಾದಿಗಳು ಸೇರಿಲ್ಲ. ಕಸ್ತೂರಿ, ಚಿನ್ನ, ಹಿಮಾಲಯ ಪರ್ವತದ ವನದ ಓಲಿಕೆಗಳು ವಂಶಾದಿಮಪ್ರಗಳಿಂದ ದೊಡ್ಡ ಯೋಗೀಶ್ವರರ ಹತ್ತಿರ ಸಂಗ್ರಹಿಸಿ ಮದುಕತನವನ್ನು ಲೋಕದಲ್ಲಿ ಇಲ್ಲದಂತೆ ಮಾಡುವುದು ಅರ್ಧ ಘಂಟೆಯೊಳಗಾಗಿ ವೀರ್ಯವನ್ನು ಕಲ್ಲಿನಂತೆಮಾಡಿ ರಮಿಸಲು ಉಲ್ಲಾಸವನ್ನು ಮಾಡುವುದು. ಗುಣವಿಲ್ಲದಿದ್ದಲ್ಲಿ ಹಣ ವಾಪಸು.

... ಮಾತ್ರೆಗಳು ರೂ ೫—೦—೦   ೩೦ ಮಾತ್ರೆಗಳು ರೂ ೩—೦—೦.

(ಕಾಗದ ಪತ್ರಗಳು ಇಂಗ್ಲೀಷಿನಲ್ಲಿಯೇ)

ಡಾ॥ ಎ ಎಸ್. ಮೂರ್ತಿ, ಚಿಕಾಕೋಲ್, ಗಂಜಾಮ್ ಡಿಸ್ಟ್ರಿಕ್ಟ್

ಟಿ. ಸಿ. ನಟರಾಜ್ ಔಷಧಾಲಯ,

ಸಯ್ಯಾಜಿರಾವ್ ರೋಡು, ಮೈಸೂರು.

ಇವರಲ್ಲಿ ನೇತ್ರಪರೀಕ್ಷೆಯು ಉಚಿತವಾಗಿ ಮಾಡಲ್ಪಡುತ್ತದೆ.

ಅವಶ್ಯಕವಾಗಿ ಬೇಕಾದ ಎಲ್ಲಾ ಇಂಜಕ್ಷನ್ ಔಷಧಿಗಳೂ ಸದಾ ಕಾಲದ ಲ್ಲಿರುವುದಲ್ಲದೆ ಸಮಸ್ತ ವ್ಯಾಧಿಗಳಿಗೂ ಚಿಕಿತ್ಸೆಯು ಬಹು ಸುಲಭ ದಿಂದ ಮಾಡಲ್ಪಡುತ್ತದೆ.

ಇದಲ್ಲದೆ ಆಯುರ್ವೇದೀಯ ಸಿದ್ಧೌಷಧಗಳೆಲ್ಲವೂ ಸದಾ ದೊರಕುತ್ತವೆ.

ಕನ್ನಡ ಆತ್ಮ ಪುರಾಣ.

ಇದು ಮುಮುಕ್ಷುಗಳ ಮುಖದರ್ಪಣ.

ಈ ಗ್ರಂಥವು ೧೮ ಅಧ್ಯಾಯಗಳುಳ್ಳದ್ದು. ಇದರಲ್ಲಿ ಐತರೇಯಾದಿ ೨೨ ಉಪನಿಷತ್ತುಗಳ ವಿಸ್ತಾರವಾದ ವಿವರವಿರುವದು. ಇದು ಶ್ರೀ ಶಂಕರಾನಂದಮುನಿ ಗಳು ವೇದಾಂತಶಾಸ್ತ್ರದಲ್ಲಿ ತಮ್ಮ ಶಿಷ್ಯನಿಗೆ ಉಪದೇಶಿಸಿದ ಪರಮ ಅದ್ಭುತ ಪುರಾತನ ಗ್ರಂಥವಾಗಿರುವುದು. ಆತ್ಮವಿದ್ಯಾ ವಿಷಯದಲ್ಲಿ ಇದಕ್ಕೆ ಸಮಾನವಾದ ಗ್ರಂಥವು ಈ ಜಗತ್ತಿನಲ್ಲಿಯೇ ಇಲ್ಲವೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಈ ಗ್ರಂಥವು ಹಿಂದೀಭಾಷೆಯಲ್ಲಿದ್ದು ಕಲ್ಕತ್ತಾ ಬಾಬುರವರಿಂದ ... ಪ್ರಸಿದ್ಧಿಗೊಂಡಿರುವದು. ನಮ್ಮ ದಕ್ಷಿಣ ಕರ್ನಾಟಕದಲ್ಲಿ ಇದರ ಪ್ರಚಾರಕ್ಕೋಸುಗ ಸುಲಭ ಕನ್ನಡದಲ್ಲಿ ಭಾಷಾಂತರಮಾಡಲ್ಪಟ್ಟಿತು. ಇದನ್ನು ಎರಡು ವಿಭಾಗವಾಗಿ ವಿಂಗಡಿಸಿ ಎರಡು ಪುಸ್ತಕಗಳಾಗಿ ಮಾಡಬೇಕೆಂದು ಆಲೋಚಿಸಿ, ... ಅಧ್ಯಾಯಗಳುಳ್ಳ ಈ ಮೊದಲನೇ ಭಾಗ ... ಬೈಂಡಿಂಗ ಸಹಾ ಕಟ್ಟಿಸಿ ತಯಾರ್ ಮಾಡಲ್ಪಟ್ಟಿರುವದು. ಇದರ ಕ್ರಯ ೧—೮—0 ರೂ. ಇದನ್ನಪೇಕ್ಷಿಸುವವರು ೨ ರೂಪಾಯಿ ಮುಂಗಡ ಕಳುಹಿಸಬೇಕು. ಉಳಿದ ಹತ್ತು ಅಧ್ಯಾಯಗಳುಳ್ಳ ಎರಡನೇ ಭಾಗವು ಶೀಘ್ರದಲ್ಲಿಯೇ ತಯಾರಾಗುವದು. ಇದನ್ನಪೇಕ್ಷಿಸುವವರು ೩ ರೂಪಾಯಿ ಗಳನ್ನು ಮುಂಗಡವಾಗಿ ಕಳುಹಿಸಿಕೊಟ್ಟಲ್ಲಿ ಪುಸ್ತಕವು ಶೀಘ್ರದಲ್ಲಿಯೇ ಮುದ್ರಿಸಿ ಬೈಂಡಿಂಗ್ ಸಹಾ ಕಟ್ಟಿಸಿ ಅವರವರ ವಿಳಾಸಕ್ಕೆ ಪುಸ್ತಕದ ಕ್ರಯದಲ್ಲಿ ಆದ್ದರಿಂದ ... ವಿ ಪಿ ಮಾಡಲ್ಪಡುವದು. ಇದಲ್ಲದೆ ಗ್ರಂಥಕರ್ತರಿಂದ ... ಅನೇಕ ವೇದಾಂತ ಗ್ರಂಥಗಳು ರಚಿಸಲ್ಪಟ್ಟು ಬಿಕರಿಗೆ ಸಿದ್ಧವಾಗಿವೆ.

ಗ್ರಂಥಕರ್ತ:—ಶಿವಾನಂದ ಸುಬ್ರಹ್ಮಣ್ಯ (ವೇದಾಂತ ಸುಬ್ಬಯ್ಯ)

ಲಕ್ಷ್ಮೀನಿವಾಸ ಅಗ್ರಹಾರ, ಮೈಸೂರು

ಪ್ರಾಚೀನ ಕನ್ನಡ ವಚನ ಗ್ರಂಥಗಳು

ಸೌಗಂಧಿಕಾಪರಿಣಯ.— ಸ್ವರ್ಗದಲ್ಲಿ ದೇವೇಂದ್ರನಿಗ ದೂರ್ವಾಸ ಮುನಿಗಳಿಂದ ಆಶೀರ್ವಾದ ಪೂರ್ವಕವಾಗಿ ಕೊಡಲ್ಪಟ್ಟ ಕಮಲಮಾಲಿಕೆ ಯನ್ನು ಆನೆಯ ಕುಂಭಸ್ಥಳದಲ್ಲಿಟ್ಟಿದ್ದುದರಿಂದ, ಆನೆಯು ಆ ಮಾಲಿಕೆ ಯನ್ನು ಕಾಲಿನಲ್ಲಿ ಹೊಸಕಿ ಸ್ವರ್ಗಪಡಿಸಲು, ಮುನಿಗಳ ಶಾಪದಿಂದ ಭೂಲೋಕದಲ್ಲಿ ರತ್ನಪುರಿಯಲ್ಲಿ ಸುಗಂಧರಾಜನಾಗಿ ಹುಟ್ಟಿ, ಕಳಿಂಗದೇ ಶದ ರಾಜಪುತ್ರಿಯಾದ ಸೌಗಂಧಿಕಾದೇವಿಯನ್ನು ಸ್ವಯಂವರಮಾಡಿ ಕೊಂಡ, ಬಹಳ ವಿಷಯಗಳಿರುವ ಕಥೆ.

೧೧೦ ಪುಟಗಳು ಕ್ರಯ ರೂ ೦—೮—೦

ಸಹಸ್ರಾಯುಚರಿತ್ರೆ:— ಮಾಹಿಷ್ಮತೀ ಅರಸನ ಪತ್ನಿಯಲ್ಲಿ ದಾಕ್ಷಾಯಣಿ ಪ್ರಸಾದದಿಂದ ಜನಿಸಿ ಲೋಕಪ್ರಸಿದ್ಧನಾಗಿ ತನಗ ಇತರರಿಂದ ಬಂದ ಗಂಡಾಂತರಗಳೆಲ್ಲಾ ಪರಿಹರಿಸಿಕೊಂಡ ಒಬ್ಬ ಮಹಾಪುರುಷನ ಕಥೆ.

೧೬೦ ಪುಟಗಳು ಕ್ರಯ ರೂ ೦—೧೦—೦

ಕಾಶೀಕ್ಷೇತ್ರಮಹಾತ್ಮೆ.— ಇದರಲ್ಲಿ ೧೪ ಲೋಕಗಳ ವರ್ಣನ, ನದಿಗಳ ಪರ್ವತಗಳ ಉತ್ಪತ್ತಿ ... ಉತ್ಪತ್ತಿ ಕ್ರಮ, ಗಂಗಾ ಸಹಸ್ರನಾಮವೇ ಮೊದಲಾದ ಅನೇಕ ವಿಷಯಗಳು ಅಡಕವಾಗಿರುತ್ತೆ.

೭೦೬ ಪುಟಗಳು ಕ್ರಯ ರೂ ೨—೨—೦

ಅದ್ರಸ್ಸು —

ಗುಂಡ್ಲು ಪಂಡಿತ ಲಕ್ಷ್ಮಣಾಚಾರ್ಯರ ಮಕ್ಕಳು

ಶ್ರೀನಿವಾಸ ದೀಕ್ಷಿತಾಚಾರ್,

೩೦೭, ಕಲ ಮಟ್ಟಿಬೀದಿ ಮೈಸೂರು



ORDER YOUR COPIES NOW!

The "SADHVI"
Dasara Special Supplement.

"ಸಾಧ್ವಿ" ದಸರಾ ವಿಶೇಷ ಸಂಚಿಕೆ.

೮೦ ಪುಟಗಳು-ಅರ್ಧಾಣೆ ಮಾತ್ರ.

ಕಥೆಗಳು—

ಕವನಗಳು—

ಲೇಖನಗಳು—

ಚಿತ್ರಗಳು—

ಇತ್ಯಾದಿ, ಇತ್ಯಾದಿ.

For Details & Advertisements Apply to:—

The SADHVI Office, Mysore.

Edited, Printed & Published by Agaram Rangiah, B. A., at Sri Rama Press, D. Subbiah Road, Mysore.

Registered No. M. 3534.

ವಾರ್ಷಿಕ ಚಂದಾ ವಿವರ.

ಸ್ಥಳ ಪರಸ್ಥಳಗಳಿಗೆ ಏಜೆಂಟರ ಮೂಲಕ 1—8—0
ಅಂಚೆ ಮೂಲಕ 2—4—0 ಬಿಡಿ ಪತ್ರಿಕೆ 0—0—6

ವಾರ್ಷಿಕ ಚಂದಾ ವಿವರ.

ವಾಚನಾಲಯಗಳು, ವಿದ್ಯಾ ಸಂಸ್ಥೆಗಳು
ಮತ್ತು ಸಾರ್ವಜನಿಕ ಸಂಘಗಳಿಗೆ 2—1—0

॥ ಸತ್ಯಮೇವೋದ್ಧರಾಮ್ಯಹಮ್ ॥

ರಾಜಧಾನಿಯ ರಾಷ್ಟ್ರೀಯ ವಾರ ಪತ್ರಿಕೆ.

ವೃದ್ಧ ಪಿತಾಮಹ ಎಂ. ವೆಂಕಟಕೃಷ್ಣಯ್ಯನವರ ಜ್ಞಾಪಕಾರ್ಥವಾಗಿ ಪ್ರಕಟಿಸಲ್ಪಡುವುದು.

ಸಂಪಾದಕರು: ಅಗರಂ ರಂಗಯ್ಯ, ಬಿ. ಎ.

Sadhvi: A Leading Nationalist Weekly of Mysore.

FOUNDED IN MEMORY OF MR. M. VENKATAKRISHNAYYA, THE GRAND OLD MAN OF MYSORE.

ಸಂಪುಟ ೧] MYSORE : MONDAY 21—9—36 ಮೈಸೂರು : ಸೋಮವಾರ ೨೧—೯—೩೬ [ಸಂಚಿಕೆ ೩೧

ಲಿವರ್ ಕ್ಯೂರ್

(ಪಿತ್ತಕೋಶದ ರಕ್ಷಣೆ)

ಪಿತ್ತಕೋಶ, ಮತ್ತು ಯಕೃತ್ತುಗಳ ರೋಗ (ಗೆಡ್ಡೆ) ಗಳಿಂದ, ಮಕ್ಕಳನ್ನು ಕಾಪಾಡುವುದು.

ವಿಳಾಸ:—ಜನ್ನಿ ವೆಂಕಟರಮಣಯ್ಯ,

ಲಿವರ್ ಮತ್ತು ಸ್ಪ್ಲೀನ್ ಸ್ಪೆಷಲಿಸ್ಟ್, ಮೈಲಾಪುರ, ಮದ್ರಾಸು.

ಬೆಂಗಳೂರಿನ ಶಾಖೆ:—ಅಕ್ಕಾಟು ಶ್ರೀನಿವಾಸಾಚಾರ್ಯರ ಬೀದಿ.

ಮೈಸೂರು ಒಲಂಪಿಯಾ ಟಾಕೀಸಿನಲ್ಲಿ

ಸಂಸಾರ ನೌಕ

ದೇವೀ ಫಿಲಂರವರ ಅಸು ಪಮ ತಯಾರಿಕೆ.

ಪ್ರಥಮ ಸಾಮಾಜಿಕ ಕನ್ನಡ ಚಲನ ಚಿತ್ರ.

ಪತ್ರಿಕೆಗಳೂ ಪ್ರಮುಖ ದೊಡ್ಡ ಮನುಷ್ಯರುಗ ಳೂ ಮುಕ್ತ ಕಂಠ ದಿಂದ ಹೊಗ ಳಿರುವರು.

ಬಂಧು ಮಿತ್ರ ಸಮೇತವಾಗಿ ನೋಡಬೇಕಾದ ಚಲನ ಚಿತ್ರ.

೨—೧೦—೩೬ : : ಶುಕ್ರವಾರದಿಂದ

ಬೆಂಗಳೂರು ಸಾಗರ ಟಾಕೀಸಿನಲ್ಲಿ ನಾಲ್ಕನೆಯ ವಾರ ಪ್ರಾರಂಭ

WANTED.

The Coorg Central Co-operative Stores L Virarajendrapet

ಕೊಡಗು ಸೆಂಟ್ರಲ್ ಕೋ ಆಪರೇಟಿವ್ ಸ್ಟೋರಿಗೆ ಬೇಕಾಗುವ ಸಾಮಾ ನನ್ನು ಮೈಸೂರು ಮತ್ತು ಮಲಬಾ ಸಾಗಿಸುವ ಮತ್ತು ಸೆಂಟ್ರಲ್ ಸ್ಟೋ ಸಾಮಾನುಗಳನ್ನು ಕೊಡಗಿನ ಸ್ಟೋರುಗಳಿಗೆ ಸಾಗಿಸುವ ಕಂಟ್ರಾ ವಹಿಸಿಕೊಳ್ಳಲು ಇರಾದೆ ಪದುವ ಮಾಲೀಕರು ತಮ್ಮ ಶರತ್ತುಗಳ ಮೇಲಿನ ವಿಳಾಸಕ್ಕೆ ಬರೆದುಕೊಳ್ಳ

ಒಪ್ಪಿದ ಕಂಟ್ರಾಕ್ಟುದಾರರು ಜಾಮೀನು ಕೊಡಬೇಕಾಗುವುದು

P A N, NJA
16–9–36 Manager

ಎರಡೇ ಸುಖಸಾಧನಗಳು

ಕಿಮೊನೊ— (ಗಂಡಸರಿಗ) ತ್ತಮವಾದ ರಬ್ಬರು ಸಾಧನ ... ಡಿಗೆ ಆತಂಕವಿಲ್ಲ ಗರ್ಭೋತ್ಪ ಬೆದರಿಕೆಯಿಲ್ಲ ಮೇಹರೋಗದ ಯಿಲ್ಲ ಬೆಲೆ ೧—೮—೦

ಪ್ಯಾರಗನ್ — (ಹೆಂಗಸರಿಗೆ) ಸರ ಗರ್ಭನಿವಾರಣೆಗೆ ಉತ್ತಮ ಸಾಧನ ಕ್ರೀಡಾ ಸಮಯದಲ್ಲಿ ಸತಕ್ಕದ್ದು ಬೆಲೆ ೨—೬—೦

ಕೇಟಲಾಗು ಉಚಿತ

ಆಂಧ್ರಾ ಟ್ರೇಡಿಂಗ್ ಕಂಪೆ

ಕೃಷ್ಣಪ್ಪನಾಯಕನ ಬೀದಿ, ಮದ

ಬಹುರತ್ನ ಆಯುರ್ವೇದ ವಿದ್ವಾನ್ ಬಿ ವಿ. ಪಂಡಿತರ

ಬಾಲಸುಧಾ

ಮಕ್ಕಳ ಜ್ವರದ ಗೆಡ್ಡೆಯನ್ನು ಖಾತರಿ ಗುಣ ಪಡಿಸುತ್ತೆ ಲಿವರ್ (ಪಿತ್ತ ಕೋಶ) ದಪ್ಪನಾಗಿ ಕಣ್ಣು ಹಳದಿ ಬಣ್ಣವಾಗಿದ್ದರೆ ಇದರ ಸೇವನೆಯಿಂದ ದಿನೇ ದಿನೇ ಗುಣವಾಗುತ್ತೆ. 20 ವರ್ಷಗಳಿಂದಲೂ ಅನುಭವ ಸಿದ್ಧವಾಗಿದೆ—ಮಕ್ಕಳ ಭೇದಿಗ ನಮ್ಮ ಬಾಲ ಸಂಜೀವಿನಿಯನ್ನೇ ಉಪಯೋಗಿಸಿರಿ

ಬಾಲ ಸುಧಾ ಬೆಲೆ 1 ರೂ ಬಾಲ ಸಂಜೀವಿನಿ 4 ಆ

ಮೈಸೂರು, ಬೆಂಗಳೂರು, ಮದ್ರಾಸುಗಳಲ್ಲಿ ನಮ್ಮ ಶಾಖೆಗಳಿವೆ

ಸದ್ವೈದ್ಯಶಾಲಾ, ನಂಜನಗೂಡು.

ANANDA SODA FACTORY.

BEST AERATED WATER SUPPLIERS
COMPLETE REQUISITES FOR
AERATED WATER MANUFACTURERS
AVAILABLE

ಆನಂದಾ ಸೋಡಾ ಫ್ಯಾಕ್ಟರಿ,
ದೊಡ್ಡ ಪೇಟೆ, ಮೈಸೂರು

ಎಂ. ವಿ. ನಾರಾಯಣರಾಯರ

ಶ್ರೀ ಸತ್ಯನಾರಾಯಣ ಪರಿಮಳ ಫ್ಯಾಕ್ಟರಿ,

ಜಗನ್ಮೋಹನ ಬಂಗ್ಲಾ ಬೀದಿ, ಮೈಸೂರು

ಪರಿಮಳ ಅಗರ ಬತ್ತಿ

ಉಪಯೋಗಿಸಿ ಪ್ರೋತ್ಸಾಹಿಸಿರಿ

|| ಸತ್ಯಮೇವೋದ್ಧರಾಮ್ಯಹಮ್ ||

ರಾಜಧಾನಿಯ ರಾಷ್ಟ್ರೀಯ ವಾರ ಪತ್ರಿಕೆ.

ವೃದ್ಧ ಪಿತಾಮಹ ಎಂ. ವೆಂಕಟಕೃಷ್ಣಯ್ಯನವರ ಜ್ಞಾಪಕಾರ್ಥವಾಗಿ ಪ್ರಕಟಿಸಲ್ಪಡುವುದು

ಸಂಪಾದಕರು ಆಗರಂ ರಂಗಯ್ಯ, ಬಿ ಎ

ಸಂಪುಟ ೧] MYSORE : MONDAY 21-9-36 ಮೈಸೂರು : ಸೋಮವಾರ ೨೧-೯-೩೬ [ಸಂಚಿಕೆ ೪೧

ವರೂವರರ ಬಿಂಕ.

ಕಳೆದವಾರ ಪತ್ರಿಕೋದ್ಯೋಗಿ ಸಂಘದಲ್ಲಿ ಒಂದು ಸತ್ಕಾರಕೂಟ ನಡೆಯಿತು ... ಟಿ ವಿಜಯರಾಘವಾಚಾರಿಯವರೇ ... ಅತಿಥಿಗಳು ಜಿಲ್ಲಾಧಿಕಾರಿಗಳು, ನಗರದ ಮ್ಯಾಜಿಸ್ಟ್ರೇಟರು ಇವರೇ ಮುಂತಾದ ... ಅತಿಥಿಗಳು ಕೂಟದಲ್ಲಿ ಭಾಗವಹಿಸಿದ್ದರು ಫಲಾಹಾರಾನಂತರ ಮುಖ್ಯ ಅತಿಥಿಗಳು ಭಾಷಣಮಾಡುತ್ತಾ "ಪತ್ರಿಕೋದ್ಯೋಗಿಗಳೆಂದರೆ ಅಧಿಕಾರಿ ವರ್ಗದವರಿಗೆ ಬಹುಸಂಕೋಚ ಹೊಸದಾಗಿ ಮದುವೆಯಾದ ಕನ್ಯೆಯು ತನ್ನ ಯಜಮಾನರ ಹೆಸರನ್ನು ಹೇಳಲು ಎಷ್ಟು ಸಂಕೋಚಪಡುವಳೋ ಅದಕ್ಕೂ ಮೀರಿದ ಸಂಕೋಚವನ್ನು ಹಲವು ಅಧಿಕಾರಿಗಳು ಪತ್ರಿಕೋದ್ಯೋಗಿಗಳನ್ನು ಕಂಡರೆ ತೋರುವರು" ಎಂಬ ಉಪಮಾನವನ್ನು ಸೂಚಿಸಿದರು

... ಕಲವು ಮದವಣಿಗರೂ ತಮ್ಮ ... ಹೆಸರು ಹೇಳಲು ನಾಚುವರು ಆ ... ಮರೆತಿದ್ದರೆಂದು ತೋರುತ್ತದೆ.

* * *

... ನಮೇಲೆ ಹುಣ್ಣು.

... ರಾಜ್ಯದ ಅಧಿಕಾರಿಗಳೊಬ್ಬರು ... ಅವರು ಒಂದು ಮೂಲೆಯಲ್ಲಿದ್ದು ಇ... ಮೂಲೆಗೆ ಹೋಗಿದ್ದಾರೆ. ಅವರ ... ಅಧಿಕಾರಿಗಳೇ ಪ್ರೈವಸಂಘ ... ಮುಂದಿನ ಪತ್ನಿವಿಯೋಗ ಪ್ರಾಪ್ತಿಯಾಯಿತು ಹುಣ್ಣಿನಮೇಲೆ ಹುಣ್ಣು ಎಂಬಂತೆ ... ವಿಪತ್ತು ಏನೇನೋ ಗ್ರಹಚಾರ ... ಪ್ರಾಪ್ತವಾಗೋಣ ತಮ್ಮ ಘನ ... ತಕ್ಕ ವಿದ್ಯೆ, ಸಮವಯಸ್ಸು, ಸಮ ... ನೆಯೂ ಉಳ್ಳಂಥ ಕನ್ಯೆಯ ... ಆಯಿತು ಆದರೆ ಅವರು ... ಕಷ್ಟದಿಂದ ಪಾರಾಗಲಿಲ್ಲ ... ಮತ್ತೊಬ್ಬ ಅನ್ಯ ಸ್ತ್ರೀಯು ಆ... ಮೊಕದ್ದಮೆ ಹೂಡಿ ತನಗೂ ... ಜೀವನಾಂಶ ಎರಡೂ ... ಕೋರ್ಟು ತೀರ್ಪನ್ನು ಹೊಂದಿ... ಇದು ವಿಧಿವಿಲಾಸವಲ್ಲವ"

* * *

... ಮಾಡಬಾರದೆ ?

ಸಿನಿಮಾ ಮುಂದಿರುವಲ್ಲಿ ಬೀದಿ ... ವಕ್ಕೆ ... ಪೂನಾ ಮ್ಯಾಜಿಸ್ಟ್ರೇಟ ... ನಿರ್ಬಂಧಿಸಿದ್ದಾರೆ ... "ಮಾಡಬಾರದ" ಇರುವರೆಗೆ ... ತಗಳಾಗಿನೆಯಲ್ಲಾ !

ಕೈತೋರಿಸಿ ಅವಲಕ್ಷಣ.

ಬೆಂಗಳೂರು ಪೌರಸಭೆಯಲ್ಲಿ ಮ॥ ಬೈಯ್ಯಣ್ಣನವರು ಒಂದು ಠರಾವು ತಂದರು "ಹಿಂದೆ ಪೌರಸಭಾಧ್ಯಕ್ಷರಾಗಿ ನಗರಕ್ಕೆ ಬಹಳ ಸೇವೆ ಮಾಡಿದ ಮ॥ ಪಿ ಸುಬ್ಬರಾಮಚೆಟ್ಟರು ಮತ್ತು ಮ॥ ಅಬ್ಬಾಸ್‌ಖಾನರ ಭಾವಚಿತ್ರಗಳನ್ನು ಪೌರಸಭೆಯಲ್ಲಿ ಅಲಂಕರಿಸಬೇಕೆಂದು." ಸೂಚಿಸಿದರು ಅದು ಬರೀ ಚರ್ಚೆಯಲ್ಲಿಯೇ ಪರ್ಯವಸಾನವಾಯಿತು ವಿಪರೀತಕ್ಕೇ ತಿರುಗಿತು. ಠರಾವನ್ನು ತರಬೇಕಾದರೆ ಸ್ವಲ್ಪ ಮುಂಚಿತವಾಗಿ ಪರಸ್ಪರ ಪರ್ಯಾಲೋಚನೆ ಮಾಡಬಾರದೆ ? ಅವಸರದಲ್ಲಿ ಮಾಡುವ ಪ್ರಯತ್ನವು ಆಗುವ ಕಾರ್ಯಕ್ಕೂ ಅಡ್ಡಿಯನ್ನುಂಟುಮಾಡುವುದಿಲ್ಲವೆ ?

* * *

ಮಣ್ಣಿನಿಂದ ಚಿನ್ನ

ಕರಾಚಿ ಬಂದರಿನಿಂದ ಮಣ್ಣನ್ನು ತೆಗೆದುಕೊಳ್ಳಲು ಐವತ್ತು ವರ್ಷಗಳಿಗೆ ಮೇಲ್ಪಟ್ಟ ಅವಧಿಯ ಒಂದು ಹಕ್ಕನ್ನು ಕೊಡಿಸಬೇಕೆಂದು ಹ್ಯಾರಿಗ್ರೀನ್‌ಫೀಲ್ಡ್ ಎಂಬ ಕೈಗಾರಿಕೆಯವನು ಕೇಳಿದ್ದಾನೆ ಅದರಲ್ಲಿ ಹಣ ಸಿಕ್ಕುವುದೆಂದು ಅವನ ನಂಬಿಕೆ ಅದರ ಗುಟ್ಟನ್ನು ಹೇಳುವುದಿಲ್ಲ ಅಂತು ಭಾರತೀಯರ ಮಣ್ಣನ್ನು ಪರಕೀಯರು ಉಪಯೋಗಿಸಿಕೊಳ್ಳುತ್ತಿರುವರು

* * *

ಬಂಗಾರದ ಹರಟೆಗಳು

ಕೆಂಪು ಹರಟೆಗಳವರನ್ನು ಕೇಳಿದ್ದೇವೆ, ಕಪ್ಪು ಹರಟೆಗಳನ್ನು ಅರಿತಿದ್ದೇವೆ ಬಂಗಾರದ ಹರಟೆಗಳಿರುವುದು ಗೊತ್ತಿರಲಿಲ್ಲ ಮೆಕ್ಸಿಕೋದಲ್ಲಿ ಅದೂ ಒಂದು ಸಂಗಡವಿದೆ ಅದರ ಮುಖಂಡಳು ಒಬ್ಬ ಸ್ತ್ರೀ ಟಿಯೊನಾರಾಕೋಟಿಯರೆಜ್ ಎಂದು ಅವಳ ಹೆಸರು ಆಕೆಯನ್ನು ಗಡೀಪಾರು ಮಾಡುವ ಪ್ರಯತ್ನ ನಡೆಯುತ್ತಿದೆ

* * *

ಗ್ರಾಂಡ್ ಪಾರ್ಲಿಮೆಂಟ್, ಮೈಸೂರು

ಮೇಲ್ಕಂಡ ಸಂಘದವರು ಶ್ರೀಗಣಪತಿ ಉತ್ಸವದ ಪ್ರಯುಕ್ತ ದಿವಾನರ ರಸ್ತೆಯಲ್ಲಿರುವ 160ನೇ ನಂಬರು ಮನೆಯಲ್ಲಿ ಭಜನೆ ಸಂಗೀತ, ವೇದಪಾರಾಯಣ, ಮುಂತಾದವುಗಳನ್ನು ನಡೆಸುತ್ತಿರುವರು 23 ನೇ ತಾರೀಖು ಬುಧವಾರ ಮಹಾ ಮಂಗಳಾರತಿ ಜರುಗುವುದು

ಕಾಯಿ ಹೋಯಿತು, ಬಾಲ ಉಳಿಯಿತು

ಸತ್ಯಾಗ್ರಹ ಸಂಗ್ರಾಮದ ಕಾಲದಲ್ಲಿ ಸರ್ಕಾರದವರು ಹಾಕಿದ್ದ ನಿರ್ಬಂಧಗಳೆಲ್ಲಾ ಹೋದವು ವೃದಿಗಳನ್ನೆಲ್ಲಾ ಬಿಟ್ಟರು ಚಳವಳಿಗಲ್ಲಾ ... ಜುಲ್ಮಾನೆಗಳನ್ನು ವಾಪಸು ಕೊಟ್ಟರು ಆಸ್ತಿಪಾಸ್ತಿಗಳನ್ನು ಮಾಲೀಕರಿಗೊಪ್ಪಿಸಿದರು ಆದರೆ ಹಿಂದೂಸ್ಥಾನೀ ಸೇವಾದಲ ಸ್ವಯಂ ಸೇವಕ ಸಂಸ್ಥೆಯ ಮೇಲಿನ ನಿರ್ಬಂಧವನ್ನು ಮಾತ್ರ ಇನ್ನೂ ತೆಗದಿಲ್ಲ ಇದಕ್ಕೆ ಮೂಲವಾದ ಕಾಂಗ್ರೆಸ್ ಸಭೆಗೇ ಯಾವ ಅಡ್ಡಿಯೂ ಇಲ್ಲ ಅಂದಮೇಲೆ ಅದರ ಅಂಗವಾದ ಸೇವಾದಲಕ್ಕೇಕೆ ?

* * *

ಬ್ರಹ್ಮಚಾರಿಗಳಿಗೆ ತೆರಿಗೆ

ಮೆಕ್ಸಿಕೋದಲ್ಲಿ ಬ್ರಹ್ಮಚಾರಿಗಳಿಗೆ ಒಂದು ತೆರಿಗೆ ಬೀಳುವಂತೆ ಸ್ತ್ರೀಯರೇ ಈ ಸಲಹೆಯನ್ನು ಕೊಟ್ಟಿರುವರು ಮುವತ್ತನೇ ವರ್ಷದೊಳಗೆ ಮದುವೆ ಮಾಡಿಕೊಳ್ಳದ ಬ್ರಹ್ಮಚಾರಿಗಳು ತಮ್ಮ ಆದಾಯದಲ್ಲಿ ಶೇ॥ 5 ರಷ್ಟು ಕಂದಾಯ ಕೊಡಬೇಕು ಹೀಗೆ ಮಾಡಿದರೆ ದೇಶಾಭಿವೃದ್ಧಿಯಾಗುವುದು, ಜನಾಭಿವೃದ್ಧಿಯಾಗುವುದು, ಅನೀತಿ ತಪ್ಪುವುದು ಎಂದು ಅವರ ಅಭಿಪ್ರಾಯ

* * *

ರಾಜರುಗಳೇನು ಕಮ್ಮಿ ?

ಜಾತಿ ಕೆಡುವ ಹುಚ್ಚು ಸಾಮಾನ್ಯ ಜನಗಳಿಗೆ ಮಾತ್ರ ಇತ್ತು ಹಣದ ಆಶೆಯಿಂದಲೂ, ಸ್ತ್ರೀ ಆಶೆಯಿಂದಲೂ ವಂಚಿತರಾಗಿ ಅನೇಕರು ಜಾತಿ ಕೆಟ್ಟರು ಇದುವರೆಗೆ ರಾಜರುಗಳ ಪೈಕಿ ಯಾರೂ ಕೆಟ್ಟಿರಲಿಲ್ಲ ಹೀಗೇಕೆ ಇರಬೇಕು ಅವರೂ ಮನುಷ್ಯರಲ್ಲವೆ ? ಅವರಿಗೂ ಆಶಾಪಾಶಗಳಿಲ್ಲವೆ ? ಸೀತಾಮು ಸಂಸ್ಥಾನದ ರಾಜಪುತ್ರನಾದ ಗೋವಿಂದಸಿಂಗನು ಕ್ರಿಸ್ತಮತವನ್ನವಲಂಬಿಸಿರುವನು ಇದರಮೇಲೆ ಜೋಧ್‌ಪುರ, ಬಿಕನೀರ್, ಕೈಲಾಸಾ, ರತ್ಲಂ ಸಂಸ್ಥಾನಗಳ ರಾಜ ಮನೆತನಗಳಲ್ಲಿ ಕೋಲಾಹಲವೆದ್ದಿದೆ. ಬುದ್ಧಿ ಹೊಂದಿ ಪುನಃ ಹಿಂದೂ ಮತಕ್ಕೆ ಬರಬೇಕೆಂದು ಪ್ರೇರೇಪಿಸಲು ಅವನ ಅನುಬಂಧಿಗಳು ಹೋಗಿದ್ದಾರೆ

ಪಾಪಿ ಸಮುದ್ರಕ್ಕೆ ಹೋದರೇನು ?

ಅಬ್ದುಲ್ಲಾ ಗಾಂಧಿಯು ಹಿಂದೂ ಮತವನ್ನು ಬಿಟ್ಟು ಮುಸಲ್ಮಾನನಾದನು ಪಂಚಾಂಗ ಹೋದರೆ ನಕ್ಷತ್ರ ಹೋದೀತೆ ? ನಾಮರೂಪ ಭೇದದಿಂದ ಗುಣಮೋಪಗಳು ಹೋಗುವುವೆ ? ಅವನ ಹುಟ್ಟುಗುಣವಾದ ಕುಡುಕತನವು ಬೆನ್ನುಬಿಡಲಿಲ್ಲ ಮೊನ್ನೆ ಮದ್ರಾಸಿನ ರಾಜಬೀದಿಯಲ್ಲಿ ಕುಡಿದುಬಿದ್ದು ಜನರಿಗೆ ಹಿಂಸೆಯನ್ನುಂಟುಮಾಡಿದ್ದಕ್ಕಾಗಿ ಒಂದು ರೂ ಜುಲ್ಮಾನೆ ಹೊಂದಿದನು

* * *

ಮುಂದಿನ ಯುದ್ಧಕ್ಕೆ ಸಿದ್ಧತೆ

ಇಂಗ್ಲೆಂಡಿನಲ್ಲಿ ಮುಂದಿನ ಯುದ್ಧಕ್ಕೆ ಸಿದ್ಧತೆಗಳು ಬಿರುಸಿನಿಂದ ನಡೆಯುತ್ತಿವೆ ಎಂದರೆ ಯುದ್ಧ ಮಾಡುವುದಕ್ಕಲ್ಲ ಯುದ್ಧದ ಅನರ್ಥಗಳನ್ನು ತಪ್ಪಿಸಿಕೊಳ್ಳಲಿಕ್ಕೆ ಯುದ್ಧವು ಪ್ರಾಪ್ತವಾದ 24 ಗಂಟೆಗಳಲ್ಲಿ ಲಕ್ಷಾಂತರ ಜನರನ್ನು ಒಂದು ಕಡೆಯಿಂದ ಬೇರೆ ಕಡೆಗೆ ಸಾಗಿಸುವ ಏರ್ಪಾಡು ಆಗುತ್ತಿದೆ ವಿಷವಾಯುವಿನ ಅನರ್ಥಗಳನ್ನು ತಡೆಯಲು ಮೂರು ಕೋಟಿ ಮುಖವಾಡಗಳು ತಯಾರಾಗುತ್ತಿವೆ ಇತರ ಸಿದ್ಧತೆಗಳೂ ಆಗುತ್ತಿವೆ

* * *

ಗೌರೀ ಹಬ್ಬದಲ್ಲಿ ಕೊಲೆಹಬ್ಬ !!

ಕಳೆದ 18ನೇ ತಾ॥ ಶುಕ್ರವಾರ ಬೆಂಗಳೂರಿನ ಮರಿಯೋಪೇಟೆಯಲ್ಲಿ ಒಂದು ದುರ್ಘಟನೆ ನಡೆಯಿತು 25 ವಯಸ್ಸಿನ ಶಿವಣ್ಣ ಎಂಬುವನು ಕೊಲೆಮಾಡಲ್ಪಟ್ಟಿರುತ್ತಾನೆ ಇವನ ಶರೀರದಮೇಲೆ ಅಸಂಖ್ಯಾತ ಗಾಯಗಳಾಗಿದ್ದವು ಇವನು ಪೌರಸಭೆಯಲ್ಲಿ ಉದ್ಯೋಗಿಯಾಗಿರುವ ಮಲ್ಲಪ್ಪ ಎಂಬುವರ ಸಮೀಪ ಸಂಬಂಧಿಯೆಂದೂ ಮತ್ತು ಲಿಂಗಾಯಿತ ಕುಲದವನೆಂದೂ ಹೇಳಲಾಗಿದೆ ಜೂಜಿನಾಟದಲ್ಲಿ ಕಲಹ ಪ್ರಸಂಗವು ಒದಗಿ, ತತ್ಪರಿಣಾಮವಾಗಿ ಈತನು ಕೊಲೆಮಾಡಲ್ಪಟ್ಟಿದ್ದಾನೆಂದು ತಿಳಿದುಬಂದಿದೆ ಪೋಲೀಸಿನವರು ಹತ್ಯಾಕಾರಿಯನ್ನು ಹಿಡಿಯಲು ಪತ್ತೆಮಾಡುತ್ತಿರುವರು

ಶ್ರೀ ರಮಣ ಮಹರ್ಷಿಗಳು.

ಲೇಖಕ:—ಪಂಡಿತ.

ತಿರುವಣ್ಣಾಮಲೆಯ ಬೆಟ್ಟವೆಲ್ಲವೂ ತಪೋಭಾವನೆಯಿಂದ ತುಂಬಿರುವದು. ನಾನು ಈ ಬೆಟ್ಟಕ್ಕೆ ಹತ್ತಿದೊಡನೆಯೇ ಧ್ಯಾನದ ಕಡೆ ಮನಸ್ಸು ಓಡಿತು. ಒಂದು ಬಂಡೆಯ ಮೇಲೆ ಧ್ಯಾನಕ್ಕೆ ಕುಳಿತೆ ಮನಸ್ಸು ತಾನೇ ತಾನಾಗಿ ಶಾಂತಗೊಂಡಿತು ಕೆಲವು ಸಮಯಗಳಲ್ಲಿ, ಕೆಲವು ಸ್ಥಳಗಳಲ್ಲಿ ಪ್ರಯತ್ನಪಟ್ಟರೂ ಮನಸ್ಸು ಧ್ಯಾನದಲ್ಲಿ ನಿಲ್ಲುವುದಿಲ್ಲ ಸ್ಥಳ ಮಹತ್ವವೋ, ಮಹರ್ಷಿಗಳ ಸಾನ್ನಿಧ್ಯವೋ, ಆಶ್ರಮದ ಭಕ್ತರ ಪ್ರಭಾವವೋ ತಿಳಿಯದು. ಹೃದಯಕಪಿಯು ಚಪಲಚಿತ್ತವನ್ನು ಬಿಟ್ಟು ಇಲ್ಲಿ ಶಾಂತವಾಗುವದು. "ಈ ಬೆಟ್ಟದಲ್ಲಿ ಸಿದ್ಧರು ಮತ್ತು ಯೋಗಿಗಳು ಅದೃಶ್ಯರಾಗಿ ತಪಸ್ಸು ಮಾಡುತ್ತಿದ್ದಾರೆ ಇದು ಪವಿತ್ರವಾದ ಸ್ಥಳ. ಈ ಸುತ್ತಿನಲ್ಲಿಯೇ ಒಂದು ದೊಡ್ಡ ವಟವೃಕ್ಷವಿದೆ ಅಲ್ಲಿ ಅಗಸ್ತ್ಯರು ಆಶ್ರಮದಲ್ಲಿ ವಾಸಿಸುತ್ತಾರೆ ಸುತ್ತಮುತ್ತಲೂ, ಹಾವು, ಚಿರತೆಗಳ ಕಾಟ. ಜನರಿಗೆ ಆಶ್ರಮವು ಅಗಮ್ಯವಾಗಿದೆ' ಎಂದು ಜನರು ಆಡಿಕೊಳ್ಳುತ್ತಾರೆ. ಸ್ಕಂದಾಶ್ರಮದಲ್ಲಿದ್ದಾಗ ಒಂದು ನವಿಲನ್ನು ಸಾಕುತ್ತಿದ್ದರಂತೆ ಒಂದು ದಿವಸ ಒಂದು ನಾಗರ ಹಾವಿಗೂ ಆ ನವಿಲಿಗೂ ಜಗಳನಾಗುತ್ತಿತ್ತಂತೆ ಆಗ ಮಹರ್ಷಿಗಳು 'ಜಗಳವಾಡಬೇಡಿ, ಹೋಗಿ" ಅಂದರಂತೆ ಅವೆರಡೂ ಜಗಳವನ್ನು ನಿಲ್ಲಿಸಿದವಂತೆ ಈ ಕಥೆಯನ್ನು ಆಶ್ರಮದ ಭಕ್ತರು ಹೇಳುತ್ತಾರೆ

ಈ ಊರಿನಲ್ಲಿಯೇ ಒಬ್ಬ ಫಕೀರನು ಆಳಿಲನ್ನು ಸಾಕುತ್ತಾನೆ ಪ್ರಾಣಿಗಳಲ್ಲಿ ಮನುಷ್ಯರು ಪ್ರೇಮವಿಡುವದು ಸಹಜವಾದ ವಿಷಯ ಮಹರ್ಷಿಗಳು ಆಳಿಲನ್ನು ಸಾಕುವುದೂ ಹಾಗೆಯೇ. ಇಷ್ಟಾದರೂ ನನ್ನ ಮನಸ್ಸಿನಲ್ಲಿ ವಿಚಿತ್ರಭಾವನೆಗಳುಂಟಾಗಲು ಕಾರಣವೇನು? ಇಂತಹ ದೃಶ್ಯಗಳೆಷ್ಟೋ ನನ್ನ ಕಣ್ಣಿಗೆ ಬಿದ್ದಿವೆ ಆದರೂ ಈ ಚಿಕ್ಕ ವಿಷಯವು ನನ್ನ ಮನಸ್ಸಿನಲ್ಲಿ ನಾಟಿತು ಸ್ವಾರ್ಥರಹಿತಪ್ರೇಮವು ಮೂರ್ತಿಮತ್ತಾಗಿ ನನ್ನ ಕಣ್ಣೆದುರಿಗೆ ಬಂದು ನಿಂತಂತಾಯಿತು ಮಹರ್ಷಿಗಳು ತಮ್ಮ ಪ್ರೇಮವೆಲ್ಲವನ್ನೂ ಆ ಚಿಕ್ಕ ಪ್ರಾಣಿಯ ಮೇಲೆ ಸುರಿಸಿದರು ನಿಜ ಆದರೂ ಆ ಪ್ರೇಮದಲ್ಲಿ ಲವಲೇಶವಾದರೂ ಸ್ವಾರ್ಥವಿಲ್ಲ. ನಮಗೂ ಅವರಿಗೂ ಇರುವ ವ್ಯತ್ಯಾಸವೇ ಇದು ನಾವು ಮಾಡುವ ಪ್ರೇಮದಲ್ಲಿ ಸ್ವಾರ್ಥವು ಅಳಿಸಿಹೋದ ನಿಮಿಷವೇ ನಾವೂ ಮಹರ್ಷಿಗಳೇ ಆದರ್ಶಪ್ರೇಮವನ್ನು ತಿಳಿಯಬೇಕಾದರೆ ಮಹರ್ಷಿಗಳನ್ನು ನೋಡಬೇಕು. ಆದರ್ಶಪ್ರೇಮವೇಕೆ? ಅದನ್ನು ಒಂದು ಬಗೆಯ ದೈವಿಕ ಪ್ರೇಮವೆನ್ನಬಹುದು

ರಮಣಾಶ್ರಮದಲ್ಲಿ ಮಹರ್ಷಿಗಳ ಮಾತೃಶ್ರೀಯವರ ಸಮಾಧಿ ಇರುವದು. ಅದಕ್ಕೆ ನಿತ್ಯವೂ ಪೂಜೆಯು ನಡೆಯುವದು ಮತ್ತೊಂದುಕಡೆ ಕಾಗೆ, ನಾಯಿ, ಜಿಂಕೆ ಇವುಗಳ ಮೂರು ಸಮಾಧಿಗಳಿರುವವು. ಇದೇನು ವಿಚಿತ್ರ? ಪಶುಪಕ್ಷಿಗಳಿಗೆ ಸಮಾಧಿಗಳೆಂದರೇನು? ಎಂದು ನೀವು ಕೇಳಬಹುದು ನಾವು ಮನುಷ್ಯರು. ಆದುದರಿಂದ ಮನುಷ್ಯ ಜನ್ಮವು ಅತ್ಯುತ್ತಮವಾದುದೆಂದು ನಾವು ತಿಳಿದಿದ್ದೇವೆ ಆದರೆ ಜ್ಞಾನಿಗಳ ರೀತಿಯೇ ಬೇರೆ ಎಲ್ಲರೂ ಮಾತೃಶ್ರೀಯವರ ಸಮಾಧಿಯಲ್ಲಿ ಅಭಿಷೇಕ ಮಾಡುತ್ತಿರುವಾಗ ಮಹರ್ಷಿಗಳು ಕಾಗೆಯ ಸಮಾಧಿಗೆ ಹೋಗಿ ಪುಷ್ಪಗಳನ್ನಿಟ್ಟು ಪರಮಾತ್ಮನ ಪೂಜೆಯನ್ನು ಮಾಡುವರು

ಶ್ರೀ ರಮಣಾಶ್ರಮ.



ಮಹರ್ಷಿಗಳು ಆಗಾಗ್ಗೆ "ಜ್ಞಾನಿಗಳು ಪಶುಪ್ರಾಣಿಗಳ ರೂಪದಲ್ಲೇ ಇರುವರು." ಎಂದು ಹೇಳುವರಂತೆ "ಶುನಿಚೈವಶ್ವಪಾಕೇಚ ಪಂಡಿತಾಃ ಸಮದರ್ಶಿನಃ" ಎಂಬುದನ್ನು ಅನೇಕರು ಹೇಳುವದನ್ನು ನಾನು ಕೇಳಿದ್ದೇನೆ. ಅದಕ್ಕೆ ವ್ಯಾಖ್ಯಾನವನ್ನು ಮಾಡುವ ಅನೇಕ ಪಂಡಿತರನ್ನೂ ನೋಡಿದ್ದೇನೆ. ಅದನ್ನು ದಿನಂಪ್ರತಿ ಶಕ್ತ್ಯನುಸಾರ ಪಾರಾಯಣ ಮಾಡುವ ಮಹನೀಯರನ್ನೂ ನೋಡಿದ್ದೇನೆ. ಆದರೇನು? ಮಹರ್ಷಿಗಳ ಮೌನವ್ಯಾಖ್ಯಾನವನ್ನು ಒಂದುಸಾರಿ ಕೇಳಬೇಕು, ಛಿನ್ನಸಂಶಯರಾಗಬೇಕು. "ಗುರೋಸ್ತು ಮೌನವ್ಯಾಖ್ಯಾನಂ। ಶಿಷ್ಯಾಸ್ತು ಛಿನ್ನಸಂಶಯಾಃ" ಇದು ಪುರಾಣದ ಮಾತಲ್ಲ, ಇಂದು ರಮಣಾಶ್ರಮದಲ್ಲಿ ಎಲ್ಲರೂ ಪರೀಕ್ಷೆ ಮಾಡಬಹುದಾದ ಸತ್ಯ.

ನನ್ನ ಮನಸ್ಸಿನಲ್ಲಿ ಈ ವಿಚಿತ್ರವಾದ ಭಾವನೆಗಳುಂಟಾಗಲು ಕಾರಣವೇನು? ಅಕ್ಕಪಕ್ಕದ ಪ್ರಕೃತಿ ಸೌಂದರ್ಯವೇನಾದರೂ ಇದನ್ನುಂಟುಮಾಡಿರಬಹುದೆ? ನಂದೀಬೆಟ್ಟವು ಅರುಣಾಚಲವನ್ನು ಸೌಂದರ್ಯದಲ್ಲಿ ಅಣಕಿಸುವಂತಿದೆ. ಆದರೂ ಅಲ್ಲಿ ನನ್ನ ಮನಸ್ಸಿನಲ್ಲಿ ಈ ತೆರನಾದ ಭಾವನೆಗಳುಂಟಾಗಲಿಲ್ಲ. ಅಥವಾ ಆಶ್ರಮದ ಭಕ್ತರು ನನ್ನ ಮನಸ್ಸಿನ ಬದಲಾವಣೆಗೆ ಕಾರಣರೋ? ನಂದೀ ಬೆಟ್ಟದಲ್ಲಿ ಮಹಾತ್ಮರನ್ನು ನಾನು ಅವರ ಭಕ್ತರೊಡನೆ ನೋಡಿದ್ದೆ ಅವರ ಪ್ರಾರ್ಥನೆ, ಪಾರಾಯಣ ಇವುಗಳಲ್ಲಿ ನಾನೂ ಭಾಗಿಯಾಗಿದ್ದೆ. ಗಾಂಧಿಯವರ ಸರಳ ಸ್ವಭಾವ, ತಿಳಿಯಾದ ಮನಸ್ಸು, ಭಗವದ್ಭಕ್ತಿ ಇವುಗಳು ನನ್ನ ಮನಸ್ಸನ್ನು ಸೂರೆಗೊಂಡಿದ್ದುವೇನೋ ನಿಜ. ಗಾಂಧಿಯವರ ಸಾನ್ನಿಧ್ಯದಲ್ಲಿ ಮನಸ್ಸಿನಲ್ಲಿ ಉತ್ಸಾಹ ಮತ್ತು ಧೈರ್ಯಗಳು ತುಂಬಿದವು ಆದರೂ ಮಹರ್ಷಿಗಳ ಸಾನ್ನಿಧ್ಯದ ಪರಿಣಾಮವೇ ಬೇರೆ ಮಹಾತ್ಮರ ಸಾನ್ನಿಧ್ಯದ ಪರಿಣಾಮವೇ ಬೇರೆ. ಮಹರ್ಷಿಗಳ ಸಾನಿಧ್ಯವು ಒಳಗಣ್ಣನ್ನು ತೆರೆಯುವದು. ಮಹರ್ಷಿಗಳು ಮನಸ್ಸಿನಲ್ಲಿ ಶಾಂತಿಯನ್ನು ತುಂಬುವರು, ಮಹಾತ್ಮರು ಮನಸ್ಸಿನಲ್ಲಿ ಶಕ್ತಿಯನ್ನು ತುಂಬುವರು ಮಹರ್ಷಿಗಳು ಜ್ಞಾನಯೋಗಿಗಳು, ಮಹಾತ್ಮರು ಕರ್ಮಯೋಗಿಗಳು

ಸ್ನೇಹಿತರೊಡನೆ ಗುರುಗಳ ವಿಷಯವನ್ನು ಮಾತನಾಡುತ್ತಿದ್ದೆ. ಅವರು "ವೇದಾಂತವಿಚಾರದವರು ನನಗೆ ಬೇಕಿಲ್ಲ. ಷಟ್ಶಾಸ್ತ್ರ ಪಂಡಿತರು ಉಪದೇಶವನ್ನು ಕೊಡಲಾರರು ವೇದಾಹಮೇತಂ ಪುರುಷಂ ಮಹಾಂತಂ ಎಂದು ಹೇಳುವ ಧೀರರು ಯಾರಿದ್ದಾರೆ" ಎಂದು ಕೇಳಿದರು ಅಂದಿನಿಂದ ಅಂತಹ ಗುರುಗಳ ದರ್ಶನ ಲಾಭವು ಈ ಜನ್ಮದಲ್ಲಿ ಸಿಕ್ಕುವದೆ ಎಂದು ಮನಸ್ಸು ತವಕಪಡುತ್ತಿತ್ತು. ದೈವಾನುಗ್ರಹದಿಂದ ಮಹರ್ಷಿಗಳ ಸಾನ್ನಿಧ್ಯವು ನನಗೆ ದೊರಕಿತು. ನಾನು ಅವರನ್ನು ಏನನ್ನೂ ಕೇಳಲಿಲ್ಲ, ಅವರು ನನಗೆ ಏನನ್ನೂ ಹೇಳಲಿಲ್ಲ. ನನ್ನ ಆಶೆಯುಮಾತ್ರ ಈಡೇರಿತು.

ಮೌನದ ಮಹತ್ವವು ಪಾಮರರಾದ ನಮಗೆ ಇನ್ನೂ ತಿಳಿದಿಲ್ಲ. ಮೌನದಲ್ಲಿ ಒಂದು ಮಹತ್ವವಿದೆ. ಒಳಗಣ್ಣು ತೆರೆಯಬೇಕಾದರೆ ಮೌನದಲ್ಲಿಯೇ ಸದ್ವಸ್ತುವ ಕಾಣಬೇಕಾದರೆ ಮೌನದಲ್ಲಿಯೇ.

ಯೋಗಾಭ್ಯಾಸದಲ್ಲಿ ನಿರತರಾದ ಸ್ವಾಮಿಗಳೊಬ್ಬರು ಮಹರ್ಷಿಗಳನ್ನು ಒಂದು ಪ್ರಶ್ನೆ ಕೇಳಿದರು ಆ ಸ್ವಾಮಿಗಳಿಗೆ ಯೋಗಾಭ್ಯಾಸದಿಂದ ನಿದ್ದೆಯು ಕಡಿಮೆಯಾಯಿತು. ಅವರು ಬಲು ಗಾಬರಿಗೊಂಡು ಅನೇಕ ಇಂಗ್ಲಿಷ್ ವೈದ್ಯರ ಹತ್ತಿರ ಚಿಕಿತ್ಸೆಗೆ ಹೋದರಂತೆ ವೈದ್ಯರು ಸ್ವಾಮಿಗಳಿಗೆ "ಯೋಗವನ್ನು ಬಿಡಿ, ಇಲ್ಲವಿದ್ದರೆ ನಿಮಗೆ ಹುಚ್ಚು ಹಿಡಿಯುವುದು" ಎಂದು ಹೇಳಿದರು ಮಹರ್ಷಿಗಳಲ್ಲಿ ಅವರು ತಮ್ಮ ಕಷ್ಟವನ್ನು ಹೇಳಿಕೊಂಡರು ಮಹರ್ಷಿಗಳು ಅವರಿಗೆ ಸಮಾಧಾನವಾಗಿ ಮಾತಾಡಿ "ಶರೀರಕ್ಕೆ ನಿದ್ದೆಯು ಯಾಕೆ ಬೇಕು? ಆಯಾಸಪರಿಹಾರಕ್ಕೆ. ಯೋಗಾಭ್ಯಾಸದಿಂದಲೇ ಆಯಾಸಪರಿಹಾರವಾಗಿ ನಿದ್ದೆಯು ಕಡಿಮೆಯಾಗುವದು ಸ್ವಭಾವ ಕಾಲಕ್ರಮೇಣ ನಿದ್ದೆಯೇ ಯೋಗವಾಗುವುದು ಯೋಗವೇ ನಿದ್ದೆಯಾಗುವದು ಗಾಬರಿಗೆ ಕಾರಣವಿಲ್ಲ" ಎಂದರು ಈ ಸಮಾಧಾನದ ಉತ್ತರವು ಸ್ವಾಮಿಗಳಿಗೆ ಯಾರಲ್ಲಿಯೂ ದೊರೆತಿರಲಿಲ್ಲ. ಆ ಸ್ವಾಮಿಗಳು ಉತ್ತರವನ್ನು ಕೇಳಿ ಅನರ ಸ್ನೇಹಿತರೊಡನೆ 'ನಾನು ಸಮುದ್ರದ ಆಳವನ್ನು ಕಂಡುಹಿಡಿಯಬಹುದು. ಮಹರ್ಷಿಗಳ ಶಾಂತಿಸಾಮ್ರಾಜ್ಯದ ಸೀಮೆ ತಿಳಿಯಲಾರೆನು" ಎಂದರು. ಅದೇ ಸ್ವಾಮಿಗಳು ಇನ್ನೊಂದು ಪ್ರಶ್ನೆಯನ್ನು ಕೇಳಿದರು "ಪೂರ್ವಜನ್ಮ ಸಂಸ್ಕಾರವು ನನ್ನನ್ನು ಯಾವಾಗಲೂ ಬಾಧಿಸುತ್ತಿದೆ ಏನು ಮಾಡುವದು?" ಮಹರ್ಷಿಗಳು, 'ಏನು ಮಾಡದೆ ಕರ್ಮವನ್ನು ಮಾಡದಿದ್ದರೆ ಹಳೆಯದು ತನಗೆ ತಾನೇ ಸವೆದುಹೋಗುವದು ಹೊಸ ಸೌದೆಯನ್ನು ಹಾಕದಿದ್ದರೆ ಬೆಂಕಿಯು ಕಾಲಕ್ರಮೇಣ ತಣ್ಣಗಾಗುವ

ತಗಡೂರು ರಾಯರಮೇಲೆ ನಿರ್ಬಂಧ.

೧೪೪ನೇ ಸೆಕ್ಷನ್ ಪ್ರಯೋಗ

(ನಮ್ಮ ವಿಶೇಷ ವಾರ್ತಾದಾರರಿಂದ)

ನಂಜನಗೂಡು ತಾ 20

144ನೇ ಕಲಮನ್ನು ಪ್ರಯೋಗಿಸಿ ಒಹಳ ದಿನಗಳಾಗಿತ್ತು. ಆದರೆ ತಗಡೂರು ರಾಮಚಂದ್ರರಾಯರಿಗೇನೇ ಹೊಸದಲ್ಲ. ಇದುವರೆಗೆ ಎಲ್ಲಾ ಕಲಮುಗಳೂ ನೂರಾರು ಸಲ ಹಾಕಲ್ಪಟ್ಟವೆ ಈದಿನ ರಾತ್ರಿ ಒಂದು ತಪ್ಪುವರೆ ಗಂಟೆಯಲ್ಲಿ ಪುನಃ ಹಾಕಲ್ಪಟ್ಟಿತು ಇದನ್ನು ಚಾಮರಾಜನಗರದ ಅಮಲ್ದಾರ್ ಮ್ಯಾಜಿಸ್ಟ್ರೇಟರು ಹಾಕಿರುವರು

ಶ್ರೀ|| ರಾಯರು ನಂಜನಗೂಡಿನಲ್ಲಿ ಈ ದಿನ ನಡೆದ ಶ್ರೀ ರಾಮಕೃಷ್ಣ ಶತಮಾನೋತ್ಸವಕ್ಕಾಗಿ ಮಿತ್ರರೊಡನೆ ಮೈಸೂರಿನಿಂದ ಬಂದಿದ್ದರು ಪೋಲಿಸ್ ಸೂಪರಿಂಟೆಂಡೆಂಟರು ಎಲ್ಲಿಪೂ ಮಾಗಿದಮೇಲೆ ಮೇಲ್ಕಂಡ ಆರ್ಡರನ್ನು ರಾಯರಿಗೆ ಜಾರಿಮಾಡಿದರು

ಚಾಮರಾಜನಗರದ ಶ್ರೀ|| ಭೋಗಾಪುರದಲ್ಲಿ ಕ್ರೈಸ್ತ ಪಾದ್ರಿಗಳ ಪ್ರಸಂಗದಿಂದ ಉಂಟಾದ ಭಾವಿ ವಿಷಯವಾಗಿ ಹರಿಜನರಿಗೂ ದೇಶೀಯ ಕ್ರೈಸ್ತರಿಗೂ ಅಸಮಾಧಾನಗಳು ಉಂಟಾಗಿರುವವಷ್ಟೆ. ಈ ಸಂಬಂಧದಲ್ಲಿ ಕೆಲವುದಿನಗಳ ಹಿಂದೆ ಕ್ರೈಸ್ತ ಪಾಲುಂಡರಮೇಲೆ ಇದೇ ಆಜ್ಞೆಯನ್ನು ಇದೇ ಮ್ಯಾಜಿಸ್ಟ್ರೇಟರು ಹಾಕಿದ್ದರು ಶಾಂತಿಭಂಗಕ್ಕೆ ಅವಕಾಶಕೊಡಕೂಡದೆಂದೂ, ಪವಿತ್ರವಾದ ಬಾವಿಯ ಬಳಿ ಅವರು ಸೇರಕೂಡದೆಂದೂ ಆಜ್ಞೆ ಮಾಡಿದ್ದರು ಈಗ ಶ್ರೀ|| ರಾಯರ ಚಳುವಳಿಗಳಿಂದ ಶಾಂತಿಭಂಗವಾಗುವುದೆಂದೂ ಕೋಮುವಾರು ಕಲಹವುಂಟಾಗಬಹುದೆಂದೂ ತಿಳಿದು ಇನ್ನು 2 ತಿಂಗಳವರೆಗೆ ರಾಯರು ಭೋಗಾಪುರ ಮತ್ತು ಅದರ 3 ಮೈಲಿಯೊಳಗಿನ ಎಲ್ಲೆಯೊಳಗೆ ಪ್ರವೇಶಿಸಕೂಡದೆಂದೂ, ಹಸ್ತಪತ್ರಿಕೆಗಳನ್ನು ಹಂಚಕೂಡದೆಂದೂ, ಕೋಮುವಾರು ದ್ವೇಷವನ್ನು ಹುಟ್ಟಿಸುವ ಭಾಷಣಗಳನ್ನು ಮಾಡಕೂಡದೆಂದೂ ತಿಳಿಸಿರುವರು

ಶ್ರೀ ರಾಮಕೃಷ್ಣ ಶತಮಾನೋತ್ಸವ.

ಈ ದಿನ ಈ ಉತ್ಸವವು ಅತ್ಯಂತ ವೈಭವದಿಂದ ಜರುಗಿಸಲ್ಪಟ್ಟಿತು ನೂರಾರು ಜನರಿಗೆ ಅನ್ನದಾನವೂ, ಬಡ ಮುದುಕರಿಗೆ ವಸ್ತ್ರದಾನವೂ ನಡೆಯಿತು ಶ್ರೀ|| ಸಂತ ರಾಮರಾಯರ ಅಧ್ಯಕ್ಷತೆಯಲ್ಲಿ ಸಭೆ ನಡೆಯಿತು ಶ್ರೀ|| ಗಮಕಿ ರಾಮಕೃಷ್ಣಯ್ಯನವರು ದಾಸವೀರಕರ್ಣ ಎಂಬ ವಿಷಯವಾಗಿ ಸ್ವಾರಸ್ಯವಾದ ಹರಿಕಥೆಯನ್ನು ನಡೆಸಿದರು ಸ್ಪೆಷಲ್ ಮ್ಯಾಜಿಸ್ಟ್ರೇಟ್ ರುದ್ರಪ್ಪನವರು, ಶ್ರೀ|| ಎಂ. ಕಸ್ತೂರಿರಂಗಸ್ವಾಮಿ ದೀಕ್ಷಿತಾನಂದಜಯಪವರು ಕೃಷ್ಣ ಪರಮಹಂಸರ ವಿಷಯವಾಗಿ ಸಂತೋಷವಾಗಿ ಭಾಷಣಮಾಡಿದರು

ಮೊಸಳೆಯಾಗಿದ್ದ ಸಾಧು ಮೀನಾದನು.

ಮೀನನ್ನು ಕೊಂದರು.

ಅತ್ರೇಯಿ ನದಿಯಲ್ಲಿ ಹೀರಾಲಾಲ್ ಎಂಬುವನು ಮೊಸಳೆಯಾಗಿದ್ದನೆಂದು ಹಿಂದೆಯೇ ತಿಳಿಸಲಾಗಿದ್ದಿತಷ್ಟೆ. ಆ ಮೊಸಳೆಯನ್ನು ತಿರುಗಿ ಮನುಷ್ಯನನ್ನಾಗಿ ಮಾಡಬೇಕೆಂದು ಅವನ ಗುರುವನ್ನು ನೆಂಟರು ಕೇಳಿಕೊಂಡರು ಅವರ ಗುರುವು ಅವನು ನದಿಯಲ್ಲಿ ಕಶ್ಮಲ ಪದಾರ್ಥಗಳನ್ನು ತಿಂದಿರುತ್ತಾನೆ. ಆದುದರಿಂದ ಆಗುವುದಿಲ್ಲವೆಂದು ಹೇಳುತ್ತಿದ್ದನು ಇವನ ಸಂಬಂಧಿಗಳ ಒತ್ತಾಯದಿಂದ ಕಡೆಗೆ ಆ ಮೊಸಳೆಯನ್ನು ಮೀನನ್ನಾಗಿ ಮಾಡಿದನು ಗಂಗಾನದಿಯನ್ನು ಸೇರಿದೊಡನೆ ಆ ದೇವಿಯ ಅನುಗ್ರಹದಿಂದ ಮೀನಾಗಿರುವ ಹೀರಾಲಾಲನು ವಿಮೋಚನ ಹೊಂದುವನೆಂದು ಗುರುದೇವನು ಹೇಳಿದ್ದನು. ಅನೇಕ ದೊಡ್ಡ ಮನುಷ್ಯರು ಈ ಮೀನಿನ ಚಲನವಲನಗಳನ್ನು ಪರಿಶೀಲಿಸುತ್ತಿದ್ದರು ಮತ್ತು ಕೆಲವರು ಓಡಮೂಕದಿಂದ ಹೊಡೆಯುತ್ತಲೂ ಇದ್ದರು ಅವರ ಕಳೆದ ಬುಧವಾರ ಆ ಮೀನು ತನ್ನ ಸ್ಥಳದಿಂದ 12 ಮೈಲಿ ದೂರದಲ್ಲಿ ಗಂಗಾನದಿಗೆ ಅಭಿಮುಖವಾಗಿ ಅತ್ರೇಯಿ ನದಿಯಲ್ಲಿ ಹೋಗುತ್ತಿದ್ದಾಗ ಕಡೆಗೆ ಜಟಿನ್‌ರಾಮ್ ಎಂಬುವನು ಒಂದೂಕದಿಂದ ಹೊಡೆದು ಕೊಂದನು ಆ ಸತ್ತ ಮೀನನ್ನು ಹೂಳಲು 60 ಆಳುಗಳು ಬೇಕಾಯಿತು ಅದು 20 ಅಡಿ ಉದ್ದವಾಗಿಯೂ 30 ಮಣ ತೂಕವುಳ್ಳದ್ದಾಗಿಯೂ ಇದ್ದಿತು

ಮನುಷ್ಯನು ಮೊಸಳೆಯಾಗುವದು ಮತ್ತು ಮೊಸಳೆಯು ಮೀನಾಗುವದು ಅತ್ಯಾಶ್ಚರ್ಯಕರವಾದ ಸಂಗತಿಯಾಗಿರುತ್ತೆ. ನಂಬುವರು ನಂಬಲಿ, ಬಿಟ್ಟವರು ಬಿಡಲಿ ಮೀನಿನ ಶರೀರವು ಮಾತ್ರ ಎಲ್ಲರ ನೋಟಕ್ಕಾಗಿ ಇಡಲ್ಪಟ್ಟಿದೆ.

ಕೃತಕ ನಾಣ್ಯಗಳಿಗಾಗಿ ದಸ್ತಗಿರಿ

ಒಂದು ರೂಪಾಯಿನ ಒಂದು ಕೃತಕ ನಾಣ್ಯವನ್ನೂ ಅರ್ಧರೂಪಾಯಿನ ನಾಲ್ಕು ಕೃತಕ ನಾಣ್ಯಗಳನ್ನೂ ಬೆಂಗಳೂರು ಗೌರ್ನಮೆಂಟು ಟ್ರೆಜರಿಯಲ್ಲಿ ಕೊಡಲು ಹೋಗಿದ್ದರೆಂಬ ಆಪಾದನೆಯಮೇಲೆ ಆಲ್ಲಿನ ವ್ಯವಸಾಯದ ಇಲಾಖೆಯ ಕೃಷ್ಣಸ್ವಾಮಿಸೆಟ್ಟಿ ಮತ್ತು ಕೃಷ್ಣಮೂರ್ತಿ ಎಂಬುವರನ್ನು ಪೋಲೀಸರು ದಸ್ತಗಿರಿ ಮಾಡಿರುವರೆಂದು ಗೊತ್ತಾಗಿದೆ ಮುಂದಿನ ತನಿಖೆ ನಡೆಯುತ್ತಿದೆ

ಬೆಂಗಳೂರು ರಸ್ತೆಯಲ್ಲಿ ದರೋಡೆ

ಬೆಂಗಳೂರಿನಲ್ಲಿರುವ ಮೈಸೂರು ರಸ್ತೆಯಲ್ಲಿ ಚಿಕ್ಕಣ್ಣ ಮತ್ತು ಲಕ್ಷ್ಮಪ್ಪ ಎಂಬುವರು ದೊಡ್ಡನಸಳ್ಳಿಯ ನರಸಿಂಹನೆಂಬುವನ ಮೇಲೆ ಬಿದ್ದು ಅವನಲ್ಲಿದ್ದ ಹಣವನ್ನು ದರೋಡೆ ಮಾಡಿದರೆಂಬ ಆಪಾದನೆ ಮೇಲೆ ಅಪರಾಧಿಗಳನ್ನು ದಸ್ತಗಿರಿ ಮಾಡಿ ಮೊಕದ್ದಮೆ ಹಾಕಲಾಗಿದೆ

ಪ್ರಾಣಿಗಳು ತಮಗೆ ತಾವೇ ಚಿಕಿತ್ಸೆ ಮಾಡಿಕೊಳ್ಳುವುವು

ಲೇಖಕರು —ಎಸ್. ಕೃಷ್ಣಯ್ಯಂಗಾರ್

ಮನುಷ್ಯನಿಗೆ ಖಾಯಿಲೆ ಬಂದರೆ ವೈದ್ಯರೋ, ಡಾಕ್ಟರೋ ಇವರ ಸಹಾಯವನ್ನು ಕೋರುತ್ತಾನೆ ಇದು ರೂಢಿಯಾಗಿ ಹೋಗಿದೆ ಪೂರ್ವದಲ್ಲಿ ಹಾಗಿರಲಿಲ್ಲ ಕೈಲಾದಷ್ಟು ತಾವೇ ಚಿಕಿತ್ಸೆ ಮಾಡಿಕೊಳ್ಳುತ್ತಿದ್ದರು

ಅನೇಕ ಪ್ರಾಣಿಗಳು ಖಾಯಿಲೆ ಬಂದರೆ ತಮಗೆ ತಾವೇ ಪರಿಹಾರ ಮಾಡಿಕೊಳ್ಳುತ್ತವೆ. ಉದಾಹರಣೆಗಾಗಿ ಕೆಲವನ್ನು ಇಲ್ಲಿ ಬರೆದಿದೆ —

ನಾಯಿ, ಬೆಕ್ಕು, ಸಿಂಹ ಹುಲಿ, ಇತ್ಯಾದಿಯಾಗಿ ಎಲ್ಲ ಮಾಂಸಾಹಾರಿಗಳೂ, ತಾವು ಮಾಂಸಾಹಾರದಿಂದ ಅಜೀರ್ಣವಾಗಿ ತೊಂದರೆಪಡುತ್ತಿದ್ದರೆ ಹುಲ್ಲು ಗರಿಕೆಯ ಕೆಲವು ಕಡ್ಡಿಗಳನ್ನು ತಿಂದು ವಾಂತಿ ಮಾಡಿಕೊಂಡು ಸುಖವಾಗಿರುತ್ತವೆ ಅಲ್ಲದೆ ಈ ವಿಧವಾದ ಹುಲ್ಲಿನ ಕಡ್ಡಿಗಳಿಂದ ಅವುಗಳಿಗೆ ಸುಖವಾಗಿ ಮಲವಿಸರ್ಜನೆಯೂ ಆಗುವುದು. ಮುಂಗುಸಿಯು ಹಾವನ್ನು ಕಡಿದು ಕೊಂದನಂತರ ಅದರ ವಿಷವು ತನಗೇರದಂತೆ ಕಾಡಿನ ಬೇರನ್ನು ಅಗಿದು ತನಗೆ ಉಂಟಾಗಬಹುದಾದ ತೊಂದರೆಯನ್ನು ತಾನೇ ನಿವಾರಿಸಿಕೊಳ್ಳುವುದು

ನಾಯಿ, ಬೆಕ್ಕು ಇತ್ಯಾದಿ ಕೆಲವು ಪ್ರಾಣಿಗಳು ಮರಿಹಾಕಿದಾಗ ತಮ ಗೆ ಬಾಣಂತಿ ಉಪಚಾರ ಮಾಡುವವರಿಲ್ಲವೆಂದು ತಾವು ಹಾಕಿದ ಮರಿಗಳೆಲ್ಲ ಹೊರಬರುವ ಮಾಸವನ್ನು ತಾವೇ ತಿಂದು ತಮ್ಮ ಪ್ರಕೃತಿ ಆರೋಗ್ಯವನ್ನು ಕಾಪಾಡಿಕೊಳ್ಳುತ್ತವೆ

ದನ, ಹುಲ್ಲೆ, ಎಮ್ಮೆ, ಕತ್ತೆ, ನಾಯಿ ಬೆಕ್ಕು ಇವೇ ಮೊದಲಾದ ಅನೇಕ ದೊಡ್ಡ ದೊಡ್ಡ ಪ್ರಾಣಿಗಳು, ತನುತಮಗೆ ಏಟು ಬಿದ್ದಿರಲಾಗಲಿ, ಮತ್ತಾವ ವಿಧದಿಂದಾಗಲಿ ಗಾಯವಾಗಿದ್ದರೆ ಅಂಥ ಗಾಯಗಳನ್ನು ತಮ್ಮ ನಾಲಿಗೆಯಿಂದ ನೆಕ್ಕಿ, ತಮ್ಮ ನಾಲಗೆಗಳಲ್ಲಿ ಸ್ರವಿಸುವ ಜೊಲ್ಲಿನಿಂದಲೇ ಲೇಪಮಾಡಿ, ವಾಸಿಮಾಡಿಕೊಳ್ಳುವುವು ಇಂಥ ಪ್ರಾಣಿಗಳಿಗೆ ನೆಕ್ಕುವದಕ್ಕಾಗದ ತಲೆಯ ಭಾಗದಲ್ಲಿ ಗಾಯವಾದರೆ ಜಾಗ್ರತೆ ವಾಸಿಯಾಗುವುದಿಲ್ಲ ಕೆಲವು ವೇಳೆ ಅಂಥ ಗಾಯಗಳಿಂದಲೇ ಸಾಯಬಹುದು

ಆಡಿಗೂ ಸಹ ತಾನು ತಿನ್ನಬಾರದ ಸೊಪ್ಪು ಇಂತಹುದೆಂದು ತಿಳಿದಿದೆ. ಅದನ್ನು ಅದು ತಿನ್ನುವುದಿಲ್ಲ

ಸರ್ಪವು ಪ್ರಾಣಿಗಳನ್ನು ಕಡಿದಾಗ ಕಡಿಯಲ್ಪಟ್ಟ ಪ್ರಾಣಿಸಂಬಂಧವಾದ ವಿಷವು ಸರ್ಪಕ್ಕೆ ಕೆಡಕನ್ನುಂಟುಮಾಡುವುದರಿಂದ ಆ ಹಾವು ತನ್ನ ಬಿಲವನ್ನೇ ಆಗಲಿ ಕಚ್ಚಿಕೊಂಡು ತನಗೆ ಉಂಟಾಗುವ ತೊಂದರೆಯನ್ನು ನಿವಾರಿಸಿಕೊಳ್ಳುವುದು

ಅನೇಕ ಮಾಂಸಾಹಾರಿ ಪ್ರಾಣಿಗಳು ತಾವು ತಿನ್ನುವ ಎಲ್ಲಾ ಪದಾರ್ಥಗಳನ್ನು ಜೀರ್ಣಿಸಿಕೊಳ್ಳುವುದಿಲ್ಲ ...

ಗ, ಪಿತ್ತಕೋಶ, ಮೇದೋಜೀರಕ, ಗುಲ್ಮ ಇತ್ಯಾದಿ ಕೆಲವು ಅಂಗಗಳನ್ನು ತಿನ್ನುವುದಿಲ್ಲ

ಜೇಬಳೇ ಹುಳುಗಳು, ರೇಷ್ಮೆ ಹುಳುಗಳು, ಈ ಜಾತಿಗೆ ಸೇರಿದ ಕೆಲವು ಹುಳುಗಳಿಗೆ ಆಗಾಗ್ಗೆ ಜ್ವರಬರುವುದುಂಟು ಆಗ ಅವುಗಳು ಆಹಾರವನ್ನು ತ್ಯಜಿಸಿ ಉಪವಾಸವಿದ್ದು ತಮಗೆ ಬಂದಿರುವ ಖಾಯಿಲೆಯನ್ನು ವಾಸಿಮಾಡಿಕೊಳ್ಳುವುವು.

ಕೆಲವು ಪ್ರಾಣಿಗಳಿಗೆ ಏಟುಬಿದ್ದು ರಕ್ತ ಸೋರುತ್ತಿದ್ದರೆ ತಣ್ಣೀರಿನಲ್ಲಿ ಕಾಲನ್ನು ಅದ್ದುತ್ತವೆ ಸ್ರವಿಸುವ ರಕ್ತವು ಇದರಿಂದ ನಿಂತು ಅನುಕೂಲವಾಗುತ್ತದೆ

ಹೀಗೆ ಅನೇಕ ಪ್ರಾಣಿಗಳು, ಬಿಸಿಲಿನಿಂದಲೂ, ನೀರಿನಿಂದಲೂ, ಹುಲ್ಲು, ಸೊಪ್ಪು, ಗಡ್ಡೆ ಮೊದಲಾದ ಔಷಧಿಗಳಿಂದಲೂ, ಕಲವುವೇಳೆ ನೆಕ್ಕುವುದೇ ಮೊದಲಾದ ಸ್ವಂತ ಚಿಕಿತ್ಸೆಯಿಂದಲೂ, ಉಪವಾಸಾದಿಗಳಿಂದಲೂ, ತಮಗೆ ಪ್ರಾಪ್ತಗಿರುವ ರೋಗಾದಿಗಳನ್ನು ನಿವಾರಿಸಿಕೊಳ್ಳುವುವು ಇವು ದೈವದತ್ತವಾದ ಮಾರ್ಗಗಳು

ಹೀಗಿರುವಲ್ಲಿ ಪಂಡಿತರನ್ನಪೇಕ್ಷಿಸುವ ಮನುಷ್ಯನು ಹೆಚ್ಚೋ? ಸ್ವಂತವಾಗಿ ಆರೋಗ್ಯವನ್ನು ಕಾಪಾಡಿಕೊಳ್ಳುವ ಪ್ರಾಣಿಗಳು ಹೆಚ್ಚೋ? ತೀರ್ಮಾನವು ವಾಚಕರದಾಗಿರಲಿ

ಯಳಂದೂರು ವರ್ತಮಾನ.

(ನಮ್ಮ ಸ್ವಂತ ಬಾತ್ಮೀದಾರರಿಂದ)

ಈ ತಾಲ್ಲೂಕಿನಲ್ಲಿ ಉತ್ತರ ಮಳೆ ಚೆನ್ನಾಗಿ ಆಯಿತು ಗೌರಿಹಬ್ಬದ ದಿನವೇ ಮಳೆ ಆಗಿ ಸುವರ್ಣಾವತಿಯಲ್ಲಿ ನೀರು ಬಂದಿರುತ್ತೆ. ಬಾಡುತ್ತಿದ್ದ ಪೈರುಗಳಿಗೆ ಸ್ವಲ್ಪ ಮಟ್ಟಿಗೆ ಅನುಕೂಲವಾಗಿದೆ ಈ ಕಸಬಾ ಮಂಡಲಿಗರು ಸೇರಿ ಮಳೆ ಬರಲು ಇಲ್ಲಿನ ಅನಾದಿ ದೇವರಾದ ಶ್ರೀಗೌರೀಶ್ವರಸ್ವಾಮಿಯವರಿಗೂ, ಪ್ರಸನ್ನ ಪಾರ್ವತಿ ದೇವಿಯವರಿಗೂ ಒಂದು ವಾರ ಅಭಿಷೇಕ, ಅರ್ಚನೆ ನಡೆಸಿ ಕಡೆಯ ದಿವಸ ಎಂದರೆ ಇದೇ 17 ನೇ ತಾರೀಖು ಸಹಸ್ರಕುಂಭಾಭಿಷೇಕ ನಡೆಸಿ ರಾತ್ರಿ ವಿಜೃಂಭಣೆಯಿಂದ ಉತ್ಸವವನ್ನು ಮಾಡಿಸಿದರು ಈ ಉತ್ಸವ ನಡೆಯುವಾಗಲೇ ಒಳ್ಳೆ ಮಳೆ ಬಂದು ಜನಗಳಿಗೆ ಆನಂದವನ್ನುಂಟುಮಾಡಿದ್ದು ವಿಶೇಷ ವಿಷಯ

ನಕ್ಕೀ ಕೆಲಸಗಾರರ ಮುಷ್ಕರ

ಬೆಂಗಳೂರಿನಲ್ಲಿ ನಕ್ಕೀ ಕೆಲಸಗಾರರು ಮುಷ್ಕರ ಹಿಡಿದಿರುತ್ತಾರೆ ಇವರು ದಿನಗೂಲಿಯನ್ನು ಹೆಚ್ಚು ಕೊಡಬೇಕೆಂದು ಕೇಳುತ್ತಿದ್ದಾರೆ ಈ ಕೆಲಸಗಾರರು ತಮ್ಮ ತಮ್ಮ ಕೆಲಸಗಳಿಗೆ ವಾಪಸ್ ಹೋಗುವುದಿಲ್ಲ ಕೂಲಿಗಾರರಿಗೂ ಮತ್ತು ಒಂದೆ ಮಾಲೀಗಾರರಿಗೂ ಇರುವ ಮನಸ್ತಾಪವನ್ನು ಹೋಗಲಾಡಿಸಲು ತಕ್ಕ ಪ್ರಯತ್ನಗಳು ನಡೆಯುತ್ತಿವೆ ಸರ್ಕಾರೀ ಕೈಗಾರಿಕೆ ಇಲಾಖೆಯ ಅಧಿಕಾರಿಗಳು ಮೇಲ್ಕಂಡ ಈ ಪ್ರಯತ್ನದಲ್ಲಿ ತೊಡಗಿರುವರು

ಸಾಧ್ವಿ

೨೧-೯-೩೬ ನೇ ಸೋಮವಾರ

ಹೊರಗಿನ ನಮ್ಮವರು

ಮೈಸೂರು ಒಂದು ದೇಶ, ಅಂದಮೇಲೆ ಅದರ ನಿವಾಸಿಗಳು ಎಲ್ಲಿದ್ದರೂ ಅದರ ಸರ್ಕಾರದ ರಕ್ಷಣೆಗೆ ಒಳಪಟ್ಟವರಷ್ಟೆ. ಸರ್ಕಾರದ ಕರ್ತವ್ಯವಿನ್ನೆ ಎಂದರೆ ಒಳದೇಶದ ನೆಮ್ಮದಿಯನ್ನು ಕಾಪಾಡುವುದೆಂದು ಮಾತ್ರವಲ್ಲ. ಹೊರಗಿರುವ ತನ್ನ ನಿವಾಸಿಗಳ ಹಕ್ಕುಬಾಧ್ಯತೆಗಳನ್ನೂ, ಆಸ್ತಿಪಾಸ್ತಿಗಳನ್ನೂ ಕಾಪಾಡುವುದೂ ಸಹ. ಇಂದು ನಮ್ಮನ್ನೂ, ನಮ್ಮ ಆದೇಶವನ್ನೂ ಮೆಚ್ಚುಗೆಯಿಂದ ಕೊಂಡಾಡುತ್ತಿರುವವರು ಬ್ರಿಟಿಷರು, ಬ್ರಿಟಿಷ್ ಇಂಡಿಯರು. ಅದಕ್ಕೆ ಕಾರಣವಿದೆ. ನಮ್ಮ ಸರ್ಕಾರದಲ್ಲಿಯೂ, ಸಂಸ್ಥಾನದಲ್ಲಿಯೂ ಇವರಿಗೆ ವಿಶೇಷ ಮನ್ನಣೆ ಇದೆ. ಸರ್ಕಾರವು ತನ್ನ ಜನರಿಗೆ ಉದ್ಯೋಗವನ್ನು ಕಲ್ಪಿಸುವುದಾದರೂ ಪ್ರಾಮುಖ್ಯವಂಬುದು ಎಲ್ಲರಿಗೂ ಈಚಿಗೆ ಮನಗಂಡ ಮಾತು. ಮೈಸೂರು ತೆರದ ಬಾಗಿಲಾದ ಮೇಲೆ ಮೈಸೂರು ತರುಣರಿಗೆ ಸಾಕಷ್ಟು ಮಟ್ಟಿಗಾದರೂ ಭಾರತ ಸ್ವರ್ಗದಲ್ಲಿ ಸ್ಥಾನವನ್ನೇಕೆ ಕಲ್ಪಿಸಬಾರದು? ನಮ್ಮ ಸರ್ಕಾರವು ಈ ಭಾಗದಲ್ಲಿ ಹೋರಾಡಬಾರದೇಕೆ? ಇಡೀ ಭಾರತದ ಒಂದಂಗವು ನಮ್ಮ ದೇಶವಾದಮೇಲೆ ನಮಗೆ ನಮ್ಮ ದೇಶದ ಮತ್ತು ಭರತಖಂಡದ ರಕ್ಷಣೆಯಲ್ಲಿ ತಕ್ಕಷ್ಟು ಭಾಗವಿರಬೇಡವೆ? ನಾಗರಿಕರಿಗೆ ನಾಚಿಗೇಡಾದ ಪೋಗದಿಯ ಅಂತ್ಯಕ್ರಿಯೆಗಾಗಿ ಮಾತ್ರವಲ್ಲ, ಸ್ವಸಂರಕ್ಷಣೆಯ ಹಕ್ಕಿಗೂ ಹೋರಾಡಿ ಸಾಮ್ರಾಜ್ಯ ಸರ್ಕಾರದೊಡನೆ ಜಗಳವಾಡುವಲ್ಲಿದೆ ನಾವು ಒಂದು ದೇಶವನ್ನಿಸಬಾರದು.

ನಮ್ಮವರು ಸಿಲೋನ್, ಮಲಯ ಸಂಸ್ಥಾನಗಳಿಗೆ ಕೂಲಿಗಾಗಿ ಹೋಗುತ್ತಿಲ್ಲವೆ? ಅಂತಹವರೆಷ್ಟುಮಂದಿ? ಅವರ ಸ್ಥಿತಿಗತಿಗಳೇನು? ಎಂಬುದೊಂದು ಪ್ರಶ್ನೆ. ಅದನ್ನು ಸರ್ಕಾರವು ವಿಮರ್ಶಿಸಬೇಕಾದುದಿಲ್ಲವೋ? ಬ್ರಿಟಿಷ್ ಇಂಡಿಯದಲ್ಲಿರುವ ಕಾಫೀ ತೋಟಗಳಿಗೆ ಹೋಗುತ್ತಿರುವ ನಮ್ಮ ಕೂಲಿಗಳ ಪಾಡೇನು? ನಿಬಂಧನೆಗಳಂತೆ ನಡೆಯುತ್ತಿರುವರೆ? ಮೈಸೂರಿನ ಹಕ್ಕುಬಾಧ್ಯತೆಗಳನ್ನೂ, ಮೇಲ್ಮೆಯನ್ನೂ ಉಳಿಸಲು ಸರ್ಕಾರವು ಹಿಂದೆಗೆಯುವವರೆ, ಮೈಸೂರಿನ ಸಾರ್ವಜನಿಕ ಸಭೆಗಳಲ್ಲಿ ನಿಸ್ವಾರ್ಥವಾಗಿ, ಪ್ರತ್ಯುತ್ತರಗಳ ಮೂಲಕ ಎಚ್ಚರಿಸುವ ಸದಸ್ಯರಾರೂ ಇಲ್ಲವೆ? ಇಲ್ಲವೆ? ಪ್ರತಿಧ್ವನಿ ಕೇಳಿಸುತ್ತಿದೆ.

ದಿವಂಗತ ಬೆಳಕವಾಡಿ ಶ್ರೀನಿವಾಸ ಯ್ಯಂಗಾರ್

ಮೈಸೂರು ಆಸ್ಥಾನ ಸಂಗೀತ ವಿದ್ವಾಂಸರಾಗಿದ್ದ ಶ್ರೀ॥ ಬೆಳಕವಾಡಿ ಶ್ರೀನಿವಾಸಯ್ಯಂಗಾರ್ಯರವರು ಕಳೆದ ಗುರುವಾರ ಬೆಳಗಿನಜಾವದಲ್ಲಿ ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರು ಒಂದೆರಡು ವರ್ಷಗಳಿಂದ ಗಂಟಲು ಬೇನೆಯಿಂದ ನರಳುತ್ತಿದ್ದರು. ಸಂಗೀತ ಹಾಡುವುದಕ್ಕೇ ಆಗುತ್ತಿರಲಿಲ್ಲ. ಈಚೆಗೆ ಕ್ಯಾನ್ಸರೋಗವುಂಟಾಗಿ ಅದು ಉಲ್ಬಣಿಸಿತು. ಇವರಿಗೆ ಇನ್ನೂ ಐವತ್ತು ವರ್ಷ ವಯಸ್ಸು ಮಾತ್ರವಾಗಿತ್ತು. ದೊಡ್ಡ ಕುಟುಂಬಿಗಳು. ಘನವಿದ್ವಾಂಸರು. ದೇಶ ದೇಶಗಳಲ್ಲೆಲ್ಲಾ ಕೀರ್ತಿಯನ್ನೂ ಬಹುಮಾನವನ್ನೂ ಪಡೆದಿದ್ದರು. ಅನೇಕ ಶಿಷ್ಯರನ್ನು ತಯಾರು ಮಾಡಿರುವರು. ಇವರ ಮರಣದಿಂದ ಸಂಗೀತ ಕಲೆಗೆ ಅಪಾರ ನಷ್ಟವುಂಟಾಗಿದೆ. ಅವರ ಬಂಧುವರ್ಗದವರಿಗೆ ನಮ್ಮ ಸಮಾಧಾನವನ್ನು ಸಲ್ಲಿಸುತ್ತೇವೆ.

ಗ್ರಂಥ ಸ್ವೀಕಾರ.

ಸಹಕಾರ ಸಮಿತಿಯ ವರದಿ.—ಮೈಸೂರು ಸರ್ಕಾರದವರು ಸಂಸ್ಥಾನದ ಸಹಕಾರ ಸಂಘಗಳ ಕಾರ್ಯ ಕಲಾಪಗಳನ್ನೂ ಸಹಕಾರ ಚಳವಳಿಯ ಪರಿಸ್ಥಿತಿಯನ್ನೂ ಪರಿಶೀಲಿಸಿ ವರದಿಯನ್ನು ಕೊಡಲು ದಿವಾನ್ ಬಹದ್ದೂರ್ ಕೆ. ಎಸ್. ಚಂದ್ರಶೇಖರಯ್ಯನವರ ಅಧ್ಯಕ್ಷತೆಯಲ್ಲಿ ಒಂದು ಸಮಿತಿಯನ್ನು ನಿರ್ಮಿಸಿದ್ದರಷ್ಟೆ. ಆ ಸಮಿತಿಯವರು ಒಪ್ಪಿಸಿರುವ ವರದಿಯ ಒಂದು ಪ್ರತಿಯನ್ನು ನಾವು ಕೃತಜ್ಞತೆಯಿಂದ ಸ್ವೀಕರಿಸಿದ್ದೇವೆ. ಇದರ ಬೆಲೆ 13 ಆಣೆ.

ಆಯುರ್ವೇದ ಪಂಡಿತರ ಕೈಪಿಡಿ.—ಕರ್ನಾಟಕ ಆಯುರ್ವೇದ ಪಂಡಿತರ ಕೈಪಿಡಿಯ ಪುಸ್ತಕವು ಎರಡನೇ ಸಾರಿ ಮುದ್ರಿಸಲ್ಪಟ್ಟಿದೆ. ಇದರ ಒಂದು ಪ್ರತಿಯು ನಮ್ಮ ಹಸ್ತಗತವಾಗಿದೆ. ಇದನ್ನು ಅಖಿಲ ಕರ್ನಾಟಕ ಆಯುರ್ವೇದ ಮಂಡಲದ ಕಾರ್ಯದರ್ಶಿಗಳಾದ ಶ್ರೀ ಹಲಿಂಗೇಕರರು ಪ್ರಕಾರ ಕಡಿಸಿದ್ದಾರೆ. ಬೆಲೆ ಹನ್ನೆರಡಾಣೆ. ಇದರಲ್ಲಿ ಕರ್ನಾಟಕದಲ್ಲಿರುವ ಅನೇಕ ಆಯುರ್ವೇದ ವೈದ್ಯರುಗಳ ಹೆಸರುಗಳೂ, ಚಿತ್ರ ಪಟಗಳೂ, ಪರಿಚಯಗಳೂ ಕೊಡಲ್ಪಟ್ಟಿವೆ.

ವಿಜಯರಾಘವಾಚಾರ್ಯರಿಗೆ ಸತ್ಕಾರ.

ಮೈಸೂರಿನ ಪತ್ರಿಕೋದ್ಯೋಗಿಗಳ ಸಂಘದವರು ಕಳೆದ ಗುರುವಾರ ಸಾಯಂಕಾಲ ಸರ್ ಟಿ. ವಿಜಯ ರಾಘವಾಚಾರ್ಯರನ್ನು ಬರಮಾಡಿಕೊಂಡು ಸತ್ಕರಿಸಿದರು. ಅನೇಕ ಜನ ದೊಡ್ಡ ಮನುಷ್ಯರು ಬಂದಿದ್ದರು. ಡೆಪ್ಯುಟಿ ಕಮೀಷನರ್ ಮ॥ ಟಿ. ಜಿ. ರಾಮಯ್ಯರವರೂ, ಸಿಟಿ ಮ್ಯಾಜಿಸ್ಟ್ರೇಟ್ ಮ॥ ಕೆ. ಗುರುದತ್ತರವರೂ, ರೇಷ್ಮೆ ಇಲಾಖೆಯ ಸೂಪರಿಂಟೆಂಡೆಂಟರಾದ ಶ್ರೀ॥ ಹೆಚ್. ಎಸ್. ಗೋವಿಂದರಾಯರೂ, ಶ್ರೀ॥ ಡಿ. ರಾಮಸ್ವಾಮಿಯವರೇ ಮುಂತಾದ ದೊಡ್ಡ ಮನುಷ್ಯರೂ ಬಂದಿದ್ದರು. ಉಪಾಹಾರವಾದನಂತರ ಸಂಘದ ಅಧ್ಯಕ್ಷರಾದ ಶ್ರೀ॥ ಜಿ. ಆರ್. ಜೋಸರವರು ಒಂದು ಸ್ವಾರಸ್ಯವಾದ ಭಾಷಣವನ್ನು ಮಾಡಿ ಪತ್ರಿಕೋದ್ಯಮದ ಮಹತ್ವವನ್ನು ವಿವರಿಸಿದರು. ಮೈಸೂರಿನ ಪತ್ರಿಕೋದ್ಯೋಗಿಗಳು ಹೇಗೆ ಪ್ರಜಾಸೇವೆ ಮಾಡುತ್ತಿರುವರೆಂಬುದನ್ನು ತಿಳಿಸಿದರು.

ಆಚಾರ್ಯರು ಪ್ರತ್ಯುತ್ತರವಾಗಿ ಬಹಳ ಉಪಯುಕ್ತವಾದ ಉಪನ್ಯಾಸವನ್ನು ಮಾಡಿದರು. ಈಗಿನ ಕಾಲದ ಎಲ್ಲಾ ಪ್ರಮುಖ ರಾಜನೀತಿಜ್ಞರೂ ಪತ್ರಿಕಾ ಚಾಲಕರಿಗೆ ಉಚಿತವಾದ ಮನ್ನಣೆಯನ್ನು ಕೊಟ್ಟಿರುವರೆಂದೂ ಅದರಿಂದಲೇ ಅವರ ಕಾರ್ಯವು ಸುಲಲಿತವಾಗಿ ನಡೆಯುತ್ತಿದೆಯೆಂದೂ ಹೇಳಿದರು. ಹಿಟ್ಲರ್ ಮತ್ತು ಮುಸ್ಸೋಲಿನಿಯವರೇ ಇದಕ್ಕೆ ಉದಾಹರಣೆಯೆಂದು ಸೂಚಿಸಿದರು. ಅಧಿಕಾರಿಗಳು ಪತ್ರಿಕಾ ಚಾಲಕರ ಸಹಾಯವನ್ನು ಪಡೆದುಕೊಳ್ಳಬೇಕೆಂದೂ ಅಭಿಪ್ರಾಯಪಟ್ಟರು.

ಅಭಿನಂದನೀಯ ಉತ್ಸಾಹ

ಬೆಂಗಳೂರಿನ ಗಣಪತಿ ಅಧ್ಯಾಯದ ತ್ರಿಮೂರ್ತಿಗಳಲ್ಲೊಬ್ಬರಾದ ಶ್ರೀ॥ ಎಚ್. ವಿ. ಸುಬ್ರಹ್ಮಣ್ಯಂರವರ ಉತ್ಸಾಹವು ಅಭಿನಂದನೀಯವಾಗಿದೆ. ಯಾರು ಏನೇ ಹೇಳಲಿ, ತಮಗೆ ಸರಿಯೆಂದು ತೋರಿದುದನ್ನು ನಿರ್ಲಕ್ಷ್ಯದಿಂದ ಮಾಡುವವರಲ್ಲಿ ಇವರೊಬ್ಬರು. ಕಾಂಗ್ರೆಸ್ ಸಭೆಯ ಪರವಾಗಿ ಸ್ವರಾಜ್ಯ ಪಾರ್ಟಿಯನ್ನು ಇವರು ನಿರ್ಮಿಸಿರುವರು. ಬ್ರಿಟಿಷ್ ಇಂಡಿಯಾದಂತೆಯೇ ಇಲ್ಲಿಯೂ ಶಾಸನಸಭೆ ಮತ್ತು ಸ್ಥಳೀಯ ಸಂಸ್ಥೆಗಳ ಪ್ರವೇಶ ಕಾರ್ಯಕ್ರಮವನ್ನು ಕೈಗೊಳ್ಳಬೇಕೆಂದಿರುವರು. ಪಂಡಿತ ಜವಾಹರರಿಗೆ ಆಹ್ವಾನವನ್ನು ಕಳುಹಿಸಿರುವರು.

ಗ್ರಂಥ ರಚನೆಗೆ ಬಹುಮಾನ

'ಭರತ ಖಂಡದಲ್ಲಿ ಸಹಕಾರ ವ್ಯಾಪಾರ' ಎಂಬ ವಿಷಯವಾಗಿ ಉತ್ತಮವಾದ ಗ್ರಂಥವನ್ನು ಬರೆದು ಡಿಸೆಂಬರ್ ಒಂದನೇ ತಾ॥ ಯೊಳಗೆ ರಿಜಿಸ್ಟ್ರಾರವರಿಗೆ ಕಳುಹಿಸಿ ಕೊಟ್ಟವರಿಗೆ ವಿಶ್ವವಿದ್ಯಾಲಯದವರು ಡಿ. ಆರ್. ಪ್ಪುರಾಯರ ನಾಮಾಂಕಿತ ಬಹುಮಾನ ನಿಧಿಯಿಂದ ಪದ್ಧತಿ ಪ್ರಕಾರ ಐವತ್ತು ರೂ ಕೊಡುವುದಾಗಿ ಪ್ರಕಟಿಸಿರುತ್ತಾರೆ.

ಉತ್ತರ ದೇಶದ ಯಾತ್ರಾರ್ಥಿಗಳಿಗೆ ಸಲಹೆ.

ಪ್ರಯಾಗ, ಕಾಶಿ, ಗಯಾ, ಹರಿದ್ವಾರ ಮುಂತಾದ ಕಡೆಗಳಿಗೆ ಯಾತ್ರೆಗೆ ಹೋಗುವವರು ನೆನಪಿಡಲು ಕೆಲವು ಸಲಹೆಗಳನ್ನು ಒಬ್ಬ ಯಾತ್ರಿಕರು ನಮಗೆ ತಿಳಿಸಿರುತ್ತಾರೆ. ಇವರು ಈಚೆಗೆ ಆ ಪ್ರದೇಶಗಳಲ್ಲಿ ಸಂಚರಿಸಿದಿರುತ್ತಾರೆ.

ಶ್ರೀ ಕಾಶಿ ಕ್ಷೇತ್ರದಲ್ಲಿ ಹನುಮಾನ್ ಘಟ್ಟದಲ್ಲಿ ದೊಡ್ಡ ಬಾಪು ಆಚಾರ್ಯರೆಂಬುವರು ಬಹುಕಾಲದಿಂದ ಇಲ್ಲಿನ ಯಾತ್ರಿಗಳಿಗೆ ಸಹಾಯ ಮಾಡುತ್ತಿದ್ದಾರೆ. ಮೈಸೂರು ಮಹಾರಾಜರ ಛತ್ರದ ಪಾರುಪತ್ತೇದಾರ್ ವೇ॥ ಬೋಧಾಯನ ರಾಮಾಚಾರ್ಯರು ಮೈಸೂರು ಸ್ಥಳದವರು. ಅವರಿಂದಲೂ ನಮ್ಮ ದೇಶದ ಜನರಿಗೆ ಉಪಕಾರವಾಗುತ್ತಿದೆ. ಅವರು ಮುಂದಾಗಿ ತಿಳಿಸಿದರೆ ಬೇಕಾದ ಅನುಕೂಲವನ್ನು ಮಾಡಿಕೊಡುವರು. ಅವರು ಕನ್ನಡಿಗರು. ಆದ್ದರಿಂದ ಭಾಷಾ ಸಂಬಂಧದ ಅನಾನುಕೂಲವಿರುವುದಿಲ್ಲ. ಪ್ರಯಾಗ, ಗಯಾ ಮುಂತಾದ ಕ್ಷೇತ್ರಗಳಲ್ಲೂ ತಕ್ಕ ಸೌಕರ್ಯವನ್ನು ಮಾಡಿಕೊಡುತ್ತಾರೆ. ಹರಿದ್ವಾರದಲ್ಲಿ ಮೈ ರು. ನಂಜುಂಡಶಾಸ್ತ್ರಿಗಳು ಮೈಸೂರು ಕಡೆಯವರಿಗೆ ಬಹಳ ಅನುಕೂಲವಾಗಿದ್ದಾರೆ. ಇವರೆಲ್ಲರ ಉಪಕಾರವನ್ನು ಯಾತ್ರಿಕರವರ ಬರೆಯಲಿರುವ ಪುಸ್ತಕದಲ್ಲಿ ... ಪದಿಂದ ಬರೆದಿರುತ್ತಾರೆ. ಇಂತಹ ಸ್ಥಳಗಳಲ್ಲಿ ಅಪರಿಚಿತರು ತುಂಬಾ ತೊಂದರೆಗೆ ಬೀಳುವ ಸಂಭವವಿದೆ. ಅದಕ್ಕಾಗಿ ಸಹಾಯಾಪೇಕ್ಷಿಗಳು ಇವರುಗಳಿಗೆ ಮುಂದಾಗಿ ಬರೆದು ಅನುಕೂಲಗಳನ್ನು ಕಲ್ಪಿಸಿಕೊಳ್ಳಬೇಕು. ಹಾಗೆ ಮಾಡದಿದ್ದಲ್ಲಿ ... ಡಾಗಳ ಕೋಟಲೆ ತಪ್ಪುತ್ತೆ ... ಮತ್ತು ಸಾಮಾನುಗಳನ್ನು ಅಜಾಗರೂಕತೆಯಿಂದ ಕಳೆದುಕೊಂಡು ಗುಪ್ತ ... ತೊಂದರೆಯೂ ... ವಂತೆ ಯಾತ್ರಿಕರು ಜಾಗರೂಕತೆಯಿಂದಿರಬೇಕು. ದೇಶಭಾಷೆ ... ವವರು ಜೊತೆಯಲ್ಲಿರುವುದು ಆವಶ್ಯಕ.

ಕಾಲಗತಿ

ಯಾವ ಕಾಂಗ್ರೆಸ್ ಮಹಾಸಭೆಯ ಕಾರ್ಯ ಕಲಾಪಗಳನ್ನು ಒಂದು ಕಾಲದಲ್ಲಿ ಸರ್ಕಾರದವರು ಪ್ರತಿಬಂಧಿಸಿದ್ದರೋ ಆ ಸಭೆಯೊಡನೆ ಈಗ ಅವರು ಬಹಳ ... ವಂದದೂ ಸಹಕರಿಸುತ್ತಿರುವರು ... ಪ್ರದೇಶದಲ್ಲಿ ಈ ಸಾರಿ ನಡೆಯುವ ಕಾಂಗ್ರೆಸ್ ಅಧಿವೇಶನಕ್ಕೆ ವಿಶಾಲವಾದ ಸ್ಥಳವನ್ನು ಕೊಟ್ಟಿರುವರು. ಕಾಂಗ್ರೆಸ್ಸಿನವರ ... ರಸ್ತೆ ನಿರ್ಮಾಣೀಕರಣಗಳ ವ್ಯವಸ್ಥೆ ... ಮಾಡಿಕೊಳ್ಳುವೆವೆಂದರೂ ... ಕೈಹಚ್ಚಿರುವರು. ಇಂಜನಿಯರ ... ಕಳುಹಿಸಿರುವರು. ಇತರ ... ದ್ವಾರ ಕಾರ್ಯವನ್ನಾರಂಭಿಸಿದ ... ಮೂ ಒಂದು ಅನುಕೂಲ ಸ್ಪರ್ಧೆ

ವಿಸೂಚಿಕಾ (ಕಾಲರಾ)

ಲೇಖಕರು—ಭಿಷಗಾಚಾರ್ಯ, ಆಯುರ್ವೇದ ವಿಶಾರದ,
ಪಂಡಿತ ತಾರಾನಾಥರು

ಈ ರೋಗವು ಕಾಲರಾ (Cholera) ಎಂಬ ಹೆಸರಿನಿಂದ ಈಗ ಜನ ಸಾಮಾನ್ಯಕ್ಕೆ ತಿಳಿದಿದೆ. ಕೊಲೆರಾ ಎಂಬುದು ಇಂಗ್ಲಿಷ್ ಶಬ್ದ. ಇದು ಅತಿಸಾರಗಳಲ್ಲಿ ವಿಷಮ ಕಠಿಣವಾದುದು. ಅತಿವಿರೋಚನ ಮಾತ್ರವೇ ಅಲ್ಲದೆ ವಮನವೂ ಇದರಲ್ಲಿ ಕಾಣಿಸುವುದರಿಂದ ಇದೊಂದು ಬಹಳ ಭಯಂಕರವಾದ ರೋಗ.

ಲಕ್ಷಣಗಳು.—ಇದು ಸಾಮಾನ್ಯವಾಗಿ ಸಾಂಕ್ರಾಮಿಕವಾಗಿ ಬರುತ್ತದೆ. ಕೆಲವು ದಿನಗಳೊಳಗಾಗಿಯೇ ನೂರಾರು ಮಂದಿಯನ್ನು ಹಿಡಿದುಕೊಂಡು ನಾಶಗೊಳಿಸುತ್ತದೆ. ಒಬ್ಬ ರೋಗಿಯಿಂದ ಇನ್ನೊಬ್ಬ ಆರೋಗ್ಯವುಳ್ಳವನಿಗೆ ಸೇರುತ್ತದೆ. ಒಬ್ಬ ರೋಗಿಯಿಂದ ಇನ್ನೊಬ್ಬ ಆರೋಗ್ಯವಂತನಿಗೆ ಸೇರುತ್ತ ಹಬ್ಬುತ್ತ ಹೋಗುವ ಮಾರಿ ಇದು. ಮೊದಲು ಯಾವ ಬಾಧೆಯೂ ತೋರಿಬರದಂತೆ ಬೇಧಿಗಳಾಗತೊಡಗುವವು. ಈ ಅತಿಸಾರವು ಸ್ವಲ್ಪ ಹೊತ್ತು ನಡೆಯಿತೋ, ಕೂಡಲೇ ಶರೀರಬಲದ ಕ್ಷಯಕ್ಕೆ ಆರಂಭ. ತಲೆತಿರುಗುವುದು, ಕೈಕಾಲುಗಳು ನಡುಗುವುದು, ಸೆಳೆಯುವುದು, ಕಮಳೆಲ್ಲ ಚಳುಕು ಇವೆಲ್ಲ ಒಂದೊಂದಾಗಿ ಉಂಟಾಗುತ್ತವೆ.

ಮಲವು ನೀರು ನೀರಾಗಿ ಗಂಜಿನೀರಿನಂತೆ ಬಿಳುಪಾಗಿ ಬಹಳವಾಗಿ ಹೋಗುವುದು. ಒಮ್ಮೊಮ್ಮೆ ಅದಕ್ಕೆ ರಕ್ತವರ್ಣವೂ ಉಂಟು. ವಾಂತಿಗಳಾಗುವವು, ಹೊಟ್ಟೆಯುರಿ, ಮೈಯೆಲ್ಲ ತಣ್ಣಗಾಗಿರುವುದು, ಒದ್ದೆಯಾಗಿರುವುದು, ಹೊಟ್ಟೆ ಬಟ್ಟೆಯಿಂದ ಸುತ್ತಿದಂತಾಗುವುದು. ತುಟಿ, ನಾಲಿಗೆಗಳು ತಣ್ಣಗಿರುವವು. ಕಪೋಲಗಳಿಗೆ ತಲೆನೋವು, ಎದೆನೋವು, ನಡುಕವೂ ಉಂಟು. ಬಾಯಾರಿಕೆ ಬಹಳ. ಶ್ವಾಸೋಚ್ಛ್ವಾಸಗಳಲ್ಲಿ ಒಮ್ಮೊಮ್ಮೆ ಕಷ್ಟ. ಆಪಾದ ಮಸ್ತಕ ವಿಶೋಷದ ಹೇಳಲಾರದ ಸಂಕಟ. ಮೂತ್ರ ಹೋಗದೆ ಇರುವುದು, ಹೋದರೆ ಸ್ವಲ್ಪಸ್ವಲ್ಪ ಉರಿಯಾಗಿ ಹೋಗುವುದು. ಮೈ ನೀಲಿವರ್ಣ ಬರುತ್ತ ಹೋಗುವುದು. ಮೂಗು ಸೊರಗಿ, ಕಣ್ಣುಗಳು ಕುಳಿಗಿಳಿದು, ಮುಖ ಭಯಂಕರವಾಗಿ ತೋರುವುದು. ಬಾಯಿಯಿಂದ ಒಂದು ವಿಲಕ್ಷಣವಾದ ವಾಸನೆ. ಮತ್ತಿಂದ ಎಲ್ಲ ಶಕ್ತಿಗಳೂ ಕುಸಿದು ಮರಣ ಬರುವುದು.

ಈ ಲಕ್ಷಣಗಳೆಲ್ಲ ಒಂದರ ಮೇಲೊಂದಾಗಿ ಬೇಗನೆ ಬಂದುಬಿಡುವುವು. ವಿರೇಚನಗಳು ಮೊದಲಾದ ಎರಡರಿಂದ ಹತ್ತು ಗಂಟೆಗಳೊಳಗೆ ರೋಗಿಗಳು ಸಾಯುವುದನ್ನು ಎಷ್ಟೋ ಸಲ ನೋಡಿದ್ದೇವೆ.

ಕಾರಣಗಳು—ಬಡಬಗ್ಗರಲ್ಲಿ ಇದು ಬಹು ಶೀಘ್ರವಾಗಿಯೂ, ತೀಕ್ಷ್ಣವಾಗಿಯೂ ಹಬ್ಬುತ್ತದೆಂದು ಎಲ್ಲ ವೈದ್ಯರ ಮತ. ಬಹುಮಂದಿ ಒಂದೇಕಡೆ ಗುಂಪುಗುಂಪಾಗಿರುವುದು, ಮನೆಯ ನೆರೆಹೊರೆಯಲ್ಲಿ ತುಂಬಿರುವುದು, ಅಸಹ್ಯ ಗಲೀಜಾಚರಣೆಗಳು, ಅತಿಭೋಜನ, ಉಪವಾಸ, ದುಷ್ಟಭೋಜನ, ಇವೆಲ್ಲಾ ರೋಗಕ್ಕೆ ಅನುಕೂಲ. ಕುಡಿಯುವ ನೀರಿನ ಅಶುದ್ಧತೆಯು ಈ ರೋಗಕ್ಕೆ ಮುಖ್ಯ ಕಾರಣವೆಂದು ಪಾಶ್ಚಿಮಾತ್ಯ ವೈದ್ಯವಿಶಾರದರ ಮತ. ಇದಕ್ಕೆ ತಕ್ಕ ಆಧಾರವುಂಟು. ಏಕೆಂದರೆ ಕುಡಿಯುವ ನೀರನ್ನೂ ವಾಸಸ್ಥಳವನ್ನೂ ಹೊರಗೂ ಒಳಗೂ ಸ್ವಚ್ಛಗೊಳಿಸುವದರಿಂದ ಈ ರೋಗಕ್ಕೆ ತಡೆಯಾಗುತ್ತದೆಂಬುದು ಅನುಭವದ ಮಾತು. ರೋಗಕ್ಕೆ ಮುಖ್ಯವಾದ ಕಾರಣಗಳನ್ನು ತಿಳಿದುಕೊಳ್ಳುವುದೇ ಒಂದು ರೋಗವನ್ನೂ, ಅದರ ಲಕ್ಷಣಗಳನ್ನೂ ನಿವಾರಿಸಲೆತ್ನಿಸುವುದು ವಿವೇಕದ ಚಿಹ್ನೆ ವಲ್ಲ.

ಆಯುರ್ವೇದದ ದೋಷದೂಷ್ಯಗಳ ದೃಷ್ಟಿಯಿಂದಲೂ ಸ್ವಲ್ಪ ನೋಡಿಕೊಳ್ಳುವುದು ಅವಶ್ಯ. ವಾತವು ಬಹಳ ಪ್ರಕುಪಿತವಾಗಿ ಎಲ್ಲಾ ಅವಯವಗಳಲ್ಲೂ ಸೂಜಿ ಚುಚ್ಚಿದಂತಾಗಿ ನಾನಾವಿಧ ವೇದನೆಗಳು ಯಾವ ಅಜೀರ್ಣದಿಂದಾಗುವವೋ ಅಂಥಾ ಅಜೀರ್ಣಕ್ಕೆ ವಿಸೂಚೀ ಎನ್ನುತ್ತಾರೆ. ಆ ಅಜೀರ್ಣದಿಂದ ಮೇಲಿಂದಲೂ ಕೆಳಗಿನಿಂದಲೂ ವಮನ ವಿರೇಚನವಾಗುವದಕ್ಕೆ ವಿಸೂಚೀ ಎನ್ನಬೇಕೆಂಬುದೇ ಇದರ ತಾತ್ಪರ್ಯವು.

ಪಾಶ್ಚಿಮಾತ್ಯ ಪದ್ಧತಿಗೆ ಇದೊಂದು ಸ್ವತಂತ್ರ ರೋಗ. ಆಯುರ್ವೇದಕ್ಕೆ ಇದು ಅಜೀರ್ಣಾತಿಸಾರದ ಒಂದು ಕಠಿಣ ರೂಪ.

ಎಚ್ಚರಿಕೆಯ ಮಾತುಗಳು—ಕುಡಿಯುವ ನೀರನ್ನು ಒನ್ನು ಕದಿಸಿ ಆಮೇಲೆ ಆರಿಸಿ ಕುಡಿಯಬೇಕು. ತಾವು ಇರುವ ಜಾಗಗಳನ್ನೂ ನೆರೆಹೊರೆಯವನ್ನೂ ಸ್ವಚ್ಛವಾಗಿಡಬೇಕು. ಅಲ್ಲಲ್ಲಿ ಬಿಸಿಲು, ಗಾಳಿಯ ಸಂಚಾರಕ್ಕೆ ಸಾಕಷ್ಟು ಅವಕಾಶವಿರಬೇಕು.

ಮೈಗೆ ಸಂಡಿ ಹತ್ತದಂತೆ ಮೈ ಬಟ್ಟೆಗಳು ಒದ್ದೆಯಾಗಿರದಂತೆ ನೋಡಿಕೊಳ್ಳಬೇಕು. ಆಟಪಾಠಗಳನಂತರ ಮೈ ಬಟ್ಟೆಗಳನ್ನು ತೆಗೆದುಹಾಕಿ ಸುರಿಯುವ ಬೆವರನ್ನು ತಟಕ್ಕನೆ ನಿಂದಿರಬಾರದು. ಮೈಗೆ ಹೆಚ್ಚು ಉಷ್ಣವಾಗದಂತೆಯೂ, ಛಳಿ ಹತ್ತದಂತೆಯೂ ಸುಖೋಷ್ಣ ಸ್ಥಿತಿಯಲ್ಲಿ ವಸ್ತ್ರ ವಾತಾವರಣಗಳನ್ನಿಟ್ಟಿರಬೇಕು.

ಆಹಾರ ನಿದ್ರೆ ಇತ್ಯಾದಿ ಕ್ರಮಗಳಲ್ಲಿ ತಪ್ಪಬಾರದು. ಹೊತ್ತಿಗೆ ಸರಿಯಾಗಿ ಇವೆಲ್ಲವನ್ನು ಮಿತಿಯಿಂದ, ಯೋಗ್ಯರೀತಿಯಿಂದ, ಭೋಗಿಸತಕ್ಕದ್ದು. ಚಿಂತೆಯನ್ನು ನಿರೋಧಿಸಬೇಕು. ನಿದ್ರೆ ಕೆಡಬಾರದು. ತಿರುತಿಂಡಿ ತ್ಯಾಜ್ಯ. ಪ್ರತಿಯೊಬ್ಬರೂ ತಮ್ಮ ತಮ್ಮ ಅನುಭವವನ್ನು ವಿಚಾರದಿ ಅದಕ್ಕೆ ಸರಿಯಾಗಿ ತಮಗೆ ಹಿತಕಾರಕವೆಂದು ತೋರಿದ ಆಹಾರವನ್ನೂ ಅದರ ಪ್ರಮಾಣವನ್ನೂ ಇಟ್ಟುಕೊಳ್ಳಬೇಕು.

ಹಸಿ ತರಕಾರಿಗಳ ಉಪಯೋಗ ಕೂಡದು. ಕಾಲರಾ ಇರುವ ಕಾಲದಲ್ಲಿ ಅವನ್ನು ಬೇಯಿಸಿಯೇ ತಿನ್ನಬೇಕು. ಮಾಗದ ಹಣ್ಣು, ಉಪ್ಪಿನಕಾಯಿಗಳು, ಹುಳಿ ಹಣ್ಣು ಹಂಪಲುಗಳು, ಶೈತ್ಯಕಾರಿ ಇವೆಲ್ಲಾ ಬಿಡುವುದು ಉತ್ತಮ.

ಈ ವಿಷಯಗಳಲ್ಲಿ ಎಚ್ಚರವಾಗಿರೋಣದರಿಂದ ಎಷ್ಟೋ ಅನಾಹುತಗಳನ್ನು ತಳ್ಳಬಹುದು.

ಪ್ರತಿಬಂಧಕ ಉಪಾಯಗಳು.—ಎಚ್ಚರಿಕೆಯ ಮಾತುಗಳ ಅನುಸರಣೆಯಲ್ಲಿಯೇ ಎಷ್ಟೋ ಪ್ರತಿಬಂಧಕ ಶಕ್ತಿಯಿದೆ ಎಂಬುದನ್ನು ಮರೆಯಬಾರದು. ಅದರಲ್ಲೊಂದು ವಿಶೇಷವಾದ ಸಂಗತಿ. ಮಕ್ಕಳು ಒಂದು ಕಟ್ಟು ಪದ ಸುಲಭಸಾಧ್ಯವಲ್ಲ. ಅದರಿಂದ ಅವುಗಳನ್ನು ಕಾಪಾಡುವಿಕ್ಕೆ ಸಾಧ್ಯವಾದ ಉಪಾಯಗಳನ್ನೆಲ್ಲಾ ಮಾಡಬೇಕು.

ಸಿಹಿಯಿಲ್ಲದಿರುವ ಯಾವದೊಂದು ಔಷಧಿಯನ್ನೂ ಚಿಕ್ಕ ಮಕ್ಕಳು ತೆಗೆದುಕೊಳ್ಳುವದು ಬಹುಕಷ್ಟ. ರುಚಿ ವಾಸನೆಗಳೇ ಇಲ್ಲದ ಔಷಧಗಳನ್ನು ಮಾತ್ರ ಅವು ತಿನ್ನುತ್ತವೆ. ಆದರೆ ಅಂಥಾ ಔಷದಗಳು ಹೋಮಿಯೋಪೆಥಿಕ್ ಪದ್ಧತಿಯಲ್ಲಿವೆಯೇ ಹೊರತು ಇನ್ನಾವುದರಲ್ಲಿಯೂ ಇಲ್ಲ. ಇನ್ನೊಂದು ಮಾತು—ಅವುಗಳ ಬೆಲೆಯೇ ಅಲ್ಲ. ಅವುಗಳಿಗೆ ಆ ಔಂತಸ್ತನ್ನು ತರುವ ಗುಣ. ಕಾಲರಾದ ಪ್ರತಿಬಂಧಕ, ಶಾಮಕ ಶಕ್ತಿಗಳಿಂದ ಈ ಔಷಧಗಳು ತಮ್ಮಲ್ಲಿರುವ ಎಲ್ಲಾ ಪಾಶ್ಚಿಮಾತ್ಯ ಚಿಕಿತ್ಸೆಗಳನ್ನೂ ಹಿಂದಕ್ಕೆ ಹಾಕಿಬಿಟ್ಟಿವೆ. ಮೂರನೆಯದೇನೆಂದರೆ—ಈ ಔಷಧಗಳನ್ನು ತೆಕ್ಕೊಳ್ಳುವ ಪ್ರಮಾಣವು ಬಹು ಚಿಕ್ಕದು. ನಾಲ್ಕನೆಯದು—ಅವುಗಳ ಬೆಲೆಯೂ ಕಮ್ಮಿ. ಈ ಎಲ್ಲಾ ವಿಷಯಗಳನ್ನೂ ಪರೀಕ್ಷಿಸಿ ನೋಡಿದರೆ ಈ ರೋಗದ ಪ್ರತಿಬಂಧಕೋಪಾಧ್ಯಾಯಗಳಲ್ಲಿ ಹೋಮಿಯೋಪತಿಗೆ ಸೇರಿದವುಗಳಿಗೆ, ಬುದ್ಧಿಯು ಅಗ್ರಸ್ಥಾನವನ್ನು ಕೊಡುತ್ತದೆ.

ವಿಸೂಚಿಕಾ ರೋಗವು ಸಂಚಾರಕ (Epidemic) ವಾಗಿರುವಾಗ ದಿನಕ್ಕೆ ಎರಡುಸಾರಿ ಎರಡು ಅಥವಾ ಮೂರು ಹನಿ 'ರುಬಿನೀಸ್ ಕೆಂಫರ್' (Rubinis Camphor) ಸ್ವಲ್ಪ ಸಕ್ಕರೆಯಲ್ಲಿ ಕಲಸಿ ತೆಕ್ಕೊಳ್ಳುವದು ಉತ್ತಮ. ಕೊಲೆರಾ ರೋಗಿಗಳ ಹತ್ತಿರವೇ ಆಗಲಿ, ಆ ರೋಗವು ಹುಟ್ಟಿರುವ ಜಾಗದಲ್ಲಿಯೇ ಆಗಲಿ ಹೆಚ್ಚಾಗಿ ಯಾರಿಗಾದರೂ ಇರಬೇಕಾಗಿ ಬಂದರೆ ಅಂಥವರು ದಿನಕ್ಕೆರಡುಸಾರಿ ಸ್ವಲ್ಪ ನೀರಿನೊಂದಿಗೆ ಕ್ಯೂಪ್ರಮ್ ಎಲಿಟಸ್ (Cuprum Alete) ತೆಕ್ಕೊಳ್ಳುವುದು ಉತ್ತಮ ಎಂದು ಪ್ರಸಿದ್ಧ ಡಾಕ್ಟರ್ ಜೆ. ಕೆ. ಕ್ಲಾರ್ಕರ ಮತ. ಪ್ರಸಿದ್ಧ ಡಾ. ರಡೋಕ್‌ರೂ ಅದನ್ನೇ ಅನುಮೋದಿಸುತ್ತಾರೆ.

(ಮುಂದುವರಿಯುವುದು)

ವಿದ್ಯುಚ್ಛಕ್ತಿಯ ಸಂಬಂಧವಾದ ಎಚ್ಚರಿಕೆಗಳು.

ಈ ಕೆಳಗೆ ಕಂಡ ಎಂಟು ನಿಬಂಧನೆಗಳನ್ನನುಸರಿಸುವುದರಿಂದ ಎಲ್ಲಾ ಕಾಲದಲ್ಲಿಯೂ ವಿದ್ಯುಚ್ಛಕ್ತಿಯನ್ನು ನಿರುಪಾಧಿಕವಾಗಿ ಉಪಯೋಗಿಸಿಕೊಳ್ಳಬಹುದು, ಎಂಬುದಾಗಿ ಪ್ರಕಟನ ಶಾಖಾಧಿಕಾರಿಗಳು ತಿಳಿಸುತ್ತಾರೆ—

ವಿದ್ಯುಚ್ಛಕ್ತಿಯಿಂದ ಜೀವವನ್ನು ದೂರವಾಗಿಡಬೇಕು.

ವಿದ್ಯುಚ್ಛಕ್ತಿಯು ಪ್ರವಹಿಸುತ್ತಿರುವ ಮೆತುವಾದ ತಂತಿಗಳನ್ನೊಳಗೊಂಡಿರುವ ರೇಷ್ಮೆಯ ಹುರಿಗಳನ್ನು ಉಪಯೋಗಿಸಬೇಕಾದ ಸಂದರ್ಭದಲ್ಲಿ ಎಚ್ಚರಿಕೆಯಿಂದ ವರ್ತಿಸುವುದು.

ಸಾಧ್ಯವಾಗಿಯೂ ಮತ್ತು ಸರಿಯಾದ ರೀತಿಯಲ್ಲಿಯೂ ಇರುವಂತೆ ತಂತಿಗಳನ್ನು ಜೋಡಿಸಿರುವದಕ್ಕೆ ಬದಲಾಗಿ ಮೆತುವಾದ ತಂತಿಗಳನ್ನೊಳಗೊಂಡ ಉದ್ದವಾದ ರೇಷ್ಮೆಯ ಹುರಿಗಳನ್ನು ಉಪಯೋಗಿಸಬಾರದು.

ಶಾಖವನ್ನುಂಟುಮಾಡಿಕೊಳ್ಳುವುದಕ್ಕಾಗಿ ಸ್ಥಾಪಿಸಿರುವ ವಿದ್ಯುಚ್ಛಕ್ತಿಯ ಯಂತ್ರೋಪಕರಣಗಳನ್ನು ಉಪಯೋಗಿಸದೆ ಬಿಟ್ಟಿರುವಾಗ ಅವುಗಳನ್ನು ಪ್ಲಗ್ಗಿಗೆ ಜೋಡಿಸಿರಕೂಡದು—ಹಾಗೆ ಜೋಡಿಸಿದ್ದಲ್ಲಿ ಅವುಗಳಿಂದ ಬೆಂಕಿ ಹತ್ತಿಕೊಳ್ಳುವ ಸಂಭವವುಂಟು.

ವಿದ್ಯುಚ್ಛಕ್ತಿಯ ಜೋಡಣೆಗಳನ್ನು ಅಥವಾ ಸಲಕರಣೆಗಳನ್ನು ಅವುಗಳ ಮೇಲಿರುವ ಧೂಳು ಮುಂತಾದ ಕಶ್ಮಲಗಳನ್ನು ತೆಗೆದು ನಿರ್ಮಲಗೊಳಿಸುವಾಗ ವಿದ್ಯುಚ್ಛಕ್ತಿಯ ಸಂಬಂಧವನ್ನು ತಡೆದು ನಿಲ್ಲಿಸುವಂತೆ ಸ್ವಿಚ್ಚನ್ನು ತೆಗೆಯತಕ್ಕದ್ದು (ಮುಚ್ಚತಕ್ಕದ್ದು).

ಮಕ್ಕಳು ವಿದ್ಯುಚ್ಛಕ್ತಿ ಇರುವ ಯಂತ್ರೋಪಕರಣಗಳ, ಒಳಗಡೆ ವಿದ್ಯುಚ್ಛಕ್ತಿಯ ಮೆತುವಾದ ತಂತಿಯನ್ನೊಳಗೊಂಡ ಹೂಗಳ ಮತ್ತು ದೀಪಗಳನ್ನು ಹತ್ತಿಸುವ ಪ್ಲಗ್ಗುಗಳ ತಂಟೆಗೆ ಹೋಗದಂತೆ ನೋಡಿಕೊಳ್ಳತಕ್ಕದು.

ಸರಿಯಾದ ರೀತಿಯಲ್ಲಿಲ್ಲದೆ ಇರುವ ವಿದ್ಯುಚ್ಛಕ್ತಿಯ ಯಂತ್ರೋಪಕರಣಗಳನ್ನೂ ಮತ್ತು ಸರಿಯಾಗಿ ಜೋಡಿಸದೆ ಇರುವ ಯಂತ್ರಗಳನ್ನೂ ಉಪಯೋಗಿಸಬಾರದು.

ಪ್ರತಿ ಮಳೆ ಚಳಿಗಾಲಗಳ ಪ್ರಾರಂಭದಲ್ಲಿಯೇ ನಿಮ್ಮ ವಿದ್ಯುಚ್ಛಕ್ತಿಯ ಯಂತ್ರೋಪಕರಣಗಳು ಮತ್ತು ಜೋಡಣೆಗಳು ಒಳ್ಳೆಯ ಸ್ಥಿತಿಯಲ್ಲಿ ಇವೆಯೋ ಹೇಗೆ ಎಂಬುದನ್ನು ಸರಿಯಾದ ಲೈಸೆನ್ಸು ಹೊಂದಿರುವ ವಿದ್ಯುಚ್ಛಕ್ತಿಯ ಕಂಟ್ರಾಕ್ಟರನಿಂದ ವರ್ಷಕ್ಕೆ ಒಂದುಸಾರಿಯಾದರೂ ಪರೀಕ್ಷೆ ಮಾಡಿಸುವುದು ಆವಶ್ಯಕ.

ರೆಡ್ಡಿಗಳು ಮುಸಲ್ಮಾನರಾದರೆ?

ಕ್ಷತ್ರಿಯ ಕುಲೋತ್ಪನ್ನರಾದ ರೆಡ್ಡಿಗಳಿಗೆ ಇಸ್ಲಾಮೀ ಧರ್ಮ ದೀಕ್ಷೆಯೇ?

ನಾವು ತಾ|| ೧೧—೯—೩೬ ಮತ್ತು ತಾ|| ೧೨ರಲ್ಲಿ ಮರಡೀಹಳ್ಳಿಯ ಪ್ರಾಂತ್ಯಗಳಲ್ಲಿ ಹಿಂದೂ ಧರ್ಮದ ಪ್ರಚಾರಕ್ಕಾಗಿ ಹೋಗಿದ್ದಾಗ, ಈಕಡೆಯ ಕೆಲವು ಜನ ರೆಡ್ಡೀ ಮುಖಂಡರೊಡನೆಯೂ, ಸನಾತನ ಧರ್ಮ ಪ್ರೇಮಿಗಳೊಡನೆಯೂ ಕೂಡಾ ಸಂಭಾಷಣೆ ಮಾಡುತ್ತಿದ್ದಾಗ, ಮರಡೀಹಳ್ಳಿಯ ಕೆಲವು ರೆಡ್ಡೀ ಕುಟುಂಬಿಗಳೂ, ಬಾಗೇಪಲ್ಲಿಯಲ್ಲಿರುವ ರೆಡ್ಡೀ ಕುಟುಂಬಿಗಳಾದ್ಯಂತವೂ, ಬಸಪ್ಪನ ಪಾಳ್ಯಗಳಲ್ಲಿ ಕೆಲವು ಜನಗಳೂ, ತಾಳವಟ್ಟಿಯಲ್ಲಿ ಕೆಲವು ಜನ ರೆಡ್ಡಿಗಳೂ ಸಹ ಇಲ್ಲಿಗೆ ಸುಮಾರು 15 ವರ್ಷಗಳಿಂದಲೂ ಬಳ್ಳಾರಿ ಪ್ರಾಂತ್ಯದಿಂದ ಬಂದಿದ್ದ ಒಬ್ಬಾತನೊಬ್ಬ ಮಹಮ್ಮದೀಯರ ಕುಟ್ಟ ಉಪದೇಶಕ್ಕೆ ಗುರಿಯಾಗಿ ಹಿಂದೂ ಧರ್ಮಕ್ಕೆ ತಿಲಾಂಜಲಿಯನ್ನು ಕೊಟ್ಟು ಧರ್ಮ ಬಾಹಿರರಾಗಿರುತ್ತಾರೆಂದು ತಿಳಿಯಿತು. ಪರಿಸ್ಥಿತಿಯನ್ನು ಚೆನ್ನಾಗಿ ಪರಿಶೀಲಿಸಿದ್ದರಲ್ಲಿ ಇವರು ಅಂದರೆ ಧರ್ಮಚ್ಯುತರು ಪವಿತ್ರವಾದ ಗೋಮಯವನ್ನು ತ್ಯಾಜ್ಯ ಮಾಡಿ ಮ್ಲೇಂಛರಂತೆ ಕೆಂಪು ಮಣ್ಣನ್ನು ಉಪಯೋಗಿಸುವಿಕೆಯೂ, ಕ್ಷತ್ರಿಯರಾದ ಈ ರೆಡ್ಡಿಯವರಿಗೆ ಅನಾದಿ ಸಂಸಿದ್ಧವಾದ ಶ್ರವಣದಹನ ಸಂಸ್ಕಾರವನ್ನು ಬಿಟ್ಟು ಬಿಟ್ಟು ಖನನ ಸಂಸ್ಕಾರ ಮಾಡುವುದೂ, ಯವನನಾದ ಗುರುವಿನೊಂದಿಗೆ ಸಹಪಂಕ್ತಿ ಭೋಜನವನ್ನು ಮಾಡುವುದೂ, ವಿಗ್ರಹಾರಾಧನಾ ನಿರೋಧವೂ, ಇನ್ನೂ ಅನೇಕ ಹಿಂದೂ ಧರ್ಮ ಪದ್ಧತಿಗಳಿಗೆ ವಿರೋಧವಾದ ಆಚಾರ ವ್ಯವಹಾರಗಳನ್ನು ನಡೆಸುತ್ತಿರುವುದೂ ಸ್ಪಷ್ಟವಾಯಿತು. ಇನ್ನೊಂದು ಬಹು ಶೋಚನೀಯವಾದ ಸಂಗತಿಯು ಕೇಳಬಂದಿತು. ಏನೆಂದರೆ—ಉಭಯ ವಂಶಗಳನ್ನೂ ಪುನೀತ ಮಾಡತಕ್ಕ ಮುತ್ತೈದೆಯರಾದ ಮಹಿಳೆಯರು ಪವಿತ್ರವಾದ ಅರಸಿನ ಕುಂಕುಮಗಳಿಂದ ಶೋಭಿತವಾದ ತಮ್ಮ ಲಲಾಟ ಭಾಗವನ್ನು ಯವನರ ಪಾದಗಳ ಮೇಲಿಡುವಿಕೆಯೂ, ಅವನು ಸ್ನಾನಮಾಡಿದ ಶೇಷ ಜಲವನ್ನು ಸೇಚನೆ ಮಾಡುವುದೂ ಸಹಾ ಬಹು ಶೋಚನೀಯವಾಗಿರುತ್ತದೆ.

ಇಷ್ಟೆಲ್ಲಾ ಮಾಡಿಯೂ ಗುರು ಕಾಣಿಕೆ ಗೋಸ್ಕರವಾಗಿ ವಿಶೇಷ ದ್ರವ್ಯವನ್ನು ಸೆಳೆದುಕೊಂಡು ಹೋಗಿರತಕ್ಕ ಹಿಂದೂ ಧರ್ಮಕ್ಕೆ ವಿರೋಧವಾದ ಅವನ ಗ್ರಂಥಗಳನ್ನು ಪ್ರತಿನಿತ್ಯವೂ ಒದುತ್ತಾ ಇತರ ಹಿಂದೂಗಳನ್ನೂ ತಿರಸ್ಕಾರದಿಂದ ನಮ್ಮಂತೆಯೇ ಮಾಡಿಕೊಳ್ಳುತ್ತಾ ಕೆಲವು ಜನ ವೈಶ್ಯರನ್ನೂ, ವಿಶ್ವಕರ್ಮರನ್ನೂ, ವೀರಶೈವರನ್ನೂ ತಮ್ಮಂತೆಯೇ ಮಾಡಿಕೊಂಡಿದ್ದಾರೆ. ಇಷ್ಟೆಲ್ಲಾ ಆದಾಗ್ಯೂ, ಚಿತ್ರದುರ್ಗ ಡಿಸ್ಟ್ರಿಕ್ಟ್ ರೆಡ್ಡೀ ಜನ ಸಂಘದವರು ಇದರ ಕಡೆ ಗಮನವನ್ನೇ ಕೊಡದೆ ಇರುವುದು ಅತ್ಯಂತ ವಿಷಾದವನ್ನುಂಟು ಮಾಡುತ್ತದೆ. ಎಲ್ಲಿಯೋ ಹತ್ತಿ ಕೊಂಡಿರತಕ್ಕ ಅಧರ್ಮ ಬೆಂಕಿಯು ತಮಗೂ ವ್ಯಾಪಿಸುತ್ತದೆಂಬ ಅಂಶವನ್ನು ಸಂಘದವರ ಮನಸ್ಸಿಗೆ ತಟ್ಟಲಿಲ್ಲವೇಕೆ? ಇನ್ನಾದರೂ ಸಂಘದವರು ಈ ವಿಷಯವನ್ನು ಮನಸ್ಸಿಗೆ ಹಚ್ಚಿಕೊಂಡು ವೇಳ್ಯಂಬರಲ್ಲಿ ಧ್ವಂಸದ ಜನತೆಯ ಸ್ವಾಭಾವಿಕ ಧರ್ಮ ಚೇತನವನ್ನುಂಟುಮಾಡುತ್ತಾರೆಂದು ನಂಬಿರುತ್ತೇನೆ. ಈ ರೆಡ್ಡಿಗಳ ಕುಲ ಗುರುಗಳಾದ ಮುಷ್ಟೂರು ಪಾ|| ಬ್ರ|| ಶ್ರೀ ಕೃಷ್ಣಮಾಚಾರ್ಯರವರು ತಮ್ಮ ಅಮೋಘವಾದ ವಾಕ್ಚಾತುರ್ಯದಿಂದಲೂ ತಮ್ಮ ಗುರುಪಾದದ ಗೌರವದಿಂದಲೂ ಈ ದುರ್ಗತಿಯನ್ನು ಹೋಗಲಾಡಿಸಬೇಕು. ಇನ್ನೊಂದೆ ತಿಂಗಳಲ್ಲಿ ನಾವು ಈ ಪ್ರಾಂತ್ಯಕ್ಕೆ ಮತ್ತೆ ಬರುವಾಗ ಆಚಾರ್ಯರು ಸಹಾಯಕರಾಗಿ ಅಲ್ಲಲ್ಲಿ ತಿರುಗಿ ಜನಗಳಿಗೆ ಬೋಧೆಮಾಡಿ ಕೀರ್ತಿಯನ್ನು ಗಳಿಸಿ, ಸಂಘದವರೂ ಹೊಂದಬೇಕೆಂದು ಕೋರುತ್ತೇನೆ. ಇತರ ಹಿಂದುಗಳು ಕೂಡಾ ತಮ್ಮ ತಮ್ಮ ಧರ್ಮವನ್ನು ಉಳಿಸಿಕೊಂಡು ಹಳ್ಳಿಹಳ್ಳಿಗಳಲ್ಲಿ ಹಿಂದೂ ಮಹಾ ಸಭೆಗಳನ್ನು ಸ್ಥಾಪಿಸಿ ಹಿಂದೂ ಧರ್ಮದ ಪವಿತ್ರತೆಯನ್ನು ಕಾಪಾಡಿಕೊಳ್ಳುವುದು ಪ್ರತಿಯೊಬ್ಬ ಹಿಂದೂವಿನ ಕರ್ತವ್ಯವಾಗಿರುತ್ತದೆ. ಇದೇ ರೀತಿಯಾಗಿ ಹಿಂದೂ ಜನಾಂಗವು ಮಲಗಿರುತ್ತಾ ಬಂದರೆ ಒಂದೆರಡು ಶತಮಾನಗಳಲ್ಲಿ ಹಿಂದೂ ಧರ್ಮವು ನಾಶವಾಗುವುದರಲ್ಲಿ ಎಳ್ಳಷ್ಟೂ ಸಂದೇಹವಿಲ್ಲ.

ಎ ಕೇಶವಯ್ಯ.

ಭೋಗಾಪುರವು ಪ್ರಸಿದ್ಧಿಗೆ ಬರುತ್ತಿದೆ

ಚಾಮರಾಜನಗರದ ತಾಲ್ಲೂಕು ಭೋಗಾಪುರವು ಕ್ರೈಸ್ತ ಪಾದ್ರಿಗಳ ಮತ್ತು ಆದಿಕರ್ಣಾಟಕರ ವ್ಯವಹಾರದಿಂದ ಸಂಸ್ಥಾನದಲ್ಲೆಲ್ಲಾ ಪ್ರಸಿದ್ಧಿ ಪಡೆದಿದೆ. ಭಾವಿಯ ವ್ಯವಹಾರದಿಂದ ಸರ್ಕಾರದ ಸಂಪೂರ್ಣ ದೃಷ್ಟಿಯು ಭೋಗಾಪುರದ ಮೇಲೆ ಬಿದ್ದಿದೆ. ಹಿಂದೂಸ್ಥಾನಕ್ಕೆ ನಾಗರೀಕತೆ ಕಲಿಸಲು ಏಸುಸ್ವಾಮಿಯ ತತ್ವ ಪ್ರಚಾರ ಮಾಡಲು ಬಂದಿದ್ದೇವೆಂದು ಜಂಭ ಮಾಡಿಕೊಳ್ಳುವ ಪಾದ್ರಿಗಳ ನಡತೆಯು ಜನರಿಗೆ ಬೇಜಾರನ್ನುಂಟುಮಾಡುತ್ತಿದೆ. ಹಳ್ಳಿಹಳ್ಳಿಗಳಲ್ಲಿ ಶಾಂತಿಭಂಗವನ್ನು ಉಂಟುಮಾಡುತ್ತಿದೆ. ಉದಾಹರಣೆಗಾಗಿ ಭೋಗಾಪುರವನ್ನು ದೇಶದ ಮುಂದಿಟ್ಟಿದ್ದೇನೆ. ಸರ್ಕಾರದ ಮುಂದಿಟ್ಟಿದ್ದೇನೆ. ದೇಶ ಹಿರಿಯರ ಮುಂದಿಟ್ಟಿದ್ದೇನೆ. ಎಲ್ಲರೂ ನೋಡಲಿ. ನ್ಯಾಯಾನ್ಯಾಯಗಳನ್ನು ನಿರ್ಣಯಿಸಲಿ.

ಭೋಗಾಪುರದಲ್ಲಿ ವಿಚಾರಣೆ

ಭೋಗಾಪುರದ ಆದಿಕರ್ಣಾಟಕರ ಪ್ರಾರ್ಥನೆಯ ಪ್ರಕಾರ 4—9—36ನೇ ರಾತ್ರಿ ವಿಚಾರಣೆ ನಡೆಸಿ, ಅದರ ವಿವರಗಳನ್ನು ಈ ಕೆಳಗೆ ಕೊಟ್ಟಿದ್ದೇನೆ— ಭೋಗಾಪುರದಲ್ಲಿ ಜ್ಞಾನ ಶಿದ್ದಾ ಮೇಸ್ತ್ರಿ ಎಂಬೊಬ್ಬ ಹಣವುಳ್ಳವನಿದ್ದಾನೆ. ಆತನಲ್ಲಿ ಆದಿಕರ್ಣಾಟಕರ ಚಿಕ್ಕರಂಗಯ್ಯನೆಂಬುವನು 7 ಅಥವ 8 ವರ್ಷದ ಹಿಂದೆ 100 ರೂಪಾಯಿ ಸಾಲಮಾಡಿದ್ದಾನೆ. ಸಾಲ ತೀರಿಸಲು ಸಾಧ್ಯವಾಗಲಿಲ್ಲ. ಕೆಲವು ದಿವಸ ಬಡ್ಡಿಯನ್ನು ಕೊಟ್ಟನು. ಈಚೆಗೆ ಬಡ್ಡಿಯನ್ನು ಕೊಡಲು ಆಗಲಿಲ್ಲ. ಒತ್ತಾಯ ಜೋರಾಯಿತು. ಅದಕ್ಕಾಗಿ ಸುಮಾರು 10 ವರ್ಷದ ತನ್ನ ಮಗನಾದ ಮಾದನೆಂಬುವನನ್ನು ಜೀತಕ್ಕೆ ಮೇಸ್ತ್ರಿಯ ಮನೆಯಲ್ಲಿಟ್ಟಿದ್ದನು. ಆ ಊರಿನ ಆದಿಕರ್ಣಾಟಕರುಗಳಿಗೆ ಆ ಹುಡುಗನ ಮನೆಯವರು ದಾಸಯ್ಯನ ಒಕ್ಕಲು. ಈ ಸಾಲದ ನೆಪದಿಂದ ಈತನನ್ನು ಕ್ರೈಸ್ತಕುಲಕ್ಕೆ ಎಳೆಯುವ ಪ್ರಯತ್ನ ಸಾಮಾನ್ಯ ರೀತಿಯಿಂದ ಸಾಧ್ಯವಾಗಲಿಲ್ಲ. ಹಣ ಖರ್ಚು ಮಾಡಿಸುವ ಮಾರ್ಗ ಹುಡುಕಿದರು. ೭೫—೮—36ನೇ ಮಂಗಳವಾರ ಬೆಳಗ್ಗೆ ಸುಮಾರು 10 ಘಂಟೆಯ ಸಮಯದಲ್ಲಿ ಮೇಸ್ತ್ರಿಯ ಮನೆಯಲ್ಲಿ ಜೀತದ್ದ ಹುಡುಗನು ರೇಷ್ಮೆ ಹುಳ ಸಾಕುವ ತಟ್ಟೆಯನ್ನು ಸಾರಿಸುತ್ತಿದ್ದನು. ಸುಮಾರು 8 ವರ್ಷದ ಕ್ರೈಸ್ತರ ಭಕ್ತಯ್ಯನ ಮಗನು ಬಂದು ಸಾರಿಸುತ್ತಿದ್ದ ಹುಡುಗನಿಗೆ ನೀರೆರಚಿದನು. ಸರಿ! ಹುಡುಗ ಹುಡುಗರು ಜಗಳ ಮಾಡಿಕೊಳ್ಳುತ್ತಿದ್ದರು. ಗುರುಸ್ವಾಮಯ್ಯನೆಂಬ 40 ವರ್ಷದ ಕ್ರೈಸ್ತನು ಜುಟ್ಟನ್ನು ತೆಗೆದುಕೊಂಡು ಒಂದು ದಾಸಯ್ಯನ ಹುಡುಗನನ್ನು ಹೊಡೆದುಬಿಟ್ಟನು. ಜನರೆಲ್ಲಾ ಸೇರಿದರು. ಅವರವರನ್ನು ಬಿಡಿಸಿದಹಾಗೆ ಮಾತನಾಡಿಕೊಂಡು ಅವರವರ ಮನೆಗೆ ಸೇರಿದರು. ನಮ್ಮ ದೇಶದಲ್ಲಿ ಕಾಣುವ ಗುಡಿಗಳಲ್ಲಿ ಪ್ರಾಯಶಃ ಎಲ್ಲಾ ಗ್ರಾಮಗಳಲ್ಲಿಯೂ ಯಾರಾದರೂ ಜೋಡಿನಿಂದ ಹೊಡೆಸಿಕೊಂಡು ಬಂದರೆ ಆತನು ಜಾತಿಭ್ರಷ್ಟನೆಂದು ನಿರ್ಣಯಿಸುತ್ತಾರೆ. ಆತನಿಂದ ಸಮಾಜಕ್ಕೆ ಅವಮಾನವೆಂದು ಭಾವಿಸುತ್ತಾರೆ. ಅದಕ್ಕಾಗಿ ಜೋಡಿನಲ್ಲಿ ಹೊಡೆದವನಿಗೆ ಪುನಃ ಜೋಡಿನಲ್ಲಿ ಹೊಡೆದುಬಿಟ್ಟು ಬಂದರೆ ಆತನನ್ನು ಕ್ಷಮಿಸಿ ಜಾತಿಗೆ ಸೇರಿಸಿಕೊಳ್ಳುತ್ತಾರೆ. ಇಲ್ಲದಿದ್ದರೆ ನೂರಾರು ರೂಪಾಯಿಗಳನ್ನು ದಂಡ ಹಾಕಿ ಸಮಾಜಕ್ಕೆ ಒಂದು ಊಟ ತೆಗೆದುಕೊಳ್ಳುತ್ತಾರೆ. ಈಗ ಹುಡುಗನೂ ಆ ಕ್ರೈಸ್ತನಿಗೆ ಜೋಡಿನಲ್ಲಿ ಹೊಡೆಯಬೇಕು. ಇಲ್ಲದಿದ್ದರೆ ಸಮಾಜದ ಕಟ್ಟಿನಂತೆ ನಡೆಯಬೇಕೆಂಬ ಪದ್ಧತಿಗೆ ಬದ್ಧನಾಗಬೇಕು. ಈ ಸ್ಥಿತಿ ಬಂದಿದೆ.

ತೀರ್ಮಾನ.

ಆದಿಕರ್ಣಾಟಕ ಮಹಾಜನರೇ ಈ ಪದ್ಧತಿಯನ್ನು ನೀವುಗಳು ಜಾತಿ ತಲುವುದರಿಂದ ಪರಿಸ್ಥಿತಿಯು ವಿಷಮಿಸುತ್ತದೆ. ಅಲ್ಲದೆ ಆ ಪದ್ಧತಿಯು ಸರಿಯಲ್ಲ. ಅದು ಯಾವ ಮತಕ್ಕೂ ಗೌರವವನ್ನು ತರತಕ್ಕದ್ದಲ್ಲ. ಆ ಪದ್ಧತಿಯನ್ನು ಬಿಟ್ಟುಬಿಡಿರಿ. ನೀವುಗಳು ಉದಾರ ಮನಸ್ಕರಾಗಿ ಆ ಕ್ರೈಸ್ತನನ್ನು ಕ್ಷಮಿಸಿ ನಿಮ್ಮ ಹುಡುಗನನ್ನು ಜಾತಿಗೆ ಸೇರಿಸಿಕೊಳ್ಳಿರಿ. ಹೀಗೆ ಮಾಡಿದರೆ ದೇಶದಲ್ಲಿ ನಿಮ್ಮ ಕೀರ್ತಿಯು ಹೆಚ್ಚುವುದು. ನೀವುಗಳು ಗೌರವಸ್ಥರಾಗುವಿರಿ. ಈ ವಿಷಯವನ್ನು ಜನಗಳನ್ನೆಲ್ಲಾ ಮಹಾಜನರಿಗೂ, ಸರ್ಕಾರದ ಗಮನಕ್ಕೂ ತರುವ ಸಲುವಾಗಿ ಎಲ್ಲಾ ಪತ್ರಿಕೆಯವರಿಗೂ, ಉಪದೇಶಿಗಳ ಪಾತ್ರ ಕ್ರೈಸ್ತರುಗಳಿಗೆ ವಿವೇಕ ಕಲಿಸಲು ಸಹಾಯವಾಗಿ ಶ್ರೀ ಹಿರಿಯರಿಗೂ, ಬರೆಯುತ್ತೇನೆ. ನಿಮ್ಮ ಬರಹವನ್ನು ಕೊಟ್ಟು ಎಲ್ಲರ ಸ್ವಭಾವವೂ ಅಲೋಚಿಸುವರೆಂದು ತಿಳಿಸಿಕೊಟ್ಟಿದ್ದೇನೆ. ಆದರಂತೆ ಬಾಕಿ ಸಮ ಬರುತ್ತದೆ.

ತಗಡೂರು ರಾಮಚಂದ್ರರಾವ್

ಕನ್ನಡ ಆತ್ಮ ಪುರಾಣ.

ಇದು ಮುಮುಕ್ಷುಗಳ ಮುಖದರ್ಪಣ.

ಈ ಗ್ರಂಥವು ೧೮ ಅಧ್ಯಾಯಗಳುಳ್ಳದ್ದು. ಇದರಲ್ಲಿ ಐತರೇಯಾದಿ ೩೦ ಉಪನಿಷತ್ತುಗಳ ವಿಸ್ತಾರವಾದ ಅರ್ಥವಿರುವದು. ಇದು ಶ್ರೀ ಶಂಕರಾನಂದಮುನಿಗಳು ದೇವಭಾಷೆಯಲ್ಲಿ ತಮ್ಮ ಶಿಷ್ಯನಿಗೆ ಉಪದೇಶಿಸಿದ ಪರಮ ಅದ್ಭುತ ಪುರಾತನ ಗ್ರಂಥವಾಗಿರುವುದು. ಆತ್ಮವಿದ್ಯಾ ವಿಷಯದಲ್ಲಿ ಇದಕ್ಕೆ ಸಮಾನವಾದ ಗ್ರಂಥವು ಈ ಜಗತ್ತಿನಲ್ಲಿಯೇ ಇಲ್ಲವೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಈ ಗ್ರಂಥವು ಹಿಂದೀಭಾಷೆಯಲ್ಲಿದ್ದುಕೊಂಡು ಉತ್ತರದೇಶದವರೆಲ್ಲಾ ಬಹು ಪ್ರಸಿದ್ಧಿಗೊಂಡಿರುವದು. ನಮ್ಮ ದಕ್ಷಿಣ ಕರ್ಣಾಟಕದಲ್ಲಿ ಇದರ ನ್ಯೂನತೆಯಂ ನೋಡಿ ನನ್ನಿಂದ ಕನ್ನಡದಲ್ಲಿ ಭಾಷಾಂತರಮಾಡಲ್ಪಟ್ಟಿತು. ಇದನ್ನು ಎರಡು ವಿಭಾಗವಾಗಿ ವಿಂಗಡಿಸಿ ಎರಡು ಪುಸ್ತಕಗಳಾಗಿ ಮಾಡಬೇಕೆಂದು ಆಲೋಚಿಸಿ, ಆ ಪ್ರಕಾರ ೨ ಅಧ್ಯಾಯಗಳುಳ್ಳ ಈ ಮೊದಲನೇ ಭಾಗ ಮುದ್ರಿಸಿ ಬೈಂಡಿಂಗ್ ಸಹಾ ಕಟ್ಟಿಸಿ ತಯಾರ್ ಮಾಡಲ್ಪಟ್ಟಿರುವದು. ಇದರ ಕ್ರಯ ೨—೮—0 ರೂ ಇದನ್ನಪೇಕ್ಷಿಸುವವರು ೩ ರೂಪಾಯಿ ಮುಂಗಡ ಕಳುಹಿಸಬೇಕು. ಉಳಿದ ಹತ್ತು ಅಧ್ಯಾಯಗಳುಳ್ಳ ಎರಡನೇ ಭಾಗವು ಶೀಘ್ರದಲ್ಲಿಯೇ ತಯಾರಾಗುವದು. ಇದನ್ನಪೇಕ್ಷಿಸುವವರು ೩ ರೂಪಾಯಿಗಳನ್ನು ಅಡ್ವಾನ್ಸಾಗಿ ಮುಂಗಡ ಕಳುಹಿಸಿಕೊಟ್ಟಲ್ಲಿ ಪುಸ್ತಕವು ಶೀಘ್ರದಲ್ಲಿಯೇ ಮುದ್ರಿಸಿ ಬೈಂಡಿಂಗ್ ಸಹಾ ಕಟ್ಟಿಸಿ ಅವರವರ ವಿಳಾಸಕ್ಕೆ ಪುಸ್ತಕದ ಕ್ರಯದಲ್ಲಿ ಅಡ್ವಾನ್ಸ್ ವಜಾಮಾಡಿ ಉಳಿದ ಹಣಕ್ಕೆ ಬಾಕಿಯನ್ನು ವಿ. ಪಿ. ಮಾಡಲ್ಪಡುವದು. ಇದಲ್ಲದೆ ಗ್ರಂಥಕರ್ತರಿಂದ ಇನ್ನೂ ಅನೇಕ ವೇದಾಂತ ಗ್ರಂಥಗಳು ರಚಿಸಲ್ಪಟ್ಟು ಪ್ರಕಟಿಸಲು ಸಿದ್ಧವಾಗಿವೆ.

ಗ್ರಂಥಕರ್ತ:—ಶಿವಾನಂದ ಸುಬ್ರಹ್ಮಣ್ಯ (ವೇದಾಂತ ಸುಬ್ಬಯ್ಯ)
ಲಕ್ಷ್ಮೀವಿಲಾಸ ಅಗ್ರಹಾರ, ಮೈಸೂರು

ವಿಜಯನಗರ ಸಾಮ್ರಾಜ್ಯ

ಶಿವಮೂರ್ತಿಶಾಸ್ತ್ರಿಗಳ ಭಾಷಣ

ಸಂಗ್ರಾಹಕರು:—ಆರಾಧ್ಯ, ತುಮಕೂರು

ತುಮಕೂರು ಕರ್ನಾಟಕ ಸಂಘದ ... ತಾ॥ 8–9–1936 ನೇ ಬುಧವಾರ ... ಕಾಲ ತುಮಕೂರು ಜಿಲ್ಲಾ ಬೋ... ಭವನದ ದಿವ್ಯ ಸಭಾಂಗಣದಲ್ಲಿ ... ಕೂರಿನ ಪಿತಾಮಹರಾದ ದೇಶಭಕ್ತ ... ಲಿಂಗಯ್ಯಂಗಾರ್‌ರವರ ಅಧ್ಯಕ್ಷತೆಯ ... ಂದು ಮಹಾ ಸಭೆಯನ್ನು ಸೇರಿಸಿ ... ಅಂದಿನ ಸಭೆಯಲ್ಲಿ ತವ ಕೂರಿ ... ಸುಪ್ರಸಿದ್ಧ ಸಾಹಿತ್ಯ ಭಕ್ತರಾದ ಕೀರ್ತ... ಕವಿರತ್ನ ವೆ॥ ಬಿ ಶಿವಮೂರ್ತಿ ... ಗಳು 'ವಿಜಯನಗರ ಸಾಮ್ರಾಜ್ಯ" ... ವಿಷಯವನ್ನು ಕುರಿತು ಒಂದು ... ಸ್ತಲವಾದ ಭಾಷಣವನ್ನು ಮಾಡಿ ...

ಕರ್ನಾಟಕಕ್ಕೆ ಇಂದಿನ ದಿವಸ ಪ್ರಾಪ್ತ ... ರುವ ನಿರುತ್ಸಾಹ, ನಿಶ್ಶಕ್ತಿಗಳನ್ನು ... ಗಳಾಡಿಸಿ ಗತವೈಭವದ ಸ್ಮರಣೆಯ ... ಮಾಡಿ ನವತೇಜಸ್ಸನ್ನು ತುಂ... ಸಲುವಾಗಿ ಕರ್ನಾಟಕದ ಹಿರಿಯರು ... ವರ್ಷದ ಡಿಶಂಬರ್ ತಿಂಗಳ ಕಡೆಯ ... ಹಂಪೀಕ್ಷೇತ್ರದಲ್ಲಿ "ವಿಜಯ ... ಸಾಮ್ರಾಜ್ಯ ಸ್ಮಾರಕೋತ್ಸವದ ... ಮೂಲಕ ಕನ್ನಡಿಗರನ್ನು ಹುರಿದುಂಬಿಸ ... ಬೇಕೆಂದು ಸಂಕಲ್ಪಿಸಿರುವರು. ಯಾವ ... ಸಾಮ್ರಾಜ್ಯದ ವಿನಾಶದೊಂದಿಗೆ ... ಶಕ 1565 ರಲ್ಲಿ ತಾಳೀಕೋಟೆ ಸಂ... ವದಲ್ಲಿ ಕರ್ನಾಟಕ ಸೌಭಾಗ್ಯಲಕ್ಷ್ಮಿ ... ಅಸ್ತಂಗತಳಾಗಿ ಹೋದಳೋ ಮತ್ತೆ ... ಸ್ಮಾರಕೋತ್ಸವದ ಪ್ರಭಾವದಿಂದ ... ವಾಸವಿಲ್ಲದಿರುವ ಕರ್ನಾಟಕ ಲಕ್ಷ್ಮಿಯ ... ಮೊರೆಗೆ ತರಬೇಕೆಂದು ನಮ್ಮ ನಾ... ಹಿರಿಯರು ಮಾಡಿರುವ ಯೋಚನೆ ... ಅತ್ಯಂತ ಸಮಂಜಸವಾದುದೆಂದು ... ತಿಳಿದಿದ್ದೇನೆ

ಕರ್ನಾಟಕದಲ್ಲಿ ಗಂಗ, ಕದಂಬ, ಚಾ... ರಾಷ್ಟ್ರಕೂಟ, ಹೊಯಿಸಳ, ಯಾ... ಮೊದಲಾದ ಮಹಾಸಾಮ್ರಾಜ್ಯಗಳು ಆಗಿ... ವೆ ಇವುಗಳ ಇತಿಹಾಸವು ಹೇ... ಕ್ರಮವಾಗಿ ಯನ್ನಾಗಿ ... ನನ್ನು ವೀರ್ಯಯುಕ್ತವಾಗಿವೆ. ... ಕರ್ನಾಟಕದ ಕಟ್ಟಕಡೆಯ ಸಾ... ವಾದ ವಿಜಯನಗರವು ಅನೇಕ ... ಇವೆಲ್ಲ ಕನ್ನಡ ಸಾಮ್ರಾ... ಗಿಂತಲೂ ವಿಶಾಲವಾದುದಾಗಿದೆ.

ಕದಂಬಾದಿ ಸಾಮ್ರಾಜ್ಯಗಳು ... ಶಕ್ತಿ ಮತ್ತು ಕುಲ ಇವುಗಳ ... ಪ್ರತಿಷ್ಠೆಗಾಗಿ ಸ್ಥಾಪಿತವಾದವು. ... ನಗರ ಸಾಮ್ರಾಜ್ಯವಾದರೋ ಇಡಿ ... ಧರ್ಮದ ಹಾಗೂ ಕರ್ನಾಟಕ ... ಉನ್ನತಿಗಾಗಿ ಸಂಸ್ಥಾಪಿತ ... ಹೊಯಿಸಳ ಚಾಲುಕ್ಯಾದಿ ರಾಜ್ಯಗಳು ಕೇವಲ ವೀರರಿಂದ ಸ್ಥಾಪಿತವಾದುವು. ವಿಜಯನಗರ ಸಾಮ್ರಾಜ್ಯವು ಕೇವಲ ಹಕ್ಕಬುಕ್ಕಾದಿ ವೀರರಿಂದಲೇ ಅಲ್ಲದೆ ಮಹರ್ಷಿ ವಿದ್ಯಾರಣ್ಯ ಸ್ವಾಮಿಯಂತಹ ವಿಭೂತಿ ಪುರುಷರ ದಿವ್ಯಾನುಗ್ರಹದಿಂದ ಸ್ಥಾಪಿತವಾಯಿತು. ಹೊಯಿಸಳ, ರಾಷ್ಟ್ರಕೂಟಾದಿ ರಾಜ್ಯಗಳು ತಮ್ಮತಮ್ಮಲ್ಲೇ ಹೊಡೆದಾಡಿಕೊಂಡುವು. ವಿಜಯನಗರ ಸಾಮ್ರಾಜ್ಯವಾದರೋ ಸುಮಾರು 230 ವರ್ಷಗಳಕಾಲ ವಿರುದ್ಧ ಸಂಸ್ಕೃತಿಯ ಯವನರ ಕೂಡೆ ಭಯಂಕರ ಸಂಗ್ರಾಮವನ್ನು ಹೂಡಿ ಹಿಂದೂಧರ್ಮವನ್ನೂ, ಹಿಂದೂ ಸಮಾಜವನ್ನೂ ಕಾಪಾಡಿದುದು ಇತ್ಯಾದಿ ಕಾರಣಗಳಿಂದ ಎಂದೂ ಮರೆಯದ ಈ ಸಾಮ್ರಾಜ್ಯದ ನೆನಪು ಕನ್ನಡಿಗರಿಗೆ ಹೆಮ್ಮೆಯನ್ನುಂಟು ಮಾಡತಕ್ಕದಾಗಿದೆ.

ಇಂತಹ ಮಹಾಸಾಮ್ರಾಜ್ಯವು ಯವನರಿಂದ ಕ್ಷಣಕಾಲದಲ್ಲಿ ನಾಶವಾಗಬೇಕಾದ್ದರ ಕಟ್ಟಕಡೆಯಲ್ಲಿ ಆ ಸಾಮ್ರಾಜ್ಯದ ಅರಸರಲ್ಲಿ, ಆಗಿನಕಾಲದ ಕನ್ನಡಿಗರಲ್ಲಿ ಪ್ರಬಲವಾದ ದೋಷಗಳಿರಬೇಕು ಹಾಗಿಲ್ಲವಾದರೆ ಅಂತಹ ವಿಪತ್ತುಬರಲು ಕಾರಣವೇನು? ಶ್ರೀ ವಿದ್ಯಾರಣ್ಯ ಸ್ವಾಮಿಗಳ ದಿವ್ಯ ಆಶೀರ್ವಾದದಿಂದ ಸ್ಥಾಪಿತವಾದ ಈ ಸಾಮ್ರಾಜ್ಯವು ತುರಷ್ಕರ ದೌರ್ಬಲ್ಯಕ್ಕೆ ಈಡಾಗಲು ಕಾರಣವೇನು?

ವಿಜಯನಗರ ಸಾಮ್ರಾಜ್ಯ ಸ್ಮಾರಕೋತ್ಸವವು ಆ ಸಾಮ್ರಾಜ್ಯದ ಉನ್ನತಿ ಅವನತಿಗಳ ರಹಸ್ಯವನ್ನು ಕನ್ನಡಿಗರಿಗೆ ತಿಳಿಸಿಕೊಟ್ಟು ಕನ್ನಡಿಗರಲ್ಲಿ ಇಂದಿರುವ ದೌರ್ಬಲ್ಯವನ್ನು ಹೋಗಲಾಡಿಸಿ ತೇಜಃಪುಂಜರನ್ನಾಗಿ ಮಾಡುವುದೆಂದು ನಮ್ಮ ನಿರೀಕ್ಷಣೆ ಇದೆ ಈ ಮಹೋತ್ಸವದ ಬಗ್ಗೆ ಪ್ರತಿಯೊಬ್ಬ ಕನ್ನಡಿಗನೂ ಸಹಾಯ ಸಹಾನುಭೂತಿಯನ್ನು ತೋರಿಸುವುದಲ್ಲದೆ ದೇಶದ ಋಣದಿಂದ ಮುಕ್ತನಾಗುವುದು ಅವಶ್ಯಕ.

ಮಿಸೆಸ್ ಈಶ್ವರನ್‌ರ ವ್ಯಾಯಾಮ ಪ್ರದರ್ಶನ.

ಮೈಸೂರಿನ ಮಿಸೆಸ್ ಈಶ್ವರನ್‌ರವರು ಕಳೆದ ಗುರುವಾರ ಸಂಧ್ಯಾಕಾಲದಲ್ಲಿ ವಾಣೀವಿಲಾಸ ಇನ್‌ಸ್ಟಿಟ್ಯೂಟಿನಲ್ಲಿ ವ್ಯಾಯಾಮ ಪ್ರದರ್ಶನವನ್ನು ಮಾಡಿದರು. ಇವರು ಅಮೋಘವಾದ ಸಾಹಸಗಳನ್ನು ಪ್ರದರ್ಶಿಸಿದರು. 12–13 ವಯಸ್ಸಿನ ಒಬ್ಬ ಬಾಲಿಕೆಯನ್ನು ಹಗ್ಗದಿಂದ ಕಟ್ಟಿ ಹಲ್ಲಿನಲ್ಲಿ ಮೇಲಕ್ಕೆತ್ತಿದುದು ಬಹಳ ಆಶ್ಚರ್ಯಕರವಾಗಿದ್ದಿತು. ಈಕೆಯ ಪ್ರದರ್ಶನಗಳಿಗೆ ಎಲ್ಲರೂ ಪ್ರೋತ್ಸಾಹಿಸುವುದು ಅವಶ್ಯಕವಾಗಿದೆ.

ಎಂಟನೆಯ ದ್ರವಿಡ ವೈದ್ಯ ಸಮ್ಮೇಲನ.

ನಾಡೀ ಪರೀಕ್ಷಾ ಸ್ಪರ್ಧೆ.

ತಂಜಾವೂರು ಜಿಲ್ಲೆಯ ಕೂತನಲ್ಲೂರಿನಲ್ಲಿ ಇದೇ ತಿಂಗಳು 20-21 ನೇ ತಾರೀಖುಗಳಲ್ಲಿ ಸೇರುವ ಎಂಟನೆಯ ದ್ರವಿಡ ಸಮ್ಮೇಳನ ಸಮಯದಲ್ಲಿ ರೋಗಿಯನ್ನು ತೆರೆಯ ಮರೆಯಲ್ಲಿಟ್ಟು ಕೇವಲ ಹಸ್ತದಿಂದ ನಾಡೀ ಪರೀಕ್ಷೆಯನ್ನು ಮಾಡಿ ರೋಗಿಯ ರೋಗ ನಿದಾನವನ್ನು ಮಾಡುವ ನಾಡೀ ಪರೀಕ್ಷಾ ಸ್ಪರ್ಧೆಯನ್ನು ಏರ್ಪಡಿಸಿದೆ ಇದರಲ್ಲಿ ಕಮಿಟಿಯವರ ತೀರ್ಮಾನದಂತೆ ಉತ್ತೀರ್ಣರಾಗುವ ನಾಡೀ ಪರೀಕ್ಷಾ ಕುಶಲರಾದ ವೈದ್ಯರಿಗೆ, ಮೊದಲನೆಯ ಬಂಗಾರದ ಪದಕ, ಎರಡನೆಯವರಿಗೆ ಪ್ರಶಸ್ತಿ ಪತ್ರಿಕೆ ಕೊಡಲಾಗುವುದು ಬೇಕಾದವರು ಕೆಳಗಿನ ವಿಳಾಸದವರಿಗೆ ಇಂಗ್ಲೀಷಿನಲ್ಲಾಗಲಿ, ತಮಿಳಿನಲ್ಲಾಗಲೀ ಬರೆಯಬೇಕು. —

ವಿ ಸುಬ್ರಹ್ಮಣ್ಯಂ, ಜನರಲ್ ಸೆಕ್ರೆಟರಿ, ದ್ರವಿಡ ವೈದ್ಯ ಸಮ್ಮೇಲನ, ಶ್ರೀರಂಗಂ. ಎಸ್ ಐ ರೈಲ್ವೆ

ತ್ರಿದೋಷ ಚರ್ಚಾ ಪರಿಷತ್ತು

ಧಾರವಾಡಾ ಜಿಲ್ಲೆಯ ರಟ್ಟೆಹಳ್ಳಿಯಲ್ಲಿ ಸೇರಿದ ವಿದ್ಯಾ ವಾಚಸ್ಪತಿ ನಾಗೇಶಶಾಸ್ತ್ರಿಗಳು, ಆಯುರ್ವೇದತೀರ್ಥ ಆದ್ಯ ಅನಂತಾಚಾರ್ಯ, ಆಯುರ್ವೇದತೀರ್ಥ ನರಸಿಂಹ ನೀಲಕಂಠಜೋಶಿ, ಕವಿರತ್ನ ಆಯುರ್ವೇದ ವಿಶಾರದ ಎಚ್ ಎಸ್ ಶಾಸ್ತ್ರಿ, "ಆಯುರ್ವೇದಾಚಾರ್ಯ ಡಾ॥ ಎಂ ಆರ್ ನಾಮಿ ಮುಂತಾದ ವಿದ್ವಾಂಸರನ್ನೊಳಗೊಂಡ ತ್ರಿದೋಷ ಚರ್ಚಾ ಪರಿಷತ್ತಿನಲ್ಲಿ "ವಾತ, ಪಿತ್ತ, ಕಫಗಳು ಪಾಂಚ ಭೌತಿಕ ದ್ರವ್ಯ—(ಎಂದರೆ ಇಂಗ್ಲೀಷಿನಲ್ಲಿ ಹೇಳುವ ಮ್ಯಾಟರ್ ಎಂಡ್ ಎನರ್ಜಿ ಅಲ್ಲ)—ಗಳಾಗಿವೆ ಎಂಬ ತೀರ್ಮಾನವಾಡಿರುವರು ಭಾರತದ ವಿವಿಧ ಭಾಗಗಳ ವಿದ್ವಾಂಸರುಗಳಿಂದ ಈ ಪರಿಷತ್ತಿಗೆ ಶುಭಸಂದೇಶಗಳು ಬಂದಿದ್ದವು ಅಖಿಲಕರ್ನಾಟಕದ ತ್ರಿದೋಷ ಚರ್ಚಾ ಪರಿಷತ್ತಿನ ಮುಖ್ಯಾಧಿವೇಶನವು ವಿಜಯ ನಗರ ಸ್ಮಾರಕೋತ್ಸವ ಕಾಲದಲ್ಲಿ ಹಂಪೆಯಲ್ಲಿ, ಕಲಕತ್ತೆಯ ಕವಿಶೇಖರ ಡಾ॥ ಧೀರೇಂದ್ರನಾಥರಾಯ್ ಎಂ. ಎಸ್ ಸಿ, ಅವರ ಅಧ್ಯಕ್ಷತೆಯಲ್ಲಿ ಸೇರುವುದೆಂದ ತಿಳಿದುಬಂದಿದೆ

ಗಂಡಭೇರುಂಡ ವಿಗ್ರಹ

ಮೈಸೂರಿನ ಪ್ರಸಿದ್ಧ ಶಿಲ್ಪಿ ಶ್ರೀ ಸಿದ್ಧಲಿಂಗಸ್ವಾಮಿಯವರು ಕಲ್ಲಿನಲ್ಲಿ ಗಂಡ ಭೇರುಂಡ ಪ್ರತಿಮೆಯನ್ನು ಬಹಳ ಸುಂದರವಾಗಿ ತಯಾರು ಮಾಡಿದ್ದಾರೆ ಶಿಕಾರಿಪುರದ ತಾಲ್ಲೂಕಿನಲ್ಲಿರುವ ಭೇರುಂಡೇಶ್ವರ ದೇವಾಲಯದಲ್ಲಿದ್ದ ಗಂಡಭೇರುಂಡ ಪ್ರತಿಮೆಯನ್ನು ಯಾರೋ ದುಷ್ಟರು ಹಾಳುಮಾಡಿರುವರು. ಈಗ ಈ ಹೊಸ ವಿಗ್ರಹವನ್ನು ಆ ದೇವಸ್ಥಾನದಲ್ಲಿ ಇಡಲಾಗುವುದೆಂದು ಗೊತ್ತಾಗಿದೆ.

ವಿನೋದಲಹರಿ.

ಯಜಮಾನ:—ಈ ವಿಷಯದಲ್ಲಿ ನೀನು ಮಾಡಿರುವುದು ಕೇವಲ ಕತ್ತೆ ಮಾಡುವ ಕೆಲಸ, ತಿಳಿಯಿತೇ?

ಸೇವಕ —ಅದರೆ ಅದನ್ನು ತಮ್ಮ ಬದಲು ಮಾಡಿದ್ದೇನೆ, ಸ್ವಾಮಿ.

‡ ‡ ‡

ರೋಗಿಯ ಪತ್ನಿ.—ನಿಮ್ಮ ಹತ್ತಿರ ಒಂದು ವರ್ಷದಿಂದ ಔಷದಿ ತೆಗೆದುಕೊಂಡರೂ ಅವರು ಸತ್ತು ಹೋದರಲ್ಲಾ ಡಾಕ್ಟರೇ

ಡಾಕ್ಟರ್ —ಅವರು ನಾನು ಹೇಳಿದ ಹಾಗೆ ಕೇಳಲಿಲ್ಲರಮ್ಮಾ ನಾನೇನ್ಮಾಡಲಿ?

ರೋ ಪ:—(ರೇಗಿಕೊಂಡು) ನೀವು ಹೇಳಿದ್ದಾಗಿಯೇ ಒಂದು ವರ್ಷದಿಂದ ಕೇಳಿದ್ದಾರೆ

ಡಾಕ್ಟರ್ —ನಾನು ಎರಡು ವರ್ಷ ಇರಬೇಕು ಎಂತ ಹೇಳಿದ್ದೆ.

* * *

ಅವನು —ನಮ್ಮ ಕಕ್ಷಿಗೆ ಯಾವಾಗ ಸಾಯುವನೆಂಬುದು ಒಂದು ತಿಂಗಳು ಮುಂಚೆಯೇ ಗೊತ್ತಾಗಿ ತಿಳಿದಿತ್ತು

ಇವನು —ತುಂಬಾ ಮಹಾನುಭಾವರಿರಬೇಕು

ಅವನು —ಅಲ್ಲ ಖೂನಿ ಮಾಡಿದ್ದಕ್ಕೆ ನ್ಯಾಯಾಧೀಶರು ತೀರ್ಪು ಕೊಟ್ಟು ತಿಳಿಸಿದ್ದರು.

* * *

ಪ್ರ ದಿವಾಳಿ ಎಂದರೇನು?

ಉ —ಹಣವೆಲ್ಲಾ ಸೊಂಟಕ್ಕೆ ಸಿಕ್ಕಿಸಿ ಸಾಲಗಾರರಿಗೆ ಜೋಬು ತೋರಿಸುವುದು ಸಾರ್.

* * *

ತಾಯಿ —ಎರಡು ಬಿಸ್ಕತ್ತು ಇಟ್ಟಿದ್ದೆ. ಒಂದೇ ಇದೆಯಲ್ಲೋ ರಾಮು.

ರಾಮು — ಕತ್ತಲಿನಲ್ಲಿ ನನಗೆ ಒಂದೇ ಕಾಣಿಸಿತು ಅಮ್ಮ ಇನ್ನೊಂದಿದ್ದುದು ಗೊತ್ತಾಗಲಿಲ್ಲ

* * *

ತಾಯಿ —ಕೈ ಯಾಕೋ ಅಷ್ಟು ಹೊಲಸಾಗಿದೆಯೋ?

ಮಗ — ಮುಖ ತೊಳೆದುಕೊಂಡಿದ್ದರಿಂದ

* * *

ಜೊಷ್ಟನವ —ಟಾಂಗಾವಾಲಾ, ನನ್ನ ಸ್ಟೇಷನ್ನಿಗೆ ಕರೆದುಕೊಂಡು ಹೋಗಲು ಏನು ಕೊಡಬೇಕು?

ಟಾಂಗಾವಾಲಾ —ಎಪ್ಪತ್ತು ರೂಪಾಯಿ, ನಾಲ್ಕಾಣೆ ಸ್ವಾಮಿ

ಜೊಷ್ಟ —ಏನಯ್ಯಾ, ಅಷ್ಟು?

ಟಾಂಗಾವಾಲಾ —ನಾಲ್ಕಾಣೆ ನನ್ನ ಬಾಡಿಗೆ, ಎಪ್ಪತ್ತು ರೂಪಾಯಿ ಆಮೇಲೆ ಟಾಂಗಾ ರಿಪೇರಿಗೆ

* * * *

ಪ್ರಶ್ನೆ —ಮುಖಂಡರೆಂದರೆ ಯಾರು?

ಉತ್ತರ —ಜನರು ಯಾವ ಕಡೆ ಇದ್ದಾರೆಂಬುದನ್ನು ತಿಳಿದು, ಅವರ ಮುಂದೆ ನುಗ್ಗಿ ಹೋಗಿ ನಿಲ್ಲುವವರು?

ಚಕ್ರವರ್ತಿಗಳಮೇಲೆ ಅತ್ಯಾಚಾರ.

ಮೆಕ್‌ಮೋಹನ್ನನ ವಿಚಾರಣೆ.

ಚಕ್ರವರ್ತಿಯವರ ಪ್ರಾಣಾಪಹಾರ ಮಾಡಲು ಪ್ರಯತ್ನಪಟ್ಟಿದ್ದ ಮೆಕ್‌ಮೋಹನ್ನನ ವಿಚಾರಣೆಯು ಈ ಮಾಹೆ 13ನೆ ತಾರೀಖು ನಡೆಯಿತು. ಮೆಕ್‌ಮೋಹನ್ನನು ತನಗೆ ವಿದೇಶೀ ಸರ್ಕಾರದ ಒಬ್ಬ ಏಜಂಟರು 150 ಪೌಂಡುಗಳನ್ನು ಕೊಟ್ಟು ಚಕ್ರವರ್ತಿಯವರನ್ನು ಕೊಲ್ಲಬೇಕೆಂದು ಹೇಳಿದ್ದರು. ಚಕ್ರವರ್ತಿಯವರು ಧ್ವಜಗಳನ್ನು ಕೊಡುವ ಸಮಾರಂಭದಲ್ಲಿ ಮಾಡಬೇಕೆಂದು ಸೂಚಿಸಲಾಗಿತ್ತು. ಮತ್ತು ತನ್ನ ಜೊತೆಗೆ ಇನ್ನೂ 9 ಜನರನ್ನು ಕಳುಹಿಸುವ ಏರ್ಪಾಡಾಗಿತ್ತು. ತಾನು ಈ ವಿಚಾರವನ್ನು ಮುಂಚೆಯೇ ಯುದ್ಧದ ಕಚೇರಿಗೆ ತಿಳಿಸಿದ್ದನು. ಈಗ ಕೊಲ್ಲಲು ಆಗದಿದ್ದರೆ ಫ್ರಾನ್ಸಿನಲ್ಲಾದರೂ ಕೊಲ್ಲುವುದೆಂದು ನಿಶ್ಚಯವಾಗಿತ್ತು. —ಈ ರೀತಿ ಹೇಳಿಕೆಯನ್ನು ಕೇಳಿ ನ್ಯಾಯಾಧೀಶರು ಕಾನೂನಿಗೆ ವಿರೋಧವಾಗಿ ಪಿಸ್ತೂಲನ್ನು ಹಿಡಿದಿದ್ದನೆಂಬ ಆಪಾದನೆಯಮೇಲೆ ಅವನಿಗೆ 12 ತಿಂಗಳುಗಳ ಕಠಿಣ ಸಜಾ ಶಿಕ್ಷೆಯನ್ನು ವಿಧಿಸಿದರು.

ವೈ. ಎಂ. ಸಿ. ಎ. ಕಾಂಗ್ರೆಸ್.

ಮೈಸೂರು ಸಿಟಿಯಲ್ಲಿ 1937ನೇ ಇಸ್ವಿ ಜನವರಿ ಮಾಹೆಯಲ್ಲಿ ವೈ. ಎಂ. ಸಿ. ಎ. ಕ್ರೈಸ್ತ ಯುವಜನ ಸಂಘಗಳ ಕಾಂಗ್ರೆಸ್ಸು ನಡೆಯುವದು. ಈ ಸಮಾರಂಭಕ್ಕೆ ಪ್ರಪಂಚದಲ್ಲಿರುವ ಎಲ್ಲಾ ವೈ.ಎಂ.ಸಿ.ಎ. ಸಂಘಗಳೂ ಪ್ರತಿನಿಧಿಗಳನ್ನು ಕಳುಹಿಸುವರು. ಈ ಸಮಾರಂಭದ ಪ್ರಾರಂಭೋತ್ಸವವನ್ನು ನಮ್ಮ ಶ್ರೀಮನ್ಮಹಾರಾಜರವರು ನೆರವೇರಿಸುವರೆಂಬ ವದಂತಿ ಇದೆ. 43 ದೇಶಗಳವರು ಒಟ್ಟು 150 ಪ್ರತಿನಿಧಿಗಳನ್ನು ಕಳುಹಿಸುವವರಾಗಿದ್ದಾರೆ. ಡಾ॥ ಜಾನ್. ಆರ್. ಮಾಟ್ ರವರು ಅಧ್ಯಕ್ಷತೆಯನ್ನು ವಹಿಸುವರು.

ಪೋಲೀಸಿನವರ ಅಜಾಗರೂಕತೆ

ಹೆಗ್ಗಡದೇವನಕೋಟೆ ತಾಲ್ಲೂಕು ಪೋಲೀಸಿನವರು ಆ ಊರಿನ ಕಾಳೇಗೌಡನು 1-1-28 ರಿಂದ 6-1-31 ರ ವರೆಗೆ ಲೈಸೆನ್ಸ್ ಪಡೆಯದೆ ಬಂದೂಕವನ್ನಿಟ್ಟುಕೊಂಡಿದ್ದನೆಂದು 10-9-31 ರಲ್ಲಿ ಮೊಕದ್ದಮೆ ಹೂಡಿದರು. ಸ್ಪೆಷಲ್ ಫಸ್ಟ್ ಕ್ಲಾಸ್ ಮ್ಯಾಜಿಸ್ಟ್ರೇಟರಾದ ಶ್ರೀ॥ ಕೆ. ಶ್ರೀನಿವಾಸರವರು ವಿಚಾರಣೆಮಾಡಿ ಅಪರಾಧಿಗೆ 10 ರೂ ಜುಲ್ಮಾನೆ ವಿಧಿಸಿದರು. ಮತ್ತು ಮೊಕದ್ದಮೆ ಹೂಡಲು ಬಹು ನಿಧಾನಮಾಡಿದ್ದಕ್ಕೆ ಪೋಲೀಸಿನವರ ವರ್ತನೆಯನ್ನು ಖಂಡಿಸಿದರು.

"ರೇಡಿಯೋ" ಸಾಂಕ್ರಾಮಿಕ

ಯಾವುದಾದರೊಂದು ಪದಾರ್ಥವು ಹೊರಹೊರಡುವಷ್ಟೇ ತಡ. ಅದರ ಪೂರ್ವಾಪರಗಳ ಯೋಚನೆಯೇ ಇಲ್ಲದೆ ತಮ್ಮ ಕೈಯಲ್ಲಿರುವ ಗಂಟನ್ನು ಸುರಿದುಬಿಟ್ಟು, ಗಾಜಿನ ಚೂರನ್ನೋ, ಕಬ್ಬಿಣದ ಗಟ್ಟಿಗಳನ್ನೋ, ಇನ್ನೇನನ್ನೋ ತಂದು ಇಟ್ಟುಕೊಂಡುಬಿಡುವದರಲ್ಲಿ ನಾವು ಅಗ್ರೇಸರರು. ಅದರಲ್ಲಿಯೂ ನಮ್ಮವರ ಪೈಕಿ ಯಾರಾದರೊಬ್ಬರು ತೆಗೆದರಂತೂ ನಾವೇಕೆ ತೆಗೆಯಬಾರದೆಂಬ ತೀವ್ರ ಸ್ಪರ್ಧೆ ಬೇರೆ. ನಮ್ಮ ಅನುಕೂಲ ಪ್ರತಿಕೂಲಗಳ ವಿಮರ್ಶೆಯೇ ಇಲ್ಲ. ಬೈಸಿಕಲ್, ಗ್ರಾಮೋಫೋನ್‌ಗಳಂತೆಯೇ ರೇಡಿಯೋ ಹುಚ್ಚು ನಮ್ಮವರೆಲ್ಲರಿಗೂ ಹಿಡಿಯಲಾರಂಭವಾಗಿದೆ. ಪ್ರಡಿಕಾಸ್ಟಿನ ಕಮೀಷನ್ ಆಶೆಗೆ ಇರತಕ್ಕ ನಮ್ಮ ವ್ಯಾಪಾರಿಗಳಿಗೆ ಅದರ ರಿಪೇರಿ ವಿಷಯ ಹ್ಯಾಗೆ ತಿಳಿಯಬೇಕು? ಯಂತ್ರವಾದರೊ ಬಹು ಸೂಕ್ಷ್ಮ. ಸ್ವಲ್ಪ ಹೆಚ್ಚು ಕಡಿಮೆಯಾದರೂ ಕೊಟ್ಟ ಗಂಟಿಗೇ ಧೋಕ. ರಿಪೇರಿ ಇಲ್ಲಿ ಯಾರಿಗೂ ಬರೋಹಾಗಿಲ್ಲ. ಅದರ ಕಂಪನಿಗೇ ಬರೆಯಬೇಕು. ಕಂಪನಿಯವರು ಒಬ್ಬ ಮೆಕ್ಯಾನಿಕ್ಕನ್ನು ಇಟ್ಟು ಸೂಪರ್‌ವೈಸ್ ಮಾಡಿಸುವಷ್ಟು ವ್ಯಾಪಾರವು ಮುಂದುವರಿದಿಲ್ಲ. ಇದು ಪ್ರಾರಂಭದಶೆಯಾದುದರಿಂದ ಇನ್ನುಮುಂದೆ ಕಂಡಾಯಕರವಳಿಗೆಗಳೂ ಬೀಳುತ್ತವೆ. ಅಂತೂ ಈ ಒಪ್ಪಾಟದಲ್ಲಿ "ಸಿಕ್ಕೊಂಡ-ವಿ ಣಚಂಭಟ್ಟ" ಎಂಬಂತೆ ಆಗುತ್ತದೆ. ನಮ್ಮ ಜನರು ಈ ಸಾಂಕ್ರಾಮಿಕದಿಂದ ದೂರವಾಗಿರಲು ಯೋಚಿಸಬಾರದೇಕೆ?

—ಇಣಕಪ್ಪ.

ರೇಷ್ಮೆ ಕೈಗಾರಿಕೆಗೆ ರಕ್ಷಣೆ.

ಮೈಸೂರು ರೇಷ್ಮೆ ಸಂಘದ ಅಧ್ಯಕ್ಷರಾದ ರಾಜಸಭಾ ಭೂಷಣ ದಿವಾನ್ ಬಹದ್ದೂರ್ ಕೆ. ಆರ್. ಶ್ರೀನಿವಾಸಯ್ಯಂಗಾರ್ಯರವರು ಸಿಮ್ಲಾಗೆ ದಯಮಾಡಿಸುವರು. ಇಂಡಿಯಾ ಸರ್ಕಾರದ ವಾಣಿಜ್ಯ ಮೆಂಬರರಾದ ಸರ್ ಜಫರುಲ್ಲಾಖಾನರವರನ್ನು ಸಂದರ್ಶಿಸಿ ಭಾರತೀಯ ರೇಷ್ಮೆಯ ಕೈಗಾರಿಕೆಗೆ ಇನ್ನೂ ಹೆಚ್ಚಿನ ರಕ್ಷಣೆ ಬೇಕೆಂಬ ಅಂಶವನ್ನೂ ಹೊರಗಿಂದ ಬರುವ ಕೃತಕ ರೇಷ್ಮೆಗೇ ಪ್ರೋತ್ಸಾಹ ದೊರೆತು ನಿಜವಾದ ರೇಷ್ಮೆಯ ಬೆಲೆಯು ಇಳಿದು ಹೋಗುವದೆಂದೂ ಮತ್ತು ಹೀಗೆಯೇ ಬಿಟ್ಟರೆ ನಿಜವಾದ ರೇಷ್ಮೆ ತಯಾರಿಸುವವರ ಖರ್ಚೂ ಉತ್ಪತ್ತಿಯಾಗುವದಿಲ್ಲವೆಂಬ ವಿಷಯಗಳನ್ನು ತಿಳಿಸಿ ರೇಷ್ಮೆಗೆ ಸರಿಯಾದ ರಕ್ಷಣೆ ಬೇಕೆಂದು ಕೇಳುವರು. ಇವರೊಡನೆ ಮಿ॥ ಸಿ. ಸುಬ್ರಾಮಶೆಟ್ಟರೂ, ಮಿ॥ ಸಂಪುರ್ದ್ಧಿ ಮುಂತಾದವರೂ ಹೋಗುವರು.

ದಿವಾನರ ಪ್ರಯಾಣ

ದೇಶೀಯ ಸಂಸ್ಥಾನಗಳ ಮಂತ್ರಿಗಳ ಸಮ್ಮೇಳನಕ್ಕೆ ಮೈಸೂರು ಸಂಸ್ಥಾನದಿಂದ ಇನ್ ಛಾರ್ಜ್ ದಿವಾನರಾದ ಶ್ರೀ॥ ಎಸ್. ಪಿ. ರಾಜಗೋಪಾಲಾಚಾರ್ಯರವರು ಸದ್ಯದಲ್ಲಿಯೇ ಬೊಂಬಾಯಿಗೆ ಪ್ರಯಾಣ ಬೆಳೆಸುವರು.

ಪ್ರಾಚೀನ ಕನ್ನಡ ವಚನ ಗ್ರಂಥಗಳು

ಸೌಗಂಧಿಕಾಪರಿಣಯ:—ಪೂರ್ವದಲ್ಲಿ ದೇವೇಂದ್ರನಿಗೆ ದೂರ್ವಾಸಮುನಿಗಳಿಂದ ಆಶೀರ್ವಾದ ಪೂರ್ವಕವಾಗಿ ಕೊಡಲ್ಪಟ್ಟ ಕಮಲಮಾಲಿಕೆಯನ್ನು ಆನೆಯ ಕುಂಭಸ್ಥಳದಲ್ಲಿಟ್ಟೊಡನೆ, ಆನೆಯು ಆ ಮಾಲಿಕೆಯನ್ನು ಕಾಲಿನಲ್ಲಿ ಹೊಸಕಿ ವ್ಯರ್ಥಪಡಿಸಲು, ಋಷಿಗಳ ಶಾಪದಿಂದ ಭೂಲೋಕದಲ್ಲಿ ರತ್ನಪುರಿಯಲ್ಲಿ ಸುಗಂಧರಾಜನಾಗಿ ಹುಟ್ಟಿ, ಕಳಿಂಗದೇಶದ ರಾಜಪುತ್ರಿಯಾದ ಸೌಗಂಧಿಕಾದೇವಿಯನ್ನು ಸ್ವಯಂವರಮಾಡಿಕೊಂಡ, ಬಹಳ ವಿಷಯಗಳಿರುವ ಕಥೆ

೧೮೦ ಪುಟಗಳು ಕ್ರಯ ರೂ. ೧—೮—೦

ಸಹಸ್ರಾಯುಚರಿತ್ರೆ:—ಮಾಹಿಷ್ಮತೀ ಅರಸನ ಜ್ಯೇಷ್ಠಪತ್ನಿಯಲ್ಲಿ ದಾಕ್ಷಾಯಿಣಿ ವರಪ್ರಸಾದದಿಂದ ಜನಿಸಿ ಲೋಕಪ್ರಸಿದ್ಧನಾಗಿ ತನಗೆ ಇತರರಿಂದ ಬಂದ ಗಂಡಾಂತರಗಳನ್ನೆಲ್ಲಾ ಪರಿಹರಿಸಿಕೊಂಡ ಒಬ್ಬ ಮಹಾಪುರುಷನ ಕಥೆ

೪೭೫ ಪುಟಗಳು ಕ್ರಯ ರೂ ೨—೦—೦

ಕಾಶೀಕ್ಷೇತ್ರ ಮಹಾತ್ಮೆ:—ಇದರಲ್ಲಿ ೧೪ ಲೋಕಗಳ ವರ್ಣನೆ, ನದಿಗಳು, ದೇವತೆಗಳು ಋಷಿಗಳೇ ಮುಂತಾದವರ ಉತ್ಪತ್ತಿಕ್ರಮ, ಗಂಗಾಸಹಸ್ರನಾಮವೇ ಮೊದಲಾದ ಅನೇಕ ವಿಷಯಗಳು ಅಡಕವಾಗಿರುತ್ತೆ

೬೮೩ ಪುಟಗಳು ಕ್ರಯ ರೂ. ೨—೨—೦

ಜಿಪ್ರಸ್ಸು —

ಗುಂಡ್ಲು ಪಂಡಿತ ಲಕ್ಷ್ಮಣಾಚಾರ್ಯರ ಮಕ್ಕಳು
ಶ್ರೀನಿವಾಸ ದೇಶಿಕಾಚಾರ್,
೩೦೭, ಕರುಹಟ್ಟಿ ಬೀದಿ, ಮೈಸೂರು

ನಂಜನಗೂಡು ವರ್ತಮಾನ.

ಹವೆ—ಸುತ್ತಲೂ ನಿನ್ನೆ ರಾತ್ರಿ ಒಳ್ಳೆಯ ಮಳೆಯಾಗಿ, ಜನರು ಹರ್ಷದಿಂದಿದ್ದಾರೆ.

ಧರ್ಮ ಸತ್ರ—ಅರಕಲಗೂಡು ಸೀತಾರಾಮಶೆಟ್ಟರು ಪರಸ್ಥಳದ ಯಾತ್ರಿಕರ ಸಲುವಾಗಿ ಒಂದು ಪ್ರಶಸ್ತವಾದ ಕಟ್ಟಡವನ್ನು ಅಂಗಡೀ ಬೀದಿಯಲ್ಲಿ ವಿಸ್ತಾರವಾಗಿ ಕಟ್ಟಿಸಿರುತ್ತಾರೆ. ಈಗ ಈ ಕಟ್ಟಡವನ್ನು ವೇಶ್ಯಾ ಸ್ತ್ರೀಯರ ನರ್ತನಕ್ಕೆ ಬಾಡಿಗೆಗೆ ಕೊಟ್ಟಿರುತ್ತಾರಾಗಿ, ಪ್ರಯಾಣಿಕರಿಗೆ ತೀರಾ ತೊಂದರೆಯಾಗಿರುತ್ತೆ. ಮುಜರಾಯಿ ಇಲಾಖೆಯವರು ಗಮನಿಸಬಾರದೆ?

ರೈಲ್ವೆ—ರಾತ್ರಿ ಮೈಸೂರಿನಿಂದ ಏಳೂ ಮುಕ್ಕಾಲು ಘಂಟೆಗೆ ಹೊರಡುವ ರೈಲು ಹೆಚ್ಚುಕಾಲ ಕಡಕೊಳದಲ್ಲಿ ನಿಂತು ಪ್ರಯಾಣಿಕರಿಗೆ ಬೇಸರಿಕೆಯನ್ನುಂಟುಮಾಡುತ್ತಿದೆ.

ಲೇಂಡಿ ಕಂಟ್ರಾಕ್ಟು—ರೈಲಿನಲ್ಲಿ ಮೈ... ಸೂರಿಗೆ ಲೇಂಡಿಯು ಸಾಗುತ್ತಿದೆಯಂತೆ ಇಲಾಖೆಯವರು ಗಮನಿಸಿದರಾದೀತು

ಪುರ ಸಭೆ—ಬೀದಿ ಸುಂಕವು ವಸೂಲ್ಮಾಡಿರುವದು ತಪ್ಪೆಂದು ಕೋರ್ಟಿನ ತೀರ್ಮಾನವಾಗಿದ್ದರೂ ಮತ್ತೊಬ್ಬಂಥ... ಲೆ ಪುನಃ ವೊಬದ್ದ ಮೆಯನ್ನು ಹೂಡು... ವಾಗಿ ಕೇಳುತ್ತೇವೆ. ಈ ವಿಧವಾದ ನಡ... ಳಿಕೆಯಿಂದ ಜನಾನುರಾಗವನ್ನು ಪುರಸಭೆ... ಯು ಕಳೆದುಕೊಳ್ಳುವಂತಿದೆ. ಇದು ಸ... ಯಲ್ಲ.

ಜಮೀನು ಅಡಮಾನದ ಬ್ಯಾಂಕು—ಈ ಬ್ಯಾಂಕಿನ ಪ್ರಾರಂಭೋತ್ಸವವನ್ನೂ ನಡೆಯದೆ ಇರುವದು ಶೋಚನೀಯವಾದುದು.

14-9-1936 —ಟಿಕ್...

ಎಲ್ಲಾ ಜಾಣ, ತುಸ ಕೋಣ!

ಶಿವನಸಮುದ್ರದಲ್ಲಿ (ಬ್ಲಫ್) ... ಗಿನಿಂದ ಬರುವ ಪ್ರಯಾಣಿಕರು ... ದಿನ ಅಲ್ಲಿ ತಂಗಬೇಕಾದರೆ ಬಹಳ ... ಪಡಬೇಕು. ಬಾಕಿ ಎಲ್ಲಾ ಸೌ... ಗಳೂ ದೊರೆತರೂ ಇಳಿದುಕೊಳ್ಳಲು ಬಹಳ ಅಭಾವ. ಅಲ್ಲಿಯೂ ... ಮುಸಾಫರ್ ಖಾನೆಯೇನೋ ಇದೆ... ರೆ ಅದರ ತುಂಬ ಬರೀ ಕೆಲಸ... ಇರುತ್ತಾರೆ. ಒಂದು ರಾತ್ರಿ ಇ... ವರೆ ಒಂದು ಬಸ್ಸಿನಡಿಯಲ್ಲೋ ಮರದಡಿಯಲ್ಲೋ ನಿಲ್ಲಬೇಕು. ...ರಿಂದ ಸರ್ಕಾರದವರು ಜನರ... ಕ್ಕಾಗಿ ಬೇರೊಂದು ಮುಸಾಫರ್... ನ್ನಾದರೂ ಏರ್ಪಡಿಸುತ್ತಾರೆಂದು ... ಕ್ಷೇವೆ

ಒಬ್ಬ ಪ್ರೇ...

Asiatic Government Security Life Assurance Co., Ltd.

HEAD OFFICE:-ASIATIC BUILDINGS, BANGALORE CITY.

THIS IS PURELY A NATIONAL CONCERN

Managed by Experts.
Low Premiums and Liberal Policy Conditions.

Apply for Agency:—
To
Mr. H. Venkataramiah,
Divl. Suptd.,
ASIATIC BUILDINGS,
Bangalore City. Or
To
V. RANGASAMI Esq.
B.A. B.L., F.C.I.
General Manager.



ಚೆನ್ನಾಗಿ ಅನುಭವವುಳ್ಳವರ ಆಡಳಿತಕ್ಕೆ ಒಳಪಟ್ಟ, ಕಡಿಮೆ ಪ್ರೀಮಿಯಮ್ಮು ಮತ್ತು ಧಾರಾಳವಾದ ಪಾಲಿಸಿ ಷರತ್ತುಗಳುಳ್ಳ ಶುದ್ಧ ಸ್ವದೇಶೀ ವಿಮಾ ಸಂಸ್ಥೆ.

ಏಜನ್ಸಿಗಾಗಿ ಕೆಳಗಿನ ವಿಳಾಸಕ್ಕೆ ಬರೆಯಿರಿ:—

ಹೆಚ್. ವೆಂಕಟರಾಮಯ್ಯ,
ಡಿವಿಜನಲ್ ಸೂಪರಿಂಟೆಂಡೆಂಟ್,
ಏಷ್ಯಾಟಿಕ್ ಬಿಲ್ಡಿಂಗ್ಸ್,
ಬೆಂಗಳೂರು ಸಿಟಿ.
ಅಥವಾ
ಮ॥ ವಿ. ರಂಗಸ್ವಾಮಿ, ಬಿ.ಎ., ಬಿ.ಎಲ್., ಎಫ್.ಸಿ.ಐ.
ಜನರಲ್ ಮ್ಯಾನೇಜರ್.

ಏಷ್ಯಾಟಿಕ್ ಲೈಫ್ ಇನ್ಷೂರೆನ್ಸ್ ಕಂಪೆನಿ ಲಿಮಿಟೆಡ್

ಹೆಡ್ ಆಫೀಸ್:—ಏಷ್ಯಾಟಿಕ್ ಬಿಲ್ಡಿಂಗ್ಸ್, ಬೆಂಗಳೂರು.

ದ್ರಾಕ್ಷಾಮೃತ

ಈ ದ್ರಾಕ್ಷಾಮೃತವು ಸಹ್ಯಾದ್ರಿ ಪರ್ವತದಲ್ಲಿ ಅನೇಕ ವನಸ್ಪತಿಗಳ ರಸವರ್ಗದೊಡನೆ ದ್ರಾಕ್ಷಾರಸವನ್ನು ಮಿಶ್ರಮಾಡಿ ಸ್ವದೇಶಿ ಯಂತ್ರದಿಂದ ಶಾಸ್ತ್ರೋಕ್ತ ಪ್ರಕಾರ ತಯಾರು ಮಾಡುವದರಿಂದ ಸ್ವಾದಿಷ್ಟವು ಮತ್ತು ಮಧುರವು.

ಇದರ ಸೇವನೆಯಿಂದ ಶರೀರದೊಳಗಿನ ಚಳಿ ಕತಕಿ (ಗರಮಿ) ಸಂಪೂರ್ಣ ನಾಶವಾಗುತ್ತದೆ. ಮತ್ತು ಧಾತುಸ್ರಾವ, ಸ್ವಪ್ನಾವಸ್ಥೆಯಿಂದ ಅಥವಾ ಬೇರೆ ಯಾವದೇ ಕಾರಣದಿಂದ ಬಂದ ಅಶಕ್ತತೆಯಿಂದ ಕೈಕಾಲು, ಕಣ್ಣೊಳಗೆ ಉರಿ ಉರಿ, ಶೌಚಕ್ಕೆ ಸಾಫ ಆಗದೆ ಅರೋಗ, ಮುಂತಾದ ಎಲ್ಲ ವಿಕಾರಗಳು ನಷ್ಟವಾಗಿ, ಚಳಿಯುತ್ತದೆ. ಮತ್ತು ಅನ್ನ ಚೆನ್ನಾಗಿ ಪಚನವಾಗಿ ಶೌಚಕ್ಕೆ ಆಗುತ್ತದೆ. ಇದರ ಸೇವನೆಯಿಂದ ತರುಣರಿಗೆ ವ್ಯಭಿಚಾರದಿಂದ ಅಥವಾ ಬೇರೆ ಕಾರಣದಿಂದ ಬಂದ ಧಾತುಕ್ಷೀಣತೆ, ನಪುಂಸಕತ್ವ ಇದ್ದರೆ ಅದು ಹೋಗಿ ಯೌವನವಂತರಾಗಿ, ಶರೀರ ಬಲವಾಗಿ ಮಕ್ಕಳು ಪುಷ್ಟಿವಂತರಾಗುವರು ಹೆಂಗಸರಿಗೂ ಮತ್ತು ಮಕ್ಕಳಿಗೂ ಈ ಔಷಧವು ಗುಣಕಾರಿ ಇದೆ. ಮುಟ್ಟಾಗದಿರುವದು ಮತ್ತು ಉಷ್ಣ ಗರ್ಭ ಸಂಬಂಧವಾದ ರೋಗಗಳಿದ್ದರೂ ಅವೆಲ್ಲ ಗುಣವಾಗಿ ಅವರಿಗೆ ಸಂತತಿ ವೃದ್ಧಿಯಾಗುವದು. ಈ ಔಷಧದ ಮೂರು ಬಾಟ್ಲಿಗಳನ್ನು ಸೇವಿಸಿದರೆ ಪೂರ್ಣ ಗುಣಬರುತ್ತದೆ. ಇದರ ಅನುಭವ 1 ಬಾಟ್ಲಿ ಸೇವನೆ ಮಾಡಿದನಂತರ ನಿಮಗೆ ತಿಳಿದೀತು.

ಕಿಮ್ಮತ್ತು ರೂ. ೧—೪—೦, 3 ಬಾಟ್ಲಿ ೩—೮—೦, 1 ಡಜನ ಬಾಟ್ಲಿ ಬೆಲೆ ೧೨—೦—೦

ಮಾಲೀಕರ—ದ್ರಾಕ್ಷಾಮೃತ ಡಿಪೋ, ಪೋಸ್ಟ ನಿಪ್ಪಾಣಿ, ಜಿಲ್ಲಾ ಬೆಳಗಾವಿ,

ಮಾರಾಟ ಸ್ಟಾಕಿಸ್ಟರು:—ಟಿ. ಸಿ. ನಟರಾಜ್, ಬೊಂಬಾಯಿ ಆನಂದ ಭವನ, ಫಾರ್ಮಸಿ, ಸಯ್ಯಾಜಿರಾವ್ ರೋಡ್. ಬೆಂಗಳೂರು ಸಿಟಿ:—ಸಿ. ವಿ. ಸನ್ಸ್, ಚಿಕ್ಕಪೇಟೆ. ತುಂಕೂರು—ಟಿ. ಆರ್. ಗುರು ಚನ್ನಬಸಪ್ಪ ಬ್ರದರ್ಸ್. ಚಿಕ್ಕಮಗಳೂರು—ಎಂ. ಎಲ್. ಮಂಜಯ್ಯಶೆಟ್ಟಿ. ಶಿವಮೊಗ್ಗ—ಶ್ರೀಕೃಷ್ಣ ಟ್ರೇಡಿಂಗ್ ಏಜನ್ಸಿ ಮತ್ತು ಶಿಂಡೇರಾವ್ ಬ್ರದರ್ಸ್. ದಾವಣಗೆರೆ—ಸಿದ್ದಪ್ಪ ಮತ್ತು ಕೆ. ಭೋಜಯ್ಯಶೆಟ್ಟಿ ಅಂಡ್ ಬ್ರದರ್ಸ್.

"ಬ್ರೇಕ್ ಪಿಲ್ಸ್"

INVENTED BY A HIMALAYAN SAGE.

● ಸ್ತ್ರೀಪುರುಷರಿಗೆ ಆನಂದವನ್ನುಂಟುಮಾಡುವುದು ಈ ಮಾತ್ರೆಗಳು. ಮದಿಸಿದ ಸ್ತ್ರೀಯರ ಗರ್ವಭಂಗಮಾಡಲು ಕಂಡುಹಿಡಿದಿರುವ ಮಾತ್ರೆಗಳಿವು. ಇವರಲ್ಲಿ ರಸ

ವಿಷಾದಿಗಳು ಸೇರಿಲ್ಲ. ಕಸ್ತೂರಿ, ಚಿನ್ನ, ಹಿಮಾಲಯ ಪರ್ವತದ ವನಮೂಲಿಕೆಗಳು ಮುಂತಾದುವುಗಳಿಂದ ದೊಡ್ಡ ಯೋಗೀಶ್ವರರ ಹತ್ತಿರ ಸಂಗ್ರಹಿಸಿ ಮುದುಕತನವನ್ನು ಲೋಕದಲ್ಲಿ ಇಲ್ಲದಂತೆ ಮಾಡುವುದು. ಅರ್ಧ ಘಂಟೆಯೊಳಗಾಗಿ ವೀರ್ಯವನ್ನು ಕಲ್ಲಿನಂತೆಮಾಡಿ ರಮಿಸಲು ಉಲ್ಲಾಸವನ್ನು ಮಾಡುವುದು. ಗುಣವಿಲ್ಲದಿದ್ದಲ್ಲಿ ಹಣ ವಾಪಸು.

೬೦ ಮಾತ್ರೆಗಳು ರೂ. ೫—೧—೦. ೩೦ ಮಾತ್ರೆಗಳು ರೂ. ೩—೦—೦.
(ಕಾಗದ ಪತ್ರಗಳು ಇಂಗ್ಲೀಷಿನಲ್ಲಿಯೇ.)

ಡಾ॥ ಎ. ಎಸ್. ಮೂರ್ತಿ, ಚಿಕಾಕೋಲ್, ಗಂಜಾಮ್ ಡಿಸ್ಟ್ರಿಕ್ಟ್.



ಟಿ. ಸಿ. ನಟರಾಜ್ ಔಷಧಾಲಯ,

ಸಯ್ಯಾಜಿರಾವ್ ರೋಡು, ಮೈಸೂರು.

ಇವರಲ್ಲಿ ನೇತ್ರಪರೀಕ್ಷೆಯು ಉಚಿತವಾಗಿ ಮಾಡಲ್ಪಡುತ್ತದೆ.

ಅತ್ಯಗತ್ಯವಾಗಿ ಬೇಕಾದ ಎಲ್ಲಾ ಇಂಜಕ್ಷನ್ ಔಷಧಿಗಳೂ ಸದಾ ಕಾಲದಲ್ಲಿಯೂ ದೊರಕುವುವಲ್ಲದೆ ಸಮಸ್ತ ವ್ಯಾಧಿಗಳಿಗೂ ಚಿಕಿತ್ಸೆಯು ಬಹು ಸುಲಭ ಛಾರ್ಜಿನಿಂದ ಮಾಡಲ್ಪಡುತ್ತದೆ.

ಝಂಡೂರವರ ಆಯುರ್ವೇದೀಯ ಸಿದ್ಧೌಷಧಗಳೆಲ್ಲವೂ ಸದಾ ದೊರಕುತ್ತವೆ.

ಕುಟುಂಬಗಳ ಮೇಲೆ :

ಕುಟುಂಬಗಳು ಎಡೆಬಿಡದೆ :

ಅಪೇಕ್ಷಿಸುತ್ತಿರುವುದೇನು?

ಹಿಂದೂಸ್ತಾನ್ ಕೋ-ಆಪರೇಟಿವ್ ಇನ್ಷೂರೆನ್ಸ್ ಸೊಸೈಟಿ

(ಲಿಮಿಟೆಡ್.)

ಇವರ ಲಾಭಕರವಾದ ಜೀವ ವಿಮೆಯನ್ನೇ!

ಏಕೆಂದರೆ {ಅದರ ಪರಿಮಾಣ / ಅದರ ಅಭ್ಯುದಯ / ಅದರ ಭದ್ರತೆಗಾಗಿ

ಹಿಂದೂಸ್ಥಾನಿನವರು ಈಗ
ಎಂಡೋಮೆಂಟ್ ಬೋನಸ್ 23 ರೂಪಾಯನ್ನೂ
ಹೋಲ್ ಲೈಫ್ ಬೋನಸ್ 20 ರೂ. ಅನ್ನೂ ಕೊಡುತ್ತಾರೆ.

ಮುಂದಿನ ವ್ಯಾಲ್ಯುಯೇಷನ್ ೩೦ ನೇ ಏಪ್ರಿಲ್ ೧೯೩೭.

ಮದರಾಸ್ ಶಾಖೆ:—ಹಿಂದೂಸ್ಥಾನ್ ಬಿಲ್ಡಿಂಗ್ಸ್, ಪೋಸ್ಟ್‌ಬಾಕ್ಸ್ ೨೨೩, ಮದ್ರಾಸ್.

ವ್ಯವಸ್ಥಾಪಕ ಶಾಖೆಗಳು:— ವಿಶಾಖಪಟ್ಟಣ, ಬೆಜವಾಡ, ಬಳ್ಳಾರಿ, ಕಲ್ಲಿಕೋಟೆ, ಮಧುರೆ, ಕೊಯಮುತ್ತೂರು, ಕಡಲೂರು, ಬೆಂಗಳೂರು.

ನ್ಯೂ ಕೃಷ್ಣಾ ಟಾಕೀಸಿನಲ್ಲಿ
ಮೈಸೂರು.

ತಾ॥ 3—10—1936 ರಿಂದ ಪ್ರಾರಂಭ.

ಮಿಸ್ ಫ್ರಾಂಟಿಯರ್ ಮೇಲ್

ಹಂಟರ್‌ವಾಲಿಯಲ್ಲಿ ಎಲ್ಲರಿಗೂ ಆಶ್ಚರ್ಯವನ್ನೂ ಆನಂದವನ್ನುಂಟುಮಾಡಿರುವ ಫಿಯರ್‌ಲೆಸ್, ನಾದಿಯ, (ಇಂಡಿಯನ್ ಎಡ್ಡಿಪೋಲೋ) ಜಾನ್ ಕವಾಸ್, ಮಾಸ್ಟರ್ ಮಹಮ್ಮದ್, ಬಾಬ್ ಕಂಬಾಟ, ಸಯ್ಯಾನಿ, ಸಕಲ ಶಿರೋಮಣಿಯಾದ ಪನ್ನಿ ಫೂಟಿ, ಸರದಾರ್ ಮನ್ಸೂರ್ ಎಂಬಿವರೇ ಮುಂತಾದ ವಾಡಿಯಾ ಮೂವಿಟೋನ್ ರವರ ನಟಶ್ರೇಷ್ಟರೆಲ್ಲರೂ ಪಾತ್ರವಹಿಸಿರುವರು—

ಬಹಳ ದಿನಗಳಿಂದಲೂ ನಿರೀಕ್ಷಣೆಯಲ್ಲಿದ್ದ ಈ ಚಿತ್ರವು ಈಗ ತಾನೇ ಮೈಸೂರಿನಲ್ಲಿ ನಲಿದಾಡಲು ಓಡಿ ಬಂದಿರುತ್ತದೆ.

ರೈಲಿನ ಮೇಲೆ ಕೈಕೈ ಯುದ್ಧ—ರೈಲುರೋಡಿನಲ್ಲಿ ಮೋಟಾರ್ ಓಡಾಟ—ಸೇತುವೆಯಲ್ಲಿ ಹಿಡಿಮುಷ್ಟಿನ ಹಿಡಿದಾಟ—ರೈಲಿನ ರಸ್ತೆಯಲ್ಲಿ ಬಿಗಿಯಲ್ಪಟ್ಟಿದ್ದ ಸ್ತ್ರೀಯನ್ನು ಓಡುತ್ತಿದ್ದ ರೈಲಿನಿಂದ ದುಮುಕಿ ಕಾಪಾಡಿ.ಏಕ—ರಭಸದಿಂದ ಓಡುತ್ತಿದ್ದ, ರೈಲುಗಳ ಡಿಕ್ಕಿ, ಇವೆಲ್ಲವೂ ನಿಮ್ಮನ್ನು ರೋಮಾಂಚಿತರನ್ನಾಗಿ ಮಾಡುವುವು.

THE SADHV

RECOMMENDED FOR SCH
BY THE DEPARTMENT
No. TI. 3778-146-3

OFFICE OF THE DIR
TOR OF PUBLIC
INSTRUCTION
IN MYSORE

ಎರಡೇ ಸುಖಸಾಧನಗ

ಕಿಮೋಸೊ — (ಗಂಡಸರಿಗೆ)
ತ್ತಮವಾದ ರಬ್ಬರು ಸಾಧನ
ಡಗೆ ಆತಂಕವಿಲ್ಲ. ಗರ್ಭೋತ್ಪ
ಬಿಸಿಕೆಯಿಲ್ಲ. ಮೇಹರೋಗದ
ಯಿಲ್ಲ. ಬೆಲೆ: ೧—೬—೦

ಸ್ಪ್ಯಾದಗನ್:— (ಹೆಂಗಸರಿಗೆ)
ಸರ ಗರ್ಭನಿವಾರಣೆಗೆ ಅತ್ಯುತ್ತ
ಸಾಧನ. ಕ್ರೀಡಾ ಸಮಯದಲ್ಲ
ಸತಕ್ಕದ್ದು. ಬೆಲೆ ೨—೬—೦

ಕೇಟಲಾಗು ಬಾಚ
ಆಂಧ್ರಾ ಟ್ರೇಡಿಂಗ್ ಕ
ಕೃಷ್ಣಪ್ಪನಾಯಕನ ಬೀದಿ, ಮ

॥ ಸತ್ಯಮೇವೋದ್ಧರಾಮ್ಯಹಮ್ ॥

ರಾಜಧಾನಿಯ ರಾಷ್ಟ್ರೀಯ ವಾರ ಪತ್ರಿಕೆ.

ವೃದ್ಧ ಪಿತಾಮಹ ಎಂ. ವೆಂಕಟಕೃಷ್ಣಯ್ಯನವರ ಜ್ಞಾಪಕಾರ್ಥವಾಗಿ ಪ್ರಕಟಿಸಲ್ಪಡುವುದು

ಸಂಪಾದಕರು: ಅಗರಂ ರಂಗಯ್ಯ, ಬಿ. ಎ.

ಸಂಪುಟ ೧] MYSORE : MONDAY 28—9—36 ಮೈಸೂರು : ಸೋಮವಾರ ೨೮—೯—೩೬ [ಸಂಚಿಕೆ ೩೨

...ಬಿಟ್ಟರೆ ಬಣ್ಣಗೇಡು.

ಲಾರ್ಡ್ ಲಿನ್‌ಲಿತ್‌ಗೋರವರ ಅಧ್ಯಕ್ಷತೆ ...ಲ್ಲಿ ಸ್ಥಾಪಿಸಲ್ಪಟ್ಟ ವ್ಯವಸಾಯ ಸಮಿತಿ ...ಯವರ ಸಲಹೆಗಳಲ್ಲಿ ಯಾವುವನ್ನು ಕಾ...ರ್ಯ ರಂಗದಲ್ಲಿ ತಂದಿದ್ದೀರೆಂದು ಶ್ರೀಯುತ ...ಆಗಯ್ಯನವರು ಕೇಂದ್ರ ಸಭೆಯಲ್ಲಿ ಕೇಳಿ...ದು ಕಾರ್ಯತಃ ನಡಸಿದ ವಿಚಾರಗಳ ...ಪಟ್ಟಿಯನ್ನು ಕೇಳಿದರು.

...ಸರ್ಕಾರದವರು ಇದನ್ನು ಕೊಡಲು ...ಪ್ಪಲಿಲ್ಲ.

...ಒಪಲಿಗೆ ಬಂದರೆ ತಿಳಿಯುತ್ತಿತ್ತು ...ಲಾರೆಯ ಕಸದ ಬುಟ್ಟಿಯಲ್ಲಿ ...ದ್ದ ...ಸ್ಟೇಟ್ಮೆಂಟ್.

* * *

...ರುದ್ಯೋಗ ಪರಿಹಾರ.

...ಕ್ಷಿತ ಜಾತಿಯ ಹಣಕಾಸಿನ ಪರಿಸ್ಥಿತಿ...ಯನ್ನು ವಿಮರ್ಶಿಸಲು ಕೇಂದ್ರ ಸರ್ಕಾರ...ದು ಒಂದು 'ಪ್ರವೀಣ ಸಮಿತಿ' ಯ...ನ್ನು ನಿಯಮಿಸುವರಂತೆ.

...ಪ್ರತಿ 'ಪ್ರವೀಣ' ರಿಗೆ ಪ್ರತಿ...ಂದು ಶಾಖೆಯಲ್ಲಿಯೂ ನಿರುದ್ಯೋಗ ...ವಾರ ಕಾರ್ಯಗಳು ನಡೆಸಲ್ಪಡಬೇ...ತತ್ತ್ವವೇನಾದರೂ ಇದೆಯೋ? ...

* * *

...ವಾಸ ಮಹಾನುಭಾವರು!

...ದಾಸು ಪೌರ ಸಭೆಯವರು ಮುಸ್ಲಿಂ ...ಕಾಂಗ್ರೆಸ್ ಅಧ್ಯಕ್ಷರಿಗೆ ಮಾನ ಪತ್ರ ...ಕೊಡಕೂಡದೆಂದು ನಿರ್ಧರಿಸಿದ್ದಾ...

...ಕಾಂಗ್ರೆಸ್ ಅಧ್ಯಕ್ಷರಿಗೆ ಇವರಿಂದ ಯಾ...ಪ್ರಯೋಜನ ಇಲ್ಲ. ಆದರೆ ಪೌರ ಸಭೆಯ ...ಚುನಾವಣೆ ಕ್ಷೇತ್ರದಲ್ಲಿ ನಿಂತರೆ ...

...ಕೆಳಿಯುತ್ತೆ ಫಲಿತಾಂಶ! ನರೀಮ...ಗೆ ಮಾಡಿದ ಮಂಗಳಾರತಿ ...ಕಾಣುತ್ತೆ.

* * *

...ವಸ್ತು ಪ್ರದರ್ಶನ

...ದಲ್ಲಿ ನಡೆಯುವ ಕಾಂಗ್ರೆಸ್ ...ನಡ ಕಾಲದಲ್ಲಿ ವಸ್ತು ಪ್ರದ...ನ ಜರುಗುವುದು. ಅದರ ಮೇ...ನ್ನು ಮಹಾತ್ಮಾ ಗಾಂಧಿಯ...ಕೊಂಡಿರುವರು.

ಆಟಕ್ಕೆ ತಕ್ಕ ರೂಪ.

ಲಂಡನ್ನಿನಲ್ಲಿರುವ ಭಾರತದ ಹೈ ಕಮಿಷನರ ಕಛೇರಿಯಲ್ಲಿ 600 ಜನ ನೌಕರರಿದ್ದಾರೆಯಂತೆ.

ಆಗಬೇಕಾದ ಕೆಲಸವನ್ನೆಲ್ಲಾ ಭಾರತದ ಸಚಿವರು (ಸೆಕ್ರೆಟರಿ ಆಫ್ ಸ್ಟೇಟ್) ನಡೆಸುತ್ತಿರುವಾಗ ಇವರಿಗೇಕೆ ಇಷ್ಟು ಕೆಲಸಗಾರರೋ! ದೇವರೇ ಬಲ್ಲ.

ಉಳಿದ ಡೊಮಿನಿಯನ್‌ಗಳಂತೆ ಕುಣಿಯಲು ಹೊರಟು ಆದಕ್ಕೆ ತಕ್ಕಂತೆ ತಿರುಳಿಲ್ಲದಿದ್ದರೆ ಆಗುವುದು ಇದೇ

* * *

ನಕ್ಷತ್ರಿಕರ ಕಾಟ.

ಸಂಯುಕ್ತ ಪ್ರಾಂತದಲ್ಲಿ ಪ್ರವಾಹದ ಹಾವಳಿಯ ನಿಮಿತ್ತವಾಗಿ ಕಾಂಗ್ರೆಸ್ಸಿನವರು ಜನರಿಗೆ ಪರಿಹಾರವನ್ನು ಒದಗಿಸುತ್ತಲಿದ್ದರು. ಇವರ ಮೇಲೆ 'ಕಣ್ಣಿಟ್ಟಿರ' ಬೇಕೆಂದು ಪೋಲೀಸರಿಗೆ ಆಜ್ಞೆಯಾಗಿತ್ತಂತೆ

ಇದರ ಪರಿಣಾಮವಾಗಿ ಪ್ರವಾಹದ ಹಾವಳಿಯಿಂದ ನೊಂದ ಹಲವರು ಹಳ್ಳಿಗರು ಪರಿಹಾರವನ್ನು ತೆಗೆದುಕೊಳ್ಳಲು ಹಿಂಜರಿದರಂತೆ.

ಅದನ್ನು ತೆಗೆದುಕೊಂಡಲ್ಲಿ ಪೋಲೀಸರು ಹಿಂಸಿಸುವರೆಂದು ಹೇಳಿದರಂತೆ.

ಪ್ರವಾಹವಾದರೆ ಪೋಲೀಸ್ ಕೆಲಸಕ್ಕೇನು ಅಡಚಣೆಯೋ?

* * *

ವೈಸ್ರಾಯರ ರೋಲ್ಸ್ ರಾಯ್ಸ್.

ನಮ್ಮ ವೈಸ್ರಾಯರವರ ಉಪಯೋಗಕ್ಕಾಗಿ ರೋಲ್ಸ್ ರಾಯ್ಸ್ ಮೋಟಾರು ಕಂಪೆನಿಯವರು ತಯಾರಿಸಿರುವ ನೂತನ ಮಾದರಿಯ ಮೋಟಾರೊಂದನ್ನು ತರಿಸಿದ್ದಾರೆ.

ಈ ಮಾದರಿಯ ಮೊದಲನೆಯ ಮೋಟಾರನ್ನು ಚಕ್ರವರ್ತಿಯವರು ತೆಗೆದುಕೊಂಡರು. ಎರಡನೆಯದೇ ವೈಸ್ರಾಯರಿಗೆ ಬಂದಿದೆ

ಹೇಗಿದೆ ಭಾರತದ ಪ್ರತಿಷ್ಠೆ?

* * *

ಗ್ರಾಮೋದ್ಧಾರ ಕೇಂದ್ರ.

ನಮ್ಮ ಸರ್ಕಾರದವರು ಗ್ರಾಮೋದ್ಧಾರದ ಒಂದು ಕೇಂದ್ರವನ್ನು ಏರ್ಪಡಿಸುವರಾಗಿರುವರೆಂದೂ, ಕ್ಲೋಸ್‌ಪೇಟೆ ತಾಲ್ಲೂಕನ್ನು ಈ ಕೇಂದ್ರವನ್ನಾಗಿ ಮಾಡಬೇಕೆಂದಿರುವರೆಂದೂ ತಿಳಿಯಬರುತ್ತದೆ.

"ದೇವರ ದಯೆ" ಬೇಡವೇ?

ರಾಜಧಾನಿಯ ಸಹಕಾರ ಸಂಘ ಒಂದರ ವಾರ್ಷಿಕ ವರದಿಯಲ್ಲಿ 'ದೇವರ ದಯೆಯಿಂದ' ಎಂಬುದನ್ನು ತೆಗೆದು ಹಾಕಬೇಕೆಂದು ಸೂಚನೆ ಬಂದಿದ್ದಿತಂತೆ!

ಒಂದು ಗಂಟೆ ಕಾಲ ವಿಶೇಷ ಚರ್ಚೆಯಾಗಿ ದೇವರ ಪರವಾಗಿಯೇ ತೀರ್ಮಾನವಾಯಿತಂತೆ

ಸಧ್ಯ, ಇನ್ನೂ ದೇವರಿಗೆ ಸ್ಥಾನವಿದೆಯಲ್ಲಾ, ನಮ್ಮ ಭಾರತ ಭೂಮಿಯಲ್ಲಿ!

* * *

ಸಪ್ರೂ ಸಮಿತಿಯ ರಿಪೋರ್ಟ್.

ಸರ್ ಸಪ್ರೂರವರ ಸಮಿತಿಯವರು ಭಾರತೀಯರ ನಿರುದ್ಯೋಗವನ್ನು ಪರಿಶೀಲಿಸಿ ಅದನ್ನು ಪರಿಹರಿಸಲು ಕೆಲವು ಸೂಚನೆಗಳನ್ನು ಕೊಟ್ಟಿದ್ದರು.

ಈ ಸಲಹೆಗಳನ್ನು ಪರಿಶೀಲಿಸಲು ಪುನಃ ಕೆಲವು 'ಪ್ರವೀಣ' ರು ಬರುವರೆಂದು ವದಂತಿ.

ಭಾರತೀಯರ ನಿರುದ್ಯೋಗ ಪರಿಹಾರದ ಬದಲು ಪರದೇಶದ ನಿರುದ್ಯೋಗ ಪರಿಹಾರವಾಯಿತು.

ಎಲ್ಲರೂ ಒಂದೇ ಅಲ್ಲವೆ?

* * *

ವಕೀಲರಿಗೆ ನಿರ್ಬಂಧ

ವಕೀಲರುಗಳು ಹೈಕೋರ್ಟಿನಲ್ಲಿ ವಾದ ವಿವಾದಗಳನ್ನು ನಡೆಸುವಾಗ್ಯೆ ಕರೀಗೌನ್ ಮತ್ತು ಕಪ್ಪು ಬಣ್ಣದ ಕೋಟುಗಳನ್ನು ಹಾಕಿಕೊಳ್ಳಬೇಕೆಂದೂ, ಕೆಳಗಿನ ಕೋರ್ಟುಗಳಲ್ಲಿ ಕರೀ ಅಂಗಿಗಳನ್ನು ಹಾಕಿಕೊಳ್ಳಬೇಕೆಂದೂ ಹೈಕೋರ್ಟಿನಿಂದ ಸರ್ಕ್ಯುಲರ್ ಹೊರಟಿರುವುದಾಗಿ ತಿಳಿದು ಬಂದಿದೆ.

* * *

ಸ್ತ್ರೀ ರಾಜ್ಯ.

ಯೂರೋಪಿನ ಸ್ತ್ರೀ ಮಳೆಯಾಳನ್ಯಾವುದು? ಸ್ವಿಟ್ಜರ್ಲೆಂಡಿನ ಸ್ಪೈಸಿಲೀಸ್. ಇದರ ವಿನಿಸ್ಟ್ ಆಡಳಿತವೂ ಸ್ತ್ರೀಯರದೇ. ನಗರಾಧ್ಯಕ್ಷಳು ಸ್ತ್ರೀ. ಆಕೆಯ ಕೈ ಕೆಳಗಿನ ಅಧಿಕಾರಿಗಳು, ಪೌರಸಭಾಸದರು, ಮಂತ್ರಿಗಳೆಲ್ಲರೂ ಸ್ತ್ರೀಯರೇ. ಅಲ್ಲಿನ ಸಣ್ಣ ಕೈಲ್ವೆ ಸ್ಟೇಷನ್ ಮತ್ತು ಪೋಸ್ಟ್ ಮಾತ್ರ ಗಂಡಸರ ವಶದಲ್ಲಿವೆ.

ಕಾರಣರಾರು?

ಪೌರಸಭೆಯ ಅಧಿವೇಶನವನ್ನು ಮುಂದೂಡಿಸಲು ಹೊಸದೊಂದು ಕಾರಣವನ್ನು ಪೂನಾದವರು ಕಂಡು ಹಿಡಿದಿದ್ದಾರೆ.

ಬಹಳ ದಿನದಿಂದ ಮಳೆ ಇಲ್ಲದಿದ್ದು ಆ ದಿನ ಬಂದಿದ್ದರಿಂದ ಆನಂದಿಸಿ ಸಭೆಯನ್ನು ಮುಂದೂಡಿಸಿದರಂತೆ

ಪೌರಸಭೆಯವರು ಸೇರಿದ್ದರಿಂದಲೇ ಮಳೆ ಬಂದಿತೋ ಏನೋ ಎಂದು ನಮ್ಮ ಸಂಶಯ

* * *

ಇಂಗ್ಲೆಂಡಿಗೆ ನಿಜವಾದ ದೊರೆ ಯಾರು?

ಬ್ರಿಟಿಷ್ ಸಿಂಹಾಸನಕ್ಕೆ ತಾನೇ ನಿಜವಾದ ವಾರಸು ದಾರನೆಂದು ಅಂಥೋನಿಹಾಲ್ ಎಂಬುವನ ವಾದ. ಅದಕ್ಕಾಗಿ ಅನೇಕ ಪ್ರಯತ್ನಗಳನ್ನು ಮಾಡುತ್ತಿರುವನು. ತನ್ನ ಸ್ವಂತ ಮುದ್ರೆಯೊಡನೆ ಒಂದು ಪೌಂಡಿನ ನೋಟನ್ನು ಮಾಡಿ ಹೈಡ್ ಪಾರ್ಕಿನಲ್ಲಿ ಯಾರಿಗೋ ಕೊಡಲು ಹೋದಾಗ ದಸ್ತಗಿಯಾಗಿ ವಿಚಾರಣೆ ಮಾಡಲ್ಪಟ್ಟನು. ಇನ್ನು ಮೇಲೆ ಸದರಿ ಸ್ಥಳಕ್ಕೆ ಹೋಗುವುದಿಲ್ಲವೆಂದು ಹೇಳಿದ್ದರಿಂದ ಖುಲಾಸೆಯಾದನು. ಅವನು ಇಂಡಿಯಾದಲ್ಲಿದ್ದಿದ್ದರೆ ...?

* * *

ಟಿ. ಎಲ್. ಕಾಂತಂರವರ ಅಪ್ಪೀಲು

ಚಿತ್ರದುರ್ಗದ ಅಸಿಸ್ಟೆಂಟು ಕಮಿಷನರಾಗಿದ್ದ ಮಿ॥ ಟಿ. ಎಲ್. ಕಾಂತಂರವರ ಮೇಲೆ ಸರೋಜಮ್ಮ ಎಂಬಾಕೆಯು ಮೊಕದ್ದಮೆ ಹೂಡಿ ತನಗೂ ತನ್ನ ಮಗನಾದ ಗೋಪೀನಾಥನಿಗೂ ಒಟ್ಟು ಮಾಹೆಯಾನಾ ಒಂದು ನೂರು ರೂಪಾಯಿ ಜೀವನಾಂಶ ಕೊಡಬೇಕೆಂದು ತೀರ್ಪು ಪಡೆದಿರುವಳು. ಇದರ ಮೇಲೆ ಮಿ॥ ಕಾಂತಂರವರು ಹೈಕೋರ್ಟಿನಲ್ಲಿ ಅಪ್ಪೀಲು ಮಾಡಿರುವರು. ಜೀವನಾಂಶದ ಮೊಬಲಗು ಬಹಳ ಹೆಚ್ಚೆಂದು ಹೇಳುವರು.

* * *

ಶಿಕ್ಷೆ ಕೊಟ್ಟರೂ ಹೀಗಿರಬೇಕು

ಅಮೇರಿಕದಲ್ಲಿ ಹನ್ನೆರಡು ವರ್ಷ ವಯಸ್ಸಿನ ಒಬ್ಬ ನೀಗ್ರೋ ಬಾಲಕ. ಬೈಸಿಕಲ್ ಕಳುವುದರಲ್ಲಿ ಅಗ್ರೇಸರ. ಅವನನ್ನು ಹಿಡಿದು ಹಿಡಿದು ಪೋಲೀಸರಿಗೆ ಬೇಜಾರಾಯಿತು. ಅವನಿಗ ಬೈಸಿಕಲ್ ಹುಚ್ಚು ಹಿಡಿದು. ಅದ್ದರಿಂದ ಪೋಲೀಸಿನವರೇ ಸಾರ್ವಜನಿಕರಿಂದ ಚಂದಾ ಎತ್ತಿ ಅವನಿಗೆ ಒಂದು ಬೈಸಿಕಲ್ ಕೊಂಡು ಕೊಟ್ಟರು. ಅವನು ಕಳುವುದನ್ನು ಬಿಟ್ಟು ಬಿಟ್ಟನು

ನಿಷ್ಫಲ ಪ್ರೇಮ.

(ಒಂದು ಸಣ್ಣ ಕತೆ)

ಲೇಖಕ—ಹೆಚ್ ವಾಮನಮೂರ್ತಿ

ಹೌದು, ಕೇಶವನು ಈಗೊಬ್ಬ ನಿರುದ್ಯೋಗಿ ಅವನ ಮೇಲೆ ದರಿದ್ರ ನಾರಾಯಣನು ತನ್ನ ತೀಕ್ಷ್ಣ ಬಾಣಗಳನ್ನು ಬಿಡುತ್ತಾ ಅವನನ್ನು ಕಡು ಶಿಕ್ಷೆಗೆ ಗುರಿಮಾಡಿದನು ರೋಗ ಪೀಡಿತನಾಗಿ ಮೇಲಿನ ಅಧಿಕಾರಿಗಳ ಅಪ್ಪಣೆಯಿಲ್ಲದೆ ಕೆಲಸಕ್ಕೆ ಹೋಗದಿದ್ದುದರಿಂದ ಅವನನ್ನು ಕೆಲಸದಿಂದ ನಿವೃತ್ತನನ್ನಾಗಿ ಮಾಡಿದರು ಅವನ ಸುಖವು ಅಂದಿಗೆ ಕೊನೆಗೊಂಡಿತು ಶೋಕ ಸಾಗರದ ಘೋರತರ ತರಂಗಗಳಲ್ಲಿ ತೇಲಾಡಲಾರಂಭಿಸಿದನು ಅವನ ಆಪ್ತ ಮಿತ್ರರು ಅವನನ್ನು ತೊರೆದರು ಬಂಧುಗಳೆಂದು ಆಗಿಂದಾಗ್ಯೆ ಅವನೆದುರಿಗೆ ಕಾಣಿಸಿಕೊಳ್ಳುತ್ತಲಿದ್ದವರು ಈಗ ಅವನನ್ನು ತಲೆಯೆತ್ತಿ ನೋಡುವಷ್ಟು ಕೃಪೆಯನ್ನು ಸಹ ತೆಗೆದುಕೊಳ್ಳುತ್ತಲಿರಲಿಲ್ಲ ಕೇಶವ ರೋಗದಿಂದ ಇನ್ನೂ ಸಂಪೂರ್ಣವಾಗಿ ವಿಮುಕ್ತನಾಗಿಲ್ಲ

ಇಂದಿಗೆ ಕೇಶವನು ಹಾಸಿಗೆ ಹಿಡಿದು ಒಂದು ಮಾಸವಾಗುತ್ತಾ ಬಂದಿತು ಸ್ವಲ್ಪ ಗುಣಮುಖನಾಗುತ್ತಲೆ ಕೆಲಸ ಹುಡುಕಿಕೊಂಡು ಹೊರಟನು, ಅವನ ಪ್ರಯತ್ನಗಳೆಲ್ಲಾ ನೀರಿನಲ್ಲಿ ಹೋಮ ಮಾಡಿದಂತೆ ನಿಷ್ಫಲವಾಯಿತು

ರಮೆಯು ತನ್ನ ಪತಿಗೆ ತಿಳಿಯದಂತೆ ಕೂಲಿನಾಲಿ ಸಂಸಾರವನ್ನು ನಡೆಸುತ್ತಿದ್ದಳು ಕೋಮಲ ಕಾಯವನ್ನುಳ್ಳ ರಮೆಯು ಕೂಲಿನಾಲಿ ಬೇಗೆಯನ್ನು ಸಹಿಸಿಯಾಳೆ? ಸ್ವಲ್ಪ ದಿನಗಳಲ್ಲಿಯೇ ಮೈಯಲ್ಲಿ ಅಸ್ವಸ್ಥತೆ ತೋರಿ ಬಂದಿತು ದಿನ ದಿನವೂ ಅವಳು ಕೃಶಳಾಗುತ್ತಾ ಬಂದಳು ಅವಳ ಮುಖವು ಬಾಡಿದ ಕುಸುಮದಂತೆ ಕಾಂತಿಹೀನವಾಗುತ್ತಾ ಬಂದಿತು ಆದರೂ ಪತಿಯ ಹಿತಕ್ಕಾಗಿ ಪುನಃ ಕೂಲಿ ಮಾಡಲು ಉಪಕ್ರಮಿಸಿದಳು

ಪಾಪ! ಕೇಶವನು ಹಾಸಿಗೆಯಿಂದೇಳುತ್ತಲೇ ಕೆಲಸ ಹುಡುಕಲು ಹೊರಗ ಹೋದರೆ ಮಧ್ಯಾಹ್ನ ಹನ್ನೆರಡು ಗಂಟೆಯ ಹೊತ್ತಿಗೆ ಮನೆಗೆ ಬಂದು ಸ್ವಲ್ಪ ಗಂಜಿಯನ್ನು ಕುಡಿದು, ಪುನಃ ಕೆಲಸ ಹುಡುಕಲು ಹೊರಟರೆ, ಮನೆಗೆ ಬರುವ ಹೊತ್ತಿಗೆ ಒಂಬತ್ತು ಘಂಟೆ ಹೊಡೆಯುತ್ತಿತ್ತು ಹೀಗಿರುವಾಗ ಕೇಶವನಿಗೆ ತನ್ನ ಮಡದಿಯು ಕಷ್ಟಪಟ್ಟು ಕೂಲಿನಾಲಿ ಮಾಡುತ್ತಿರುವಳೆಂದು ಹೇಗೆ ತಿಳಿಯಬೇಕು?

ಇಂದು ಅವನು ನಿತ್ಯವೂ ಮನೆಗೆ ಬರುವ ಹೊತ್ತಿಗಿಂತ ಬಹಳ ಶೀಘ್ರತೆಯಾಗಿ ಮನೆಗೆ ಹೋಗುತಲಿದ್ದಾನೆ. ಅವನ ಮುಖವು ಚಂದ್ರನ ಮುಖದಂತೆ ಕಾಂತಿಯಿಂದ ಕೂಡಿದೆ! ಅವನ ಮುಖದಲ್ಲಿ ಮುಗುಳ್ನಗೆಯ ಭಾವಗಳು ಮೂಡಿವೆ ಮನೆಯ ಸಮೀಪಿಸಿದ ಹಾಗೆಲ್ಲಾ ಅವನ ಸಂತೋಷವು ದ್ವಿಗುಣವಾಗುತ್ತಲಿದೆ ನೋಡಿದವರು ಏನೆಂದುಕೊಂಡಾರು ಎಂಬುದನ್ನು ಸಹಾ ಗಮನಿಸದೆ ಎಳೆಯ ಮಕ್ಕಳಂತೆ ಮನೆಗೆ ಆನಂದದಿಂದ ಓಡಿ ಓಡಿ ಬರುತ್ತಲಿದ್ದಾನೆ!

ಇಂದು ಅವನು ಇಷ್ಟು ಸಂತೋಷವಾಗಿರಲು ಮತ್ತಾವ ಕಾರಣವೂ ಅಲ್ಲದೆ ಪುನಃ ಅವನಿಗೆ ಬೇರೆ ಕೆಲಸವೊಂದು ದೊರೆತದ್ದೇ ಅವನ ಆ ಸುಹಾಸಾನಂದಕ್ಕೆ ಕಾರಣ!

ಮನೆಯ ಬಾಗಿಲು ಮುಚ್ಚಿತ್ತು ಬಾಗಿಲನ್ನು ತಟ್ಟಿ "ರಮಾ, ಬಾಗಿಲು" ಎಂದು ಕೂಗಿದನು ಒಳಗಿನಿಂದ ಯಾವ ಉತ್ತರವೂ ಬಾರದಿದ್ದುದರಿಂದ ಕತ್ತೆತ್ತಿ ನೋಡಿದನು ಬಾಗಿಲಿಗೆ ಬೀಗ ಹಾಕಲ್ಪಟ್ಟಿತ್ತು ಈಗ ಬರಬಹುದೆಂದುಕೊಂಡು ಕಟ್ಟೆಯ ಮೇಲೆ ಕುಳಿತುಕೊಂಡನು.

ರಮೆಯು ಎಂದಿನಂತೆ ಕೂಲಿಗಾಗಿ ಹೋಗಿದ್ದಳು ಕೇಶವನು ರಮೆಗಾಗಿ ಬಹಳ ಹೊತ್ತು ಕಾದರೂ ಅವಳ ಸುಳಿವೇ ಇಲ್ಲ, ಎದ್ದನು ಕಟ್ಟೆಯಮೇಲೆ ನಿಂತು ನಿಂತು ಬೇಸರಿಕೆಯಾಯಿತು ರಮೆಯ ಆಪ್ತ ಮಿತ್ರಳಾದ ಪ್ರಮೀಳೆಯ ಮನೆಗೆ ಹೋಗಿ "ಪ್ರಮೀಳಾ, ರಮೆಯು ಎಲ್ಲಿಗೆ ಹೋಗಿರುವಳೆಂಬುದು ನಿನಗೇನಾದರೂ ಗೊತ್ತೆ?" ಎಂದು ಕೇಳಿದನು ಪ್ರಮೀಳೆಯು ಕೇಶವನನ್ನು ಸಹೋದರನಂತೆ ಕಾಣುತ್ತಲಿದ್ದುದರಿಂದ ಅವನೊಡನೆ ಯಾವ ಆತಂಕವೂ ಇಲ್ಲದೆ ನಿಜಾಂಶವನ್ನು ತಿಳಿಸಿದಳು

ರಮೆಯ ತಾತ್ಪರ್ಯವನ್ನೂ, ಪತಿಸೇವೆಯನ್ನೂ ಮತ್ತು ಅವಳ ನಿಷ್ಕಲ ಪ್ರೇಮವನ್ನೂ ನೋಡಿ ಕೇಶವನಿಗೆ ಆಶ್ಚರ್ಯವೂ, ಸಂತೋಷವೂ, ದುಃಖವೂ ಏಕ ಕಾಲದಲ್ಲಿ ಉಂಟಾದವು

ಸ್ವಲ್ಪ ಹೊತ್ತಿನಲ್ಲಿಯೇ ಗಾಡಿಯೊಂದು ಕೇಶವನ ಮನೆಯ ಬಾಗಿಲಿನಮುಂದೆ ನಿಂತಿತು ಗಾಡಿಯಲ್ಲಿ ಇಣಕಿ ನೋಡಿದೊಡನೆ ಎದೆಯೊಡೆಯಿತು! ಅವನ ಮುಖವು ಬಿಳುಪೇರಿತು! ಉದ್ವೇಗದಿಂದ 'ಅಯ್ಯೋ! ರಮೆ! ನನ್ನ ರಮೆ! ಏನಾಗಿ ಎಷ್ಟು ಕಷ್ಟಪಡಲಾರಂಭಿಸಿದೆ" ಎಂದು ನಾನಾ ವಿಧವಾಗಿ ಪ್ರಲಾಪಿಸಹತ್ತಿದನು ವಿಪರೀತ ಜ್ವರದಿಂದ ಪೀಡಿತಳಾಗಿ ಎಚ್ಚರವಿಲ್ಲದೆ ಮಲಗಿಕೊಂಡಿದ್ದ ರಮೆಯನ್ನು ಮನೆಯೊಳಕ್ಕೆ ಕರೆದೊಯ್ದರು ಅವನು ವೈದ್ಯರನ್ನು ಕರೆತಂದು ತೋರಿಸಿದನು ಅವರು ಔಷಧವನ್ನು ಕೊಟ್ಟು ಚಿಂತಿಸಬೇಡವೆಂದು ಕೇಶವನಿಗೆ ಸಮಾಧಾನೋಕ್ತಿಗಳನ್ನಾಡಿ ಹೊರಟು ಹೋದರು

ವೈದ್ಯರ ಸಮಾಧಾನೋಕ್ತಿಯಿಂದ ಆತ್ಮಸಂತೋಷವಾದರೂ ಶೋಕಸಾಗರದ ಭೀಕರ ತರಂಗಗಳಿಂದ ಅಪ್ಪಳಿಸಲ್ಪಟ್ಟು ನಿಟ್ಟುಸಿರುಬಿಡುತ್ತಾ ತಲೆಯ ಮೇಲೆ ಕೈ ಹೊತ್ತು ಕುಳಿತನು.

ದಿನಾಕರನು ತನ್ನ ಕಿರಣಗಳನ್ನು ಕರೆಯುತ್ತಾ ಈ ಪ್ರಪಂಚದ ಜನರ ತಾಪತ್ರಯಗಳನ್ನು ನೋಡಿ ಬೇಸರಿಕೆಯಿಂದ ಅಸ್ತಮಯನಾಗಲು ತ್ವರೆ ಪಡುತ್ತಲಿದ್ದನು ಪಶುಪಕ್ಷಿಗಳು ತಮ್ಮ ಮಕ್ಕಳನ್ನು ನೋಡಲು ಆತುರದಿಂದ ತಮ್ಮ ತಮ್ಮ ಗೂಡಿಗೆ ತೆರಳುತ್ತಿದ್ದವು ಇಂಥಾ ಸಮಯದಲ್ಲಿ ರಮೆಯ ಪ್ರಾಣವಾಯುವು ಹೊರಟು ಹೋಯಿತು! ರಮೆಯು ಕೇಶವನನ್ನೊಬ್ಬನನ್ನೇ ಅನಾಥನನ್ನಾಗಿ ಬಿಟ್ಟು ಕಣ್ಣು ಮುಚ್ಚಿದಳು

ಕೇಶವನು ಅಪಾರ ದುಃಖಿತನಾದನು ರಮೆಯ ಸದ್ಗುಣಗಳನ್ನು ನೆನೆನೆನೆದು ರೋದಿಸಹತ್ತಿದನು 'ಹಾ! ರಮೇ, ಪಾಪಿಯಾದ ನನ್ನ ಉದರಕ್ಕೆ ನಿನ್ನ ಪ್ರಾಣವನ್ನು ಬಲಿಕೊಟ್ಟೆಯಾ? ಜನ್ಮಜನ್ಮಾಂತರದಲ್ಲಿಯೂ ನಿನಗೆ ನನ್ನಂತಹ ನೀಚ ಪತಿಯು ದೊರೆಯದಿರಲಿ' ಎಂದು ಅನೇಕ ವಿಧವಾಗಿ ಪ್ರಲಾಪಿಸಹತ್ತಿದನು

ರಾತ್ರಿ ಸುಮಾರು ೮ ಗಂಟೆಯ ಸಮಯ ಚಂದ್ರನು ಕೇಶವನ ದುಃಖವನ್ನು ನೋಡಿ ನಗುತ್ತಲಿದ್ದಾನೆ ಕೇಶವನ ಮನೆಯ ಮುಂದುಗಡೆ ಜನಗಳ ಗುಂಪೊಂದು ಸೇರಿತ್ತು ಕೇಶವನು ಮಾತ್ರ ಯಾರನ್ನೂ ಗಮನಿಸದೆ ಶವದ ಮುಂದುಗಡೆ ಕುಳಿತು ರೋದಿಸುತ್ತಲಿದ್ದಾನೆ ಯಾರು ಯಾರು ಎಷ್ಟು ಹೇಳಿದರೂ ಶವವನ್ನು ಅವನು ಸ್ಮಶಾನಕ್ಕೊಯ್ಯಲು ಕೊಡಲೊಪ್ಪಲೇ ಇಲ್ಲ. ಕೊನೆಗೆ ನಾಲ್ಕೈದು ಜನಗಳು ಬಲಾತ್ಕಾರವಾಗಿ ಶವವನ್ನು ಸ್ಮಶಾನಕ್ಕೆ ಕೊಂಡೊಯ್ದು ಸಂಸ್ಕಾರಗಳನ್ನು ಮುಗಿಸಿದರು

ರಮೆಯ ಅಗಲಿಕೆಯಿಂದ ಕೇಶವನಿಗೆ ಹುಚ್ಚು ಹಿಡಿದಂತಾಯಿತು ಯಾವ ವಸ್ತುವನ್ನು ನೋಡಿದರೂ ರಮೆಯೆಂದು ಭ್ರಮಿಸಿ, ಹತ್ತಿರ ಹೋಗಿ ತೋಳುಗಳನ್ನು ನೀಡಿ, ನಿರಾಶನಾಗಿ ಹಿಂತಿರುಗುತ್ತಿದ್ದನು

ಕರ್ನಾಟಕ ಏಕೀಕರಣ ಪರಿಷತ್ತು.

ಇತ್ತೀಚೆಗೆ ಬ್ರಿಟಿಷ್ ಮತ್ತು ಸಂಸ್ಥಾನ ಸರಕಾರಗಳಿಂದ ಕನ್ನಡಕ್ಕೆ ಅನೇಕ ಅನ್ಯಾಯಗಳು ಉಂಟಾಗುತ್ತಿವೆ ಇವುಗಳಿಂದ ಕರ್ನಾಟಕದಲ್ಲಿ ಪರಪ್ರಾಂತೀಯರ ಮತ್ತು ಪರಭಾಷೆಯ ವರ್ಚಸ್ಸು ಅನವಶ್ಯಕವಾಗಿ ಬೆಳೆದು ಕರ್ನಾಟಕದ ಹಿತಸಂಬಂಧಗಳಿಗೆ ಬಾಧೆ ಬರಲಾರಂಭಿಸಿದೆ ಕನ್ನಡದ ಬೆಳೆವಣಿಗೆಗೆ ಪರಪ್ರಾಂತೀಯರ ವಿರೋಧವಲ್ಲದೆ ಸರಕಾರದವರ ವಿರೋಧವೂ ಪ್ರಾರಂಭವಾಗಿ ಏಕೀಕೃತ ಕರ್ನಾಟಕದ ಕಲ್ಪನೆಗೆ ಆಘಾತವಾಗಿದೆ. ಬೆಳಗಾವಿ, ಧಾರವಾಡ, ವಿಜಾಪುರ, ಕಾರವಾರ ಜಿಲ್ಲೆಗಳಲ್ಲಿಯ ನೊಂದಣೆ ಖಾತೆಯಲ್ಲಿ ಮರಾಠಿಯ ಪ್ರವೇಶವಾಗಿದೆ ಬೆಳಗಾವಿ, ಖಾನಾಪೂರ, ಚಿಕ್ಕೋಡಿ ತಾಲೂಕುಗಳಲ್ಲಿಯ ಮತ್ತು ಸುಪೆ ಪೇಟೆಯಲ್ಲಿಯ ಮತದಾರ ಪಟ್ಟಿಗಳು ಕೇವಲ ಮರಾಠಿಯಲ್ಲಿಯೂ ಬಳ್ಳಾರಿ ಜಿಲ್ಲೆಯ ಪೂರ್ವಭಾಗದಲ್ಲಿಯ ಮತದಾರ ಪಟ್ಟಿಗಳು ತೆಲುಗಿನಲ್ಲಿಯೂ ಪ್ರಕಟವಾಗಿವೆ ಜಮಖಂಡಿ ಸಂಸ್ಥಾನದಲ್ಲಿಯ [illegible]ದೆ ಮಂಡಲದಲ್ಲಿ ಕನ್ನಡ ವಿಷಯವನ್ನು ಚರ್ಚಿಸಕೂಡದೆಂದು ಕಟ್ಟಳೆಯಾಗಿದೆ ಹೈದರಾಬಾದ ಸಂಸ್ಥಾನದ ಕಲಬುರ್ಗಿ ಜಿಲ್ಲೆಯ ಸರಕಾರೀ ವ್ಯವಹಾರವೆಲ್ಲ ಉರ್ದುಭಾಷೆಯಲ್ಲಿಯೇ ನಡೆಯುತ್ತಿದೆ ಉತ್ತರ ಕರ್ನಾಟಕ ಸಂಸ್ಥಾನಗಳಲ್ಲಿಯ ಸರಕಾರೀ ವ್ಯವಹಾರದಲ್ಲಿ ಕನ್ನಡಕ್ಕೆ ಮನ್ನಣೆಯಿಲ್ಲ ಕನ್ನಡ ಶಾಲೆಗಳಿಗೆ ಪ್ರೋತ್ಸಾಹವಿಲ್ಲ ಬೆಳಗಾವಿ, ಚಿಕ್ಕೋಡಿ ಕೋರ್ಟುಗಳಲ್ಲಿ ಮರಾಠಿಯು ಕಾಲಿಟ್ಟು ಎಷ್ಟೋ ವರ್ಷಗಳಾದವು. ಪೋಸ್ಟ ಆಫೀಸಿನಲ್ಲಿ ಕನ್ನಡ ಫಾರ್ಮುಗಳು ದೊರೆಯುವದೇ ಕಠಿಣವಾಗಿದೆ. ಇನ್ನು ಕೆಲ ಎಷ್ಟೋ ಸರಕಾರ ಕಚೇರಿಗಳಲ್ಲಿಯೂ ಫಾರ್ಮು ಮೊದಲಾದವು ಕೇವಲ ಮರಾಠಿಯಲ್ಲಿಯೇ, ಲೋಕನಿಯುಕ್ತವೆಂದೆನಿಸಿಕೊಳ್ಳುವ ಲೋಕಲ್ ಬೋರ್ಡು, ಮ್ಯುನಿಸಿಪಾಲಿಟಿ, ಬ್ಯಾಂಕ ಮೊದಲಾದವುಗಳಲ್ಲಿ ಮರಾಠಿಯ ಪ್ರಾಬಲ್ಯವಿದೆ ಬೆಳಗಾವಿಯ ಮ್ಯುನಿಸಿಪಾಲಿಟಿಯ ವ್ಯವಹಾರವೆಲ್ಲ ಮರಾಠಿಯಲ್ಲಿ [illegible]ರಣಾದ ಲೋಕಲ್ ಬೋರ್ಡಿನ ವ್ಯವಹಾರವೆಲ್ಲ ಕನ್ನಡದಲ್ಲಿ ನಡೆಯಬೇಕೆಂದು [illegible]ತ್ತುವಳಿ ಒಂದರ ಉಚ್ಚಕ್ಷರ ಮನ್ನಣೆ ದೊರೆಯಲಿಲ್ಲ ಬಳ್ಳಾರಿಯಲ್ಲಿಯ ಕನ್ನಡ ಟ್ರೇನಿಂಗ ಕಾಲೇಜನ್ನು ಹೊಸಪೇಟೆಗೆ ಸ್ಥಳಾಂತರ ಮಾಡಿದ್ದರಿಂದ ಬಳ್ಳಾರಿಯಲ್ಲಿ [illegible]ದ ವರ್ಚಸ್ಸು ಹೆಚ್ಚಾಗಹತ್ತಿದೆ ಹೀಗೆ ಕನ್ನಡವು ಎಲ್ಲೆಲ್ಲಿಯೂ ಹಿಂದೊತ್ತಲ್ಪಡಹತ್ತಿದೆ ಮುಂಬಯಿ, ಪುಣೆ, ಮದ್ರಾಸ ಮೊದಲಾದ ಸರಕಾರದ ಕೇಂದ್ರಗಳಲ್ಲಿ ಮರಾಠಿಗರೂ ತೆಲುಗರೂ ಪ್ರಬಲರಾಗಿದ್ದುದರಿಂದಲೇ ಸರಕಾರೀ ಖಾತೆಗಳಲ್ಲಿ ಈ ರೀತಿ ಪರಭಾಷೆಗಳ ಪ್ರವೇಶವಾಗಹತ್ತಿದೆ ಈ ಅನ್ಯಾಯಗಳನ್ನೆಲ್ಲ ತಡೆದು ಕನ್ನಡದ ಬೆಳವಣಿಗೆಯನ್ನು ಹೆಚ್ಚಿಸಲು [illegible] ಕರ್ನಾಟಕ ಆಂದೋಲನವನ್ನು ಈಗಲೇ ಪ್ರಾರಂಭಿಸುವದು ಅತ್ಯವಶ್ಯವಾಗಿದೆ ಕರ್ನಾಟಕದ ಏಕೀಕರಣ ಚಳವಳಿಗೆ ಮತ್ತೆ ಸ್ವತಂತ್ರಸ್ವರೂಪವನ್ನು ಕೊಡಬೇಕಾಗಿದೆ

ಈ ಎಲ್ಲ ದೃಷ್ಟಿಗಳಿಂದ ನೋಡಿದರೆ "ಕರ್ನಾಟಕ ಏಕೀಕರಣ ಪರಿಷತ್ತಿನ ಕೇವಲ ಅಧಿವೇಶನ" ವನ್ನು ಬೇಗನೆ ಕೂಡಿಸುವದು ಅತ್ಯಂತ ಅವಶ್ಯಕವೆಂದು ತಪ್ಪರಿಂದ ಇದೇ ನವ್ಹೆಂಬರ ತಿಂಗಳು ಬೆಳಗಾವಿಯಲ್ಲಿ ಕರೆಯುವದು ಗೊತ್ತಾಗಿದೆ ಇದಕ್ಕೆ ಈಗಾಗಲೇ ಅನೇಕ ಮುಖಂಡರ ಮತ್ತು ವೃತ್ತಪತ್ರಿಕೆಗಳ [illegible] ದೊರೆತಿದೆ ಕರ್ನಾಟಕದಲ್ಲಿಯ ಸಂಸ್ಥೆಗಳು ವೃತ್ತಪತ್ರಿಕೆಗಳು, ಮುಖಂಡರು ಮತ್ತು ಜನಸಾಮಾನ್ಯವು ಸಲಹೆ ಸೂಚನೆಗಳನ್ನು ಕೊಟ್ಟು, ಧನಸಹಾಯ ಮಾಡಿ, ಲೇಖನಗಳನ್ನು ಬರೆದು, ಪ್ರತಿನಿಧಿಗಳನ್ನು ಕಳಿಸಿ ಸರ್ವವಿಧದಿಂದಲೂ ಪರಿಷತ್ತಿಗೆ ಸಹಾಯ ಮಾಡಬೇಕೆಂಬುದು ಕನ್ನಡಿಗರೆಲ್ಲರ ಪ್ರಧಾನ ಕರ್ತವ್ಯ[illegible]

ಬಳವಂತರಾವ ದ[illegible]

ಅಧ್ಯಕ್ಷ

ಸಿಮ್ಲಾದಲ್ಲಿ ಭೂತ ಜನನ.

ಸಿಮ್ಲಾ ನಗರಕ್ಕೆ ಸೇರಿದ ಸಾಂಜವಲಿ ಎಂಬಲ್ಲಿ ಭೂತದ ಜನನವನ್ನು ನೋಡಿ ಜನರು ಬೆರಗಾಗಿದ್ದಾರೆ! ಇಲ್ಲಿ ಒಂದು ಕಟ್ಟುಕಥೆ ಇದೆ. ಈ ಪಟ್ಟಣದ ಸುತ್ತಮುತ್ತಲ ಬೆಟ್ಟಗಳ ಪ್ರದೇಶದಲ್ಲಿ ಯಾವ ಹೆಂಗಸು ಒಂದು ಮಗ ವಿಗೆ ಜನನ ಕೊಟ್ಟು, ತಾನು ಒಂದು ತಿಂಗಳಲ್ಲಿಯೇ ಮರಣಹೊಂದುತ್ತಾಳೆಯೋ ಅಂತಹವಳು ಪಿಶಾಚಿಯಾಗಿ ಆ ಮಗುವಿನ ಸಮೀಪದಲ್ಲಿ ... ಸುಳಿದಾಡುತ್ತಾಳೆಂಬ ನಂಬಿಕೆಯಿದೆ.

ಈ ತಿಂಗಳಿನ ಆದಿಯಲ್ಲಿ ಒಬ್ಬ ಹೆಂಗಸು ಒಂದು ಮಗ ವಿಗೆ ಜನನ ಕೊಟ್ಟು ಮರಣಹೊಂದಿದಳು. ಅವಳ ಶವವನ್ನು ಸ್ಮಶಾನಕ್ಕೆ ತೆಗೆದುಕೊಂಡುಹೋಗಿ, ... ಮೇಲಿಟ್ಟು, ದಹನ ಮಾಡಿದರು. ... ಉರಿಯುತ್ತಿದ್ದ ಆ ಶವದಿಂದ ಸ್ತ್ರೀ ವ್ಯಕ್ತಿಯ ಒಂದು ಶರೀರವು ಮೇಲಕ್ಕೆದ್ದಿತು! ... ಓಡಾಡುತ್ತಿದ್ದ ಈ ವಿಚಿತ್ರ ... ವನ್ನು ನೋಡಿ ಎಲ್ಲರೂ ಆಶ್ಚರ್ಯ ... ರಾದರು. ಈ ವಿಚಿತ್ರ ಪ್ರಸಂಗವನ್ನು ನೋಡಲು ಅನೇಕರು ನೆರೆದಿದ್ದರು.

ಈ ಭೂತವು ಪಟ್ಟಣದ ನಾನಾ ಭಾಗಗಳಲ್ಲಿ ಓಡಾಡಲಾರಂಭಿಸಿತು. ಈ ಭೂತವು ... ಸಲ ಬಂಕೆಯ ಬಡಿಯಂತೆಯೂ ... ಒಂದು ಸಲ ಪಟ್ಟಣದಲ್ಲಿ ವಾಸಿಸುವ ... ಗಸಿನಂತೆಯೂ ಕಾಣುತ್ತಿತ್ತು. ಇದು ... ಅನೇಕ ತಿಳುವಳಿಕೆಯುಳ್ಳ ಗಂಡಸರು, ಹೆಂಗಸರೂ ನೋಡಿ ಆಶ್ಚರ್ಯಚಕಿತರಾದರು. ಕಾಲು ಘಂಟೆ ಹಾಗೆಯೇ ಸುಳಿದಾಡಿದ ನಂತರ ಭೂತವು ಅದೃಶ್ಯವಾಯಿತು! ಭೂತವನ್ನು ನಂಬದೇ ಇದ್ದ ಕೆಲವು ಜನರು ಈ ವಿಚಿತ್ರ ಪ್ರಸಂಗವನ್ನು ನೋಡಿ ವಿಶೇಷವಾಗಿ ಆಶ್ಚರ್ಯಪಡುತ್ತಿದ್ದಾರೆ!

ಟಿಪ್ಪೂಸುಲ್ತಾನರ ಮಯೂರಾಸನವು ಮೈಸೂರಿಗೆ.

ಟಿಪ್ಪೂಸುಲ್ತಾನರು ಉಪಯೋಗಿಸುತ್ತಿದ್ದ ಮಯೂರಾಸನವನ್ನು ಬ್ರಿಟಿಷರು ಶ್ರೀರಂಗಪಟ್ಟಣವನ್ನು ಆಕ್ರಮಿಸಿದಾಗ ತೆಗೆದುಕೊಂಡು ಹೋದರು. ಸುಮಾರು 150 ವರ್ಷಗಳಿಂದಲೂ ಅದು ವಿಕ್ಟೋರಿಯಾ ವಸ್ತು ಪ್ರದರ್ಶನಾಲಯದಲ್ಲಿಯೇ ಇತ್ತು. ಈಗ ಅದನ್ನು ನಮ್ಮ ಶ್ರೀಮನ್ಮಹಾರಾಜರಿಗೆ ವಾಪಸು ಕೊಟ್ಟಿರುತ್ತಾರೆ. ಅದು ರತ್ನಗಳಿಂದ ಅಲಂಕರಿಸಲ್ಪಟ್ಟು ಬಹಳ ಬೆಲೆಯುಳ್ಳದ್ದಾಗಿದೆ. ಅದರ ಮೇಲ್ಭಾಗದಲ್ಲಿ ರತ್ನ ಖಚಿತವಾದ "ಹೂಮ" ಎಂಬ ಪಕ್ಷಿಯಿದೆ. ಈ ಪಕ್ಷಿಯು ಬಹಳ ಶುಭದಾಯಕವೆಂದು ಹೇಳಲ್ಪಟ್ಟಿದೆ. ಈ ಆಸನದ ಆಗಮನದಿಂದ ಮೈಸೂರಿಗೆ ಸಮಸ್ತ ಶುಭಗಳೂ ಉಂಟಾಗಲೆಂದು ಪ್ರಾರ್ಥಿಸೋಣ. ನಾವು ಕೊಡುತ್ತಿರುವ ಪ್ರೊಗವಿಯ ಭಾರವು ನಿವೃತ್ತಿಯಾಗಲೆಂದೂ, ಬೆಂಗಳೂರು ಮುಂತಾದ ಪ್ರದೇಶಗಳು ನಮಗೆ ಸೇರಲೆಂದೂ, ನಮ್ಮ ಸಂಸ್ಥಾನದಲ್ಲಿ ಜವಾಬ್ದಾರಿ ಸರ್ಕಾರವು ಸ್ಥಾಪಿಸಲ್ಪಡಲೆಂದೂ ಆಶಿಸೋಣ.

ಗಣಪತಿ ಪೂಜಾ

ಶ್ರೀ ಶಾರದಾವಿಲಾಸ ಹೈಸ್ಕೂಲಿನ ಆವರಣದಲ್ಲಿ ಮಾಮೂಲಿನಮೇರೆಗೆ ಈ ವರ್ಷವೂ ಗಣಪತಿ ಪೂಜೆಯು ನಡೆಯುತ್ತಿರುವುದು. ಈ ಸಂದರ್ಭದಲ್ಲಿ ತಾ|| ೨೪ ೯ ೩೬ ನೇ ಗುರುವಾರ ಸಾಯಂಕಾಲ ವಿದ್ವಾಂಗಳಾದ ರಂಗನಾಥರವರ ಕೊಳಲೂ, ವಾಸಪ್ಪನವರ ಪಿಟೀಲೂ, ಶ್ರೀನಿವಾಸಲು ನಾಯ್ಡು ರವರ ಕಂಜರಿಯೂ, ಕೃಷ್ಣಮೂರ್ತಿಯವರ ತಬಲ ಇವುಗಳಿಂದೊಡಗೂಡಿದ ಸುಶ್ರಾವ್ಯವಾದ ಸಂಗೀತಕಚೇರಿಯು ನಡೆಸಲ್ಪಟ್ಟಿತು.

ನಂಜನಗೂಡು ಸಬ್‌ಡಿವಿಜನ್ ಆಫೀಸರು.

ಈಗಿನ ಹೊಸ, ಯುವಕ ಸಬ್ ಡಿವಿಜನ್ ಆಫೀಸರವರು ಕೆಲವು ದಿನಗಳ ಹಿಂದೆ ಚಾಮರಾಜನಗರಕ್ಕೆ ಹೋಗಿ, ಭೋಗಾಪುರದ ಅಧಿಕರ್ಣಾಟಕ ಯಜಮಾನರುಗಳನ್ನು ಬರಮಾಡಿ ಅವರುಗಳಿಂದ ವಿನೋಬೋ ... ಗಳನ್ನು ತೆಗೆದುಕೊಂಡರೆಂದೂ, ಭೋಗಾಪುರಕ್ಕೂ ಹೋಗಿ ಅಧಿಕರ್ಣಾಟಕರನ್ನು ಕೇಳಲು ಅವರು ಸದರಿ ಹೇಳಿಕೆಗಳಿಗೆ ರುಜು ಹಾಕುವುದಿಲ್ಲವೆಂದು ಹೇಳಿದಂತೆಯೂ, ಇದರ ಮೇಲೆ ಇತರರಿಂದ ಹೇಳಿಕೆ ತೆಗೆದುಕೊಂಡು ಬಂದರೆಂದೂ ವಕೀಲರ ಶ್ರೀ|| ತಗಡೂರು ರಾಮಚಂದ್ರರಾಯರು ಬರೆದಿರುತ್ತಾರೆ. ಈ ವಿಧವಾದ ವ್ಯವಹಾರಗಳನ್ನು ನಡೆಸುವುದು ಸರಿಯಲ್ಲವೆಂದೂ ರಾಯರು ತಿಳಿಸುತ್ತಾರೆ.

ಆಫೀಸರ ಪ್ರಸ್ತುತದಲ್ಲಿ ಭೋಗಾಪುರಕ್ಕೆ ಹೋಗುವ ಆಲೋಚನೆ ಮಾಡಿಲ್ಲವೆಂದೂ, ಆ ಸುತ್ತಮುತ್ತಲಿನ ಪ್ರಾಂತದಲ್ಲಿ ಇಟ್ಟಿರುವ ಪೋಲೀಸ್ ಪಡೆಯನ್ನು ವಾಪಸು ತೆಗೆದುಕೊಂಡು ವ್ಯರ್ಥವಾದ ವೆಚ್ಚವನ್ನು ತಪ್ಪಿಸಬೇಕೆಂದೂ ಟೀಕೆ ಮಾಡುತ್ತಾರೆ.

ಅದ್ವೈತ ವೇದಾಂತ ಪಾಠ

ಶ್ರೀ ಶೃಂಗೇರಿ ಮಠದ ವಿದ್ವಾಂಸರಾದ ವೇ|| ಬ್ರ|| ಮಲ್ಲಿಗರ ಸುಬ್ರಹ್ಮಣ್ಯಶಾಸ್ತ್ರಿಗಳು ರಾಜಧಾನಿಯ ಅಧೀನದ ಶಂಕರಾಲಯದಲ್ಲಿ ಪ್ರತಿದಿನ ಸಾಯಂಕಾಲ ಐದೂವರೆ ಗಂಟೆಯಿಂದ ಏಳು ಗಂಟೆವರೆಗೆ ಅದ್ವೈತ ವೇದಾಂತ ವಿಚಾರವಾಗಿ ಸ್ವಾರಸ್ಯವಾದ ಭಾಷಣಗಳನ್ನು ಮಾಡುತ್ತಿರುವರು.

ತಲೂರು ಆದಿಕರ್ಣಾಟಕರ ದುರವಸ್ಥೆ.

ಮೈಸೂರು ತಾಲ್ಲೋಕು ತಲೂರಿನಲ್ಲಿ ಆದಿಕರ್ಣಾಟಕರಿಗೆ ಸೇರಿದ 100 ಮನೆಗಳಿವೆ. ಇವರಿಗೆ ಅನ್ನಪಾನಾದಿಗಳಿಗೆ ಬಾವಿ ನೀರಾಗಲಿ ಕೆರೆಯ ನೀರಾಗಲಿ ಗ್ರಾಮದಲ್ಲಿ ಸಿಕ್ಕುವುದಿಲ್ಲ. 1½ ಮೈಲಿ ದೂರ ಹೋಗಿ ನೀರನ್ನು ತಂದು ಕಷ್ಟದಿಂದ ಜೀವನ ಮಾಡುತ್ತಿದ್ದಾರೆ. ಈಚೆಗೆ ಕೇರಿ ಬಳಿಯಲ್ಲಿರುವ ಊರು ಒಟ್ಟಿನ ಕೆರೆಯಲ್ಲಿ ಆದಿಕರ್ಣಾಟಕರು ನೀರು ತೆಗೆದುಕೊಳ್ಳುವುದಕ್ಕೆ ಪ್ರಯತ್ನಪಟ್ಟಾಗ ಸವರ್ಣ ಹಿಂದುಗಳು ಅವಕಾಶಕೊಡದೆ ನಾನಾ ವಿಧವಾಗಿ ಕಿರುಕುಳ ಕೊಡುತ್ತಿದ್ದಾರೆ. ಈ ವಿಚಾರದಲ್ಲಿ ಸರ್ಕಾರಕ್ಕೆ ಹರಿಜನರು ಅರ್ಜಿ ಹಾಕಿಕೊಂಡ ಇರುತ್ತಾರಂತೆ. ವರ್ತಮಾನವಿದೆ. ಹೊಸ ಸರ್ಕಾರದವರು ಹರಿಜನರ ನೀರಿನ ಕಷ್ಟವನ್ನು ಪರಿಹಾರಮಾಡಿ ಕೆರೆಯಲ್ಲಿ ನೀರು ತೆಗೆದುಕೊಳ್ಳುವುದಕ್ಕೆ ತಕ್ಕ ಏರ್ಪಾಡುಮಾಡುತ್ತಾರೆಂದು ನಿರೀಕ್ಷಿಸುತ್ತಿದ್ದಾರೆ.

ಹರಿಜನ ಹಿತೈಷಿ.

ಬಿನ್ನಿಮಿಲ್ ಮೊಕದ್ದಮೆ ವಜಾ

ಬೆಂಗಳೂರಿನ ಕಳೆದ ಗಲಭೆ ಸಂದರ್ಭದಲ್ಲಿ ಬಿನ್ನಿ ಮಿಲ್ ಕೂಲಿಗಳು ಮಿಲ್ ಆಡಳಿತಗಾರರ ಮೇಲೆ ಹಾಕಿದ್ದ ಮೊಕದ್ದಮೆಯಲ್ಲಿ ಕೂಲಿಗಳ ಪರವಾಗಿ ತೀರ್ಪು ಆಯಿತು. ಎದುರುದಾರೆ ಮಿಲ್ಲಿನವರು ಅಪ್ಪೀಲು ಹೂಡಿದರು. ಅಪ್ಪೀಲನ್ನು ಸಬ್ ಜಡ್ಜ್ ಮ|| ಪೆಟ್ ನಂಜುಂಡಯ್ಯನವರು ತಿರಸ್ಕರಿಸಿರುವರು.

ಬಿಪತ್ರಕ್ಷ ಆಯುರ್ವೇದ ವಿದ್ವಾನ್ ಟಿ. ವಿ. ಪಂಡಿತರ

ಬಾಲಸುಧಾ

ಮಕ್ಕಳ ಜ್ವರದ ಗೆಡ್ಡೆಯನ್ನು ಜಾತರಿ ಗುಣ ಪಡಿಸುತ್ತೆ. ಲಿವರ್ (ಪಿತ್ತ...) ಲಕ್ಷಣವಾಗಿ ಕಣ್ಣು ಹಳದಿ ಬಣ್ಣವಾಗಿದ್ದರೆ ಇದರ ಸೇವನೆಯಿಂದ ದಿನೇ ... ಗುಣವಾಗುತ್ತೆ. 20 ವರ್ಷಗಳಿಂದಲೂ ಅನುಭವ ಸಿದ್ಧವಾಗಿದೆ—ಮಕ್ಕಳಿಗೆ ನಮ್ಮ ಬಾಲಸಂಜೀವಿನಿಯನ್ನೇ ಉಪಯೋಗಿಸಿರಿ.

... ಬೆಲೆ 1 ರೂ

ಬಾಲಸಂಜೀವಿನಿ ೪ ಆ

ಮೈಸೂರು, ಬೆಂಗಳೂರು, ಮದ್ರಾಸುಗಳಲ್ಲಿ ನಮ್ಮ ಶಾಖೆಗಳಿವೆ

ವೈದ್ಯಶಾಲಾ, ನಂಜನಗೂಡು.

NANDA SODA FACTORY,

ST AERATED WATER SUPPLIERS

COMPLETE REQUISITES FOR

ERATED WATER MANUFACTURERS

AVAILABLE.

ಆನಂದಾ ಸೋಡಾ ಫ್ಯಾಕ್ಟರಿ,

ದೊಡ್ಡ ಪೇಟೆ ಮೈಸೂರು

ಎಂ. ವಿ. ನಾರಾಯಣರಾಯರ

ಶ್ರೀ ಸತ್ಯನಾರಾಯಣ ಪರಿಮಳ ಫ್ಯಾಕ್ಟರಿ,

ಜಗನ್ಮೋಹನ ಬಂಗ್ಲಾ ಬೀದಿ, ಮೈಸೂರು

ಪರಿಮಳ ಅಗರ ಬತ್ತಿ

ಉಪಯೋಗಿಸಿ ಪ್ರೋತ್ಸಾಹಿಸಿರಿ

ಸಾಧ್ವಿ

೨೮-೯-೩೬ ನೇ ಸೋಮವಾರ

ಸಹಕಾರ ಸಮಿತಿಯ ವರದಿ.

ಈ ವರದಿಯ ಒಂದು ಪ್ರತಿಯು ನಮ್ಮ ಕೈಗೆ ಬಂದಿದೆ. ಸಮಿತಿಯು ಬಹು ಮುಖ್ಯವಾದುದೆಂದೂ, ಬಹು ಬುದ್ಧಿವಂತರುಗಳನ್ನೊಳಗೊಂಡುದೆಂದೂ ನಾವು ಬರೆಯಬೇಕಾದುದಿಲ್ಲ.

ಇಂತಹ ಇತರ ಸಮಿತಿಗಳನ್ನೂ, ಈಗ ಕೆಲಸಮಾಡುತ್ತಿರುವ ಸಹಕಾರ ಸಂಘಗಳ ಆಗುಹೋಗುಗಳನ್ನೂ ಮಾತ್ರವೇ ಗಮನದಲ್ಲಿಟ್ಟು, ಈ ಸಮಿತಿಯು ತನ್ನ ವರದಿಯನ್ನು ಪ್ರಕಟಿಸಿರುವುದೆಂದು ಕಾಣುವುದು. ದೇಶದ ಆವಶ್ಯಕತೆಗೆ ಸಹಕಾರತತ್ವವು ಹೇಗೆ ಉಪಯೋಗಿಸಲ್ಪಡಬೇಕೆಂಬುದನ್ನು ಕೂಲಂಕಷವಾಗಿ ಚರ್ಚಿಸಿದಂತೆ ಈ ವರದಿಯಿಂದ ಕಾಣಲಿಲ್ಲ.

ಈ ಸಮಿತಿಯ ಹಲವು ಸೂಚನೆಗಳು ರಿಜಿಸ್ಟ್ರಾರವರ ಅಧಿಕಾರವನ್ನು ಮಿತಿಮೀರಿ ಹೆಚ್ಚಿಸಿ, ಸದಸ್ಯರ ವಿಶೇಷ ಹಕ್ಕುಬಾಧ್ಯತೆಗಳನ್ನು ತಡೆಗಟ್ಟುವಂತಿವೆ. ಇಂತಹ ಮತ್ತೆರಡು ಸಮಿತಿಗಳು ನಿಶ್ಚಯವಾಗುವಷ್ಟರಲ್ಲಿ ಪಂಚಾಯಿತರ ಮತ್ತು ಸದಸ್ಯರೆಲ್ಲರ ಹಕ್ಕುಬಾಧ್ಯತೆಗಳೆಲ್ಲವೂ ನಿರರ್ಥಕವಾಗುವುವು. ಈಗಾಗಲೇ ಅನವಶ್ಯಕವಾದ ಹಲವು ಸಂಗತಿಗಳಲ್ಲಿ ರಿಜಿಸ್ಟ್ರಾರವರ ಪ್ರವೇಶವಿದೆ. ಎಷ್ಟು ಜನ ಮೆಂಬರುಗಳಿರಬೇಕು? ಎಷ್ಟು ಲೆಕ್ಕಗಳು ಆವಶ್ಯಕ? ಬಡ್ಡಿ ದರವು ಎಷ್ಟಿರಬೇಕು? ಯಾರಮೇಲೆ ದಾವಾ ಹಾಕಬೇಕು? ಇತ್ಯಾದಿ ಹಲವು ಸಂಗತಿಗಳಲ್ಲಿ ರಿಜಿಸ್ಟ್ರಾರವರ ಅಧಿಕಾರವು ಹೆಚ್ಚಿದಂತೆಲ್ಲಾ ಅವರ ಶಿಬ್ಬಂದಿಯೂ ಹೆಚ್ಚಿ ಬಡ ಬೋರೇಗೌಡನ ಕಷ್ಟಾರ್ಜಿತ ದ್ರವ್ಯಕ್ಕೆ ಇದು ಒಂದು ಹೊರೆಯಾಗಿ ಪರಿಣಮಿಸಬಹುದು. ನೀರಾವರಿಯ ಸಹಕಾರ ಸಂಘಗಳ ಕಡೆಗೆ ಗಮನವನ್ನು ಕೊಟ್ಟಿಲ್ಲ. ಕೂಲಿಕಾರರ ಸಹಕಾರ ಸಂಘಗಳನ್ನು ಮುಟ್ಟಿ ಮುಂದಕ್ಕೆ ಹಾರಿದೆ. ರೈತನ ಋಣಬಾಧಾಪಹಾರಕ ಸಮಸ್ಯೆಯ ಸಾಗರಕ್ಕೆ ಬಿದ್ದು ದಡವನ್ನೇ ಸೇರದೆ ಸೋತು ಶಾಂತವಾಗಿ ನೋಡುತ್ತಿದೆ. ಗ್ರಾಮ ಕೈಗಾರಿಕೆಯ ಕಡೆಗೆ ಕಡೆಗಣ್ಣಿಂದ ನೋಡಿದೆ.

ಸಹಕಾರತತ್ವವು ಆರ್ಥಿಕೋನ್ನತಿಗೆ ಸಿದ್ಧಾಂತವು. ಕಾನೂನಿನ ಬೆಂಬಲವನ್ನು ಕೊಟ್ಟು, ವಿಶಾಲ ಹೃದಯದಿಂದ ರೈತನ ರಕ್ಷಣೆಯನ್ನು ಮಾಡಬೇಕಾದರೆ ಈ ತರಾವೀ ಸಾಲಗಳಾಗಲೀ, ಲಡಮಾನ ಬ್ಯಾಂಕುಗಳಾಗಲೀ ಸುತರಾಂ ಸಾಲವು. ಬರುವ ಸಹಕಾರ ಸಭೆಯಲ್ಲಿ ಈ ವರದಿಯಮೇಲಿನ ಚರ್ಚೆಗಾಗಿಯೇ ಒಂದು ದಿನವನ್ನು ಮೀಸಲಾಗಿಡಬೇಕೆಂದು ನಾವು ಸೂಚಿಸುವೆವು.

ಒಟ್ಟಾಗಿ ಸರಕಾರವು ಹಣಕಾಸಿನ ಭದ್ರತೆಯನ್ನೂ, ತತ್ವಪ್ರಚಾರವನ್ನೂ ಗಮನಿಸಬೇಕಲ್ಲದೆ, ಒಳ ಆಡಳಿತಗಳ ವಿವರಕ್ಕೆ ಕೈಯಿಡುವುದನ್ನು ಸಾಧ್ಯವಾದಷ್ಟೂ ಕಡಿಮೆಮಾಡಬೇಕೆಂದು ನಾವು ಅಭಿಪ್ರಾಯಪಡುವೆವು.

ಮತ್ತೆ ೧೪೪ ನೇ ಕಲಮಿನ ಪ್ರಯೋಗ

ಶ್ರೀ॥ ತಗಡೂರು ರಾಯರನ್ನು 144ನೇ ಕಲಮಿನ ಪ್ರಕಾರ ನಿರ್ಬಂಧಿಸಿರುವರಷ್ಟೆ. ಕೆಲವು ತಿಂಗಳ ಹಿಂದೆ ಇದೇ ಮ್ಯಾಜಿಸ್ಟ್ರೇಟರು ಚಾಮರಾಜನಗರ ಮತ್ತು ಭೋಗಾಪುರದ ಕ್ರೈಸ್ತ ಉಪದೇಶಗಳಿಗೂ ಕ್ರೈಸ್ತ ಮುಖಂಡರಿಗೂ ಇದೇ ಕಲಮನ್ನೇ ಪ್ರಯೋಗಿಸಿದ್ದರು. ಈಗ ಅವರು ರಾಯರ ಮೇಲೆ ಅದನ್ನು ಜಾರಿಸುತ್ತಾರೆ. ಆಗ ಕ್ರೈಸ್ತರಿಂದ ಶಾಂತಿಭಂಗವೂ ಕೋಮುವಾರು ಕಲಹಗಳೂ ಉಂಟಾಗುತ್ತವೆಂದು ಸಾಜಸಿದ್ದರು. ಈಗ ರಾಯರಿಂದ ಉಂಟಾಗುವುದಾಗಿ ತಿಳಿಸಿರುತ್ತಾರೆ. ಈ ವಿಷಯದಲ್ಲಿ ರಾಯರು ಕೊಟ್ಟಿರುವ ಹೇಳಿಕೆಯಿಂದ ಅವರು ಎಷ್ಟು ಮಟ್ಟಿಗೆ ಶಾಂತರೀತಿಯಿಂದ ಪ್ರವರ್ತಿಸುತ್ತಿರುವರೆಂಬುದು ಗೊತ್ತಾಗುತ್ತದೆ. ಮತ್ತು ಅವರ ಕಾರ್ಯಗಳಿಗೆ ಪೋಲೀಸಿನವರೂ ಸಹ ಒಪ್ಪಿಗೆ ಕೊಟ್ಟಿರುವರು. ಹೀಗಿರುವಲ್ಲಿ ಅವರ ಮೇಲೆ ಶಾಂತಿಭಂಗವೇ ಮುಂತಾದ ಅಪಾದನಗಳನ್ನು ಹೊರಿಸುವುದು ಎಷ್ಟು ಮಟ್ಟಿಗೆ ಸಾಧುವಾದುದೆಂದು ನ್ಯಾಯವಿಚಾರೇ ಊಹಿಸಬಹುದು. ಈ ರೀತಿಯಲ್ಲಿ ರಾಯರ ಚಳವಳಿಗಳಿಗೆ ನಿರ್ಬಂಧಪಡಿಸಿರುವುದನ್ನು ಯಾರೂ ಒಪ್ಪಲಾಗುವುದಿಲ್ಲ.

ಶ್ರೀಮನ್ಮಹಾರಾಜರವರು

ಶ್ರೀಮನ್ಮಹಾರಾಜರವರು ಮುಂದಿನ ತಿಂಗಳು ತಾ॥ 2 ಕ್ಕೆ ಬೆಂಗಳೂರಿಗೆ ಆಗಮಿಸುವರು. ಅವರು ಬೆಂಗಳೂರಿನಲ್ಲಿ ಇದ್ದು ಅನಂತರ ರಾಜಧಾನಿಗೆ ದಯಮಾಡಿಸುತ್ತಾರೆಂದು ಗೊತ್ತಾಗಿದೆ. ಅವರ ಪರಿವಾರದಲ್ಲಿ ಕೆಲವರು ಬೆಂಗಳೂರಿನಲ್ಲಿಯೇ ಉಳಿಯುವರೆಂದೂ, ಇತರರು ರಾಜಧಾನಿಗೆ ಬರುವರೆಂದೂ ತಿಳಿದುಬಂದಿದೆ.

ಮಹಾತ್ಮರ ವರ್ಧಂತಿ.

ಮಹಾತ್ಮ ಗಾಂಧಿಯವರ 68 ನೇ ವರ್ಷ ವರ್ಧಂತಿಯನ್ನು ವೈಭವದಿಂದ ಆಚರಿಸಬೇಕೆಂದು ರಾಷ್ಟ್ರ ಮುಖಂಡರೆಲ್ಲರೂ ವಿನಂತಿ ಮಾಡಿರುತ್ತಾರೆ. ಮಹಾತ್ಮರು ಜನಿಸಿ ಅರವತ್ತೇಳು ವರ್ಷಗಳು ಕಳೆದವು. ಅವರು ತಮ್ಮ ಅಸಾಧಾರಣ ಸ್ವಾರ್ಥತ್ಯಾಗದಿಂದಲೂ, ಅದ್ಭುತವಾದ ಧೈರ್ಯಸ್ಥೈರ್ಯಗಳಿಂದಲೂ ಅನುಪಮವಾದ ಕ್ರಿಯಾ ಶಕ್ತಿಯಿಂದಲೂ ಇಡೀ ಪ್ರಪಂಚದ ಗಮನವನ್ನೇ ಭರತಖಂಡದ ಕಡೆಗೆ ಎಳೆದಿರುತ್ತಾರೆ. ಸ್ವಾತಂತ್ರ್ಯ ಸಾಧನೆಗೆ ನೂತನ ಅಸ್ತ್ರಗಳನ್ನು ಕಂಡು ಹಿಡಿದಿದ್ದಾರೆ. ಅವರಿಗೆ ಭಗವಂತನು ದೀರ್ಘಾಯುಸ್ಸನ್ನು ಕೊಟ್ಟು ನಮ್ಮ ದೇಶದ ಅಭಿವೃದ್ಧಿಗೆ ಸಹಾಯಮಾಡುವಂತೆ ಅನುಗ್ರಹಿಸಲಿ.

ಕಾಂಗ್ರೆಸ್ ಸಭೆಯ ಸದಸ್ಯತ್ವ

ಕಾಂಗ್ರೆಸ್ ಸಭೆಗೆ ಸದಸ್ಯರಾಗುವವರೆಲ್ಲರೂ ಈ ತಿಂಗಳ ಅಂತ್ಯದೊಳಗೆ ಆಗಬೇಕು. ಅನಂತರ ಸೇರುವವರಿಗೆ ಪ್ರಾತಿನಿಧ್ಯದ ಅವಕಾಶ ದೊರೆಯುವುದಿಲ್ಲ. ಮತ್ತು ಚುನಾವಣೆಗಳಲ್ಲಿ ಭಾಗವಹಿಸಲು ಅವಕಾಶವಿರುವುದಿಲ್ಲ. ಫೈಜಾಪುರದಲ್ಲಿ ನಡೆಯುವ ಕಾಂಗ್ರೆಸ್ ಸಭೆಗೆ ಸದಸ್ಯರಾಗಿ ಹೋಗಲು ಆಗುವುದಿಲ್ಲ. ಆದ್ದರಿಂದ ಅಷ್ಟರೊಳಗೆ ಎಲ್ಲರೂ ಸದಸ್ಯರಾಗಬೇಕು. ಇದಕ್ಕೆ ವಾರ್ಷಿಕ ಚಂದಾ ನಾಲ್ಕಾಣೆ ಮಾತ್ರ. ಸದಸ್ಯರಾಗುವವರಿಗೆ 18 ವರ್ಷ ವಯಸ್ಸಾಗಿರಬೇಕು ಮತ್ತು ಸಂಪೂರ್ಣ ಸ್ವಾತಂತ್ರ್ಯವೇ ಭಾರತ ರಾಷ್ಟ್ರೀಯ ಮಹಾಸಭೆಯ ಧ್ಯೇಯವೆಂದು ಅಂಗೀಕರಿಸಬೇಕು. ಇದು ಎಲ್ಲಾ ಭಾರತೀಯರ ಧ್ಯೇಯವೂ ಆಗಿರುತ್ತದೆ. ನಮ್ಮ ದೇಶಬಾಂಧವರು ಕೂಡಲೇ ಸದಸ್ಯರಾಗಿ ಭಾರತಖಂಡದ ಏಕಮಾತ್ರ ಪ್ರಜಾಸಂಸ್ಥೆಯಾದ ಕಾಂಗ್ರೆಸ್ ಸಭೆಯನ್ನು ಪುಷ್ಟೀಕರಿಸಬೇಕೆಂದು ನಾವು ಕೋರುತ್ತೇವೆ.

ಒಂದು ಕಣ್ಣಿಗೆ ಸುಣ್ಣ; ಮತ್ತೊಂದಕ್ಕೆ ಬೆಣ್ಣೆ!

ಕಾನ್‌ಪುರದ ಪೌರಸಭೆಯು, ಪೌರಸಭೆಗೆ ಸೇರಿದ ಎಲ್ಲಾ ಪಾಠಶಾಲೆಗಳಲ್ಲಿಯೂ ಜಾರ್ಜ್ ಸಾರ್ವಭೌಮರ ಮತ್ತು ಮೇರಿ ರಾಣಿಯವರ ಭಾವ ಚಿತ್ರಗಳ ಜೊತೆಯಲ್ಲಿ ಮಹಾತ್ಮ ಗಾಂಧಿಯವರ ಭಾವ ಚಿತ್ರವನ್ನೂ ಹಾಕಬೇಕೆಂದು ತೀರ್ಮಾನಿಸಿದ್ದಿತು. ಆದರೆ ಸಂಯುಕ್ತ ಪ್ರಾಂತ್ಯದ ಗವರ್ನರ್ ಸಾಹೇಬರವರು ಈ ರೀತಿ ದ್ರವ್ಯವ್ಯಯ ಮಾಡುವುದು ಅನ್ಯಾಯವೆಂದು ಹೇಳಿದರು. ಜಾರ್ಜ್ ಮತ್ತು ಮೇರಿಯವರ ಭಾವ ಚಿತ್ರಗಳನ್ನು ಕೊಳ್ಳಲು ವಿಶೇಷ ಹಣ ಮಂಜೂರ್ಮಾಡಿರುತ್ತಾರೆ. ಆದರೆ ಮಹಾತ್ಮಾ ಗಾಂಧಿಯವರ ಭಾವಚಿತ್ರಗಳಿಗೆ ಅನುಮತಿಯನ್ನೇ ಕೊಡದೆ ಹಠ ಹಿಡಿದರು!

ಬ್ರಹ್ಮರ್ಷಿ ಗುರು ಕುಲ[illegible]

ಆಸ್ತಿಕ ಶಿರೋಮಣಿಗಳಲ್ಲಿ ವಿಜ್ಞಾಪನೆ.

ಸ್ವಧರ್ಮ ಸ್ವರಾಷ್ಟ್ರಾಭ್ಯುದಯಕ್ಕಾಗಿಯೂ ಅಖಿಲಜನರ ಕ್ಷೇಮಕ್ಕೂ ಆ[illegible] ಸ್ಕಾರಣವಾದ ಶ್ರೀ ಗಣೇಶ ಪ್ರ[illegible] ಮಹೋತ್ಸವವನ್ನು ಸಾರ್ವಜನಿಕ[illegible] ಈ ಮಹೀಸುರನಗರದಲ್ಲಿ ಶಾಶ್ವತ[illegible] ಪ್ರತಿವರ್ಷದಲ್ಲಿಯೂ ವಿಜೃಂಭಣೆ[illegible] ನಡೆಸಬೇಕೆಂಬ, ಸನ್ಮಿತ್ರ ಹಿತೋದ್ದೇ[illegible]ತೆ ಇನ್ನು ಮೇಲೆ ಸೌಕರ್ಯವಾದರ[illegible] ನವವರ್ಷದಿಂದ—ಬ್ರಹ್ಮರ್ಷಿ ಗುರುಕು[illegible] ಅಖಿಲಬ್ರಾಹ್ಮಣ (ಭಾರತ) ಕಾರ್ಯಕ್ರ[illegible]ಗಳಲ್ಲಿ ಮೊದಲನೆಯಾಗಿ ಶ್ರೀ ಗಣೇ[illegible]ನೆಯ ದೀಕ್ಷೆವಹಿಸಬೇಕಾಗಿರುವುದನ್ನು[illegible] ಹನೀಯರೆಲ್ಲರೂ ವಿಮರ್ಶಿಸಿ [illegible]ದ ಸಲಹೆ ಮತ್ತು ಸಹಾಯಗಳಿಂದ [illegible] ಕರಿಸಬೇಕಾಗಿ ಪ್ರಾರ್ಥನೆ.

ಬ್ರಾಹ್ಮಣ (ಭಾರತೀಯ) ವ್ಯವ[illegible] ಕಾರ್ಯಕ್ರಮಗಳ ಸೌಕರ್ಯಕ್ಕಾಗಿ ಕಾ[illegible] ಗಣನೆಗೆ ಬ್ರಾಹ್ಮಣ ಪದ್ಧತಿಯನ್ನೇ [illegible] ಲಂಬಿಸುವುದು ಸ್ವರಾಜ್ಯಪ್ರಾಪ್ತಿ[illegible]ವಾಗಿರುತ್ತದೆ. ಸೌರಮಾನಕ್ರಮವು [illegible] ಹಾರಕ್ಕೆ ಅನುಕೂಲವಾಗಿರುತ್ತದೆ. [illegible] ವಾಹನ ಮೊದಲಾದ ಆಯಾ ದೇಶ[illegible] ಶಕಪುರುಷರನ್ನೇ ಮುಂದಿಡದೆ ಬ್ರಾಹ್ಮ[illegible] ದೇಶಕ್ಕೆಲ್ಲಾ ಅನ್ವಯಿಸುವ ಸರ್ವಸಮ[illegible]ವಾದ ಶಕಪುರುಷರಿಗೆಲ್ಲರಿಗೂ ಅಧಿ[illegible]ವಾದ ಕಲಿಸಂವತ್ಸರ ಗಣನೆಯನ್ನೇ [illegible] ವ್ಯವಹಾರದಲ್ಲಿ ಸ್ವೀಕರಿಸಬಹುದು. [illegible] ಶಾಭಿಮಾನ ಮತ್ತು ಬ್ರಾಹ್ಮಣ [illegible] ದೃಷ್ಟಿಯಿಂದ ಈ ಪದ್ಧತಿಯು [illegible]ವಾಗಿ ಪರೀಕ್ಷಾರ್ಥವಾಗಿ ಬ್ರಹ್ಮ[illegible] ಗುರುಕುಲದಲ್ಲಿ ಪ್ರಥಮತಃ ಕಾರ್ಯ[illegible] ಬಂದಿರುವುದು. ದೇಶಾಭಿಮಾನಿಗ[illegible] ಬ್ರಾಹ್ಮಣ ಧರ್ಮಾವಲಂಬಿಗಳೂ [illegible] ಗುರುಕುಲ ಕಾರ್ಯಕಲಾಪಗಳಲ್ಲಿ ಒಂ[illegible] ಈ ವಿಷಯವನ್ನು ಪರ್ಯಾಲೋ[illegible] ಪ್ರಚಾರಮಾಡಲು ನೆರವಾಗಬೇ[illegible] ಕೋರಿಕೆ.

ಶ್ರೌತವಿದ್ಯೆ, ಶ್ರೌತಕರ್ಮ, [illegible]ವಾಗಿ ಬ್ರಾಹ್ಮಣ ಧರ್ಮ (The Un[illegible]versal or Vedic Relig[illegible] ಪ್ರಚಾರ, ಸ್ತ್ರೀಯರ ಸಂಸ್ಕೃತ ವಿದ್ಯಾ[illegible]ಭ್ಯಾಸಕ್ಕೆ ಪ್ರೋತ್ಸಾಹ ಮೊದಲಾ[illegible]ಧ್ಯದಯ ಕಾರ್ಯಗಳನ್ನು ನಡೆ[illegible] ಬದ್ಧಕಂಕಣರಾಗಿರುವ ಬ್ರಹ್ಮ[illegible] ಕುಲದ ಅಖಿಲ ಬ್ರಾಹ್ಮಣ ([illegible] ಕಾರ್ಯಕಲಾಪಗಳನ್ನು ಶೀಘ್ರದ[illegible] ಮಹಾ ಜನಗಳ ಮುಂದಿಡಲು [illegible] ಕೊಡಬೇಕಾಗಿ ಬೇಡುವ

ವಿಧೇಯರಾದ

ಬ್ರಹ್ಮರ್ಷಿ ಗುರುಕುಲ ಕಾರ್ಯನಿರ್ವಾಹಕ

ಮೈಸೂರು ಸಂಸ್ಥಾನದ ಕಾಂಗ್ರೆಸ್ ಕಾರ್ಯಕರ್ತರಿಗೆ ಬಿನ್ನಹ

ಮೈಸೂರು ಸಂಸ್ಥಾನದಲ್ಲಿ ಈ ಸಾರಿ ಕಾಂಗ್ರೆಸ್ ಸಭಾಸದರನ್ನು ಮಾಡುವ ಕಾರ್ಯವು ಆಗಸ್ಟ್ ೧೦ ನೇ ತಾರೀಖಿಗೆ ಪ್ರಾರಂಭಿಸಲ್ಪಟ್ಟಿತು ಆ ಬಳಿಕ ಅಲ್ಲಲ್ಲಿ ಕಾಂಗ್ರೆಸ್ ಕಾರ್ಯಕರ್ತರು ಕಾಂಗ್ರೆಸ್ ಸಭಾಸದರನ್ನು ಸೇರಿಸುತ್ತಾ ಬಂದಿರುವರು ಹಲವೆಡೆಗಳಲ್ಲಿ ಒಳ್ಳೆ ಉತ್ಸಾಹದಿಂದ ಕಾರ್ಯವು ನಡೆದುದನ್ನು ಕೇಳಿ ಕಾರ್ಯದ ಬಗ್ಗೆ ಅಭಿನಂದನೆ ಮಾಡಬಹುದು

ಆದರೆ ಇಷ್ಟರಿಂದ ಸಂತುಷ್ಟರಾಗುವುದು ಉಚಿತವಲ್ಲ. ಏಕೆಂದರೆ, ಈಗ ೩೦-೯-೩೬ ರ ವರೆಗ ಆದ ಸಭಾಸದರ ಮತದಾರ ಸಂಘವನ್ನು ಮಾಡಿ ಫೈಜ್‌ಪುರ ಕಾಂಗ್ರೆಸ್ಸಿಗಾಗಿ ಪ್ರತಿನಿಧಿಗಳನ್ನು ಆರಿಸುವ ಕಾರ್ಯವನ್ನು ಮಾಡುವುದು ಅವಶ್ಯವಿರುವುದು

೩೦-೯-೩೬ ಕೊನೆಯ ತಾರೀಖು — ಸ್ಥಳೀಕ ಕಾರ್ಯಕರ್ತರು ತಮ್ಮ ೩೦-೯-೩೬ ರ ವರೆಗ ಆದ ಸಭಾಸದರ ಪಟ್ಟಿಯನ್ನು ತಯಾರಿಸಿ ಕೊಂಡು ಕಾಂಗ್ರೆಸ್ ಸಭಾಸದರ ವರ್ಗಗಳನ್ನೆಲ್ಲ ಜಿಲ್ಲಾ ಕಮಿಟಿಗಳಿಗೆ ಕಮಿಟಿಗಳಿಗೆ, ಇಲ್ಲದ ಶ್ರೀ॥ ವಿ ನಾರಾಯಣರಾವ್, ಇಂಡಿಯ ಪ್ರೆಸ್ ಬೆಂಗಳೂರು, ಇವರ ಕಡೆಗೆ ೩೦-೯-೩೬ ನೇ ದಿವಸವೇ ರವಾನಿಸಬೇಕು

ಜಿಲ್ಲಾ ಕಮಿಟಿಯವರು ಹಾಗು ಶ್ರೀ॥ ನಾರಾಯಣರಾಯರು ಅವುಗಳಲ್ಲಿಯ ಹೆಸರಿನ ರಿಜಿಸ್ಟರ್ ಇಟ್ಟುಕೊಂಡು ಅದರ ಪ್ರತಿಯನ್ನು ಪ್ರಾಂತಿಕ ಕಾಂಗ್ರೆಸ್ ಕಮಿಟಿಗೆ ... ತಾರೀಖಿನ ಒಳಗಾಗಿ ಕಳಿಸಬೇಕು ಅಂದರೆ ಮುಂದೆ ಮತದಾರರನ್ನು ಮಾಡಿ, ಫೈಜ್‌ಪುರ ಕಾಂಗ್ರೆಸ್ ಹಾಗೂ ಪ್ರಾಂತಿಕ ಕಾಂಗ್ರೆಸ್‌ಗೆ ಪ್ರತಿನಿಧಿಗಳನ್ನಾರಿಸುವ ಕೆಲಸ ವ್ಯವಸ್ಥಿತ ನಡೆಯಬಲ್ಲದು ಇಲ್ಲದಿದ್ದರೆ ಈ ವರೆಗೆ ಮಾಡಿದ ಕಾರ್ಯವು ವ್ಯರ್ಥವಾಗುವುದು

ಮೇಲಿನ ಬರೆದ ತಾರೀಖುಗಳು ... ಸಂಬಂಧವನ್ನು ಎಲ್ಲರೂ ತಿಳಿದಿರಬೇಕು

(ಸಹಿ) ರಂಗನಾಥ ದಿವಾಕರ
ಗೌರವ ಕಾರ್ಯದರ್ಶಿ,
ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿ.

ಡಾ॥ ಹರ್ಡೀಕರರು.

... ಎಸ್ ಹರ್ಡೀಕರರವರು ... ರನ್ನು ಕೂಡಿಸುವ ಸ... ರಾಜಧಾನಿಗೆ ದಯ... ವರು

ಮಕ್ಕಳ ರಾಜ್ಯ.

ಬೆದರಿದ ಚಂದ್ರ.

೧.

ಸುತ್ತ ಮಂದವಿತ್ತು
ಮಧ್ಯೆ ಕೋಟವಿತ್ತು
ವಾಯು ಎಚ್ಚೆತ್ತು
ಮರವು ಎಚ್ಚೆತ್ತು
ಎಲೆಗಳನ್ನೆಬ್ಬಿಸಿತ್ತು
ಚಿತ್ರ ಪ್ರತಿಬಿಂಬಿಸಿತ್ತು
ಎಲೆಯೊಂದು ಚುಂಬಿಸಿತು
ಮತ್ತೊಂದು ಅನುಕರಿಸಿತು
ಚಂದ್ರ ಬೇಸತ್ತು
ಕಾರ್ಮೋಡ ಸೇರಿತ್ತು

೨

ತಾರಗಳ, ಸುತ್ತಿರುವ, ಬಾನಿನಲಿ,
ಮೂಡುತಿರ ಚಂದ್ರ,
ವಿಹಾರಕೆಳಸಿ, ಸುತ್ತ ಹೊರಟೆನು,
ಎನ್ನ ಬಿಡದೆ, ಹಿಂದೆ ಬಂತು,
ಎನ್ನ ನಾಯಿ, ಜಿಪ್ಪಿಯು,
ಜಿಪ್ಪು ನಗೆದು, ಹಾರುತೋಡುತಾ,
ಹಿಂದೆ ಬಂತು ಕಾಡುತಾ ಜಿಪ್ಪಿ ರೇಗಿ,
ಬಾನ ನೋಡಿ, ಬೊಗಳಿತು.
ಚಂದ್ರ ಹೆದರಿ, ಮೋಡ ಸೇರಿ,
ಮೆಲ್ಲ ಮೆಲ್ಲನಿಣುಕುವ,
ಜಿಪ್ಪಿ ಧ್ವನಿಯ ಕೇಳಿ,
ಮತ್ತ ಬೆದರಿ ಓಡುವಾ,
ಜಿಪ್ಪಿ ಬೊಗಳೆ ಬಹಳ,
ಕೊನೆಯಸಾರಿ ಮೋಡ ಸೇರಿದ, ಮತ್ತೆ
ಬರಲು ಹೆದರಿ ಭದ್ರನಾಗಿ ಅಡಗಿದ,
ಬೆಳಕು ಹರಿವ ಮುನ್ನ ಇಣುಕಿ
ನೋಡಿ,ಕೇಳಿ
ಜಿಪ್ಪಿ ಧ್ವನಿಯ, ದೇಹ ಮರೆಸಿ ಓಡಿದ

ಕೆ ಎಸ್ ಕೆ

ತಿದ್ದುಪಡಿ

ಧರ್ಮಸತ್ರ—ನಂಜನಗೂಡಿನಲ್ಲಿರುವ ಶ್ರೀ ಅರಕಲಗೂಡು ಸೀತಾರಾಮಯ್ಯನವರ ಧರ್ಮಸತ್ರದಲ್ಲಿ ರಾಧಾ ನರ್ತನ ಸಭೆಯವರ ನರ್ತನಗಳು ನಡೆಯುತ್ತಿರುವುದು ಸರಿಯಷ್ಟೆ ಸದರೀ ಸಭೆಯವರ ವಿಚಾರದಲ್ಲಿ ತಪ್ಪು ತಿಳುವಳಿಕೆಯ ಕಾರಣದಿಂದ 21—9—36ನೇ ತಾರೀಖಿನ ಪತ್ರಿಕೆಯಲ್ಲಿ ಪ್ರಕಟಿಸಲ್ಪಟ್ಟ ಅಂಶಗಳಿಗಾಗಿ ವಿಷಾದಪಡುತ್ತೇನೆ ಅದರಿಂದ ಯಾತ್ರಿಕರು ಸತ್ರದಲ್ಲಿ ಒಂದು ಇಳಿದುಕೊಳ್ಳಲು ಯಾವ ಅಡ್ಡಿಯೂ ಇಲ್ಲವೆಂದೂ ಮತ್ತು ಸತ್ರದ ಪಂಡಿಗೆ ಅವರು ಉದಾರವಾಗಿ ಸಹಾಯ ಮಾಡಿರುವುದಾಗಿಯೂ ನನಗೆ ಇತ್ತೀಚೆಗೆ ತಿಳಿದುಬಂದಿರುತ್ತೆ

ಹಿತೈಷಿ

ಸರ್ ವಿಶ್ವೇಶ್ವರಯ್ಯನವರು

ಸರ್ ಎಂ. ವಿಶ್ವೇಶ್ವರಯ್ಯನವರು ಇಂದೋರ್ ಸಂಸ್ಥಾನದಲ್ಲಿ ಟೌನ್‌ಪ್ಲಾನಿಂಗ್ ಏರ್ಪಾಡನ್ನು ಮಾಡಲು ಅಲ್ಲಿಗೆ ದಯಮಾಡಿಸಿರುವರು

ಅಬಿಸೀನಿಯಕ್ಕೆ ಲೀಗಿನಲ್ಲಿ ಸ್ಥಾನ

(ಕೆ. ಎಸ್. ರಾಧಾಕೃಷ್ಣ)

ಅಬಿಸೀನಿಯಾ ಪ್ರತಿನಿಧಿಗಳಿಗೆ ಲೀಗಿನಲ್ಲಿ ಸ್ಥಾನವಿರುವುದೋ ಇಲ್ಲವೋ ಇನ್ನೂ ನಿರ್ಧರಿತವಾಗಿಲ್ಲ ಅದು ಹೇಗೆ ನ್ಯಾಯಾಸ್ಥಾನಕ್ಕೆ ಹೋಗುವುದು ಎಂದಿತ್ತು ಈಚಿನ ಸುದ್ದಿಗಳಲ್ಲಿ ಅಬಿಸೀನಿಯಾ ಪ್ರತಿನಿಧಿಗಳಿಗೆ ಲೀಗಿನಲ್ಲಿ ಸ್ಥಾನವುಂಟು ಎಂದಿದೆ

ಅಬಿಸೀನಿಯವು ಮುಳುಗಿಹೋಗಿದೆ ಮುಸಲೋನಿಯು ಕೈಕೈಮಾಡುತ್ತಿದ್ದಾನೆ ಗರ್ವಪಡುತ್ತಿದ್ದಾನೆ ಹಿಂದಿನ ರೋಮನ ಸಾಮ್ರಾಜ್ಯವನ್ನು ಗೆದ್ದೆವೆಂದು ನೋಡುತ್ತಿದ್ದಾನೆ ಆದು ಹಾಗಿರಲಿ ಅಬಿಸೀನಿಯವು ಹಾರಬಹೋಯಿತಷ್ಟೆ ಚಕ್ರವರ್ತಿ ಹೇಲ್‌ಸೆಲಾಸಿಯು ಇಂಗ್ಲೆಂಡಿಗೆ ಹೋಗಿ ಕೂಗುತ್ತಿದ್ದನು ಹೀಗೆ ಅವನು ಏನು ತಾನೆ ಮಾಡಲಿಕ್ಕಾದೀತು ? ಅವನ ರಾಜ್ಯವು ಅವನ ಕೈಬಿಟ್ಟುಹೋಯಿತು ಇನ್ನು ಅವನದನ್ನು ಹೊಂದಲಾರನು

ಅಂಥವನಿಗೂ, ಲೀಗಿಗೂ ಏನು ಸಂಬಂಧ? ರಾಜ್ಯವು ಇದ್ದರಲ್ಲವೇ ಅದಕ್ಕೂ ಲೀಗಿಗೂ ಏನಾದರೂ ಸಂಬಂಧವುಂಟು? ಈಗ ರಾಜ್ಯರಹಿತನಾದ ರಾಜನೇ? ಅಲ್ಲ ಎಂದು ಅವನು ರಾಜ್ಯವನ್ನು ಬಿಟ್ಟು ಓಡಿ ಬಂದನೋ ಅಂದೇ ಅಬಿಸೀನಿಯವು ರಾಸ್ ... ಯು ಕೈಯಿಂದ ಹೋಯಿತು ಇಟಲಿಯು ಇನ್ನೂ ಅಬಿಸೀನಿಯವನ್ನು ಪೂರ್ತಿ ಹಾಳುಮಾಡಿರಬಹುದು ಉದರಕ್ಕೆ ಯಾರೂ ದಿಕ್ಕಿಲ್ಲ

ಲೀಗು ಇನ್ನು ಅಬಿಸೀನಿಯಾಕ್ಕೆ ಸಹಾಯಮಾಡಿ ಇಟಲಿಯನ್ನೋಡಿಸುವಹಾಗಿಲ್ಲ ಜೋರುಮಾಡಿದರ ಇಟಲಿಯು ಲೀಗನ್ನು ಬಿಡುತ್ತದೆ ರಾಜ್ಯವಿಲ್ಲದ ತಿರುಕನಾದ ಅರಸನಿಗೆ ಲೀಗಿನಲ್ಲಿ ಪ್ರತಿನಿಧಿತನವೇಕೆ? ಎಂದಿಗೂ ಅವನಿಗ ಲೀಗಿನಲ್ಲ ಸ್ಥಾನವಿಲ್ಲ ಲೀಗಂಬುದು ಶಾಂತಿ ಸಂಸ್ಥೆಯಲ್ಲ ಲೀಗು ಇದ್ದೂ ಈಗ ಎಲ್ಲಾ ಭಾಗಗಳಲ್ಲಿಯೂ ಶಾಂತಿ ನೆಲೆಸಿದೆಯೋ? ಇಲ್ಲ

ಸತ್ತ ಗಿಡಗಳನ್ನು ಬದುಕಿಸುವ ವಿಚಿತ್ರ

ಅಮೇರಿಕದ ರೂಸ್ ವೆಲ್ಟ್ರ ಸಂಶೋಧನಾ ಶಾಲೆಯಲ್ಲಿ ಸತ್ತ ಗಿಡಗಳನ್ನು ಬದುಕಿಸಬಹುದಾದ ಒಂದು ನೂತನ ವಿಧಾನವನ್ನು ಕಂಡುಹಿಡಿದಿರುವರು ಗಿಡಗಳ ಎಲೆಗಳಲ್ಲಿ ಒಂದು ವಿಧವಾದ ದ್ರವವನ್ನು ನಿಲ್ಲುವಂತೆ ಮಾಡುವರು ಆ ದ್ರವದಲ್ಲಿ ಗಿಡಗಳಿಗೆ ಬೇಕಾದ ಎಲ್ಲಾ ಆಹಾರವಸ್ತುಗಳನ್ನೂ ಒದಗಿಸುವರು ಇದರಿಂದ ಆ ಗಿಡಗಳು ಪುನಃ ಜೀವಂತವಾಗುವವಂತೆ?

ವಿನೋದಲಹರಿ.

ಲೇಖಕರು—ಎಸ್ ಶ್ರೀ ಶೈಲಂ, ಮೈಸೂರು

ಸುಬ್ಬಾಭಟ್ಟರ — ಏನು? "ನಿಮ್ಮ ಮಗ ಹಿಸ್ಟರಿಯಲ್ಲಿ ಪಾಸಾದನೆ? ಚರಿತ್ರೆ ತಿಳಿದುಕೊಂಡಿದ್ದಾನೆ ಅಂತ ಹೇಳಿದ್ದಿರಲ್ಲಾ?"

ವೆಂಕಟಪ್ಪನ್—ಇಲ್ಲ ಅವನು ಹುಟ್ಟಿದಂದಿನಿಂದ ಮೊದಲು ಆಗಿದ್ದ ಕೆಲಸಗಳನ್ನ ಕೇಳಿದರಂತೆ

* * *

ಪಂಡಿತನು—ತನ್ನ ಹೆಂಡತಿಯನ್ನು ಕುರಿತು "ಲೇ, ಲೇ, ನನ್ನ ಬುದ್ಧಿ ಮತಿ ಮೀರಿ ಹೋಗಿದೆ, ನಿನ್ನೆಗೆ ಏನಂದಿ?"

ಹೆಂ—ದೇವರು ಶಿಕ್ಷ ನನ್ನಿಗೆ ದಿನಿಸಿದಾತ ಸುಮ್ಮನೆ ಇರಿ ಬಹಳ ಒಳ್ಳೇದು, ಎಂದು ಹೇಳಿದಳ.

* * *

ಹುಡುಗ—'ನನಗೆ ಸ್ಕೂಲಿಗೆ ಹೋಗುವುದಕ್ಕೆ ಆಗುವುದೇ ಇಲ್ಲ ಈಗ ನನಗೆ ಬಾಯಿಲೆ

ತಾಯಿ—ನಿನಗೆ ಎಲ್ಲಿ ನೋವು? ಎಲ್ಲಿ ಬಾಯಿಲೆ

ಹುಡುಗ—ಸ್ಕೂಲಿನಲ್ಲಿ

* * *

ಮೇಷ್ಟು—' ಲೋ ! ರಾಮು ಗಾರ್ಧಬ ಗಾನ ಎಂದರೆ ಅರ್ಥವೇನೋ,

ರಾಮು—' ಗಾರ್ಧಭ—ಕೋಕಿಲೆಯ, ಗಾನ ಹಾಡು ಎಂದು ಅರ್ಥ ಸಾರ್. "

ಮೇಷ್ಟು—ಲೋ, Fool ಚೆಂಡಿನಂತೆ ಒದೆತೇನ ನೋಡು

ರಾಮು—ಕತ್ತೆಯಂತೆ ಒದಿಯರಿ

* * *

ಶೆಟ್ಟಿ—" ಲೋ, ಒಂದೂವರಕಣ್ಣ, ಬಾರೋ ಇಲ್ಲಿ

ಒಂದೂವರೆಕಣ್ಣ—' ಏನ್ರಿ, ಶೆಟ್ರೆ! ' " ಯಾವ ಮಾಡುತ್ತ ಒಂದುವರಾಣ'

ಶೆಟ್ಟಿ—ಹಾಗೋ, ಹಾಗಾದರ ಈ ಸಾಮಾನನ್ನಾ ತಕ್ಕೊಂಡು ಗಾಡಿ ಕೊಡು

* * *

ತಂದೆ—ಲೋ ಶೇಷಾದ್ರಿ, ನಿಮ್ಮ ಟೀಚರ್ ಕನ್ನಡ ಟೆಕ್ಸ್ಟನಲ್ಲಿ ಎಲ್ಲಾ ಹೇಳಿದ್ದಾರೆಯೇನೋ

ಶೇಷಾದ್ರಿ—ಹೌದು, ಅಣ್ಣಾ, ಮಹಾಭಾರತ ಪೂರ್ತಿ ಗೊತ್ತು

ತಂದ—ಹಾಗಾದರೆ ಕುರುವಂಶದವರಾರೋ

ಶೇಷಾದ್ರಿ—" ಯಾರ್ಯಾರ ತೊಡೆಯ ಮೇಲೆ ಕುರು ಎದ್ದಿತ್ತೋ ಅವರೆಲ್ಲಾ ಕುರುವಂಶಕ್ಕೆ ಸೇರಿದವರು ಅಣ್ಣಾ "

ಈ ಆರ್ಡರು ನ್ಯಾಯ, ಸತ್ಯ ಧರ್ಮಗಳಿಗೆ ವಿರುದ್ಧವಾದದ್ದು.

ಮಹಾಜನರು ನ್ಯಾಯಾನ್ಯಾಯವನ್ನು ಪರಿಶೀಲನೆಮಾಡಿಕೊಳ್ಳಲಿ.

ಶ್ರೀ॥ ತಗಡೂರು ರಾಮಚಂದ್ರರಾಯರ ಹೇಳಿಕೆ.

"ನಂಜನಗೂಡು ತಾಲ್ಲೂಕು ತಗಡೂರಿನಲ್ಲಿರುವ ಸೂರ್ಯನಾರಾಣಪ್ಪನವರ ಮಕ್ಕಳು, ತಗಡೂರು ರಾಮಚಂದ್ರರಾಯರ ಮೇಲೆ ಕ್ರಿ ಪ್ರೊ ೧೪೪ ನೇ ಸೆಕ್ಷನ್ ಪ್ರಕಾರ ಆರ್ಡರ್ ಮಾಡಬೇಕೆಂದು ಚಾಮರಾಜನಗರದ ತಾಲ್ಲೂಕು ಪೋಲೀಸ್ ಇನ್ಸ್ಪೆಕ್ಟರವರು ಹಾಕಿಕೊಂಡ ಅರ್ಜಿಯನ್ನು ದಾಖಲ್ ಮಾಡಿ ಪರಿಶೀಲಿಸಲಾಯಿತು. ಮತದ್ವೇಷವನ್ನು ಹುಟ್ಟಿಸತಕ್ಕ ನಡವಳಿಕೆಗಳಿಗೆ ಸಂಬಂಧಪಟ್ಟ ಪೋಲೀಸ್ ವರದಿಗಳೂ ಮತ್ತು ತಗಡೂರು ರಾಮಚಂದ್ರರಾಯರು ಪ್ರಕಟಿಸಿರತಕ್ಕ ನೋಟೀಸುಗಳೂ ಪರಿಶೀಲಿಸಲ್ಪಟ್ಟವು.

"ಚಾಮರಾಜನಗರದ ತಾಲ್ಲೂಕು ಪೊ॥ ಇನ್ಸ್ಪೆಕ್ಟರವರ ವರದಿಯಿಂದಲೂ ಅವರ ಪ್ರಮಾಣದ ಹೇಳಿಕೆಯಿಂದಲೂ ಮತ್ತು ತಗಡೂರು ರಾಮಚಂದ್ರರಾಯರು ಈ ಪ್ರಾಂತ್ಯದ ಕ್ರೈಸ್ತಪಾದ್ರಿಗಳ ನಡವಳಿಕೆಗಳಮೇಲೆ ಆಪಾದನೆಗಳನ್ನು ಮಾಡಿ ಅವರು ಇತರ ಜನರನ್ನು ತಮ್ಮ ಮತಕ್ಕೆ ಸೇರಿಸಿಕೊಳ್ಳಲು ಮಾಡುತ್ತಿರುವ ಅಕ್ರಮವೆಂದು ಭಾವಿಸಲ್ಪಟ್ಟ ನಡವಳಿಕೆಯ ಮೇರೆಯೂ ಆಗಿಂದಾಗ್ಗೆ ಹೊರಡಿಸಿರುವ ಹಲವು ನೋಟೀಸುಗಳ ಪರಿಶೀಲನೆಯಿಂದಲೂ ನನಗೆ ತಿಳಿಯಬರುವುದೇನೆಂದರೆ, ಈ ತಗಡೂರು ರಾಮಚಂದ್ರರಾಯರು ಆದಿಕರ್ಣಾಟಕರ ಹಿತವನ್ನು ಕೋರುವ ನೆಪದಿಂದಲೂ ಕ್ರೈಸ್ತರ ಮತ್ತು ಮಿಷನರಿಗಳ ಅಕ್ರಮ ಕಾರ್ಯಗಳಿಂದ ಆದಿಕರ್ಣಾಟಕರನ್ನು ರಕ್ಷಿಸುವ ನೆಪದಿಂದಲೂ ಅನೇಕ ದಿವಸಗಳಲ್ಲಿ ಕ್ರೈಸ್ತರಿಗೂ ಆದಿಕರ್ಣಾಟಕರಿಗೂ ಮತದ್ವೇಷವನ್ನು ಹುಟ್ಟಿಸುತ್ತಿರುವರು. ಇದರಿಂದ ಆದಿಕರ್ಣಾಟಕರೂ, ಕ್ರೈಸ್ತರೂ ವಾಸಿಸುವ ಗ್ರಾಮದಲ್ಲಿ ಶಾಂತಿಭಂಗವಾಗುವುದೆಂಬ ಭೀತಿಯುಂಟಾಗಿದೆ.

'ಸುಮಾರು ಎರಡು ವರ್ಷದ ಕೆಳಗೆ ಚಾಮರಾಜನಗರದ ಟವನ್ನಿನಲ್ಲಿ ನಡೆದ ವಿದ್ಯಮಾನಗಳಿಂದ ಕ್ರಿ॥ ಪ್ರೊ॥ ರೂ॥ ೧೪೪ ನೇ ಸೆಕ್ಷನ್ ೧ ನೇ ಕಲಮಿನ ಪ್ರಕಾರ ತಗಡೂರು ರಾಮಚಂದ್ರರಾಯರಮೇಲೆ ಆರ್ಡರ್ ಮಾಡಲ್ಪಟ್ಟಾಗಲೂ ಮತ್ತು ಈಚಗೆ ಭೋಗಾಪುರದ ಗ್ರಾಮದಲ್ಲಿ ನಡೆದಿರುವ ವಿದ್ಯಮಾನಗಳಿಂದಲೂ ಪೋಲೀಸಿನವರ ವರದಿಯು ಸಾಧುವಾದದ್ದೆಂದು ನನಗೆ ತೋರುತ್ತದೆ ಮತ್ತು ಸದರಿ ತಗಡೂರು ರಾಮಚಂದ್ರರಾಯರು ಆದಿಕರ್ಣಾಟಕರುಗಳ ಸಭೆಗಳನ್ನು ಕೂಡಿಸಿ ಭಾಷಣಮಾಡದಂತೆಯೂ, ಕ್ರೈಸ್ತರಮೇಲೆ ಆದಿಕರ್ಣಾಟಕರು ದಬ್ಬಾಳಿಕೆಯನ್ನು ನಡೆಸುವಂತೆ ಪ್ರೇರೇಪಿಸುವ ನೋಟೀಸುಗಳನ್ನೂ, ಹಸ್ತಪತ್ರಿಕೆಗಳನ್ನು ಮುದ್ರಿಸದಂತೆಯೂ, ಪ್ರಕಟಿಸದಂತೆಯೂ ಮತ್ತು ಭೋಗಾಪುರದ ಗ್ರಾಮವನ್ನಾಗಲೀ ಅಥವ ಅದರ ಸುತ್ತಮುತ್ತಲಿನ ಮೂರುಮೈಲಿಯೊಳಗಿರುವ ಪ್ರದೇಶವನ್ನಾಗಲೀ ಪ್ರವೇಶಿಸದಂತೆಯೂ ನಿರ್ಬಂಧಪಡಿಸುವುದು ಜರೂರಾಗಿ ಆವಶ್ಯಕವಾಗಿರುವುದರಿಂದ, ಶಾಂತಿ ಮತ್ತು ಶಿಸ್ತುಗಳ ರಕ್ಷಣೆಗಾಗಿ ಕ್ರಿ ಪ್ರೊ ೧೪೪ನೇ ಸೆಕ್ಷನ್ ಪ್ರಕಾರ ಈ ತಗಡೂರು ರಾಮಚಂದ್ರರಾಯರಮೇಲೆ ಈ ಕೆಳಗೆ ಕಂಡ ಏಕಪಕ್ಷದ ತೀರ್ಮಾನದ ಆರ್ಡರನ್ನು ಕೊಟ್ಟಿದ್ದೇನೆ.

ಆರ್ಡರ್.

'ನಂಜನಗೂಡು ತಾಲ್ಲೂಕು ತಗಡೂರು ಗ್ರಾಮದ ನಿವಾಸಿಯಾದ ಬ್ರಾಹ್ಮಣ ಮತದ ಸೂರ್ಯನಾರಾಣಪ್ಪನವರ ಮಕ್ಕಳು ತಗಡೂರು ರಾಮಚಂದ್ರರಾಯರಾದ ನೀವು ಭೋಗಾಪುರ ಮತ್ತು ಅದರ ಮೂರು ಮೈಲಿ ಸುತ್ತಳತೆಯೊಳಗೆ ಇರುವ ಇತರ ಗ್ರಾಮಗಳ ಆದಿಕರ್ಣಾಟಕರುಗಳ ಸಭೆಗಳನ್ನು ನಡಸಿ ಭಾಷಣಗಳನ್ನು ಮಾಡಿ ಕ್ರೈಸ್ತರು ಮತ್ತು ಮಿಷನರಿಗಳಮೇಲೆ ಆಪಾದನೆಗಳನ್ನು ಸೂಚಿಸುವ ನೋಟೀಸುಗಳು, ಹಸ್ತಪತ್ರಿಕೆಗಳು, ಕರಪತ್ರಗಳ ಪ್ರಕಟನೆ ಮತ್ತು ಹಂಚುವಿಕೆಯಿಂದಲೂ ಆದಿಕರ್ಣಾಟಕರಿಗೂ, ಕ್ರೈಸ್ತರಿಗೂ ಮತದ್ವೇಷವುಂಟಾಗುವಂತೆ ಮಾಡುತ್ತಿರುವುದರಿಂದಲೂ ಇದರಿಂದ ಶಾಂತಿಭಂಗವುಂಟಾಗುವುದರಿಂದಲೂ ಚಾಮರಾಜನಗರದ ತಾಲ್ಲೂಕಿನ ಅಮಲ್ದಾರ್ ಮತ್ತು ಎಕ್ಸ್ ಅಫಿಸಿಯೋ ಸೆಕೆಂಡ್ ಕ್ಲಾಸ್ ಮ್ಯಾಜಿಸ್ಟ್ರೇಟ್ ಸಿ ಬಿ ಶಂಕರ ಅಯ್ಯರ್ ಎಸ್ಕ್ವೈಯರ್ ಆದ ನಾನು ಕ್ರಿ ಪ್ರೊ. ೧೪೪ ನೇ ಸೆಕ್ಷನ್ ಪ್ರಕಾರ ನೀವು ಭೋಗಾಪುರ ಗ್ರಾಮಕ್ಕೆ ಅದರ ಸುತ್ತಮುತ್ತಲಿನ ಮೂರು ಮೈಲಿಯೊಳಗಿನ ಪ್ರದೇಶಕ್ಕೂ ಪ್ರವೇಶಿಸಕೂಡದೆಂಬುದಾಗಿ ನಿರ್ಬಂಧಪಡಿಸಿದ್ದೇನೆ. ಆದಿಕರ್ಣಾಟಕರ ಸಭೆಗಳನ್ನು ನೀವು ನೆರಿಸದಂತೆಯೂ, ಭಾಷಣ ಮಾಡದಂತೆಯೂ ಈ ಹೇಳಲ್ಪಟ್ಟ ಪ್ರದೇಶದಲ್ಲಿ ಕ್ರೈಸ್ತ ಜನರಮೇಲೆ ಆದಿಕರ್ಣಾಟಕರಿಗೆ ದ್ವೇಷ, ವೈಮನಸ್ಯಗಳನ್ನು ಉಂಟುಮಾಡತಕ್ಕ ಕಾಗದಗಳು, ಕರಪತ್ರಗಳು, ಹಸ್ತಪತ್ರಿಕೆಗಳೂ, ನೋಟೀಸುಗಳು ಇವುಗಳನ್ನು ಹಂಚಕೂಡದೆಂದೂ ಮತ್ತು ಆ ಮೂಲಕ ಶಾಂತಿಭಂಗವನ್ನು ಉಂಟುಮಾಡಕೂಡದೆಂದೂ ನಿರ್ಬಂಧಪಡಿಸಿರುತ್ತೇನೆ.

ಈ ಏಕಪಕ್ಷದ ಆರ್ಡರು ಈ ದಿನದಿಂದ ಎರಡು ತಿಂಗಳವರೆಗೆ ಜಾರಿಯಲ್ಲಿರತಕ್ಕದ್ದು.

೨೦—೯—೧೯೩೬ನೇ ತಾರೀಖು ಚಾಮರಾಜನಗರದಲ್ಲಿ ನನ್ನ ರುಜು ಮತ್ತು ಸೀಲಿನೊಡನೆ ಕೊಡಲ್ಪಟ್ಟಿದೆ.

ಚಾಮರಾಜನಗರ } (ರುಜು) ಸಿ ಬಿ
೨೦—೯—೧೯೩೬ } ಶಂಕರ ಅಯ್ಯರ್

ಎಸ್ಕ್ವೈಯರ್, ಅಮಲ್ದಾರ್ ಮತ್ತು ಎಕ್ಸ್ ಅಫಿಸಿಯೋ ಸೆಕೆಂಡ್ ಕ್ಲಾಸ್ ಮ್ಯಾಜಿಸ್ಟ್ರೇಟ್

ತಗಡೂರು ರಾಮಚಂದ್ರರಾಯರಿಗೆ ಜಾರಿಮಾಡುವುದಕ್ಕಾಗಿಯೂ ವಿಸ್ತಾರವಾಗಿ ಪ್ರಕಟಿಸುವುದಕ್ಕಾಗಿಯೂ ಚಾಮರಾಜನಗರದ ಪೊ॥ ಇನ್ಸ್ಪೆಕ್ಟರವರಿಗೆ ಕಳುಹಿಸಿ."

ಈ ಆರ್ಡರನ್ನು 20 ನೇ ತಾರೀಖು ದಿನದ ರಾತ್ರಿಯೇ ನಂಜನಗೂಡಿನ ಪೋಲೀಸು ಸೂಪರಂಡೆಂಟರವರು ನನಗೆ ಜಾರಿಮಾಡಿದರು. ಈ ಆರ್ಡರು ನ್ಯಾಯ, ಸತ್ಯ, ಧರ್ಮಗಳಿಗೆ ವಿರುದ್ಧವಾದದ್ದು. ಬಹುಮಂದಿ ಕ್ರೈಸ್ತ ಪಾದ್ರಿಗಳು ಮತಪ್ರಚಾರದ ನೆಪದಿಂದ ರಾಜದ್ರೋಹದ ಗೊಂದಲವನ್ನು ಎಬ್ಬಿಸಿರುವರು. ಅವರ ಹಲವು ಸಂಸ್ಥೆಗಳು ಎಲ್ಲೆಲ್ಲೂ ದಂಗೆಗಳನ್ನೆಬ್ಬಿಸಿವೆ. ಹಿಂದೂಸ್ಥಾನದಲ್ಲೂ, ಇಂಗ್ಲೆಂಡಿನಲ್ಲೂ ದಂಗೆ ನಡೆದುದು ಜನಜನಿತವಾಗಿ ಗೊತ್ತಾಗಿದೆ. ಇದಾದ್ದನ್ನು ಅಡಗಿಸಲು ಸರ್ಕಾರಗಳೂ ಅಧಿಕಾರಿಗಳೂ ನಿಶ್ಶಕ್ತರಾಗಿದ್ದಾರೆ. ಇದನ್ನು ಪ್ರತಿಯೊಬ್ಬ ಮನುಷ್ಯನೂ ತಿಳಿದುಕೊಂಡಿದ್ದಾನೆ. ಕ್ರೈಸ್ತ ಪಾದ್ರಿಗಳು 7000 ಮೈಲಿಯಿಂದ ನಮ್ಮ ದೇಶಕ್ಕೆ ಬಂದಿದ್ದಾರೆ. ನಮ್ಮ ಮತ ಮತ್ತು ಆಚಾರಗಳ ಮೇಲೆ ಟೀಕೆ ಮಾಡುತ್ತಿದ್ದಾರೆ. ಗ್ರಾಮ ಗ್ರಾಮಗಳಲ್ಲಿಯೂ ಪಾರ್ಟಿಗಳನ್ನು ಮಾಡಿ ವೈಷಮ್ಯವನ್ನುಂಟುಮಾಡುತ್ತಿದ್ದಾರೆ. ಇದು ಸಹ ಪ್ರತಿಯೊಬ್ಬ ಮನುಷ್ಯನಿಗೂ ಗೊತ್ತಿದೆ. ಅವರು ಇಷ್ಟು ಮಾಡುತ್ತಿದ್ದರೂ ಅವರುಗಳ ಮೇಲೆ ರಿಪೋರ್ಟು ಮಾಡಲು ಪೋಲೀಸರು ಹೆದರುತ್ತಾರೆ. ಆರ್ಡರು ಮಾಡಲು ಮ್ಯಾಜಿಸ್ಟ್ರೇಟರುಗಳು ಗಾಬರಿಪಡುತ್ತಾರೆ. ಇದಕ್ಕೆ ಭೋಗಾಪುರ ಮತ್ತು ಚಾಮರಾಜನಗರವೇ ಉದಾಹರಣೆಗಳಾಗಿರುತ್ತವೆ.

ಚಾಮರಾಜನಗರದ ಪೋಲೀಸು ಇನ್ಸ್ಪೆಕ್ಟರವರು ನನ್ನ ಮೇಲೆ ಮಾಡಿರುವ ರಿಪೋರ್ಟು ನಿರಾಧಾರವಾದದ್ದು. ಈ ರಿಪೋರ್ಟನ್ನು ನಂಬಿ ಮ್ಯಾಜಿಸ್ಟ್ರೇಟರವರು ಆರ್ಡರು ಮಾಡಿರುವುದು ನ್ಯಾಯ, ಸತ್ಯ, ಧರ್ಮಗಳಿಗೆ ವಿರುದ್ಧವಾದದ್ದು. ಈಗ್ಗೆ ಎರಡು ವರ್ಷದ ಹಿಂದೆ ಪೊ॥ ರೂ॥ 39 ನೇ ಸೆಕ್ಷನ್ ಪ್ರಕಾರ ಆರ್ಡರು ಕೊಟ್ಟಿದ್ದ ಸಿ. ಫಸ್ಟ್ ಕ್ಲಾಸ್ ಮ್ಯಾಜಿಸ್ಟ್ರೇಟರವರು ಬೇಕಾದಷ್ಟು ಪೋಲೀಸು ಸಿಬ್ಬಂದಿಯೊಡನೆ ನನ್ನ ಮೇಲೆ ಬಂದು ಕಾವಲಿದ್ದರು ನಿಜ. ಆದರೆ ಆಗ ಉಗನಿಯನ ಮಾಕಮ್ಮನನ್ನು ಕ್ರೈಸ್ತ ಪಾದ್ರಿಗಳು ಬಲಾತ್ಕಾರದಿಂದ ಸಾಗಿಸಿ ಬೆಂಗಳೂರು ಕ್ರೈಸ್ತ ಮಿಷನರಿ ಶಾಂತಿಸದನದಲ್ಲಿಟ್ಟಿದ್ದರು. ಚಾಮರಾಜನಗರದ ಪೋಲೀಸಿನವರೇ ಬೆಂಗಳೂರು ಪೋಲೀಸಿನವರಿಗೆ ನನ್ನ ಮತ್ತು ಆಕೆಯ ಅಣ್ಣನ ಎದುರಿಗೆ ವಿಚಾರಣೆ ನಡಸುವ ಸಲುವಾಗಿ ನನ್ನ ಕೈಯ್ಯಲ್ಲೇ ಕಾಗದ ಕೊಟ್ಟಿದ್ದರು. ಬೆಂಗಳೂರು ಶಾಂತಿಸದನದಲ್ಲಿ ಬೆಂಗಳೂರು ಪೋಲೀಸಿನವರೇ ಶಾಂತಿಸದನದ ಲೇಡಿ ಸೂಪ

ರಿಂಟೆಂಡೆಂಟು ಮತ್ತು ನನ್ನುಗಳೆದುರು
ಮಾಕಮ್ಮನನ್ನು ವಿಚಾರಣೆ ಮಾಡಿ
ಆವಾಗ ಮಿ॥ ಟಾಮ್ಲಿನ್ಸನ್ ಮತ್ತು
ಲವು ಉಪದೇಶಿಗಳಾದ ಕ್ರೈಸ್ತರು
ಬಲಾತ್ಕಾರ ಮಾಡಿ ಹಿಂಸಿಸಿ ಹೇಗ
ಳೂರಿಗೆ ಸಾಗಿಸಿದರು ಎಂಬುದನ್ನು
ಕರಗುವಂತೆ ಗೋಳಾಡುತ್ತ ಮಾಕಮ್ಮ
ಹೇಳಿಕೆಯನ್ನು ಕೊಟ್ಟಳು
ಶಾಂತಿಸದನದಿಂದ ಮಾಕಮ್ಮನನ್ನು
ಲೀಸಿನವರೇ ಬಿಡಿಸಿಕೊಟ್ಟರು
ಮ್ಮನನ್ನು ಮೈಸೂರಿನಲ್ಲಿ ನಾವೇ
ಮಾಡಿ ಹಿಂದು ಮತಕ್ಕೆ ತೆಗೆದುಕೊ
ವು ಟವುನ್ಹಾಲಿನಲ್ಲಿ ಬಹಿರಂಗ
ನಡೆಯಿತು ಸ್ವತಃ ಮಾಕಮ್ಮ
ಭಾಷಣಮಾಡಿದಳು

ಈ ಮಾಕಮ್ಮನ ತಮ್ಮನನ್ನು
ಯುವಲ್ಲಿ ಬಲಾತ್ಕಾರಮಾಡಿ ಪೋಲೀ
ಆ ಕ್ರೈಸ್ತರೇ ತಂದರು ಪೋಲೀಸಿನ
ವಿಚಾರಣೆ ನಡಸಿ ಹುಡುಗನನ್ನು
ರ್ಣಾಟಕರ ವಶಕ್ಕೆ ಒಪ್ಪಿಸಿದರು
ಮಹಾಜನರು, ಎಲ್ಲಾ ಅಧಿಕಾರಿಗ
ತ್ತು ನನ್ನ ಮೇಲೆ ಕಾವಲಿದ್ದ ಮ್ಯಾಜಿ
ಒರವರ ಎದುರಿಗೇ ಬಹಿರಂಗವಾಗಿ
ಡುಗನನ್ನು ಶುದ್ಧಿಮಾಡಿ ಹಿಂದೂ
ಕ್ಕೆ ತಗೆದುಕೊಂಡೆನು ಭೋಗಾಪುರದ
ವಿ ವಿಷಯವಾಗಿ ಈ ಪೋಲೀಸಿನ
ಹೋಗಿ ವರದಿ ಮಾಡಿದ್ದಾರೆ ಈ
ಸ್ಪೆಕ್ಟರವರೇ ಕ್ರೈಸ್ತ ಉಪದೇಶ
ತ್ತು ಕ್ರೈಸ್ತ ಮುಖಂಡರಮೇಲೆ
ಬ ಮಾಡಿದ್ದಾರೆ ನಂತರ ಗಂಗಾ
ಯಾಗಿದ ವ್ಯವಹಾರವೂ ಇತ್ಯರ್ಥ
ದೆ ಸತ್ಯಾಂಶವು ಹೀಗಿದ್ದರೂ ಕ್ರೈ
ಪಾದ್ರಿಗಳು ದೊಡ್ಡ ದೊಡ್ಡ ಅಧಿಕಾ
ಲ್ಲಿ ಶರಣಾಗತರಾದರು ಚಿಕ್ಕ ಚಿಕ್ಕ
ಕಾರಿಗಳು ಚಿಕ್ಕಟ್ಟಿಗೆ ಸಿಕ್ಕಿದರು
ಇನ್ಸ್ಪೆಕ್ಟರವರಿಂದ ಮೊದಲಾಗಿ
ಕಮೀಷನರವರಗೆ ಎಲ್ಲಾ ಅಧಿಕಾರಿ
ಹಲವು ಬಾರಿ ದೊಡ್ಡ ಮನುಷ್ಯ
ಭೋಗಾಪುರಕ್ಕೆ ಹೋಗಿ ಬಾಧಿತ
ಸ್ತರಿಗೆ ಉಪಕಾರ ಕೂಡುವ
ಆದಿಕರ್ಣಾಟಕರುಗಳಿಗೆ ಬ್ರಿಜಲ
ಪ್ರೇರೇಪಿಸಿದ್ದಾರ ಹೊಸ ಯುವಕ
ಶಾರಿಗಳು ಹನರಿಸುತ್ತಾರೆ ಅದಿಕರ್ಣಾ
ಕರಮೇಲೆ ಚಿತಾವಣೆ ಅರ್ಜಿಯನ್ನು
ಮಕೊಂಡು ಬಂದಿದ್ದಾರೆ ನನಗೆ
ದದ ಆರ್ಡರು ಮಾಡಿದ್ದಾರೆ
ಳಿಕೆಯು ಈ ರೀತಿಯಾಗಿ ನಡದಿ
ರಿಂದ ಈಗ 111 ನೇ ಸೆಕ್ಷನ್ ಪ್ರಕಾ
ರ್ಡರನ್ನು ಯಾಕಿಗ ಜಾರಿಮಾಡ
ದು ಮಹಾಜನರೇ ಆಲೋಚಿಸಿ
ಇಂತಾ ಆರ್ಡರುಗಳು ನೂರಾರು
ಈ ಆರ್ಡರು ನನ್ನ ಆತ್ಮ ಸ್ವಾತಂತ್ರ
ಯ, ಸತ್ಯ ಧರ್ಮಗಳಿಗೂ ವಿರುದ್ಧ
ದೆ ಮುಂದೆ ಗತಿ ಯೋಗ್ಯವಾದದ್ದ
ರಿಂದ ಈ ಆರ್ಡರನ್ನು ಗೌರವಿಸ
ಸಿಸದೆ, ತಿರಸ್ಕರಿಸಿ ಉದಾಸೀನನಾಗಿ
ನವಾಗಿದ್ದೇನೆ ನನ್ನ ಕರ್ತವ್ಯವ
ನುಮಾಡಿದ್ದೇನೆ ಮತ್ತು ಮಹಾಜ
ನ್ಯಾಯಾನ್ಯಾಯಗಳನ್ನು ಮಹಾಜ
ನೋಡಿಕೊಳ್ಳಲಿ

ವಿಸೂಚಿಕಾ (ಕಾಲರಾ)

(ಕಳೆದವಾರದ ಶೇಷ)

ಲೇಖಕರು —ಭಿಷಗಾಚಾರ್ಯ, ಆಯುರ್ವೇದ ವಿಶಾರದ, ಪಂಡಿತ ತಾರಾನಾಥರು.

ಈಗ ಆಯುರ್ವೇದದ ಪ್ರತಿಬಂಧಕೋಪಾಯಗಳನ್ನು ನೋಡೋಣ —

(೧) ಆರತಿ ಕರ್ಪೂರ (ಖಂಡೇಕರ್ಪೂರ) ೧೦ ತೊಲೆ, ಅಜವಾನದ ಹೂ ... ತೊಲೆಯನ್ನು ... ಸೇರಿಸಿದರೆ ಎರಡೂ ... ನೀರಾಗುವುದು. ಒಂದು ತಕ್ಕ ... ದಲ್ಲಿ ಅವುಗಳ ಚೂರು ಹಾಕಿ ಬಾ... ಮುಚ್ಚಿಬಿಟ್ಟು ಚೆನ್ನಾಗಿ ಅಲ್ಲಾಡಿಸಬೇಕು. ಎರಡೂ ಕರಗಿ ನೀರಾಗುವುದು. ... ರಸದ ಒಂದು ಯಾ ಎರಡು ಹನಿಗಳನ್ನು ಒಂದು ಬಟ್ಟಲಲ್ಲಿ ಕಲಸಿ ಊ... ಒಂದು ತಾಸಿನ ಮೊದಲು ... ಬೇಕು. ದಿನಕ್ಕೆ ಎರಡರಿಂದ ... ಬಾರಿಯ ತನಕ ತಕ್ಕೊಳ್ಳಬಹುದು.

(೨) ಒಂದು ಹೊಸ ಮಣ್ಣಿನ ಗಡಿಗೆಯನ್ನು ಲೋಬಾನದ ಹೊಗೆಯ ಮೇಲೆ ... ಹಾಕಬೇಕು. ಅದರಲ್ಲಿ ಹೊಗೆ ... ಆಗ ಅದು ಅರ್ಧ ತುಂಬುವ ... ಚೆನ್ನಾಗಿ ಕಾದು ಆಗಲೇ ಉಗುರು ... ನೀರನ್ನು ಅದರಲ್ಲಿ ... ತುಂಬಿಸಿಬಿಟ್ಟು ಒಂದು ಮುಚ್ಚಳ ... ಬೇಕು. ಆ ನೀರು ಹಾಕಬೇಕಾ... ನೀರಿನ ಒಂದು ಭಾಗಕ್ಕೆ ಒಂದು ... ಪ್ರಕಾರ ನಿಂಬೇ ರಸವನ್ನು ... ಕೂಡಿಸಿರಬೇಕು. ಹಾಗೆ ಕೂಡಿಸಿ ... ಇಟ್ಟ ನೀರು, ತಣ್ಣಗಾದ ಮೇಲೆ ... ೨ ರಿಂದ ೫ ತೊಲೆಯವರೆಗೆ ... ಬರಿ ಹೊಟ್ಟೆಯಲ್ಲಿ ಕುಡಿಯು...

...ಯಕ ಉಪಾಯಗಳು — ವಿಶೇ... ನೊವಲಾದೊಡನೆ ಅಂಗಾತ ... ದು ಮುಖ್ಯ. ಮನಸ್ಸಿನಲ್ಲಿ ... ಮುಖ್ಯ ಸ್ಥಾನವನ್ನು ಕೊಡ... ಯಾಕಂದರೆ, ಉಲ್ಲಾಸಕ್ಕೇನೇ ... ಪ್ರಬಲ ಪ್ರತಿಬಂಧಕ ಶಕ್ತಿಯಿದೆ. ... ಸಿರೋಧ ಶಕ್ತಿಯು ದ... ಮೃತ್ಯುವಿಗೆ ಆಮಂತ್ರಣವನ್ನು ...

...ಯನ್ನು ಮಲಗಿಸಿದ ಕೋಣೆ ... ಬೆಳಕು ಧಾರಾಳವಾಗಿರ... ಬೀಸುವ ಗಾಳಿಯಾದರೆ ... ಹಾಸಿಗೆ ಹತ್ತಿರ ... ಕೋಣೆ ಬೆಚ್ಚಗಿರಬೇಕು. ರೋ... ಳಿಯುವಂತೆ ಬಿಸಿ ನೀರಿನ ಬಾಟ್ಲಿ ... ಪಕ್ಕಗಳಲ್ಲಿ ಹೊದಿಕೆಯಲ್ಲಿ ... ಬೇಕು. ರೋಗಿಯ ಕಾ... ವಂತೆ ಮಾಡಬಹುದು. ಆದರೆ ... ವಾಗ ರೋಗಿಗೆ ಗಾಳಿ ಹತ್ತ... ಬೇಕು. ಅದಕ್ಕಾಗಿ ಚಿಕ್ಕ ... ಹೊದಿಕೆಯೊಳಗೆ ಕೈಹಾಕಿ ಮಾ... ಬೇಕು. ಕುಡಿಯಲಿಕ್ಕೆ ತಣ್ಣಗಾದ ನೀರನ್ನು ಕೊಡಬೇಕು. ಮಂಜುಗಡ್ಡೆ ಹಾಕಿಯೂ ಕೊಡಬಹುದು. ಬಟ್ಟೆಬರೆಗಳು ಸ್ವಚ್ಛವಾಗಿರಬೇಕೆಂಬುದನ್ನು ಎಷ್ಟು ಹೇಳಿದರೂ ಕಡಿಮೆಯೆ.

ವಾಂತಿಭೇದಿ ನಿಂತ ಮೇಲೆ ಕೂಡ ಆಹಾರವನ್ನು ಒಮ್ಮೆಲೇ ತಕ್ಕೊಳ್ಳುವುದು ಅಪಾಯಕರ. ರೋಗವಿರುವವರಿಗೆ ನೀರೇ ಆಹಾರ. ರುಚಿಸುವಂತೆ ನಿಂಬೇ ಹಣ್ಣನ್ನು ಕಲಸಿಯೂ ಕೊಡಬಹುದು. ಬಿಸಿ ಹಾಲು ಸಕ್ಕರೆ ಕೊಡಬಹುದು. ಗುಣವಾದ ಎರಡು ದಿನ ಮುಸಂಬಿ, ಕಿತ್ತಳೆ ಹಣ್ಣಿನ ರಸವನ್ನು ಕುಡಿಸುವುದು. ಅನಂತರ ಎರಡು ದಿನ ಅವಲ್ಲದ ಮಜ್ಜಿಗೆ, ತೆಳ್ಳಗಾದ ಅಕ್ಕಿಯ ಗಂಜಿ, ಇವನ್ನು ತಕ್ಕೊಳ್ಳಬಹುದು. ಅಲ್ಲಿಂದ ಮುಂದೆ ಸ್ವಲ್ಪ ಮೆತ್ತಗಾದ ಅನ್ನ, ತಿಳಿಸಾರು ಮಜ್ಜಿಗೆ ಹೀಗೆ ಕೆಲವು ದಿವಸ ಇದ್ದ ಮೇಲೆ, ಮಾಮೂಲು ಆಹಾರವನ್ನು ಸಣ್ಣ ಪ್ರಮಾಣದಿಂದ ತಕ್ಕೊಳ್ಳುತ್ತ ಕ್ರಮೇಣ ಹೆಚ್ಚಿಸುತ್ತ ಹೋಗಬೇಕು. ದಿನ ಒಂದಕ್ಕೆ ಹೆಚ್ಚು ಕಡಿಮೆ ಹೇಸುತ್ತಿರುವ ಈ ಆಹಾರ ಮತ್ತು ಹಣ್ಣು ಕಲಸಿ ತಕ್ಕೊಳ್ಳಬಹುದು.

ಹಾಗೆ ತಕ್ಕೊಳ್ಳುವುದು ಉತ್ತಮವಂದೂ ಹಲವು ಮತ. ರೋಗವಿರುವಾಗ ಕೂಡ ಹಾಲು ಹಾಕದೆ ಕಾಫಿ ಕೊಡಬಹುದು, ಎಂದು ಕೆಲವು ಪಾಶ್ಚಾತ್ಯ ವೈದ್ಯರ ಮತವಿದೆ.

ಚಿಕಿತ್ಸಾ ಯೋಜನೆಗಳು

(೧-೨) ಹಿಂದೆ ಕೊಟ್ಟ ಪ್ರತಿಬಂಧಕ ಯೋಜನೆಗಳು ಇಲ್ಲಿಯೂ ಕೆಲಸಕ್ಕೆ ಬರುತ್ತವೆ. ಅದರಲ್ಲಿ ಮೊದಲನೇದು (ಕರ್ಪೂರ ಅಜವಾನದ ಹೂ ದ್ರಾವಕ) ಬಹಳ ಒಳ್ಳೆಯ ಔಷಧ. ಅದರ ೪—೬ ಹನಿ ಹೆಚ್ಚು ಕಡಿಮೆ ಒಂದೊಂದು ಹಾವಳಿತೂಕ ಸಕ್ಕರೆಯೊಡನೆ ಕೊಟ್ಟರೆ, ಎರಡುಮೂರು ಸಲ ಕೊಡುವಷ್ಟರೊಳಗೆ ವಾಂತಿ, ಭೇದಿಗಳೊಳಗೆ ಒಂದಾದರೂ ನಿಲ್ಲುವದು. ಹಾಗೆ ಒಂದಾದರೂ ನಿಲ್ಲುವವರೆಗೆ ಇದನ್ನು ಅರ್ಧಗಂಟೆಗೊಮ್ಮೆ ಕೊಡಬೇಕು. ಅನಂತರ ೨—೩ ಘಂಟೆಗೊಮ್ಮೆ ಕೊಟ್ಟರೆ ಸಾಕು. ಮೂರನೆ ದಿನದಿಂದ ದಿನಕ್ಕೆ ಎರಡುಮೂರುಸಾರಿ ಕೊಟ್ಟರೆ ಸಾಕು.

ಇದರಿಂದ ರೋಗಿಗೆ ಶೀತವೇರುವುದೂ ಇಲ್ಲ. ಹೃದಯ ಶ್ವಾಸಕೋಶಗಳಿಗೆ ತುಂಬಾ ಲಾಭವಿದೆ. ಇದು ರೋಗಿಯ ಶಕ್ತಿಯನ್ನು ಇಳಿಯಗೊಡುವದಿಲ್ಲ. ರೋಗಿಯನ್ನು ಬೆಚ್ಚಗಾಗಿಡುತ್ತದೆ.

ರೋಗಿಯ ಕೈಕಾಲುಗಳು ಎಳೆತವಿಲ್ಲದಿದ್ದರೂ ಇದ್ದರೂ ಇದರ ಒಂದು ಭಾಗವನ್ನು ಕೊಬ್ಬರಿ ಎಣ್ಣೆಯ ಒಂದೂವರೆ ಭಾಗಕ್ಕೆ ಕಲಸಿ ಚೆನ್ನಾಗಿ ತಿಕ್ಕಿದರೆ ಕಡಿಮೆಯಾಗುವುದು.

ಎರಡನೆಯದು—ಹಿಂದೆ ಬರೆದಂತೆ ತಯಾರು ಮಾಡಿದ ಗಡಿಗೆಯಲ್ಲಿಟ್ಟ ನಿಂಬೇ ನೀರನ್ನು ೨೦-೩೦ ನಿಮಿಷಕ್ಕೊಮ್ಮೆ ಕುಡಿಯುತ್ತಾ ಹೋದರೆ ಕಾಲರಾ ಬೇಗ ಗುಣವಾಗುವುದು. ವಾಂತಿ ಭೇದಿ ಶುರುವಾದೊಡನೆ ತೆಗೆದುಕೊಂಡರೆ ಉತ್ತಮ ಫಲಕಾರಿ.

೩ ಎಕ್ಕೆ ಬೇರಿನ ಚಕ್ಕೆ ೧ ತೊಲ, ಮೆಣಸು ೧ ತೊಲ ಇವನ್ನು ಹಸಿಶುಂಠಿಯ ರಸದಲ್ಲಿ ನುಣ್ಣಗೆ ಅರೆದು ೧ ಗುಂಜಿ ಪ್ರಮಾಣದ (ಸುಮಾರು ಮೆಣಸಿನ ಕಾಳಿನಷ್ಟು) ಗುಳಿಗೆಗಳನ್ನು ಮಾಡಬೇಕು. ವಾಂತಿಯಾಗಲಿ, ಭೇದಿಯಾಗಲೀ ಒಮ್ಮೆ ಆದೊಡನೆ ಒಂದು ಮಾತ್ರೆ ನುಂಗಿ ಸ್ವಲ್ಪ ಬೆಚ್ಚಗಾದ ನೀರನ್ನು (ತಣ್ಣೀರೂ ತಗೂಬಹುದು) ಕುಡಿಯಬೇಕು. ಮೊದಲನಾಲ್ಕು ನುಂಗುವಷ್ಟರಲ್ಲಿ ಗುಣವಾಗುವದು.

೪ ಬಡೇಸೋಪು, ಪುದಿನಾ ಸೊಪ್ಪು ಪ್ರತಿಯೊಂದು ನಾಲ್ಕುನೂರು ತೊಲ, ಲವಂಗ ನಾಲ್ಕು ತೊಲ ಮಾತ್ರ. ಗುಲ್ಬ ೨ ತೊಲ. ಬಡೇಸೋಪು ಲವಂಗಗಳನ್ನು ಸ್ವಲ್ಪ ಜಜ್ಜಿ ಬಾಕಿ ಎರಡರೊಡನೆ ೬ ಸೇರು ನೀರಿನಲ್ಲಿ ಕುದಿಸಿ, ಶೋಧಿಸಿ ಅರ್ಕ ತೆಗೆಯಬೇಕು. ರೋಗಿಗೆ ಬಾಯಾರಿಕೆಯಾದಂತೆ ಇದನ್ನು ಕೊಡುತ್ತಾ ಹೋಗಬೇಕು.

ರೋಗ ಮೊದಲಾದೊಡನೆ ಇದನ್ನು ಕೊಡುತ್ತಾ ಹೋದರೆ ಒಮ್ಮೊಂದರಿಂದಲೇ ರೋಗ ನಾಶಿಯಾಗುವುದೂ ಉಂಟು.

ಹೋಮಿಯೋಪತಿ ಚಿಕಿತ್ಸೆಯೂ ಬಹಳ ಉತ್ತಮ ಮತ್ತು ಎಂಥ ಸಂಸ್ಕೃತಿ ನಾಲಿಗೆಯವರಿಗೂ ಅನುಕೂಲ. ಈ ಔಷಧಗಳನ್ನು ಪ್ರತಿಬಂಧಕವಾಗಿಯಾದರೆ ದಿನಕ್ಕೊಂದು ಬಾರಿ ತಕ್ಕೊಂಡರೆ ಸಾಕು. ಇಲ್ಲವಾದರೆ ರೋಗದ ಜೋರಿನ ಕುರಿತು ಜೋರಿಗೆ ತಕ್ಕಂತೆ ೩ ಗಂಟೆಗೊಮ್ಮೆಯಿಂದ ಹಿಡಿದು ಅರ್ಧಗಂಟೆಗೊಮ್ಮೆ ಕೊಡಬಹುದು.

ಭೇದಿ ಮೊದಲಾದೊಡನೆ ರುಬಿನಿಸ್ ಕೆಂಫರ್, ಎಕೊನೈಟಮ್ ನಡು ಒಮ್ಮೆ ಅದು, ಒಮ್ಮೆ ಇದು. ಕೂಪಿರಾ ಫೂರ್ತ ಮಿಯೊ ತಕೊಂಡಾಗ—ಕೆಂಫರ ಇದು ಸಾಕಾಗದೆ ಹೋದರೆ—ಆರ್ಸೆನಿಕ, ಕೂಪ್ರಮ್, ಎಸಿಡ್, ಇಪೆಕೆಕ್, ಎಪೋನ್ ಸಲ್ಪ ಒಂದು ತಪ್ಪಿದರೆ ಇನ್ನೊಂದು. ಬಲಹೀನವಾಗುವಾಗ —ಆರ್ಸೆನಿಕಮ್, ಎಕೊನೈಟಮ್, ಕಾರ್ಬೊವೆಜಿಟಬಿಲಿಸ್ ಒಂದು ತಪ್ಪಿದರೆ ಇನ್ನೊಂದು. ಭಯವಿದ್ದರೆ—ಸಲ್ಫರ, ಫಾಸ್ಫರಸ್ ... ಬೇದಿ ನಿಂತ ಮೇಲೆ ... ಸೂಸ ಮಾಡಿಕ್

ಪಥ್ಯ —ರೋಗಿಯು ವಾಂತಿ ಭೇದಿಯನ್ನು ಮಾಡಬೇಕು. ... ಅವನ ಕುಣಿಗೆ ಹಾಕಬೇಕು. ಬಟ್ಟೆಗಳನ್ನು ... ನಿಮಿಷವಾದರೂ ... ಬಿಸಿಲಿನಲ್ಲಿ ಒಣಗಿಸಿ ಮತ್ತೆ ಒಗೆಯಬೇಕು. ಗುಣವಾದ ಮೇಲೆ ... ದಿನಗಳವರೆಗೆ ... ವನ್ನು ಕೊಡಬೇಕು. ... ನಿಂತ ಮೇಲೆ ... ಹಾಲು ಸಕ್ಕರೆ ಸ್ವಲ್ಪ ಸ್ವಲ್ಪ ... ಬಹುದು.

ಸುಲಭ ಚಿಕಿತ್ಸೆ.

ಅತ್ತೀಮರ (ಔದುಂಬರವೃಕ್ಷ)

ಈ ಮರವನ್ನು ನಮ್ಮಲ್ಲಿ ಕಾಣದವರು ಬಹಳ ವಿರಳ. ಆದರೆ ಇದರ ಪ್ರಯೋಜನವು ಪಟ್ಟಣಿಗರಿಗಿಂತ, ಹಳ್ಳಿಯವರಿಗೆ ವಿಶೇಷ ಪ್ರಯೋಜನಕಾರಿಯಾಗಿದೆ. ಈ ಮರದ ಪರಿಚಯವನ್ನು ಪಟ್ಟಣಿಗರು ಮಾಡಿಕೊಂಡು ಇದರ ಉಪಯೋಗಗಳನ್ನು ಮಾಡಿಕೊಂಡಲ್ಲಿ ಔಷಧಕ್ಕಾಗಿ ಖರ್ಚಾಗುವ ಸ್ವಲ್ಪಭಾಗ ಹಣವನ್ನಾದರೂ ಉಳಿಸಬಹುದು.

ಇದು ನಮ್ಮ ದೇಶದಲ್ಲಿ ಎಲ್ಲಿ ನೋಡಿದರೂ ಸರ್ವಸಾಧಾರಣವಾಗಿ ಸಿಕ್ಕುವ ಮರಗಳಲ್ಲೊಂದು. ಈ ಮರದ ಕಾಯಿಗಳಿಂದ ಸ್ತ್ರೀರೋಗದ ಸ್ರಾವಗಳನ್ನು ಮಾಡುವರು. ಹೆಣ್ಣುಗಳ ಗರ್ಭದಲ್ಲಿ ಸರಿಕ್ಕೆ ಸಹಾಯಮಾಡುವುದು. ಬಾಯಾರಿಕೆಯನ್ನೂ, ಶರೀರದಿಂದ ಆಗುವ ಕಫವನ್ನೂ, ಪಿತ್ತವನ್ನೂ ಹೋಗಲಾಡಿಸುವುದಲ್ಲದೆ ಸ್ತ್ರೀ ಸಂಬಂಧವಾದ ಹೊಟ್ಟೆನೋವು, ಯೋನಿರೋಗಗಳನ್ನು ನಾಶಮಾಡುವ ಗುಣವೂ, ವ್ರಣನಾಶಕವೂ, ಗರ್ಭವೃದ್ಧಿಕಾರಿಯಾಗಿಯೂ ಆಗಿರುವುದು.

ಈ ವೃಕ್ಷದಿಂದ ಆಗುವ ಪ್ರಯೋಜನಗಳು —

1 ಎಲ್ಲಾ ಬಗೆಯ ಮೇಹಕ್ಕೆ —ಅತ್ತೀಬೇರಿನ ಹಾಲಿನಲ್ಲಿ ಜೀರಿಗೆ ಪುಡಿಯನ್ನೂ, ಸ್ವಲ್ಪ ಸಕ್ಕರೆಯನ್ನೂ ಹಾಕಿ ತೆಗೆದುಕೊಳ್ಳುವುದು.

2 ಬಾವುಗಳಿಗೆ — ಅತ್ತೀಹಾಲನ್ನು ಹಚ್ಚಿ ಅದರಮೇಲೆ ಹತ್ತಿಯನ್ನು ಕಟ್ಟಿದರೆ ಗುಣವಾಗುತ್ತ.

3 ಹಾವಿನ ವಿಷಕ್ಕೆ —ಅತ್ತಿ ತೊಗಟೆಯನ್ನು ಜಜ್ಜಿ ಬರುವ ರಸಕ್ಕೆ ತುಪ್ಪವನ್ನು ಬೆರಸಿ ಬಿಸಿಮಾಡಿ ಕುಡಿಸಲು ಗುಣ.

4 ಉಷ್ಣಕ್ಕೆ —ಬೆಳಿಗ್ಗೆ ಊಟಮಾಡುವುದಕ್ಕೆ ಮೊದಲು ಅತ್ತೀಹಾಲು ಅರ್ಧ ವೀಳ್ಯದೆಲೆ ಹಣ್ಣುಗಳ ಜೊತೆಗೆ ಕಲ್ಲುಸಕ್ಕರೆ ಪುಡಿಯನ್ನು ಹಾಕಿ ತಿನ್ನಬೇಕು.

5 ಚೇಳಿನ ವಿಷಕ್ಕೆ — ಅತ್ತಿಯ ಎಲೆಗಳನ್ನು ನುಣ್ಣಗರೆದು ಚೇಳು ಕಚ್ಚಿದ ಗಾಯಕ್ಕೆ ಕಟ್ಟಬೇಕು.

6 ಗಂಡಮಾಲೆಗೆ —ಸಿಹಿ ಮೊಸರಿನಲ್ಲಿ ಚಿಗುರಾಗಿರುವ ಎಲೆಗಳನ್ನು ಚೆನ್ನಾಗಿ ಅರೆದು ಗಜ್ಜುಗದ ಪ್ರಮಾಣ ಬೆಳಗಿನ ವೇಳೆ ಮಾತ್ರ ಕಲ್ಲುಸಕ್ಕರೆಯೊಡನೆ ಸೇವಿಸಲು ಗುಣ.

7 ರಕ್ತಾತಿಸಾರಕ್ಕೆ —ಅತ್ತೀಬೇರಿನ ಹಾಲನ್ನು ಸೇವಿಸುವುದರಿಂದ ಜಾಗ್ರತೆ ಗುಣವಾಗುವುದು.

8 ಕಣ್ಣುರೋಗಕ್ಕೆ — ಅತ್ತೀಹಾಲನ್ನು ಕಣ್ಣಿನ ರೆಪ್ಪೆಗಳ್ಗೆ ಹಚ್ಚಲು ಕಣ್ಣುರಿ, ಕಣ್ಣುಕೆಂಪು ಮೊದಲಾದ ತೊಂದರೆಯು ಗುಣವಾಗುವುದು.

ಪಂಡಿತ ಜೆ ಎ ವೆಂಕಟರಾಮಯ್ಯ,
ಶ್ರೀನಿವಾಸ ಆಯುರ್ವೈದ್ಯಶಾಲೆ,
ಕಾಗಲ್ವಾಡಿ

ವರ್ತಮಾನ ಸಂಗ್ರಹ.

ಆಫ್ರಿಕಾ ಪ್ರತಿನಿಧಿಗಳು — ದಕ್ಷಿಣ ಆಫ್ರಿಕಾ ಸ್ವಾಸ್ಥ್ಯಗಳ ಪ್ರತಿನಿಧಿಗಳು ಕಳೆದ ವಾರ ಬೊಂಬಾಯಿಗೆ ಆಗಮಿಸಿದರು ಅನೇಕ ಅಧಿಕಾರಿಗಳೂ, ಖಾಸಗೀ ದೊಡ್ಡ ಮನುಷ್ಯರೂ, ಕಾಂಗ್ರೆಸ್ಸಿನ ಸದಸ್ಯರುಗಳೂ ಮತ್ತು ಇನ್ನೂ ಅನೇಕರೂ ಸ್ವಾಗತ ಬಯಸಿದರು. ಈ ಪ್ರತಿನಿಧಿಗಳಿಗೆ ಇಂಡಿಯಾ ದೇಶದ ವೈಸರಾಯಿ ಲಾರ್ಡ್ ಲಿನ್ ಲಿತ್ ಗೋರವರಿಂದಲೂ ಮತ್ತು ಮಹಾತ್ಮಾ ಗಾಂಧಿಯವರಿಂದಲೂ ಪ್ರತ್ಯೇಕ ಸುಖಾಗಮನ ಪತ್ರಗಳು ಬಂದವು

ಇಂಡಿಯಾ ಸರ್ಕಾರದ ಪ್ರಕಟನೆ — ಕಾಂಗ್ರೆಸ್ಸಿನ ಮುಖಂಡರು ವೈಸರಾಯಿಯವರ ವಿಷಯವಾಗಿ ಜನರಲ್ಲಿ ದುರ್ಭಾವನೆಯನ್ನುಂಟುಮಾಡಲು ಪ್ರಯತ್ನಿಸುತ್ತಿದ್ದಾರೆಂದೂ, ಅದುದರಿಂದ ಜನರು ಬಹಳ ಎಚ್ಚರಿಕೆಯಿಂದಿರಬೇಕೆಂದೂ ಇಂಡಿಯಾ ಸರ್ಕಾರದ ಪ್ರಕಟಣೆಯು ಹೊರ ಹೊರಟಿದೆ

ಕೊಳವೆಯು ಸಿಡಿಯಿತು — ಲಾಹೋರಿನ ಸಮೀಪದಲ್ಲಿ ಒಂದು ರೈಲ್ವೆ ಇಂಜನ್ನು ಆಮ್ಲಜನಕದ ಸಹಾಯದಿಂದ ಸರಿಪಡಿಸುತ್ತಿದ್ದರು. ಹಠಾತ್ತಾಗಿ ಆಮ್ಲಜನಕವು ಭರ್ತಿಯಾಗಿದ್ದ ಕೊಳವೆಯೊಂದು ಸಿಡಿಯಿತು ತಕ್ಷಣವೇ ಸಿಡಿದ ಆ ಕೊಳವೆಯ ರಭಸಕ್ಕೆ ಸುಮಾರು ಮಂದಿ ಅಲ್ಲಿಯೇ ಸತ್ತರು. ವಿಶೇಷ ಗಾಯಗೊಂಡ ನಾಲ್ವರು ಆಸ್ಪತ್ರೆಯಲ್ಲಿ ಮರಣಹೊಂದಿದರು. ಸುಮಾರು 25 ಮಂದಿ ಗುಣಹೊಂದುತ್ತಿರುವರು

---

70 ಅಡಿ ಉದ್ದ ಪುಳ್ಳೆ ಮೇಜು — ಜೋಧ್‌ಪುರದ ಮಹಾರಾಜರವರು ಇಂಗ್ಲೆಂಡಿನಲ್ಲಿ 70 ಅಡಿ ಉದ್ದ ಪುಳ್ಳೆ ಒಂದು ಊಟದ ಮೇಜನ್ನು ಮಾಡಿಸಿ, ಅದನ್ನು ಶೀಘ್ರದಲ್ಲಿಯೇ ಭಾರತದೇಶಕ್ಕೆ ತರಿಸುತ್ತಾರೆ ಇನ್ನೇನು! ಅನೇಕರು ಆ ಮೇಜಿನಮೇಲೆ ಹೊಟ್ಟೆತುಂಬ ಊಟಮಾಡಬಹುದು!

---

11 ಲಕ್ಷ ರೂಪಾಯಿಗೆ ವಾರಸುದಾರರೇ ಇಲ್ಲ! — ಕಳೆದ ಹತ್ತು ವರ್ಷಗಳಿಂದೀಚೆಗೆ ಪೋಸ್ಟಾಫೀಸಿನ ಸೇವಿಂಗ್ಸ್ ಬ್ಯಾಂಕಿನಲ್ಲಿ ವಾರಸುದಾರರೇ ಇಲ್ಲದಿದ್ದುದರಿಂದ 11 ಲಕ್ಷ ರೂ ನಿಂತು ಹೋಗಿದೆ ಎಂದು ಸರ್ ಫ್ರಾಂಕ್ ನಾಯ್ಸ್‌ರವರು ಸಿಮ್ಲಾ ನಗರದಲ್ಲಿ ನಡೆಯುತ್ತಿರುವ ನ್ಯಾಯನಿರ್ಮಾಯಕ ಸಭೆಯಲ್ಲಿ ಹೇಳಿದರು

ದುರುಪಯೋಗ — ಇತ್ತೀಚೆಗೆ ಜೀವವಿಮೆಗಳಲ್ಲಿಯೂ, ಪರಸ್ಪರ ಸಹಾಯ ಸಂಘಗಳಲ್ಲಿಯೂ ಕೆಲಸ ಮಾಡುವ ಗುಮಾಸ್ತರುಗಳೂ ಮತ್ತು ಇನ್ನೂ ಕೆಲವು ದೊಡ್ಡ ಅಧಿಕಾರಿಗಳೂ ಹಣವನ್ನು ದುರುಪಯೋಗಪಡಿಸಿಕೊಳ್ಳುತ್ತಿರುವುದು ಸಾಮಾನ್ಯವಾಗಿ ಹೋಗಿಬಿಟ್ಟಿದೆ ವಿಜಯನಗರದ ಕೋ-ಆಪರೇಟಿವ್ ಸೆಂಟ್ರಲ್ ಬ್ಯಾಂಕಿನ ಸೆಕ್ರೆಟರಿ, ಅಸಿಸ್ಟೆಂಟ್ ಸೆಕ್ರೆಟರಿ ಮತ್ತು ಒಬ್ಬ ಡೈರೆಕ್ಟರು — ಈ ಮೂರು ಜನಗಳೂ ಬ್ಯಾಂಕಿನ ಸುಮಾರು 51,000 ರೂಪಾಯಿಗಳನ್ನು ದುರುಪಯೋಗಪಡಿಸಿಕೊಂಡಿದ್ದಾರೆಂದು ಅವರ ಮೇಲೆ ಮೊಕದ್ದಮೆಯನ್ನು ಹೂಡಲಾಗಿದೆ.

ಪಂಡಿತ ನೆಹರೂರವರು — ಪಂಡಿತ ಜವಾಹರಲಾಲ್ ನೆಹ್ರೂರವರು ಅಕ್ಟೋಬರ್ ೬ ರಿಂದ 18ರ ವರೆವಿಗೆ ಮದರಾಸು ಅಧಿಪತ್ಯದಲ್ಲಿ ಸಂಚರಿಸುವರೆಂದು ತಿಳಿದು ಬಂದಿದೆ ಕಾಂಗ್ರೆಸ್ಸಿನ ಅಧ್ಯಕ್ಷರೂ ಮತ್ತು ತ್ಯಾಗಮೂರ್ತಿಯೂ ಆದ ಪಂಡಿತ ನೆಹರೂರವರು ಮೈಸೂರು ಮತ್ತು ಬೆಂಗಳೂರನ್ನು ಅವರ ತಮಿಳುನಾಡು ಪ್ರವಾಸವು ಮುಗಿದನಂತರ ಸಂದರ್ಶಿಸಬಹುದು

ಹೊಳೆನರಸೀಪುರ — ಹೊಳೇ ನರಸೀಪುರದಲ್ಲಿ ವಿದ್ಯುಚ್ಛಕ್ತಿಯ ದೀಪದ ಪ್ರಾರಂಭೋತ್ಸವವು ಈ ತಿಂಗಳು 6 ನೇ ತಾ॥ನಲ್ಲಿ ವಿಶೇಷ ವಿಜೃಂಭಣೆಯಿಂದ ನಡೆಯಿತು ಅಲ್ಲಿನ ಪೌರಸಭೆಯವರು ಸೀರಿನ ನಲ್ಲಿಗಳನ್ನು ಊರಿಗೆಲ್ಲಾ ಕೊಟ್ಟು ಪ್ರಜೆಗಳಿಗೆಲ್ಲಾ ವಿಶೇಷ ಉಪಕಾರ ಮಾಡಿದ್ದಾರೆ. ಇತ್ತೀಚೆಗೆ ಪೌರಸಭೆಯು ಊರನ್ನು ಮತ್ತಷ್ಟು ಅಲಂಕರಿಸಬೇಕೆಂದು ಪ್ರಯತ್ನಿಸುತ್ತಿದೆ ಇಲ್ಲಿ ಮಳೆಯಿಲ್ಲದೆ ಇರುವುದರಿಂದ ಪೈರು ಒಣಗಿ ಹೋಗುತ್ತಿದೆಯೆಂದು ರೈತರು ಪ್ರಲಾಪಿಸುತ್ತಿದ್ದಾರೆ ಈ ಊರಿನ ಸುತ್ತ ಮುತ್ತಲ ಗ್ರಾಮಗಳಲ್ಲಿ ಪ್ಲೇಗ್ ಬಾಧ್ಯವಿದೆ ಎಂದು ತಿಳಿದು ಬಂದಿದೆ

ಇದಲ್ಲವೆ ವಿಕಮತ್ಯ? — ಮೇಲಿಲ್ ಕೋಟ್ಲಾ ಎಂಬ ಸಂಸ್ಥಾನದ ಸರ್ಕಾರದವರು 6 ಮಂದಿ ಮುಸಲ್ಮಾನ ಮುಖಂಡರನ್ನು ದಸ್ತಗಿರಿಮಾಡಿ ದಂಡಿಸಿದರು ಇದನ್ನು ನೋಡಿ ಸಹಿಸಲಾರದೆ ಅಲ್ಲಿನ ಸುಮಾರು 2000 ಮಹಮ್ಮದೀಯ ಗಂಡಸರೂ, ಹೆಂಗಸರೂ ಮತ್ತು ಮಕ್ಕಳೂ ಸಹ ಆ ಸಂಸ್ಥಾನವನ್ನು ಬಿಟ್ಟು ದೇಶಾಂತರ ಹೊರಟು ಹೋಗಿರುತ್ತಾರೆಂದು ಗೊತ್ತಾಗಿದೆ.

ಹುಣಸೂರು ವರ್ತಮಾನ.

(ನಮ್ಮ ಸ್ವಂತ ಬಾತ್ಮೀದಾರರಿಂದ)

ಹುಣಸೂರನ್ನು ಒಂದು ಮಾದರಿ ನಗರವನ್ನಾಗಿ ಮಾಡಬೇಕೆಂದು ಹೊರಟಿರುವ ನಮ್ಮ ಪೌರ ಸಭೆಯವರ ಪ್ರಯತ್ನಗಳು ಊರ್ಜಿತಗೊಳ್ಳಲಿ ನಾಲ್ಕು ರೋಡುಗಳು ಸಂಧಿಸುವ ಪುರ ಕೇಂದ್ರದಲ್ಲಿ ಒಂದು ಸರ್ಕಲನ್ನು ನಿರ್ಮಿಸಬೇಕೆಂದು ಕಲ್ಲು ಕಟ್ಟಡಗಳು ನಡೆಯುತ್ತಲಿವೆ. ಈ ಕಾರ್ಯವು ಅತಿ ಶೀಘ್ರದಲ್ಲಿ ನಡೆದು ಕೇಂದ್ರದಲ್ಲಿ ಪಂಚದೀಪಸ್ತಂಭವು ಅಲಂಕರಿಸಲ್ಪಡಬಹುದೆಂದು ತಿಳಿಯಬರುತ್ತದೆ

ಸಂತೆಪೇಟೆಯ ಅಂಗಡಿಬೀದಿಯ ಉಭಯ ಪಾರ್ಶ್ವದಲ್ಲಿ ಹರಿಯುವ ಚರಂಡಿಗಳು ತುಂಬಾ ರೊಚ್ಚಿನಿಂದ ದುರ್ಗಂಧವು ಬೀರಿ ಅನಾರೋಗ್ಯಕ್ಕೆ ಮೂಲವಾಗಿದೆ ಸೊಳ್ಳೆಗಳು ವೃದ್ಧಿಹೊಂದಿ ಮಲೇರಿಯ ಕಾಯಿಲೆಯನ್ನು ತರುತ್ತವೆ ಈ ಚರಂಡಿಗಳ ಮೇಲೆ ಅಡ್ಡವಾಗಿ ತಿರುಗಾಡಲು ಕಟ್ಟಿರುವ ಸಣ್ಣ ಸೇತುವೆಗಳಮೇಲೆ ಚಪ್ಪಡಿ ಕಲ್ಲುಗಳನ್ನು ಸರಿಯಾಗಿ ಜೋಡಿಸದೆಯೂ ಅದರಮೇಲೆ ಮಣ್ಣನ್ನು ಸರಿಯಾಗಿ ಹಾಕದೆ ಇರುವುದರಿಂದಲೂ, ಮಕ್ಕಳು ಮರಿಗಳು ದನಕರುಗಳು ತಿರುಗಾಡುವಾಗ ಈ ಕಲ್ಲುಗಳ ಮಧ್ಯದಲ್ಲಿ ಬಿಡಲ್ಪಟ್ಟಿರುವ ಸ್ಥಾನಗಳಲ್ಲಿ ಏನಾದರೂ ಬೇಹುಷಾರಿನಿಂದ ಕಾಲುಸಿಕ್ಕಿಕೊಂಡರೆ ತುಂಬಾ ಅಪಾಯವಾಗುತ್ತದೆ ಕಳೆದ ಗುರುವಾರ ನಾಯಂಕಾಲ ಒಂದು ಮಗುವಿಗೆ ಕಾಲುಸಿಕ್ಕಿಕೊಂಡು ತುಂಬಾ ತೊಂದರೆಯಾಯಿತು ಇಂತಹ ಶಿಥಿಲವಾದ ಚರಂಡಿಗಳ ವಿಚಾರದಲ್ಲಿಯೂ ಸೇತುವೆಗಳ ವಿಚಾರದಲ್ಲಿಯೂ ಮುನಿಸಿಪಾಲಿಟಿಯವರು ಹೆಚ್ಚಿನ ಗಮನವನ್ನು ಕೊಡಬೇಕಾಗಿರುತ್ತದೆ.

ಈ ಗ್ರಾಮ ಹುಟ್ಟಿದ ಲಾಗಾಯಿತು ಈ ಊರಿನಲ್ಲಿ ಸಾರ್ವಜನಿಕ ಸೌಕರ್ಯಕ್ಕಾಗಿ ಕಾರ್ಯವನ್ನು ಯಾರೂ ಕೈಕೊಂಡಿರಲಿಲ್ಲ ಆದರೆ ಈ ಸಂವತ್ಸರದಲ್ಲಿ ಮೆಚ್ಚಗದ ಮತಸ್ಥರಾದ ಪರಸಯ್ಯ ಎಂಬುವರು, ಸುಮಾರು ಐದಾರು ಸಾವಿರ ದ್ರವ್ಯ ಖರ್ಚಿನಿಂದ ಒಂದು ಉನ್ನತವಾದ ಛತ್ರವನ್ನು ಕಟ್ಟಿ ಪ್ರಯಾಣಿಕರಿಗೂ, ಗಾಡಿ ಎತ್ತುಗಳಿಗೂ, ಭಿಕ್ಷುಕರಿಗೂ ತುಂಬಾ ಸೌಕರ್ಯವನ್ನು ಕಲ್ಪಿಸಿಕೊಟ್ಟಿರುವುದು ಸ್ತೋತ್ರಾರ್ಹವಾಗಿದೆ ಈ ಛತ್ರದಲ್ಲಿ ರಾತ್ರೀ ಹಗಲೂ ಗಾಡಿಗಳೂ ಜನರೂ ತಿರುಗಾಡುತ್ತಾ ಇರುವುದರಿಂದ ನಮ್ಮ ಪೌರಸಭೆಯವರು ಈ ಛತ್ರದ ಗೇಟಿನ ಮುಂಭಾಗದಲ್ಲಿ ೭೦ ದರ ಮುನಿಸಿಪಲ್ ಸ್ಥಳದಲ್ಲಿ ಎರಡು ಬೆಳಕನ್ನು ಇಡಿಸಿಕೊಟ್ಟರೆ ತುಂಬಾ ಸಹಾಯವಾಗುತ್ತದೆ

ನಮ್ಮ ಪ್ರಾಂತ್ಯದಲ್ಲಿ ಕಳ್ಳಕಾಕರ ಹಾವಳಿ ತುಂಬಾ ಜೋರಾಗಿದೆ ಮೈಸೂರಿಂದ ಹುಣಸೂರಿಗೆ ಬರುವ ದಿಗ್ಗಿ, ಸಾಮಾನು ಸರ್ಕಾರಗಳ ಗಾಡಿಗಳಿಗೆ ಕಳ್ಳರು ಬಿದ್ದು ಬೆಂಕಿ ಪೆಟ್ಟಿಗೆ ಮೂಟೆಯೊಂದನ್ನು ಕೇಳುತ್ತಿದ್ದರೆಂದೂ ಎತ್ತುಗಳನ್ನು ಹೊಡೆದುಕೊಂಡು ಹೋಗಿ ಅವುಗಳನ್ನು ಕೊಂದು

ವೈದ್ಯರೊಬ್ಬರ ಸೇವಾ ಪ್ರಶಂಸೆ

ಯಳಂದೂರು ತಾ॥ ಹೊನ್ನೂರು ಗ್ರಾಮಸ್ಥರು ತಿಳಿಯಪಡಿಸುವದೇನೆಂದರೆ — ನಮ್ಮ ಗ್ರಾಮದ ಹಳ್ಳಿ ಕೆರೆಹುಂಡಿ ಲಿಂಗಾಚಾರಿಯ ಮಗ ಪುಟ್ಟಸ್ವಾಮಿ ಆಚಾರಿ ಎಂಬುವನಿಗೆ ಸುಮಾರು ೬-೧೦ ತಿಂಗಳ ಹಿಂದೆ ಗಾಯ್ತು ಅಸ್ತಿಗತ ಜ್ವರ, ಕೆಮ್ಮು, ಬೇಧಿ ವಾಂತಿ ಸಹಿತವಾಗಿ, ಶರೀರಕ್ಷೀಣತೆ, ನಿಶ್ಶಕ್ತಿ ಈರೀತಿ ಆಗಿತ್ತು. ಇದನ್ನು ನೋಡಿದ ಪಂಡಿತರುಗಳೆಲ್ಲಾ ಇದು ಕ್ಷಯರೋಗವೆಂದು ಹೇಳಿ ಔಷಧಿಯನ್ನು ಮೂರು ನಾಲ್ಕು ತಿಂಗಳು ಕೊಟ್ಟರು ಅವರೆ ಯಾರಿಂದಲೂ ಕಾಯಿಲೆಮಾತ್ರ ಹುಷಾರಾಗದೆ ದಿನೇದಿನೇ ಜಾಸ್ತಿಯಾಯಿತು ನಮ್ಮ ಗ್ರಾಮದ ಪಂ॥ ಪುಟ್ಟಮಲ್ಲಪ್ಪನವರು ಸುಮಾರು ಮಂಡೂವರೆ, ಎರಡು ತಿಂಗಳು ಔಷಧಿಕೊಟ್ಟು ಈ ಕಾಯಿಲೆಯನ್ನು ಗುಣಪಡಿಸಿರುತ್ತಾರೆ. ನಮ್ಮ ಗ್ರಾಮದಲ್ಲಿ ಈ ಪಂ॥ ಪುಟ್ಟಮಲ್ಲಪ್ಪನವರು ಇಂತಹ ಅನೇಕ ದೊಡ್ಡದೊಡ್ಡ ಕಾಯಿಲೆಗಳನ್ನು ಗುಣಪಡಿಸಿ ಬಹಳ ಹೆಸರುವಾಸಿ ಪಡೆದಿರುತ್ತಾರೆ ಇವರು ಅಲ್ಲದೆ ಅನೇಕ ಔಷಧಿಗಳನ್ನು ತಯಾರುಮಾಡಿ ಇಟ್ಟುಕೊಂಡು ಬಡಬಗ್ಗರ ಕಾಯಿಲೆಗಳಿಗೆ ಧರ್ಮಾರ್ಥವಾಗಿ ಔಷಧಿಕೊಟ್ಟು ಗುಣಪಡಿಸಿರುತ್ತಾರೆ. ಆದ್ದರಿಂದ ಭಗವಂತನು ಇವರು ಮಾಡತಕ್ಕ ಧರ್ಮಾರ್ಥದ ಕೆಲಸಕ್ಕೆ ಸಹಾಯ ಮಾಡಲೆಂದು ಪ್ರಾರ್ಥಿಸುತ್ತೇವೆ

ಚರ್ಮವನ್ನು ಸುಲಿದುಕೊಂಡುಹೋಗುತ್ತಾರೆಂದೂ ತಿಳಿಯಬಂದಿದೆ ಕಳೆದ ಶನಿವಾರ ರಾತ್ರಿ ಇದೇ ಊರಿನ ಸೇತುವೆ ಮೇಲೆ ಮಿ॥ ಪವಾರ್ ಸಾಹೇಬರವರ ಮನೆಗೆ ಕಳ್ಳರು ನುಗ್ಗಿ ಅಲ್ಲಿ ಅವಕಾಶವಾಗದೆ ಹೋಗಲು ಪಕ್ಕದ ಮನೆ ನಾರಾಯಣಶೆಟ್ಟರ ಮನೆಗೆ ನುಗ್ಗಿ ಒಳ್ಳೆಯೂ ಅವಕಾಶ ದೊರೆಯದೆಹೋಗಲು ಅವರ ಪಕ್ಕದ ಮನೆ ಮಾ। ರಾ॥ ನಂಜುಂಡಪ್ಪನವರ ಮನೆಯ ಹಿಂಬಾಗದಲ್ಲಿ ಒಳಕ್ಕೆ ಇಳಿದು ಹಜಾರದಲ್ಲಿ ಇಟ್ಟಿದ್ದ ಪಂಚೆಗಳನ್ನೂ … ರಗಳನ್ನು ಮೂಟೆಕಟ್ಟಿ ಮನೆಯೊಳಕ್ಕೆ ಪ್ರವೇಶಮಾಡಲು ಬಾಗಲನ್ನು ಹೊಡೆಯುವುದಕ್ಕೆ ಪ್ರಾರಂಭಿಸಲು ಅಷ್ಟರಲ್ಲಿ ಮನೆಯವರು ಎಚ್ಚರವಾಗಲು, ಗಲಾಟೆಯಿಂದ ಆ ಬಟ್ಟೆಯನ್ನೆಲ್ಲಾ ಹೊತ್ತುಕೊಂಡು ಓಡಿ ಹೋದರಂತೆ

ನಮ್ಮೂರಿನಲ್ಲಿರುವ ಪೋಲೀಸ್ ಇನ್ಸ್‌ಪೆಕ್ಟರ್ ಶ್ರೀಮಾನ್ ಕೆಂಪಣ್ಣನವರು ತುಂಬಾ ಸಾಹಸದಿಂದ ಜಾಗರೂಕತೆಯಿಂದಲೂ ಚಿಂತನೆಯಿಂದಲೂ ಕಳ್ಳರನ್ನು ಹಿಡಿಯಲು ತುಂಬಾ ಪ್ರಯತ್ನಿಸುತ್ತಲಿದ್ದಾರೆ ಕಳ್ಳರ ಹುಟ್ಟಡಗಿಸಬೇಕೆಂದು ತುಂಬಾ ಸಾಹಸ ಮಾಡುತ್ತಿದ್ದಾರೆ ಆದರೆ ಇವರೊಬ್ಬರ ಪ್ರಯತ್ನ ಸಾಫಲ್ಯಕ್ಕೆ ಬರಲಾರದು ಪ್ರತಿಯೊಬ್ಬ ಪೋಲೀಸಿನವರಲ್ಲಿಯೂ ಈ ಪ್ರಯತ್ನ ಇಂತಹ ಮನಸ್ಸೂ ಇದ್ದು ಸಾಧಿಸುವದರ ಒಂದಿತವಾಗಿಯೂ ಕಳ್ಳಕಾಕರ … ಟ್ಟನ್ನು ಅಡಗಿಸಬಹುದು ಇಲ್ಲದ … ಸಾಧ್ಯವಾಗಲಾರದು

ಕನ್ನಡ ಆತ್ಮ ಪುರಾಣ.

ಇದು ಮುಮುಕ್ಷುಗಳ ಮುಖದರ್ಪಣ.

ಈ ಗ್ರಂಥವು ೧೮ ಅಧ್ಯಾಯಗಳುಳ್ಳದ್ದು. ಇದರಲ್ಲಿ ಐತರೇಯಾದಿ ೨೮ ಉಪನಿಷತ್ತುಗಳ ವಿಸ್ತಾರವಾದ ಅರ್ಥವಿರುವದು. ಇದು ಶ್ರೀ ಶಂಕರಾನಂದಮುನಿ ಗಳು ಹಿಂದೀ ಭಾಷೆಯಲ್ಲಿ ತಮ್ಮ ಶಿಷ್ಯನಿಗೆ ಉಪದೇಶಿಸಿದ ಪರಮ ಅದ್ಭುತ ಪುರಾತನ ಗ್ರಂಥವಾಗಿರುವುದು. ಆತ್ಮವಿದ್ಯಾ ವಿಷಯದಲ್ಲಿ ಇದಕ್ಕೆ ಸಮಾನವಾದ ಗ್ರಂಥವು ಈ ಜಗತ್ತಿನಲ್ಲಿಯೇ ಇಲ್ಲವೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಈ ಗ್ರಂಥವು ಹಿಂದೀಭಾಷೆಯಲ್ಲಿದ್ದುಕೊಂಡು ಉತ್ತರದೇಶದೊಳಗೆಲ್ಲಾ ಬಹು ಪ್ರಸಿದ್ಧಿಗೊಂಡಿ ರುವದು. ನಮ್ಮ ದಕ್ಷಿಣ ಕರ್ನಾಟಕದಲ್ಲಿ ಇದರ ನ್ಯೂನತೆಯಂ ನೋಡಿ ಕನ್ನಡದಲ್ಲಿ ಭಾಷಾಂತರಮಾಡಲ್ಪಟ್ಟಿತು. ಇದನ್ನು ಎರಡು ವಿಭಾಗವಾಗಿ ವಿಂಗಡಿಸಿ ಎರಡು ಪುಸ್ತಕಗಳಾಗಿ ಮಾಡಬೇಕೆಂದು ಆಲೋಚಿಸಿ, ಆ ಪೈಕಿ ೮ ಅಧ್ಯಾಯಗ ಳುಳ್ಳ ಈ ಮೊದಲನೇ ಭಾಗ ಮುದ್ರಿಸಿ ಬೈಂಡಿಂಗ್ ಸಹಾ ಕಟ್ಟಿಸಿ ತಯಾರ್ ಮಾಡಲ್ಪಟ್ಟಿರುವದು. ಇದರ ಕ್ರಯ 5—8—0 ರೂ. ಇದನ್ನಪೇಕ್ಷಿಸುವವರು ೨ ರೂಪಾಯಿ ಮುಂಗಡ ಕಳುಹಿಸಬೇಕು. ಉಳಿದ ಹತ್ತು ಅಧ್ಯಾಯಗಳುಳ್ಳ ಎರಡನೇ ಭಾಗವು ಶೀಘ್ರದಲ್ಲಿಯೇ ತಯಾರಾಗುವದು. ಇದನ್ನಪೇಕ್ಷಿಸುವವರು ೩ ರೂಪಾಯಿ ಮುಂಗಡವಾಗಿ ದಯವಿಟ್ಟು ಕಳುಹಿಸಿಕೊಟ್ಟಲ್ಲಿ ಪುಸ್ತಕವು ಶೀಘ್ರದಲ್ಲಿಯೇ ಮುದ್ರಿಸಿ ಬೈಂಡಿಂಗ್ ಸಹಾ ಕಟ್ಟಿಸಿ ಅವರವರ ವಿಳಾಸಕ್ಕೆ ಪುಸ್ತಕದ ಕ್ರಯದಲ್ಲಿ ಅಡ್ವಾನ್ಸ್ ವಜಾಮಾಡಿ ಉಳಿದ ಬಾಬಲಿಗೆ ಬುಕ್ಕನ್ನು ವಿ. ಪಿ. ಮಾಡಲ್ಪಡುವದು. ಇದಲ್ಲದೆ ಗ್ರಂಥಕರ್ತರಿಂದ ಇನ್ನೂ ಅನೇಕ ವೇದಾಂತ ಗ್ರಂಥಗಳು ರಚಿಸಲ್ಪಟ್ಟು ಅಚ್ಚಿಗೆ ಸಿದ್ಧವಾಗಿವೆ.

ಗ್ರಂಥಕರ್ತ:—ಶಿವಾನಂದ ಸುಬ್ರಹ್ಮಣ್ಯ (ವೇದಾಂತ ಸುಬ್ಬಯ್ಯ)

ಲಕ್ಷ್ಮೀವಿಲಾಸ ಅಗ್ರಹಾರ, ಮೈಸೂರು.

ದ್ರಾಕ್ಷಾಮೃತ

ಈ ದ್ರಾಕ್ಷಾಮೃತವು ಸಹ್ಯಾದ್ರಿ ಪರ್ವತದಲ್ಲಿ ಅನೇಕ ವನಸ್ಪತಿಗಳ ರಸವರ್ಗ ದೊಂದಿಗೆ ದ್ರಾಕ್ಷಾರಸವನ್ನು ಮಿಶ್ರಮಾಡಿ ಸ್ವದೇಶಿ ಯಂತ್ರದಿಂದ ಶಾಸ್ತ್ರೋಕ್ತ ರೀತಿ ಪ್ರಕಾರ ತಯಾರು ಮಾಡಿರುವದರಿಂದ ಸ್ವಾದಿಷ್ಟವು ಮುತ್ತು ಮಧುರವು ಇದೆ.

ಇದರ ಸೇವನೆಯಿಂದ ಶರೀರದೊಳಗಿನ ಹಳೆ ಕಡಕಿ (ಗರಮಿ) ಸಂಪೂರ್ಣ ನಾಶವಾಗುತ್ತದೆ. ಮತ್ತು ಧಾತುಸ್ರಾವ, ಸ್ವಪ್ನಾವಸ್ಥೆಯಿಂದ ಅಥವಾ ಬೇರೆ ಯಾವದೇ ಕಾರಣದಿಂದ ಬಂದ ಅಶಕ್ತತೆಯಿಂದ ಕೈಕಾಲು, ಕಣ್ಣೊಳಗೆ ಉರಿವು ಕ್ಷೀಣ, ಶೌಚಶಕ್ತಿ ಸಾಫ ಆಗದೆ ಇರೋಣ, ಮುಂತಾದ ಎಲ್ಲ ವಿಕಾರಗಳು ನಷ್ಟ ವಾಗಿ ಸ್ವಚ್ಛವಾಗಿ ಬೆಳೆಯುತ್ತದೆ. ಮತ್ತು ಅನ್ನ ಚೆನ್ನಾಗಿ ಪಚನವಾಗಿ ಶೌಚಕ್ಕೆ ಸಾಫವಾಗುತ್ತದೆ. ಇದರ ಸೇವನೆಯಿಂದ ತರುಣರಿಗೆ ವ್ಯಭಿಚಾರದಿಂದ ಅಥವಾ ಬೇರೆ ಕಾರಣದಿಂದ ಬಂದ ಧಾತುಕ್ಷೀಣತೆ, ನಪುಂಸಕತ್ವ ಇದ್ದರೆ ಅದು ಹೋಗಿ ಆ ಯೌವನವಂತರಾಗಿ, ಶರೀರ ಬಲವಾಗಿ ಮಕ್ಕಳು ಪುಷ್ಟಿವಂತರಾಗುವರು ಹೆಂಗಸರಿಗೂ ಮತ್ತು ಮಕ್ಕಳಿಗೂ ಈ ಔಷಧವು ಗುಣಕಾರಿ ಇದೆ. ಮುಟ್ಟಾಗದಿ ರುವದು ಮತ್ತು ಉಷ್ಣ ಗರ್ಭ ಸಂಬಂಧವಾದ ರೋಗಗಳಿದ್ದರೂ ಅವೆಲ್ಲ ಗುಣವಾಗಿ ಹೆಂಗಸರಿಗೆ ಸಂತತಿ ವೃದ್ಧಿಯಾಗುವದು. ಈ ಔಷಧದ ಮೂರು ಬಾಟ್ಲಿಗಳನ್ನು ಸೇವನೆ ಮಾಡಿದರೆ ಪೂರ್ಣ ಗುಣಬರುತ್ತದೆ. ಇದರ ಅನುಭವ 1 ಬಾಟ್ಲಿ ಸೇವನೆ ಮಾಡಿದ ಅನಂತರ ನಿಮಗೆ ತಿಳಿದೀತು.

ಬಾಟ್ಲಿ ಬೆಲೆ ರೂ. ೧—೮—೦, 3 ಬಾಟ್ಲಿ ೩—೮—೦, 1 ಡರ್ಜ ಬಾಟ್ಲಿ ಬೆಲೆ ೧೬—೦—೦

ಮ್ಯಾನೇಜರ್—ದ್ರಾಕ್ಷಾಮೃತ ಡಿಪೋ. ಪೋಸ್ಟ್ ನಿಪ್ಪಾಣಿ, ಜಿಲ್ಲಾ ಬೆಳಗಾವಿ,

ಮೈಸೂರು ಸ್ಟಾಕಿಸ್ಟ್:—ಟಿ. ಸಿ. ನಟರಾಜ್, ಬೊಂಬಾಯಿ ಆನಂದ ಭವನ, ಆಯುರ್ವೇದಿಕ್ ಫಾರ್ಮಸಿ, ಸಯ್ಯಾಜಿರಾವ್ ರೋಡ್. ಬೆಂಗಳೂರು ಸಿಟಿ:—ಪಿ. ವಿ. ... ಅಂಡ್ ಸನ್ಸ್, ಚಿಕ್ಕಪೇಟೆ. ತುಂಕೂರು—ಟಿ. ಆರ್. ಗುರು ಚನ್ನಬಸಪ್ಪ ಅಂಡ್ ಬ್ರದರ್ಸ್. ಚಿಕ್ಕಮಗಳೂರು—ಎಂ. ಎಚ್. ಮಂಜಯ್ಯಶೆಟ್ಟಿ. ಶಿವ ಮೊಗ್ಗ—ಶ್ರೀಕೃಷ್ಣ ಟ್ರೇಡಿಂಗ್ ಏಜನ್ಸಿ ಮತ್ತು ಖಂಡೇರಾವ್ ಬ್ರದರ್ಸ್. ದಾವ ಣಗೆರೆ—ಪುರ್ವೀರಪ್ಪ ಮತ್ತು ಕೆ. ಭೋಜಯ್ಯಶೆಟ್ಟಿ ಅಂಡ್ ಬ್ರದರ್ಸ್.

ಪ್ರಾಚೀನ ಕನ್ನಡ ವಚನ ಗ್ರಂಥಗಳು

ಸೌಗಂಧಿಕಾಪರಿಣಯ:—ಪೂರ್ವದಲ್ಲಿ ದೇವೇಂದ್ರನಿಗೆ ದೂರ್ವಾಸ ಮುನಿಗಳಿಂದ ಆಶೀರ್ವಾದ ಪೂರ್ವಕವಾಗಿ ಕೊಡಲ್ಪಟ್ಟ ಕಮಲಮಾಲಿಕೆ ಯನ್ನು ಆನೆಯ ಕುಂಭಸ್ಥಳದಲ್ಲಿಟ್ಟವನೆ, ಆನೆಯು ಆ ಮಾಲಿಕೆ ಯನ್ನು ಕಾಲಿನಲ್ಲಿ ಹೊಸಕಿ ವ್ಯರ್ಥಪಡಿಸಲು, ಋಷಿಗಳ ಶಾಪದಿಂದ ಭೂಲೋಕದಲ್ಲಿ ರತ್ನಪುರಿಯಲ್ಲಿ ಸುಗಂಧರಾಜನಾಗಿ ಹುಟ್ಟಿ, ಕಳಿಂಗದೇ ಶದ ರಾಜಪುತ್ರಿಯಾದ ಸೌಗಂಧಿಕಾದೇವಿಯನ್ನು ಸ್ವಯಂವರಮಾಡಿ ಕೊಂಡ, ಬಹಳ ವಿಷಯಗಳಿರುವ ಕಥೆ.

೧೮೦ ಪುಟಗಳು ಕ್ರಯ ರೂ. ೪—೮—೦

ಸಹಸ್ರಾಯುಚರಿತ್ರೆ:—ಸಾಹಿತ್ಯಶ್ರೀ ಅರಸನ ಜ್ಯೇಷ್ಠ ಪತ್ನಿಯಲ್ಲಿ ದಾಕ್ಷಾಯಣಿ ವರಪ್ರಸಾದದಿಂದ ಜನಿಸಿ ಲೋಕಪ್ರಸಿದ್ಧನಾಗಿ ಸವತಿ ಇತರರಿಂದ ಬಂದ ಗಂಡಾಂತರಗಳನ್ನೆಲ್ಲಾ ಪರಿಹರಿಸಿಕೊಂಡ ಒಬ್ಬ ಮಹಾಪುರುಷನ ಕಥೆ.

೪೭೫ ಪುಟಗಳು ಕ್ರಯ ರೂ. ೨—೦—೦

ಕಾಶೀಕ್ಷೇತ್ರಮಹಾತ್ಮೆ:—ಇದರಲ್ಲಿ ೧೪ ಲೋಕಗಳ ವರ್ಣನೆ, ನದಿ ಗಳು, ದೇವತೆಗಳು ಋಷಿಗಳೇ ಮುಂತಾದವರ ಉತ್ಪತ್ತಿಕ್ರಮ, ಗಂಗಾ ಸಹಸ್ರನಾಮವೇ ಮೊದಲಾದ ಅನೇಕ ವಿಷಯಗಳು ಅಡಕವಾಗಿರುತ್ತೆ.

೬೮೩ ಪುಟಗಳು ಕ್ರಯ ರೂ. ೨—೨—೦

ಅಡ್ರೆಸ್ಸು:—

ಗುಂಡ್ಲು ಪಂಡಿತ ಲಕ್ಷ್ಮಣಾಚಾರ್ಯರ ಮಕ್ಕಳು

ಶ್ರೀನಿವಾಸ ದೇಶಿಕಾಚಾರ್,

೩೦೭, ಕರುಹಟ್ಟಿ ಬೀದಿ, ಮೈಸೂರು.

"ಬ್ರೇಕ್ ಪಿಲ್ಸ್"

INVENTED BY A HIMALAYAN SAGE.

● ಸ್ತ್ರೀಪುರುಷರಿಗೆ ಆನಂದವನ್ನುಂಟುಮಾಡುವುವು ಈ ಮಾತ್ರೆಗಳೆ. ಮದಿ ಸಿದ ಸ್ತ್ರೀಯರ ಗರ್ವಭಂಗವಾಡಲು ಕಂಡುಹಿಡಿದಿರುವ ಮಾತ್ರೆಗಳಿವು. ಇದರಲ್ಲಿ ರಸ

ವಿಷಾದಿಗಳು ಸೇರಿಲ್ಲ. ಕಸ್ತೂರಿ, ಚಿನ್ನ, ಹಿಮಾಲಯ ಪರ್ವ ತದ ವನಮೂಲಿಕೆಗಳು ಮುಂತಾದುವುಗಳಿಂದ ದೊಡ್ಡ ಯೋ ಗೀಶ್ವರರ ಹತ್ತಿರ ಸಂಗ್ರಹಿಸಿ ನೂತನವನ್ನು ಲೋಕದಲ್ಲಿ ಇಲ್ಲವಂತೆ ಮಾಡುವುದು. ಅರ್ಧ ಘಂಟೆಯೊಳಗಾಗಿ ವೀರ್ಯ ವನ್ನು ಕಲ್ಲಿನಂತೆಮಾಡಿ ರಮಿಸಲು ಉಲ್ಲಾಸವನ್ನು ಮಾಡುವು ದು. ಗುಣವಿಲ್ಲದಿದ್ದಲ್ಲಿ ಹಣ ವಾಪಸು.

೬೦ ಮಾತ್ರೆಗಳು ರೂ. ೫—೦—೦. ೩೦ ಮಾತ್ರೆಗಳು ರೂ. ೩—೦—೦.

(ಕಾಗದ ಪತ್ರಗಳು ಇಂಗ್ಲೀಷಿನಲ್ಲಿಯೇ.)

ಡಾ॥ ಎ. ಎಸ್. ಮೂರ್ತಿ, ಚಿಕಾಕೋಲ್, ಗಂಜಾಮ್ ಡಿಸ್ಟ್ರಿಕ್ಟ್.



ಟಿ. ಸಿ. ನಟರಾಜ್ ಔಷಧಾಲಯ,

ಸಯ್ಯಾಜಿರಾವ್ ರೋಡು, ಮೈಸೂರು.

ಇವರಲ್ಲಿ ನೇತ್ರಪರೀಕ್ಷೆಯು ಉಚಿತವಾಗಿ ಮಾಡಲ್ಪಡುತ್ತದೆ.

ಅತ್ಯಗತ್ಯವಾಗಿ ಬೇಕಾದ ಎಲ್ಲಾ ಇಂಜಕ್ಷನ್ ಔಷಧಿಗಳೂ ಸದಾ ಕಾಲದ ಲ್ಲಿಯೂ ದೊರಕುವುವಲ್ಲದೆ ಸಮಸ್ತ ವ್ಯಾಧಿಗಳಿಗೂ ಚಿಕಿತ್ಸೆಯು ಬಹು ಸುಲಭ ಛಾರ್ಜಿನಿಂದ ಮಾಡಲ್ಪಡುತ್ತದೆ.

ಝಂಡೂರವರ ಆಯುರ್ವೇದೀಯ ಸಿದ್ಧೌಷಧಗಳೆಲ್ಲವೂ ಸದಾ ದೊರಕುತ್ತವೆ.

ORDER YOUR COPIES NOW!

The "SADHVI"
Dasara Special Supplement.

: : "ಸಾಧ್ವಿ" ದಸರಾ ವಿಶೇಷ ಸಂಚಿಕೆ. : :

೮೦ ಪುಟಗಳು-ಅರ್ಧಾಣೆ ಮಾತ್ರ.

ಕಥೆಗಳು—

ಕವನಗಳು—

ಲೇಖನಗಳು—

ಚಿತ್ರಗಳು—

: : ಇತ್ಯಾದಿ, ಇತ್ಯಾದಿ. : :

For Details & Advertisements Apply to—

The SADHVI Office, Mysore.

Edited, Printed & Published by Agaram Rangaiah, B.A., at Sri Rama Press, D. Subbiah Road, Mysore

Re_istered No M. 3534.

ವಾರ್ಷಿಕ ಚಂದಾ ವಿವರ.

ವಾಚನಾಲಯಗಳು, ವಿದ್ಯಾ ಸಂಸ್ಥೆಗಳು
ಮತ್ತು ಸಾರ್ವಜನಿಕ ಸಂಘಗಳಿಗೆ 2—1—0

|| ಸತ್ಯಮೇವೋದ್ಧರಾಮ್ಯಹಮ್ ||

ರಾಜಧಾನಿಯ ರಾಷ್ಟ್ರೀಯ ವಾರ ಪತ್ರಿಕೆ.

ವೃದ್ಧಪಿತಾಮಹ ಎಂ. ವೆಂಕಟಕೃಷ್ಣಯ್ಯನವರ ಜ್ಞಾಪಕಾರ್ಥವಾಗಿ ಪ್ರಕಟಿಸಲ್ಪಡುವುದು.

ಸಂಪಾದಕರು. ಅಗರಂ ರಂಗಯ್ಯ, ಬಿ ಎ

Sadhvi: A Leading Nationalist Weekly of Mysore.

F..DED IN MEMORY OF Mr. M. VENKATAKRISHNAYYA, THE GRAND OLD MAN OF MYSORE.

ಸಂ 3 ೧] MYSORE : MONDAY 5—10—36 ಮೈಸೂರು : ಸೋಮವಾರ ೫—೧೦—೩೬ [ಸಂಚಿಕೆ ೩೩

ಲಿವರ್ ಕ್ಯೂರ್

(ಪಿತ್ತಕೋಶದ ರಕ್ಷಣೆ)

ಪಿತ್ತಕೋಶ, ಮತ್ತು ಯಕೃತ್ತುಗಳ ರೋಗ(ಗಡ್ಡೆ) ಗಳಿಂದ, ಮಕ್ಕಳನ್ನು ಕಾಪಾಡುವುದು.

ವಿಳಾಸ:—ಜಮ್ಮಿ ವೆಂಕಟರಮಣಯ್ಯ,

ಲಿವರ್ ಮತ್ತು ಸ್ಪ್ಲೀನ್ ಸ್ಪೆಷಲಿಸ್ಟ್, ಮೈಲಾಪುರ, ಮದ್ರಾಸು.

ಬೆಂಗಳೂರಿನ ಶಾಖೆ:—ಆರ್ಕಾಟು ಶ್ರೀನಿವಾಸಾಚಾರ್ಯರ ಬೀದಿ.

ಕುಟುಂಬಗಳ ಮೇಲೆ : :
: ಕುಟುಂಬಗಳು ಎಡೆಬಿಡದೆ : :
: : ಅಪೇಕ್ಷಿಸುತ್ತಿರುವುದೇನು? :

ಹಿಂದೂಸ್ಥಾನ್ ಕೋ-ಆಪರೇಟಿವ್ ಇನ್ಷೂರೆನ್ಸ್ ಸೊಸೈಟಿ

(ಲಿಮಿಟೆಡ್,)

ಇವರ ಲಾಭಕರವಾದ ಜೀವ ವಿಮೆಯನ್ನೇ!

ಏಕೆಂದರೆ { ಅವರ ಪರಿಮಾಣ / ಅವರ ಅಭ್ಯುದಯ / ಅವರ ಭದ್ರತೆಗಾಗಿ

ಹಿಂದೂಸ್ಥಾನಿನವರು ಈಗ
ಎಂಡೋವ್ಮೆಂಟ್ ಬೋನಸ್ 23 ರೂಪಾಯನ್ನೂ
ಹೋಲ್ ಲೈಫ್ ಬೋನಸ್ 20 ರೂ ಅನ್ನೂ ಕೊಡುತ್ತಾರೆ

ಮುಂದಿನ ವ್ಯಾಲ್ಯುಯೇಷನ್ ೩೦ ನೇ ಏಪ್ರಿಲ್ ೧೯೩೭

ಮದರಾಸ್ ಶಾಖೆ:—ಹಿಂದೂಸ್ಥಾನ್ ಬಿಲ್ಡಿಂಗ್ಸ್, ಪೋಸ್ಟ್‌ಬಾಕ್ಸ್ ೨೨೩, ಮದ್ರಾಸ್.

ವ್ಯವಸ್ಥಾಪಕ ಶಾಖೆಗಳು — { ವಿಶಾಖಪಟ್ಟಣ / ಬೆಜವಾಡ / ಬಳ್ಳಾರಿ / ಕಲ್ಲಿಕೋಟೆ
ಮದುರೆ / ಕೊಯಮುತ್ತೂರು / ಕಡಲೂರು / ಬೆಂಗಳೂರು

ಕನ್ನಡ ಆತ್ಮ ಪುರಾಣ.

ಇದು ಮುಮುಕ್ಷುಗಳ ಮುಖದರ್ಪಣ.

ಈ ಗ್ರಂಥವು ೧೮ ಅಧ್ಯಾಯಗಳುಳ್ಳದ್ದು ಇದರಲ್ಲಿ ಐತರೇಯಾದಿ ೩೨ ಉಪನಿಷತ್ತುಗಳ ವಿಸ್ತಾರವಾದ ಅರ್ಥವಿರುವುದು ಇದು ಶ್ರೀ ಶಂಕರಾನಂದಮುನಿಗಳು ದೇವಭಾಷೆಯಲ್ಲಿ ತಮ್ಮ ಶಿಷ್ಯನಿಗೆ ಉಪದೇಶಿಸಿದ ಪರಮ ಅದ್ಭುತ ಪುರಾತನ ಗ್ರಂಥವಾಗಿರುವುದು ಆತ್ಮವಿದ್ಯಾ ವಿಷಯದಲ್ಲಿ ಇದಕ್ಕೆ ಸಮಾನವಾದ ಗ್ರಂಥವು ಈ ಜಗತ್ತಿನಲ್ಲಿಯೇ ಇಲ್ಲವೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ಈ ಗ್ರಂಥವು ಹಿಂದೀಭಾಷೆಯಲ್ಲಿದ್ದು ಕೊಂಡು ಉತ್ತರದೇಶದೊಳಗೆಲ್ಲಾ ಬಹು ಪ್ರಸಿದ್ಧಿಗೊಂಡಿರುವದು ನಮ್ಮ ದಕ್ಷಿಣ ಕರ್ನಾಟಕದಲ್ಲಿ ಇದರ ನ್ಯೂನತೆಯಂ ನೋಡಿ ನನ್ನಿಂದ ಕನ್ನಡದಲ್ಲಿ ಭಾಷಾಂತರವಾದಲ್ಪಟ್ಟಿತು ಇದನ್ನು ಎರಡು ವಿಭಾಗವಾಗಿ ವಿಂಗಡಿಸಿ ಎರಡು ಬುಕ್ಕುಗಳಾಗಿ ಮಾಡಬೇಕೆಂದು ಆಲೋಚಿಸಿ ಆ ಪ್ರಕಾರ ೮ ಅಧ್ಯಾಯಗಳುಳ್ಳ ಈ ಮೊದಲನೇ ಭಾಗ ಮುದ್ರಾಪಿಸಿ ಬೈಂಡಿಂಗ್ ಸಹಾ ಕಟ್ಟಿಸಿ ತಯಾರ್ ಮಾಡಲ್ಪಟ್ಟಿರುವದು ಇದರ ಕ್ರಯ ೬—೮—0 ರೂ ಇದನ್ನಪೇಕ್ಷಿಸುವವರು ೨ ರೂಪಾಯಿ ಮುಂಗಡ ಕಳುಹಿಸಬೇಕು ಉಳಿದ ಹತ್ತು ಅಧ್ಯಾಯಗಳುಳ್ಳ ಎರಡನೇ ಭಾಗವು ಶೀಘ್ರದಲ್ಲಿಯೇ ತಯಾರಾಗುವದು ಇದನ್ನಪೇಕ್ಷಿಸುವವರು ೩ ರೂಪಾಯಿಗಳನ್ನು ಅಡ್ವಾನ್ಸಾಗಿ ದಯವಿಟ್ಟು ಕಳುಹಿಸಿಕೊಟ್ಟಲ್ಲಿ ಪುಸ್ತಕವು ಶೀಘ್ರದಲ್ಲಿಯೇ ಮುದ್ರಾಪಿಸಿ ಬೈಂಡಿಂಗ್ ಸಹಾ ಕಟ್ಟಿಸಿ ಅವರವರ ವಿಳಾಸಕ್ಕೆ ಪುಸ್ತಕದ ಕ್ರಯದಲ್ಲಿ ಅಡ್ವಾನ್ಸ್ ವಜಾಮಾಡಿ ಉಳಿದ ಮೊಬಲಗಿಗೆ ಬುಕ್ಕನ್ನು ವಿ. ಪಿ. ಮಾಡಲ್ಪಡುವದು ಇದಲ್ಲದೆ ಗ್ರಂಥಕರ್ತರಿಂದ ಇನ್ನೂ ಅನೇಕ ವೇದಾಂತ ಗ್ರಂಥಗಳು ರಚಿಸಲ್ಪಟ್ಟು ಬಿಕರಿಗೆ ಸಿದ್ಧವಾಗಿವೆ

ಗ್ರಂಥಕರ್ತ —ಶಿವಾನಂದ ಸುಬ್ರಹ್ಮಣ್ಯ (ವೇದಾಂತ ಸುಬ್ಬಯ್ಯ)
ಲಕ್ಷ್ಮೀವಿಲಾಸ ಅಗ್ರಹಾರ, ಮೈಸೂರು.

ಪ್ರಾಚೀನ ಕನ್ನಡ ವಚನ ಗ್ರಂಥಗಳು

ಸೌಗಂಧಿಕಾಪರಿಣಯ:—ಪೂರ್ವದಲ್ಲಿ ದೇವೇಂದ್ರನಿಗೆ ದುರ್ವಾಸ ಮುನಿಗಳಿಂದ ಆಶೀರ್ವಾದ ಪೂರ್ವಕವಾಗಿ ಕೊಡಲ್ಪಟ್ಟ ಕಮಲದ ಮಾಲೆಯನ್ನು ಆನೆಯ ಕುಂಭಸ್ಥಳದಲ್ಲಿಟ್ಟೊಡನೆ, ಆನೆಯು ಆ ಮಾಲೆಯನ್ನು ಕಾಲಿನಲ್ಲಿ ಹೊಸಕಿ ವ್ಯರ್ಥಪಡಿಸಲು, ಋಷಿಗಳ ಶಾಪದಿಂದ ಭೂಲೋಕದಲ್ಲಿ ರತ್ನಪುರಿಯಲ್ಲಿ ಸುಗಂಧರಾಜನಾಗಿ ಹುಟ್ಟಿ, ಕಲಿಂಗದ ರಾಜಪುತ್ರಿಯಾದ ಸೌಗಂಧಿಕಾದೇವಿಯನ್ನು ಸ್ವಯಂವರದಲ್ಲಿ ಕೊಂಡ, ಬಹಳ ವಿಷಯಗಳಿರುವ ಕಥೆ

೧೩೦ ಪುಟಗಳು ಕ್ರಯ ರೂ ೪—೮—೦

ಸಹಸ್ರಾಯುಚರಿತ್ರೆ:—ಮಾಹಿಷ್ಮತೀ ಅರಸನ ಜ್ಯೇಷ್ಠಪತ್ನಿ ದಾಕ್ಷಾಯಿಣಿ ವರಪ್ರಸಾದದಿಂದ ಜನಿಸಿ ಲೋಕಪ್ರಸಿದ್ಧನಾಗಿ ಇತರರಿಂದ ಬಂದ ಗಂಡಾಂತರಗಳನ್ನೆಲ್ಲಾ ಪರಿಹರಿಸಿಕೊಂಡ ಒಬ್ಬ ಮಹಾಪುರುಷನ ಕಥೆ

೪೭೯ ಪುಟಗಳು ಕ್ರಯ ರೂ ೨—೦—೦

ಕಾಶೀಕ್ಷೇತ್ರಮಹಾತ್ಮೆ:—ಇದರಲ್ಲಿ ೧೪ ಲೋಕಗಳ ವರ್ಣನೆ, ನದಿಗಳು, ದೇವತೆಗಳು ಋಷಿಗಳೇ ಮುಂತಾದವರ ಉತ್ಪತ್ತಿಕ್ರಮ, ಗಂಗಾ ಸಹಸ್ರನಾಮವೇ ಮೊದಲಾದ ಅನೇಕ ವಿಷಯಗಳು ಅಡಕವಾಗಿರುತ್ತೆ

೬೮೭ ಪುಟಗಳು ಕ್ರಯ ರೂ ೨—೨—೦

ಅಡ್ರೆಸ್ಸು —

ಗುಂಡ್ಲು ಪಂಡಿತ ಲಕ್ಷ್ಮಣಾಚಾರ್ಯರ ಮಕ್ಕಳು
ಶ್ರೀನಿವಾಸ ದೇಶಿಕಾಚಾರ್,
೫೦೭, ಕರುಹಟ್ಟಿಬೀದಿ, ಮೈಸೂರು

|| ಸತ್ಯಮೇವೋದ್ಧರಾಮ್ಯಹಮ್ ||

ರಾ ಜ ಧಾ ನಿ ಯ ರಾ ಷ್ಟ್ರೀ ಯ ವಾ ರ ಪ ತ್ರಿ ಕೆ.

ವೃದ್ಧಪಿತಾಮಹ ಎಂ. ವೆಂಕಟಕೃಷ್ಣಯ್ಯನವರ ಜ್ಞಾಪಕಾರ್ಥವಾಗಿ ಪ್ರಕಟಿಸಲ್ಪಡುವುದು.

ಸಂಪಾದಕರು. ಆಗರಂ ರಂಗಯ್ಯ, ಬಿ ಎ

ಸಂಪುಟ ೧] MYSORE : MONDAY 5-10-36 ಮೈಸೂರು : ಸೋಮವಾರ ೫—೧೦—೩೬ [ಸಂಚಿಕೆ ೩೨

ಗಾಂಧಿ ಜಯಂತಿ.

ರಾಜಧಾನಿಯಲ್ಲಿ ಮಹಾತ್ಮಗಾಂಧಿಯ ... ಉತ್ಸವವು ಅನೇಕರೀತಿಗ ... ನಡೆಯಿತು. ... ದಿವಸವರು ಇವತ್ತು 29ನೇ ... ಮಾಲಿನಲ್ಲಿ ಬಹಿರಂಗ ಸಭೆಯ ... ವಿಸಿದ್ದರು. ಶ್ರೀ॥ ಅಹ್ಮೋ ... ನರಸಿಂಹಯ್ಯನವರು ಅಧ್ಯಕ್ಷತೆ ... ಡಾ॥ ಎ. ಎಸ್. ಹರ್ಡಿ ... ಮನೋಹರವಾದ ಭಾಷಣವನ್ನು ... .

... ತಾರೀಖು ಮೇಲ್ಕಂಡ ಸ್ಥಳ ... ಸೇವಕಸಂಘದ ಪರವಾಗಿ ... ಸಭೆ ನಡೆಯಿತು. ಶ್ರೀ॥ ಎಸ್. ... ಅಯ್ಯಂಗಾರ್ರವರು ಅಧ್ಯಕ್ಷತೆ ... ವಹಿಸಿದ್ದರು. ವಾರದಾವಿಲಾಸ ... ಪಡ್ಮಾಸ್ಯರಾದ ಶ್ರೀ॥ ಎಂ. ... ಸ್ವಾಮಿಯವರೂ, ಶ್ರೀಮತಿ ... ರಂಗಮ್ಮನವರೂ, ಶ್ರೀ॥ ಎ. ನಾಗ ... ಇವರೂ ಭಾಷಣಗಳನ್ನು ... ಕಾರ್ಯದರ್ಶಿಗಳಾದ ಶ್ರೀ॥ ... ಯವರು ಹರಿಜನ ಸೇವಕಸಂ ... ವರದಿಯನ್ನು ಓದಿ ಒಪ್ಪಿ ... .

... ಪ್ರಚಾರ ಸಭೆಯವರೂ ನಡೆ ... ತ್ತಿರುವ ಹಿಂದೀ ಪ್ರಚಾರ ... ಗವಾಗಿ ಗಾಂಧೀ ಜಯಂತಿ ... ಸಿದರು. ಇದರಂತೆ ಸಂ ... ಶಾಲೆಗಳಲ್ಲಿಯೂ ಆಚರಿ ... .

ಭಟ್ಟರ ಸೇವೆ.

1-10-36 ನೆ ಬೆಳಿಗ್ಗೆ ಶ್ರೀ ಜಾ ... ಜಪ್ಪನ ಕೆಳಗೆ ಕುಂಚಿಟಿ ... ಭಟ್ಟರ ಪೂಜ ... ಬಂದಿದ್ದ ಭಕ್ತರುಗಳಿಗೂ ... ಸುಮಾರು 500 ... ದಾನಮಾಡಿದರು. ಬೆಂಗ ... ಮುಪ್ಪಮ್ಮನವರು ಒಂ ... ತಗಡು ಸಿದರು. ಈ ... ತುಪಡಿಸಿವಿಸಿದ ಶ್ರೀ॥ ... ಭಕ್ತರುಗಳೂ ವಂದನೆಗ ... .

೨೦೨ ದಿನ ಉಪವಾಸ

... ಸಾರಗಳಲ್ಲಿ ಪಂಸ್ಕೃತ ವಿದ್ಯಾಪವ ನ್ನು ಉಂಟುಮಾಡುವುದಕ್ಕಾಗಿ ಲಾಹೋ ರಿನಲ್ಲಿ ಮುನಿ ಶ್ರೀ ಮಿಸ್ರಿಲಾಲ್‌ಜಿ ಮಹಾ ರಾಜರವರು ಇನ್ನೂರೆರಡು ದಿನಗಳಿಂದ ಉಪವಾಸ ಮಾಡುತ್ತಿದ್ದರು. ಅವರ ಸಿ ತಿಯು ಬಹಳ ವಿಷಮಾವಸ್ಥೆಗೆ ಬಂದಿತ್ತು. ದೇಹದಲ್ಲಿ ಮೂಳೆ ಮತ್ತು ಚರ್ಮ ಮಾತ್ರ ಉಳಿದಿತ್ತು. ಕಳೆದ ೨೯ ನೇ ತಾ॥ ಅವರು ಉಪವಾಸವನ್ನು ಮುಕ್ತಾಯ ಮಾಡಿದರು.

ಪಂಡಿತ ಮದನಮೋಹನ ಮಾಳವೀಯರು.

ಅಸ್ವಸ್ಥರಾಗಿರುವರು.

ತಿಮಿಂಗಿಲದ ಬೇಟೆ.

ಜರ್ಮನರು ತಿಮಿಂಗಿಲದ ಬೇಟೆಯ ಕಾರ್ಯಕ್ರಮಗಳನ್ನು ಅಗಾಧವಾಗಿ ಕೈಗೊಂಡಿದ್ದಾರೆ. ತಿಮಿಂಗಿಲದ ಎಣ್ಣೆಯಿಂದ ಬಾಂಬುಗಳನ್ನು ತಯಾರುಮಾಡಲು ಬಹಳ ಅನುಕೂಲ. ಈ ಕಾರ್ಯಕ್ರಮವನ್ನು ಜರ್ಮನಿಯು ಬಹಳ ಗುಪ್ತವಾಗಿ ಇಟ್ಟಿದೆ. ದೊಡ್ಡ ಹಡಗುಗಳನ್ನು ಕಟ್ಟಿ ಅವರಲ್ಲಿ ತಿಮಿಂಗಿಲಗಳನ್ನು ಹಿಡಿದು, ಹಡಗಿನಲ್ಲಿಯೇ ಎಣ್ಣೆ ತೆಗೆದು ಅನಂತರ ಎಣ್ಣೆಯನ್ನು ಬಾಂಬುಮಾಡಲು ಉಪಯೋಗಿಸುವರು.

ಗಂಗಾಧರರಾವ್ ದೇಶಪಾಂಡೆಯವರು

ಕರ್ನಾಟಕ ಕೇಸರಿ ದೇಶಭಕ್ತ ಗಂಗಾಧರರಾವ್ ದೇಶಪಾಂಡೆಯವರು ಬೆಂಗಳೂರಿಗೆ ದಯಮಾಡಿಸಿದ್ದಾರೆ. ಹಿಂದೀ ಪ್ರಚಾರ ಸಭೆಯವರು ಏರ್ಪಡಿಸಿದ್ದ ಗಾಂಧಿ ಜಯಂತಿ ಉತ್ಸವದಲ್ಲಿ ಭಾಷಣ ಮಾಡಿದರು. ... ಇನ್ನೂ ಕೆಲವು ದಿನಗಳಲ್ಲಿ ಸಾರ್ವಜನಿಕ ಭಾಷಣಗಳನ್ನು ಮಾಡುವರೆಂದು ತಿಳಿದು ಬಂದಿದೆ.

ಇಂಜಕ್ಷನ್ ಆರ್ಡರಾಯಿತು!

ಭಾವಿ ವಿಷಯವಾಗಿ ಚೋರಗಾಪುರದ ಆದಿಕರ್ನಾಟಕರ ಮುಖಂಡರುಗಳು ಆದೇ ಗ್ರಾಮದ ಕೃಷ್ಣಪ್ಪ ಮತ್ತು ಆತನ ಮುಖಂಡರುಗಳ ಮೇಲೆ ಸಂಜನಗೂಡು ಮುನ್ಸೀಫ್ ಕೋರ್ಟಿನಲ್ಲಿ ಸಿವಿಲ್ ದಾವಾ ಹೂಡಿದ್ದರು. 3-10-36 ನೇ ಶನಿವಾರದ ದಿವಸ ಮುನ್ಸೀಫರು ಇಂಜಕ್ಷನ್ ಆರ್ಡರ್ ಮಾಡಿದ್ದಾರೆ. ಕೃಷ್ಣಪ್ಪ ಬಾವಿ ಒಳ ಒರಕೂಡದೆಂದು ತೀರ್ಮಾನವಾಗಿದೆ

ಮುಷ್ಕರದ ಮುಕ್ತಾಯ.

ಬೆಂಗಳೂರಿನಲ್ಲಿ ನಕ್ಕೀ ಕೆಲಸಮಾಡುವ ಸುಮಾರು ನೂರಾರಾರು ಕೆಲಸಗಾರರು ತಮ್ಮ ಕೂಲಿ ಮತ್ತು ಕೆಲಸಮಾಡುವ ಸೌಕರ್ಯಗಳ ವಿಷಯದಲ್ಲಿ ಅಸಮಾಧಾನ ಗೊಂಡು ಮುಷ್ಕರ ಹಿಡಿದಿದ್ದರು. ಇದು ... ಕೈಗಾರಿಕೆಯ ಡೈರೆಕ್ಟರಾದ ಶ್ರೀ॥ ಎಸ್. ಜಿ. ಶಾಸ್ತ್ರಿಗಳೂ, ಡಾ॥ ಬಿ. ಕೆ. ಗರುಡಾಚಾರ್ಯರೂ, ಶ್ರೀರಾಮಚಂದ್ರರಾವ್ ಸಿಂಧ್ಯೆಯವರೂ ಕೆಲಸಗಾರರಿಗೆ ಹಿತೋಪದೇಶ ಮಾಡಿ ಮುಷ್ಕರವನ್ನು ನಿಲ್ಲಿಸುವಂತೆ ಮಾಡಿದರು. ಕೆಲಸಗಾರರೂ ಸಹ ಅವರ ಹಿತೋಪದೇಶದಂತೆ ನಡೆದುಕೊಳ್ಳುವುದಾಗಿ ತಿಳಿಸಿದರು.

ಮುನಿಸಿಪಲ್ ಮೊಕದ್ದಮೆಗಳು.

ರಾಜಧಾನಿಯ ಆರೋಗ್ಯಾಧಿಕಾರಿಯವರು ಕಳೆದವಾರ ಎರಡನೇ ದರ್ಜೆ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಒಟ್ಟು ಸುಮಾರು 120 ಮೊಕದ್ದಮೆಗಳನ್ನು ಹೂಡಿದರೆಂದು ತಿಳಿಯಬರುತ್ತದೆ. ಕಳೆದ ತಿಂಗಳು ಸುಮಾರು 300 ಮೊಕದ್ದಮೆಗಳು ಹೂಡಲ್ಪಟ್ಟಿದ್ದುವು. ಅವುಗಳಲ್ಲಿ ಜನರು ಮೊಕದ್ದಮೆಗಳು ತೀರ್ಮಾನವಾದವು. 100 ... ಎಂದು ಗೊತ್ತಾಗಿದೆ.

ಕಾಂಗ್ರೆಸ್ ಮಹಾಸಭೆಗೆ ಸಿದ್ಧತೆ

ಫೈಜಾಪುರದಲ್ಲಿ ಬರುವ ಡಿಸೆಂಬರ್ ಅಂತ್ಯದಲ್ಲಿ ನಡೆಯುವ ಕಾಂಗ್ರೆಸ್ ಮಹಾಸಭೆಗೆ ಸಿದ್ಧತೆಗಳು ಬಿರುಸಿನಿಂದ ನಡೆಯುತ್ತಿವೆ. ಸುತ್ತಮುತ್ತಲಿನ ಗ್ರಾಮಸ್ಥರೂ ಇತರರೂ ಉತ್ಸಾಹದಿಂದ ಸಹಾಯಮಾಡುತ್ತಿರುವರು. ಇಲ್ಲಿ ನಿರ್ಮಿಸಲಾಗುವ ವಸತಿಗೆ ತಿಲಕ್ ನಗರವೆಂದು ಹೆಸರಿಡಲಾಗುವುದು. ಇದರ ಶಂಕುಸ್ಥಾಪನಾ ಉತ್ಸವವು ಕಳೆದ ಶುಕ್ರವಾರ ನಡೆಯಿತು.

ಚೀನಾ ಜಪಾನ್ ಯುದ್ಧ ಸಿದ್ಧತೆ.

ಶಾಂಘೈನಲ್ಲಿ ಪರಿಸ್ಥಿತಿಯು ಬಹಳ ಕೆಟ್ಟಿದೆ. ಸೈನಿಕರನ್ನು ಹೆಚ್ಚಾಗಿ ಸೇರಿಸುತ್ತಿರುವರು. ಇದುವರೆಗೆ 75,000 ಸೈನ್ಯವನ್ನು ಸೇರಿಸಿರುವರು. ಚೀಣದವರು ಸೈನ್ಯಗಳನ್ನು ಬಿಡುತ್ತಿರುವರು. ಜಪಾನಿನೊಡನೆ ನಡೆಯುತ್ತಿದ್ದ ರಾಜಿ ಪ್ರಯತ್ನಗಳು ಕೆಡುತ್ತಾಗಿವೆ

ಕುರುಡು ಪ್ರೀತಿ.

(ಒಂದು ಸಣ್ಣ ಕಥೆ)

ಲೇಖಕ—ಸುದರ್ಶನ್

ವಿಲಾಸಪುರ್ ಕಲೆಕ್ಟರ್ ಕಛೇರಿಯಲ್ಲಿ ನನ್ನ ತಂದೆ ಗುಮಾಸ್ತರು ಅವರಿಗೆ ೧೦೦ ರೂಪಾಯಿ ಸಂಬಳ. ನಾವು ಐದು ಜನ ಆತನಿಗೆ ಮಕ್ಕಳು ನಾನೇ ಅವರಲ್ಲಿ ದೊಡ್ಡವಳು ಎಷ್ಟು ಕಷ್ಟದಿಂದ ನಾವು ಜೀವನ ಮಾಡುತ್ತಿದ್ದೆವೆಂದು ವಾಚಕರೇ ಊಹಿಸಬಹುದು ಚಿಕ್ಕವರಾಗಿದ್ದಾಗ ಹೇಗೋ ನಡೆಯುತ್ತಿತ್ತು ಆದರೆ ಈಗ ಹುಡುಗರೆಲ್ಲ ಸ್ಕೂಲಿಗೆ ಹೋಗುವುದರಿಂದ ಬಹಳ ಕಷ್ಟ ನನಗೆ 11 ನೇ ವರ್ಷ ಪ್ರಾಪ್ತಿಸಿತು ಹಿಂದೂ ಹುಡಿಗಿಗೆ ಮದುವೆ ಅಂದರೆ ಬಹಳ ಖರ್ಚಲ್ಲವೇ! ವರದಕ್ಷಿಣೆಯಿಲ್ಲದೆ ಯಾರೂ ಮದುವೆಮಾಡಿಕೊಳ್ಳುವುದಿಲ್ಲ ನಾವಲ್ಲಿಂದ ತರುವುದು?

ನನ್ನ ತಂದೆಯು 1 ವರ್ಷ ನೋಡಿದರು ಎಲ್ಲಿಯೂ ಸಿಗಲಿಲ್ಲ ನನಗೆ ಅಂದವಿಲ್ಲ ಚಂದವಿಲ್ಲ, ಕಪ್ಪಗೂ ಇಲ್ಲ ಸುಮಾರಾಗಿದೆ ನನ್ನ ಬಣ್ಣ ವಿದ್ಯೆ ನಂಗೇನು ಬರಲ್ಲ ನಾವು ಬಡವರು ಭಾಗ್ಯವಂತರ ಹುಡುಗಿಯರು ಅಂದಚಂದ ಒಂದೂ ಇಲ್ಲದಿದ್ರೇನೂ ಪೌಡರ್ ರಾಶಿ ಹಾಕಿ, ಆಭರಣ, ಸೀರೆ ಮಂತಾದವು ಹಾಕಿಬಿಟ್ಟರೆ ಚಂದಿಗಾಗುತ್ತೆ. ನಮಗೆಲ್ಲಿಂದ ಬರಬೇಕು ಅವೆಲ್ಲಾ?

ನನಗೆ ಮದುವೆ ಮಾಡಿಕೋಬೇಕೆಂಬ ಇಷ್ಟ, ಆದರೆ ಯಾರನ್ನ? ನಾನು ಮದುವೆ ಮಾಡಿಕೊಂಡರೆ ನಮ್ಮ ಮನೆಯವರಿಗೆ ಆನಂದ

ನಮ್ಮ ಮನೆ ಮುಂದೆಯೇ ರಾವ್ ಬಹದ್ದೂರ್ ರವರಿರುವುದು ಅಷ್ಟೇಕೆ? ನಾವು ಅವರ ಮನೆಯಲ್ಲಿ ಬಾಡಿಗೇಗೆ ಇದ್ದೀವಿ ಆತ ವಕೀಲ ಆತನಿಗೆ ಒಬ್ಬಳೇ ಮಗಳು, ಶಾಂತ ನಾವಿಬ್ಬರೂ ಎರಡು ವರ್ಷ ದೊಡ್ಡ, ಚಿಕ್ಕವರು ಶಾಂತ VI Form ಪಾಸು ಮಾಡಿದಾಳೆ ಬೆಂಗಳೂರಿಗೆ ಕಾಲೇಜ್‌ನಲ್ಲಿ ಓದುವುದಕ್ಕೆ ಹೋಗಿದ್ದಳು ಶಾಂತನಿಗ ನನಗೆ ಅದಿತ ಸ್ನೇಹ 1 ವರ್ಷ ಆಯಿತು ಆಗ ಎಷ್ಟೋ ನನಗೆ ಸ್ವಲ್ಪ ಭೇದ ಕಾಣಿಸಿತು ಶಾಂತನ ತಂದೆ ವಕೀಲ ಅವಳು ಸ್ವಲ್ಪ ಓದಿದವಳು ನಾನಾದರೋ ಹತಭಾಗಿನಿ ಅವಳು ರೂಪವತಿ ನಾನು, ನಾನು ತಿಳಿದುಕೊಂಡಿದ್ದೇನೆ, ತೊಳೆದ ಕೆಂಡ ಶಾಂತ ಒಳ್ಳೆ ಹುಡುಗಿ

ದಿನಕರ ರಾವ್—ಓ! ಏನು! ಯಾರು ಪ್ರದರಲ್ಲೋ—ಓ ಅಗಲಿ—ಶಾಂತನಿಗೆ ಪ್ರಿಯ ಸ್ನೇಹಿತ ಅಂದರೆ Dearest ಎಂದರ್ಥ ಆತ B A ಪಾಸುಮಾಡಿ I C S ಪರೀಕ್ಷೆಗೆ ಹೋಗ ಬೇಕೂಂತ ರಾವ್ ಬಹದ್ದೂರರಿಗೆ ಇವರಿಬ್ಬರಿಗೂ ಪ್ರೀತಿ ಹೆಚ್ಚಾಗಬೇಕೆಂಬ ಅರ್ಥ

ನಾನು ಹಳ್ಳಿಗಮಾರು ಆದ್ದರಿಂದ ನನಗ ಇವರ ಪ್ರೀತಿ ಸಹಿಸಲಿಲ್ಲ ಆ ದಿವಸ ಯಾದಪ್ಪ ಶಾಂತನಿಗೆ ಹೇಳಿದೆ "ಶಾಂತ ನಿನಗ್ಯಾಕೆ ಎಷ್ಟೆಲ್ಲಾ ನಮಗೆ ಡಿಗ್ರಿಗಳು ಬರಲಿ ಆಗ ಹೋಗುತ್ತದೆ ಈ ವಾಗಿಂದಲೇ ನಿ ಹುಡೋಗ" ಎಂದಳು ಅದ್ಯಾಕೋ ನನಗಿದು ಸರಿಬೀಳಲಿಲ್ಲ ಶಾಂತ ಇವನನ್ನ ಮದುವೆಯಾದರೆ ಸುಖಪಡಲ್ಲ ಎಂದು ತಿಳಿದೆ ಆದಾಕೋ ನನಗೆ ಈಗ ಅದು ಗೊತ್ತಾಗತ್ತೆ

ದಿನಕರರಾವಿಗೂ--ಶಾಂತನಿಗೂ ಆಯಿತು ಅವರ ವಿಷಯ ಹೆಚ್ಚು ಹೇಳೋಕೆ ನಂಗೆ ಇಷ್ಟ ಇಲ್ಲ

ದಿನಕರ ರಾವು ಕಲೆಕ್ಟರಾಗಬೇಕೆಂದು ಬಹದ್ದೂರರ ಕೋರಿಕೆ ಆದರೆ ದಿನಕರನಿಗ ಪ್ರೊಫೆಸರಾಗಬೇಕೆಂದು ಆದ್ದರಿಂದಾ ಬಹದ್ದೂರರಿಗೂ—ದಿನಕರನಿಗೂ ಆವಾಗಲೇ Begin ಆಯ್ತು

ದಿನಕರ ರಾವಿಗೂ ಶಾಂತನಿಗೂ ಜಗಳ ಏಕೆಂದರೆ ದಿನಕರ ರಾವು ಯಾವ ಕೆಲಸ ಮಾಡಲ್ಲ ಕೆಂದು ತಿಳಿದಿದ್ದರು ನನ್ನನ್ನ ಕೇಳಿದರು ನಾನು ಪ್ರೊಫೆಸರಾಗಬೇಕೆಂದು ದಿನಕರ ರಾವಿಗೆ ಹೇಳಿದೆ ಶಾಂತ - ದಿನಕರ ಹೊಡೆದಾಡಿದರು.

ಸಾಯಂಕಾಲ ಅವರಿಬ್ಬರೂ ಪಿಕ್ಚರಿ ಹೊರಟರು ನನಗಾಶ್ಚರ್ಯ ಬೇಗನೆ ಹೊಡೆದಾಡಿದರು

* * *

೧ ವರ್ಷವಾಯಿತು ದಿನಕರನು ಹೊರಟು ಹೋದನು ಶಾಂತ, ರಾವ್ ಬಹದ್ದೂರ್‌ಗಳು ದಿನಕರನಿಗೆ ವೈರಿಗಳಾದರು ದಿನಕರ ರಾವು ವಿಷಯ ಕುರಿತು ಕೇಳಿದರೆ ಶಾಂತ ಓಡಿ ಹೋಗುತ್ತಿದ್ದಳು

೨ ವರ್ಷವಾದ ಒಳಿಕ ಶಾಂತ Mr Oak ರನ್ನು ಪಾಣಿಗ್ರಹಿಸಿದಳು

* * *

ನನಗೆ ೨೦ ನೇ ವರ್ಷ ಬಂತು ನಮ್ಮ ತಂದೆ ಮಾಡಿದ ಪ್ರಯತ್ನಗಳೆಲ್ಲಾ ವ್ಯರ್ಥವಾದವು ಒಂದು ದಿನ ನಮ್ಮ ತಂದೆಯವರು ನನಗೆ ಮದುವೆಯೆಂದು ಹೇಳಿ ಎಲ್ಲರನ್ನೂ ರೈಲು ಹತ್ತಿಸಿ ಸೋಮೇಪಲ್ಲಿಗೆ ಬಂದರು ಆಗ ಆ ಊರಿನ ವರೇಲು 20 ಗಾಡಿಗಳೊಡನೆ ಬಂದನು ನಾವು 4 ಜನ ಬಂದದ್ದರಿಂದ ನಿರಾಶನಾದನು. ಆದರೆ ಮದುವೆಯೇನೋ ಆಗಿಹೋಯ್ತು ಅವರು ಯಾರು ಎಂದು ತಿಳಿಯಲೇ ಇಲ್ಲ ಒಂದು ದಿವಸ ಅವರನ್ನ ಕಣ್ಣೆತ್ತಿ ನೋಡಿದೆ ಅವರಾರೂ ಅಲ್ಲ ದಿನಕರರಾವು ಪಾಪ ಆತನಿಗೆ ಕಣ್ಣು ಸ್ವಲ್ಪ ಹೋಗಿತ್ತು

ಆದರೂ ನಾನಾತನನ್ನು ಪ್ರೀತಿಸುತ್ತೇನೆ ನಂದು ಕುರುಡು ಪ್ರೀತಿ. ನಾನು (ದಿನಕರ ರಾವು), ನನ್ನ ಗಂಡ ಇದ್ದೀವಿ

ಅವರು ಗ್ರಾಮೋದ್ಧಾರಣೆಗೆ ಬಹಳ ಪ್ರಯತ್ನಪಟ್ಟು ಒಂದು ಸ್ಕೂಲನ್ನು ತೆಗೆದು ಆ ಗ್ರಾಮಾಭಿವೃದ್ಧಿ ಮಾಡುತ್ತಲಿದ್ದಾರೆ ಪ್ರತಿ ದಿವಸವೂ ನಮಗೆ ಮಾತು ಕಥೆ "ಅವರು ತಾವು ನನ್ನನ್ನು ಮದುವೆ ಮಾಡಿಕೊಳ್ಳುವೆನೆಂದು ಕಾಗದ ಬರೆದರಂತೆ" ಅವರು ಅವಳನ್ನು ತಾನು ಮದುವೆಮಾಡಿಕೊಂಡಿದ್ದಕ್ಕೆ ದುಃಖಪಟ್ಟರಂತೆ ಇತ್ಯಾದಿ ನನಗೇನೂ ಬೇಡ ಇದೋಮು ನಾಕು

ನನ್ನ ಕುರುಡು ಗಂಡನನ್ನು ಪ್ರೀತಿಸಿದ್ದೇನೆ ಪ್ರೀತಿ ಕುರುಡಲ್ಲವೇ? ನಂದು ಕುರುಡು ಪ್ರೀತಿ ಅಲ್ಲವೇ?

ಸುಧಾ

ಕಲೆಯನ್ನು ಕುರಿತು ಭಾಷಣಗಳು.

ಶ್ರೀಮಾನ್ ಓ. ಸಿ. ಗಂಗೂಲಿಯವರಿಂದ

ಕಲ್ಕತ್ತ ವಿಶ್ವವಿದ್ಯಾನಿಲಯದ ಪ್ರಸಿದ್ಧ ಪೌರ್ವಾತ್ಯ ಪಂಡಿತರಾದ ಶ್ರೀಮಾನ್ ಓ ಸಿ ಗಂಗೂಲಿಯವರು ಈ ತಿಂಗಳು ಮೈಸೂರಿಗೆ ಆಗಮಿಸುವರು ಮೈಸೂರು ವಿಶ್ವವಿದ್ಯಾಲಯದ ಆಶ್ರಯದಲ್ಲಿ ಎರಡು ಎಕ್ಸ್‌ಟೆನ್ಷನ್ ಭಾಷಣಗಳನ್ನು ಕೊಡುವರು. ಅಕ್ಟೋಬರ್ ೧೨ ನೆಯ ತಾ|| "ಭಾರತೀಯ ಕಲೆಯ ಇತಿಹಾಸ" ವನ್ನೂ ಮತ್ತು ಅಕ್ಟೋಬರ್ ೧೩ನೆಯ ತಾರೀಖು "ಕಲೆಯೆಂದರೇನು?" ಎಂಬುವನ್ನೂ ಕುರಿತು ಭಾಷಣಮಾಡುವರು

ನಿಮಗಿದು ಗೊತ್ತೇ

ದೊಡ್ಡ ಛತ್ರಿ —ಅತಿಯಾಗಿ ಬೆಲೆ ಬಾಳುವ ಎರಡು ಛತ್ರಿಗಳು ಲೀಸ್ಟರ್‌ನ ಬೆನಿಸ್ ಮುಖ್ಯಾಧೀಶರಿಗೋಸ್ಕರ ಮಾತ್ರ ಬಳಸಲ್ಪಟ್ಟಿವೆ ಈ ಛತ್ರಿಗೆ ಸುಮಾರು 2... ರೂಪಾಯಿ ಬೆಲೆ ಕೌನ್ಸಿಲ್ಲಿನ ಮೀಟಿಂಗ್‌ಗಳನ್ನು ಈ ಛತ್ರಿಯ ನೆರಳಿನಲ್ಲಿ ನಡೆಸುತ್ತಾರೆ

122 ವರ್ಷದ ಆಮೆ —ಲಂಡನ್ನಿನ... ಇರುವ ಜೂ ಗಾರ್ಡನ್ನಿನಲ್ಲಿ 122 ವರ್ಷದ ಒಂದು ಆಮೆ ಇದೆ ಇದಕ್ಕೆ ಈಗ 2 ಮ... ಇವೆ ಪ್ರತಿ ಸಾಯಂಕಾಲವೂ ಇದು ಅವುಗಳನ್ನು ತನ್ನ ಬೆನ್ನಿನ ಮೇಲೆ ಕು... ರಿಸಿಕೊಂಡು ಹೋಗುತ್ತದೆ

ಲದ್ದಿಯಿಂದ ಇಟ್ಟಿಗೆ —ಈಗ ... ಶ್ಯನ ಲದ್ದಿಯಿಂದಲೂ ಒಂದು ... ಯೋಗವನ್ನು ಕಂಡುಹಿಡಿದಿದ್ದಾರೆ ... ಟ್ಟಿಗೆಯನ್ನು ಮಾಡುತ್ತಿದ್ದಾರೆ ... ಟ್ಟಿಗೆಗಳು ಬಹಳ ಗಟ್ಟಿಯಾದವೆ... ತಿಳಿಯಬಂದಿದೆ

1 ನಿಮಿಷದ ಸಿನಿಮಾ —ಇಂಗ್ಲೆಂಡಿನಲ್ಲಿ ಪ್ರಕಟಿಸಿದ ಮೊದಲನೆಯ ... ಚಿತ್ರವು 40 ಅಡಿ ಉದ್ದವಿದ್ದಿತಂತೆ ... ನ್ನು 1 ನಿಮಿಷದಲ್ಲಿ ತೋರಿಸಿದರಂತೆ

ಹಾರುವ ಮೋಟಾರ್ ಕಾರ್ —... ನ್ನಿನ ಸಾಮ್ಯುಎಲ್ ಸಿಟ್ರಾಮ್ ಎಂಬುವನು, ಒಂದು ಹೊಸರೀತಿಯ ಮೋಟಾರ್ ಕಾರನ್ನು ಕಂಡುಹಿಡಿದಿದ್ದಾನೆ ಈ ಮೋಟಾರ್ ಕಾರು ಆಕಾಶದಲ್ಲೂ ಹಾರ... ನೆಲದಮೇಲೂ ಓಡ ಬಲ್ಲುದು

ಚೀಣಾದಲ್ಲಿ ಸ್ವದೇಶಿ!!

(ಚೀಣಾ) ಪ್ರಾಂತಿಕ ಸರಕಾರದ ... ದ ಆಜ್ಞೆಯಂತೆ ವಿದೇಶಿ ಸಮವಸ್ತ್ರ... ಧರಿಸಕೂಡದೆಂದು ಪ್ರಾನ್ಸಿಯ ಸ... ನೌಕರರ ನಿರ್ಬಂಧವಾಗಿದೆ ಆಜ್ಞೆ... ಗಮಾಡಿದವರಿಗೆ ಮೊದಲು ಒಂದು ... ಳ ಸಂಬಳವನ್ನು ಜುಲ್ಮಾನೆ ವಿಧಿಸ... ವುದು ಪುನಃ ತಪ್ಪುಮಾಡಿದವ... ರಿಂದ ವಜಾಮಾಡಲಾಗುವುದು ... ಸರಕಾರದ ಉದ್ದೇಶವಿಷ್ಟೇ. ನೌ... ಚೀಣಾ ಪದಾರ್ಥಗಳನ್ನೇ ಉಪಯೋ... ಸ್ವದೇಶಿಗೆ ಪ್ರೋತ್ಸಾಹಕೊಡಬೇಕು... ನೌಕರರು ಸರಕಾರದ ಅಪ್ಪಣೆಯ... ರೋ ಇಲ್ಲವೋ ಎಂಬುದನ್ನು ಮ... ಗಳಿಗೊಮ್ಮೆ ತನಿಖೆ ನಡೆಸಲಾ...

ಲಾಟರಿಯ ಲಾಭ

ಫಿಲಿಪ್ಪೈನ್ ಧರ್ಮಾರ್ಥ ಲಾ... ೩೦೦೦೦ ಸವರನ್‌ಗಳ ಬಹುಮಾ... ಬ್ಬ ಬೂಟ್‌ಪಾಲಿಷ್ ಮಾಡುವನ... ದಿದೆ ಅವನ ವಯಸ್ಸು ೪೭ ... ಬೂಟ್ಸುಗಳನ್ನು ಪಾಲಿಷ್ ಮಾ... ರಿಂದಲೇ ೩೦೦೦ ಸವರನ್‌ಗಳ... ಟ್ಟಿದ್ದನಂತೆ

ಶ್ರೀಮನ್ಮಹಾರಾಜರ ಆಗಮನ.

ಶ್ರೀಮನ್ ಮಹಾರಾಜರವರು ತಮ್ಮ ಯಾತ್ರಾ ಪ್ರವಾಸವನ್ನು ಮುಗಿಸಿಕೊಂಡು ಕಳೆದ ಮಂಗಳವಾರ ಬೊಂಬಾಯಿಗೆ ಬಂದು ತಲಪಿದರು ಅಲ್ಲಿ ದಿವಾನ್ ವಿಶ್ವೇಶ್ವರಯ್ಯನವರೇ ಮುಂತಾದ ಮೈಸೂರಿನ ಪ್ರಮುಖ ಮಹನೀಯರುಗಳು ಅವರಿಗೆ ಸ್ವಾಗತವನ್ನು ಆಸಿಸಿದರು ಶ್ರೀ ಜಯಚಾಮರಾಜ ಒಡೆಯರವರೂ ಸಹ ಅವರನ್ನು ಎದುರುಗೊಳ್ಳಲು ಬೊಂಬಾಯಿಗ ತೆರಳಿದ್ದರು ಅಲ್ಲಿಂದ ಎಲ್ಲರೂ ಬೆಂಗಳೂರಿಗ ಕಳೆದ ಶುಕ್ರವಾರ ಬೆಳಿಗ್ಗೆ ಬಂದು ಸೇರಿ ಮೈಸೂರಿಗೆ ಪಯಮಾಡಿಸಿದರು ಬೆಂಗಳೂರಿನಿಂದ ಸ್ಪೆಷಲ್ ರೈಲಿನಲ್ಲಿ ಹೊರಟು ಮಧ್ಯ ಒಂದು ಸ್ಟೇಷನ್ನಿನಲ್ಲಿ ಮೋಟಾರ್ ಹತ್ತಿ ರಾಜಧಾನಿಗೆ ಹೊರಟರು ಶೃಂಗರಿಸಲ್ಪಟ್ಟಿದ್ದ ಒಂದು ಸುಂದರ ಚಪ್ಪರದಲ್ಲಿ ಅವರಿಗೆ ಸ್ವಾಗತವನ್ನು ನೀಡಲಾಯಿತು

ಮಾರನೆ ದಿನ ಬೆಳಿಗ್ಗೆ ಮೈಸೂರು ಪೌರಸಭೆಯ ವಿಶೇಷ ಸಭೆಯು ಸೇರಿ ಶ್ರೀಮನ್ಮಹಾರಾಜರವರಿಗೆ ಅಭಿನಂದನೆಯನ್ನು [illegible]

ಪ್ರಭುಗಳು ವಯಸ್ಸಾದವರಾಗಿಯೂ ಆರೋಗ್ಯದಿಂದಲೂ ಇರುವರು ರಾಜಧಾನಿಯ ಸ್ಥಿತಿಗತಿಗಳನ್ನು ಆಗಾಗ ಪರಿಶೀಲಿಸ ಬಯಸುವವರಾಗಿರುವರು

"ಹುಡುಗರು ಬೀಡಿ ಸೇದಲೇಬೇಕು"

ಒಂದಾನೊಂದು ಕಾಲದಲ್ಲಿ ಬ್ರಿಟನಿನ ಬಾಲಕರೆಲ್ಲರೂ ಬೀಡಿ, ಸಿಗರೇಟು ಸೇದಬೇಕೆಂಬ ನಿರ್ಬಂಧವಿತ್ತು, ಪ್ಲೇಗ್ ರೋಗ ಇದರಿಂದ ಬರದಂತೆ ತಡೆಯಬಹುದೆಂಬ ನಂಬಿಕೆಯಿತ್ತು ಬೆಳಿಗ್ಗೆ ಎದ್ದೊಡನೆ ಅವನ್ನು ಸೇದದಿದ್ದರೆ ಮಕ್ಕಳ ಮೈಗೆ ಏಟುಗಳನ್ನು ಹೊಡೆಯುತ್ತಿದ್ದರು ಶಾಲೆಗಳಲ್ಲಿ ಇದಕ್ಕಾಗಿ ಸ್ವಲ್ಪ ವಿರಾಮ ಕೊಡಲ್ಪಡುತ್ತಿತ್ತು ಇದು 1665 ರ ವರ್ಷದಲ್ಲಿ. ಅದರ ಈಗ ಅದೆಲ್ಲಾ ಹೋಗಿ ಶಿಕ್ಷಾಮಾತ್ರವಲ್ಲದೆ ಬೀಡಿಯು ಸೇದುವವರಿಗೆ ಯಾರೂ ಸೇದಕೂಡದೆಂಬ ನಿಯಮವಾಗಿದೆ ಮತ್ತು ಸಿಗರೇಟು ಮಾರುವವರು ಮುಂತಾದುವನ್ನು ಸಹ [illegible]

ಹುಳುಗಳನ್ನೇ ತಿನ್ನುವರು

ಆಫ್ರಿಕದ ಕಾಲಹಾರಿ ಮರುಭೂಮಿಯ ಜನರು ಗೆದ್ದಲು ಹುಳುಗಳನ್ನೇ ಆಹಾರವಾಗಿ ಉಪಯೋಗಿಸುತ್ತಾರೆ ಹುಳುಗಳನ್ನು ಅನಾಯಾಸವಾಗಿ ಹಿಡಿಯುತ್ತಾರೆ ಯಾವ ಆಹಾರಕ್ಕೂ ಹುಳುಗಳೇ ಉಪಯೋಗವಾಗುತ್ತವೆ ಕಳೆದ ತಿಂಗಳು ನಡೆದ ಬ್ರಿಟಿಷ್ [illegible] ಪ್ರದರ್ಶನದಲ್ಲಿ ಇವರ ವೃತ್ತಿ ಜೀವನ ರೀತಿಯು ತೋರ್ಪಡಿಸಲ್ಪಟ್ಟು ಅನೇಕ ವೈಜ್ಞಾನಿಕರು ನೋಡಿದರು

ಮೈಸೂರು ಗಲಭೆ ಮೊಕದ್ದಮೆ ತೀರ್ಪು.

ಕಳೆದ ವರ್ಷ ರಾಜಧಾನಿಯಲ್ಲಿ ಕೆಲವು ಜನ ಹಿಂದೂಗಳಿಗೂ ಮುಸಲ್ಮಾನರಿಗೂ ನಡೆದ ಗಲಭೆಯ ಮೇಲೆ ಪೋಲೀಸ್‌ನವರು ದಿವಾಳಿ ಬಸವಯ್ಯ ಮತ್ತು 12 ಜನ ಹಿಂದುಗಳ ಮೇಲೆಯೂ 15 ಜನ ಮುಸಲ್ಮಾನರ ಮೇಲೆಯೂ ಸಿಟಿ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಮೊಕದ್ದಮೆ ಹೂಡಿದ್ದರು, ಅದು ರುಜುವಾತಾದುದರಿಂದ ಐದು ಜನ ಹಿಂದುಗಳಿಗೂ ಆರು ಜನ ಮುಸಲ್ಮಾನರಿಗೂ ತಲಾ ಹತ್ತು ರೂಪಾಯಿ ಜುಲ್ಮಾನೆ ವಿಧಿಸಲಾಯಿತು ಉಳಿದವರನ್ನು ಖುಲಾಸೆ ಮಾಡಿದರು

ಅರಬ್ಬರ ಉಪವಾಸವ್ರತ

ಪ್ಯಾಲೆಸ್ಟೈನಿನ ಏಕರ್ ಜೈಲಿನಲ್ಲಿ ಸುಮಾರು ಒಂದು ನೂರು ಜನ ಅರಬ್ಬಿಯವರು ಉಪವಾಸ ವ್ರತವನ್ನು ಕೈಗೊಂಡು ಇರುವರು ಕಳೆದ ಗಲಭೆಗಳಲ್ಲಿ ಭಾಗವಹಿಸಿದರೆಂಬ ಆಪಾದನೆ ಮೇಲೆ ಅವರು ಬಂಧಿಸಲ್ಪಟ್ಟಿರುವರು ಅವರ ಆವರ ವಿಚಾರಣೆ ನಡೆದಿಲ್ಲ ತಮ್ಮನ್ನು ಕೂಡಲೆ ವಿಚಾರಣೆ ಮಾಡಬೇಕೆಂದೂ ಇಲ್ಲದಿದ್ದರೆ ಬಿಟ್ಟುಬಿಡಬೇಕೆಂದೂ ಅವರು ಕೇಳುತ್ತಿರುವರು

ಎಂಟುಸಾವಿರ ರೈತರ ಸತ್ಯಾಗ್ರಹ.

ಅಮೃತಸರದಲ್ಲಿ ಎಂಟುಸಾವಿರ ರೈತರು ಕೆಲಸಮಾಡುವುದಿಲ್ಲವೆಂದು ಮುಷ್ಕರ ಹಿಡಿದಿದ್ದಾರೆ ಅಲ್ಲಿನ ಸಂಪಾಸಾ ಜಮೀನಿನಲ್ಲಿ ಅವರು ಹತ್ತಿ ಬೆಳೆಯನ್ನು ಮಾಡುತ್ತಿದ್ದರು ಬೆಳೆದ ಹತ್ತಿಯಲ್ಲಿ ಅರ್ಧವನ್ನು ತಗೆದುಕೊಂಡು ಉಳಿದ ಅರ್ಧವನ್ನು ಜಮೀನ್‌ದಾರರಿಗ ಕೊಡುತ್ತಿದ್ದರು ಎಲ್ಲವನ್ನೂ ತಮ್ಮ ಬಳಿಗೆ ತಂದು ಅನಂತರ ಲೆಖ್ಖಾಚಾರ ಮಾಡಬಹುದೆಂದು ಹೇಳಿದ್ದರಿಂದ ರೈತರು ಮುಷ್ಕರ ಹಿಡಿದಿರುವರು

ಮೈಸೂರು ಡಿಸ್ಟ್ರಿಕ್ಟ್ ಬೋರ್ಡು

ಮೈಸೂರು ಡಿಸ್ಟ್ರಿಕ್ಟ್ ಬೋರ್ಡಿನ ವಿಶೇಷ ಸಭೆಯು ಈ ತಿಂಗಳು ತಾ॥ 8 ನೆ ಗುರುವಾರ ಮೈಸೂರು ಆಫೀಸು ಕಚೇರಿಯಲ್ಲಿ ನಡೆಯುವುದು.

ನಾಯಿ ಬೊಗಳಿದರೆ ಜುಲ್ಮಾನೆ

ನಾಯಿ ಬೊಗಳಿದರೆ ನಾಯಿಯ ಯಜಮಾನನಿಗ ಜುಲ್ಮಾನೆ ಹಾಕಬೇಕೆಂತೆ ನಾಗರಿಕತೆಯು ಎಲ್ಲಿಗ ಬಂದಿತು! ಬರ್ಲಿನ್ ಸಂಸ್ಥಾನದ ಒಂದು ಪೌರಸಭೆಗೆ ಹೆಚ್ಚು ದ್ರವ್ಯಸಂಪಾದನೆ ಮಾಡಬೇಕೆಂದು ತೋರಿತು ರಾತ್ರಿ ಒಂಭತ್ತು ಗಂಟೆಮೇಲೆ ಯಾರ ನಾಯಿ ಬೊಗಳುತ್ತವೋ ಅವರಿಗೆಲ್ಲ ಜುಲ್ಮಾನೆ ಹಾಕಬೇಕೆಂದು ನಿರ್ಧರವಾಯಿತು ಇದರಮೇಲೆ ಯಾರು ಸರ್ಕಾರಕ್ಕೆ ಅಂಗೀಕರಿಸ ವಹಿಸ್ಲ ಮತ್ತೆ ಒಂದುಸಾರಿ ಅಪರಾಧಮಾಡಿದ ನಾಯಿ ಎರಡನೇಸಾರಿ ಮಾಡಿದರೆ, ಶಿಕ್ಷೆಯು ಮೊದಲಿಗಿಂತಲೂ ದ್ವಿಗುಣವಾಗುವದು ಇದರಿಂದ ವಿಶೇಷ ಹಣವು ಉತ್ಪತ್ತಿಯಾಗುವದೆಂದು ನಿರೀಕ್ಷಿಸಿಯಿದೆ ಆದರ ಇಂತಹ ಸೂಕ್ಷ್ಮ ಜಾಡಗಳು ನಮ್ಮಕಡೆಯೂ ಹರಡಿದರ ಏನುಗತಿ!

ಪ್ರೇಮ ಮಾಪಕ ಯಂತ್ರ

ಪ್ರೀತಿಯನ್ನು ಅಳೆಯುವುದಕ್ಕಾ ಸಹ ಒಂದು ಯಂತ್ರವು ಬಂದಿದೆ ವಿದ್ಯುಚ್ಛಕ್ತಿಯ ಸಹಾಯದಿಂದ ಈ ಯಂತ್ರವು ಚಲಿಸುವುದು ಯಾರಲ್ಲಿ ಹೆಚ್ಚು ಪ್ರೇಮವಿದೆಯೋ ಅವರ ಹೆಸರನ್ನು ಹೇಳಿದಾಗ ಈ ಯಂತ್ರವು ಹೆಚ್ಚು ಚಲಿಸುವುದು. ಇದರಿಂದ ಪ್ರೇಮದ ಪ್ರಮಾಣವು ಗೊತ್ತು ಮಾಡಲ್ಪಡುವುದು.

ದಸರ ಫುಟ್‌ಬಾಲ್ ಟೂರ್ನಮೆಂಟ್

ಮೇಲ್ಕಂಡ ಟೂರ್ನಮೆಂಟಿನ ಪಂದ್ಯಗಳು ಬರುವ ನವರಾತ್ರಿ ಉತ್ಸವದ ಕಾಲದಲ್ಲಿ ಮೈಸೂರು ಫುಟ್‌ಬಾಲ್ ಅಸೋಸಿಯೇಷನ್ ಮೈದಾನದಲ್ಲಿ ನಡೆಯುವುವು ಪದ್ಧತಿ ಪ್ರಕಾರ ಗೆದ್ದವರಿಗೆ ಬಹುಮಾನಗಳು ಕೊಡಲ್ಪಡುವವು

ಪೋರ್ಚುಗೀಸ ಗೋವಾ

ಜರ್ಮನಿಗೆ ಕೊಡುವ ಯೋಚನೆಯಿಲ್ಲ

ಪೋರ್ಚುಗೀಸರಿಗೆ ಸೇರಿರುವ ಗೋವಾವನ್ನು ಜರ್ಮನರು ತಮ್ಮ ಸ್ವಾಧೀನಪಡಿಸಿಕೊಳ್ಳಲು ಪ್ರಯತ್ನಿಸಿರುವುದಾಗಿ ಒಂದು ಸಮಾಚಾರ ಹೊರಟಿತ್ತು ಆದರೆ ಈ ಸುದ್ದಿಯು ನಿರಾಧಾರವಾದುದೆಂಬುದಾಗಿ ಈಗ ಗೊತ್ತಾಗಿದೆ

ಫುಟ್‌ಬಾಲಿನಿಂದ ಸಂಸಾರ ಹಾಳಾಯಿತು.

ಮಗನಿಗೆ ಫುಟ್‌ಬಾಲಿನಲ್ಲಿ ಆಸಕ್ತಿ [illegible] ತನ್ನ ಹೆಂಡತಿಯು ಆಡುತ್ತಾಳೆಂಬ [illegible] ಲಂಡನ್ನಿನ ರಾಬರ್ಟ್ [illegible] ಎಂಬುವನು ವಿವಾಹ ವಿಚ್ಛೇದನೆಗಾಗಿ ಕೋರ್ಟಿಗೆ ಅರ್ಜಿ ಹಾಕಿರುವನು ಪತ್ನಿಯ ಪರವಾಗಿ ಪತಿಗೆ [illegible] ಇದೆ ಆದರೆ ಹೆಂಡತಿಯು ಫೀಲ್ಡಿನಲ್ಲಿ ಆಡುತ್ತಿರುವಾಗ ತಾನು ಮನೆಯ ಕೆಲಸಗಳನ್ನು ನೋಡಬೇಕಾಗಿದೆ ಮತ್ತು ಮಕ್ಕಳನ್ನು ನೋಡಿಕೊಳ್ಳಬೇಕಾಗಿದೆ ತನ್ನ ಗಂಡನೇ ತನಗೆ ಫುಟ್‌ಬಾಲ್ ಕೌಶಲ್ಯವನ್ನು ಕಲಿಸಿ ಉತ್ತೇಜನಗೊಳಿಸಿದನೆಂದು ಹೆಂಡತಿಯು ಹೇಳುತ್ತಾಳೆ "ಮದುವೆಯಾದ ಹೆಂಗಸು ಫುಟ್‌ಬಾಲಿನಲ್ಲಿ ನಿರತರಾಗಬಾರದೆಂಬ ತತ್ವವನ್ನು ನಾನು ಒಪ್ಪುತ್ತೇನೆ ಆದರೆ ನನ್ನ ಗಂಡನೇ ಉತ್ತೇಜನ ಕೊಟ್ಟಿದ್ದರಿಂದ ಅದರಲ್ಲಿ ನನ್ನ ದೋಷವಿಲ್ಲವೆಂದು ನಾನು ತಿಳಿದೆನು ಆದರೆ ಈಗ ಕಾಲವು ಮಿಂಚಿಹೋಗಿದೆ ಫುಟ್‌ಬಾಲಿಗಾಗಿಯೇ ನಾನು ಜೀವಿಸಿದ್ದೇನೆ ಈಗ ನನಗೂ ಮಾಡಲಾಗುವುದಿಲ್ಲ" ಎಂದು ಆಕೆ ಹೇಳುತ್ತಾಳೆ

ಕೋರ್ಟೇ ಯುದ್ಧರಂಗವಾಯಿತು

ಒಂದು ಕನ್ಯೆಯ ಅಪಹಾರದ ಸಂಬಂಧದ ವ್ಯಾಜ್ಯದಲ್ಲಿ ರಾವಲ್‌ಪಿಂಡಿಯ ಮ್ಯಾಜಿಸ್ಟ್ರೇಟ್ ಕೋರ್ಟು ಯುದ್ಧರಂಗವಾಗಿ ಪರಿಣಮಿಸಿತು ಉಭಯ ಪಂಗಡದವರೂ ಮುಸಲ್ಮಾನರು ಇಬ್ಬರೂ ಕತ್ತಿ, ಚಾಕು, ದೊಣ್ಣೆಗಳನ್ನು ಹಿಡಿದು ಹೊಡೆದಾಡಲಾರಂಭಿಸಿದರು ಮೊಕದ್ದಮೆಯನ್ನು ವಿಚಾರಿಸುತ್ತಿದ್ದ ಮ್ಯಾಜಿಸ್ಟ್ರೇಟರು ಎಷ್ಟೋ ಒಂದು ಹಲವರನ್ನು ದಸ್ತಗಿರಿಮಾಡಿಸಿ ಜಗಳವನ್ನು ನಿಲ್ಲಿಸಿದರು

ಪತ್ನಿಯ ನಾಸಿಕಾ ಛೇದನ

ಹಣ ಕೊಡದಿದ್ದುದರಿಂದ

ತನಗೆ ಸ್ವಲ್ಪ ಹಣಬೇಕೆಂದು ಕೇಳಲು ಅದನ್ನು ಕೊಡದಿದ್ದುದರಿಂದ ಅಮರಾವತಿಯ ಒಬ್ಬ ಮಹಾನುಭಾವನು ತನ್ನ ಹೆಂಡತಿಯ ಮೂಗನ್ನು ಕತ್ತರಿಸಿ ಆಕೆಯನ್ನು ತಳ್ಳಿಬಿಟ್ಟನು ಆಕೆಯನ್ನು ಆಸ್ಪತ್ರೆಗೆ ಸಾಗಿಸಿದರು ಗಂಡನನ್ನು ಪೋಲೀಸರು ದಸ್ತಗಿರಿ ಮಾಡಿದರು

ದಿವಾನರು

ಯುರೋಪ ಸಂಚಾರಕ್ಕೆ ಹೋಗಿ ವಾಪಸು ಬಂದಿರುವ ಸರ್ ಮಿರ್ಜಾ ಇಸ್ಮಾಯಿಲ ರವರು ಕಳೆದ ಶುಕ್ರವಾರ ತಮ್ಮ ಮಾಮೂಲು ಕಾರ್ಯಗಳನ್ನು ರಾಜಮಂತ್ರಿ ಪ್ರವೀಣ ಎಸ್ ಪಿ ರಾಜಗೋಪಾಲಾಚಾರಿಯವರಿಂದ ವಹಿಸಿಕೊಂಡರು

ANANDA SODA FACTORY,

BEST AERATED WATER SUPPLIERS

COMPLETE REQUISITES FOR

AERATED WATER MANUFACTURERS

AVAILABLE

ಆನಂದಾ ಸೋಡಾ ಫ್ಯಾಕ್ಟರಿ,

ದೊಡ್ಡ ಪೇಟೆ, ಮೈಸೂರು

ಸಾಧ್ವಿ

೫-೧೦-೩೬ ನೇ ಸೋಮವಾರ

ಸುಖಾಗಮನ.

ಸಾಧ್ವಿಯ ಸಂತೋಷವು ರಾಜಭಕ್ತಿ ಪೂರಿತವಾದುದು. ಇಂದು ಮೈಸೂರಿನ ಮಹಾಪ್ರಭುವು ಎಂದಿಗಿಂತಲೂ ಆರೋಗ್ಯವಾಗಿ ತನ್ನ ಪ್ರಜೆಗಳ ನಡುವೆ ಹಿಂದಿರುಗಿ ಬಂದು ನೆಲಸಿರುವುದೇ ಇದಕ್ಕೆ ಕಾರಣವು. ನಮ್ಮ ಪ್ರಭುವು ವಿದೇಶಕ್ಕೆ ಹೊರಟಾಗಲೂ ಇದೇ ಸಂತೋಷವು ಸಾಧ್ವಿಗೆ ಸಹಜವೇ. ಇಂದಿನ ಆವರ್ಣ ಸರ್ಕಾರಗಳೆಂಬುವು ಪ್ರಜಾ ಕೋಟಿಗೆ ದೇಶದ ಆಳ್ವಿಕೆಯಲ್ಲಿ ಎಷ್ಟು ಸ್ವತಂತ್ರವನ್ನು ಕೊಟ್ಟಿರುವುದೆಂಬುದು ನಮ್ಮ ಪ್ರಭುಗಳಿಗೆ ಸ್ವಂತವಾಗಿ ತಿಳಿದಿರಬೇಕಾದುದು ಇಲ್ಲಿನ ಲೋಕಸೇವಕರೆಂಬುವರಿಗೆ ಎಷ್ಟು ಬಿಕ್ಕಟ್ಟಿರುವುದೆಂಬುದಾದರೂ ಕಣ್ಣಾರೆ ಕಾಣಲು ಈಗ ಸಾಧ್ಯವೆಂದು ನಂಬುವೆವು. ನನ್ನ ದೇಶ, ನನ್ನ ಧರ್ಮ, ನನ್ನ ಭಾಷೆ, ನನ್ನ ದೊರೆ, ಎಂಬ ಅಭಿಮಾನದ ಪರಿಮಿತಿಯು ಆ ರಾಷ್ಟ್ರಗಳಲ್ಲಿ ಯಾವ ಮಟ್ಟಕ್ಕೆ ಏರಿರುವುದೆಂಬುದಾದರೂ ನಮ್ಮ ಪ್ರಭುವರೇಣ್ಯರ ಸ್ವಂತ ತಿಳುವಳಿಕೆಗೆ ಬರಬೇಕಾದ ಅವಶ್ಯಕತೆ ಇದ್ದಿತೆಂದೇ ದೇಶದ ಭಾವನೆ. ಆಳುವ ಮಹಾಸ್ವಾಮಿಯವರ ಅಧಿಕಾರ ವರ್ಗವು ಪ್ರತಿನಿಧಿ ಸಭೆಯಂತಹ ಒಂದು ಸಾರ್ವಜನಿಕ ಸಂಸ್ಥೆಗೆ ಅಧ್ಯಕ್ಷರಾಗಲೂ ಬೇರೆಯಾದವರು ಇಂದು ಮೈಸೂರಿನವರಲ್ಲೊಬ್ಬರಿಲ್ಲವೆಂದೇ ಇನ್ನೂ ಸಾರುತ್ತಿರಬಹುದು. ಇದಿರಲಿ, ಇನ್ನು ಮಹಾಸ್ವಾಮಿಯವರ ಈ ವಿದೇಶ ಯಾತ್ರೆಯ ಹಿಂದೆ ರಾಜಕೀಯ ಕಾರಣಗಳಿರಬಹುದೆ? ಎಂಬುದೊಂದು ಪ್ರಶ್ನೆಯು ಅಲ್ಲಲ್ಲಿ ತಲೆದೋರುತ್ತಿದೆ. ಯಾರೂ ಆ ಪ್ರಶ್ನೆಗೆ ನಿರ್ಧಾರವಾದ ಉತ್ತರ ಹೇಳಲಾರರು. ಇಲ್ಲವಾದರ ಜೇಷ ಇದ್ದಿದ್ದರ ನನ್ನ ನೇನು! ರಾಜಕೀಯ ಕಾರಣವೆಂಬುವು ಜೇಷದ ಹಕ್ಕು ಬಾಧ್ಯತೆಗಳು! ದೇವಹಿತ!

ಹೇಗೂ ಕರ್ನಾಟಕ ರತ್ನ ಸಿಂಹಾಸನಾಧಿಪತಿಗಳು ಜಗತ್ತಿನಲ್ಲಿ ಪ್ರಗತಿಯನ್ನೈದಿದ ಹಲವು ರಾಷ್ಟ್ರಗಳ ಸ್ಥಿತಿಗತಿಗಳನ್ನು ಕಣ್ಣಾರೆ ಕಂಡು ಹಿಂದಿರುಗಿದ್ದಾರೆ. ತಮ್ಮ ಪ್ರಜೆಗಳ ಏಳಿಗೆಗೆ ತಮ ತಿಳಿವನ್ನು ಉಪಯೋಗಿಸದಿರರು. ಇದಕ್ಕಿಂತಲೂ ನಮಗೆ ಹೆಚ್ಚೇನುಬೇಕು? ನನ್ನ ದೇಶ, ನನ್ನ ಪ್ರಜೆ, ನನ್ನ ಧರ್ಮ, ನನ್ನ ಭಾಷೆ, ಎಂಬ ಅಭಿಮಾನದಿಂದ ನಮ್ಮೆಲ್ಲರನ್ನೂ ಚಿರಕಾಲ ಆಳುತ್ತಿರುವಂತೆ ಜಗದೀಶ್ವರನು, ಆಳುವ ಮಹಾಸ್ವಾಮಿಯವರನ್ನು ಅನುಗ್ರಹಿಸಲಿ. ಇದೇ ಸಾಧ್ವಿಗೆ ಸಂತೋಷ. ಜಯವಾಗಲಿ. ಮೈಸೂರಿಗೆ, ಯದುಮಣಿಗೆ.

ಹಿಂದೀ ಪ್ರಚಾರಕ್ಕೇಕೆ ಸಹಾಯವಿಲ್ಲ?

ಹಿಂದೀ ಪ್ರಚಾರ ಕಾರ್ಯದ ಸಹಾಯಾರ್ಥವಾಗಿ ರಾಜಧಾನಿಯ ಪೌರಸಭೆಯವರು ಇನ್ನೂರು ರೂಪಾಯನ್ನು ಮಂಜೂರುಮಾಡಿದ್ದರು. ಅದನ್ನು ಸರ್ಕಾರದವರು ಒಪ್ಪದೆ ತಿರಸ್ಕರಿಸಿರುವರು. ಇದು ಕೇವಲ ಅಸಮಾಧಾನಕರವಾಗಿದೆ. ಮೊದಲನೆಯದಾಗಿ ಇದು ಸ್ಥಳೀಯ ಸಂಸ್ಥೆಗಳ ವಿಷಯ. ಸಾರ್ವಜನಿಕ ಕಾರ್ಯಗಳಿಗೆ ಸರ್ಕಾರದವರೇ ವಿಶೇಷವಾಗಿ ಸಹಾಯಮಾಡಬೇಕು. ಸ್ಥಳೀಯ ಸಂಸ್ಥೆಗಳಾದರೂ ಸಹಾಯಮಾಡುವಾಗ ತಪ್ಪೆನಿಸಿರಬಹುದು. ಅದು ಬಿಟ್ಟು ಮುರಿಗತ್ತಿ ಹಾಕುವುದು ಉಚಿತವಲ್ಲ.

ಎರಡನೆಯದಾಗಿ ನಮ್ಮ ದೇಶದ ದಿವಾನರು ಮೊದಲುಗೊಂಡು ಸಣ್ಣ ಪುಟ್ಟ ನೌಕರರವರೆಗೆ ಎಲ್ಲರೂ ಹಿಂದೀ ಭಾಷೆಯ ಪ್ರಚಾರದ ವಿಷಯದಲ್ಲಿ ಸಮ್ಮತಿಯನ್ನು ಸೂಚಿಸಿರುವರು. ಸಭೆಗಳಲ್ಲಿ ಭಾಷಣಮಾಡಿರುವರು. ಹಿಗಿದ್ದೂ ಕಾರ್ಯತಃ ಸಹಾಯವನ್ನು ನಿರಾಕರಿಸಿದರೆ ಅವರ ಮಾತುಗಳಿಗೆ ಬೆಲೆ ಬರುವುದಿಲ್ಲ. ಆದ್ದರಿಂದ ಪೌರಸಭೆಯವರು ಈ ವಿಷಯವನ್ನು ಮತ್ತೊಮ್ಮೆ ಪರಿಶೀಲಿಸಿ ಸರ್ಕಾರದವರಿಗೆ ತಿಳಿಯಪಡಿಸಿ ಮಂಜೂರಾತಿಯನ್ನು ಪಡೆಯಲೇಬೇಕು.

ಗಾಯ

ಪೋಲೀಸ್ ಸೂಪರಿಂಟೆಂಡೆಂಟರುಗಳಾದ ಮಾ॥ ಗಳು ಜಿ ಕೆ ಮಾಧವರಾಯರೂ, ಎಂ. ವಿ. ರಂಗರೂ, ಬಿ ತಿಮ್ಮರಾಜೇ ಅರಸಿನವರೂ, ಎಸ್ ವಿ ಬಾಬುರೆಡ್ಡಿಯವರೂ, ಎಚ್. ಶ್ರೀನಿವಾಸಯ್ಯಂಗಾರ್ರವರೂ ಕಳೆದ ವರ್ಷದಿಂದ ತಮ್ಮ ತಮ್ಮ ನೌಕರಿಗಳಲ್ಲಿ ಖಾಯಂ ಮಾಡಲ್ಪಟ್ಟಿರುವರು.

ಮುನಸಿಫ್ ಕೋರ್ಟು

ಹುಣಸೂರಿನಲ್ಲಿರುವ ಮುನಸಿಫ್ ಕೋರ್ಟಿನಲ್ಲಿ ಬರುವ ನವಂಬರ್ ತಾ॥ ೧ ರಿಂದಾರಾಯಿತು ಇಬ್ಬರು ಮುನಸೀಫರುಗಳಿದ್ದು ಕೋರ್ಟು ನಡೆಯುವಂತೆ ಸರ್ಕಾರದವರು ಅಪ್ಪಣೆ ಮಾಡಿದ್ದಾರೆ. ಮಾ॥ ವಿ. ಕಂದಸ್ವಾಮಿಪಿಳ್ಳೆಯವರು ಪ್ರಧಾನ ಮುನಸಿಫರಾಗಿಯೂ, ಮಾ॥ ಕೆ. ವಿ ರಾಮರಾಯರು, ಅಡಿಷನಲ್ ಮುನಸಿಫರಾಗಿಯೂ ಇರುವರು.

ಪತಿತ ಪುತ್ರನಿಗೆ ಮಾತೆಯ ಉದ್ಗಾರ.

ಅಬ್ದುಲ್ಲಾ ಗಾಂಧಿಗೆ ಕಸ್ತೂರಿಬಾಯಿಯವರ ಹಿತೋಪದೇಶ.

ಮಹಾತ್ಮ ಗಾಂಧಿಯವರ ಹಿರೇ ಮಗನಾದ ಹೀರಾಲಾಲನು ಮುಸಲ್ಮಾನನಾಗಿರುವನಷ್ಟೆ. ಅವನು ಕುಡಿದು ಬಿದ್ದಿದ್ದುದಕ್ಕಾಗಿ ಮದರಾಸಿನಲ್ಲಿ ಒಂದು ರೂ. ಜುಲ್ಮಾನೆ ಹೊಂದಿರುವುದನ್ನು ಕೇಳಿ ಅವನ ತಾಯಿ ಕಸ್ತೂರಿಬಾಯಿ ಅತ್ಯಂತ ಮರುಕಗೊಂಡು ಅವನಿಗೆ ಹೀಗೆ ಬರೆದಿದ್ದಾರೆ. ತಾಯಿಯ ಹೆಂಗರುಳಿನ ಪ್ರೀತಿ ವಿಶ್ವಾಸಗಳೂ ಆಕ್ರೋಶಗಳೂ ಅದರಲ್ಲಿ ಅಡಗಿವೆ. ಅವರು ಹೇಳುವುದೇನೆಂದರೆ:—

ನಿಮ್ಮ ತಂದೆಯವರು ಯಾವಾಗಲೂ ನಿನ್ನನ್ನು ಕ್ಷಮಿಸುವರು. ದೇವರು ಕ್ಷಮಿಸುವುದಿಲ್ಲ. ನಿಮ್ಮ ತಂದೆಯವರ ಹೆಸರಿಗಾಗಿ ಮ್ಯಾಜಿಸ್ಟ್ರೇಟರು ನಿನಗೆ ಅತ್ಯಲ್ಪ ಶಿಕ್ಷೆಯನ್ನು ವಿಧಿಸಿದರು. ಬೆಳಗಾದರೆ ಮತ್ತೇನು ಅವಿವೇಕಗಳನ್ನು ನೀನು ಮಾಡುವಿಯೋ ಎಂಬುದೇ ನನ್ನ ಚಿಂತೆ. ಹಲವುವೇಳೆ ನೀನು ಎಲ್ಲಿರುವೆಯೋ, ಎಲ್ಲಿ ಮಲಗುವೆಯೋ ಏನು ತಿನ್ನುವೆಯೋ ಎಂದು ನಾನು ಯೋಚಿಸುತ್ತೇನೆ. ಒಮ್ಮೊಮ್ಮೆ ನೀನು ದುರಾಹಾರಗಳನ್ನು ತಿನ್ನಬಹುದು. ಈ ವಿಧದ ಆಲೋಚನೆಗಳಿಂದ ನನ್ನ ಕಣ್ಣಿಗೆ ನಿದ್ದೆಯೇ ಹತ್ತುವುದಿಲ್ಲ. ನಿನ್ನನ್ನು ನೋಡಬೇಕೆಂದು ಅನೇಕವೇಳೆ ಹಂಬಲಿಸಿರುತ್ತೇನೆ. ಆದರೆ ನಿನ್ನನ್ನು ಪತ್ತೆಮಾಡುವುದಾದರೂ ಎಲ್ಲಿ? ನೀನು ನನ್ನ ಹಿರೇ ಮಗ. ವಯಸ್ಸು ಸುಮಾರು ಐವತ್ತಾಗಿದೆ. ನಿನಗೆ ಏನಾದರೂ ಹೇಳುವುದಕ್ಕೂ ಹೆದರಿಕೆಯಾಗುತ್ತದೆ. ನನ್ನನ್ನು ನೀನು ಹಿಯ್ಯಾಳಿಸಬಹುದು. ನೀನು ನಿನ್ನ ಪಿತೃ ಪಿತಾಮಹರ ಧರ್ಮವನ್ನು ಏಕೆ ಬಿಟ್ಟೆಯೋ ನಾನರಿಯೆ. ಅದು ನಿನ್ನ ಹಣೆ ಬರಹ. ಆದರೆ ನೀನು ಕೆಟ್ಟ ಕಸಿಯು ವನವನ್ನೆಲ್ಲಾ ಕೆಡಿಸಿದಂತೆ ಇತರ ಅರಿಯದ ಜನರನ್ನೂ ಕೆಡಿಸುತ್ತಿರುವೆ ಎಂದು ಕೇಳುತ್ತೇನೆ. ನಿನ್ನ ಎಲ್ಲ ಕೆಟ್ಟ ಗಳನ್ನು ನೀನು ತಿಳಿಯುವುದು ಒಳ್ಳೆಯದು. ಧರ್ಮದ ವಿಷಯ ನಿನಗೇನು ಗೊತ್ತು? ನಿನ್ನ ಬುದ್ಧಿ ಸ್ಥಿಮಿತವಾಗಿದೆಯೆ? ನೀನು ನಿಮ್ಮಪ್ಪನ ಮಗನಾಗಿರುವುದರಿಂದ ಜನರು ನಿನ್ನ ವಿಷಯದಲ್ಲಿ ಭ್ರಾಂತರಾಗುವರು. ಧರ್ಮವನ್ನು ಬೋಧಿಸಲು ನಿನಗ ಯೋಗ್ಯತೆಯಿಲ್ಲ. ನೀನು ದುಡ್ಡಿನ ದಾಸನು. ದುಡ್ಡು ಕೊಟ್ಟವನೇ ನಿನಗ ದೊಡ್ಡಪ್ಪ. ಕೊಟ್ಟ ಹಣವನ್ನೆಲ್ಲಾ ಕುಡಿಯುವುದರಲ್ಲಿ ಹಾಳು ಮಾಡುವಿ. ಅನಂತರ ಸಭೆಗಳ ವೇದಿಕೆಗಳನ್ನೇರಿ ಬಾಯಿಗೆ ಬಂದಂತೆ ಹರಟುವಿ. ನೀನು ನಿನ್ನ ಆತ್ಮವನ್ನು ಕಲುಷಿತವನ್ನಾಗಿ ಮಾಡಿಕೊಳ್ಳುತ್ತಿರುವಿ. ಹೀಗೆಯೇ ಇದ್ದರೆ ಕಾಲ ಕ್ರಮದಲ್ಲಿ ಎಲ್ಲರೂ ನಿನ್ನನ್ನು ತುಚ್ಛೀಕರಿಸುವರು. ಸ್ವಲ್ಪ ಸಾವಧಾನದಿಂದ ಪರ್ಯಾಲೋಚಿಸಿ ನಿನ್ನ ದುರ್ಮಾರ್ಗದಿಂದ ಹಿಂದಿರುಗೆಂದು ನಿನ್ನನ್ನು ಬೇಡಿಕೊಳ್ಳುವೆನು.

ಜಾತಿ ಕೆಟ್ಟದ್ದರಿಂದ ನನ್ನ ಮಗನು ಉತ್ತೀರ್ಣನಾಗುವುದಕ್ಕಿಂತಲೂ ನೀಚನೇ ಆಗುತ್ತಿರುವನು. ಅವನನ್ನು ಜಾತಿ ಕೆಡಿಸಿದವರು ಅವನ ದುರಾಚಾರಗಳನ್ನು ತಪ್ಪಿಸಬೇಕು. ನನ್ನ ಮಗನಿಗೆ ಮೌಲ್ವಿ ... ಬಿರುದನ್ನೂ ಕೆಲವರು ಕೊಟ್ಟಿರುವ... ಇದು ನ್ಯಾಯವೆ? ಕುಡುಕರನ್ನು ಮೌಲ್ವಿಗಳೆಂದು ಕರೆಯಲು ನಿಮ್ಮ ಮತದಲ್ಲಿ ... ವಕಾಶವುಂಟೆ? ಅವನ ದುರ್ನಡತೆಗೆ ... ಯಾವ ಮೌಲ್ವಿಯೂ ಮದರಾಸಿನ ... ಮುಸಲ್ಮಾನರು ರೈಲ್ವೆ ಸ್ಟೇಷನ್ನಿಗೆ ... ಗಿ ಅವನನ್ನು ಮರ್ಯಾದೆಯಿಂದ ಬೀಳ್ಕೊ... ಟ್ಟರೆಂದು ತಿಳಿಯ ಬರುತ್ತದೆ. ಹೀಗೆ ... ನನ್ನ ಅಟ್ಟಕ್ಕೆ ಏರಿಸುವುದರಿಂದ ನಿ... ಏನು ಆನಂದವೋ ತಿಳಿಯದು. ಅವ... ನಿಮ್ಮ ನಿಜವಾದ ಸಹೋದರನಾದರೆ ... ಹೀಗೆ ಮಾಡಬಾರದು. ಅದರಿಂದ ... ನಿಗೆ ಒಳ್ಳೆಯದಾಗುವುದಿಲ್ಲ. ಅವನ... ನ್ನು ಹಿಯ್ಯಾಳಿಸುವುದೇ ನಿಮ್ಮ ... ದ್ದೇಶವಾದರೆ ನಾನೇನೂ ಹೇಳಲಾ... ನಿಮ್ಮಿಂದಾದ ಎಲ್ಲಾ ಅನರ್ಥಗಳನ್ನು ಮಾಡಿರಿ. ಆರ್ತಳಾದ ಮಾತೆಯು ... ಉದ್ಗಾರವು ನಿಮ್ಮಲ್ಲಿ ಪ್ರಬಲವಾಗಿ ... ವರ ಮನಸ್ಸನ್ನು ಕರಗಿಸಬಹುದು. ... ರ ದೃಷ್ಟಿಯಲ್ಲಿ ನೀವು ಸರಿಯಾದ ... ನಡೆಯುತ್ತಿಲ್ಲವೆಂದು ಹೇಳುವುದು ನ... ಕರ್ತವ್ಯ.

ಶ್ವಾನ ಸೌಕರ್ಯ.

ಅಮೇರಿಕದಲ್ಲಿ ಮನುಷ್ಯನಿಗಿಂತ... ನಾಯಿಗಳೇ ಹೆಚ್ಚು ಸೌಖ್ಯವನ್ನು ... ಭವಿಸುತ್ತಿವೆ. ಅಲ್ಲಿ ಒಂದೊಂದರ ಕೆ... ಗಿಂತ ಹೆಚ್ಚು ನಾಯಿಗಳಿವೆ. ಡಬ್ಬಿ... ಲ್ಲಿ ಪ್ಯಾಕ್‌ಮಾಡಿದ ಆಹಾರಗಳನ್ನೇ ... ಗಳಿಗೆ ಉಪಯೋಗಿಸುವುದರಿಂದ ... ಪೌಂಡುಗಳು ಖರ್ಚಾದವು. ನಾ... ಸೌಂದರ್ಯಕ್ಕಾಗಿಯೇ ಬೇರೆಬೇರೆ ... ಗಳಿವೆ. ನಾಯಿಗಳಿಗೆ ಕನ್ನಡಕಗಳ... ಹಾಕುವುದುಂಟು. ಮತ್ತು ಇತರ ... ಕಾರದ ಪರಿಕರಣಗಳನ್ನಿಡುವ ... ಕೇಸುಗಳೂ ಇದಲ್ಲಿರುತ್ತವೆ. ... ದಲ್ಲಿ ನಾಯಾಗಿ ಹುಟ್ಟುವುದೂ ... ಪುಣ್ಯವೇ!

ಮ್ಯಾಜಿಸ್ಟ್ರೇಟರ ಅಧಿಕಾ...

ಎಲ್ಲಾ ಮೊದಲನೇ ತರಗತಿ ಮ್ಯಾ... ಜಿಸ್ಟ್ರೇಟರಿಗೂ ಅವರು ಹಿಡಿದ ... ದ ಮೊಕದ್ದಮೆಗಳಲ್ಲಿ ಸಾಕ್ಷಿಗಳ ... ಗಳನ್ನು ತಮ್ಮ ಸ್ವಹಸ್ತಾಕ್ಷರಗಳ... ಷ ಭಾಷೆಯಲ್ಲಿ ಬರೆದುಕೊಳ್ಳುವ ... ರವನ್ನು ಸರ್ಕಾರದವರು ಕೊಟ್ಟಿದ...

ಫ್ಲಷಿಂಗ್ ಕಕ್ಕಸ್ಸುಗಳ ಪ್ರಕರಣ.

ಪುರನಿವಾಸಿಗಳನ್ನು ನಿರ್ಬಂಧಪಡಿಸುವುದು ಸೂಕ್ತವೇ?

ಮೈಸೂರು ನಗರ ನಿವಾಸಿಗಳ ಕುಂದು ಕೊರತೆಗಳ ವಿಷಯವಾಗಿ ಕಳೆದ ತಿಂಗಳು ನಾವು ಹೊರಡಿಸಿದ ಪ್ರಕಟನೆಯಮೇಲೆ ಪೌರಸಭಾಧ್ಯಕ್ಷರು ಒಂದು ವಿವರವಾದ ಹೇಳಿಕೆಯನ್ನು ಪ್ರಕಟಿಸಿರುವರಷ್ಟೆ. [illegible]

ಮತ್ತು ಕೊಳಂಜೋ [illegible] ಮುನಿಸಿಪಾಲಿಟಿಗಳಲ್ಲಿ ಹಾಗೆ ಮಾಡುತ್ತಾ ಇಲ್ಲವೇ? ಈ ವಿಷಯವಲ್ಲಿ ನಮ್ಮ [illegible]

3) [illegible]

1) ಕಿಲ್ಲೇ ಮೊಹಲ್ಲಾದಲ್ಲಿ [illegible]

[illegible]

ಗೆ ನಿಗವನ್ನೇ ಕೊಡದೆ ಇರುವುದು ತುಂಬಾ ವಿಷಾದವಾಗುತ್ತದೆ.

6) [illegible]

ನಗರಸಭಾ ಸಂಸ್ಥಾನದ ರಾಜಧಾನಿಯಾದ ಮೈಸೂರು ಸಿಟಿ ಕಿಲ್ಲೆ ಮೊಹಲ್ಲಾದಲ್ಲಿ ಹೆಲ್ತ್ ಆಫೀಸಿನವರು ಕಟ್ಟಿಸಿರುವ ಮಾದರಿ ಕಕ್ಕಸ್ಸಿನ ಒಂದನೇ ಚಿತ್ರ

ಸಾರ್ವಜನಿಕರ ಉಪಯೋಗಕ್ಕಾಗಿ, ಹೆಂಗಸರೂ ಮಕ್ಕಳೂ, ಮತ್ತು ಗಂಡಸರೂ, [illegible] [illegible] ಕಾಣುವ ರೀತಿಯಲ್ಲಿ ಕಟ್ಟಲ್ಪಟ್ಟಿವೆ

ಮೈಸೂರು ಸಿಟಿ ದೇವರಾಜ ಮೊಹಲ್ಲಾದಲ್ಲಿ ನಾಗರಿಕ ಹೆಲ್ತ್ ಆಫೀಸಿನವರು ಕಟ್ಟಿಸಿರುವ ಮಾದರಿ ಕಕ್ಕಸ್ಸಿನ ಎರಡನೇ ಚಿತ್ರ



[illegible] ಈ ಕಕ್ಕಸ್ಸು [illegible]

[illegible]

7) [illegible]

ನಮ್ಮ ನಗರದ ಜನರ [illegible]

ಬಿ. ಎಸ್. ಸುಬ್ಬಣ್ಣ.

ಭಾರತದಲ್ಲಿ ಮೋಟಾರು ಕೈಗಾರಿಕೆ

ಸರ್ ಎಂ. ವಿಶ್ವೇಶ್ವರಯ್ಯನವರ ವಿವರಣೆ

ಸಂಸ್ಥಾನಗಳ ಮಂತ್ರಿಗಳ ಮಂಡಲದ ಸಭೆಗಾಗಿ ಮುಂಬಯಿಗೆ ಆಗಮಿಸಿರುವ ಸಂಸ್ಥಾನಗಳ ಮಂತ್ರಿಗಳೊಡನೆ ಮೈಸೂರಿನ ನಿವೃತ್ತ ದಿವಾನರೂ, ಪ್ರಸಿದ್ಧ ಇಂಜಿನಿಯರ್, ಸ್ಟೇಟ್ಸ್‌ಮನ್‌ರವರೂ ಆದ ಸರ್ ಎಂ. ವಿಶ್ವೇಶ್ವರಯ್ಯನವರು ತಮ್ಮ ಭಾರತೀಯ ಮೋಟಾರು ಕಾರ್ಖಾನೆಯ ಯೋಜನೆಯನ್ನು ಪ್ರಸ್ತಾಪಿಸಿ, ಪೂರ್ವಭಾವಿ ಮಾತುಕತೆಯನ್ನು ನಡೆಸಿದರು.

ಸರ್ ಅಕ್ಬರ್ ಹೈದರಿಯವರು ಪ್ರತಿ ಸಂಸ್ಥಾನದ ಮಂತ್ರಿಗೂ ಇವರನ್ನು ಪರಿಚಯ ಮಾಡಿಕೊಡುತ್ತಾ, ಸರ್ ಎಂ ವಿಶ್ವೇಶ್ವರಯ್ಯನವರು ವಿಶೇಷ ಸಾಮರ್ಥ್ಯವುಳ್ಳ ಕೈಗಾರಿಕೆ, ಆಡಳಿತಗಾರರೆಂದು ಹೇಳಿ ಪರಿಚಯ ಮಾಡಿಕೊಟ್ಟರು.

ಸರ್ ಎಂ. ವಿಶ್ವೇಶ್ವರಯ್ಯನವರು ತಮ್ಮ ಯೋಜನೆಯನ್ನು ಸಂಪೂರ್ಣವಾಗಿ ವಿವರಿಸಿ, ಕೊನೆಯಲ್ಲಿ ಈ ಉದ್ಯಮವು ಭಾರತದಲ್ಲಿ ಸಫಲಗೊಂಡು ಯಶಸ್ವಿಯಾಗಿಯೂ, ಪ್ರಭಾವಯುತವಾಗಿಯೂ ನಡೆಯಬೇಕಾದರೆ, ಖಾಸಗಿಯಾಗಿ ಸಹಾಯವಾಗುವುದೇ ಅಲ್ಲದೆ, ದೇಶೀಯ ಸಂಸ್ಥಾನಗಳಿಂದಲೂ ಯಥೇಚ್ಛವಾಗಿ ಸಹಾಯವಾಗಬೇಕು. ಇಲ್ಲಿ ನೆರೆದಿರುವ ಮಂತ್ರಿಗಳು ತಮ್ಮ ಸಂಸ್ಥಾನಗಳು ಈ ಉದ್ಯಮಕ್ಕೆ ಆರ್ಥಿಕವಾಗಿಯೇ ಅಲ್ಲದೆ ಬುದ್ಧಿವಾದ ರೂಪದಲ್ಲಿಯೂ ಸಹಾಯ ಮಾಡಬೇಕು. ಈ ವಿಷಯವನ್ನು ಮಂತ್ರಿಗಳು ಸಹಾನುಭೂತಿಯುತವಾಗಿ ಪರಿಶೀಲಿಸಲಿ ಎಂದು ಹೇಳಿದರು.

ನಾಲ್ಕು ಕಾಲುಗಳ ಮಗು

ನಾಲ್ಕು ಕೈಗಳು ಇದ್ದ ವಿಷಯವನ್ನು ಪುರಾಣಗಳಲ್ಲಿ ಓದಿರುತ್ತೇವೆ. ಚತುಷ್ಪಾದವ ಮನುಷ್ಯ ಜೀವಿಯನ್ನು ನೋಡಿಯೂ ಇರಲಿಲ್ಲ. ಕೇಳಿಯೂ ಇರಲಿಲ್ಲ. ಚೀನಾದಲ್ಲಿ ಇಂತಹದೊಂದು ಮಗು ಹುಟ್ಟಿದೆ. ಅಲ್ಲಿನ ಕ್ವಾಂಗ್ಸಿ ಪ್ರಾಂತದ ಒಬ್ಬ ರೈತನ ಹೆಂಡತಿಯು ನಾಲ್ಕು ಕಾಲಿನ ಗಂಡು ಮಗುವನ್ನು ಹೆತ್ತಿರುವಳು. ತಾಯಿಗೆ ೨೬ ವರ್ಷ. ಆ ಸೀಮೆಯ ಅಧಿಕಾರಿಗಳು ಈ ಕುಟುಂಬದ ಸಹಾಯಕ್ಕಾಗಿ ಧನ ಸಂಗ್ರಹ ಮಾಡುತ್ತಿರುವರು.

ನಿರುದ್ಯೋಗಿ ಸಿಪಾಯಿಗಳು

ನಿರುದ್ಯೋಗಿಗಳಾದ ಎರಡುಸಾವಿರ ಜನ ಹಂಗೇರಿಯಾದ ಸೈನಿಕರು ಒಂದು ಸಭೆ ಸೇರಿ ಮುಸ್ಸೋಲಿನಿಗೆ ಒಂದು ಅರ್ಜಿಯನ್ನು ಗುಜರಾಯಿಸಿಕೊಂಡಿರುವರು. ಇವರನ್ನು ಅಬಿಸೀನಿಯಾಕ್ಕೆ ಕಳುಹಿಸಿ ಅಲ್ಲಿ ವಸತಿಯನ್ನು ಕಲ್ಪಿಸಿಕೊಂಡು ಬಾಳಲು ಸಹಾಯಮಾಡಬೇಕೆಂದು ಕೇಳಿಕೊಂಡಿರುವರು.

ನಂಜನಗೂಡಿನಲ್ಲಿ ಕಾಂಗ್ರೆಸ್ ಪ್ರಚಾರ.

ಡಾ॥ ಎನ್. ಎಸ್. ಹರ್ಡೀಕರರು ಕಳೆದ ಬುಧವಾರ ನಂಜನಗೂಡಿಗೆ ದಯಮಾಡಿಸಿ ಸೀತಾರಾಮ ಶೆಟ್ಟರ ಛತ್ರದಲ್ಲಿ ಮನೋಹರವಾದ ಭಾಷಣವನ್ನು ಮಾಡಿದರು. ಆ ದಿನ ಮಹಾತ್ಮಾ ಗಾಂಧಿಯವರ ವರ್ಷಂತ್ಯುತ್ಸವ ಮತ್ತು ಹಿಂದೀಪ್ರಚಾರ ಸಮಿತಿಯ ವಾರ್ಷಿಕೋತ್ಸವದ ಪ್ರಯುಕ್ತ ದೊಡ್ಡ ಸಭೆ ಏರ್ಪಾಡಾಗಿತ್ತು. ಅಡ್ವೋಕೇಟ್ ಮ॥ ಎಸ್. ನಾರಾಯಣರಾಯರು ಅಗ್ರಾಸನವನ್ನು ವಹಿಸಿದ್ದರು. ನೂರಾರು ಜನ ಮಹನೀಯರೂ, ಮಹಿಳೆಯರೂ, ಬಂದಿದ್ದರು. ಸುಶ್ರಾವ್ಯವಾದ ಸಂಗೀತವು ನಡೆಯಿತು. ಅನಂತರ ಡಾಕ್ಟರವರು ತಮ್ಮ ಅಪೂರ್ವ ವಾಗ್ಝರಿಣಿಯಿಂದ ಮಹಾತ್ಮಾ ಗಾಂಧಿಯವರ ಸಂದೇಶ, ರಾಷ್ಟ್ರೀಯ ಸಭೆಯ ಇತಿಹಾಸ, ಪ್ರಪಂಚದ ಪರಿಸ್ಥಿತಿ, ಆತ್ಮಾವಲಂಬನೆಯ ಆವಶ್ಯಕತೆ— ಇವುಗಳನ್ನು ಕುರಿತು ಸ್ವಾರಸ್ಯವಾದ ಭಾಷಣವನ್ನು ಮಾಡಿದರು. ಮಹಾಜನರು ಕಾಂಗ್ರೆಸ್ಸಿಗೆ ಸದಸ್ಯರಾಗಬೇಕೆಂದು ಕೋರಿದರು. ಅನೇಕರು ಸದಸ್ಯರಾಗುತ್ತಿರುವರು.

ಕಾಂಗ್ರೆಸ್ ಸಂಸ್ಥೆಯ ರಚನೆ.

ಈಚೆಗೆ ಕಾಂಗ್ರೆಸ್ ಸದಸ್ಯರನ್ನು ಕೂಡಿಸುವ ಪ್ರಯತ್ನವು ಆಸಕ್ತಿಯಿಂದ ನಡೆದಿದೆಯಷ್ಟೆ. ಮೈಸೂರು, ಬೆಂಗಳೂರು, ಚಿಕ್ಕಮಗಳೂರು, ಹಾಸನ ಮುಂತಾದ ನಗರಗಳಲ್ಲೂ, ಇತರ ಊರುಗಳಲ್ಲಿಯೂ ಅನೇಕರು ಸದಸ್ಯರಾಗಿರುವರು. ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯ ಸದಸ್ಯರಾದ ಡಾಕ್ಟರ್ ಎನ್. ಎಸ್. ಹರ್ಡೀಕರ್, ಮ॥ ಹುಕ್ಕೇರಿಕರ್ ಮತ್ತು ಶ್ರೀಮತಿ ಕಮಲಾದೇವಿಯವರುಗಳು ನಮ್ಮ ದೇಶದ ಅನೇಕ ಭಾಗಗಳಲ್ಲಿ ಸಂಚರಿಸಿ ಪ್ರಚಾರ ಮಾಡಿರುವರು. ಶೀಘ್ರದಲ್ಲಿಯೇ ಎಲ್ಲಾ ಕಡೆಗಳಲ್ಲಿಯೂ ಕಾಂಗ್ರೆಸ್ ಸಂಸ್ಥೆಗಳು ಪುನರ್ಘಟನೆಗೊಳ್ಳುವವು. ಮತ್ತು ನಿರ್ದಿಷ್ಟವಾದ ಕಾರ್ಯಕ್ರಮವನ್ನು ಕೈಗೊಳ್ಳುವುವು.

ಪ್ರಾರ್ಥನೆ

ರಾಗ ॥ ಏಕತಾಳ ॥

ಚಿತ್ಪಾವನ ಮೂರ್ತಿ । ನಿನ್ನ ಜ ।
ಗತ್ ಸೇವೆಯ ಕೀರ್ತಿ ॥
ನಿತ್ಯದಿ ತೋರುವುದುತ್ತಮ ಗೀತೆಯ ।
ಸುಪ್ರಾರ್ಥಗಳ ರಹಸ್ಯದಿ ಒರೆದಿಹೆ ॥ ೧ ॥
ಭಾರತಕುಲತಿಲಕ । ಸರ್ವ ಉ ।
ದಾರಗುಣದೊಳೆರಕ ॥
ಪಾರತಂತ್ರ್ಯಪರಿಹಾರಕೆ ಬೆದರದೆ ।
ಭಾರತವನಿ ನೀನೇರಿದೆ ಸ್ವರ್ಗವ ॥ ೨ ॥
ನಂಬಿರುವವರಿಗೆ । ದೇವರೇ ।
ದ್ವಂದ್ವಗಳಿಲ್ಲದ ಠಾವೇ ॥
ಸಿರಿಸಂಪದಗಳ ತೊರೆಯುತ ಜ್ಞಾನದ ।
ಪರಮಾನಂದವನರುಹಿದ ಗುರುವರ ॥ ೩ ॥
ಶೃಂಗಾರದ ತನುವು । ನೋಡಲು ।
ಗಂಗಾಧರನೊಲವು ॥
ಕಂಗಾಣದೆ ಬಲುಭಂಗಗೊಳ್ಳುತಿರುವೆವು ।
ಮುಂಗಾಣಿಸು ಬೆಳಕಂಗದೊಳುದಯಿಸಿ ॥

ಪೊನ್ನಾಲ ಪರಮೇಶ್ವರ,
ಕೊಡಗು ಜಿಲ್ಲಾ.

ಟಿ. ಎಲ್. ಶಾಂತರಾಜರವರ ಅಪೀಲು.

ಕೋಲಾರದ ಸರೋಜಮ್ಮ ಎಂಬಾಕೆಯು ಚಿತ್ರದುರ್ಗದ ಈಗಿನ ಅ॥ ಕಮೀಷನರಾದ ಶ್ರೀ॥ ಟಿ ಎಲ್. ಶಾಂತರಾಜರವರ ಮೇಲೆ ಜೀವನಾಂಶದ ಮೊಕದ್ದಮೆ ಹೂಡಿ ತನಗೂ ತನ್ನ ಮಗ ಗೋಪೀನಾಥನಿಗೂ ಮಾಹೆಯಾನಾ ಒಂದುನೂರು ರೂಪಾಯಿ ಪರಿಹಾರ ದೊರೆಯಬೇಕೆಂದು ಆರ್ಡರು ಪಡೆದಿರುವರಷ್ಟೆ. ಇವರಮೇಲೆ ಮಿ॥ ಶಾಂತರಾಜರವರು ಹೈಕೋರ್ಟಿನಲ್ಲಿ ಹೂಡಿರುವ ಅಪೀಲು ದಾಖಲಾಗಿರುತ್ತದೆ. 19 ನೇ ತಾ॥ ವಿಚಾರಣೆಯಾಗುವುದು.

ಮೈಸೂರು ಸಂಸ್ಕೃತ ಪಾಠಶಾಲೆ

ಗಣಪತಿ ಉತ್ಸವದ ಪ್ರಯುಕ್ತ ಮೈಸೂರು ಸಂಸ್ಕೃತ ಪಾಠಶಾಲೆಯಲ್ಲಿ, ಪದ್ಧತಿ ಪ್ರಕಾರ ಪ್ರತಿದಿನವೂ ಉತ್ತಮವಾದ ಉಪನ್ಯಾಸಗಳೂ, ಸಂಗೀತಗಳೂ, ವಾಕ್ಯಾರ್ಥಗಳೂ ನಡೆಯುತ್ತಿವೆ. ನೂರಾರು ಜನರು ದಯಮಾಡಿಸಿ ಕೇಳಿ ಆನಂದಪಡುತ್ತಿರುವರು.

ಯಳಂದೂರು ವರ್ತಮಾನ

(ನಮ್ಮ ಬಾತ್ಮೀದಾರರಿಂದ)

ತಾ॥ 25-9-

ಈ ತಾಲ್ಲೂಕಿನಲ್ಲಿ ಮಳೆಯು ಸ್ವಲ್ಪವಾಗಿ ಸ್ವಲ್ಪಸ್ವಲ್ಪವಾಗುತ್ತಲಿದೆ. ... ದ್ದ ಮಳೆಯು ಬಂದು ಸುವರ್ಣಾನದಿಯಲ್ಲಿ ದೊಡ್ಡ ಪ್ರವಾಹಬಂದರ ... ಲ್ಲು ದೊಡ್ಡ ಕೆರೆಗಳು ತುಂಬಿ ... ಚೆನ್ನಾಗಿ ಆಗಲು ಅನುಕೂಲ.

ಈ ತಾಲ್ಲೂಕು ಜಹಗೀರ್‌ದಾರರಾದ ನಾಗರಾಜರಾವ್ ಪೂರ್ಣಯ್ಯನವ ... ಇವರ ಜೊತೆಯಲ್ಲಿ ಮ॥ ನವರತ್ನಂ ... ರಾವ್ ರವರೂ ಸಹ ಈ ಮಾಹೆ 22 ತಾರೀಖು ಸಾಯಂಕಾಲ ದಯಮಾ ... 23 ನೇ ತಾರೀಖು ಬೆಳಗ್ಗೆ ಶ್ರೀ ಬಿಳಿ ರಂಗಸ್ವಾಮಿಯವರ ಬೆಟ್ಟಕ್ಕೆ ದಯ ... ಡಿಸಿದರು. ಯಳಂದೂರು ಕಸಬಾ ... ಲವು ಜನಗಳೊಂದಿಗೆ ಕೆರೆ ಮತ್ತು ... ಕಾರಂಜಿ ವಿಷಯ ಮೊದಲಾದವು ... ನಾದಿ ಫಲಹಾರ, ಟಿ, ಕಾಫಿ ... ಸಂತೋಷಪಡಿಸಿ ಮೈಸೂರಿಗೆ ಪ್ರಯಾ ... ಬೆಳೆಸಿದರು.

* * *

ಈ ಮಾಹೆ 24 ನೇ ತಾ॥ ಈ ತಾಲ್ಲೂಕು ... ಮಾರನಹಳ್ಳಿಯಲ್ಲಿದ್ದ ವೇ॥ ಕುಪ್ಪ ... ಗಾರ್‌ರವರು 67 ನೇ ವಯಸ್ಸಿನಲ್ಲಿ ಸ್ವ ... ಪ್ಯದಿಂದ ಸ್ವರ್ಗಸ್ಥರಾದರು. ಇವರು ... ತಾಲ್ಲೂಕಿನಲ್ಲಿ ದೊಡ್ಡ ಜಮೀನ್‌ದಾರ ... ಯೂ ಸ್ಥಳವಂದಿಗರಾಗಿಯೂ ದರ್ಮ ... ಪ್ರವೇ ಮೊದಲಾದ ವಿಷಯದಲ್ಲಿ ಶಿಲ ... ರಾಗಿಯೂ ಇದ್ದರು.

ಯೂರೋಪಿಯನರಿಗೆ ಸಜಾ

ಒಬ್ಬ ಭಾರತೀಯ ಟಪಾಲಿನವನ ... ಹೊಡೆದುದಕ್ಕಾಗಿ ಬೊಂಬಾಯಿನ ... ಯುರೋಪ್ಯರಿಗೆ ತಲಾ 100 ರೂಪಾ ... ಜುಲ್ಮಾನೆಯೂ, ಕೋರ್ಟು ಏಳುವ ... ಸಜವೂ ವಿಧಿಸಲ್ಪಟ್ಟವು. ಇವರು ... ಲು ಕೆಲವು ಕಾಗದಗಳನ್ನು ಟಪಾ ... ಪೆಟ್ಟಿಗೆಯಲ್ಲಿ ಹಾಕಿದರು. ಅನಂತರ ... ವಾಪಸು ಬೇಕೆಂದು ಅಪೇಕ್ಷಿಸಿದರು ... ಲಿನವನು ಆ ಪೆಟ್ಟಿಗೆಯಿಂದ ಕಾಗದ ... ನ್ನು ತೆಗೆದುಕೊಳ್ಳಲು ಬಂದಾಗ ... ನನ್ನು ಹೊಡೆದು ಬಲಾತ್ಕಾರದಿಂದ ... ದಗಳನ್ನು ತೆಗೆದುಕೊಂಡರು ... ಅಪರಾಧವನ್ನು ಒಪ್ಪಿ ಕ್ಷಮೆ ... ಬೇಡಿದರು.

ಪ್ರದರ್ಶನದ ಕಟ್ಟಡ ಕುಸಿಯಿತು

ಕಳೆದ ಗುರುವಾರ ಬೆಳಗ್ಗೆ ಮೈಸೂರು ದಸರಾ ವಸ್ತುಪ್ರದರ್ಶನದ ಹೊಸ ... ದ ಮುಂಭಾಗವು ಆಕಸ್ಮಿಕವಾಗಿ ಕುಸಿ ... ಬಿತ್ತು. ಕೆಲಸಮಾಡುತ್ತಿದ್ದ ... ಕೂಲಿಯವರು ಬಹಳ ಗಾಯವನ್ನು ... ಹೊಂದಿದರು. ಕೂಡಲೆ ಆವರನ್ನು ... ಸ್ಪತ್ರೆಗೆ ಸಾಗಿಸಿದರು. ಅವರಲ್ಲಿ ... ಮೃತಪಟ್ಟನೆಂದು ತಿಳಿದಿದೆ.

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ಬಾಲಸುಧಾ

ಮಕ್ಕಳ ಜ್ವರದ ಗೆಡ್ಡೆಯನ್ನು ಖಾತರಿ ಗುಣ ಪಡಿಸುತ್ತೆ. ಲಿವರ್ (ಪಿತ್ತಕೋಶ) ದಪ್ಪನಾಗಿ ಕಣ್ಣು ಹಳದಿ ಬಣ್ಣವಾಗಿದ್ದರೆ ಇದರ ಸೇವನೆಯಿಂದ ದಿನೇ ದಿನೇ ಗುಣವಾಗುತ್ತೆ. 30 ವರ್ಷಗಳಿಂದಲೂ ಅನುಭವ ಸಿದ್ಧವಾಗಿದೆ—ಮಕ್ಕಳ ಭೇದಿಗೆ ನಮ್ಮ ಬಾಲ ಸಂಜೀವಿನಿಯನ್ನೇ ಉಪಯೋಗಿಸಿರಿ

ಬಾಲ ಸುಧಾ ಬೆಲೆ 1 ರೂ.   ಬಾಲಸಂಜೀವಿನಿ 4 ಆ.

ಮೈಸೂರು, ಬೆಂಗಳೂರು, ಮದ್ರಾಸುಗಳಲ್ಲಿ ನಮ್ಮ ಶಾಖೆಗಳಿವೆ

ಸದ್ವೈದ್ಯಶಾಲಾ, ನಂಜನಗೂಡು.

ಲೀಗಿದ್ದೇನು ಪ್ರಯೋಜನ?

(ಎಂ. ವಿ. ನಾರಾಯಣಮೂರ್ತಿ)

ಲೀಗಿನ ಉದ್ದೇಶವೇನೆಂದರೆ ಪ್ರಪಂಚ ದಲ್ಲಿ ಶಾಂತಿಸ್ಥಾಪನೆ ಮಾಡುವುದು. ಅದ ಕ್ಕಾಗಿ ಅದು ಎಷ್ಟರ ಮಟ್ಟಿಗೆ ತನ್ನ ಉ ದ್ದೇಶವನ್ನು ಸಫಲಗೊಳಿಸಿದೆಯೆಂದು ನೋಡಿ: ಈಗ ಕೆಲವು ತಿಂಗಳ ಕೆಳಗೆ ಅಬಿಸೀನಿಯಾಕ್ಕೂ ಇಟಲಿಗೂ ಯುದ್ಧವಾ ದುದು ಸರ್ವರಿಗೂ ಗೊತ್ತೇ ಇದೆ. ಇಟಲಿ, ಅಬಿಸೀನಿಯಾಗಳು ಲೀಗಿಗೆ ಸೇರಿದುವ ಗಳು. ಎರಡು ರಾಷ್ಟ್ರಗಳೂ ಜಗತ್ತಿ ನಲ್ಲಿ ಶಾಂತಿ ಸ್ಥಾಪನೆ ಮಾಡುವುದೇ ನಮ್ಮ ಧ್ಯೇಯ' ಎಂಬ ತತ್ವಕ್ಕೆ ಒಪ್ಪಿದ್ದುವು. ಆದರೆ ಇಟಲಿಯು ಅಬಿಸೀನಿಯದ ಮೇಲೆ ಬಿತ್ತು. ಹಾಗಾದರೆ ಲೀಗಿನ ಉದ್ದೇಶಕ್ಕೆ ಇಟಲಿಯು ವ್ಯತಿರಿಕ್ತವಾಯಿತು. ಅದು ಅಲ್ಲದೆ ಯುದ್ಧವೇನೋ ಪ್ರಾರಂಭವಾ ಯಿತು. ರಾಜನಾದ ರಫಾರಿಯು ಲೀಗಿನ ಸಹಾಯವನ್ನು ಕೇಳಿದನು. ಲೀಗಿನವರು ದಂಡಕ್ಕೆ ಕಣ್ಣೊರಸಲು ಇಟಲಿಯವರ ಮೇಲೆ ಈಗ ಒಬ್ಬುತ್ತಿರುವ ಯಾವ ಸಾಮಾನುಗಳನ್ನು ನಾವು ನಿಲ್ಲಿಸಿ ದರೆ ಇಟಲಿಯು ಕೋಪಿಸುವುದಿಲ್ಲ ಎಂದು ಕೇ ಳಲು ಆಗ ಮುಸಲೋನಿಯು ಕೆಲವು ಹೆ ಸರುಗಳನ್ನು ಹೇಳಿದನು. ಸರಿ, ಅವುಗ ಳನ್ನು ಯಾವ ದೇಶದವರೂ ಇಟಲಿಗೆ ಕಳುಹಬಾರದೆಂದು ಆಜ್ಞೆ ಮಾಡಿ ದರು. ಮುಸಲೋನಿಯು ಬುದ್ಧಿವಂತ! ಅವನು ಪೆಟ್ರೋಲಿನ ವಿಷಯವನ್ನು ಮಾ ತನಾಡಲಿಲ್ಲ. ಈಗಿನ ಕಾಲದ ಯುದ್ಧ ವು ಪೆಟ್ರೋಲಿಲ್ಲದೆ ನಡೆಯುವ ಬಗೆ ಹೇಗೆ? ಪೆಟ್ರೋಲಿಲ್ಲದೆ ವಿಮಾನ ವು ಹೇಗೆ ನಡೆದೀತು? ವಿಮಾನವಿಲ್ಲದೆ ಯುದ್ಧವನ್ನು ಹೇಗೆ ಮಾಡುವುದು?

ಮುಸಲೋನಿಯು ತನಗೆ ಬೇಕಾದ ಪೆಟ್ರೋಲನ್ನು ತರಿಸಿಕೊಳ್ಳುತ್ತಿದ್ದನು. ಆಗ ಲೀಗಿನವರೇನು ಮಾಡುತ್ತಿದ್ದರು? ಯುದ್ಧವು ಘೋರವಾಗಿಯೇ ಆಯಿತು. ಅಬಿಸೀನಿಯ ಸೋತು ಅರ್ಧರಾತ್ರಿಯಲ್ಲಿ ರಫಾರಿಯು ದೇಶವನ್ನು ಬಿಟ್ಟು ಓಡಿ ಹೋದನು. ಅಲ್ಲಿ "ಸ್ವಸ್ತಿಕ ಅಬಿಸೀನಿಯವನ್ನು ನಾವು ಗೆದ್ದೆವು" ಎಂದರು. ಲೀಗಿನವರ ಪಾ ಡೇನು? ರಫಾರಿಯು ಲೀಗನ್ನು ನಂಬಿ ವ್ಯರ್ಥವಾಯಿತು. ಕೊನೆ ಗೆ ಅವನು ಜಿನೀವಾಕ್ಕೆ ಬಂದನು. ಸಭೆಯನ್ನು ಮತ್ತು ತನಗೆ ಕೊಡಿಸಬೇ ಕೆಂದು ಕೇಳಿದನು. ಆಗ ರಫಾರಿಯು ಲೀಗಿನ ಸಭೆಯಲ್ಲಿ ಕೂತು ಮಾತನಾಡಲು ಇಟಲಿಯವರು ಆತನಿಗೆ ಮಾತನಾಡಲು ಅವಕಾಶಕೊಡದೆ ನಾಟಕಶಾಲೆಯ ಲ್ಲಿನ ಪ್ರಭುಗಳಂತೆ ಕೂಗಾಡಿದರು. ಅವನು ಸಹಾಯವನ್ನು ಬೇಡಿದನು. ಲೀಗಿನವರೇನು ಮಾಡಿದರು? ಕೊನೆ ಗೆ ಅವನು ಸ್ವಲ್ಪ ಹಣವನ್ನು ಸಾಲ ಕೇಳಲು ಅದನ್ನು ಕೂಡ ಕೊಡಲಿಲ್ಲ. ರಾಜಪದವಿಯಲ್ಲಿದ್ದು ಈಗ ಭಿಕ್ಷುಕನಾಗಿ ರುವ ರಫಾರಿಯನ್ನು ಮಿಸ್ಟರ್ ರಫಾರಿ ಎಂದು ಕೂಗಿ ಹಾಸ್ಯಮಾಡಿದರು. ಇಷ್ಟು ಪಕ್ಷಗಳಾದರೂ, ಬುದ್ಧಿಯುಳ್ಳ ರಫಾರಿ ಯು ಮತ್ತೆ ಆ ಲೀಗಿಗೆ ಹೋಗಿದ್ದಾನೆ.

ಲೀಗಿಗೆ ಸೇರದಿರುವ, ಜಪಾನ್, ಜರ್ಮ ನಿ, ಫ್ರಾನ್ಸ್, ಇಟಲಿ ಮುಂತಾದ ಅನೇಕ ರಾ ಷ್ಟ್ರಗಳು ರಾಜೀನಾಮೆಯಿತ್ತಿವೆ. ಪ್ರತಿ ರಾಷ್ಟ್ರವೂ ರಾಜೀನಾಮೆಯನ್ನೀಯುವ ಆ ಲೋಚನೆ ಮಾಡುತ್ತಿದೆ. ಫ್ರಾನ್ಸ್ ರಷ್ಯಾ ಗಳು ಸೇರಿ ಜರ್ಮನಿಯ ಮೇಲೆ ಬೀಳಲು ಶಾಂತಿ ಎಂದು ಕೂಗುತ್ತಿದೆ. ಲೀಗಿನ ಮಾತನ್ನು ಕೇಳುವ ಒಂದು ಸಿಳ್ಳೆಯೂ ಇಲ್ಲ. ಈಗ ಯುದ್ಧಗಳನ್ನು ಮಾಡುತ್ತಿ ರುವವರೆಲ್ಲರೂ ಲೀಗಿಗೆ ಸೇರದಿದ್ದು ಅಥವಾ ಸೇರಿರುವವರೇ. ಒಂದು ಕಡೆ 'ಹೌದು, ಶಾಂತಿ ಇರಬೇಕು' ಅನ್ನು ತ್ತಿದ್ದಾರೆ. ಮತ್ತೊಂದು ಕಡೆ ಯುದ್ಧಕ್ಕೆ ಅಣಿಮಾಡುತ್ತಿದ್ದಾರೆ. ಖಂಡಿತವಾಗಿ ಯೂ ಯೂರೋಪಿನಲ್ಲಿ ಮುಂದಿನ ವರ್ಷ ದಲ್ಲಿ ಒಂದು ಮಹಾ ಯುದ್ಧವು ಸಂಭವಿಸು ವುದು. ಹೀಗಿದ್ದರೆ ಶಾಂತಿ ಎಲ್ಲಿಯದು? ಮುಂದಿನ ಯುದ್ಧದಲ್ಲಿ ಲೀಗು ಏನು ತಾನೇ ಪ್ರಯತ್ನಿಸುತ್ತಿದೆ. ಜಪಾನ್ ದೇಶವು ಚೀ ಣಾ ದೇಶದ ಮೇಲೆ ಬೀಳುತ್ತಿದೆ. ಸ್ಪೇ ಯಿನಿನಲ್ಲಿ ದೊಡ್ಡ ದಂಗೆಯಾಗುತ್ತಿದೆ. ಇ ಟಲಿಯು ತನ್ನ ಹಿಂದಿನ ರೋಮನ ಸಾ ಮ್ರಾಜ್ಯವನ್ನು ನೆನೆಸುತ್ತಿದೆ. ಅನೇಕ ದೇಶಗಳಲ್ಲಿ ಬಾಂಬು ಮುಂತಾದುವುಗಳನ್ನು ಆಕಾಶದಿಂದ ಎಸೆದರೆ ಹೇಗೆ ತಪ್ಪಿಸಿಕೊ ಳ್ಳಬೇಕೆಂಬುದನ್ನು ಚಿಕ್ಕಶಾಲೆಗಳಲ್ಲಿಯೂ ಕಲಿಸುತ್ತಿದ್ದಾರೆ. ಪ್ರತಿಯೊಬ್ಬನೂ ಯುದ್ಧಕ್ಕೆ ಅಣಿಮಾಡುತ್ತಿದ್ದಾನೆ. ಇಷ್ಟೆ ಲ್ಲಾ ನಡೆಯುತ್ತಿದ್ದರೂ ಲೀಗು ಮಾತ್ರ ಮಾಡೀತು? ಬಾಯ್ಮುಚ್ಚಿಕೊಂಡು ಸುಮ್ಮನೆ ಕುಳಿತುಕೊಳ್ಳುತ್ತದೆ. ಅಷ್ಟೆ. ಈಗ ರಾಜ್ಯವಿಲ್ಲದ ಆ ರಫಾರಿಗೆ ಲೀಗಿನಲ್ಲಿ ಸ್ಥಾ ನವನ್ನು ಒಂದೇ ಕೊಟ್ಟಿದ್ದಾರೆ. ಅಂತು ಲೀ ಗು ಮಹತ್ತರ ದಾನವನ್ನು ಕಳೆದ ಇಟ ಲಿ, ಅಬ್ಸೀನಿಯಾ ಯುದ್ಧದಲ್ಲಿಯೇ ಕಂಡಿ ದ್ದೇವೆ. ಇಂಡಿಯವು ಲೀಗನ್ನು ಬಿಡ ಬೇಕು. ಲೀಗಿದ್ದು ತಾನೇ ಏನು ಪ್ರಯೋಜ ನ? ಅದರ ಉದ್ದೇಶವೇನೋ ಶಾಂತಿಸ್ಥಾ ಪನೆಯಾಗಿರಬಹುದು. ಆದರೆ ಉದ್ದೇಶ ವು ನಡೆಯದ ಮೇಲೆ ಲೀಗಿದ್ದೇನು ಪ್ರಯೋಜನ? ಇಂಥಾ ಲೀಗಿಗೆ ನಾವು ಬಡಹಿಂದೂಸ್ಥಾನದ ಜನ್ಮ ಭೂಮಿಯನ್ನು ಹಿಂಡಿ ವರ್ಷಕ್ಕೆ 14 ಲಕ್ಷ ರೂಪಾಯಿ ಗಳನ್ನು ಕೊಡುತ್ತಿದ್ದೇವೆ. ಇದೇನ ನ್ಯಾಯ! ಇದೇ ರೂಪಾಯಿಗಳನ್ನು ಬೇರೆ ಯಾವ ಕೆಲಸಗಳಿಗಾದರೂ ಉಪ ಯೋಗಿಸಬಾರದೇ?

ಸಂಸಾರ ನೌಕದಲ್ಲಿ.

ಉದ್ಯಾನವನದಲ್ಲಿ ಕುಮಾರನೊಡನೆ ಸುಂದರ ಮತ್ತು ಸರಳಾ.

ಉಪಾಧ್ಯಾಯರ ಸಂಘ, ಮೊಸಳೆ.

ಮೇಲ್ಕಂಡ ಸಂಘದ 1936–37 ನೇ ಸಾಲಿನ 3 ನೇ ಮೀಟಿಂಗು 26 9 36ನೇ ದಿನ ಮೊಸಳೆ ಮಿಡ್ಲ್ ಸ್ಕೂಲ್ ಹಾಲಿನಲ್ಲಿ ಸದರಿ ಶಾಲೆಯ ಹೆಡ್ಮಾಸ್ಟರ್ ಮ॥ ರಾ॥ ಎಸ್. ರಾಮಚಂದ್ರರಾಯರ ಅಧ್ಯಕ್ಷತೆಯಲ್ಲಿ ನಡೆಯಿತು. ಮೊದಲು ದೇವತಾಪ್ರಾರ್ಥನೆ ಜರಗಿದನಂತರ ಈ ಕೆಳಗೆ ಕಂಡ ಠರಾವುಗಳು ಪ್ಯಾಸಾದುವು —

(1) ಇನ್ನು ಮುಂದೆ ಈ ಸಂಘಕ್ಕೆ ಮೊಸಳೆ ಮಿಡ್ಲ್ ಸ್ಕೂಲು ಹೆಡ್ಮಾಸ್ಟರು ಪ್ರೆಸಿಡೆಂಟರಾಗಿಯೂ, ಸದರಿ ಗ್ರಾಮದ ಪ್ರೈಮರೀ ಸ್ಕೂಲು ಹೆಡ್ಮಾಸ್ಟರು ಸೆಕ್ರೆಟರಿಗಳಾಗಿಯೂ ಇರಬೇಕೆಂದು ತೀರ್ಮಾನಿಸಲಾಯಿತು.

(2) ಈ ಸಂಘಕ್ಕೆ ಸೇರಿದಂತೆ "ಉಪಾಧ್ಯಾಯರ ಪರಸ್ಪರ ಸಹಾಯ ಸಂಘ" ಎಂಬ ಹೆಸರಿನಿಂದ ಒಂದು ನಿಧಿಯನ್ನು ಏರ್ಪಡಿಸಿ, ತನ್ಮೂಲಕ ಉಪಾಧ್ಯಾಯರುಗಳಿಗೆ ಅನುಕೂಲವಾಗುವಂತೆ ಮಾಡಬೇಕೆಂದೂ, ಈ ವಿಚಾರದಲ್ಲಿ ಸೊಸೈಟಿ ರಿಜಿಸ್ಟ್ರಾರಿಗೆ ತಿಳಿಸಿ, ಜಾಗ್ರತೆ ಸಂಘವನ್ನು ರಿಜಿಸ್ಟರ್ ಮಾಡಿಸಬೇಕೆಂತಲೂ, ತೀರ್ಮಾನವಾಯಿತು.

(3) ನಮ್ಮ ಪ್ರೀತಿಯ ಚಕ್ರವರ್ತಿಗಳಾದ ಜಾರ್ಜರವರು ಪಟ್ಟಮಾತ್ರ ದೇಶಗಳ ಪ್ರಜೆಗಳನ್ನು ಸುರಕ್ಷಿತವಾಗಿ ಸಲಹಿ ಕೊಂಡು ಬಹುಕಾಲದವರೆಗೆ ಜೀವಿಸಿರಬೇಕೆಂದೂ, ಬಿಕ್ಕಟ್ಟಿನ ಸಮಾಚಾರವನ್ನು ಕೇಳಿ ನಮ್ಮ ಮಹಾಪ್ರಭುಗಳಿಗೆ ಇತಿಹಾಸ ಪ್ರಸಿದ್ಧವಾದ ಜವಾಬ್ದಾರಿ ಮತ್ತು ಕಾರ್ಯಭಾರವನ್ನು ವಹಿಸಲೆಂದು ಭಗವಂತನನ್ನು ಪ್ರಾರ್ಥಿಸಿ ವಂದನಾರ್ಪಣೆ, ಉಪಹಾರಾನಂತರ ರಾಷ್ಟ್ರಗೀತದೊಡನೆ ಸಭೆಯು ಮುಕ್ತಾಯವಾಯಿತು.

ಸೆಕ್ರೆಟರಿ

ಸಹಕಾರ ಸಮ್ಮೇಳನ

ನಮ್ಮ ಸಂಸ್ಥಾನದ ಪರಸ್ಪರ ಸಹಾಯ ಸಂಘಗಳ 23 ನೇ ವಾರ್ಷಿಕ ಮಹಾಸಭೆ ಯು ರಾಜಧಾನಿಯಲ್ಲಿ ಶಾಸನ ಸಭಾ ಬಿಲ್ಡಿಂಗ್ ಬಳಿ ಹೊಸದಾಗಿ ಕಟ್ಟಿರುವ ಸೊಸೈಟಿಗಳ ಕಟ್ಟಡದಲ್ಲಿ ಅಕ್ಟೋಬರ್ ತಾ॥ 27 ರ ಲ್ಲಿ ಪ್ರಾರಂಭವಾಗಿ ಮೂರು ದಿನ ನಡೆಯುವುದು. ಸಂಸ್ಥಾನದ ಕೌನ್ಸಿಲ್ 2 ನೇ ಮೆಂಬರು ಮ॥ ಎಸ್. ಮಾಧವರಾವ್, ಬಿ. ಎ., ಬಿ. ಎಲ್. ರವರು ಅಧ್ಯಕ್ಷರಾಗಿ ಸಭೆಯ ಕಾರ್ಯಗಳನ್ನು ನಡಿಸಲು ದಯವಿಟ್ಟು ಅಂಗೀಕರಿಸಿರುತ್ತಾರೆ.

ತಾಂಬೂಲ ಸೇವನೆ.

ವೀಳ್ಯದೆಲೆಯನ್ನು ಸಂಸ್ಕೃತದಲ್ಲಿ ನಾಗವಲ್ಲಿಯೆಂದು ಹೇಳುವರು. ಆಯುರ್ವೇದ ಶಾಸ್ತ್ರದಲ್ಲಿ ಈ ತಾಂಬೂಲಕ್ಕೆ ಅನೇಕ ಗುಣಗಳನ್ನು ಹೇಳಿದೆ. ಅದರಲ್ಲಿ ಖಾರ, ಒಂದುಬಗೆಯ ಸುವಾಸನೆ, ಮಾಧುರ್ಯ, ಕ್ಷಾರ, ಸ್ತಂಭಕಗುಣ, ವಾಯುನಿಗ್ರಹಶಕ್ತಿ, ಕಫನಿವಾರಣಶಕ್ತಿ, ಕ್ರಿಮಿನಾಶಕಶಕ್ತಿ, ಬಾಯಿಗೂ ಉಸಿರಿಗೂ ಸುಗಂಧವನ್ನು ಕೊಡುವುದು, ಈ ಗುಣಗಳೆಲ್ಲಾ ಇರುವುದರೊಡನೆ, ಇದು ಬಾಯಿಗೆ ಮತ್ತು ತುಟಿಗಳಿಗೆ ಅಂದವನ್ನು ಕೊಡುವುದೆಂದೂ, ಕಾಮೋತ್ತೇಜಕವೆಂದೂ ಹೇಳಿದೆ. ವೀಳ್ಯದೆಲೆಯೊಡನೆ ಸೇರಿಸಿಕೊಳ್ಳುವ ಅಡಿಕೆಯಲ್ಲಿಕೂಡ ಸ್ತಂಭಕಗುಣವೂ ರಸ ತ್ರಿಪರ್ಷಕಶಕ್ತಿಯೂ ಇರುವದಾಗಿ ಹೇಳಲ್ಪಟ್ಟಿದೆ. ಇನ್ನೂ ಚೆನ್ನಾಗಿ ಹಣ್ಣಾಗದ ಮತ್ತು ಒಳಗೆ ಇನ್ನೂ ಹಸಿಯಾಗಿರುವ ಅಡಿಕೆಯು ಬಾಯಿಯಲ್ಲಿ ಮತ್ತನ್ನುಂಟು ಮಾಡತಕ್ಕ ಗುಣವುಂಟು. ಕೆಲವರಿಗೆ ಇದರ ಸೇವನೆಯಿಂದ ಸ್ವಲ್ಪ ತಲೆನೋವು, ತಲೆ ತಿರುಗುವದು ಇವೆಲ್ಲಾ ಆಗುವದುಂಟು. ತಾಂಬೂಲದಲ್ಲಿ ಸುಣ್ಣವನ್ನು ಸೇರಿಸಿಕೊಳ್ಳುವದರಿಂದ ಬಾಯಿಗೆ ಕೆಂಪುಬಣ್ಣವು ಬರುವುದರೊಡನೆ, ಅದರಿಂದ ಆಹಾರಾಂಗಗಳಲ್ಲಿ ರಸೋತ್ಪತ್ತಿಗೆ ಉತ್ತೇಜನ ಕೊಟ್ಟಂತಾಗುವದು. ಮತ್ತು ಸುಣ್ಣದಲ್ಲಿ ಎಲುಬನ್ನು ದೃಢಪಡಿಸುವ ಗುಣವುಂಟು.

ಹಿಂದೂಶಾಸ್ತ್ರದಲ್ಲಿ ತಾಂಬೂಲಸೇವನ ಯೋಗ್ಯ ಮಂಗಳಕರವೆಂದೂ ಹೇಳಿದೆ. ಆದರೆ ಅದರಲ್ಲಿ ಮಿತಿಯಿರಬೇಕು. ದಿನಕ್ಕೆ ಮೂರಾವರ್ತಿಗಿಂತಲೂ ಹೆಚ್ಚಾಗಿ ಉಪಯೋಗಿಸಬಾರದು. ಬೆಳಗ್ಗೆ ಅಡಿಕೆಯನ್ನು ಹೆಚ್ಚಾಗಿಯೂ, ಎಲೆ ಮತ್ತು ಸುಣ್ಣ ಇವೆರಡನ್ನೂ ಸ್ವಲ್ಪವಾಗಿಯೂ ಉಪಯೋಗಿಸಬೇಕು. ಮಧ್ಯಾಹ್ನದಲ್ಲಿ ಸುಣ್ಣವನ್ನು ಹೆಚ್ಚಾಗಿಯೂ, [illegible]ವನ್ನು ಕಡಿಮೆಯಾಗಿಯೂ ಉಪಯೋಗಿಸಬೇಕು. ರಾತ್ರಿಯಹೊತ್ತಿನಲ್ಲಿ ವೀಳ್ಯದೆಲೆಯನ್ನು ಹೆಚ್ಚಾಗಿಯೂ ಉಳಿದುವೆರಡನ್ನೂ ಸ್ವಲ್ಪವಾಗಿಯೂ ಸೇರಿಸಬೇಕೆಂದು ವಿಧಿ. ತಪ್ಪದೆ ವೀಳ್ಯದೆಲೆಯನ್ನು ಅಗಿಯುವಾಗ ಮೊಟ್ಟಮೊದಲು ಬಂದ ರಸವನ್ನು ನುಂಗದೆ ಹೊರಕ್ಕೆ ಉಗುಳಿಬಿಡಬೇಕು. ದಾಂಪತ್ಯದಲ್ಲಿರುವ ಗೃಹಸ್ಥರಿಗೆಮಾತ್ರವೇ ತಾಂಬೂಲಸೇವನೆಯು ವಿಹಿತವಾಗಿದೆ. ದಂಪತಿಗಳಲ್ಲಿ ಅನ್ಯೋನ್ಯ ಪ್ರೇಮಾಭಿವೃದ್ಧಿಗೂ, ಕಾಮೋತ್ತೇಜನಕ್ಕೂ, ಅಂದಕ್ಕೂ, ಉಲ್ಲಾಸಕ್ಕೂ ಇದು ಸಹಕಾರಿಯಾಗುವುದು. ಸುಣ್ಣ, ಮೆಣಸು, ಶುಂಠಿ, ವೀಳ್ಯದೆಲೆ ಇವುಗಳನ್ನೆಲ್ಲಾ ಸೇರಿಸಿ ತಗೆದ ಕಷಾಯವು ಮಕ್ಕಳಿಗೆ ವಾಯುವನ್ನೂ, ಶೀತದೋಷವನ್ನೂ ನಿವಾರಿಸತಕ್ಕ ಉತ್ತಮೌಷಧವೆಂದು ಅನೇಕರು ಇದನ್ನು ಮಕ್ಕಳಿಗೆ ಕೊಡುವರು.

ತಾಂಬೂಲ ಸೇವನೆಯು ಬ್ರಹ್ಮಚಾರಿಗಳಿಗೂ, ವಿಧವೆಯರಿಗೂ, ವ್ರತನಿಯಮದಲ್ಲಿರುವವರಿಗೂ ನಿಷೇಧಿಸಲ್ಪಟ್ಟಿದೆ. ಇಂತಹವರು ತಾಂಬೂಲಚರ್ವಣಮಾಡಿದರೆ, ಗೋಮಾಂಸಭಕ್ಷಣ ಮಾಡಿದಷ್ಟು ಪಾತಕವೆಂದು ಹೇಳುವ ಸಂಸ್ಕೃತ ಶ್ಲೋಕವೊಂದುಂಟು.

'ತಾಂಬೂಲವನ್ನು ಮಿತಿಮೀರಿ ಸೇವಿಸುವುದರಿಂದ ಕಣ್ಣು, ಕಿವಿ, ಹಲ್ಲು, ಕೂದಲು ಇವೆಲ್ಲ ದುರ್ಬಲವಾಗಿ ದೇಹವೇ ಮೊತ್ತಕ್ಕೆ ಕೆಟ್ಟುಹೋಗುವುದು."

ಜ್ವರವಿದ್ದವರೂ, ಬಾಯೊಣಗಿದವರೂ, ರಕ್ತಪಿತ್ತವಿದ್ದವರೂ, ಮೂರ್ಛಾರೋಗವಿದ್ದವರೂ, ಕಣ್ಣುಬೇನೆಯುಳ್ಳವರೂ, ದುರ್ಬಲದೇಹಿಗಳೂ, ತಾಂಬೂಲವನ್ನು ಸೇವಿಸಬಾರದು. ಹೀಗೆ ತಾಂಬೂಲ ವಿಷಯವಾಗಿ ಸಂಸ್ಕೃತ ಶ್ಲೋಕಗಳು ಪ್ರಸಿದ್ಧವಾಗಿವೆ.

ಆದುದರಿಂದ, ಇನ್ನು ಮುಂದೆ ವಿವೇಕವಾಗಿ ತಾಂಬೂಲ ಸೇವನೆಯ ಅಭ್ಯಾಸವುಳ್ಳವರಿಗೆ ಎಚ್ಚರಿಸುವುದೇನೆಂದರೆ, ಆ ಅಭ್ಯಾಸವು ದವಡೆ, ಬಾಯಿ, ನಾಲಿಗೆ, ತುಟಿ, ಮುಂತಾದುವುಗಳಲ್ಲಿ ಅಧಿಕಸ್ರಾವವನ್ನುಂಟು ಮಾಡಿ, ಅಪಾಯ ಕಾರಣವಾಗುವುದರಿಂದ ಇದರಲ್ಲಿ ಆಸಕ್ತಿ ಕಡಿಮೆ ಮಾಡಬೇಕು. ಮಾದಕ ದ್ರವ್ಯಗಳನ್ನು ಹೇಗೋ ಹಾಗೆಯೇ ಇದನ್ನೂ ಅಧಿಕಸೇವನೆಯು ಅಪಾಯಕರವೆಂದು ತಿಳಿಯಬೇಕು.'

(ಅ ಚಿ)

ಟ್ರಂಕ ಟೆಲಿಫೋನ್

ಮೈಸೂರಿಗೂ ಸೌಕರ್ಯ

ಬೆಂಗಳೂರು ಮತ್ತು ಮೈಸೂರು ನಗರಗಳಿಗೆ ಟ್ರಂಕ್ ಟೆಲಿಫೋನ್ ಸೌಕರ್ಯಗಳನ್ನು ಒದಗಿಸುವ ಸಂಬಂಧವಾಗಿ, ಬೆಂಗಳೂರಿನಲ್ಲಿ 'ರಿಪೀಟರ್' ಯಂತ್ರವನ್ನು ಏರ್ಪಡಿಸುವುದಾಗಿ ಗೊತ್ತಾಗಿದೆ. ಈ ಉಪಯೋಗದಲ್ಲಿರುವ ಮದ್ರಾಸ್ ಬೆಂಗಳೂರು ಟ್ರಂಕ್ ಟೆಲಿಫೋನ್ ಜೊತೆಗೆ ಮೈಸೂರು ಸಂಸ್ಥಾನದ ಟೆಲಿಫೋನ್ ವ್ಯವಸ್ಥೆಯನ್ನು ಸೇರಿಸಬೇಕೆಂಬುದೇ ಈಗ ಪ್ರಯತ್ನದಲ್ಲಿರುವುದು. ಈ ಪ್ರಯತ್ನವು ಮುಂದಿನ ತಿಂಗಳು ಅಂತ್ಯದೊಳಗೆ ಮುಗಿಯುವುದರಲ್ಲಿ ಬಹುಮಟ್ಟಿಗೆ ಸಾಧ್ಯವಿದೆ.

ಗ್ರಾಮೋದ್ಧಾರಕ್ಕೆ ಸರ್ಕಾರದ ವಿಶೇಷ ಆಲೋಚನೆ

ಮೈಸೂರು ಸರ್ಕಾರದ ಕೈಗಾರಿಕೆ ಶಾಖೆಯ ಅಧಿಕಾರಿಗಳ ಸಭೆಯೊಂದು ಸರ್ಕಾರದ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಸೇರಿ ಇಂದು ಇರುವ ಕೆಲಸಕಾರ್ಯಗಳಿಗೆ ಅತಿ ಚಾಲನವಾಗುವಂತೆ ಗ್ರಾಮೋದ್ಧಾರ ಕಾರ್ಯವನ್ನು ಹೆಚ್ಚಿಸಲು ಪರ್ಯಾಲೋಚನೆಯು ನಡೆಯಿತೆಂದು ತಿಳಿದುಬಂದಿದೆ. ಯಾವ ಕಾರ್ಯವನ್ನು ಯಾವ ಹಳ್ಳಿಯಲ್ಲಿ ಹೇಗೆ ನಡೆಯಬೇಕೆಂಬುದನ್ನು ನೋಡಲು ತೀರ್ಮಾನಿಸಬೇಕಾಗಿರುವುದರಿಂದ ಈಗ ವೃದ್ಧಿಯಲ್ಲಿರುವ ಹಳ್ಳಿಗಳ ಪ್ರತ್ಯಕ್ಷ ಪರಿಸ್ಥಿತಿಗಳನ್ನು ಅಧಿಕಾರಿಗಳು ಸ್ವತಃ ತಿಳಿಯಲಿರುವರು.

ಈಗ ತೀರ್ಮಾನವಾಗಿರುವ ರೀತಿಯಲ್ಲಿ ಈಗ ವೃದ್ಧಿಯಲ್ಲಿರುವ ಹಳ್ಳಿಗಳಲ್ಲಿ ಮೊದಲು ಮಗ್ಗದ ನೇಯ್ಗೆಯನ್ನು ಪ್ರಚಾರ ಮಾಡಲಾಗುವುದು. ಅನಂತರ ಚಾಪೆಯನ್ನು ಹೆಣೆಯುವುದು, ಕಮ್ಮಾರ ಕೆಲಸ, ಬಡಗಿಸಾಮಾನುಗಳ ತಯಾರಿಕೆ, ಬೀಸುವ ಕಲ್ಲುಗಳನ್ನು ತಯಾರುಮಾಡುವುದು, ಎತ್ತಿನ ಗಾಣಗಳನ್ನು ಏರ್ಪಡಿಸುವುದು ಇತ್ಯಾದಿ ಕೆಲಸಗಳನ್ನು ಪ್ರಚಾರಮಾಡಲಾಗುವುದು.

ಮೊದಲು ಆರಂಭವಾಗಿರುವ ಮಗ್ಗದ ನೇಯ್ಗೆಯ ವ್ಯವಸ್ಥೆಗೆ ಪ್ರತಿ ಗ್ರಾಮದಲ್ಲಿಯೂ ಒಬ್ಬ ಪ್ರದರ್ಶಕನೂ ಒಬ್ಬ ಮೇಸ್ತ್ರಿಯೂ ಇರುವಂತೆ ಆಲೋಚಿಸಲಾಗಿದೆ. ಈ ಏರ್ಪಾಡಿಗೆ ಹಣವನ್ನು ಇಲಾಖೆಯೂ, ಸೊಸೈಟಿಗಳೂ ಒದಗಿಸುವುವು. ಗ್ರಾಮ ಪಂಚಾಯಿತಿಯವರು ಈ ಬಗ್ಗೆ ಯಾವ ಬಗೆಯಲ್ಲಿಯೂ ಹಣಕಾಸಿನ ಸಹಾಯ ಮಾಡಬೇಕಾಗಿರುವುದಿಲ್ಲ.

ದೊಡ್ಡಬಳ್ಳಾಪುರದಲ್ಲಿ ವೈ ಎಂ ಸಿ ಎ ಆಶ್ರಯದಲ್ಲಿ ಸ್ಥಾಪಿತವಾಗಿರುವ ಗ್ರಾಮೋದ್ಧಾರ ಕೇಂದ್ರದಂತೆ ಕ್ಲೋಸ್‌ಪೇಟೆಯಲ್ಲಿಯೂ ಒಂದು ಕೇಂದ್ರವನ್ನು ಸ್ಥಾಪಿಸಲು ನಿರ್ಧಾರವಾಗಿದೆ. ಇಲಾಖೆಯು ಗ್ರಾಮೋದ್ಧಾರ ಕಾರ್ಯಕ್ಕೆ ಎಷ್ಟು ಸಾಧ್ಯವೋ ಅಷ್ಟು ಸಹಾಯಮಾಡಬೇಕೆಂದು ತೀರ್ಮಾನವಾಯಿತು.

ಎಂ. ಎ. ನಾರಾಯಣರಾಯರ
ಶ್ರೀ ಸತ್ಯನಾರಾಯಣ ಪರಿಮಳ ಫ್ಯಾಕ್ಟರಿ,
ಜಗನ್ಮೋಹನ ಬಂಗ್ಲಾ ಬೀದಿ, ಮೈಸೂರು
ಪರಿಮಳ ಅಗರ ಬತ್ತಿ
ಉಪಯೋಗಿಸಿ ಪ್ರೋತ್ಸಾಹಿಸಿರಿ

ಮುಂದಕ್ಕೆ ಪಂ॥ ಜವಾಹಿರರೇ ಕಾಂಗ್ರೆಸ್ ಅಧ್ಯಕ್ಷರೇ ?

ಕಾಂಗ್ರೆಸ್ ಅಧ್ಯಕ್ಷರ ಅವಧಿಯನ್ನು ಒಂದು ವರ್ಷದ ಬದಲು ಮೂರು ವರ್ಷಕ್ಕೆ ಜಾಸ್ತಿ ಮಾಡಬೇಕೆಂಬುದಾಗಿಯೂ ಇದರಿಂದ ಕಾಂಗ್ರೆಸ್ ಅಧ್ಯಕ್ಷರು ತಮ್ಮ ಕಾರ್ಯಕ್ರಮವನ್ನು ಸಾಂಗವಾಗಿ ನೆರವೇರಿಸಲು ಸಾಧ್ಯವಾಗುವುದೆಂದೂ ಮಹಾತ್ಮಾ ಗಾಂಧಿಯವರು ಸೂಚಿಸಿರುವರೆಂದು ಗೊತ್ತಾಗಿದೆ. ಇದೇ ರೀತಿಯಲ್ಲಿ ಕಾಂಗ್ರೆಸ್ ಅಂಗರಚನೆಯಲ್ಲಿ ಬದಲಾವಣೆ ಮಾಡಬೇಕೆಂಬುದಾಗಿ ಮಹಾತ್ಮಾ ಗಾಂಧಿಯವರು ಮುಂದಿನ ಫೈಜ್‌ಪುರ ಕಾಂಗ್ರೆಸ್ಸಿನಲ್ಲಿ ತೀರ್ಮಾನಿಸಬೇಕೆಂದು ಸೂಚಿಸಿದ್ದಾರೆ.

ಆದರೆ ಈಗ ಒಂದು ಪ್ರಶ್ನೆ ಏಳುವುದು. ಈ ರೀತಿ ತೀರ್ಮಾನವಾಗುವದಾದಲ್ಲಿ ಈಗಿನ ಅಧ್ಯಕ್ಷರಾದ ಪಂ॥ ಜವಾಹಿರಲಾಲರ ನೇಮಕದವರೆಗೆ ಇದು ಅನ್ವಯಿಸುವುದೋ ಅಥವಾ ಮುಂದಿನ ಅಧ್ಯಕ್ಷರಿಗೆ ಇದು ಅನ್ವಯಿಸುವುದೋ ಎಂಬುದು ಈಗಿನ ಪ್ರಶ್ನೆ. ಆದರೆ ಮಹಾತ್ಮಾ ಗಾಂಧಿಯವರು ಪಂ॥ ಜವಾಹಿರಲಾಲ್ ನೆಹ್ರೂರವರಿಗೂ ಇದು ಅನ್ವಯಿಸಬೇಕೆಂಬ ಅಭಿಪ್ರಾಯವುಳ್ಳವರಾಗಿರುವಹಾಗೆ ಕಾಣುತ್ತದೆ. ಅಂದಮೇಲೆ ಪಂ॥ ಜವಹಿರಲಾಲ್ ನೆಹ್ರೂರವರು, ಮುಂದಿನ ಕಾಂಗ್ರೆಸ್ ಅಧ್ಯಕ್ಷರಾಗಿ ನಿಯುಕ್ತರಾಗಬಹುದು.

ಪೂರ್ವ ಜನ್ಮ ಸ್ಮರಣೆ.

ಪೂರ್ವಜನ್ಮದ ವೃತ್ತಾಂತವನ್ನು [illegible] ಕದ ಡಿಲ್ಲಿಯ ಶಾಂತಿದೇವಿಯು ತನ್ನ ಮರಣಾನಂತರ ಪುನರ್ಜನ್ಮ ತಾಳುವ ತನಕ ಅನುಭವಿಸಿರುವುದನ್ನು, ಅವಳನ್ನು ಪರೀಕ್ಷಿಸಿದ ಕೆಲವು ವಿದ್ವಾನ ಪತ್ರಿಕೆ[illegible] ಸ್ಪಷ್ಟವಾಗಿ ಹೀಗೆ ಹೇಳಿರುವಳಂತೆ— [illegible] ಮರಣಾನಂತರ ದೂಗೆಯ [illegible] ನಾನು ವಿವಿಧ ಬಣ್ಣದ ಬೇರೆ ಬೇರೆ ಆವರಣಗಳನ್ನು ದಾಟಿ ಮೇಲಕ್ಕೆ [illegible]ದೆನು. ಕಟ್ಟಕಡೆಗೆ ಒಂದು ಸ್ಥಳದ[illegible] ಯೊಂದನ್ನು ಮಾತ್ರ ಧರಿಸಿ [illegible] ನುಸ್ಸರಿಸ್ದಡೆಗೆ ಹೋದೆನು. [illegible] ಯಲ್ಲಿ ಅನೇಕ [illegible]ಕಾರದ [illegible]ದ ತುಂಡುಗಳು ಇದ್ದುವು [illegible] ಅನೇಕ ಜನರಿದ್ದರು. ಅವರಿಗೆ [illegible]ದು ಕಾಗದವನ್ನು ಅವನು ಕೆ[illegible]ನು. ಆ ಕಾಗದದಲ್ಲಿ ಏನನ್ನು [illegible] ನನ್ನನ್ನು ಎಲ್ಲಿಗೆ ಹೋಗಬೇಕೆಂ[illegible] ಸೂಚಿತವಾಗಿತ್ತು. ನನಗೂ [illegible] ಕಾಗದ ದೊರೆಯಿತು. ಆ ಮುದ್ರೆ [illegible] ನಿಷ್ಪಾಲಿಗಳ [illegible] ಒಂದು ಕತ್ತಲೆ ಕೋಣೆಗೆ ಒಯ್ದ[illegible] ಕತ್ತಲೆ ಕೋಣೆಯೇ ಗರ್ಭವ[illegible]ದು ಶಾಸ್ತ್ರಜ್ಞರ ಅಭಿಪ್ರಾಯ. ಇದಕ್ಕೆ [illegible]ವಳು ಸ್ವಪ್ನದಲ್ಲಿ ಹಸುಗಳಿಂದ ವೃತ[illegible] ಮುರಲಿ ಧರಿಸಿಕೊಂಡಿದ್ದ [illegible] ಕೃಷ್ಣನು (ಶ್ರೀ ಕೃಷ್ಣನು) [illegible] ಸುತ್ತಿರುವನೆಂದೂ ಹೇಳಿದಳು.



ನೀವೆಂದೂ ನೋಡದ ಅದ್ಭುತ ಚಲನ
ಚಿತ್ರಕ್ಕಾಗಿ ಸಿದ್ಧರಾಗಿರಿ!

೧೯೩೬ ನೇ ಇಸವಿಯ
ವರಪ್ರಸಾದ

ಕಲೆ, ಚತುರ್ಯ ಮತ್ತು ಕಥಾ ವಸ್ತುವಿನ ಪರಮಾವಧಿ
ವೃತ್ತ ಪತ್ರಿಕೆಗಳೂ ಜನರೂ ಏಕಾಭಿಪ್ರಾಯದಿಂದ ಹೊಗಳುವುದು
ಪ್ರದರ್ಶಿಸಿದ ಪ್ರದೇಶಗಳಲ್ಲೆಲ್ಲಾ ಅಸಾಧಾರಣ ದಿಗ್ವಿಜಯವನ್ನು ಹೊಂದುತ್ತಿದೆ.

ಈಗ ವೈಭವದಿಂದ ನಡೆಯುತ್ತಿರುವ ಸ್ಥಳಗಳು.—

೭ ನೇ ವಾರ ಬೆಂಗಳೂರಿನಲ್ಲಿ - -
೪ ,, ಸೇಲಂನಲ್ಲಿ - -
೩ ,, ತಂಜಾವೂರು ತಿರುಚನಾಪಳ್ಳಿಗಳಲ್ಲಿ
೨ ,, ಗದಗಿನಲ್ಲಿ - -

ಮಧುರೆಯಲ್ಲಿ 26—9—36 ರಿಂದ — ಚಿಕ್ಕಮಗಳೂರಿನಲ್ಲಿ 2—10—36 ರಿಂದ

ಮೈಸೂರು ಒಲಂಪಿಯಾದಲ್ಲಿ 9—10—36 ರಿಂದ

ಆನಂದದ ಸಂಪೂರ್ಣ ಸುಗ್ಗಿ. — ಬಂಗಾರದ ಬೆಳೆಯ ಚಿತ್ರ. — ನೋಡದೆ ಇರಬೇಡಿರಿ.

—:ವಿಶೇಷ ವಿಷಯಗಳಿಗೆ ಬರೆಯಿರಿ —

ದೇವಿ ಫಿಲಮ್ಸ್ ಲಿಮಿಟೆಡ್, ೪೫. ಮಿಂಟ್ ಸ್ಟ್ರೀಟ್ ಮದ್ರಾಸ್.

"ಬ್ರೇಕ್ ಪಿಲ್ಸ್"

INVENTED BY A HIMALAYAN SAGE

ಸ್ತ್ರೀಪುರುಷರಿಗೆ ಆನಂದವನ್ನುಂಟುಮಾಡುವುದು ಈ ಮಾತ್ರೆಗಳ ಮಹಿಮೆ. ಸ್ತ್ರೀಯರ ಗರ್ವಭಂಗಮಾಡಲು ಕಂಡುಹಿಡಿದಿರುವ ಮಾತ್ರೆಗಳಿವು. ಇವುಗಳಲ್ಲಿ ರಸ ವಿಷಾದಿಗಳು ಸೇರಿಲ್ಲ. ಕಸ್ತೂರಿ, ಚಿನ್ನ, ಹಿಮಾಲಯ ಪರ್ವತದ ವನಮೂಲಿಕೆಗಳು, ಮುಂತಾದುವುಗಳಿಂದ ದೊಡ್ಡ ಯೋಗೀಶ್ವರರ ಹತ್ತಿರ ಸಂಗ್ರಹಿಸಿ ಮುದುರತನವನ್ನು ಲೋಕದಲ್ಲಿ ಇಲ್ಲದಂತೆ ಮಾಡುವುದು. ಅರ್ಧ ಘಂಟೆಯೊಳಗಾಗಿ ವೀರ್ಯವನ್ನು ಕಲ್ಲಿನಂತೆಮಾಡಿ ರಮಿಸಲು ಉಲ್ಲಾಸವನ್ನು ಮಾಡುವುದು. ಗುಣವಿಲ್ಲದಿದ್ದಲ್ಲಿ ಹಣ ವಾಪಸು

ಮಾತ್ರೆಗಳು ರೂ ೫—೦—೦. ೩೦ ಮಾತ್ರೆಗಳು ರೂ ೩—೦—೦

(ಕಾಗದ ಪತ್ರಗಳು ಇಂಗ್ಲೀಷಿನಲ್ಲಿಯೇ)

ಶ್ರೀ ಎ ಎಸ್ ಮೂರ್ತಿ, ಚಿಕಾಕೋಲ್, ಗಂಜಾಮ್ ಡಿಸ್ಟ್ರಿಕ್ಟ್



ಟಿ. ಸಿ. ನಟರಾಜ್ ಔಷಧಾಲಯ,
ಸಯ್ಯಾಜಿರಾವ್ ರೋಡು, ಮೈಸೂರು.

ಇವರಲ್ಲಿ ನೇತ್ರಪರೀಕ್ಷೆಯು ಉಚಿತವಾಗಿ ಮಾಡಲ್ಪಡುತ್ತದೆ.

ಅಗತ್ಯವಾಗಿ ಬೇಕಾದ ಎಲ್ಲಾ ಇಂಜಕ್ಷನ್ ಔಷಧಿಗಳೂ ಸದಾ ಕಾಲದಲ್ಲಿ ದೊರಕುವುದಲ್ಲದೆ ಸಮಸ್ತ ವ್ಯಾಧಿಗಳಿಗೂ ಚಿಕಿತ್ಸೆಯು ಬಹು ಸುಲಭದಲ್ಲಿ ಮಾಡಲ್ಪಡುತ್ತದೆ

ಸ್ವದೇಶದ ಆಯುರ್ವೇದೀಯ ಸಿದ್ಧೌಷಧಗಳೆಲ್ಲವೂ ಸದಾ ದೊರಕುತ್ತವೆ

ದ್ರಾಕ್ಷಾಮೃತ

ಈ ದ್ರಾಕ್ಷಾಮೃತವು ಸಹ್ಯಾದ್ರಿ ಪರ್ವತದಲ್ಲಿ ಅನೇಕ ವನಸ್ಪತಿಗಳ ರಸದೊಂದಿಗೆ ದ್ರಾಕ್ಷಾರಸವನ್ನು ಮಿಶ್ರಮಾಡಿ ಸ್ವದೇಶಿ ಯಂತ್ರದಿಂದ ಶಾಸ್ತ್ರೋಕ್ತ ಪದ್ಧತಿ ಪ್ರಕಾರ ತಯಾರು ಮಾಡಿರುವುದರಿಂದ ಸ್ವಾದಿಷ್ಟವು ಮತ್ತು ಮಧುರವು ಆಗಿದೆ

ಇದರ ಸೇವನೆಯಿಂದ ಶರೀರದೊಳಗಿನ ಹಳೆ ಕಡಕಿ (ಗರಮಿ) ಸಂಪೂರ್ಣ ನಾಶವಾಗುತ್ತದೆ ಮತ್ತು ಧಾತುಸ್ರಾವ, ಸ್ವಪ್ನಾವಸ್ಥೆಯಿಂದ ಅಥವಾ ಬೇರೆ ಯಾವದೇ ಕಾರಣದಿಂದ ಬಂದ ಅಶಕ್ತತೆಯಿಂದ ಕೈಕಾಲು, ಕಣ್ಣೊಳಗೆ ಉರುಪು ಬೀಳೋಣ, ಶೌಚಕ್ಕೆ ಸಾಫ ಆಗದೆ ಇರೋಣ, ಮುಂತಾದ ಎಲ್ಲ ವಿಕಾರಗಳು ನಷ್ಟವಾಗಿ ಕ್ಷುಧಾಗ್ನಿ ಬೆಳೆಯುತ್ತದೆ ಮತ್ತು ಅನ್ನ ಒಳ್ಳೆಗಿ ಪಚನವಾಗಿ ಶೌಚಕ್ಕೆ ಸಾಫವಾಗುತ್ತದೆ. ಇದರ ಸೇವನೆಯಿಂದ ತರುಣರಿಗೆ ವ್ಯಭಿಚಾರದಿಂದ ಅಥವಾ ಬೇರೆ ಕಾರಣದಿಂದ ಬಂದ ಧಾತುಕ್ಷೀಣತೆ, ನಪುಂಸಕತ್ವ ಇದ್ದರೆ ಅದು ಹೋಗಿ ಪುನಃ ಯೌವನವಂತರಾಗಿ ಶರೀರ ಬಲಿಷ್ಠ ಮಕ್ಕಳು ಪುಷ್ಟಿವಂತರಾಗುವರು. ಹೆಂಗಸರಿಗೂ ಮತ್ತು ಮಕ್ಕಳಿಗೂ ಈ ಔಷಧವು ಗುಣಕಾರಿ ಇದೆ. ಮುಟ್ಟಾಗದಿದ್ದರೆ ಮತ್ತು ಮುಟ್ಟು ಗರ್ಭ ಸಂಬಂಧವಾದ ರೋಗಗಳಿದ್ದರೂ ಅವೆಲ್ಲ ಗುಣವಾಗಿ ಹೆಂಗಸರಿಗೆ ಸಂತತಿ ವೃದ್ಧಿಯಾಗುವದು. ಈ ಔಷಧದ ಮೂರು ಬಾಟ್ಲಿಗಳನ್ನು ಸೇವನೆ ಮಾಡಿದರೆ ಪೂರ್ಣ ಗುಣವಾಗುತ್ತದೆ. ಇದರ ಗುಣವು 1 ಬಾಟ್ಲಿ ಸೇವನ ಮಾಡಿದ ಅನಂತರ ನಿಮಗೆ ತಿಳಿದೀತು

1 ಬಾಟ್ಲಿ ಬೆಲೆ ರೂ ೧—೪—೦ 3 ಬಾಟ್ಲಿ ೩—೦—೦, 1 ಡಜನ ಬಾಟ್ಲಿ ೧೪—೦—೦

ಮ್ಯಾನೇಜರ್—ದ್ರಾಕ್ಷಾಮೃತ ಡಿಪ್ಪೋ ಪೋಸ್ಟ್ ನಿಪ್ಪಾಣಿ, ಜಿಲ್ಲಾ ಬೆಳಗಾವಿ

ಮೈಸೂರು ಸ್ಟಾಕಿಸ್ಟ್ಸ್—ಟಿ ಸಿ ನಟರಾಜ್ ಬೊಂಬಾಯಿ ಆನಂದ ಭವನ, ಮಾಡರ್ನ್ ಫಾರ್ಮಸಿ, ಸಯ್ಯಾಜಿರಾವ್ ರೋಡ್. ಬೆಂಗಳೂರು ಸಿಟಿ—ಸಿ ವಿ ಶಾಸ್ತ್ರಿ ಅಂಡ್ ಸನ್ಸ್, ಚಿಕ್ಕಪೇಟೆ. ತುಂಕೂರು—ವಿ ಆರ್ ಗುರು ಚನ್ನಬಸಪ್ಪ ಅಂಡ್ ಬ್ರದರ್ಸ್. ಚಿಕ್ಕಮಗಳೂರು—ಎಂ ಎಲ್ ಮಂಜಯ್ಯಶೆಟ್ಟಿ. ಶಿವಮೊಗ್ಗ—ಶ್ರೀಕೃಷ್ಣ ಟ್ರೇಡಿಂಗ್ ಏಜನ್ಸಿ ಮತ್ತು ಬಿಂದೋರಾವ್ ಬ್ರದರ್ಸ್. ದಾವಣಗೆರೆ—ಮಲ್ಲಿಕಾರ್ಜುನಪ್ಪ ಮತ್ತು ಕೆ ಭೋಜಯ್ಯಶೆಟ್ಟಿ ಅಂಡ್ ಬ್ರದರ್ಸ್

Eighty Pages - Half Anna.

The "SADHVI"

Dasara Special Supplement.

ADVERTISE IN IT.

: : "ಸಾಧ್ವಿ" ದಸರಾ ವಿಶೇಷ ಸಂಚಿಕೆ. : :

೮೦ ಪುಟಗಳು-ಅರ್ಧಾಣೆ ಮಾತ್ರ.

For Details & Advertisements Apply to —

The SADHVI Office, Mysore.

Asiatic Government Security Life Assurance Co., Ltd.

HEAD OFFICE-ASIATIC BUILDINGS BANGALORE CITY.

THIS IS PURELY A NATIONAL CONCERN

Managed by Experts
Low Premiums and Liberal Policy Conditions

Apply for Agency —
To
Mr H Venkataramiah,
Dist Supd
ASIATIC BUILDINGS,
Bangalore City Or
To
V RANGASAMI Esq
B A B L, F C I
General Manager



ಚೆನ್ನಾಗಿ ಅನುಭವವುಳ್ಳವರ ಒಡೆ
ತನಕ್ಕೆ ಒಳಪಟ್ಟ, ಕಡಿಮೆ ಪ್ರೀಮಿ
ಯಮ್ಮು ಮತ್ತು ಧಾರಾ
ಳವಾದ ಪಾಲಿಸಿ ಷರತ್ತುಗ
ಳೂ ಉಳ್ಳ ಶುದ್ಧ ಸ್ವದೇ
ಶೀ ವಿಮಾ ಸಂಸ್ಥೆ
ಏಜೆನ್ಸಿಗಾಗಿ ಕೆಳಗಿನ ವಿಳಾಸಕ್ಕೆ
ಬರೆಯಿರಿ —
ಹೆಚ್. ವೆಂಕಟರಾಮಯ್ಯ
ಡಿವಿಜನಲ್ ಸೂಪರಿಂಟೆಂಡೆಂಟ್
ಏಷ್ಯಾಟಿಕ್ ಬಿಲ್ಡಿಂಗ್ಸ್,
ಬೆಂಗಳೂರು ಸಿಟಿ
ಅಥವಾ
ಮ॥ ವಿ ರಂಗಸ್ವಾಮಿ, ಬಿ.ಎ., ಬಿ
ಎಲ್, ಎಫ್ ಸಿ ಐ
ಜನರಲ್ ಮ್ಯಾನೇಜರ್.

ಏಷ್ಯಾಟಿಕ್ ಲೈಫ್ ಇನ್ಷೂರೆನ್ಸ್ ಕಂಪೆನಿ ಲಿಮಿಟೆಡ್,

ಹೆಡ್ ಆಫೀಸ್—ಏಷ್ಯಾಟಿಕ್ ಬಿಲ್ಡಿಂಗ್ಸ್, ಬೆಂಗಳೂರು.

Edited, Printed & Published by Agaram Rangiah, B A at Sri Rama Press, D. Subbiah Road, Mysore

Registered No M 3534



॥ ಸತ್ಯಮೇವೋದ್ಧರಾಮ್ಯಹಮ್ ॥

ರಾಜಧಾನಿಯ ರಾಷ್ಟ್ರೀಯ ವಾರ ಪತ್ರಿಕೆ.

ವೃದ್ಧಪಿತಾಮಹ ಎಂ. ವೆಂಕಟಕೃಷ್ಣಯ್ಯನವರ ಜ್ಞಾಪಕಾರ್ಥವಾಗಿ ಪ್ರಕಟಿಸಲ್ಪಡುವುದು

ಸಂಪಾದಕರು ಆಗರಂ ರಂಗಯ್ಯ, ಬಿ ಎ

Sadhvi: A Leading Nationalist Weekly of Mysore.

FOUNDED IN MEMORY OF Mr M VENKATAKRISHNAYYA, THE GRAND OLD MAN OF MYSORE

ಪುಟ ೧] MYSORE : MONDAY 12—10—36 ಮೈಸೂರು : ಸೋಮವಾರ ೧೨—೧೦—೩೬ [ಸಂಚಿಕೆ ೩೦

ಲಿವರ್ ಕ್ಯೂರ್

(ಪಿತ್ತಕೋಶದ ರಕ್ಷಣೆ)

ಪಿತ್ತಕೋಶ, ಮತ್ತು ಯಕೃತ್ತುಗಳ ರೋಗ (ಗೆಡ್ಡೆ) ಗಳಿಂದ, ಮಕ್ಕಳನ್ನು ಕಾಪಾಡುವುದು

ವಿಳಾಸ:—ಜನ್ನಿ ವೆಂಕಟರಮಣಯ್ಯ,

ಲಿವರ್ ಮತ್ತು ಸ್ಪ್ಲೀನ್ ಸ್ಪೆಷಲಿಸ್ಟ್, ಮೈಲಾಪುರ, ಮದ್ರಾಸು

ಬಂಗಳೂರಿನ ಶಾಖೆ —ಆರ್ಕಾಟು ಶ್ರೀನಿವಾಸಾಚಾರ್ಲ ಬೀದಿ

ಕುಟುಂಬಗಳ ಮೇಲೆ : :
: ಕುಟುಂಬಗಳು ಎಡೆಬಿಡದೆ : :
: : ಅಪೇಕ್ಷಿಸುತ್ತಿರುವುದೇನು? :

ಹಿಂದೂಸ್ಥಾನ್ ಕೋ-ಆಪರೇಟಿವ್ ಇನ್ಷೂರೆನ್ಸ್ ಸೊಸೈಟಿ

(ಲಿಮಿಟೆಡ್,)

ಇವರ ಲಾಭಕರವಾದ ಜೀವ ವಿಮೆಯನ್ನೇ!

ಏಕೆಂದರೆ { ಅವರ ಸಂರಕ್ಷಣ / ಅವರ ಅಭ್ಯುದಯ / ಅವರ ಭದ್ರತೆಗಾಗಿ

ಹಿಂದೂಸ್ಥಾನಿನವರು ಈಗ
ಎಂಡೋಮೆಂಟ್ ಬೋನಸ್ **23** ರೂಪಾಯನ್ನೂ
ಹೋಲ್ ಲೈಫ್ ಬೋನಸ್ **20** ರೂ ಅನ್ನೂ ಕೊಡುತ್ತಾರೆ

ಮುಂದಿನ ವ್ಯಾಲ್ಯೂಯೇಷನ್ ೩೦ ನೇ ಏಪ್ರಿಲ್ ೧೯೩೭.

ಮದರಾಸ್ ಶಾಖೆ—ಹಿಂದೂಸ್ಥಾನ್ ಬಿಲ್ಡಿಂಗ್ಸ್, ಪೋಸ್ಟ್ ಬಾಕ್ಸ್ ೨೨೩, ಮದ್ರಾಸ್

ವ್ಯವಸ್ಥಾಪಕ ಶಾಖೆಗಳು — { ವಿಶಾಖ ಪಟ್ಟಣ, ಬೆಜವಾಡ, ಬಳ್ಳಾರಿ, ಕಲ್ಲೀಕೋಟೆ, ಮದುರ, ಕೊಯಮುತ್ತೂರು, ಕಡಲೂರು, ಬೆಂಗಳೂರು

"ಬ್ರೇಕ್ ಪಿಲ್ಸ್"

INVENTED BY A HIMALAYAN SAGE

● ಸ್ತ್ರೀಪುರುಷರಿಗೆ ಆನಂದವನ್ನುಂಟುಮಾಡುವುದು ಈ ಮಾತ್ರೆಗಳೆ ಮದಿಸಿದ ಸ್ತ್ರೀಯರ ಗರ್ವಭಂಗಮಾಡಲು ಕಂಡುಹಿಡಿದಿರುವ ಮಾತ್ರೆಗಳಿವು ಇವರಲ್ಲಿ ರಸ ವಿಷಾದಿಗಳು ಸೇರಿಲ್ಲ ಕಸ್ತೂರಿ, ಚಿನ್ನ, ಬಿಸೂಲಾಯ ಪರ್ವತದ ವನಮೂಲಿಕೆಗಳು ಮುಂತಾದುವುಗಳಿಂದ ದೊಡ್ಡ ಯೋಗೀಶ್ವರರ ಪತ್ರಿರ ಸಂಗ್ರಹಿಸಿ ಮುದುಕತನವನ್ನು ಲೋಕದಲ್ಲಿ ಇಲ್ಲದಂತೆ ಮಾಡುವುದು ಅರ್ಧ ಘಂಟೆಯೊಳಗಾಗಿ ವೀರ್ಯವನ್ನು ಕಲ್ಲಿನಂತೆ ಮಾಡಿ ರಮಿಸಲು ಉಲ್ಲಾಸವನ್ನು ಮಾಡುವುದ ಗುಣವಿಲ್ಲದಿದ್ದಲ್ಲಿ ಹಣ ವಾಪಸು

೬೦ ಮಾತ್ರೆಗಳು ರೂ ೧—೦—೦. ೩೦ ಮಾತ್ರೆಗಳು ರೂ ೩—೦—೦

(ಕಾಗದ ಪತ್ರಗಳು ಇಂಗ್ಲೀಷಿನಲ್ಲಿಯೇ)

ಡಾ॥ ಎ ಎಸ್ ಮೂರ್ತಿ ಪಿರಾಟೋಲ್, ಗಂಟೂರ್ ಡಿಸ್ಟ್ರಿಕ್ಟ್,



ಟಿ. ಸಿ. ನಟರಾಜ್ ಔಷಧಾಲಯ,

ಸಯ್ಯಾಜಿರಾವ್ ರೋಡು, ಮೈಸೂರು.

ಇವರಲ್ಲಿ ನೇತ್ರಪರೀಕ್ಷೆಯು ಉಚಿತವಾಗಿ ಮಾಡಲ್ಪಡುತ್ತದೆ

ಅತ್ಯಗತ್ಯವಾಗಿ ಬೇಕಾದ ಎಲ್ಲಾ ಇಂಜಕ್ಷನ್ ಔಷಧಿಗಳೂ ಸದಾ ಕಾಲದಲ್ಲೂ ಮಾರಕ್ಕುವುದಲ್ಲದೆ ಸಮಸ್ತ ವ್ಯಾಧಿಗಳಿಗೂ ಚಿಕಿತ್ಸೆಯು ಬಹು ಸುಲಭ ಛಾರ್ಜಿನಿಂದ ಮಾಡಲ್ಪಡುತ್ತದೆ

ಝಂಡೂರವರ ಆಯುರ್ವೇದೀಯ ಔಷಧಿಗಳೆಲ್ಲವೂ ಸದಾ ದೊರಕುತ್ತವೆ

ದ್ರಾಕ್ಷಾಮೃತ

ಈ ದ್ರಾಕ್ಷಾಮೃತವು ಸಹ್ಯಾದ್ರಿ ಪರ್ವತದಲ್ಲಿ ಅನೇಕ ವನಸ್ಪತಿಗಳ ರಸಗಳೊಂದಿಗೆ ದ್ರಾಕ್ಷಾರಸವನ್ನು ಮಿಶ್ರಮಾಡಿ ಸ್ವದೇಶಿ ಯಂತ್ರದಿಂದ ಶಾಸ್ತ್ರ ಪದ್ಧತಿ ಪ್ರಕಾರ ತಯಾರು ಮಾಡಿರುವದರಿಂದ ಸ್ವಾದಿಷ್ಟವು ಮತ್ತು ಮದ ಆಗಿದೆ

ಇದರ ಸೇವನೆಯಿಂದ ಶರೀರದೊಳಗಿನ ಹಳೆ ಕಾವತಿ (ಗರಮಿ) ಸಂಪೂರ್ಣನಾಶವಾಗುತ್ತದೆ ಮತ್ತು ಧಾತುಸ್ರಾವ, ಸ್ವಪ್ನಾವಸ್ಥೆಯಿಂದ ಅಥವಾ ಯಾವದೇ ಕಾರಣದಿಂದ ಬಂದ ಅಶಕ್ತತೆಯಿಂದ ಕೈಕಾಲು, ಕಣ್ಣೊಳಗೆ ಉರಿ ಬೇನೆ, ಶೌಚಕ್ಕೆ ಸಾಫ ಆಗದೆ ಇರೋದು, ಮುಂತಾದ ಎಲ್ಲ ವಿಕಾರಗಳು ನಾಶವಾಗಿ ಕ್ಷುಧಾಗ್ನಿ ಬೆಳೆಯುತ್ತದೆ ಮತ್ತು ಅನ್ನ ಚೆನ್ನಾಗಿ ಪಚನವಾಗಿ ಶೌಚ ಸಾಫವಾಗುತ್ತದೆ ಇದರ ಸೇವನೆಯಿಂದ ತರುಣರಿಗೆ ವ್ಯಭಿಚಾರದಿಂದ ಅಥವಾ ಬೇರೆ ಕಾರಣದಿಂದ ಬಂದ ಧಾತುಕ್ಷೀಣತೆ, ನಪುಂಸಕತ್ವ ಇದ್ದರೆ ಅದು ಪುನಃ ಯೌವನವಂತರಾಗಿ, ಶರೀರ ಬಲವಾಗಿ ಮಕ್ಕಳು ಪುಷ್ಟಿವಂತರಾಗಿ ಹೆಂಗಸರಿಗೂ ಮತ್ತು ಮಕ್ಕಳಿಗೂ ಈ ಔಷಧವು ಗುಣಕಾರಿ ಇದೆ ಮು ದ್ದರೆ ಮತ್ತು ಉಷ್ಣ ಗರ್ಭ ಸಂಬಂಧವಾದ ರೋಗಗಳಿದ್ದರೆ ಅವೆಲ್ಲ ಗುಣ ಹೆಂಗಸರಿಗೆ ಸಂತತಿ ವೃದ್ಧಿಯಾಗುವದು ಈ ಔಷಧದ ಮೂರು ಬಾಟ್ಲಿ ಸೇವನೆ ಮಾಡಿದರೆ ಪೂರ್ಣ ಗುಣಬರುತ್ತದೆ ಇದರ ಅನುಭವ 1 ಬಾಟ್ಲಿ ಮಾಡಿದ ಅನಂತರ ನಿಮಗೆ ತಿಳಿದೀತು

1 ಬಾಟ್ಲಿ ಬೆಲೆ ರೂ. ೧—೪—೦, ೩ ಬಾಟ್ಲಿ ೩—೮—೦, 1 ಡಜನ್ ಬಾಟ್ಲಿ ಬೆಲೆ ೧

ಮ್ಯಾನೇಜರ್—ದ್ರಾಕ್ಷಾಮೃತ ಡಿಪೋ ಪೋಸ್ಟ್ ನಿಪ್ಪಾಣಿ, ಜಿಲ್ಲಾ ಬೆ

ಮೈಸೂರು ಸ್ಟಾಕಿಸ್ಟ್ಸ —ಟಿ ಸಿ ನಟರಾಜ್, ಬೊಂಬಾಯಿ ಆನಂದ ಮಾಡರ್ನ್ ಫಾರ್ಮಸಿ, ಸಯ್ಯಾಜಿರಾವ್ ರೋಡ್ ಬೆಂಗಳೂರು ಸಿಟಿ— ಶಾಸ್ತ್ರಿ ಅಂಡ್ ಸನ್ಸ್, ಚಿಕ್ಕಪೇಟೆ ತುಂಕೂರು—ಟಿ ಆರ್ ಗುರ ಅಂಡ್ ಬ್ರದರ್ಸ್ ಚಿಕ್ಕಮಗಳೂರು—ಎಂ ಎಲ್ ಮುಂಡಯ್ಯ ಶೆಟ್ಟಿ ಮೊಗ್ಗ—ಶ್ರೀಕೃಷ್ಣ ಟ್ರೇಡಿಂಗ್ ಏಜನ್ಸಿ ಮತ್ತು ಹುಂಡೇರಾವ್ ಬ್ರದರ್ಸ್ ಣಗೆರೆ—ಮಲ್ಲೇರಪ್ಪ ಮತ್ತು ಕೆ. ಭೋಜಯ್ಯಶೆಟ್ಟಿ ಅಂಡ್ ಬ್ರದರ್ಸ್

॥ ಸತ್ಯಮೇವೋದ್ಧರಾಮ್ಯಹಮ್ ॥
ರಾಜಧಾನಿಯ ರಾಷ್ಟ್ರೀಯ ವಾರ ಪತ್ರಿಕೆ.
ವೃದ್ಧಪಿತಾಮಹ ಎಂ. ವೆಂಕಟಕೃಷ್ಣಯ್ಯನವರ ಜ್ಞಾಪಕಾರ್ಥವಾಗಿ ಪ್ರಕಟಿಸಲ್ಪಡುವುದು.
ಸಂಪಾದಕರು ಅಗರಂ ರಂಗಯ್ಯ, ಬಿ.ಎ.

ಸಂಪುಟ ೧] MYSORE : MONDAY 12—10—36 ಮೈಸೂರು : ಸೋಮವಾರ ೧೨—೧೦—೩೬ [ಸಂಚಿಕೆ ೩೪

...ರ್ವ ಪ್ರವಾಸ ಅವಶ್ಯಕವಿಲ್ಲ!

...ವಹದೀನ್ ಫ್ಯಾಕ್ಟೋರ್ಸ್ನವರು ಒಂದು ...ದಲ್ಲಿ ಒಂದು ಮುಖ್ಯವಾದ ...ನ್ನು ಹೇಳಿದ್ದಾರೆ "...ರತೀಯರ ವಿದ್ಯಾಭ್ಯಾಸಕ್ಕೆ ಬೇ...ಕಾದ ಸಮಸ್ತ ಸೌಕರ್ಯಗಳೂ ...ಭಾರತದಲ್ಲಿಯೇ ಇರುವಾಗ ಅನವ...ಶ್ಯಕವಾಗಿ ಮಕ್ಕಳನ್ನು ಇಂಗ್ಲೆಂಡಿ...ಗೆ ಕಳುಹಿಸುವುದು ಕೇವಲ ಅ... ...ತಪ್ಪು' ಎಂದು ಅವರು ಅಭಿಪ್ರಾ...ಯಪಟ್ಟಿದ್ದಾರೆ

...ಕ ನಲ್ಲಿ ಸರ್ಕಾರದವರು ವಿಜಯ...ನಗರದ ಚಿಕ್ಕ ಮಕ್ಕಳನ್ನು ವಿದ್ಯಾ...ಸಕ್ಕಾಗಿ ಇಂಗ್ಲೆಂಡಿಗೆ ಕಳುಹಿಸ...ಬೇಕು ಎಂದು ನಿಶ್ಚಯಿಸಿರುವುದಾಗಿ ವಾದಿಸಿ...ದವರು ಹೀಗೆ ಕಳುಹಿಸುವುದು ...ಅನಾವಶ್ಯಕವೆಂದ ಭಾವಿಸಿದರು ...ದ ಈ ತೀರ್ಮಾನದಿಂದ ...ಮರ 'ಯೂರೋಪ್ ವಿದ್ಯಾಭ್ಯಾ...ಸ...ಚಿತ್ತವು ಹಾರಿಬಿಡ...

* * *

...ಯಲ್ಲಿ ಕಪ್ಪೆ ಸತ್ತಿರುವಾಗ...

...ಶಾಸನ ಸಭೆಯಲ್ಲಿ ಸರ್ ಜೇ... ...ವರು ಅಖಿಲ ಭಾರತ ಗ್ರಾ...ಮೋದ್ಯೋಗ ಸಂಘದವರ ಕೆಲಸವನ್ನು ...ಸ್ತು ಅವರು ಏನೂ ಕೆಲಸ ...ವಿಲ್ಲವೆಂದು ಹೇಳಿದರು ...ಲಕ್ಷಾಂತರ ರೂಪಾಯಿಗಳನ್ನು ...ಸಾಡಿಸ ಸರ್ಕಾರದ ಗ್ರಾಮಾಭಿ...ವೃದ್ಧಿ ಕಾರ್ಯಕರ್ತರ ಒಗ್ಗ ... ...ವ ಆಗಲಿಲ್ಲ ...ಎಯಲ್ಲಿ ಕಪ್ಪೆ ಸತ್ತು ಬಿದ್ದಿ... ...ದ್ದಬ್ಬನ ಎಲೆಯಲ್ಲಿ ನೊಣ ...ವ ದಾಗ.

* * *

...ಕ್ತಿ ಧುರೀಣರು!

...ನ ಜವಹರಲಾಲರು ಮದರಾಸಿಗೆ ...ಗ ಅವರ ಉತ್ಸವವನ್ನು ನೋ... ...ವಿದ್ಯಾರ್ಥಿಗಳೂ ಹೋಗ... ...ನು, ಕ್ರಿಶ್ಚಿಯನ್ ಕಾಲೇಜಿನ ... ...ಕಟ್ಟಿಬಿಟ್ಟಿದ್ದ ವಾದಿಷ್ಟರಂತೆ ...ರಿಗಳ ಈ ರಾಜಭಕ್ತಿ ಪ್ರದರ್ಶ...ನ ... ಎಂದಿ ...ವರಿಗೆ ಕ್ಯಾಜರಿ ಹಿಂ... ...ತ್ತ ಹೊರಟುಹೋಗೇ ಎಂಬ ... ...ಯಿತು

ಅಹಂಕಾರಕ್ಕೆ ತಿರಸ್ಕಾರವೇ ಮದ್ದು!

ತಿರುಚನಾಪಳ್ಳಿಯ "ಕಾಂಗ್ರೆಸ್" ಪ್ರಾ...ಂತಬಾಧ್ಯಕ್ಷರಿಗೆ ಜವಹರಲಾಲರ ಪತ್ರವು ಸಮಯೋಚಿತವಾಗಿದೆ

"ತಮ್ಮಿಂದ ಮಾನಪತ್ರದ ನನಗೆ ಬೇಕಾಗಿರುವುದಿಲ್ಲ. ಕ್ಷಮಾಪಣಾ ಪತ್ರವು ಬೇಕು" ಎಂದು ಪಂಡಿತರು ಉಲ್ಲೇಖಿಸಿದ್ದಾರೆ

ಅಹಂಕಾರದಿಂದ ತಲೆ ತಿರುಗಿದ್ದ ನವ ಸ್ವರಿಗೆ ಈಗಲಾದರೂ ಬುದ್ಧಿ ಬಂದಿದೆಯೋ ಎಂಬುದನ್ನು ನೋಡಬೇಕು.

ಪೋಲಿಸು ಹೊರಬಿದ್ದರೆ!

ಭಾರತ ... ಕೃಷಿಕರ ವಿಷಯ ...ಗಿ ಸರ್ಕಾರದ ನಿರ್ದಿಷ್ಟ ವಿಷಯವನ್ನು ವಿವರಿಸಬೇಕೆಂದು ಶ್ರೀ ಗೋವಿಂದ ವಲ್ಲಭಪಂತರು ಒಂದು ಅವಸರ ರೇಖ...ವನ್ನು ಸೂಚಿಸಿದ್ದರು ಆದರ ಇದನ್ನು ಚರ್ಚಿಸಲು ಅಧ್ಯಕ್ಷರು ಅವಕಾಶವನ್ನು ಕೊಡಲಿಲ್ಲ

ಇಂತಹ ಸಂದರ್ಭಗಳನ್ನು ಪರಿಶೀಲಿಸಿದಲ್ಲಿ ...ಗುತ್ತಿದೆ ನಡೆದಿದೆ ಎಂದು ಪ್ರತಿಯೊಬ್ಬರಿಗೂ ಸಂಶಯವಾಗದೇ ಇರದು ಬೆಂಬಲ್...ವೆ ಹೋಗುವುದುಂಟು?

ಪಂಡಿತ ಜವಾಹರಲಾಲರು.

ಮದ್ರಾಸಾಧಿಪತ್ಯದಲ್ಲಿ ಸಂಚರಿಸುತ್ತಿರುವರು

ಯುದ್ಧಕ್ಕೆ ಯೋಗ್ಯರಲ್ಲವಂತೆ

"ಭಾರತದಲ್ಲಿ ಯುದ್ಧ ಸೇವೆಗೆ ಅರ್ಹರಾದ ಯುವಕರಿಲ್ಲ" ಎಂಬುದು ಸೈನ್ಯಾಧಿಕಾರಿ ಚೆಟ್‌ವುಡ್ಡರ ಅಭಿಪ್ರಾಯ ಇದನ್ನನುಸರಿಸಿ ಇದುವರೆಗೆ ಸೈನ್ಯ ಸೇವೆಗೆ ಭಾರತೀಯರನ್ನು ವಿಶೇಷ ಸೇರಿಸುತ್ತಿರಲಿಲ್ಲ

ಈಚೆಗೆ ಕೇಂದ್ರ ಶಾಸನ ಸಭೆಯಲ್ಲಿ ಚರ್ಚೆ ನಡೆದಾಗ ಮಾತನಾಡುತ್ತಾ

"ಡೆಹ್ರಾಡೂನ್ ಕಾಲೇಜಿಗೆ ಪರೀಕ್ಷೆ ಮೂಲಕ ಪ್ರವೇಶಿಸಿದ ಭಾರತದ ತರುಣರೆಲ್ಲರೂ ತೃಪ್ತಿಕರವಾಗಿ ಕೆಲಸ ಮಾಡುತ್ತಿರುವರು" ಎಂದು ಹೇಳಿದರು.

ಅಂತೂ ಸೈನ್ಯಾಧಿಕಾರಿಗಳ ವರ್ಗಕ್ಕೆ ಸೈನ್ಯ ... ಕಾರದ ... ಉತ್ತರವನ್ನು ಹೇಳಿದಂತಾಯಿತು.

ಆದರೇನು? ಭಾರತದ ಸೈನ್ಯದಲ್ಲಿ ಬ್ರಿಟಿಷರ ಭಾಗವು ಕಡಿಮೆಯಾಗುವುದು ಮಾತ್ರ ?

ಶ್ರೀಕಂಠೇಶ್ವರಯ್ಯನವರ ಮರಣ

ಚಿನಾಕುರಹಳ್ಳಿ ಶ್ರೀಕಂಠೇಶ್ವರಯ್ಯನವರು ನೆನ್ನೆ ದಿನ ಬೆಳಗಿನ ಜಾವ ಮೈಸೂರಿನಲ್ಲಿ ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದಿಸುತ್ತೇವೆ ಇವರು ಪೋಲೀಸ್ ಇನ್ಸ್‌ಪೆಕ್ಟರ್ ಜನರಲ್ಲರಾಗಿ ನಿವೃತ್ತರಾದರು ಅನಂತರ ಮೈಸೂರಿನ ... ಸಭಾಧ್ಯಕ್ಷರಾಗಿದ್ದರು. ದಕ್ಷತೆಯಿಂದಲೂ ... ವರ್ತನೆಯಿಂದಲೂ ಹಲವು ಮಂದಿ ಪ್ರಜೆಗಳ ಮತ್ತು ಸರ್ಕಾರದವರ ಮನ್ನಣೆಗೆ ಪಾತ್ರರಾಗಿದ್ದರು

ನೀನಾದರೇನು, ನಿನ್ನಪ್ಪನಾದರೇನು?

ಯಾರದೋ ತಪ್ಪಿಗೆ ಇನ್ನು ಯಾರನ್ನೋ ಶಿಕ್ಷಿಸುವುದು ಇತ್ತೀಚಿಗೆ ಕೇವಲ ಸಾಧಾರಣವಾಗಿ ಹೋಗಿದೆ

...ಮೃತ ಬಜಾರ್ ಪತ್ರಿಕೆಯ ಸಂಪಾದಕರು ಕೇಂದ್ರ ಶಾಸನ ಸಭಾಧಿಕಾರಿಗಳನ್ನು ತೀಕ್ಷ್ಣವಾಗಿ ಖಂಡಿಸಿದರೆಂಬ ಕಾರಣದಿಂದ, ಆ ಪತ್ರಿಕೆಯ ವಾರ್ತಾಹರರಿಗೆ ಅಧಿಕಾರಿಗಳು ಸೌಕರ್ಯಗಳನ್ನು ...ದ ಮಾಡಿದ್ದಾರೆ

ಯಾರಾದರೇನು? ಶಿಕ್ಷೆಯಾದರೆ ಸಾಕು" ಎಂಬ ನೀತಿಯನ್ನು ಅನುಸರಿಸಿರುವರೋ?

* * *

ಜಮೀನ್ದಾರರಿಗೆ ಸೊನ್ನೆ

ನೂತನ ರಾಜ್ಯಾಂಗ ವ್ಯವಸ್ಥೆಗೆ ಸಂಪೂರ್ಣ ಬೆಂಬಲವನ್ನಿತ್ತ ಜಮೀನ್ದಾರರಿಗೂ ಕೂಡಾ ಧನಸಹಾಯವನ್ನು ಕೇಂದ್ರ ಸರ್ಕಾರದಿಂದ ಕೊಡಬಾರದೆಂದು ತೀರ್ಮಾನವಾಯಿತು

ಈ ವಿಷಯವು ಪ್ರಾಂತಿಕ ಸರ್ಕಾರಕ್ಕೆ ಸಂಬಂಧಪಟ್ಟಿದೆಂದು ಅದನ್ನು ಅಧಿಕಾರಿಗಳು ತಳ್ಳಿಹಾಕಿದರು

ಅಂತೂ ಪ್ರಾಂತಿಕ ಸರ್ಕಾರ ಒಂದು ಕಡೆ, ಕೇಂದ್ರ ಸರ್ಕಾರವು ಮತ್ತೊಂದು ಕಡೆ—ಎರಡರ ನಡುವೆ ಜಮೀನ್ದಾರರಿಗೆ ಸೊನ್ನೆ ...

ಧಿ...ಯು ಸರ್ಕಾರದ ವಾಕ್ಯವು ... ... ಜಮೀನ್ದಾರರಿಗೆ ...

ಕನ್ನಡ ವರ್ಣಮಾಲೆಯ ಸುಧಾರಣೆಗಳು.

ಲೇಖಕರು — ಶ್ರೀ ಆರ್ ಕೆ ಸುಬ್ರಾಯಪ್ಪ, ಎಂ ಎ ಬಿ ಟಿ.
ಮೈಸೂರು

1 ಕನ್ನಡದಲ್ಲಿ ಒಟ್ಟು ಐವತ್ತೆರಡು ಅಕ್ಷರಗಳಿವೆ ಇವು ಹೆಚ್ಚು ಅನ್ನುವ ಬೇಕಾಗಿಲ್ಲ 2 ಕೆಲವು ಮಹಾಪ್ರಾಣಾಕ್ಷರಗಳನ್ನು ತೆಗೆದುಹಾಕಿ ಅಲ್ಪಪ್ರಾಣಾಕ್ಷರಗಳಿಗೆ ಸೂಕ್ತ ಪ್ರತ್ಯೇಕ ಚಿಹ್ನೆಗಳನ್ನು ಕೊಟ್ಟು ಮಹಾಪ್ರಾಣಾಕ್ಷರದ ಪ್ರಯೋಜನವನ್ನು ಪಡೆಯಬಹುದು ೩ ಸಂಯುಕ್ತಾಕ್ಷರಗಳನ್ನು ಬರೆಯುವಾಗ ಒಂದರ ಕೆಳಗೆ ಒಂದು ಅಕ್ಷರವನ್ನು ಬರೆಯುವದಕ್ಕೆ ಬದಲಾಗಿ ಮೊದಲ ಅಕ್ಷರಕ್ಕೆ ಒತ್ತು ಕೊಡಬೇಕಾಗಿದೆಯೋ ಆ ಅಕ್ಷರವನ್ನು ಮೊದಲು ಅರ್ಧಾಕ್ಷರದಲ್ಲಿ ಬರೆದು ಆ ಬಳಿಕ ಒತ್ತಿನ ಅಕ್ಷರವನ್ನು ಗುಣಿತಾಕ್ಷರವನ್ನಾಗಿ ಅದೇ ಪಂಕ್ತಿಯಲ್ಲಿ ಬರೆಯುವದು ಉತ್ತಮ "—

ಇದೇ ಈಗಿನ ಸುಧಾರಕರ ಅಭಿಪ್ರಾಯದ ಧ್ವನಿ ಈ ತಮ್ಮ ತತ್ವಗಳನ್ನು ಸ್ಥಾಪಿಸಲು, ಜನರಂಜಕವಾಗುವಂತೆ ಮಾಡಲು, ಅವರು ಈ ಕೆಳಗಿನ ಕಾರಣಗಳನ್ನು ಕೊಡುವರು —

"ಈಗ ಇಂಗ್ಲೀಷ್ ವರ್ಣಮಾಲೆಯನ್ನು ನೋಡಿ! ಇರುವ ಅಕ್ಷರಗಳೆಷ್ಟು? ಇಪ್ಪತ್ತಾರು ಮಾತ್ರ ಇಪ್ಪತ್ತಾರು ಅಕ್ಷರಗಳಲ್ಲ ಎಷ್ಟು ಜ್ಞಾನವನ್ನ ಗಳಿಸುವಂತೆ ಮಾಡಿರುವರು? ತಮಿಳು ವರ್ಣಮಾಲೆಯನ್ನು ನೋಡಿ! ಕರ್ನಾಟಕದವರಿಗಿಂತ ಎಷ್ಟು ಮುಂದುವರಿದಿರುವರು? ಬಂಗಾಲಿ ಮೊದಲಾದವರ ವರ್ಣಮಾಲೆಯನ್ನು ನೋಡಿ ವಿಸ್ತಾರವಾಗಿ ಬೇಡದ ಅಕ್ಷರಗಳನ್ನು ಇಟ್ಟುಕೊಂಡು ಮಕ್ಕಳ ಬುದ್ಧಿಯನ್ನು ಕ್ಲೇಶ ಪಡಿಸುವರೆ? ಬೇಡದ ಅಕ್ಷರಗಳನ್ನು ಕಲಿಯುವದಕ್ಕೆ ಕಾಲವನ್ನೂ, ಬುದ್ಧಿಯನ್ನೂ ಅನ್ಯಾಯವಾಗಿ ಏತಕ್ಕೆ ಖರ್ಚುಮಾಡಬೇಕು? ಒಂದು ಹೊತ್ತಿಗೆ ಆದರೂ ಯಾವದೋ ಒಂದು ಒಳ್ಳೆಯದನ್ನು ಕೊಡುವ ಫಲಕಾರಿಯಾಗುವ ಪ್ರಯೋಜನವನ್ನು ಗಳಿಸದಂತೆ ಹೇರಿದಂತೆ ನಾವ್ಯಾವ ಗುಲಾಮಗಿರಿ ಫಲಕಾರಕ್ಕೆ ನಮ್ಮನ್ನ ತಳ್ಳಿಕೊಳ್ಳಬೇಕು? ಕೆಲವು ಮಹಾಪ್ರಾಣಾಕ್ಷರಗಳು ಅಲ್ಪಪ್ರಾಣಾಕ್ಷರಗಳ ಕೆಲಸಗಳನ್ನು ಕೊಡುತ್ತಿರುವುದರಿಂದಾಗಿಲ್ಲವೆ? ಅಂತಹ ಕಾಲಹರಣಗಳನ್ನು ಮಾಡಿಕೊಳ್ಳುವುದು ನಮ್ಮ ಕೈಯಲ್ಲಿರುವಾಗ ನಾವೇಕೆ ನಮ್ಮನ್ನೆ ಬೇಡದ ಮುದ್ದನ್ನು ಕಟ್ಟಿಕೊಂಡು ಒದ್ದಾಡಬೇಕು? ಎಷ್ಟು ವರ್ಗೀಯಾವರ್ಗೀಯಾಕ್ಷರಗಳು ಇವುಗಳ ಅನುಬಂಧ ಒತ್ತುಗಳನ್ನು ಕಲಿಯಬೇಕು ನಮ್ಮಲ್ಲಿ ಈಗ ೩೪ ವ್ಯಂಜನಾಕ್ಷರಗಳಿವೆ ಇವು ಮೂವತ್ತು ನಾಲ್ಕು ಮೂವತ್ತು ನಾಲ್ಕು ಒತ್ತಕ್ಷರಗಳಾದಲ್ಲಿ ನಮ್ಮ ವರ್ಣಮಾಲೆಯ ಅಕ್ಷರಗಳು ಎಂಭತ್ತೆರಡು ಮೇಲ್ಪಟ್ಟದಂತಾಗುತ್ತವೆ ವರ್ಣಮಾಲೆಯ ಅಕ್ಷರಗಳು, ಗುಣಿತಾಕ್ಷರ ಮತ್ತು ಸಂಯುಕ್ತಾಕ್ಷರ ಇವುಗಳನ್ನು ಕಲಿಯುವುದೆ ನಮ್ಮ ಬಾಲಕರಿಗೆ ಒಂದು ವರ್ಷವಾಗಿಬಿಡುತ್ತದೆ ಎಷ್ಟು ಕಾಲದ ಧನ! ಎಷ್ಟು ಶಕ್ತಿವ್ಯಯ! ಇವನ್ನೂ ಉಳಿಸುವುದು ಒಳ್ಳೆಯದಲ್ಲವೆ? ಇದೂ ಅಲ್ಲದೆ ಅಚ್ಚುಹಾಕಲು ಅಕ್ಷರಗಳನ್ನು ಜೋಡಿಸುವದು ಎಷ್ಟು ಕಷ್ಟ! ಟೈಪ್‌ರೈಟರ್ ಯಂತ್ರಗಳನ್ನು ಕನ್ನಡ ಭಾಷೆಗಾಗಿ ತಯಾರಿಸುವದಕ್ಕೆ ಎಷ್ಟು ತೊಂದರೆ! ಕನ್ನಡವು ಹಿಂದೆ ಬಿದ್ದಿರುವದಕ್ಕೆ ವರ್ಣಮಾಲೆಯ ಭಾರವೇ ಕಾರಣವೆಂದು ತೋರುತ್ತದೆ

ವಾಚಕ ಮಹಾಶಯ, ಇದುವರೆಗೂ ಸುಧಾರಕರ ಮಾತು ಕೇಳಿದಾಯಿತು ಇನ್ನುಮುಂದೆ ಹಿಂದಿನವರ ಮಾರ್ಗವೇ ಮೇಲು, ಅದನ್ನೇ ಅನುಸರಿಸಿಕೊಂಡು ಹೋಗುವುದೊಳ್ಳೆಯದು ಎಂಬ ಅಭಿಪ್ರಾಯ ವಸ್ತುಪ್ರೇಮಿಗಳ ಮಾತುಗಳ ಕಡೆ ಸ್ವಲ್ಪ ದೃಷ್ಟಿಕೊಡಿ

ದೇವರು ತಾನು ಸೃಷ್ಟಿಸಿರುವ ಪ್ರತಿಯೊಂದು ಪ್ರಾಣಿಗೂ, ಆಟ ಕಾಲವನ್ನು ನಿಯಾಮಕ ಮಾಡಿರುವನು ಈ ಕಾಲವು ಮನುಷ್ಯನ ಜೀವಮಾನದಲ್ಲಿ, ಹುಟ್ಟಿದಲಾಗಾಯಿತು ಸುಮಾರು 11 ವರ್ಷಗಳವರೆಗೆ ನಡೆಯುವುದು ಅಬಳಿಕ ಬೇರೆ ರೂಪವನ್ನು ತಾಳುವುದು

ಅನಾಗರಿಕ ಸ್ಥಿತಿಯಲ್ಲಿದ್ದ ಜನರು ನಾಗರೀಕರಾಗುತ್ತ ಬರುವುದೂ ಕೂಡಾ ಈ ಆಟದ ಮಹಿಮೆಯಿಂದಲೇ ಹೇಳಬೇಕು ಪ್ರಾರಂಭದಲ್ಲಿ ಮನುಷ್ಯನು ತನ್ನ ಹೊಟ್ಟೆಯನ್ನು ತುಂಬಿಕೊಳ್ಳುವುದಕ್ಕಾಗಿ ತನ್ನ ಮರಿಗೆ ಸಿಕ್ಕಿದ ಪ್ರಾಣಿಯನ್ನು ಕೊಂದು ಅದನ್ನು ಹಾಗೆಯೇ ಭಕ್ಷಿಸಿ ತೃಪ್ತನಾಗುತ್ತಿದ್ದನು ಹಸಿ ಪದಾರ್ಥವನ್ನು ತಿಂದು ಹಾಗೆಯೇ ತೃಪ್ತಿಯನ್ನು ಹೊಂದುತ್ತಿದ್ದ ಮನುಷ್ಯನು ಈಗ ತನ್ನ ತೃಪ್ತಿಗಾಗಿ, ತನ್ನ ಕ್ಷುದ್ಬಾಧೆ ನಿವಾರಿಸಿಕೊಳ್ಳುವುದಕ್ಕಾಗಿ ಭಕ್ಷ್ಯ ಭೋಜ್ಯ, ಲೇಹ್ಯ, ಚೋಷ್ಯಗಳನ್ನು ತಯಾರು ಮಾಡುತ್ತಾನೆ. ಅವನ್ನು ತಯಾರಿಸಲು ಶ್ರಮ ಪಟ್ಟರೂ ಚಿಂತೆಯಿಲ್ಲ ಶ್ರಮವನ್ನು ಅನುಭವಿಸುತ್ತಾನೆ ಮೊದಮೊದಲು ನೀರು ಕುಡಿಯುವುದಕ್ಕಾಗಿ ಒರಟು ಮಣ್ಣಿನ ಪಾತ್ರೆಗಳನ್ನು ಉಪಯೋಗಿಸುತ್ತಿದ್ದನು ಈಗ ಅದೇ ಮಣ್ಣಿನ ಪಾತ್ರೆಗಳನ್ನು ನೋಡಿ ಎಷ್ಟು ಅಂದವಾಗಿವೆ! ಎಷ್ಟು ಮುದ್ದಾಗಿವೆ! ಎಷ್ಟು ಅಲಂಕಾರ ಯುಕ್ತವಾಗಿವೆ! ಅವೇ ಈ ಅಂತಹ ಪಾತ್ರೆಗಳನ್ನು ತಯಾರಿಸಲು ಕಾಲವೆಷ್ಟು ಬೇಕು! ಶ್ರಮವೆಷ್ಟು ಬೇಕು! ಚಿನ್ನ, ಬೆಳ್ಳಿ, ಪಾತ್ರೆಗಳ ಮತ್ತು ಬಿಡಿಗೆಗಳ ವಿಚಾರವನ್ನು ನಾವು ಹೇಳಬೇಕಾದ ದೇ ಇಲ್ಲ ತನ್ನ ದಾಹ ನೀಗಿಕೊಳ್ಳಲು ಒರಟು ಮಣ್ಣಿನ ಪಾತ್ರೆಯಲ್ಲಿ ಊಟ ಬಗ್ಗೆಗಳ ನಿರ್ಮಲೋದಕವನ್ನು ಕುಡಿಯುತ್ತಿದ್ದವನು ಇಂದು ಅಂದ ಚಂದಗಳಿಂದೊಪ್ಪುತ್ತಿರುವ, ಮಣ್ಣು ಚಿನ್ನ ಬೆಳ್ಳಿ ಪಾತ್ರೆಗಳಲ್ಲಿ ಯಾವಯಾವ ಬಗೆ ನೀರನ್ನು ಕುಡಿಯುತ್ತಿರುವನು! ಅವೆಲ್ಲ ಬೇಕಾದ ಪರ್ಯಂತಲೂ ಹೆಚ್ಚಿಲ್ಲವೆ!

ಈಗ ವಾಸಮಾಡುವ ಮನೆಯನ್ನು ತೆಗೆದುಕೊಳ್ಳಿ ಮೊದಲು ಮರದ ಪೊಟರೆಗಳಲ್ಲಿಯೂ, ಗುಹೆಗಳಲ್ಲಿ ವಾಸಮಾಡುತ್ತಿದ್ದವನು ಅವುಗಳನ್ನು ಹುಲಿ ಕರಡಿ ಮುಂತಾದವುಗಳಿಗೆ ಬಿಟ್ಟು, ಗುಡಿಸಲುಗಳನ್ನೂ, ಕುಟೀರಗಳನ್ನೂ ಕಟ್ಟಿಕೊಂಡನು ಈಗ ಅವನು ವಾಸಮಾಡುತ್ತಿರುವ ಮನೆಗಳ ಕಡೆ ನೋಡಿ ಅವನಿಗೆಷ್ಟೆಲ್ಲ ಬೇಕೆ! ಹಾಗೆಯೇ ಅವನ ಉಡಿಗೆ ತೊಡಿಗೆಗಳ ಕಡೆ ದೃಷ್ಟಿಯಿಡಿ ಉಡಿಗೆ ತೊಡಿಗೆಗಳಿಲ್ಲದೆ ಇರಬಹುದು ಹೋಗಲಿ ಎಂದರೆ ನಾರಿನ ಮೊಳ ಬಟ್ಟೆಯಾದರೆ ಸಾಕು ರೇಷ್ಮೆ ಕಂಬಳಿಗಳೇಕೆ? ಕಲಾಬತ್ತುಗಳೇಕೆ? ಕಾಲರು ನೆಕ್ಟೈಗಳೇಕೆ? ಕಾಲುಚೀಲ ಬೂಟ್ಸುಗಳೇಕೆ? ಕಲಾಬತ್ತಿನಿಂದ ಥಳಥಳಿಸುತ್ತಿರುವ ಸೀರೆಯನ್ನು ಸ್ವಲ್ಪಕಾಲ ಉಟ್ಟುಕೊಂಡಿರುವುದು ಕಷ್ಟವಾಗಿರುವಾಗ ಅದರಲ್ಲಿ ಮಾನವನಿಗೆ ಹೆಮ್ಮೆ ಏಕೆ! ಇವುಗಳೆಲ್ಲವೂ ಏತರ ಪ್ರಭಾವ! ದೇವರು ಮನುಷ್ಯನಿಗೆ ಹೊಟ್ಟೆಯನ್ನೇನೋ ಕೊಟ್ಟನು ಹೊಟ್ಟೆ ತುಂಬಿದ ಮೇಲೆ ಉಳಿದ ಕಾಲವನ್ನು ಕಳೆಯಲು ಆಟ ಕೊಟ್ಟನು ಆಟವು ಮಾನವನಿಗೆ ಭೋಗ್ಯ ವಸ್ತುಗಳನ್ನು ತಯಾರಿಸುವ ಮತ್ತು ಅವುಗಳನ್ನು ಅನುಭವಿಸುವ ಶಕ್ತಿಯನ್ನುಂಟುಮಾಡಿತು ಒರಟು ಮಣ್ಣಿನ ಪಾತ್ರೆಗಳನ್ನು ತಯಾರಿಸುತ್ತಿದ್ದ ಮಾನವನು ಇಂದು ಬೃಹನ್ನಾವೆ, ಕಪ್ಪುಗಳನ್ನು ತಯಾರು ಮಾಡುವ ಯೋಗ್ಯತೆಯನ್ನು ಪಡೆದನು ನಾಟಕ ಸಂಗೀತವೂ ಸೈನ ದತ್ತವಾದ ಲೀಲೆಯ ಮಹಿಮೆಯಿಂದಲೆಯಬೇಕು ಬ್ರಹ್ಮಸೃಷ್ಟಿಯಲ್ಲಿಯೂ ಆ ಲೀಲೆಯ ಪ್ರಭಾವವು ಎದ್ದು ತೋರಿ ಬರುವುದು

ಒಂದು ಮನ್ವಂತರದಲ್ಲಿರುವ ಜೀವಿ ಪ್ರಾಣಿಯಲ್ಲಿ' ಪವಿತ್ರ ಮನುಷ್ಯನಲ್ಲಿ' ನಮ್ಮ ಜೀವಮಾನದ ಒಂದು ಭಾಗದಲ್ಲಿ ನಾಟಕವು, ನಮಗಳು ಹೇಗೆ ಬಂದವೋ ಹಾಗೆಯೇ ಎಲ್ಲದರಲ್ಲೂ ಬಂದಿರಬೇಕು ಲೋಕದಲ್ಲಿ ಅನಾಕಾರವಾದ, ತ್ರಿಕೋಣಾಕಾರವಾದ ಮತ್ತು ವರ್ತುಲಾಕಾರವಾದ ವಸ್ತುಗಳು ಮಗುವಿನ ಮನಸ್ಸನ್ನು ಬೇಗ ಆಕರ್ಷಿಸುತ್ತವೆ ಆ ಬಳಿಕ ತ್ರಿಕೋಣಾಕಾರವಾದ ವಸ್ತುಗಳನ್ನು ಕ್ರಮದಿಂದ ತಿಳಿದುಕೊಳ್ಳುತ್ತದೆ ಆಮಾಕಾರವಾದ ವಸ್ತುಗಳ ಜ್ಞಾನವು ಉಂಟಾಗುವುದು ಸ್ವಲ್ಪ ಕಷ್ಟವಾದುದೇ ಸರಿ ವಾಚಕ ಮಹಾಶಯ, ಈಗ ನಮ್ಮ ಕನ್ನಡ ವರ್ಣಮಾಲೆಯನ್ನು ನೋಡಿ ಅಕ್ಷರಗಳು ವರ್ತುಲಾಕಾರವಾಗಿವೆ, ಮುದ್ದಾಗಿವೆ ಬಾ

(೯ ನೇ ಪುಟವನ್ನು ನೋಡಿ)

ನಂಜನಗೂಡು ವರ್ತಮಾನ

ಡೈಲ್ವೆ — ಪ್ರತಿ ಸೋಮವಾರದ ಚಾಮರಾಜನಗರದ ಸಂತೆಗೆ ಮೈಸೂರಿನಿಂದ ಹೋಗುವವರ ಸೌಕರ್ಯಕ್ಕಾಗಿ ಬೆಳಗಿನ ಏಳು ಘಂಟೆಗೆ ಮೈಸೂರಿಂದ ಹೊರಡುವ ರಾತ್ರಿ ನರಸಾಂಬುಧಿಯಿಂದ ಹೊರಡುವ ರೈಲುಗಳಲ್ಲಿ ಒಂದು ಬೋಗಿ ಗಾಡಿಯನ್ನು ಹೆಚ್ಚಿಗೆ ಹಾಕುವುದು ಅವಶ್ಯಕವೆಂದು ಸೂಚಿಸುತ್ತೇವೆ ರಸ್ತೆಯ ಕಷ್ಟವನ್ನು ಹೇಳತೀರದು ಬೋರ್ಡಿನವರು ನಿದ್ರಿಸುತ್ತಿರುವರೋ ಎಚ್ಚೆತ್ತಿರುವರೋ ಎಂದು ಹಲವರು ಕೇಳುತ್ತಾರೆ

ಲೇಂಡಿ ಕಂಟ್ರಾಕ್ಟ್ — ಕಂಟ್ರಾಕ್ಟುದಾರರು ಎಲ್ಲಾ ಕಟ್ಟಿನ ಅಂಗಡಿಗಳಲ್ಲಿ ಸ್ವಂತ ... ರಕ್ತ ಮಾರುತ್ತಿರುವರಂತೂ, ಇದು ... ಗಳ ನಮ್ಮದಿಗೆ ಭಂಗ ಬರುವ ... ವೂ ಇರುವುದಂತೂ ಕೇಳುತ್ತೇವೆ ... ದು ನಿಜವಿದ್ದಲ್ಲಿ ಕಲಾಪೆಯವರು ... ಬಿಟ್ಟು ನೋಡಿಕೊಳ್ಳಬೇಕಾದುದು

ಮುನಿಸಿಪಾಲಿಟಿ — ಶ್ರೀಮಾನ್ ... ಕೃಷ್ಣರಾಯರವರು ಅಧ್ಯಕ್ಷಸ್ಥಾನ... ಸ್ವೀಕರಿಸಿ ಬಹು ಕೊಂಚವೆಂದರೆ ೩೪ ... ದಿನಗಳು ಮಾತ್ರವಾಗಿದ್ದರೂ ಪುರ ಸಭೆ ... ಆಡಳಿತದಲ್ಲಿ ಬಹು ಚಟುವಟಿಕೆ ... ದಿದೆ. ಒರದನ ಬೀದಿಯಿಂದ ... ಕೇರಿಗೆ ಹೋಗುವ ಒಂದು ಹೊಸ ರಸ್ತೆಯ ... ನ್ನು ನಡಿಸುವವರಾಗಿದ್ದಾರೆ

ಹೊಸ ಆಸ್ಪತ್ರೆ ಕಟ್ಟಡ — ಇದರ ... ದ್ಘಾಟನೋತ್ಸವವು ಇಷ್ಟರಲ್ಲಿಯೇ ನೆರವೇರುವುದಾಗಿದೆ ಲೇಡಿ ಡಾಕ್ಟರವರು ... ಹೆರಿಗೆಯವರೂ ಶ್ರಮ ವಹಿಸಿ ಸರಸ ... ರೋಗಿಗಳನ್ನು ಆದರಿಸುತ್ತಿರುವುದು ... ಗಿಗೆ ಅರ್ಹವಾದುದು

ಮುನಿಸೀಫರ — ನಿಷ್ಪಕ್ಷಪಾತಿಗಳೂ ಸಮರ್ಥರೂ ಆದ ಶ್ರೀಮಾನ್ ಕೆ ಎನ್ ... ರಾಯರವರು ಹುಣಸೂರಿಗೆ ವರ್ಗ... ತ್ತಾರೆಂದು. ಕೇಳಿ ಅನೇಕರು ಚಿಂ... ತ್ತಾರೆ

ಹವಾ — ಸತ್ತಿಲ್ಲ ಮಳೆ... ಕೆರೆ ಕೆಳಗಿನ ರೈತರು ಈಗ ... ದ್ದಾರೆ

ಸಾಕ್ಷಿಮಾತ್ರರಿಗೆ ಸವಾಲ್

ಹಗ್ಗದ ಮೇಲೆ ಅಂತರಿಕ್ಷದಲ್ಲಿ ... ಸಾಧನೆಗಳನ್ನು ಕೆಲವರು ಮಾಡು... ವರಷ್ಟೆ ಇದು ಸುಳ್ಳೆಂದೂ ... ಮೂ ಕೇಳಿ, ಲಂಡನ್ನಿನ ಒಂದು ... ಕಾರರ ಕೂಟದವರು ಸವಾಲು ... ರು ಬಂಗಾಳದ ಪ್ರೊ|| ಸೋ... ಬುವನು ಇದನ್ನು ಮಾಡುವುದಾ... ಯುತ್ತಾನೆ ಇವನು ಇತರ ಅನೇಕ ... ತ್ಕಾರಗಳನ್ನೂ ಮಾಡುವನು ... ಮನುಷ್ಯನ ನಾಲಿಗೆಯ ತುದಿ... ಕತ್ತರಿಸಿ ಪುನಃ ಅದನ್ನು ಸೇರಿಸ...

ಅಬ್ದುಲ್ಲಾ ಗಾಂಧಿಗೆ ತ್ರಿಶಂಕು ಸ್ವರ್ಗ.

ಹೀರಾಲಾಲ್ ಗಾಂಧಿಗೆ ತ್ರಿಶಂಕು ಸ್ವರ್ಗವಾಗಿದೆ ಇತ್ತಲಾಗು ಕೆಟ್ಟ, ಅತ್ತಲಾಗು ... ಹಿಂದೂ ಮತವನ್ನು ಬಿಟ್ಟು ಮುಸಲ್ಮಾನನಾದ. ಈತನು ಮುಸಲ್ಮಾನರ ... ಹೊಡೆಯಲು ... ಮುಸಲ್ಮಾನ್ ಮುಖಂಡರಾದ ... ಷೌಕತ್ತಾಲಿಯವರು ಹೇಳುವ ... ಪಲವು ಮುಸಲ್ಮಾನ ಉತ್ಸಾಹಿಗಳು ... ಕೋಮುವಾರು ಸಮ್ಮೇಳನವನ್ನು ... ಅಬ್ದುಲ್ಲಾ ಗಾಂಧಿಯನ್ನು ... ಆದರ ಮುಖ್ಯೋದ್ದೇಶವಾ... ಇಂತಹ ಉದ್ದೇಶ್ಯದ ಪ್ರಯತ್ನ... ನಾವು ಭಾಗಿಗಳಾಗುವುದಿಲ್ಲವೆಂದು ... ಸಾರರವರು ಹೇಳಿದರು

ಹರಿಜನರಿಗೆ ಮಾಂಸದ ಮದ್ದು.

...ಯಾ ಜ್ವರಕ್ಕೆ ಮಾಂಸದ ಚಿಕಿತ್ಸೆ ...ವನ್ನು ಕೊಟ್ಟಲ್ಲಿ ಜಾಗ್ರತ ...ವಾಗುವುದೆಂದು "ಹರಿಜನ" ಪತ್ರಿಕೆಯಲ್ಲಿ ಮಹದೇವ ದೇಸಾಯಿಯವರು ಬರೆದಿದ್ದಾರೆ

...ರದ ಒಬ್ಬ ಮಾನ್ಯ ವಕೀಲ ... ಔಷಧವನ್ನು ಅನೇಕ ಕಡೆ ಉಪ... ಕೃತ ಕಾರ್ಯವಾಗಿರುವರೆಂದೂ ... ಗಾಂಧಿಜಿಯವರಿಗೆ ತಿಳಿಸಿರುವರೆಂದೂ ಹೇಳಲಾಗಿದೆ

ಕನ್ನಡಿಗರೇ ಆರೋಗ್ಯವಂತರು.

ಮುಂಬಾಯಿ ವಿಶ್ವವಿದ್ಯಾಲಯಕ್ಕೆ ಸಂಬಂಧಿಸಿದ ಕಾಲೇಜುಗಳಲ್ಲಿ ವ್ಯಾಸಂಗ ಮಾಡುವ ಎಲ್ಲಾ ವಿದ್ಯಾರ್ಥಿಗಳ ಆರೋಗ್ಯವನ್ನು ಕಳೆದ ವರ್ಷ ಪರೀಕ್ಷಿಸಲಾಗಿ, ...ಡಿಗ ವಿದ್ಯಾರ್ಥಿಗಳೇ ವಿಶೇಷ ದೃಢ...ರೆಂದೂ, ಗುಜರಾತಿ ವಿದ್ಯಾರ್ಥಿಗಳು ...ಗಿಂತಲೂ ಬೊಜ್ಜುಳ್ಳವರೆಂದೂ ... ...ದಿತು

ಪ್ರಣಯಕ್ಕೊ ಒಂದು ಪಾಠಶಾಲೆ!

...ಬರ್ಗಿನ ಪಾಠಶಾಲೆಗಳ ... ದ ವಿಷಯವನ್ನು ಬೋಧಿಸಬೇಕೆಂದು ಮಿ|| ಎ ಎಸ್ ... ಪ್ರವೀಣರು ಶಿಫಾರಸು ಮಾ... ಹೀಗೆ ಮಾಡಿದರೆ ವಿವಾಹ ವಿ...ಗಳು ಕಡಿಮೆಯಾಗುವವೆಂದು ಅ...ಪ್ರಾಯ

...ಬಳು ಬೇಕೇ ಮೆದಳು?

...ಡಿನ ಮಿ|| ವಾಡಿಂಗ್ಟನ್ ಎಂಬು... ಒಂದು ತರಹೆಯ ಹೊಸ ದ್ರವವ... ಕಂಡುಹಿಡಿದಿದ್ದಾರೆ.

...ದ್ರವವನ್ನು ಯಾವ ಪ್ರಾಣಿಯಲ್ಲಿ ... ಇಂಜಕ್ಷನ್ ಮೂಲಕ ಸೇರಿಸಿ ... ಹೊಸ ಮೆದುಳೊಂದನ್ನು ಉಂಟು ...ದ ವಂತೆ

ಫೆಡರೇಷನ್ ಸೇರುವ ಬಗ್ಗೆ ಆಲೋಚನೆ.

ಕಳೆದ ಮಂಗಳವಾರ ದಿವಾನರ ಚೇಂಬರಿನಲ್ಲಿ (ಸೆಕ್ರೆಟೆರಿಯೆಟ್) ಮೈಸೂರು ಎಗ್ಸಿಕ್ಯುಟಿವ್ ಕೌನ್ಸಿಲಿನ ಮೀಟಿಂಗು ನಡೆಯಿತು ಈ ಮೀಟಿಂಗಿನಲ್ಲಿ ಮೈಸೂರು ಫೆಡರೇಷನಿಗೆ ಸೇರುವ ವಿಷಯಕ್ಕೆ ಸಂಬಂಧಪಟ್ಟ ಕೆಲವು ಅಂಶಗಳು ಚರ್ಚಿಸಲ್ಪಟ್ಟವೆಂದು ತಿಳಿದುಬಂದಿದೆ ಆಹ್ವಾನದ ಮೇರೆ ರಟ್ಟಿರ್ಡ್ ಕೌನ್ಸಿಲರ್ ದಿವಾನ್ ಬಹದ್ದೂರ್ ವಿ|| ಕೆ ... ಮೀಟಿಂಗಿನ ಕಾರ್ಯಕಲಾಪಗಳಲ್ಲಿ ಭಾಗಿಗಳಾಗಿದ್ದರು

ಫೆಡರೇಷನ್ ವಿಚಾರದಲ್ಲಿ ಸರ್ ಮಿರ್ಜಾ ಇಸ್ಮೈಲ್‌ರವರೂ ರಾಜಮಂತ್ರ ಪ್ರವೀಣ ಶ್ರೀ ಎಸ್ ಪಿ ರಾಜಗೋಪಾಲಾಚಾರ್ಯರೂ ಬ್ರಿಟಿಷ್ ರಸಿಡೆಂಟರನ್ನು ಇತ್ತೀಚೆಗೆ ಸಂಧಿಸಿದ್ದರೆಂದು ವರ್ತಮಾನ

ಮೊಟ್ಟೆಯಲ್ಲಿ ಮೊಟ್ಟೆ

ಅಫ್ರಿಕಾದೇಶದ ... ಎಂಬಲ್ಲಿ ಒಂದು ಕೋಳಿಯು ಅದ್ಭುತ ಮೊಟ್ಟೆಯನ್ನಿಟ್ಟಿತು ಆ ಮೊಟ್ಟೆಯು 9 ಅಂಗುಲ ಉದ್ದವಾಗಿಯೂ 7½ ಅಂಗುಲ ಸುತ್ತಳತೆಯುಳ್ಳದ್ದಾಗಿಯೂ ಇತ್ತು

ಅದರ ಒಳಗೆ ಇನ್ನೊಂದು ಮೊಟ್ಟೆಯೂ, ಆ ಒಳಗಿನ ಮೊಟ್ಟೆಯಲ್ಲಿಯೇ ಮತ್ತೊಂದು ಮೊಟ್ಟೆಯೂ ಇದ್ದಿತೆಂದು ವರದಿಯಾಗಿದೆ.

ಒಂದೊಂದು ಕಾಗದಕ್ಕೆ ಮೂರು ಪೌಂಡು ಬೆಲೆ

ನ್ಯೂಯಾರ್ಕಿನ ಗ್ಲೋರಿಯಾ ಡರ್ಸ್ಟ್ ಎಂಬುವಳೊಬ್ಬಳು ಪ್ರಣಯ ಪತ್ರಗಳನ್ನು ಬರೆದು ಜೀವನವನ್ನು ನಡೆಸುತ್ತಿದ್ದಾಳೆ.

ಮೂರು ಪೌಂಡು ಫೀಸು ಕೊಟ್ಟಲ್ಲಿ ಇವಳಿಗೆ ಯಾರು ಬೇಕಾದರೂ ಎಂತಹ ಪ್ರಣಯಪತ್ರವನ್ನು ಬೇಕಾದರೂ ಬರೆಯಬಹುದು ಅವುಗಳಿಗೆ ಅವಳು ಪ್ರಣಯೋಚಿತವಾಗಿ ಉತ್ತರ ಕೊಡುವಳು

ಅವಳ ಪ್ರಣಯವು ಪತ್ರದೊಡನೆ ಮುಕ್ತಾಯವಾಗಬೇಕೇ ಹೊರತು ಅನ್ಯಥಾ ಕೂಡದು

ಅವಳ ಪ್ರಣಯಪೂರ್ವಕವಾದ ಉತ್ತರವು ಪ್ರಣಯಿಗೆ ವಿ ಪಿ ಮೂಲಕ ಬರುವಂತೆ.

ಕೋರ್ಟಿನಲ್ಲಿ ಆತ್ಮಹತ್ಯ ಪ್ರಯತ್ನ

ಮಿರಾಂತ್ತಿನ ಒಂದು ಕೋರ್ಟಿನಲ್ಲಿ ಮಧುರಾರಾಮನೆಂಬ ಮುದುಕನೊಬ್ಬನು 'ನ್ಯಾಯಾಧೀಶರು ನನಗೆ ಅನ್ಯಾಯಮಾಡಿದ್ದಾರೆ' ಎಂದು ಕೂಗುತ್ತ ಒಂದು ಹರಿತವಾದ ಕತ್ತಿಯನ್ನು ಹಿಡಿದು ತನ್ನ ಹೊಟ್ಟೆಗೆ ಚುಚ್ಚಿಕೊಳ್ಳುವುದರಲ್ಲಿದ್ದನು. ಪಕ್ಕದಲ್ಲಿದ್ದ ಲಾಯರು ತಪ್ಪಿಸಿದರು ಆನಂತರ ಪೋಲೀಸರು ಬಂದು ಅವನನ್ನು ವಶಮಾಡಿದರು

"ಪಾದ್ರಿಗಳ ಹಾವಳಿಯನ್ನು ನಿಲ್ಲಿಸಿರಿ"

ರೇವಾ ಸಂಸ್ಥಾನಿಕರ ಬಿನ್ನಹ

ರೇವಾ ಸಂಸ್ಥಾನದ ಮಾನ್ಯ ಜನರನೇಕರು ಸೇರಿ ಅಲ್ಲಿನ ಮಹಾರಾಜರಿಗೆ ಒಂದು ಬಿನ್ನಹವನ್ನು ಸಲ್ಲಿಸಿದ್ದಾರೆ

ತಮ್ಮ ಸಂಸ್ಥಾನದಲ್ಲಿ ಕ್ರೈಸ್ತ ಪಾದ್ರಿಗಳ ಹಾವಳಿಯು ವಿಶೇಷವಾಗಿರುವುದರಿಂದಲೂ ಅದರಿಂದ ಒಡಕುಂಟಾಗಿ ರಾಜ್ಯಕ್ಕೆ ಕೇಡಾಗುವುದೆಂದೂ ತಿಳಿಸಿ, ಪಾದ್ರಿಗಳನ್ನು ಹೊರ ಹಾಕಬೇಕೆಂದು ಪ್ರಾರ್ಥಿಸಲಾಗಿದೆ

ಆ ಕಾ ಶ ವಾ ಣಿ.

12ನೇ ಸೋಮವಾರ 6–30 ರಿಂದ 8 ಆರ್ಕೆಸ್ಟ್ರಾ ಸಂಗೀತ "ನಮ್ಮ ನಂಬಿಕೆಗಳು"—ಉಪನ್ಯಾಸ—13ನೇ ಮಂಗಳವಾರ 6 30 ರಿಂದ 8 ಕರ್ನಾಟಕ ಗಾನ ಕನ್ನಡ ಸಾಹಿತ್ಯ ಪರಿಷ—14 ... ದವಾರ 6 30 ರಿಂದ 8 ಕರ್ನಾಟಕ ವಾದ್ಯ ಸಂಗೀತ "ಸುಲಭವಾಗಿ ಟ್ರೈವ್ ಮಾಡುವುದು", ಮಿ|| ಟ್ರಾಲಿಪ್ ರವರ ಉಪನ್ಯಾಸ—15 ನೇ ಗುರುವಾರ 6–30 ರಿಂದ 8 ಕನ್ನಡ ನಾಟಕ, ಸೀತಾ ಕಲ್ಯಾಣ ಉಪನ್ಯಾಸ, ಅಂತರರಾಷ್ಟ್ರೀಯತೆಯ ಸಮಾಪ್ತಿ

ಪ್ರಾಣಿಗಳಿಗೂ ಸಂಚಾರ ನಿರ್ಬಂಧ

ಜರ್ಮನಿಯಲ್ಲಿ ಕಾಡು ಪ್ರಾಣಿಗಳ ಸಂಚಾರಕ್ಕೂ ಸಹ ಕಾನೂನು ನಿಯಮಗಳನ್ನು ಮಾಡುತ್ತಿರುವರು ಅರಣ್ಯಗಳಲ್ಲಿ ಆ ಪ್ರಾಣಿಗಳಿಗಾಗಿಯೇ ಹೊಸ ಮಾರ್ಗಗಳು ನಿರ್ಮಿಸಲ್ಪಡುವುವು ಅದರಲ್ಲಿಯೇ ಪ್ರಾಣಿಗಳು ಓಡಾಡಬೇಕು

ದಸರಾ ವಸ್ತುಪ್ರದರ್ಶನ.

ಮಹಿಳಾಶಾಖೆ.

ಈ ಸಲದ ದಸರಾ ವಸ್ತುಪ್ರದರ್ಶನದ ಮಹಿಳಾಶಾಖೆಯಲ್ಲಿ 'ಮೇಜ ಅಲಂಕಾರ' ವಿಚಾರದಲ್ಲಿ ಒಂದು ಸ್ಪರ್ಧೆ ನಡೆಸಲು ಏರ್ಪಾಟು ಮಾಡಲಾಗಿದೆ ಸ್ಪರ್ಧೆಗೆ ಸೇರಬಿಚ್ಛಿಸುವ ಸ್ತ್ರೀಯರು ತಮ್ಮ ಮನೆಗಳಿಂದಲೇ ಟೇಬಲ್ ಕ್ಲಾತ್, ಹೂ ಮುಂತಾದುವನ್ನು ತರಬೇಕು. ಪ್ರದರ್ಶನಾಧಿಕಾರಿಗಳು ಮೇಜುಗಳನ್ನೊದಗಿಸುತ್ತಾರೆ ಸ್ಪರ್ಧೆಗೆ ಪ್ರವೇಶಧನವಿರುವುದಿಲ್ಲ ಸ್ಪರ್ಧೆಗೆ ಸೇರಬಿಚ್ಛಿಸುವ ಮಹಿಳೆಯರು ಅಕ್ಟೋಬರ್ 16ನೇ ಭಾನುವಾರ ಸಾಯಂಕಾಲ 5 ಘಂಟೆ ಒಳಗಾಗಿ ಪ್ರದರ್ಶನದ ಕಾರ್ಯದರ್ಶಿಗಳಿಗೆ ಲಿಖಿತ ಮೂಲಕ ತಿಳಿಸಬೇಕು

ಸ್ಪರ್ಧೆಯಲ್ಲಿ ಉತ್ತೀರ್ಣರಾದವರಿಗೆ ಬಹುಮಾನಗಳನ್ನು ಕೊಡಲಾಗುವುದು.

ವಿನೋದಲಹರಿ

ಗುರು —"ಚಿತ್ರಹಿಂಸೆ" ಎಂದರೇನು?

ಶಿಷ್ಯ —ಕಾಂತಿನ ಪದ್ಧತಿಯಲ್ಲಿ ಮರಣವನ್ನು ವಿಧಿಸುವುದು

* * *

ವಿದೇಶದಿಂದ ಬಂದವರೊಬ್ಬರು ಉಪನ್ಯಾಸದಲ್ಲಿ —'ನಾನು ಇಂಗ್ಲೆಂಡಿಗೆ ಹೋದದ್ದರಿಂದಲೇ ಪರಿಶುದ್ಧನಾದೆನೆಂದು ಹೇಳಬಲ್ಲೆ"

ಸಭೆಯಲ್ಲೊಬ್ಬ "ವಾಪಸು ಹೋದರೆ ಸರಿ!"

* * *

ಕೋಪಲನೇ ಭಿಕ್ಷುಕ —ಈ ಊರಿನಲ್ಲಿ ಏನಾದರೂ ಗಿಟ್ಟುತ್ತದೆಯೋ?

ಎರಡನೆಯವನು —ಪ್ರಯೋಜನವಿಲ್ಲ ಅಯ್ಯಾ ಭಿಕ್ಷೆ ಕೇಳಿದರೆ ಕೆಲಸ ಕೊಡುತ್ತಾರೆ

* * *

ಅವನು — ಅವಿವಾಹಿತನೆಂದರೇನು?

ಇವನು —ಪ್ರಣಯ ಕಾರ್ಯಗಳಲ್ಲಿ ಸಿಕ್ಕಿ ಬೀಳದಿದ್ದವನು

* * *

ಅವಳು —ಹೊ ಕಾಣಿಂದು ಕೊಳ್ಳುತ್ತೀರಾ?

ಇವಳು —ಇಲ್ಲ ನುಗ್ಗಲು ಮನೆಯವರ ಮುಲ್ಲಿಗೆ ಹೂವಿನ ಗಿಡದಿಂದ ವರ್ಣಿಸಿದರೆ ಸಾಕು, ಅವರೇ ಕೊಡುತ್ತಾರೆ

* * *

ಗೂತನ ಮದ —ನಿನ್ನ ಹಣಕ್ಕೋಸ್ಕರ ನನ್ನನ್ನು ನೀನು ಮದುವೆಯಾಗುತ್ತಿದ್ದಿರಾ?

ಗಂಡ —ಇಲ್ಲ ಬೇರೆ ಮಾರ್ಗವೇ ನಾದರೂ ಇದ್ದಿದ್ದರೆ ಆಗುತ್ತಿರಲಿಲ್ಲ

* * *

ಜಡ್ಜಿ —(ಅಪರಾಧಿಗೆ) ಏನಾದರೂ ಹೇಳತಕ್ಕದ್ದಿದೆಯೋ?

ಅಪರಾಧಿ —ಏನೂ ವಿಶೇಷವಿಲ್ಲ ತಮ್ಮಂತಹವರು ಬಹಳ ಉದಾರಿಗಳು ಎಲ್ಲದರಲ್ಲಿಯೂ ಘೋರ ಶಿಕ್ಷೆ ಕೊಡುವುದಿಲ್ಲವೆಂದು ಹಾಗೆಯೇ

* * *

ಉಪಾ —ಮಿಸ್ಟರ್ ಮುಚ್ಚರು ಎಂದು ಬರೆದಿದ ನೀನೇನಯ್ಯಾ?

ಹುಡುಗ —ಹೌದು ಸಾರ್, ನಾನೇ

ಉ —...ಸಂತೋಷ ನೀನೊಬ್ಬನಾದರೂ ಸತ್ಯವನ್ನು ಹೇಳುವೆಯಲ್ಲಾ

* * *

ಲಾಯರು ಸಾಕ್ಷಿಯನ್ನು ಕುರಿತು —ನೀನು ಸೌದೆಗಾಡಿಯನ್ನು ಹೊಡೆಯುತ್ತೀಯಲ್ಲವೇನಯ್ಯಾ?

ಸಾಕ್ಷಿ— ಇಲ್ಲ, ಸ್ವಾಮಿ.

ಲಾ—ನಾನು ಹಾಗೆ ತಿಳಿದುಕೊಂಡಿದ್ದೆ ಜೀವನಕ್ಕೇನು ಮಾಡುತ್ತೀ ಮತ್ತೆ?

ಸಾ—ಒಂಟಿಯನ್ನು ಎಳೆಯುವ ಎತ್ತುಗಳನ್ನು ಹೊಡೆಯುತ್ತೇನೆ.

ಸೂಚನೆ

"ಸಾಧ್ವಿ' ನವರಾತ್ರಿ ವಿಶೇಷ ಸಂಚಿಕೆಯು ಸರಸ್ವತೀ ಪೂಜೆಯ ದಿನ—ಎಂದರೆ ತಾ॥ 21-10-36 ಕ್ಕೆ ಹೊರಡುವುದು ಅದನ್ನು ನಮ್ಮ ಚಂದಾದಾರರಿಗೆ ಉಚಿತವಾಗಿ ಕೊಡಲಾಗುವುದು ಆದ್ದರಿಂದ ಮುಂದಿನ ವಾರ ನಮ್ಮ ಪತ್ರಿಕೆಗೆ ರಜಾ ಕೊಡಲಾಗಿದೆ

ವ್ಯವಸ್ಥಾಪಕ.

ಸಾಧ್ವಿ
೧೨-೧೦-೩೬ನೇ ಸೋಮವಾರ

ದೇಶಕ್ಕೆ ಬೇಕಾದುದೇನು?

ದಿವಾನ್ ಸಾಹೇಬರ ಸರ್ಕಾರದ ಸೂತ್ರಧಾರಿಗಳು ಕೂಡಿದ ಮುಷ್ಟಿಗೂ ಅವರ ರಾಜನೈಪುಣ್ಯವನ್ನನುಸರಿಸಿಯೋ ದೇಶದ ಪ್ರಜೆಗಳ ಬಗ್ಗು ಹೋಗುಗಳು, ಹಣದ ಒಳಹು ರಾಜ್ಯದ ಸಮೃದ್ಧಿಯಾಗಲೀ, ಹೊರದೇಶದವರ ಹೊಗಳಿಕೆಯಾಗಲೀ, ಉತ್ತಮವಾದ ಆಡಳಿತಕ್ಕೆ ಗುರುತಲ್ಲ. ಜನರ ಮಹತ್ವಾಕಾಂಕ್ಷೆಯೂ, ಆರ್ಥಿಕೋನ್ನತಿಯೂ ನಿಜವಾದ ಕುರುಹುಗಳು.

ಅಧಿಕಾರಸ್ಥಾನಗಳಲ್ಲಿ ಯಾವನಾದರೊಬ್ಬನು ಉನ್ನತ ಪೀಠವನ್ನು ಹತ್ತಬಹುದು, ಕೆಳಗೆ ಬೀಳಬಹುದು ಅಧಿಕಾರಿಗಳಲ್ಲಿ ತೀರಾ ಅವಿವೇಕಿಗಳೂ ಇರಬಹುದು, ಬಹು ಬುದ್ಧಿವಂತರೂ ಇರಬಹುದು ಇವೊಂದೂ ಇಂದು ದೇಶಕ್ಕೆ ಬೇಕಾಗಿಲ್ಲ. ಇಂದು ದೇಶಕ್ಕೆ ಬೇಕಾಗಿರುವುದೇನು? ಅದಕ್ಕೆ ಒಂದೇ ಉತ್ತರವೆಂದರೆ ಜನರ ಜೀವನ ಸಮಸ್ಯಾ ಪೂರಣ, ರಾಜ್ಯದ ಮತ್ತು ಪ್ರಜೆಗಳ ಹಕ್ಕುಬಾಧ್ಯತೆಗಳ ಸಂರಕ್ಷಣ. ದಿವಾನ್ ಸಾಹೇಬರವರ ಮುಂದಿನ ವರದಿಯಲ್ಲಿ ಈ ಸಂಗತಿಗಳ ದೃಷ್ಟಿಯಿಂದ ವಿಮರ್ಶೆಯನ್ನು ದೇಶವು ನಿರೀಕ್ಷಿಸುತ್ತಿದೆ?

ರೈತರ ಸಾಲದ ಹೊರೆ, ವಿದ್ಯಾವಂತರ ನಿರುದ್ಯೋಗ, ಅಧಿಕಾರಕ್ಕಾಗಿ ನಡೆಯುತ್ತಿರುವ ತೀಕ್ಷ್ಣವಾದ ಹೊಡೆದಾಟ ಮತಾಂತರಗಳವರು ಹಿಂದುಗಳ ಮೇಲೆ ನಡೆಸುತ್ತಿರುವ ಧಾಳಿ, ಶಕ್ತಿ ಮೀರಿ ತೆರುತ್ತಿರುವ ತೆರಿಗೆ, ಅಧಿಕಾರಿಗಳ ಸಂಬಳಕ್ಕೇ ಸಾಲದೆ ಕಣ್ಣುಬಾಯಿ ಬಿಡುತ್ತಿರುವ ಸ್ಥಳೀಯ ಸಂಸ್ಥೆಗಳು, ಇವೆಲ್ಲವೂ ಸರ್ ಮಿರ್ಜಾರವರ ರಾಜನೀತಿ ಕೌಶಲ್ಯದ ಔದಾರ್ಯವನ್ನು ಕಾದಿವೆ ಸಾರ್ವಭೌಮರ ಮನ್ನಣೆಯಾಗಲೀ, ಇಡೀ ಪ್ರಪಂಚದ ಹೊಗಳಿಕೆಯಾಗಲೀ ಸರ್ ರವರ ಹೆಸರನ್ನು ಶಾಶ್ವತಗೊಳಿಸವು. ತಾವು ಯಾರ ನಡುವೆ ಹುಟ್ಟಿ, ಯಾರೊಡನೆ ಬೆಳೆದು ವೈಭವಕ್ಕೆ ಬಂದಿರುವರೋ ಅಂತಹ ಅರವತ್ತೈದು ಲಕ್ಷ ಮಂದಿ ಸಹೋದರರ ಜೀವನ ಸಮಸ್ಯೆಯ ತೊಡಕುಗಳನ್ನು ಪರಿಶೀಲಿಸುವುದರಿಂದ ಉದಾರವಾದ ಸ್ನೇಹದ ಪರಿಹಾರ ಪ್ರದರ್ಶನದಿಂದ ಮಾತ್ರವೇ ಸಾಧ್ಯ

ಭಾರಿಯ ಕೈಗಾರಿಕೆಗಳನ್ನು ಸ್ಥಾಪಿಸುವುದರಿಂದ ದೇಶೋನ್ನತಿಯಾಗದು ಬಂಡವಾಳಗಾರರು, ಕೂಲಿಯವರೆಂಬ ಎರಡು ತರಗತಿಗಳು ಶಾಶ್ವತವಾಗಿ ನಿಂತು ಹೋಗಲು ಕಾರಣ ಅಸಂತುಷ್ಟಿಯು ಬೆಳೆಯುವುದು ಸತ್ಯ ದೇಶವು ಹೊರಗಿನವರಿಗೆ ತವರ ಬಾಗಿಲಾಗುವುದು ಮನುಷ್ಯನು ಯಂತ್ರದ ದಾಸನಾಗುವನು. ಫಲವು ದರೆ ಹೊರಗಿನವರ ಹೊಗಳಿಕೆಯೊಂದೆ

ಪ್ರತಿಯೊಬ್ಬ ಮೈಸೂರು ನಿವಾಸಿಯೂ

ಉಪ್ಪು	4—0—0
ಸೀಮೆ ಎಣ್ಣೆ	೩—೬—0
ಬಟ್ಟೆ	೨—೮—0
ಪೂಗವಿ, ಎಕ್ಸೈಸ್ ವಗೈರೆ	೩—0—0

ಸರಾಸರಿಯಾಗಿ ತನ್ನ ಮೂವತ್ತು ರೂಪಾಯಿನ ವರಮಾನದಲ್ಲಿ ಹನ್ನೆರಡು ರೂಪಾಯಿಗಳಂತೆ ವರ್ಷಕ್ಕೆ ತೆರುತ್ತಿದ್ದಾನೆ ದೇಶವು ಇದರ ಪರಿಣಾಮವೇನೆಂದು ಕೇಳುತ್ತಿದೆ ರಾಜನೀತಿಯು ಇದಕ್ಕೆ ಉತ್ತರವನ್ನು ಕೊಡಬೇಕಾಗಿದೆ

ಯಾವ ಗ್ರಾಮವನ್ನು ತೆಗೆದುಕೊಂಡರೂ ಅಲ್ಲಿನ ನಿವಾಸಿಗಳಿಗೆ ಸಾಕಾದಷ್ಟು ಬೆಳೆಯಲು ತಕ್ಕಷ್ಟು ಭೂಮಿಯೂ ಆ ಗ್ರಾಮದ ರೈತರಿಗಿಲ್ಲ, ಅಲ್ಲಿನ ಭೂಮಿ ಎಲ್ಲವನ್ನೂ ಉಳುವುದಕ್ಕೆ ಸಾಕಾದಷ್ಟು ಉತ್ತಮ ರಾಸುಗಳಿಲ್ಲ. ಹಾಲು, ಮೊಸರುಗಳಿಗೆ ಸಾಕಾದಷ್ಟು ಹಸುಗಳಂತೂ ಇಲ್ಲವೇ ಇಲ್ಲ ಈ ತೊಡಕುಗಳೊಂದಿಕ್ಕೊತ್ತಿಯುಕ್ತದೆ ಗ್ರಾಮೋದ್ಧಾರವೆಂತಹುದು ಸಾಧ್ಯ

ಇವೆಲ್ಲವನ್ನೂ ಪರಿಶೀಲಿಸಿ, ಮೈಸೂರಿನ ಹೊರಗಿರುವ ಮೈಸೂರಿನ ನಿವಾಸಿಗಳ ಹಕ್ಕುಬಾಧ್ಯತೆಗಳಿಗೂ, ಮೇಲ್ಮೈಗೂ ಮಡಿಯುವಷ್ಟು ಸ್ಥೈರ್ಯವೂ ಸಾಹಸವೂ ನಮ್ಮ ದಿವಾನ್ ಸಾಹೇಬರವರಿಗುಂಟಾಗಲೆಂದು ನಾವು ಕೋರುವೆವು

ಪೊಲೀಸ್ ಐ ಜಿ ರವರು.

ಪೊಲೀಸ್ ಇನ್ಸ್ಪೆಕ್ಟರ್ ಜನರಲ್ಲರಾದ ಮಿ॥ ಹ್ಯಾಮಿಲ್ಟನ್ನರವರು ತಮ್ಮ ಕೆಲಸದಿಂದ ನಿವೃತ್ತರಾಗುವ ಮೊದಲು ಮೂರು ತಿಂಗಳು 15 ನೇ ತಾ॥ ನಿಂದ ರಜಾದ ಮೇಲೆ ಹೋಗುವರು

ಪೌರಸಭೆಗಳ ಕರ್ತವ್ಯ.

ಬರೀ ಕಸವನ್ನು ಗುಡಿಸಿ, ಹೊಲಸನ್ನು ಹೊರಗೆ ಹಾಕಿಬಿಟ್ಟರೆ ತಮ್ಮ ಕೆಲಸ ಪೂರೈಸಿತೆಂದು ಅನೇಕ ಪೌರಸಭೆಗಳು ತಿಳಿದುಕೊಂಡಿವೆ. ಇದಕ್ಕೆ ಪಂಡಿತ ಜವಾಹರಲಾಲರು ಮದ್ರಾಸಿನಲ್ಲಿ ತಕ್ಕ ಉತ್ತರವನ್ನು ಕೊಟ್ಟಿರುವರು. ಯಾವನೊಬ್ಬ ವ್ಯಕ್ತಿಯೂ, ಕೆಲಸವಿಲ್ಲದೆ ಹೊಟ್ಟೆಗಿಲ್ಲದೆ, ವಿದ್ಯೆಯಿಲ್ಲದೆ ಇರಕೂಡದು—ಇದೇ ಪೌರಸಭೆಯ ಆದರ್ಶ ಎಂದು ಅವರು ಹೇಳಿರುವರು ಯೂರೋಪಿನ ಪೌರಸಭೆಗಳು ಪ್ರಜೆಗಳ ಯೋಗಕ್ಷೇಮಕ್ಕಾಗಿ ಮಾಡುವ ಕಾರ್ಯಗಳನ್ನು ಹೇಳಿದರು. ಅಲ್ಲದೆ ಪೂರ್ವದಲ್ಲಿ ೩೦೦೦ ವರ್ಷಗಳ ಹಿಂದೆ ನಮ್ಮ ದೇಶದಲ್ಲಿಯೂ ಪಾಟಲೀಪುತ್ರ ಮುಂತಾದ ದೊಡ್ಡ ದೊಡ್ಡ ನಗರಗಳಲ್ಲಿಯೂ ಪೌರಸಭೆಗಳಿದ್ದು ಪುರನಿವಾಸಿಗಳ ಹಿತಚಿಂತನೆಯನ್ನು ಹೇಗೆ ಮಾಡುತ್ತಿದ್ದವೆಂಬುದನ್ನು ಹೇಳಿರುವರು ನಮ್ಮ ಪೌರಸಭೆಗಳು ಈ ಅಂಶಗಳನ್ನು ಗಮನಕ್ಕೆ ತರಬೇಕು

"ದಾಮಾಜಿ ಪಂತ"

ಗ್ರಂಥವಿಮರ್ಶೆ

ಪುತ್ತೂರಿನ ಶ್ರೀ॥ ಜಿ ಎನ್ ಲಕ್ಷ್ಮಣ ಪೈ ರವರಿಂದ ರಚಿತವಾದ ಮೇಲ್ಕಂಡ ಗ್ರಂಥವನ್ನು ನಾವು ಸ್ವೀಕರಿಸಿದ್ದೇವೆ ಭಕ್ತವಿಜಯದೊಳಗಿನ ದಾಮಾಜಿಪಂತನ ಕಥೆಯೇ ಇದರ ಮೂಲ ಮೂಲಕಥೆಯು ಕೆಡದಂತೆ ನಾಟಕರಂಗಕ್ಕೆ ಅನುಕೂಲಿಸುವಂತೆ ಬರೆಯಲ್ಪಟ್ಟಿದೆ ಸಂದರ್ಭೋಚಿತವಾಗಿ ಕೆಲವು ಹಾಡುಗಳೂ ಸೇರಿಸಲ್ಪಟ್ಟಿವೆ ಭಕ್ತಿಯನ್ನು ಬಹಳ ಚೆನ್ನಾಗಿ ಸೂಚಿಸುವ ಈ ಗ್ರಂಥವನ್ನು ಕನ್ನಡಿಗರೆಲ್ಲರೂ ಓದಬೇಕು ಬೆಲೆ ಹನ್ನೆರಡಾಣೆ ಮಾತ್ರ ಮುದ್ರಣ ಚೆನ್ನಾಗಿದೆ

ಲಕ್ನೋದಲ್ಲಿ ಪ್ರವಾಹಭೀತಿ.

೩೫,೦೦೦ ಜನರು ನಿರ್ಗತಿಕರಾಗಿದ್ದಾರೆ.

ಇತ್ತೀಚಿನ ಪ್ರವಾಹದಿಂದ ಲಕ್ನೋ ಒಂದರಲ್ಲಿಯೇ ೭೦೦೭ ಮನೆಗಳುರುಳಿವೆ ಅದರಿಂದ ೩೫,೦೦೦ ಜನರಿಗೆ ಮನೆಮಠವಿಲ್ಲ ಮೂರುಲಕ್ಷ ರೂಪಾಯಿಗಳಿಗಿಂತಲೂ ಹೆಚ್ಚಿಗೆ ನಷ್ಟ ಸಂಭವಿಸಿದೆ

ಲಕ್ನೋ ಪೌರಸಭೆಯವರು ಸರ್ಕಾರವನ್ನು ೧೦೦೦೦೦ ರೂಪಾಯಿಗಳನ್ನು ಪುನರಭಿವೃದ್ಧಿಗಾಗಿ ಕೋರಬೇಕೆಂದಿದ್ದಾರೆ ಕಮಿಷನರು ೭೫೦೦೦ ರೂಪಾಯಿಗಳನ್ನು ಕೊಡಬೇಕೆಂದೂ [illegible] ಪೌರಸಭೆಯು ಕೊಡಬೇಕೆಂದೂ ಹೇಳಿದ್ದಾರೆ

ಪುಟ್ಟಣ್ಣಶೆಟ್ಟರ ಪುರಮಂ[illegible]

ಬೆಂಗಳೂರಿನಲ್ಲಿರುವ ಪುಟ್ಟಣ್ಣಶೆಟ್ಟಿ ಪುರಮಂದಿರವು ಸಿನಿಮಾ ಮಂದಿರ[illegible] ಪರಿಣಮಿಸುವದೆಂಬ ಶಂಕೆಯು ಹು[illegible]ಷ್ಟೆ. ಇದರಮೇಲೆ ಪ್ರಜಾವರ್ಗದ[illegible] ಪತ್ರಿಕೆಗಳೂ, ಸಾರ್ವಜನಿಕ ಸಂಸ್ಥೆ[illegible] ಬಹಳ ಅಸಮಾಧಾನವನ್ನು ಸೂಚಿಸಿ[illegible] ಅದರ ಪರಿಣಾಮವಾಗಿ ಈ ಭವನ[illegible] ಸಿನಿಮಾಕ್ಕೆ ಕೊಡುವುದಿಲ್ಲವೆಂದು [illegible]ರದವರು ತೀರ್ಮಾನಿಸಿರುವರು [illegible]ಗಿ ಸರ್ಕಾರವನ್ನು ನಾವು ಅಭಿನಂದಿಸು[illegible]ವೆ. ಎಲ್ಲರಿಗಿಂತಲೂ ಈ ವಿಷಯವು [illegible]ಶೆಟ್ಟರಿಗೆ ಅತ್ಯಂತ ಸಮಾಧಾನವನ್ನು[illegible] ಮಾಡುವುದು ಸರ್ಕಾರದವರೂ [illegible] ಪ್ರಾಯಕ್ಕೆ ಮನ್ನಣೆಯನ್ನು [illegible]ರುವರೆಂಬ ಸದ್ಭಾವನೆಯೂ [illegible]ವದು

ಬ್ರಿಟಿಷ್ ಚಕ್ರವರ್ತಿಯವರಿಗೆ ಬಹಿಷ್ಕಾರವೇ?

'ಬ್ರಿಟಿಷ್ ಚಕ್ರವರ್ತಿಗಳು [illegible] ಖಂಡಕ್ಕೆ ಬಂದರೆ ಅವರ ಸ್ವಾಗ[illegible] ಭಾಗವಹಿಸಕೂಡದು ಮತ್ತು [illegible] ರೀಟದಾರಣಾ ಉತ್ಸವದಲ್ಲಿಯೂ [illegible]ಯರು ಸಹಕರಿಸಕೂಡದು ಸಂಪೂ[illegible] ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿ[illegible] ಭಾರತೀಯರ್‍ಯಾರೂ ಈ ಉತ್ಸವದಲ್ಲಿ[illegible] ತ್ಸಾಹವನ್ನು ತೋರಬಾರದು'— [illegible] ಬೊಂಬಾಯಿನ ಮುಖಂಡರಾದ ಮೇಹರಾಲಿಯವರು ಕಲ್ಕತ್ತಾದಲ್ಲಿ [illegible] ಸಮತಾವಾದಿಗಳ ಸಮ್ಮೇಳನದಲ್ಲಿ [illegible]ವರು

೧,೨೦೦ ರೂ. ಗಳ ಜುಲ್ಮಾ[illegible]

ಪುದುಕೋಟೆಯ ಸೋಲಿಸ್ಟೆಟ್[illegible]ರ್, ಚಿದಂಬರಶೆಟ್ಟಿಯಾರ್ [illegible] ಷಣ್ಮುಗಂ ಶೆಟ್ಟಿಯಾರ್ ಎಂಬುವರ[illegible] ಮಾರು ೬,೦೦೦ ರೂ ಗಳ[illegible] ಳುವ ಚೀಲವನ್ನು ಆಕ್ರಾಯಿ [illegible] ದವೆ ಬೆಂಗಳೂರಿಗೆ ತಂದರೆಂದೂ [illegible]ನ್ನು ಆಕ್ರಾಯಿ ಇಲಾಖೆಯ ಉದ್ಯೋಗಿ[illegible] ಸಾಹಸದಿಂದ ಪತ್ತೆ ಹಚ್ಚಿದರೆಂ[illegible]ದು ಬಂದಮೇಲೆ ಸೆಕೆಂಡ್ ಸಿಟಿ ಮ[illegible]ಸ್ಟ್ರೇಟರು ಶ್ರೀ ಡಿ ಶ್ರೀನಿವಾಸಾ[illegible] ಮೇಲ್ಕಂಡ ಕೇಸಿನ ವಿಚಾರಣೆ [illegible] ಮೇಲ್ಕಂಡವರು ಮೂವರಿಗೂ ಆ[illegible] ತೆರಿಗೆ ಕೊಡದೆ ಸಾಗಿಸಿದ್ದ ಅಪರಾಧ[illegible] ತಲಾ ೪೦೦ ರೂ ಜುಲ್ಮಾನೆಯನ್ನು [illegible] ಸಿದರು ಮ್ಯಾಜಿಸ್ಟ್ರೇಟರು ಅವರ[illegible] ನ್ಯಾಯ ರೀತಿಯಲ್ಲಿ ಕೊಡಬೇಕಾಗಿದ್ದ [illegible] ಗೆ ೧೦ರೂ ಗಳನ್ನೂ ಕೊಡಬೇ[illegible] ಒಪ್ಪಣೆ ಮಾಡಿದರು

ಜುಲ್ಮಾನೆ ವಸೂಲಾದಲ್ಲಿ [illegible] ಗಳನ್ನು ಸಾಹಸದಿಂದ ಪತ್ತೆ ಹ[illegible] ಕ್ರಾಯಿ ಇಲಾಖೆಯ ಉದ್ಯೋಗಿ[illegible] ಹುಮಾನವಾಗಿ ಹಂಚಬೇಕೆಂದು [illegible] ವರು

ಅರಕಲಗೂಡು ವರ್ತಮಾನ

(ನಮ್ಮ ಬಾತ್ಮೀದಾರರಿಂದ)

ಅರಕಲಗೂಡು ತಾಲ್ಲೂಕು ಮಲ್ಲಿಪಟ್ಟಣದ ಕೆಳಗಿನ ಮನೆ ಸೂರ್ಯನಾರಾಣಪ್ಪನವರು ತಮ್ಮ 70 ನೇ ವಯಸ್ಸಿನಲ್ಲಿ ಅಂದು ತಾ॥ 23-9-36 ನೇ ಬುಧವಾರ ಪ್ರಾತಃಕಾಲ ಸ್ವರ್ಗಸ್ಥರಾದರು ಇವರು ... ಬರುವವರಿಗೂ ಅನ್ನದಾನ ನಡಿಸಿ ... ಬಂದರು ಇವರ ಕುಟುಂಬವು ... ಎಷ್ಟೊತ್ತಿನಲ್ಲಿಯಾಗಲಿ ಹೋದ ... ಅವರಿಗೆ ಸ್ನಾನ ಸಂಧ್ಯಾವಂದನಾದಿಗಳು ಮುಗ್ಧು ನಿಂತು ಭೋಜನಾದಿಗಳನ್ನು ಮಾಡಿಸಿ ಕಳುಹಿಸುತ್ತಿದ್ದರು ಎಲ್ಲ ... ಇಂಥಾ ಅನ್ನದಾನ ಮಾಡುವವರು ... ಹುಟ್ಟುತ್ತಾರೆಯೇ, ನಾವುಗಳು ಅಂತವರನ್ನು ಕಾಣುತ್ತೇವೆಯೇ ಎಂಬು ... ವಿಷಾದಪಡುತ್ತಿದ್ದಾರೆ ಇವರ ... ಭಗವಂತನು ಶಾಂತಿಯನ್ನೀಯ...

... ವಾಸನದಿಂದ ಅರಕಲಗೂಡು ಮಾ... ರಾಮನಾಥಪುರಕ್ಕೆ ಸ್ಟಾರ್ ... ನವರು ಹೊಸದಾಗಿ ಸರ್ವಿಸನ್ನು ... 10-36 ರಿಂದ ಇಟ್ಟಿರುವುದು ... ಹಿಂದಿನಿಂದ ನಡ...ತ್ತಿರುವ ಎಸ್ ಆರ್ ಟಿ ಮತ್ತು ... ಸರ್ವಿಸಿನ ಜೊತೆಗೆ ಇದೂ ಒಂ...ಯಿತು ಇದರಿಂದ ಪ್ರಯಾಣಿಕ... ಟಿಕೇಟಿನ ದರವೂ ಕಡಿಮೆಯಾದಂ...ತು

... ಊರಿನ ಕೆರೆ ಕೆಟ್ಟುಹೋಗುತ್ತಲೇ ... ಕೇಳುವವರು ಯಾರು" ಪ್ರತಿ ... ಪತ್ರಿಕೆಗಳನ್ನು ಒಗೆಯುವವರು ... ಮಂದಿ" ಇದೂ ಅಲ್ಲದ ತಾವರೆ ... ಸೋಪಾನಗಳನ್ನೂ ಸಹ ಮು...ವನ್ನು ಬೆಳೆದು ಕೊಳೆತು ಕೆರೆಯ ... ಹೋಗುವರು ಮರ್ವಾಸನೆಯನ್ನು ... ರದೆ ಮೂಗುಮುಚ್ಚಿಕೊಂಡು ... ಹಾಗಿದೆ ಇಲ್ಲಿರತಕ್ಕ 2 ಸಾವಿರ ... ಇದೇ ಕೆರೆಯ ನೀರನ್ನು ಕು...ಡಿಯಾಗಿದ ಇದರಿಂದ ಅನೇಕ ... ಕಾಲರಾ ಜಾಡ್ಯವನ್ನು ಹೊಂದಿ...ತ್ತಿರುತ್ತಾರೆ ಇದರಲ್ಲಿ ಒಂದು ... ಇಡಿಸಿದ್ದರು ಇದನ್ನು ಕಾ...ರದಿಂದ ಮುಚ್ಚಿಸಿರುತ್ತಾರೆ ಈ ... ಹೊರಗೆ ಒಂದು ತೊಟ್ಟಿ ... ಅವಕಾಶವಿಲ್ಲ ಈಗಲಾದರೂ ... ಲಟೀಯವರೇ ಆಗಲಿ ಸರ್ಕಾರ ... ಮುದ್ದು ನಿಂತು ಕೆರೆಯ ... ದಲ್ಲಿ ಹೆಚ್ಚು ನಿಗಾಕೊ... ಎಲೆಗಳನ್ನು ಕೇಳಿಸಿ ನೀರು ... ಗಲು ತೂಬನ್ನು ಇಡಿಸಿಕೊ... ನಂಬಿರುತ್ತೇವೆ

... 2-3 ವರ್ಷಗಳಿಂದಲೂ ಹರಿ... ಗದ್ದೆಗಳಿಗೆಲ್ಲವೂ ಒಣಗಿ ... ವನ್ನು ರೈತರು ತಮಗೆ ... ದ್ದರೂ ಸಾಲಸೋಲ ಮಾಡಿ ... ಅನೇಕ ಅರ್ಜಿಗಳನ್ನು ... ಕೆರೆ ಕೆಳಗಿನತಕ್ಕ ಅಚ್ಚು...

ಬಾಲಚಮೂದಳದ ಪ್ರವಾಸ

(ಒಬ್ಬ ಬಾತ್ಮೀದಾರರಿಂದ)

ಮೊಸಳೆ ಏಡ್ಸ್ ಸ್ಕೂಲಿನ ಬಾಲಚಮೂ ದಳದವರು ಈ ಮಾಹೆ ತಾ॥ 4 ರ ಭಾನುವಾರ ಮೂವಿನಕೆರೆಗೆ ಸಂಚಾರ ಹೋಗಿದ್ದರು ಬಾಲಚಮೂಗಳು ಬಹು ಉಲ್ಲಾಸದಿಂದ ಕಾಲುನಡೆಗೆಯಿಂದಲೇ ಬೆಳಿಗ್ಗೆ 10 ಘಂಟೆಗೆ ಆ ಸ್ಥಳವನ್ನು ಸೇರಿದರು ಅಲ್ಲಿನ ಛತ್ರದಲ್ಲಿ ತಮ್ಮ ವಸತಿಯನ್ನು ಏರ್ಪಡಿಸಿಕೊಂಡು ಮೈಸೂರು ರಾಷ್ಟ್ರಧ್ವಜವನ್ನು ಏರಿಸಿ ರಾಷ್ಟ್ರಗೀತೆಯನ್ನು ಹಾಡಿದರು ಮಧ್ಯಾಹ್ನ ಭೋಜನಾನಂತರ ಆ ಸುತ್ತಿನ ನದಿಯ ಸಮೀಪ, ಬೆಟ್ಟ, ಮೊದಲಾದ ಪ್ರಕೃತಿಯ ಶೋಭೆಯನ್ನು ನೋಡಿಕೊಂಡು ರಾತ್ರೆ ಭೋಜನಾನಂತರ ತಂಪಾದ ಹಿಮಕರನ ಕಿರಣಗಳ ಸಂತೋಷವನ್ನು ಅನುಭವಿಸುತ್ತಾ ತಮ್ಮ ಸ್ಥಳಕ್ಕೆ ಹಿಂತಿರುಗಿದರು ಈ ಪ್ರವಾಸದಲ್ಲಿ ಸ್ಕೌಟ್ ಮಾಸ್ಟರು ಮಿ॥ ಸೂರ್ಯನಾರಾಯಣ ಅವಧಾನಿಗಳೂ, ಮಿ॥ ಸ್ಕೂ॥ ಹೆ॥ ಮಾ॥ ಎಂ. ಎನ್ ರಾಮಚಂದ್ರರಾಯರವರೂ ಅತ್ಯಂತ ಶ್ರಮವಹಿಸಿ ಎಲ್ಲಾ ಸೌಕರ್ಯಗಳನ್ನು ಒದಗಿಸಿ ಕೊಟ್ಟರು

ದೆಪ್ಯುಟೀ ಕಮೀಷನರುಗಳ ಬಡ್ತಿ

ಮಿ॥ ಗುಲಾಂ ಮೊಹಿಯುದ್ದೀನ್ ಷೇಕ್ರಿಯವರು ಮೊದಲನೇ ದರ್ಜೆಯ ಡಿ ಸಿ ಪದವಿಗೂ (ಹಂಗಾಮಿ), ಮಿ॥ ಟಿ. ವಿ ಎ. ಈಶ್ವರಯ್ಯರವರು ಎರಡನೇ ದರ್ಜೆಯ ಡಿ ಸಿ ಪದವಿಗೂ (ಹಂಗಾಮಿ), ಮಿ॥ ಎಂ ಚೆನ್ನರಾಜ ಅರಸ್‌ರವರು ಎರಡನೇ ದರ್ಜೆಯ ಡಿ ಸಿ ಪದವಿಗೂ (ಹಂಗಾಮಿ) ಮಿ॥ ಎಂ ಎ ಶ್ರೀನಿವಾಸರವರು ಎರಡನೇ ದರ್ಜೆಯ ಡಿ ಸಿ ಪದವಿಗೂ (ಹಂಗಾಮಿ) ಬಡ್ತಿ ಹೊಂದಿರುತ್ತಾರೆ

ಜರ್ಮನಿ ಮತ್ತು ಇಟಲಿಯ ಸ್ನೇಹ

ಇಟಲಿಯ ವಿದೇಶಾಂಗ ಮಂತ್ರಿಯಾದ ಸಿನಾರ್ ಸಿಯಾನೋರವರು ಸದ್ಯದಲ್ಲಿಯೇ ಬರ್ಲಿನ್‌ಗೆ ಹೋಗಿ ಹೆರ್ ಹಿಟ್ಲರ್‌ರವರನ್ನು ಸಂದರ್ಶಿಸುವರೆಂದು ತಿಳಿದಿದೆ

ಲೈರ್ ನಾಣ್ಯದ ಬೆಲೆಯನ್ನು ಇಟಲಿಯು ಇಳಿಸಿರುವದರಿಂದ ಜರ್ಮನಿಗೂ ಇಟಲಿಗೂ ಇರುವ ಸ್ನೇಹ ಮತ್ತು ಸಹಕಾರವು ಎಳ್ಳಷ್ಟೂ ಒದಲಾಗುವುದಿಲ್ಲವೆಂದು ಜರ್ಮನಿಗೆ ಭರವಸೆಯೀಯುವುದೇ ಈ ಸಂದರ್ಶನದ ಆಶಯವಾಗಿದೆ

ಕಟ್ಟುದಾರರೂ ಸಹ ಸರ್ಕಾರಕ್ಕೆ ಬರದುಕೊಂಡಿದ್ದರೂ ಸರ್ಕಾರದವರು ಇನ್ನೂ ಗಮನಕ್ಕೆ ತಂದುಕೊಂಡಿಲ್ಲವೆಂದು ಕಾಣುತ್ತದೆ ಈಗಲಾದರೂ ಘನವುಳ್ಳ ಸರ್ಕಾರದವರು ಈ ವರ್ಷದ ಕಂದಾಯವನ್ನಾದರೂ ರಿಮಿಷನ್ ಮಾಡಿಸಿ ಬಡ ರೈತರುಗಳ ಮೇಲೆ ಕರುಣವಿಡುತ್ತಾರೆಂದು ನಂಬಿರುತ್ತೇವೆ

ಹುಣಸೂರು ವರ್ತಮಾನ

(ನಮ್ಮ ಬಾತ್ಮೀದಾರರಿಂದ)

ಈ ಸಾಲಿನಲ್ಲಿ ಹುಣಸೂರು ತಾಲ್ಲೂಕಿನಲ್ಲಿಯೂ, ಪಿರಿಯಾ ಪಟ್ಟಣ, ಹೆಗ್ಗಡದೇವನಕೋಟೆ, ಎಡತೊರೆ ತಾಲ್ಲೂಕುಗಳಲ್ಲಿಯೂ ಕಾಲ ಕಾಲಕ್ಕೆ ಸರಿಯಾಗಿ ಮಳೆ ಅನುಕೂಲವಾಗಿ ಬೀಳುತ್ತಾ ಬಂದುದರಿಂದ ರಾಗಿ ಬೆಳೆಯು ಎಲ್ಲಾ ಕಡೆಯೂ ಅನುಕೂಲವಾಗಿ ಬೆಳೆದು ಕಟಾವಿನಲ್ಲಿ ರೈತರ ಮನಸ್ಸಂತೋಷವಾಗಿರುತ್ತದೆ ಕಳೆದ ವಾರ ಈ ಪ್ರಾಂತ್ಯಗಳಲ್ಲಿ ಎರಡು ಮೂರು ದಿನಗಳು ವಿಪರೀತವಾದ ದೊಡ್ಡ ಮಳೆಯು ಹೊಡೆದು ಈ ಪ್ರಾಂತ್ಯಗಳಲ್ಲಿರುವ ಕೆರೆ ಕುಂಟೆಗಳೆಲ್ಲ ಭರ್ತಿಯಾಗಿರುತ್ತದೆಂದು ತಿಳಿದು ಬಂದಿದೆ ಈ ವರ್ಷ ಈ ಪ್ರಾಂತ್ಯದ ಜನಕರಗಳಿಗೆ ನೀರಿನ ತೊಂದರೆಯು ಸ್ವಲ್ಪ ಮಟ್ಟಿಗೆ ತಪ್ಪಿತು

ನಮ್ಮ ಗ್ರಾಮದ ಪೋಲೀಸರನ್ನೂ ನಿವಾಸಿಗಳ ಸಹಕಾರವನ್ನೂ ಆರೋಗ್ಯ ರಾತ್ರಿ ಇಳೆಯಲು ಗ್ರಾಮದ ನಿರ್ಮಲಕ್ಕೆ ಆದರ್ಶಪ್ರಾಯರಾಗಿದ್ದ ಸ್ಯಾನಿಟರಿ ಇನ್ಸ್‌ಪೆಕ್ಟರ್‌ರವರು ಚಿತ್ರದುರ್ಗ ಟೌನಿಗೆ ವರ್ಗಾಯಿಸಲ್ಪಟ್ಟಿರುತ್ತಾರೆಂದು ಕೇಳಿ ಈ ಗ್ರಾಮಸ್ಥರು ತುಂಬಾ ವಿಷಾದಿಸುತ್ತಾರೆ ಇವರು ಗ್ರಾಮದ ಪ್ರತಿಯೊಂದು ಮೂಲೆ ಮುಡುಕುಗಳನ್ನು ದೂಕ್ಕು ನಿವಾಸಿಗಳಿಗಿರತಕ್ಕ ಸಾಧಕ ಬಾಧಕಗಳನ್ನು ತಿಳಿದು ಜನಾಂಗ ನೈರ್ಮಲ್ಯಕ್ಕೂ ಶುಚಿರ್ಭೂತಕ್ಕೂ ಹೆಚ್ಚು ಅನಕಾರವನ್ನು ಕಲ್ಪಿಸುತ್ತಿದ್ದರು ಮುಂದೆ ಈ ಸ್ಥಳಕ್ಕೆ ಆಗಮಿಸುವರು ಇದಕ್ಕಿಂತಲೂ ಮಿಗಿಲಾಗಿ ಜನಾಂಗ ಸೌಕರ್ಯಕ್ಕೆ ಕರ್ತರಾಗಿರುತ್ತಾರೆಂದು ನಂಬಿಕೆ

ಟೌನ್ ಮುನಿಸಿಪ್ಲ್ ಫುಟ್‌ಬಾಲ್ ಟೀಮಿನವರು ಒಂದು ಜನರಲ್ ಮೀಟಿಂಗನ್ನು ಪ್ರಾರಂಭಿಸಿ, ಈ ಟೀಮನ್ನು ಸುವ್ಯವಸ್ಥೆಗೆ ತರಲು ಈ ಕೆಳಗೆ ಕಂಡ ಕಾರ್ಯನಿರ್ವಾಹಕ ಸಮಿತಿಯವರು ಚುನಾಯಿಸಲ್ಪಟ್ಟರು ಮ॥ ಜ ಕೃಷ್ಣಮೂರ್ತಿಯವರನ್ನು ಈ ಟೀಮಿನ ಪ್ರೆಸಿಡೆಂಟರಾಗಿಯೂ, ಮಿ॥ ಯಂ ಎಸ್. ಶಿವಗಿರಿರಾಯರನ್ನು ಫೀಲ್ಡ್ ಕ್ಯಾಪ್ಟನ್ನಾಗಿಯೂ, ಮಿ॥ ಟಿ ವಿ ರಾಮವೇಲ್‌ನಾಯ್ಡು ರನ್ನು ಕೋಶಾಧಿಕಾರಿಗಳನ್ನಾಗಿಯೂ ಆರಿಸಲಾಯಿತು

ಚೀನಾ-ಜಪಾನ್ ಗಲಾಟೆ.

ಶಾಂತತೆಯು ಪುನಃ ಭಂಗವಾಗಿದೆ

ಕಳೆದ ಮೂರು ವಾರಗಳಿಂದಲೂ ಚೀನಾ ಜಪಾನ್ ಪರಿಸ್ಥಿತಿಯು ಬಹಳ ವಿಷಮವಾಗಿತ್ತು ಈಗ ಆ ವಿಷಮತೆಯೆಲ್ಲಾ ಮುಕ್ತಾಯಗೊಂಡಿತು ಗಲಭೆಯೆಲ್ಲಾ ಪರಿಸಮಾಪ್ತಿಗೊಂಡಿತೆಂದು ಸಮಾಧಾನಕರವಾದ ಸುದ್ದಿಯು ಬರುತ್ತಾ ಇರುವಾಗ ಮತ್ತೆ ಹ್ಯಾಂಕೋವಿನಲ್ಲಿ ಒಂದು ಜಪಾನೀ ಓಷಧಿ ಅಂಗಡಿಯ ಮೇಲೆ ಒಂದು ಬಾಂಬು ಬಿದ್ದಿತೆಂದು ಸಮಾಚಾರ ಬಂದಿದೆ ಬಾಂಬ್ ನೋ ಅಸ್ಫೋಟಿಸಲಿಲ್ಲ ಆದರೆ ಜಪಾನೀ ಪೆಟ್ರೋಲ್‌ಗಳು ಮಾತ್ರ ಕೂಡಲೇ ಜಮಾಯಿಸಿಕೊಂಡು ಎಚ್ಚರಿಕೆಯಿಂದಿದ್ದಾರೆ

ಕನ್ನಡ ಲಾವಣಿ.

ಚಂದದಿ ಕನ್ನಡಿಗರಿಗ್ವಂದಿಸ್ಯೊಪೇಳುವೆ
ಕನ್ನಡ ಮಾತೆಯ ದಯದಲ್ಲಿ।
ಬಂದಿದೆ ಕಷ್ಟವು ಕನ್ನಡ ಮಾತೆಗೆ
ಇಂದಿನ ಕನ್ನಡಿಗರ ದೆಶೆಯಲ್ಲಿ॥
ಕನ್ನಡನಾಡಿನ ಕನ್ನಡಿಗರೆನಾವ್ ಕನ್ನಡ
ಭಾಷೆಯ ತೊರೆಯಲ್ಪಡ್ದೆ —

1 ಕನ್ನಡ ಕನ್ನಡ ಜನ್ಮೆಕ ಭಾಷೆಯು
ಎಂಬ ದಿನಾಸ್ಗಳು ಮರೆಯುವವೇ?॥
ಚೆನ್ನದ ಕನ್ನಡ ಎನ್ನುವ ನುಡಿಯು
ಕನ್ನಡ ಜಗದೊಳು ತಪ್ಪುವದೆ?
2 ಕನ್ನಡ ನುಡಿದ ಪಂಪನು —
ಸೇಳದ ಸೂಂಸಿನ ಕನ್ನಡವನು ದೂರು
ವದೇ?॥
ಕನ್ನಡ ಭಾಷೆಗೆ ಅನ್ಯರ ಬೀಷೆಯು ಬೆರ
ಸುತ ಭಿನ್ನದ ಮಾಡುವದೇ?।
3 ಭಿನ್ನತನ್ಯೆಯಲು ಕನ್ನಡ ಭಾಷೆಗ
ಮಾನ್ಯತೆ ನವ್ಯಗ ದೊರೆಯುವದೇ?॥
4 ಕನ್ನಡ ಪ್ರಾಂತ್ಯವು ಅನ್ಯರವಾಲಿಗ
ಹೋಗದ ತೆರನಾವ್ ಮಾಡಬೇಕು?।
ಕನ್ನಡನಾಡಲಿ ಕನ್ನಡ ಎಳ್ಳಿಗೆ
ಕರ್ನಾಟಕ ಏಕೀಕರಣನಾಗಬೇಕು॥
5 ಸ್ವರ್ಗಕರ್ನಾಟಕ ಸ್ವರ್ಗಭಾರ
ತದಿ ಪೂರ್ಣಸ್ವತಂತ್ರದಿ ಇರಬೇಕು।
ಕರ್ನಾಟಕಮಾತೆ ತೃಪ್ತಿಪೊಂದ್ವಳು
ದೇಶಸೇವೆ ನಮ್ಮ ಗುರಿಯಾಗಬೇಕು॥
ವಂದಿಪೆ ಭಾರತ ಮಾತೆಗ ವಂದಿಪೆ ಸಿರು
ತದಿ ಕರ್ನಾಟಕಾಂಬೆಯನೂ।
ಚಂದದಿ ವಂದಿಪೆ ಪೂಜ್ಯ ಮಹಾತ್ಮನ
ವಂದಿಪೆ ಕರ್ನಾಟಕ ಸಾಮ್ರಾಟರನು॥

ನಂ ಗೋಪಾಲ್‌ರಾವ್,
ಮೈಸೂರು

ಸಂಸ್ಕೃತ ಮಹಾ ಪಾಠಶಾಲಾ

(ಒಬ್ಬ ಬಾತ್ಮೀದಾರರಿಂದ)

ಮೇಲ್ಕಂಡ ಪಾಠಶಾಲೆಯಲ್ಲಿ ಪ್ರತಿವರ್ಷವೂ, ಶ್ರೀ ವಿದ್ಯಾಗಣಪತಿ ಸ್ವಾಮಿಯವರನ್ನು 21 ದಿನಗಳ ವರಿವಿಗೆ ಕೂರಿಸುವಂತೆ ಈ ವರ್ಷವೂ ಸಹ, ಗಣಪತಿಸ್ವಾಮಿಯವರನ್ನು 21 ದಿನಗಳ ವರಿವಿಗೆ ಕೂರಿಸಿ ಅಮೋಘವಾದ ಉಪನ್ಯಾಸ, ಹರಿಕಥೆ, ಸಂಗೀತ ಇತ್ಯಾದಿಗಳನ್ನು, ಶ್ರೀ ಸ್ವಾಮಿಯವರ ಸನ್ನಿಧಿಯಲ್ಲಿ ನಡಸಿದರು. ತಾ॥ 9-10-36 ರಲ್ಲಿ ಶ್ರೀ ಗಣಪತಿ ಸ್ವಾಮಿಯವರನ್ನು ಉದ್ವಾಸನೆ ಮಾಡಿ ರಾಜ ಮರ್ಯಾದೆಗಳೊಡನೆ ಮೇನಾದಲ್ಲಿ ಕುಳ್ಳಿರಿಸಿ ಪಟ್ಟಣದ ಪ್ರಮುಖ ರಾಜವೀಧಿಗಳಲ್ಲಿ ಮೆರವಣಿಗೆಯನ್ನು ವಿಜೃಂಭಣೆಯಿಂದ ನಡೆಸಿದರು ಕೊನೆಗೆ ಸ್ವಾಮಿಯವರನ್ನು ದಿವಾನ್ ಪೂರ್ಣಯ್ಯನವರ ಛತ್ರದ ಹತ್ತಿರದ ಕೊಳದೊಳಕ್ಕೆ ಶ್ರೀ ವಿಶ್ವೇಶ್ವರಸ್ವಾಮಿಯವರನ್ನು ಕಳುಹಿಸಿಕೊಟ್ಟರು ರಾತ್ರಿ 8-30 ಗಂಟೆಯಲ್ಲಿ ಪಾಠಶಾಲಾ ವಿದ್ಯಾರ್ಥಿಗಳೆಲ್ಲರಿಗೂ ಗಣಪತಿ ಸ್ವಾಮಿಯವರ ಪ್ರಸಾದ ವಿನಿಯೋಗವಾಯ್ತು ಶ್ರೀಮನ್ಮಹಾರಾಜರವರಿಗೆ ಭಗವಂತನು ಆಯುರಾರೋಗ್ಯ ಐಶ್ವರ್ಯಾದಿಗಳನ್ನು ಕೊಟ್ಟು ಕಾಪಾಡಲಿ ಎಂದು ಪ್ರಾರ್ಥಿಸಲಾಯಿತು

ಪರಿತ್ಯಾಗ.

ಬರೆದವರು—ಶ್ರೀಮತಿ ರಾಜೇಶ್ವರಿ ವೈದ್ಯಶಂಕರ್,
ಮೈಸೂರು

ಕಲ್ಯಾಣಿಯು ಏನನ್ನೋ ಯೋಚಿಸುತ್ತಿದ್ದಳು ಸುಂದರನು ಅವಳ ದೃಷ್ಟಿಯ ಸೆಳೆಯಲು ಮಾಡಿದ ಪ್ರಯತ್ನಗಳೊಂದೂ ಫಲಿಸಲಿಲ್ಲ ಅವಳ ತಲೆಯನ್ನು ತಡವರಿಸಿದನು, ಭುಜವನ್ನು ಬಲವಾಗಿ ಅದುಮಿದನು, ಕೆನ್ನೆಗಳನ್ನು ಮೃದುವಾಗಿ ಸವರಿದನು, ಕೊನೆಗೆ ತಬ್ಬಿಕೊಂಡು ಮುತ್ತಿಟ್ಟನು

ಆದರೂ ಕಲ್ಯಾಣಿಯು ಚಿಂತಾಮಗ್ನಳೇ!

'ಕಲ್ಯಾಣೀ, ಮಲಗಿದೆಯೋ?'

'ಸುಂದರಾ! ನನ್ನಲ್ಲಿ ಒಂದು ಗುಪ್ತ ಮಂತ್ರವಿದೆ ಅದನ್ನು ಹೇಳಿದೊಡನೆಯೇ ಜ್ವಾಲೆಯಂತೆ ಸರ್ವಸ್ವವನ್ನೂ ದಹಿಸಿಬಿಡುವುದು!'

ಕಲ್ಯಾಣೀ! ಅದುಬೇಡ, ಈ ರಾತ್ರಿಯನ್ನು, ಈ ಚಂದ್ರಿಕೆಯನ್ನು, ಈ ತಂಗಾಳಿಯನ್ನು ಅನಂತವನ್ನಾಗಿ ಮಾಡುವ ಮಂತ್ರವಿದ್ದರೆ ಜಪಿಸು ಅದರಿಂದ ನಾನು ನನ್ನ ಕಲ್ಯಾಣಿಯೊಡನೆ ಸರ್ವದಾ ಇದೇ ರೀತಿ ಕುಳಿತಿರಬಹುದು ಕಲ್ಯಾಣಿ! ನನ್ನ ಕಲ್ಯಾಣಿ!'

"ಸುಂದರಾ! ಹೇಳಬಾರದೆಂದು ತಡೆಬಿದ್ದ ಒಂದು ಗುಟ್ಟು, ನನ್ನ ಹೃದಯವನ್ನು ದಹಿಸುತ್ತಿರುವ ಗುಟ್ಟು, ಅದನ್ನು ಇಂದು ಹೇಳಿಯೇಬಿಡುವೆನು ಇಲ್ಲವಾದರೆ ನನಗೆ ಶಾಂತಿಯೇ ಇಲ್ಲ"

ಹೊರಗಡೆ ಕೋಪದಿಂದ ಯಾರೋ ದಡಬಡನೆ ಮಹಡಿಯನ್ನು ಹತ್ತಿದಂತಾಯಿತು ಮರುಕ್ಷಣದಲ್ಲೇ,

"ಸುಂದರಾ! ಕಲ್ಯಾಣಿಯನ್ನು ಹೊರದೂಡು! ಅವಳು ಹೀನ ಕನ್ಯೆ! ಮರೆಮಾಚಿ ಮದುವೆ ಮಾಡಿದರು, ಆ ಪಾಪಿ—ರಾಯ, ಸುಂದರಾ ನನ್ನ ಮಗನೇ ಆಗಿದ್ದಲ್ಲಿ, ಶ್ರೇಷ್ಠ ಬ್ರಾಹ್ಮಣನಾಗಿದ್ದಲ್ಲಿ ತಕ್ಷಣ ಕಲ್ಯಾಣಿಯನ್ನು ಆಚೆಗಟ್ಟು, ಯಾವ ಪ್ರತ್ಯುತ್ತರವೂ ನನಗೆ ಬೇಡ'

ಸುಂದರನ ತಂದೆಯು ಘರ್ಜಿಸಿ ಬಂದಂತೆಯೇ ಹಿಂದಿರುಗಿದನು

'ಕಲ್ಯಾಣೀ! ನಾನು ಕೇಳಿದ್ದು ನಿಜವೇ?'

'ಸುಂದರಾ! ಅದು ಅಕ್ಷರಶಃ ನಿಜ, ಅದೇ ನನ್ನ ಹೃದಯವನ್ನು ದಹಿಸುತ್ತಿದ್ದ ಗುಟ್ಟು"

ಕಲ್ಯಾಣೀ! ಮರೆಮಾಚಿದ್ದೇಕೆ"

"ಪ್ರಾ ಣ ಶಿ "

ಸುಂದರನು ಮನೆಬಿಟ್ಟು ಹೊರಟನು ರಾತ್ರಿಯ ಅಕಾಂಡವು ಅವನನ್ನು ಎಚ್ಚರಿಸಲಿಲ್ಲ—ರಾಯರ ಬಳಿ ಹೋದನು ಅವರು ಇವನ ಉದ್ವೇಗಪೂರಿತವಾದ ಮುಖದಿಂದಲೇ ಸಂಗತಿಯನ್ನು ಊಹಿಸಿದರು

"ನನಗೆ ಸರ್ವನಾಶಮಾಡಿದಿರಿ—ರಾಯರೇ!, ಯಾವ ಅಪರಾಧಕ್ಕಾಗಿ ಈ ಅತ್ಯಾಚಾರ ನಡೆಸಿದಿರಿ''

ರಾಯರು—ನಗುತ್ತಾ ನುಡಿದರು

"ಸುಂದರಾ! ಕೋಪಿಸಬೇಡ ಶಾಂತನಾಗು ಅದೊಂದು ಹಳೆಯ ಪುರಾಣ ಅದನ್ನು ಕೇಳಿದರೆ ನೀನೂ ನನ್ನಂತೆಯೇ ನಗುವಿ ಸುಂದರಾ ಸೇಡು ತೀರಿಸಲು ಮಾಡಿದ ಕೆಲಸವದು"

ಸುಂದರನು ಕಿಡಿ ಕಿಡಿಯಾದನು

"ರಾಯರೇ!—ನನ್ನ ಮೇಲೆ ಸೇಡೇ! ನಾನು ನಿಮಗೆ ಮಾಡಿದ್ದಾದರೂ ಏನು! ಸೇಡು ಸೇ ಡೇ!

"ಸುಂದರಾ! ಕೇಳು

ನನ್ನ ತಂದೆಯ ಬಳಿ ಪರಮಾಪ್ತನಾದ ಭೃತ್ಯನೊಬ್ಬನಿದ್ದನು ಆತನು ಕಾಮನ ಜಾತಿಯವನು ಆತನು ಸಾಯುವಾಗ ತನ್ನ ಚಿಕ್ಕ ವಯಸ್ಸಿನ ಹೆಂಡತಿಯ ಮತ್ತು ರೂಪವತಿಯಾದ ಮಗಳ ಸಂರಕ್ಷಣಾ ಭಾರವನ್ನು ನಮ್ಮ ತಂದೆಯ ಮೇಲೆ ಹೊರಿಸಿಬಿಟ್ಟನು ಚಿಕ್ಕತನದಿಂದಲೂ ತಮ್ಮಲ್ಲಿಯೇ ಬೆಳೆದು, ತಮ್ಮ ಸೇವೆಯಲ್ಲಿಯೇ ಪ್ರಾಣಬಿಟ್ಟ ಆ ಸೇವಕನ ಮೇಲಿನ ಅಪಾರ ವಾತ್ಸಲ್ಯದಿಂದ, ನಮ್ಮ ತಂದೆಯು ಆ ತಾಯಿಮಕ್ಕಳನ್ನು ಮನೆಯಲ್ಲಿಯೇ ಇಟ್ಟುಕೊಂಡು ಸಾಕಿದರು ಆಗ ನೀನಿನ್ನೂ ಚಿಕ್ಕವನು ನಿಮ್ಮ ತಂದೆಯು ವೈದಿಕ ಶ್ರೇಷ್ಠರಂತೆ (ವರ್ತಿಸುತ್ತ) ಇದ್ದರು ಅವರಿಗೆ ಬ್ರಾಹ್ಮಣ ಪಾಲನೆಯಲ್ಲಿ ಈ ಶೂದ್ರರು ಇರುವುದು ಸರಿಬೀಳಲಿಲ್ಲ ನನಗೆ ತಾಯಿ ಇರಲಿಲ್ಲ ಸೋದರ ಸೋದರಿಯರಿರಲಿಲ್ಲ ಆ ವಿಧವೆಯೇ ನನ್ನ ತಾಯಿಯಂತಿದ್ದಳು ಆ ಬಾಲೆಯೇ ನನ್ನ ಸೋದರಿಯಂತಿದ್ದಳು ನಿಮ್ಮ ತಂದೆಯು ಸ್ವಲ್ಪ ಸ್ವಲ್ಪವಾಗಿ ತಮ್ಮ ಅಸಮಧಾನವನ್ನು ಸೂಚಿಸಿದರು ನಮ್ಮ ತಂದೆಯು ಯಾತರಿಂದಲೂ ವಚನವಿಮುಖರಾಗಲಿಲ್ಲ

'ಕೊನೆಗೆ ನಮಗಾದದ್ದೇನು! ಮಿಥ್ಯಾಪವಾದ! ಬಹಿಷ್ಕಾರ! ಬರೀ ಬಹಿಷ್ಕಾರವಲ್ಲ! ಸುಂದರಾ! ಆ ವಿಧವೆಯು, ಆ ಭೃತ್ಯಪತ್ನಿಯು, ಸಂಗವಿದ್ದರೆಂದು, ನಮ್ಮ ತಂದೆಗೆ, ಅವರ ಕಾಲಾನಂತರ, ಶಾಸ್ತ್ರೋಕ್ತ ಕ್ರಿಯೆಗಳು ಕೂಡ ನಡೆಯದಂತೆ ಮಾಡಿದರು!"

"ಆಗ ನಾನು ನನ್ನಲ್ಲಿ ಒಂದೇ ಹನಿ ರಕ್ತವಿರುವವರೆಗೆ ಆ ಸೇಡನ್ನು ತೀರಿಸದೇ ಬಿಡೆನೆಂದು ಶಪಥಮಾಡಿದೆನು ಅನಂತರ ಈ ಊರನ್ನು ಬಿಟ್ಟು ಪಟ್ಟಣವನ್ನು ಸೇರಿದೆನು! ಆಗ ನೀನು ಬಹಳ ಸಣ್ಣವನು ನನ್ನನ್ನೇ ನಂಬಿದ್ದ ಆ ತಾಯಿಮಕ್ಕಳೂ ನನ್ನ ಜತೆಯಲ್ಲಿಯೇ ಬಂದರು. ಅವರನ್ನು ನನ್ನ ಮಿತ್ರನೊಬ್ಬನಲ್ಲಿ ಬಿಟ್ಟು ನಾನು ದೇಶಾಟನೆ ಮಾಡಲು ಹೊರಟೆನು

"ಮಕ್ಕಳಿಲ್ಲದ ನನ್ನ ಮಿತ್ರನು ಆ ಬಾಲೆಯನ್ನು ಬಹಳ ಪ್ರೇಮದಿಂದ ಸಲಹಿದನು ಪೂರ್ಣಚಂದ್ರನಂತೆ ಬೆಳೆದಳು ಆಕೆ ನನ್ನ ಮಿತ್ರನ ಮನೆಯು ವಿದ್ಯಾರ್ಥಿಗಳ ವಸತಿಯೊಂದರ ಪಕ್ಕದಲ್ಲಿತ್ತು. ಆ ತರುಣರ ದೃಷ್ಟಿಗೆ ಬೀಳದಂತೆ ನನ್ನ ಮಿತ್ರನು ಆಕೆಯನ್ನು ಬಹು ಎಚ್ಚರಿಕೆಯಿಂದಲೇ ನೋಡಿಕೊಳ್ಳುತ್ತಿದ್ದನು

"ಆದರೂ, ದೈವಘಟನೆಯಂತೆ ಆಕೆಯು ನಿನ್ನ ಕಣ್ಣಿಗೆ ಬಿದ್ದಳು ನೀನು ಆಗತಾನೇ ಪ್ರೌಢವಿದ್ಯಾರ್ಥಿಯಾಗಿದ್ದೆ ಅವಳನ್ನು ನೋಡಿದಂದಿನಿಂದಲೇ ನೀನು ಹುಚ್ಚನಾದೆ ನಿನ್ನ ವ್ಯಾಸಂಗದಿಂದ ವಿಮುಖನಾದೆ. ಅವಳ ದರ್ಶನಕ್ಕಾಗಿ, ನೀನು ಸದಾ ಮಚ್ಚಿನ ಮೇಲೇ ಪುಸ್ತಕ ಹಿಡಿದು ಓದುತ್ತಿರುವಂತೆ ನಟಿಸುತ್ತಾ ಕುಳಿತಿರುತ್ತಿದ್ದೆ

"ಅವಳೂ ಹಾಗೆಯೇ ಆದಳು. ಇಲ್ಲದ ನೆಪವನ್ನು ಕಲ್ಪಿಸಿಕೊಂಡು ನಿನ್ನ ಕೊಠಡಿಯ ಕಡೆ ಇದ್ದ ಕಿಟಕಿಯಲ್ಲೇ ಬಂದು ನಿಲ್ಲುತ್ತಿದ್ದಳು ಆಕೆಯು ಸರ್ವಕಾರ್ಯಗಳನ್ನೂ ಆ ಕಿಟಕಿಯಲ್ಲೇ ಬಂದು ನಡೆಸುತ್ತಿದ್ದಳು ನನ್ನ ಸ್ನೇಹಿತನು ಎಷ್ಟು ಎಚ್ಚರಿಸಿದರೂ ನಿಷ್ಫಲವಾಯಿತು ಪ್ರೇಮವು ನಿಕಟವಾದದ್ದು ಇದನ್ನು ತಿಳಿದ ನನ್ನ ಸ್ನೇಹಿತನು ತನ್ನ ವಸತಿಯನ್ನು ಬದಲಾಯಿಸಿದನು ಇದರಿಂದ ಹೆಚ್ಚು ಕೆಡಕೇ ಲಭಿಸಿತು

"ಅವಳಿಗೆ ಪ್ರಬಲವಾದ ಮನೋರೋಗವೇ ಹಿಡಿಯಿತು ನೀನು ಹುಚ್ಚಾಂಗ ಹುಚ್ಚನಾದೆ ನಿನ್ನ ವ್ಯಾಸಂಗಕ್ಕೆ ತಿಲಾಂಜಲಿಯನ್ನೇ ಕೊಟ್ಟು ಅವಳ ನೆರೆಯನ್ನು ಪತ್ತೆಹಚ್ಚಲು ಮೊದಲು ಮಾಡಿದೆ. ಕೃತಕಾರ್ಯನೂ ಆದೆ

'ಸುಂದರಾ! ನನ್ನ ಮಿತ್ರನು ನಾನು ಹಿಂದಿರುಗಿದೊಡನೆ ಇವೆಲ್ಲವನ್ನೂ ನನಗೆ ತಿಳಿಸಿದನು ನಾನು ನಿನ್ನ ಸ್ಥಿತಿಯನ್ನು ನೋಡಿದೆ ತಡಮಾಡಿದ್ದರೆ ಅನರ್ಥವೇ ಆಗುತ್ತಿತ್ತು ಮತ್ತು ನನ್ನ ಸೇಡನ್ನು ತೀರಿಸಲು ಒದಗಿದ ಸುಸಂಧಿಯಲ್ಲವೇ!

"ಮುಂದಾದುದು ನಿನಗೆ ತಿಳಿದೇ ಇದೆ" ರಾಯರು ಉಸಿರು ತೆಗೆದುಕೊಳ್ಳಲು ನಿಲ್ಲಿಸಿದರು ಸುಂದರನು ನಿರ್ವಿಣ್ಣನಾಗಿದ್ದನು ಒಡನೆಯೇ

'—ರಾಯರೇ! ಜಾತಿಯನ್ನು ಮರೆಮಾಚಿದಿರೇಕೆ?' ಎಂದನು

"ಇಲ್ಲದಿದ್ದರೆ ನಾನು ಇಂದು ಸುಂದರನನ್ನು ನೋಡುತ್ತಿರಲಿಲ್ಲ ಆದರೂ ನಿಮ್ಮ ತಂದೆಯನ್ನು ಅನ್ಯಾಯ ಮಾಡಿಲ್ಲವೆಂದೇ ನನ್ನ ಭಾವನೆ" ಎಂದರು ರಾಯರು

* * *

ಅದೇ ಪ್ರಶಾಂತವಾದ ಚಂದ್ರಿಕೆ, ಅದೇ ಬಿಸಿಲುಮಚ್ಚು ಸುಂದರನು ಹಿಂದಿನ ದಿನದಂತೆಯೇ ಕುಳಿತಿದ್ದಾನೆ ಆ ಕಲ್ಯಾಣಿಯು ಮಾತ್ರ ನೀರವಳಾಗಿ ಅವನ ಪಾದದ ಮೇಲೆ ತಲೆಯೂರಿ ಮಲಗಿದ್ದಾಳೆ ಅವಳ ಕಂಬನಿಗಳಿಂದ ಪಾದ ನೆನೆದು ಹೋಗಿದೆ

ಕಲ್ಯಾಣಿಯ ಗುಪ್ತಮಂತ್ರವು ಆಸ್ಫೋಟನವಾಗಿದೆ ಅದರ ಜ್ವಾಲೆಯು ದಹಿಸಿ ಪರಿತಾಪಕಾರಿಯಾಗಿದೆ

* * *

"ಸುಂದರಾ! ನಾನಿನ್ನು ಸಹಿಸಲಾರೆ ತಕ್ಷಣ ಕಲ್ಯಾಣಿಯನ್ನು ಆಚೆಗಟ್ಟು! ಅವಳು ಅರಗಳಿಗೆಯಾದರೂ ಇಲ್ಲಿರಕೂಡದು ಆ ಕುಟಿಲ—ರಾಯನು ತಕ್ಕ ಫಲವನ್ನನುಭವಿಸುವನು ಎದುರಾಡದೆ ಅವಳನ್ನು ತ್ಯಜಿಸು

'ತಂದೆಯೇ! ಕ್ಷಮಿಸಿರಿ ನಾನು ನನ್ನ ಕಲ್ಯಾಣಿಯನ್ನು ತ್ಯಜಿಸಲಾರೆ'

'ಹಾ!!!'

ಹಾಗಾದರೆ ನಿನ್ನನ್ನೂ "ಪರಿತ್ಯಾಗ" ಮಾಡಿದ್ದೇನೆ

ಬಾಹುಸಾರವೋ, ಭಾವಸಾರವೋ?

ಈಗ ಹಲವು ವರ್ಷಗಳಿಂದ ಈ ಪತ್ರಿಕೆಯಲ್ಲಿ 'ಭಾವಸಾರ' ಮತ್ತು 'ಬಾಹುಸಾರ' ಎಂಬ ವಿಶೇಷಣ ಶಬ್ದಗಳ 'ಸಾಧುತ್ವ ಮತ್ತು ಅನ್ವರ್ಥತೆ' ಈ ವಿಷಯದಲ್ಲಿ ವಿವಾದವು ನಡೆಯುತ್ತಿದ್ದು ಈಗ ಈ 'ವಿಶೇಷಣ ಶಬ್ದಗಳ' ವಿಚಾರವಾಗಿ ಶಾಸ್ತ್ರೀಯ ವ್ಯವಸ್ಥೆಯು ಅನುಜ್ಞೆ ಹೊಂದಬೇಕಾಗಿ ಶ್ರೀ ಶ್ರೀ ಜಗದ್ಗುರು ಮಹಾಸ್ವಾಮಿಗಳವರ ಮಹಾಸನ್ನಿಧಿಗೆ ವಿಜ್ಞಾಪನಾಪತ್ರಿಕೆಯು ಅರಿಕೆಮಾಡಲ್ಪಟ್ಟಿದೆ. ಈ ಕಾರಣ ಶ್ರೀ ಮಹಾಸಂಸ್ಥಾನದವರು ಉಭಯಪಕ್ಷದವರಿಂದಲೂ ಕೇಳಲ್ಪಡುವ ಶಾಸ್ತ್ರೀಯಾಧಾರಗಳನ್ನು ಪರಿಶೀಲಿಸುತ್ತಿರುವುದರಿಂದ "ಈ ವಿಶೇಷಣ ಶಬ್ದ' ದ ವ್ಯವಸ್ಥೆಗಾಗಿ ವ್ಯಾಕರಣ, ನಿಘಂಟು, ಸ್ಮೃತಿ, ಅಪ್ರಾದೇಶಪುರಾಣ ಪುಗಳ ಆಧಾರವನ್ನವಲಂಬಿಸಿ ಈ ಪ ಲಿಯ ಅಭಿಜ್ಞರಿಂದ ಬರುವ ಪ್ರಮಾಣ ಪುರಸ್ಸರವಾದ ಲೇಖಗಳು ಅಂಗೀಕರಿಸಲ್ಪಡುವಂತೆ ನಿರ್ಣಯಿಸಲಾಗಿದೆ ನಿಬಂಧನೆಯಂತೆ 1936 ನೇ ಡಿಸೆಂಬರ್ ಆಖೈರುವರೆಗೆ ಬರುವ ಎಲ್ಲಾ ಲೇಖಗಳು ವಿಮರ್ಶಿಸಲ್ಪಟ್ಟು ಅನಂತರ ಶ್ರೀ ಶ್ರೀ ಜಗದ್ಗುರು ಮಹಾಸ್ವಾಮಿಗಳವರಿಂದ ಪ್ರೈರು ತೀರ್ಮಾನವು ಮಾಡಲ್ಪಡುವ ವಿಷಯವು ಈ ಮೂಲಕ ನಿರೂಪಿಸಲಾಗಿದೆ

ವಿದ್ವಾನ್ ಕೆ ಶೇಷಶಾಸ್ತ್ರಿ,
ಧರ್ಮಾಧಿಕಾರಿ,
ಶ್ರೀ ಜಗದ್ಗುರು ಶೃಂಗೇರಿ ಸಂಸ್ಥಾನ
ಶ್ರೀಮಠ

ಕನ್ನಡ ವರ್ಣಮಾಲೆಯ ಸುಧಾರಣೆಗಳು.

(... ನೇ ಪುಟದಿಂದ ಮುಂದುವರಿದುದು)

[illegible] ಮನಸ್ಸಿಗೆ ಬೇಗ ತಾಗುತ್ತವೆ. ಜೀವನ[illegible]ದಲ್ಲಿ ಎಷ್ಟು ಬೇಕೋ ಅಷ್ಟನ್ನು [illegible] ಇಟ್ಟುಕೊಳ್ಳುವ ದೈವದತ್ತವಾದ [illegible] ಶಕ್ತಿಯ ಸಹಿಗಳನ್ನೆಲ್ಲಾ ಬಿಗಿಯಾಗಿ [illegible] ಕವಡಿಸುತ್ತಿರುವ ನಾವು ಅದೇ [illegible] [illegible]ಯಿಂದ ಅದರ ಫಲವಾಗಿ [illegible]ವಿಸಿರುವ ವರ್ಣಮಾಲೆಯ ಮೇಲೇ [illegible] ನಾವು ಸುಧಾರಣೆಯನ್ನು ತಂದೇವು? [illegible] ಐದುನೂರು ವರುಷಗಳ ಹಿಂದಿನ [illegible] ಜ್ಞಾನಕ್ಕಿಂತಲೂ ಶತಾಂಶ ಹೆಚ್ಚಾಗಿರುವ ಜ್ಞಾನವನ್ನು, ಅಗಿನ ಜ್ಞಾನ[illegible] ಸಂಪಾದಿಸಲು ಆಗಿನವರು ಎಷ್ಟು [illegible]ಕೊಳ್ಳುತ್ತಿದ್ದರೋ, ಒಂದಕ್ಕಿಂತ [illegible] ಕಾಲದಲ್ಲಿ ಸಂಪಾದಿಸುವ [illegible] ಮನುಷ್ಯನಿಗೆ ವರ್ಣ[illegible]ಲ್ಲಿನ ನಾಲ್ವತ್ತು ಅಕ್ಷರಗಳು ಪ್ರ[illegible]ವಾಗುವುವ?

[illegible] ಭಾಷೆಯಲ್ಲೇ ಆಗಲಿ ಅಕ್ಷರಗ[illegible] ಮಾತ್ರದಿಂದಲೇ ಉ[illegible] ಕಡಿಮೆಯಾಗುವುದೇ? ಉ[illegible]ವನ್ನು ಕಡಿಮೆಮಾಡಲು ಸಾಧ್ಯ[illegible] ಅಕ್ಷರಗಳಿಗೆ ಸ್ವರ ತಾನ ಏನು? [illegible] ಅಕ್ಷರಗಳೂ [illegible] ಒಂದೇ ವೃತ್ತಿ ಉಚ್ಚಾರಣೆ[illegible] ಅಕ್ಷರಗಳನ್ನು ಕಲಿತುಬಿಟ್ಟಲ್ಲಿ [illegible] ನಮಗೆ ಶ್ರಮವೇ ಇರುವದಿಲ್ಲವು [illegible] ತಕ್ಕಷ್ಟು ಅಕ್ಷರಗಳಿಲ್ಲದಿರು[illegible] ಉದ್ದಕ್ಕೂ ಸ್ಥಲಿಂಗಿನಾಗಿ ಬ[illegible] ಕನ್ನಡ [illegible] ಕಲವು [illegible] ಅಪಭ್ರಂಶವಾಗಿ ಉಚ್ಚರಿಸ[illegible] ಅಂತಹ ಅಕ್ಷರಗಳನ್ನೂ [illegible] ಶಬ್ದಗಳು ನಮಗ ಬೇಡ [illegible] ಆದರೂ ಶಬ್ದವನ್ನು [illegible] ಚಿಹ್ನೆಯನ್ನು ತಿಳಿದ ಮಾತ್ರ [illegible]ಗುವ ನಷ್ಟವೇನು?

[illegible] ಹಿಂದೆ ಹೇಳಿದಂತೆ ದೈವದತ್ತ [illegible] ಫಲರೂಪವಾದ ನಾಗರಿ[illegible] ಹೆಚ್ಚಿದ ಹಾಗೆಲ್ಲ ನಮ್ಮ ಜೀವ[illegible] ಹೆಚ್ಚುಹೆಚ್ಚು ಗಡಿಬಿಡಿಗಳೇ (complications) ಹೊರತು [illegible] [illegible] ಮಾರಕುವಂತಿಲ್ಲ ಗಡಿಬಿಡಿ[illegible] ಹೆಚ್ಚುಹೆಚ್ಚಾಗಿ ಆನಂದವನ್ನುಂಟು[illegible] ಹಿಂದೆಹಿಂದಕ್ಕೆ ಸಾವೇ [illegible] ಇದೂ ಅಲ್ಲದ, ನಮಗೆ [illegible] ಜೀವನ? ಲೀಲೆಯ ಫ[illegible] ನಮ್ಮ ಪೂರ್ವಜರು ಕನ್ನಡ [illegible]ಮಾಲೆಯನ್ನು ಯಾವದೋ ಒಂದು [illegible] ತಂದಿಟ್ಟಿರುವರು ಅದನ್ನು [illegible] ಹೆಚ್ಚು ಅಂದವಾಗಿಯೂ, ಹೆಚ್ಚು [illegible]ಯೂ ಆಗುವಂತೆ ಮಾಡಿದರ [illegible]ಕ್ಷನಾದರ—ಈಗ ಇಂಗ್ಲೀಷ್ ವ[illegible]ಮಾಲೆಯನ್ನು ತೆಗೆದು ಕೊಳ್ಳಿ 'ಸಿ' [illegible]ಕ್ಷರವನ್ನು ಕಿತ್ತುಹಾಕ ವದರಿಂದ [illegible] ಯಾವ ವಿಧವಾದ ನ್ಯೂನತೆಯೂ ಬರುವಂತಿಲ್ಲ 'ಸಿ' ಎಂಬ ಅಕ್ಷರಕ್ಕೆ ಎರಡುಬಗೆ ಉಚ್ಚಾರಗಳುಂಟು ಒಂದು 'ಕೆ' ಉಚ್ಚಾರ, ಇನ್ನೊಂದು 'ಎಸ' ಎಂಬ ಅಕ್ಷರದ ಉಚ್ಚಾರ ಕೆ ಮತ್ತು ಎಸ್ ಎಂಬ ಅಕ್ಷರಗಳೆರಡು ಇರುವಾಗ 'ಸಿ' ಎಂಬ ಅಕ್ಷರದ ಅವಶ್ಯವೇನು? ಜನಾಂಗದ ಹೆಮ್ಮೆಯೆಂಬುದೇ ಇದರ ಒಸ್ತಕತೆ ಅನೇಕ ಪದಗಳಲ್ಲಿ ಉಚ್ಚಾರಣೆಯಾಗದ ಅಕ್ಷರಗಳು ಎಷ್ಟೋ ಇವೆ ಅಕ್ಷರಗಳನ್ನು ಬಿಡುವದರಿಂದ ದೋಷವೇನೂ ಕಾಣದಿದ್ದರೂ ಇಂಗ್ಲಿಷ್ ಭಾಷಾಕಾರರು ಅವನ್ನು ತಪ್ಪಾಗಿ ಎಣಿಸುವರು ದೊಡ್ಡ ದೊಡ್ಡ ಕವಿಗಳೇನಾದರೂ ಪೂರ್ವಜರ ಮಾರ್ಗ ತಪ್ಪಿಹೋಗಿದ್ದಲ್ಲಿ ಅವಕ್ಕೆ ರಿಯಾಯಿತಿ ಕೊಡಲು 'ಮಹಾಕವಿ ಪ್ರಯೋಗ' ಎನಿಸಿಬಿಡುವರು ಎಲ್ಲಾ ಜನಾಂಗದಲ್ಲೂ ಇದೇ ಪದ್ಧತಿ ಇರುವದು

ಲೋಕದಲ್ಲಿ ಹಾರ್ಮೋನಿಯಂ, ಗ್ರಾಮೋಫೋನು ಬಂತು ಸಂಗೀತ ಹೇಗೆ ಹಾಳಾಗುತ್ತಿದೆಯೋ ಹಾಗೆ ಈ ಟೈಪುರೈಟರುಗಳು ಹೆಚ್ಚಿ ಬಾಲಕರ ಭಾಷಾಜ್ಞಾನವು ಹಾಳಾಗುತ್ತಿದೆಯೆಂದು ಒಬ್ಬ ಅಮೇರಿಕಾ ದೇಶೀಯನು ಹೇಳುವನು ಇದು ವಾಸ್ತವಾಂಶವೆಂದು ನಂಬುವದರಲ್ಲಿ ಯಾವ ಪ್ರತ್ಯವಾಯವೂ ನಮಗ ಕಂಡುಬರುವದಿಲ್ಲ ಹಿಂದ ಕಾಗದಗಳಿರಲಿಲ್ಲ, ಮಸಿಕಡ್ಡಿಗಳರಲಿಲ್ಲ ಅಚ್ಚಿನ ಹೆಸರನ್ನೇ ಕಾಣರು ಅಂತಹ ಕಾಲದಲ್ಲಿ ಕಷ್ಟದಲ್ಲಿ ತಯಾರಿಸಿದ ಕಂಠದಿಂದ ಓಲೆಗರಿಗಳ ಮೇಲೆ ಬರೆದು ಕನ್ನಡಸಾಹಿತ್ಯ ದೇವಿಯನ್ನು ಜೀವಂತವಾಗಿಯುಳಿಸಿ ಕಾಪಾಡಿದ ನಮ್ಮ ಪೂರ್ವಜರಿಗೆ ಕ್ಲೇಶವನ್ನೀಯದ ವರ್ಣಮಾಲೆಯು ಸಕಲ ಸೌಕರ್ಯಗಳಿಂದ ಕೂಡಿದ ಈಗಿನ ಕಾಲದ ಸಾಹಿತ್ಯ ಪ್ರೇಮಿಗಳಿಗೆ ಹೊರೆಯಾಗಿರುವದು ಆಶ್ಚರ್ಯವನ್ನುಂಟುಮಾಡುತ್ತಿದೆ

ವಾಚಕ ಮಹಾಶಯರೇ ಒಟ್ಟಿನಲ್ಲಿ ದೈವದತ್ತವಾದ ಶಕ್ತಿಯ ಪ್ರೇರಣೆಯಿಂದ ತಲೆ ತಲೆಗೂ ಅಂದದಲ್ಲಿಯೂ, ಚಂದದಲ್ಲಿಯೂ, ನಾವು ಮುಂದ ಮುಂದೆ ಹೋಗುತ್ತಿರುವಾಗ, ಕಲ್ಯಾಣ ಮಹೋತ್ಸವದ ಕಾಲದಲ್ಲಿ ವಧೂ ವರರಿಗೆ ಅಲಂಕರಿಸುವಂತೆ ನಮ್ಮ ಕನ್ನಡ ಭಾಷಾ ದೇವಿಗ ಹೆಚ್ಚು ಹೆಚ್ಚು ಅಲಂಕಾರಮಾಡುತ್ತಿರುವಾಗ, ಮಧ್ಯೆ ಅಲಂಕಾರವು ಹೆಚ್ಚು ಕ್ಲೇಶವಾದುದು ಎಂದು ಅಲಂಕಾರವನ್ನು ಕಿತ್ತು ಬಿಸಾಡುವುದು ಸಾಧುವಾದುದೇ! ಕಿರೀಟದಲ್ಲಿನ ಮುತ್ತು, ರತ್ನ, ಪಚ್ಚೆಗಳು ಹೆಚ್ಚೆಂದು ಅವುಗಳನ್ನು ಕಿತ್ತುಹಾಕಿದರ ಕಿರೀಟದ ಅಂದವು ಕೆಡುವದಿಲ್ಲವೆ! ಮುತ್ತು ರತ್ನಗಳ ಬದಲಾಗಿ ಕಾಗೆ ಬಂಗಾರವನ್ನೋ ಗಾಜನ್ನೋ ಇಟ್ಟರೆ ಅದು ಮನಸ್ಸಿಗೆ ಹರ್ಷವನ್ನೀಯುವುದೇ! ಭಾಷೆಯೂ ಹಾಗೂ ಸಾಹಿತ್ಯವೂ ಕಲಿಯುವವರ ಕಷ್ಟದ ಬಗೆಗಳಮೇಲೆ ನಿಂತಿಲ್ಲ ನಮ್ಮ ಮನಸ್ಸಿಗೂ ಹೃದಯಕ್ಕೂ ಆನಂದವನ್ನೀಯುವ ಅಂದಚಂದಗಳಮೇಲೆ!

ಚಿರತೆಯೊಡನೆ ಕದನ ಮಾಡಿದನು.

ಪೋಲೀಸಿನವನೊಬ್ಬನ ಸಾಹಸ

ಉತ್ತರ ಆರ್ಕಾಟ್ ಜಿಲ್ಲೆಯ ವಾಂಡಿವಾಷ್ ತಾಲ್ಲೂಕಿನಲ್ಲಿ ಮಸ್ತಾನ್ ಎಂಬ ಪೋಲೀಸಿನವನು ಚಿರತೆಯೊಡನೆ ಕಾದಾಡಿದ ಭಯಂಕರ ಸಮಾಚಾರ ಬಂದಿದೆ ಮಸ್ತಾನ್ ಎಂಬುವನಿಗೆ ೪೦ ವಯಸ್ಸು ವದನಾಪುರದ ಪೋಲೀಸ್ ಸ್ಟೇಷನ್ನಿಗೆ ಸೇರಿದವನು.

ಕೆಲವು ಹಳ್ಳಿಗರು ತಮ್ಮ ಹೊಲಗಳಲ್ಲಿ ಒಂದು ಚಿರತೆಯು ತಿರುಗಾಡುವದನ್ನು ಕಂಡರ ಪದರಿ ಪೋಲೀಸ್ ಠಾಣೆಗ ವರ್ತಮಾನ ಕಳಿಸಿದರು

ಚಿರತೆಯನ್ನು ಕೊಲ್ಲಲು ಮಸ್ತಾನನನ್ನು ಆ ಸ್ಥಳಕ್ಕೆ ಕಳಿಸಲಾಯಿತು

ಮಸ್ತಾನನು ಕೆಲವು ಗುಂಡುಗಳನ್ನು ಹಾರಿಸಿದ ಗುರಿತಪ್ಪಿತು. ಚಿರತೆಯು ರೋಷದಿಂದ ಮಸ್ತಾನನ ಮೇಲೆ ಹಾರಿ ಅವನ ಬಲ ತೋಳನ್ನು ಬಲವಾಗಿ ಕಚ್ಚಿ ಹಿಡಿಯಿತು

ಮಸ್ತಾನನು ಧೈರ್ಯಗುಂದದೇ ಚಿರತೆಯ ಎದೆಗೆ ಕೆಲವೇಟುಗಳನ್ನು ಕೊಟ್ಟು ಅದರ ಹಿಡಿತವನ್ನು ತಪ್ಪಿಸಿದ ಚಿರತೆ ಸಾಕಾಗಿ ಕೆಳಗ ಬಿತ್ತು ಮೊದಲೇ ಗುಂಡಿನೇಟುಗಳು ಬಿದ್ದುದರಿಂದಲೂ ಇವನ ಹೊಡೆತಗಳಿಂದಲೂ, ಮೃತಪಟ್ಟಿತು

ಮಸ್ತಾನನನ್ನು ಮದರಾಸಿನ ಜನರಲ್ ಆಸ್ಪತ್ರೆಗೆ ಸೇರಿಸಲಾಗಿದೆ

ವಿಜಯನಗರ ಸ್ಮಾರಕೋತ್ಸವ

ವ್ಯವಸ್ಥಾಪಕರಿಗೆ ಒಂದು ಸಲಹೆ

ಇದೇ ಸಂವತ್ಸರದ ಕನ್ನಡ ಚಕ್ರಾಧಿಪತ್ಯದ ರಾಜ್ಯ ಸ್ಥಾಪನೆಯ ಸ್ಮಾರಕೋತ್ಸವವು ನಡೆಯುವದು ಸರಿಯಷ್ಟೆ ಈ ಸಂದರ್ಭದಲ್ಲಿ ಉತ್ಸವ ವ್ಯವಸ್ಥಾಪಕರೂ ಕನ್ನಡಾಭಿಮಾನಿಗಳೂ ಈ ಕೆಳಗಿನ ವಿಚಾರಗಳಿಗ ಗಮನ ಕೊಟ್ಟು ಉತ್ಸವದ ವೇಳೆಯೊಳಗೆ ಸರಿಯಾದ ವ್ಯವಸ್ಥೆಯಿಂದ ಸರ್ವ ಕನ್ನಡಿಗರಿಗೂ ವಿಚಾರವನ್ನು ತಿಳಿಯಪಡಿಸಬೇಕಾಗಿ ಪ್ರಾರ್ಥನೆ

ವಿಜಯನಗರ ಸ್ಥಾಪಕರಾದ ಶ್ರೀ ವಿದ್ಯಾರಣ್ಯ (ಮಾಧವಾಚಾರ್ಯ) ರವರ ವಂಶಿಕರು ಯಾರಾದರೂ ಇದ್ದಾರೆಯೆ? ಚಕ್ರಾಧಿಪತ್ಯದ ಸ್ಥಾಪನೆಗೆ ಮುಂಚೆ ಮದರಿಯವರ ವಂಶಸ್ಥರು ಎಲ್ಲಿದ್ದರು? ರಾಜ್ಯಸ್ಥಾಪನೆಗೆ ಮುಂಚೆ ಅವರ ವೃತ್ತಿ ಏನು? ರಾಜ್ಯಕ್ಕೆ ಚಕ್ರವರ್ತಿಗಳೆನಿಸಿದ ಹಕ್ಕಬುಕ್ಕರ ಪೂರ್ವಜರು ಎಲ್ಲಿಯವರು? ಅವರಿಗೇ ರಾಜ್ಯಾಧಿಕಾರಬರಲು ಕಾರಣವೇನು? ಸದರಿ ವಂಶದಲ್ಲಿ (ಹೆಣ್ಣು ಸಂತತಿ, ಗಂಡು ಸಂತತಿ) ಸಂಸಾರಗಳೇನಾದರೂ ಉಂಟೆ?

—ಕಿಕ್ಕೇರಿ

ವಿಮಾನ ಪ್ರಣಯ ಮೊಕದ್ದಮೆ.

ಮದರಾಸಿನ ರಂಗನಾಯಕಿ ಎಂಬಾಕೆಯನ್ನು ವಿಮಾನದಲ್ಲಿ ಅಪಹರಿಸಿಕೊಂಡು ಹೋದನೆಂದು ಮೂರುತಿಂಗಳ ಕಠಿಣಸಜಾ ಮತ್ತು ೧೦೦೦ ರೂಪಾಯಿಗಳ ದಂಡಕ್ಕೆ ಗುರಿಯಾಗಿದ್ದ ಆರ್ ಎನ್ ಕಾಪ್ರೂರ್ ಎಂಬುವನು ನಿರಪರಾಧಿಯೆಂದು ಬೊಂಬಾಯಿ ಹೈಕೋರ್ಟಿನ ನ್ಯಾಯಾಸ್ಥಾನದಲ್ಲಿ ತೀರ್ಮಾನವಾಯಿತು

"ನ್ಯಾಯಾಧಿಪತಿಗಳು ಅಪರಾಧಿಯು ವ್ಯಭಿಚಾರಮಾಡಿದನೆಂಬುದೂ ಪುಸಲಾಯಿಸಿದನೆಂಬುದೂ ರುಜುವಾತಾಗಲಿಲ್ಲವೆಂದು ಹೇಳಿದರು 'ರಂಗನಾಯಕಿಯ ವಿವಾಹವು ವ್ಯರ್ಥವಾಗಿತ್ತು ಗಂಡನು ಆಕೆಯನ್ನು ತಿರಸ್ಕರಿಸಿದ್ದ ರಂಗನಾಯಕಿಯು ಹೋಟೆಲಿನ ಗಂಡನು ಯಾವ ಎಚ್ಚರಿಕೆಯನ್ನೂ ಕೊಡಲಿಲ್ಲ ಈಗಲೂ ಕೂಡ ಆವನು ಆಕೆಯ ಗಮನವನ್ನು ಕೊಟ್ಟಿಲ್ಲ ಪರಿಸ್ಥಿತಿಯನ್ನು ವಿವೇಚಿಸಿ ನೋಡಿದರೆ ಕಾಪ್ರೂರನಿಗೂ ರಂಗನಾಯಕಿಗೂ ಪ್ರೇಮವಿತ್ತೆಂಬುದಕ್ಕೆ ಸಂದೇಹವಿಲ್ಲ' ಎಂದಿದ್ದಾರೆ

ಹರಿಹರ ಪುರದ ಮಠ

ಶ್ರೀ ಸ್ವಾಮಿಯವರ ಮರಣ

ಶೃಂಗೇರಿ ಮಠಕ್ಕೆ ಸಂಬಂಧಿಸಿರುವ ಹರಿಹರ ಪುರದ ಮಠದ ಸ್ವಾಮಿಗಳಾದ ಶ್ರೀ ನೃಸಿಂಹ ಹಂಸ ಸರಸ್ವತೀ ಸ್ವಾಮಿಗಳವರು ಮದನಪಲ್ಲಿಗೆ ದೂರದಲ್ಲಿರುವ ಪುಂಗನೂರಿನಲ್ಲಿ ಪರಂಧಾಮವನ್ನೈದಿದರು

ಶ್ರೀ ಸ್ವಾಮಿಗಳವರು ತಮ್ಮ ಚಾತುರ್ಮಾಸ ವ್ರತವನ್ನು ಮದನಪಲ್ಲಿಯಲ್ಲಿ ನೆರವೇರಿಸಿದರು ಈ ತಿಂಗಳು ಮೂರನೇ ತಾರೀಖಿನ ದಿನ ಮದನಪಲ್ಲಿಯಿಂದ ಹೊರಟರು ದೇಹಸ್ವಸ್ಥವಿಲ್ಲದೆ ಹೋದರೂ ಕಾಲುನಡಗೆಯಿಂದಲೇ ಪ್ರಯಾಣಮಾಡಿದರು ಪುಂಗನೂರಿನಲ್ಲಿ ದೇಹತ್ಯಾಗ ಮಾಡಿದರು

ಕೂಡಲೇ ಶ್ರೀ ಸ್ವಾಮಿಗಳ ಮೃತ ದೇಹವನ್ನು ಕಾರಿನಲ್ಲಿ ಮುಳಬಾಗಿಲಿಗೆ ಸಾಗಿಸಲಾಯಿತು ಸ್ವಾಮಿಗಳೊಡನಿದ್ದ ಸುಮಾರು ೫೦,೦೦೦ ರೂಪಾಯಿ ಬೆಲೆ ಬಾಳುವ ಮಠದ ಸಾಮಾನುಗಳನ್ನು ಜಿಲ್ಲಾಧಿಕಾರಿಗಳು ಬಂದು ಬೇಗ ಮುದ್ರೆ ಮಾಡಿಸಿದರೆ.

ಕುಮಾರಿ ಜೈರಮ್ಮ

ಈಚೀಚೆಗೆ ಸುಪ್ರಸಿದ್ಧಳಾಗಿರುವ ಬೆಂಗಳೂರಿನ ಕುಮಾರಿ ಜೈರಮ್ಮನು ತನ್ನ ಗುರುಗಳಾದ ಶ್ರೀ ಬಿ ಆರ್ ಶ್ರೀನಿವಾಸರಾಯರೊಡನೆ ಮುಂದಿನ ಡಿಸಂಬರ್ ತಿಂಗಳಲ್ಲಿ ಬೊಂಬಾಯಿಗೆ ತೆರಳುವಳೆಂದೂ ಅಲ್ಲಿ ತನ್ನ ಅದ್ಭುತ ಸಾಹಸವನ್ನು ಪ್ರದರ್ಶನ ಮಾಡುವಳೆಂದೂ ತಿಳಿದುಬಂದಿದೆ

ಶಾಸ್ತ್ರಿ ಮಾತ್ರ ಪ್ರವಾಸದ ಅನುಭವಗಳು

ಶ್ರೀ ವಿ. ಸುಬ್ರಹ್ಮಣ್ಯಯ್ಯನವರೊಡನೆ ಭೇಟಿ

(ನಮ್ಮ ವಿಶೇಷ ಪ್ರತಿನಿಧಿಗಳಿಂದ)

ಶ್ರೀನಗರ್ ಆಸ್ಥಾನದವರು ತತ್ವಶಾಸ್ತ್ರ ಪಂಡಿತರು ಆಗಿರುವ ಮಹಾಸ್ವಾಮಿಯವರ ಸಂಗಡ ವಿದೇಶ ಯಾತ್ರೆಯನ್ನು ಮುಗಿಸಿ ಬಂದವರು ಉಜ್ವಲವಾದ ಪರಿಭಾಷಾ ಜ್ಞಾನ ಉಳ್ಳ ಸಂಭಾಷಣೆಯ ತಿರುಳನ್ನು ಇಲ್ಲಿ ಕೊಟ್ಟಿದ್ದೇವೆ. ಶ್ರೀ ಅಯ್ಯರವರಿಗೆ ಪ್ರಪಂಚದ ತತ್ವಶಾಸ್ತ್ರಜ್ಞರ ನಡುವೆ ಒಂದು ಗಣ್ಯವಾದ ಸ್ಥಾನ ಉಂಟು. ಇವರು ಮೈಸೂರಿಗಾಗಿ ದುಡಿದವರು, ಬಾಳುತ್ತಿರುವವರು, ಮೈಸೂರಿಗೆ ಕೀರ್ತಿ ತಂದವರಲ್ಲೊಬ್ಬರು.

ಇಂಗ್ಲೆಂಡಿನಲ್ಲಿರುವ ಭಾರತೀಯರ ಸ್ಥಿತಿಯನ್ನು ಕುರಿತು ತಿಳಿಸುತ್ತಾ ಹೀಗೆಂದರು—ಈಗ್ಗೆ ಕೆಲವು ವರ್ಷಗಳ ಕೆಳಗೆ ಇಂಡಿಯನ್ ಅಸೋಸಿಯೇಷನ್ ಎಂಬ ಹೆಸರಿನ ಒಂದೇ ಸಂಸ್ಥೆ ಇತ್ತು. ಭಾರತೀಯರೆಲ್ಲರೂ ಏಕತ್ರ ಅಲ್ಲಿ ಸೇರುತ್ತಿದ್ದರು. ಈಗ ಸೌತಿಂಡಿಯನ್ನರೇ ಬೇರೆ, ಇಸ್ಲಾಮೀಯರೇ ಬೇರೆ, ಬ್ರಾಹ್ಮಣೇತರರೇ ಬೇರೆ, ಹೀಗೆ ಬೇರೆ ಬೇರೆ ಸಾಕಷ್ಟು ಸಮಾಜಗಳಾಗಿ ಒಡೆದು ಹೋಗಿವೆ. ನಮ್ಮ ಐಕ್ಯಕ್ಕೆ ಹೇಗೂ ಸ್ವಲ್ಪವೆ ಕೆಲಸಕ್ಕೂ ಮತ್ತು ನಿದರ್ಶನವು ಬೇಕೆಂದವರು ಭಾರತದಲ್ಲಿ ಈ ಹೊಸ ಬಗೆ ದೇಶಭಾಷೆಯ ವಿಶ್ವವಿದ್ಯಾಲಯಗಳನ್ನೇ ಹೆಚ್ಚು ಅನುಮೋದಿಸುತ್ತಿರುವರು. ಆದರೆ ಭಾಷೆಯ ಅಭಿಮಾನದಿಂದ ಭಾರತೀಯರು ಒಬ್ಬರು ಮತ್ತೊಬ್ಬರ ದೂರವಾಗದೆ ಒಟ್ಟು ಭಾರತೀಯರ ಏಕಮತ್ಯಕ್ಕೆ ಕುಂದುಂಟಾಗದಂತೆ ಕಾಪಾಡಿಕೊಳ್ಳಬೇಕಲ್ಲವೆ? ಎಂಬ ಸಂದೇಹವೂ ಏಳಬಹುದು. ರಾಜನೀತಿಗೂ ಶಿಕ್ಷಣ ತತ್ವಕ್ಕೂ ಸಂಬಂಧವಿರಬೇಕು ಎಂದರು.

ಅಲ್ಲಿನ ಬಹುಮಂದಿ ಪ್ರಖ್ಯಾತ ತತ್ವಶಾಸ್ತ್ರಜ್ಞರಿಗೆ ಭಾರತೀಯರ ಹೊಸ ಸ್ಥಿತಿಗೂ ಪರತಂತ್ರ್ಯಕ್ಕೂ ನಮ್ಮ ತತ್ವಶಾಸ್ತ್ರವೇ ಕಾರಣವೆಂಬ ತಿಳುವಳಿಕೆ ಇದೆ. ಅವರ ತಿಳುವಳಿಕೆಯಲ್ಲಿ ಇಲ್ಲಿನ ಹಲವರ ಬಗೆಯೂ ತತ್ವಕ್ಕೂ ವರ್ತನೆಗೂ ಇರುವ ವ್ಯತ್ಯಾಸವನ್ನು ತಿಳಿಯದುದೇ ಒಂದು ದೋಷ. ಒಬ್ಬ ತತ್ವಶಾಸ್ತ್ರಜ್ಞನು ನಿಮ್ಮ ತತ್ವಶಾಸ್ತ್ರವು ನಮಗೆ ಬೇಡ, ದತ್ತು ಸಾವಿರ ವರ್ಷಗಳಿಂದ ಈ ನಿಮ್ಮ ತತ್ವಶಾಸ್ತ್ರವು ನಿಮಗೆ ಕೊಟ್ಟಿರುವುದೇನು? ರಾಜಕೀಯೋನ್ನತಿಯೆ? ಆರ್ಥಿಕೋನ್ನತಿಯೆ? ಸಾತ್ತಿಕತೆಯ ಮರಣಾನಂತರ, ಪರಲೋಕದಲ್ಲಿ ಸುಖವೆಂದು ಸಾರುವ ತತ್ವಶಾಸ್ತ್ರವು ನಮಗೆ ಖಂಡಿತವಾಗಿಯೂ ಬೇಡ, ಎಂದು ಕೋಪಿಸಿ ಬೈದರು ಅಷ್ಟೆ? ಅಲ್ಲಿ ನಿಮ್ಮ ತತ್ವಶಾಸ್ತ್ರವು ಅನ್ನೊಂದು ವರ್ಗದವರೂ, ನಿಮ್ಮ ಸ್ಥಿತಿಗತಿಯನ್ನರಿತ ಕೃಷ್ಣನೋ, ಮಹನೀಯರೋ ಆಗುತ್ತಿರುವುದೇಕೆ ಎಂದು ಕೇಳಿದ ಒಬ್ಬರು ಕೇಳಿದರಂತೆ. ಇಂದು ಯೂರೋಪ್ ಅಮೆರಿಕಾಗಳಲ್ಲಿ ಕಾಣುತ್ತಿರುವುದು ಸತ್ತಮೇಲೆ ಪರಲೋಕದಲ್ಲಿ ಅನುಭವಿಸುವ ಪರಮ ಸುಖವಲ್ಲ, ಬದುಕಿರುವಾಗ ಹೊರಗಿರುವ ರೀತಿ ಸರಿಸಮವಾಗಿ ತಲೆ ಎತ್ತಿ ಬಾಳುವುದನ್ನು ಕಲಿಸುವ ತತ್ವಶಾಸ್ತ್ರ ಎಂದರು. ನಾನು ಭಗವದ್ಗೀತೆ ಎಂಬುದೊಂದು ಗ್ರಂಥ ನಿಮಗೆ ಗೊತ್ತೆ? ಎಂದೆ. ಹೆಸರನ್ನು ಕೇಳಿದ್ದೇನೆ ಎಂದರು. ಅದರಲ್ಲಿ, ಅರ್ಜುನನೆಂಬುವನು ಯುದ್ಧವು ಬೇಡ ಸತ್ತಮೇಲೆ ಸ್ವರ್ಗ ಸುಖಕ್ಕೆ ಇದು ಬಿಡ್ಡೆಯೆಂದು ಹೇಳಿದಾಗ ಬದುಕಿರುವಾಗ ನಿನ್ನ ಕರ್ತವ್ಯವನ್ನು ಮಾಡು, ಎಂದು ಶ್ರೀಕೃಷ್ಣನು ಬೋಧಿಸಿ ಯುದ್ಧವನ್ನು ಮಾಡಿಸಿದನು.

ಮತ್ತು ಮರಣಾನಂತರದ ಸ್ಥಿತಿಯ ಸುಖವನ್ನು ಹೆಚ್ಚಾಗಿ ಬೋಧಿಸುತ್ತದೆ ತತ್ವಶಾಸ್ತ್ರವು ಜೀವಿತಿಯವಾಗಿನ ಸೌಖ್ಯವನ್ನು ಬೋಧಿಸುತ್ತದೆ ಭಾರತೀಯರ ನಾವು ಇಂದು ಹೀನಸ್ಥಿತಿಯಲ್ಲಿರುವುದು ಸತ್ಯ. ಅದಕ್ಕೆ ಕಾರಣವು ನಮ್ಮ ತತ್ವಜ್ಞಾನವಲ್ಲ, ಅದರ ತಪ್ಪಾದ ತಿಳುವಳಿಕೆ, ಎಂದು ತಿಳಿಸಿದ ಮೇಲೆ ನಮ್ಮ ತತ್ವಶಾಸ್ತ್ರದಲ್ಲಿ ಅವರಿಗೆ ಗೌರವ ಬುದ್ಧಿಯೂ ಆದರವೂ ಹುಟ್ಟಿತು, ಎಂದು ಹೇಳಿದರು. ಒಬ್ಬೊಬ್ಬರಿಗೆ ಅವರ ತಿಳಿವು, ಕೇವಲ ಬಾಹ್ಯ ಪ್ರಪಂಚ, ಭೌತಿಕ ಜಗತ್ತಿಗೆ ಮಾತ್ರ ಸಂಬಂಧಿಸಿರುವುದೆಂದು ಅಪೂರ್ಣವಾದುದೆಂದೂ, ಬುದ್ಧಿ ಎಂದರೇನೆಂದೂ ವಿವರಿಸಿ ಹೇಳಬೇಕಾಯಿತು. ವಿಷಯವು ತಿಳಿದ ಮೇಲೆ ಹಲವರು ಇನ್ನಷ್ಟು ಕಲಿಯಬೇಕೆಂದು ವಿಸ್ತರವಾಗಿ ಅರಿತವರು. ಜ್ಞಾನವೆಂಬುದು ಬುದ್ಧಿಗೆ ಮೀರಿದ್ದೆಂದಾಗಲೀ, ಕರ್ಮಕ್ಕೆ ತತ್ವಶಾಸ್ತ್ರದಲ್ಲಿ ಯಾವ ಸ್ಥಾನವಿರುವುದೆಂದಾಗಲೀ ಸರಿಯಾಗಿ ತಿಳಿದಿರುವುದಿಲ್ಲ.

ಒಬ್ಬರನ್ನು ಪ್ರಜ್ಞೆ ಎಂದರೇನು? ಎಂದು ಕೇಳಬೇಕಾಗಿ ಬಂದಿತು. ಅಲ್ಲಿ ಅವರು ಮೌನವಾದರು. ಜಗತ್ತಿನ ಸ್ಥಿತಿಯು ಅದು ಜ್ಞೇಯ. ಜ್ಞಾತೃವ್ಯಾಪಾರ! ಜ್ಞಾನವೆಂಬುದು. ಯಾವುದು ಎಂಬುದನ್ನು ವಿಚಾರಿಸಬೇಕು. ಒಬ್ಬ ಜಗತ್ತನ್ನು ವಿವೇಚಿಸಬೇಕಾದುದು ಅಂತರ್ಜಗತ್ತು, ಬಹಿರ್ಜಗತ್ತು. ಈ ಎರಡನ್ನೂ ತಿಳಿದಲ್ಲದೆ ಜ್ಞಾನವು ಉಂಟಾಗುವುದಿಲ್ಲ. ಬರಿ ಪ್ರಪಂಚವನ್ನೇ ಆಗಲಿ ಅಥವಾ ಒಳಗಿನ ವಿಷಯಗಳನ್ನಾಗಲಿ ಮಾತ್ರ ಎಷ್ಟು ಓದಿದರೂ ಅದು ತತ್ವವಾಗುವುದಿಲ್ಲ. ಅವು ಸಾಯನ್ಸ್ (ಭೌತಿಕ ಶಾಸ್ತ್ರ) ಮನಶ್ಶಾಸ್ತ್ರ, ಮತ, ಇವೆಲ್ಲವೂಗಳಾಗುವುವು. ತತ್ವಶಾಸ್ತ್ರಕ್ಕೆ ಈ ಎಲ್ಲವುಗಳ ವಿಚಾರ ಆವಶ್ಯಕ.

ಬರ್ಲಿನ್ನಲ್ಲಿ ಪರದೇಶದವರಿಗೆ ಜರ್ಮನಿಯನ್ನು ಪರಿಚಯಮಾಡಿಸುವುದಕ್ಕೆ ಒಂದು ಸಮಾಜವಿದೆ. ನಾನು ಆ ಸಮಾಜಕ್ಕೆ ಹೋಗಿದ್ದೆ. ಪಾಠಶಾಲೆಗಳಿಗೆಲ್ಲಾ ವಿಶ್ರಾಂತಿ ದಿನವಾಗಿದ್ದಾಗಲೂ ಕೆಲವು ತರಗತಿಗಳನ್ನು ಕೂಡಿಸಿ, ಪಾಠಕ್ರಮಗಳು ನಡೆಯುವ ರೀತಿಯನ್ನೆಲ್ಲಾ ವಿವರಿಸಿ ತೋರಿಸಿದರು. ಒಂದು ಸಂಗೀತವನ್ನು ತೆಗೆದುಕೊಂಡರೆ, ಸ್ವರವಿನ್ಯಾಸ, ರಾಗಪ್ರಸ್ತಾರ ಮುಂತಾದ ಶಾಸ್ತ್ರರಹಸ್ಯಗಳನ್ನು ಮಾತ್ರವಲ್ಲದೆ, ಮುಖಭಾವವು ಹೇಗಿರಬೇಕು? ಧ್ವನಿಯು ಎತ್ತಗಡೆ, ನಿಲುಗಡೆ ಹೇಗಿರಬೇಕು? ಉಡುಪು, ಕುಳಿತುಕೊಳ್ಳುವುದು, ನಿಂತುಕೊಳ್ಳುವುದು ಮುಂತಾಗಿ ಎಲ್ಲವನ್ನೂ ಕಲಿಸಿಕೊಡುತ್ತಾರೆ. ಮತ್ತೊಂದು ಕಡೆ ನಮ್ಮ ಕಣ್ಣೆದುರಿಗೆ ಸಂಧ್ಯಾಕಾಲಗಳು, ಮಧ್ಯಾಹ್ನ, ಋತುಗಳು, ಗುಡುಗು ಮಿಂಚು ಇವೂ ಅಲ್ಲದೆ ಸಾಕ್ಷಾತ್ತಾಗಿ ಮಳೆ ಬಂದು ನೆನೆಯುವವನ್ನು ತೋರಿಸುತ್ತಾರೆ. ಇವೆಲ್ಲವನ್ನೂ ಅರ್ಧಗಂಟೆಯ ಕಾಲದಲ್ಲೇ ನೋಡಬಹುದು. ಮತ್ತೊಂದು ಕಡೆ ಭೂಗೋಳ, ಖಗೋಳವೆಲ್ಲವೂ ಚಲಿಸುವುದನ್ನು ನೋಡುವಹಾಗೆ ಮಾಡಿ ತೋರಿಸುವರು. ನಾವು ನೂರಾರು ವರುಷಗಳು ಓದಿದರೂ ಎಂದಿಗೂ ತಿಳಿಯಲಾರದು. ನಾವು ಆ ಶಾಲೆಗಳ ವಿಚಿತ್ರವು ಇನ್ನೂ ಹೆಚ್ಚಾಗಿರುವುದು.

ಆ ದೇಶಗಳಲ್ಲಿ ಯಾವುದನ್ನು ನೋಡಿದರೂ ಮನುಷ್ಯನ ಬುದ್ಧಿಯನ್ನು ತೀಕ್ಷ್ಣವಾಗಿ ಮಾಡುವುದಕ್ಕೂ, ಪ್ರಪಂಚಜ್ಞಾನವನ್ನು ಹೆಚ್ಚಿಸುವುದಕ್ಕೂ ಈ ಲೋಕದಲ್ಲಿ ಬಾಳುವುದಕ್ಕೆ ಬೇಕಾದ ಸಲಕರಣೆ ಮಾಡಿಕೊಳ್ಳುವುದಕ್ಕೂ, ಕೌಶಲ್ಯವನ್ನು ವೃದ್ಧಿಪಡಿಸಿಕೊಳ್ಳುವುದಕ್ಕೂ ಶಕ್ತಿಯನ್ನುಂಟುಮಾಡಿಕೊಳ್ಳುವ ರೀತಿಯನ್ನು ತಿಳಿಸುತ್ತದೆ.

ಜರ್ಮನಿಗೂ ಇಂಡಿಯಾಕ್ಕೂ ಸಂಬಂಧವೆ.

ಪೋರ್ಚುಗೀಸರಿಗೆ ಸೇರಿದ ಗೋವಾ ಪಟ್ಟಣವನ್ನು ಜರ್ಮನಿಯವರು ಆಕ್ರಮಿಸಬಹುದೆಂಬ ವದಂತಿ ಹೊರಟಿತ್ತಷ್ಟೆ. ಅದು ನಿಜವಲ್ಲವೆಂದೂ ಸಹ ಹೇಳಲ್ಪಟ್ಟಿತು. ಆದರೆ ಕಳೆದ ಮಂಗಳವಾರ ಜರ್ಮನಿಯ ನೌಕಾಪಡೆಯ ಎಂಡನ್ ಹಡಗು ಗೋವಾಕ್ಕೆ ಭೇಟಿ ಕೊಟ್ಟಿತು. ಅದಕ್ಕೆ ಜರ್ಮನಿಯ ಧ್ವಜವನ್ನು ಹಾಕಿದ್ದರು. ಅದರ ಗುರುತು ಯಾರಿಗೂ ತಿಳಿಯಲಿಲ್ಲ. ಸ್ವಲ್ಪ ಹೊತ್ತಿನಮೇಲೆ ಹಾರಿಹೋಯಿತು. ಇದರ ಪೂರ್ವಾಪರಗಳು ತಿಳಿಯಬೇಕಾಗಿದೆ.

ಕೃಷ್ಣರಾಜಸಾಗರ, ಬೃಂದಾವನ

ಕೃಷ್ಣರಾಜಸಾಗರದಲ್ಲಿ ಬೃಂದಾವನ ತೋಟವನ್ನು ನೋಡಲು ಹೋಗುವವರ ಸೌಕರ್ಯಕ್ಕಾಗಿ ಮೈಸೂರು ಉಡುಪಿ ಆನಂದಭವನದ ಮಾಲೀಕರಾದ ಶ್ರೀ ಗುರುರಾಜಾಚಾರ್ಯರವರು ಒಂದು ಹೊಸ ಫಲಾಹಾರಮಂದಿರವನ್ನು ಏರ್ಪಡಿಸಿರುವರು. ಇದರ ಆರಂಭೋತ್ಸವವು ಕಳೆದ ಬುಧವಾರ ವೈಭವದಿಂದ ನಡೆಯಿತು.

ಭಾವಿಯಲ್ಲಿ ಜನನ

ಪ್ರಸವ ವೇದನೆಯಿಂದ ಬಾವಿಗೆ ಬಿದ್ದ ಪ್ರಸಂಗ.

ಬಾವಿಯಲ್ಲಿ ಮನುಷ್ಯರು ಮಕ್ಕಳ-ಹೆತ್ತುದನ್ನು ಇದುವರೆಗೂ ಕೇಳಿರಲ್ಲಿಲ್ಲ. ಆ ರೀತಿ ಜನಿಸಿದ ಮಗುವೂ ತಾಯಿಯೂ ಸುರಕ್ಷಿತವಾಗಿರುವುದನ್ನು ಕೇಳುವುದು ಮತ್ತೂ ದುರ್ಲಭ. ಆದರೆ ಇಂತಹ ವಿಚಿತ್ರ ಪ್ರಸಂಗವು ಈಗ ನಡೆದಿದೆ. ಅದೂ ಎಲ್ಲಿ? ಇಂಗ್ಲೆಂಡ್ ಅಮೆರಿಕಾ ಅಥವಾ ಕಣ್ಣುಕಾಣದ ದೇಶಗಳಲ್ಲಲ್ಲ. ನಮ್ಮ ದೇಶದಲ್ಲೇ ನಮ್ಮ ಮೈಸೂರು ಸೀಮೆಯಲ್ಲೇ. ಕೋಲಾರ ಜಿಲ್ಲೆಯ ಮುಳಬಾಗಿಲು ತಾ॥ ನಂಗ್ಲಿ [illegible] ರು ಗ್ರಾಮದಲ್ಲಿ ಇದು ನಡೆಯಿತು. 1[illegible] ವರ್ಷ ವಯಸ್ಸಿನ ಒಬ್ಬ ಮುಸಲ್ಮಾನ ಯುವತಿ ಪ್ರಥಮಸಲ ಗರ್ಭಿಣಿ. ಪ್ರಸವವೇದನೆಯನ್ನು ತಡೆಯಲಾರದೆ ತಪ್ಪಿಸಿಕೊಂಡು ಒಂದು ಬಾವಿಯೊಳಕ್ಕೆ ಹಾರಿದಳು. ನೀರಿನೊಳಕ್ಕೆ ಬಿದ್ದ ಕೂಡಲೇ ಪ್ರಸವವಾಯಿತು. ಮಗುವನ್ನು ಹಿಡಿದುಕೊಂಡು ಕೂಗಿಕೊಂಡಳು. ಅದನ್ನು ಕೇಳಿ ಸುತ್ತಮುತ್ತಲೂ ಇದ್ದ ಜನರು ಬಾವಿಗೆ ಇಳಿದು ಮಗುವನ್ನೂ ಬಾಣಂತಿಯನ್ನೂ ಸುರಕ್ಷಿತವಾಗಿ ಮೇಲಕ್ಕೆ ತಂದರು. ತಾಯಿಯೂ, ಮಗುವೂ ಸುರಕ್ಷಿತವಾಗಿದ್ದಾರೆ. ದೈವವಿಲಾಸವು ಚಿತ್ರತರವಾದುದು. ಆಯುಷ್ಯವು ಗಟ್ಟಿಯಾಗಿದ್ದವರ ಪಟ್ಟದ ಶಿಖರದಿಂದ ಬಿದ್ದರೂ ಸಾಯುವುದಿಲ್ಲ.

ಮೈಸೂರು ಸಂಸ್ಥಾನದ ವೈಶ್ಯಶಿಲ್ಪ ಪ್ರದರ್ಶನ.

ಮೈಸೂರು ವೈಶ್ಯ ಯುವಜನ ಸಂಘದ ಆಶ್ರಯದಲ್ಲಿ ಇದೇ ಅಕ್ಟೋಬರ್ ತಿಂಗಳು ಮಹಾನವಮಿ 27 ನೇ ತಾರೀಖಿನ ರಾತ್ರಿಗೆ ವೈಶ್ಯ ಯುವಕ ಇಲ್ಯಾಕ್ಷ್ರ ಕ್ಲಾರ್ಕ್ಸ್ ಮೈಸೂರಿನಲ್ಲಿ ನಡೆಯುತ್ತದೆ. ಈ ಸಂದರ್ಭದಲ್ಲಿ ವೈಶ್ಯ ಜನಾಂಗದ ಕುಶಲತೆಯನ್ನು ಪ್ರಕಟಿಸತಕ್ಕ ಶಿಲ್ಪಕಲಾ ವಸ್ತು ಪ್ರದರ್ಶನವನ್ನು (Exhibition) ನಡೆಸಲಾಗುತ್ತದೆ. ಬಹುಮಾನ ಏರ್ಪಡಿಸಿದೆ. ಇದಕ್ಕೆ ತಮ್ಮ ವಸ್ತು ಪ್ರದರ್ಶನಕ್ಕೆ ಮೈಸೂರು ದೇಶದಲ್ಲಿರುವ ವೈಶ್ಯರು ಬೇಕಾದಷ್ಟು ವಸ್ತುಗಳನ್ನು ಕಳುಹಿಸುವುದು.

ಮೊಸಳೆ ಹೊಟ್ಟೆಯಲ್ಲಿ ಬಂಗಾರ.

ಕಳೆದವಾರ ಶ್ರೀರಂಗಪಟ್ಟಣದ ಯಾತ್ರೋತ್ಸವದಲ್ಲಿ ಬಳಿ ಕಾವೇರಿ ನದಿಯಲ್ಲಿ ಒಂದು ಮೊಸಳೆಯನ್ನು ಗುಂಡಿಟ್ಟು ಹೊಡೆದು ಕೊಂದರು. ಅದರ ಹೊಟ್ಟೆಯಲ್ಲಿ ಒಡವೆಗಳೂ, ಬಂಗಾರವೂ ಇದ್ದವೆಂದು ತಿಳಿದುಬಂದಿದೆ.

ಅಪೂರ್ವ ವಸ್ತು.

70,000 ಸಾವಿರ ರೂಪಾಯಿ

ಬೆಲೆ ಬಾಳುವ

ದಂತ ಮತ್ತು ಚಿನ್ನದಿಂದ ಮಾಡಿದ

ಸಿಂಹಾಸನವು

ಮೈಸೂರಿನಲ್ಲಿ ಪ್ರದರ್ಶಿಸಲ್ಪಡುತ್ತೆ.

ಸ್ಥಳವನ್ನೂ, ತಾರೀಖನ್ನೂ ಗಮನಿಸಿರಿ

ಶ್ರೀ ರಂಗನಾಥ ಟೈಪ್ ಫೌಂಡ್ರಿ

ಚಿಕ್ಕಪೇಟೆ, ಬೆಂಗಳೂರು ಸಿಟಿ.

ನವಾದ ಅಕ್ಷರಗಳು, ಮುದ್ದುಮುದ್ದಾದ ಬಾರ್ಡರುಗಳು ಬಗೆಬಗೆಯ ಆಕಾರ
ಕೆಲಸದಲ್ಲಿ ೩೦ ವರ್ಷಗಳ ಕಾಲದ ಅನುಭವವಿದೆ. ಆಧುನಿಕ ಕಾಲಕ್ಕೆ
ತಕ್ಕಂತ ಅಕ್ಷರದ ಆಕಾರವನ್ನು ಬಹು ಸುಂದರವಾಗಿ ಸುಧಾರಿಸಿದ್ದೇವೆ.
" ಕನ್ನಡ, ಇಂಗ್ಲೀಷ್ " ಅಕ್ಷರಗಳಂತಹ ಸುಂದರವಾದ ಅಕ್ಷರಗಳನ್ನು
ಮತ್ತೆಲ್ಲಿಯೂ ನೋಡಲಾರಿರಿ ಮತ್ತು
ಬಗೆಯ ಸುಂದರವಾದ ಬಾರ್ಡರುಗಳು, ನಯನಮನೋಹರವಾಗಿವೆ.
ಪಾಯಿಂಟಿನಿಂದ ೪೮ ಪಾಯಿಂಟಿನವರಿಗೆ ವಿಧವಿಧವಾದ ಸುಂದರಾಕ್ಷರಗಳಿವೆ.
"ರಂಗನಾಥ ಕನ್ನಡ ಡಾಮಿನಸ" ಅಕ್ಷರಗಳನ್ನು ನೋಡಲು ಮರೆಯಬೇಡಿರಿ.
ಕಾಪರ್ ಅಲಾಯ್ಡ್ (ತಾಮ್ರಮಿಶ್ರ) ಸೀಸದಿಂದ ಅಕ್ಷರಗಳನ್ನು
ತಯಾರಿಸುತ್ತೇವೆ. ಸುಲಭ ಬೆಲೆ ಗ್ಯಾರಂಟಿಯಾದ ಬಾಳಿಕೆ.

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

ಬಾಲಸುಧಾ

ಜ್ವರದ ಗೆಡ್ಡೆಯನ್ನು ಖಾತರಿ ಗುಣ ಪಡಿಸುತ್ತೆ ಲಿವರ್ (ಪಿತ್ತ
ದಪ್ಪನಾಗಿ ಕಣ್ಣು ಹಳದಿ ಬಣ್ಣವಾಗಿದ್ದರೆ ಇವರ ಸೇವನೆಯಿಂದ ದಿನೇ
ಗುಣವಾಗುತ್ತೆ. 20 ವರ್ಷಗಳಿಂದಲೂ ಅನುಭವ ಸಿದ್ಧವಾಗಿದೆ—ಮಕ್ಕಳ
ಬಾಲಸಂಜೀವಿನಿಯನ್ನೇ ಉಪಯೋಗಿಸಿರಿ
ಸುಧಾ ಬೆಲೆ 1 ರೂ ಬಾಲಸಂಜೀವಿನಿ 4 ಆ.
ಮೈಸೂರು, ಬೆಂಗಳೂರು, ಮದ್ರಾಸುಗಳಲ್ಲಿ ನಮ್ಮ ಶಾಖೆಗಳಿವೆ.

ಸದ್ವೈದ್ಯಶಾಲಾ, ನಂಜನಗೂಡು.

ANANDA SODA FACTORY,

BEST AERATED WATER SUPPLIERS.
COMPLETE REQUISITES FOR
AERATED WATER MANUFACTURERS
AVAILABLE.

ಆನಂದಾ ಸೋಡಾ ಫ್ಯಾಕ್ಟರಿ,
ದೊಡ್ಡಪೇಟೆ, ಮೈಸೂರು

ಎರಡೇ ಸುಖಸಾಧನಗಳು!!

ಪಿಪೋನೊ.—(ಗಂಡಸಂಗೆ) ಅತ್ಯುತ್ತಮವಾದ ರಬ್ಬರು ಸಾಧನ ರತಿಕ್ರೀಡೆಗೆ ಆತಂಕವಿಲ್ಲ ಗರ್ಭೋತ್ಪತ್ತಿಯು ಬಿದರಿಕೆಯಿಲ್ಲ. ಮೇಹರೋಗದ ಹೆದರಿಕೆಯಿಲ್ಲ. ಬೆಲೆ ೧—೮—೦

ಸ್ಪೈರಗಸ್—(ಹೆಂಗಸಂಗೆ) ಹೆಂಗಸರ ಗರ್ಭನಿವಾರಣೆಗೆ ಅತ್ಯುತ್ತಮವಾದ ಸಾಧನ ಕ್ರೀಡಾ ಸಮಯದಲ್ಲುಪಯೋಗಿಸತಕ್ಕದ್ದು ಬೆಲೆ ३—८—೦

ಕೇಟಲಾಗು ಉಚಿತ
ಆಂಧ್ರಾ ಟ್ರೇಡಿಂಗ್ ಕಂಪೆನಿ,
ಕೃಷ್ಣಪ್ಪನಾಯಕನ ಬೀದಿ, ಮದರಾಸು.

ಎಂ. ವಿ. ನಾರಾಯಣರಾಯರ
ಶ್ರೀ ಸತ್ಯನಾರಾಯಣ ಪರಿಮಳ ಫ್ಯಾಕ್ಟರಿ,
ಜಗನ್ಮೋಹನ ಬಂಗ್ಲಾ ಬೀದಿ, ಮೈಸೂರು

ಪರಿಮಳ ಅಗರ ಬತ್ತಿ

ಉಪಯೋಗಿಸಿ ಪ್ರೋತ್ಸಾಹಿಸಿರಿ

THE SADHVI

RECOMMENDED FOR SCHOOLS BY THE DEPARTMENT.
No. TI 3778 146—35-36.
OFFICE OF THE DIRECTOR OF PUBLIC
INSTRUCTION IN MYSORE.

ಪ್ರಾಚೀನ ಕನ್ನಡ ವಚನ ಗ್ರಂಥಗಳು

ಸೌಗಂಧಿಕಾಪರಿಣಯ:—ಪೂರ್ವದಲ್ಲಿ ದೇವೇಂದ್ರನಿಗೆ ದೂರ್ವಾಸ ಮುನಿಗಳಿಂದ ಆಶೀರ್ವಾದ ಪೂರ್ವಕವಾಗಿ ಕೊಡಲ್ಪಟ್ಟ ಕಮಲಮಾಲಿಕೆಯನ್ನು ಆನೆಯ ಕುಂಭಸ್ಥಳದಲ್ಲಿಟ್ಟಿದ್ದನು, ಆನೆಯು ಆ ಮಾಲಿಕೆಯನ್ನು ಕಾಲಿನಲ್ಲಿ ಹೊಸಕಿ ಧ್ವಂಸಪಡಿಸಲು, ಋಷಿಗಳ ಶಾಪದಿಂದ ಭೂಲೋಕದಲ್ಲಿ ರತ್ನಪುರಿಯಲ್ಲಿ ಸುಗಂಧರಾಜನಾಗಿ ಹುಟ್ಟಿ, ಕಳಿಂಗದೇಶದ ರಾಜಪುತ್ರಿಯಾದ ಸೌಗಂಧಿಕಾದೇವಿಯನ್ನು ಸ್ವಯಂವರಮಾಡಿಕೊಂಡ, ಬಹಳ ವಿನೋದಗಳಿರುವ ಕಥೆ

೧೨೦ ಪುಟಗಳು ಕ್ರಯ ರೂ ೧—೮—೦

ಸಹಸ್ರಾಯುಚರಿತ್ರೆ—ಮಾಹಿಷ್ಮತೀ ಅರಸನ ಪಟ್ಟಪತ್ನಿಯಲ್ಲಿ ಚಾಮುಂಡಿಯ ವರಪ್ರಸಾದದಿಂದ ಜನಿಸಿ ಲೋಕಪ್ರಸಿದ್ಧನಾಗಿ ತನಗೆ ಇತರರಿಂದ ಬಂದ ಗಂಡಾಂತರಗಳನ್ನೆಲ್ಲಾ ಪರಿಹರಿಸಿಕೊಂಡ ಒಬ್ಬ ಮಹಾಪುರುಷನ ಕಥೆ

೪೭೮ ಪುಟಗಳು ಕ್ರಯ ರೂ ೨—೦—೦

ಕಾಶೀಕ್ಷೇತ್ರಮಹಾತ್ಮೆ.—ಇದರಲ್ಲಿ ೧೪ ಲೋಕಗಳ ವರ್ಣನೆ, ನದಿಗಳು, ದೇವತೆಗಳು ಋಷಿಗಳೇ ಮುಂತಾದವರ ಉತ್ಪತ್ತಿಕ್ರಮ, ಗಂಗಾ ಸಹಸ್ರನಾಮವೇ ಮೊದಲಾದ ಅನೇಕ ವಿಷಯಗಳು ಅಡಕವಾಗಿರುತ್ತೆ

೬೩೩ ಪುಟಗಳು ಕ್ರಯ ರೂ ೨—೬—೦

N B ಪುಸ್ತಕದ ಕ್ರಯದ ನಾಲ್ಕರಲ್ಲಿ ಒಂದು ಭಾಗ ಮೊಬಲಗು ಅಡ್ವಾನ್ಸ ಕಳುಹಿಸಿದರೆ ಬಾಕಿಗೆ ವಿ ಪಿ ಮಾಡಲಾಗುತ್ತೆ

ಅಡ್ರೆಸ್ಸು —

ಗುಂಡ್ಲು ಪಂಡಿತ ಲಕ್ಷ್ಮಣಾಚಾರ್ಯರ ಮಕ್ಕಳು
ಶ್ರೀನಿವಾಸ ದೇಶಿಕಾಚಾರ್,
೩೦೭, ರಾಮಶೆಟ್ಟಿಬೀದಿ, ಮೈಸೂರು.



ಟಿ. ಸಿ. ನಟರಾಜ್ ಔಷಧಾಲಯ,

ಸಯ್ಯಾಜಿರಾವ್ ರೋಡು, ಮೈಸೂರು

ಇವರಲ್ಲಿ ನೇತ್ರಪರೀಕ್ಷೆಯು ಉಚಿತವಾಗಿ ಮಾಡಲ್ಪಡುತ್ತದೆ.

ಅತ್ಯಗತ್ಯವಾಗಿ ಬೇಕಾದ ಎಲ್ಲಾ ಇಂಜಕ್ಷನ್ ಔಷಧಿಗಳೂ ಸದಾ ಕಾಲದಲ್ಲೂ ದೊರಕುವುದಲ್ಲದೆ ಸಮಸ್ತ ವ್ಯಾಧಿಗಳಿಗೂ ಚಿಕಿತ್ಸೆಯು ಬಹಳ ಸುಲಭ ಛಾರ್ಜಿನಿಂದ ಮಾಡಲ್ಪಡುತ್ತದೆ

ಝಂಡೂರವರ ಆಯುರ್ವೇದೀಯ ಸಿದ್ಧೌಷಧಗಳೆಲ್ಲವೂ ಸದಾ ದೊರಕುತ್ತವೆ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ ವಿ. ಪಂಡಿತರ

- ಬಾಲಸುಧಾ -

ಮಕ್ಕಳ ಜ್ವರದ ಗೆಡ್ಡೆಯನ್ನು ಖಾತರಿ ಗುಣ ಪಡಿಸುತ್ತೆ ಲಿವರ್ (ಪಿತ್ತಕೋಶ) ದಪ್ಪನಾಗಿ ಕಣ್ಣು ಹಳದಿ ಬಣ್ಣವಾಗಿದ್ದರೆ ಇದರ ಸೇವನೆಯಿಂದ ದಿನೇ ದಿನೇ ಗುಣವಾಗುತ್ತೆ, 20 ವರ್ಷಗಳಿಂದಲೂ ಅನುಭವ ಸಿದ್ಧವಾಗಿದೆ—ಮಕ್ಕಳ ಭೇದಿಗೆ ನಮ್ಮ ಬಾಲಸಂಜೀವಿನಿಯನ್ನೇ ಉಪಯೋಗಿಸಿರಿ.

ಬಾಲಸುಧಾ ಬೆಲೆ 1 ರೂ — ಬಾಲಸಂಜೀವಿನಿ 1 ಆ

ಮೈಸೂರು, ಬೆಂಗಳೂರು, ಮದ್ರಾಸ ಗಳಲ್ಲಿ ನಮ್ಮ ಶಾಖೆಗಳಿವೆ

ಸದ್ವೈದ್ಯಶಾಲಾ, ನಂಜನಗೂಡು.

ದ್ರಾಕ್ಷಾಮೃತ

ಈ ದ್ರಾಕ್ಷಾಮೃತವು ಸಹ್ಯಾದ್ರಿ ಪರ್ವತದಲ್ಲಿ ಅನೇಕ ವನಸ್ಪತಿಗಳ ರಸಗಳೊಂದಿಗೆ ದ್ರಾಕ್ಷಾರಸವನ್ನು ಮಿಶ್ರಮಾಡಿ ಸ್ವದೇಶಿ ಯಂತ್ರದಿಂದ ಶಾಸ್ತ್ರ ಪದ್ಧತಿ ಪ್ರಕಾರ ತಯಾರು ಮಾಡಿರುವದರಿಂದ ಸ್ವಾದಿಷ್ಟವು ವ ತ್ತು ... ಆಗಿದೆ

ಇದರ ಸೇವನೆಯಿಂದ ಶರೀರದೊಳಗಿನ ಹಳೆ ಕಡಕಿ (ಗರಮಿ) ಸಂಪೂರ್ಣ ನಾಶವಾಗುತ್ತದೆ ಮತ್ತು ಧಾತುಸ್ರಾವ, ಸ್ವಪ್ನಾವಸ್ಥೆಯಿಂದ ಅಥವಾ ... ಯಾವದೇ ಕಾರಣದಿಂದ ಬಂದ ಅಶಕ್ತತೆಯಿಂದ ಕೈಕಾಲು, ಕಣ್ಣೊಳಗೆ ... ಬೇಗೋಣ, ಶೌಚಕ್ಕೆ ಸಾಫ ಆಗದೆ ಇರೋಣ, ಮುಂತಾದ ಎಲ್ಲ ವಿಕಾರಗಳು ... ವಾಗಿ ಕ್ಷುಧಾಗ್ನಿ ಬೆಳೆಯುತ್ತದೆ ಮತ್ತು ಅನ್ನ ಚನ್ನಾಗಿ ಪಚನವಾಗಿ ... ಸಾಫವಾಗುತ್ತದೆ ಇದರ ಸೇವನೆಯಿಂದ ತರುಣರಿಗೆ ವ್ಯಭಿಚಾರದಿಂದ ... ಬೇರೆ ಕಾರಣದಿಂದ ಬಂದ ಧಾತುಕ್ಷೀಣತೆ, ನಪುಂಸಕತ್ವ ಇದ್ದರೆ ಅದು ... ಪುನಃ ಯೌವನವಂತರಾಗಿ, ಶರೀರ ಬಲವಾಗಿ ಮಕ್ಕಳು ಪುಷ್ಟಿವಂತರಾಗ ... ಹೆಂಗಸರಿಗೂ ಮತ್ತು ಮಕ್ಕಳಿಗೂ ಈ ಔಷದವು ಗುಣಕಾರಿ ಇದೆ ... ದ್ದರೆ ಮತ್ತು ಉಷ್ಣ ಗರ್ಭ ಸಂಬಂಧವಾದ ರೋಗಗಳಿದ್ದರೂ ಅವೆಲ್ಲ ... ಹೆಂಗಸರಿಗೆ ಸಂತತಿ ವೃದ್ಧಿಯಾಗುವದು ಈ ಔಷಧದ ಮೂರು ಬಾಟ್ಲಿಗಳ ಸೇವನೆ ಮಾಡಿದರೆ ಪೂರ್ಣ ಗುಣಬರುತ್ತದೆ ಇದರ ಅನುಭವ 1 ಬಾಟ್ಲಿ ... ಮಾಡಿದ ಅನಂತರ ನಿಮಗೆ ತಿಳಿದೀತು

1 ಬಾಟ್ಲಿ ಬೆಲೆ ರೂ ೧—೪—೦, 3 ಬಾಟ್ಲಿ ೩—೮—೦, 1 ಡಜನ್ ಬಾಟ್ಲಿ ಬೆಲೆ ೧೨—

ಮ್ಯಾನೇಜರ್—ದ್ರಾಕ್ಷಾಮೃತ ಡಿಪೋ ಪೋಸ್ಟ್ ನಿಪ್ಪಾಣಿ, ಜಿಲ್ಲಾ ಬೆಳಗಾ

ಮೈಸೂರು ಸ್ಟಾಕಿಸ್ಟ್ಸ —ಟಿ ಸಿ ನಟರಾಜ್, ಬೊಂಬಾಯಿ ಆನಂದ ... ಮಾಡರ್ನ್ ಫಾರ್ಮಸಿ, ಸಯ್ಯಾಜಿರಾವ್ ರೋಡ್. ಬೆಂಗಳೂರು ಸಿಟಿ—... ಶಾಸ್ತ್ರಿ ಅಂಡ್ ಸನ್ಸ್, ಚಿಕ್ಕಪೇಟೆ ತುಮಕೂರು—ಟಿ ಆರ್ ಗುರು ... ಅಂಡ್ ಬ್ರದರ್ಸ್ ಚಿಕ್ಕಮಗಳೂರು—ಎಂ ಎಲ್ ಮಂಜಯ್ಯಶೆಟ್ಟಿ ... ಮೊಗ್ಗ—ಶ್ರೀಕೃಷ್ಣ ಟ್ರೇಡಿಂಗ್ ಏಜನ್ಸಿ ಮತ್ತು ಹಿಂಡೇರಾವ್ ಬ್ರದರ್ಸ್ ... ಣಗೆರೆ—ಮಲ್ಲೇಶಪ್ಪ ಮತ್ತು ಕೆ ಚೆನ್ನಿಗಯ್ಯಶೆಟ್ಟಿ ಅಂಡ್ ಬ್ರದರ್ಸ್

"ಬ್ರೇಕ್ ಪಿಲ್ಸ"

INVENTED BY A HIMALAYAN SAGE

● ಸ್ತ್ರೀಪುರುಷರಿಗೆ ಆನಂದವನ್ನುಂಟುಮಾಡುವುದು ಈ ಮಾತ್ರೆಗಳ ... ಸಿದ ಸ್ತ್ರೀಯರ ಗರ್ಭಭಂಗಮಾಡಲು ಕಂಡುಹಿಡಿದಿರುವ ಮಾತ್ರೆಗಳಿವು ...

ವಿಶಾಲವಿಗಳ ಸೇರಿಲ್ಲ ಕಸ್ತೂರಿ, ಚಿನ್ನ, ಹಿಮಾಲಯ ... ತದ ವನಮೂಲಿಕೆಗಳು ಮುಂತಾದುವುಗಳಿಂದ ದೊಡ್ಡ ... ಗೀಶ್ವರರ ಹತ್ತಿರ ಸಂಗ್ರಹಿಸಿ ಮುದುಕತನವನ್ನು ... ಇಲ್ಲದಂತೆ ಮಾಡುವುದು ಅರ್ಧ ಘಂಟೆಯೊಳಗಾಗಿ ... ವನ್ನು ಕಲ್ಲಿನಂತೆಮಾಡಿ ರಮಿಸಲು ಉಲ್ಲಾಸವನ್ನು ಮಾ... ದು ಗುಣವಿಲ್ಲದಿದ್ದಲ್ಲಿ ಹಣ ವಾಪಸು

೬೦ ಮಾತ್ರೆಗಳು ರೂ ೫—೦—೦ ೩೦ ಮಾತ್ರೆಗಳು ರೂ. ೩—೦—

(ಕಾಗದ ಪತ್ರಗಳು ಇಂಗ್ಲೀಷಿನಲ್ಲಿಯೇ)

ಡಾ॥ ಎ ಎಸ್. ಮೂರ್ತಿ, ಚಿಕಾಕೋಲ್, ಗಂಜಾಮ್ ಡಿಸ್ಟ್ರಿಕ್ಟ

ANANDA SODA FACTORY

BEST AERATED WATER SUPPLIERS
COMPLETE REQUISITES FOR
AERATED WATER MANUFACTURERS
AVAILABLE

ಆನಂದಾ ಸೋಡಾ ಫ್ಯಾಕ್ಟರಿ,
ದೊಡ್ಡ ಪೇಟೆ, ಮೈಸೂರು

॥ ಸತ್ಯಮೇವೋದ್ಧರಾಮ್ಯಹಮ್ ॥

ರಾಜಧಾನಿಯ ರಾಷ್ಟ್ರೀಯ ವಾರ ಪತ್ರಿಕೆ.

ವೃದ್ಧಪಿತಾಮಹ ಎಂ. ವೆಂಕಟಕೃಷ್ಣಯ್ಯನವರ ಜ್ಞಾಪಕಾರ್ಥವಾಗಿ ಪ್ರಕಟಿಸಲ್ಪಡುವುದು.

ಸಂಪಾದಕರು ಅಗರಂ ರಂಗಯ್ಯ, ಬಿ. ಎ.

ಸಂಪುಟ ೧] MYSORE : MONDAY 26—10—36 ಮೈಸೂರು : ಸೋಮವಾರ ೨೬—೧೦—೩೬ [ಸಂಚಿಕೆ ೩೬

ಮೈಸೂರಿಗೆ ಮಾತ್ರ ಇಲ್ಲವೆ?

ಪ್ರತಿನಿಧಿ ಸಭೆಯಲ್ಲಿ ಭಾಷಣ ಮಾಡುತ್ತ ದಿವಾನರು ಹೀಗೆ ಹೇಳಿದರು — 'ಸರ್ಕಾರದ ಯಾವ ಹೆಸರಿನಲ್ಲಿ ವಿವೇಚನೆ ಇಲ್ಲದ ತೆರಿಗೆ ತಪ್ಪಿ ಮುಂದೆ ಹಾದುಹೋಗಲಿ, ಯಾವ ರಾಜಕೀಯ ವಿಚಾರದ ದೃಷ್ಟಿಯೂ ಮುಂದುವರಿಯುವ ಹಿನ್ನೆಲೆಯಲ್ಲಿ ಜಡತೆಯಿಂದ ತಡವರಿಸುತ್ತ ಲಕ್ಷ್ಯಕ್ಕೆ ಬಾರದೆ ಓಡಾಡುವುದಾಗಲಿ ನಡೆಯುವಂತಿಲ್ಲ.'

(ಬೇರೆ ಕಡೆಯಲ್ಲಿ) 'ಅನ್ಯಾಯವಾದ ತೆರಿಗೆಗಳುಂಟಾಗುವ ಕಾಲವು ತೀರಿ ನಿವಾಸಿಸಿದ ಉಪ್ಪುಗಳಿಂದುಂಟಾಗುವ ಉಪಯೋಗಗಳು ಇತರ ದೇಶಗಳಂತೆ ಬರತಕ್ಕಂಡಕ್ಕೂ ತಪ್ಪದೇ ತಪ್ಪಲ್ಲ'

ಮೈಸೂರಿಗೆ ಮಾತ್ರ ಇದು ಅನ್ವಯಿಸುವುದಿಲ್ಲವೆ?

* * *

ಪೂರ್ಣವಾದ ವಿವೇಚನೆಯೇಕೆ?

'ಈವರೆಗೆ ನಿರೀಕ್ಷಿಸಿದಷ್ಟು ಮಳೆಯೇ ಬಂದಿಲ್ಲ. ಆದಾಗ್ಯೂ 1935-36 ರ ಸಾಲಿನಲ್ಲಿ ಜಮೀನು ಕಂದಾಯದ ಬಾಬ್ತು 1,36,12,961 ರೂ ಹಿಂದಿನ ವರ್ಷ 1 16 66,206 ರೂ ಮಾತ್ರ" ಹಿಂದಿನ ಸಾಲಿನಲ್ಲಿ ನಿರೀಕ್ಷಿಸಿದಷ್ಟು ರೂಪಾಯಿಗಳು ಸುಮಾರು ಇಪ್ಪತ್ತು ಲಕ್ಷ ಹೆಚ್ಚು ವಸೂಲಿಯಾಗಿದೆ ಆದರೂ ಬೆಳೆಯ ಉತ್ಪತ್ತಿ 2 ಲಕ್ಷ ರೂ ಕಡಿಮೆಯಾಯಿತು. ಹೀಗೆ ತಗ್ಗಿದುದಕ್ಕೆ ಕಾರಣ ಜನರು ಕಂದು ಹಿಡಿಯುವದು ಬಹು ಕಡಿಮೆಯೆಂದು ದಿವಾನರು ಹೇಳುತ್ತಾರೆ. ನಮ್ಮ ಕಂದು ಹಿಡಿಯದಿದ್ದರೂ ಸರ್ಕಾರ ಕಾರ್ಯತಃ ಕಡಿಮೆಯಾದುದು ಸಂತೋಷಪಡಬಹುದಲ್ಲವೇ?

* * *

ಸಂದೇಹ ಸಾಮ್ರಾಜ್ಯವೆ?

ಮೈಸೂರು ಸಂಸ್ಥಾನವು ಭರತ ಖಂಡದಲ್ಲಿ ಬರುವ ಸಂಯುಕ್ತ ರಾಜ್ಯಾಂಗ ವನ್ನು ಸೇರಲು ಮನಸ್ಸು ಮಾಡುವ ಕಾಲದಲ್ಲಿ' ಎಂಬ ರೀತಿ ಪ್ರಯೋಗವನ್ನು ದಿವಾನರು ಮಾಡಿದ್ದಾರೆ ಇನ್ನೆಂತಹ ಸಂದೇಹ ' ಈ ವಿಷಯವು ಇತ್ಯರ್ಥವಾಗಿ ಎಷ್ಟೋ ದಿನಗಳಾಗಿವೆಯೆಂದು ನಾವು ಭಾವಿಸಿದ್ದೆವು ನಮ್ಮ ಸರ್ಕಾರದವರೂ ಅದೇ ಭಾವನೆಯಲ್ಲಿಯೇ ಇದ್ದರೆಂದೂ ಹೇಳಬಹುದು

ಮುಂದೆ ದಿವಾನರು ಹೀಗೆ ಹೇಳುತ್ತಾರೆ. "ಮುಂದೆ ಏರ್ಪಡುವ ಆ ಶಿಸ್ತಿನಲ್ಲಿ (ಸಂಯುಕ್ತ ರಾಜ್ಯಾಂಗ ವ್ಯವಸ್ಥೆ) ಭಾಗಿಗಳಾಗಿ ನಮ್ಮ ಸ್ಥಾನಮಾನಗಳಿಗೆ ತಕ್ಕಂತೆ ಕೆಲಸಮಾಡಲು ಸಿದ್ಧವಾಗೋಣ '— ಇದರಲ್ಲಿ ಸಂದೇಹಕ್ಕೇ ಅವಕಾಶವಿಲ್ಲ

ಹರಿಜನರಿಗೆ ಅರಮನೆ ದರ್ಬಾರಿನ ಪ್ರವೇಶ.

ಹಿಂದಿನ ರಾತ್ರಿ ಅರಮನೆಯಲ್ಲಿ ನಡೆದ ದರ್ಬಾರಿಗಾಗಿ ಪ್ರತಿನಿಧಿ ಸಭೆಯ ಹರಿಜನ ಸದಸ್ಯರಾದ ಶ್ರೀ॥ ಗಳು ಮುರುಗೇಶಂ ಪಿಳ್ಳೆ, ಮಾದಯ್ಯ, ಚಲುವಯ್ಯ ಮತ್ತು ಹನುಮಂತಪ್ಪ ಇವರುಗಳಿಗೆ ಆಹ್ವಾನವು ಬಂದಿತ್ತು ಅವರು ಸಭೆಗೆ ಹೋಗಿದ್ದರು ಇತರ ಸದಸ್ಯರಂತೆ ಅವರಿಗೂ ಮನ್ನಣೆ ಕೊಡಲ್ಪಟ್ಟಿತು ಹರಿಜನ ಸದಸ್ಯರಿಗೆ ಅವಕಾಶ ದೊರೆತಷ್ಟು ಇದೇ ಮೊದಲು ಅರಮನೆ ಮುಂದಿನ ಕುಸ್ತಿ ಪಂದ್ಯಗಳಲ್ಲಿ ತಮಗೆ ಅವಕಾಶ ಕೊಡಬೇಕೆಂದು ಹರಿಜನರು ಬೇಡುತ್ತಿರುವರು ಮುಂದಿನ ವರ್ಷ ಇದು ನೆರವೇರಬಹುದು

—

ಪೌರಸಭಾ ಸದಸ್ಯರಿಗೆ ಸೂಚನೆ.

ತಿರುನೆಲ್ವೇಲಿ ಪೌರಸಭೆಯಲ್ಲಿ ನೀರಿನ ತೆರಿಗೆಯನ್ನು ವಿಧಿಸಬೇಕೋ ಬೇಡವೇ ಎಂಬ ವಿಷಯವು ಚರ್ಚೆಗೆ ಬಂದು ತೆರಿಗೆ ಹಾಕಕೂಡದೆಂದು ತೀರ್ಮಾನವಾಯಿತು ನಮ್ಮ ಪೌರಸಭೆಗಳಲ್ಲಿ ನೀರಿನ ತೆರಿಗೆಗಳನ್ನು ಹೆಚ್ಚು ಹೆಚ್ಚಾಗಿ ವಸೂಲುಮಾಡುವ ಪ್ರಯತ್ನಗಳೇ ಕಂಡ ಬರುತ್ತಿವೆ ಅಲ್ಲದೆ ಮದರಾಸ್ ಪಟ್ಟಣ ಮೊದಲುಗೊಂಡು ಅಲ್ಲಿನ ಅನೇಕ ಪ್ರಮುಖ ಪೌರಸಭೆಗಳು ಬೈಸಿಕಲ್ ಕಂದಾಯ ವರ್ಷಕ್ಕೆ ಎರಡೇ ರೂ ತೆಗೆದುಕೊಳ್ಳುತ್ತಿವೆ ನಮ್ಮಲ್ಲಿ ಮೂರು ರೂ ತೆಗೆದುಕೊಳ್ಳುತ್ತಿರುವರು ಇದಕ್ಕೆ ಕಾರಣಗಳನ್ನು ಪೌರಸಭಾ ಸದಸ್ಯರು ಪರಿಶೀಲಿಸುವರೆ?

ದಂತದ ಸಿಂಹಾಸನ

ಈ ಸಾರಿ ನವರಾತ್ರಿ ಉತ್ಸವದಲ್ಲಿ ಪ್ರದರ್ಶಿಸಲ್ಪಟ್ಟಿರುವ ಅಪೂರ್ವ ವಸ್ತುಗಳಲ್ಲಿ ದಂತದ ಸಿಂಹಾಸನವೂ ಒಂದು ಇದನ್ನು ರಾಜಧಾನಿಯ ಯಳಂದೂರ್ ಹೌಸಿನಲ್ಲಿ ಇಟ್ಟಿರುವರು ಶಿವಮೊಗ್ಗ ಡಿಸ್ಟ್ರಿಕ್ಟ್ ರಾಮಚಂದ್ರಾಪುರದ ಶ್ರೀ ಮಹಾಸಂಸ್ಥಾನ ಕ್ಷೇತ್ರದ ಇದನ್ನು ಮ॥ ಪೊಸಬಾಳ ಪುಟ್ಟಪ್ಪ ಅಂಡ್ ಬ್ರದರ್ಸ್‌ರವರು ತಯಾರು ಮಾಡಿದ್ದಾರೆ ಇದನ್ನು ಮಾಡಲು ಇಪ್ಪತ್ತು ವರ್ಷಕಾಲ ಹಿಡಿಯಿತು ಒಟ್ಟು ಬೆಲೆ ಸುಮಾರು ಐವತ್ತು ಸಾವಿರ ರೂಪಾಯಿ ಆಗುತ್ತದೆ ದಂತದಲ್ಲೇ ರಾಮಾಯಣ, ಭಾರತ, ಭಾಗವತಗಳ ಚಿತ್ರಗಳನ್ನು ಮನೋಹರವಾಗಿ ಕೆತ್ತಿರುವರು ಎಳೆಗಳನ್ನು ಹಿಡಿಸಿರುವ ರೀತಿಯು ಬಹಳ ಅದ್ಭುತವಾಗಿದೆ ಮಹಾಜನರೆಲ್ಲರೂ ನೋಡಬೇಕಾದುದು. ನಮ್ಮ ಶ್ರೀಮನ್ಮಹಾರಾಜರವರೂ ಸಹ ಅಗತ್ಯವಾಗಿ ಇದನ್ನು ನೋಡಲೇಬೇಕು

—

ವಸ್ತುಪ್ರದರ್ಶನದ ಕೈಪಿಡಿ

ನವರಾತ್ರಿ ವಸ್ತುಪ್ರದರ್ಶನದ ಕೈಪಿಡಿಯ ಒಂದು ಪ್ರತಿಯನ್ನು ನಾವು ಆದರದಿಂದ ಸ್ವೀಕರಿಸಿದ್ದೇವೆ ಇದು ಪ್ರತಿವರ್ಷಕ್ಕಿಂತಲೂ ಈಸಾರಿ ದೊಡ್ಡ ಆಕೃತಿಯಲ್ಲಿಯೂ ಸುಂದರವಾಗಿಯೂ ಮುದ್ರಿಸಲ್ಪಟ್ಟಿದೆ ಹಲವು ಉತ್ತಮ ಲೇಖನಗಳಿವೆ ತಾತ್ಕಾಲಿಕ ತಿಳಿವಳಿಕೆಗಾಗಿ ಮಾತ್ರವಲ್ಲ ಶಾಶ್ವತವಾದ ಮೈಸೂರಿನ ಪರಿಸ್ಥಿತಿಯನ್ನು ಸಾಧ್ಯವಾದಮಟ್ಟಿಗೂ ತಿಳಿಸುತ್ತದೆ ಅಲ್ಪಬೆಲೆಗೆ ಇಷ್ಟೊಂದು ವಿಷಯಗಳನ್ನು ತಿಳಿಸುವ ಈ ಏರ್ಪಾಡು ಸ್ತುತ್ಯವೇ ಸರಿ ಇದನ್ನು ಓದದಲ್ಲದೆ ಮೈಸೂರಿನ ಪ್ರಗತಿಯ ಜ್ಞಾನವು ಪೂರ್ಣವಾಗದು ಪ್ರತಿಯೊಬ್ಬ ಮೈಸೂರಿನ ಅಭಿಮಾನಿಯೂ ಅಗತ್ಯವಾಗಿ ಓದಬೇಕಾದುದು ಚಿತ್ರಗಳ ದೃಷ್ಟಿಯಿಂದ ಹೇಳುವುದಾದರೆ, ಈ ಪ್ರಕಟಣೆಯಲ್ಲಿ ಮೈಸೂರಿನ ಹಲವು ಪ್ರಮುಖರ ಭಾವಚಿತ್ರಗಳನ್ನು ಮತ್ತಷ್ಟು ಕೊಡಬಹುದಾಗಿತ್ತು ನವರಾತ್ರಿ ಉತ್ಸವಕ್ಕೆ ಬರುವವರೆಲ್ಲರೂ ಅಗತ್ಯವಾಗಿ ಕೊಂಡು ಓದಬೇಕಾದುದು

ನಮ್ಮ ದಸರಾ ವಿಶೇಷ ಸಂಚಿಕೆ

ನಮ್ಮ ದಸರಾ ವಿಶೇಷ ಸಂಚಿಕೆಯ ಪ್ರತಿಗಳಿಗಾಗಿ ಅನೇಕರು ಬರೆಯುತ್ತಿದ್ದಾರೆ ಆದರೆ ನಾವು ಪ್ರಕಟಿಸಿದ್ದ ಪ್ರತಿಗಳು ಮುಗಿದುಹೋಗಿವೆ ಅದ್ದರಿಂದ ಇನ್ನು ಯಾರೂ ನಮಗೆ ಈ ಸಂಚಿಕೆಗಾಗಿ ಬರೆಯಬಾರದೆಂದು ಬೇಡುತ್ತೇವೆ ಈ ಕಾರ್ಯದಲ್ಲಿ ನಮಗೆ ಉತ್ತೇಜನಕೊಟ್ಟ ಮಹನೀಯರೆಲ್ಲರಿಗೂ ನಮ್ಮ ವಂದನೆಗಳನ್ನು ಅರ್ಪಿಸುತ್ತೇವೆ

—

ಹೈದರಾಬಾದಿಗೆ ಬೇಡದ್ದು ಮೈಸೂರಿಗೇಕೆ?

ನಮ್ಮ ಸರ್ಕಾರದವರು ಮತಾಂತರ ಹೊಂದಿದವರಿಗೆ ಪಿತ್ರಾರ್ಜಿತ ಆಸ್ತಿಯಲ್ಲಿ ಭಾಗವನ್ನು ಕೊಡಿಸಲು ಕಾನೂನುಮಾಡಬೇಕೆಂದು ತವಕಪಡುತ್ತಿದ್ದಾರೆ ಅತ್ತ ಸ್ವಲ್ಪ ಹೈದರಾಬಾದಿನ ಕಡೆ ಅವರು ತಮ್ಮ ಲಕ್ಷ್ಯವನ್ನು ಕೊಡಲಿ ಮೊನ್ನೆ ತಾನೆ ಅಲ್ಲಿ ಒಂದು ಕಾನೂನಾಗಿದೆ ಪಾರ್ಸಿ ಜನಾಂಗದವರ ಹಕ್ಕುಬಾಧ್ಯತೆಗೆ ಸಂಬಂಧಪಟ್ಟ ಒಂದು ಮಸೂದೆಗೆ ನೈಜಾಮರು ಈಗತಾನೆ ಸಮ್ಮತಿಕೊಟ್ಟಿರುವರು ಅದರಲ್ಲಿ ಜಾತಿಯನ್ನು ಬಿಟ್ಟು ಬೇರೆ ಜಾತಿಗೆ ಸೇರಿದವನಿಗೆ ಪಿತ್ರಾರ್ಜಿತ ಆಸ್ತಿಯಲ್ಲಿ ಹಕ್ಕು ಇಲ್ಲವೆಂದು ಸ್ಪಷ್ಟವಾಗಿ ಸೂಚಿಸಿದ್ದಾರೆ ಹೈದರಾಬಾದಿಗೆ ಬೇಡವಾದದ್ದು ಮೈಸೂರಿಗೇಕೆ?

—

ಯಳಂದೂರು ಪ್ರಜೆಗಳಿಗೆ ಪ್ರಭುಗಳ ಕೃತಜ್ಞತೆ.

ಶ್ರೀಮನ್ಮಹಾರಾಜರವರು ಯೂರೋಪಿನ ಪ್ರಯಾಣವನ್ನು ಸುಖವಾಗಿ ಮುಗಿಸಿಕೊಂಡು ವಾಪಸು ಬಂದುದಕ್ಕಾಗಿ ಯಳಂದೂರು ಪ್ರಜೆಗಳ ಸಂತೋಷವನ್ನು ಸೂಚಿಸಿ ಶ್ರೀ॥ ಮ್ಯು॥ ಕೌನ್ಸಿಲರ್ ಮತ್ತು ವಕೀಲರೂ ಆದ ವೈ ಶ್ರೀನಿವಾಸಯ್ಯಂಗಾರ್ಯರವರು ಒಂದು ವಿಜ್ಞಾಪನಾ ಪತ್ರಿಕೆಯನ್ನು ಬರೆದಿದ್ದರು. ಶ್ರೀಮನ್ಮಹಾರಾಜರು ಹುಜೂರ್ ಸೆಕ್ರೆಟರಿಯವರ ಮೂಲಕ ಯಳಂದೂರು ತಾಲ್ಲೂಕಿನ ಪ್ರಜೆಗಳಿಗೆ ತಮ್ಮ ಕೃತಜ್ಞತೆಯನ್ನು ಸಲ್ಲಿಸಿಯಿತ್ತಾರೆ

ಸುಲಭ ಚಿಕಿತ್ಸೆ.

ಅಮೃತಬಳ್ಳಿ.

ನಮ್ಮ ದೇಶದಲ್ಲಿ ಇದು ಸಾಮಾನ್ಯವಾಗಿ ಬೇಲಿಗಳ ಗಿಡ, ಕಳ್ಳಿ ಗಿಡ ಮತ್ತು ಇತರ ದೊಡ್ಡ ಮರಗಳ ಮೇಲೂ, ಬಂಡೆಗಳ ಮೇಲೂ ಉಗನಿಯ ಹಂಬಿನಂತೆ ಉದ್ದವಾಗಿ ಬೆಳೆಯುತ್ತದೆ. ಪ್ರತಿಯೊಂದು ಸ್ಥಳದಲ್ಲಿಯೂ ಸಾಮಾನ್ಯವಾಗಿ ಸಿಕ್ಕುತ್ತದೆ. ಗ್ರಾಮ್ಯಭಾಷೆಯಲ್ಲಿ ಇದನ್ನು (ಕೊಡಬಳ್ಳಿ ಹಂಬು) ಎನ್ನುತ್ತಾರೆ.

ಅಮೃತಬಳ್ಳಿ ಎಲೆ—ಕಟು, ಅಗ್ನಿದೀಪಕ, ತ್ರಿದೋಷಹರ, ಮೇಹ, ಕುಷ್ಠ, ಕಾಮಾಲೆ, ಪಾಂಡುರೋಗಗಳನ್ನು ಗುಣಪಡಿಸುತ್ತದೆ. ಉಷ್ಣದಿಂದ ಉಂಟಾದ ಕುರ, ಬೊಕ್ಕೆ ನೋವಿನ ಮೊಡವೆ ಬೊಬ್ಬೆಗೆ ಈ ಎಲೆಗೆ ಹರಳೆಣ್ಣೆ ಹಚ್ಚಿ ಬಿಚ್ಚಗೆ ಮಾಡಿ ಹಚ್ಚಲು ಗುಣ.

ಅಮೃತಬಳ್ಳಿ ದಂಟು—ತ್ರಿದೋಷಹರ, ಅಗ್ನಿದೀಪಕ, ಕಟು ಮತ್ತು ಪಗರ. ಇದು ಪ್ರಮೇಹ, ವಾತರಕ್ತ, ಕುಷ್ಠ, ಹೃದಯ ರೋಗ, ಮೂಲವ್ಯಾಧಿಗಳಲ್ಲಿ ರಕ್ತ ಬೀಳುವದನ್ನು ಗುಣಪಡಿಸುತ್ತದೆ. ಇದನ್ನು ಬೇರೆ ಅನುಪಾನದೊಡನೆ ಸೇವಿಸಲು ಬೇರೆ ಬೇರೆ ಗುಣಗಳು ಕಾಣುತ್ತವೆ.

ಅಮೃತದ ಸತ್ವ—ಈ ಗಿಡಬಳ್ಳಿಗಳನ್ನು ತುಂಡುತುಂಡಾಗಿ ಕತ್ತರಿಸಿ ಜಜ್ಜಿ ಬಾಯಿ ಅಗಲವಾಗಿರುವ ಪಾತ್ರೆಯಲ್ಲಿ ಹಾಕಿ ಚೆನ್ನಾಗಿ ತಿಕ್ಕಿ ಒಂದು ಪಾತ್ರೆಯಿಂದ ಇನ್ನೊಂದು ಪಾತ್ರೆಗೆ ಬಾಗಿಸಿ ಸ್ವಚ್ಛಹೊತ್ತು ಈ ನೀರನ್ನು ಇಟ್ಟಿದ್ದರೆ ಹಸಿ ಹುಂಡಿ ರಸದಲ್ಲಿ ಸಿಲ್ಲುವಂತೆ ತಳಭಾಗದಲ್ಲಿ ಹಾಡಿಯು ನಿಲ್ಲುತ್ತದೆ. ಇದನ್ನು ಒಣಗಿಸಿದರೆ ಬರುವ ಪುಡಿಯೇ ಅಮೃತದ ಸತ್ವವು. (ಅಮೃತಬಳ್ಳಿ ಸಕ್ಕರ ಎನ್ನುತ್ತಾರೆ) ಈ ಸತ್ವವು, ಧಾತುವರ್ಧಕ, ದೀಪನ, ಜೀರ್ಣಜ್ವರ, ಪ್ರಮೇಹ, ಕೆಮ್ಮು, ಬಿಕ್ಕಳಿಕ, ಗೂರಲು, ಪ್ರದರ ರೋಗಗಳನ್ನು ನಾಶಪಡಿಸುತ್ತದೆ. ಅಮೃತಬಳ್ಳಿಯು ಎಲ್ಲಾ ಕಾಲಗಳಲ್ಲಿಯೂ ಉಪಯೋಗಕ್ಕೆ ಬರುತ್ತದೆ.

1. ಸರ್ವ ಜ್ವರಗಳಿಗೆ—ಕೊತ್ತುಂಬರಿ, ಅಮೃತಬಳ್ಳಿ, ಕಣ್ಣುಗುಡದ ಅಂಟು (ಪರ್ಪಾಟಕ) ರಕ್ತಚಂದನ ಇವುಗಳನ್ನು ಸಮಭಾಗ ತೆಗೆದುಕೊಂಡು ನಾಲ್ಕನೇ ಒಂದು ಭಾಗ ಕಷಾಯಮಾಡಿ ಸುಮಾರು ½ ತೊಲೆಯಿಂದ 1 ಔನ್ಸು ವರೆಗೆ ಕೊಡುವುದರಲ್ಲಿ ಸರ್ವ ಜ್ವರವನ್ನು ಸಂಹಾರಮಾಡುವುದು. ಇದರ ಜೊತೆಗೆ ಸ್ವಲ್ಪ ಜೇನುತುಪ್ಪ ಬೆರಸಿ ಸೇವನೆ ಮಾಡಬಹುದು.

2. ಜೀರ್ಣಜ್ವರಕ್ಕೆ—ಅಮೃತಬಳ್ಳಿ ಕಷಾಯದೊಡನೆ ಸ್ವಲ್ಪ ಹಿಪ್ಪಲೀ ಚೂರ್ಣ ಸೇರಿಸಿ ಜೇನುತುಪ್ಪ ಬೆರಸಿ ಸೇವಿಸಲು ಗುಣ.

3. ಸಂತಾಪ ವಾಯು ವಿಗೆ—ಹರಳು ಗಿಡದ ಬೇರು, ಆಡುಸೋಗೆ ಎಲೆ, ಅಮೃತಬಳ್ಳಿ, ಇವುಗಳನ್ನು ಸಮ ಭಾಗ ಸೇರಿಸಿ ಕಷಾಯ ಮಾಡಿ, 3 ತೊಲ ಕಷಾಯಕ್ಕೆ 1 ತೊಲ ಹರಳೆಣ್ಣೆ ಸೇರಿಸಿ ತೆಗೆದುಕೊಳ್ಳಲು ಗುಣ.

4. ಸೂತಿಕಾ ರೋಗಕ್ಕೆ—ಅಮೃತ ಬಳ್ಳಿ ಶುಂಠಿ, ಅಡಿಕೆ, ಮುಸ್ತೆ, ಗೋರಂಟೆ ಮತ್ತು ಬೃಹದ್ದಂತಿ ಇವುಗಳ ಕಷಾಯದೊಡನೆ ಬೇನನ್ನು ಸೇರಿಸಿ ತೆಗೆದುಕೊಳ್ಳಲು ಗುಣ.

5. ಪಿತ್ತರೋಗಗಳಿಗೆ—ಅಮೃತಬಳ್ಳಿ ರಸದೊಡನೆ ಕಲ್ಲುಸಕ್ಕರೆ ಸೇರಿಸಿ ಉಪಯೋಗಿಸಲು ಬಹಳ ಜಾಗ್ರತೆ ಪಿತ್ತ ಲಕ್ಷಣಗಳು ಕಡಿಮೆಯಾಗುತ್ತವೆ.

6. ಮೂತ್ರಕೃಚ್ಛ್ರಕ್ಕೆ—ಅಮೃತಬಳ್ಳಿ, ಶುಂಠಿ, ನೆಲ್ಲಿಕಾಯಿ, ನೆಗ್ಗಿಲುಮುಳ್ಳು, ಅಶ್ವಗಂಧಿ ಇವುಗಳ ಸಮಭಾಗ ಕಷಾಯ ಮಾಡಿ ಸೇವಿಸಲು ಗುಣವಾಗುವುದು.

7. ಚತುರ್ಥಕ ಜ್ವರಕ್ಕೆ—ಅಮೃತಬಳ್ಳಿ, ನೆಲ್ಲಿಕಾಯಿ, ತುಂಗಗಡ್ಡೆ, (ಕೊನ್ನಾರಿಗಡ್ಡೆ) ಇವುಗಳ ನಾಲ್ಕನೇ ಒಂದು ಭಾಗ ಕಷಾಯ ತಯಾರಿಸಿ 1 ತೊಲೆಯಿಂದ 3 ತೊಲದ ವರೆಗೆ ಸೇವಿಸಲು ಗುಣವಾಗುವುದು. ಮೂರದ ಜ್ವರಕ್ಕೂ, ದಿನಬಿಟ್ಟು ದಿನ ಬರುವ ಜ್ವರಕ್ಕೂ, ಛಳಿಯಿಂದ ಕೂಡಿಬರುವ ಜ್ವರಕ್ಕೂ ಇದೇ ಚಿಕಿತ್ಸೆ.

8. ವಾತರೋಗಕ್ಕೆ—ಆಳತೆಕಾಯಿ, ದೇವದಾರು, ಶುಂಠಿ, ಹರಳು ಬೇರು, ಅಮೃತಬಳ್ಳಿ ಇವುಗಳ ಕಷಾಯವನ್ನು ಪಳಗ್ಗೆ ಕುಡಿಯುತ್ತಾ ಬಂದಲ್ಲಿ ಗುಣ.

9. ಕೆಮ್ಮಿಗೆ—ಗಂಟೆ ಭಾರಂಗಿ, ಶುಂಠಿ, ಅಮೃತಬಳ್ಳಿ, ಕಷಾಯ ಮಾಡಿ ಹಿಪ್ಪಲೀ ಚೂರ್ಣದೊಡನೆ ಸೇವಿಸಲು ಗುಣ.

10. ಕುಷ್ಠರೋಗಕ್ಕೆ—ತಾಳೆಸೂಪ್ಪು, ಅಮೃತಬಳ್ಳಿ, ಬೇವಿನ ಎಲೆ, ಅರಸಿನ, ಆಡುಸೋಗೆ ಎಲೆ ಇವುಗಳ ಕಷಾಯವನ್ನು ಜೇನುತುಪ್ಪದೊಡನೆ ಸೇವಿಸುತ್ತಾ ಬರಲು ಗುಣವಾಗುವುದರಲ್ಲಿ ಸಂದೇಹವಿಲ್ಲ. ಅನುಪಾನವರಿತು ಸೇವಿಸಿದರೆ ಬೇರೆಬೇರೆ ಗುಣಗಳು ಕಾಣಬರುತ್ತವೆ. ಬೆಲ್ಲದೊಡನೆ ಸೇರಿಸಿದರೆ ಮಲಬದ್ಧವೂ, ಸಕ್ಕರೆಯೊಡನೆ ಪಿತ್ತವೂ, ಜೇನುತುಪ್ಪದೊಡನೆ ಸೇವಿಸಲು ಕಫವೂ, ತುಪ್ಪದಲ್ಲಿ ಸೇವಿಸಲು ವಾತವೂ, ಚರ್ಮರೋಗ, ಶ್ವೇತಪ್ರದರ, ವೀರ್ಯದೋಷಗಳೂ ಗುಣವಾಗುತ್ತವೆ. ಮಲೇರಿಯಾ ಜ್ವರದಲ್ಲಿ ಕ್ವಿನೈನ್‌ಗಿಂತಲೂ ಶ್ರೇಷ್ಠವಾದದ್ದೆಂದು ಹೇಳಬೇಕು. ಇದನ್ನು ನಿತ್ಯವೂ ಸೇವಿಸುತ್ತಾ ಬಂದಲ್ಲಿ ಶತಾಯುಷ್ಯಂ ಭವತಿ ಎಂದು ಹಿರಿಯರು ಮಾಡುವ ಆಶೀರ್ವಾದದಂತೆ ನೂರು ವರ್ಷಗಳು ಬದುಕಬಹುದು. ಆದ್ದರಿಂದಲೇ ನಮ್ಮ ಹಿರಿಯರು ಇದಕ್ಕೆ ಅಮೃತ ಎಂಬ ಹೆಸರ ಕೊಟ್ಟಿರುತ್ತಾರೆ. ಹಸರಿಗ ತಕ್ಕ ಗುಣ ಕೂಡುವುದರಲ್ಲಿ ಸಂದೇಹವಿಲ್ಲ.

ಕುಮಾರಿ ಜೈರಮ್ಮ ಮತ್ತು ಆಕೆಯ ಗುರುಗಳಾದ ಶ್ರೀ ಬಿ. ಆರ್. ಶ್ರೀನಿವಾಸರಾಯರು.

ಈಕೆಯು 31 ನೇ ತಾ|| ಶನಿವಾರ ಇರ್ವಿನ್ ನಾಲೆಯಲ್ಲಿ ಕೈ ಕಾಲುಗಳನ್ನು ಕಟ್ಟಿಕೊಂಡು 16 ಮೈಲಿದೂರ ಈಜಿ ರೆಕಾರ್ಡ್ ಸ್ಥಾಪಿಸಬೇಕೆಂದಿದ್ದಾಳೆ.

ಕಾಂಗ್ರೆಸ್ ಸಮಿತಿ ಮೈಸೂರು

ಫೈಜ್‌ಪುರ್ ಕಾಂಗ್ರೆಸ್ಸಿಗೆ ಪ್ರತಿನಿಧಿಗಳಾಗಿ ಹೋಗಲಿಚ್ಛಿಸುವವರು ಧಾರವಾಡದಲ್ಲಿರುವ ಕರ್ನಾಟಕ ಕಾಂಗ್ರೆಸ್ ಸಮಿತಿಗೆ ೩ ರೂಪಾಯಿಗಳನ್ನು ಕಳುಹಿಸಿ ರಶೀತಿಯೊಡನೆ ಸ್ಥಳೀಯ ಕಚೇರಿಗೆ ಇದೇ ನವೆಂಬರ್ ೩ ರೊಳಗಾಗಿ ಅರ್ಜಿ ಹಾಕಬೇಕೆಂದು ಮೈಸೂರು ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿಗಳಾದ ಶ್ರೀ ಎಂ. ಎಸ್. ಜೋಯಿಸರು ತಿಳಿಸಿರುತ್ತಾರೆ. ಚುನಾವಣೆ ಸ್ಥಳ ಮತ್ತು ತಾರೀಖನ್ನು ಮುಂದೆ ತಿಳಿಸಲಾಗುತ್ತದೆ.

ಮೈಸೂರು ಜಿಲ್ಲಾ ಬೋರ್ಡು

ಉಪಾಧ್ಯಕ್ಷರ ಚುನಾವಣೆ

ಶ್ರೀ ಬಿ. ಎಸ್. ಪುಟ್ಟಸ್ವಾಮಿಯವರ ಅಧ್ಯಕ್ಷತೆಯಲ್ಲಿ ಮೈಸೂರು ಜಿಲ್ಲಾ ಬೋರ್ಡ್ ಸಭೆ ಸೇರಿಯಿತು. ಉಪಾಧ್ಯಕ್ಷರ ಚುನಾವಣೆಯಾಯಿತು.

ಹಿಂದಿನಸಲ ಉಪಾಧ್ಯಕ್ಷರಾಗಿದ್ದ ಶ್ರೀ ಕೆ. ಎಂ. ಕೃಷ್ಣಪ್ಪಗೌಡರೂ ಮತ್ತು ಶ್ರೀಗಳಾದ ಬಿ. ಚಾಮಯ್ಯ, ಕುದೇರು ವೀರಣ್ಣನವರುಗಳೂ ಇವರುಗಳು ಉಪಾಧ್ಯಕ್ಷರ ಸ್ಥಾನಕ್ಕೆ ಅಭ್ಯರ್ಥಿಗಳಾಗಿದ್ದರು.

ಮೊದಲನೇ ರೌಂಡ್ ಓಟಿಂಗಿನಲ್ಲಿ ಶ್ರೀ ಕೃಷ್ಣಪ್ಪಗೌಡರಿಗೆ ೨೪, ಶ್ರೀ ಚಾಮಯ್ಯನವರಿಗೆ ೮ ಮತ್ತು ಶ್ರೀ|| ವೀರಣ್ಣನವರಿಗೆ ೨ ಓಟುಗಳೂ ಬಂದವು.

ಎರಡನೇ ರೌಂಡಿನಲ್ಲಿ ಶ್ರೀ ಕೃಷ್ಣಪ್ಪನವರಿಗೆ ೨೭ ಮತ್ತು ಶ್ರೀ ಚಾಮಯ್ಯನವರಿಗೆ ೧೧ ಓಟುಗಳು ಬಂದವು.

ಆದ್ದರಿಂದ ಶ್ರೀ ಕೃಷ್ಣಪ್ಪಗೌಡರು ಚುನಾಯಿಸಲ್ಪಟ್ಟರು. ಇದಲ್ಲದೆ ಕಲವು ಸಮಿತಿಗಳ ಚುನಾವಣೆಗಳೂ ನಡೆದವು.

ಕೃಷ್ಣರಾಜಸಾಗರ

‘ಬೃಂದಾವನ’ಕ್ಕೆ ವಿದ್ಯುದ್ದೀಪಾಲಂಕಾರ

ದಸರಾ ಮಹೋತ್ಸವ ಕಾಲದಲ್ಲಿ ಅಕ್ಟೋಬರ್ ೧೬ ರಿಂದ ನವೆಂಬರ್ ೭ ರವರೆಗೆ (ಎರಡು ದಿನಗಳೂ ಸೇರಿ) ಪ್ರತಿನಿತ್ಯವೂ ಕೃಷ್ಣರಾಜಸಾಗರದಲ್ಲಿ ಬೃಂದಾವನ ವನ್ನು ವಿದ್ಯುದ್ದೀಪಾಲಂಕಾರದಿಂದ ಸರ್ಚ್ ಲೈಟ್‌ಗಳಿಂದಲೂ ಅಲಂಕರಿಸುವ ಏರ್ಪಾಟುಗಳು ನಡೆದಿವೆ. ಸಾರ್ವಜನಿಕರ ನೋಟಕ್ಕಾಗಿ ತೆರೆದಿರುತ್ತದೆ.

‘ಬೃಂದಾವನ’ದ ತೋಟಗಳನ್ನು ವಿದ್ಯುದ್ದೀಪಗಳಿಂದಲಂಕರಿಸುವ ದಿನಗಳಲ್ಲಿ ಮೈಸೂರು ರೈಲ್ವೆಯವರು ಮೈಸೂರು ಕೃಷ್ಣರಾಜಸಾಗರದ ಮಧ್ಯೆ ಓಡಾಡುವ ಕೃಷ್ಣರಾಜಸಾಗರಕ್ಕೆ ಹೋಗಿ ಬರುವ ಪ್ರಯಾಣಿಕರ ಸೌಕರ್ಯಕ್ಕಾಗಿ ವಿಶೇಷ ಟ್ರೈನುಗಳನ್ನು ನಡಿಸಲು ಏರ್ಪಾಟುಗಳನ್ನು ಮಾಡಿರುತ್ತಾರೆ.

ನಾಗಪುರ ಪೌರಸಭೆಗೆ ಶ್ರೀ|| ಎಂ. ಜಿ. ರಂಗಯ್ಯನವರು

ನಿವೃತ್ತ ಚೀಫ್ ಇಂಜಿನಿಯರಾದ ಶ್ರೀ|| ಎಂ. ಜಿ. ರಂಗಯ್ಯನವರ ನಾಗಪುರ ಮ್ಯುನಿಸಿಪಾಲಿಟಿಗೆ ಕನ್ಸಲ್ಟಿಂಗ್ ಇಂಜಿನಿಯರಾಗಿ, ಡಾ|| ಸರ್ ಎಂ. ವಿಶ್ವೇಶ್ವರಯ್ಯನವರಿಂದ ಮಾಡಲ್ಪಟ್ಟ ಶಿಫಾರಸಿನಂತೆ ನೇಮಿಸಲ್ಪಟ್ಟು ನಗರದ ಡ್ರೈನೇಜ್ ಸ್ಕೀಮಿನ ಸಂಬಂಧದಲ್ಲಿ ಸಲಹೆ ಕೊಡುವವರಾಗಿದ್ದಾರೆಂದು ತಿಳಿಯಬಂದಿದೆ.

ಅಖಿಲ ಕರ್ನಾಟಕ ಹಿಂದೀ ಪ್ರಚಾರ ಪರಿಷತ್
ಬೆಂಗಳೂರು.

ಸೋಲ್ಜರಂಡ ಪರಿಷತ್ತಿನ ಗೌ॥ ಕಾರ್ಯದರ್ಶಿಗಳಾದ ಮ॥ರಾ॥ ಬಿ. ಸತ್ಯನಾರಾಯಣ ರ್ಸರ್ಕಾರವರು ಪರಿಷತ್ತಿನ ಶಾಖೆಯಾದ ಹಿಂದೀ ಸೇವಾ ಸಮಾಜದ ಕಾರ್ಯಕರ್ತರುಗಳನ್ನು ಸಂದರ್ಶಿಸಿ ಮೈಸೂರಿನ ಕಾಂಗ್ರೆಸ್ಸಿನ ಕಾರ್ಯಾಲಯದಲ್ಲಿ ಶ್ರೀಮಾನ್ ತಗಡೂರು ರಾಮಚಂದ್ರರಾಯರ ಅಧ್ಯಕ್ಷತೆಯಲ್ಲಿ ಸಮಾಜದ ಕಾರ್ಯಕರ್ತರುಗಳ ಸಭೆಯನ್ನು ನೆರವೇರಿಸಿದರು. ಮೊದಲು ಹಿಂದಿಯಲ್ಲಿ ಅದ್ವಿತೀಯ ಪಂಡಿತರೂ ಸುಪ್ರಸಿದ್ಧ ಕಥೆಗಾರರಾದ ಪ್ರೇಮ ಚಂದರ ನಿಧನದ ಬಗ್ಗೆ ಸಂತಾಪವನ್ನು ವ್ಯಕ್ತಪಡಿಸಿದರು. ಸಮಾಜದ ಅಧ್ಯಕ್ಷರೂ ಮತ್ತು ಮೈಸೂರು ಕಾಂಗ್ರೆಸಿನ ಕಾರ್ಯದರ್ಶಿಗಳಾದ ಶ್ರೀಮಾನ್ ಎಂ. ಎನ್. ಜೋಯಿಸರವರು ಮತ್ತು ಸಮಾಜದ ಗೌ॥ ಕಾರ್ಯದರ್ಶಿಗಳಾದ ಶ್ರೀಮಾನ್ ಎಸ್. ಎನ್. ಪಂಡಿತರು ಮತ್ತು ಇತರರೂ ಭಾಷಣಮಾಡಿದರು. ಪ್ರತಿನಿತ್ಯವೂ ಸಾಯಂಕಾಲ ೬½ ಘಂಟೆಗೆ ಕಾಂಗ್ರೆಸ್ ಆಫೀಸಿನಲ್ಲಿ ಹಿಂದೀ ತರಗತಿಗಳು ನಡೆಯುವಂತೆ ಠರಾವು ಪಾಸಾಯಿತು. ಅಧ್ಯಕ್ಷರ ಭಾಷಣಾನಂತರ ಸಭೆಯು ಬರಖಾಸ್ತಾಯಿತು.

———

ಕನ್ನಡದಲ್ಲಿ ಜವಾಹರಲಾಲರ ಆತ್ಮಕಥೆ.

ಬೆಂಗಳೂರು ನವಜೀವನ ಪತ್ರಿಕಾ ಸಂಪಾದಕರಾದ ಶ್ರೀ ಸಿ. ಅಶ್ವತ್ಥನಾರಾಯಣರವರು ಕನ್ನಡ ಭಾಷೆಯಲ್ಲಿ ಪಂಡಿತ ಜವಾಹರಲಾಲರ ಆತ್ಮಕಥೆಯನ್ನು ತರ್ಜುಮೆ ಮಾಡಿ ಪ್ರಕಟಿಸಲು ಉದ್ಯುಕ್ತರಾಗಿರುವರು. ಇದು ಬಹಳ ಶ್ಲಾಘನೀಯವಾದ ಯತ್ನ. ಪಂಡಿತರ ಆತ್ಮಕಥೆಯು ಇಂಗ್ಲೀಷಿನಲ್ಲಿ ಈಗಾಗಲೇ ಅನೇಕಾವರ್ತಿ ಪುನರ್ಮುದ್ರಿತವಾಗಿದೆ. ಇತರ ಭಾರತೀಯ ಭಾಷೆಗಳಿಗೂ ಪರಿವರ್ತನೆಯಾಗಿದೆ. ಕನ್ನಡಕ್ಕೆ ಆಗದಿದ್ದುದು ದೊಡ್ಡ ಕೊರತೆಯಾಗಿತ್ತು. ಈ ಕೊರತೆಯನ್ನು ನೀಗಿ ಪಂಡಿತರ ಉದಾತ್ತ ಜೀವನ ಚರಿತ್ರೆಯನ್ನು ಕನ್ನಡಿಗರಿಗೆ ದೊರಕಿಸಲು ಮಾಡಿದ ಈ ಉದ್ಯಮವು ಅಭಿನಂದನೀಯವಾದುದು. ಕನ್ನಡ ಬಾಂಧವರೆಲ್ಲರೂ ಪುಸ್ತಕವನ್ನು ಓದಿ ಪ್ರಯೋಜನ ಪಡೆಯಬೇಕೆಂದು ನಾವು ಹಾರೈಸುವೆವು.

———

ಮೈಸೂರಿನಲ್ಲಿ ವಾರ್ಷಿಕೋತ್ಸವ.

ಮೈಸೂರು ನಗರದ ಗ್ರಾಮಕೇಂದ್ರದ ವಾರ್ಷಿಕೋತ್ಸವವು ನವಂಬರ್ ಒಂದನೇ ತಾರೀಖು ಸೋಮವಾರ ನಡೆಯುವುದು. ಡಾ॥ ಎಸ್. ಹರ್ಡೀಕರರವರು ಅಧ್ಯಕ್ಷತೆ ವಹಿಸುವರು. ಅನೇಕಜನ ದೇಶಭಕ್ತರು ಈ ಉತ್ಸವಕ್ಕಾಗಿ ಅಲ್ಲಿಗೆ ಹೋಗುವರು.

ನಮಗೂ ತಪ್ಪಿದುದಲ್ಲ.

———

ನಮಗೆ ಅನ್ನವನ್ನು ಕೊಡಿ. ಮಾಡುವುದಕ್ಕೆ ಕೆಲಸವನ್ನು ಕೊಡಿ. ಆಮೇಲೆ ಮುಂದಕ್ಕೆ ಹೋಗಿ. ಎಂದು ಸಾವಿರಾರು ಮಂದಿ ಹೆಂಗಸರೂ, ಮಕ್ಕಳೂ ಮಧ್ಯ ಪ್ರಾಂತ್ಯದ ಮಂತ್ರಿಗಳೊಬ್ಬರಿಗೆ ಅವರ ಪ್ರವಾಸಕಾಲದಲ್ಲಿ, ವಾರ್ಧಾ ಡಿಸ್ಟ್ರಿಕ್ಟಿನ ಒಂದು ಗ್ರಾಮದಲ್ಲಿ ಮೋಟಾರನ್ನು ಅಡ್ಡಗಟ್ಟಿ ರಾತ್ರಿ ಒಂಭತ್ತು ಘಂಟೆಯವರೆಗೂ ವಾದಿಸಿದರಂತೆ ಆ ಮಂತ್ರಿಗಳ ಹೆಸರು ಆನರಬಲ್ ಆರ್. ಬಿ. ನಾಯಿಡು. ಅವರೆಲ್ಲರಿಗೂ ಅನ್ನವನ್ನು ಹಾಕಿಸಿ, ರಸ್ತೆಯ ಕಾಮಗಾರಿಯಲ್ಲಿ ಕೂಲಿಗಾಗಿ ಭರವಸೆಕೊಟ್ಟು ಮುಂದಕ್ಕೆ ತೆರಳಿದರಂತೆ! ನಮ್ಮ ದೇಶದ ಹಳ್ಳಿಗಳ ಸ್ಥಿತಿಗತಿಗಳನ್ನು ಬಲ್ಲ ಹಲವರು ಇಲ್ಲಿಗೂ ಆ ಸ್ಥಿತಿಯು ತಪ್ಪಿದುದಲ್ಲವೆಂದೇ ಅಭಿಪ್ರಾಯಪಡುವರು.

ಮಹಾತ್ಮರ ಮಹಿಮೆಯ ರಹಸ್ಯ.

———

ಕಾಂಗ್ರೆಸ್ ಅಧ್ಯಕ್ಷರೂ, ಸರ್ದಾರರೂ, ರಾಜೇಂದ್ರರೂ ಮಹಾತ್ಮರನ್ನು ನೋಡುವುದಕ್ಕೆ ಹೋಗಿದ್ದರಂತೆ. ಮಹಾತ್ಮರು ಗೊತ್ತಾಗಿದ್ದ ಕಾಲಕ್ಕೆ ಸರಿಯಾಗಿ ಒಳಗಿನಿಂದ ಈಚೆಗೆ ಬಂದರು. ಅವರ ದೃಷ್ಟಿಯು ಅಂಗಳದಲ್ಲಿ ಜ್ವರದಿಂದ ನರಳುತ್ತಿದ್ದ ಇಬ್ಬರ ಕಡೆಗೆ ತಿರುಗಿತು. ಕೂಡಲೆ ಅವರ ಸೇವೆಗಾಗಿ ಪ್ರಾರಂಭಿಸಿಬಿಟ್ಟರು. ಕಾಲಮೀರಿ ಬಹು ಹೊತ್ತಾದ್ದರಿಂದ ಎಲ್ಲರೂ ಅಲ್ಲಿಗೆಯೇ ಬಂದರು. ಮಹಾತ್ಮಜಿಯವರು ಸೇವೆಯಲ್ಲಿಯೇ ಆಸಕ್ತರಾಗಿರುವುದನ್ನು ನೋಡಿ, ಇವೆಲ್ಲವನ್ನೂ ನೀವೇ ಮಾಡಬೇಕೆ? ಆಸ್ಪತ್ರೆಗೆ ಕಳುಹಿಸಬಹುದಲ್ಲಾ ಎಂದು ಅಲ್ಲಾ ವಿವೇಕವನ್ನು ಕಲಿಸುವುದು ಜೊರಿಯಾದ ಕೆನ್ಯೂಟನು ಸಮುದ್ರಕ್ಕೆ ವಿವೇಕವನ್ನು ಹೇಳಿದಂತೆ, ಎಂದು ಕಾಂಗ್ರೆಸ್ಸಿನ ಅಧ್ಯಕ್ಷರು ಹೇಳಿದರಂತೆ. ಉತ್ತರವಾಗಿ ಮಹಾತ್ಮಜಿಯವರು ಹಾಗೆ ವಿವೇಕವನ್ನು ಕಲಿಸುವುದಕ್ಕಾಗಿಯೇ ನಿಮ್ಮನ್ನು ಕೆನ್ಯೂಟನನ್ನಾಗಿ ಮಾಡಿರುವೆವು. ಎದುರಿಗಿರುವ ಹಳ್ಳಿಯಲ್ಲಿ ಆರುನೂರು ಜನರ ಪೈಕಿ, ಮೂರುನೂರು ಮಂದಿ ನರಳುತ್ತಿದ್ದಾರೆ. ಅವರೆಲ್ಲರೂ ಆಸ್ಪತ್ರೆಗೆ ಹೋಗಬೇಕೆ? ನಾವಲ್ಲದೆ ಮತ್ತಾರು ರೋಗಿಗಳ ಆರೈಕೆಯನ್ನು ಕಲಿತುಕೊಳ್ಳಬೇಕು? ನಮ್ಮ ಪಾಪದ ಫಲವೇ ನಮ್ಮನ್ನು ಪೀಡಿಸುತ್ತಿರುವುದು. ಮಲೇರಿಯಾ, ಕಾಲರಾ ಎಲ್ಲಕ್ಕೂ ನಾವೇ ಕಾರಣರು. ಈ ಬಡ ಹಳ್ಳಿಗರಿಗೆ ನಮ್ಮ ಸ್ವಂತ ನಡತೆಯಿಂದಲ್ಲದೆ ಕಲಿಸುವುದು ಹೇಗೆ? ಇದೇ ಈ ಸ್ವಂತ ನಡತೆಯೇ ಅಲ್ಲವೆ ಮಹಾತ್ಮರ ಮಹಿಮೆಯ ಮರ್ಮ.

———



ಮೈಸೂರಿನ ನಗರ ಭವನ.

ಸಹಕಾರ ಮಹಾಸಭೆ.

———

ಎಂದಿನಂತೆ, ಮತ್ತೊಂದು ಬಾರಿಯೂ ಈ ಮಹಾಸಭೆಯು ನಡೆಯಿತು. ಪ್ರಚಾರಕ ಸಂಘದ ಅಧ್ಯಕ್ಷರೂ ಮಹಾಸಭೆಯ ಅಧ್ಯಕ್ಷರೂ ಒಬ್ಬರು ಮತ್ತೊಬ್ಬರ ಮೆಚ್ಚುಗೆಯ ಮಾತುಗಳನ್ನು ವಿನಿಮಯಮಾಡಿಕೊಂಡುದೂ ಆಯಿತು. ವಂದನೆಗಳನ್ನು ಮಾತ್ರ ಕನ್ನಡದಲ್ಲಿ ಹೇಳಿದವರಿಗೆ ಸ್ವಾಗತದ ಭಾಷಣದಲ್ಲಿ ತಾಯ್ನುಡಿಯನ್ನು ತಲೆಬಾಗಿಲಿಂದಾಚೆಗೆ ತಳ್ಳಬಾರದೆಂಬುದು ತೋಚದಾಯಿತು.

ಇದಾದಮೇಲೆ, ರಿಜಿಸ್ಟ್ರಾರರವರ ಕಾರ್ಯಕ್ರಮದ ವರದಿಗೆ ಪ್ರತಿಯಾಗಿ ಸತ್ಕಾರ ಭಾಷಣವು ಸಹಕಾರ ಪ್ರಪಂಚದ ಇಂದಿನ ಸಮಸ್ಯೆಗಳಾವುವು? ಅವುಗಳ ಪರಿಹಾರವು ಹೇಗೆ? ಎಂಬುದನ್ನು ಸ್ವಲ್ಪ ಮಟ್ಟಿಗಾದರೂ ತಿಳಿಸಿದ್ದರಾಗಿದ್ದಿತು. ಅಧ್ಯಕ್ಷ ಭಾಷಣದಲ್ಲಿ ತಿರುಳಾದ ವಾದವಾಗಲೀ, ಅಭಿವೃದ್ಧಿಗೆ ಅವಶ್ಯಕವಾದ ಸೂಚನೆಗಳಾಗಲೀ ಇರಲಿಲ್ಲ. ಚರ್ಚೆಯಲ್ಲಿ ರಿಜಿಸ್ಟ್ರಾರರು ಕೊಡುತ್ತಿದ್ದ ವಿವರಣೆಗಳೂ, ಸೂಚನೆಗಳೂ, ಗಾಂಭೀರ್ಯದಿಂದಲೂ, ಅನುಭವದಿಂದಲೂ ಕೂಡಿರುತ್ತಿದ್ದುವು. ಮಹಾಸಭೆಯನ್ನು ಎರಡೇ ದಿನಗಳಲ್ಲಿ ಮುಗಿಸಿದ ಕೀರ್ತಿಯು ಪ್ರಚಾರಕ ಸಂಘದ ಅಧ್ಯಕ್ಷರಿಗೆಯೇ ಸಲ್ಲಬೇಕು. ಪ್ರತಿನಿಧಿ ಸಭೆಯಂತೆಯೇ ಇಲ್ಲಿಯಾದರೂ "ದಯವಿಟ್ಟು, ಅವಕಾಶ ಕೊಡಿ. ಒಂದುಮಾತು." ಎಂದು ಮುಂದಾಗಿ ಬೇಡಿಕೊಳ್ಳುವುದೂ, ಅಸಮಂಜಸವಾಗಿ ಮಾತನಾಡಿಕೊಳ್ಳುವುದೂ ವಿಶೇಷವಾಗಿ ಕಾಣುತ್ತಿದ್ದುವು. ಚರ್ಚೆಗೆ ಬಂದಿದ್ದ ವಿಷಯಗಳೂ, ಅವನ್ನು ತೀರ್ಮಾನಿಸಿದ ರೀತಿನೀತಿಗಳೂ ಎಲ್ಲವೂ ಪ್ರತಿನಿಧಿ ಸಭೆಯಲ್ಲಿ ದಿವಾನ್ ಸಾಹೇಬರವರು ಅನುಸರಿಸುತ್ತಿರುವುದರ ಅನುಕರಣವು ಮಾತ್ರವಾಗಿದ್ದಿತು. ಈಗಿನ ಪ್ರತಿನಿಧಿಗಳ ಚುನಾವಣೆಯ ತತ್ವವೇ ಸರಿಯಲ್ಲವೆಂಬ ವಾದವೂ, ಈಗಿರುವ ಕ್ರಮದಂತೆ ಜಾತಿ ಪ್ರಾತಿನಿಧ್ಯ ಕಸುಬಿನ ಪ್ರಾತಿನಿಧ್ಯಗಳು ಇರುವವರೆವಿಗೂ ಸಹಕಾರ ತತ್ವ ಪ್ರಾತಿನಿಧ್ಯವೂ ಇರಲೇಬೇಕೆಂಬ ವಾದವೂ ಸ್ವಾರಸ್ಯವಾಗಿದ್ದುವು. ಸಹಕಾರ ಸಮಿತಿಯ ವರದಿಯನ್ನು ಕುರಿತು ಈ ಮಹಾಸಭೆಯ ಅಭಿಪ್ರಾಯವನ್ನು ಕೇಳಲಿಲ್ಲವೇಕೆ?

ಜಪಾನಿಗಳ ಸಾಹಸ.

ಜಪಾನಿನಿಂದ ಬಂದ ಶಿಖರಾರೋಹಣ ಗುಂಪಿನವರು ೮ನೇ ತಾರೀಖಿನ ದಿವಸ ನಂದಕೋಟಿ ಶಿಖರವನ್ನು ಹತ್ತಿ ಯಶಸ್ಸು ಪಡೆದು ಅಲ್ಮೋರಾಕ್ಕೆ ತಿರುಗಿ ಬಂದಿರುವರೆಂದು ತಿಳಿಯಬರುತ್ತದೆ.

ಸಾಧ್ವಿ

೨೬-೧೦-೩೬ನೇ ಸೋಮವಾರ

ದಿವಾನರ ಭಾಷಣ

ಎಂದಿನಂತೆಯೇ ಮೃದುಮಧುರವಾಕ್ಯಗಳು, ನಾವಿರುವುದೇ ಸರಿ ಎಂಬ ಘೋಷಣೆ, ಪ್ರಚಲಿತವಾದ ರಾಜನೀತಿಯನ್ನು ಕುರಿತು ತಮ್ಮ ಭಾವನೆ, ಇವೇ ದಿವಾನ್ ಸಾಹೇಬರವರ ಭಾಷಣದ ತಿರುಳು.

ಜಗತ್ತಿನ ಸಮಸ್ಯೆ, ಸರ್ಕಾರದ ಕಲಾಪ, ಕೈಗಾರಿಕೆಯ ನೀತಿ, ಇವೆಲ್ಲವೂ ವಿಶದವಾಗಿ ವಿವರಿಸಲ್ಪಟ್ಟಿವೆ. ಹೊರಗಿನವರ ಮೆಚ್ಚುಗೆಗೆ ಇವು ಸಾಕು.

ಇಂದಿನ ಮೈಸೂರಿನ ಸಮಸ್ಯೆಗಳಾವುವು? ಅವಕ್ಕೆ ಸರ್ ಮಿರ್ಜಾರವರಂತಹ ರಾಜನೀತಿ ನಿಪುಣರ ಪರಿಹಾರವೇನು? ಮುಂತಾದ ಸಂಗತಿಗಳೇ ಕಾಣುತಲಿಲ್ಲ. ಮೈಸೂರಿನ ಹೊರಗಿರುವ ಬಡ ಮೈಸೂರು ಕೂಲಿಗಳ ಪರಿಸ್ಥಿತಿಯ ಮಾತೂ ಎತ್ತಿಲ್ಲ. ಭಾರಿಯ ಬಂಡವಾಳದ ಕೈಗಾರಿಕೆಗಳಿಂದ ಬಡ ಬೋರೇಗೌಡನಿಗಾಗಿರುವ ಸೌಕರ್ಯವೇನೂ ಇಲ್ಲ. ಇರುವ ಮಾತೆಂದರೆ, ಇನ್ನು ಮುಂದೆ ನೀರಾವರಿಯ ಕಾಮಗಾರಿಗಳ ಕಡೆಗೆಯೇ ಸರ್ಕಾರದ ಪೂರ್ಣಗಮನವನ್ನು ಕೊಡಲಾಗುವುದಂತೆ. ಸತ್ಯಮಂಗಲದ ಲೈನನ್ನು ಮರೆತಿಲ್ಲ. ಪ್ರೊಗದಿಯ ಮಾತೂ, ಮಂಡಿನ ಪ್ರಶ್ನೆಯೂ ದಿವಾನರವರ ಬಾಯಿಂದ ಬಾರದಿದ್ದರೂ, ಸದಸ್ಯರೊಬ್ಬರ ಧ್ವನಿಯಿಂದ ಕೇಳಲವಕಾಶವನ್ನು ಕಲ್ಪಿಸಿಕೊಟ್ಟರು. ಕಲಿತವರ ನಿರುದ್ಯೋಗವು ನೆನಪಿಗೆ ಬಂದಂತಿಲ್ಲ. ಇವೆಲ್ಲವೂ ಇರಲಿ.

ಈಗ ದೇಶಕ್ಕೆ ಬೇಕಾಗಿರುವುವು ಎರಡೇ. ಒಂದು, ಜನಗಳಿಗೆ ಆಡಳಿತದ ಜವಾಬ್ದಾರಿ. ಮತ್ತೊಂದು ಬಡ ಬೋರೇಗೌಡನ ಹೊಟ್ಟೆ. ಆಡಳಿತದ ಜವಾಬ್ದಾರಿಯನ್ನು ಕುರಿತು ಸರ್ ರವರ ಹೇಳಿಕೆಯು ಅವರ ಮನಸ್ಸಾದರೂ ಒಪ್ಪುವಂತಿದೆಯೆ? ಮಿತಿ ಮೀರಿದ ಜವಾಬ್ದಾರಿಯನ್ನು ಯಾರು ಎಲ್ಲಿ ವಹಿಸಿರುವರು? ಎಲ್ಲಿ ಮರುಪಯೋಗವಾಗಿದೆ? ಎಂಬುದನ್ನು ಎತ್ತಿ ತೋರಿಸಿದ್ದರಾಗಿದ್ದಿತು. ಮುಂದಾದರೂ ಎಚ್ಚರದಿಂದಿರಲು ದಾರಿ ತೋರಿಸಿಕೊಟ್ಟಂತಾಗುತ್ತಿದ್ದಿತು. ನಮ್ಮ ಸರ್ಕಾರವು ನಮಗೆ ಕೊಟ್ಟಿರುವುದೇನು? ರಾಜನೀತಿ ನಿಪುಣರೆಂಬ ಶ್ರೀ ರಂಗಾಚಾರ್ಯರವರ ಕಾಲದಂತೆಯೇ ಇಂದೂ ಪ್ರತಿನಿಧಿಸಭೆಯು ಅರ್ಜಿದಾರರ ಕೂಟವೇ ತಾನೆ? ಕೋಮುವಾರು ಪ್ರತಿನಿಧಿಗಳು ಅದಕ್ಕಿಂತಲೂ ಹೆಚ್ಚೇನು ಮಾಡಬಲ್ಲರು? ಅಧಿಕಾರಿಗಳ ಆದೊಂದು ವಿನೋದ ಕೂಟವಂತೆ ಈ ಸಭೆಗಳು ಕಾಣುವುವೇ ವಿನಾ ಸ್ವಾತಂತ್ರ್ಯ ಭಾವನೆಯಾಗಲೀ, ದೇಶಸೇವೆಯ ಗಾಂಭೀರ್ಯವಾಗಲೀ ಆ ವಾತಾವರಣದಲ್ಲಿಯೇ ಇಲ್ಲಿ ಕಾಣುತಲಿಲ್ಲ. ಸೀಲ್ ಕಮಿಟಿಯವರ ದಾನಗಳೂ ಇತ್ತೀಚಿನ ಸುಧಾರಣೆಗಳೂ, ಇಪ್ಪತ್ತನೆಯ ಶತಮಾನದ ಜವಾಬ್ದಾರಿಯ ಸರ್ಕಾರದ ಕಸದ ಬುಟ್ಟಿಗಳು. ದೇಶವನ್ನು ಅದರಲ್ಲಿಯೇ ತಳ್ಳಿ, ಮೇಲಕ್ಕೆತ್ತದಿರುವುದನ್ನೇ ಸಮರ್ಥಿಸುತ್ತಿರುವಂತೆ ಕಾಣುವುದು.

ಬಡ ಬೋರೇಗೌಡನ ಹೊಟ್ಟೆ ಬಟ್ಟೆಗಳ ಸಮಸ್ಯೆಗಾಗಿ ಸರ್ ಮಿರ್ಜಾರವರು ಇಲ್ಲೇನೂ ಹೇಳಲಿಲ್ಲವಾದರೂ ಏನಾದರೂ ಮಾಡುವರೆಂಬ ಬೋರೇಗೌಡನ ಆಸೆ ಎಂದಿಗೂ ಇದೆ.

ಕಂದಾಯದ ಹೊರೆಯನ್ನು ಇಳಿಸಬೇಕೆಂದೂ ಅಧಿಕಾರಿಗಳ ಸಂಬಳಗಳನ್ನು ಕಡಿಮೆ ಮಾಡಬೇಕೆಂದೂ ಪ್ರಜಾಪ್ರತಿನಿಧಿಗಳು ಬಾರಿ ಬಾರಿಗೂ ಹೇಳುತ್ತಿರುವರು. ಈ ಪ್ರಸ್ತಾಪವೇ ದಿವಾನರ ಭಾಷಣದಲ್ಲಿಲ್ಲ. ದೇಶವು ಇಂದು ಹೇಗೆ ಕೇಳುತ್ತಿದೆ. ಮಳೆಯು ನಿರೀಕ್ಷಿಸಿದಷ್ಟು ಬಿಟ್ಟಿಗಿಲ್ಲ. ತಮ್ಮ ಸರ್ಕಾರವು ಏನು ಮಾಡಿದ, ಮಾಡಲಿಕ್ಕಿದೆ? ನಿರ್ಗತಿಕರೂ, ಭಿಕ್ಷುಕರೂ ಎಷ್ಟು ಮಂದಿಗಳಿದ್ದಾರೆಂಬ ಗಣತಿಯೊಂದನ್ನು ವಿದ್ಯಾರ್ಥಿಗಳು ನಡೆಯಿಸಿದರು. ಅದು ಬಹು ಜನರ ಗಮನವನ್ನು ಸೆಳೆಯಿತು. ತಮ್ಮ ಸರ್ಕಾರವು ಮಾಡುವುದೇನು? ತೆರಿಗೆಗಳನ್ನು ವಸೂಲ್ಮಾಡುವುದು ಗ್ರಾಮ ಪಂಚಾಯಿತಿಗಳಿಗೆ ಕಷ್ಟವಾಗಿರುವುದೇ ಒಂದು ಕುಂದು. ಅದಕ್ಕೆ ಕಾರಣವೇನು? ತಮ್ಮ ಸರ್ಕಾರವು ಪರಿಶೀಲಿಸಿದೆಯೇ?

ಸಂಯುಕ್ತ ಸರ್ಕಾರವು ನಮ್ಮ ಮೇಲೆ ಬಿದ್ದೇ ಬೀಳುವುದು. ಅಭಿಪ್ರಾಯವನ್ನು ಕೇಳುವುದೆಂಬುದು ಕೇವಲ ನೀತಿ ಮಾತ್ರ. ಇದು ಬ್ರಿಟಿಷ್ ರಾಜನೀತಿಯಲ್ಲಿ ಓನಾಮ ಕಲಿತಿರುವವನಿಗೂ ತಿಳಿದ ಮಾತು. ಆದರೆ ಆ ಸಂಯುಕ್ತ ಸರ್ಕಾರಕ್ಕಾಗಿ ಮೈಸೂರಿನ ಬೇಡಿಕೆಗಳೇನೆಂಬುದನ್ನು ಸರ್ ಮಿರ್ಜಾರವರು ದೇಶದ ಮುಂದಿಟ್ಟಿರುವರೇನು? ದೇಶದಲ್ಲಿ ಮುಖಂಡರೆಂಮೋ ತಿಳಿದವರೆಂಮೋ ತಮಗೆ ತೋಚಿದವರನ್ನು ಕೇಳಿದ್ದರೆ ಅದಂತೂ ಸಾಲದು. ಈ ಭಾಷಣವಂತೂ ದೇಶದೃಷ್ಟಿಯಿಂದಿಲ್ಲವೆಂದೂ ಸರ್ಕಾರದ ದೃಷ್ಟಿಯಿಂದ ಮಾತ್ರ ಮಾಡಲ್ಪಟ್ಟಿದೆಯೆಂದೂ ಹೇಳಬಲ್ಲೆವು.

ಪ್ರಜಾಪ್ರತಿನಿಧಿ ಸಭೆ

ಈ ದಿನ ಮಧ್ಯಾಹ್ನ ಜಗನ್ಮೋಹನ ಬಂಗಲೆಯಲ್ಲಿ ಪ್ರಜಾಪ್ರತಿನಿಧಿ ಸಭೆಯ ನವರಾತ್ರಿ ಅಧಿವೇಶನವು ಆರಂಭವಾಯಿತು. ಸಭೆಗೆ ಬ್ರಿಟಿಷ್ ರೆಸಿಡೆಂಟರೂ ಜಸ್ಟಿಸ್ ರೈಲಿಯವರೂ, ಮಾಜಿ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ॥ ವಿಜಯರಾಘವಾಚಾರ್ಯರೂ ದಯಮಾಡಿಸಿದ್ದರು. ದಿವಾನರು ತಮ್ಮ ಭಾಷಣವನ್ನು ಓದಿದರು. ಇದರ ಸಾರಾಂಶವು ಬೇರೆಕಡೆ ಕೊಡಲ್ಪಟ್ಟಿದೆ. ಅದರ ಕನ್ನಡ ಅನುವಾದವನ್ನು ಶ್ರೀ॥ ಸಿ. ಕೆ. ವೆಂಕಟರಾಮಯ್ಯನವರು ಓದಿದರು. ಅನಂತರ ಶ್ರೀ॥ ಚೆಂಗಲರಾಯರೆಡ್ಡಿಯವರು ಭಾಷಣಮಾಡಿ ಶ್ರೀಮನ್ಮಹಾರಾಜರ ಯೂರೋಪ್ ಪ್ರವಾಸವು ಸುಗಮವಾಗಿ ನಡೆದುದಕ್ಕಾಗಿ ಅಭಿನಂದನೆಯನ್ನು ಸೂಚಿಸಿದರು. ಮೈಸೂರು ದೇಶದ ಪ್ರೊಗದಿಯನ್ನು ವರ್ಧಮಾಡಿಸುವ ವಿಷಯದಲ್ಲಿ ತೀವ್ರವಾದ ಪ್ರಯತ್ನಗಳನ್ನು ಮಾಡಬೇಕೆಂದು ಒತ್ತಿ ಹೇಳಿದರು. ರಾವ್ ಸಾಹೇಬ್ ರಾಮಸ್ವಾಮಿಯವರೂ ಶ್ರೀ॥ ಕೆ. ಟಿ. ಬಾಷ್ಯಂ ಮತ್ತು ಶ್ರೀ॥ ಬಿ. ಎಸ್. ಪುಟ್ಟಸ್ವಾಮಿಯವರೂ ಇದೇ ಅಭಿಪ್ರಾಯಗಳನ್ನು ಸಮರ್ಥಿಸಿ ಭಾಷಣಮಾಡಿದರು.

ತರುವಾಯ ಪ್ರಶ್ನೋತ್ತರಗಳು ಆರಂಭವಾದವು. ಇದಾದಮೇಲೆ ಸರ್ಕಾರಿ ಕಾರ್ಯಕಲಾಪಗಳು ಉಪಕ್ರಮವಾದವು. ಅಂಗಹೀನರಿಗೆ ಈಗ ಹಿಂದೂ ಲಾ ಪ್ರಕಾರ ದಾಯಭಾಗದ ಹಕ್ಕು ಇಲ್ಲದೆ ಇರುವ ವಿಷಯದಲ್ಲಿ ಕಾನೂನಿನ ತಿದ್ದುಪಡಿಯು ಸೂಚಿಸಲ್ಪಟ್ಟಿತು. ಇದರ ತತ್ವವನ್ನು ಸಭೆಯು ಅಂಗೀಕರಿಸಿತು. ಮತ್ತು ಇನಾಂ ಗ್ರಾಮಗಳ ಕೆರೆಗಳನ್ನು ಅಭಿವೃದ್ಧಿಪಡಿಸುವ ವಿಷಯದಲ್ಲಿ ತಂದಿದ್ದ ಮಸೂದೆಯ ಸಾಮಾನ್ಯ ನಿಯಮಗಳೂ ಸ್ವಲ್ಪ ಚರ್ಚೆಯಾದನಂತರ ಅಂಗೀಕರಿಸಲ್ಪಟ್ಟವು.

ಸಭೆ ನಡೆಯುತ್ತಿದೆ

ವೈಶ್ಯ ಯುವಜನ ಸಮ್ಮೇಳನ ಮತ್ತು ವೈಶ್ಯ ಕಲಾಪ್ರದರ್ಶನ

ತಾ॥ 27-10-36 ನೆಯ ಮಂಗಳವಾರ ಮಧ್ಯಾಹ್ನ 4 ಘಂಟೆಗೆ ಮೈಸೂರಿನಲ್ಲಿ ಸಿಲ್ವರ್ ಜೂಬಿಲಿ ಗಡಿಯಾರದ ಸಮೀಪದಲ್ಲಿರುವ ಶ್ರೀಮಾನ್ ಕಾವೇರಿಪಟ್ಣಂ ಸುಬ್ರಾಯಶ್ರೇಷ್ಠಿಯವರ ಛತ್ರದಲ್ಲಿ ಮೈಸೂರು ಸಂಸ್ಥಾನದ ವೈಶ್ಯ ಯುವಜನ ಸಮ್ಮೇಳನವು (ಇನ್‌ಫಾರ್ಮಲ್ ಕಾನ್ಫರೆನ್ಸ್) ಧರ್ಮಪ್ರವರ್ತ ಎಂ. ಎಲ್. ನಾಗಪ್ಪಶ್ರೇಷ್ಠಿಯವರ ಅಧ್ಯಕ್ಷತೆಯಲ್ಲಿ ನಡೆಯುವುದು.

ಈ ಸಮ್ಮೇಳನವು ಪ್ರಾರಂಭವಾಗುವುದಕ್ಕೆ ಅರ್ಧ ಘಂಟೆ ಮುಂಚೆ ಮೇಲ್ಕಂಡ ಛತ್ರದ ಸಮೀಪದಲ್ಲಿರುವ ಶ್ರೀ ಕನ್ಯಕಾಪರಮೇಶ್ವರೀ ಕೋ-ಆಪರೇಟಿವ್ ಸೊಸೈಟಿ ಕಟ್ಟಡದಲ್ಲಿ ಮೈಸೂರು ಸಂಸ್ಥಾನದ ವೈಶ್ಯ ಕಲಾಪ್ರದರ್ಶನದ (ಎಗ್ಜಿಬಿಷನ್) ಪ್ರಾರಂಭೋತ್ಸವವನ್ನು ಸಮ್ಮೇಳನದ ಅಧ್ಯಕ್ಷರೇ ನಡೆಸಲು ದಯವಿಟ್ಟು ಒಪ್ಪಿರುವರು.

ಮತಾಂತರ ಹೊಂದಿದವರಿಗೆ ದಾಯಭಾಗವೇಕೆ?

ಜಾತಿಯನ್ನು ಬಿಟ್ಟು ಬೇರೆ ಜಾತಿಗೆ ಸೇರಿದವರಿಗೆ ಪಿತ್ರಾರ್ಜಿತ ಆಸ್ತಿಯಲ್ಲಿ ಪಕ್ಷನ್ನು ಕೊಡಿಸಲು ಒಂದು ಮಸೂದೆಯನ್ನು ಸರ್ಕಾರದವರು ತಂದಿರುತ್ತಾರೆ. ಅದು ಪ್ರಜಾಪ್ರತಿನಿಧಿ ಸಭೆಯ ಮುಂದೆ ಬರುವುದು. ಇದಕ್ಕೆ ಜನರ ವಿರೋಧವು ಪ್ರಬಲವಾಗಿಯೇ ಇದೆ. ಇದಕ್ಕೆ ಸಹಾನುಭೂತಿಯು ದೊರೆಯುವುದಿಲ್ಲ. ಅದು ಬಿದ್ದು ಹೋಗುವುದು ಖಂಡಿತ

ಆದರೂ ಸರ್ಕಾರದವರೇ ತಮ್ಮ ಸ್ವಂತ ಪ್ರಯತ್ನದಿಂದಲೇ ಈ ಮಸೂದೆಯನ್ನು ತಂದಿರುವುದು ಆಶ್ಚರ್ಯಕರ. ಜನರಲ್ಲಿ ಯಾರೂ ಇದನ್ನು ಅಪೇಕ್ಷಿಸಲಿಲ್ಲ. ಅನೇಕರು ಇದನ್ನು ವಿರೋಧಿಸಿರುತ್ತಾರೆ. ಪತ್ರಿಕೆಗಳು ಖಂಡಿಸಿವೆ. ಜನಗಳು ಅಪೇಕ್ಷಿಸಿದ ಎಷ್ಟೋ ಕಾನೂನುಗಳನ್ನು ಸರ್ಕಾರದವರು ಜಾರಿಗೆ ತಾರದೆ ಈ ಅಪ್ರಸಕ್ತವೂ, ಅಪ್ರಯೋಜಕವೂ ಆದ ಕಾನೂನಿಗೆ ಇಷ್ಟೊಂದು ಉತ್ಸಾಹವನ್ನು ತೋರುತ್ತಿರುವುದು ಕೇವಲ ವಿಷಾದಕರ

ಈ ಕಾನೂನು ಐವತ್ತು ವರ್ಷಗಳ ಹಿಂದೆ ಒಂದಾವರ್ತಿ ಬಂದು ಬಿದ್ದು ಹೋಯಿತು. ಪುನಃ 25 ವರ್ಷಗಳ ಹಿಂದೆ ಮತ್ತೊಂದು ಸಾರಿ ಬಂದು ಆಗಲೂ ಪ್ರಜಾಭಿಪ್ರಾಯವು ವಿರೋಧವಾಗಿದ್ದು ಮರೀ ಬಿದ್ದು ಹೋಯಿತು. ಈಗ ಪುನಃ ಬಂದಿದೆ. ಈಗಲೂ ಪ್ರಜೆಗಳ ಪ್ರತಿನಿಧಿಗಳು ಇದನ್ನು ತಿರಸ್ಕರಿಸುವುದರಲ್ಲಿ ಸಂದೇಹವಿಲ್ಲ. ಇದನ್ನು ಮುಸಲ್ಮಾನರೂ, ಹಿಂದೂಗಳೂ ಹಲವು ಕ್ರೈಸ್ತರೂ ಸಹ ವಿರೋಧಿಸುವರು. ಇದು ಮತಕ್ಕೆ ಸಂಬಂಧಪಟ್ಟ ವಿಷಯ. ಒಂದು ಮತದವರನ್ನು ಇನ್ನೊಂದು ಮತಕ್ಕೆ ಆಲೋಚನೆಗಳನ್ನು ತೋರಿಸಿ ಸೆಳೆಯುವ ... ರಿಸಿಕೊಳ್ಳುವ ಪ್ರಯತ್ನವನ್ನು ನಿರೋಧಿಸಿ ... ಪ್ರೋತ್ಸಾಹಿಸಬೇಕು. ಅದು ಬಿಟ್ಟು ಜಾತಿಕೆಟ್ಟವರಿಗೆ ಆಸ್ತಿಯನ್ನು ಕೊಡಿಸಿ ಮತ್ತಷ್ಟು ... ಡಲು ಸಹಕಾರಮಾಡುವುದು ಕೇವಲ ಅನುಚಿತವಾಗಿದೆ.

ಮೈಸರಾಯರ ಭವನದಲ್ಲಿ

೧,೨೦೦ ರೂ. ಕಳುವು

ಮೈಸರಾಯರ ಭವನದಲ್ಲಿ ೧,೭೦೦ ರೂಪಾಯಿಗಳ ನೋಟುಗಳು ಕಳುವು ... ವುವು ಭವನದ ಆಡಳಿತಗಾರ್ತಿಯಾದ ಮಿ ... ಬುಲ್‌ಫಿಟ್ ಎಂಬುವಳು ತನ್ನ ಕೈ ಚೀಲದಲ್ಲಿ ಮೂರು ಕವರುಗಳಿದ್ದುವೆಂದೂ ... ದರಲ್ಲಿ ೨,೩೬೫ ರೂಪಾಯಿಗಳ ಬೆಲೆಯ ಕರೆನ್ಸಿ ನೋಟುಗಳೂ, ಎರಡನೆಯದರಲ್ಲಿ ೨೦೦ ರೂ ಗಳ ಬೆಲೆಯುಳ್ಳ ನೋಟುಗಳೂ, ಮೂರನೆಯದರಲ್ಲಿ ೧,೨೦೦ ರೂ. ಗಳ ಬೆಲೆಯುಳ್ಳ ಕರೆನ್ಸಿ ನೋಟುಗಳೂ ಇದ್ದುವೆಂದೂ ಹೇಳಿರುವಳು. ಕೈ ಚೀಲವನ್ನು ಡ್ರಾಯಿಂಗ್ ರೂಂ ಸೋಫದ ಮೇಲೆ ಇಟ್ಟು ಊಟಕ್ಕೆ ಹೋದಳು. ... ದನಂತರ ಬಂದು ಚೀಲವನ್ನು ತೆಗೆದು ನೋಡಲಾಗಿ ೧,೨೦೦ ರೂ. ಗಳ ನೋಟುಗಳುಳ್ಳ ಕವರು ಮಾಯವಾಗಿ ಹೋಗಿ...

ಪ್ರಜಾಪ್ರತಿನಿಧಿ ಸಭೆಯಲ್ಲಿ ದಿವಾನ್‌ಸಾಹೇಬರ ಭಾಷಣದ

(ಸಾರಾಂಶ)

—

ಪ್ರಜಾಪ್ರತಿನಿಧಿ ಸಭೆಯ ಸದಸ್ಯರಿರಾ, ತಮ್ಮೆಲ್ಲರನ್ನೂ ಈ ಅಧಿವೇಶನಕ್ಕೆ ಆದರದಿಂದ ಬರಮಾಡಿಕೊಳ್ಳುತ್ತೇನೆ. ನಾನು ಈ ಸಂದರ್ಭದಲ್ಲಿ ಮೊಟ್ಟಮೊದಲು ತಮಗೆ ವ್ಯಕ್ತಪಡಿಸಬೇಕಾದುದು ತುಂಬ ಸಂತೋಷಕರವಾಗಿರುವ ಅಂಶವು, ಶ್ರೀಮನ್ಮಹಾರಾಜರವರು ಯೂರೋಪುಖಂಡಕ್ಕೆ ಚಿಕಿತ್ಸೆಗೋಸ್ಕರ ಅಲ್ಲಿಂದ ವಯಸ್ಸಾಗಿರುವ ವಿಚಾರ. ಮೊಟ್ಟಮೊದಲು ಈ ಸಭೆಯಲ್ಲಿ ಸೂಚಿಸುವುದು ಅದರಷ್ಟು ಉಚಿತವಾದ ಮಹತ್ವದ ವಿಷಯವು ಮತ್ತಾವುದೂ ಇಲ್ಲ. ಪ್ರಸ್ತುತ ಸಂಸ್ಥಾನದ ಚರಿತ್ರೆಯಲ್ಲೇ ಇದು ಅಪೂರ್ವವಾದೊಂದು ಅಂಶ. ಸಮುದ್ರಯಾನಮಾಡಿ ಪಾಶ್ಚಿಮಾತ್ಯ ದೇಶಗಳಿಗೆ ಮಹಾಸ್ವಾಮಿಯವರ ಸವಾರಿಯು ಚಿತ್ತೈಸಿದುದು ಇದೇ ಮೊಟ್ಟಮೊದಲನೆಯದು. ಇದು ಕೇವಲ ವಿನೋದಾರ್ಥವಾಗಿ ಕೈಕೊಂಡ ಪ್ರಯಾಣವಲ್ಲ. ಸ್ವಹಿತವನ್ನೂ ಸಂಸ್ಥಾನದ ಹಿತವನ್ನೂ ಮಹಾಸ್ವಾಮಿಯವರು ತಮ್ಮ ಮನಸ್ಸಿನಲ್ಲಿಟ್ಟುಕೊಂಡು ತಮ್ಮ ಕರ್ತವ್ಯಸಾಧನೆಗಾಗಿ ಯೂರೋಪಿನ ಪ್ರಯಾಣವನ್ನು ಕೈಕೊಂಡರು. ಪ್ರಭುಗಳವರು ಸಂಸ್ಥಾನವನ್ನು ಬಿಟ್ಟ ಹೊರಟ ಕಾಲದಲ್ಲಿ ಪ್ರಜೆಗಳೆಲ್ಲರೂ ಸುಖಪ್ರಯಾಣವನ್ನು ಕೋರಿ ಮಂಗಳವನ್ನು ಬಯಸಿದರು. ಮಹಾಸ್ವಾಮಿಯವರು ಹೆಚ್ಚಿನ ಆರೋಗ್ಯಲಾಭವನ್ನು ಹೊಂದಿ, ಅಮೂಲ್ಯವಾದ ಹೊಸ ಹೊಸ ಅನುಭವಗಳನ್ನು ಪಡೆದು, ಸಂಸ್ಥಾನಕ್ಕೆ ಕ್ಷೇಮವಾಗಿ ಚಿತ್ತೈಸಿರುವುದಕ್ಕಾಗಿ ಪ್ರಜೆಗಳೆಲ್ಲರೂ ಹರ್ಷಿಸುತ್ತಿರುವರು. ಮಹಾಸ್ವಾಮಿಯವರು ಪರಿಶೀಲಿಸಿ ಕೊಂಡು ಬಂದಿರುವ ಹೊಸ ಹೊಸ ಸಂಗತಿಗಳು ಮತ್ತು ಅವರು ಪಡೆದಿರುವ ಹೊಸ ಹೊಸ ಅನುಭವಗಳು ಮುಂದೆ ಸಂಸ್ಥಾನದ ಅಭ್ಯುದಯವನ್ನು ಹೆಚ್ಚಿಸುವುದರಲ್ಲಿ ಸಹಕಾರಿಯಾಗುವುದೆಂದು ನಂಬುತ್ತೇನೆ.

ನಾನು ಈಗ ವ್ಯಕ್ತಪಡಿಸಿರುವುದಲ್ಲದೆ ಬೇರೆ ಯಾವುದೋ ಒಂದು ಉದ್ದೇಶವನ್ನಿಟ್ಟುಕೊಂಡು ಅದನ್ನು ಸಾಧಿಸಲು ಮಹಾಸ್ವಾಮಿಯವರು ಯೂರೋಪುಖಂಡ ಪ್ರಯಾಣ ಹೊರಟಂತ ವದಂತಿಯೊಂದು ಹರಡಿದ್ದಿತು. ಆ ವದಂತಿಯಲ್ಲಿ ಸ್ವಲ್ಪವೂ ನಿಜವಿಲ್ಲವೆಂಬ ಅಂಶವನ್ನು ಪ್ರಜಾಪ್ರತಿನಿಧಿಗಳಿಂದ ತುಂಬಿರುವ ಈ ಸಭೆಯಲ್ಲಿ ಸೂಚಿಸಬೇಕಾದ ಆವಶ್ಯಕತೆಯೇ ಇಲ್ಲ. ಮಹಾಸ್ವಾಮಿಯವರು ತಮ್ಮ ಸಂಸ್ಥಾನಕ್ಕೆ ಸಂಬಂಧಪಟ್ಟ ವಿಚಾರಗಳಲ್ಲಿ ಯಾವ ವ್ಯಕ್ತಿಗೆ [illegible] ಚಿತ್ತೈಸಲೂ ಇಲ್ಲ. ಹಾಗೆ ಮಾಡಬೇಕಾದ ಆವಶ್ಯಕತೆಯೂ ಇರಲಿಲ್ಲ.

ಯೂರೋಪುಖಂಡದ ಈಗಿನ ಸ್ಥಿತಿಯನ್ನು ನೋಡಿದರೆ, ಕೆಲವು ವಿದ್ಯಮಾನಗಳು ಎದ್ದು ಕಾಣುತ್ತಿವೆ. ಸಾಮಾಜಿಕ ವ್ಯವಸ್ಥೆಯನ್ನೇ ತಲೆಕೆಳಕು ಮಾಡಿ ಹೊಸ ಹೊಸ ಪರಿಸ್ಥಿತಿಯನ್ನುಂಟುಮಾಡತಕ್ಕ ಹಗಿದ ಹಲವು ಸಿದ್ಧಾಂತಗಳೂ ಕೊಂಚ ಕಾಲ ಗುಡುಗಿ ಈಗ ತಣ್ಣಗಾಗಿರುವುದು, ಆ ವಿದ್ಯಮಾನಗಳಲ್ಲೊಂದು. ಮಾರ್ಕ್ಸಿಸಂ, ಕಮ್ಯೂನಿಸಂ, ಸಿಂಡಿಕ್ಯಾಲಿಜಮ್, ಮುಂತಾದವು ಆರೀತಿಯ ಸಿದ್ಧಾಂತಗಳು.

* * *

ಪ್ರಪಂಚವೇ ತಲ್ಲಣಪಡುತ್ತಿರುವ ಈ ಸಮಯದಲ್ಲಿ, ಯಾರೂ ಪ್ರಯೋಗಿಸಿ ಗುಣವೊಂದದೆ ಇದ್ದ ಈ ಹೊಸ ಸಿದ್ಧಾಂತಗಳ ರೂಪದ ವಿಚಿತ್ರವಾದ ಸಿದ್ಧಾಂತಗಳ ಸೇವನೆಯ ಪ್ರಯೋಗಪರೀಕ್ಷೆಗಳಿಗಾಗಿ ನಾವುಗಳು ನಮ್ಮ ಹಣವನ್ನೂ ಸಾಧನಸಂಪತ್ತುಗಳನ್ನೂ ಪೋಲುಮಾಡಿಕೊಂಡು ಹಾಳುಮಾಡದಿರುವುದು ನಮ್ಮ ಸುಯೋಗ. ನಾವು ಅಶ್ರಯಿಸಿರುವುದು ಪ್ರಜಾಸತ್ತಾತ್ಮಕವಾದ ಆಡಳಿತ ಕ್ರಮವೆಂಬ ಸಮ್ಯಕ್ಸ್ಥಾನ ಹಳೆಯ ಚಿಕಿತ್ಸೆಯೊಂದನ್ನೇ. ಹಂಬನಾದ ಆ ವೈದ್ಯನಿಗೂ ಸಾರ್ವತ್ರಿಕವಾದ ಅಂಶಗಳಲ್ಲಿ ಪರಿಶ್ರಮ. ಆದರ ಆವನ ಕೀರ್ತಿಯು ಬೆಳದಿಂಗಳು ಮಾತ್ರ ಎಂದಿನಂತೆ ಉಜ್ವಲವಾಗಿಯೂ ನಿರ್ಮಲವಾಗಿಯೂ ಇದೆ. ಆವನ ಕೈಚಳಕವು ಕುಂದಿಕುಂದದೆ ಎಂದಿನಂತೆ ಪ್ರಶಸ್ತವಾಗಿಯೇ ಇದೆ. ಮತ್ತೊಂದು ದೊಡ್ಡ ಭಾಗ್ಯವೂ ನಮಗುಂಟು; ಅದು ಭಗವತ್ಕೃಪೆಯಿಂದ ನಮಗೆ ಲಭಿಸಿದೆ. ನಾನು ಪ್ರಸ್ತಾಪಿಸುತ್ತಿರುವುದು, ಈ ಅವಧಿಯಲ್ಲೆಲ್ಲ ವಿಶೇಷಪ್ರಕಾರವಾಗಿ ಬೆಳಗುತ್ತಿರುವ ನಮ್ಮ ಪ್ರಭುಗಳವರ ಆಳ್ವಿಕೆಯ ವಿಚಾರ. ಮಹಾಸ್ವಾಮಿಯವರು ವಿವೇಕದಿಂದಲೂ ವೈರ್ಯದಿಂದಲೂ ರಾಜ್ಯವಾಳುತ್ತಿದ್ದಾರೆ, ಸುಧಾರಣೆಗಳನ್ನು ಪರೀಕ್ಷಿಸಿ ನೋಡಲು ಸಂತತವೂ ಸಿದ್ಧವಾಗಿದ್ದಾರೆ, ಪ್ರಜೆಗಳ ಹಿತಕ್ಕೆ ಸಾಧಕವಾದುದು ಯಾವುದೊಂದರಿಂದ ಕಂಡುಬಂದರೂ ಅದನ್ನಾಚರಿಸಲು ಅವರು ತಮ್ಮ ಸಿದ್ಧತೆಯನ್ನೂ ಉತ್ಸಾಹವನ್ನೂ ತೋರ್ಪಡಿಸುತ್ತ ಬಂದಿದ್ದಾರೆ. ಆದರ, ಮಹಾಸ್ವಾಮಿಯವರ ಘನವಾದ ಆಳ್ವಿಕೆಯಲ್ಲಿ ಕಂಡುಬಂದಿರುವುದು, ಯುಕ್ತಾಯುಕ್ತ ವಿವೇಚನೆಯ ಸಮತೆಯಿಂದಲೂ ಮತ್ತು ಕ್ರಮಬದ್ಧವಾದ ಶಿಸ್ತಿನಿಂದಲೂ ಒಂದೇ ಸಮನಾಗಿ ನಡೆಯುತ್ತಿರುವ ಪ್ರಗತಿಸಾಧನೆ. ಸುಧಾರಣೆಯ ಹಸರಿನಲ್ಲಿ ವಿವೇಚನೆಯಿಲ್ಲದ ಅತಿ ತಪ್ಪು ಮುಂದೆ ಹಾರುವುದಾಗಲಿ, ಅಥವಾ ರಾಜಕೀಯ ವಿಚಾರದಲ್ಲಿ ಸ್ವಲ್ಪವೂ ಮುಂದುವರಿಯದೆ ಹಿನ್ನೆಲೆಯಲ್ಲಿ ಜಡತೆಯಿಂದ ತಡಮಾಡುತ್ತ ಲಕ್ಷ್ಯತಪ್ಪಿ ಅಲೆದಾಡುವುದಾಗಲಿ ಮಹಾಸ್ವಾಮಿಯವರ ಆಳ್ವಿಕೆಯಲ್ಲಿ ನಡೆಯುವಂತಿಲ್ಲ. ಯಾವ ಬಗೆಯ ಅತಿವರ್ತನೆಗೂ ಅವಕಾಶಕೊಡದಂತೆ, ಕ್ರಮವರಿತು, ಅನುಗೊಳಿಸಿ, ಮುಂದುವರಿಯುವಂತೆ ಮಾಡುವುದೇ ಮಹಾಸ್ವಾಮಿಯವರ ಕಾರ್ಯಸಾಧನೆಯ ದೊಡ್ಡ ಗುರಿ.

ಸರ್ಕಾರದವರೇ ಕೈಗಾರಿಕೆಯ ಉದ್ಯಮಗಳಲ್ಲಿ ಮಿತಿಮೀರಿ ಕೈಹಾಕಿ ಆಕ್ರಮಿಸಿಕೊಳ್ಳುತ್ತಿದ್ದಾರೆಂಬ ಆಕ್ಷೇಪವೊಂದು ಬಂದಿದೆ. ವಾಸ್ತವ ವಿದ್ಯಮಾನಗಳನ್ನೇ ಸರಿಯಾಗಿ ತಿಳಿದುಕೊಳ್ಳದೆ ಪ್ರವರ್ತಿಸಿರುವುದೇ ಈ ಆಕ್ಷೇಪಕ್ಕೆ ಕಾರಣವೆಂದು ಹೇಳಬೇಕಾಗಿದೆ. ಇಂಗ್ಲೆಂಡಿನಂಥ ದೊಡ್ಡ ದೊಡ್ಡ ಪಾಶ್ಚಿಮಾತ್ಯ ದೇಶಗಳ ಮಾತೇ ಬೇರೆ. ಅಲ್ಲಿ ಕೈಗಾರಿಕೆಗಳ ಮತ್ತು ವಾಣಿಜ್ಯದ ಭಾರಿ ಭಾರಿ ಉದ್ಯಮಗಳನ್ನು ಹೂಡಿ ಕೆಲಸ ನಡೆಯಿಸುವವರು ಮುಖ್ಯವಾಗಿ ಪ್ರಜಾವರ್ಗದವರೇ.

ಇಲ್ಲಿ ನಮ್ಮ ಭರತಖಂಡದ ವಿದ್ಯಮಾನಗಳೇ ಬೇರೆ. ಇಲ್ಲಿ ಪ್ರಜಾವರ್ಗದವರು ಭಾರಿ ಭಾರಿ ಕೈಗಾರಿಕೆಯ ಉದ್ಯಮಗಳನ್ನು ನಡೆಯಿಸುವ ಸಾಹಸದಿಂದ ದೂರವಾಗಿರುವುದೇ ಸಾಮಾನ್ಯ ಪರಿಸ್ಥಿತಿ. ಕೈಗಾರಿಕೆಗಳಿಗ ಖಾಸಗಿ ಬಂಡವಾಳವು ಒದಗುವುದಂತೂ ಬಹಳ ಕಡಿಮೆ.

ಕಳೆದಿರುವ ಒಂದು ವರ್ಷದ ಅವಧಿಯಲ್ಲಿ ಆರ್ಥಿಕ ಕಾರ್ಯಕ್ರಮ ಮತ್ತು ಗ್ರಾಮಪುನರುಜ್ಜೀವನಗಳಿಂಡರ ವಿಷಯದಲ್ಲಿ ಸಹ ಗಣನೀಯವಾದಷ್ಟು ಎಷ್ಟೋ ಕಾರ್ಯಸಾಧನೆಯಾಗಿರುವ ಅಂಶವನ್ನು ತಮಗ ವ್ಯಕ್ತಪಡಿಸಲು ಹರ್ಷಿಸುತ್ತೇನೆ. ಕಳೆದ ಅಧಿವೇಶನದಿಂದೀಚೆಗೆ ಸಿಮೆಂಟು ಕಾರ್ಖಾನೆ, ಕಾಗದದ ಕಾರ್ಖಾನೆ ಮತ್ತು ಜೂಟು ರೇಷ್ಮೆ ಕಾರ್ಖಾನೆ ಕಂಪೆನಿ—ಇವು ಮೂರರ ಸ್ಥಾಪನೆಯ ಸಂಬಂಧವಾಗಿ ಕೆಲಸ ನಡೆಯುತ್ತಿದೆ.

ಕೈಗಾರಿಕೆಯು ಒಂದೇ ಸಮವಾಗಿ ಮುಂದುವರಿದು ಏಳಿಗೆ ಹೊಂದುತ್ತಿರುವುದಕ್ಕೆ ಇಲ್ಲಿ ಒಂದೇ ಒಂದು ನಿದರ್ಶನವನ್ನು ಮಾತ್ರ ಸೂಚಿಸುತ್ತೇನೆ. ಭದ್ರಾವತಿಯಲ್ಲಿ ಕಬ್ಬಿಣದಿಂದ ಉಕ್ಕನ್ನು ತಯಾರಿಸುವ ಯಂತ್ರವನ್ನು ಸ್ಥಾಪಿಸುವ ಕೆಲಸವು ಪೂರೈಸಿತು. ಮೊಟ್ಟಮೊದಲನೆಯ ಸಲದ ಉಕ್ಕಿನ ತಯಾರಿಯು 1936 ನೆಯ ಇಸವಿ ಮಾರ್ಚಿ 7 ನೆಯ ತಾರೀಖಿನ ದಿನ ಪ್ರಾರಂಭವಾಯಿತು.

ವರ್ಷದಲ್ಲಿ ಭದ್ರಾವತಿ ಕಾರ್ಖಾನೆಯಲ್ಲಿ ಕೆಲಸ ನಡೆದುದರಿಂದ ಬಂದಿರತಕ್ಕ ನಿವ್ವಳ ಲಾಭವು 1.95 ಲಕ್ಷ ರೂಪಾಯಿಗಳು. ಇದನ್ನು ಸವಕಳಿ ಕಿಮ್ಮತು ಭರ್ತಿ ನಿಧಿಯ (ಡಿಪ್ರೀಸಿಯೇಷನ್ ಫಂಡಿನ) ಲೆಕ್ಕಕ್ಕೆ ಸೇರಿಸಲಾಯಿತು.

ರೈತರ ಯೋಗಕ್ಷೇಮವು ಸರ್ವದಾ ಸರ್ಕಾರದವರ ಗಮನದಲ್ಲಿರುವ ಅತ್ಯಂತ ಮುಖ್ಯವಾದ ವಿಚಾರವಾಗಿದೆ. ಗ್ರಾಮ ಪುನರುಜ್ಜೀವನದ ವಿಚಾರವಾಗಿ ಈಚಿನ ಕೆಲ ದಿನಗಳಲ್ಲಿ ಕೆಲವು ಮುಖ್ಯವಾದ ಏರ್ಪಾಡುಗಳು ನಡೆದಿವೆ. ಎಲ್ಲ ಗ್ರಾಮಗಳಲ್ಲಿಯೂ ಕೊಂಚಕೊಂಚ ಕೆಲಸ ನೆರವೇರಿಸುವುದರಲ್ಲಿ ಅನೇಕ ವರ್ಷಗಳಿಂದಲೂ ನಮ್ಮ ಪ್ರಯತ್ನಗಳು ನಡೆದವು. ಈಗ ಕೆಲವು ಗ್ರಾಮಗಳನ್ನು ಆರಿಸಿ ಅಲ್ಲಿ ಗ್ರಾಮಾಭಿವೃದ್ಧಿಯ ಸಮಸ್ತ ಏರ್ಪಾಡುಗಳನ್ನೂ ಮಾಡುವ ಯೋಜನೆಯನ್ನು ಮಾಡಿದ್ದೇವೆ. ಇದಕ್ಕಾಗಿ ಒಟ್ಟು 200 ಗ್ರಾಮಗಳನ್ನು ಆರಿಸಿದ್ದೇವೆ. ಅಲ್ಲಿ ಅಭಿವೃದ್ಧಿಕಾರ್ಯಗಳ ನಾನಾ ಶಾಖೆಗಳಲ್ಲಿ ಕೆಲಸ ನಡೆಯಿಸಿ ಗ್ರಾಮಾಭಿವೃದ್ಧಿ ಪ್ರಯತ್ನವು ಪೂರ್ಣವಾಗಿ ನೆರವೇರುವಂತೆ ಮಾಡಬೇಕೆಂದಿದ್ದೇವೆ.

ಆರಿಸಿಕೊಂಡ ಗ್ರಾಮಗಳಲ್ಲಿ ಪಂಚಾಯಿತಿಗಳ ಆಡಳಿತವನ್ನು ಉತ್ತಮಪಡಿಸುವುದಕ್ಕೆ ಏರ್ಪಾಡುಮಾಡಲಾಗಿದೆ. ಆ ಗ್ರಾಮಪಂಚಾಯಿತಿಗಳು ತಮ್ಮ ಕರ್ತವ್ಯಗಳಲ್ಲಿಯೂ ಜವಾಬ್ದಾರಿಗಳಲ್ಲಿಯೂ ಶ್ರದ್ಧೆವಹಿಸಿ ಅವುಗಳನ್ನು ಸಮರ್ಪಕವಾಗಿ ನೆರವೇರಿಸುವಂತೆ ಮಾಡಬೇಕೆಂಬುದು ಇದರ ಉದ್ದೇಶ. ಈ ಏರ್ಪಾಡುಗಳನ್ನು ಮೆಚ್ಚಿ ಜನರು ಬಹಳ ಉತ್ಸಾಹದಿಂದ ಕೆಲಸಮಾಡಲು ಮುಂದೆ ಬಂದಿದ್ದಾರೆಂದು ಸೂಚಿಸಲು ಹರ್ಷಿಸುತ್ತೇನೆ.

ಗ್ರಾಮ ಪುನರುಜ್ಜೀವನದ ಕಾರ್ಯಕಲಾಪಗಳನ್ನು ನೆರವೇರಿಸಲು ಆರಿಸಿರತಕ್ಕ ಗ್ರಾಮಗಳಲ್ಲಿ ಕುಡಿಯುವ ನೀರಿನ ಬಾವಿಗಳು, ಬೀಜದ ಹೋರಿಗಳು, ಶಾಲಾಶಾಲೆಗಳು, ಇವುಗಳಲ್ಲಿ ಯಾವುವು ಯಾವ ಗ್ರಾಮಗಳಲ್ಲಿಲ್ಲವೋ ಅವುಗಳನ್ನು ಆ ಗ್ರಾಮಗಳಿಗೆ ಒದಗಿಸುವದಕ್ಕಾಗಿ ಸರ್ಕಾರದಿಂದ ಮೊಬಲಗುಗಳನ್ನು ಮಂಜೂರು ಮಾಡಿದ್ದೇವೆ. ಅತ್ಯವಶ್ಯವಾದ ಆ ಸೌಕರ್ಯಗಳೆಲ್ಲ ಆ ಗ್ರಾಮಗಳಲ್ಲಿ ಪ್ರತಿಯೊಂದರಲ್ಲಿ ಕೂಡ ಇರುವಂತೆ ಏರ್ಪಡಿಸುವ ವ್ಯವಸ್ಥೆಯು ನಡೆದಿದೆ. ಆದರೆ, ಸರ್ಕಾರದ ಸಹಾಯವಿಲ್ಲದೆ ಗ್ರಾಮಸ್ಥರೇ ಸಾಧ್ಯವಾದ ಸಮಸ್ತ ಕಾರ್ಯಗಳನ್ನೂ ನೆರವೇರಿಸಿಕೊಳ್ಳಬೇಕೆಂಬುದನ್ನು ಮನದಟ್ಟು ಮಾಡಿಕೊಟ್ಟು ಒತ್ತಾಯಪಡಿಸುವದಕ್ಕೂ ಗಮನಕೊಡಲಾಗಿದೆ. ಇದು ಯುಕ್ತವಾದ ಅಂಶ ಏಕೆಂದರೆ, ಗ್ರಾಮಾಭಿವೃದ್ಧಿಕಾರ್ಯಗಳು ಅವಿಚ್ಛಿನ್ನವಾಗಿ ನಡೆಯಬೇಕಾದರೆ, ಗ್ರಾಮಸ್ಥರೇ ತಮ್ಮ ಕರ್ತವ್ಯವನ್ನರಿತು ಅವುಗಳನ್ನು ನೆರವೇರಿಸುವದರಿಂದ ಅದು ಸಾಧ್ಯವೇ ಹೊರತು, ಹೊರಗಿನ ಬಲವಂತದಿಂದ ಅದು ಸಾಧ್ಯವಿಲ್ಲ.

ಇವು ಸಂಸ್ಥಾನದಲ್ಲಿ ಗ್ರಾಮಪುನರುಜ್ಜೀವನವನ್ನು ನಡೆಯಿಸುತ್ತಿರುವ ಕೆಲವು ಮಾರ್ಗಗಳು. ನಮ್ಮ ದೇಶವು ವ್ಯವಸಾಯವೇ ಮುಖ್ಯವೃತ್ತಿಯಾದ ದೇಶ. ಆದಕಾರಣ, ಮೂಲತಃ ನೋಡಿದ್ದಲ್ಲಿ ಗ್ರಾಮ ಪುನರುಜ್ಜೀವನವೆಂದರೆ ನಮ್ಮ ದೇಶದ ವಿಚಾರದಲ್ಲೇನೊ, ಕೇವಲ ವ್ಯವಸಾಯದ ಮೇಲ್ಪಾಟೆಂದೇ ಅರ್ಥ.

ಕೈಗಾರಿಕೆ ಪಾಠಶಾಲೆಗಳನ್ನು ಉತ್ತಮಪಡಿಸಿ ಪುನರ್ವ್ಯವಸ್ಥೆ ಮಾಡಲು ಸಲಹೆಗಳನ್ನು ಕೊಡುವುದಕ್ಕಾಗಿ ನೇಮಕವಾಗಿದ್ದ ಸಮಿತಿಯವರ ಸಲಹೆಗಳಮೇಲೆ ಹುಕುಂ ಸಾದರುಮಾಡಲಾಗಿದೆ. ಬಡನವಾಳದ ನೂಲುವ ಸಂಸ್ಥೆಯಲ್ಲಿ ಈ ವರ್ಷ 97,311 ಚದರ ಗಜ ಖಾದಿ ತಯಾರಾಯಿತು. ಅದರ ಬೆಲೆಯು 68,915 ರೂಪಾಯಿಗಳು. ಹಿಂದಿನವರ್ಷದಲ್ಲಿ 68,915 ಚದರಗಜ ಖಾದಿಯು ತಯಾರಾಗಿದ್ದಿತು. ಅದರ ಬೆಲೆ 31,000 ರೂಪಾಯಿಗಳು. ಅಲ್ಲಿಯ ಕಾರ್ಯಕಲಾಪಗಳ ಸಂಬಂಧದಲ್ಲಿ 2,600 ಮಂದಿ ನೂಲುವವರೂ 120 ಮಂದಿ ನೇಯ್ಗೆಯವರೂ ನೇಮಕವಾಗಿದ್ದಾರೆ.

ದಿವಾನರ ಭಾಷಣ

(ಹಿಂದಿನ ಪುಟದಿಂದ ಮುಂದುವರಿದುದು)

ಇದುವರೆಗೆ ನಿರೀಕ್ಷಿಸಿದಷ್ಟು ಮಳೆಯೇನೂ ಬಂದಿಲ್ಲ. ಆದಾಗ್ಯೂ ಒಟ್ಟಿನಲ್ಲಿ ಮಳೆಬೆಳೆಗಳ ಸ್ಥಿತಿಯು ಸುಮಾರಾಗಿ ಸಮರ್ಪಕವಾಗಿದೆ ಕಬ್ಬನ್ನು ಕೊರೆಯುವ ಕೀಟಗಳ ಮತ್ತು ಶಾಖಿಗಿಡಗಳನ್ನು ಕೊರೆಯುವ ಕೀಟಗಳ ಹಾವಳಿಯನ್ನು ಅಡಗಿಸುವುದಕ್ಕಾಗಿ ವ್ಯವಸಾಯದ ಇಲಾಖೆಯವರು ನೆರವೇರಿಸಿದ ಪ್ರಯತ್ನಗಳಿಗೆ ಫಲವಾಗಿದೆ

1935–36ನೆಯ ಸಾಲಿನಲ್ಲಿ ಗ್ರಾಮ ಪಂಚಾಯಿತಿಗಳ ಸಂಖ್ಯೆಯು 11,390 ರಿಂದ 11,337ಕ್ಕೆ ತಗ್ಗಿತು ತಮ್ಮ ಅಧ್ಯಕ್ಷರನ್ನು ತಾವುಗಳೇ ಚುನಾಯಿಸಿಕೊಳ್ಳುವ ಗ್ರಾಮಪಂಚಾಯಿತಿಗಳು 165ಕ್ಕೆ ಹೆಚ್ಚಿದವು ಐಚ್ಛಿಕ ತೆರಿಗೆಯನ್ನು ವಿಧಾಯಕಮಾಡಿರತಕ್ಕ ಗ್ರಾಮಪಂಚಾಯಿತಿಗಳು ಮತ್ತೆರಡು ಹೆಚ್ಚಿದುವು ಮುಖ್ಯಮುಖ್ಯವಾದ ಹಲವು ಕಾಮಗಾರಿಗಳು ನಡದುವು

ಪ್ರಪಂಚದ ಇತಿಹಾಸದಲ್ಲೇ ಅತ್ಯಂತ ಬಿಕ್ಕಟ್ಟಿನ ಸಮಯಗಳಲ್ಲೊಂದು ಈಗ ಒದಗಿದೆಯೆಂಬುದು, ಪ್ರಪಂಚದಲ್ಲಿ ಸಮಸ್ತರಿಗೂ ತೋರಿಬರುವ ಅಂಶವಾಗಿದೆ ಅದ್ಭುತವಾದ ಮಾರ್ಪಾಡುಗಳುಂಟಾಗುವ ಕಾಲವು ತೀರ ಸಮೀಪಿಸಿದೆ ಅವುಗಳಿಂದ ಉಂಟಾಗುವ ಆಗು ಹೋಗುಗಳು ಇತರ ದೇಶಗಳಂತೆಯೇ ಭರತಖಂಡಕ್ಕೂ ತಟ್ಟದೆ ತಪ್ಪುವಂತಿಲ್ಲ

ಅದಕಾರಣ ಕೋಟ್ಯಂತರ ಜನಸಂಖ್ಯೆಯುಳ್ಳದ್ದಾಗಿ ಹಲವು ಬುಡಕಟ್ಟುಗಳವರಿಂದಲೂ ಹಲವು ಜಾತಿ ಮತಗಳವರಿಂದಲೂ ತುಂಬಿರುವ ದೊಡ್ಡ ದೇಶವಾದ ಭರತಖಂಡವು ಈಗಿನಂತಿರದೆ ಜನಪದ ಭಾವದ ಹೊಸರೂಪವನ್ನು ಎಷ್ಟು ಬೇಗ ತಳೆದರೆ ಅದಕ್ಕೂ ಒಟ್ಟು ಪ್ರಪಂಚಕ್ಕೂ ಅಷ್ಟೂ ಅಷ್ಟು ಅನುಕೂಲ ಭರತಖಂಡದವರೆಲ್ಲ ಒಂದಾಗಬೇಕು, ಭರತಖಂಡದ ಯೋಗಕ್ಷೇಮ ಒಂದೇ ಉಳಿದುದೆಲ್ಲಕ್ಕಿಂತಲೂ ಮುಖ್ಯವೆಂಬ ಮನೋಧರ್ಮವು ಒಲಿಯಬೇಕು, ಭರತಖಂಡದ ಹಿತಸಾಧನೆಯೊಂದೇ ಭಾರತೀಯರೆಲ್ಲರ ಸಮಾನ ಧರ್ಮವೆಂಬ ಪವಿತ್ರವಾದ ಜನಪದ ಭಾವನೆಯು ಭಾರತೀಯರೆಲ್ಲರ ಹೃದಯವನ್ನೂ ಮಿಡಿದು ಸುರಿದುಂಬಿಸಬೇಕು ಭರತಖಂಡಕ್ಕೆ ಈ ಹೊಸ ರೂಪವು ಎಷ್ಟು ಬೇಗ ಸಿದ್ಧಿಸಿದರೆ ಅದರ ಯೋಗಕ್ಷೇಮ ಸಾಧನೆಗೂ ಒಟ್ಟು ಪ್ರಪಂಚದ ಯೋಗಕ್ಷೇಮಸಾಧನೆಗೂ ಅಷ್ಟೂ ಅಷ್ಟು ಅನುಕೂಲ ಏಕೆಂದರೆ, ಪ್ರಪಂಚದಲ್ಲಿ ಸುಖಶಾಂತಿಗಳು ನೆಲೆಗೊಳ್ಳುವದಕ್ಕೆ ಭರತಖಂಡದವಲ್ಲಿ ಹೆಚ್ಚಿನ ಸಹಾಯವಾಗಬೇಕಾಗಿದೆ ಭಾರತೀಯರೆಲ್ಲರೂ ಐಕಮತ್ಯದಿಂದ ಕೂಡಿಗೂಡಿ, ಭಾರತೀಯರಲ್ಲಿ ನೂತನ ಶಕ್ತಿ ಸಾಮರ್ಥ್ಯಗಳು ಕಳಕಳಿಸುವಂತಾದಲ್ಲಿ ಮಾತ್ರವೇ ಭರತಖಂಡದಿಂದ ಹಾಗೆ ಸಹಾಯವಾಗುವುದು ಸಾಧ್ಯ ಆದಕಾರಣ, ಹಾಗೆ ಸಹಾಯವಾಗುವಂತೆ ಮಾಡುವುದನ್ನೇ ಗುರಿಯಾಗಿಟ್ಟುಕೊಂಡು ಭಾರತೀಯರಾದ ನಾವೆಲ್ಲರೂ ಶ್ರಮಿಸಬೇಕು ಈಗ ಆಚರಣೆಗೆ ಬರುವುದರಲ್ಲಿರುವ ಇಂಡಿಯಾ ಸರ್ಕಾರದ ಹೊಸ ಕಾನೂನು ಆ ಕಾರ್ಯಕಲಾಪಗಳಿಗೆ ಸ್ವಲ್ಪಮಟ್ಟಿನ ಲಾಂಛನದಂತಿದೆ ಮೈಸೂರು ಸಂಸ್ಥಾನವು ಭರತಖಂಡದಲ್ಲಿ ಏರ್ಪಡವ ಸಂಯುಕ್ತ ರಾಜ್ಯಾಂಗ ವ್ಯವಸ್ಥೆಗೆ ಸೇರಲು ಮನಸ್ಸು ಮಾಡುವ ಸ್ಥಿತಿಯೊದಗಿದಲ್ಲಿ, ನಮ್ಮ ಮೈಸೂರು ಸಂಸ್ಥಾನವೂ ಸಹ ಮಹತ್ತರವಾದ ಆ ಕಾರ್ಯಕಲಾಪಗಳಲ್ಲಿ ಭಾಗವನ್ನು ವಹಿಸಿ ತನ್ನ ಸ್ಥಿತಿಗೆ ತಕ್ಕಂತೆ ಉತ್ತಮ ರೀತಿಯಲ್ಲಿ ಸಹಾಯ ಮಾಡುವುದು ಸಾಧ್ಯವೆಂಬ ಭರವಸೆಯು ನನಗಿದೆ ತಮ್ಮೆಲ್ಲರಿಗೂ ಅದೇ ಭರವಸೆಯಿದೆಯೆಂಬ ವಿಷಯದಲ್ಲಿ ಕೂಡ ನನಗೆ ಸ್ವಲ್ಪವೂ ಸಂದೇಹವಿಲ್ಲ ಭರತಖಂಡದಲ್ಲಿ ಏರ್ಪಡುವ ಸಂಯುಕ್ತ ರಾಜ್ಯಾಂಗ ವ್ಯವಸ್ಥೆಯು ಪ್ರಪಂಚದಲ್ಲೇ ಪ್ರಾಮುಖ್ಯವಾದ ಅತ್ಯಂತ ದೊಡ್ಡ ರಾಜಕೀಯ ವ್ಯವಸ್ಥೆಯಾಗಿ ಪರಿಣಮಿಸುತ್ತದೆ. ಆದಕಾರಣ ಮುಂದೆ ಏರ್ಪಡುವ ಆ ಶಿಸ್ತಿನಲ್ಲಿ ಭಾಗಿಗಳಾಗಿ ನಮ್ಮ ಸ್ಥಾನಮಾನಗಳಿಗೆ ತಕ್ಕಂತೆ ಶ್ರೇಷ್ಠರೀತಿಯಲ್ಲಿ ಕೆಲಸಮಾಡಲು ಸಿದ್ಧವಾಗೋಣ ನಾವು ಇತರ ಸಂಸ್ಥಾನಗಳ ಮತ್ತು ಇತರ ಪ್ರಾಂತಗಳ ನಮ್ಮ ದೇಶಬಾಂಧವರೊಡಗೂಡಿ ನಮ್ಮ ಮಾತೃಭೂಮಿಗಾಗಿ ಮಾತ್ರವೇ ಅಲ್ಲದೆ ಒಟ್ಟು ಮನುಷ್ಯವರ್ಗದ ಶ್ರೇಯಸ್ಸಿಗಾಗಿಯೇ ಶ್ರಮಿಸಿ ನಮ್ಮ ಸೇವೆಯನ್ನು ಸಮರ್ಪಿಸುವೆವೆಂಬ ಭಾವನೆಯಿಂದ ಉದ್ದೀಪಿತರಾಗಿ ಕಾರ್ಯಕ್ಷೇತ್ರದಲ್ಲಿ ಉತ್ಸಾಹದಿಂದ ಮುಂದುವರಿಯೋಣ

ನವರಾತ್ರಿ ಬಿರುದುಗಳು.

ಈ ದಿನ ರಾತ್ರಿ ನಡೆದ ದರ್ಬಾರಿನಲ್ಲಿ ಶ್ರೀಮನ್ಮಹಾರಾಜರು ಈ ಕೆಳಗೆ ಕಂಡಂತೆ ಬಿರುದುಗಳನ್ನು ದಯಪಾಲಿಸಿದರು —

ಶ್ರೀ॥ ಎನ್. ಮಾಧವರಾವ್ (ದ್ವಿತೀಯ ಸಚಿವರು) —ರಾಜಮಂತ್ರಪ್ರಸಕ್ತ

ಶ್ರೀ॥ ಗಳಾಡ ಎ ಎಸ್ ಆರ್ ಚಾರಿ ಮತ್ತು ಕೆ ಶಂಕರನಾರಾಯಣರಾವ್ —ರಾಜಧರ್ಮ ಪ್ರಸಕ್ತ

ಡಾ॥ ಬಿ ಕೆ ನಾರಾಯಣರಾವ್.—ರಾಜಸೇವಾಸಕ್ತ

ಶ್ರೀ॥ ಎಸ್. ಶಾಮಣ್ಣನವರು — ರಾಜಸೇವಾನಿಪುಣ

ವೇ॥ ಬ್ರ॥ ಆಟ್ಟೀಮಳಲವಾಡಿ ವೆಂಕಟರಾಮಾವಧಾನಿಗಳು —ವೇದರತ್ನಂ

ವೇ॥ ಬ್ರ॥ ಬೆಟ್ಟದಹಳಸೂರು ವೆಂಕಟರಾಮಾಶಾಸ್ತ್ರಿಗಳು —ಸಾಹಿತ್ಯರತ್ನಂ

ಶ್ರೀ॥ ಎ. ಟಿ ರಾಜಾರಾಂ —ಧರ್ಮಪ್ರಕಾರ

ಶ್ರೀ॥ ವಂಕಟಗಿರಿಯಪ್ಪನವರು —ವೈಣಿಕಪ್ರವೀಣ

ಪಂಡಿತ ಜವಾಹಿರಲಾಲರ

ತಮಿಳುನಾಡು ಪ್ರವಾಸ

ತಮಿಳುನಾಡು ಪ್ರವಾಸದಲ್ಲಿ ರಾಷ್ಟ್ರಮಹಾಸಭೆಯ ಅಧ್ಯಕ್ಷರಾದ ಪಂಡಿತ ಜವಾಹಿರಲಾಲ್ ನೆಹರೂರವರು ೨೦೩ ಸಭೆಗಳಲ್ಲಿ ಉಪನ್ಯಾಸ ಮಾಡಿದರು ೩೫೦ ಸನ್ಮಾನ ಪತ್ರಗಳನ್ನು ಸ್ವೀಕರಿಸಿದರು ಆ ನಾಡಿನಲ್ಲಿ ಅವರು ೧೫ ದಿವಸಗಳವರೆಗೆ ಸಂಚರಿಸಿದರು ಸುಮಾರು ೩ ಕೋಟಿ ಜನರು ಅವರ ಭಾಷಣವನ್ನು ಕೇಳಿದರು

ಮೈಜಾಪುರ ಕಾಂಗ್ರೆಸ್ ಪ್ರತಿನಿಧಿಗಳು ಕರ್ನಾಟಕದಲ್ಲಿ ಚುನಾವಣೆ

೨೫—೧೧—೩೬ ನೇ ದಿವಸ ಫೈಜಾ[illegible] ಕಾಂಗ್ರೆಸ್ ಪ್ರತಿನಿಧಿಗಳನ್ನು ಆರಿಸುವ [illegible]ಲಸವು ಕರ್ನಾಟಕದಲ್ಲಿ ನಡೆಯತಕ್ಕದ್ದು ಆ ಬಗ್ಗೆ ಆಯಾ ಜಿಲ್ಲಾ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರು ಆಯಾ ಜಿಲ್ಲೆಯಲ್ಲಿ ನಡೆಯತಕ್ಕ ಚುನಾವಣೆಯ ಚುನಾವಣಾ ಅಧಿಕಾರಿಗಳಾಗಿ (Returning Officer) ನೇಮಿಸಲ್ಪಟ್ಟಿದ್ದಾರೆ ಕಾರವಾರ [illegible]ಗಿ ಶ್ರೀ ಹಳದೀ ಪುರಂದರರು, ಕೊಡಗಿ[illegible] ಶ್ರೀ ಬೆಳ್ಳಿಯಪ್ಪನವರು, [illegible] ಮೈಸೂರು ಸಂಸ್ಥಾನಕ್ಕಾಗಿ ಡಾ॥ [illegible]ಕರರು, ಚುನಾವಣೆ ಅಧಿಕಾರಿಗಳೆಂದು [illegible]ಯಮಿಸಲ್ಪಟ್ಟಿದ್ದಾರೆ

ರ ರಾ ದಿವಾ[illegible]
ಗೌ| ಕಾರ್ಯ[illegible]
ಕ ಪ್ರಾಂ. ಕಾಂ ಕಮಿ[illegible]

ನವರಾತ್ರಿ ಉತ್ಸವದ ವೈಭವ

ಕಳೆದ ಹತ್ತು ದಿನಗಳಿಂದ ರಾಜಧಾನಿಯಲ್ಲಿ ಜೀವಕಳೆಯು ತುಂಬಿ ತುಳುಕಾಡುತ್ತಿತ್ತು ಎಂದಿಗಿಂತಲೂ ಮಿಗಿಲಾಗಿ ಈ ಸಾರಿ ನವರಾತ್ರಿ ಉತ್ಸವವು ವೈಭವದಿಂದ ಜರುಗಿತು ಪದ್ಧತಿಯಂತೆ ದರ್ಬಾರುಗಳು ವಿನೋದಗಳೂ ನಡೆದವು ಶ್ರೀಮನ್ಮಹಾರಾಜರವರ ಜಂಬೂಸವಾರಿಯ [illegible]ಳ ಶೋಭಾಯಮಾನವಾಗಿತ್ತು ಶ್ರೀ[illegible]ನ್ಮಹಾರಾಜರವರು, ಶ್ರೀಮದ್ಯುವರಾಜರು ಮತ್ತು ಶ್ರೀ ಜಯಚಾಮರಾಜರವರು [illegible]ನೆ ಆನೆಯಮೇಲೆ ಅಂಬಾರಿಯಲ್ಲಿ [illegible] ವಿಜಯೋತ್ಸವವನ್ನು ನೆರವೇರಿಸಿದರು ಸಾವಿರಾರು ಜನರು ಸ್ಥಳ, ಪರಸ್ಥಳಗಳಿಂದ ಬಂದು ತಮ್ಮ ರಾಜಭಕ್ತಿ ವಿಶ್ವಾಸಗಳನ್ನು ಸೂಚಿಸಿದರು ಈ ಸಾರಿ ಉತ್ಸವಕ್ಕೆ [illegible]ಹಳ ಜನರು ಬಂದಿದ್ದರು ರೈಲ್ವೆ ಇ[illegible]ಯವರು ಬಹಳ ಸೌಕರ್ಯಗಳನ್ನು ಒದಗಿಸಿದ್ದರು

ವಸ್ತು ಪ್ರದರ್ಶನ.

ನವರಾತ್ರಿ ವಸ್ತುಪ್ರದರ್ಶನವು ಈ 16ನೇ ತಾ॥ ಆರಂಭವಾಯಿತು [illegible] ತಿನಂತೆ ಭರತಖಂಡದ, ಅನೇಕ [illegible]ಳಿಂದ ವರ್ತಕರು, ಕೈಗಾರಿಕೆಗಳವರು ತಮ್ಮ ತಮ್ಮ ವಸ್ತುಗಳನ್ನು ತಂದು [illegible]ತಿಸುತ್ತಿರುವರು ಈ ಸಾರಿ ಪ್ರದರ್ಶನ ಕಟ್ಟಡವು ಹೊಸದಾಗಿ ಕಟ್ಟಲ್ಪಟ್ಟಿ[illegible] ಮೈಸೂರು ವಾಣಿಜ್ಯ ಮತ್ತು ಕೈ[illegible] ಇಲಾಖೆಯವರು ಹೊಸ ನಮೂನೆಯ [illegible]ಣವನ್ನೂ, ಹೊಸ ಸುಲಭ ಮಾದರಿ[illegible]ಮವನ್ನೂ ಹೊಸ ತರಹದ ಎತ್ತಿನ [illegible]ಡಿಯನ್ನೂ ಇಟ್ಟಿರುವರು ಸಾವಿರಾರು ಜನರು ಬಂದು ನೋಡುತ್ತಿರುವರು

ಶ್ರೀ ರಂಗನಾಥ ಟೈಪ್ ಫೌಂಡ್ರಿ

ಚಿಕ್ಕಪೇಟೆ, ಬೆಂಗಳೂರು ಸಿಟಿ

ಸುಂದರವಾದ ಅಕ್ಷರಗಳು, ಮುದ್ದುಮುದ್ದಾದ ಬಾರ್ಡರುಗಳು ಬಗೆಬಗೆಯ ಆಕಾರ

ನಮಗೆ ಈ ಕೆಲಸದಲ್ಲಿ ೩೦ ವರ್ಷಗಳ ಕಾಲದ ಅನುಭವವಿದೆ ಆಧುನಿಕ ಕಾಲಕ್ಕೆ ತಕ್ಕಂತೆ ಅಕ್ಷರದ ಆಕಾರವನ್ನು ಬಹು ಸುಂದರವಾಗಿ ಸುಧಾರಿಸಿದ್ದೇವೆ

ನಮ್ಮಲ್ಲಿನ " ಕನ್ನಡ, ಇಂಗ್ಲೀಷ್ " ಅಕ್ಷರಗಳಂತಹ ಸುಂದರವಾದ ಅಕ್ಷರಗಳನ್ನು ಮತ್ತೆಲ್ಲಿಯೂ ನೋಡಲಾರಿರಿ ಮತ್ತು,

ನೂರಾರು ಬಗೆಯ ಸುಂದರವಾದ ಬಾರ್ಡರುಗಳು, ನಯನಮನೋಹರವಾಗಿವೆ

೮ ಪಾಯಿಂಟಿನಿಂದ ೪೮ ಪಾಯಿಂಟಿನವರೆಗೆ ವಿಧವಿಧವಾದ ಸುಂದರಾಕ್ಷರಗಳಿವೆ

ನಮ್ಮ "ರಂಗನಾಥ ಕನ್ನಡ ಡಾಮಿನಸಾ' ಅಕ್ಷರಗಳನ್ನು ನೋಡಲು ಮರೆಯಬೇಡಿರಿ

ನಾವು ಕಾಪರ್ ಅಲಾಯ್ಡ್ (ತಾಮ್ರಮಿಶ್ರಿತ) ಸೀಸದಿಂದ ಅಕ್ಷರಗಳನ್ನು ತಯಾರಿಸುತ್ತೇವೆ ಸುಲಭ ಬೆಲೆ ಗ್ಯಾರಂಟಿಯಾದ ಬಾಳಿಕೆ.

ಎಂ. ಸಿ. ನಾರಾಯಣರಾಯರ

ಶ್ರೀ ಸತ್ಯನಾರಾಯಣ ಪರಿಮಳ ಫ್ಯಾಕ್ಟರಿ,

ಜಗನ್ಮೋಹನ ಬಂಗ್ಲಾ ಬೀದಿ, ಮೈಸೂರು

ಪರಿಮಳ ಅಗರ ಬತ್ತಿ

ಉಪಯೋಗಿಸಿ ಪ್ರೋತ್ಸಾಹಿಸಿರಿ

ಆಧುನಿಕ ಟಪಾಲ್ ಮತ್ತು ತಂತಿ ಸೌಕರ್ಯಗಳು.

(ಮ|| ಪೋಸ್ಟ್‌ಮಾಸ್ಟರ್ ಶ್ರೀನಿವಾಸ ಚಾರ್ಯರಿಂದ)

ಒಂದು ದೇಶದ ನಾಗರೀಕತೆಯು ಹೆಚ್ಚಿದಹಾಗೆಲ್ಲ, ಆ ದೇಶದಲ್ಲಿ ಪೋಸ್ಟಲ್ ಮತ್ತು ಟೆಲಿಗ್ರಾಫುಗಳ ಅನುಕೂಲ್ಯಗಳು ಬಹಳ ಚೆನ್ನಾಗಿರಬೇಕು. ಈ ಅನುಕೂಲ್ಯಗಳು ನಾಗರಿಕತೆಯ ಚಿಹ್ನೆ.

ಪೋಸ್ಟಾಫೀಸಿನಿಂದುಂಟಾಗಿರುವ ಸೌಕರ್ಯಗಳು ಸಾಮಾನ್ಯವಾಗಿ ಎಲ್ಲರಿಗೂ ತಿಳಿದೇ ಇದೆ. ರಾಮೇಶ್ವರದಲ್ಲಿ ಪೋಸ್ಟು ಮಾಡಿದ ಕಾಗದವು ಸರಿಯಾಗಿ ಪೆಷಾವರ್ರನ್ನು ಮುಟ್ಟುವುದು, ಕಲಕತ್ತಾದಿಂದ ಕಳಿಸಿದ ತಂತೀ ವರ್ತಮಾನವು ಶೀಘ್ರವಾಗಿ ಕೊಚ್ಚಿಗೆ ತಲ್ಪುವುದು ಕೂಡ ನಿನ ದರಬಾರ ಸಂತೆಯಲ್ಲಿ ಕೊಟ್ಟ ಮನಿ ಆರ್ಡರು ತಪ್ಪದೆ ಕಾಶಿಯನ್ನು ಸೇರುವದು. ಇನ್ಶೂರ್, ರಿಜಿಸ್ಟರ್ ಮತ್ತು ವಾಲ್ಯುಗಳೂ ಹಾಗೆಯೇ. ಈ ಇಲಾಖೆಯವರ ಪರಕ್ಕೆ ಕೊಂಡ ಯಾವ ಪತ್ರವೇ ಆಗಲಿ ಸುರಕ್ಷಿತವಾಗಿ ವಿಳಾಸದವರಿಗೆ ತಲ್ಪುವುದು. ಹಣವು ಪೋಸ್ಟಾಫೀಸ್ ಸೇವಿಂಗ್ಸ್ ಬ್ಯಾಂಕಿನಲ್ಲಿಟ್ಟಿದ್ದರೆ ಕಾಲಕ್ಕೆ ಕಾಲ ಒಮ್ಮೊಂದು ಪುಟ್ಟ ಗಂಟೇ ಆಗುವುದು.

ಟಪಾಲುಗಳನ್ನು ಊರಿಂದೂರಿಗೆ ಸಾಗಿಸುವದಕ್ಕಾಗಿ ಹಲವು ಏರ್ಪಾಟುಗಳನ್ನು ಮಾಡಿದ್ದಾರೆ. ಚಿರಪರಿಚಿತನಾದ ರನ್ನರು ಹಿಂದಿನಕಾಲದ ಜಟಕಾ, ಟಾಂಗಾಗಳು, ರೈಲುಗಳು, ಕಡಗೆ ಜಾರಿಗೆ ಬಂದ ಮೋಟಾರುಗಳು ಇವುಗಳೆಲ್ಲವೂ ಟಪಾಲನ್ನು ಊರಿಂದೂರಿಗೆ ಸಾಗಿಸುವದಕ್ಕಾಗಿ ಮಾಡಿದ ಸಾಧನಗಳು—ಇವುಗಳಿಂದ ಕೆಲಸ ನಡಿಸುವ ವಿಧಾನವು ಸರ್ವರಿಗೂ ತಿಳಿದೇ ಇದೆ.

ಈ ವಿಧಾನಗಳೆಲ್ಲವೂ ಹಳೆಯವು. ಈಗ ವಿಮಾನಗಳ ಮೂಲಕವೂ ಟಪಾಲು ಸಾಗಿಸುವ ಏರ್ಪಾಡು ಜಾರಿಗೆ ಬಂದಿದೆ. ಹಿಂದೂಸ್ಥಾನದಿಂದ ಹೊರಟ ಕಾಗದವು ಹಡಗಿನ ಮೂಲಕ ಇಂಗ್ಲೆಂಡಿಗೆ ಹೋಗುವದಕ್ಕೆ ಸಾಧಾರಣವಾಗಿ 15 ದಿನಗಳು ಬೇಕು. ಆದರೆ ಆಕಾಶ ವಿಮಾನದ ಮೂಲಕ 7–8 ದಿವಸಗಳಲ್ಲಿಯೇ ಮುಟ್ಟಬಹುದು. ಈ ವಿಮಾನ ಮಾರ್ಗವು ಪಟ್ಟಣಗಳಿಗೆ ಮಾತ್ರವೇ ಅಲ್ಲದೆ ಇಂಡಿಯಾದ ಒಳಪ್ರದೇಶದಲ್ಲಿಯೂ ಈಚೆಗೆ ವ್ಯಾಪಿಸಿದೆ.

ಪೋಸ್ಟಾಫೀಸಿನ ಅಥವಾ ಲೆಟರ್ ಬಾಕ್ಸಿನ ಅನುಕೂಲ್ಯವಿಲ್ಲದವರು ಕಾಗದಗಳನ್ನು ಊರಿಂದೂರಿಗೆ ಪ್ರಯಾಣಮಾಡುವ ಮೇಲ್ ಮೋಟಾರುಗಳಲ್ಲಿನ ಪೆಟ್ಟಿಗೆಗಳಲ್ಲಿ ಹಾಕಬಹುದು. ಆ ಕಾಗದಗಳು ಆ ದಿನವೇ ಮುಂದಿನ ಊರುಗಳಿಗೆ ಪ್ರಯಾಣಮಾಡುವ ಅವಕಾಶವುಂಟು.

ಈಚೆಗೆ "ಲಾಕ್‌ಬ್ಯಾಗ್ ಸಿಸ್ಟಂ" ಎಂಬ ಏರ್ಪಾಟೂ ಜಾರಿಗೆ ಬಂದಿದೆ. ಯಾವುದಾದರೂ ಒಂದು ಹಳ್ಳಿಗೆ ಬರುವ ಕಾಗದಗಳಾಗಲಿ ಅಥವಾ ಆ ಹಳ್ಳಿಯಿಂದ ಬೇರೆ ಊರುಗಳಿಗೆ ರವಾನೆಯಾಗಬೇಕಾದ ಕಾಗದಗಳಾಗಲೀ ಈ ಚೀಲಗಳಲ್ಲಿ ರವಾನೆಯಾಗುವ ಸೌಕರ್ಯವುಂಟು.

ಸುಮಾರು ಎರಡು ವರ್ಷಗಳಿಂದೀಚೆಗೆ "ಎಕ್ಸ್‌ಪ್ರೆಸ್ ಡಿಲಿವರಿ ಸಿಸ್ಟಂ" ಎಂಬುದೊಂದು ಜಾರಿಯಲ್ಲಿ ಬಂದಿದೆ. ಒಂದು ಕಾಗದಕ್ಕೆ ಮಾಮೂಲ್ ಟಪಾಲ್ ಹಾಸಲಿನ ಜೊತೆಗೆ ಇನ್ನೂ ಎರಡಾಣೆ ಸ್ಟಾಂಪು ಜಾಸ್ತಿಯಾಗಿ ಅಂಟಿಸಿ ಕೊಟ್ಟರೆ, ಆ ಕಾಗದವು ನಿರ್ದಿಷ್ಟವಾದ ಸ್ಥಳವನ್ನು ಮುಟ್ಟಿದ ಕೂಡಲೆ, ಇತರ ಕಾಗದಗಳ ಜೊತೆಗಲ್ಲದೆ ತಂತಿಯಂತೆ ಪ್ರತ್ಯೇಕವಾಗಿ ಡೆಲಿವರಿ ಮಾಡುವ ಈ ಏರ್ಪಾಟಿಗೆ 'Express Delivery System' ಎಂದು ಹೆಸರು.

Identity Cards ಎಂದರೇನು? ಇದರ ವಿಷಯವು ಅನೇಕರಿಗೆ ಗೊತ್ತಿದ್ದರೂ ಕೂಡ ಪ್ರಯೋಜನವನ್ನು ಹೊಂದುತ್ತಿರುವವರ ಸಂಖ್ಯೆಯು ಮಾತ್ರ ಬಹಳ ಕಡಿಮೆ. ಈ ಏರ್ಪಾಡು ಊರಿಂದೂರಿಗೆ ಯಾವಾಗಲೂ ಪ್ರಯಾಣ ಮಾಡಬೇಕಾಗಿರುವ ವ್ಯಾಪಾರಸ್ಥರೇ ಮೊದಲಾದವರಿಗೂ, ಯಾತ್ರಿಕರಿಗೂ, ಇನ್ನೂ ಅನೇಕರಿಗೂ ಬಹಳ ಅನುಕೂಲ.

ಈ ಅಂಚೆಯ ಸೌಕರ್ಯಗಳಲ್ಲಿ ಮತ್ತೊಂದು ಏರ್ಪಾಡಿದೆ. ಇದಕ್ಕೆ "Business Reply System" ಎಂದು ಹೆಸರು. ಹೆಚ್ಚಾಗಿ ಪ್ರತ್ಯುತ್ತರಗಳನ್ನು ಪಡೆಯಲಪೇಕ್ಷಿಸುವರಿಗೆ ಮುಖ್ಯವಾಗಿ ವ್ಯಾಪಾರಸ್ಥರಿಗೆ ಈ ಏರ್ಪಾಟು ಬಹಳ ಅನುಕೂಲ. ತಮ್ಮ ಕಾಗದವು ವಿಳಾಸದವರಿಗೆ ಮುಟ್ಟಿದ ಕೂಡಲೆ, ಆ ವಿಳಾಸದವರು, ಮೊದಲಿನ ಕಾರ್ಡು ಅಥವಾ ಕವರಿನ ಜೊತೆಗೆ ಬಂದ ಕಾಗದದಲ್ಲಿ ಪ್ರತ್ಯುತ್ತರವನ್ನು ಬರೆದು ಟಪಾಲ್ ಹಾಸಲ್ ಇಲ್ಲದಯೇ ಮೊದಲು ಬರೆದವರಿಗೆ ರವಾನಿಸಬಹುದು. ಮೊದಲು ಅದನ್ನು ಬರೆದವರೇ ಅದರ ಹೆಸರನ್ನು ಅಂಚೆಯ ಇಲಾಖೆಗೆ ಸಲ್ಲಿಸಿ ಡಿಲವರಿ ತೆಗೆದುಕೊಳ್ಳುವರು.

ಟೆಲಿಗ್ರಾಫ್ ಇಲಾಖೆ.

ಟೆಲಿಗ್ರಾಫ್ ಆಂದರೆ ಏನು ಎಂಬ ವಿಷಯವು ಸಾಮಾನ್ಯವಾಗಿ ಎಲ್ಲರಿಗೂ ತಿಳಿದೇ ಇದೆ. ಇತ್ತೀಚೆಗೆ Greeting Telegrams ಎಂಬ ಏರ್ಪಾಡು ಜಾರಿಗೆ ಬಂದಿದೆ. ನಮ್ಮ ಇಷ್ಟಮಿತ್ರರಿಗೆ ನಮಗಾಗುವ ಸಂತೋಷವನ್ನು ಟೆಲಿಗ್ರಾಂ ಮೂಲಕ ತಿಳಿಸಬೇಕಾದರೆ ಅದಕ್ಕಾಗಿ ನಿಯಮಾಮಕವಾಗಿರುವ ಒಂದು ನವೀನ ವಿಧವಾದ ತಂತೀ ವರ್ತಮಾನವು ಜಾರಿಯಲ್ಲಿದೆ. ಅದಕ್ಕೆ ರುಸುಮು 6 ಆಣೆ ಮಾತ್ರ.

ಮತ್ತೊಂದು ಅನುಕೂಲ್ಯವು ಯಾವುದೆಂದರೆ ಫೋನೋಗ್ರಾಂ ಸಿಸ್ಟಂ ತಂತಿಯನ್ನು ಕಳಿಸತಕ್ಕವರ ಮನೆಯಲ್ಲಿ ಟೆಲಿಫೋನ್ ಇದ್ದರೆ ಅಂತಹವರು ತಂತಿಯ ಆಫೀಸಿಗೆ ಹೋಗಬೇಕಾಗಿಯೂ ಇಲ್ಲ, ತಂತಿ ಫಾರಮನ್ನು ಬರದು ಕೊಡಬೇಕಾಗಿಯೂ ಇಲ್ಲ. ಫೋನ್ ಮೂಲಕ ವರ್ತಮಾನವನ್ನು ಟೆಲಿಗ್ರಾಫ್ ಆಫೀಸಿಗೆ ತಿಳಿಸಿಬಿಟ್ಟರೆ ಸಾಕು. ತಂತೀ ಆಫೀಸಿನವರು ಅದನ್ನು ಬರೆದುಕೊಂಡು ಕೂಡಲೆ ನಿರ್ದಿಷ್ಟವಾದ ಊರಿಗೆ ಕಳಿಸುತ್ತಾರೆ. ಇದಕ್ಕಾಗಿ, ತಂತಿ ಫೋನಿಗೆ ಎರಡಾಣೆ ಜಾಸ್ತಿ ರುಸುಮನ್ನು ಕೊಡಬೇಕು. ಇಂತಹವರ ಮನೆಗೆ ತಂತೀ ವರ್ತಮಾನವು ಬಂದರೆ ಟೆಲಿಗ್ರಾಫ್ ಆಫೀಸಿನವರು ಅದನ್ನು ಯಾವ ರುಸುಮೂ ಇಲ್ಲದೆ ಫೋನುಮಾಡಿ ಹೇಳುವರು.

ಟೆಲಿಫೋನುಗಳು

ಈ ಏರ್ಪಾಡು ಜಾರಿಗೆ ಬಂದು ಸುಮಾರು 15–20 ವರ್ಷಗಳೇ ಆದಾಗ್ಯೂ ಇದು ಈಚೆ ಜನಪ್ರಿಯವಾಗಿ ನಮ್ಮ ದೇಶದಲ್ಲೆಲ್ಲ ಹಬ್ಬಿದೆ. ಹಿಂದೂಸ್ಥಾನದ ಒಂದು ಮೂಲೆಯಿಂದ ಇನ್ನೊಂದು ಮೂಲೆಗೆ ಸುಲಭವಾಗಿ ಮಾತನಾಡಬಹುದು.

ರೇಡಿಯೋ ಟೆಲಿಫೋನ್ ಕೂಡ ಇಷ್ಟರಲ್ಲಿಯೇ ಬಳಕೆಗೆ ಬರುವುದಲ್ಲದೆ ಇಂಡಿಯಾ ಟ್ರಂಕ್ ಟೆಲಿಫೋನಿಗೆ ಇಂಗ್ಲೆಂಡ್ ಮತ್ತು ಅಮೆರಿಕಾಗಳೂ ಲಗತ್ತಾಗಿರುವುದರಿಂದ ಆ ದೇಶಗಳ ಕೂಡವೂ ನಾವು ಧಾರಾಳವಾಗಿ ಮಾತನಾಡಬಹುದು.

ಅತ್ಯಂತಾಧುನಿಕವಾದ ಇನ್ನೊಂದು ನವೀನವಾದ ಯಂತ್ರವೂ ಕೂಡ ಬಂದು ಹಿಡಿಯಲ್ಪಟ್ಟಿದೆ. ಇದಕ್ಕೆ Voice Frequency Telegraphy ಎಂತ ಹೆಸರು. ನಾವು ಕಳಿಸತಕ್ಕ ವರ್ತಮಾನವನ್ನು ತೆಗೆದುಕೊಳ್ಳಬೇಕಾಗಿರುವವರು ಮನೆಯಲ್ಲಿಲ್ಲದಿದ್ದರೂ ಚಿಂತೆಯಿಲ್ಲ. ಈ ಯಂತ್ರವು ಆ ಸಮಾಚಾರವನ್ನು ಪ್ರಿಂಟು ಮಾಡಿಟ್ಟಿರುವದು ಇದೊಂದು ಆಶ್ಚರ್ಯಕರವಾದ ಸೃಷ್ಟಿ.

ಪ್ರಜಾನುಕೂಲ್ಯಕ್ಕಾಗಿ ಮಾಡಿರುವ ಈ ನೂತನವಾದ ಏರ್ಪಾಟುಗಳು ಬಹಳ ಅಮೋಘವಾದುವುಗಳು. (ಮ|| ಶ್ರೀನಿವಾಸಾಚಾರ್ಯರು ಮಾಡಿದ ರೇಡಿಯೋ ಭಾಷಣದ ಸಾರಾಂಶ)

ಮೈಸೂರಿಗೆ ಛೀಫ್ ಎಲೆಕ್ಟ್ರಿಕಲ್ ಇಂಜಿನಿಯರು

ಮಿ|| ಫೋರ್ಬ್ಸ್‌ರವರು

ಮೈಸೂರು ಸಂಸ್ಥಾನದ ಛೀಫ್ ಎಲೆಕ್ಟ್ರಿಕಲ್ ಇಂಜಿನಿಯರ ಸ್ಥಾನಕ್ಕೆ ಬರಲು ಮಿ|| ಎಸ್. ಜಿ. ಫೋರ್ಬ್ಸ್‌ರವರು (ಹಿಂದೆ ಇದೇ ಸ್ಥಾನದಲ್ಲಿದ್ದರು) ಒಪ್ಪಿಕೊಂಡಿದ್ದಾರೆಂದು ತಿಳಿದುಬಂದಿದೆ. ಈಗ ನೌಕರಿಯಲ್ಲಿರುವ ಮ|| ಎಸ್. ಎನ್. ಮೋದಾಪಾಲಾರವರು ರಾಜೀನಾಮೆಯನ್ನು ಕೊಟ್ಟಿದ್ದಾರೆ.

ಮಿ|| ಫೋರ್ಬ್ಸ್‌ರವರು ನವಂಬರ್ 1 ನೇ ತಾರೀಖಿಗೆ ಬಂದು ಅಧಿಕಾರವನ್ನು ವಹಿಸಿಕೊಳ್ಳುವರು.

ರಾಜಧಾನಿಗೆ ನೂತನ ಹೆರಿಗೆ ಆಸ್ಪತ್ರೆ

ಶ್ರೀಮನ್ಮಹಾರಾಜರವರ ೧ ಲಕ್ಷ ರೂಪಾಯಿಗಳ ದಾನ

ಮೈಸೂರು ನಗರದಲ್ಲಿ ಆಧುನಿಕ ಕಾಲಕ್ಕೆ ತಕ್ಕಂತೆ ನೂತನವೊಂದು ಹೆರಿಗೆ ಆಸ್ಪತ್ರೆಯನ್ನು ಕಟ್ಟಲು ಶ್ರೀಮನ್ಮಹಾರಾಜರವರು ೧ ಲಕ್ಷ ರೂಪಾಯಿಗಳ ಉದಾರ ದಾನವನ್ನು ದಯಪಾಲಿಸಿರುವರು.

ಆಸ್ಪತ್ರೆಯು ದಿವಂಗತ ಪ್ರಿನ್ಸೆಸ್ ಚೆಲುವಾಜಮ್ಮಣ್ಣಿಯವರ ಹೆಸರಿನಿಂದ ಕರೆಯಲ್ಪಡುವುದು. ರಾಜಧಾನಿಗೆ ಅತ್ಯಾವಶ್ಯಕವಾಗಿದ್ದ ಸಹಾಯವು ಇದರಿಂದ ಬಹುಮಟ್ಟಿಗೆ ಅನುಕೂಲವಾಗುವುದರಲ್ಲಿ ಸಂದೇಹವಿಲ್ಲ.

ಇರ್ವಿನ್ ರಸ್ತೆಗೆ ಅಭಿಮುಖವಾಗಿ ಕೃಷ್ಣರಾಜೇಂದ್ರ ಆಸ್ಪತ್ರೆಯ ಕಾಂಪೌಂಡಿನಲ್ಲಿ ಇದನ್ನು ಕಟ್ಟಲಾಗುವುದು.

ಆರ್ಥಿಕ ಮುಗ್ಗಟ್ಟು

ಮೈಸೂರು ರೈತರಿಗೆ ರಿಯಾಯಿತಿ

ಭೂಕಂದಾಯದಲ್ಲಿ ಮತ್ತು ಇನ್ನೂ ಕೆಲವು ಸಣ್ಣ ಸಣ್ಣ ಬಾಬತ್ತುಗಳ ವಿಷಯದಲ್ಲಿ ಕೆಲವು ರಿಯಾಯಿತಿಗಳನ್ನು ಎಂದಿನಂತೆ ಈ ವರ್ಷವೂ ಮಂಜೂರು ಮಾಡಲು ನಮ್ಮ ಸರ್ಕಾರವು ಒಂದು ಪ್ರಕಟಣೆಯನ್ನು ಹೊರಡಿಸಿದೆ.

ವ್ಯವಸಾಯ ಬಂಧುಗಳ ಆರ್ಥಿಕ ಮುಗ್ಗಟ್ಟಿನ ನಿವಾರಣೆಗೆಂದು ೧೯೩೩ರಲ್ಲಿ ಮೊದಲನೆಯಸಲ ಒಂದು ಪ್ರಕಟಣೆಯು ಹೊರಬಿತ್ತು. ರವಿನ್ಯೂ ಕಮಿಷನರ ಸಲಹೆಯ ಮೇರೆಗೆ ಈ ವರ್ಷವೂ ಸರ್ಕಾರವು ರಿಯಾಯಿತಿಯನ್ನು ಮುಂದುವರಿಸಿದೆ. ಭೂಕಂದಾಯ, ತರಾವಿ, ಭೂಮಿಯ ಸಾಗುವಳಿ, ಹಣ್ಣಿನ ಅಭಿವೃದ್ಧಿ, ಕೆರೆಕಾಲುವೆಗಳ ಉದ್ಧಾರಕ್ಕಾಗಿ ಮಂಜೂರಾದ ಸಾಲ ಇವುಗಳ ವಿಷಯವಾಗಿ ಈ ರಿಯಾಯಿತಿಯು ಸಂಬಂಧಪಟ್ಟಿದೆ.

ಮೈಸೂರು ವಿಶ್ವವಿದ್ಯಾಲಯದ ಪದವೀದಾನೋತ್ಸವ

ಮೈಸೂರು ವಿಶ್ವವಿದ್ಯಾನಿಲಯದ ಪದವೀದಾನೋತ್ಸವವು ಅಕ್ಟೋಬರ್ ೩೧ರಲ್ಲಿ ಮೈಸೂರಿನಲ್ಲಿ ನಡೆಯುವುದು. ಛಾನ್ಸಲರ್ ಶ್ರೀಮನ್ಮಹಾರಾಜರವರು ಅಧ್ಯಕ್ಷತೆಯನ್ನು ವಹಿಸುವದಿಲ್ಲವೆಂದೂ, ಪ್ರೋ-ಛಾನ್ಸಲರ್ ಶ್ರೀಮದ್ಯುವರಾಜರು ಅಧ್ಯಕ್ಷತೆಯನ್ನು ವಹಿಸುವರೆಂದೂ ವೈಸ್‌ಛಾನ್ಸಲರ್ ಡಾ|| ಇ. ಪಿ. ಮೆಟ್‌ಕಾಫ್‌ರವರು ಉಪದೇಶ ಭಾಷಣ ಮಾಡುವರೆಂದೂ, ತಿಳಿದುಬಂದಿದೆ.

ಭಕ್ತಿಮಾರ್ಗ.

ಲೇಖಕರು—ಮ॥ ಎಸ್ ಕೃಷ್ಣಪ್ಪನವರು, ಗುಂಡ್ಲುಪೇಟೆ.

ಮಹಿಮಾಪೂರ್ಣನಾದ ಭಗವಂತನು ತನ್ನ ಲೀಲಾಮಾತ್ರದಿಂದ ಸೃಷ್ಟಿಸಿರುವ ಈ ಜಗತ್ತು ಸ್ವಭಾವಸಿದ್ಧವಾಗಿ ಪ್ರೇಮವೆಂಬ ಅಮೋಘ ವಸ್ತುವಿನಿಂದ ಭರಿತವಾಗಿದೆ. ಈ ಪ್ರೇಮವು ಜಗತ್ತಿನಲ್ಲಿರುವ ಪ್ರಾಣಿಕೋಟಿಗಳಿಂದ ಅನುಭವಿಸಲ್ಪಡುತ್ತಾ ಇದೆ. ಹೀಗೆ ಪ್ರಾಣಿಕೋಟಿಗಳು ಪ್ರೇಮಮಾಧುರಿಯನ್ನು ಹೊಂದಿಕೊಂಡು ವ್ಯವಹರಿಸುತ್ತಿರುವಾಗ, ಜೀವಕೋಟಿಗಳಲ್ಲಿ ಅಗ್ರಸ್ಥಾನವನ್ನು ಹೊಂದಿರುವ ಮಾನವನೂ ಕೂಡ. ಮೇಲೆ ಹೇಳಿದ ಪ್ರೇಮಕ್ಕೆ ಭಾಗಿಗಳಾಗದೆ ಉಳಿಯಲಿಲ್ಲ. ಆದರೂ ಸಹ ಪ್ರೇಮ ಮಾಧುರ್ಯಕ್ಕೆ ಸಿಕ್ಕಿಬಿದ್ದು ಜಗತ್ತಿನಲ್ಲಿ ಪ್ರೇಮದ ಸವಿಯನ್ನು ಯಥೇಷ್ಟವಾಗಿ ಅನುಭವಿಸತೊಡಗಿದರು. ಆಗ ಮಾನವರು ಅನುಭವಿಸುತ್ತಿರುವ ಪ್ರೇಮವು ಸಾಮಾನ್ಯವಾಗಿ ತಮ್ಮ ತಮ್ಮ ಇಷ್ಟವಸ್ತುಗಳಲ್ಲಿ ಸಹಜ, ಅನಂತರ ಅವುಗಳ ವಿಯೋಗ ಕಾಲದಲ್ಲಿ ವ್ಯಥೆಯನ್ನೂ, ಸಂಯೋಗ ಕಾಲದಲ್ಲಿ ಸಂತೋಷವನ್ನೂ ಉಂಟುಮಾಡುತ್ತಾ ಮನುಷ್ಯನ ಮನಸ್ಸನ್ನು ಪರಿಮಿತಕ್ಕೆ ಸಿಕ್ಕಿಸಿ ಒಂದು ನೆಲೆಗೆ ಬಾರದಂತೆ ಮಾಡಿತು. ಇಂಥ ಸಂದರ್ಭದಲ್ಲಿ ಮನುಷ್ಯನು ಹೇಗೆ ವರ್ತಿಸಿ, ಪ್ರೇಮಸ್ವರೂಪವನ್ನು ತಿಳಿದು ನಡೆದುಕೊಳ್ಳಬೇಕೆಂದು ಆಲೋಚಿಸಬೇಕಾಯಿತು. ಹೀಗೆ ಆಲೋಚನೆ ಮಾಡುತ್ತಿರುವಲ್ಲಿ ಶ್ರೀ ಕೃಷ್ಣ ಭಗವಂತನು ಗೀತೆಯಲ್ಲಿ ಉದ್ಘೋಷಿಸಿದಂತೆ 'ಅನಿತ್ಯಮಸುಖಂ ಲೋಕಂ ಇಮಂ ಪ್ರಾಪ್ಯ ಭಜಸ್ವ ಮಾಂ" ಎಂಬಂತೆ ಅನಿತ್ಯ ವಸ್ತುಗಳಲ್ಲಿ ಇರುವ ಪ್ರೇಮವನ್ನು ತಿರುಗಿಸಿ ಸುಖಸ್ವರೂಪನಾದ ಭಗವಂತನಲ್ಲಿ ಇಡಬೇಕು. ಇದರಿಂದ ಮನುಷ್ಯನಿಗೆ ಸುಖಶಾಂತಿಗಳು ಲಭ್ಯವಾಗುತ್ತವೆ ಎಂಬ ತತ್ವವನ್ನು ತಿಳಿಯಲು ಅನುಕೂಲವಾಯಿತು. ಈ ತತ್ವಾನುಸಾರವಾಗಿ ಮಾನವನು ಭಗವಂತನಲ್ಲಿ ಇಡತಕ್ಕ ನಿಸ್ವಾರ್ಥ ಪ್ರೇಮವನ್ನು 'ಭಕ್ತಿ' ಎಂಬುದಾಗಿ ಕರೆಯಲು ಕಾರಣವಾಯಿತು. ಮಾನವನಲ್ಲಿ ಭಕ್ತಿಯು ನೆಲೆಯಾಗಿ ನಿಲ್ಲಬೇಕಾದರೆ ಅದಕ್ಕೆ ಅಭ್ಯಾಸಯೋಗವು ಅತ್ಯವಶ್ಯಕವಾಗಿರುತ್ತದೆ. ಈ ಅಭ್ಯಾಸಯೋಗವೆಂದರೆ ಸದಾ ಕಾಲದಲ್ಲಿಯೂ, ಸದಾ ಭಾವನೆಗಳಲ್ಲಿಯೂ ನಿಸ್ವಾರ್ಥ ಪ್ರೇಮದಿಂದ ಜಗತ್ತನ್ನು ನೋಡುತ್ತಾ ತನ್ಮೂಲಕವಾಗಿ ಜಗದಾಧಾರನಾದ ಭಗವಂತನ ಕೃಪೆಯನ್ನು ಪಡೆಯುವದೆಂದು ಅರ್ಥ. ಹೀಗೆ ಜಗತ್ತೇ ದೇವರ ಮಂದಿರವೆಂದೂ, ಜಗತ್ತಿನಲ್ಲಿರುವ ಜೀವಕೋಟಿಗಳೇ ಭಗವದ್ರೂಪವೆಂದೂ ತಿಳಿದು ಸ್ವಾರ್ಥರಹಿತ ಪ್ರೇಮದಿಂದ ವರ್ತಿಸುತ್ತಾ ಬರುವುದೇ ಭಕ್ತಿಯ ರಹಸ್ಯವಾಗಿದೆ. ಭಕ್ತಿಯು ಪರಮಾತ್ಮನಲ್ಲಿ ಅತ್ಯಂತ ಪ್ರೇಮರೂಪವಾದುದು. ಪ್ರೇಮವು ಮಾನವನ ಸ್ವಭಾವಸಿದ್ಧವಾದ ಗುಣವು. ಆದುದರಿಂದ ಮಾನವನು ಸ್ವಾಭಾವಿಕ ಪ್ರೇಮದಿಂದ ನಿಸ್ವಾರ್ಥರೂಪವಾದ ಪ್ರೇಮವನ್ನು, ಆ ನಿಸ್ವಾರ್ಥ ಪ್ರೇಮದಿಂದ ಭಕ್ತಿಯನ್ನು ಪಡೆದು ತನ್ಮೂಲಕವಾಗಿ ಭಗವಂತನನ್ನು ನೋಡಲು ಪ್ರಯತ್ನಿಸಬೇಕು. ಇದೇ ಮಾನವ ಜನ್ಮದ ಮುಖ್ಯ ಕರ್ತವ್ಯವಾಗಿದೆ. ಇದರ ಭಕ್ತಿಸ್ವರೂಪವನ್ನು ಬಲ್ಲವರು ಬಹಳ ಒಂದು ವಿಧವಾಗಿ ವರ್ಣಿಸಿದ್ದಾರೆ. ಹೇಗೆಂದರೆ ಜಗದಾಧಾರನಾದ ಭಗವಂತನಲ್ಲಿ ಇಟ್ಟಿರುವ ಅನುರಾಗವೇ ಭಕ್ತಿಯೆಂದು ಕೆಲವರೂ, ಪೂಜಾದಿಗಳಿಂದ ಆ ಭಗವಂತನನ್ನು ಅನನ್ಯ ಮನಸ್ಸಿನಿಂದ ಭಜಿಸುತ್ತಿರುವದೇ ಭಕ್ತಿಯ ಲಕ್ಷಣವೆಂದೂ ಹೇಳಿದ್ದಾರೆ. ಹೀಗೆ ಬೇರೆಬೇರೆ ವಿಧವಾಗಿ ವರ್ಣಿಸಿದರೂ ತತ್ವತಃ ಎಲ್ಲಾ ಮಾರ್ಗಗಳೂ, ಭಕ್ತಿಮಾರ್ಗವನ್ನೇ ಪ್ರತಿಪಾದಿಸುತ್ತಿವೆ. ಮತ್ತು ಒಂದು ಮಾತನ್ನು ಹೇಳುವುದಾದರೆ ಶ್ರೀ ಕೃಷ್ಣಪರಮಾತ್ಮನು ಅರ್ಜುನನಿಗೆ ಬೋಧಿಸಿರುವ "ಮಾಮೇಕಂ ಶರಣಂ ವ್ರಜ" ಎಂಬ ಗೀತೋಕ್ತಿಯಂತೆ ಮಾನವರು ಕರ್ತವ್ಯನಿಷ್ಠರಾಗಿದ್ದು ನಿಸ್ವಾರ್ಥ ಪ್ರೇಮದಿಂದ ಜಗತ್ತನ್ನು ನೋಡುತ್ತಾ, ಆ ಭಗವಂತನಲ್ಲಿ ಅನನ್ಯ ಶರಣಾಗತಿಯನ್ನು ಹೊಂದಿ ಅವನನ್ನು ಭಜಿಸುವದೇ ಭಕ್ತಿಮಾರ್ಗದ ಪರಮ ಧ್ಯೇಯವಾಗಿದೆ, ಎಂದು ಹೇಳಬಹುದು.

ಶಾಂತಿಃ ಶಾಂತಿಃ ಶಾಂತಿಃ!

ಹಿಂದೂ ಮಹಾಸಭಾ ಅಧಿವೇಶನ

ಹಿಂದೂ ಮಹಾಸಭೆಯ ೧೮ ನೇ ವಾರ್ಷಿಕ ಅಧಿವೇಶನವು ಶ್ರೀ ಶಂಕರಾಚಾರ್ಯ (ಡಾ॥ ಕುರ್ತಕೋಟಿ) ಯವರ ಅಧ್ಯಕ್ಷತೆಯಲ್ಲಿ ಲಾಹೋರಿನಲ್ಲಿ ಪ್ರಾರಂಭವಾಯಿತು. ಅಧಿವೇಶನಕ್ಕೆ ಆಗಮಿಸಿದ್ದ ಮುಖಂಡರುಗಳಲ್ಲಿ ರಾಜಾ ನರೇಂದ್ರನಾಥ, ಭಾಯಿ ಪರಮಾನಂದ, ಡಾ॥ ಗೋಕುಲಚಂದ್ ನಾರಂಗ್ ಮತ್ತು ಇತರ ಮುಖಂಡರುಗಳು ಇದ್ದರು.

ಸ್ವಾಗತ ಸಮಿತಿಯ ಅಧ್ಯಕ್ಷರಾದ ಶ್ರೀ ರಾಮಶರಣದಾಸರವರು ಭಾಷಣ ಮಾಡುತ್ತಾ ಹಿಂದೂ ಸಮಾಜದ ಇತಿಹಾಸವನ್ನು ತಿಳಿಸಿದರು ಮತ್ತು ಅದರ ಅವನತಿಗಳನ್ನು ವಿವರಿಸಿದರು. ಹಿಂದೂ ಮಹಾಸಭೆಯು ಭಾರತದ ರಾಷ್ಟ್ರೀಯತೆಗಾಗಿಯೇ ನಿಂತಿರುವದಲ್ಲದೆ ಅದು ಹಿಂದೂಗಳ ರಾಜಕೀಯ ಹಕ್ಕುಬಾಧ್ಯತೆಗೂ ನಿಂತಿರುವದೆಂದೂ ತಿಳಿಸಿದರು. ಹಿಂದೂಗಳ ಸಂಬಂಧಿಸಿದ ಅನೇಕ ಪ್ರಶ್ನೆಗಳನ್ನು ಅಂದರೆ ಶುದ್ಧಿ ಸಂಸ್ಕಾರ, ಹಿಂದೂಗಳ ಶಾರೀರಿಕ ಬಲದ ಪರಿಸ್ಥಿತಿ, ಹರಿಜನೋದ್ಧಾರ, ಹಿಂದೂ ಸ್ತ್ರೀಯರ ರಕ್ಷಣೆ, ಮತ್ತು ಇತರ, ಈ ವಿಷಯಗಳನ್ನು ಪರಿಶೀಲಿಸಿ ಹಿಂದೂಗಳು ಐಕಮತ್ಯದಿಂದ ಸ್ವಾವಲಂಬಿಗಳಾಗಿಯೂ ಇರಬೇಕೆಂದು ತಿಳಿಸಿದರು.

ಸ್ವಾಮಿಗಳವರ ಮೇಲೆ ಮಾನ ನಷ್ಟದ ಮೊಕದ್ದಮೆ.

ಅಪೀಲಿನಲ್ಲಿ ನಿರಪರಾಧಿಗಳಾದರು.

ಚಿತ್ರದುರ್ಗದ ನ್ಯಾಷನಲ್ ಡಿಸ್ಪೆಂಸರಿ ಪ್ರೊಪ್ರೈಟರ್ ಶ್ರೀ ಕೆ ನಾರಾಯಣಪ್ಪನವರು ಉಡುಪಿಯ ಶ್ರೀ ಪೇಜಾವರ ಸ್ವಾಮಿಗಳವರ ಮೇಲೆ ಹೂಡಿದ್ದ ಮಾನನಷ್ಟ ಮೊಕದ್ದಮೆಯಲ್ಲಿ ತೀರ್ಪು ಕೊಡಲ್ಪಟ್ಟು, ಸ್ವಾಮಿಗಳು ನಿರಪರಾಧಿಗಳೆಂದು ತೀರ್ಮಾನವಾಗಿ ಬಿಡುಗಡೆಯಾದರು. ಶ್ರೀ ಪೇಜಾವರ ಸ್ವಾಮಿಗಳು ಶ್ರೀ ನಾರಾಯಣಪ್ಪನವರೂ ಅವರ ಸಂಸಾರದವರೂ ಬ್ರಾಹ್ಮಣರಲ್ಲವೆಂದು ತಿಳಿಯಪಡಿಸಿದರು. ಈ ವಿಷಯವನ್ನು ಶ್ರೀ ಶ್ರೀನಿವಾಸರಾಯರು ಚಿತ್ರದುರ್ಗದಲ್ಲಿ ಪ್ರಚುರಪಡಿಸಿದರು ಎಂಬದಾಗಿ ಫಿರ್ಯಾದಿನಲ್ಲಿ ಹೇಳಲಾಗಿದೆ.

ಶ್ರೀ ನಾರಾಯಣಪ್ಪನವರು ಇವರ ಮೇಲೆಯೂ ಶ್ರೀ ಸ್ವಾಮಿಗಳ ಮೇಲೆಯೂ ಮಾನನಷ್ಟ ಮೊಕದ್ದಮೆಯನ್ನು ಫಸ್ಟ್ ಕ್ಲಾಸ್ ಮ್ಯಾಜಿಸ್ಟ್ರೇಟರಲ್ಲಿ ಹೂಡಿದರು. ಅಲ್ಲಿ ವಿಚಾರಣೆಯಾಗಿ ಅಪರಾಧಿಗಳಿಗೆ ರೂ ೫೦ ಜುಲ್ಮಾನೆಯಾಯಿತು.

ಅಪೀಲು ಮೊಕದ್ದಮೆಯು ಸೆಷನ್ಸ್ ಜಡ್ಜರಿಂದ ವಿಚಾರಣೆಯಾಗಿ, ಆಪಾದಿತರು ನಿರಪರಾಧಿಗಳೆಂದು ತೀರ್ಮಾನವಾಯಿತು.

ಫಿರ್ಯಾದಿಯು ಪ್ರಥಮ ನ್ಯಾಯಸ್ಥಾನದಲ್ಲಿ ಒಪ್ಪಿಸಲು ಮಾಡಬೇಕಾಗಿದ್ದ ಮೊಕದ್ದಮೆಯು ಪುನಃ ವಿಚಾರಣೆಯಾಗಬೇಕೆಂದು ತೀರ್ಮಾನವಾಯಿತು.

ಸೆಷನ್ಸ್ ಕೋರ್ಟಿನಲ್ಲಿ ಪುನಃ ವಿಚಾರಣೆಯಾಗಿ, ಶ್ರೀ ಸ್ವಾಮಿಗಳು ಮೊದಲಾದವರು. ಎರಡನೇ ಆಪಾದಿತರು ತಪ್ಪಿತಸ್ಥರೆಂದು ತೀರ್ಮಾನವಾಗಿ ಅವರಿಗೆ ವಿಧಿಸಿದ ಶಿಕ್ಷೆಯು ಖಾಯಂ ಆಯಿತು.

ಕಾಂಗ್ರೆಸ್ಸಿಗೆ ಕರ್ನಾಟಕದಲ್ಲಿ ೪೧,೦೫೮ ಸದಸ್ಯರು.

ಕರ್ನಾಟಕದಲ್ಲಿ ಈ ಸಾರೆ ೪೧,೦೫೮ ಕಾಂಗ್ರೆಸ್ ಸದಸ್ಯರನ್ನು ಸೇರಿಸಲಾಯಿತು. ಆ ಪೈಕಿ ೧೦,೩೮೮ ಜನರು ಪಟ್ಟಣಿಗರು, ಉಳಿದ ೩೦,೬೭೦ ಜನರು ಗ್ರಾಮವಾಸಿಗಳು.

ಬೆಳಗಾಂ ಜಿಲ್ಲೆಯಲ್ಲಿ ೬೦೦೦ ಸದಸ್ಯರಾದರು. ಇದೇ ಅತ್ಯಂತ ಅಧಿಕ ಸಂಖ್ಯೆ.

ಮೈಸೂರು ಸಂಸ್ಥಾನದಲ್ಲಿ ೫೧೩ ಸದಸ್ಯರಾದರು.

ಈ ವರ್ಷ ಒಟ್ಟಿನಲ್ಲಿ ೧೦,೦೦೦ ಜನರು ಹೆಚ್ಚು ಸದಸ್ಯರಾದರು.

ಈ ಸಾರಿ ಫೈಜಪುರ ಕಾಂಗ್ರೆಸ್ಸಿಗೆ ಕರ್ನಾಟಕದಿಂದ ೧೦೯ ಪ್ರತಿನಿಧಿಗಳು ಹೋಗಬಹುದು. ಗ್ರಾಮಾಂತರಗಳಿಂದ ೭೨ ಜನರನ್ನೂ, ಪಟ್ಟಣಗಳಿಂದ ೩೭ ಜನರನ್ನೂ, ಆರಿಸಲಾಗುವುದು.

ಇಂಗ್ಲೆಂಡ್ ಸಿಂಹಾಸನದ ಹಕ್ಕು ನನ್ನದು

ಲಂಡನ್ನಿನಲ್ಲಿ ಒಬ್ಬನ ಕೂಗು.

'ಇಂಗ್ಲೆಂಡಿನ ಸಿಂಹಾಸನಕ್ಕೆ ನಾನೇ ಹಕ್ಕುದಾರನು' ಎಂದು ಒಬ್ಬನು ಲಂಡನ್ ನಗರದ ಕೇಂದ್ರ ಸ್ಥಳಗಳಲ್ಲಿ ಕೂಗುತ್ತಾ ಓಡಾಡಿಕೊಂಡಿರುವನು. ಅವನ ಮುಂದೆ ಜನರು ಗುಂಪು ಕಟ್ಟಿಕೊಂಡು ಅವನು ಹೇಳುವ ಮಾತುಗಳನ್ನು ಕೇಳುತ್ತಲಿರುವರು. ಅವನು ಅನೇಕ ಗಲ್ಲಿಗಳಲ್ಲಿ ಪತ್ರಿಕೆಗಳನ್ನು ಹಂಚಿ ಅವರಲ್ಲಿ ಇಂಗ್ಲೆಂಡಿನ ಕಿರೀಟವು ತನ್ನ ಅಧಿಕಾರಕ್ಕೆ ಹೋಗಿರುವದು ಎಂದು ಮುಂತಾಗಿ ತಿಳಿಸಿದನು.

ಅವನು ಟ್ಯೂಡರ್ ವಂಶದವನೆಂದೂ, ೮ ನೇ ಹೆನ್ರಿಯು ಮತ್ತು ಆನಿ ಬೊಲಿನ್ (ಅವನ ಪತ್ನಿ) ಸಂಸಾರಕ್ಕೆ ಸೇರಿದವನೆಂದೂ, ಈಗಿರುವ ವಿಂಡ್ಸರ್ ವಂಶವು ೬ ನೇ ಜೇಂಸ್ ಸಂಸಾರಕ್ಕೆ ಸೇರಿದ್ದೆಂದೂ ಅತನು ಸ್ಥಿರವಾದಲ್ಲೇ ಪ್ರತ್ಯೇಕ ಮುದ್ರಿಂದ ಅವನ ಸಂಸಾರವೇ ಇದ್ದುದೂ ಹೇಳುವನು.

ಅವನು ಎಡ್ವರ್ಡ್ (ವಿಂಡ್ಸರ್) ಪ್ರಭುಗಳ ಪಟ್ಟಾಭಿಷೇಕೋತ್ಸವವನ್ನು ವಿರೋಧಿಸಲು ಪ್ರಯತ್ನಿಸುತ್ತಿರುವನೆಂದೂ ತಿಳಿಯಲಾಗಿದೆ.

ಪಂ॥ ಜವಹರಲಾಲರ ಆತ್ಮಕಥೆ

ಪೌರ ವಾಚನಾಲಯದಲ್ಲಿ ಇಡಲಾಗದು

ಮಂಗಳೂರು ಪೌರಸಭೆಯು ಸೋಮವಾರ ಸಮಾವೇಶವಾಯಿತು. ಆಗ ಡಿಸ್ಟ್ರಿಕ್ಟ್ ಎಜುಕೇಷನಲ್ ಆಫೀಸರು ಪೌರಸಭಾ ವಾಚನಾಲಯದಲ್ಲಿ ಪಂಡಿತ ಜವಹರಲಾಲ ನೆಹರೂರವರ ಆತ್ಮಕಥೆಯ ಗ್ರಂಥವನ್ನು ಇಡಕೂಡದೆಂದು ಆಕ್ಷೇಪಣೆಯನ್ನು ತಂದರು.

ಕೆಲ ಪೌರಸಭಾಧ್ಯಕ್ಷರು ಈ ವಿಷಯದಲ್ಲಿ ಶಿಕ್ಷಣಾಧಿಕಾರಿಗಳನ್ನು ಕ್ಷಮೆ 'ವಿಸ್ತೃತ' ಮಾಡಿಕೊಳ್ಳಬೇಕೆಂದು ಸೂಚಿಸಿದರು.

ಓಡುಗಾರಿಕೆ

ಹಿಂದಕ್ಕೆ ೧೩೦ ಗಜಗಳು

ಜಗತ್ತಿನಲ್ಲಿ ಹೊಸ ರೆಕಾರ್ಡು

ನೀಡ್ ಸೆನ್ನೈರವರು ೧೩೦ ಗಜ ಹಿಂದಕ್ಕೆ ಓಡಿ ಹೊಸದೊಂದು ಜಗತ್ತಿನ ರೆಕಾರ್ಡನ್ನು ಸ್ಥಾಪಿಸಿದರು. ಇವರು ೧ ನಿಮಿಷ ೬. ೪/೧೦ ಸೆಕೆಂಡುಗಳಲ್ಲಿ ಸ್ಥಾಪಿಸಿದರು. ಅಮೇರಿಕಾದ ಚ ಬ್ರಿಗ್ಸ್‌ರವರು ಹಿಂದಕ್ಕೆ ೧ ನಿಮಿಷ ೪/೧೦ ಸೆಕೆಂಡುಗಳಲ್ಲಿ ಸ್ಥಾಪಿಸಿದ್ದದನ್ನು ಇವರು ಮೀರಿಸಿದರು.

Asiatic Government Security Life Assurance Co., Ltd.

HEAD OFFICE:-ASIATIC BUILDINGS, BANGALORE CITY.

THIS IS PURELY A NATIONAL CONCERN

Managed by Experts.
Low Premiums and Liberal Policy Conditions

Apply for Agency.—
To.
Mr H Venkataramiah,
Dist Supdt,
ASIATIC BUILDINGS,
Bangalore City Or
To
V RANGASAMI Esq
B.A B.L., F C I.
General Manager



ಬಹಳ ಅನುಭವವುಳ್ಳವರ ಆಡಳಿತಕ್ಕೆ ಒಳಪಟ್ಟ, ಕಡಿಮೆ ಪ್ರೀಮಿಯಮ್ಮು ಮತ್ತು ಉದಾರವಾದ ಪಾಲಿಸಿ ಷರತ್ತುಗಳೂ ಉಳ್ಳ ಶುದ್ಧಸ್ವದೇಶೀ ವಿಮಾ ಸಂಸ್ಥೆ

ಏಜನ್ಸಿಗಾಗಿ ಕೆಳಗಿನ ವಿಳಾಸಕ್ಕೆ ಬರೆಯಿರಿ —
ಹೆಚ್. ವೆಂಕಟರಾಮಯ್ಯ,
ಡಿವಿಜನಲ್ ಸೂಪರಿಂಟೆಂಡೆಂಟ್,
ಏಷ್ಯಾಟಿಕ್ ಬಿಲ್ಡಿಂಗ್ಸ್,
ಬೆಂಗಳೂರು ಸಿಟಿ
ಅಥವಾ
ಮ॥ ವಿ ರಂಗಸ್ವಾಮಿ, ಬಿ ಎ, ಬಿ ಎಲ್, ಎಫ್ ಸಿ ಐ
ಜನರಲ್ ಮ್ಯಾನೇಜರ್.

ಏಷ್ಯಾಟಿಕ್ ಲೈಫ್ ಇನ್ಷೂರೆನ್ಸ್ ಕಂಪೆನಿ ಲಿಮಿಟೆಡ್

ಹೆಡ್ ಆಫೀಸ್:—ಏಷ್ಯಾಟಿಕ್ ಬಿಲ್ಡಿಂಗ್ಸ್, ಬೆಂಗಳೂರು.

॥ ಓಂ ॥

ಜಯಗುರು ಶಂಕರ ಭಗವಾನ್

ಶ್ರೀ ಜಗದ್ಗುರು ಶಂಕರಾಲಯ, ಅಗರ.

ಶಂಕರಾಖ್ಯಪದಾಂಬೋಜ ನಖಚಂದ್ರಮರೀಚಯಃ ।
ವ್ಯಾಕೋಚಯಂತು ಸತತಂ ಮಮಮಾನಸ ಕೈರವಂ ॥

—: ಸಮಸ್ತ ಆಸ್ತಿಕ ಮಹನೀಯರುಗಳಲ್ಲಿ ಪ್ರಾರ್ಥನೆ :—

ಜಹಗೀರಿ ಯಳಂದೂರು ತಾಲ್ಲೂಕು ಮರ್ಗ್ಗಾಗ್ರಹಾರ ಉಪನಾಮಾಂಕಿತ ಅಗರ ನಿವಾಸಸ್ಥರಾದ ಅಶೇಷ ವಿದ್ವನ್ಮಹಾಜನಂಗಳ ಪ್ರೋತ್ಸಾಹದಿಂದ ಶ್ರೀಮದಕ್ಷಯನಾಮ ಸಂವತ್ಸರದ ವೈಶಾಖ ಶುದ್ಧ ಪಂಚಮಿ ಭಾನುವಾರ ತಾ॥ 16-5-1926 ಈ ಶುಭ ದಿವಸ ಮುಹೂರ್ತಿಸಲ್ಪಟ್ಟ ಶಂಕರಾಲಯದ ಕೆಲಸವು ಅನೇಕ ಮಹನೀಯರುಗಳ ಔದಾರ್ಯಪೂರ್ವಕವಾದ ದ್ರವ್ಯಸಹಾಯಸಂಪತ್ತಿನ ಪ್ರಭಾವದಿಂದ ಸುಮಾರು ಎರಡೂವರೆ ಸಹಸ್ರ ರೂಪಾಯಿಗಳ ಕೆಲಸಗಳು ನಿರ್ವಿಘ್ನವಾಗಿ ನಡೆದಿರುವುದು ನಮ್ಮ ಪ್ರಾಂತ್ಯದಲ್ಲಿರತಕ್ಕ ಸಮಸ್ತ ಆಬಾಲವೃದ್ಧರಿಗೆಲ್ಲ ಗೊತ್ತಾದ ವಿಚಾರ ... ಮುಂದೆ ಇಲ್ಲಿ ಶ್ರೀ ಚಂದ್ರಮೌಳೀಶ್ವರ, ಶ್ರೀ ಶಾರದ, ಶ್ರೀಮದಾಚಾರ್ಯ ಸ್ವಾಮಿಗಳವರ ವಿಗ್ರಹಗಳು ಸ್ಥಾಪಿಸಲ್ಪಡಬೇಕಾಗಿರುತ್ತ...

... ಈ ಶಂಕರಾಲಯದಲ್ಲಿ ನಡೆದಿರುವ ಕೆಲಸಗಳಲ್ಲದೆ ಮುಂದೆ ನಡೆಯಬೇಕಾಗಿರುವ ವಿಗ್ರಹ ಸ್ಥಾಪನಾದಿಗಳು, ನಿತ್ಯಾರಾಧನೆ, ದೀಪಾರಾಧನೆ, ಪ್ರತಿಸಂವತ್ಸರವೂ ... ನವರಾತ್ರಿಮಹೋತ್ಸವವೂ, ಶ್ರೀಮದಾಚಾರ್ಯಸ್ವಾಮಿಗಳವರ ಜಯಂತಿಯೂ ಈ ಕಟ್ಟಡದ ತಾತ್ಕಾಲಿಕ ರಿಪೇರಿಗಳೂ ಅದರೆ ಶ್ರೀ ಶಂಕರರ ಸೇವೆಯು ಆಚಂ...ಯೂ ಆನಂದವಾಗಿಯೂ ಯಾವ ಈತಿಬಾಧೆಯೂ ಇಲ್ಲದೆ ನಿರ್ವಿಘ್ನವಾಗಿ ನಡೆಯುವುದಕ್ಕೆ ಸಂಶಯವಿಲ್ಲ. ಈ ಕಾರ್ಯಗಳಿಗೆ ನಾಲ್ಕು ಸಹಸ್ರ ರೂಪಾಯಿಗಳು ...

...ಕಾರ್ಯಕ್ಕೆ ಮಹನೀಯರುಗಳು ಸಹಾಯಮಾಡಿ ಈಶ್ವರಾನುಗ್ರಹಕ್ಕೆ ಪಾತ್ರರಾಗಿ ನಾನು ಪ್ರಯತ್ನಿಸಿರುವ ಕಾರ್ಯಗಳನ್ನು ನೆರವೇರಿಸುವರಾಗುವರೆಂದು ...

...ಂದೂರು ತಾಲ್ಲೂಕು.

ಸಜ್ಜನ ವಿಧೇಯ,
ಶಂಕರಯೋಗೀಶ್ವರ, ಶ್ರೀಶಂಕರಾಲಯ.

Asiatic Government Security Life Assurance Co., Ltd.

HEAD OFFICE:-ASIATIC BUILDINGS, BANGALORE CITY.

THIS IS PURELY A NATIONAL CONCERN

Managed by Experts.
Low Premiums and Liberal Policy Conditions.

Apply for Agency:—
To
Mr. H. Venkataramiah,
Divl. Suptd.,
ASIATIC BUILDINGS,
Bangalore City. Or
To
V. RANGASAMI Esq
B.A. B.L., F.C.I.
General Manager.



ಚೆನ್ನಾಗಿ ಅನುಭವವುಳ್ಳವರ ಆಡಳಿತಕ್ಕೆ ಒಳಪಟ್ಟ, ಕಡಿಮೆ ಪ್ರೀಮಿಯಮ್ಮು ಮತ್ತು ಧಾರಾಳವಾದ ಪಾಲಿಸಿ ಷರತ್ತುಗಳೂ ಉಳ್ಳ ಶುದ್ಧ ಸ್ವದೇಶೀ ವಿಮಾ ಸಂಸ್ಥೆ.

ಏಜೆನ್ಸಿಗಾಗಿ ಕೆಳಗಿನ ವಿಳಾಸಕ್ಕೆ ಬರೆಯಿರಿ:—
ಹೆಚ್. ವೆಂಕಟರಾಮಯ್ಯ,
ಡಿವಿಷನಲ್ ಸೂಪರಿಂಟೆಂಡೆಂಟ್,
ಏಷ್ಯಾಟಿಕ್ ಬಿಲ್ಡಿಂಗ್ಸ್,
ಬೆಂಗಳೂರು ಸಿಟಿ.
ಅಥವಾ
ಮ|| ವಿ. ರಂಗಸ್ವಾಮಿ, ಬಿ.ಎ., ಬಿ.ಎಲ್., ಎಫ್.ಸಿ.ಐ.
ಜನರಲ್ ಮ್ಯಾನೇಜರ್.

ಏಷ್ಯಾಟಿಕ್ ಲೈಫ್ ಇನ್ಷೂರೆನ್ಸ್ ಕಂಪೆನಿ ಲಿಮಿಟೆಡ್

ಹೆಡ್ ಆಫೀಸ್:—ಏಷ್ಯಾಟಿಕ್ ಬಿಲ್ಡಿಂಗ್ಸ್, ಬೆಂಗಳೂರು.

ಶ್ರೀ ರಂಗನಾಥ ಟೈಪ್ ಫೌಂಡ್ರಿ

ಚಿಕ್ಕಪೇಟೆ, ಬೆಂಗಳೂರು ಸಿಟಿ.

ಸುಂದರವಾದ ಅಕ್ಷರಗಳು, ಮುದ್ದುಮುದ್ದಾದ ಬಾರ್ಡರುಗಳು ಬಗೆಬಗೆಯ ಆಕಾರ

ನಮಗೆ ಈ ಕೆಲಸದಲ್ಲಿ ೩೦ ವರ್ಷಗಳ ಕಾಲದ ಅನುಭವವಿದೆ. ಆಧುನಿಕ ಕಾಲಕ್ಕೆ ತಕ್ಕಂತೆ ಅಕ್ಷರದ ಆಕಾರವನ್ನು ಬಹು ಸುಂದರವಾಗಿ ಸುಧಾರಿಸಿದ್ದೇವೆ.

ನಮ್ಮಲ್ಲಿನ "ಕನ್ನಡ, ಇಂಗ್ಲೀಷ್" ಅಕ್ಷರಗಳಂತಹ ಸುಂದರವಾದ ಅಕ್ಷರಗಳನ್ನು ಮತ್ತೆಲ್ಲಿಯೂ ನೋಡಲಾರಿರಿ. ಮತ್ತು

ನೂರಾರು ಬಗೆಯ ಸುಂದರವಾದ ಬಾರ್ಡರುಗಳು, ನಯನಮನೋಹರವಾಗಿವೆ.

೬ ಪಾಯಿಂಟಿನಿಂದ ೪೮ ಪಾಯಿಂಟಿನವರೆಗೆ ವಿಧವಿಧವಾದ ಸುಂದರಾಕ್ಷರಗಳಿವೆ.

ನಮ್ಮ "ರಂಗನಾಥ ಕನ್ನಡ ಡಾಮಿನಸ" ಅಕ್ಷರಗಳನ್ನು ನೋಡಲು ಮರೆಯಬೇಡಿರಿ.

ನಾವು ಕಾಪರ್ ಅಲಾಯ್ (ತಾಮ್ರಮಿಶ್ರ) ಸೀಸದಿಂದ ಅಕ್ಷರಗಳನ್ನು ತಯಾರಿಸುತ್ತೇವೆ. ಸುಲಭ ಬೆಲೆ. ಗ್ಯಾರಂಟಿಯಾದ ಬಾಳಿಕೆ.

ಎಂ. ವಿ. ನಾರಾಯಣರಾಯರ

ಶ್ರೀ ಸತ್ಯನಾರಾಯಣ ಪರಿಮಳ ಫ್ಯಾಕ್ಟರಿ,

ಜಗನ್ಮೋಹನ ಬಂಗ್ಲಾ ಬೀದಿ, ಮೈಸೂರು.

ಪರಿಮಳ ಅಗರ ಬತ್ತಿ

ಉಪಯೋಗಿಸಿ ಪ್ರೋತ್ಸಾಹಿಸಿರಿ.

THE SADHVI

RECOMMENDED FOR SCHOOLS BY THE DEPARTMENT.

No. T1. 3778-146—35-36.

OFFICE OF THE DIRECTOR OF PUBLIC INSTRUCTION IN MYSORE.

Bangalore, Dated 20th April 1936.

ANNUAL SUBSCRIPTION.

Local	Rs. 2—4—0.
Moffusil	

ಎರಡೇ ಸುಖಸಾಧನಗಳು !!

ಕಿಸೊನೊ:—(ಗಂಡಸರಿಗೆ) ಅತ್ಯುತ್ತಮವಾದ ರಬ್ಬರು ಸಾಧನ. ರತಿ... ಡಗೆ ಆತಂಕವಿಲ್ಲ. ಗರ್ಭೋತ್ಪತ್ತಿಯ ಹೆದರಿಕೆಯಿಲ್ಲ. ಮೋಹರೋಗದ ... ರಿಕೆಯಿಲ್ಲ. ಬೆಲೆ: ೧—೮—೦

ಸ್ಪ್ಯಾರಗನ್:—(ಹೆಂಗಸರಿಗೆ) ಹೆಂಗಸರ ಗರ್ಭನಿವಾರಣೆಗೆ ಅತ್ಯುತ್ತಮವಾದ ಸಾಧನ. ಕ್ರೀಡಾ ಸಮಯದಲ್ಲುಪಯೋಗಿಸತಕ್ಕದ್ದು. ಬೆಲೆ ೨—೮—೦

ಕೇಟಲಾಗು ಉಚಿತ.

ಆಂಧ್ರಾ ಟ್ರೇಡಿಂಗ್ ಕಂಪೆನಿ,
ಕೃಷ್ಣಪ್ಪ ನಾಯಕನ ಬೀದಿ, ಮದರಾಸು

॥ ಸತ್ಯಮೇವೋದ್ಧರಾಮ್ಯಹಮ್ ॥

ರಾಜಧಾನಿಯ ರಾಷ್ಟ್ರೀಯ ವಾರ ಪತ್ರಿಕೆ.

ವೃದ್ಧಪಿತಾಮಹ ಎಂ. ವೆಂಕಟಕೃಷ್ಣಯ್ಯನವರ ಜ್ಞಾಪಕಾರ್ಥವಾಗಿ ಪ್ರಕಟಿಸಲ್ಪಡುವುದು.

ಸಂಪಾದಕರು ಅಗರಂ ರಂಗಯ್ಯ, ಬಿ ಎ

ಸಂಪುಟ ೧] MYSORE : MONDAY 2—11—36 ಮೈಸೂರು : ಸೋಮವಾರ ೨—೧೧—೩೬ [ಸಂಚಿಕೆ ೩೬

ಹೆಂಗಸು ಗಂಡಸಾದಳು.

ಓರ್ವ ಮುಸ್ಲಿಂ ತರುಣಿಯು ಗಂಡಸಾದ ವಿಚಿತ್ರ ಕಥೆಯು ಈಚೆಗೆ ಪ್ರಕಟವಾಗಿದೆ. ರಂಗೂನಿನಲ್ಲಿರುವ ಸಿಂಗಪೂರ್ ಎಂಬಲ್ಲಿ ಒಂದು ಕ್ಷೌರದ ಅಂಗಡಿ. ಮುಸಲ್ಮಾನ ಹುಡುಗಿಯಂತೆ ವೇಷಹಾಕಿ, ಮುಖ ಪರದೆಯನ್ನು ಧರಿಸಿದ್ದ ಒಂದು ವ್ಯಕ್ತಿ ಆ ಅಂಗಡಿಯ [illegible] ಒಳಗೆ ಒಂದು ಅಂಗಡಿಯ ಸ್ತ್ರೀ ಕಿಟಕಿಯಲ್ಲಿ ಕುಳಿತಿತು. ತನ್ನ ತಲೆಯನ್ನು ಕ್ರಾಪ್ ಮಾಡಬೇಕೆಂದು ಕೇಳಿತು. ಕ್ರಾಪು ಮಾಡಿದಮೇಲೆ "ಈಗಲೀಗ ನಾನು ಸ್ವಾತಂತ್ರ್ಯ ಹೊಂದಿದೆನು" ಎಂದು ಕೂಗುತ್ತ ತನ್ನ ವೇಷವನ್ನು ತೆಗೆದು ಪುರುಷ ವೇಷವನ್ನು ಧರಿಸಿಕೊಂಡಿತು. ಆ ವ್ಯಕ್ತಿಗೆ ಹದಿನಾರು ವರ್ಷ. ಹುಟ್ಟಿದಾಗ ಹೆಣ್ಣೋ ಗಂಡೋ ಎಂಬ ಸಂಶಯವಿತ್ತು. ಮಗುವಿನ ತಾಯಿಯು ಅದನ್ನು ಹುಡುಗಿಯೆಂದೇ ಸಾಕಬೇಕೆಂದು ಅಪೇಕ್ಷಿಸಿದಳು.

ಈಗ ಈ ವ್ಯಕ್ತಿಯು ಗಂಡಸಾಗಿರ[illegible] ಪ್ರಣಯ ಪ್ರಸಂಗಗಳಲ್ಲಿಯೂ ಉಮ್ಮ[illegible]ನಾಗಿರುವನು. ಒಬ್ಬ ಸ್ನೇಹಿತೆಯಲ್ಲಿ [illegible]ನಾಗುತ್ತಿರುವನು. ಪುರುಷ ವರ್ಗ[illegible]ದವನಾಗುತ್ತಿರುವನು. ಒಂದು [illegible] ಶಸ್ತ್ರ ಚಿಕಿತ್ಸೆಯನ್ನು ಮಾಡಿದರೆ ಆತ[illegible] ಸಂಪೂರ್ಣವಾಗಿ ಪುರುಷನಾಗುವನೆಂದು ವೈದ್ಯರುಗಳು ಹೇಳುತ್ತಾರೆ.

ಹೊಸ ವಿಮಾನ ಸಂಘ.

ಬೊಂಬಾಯಿನಲ್ಲಿ ವಿಮಾನ ಸಂಚಾರಕ್ಕಾಗಿ ಒಂದು ಹೊಸ ಸಂಘವು ಸ್ಥಾಪನೆಯಾಗುವುದು. ವಿಶೇಷ ಧನವನ್ನು ಕೂಡಿಸುವುದು ಭಾರತೀಯರೂ ಐರೋಪ್ಯರೂ [illegible]ರು. ಭರತಖಂಡದ ಮುಖ್ಯ ನಗರಗಳಿಗೆ ವಿಮಾನ ಸಂಚಾರವು [illegible]ಗುವುದು. ಈ ವರ್ಷದ ಅಂತ್ಯ[illegible]ದೊಳಗಾಗಿ ಏರ್ಪಾಡಾಗುವುದು.

ಪಿಶಾಚಿ ಪುಸ್ತಕ

[illegible] ವೈಸರಾಯರಾದ ಲಾರ್ಡ್ ಇ[illegible] ಪಿಶಾಚಿಗಳ ವಿಚಾರವಾಗಿ ಗ್ರಂಥವನ್ನು ಬರೆದಿದ್ದಾರೆ. ಅದರ[illegible]ಕವಾದ ಭೂತ ಚೇಷ್ಟೆಗಳೂ, ಸ್ವ[illegible]ಗಳೂ ಇತರ ಪಾರಲೌಕಿಕ [illegible] ಕೊಡಲ್ಪಟ್ಟಿದೆ. ಶೀಘ್ರದಲ್ಲಿ [illegible] ಗ್ರಂಥವು ಹೊರಬೀಳುವದು.

ಭಾರತಕ್ಕೆ ಆಗಮನ

ಪುನರ್ಜನ್ಮ ವಿಚಾರವನ್ನು ತಿಳಿದುಕೊಳ್ಳಲು ಗನ್ನಾ ವಾಲ್‌ಸ್ಕ ಎಂಬ ಪಾಶ್ಚಿಮಾತ್ಯ ಸ್ತ್ರೀಯು ಭರತಖಂಡಕ್ಕೆ ಬರಲು ಹೊರಟಿದ್ದಾಳೆ. ಈಕೆಯು ಮೊದಲು ಒಬ್ಬನಾದಮೇಲೆ ಮತ್ತೊಬ್ಬನಂತೆ ನಾಲ್ಕು ಜನ ಲಕ್ಷಾಧೀಶ್ವರರನ್ನು ಮದುವೆಯಾದಳು. ಇವರಿಂದ ೩,10,00000 ಪೌಂಡು ಆಸ್ತಿಯನ್ನು ಪಡೆದಳು. ಆಕೆಗೆ ಜೀವಮಾನದಲ್ಲಿ ಎರಡು ದೊಡ್ಡ ಆಸೆಗಳು: ಶ್ರೇಷ್ಠ ಗಾಯಕಿಯಾಗಬೇಕು ಮತ್ತು ಮೂರನೇ ನೆಪೋಲಿಯನ್ನನ ದಾದಿಯಾದ ವಿರಾಸಿನ್ ಎಂಬಾಕೆಯೇ ತಾನಾಗಿದ್ದು ಈ ಜನ್ಮದಲ್ಲಿ ಈ ರೀತಿ ಜನಿಸಿರುವದಾಗಿ ಸ್ಥಾಪಿಸಬೇಕೆಂಬುದು. ಮೊದಲನೆಯ ಪ್ರಯತ್ನದಲ್ಲಿ ವಿಫಲಳಾದಳು. ಎರಡನೆಯದನ್ನು ಸ್ಥಾಪಿಸಲು ಈಗ ಪ್ರಯತ್ನಿಸುವಳು.

ಆಯುರ್ವೇದ ಕಾಲೇಜು

ಮೈಸೂರು ಆಯುರ್ವೇದ ಮತ್ತು ಯುನಾನಿ ಕಾಲೇಜಿನ ವಾರ್ಷಿಕೋತ್ಸವವು ನೆನ್ನೆ ದಿನ ವೈಭವದಿಂದ ನಡೆಯಿತು. ರಾಜಮಂತ್ರಪ್ರವೀಣ ಎನ್ ಸಿ ರಾಮಗೋಪಾಲಾಚಾರ್ಯರು ಅಗ್ರಾಸನವನ್ನು ವಹಿಸಿದ್ದರು. ನೂರಾರು ಜನ ಆಹ್ವಾನಿತರಾದ ದೊಡ್ಡ ಮನುಷ್ಯರು ಬಂದಿದ್ದರು. ಉಪಹಾರಾನಂತರ ಸಭೆಯು ಉಪಕ್ರಮಿಸಿತು. ಪ್ರಾರ್ಥನೆಗಳಾದವು. ಶ್ರೀ॥ ಎನ್ ಕೆ ರಾಮಾಚಾರ್ಯರವರ ಸುಶ್ರಾವ್ಯವಾದ ಬಾಯಿಕೊಳಲು ಆಯಿತು. ಶಾಲಾಧ್ಯಕ್ಷರು ವರದಿಯನ್ನೋದಿದರು. ಅಧ್ಯಕ್ಷರು ಸ್ವಾರಸ್ಯವಾದ ಭಾಷಣ ಮಾಡಿ ಆಯುರ್ವೇದವೂ ಯುನಾನಿಯೂ ಅಭಿವೃದ್ಧಿಗೆ ಬರಲೆಂದು ಹಾರೈಸಿದರು. ಧನ್ಯವಾದದೊಡನೆ ಸಭೆ ಮುಗಿಯಿತು.

ಬೆಳದಿಂಗಳಲ್ಲಿ ಫೋಟೊ

ಫೋಟೋ ತೆಗೆಯಲು ಇದುವರೆಗೆ ಬಿಸಿಲಿನ ಸಹಾಯವು ಅವಶ್ಯಕವಾಗಿತ್ತು. ಇನ್ನುಮೇಲೆ ಬೆಳದಿಂಗಳಲ್ಲಿಯೇ ಫೋಟೊ ತೆಗೆಯುವ ಏರ್ಪಾಡು ನಡೆಯುತ್ತಿದೆ. ಪೂರ್ಣಚಂದ್ರನ ಪ್ರಕಾಶದಲ್ಲಿ ಒಂದೇ ನಿಮಿಷದಲ್ಲಿ ಫೋಟೋಗಳನ್ನು ತೆಗೆಯುವ ವಿಧಾನವನ್ನು ಫ್ರೆಂಚ್ ಜ್ಯೋತಿಷ್ಯನಾದ ಲ್ಯೂಸಿಯೆನ್ ರೂಡಾಕ್ಸ್ ಎಂಬವನು ಕಂಡು ಹಿಡಿದಿರುವನು.

ವೈಶ್ಯ ಯುವಜನ ಸಂಘ, ಮೈಸೂರು.

ಮೇಲ್ಕಂಡ ಸಂಘದ ಆಶ್ರಯದಲ್ಲಿ ತಾ॥ 27-10-1936 ರಲ್ಲಿ ಒಂದು ಸಮ್ಮೇಳನವು ನಡೆಸಲ್ಪಟ್ಟಿತು. ಈ ಸಮ್ಮೇಳನಕ್ಕೆ ನಮ್ಮ ಸಂಸ್ಥಾನದ ಹಲವು ಕಡೆಗಳಿಂದ ಪ್ರತಿನಿಧಿಗಳು ಬಂದಿದ್ದರು. ಧರ್ಮ ಪ್ರವರ್ತಕರಾದ ಶ್ರೀ॥ ಎಂ ಎಲ್ ನಾಗಪ್ಪ ಶೆಟ್ಟರು ಅಧ್ಯಕ್ಷತೆಯನ್ನು ವಹಿಸಿ ಯುವಕರಿಗೆ ಯುಕ್ತವಾದ ಭಾಷಣ ಮಾಡಿದರು. ಶ್ರೀ॥ ಗೋಪಾಲಕೃಷ್ಣ ಶೆಟ್ಟಿಯವರು ಸ್ವಾಗತ ಭಾಷಣವನ್ನು ಮಾಡಿದರು. ಈ ಸಂಘವು ಕಳೆದ ಆರು ತಿಂಗಳಿಂದಲೂ ಮಾಡುತ್ತಾ ಬಂದಿರುವ ಸೇವಾ ಕಾರ್ಯಗಳು ನಿರೂಪಿಸಲ್ಪಟ್ಟವು. ಈ ಸಮ್ಮೇಳನದವರು ಒಂದು ಪ್ರದರ್ಶನವನ್ನು ಏರ್ಪಡಿಸಿದ್ದರು ಮತ್ತು ಕೆಲವು ಸ್ಪರ್ಧೆಗಳನ್ನೂ ಏರ್ಪಡಿಸಿ ಗದ್ದವರಿಗೆ ಬಹುಮಾನಗಳು ಹಂಚಲ್ಪಟ್ಟವು.

ರಾಜಪುತ್ರನ ದಸ್ತಗಿರಿ

ಗ್ರೀಸ್ ದೇಶದ ರಾಜ ಪುತ್ರನಾದ ಪೀಟರನು ದಕ್ಷಿಣ ಪೋಲೆಂಡಿನಲ್ಲಿ ವಿಹಾರಕ್ಕಾಗಿ ಹೋಗಿದ್ದಾಗ ಅಲ್ಲಿನ ಕೆಲವು ಹಳೇ ಕೋಟೆ ಕೊತ್ತಲಗಳ ಭಾವ ಚಿತ್ರಗಳನ್ನು ತೆಗೆದುಕೊಳ್ಳುತ್ತಿದ್ದನು. ಅದನ್ನು ನೋಡಿ ಅನುಮಾನಪಟ್ಟು ಪೋಲೀಸಿನವರು ಅವನನ್ನು ದಸ್ತಗಿರಿ ಮಾಡಿ ಸ್ಟೇಷನ್ನಿಗೆ ಕರೆದುಕೊಂಡುಹೋದರು. ಅವನು ಕೊಟ್ಟ ದಾಖಲೆಗಳನ್ನು ಅವರು ನಂಬಲಿಲ್ಲ. ಕಡೆಗೆ ವಿಷಯವು ತಿಳಿದಮೇಲೆ ಕ್ಷಮಾಪಣೆ ಕೇಳಿಕೊಂಡು ಬಿಟ್ಟುಬಿಟ್ಟರು.

೨೫ ವರ್ಷದಲ್ಲಿ ಸಿನಿಮಾಗಳು ಮಾಯವಾಗುವುವು.

ಇನ್ನು 25 ವರ್ಷಗಳಲ್ಲಿ ಈಗಿರುವ ಸಿನಿಮಾಗಳು ಹಾಳಾಗಿಹೋಗುವವು. ಬೇರೆ ವಿಧವಾದ ವಿನೋದ ಸೌಕರ್ಯಗಳು ಏರ್ಪಾಡಾಗುವವು. ಬರುವ ಐದು ವರ್ಷಗಳಲ್ಲಿ ದೂರದರ್ಶನ ಸೌಕರ್ಯವು ಜಾರಿಗೆ ಬಂದು ಸಿನಿಮಾ ಕೈಗಾರಿಕೆಯನ್ನು ಉರುಳಿಸುವದು. ಸಿನಿಮಾದಿಂದ ನಾಟಕಗಳು ಮೂಲೆ ಪಾಲಾದವು. ಈಗ ಅದಕ್ಕೇ ದುರ್ಗತಿ ಬರುತ್ತಿದೆ—ಹೀಗೆಂದು ಕವಿ ಶ್ರೇಷ್ಠರಾದ ಜಾನ್ ಡ್ರಿಂಕ್‌ವಾಟರವರು ಹೇಳುವರು.

ವಿದ್ವಾನ್ ವೆಂಕಟಗಿರಿಯಪ್ಪನವರಿಗೆ ಸನ್ಮಾನ

(ನಮ್ಮ ಬಾತ್ಮೀದಾರರಿಂದ)

[illegible] ಕರ್ನಾಟಕ ಸಂಘದವರು ನೆನ್ನೆ ದಿನ ವೈಣಿಕಪ್ರವೀಣ ವೆಂಕಟಗಿರಿಯಪ್ಪನವರನ್ನು ಬರಮಾಡಿಕೊಂಡು ಶ್ರೀ ಶ್ರೀಕಂಠೇಶ್ವರಸ್ವಾಮಿಯವರ ದೇವಸ್ಥಾನದಲ್ಲಿ ಸತ್ಕರಿಸಿದರು. ಶ್ರೀಮನ್ಮಹಾರಾಜರು ಇವರಿಗೆ ಮೊನ್ನೆ ದರ್ಬಾರಿನಲ್ಲಿ ವೈಣಿಕಪ್ರವೀಣ ಎಂಬ ಬಿರುದನ್ನು ಕೊಟ್ಟ ವಿಷಯಲ್ಲಿ ಸಂತೋಷವನ್ನು ಸೂಚಿಸಲು ಈ ಏರ್ಪಾಡು ಮಾಡಲ್ಪಟ್ಟಿತ್ತು. ನೂರಾರು ಜನ ಪುರವಾಸಿಗಳು ನೆರೆದಿದ್ದರು. ವೇದಘೋಷ ಪ್ರಾರ್ಥನೆಯಾದಮೇಲೆ ಮೊದಲ್ [illegible] ಮತ್ತು ವಿದ್ವಾನ್ ವೆಂಕಟೇಶಯ್ಯಂಗಾರ್ಯರವರ ವೀಣೆ ಮತ್ತು ಕೊಳಲು ಕಚೇರಿಯು ಮನೋಹರವಾಗಿ ನಡೆಯಿತು. ಬಾಲಪಾಠದ ವಿದ್ವಾನ್ ಹುಲಗೂರು ಕೃಷ್ಣಾಚಾರ್ಯರವರು ಕೆಲವು ಸಂಸ್ಕೃತ [illegible] ಪದ್ಯಗಳನ್ನು ಹೃದಯಂಗಮವಾಗಿ ಓದಿದರು. ವಿದ್ವಾನ್ ವೆಂಕಟಗಿರಿಯಪ್ಪನವರ ಗುಣಕಥನದೊಡನೆ ನಾಡ ಸನ್ಮಾನವನ್ನು [illegible] ವಿದ್ವಾನ್ ಚಿಕ್ಕರಾಮರಾಯರು ವಹಿಸಿದರು. ಶ್ರೀ॥ ಜಂಬಳಿ ಸುಬ್ರಹ್ಮಣ್ಯ ಅಯ್ಯರವರು ವಿದ್ವಾಂಸರಿಗೆ ಪುಷ್ಪಮಾಲಿಕೆಗಳನ್ನು ಸಲ್ಲಿಸಿ ಆಶೀರ್ವದಿಸಿದರು. ಧನ್ಯವಾದಗಳೊಡನೆ ಸಭೆ ಮುಕ್ತಾಯವಾಯಿತು.

೫೨ ವರ್ಷದಿಂದ ಉರಿಯುವ ಬೆಂಕಿ

ಅಮೆರಿಕದಲ್ಲಿ ಒಂದು ಭಾರಿ ಬೆಂಕಿಯು 52 ವರ್ಷಗಳಿಂದ ಉರಿಯುತ್ತಿದೆ. ಹಾಕಿಂಗ್ ವ್ಯಾಲಿ ಎಂಬಲ್ಲಿಯ ಕಲ್ಲಿದ್ದಲು ಗಣಿಯಲ್ಲಿ ಭೂಮಿಯ ಕೆಳಗೆ ಉರಿಯುತ್ತಿದೆ. ಇದನ್ನು ಆರಿಸುವ ವಿಧಾನವನ್ನು ಅಲ್ಲಿನ ಸರ್ಕಾರದವರು ಪರ್ಯಾಲೋಚಿಸುತ್ತಿರುವರು. ಇದುವರೆಗೆ ಇದು ಐದು ಚದರಮೈಲಿಯ ಪ್ರದೇಶವನ್ನು ಆಕ್ರಮಿಸಿದೆ. ಐವತ್ತು ಲಕ್ಷ ಪೌಂಡಿನ ಬೆಲೆಯ ಕಲ್ಲಿದ್ದಲನ್ನು ನಾಶಮಾಡಿದೆ.

ಕೋಮಲೆ.

(ಒಂದು ಸಣ್ಣ ಪತ್ತೆದಾರಿ ಕಾದಂಬರಿ)

ಲೇಖಕರು:— ಕೆ. ಶ್ರೀಕಂಠಯ್ಯ, ಶಿವಮೊಗ್ಗ.

ಅಂದು ಸಾಯಂಕಾಲ ಸಮಯ. ಸೂರ್ಯನು ಗುಡ್ಡಗಳ ನಡುವೆ ಮರೆಯಾಗುತ್ತಲಿದ್ದಾನೆ. ಹಕ್ಕಿಗಳು ಚಿಲಿಪಿಲಿಗುಟ್ಟುವುದನ್ನು ನಿಲ್ಲಿಸಿ ತಮ್ಮ ತಮ್ಮ ಗೂಡುಗಳನ್ನು ಸೇರುತ್ತಿವೆ. ರೈತರೆಲ್ಲರೂ ಗದ್ದೆಗಳಿಂದ ತಮ್ಮ ಮನೆಗಳಿಗೆ ತೆರಳುತಿದ್ದಾರೆ. ಶಾಂತಿಪುರದ ಭೀಮರಾಯರ ಮನೆಯಲ್ಲಿ ಅಂದು ಅರಿಸಿನ ಕುಂಕುಮದ ಗಲಾಟೆ. ಹೆಂಗಸರೆಲ್ಲರೂ ವಿಜೃಂಭಣೆಯಿಂದ ತಮ್ಮ ಸೀರೆಗಿಂತ ಅವರ ಸೀರೆ ಚೆಂದೆಂದೂ, ಕಡಿಮೆ ದರ್ಜೆಯದೆಂದೂ ಮುಂತಾಗಿ ಮಾತಾಡುತ್ತಾ ಭೀಮರಾಯರ ಮನೆಗೆ ಬರುತ್ತಿದ್ದಾರೆ. ಹೀಗಿರುವಲ್ಲಿ ಯಾರೋ 5 ಜನ ಕರಿಯ ಉಡುಪಿನ ಜನರು ಭೀಮರಾಯರ ಮನೆಯ ಹಿಂಭಾಗದಲ್ಲಿ ಸುಳಿದಾಡುತ್ತಿದ್ದರು. ಅರಿಸಿನ ಕುಂಕುಮವಾದನಂತರ ಜನರೆಲ್ಲರೂ ತಮ್ಮ ತಮ್ಮ ಮನೆಗಳಿಗೆ ತೆರಳಿದರು. ಪೂರ್ಣ ಕತ್ತಲೆಯಾಯಿತು. ರಸ್ತೆಯಲ್ಲಿ ಜನಗಳ ಸಂಚಾರವು ಕಡಿಮೆಯಾಯಿತು.

ವಾಚಕರೇ! ಶಾಂತಿಪುರದಲ್ಲಿರುವ ಭೀಮರಾಯರು ಅಗಾಧ ಐಶ್ವರ್ಯವಂತರು. ಆದರೆ ಆ ಐಶ್ವರ್ಯಕ್ಕೆ ತಕ್ಕಂತೆ ಮನೆಯಲ್ಲಿ ಹೆಚ್ಚು ಜನರಿರಲಿಲ್ಲ. ಇದ್ದವರು ಅವರ ಮಡದಿ ವಿಮಲಾಬಾಯಿ, ಅವರ ಮಗಳು ಕೋಮಲೆ, ಮತ್ತು ಬೆಂಗಳೂರಿನ ಕಾಲೇಜಿನಲ್ಲಿ ವ್ಯಾಸಂಗಮಾಡುತ್ತಿದ್ದ ಗೋವಿಂದ.

ಮನೆಯ ಹಿಂಭಾಗದಲ್ಲಿ ಸುಳಿಯುತ್ತಿದ್ದವರು ಕಳ್ಳರು. ಇವರು ತಮ್ಮ ಕಳುವಿನಿಂದ ದೊರೆತ ಐಶ್ವರ್ಯದಿಂದ ಒಂದು ದಟ್ಟ ಕಾಡಿನಲ್ಲಿ ಮಾಯವಾಗಿರುವಂತ ಮನೆಯನ್ನು ಕಟ್ಟಿಕೊಂಡು ಯಾರಿಗೂ ತಿಳಿಯದಂತೆ ವಾಸವಾಗಿದ್ದರು.

ಕಳ್ಳರು ಸುಳಿದಾಡುತ್ತಿದ್ದುದು ಭೀಮರಾಯರ ಮಗಳನ್ನು ಅಪಹರಿಸುವುದಕ್ಕಲ್ಲದೆ ಅವರ ಆಸ್ತಿಯನ್ನು ಅಪಹರಿಸುವುದಕ್ಕಲ್ಲ. ಇವರಿಗ ಹಣವನ್ನು ಕದ್ದು ಕದ್ದು ಬೇಸತ್ತು ತಮ್ಮ ಮುಖಂಡನಿಗೆ ಒರ್ವ ಸುಂದರಿಯನ್ನು ತೆಗೆದುಕೊಂಡುಕೊಡಬೇಕೆಂದು ಮೊದಲಿನಿಂದಲೂ ಆಸೆಯಿದ್ದಿತು. ಅದಕ್ಕೆ ಈಗ ಒಂದು ಸಮಯವು ದೊರೆಯಿತು.

ಅರಿಸಿನ ಕುಂಕುಮದ ಗಲಾಟೆ ತೀರಿದ ಮೇಲೆ ಭೀಮರಾಯರು ವಿಮಲಾಬಾಯಿಯೊಡನೆ ತಾಂಬೂಲ ಜಗಿಯುತ್ತಾ ಮನೆಯ ಹೊರಭಾಗದಲ್ಲಿ ಈ ರೀತಿ ಸಂಭಾಷಣೆಗೈಯುತ್ತಿದ್ದರು.

ಭೀಮರಾಯರು:— ವಿಮಲಾ ಕೋಮಲೆಗೆ ಆಗಲೇ ವಯಸ್ಸಾಗಿ ಹೋಗಿದೆ. ಇನ್ನು ನಾವು ಲಗ್ನಮಾಡದಿದ್ದರೆ ವೃಥಾ ಜನರ ನಿಂದೆಗೆ ಗುರಿಯಾಗಬೇಕಾಗುವುದು. ನನ್ನ ಮನಸ್ಸಿನಲ್ಲಿ ಇಲ್ಲಿಯ ಪತ್ತೆ ಹಚ್ಚುವ ಕೆಲಸದಲ್ಲಿರುವ ರಾಘುರಾಯನಿಗೇ ಕೊಟ್ಟು ಲಗ್ನ ಮಾಡಬೇಕೆಂದಿದೆ ಇದಕ್ಕೆ ನಿನ್ನ ಸಮ್ಮತವೇನು?

ವಿಮಲಾಬಾಯಿ:— ಪ್ರಿಯ, ನಿಮ್ಮ ಮನಸ್ಸಿಗೆ ನಾನು ಎದುರಾಡಲಾರೆನು. ನನಗೂ ಮಾಡಲಿಕ್ಕೆ ಇಷ್ಟ ಸಮ್ಮತವೂ ಇದೆ. ಈ ವಿಷಯದಲ್ಲಿ, ಕೋಮಲೆಯ ಅಭಿಪ್ರಾಯವನ್ನು ವಿಚಾರಿಸೋಣ.

ಕೋಮಲೆ, ನೀನು ರಾಘುರಾಯನನ್ನು ಲಗ್ನವಾಗಲು ಸಮ್ಮತಿಸುವೆಯಾ?" ಕೋಮಲೆಯು ಲಜ್ಜೆಯಿಂದ ಅಡುಗೆಯ ಮನೆಗೆ ಮರುಮಾತಾಡದೆ ಓಡಿ ಹೋದಳು. ಹೀಗಿರುವಲ್ಲಿ ನಮ್ಮ ಕಳ್ಳರಿಗೆ ಒಳ್ಳೆಯ ಸಮಯ ಒದಗಿತು. ಒಬ್ಬ ಕರಿಯ ವ್ಯಕ್ತಿಯು ಅಡುಗೆಯ ಮನೆಯಲ್ಲಿದ್ದ ಕೋಮಲೆಯ ಕಡೆಗೇ ಬರುತ್ತಿತ್ತು. ಮತ್ತೊಂದು ವ್ಯಕ್ತಿಯು ಅಡುಗೆಯ ಮನೆಯ ಮಾಳಿಗೆಯ ಹೆಂಚನ್ನು ತೆಗೆದು ಅಲ್ಲಿಂದ ನೆಲಕ್ಕೆ ಒಂದು ನೂಲೇಣಿಯನ್ನು ಹಾಕಿ ಅದರ ಮೂಲಕವೇ ಹೊರಗೆ ಹೋಯಿತು. ಹೋಗುತ್ತಿದ್ದ ರಭಸದಲ್ಲಿ ಆ ವ್ಯಕ್ತಿಯ ಕರಿಯ ಗೌನು ಅಲ್ಲೇ ಸಿಕ್ಕಿಕೊಂಡಿತು. ನುಗ್ಗುತ್ತಿದ್ದ ರಭಸದಲ್ಲಿ ಒಂದೆರಡು ಹನಿ ರಕ್ತವು ಸಹ ಬಿದ್ದಿದ್ದವು. ಈ ಸಮಯದಲ್ಲಿ ಹುಡುಗಿಯು ಇವನ್ನೆಲ್ಲಾ ನೋಡಿ ಚಿಟ್ಟನೆ ಕಿರುಚಿದಳು. ಆಗ ಒಮ್ಮೆಲೇ ಭೀಮರಾಯರೂ, ವಿಮಲಾಬಾಯಿಯವರೂ ಓಡಿ ಬಂದರು. ಇಷ್ಟರಲ್ಲೇ ವ್ಯಕ್ತಿಯು ತನ್ನ ನೂಲೇಣಿಯನ್ನು ಹುಡುಗಿಯೊಡನೆ ಹತ್ತಿದ್ದಿತು. ಆದರೆ ವಿಮಲಾಬಾಯಿಯವರು ಧೈರ್ಯದಿಂದ ಬಿಡಿಸಲೆತ್ನಿಸಿದರು. ಆದರೆ ವ್ಯಕ್ತಿಯು ಸೊಂಟದಲ್ಲಿದ್ದ ಕತ್ತಿಯನ್ನು (Dagger) ಅವರ ಕಡೆ ಎಸೆದು ಮಾಯವಾಯಿತು.. ಭೀಮರಾಯರು ಮೇಲೆ ನೋಡುತ್ತಾ ನಿಂತಿದ್ದರು.

ಇತ್ತ ವಿಮಲಾಬಾಯಿಯವರು ಕತ್ತಿಯ ಹೊಡೆತದಿಂದ ಮೂರ್ಛೆಹೊಂದಿ ಬಿದ್ದುಬಿಟ್ಟರು. ನೀರು!—ನೀರು!—ನೀರು ಇಲ್ಲ. ಪ್ರಾಣವೇ ಹೋಯಿತ. ಭೀಮರಾಯರು ಮಡದಿಯ ಶವವನ್ನು ನೋಡಿ ವ್ಯಸನಪಡುತ್ತಾ ಕುಳಿತುಕೊಂಡರು.

— : ೨ ನೆಯ ಅಧ್ಯಾಯ : —

ಇತ್ತ ಗೋವಿಂದನು ಊರಿಗೆ ರಜೆಯಾದ್ದರಿಂದ ಬಂದು ಬಾಗಿಲ ಬಳಿ ನಿಂತನು. ಕೂಗಿದನು. ಕರೆದನು. ಮಾತೇ ಇಲ್ಲ. ಆಶ್ಚರ್ಯವಾಯಿತು ಹಿತ್ತಲಿನಲ್ಲಿ ನೋಡಿದರೆ ರಕ್ತಗಳ ಹನಿ. ನೂಲೇಣಿಯು ಹಾಗೆಯೇ ಬಿದ್ದಿದೆ. ಕರಿಯ ಗೌನೊಂದು ಸಿಕ್ಕಿಕೊಂಡು ಗಾಳಿಯಲ್ಲಿ ಹಾರಾಡುತ್ತಿದೆ. ಭೀಮರಾಯರು ಮೂರ್ಛೆಯಿಂದೆದ್ದು ನರಳುತ್ತಿದ್ದರು. ಈ ದೃಶ್ಯವು ಗೋವಿಂದನಿಗೆ ತಿಳಿದ ಬಳಿಕ ಒಳಗೆ ಹೋಗಿ ತಂದೆಯವರಿಂದಲೂ ತಾಯಿಯವರಿಗೂ ಆದ ಸಂಕಟವನ್ನು ಕೇಳಿ ತಾಯಿಯವರ ಮರಣಕ್ಕೆ ಬಹಳ ಗೋಳಾಡಿ, ನಂತರ ತಂದೆಯವರನ್ನು ಒಂದು ಮಂಚದ ಮೇಲೆ ಮಲಗಿಸಿ ಸಂತೈಸಿ, ವಿಷಯವನ್ನು ಆ ಪೋಲೀಸ ಪತ್ತೇದಾರನಾದ ಭಗವಾನ್ ಸಿಂಗನಿಗೆ ತಿಳಿಸಲು ಹೊರಟುಹೋದನು.

ಭಗವಾನ್‌ಸಿಂಗರು ಒಂದು ತರುಣ ಕುರ್ಚಿಯಲ್ಲಿ ಕುಳಿತು ವರ್ತಮಾನಪತ್ರಿಕೆಯನ್ನೋದುತ್ತಿದ್ದರು. ಪಕ್ಕದಲ್ಲಿ ಇಬ್ಬರು ಪೋಲೀಸರು ಸಿಂಗರ ಮೀಸೆಯನ್ನು ಹುರಿಮಾಡುತ್ತಿದ್ದರು. ಮತ್ತಿಬ್ಬರು ಅವರ ಕಾಲುಗಳನ್ನು ನೀವುತ್ತಿದ್ದರು. ಗೋವಿಂದನು ಬಂದೊಡನೆಯೇ ಅವನಿಗೂ ಒಂದು ಆಸನವನ್ನಿತ್ತು ಬಂದ ಸಮಾಚಾರವನ್ನು ಕೇಳಿದನು. ಅನಂತರ ತಮ್ಮ ಕೈ ಕೆಳಗಿದ್ದ ಮತ್ತಿಬ್ಬ ಅಧಿಕಾರಿಯೊಡನೆ ಭೀಮರಾಯರ ಮನೆಗೆ ಬಂದು ಎಲ್ಲಾ ವಿಷಯಗಳನ್ನು ಗುರುತುಮಾಡಿಕೊಂಡು ಆ ಗೌನನ್ನೂ ತೆಗೆದುಕೊಂಡು ಇದನ್ನು ಪತ್ತೆಹಚ್ಚುವುದಾಗಿ ಭರವಸ ಕೊಟ್ಟು ಹೊರಟು ಹೋದನು. ವಾಚಕರೇ! ಭಗವಾನ್‌ಸಿಂಗರೊಡನೆ ಬಂದವನು ಮತ್ತೊಬ್ಬ ಪತ್ತೇದಾರಿಯಾದ ರಾಘುರಾಯನು, ಒಂದೆ ಇವನಿಗೇ ಕೋಮಲೆಯನ್ನು ಕೊಡಬೇಕೆಂದು ನಿಶ್ಚಯವಾಗಿದ್ದು. ಇವನಿಗೂ ಕೋ

(೯ ನೆಯ ಪುಟದಲ್ಲಿ ಮುಂದುವರಿದಿದೆ.)

ಕರ್ನಾಟಕ ಸಾಹಿತ್ಯ ಪರಿಷತ್ತು.

ಕಾರ್ಯನಿರ್ವಾಹಕ ಮಂಡಲಿ,

೧೦ನೆಯ ಸಾಮಾನ್ಯ ಅಧಿವೇಶನ

ತಾ|| ೧೭–೧೦–೧೯೩೬.

ನಿರ್ಣಯಗಳು.

" ಪರಿಷತ್ತಿನ ಮಹಾಪೋಷಕರಾದ ಶ್ರೀಮನ್ಮಹಾರಾಜ ಶ್ರೀ ಕೃಷ್ಣರಾಜ ಒಡೆಯರ್ ಬಹದ್ದೂರ್, ಜಿ. ಸಿ. ಎಸ್. ಐ., ಜಿ. ಬಿ. ಇ., ಮಹಾಸ್ವಾಮಿಯವರು ಯೂರೋಪುಖಂಡದ ಪ್ರವಾಸವನ್ನು ಉದ್ದೇಶಿಸಿದಂತೆ ನಡೆಸಿ ಮುಗಿಸಿಕೊಂಡು ಆರೋಗ್ಯಸಂಪನ್ನರಾಗಿ ಹಿಂದಿರುಗಿ ಬಂದಿರುವ ಈ ಸಂತೋಷ ಸಂದರ್ಭದಲ್ಲಿ ಪರಿಷತ್ತಿನ ಕಾರ್ಯ-ನಿರ್ವಾಹಕ ಮಂಡಲಿ ಪ್ರಭುಗಳವರ ಸನ್ನಿಧಿಯಲ್ಲಿ ತನ್ನ ರಾಜಭಕ್ತಿಪುರಸ್ಸರವಾದ ಅಭಿನಂದನೆಗಳನ್ನು ಸಮರ್ಪಿಸಲು ಅಪ್ಪಣೆ ಬೇಡುತ್ತದೆ.

ಸಾಹಿತ್ಯ ಸಮ್ಮೇಳನದ ವಿಚಾರ

ಮುಂದಿನ ಡಿಸಂಬರು ತಿಂಗಳಿನಲ್ಲಿ ಹಂಪೆಯಲ್ಲಿ ನಡೆಯಬೇಕೆಂದು ಏರ್ಪಾಟಾಗುತ್ತಿರುವ ವಿಜಯನಗರ ಸ್ಮಾರಕೋತ್ಸವದ ಅಂಗವಾಗಿ ಕನ್ನಡ ಸಾಹಿತ್ಯೋತ್ಸವವೊಂದನ್ನು ನಡೆಸಬೇಕೆಂದು ವಿಜಯನಗರ ಸಾಮ್ರಾಜ್ಯ ಸ್ಮಾರಕೋತ್ಸವ ಮಂಡಲಿಯವರು ಇಚ್ಛಿಸಿ, ಆ ವಿಚಾರದಲ್ಲಿ ಉತ್ಸಾಹದಿಂದ ಪರಿಷತ್ತಿಗೆ ಕಾಗದಗಳನ್ನು ಬರೆದಿರುವುದರಿಂದಲೂ, ಆ ಉತ್ಸವವು ಕರ್ನಾಟಕಕ್ಕೆ ಅತ್ಯಂತ ಮಹತ್ವದ ಸಂದರ್ಭವಾಗಿರುವ ಕಾರಣ ಅದರ ಭಾಗವಾಗಿ ಸಾಹಿತ್ಯೋತ್ಸವವೂ ನಡೆಯುವುದು ಬಹು ಉಚಿತವಾಗಿರುವುದರಿಂದಲೂ ಮತ್ತು ಅಲ್ಲಿ ಸಾಹಿತ್ಯೋತ್ಸವ ನಡೆಯುವುದಾಗಿರುವಾಗ ಬೇರೊಂದು ಸಮ್ಮೇಳನವನ್ನು ಏರ್ಪಡಿಸುವುದು ಯುಕ್ತವಲ್ಲವಾದ್ದರಿಂದಲೂ, ಪರಿಷತ್ತು ಪದ್ಧತಿಯಂತೆ ಸಮ್ಮೇಳನದ ಏರ್ಪಾಟನ್ನು ನಡೆಸಲು ಈಗ ಅದರ ನಿಬಂಧನೆಗಳಿಗೂ, ಅದೇತಕ್ಕೋ ಸಂಬಂಧಪಟ್ಟ ಅನೇಕ ಕಾರಣಗಳಿಂದ ಪ್ರತಿಬಂಧಕವಿರುವುದರಿಂದಲೂ ಈಸಲ ಡಿಸಂಬರ್ ತಿಂಗಳಿನಲ್ಲಿ ಪದ್ಧತಿಯ ಪ್ರಕಾರ ನಡೆಯಬೇಕಾಗಿರುವ ಸಾಹಿತ್ಯ ಸಮ್ಮೇಳನದ ಯೋಜನೆಯನ್ನು ಬದಿಗಿರಿಸಿ, ಅದಕ್ಕೆ ಬದಲಾಗಿ ವಿಜಯನಗರ ಸಾಮ್ರಾಜ್ಯ ಸ್ಮಾರಕೋತ್ಸವ ಸಂಘದ ಮೇಲ್ಕಂಡ ಉಪಸಮಿತಿ ಸೂಚಿಸಿರುವಂತೆ ವಿಜಯನಗರ ಸಾಮ್ರಾಜ್ಯ ಸ್ಮಾರಕೋತ್ಸವ ಮಂಡಲಿಯು ಮುಂದಿನ ಡಿಸೆಂಬರ್ ತಿಂಗಳಲ್ಲಿ ಹಂಪೆಯಲ್ಲಿ ಒಂದು ಕನ್ನಡ ಸಾಹಿತ್ಯೋತ್ಸವವನ್ನು ನಡೆಸುವುದು ಯೋಗ್ಯವೆಂದು ಕ|| ಸಾ|| ಪರಿಷತ್ತಿನ ಕಾ|| ನಿ|| ಮಂಡಲಿ ಒಪ್ಪುತ್ತದೆ. ಮತ್ತು ಈ ವಿಜಯನಗರ ಸ್ಮಾರಕೋತ್ಸವದ ಅಂಗವಾದ ಕನ್ನಡ ಸಾಹಿತ್ಯೋತ್ಸವಕ್ಕೆ ಪರಿಷತ್ತಿನ ಸಮಸ್ತ ಸದಸ್ಯರುಗಳೂ ಅಂಗ ಸಂಸ್ಥೆಗಳೂ ಸಂಪೂರ್ಣವಾಗಿ ಸಹಕಾರವನ್ನು ಕೊಟ್ಟು ವಿಜಯನಗರ ಸಾಮ್ರಾಜ್ಯ ಸ್ಮಾರಕೋತ್ಸವವನ್ನು ಯಶಸ್ವಿಯಾಗಿ ಮಾಡಬೇಕೆಂದು ಪರಿಷತ್ತಿನ ಕಾರ್ಯನಿರ್ವಾಹಕ ಮಂಡಲಿ ಪ್ರಾರ್ಥಿಸುತ್ತದೆ. ಮತ್ತು ಆ ಸಾಹಿತ್ಯೋತ್ಸವದ ವೆಚ್ಚದ ಬಗ್ಗೆ ಪರಿಷತ್ತು ತನ್ನ ಸಹಾನುಭೂತಿಯ ಗುರುತಾಗಿ ೫೦ ರೂಪಾಯಿಗಳ ಕಾಣಿಕೆಯನ್ನು ಕೊಡಬಹುದೆಂದು ಕಾರ್ಯನಿರ್ವಾಹಕ ಮಂಡಲಿ ನಿರ್ಣಯಮಾಡುತ್ತದೆ.

ವಾರ್ಷಿಕಾಧಿವೇಶನದ ವಿಚಾರ.

" ಮೇಲಿನ ನಿರ್ಣಯದಲ್ಲಿ ಕಾಣಿಸಿರುವಂತೆ ಈ ವರ್ಷದ ಸಾಹಿತ್ಯ ಸಮ್ಮೇಳನದ ಏರ್ಪಾಟನ್ನು ಬದಿಗಿರಿಸಿರುವುದರಿಂದಲೂ ವಿಜಯನಗರ ಸಾಮ್ರಾಜ್ಯ ಸ್ಮಾರಕೋತ್ಸವ ಮಂಡಲಿಯ ಕಡೆಯಿಂದ ಬಂದಿರುವ ಕಾಗದಗಳಿಂದ ಹಂಪೆಯಲ್ಲಿ ಅವರು ನಡೆಸುವ ಸಾಹಿತ್ಯೋತ್ಸವದ ಕಾಲದಲ್ಲಿ ಪರಿಷತ್ತಿನ ವಾರ್ಷಿಕಾಧಿವೇಶನಕ್ಕೆ ಬೇಕಾದಷ್ಟು ಅವಕಾಶ ಸ್ಥಳಾನುಕೂಲ ಇವೇ ಮೊದಲಾದ ಸೌಕರ್ಯಗಳು ಅವಶ್ಯವಿರುವಷ್ಟು ದೊರೆಯುವ ನಿಷ್ಕರ್ಷೆ ತೋರದೆ ಇರುವುದರಿಂದಲೂ ಪರಿಷತ್ತಿನ ವಾರ್ಷಿಕಾಧಿವೇಶನವನ್ನು ೧೯೩೭ ನೆಯ ಏಪ್ರಿಲ್–ಮೆ ತಿಂಗಳುಗಳಲ್ಲಿ ನಡೆಯಲಿರುವ ನಿಜ ಸಾಹಿತ್ಯೋತ್ಸವ ಕಾಲದಲ್ಲಿ ಬೆಂಗಳೂರಿನಲ್ಲಿ ನಡೆಸಬಹುದು.

(ರುಜು) ಸಿ. ಕೆ. ವೆಂಕಟರಾಮಯ್ಯ,
ಗೌ|| ಕಾರ್ಯದರ್ಶಿ,
ಕರ್ನಾಟಕ ಸಾಹಿತ್ಯ ಪರಿಷತ್ತು

ಹರಿಜನರಿಗೆ ದೇವಾಲಯ ಪ್ರವೇಶ

ಹರಿಜನರು ಮುಜರಾಯಿ ಇಲಾಖೆಯ ಅಧೀನಕ್ಕೊಳಪಟ್ಟ ಎಲ್ಲಾ ದೇವಸ್ಥಾನಗಳಿಗೂ ಹೋಗಿ ಪೂಜೆ ಮಾಡಿಸಿಕೊಂಡು ಬರಲು ಅವಕಾಶ ಕೊಡಬೇಕೆಂಬ ಠರಾವು ಪ್ರತಿನಿಧಿಸಭೆಯಲ್ಲಿ ಬಹಳವಾಗಿ ಚರ್ಚಿಸಲ್ಪಟ್ಟಿತು ಶ್ರೀ|| ಪಾಮಡಿ ಸುಬ್ರಾಮಶೆಟ್ಟರು ಅದನ್ನು ಸೂಚಿಸಿದರು ಶ್ರೀ|| ಗಂಗಾವ ವಂಕಟಪ್ಪ, ಟಿ ಮರಿಯಪ್ಪನು ಮೊದಲಾದವರು ಅದನ್ನು ಅನುಮೋದಿಸಿ ಮಾತನಾಡಿದರು ಶ್ರೀ|| ಗಳಾದ ಶಿದ್ಧಲಿಂಗಪ್ಪ, ವೆಂಕಟಸ್ವಾಮಿಗೌಡರು, ಪುಟ್ಟಸ್ವಾಮಿಗೌಡರು, ಮುನಿವೆಂಕಟಪ್ಪನವರು, ಹುಚ್ಚಪ್ಪನವರು ಇವರೇ ಮುಂತಾದ ಗ್ರಾಮಾಂತರದ ಸದಸ್ಯರು ವಿರೋಧಿಸಿದರು

ಸಾಬ್ಬವಾಗಿ ಈಗ ನಾಗರೀಕತೆಯು ಹೆಚ್ಚುತ್ತಿದೆ ಹರಿಜನರ ಹಕ್ಕುಗಳು ಹೆಚ್ಚು ಹೆಚ್ಚಾಗಿ ಕೊಡಲ್ಪಡುತ್ತಿವೆ ಶ್ರೀರ ಮಹಾರಾಜರೂ ಸಹ ಅರಮನೆಗೆ ಹರಿಜನರನ್ನು ಬಿಟ್ಟಿರುವರು ಇನ್ನು ಮುಂದೆ ನಾವು ಅವರನ್ನು ದೇವಸ್ಥಾನಗಳಿಗೂ ಬಿಡಬೇಕು ಎಂಬುದಾಗಿ ಠರಾವನ್ನು ಅನುಮೋದಿಸುವವರು ಹೇಳಿದರು

ವಿರೋಧಿಸಿದವರು ಹೇಳಿದ್ದೇನೆಂದರೆ-ನಮ್ಮ ದೇಶದಲ್ಲಿ ಸಾರ್ವಜನಿಕವಾದ ರಸ್ತೆ, ಕೆರೆ ಮುಂತಾದವುಗಳಲ್ಲಿ ಹರಿಜನರ ಪ್ರವೇಶಕ್ಕೆ ಅನೇಕ ಅಡಚಣೆಗಳಿವೆ ಹಲವು ಕಡೆಗಳಲ್ಲಿ ಕಲಹ ಕದನಗಳೂ ಆಗಿವೆ ಜನಾಭಿಪ್ರಾಯವು ಮುಂದೆ ಬಂದಿಲ್ಲ ಹೀಗಿರುವಲ್ಲಿ ನಾವು ಇಲ್ಲಿ ಪಟ್ಟಣದಲ್ಲಿ ಕುಳಿತು ಕಣ್ಣುಮುಚ್ಚಿಕೊಂಡು ಶಾಸನಗಳನ್ನು ಮಾಡಿಬಿಟ್ಟರೆ ಬಹಳ ಕಲಹಗಳಿಗೆ ಕಾರಣವಾಗುವುದು ಶ್ರೀಮನ್ಮಹಾರಾಜರೂ ಸಹ ಹರಿಜನರನ್ನು ಅರಮನೆಗೆ ಸೇರಿಸಲು ಎಷ್ಟೋ ದಿನ ಯೋಚಿಸಿ ಕಡೆಗ ಸೇರಿಸಿರುತ್ತಾರೆ ನಾವೂ ಸಹ ಆತುರಪಡಬಾರದು

ದಿವಾನ್ರ್ಯು ಶಿವಾಷನದು ಉತ್ತರ ಕೊಡುತ್ತಾ " ಸರ್ಕಾರದವರು ಹರಿಜನರಿಗೆ ವಿಚಾರದಲ್ಲಿ ಸಂಪೂರ್ಣ ಸಮಾನುಭೂತಿಯುಳ್ಳವರಾಗಿದ್ದಾರೆ ಠರಾವಿನ ತತ್ವಕ್ಕೆ ಸರ್ಕಾರದವರ ವಿರೋಧವಿಲ್ಲ. ಆದರೆ ಇಂಥಾ ಕೆಲಸವನ್ನು ಮಾಡಬೇಕಾದರೆ ಸಮಯಸಂದರ್ಭಗಳನ್ನು ನೋಡಿ ಮಾಡಬೇಕು ಇದಲ್ಲದೆ ಸರ್ಕಾರದವರು ದೇವಸ್ಥಾನಗಳಿಗೆ ಬರೀ ಟ್ರಸ್ಟಿಗಳು ಮಾತ್ರವಲ್ಲ ಒಂದೊಂದು ದೇವಸ್ಥಾನದ ಶಾಸ್ತ್ರದ ಆಗಮಕ್ರಮಗಳನ್ನು ಅನುಸರಿಸಿ ಪೂಜೆಗಳನ್ನು ನಡೆಸಬೇಕು. ಅದರಲ್ಲಿ ಸ್ವಲ್ಪ ವ್ಯತ್ಯಾಸವಾದರೂ ಪೂಜಾಭಂಗವಾಗುವುದು ಈ ಮಸೂದೆ ವಿಷಯವಾಗಿ ಈ ಸಭೆಯಲ್ಲಿಯೇ ಇಷ್ಟೊಂದು ಭಿನ್ನಾಭಿಪ್ರಾಯವಿದೆ ಇನ್ನು ದೇಶದಲ್ಲೆಲ್ಲಾ ಎಷ್ಟು ಭಿನ್ನಾಭಿಪ್ರಾಯವಿರಬಹುದು ? ಆದ್ದರಿಂದ ಆತುರಪಟ್ಟರೆ ಪ್ರಯೋಜನವಿಲ್ಲ ಎಂದು ತಿಳಿಸಿದರು

ವಿಜ್ಞಾನದ ಧ್ಯೇಯವೇನು ?

ಬರುವ ಒಂದು ಶತಮಾನದಲ್ಲಿ ವಿಜ್ಞಾನ ಶಾಸ್ತ್ರವು ಯಾವಯಾವ ಕಾರ್ಯ ಸಾಧನೆಗಳನ್ನು ಮಾಡುವುದು"—ಈ ಪ್ರಶ್ನೆಯು ಪ್ರಪಂಚದ ಎಲ್ಲಾ ಶಾಸ್ತ್ರಜ್ಞರಿಗೆ ಹಾಕಲ್ಪಟ್ಟಿದೆ ಸಾಮಾನ್ಯವಾಗಿ ಈ ಕೆಳಗೆ ಕಂಡಂತೆ ಉತ್ತರಗಳು ಬಂದಿವೆ —

1 ಮನುಷ್ಯನ ಆಯುಃ ಪ್ರಮಾಣವನ್ನು ಕಡೆಯಪಕ್ಷ 120 ವರ್ಷಕ್ಕೆ ಹೆಚ್ಚಿಸುವುದು

2. ಮಹಾರ್ಬುದ, ಕುಷ್ಟ ಮತ್ತು ಕ್ಷಯ ರೋಗಗಳಿಗೆ ಪರಿಹಾರವಾದ ಚಿಕಿತ್ಸೆಗಳನ್ನು ಕಂಡು ಹಿಡಿಯುವುದು.

3 ಶಾರೀರಕ ಯಾತನೆಗಳನ್ನೆಲ್ಲಾ ನಿವಾರಿಸುವುದು

4 24 ಗಂಟೆಗಳಲ್ಲಿ ಸುಖವಾಗಿಯೂ ಆನಂದದಿಂದಲೂ ಪ್ರಪಂಚದ ಸುತ್ತಲೂ ವಿಮಾನದಲ್ಲಿ ಸಂಚರಿಸುವುದು

5 ಸಣ್ಣ ಗಡಿಯಾರದ ಆಕೃತಿಯಲ್ಲಿ ರೇಡಿಯೋ ಯಂತ್ರಗಳನ್ನು ಮಾಡಿ ಇಟ್ಟುಕೊಳ್ಳುವುದು

6 ವಿದ್ಯುಚ್ಛಕ್ತಿಯ ವೆಚ್ಚವಿಲ್ಲದೆ, ವಿದ್ಯುಚ್ಛಕ್ತಿಯ ಸಂಗ್ರಹ ಮತ್ತು ವಿನಿಯೋಗಗಳನ್ನು ಮಾಡುವುದು

7 ಚಂದ್ರಗ್ರಹಕ್ಕೆ ಹೋಗಿಬರುವುದು

8 ಕೃತಕವಾದ ಮತ್ತು ಪರಿಷ್ಕಾರವಾದ ಸೂರ್ಯ ರಶ್ಮಿ

9. ಕೃತಕವಾದ ಆಹಾರವನ್ನು ತಯಾರುಮಾಡಿ ಹೊಟ್ಟೆ ಹಸಿವನ್ನು ನಿವಾರಿಸುವುದು

10 ಸ್ತ್ರೀಯರ ಸೌಂದರ್ಯವನ್ನು ಪರಿಪೂರ್ಣವಾಗಿ ಸಂರಕ್ಷಿಸುವುದು

11. ಮಿಶ್ರವಿಲ್ಲದ ಬಣ್ಣಗಳನ್ನು ತಯಾರಿಸುವುದು ಪೂರ್ಣಾಕೃತಿಯುಳ್ಳ ಚಲನ ಚಿತ್ರಗಳು

12 ಕೆಟ್ಟ ಪರಿಣಾಮಗಳುಂಟಾಗದಂತೆ ಇಂದ್ರಿಯ ಸುಖವನ್ನನುಭವಿಸಲು ರಸಾಯನ ಶಾಸ್ತ್ರಪ್ರಕಾರ ಔಷಧಿಗಳನ್ನು ಸಿದ್ಧಮಾಡುವುದು

ಅಧ್ಯಕ್ಷರಾದ ಶ್ರೀ|| ಎಸ್. ಪಿ ರಾಜಗೋಪಾಲಾಚಾರ್ಯರು ಹೀಗೆ ಹೇಳಿದರು—" ಹರಿಜನರನ್ನು ಯಾವಾಗಲೂ ದೇವಸ್ಥಾನಕ್ಕೆ ಬಿಡಲೇ ಕೂಡದೆಂಬುದು ಸರ್ಕಾರದ ಅಭಿಮತವಲ್ಲ ಸರಿಯಾದ ಕಾಲ, ಮಹಾಜನಗಳ ಸಂತೋಷ ಇವುಗಳನ್ನೆಲ್ಲಾ ನೋಡಿಕೊಂಡು ಈ ಏರ್ಪಾಡನ್ನು ಜಾರಿಗೆ ತರುವುದು ಸಾಧ್ಯ.

ಶ್ರೀ|| ಶೆಟ್ಟರು ಇಷ್ಟಕ್ಕೇ ತೃಪ್ತರಾದರು. ಕೈತೋರಿದರೆ ಎಲ್ಲಿ ಅವಲಕ್ಷಣವಾಗುವುದೋ ಎಂದು ಸಂದೇಹಪಟ್ಟರಬೇಕು ಸರ್ಕಾರದವರು ಕೊಟ್ಟ ಭರವಸೆಯಿಂದ ತಮ್ಮ ಠರಾವನ್ನು ವಾಪಸು ತೆಗೆದುಕೊಂಡರು ಬೀಸೋ ದೊಣ್ಣೆ ತಪ್ಪಿದಂತಾಯಿತು

ಚಕ್ರವರ್ತಿಯವರ ಕಿರೀಟ ಧಾರಣೆಗೆ ಅಡಚಣೆ!

ಬ್ರಿಟಿಷ್ ಸಿಂಹಾಸನಕ್ಕೆ ಬೇರೆ ಹಕ್ಕುದಾರ

ಬ್ರಿಟಿಷ್ ಸಿಂಹಾಸನದ ಹಕ್ಕು ತನ್ನದೆಂದು ಅಂತೋನಿ ಹಾಲ್ ಎಂಬುವನು ಹಿಂದೆ ಅನೇಕ ಬಾರಿ ಚಳವಳಿ ಹೂಡಿದ್ದನು ಆದರೆ ಹುಚ್ಚನೆಂದು ತಿಳಿದು ಸ್ವಲ್ಪಕಾಲ ನಿರ್ಬಂಧಪಡಿಸಿ ಬಿಟ್ಟುಬಿಡುತ್ತಿದ್ದರು ಆದರೆ ಈಗ ಹೊಸರೀತಿಯಲ್ಲಿ ತನ್ನ ಪ್ರತಿಭಟನೆಯನ್ನು ಆರಂಭಿಸಿರುವನು ಮುಂದೆ ನಡೆಯಲಿರುವ ಚಕ್ರವರ್ತಿಗಳ ಕಿರೀಟಧಾರಣಾ ಮಹೋತ್ಸವವನ್ನು ನಿಲ್ಲಿಸುವಂತೆ ಆತನು ನೋಟೀಸು ಕೊಡುವವನಾಗಿದ್ದಾನೆ ತನ ಹೆಸರಿನಲ್ಲಿಯೇ ನಾಣ್ಯಗಳನ್ನು ತಯಾರು ಮಾಡಿ ಕೂಲಿ ಆಳುಗಳಿಗೆ ಹಂಚುತ್ತಿದ್ದಾನೆ ಹೆನ್ರಿ ಯುದ್ಧದಲ್ಲಿ ಜಯಶೀಲನಾಗಿ ಬ್ರಿಟಿಷ್ ಸಾಮ್ರಾಜ್ಯದ ಚಕ್ರವರ್ತಿಯಾಗಿ ಅಂಗೀಕರಿಸಲ್ಪಟ್ಟವೇಳೆ ಆತನ ಸಂತತಿಯಲ್ಲಿ ಹುಟ್ಟಿದವರ ಪೈಕಿ ತಾನೇ ನಿಜವಾದ ಹಕ್ಕುದಾರನೆಂದೂ ಈಗಿನ ಚಕ್ರವರ್ತಿಗಳಿಗೆ ಹಕ್ಕಿಲ್ಲವೆಂದೂ ಹೇಳುತ್ತಿದ್ದಾನೆ ಅವರೂ ಇವನಿಗೆ ಅಧಿಕಾರಿಗಳು ವಿಶೇಷವಾದ ತೊಂದರೆಯನ್ನೇನೂ ಕೊಟ್ಟಿಲ್ಲ ವಿನೋದದಿಂದ ಅವನನ್ನು ಹಾಗಿಯೇ ಬಿಟ್ಟಿದ್ದಾರೆ

ಸ್ತ್ರೀಯರು ವಕೀಲರಾಗಕೂಡದು

ಬುಡಾಪೆಸ್ಟಿನಲ್ಲಿ ಹೊಸದಾಗಿ ಒಂದು ಕಾನೂನಾಗಿದೆ ಅದರಂತೆ ಹೆಂಗಸರು ವಕೀಲ ಶಿಕ್ಷಣವನ್ನು ಪಡೆಯಕೂಡದು ಮತ್ತು ಆ ವೃತ್ತಿಯನ್ನು ಅನುಸರಿಸಕೂಡದು ಒಳ್ಳಿದ ಪುರಸಭೆದ ವಕೀಲರು ಕಡೆಯ ಪಕ್ಷ ಎರಡೆರಡು ಕೊಠಡಿಗಳನ್ನಾದರೂ ಇಟ್ಟುಕೊಂಡಿರಬೇಕು. ಒಂದು ಕೊಠಡಿಯುಳ್ಳವರೂ ಬೋರ್ಡಿಂಗ್ ಹೋಂಗಳಲ್ಲಿರುವವರೂ ವಕೀಲರಾಗಲು ಅವಕಾಶವಿಲ್ಲ

ಚಕ್ರವರ್ತಿಗಳ ಕಿರೀಟಧಾರಣೆಯ ತೊಡಕುಗಳು

ಚಕ್ರವರ್ತಿಗಳಿಗೆ ಮುಂದಿನ ಮೇ ತಿಂಗಳಲ್ಲಿ ಕಿರೀಟಧಾರಣೆಯಾಗುವಾಗ ಅವರು ಮೂರು ಮೂರು ಬೇರೆ ಧರಿಸುವ ಕಿರೀಟವನ್ನು ಹಾಕಿಕೊಳ್ಳ ಕೂಡದೆಂದು ದಕ್ಷಿಣ ಆಫ್ರಿಕದವರು ತಕರಾರು ಹೂಡಿದ್ದಾರೆ ಉತ್ಸವಕಾಲದಲ್ಲಿ ಡೋಮಿನಿಯನ್ನುಗಳ ಪರವಾಗಿ ಚಕ್ರವರ್ತಿಯವರು ಬೇರೊಂದು ಕಿರೀಟವನ್ನು ಧರಿಸಬೇಕು ಬ್ರಿಟಿಷ್ ಸಾಮ್ರಾಜ್ಯದಿಂದ ದಕ್ಷಿಣ ಆಫ್ರಿಕವು ಬೇರೆಯಾಗಿದೆ ಯೆಂಬುದನ್ನು ಸ್ಪಷ್ಟವಾಗಿ ತೋರ್ಪಡಿಸಬೇಕು ಈಗಿನಂತೆ ಒಂದೇ ಕಿರೀಟವನ್ನೇ ಧರಿಸುವ ಹಳೇ ಪದ್ಧತಿ ಹಾಗೆಯೇ ನಡೆಯಬೇಕು ಹಾಗಿಲ್ಲದೆ ನಮಗೆ ಸಮಾಧಾನವಿಲ್ಲ—ಎಂದು ದಕ್ಷಿಣ ಆಫ್ರಿಕದ ಹೈ ಕಮೀಷನರವರು ತಮ್ಮ ಸರ್ಕಾರದ ಅಭಿಪ್ರಾಯದ ಪ್ರಕಾರ ವಾದಿಸುತ್ತಿರುವರು

ಗ್ರಾಮನೌಕರರ ವಂಶಪಾರಂಪರ್ಯದ ಹಕ್ಕನ್ನು ವಜಾಮಾಡುವುದು.

ಶಾನುಭೋಗರು, ಪಟೇಲರು, ತೋಟಿ, ತಳವಾರರೇ ಮುಂತಾದ ಗ್ರಾಮನೌಕರರ ವಂಶಪಾರಂಪರ್ಯದ ಹಕ್ಕುಗಳನ್ನು ವಜಾಮಾಡುವ ವಿಷಯದಲ್ಲಿ ಸರ್ಕಾರದವರು ಕಳೆದ ಪ್ರತಿನಿಧಿಸಭೆಯಲ್ಲಿ ಒಂದು ಮಸೂದೆಯನ್ನು ತಂದರು ಈ ವಿಧವಾದ ಮಸೂದೆಯನ್ನು ಮಾಡಬೇಕೆಂದು ಸಭೆಯ ಬಹುಸಂಖ್ಯಾತ ಸದಸ್ಯರು ಬಹಳ ದಿನಗಳಿಂದ ಕೇಳುತ್ತಲೇ ಇದ್ದರು ಸರ್ಕಾರದವರು ಅದರ ತತ್ವವನ್ನು ಅಂಗೀಕರಿಸಿದ್ದಾರೆ ಅದರಂತೆ ಈಗ ಮಸೂದೆಯನ್ನು ತಂದರು

ಇದುವರೆಗೆ ಬರೀ ಶಾನುಭೋಗರುಗಳ ಹಕ್ಕುಗಳನ್ನು ಮಾತ್ರ ತೆಗೆದುಕೊಳ್ಳಬೇಕೆಂದು ವಾದವು ನಡೆಯುತ್ತಿತ್ತು. ಈಗ ಎಲ್ಲಾ ಗ್ರಾಮನೌಕರರಿಗೂ ಇದು ಅನ್ವಯಿಸುವುದು ಈ ಮಸೂದೆಯ ಮೇಲೆ ಬಹಳ ಚರ್ಚೆ ನಡೆಯಿತು ಮ|| ಗುಂಡಪ್ಪನವರೂ, ಚೆಂಗಲರಾಯ ರೆಡ್ಡಿಯವರೂ ಅವರ ಅನುಯಾಯಿಗಳೂ ಇದನ್ನು ಅನುಮೋದಿಸಿದರು ಇದರಲ್ಲೂ ಶಾನುಭೋಗರ ಹಕ್ಕನ್ನು ಮೊದಲು ತೆಗೆದುಹಾಕಬೇಕೆಂದು ಹೇಳಿದರು

ಶ್ರೀ|| ಗಳಾದ ವೇಮಾರೆಡ್ಡಿ, ಬಿ ಎಲ್ ಸುಬ್ಬಯ್ಯಣ್ಣ, ಕೆ ಟಿ ಭಾಷ್ಯಂ, ಸಿ ಎಸ್. ನರಸಿಂಗರಾವ್ ಮುಂತಾದವರು ತೀವ್ರವಾಗಿ ಖಂಡಿಸಿದರು ಈ ಸಂದರ್ಭದಲ್ಲಿ ಶ್ರೀ|| ಎಸ್ ಕೆ ವಂಕಟರಂಗಯ್ಯಂಗಾರ್ರವರು ಒಂದು ಗದಾಪ್ರಹಾರಮಾಡಿದರು. ಈ ಅಂಶವನ್ನು ಪರ್ಯಾಲೋಚಿಸಲು ಪ್ರತಿನಿಧಿಸಭೆಗಾಗಲಿ ನ್ಯಾಯವಿಧಾಯಕ ಸಭೆಗಾಗಲೀ ಹಕ್ಕೇ ಇಲ್ಲವೆಂದು ತಿಳಿಸಿ ತಕರಾರು ತಂದೊಡಿದ್ದರು ಮೈಸೂರು ರಾಜ್ಯವನ್ನು ಬ್ರಿಟಿಷರು ವಾಪಸು ಕೊಟ್ಟಾಗ ಮಾಡಿದ ರಾಜಿಒಪ್ಪಂದಗಳು ಗ್ರಾಮನೌಕರರಿಗೂ ಅನ್ವಯಿಸುವುವೆಂದೂ ಅದನ್ನು ಮಾರ್ಪಾಡು ಮಾಡಲು ಯಾರಿಗೂ ಅಧಿಕಾರವಿಲ್ಲವೆಂದೂ ಸೂಚಿಸಿದರು ಅಧಿಕಾರಿವರ್ಗದವರು ಪುಸ್ತಕಗಳ ದಾಖಲೆಗಳನ್ನು ನೋಡಿದರು ಕಡಗೆ ಪ್ರತಿನಿಧಿಸಭೆಯು ಕೇವಲ ಸಲಹೆ ಕೊಡುವ ಸಂಸ್ಥೆಯಾದ ದರಿಂದ ಈ ವಿಷಯವನ್ನು ಚರ್ಚಿಸುವುದಕ್ಕೆ ಏನೂ ಅಡ್ಡಿಯಿಲ್ಲನೆಂದು ತೀರ್ಮಾನಿಸಿದರು

ಬಹಳ ದೀರ್ಘವಾಗಿ ಚರ್ಚೆಯಾಯಿತು ಸಮೂಹಾವವೇ ಮುಂತಾದ ರಾಜನೀತಿ ತತ್ವಗಳು ಚಳೆದು ಸುರಿಯಲ್ಪಟ್ಟವು ಕಡೆಗೆ ಬಹುಮತದಿಂದ ಮಸೂದೆಯ ನಿಯಮಗಳು ಅಂಗೀಕರಿಸಲ್ಪಟ್ಟವು

ಸಾಧ್ವಿ

೨-೧೧-೩೬ನೇ ಸೋಮವಾರ

ಪ್ರಜಾಪ್ರತಿನಿಧಿ ಸಭೆ.

ಪ್ರತಿನಿಧಿ ಸಭೆಯ ನವರಾತ್ರಿ ಅಧಿವೇಶನವು ಕಳೆದ ಸೋಮವಾರ ಆರಂಭವಾಯಿತು ಇಂದು ಒಳಗೆ ಮುಗಿಯಿತು ದಿವಾನರು ಒಂದು ದಿನ ಮಾತ್ರ ಇದ್ದರು. ಮೂರನೇ ದಿನದಿಂದ ರಾಜಮಂತ್ರಪ್ರವೀಣ ಎಸ್ ಪಿ ರಾಜಗೋಪಾಲಾಚಾರಿಯವರು ಅಧ್ಯಕ್ಷತೆ ವಹಿಸಿ ಕೆಲಸ ನಡೆಸಿದರು

ಈ ಸಾರಿ ಅಧಿವೇಶನದಲ್ಲಿ ವಿಶೇಷವಾದ ವಿಷಯಗಳೇನೂ ನಡೆಯಲಿಲ್ಲ ನಾಮಮೂಲಮೇರೆ ಕಾರ್ಯಕ್ರಮಗಳು ಜರುಗಿದವು ಯಥಾ ಪ್ರಕಾರ ಪ್ರಶ್ನೋತ್ತರಗಳೂ, ಅರಿಕೆಗಳೂ, ನಿರ್ಣಯಗಳೂ ಒಂದುವು ಸೌಕರ್ಯವಿದ್ದಷ್ಟು ಒಳಗೆ ಚರ್ಚಿಸಲ್ಪಟ್ಟು ನಿರ್ಣಯವಾದವು ಉಳಿದವು ಹಾಗೆಯೇ ನಿಂತವು ಸರ್ಕಾರದ ಕಾರ್ಯಕ್ರಮಗಳೆಲ್ಲವೂ ಸಾಂಗವಾಗಿ ನೆರವೇರಿದವು

ಮುಖ್ಯವಾಗಿ ಚರ್ಚಿಸಲ್ಪಟ್ಟ ವಿಷಯಗಳಲ್ಲೈಕಿ ಮತಾಂತರ ಹೊಂದಿದವರಿಗೆ ದಾಯಭಾಗ ಕೊಡಿಸುವದು ಮತ್ತು ಗ್ರಾಮನೌಕರರ ಹಕ್ಕುಗಳನ್ನು ತೆಗೆದು ಹಾಕುವ ಮಸೂದೆಗಳು ಮೊದಲನೆಯದನ್ನು ಸಭೆಯವರು ಬಹುಮತದಿಂದ ತಿರಸ್ಕರಿಸಿದರು. ಆದರೂ ಸರ್ಕಾರದವರು ಮಾತ್ರ ಅದರಲ್ಲಿ ತಮ್ಮ ವಿಶ್ವಾಸವನ್ನು ಇಟ್ಟುಕೊಂಡಿರುವರು

"ಈ ಮಸೂದಾ ಕಾನೂನಿನ ಚರ್ಚೆಯಲ್ಲಿ ಸೂಚಿತವಾದ ಅಂಶಗಳು ಮನಸ್ಸಿನ ಸ್ಥಿರ ನಿಶ್ಚಯದಿಂದಲೂ, ತ್ರಿಕರಣ ಶುದ್ಧಿಯಿಂದ ಕೂಡಿದ ಶ್ರದ್ಧೆಯಿಂದಲೂ ಹೊರಟವುಗಳೆಂಬುದೇನೋ ನಿಜ ಈ ಭಾಗದಲ್ಲಿ ಕೊಂಚವೂ ಸಂದೇಹವಿಲ್ಲ"— ಎಂದು ಅಧ್ಯಕ್ಷರು ಮುಕ್ತಾಯ ಭಾಷಣದಲ್ಲಿ ತಿಳಿಸಿರುತ್ತಾರೆ ಆದ್ದರಿಂದ ಪ್ರಜಾಭಿಪ್ರಾಯಕ್ಕೆ ವಿರುದ್ಧವಾದ ಇಂತಹ ಕಾನೂನುಗಳನ್ನು ಅವರು ಜಾರಿಗೆ ತರುವದಿಲ್ಲವೆಂದು ನಾವು ನಂಬುತ್ತೇವೆ.

ಗ್ರಾಮನೌಕರರಿಗೆ ಸಂಬಂಧಪಟ್ಟ ಮಸೂದೆಯನ್ನು ಸಭೆಯು ಬಹುಮತದಿಂದ ಅಂಗೀಕರಿಸಿತು. ಸರ್ಕಾರದವರು ತಾವು ಹಿಂದೆಯೇ ಈ ವಿಷಯದಲ್ಲಿ ನಿರ್ಧರಿಸಿ ವಾಗ್ದಾನಮಾಡಿದ್ದ ಪ್ರಕಾರ ಈ ಮಸೂದೆಯನ್ನು ತಂದಿರುವುದಾಗಿ ಹೇಳಿದರು ಆದರೂ ಜನಸಾಮಾನ್ಯದಲ್ಲಿ ಈ ಮಸೂದೆಯು ಎಷ್ಟುಮಟ್ಟಿನ ಸಮಾಧಾನವನ್ನುಂಟು ಮಾಡುವುದೆಂಬ ಸಂದೇಹಾಸ್ಪದವಾದ ವಿಷಯವೇ ಆಗಿದೆ

ಕಂದಾಯದ ಹಣಗಳನ್ನು ವಸೂಲು ಮಾಡುವುದರಲ್ಲಿ ಏರ್ಪಡಿಸಿರುವ ನಿಯಮಗಳನ್ನು ಇನ್ನೂ ಸಡಿಲಿಸು ಮಾಡಲು ಆಗುವುದಿಲ್ಲವೆಂದು ಅಧ್ಯಕ್ಷರು ತಿಳಿಸಿರುತ್ತಾರೆ ಆರ್ಥಿಕ ಮುಗ್ಗಟ್ಟಿನ ಮೊಬ್ಬು ನಿವಾರಣೆಯಾಗುತ್ತಿದೆಯೆಂದು ಹೇಳಿದರು ಈ ವಿಷಯಗಳಲ್ಲಿ ಭಿನ್ನಾಭಿಪ್ರಾಯವು ಜರುಗುವುದು

ಒಟ್ಟಿನಲ್ಲಿ ದಸರಾದ ಅಧಿವೇಶನದಿಂದ ಪ್ರಜೆಗಳಿಗೆ ವಿಶೇಷ ಉಪಯುಕ್ತವಾದ ಶಿ ಮಾನಗಳೇನೂ ಆಗಿರುವುದಿಲ್ಲ

ಧರ್ಮಶಾಸ್ತ್ರಗಳಲ್ಲಿ ಅಭಿಮಾನ !

ಕಳೆದ ಪ್ರಜಾಪ್ರತಿನಿಧಿ ಸಭೆಯಲ್ಲಿ ಧರ್ಮಶಾಸ್ತ್ರಗಳ ಅಭಿಮಾನವು ತುಂಬಿತುಳುಕುತ್ತಿತ್ತು ಹಿಂದೂ ಧರ್ಮಕ್ಕೆ ಇನ್ನೊ ಇಷ್ಟೊಂದು ಜನ ಹಿತೈಷಿಗಳು ಇದ್ದಾರಯೇ ' ಎಂಬ ಆಶ್ಚರ್ಯವನ್ನುಂಟುಮಾಡುತ್ತಿತ್ತು ಮತಾಂತರವನ್ನು ಹೊಂದಿದವರಿಗೆ ದಾಯಭಾಗ ಕೊಡಿಸುವ ಮಸೂದೆಯನ್ನು ಅನೇಕರು ಪ್ರತಿಭಟಿಸಿದರಷ್ಟೆ ಎಲ್ಲರ ಬಾಯಲ್ಲೂ ಧರ್ಮ ಎಲ್ಲರೂ ಶಾಸ್ತ್ರದ ಹೆಸರನ್ನು ಹೇಳುವವರೇ ಧರ್ಮಶಾಸ್ತ್ರಗಳ ಗಂಧವನ್ನು ಕೂಡ ನೋಡದಿದ್ದವರೂ ಧರ್ಮಕ್ಕಾಗಿ ಕಾದಾಡಿದರು. ಭಲಾ, ಹಿಂದೂಧರ್ಮದಲ್ಲಿ ಇನ್ನೂ ಎಷ್ಟು ಸತ್ವವಿದೆ !

ನಂಜನಗೂಡಿನಲ್ಲಿ ಹಗಲು ದರೋಡೆಯೆ ?

(ನಮ್ಮ ವಿಶೇಷ ಬಾತ್ಮೀದಾರರಿಂದ)

ಕಳೆದ ಶುಕ್ರವಾರ ಬೆಳಗ್ಗೆ ಆರು ಗಂಟೆಯಲ್ಲಿ ನಂಜನಗೂಡಿನ ಪಬ್ಲಿಕ್ ಲೈಬ್ರರಿ ಪಕ್ಕದ ಓಣಿಯಲ್ಲಿ ಒಂದು ದರೋಡೆ ನಡೆಯಿತೆಂದು ತಿಳಿದುಬಂದಿದೆ ಎಂದಿನಂತೆ ಹೊಳೆಯಲ್ಲಿ ಸ್ನಾನಕ್ಕಾಗಿ ಒಬ್ಬ ತರುಣಿಯೂ ಅವರ ತಾಯಿಯೂ ಹೋಗುತ್ತಿದ್ದರು ತರುಣಿಯು ಕತ್ತಿನಲ್ಲಿ ಚಿನ್ನದ ಸರಗಳನ್ನು ಧರಿಸಿದ್ದಳು ಹಿಂದಿನಿಂದ ಒಬ್ಬ ಮನುಷ್ಯನು ಒಂದು ಕತ್ತಿಗೆ ಕೈ ಹಾಕಿ ಚಿನ್ನದ ಸರಗಳನ್ನು ಬಲಾತ್ಕಾರದಿಂದ ಕಿತ್ತು ತೆಗೆದುಕೊಂಡು ಓಡಿದನು ವಿಚಾರಿಸುವಲ್ಲಿ ಅತನು ಒಬ್ಬ ಮಹಮ್ಮದೀಯನೆಂದು ಗೊತ್ತಾಗಿದೆ ಸ್ವಲ್ಪ ಹೊತ್ತಾದನಂತರ ಸತ್ಯಾಂಶ ತಿಳಿದವರು ಒಂದು ಕಡೆ ಅಸಾಮಿಯನ್ನು ಹಿಡಿದರು ಅವನು ಪರಾರಿಯಾಗಿದ್ದನು ಪೋಲೀಸಿನವರಲ್ಲಿ ಫಿರ್ಯಾದು ಕೊಡಲ್ಪಟ್ಟಿದೆ ಪತ್ತೆ ತನಿಖೆ ನಡೆಯುತ್ತಿದೆ ಸುಮಾರು ... ರೂಪಾಯಿನ ಒಡವೆಗಳು ಹೋಗಿರುವುದಾಗಿ ತಿಳಿಯಬರುತ್ತದೆ

ಶ್ರೀಮನ್ಮಹಾರಾಜರವರಿಂದ ಸನ್ಮಾನ.

ಶ್ರೀಮನ್ಮಹಾರಾಜರವರು ಈ ಕೆಳಗೆ ಕಂಡ ಮಹಾಶಯರು ಕೆಲವರು ದೇಶದ ಏಳಿಗೆಗೆ ಸಹಾಯಭೂತರಾಗಿ ಜನೋಪಕಾರ ಕಾರ್ಯಗಳನ್ನು ಮಾಡಿರುವುದರಿಂದ ತಮ್ಮ ಅನುಗ್ರಹಕ್ಕೆ ಪಾತ್ರರಾಗಿರುತ್ತಾರೆಂಬ ಸಂಗತಿಯನ್ನು ನವರಾತ್ರಿ ದರ್ಬಾರಿನಲ್ಲಿ ಅಪ್ಪಣೆ ದಯಪಾಲಿಸಿರುವದನ್ನು ಈ ಮೂಲಕ ಪ್ರಕಟಿಸಿರುತ್ತದೆ —

ಶ್ರೀಮಾನ್ ಶ್ಯಾಂಪುರ್ ಸಾಹೇಬ್‌ರವರು, ಬೆಂಗಳೂರು.

ಇವರು ದೊಡ್ಡಬಳ್ಳಾಪುರದಲ್ಲಿ ಸ್ತ್ರೀಯರ ವಸತಿಯನ್ನು ಕಲ್ಪಿಸುವ ಏರ್ಪಾಡಿನ ಸಂಬಂಧದಲ್ಲಿ ೩,೦೦೦ ರೂಪಾಯಿಗಳನ್ನು ಕೊಟ್ಟಿದ್ದಾರೆ ಅಲ್ಲದೆ, ೨೦,೦೦೦ ರೂಪಾಯಿಗಳನ್ನು ವೆಚ್ಚಮಾಡಿ ಹೆರಿಗೆ ಆಸ್ಪತ್ರೆಯನ್ನು ಕಟ್ಟಿಸಿಕೊಟ್ಟಿದ್ದಾರೆ

ಶ್ರೀಮಾನ್ ಡಿ ವೆಂಕಟಶೆಟ್ಟಿಯವರು, ಹೊಸಹೊಳಲು.

ಇವರು ೧೦,೦೦೦ ರೂಪಾಯಿಗಳನ್ನು ವೆಚ್ಚಮಾಡಿ ಹೊಸಹೊಳಲು ಗ್ರಾಮದಲ್ಲಿ ಪಾಠಶಾಲೆಯ ಕಟ್ಟಡವನ್ನು ಕಟ್ಟಿಸಿಕೊಟ್ಟಿದ್ದಾರೆ ಕಟ್ಟಡವು ಸುಸ್ಥಿತಿಯಲ್ಲಿರುವಂತೆ ಕಾಪಾಡಲು ೫,೦೦೦ ರೂಪಾಯಿಗಳನ್ನು ಕೊಟ್ಟಿದ್ದಾರೆ ಹೊಸಹೊಳಲು ಗ್ರಾಮದಲ್ಲಿ ಶ್ರೀ ಲಕ್ಷ್ಮೀನಾರಾಯಣಸ್ವಾಮಿ ದೇವಾಲಯದ ಪ್ರಾಕಾರದ ಗೋಡೆಯನ್ನು ಕಟ್ಟಿಸುವ ವೆಚ್ಚಕ್ಕಾಗಿ ೩,೫೦೦ ರೂಪಾಯಿಗಳನ್ನು ದಾನಮಾಡಿದ್ದಾರೆ ಹೊಸಹೊಳಲಿಗೂ ಕೃಷ್ಣರಾಜಪೇಟೆಗೂ ಮಧ್ಯದಲ್ಲಿ ಧರ್ಮಛತ್ರವನ್ನು ಕಟ್ಟುವುದಕ್ಕಾಗಿ ೬,೦೦೦ ರೂಪಾಯಿಗಳನ್ನು ಕೊಟ್ಟು ಸಹಾಯಮಾಡಿದ್ದಾರೆ

ಶ್ರೀಮಾನ್ ಕೆ ಎಂ. ಗುರುಸ್ವಾಮಿಯವರು, ಎಕ್ಸೈಜ್ ಕಂಟ್ರಾಕ್ಟರ್, ಬೆಂಗಳೂರು.

ಇವರು ಮೈಸೂರು ನಗರದಲ್ಲಿರುವ ಕೃಷ್ಣರಾಜೇಂದ್ರ ಆಸ್ಪತ್ರೆಯಲ್ಲಿ ಚಿಕಿತ್ಸೆಗಾಗಿ "ರೇಡಿಯಂ" ಕೊಂಡುಕೊಳ್ಳಲು ೨೦ ೦೦೦ ರೂಪಾಯಿಗಳನ್ನು ಧರ್ಮಾರ್ಥವಾಗಿ ಕೊಟ್ಟಿದ್ದಾರೆ

ಶ್ರೀಮಾನ್ ಬಿಂಡಿಗನವಲೆ ಗರುಡಾಚಾರ್ಯರು ಅಡ್ವೊಕೇಟ್, ಶಿವಮೊಗ್ಗ

ಇವರು ಶಿವಮೊಗ್ಗೆಯ ಪಶುವೈದ್ಯಶಾಲೆಗಾಗಿ ೬,೦೦೦ ರೂಪಾಯಿಗಳನ್ನು ಕೊಟ್ಟಿದ್ದಾರೆ ವಿದ್ಯಾ ಸಂಸ್ಥೆಗಳು, ಮುಜರಾಯಿ ಸಂಸ್ಥೆಗಳು, ಮುಂತಾದುವುಗಳಲ್ಲಿ ಆಸಕ್ತಿಯನ್ನು ವಹಿಸಿ, ಅವುಗಳನ್ನು ಉತ್ತಮಪಡಿಸಲು ಶ್ರಮಿಸುತ್ತಿದ್ದಾರೆ

ಶ್ರೀಮಾನ್ ತಿಮ್ಮಯ್ಯಾಚಾರಿಯವರು ಮೈಸೂರು.

ಇವರು ೭೩,೦೦೦ ರೂಪಾಯಿಗಳನ್ನು ವೆಚ್ಚಮಾಡಿ ಒಂದು ಛತ್ರವನ್ನು ಕಟ್ಟಿಸಿದ್ದಾರೆ ಬಡ ಮಕ್ಕಳಿಗೆ ಉಚಿತವಾಗಿ ದಾನವನ್ನು ಕೊಡುವ ಏರ್ಪಾಡಿಗಾಗಿ ೫,೦೦೦ ರೂಪಾಯಿಗಳನ್ನೂ, ಅನಾಥರ ಪೋಷಣೆಗಾಗಿ ೨,೦೦೦ ರೂಪಾಯಿಗಳನ್ನೂ ಕೊಟ್ಟಿದ್ದಾರೆ

ಶ್ರೀಮಾನ್ ಅಂಗತಟ್ಟಿ ನಂಜುಂಡಪ್ಪನವರು, ವಡಿಗೇನಹಳ್ಳಿ.

ಇವರು ನಾನಾ ಧರ್ಮಕಾರ್ಯಗಳಿಗಾಗಿ ಸುಮಾರು ೧೨,೦೦೦ ರೂಪಾಯಿಗಳವರೆಗೂ ಕೊಟ್ಟು ಸಹಾಯಮಾಡಿದ್ದಾರೆ.

ಶ್ರೀಮಾನ್ ಹಾಜಿ ಯೂಸುಫ್ ಸೇಟ್‌ರವರು, ಬೆಂಗಳೂರು,

ಇವರು ಬೆಂಗಳೂರು ವಾಣೀವಿಲಾಸ ಆಸ್ಪತ್ರೆಯದ ಘೋಷಾ ಸ್ತ್ರೀಯರಿಗಾಗಿ ವಾರ್ಡನ್ನು ಕಟ್ಟುವದಕ್ಕಾಗಿ ೬,೦೦೦ ರೂಪಾಯಿಗಳನ್ನು ಕೊಟ್ಟಿದ್ದಾರೆ.

ಶ್ರೀಮಾನ್ ಕಾಳೇಗೌಡರು, ಕಾಂತರಾಜಪುರ

ಇವರು ಕಾಂತರಾಜಪುರದ ಬಾಲಕರ ಪಾಠಶಾಲೆಯ ಕಟ್ಟಡಕ್ಕಾಗಿ ೩,೫೦೦ ರೂಪಾಯಿಗಳನ್ನು ಕೊಟ್ಟಿದ್ದಾರೆ. ಶ್ರೀ ನಾರಾಯಣಸ್ವಾಮಿ ದೇವಾಲಯಕ್ಕಾಗಿ ೧,೦೦೦ ರೂಪಾಯಿಗಳನ್ನೂ ಇತರ ಧರ್ಮಕಾರ್ಯಗಳಿಗಾಗಿ ಸುಮಾರು ೪,೦೦೦ ರೂಪಾಯಿಗಳನ್ನೂ ವೆಚ್ಚಮಾಡಿದ್ದಾರೆ.

ಶ್ರೀಮಾನ್ ಪೊನ್ನಾ ಸಿ ವೆಂಕಟೇಶಯ್ಯನವರು, ಕಿಕ್ಕೇರಿ.

ಇವರು ೧೦,೯೦೦ ರೂಪಾಯಿಗಳ ವೆಚ್ಚದಲ್ಲಿ ಕೋಲಾರದ ಹೊಸ ಆಸ್ಪತ್ರೆಯ ಎರಡು ವಾರ್ಡುಗಳನ್ನು ಕಟ್ಟಿಸುತ್ತಿದ್ದಾರೆ

ಶ್ರೀಮಾನ್ ನಾಮಾ ರಾಮಸ್ವಾಮಿ ಶೆಟ್ಟಿಯವರು, ಚಿಂತಾಮಣಿ.

ಇವರು ಚಿಂತಾಮಣಿ ಆಸ್ಪತ್ರೆಯಲ್ಲಿ ಚಿಕಿತ್ಸೆಪಡೆಯುವವರಿಗಾಗಿ ೪,೫೦೦ ರೂಪಾಯಿಗಳ ವೆಚ್ಚದ ಒಂದು ವಾರ್ಡನ್ನು ಕಟ್ಟಿಸುತ್ತಿದ್ದಾರೆ ೪,೦೦೦ ರೂಪಾಯಿಗಳನ್ನು ವೆಚ್ಚಮಾಡಿ ಕಟ್ಟಿಸಿರುವ ಛತ್ರದಲ್ಲಿ ಹೈಸ್ಕೂಲಿನ ೧೨ ಮಂದಿ ಬಡ ವಿದ್ಯಾರ್ಥಿಗಳಿಗೆ ಸ್ಥಳವಸತಿಯನ್ನು ಕಲ್ಪಿಸಿಕೊಟ್ಟಿದ್ದಾರೆ ಅಲ್ಲದೆ ೧,೦೦೦ ರೂಪಾಯಿಗಳ ವೆಚ್ಚದಲ್ಲಿ ಬಡ ವಿದ್ಯಾರ್ಥಿಗಳಿಗೆ ಅನ್ನದಾನ ಮಾಡುತ್ತಿದ್ದಾರೆ

ಶ್ರೀಮಾನ್ ಮುರಿಗಪ್ಪಯ್ಯನವರು, ದಾವಣಗೆರೆ.

ಇವರು ಕ್ಷಯರೋಗ ಚಿಕಿತ್ಸೆಯ ನಿಧಿಗಾಗಿ ೧೨,೦೦೦ ರೂಪಾಯಿಗಳನ್ನು ಕೊಟ್ಟು ಸಹಾಯಮಾಡಿದ್ದಾರೆ.

ಶ್ರೀಮಾನ್ ದೇವಲ್‌ಕೊಪ್ಪದ ಸುಬ್ಬಯ್ಯಗೌಡರು, ನರಸಿಂಹರಾಜಪುರ ಸಬ್ ತಾಲ್ಲೂಕು

ಇವರು ೧,೬೫೦ ರೂಪಾಯಿಗಳನ್ನು ವೆಚ್ಚಮಾಡಿ ನರಸಿಂಹರಾಜಪುರದಲ್ಲಿ ಹೆರಿಗೆ ವಾರ್ಡನ್ನು ಕಟ್ಟಿಸಿಕೊಟ್ಟಿದ್ದಾರೆ. ಅಲ್ಲದೆ ೬,೦೦೦ ರೂಪಾಯಿಗಳನ್ನು ವೆಚ್ಚಮಾಡಿ ಒಕ್ಕಲಿಗರ ವಿದ್ಯಾರ್ಥಿನಿಲಯವನ್ನು ಕಟ್ಟಿಸಿ ಸಹಾಯಮಾಡಿದ್ದಾರೆ

ತಗಡೂರಿನ ಆರನೇ ವಾರ್ಷಿಕೋತ್ಸವ.

(ನಮ್ಮ ವಿಶೇಷ ಪ್ರತಿನಿಧಿಗಳಿಂದ)

ತ್ತಿಗಿನ ತಗಡೂರಿನ ಸತ್ಯಾಗ್ರಹ ಆಶ್ರಮದ ವಾರ್ಷಿಕೋತ್ಸವವು ನಡೆಯಿತು. ... ಕಾಲ 9—30 ರಿಂದ ... ಗಳು ಪ್ರಾರಂಭಿಸಲ್ಪಟ್ಟವು. ಮೈಸೂರಿನ ... ನಂಜನಗೂಡಿನಿಂದಲೂ ಪ್ರಮುಖರುಗಳು ತಗಡೂರಿಗೆ ದಯಮಾಡಿಸಿದರು. ... ವಾರ್ಷಿಕೋತ್ಸವ ಸಮಾರಂಭಕ್ಕೆ ದಯಮಾಡಿ ... ಸುಮಾರು 100 ಜನರಿಗೆ ... ಆಶ್ರಮದಲ್ಲಿ ... ರಾಟೆಯ ಪ್ರದರ್ಶನವು ನಡೆಯಿತು. ಅತಿಥಿಗಳಿಗೆಲ್ಲಾ ... ವು ಒಲಿಗ, ತಮಟೆಯೊಂದಿಗೆ ... ನಡೆಯಿತು. ಸ್ವಾಮಿ ... ನಂಜನಗೂಡಿನ ಸುಪ್ರಸಿದ್ಧ ವಕೀಲರಾದ ಶ್ರೀ ಎಸ್. ... ಅವರು ...

ಪ್ರಾರಂಭದಲ್ಲಿ ಶ್ರೀ ತಗಡೂರು ರಾಮಚಂದ್ರರಾಯರು ... ಒಂದಿದ್ದ ಹೆಂಗಸರಿಗೂ, ... ರಾಟೆ ... ವಾರ್ಷಿಕ ವರದಿಯನ್ನು ... ಕಳೆದ 15 ವರುಷಗಳಿಂದಲೂ ... ಕೆಲಸ ಕಾರ್ಯಗಳನ್ನು ... ಮಹಾಜನರ ಮತ್ತು ಸರಕಾರದವರ ... ಸಂತೋಷವನ್ನುಂಟುಮಾಡಿದೆಯೆಂದೂ ಮುಂದೆಯೂ ಮಹಾಜನರ ಸಹಾಯ ... ತಮಗಿರುವದೆಂದೂ ತಿಳಿಸಿದರು. ... ವಾಸುದೇವ ... ಹಾಜರಾಗಿದ್ದರು.

ತಗಡೂರು ರಾಮಚಂದ್ರರಾಯರು ತಮಗೆ ... ಈ ಕಾರ್ಯವನ್ನು ಮಾಡು ... ಕೆಲಸಕ್ಕೆ ... ಯಾವ ... ಇರುವದಿಲ್ಲವೆಂದೂ, ಯಾವ ಮನುಷ್ಯನ ... ಕಷ್ಟಗಳು ... ಮನುಷ್ಯನು ... ಅಧ್ಯಕ್ಷರ ಭಾಷಣವನ್ನು ... ನಂತರ ... ಸಭೆಯು ಮುಕ್ತಾಯವಾಯಿತು.

ಪ್ರಜಾಕೋಟಿಯೆಲ್ಲಿದೆ?

ಗ್ರಾಮ ನೌಕರರ ಮಹಾಸಭೆಯನ್ನು ... ಒಬ್ಬ ಪ್ರತಿನಿಧಿ ... ಪ್ರಜಾಕೋಟಿಯ ... ಕ್ಕಾಗಿ ... ಶ್ರೀನಿವಾಸಯ್ಯಂಗಾರ್ಯರವರು "ಇರುವುದು ... ಪ್ರಜಾಕೋಟಿಯೆಲ್ಲಿದೆಯೆಂತು? ... ಪ್ರಜಾಕೋಟಿ ... ಜನ ... ಗೆ ತೋರುವುದಿಲ್ಲ" ಎಂದು ಹೇಳಿದರು.

ಏಳ ಹೆಂಡಿರು; ಇಪ್ಪತ್ತು ಮಕ್ಕಳು

... ಗ್ರಾಮ ನೌಕರ ... ಈ ... ಕ್ಷೇತ್ರದಲ್ಲಿ ... ಹೆಂಡತಿಯರು ... ಮಕ್ಕಳು ...

"ಸ್ತ್ರೀಯರಿಗೆ ಆಧುನಿಕ ವಿದ್ಯೆ ಬೇಡ"

ಸ್ತ್ರೀಯರಿಗೆ ಆಧುನಿಕ ವಿದ್ಯಾಭ್ಯಾಸದಿಂದ ಪ್ರಯೋಜನವಿಲ್ಲವೆಂಬ ... ಮೈಸೂರು ಕರ್ನಾಟಕ ಸಂಘದಲ್ಲಿ ... ಶ್ರೀ ... ವೆಂಕಟೇಶಯ್ಯಂಗಾರ್ಯರು ... ಶ್ರೀ ... ಗುಂಡಪ್ಪಗೌಡರೂ, ... ರಾಯರೂ ... ಸ್ತ್ರೀಯರ ... ಆಧುನಿಕ ... ಸಂಸ್ಕೃತಿ ... ಈ ವಿದ್ಯೆಯಿಂದ ... ಹೆಂಗಸರಿಗೆ ... ಎಂದು ಅವರು ಹೇಳಿದರು.

... ಶ್ರೀ ... ವಿರೋಧಿಸಿದರು ... ವಿದ್ಯೆಯಿಂದ ... ಪುರುಷ ... ಸ್ತ್ರೀಯರ ಜ್ಞಾನವನ್ನು ... ಸ್ತ್ರೀಯರು ... ಎಂದು ವಾದಿಸಿದರು. ... ವಿದ್ಯಾಭ್ಯಾಸದಿಂದ ಸ್ತ್ರೀಯರಿಗೆ ಪ್ರಯೋಜನವಿಲ್ಲವೆಂದು ... ತೀರ್ಮಾನವಾಯಿತು.

ಕಾಳಿದಾಸ ... ?

ಪ್ರತಿನಿಧಿ ... ಗ್ರಾಮ ನೌಕರರ ... ವರ್ಷಗಳ ... ವೆಯೆಂದು ... ಕಾಲ ... ಶ್ರೀ ಸಿ. ಎಸ್. ನರಸಿಂಗರಾಯರು ಹೇಳಿದರು ... ಕಾಳಿದಾಸನ ... ಕಾಲ ... ಕಾಳಿದಾಸನೂ ...

ವೈಣಿಕ ಪ್ರವೀಣ ವೆಂಕಟಗಿರಿಯಪ್ಪನವರು.

"ತಿಲೋತ್ತಮೆ" ನಾಟಕ.

(ವಿಮರ್ಶೆ)

ಮೈಸೂರು ಚಾಮುಂಡೇಶ್ವರಿ ನಾಟಕ ಸಭೆಯವರು ... ದಿನ ರಾತ್ರಿ ... ನಾಟಕ ಶಾಲೆಯಲ್ಲಿ 'ತಿಲೋತ್ತಮೆ' ಎಂಬ ನಾಟಕವನ್ನು ಆಡಿದರು. ... ಸ್ತ್ರೀ ಪುರುಷರು ಬಂದಿದ್ದರು. ... ದೃಶ್ಯಗಳು ... ತಿಲೋತ್ತಮೆ ... ನಾಟಕದೊಳಗೆ ... ನಾಟಕವಾಗುತ್ತದೆ. ಅದನ್ನು ... ಮತ್ತು ಅವರ ... ಸಭೆಯ ... ಗೆ ... ಪ್ರೋತ್ಸಾಹ ...

— ಪ್ರೇಕ್ಷಕ

ವಿಶ್ವವಿದ್ಯಾನಿಲಯದ ಪದವೀದಾನ ಸಮಾರಂಭೋತ್ಸವ.

(ನಮ್ಮ ಸ್ವಂತ ಪ್ರತಿನಿಧಿಗಳಿಂದ)

ತಾ॥ 29—10—36 ರಲ್ಲಿ ಮೈಸೂರು ಜಗನ್ಮೋಹನ ಬಂಗಲೆಯಲ್ಲಿ ಪದವೀದಾನ ಸಮಾರಂಭ ಮಹೋತ್ಸವವು ನೆರವೇರಿಸಲ್ಪಟ್ಟಿತು ಸಭಾಂಗಣದಲ್ಲಿ ವಿದ್ಯಾರ್ಥಿಗಳೂ, ಪ್ರೇಕ್ಷಕರೂ ಕಿಕ್ಕಿರಿದು ನೆರೆದಿದ್ದರು ನೂರಾರು ಜನ ಸ್ತ್ರೀಯರೂ ನೆರೆದಿದ್ದರು ಕರ್ಣಾನಂದವನ್ನುಂಟುಮಾಡುವ 'ಆರ್ಕೆಸ್ಟ್ರ' ವಾದ್ಯಗಳು ಮೊಳಗುತ್ತಿರಲು ಘನವನ್ನು ಹೊಂದಿದ ಶ್ರೀಮದ್ ಯುವರಾಜರು ರಾಜ ಮರ್ಯಾದೆಗಳೊಂದಿಗೆ ಸಭಾಮಂಟಪಕ್ಕೆ ದಯಮಾಡಿದರು

ವಿಶ್ವವಿದ್ಯಾನಿಲಯದ ಸ್ಥಾನಪತಿಗಳಾದ ಡಾ॥ ಇ ಪಿ ಮೆಟ್ಕಾಫ್‌ರವರು ವಿಶ್ವವಿದ್ಯಾನಿಲಯದಲ್ಲಿ ಪದವೀಧರರಾದವರಿಂದ ಪ್ರತಿಜ್ಞೆಯನ್ನು ಮಾಡಿಸಿದರು ತರುವಾಯ ತೇರ್ಗಡೆಯಾದವರಿಗೆ ಯೋಗ್ಯತಾಪತ್ರಗಳೂ ಅತ್ಯಂತ ಉತ್ತಮ ತರಗತಿಗಳಲ್ಲಿ ತೇರ್ಗಡೆಯಾದವರಿಗೆ ಬಂಗಾರದ ಮೆಡಲುಗಳೂ ಶ್ರೀಮದ್ಯುವರಾಜರ ಹಸ್ತದಿಂದ ಕೊಡಲ್ಪಟ್ಟವು

ಬಂಗಾರದ ಮೆಡಲುಗಳನ್ನು ಪಡೆದವರು—

M A ಮತ್ತು M Sc ಈ ಎರಡರಲ್ಲೂ 6 ಜನರು ಬಹುಮಾನಗಳನ್ನು ಪಡೆದರು

B A. ಮತ್ತು B Sc ಗಳಲ್ಲಿ 8 ಜನರು ಬಹುಮಾನಗಳನ್ನು ಪಡೆದರು

ಇವರಲ್ಲಿ ಶ್ರೀಮತಿ ಸಿ ಸೇತುಬಾಯಿ ಎಂಬ ವಿದ್ಯಾರ್ಥಿನಿಯರು ಬಂಗಾರದ ಮೆಡಲುಗಳನ್ನು ಪಡೆದರು ಮತ್ತು ಎಂ ವೈದ್ಯಶಂಕರ ಎಂಬ ವಿದ್ಯಾರ್ಥಿಯು 3 ಮೆಡಲುಗಳನ್ನು ಪಡೆದರು

B E. ನಲ್ಲಿ ಎಂ ವಿ ಅಶ್ವತ್ಥನಾರಾಯಣಶೆಟ್ಟರೆಂಬವರು ಎರಡು ಮೆಡಲುಗಳನ್ನು ಪಡೆದರು

M B B. S ನಲ್ಲಿ ಮೂರು ಜನರು ಮೆಡಲುಗಳನ್ನು ಹೊಂದಿದರು

M A 13+1 B T 31+13 B A 101+1,
M Sc 12 B Sc 95
B E 29 M B B S 11
ಒಟ್ಟು 319

ಬಹುಮಾನಗಳ ವಿನಿಯೋಗವಾದನಂತರ ಡಾ॥ ಮೆಟ್ಕಾಫ್‌ರವರು ಪದವೀಧರರಿಗೆ ಉಪದೇಶಮಾಡಿದರು ಡಾ॥ ಮೆಟ್ಕಾಫ್‌ರವರ ಭಾಷಣವು ಸಂಕ್ಷಿಪ್ತವಾಗಿದ್ದಾಗ್ಯೂ ಅವರ ಭಾಷಣದ ಸಲಹೆ ಅಭಿಪ್ರಾಯಗಳಿವು — ಆಂಗ್ಲೇಯ ಭಾಷಾಧ್ಯಯನವು ತನ್ನ ಒಂದು ಶತಮಾನವನ್ನು ಮುಗಿಸಿತು

ಈ ವರುಷ ಎರಡನೆಯ ಶತಮಾನದ [illegible] ಆಂಗ್ಲೇಯ ಭಾಷೆಯಿಂದ ನಮಗೆ ಮಹತ್ತಾದ ಪ್ರಯೋಜನಗಳುಂಟಾಗಿರುತ್ತವೆ ವಿಜ್ಞಾನವು ಮುಂದುವರಿದಿದೆ

ಖಜಾನೆ ನೌಕರರ ವರ್ತನೆ.

ನಂಜನಗೂಡು 28-10-36

ನವರಾತ್ರಿ ಆರಂಭಕ್ಕೆ ಮುಂಚೆ ಗೊತ್ತಾದ ಒಂದು ಶನಿವಾರದ ದಿವಸ ನಂಜನಗೂಡು ತಾಲ್ಲೂಕು ಗ್ರಾಮಾಂತರಗಳ ಸ್ಕೂಲ್ ಮಾಸ್ತರುಗಳು ತಮ್ಮ ಸಂಬಳಗಳನ್ನು ಹೊಂದಲು ತಾಲ್ಲೂಕು ಟ್ರಜರಿಗೆ ಹೋಗಿದ್ದಾಗ ಟ್ರಜರಿ [illegible] ಈ ಬಡಮಾಸ್ತರುಗಳನ್ನು [illegible] ವಾಗಿ ಕೂಗಿಸುವುದು ಮತ್ತು ಛಾನಿಸುತ್ತಾ ಒಂದಷ್ಟಿಷ್ಟಿದೆ ಕೆಲವು ಮಾಸ್ತರುಗಳ [illegible] ನೆಂದನ್ನು ನಿರಾಕರಿಸಿದರೆಂದು ಗುಣಗುಟ್ಟಿಕೊಂಡರು ಇಂಥ ಈ ವರ್ತನೆಯನ್ನು ಕಮ್ಮಿಮಾಡಿ, ಆ ಮಾಸ್ತರುಗಳು ಸರ್ಕಾರಿ ನೌಕರರೆಂದು ಮತ್ತು ತಮ್ಮ ಸಹೋದರರೆಂದು ಟ್ರಜರಿ ಅಧಿಕಾರಿಯವರು ಭಾವಿಸಬೇಕೆಂದು ಪ್ರಾರ್ಥಿಸುತ್ತೇನೆ

ಪುರನಿವಾಸಿ

1857 ರಲ್ಲಿ ಭರತಖಂಡದಲ್ಲಿ ವಿಶ್ವವಿದ್ಯಾನಿಲಯಗಳು ಸ್ಥಾಪಿಸಲ್ಪಟ್ಟವು ಅಂದಿನ ವ್ಯಾಸಂಗಕ್ಕೂ ಇಂದಿನ ವ್ಯಾಸಂಗಕ್ಕೂ ಬಹಳ ಬದಲಾವಣೆಗಳಾಗಿರುತ್ತವೆ

ಭಾಷಣವನ್ನು ಮುಂದುವರಿಸುತ್ತಾ ಹೇಳಿದುದು — ನಮ್ಮ ಮೈಸೂರು ವಿಶ್ವವಿದ್ಯಾನಿಲಯವು ಪ್ರಖ್ಯಾತರಾದ ವಿಜ್ಞಾನ ಶಾಸ್ತ್ರಜ್ಞರನ್ನೂ, ನ್ಯಾಯವಾದಿಗಳನ್ನೂ, ವೈದ್ಯರನ್ನೂ, ಎಂಜನೀಯರುಗಳನ್ನೂ, ರಾಜಕಾರಣ ಪಟುಗಳನ್ನೂ ತಯಾರಿಸಿರುವುದು ಇದು ಯೌವನಾವಸ್ಥೆಯಲ್ಲಿದೆಯಾದರೂ ಭರತಖಂಡದ ವಿಶ್ವವಿದ್ಯಾನಿಲಯಗಳಲ್ಲಿ ಇದು ಒಂದು ಮಾನ್ಯಸ್ಥಾನವನ್ನು ಪಡೆದಿರುತ್ತದೆ

ನಮ್ಮ ವಿದ್ಯಾಲಯದ ಅಂತಿಮ ಧ್ಯೇಯವು ಧರ್ಮ ಪರಿಪೂರ್ಣತೆಯನ್ನು ಹೊಂದುವುದಾಗಿದೆ 1910 ರಿಂದ 1936 ರ ವರೆಗೆ ಗಮನಿಸಿ ನೋಡಿದರೆ ವಿಶ್ವವಿದ್ಯಾನಿಲಯದಲ್ಲಿ ತೇರ್ಗಡೆ ಹೊಂದಿದವರ ಸಂಖ್ಯೆಯು ಅಭಿವೃದ್ಧಿಯಲ್ಲಿದೆ ನಮ್ಮ ಉಪಾಧ್ಯಾಯರ ಸಂಘದಿಂದ ಬಹಳವಾದ ಪ್ರಯೋಜನವಾಗಿರುತ್ತದೆ ಕನ್ನಡ ಸಂಘದಿಂದಲೂ ಪ್ರಯೋಜನವಾಗಿದೆ ಕನ್ನಡ ನಿಘಂಟನ್ನು ನಾವು ತಯಾರಿಸಲು ಪ್ರಯತ್ನಪಡುತ್ತೇವೆ ಗ್ರಾಮಾಂತರಗಳ ಬಡಜನರಿಗೆ ನಮ್ಮಿಂದ ಸಹಾಯವೂ ಸದಾ [illegible] ಸಾಧ್ಯವಾದಷ್ಟು ಮಾಡಬೇಕಾಗಿರುತ್ತೇವೆ ನೀವು ಪದವಿಗಳನ್ನು ಪಡೆದ ಮಾತ್ರಕ್ಕೆ ನೀವು ವಿದ್ಯಾವಂತರಾದಂತೆ ಆಗಲಿಲ್ಲ [illegible] ನಿಮ್ಮಲ್ಲಿ [illegible] ಇರಲಿ ನಿಮ್ಮ ಸ್ಥಿತಿಯನ್ನು ಉತ್ತಮಪಡಿಸಿಕೊಳ್ಳಲು [illegible] ನೀವು [illegible] ವಿಜಯಪತ್ರದಾಸರಾಗಿ ನೀವು ಪಡೆದ ಪದವಿಗಳು ಸಾರ್ಥಕವನ್ನು ಹೊಂದುವಂತೆ ನನ್ನ ಉಪದೇಶವಿದೆ ನಿಮ್ಮ ಕರ್ಮಕ್ಷೇತ್ರದ ಕಡೆ ನಿಮ್ಮ ಮನಸ್ಸಿರಲಿ

ತರುವಾಯ ಶ್ರೀಮದ್ಯುವರಾಜರು ಸಭೆಯನ್ನು ವಿಸರ್ಜನೆ ಮಾಡಿದರು

ಮತಾಂತರದ ಮಸೂದೆಗೆ ಮಂಗಳಾರತಿ!

ನಮ್ಮ ಪ್ರಜಾ ಪ್ರತಿನಿಧಿಸಭೆಯ ಕಾರ್ಯಕಲಾಪಗಳಲ್ಲಿ ಒಂದೊಂದು ಸಾರಿಯೂ ಒಂದೊಂದು ವಿಶೇಷವಿದ್ದೇ ಇರುತ್ತದೆ

ಈಸಾರಿ ನಡೆದ ಅಸೆಂಬ್ಲಿಯಲ್ಲಿ ಒಂದು ವಿಶೇಷವೇನೆಂದರೆ —

ಮತಾಂತರ ಹೊಂದಿದವನಿಗೆ ಅವನ ಪಿತ್ರಾರ್ಜಿತವಾದ ಆಸ್ತಿಯು ದೊರೆಯಬೇಕೆಂಬ ವಿಚಾರದಲ್ಲಿ ಸರಕಾರದವರು ಒಂದು ಶಾಸನವನ್ನು ಮಾಡಬೇಕೆಂದು ಒಂದು ಮಸೂದೆಯನ್ನು ತಂದಿದ್ದರು ಈ ಮಸೂದೆಯು ಸದಸ್ಯರಿಂದ ತೀವ್ರವಾಗಿ ವಿಮರ್ಶಿಸಲ್ಪಟ್ಟು ತಿರಸ್ಕರಿಸಲ್ಪಟ್ಟಿತು ಸದಸ್ಯರಾದ ಮಹಾಶಯರ ಸಾರಾಂಶವಿದು:—

ಈ ಮತಾಂತರ ಹೊಂದಿದವರಿಗೆ ಆಸ್ತಿಯು ದೊರೆಯಬೇಕೆಂಬ ಮಸೂದೆಯನ್ನು ಜಾರಿಗೆ ತರುವುದರಿಂದ ಹಿಂದೂ ಸಮಾಜದಲ್ಲಿ ಛಿನ್ನಭಿನ್ನಗಳಾಗುವುವು ಮತಾಂತರಹೊಂದುವವರಿಗೆ ಉತ್ತೇಜನಕೊಟ್ಟಂತಾಗುವುದು ಕಳ್ಳನಿಗೆ ಕನ್ನಗತ್ತರಿ ಕೊಟ್ಟಂತಾಗುವುದು ಧರ್ಮವನ್ನು ಬಿಡುವವನಿಗೆ ಪಿತೃ ಶ್ರಾದ್ಧಮಾಡುವ ಅಧಿಕಾರವೇ ತಪ್ಪಿಹೋಗುವುದು ಕರ್ಮಾಧಿಕಾರಿಯಲ್ಲದವನಿಗೆ ಪಿತೃವಿನ ಆಸ್ತಿಯು ಸೇರುವುದೆಂತು?

ಮ॥ ರಾ॥ ಗಳಾದ ಎಚ್ ಬಿ ಗುಂಡಪ್ಪಗೌಡರು, ವಿ ವೆಂಕಟಪ್ಪನವರು, ಬೇಲೂರು ಶ್ರೀನಿವಾಸ ಐಯ್ಯಂಗಾರರವರು, ಚನ್ನಮಲ್ಲಪ್ಪನವರು, ಪಿ ಎಸ್ ಕೃಷ್ಣಸ್ವಾಮಿಯವರು, ಬಿ ಎಲ್ ಸ್ವಾಮಿಯಣ್ಣನವರು, ಟಿ ಮರಿಯಪ್ಪನವರು, ಚೆಲುವಯ್ಯನವರು, ಟಿ. ರಾಮಯ್ಯನವರು, ಕೆ ಟಿ ಭಾಷ್ಯಂ ಐಯ್ಯಂಗಾರರವರು, ಶ್ರೀಮತಿ ಕನಕಲಕ್ಷ್ಮಮ್ಮ ರಾಮಪ್ಪನವರೂ ಮಸೂದೆಗೆ ವಿರೋಧಿಸಿ ಮಾತಾಡಿದರು.

ವಿಶೇಷ ಕ್ರೈಸ್ತರಾದ ಶ್ರೀ॥ ಜೆ ಆರ್ ಐಸಾಕ್‌ರವರೂ, ಸಿಲ್ವೆಸ್ಟರ್ ಪಯಸ್‌ರವರೂ, ಖಾನ್ ಬಹದ್ದೂರ್ [illegible] ರವರೂ ಎಂ ಎ ಗೋಪಾಲಸ್ವಾಮಿ ಐಯ್ಯಂಗಾರ್‌ರವರೂ ಮಸೂದೆಯನ್ನು ಸಮರ್ಥಿಸಿ ಮಾತಾಡಿದರು

ಒಟ್ಟಿಗೆ ಹಾಕಲಾಗಿ ಮಸೂದೆಯನ್ನು ಅನುಮೋದಿಸಿದವರು 4 ಜನರು ಮಾತ್ರ ಅವರು ಯಾರೆಂದರೆ ಮ॥ ಸಿಲ್ವೆಸ್ಟರ್ ಪಯಸ್, ಜೆ ಆರ್ ಐಸಾಕ್, ಶ್ರೀಪತಿ ಡಿಸೋಜ ಮತ್ತು ಖಾನ್ ಬಹದ್ದೂರ್ [illegible] ಇವರುಗಳು ಇದ್ದರು ಉಳಿದ ಎಲ್ಲಾ ಸದಸ್ಯರೂ ಮಸೂದೆಯನ್ನು ವಿರೋಧಿಸಿದರು

ಲಾರಿ ಡ್ರೈವರನ ಕೊಲೆ.

ಭೋಪಾಲ್ ನಗರದಲ್ಲಿ ಒಬ್ಬ ಲಾರಿ ಡ್ರೈವರನು ತನ್ನ ಲಾರಿಯನ್ನು ಅಕಸ್ಮಾತ್ ಒಬ್ಬ ಮಹಮ್ಮದೀಯ ಹುಡುಗಿಯ ಮೇಲೆ ಬಿಟ್ಟನು ಇದರ ಫಲಿತಾಂಶವಾಗಿ ಅಲ್ಲಿನ ಮಹಮ್ಮದೀಯರು ಕೆಲವರು ಅವನನ್ನು ನಿಷ್ಕರುಣೆಯಿಂದ ಕೊಂದರು

ಯಳಂದೂರು ಜಹಗೀರ್ ವರ್ತಮಾನ

(ನಮ್ಮ ಸ್ವಂತ ಸುದ್ದಿಗಾರರಿಂದ)

ಈ ತಾಲ್ಲೂಕಿನಲ್ಲಿ ಮಳೆ ಆಗುತ್ತಲಿದೆ ಕೆರೆಗಳಿಗೆ ನೀರು ಸೇರುತ್ತಲಿದೆ. ಸುವರ್ಣಾವತಿ ನದಿಯಲ್ಲಿ ಆಗಾಗ್ಗೆ ನೀರು ಬರುತ್ತಲಿದೆ ರಾಗಿ, ಅವರೆ, ಹಲಸಂದೆ, [illegible] ಹಿಪ್ಪನೇರಳೆ ವಗೈರೆ ಫಸಲುಗಳು ಚೆನ್ನಾಗಿರುತ್ತೆ ಮುಂದಿನ ಮಳೆಗಳು ಚೆನ್ನಾಗಿ ನಡಿಸಿದರೆ ಪೂರ್ಣವಾಗಿ ಎಲ್ಲಾ ಕೆರೆಗಳು ತುಂಬಲು ಅನುಕೂಲವಾಗುತ್ತೆ

ಇಲ್ಲಿಗೆ ಹೊಸದಾಗಿ ಬಂದಿರತಕ್ಕ ಡಾ॥ ರಾ॥ ಲಕ್ಷ್ಮಣರಾಯರು ಆಸ್ಪತ್ರೆಗೆ ಬಂದ ಖಾಯಿಲೆ ಜನಗಳನ್ನು ಆದರಪೂರ್ವಕವಾಗಿ ನೋಡಿ ಔಷಧಿ ಕೊಡುವುದಲ್ಲದೆ ಖಾಯಿಲೆ ಜನಗಳ ಮನೆಗಳಿಗೂ ಹೋಗಿ ಚಿಕಿತ್ಸೆಗಳನ್ನು ನಡಿಸುವದು ಪ್ರಶಂಸನೀಯವಾಗಿದೆ ಇಲ್ಲಿಗೆ ಬಂದಿರತಕ್ಕ ಮಿಡ್ ವೈಫ್ ಸಹಾ ಮನೆಗಳಿಗೆ ಪ್ರಸವ ಕೇಸ್‌ಗಳಿಗೆ ಗಮನಕೊಟ್ಟು ಜನಗಳಿಗೆ ಅನುಕೂಲವಾಗಿ ಚಿಕಿತ್ಸೆ ನಡಿಸುತ್ತಾರೆ

ಈ ಊರಿನಲ್ಲಿ ಕನ್ನಡ ಭಾಷಾ ಪ್ರಚಾರ ಕೆಲಸಕ್ಕಾಗಿ ಸ್ಥಳೀಯರು ತುಂಬಾ [illegible] ವರ್ಷದಿಂದ ಕೆಲಸ ಕಾರ್ಯಗಳು ನಡೆಸಲು ಉತ್ತೇಜನದ ವಿಷಯದಲ್ಲೂ [illegible] ಕವಿಗಳಾದ ಷಡಕ್ಷರಿ ಸ್ವಾಮಿಗಳು [illegible] ಯಳಂದೂರಲ್ಲಿ ಅಭಿಮಾನಶಾಲಿಗಳಾಗಿ [illegible] ಉತ್ತಮವಾದ ಕನ್ನಡ ಭಾಷೆಯ ಗ್ರಂಥಗಳನ್ನು ಪ್ರಚುರಪಡಿಸಿ ಇಲ್ಲಿ ವಿದ್ಯಾರ್ಥಿಗಳ ವಿಷಯವೇ ಪ್ರೋತ್ಸಾಹದಕ್ಕೆ [illegible] ಕೆಲವು ಅಭಿಮಾನಿಗಳು ಒಂದು [illegible] ಟಂಗು ನಡೆಸಿದರು

ಹೆಂಡತಿಯನ್ನೇ ಕೊಲ್ಲಲು ಪ್ರಯತ್ನ

ಕಾನ್ಪುರದಲ್ಲಿ ಹೃದಯವಿದ್ರಾವಕವಾದ ಪ್ರಸಂಗ ನಡೆದಿದೆ

ಸತ್ಯನಾರಾಯಣ ಎಂಬುವನು ತನ್ನ ಹೆಂಡತಿಯೊಡನೆ ಒಂದು ನದಿ ಸೇತುವೆ ಮೇಲೆ ಹೋಗುತ್ತಿದ್ದಾಗ್ಯ ಹೆಂಡತಿಯನ್ನು ನದಿಗೆ ತಳ್ಳಿದನು ಅದೃಷ್ಟವಶಾತ್ ಅವಳು ಬೇರೊಬ್ಬನಿಂದ ರಕ್ಷಿಸಲ್ಪಟ್ಟಳು ಈ ಕೇಸು ಸೆಷನ್ಸ್ ಕೋರ್ಟಿನ ನ್ಯಾಯಾಧೀಶನ ಮುಂದೆ ಬಂದಿತು ಆಪಾದಿತನಾದ ಗಂಡನು ತನ್ನ ಹೇಳಿಕೆಯಲ್ಲಿ ತಾನೂ ತನ್ನ ಹೆಂಡತಿಯೂ ಯಾವ ವಿಧದ ಮನಸ್ತಾಪದಿಂದಲೂ ಇರುವುದಿಲ್ಲ ಆದರೆ ಅವಳು ತನಗೆ ಸ್ವಲ್ಪ ಅವಮಾನಕರವಾದ ಮಾತಾಡಿದಳು ನಾನು ಈಕೆಯನ್ನು ನದಿಗೆ ತಳ್ಳಬೇಕೆಂಬ ಉದ್ದೇಶದಿಂದ ತಳ್ಳಿಲ್ಲ ಮೆಲ್ಲಗೆ ತಳ್ಳಿದೆನು ಅವಳು ಜಾರಿಬಿದ್ದಳು—ಎಂದು ಹೇಳಿಕೆಯನ್ನಿತ್ತನು ನ್ಯಾಯಾಧೀಶರಿಗೆ ಸಮರ್ಪಕವಾದ ಪ್ರಮಾಣವು ದೊರೆಯಲಿಲ್ಲ ಗಂಡನಿಗೆ ಎಂಟು ವರ್ಷ ಕಠಿಣ ಶಿಕ್ಷೆ ವಿಧಿಸಿದರು

ಕೋಮಲೆ.

(೮ ನೇ ಪುಟದಿಂದ ಮುಂದುವರಿದುದು)

ಸುರಗೂ ನೀಳೆಯುಬ್ಬುವ ಅಡಿಕೆ ಮರವನ್ನು ಹಬ್ಬಿದಂತೆ ಕೂಡಿತ್ತು. ಅಲ್ಲಿಂದ ರಾಮರಾಯನಿಗೆ ಈ ಪತ್ರ ವಿಷಯದಲ್ಲಿ ಹೆಚ್ಚಿನ ಕುತೂಹಲವಿದ್ದಿತೆನ್ನ ಬೇಕಾದ ಅವಶ್ಯಕತೆಯೇ ಇಲ್ಲ

—: ೩ ನೆಯ ಅಧ್ಯಾಯ. :—

ಇತ್ತ ನಮ್ಮ ಘೋರ ಸಮಾಜದ ವಿಷಮ ವೇಷರೆಂದು ತಿಳಿಯೋಣ ವಾಗಿ ತೆಗೆದುಕೊಂಡ ಹುಡುಗಿಯನ್ನು ಬಲಾತ್ಕಾರದಿಂದ ಒಂದು ರಾಣದ ಮೇಲೆ ಕುಳ್ಳಿರಿಸಿಕೊಂಡು ಓಡಲಾರಂಭಿಸಿದರು ಓಡುತ್ತಾ ಓಡುತ್ತಾ ಬಂದು ನಿರ್ಜನವಾದ ಪ್ರದೇಶವನ್ನು ಸೇರಿದರು. ಅಲ್ಲೆಲ್ಲಾ ದಟ್ಟವಾದ ಕಾಡು ಬೆಳೆದಿದ್ದಿತು ಎಲ್ಲರೂ ಒಂದು ದುರ್ಗದಂತಿದ್ದ ಪ್ರದೇಶದ ಒಳಹೊಕ್ಕರು. ಅಲ್ಲಿ ಬೆಳಕೆಂಬ ಮಾತೇ ಇಲ್ಲ. ಎಲ್ಲೋ ಒಂದು ಪ್ರದೇಶದಲ್ಲಿ ಒಂದು ಹಣತೆಯು ಮಿಣುಕುತ್ತಿತ್ತು. ಅಲ್ಲಿ ಒಂದು ಮುದುಕಿಯು ಅಲ್ಲಿದ್ದ ಕರಿಯ ಗೌನಿನವನಿಗೆ ಏನೇನೊ ವಿಷಯಗಳನ್ನು ಹೇಳುತ್ತಿತ್ತು. ಅವರ ವಿಕಾರಸ್ವರೂಪವನ್ನೂ, ವಿಚಿತ್ರ ಕೂಗನ್ನೂ ಕೇಳಿ ಹುಡುಗಿಯು ಎಚ್ಚತ್ತಳು ಆಗ ಯಾರೋ ಒಬ್ಬನು ಭಯಂಕರ ರೂಪವನ್ನು ತಾಳಿ, ಹುಡುಗಿಯನ್ನು ನೂಕಿಕೊಂಡು ಹೋಗಿ ಒಂದು ಕತ್ತಲ ಮನೆಗೆ ದಬ್ಬಿ ಬೀಗಹಾಕಿಕೊಂಡು ಹೋಯಿತು.

ನಡುರಾತ್ರಿಯಲ್ಲಿ ಮತ್ತೊಬ್ಬ ವ್ಯಕ್ತಿಯು ಕೋಣೆಗೆ ಬಂದು, ಹುಡುಗಿಯ ಕಡೆಗೆ ಕತ್ತಿಯನ್ನು ತೋರಿಸುತ್ತಾ "ಸುಂದರೀ! ನೀನು ನಮ್ಮ ಮುಖಂಡನ ರಾಣಿಯಾಗದಿದ್ದಲ್ಲಿ ಈ ಕತ್ತಿಯು ನಿನ್ನ ಮಾಂಸದ ರುಚಿಯನ್ನು ನೋಡುವುದರಲ್ಲಿ ಸಂಶಯವಿಲ್ಲ" ಎಂದು ಹೇಳಿ ಸ್ವಲ್ಪ ತಿನ್ನಲು ಏನನ್ನೋ ಕೊಟ್ಟು ಹೊರಟು ಹೋಯಿತು ಹುಡುಗಿಯು ಆ ಪದಾರ್ಥವನ್ನು ಭಕ್ಷಿಸಲಿಲ್ಲ, ಚಿಂತಾಕ್ರಾಂತಳಾಗಿ ಕುಳಿತಿದ್ದಾಳೆ.

—: ೪ ನೆಯ ಅಧ್ಯಾಯ. :—

ಭಗವತ್‌ಸಿಂಗರು, ರಾಮರಾಯರೊಡನೆ ಒಂದು ಭೀಮರಾಯರ ಮನೆಯ ಹಿಂಭಾಗವನ್ನು ಪರಿಶೀಲಿಸಿ ಅಲ್ಲಿ ಬಿದ್ದಿದ್ದ ರಕ್ತವನ್ನು ನೋಡಿ ಅದನ್ನು ತೋರಿಸುತ್ತಿದ್ದ ಕಾಲುದಾರಿಯನ್ನು ಹಿಡಿದರು ಒಂದು ಊರಿನ ಜನರ ಬಾಯಲ್ಲೆಲ್ಲಾ ವಿಷಮಬಾಯಿಸುವರ ಖೂನಿಯ ವಿಷಯವೇ. ಇಬ್ಬರೂ ನಡೆಯುತ್ತಾ ನಡೆಯುತ್ತಾ ಇರಲು ಸಾಯಂಕಾಲವಾಯಿತು. ಒಂದು ದುರ್ಗದಂತಿದ್ದ ಪ್ರದೇಶವನ್ನು ಸೇರಿದರು ಅಲ್ಲಿ ಭಯಂಕರವಾದ ಕರಿಯ ವ್ಯಕ್ತಿಗಳು ಜಂಕಿಯ ಸುತ್ತಾ ಕುಣಿದಾಡುತ್ತಿದ್ದರು ಮುಂದೆ ಇಬ್ಬರು ಕಾಯುತ್ತಿದ್ದಲು ರಾಮರಾಯನು ಸಮೀಪದಲ್ಲಿದ್ದ ಮರದಡಿಯಲ್ಲಿ ಅವಿತುಕೊಂಡನು ಭಗವತ್‌ಸಿಂಗರು ಧೈರ್ಯದಿಂದ ಸುಳಿದಾಡುತ್ತಿದ್ದ ವ್ಯಕ್ತಿಯನ್ನು ಕಠಾರಿಯಿಂದ ಯಮಲೋಕಕ್ಕೆ ಸಾಗಿಸುವಾಗಲೇ ಇನ್ನೊಬ್ಬ ವ್ಯಕ್ತಿಯು ಅವನನ್ನು ಬಿಡಿಸಲು ಓಡಿಬಂದಿತು. ಆಗ ಆ ರಾಮರಾಯನು ಈ ವ್ಯಕ್ತಿಯನ್ನು ಕೊಂದನು. ಸಿಂಗರು ಮತ್ತೊಬ್ಬರನ್ನು ಕೊಂದರು. ಅವರು ಇಬ್ಬರನ್ನು ಅಲ್ಲೇ ಹೂತು ಅವರ ಉಡುಪುಗಳನ್ನು ತಾವು ಧರಿಸಿಕೊಂಡರು. ತಮಗೆ ದೊರೆತಿದ್ದ ಕರಿಯ ಗೌನು ಈಗ ತಾವು ಧರಿಸಿರುವುದಕ್ಕೆ ಹೋಲುತ್ತಿದ್ದುದರಿಂದ ಈ ಗುಂಪಿನವರೇ ಹುಡುಗಿಯನ್ನು ಅಪಹರಿಸಿರಬಹುದೆಂಬುದು ನಿಶ್ಚಯವಾಯಿತು. ಆಗ ಅಲ್ಲಿಯ ಮುಖಂಡನು ಭೋಜನಕ್ಕೆ ಸಿಳ್ಳೆಯೂದಿದನು ಇವರೂ ಸಹ ಅವನೊಡನೆ ಪಾತಾಳದ ಊಟಕ್ಕೆ ಹೋದರು.

—: ೫ ನೆಯ ಅಧ್ಯಾಯ :—

ಹೀಗೆ ಹೋದವರು ಅಲ್ಲಿರುವ ಜನರನ್ನೆಲ್ಲಾ ಪರಿಚಯಮಾಡಿಕೊಂಡರು ಎಲ್ಲರೂ ಮಲಗಿಕೊಂಡರು. ಅವರ ಇವರಿಬ್ಬರಿಗೂ ಎಚ್ಚರವಿದ್ದಿತು ಇತ್ತ ನಡುರಾತ್ರಿಯಲ್ಲಿ ರಾಮರಾಯನು ಒಂದು ಬ್ಯಾಟರಿ (Battery) ಸಹಾಯದಿಂದ ಅಲ್ಲಿನ ದಾರಿಯನ್ನು ಕಂಡುಕೊಂಡು ಹುಡುಗಿಯನ್ನು ಕೂಡಿದ್ದ ಕೋಣೆಗೆ ಹೋದನು. ಈ ವ್ಯಕ್ತಿಯನ್ನು ನೋಡಿ ಹುಡುಗಿಯು ಬೆದರಿದಳು. ರಾಮರಾಯನಿಗೆ ಕೋಮಲೆ ಎಂಬುದು ನಿರ್ಧಾರವಾಗಲು ತನ್ನ ನಿಜ ಸ್ವರೂಪವನ್ನು ಹುಡುಗಿಗೆ ತೋರಿಸಿದನು. ಹುಡುಗಿಯು ಆನಂದಭರಿತಳಾಗಿ ರಾಮರಾಯನನ್ನು ಅಪ್ಪಿಕೊಂಡಳು. ನಂತರ ರಾಮರಾಯನು ಹುಡುಗಿಯನ್ನು ಹೊರಗೆ ತಂದು ನಿಶ್ಚಿತ ಸಮಾಚಾರವನ್ನು ಭಗವತ್‌ಸಿಂಗರಿಗೆ ತಿಳಿಸಿದನು. ಈ ಸಮಯದಲ್ಲಿ ಭಗವತ್‌ಸಿಂಗರು ತಮ್ಮ ಕೈಲಾದಷ್ಟು ಚೋರರನ್ನು ಯಮಪುರಿಗೆ ಕಳುಹಿಸಿದ್ದರು ಸಿಂಗರು ರಾಮರಾಯನಿಗೆ ಶಾಂತಿಪುರಕ್ಕೆ ಹೋಗಿ ಬೆಳಗಿನ ಹೊತ್ತಿಗೆ 300 ಜನ ಪೋಲೀಸಿನವರನ್ನು ಇಲ್ಲಿಗೆ ಬರಲು ಸಿದ್ಧಮಾಡಬೇಕೆಂದು ತಿಳಿಸಿದರು. ರಾಮರಾಯನು ನಡುರಾತ್ರಿಯಲ್ಲೇ ಶಾಂತಿಪುರಕ್ಕೆ ಹೋಗಿ ಪಹರೆಯವರನ್ನು "ಘೋರ ಸಮಾಜ" ದ ಬಳಿ ಬರಬೇಕೆಂದು ತಿಳಿಸಿ ತಕ್ಷಣವೇ ಇಲ್ಲಿಗೆ ಬಂದನು. ಬೆಳಗಾಯಿತು ಮುಖಂಡನನ್ನು ಎಚ್ಚರಿಸಿ ಮುದುಕಿಯು ಬೆಂಕಿಯೊತ್ತಿಸುತಿತ್ತು ಮುಖಂಡನು ಎಚ್ಚೆತ್ತ ನಂತರ ತಕ್ಷಣವೇ ಪಹರೆಯವರು ಅವನನ್ನು ಹಿಡಿದುಕೊಂಡರು ಸಿಂಗರು ಮುಂದೆ ಬಂದು ಕುದುರೆಯನ್ನೇರಿ ರಾಮರಾಯನೊಡನೆಯೂ, ಹುಡುಗಿಯೊಡನೆಯೂ ಶಾಂತಿಪುರಕ್ಕೆ ಬಂದರು ರಾಮರಾಯರು ಹುಡುಗಿಯೊಡನೆ ಬಂದು ಭೀಮರಾಯನೆದುರಿಗೆ ನಿಂತನು ಭೀಮರಾಯನು ರಾಮರಾಯನನ್ನು ಅಪ್ಪಿಕೊಂಡನು ಗೋವಿಂದನು ತಂಗಿಯೊಡನೆ ಪ್ರೀತಿಯಿಂದ ಮಾತನಾಡಿದನು ಪೈಶಾಚಿಕರು ದ್ವೀಪಾಂತರವಾಸಿಗಳಾದರು. ಮುಖಂಡನು ಗಲ್ಲಿಗೇರಿಸಲ್ಪಟ್ಟನು ಭಗವತ್‌ಸಿಂಗರು 1000 ರೂ. ಬಹುಮಾನದೊಡನೆ ವಿಖ್ಯಾತರೆಂಬ ಹೆಸರನ್ನು ಗಳಿಸಿದರು ಶಾಂತಿಪುರದಲ್ಲಿ ಕೋಮಲೆಯನ್ನು ರಾಮರಾಯನಿಗೆಕೊಟ್ಟು ಶಾಸ್ತ್ರೋಕ್ತವಾಗಿ ವಿಜೃಂಭಣೆಯಿಂದ ಪಾಣಿಗ್ರಹಣವಾಯಿತು.

ಈಗ ಭೀಮರಾಯರಿಗೆ ಮರಳಿ ಜೀವ ಬಂದಂತಾಯಿತು.

ನಿಮಗೆ ಗೊತ್ತೆ?

(ಲೇ|| —ಎಸ್. ಸಿ. ನಾರಾಯಣಶೆಟ್ಟರು.)

ಚೈನಾ ಭಾಷೆಯಲ್ಲಿ ವರ್ಣಮಾಲೆಯೇ ಇಲ್ಲ. ಆದರೆ ಆ ದೇಶದವರು ಪ್ರತಿಯೊಂದು ಪದಕ್ಕೂ ಒಂದೊಂದು ಚಿತ್ರವನ್ನು ಉಪಯೋಗಿಸುವರು ಪದದ ಅರ್ಥಕ್ಕೂ ಮತ್ತು ಅದಕ್ಕಾಗಿ ಉಪಯೋಗಿಸುವ ಚಿತ್ರಕ್ಕೂ ಬಹಳ ಸಂಬಂಧವಿರುತ್ತದೆ. ಉದಾಹರಣೆ—ಅವರು 'ರಾಜ್ಯ' ಎಂಬ ಪದಕ್ಕೆ ಒಂದು ಚೌಕಳಿಯನ್ನು ಬರೆದು ಅದರಲ್ಲಿ ಒಂದು ಮರವನ್ನು ಚಿತ್ರಿಸುವರು.

* * *

ಒಂದು ಘನ ಮಿಲ್ಲಿ ಮೀಟರ್ ರಕ್ತದಲ್ಲಿ 55 ಲಕ್ಷ ಕೆಂಪು ರಕ್ತ ಕಣಗಳಿವೆ.

* * *

ಮರದಲ್ಲಿ ಸೆಲ್ಯುಲೋಸ್ ಎಂಬ ಪದಾರ್ಥವು ಇದೆ. ಇದರಿಂದಲೇ ಕಾಗದವನ್ನೂ ಮತ್ತು ಕೃತಕ ಸಿಲ್ಕನ್ನು ತಯಾರಿಸುತ್ತಾರೆ

* * *

ವಿಶ್ವದ ಒಟ್ಟು ತೂಕ 10,000,000 00.00000 00.00,00000, 0000 0,00000,00000,00000,00000, 00000 ಗ್ರಾಮುಗಳು ಇರಬಹುದೆಂದು ಊಹಿಸಲಾಗಿದೆ

* * *

ಕಳೆದ 40 ವರುಷಗಳಿಂದ ನಮ್ಮ ಆದಾಯವು ಅಷ್ಟೇ ಇದ್ದರೂ ನಮ್ಮ ವೆಚ್ಚ ಮಾತ್ರ 2·78 ರಷ್ಟು ಹೆಚ್ಚಾಗಿದೆ

* * *

ನಮಗೆ ಪ್ರತಿ ವರ್ಷವೂ ಬೇಕಾಗುವ 100,000 ಟನ್ ಕಾಗದದಲ್ಲಿ ನಮ್ಮ ದೇಶದಲ್ಲೇ 40,000 ಟನ್ ಕಾಗದವನ್ನು ಮಾತ್ರ ತಯಾರಿಸಲು ಸಾಧ್ಯ.

* * *

ಮನುಷ್ಯನಲ್ಲಿರುವ ಒಟ್ಟು ಮೂಳೆಗಳ ಸಂಖ್ಯೆ 206.

* * *

ಅಮೇರಿಕಾ ದೇಶದ ಸಂಯುಕ್ತ ಸಂಸ್ಥಾನ ಒಂದೇ ಪ್ರತಿ ವರ್ಷವೂ 2000 ಪೌಂಡು ತೂಕದ ಕೃತಕ ರೇಷ್ಮೆಯನ್ನು ತಯಾರಿಸುತ್ತದೆ.

* * *

ದೇಶದಲ್ಲಿ ಕ್ರಿ. ಪೂ. 3000 ದಲ್ಲೇ ಪಾಪಿರಸ್ ಎಲೆಗಳಿಂದ ಕಾಗದವನ್ನು ಮಾಡುತ್ತಿದ್ದರು ಆದರೆ ಈಗಿನ ಕಾಗದ ಮಾಡುವ ರೀತಿಯನ್ನು ಮೊದಲು ಕಂಡು ಹಿಡಿದವರು ಚೈನಾ ದೇಶದವರು.

* * *

ಕೆನಡಾ ದೇಶ ಒಂದೇ ಇನ್ನು 200 ವರುಷಗಳವರೆಗೆ ಇಡೀ ಪ್ರಪಂಚಕ್ಕೆ ಬೇಕಾಗುವಷ್ಟು ಕಾಗದವನ್ನು ತಯಾರಿಸಲು ಮರವನ್ನು ಒದಗಿಸಬಲ್ಲದು

ವಿನೋದ ಲಹರಿ.

ತಂದೆ—(ಮಗನನ್ನು ಕುರಿತು) ಏನೋ ಬೀಡಿ ಸೇದುತ್ತಾ ಇದ್ದೀಯಾ.

ಮಗ—ಇಲ್ಲಾ ಸಿಗರೇಟು.

† † †

ಉಪಾಧ್ಯಾಯ (ಶಿಷ್ಯನನ್ನು ಕುರಿತು) ಮಾರಜನಕ ಯಾರೋ?

ಶಿಷ್ಯ—ಸಿದ್ದ ಸಾರ್.

ಉಪಾಧ್ಯಾಯ—ಹ್ಯಾಗೊ?

ಶಿಷ್ಯ—ಜನಕ ಅಂದರೆ ತಂದೆ ಅಲ್ಲವೆ ಸಾರ್.

ಉಪಾಧ್ಯಾಯ—ಹೌದು.

ಶಿಷ್ಯ—ಸರಿ ಸಾರ್ ನಮ್ಮ ಮನೆ ಆಳು ಮಾರ, ಅವರಪ್ಪ ಸಿದ್ದ

† † †

ಅತ್ತೆ—(ನವರಾತ್ರಿಗೆ ಬಂದ ಅಳಿಯನನ್ನು ಕುರಿತು)

ನೀವು ಬಂದದ್ದು ನಮ್ಮ ಮನೆ ದೇವರು ಬಂದಹಾಗಾಯ್ತು.

ಅಳಿಯ—ಹಾಗಾದರೆ ನನ್ನನ್ನೆ ಪೂಜೆ ಮಾಡಿ.

† † †

ಗಂಡ—(ಹೆಂಡತಿಯನ್ನು) ಕುರಿತು

ಲೇ ನೀನು ನಮ್ಮ ಮನೆ ಭಾಗ್ಯಲಕ್ಷ್ಮೀ ಕಣ

ಹೆಂಡತಿ—ಹಾಗಾದರೆ ಇನ್ನು ಮೇಲೆ ಪ್ರತಿ ಶುಕ್ರವಾರವೂ ನನ್ನನ್ನೇ ಪೂಜೆ ಮಾಡಿ

† † †

ತಂದೆ—(ಮಗನನ್ನು ಕುರಿತು)

ಎಷ್ಟು ಸಲವೋ ನಿನಗೆ ಸಾರಾಯಿ ಕುಡಿಬೇಡ ಅಂತ ಹೇಳೋದು.

ಮಗ—ಅದಕ್ಕೇನೇಪ್ಪ, ಬ್ರಾಂದಿ ಕುಡಿಯೋದು

† † †

ಉಪಾಧ್ಯಾಯ—ಕೋ ರಾಮು ನಿನಗೆ ನಸ್ಯ ಹಾಕೋದು ಯಾರು ಹೇಳಿಕೊಟ್ಟರು

ಶಿಷ್ಯ—ಗುರುವಿನಂತೆ ಶಿಷ್ಯ ಅಂತ ಅಲ್ಲವೆ ಸಾರ್. ನೀವು ಹಾಕತೀರಿ ಅದಕ್ಕೋಸ್ಕರ ನಾನು ಹಾಕೋದು.

† † †

ಉಪಾಧ್ಯಾಯರು—(ವಿದ್ಯಾರ್ಥಿಯನ್ನು ಕುರಿತು)

1 ಕಾಸಿಗೆ 6 ಕಿತ್ತಳೆ ಹಣ್ಣಾದರೆ 3 ಕಾಸಿಗೆಷ್ಟು?

ವಿದ್ಯಾರ್ಥಿ—ನಮ್ಮ ಮೇಷ್ಟ್ರು ಹೇಳಿ ಕೊಟ್ಟಿರೋದು ಬಾಳೆ ಹಣ್ಣಿನ ಲೆಕ್ಕ ಸಾರ್ ಕಿತ್ತಳೆ ಹಣ್ಣಿನದಲ್ಲ.

† † †

ಗಂಡ—(ಹೆಂಡತಿಯನ್ನು ಕುರಿತು)

ಲೇ ನಾನು ಪೇಪರ್ ತರಿಸ್ತೀನಲ್ಲಾ ಅದನ್ನು ನೀನ್ಯಾಕೆ ಓದೋದಿಲ್ಲ.

ಹೆಂಡತಿ—ನನಗೆ ಒಲೆ ಹಚ್ಚೋದಕ್ಕೆ ಬೇಕು ಅದ್ದರಿಂದ ನಾನು ಓದೋದಿಲ್ಲ

ಹಿಂದೂ ವಿಧವೆಗೆ ಮಿಷನರಿಗಳ ಬಂಧನ.

"ನಾನು ಓರ್ವ ಹಿಂದೂ ವಿಧವೆ. ಅಕ್ರಮವಾಗಿ ಮಿಷನರಿಗಳ ಬಂಧನದಲ್ಲಿ ಸಿಕ್ಕಿರುತ್ತೇನೆ. ಸ್ಥಳದಿಂದ ಸ್ಥಳಕ್ಕೆ ಸಾಗಿಸಲ್ಪಡುತ್ತಿದ್ದೇನೆ. ಬಲವಂತದಿಂದ ಗೋಮಾಂಸ ಭಕ್ಷಣೆ ಮಾಡಲು ಒತ್ತಾಯ ಮಾಡಲ್ಪಡುತ್ತಿರುತ್ತೇನೆ. ದಯವಿಟ್ಟು ನನ್ನನ್ನು ಉದ್ಧಾರ ಮಾಡಿರಿ" ಎಂಬ ವಿಷಾದಾಂತ ಪತ್ರವು ಒಬ್ಬ ವಿಧವೆಯಿಂದ ಆಗ್ರಾ ನಗರದ ಆರ್ಯಸಮಾಜದ ಮುಖಂಡರಿಗೆ ಬಂದಿತು.

ಆರ್ಯ ಸಮಾಜದ ಮುಖಂಡರು ತಮಗೆ ಬಂದಿದ್ದ ವಿಧವಾಶ್ರಮದ ಮ್ಯಾನೇಜರವರನ್ನು ಪೋಲೀಸಿನಲ್ಲಿ [illegible] ಮಾಡಲು ಏರ್ಪಡಿಸಿದರು.

ಪೋಲೀಸ್ ಸೂಪರಿಂಟೆಂಡೆಂಟ್ [illegible] ಕೇಸು ಪೋಲೀಸಿಗೆ ಬಗೆಹರಿಸತಕ್ಕದ್ದಲ್ಲವೆಂದು ಬರೆದರು. ನಂತರ ಈ ಕೇಸು ಮ್ಯಾಜಿಸ್ಟ್ರೇಟರವರಿಗೆ ರಿಪೋರ್ಟ್ ಮಾಡಲ್ಪಟ್ಟಿತು.

ಮ್ಯಾಜಿಸ್ಟ್ರೇಟರವರು ಮುನಿಸಿಪಾಲಿಟಿ ಮುಖ್ಯಾಧಿಕಾರಿಗಳೂ ಪ್ರಸಿದ್ಧರಾದ ಅಡ್ವೋಕೇಟರೂ ಆದ ರಾವ್ ಬಹದ್ದೂರ್ ಜಮ್ನಾಪ್ರಸಾದ್ ಎಂಬುವರನ್ನು ಈ ವಿಷಯವನ್ನು ಪರೀಕ್ಷಿಸಿ ರಿಪೋರ್ಟ್ ಮಾಡಲು ಏರ್ಪಡಿಸಿದರು.

ಶ್ರೀ ಜಮ್ನಾಪ್ರಸಾದರು ಕೋರ್ಟಿನ್ನು ಪ್ರಮಾಣ [illegible] ತಿಳಿಸಿದ ರೀತಿ [illegible] —

'[illegible] ಆ ವಿಧವೆಯನ್ನು [illegible] ಮಿಷನರಿಗಳು [illegible] ಇಷ್ಟಪಡುವುದಿಲ್ಲ — [illegible] ಮಾಡಲು [illegible] ಪ್ರತಿದಿನವೂ [illegible] ನಡೆಯುತ್ತಿರುವುವು.

ಮೇಲ್ಕಂಡ ಸಡಗರಿಕೆಯು ಮಿಷನರಿಗಳ ನೀತಿಯನ್ನು ಪ್ರಸಾರ ಮಾಡುವಂಥಾದ್ದಾಗಿದೆ. ಇಂಥಾ ನೂರಾರು ನಿದರ್ಶನಗಳು ಪ್ರತಿನಿತ್ಯವೂ ಭಾರತದ ಅನೇಕ ಕಡೆಗಳಲ್ಲಿ ನಡೆಯುತ್ತಿವೆ.

ಹೈ ಕೋರ್ಟಿನ ಜಡ್ಜಿಗಳು

ಹೈ ಕೋರ್ಟಿನ ಈಗಿನ ಜಡ್ಜಿಗಳಾದ ಶ್ರೀ॥ ಎ. ಎಸ್. ಆರ್. ಚಾರಿ ಮತ್ತು ಎ. ಕೆ. ಶ್ರೀನಿವಾಸರಾಯರು ನಿವೃತ್ತರಾಗುವ ಪ್ರಯುಕ್ತ ಅವರ ಸ್ಥಾನದಲ್ಲಿ ಮಿ॥ ಅಬ್ದುಲ್ ಗನಿಯವರನ್ನೂ, ಮ॥ ಎ. ಆರ್. ನಾಗೇಶ್ವರ ಅಯ್ಯರ್‌ರವರನ್ನೂ ಜಡ್ಜಿಗಳನ್ನಾಗಿ ನೇಮಿಸಲಾಗಿದೆ. ಮ॥ ಸು[illegible] ನಾರಾಯಣಸ್ವಾಮಿಯವರು ಗೌರ್ನಮೆಂಟ್ ವಕೀಲರಾಗಿ ನೇಮಿಸಲ್ಪಟ್ಟಿರುವರು.

೨೫ ಪ್ಯೈಲಿ ಈಜುವ ಪ್ರದರ್ಶನ.

ಬೆಂಗಳೂರಿನ ಸುಪ್ರಸಿದ್ಧ ಈಜುವ ಪಟುವಾದ ಕುಮಾರಿ ಪ್ರೇಮ[illegible]ರು ತಾ॥ 6–11–36 ನೆಯ ಭಾನುವಾರ ಬೆಳಿಗ್ಗೆ 7 ಘಂಟೆಗೆ ಕೃಷ್ಣರಾಜಸಾಗರದ [illegible] ಭಾಗದಿಂದ [illegible] ಇರ್ವಿನ್ ನಾಲೆಯಲ್ಲಿ 25 ಮೈಲಿಗಳ [illegible] ಕಾಲು ಕಟ್ಟಿಕೊಂಡು ಈಜುವರು. ಈ ಮಹಾ ಪ್ರಯತ್ನದಲ್ಲಿ ಸರ್ವರೂ ಸಹಕರಿಸುವಂತೆ [illegible] ತಕ್ಕ [illegible] ಮಾಡಲ್ಪಟ್ಟಿದೆ. ಈ ಪ್ರದರ್ಶನವು ಮೊದಲು 31–10 ರಲ್ಲಿ ನಡೆಯಬೇಕಾಗಿತ್ತು. ಆದರೆ [illegible]ರವರ ಶರೀರ ಸ್ಥಿತಿಯು [illegible] ಬದಲಾಯಿಸಲ್ಪಡಬೇಕಾಯಿತು.

ಮೈಸೂರು ಸಂಸ್ಥಾನದ ಹರಿಜನ ಸೇವಕ ಸಂಘ.

ಮೇಲ್ಕಂಡ ಸಂಘದ ವಾರ್ಷಿಕ ಸಭೆಯು ತಾ॥ 31–10–1936 ರಲ್ಲಿ [illegible] ಒಡೆಯರ್ ಛತ್ರದಲ್ಲಿ ನಡೆಸಲ್ಪಟ್ಟಿತು. ಶ್ರೀಯುತ ಪಿ. ಸುಬ್ಬರಾವ್ [illegible]ವರು ಅಧ್ಯಕ್ಷಸ್ಥಾನವನ್ನು ವಹಿಸಿದ್ದರು. ಮೈಸೂರು ಸಂಸ್ಥಾನದಲ್ಲಿ 19 ಸ್ಥಳಗಳಲ್ಲಿ ಹರಿಜನ ಸೇವಕ ಸಂಘಗಳಿರುತ್ತವೆ. ಈ ಸಂಘದ ಎಲ್ಲಾ ಕಾರ್ಯಗಳೂ [illegible] ನಿರ್ವಹಿಸಲ್ಪಡುತ್ತಿವೆ. 25 [illegible] ಶಾಲೆಗಳು ನಡೆಸಲ್ಪಡುತ್ತಿವೆ. ಮೈಸೂರು ಸಂಸ್ಥಾನದ ಹರಿಜನಸೇವಕ ಸಂಘವು ಹರಿಜನರ ವಿದ್ಯಾಭ್ಯಾಸಕ್ಕಾಗಿಯೂ [illegible] ಉದ್ಯೋಗಕ್ಕಾಗಿಯೂ [illegible] ಕಾರ್ಯಗಳನ್ನು ಮಾಡುತ್ತಿರುವುದು [illegible] ಹರಿಜನರು [illegible] ಸಹಾಯ ಮಾಡುತ್ತಿರುವ [illegible] ಪರಮಿಸ್ಸು [illegible] ಗಿರುತ್ತದೆ.

'ಗ್ರಾಮಸೇವೆ'

ಗ್ರಾಮಸೇವೆಯ [illegible] ಪತ್ರಿಕೆಯನ್ನು [illegible] ಈ ಪತ್ರಿಕೆಯು ಮ॥ [illegible] ಸಂಪಾದಕತ್ವದಲ್ಲಿ ನಡೆಸಲ್ಪಡುತ್ತಿದೆ. [illegible] ಸಂಚಿಕೆಯಲ್ಲಿ [illegible] ಮತ್ತು [illegible] ಪಡಿಸಿದ ಪಂಡಿತ [illegible] ಚಿತ್ರಗಳ [illegible] ಪ್ರಸಿದ್ಧರಾದ [illegible] ಶ್ರೀ॥ [illegible] ಎರಡು ತಿಂಗಳಿಗೆ [illegible] ಶ್ರೀ॥ [illegible] ಕುಮಾರಸ್ವಾಮಿ [illegible] ಶ್ರೀ [illegible] ನವರು ಇವರ ಉತ್ತಮ [illegible] ನಮ್ಮ ಕನ್ನಡ [illegible] ಗ್ರಾಮಸೇವೆ [illegible] ಪತ್ರಿಕೆಯನ್ನು ಸರ್ವರೂ [illegible] ಪಡಿಸುವರೆಂದು ನಂಬುತ್ತೇನೆ.

ಶ್ರೀರಂಗಪಟ್ಟಣದ ದರಿಯಾ ದೌಲತ್.

ಶಿವಮೊಗ್ಗ ವರ್ತಮಾನ

(ನಮ್ಮ ಬಾತ್ಮೀದಾರರಿಂದ)

ಆಯುಧ ಪೂಜೆ

ಶನಿವಾರ ಸಂಜೆ ಪೋಲೀಸಿನವರು ಪೋಲೀಸು ಸ್ಟೇಷನ್ನಿನಲ್ಲಿ ಆಯುಧ ಪೂಜೆಯನ್ನು ಬಹು ವಿಜೃಂಭಣೆಯಿಂದ ಆಚರಿಸಿದರು. ಸ್ಟೇಷನ್ ಭವನವು ತಳಿರುತೋರಣಗಳಿಂದ ಬಹು ಅಂದವಾಗಿ ಅಲಂಕೃತವಾಗಿದ್ದಿತು. ಶ್ರೀಮನ್ಮಹಾರಾಜರವರ ಚಿತ್ರಪಟವನ್ನು ಸುಂದರವಾಗಿ ಅಲಂಕಾರ ಮಾಡಿದ್ದರು. ಜಿಲ್ಲಾ ಪೋಲೀಸು ಅಧಿಕಾರಿಗಳಾದ ಮಿ॥ ದಾಸಪ್ಪ [illegible]ವರು ಅಧ್ಯಕ್ಷತೆಯನ್ನು ವಹಿಸಿದರು. ನೃತ್ಯವು ನೋಡುವುದಕ್ಕೆ ಬಹು ರಮ್ಯವಾಗಿ ಕಂಗೊಳಿಸುತ್ತಿತ್ತು.

ವಿಜಯ ದಶಮಿ

ಎಲ್ಲೆಡೆಗಳಂತೆಯೇ ಇಲ್ಲಿಯೂ ವಿಜಯ ದಶಮಿ ಸಮಾರಂಭವು ಆಚರಿಸಲ್ಪಟ್ಟಿತು. ಎಲ್ಲಾ ದೇವಾಲಯಗಳಲ್ಲಿಯೂ ದಶಮಿ ಬೆಳಿಗ್ಗೆ ವಿಶೇಷ ಪೂಜೆಗಳು ನಡೆದು, ಶ್ರೀಮನ್ಮಹಾರಾಜರವರ ಶ್ರೇಯಃಪ್ರಾರ್ಥನೆಯಾದವು. ಸಂಜೆ ಸುತ್ತಮುತ್ತಲಿನ ಊರುಗಳ ದೇವರುಗಳೆಲ್ಲಾ ಶಮಿ ಮಂಟಪವನ್ನು ಸೇರಿ ಪೂಜೆಯಾದಮೇಲೆ ಉತ್ಸವವು ದೊಡ್ಡಪೇಟೆ ಮಾರ್ಗವಾಗಿ ಹಿಂದಿರುಗಿತು. ಉತ್ಸವವನ್ನು ನೋಡಲು ಜನಗಳು ಕಿಕ್ಕಿರಿದು ನೆರೆದಿದ್ದಿತು. ಜಿಲ್ಲಾ ಪೋಲೀಸು ಅಧಿಕಾರಿಗಳಾದ ಮಿ॥ ದಾಸಪ್ಪನವರ ಮತ್ತು ಇನ್ಸ್‌ಪೆಕ್ಟರ್ [illegible] ರಾಜಯ್ಯನವರ ನೇತೃತ್ವದಲ್ಲಿ ಪೋಲೀಸಿನವರ ಬಂದೋಬಸ್ತು ಚೆನ್ನಾಗಿದ್ದು ಯಾವ ಗಲಾಟೆಯೂ ಇಲ್ಲದೆ ಉತ್ಸವ ಸಾಂಗವಾಗಿ ನೆರವೇರಿತು.

ವಸ್ತು ಪ್ರದರ್ಶನ

ನವರಾತ್ರಿ ವಸ್ತು ಪ್ರದರ್ಶನದ ಶನಿವಾರ ಮುಕ್ತಾಯವಾಯಿತು. [illegible]ತಿಯ ಸಚಿವರಾದ ರಾಜಮಂತ್ರಪ್ರವೀಣ ಶ್ರೀ॥ ಎನ್. ಮಾಧವರಾಯರು ಪ್ರದರ್ಶಕರಿಗೆ ಬಹುಮಾನಗಳನ್ನೂ ಪ್ರಶಸ್ತಿಪತ್ರಗಳನ್ನೂ ಕೊಟ್ಟರು. ಪ್ರದರ್ಶನವು ಯಶಸ್ವಿಯಾಗಿ ನಡೆದುದಕ್ಕಾಗಿ ಸಂತೋಷಪಡಿಸಿದರು.

ಪ್ರಾಚೀನ ಕನ್ನಡ ವಚನ ಗ್ರಂಥಗಳು

ಸೌಗಂಧಿಕಾಪರಿಣಯ:— ಪೂರ್ವದಲ್ಲಿ ದೇವೇಂದ್ರನಿಗೆ ದೂರ್ವಾಸ ಋಷಿಗಳಿಂದ ಆಶೀರ್ವಾದ ಪೂರ್ವಕವಾಗಿ ಕೊಡಲ್ಪಟ್ಟ ಕಮಲಮಾಲಿಕೆಯನ್ನು ಆನೆಯ ಕುಂಭಸ್ಥಳದಲ್ಲಿಟ್ಟಿರಲು, ಆನೆಯು ಆ ಮಾಲಿಕೆಯನ್ನು ಕಾಲಿನಲ್ಲಿ ಹೊಸಕಿ ಮರ್ದಿಸಲು, ಋಷಿಗಳ ಶಾಪದಿಂದ ಭೂಲೋಕದಲ್ಲಿ ರತ್ನಪುರಿಯಲ್ಲಿ ಸುಗಂಧರಾಜನಾಗಿ ಹುಟ್ಟಿ, ಕಳಿಂಗದೇಶದ ರಾಜಪುತ್ರಿಯಾದ ಸೌಗಂಧಿಕಾದೇವಿಯನ್ನು ಸ್ವಯಂವರದಿಂದ ಹೊಂದಿದ, ಬಹಳ ವಿಷಯಗಳಿರುವ ಕಥೆ.

೧೮೦ ಪುಟಗಳು ಕ್ರಯ ರೂ. ೦—೩—೦

ಸಹಸ್ರಾಯುಚರಿತ್ರೆ:— ಮಾಹಿಷ್ಮತೀ ಅರಸನ ಜ್ಯೇಷ್ಠ ಪತ್ನಿಯಲ್ಲಿ ದಕ್ಷಾಯಣಿ ವರಪ್ರಸಾದದಿಂದ ಜನಿಸಿ ಲೋಕಪ್ರಸಿದ್ಧನಾಗಿ ತನಗೆ ಅರಿಗಳಿಂದ ಬಂದ ಗಂಡಾಂತರಗಳನ್ನೆಲ್ಲಾ ಪರಿಹರಿಸಿಕೊಂಡ ಒಬ್ಬ ಮಹಾಪುರುಷನ ಕಥೆ.

೩೭೫ ಪುಟಗಳು ಕ್ರಯ ರೂ ೦—೮—೦

ಕಾಶೀಕ್ಷೇತ್ರಮಹಾತ್ಮೆ:— ಇದರಲ್ಲಿ ೧೫ ಲೋಕಗಳ ವರ್ಣನೆ, ನದಿಗಳು, ಋಷಿಗಳು ಋಷಿಗಳಿಗೆ ಮುಂತಾದವರ ಉತ್ಪತ್ತಿ ಕ್ರಮ, ಗಂಗಾ ಸಹಸ್ರನಾಮವೇ ಮೊದಲಾದ ಅನೇಕ ವಿಷಯಗಳು ಅಡಕವಾಗಿರುತ್ತೆ.

೬೦೩ ಪುಟಗಳು ಕ್ರಯ ರೂ ೧—೨—೦

N B ಪುಸ್ತಕದ ಕ್ರಯದ ನಾಲ್ಕರಲ್ಲಿ ಒಂದು ಭಾಗ ಹಿಂಬಲಗು ಅಡ್ವಾನ್ಸ್ ಕಳುಹಿಸಿದರೆ ಬಾಕಿಗೆ ವಿ. ಪಿ. ಮಾಡಲಾಗುತ್ತೆ.

ಇತ್ಯನ್ನು —

ಗುಂಡ್ಲು ಪಂಡಿತ ಲಕ್ಷ್ಮಣಾಚಾರ್ಯರ ಮಕ್ಕಳು
ಶ್ರೀನಿವಾಸ ದೇಶಿಕಾಚಾರ್,
೬೦೭, ಕರುಹಟ್ಟಿಬೀದಿ, ಮೈಸೂರು

ಟಿ. ಸಿ. ನಟರಾಜ್ ಔಷಧಾಲಯ,

ಸಯ್ಯಾಜಿರಾವ್ ರೋಡು, ಮೈಸೂರು

ಇವರಲ್ಲಿ ನೇತ್ರಪರೀಕ್ಷೆಯು ಉಚಿತವಾಗಿ ಮಾಡಲ್ಪಡುತ್ತದೆ

ಅತ್ಯಗತ್ಯವಾಗಿ ಬೇಕಾದ ಎಲ್ಲಾ ಇಂಜಕ್ಷನ್ ಔಷಧಿಗಳೂ ಸದಾ ಕಾಲದಲ್ಲೂ ದೊರಕುವುವಲ್ಲದೆ ಸಮಸ್ತ ವ್ಯಾಧಿಗಳಿಗೂ ಚಿಕಿತ್ಸೆಯು ಬಹು ಸುಲಭ ದರದಿಂದ ಮಾಡಲ್ಪಡುತ್ತದೆ.

ಗುಂಡೂರಾವರ ಆಯುರ್ವೇದೀಯ ಸಿದ್ಧೌಷಧಗಳೆಲ್ಲವೂ ಸದಾ ದೊರಕುತ್ತವೆ

ಬಹುಗ್ರಂಥ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

- ಬಾ ಲ ಸು ಧಾ -

ಮಕ್ಕಳ ಜ್ವರದ ಗಡ್ಡೆಯನ್ನು ಜಾತರಿ ಗುಣ ಪಡಿಸುತ್ತೆ. ಲಿವರ್ (ಪಿತ್ತಕೋಶ) ದಪ್ಪನಾಗಿ ಕಣ್ಣು ಹಳದಿ ಬಣ್ಣವಾಗಿದ್ದರೆ ಇದರ ಸೇವನೆಯಿಂದ ದಿನದಿನ ಗುಣವಾಗುತ್ತೆ. 20 ವರ್ಷಗಳಿಂದಲೂ ಅನುಭವ ಸಿದ್ಧವಾಗಿದೆ—ಮಕ್ಕಳಿಗೆ ನಮ್ಮ ಬಾ ಲ ಸಂ ಜೀ ವಿ ನಿ ಯ ನ್ನೇ ಉಪಯೋಗಿಸಿರಿ

ಬಾ ಲ ಸು ಧಾ ಬೆಲೆ 1 ರೂ ಬಾ ಲ ಸಂ ಜೀ ವಿ ನಿ 1 ರೂ

ಮೈಸೂರು, ಬೆಂಗಳೂರು, ಮದ್ರಾಸುಗಳಲ್ಲಿ ನಮ್ಮ ಶಾಖೆಗಳಿವೆ

ವೈದ್ಯಶಾಲಾ, ನಂಜನಗೂಡು

ದ್ರಾಕ್ಷಾಮೃತ

ಈ ದ್ರಾಕ್ಷಾಮೃತವು ಸಹ್ಯಾದ್ರಿ ಪರ್ವತದಲ್ಲಿ ಅನೇಕ ವನಸ್ಪತಿಗಳ ರಸವರ್ಗಗಳೊಂದಿಗೆ ದ್ರಾಕ್ಷಾರಸವನ್ನು ಮಿಶ್ರಮಾಡಿ ಸ್ವದೇಶಿ ಯಂತ್ರದಿಂದ ಶಾಸ್ತ್ರೋಕ್ತ ಪದ್ಧತಿ ಪ್ರಕಾರ ತಯಾರು ಮಾಡಿರುವದರಿಂದ ಸ್ವಾದಿಷ್ಟವೂ ಮತ್ತು ಮಧುರವೂ ಆಗಿದೆ.

ಇದರ ಸೇವನೆಯಿಂದ ಶರೀರದೊಳಗಿನ ಹಳೆ ಕಷ್ಟ (ಗರಮಿ) ಸಂಪೂರ್ಣ ನಾಶವಾಗುತ್ತದೆ. ಮತ್ತು ಧಾತುಸ್ರಾವ, ಸ್ವಪ್ನಾವಸ್ಥೆಯಿಂದ ಅಥವಾ ಬೇರೆ ಯಾವದೇ ಕಾರಣದಿಂದ ಬಂದ ಅಶಕ್ತತೆಯಿಂದ ಕೈಕಾಲು, ಸೊಂಟ ಉರುಪು, ಬೇನೆ, ಶೀತಕ್ಕೆ ಸಾಸ ಬಿಗಿದ ಇರುವಿಕೆ ಮುಂತಾದ ಎಲ್ಲ ವಿಕಾರಗಳು ನಷ್ಟವಾಗಿ ಕ್ಷುಧಾಗ್ನಿ ಬೆಳೆಯುತ್ತದೆ. ಮತ್ತು ಅನ್ನ ಚೆನ್ನಾಗಿ ಪಚನವಾಗಿ ಶೌಚಕ್ಕೆ ಸಾಫವಾಗುತ್ತದೆ. ಇದರ ಸೇವನೆಯಿಂದ ತರುಣರಿಗೆ ವ್ಯಭಿಚಾರದಿಂದ ಅಥವಾ ಬೇರೆ ಕಾರಣದಿಂದ ಬಂದ ಧಾತುಕ್ಷೀಣತೆ, ನಪುಂಸಕತ್ವ ಇದರ ಉಮ ಹೋಗಿ ಪುನಃ ಯೌವನಸಂತರ ಶರೀರ ಬಲವಾಗಿ ಮಕ್ಕಳು ಹುಟ್ಟುವಂತರಾಗುವರು. ಹೆಂಗಸರಿಗೂ ಮತ್ತು ಮಕ್ಕಳಿಗೂ ಈ ಔಷಧವು ಗುಣಕಾರಿ ಇದೆ. ಮುಟ್ಟಿನ ಗದಿದ್ದರ ಮತ್ತು ಹುಟ್ಟ ಗನಿ ಸಂಬಂಧವಾದ ರೋಗಗಳಿದ್ದರೂ ಅಷ್ಟೆ ಗುಣವಾಗಿ ಹೆಂಗಸರಿಗೆ ಸಂತತಿ ವೃದ್ಧಿಯಾಗುವದು. ಈ ಔಷಧದ ಮೂರು ಬಾಟಿಗಳನ್ನು ಸೇವನೆ ಮಾಡಿದರೆ ಪೂರ್ಣ ಗುಣವಾಗುತ್ತದೆ. ಇದರ ಅನುಭವ 1 ಬಾಟ್ಲಿ ಸೇವನೆ ಮಾಡಿದ ನಂತರ ನಿಮಗೆ ತಿಳಿಯುತ್ತದೆ.

1 ಬಾಟ್ಲಿ ಬೆಲೆ ರೂ ೧-೨-೦, 3 ಬಾಟ್ಲಿ ೩-೮-೦ 1 ಡಜನ್ ಬಾಟ್ಲಿ ಬೆಲೆ ೧೨-೦-೦

ಮ್ಯಾನೇಜರ್—ದ್ರಾಕ್ಷಾಮೃತ ಡಿಪೋ, ಪೋಸ್ಟ್ ನಿಪ್ಪಾಣಿ, ಜಿಲ್ಲಾ ಬೆಳಗಾವಿ.

ಮೈಸೂರು ಏಜಂಟ್ಸ್ —ಟಿ. ಸಿ. ನಟರಾಜ್, ಬೊಂಬಾಯಿ ಆನಂದ ಭವನ, ಮಾಡರ್ನ್ ಫಾರ್ಮಸಿ, ಸಯ್ಯಾಜಿರಾವ್ ರೋಡ್ ಬೆಂಗಳೂರು ಸಿಟಿ—ಸಿ. ಬಿ. ಶಾಸ್ತ್ರಿ ಅಂಡ್ ಸನ್ಸ್, ಚಿಕ್ಕಪೇಟೆ ತುಂಕೂರು—ಟಿ. ಆರ್. ಗುರು, ಚನ್ನಬಸಪ್ಪ ಅಂಡ್ ಬ್ರದರ್ಸ್ ಚಿಕ್ಕಮಗಳೂರು—ಎಂ. ಎಲ್. ಮಂಜಯ್ಯಶೆಟ್ಟಿ ತಿಪಟೂರು—ಶ್ರೀಕೃಷ್ಣ ಟ್ರೇಡಿಂಗ್ ಏಜನ್ಸಿ ಮತ್ತು ಬಂಡೇರಾವ್ ಬ್ರದರ್ಸ್ ದಾವಣಗೆರೆ—ಮಲ್ಲಪ್ಪ ಸೇತು ಶೆ ಳ್ಳಿಗಯ್ಯಶೆಟ್ಟಿ ಅಂಡ್ ಬ್ರದರ್ಸ್

"ಬ್ರೇಕ್ ಪಿಲ್ಸ್"

INVENTED BY A HIMALAYAN SAGE

● ಸ್ತ್ರೀಪುರುಷರಿಗೆ ಉಪಯೋಗವನ್ನುಂಟುಮಾಡುವ ಈ ಮಾತ್ರೆಗಳ ಮುಖ್ಯ ಸ್ತ್ರೀಯರ ಗರ್ಭಭಂಗವಾಗದಿರಲು ಕೊಡಬಹುದಾದ ಮಾತ್ರೆಗಳಿವು. ಇದರಲ್ಲಿ ರಸ

ಸಿಂಧೂರ, ಕಸ್ತೂರಿ, ಬಸ್ಮ, ಹಿಮಾಲಯ ಪರ್ವತದ ವನಮೂಲಿಕೆಗಳು ಮುಂತಾದುವುಗಳಿಂದ ಮಹಾಯೋಗೀಶ್ವರರ ಹತ್ತಿರ ಸಂಗ್ರಹಿಸಿ ಮುಖ್ಯವಾದವನ್ನು ಲೋಕದಲ್ಲಿ ಇಲ್ಲದಂತೆ ಮಾಡುವುದು ಅರ್ಧ ಗಂಟೆಯೊಳಗಾಗಿ ವೀರ್ಯವನ್ನು ಸ್ಥಿರಗೊಳಿಸಿ ರಮಿಸಲು ಇಚ್ಛಿಸುವವನ್ನು ಮಾಡುವುದು. ಗುಣವಿಲ್ಲದಿದ್ದಲ್ಲಿ ಹಣ ವಾಪಸು

೬೦ ಮಾತ್ರೆಗಳು ರೂ ೫—೦—೦ ೩೦ ಮಾತ್ರೆಗಳು ರೂ ೩—೦—೦

(ಕಾಗದ ಪತ್ರಗಳು ಇಂಗ್ಲೀಷಿನಲ್ಲಿಯೇ)

ಡಾll ಎ. ಎಸ್. ಮೂರ್ತಿ, ಚಿಕಾಕೋಲ್, ಗಂಜಾಮ್ ಡಿಸ್ಟ್ರಿಕ್ಟ್

ANANDA SODA FACTORY,

BEST AERATED WATER SUPPLIERS
COMPLETE REQUISITES FOR
AERATED WATER MANUFACTURERS
AVAILABLE

ಆನಂದಾ ಸೋಡಾ ಫ್ಯಾಕ್ಟರಿ,

ದೊಡ್ಡ ಪೇಟೆ, ಮೈಸೂರು

ಪಂಡಿತ ಜವಹರಲಾಲರ ಆತ್ಮಕಥೆ

[ಕನ್ನಡ ಭಾಷಾಂತರ]

ವಿಶ್ವದ ಆತ್ಮಕಥೆಗಳಲ್ಲಿ ಪಂಡಿತ ಜವಾಹರಲಾಲರವರ ಶ್ರೇಷ್ಠ ಸ್ಥಾನವನ್ನು ಗಳಿಸಿದೆ. ಇದು ಕೇವಲ ಆತ್ಮಕಥೆಯಾಗಿರದೆ ಆ ಮಹಾತ್ಮರ ಹೃದಯವು ಪ್ರತಿಯೊಂದು ಸಾಲಿನಲ್ಲಿಯೂ ಮಿಡಿಯುತ್ತ ಕಲಾತ್ಮಕವಾಗಿದೆ. ಉತ್ತಮ ಪವಿತ್ರ ಜನತೆಯ ಉಪಯುಕ್ತವಾಗಿ ಅವರ ಪದ ಬಿಡುಗಡೆಯಾದ ಮೂಲ ಗ್ರಂಥವು ಇಂಗ್ಲೆಂಡಿನಲ್ಲಿ ಈ ಒಂದು ತಿಂಗಳುಗಳಲ್ಲಿ ಐದು ಪುನರ್ಮುದ್ರಣಗಳಾಗಿ ಅತ್ಯಂತರ ಸತ್ಯದ ... ಪರಿಣಮಿಸಿದೆ.

ಪಾಶ್ಚಾತ್ಯ ಪೌರಸ್ತ್ಯ ವಿಮರ್ಶಕರೆಲ್ಲರೂ ಇದ ... ಗ್ರಂಥವನ್ನು ... ರೂಸೊ ... (ಕ್ರಾಸ್) ತಪ್ಪೊಪ್ಪಿಗೆ, ಮಹಾತ್ಮಾ ಗಾಂಧಿಯವರ ಆತ್ಮಕಥೆ (ಸತ್ಯಶೋಧನ) ಮತ್ತು ಪಂ॥ ಜವಾಹರಲಾಲರ ಆತ್ಮಕಥೆ ಇವು ಮೂರು ಪ್ರಪಂಚದ ಆತ್ಮಕಥೆಗಳಲ್ಲಿ ಶ್ರೇಷ್ಠವಾದವುಗಳೆಂದು ಪ್ರಶಂಸಿಸಿದ್ದಾರೆ.

ಈಗಾಗಲೇ ಎಲ್ಲಾ ಭಾರತೀಯ ಪ್ರಾಂತಿಕ ಭಾಷೆಗಳಲ್ಲಿ ಪಂಡಿತರ ಒಪ್ಪಿಗೆಯ ಪ್ರಕಟವಾಗಿದೆ. ಕನ್ನಡ ... ಮೂಲಕವೂ ಅವರ ಸ್ವಂತ ಮಹತ್ವವು ... ಕನ್ನಡಿಗರಿಗೆ ಇದು ... ಭಾರತದ ... ಪ್ರಪಂಚದ ... ಸಂಜನ್ಯ ...

೧,೦೦೦ ಪುಟಗಳು!

ಎರಡು ಸಂಪುಟಗಳು!!

ದೆಹ್ಲಿ ಅಷ್ಟಪತ್ರಿಕಾರ

ಈ ವರ್ಷ ಡಿಸೆಂಬರ್ ಅಂತ್ಯದಲ್ಲಿ

ಪ್ರಕಟವಾಗುವ್ವದು

ಟಪಾಲು ಖರ್ಚು ಪ್ರತ್ಯೇಕ

ಉತ್ತಮ ಪ್ರತಿ	ರೂ	೧೦–೦–೦
ವಾಚನಾಲಯ ಪ್ರತಿ	,,	೭–೦–೦
ಸಾಮಾನ್ಯ ಪ್ರತಿ	,,	೫–೦–೦

ಪ್ರಕಟಣ ಪೂರ್ವಕಾಲದ ಬೆಲೆ.

ಟಪಾಲು ಖರ್ಚು ಮಾಫತ್ತು

ಉತ್ತಮ ಪ್ರತಿ	ರೂ	೧೦–೦–೦
ವಾಚನಾಲಯ ಪ್ರತಿ	,,	೬–೦–೦
ಸಾಮಾನ್ಯ ಪ್ರತಿ	,,	೪–೮–೦

ಹಣವನ್ನು ನೇರ ಕಳುಹಿಸಬೇಕು (ಏಜಂಟರನ್ನು ನೇಮಿಸಿಲ್ಲ)

ಮುಂಗಡವಾಗಿ ಆರ್ಡರುಗಳನ್ನು ಕೊಟ್ಟು ವ್ಯಾಪಾರ ನಡಸುವ ಪುಸ್ತಕ ವ್ಯಾಪಾರಿಗಳಿಗೆ ಧಾರಾಳವಾದ ಕಮಿಷನ್ ಕೊಡಲ್ಪಡುವುದು

ಮಕ್ಕಳ ಪುಸ್ತಕದ

೧೦ ನೆಯ ವಾರ್ಷಿಕೋತ್ಸವದ

ಸಲುವಾಗಿ

ಪ್ರತಿಯೊಬ್ಬ ಚಂದಾದಾರರಿಗೂ ಬಹುಮಾನ

ನಿಮಗೂ ಬಹುಮಾನ ಬೇಕೆ?

ಕೂಡಲೆ ನಾಲ್ಕಾಣೆ ಸ್ಟಾಂಪನ್ನು ಕಳುಹಿಸಿ,

ವಿವರವನ್ನು ತರಿಸಿಕೊಳ್ಳಿ.

ಪ್ರಕಾಶಕರು:—ಸಿ. ಅಶ್ವತ್ಥನಾರಾಯಣರಾವ್, ಬಿ. ಎ.,

ಸಂಪಾದಕರು: 'ನವಜೀವನ' ಮತ್ತು 'ಮಕ್ಕಳ ಪುಸ್ತಕ'

ಬಳೇಪೇಟೆ, ಬೆಂಗಳೂರು ಸಿಟಿ.

ಪತ್ರಕರ್ತೆ ಬರೆಯುವಾಗ ದಯವಿಟ್ಟು ಸಾಧ್ವಿಯ ಹೆಸರನ್ನು ಸೂಚಿಸಿರಿ

॥ ಸತ್ಯಮೇವೋದ್ಧರಾಮ್ಯಹಮ್ ॥

ರಾಜಧಾನಿಯ ರಾಷ್ಟ್ರೀಯ ವಾರ ಪತ್ರಿಕೆ.

ವೃದ್ಧ ಪಿತಾಮಹ ಎಂ. ವೆಂಕಟಕೃಷ್ಣಯ್ಯನವರ ಜ್ಞಾಪಕಾರ್ಥವಾಗಿ ಪ್ರಕಟಿಸಲ್ಪಡುವುದು

ಸಂಪಾದಕರು ಅಗರಂ ರಂಗಯ್ಯ, ಬಿ.ಎ.

ಸಂಪುಟ ೧] MYSORE MONDAY 9—11—36 ಮೈಸೂರು : ಸೋಮವಾರ ೯—೧೧—೩೬ [ಸಂಚಿಕೆ ೩೭

ಶ್ರೀಮನ್ಮಹಾರಾಜರವರ ಆರೋಗ್ಯ.

ಶ್ರೀಮನ್ಮಹಾರಾಜರವರು ಬೆಂಗಳೂರಿಗೆ ದಯಮಾಡಿಸಿರುವರು. ಅವರಿಗೆ ಗಂಟಲು ಬಾಧೆಯು ಉಂಟಾದುದರಿಂದ ಕಳೆದ ಗುರುವಾರ ಸಣ್ಣ ಆಪರೇಷನ್ ಆಯಿತು. ಜ್ವರ ತೀವ್ರ ಬರುತ್ತಿದೆ. ಸದರಿ ಶಸ್ತ್ರ ಚಿಕಿತ್ಸೆಯು ಯಶಸ್ವಿಯಾಗಿಯೂ ಸುಲಭವಾಗಿಯೂ ಆಯಿತೆಂದು ಗೊತ್ತಾಗಿದೆ. ಪ್ರಜೆಗಳ ಶುಭಹಾರೈಕೆಯ ಫಲದಿಂದ ಶೀಘ್ರದಲ್ಲಿ ಅವರ ದೇಹಸ್ಥಿತಿಯು ಈಗ ಸಮಾಧಾನಕರವಾಗಿರುವುದೆಂದು ಕೇಳುತ್ತೇವೆ. ಇನ್ನು ಕೆಲವು ದಿನಗಳು ಬೆಂಗಳೂರಿನಲ್ಲಿ ಇರುವರು.

ಮೈಸೂರು ಪೌರ ಸಭೆ.

ಶ್ರೀ ಎನ್. ಸಿ. ರಂಗಸ್ವಾಮಯ್ಯನವರು ಈಗ ಸಿಟಿ ಮುನಿಸಿಪಲ್ ಕೌನ್ಸಿಲ್ ಮೆಂಬರಾಗಿರಲು ಅಸಮರ್ಥರಾದ್ದರಿಂದ ಆ ಸ್ಥಾನಕ್ಕೆ ಮೈಸೂರು ಡಿವಿಷನ್ ಕಮಿಷನರ್ ಶ್ರೀ ಜಿ. ಲಿಂಗಯ್ಯನವರು ಸದಸ್ಯರಾಗಿ ಗೊತ್ತುಮಾಡಲ್ಪಟ್ಟಿದ್ದಾರೆ.

ಮಾದರಿ ಗ್ರಾಮ

ಕಳೆದ ವಾರ ಹಳೇ ಊರನ್ನು ಮಾದರಿ ಗ್ರಾಮವನ್ನಾಗಿ ಏರ್ಪಡಿಸುವ ಬಗ್ಗೆ ರೂರಲ್ ಡೆವಲಪ್‌ಮೆಂಟ್ ಕಮಿಷನರು ಶ್ರೀ ಟಿ. ಜಿ. ರಾಮಯ್ಯರವರೂ, ಡಿವಿಜನ್ ಆಫೀಸರವರೂ ಇತರ ಸ್ನೇಹಿತರೂ ಕಳೆದ ಶನಿವಾರ ಹಳ್ಳಿಗೆ ದಯಮಾಡಿಸಿದ್ದರು. ಸಧ್ಯದಲ್ಲಿಯೇ ಅಲ್ಲಿನ ಕಾರ್ಯಕ್ರಮಗಳು ಆರಂಭವಾಗುವವು.

ಬಹಿಷ್ಕಾರ.

ಪೋಲಿಟಿಕಲ್ ಡಿಸ್ಟ್ರಿಕ್ಟಿನ ಸಿವಿಲ್ ಅಧಿಕಾರಿಗಳು, ಟ್ರಾವಂಕೂರಿನವರು ಬರೆದ "ಸ್ವದೇಶದ ಕ್ರಾಂತಿ" ಎಂಬ ಪುಸ್ತಕವನ್ನೂ, ಮಹಾತ್ಮರು ಬರೆದ "ಸತ್ಯಾಗ್ರಹ ಸಂಬಂಧ ಭಾಷಣಗಳು ಮತ್ತು ಕೃತಿ" ಎಂಬ ಪುಸ್ತಕವನ್ನೂ ಸಾರ್ವಜನಿಕ ವಾಚನಾಲಯಕ್ಕೆ ಸ್ವೀಕರಿಸಬಾರದೆಂದು ನಿಷೇಧಿಸಿರುವರು.

ಭಲಾ, ವಿದ್ಯಾರ್ಥಿಗಳೇ!

ಬೆಂಗಳೂರು ದಂಡಿನ ಸೆಂಟ್ ಜೋಸೆಫ್ಸ್ ಕಾಲೇಜು ವಿದ್ಯಾರ್ಥಿಗಳು ಐಕಮತ್ಯವೂ ಸ್ವಾಭಿಮಾನವೂ ಪ್ರಶಂಸನೀಯವಾದುವು. ಇತರ ವಿದ್ಯಾರ್ಥಿಗಳಿಗೆ ಇವರ ಆದರ್ಶ ಸ್ವಾಗತಾರ್ಹವಾದುವು. ಹಿಂದೆ ಒಂದು ಬಾರಿ ಅಲ್ಲಿನ ಬಿಳಿಯ ಪ್ರಿನ್ಸಿಪಾಲರು ಗಾಂಧಿ ಟೋಪಿ ಹಾಕಿಕೊಂಡು ಬಂದುದಕ್ಕಾಗಿ ಒಬ್ಬ ವಿದ್ಯಾರ್ಥಿಯನ್ನು ಒಂದು ಅಪಮಾನಪಡಿಸಿದರು. ಅದಕ್ಕಾಗಿ ವಿದ್ಯಾರ್ಥಿಗಳೆಲ್ಲರೂ ಕೋಪಗೊಂಡು, ಕಾಲೇಜಿನ ಒಂದು ಸಿಳ್ಳೆಯೂ ಬಿಡದಂತೆ ಎಲ್ಲರೂ ಗಾಂಧಿ ಟೋಪಿಗಳನ್ನು ಧರಿಸಿಕೊಂಡು ಬಂದು ಕುಳಿತರು. ಪ್ರಿನ್ಸಿಪಾಲರು ಮುಖವನ್ನು ಮುಚ್ಚಿಕೊಂಡು ತೆಪ್ಪಗಾದರು.

ಈಗ ಮತ್ತೊಂದು ಪ್ರಸಂಗ ನಡೆದಿದೆ. ಒಬ್ಬ ಬಿ. ಎ. ತರಗತಿ ವಿದ್ಯಾರ್ಥಿಯು ತರಗತಿಗೆ ಹೋದಾಗ ಪ್ರಿನ್ಸಿಪಾಲರು ಆತನನ್ನು ಸಿಕ್ಕಾಪಟ್ಟೆ ರೇಗಿಸುವುದಲ್ಲದೆ, ಮನಸ್ಸು ಬಂದಂತೆ ನಾಲಗೆ ಹರಿಸಿ ಒಂದು ಕಾಲನ್ನೂ ತೋರಿಸಿದರಂತೆ. ಇದರಿಂದ ತಕ್ಕ ಪ್ರತೀಕಾರಮಾಡಲು ವಿದ್ಯಾರ್ಥಿಗಳೆಲ್ಲರೂ ಕಳೆದ ಬುಧವಾರ ಮುಷ್ಕರ ಹಿಡಿದರು. ಒಂದು ಗಂಟೆ ಹೊತ್ತಿನಲ್ಲಿಯೇ ಪ್ರಿನ್ಸಿಪಾಲರು ಕೆಳಗಿಳಿದರು. ತಾವು ಮಾಡಿದ ಅಪರಾಧಕ್ಕಾಗಿ ಕ್ಷಮಾಪಣೆ ಬೇಡಿದರು. ಅನಂತರವೇ ವಿದ್ಯಾರ್ಥಿಗಳೆಲ್ಲರೂ ಶಾಲೆಗಳಿಗೆ ಹೋದರು.

ವಿದ್ಯಾರ್ಥಿಗಳಿಗೂ ಆತ್ಮ ಗೌರವ, ಐಕಮತ್ಯಗಳು ಬೇಕು.

ಸಹಕಾರ ದಿನಾಚರಣೆ

ಅಖಿಲಭಾರತ ಸಹಕಾರ ದಿನಾಚರಣೆಯ ಪ್ರಯುಕ್ತ ಮೊನ್ನೆ ದಿನ ಟೌನ್‌ಹಾಲಿನಲ್ಲಿ ಒಂದು ಸಭೆ ನಡೆಯಿತು. ಅದಕ್ಕೆ ಮುಂಚೆ ಸಹಕಾರಿಗಳ ದೊಡ್ಡ ಮೆರವಣಿಗೆಯಾಯಿತು. ಸಹಕಾರ ತತ್ವವನ್ನು ಪ್ರಚಾರಮಾಡುವ ಹಸ್ತಪತ್ರಿಕೆಗಳು ಹಂಚಲ್ಪಟ್ಟವು. ಸಭೆಗೆ ಪೌರಸಭಾಧ್ಯಕ್ಷರಾದ ಶ್ರೀ ಎಂ. ಎ. ಶ್ರೀನಿವಾಸರವರು ಅಧ್ಯಕ್ಷತೆಯನ್ನು ವಹಿಸಿದ್ದರು. ಸಹಕಾರ ಪ್ರಚಾರದ ಭಾಷಣಗಳೂ ಸಂಗೀತವೂ ನಡೆದವು.

ಟೀ, ಎಲೆಯ ಮೂಲವೇನು?

ಟೀ, ಎಲೆಯು ದಕ್ಷಿಣ ಭಾಗದ ಒಬ್ಬ ಯೋಗಿಯ ಕಣ್ಣು ರೆಪ್ಪೆಗಳಿಂದ ಉದ್ಭವಿಸಿತೆಂದು ಒಂದು ಹೊಸ ವಾದವು ಹೊರಟಿದೆ. ಆದುದರಿಂದಲೇ ಅದನ್ನು ಕುಡಿದವರು ನಿದ್ದೆಯನ್ನು ಹೋಗಲಾಡಿಸಿ ಎಚ್ಚರದಿಂದಿರುವುದೆಂದು ಹೇಳಲ್ಪಟ್ಟಿದೆ. ದಕ್ಷಿಣ ಭಾರತದ ಸನ್ಯಾಸಿಯಾದ ಬೋಧಿಧರ್ಮ ಎಂಬುವರು ಆರನೇ ಶತಮಾನದಲ್ಲಿ ಚೀನಾಕ್ಕೆ ಪ್ರಯಾಣ ಮಾಡಿದರು. ಅಲ್ಲಿ ಒಂದು ಮೂಲೆ ಗೋಡೆಯ ಬಳಿ ಕುಳಿತು, ಧ್ಯಾನಾಸಕ್ತರಾದರು. ಹೀಗಿರಲು ಒಂದು ಸಮಯದಲ್ಲಿ ಅವರ ಕಣ್ಣಿಗೆ ನಿದ್ದೆ ಹತ್ತುವಂತೆ ತೋರಿತು. ಇದರಿಂದ ಜಿಗುಪ್ಸಿತರಾಗಿ ಅವರು ತಮ್ಮ ಕಣ್ಣುರೆಪ್ಪೆಗಳನ್ನು ಕಿತ್ತು ನೆಲಕ್ಕೆ ಬಿಸಾಡಿದರು. ಆಗ ನಡೆದ ಆಶ್ಚರ್ಯವೇನೆಂದರೆ:— ಕಣ್ಣುರೆಪ್ಪೆಗಳು ಒಳ್ಳೆಯ ಮೊಳಕೆಯೊಡೆದು ಒಂದು ಗಿಡವಾಗಿ ಪರಿಣಮಿಸಿದವು. ಈಗಲೂ ಕೆಲವು ಬೌದ್ಧಸನ್ಯಾಸಿಗಳ ಆಶ್ರಮಗಳಲ್ಲಿ ಆವರ ಧ್ಯಾನಕ್ಕೆ ಸಹಕಾರಿಯಾಗಲು ಆಗಾಗ್ಗೆ ಸ್ವಲ್ಪ ಟೀ ಪಾನವನ್ನು ಇಟ್ಟುಕೊಂಡಿರುವರು.

ಮೀನುಗಳ ಕ್ಷಯದ ಆಸ್ಪತ್ರೆ

ಜರ್ಮನಿಯಲ್ಲಿ ಮೀನುಗಳಿಗೂ ಸಹ ಒಂದು ಕ್ಷಯರೋಗದ ಆಸ್ಪತ್ರೆಯು ನಿರ್ಮಾಣವಾಗಿದೆ. ಇದನ್ನು ಬರ್ಲಿನ್ ನಗರದಲ್ಲಿ ಸ್ಥಾಪಿಸಿರುವರು. ನಗರದ ಸಮೀಪದಲ್ಲಿರುವ, ಒಂದು ಸರೋವರದ ದಡದಲ್ಲಿ ವಿಜ್ಞಾನಿಗಳ ಶೋಧನಾಲಯದ ಬಳಿ ಈ ಆಸ್ಪತ್ರೆಯು ನಿರ್ಮಿಸಲ್ಪಟ್ಟಿದೆ.

ಕುರಿಮರಿಗೆ ಆನೆ ಮುಖ

ಬೆಂಗಳೂರು ಮುನಿಸಿಪಲ್ ಆಫೀಸಿಗೆ ಗೌಡನೊಬ್ಬನು ಒಂದು ವಿಚಿತ್ರವಾದ ಕುರಿಮರಿಯನ್ನು ತಂದಿದ್ದನು. ಅದಕ್ಕೆ ಒಂದು ಸೊಂಡಿಲೂ ದೊಡ್ಡ ಕಿವಿಗಳೂ ಇದ್ದವು, ಆನೆಯ ಮುಖವನ್ನು ಹೋಲುತ್ತಿತ್ತು. ಮೈ ಕೈಕಾಲುಗಳು ಕುರಿಗಿರುವಂತಿದ್ದವು.

ಭಾರತಮಾತಾ ಮಂದಿರ

ಕಾಶಿಯಲ್ಲಿ ಭಾರತಮಾತಾ ಮಂದಿರವೊಂದನ್ನು ಮಹಾತ್ಮಗಾಂಧಿಯವರು ಪ್ರಕಾಶಪಡಿಸಿದರು. ಇದರಲ್ಲಿ ಭಾರತಮಾತೆಯ ಚಿತ್ರವು ಭೂಪಟದರೀತಿಯಲ್ಲಿ ಅಮೃತಶಿಲೆಯಲ್ಲಿ ಕೆತ್ತಿ ಇಡಲ್ಪಟ್ಟಿದೆ. ನಮ್ಮ ದೇಶದಲ್ಲಿರುವ ಮುಖ್ಯವಾದ ಪರ್ವತಗಳೂ, ನದಿಗಳೂ ಪಟ್ಟಣಗಳೂ ಅದರಲ್ಲಿ ಕಾಣಿಸಲ್ಪಟ್ಟಿವೆ. ಈ ದೇವಾಲಯವನ್ನು ಕಟ್ಟಲು ಒಂದು ಲಕ್ಷರೂಪಾಯಿ ವೆಚ್ಚವಾಯಿತು. ಅನೇಕ ಜನ ಶಿಲ್ಪಿಗಳು ಕಳೆದ ಐದು ವರ್ಷಗಳಿಂದ ಭಾರತಮಾತೆಯ ವಿಗ್ರಹವನ್ನು ಕೆತ್ತಿದರು. ಮಂದಿರದ ಅಂಗಳದಲ್ಲಿ ಸಹ ಕಲಾಕೌಶಲ್ಯಭರಿತವಾದ ಇತರ ಅನೇಕ ವಸ್ತುಗಳು ಅಲಂಕರಿಸಲ್ಪಟ್ಟಿವೆ.

ಕಾಶಿಯ ಲಕ್ಷಾಧೀಶ್ವರರಾದ ಬಾಬು ಶಿವಪ್ರಸಾದ ಗುಪ್ತರೇ ಈ ಆಲಯದ ನಿರ್ಮಾಣಕರು. ಯಾವ ಜಾತಿ, ಕೋಮುಗಳ ಭೇದಗಳಿಗೂ ಅವಕಾಶವಿಲ್ಲದಂತೆ ಸಕಲರೂ ಬಂದು ಮಾತೃಭೂಮಿಗೆ ಭಕ್ತಿ ಕಾಣಿಕೆಯನ್ನು ಸಲ್ಲಿಸಲು ಅವಕಾಶಕೊಡುವುದಕ್ಕಾಗಿ ಈ ಮಂದಿರವನ್ನು ಇವರು ಸ್ಥಾಪಿಸಿರುವರು. ಈ ಮಂದಿರಕ್ಕೆ ಪ್ರೇಮಮಂದಿರವೆಂದು ಹೆಸರು.

ಭಾರತಮಾತೆಯ ಪ್ರತಿಷ್ಠೆಗೆ ಮುಂಚೆ ಗಾಯತ್ರಿ ಮಂತ್ರವು 21 ಲಕ್ಷ ಸಾರಿ ಜಪಿಸಲ್ಪಟ್ಟಿತು. ನಾಲ್ಕು ವೇದಗಳನ್ನೂ ನಾಲ್ಕು ಸಾರಿ ಪಾರಾಯಣ ಮಾಡಿಸಿದರು. ಹಿಂದೂ, ಪಾರ್ಸಿ, ಕ್ರೈಸ್ತ, ಮುಸಲ್ಮಾನ, ಜೈನ, ಬೌದ್ಧ ಮುಖಂಡರುಗಳು ಪ್ರಾರ್ಥನೆಯನ್ನು ಸಲ್ಲಿಸಿದರು. ಮಹಾತ್ಮರು ತಮ್ಮ ಭಾಷಣದಲ್ಲಿ ಹೀಗೆ ಹೇಳಿದರು —

"ನಮ್ಮೆಲ್ಲರ ಹೆತ್ತ ತಾಯಿಯು ಒಂದಲ್ಲ ಒಂದು ದಿನ ಮೃತಪಡುವಳು. ಆದರೆ ನಮ್ಮ ರಕ್ಷಣೆಗೆ ಕಾರಣಭೂತಳಾದ ಭೂಮಾತೆಯು ಹಾಗಲ್ಲ. ಆಕೆಯು ಮೃತಪಡುವಾಗ ತನ್ನ ಮಕ್ಕಳನ್ನೂ ಜೊತೆಯಲ್ಲಿಯೇ ಕರೆದುಕೊಂಡು ಹೋಗುವಳು. ಆದ್ದರಿಂದ ನಮ್ಮ ಜೀವನಾವಧಿಗಳನ್ನು ಪೂರಾ ಮಾತೃಭೂಮಿಯ ಅಡಿದಾವರೆಗಳಲ್ಲಿ ಅವುಗಳನ್ನು ಅರ್ಪಿಸಿ ನಿಷ್ಕಳಂಕವಾದ ಸೇವೆಯಲ್ಲಿ ನಿರತರಾಗೋಣ."

ನಿರುದ್ಯೋಗ ಮತ್ತು ದಾನ.

ಲೇಖಕರು – ಆರ್. ಕೆ ಸುಬ್ಬರಾಮಯ್ಯ
ಎಂ. ಎ., ಬಿ. ಟಿ

ಹಿಂದೂಸ್ಥಾನದಲ್ಲಿ ನಿರುದ್ಯೋಗವನ್ನು ನಾಶಪಡಿಸಲು ದಾನಗಳನ್ನು ಏರ್ಪಡಿಸಿದರು. ದಾನಗಳ ಮಹಾತ್ಮ್ಯೆಯನ್ನು ಕೊಂಡಾಡಿ ದಾತೃವಿಗೆ ಇಹಪರಾದಿ ಭೋಗಗಳ ಆಸೆಯನ್ನು ಹುಟ್ಟಿಸಿದರು. ಸ್ವರ್ಗಾದಿ ಭೋಗಗಳು ಸಿಕ್ಕುವವೋ ಇಲ್ಲವೋ ಅದನ್ನು ನಾವು ಕಂಡರಿಯೆವು. ಈ ಶರೀರವನ್ನು ಬಿಟ್ಟ ಮೇಲೆ ಆತ್ಮನು ಎಲ್ಲಿಗೆ ಹೋಗುವನೋ ಅದನ್ನು ಯಾರೂ ತಿಳಿದು ಹೇಳಲಾರರು. "ಜೀರ್ಣ ವಸ್ತ್ರಗಳನ್ನು ಬಿಸಾಟು ನೂತನ ವಸ್ತ್ರಗಳನ್ನು ಧರಿಸುವಂತೆ ಆತ್ಮನು ಈ ಶರೀರವನ್ನು ಬಿಟ್ಟು ಬೇರೆ ಶರೀರವನ್ನು ಧರಿಸುವನು" ಎಂಬ ಭಗವದ್ಗೀತೆಯ ಮಾತಿನಂತೆ ಆತ್ಮನು ಒಂದು ಶರೀರವನ್ನು ಬಿಟ್ಟು ಒಂದು [illegible] ಬೇರೆ ಶರೀರವನ್ನು ಹೊಂದಿ ಲೋಕದಲ್ಲಿ ಕಾಣಿಸಿಕೊಳ್ಳುವನು, ಎಂದಾಯಿತು. ಪೂರ್ವ ಸ್ಮರಣೆಯುಳ್ಳ [illegible] ಕಡೆಗೆ [illegible] ವಿಚಾರ ಮಾಡಿ ನೋಡಿದಲ್ಲಿ ಅದು ಸ್ಪಷ್ಟವಾಗಿ ಕಾಣುವುದು. ಸ್ವರ್ಗವಿರಲಿ, ಇಲ್ಲದಿರಲಿ, ನರಕವಿರಲಿ, ಇಲ್ಲದಿರಲಿ ನಾವು ಈ ಲೋಕದಲ್ಲಿ ಜೀವನಯಾತ್ರೆ ಮಾಡುತ್ತಿರುವಾಗ ಯಾವ ವಿಧವಾದ ತಾಪತ್ರಯಗಳೂ, ಕಂಟಕಗಳೂ ಉಂಟಾಗದಂತೆ ಸುಖವಾಗಿರಲು [illegible] ನಾವು [illegible] ಮಾಡಿಕೊಂಡು ಬೇಕಾದ [illegible] ನಮ್ಮ [illegible] ಕೊಟ್ಟ [illegible] ದಿನಗಳು ನಡೆದೀತೆ?

ನಾವು [illegible] ನಮ್ಮ [illegible] ನಾವು [illegible] ಆಗದೇ ಲೋಕದಲ್ಲಿ ಕ್ರಾಂತಿಯುಂಟಾಗುವುದು [illegible] ಕಲ್ಯಾಣ [illegible] ಯಾವ ದೇಶದಲ್ಲಿ ಯೋಗ್ಯರ [illegible] ಹೆಚ್ಚುತ್ತ [illegible] ಯಾವ ದೇಶದಲ್ಲಿ [illegible] ಆ ದೇಶದ [illegible] ಸ್ವಲ್ಪವೂ [illegible] ಜೀವನ ಸಂಪಾದನೆ ಮಾಡಿಕೊಳ್ಳಲು ಯಾವ ದೇಶದಲ್ಲಿ ಅನುಕೂಲಗಳಿಲ್ಲವೋ ಆ ದೇಶದಲ್ಲಿ ಭಿಕ್ಷುಕರ ಮತ್ತು ಕಳ್ಳಕಾಕರ ಸಂಖ್ಯೆ [illegible] ಹೆಚ್ಚಾಗಿ ಕಾಣುತ್ತೇವೆ

ಮಾತಲು [illegible] ಮನಸ್ಸು [illegible] ವ್ಯಾಸಂಗಗಳಲ್ಲಿ [illegible]

ಹೀಗೆ [illegible] ಆಸ್ಪತ್ರೆಗಳನ್ನು [illegible] ಸ್ಥಾಪಿಸಿ [illegible] ದೇವಸ್ಥಾನ [illegible] ಕೊಟ್ಟು [illegible] ಮಾಡಿದರು.

ಆ ದಾನಗಳಲ್ಲಿ [illegible] ಭೂದಾನ ನಮ್ಮ [illegible] ಕೆ ದವಸ ಧಾನ್ಯ ಪದಾರ್ಥಗಳನ್ನು [illegible] ಭೂಮಿಯು [illegible] ನಮಗೆ ಬೇಕಾದ ಯೋಗ್ಯವಸ್ತುಗಳನ್ನು ಬೆಳೆದು ನಮ್ಮ ಆಗತ್ಯವನ್ನು [illegible] ಒಂದು ಒಳ್ಳೇ ಭೂಮಿಯಿದ್ದರೆ ಸಾಲದು. ಭೂಮಿಯನ್ನು ಉತ್ತು [illegible] ಬಿತ್ತಿದರಲ್ಲವೇ ನಮಗೆ ಬೇಕಾದ ವಸ್ತುಗಳನ್ನು [illegible] ಸಾಧ್ಯವಾದೀತು? ಅದರಿಂದಲೇ ನಮಗೆ ಗೋವು ಬೇಕು. ಗೋಮಾತೆಯು ನಮಗೆ ಭೂಮಿಯನ್ನು ಉತ್ತು [illegible] ಮಾಡಲು [illegible] ಭೂಮಿಯೊಡರ ವನ್ನು ವೃದ್ಧಿಮಾಡುವುದಕ್ಕೆ [illegible] ಗೊಬ್ಬರವನ್ನೂ [illegible] ನಮ್ಮ ಶರೀರ ಪುಷ್ಟಿಗೆ [illegible] ಹಾಲು, ಮೊಸರು, ಬೆಣ್ಣೆ, ತುಪ್ಪ ಮುಂತಾದ [illegible]

ನಮ್ಮ ಪೂರ್ವಿಕರು ಗೋದಾನಕ್ಕೆ ಸಮನಾದ ದಾನವೇ ಇಲ್ಲವೆಂದರು.

ಹೀಗೆ ಒಳ್ಳೇ ಗೋ ಭೂಮಿಗಳನ್ನು ಕೊಟ್ಟಲ್ಲಿ ಸಾಲದು ಒಂದು ನೆಲೆ ಬೇಕು. ಅದಕ್ಕಾಗಿ ಗೃಹದಾನವನ್ನೇ ಕಡಿಸಿದರು. ಕೈಯಲ್ಲಿ ದೊಕ್ಕವಿಲ್ಲದೆ ಹೋದರೆ ಇತರರ ಸಹಾಯವನ್ನು ಪಡೆಯುವುದು ಕಷ್ಟ. ಅದಕ್ಕಾಗಿ ಹಿರಣ್ಯದಾನವನ್ನಿಟ್ಟರು. ಬಿತ್ತನೆಗೆ ಬೀಜ ಬೇಕು. ಅದಕ್ಕಾಗಿ [illegible] ಸದಾ [illegible] ಬೆಳೆದು ವಸ್ತ್ರಗಳನ್ನು ತಯಾರು ಮಾಡಿ [illegible] ಟ್ಟುಕೊಳ್ಳುವ ವಸ್ತ್ರ ಬೇಕು. ಅದಕ್ಕೆ ವಸ್ತ್ರದಾನವನ್ನಿಟ್ಟರು. [illegible] ಬೇಕಾದ ವಸ್ತುಗಳನ್ನೆಲ್ಲ [illegible] ಕೊಡುವ [illegible] ನಿರುದ್ಯೋಗವು ತಲೆದೋರದಂತೆ ಮಾಡುತ್ತಿದ್ದರು.

ಪೂರ್ವದಲ್ಲಿ ಮಹಾರಾಜರುಗಳು ಮತ್ತು ದೊಡ್ಡ ದೊಡ್ಡ ಶ್ರೀಮಂತರುಗಳು ಅಲ್ಲಲ್ಲಿ ಹಳ್ಳಿಗಳನ್ನು ಸ್ಥಾಪಿಸಿ ಒಕ್ಕಲುಗಳನ್ನಿಟ್ಟು ಗೋ ಭೂಮಾತೆಯರ ಸೇವೆಗೆ ಅವಕಾಶ ಕಲ್ಪಿಸಿ ಕೊಡುತ್ತಿದ್ದರು. ಇದರಿಂದ ಜನರು ತಮ್ಮ ಜೀವನವನ್ನು ಸಂಪಾದಿಸಿಕೊಂಡು [illegible] ತಮ್ಮ [illegible] ಹಳ್ಳಿಯಲ್ಲಿಯೂ ಒಂದು ತೋಪು, ಒಂದು ದೇವಸ್ಥಾನ, ಒಂದು ಕೆರೆ, ಒಂದು ಗೋಮಾಳ, ಇವುಗಳು ಇರುತ್ತಿದ್ದುವು. ಹಗಲೆಲ್ಲಾ ದುಡಿದು ಸಂಜೆಗೆ ಸರಿಯಾಗಿ ಹಳ್ಳಿಯವರೆಲ್ಲರೂ ದೇವಸ್ಥಾನದಲ್ಲಿ ನೆರೆಯುತ್ತಿದ್ದರು. [illegible] ರಾತ್ರಿ 9–10 ಘಂಟೆಯವರೆಗೆ [illegible] ಅಮೇಲೆ ತಮ್ಮ ತಮ್ಮ ಮನೆಗಳಿಗೆ ಹೋಗಿ [illegible] ಸುಖ [illegible] ಗಿಯೂ [illegible] ಗೋ



ಟಿ. ಸಿ. ನಟರಾಜ್ ಔಷಧಾಲಯ,

ಸಂಪ್ಯೋಜಿರಾವ್ ರೋಡು, ಮೈಸೂರು

ಇವುಗಳಲ್ಲಿ ಸತ್ಪರೀಕ್ಷೆಯು ಉಚಿತವಾಗಿ ಮಾಡಲ್ಪಡುತ್ತದೆ

ಉತ್ತಮಗಳಾದ ಬೇಕಾದ ಎಲ್ಲಾ ಇಂಗ್ಲೀಷ್ ಔಷಧಿಗಳೂ ಸದಾ ಕಾಲ ದೊರಕುವುವಲ್ಲದೆ ಸಮಸ್ತ ವ್ಯಾಧಿಗಳಿಗೂ ಚಿಕಿತ್ಸೆಯು ಬಹು ಸುಲಭ ಚಾರ್ಜಿನಿಂದ ಮಾಡಲ್ಪಡುತ್ತದೆ

ರೊಂಡೊರವರ ಆಯುರ್ವೇದೀಯ ಸಿದ್ಧೌಷಧಗಳೆಲ್ಲವೂ ಸದಾ ದೊರಕುತ್ತವೆ

ಭೂಮಾತೆಯರ ಸೇವೆಯು ಅವರಿಗೆ ಆರೋಗ್ಯವನ್ನೂ ಪುರಾಣಶ್ರವಣವು ವ್ಯ ಮತ್ತು ದಯವನ್ನೂ ನಿರ್ಮಲಮನಸ್ಸನ್ನೂ ಕೊಟ್ಟಿವೆಂಬುದರಲ್ಲಿ ಏನಾದರೂ ಸಂದೇಹವೆ ಉಂಟೆ?

ಈಗ ದಾನಗಳ ಸ್ವರೂಪವೇ ಬದಲಾವಣೆಯಾಗಿಹೋಗಿಬಿಟ್ಟಿದೆ. ಈಗಿನ [illegible] ದ ಜನರಿಗೆ ಅವುಗಳಲ್ಲಿ ನಂಬಿಕೆಯೂ [illegible] ಯಾಗಿಹೋಗಿವೆ. ಈಗಿನ ಕಾಲದ ವಿದ್ಯೆಯನ್ನು ಕಲಿಯುವುದರಿಂದ ಎಲ್ಲರೂ ಜೀವನ ಸಂಪಾದನೆ ಮಾಡಿಕೊಳ್ಳಬಹುದೆಂದು ತಿಳಿದಿರುವರು. ಈಗಿನ ದಾರಿದ್ರ್ಯಸ್ಥಿತಿಗೆ [illegible] ಕಾರಣವೆಂದೂ ನವೀನ [illegible] ದಕ್ಕೆ ತಕ್ಕ [illegible] ಗಂಡಿರುವಂತೆ ತೋರುತ್ತದೆ. [illegible] ಕೆ ಯಿಂದ ಬಿಳಿದವರು [illegible] ದೂರಸ್ಥಳದಲ್ಲಿ ನೀರು ಕಾಣುವಂತೆ ಮುಂದೆ ಜ್ಞಾನೋದಯವಾದಾಗ ತನ್ನ [illegible] ಯು ಬರಿ ಭ್ರಾಂತಿಯೆಂದೂ ತಿಳಿಯುವನು. ಒಂದು ದೇಶದಲ್ಲಿ ಸುಖವು ನೆಲಸಬೇಕಾದರೆ, ಐಶ್ವರ್ಯಲಕ್ಷ್ಮಿಯು ನ [illegible] ಬೇಕಾದರೆ ಆ ದೇಶದಲ್ಲಿ ಜನಗಳು ತಮಗೆ ಬೇಕಾದ ಭೋಗ್ಯವಸ್ತುಗಳನ್ನು ತಮ್ಮ ದೇಶದಲ್ಲೇ ಕಾಣಬೇಕಲ್ಲದೆ, [illegible] ತರಿಸಕೂಡದು. ಹಾಗೆ ಮಾಡಲು [illegible] ಐಶ್ವರ್ಯವು ಹಣ್ಣಿಗೆ [illegible] ಪ್ರವಾಹ [illegible] ವನ್ನು ತಾಳ ಹರಿದು ಹೋಗುವುದು. ನಮ್ಮ ಹಳ್ಳಿಗಾಡಿನವರು ತಮಗೆ ಬೇಕಾದ ಭೋಗ್ಯವಸ್ತುಗಳನ್ನೆಲ್ಲಾ ತಮ್ಮ ತಮ್ಮ ಹಳ್ಳಿಗಳಲ್ಲೇ ಉತ್ಪನ್ನಮಾಡಿಕೊಳ್ಳುತ್ತಿದ್ದರು. ಎಲ್ಲರೂ ಸಮ್ಮತಿಯಿಂದ [illegible] ತಮ್ಮಲ್ಲಾಗದ ಪದಾರ್ಥಗಳನ್ನು [illegible] ಲ್ಲೂ ಸಹ ಮುಟ್ಟುತ್ತಿರಲಿಲ್ಲ. [illegible] ಉಪಯೋಗಿಸುವುದು [illegible] ವೆಂದು ತಿಳಿದಿದ್ದರು. ಸೀಮೆಎಣ್ಣೆಯನ್ನೂ ಕೂಡ ಉಪಯೋಗಿಸಲು [illegible] ಯುತ್ತಿದ್ದರು. ಈಗ ಅವರು ತಮ್ಮ [illegible] ದ ಪದಾರ್ಥಗಳನ್ನು ಉಪಯೋಗಿಸ [illegible] ದಂದರ ಅವರಿಗೆ ನೀರು ಕುಡಿದ [illegible] ಹೋಗಿಬಿಟ್ಟಿವೆ. ಆದುದರಿಂದ [illegible] ಕ್ಯರಾಗುತ್ತಿರುವರು. ಈಗಿನ [illegible] ಒಬ್ಬನು ಜೀವನದ [illegible] ಅವರ ಕೈಗೆ ಎಟುಕದಷ್ಟು [illegible] ವುದು. ಹೀಗಾಗಿ ದೇಶವು ದಾರಿದ್ರ್ಯಕ್ಕೆ ಬಂದಿರುವುದು. [illegible] ತಲೆದೋರಿರುವುದು. ವಿದ್ಯಾವಂತರೆಲ್ಲ ಸರ್ಕಾರಿ ನೌಕರಿಗಾಗಿ ಬಾಯಿ ಬಿಡುತ್ತಿರುವರು. ಎಲ್ಲವನ್ನೂ ನಂತರ [illegible] ಜೀವನ [illegible] ದಿನದಲ್ಲಿ ಮುಂದೆ [illegible] ದಾನ ಹಂಚುವುದೂ ಅದನ್ನು [illegible] ಇರ ನೇಳಬಾರದು. [illegible] ನ್ನು [illegible] ವುದು [illegible] ನಮ್ಮ [illegible] ನುಸರಿಸಿ ಮಾರ್ಗದಂತಿರುವ 'ದಾನ' ಮಾರ್ಗವನ್ನು ಅನುಸರಿಸಿದಲ್ಲಿ ದೇಶವು [illegible] ಗ ಒಡೆಯುವುದರಲ್ಲಿ ಸಂದೇಹವೇ ಇಲ್ಲ.

ನಿರುದ್ಯೋಗವೂ, ಆತ್ಮಹತ್ಯೆಯೂ.

ನಿರುದ್ಯೋಗವು, ಅನೇಕ ಯುವಕರ ಪ್ರಾಣಹರಣಮಾಡುತ್ತಿರುವುದು ಮುಖ್ಯವಾಗಿ ಇದು ವಿದ್ಯಾರ್ಥಿಗಳಿಗಾಗೂ ಯುವಕರ ಮೃತ್ಯುದೇವತೆಯಾಗಿದೆ. ಎಷ್ಟೋ ಯುವಕರು ಈ ನಿರುದ್ಯೋಗದ ದುರ್ಭರ ಸ್ಥಿತಿಯನ್ನು ತಡೆಯಲಾರದೆ, ನಿರಾಶರಾಗಿ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಈ ... ವಿಷಯದಿಂದ ನಿರುದ್ಯೋಗವು ಹೇಗೆ ತಾಂಡವನಾಡುತ್ತಿದೆಯೋ, ಎಷ್ಟು ಜನ ಯುವಕರು ಈ ಮಹಾಮಾರಿಗೆ ಆಹುತಿಯಾಗುತ್ತಿರುವರೋ ಗೊತ್ತಾಗುವುದು. ... ಹೇಸುಕಿಯಾದಲ್ಲಿ ಒಬ್ಬ ಅನ್ನಾಮಿನ ಯುವಕನು, ಹೊಗೆಗಾಡಿಯಿಂದ ದುಮುಕಿ ಪ್ರಾಣವನ್ನು ಕಳೆದುಕೊಂಡನು. ವಿಚಾರ ಮಾಡಿದ್ದರಲ್ಲಿ ನಿರುದ್ಯೋಗವೇ ಕಾರಣ ಎಂದು ಗೊತ್ತಾಯಿತು.

ಈತನು ಉದ್ಯೋಗಕ್ಕೋಸ್ಕರ ಹುಡುಕುತ್ತಾ ಹಲವು ದಿನಗಳಿಂದ ಈ ಊರು ಆ ಊರನ್ನು ತಿರುಗುತ್ತಿದ್ದನು. ಎಲ್ಲಿಯೂ ಕೆಲಸ ದೊರೆಯಲಿಲ್ಲ. ಕೊನೆಗೆ ಆ ... ಮನೆಗೆ ಹಿಂತಿರುಗಲು ನಿಶ್ಚಯಿಸಿದನು. ಕೈಯಲ್ಲಿ ಕಾಸಿಲ್ಲ. ಹೇಗೆ ಊರು ಸೇರುವನು? ದಿಕ್ಕುತೋಚದೆ 'ಜೋ... ಸ್ಟೇಷನಿನಲ್ಲಿ ಟಿಕೆಟ್ಟು ತೆಗೆದುಕೊಳ್ಳದೆ ರೈಲು ಹತ್ತಿದನು. ರೈಲು ತನ್ನ ಗಮ್ಯಸ್ಥಾನವನ್ನು ಸೇರುವಷ್ಟರಲ್ಲಿ ಟಿಕೆಟ್ಟು ಇಲ್ಲ, ಹಿಡಿದು ಜೈಲಿನಲ್ಲಿ ಇಕ್ಕುತ್ತಾರೇನೋ ಎಂಬುವ ಭಯ. ಎ... ಮಾಡಯುತ್ತಲಿದ್ದ ಎಷ್ಟು ಅಸಹ್ಯವಾದ ಕೆಲಸವನ್ನು ಮಾಡುತ್ತಿರುವೆನಲ್ಲ ... ನಾಚಿಕೆ ತಪ್ಪಿಸಿಕೊಳ್ಳಲು ಗಾಡಿ ... ಸ್ಟೇಷನ್ನಿನಲ್ಲಿ ನಿಲ್ಲುವುದಕ್ಕೆ ಮುಂಚೆ ... ಗಾಡಿಯಿಂದ ಹೊ... ಎಷ್ಟನು ಕಣ್ಣು ತೆಗೆಯುವುದರೊಳಗೆ ಆ ಯುವಕನ ಶರೀರವು ಗಾಡಿಯ ... ಕೆಳಗೆ ಇತ್ತು. ಚಕ್ರಗಳ ಕೆಳಗೆ ಸಿಕ್ಕಿ ಅವನು ಜಜ್ಜಿಹೋದನು. ... ಪಾಪ! ಒಂದು ನಿಮಿಷದಲ್ಲಿ ... ಒಂದು ಮಾಂಸದ ಮುದ್ದೆಯಾಗಿದ್ದನು.

ಸಪ್ರೂರವರಿಗೆ ಭಾರಿ ವಕಾಲತ್ತು.

... ಸಪ್ರೂರವರಿಗೆ ಹತ್ತು ಲಕ್ಷ ರೂಪಾಯಿಗಳ ಒಂದು ಭಾರಿ ವಕಾಲತ್ತು ದೊರೆತಿದೆ. ... ವರಲ್ಲಿ ಮೈಸೂರಿನಿಂದಲೂ ಎರಡೂವರೆ ಲಕ್ಷ ರೂ ಹೋಗುವುದಾಗಿ ತಿಳಿದು ... ಫೆಡರೇಷನ್ ರಾಜ್ಯಾಂಗ ವ್ಯವಸ್ಥೆಯಲ್ಲಿ ಸೇರುವ ಮುಂಚೆ ಮೈಸೂರು, ..., ಕೊಲ್ಹಾಪುರ, ಉದಯಪುರ ... ಸಂಸ್ಥಾನಗಳ ಪರವಾಗಿ ವಕಾಲತ್ತು ಮಾಡಿ ... ಸರ್ಕಾರದ ಮುಂದೆ ವಾದಿಸಲು ... ಈ ತಿಂಗಳ ಅಂತ್ಯದಲ್ಲಿ ಇಂಗ್ಲೆಂಡಿಗೆ ಪ್ರಯಾಣಮಾಡುವರು. ಫೆಡರೇಷನ್ನಿಗೆ ಸೇರುವ ಮುಂಚೆ ನಿರ್ಧಾರವಾಗಬೇಕಾದ ... ವಿಷಯಗಳನ್ನು ಅವರು ಚರ್ಚಿಸುವರು. ಇವರ ಕಾರ್ಯವು ಸಫಲವಾಗಲೆಂದು ಹಾರೈಸೋಣ.

"ಕಾಂಗ್ರೆಸ್ಸು ನನ್ನ ತಾಯಿ"

"ಕಾಂಗ್ರೆಸ್ಸು ನನ್ನ ತಾಯಿ. ಅದಕ್ಕೆ ವಿರೋಧವಾಗಿ ನಾನು ಹೇಗೆ ನಡೆಯಲಿ?" ಎಂದು ಪಂಡಿತ ಮದನಮೋಹನ ಮಾಳವೀಯರವರು ಮೊನ್ನೆ ಒಬ್ಬರಿಗೆ ಹೇಳಿದರು. ಈಚೆಗೆ ಕೋಮುವಾರು ಸಂಗಡಗಳು ಹಿಂದೂ ಸಭೆಯಲ್ಲಿ ಉತ್ಪನ್ನವಾಗಿ ಕಾಂಗ್ರೆಸ್ ಸಭೆಗೆ ವಿರೋಧವಾಗಿ ವರ್ತಿಸಲು ಆರಂಭಿಸಿವೆ. ಅವುಗಳಲ್ಲಿ ಒಂದು ಪಕ್ಷದವರು ಪಂಡಿತರನ್ನು ಕಂಡು ತಮ್ಮ ಪಕ್ಷಕ್ಕೆ ಆಶೀರ್ವಾದ ಮಾಡಬೇಕೆಂದು ಕೇಳಿದರು ಮತ್ತು ಕಾಂಗ್ರೆಸ್ಸಿನಿಂದ ಹಿಂದೂ ಸಂಗಡದ ರಕ್ಷಣೆಯು ಸಂಪೂರ್ಣವಾಗಿ ದೊರೆಯುವುದಿಲ್ಲವೆಂದೂ ಹೇಳಿದರು. ಅದಕ್ಕೆ ಪಂಡಿತರು ಹೀಗೆ ಉತ್ತರಕೊಟ್ಟರು — "ನನ್ನ ಜೀವಮಾನದಲ್ಲೆಲ್ಲಾ ನೋಡಿರುವುದರಲ್ಲಿ ಸರ್ಕಾರವು ಈಗ ಕಾಂಗ್ರೆಸ್ಸಿನ ವಿಷಯದಲ್ಲಿ ನಿರ್ದಯವಾಗಿರುವಷ್ಟು ಯಾವಾಗಲೂ ಇರಲಿಲ್ಲ. ಕಾಂಗ್ರೆಸ್ ಸಭೆಯು ನಮ್ಮ ಸ್ವಾತಂತ್ರ್ಯ ಕಾಂಕ್ಷೆಯ ಮೂರ್ತಿಸ್ವರೂಪವಾಗಿರುತ್ತದೆ. ಕಾಂಗ್ರೆಸ್ಸನ್ನು ವಿರೋಧಿಸಿದವರು ನಮ್ಮ ಸ್ವಾತಂತ್ರ್ಯದ ಅಪೇಕ್ಷೆಯನ್ನು ವಿರೋಧಿಸಿದಂತೆ ಆಗುವುದು. ಆದ್ದರಿಂದ ನನ್ನ ಮತ್ತು ಪ್ರತಿಯೊಬ್ಬ ಭಾರತೀಯನ ಕರ್ತವ್ಯವೇನೆಂದರೆ, ಕಾಂಗ್ರೆಸ್ ಸಭೆಯ ಗೌರವವನ್ನು ಎಲ್ಲಾ ರೀತಿಯಲ್ಲಿಯೂ ಕಾಪಾಡುವುದೇ. ಕಾಂಗ್ರೆಸ್ ಸಭೆಯು ನನಗೆ ತಾಯಿಯಂತೆ. ಮಗುವು ತಾಯಿಯ ಬಳಿಗೆ ಓಡಿಹೋಗುವಂತೆ ನಾನು ಕಾಂಗ್ರೆಸ್ಸಿಗೆ ಕಾತುರದಿಂದ ಓಡಿಹೋಗುತ್ತೇನೆ. ಅದನ್ನು ನಾನು ವಿರೋಧಿಸುವೆನೆ?"

ಪ್ರಪಂಚದಲ್ಲಿ 700 ಜ್ವಾಲಾಮುಖಿಗಳು ಇವೆಯೆಂದು ಎಣಿಸಿದ್ದಾರೆ. ಅವುಗಳಲ್ಲಿ 270 ಜ್ವಾಲಾಮುಖಿಗಳು ಇನ್ನೂ ಬೆಂಕಿ ಜ್ವಾಲೆಗಳನ್ನು ಉಗುಳುತ್ತಿವೆ.

* * *

ಭೂಮಿಯು ಕರಗಿಹೋಗುತ್ತಿದೆ ಎಂದು ಪ್ರೊಫೆಸರ ಎಲ್ಸ್ ಸ್ವಾನ್‌ಸೀ‌ರವರು ಎನ್ನುತ್ತಾರೆ. ಪ್ರತಿ ಸಾವಿರ ವರ್ಷಕ್ಕೆ ಐದು ಅಂಗುಲದಷ್ಟಾಗಿ ಭೂಮಿಯ ವ್ಯಾಸವು ಕಡಿಮೆಯಾಗುತ್ತಾ ಇದೆಯಂತೆ.

* * *

ಪ್ರಪಂಚದಲ್ಲೆಲ್ಲಾ ಪರಿಶುಭ್ರವಾದ ನಗರವು ವಾಲೆಂಡಿನಲ್ಲಿರುವುದು. ಆ ನಗರವು ಬ್ರೂಕ್. ಆ ನಗರವು ಮನುಷ್ಯರಿಂದ ಪಶುಪಕ್ಷಿಗಳಿಗೆ ಹೆಸರುವಾಸಿಯಾದುದು. ಜೀವಿಗಳೆಲ್ಲವೂ ಬೇರೆ ನಗರಗಳಿಂದ ಹಾಕಲ್ಪಟ್ಟಿರುವುವು. ಮನೆಗಳ ಬಾಗಿಲುಗಳೂ ಒಂದೇ ರಂಗಿನ ಬಣ್ಣಗಳಿಂದ ಬಳಿಯಲ್ಪಟ್ಟಿವೆ.

* * *

ಬ್ರಿಟನ್ ದೇಶದಲ್ಲಿ ಮೊದಲು ವ್ಯವಸಾಯದಾರರ ತೆರಿಗೆಯನ್ನು ವಸೂಲು ಮಾಡುತ್ತಾ ಇದ್ದರಂತೆ!

* * *

ಎಲ್ಲಾ ದೇಶಗಳಿಗಿಂತಲೂ ಐರ್ಲೆಂಡಿನಲ್ಲಿ ಆತ್ಮಹತ್ಯೆಗಳು ಕಡಿಮೆಯೆಂದು ತಿಳಿದುಬರುತ್ತದೆ.

ಮತಾಂತರ ಹೊಂದುವವರಿಗೆ ಅಧಿಕಾರಿಗಳ ನಿರ್ಬಂಧ

ಜೈಪುರ ಸಂಸ್ಥಾನದ ನವಾಬರು ತಮ್ಮ ಸಂಸ್ಥಾನದಲ್ಲಿ ರಾಜಕೀಯ ಶಿಕ್ಷಣವನ್ನು ಪಡೆದು ಹೋಗಲು ಒಂದಿದ್ದರು. ಅಲ್ಲ ಈಗ ಬ್ರಿಟಿಷ್ ಮಂತ್ರಿಗಳೊಬ್ಬರು ಇರುವರು. ಕೆಲವು ದಿನಗಳ ಕೆಳಗೆ ಗಾಂಧಿ ಟೋಪಿಗಳನ್ನು ಹಾಕುವುದು ಅಲ್ಲಿ ಒಂದು ಅಪರಾಧವಾಗಿತ್ತು. ಈಗ ಮತಾಂತರ ಹೊಂದುವುದು ಅಪರಾಧವಾಗಿರುವಂತೆ ಕಾಣುತ್ತಿದೆ. ಜೈಪುರದಲ್ಲಿ ಶಿಕ್ಷಣಕ್ಕಾಗಿ ಬಂದಿದ್ದವರು ಈಚೆಗೆ ಜೈಪುರದಲ್ಲಿ ಆಗುತ್ತಿರುವ ಅನ್ಯಾಯಗಳನ್ನು ಗಮನಿಸುತ್ತಿಲ್ಲವೆಂದು ಕಾಣುತ್ತದೆ. ಇಲ್ಲಿ ಸರ್ಕಾರದವರು ಮತಾಂತರ ಹೊಂದುವವರಿಗೆ ಸಹಾಯಕವಾದ ನ್ಯಾಯಭಾಗ ಕೂಡಿಸುವ ಮಸೂದೆಯನ್ನು ತಂದಿರುವರು. ಆಕ್ಷೇಪಣೆಗಳಿದ್ದರೂ ಈಗ ಅಧಿಕಾರದಲ್ಲಿರುವ ಬ್ರಿಟಿಷ್ ಮಂತ್ರಿಗಳು ಮತಾಂತರ ಹೊಂದುವವರಿಗೆ ಶಿಕ್ಷೆಯನ್ನು ಮಾಡಿರುವುದಲ್ಲದೆ ಅವರನ್ನು ದಸ್ತಗಿರಿ ಮಾಡಿಸಿ ಸ್ಪೆಷಲ್ ಬಂದೀಖಾನೆಗಳಲ್ಲಿ ಇಡಿಸಿರುವರು.

ಅಲ್ಲಿ ಒಬ್ಬ ಮುಸ್ಲಿಂ ತರುಣಿಯು, ಒಬ್ಬ ಹಿಂದೂ ತರುಣನಲ್ಲಿ ಅನುರಾಗಹೊಂದಿ ಅವನೊಡನೆ ಓಡಿಹೋದಳು. ಅವನನ್ನು ಕ್ರಮಪ್ರಕಾರ ಮದುವೆಯಾಗಲು ಹಿಂದೂ ಮತಕ್ಕೆ ಶುದ್ಧಿಯ ಮೂಲಕ ಸೇರಬೇಕೆಂದಿದ್ದಳು. ಆಗ ಮಂತ್ರಿಗಳ ಅಪ್ಪಣೆಯಂತೆ ದಸ್ತಗಿರಿ ಮಾಡಲ್ಪಟ್ಟಳು. ತನ್ನ ಅಭಿಪ್ರಾಯವನ್ನು ಬಿಟ್ಟುಬಿಡ ಬಯಸಲಿಲ್ಲವೆಂದು ಆಕೆಯು ಹೇಮದರಿಂದ ಕಾರಾಗೃಹಕ್ಕೆ ಕಳುಹಿಸಲ್ಪಟ್ಟಿರುವಳು.

ಅದರಂತೆ ಇಬ್ಬರು ಹಿಂದೂ ಹೆಂಗಸರು ತಮ್ಮ ಮಕ್ಕಳೊಡನೆ ಕೆಲವರು ಮುಸಲ್ಮಾನರ ಜೊತೆಯಲ್ಲಿ ಓಡಿಹೋದರು. ಮುಸಲ್ಮಾನ ಜಾತಿಗೆ ಸೇರಲು ಏರ್ಪಾಡು ಮಾಡಿದರು. ಅಷ್ಟರಲ್ಲಿಯೇ ದಸ್ತಗಿರಿ ಮಾಡಲ್ಪಟ್ಟು ಕಾರಾಗೃಹದಲ್ಲಿರುವರು. ಅವರೊಡನೆ ಅವರ ಮಕ್ಕಳಿಗೂ ಕಾರಾಗೃಹವಾಸ ಪ್ರಾಪ್ತಿಯಾಗಿದೆ. ಅವರ ಒಂದು ವರ್ಗದವರ ಮತ್ತು ರಕ್ಷಕರ ವಿಚಾರಣೆಯಾಗಿ ಪತ್ತೆ ತಂದೂಮು ನಡಯುತ್ತಿದೆ.

ಒಂದು ಸಂಸ್ಥಾನದಲ್ಲಿನವರೂ ಮತವನ್ನು ಬದಲಿಸಲು ಇಂಗ್ಲೀಷ್ ಸಾಮ್ರಾಜ್ಯಕ್ಕಿಂತ ಕಡೆಯಾಗಿ ನೋಡಲು ಅವಕಾಶವಿಲ್ಲದಂತೆ ಮಾಡಿರುವುದಕ್ಕಾಗಿ ನಾವು ಸಂತೋಷಪಡಬೇಕು ಅಲ್ಲವೆ? ನಮ್ಮ ಸರ್ಕಾರದವರು ಈ ಅಂಶವನ್ನು ಗಮನಿಸಲಿ!

ಕುಮಾರಿ ಬೈರಮ್ಮ

ಕುಮಾರಿ ಬೈರಮ್ಮನ ದೇಹಸ್ಥಿತಿಯು ಇನ್ನೂ ಉತ್ತಮವಾಗಿರುವುದಿಲ್ಲ. ಆದ್ದರಿಂದ ಇರ್ವಿನ್ ನಾಲೆಯಲ್ಲಿ ಆಕೆಯು ಈಜುವುದನ್ನು ಮುಂದಿನ ತಿಂಗಳಿಗೆ ಮುಂದುವರಿಸಿದೆ.

ವಿಜಯನಗರದ ಸ್ಮಾರಕೋತ್ಸವ

ಮುಂದಿನ ತಿಂಗಳ ಅಂತ್ಯದಲ್ಲಿ ಪಂಪಾಕ್ಷೇತ್ರದಲ್ಲಿ ನಡೆಯುವ ವಿಜಯನಗರ ಸ್ಮಾರಕೋತ್ಸವಕ್ಕೆ ಸಿದ್ಧತೆಗಳನ್ನು ಮಾಡುವುದಕ್ಕಾಗಿ ಮೈಸೂರು ನಗರದಲ್ಲಿ ಒಂದು ಸಭೆಯು ಏರ್ಪಾಡಾಗಿದೆ. ಹರಿಕಥಾ ವಿದ್ವಾಂಸರುಗಳಾದ ಬೇಲೂರು ಕೇಶವದಾಸರೂ, ತುಮಕೂರಿನ ಶಿವಮೂರ್ತಿ ಶಾಸ್ತ್ರಿಗಳೂ, ಸಂಸ್ಥಾನದಲ್ಲೆಲ್ಲಾ ಸಂಚಾರ ಹೊರಡುವರು. ಜನರಲ್ಲಿ ಈ ವಿಷಯವಾಗಿ ಜಾಗ್ರತೆಯನ್ನು ಉಂಟುಮಾಡುವರು. ದ್ರವ್ಯ ಸಹಾಯವನ್ನು ತೆಗೆದುಕೊಳ್ಳುವರು ಮತ್ತು ದೊಡ್ಡ ಮನುಷ್ಯರುಗಳಿಂದ ಆಗತಕ್ಕ ಎಲ್ಲಾ ಸಹಾಯಗಳನ್ನು ಪಡೆಯುವರು.

ಈಗಾಗಲೇ ದಿವಾನ್ ಸರ್ ಮಿರ್ಜಾ ಇಸ್ಮಾಯಿಲ್‌ರೂ, ಸರ್ ಪುಟ್ಟಣ್ಣಶೆಟ್ಟರೂ, ಇತರ ಅನೇಕ ಮಹನೀಯರೂ ತಮ್ಮ ಸಹಾನುಭೂತಿಯನ್ನು ತೋರಿಸಿದ್ದಾರೆ. ಶ್ರೀಮನ್ಮಹಾರಾಜರನ್ನು ಕಂಡು ಅವರಿಗೆ ಉತ್ಸವದ ವಿಚಾರಗಳನ್ನು ಅರಿಕೆಮಾಡಲು ಒಂದು ನಿಯೋಗವು ಬರುವುದಾಗಿದೆ. ಮಹಾವಿಭೂತಿಗಳಾದ ಸರ್ ಎಂ. ವಿಶ್ವೇಶ್ವರಯ್ಯ, ರಾವ್‌ಬಹದ್ದೂರ್ ಕಂಬಳಿ ಮುಂತಾದವರುಗಳಿಗೆ ಆಹ್ವಾನವು ಹೋಗಿದೆ. ಹಿಂದಿನ ವಿಜಯನಗರದ ವೈಭವವನ್ನು ಶಾಶ್ವತವಾಗಿ ತೋರಿಸತಕ್ಕ ಗ್ರಂಥವನ್ನು ಪ್ರಕಟಿಸುವ ಆಲೋಚನೆಯಿದೆ. ಈ ಉತ್ಸವದ ಅಂಗವಾಗಿ ಸಂಗೀತ, ಸಾಹಿತ್ಯ, ಉದ್ಯೋಗಗಳಿಗೆ ಸಂಬಂಧಪಟ್ಟ ಇತರ ಸಮ್ಮೇಳನಗಳೂ, ಪ್ರದರ್ಶನಗಳೂ ಜರುಗುವುವು.

ಒಟ್ಟಿನಲ್ಲಿ ಮಹಾ ವೈಭವದ ಸಮಯವಿದು. ನಮ್ಮ ದೇಶಬಾಂಧವರೆಲ್ಲರೂ ಇದರಲ್ಲಿ ತನುಮನಧನಗಳಿಂದ ಭಾಗವಹಿಸಿ ಈ ಕಾರ್ಯವನ್ನು ಯಶಸ್ವಿಯಾಗುವಂತೆ ಮಾಡುವರೆಂದು ನಂಬುತ್ತೇವೆ.

ಆಕಾಶವಾಣಿ ಕಾರ್ಯಕ್ರಮ.

ಸೋಮವಾರ —ರಾತ್ರಿ 7-40 ರಿಂದ 9 15 ಆರ್ಕೆಸ್ಟ್ರಾ ಸಂಗೀತ, ಲೀಗ್ ಉಪನ್ಯಾಸ—"ಜನಾಂಗನಮಿತಿಯ ಭವಿಷ್ಯ" ಮಂಗಳವಾರ — 7 ರಿಂದ 8 30 ಹರಿಕಥೆ ವೇ॥ ಬ್ರ॥ ಪಟ್ಟಾಭಿರಾಮಾಚಾರ್ಯರಿಂದ "ಸತಿ ಸುಲೋಚನ" ಮತ್ತು ಉಪನ್ಯಾಸ, "ದೀಪಾವಳಿಯಲ್ಲಿ ಬಾಣ ಬಿರುಸುಗಳನ್ನು ಅಪಾಯವಿಲ್ಲದಂತೆ ಉಪಯೋಗಿಸುವುದು" ಗುರುವಾರ.— 8 30 ರಿಂದ 9 45 ಹಿಂದೂಸ್ತಾನಿ ಸಂಗೀತ ಮತ್ತು ಉರ್ದು ಸಂಭಾಷಣೆ. ಶುಕ್ರವಾರ — 6 30 ರಿಂದ 8 ಮಕ್ಕಳ ವಿಹಾರ ಮತ್ತು ಕನ್ನಡ ನಾಟಕ

ಸಾಧ್ವಿ

೯-೧೧-೩೬ ನೇ ಸೋಮವಾರ

ಯುದ್ಧವನ್ನು ಪ್ರತಿಭಟಿಸಿರಿ !

ಯುದ್ಧವನ್ನು ಪ್ರತಿಭಟಿಸುವುದಕ್ಕಾಗಿ ತಾ॥ 11-11-36 ನೇ ದಿನ ಅಖಿಲ ಭಾರತದಲ್ಲೂ ಸಭೆಗಳನ್ನು ನಡಸಿ ಭಾಷಣಗಳನ್ನು ಮಾಡಿ ನಿರ್ಣಯಗಳನ್ನು ಮಂಜೂರುಮಾಡಬೇಕೆಂದು ರಾಷ್ಟ್ರೀಯ ಸಭೆಯ ಅಧ್ಯಕ್ಷರಾದ ಪಂಡಿತ ಜವಾಹರಲಾಲರು ಅಪ್ಪಣೆ ಮಾಡಿರುವರು ಅದರಂತೆ ಎಲ್ಲ ಕಡೆಯೂ ಯುದ್ಧ ನಿರೋಧ ದಿನಾಚರಣೆಯು ನಡೆಯುವುದು

ಪ್ರಕೃತದಲ್ಲಿ ತಕ್ಷಣ ಯಾವುದಾದರೂ ಯುದ್ಧವು ಸಂಪ್ರಾಪ್ತವಾಗದೆ ಇರಬಹುದು ಆದರೆ ಈಗಿನ ಪ್ರಪಂಚದ ವಾತಾವರಣದಲ್ಲಿ ಯಾವ ಕ್ಷಣದಲ್ಲಿ ಬೇಕಾದರೂ ಎಲ್ಲಿಯಾದರೂ ಯುದ್ಧವು ಆರಂಭವಾಗಬಹುದು ಒಂದು ಮೂಲೆಯಲ್ಲಿ ಯುದ್ಧವು ಆರಂಭವಾದರೆ ಪ್ರಪಂಚದ ಎಲ್ಲಾ ಭಾಗಗಳಿಗೂ ಅದರ ಜ್ವಾಲೆಯು ವ್ಯಾಪಿಸುವುದು ಭರತ ಖಂಡಕ್ಕೂ ಅದರ ಪರಿಣಾಮವು ತಟ್ಟುವುದು ಇದುವರೆಗೆ ತನಗೆ ಇಷ್ಟವಿರಲಿ, ಇಲ್ಲದಿರಲಿ. ಭರತಖಂಡವು ಅನೇಕ ಯುದ್ಧಪ್ರಸಂಗಗಳಿಗೆ ಎಳೆಯಲ್ಪಟ್ಟಿದೆ ವಿಶೇಷ ಪ್ರಾಣ, ಧನಗಳನ್ನರ್ಪಿಸಿದೆ ಈಗ ನಡೆಯುತ್ತಿರುವ ಯುದ್ಧಗಳೆಲ್ಲವೂ ಅಧರ್ಮ ಯುದ್ಧಗಳೆಂದೂ, ಸ್ವಾರ್ಥತೆಯಿಂದ ಕೂಡಿದವುಗಳೆಂದೂ ಅವುಗಳಲ್ಲಿ ಯಾವ ರೀತಿಯಲ್ಲಿಯೂ ಭರತಖಂಡವು ಇನ್ನು ಮುಂದೆ ಭಾಗಿಯಾಗಕೂಡದೆಂದೂ ಕಾಂಗ್ರೆಸ್ ಮಹಾಸಭೆಯು ಕಳೆದ ಅಧಿವೇಶನದಲ್ಲಿ ತೀರ್ಮಾನವಾಗಿದೆ ಈ ಅಭಿಪ್ರಾಯವನ್ನು ಜನರಲ್ಲಿ ಪ್ರಚುರಮಾಡುವದಕ್ಕಾಗಿ ನಾಳಿದ್ದು ಈ ದಿನಾಚರಣೆಯನ್ನು ಏರ್ಪಡಿಸಿರುವರು

ವಸ್ತುತಃ ಭರತಖಂಡಕ್ಕೆ ಯುದ್ಧ ಮತ್ತು ರಕ್ತಪಾತಗಳ ಅಕಾಂಕ್ಷೆಯಿರುವುದಿಲ್ಲ ಇದಕ್ಕೆ ಶಾಂತಿ ಮತ್ತು ಅಹಿಂಸೆಗಳೇ ಈಗಿನ ಅಸ್ತ್ರಗಳು ಈಗಿನ ಶಸ್ತ್ರ ಮತ್ತು ಯಂತ್ರ, ಮದ್ದು ಗುಂಡುಗಳ ಯುದ್ಧಗಳಲ್ಲಿ ಭಾಗಿಯಾಗುವುದರಿಂದ ಭರತಖಂಡಕ್ಕೆ ಯಾವ ಪ್ರಯೋಜನವೂ ಆಗುವುದಿಲ್ಲ. ಆದ್ದರಿಂದ ಪಂಡಿತರವರ ಕೋರಿಕೆಯಂತೆ ನಮ್ಮ ದೇಶಬಾಂಧವರು ಈ ದಿನಾಚರಣೆಯಲ್ಲಿ ಭಾಗಿಗಳಾಗಿ ಯುದ್ಧದ ಪ್ರಸಂಗಗಳನ್ನು ಪ್ರತಿಭಟಿಸುವರೆಂದು ನಾವು ನಂಬುತ್ತೇವೆ

ತಾತಯ್ಯನವರ ಪುಣ್ಯಸ್ಮರಣೆ.

ವೃದ್ಧಪಿತಾಮಹ ಎಂ ವೆಂಕಟಕೃಷ್ಣಯ್ಯನವರ ಮೂರನೇ ಪುಣ್ಯ ದಿನಾಚರಣೆಯು ನಿನ್ನೆ ದಿನ ಟೌನ್‌ಹಾಲಿನಲ್ಲಿ ನಡೆಸಲ್ಪಟ್ಟಿತು ಅನೇಕ ಮಹಿಳೆಯರೂ ಮಹನೀಯರೂ ದಯಮಾಡಿಸಿದ್ದರು ಪೌರಸಭಾಧ್ಯಕ್ಷರಾದ ಶ್ರೀ॥ ಎಂ ಎ ಶ್ರೀನಿವಾಸರವರು ಅಗ್ರಾಸನವನ್ನು ವಹಿಸಿದ್ದರು ಸಂಗೀತವು ನಡೆಯಿತು ತಾತಯ್ಯನವರ ಗುಣಗಳನ್ನು ವಿವರಿಸಿ ಭಾಷಣಗಳಾದವು

ವಿದ್ಯುಚ್ಛಕ್ತಿ ಭವಾವಣೆ ಮೊಕದ್ದಮೆ

ವಿದ್ಯುಚ್ಛಕ್ತಿ ಇಲಾಖೆಯಲ್ಲ ಭವಾವಣೆಯ ಆಪಾದನೆಯ ಮೇಲೆ ಬೆಂಗಳೂರು ಸಿಟಿ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಮೂರು ದಿವಸ ನಡೆಯುತ್ತಿದ್ದಿತಷ್ಟೆ ನವರಿ ಕೋರ್ಟಿನಲ್ಲಿ ವಿಚಾರಣೆಯು ಮುಗಿಯಿತು. ಆಪಾದಿತರನ್ನು ಸಶನ್ಸಿಗೆ ಕಮಿಟ್ ಮಾಡಲಾಗಿದೆ.

ಜೇಡರ ಹುಳುವಿನಿಂದ ಹವಾನಿರ್ಣಯ

ಜೇಡರ ಹುಳುವು ಹವಾಬದಲಾವಣೆಗಳನ್ನು ಗೊತ್ತುಮಾಡಲು ಅತ್ಯಂತ ಸಹಕಾರಿ ಎಂದು ಹಂಗೇರಿಯ ವೈಜ್ಞಾನಿಕನೊಬ್ಬನು ತಿಳಿಸುತ್ತಾನೆ ಮಳೆಯು ಬರಲಿರುವಾಗ ಜೇಡನು ತನ್ನ ಬಲೆಯ ದಾರಗಳನ್ನು ಕೂಡಲೇ ಎಳೆದುಕೊಳ್ಳುತ್ತದೆ ಬಿಸಿಲು ಕಾಯುವಾಗ ತನ್ನ ಬಲೆಯ ದಾರವನ್ನು ದೀರ್ಘವಾಗಿ ಬಿಡುತ್ತದೆ ಮತ್ತು ಆನಂದದಿಂದ ಸೂರ್ಯಸ್ನಾನವನ್ನು ಮಾಡುತ್ತದೆ ಮಳೆಯು ಬರುವಮುಂಚೆ ಜೇಡನು ಬಲೆಯ ಬಳಿ ನಿಶ್ಚಲವಾಗಿದ್ದರೆ ಮಳೆಬರುವುದೆಂದು ತಿಳಿಯಬೇಕು ಪ್ರಕಾಶಮಾನವಾದ ಬೆಳದಿಂಗಳು ಒಂದು ದಿನ ರಾತ್ರಿಯಲ್ಲ ಇದ್ದುದಾದರೆ, ತನ್ನ ಬಲೆಯನ್ನು ಬಲಪಡಿಸುತ್ತದೆ

ಜಪಾನಿನ ಯುದ್ಧಸನ್ನಾಹ

ಜಪಾನಿನಲ್ಲಿ ಉಪ್ಪಿನಾದ ಅದರ ಪತ್ರಿಕೆಗಳಿಗೆ ಅಭಾವ ಇದ್ದರೂ ಯುದ್ಧಕ್ಕೆ ಉಪಯುಕ್ತ ಸಾಮಗ್ರಿಗಳ ಅಭಾವ ಅಮೆರಿಕಾ ದೇಶಗಳಿಂದ ಜಪಾನು ದೇಶವು ಒಂದು ವರುಷದ ಅವಧಿಗೆ ಬೇಕಾದ ಸಾಮಗ್ರಿಗಳನ್ನೆಲ್ಲಾ ಸಂಗ್ರಹಿಸಿ ಯುದ್ಧಸನ್ನಾಹವನ್ನು ಮಾಡಿಕೊಳ್ಳುತ್ತಿದೆ ತನ್ನ ಹಡಗುಗಳಲ್ಲ ಹೇರಳವಾದ ಕಬ್ಬಿಣವನ್ನೂ, ಎಣ್ಣೆಯನ್ನೂ ಸಂಗ್ರಹಿಸುತ್ತಿದೆ

ತಗಡೂರು ರಾಯರ ವಿವಾಹ

ಷರತ್ತುಗಳು.

ಶ್ರೀ ತಗಡೂರು ರಾಮಚಂದ್ರರಾಯರವರು ವಿವಾಹವಾಗಲು ಒಪ್ಪಿದ್ದಾರೆ ಅದರ ನಿಯಮಾವಳಿಯನ್ನು ಪ್ರಕಟಣೆಗೆ ಕಳುಹಿಸಿದ್ದಾರೆ. ಅವರು ತಿಳಿಸುವುದೇನೆಂದರೆ —

ನನ್ನ ಸ್ನೇಹಿತರುಗಳು ಸೇರಿ ನನ್ನ ವಿವಾಹದ ವಿಷಯವಾಗಿ ಬಹಳವಾಗಿ ಚರ್ಚೆ ನಡೆಸಿದರು ಇದು ನನ್ನ ಸ್ವಂತ ವಿಷಯವಾದರೂ ಆಗಾಗ್ಗೆ ಈ ತರಹ ಚರ್ಚೆಗಳು ಬಹಿರಂಗವಾಗಿ ಏರುತ್ತಲೇ ಇವೆ ಅದಕ್ಕಾಗಿ ಈ ಪ್ರಶ್ನೆಯನ್ನು ಬಹಿರಂಗವಾಗಿಯೇ ಇತ್ಯರ್ಥಪಡಿಸುವ ಸಲುವಾಗಿ ನನ್ನ ಪ್ರತಿಯೊಂದು ಕಾರ್ಯವೂ ಚಳವಳಿರೂಪವನ್ನು ಹೊಂದುವಂತೆ ಇದೂ ಸಹ ಆಗಬಹುದೆಂದು ನಾನು ಊಹಿಸುತ್ತೇನೆ

ಈ ಕೆಳಗೆ ಕಂಡ ನಿಯಮಗಳನ್ನು ಪಾಲಿಸುವ ಯುವತಿಯು ಸಿಕ್ಕಿದರೆ ವಿವಾಹವಾಗಲು ನಿಶ್ಚಯಿಸುತ್ತೇನೆ —

ನಿಯಮಗಳು :—(1) ನಾನೊಬ್ಬ ಹಿಂದೂ ಯುವತಿ ನನಗೆ 16 ವರ್ಷ ಕಳೆದಿದೆ ಹಿಂದೂ ಧರ್ಮದ ಆದರ್ಶವ್ಯಕ್ತಿಗಳು ಆ ಸ್ಥಾನದಲ್ಲಿ ತರುತ್ತಿದ್ದ, ತರಬೇಕಾದ ಸಮಾಜ ಸುಧಾರಣೆಯ ಕಾರ್ಯಗಳನ್ನು ಕೈಕೊಳ್ಳುವ ಸಲುವಾಗಿ ವಿವಾಹವಾಗಬಿಚ್ಛಿಸುತ್ತೇನೆ

(2) ಹಿಂದೂಮತದಲ್ಲಿ ಹಿಂದೂಧರ್ಮದ ಹೆಸರಿನಲ್ಲಿ ತುಳಿಯಲ್ಪಟ್ಟಿರುವವರ, ದೂರೀಕರಿಸಲ್ಪಟ್ಟಿರುವವರ ಅನಾಥರ ಸೇವೆಯನ್ನು ಮಾಡಿ ಹಿಂದೂಧರ್ಮದ ಪವಿತ್ರತೆಯನ್ನು ಕಾಯುವಸಲುವಾಗಿ ವಿವಾಹವಾಗಲಿಚ್ಛಿಸುತ್ತೇನೆ

(3) ಹಿಂದೂಮತದಲ್ಲಿ ಮೂಢನಂಬಿಕೆ ಬಾಲ್ಯವಿವಾಹ, ಬಡತನ, ನಿರುದ್ಯೋಗ, ಅಸಮಾನತೆ ತೆಯಬೇಕೆಂದು, ಅಸಂತುಷ್ಟಿಯಿರಬಾರದು, ಐಶ್ವರ್ಯಕ್ಕೆ ಸ್ವಾಮಿಗಳಾಗಬಾರದು, ಮತ್ತು ಗುಲಾಮರಾಗದಿರಲು, ಐಶ್ವರ್ಯವು ಧರ್ಮರಕ್ಷಕರಾಗಿ ರಾಜ್ಯದ ಆಸ್ತಿಯಾಗಿರಬೇಕು ಈ ಘನವಾದ ತತ್ವವನ್ನು ಜನಸ್ವಾಸಕ್ತಿ ತರುವಸಲುವಾಗಿ, ಪ್ರಚಾರಮಾಡುವಸಲುವಾಗಿ ಒದಗಿದವನ್ನುಗಳನ್ನು ಉಪಯೋಗಿಸುವುದಿಲ್ಲ ಶರೀರರಕ್ಷಣೆಗಾಗಿ ಅವಶ್ಯಕವಾದ ಉಡುಪನ್ನು ಧರಿಸುತ್ತೇನೆ ಸತ್ಯ, ಧರ್ಮ, ಶಾಂತಿ, ಪ್ರೇಮ ಇವುಗಳ ಅನುಷ್ಠಾನಕ್ಕಾಗಿ ವಿವಾಹವಾಗಲಿಚ್ಛಿಸುತ್ತೇನೆ

(4) ಮದುವೆಯ ಹೆಸರಿನಲ್ಲಿ ಬಾಲಕಿಯರನ್ನು ಮಾರಾಟಮಾಡುವ ಪದ್ಧತಿಯನ್ನೂ, ಸಿಕ್ಕಿಸಿಕ್ಕಿದವರಿಗೆ ಮಾರಿಯಾಗುತ್ತಿರುವ ಯುವತಿಯರ ಸ್ಥಿತಿಯನ್ನೂ ಬದಲಾಯಿಸಲು ಸರಳ ಜೀವನವೇ ಸರಿಯಾದ ಮಾರ್ಗವೆಂದು ತಿಳಿದಿದ್ದೇನೆ ಅದನ್ನು ಅನುಷ್ಠಾನಕ್ಕೆ ತಂದು ಯುವಕ ಯುವತಿಯರಿಗೆ ಇದೇ ಸರಿಯಾದ ಹಾದಿಯೆಂದು ವ್ಯಕ್ತಪಡಿಸುವಸಲುವಾಗಿ ವಿವಾಹವಾಗಲಿಚ್ಛಿಸುತ್ತೇನೆ

ಸ್ವದೇಶಿ ನೌಕಾ ಸಂಸ್ಥೆ.

ಜಹಜುಗಳೆಲ್ಲವೂ ಈಗ ಪರದೇಶೀಯರ ಕೈಯ್ಯಲ್ಲಿವೆ ಈ ಕೈಗಾರಿಕೆಗೆ ಇದುವರೆಗೆ ಆಧುನಿಕ ಕಾಲದಲ್ಲಿ ಭಾರತೀಯರು ಪ್ರಯತ್ನಿಸಿರಲಿಲ್ಲ ಈಗ ಬೊಂಬಾಯಿಯಲ್ಲಿ ಒಂದು ಸಂಸ್ಥೆಯು ಸ್ಥಾಪಿಸಲ್ಪಟ್ಟಿದೆ ಇದರ ಸಂಪೂರ್ಣ ಆಡಳಿತವು ದೇಶೀಯರ ಕೈಯಲ್ಲಿದೆ. ಇದರ ಕೇಂದ್ರ ಕಾರ್ಯಾಲಯವು ಸಿಂಧ್ಯಾ ಹೌಸ್ ಎಂಬ ಗೃಹದಲ್ಲಿ ಇರುತ್ತದೆ ಈ ಕಟ್ಟಡದ ಶಂಕುಸ್ಥಾಪನೆಯನ್ನು ಶ್ರೀ ಭುಲಾಭಾಯಿದೇಸಾಯಿಯವರು ಕಳೆದ ಗುರುವಾರ ನೆರವೇರಿಸಿದರು ಇದಕ್ಕೆ ಬೊಂಬಾಯಿ ವರ್ತಕರು ಕೋಟ್ಯಂತರ ರೂ ಬಂಡವಾಳವನ್ನು ಹಾಕಿರುವರು ಆ ಉತ್ಸವಕ್ಕೆ ಪಂಡಿತ ಮದನಮೋಹನ ಮಾಳವೀಯರೂ, ಡಾ॥ ರವೀಂದ್ರನಾಥ ಠಾಕೂರರೂ ಸರ್. ಪಿ ಸಿ ರಾಯರೂ ಪಂಡಿತ ಜವಾಹರಲಾಲರೂ, ಶುಭಸಂದೇಶಗಳನ್ನು ಕಳುಹಿಸಿರುವರು

ಮಾಂಸಾಹಾರದಿಂದ ಯುದ್ಧಾಕಾಂಕ್ಷೆ

ಮಾಂಸಾಹಾರ ಮಾಡುವವರಿಗೆ ಸಸ್ಯಾಹಾರ ಮಾಡುವವರಿಗಿಂತಲೂ ಹೆಚ್ಚು ಯುದ್ಧದಲ್ಲಿ ಆಸಕ್ತಿ ಇರುವುದೆಂದು ಇಂಗ್ಲೆಂಡಿನ ಸಸ್ಯಾಹಾರಿ ಸಂಘದ ಅಧ್ಯಕ್ಷರಾದ ಪೀಟರ್ ಫ್ರೀಮನ್‌ರವರು ಹೇಳುತ್ತಾರೆ ಈಗಿನ ಪ್ರಪಂಚ ಯುದ್ಧದ ಸಮಸ್ಯೆಯು ಮಾಂಸಾಹಾರ ಸಮಸ್ಯೆಯೊಡನೆ ಸೇರಿಕೊಂಡಿದೆಯೆಂದು ಅವರ ಅಭಿಪ್ರಾಯ ಒಂದು ಕಾಲದಲ್ಲಿ ಜರ್ಮನ್ ದೇಶವು ಶಾಂತಿಯಿಂದ ಕೂಡಿತ್ತು ಮಾಂಸಾಹಾರವನ್ನು ಮಾಡಲು ಆರಂಭಿಸಿದಮೇಲೆ ಅದು ಸತತ ಯುದ್ಧಗಳ ಗಂಟೆಗಳಿಗೆ ಉಪಕ್ರಮಿಸಿತು ಇತರ ದೇಶಗಳಂತೆಯೇ ಇದೂ ಸಹ ಕ್ರೂರ ಆವೇಶಗಳನ್ನು ಹೆಚ್ಚಾಗಿ ಹೊಂದುತ್ತಿದೆ

(5) ಹಿಂದೂಮತದ ಸಂಘಟನೆಗಾಗಿ ಸರ್ವಸ್ವವನ್ನೂ ತ್ಯಾಗಮಾಡಿ ದುಡಿಯುವ ಸಲುವಾಗಿ ವಿವಾಹವಾಗಲಿಚ್ಛಿಸುತ್ತೇನೆ

(6) ಮೇಲ್ಕಂಡ ನಿಯಮಗಳನ್ನು ಬಹಳ ದೀರ್ಘವಾಗಿ ಆಲೋಚಿಸಿ ದೈಹಿಕ ಮಾನಸಿಕ ಮತ್ತು ಆರ್ಥಿಕ ಸುಧಾರಣೆಗೆ ದೇಶಕ್ಕೆ ಎಷ್ಟು ಅವಶ್ಯವೋ ಅದಕ್ಕಿಂತಲೂ ಅಧಿಕವಾಗಿ ಬಾಲಕ ಬಾಲಕಿಯರ ಸುಗೃಹ ವ್ಯವಸ್ಥೆಯು ಅಗತ್ಯವೆಂದು ತಿಳಿದು ಇಷ್ಟ ಬಂಧುಗಳ ಅಭಿಪ್ರಾಯಗಳನ್ನು ಪಡೆದು ಮಹಾಜನರ ಮಧ್ಯದಲ್ಲಿ ಪ್ರಮಾಣಪೂರ್ವಕವಾಗಿ ನನ್ನ ಜೀವಮಾನದ ಸಂಪೂರ್ಣ ಜವಾಬ್ದಾರಿಯಿಂದ ವಿವಾಹವಾಗಲಿಚ್ಛಿಸುತ್ತೇನೆ

ಈ ಷರತ್ತುಗಳಿಗೆ ಅನುಮೋದಿಸುವರು ಕೆಳಗಿನ ವಿಳಾಸದವರೊಡನೆ ಪತ್ರವ್ಯವಹಾರವನ್ನು ಬೆಳೆಸಬಹುದು

ಎಸ್ ನಾರಾಯಣರಾವ್,
ಸ್ಟೀಲ್‌ವರ್ಕ್ಸ್
ಲ್ಯಾನ್ಸ್‌ಡೌನ್ ಬಜಾರ್, ಮೈಸೂರು

ದೀಪಾವಳಿಗೆ ಖಾದಿಯನ್ನೇ ಕೊಳ್ಳಿರಿ.

ಬರುವ ಶುಕ್ರವಾರ ದೀಪಾವಳಿ ಹಬ್ಬ. ಲಕ್ಷಾಂತರ ಜನರು ಆನಂದಪಡುವ ದಿನ. ಬಡವರು, ಬಲ್ಲಿದರು, ಎಲ್ಲರೂ ಹೊಸ ಬಟ್ಟೆಗಳನ್ನು ಧರಿಸುವರು ಅವರು ಖಾದಿ ಬಟ್ಟೆಯನ್ನೇ ಕೊಂಡು ಧರಿಸಿದರೆ ಬಹಳ ಶ್ರೇಯಸ್ಕರವು.

1920 ನೇ ಇಸವಿಯಲ್ಲಿ ಮಹಾತ್ಮ ಗಾಂಧಿಯವರು ಕೈ ರಾಟೆಯೇ ಭರತಖಂಡದ ಭಾಗ್ಯದ ಚಿಹ್ನೆಯೆಂದು ಸಾರಿದರು. ಬಿಸಿಲಿನ ರಾಟೆಯು ನಮ್ಮ ಸ್ವಾತಂತ್ರ್ಯದ ನೆಲೆಯ ಹೆಗ್ಗುರುತಾಗಿದೆ. ಲಕ್ಷಾಂತರ ಜನರು ಖಾದಿ ಬಟ್ಟೆಯನ್ನು ಧರಿಸಲು ಪ್ರೇಮಿಸುವರಾದರೆ ಆದರೂ ಅನೇಕರಿಗೆ ಖಾದಿಯ ಮಹತ್ವವು ಇನ್ನೂ ಮನಗಂಡಿಲ್ಲ. ಯಂತ್ರಯುಗವು ಪ್ರಪಂಚವನ್ನೆಲ್ಲಾ ಆಕ್ರಮಿಸುತ್ತಿರುವಾಗ ನಾವು ಮಾತ್ರ ಏಕೆ ಹಿಂದಕ್ಕೆ ಹೋಗಬೇಕೆಂದು ಜನರು ಕೇಳುವರು. ಆದರೆ ಇಂತಹವರು ಒಂದು ವಿಷಯವನ್ನು ಮರೆಯುವರು. ಭರತಖಂಡ ವ್ಯವಸಾಯ ಪ್ರಧಾನವಾದ ದೇಶ. ಇಲ್ಲಿ ಏಳುವರೆ ಲಕ್ಷ ಗ್ರಾಮಗಳಿವೆ. ಅವುಗಳಲ್ಲಿ ನೂರಕ್ಕೆ 90 ರಷ್ಟು ಜನರು ವಾಸಿಸುವರು. ಅವರ ಪೈಕಿ ಶೇ|| 70 ಜನ ವ್ಯವಸಾಯಗಾರರು. ಇವರುಗಳ ಸರಾಸರಿ ಆದಾಯ 12 ರೂ. ಇವರು ವರ್ಷಕ್ಕೆ ನಾಲ್ಕು ತಿಂಗಳು ಏನೂ ಕೆಲಸವಿರುವುದಿಲ್ಲ. ಇಂತಹವರು ತಮ್ಮ ಬಿಡುವಿನ ಕಾಲದಲ್ಲಿ ದಿನಕ್ಕೆ ಕೆಲವು ಆಣೆಗಳನ್ನಾದರೂ ಸಂಪಾದಿಸಬೇಕಾದರೆ ಎಲ್ಲರಿಗೂ ಪ್ರಯೋಜನವಾಗುವುದು. ನಮ್ಮ ದೇಶದಲ್ಲಿ ಸಾರ್ವತ್ರಿಕವಾಗಿ ಭಾರಿ ಭಾರಿ ಕೈಗಾರಿಕೆಗಳನ್ನು ಸ್ಥಾಪಿಸಲು ಅವಕಾಶವು ಹಿತವೂ ಅಲ್ಲ. ವ್ಯವಸಾಯವನ್ನು ನಿರ್ಲಕ್ಷಿಸಲು ಸಾಧ್ಯವಲ್ಲ. ಗಿರಣಿಗಳಲ್ಲಿ ಕೆಲಸ ಮಾಡಲು ಸಾಧ್ಯವಿಲ್ಲ.

ಗಿರಣಿ ಬಟ್ಟೆಯು ಮಿಲ್ಲು ಬಟ್ಟೆಗಳಿಗಿಂತ ಎಲ್ಲಾ ವಿಷಯದಲ್ಲಿಯೂ ಶ್ರೇಷ್ಠವಾದದ್ದು. ಖಾದಿ ಮಿಲ್ಲು ಬಟ್ಟೆಯಲ್ಲಿ ಶೇ|| 20 ರಷ್ಟು ಮಾತ್ರ ಕೂಲಿಗಾರರಿಗೆ ಸಲ್ಲುತ್ತದೆ. ಖಾದಿಯಲ್ಲಿ ಶೇ|| 70 ರಷ್ಟು ಸಲ್ಲುತ್ತದೆ. ಇತರ ಜನರಿಗೆ ಇದರಿಂದ ಜೀವನ ನಡೆಯುತ್ತದೆ.

ಒಂದಾನೊಂದು ಕಾಲದಲ್ಲಿ ಈ ಕೈಗಾರಿಕೆ ಭರತಖಂಡಕ್ಕೆ ವಿಶೇಷ ಖ್ಯಾತಿ ತಂದಿತ್ತು. ಇತರ ದೇಶಗಳಿಗೂ ಬಟ್ಟೆ ರಫ್ತು ಮಾಡುತ್ತಿತ್ತು. ಬ್ರಿಟಿಷರ ಆಳ್ವಿಕೆಯ ಮೇಲೆ ಈ ವ್ಯಾಪಾರವು ಬಿದ್ದು ಹೋಯಿತು. ಮಿಲ್ ಬಟ್ಟೆಗಳನ್ನು ಈ ದೇಶದ ಮೇಲೆ ಸುರಿದರು. ಇಲ್ಲಿ ನೇಯ್ದ ಬಟ್ಟೆಗಳಿಗೆ ವಿಪರೀತ ಸುಂಕಗಳನ್ನು ಹೇರಿದರು. ಒಂದಕ್ಕೆ ಹತ್ತು ಮತ್ತು ಹಲವು ಸಂದರ್ಭಗಳಲ್ಲಿ ಮುವತ್ತರಷ್ಟು ಸಹ ತೆರಿಗೆಗಳು ಇದ್ದವು. ಆದರೂ ಈ ವ್ಯಾಪಾರ ನಷ್ಟವಾಯಿತು.

ಗೆಜೆಟ್ ಸಂಗ್ರಹ

ಅಧಿಕಾರಿಗಳ ವರ್ಗಾವರ್ಗಿ

ಈ ಕೆಳಗೆ ಕಂಡ ವರ್ಗಾವರ್ಗಿಗಳು ಸರ್ಕಾರಿ ಗೆಜೆಟ್ಟಿನಲ್ಲಿ ಪ್ರಕಟವಾಗಿರುವುವು —

ಬೆಂಗಳೂರು ಡಿಸ್ಟ್ರಿಕ್ಟ್ ಮತ್ತು ಸೆಷನ್ಸ್ ಜಡ್ಜ್ ಶ್ರೀ ಟಿ. ಸಿಂಗಾರವೇಲು ಮೊದಲಿಯಾರ್‌ರವರನ್ನು ಮೈಸೂರಿಗೆ ವರ್ಗಾಯಿಸಲಾಗಿದೆ.

ಶಿವಮೊಗ್ಗ ಡಿಸ್ಟ್ರಿಕ್ಟ್ ಸೆಷನ್ಸ್ ಜಡ್ಜ್ ಶ್ರೀ ಎಸ್. ವೆಂಕಟರಂಗಯ್ಯಂಗಾರ್‌ರವರನ್ನು ಬೆಂಗಳೂರಿಗೆ ವರ್ಗಾಯಿಸಲಾಗಿದೆ.

ಬೆಂಗಳೂರು ಆಕ್ಟಿಂಗ್ ಅಡೀಷನಲ್ ಡಿಸ್ಟ್ರಿಕ್ಟ್ ಜಡ್ಜ್ ಶ್ರೀ ಕೆ. ಸುಬ್ರಹ್ಮಣ್ಯ ಅಯ್ಯರ್‌ರವರನ್ನು ಶಿವಮೊಗ್ಗ ಡಿಸ್ಟ್ರಿಕ್ಟ್ ಜಡ್ಜರಾಗಿ ವರ್ಗಾಯಿಸಲಾಗಿದೆ.

ಮೈಸೂರು ಸಬಾರ್ಡಿನೇಟ್ ಜಡ್ಜ್ ಶ್ರೀ ಜಿ. ಪರಮಶಿವಯ್ಯನವರನ್ನು ಬೆಂಗಳೂರು ಅಡೀಷನಲ್ ಡಿಸ್ಟ್ರಿಕ್ಟ್ ಮತ್ತು ಸೆಷನ್ಸ್ ಜಡ್ಜರಾಗಿ ವರ್ಗಾಯಿಸಲಾಗಿದೆ.

ಮೈಸೂರು ಹೈಕೋರ್ಟಿನಲ್ಲಿ ಒಂಪರರಿ ಜಡ್ಜ್ ರಾಗಿರುವ ಶ್ರೀ ಎನ್. ಕೆ. ಶ್ರೀನಿವಾಸರಾಯರಿಗೆ ನವೆಂಬರ್ ೧೬ ರಿಂದ (ಉದ್ಯೋಗದಿಂದ ನಿವೃತ್ತರಾಗುವ ಪೂರ್ವಭಾವಿಯಾಗಿ) ಪ್ರಿವಿಲೇಜ್ ರಜಾ

ಆರನೇ ಶತಮಾನದ ಮಧ್ಯದಲ್ಲಿ ಈ ವ್ಯಾಪಾರವು ಶುದ್ಧಾಂಗವಾಗಿ ನಿಂತಿತು. ಇಲ್ಲಿನ ಕಸಬುಗಾರರಿಗೆ ಚಿತ್ರವಿಚಿತ್ರವಾದ ಹಿಂಸೆಗಳೂ, ನಿರ್ಬಂಧಗಳೂ, ತೆರಿಗೆಗಳೂ ಒಳದೇಶದ ಕಂಪೆನಿಯವರಿಂದ ಹಾಕಲ್ಪಟ್ಟು ಈ ಉದ್ಯೋಗವು ನಾಶ ಮಾಡಲ್ಪಟ್ಟಿತು. ಕೈಗಾರಿಕೆಗಳೆಲ್ಲಾ ಹಾಳಾದವು. ವ್ಯವಸಾಯವೊಂದೇ ಉಳಿಯಿತು. ಆಗ ತಮ್ಮ ದಿವ್ಯದೃಷ್ಟಿಯಿಂದ ಗಾಂಧಿಯವರು ಈ ಕೈಗಾರಿಕೆಯನ್ನು ಪುನಃ ಸ್ಥಾಪಿಸಿದರು.

ಸರ್ ಎಂ. ವಿಶ್ವೇಶ್ವರಯ್ಯನವರಂತಹ ಕೈಗಾರಿಕೆಗಳ ನಿಪುಣರೂ, ಖಾದಿಯಿಂದ ಲೀ ಜನರಿಗೆ ಹಸಿವು ಇಂಗಬೇಕೆಂದು ಹೇಳುವರು. ವಿಪಸ್ನಿಸಿಂದ ಎಲ್ಲಾ ಕೆಲಸಗಳನ್ನು ಮಾಡಿಸಬಹುದಾಗಿರುವಾಗ ಕೈನೂಲು, ಕೈ ಮಗ್ಗಗಳಿಂದ ಏನು ಪ್ರಯೋಜನವೆಂಬ ಶಂಕೆಯು ಅವರಿಗೂ ಇತ್ತು. ಇದೊಂದು ವ್ಯರ್ಥ ಕಾಲಹರಣವೆಂದು ಅವರು ಮೊದಲು ಭಾವಿಸಿದ್ದರು. ಆದರೆ ನಿರುದ್ಯೋಗವನ್ನು ನಿವಾರಿಸಲು ಯಾವ ವ್ಯವಸ್ಥೆಯೂ ಇಲ್ಲದ ಹೊಟ್ಟೆಗಿಲ್ಲದ ಜನರು ಅನೇಕರು ಇರುವ ಈ ಸಂದರ್ಭದಲ್ಲಿ ಖಾದಿ ಚಳುವಳಿಯು ಬಹಳ ಉಪಯುಕ್ತವಾಗಿದೆಯೆಂದು ಅವರು ಹೇಳಿದ್ದಾರೆ. ಬಡವರ ಜೀವನೋಪಾಯಕ್ಕೆ ಖಾದಿಯು ಒಂದು ಮುಖ್ಯ ಹಾದಿ. ಆದಕ್ಕೆ ಎಲ್ಲರೂ ಸಹಕಾರಿಗಳಾಗಿ ದೀಪಾವಳಿಯಲ್ಲಿ ಹೊಸ ಖಾದಿ ಬಟ್ಟೆಗಳನ್ನೇ ಧರಿಸಿ!

ಕೊಡಲಾಗಿದೆ. ಅವರ ಸ್ಥಾನದಲ್ಲಿ ಬಂದಿನಿಂದ ಗೌ|| ಅಡ್ವೊಕೇಟ್ ಶ್ರೀ ಎ. ಆರ್. ನಾಗೇಶ್ವರಯ್ಯರ್‌ರವರು ಟೆಂಪರರಿ ಜಡ್ಜರಾಗಿ ಕೆಲಸ ಮಾಡುವರು.

ಜಸ್ಟಿಸ್ ಶ್ರೀ ಎ. ಎಸ್. ಆರ್. ಚಾರಿಯವರು ಡಿಸೆಂಬರ್ ೧ ರಲ್ಲಿ ಸರ್ಕಾರಿ ಉದ್ಯೋಗದಿಂದ ನಿವೃತ್ತರಾಗುವರು. ಅವರ ಸ್ಥಾನದಲ್ಲಿ ಅಂದಿನಿಂದ ಜಸ್ಟಿಸ್ ಶ್ರೀ ಎನ್. ಕೆ. ಶ್ರೀನಿವಾಸರಾಯರು ಖಾಯಂ ಆಗುವರು.

ಡೆಪ್ಯುಟಿ ಕಮೀಷನರ್ ಶ್ರೀ ಎನ್. ಸುಂದರರಾಜಯ್ಯಂಗಾರ್‌ರವರು ಸರ್ವೆ ಮತ್ತು ಸೆಟ್ಲ್‌ಮೆಂಟ್ ಸೂಪರಿಂಟೆಂಡೆಂಟರಾಗಿ ವರ್ಗವಾಗಿರುವರು. ಅವರ ೩ ತಿಂಗಳು ರಜ ಮುಗಿದನಂತರ ಅಧಿಕಾರವನ್ನು ಅವರು ವಹಿಸುವರು. ಆ ಅಧಿಕಾರದಲ್ಲಿರುವ ಶ್ರೀ ಎಂ. ನರಸಿಂಹ ನಾಯುಡು ರವರನ್ನು ಡೆಪ್ಯುಟಿ ಕಮೀಷನರ್ ಆಗಿ ಚಿತ್ರದುರ್ಗಕ್ಕೆ ವರ್ಗಾಯಿಸಲಾಗಿದೆ.

ಡೆಪ್ಯುಟಿ ಕಮೀಷನರಾಗಿ ಕಡೂರಿಗೆ ಶ್ರೀ ಟಿ. ಎಸ್. ರಾಘವೇಂದ್ರರಾಯರನ್ನು ವರ್ಗಾಯಿಸಲಾಗಿದೆ.

ಕಡೂರು ಡೆಪ್ಯುಟಿ ಕಮೀಷನರಾಗಿದ್ದ ಶ್ರೀ ಎಂ. ಅಬ್ದುಲ್ ಹಕ್‌ರವರನ್ನು ಕೆ. ಆರ್. ಎಸ್. ವರ್ಕ್ಸ್ ಸ್ಪೆಷಲ್ ಲ್ಯಾಂಡ್ ಅಕ್ವಿಸಿಷನ್ ಆಫೀಸರಾಗಿ ವರ್ಗಾಯಿಸಲಾಗಿದೆ.

ಶ್ರೀ ಎ. ಆರ್. ನಾಗೇಶ್ವರಯ್ಯರ್ ಸ್ಥಾನದಲ್ಲಿ ಗೌ|| ಅಡ್ವೊಕೇಟರಾಗಿ ಶ್ರೀ ಮಿರ್ಲೆ ಎನ್. ಲಕ್ಷ್ಮೀನಾರಾಣಪ್ಪನವರನ್ನು ನೇಮಿಸಲಾಗಿದೆ.

ಮೈಸೂರು ಎ. ಜಿ. ಓ. ಆದ ಮಿ|| ಎಫ್. ಎ. ಹ್ಯಾಮಿಲ್ಟನ್‌ರವರಿಗೆ ನವೆಂಬರ್ ೧೦ ರಿಂದ ೬ ತಿಂಗಳುಗಳು ಮತ್ತು ೭ ದಿವಸಗಳ ಪ್ರಿವಿಲೇಜ್ ರಜ ಮುಂದೂಡಾಗಿ ದ ೧೯೩೭ ನೇ ಮೇ ಕೊನೆಯವರೆಗೆ ಅವರಿಗೆ ರಜ ಕೊಡಲಾಗಿದೆ. ಆ ಸಮಯದಲ್ಲಿ ಅವರಿಗೆ ಅಕೌಂಟೆಂಟ್ಸ್‌ಗಳಲ್ಲಿ ಬೆಂಗಳೂರು ಮಿ|| ಶ್ರೀ ಹೆಚ್. ವಿ. ರಾಮಸ್ವಾಮಿಯವರು ನವೆಂಬರ್ ೧೧ ರಿಂದ ಎ. ಜಿ. ಓ. ಯವರಾಗಿ ಕೆಲಸ ಮಾಡುವರು.

ಸ್ಟೋರ್ಸ್ ಪರ್ಚೇಸ್ ಕಮಿಟಿ ಸೆಕ್ರೆಟರಿ ಶ್ರೀ ವಿ. ವೇದವ್ಯಾಸಾಚಾರ್ಯರನ್ನು ಬೆಂಗಳೂರು ಜಿಲ್ಲಾ ಮಿ|| ಆಗಿ ವರ್ಗಾಯಿಸಲಾಗಿದೆ.

ನಂಜನಗೂಡು ಡಿವಿಜನ್ ಎ. ಎಸ್. ಪಿ. ಆದಂತಹ ಶ್ರೀ ಎಂ. ಎ. ಎ. ನಾಯಕ್‌ರವರನ್ನು ರೈಲ್ವೆ ಮತ್ತು ಸಿ. ಐ. ಡಿ. ಸೂಪರಿಂಟೆಂಡೆಂಟರಾಗಿ ವರ್ಗಾಯಿಸಲಾಗಿದೆ.

ಪೋಲೀಸು ಇನ್ಸ್‌ಪೆಕ್ಟರಾದ ಶ್ರೀ ಚಾಂಡಿಯವರನ್ನು ನಂಜನಗೂಡು ಡಿವಿಜನ್ ಎ. ಎಸ್. ಪಿ. ಆಗಿ ವರ್ಗಾಯಿಸಲಾಗಿದೆ.

ಬರುವ ಡೆಲ್ಲಿ ದರ್ಬಾರ್.

ಮುಂದಿನ ವರ್ಷ ಡಿಸೆಂಬರ್ ತಿಂಗಳಲ್ಲಿ ಅಥವಾ 1938ನೇ ಜನವರಿಯಲ್ಲಿ ಎಷ್ಟನೇ ಪ್ರಭುಗಳು ಭರತಖಂಡಕ್ಕೆ ಬಂದು ದರ್ಬಾರ್ ನಡೆಸುವುದಾಗಿ ತಿಳಿದುಬಂದಿದೆ. ಇದಕ್ಕೆ ಸಂಬಂಧಪಟ್ಟ ಏರ್ಪಾಡುಗಳು ಈಗಾಗಲೇ ನಡೆಯುತ್ತಿವೆ. ಹಿಂದೆ ವೆಹಲಿ ದರ್ಬಾರು ನಡೆದಾಗ ಮಾಡಿದ್ದ ಏರ್ಪಾಡುಗಳನ್ನು ಅಧಿಕಾರಿಗಳು ವಿವರವಾಗಿ ಪರಿಶೀಲಿಸುತ್ತಿರುವರು. ಮುಂದಿನ ದರ್ಬಾರು ನಡೆಯಬೇಕಾದ ರೀತಿ, ಚಕ್ರವರ್ತಿಗಳ ಪ್ರಯಾಣ ಕಾರ್ಯಕ್ರಮ ಇತ್ಯಾದಿ ವಿಷಯಗಳನ್ನು ಈಗಿನಿಂದಲೂ ಪರಿಶೀಲಿಸುತ್ತಿರುವರು. ದರ್ಬಾರು ಬಹಳ ವೈಭವದಿಂದಲೇ ನಡೆಯಬಹುದೆಂದು ನಿರೀಕ್ಷಿಸಲ್ಪಟ್ಟಿದೆ.

ಮಾನಭಂಗಕ್ಕೆ ಪ್ರಾಣಭಂಗ

ಅಮೆರಿಕಾ ಸಂಯುಕ್ತ ರಾಷ್ಟ್ರಗಳಲ್ಲಿ ಈ ನವನಾಗರಿಕ ಯುಗದಲ್ಲಿಯೂ ಕೂಡ ಎಂತಹ ಕೃತ್ಯಗಳು ನಡೆಯುತ್ತಲಿವೆ ಯೆಂಬುದರ ವಿಷಯವನ್ನು ಗಮನಿಸಿದರೆ ಗೊತ್ತಾಗುವುದು.

ಡಾಲ್ಟನ್ ಗ್ರಾಮದಲ್ಲಿ 21 ವರ್ಷದ ನೀಗ್ರೋ ಒಬ್ಬನು, ಒಂದು ಶ್ವೇತಜಾತಿ ಸ್ತ್ರೀಯಮೇಲೆ ಅತ್ಯಾಚಾರ ನಡೆಸಿದನಂತೆ. ಅದಕ್ಕೆ ಅವನನ್ನು ಜೈಲಿನಲ್ಲಿ ಹಾಕಿದರು. ಆ ಬಳಿಯರಿಗೆ ಕ್ರೋಧವು ಕಡಿಮೆಯಾಗಲಿಲ್ಲ. ಜಾತ್ಯಹಂಕಾರವು ಬೆಳೆಯಿತು. ಆ ಬಿಳಿಯ ಜಾತಿಯ ಗುಂಪು ಅರ್ಧರಾತ್ರಿಯಲ್ಲಿ ಪಿಸ್ತೋಲ್‌ಗಳನ್ನು ಹಿಡಿದುಕೊಂಡು, ಜೈಲ್ ಬಾಗಿಲನ್ನು ಒಡೆಯಿತು. ಜೈಲಿನಲ್ಲಿದ್ದ ಆ ನೀಗ್ರೋ ಯುವಕನನ್ನು ಅನೇಕವಿಧವಾಗಿ ಹಿಂಸಿಸಿದರು. ಕೊನೆಗೆ ಕೊಂದುಹಾಕಿ ಆ ಮೃತ ಕಳೇಬರವನ್ನು ಒಂದು ಮರಕ್ಕೆ ತೂಗುಹಾಕಿ ಹೊರಟು ಹೋದರು. ಅಲ್ಲಿಯವರೆಗೂ ಅವರಿಗೆ ಮನಶ್ಶಾಂತಿ ಆಗಲಿಲ್ಲ.

ಹೊಸ ದರ್ಬಾರ್ ಭಕ್ಷಿಗಳು

ಗತಿಸಿದ ದರ್ಬಾರ್ ಭಕ್ಷಿ ಮಿ|| ಲಿಂಗರಾಜೇ ಅರಸಿನವರ ಸ್ಥಾನದಲ್ಲಿ ಮಿ|| ಎಚ್. ಎಲ್. ದೇವರಾಜೇ ಅರಸಿನವರು ಅರಮನೆ ದರ್ಬಾರ್ ಭಕ್ಷಿಗಳಾಗಿ ನೇಮಿಸಲ್ಪಟ್ಟಿರುವರು.

House to let.

A big and well ventilated house with fourteen decent rooms and spacious Hall and with upstairs, fit for Hostels or Hotels near College University, Public Offices etc

Apply for details to —

X

C/o Sadhvi Office, Mysore

ಕಿರೀಟಧಾರಣೆಗೆ ಭರತ ಖಂಡದ ವಜ್ರವೈಡೂರ್ಯಗಳು

ಚಕ್ರವರ್ತಿಯವರ ಕಿರೀಟಧಾರಣೆಗೆ ಭರತಖಂಡದ ರಾಜಮಹಾರಾಜರುಗಳು ಅಮೂಲ್ಯವಾದ ರತ್ನಾಭರಣಗಳನ್ನು ಕಳುಹಿಸುವರೆಂದು ಲಂಡನ್ನಿನ ಪತ್ರಿಕೆಗಳು ಡಂಗೂರ ಹೊಡೆಯುತ್ತಿವೆ. ಆ ಪಟ್ಟಿಯಲ್ಲಿ ಮೈಸೂರಿನ ಹೆಸರೂ ಇದೆ. ಹೈದರಾಬಾದು, ಬರೋಡ, ಮೈಸೂರು, ಭೂಪಾಲ್ ಕಾಶ್ಮೀರ ಮತ್ತು ಕಪೂರ್‌ಥಲಾ ಸಂಸ್ಥಾನಗಳಿಂದ ಈ ರತ್ನಗಳು ಹೋಗುವುದಾಗಿ ಹೇಳಲ್ಪಟ್ಟಿದೆ. ಈ ರತ್ನಗಳ ಬೆಲೆಯನ್ನೇ ಕಟ್ಟಲಾಗುವುದಿಲ್ಲ. ಉತ್ಸವದ ಸಮಯದಲ್ಲಿ ಇವುಗಳನ್ನು ಲಂಡನ್ನಿಗೆ ತೆಗೆದುಕೊಂಡು ಹೋಗುವರು. ಚಕ್ರವರ್ತಿಗಳಿಗೆ ಅರ್ಪಿಸುವರು. ಇವುಗಳ ಪೈಕಿ ಸೂರ್ಯಕಾಂತಮಣಿ, ಚಂದ್ರಕಾಂತಮಣಿ, ಹೀರಾ, ಮುತ್ತು, ಮಾಣಿಕ್ಯ ಮುಂತಾದುವುಗಳೂ ಇವೆ. ಒಂದಾನೊಂದು ಕಾಲದಲ್ಲಿ ಪ್ರಬಲರಾಗಿದ್ದ ಮೊಗಲ್ ಚಕ್ರವರ್ತಿಗಳು ಇವನ್ನು ಧರಿಸುತ್ತಿದ್ದರು. ಈಗ ಬ್ರಿಟಿಷ ಚಕ್ರವರ್ತಿಗಳು ಧರಿಸುವ ಕಾಲಬಂದಿದೆ.

ಸಣ್ಣಪುಟ್ಟ ರಾಜರುಗಳು ತಮ್ಮ ತಮ್ಮ ಯೋಗ್ಯತೆಗಳಿಗೆ ತಕ್ಕಂತೆ ಬೇರೆ ಬೇರೆ ನಜರುಗಳನ್ನು ಕೊಂಡೊಯ್ವರು

ಇದುವರೆಗೆ 125 ಜನ ರಾಜರುಗಳು ತಮ್ಮ ಪ್ರಯಾಣಕ್ಕಾಗಿ ಹಡಗಿನಲ್ಲಿ ಸೀಟು ರಿಸರ್ವ್‌ಮಾಡಿಸಿರುವರು. ಇವರಲ್ಲಿ ಅನೇಕರು ಇಂಗ್ಲಂಡಿಗೆ ಹೋಗಲು ಇದೇ ಮೊದಲು.

ಕಿರೀಟಧಾರಣೆಯಾದ ಅನಂತರ ಚಕ್ರವರ್ತಿಯವರು ಭರತಖಂಡಕ್ಕೆ ಭೇಟಿ ಕೊಡುವರೆಂದು ಅವರೇ ತಿಳಿಸಿರುತ್ತಾರೆ.

ಮನುಷ್ಯರ ಬೇಟೆ

ಚಿಕ್ಕಮಗಳೂರು ಪ್ರಾಂತದಲ್ಲಿ ಮನುಷ್ಯರ ಬೇಟೆಯು ಹೆಚ್ಚುತ್ತಿದೆ. ಕೆಲವು ದಿನಗಳ ಹಿಂದೆ ಯಾರೋ ಒಬ್ಬರು ಆಕಸ್ಮಿಕವಾಗಿ ಗುಂಡಿನೇಟಿನಿಂದ ಮತ್ತೊಬ್ಬರನ್ನು ಕೊಂದುಹಾಕಿದರು. ಈಗ ಚಿಕ್ಕಮಗಳೂರು ತಾಲ್ಲೂಕು ಆಲ್ದೂರು ಗ್ರಾಮದ ಸಿಂಗೇಗೌಡನು ಯಾರಿಂದಲೋ ಗುಂಡಿನಿಂದ ಹೊಡೆಯಲ್ಪಟ್ಟು ಮೃತಿಹೊಂದಿದನು. ಇತನು ಕಳೆದ ಭಾನುವಾರ ಹಲಿಯೂರಿನಿಂದ ಹೊಂಗರವಳ್ಳಿ ಕಾಡಿನ ಮಾರ್ಗವಾಗಿ ಊರಿಗೆ ಬರುತ್ತಿದ್ದನು. ಅಪರಾಧಿಗಳು ಇನ್ನೂ ಪತ್ತೆಯಾಗಿಲ್ಲ.

ಕುಡಿಯುವ ನೀರಿನ ಭಾವಿಗಳಿಗಾಗಿ ಸಹಾಯ.

ಈ ವರ್ಷ ಸಂಸ್ಥಾನದ ಗ್ರಾಮಾಂತರಗಳಲ್ಲಿ ಅಭಿವೃದ್ಧಿ ಕಾರ್ಯಗಳಿಗಾಗಿಯೂ, ಕುಡಿಯುವ ನೀರಿನ ಬಾವಿಗಳನ್ನು ತೋಡಿಸುವುದಕ್ಕಾಗಿಯೂ ಸರ್ಕಾರದವರು ಒಂದು ಲಕ್ಷ ರೂ. ಮಂಜೂರು ಮಾಡಿರುವರು. ಈ ಮೊಬಲಗನ್ನು ಎಂಟು ಡಿಸ್ಟ್ರಿಕ್ಟುಗಳಿಗೂ ಹಂಚಿ ಆಯಾ ಡಿ|| ಡೆಪ್ಯೂಟಿ ಕಮೀಷನರುಗಳ ವಶಕ್ಕೆ ಒಪ್ಪಿಸಿರುವರು.

ವಿಶ್ವವಿದ್ಯಾಲಯದ ಸೆನೇಟ್.

ಮೈಸೂರು ವಿಶ್ವವಿದ್ಯಾಲಯದ ಸೆನೆಟ್ಟಿನ ಸಾಮಾನ್ಯ ಸಭೆಯು ಬೆಂಗಳೂರು ಯೂನಿವರ್ಸಿಟಿ ಯೂನಿಯನ್ ಕಟ್ಟಡದಲ್ಲಿ ಈ ತಿಂಗಳು ತಾ|| 26ನೇ ಗುರುವಾರ ಮಧ್ಯಾಹ್ನ ಸೇರುವುದು. ಅಂಡರ್ ಗ್ರಾಜುಯೇಟುಗಳಿಗೆ ಕ್ರಮವಾದ ಮಿಲಿಟರಿ ಶಿಕ್ಷಣವನ್ನು ಕೊಡಬೇಕೆಂಬ ಸಲಹೆಯನ್ನು ಶ್ರೀ|| ವಿ. ಲಿಂಗಪ್ಪಯ್ಯನವರು ತಂದಿರುವರು. ಈಗ ಶಿಕ್ಷಣಕ್ಕೆ ಸಂಬಂಧಪಟ್ಟಿರುವ ಭಾಗಗಳನ್ನು ಸ್ಕೂಲು ಫೈನಲ್ ತರಗತಿಗಳಲ್ಲಿ ದೇಶಭಾಷೆಯಲ್ಲಿ ಹೇಳುತ್ತಿರುವ ಪದ್ಧತಿಯನ್ನು ತಪ್ಪಿಸಬೇಕೆಂದೂ ಇದರಿಂದ ಭರತಖಂಡದ ಇತರ ಭಾಗಗಳಲ್ಲಿರುವ ಶಿಕ್ಷಣ ದರ್ಜೆಗಿಂತ ನಮ್ಮ ಶಿಕ್ಷಣವು ಕಡಿಮೆಯಾಗುವುದೆಂದೂ, ವಿಶ್ವವಿದ್ಯಾನಿಲಯದ ಪಾಠ ಪ್ರವಚನಗಳೂ ಅವಹೇಳನೆಯಾಗಿರುವುದೆಂದೂ, ನಿರುದ್ಯೋಗ ಸಮಸ್ಯೆಯೂ ಬಹಳ ಕಠಿಣತರವಾಗಿರುವುದೆಂದೂ, ಆದ್ದರಿಂದ ಈ ಪದ್ಧತಿಯನ್ನು ತಪ್ಪಿಸಬೇಕೆಂದು ಶ್ರೀ|| ಎಂ ರಾಮಚಂದ್ರರಾಯರು ಸಲಹೆ ಕೊಟ್ಟಿರುವರು. ಇದು ಎಷ್ಟರ ಮಟ್ಟಿಗೆ ಅನುಮೋದಿಸಲ್ಪಡುವುದೋ ಸಂದೇಹ. ಆಧುನಿಕ ವಿಜ್ಞಾನ ಗ್ರಂಥಗಳನ್ನು ಸುಲಭ ಕನ್ನಡ ಶೈಲಿಯಲ್ಲಿ ಬರೆಯಲು 10,000 ರೂ. ಮಂಜೂರು ಮಾಡಬೇಕೆಂದು ಇವರು ಸಲಹೆ ಕೊಟ್ಟಿರುವರು. ವಿಶ್ವವಿದ್ಯಾನಿಲಯದ ಸ್ಥಿತಿಗತಿಗಳನ್ನು ಪರಿಶೀಲಿಸಿ ಅದು ಮತ್ತಷ್ಟು ಉಪಯುಕ್ತವಾಗುವಂತೆ ಸಲಹೆಕೊಡಲು ಒಂದು ಸಮಿತಿಯನ್ನು ನೇಮಿಸಬೇಕೆಂದು ಮ|| ಚಂದ್ರಶೇಖರಯ್ಯನವರು ಸಲಹೆ ಕೊಟ್ಟಿರುವರು.

ಮೃಗಗಳಿಗೂ ಮುಖವಾಡ.

ವಿಷವಾಯುವುಗಳಿಂದ ತಪ್ಪಿಸಿಕೋಸುಗ ಪಾಶ್ಚಾತ್ಯ ದೇಶೀಯರು ಬಗೆಬಗೆಗಳನ್ನು ತಯಾರುಮಾಡಿಕೊಳ್ಳುತ್ತಿದ್ದಾರೆ. ಇನ್ನು ಜಂತು ಪ್ರದರ್ಶನಶಾಲೆಯಲ್ಲಿ ಎಷ್ಟೋ ಜಂತುವರ್ಗಗಳಿರುವುವು. ಅವುಗಳಿಗೆ ಮಾತ್ರ ಪ್ರಾಣದ ಆಸೆ ಇಲ್ಲವೇ? ಇದೆ. ಆದುದರಿಂದ ಲಂಡನ್ನಿನ ಜಂತು ಪ್ರದರ್ಶನಶಾಲೆಯ ಪ್ರಾಣಿಗಳಿಗೆ ಪರಿಶೋಧಕರು ಬುರುಖಗಳನ್ನು ತಯಾರು ಮಾಡುತ್ತಲಿದ್ದಾರೆ

ಜಂಬೂಸವಾರಿಯಲ್ಲಿ ಆನೆಯ ಹಾವಳಿ

ದತಿಯಾ ಸಂಸ್ಥಾನದಲ್ಲಿ ಕಳೆದ ನವರಾತ್ರಿ ಉತ್ಸವದಲ್ಲಿ ಮೆರವಣಿಗೆಯ ಆನೆಯು ಬೆದರಿ ಜನರಮೇಲೆ ನುಗ್ಗಿ ಬಹಳ ಅನಾಹುತವನ್ನುಂಟುಮಾಡಿತು. ಜಂಬೂಸವಾರಿಯೆಲ್ಲಾ ಮುಗಿದಮೇಲೆ ಜನರು ತಮ್ಮ ತಮ್ಮ ಮನೆಗಳಿಗೆ ವಾಪಸು ಹೋಗುತ್ತಿದ್ದರು. ಆನೆಯು ಹಠಾತ್ತಾಗಿ ಜನರ ಗುಂಪಿನ ಮೇಲೆ ನುಗ್ಗಿತು. ಮೂರು ಜನರನ್ನು ಸೊಂಡಲಿನಲ್ಲಿ ಎಸೆದು ಮತ್ತು ಎತ್ತಿ ಹೌದಾದ ಮೇಲೆ ಕೂರಿಸಿಕೊಂಡು ಓಡಿತು. ಓಡುವಾಗ ದಾರಿಯಲ್ಲಿ ಒಂದು ಮರದ ಕೊಂಬೆಯು ಸಿಕ್ಕಲು ಈ ಮೂವರೂ ಅದನ್ನು ಹಿಡಿದು ಮೇಲಕ್ಕೆ ನೆಗೆದು ಗಿಡವನ್ನು ಏರಿ ಪ್ರಾಣವನ್ನುಳಿಸಿಕೊಂಡರು. ಆ ಮದಗಜಕ್ಕೆ ಅವರು ತಪ್ಪಿಸಿಕೊಂಡದ್ದೇ ಜ್ಞಾನವಿಲ್ಲ. ಕಣ್ಣು ಮುಚ್ಚಿಕೊಂಡು ಒಂದು ಕಾಡಿಗೆ ಓಡಿತು. ಅಲ್ಲಿ ಹೋಗುತ್ತಿದ್ದ ಮೂರು ಜನರು ಅದನ್ನು ಹಿಡಿದು ಬಂಧಿಸಲು ಪ್ರಯತ್ನಿಸಿದರು. ಆನೆಯು ಅವರೆಲ್ಲರನ್ನೂ ತನ್ನ ಸೊಂಡಲಲ್ಲಿ ಹಿಡಿದುಕೊಂಡು, ನೆಲಕ್ಕೆ ಹಾಕಿ ಕಾಲಿನಲ್ಲಿ ಹೊಸಕಿ ಸಾಯಿಸಿತು. ಬೆನ್ನಮೇಲೆ ಕುಳಿತು ತಪ್ಪಿಸಿಕೊಂಡವರಮೇಲಿನ ಕೋಪವನ್ನು ಇವರುಗಳ ಮೇಲೆ ತೀರಿಸಿಕೊಂಡಿತು.

ಆಹಾರ ತೆಗೆದುಕೊಳ್ಳದ ಸ್ತ್ರೀ.

ಜೆಪೂರ್ ಗ್ರಾಮದಲ್ಲಿ ಗಿರಿಬಾಲದೇವಿ ಎಂಬ ಸ್ತ್ರೀಯು 56 ವರ್ಷಗಳಿಂದ ಆಹಾರವನ್ನೂ ನೀರನ್ನೂ ಇಲ್ಲದೆ ಜೀವಿಸುತ್ತಾ ಇದ್ದಾಳೆ ಎಂದು ತಿಳಿದುಬಂದಿದೆ. ಬಂಕೂರಾ ಮುನಿಸಿಪಲ್ ಚೇರ್ಮನ್‌ರವರು ವೈಸ್‌ಚೇರ್ಮನ್ ಮತ್ತು ಕೆಲವು ಡಾಕ್ಟರುಗಳು, ಕೆಲವು ದೊಡ್ಡಮನುಷ್ಯರನ್ನು ಕರೆದುಕೊಂಡು ಅವಳನ್ನು ನೋಡುವುದಕ್ಕೆ ಹೋಗಿರುವರು.

ಫಿಲಿಪ್ಪೈನ್ಸಿನಲ್ಲಿ ಚಂಡಮಾರುತ

ಫಿಲಿಪ್ಪೈನು ದ್ವೀಪಗಳಲ್ಲಿ ಮನಿಲಾ ನಗರದ ಹತ್ತಿರ ಪ್ರಚಂಡ ಚಂಡಮಾರುತವು ಹೊಡೆಯಿತು. ಇದರಿಂದ 200 ಮಂದಿ ಸತ್ತರು. ಇನ್ನು 100 ಜನ ಗ್ರಾಮಸ್ಥರ ಪತ್ತೆಯೇ ಇಲ್ಲ.

ಮುಂದಿನ ವರ್ಷದ ಭವಿಷ್ಯ.

ಕರಾಚಿಯ ಸ್ವಾಮಿ ಜ್ಯೋತಿಷಿ ಎಂಬುವರು 1937ನೇ ಇಸವಿಯ ಭವಿಷ್ಯವನ್ನು ಈ ಕೆಳಗೆ ಕಂಡಂತೆ ಹೇಳಿರುತ್ತಾರೆ. ಕ್ವೆಟ್ಟಾದಲ್ಲಿ ಭೂಕಂಪವಾಗುವುದೆಂದು ಇವರು ಮೊದಲೇ ಹೇಳಿದ್ದರಂತೆ. ಇವರು ಹೇಳುವ ಪ್ರಾಮುಖ್ಯ ಭವಿಷ್ಯಗಳಿವು:—

1. ಕಿರೀಟ ಧಾರಣೆಯಾದ ಒಡನೆ ಚಕ್ರವರ್ತಿ ಎಡ್ವರ್ಡರವರು ವಿವಾಹವಾಗುವರು 2. ಹೊಸ ರಾಜ್ಯಾಂಗ ರಚನೆಯನ್ನು ಭರತ ಖಂಡದಲ್ಲಿ ಜಾರಿಗೆ ತಂದಮೇಲೆ ಇಲ್ಲಿ ಹೊಡೆದಾಟಗಳೂ, ಅಶಾಂತಿಯೂ, ಉಂಟಾಗುವುವು. 3 ಬ್ರಿಟಿಷ್ ರಾಜ ಮನೆತನದಲ್ಲಿ ಎರಡು ಪ್ರಾಮುಖ್ಯವಾದ ಆನಂದದ ಸನ್ನಿವೇಶಗಳು ನಡೆಯುವುವು. 4. ಐರ್ಲೆಂಡು ದೇಶವು ರಿಪಬ್ಲಿಕ್ಕಾಗುವುದು 5. ಈಜಿಪ್ಟ್ ದೇಶದ ರೈತನೊಬ್ಬನ ಹೆಂಡತಿಯು ಏಕಸಮಯದಲ್ಲಿ ಆರು ಮಕ್ಕಳನ್ನು ಹೆರುವಳು. 6. ಯೂರೋಪಿನ ಸರ್ವಾಧಿಕಾರಿಗಳ ಪೈಕಿ ಒಬ್ಬರು ಸಾಯುವರು 7 ಅಮೆರಿಕಾದ ವೈಜ್ಞಾನಿಕರೊಬ್ಬರು ಪರಮಾದ್ಭುತವಾದ ಶೋಧನೆಯನ್ನು ಕಂಡು ಹಿಡಿಯುವರು. 8. ರಷ್ಯಾದೇಶದಲ್ಲಿ ಅಂತರ್ಯುದ್ಧವುಂಟಾಗುವುದು 9. ಜಪಾನಿನಲ್ಲಿ ಇದುವರೆಗೆ ಉಂಟಾದ ಎಲ್ಲಾ ಭೂಕಂಪಗಳಿಗಿಂತಲೂ ಮಿಗಿಲಾದ ಭೂಕಂಪವು ಉಂಟಾಗುವುದು

ಬೆಂಗಳೂರು-ಮೈಸೂರಿಗೆ ವಿಮಾನ ಸಂಚಾರ.

ಸುಪ್ರಸಿದ್ಧ ಭಾರತೀಯ ವೈಮಾನಿಕರಾದ ಶ್ರೀ|| ಚಾಲರರವರು ಇಷ್ಟರಲ್ಲಿಯೇ ಮೈಸೂರು-ಬೆಂಗಳೂರಿಗೆ ವಿಮಾನ ಸಂಚಾರ ಏರ್ಪಾಡನ್ನು ಮಾಡುವವರಾಗಿದ್ದಾರೆಂದು ಕೇಳುತ್ತೇವೆ. ಈ ಏರ್ಪಾಡು ಆದರೆ ಕೇವಲ ಮುಕ್ಕಾಲು ಗಂಟೆ ಕಾಲದಲ್ಲಿ ಬೆಂಗಳೂರಿನಿಂದ ಮೈಸೂರಿಗೆ ಪ್ರಯಾಣ ಮಾಡಬಹುದು. ಬೆಳಗಿನ ಕಾಗದ ಪತ್ರಗಳನ್ನು ಬೆಳಗ್ಗೆಯೇ ಪಡೆಯಬಹುದು. ಚಾರಕ್ಕೂ ಹಂಚು ಅನುಕೂಲವಾಗುದು ದಿನಕ್ಕೆ ಮೂರಾವರ್ತಿ ವಿಮಾನವನ್ನು ಬಿಡುವರೆಂದು ಗೊತ್ತಾಗಿ ಪ್ರಯಾಣಿಕರಿಗೆ ತಲಾ ಹನ್ನೆರಡು ಮಾತ್ರ ಬೀಳುವುದು. ಮಿ|| ಚಾಲರು ಮೈಸೂರು ಸರ್ಕಾರದೊಡನೆ ಪರ್ಯಾಲೋಚನೆ ನಡೆಸಿ ಈ ಕೆಲಸಗಳನ್ನು ಗೊಳ್ಳುವರು. ಇವರು ಈಗಾಗಲೇ ಭರತಖಂಡದಲ್ಲಿ ಅನೇಕಕಡೆ ವಿಮಾನ ಸಂಚಾರವನ್ನು ಏರ್ಪಡಿಸಿ ಯಶಸ್ವಿಯಾಗಿ ನಡೆಸುತ್ತಿರುವರು. ಅತ್ಯಲ್ಪಕಾಲದಲ್ಲಿಯೇ ನಮಗೆ ಮೇಲ್ಕಂಡ ಸೌಕರ್ಯಗಳು ದೊರೆಯಬಹುದೆಂದು ನಿರೀಕ್ಷಿಸಲ್ಪಟ್ಟಿದೆ

ಎಂ. ವಿ. ನಾರಾಯಣರಾಯರ
ಶ್ರೀ ಸತ್ಯನಾರಾಯಣ ಪರಿಮಳ ಫ್ಯಾಕ್ಟರಿ,
ಜಗನ್ಮೋಹನ ಬಂಗ್ಲಾ ಬೀದಿ, ಮೈಸೂರು.
ಪರಿಮಳ ಅಗರ ಬತ್ತಿ
ಉಪಯೋಗಿಸಿ ಪ್ರೋತ್ಸಾಹಿಸಿರಿ.

"ಅಧಿಕಾರಿಗಳನ್ನು ದೇವತೆಗೆ ಬಲಿ ಕೊಡುವುದು"

ಬೀರೂರು ಎಕ್ಸೈಜು ಸೂಪರ್ವೈಜರಿಗೆ ಚಿತ್ರಹಿಂಸೆ.

ಸರ್ಕಾರಿ ಅಧಿಕಾರಿಗಳನ್ನೂ ಅವರ ಸಹಚರರನ್ನೂ ಗ್ರಾಮಸ್ಥರು ಹಿಡಿದು ಮರಗಳಿಗೆ ಕಟ್ಟಿ ಸಾಕೆ ಹೊಡೆದು ಬಡಿದರೆಂದೂ ಅವರ ರಕ್ತವನ್ನು ಶತ್ರುವಿಸಿ ದೇವತೆಗೆ ಬಲಿ ಕೊಡಬೇಕೆಂದಿದ್ದರೆಂದೂ ತಿಳಿಸುವ ಸ್ವಾರಸ್ಯತರವಾದ ವರದಿಯೊಂದು ಕಡೂರು ಪ್ರಾಂತದಿಂದ ಬಂದಿರುತ್ತದೆ. "ಬೀರೂರಿನ ಬಳಿ ಒಂದು ಗ್ರಾಮದಲ್ಲಿ ಸಿಪಾಯಿಗಳು ಕಳ್ಳಭಟ್ಟಿ ಇಳಿಸುತ್ತಿದ್ದಾರೆಂದು ಸರ್ಕಾರಕ್ಕೆ ತಿಳಿದುಬಂತು. ಅದರ ಸಂಬಂಧ ಎಕ್ಸೈಸ್ ಸೂಪರ್ವೈಸರ್ ಮ॥ ಸುಬ್ಬನಾರಾಯಣ ನಾಯುಡುರವರು ಕಳೆದ 29 ನೇ ತಾರೀಖು ಆಳುಕಾಳು ಸಹಿತ ಗ್ರಾಮಕ್ಕೆ ಹೋದರು. ಒಡನೆ ಆ ಗ್ರಾಮಸ್ಥರು ಎಲ್ಲರನ್ನೂ ಹಿಡಿದು ಮರಗಳಿಗೆ ಕಟ್ಟಿಹಾಕಿದರು. ಚೆನ್ನಾಗಿ ಹೊಡೆದರು. ಆಗ ಅವರ ಪೈಕಿ ಒಬ್ಬನು ತಪ್ಪಿಸಿಕೊಂಡು ಬೇಗ ಹೋಗಿ ಪೊಲೀಸಿನವರನ್ನು ಕರೆತಂದನು. ಪೊಲೀಸಿನವರು ಎಲ್ಲಾ ಜನರನ್ನೂ ದಸ್ತಗಿರಿಮಾಡಿ ಕೈದು ಇಲಾಖೆಯವರನ್ನೆಲ್ಲಾ ಬಂಧವಿಮುಕ್ತರನ್ನಾಗಿ ಮಾಡಿದರು. ಅಷ್ಟರೊಳಗೆ ಆ ಗ್ರಾಮಸ್ಥರು ಮ॥ ನಾಯುಡುರವರ ರುಂಡವನ್ನು ದೇವತೆಗೆ ಬಲಿ ಕೊಡಲು ಅವರ ಕತ್ತನ್ನು ಕತ್ತರಿಸ ಹೊರಟಿದ್ದರಂತೆ! ನಾಯುಡುರವರಿಗೆ ಬಹಳ ಗಾಯಗಳಾಗಿವೆ. ಪೊಲೀಸಿನವರು ಮುಂದಿನ ಕ್ರಮ ಜರುಗಿಸುತ್ತಿದ್ದಾರೆ. ಈ ವರ್ತಮಾನವು ವಿಸ್ಮಯಕರವಾಗಿ ಕುತೂಹಲವನ್ನುಂಟುಮಾಡಿರುವುದು.

ಸ್ವೀಕಾರ

"ಬ್ರಿಟಿಷ್ ಸಾಮ್ರಾಜ್ಯ ಶಾಹಿ ಮತ್ತು ಹಿಂದೂಸ್ಥಾನ" ಎಂಬ ಗ್ರಂಥವು ನಮ್ಮ ಕೈಸೇರಿದೆ. ಇದನ್ನು ಶ್ರೀಮಾನ್ ಎಂ. ಎನ್. ನಾಗರಾಜರಾವ್‌ರವರು ಬರೆದಿರುವರು. ಈ ಪುಸ್ತಕವು ಕಾಂಗ್ರೆಸ್ ಸೋಷಿಯಲಿಸ್ಟ್ ಪಬ್ಲಿಷಿಂಗ್ ಹೌಸ್, ಬೊಂಬಾಯಿ, ಇಲ್ಲಿ ದೊರೆಯುತ್ತದೆ. ಇದರ ಬೆಲೆ 2 ಆಣೆ. ಬ್ರಿಟಿಷ್ ಆಡಳಿತೆಯಲ್ಲಿ ಭಾರತವು ತನ್ನ ದುರ್ಗತಿಯನ್ನು ಹೊಂದಿರುವುದನ್ನು ಲೇಖಕರು ಚೆನ್ನಾಗಿ ನಿರೂಪಿಸಿರುವರು. ಇದು ಇಂಗ್ಲೀಷ್ ಎಂದು ಹೇಳುವರು. ಇದು 9 ಪ್ರಕರಣಗಳಿಂದ ಕೂಡಿದೆ. ಅನೇಕ ನಿದರ್ಶನಗಳಿಂದ ಭಾರತದೇಶದ ದುಃಸ್ಥಿತಿಯನ್ನು ನಿವಾರಿಸೋಪಾಯವನ್ನು ಪ್ರತಿಪಾದಿಸುತ್ತದೆ. ನಮ್ಮ ಕನ್ನಡಿಗರು ಇದನ್ನು ಕೊಂಡು ಪ್ರೋತ್ಸಾಹಿಸುವರೆಂದು ನಂಬುತ್ತೇವೆ.

ಯುವತಿಯಾದ ಉಪಾಧ್ಯಾಯಿನಿಯ ರಾಜಿನಾಮೆಯೆ?

ದೇಶೀಯ ಕ್ರೈಸ್ತರ 16 ವರುಷದ ಹುಡುಗಿಯು ಆಕಸ್ಮಿಕವಾಗಿ ಉಪಾಧ್ಯಾಯಿನಿಯ ಕೆಲಸಕ್ಕೆ ವಿಚಿತ್ರ ಸನ್ನಿವೇಶದಲ್ಲಿ ರಾಜಿನಾಮೆ ಕೊಟ್ಟಿರುವಳಂತೆ! ಈಕೆಗೆ ಮಿಷನರಿಗಳ ಶಾಲೆಯಲ್ಲಿ ಕೆಲಸ ಮಾಡುತ್ತಿದ್ದ ಪ್ರಾಯದ ಯುವಕರು ಮತ್ತು ಯುವತಿಯರ ವ್ಯವಹಾರಗಳು ಬಹಳ ಹೆಸರನ್ನು ಹೊಂದುತ್ತಿರುವುದು ರೂಢಿಯಾಗಿದೆ. ಅಲ್ಲಿ ಕೆಲಸಮಾಡುವ ಉಪಾಧ್ಯಾಯಿನಿಯರು ಅವಿವಾಹಿತರಾಗಿರಬೇಕೆಂದು ಇರುವ ನಿರ್ಬಂಧನೆ ಇದಕ್ಕೆ ಕಾರಣ. ಓರ್ವ ಯುವತಿಯು ಉಪಾಧ್ಯಾಯಿನಿಯಾಗಿ ಕೆಲಸ ಮಾಡುತ್ತಿದ್ದಳು. ಆಗ ಈಕೆಗೆ 16 ವರ್ಷ ಪ್ರಾಯವಾಗಿದ್ದಿತೆಂದೂ ಈಕೆಯೂ ಉಪಾಧ್ಯಾಯಿನಿಯರೂ ದಾರಿಯಲ್ಲಿ ಹೋಗುತ್ತಾ ಬರುತ್ತಾ ಇದ್ದಾಗ ಮಹಮ್ಮದೀಯ ಯುವಕನೋರ್ವನ ಕೈವಶಕ್ಕೆ ಸಿಕ್ಕಿ ಪಾತ್ರಳಾದಳೆಂದೂ ತರುವಾಯ ಸ್ನೇಹ ಪರವಾಗಿ ಈಕೆ ಯುವಕನ ಕೈಸೇರಿದಳು. ಒಂದು ರಾತ್ರಿ ಆ ಮಹಮ್ಮದೀಯ ಯುವಕನ ಮನೆಗೆ ಹೋಗಿದಳು. ಆ ಮಹಮ್ಮದೀಯ ಯುವಕನ ಮನೆಯವರೂ ಇತರರೂ ಇವರಿಬ್ಬರನ್ನೂ ಹಿಡಿದು ಪೋಲೀಸು ಸ್ಟೇಷನ್ನಿನಲ್ಲಿರಿಸಿದ್ದು ಬೆಳಿಗ್ಗೆ ಬಿಟ್ಟರೆಂಬ ದಾಗಿಯೂ ಕೋಲಾಹಲವಾಗಿದೆ. ಈ ನಂಟಿಕೆಯನ್ನು ಸಹಿಸಲಾರದೆ ಈ ಯುವತಿಯು ಅಣ್ಣನವರು ಹುಡುಗಿಯನ್ನು ತಕ್ಷಣ ಊರಿಗೆ ಕಳುಹಿಸಿದ್ದಾರೆ. ಶಾಲಿ ಬಿಟ್ಟಿರುವ ಜಾಗಕ್ಕೆ ಓರ್ವ ಉಪಾಧ್ಯಾಯನಿಯನ್ನು ಲೇಡಿ ಸೂಪರಿಂಟೆಂಡೆಂಟರವರು ವಿಚಾರಿಸುತ್ತಿದ್ದಾರೆ. ಈ ವಿಧವಾದ ಪರಿಸ್ಥಿತಿಗೆ ನಾವು ವಿಷಾದಪಡುತ್ತೇವೆ. ಬರಿ, ನಾಗರೀಕತೆಯಿಂದ ಮೋಹಿತರಾದ ಯುವಕ ಯುವತಿಯರು ಅವಿವೇಕಗಳಿಗೆ ಸಿಕ್ಕಿ ಬಲಿಯಾಗುತ್ತಿರುವುದು ತುಂಬಾ ವಿಷಾದಕರವಾಗಿದೆ.

ಹಿತೈಷಿ.

ಚಕ್ರಿ ಪಾಕಿ

ಲೇಖಕರು —ಎಸ್. ಶ್ರೀಶೈಲಂ, ಮೈಸೂರು

ದೀವಳಿ ಹಬ್ಬವು ಬಂದಿತು ಈಗ
ದೀವಿಗೆ ಹಚ್ಚಿತು ಬಾಲುಬೇಗ
ಪಟ್ಟಿರು ಕುಣಿಯು ಒಂಗ್ಗ ಮುಂದೆ
ಇಟ್ಟರು ಬಾಣಗ ಹುಡುಗರ ಮುಂದ

* * *

'ದೀವಳಿ ಹಬ್ಬವು ಬಂದಿತು ಈಗ
ಜೀವರ ಮನೆಗಳು ಒಳಗಿ ಬೇಗ
ಬೆಳಗಲು ದೇವರ ಮನೆಯನು ಈಗ
ಕೇಳಿರಿ ಅಪ್ಪನ ಮುದ್ದನು ಬೇಗ'

* * *

ಎಷ್ಟೋ ತ ಕೂಗಲು ಶಿಷ್ಟರು ಆಗ
ಕಷ್ಟವ ಹೊಡೆದರು ಅಪ್ಪನ ಜೇಬ
ಕನ್ನವ ಹೊಡೆಯಲು ಜೇಬನು ಬೇಗ
ಕೆನ್ನಗ ವಿದ್ದಿತು ಬಲು ಪೆಟ್ಟಾಗ

* * *

ಇಂದನು ನೋಡುತ ಕೇಳದೆ ಬಿಡಿರಿ
ಮುಂದಿನ ಪಾತನೆ ಧ್ಯೇಯವ ಇಡಿರಿ
ಕುಂದದೆ ಪಾತನ ಗನುರದಿ ಕಲಿರಿ
ಇಂದೇ ಹಣವನು ಆರ್ಜಿಸಿರಿ

* * *

ಗಾಂಧಿಯ ನೀತಿಯ ವಾಕ್ಯವನೆಲ್ಲಾ
ಬಂಧಿಸಿರಿಗಳಲಿ ನೀನೆಲ್ಲಾ
ಹಿಂದೂ ದೇಶದ ಮಕ್ಕಳಗಳೆಲ್ಲಾ
ಪೊಂದನೆ ಮಾಡಿರಿ ಜೈಸರಿಗಳಲ್ಲಾ

* * *

ಎಲೆ ಚಟಾಕಿಯೇ ನೋಡಲು ನೀನೆ
ಫಲವನು ನೀಡುವೆ ಜೈನರಿಗೇ
ಧನವನು ಕೇಳ ಹೊಗೆಯನು ಉಗುಳಿ
ಧನವನು ನೀಡುವೆ ಜೈನರಿಗೆ

* * *

ಹುಡುಗರಿಗೆಲ್ಲಾ ಹಿಡಿಸುವೆ ಹುಚ್ಚು
ಬಡ ಬಡ ಸದ್ದೇ ಅವರಿಗೆ ಮೆಚ್ಚು
ಹುಡುಗರು ಶಿಸ್ತಿಯ ವಚನಗಳನು ಕೇಳಿ
ಬಿಡುವರು ಪ್ರಾಣವ ನಿನ್ನನು ಹೇಳಿ

† † †

ತೊಲಗಿಸಿರಿಂದಿಯುದಿಂದಲೆ ಆಚೆಗೆ
ತುಳಿಯಿರಿ ಮನ್ನೆಗೆ ಬಲುಬೇಗೆ

ಮೋಸದ ವ್ಯಾಪಾರ

ಸ್ವಾಮಿ,

ರಾಜಧಾನಿಯ ಪರಸಪ್ಪನ ಸರದ ದೇವಸ್ಥಾನದ ಬಳಿ (ಚಿಕ್ಕಪೇಟೆ ಪಕ್ಕ) ಒಬ್ಬ ಮನುಷ್ಯನು ಬಟ್ಟೆಗಳನ್ನು ಹರಾಜು ಮಾಡುವುದು ಸಿಟಿಯಲ್ಲಿ ಎಲ್ಲರಿಗೂ ತಿಳಿದ ವಿಷಯವೇ. ಆ ಮನುಷ್ಯನು ನಡಸುವ ಮೋಸದ ಹರಾಜನ್ನು ಯಾರೊ ಗಮನಿಸಿಲ್ಲ. ತನ್ನ ಕಡೆಯ ನಾಲ್ಕಾರು ಜನಗಳನ್ನು ನಿಲ್ಲಿಸಿಕೊಂಡು ಜವಳಿಯನ್ನು ಹರಾಜುಮಾಡುತ್ತಾನೆ. ಈ ಗುಟ್ಟು ಬೇರೆಯವರಿಗೆ ತಿಳಿಯದು. ಈ ಬಿಟ್ಟು ಹಳ್ಳಿ ಜನರಿಗೆ ಈ ಒಳಗುಟ್ಟನ್ನು ತಿಳಿಯದು. ಹರಾಜುದಾರನ ತನ್ನ ಕಡೆಯವರು ಹಾಕುವ ಬಿಡ್‌ಗಳ ಮೇಲೆ ಕಮ್ಮಿ ಕೊಡುವನು. ಈ ಹಳ್ಳಿಗರು ನಮಗೂ ಹೀಗೆ ಕಮಿಷನ್ ಕೊಡುತ್ತಾನೆಂದು ಆಸೆಪಟ್ಟು ಹೋಗಿ ಬಿಡ್ ಮಾಡುತ್ತಾರೆ. ಹರಾಜುದಾರನು ಮೊದಲು ಬಿಡ್‌ಮಾಡುವ ಹಳ್ಳಿಗರ ಬಳಿ ವಸ್ತು ಎಷ್ಟು ಇದೆ ಎಂಬುದನ್ನು ಕೇಳಿ ಮಾಡಿಕೊಂಡು ತನ್ನ ಕಡೆಯವರಿಂದ ಹಳ್ಳಿಗರ ಬಳಿ ಇರುವ ಮೊತ್ತದವರೆಗೆ ಹರಾಜನ್ನು ಮಾಡಿಸಿ ಕೂಡಲೆ ಹಳ್ಳಿಗರಿಗೆ ನಿನಗೆ ಕಮಿಷನ್ ಕೊಡುತ್ತೇನೆ ನಿನ್ನಲ್ಲಿರುವ ದುಡ್ಡು ತೋರಿಸು, ಎಂದು ಬಲುಂತದಿಂದ ತನ್ನ ಕೈಗೆ ತೆಗೆದುಕೊಂಡು ಕೇವಲ ನಾಲ್ಕು ಆಣೆ ಬಟ್ಟೆಗೆ ನಾಲ್ಕು ರೂಪಾಯಿಗಳವರೆಗೆ ವಿಧಿಸಿ ಆ ಹಳ್ಳಿಗರಿಗೆ ಮೋಸಮಾಡುತ್ತಿರುವನು. ಇವನು ಸುಮಾರು 1–2 ವರ್ಷಗಳಿಂದಲೂ ಈ ಮೋಸದ ವ್ಯಾಪಾರ ನಡೆಸುತ್ತಿರುವನು. ಸಂಬಂಧಪಟ್ಟ ಅಧಿಕಾರಿಗಳು ಇದನ್ನು ಗಮನಿಸಿಲ್ಲವೆಂದು ಕಾಣುತ್ತದೆ. ಬೇಕಾದರೆ ಕೃತ್ರಿಮರೂಪದಿಂದ ಬೇರೆ ಸ್ವಂತ ಜನಗಳ, ಸ್ವಹಿತರುಗಳ ಕಡೆಯಿಂದ ನಲ್ಕಾರು ದಿನಗಳು 1–2 ಗಂಟೆ ನಿಂತು ಪರೀಕ್ಷಾಯಿಸಿ ನೋಡಿದಲ್ಲಿ ಹರಾಜುದಾರನ ಮೋಸವು ವ್ಯಕ್ತವಾಗುತ್ತದೆ. ಧನವನ್ನು ಹೊಂದಿದ ಸರ್ಕಾರದವರು ಇಂತಹ ಮೋಸದ ವ್ಯಾಪಾರಗಳಿಗೆ ಅವಕಾಶಕೊಟ್ಟರೆ ಬಡ ಹಳ್ಳಿಗರು ಹಾಳಾಗುತ್ತಾರೆ. ಈ ವಿಷಯವನ್ನು ನಾನು ಖುದ್ದು ಹರಾಜು ಬಳಿ ನಿಂತು ಅಜಮಾಯಿಷಿ ಮಾಡಿ ತಿಳಿದಿರುವ ವಿಷಯ. ಸಂಬಂಧಪಟ್ಟ ಅಧಿಕಾರಿಗಳು ಇದನ್ನು ಜಾಗ್ರತೆ ಅಜಮಾಯಿಷಿಯಿಂದ ಈ ಮೋಸದ ವ್ಯಾಪಾರವನ್ನು ನಿಲ್ಲಿಸುವರೆಂದು ನಂಬಿರುತ್ತೇನೆ.

—ಆರ್. ರಾಮಸ್ವಾಮಿ ನಾಯ್ಡು.

ವಿದ್ಯಾರ್ಥಿಗೆ ನಿರ್ಬಂಧ

ಬೈಸಿಕಲ್ಲಿನ ಹಳೇ ಚಕ್ರಗಳನ್ನು ಹೊಸ ಚಕ್ರಗಳಿಗೆ ಬದಲಾಯಿಸಿದನೆಂಬ ಆಪಾದನೆಯ ಮೇಲೆ ತುಮಕೂರು ಗೌರ್ನ್ಮೆಂಟ್ ಹೈಸ್ಕೂಲು 5 ನೇ ಫಾರಂ ವಿದ್ಯಾರ್ಥಿ ಟಿ. ಎ. ವೆಂಕಟರಾಮರಾವ್ ಎಂಬುವನನ್ನು ಒಂದು ವರ್ಷ ಸ್ಕೂಲಿಗೆ ಸೇರಿಸಕೂಡದೆಂದು ಸರ್ಕಾರದವರು ನಿರ್ಧಾರಕವಾಡಿರುವರು.

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

— ಬಾಲಸುಧಾ —

ಮಕ್ಕಳ ಪ್ರಸವ ಗೆಡ್ಡೆಯನ್ನು ಜಾತರಿ ಗುಣ ಪಡಿಸುತ್ತೆ. ಲಿವರ್ (ಪಿತ್ತಕೋಶ) ದಪ್ಪನಾಗಿ ಹೊಟ್ಟೆ ಬೀಗಿ ಒಣ್ಣಮಾಗಿದ್ದರೆ ಇದರ ಸೇವನೆಯಿಂದ ದಿನೇ ದಿನೇ ಗುಣವಾಗುತ್ತೆ. 30 ವರ್ಷಗಳಿಂದಲೂ ಅನುಭವ ಸಿದ್ಧವಾಗಿದೆ—ಮಕ್ಕಳ ಭೇದಿಗೆ ನಮ್ಮ ಬಾಲಸಂಜೀವಿನಿಯನ್ನೇ ಉಪಯೋಗಿಸಿರಿ.

ಬಾಲಸುಧಾ ಬೆಲೆ 1 ರೂ. ಬಾಲಸಂಜೀವಿನಿ 4 ಆ

ಮೈಸೂರು, ಬೆಂಗಳೂರು, ಮದ್ರಾಸುಗಳಲ್ಲಿ ನಮ್ಮ ಏಜೆಂಟರಿವೆ

ಸದ್ವೈದ್ಯಶಾಲಾ, ನಂಜನಗೂಡು

ಸ್ತ್ರೀಯ ಕರ್ತವ್ಯ ನಿರೂಪಣೆ

ಲೇಖಕರು —
ಮ॥ ಆನವಟ್ಟಿ ರಾಮರಾಯರು,
ಕನ್ನಡ ಕವಿ, ಆಸ್ಥಾನ ವಿದ್ವಾನ್

ಸ್ತ್ರೀಯರು ಯಾವ ದೇಶದಲ್ಲಿದ್ದರೂ ಅವರ ಪ್ರೇರಣೆಯು ಒಂದೇ ವಿಧವಾಗಿರುವುದು ಅವರ ಇರುವಿಕೆಯು ಯಾವ ದೇಶದ ಪುರುಷರನ್ನಾದರೂ ನೀತಿಪರರನ್ನಾಗಿಯೂ, ಸಹಶೀಲಂತರನ್ನಾಗಿಯೂ ಪ್ರೇರೇಪಿಸುವುದು. ಯಾವ ಸ್ಥಳದಲ್ಲಿನ ಹೆಂಗಸಿನ ಸ್ಥಿತಿಯು ಶೋಚನೀಯವಾಗಿರುತ್ತದೆಯೋ, ಅಲ್ಲಿನ ಜನರೂ ಸಂಸಾರವೂ ಹೀನಸ್ಥಿತಿಯಲ್ಲಿರುವರು ಹೆಂಗಸು ನಿರ್ಮಲವಾದ ನೀತಿಪರಳಾಗಿಯೂ, ಜ್ಞಾನವಂತಳಾಗಿಯೂ ಎಲ್ಲರುವಳೋ ಅಲ್ಲಿನ ಸಂಸಾರವೂ ಉತ್ತಮ ಸ್ಥಿತಿಗೆ ಬರುವುದು. ಮೇಲೆ ಹೇಳಿದ ಕಾರಣಗಳಿಂದ ಹೆಂಗಸನ್ನು ವಿವೇಕವಂತಳನ್ನಾಗಿ ಮಾಡಿದರೆ ಗಂಡಸರನ್ನೂ ವಿವೇಕವಂತರನ್ನಾಗಿ ಮಾಡಿದಂತಾಯಿತು ಅವನನ್ನು ಉತ್ತಮ ಸ್ಥಿತಿಗೆ ತಂದರೆ ಗಂಡಸರನ್ನೂ ತಂದಂತಾಗುವುದು ಹೆಂಗಸಿನ ಬುದ್ಧಿಯನ್ನು ವಿಕಾಸಗೊಳಿಸುವಂತೆ ಮಾಡಿದರೆ ಒಂದು ಸಂಘವನ್ನು ಅಧಿಕಸ್ಥಿತಿಗೆ ತಂದ ಸುರಕ್ಷಿತವಾಗಿಟ್ಟಂತೆಯೇ ಆಯಿತು.

ಹೆಂಗಸರು ಮಾಡುವ ಕಾರ್ಯಗಳಲ್ಲಿ ಗಂಡಸರು ಪ್ರವೇಶಿಸಿ ನಡೆಸಿದಂತೆ ಗಂಡಸು ಮಾಡುವ ಕಾರ್ಯಗಳಲ್ಲಿ ಹೆಂಗಸು ಪ್ರವೇಶಿಸಿ ಮಾಡಲಾರಳು ಯಾವ ಸಂಸಾರದ ಮನೆಯಿಂದಲಾದರೂ ಹೆಂಗಸರನ್ನು ಬೇರೆ ಮಾಡಿ, ಸಂಸಾರದ ಕೆಲಸಗಳ ಗೋಜಿಗೆ ಹೋಗದೆ ಅನ್ಯಕಾರ್ಯಗಳನ್ನು ಮಾತ್ರ ಮಾಡುವಂತೆ ಏರ್ಪಡಿಸುವುದಾದರೆ, ಸಂಸಾರದಲ್ಲಿನ ಜನರು ಹಾಳಾಗಿ ಹೋಗುವರು

ಮನೆಯಲ್ಲಿ ಸೋಮಾರಿಯಾಗಿ ಕಾಲಹರಣ ಮಾಡುತ್ತಾ ಇದ್ದ ಹೆಂಡತಿಯು ಹೊರಗೆ ಹೋಗಿ ಕೆಲಸಮಾಡುತ್ತಿದ್ದರೆ ಸಂಸಾರದ ಕಾರ್ಯಗಳೆಲ್ಲಾ ವಿಚಕ್ಷಣವಿಲ್ಲದ ಮಕ್ಕಳನ್ನು ತರಬೇತು ಮಾಡುವವರಿಲ್ಲದೆ, ಸಂಸಾರದ ಕಾರ್ಯಕ್ರಮಗಳು ನಡೆಯದಾಗುವುವು ಹೆಂಗಸು ಹೊರಗೆ ಹೋಗಿ ಹಣಕ್ಕಾಗಿಯೇ ಕೆಲಸ ಮಾಡುತ್ತಿರಬೇಕಾಗಿ ಬಂದುದರಿಂದ ಸಂಸಾರದಾಸಕ್ತಿಗನುಸಾರವಾದ ಕಾರ್ಯಗಳನ್ನು ನೆರವೇರಿಸಲು ಅವಳಿಗವಕಾಶವಿಲ್ಲದಂತಾಗುವುದು

ಸಂಸಾರ ಧರ್ಮವನ್ನು ಹೇಗೆ ನಡೆಸಿಕೊಂಡು ಹೋಗಬೇಕು, ಸನ್ಮಾರ್ಗಗಳನ್ನು ಹೇಗೆ ಅನುಸರಿಸಬೇಕು? ಮಕ್ಕಳನ್ನು ಸನ್ಮಾರ್ಗಗಾಮಿಗಳಾಗಿರುವಂತೆ ಹೇಗೆ ಮಾಡಬೇಕು? ಅವರನ್ನು ಹೇಗೆ ಕಾಪಾಡಬೇಕು? ಎಂಬೀ ಮೊದಲಾದ ವಿಷಯಗಳು ಅವಳ ಮನಸ್ಸಿಗೆ ಬರುವುದು ಅಸಾಧ್ಯವು ಹಾಗೆ ಬಂದರೂ ಮೇಲೆ ಹೇಳಿದ ಕಾರ್ಯಗಳು ನೆರವೇರುವ ಸಂಭವವು ಅಲ್ಪ. ಹೆಂಗಸರು ತಮ್ಮ ಕರ್ತವ್ಯವೇನೆಂಬುದನ್ನೇ ಮರೆತಂತಾಗುವುದು ಸಂಸಾರವು ನಿಸ್ಸಾರವಾಗುವುದು ಮಕ್ಕಳು ಅವಿವೇಕಿಗಳಾಗಿ ಅವಿಧೇಯರಾಗುವರು, ಅವರಲ್ಲಿ ಮರುಕವೆಂಬುದು ನಾಶವಾಗಿ ಹೋಗುವುದು

ಸ್ತ್ರೀಯರಿಗೆ ರಾಜಕೀಯ ಮಾತ ವಿಷಯಗಳನ್ನು ತಿಳಿಸಿ ಅವರು ಆ ಕಾರ್ಯದಲ್ಲಿ ಪ್ರವೇಶಿಸುವಂತೆ ಮಾಡುವುದು ಎಷ್ಟರ ಯೋಗ್ಯ ಮತ್ತು ಉಪಾಯಕರವಾಗಿರುವುದು ಹೇಗೆಂದರೆ — ಕೆಲವು ಮಹಿಳೆಯರು ಇಂಗ್ಲೆಂಡಿನ ಪಾರ್ಲಿಮೆಂಟ್ ಮೊದಲಾದ ಸಂಘಗಳಲ್ಲಿ ಮುಂದಾಗಿ ಕೆಲಸ ಮಾಡುತ್ತಿರುವರೆಂದು ಪತ್ರಿಕೆಗಳಿಂದ ತಿಳಿದುಬರುವುದು ... ರಾಜಕೀಯ ಜವಾಬ್ದಾರಿ ಕೆಲಸಗಳಲ್ಲಿ ಸ್ತ್ರೀಯರನ್ನು ನೇಮಿಸುವುದು ಎಷ್ಟು ಯೋಗ್ಯವಲ್ಲವೆ?

ಪುರುಷನಿಗೆ ಕೊಡುವ ವಿದ್ಯೆಯನ್ನು ಸ್ತ್ರೀಗೆ ಕೊಡುವುದರಿಂದ ಪ್ರಯೋಜನವಿದ್ದರೂ ಈಗ ಒಂದುವೇಳೆ ಸ್ತ್ರೀಯು ಕಲಿತರೂ ಗಂಡಸಿನಷ್ಟು ಸಾಮರ್ಥ್ಯವಿಲ್ಲ ... ಶರೀರದ ಧರ್ಮವೂ, ಸಂಸಾರದ ಸಂಬಂಧವೂ, ಮಕ್ಕಳ ಪೋಷಣಾ ಕಾರ್ಯವೂ ಇವೇ ಮುಂತಾದವುಗಳೇ ಅವಳ ಕಾರ್ಯಗಳಿಗೆ ವಿಶೇಷ ಪ್ರತಿಬಂಧಕಗಳಾಗಿರುವುದರಿಂದ ಸಾಧಾರಣವಾಗಿ ಪುರುಷರಿಗಿರುವ ಗುಣಗಳು ಶಕ್ತಿಯೂ, ಸಾಹಸವೂ, ಧೀಶಕ್ತಿಯೂ ಸ್ತ್ರೀಯರಲ್ಲಿ ಇವೇ ಮುಂತಾದ ಕೆಲವು ವಿಷಯಗಳಲ್ಲಿ ... ಮಾಡಿದರೆ ಸಂಸಾರವು ಕ್ಲಿಷ್ಟವಾಗುವದೆಂಬ ಭಯವೇನೂ ಇರುತ್ತದೆ

ಹೆಂಗಸು ಮಾಡಬೇಕಾದ ಅನೇಕ ಕಾರ್ಯಗಳಲ್ಲಿ ಅಡಿಗೆ ಮಾಡುವುದು ಒಂದು ಹೆಂಗಸು ಈ ಕಾರ್ಯದಲ್ಲಿ ... ಈ ಕಾರ್ಯವು ಗಂಡಸಿಗೆ ಸಾಧ್ಯವು ಗಂಡಸು ... ಸಾಮಗ್ರಿಗಳನ್ನು ಒದಗಿಸಿ, ಅಥವಾ ಕೊಂಡು ತಂದು ಮನೆಗೆ ಹಾಕಲು ಸಮರ್ಥನು ... ಯಾವಾಗ ... ಏರ್ಪಡಿಸಿ ಭೋಜನಕ್ಕೆ ... ಹೆಂಗಸರು ... ಇಂತಹ ... ಸ್ತ್ರೀಯು ಸಂಸಾರವನ್ನು ... ಈ ಕಾರ್ಯಗಳನ್ನು ... ಕೊಡದಂತೆ ಸ್ತ್ರೀಯು ತನ್ನ ಕರ್ತವ್ಯಗಳನ್ನು ... ತಿಳಿಸಿದರೆ ಆಕೆಯ ಸಂಸಾರವೇ ಸ್ವರ್ಗ ಸಮಾನವಾಗುವುದು

ಕಾಡುಹಂದಿ ಹಾವಳಿ.

ಅರಕಲಗೂಡು ವರ್ತಮಾನ

(ನಮ್ಮ ಬಾತ್ಮೀದಾರರಿಂದ)

ಮಲ್ಲಿಪಟ್ಟಣದ ಹೋಬಳಿ ಕೊಳ್ಳಂಗಿ ಗ್ರಾಮದ ಒಬ್ಬ ಮನುಷ್ಯ ಈಗ್ಯೆ ಸುಮಾರು 20–25 ದಿವಸಗಳಲ್ಲಿ ರಾತ್ರಿ ಕಾಲ ತನ್ನ ಹೊಲದ ಹತ್ತಿರ ಕೆಲಸ ಮಾಡಲು ಹೋದಾಗ ಒಂದು ಕಾಡು ಹಂದಿಯು ಬಂದು ಅವನನ್ನು ಬಗಚಿ ಬಹಳ ಗಾಯ ಮಾಡಿತು ತಕ್ಷಣ ಅವನು ಕೂಗಿಕೊಳ್ಳಲು ಗ್ರಾಮಸ್ಥರು ನಾಯಿಯ ಸಂಗಡ ಓಡಿಬಂದು ಅದನ್ನು ಓಡಿಸಿ ಹಾಕಿದರು ... ಮಾಂಸವೆಲ್ಲಾ ಕಿತ್ತು ಹಾಕಿದ್ದುದನ್ನು ಪುನಃ ಹೊಲಿಸಲು ಅರಕಲಗೂಡು ಆಸ್ಪತ್ರೆಗೆ ತರಲು ಕೊಂಡು ಹೋಗಲು ಕೆಲವು ಭಾಗ ... ಕಾರಣ ಹೊಳೆನರಸೀಪುರದ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಚಿಕಿತ್ಸೆ ನಡಸುತ್ತಿದ್ದಾರೆ

ಇಲ್ಲಿನ ಕಾಪರೇಟಿವ್ ಕೋ ಆಪರೇಟಿವ್ ಸೊಸೈಟಿಯ ಜನರಲ್ ಮೀಟಿಂಗ್ ತಾ 1-11-36 ನೇ ಭಾನುವಾರ ಪೇಟೆ ಬಾಯ್ಸ್ ಸ್ಕೂಲ್ ಕಟ್ಟಡದ ಮಹಡಿ ಮೇಲೆ ನಡೆಯಿತು ಇಲ್ಲಿನ ಅಮಲ್ದಾರ್ ಮಿ॥ ಸಿ ಮಹಮದ್ ಹುಸೇನ್ ಸಾಹೇಬರು ಅಗ್ರಾಸನವನ್ನು ವಹಿಸಿದ್ದರು ಪ್ರಾರಂಭದಲ್ಲಿ ಪ್ರಾರ್ಥನೆಯೂ ನಂತರ ಸಕ್ರೆಟರಿಯವರ ರಿಪೋರ್ಟೂ ಓದಲಾಯಿತು

ಇಲ್ಲಿನ ಅರಕಲಗೂಡು — ಹೊಳೇನರಸೀಪುರಕ್ಕೆ ಹೋಗುತ್ತಿದ್ದ ಲಲಿತಾ ಬಸ್ ಸರ್ವಿಸ್ಸು ಒಂದು ತಿಂಗಳು ನಡೆಸ ಕೊಡದಂತೆ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರ ಆರ್ಡರಿನ ಮೇರೆ 27-10-36 ನೇ ಮಂಗಳವಾರದಿಂದ ನಿಂತು ಹೋಗಿದೆ ಇದಕ್ಕೆ ಮಿತಿಮೀರಿದ ಪ್ಯಾಸೆಂಜರನ್ನು ಕೂಡಿಸಿದ್ದೇ ಕಾರಣವೆಂದು ತಿಳಿಯಲಾಯಿತು S R T ಸರ್ವೀಸಿನವರು ಬ್ಯುಸಿನೆಸ್ ಪಡೆದು ಆ ಕಾಲ ... ನಡೆಸುತ್ತಿರುತ್ತಾರೆ ದರ ಮಾತ್ರ ... ಇದರಿಂದ ಪ್ಯಾಸೆಂಜರುಗಳಿಗೆ ತೊಂದ್ರೆ ಆದಂತಾಯಿತು

ಈ ಊರಿನ ಕೆರೆ ನೀರನ್ನು ಕುಡಿದು ... 50 60 ಜನ ವಾಯಿಲೆ ಮಲಗಿರುತ್ತಾರೆ

ಉಪಾಧ್ಯಾಯ — ಏ ಜಟಕ ಅಂದ್ರೆ ಏ.
ಜಟಕ — ಎಲ್ಲಿ ಬಿದ್ದಿ?
ಉಪಾಧ್ಯಾಯ — ಕೋರ್ಟಿಗೆ
ಜಟಕ — ಕೋರ್ಟಿಗೆ ಬರೋದಕ್ಕೆ ನಾನು ಏನು ತಪ್ಪು ಮಾಡಿಲ್ಲ ಬುದ್ಧಿ

ಉಪಾಧ್ಯಾಯರು — ಲೋ ಕಿಟ್ಟು ಹೋಂ, ವರ್ಕ್, ಮಾಡಿಕೊಂಡು ಬಂದಿದೆಯೇನೋ
ಕಿಟ್ಟು — ಇಲ್ಲ, ಸಾರ್
ಉಪಾಧ್ಯಾಯರು — ಯೇಕೆ?
ಕಿಟ್ಟು — ನಮ್ಮ ತಂದೆಯವರು ಮನೆಯ ಕೆಲಸ ಮಾಡುವದಕ್ಕೆ ನಿನ್ನೆ ದಿವಸ ಒಬ್ಬ ಆಳನ್ನು ಇಟ್ಟುಕೊಂಡರು ಅದರಿಂದ

ವಿನೋದಲಹರಿ.

ಲೇಖಕರು — ಎಂ ಎಸ್ ಶ್ರೀನಿವಾಸ ...

ತಾಯಿ — ಕಮಲ ಒಳಗಡೆ ... ಏನೆ ಉರುಳಿಸಿಯೆ? ಬಂದೆ ...
ಕಮಲ — ಬಂದು ನೋಡಿ ಉರುಳ...

* * *

ನಿರುದ್ಯೋಗಿ — ಸಾರ್ ನನಗೆ ಒಂದು ಕೆಲಸ ಕೊಡಿ
ಅಧಿಕಾರಿ — ನಿನಗೆ ಏನು ಪಾಸಾಗಿದೆ
ನಿ — ಐ. ಸಿ ಎಸ್.
ಅ — ಪಾಸ್ಮಾಡಿದವನು?
ನಿ — ಫೇಲಾದವನು
ಅ — ಆಶ್ಚರ್ಯದಿಂದ, ... ಸಿ ಎಸ್ ಅಂದರೇನು
ನಿ — ಇಂಡಿಯನ್ ಕುಂಟಾ...

* * *

ವ್ಯಾಪಾರಿ — ಹಲ್ಲುಪುಡಿ ಬೇಕೆ ... ಪುಡಿ?
ಹಳ್ಳಿಗೌಡ — ಅದು ಯಾರ ... ಸ್ವಾಮಿ?
ವ್ಯಾ — ಸಂಡಿತರದು
ಗೌ — ಅವರ ಹಲ್ಲಿನ್ಯಾಕೆ ಪುಡಿಮಾಡಿ...

* * *

(ಗಂಡ ಹೆಂಡತಿಯನ್ನು ಕರೆತ... ಲೇ ತಪ್ಪಾಯಿತು ಅಂತ ... ಕೋ ಆಗ ಕ್ಷಮಿಸುತ್ತೇನೆ
ಹಾಗಾದರೆ ತಾಳಿ ಹಗ್ಗ ತರು...

* * *

ರಾಯರು — ಏನು ರಟ್ಟಿರಿ ಹೋ...
ಬಿಟ್ಟರು — ನಿಮ್ಮನ್ನೇ ನೋಡು... ಅಂತ.
ರಾಯರು — ನೋಡಿ ಆಯಿತಲ್ಲ...

* * *

ವರ್ತಕ — ಒಬ್ಬ ಸ್ವಾಮಿ ನಿಮಗೆ ... ಲೇಕಾದರೂ ಕೊಡುತ್ತೇನೆ
ಗಿರಾಕಿ — ನನಗೆ 5 ರೂಪಾಯಿ ... ಕೊಡಿ

* * *

ಪಾಲಿಸುವನು — ರಾಯರ ನಿಮ್ಮ... ಕೊಡೋದಿಲ್ಲ, ನಾ ... ತರೋದಿಲ್ಲ ಸ್ವಾಮಿ
ರಾಯರು — ಹಾಗೇ ಮಾಡಪ್ಪ

ಕಂ ಸುಬ್ರಹ್ಮಣ್ಯಶಾಸ್ತ್ರಿಗಳು

೩ ವರುಷದ ರಾಮು (ಊಟಕ್ಕೆ ... ತಿರುವಾಗ ತಂದೆಯನ್ನು ಕುರಿತು) ... ನಿನ್ನ ತುಟಿಯ ಮೇಲೆ ನೋಣ ... ರುವಂತೆ ಕಾಣುತ್ತೆ ನೋಡಿಕೋ
ತಂದೆ — ಓ ಮಗು, ನನ್ನ ಮೀಸೆ ಕುಳಿತುಕೊಂಡಿರುವುದು ... ಲ್ಲ, ಮೀಸೆ
ರಾಮು — ನಗುತ್ತಾ ಓಹೋ? ... ಅಣ್ಣನ ಮೀಸೆಗೂ ರಿಬ್ಬಿಂಗ್ ... ಬಿಡಕಣಪ್ಪ

(ಹಿಂದಿನ ಕಾಲಮನ್ನು ನೋ...

ಪ್ರಾಚೀನ ಕನ್ನಡ ವಚನ ಗ್ರಂಥಗಳು

ಸೌಗಂಧಿಕಾಪರಿಣಯ.—ಪೂರ್ವದಲ್ಲಿ ದೇವೇಂದ್ರನಿಗೆ ದೂರ್ವಾಸ ಮುನಿಗಳಿಂದ ಅತೀರ್ವಾದ ಪೂರ್ವಕವಾಗಿ ಕೊಡಲ್ಪಟ್ಟ ಕಮಲದಮಾಲಿಕೆ ಯನ್ನು ಆನೆಯ ಕುಂಭಸ್ಥಳದಲ್ಲಿಟ್ಟದ್ದಾಡನೆ, ಆನೆಯು ಆ ಮಾಲಿಕೆ ಯನ್ನು ಕಾಲಿನಲ್ಲಿ ಹೊಸಕಿ ವ್ಯರ್ಥಪಡಿಸಲು, ಮುನಿಗಳ ಶಾಪದಿಂದ ಭೂಲೋಕದಲ್ಲಿ ರತ್ನಪುರಿಯಲ್ಲಿ ಸುಗಂಧರಾಜನಾಗಿ ಹುಟ್ಟಿ, ಕಳಿಂಗದೇ ಶದ ರಾಜಪುತ್ರಿಯಾದ ಸೌಗಂಧಿಕಾದೇವಿಯನ್ನು ಸ್ವಯಂವರವಾಡಿ ದ್ದೂಂದ, ಬಹಳ ವಿಷಯಗಳಿರುವ ಕಥೆ.

೧೮೦ ಪುಟಗಳು ಕ್ರಯ ರೂ ೧—೮—೦

ಸಕಸ್ತ್ರಾಯುಚರಿತ್ರೆ—ಮಾಹಿಷ್ಮತೀ ಅರಸನ ಜ್ಯೇಷ್ಠಪತ್ನಿಯಲ್ಲಿ ಸ್ವಾಯಣಿ ವರಪ್ರಸಾದದಿಂದ ಜನಿಸಿ ಲೋಕಪ್ರಸಿದ್ಧನಾಗಿ ತನಗ ಇತರರಿಂದ ಬಂದ ಗಂಡಾಂತರಗಳೆನ್ನೆಲ್ಲಾ ಪರಿಹರಿಸಿಕೊಂಡ ಒಬ್ಬ ಸತ್ಪುರುಷನ ಕಥೆ

೪೭೫ ಪುಟಗಳು ಕ್ರಯ ರೂ ೨—೦—೦

ಕಾಶೀಕ್ಷೇತ್ರಮಹಾತ್ಮೆ.—ಇದರಲ್ಲಿ ೧೪ ಲೋಕಗಳ ವರ್ಣನೆ, ನದಿ ಗಳು, ದೇವತೆಗಳು ಮುನಿಗಳೇ ಮುಂತಾದವರ ಉತ್ಪತ್ತಿಕ್ರಮ, ಗಂಗಾ ಪೆಸ್ನಾನಮುವೇ ಮೊದಲಾದ ಅನೇಕ ವಿಷಯಗಳು ಅಡಕವಾಗಿರುತ್ತೆ

೬೫೦ ಪುಟಗಳು ಕ್ರಯ ರೂ ೨—೨—೦

N B ಪುಸ್ತಕದ ಕ್ರಯದ ನಾಲ್ಕರಲ್ಲಿ ಒಂದು ಭಾಗ ಮೊದಲ ಗ ಅಡ್ವಾನ್ಸ್ ಕಳುಹಿಸಿದರೆ ಬಾಕಿಗೆ ವಿ ಪಿ ಮಾಡಲಾಗುತ್ತೆ

ಅಡ್ರೆಸ್ಸು —

ಗುಂಡ್ಲು ಪಂಡಿತ ಲಕ್ಷ್ಮಣಾಚಾರ್ಯರ ಮಕ್ಕಳು
ಶ್ರೀನಿವಾಸ ದೇಶಿಕಾಚಾರ್,
೩೦೭, ಕರುಪಟ್ಟಿಬೀದಿ, ಮೈಸೂರು

ಚಿನ್ನಗೃಷ್ಣ ವಾಳ್ಯದ ವೆಂಕಟಾಚಲ ಪಂಡಿತ ಅಂಡ್ ಸನ್ಸರ
ಆಯುರ್ವೇದೀಯ ಸಿದ್ಧೌಷಧಗಳು

ಶ್ಲೇಷ್ಮಾಮಯಹರ ಕಸ್ತೂರಿ ಮಾತ್ರೆಗಳು



ಈ ಮಾತ್ರೆಗಳು 1-2 ನ್ನು ಪ್ರತಿ ದಿನ ಊಟವಾದ ಬಳಿಕ ತಾಂಬೂಲದೊಡನಾಗಲಿ ಹಾಗೆಯಾಗಲಿ, ಉಪಯೋಗಿಸುತ್ತಿದ್ದರೆ, ಬಾಯಿ ಸುವಾಸನೆಯಾಗಿರುತ್ತೆ ಎಂತಹ ಗುರುಸಾದ ಆಹಾರವನ್ನಾದರೂ ಜೀರ್ಣಿಸಿ ಕೊಳಕಾದ ನೀರು, ಕೆಟ್ಟಗಾಳಿಗಳ ದೋಷವನ್ನೂ, ಅಂಟುಜಾಡ್ಯಗಳನ್ನೂ ಒಳಗೆ ಸೇರಿಸದೆ ಮಲಬದ್ಧವನ್ನು ಹೋಗಲಾಡಿಸಿ, ಆರೋಗ್ಯವಾಗಿರುವಂತೆ ಮಾಡುತ್ತವೆ

ಮಕ್ಕಳ ಪಕ್ಕೆಸೆಳೆತ (ಏಳವು) ಕಾಲುಕೈ ಊದಲು, ಬಾಯಲ್ಲಿ ಜೊಲ್ಲುಸುರಿಸುವ ಶೀತವಾತ ಮಕ್ಕಳ ಮತ್ತು ದೊಡ್ಡವರ ಶೀತ, ನೆಗಡಿ, ಕೆಮ್ಮಲು, ಗೂರಲು, ಜ್ವರ, ಚಳಿಜ್ವರ, ಅಜೀರ್ಣ, ಅಜೀರ್ಣ ಭೇದಿ, ಹೊಟ್ಟೆಯುಬ್ಬರ, ಹೊಟ್ಟೆ ನೋವು, ಅಗ್ನಿಮಾಂದ್ಯ, ಇನ್‌ಫ್ಲುಯಂಜಾ, ಪ್ಲೇಗು, ಶೀತಭೇದಿ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ

ಸ್ತ್ರೀಯರು ಹೆತ್ತ ದಿನ ಸ್ನಾನದ ದಿನ ಶೀತವಾತ ಪರಿಹಾರಕ್ಕಾಗಿ ಸುಂಠಿಗೆ ಬದಲು ಈ ಮಾತ್ರೆಗಳನ್ನೇ ಲಕ್ಷಾಂತರ ಜನರು ಉಪಯೋಗಿಸುತ್ತಾರೆ ಈ ಮಾತ್ರೆಗಳಲ್ಲಿ ಅಫೀಮಾಗಲಿ, ವಿಷವಸ್ತುವಾಗಲಿ, ನಿಂದಿತ ವಸ್ತುವಾಗಲಿ ಇಲ್ಲ. ಒಂದೇ ಒಂದು ಈ ಸೀಸೆಯು ನಿಮ್ಮ ಬಳಿ ಇದ್ದರೆ, ವೈದ್ಯರ ಸಹಾಯವನ್ನಪೇಕ್ಷಿಸದೆ, ಹೀಗೇ ಅನೇಕ ವ್ಯಾಧಿಗಳನ್ನು ಗುಣಪಡಿಸಬಹುದು

250 ರಿಂದ 300 ಮಾತ್ರೆಗಳವರಿಗಿರುವ ಸೀಸೆ 1 ಕ್ಕೆ 1 ಆಣೆ ಗಳು ಮೂಲಕವಾದರೆ 1 ಸೀಸೆಗೆ 9 ಆಣೆ 6 ಸೀಸೆಗೆ 1—0—0 12 ಕ್ಕೆ 2—13—0 25 ಕ್ಕೆ 5—3—0

ವಾಳ್ಯದ ವೆಂಕಟಾಚಲ ಪಂಡಿತ ಅಂಡ್ ಸನ್ಸ್,
ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು

ದ್ರಾಕ್ಷಾಮೃತ

ಈ ದ್ರಾಕ್ಷಾಮೃತವು ಸಹ್ಯಾದ್ರಿ ಪರ್ವತದಲ್ಲಿ ಅನೇಕ ವನಸ್ಪತಿಗಳ ರಸವರ್ಗಗಳೊಂದಿಗೆ ದ್ರಾಕ್ಷಾರಸವನ್ನು ಮಿಶ್ರಮಾಡಿ ಸ್ವದೇಶಿ ಯಂತ್ರದಿಂದ ಶಾಸ್ತ್ರೋಕ್ತ ಪದ್ಧತಿ ಪ್ರಕಾರ ತಯಾರು ಮಾಡಿರುವದರಿಂದ ಸ್ವಾದಿಷ್ಟವು ಮತ್ತು ಮಧುರವು ಆಗಿದೆ

ಇದರ ಸೇವನೆಯಿಂದ ಶರೀರದೊಳಗಿನ ಹಳೆ ಕಾವು (ಗರಮಿ) ಸಂಪೂರ್ಣ ನಾಶವಾಗುತ್ತದೆ ಮತ್ತು ಧಾತುಸ್ರಾವ ಸ್ವಪ್ನಾವಸ್ಥೆಯಿಂದ ಅಥವಾ ಬೇರೆ ಯಾವದೇ ಕಾರಣದಿಂದ ಬಂದ ಅಶಕ್ತತೆಯಿಂದ ಕೈಕಾಲು, ಕಣ್ಣೊಳಗೆ ಉರುವು ಬೀಳೋಣ, ರೌತಿಕ್ಕೆ ಸಾಸ ಆಗದೆ ಇರೋಣ, ಮುಂತಾದ ಎಲ್ಲ ವಿಕಾರಗಳು ನಷ್ಟವಾಗಿ ಕ್ಷುಧಾಗ್ನಿ ಬೆಳೆಯುತ್ತದೆ ಮತ್ತು ಅನ್ನ ಚೆನ್ನಾಗಿ ಪಚನವಾಗಿ ಬೆಳಕಿಗೆ ಸಾಧನವಾಗುತ್ತದೆ ಇದರ ಸೇವನೆಯಿಂದ ತರುಣರಿಗೆ ವ್ಯಭಿಚಾರದಿಂದ ಅಥವಾ ಬೇರೆ ಕಾರಣದಿಂದ ಬಂದ ಧಾತುಕ್ಷೀಣತೆ, ನಪುಂಸಕತ್ವ ಇದ್ದರೆ ಅದು ಹೋಗಿ ಪುನಃ ಯೌವನವಂತರಾಗಿ, ಶರೀರ ಬಲವಾಗಿ ಮಕ್ಕಳು ಪುಷ್ಟಿವಂತರಾಗುವರು ಹೆಂಗಸರಿಗೂ ಮತ್ತು ಮಕ್ಕಳಿಗೂ ಈ ಔಷಧವು ಗುಣಕಾರಿ ಇದೆ ಮುಟ್ಟಾಗದಿದ್ದರೆ ಮತ್ತು ಬಿಳಿ ಗರ್ಭ ಸಂಬಂಧವಾದ ರೋಗಗಳಿದ್ದರೂ ಅವೆಲ್ಲ ಗುಣವಾಗಿ ಹೆಂಗಸರಿಗೆ ಸಂತತಿ ವೃದ್ಧಿಯಾಗುವದು ಈ ಔಷಧದ ಪತ್ತರು ಬಾಟ್ಲಿಗಳನ್ನು ಸೇವನೆ ಮಾಡಿದರೆ ಪೂರ್ಣ ಗುಣಬರುತ್ತದೆ ಇದರ ಅನುಭವ 1 ಬಾಟ್ಲಿ ಸೇವನೆ ಮಾಡಿದ ಅನಂತರ ನಿಮಗೆ ತಿಳಿದೀತು

1 ಬಾಟ್ಲಿ ಬೆಲೆ ರೂ ೧—೪—೦, 3 ಬಾಟ್ಲಿ ೩—೮—೦, 1 ಡಜನ ಬಾಟ್ಲಿ ಬೆಲೆ ೧೨—೦—೦

ಮ್ಯಾನೇಜರ್—ದ್ರಾಕ್ಷಾಮೃತ ಡಿಪೋ ಪೋಸ್ಟ್ ನಿಪ್ಪಾಣಿ, ಜಿಲ್ಲಾ ಬೆಳಗಾವಿ.

ಮೈಸೂರು ಸ್ಟಾಕಿಸ್ಟ್ಸ —ಟಿ ಸಿ ನಟರಾಜ್, ಬೊಂಬಾಯಿ ಆನಂದ ಭವನ, ಮಾಡರ್ನ್ ಫಾರ್ಮಸಿ, ಸಯ್ಯಾಜಿರಾವ್ ರೋಡ್ ಬೆಂಗಳೂರು ಸಿಟಿ—ಸಿ ವಿ ಶಾಸ್ತ್ರಿ ಅಂಡ್ ಸನ್ಸ್, ಚಿಕ್ಕಪೇಟೆ ತುಂಕೂರು—ಟಿ ಆರ್ ಗುರು ಚನ್ನಬಸಪ್ಪ ಅಂಡ್ ಬ್ರದರ್ಸ್ ಚಿಕ್ಕಮಗಳೂರು—ಎಂ ಎಲ್ ಮಂಜಯ್ಯಶೆಟ್ಟಿ ಶಿವಮೊಗ್ಗ—ಶ್ರೀಕೃಷ್ಣ ಟ್ರೇಡಿಂಗ್ ಏಜನ್ಸಿ ಮತ್ತು ಖಂಡೇರಾವ್ ಬ್ರದರ್ಸ್ ದಾವಣಗೆರೆ—ಮಲ್ಲೇಶಪ್ಪ ಮತ್ತು ಕೆ ಭೋಗಯ್ಯಶೆಟ್ಟಿ ಅಂಡ್ ಬ್ರದರ್ಸ್

"ಬ್ರೇಕ್ ಪಿಲ್ಸ್"

INVENTED BY A HIMALAYAN SAGE

● ಸ್ತ್ರೀಪುರುಷರಿಗೆ ಆನಂದವನ್ನುಂಟುಮಾಡುವುದು ಈ ಮಾತ್ರೆಗಳೆ ಮದಿಸಿದ ಸ್ತ್ರೀಯರ ಗರ್ವಭಂಗಮಾಡಲು ಕಂಡುಹಿಡಿದಿರುವ ಮಾತ್ರೆಗಳಿವು ಇದರಲ್ಲಿ ವಿಷಾದಿಗಳು ಸೇರಿಲ್ಲ ಕಸ್ತೂರಿ, ಚಿನ್ನ, ಹಿಮಾಲಯ ಪರ್ವತದ ವನಮೂಲಿಕೆಗಳು ಮುಂತಾದುವುಗಳಿಂದ ದೊಡ್ಡ ಯೋಗೀಶ್ವರರ ಹತ್ತಿರ ಸಂಗ್ರಹಿಸಿ ಮುದುಕನನ್ನು ಲೋಕದಲ್ಲಿ ಇಲ್ಲದಂತೆ ಮಾಡುವುದು ಅರ್ಧ ಘಂಟೆಯೊಳಗಾಗಿ ವೀರ್ಯವನ್ನು ಕಲ್ಲಿನಂತೆಮಾಡಿ ರಮಿಸಲು ಉಲ್ಲಾಸವನ್ನು ಮಾಡುವುದು ಗುಣವಿಲ್ಲದಿದ್ದಲ್ಲಿ ಹಣ ವಾಪಸು

೬೦ ಮಾತ್ರೆಗಳು ರೂ ೫—೦—೦ ೩೦ ಮಾತ್ರೆಗಳು ರೂ ೩—೦—೦
(ಕಾಗದ ಪತ್ರಗಳು ಇಂಗ್ಲೀಷಿನಲ್ಲಿಯೇ)

ಡಾ॥ ಎ ಎಸ್. ಮೂರ್ತಿ, ಚಿಕಾಕೋಲ್, ಗಂಜಾಮ್ ಡಿಸ್ಟ್ರಿಕ್ಟ್.

ANANDA SODA FACTORY,

BEST AERATED WATER SUPPLIERS
COMPLETE REQUISITES FOR
AERATED WATER MANUFACTURERS
AVAILABLE.

ಆನಂದಾ ಸೋಡಾ ಫ್ಯಾಕ್ಟರಿ,
ದೊಡ್ಡ ಪೇಟೆ, ಮೈಸೂರು

[illegible] ನಿಮ್ಮ ಜಾಣತನಕ್ಕೆ ತಕ್ಕ ಫಲವನ್ನು ಹೊಂದಿರಿ!

Missing Letters Competition.

Last day of Entry	Fee for each Entry	Result on
20—11—36	2 Annas	23—11—36

ಅಕ್ಷರ ಬಂಧ ಸ್ಪರ್ಧೆ ನಂ. ೧.

ಬಹುಮಾನ ಹತ್ತು ರೂಪಾಯಿ.

ಮೊದಲನೇ ಬಹುಮಾನ ಆರು ರೂ. - - ಎರಡನೇ ಬಹುಮಾನ ನಾಲ್ಕು ರೂ.

ವಿಶೇಷ ಬಹುಮಾನವೂ ಉಂಟು

ಪ್ರವೇಶ ಧನ ಎರಡಾಣೆ ಮಾತ್ರ - - ಕಡೆಯ ತಾ|| ೨೦—೧೧—೩೬.

ಕೆಳಗೆ ಕೊಟ್ಟಿರುವ ಎಂಟು ಪದಗಳಲ್ಲಿ ಬಿಟ್ಟಿರುವ ಅಕ್ಷರಗಳನ್ನು ಸೇರಿಸಬೇಕು

ಪದಗಳು	[illegible]
ಗಣ - -	ವಿನಾಯಕ
ರಾಮಾ - -	[illegible]
ಚಕ್ರ - -	ವಿಷ್ಣು
- ದರ	ಕರ್ಪೂರ
- - ಮುಖಿ	ಸ್ತ್ರೀ
- - ವತಾರ	[illegible]
- - ರುಹ	[illegible]
- - ಸುರ	[illegible]

— ನಿಯಮಗಳು —

1 ಈ ಸ್ಪರ್ಧೆಯ ಉತ್ತರವು "ಸಾಧ್ವಿ" ಪತ್ರಿಕಾ ಸಂಪಾದಕರ ಬಳಿ ಮೊಹರು ಮಾಡಿ ಇಡಲ್ಪಟ್ಟಿದೆ 2 ಅದಕ್ಕೆ ಪ್ರತಿ ಅಕ್ಷರವು ಸರಿಹೋಲುತ್ತ ಉತ್ತರಕ್ಕೆ ಮೊದಲನೇ ಬಹುಮಾನವೂ ಒಂದು ತಪ್ಪಿರುವುದಕ್ಕೆ ಎರಡನೇ ಬಹುಮಾನವೂ ಕೊಡಲ್ಪಡುತ್ತವೆ 3 ಎರಡಕ್ಕಿಂತ ಕಮ್ಮಿ ಉತ್ತರವನ್ನು ಅಂಗೀಕರಿಸುವುದಿಲ್ಲ 4 ಪ್ರವೇಶಧನ ಒಂದು ಉತ್ತರಕ್ಕೆ ಎರಡಾಣೆ 5 ಪ್ರವೇಶಧನವನ್ನು ಟಪಾಲು ಸ್ಟಾಂಪು ಮೂಲಕವಾಗಿಯಾಗಲೀ ಮನಿಯಾರ್ಡರು ಮೂಲಕವಾಗಿಯಾಗಲಿ ಕಳುಹಿಸಬಹುದು 6 ಕನಿಷ್ಟಪಕ್ಷ ಎರಡು ಉತ್ತರಗಳನ್ನು 'ಸಾಧ್ವಿ' ಪತ್ರಿಕೆಯ ಕೂಪನ್ನಿನಲ್ಲೇ ಕಳುಹಿಸಬೇಕು ಬಾಕಿ ಉತ್ತರಗಳನ್ನು ಬಿಳಿ ಕಾಗದದಲ್ಲಿ ಕಳುಹಿಸಬಹುದು 7 ಒಂದು ರೂಪಾಯಿಗೆ ಹತ್ತು ಉತ್ತರಗಳನ್ನು ಕಳುಹಿಸಬಹುದು 8 ಬಹುಮಾನಗಳಿಗೆ ಯೋಗ್ಯವಾದ ಉತ್ತರಗಳು ಒಂದಕ್ಕಿಂತ ಹೆಚ್ಚು ಬಂದಲ್ಲಿ ಬಹುಮಾನವನ್ನು ಹಂಚಲಾಗುವುದು 9 ಉಮೇದುವಾರರ ಸಂಖ್ಯೆಗೆ ಅನುಗುಣವಾಗಿ ಬಹುಮಾನದ ಮೊಬಲಗನ್ನು ಹೆಚ್ಚಿಸಲಾಗುವುದು (ಕಡಿಮೆ ಮಾಡುವುದಿಲ್ಲ) 10 ಇದರ ಉತ್ತರವು ಇದೇ ನೇ ತಿಂಗಳು 23 ನೇ ತಾ|| ನ 'ಸಾಧ್ವಿ' ಪತ್ರಿಕೆಯಲ್ಲಿ ಪ್ರಕಟಿಸಲ್ಪಡುವುದು 11 ಇದರಲ್ಲಿ ಭಾಗವಹಿಸತಕ್ಕವರು ಈ ತಿಂಗಳು 20 ನೇ ತಾ|| ನೊಳಗೆ ಉತ್ತರಗಳನ್ನು ಕಳುಹಿಸಬೇಕು 12 ಮೈಸೂರಿನಲ್ಲಿ ಭಾಗವಹಿಸುವವರು 'ಸಾಧ್ವಿ' ಆಫೀಸಿನಲ್ಲಿ ಕೊಡಬಹುದು 13 ಈ 'ಸ್ಪರ್ಧೆ'ಯ ವಿಷಯವಾಗಿ ಯಾವ ವ್ಯವಹಾರಗಳಿಗೂ ಆಸ್ಪದವಿಲ್ಲ ಮ್ಯಾನೇಜರವರ ತೀರ್ಮಾನವೇ ಕಡೆಯದು ಇದಕ್ಕೆ ಎಲ್ಲರೂ ಬದ್ಧರು

ಹೆಸರು

ವಿಳಾಸ

ವಿಳಾಸ —

ಮ್ಯಾನೇಜರ್,
"ಅಕ್ಷರ ಬಂಧ ಸ್ಪರ್ಧೆ"
[illegible] ರಸ್ತೆ
ಮೈಸೂರು.

ಉದಾಹರಣೆ —

[illegible]

Edited Printed & Published by [illegible] at Sri Rama Press, D Subbiah Road, Mysore

Registered No. M. 3534



|| ಸತ್ಯಮೇವೋದ್ಧರಾಮ್ಯಹಮ್ ||

ರಾಜಧಾನಿಯ ರಾಷ್ಟ್ರೀಯ ವಾರ ಪತ್ರಿಕೆ.

ವೃದ್ಧಪಿತಾಮಹ ಎಂ ವೆಂಕಟಕೃಷ್ಣಯ್ಯನವರ ಜ್ಞಾಪಕಾರ್ಥವಾಗಿ ಪ್ರಕಟಿಸಲ್ಪಡುವುದು.

ಸಂಪಾದಕರು ಆಗರಂ ರಂಗಯ್ಯ, ಬಿ ಎ

SADHVI: A LEADING NATIONALIST WEEKLY OF MYSORE.

FOUNDED IN MEMORY OF Mr. M. VENKATAKRISHNAYYA, THE GRAND OLD MAN OF MYSORE

ಸಂಪುಟ ೧] MYSORE MONDAY 16—11—36 ಮೈಸೂರು : ಸೋಮವಾರ ೧೬—೧೧—೩೬ [ಸಂಚಿಕೆ ೨೦

ಲಿವರ್ ಕ್ಯೂರ್

(ಪಿತ್ತಕೋಶದ ರಕ್ಷಕ)

ಪಿತ್ತಕೋಶ, ಮತ್ತು ಯಕೃತ್ತುಗಳ ರೋಗ (ಗಡ್ಡೆ) ಗಳಿಗೆ, ... ಔಷಧವು

ಲಿವರ್ ಕ್ಯೂರ್

ಲಿವರ್ ಕ್ಯೂರ್

ವಿಳಾಸ — ಜಮ್ಮಿ ವೆಂಕಟರಮಣಯ್ಯ,

ಲಿವರ್ ಮತ್ತು ಸ್ಪ್ಲೀನ್ ಸ್ಪೆಷಲಿಸ್ಟ್, ಮೈಲಾಪುರ, ಮದ್ರಾಸು

ಬೆಂಗಳೂರ್ ... ಶ್ರೀನಿವಾಸಾಚಾರ್ಯರ ...

ಈ ಸುಸಮಯವನ್ನು ಕಳೆದುಕೊಳ್ಳಬೇಡಿರಿ!

ಚಿತ್ರಶಾಲಾ ಸ್ಪರ್ಧೆ ನಂ ೧೪.

ಮೊದಲನೇ ಬಹುಮಾನ ೬೦ ರೂ.

ಸ್ಪೆಷಲ್

ದೀಪಾವಳೀ ಹಬ್ಬಕ್ಕಾಗಿ ಸ್ಪೆಷಲ್ ರಿಯಾಯಿತಿಗಳು

೧೦೦ ರೂ. ಬಹುಮಾನ

ಸ್ಪೆಷಲ್

ಬಿಳಿಯ ಕಾಗದದಮೇಲೆ ಬರೆದು ಕಳುಹಿಸಬಹುದು

ಇತರ ಬಹುಮಾನಗಳು ४೦ ರೂ



ಕೂಪನ್ ನಂಬರು

ಹೆಸರು

ವಿಳಾಸ

— ಎಡದಿಂದ ಬಲಕ್ಕೆ —

೧ ಬಿದುಗಡೆ ೩ ಉಚ್ಚ ಶಿಕ್ಷಣವನ್ನು ಕೊಡತಕ್ಕ ಸ್ಥಳ ೬ ಕಪಿ ८ ಕುಬಗುರು ೮ ಸುರುಕ ೧೦ ಮಹಾತ್ಮಾ ಗಾಂಧಿಯವರು ಪ್ರಪಂಚಕ್ಕೇ ಸ್ವಾಮಿಯರು ೧೩ ಬಹು ಹಿಂದಿನಕಾಲದ ಸ್ಥಳ ೧೪ ಇನ್ನೊಬ್ಬರ ಆಧೀನ ೧೫ ಜ್ಯೋತಿ ಒಂದು ಕೆಲಸಕ್ಕೆ ೧೭ ಸಟ್ಟಿ ೧೭ ಅರಣ್ಯ ೧೭ ಒದಕ್ಕೆ ೧೯ ಸ್ವತಂತ್ರದ ಸಾಧನ ೨೦ ದೇವ ಪುತ್ರರು ೨೪ ಹಿಂದೂ ಜನಾಂಗವನ್ನು ನಾಲ್ಕು ಗಳಾಗಿ ವಿಂಗಡಿಸಿದ್ದಾರೆ ೨೬ ಕೇಳು ೩೦ ಇದು ಭೂಮಿಯೊಳಗೆ ಇರುತ್ತದೆ ೩೨ ನಾತಿಸ–ಬಾಣ ೩೩ ದುಷ್ಟರನ್ನು ಶಿಕ್ಷಿಸುವುದೇ ಇವರ ಕುಲ ಕಸುಬು ೩೪ ಸಿಹಿ ೩೬ ಇದನ್ನು ಕೊಂಡು ವಿಗ್ರಹಗಳನ್ನು ಮಾಡುತ್ತಾರೆ ೩೭ ಆಶ್ಚರ್ಯ ೩೮ ಇದು ಸಮ್ಮ ದೇಶಕ್ಕೆ ಈಗ ಅಗತ್ಯವಾಗಿ ಬೇಕು.

— ಮೇಲಿನಿಂದ ಕೆಳಕ್ಕೆ: —

೧ ಉಭಯ ಪಕ್ಷದವರ ಸಹಕಾರವೂ ಇದಕ್ಕೆ ಬೇಕು ೨ ನೂಲು ತೆಗೆಯುವ ಯಂತ್ರ ೩ ಸಧಿ ४ ತೋರಿಸಿ ಕೊಡುವುದು ೫ ಒಂದೇ ಸ್ಥಳದಲ್ಲಿ ಹುಟ್ಟಿ ಬೇರೆ ಬೇರೆ ಹರಿದು ಒಂದೇ ಸ್ಥಳದಲ್ಲಿ ಸಮುದ್ರವನ್ನು ಸೇರುವ ನದಿಗಳು ೬ ಹಸು ೯ ಉಪವಾಸ ವ್ರತ ೧೦ ಪೂಜ್ಯ ರುಚಿಗಳಲ್ಲೊಂದು ೧೨ ಪೂಜಾದಿ ಕಾರ್ಯಗಳನ್ನು ನಡೆಸುವವನು ೧೩ ನೆಡು ೧४ ಹೊಂದುವ ೧೬ ದೇವರು ಆಶೀರ್ವದಿಸು ೨೦ ಬೆಂಗಳೂರಿನಲ್ಲಿ ನಡೆಯುವ ಜಾತ್ರೆ ೨೨ ಶತ್ರುಗಳು ಗದ್ದಲ್ಲಿ ಊರಿನಲ್ಲೆಲ್ಲಾ ಸ್ನ ಮಾಡುವರು ೨೩ ರೋಗಿಗೆ ಔಷಧಿಯು ವುದಿಲ್ಲಾ ೨೫ ಪುನಃ ೨೬ ನದಿ ಸಮುದ್ರಗಳಲ್ಲಿ ಇವು ಇರುತ್ತವೆ ೨೮ ಇದರಲ್ಲಿ ಪರಿಣತರಾದವರು ಪ್ರಸಿದ್ಧರಾಗುತ್ತಾರೆ ೨೯ ಅನುಭವ ಶಾಲಿಯಾದ ಈತನ ಸಹಾಯದಿಂದ ಜನರು ಉತ್ತಮ ಸ್ಥಿತಿಗೆ ಬರಬಹುದು ೩೧ ನಕೆ ೩೫ ವೇಶ್ಯಾಂಗನೆ ೩೬ ಇದು ಒಂದೂ ದರ್ಮವನ್ನು ಬೋಧಿಸುತ್ತದೆ

ಸೂಚನೆ — ಈ ಸ್ಪರ್ಧೆಯ ಸರಿಯಾದ ಉತ್ತರವು ಸಾಧ್ವಿ ಎಡಿಟರ ಬಳಿ ಮೊಹರುಮಾಡಿ ಇಟ್ಟಿರುತ್ತೆ. ಅದಕ್ಕೆ ಪ್ರತಿ ಅಕ್ಷರವೂ ಸರಿಹೋಲುತಕ್ಕ ಸ್ಪರ್ಧೆಗೆ ಮೊದಲನೇ ಬಹುಮಾನವೂ, ಒಂದು ತಪ್ಪಿರುವವುಗಳಿಗೆ ಇತರ ಬಹುಮಾನಗಳೂ ಕೊಡಲ್ಪಡುವುವು. ಬಹುಮಾನಕ್ಕೆ ಯೋಗ್ಯವಾದ ಉತ್ತರಗಳು ಒಂದಕ್ಕಿಂತ ಹೆಚ್ಚಾಗಿದ್ದಲ್ಲಿ ಮೇಲ್ಕಂಡ ಬಹುಮಾನಗಳು ಎಲ್ಲರಿಗೂ ಹಂಚಲ್ಪಡುವುವು. ಬಹುಮಾನಗಳನ್ನು ಮುಂದಿನ ವಿಶಾಲ ಸ್ಪರ್ಧೆಯ ಸನ್ಮಾನೇಜರಿಗೆ ಸೇರಿದ್ದು. ಈ ವಿಚಾರದಲ್ಲಿ ಯಾವ ಪತ್ರವ್ಯವಹಾರಗಳಿಗೂ ಅವಕಾಶವಿಲ್ಲ. ಪ್ರತಿ ಸ್ಪರ್ಧೆಗೂ ಪ್ರವೇಶದ ನಾಲ್ಕಾಣೆ. ಎರಡಕ್ಕಿಂತ ಹೆಚ್ಚು ಸ್ಪರ್ಧೆಗಳನ್ನು ಅಂಗೀಕರಿಸುವುದಿಲ್ಲ. ಪ್ರವೇಶದನವನ್ನು ಪೋಸ್ಟಲ್ ಸ್ಟಾಂಪು, ಇಂಡಿಯನ್ ಪೋಸ್ಟಲ್ ಆರ್ಡರ್ ಅಥವಾ ಮನಿಯಾರ್ಡರ್ ಮೂಲಕ ರವಾನಿಸಬಹುದು. ಉತ್ತರಗಳನ್ನು ಬರೆಯತಕ್ಕವರು ಸಾಧ್ವಿ ಪತ್ರಿಕೆಯಲ್ಲಿರತಕ್ಕ ಕೂಪನ್ನಿನಲ್ಲಾಗಲಿ ಅಥವಾ ಬಿಳಿಯ ಕಾಗದದಲ್ಲಾಗಲಿ ಚಿತ್ರದಲ್ಲಿರುವಂತೆ ಚೌಕಾಗಿ (ಶಾಯಿಯಿನಲ್ಲಿ) ಬರೆದು ಕಳುಹಿಸಬೇಕು. ಉತ್ತರಗಳನ್ನು ಕಳುಹಿಸಲು ಡಿಸೆಂಬರು 3 ನೇ ತಾರೀಖು ಕೊನೆಯದಿನ. ನಂತರ ಬಂದ ಉತ್ತರಗಳನ್ನು ಸ್ವೀಕರಿಸುವುದಿಲ್ಲ. ಸರಿಯಾದ ಉತ್ತರವನ್ನು ಡಿಸೆಂಬರು 7 ನೇ ತಾರೀಖಿನ ಸಾಧ್ವಿಯಲ್ಲಿ ಪ್ರಕಟಿಸಲಾಗುತ್ತೆ.

ವಿಳಾಸ:— ಮ್ಯಾನೇಜರ್ ಚಿತ್ರಶಾಲಾ ಸ್ಪರ್ಧೆ, ಚಿತ್ರಶಾಲಾ, ನಾಗವಿಲಾಸ ಮೊಹಲ್ಲಾ ಒಂಟಿಕೊಪ್ಪಲ್, ಮೈಸೂರು.

ಮೈಸೂರಿನಲ್ಲಿ ಸ್ಪರ್ಧೆಗೆ ಭಾಗವಹಿಸುವವರು ತಮ್ಮ ಉತ್ತರಗಳನ್ನು ಮೆಸರ್ಸ್ ಸ್ಟೀಲ್ ಸ್ಟೋರ್ಸ್ ಇವರ ವಶಪಡಿಸಬೇಕಾಗಿ ವಿನಂತಿ. ಮ್ಯಾನೇಜರ್

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

– ಬಾಲಸುಧಾ –

ಮಕ್ಕಳ ಜ್ವರ, ಕೆಮ್ಮು, ಭೇದಿ, ಹಾಲು ಕಕ್ಕುವುದು, ಲಿವರ್ (ಪಿತ್ತಕೋಶ) ದೊಡ್ಡದಾಗಿ ಕಣ್ಣು ಬಿಳಿಯ ಬಣ್ಣವಾಗಿದ್ದರೆ ಇದರ ಸೇವನೆಯಿಂದ ನಿಶ್ಚಯವಾಗಿ ಗುಣವಾಗುತ್ತದೆ. 20 ವರ್ಷಗಳಿಂದಲೂ ಅನುಭವ ಸಿದ್ಧವಾದ ಸ್ವರ್ಣ ಭಸ್ಮ ಘಟಿತ ...

ಬಾಲಸುಧಾ ೧ಕ್ಕೆ 1 ರೂ. ... 1 ಆ

ಮೈಸೂರು, ಬೆಂಗಳೂರು, ದೊಡ್ಡಪೇಟೆಗಳಲ್ಲಿ ಸಿಗುವುದು.

ಸದ್ವೈದ್ಯಶಾಲಾ, ನಂಜನಗೂಡು

ANANDA SODA FACTORY,

BEST AERATED WATER SUPPLIERS.
COMPLETE REQUISITES FOR
AERATED WATER MANUFACTURERS
AVAILABLE

ಆನಂದಾ ಸೋಡಾ ಫ್ಯಾಕ್ಟರಿ,
ದೊಡ್ಡ ಪೇಟೆ, ಮೈಸೂರು



ಟಿ. ಸಿ. ನಟರಾಜ್ ಔಷಧಾಲಯ,

ಸಯ್ಯಾಜಿರಾವ್ ರೋಡು, ಮೈಸೂರು

ಇವರಲ್ಲಿ ನೇತ್ರಪರೀಕ್ಷೆಯು ಉಚಿತವಾಗಿ ಮಾಡಲ್ಪಡುತ್ತದೆ
ಅತ್ಯಗತ್ಯವಾಗಿ ಬೇಕಾದ ಎಲ್ಲಾ ಇಂಜಕ್ಷನ್ ಔಷಧಿಗಳೂ ಸದಾ ದೊರೆಯುವುದಲ್ಲದೆ ಸಮಸ್ತ ವ್ಯಾಧಿಗಳಿಗೂ ಚಿಕಿತ್ಸೆಯು ಬಹು ಸುಲಭ ಛಾರ್ಜಿನಿಂದ ಮಾಡಲ್ಪಡುತ್ತದೆ
ಝಂಡೂರವರ ಆಯುರ್ವೇದೀಯ ಸಿದ್ಧೌಷಧಗಳೆಲ್ಲವೂ ಸದಾ ದೊರೆಕುತ್ತವೆ

ಎಂ. ವಿ. ನಾರಾಯಣ ರಾಯರ
ಶ್ರೀ ಸತ್ಯನಾರಾಯಣ ಪರಿಮಳ ಫ್ಯಾಕ್ಟರಿ,
ಜಗನ್ಮೋಹನ ಬಂಗ್ಲಾ ಬೀದಿ, ಮೈಸೂರು

ಪರಿಮಳ ಅಗರ ಬತ್ತಿ

ಉಪಯೋಗಿಸಿ ಪ್ರೋತ್ಸಾಹಿಸಿರಿ.

|| ಸತ್ಯಮೇವೋದ್ಧರಾಮ್ಯಹಮ್ ||
ರಾಜಧಾನಿಯ ರಾಷ್ಟ್ರೀಯ ವಾರಪತ್ರಿಕೆ.
ವೃದ್ಧಪಿತಾಮಹ ಎಂ. ವೆಂಕಟಕೃಷ್ಣಯ್ಯನವರ ಜ್ಞಾಪಕಾರ್ಥವಾಗಿ ಪ್ರಕಟಿಸಲ್ಪಡುವುದು.
ಸಂಪಾದಕರು ಅಗರಂ ರಂಗಯ್ಯ, ಬಿ. ಎ.

ಸಂಪುಟ ೧] MYSORE : MONDAY 16—11—36 ಮೈಸೂರು : ಸೋಮವಾರ ೧೬—೧೧—೩೬ [ಸಂಚಿಕೆ ೩೮

ಗಾಂಧಿಯವರ ಆತ್ಮಕಥೆಗೆ ಬಹಿಷ್ಕಾರ!

ತುತ್ತುಕುಡಿಯ ಜಿಲ್ಲಾ ವಿದ್ಯಾಧಿಕಾರಿ ಯು ಗಾಂಧಿಜಿಯವರ ಆತ್ಮಕಥೆಯು ತ ಮ್ಮ ಅಧೀನದ ಪುಸ್ತಕಭಂಡಾರಗಳಲ್ಲಿರ ಬಾರದೆಂದು ಆಜ್ಞೆ ಮಾಡಿದ್ದಾರೆಯಂತೆ.

ಅದೇ ಪುಸ್ತಕವನ್ನೇ ಇನ್ನೊಂದು ಪ್ರಾಂತ್ಯದಲ್ಲಿ ಪಠ್ಯಪುಸ್ತಕವನ್ನಾಗಿ ಚು ನಾಯಿಸಿದ್ದಾರೆ—ಜಿಲ್ಲಾ ವಿದ್ಯಾಧಿಕಾರಿ ಗ ಳ ಮೇಲಧಿಕಾರಿಗಳೇ ವಿಮರ್ಶಿಸಿವನಂ ತೆ

ಮೈಸೂರಿನಲ್ಲಿಯೂ ಕೂಡಾ ಆತ್ಮ ಕಥೆಯ ಅನುವಾದವು ಪಠ್ಯ ಪುಸ್ತಕವಾಗಿ ದೆ.

ಪಾಪ ತುತ್ತುಕುಡಿ ಜಿಲ್ಲಾಧಿಕಾರಿಗ ಳು ವರ್ತಮಾನಪತ್ರಿಕೆಗಳನ್ನೋದಿ ಬಹ ವರ್ಷಗಳಾಗಿರಬೇಕು

* * *

ಕೊಂಕಣ ಸುತ್ತಿ ಮೈಲಾರಕ್ಕೆ

ಶ್ರೀ ಜಮ್ಷೆಟ್ ಮೆಹ್ತಾರವರು ಕರಾಚಿ ಯ ಮಾತನಾಡುತ್ತ ಹೇಳಿದುದು ಇದು

'ಬೊಂಬಾಯಿಯಿಂದ ಮದ್ರಾಸಿ ಗೆ ಹೋಗತಕ್ಕ ಸಾಮಾನುಗಳು ಕ ರಾಚಿಗೆ ಬಂದೇ ನೇರವಾಗಿ ರೈಲು ಮೂಲಕ ಹೋಗುತ್ತಿವೆ. ಕರಾಚಿ ಯೇ ಈ ಸಾಮಾನುಗಳ ರಫ್ತಿಗೆ ಸ ರಿಯಾದ ದ್ವಾರ'

ಎಂದರು.

"ಕೊಂಕಣವೇ ಮೈಲಾರಕ್ಕೆ ಹೋ ಗಲು ಸರಿಯಾದ ಮಾರ್ಗ" ಎಂದಂತೆ!

* * *

ಸಾವಣೆಯಾದರೆ ಸಾವಿರ ರೂಪಾಯಿ!

ಸಾಯಿ ಪರಮಾನಂದರವರಿಗೆ ಶಾಸನ ಸಭೆ ಸದಸ್ಯಸ್ಥಾನವು ಯಾವ ಸ್ಥಳದಲ್ಲಿ ಯಾದರೂ ಚುನಾವಣೆಯ ಮೂಲಕ ದೊ ರೆತರೆ 1000 ರೂಪಾಯಿ ಬಹುಮಾನ ಕೊಡುವೆನೆಂದು ರಾಧಾಕಾಂತ ಮಾಳವಿ ಯ ಹೇಳಿರುವರು

ಬರುವ ಮೈಸೂರು ಚುನಾವಣೆಗಳಲ್ಲಿ ನ ಕೆಲವು ಜನರ ವಿಷಯವಾಗಿ ಇದೇ ರೀತಿಯಾಗಿ ಧೈರ್ಯದಿಂದ ಪಣ ಕಟ್ಟಬ ಹ್ದು.

ಚೆಕ್ಕಿಗೆ ಚೆಲ್ಲಾಟ; ಇಲಿಗೆ ಪ್ರಾಣಸಂಕಟ

ಬಂಗಾಳಾ ಪ್ರಾಂತ್ಯದಲ್ಲಿ ನ್ಯಾಯಸ್ಥಾನ ವಿಚಾರಣೆ ಇಲ್ಲದೆ, ಬಂಧಿಸಲ್ಪಟ್ಟವರ ಪೈ ಕಿ ನವಜೀವನ ಘೋಷ್ ಎಂಬುವರೂ, ಸಂತೋಷ್ ಚಂದ್ರ ಗಂಗೂಲಿಯೆಂಬುವ ರು ಆತ್ಮಹತ್ಯೆ ಮಾಡಿಕೊಂಡರು

ತಮ್ಮ ಮನೆಯವರಿಗೆ ತಮ್ಮ ಬಂಧನ ದಿಂದ ಉಂಟಾದ ಆರ್ಥಿಕ ತಾಪಗಳನ್ನು ಸಹಿಸಲಾರದೆ ಅವರು ಪ್ರಾಣ ಬಿಟ್ಟರಂತೆ

ಈ ತೊಂದರೆಗಳಿಗೆಲ್ಲಾ ಜವಾಬ್ದಾರರು ಯಾರು? ಚೆಕ್ಕಿಗೆ ಚೆಲ್ಲಾಟವಾದರೆ ಇಲಿ ಗಳಿಗೆ ಪ್ರಾಣಸಂಕಟವಲ್ಲವೇ?

ಹರಿಜನರ ಭಾಗ್ಯ.

ನಮ್ಮ ದೇಶದಲ್ಲಿ ಹರಿಜನರಿಗೆ ಮೊಟ್ಟ ಮೊದಲನೆಯ ದೇವಾಲಯ ಪ್ರವೇಶ ದೊರೆಯಿತು ಆತ್ತಲಾಗಿ ತಿರುವಾಂಕೂ ರು ರಾಜರು ತಮ್ಮ ಇಪ್ಪತ್ತೈದನೇ ವರ್ಷ ವರ್ಧಂತಿ ಸಮಾರಂಭದಲ್ಲಿ ಹರಿ ಜನರನ್ನು ಎಲ್ಲಾ ದೇವಸ್ಥಾನಗಳಿಗೂ ಬಿಡಬಹುದೆಂ ದು ಒಪ್ಪಣೆ ಮಾಡಿದ್ದಾರೆ ತಿರುವಾಂ ಕೂರು ಬಹಳ ಆಚಾರ ಬದ್ಧವಾದ ದೇಶ ವಲ್ಲಿಯೇ ಅವಕಾಶವಾದ ಮೇಲೆ ಉಳಿದ ಕ ಡೆಗಳಲ್ಲಿ ಸುಲಭವಾಗಬಹುದು

ಆವಾಹನೆ ಮತ್ತು ವಿಸರ್ಜನೆ.

ಅಬ್ದುಲ್ಲಾ ಗಾಂಧಿಗೆ ಆಗಲೇ ಇಸ್ಲಾಂ ಮತ ಸಾಕಾಯಿತು ಪುನಃ ಹಿಂದೂ ಮ ತಕ್ಕೆ ಸೇರಲು ಬಯಸುತ್ತಿದ್ದಾನೆ ತಾನು ತಿಳಿದುಕೊಂಡಂತೆ ಮುಸಲ್ಮಾನರು ಧರ್ಮ ಪರಾಯಣರಾಗಿಲ್ಲವೆಂದು ಹೇಳುತ್ತಾನ ಹಣದ ಆಸೆಗಾಗಿ ತಾನು ಮುಸಲ್ಮಾನ ಮ ತಕ್ಕೆ ಹೋಗಲಿಲ್ಲವೆಂತೆ ತನಗೆ ಯಾರಾದ ರೂ ಹಣವನ್ನು ಕೊಟ್ಟಿದ್ದರೆ ರುಜುವಾತು ಮಾಡಲೆಂದು ಸವಾಲು ಹಾಕಿದ್ದಾನೆ ಆ ರ್ಯಸಮಾಜದವರು ಅವನನ್ನು ಶುದ್ಧಿ ಮಾಡಿ ಹಿಂದೂ ಮತಕ್ಕೆ ಸೇರಿಸುವರು ಮೂರು ತಿಂಗಳಲ್ಲೇ ಆವಾಹನೆ, ವಿಸರ್ಜ ನೆಗಳೆರಡೂ ಆದವು

* * *

ಚೆಕ್ಕ ತಪಸ್ಸು ಮಾಡಿದಂತೆ!

ಅಂತರ್ರಾಷ್ಟ್ರೀಯ ಸಭೆಯವರು ಶಸ್ತ್ರಾ ಸ್ತ್ರಗಳಿಗಾಗಿ ಒಟ್ಟು ಪ್ರಪಂಚದಲ್ಲಿ ತಗಲಿದ ಖರ್ಚನ್ನು ಗಣನೆ ಮಾಡಿ ಈ ರೀತಿ ತಿಳಿ ಸಿದ್ದಾರೆ

1913 ರಲ್ಲಿ	833	ಕೋಟಿ ಪೌಂ
1931 ರಲ್ಲಿ	1,633	,,
1935 ರಲ್ಲಿ	1,800	,,

ಖರ್ಚಾಗಿರುವುದಾಗಿ ವರದಿ ಮಾಡಿ ದ್ದಾರೆ.

ಶಸ್ತ್ರ ಸನ್ಯಾಸದ ಮಾತಿನಲ್ಲಿ ಕಪಟ ಸ ನ್ಯಾಸವು ಜರುಗುತ್ತಿದೆ 'ಆಚಾರ ಹೇ ಳುವುದಕ್ಕೆ, ಬದನೇಕಾಯಿ ತಿನ್ನುವುದಕ್ಕೆ' ಎಂದ ಹಾಗೆ

* * *

ಅಸಲು ೨೭ ರೂ, ಬಡ್ಡಿ ೨ ಲಕ್ಷ!

1896 ನೇ ವರ್ಷದಲ್ಲಿ ಫಿರೋಜ್‌ಪೂ ರದ ಸಾಹುಕಾರನೊಬ್ಬನು ಒಬ್ಬ ರೈತನಿಗೆ 27 ರೂಪಾಯಿ ಸಾಲ ಕೊಟ್ಟನಂತೆ

ಈಗ ಅವರ ಬಡ್ಡಿ ಬಾಕಿ ಎಂದು 2,03,120 ರೂಪಾಯಿಗೆ ಸಾಹುಕಾರನು ರೈತನ ಮೇಲೆ ದಾವಾ ಹಾಕಿದ್ದಾನೆ.

ಬಡ್ಡಿಗೆ ಬಡ್ಡಿ, ಚಕ್ರಬಡ್ಡಿ ಸೇರಿ ಇಷ್ಟಾ ಗಿದೆಯಂತೆ ಪಂಚಾಯಿತಿಯವರು ಒಟ್ಟು 60 ರೂ ಕೊಡಿಸುವಂತೆ ಹೇಳಿದುದನ್ನು ಸಾಹುಕಾರನು ಒಪ್ಪಲಿಲ್ಲ

ಎಂದಮೇಲೆ ಹಣ ಬಂದಂತೆಯೇ ಆಯಿತು!

ಶ್ರೀ|| ಸುಭಾಷ್ ಚಂದ್ರಭೋಸ್‌ರವರು.

ಇವರ ತೂಕವು ಕಡಿಮೆಯಾಗುತ್ತಿವೆ

ಅಲ್ಲೊಂದು ಇಲ್ಲೊಂದು

ಸ್ವತಂತ್ರ ರಾಜ್ಯವೆನಿಸಿದ ಇಂಗ್ಲೆಂಡಿನ ಲ್ಲಿಯೂ ಯೂನಿಫಾರಂಗಳ ಮೇಲೆ ಬಹಿ ಷ್ಕಾರಾಜ್ಞೆಯು ಜಾರಿಗೆ ಬಂದಿದೆ.

ಇಂಡಿಯಾಕ್ಕೆ ಇದು ಹೊಸದೇನೂ ಅ ಲ್ಲ. ಇನ್ನೂ ಹಿಂದೂಸ್ಥಾನೀ ಸೇವಾದಳ, ರಕ್ತವಸ್ತ್ರಧಾರಿಗಳು, ಮುಂತಾದವರ ಮೇ ಲೆ ಜಾರಿಯಲ್ಲಿರುವ ಬಹಿಷ್ಕಾರಗಳು ಎಲ್ಲ ರಿಗೂ ತಿಳಿದವುಗಳೇ.

ಆದರೆ ಒಂದು ವ್ಯತ್ಯಾಸ

ಇಂಗ್ಲೆಂಡಿನಲ್ಲಿ ತಪ್ಪಿತಸ್ಥರನ್ನು ಸಾಧಾ ರಣ ನ್ಯಾಯಾಧಿಕಾರಿಗಳೇ ವಿಚಾರಿಸುವ ರು ಇಂಡಿಯಾದಲ್ಲಿ ಮಾತ್ರ ಇವುಗಳಿ ಗಾಗಿ ಸ್ಪೆಷಲ್ ಟ್ರಿಬ್ಯೂನಲ್‌ಗಳು ಹುಟ್ಟು ತ್ತವೆ

ಭಾರತೀಯರಿಗೂ ಇಂಗ್ಲೆಂಡಿನವರಿಗೂ ಸರಿಹೋಗುವುದೆ?

ಪೋಸ್ಟಾಫೀಸು ರಸ್ತೆಯಲ್ಲಿ

(ಸಣ್ಣ ಕಥೆ)

ಲೇಖಕ :— ನಾಗರಾಜ

(ಸೋದರ ಸಂಘ, ಶಿವಮೊಗ್ಗ)

ರಾತ್ರಿ 9 ಅಥವ 9½ ಗಂಟೆ ಇರಬಹುದು. ನಾನು ಊಟಮಾಡಿಕೊಂಡು ಹಾಸ್ಟಲ್ ಕಡೆಯಿಂದ ಹಳೇ ಪೋಸ್ಟಾಫೀಸು ರಸ್ತೆಯಲ್ಲಿ ಬರುತ್ತಿದ್ದೆ. ಬೆಳದಿಂಗಳಿದ್ದುದರಿಂದ ಒಂದು ಸುತ್ತು ಸುತ್ತಿಕೊಂಡು ಬರೋಣವೆಂದು ಹೊರಟಿದ್ದೆ. ಆ ರಸ್ತೆಯಲ್ಲಿ ಒಂದು ಔಷಧಾಲಯವಿದೆ. ಅಲ್ಲಿಗೆ ಬರುವ ಹೊತ್ತಿಗೆ ನಾಲ್ಕು ಐದು ಜನ ಮೊಸ್ಲೆಗಳನ್ನು ತೆಗೆದುಕೊಂಡು ಕೆಲಭಾಗಕ್ಕೆ ಹೋಗುತ್ತಿದ್ದರು. ನನಗೆ ಗಾಬರಿಯಾಯಿತು. ಅಲ್ಲಿಯೇ ನಿಂತುಕೊಂಡೆ. ಬಹುಶಃ ಎಲ್ಲಿಯೋ ಹೊಡೆದಾಟವಿರಬೇಕು. ಈ ಊರಿನಲ್ಲಿ ಗಲಾಟೆಗಳೇನೂ ಅಭಾವವಿಲ್ಲ. ಹಾಗೆಂದು ಯೋಚಿಸುತ್ತಿದ್ದೆ. ಅಷ್ಟು ಹೊತ್ತಿಗೆ ಔಷಧಾಲಯದಿಂದ ಯಾರೋ ಹೊರಗೆ ಬಂದರು. ಅವರ ಕೈಯಲ್ಲೂ ಒಂದು ದೊಣ್ಣೆ ಇತ್ತು.

'ಏನ್ರಿ ಗಲಾಟೆ ?" ಎಂದು ಅವರನ್ನು ಕೇಳಿದೆ.

"ಆ ಮನೇಲಿ ಯಾರೋ ಕಳ್ಳರು ಬಿದ್ದಿದ್ದಾರಂತೆ, ಬರುತ್ತೀರೋ ತೋಗೋಣ ?' ಎಂದರು.

ಇಬ್ಬರೂ ಹೊರಟೆವು.

ಆ ರಸ್ತೆಯ ಎಡಭಾಗದಲ್ಲಿ ಒಂದು ಸಣ್ಣ ಓಣಿ. ಓಣಿ ಎದುರು ಭಾಗದಲ್ಲಿ ಒಂದು ಮನೆ. ಬಹಳ ಹಳೆಯ ಮನೆ ಎನ್ನಬಹುದು. ಮನೆಯ ಬಲಗಡೆ ಒಂದು ಓಣಿ ಹಾದುಹೋಗುತ್ತದೆ. ಆ ಮನೆಯ ಹಿಂಭಾಗದಲ್ಲಿ ಕೆಲವು ಗುಡಿಸಲುಗಳನ್ನು ಕಟ್ಟಿಕೊಂಡು ನೇಯ್ಗೆಯವರಿದ್ದಾರೆ. ಆ ಮನೆಯಲ್ಲಿ ಯಾರೋ ವೈಷ್ಣವರು ವಾಸವಾಗಿದ್ದಾರೆ. ಈಗ ರಜವಾದ್ದರಿಂದ, ಅವರು ಊರಿಗೆ ಹೋಗಿದ್ದರು. ಅವರ ಹಾಸುಗೆ ಕಿಲ್ಲವೂ ಮನೆಯಲ್ಲಿಯೇ ಇದ್ದುವು. ನಾವು ಮನೆಯ ಬಳಿಗೆ ಬಂದೆವು. ಅಲ್ಲಿ ಹತ್ತು ಹನ್ನೆರಡು ಜನರು ನಿಂತಿದ್ದರು. ಮನೆಗೆ ಕಳ್ಳರು ಬಿದ್ದಿರಬೇಕು. ಅಲ್ಲಿ ನಿಂತಿದ್ದವರಲ್ಲಿ ಒಬ್ಬರನ್ನು ಕೇಳಿದೆ. ವಿಷಯವನ್ನು ತಿಳಿಸಿದರು.

ನೇಯ್ಗೆಯವರಲ್ಲಿ ಒಬ್ಬಿಬ್ಬರು ನೀರನ್ನು ತರಲು ಬಂದಿದ್ದರಂತೆ. ಕೊಳಾಯಿ ಬಿಡುವಿಲ್ಲದೆ ಇದ್ದುದರಿಂದ ಆ ಮನೆಯ ಜಗುಲಿಯ ಮೇಲೆ ಕುಳಿತಿದ್ದರಂತೆ. ಕೊಂಚ ಹೊತ್ತಿನಲ್ಲಿಯೇ ಒಳಗೇನೋ ಶಬ್ದವಾದಂತಾಯಿತಂತೆ. ಅವರಿಗೆ ಗಾಬರಿಯಾಯಿತು. ತಿರುಗಿನೋಡಿದರು. ತೆರೆದ ಕಿಟಕಿಯ ಒಳಭಾಗದಲ್ಲಿ ಯಾರೋ ನಿಂತಿದ್ದಂತೆ ಕಂಡಿತಂತೆ. ಕೂಡಲೇ ಅವರು "ಕಳ್ಳ" ಎಂದು ಕಿರಿಚಿಕೊಂಡು ಅಲ್ಲಿಂದ ರಸ್ತೆಗೆ ಬಂದರಂತೆ. ಕಿಟಕಿಯಲ್ಲಿ ಕಂಡ ವ್ಯಕ್ತಿಯೂ ಬಹು ಜಾಗ್ರತೆಯಾಗಿ ಒಳಗೆ ಹೊರಟುಹೋಯಿತಂತೆ.

'ಹೌದು' ಈತನಿಗೆ ಕಳ್ಳಕಾಕರ ಗಲಾಟೆ ಜಾಸ್ತಿಯಾಗಿದೆ. ಇದ್ದರೂ ಇರಬಹುದು.

'ಹಿಂಭಾಗದ ಬಾಗಿಲು ತೆಗೆದಿದೆಯೋ, ನೋಡಿ !" ಎಂದೆನು. ನನ್ನ ಜತೆಗೆ ಬಂದವರು ಕೆಲವರು ಹಿಂಭಾಗಕ್ಕೋಡಿದರು.

'ನೀವು, ಒಳಗೆ ಮನುಷ್ಯರು ನಿಂತಿದ್ದನ್ನು ಸರಿಯಾಗಿ ನೋಡಿದಿರೋ ?" ಎಂದು ವಿಷಯ ಹೇಳಿದವರನ್ನು ಕೇಳಿದೆ.

"ದೇವರಾಣೆಗೂ.. ಕೈಕಾಲು ಅಲ್ಲಾಡಿದ್ದನ್ನೂ ಸಹ ನೋಡಿದೆವು'

"ಒಳಗೆ ಕತ್ತಲು, ನಿಮಗೆ ಸರಿಯಾಗಿ ಕಂಡಿತೇ ?"

"ದಿವಿನಾಗಿ ಕಂಡ್ರೆ ಶ—ಶಾಸ್ತ್ರಿಗಳ ಮನೆ ಕಿಟಕಿಯಿಂದ ಬೆಳಕು ಬಿದ್ದಿತ್ತು. ಸ್ಪಷ್ಟವಾಗಿ ಕೈ, ಕಾಲು, ತಲೆ, ಮೂ ."

ಶ—ಶಾಸ್ತ್ರಿಗಳ ಮನೆ ಕಡೆಗೆ ನೋಡಿದೆ. ಕಿಟಕಿಯಲ್ಲಿ ದೀಪವಿರಲಿಲ್ಲ. ಬಾಗಿಲು ಹಾಕಿತ್ತು.

"ಕಿಟಕಿ ಹಾಕಿದೆ" ಎಂದೆ

"ಅಲ್ರಿ, ಈಗ ಬಾಗಿಲು ಹಾಕಿದರು ಇಲ್ಲಿ ಕಳ್ಳರು ಬಿದ್ದಿದ್ದಾರ ಅಂತ ಕೇಳೀ'

ಹಿಂಭಾಗದ ಬಾಗಿಲು ತೆರೆದಿರಲಿಲ್ಲವಂತೆ ನೋಡಲು ಹೋದವರು. ಬಹಳ ಜನರ ಗಲಾಟೆಯಿಂದ ಒಳಭಾಗದಲ್ಲಿ ಚಿಲಕಹಾಕಿ ಕೊಂಡಿರಬೇಕು. ಎಲ್ಲರೂ ಹಿಂಭಾಗಕ್ಕೆ ಹೋದೆವು. ಬಾಗಿಲು ಬಳಿ ಮಣ್ಣು ಕುಸಿದಿತ್ತು. ಚಿಲಕದ ಪಕ್ಕದಲ್ಲಿಯೇ ಒಂದು ದೊಡ್ಡ ತೂತು ಕಳ್ಳರು ಕನ್ನ ಕೊರೆದಿರಬೇಕು.

"ಒಳಗೆ ಕೈಹಾಕಿ ಚಿಲಕ ತೆಗೆಯಿರಿ !" ಎಂದು ಯಾರೋ ಹೇಳಿದರು.

'ಸ್ವಾಮಿ, ತಾವೇ ಆ ಕೆಲಸ ಮಾಡಿ" ಎಂದು ಮತ್ತೊಬ್ಬರ ಸಲಹೆ.

ಅಷ್ಟು ಹೊತ್ತಿಗೆ ಇನ್ಸ್‌ಪೆಕ್ಟರ್ ಚಂದ್ರಶೇಖರಯ್ಯನವರ ಸವಾರಿ ಅಲ್ಲಿಗೆ ದಯಮಾಡಿಸಿತು. ವಿಷಯವು ಕೂಡಲೇ ತಿಳಿಸಲ್ಪಟ್ಟಿತು. ಎಲ್ಲರ ಉತ್ಸಾಹಕ್ಕೂ ಪಾರವೇ ಇಲ್ಲ. ಕಳ್ಳರ, ಸಿಕ್ಕರಂತಲೇ ಭಾವನೆ. ಇನ್ಸ್‌ಪೆಕ್ಟರಿಗೂ ಅನುಮಾನವಾಯಿತು. ತನ್ನ ಹಂಟಿಂಗ್ ವಿಪ್ಪನ್ನು ಆ ತೂತಿನಲ್ಲಿ ತೂರಿಸಿದರು. ತೀರಾ ಒಳಗೆ ಹೋಯಿತು. ಒಳಗೇನೋ ಸಪ್ಪಳವಾದಂತೆ ಕೇಳಿತು. ಎಲ್ಲರಿಗೂ ಕಿವಿಗಳು ನೆಟ್ಟಗಾದವು. ಇನ್ಸ್‌ಪೆಕ್ಟರು ಮೊದಲು ಕಳ್ಳನನ್ನು ನೋಡಿದ ಮನುಷ್ಯನನ್ನು ಕರೆದು ಕೇಳಿದರು.

"ನೀವು ಸರಿಯಾಗಿ ನೋಡಿದಿರೇನ್ರಿ ಮನುಷ್ಯನ್ನ ?"

"ಹೌದು ಸ್ವಾಮಿ"

"ಸರಿಯಾಗಿ ಹೇಳಿ........?"

"ಸರಿಯಾಗಿ ಸ್ವಾಮಿ.. .... ನನ್ನ ಕಣ್ಣನ್ನೇ ನಂಬಲಾರೆನೆ ?"

"ಸರಿಯಾಗಿ ಹೇಳಿ . .. ಬಾಗಿಲು ಒಡೆದು ನೋಡಬೇಕೂಂತ ಇದ್ದೇನೆ . ?"

"ಖಂಡಿತ ಸ್ವಾಮಿ"

ಎಲ್ಲರೂ ಮುಂಭಾಗಕ್ಕೆ ಬಂದೆವು.

ಇನ್ಸ್‌ಪೆಕ್ಟರು, ಹುನೆಯವರ ಹೆಸರು ಮುಂತಾದವುಗಳನ್ನು ತಮ್ಮ ಪುಸ್ತಕದಲ್ಲಿ ಬರೆದುಕೊಂಡರು. ನಾನು ಕಿಟಕಿಯಲ್ಲಿಯೇ ಬಗ್ಗಿ ನೋಡುತ್ತಿದ್ದೆ. ಒಮ್ಮಿಂದೊಮ್ಮೆ ಒಳಗೆ ಯಾರೋ ನಿಂತಂತೆ ಕಂಡಿತು. ಇನ್ನೇನು ಕಿರಿಚಿಕೊಳ್ಳಬೇಕು, ಅಷ್ಟರಲ್ಲಿ ಮನಸ್ಸಿಗೇನೋ ಹೊಳೆದು, ತಿರುಗಿದೆ. ಶ—ಶಾಸ್ತ್ರಿಗಳ ಮನೆ ಕಿಟಕಿ ಬಾಗಿಲು ತೆರೆದಿತ್ತು. ಅಲ್ಲಿಂದ ಬೆಳಕು ಬರುತ್ತಿತ್ತು. ಕಳ್ಳನನ್ನು ಮೊದಲು ನೋಡಿದ ಮನುಷ್ಯ ತನ್ನ ನೆರಳನ್ನು ಕಿಟಕಿಯ ಒಳಭಾಗದಲ್ಲಿ ಕಂಡು, ಮೋಸಹೋಗಿರಬೇಕು

ಮೊದಲು ಕಳ್ಳನನ್ನು ನೋಡಿದ್ದ ಮನುಷ್ಯನನ್ನು ಕರೆದು ತೋರಿಸಿದೆ ಕಳ್ಳನನ್ನು.

"ಕಳ್ಳನನ್ನು ನೋಡಿದಿರೋ.. ?" ಎಂದೆ

"ಇದೇ ಇರಬೇಕು ಸ್ವಾಮಿ, ಎಷ್ಟು ಭಯವಾಗಿತ್ತು ಸ್ವಾಮಿ" ಎಂದರು

ಇನ್ಸ್‌ಪೆಕ್ಟರು "ಅಬ್ಬಾ '. . . . . !" ಎಂದರು

ಎಲ್ಲರೂ ಗೊಳ್ಳೆಂದು ನಕ್ಕರು.

ಯುವಕರಿಗೆ ಸರ್ಕಾರವಲು.

ಬಂಗಾಳಿ ಪ್ರಾಂತ್ಯದ ಜೋಗ್ರಾಬಕ್ಲಿಗೆ, ಗವರ್ನರವರು ಬಂದಾಗ ಅಲ್ಲಿನ ನೇಕ ಯುವಕರಿಗೆ ನಿರ್ಬಂಧವನ್ನು ಕ... ಸಿದರೆಂದು ತಿಳಿದುಬಂದಿದೆ.

ಆಗ ಇನ್ನೂ ಹೊಸದಾಗಿ ಕಾರಾಗೃಹದಿಂದ ಹೊರ ಬಂದ ಕೆಲವರಿಗೆ ಪ್ರಸಂಗಧನವೂ, ಇನ್ನು ಹಲವರಿಗೆ ಮನೆ ಬಿಟ್ಟು ಹೊರ ಹೋರದ ಕೂಡದೆಂಬ ಕಟ್ಟಾಜ್ಞೆಯೂ ಪೋಲೀಸರಿಂದ ವಿಧಿಸಲ್ಪಟ್ಟಿತೆಂದು ವರದಿಯಾಗಿದೆ.

ಕಾಂಗ್ರೆಸ್ ವಿಜಯಗಳು

ಮದರಾಸಿನ ಪೌರ ಸಭಾಸದಸ್ಯರ ಚುನಾವಣೆಗಳಲ್ಲಿ 32 ಜನ ಕಾಂಗ್ರೆಸ್ ಉಮೇದುವಾರರಿಗೂ 18 ಜನ ಇತರರಿಗೂ ಜಯವು ಲಭಿಸಿತು.

ಅಹ್ಮದಾಬಾದಿನಲ್ಲಿ 21 ಜನ ಕಾಂಗ್ರೆಸ್ ಉಮೇದುವಾರರಿಗೂ, 14 ಜನ ಇತರರಿಗೂ ಚುನಾವಣೆಯಾಗಿದೆ.

ನೆಲ್ಲೂರು ಜಿಲ್ಲಾ ಬೋರ್ಡಿಗೆ 17 ಜನ ಕಾಂಗ್ರೆಸ್ ಉಮೇದುವಾರರು ನಿಂತು, ಎಲ್ಲರೂ ವಿರೋಧವಿಲ್ಲದೆ ಚುನಾಯಿಸಲ್ಪಟ್ಟಿದ್ದಾರೆ.

ಪ್ರಾಚೀನ ಕನ್ನಡ ವಚನ ಗ್ರಂಥಗಳು

ಸೌಗಂಧಿಕಾಪರಿಣಯ:—ಪೂರ್ವದಲ್ಲಿ ದೇವೇಂದ್ರನಿಗೆ ದೂರ್ವಾಸಮುನಿಗಳಿಂದ ಆಶೀರ್ವಾದ ಪೂರ್ವಕವಾಗಿ ಕೊಡಲ್ಪಟ್ಟ ಕಮಲಮಾಲಿಕೆಯನ್ನು ಆನೆಯ ಕುಂಭಸ್ಥಳದಲ್ಲಿಟ್ಟಿದ್ದಾಗ, ಆನೆಯು ಆ ಮಾಲಿಕೆಯನ್ನು ಕಾಲಿನಲ್ಲಿ ಹೊಸಕಿ ವ್ಯರ್ಥಪಡಿಸಲು, ಋಷಿಗಳ ಶಾಪದಿಂದ ಭೂಲೋಕದಲ್ಲಿ ರತ್ನಪುರಿಯಲ್ಲಿ ಸುಗಂಧರಾಜನಾಗಿ ಹುಟ್ಟಿ, ಕಳಿಂಗದೇಶದ ರಾಜಪುತ್ರಿಯಾದ ಸೌಗಂಧಿಕಾದೇವಿಯನ್ನು ಸ್ವಯಂವರವಾಡಿಕೊಂಡ, ಬಹಳ ವಿಷಯಗಳಿರುವ ಕಥೆ.

೧೨೮ ಪುಟಗಳು ಕ್ರಯ ರೂ. ೪—೪—೦

ಕುಸುಮಾಯುಧಚರಿತ್ರೆ:—ಮಾಹಿಷ್ಮತೀ ಅರಸನ ಜ್ಯೇಷ್ಠಪತ್ನಿಯಲ್ಲಿ ದಾಕ್ಷಾಯಣಿ ವರಪ್ರಸಾದದಿಂದ ಜನಿಸಿ ಲೋಕಪ್ರಸಿದ್ಧನಾಗಿ ತನಗೆ ಇತರರಿಂದ ಬಂದ ಗಂಡಾಂತರಗಳನ್ನೆಲ್ಲಾ ಪರಿಹರಿಸಿಕೊಂಡ ಒಬ್ಬ ಮಹಾಪುರುಷನ ಕಥೆ

೪೭೫ ಪುಟಗಳು ಕ್ರಯ ರೂ. ೨—೦—೦

ಕಾಶೀಕ್ಷೇತ್ರಮಹಾತ್ಮೆ:—ಇದರಲ್ಲಿ ೧೪ ಲೋಕಗಳ ವರ್ಣನೆ, ನದಿಗಳು, ದೇವತೆಗಳು ಋಷಿಗಳೇ ಮುಂತಾದವರ ಉತ್ಪತ್ತಿಕ್ರಮ, ಗಂಗಾ ಸಹಸ್ರನಾಮವೇ ಮೊದಲಾದ ಅನೇಕ ವಿಷಯಗಳು ಅಡಕವಾಗಿರುತ್ತೆ

೭೮೩ ಪುಟಗಳು ಕ್ರಯ ರೂ. ೨—೨—೦

N. B. ಪುಸ್ತಕದ ಕ್ರಯದ ನಾಲ್ಕರಲ್ಲಿ ಒಂದು ಭಾಗ ಮೊಬಲಗು ಅಡ್ವಾನ್ಸು ಕಳುಹಿಸಿದರೆ ಬಾಕಿಗೆ ವಿ. ಪಿ. ಮಾಡಲಾಗುತ್ತೆ.

ಅಡ್ರೆಸ್ಸು.—

ಗುಂಡ್ಲು ಪಂಡಿತ ಲಕ್ಷ್ಮಣಾಚಾರ್ಯರ ಮಕ್ಕಳು

ಶ್ರೀನಿವಾಸ ದೇಶಿಕಾಚಾರ್,

೩೦೭, ಕರುಹಟ್ಟಿಬೀದಿ, ಮೈಸೂರು

ದೀಪಾವಳಿ ಹಬ್ಬದ ಮಹಿಮೆ.

ಲೇಖಕರು:—ಮು॥ ರಾ॥ ಲಕ್ಷ್ಮೀಕಾಂತ.

ಪರಮಾತ್ಮನು ವಾಮನಾವತಾರಮಾಡಿದಾಗಿನಿಂದ ದೀಪಾವಳಿ ಹಬ್ಬವು ಆಚರಣೆಗೆ ಬಂದಿದೆ ಎಂಬುದು ಸರ್ವತ್ರ ವಿದಿತವಾಗಿದೆ.

ಕೃತಯುಗದಲ್ಲಿ ಬಲಿಚಕ್ರವರ್ತಿ ಎಂಬ ರಾಕ್ಷಸ ಸಾರ್ವಭೌಮನು ಸದಾಚಾರ ಸಂಪನ್ನನಾಗಿ ಸಮಸ್ತ ಲೋಕವನ್ನೂ ಬಹಳ ದಕ್ಷತೆಯಿಂದ ಪರಿಪಾಲನೆ ಮಾಡುತ್ತಿದ್ದನು. ದೇವೇಂದ್ರನೇ ಆದಿಯಾಗಿ ಎಲ್ಲರೂ ರಾಜ್ಯವನ್ನು ಕಳೆದುಕೊಂಡು ಈತನ ಅಧೀನರಾಗಿದ್ದರು. ಇದನ್ನು ಸಹಿಸಲಾರದೆ ದೇವತೆಗಳೆಲ್ಲಾ ತಮ್ಮ ತಾಯಿಯಾದ ಅದಿತಿಯ ಹತ್ತಿರ ಹೋಗಿ ತಮ್ಮ ಕಷ್ಟವನ್ನು ಹೇಳಿಕೊಂಡರು. ಅದಿತಿಯು ದೇವತೆಗಳ ತಾಯಿ. ದಿತಿಯು ರಾಕ್ಷಸರ ತಾಯಿ. ಎಷ್ಟಾದರೂ ತಾಯಿ ಅಲ್ಲವೆ? ಅದಿತಿಯ ಮನಸ್ಸು ಕರಗಿ ಪಯೋವ್ರತದಿಂದ ದೇವನನ್ನು ಪ್ರಾರ್ಥಿಸತೊಡಗಿದಳು. ಪಯೋವ್ರತವೆಂದರೆ:—ಒಂದು ತೊಟ್ಟು ಹಾಲು ಸೇವನೆಮಾಡಿ ಒಂದು ತಿಂಗಳಕಾಲ ತಪಸ್ಸು ಮಾಡುವುದು. ಹೀಗೆ ಒಂದು ತಿಂಗಳ ಕಾಲ ತಪಸ್ಸುಮಾಡಲು ಶ್ರೀ ಕೃಷ್ಣನು ಅದಿತಿಯ ತಪಸ್ಸಿಗೆ ಸಂತುಷ್ಟನಾಗಿ, ಪ್ರತ್ಯಕ್ಷನಾದನು. ಮತ್ತು ಯಾವ ವರಬೇಕು. ಕೇಳಿಕೋ? ಎಂದು ಹೇಳಲು, ದಿತಿಯು ನನ್ನ ಮಕ್ಕಳ ಅವಸ್ಥೆ ಶೋಚನೀಯವಾಗಿದೆ. ಅವರನ್ನು ಹೋಗಲಾಡಿಸಿ, ಅವರ ರಾಜ್ಯವನ್ನು ಅವರಿಗೆ ಕೊಡಿಸಬೇಕು, ಇಷ್ಟೇ. ಇನ್ನೇನೂ ಬೇಡ ಎನಲು, ಪರಮಾತ್ಮನು ತಾಯಿ! ನಿನ್ನ ಇಷ್ಟದಂತೆ ಈ ಪ್ರಾರ್ಥನೆಯನ್ನು ಈಡೇರಿಸಲು ಸಿದ್ಧನಾಗಿರುವೆನು. ಮತ್ತು ನಾನು ನಿನ್ನ ಉದರದಲ್ಲಿ ಜನಿಸಿ ರಾಕ್ಷಸರ ಬಾಧೆ ತಪ್ಪಿಸುವೆನೆಂದು ಅಭಯಪ್ರದಾನಮಾಡಿ ಅಂತರ್ಧಾನನಾದನು.

ಸ್ವಲ್ಪ ದಿನ ಕಳೆಯಲು, ಅದಿತಿಯು ಗರ್ಭಿಣಿಯಾಗಿ, ತೇಜಃಪುಂಜವಾದ ಒಂದು ಗಂಡು ಮಗುವನ್ನು ಒಳ್ಳೆ ಶುಭ ಮುಹೂರ್ತದಲ್ಲಿ ಪ್ರಸವಿಸಿದಳು. ಮಗುವಿಗೆ ಐದು ವರ್ಷಗಳಾದಮೇಲೆ ಉಪನಯನ ಕರ್ಮಮಾಡಿ ವಿದ್ಯಾಭ್ಯಾಸಕ್ಕಾಗಿ ಕಳುಹಿಸಿದರು. ಈ ವಾಮನ ಬ್ರಹ್ಮಚಾರಿಯು ತಾಯಿಯ ಮನೆಯಿಂದ ಹೊರಟು ಯಾಗವನ್ನು ಮಾಡುತ್ತಿದ್ದ ಬಲಿಚಕ್ರವರ್ತಿಯ ಅರಮನೆಯನ್ನು ಕುರಿತು ದಾರಿಯಲ್ಲಿ ಬರುತ್ತಿರಲು, ಜನರೆಲ್ಲರೂ ಆಶ್ಚರ್ಯಭರಿತರಾಗಿ, ಈತನ ತೇಜಸ್ಸನ್ನೂ ಇವನ ರೂಪವನ್ನೂ ನೋಡಿ ಸ್ತಂಭೀಭೂತರಾಗಿ ನಿಂತರು ವಾಮನನೆಂದರೆ ಕುಳ್ಳ. ಈ ಕುಳ್ಳ ಹುಡುಗನು ಇಷ್ಟು ತೇಜೋವಂತನಾಗಿರುವನಲ್ಲ, ಇವನಲ್ಲಿರತಕ್ಕ ವೈಶಿಷ್ಟ್ಯವೇನು ಎಂದು ಹೀಗೆ ನಾನಾ ಪ್ರಕಾರವಾಗಿ ಆಲೋಚಿಸುತ್ತಿದ್ದರು. ಕೊನೆಗೆ ಈ ವಾಮನ ವಟುವು ಬಲಿಚಕ್ರವರ್ತಿಯ ಅರಮನೆಯನ್ನು ಪ್ರವೇಶಿಸಿದನು. ಎಲ್ಲರೂ ಸಂತೋಷಗೊಂಡು ಉಚಿತಾಸನದಲ್ಲಿ ಈ ಬ್ರಹ್ಮಚಾರಿಯನ್ನು ಕುಳ್ಳಿರಿಸಿದರು. ವಾಮನಾವತಾರದಲ್ಲಿದ್ದ ಸ್ವಾಮಿಯು ಚಕ್ರವರ್ತಿಯನ್ನು ಕುರಿತು, ಅಯ್ಯಾ ನನಗೆ ತಪೋವನಕ್ಕಾಗಿ ಮೂರು ಹೆಜ್ಜೆಯ ಭೂಮಿಯನ್ನು ನನ್ನ ಕಾಲಿನಲ್ಲಿ ಅಳೆದುಕೊಳ್ಳುವಂತೆ ಅನುಜ್ಞೆ ಕೊಡು ಎಂದು ಕೇಳಿದನು. ಇಷ್ಟು ಅಲ್ಪ ದಾನವನ್ನು ವಟುವು ಕೇಳುತ್ತಿರುವುದಕ್ಕಾಗಿ ಮರುಕಪಟ್ಟು ಚಕ್ರವರ್ತಿಯು ಹೆಚ್ಚಿನ ದಾನವನ್ನು ಕೊಡುತ್ತೇನೆಂದರೂ ಒಪ್ಪದಿರಲು ಮೂರಡಿ ಭೂಮಿಯನ್ನು ಕೊಡುವುದಾಗಿ ಸಮ್ಮತಿಸಿದನು. ಧಾರೆ ಎರೆದನು.

ತಕ್ಷಣವೇ ವಟುವು ತನ್ನ ನಿಜ ಸ್ವರೂಪವನ್ನು ತಾಳಿ ಪ್ರಪಂಚವನ್ನು ಅಳೆಯಲಾರಂಭಿಸಿದನು. ಈ ದೃಶ್ಯವನ್ನು ರಾಕ್ಷಸರು ಕಂಡು ರೋಷಾವಿಷ್ಟರಾಗಿ ಸ್ವಾಮಿಯಮೇಲೆ ಯುದ್ಧಕೆ ಹೋದರು. ಪರಮಾತ್ಮನು ಅವರನ್ನೆಲ್ಲಾ ನಿರ್ಮೂಲಮಾಡಿದನು. ಆಶ್ವೀಜ ಬಹುಳ ಚತುರ್ದಶಿದಿನ ಆಕಾಶ(ಖಗೋಳ) ವನ್ನೂ ಅಮಾವಾಸ್ಯೆದಿನ(ಭೂಗೋಳ) ವನ್ನೂ ಅಳೆದನು ಬಳಿಕ ಶ್ರೀ ಕೃಷ್ಣನು ಚಕ್ರವರ್ತಿಯನ್ನು ಕುರಿತು ಅಯ್ಯಾ ರಾಕ್ಷಸೋತ್ತಮನೆ! ನೀನು ನನಗೆ ದಾನಮಾಡಿರುವದು ಮೂರು ಹೆಜ್ಜೆ ಭೂಮಿ ಈಗ ಎರಡು ಹೆಜ್ಜೆ ಆಯಿತು, ಇನ್ನೊಂದು ಹೆಜ್ಜೆಗೆ ಏನುಮಾಡಲಿ ಎಂದು ಕೇಳಲು ಆಗ ದಾನವಶ್ರೇಷ್ಠನು ತನ್ನ ಶಿರಸ್ಸನ್ನು ತೋರಿಸಿದನು. ಸ್ವಾಮಿಯು ಪಾಡ್ಯದ ದಿನ ಚಕ್ರವರ್ತಿಯನ್ನು ಪಾತಾಳಕ್ಕೆ ತುಳಿದನು ಶ್ರೀ ಕೃಷ್ಣನು ಈತನ ಭಕ್ತಿಗೂ, ದಾನಕ್ಕೂ ಸಂತಸಗೊಂಡು ಏನು ಬೇಕಾದರೂ ವರವನ್ನು ಕೇಳಿಕೊ ಎನ್ನಲು ಸಾರ್ವಭೌಮನು ಎಲೈ ಕರುಣಾಳುವೆನೀನು ಚತುರ್ದಶಿ, ಅಮಾವಾಸ್ಯೆ, ಪಾಡ್ಯ ಈ ಮೂರು ದಿನಗಳಲ್ಲಿ ಪ್ರಪಂಚವನ್ನು ಅಳೆದುದರಿಂದ ಆ ಮೂರು ದಿನವೂ ಸಮಸ್ತ ಲೋಕದ ಜನರೂ ನನ್ನ ಹೆಸರನ್ನು ಹೇಳಿಕೊಂಡು ಸಂತೋಷದಿಂದ ಹಬ್ಬವನ್ನು ಮಾಡಿಕೊಂಡು ಸುಖಪಡಲಿ. ಮತ್ತು ನೀನು ನನ್ನನ್ನು ಪಾಡ್ಯದ ದಿನ ಪಾತಾಳಕ್ಕೆ ತುಳಿದುದರಿಂದ ಆ ದಿನಕ್ಕೆ ಬಲಿಪಾಡ್ಯಮಿ ಎಂದು ಹೆಸರಾಗಲಿ ಮತ್ತು ಆ ದಿನ ಸಾಯಂಕಾಲ ಯಾವನು? ನನ್ನನ್ನು ಪ್ರತಿಷ್ಠಿಸಿ ಪೂಜಿಸುವನೊ ಅಂಥವನಿಗೆ ಸಕಲಾಯುರಾರೋಗ್ಯ ಐಶ್ವರ್ಯಾದಿಗಳು ಪ್ರಾಪ್ತಿಯಾಗಲಿ. ಇಷ್ಟೇ ನನ್ನ ಪ್ರಾರ್ಥನೆ ಎಂದನು.

ಸ್ವಾಮಿಯು ಈತನ ಪ್ರಾರ್ಥನೆಗೆ ತಥಾಸ್ತು ಎಂದು ಅದೃಶ್ಯನಾದನು. ದೇವತೆಗಳೆಲ್ಲಾ ಪರಮಾತ್ಮನ ಲೀಲೆಗೆ ಮೆಚ್ಚಿ ಕೊಂಡಾಡಿದರು ಆ ದಿನದಿಂದ ಇದಕ್ಕೆ ಬಲಿಪಾಡ್ಯಮಿ ಎಂದು ಹೆಸರು ಬಂದಿತು. ಅದ್ದರಿಂದ ಸಮಸ್ತ ಜಾತಿಯವರೂ ಈ ಬಲೀಂದ್ರ ಪೂಜೆಯನ್ನು ನೆರವೇರಿಸಿದ್ದೇ ಆದರೆ ಸಕಲ ಸಂಪತ್ತುಗಳೂ ಪ್ರಾಪ್ತಿಯಾಗುವುವು.

ಪೌಲತ್ತಿನ ಹೊರೆ

ಹೊಸ ಸುಧಾರಣೆಯ ಪ್ರಕಾರ ಗವರ್ನರುಗಳಿಗೆ ದೊರೆಯುವ ಹಣವೆಷ್ಟೆಂಬುದನ್ನು ನೋಡಿದಲ್ಲಿ, ಭಾರತವು ಬಡವರ ರಾಷ್ಟ್ರವೆಂದು ಯಾರೂ ಹೇಳಲಾರರು.

ಗವರ್ನರವರಿಗೆ ತಮ್ಮ ಸಂಬಳವಲ್ಲದೆ ಕೊಡುವ ಭತ್ಯೆಯ ಪಟ್ಟಿ ಹೀಗಿದೆ.

	ರೂ ಗಳು.
ಸಾಲಿಯಾನ ಆಹಾರ ಖರ್ಚು	18,000
ಮಿಲಿಟರಿ ಕಾರ್ಯದರ್ಶಿ ಮತ್ತು ತತ್ಸಂಬಂಧವಾದ ಖರ್ಚು	1,12,000
ಬ್ಯಾಂಡ್, (ಓಲಗದವರು)	13,000
ಅಂಗರಕ್ಷಕರು	1,26,000
ಸಂಚಾರಕ್ಕೆ ಭತ್ಯೆ	1,13,000
ವೈದ್ಯಕೀಯ	36,000
ಮನೆ ರಿಪೇರಿ ಇತ್ಯಾದಿ	21,500
ಇತರ ಖರ್ಚಿಗೆ	92,000
ಸಾಲಿಯಾನ ಒಟ್ಟು	5,61,500

ಒಪ್ಪಂದದ ಗವರ್ನರರು ಹೊಸದಾಗಿ ಬಂದು ಸೇರಿದಾಗಲೂ, ಹೋಗುವಾಗಲೂ, ಕೆಲವು ವಿಶೇಷ ಖರ್ಚನ್ನು ಒಪ್ಪಲಾಗಿದೆ. ಮದ್ರಾಸಿಗೆ ಗವರ್ನರರು ಬಂದು ಕೆಲಸಕ್ಕೆ ಸೇರುವ ಮುಂಚೆ ಅವರ ಪ್ರಯಾಣ ಭತ್ಯಗಾಗಿ 4000 ಪೌಂಡನ್ನು ಕೊಡಲಾಗುವುದು

ಅವರು ತರುವ ಯಾವ ಪದಾರ್ಥದಮೇಲೆಯೂ ತೆರಿಗೆಯನ್ನು ಹಾಕುವದಿಲ್ಲ.

ಅವರು ಬಂದನಂತರ ಅವರವರ ಅನುಕೂಲಕ್ಕೆ ತಕ್ಕಂತ ತಮ್ಮ ಭವನವನ್ನು ಕುರ್ಚಿ ಮೇಜುಗಳಿಂದ ಅಣಿಮಾಡಿಕೊಳ್ಳುವದಕ್ಕಾಗಿ 14,000 ರೂಪಾಯಿಗಳನ್ನು ಕೊಡುವರು.

ಅಂತೂ ಗವರ್ನರುಗಳು ಎಷ್ಟು ದುಂದು ಖರ್ಚು ಮಾಡಿದಾಗ್ಯೂ, ಇಲ್ಲಿಂದ ಹೊರಡುವ ಮೊದಲು ಅವರ ಸಂಬಳದ ಹಣವೇನೂ ಸ್ವಲ್ಪವೂ ಚ್ಯುತಿ ಇಲ್ಲದೆ ಬ್ಯಾಂಕಿನಲ್ಲಿರುತ್ತದೆ.

ಇದೆಲ್ಲವೂ ಬಡ ಭಾರತದಲ್ಲಿ!

ಕುಷ್ಠರೋಗಿಗಳ ಮುತ್ತಿಗೆ.

ಫಿಲಿಪ್ಪೈನ್ ದ್ವೀಪಗಳ ಸಾಲ್ಯಾಸರೋ ಎಂಬಲ್ಲಿ ಒಂದು ಕುಷ್ಠರೋಗಿಗಳ ಆಸ್ಪತ್ರೆ. ಅಲ್ಲಿ ೩೫೦ ಜನ ರೋಗಿಗಳು. ಅವರಿಗೆ ಯಾರೋ ಡಾಕ್ಟರುಗಳು ಕುಷ್ಠರೋಗವು ಅಂಟುಜಾಡ್ಯವಲ್ಲವೆಂದು ಹೇಳಿಬಿಟ್ಟಿದ್ದಾರೆ

ಬಂಧನದಲ್ಲಿದ್ದ ರೋಗಿಗಳಿಗೆ ಮನೆಕಡೆ ಜ್ಞಾಪಕಬಂತು ಹೆಂಡತಿ, ಮಕ್ಕಳು, ಬಂಧುಗಳಮೇಲೆ ಆಶೆ ಹುಟ್ಟಿತು. ಎಲ್ಲರೂ ಒಟ್ಟಾಗಿ ಸೇರಿದರು. ಒಂದು ದೊಡ್ಡ ಮೆರವಣಿಗೆಯನ್ನು ಹೂಡಿದರು.

“ನಮಗೆ ಸ್ವಾತಂತ್ರ್ಯವನ್ನು ಕೊಡಿ, ಇಲ್ಲದಿದ್ದರೆ ಮರಣವನ್ನು ಕೊಡಿ” ಎಂದು ಹೇಳುವ ಧ್ವಜಗಳನ್ನು ಹಿಡಿದುಕೊಂಡು ಅರಮನೆ ಕಡೆ ನುಗ್ಗಿದರು. ಈ ಸೈನ್ಯವನ್ನು ನೋಡಿ ಬೀದಿಯಲ್ಲಿದ್ದ ಜನರೆಲ್ಲರೂ ಗಾಬರಿಬಿದ್ದರು ಸಂಚಾರವೆಲ್ಲಾ ನಿಂತುಹೋಯಿತು. ಪೋಲೀಸಿನವರೂ ಚೆಲ್ಲಾಪಿಲ್ಲಿಯಾದರು ಗುಂಪು ಅರಮನೆಗೆ ನುಗ್ಗುವುದರಲ್ಲಿತ್ತು. ಬಿಚ್ಚುಕತ್ತಿಯ ಸಿಪಾಯಿಗಳು ಬಹು ಪ್ರಯಾಸದಿಂದ ಅವರನ್ನು ತಡೆಗಟ್ಟಿದರು ತಮ್ಮ ಅರ್ಜಿಯನ್ನು ಒಪ್ಪಿಸಿದನಂತರ ಗುಂಪಿನವರು ಶಾಂತವಾಗಿ ಹಿಂತೆರಳಿದರು.

ಚುನಾವಣೆಗೆ ಉಪವಾಸವ್ರತ

ಸಿಂಧ್ ಪ್ರಾಂತ್ಯದ ಷಿಕಾರಿಪುರ್ ಪಟ್ಟಣದ ಕಾಂಗ್ರೆಸ್ಸಿನವರು ಒಬ್ಬ ಸದಸ್ಯರನ್ನು ಬರುವ ಚುನಾವಣೆಯಲ್ಲಿ ತಮ್ಮ ಕಡೆಯ ಸ್ಪರ್ಧಿಯನ್ನಾಗಿ ಆರಿಸಿದ್ದರು. ಡಾ॥ ಟೀಲಾರಾಂ ಪೊವಾನಿ ಎಂಬ ಇನ್ನೊಬ್ಬ ಕಾಂಗ್ರೆಸ್ ಅನುಯಾಯಿಗಳು ಇದನ್ನು ವಿರೋಧಿಸಿ, ತಾವೇ ಸ್ವತಂತ್ರವಾಗಿ ಸ್ಪರ್ಧಿಯಾಗಿ ನಿಂತರು ಇದನ್ನು ವಿರೋಧಿಸಿ ಇವರು ತಮ್ಮ ಉಮೇದುವಾರಿಕೆಯನ್ನು ಹಿಂತೆಗೆದುಕೊಳ್ಳುವವರೆಗೂ ಉಪವಾಸ ವ್ರತವನ್ನು ಮಾಡುವೆನೆಂದು, ಶ್ರೀ ಬಿಲಂದ್ರಾಸ್ ಎಂಬ ಮತ್ತೊಬ್ಬ ಕಾಂಗ್ರೆಸ್ ಅನುಯಾಯಿಗಳು ತಿಳಿಸಿದ್ದಾರೆ.

“ಬ್ರೇಕ್ ಪಿಲ್ಸ್”

INVENTED BY A HIMALAYAN SAGE

● ಸ್ತ್ರೀಪುರುಷರಿಗೆ ಆನಂದವನ್ನುಂಟುಮಾಡುವುದು ಈ ಮಾತ್ರೆಗಳೆ. ಮದಿಸಿದ ಸ್ತ್ರೀಯರ ಗರ್ವಭಂಗಮಾಡಲು ಕಂಡುಹಿಡಿದಿರುವ ಮಾತ್ರೆಗಳಿವು. ಇವರಲ್ಲಿ ರಸ

ವಿಷಾದಿಗಳ- ಸೇರಿಲ್ಲ. ಕಸ್ತೂರಿ, ಚಿನ್ನ, ಹಿಮಾಲಯ ಪರ್ವತದ ವನಮೂಲಿಕೆಗಳು ಮುಂತಾದುವುಗಳಿಂದ ದೊಡ್ಡ ಯೋಗೀಶ್ವರರ ಹತ್ತಿರ ಸಂಗ್ರಹಿಸಿ ಮುದುಕತನವನ್ನು ಲೋಕದಲ್ಲಿ ಇಲ್ಲದಂತೆ ಮಾಡುವುದು. ಅರ್ಧ ಘಂಟೆಯೊಳಗಾಗಿ ವೀರ್ಯವನ್ನು ಕಲ್ಲಿನಂತೆಮಾಡಿ ರಮಿಸಲು ಉಲ್ಲಾಸವನ್ನು ಮಾಡುವುದು ಗುಣವಿಲ್ಲದಿದ್ದಲ್ಲಿ ಹಣ ವಾಪಸು

೬೦ ಮಾತ್ರೆಗಳು ರೂ ೫—೦—೦. ೩೦ ಮಾತ್ರೆಗಳು ರೂ. ೩—೦—೦.

(ಕಾಗದ ಪತ್ರಗಳು ಇಂಗ್ಲೀಷಿನಲ್ಲಿಯೇ)

ಡಾ॥ ಎ. ಎಸ್. ಮೂರ್ತಿ, ಚಿಕಾಕೋಲ್, ಗಂಜಾಮ್ ಡಿಸ್ಟ್ರಿಕ್ಟ್.

ಸಾಧ್ವಿ

೧೬—೧೧—೩೬ ನೇ ಸೋಮವಾರ

ಬಂತು ಚುನಾವಣೆ!

ಇನ್ನು ಒಂದರವೇಳೆ ಒಂದು ಚುನಾವಣೆ ಬರುತ್ತದೆ. ಎಲ್ಲೆಲ್ಲೂ ಸಡಗರ. ಉಮೇದುವಾರರು ಮತ್ತು ಅವರ ಕಡೆಯ ಏಜಂಟರುಗಳ ಸಡಗರ. ತೆರಿಗೆದಾರರಿಗೆ ಇಲ್ಲದಸಲ್ಲದ ಆಶೋತ್ತರ. ಹಲವರಿಗೆ ತಿರಸ್ಕಾರ, ಕೆಲವರಿಗೆ ಪುರಸ್ಕಾರ, ಒಟ್ಟಿನಲ್ಲಿ ಹಾಹಾಕಾರ.

ಇದುವರೆಗ ನಮ್ಮ ಪ್ರತಿನಿಧಿಗಳಾಗಿದ್ದವರು ಏನುಮಾಡಿದರು? ಇವರುಗಳಿಗೆ ನಮ್ಮ ಓಟುಗಳನ್ನು ಕೊಟ್ಟದ್ದರಿಂದ ಬಂದ ಭಾಗ್ಯವೇನು? ಇವರುಗಳಲ್ಲದೆ ಬೇರೆಯವರು ಚುನಾಯಿಸಲ್ಪಟ್ಟಿದ್ದರೆ ಆಗುತ್ತಿದ್ದ ಅನರ್ಥಗಳೇನು? ಇವೇ ಮೊದಲಾದ ಪ್ರಶ್ನೆಗಳನ್ನು ಕೆಲವರು ಕಂದಾಯದಾರರು ಕೇಳುವರು. ನಮ್ಮ ತೆರಿಗೆಗಳ ಹೊರೆ ಇಳಿಯಲಿಲ್ಲ. ಆರ್ಥಿಕ ಸ್ಥಿತಿ ಉತ್ತಮವಾಗಲಿಲ್ಲ. ಆಡಳಿತದ ಖರ್ಚು ವೆಚ್ಚಗಳು ಕಡಿಮೆಯಾಗಲಿಲ್ಲ. ಪ್ರಜಾ ಸೌಕರ್ಯಗಳು ಹೆಚ್ಚಲಿಲ್ಲ. ಮುಖ್ಯವಾಗಿ ಹಿಂದಿನ ಚುನಾವಣೆಗಳಲ್ಲಿ ನಮ್ಮ ಪ್ರತಿನಿಧಿಗಳು ಕೊಟ್ಟ ಭರವಸೆಗಳೊಂದೂ ಈಡೇರಲಿಲ್ಲ. ಇವರುಗಳಿಂದ ನಮಗೇನು ಪ್ರಯೋಜನ? ಎಂದು ಕೇಳುವವರೂ ಅನೇಕರಿದ್ದಾರೆ.

ಅಲ್ಲದೆ ಎಲ್ಲರಿಂದ ಆಗುವುದೂ ಇಷ್ಟೆ. ಈಗಿನ ರಚನೆಯಲ್ಲಿ ಕೌನ್ಸಿಲ್ಲುಗಳಿಂದಲೂ ಶಾಸನ ಸಭೆಗಳಿಂದಲೂ ಪ್ರಜೆಗಳಿಗೆ ವಿಶೇಷ ಪ್ರಯೋಜನವಾಗುವಂತಿಲ್ಲ. ಅವುಗಳಿಗೆ ಒಳ್ಳೆಯ ಸ್ವಾತಂತ್ರ್ಯವಿಲ್ಲ. ಅವುಗಳ ತೀರ್ಮಾನಗಳನ್ನು ಅಧಿಕಾರಿ ವರ್ಗದವರು ಕಸದಬುಟ್ಟಿಗೆ ಎಸೆಯಬಹುದು, ಈ ಸಭೆಗಳು ಬರೀ ಆಡಂಬರದ ಸಭೆಗಳು ಡಿಬೇಟಿಂಗ್ ಸೊಸೈಟಿಗಳು ಎಂಬುದಾಗಿ ಭಾವಿಸುವವರೂ ಅನೇಕರಿರುವರು. ಯಾರಿಗೂ ನಮ್ಮ ಓಟನ್ನು ಕೊಡುವುದೇ ಇಲ್ಲ. ಬೇಕಾದವರು ನಿಂತುಕೊಳ್ಳಲಿ ಎಂದು ಇಂದವರು ಹೇಳುವರು.

ಆದರೆ, ಚುನಾವಣೆಗಳು ಸಮೀಪಿಸುತ್ತಿವೆ. ಉಮೇದುವಾರರುಗಳು ಮುಂದೆ ಬಂದು ನಿಲ್ಲುತ್ತಿರುವರು. ಒಬ್ಬರಲ್ಲ ಒಬ್ಬರು ಚುನಾಯಿತರಾಗಿಯೇ ಆಗುವರು. ಅವರುಗಳ ಪ್ರವರ್ತನೆಯು ನಮ್ಮ ಸಾರ್ವಜನಿಕ ಜೀವನದ ಮೇಲೆ ಪರಿಣಾಮವನ್ನುಂಟುಮಾಡಿಯೇ ಮಾಡುವುದು.

ಆದ್ದರಿಂದ ಮಹಾಜನರು ಈ ವಿಷಯದಲ್ಲಿ ಉದಾಸೀನರಾಗಿರುವುದು ಸರಿಯಲ್ಲ. ಕೆಟ್ಟವುಗಳಲ್ಲಿ ಮಧ್ಯಸ್ಥವಾದವೂ ಚಿಂತೆಯಿಲ್ಲ ಅನಿವಾರ್ಯದಿಂದ ನಮಗೆ ಬಂದು ಪ್ರಾಪ್ತವಾಗುವ ಸನ್ನಿವೇಶದಲ್ಲಿ ಉತ್ತಮವಾದ ಒಂದೆರಡನ್ನಾದರೂ ಆರಿಸಿಕೊಳ್ಳುವುದು ನಮ್ಮ ಕರ್ತವ್ಯ. ಬರುವ ಚುನಾವಣೆಗಳಲ್ಲಿ ಹೇಗೆ ಪ್ರವರ್ತಿಸಬೇಕು, ಉಮೇದುವಾರರುಗಳು ಎಂತಹವರಾಗಿರಬೇಕು, ಪ್ರಜೆಗಳ ಕರ್ತವ್ಯವೇನು ಎಂಬುದನ್ನು ಕ್ರಮ ಕ್ರಮವಾಗಿ ಅರಿಕೆ ಮಾಡಿಕೊಳ್ಳುವೆವು.

ರಾಜಧಾನಿಯಲ್ಲಿ ರಾಷ್ಟ್ರ ಧ್ವಜಕ್ಕೆ ಪ್ರತಿಬಂಧಕ.

(ಬಿ. ಸುಬ್ಬರಾವ್ ಉಪಾಧ್ಯ ಇವರಿಂದ)

ಮೈಸೂರಿನಲ್ಲಿ ರಾಷ್ಟ್ರ ಧ್ವಜವನ್ನು ಸಾರ್ವಜನಿಕ ಸ್ಥಳಗಳಲ್ಲಿ ಹಾರಿಸಕೂಡದೆಂಬ ಪ್ರತಿಬಂಧಕವು ಇರುವುದು ಸರಿಯಷ್ಟೆ. ಈ ಪ್ರತಿಬಂಧಕವು ಬಂದು ಈಗ್ಗೆ ಐದು ವರ್ಷಗಳಾದುವು. ಈಗಿನ ಕಾಂಗ್ರೆಸ್ ಅಧ್ಯಕ್ಷರಾದ ಪಂಡಿತ ಜವಾಹರಲಾಲನೆಹರೂರವರು ನಮ್ಮ ನಾಡಿಗೆ ದಯಮಾಡಿಸಿದ ಸಮಯದಲ್ಲಿ ಬೆಂಗಳೂರು ಮತ್ತು ಮೈಸೂರು ನಗರಗಳಲ್ಲಿ ಈ ಪ್ರತಿಬಂಧಕಗಳು ಏರ್ಪಟ್ಟವು. ತತ್ಪೂರ್ವದಲ್ಲಿ ಇಂತಹ ಸರಕಾರಿ ಆಜ್ಞೆಗಳು ಪ್ರಜೆಗಳಮೇಲೆ ಪ್ರಯೋಗಿಸಲ್ಪಟ್ಟಿರಲಿಲ್ಲ. ಇಂತಹ ಆಜ್ಞೆಗಳು ಯಾವ ರೀತಿಯಲ್ಲಿ ಪ್ರಯೋಗಿಸಲ್ಪಡುತ್ತಿವೆ ಎಂಬುದನ್ನು ಪ್ರಜೆಗಳು ತಿಳಿದುಕೊಳ್ಳುವುದು ಆವಶ್ಯಕವಾಗಿದೆ.

ಈ ಸಂದರ್ಭದಲ್ಲಿ ಮೈಸೂರಿನಲ್ಲಿ ಕಾಂಗ್ರೆಸ್ ಮಹಾಸಭೆಯ ಪ್ರಭಾವವು ಎಷ್ಟಿದೆ ಎಂಬುವನ್ನು ನಾವು ತಿಳಿಯಬೇಕು. ಈಗ್ಗೆ ಹತ್ತು ಹದಿನೈದು ವರುಷಗಳಿಂದಲೂ ಅಂದರೆ ಮಹಾತ್ಮ ಗಾಂಧೀಜಿಯವರು ಅಸಹಕಾರ ಚಳುವಳಿಯನ್ನು ಕೈಕೊಂಡಾಗ ಮೈಸೂರಿನಲ್ಲಿ ರಾಜಕೀಯ ವಾತಾವರಣವು ಸ್ವಲ್ಪ ಹರಡಿತು. ಬ್ರಿಟಿಷ್ ಇಂಡಿಯಾದಲ್ಲಿ ರೌಲೆಟ್ ಕಾನೂನನ್ನು (Rowlatt Act) ವಿರೋಧಿಸುವ ಸಲುವಾಗಿ ಹುಟ್ಟಿದ ಮತ್ತು ಜಲಿಯನವಾಲಾ ಬಾಗಿನಲ್ಲಿ ನಡೆದ ಅನಾಹುತದ ಪರಿಣಾಮವಾಗಿ ಉಂಟಾದ ಈ ಲೋಕ ಪ್ರಸಿದ್ಧವಾದ ಅಸಹಕಾರ ಚಳುವಳಿಯು ಹೂಡಲ್ಪಟ್ಟದ್ದು ಸಕಲರಿಗೂ ವಿದಿತವಾಗಿದೆ. ಆಗಿಂದಲೂ ಭರತಖಂಡದ ವಾತಾವರಣವೇ ಒಂದು ವಿಧವಾಗಿ ಮಾರ್ಪಟ್ಟಿತು. ದೇಶೀಯ ಸಂಸ್ಥಾನಗಳಲ್ಲಿಯೂ ಕಾಂಗ್ರೆಸ್ ಮನೋಭಾವನೆಯು ಬೇರೂರಿತು. ರಾಷ್ಟ್ರ ಮುಖಂಡರುಗಳ ಆದೇಶಗಳು ಸಕಲ ಭಾರತ ಪ್ರಜೆಗಳಿಗೂ ಮಾನ್ಯವಾದುವು. ಅಂದಿನಿಂದ ದೇಶೀಯ ಸಂಸ್ಥಾನಗಳಲ್ಲಿ ಕೊಂಚ ಚೈತನ್ಯವು ತಲೆದೋರಿ ಇಲ್ಲಿಯೂ ಆ ವಾತಾವರಣವು ಹರಡಿತು. ಆಗಿನಿಂದಲೂ ಕಾಂಗ್ರೆಸ್ ಕಮಿಟಿಗಳು ಬೆಂಗಳೂರು ಮೈಸೂರುಗಳಲ್ಲಿ ಸ್ಥಾಪಿಸಲ್ಪಟ್ಟು ರಾಜಕೀಯ ಜಾಗೃತಿಯು ಹೆಚ್ಚು ಹೆಚ್ಚಾಗಿ ಪ್ರಜೆಗಳಲ್ಲಿ ನೆಲೆಗೊಂಡಿತು. ಕಾಂಗ್ರೆಸ್ ಮಹಾಸಭೆಯ ಆಜ್ಞಾ ಪ್ರಕಾರ ದೇಶೀಯ ಸರಕಾರಕ್ಕೆ ನೇರವಾಗಿ ವಿರೋಧವಲ್ಲದ ಕಾರ್ಯಕ್ರಮಗಳನ್ನು ಕೈಕೊಂಡು ರಾಷ್ಟ್ರೋನ್ನತಿಗೆ ಸಹಕಾರವಾಗುವ ಕಾರ್ಯಗಳು ನಡೆಯುತ್ತಾ ಬಂದುವು. ಅವುಗಳಲ್ಲಿ ಮೈಸೂರಿನಲ್ಲಿ ಮತ್ತು ಬೆಂಗಳೂರಿನಲ್ಲಿ ಪ್ರತಿ ತಿಂಗಳ ಕಡೆಯ ಭಾನುವಾರದಲ್ಲಿ ರಾಷ್ಟ್ರಧ್ವಜಾ ರೋಹಣವು ನಡೆಯುತ್ತಾ ಬಂದಿತು.

ಹೀಗೆ ಕೆಲವು ವರುಷಗಳಿಂದಲೂ ಸುಸೂತ್ರವಾಗಿ ನಡೆದು ಕೊಂಡು ಬಂದ ಧ್ವಜಾರೋಹಣಕ್ಕೆ ಅಡ್ಡಿಯು ಪಂಡಿತ ಜವಾಹರಲಾಲರು ಬಂದವೇಳೆ ಬಂದಿತು. ಬೆಂಗಳೂರಿನ ಡಿಸ್ಟ್ರಿಕ್ಟ್ ಮ್ಯಾಜಿಸ್ಟ್ರೇಟರು, ನಮ್ಮ ದೇಶಕ್ಕೆ ಮಾನ್ಯ ಪಂಡಿತರು ಬಂದು ಹೋದನಂತರ, ಬೆಂಗಳೂರಿನಲ್ಲಿ ರಾಷ್ಟ್ರಧ್ವಜವನ್ನು ಹಾರಕೂಡದೆಂದು ಅಪ್ಪಣೆಮಾಡಿದರು. ಆದರೆ ಅಲ್ಲಿಯ ದೇಶ ಭಕ್ತಿಯುಳ್ಳ ಯುವಕರು ಅದನ್ನು ಲೆಕ್ಕಿಸಲಿಲ್ಲ. ಶ್ರೀ ಸಾಂಬಾಜಿ ಎಂಬ ತರುಣನೊಬ್ಬನು ಈ ಆಜ್ಞೆಯನ್ನು ಉಲ್ಲಂಘಿಸಿಯೇಬಿಟ್ಟನು. ಬೆಂಗಳೂರಿನ ಮ್ಯಾಜಿಸ್ಟ್ರೇಟರಂತೆಯೇ ಮೈಸೂರಿನ ಮ್ಯಾಜಿಸ್ಟ್ರೇಟರೂ ಸಹ ಒಂದು ಅಸ್ತ್ರವನ್ನು ಪ್ರಯೋಗಮಾಡಿದರು. ಇಲ್ಲಿಯೂ ಆ ಆಜ್ಞೆಗೆ ವಿರೋಧಬರದೇ ಇರಲಿಲ್ಲ. ಮೈಸೂರಿನ ಮೂವರು ಸ್ನೇಹಿತರು ಧೈರ್ಯದಿಂದ ಈ ಆಜ್ಞೆಯನ್ನು ಮೀರಿಸಿ ಸಾನಂದದಿಂದ ಕಾರಾಗೃಹವಾಸವನ್ನು ಅನುಭವಿಸಿ ಬಂದರು. ಆದರೆ ಒಂದು ವಿಶೇಷ ಸಂಗತಿಯನ್ನು ನಾವು ಗಮನಿಸಬೇಕು. ಬೆಂಗಳೂರಿನಲ್ಲಿ ಈ ಆಜ್ಞೆಯು ಜಾರಿಯಲ್ಲಿದ್ದುದು ಆರುತಿಂಗಳು ಮಾತ್ರ. ಆನಂತರ ಅಲ್ಲಿನ ಮ್ಯಾಜಿಸ್ಟ್ರೇಟರು ಅದೇ ಅಪ್ಪಣೆಯನ್ನು ಪುನಃ ಪ್ರಜೆಗಳಮೇಲೆ ಚಲಾಯಿಸಲಿಲ್ಲ. ಆದರೆ ಮೈಸೂರಿನಲ್ಲಿ ಹಾಗಾಗಲಿಲ್ಲ. ಇಲ್ಲಿನವರಾರೋ ಪ್ರತಿ ಆರು ತಿಂಗಳಿಗೂ ಒಂದು ಸಲವೂ ತಪ್ಪದೇ ಪ್ರಜೆಗಳಮೇಲೆ ಜಬರ್ದಸ್ತಿನ ಕಾರ್ಯಗಳನ್ನೇ ಮಾಡುತ್ತಾ ಬಂದಿರುವರು. ಅಧಿಕಾರಿಗಳು ತಪ್ಪು ... ಪ್ರಕಾಶಮಾಡುವ ಸಲುವಾಗಿ ... ಮಾಡುತ್ತಾ ಇರುವಂತೆ ಹಾಗೆ ಕಾಣುತ್ತದೆ.

ಈ ಮ್ಯಾಜಿಸ್ಟ್ರೇಟರುಗಳು ರಾಷ್ಟ್ರಧ್ವಜಾರೋಹಣವು ನಮ್ಮ ಶ್ರೀಮನ್ಮಹಾರಾಜರವರ ರಾಜತ್ವಕ್ಕೆ ಕುಂದನ್ನು ತರುತ್ತದೆಂಬ ಕಂಟಿಯಕ್ತಿಯನ್ನು ತೆಗೆದಿದ್ದಾರೆ. ಇದರೊಂದಿಗೆ ನಮ್ಮ ದೇಶದಲ್ಲಿ ಈಗ ನೆಲೆಸಿರುವ ಶಾಂತಿಗೆ ಭಂಗಬರುವದು ಎಂದೂ ಹೇಳುವದು ಅವರ ವಾಡಿಕೆಯಾಗಿಬಿಟ್ಟಿದೆ. ಹೀಗೆ ಅವರು ಐದುವರ್ಷಗಳಿಂದಲೂ ಹೇಳುತ್ತಾ ಬರುತ್ತಿರುವರು. ಈ ಅರ್ಥವು ಎಷ್ಟರಮಟ್ಟಿನ ನಿಜತ್ವವನ್ನು ಹೊಂದಿರುವುದೋ ಮಹಾ ಜನಗಳು ತೀರ್ಮಾನಿಸಬೇಕಾಗಿಯೇ ಇದ್ದಾರೆ. ರಾಷ್ಟ್ರಧ್ವಜವು ಏತಕ್ಕಾಗಿ ಹುಟ್ಟಿತು; ಅದು ಯಾವ ಧ್ಯೇಯವನ್ನು ಪ್ರತಿಪಾದನೆ ಮಾಡುತ್ತಿದೆ ಎಂಬುದು ಹಿಂದೂಸ್ಥಾನದ ಪ್ರತಿಯೊಬ್ಬ ನಾಗರಿಕರಿಗೂ ತಿಳಿದ ವಿಷಯವಾಗಿದೆ.

ಭಾರತಭೂಮಿಯು ಪರರ ಪಾದಾಕ್ರಾಂತವಾಗಿ ಕೇವಲ ದಾಸ್ಯದಲ್ಲಿ ಬಳಲುತ್ತಿರುವ ದೇಶ. ಇಂತಹ ದೇಶಕ್ಕೆ ಸ್ವತಂತ್ರವಾದ ಕುರುಹು ಇಲ್ಲ. ಎಲ್ಲ ರಾಷ್ಟ್ರಗಳೂ ಅವುಗಳನ್ನು ಗುರುತಿಸುವಂತಹುದಾದ ಕುರುಹುಗಳನ್ನು ಇಟ್ಟುಕೊಂಡಿವೆ. ಅಂತಹ ಕುರುಹುವಿನ ಅವಶ್ಯಕತೆಯನ್ನು ಅರಿತು ಕಾಂಗ್ರೆಸ್ ಮಹಾಸಭೆಯು ಭಾರತಭೂಮಿಗೆ ಸಂಪೂರ್ಣ ಸ್ವಾತಂತ್ರ್ಯವನ್ನು ಪಡೆದುಕೊಳ್ಳಲು ಪಣತೊಟ್ಟಿದೆ ಎಂಬುವನ್ನು ತೋರಿಸಲು ಮತ್ತು ಇಲ್ಲಿನ ಜನರು ಆ ಧ್ಯೇಯವನ್ನು ಸಾಧಿಸಲು ಸಲುವಾಗಿ ಈ ಧ್ವಜವನ್ನು ಆರಿಸಿ ಒಪ್ಪಿದೆ. ಇಂತಹ ಇಡೀ ಭಾರತ ಮಾನ್ಯವಾಗಿರುವ ರಾಷ್ಟ್ರಧ್ವಜವು ಮೈಸೂರಿನಲ್ಲಿ ಇದುವರೆಗೂ ಅವಮಾನ ಹೊಂದುತ್ತಿರುವದೆಂದು ನೋಡಿದರೆ ಇದು ಕೇವಲ ದುಃಖಕರವಾಗಿದೆ.

ಆದರೆ ನಾವು ಮೈಸೂರಿನವರು ಮಾತೃಭೂಮಿಯಾದ ಭರತಖಂಡದಿಂದ ಬೇರೆಯಾಗಿಲ್ಲ. ಬೇರೆಯಾಗಿದ್ದರೆ ಆ ಮಾತುಬೇರೆ. ಆದುದರಿಂದ ಸಕಲ ಭಾರತಕ್ಕೆ ಅನ್ವಯ ಹೊಂದುವ ಈ ರಾಷ್ಟ್ರಧ್ವಜವು ಸಕಲರಿಗೂ ಮಾನ್ಯವಾಗಿಯೇ ಇರುವುದು.

ಈ ವಿಷಯವಾಗಿ ಮತ್ತೊಂದು ವಿಷಯವನ್ನು ಹೇಳಬೇಕಾಗಿದೆ. ನಾನು ಈ ಸಂದರ್ಭದಲ್ಲಿ ತಾ॥ 20 ನೇ ಅಕ್ಟೋಬರಿನಲ್ಲಿ ಮೈಸೂರು ಸರ್ಕಾರದ ಚೀಫ್ ಸೆಕ್ರೆಟರಿಗಳಿಗೆ ಒಂದು ವಿಜ್ಞಾಪನಾ ಪತ್ರವನ್ನು ಬರೆದಿದ್ದೆನು. ಅದರಮೇಲೆ ಅವರು ಯಾವ ಕಾರ್ಯವನ್ನು ಮಾಡಿರುವರೋ ಅದು ನನಗೆ ತಿಳಿಯದು.

ನಮ್ಮ ದೇಶದಲ್ಲಿರುವ ... ಸಹಸ್ರ ಕಾಂಗ್ರೆಸ್ ಸದಸ್ಯರೂ ಈ ವಿಷಯದಲ್ಲಿ ಗಮನಕ್ಕೆ ತಂದುಕೊಳ್ಳಬೇಕು.

ಈರೀತಿಯಾಗಿ ಅಡ್ಡಿಯನ್ನು ಒಡ್ಡುತ್ತಿರುವುದು ಸರಿಯಲ್ಲವೆಂದು ಸರಕಾರಕ್ಕೆ ತಿಳಿಸಬೇಕಾದುದು ನಮ್ಮ ಕರ್ತವ್ಯ. ಮೈಸೂರು ಮತ್ತು ಬೆಂಗಳೂರು ಕಾಂಗ್ರೆಸ್ ಕಮಿಟಿಯವರು ಈ ವಿಷಯವನ್ನು ಗಮನಕ್ಕೆ ಹೆಚ್ಚು ತೆಗೆದು ಕೊಂಡು ಈ ವಿಷಯವಾಗಿ ಎಲ್ಲಾ ಕಡೆಗಳಿಂದಲೂ ಜನರ ಮನೋಭಾವನೆ ಯಾವ ರೀತಿ ಇದೆ ಎಂಬುವನ್ನು ವ್ಯಕ್ತಪಡಿಸಬೇಕಾದುದು ಅವರ ಕರ್ತವ್ಯ. ಬೆಂಗಳೂರು ಮೈಸೂರು ಕಾಂಗ್ರೆಸ್ ಕಮಿಟಿಯವರು ಮಾತ್ರವಲ್ಲದೆ ಮೈಸೂರಿನ ಇತರ ಕಾಂಗ್ರೆಸ್ ಕಮಿಟಿಗಳೂ, ಕರ್ನಾಟಕ ಪ್ರಾಂತಿಕ ಕಮಿಟಿಯೂ ಈ ವಿಷಯವನ್ನು ಗಮನಕ್ಕೆ ತಂದುಕೊಂಡು ತಕ್ಕ ಕಾರ್ಯವನ್ನು ಮಾಡಬೇಕಾಗಿದೆ.

ಮುಂದುವರಿದ ಮೈಸೂರು.

೨೫ ವರ್ಷಗಳ ಅಭಿವೃದ್ಧಿ.

ಮಾಜೀ ದಿವಾನ್ ಬ್ಯಾನರ್ಜೀಯವರ ಲೇಖನ.

ಮೈಸೂರಿನ ಮಾಜೀ ದಿವಾನರಾದ ಸರ್ ಆಲ್ಬಿಯನ್ ಬ್ಯಾನರ್ಜಿಯವರು ಮೈಸೂರಿನ ಪ್ರಗತಿಯನ್ನು ಕುರಿತು ಹಿಂದೂ ಪತ್ರಿಕೆಗೆ ಒಂದು ವಿಶೇಷ ಲೇಖನವನ್ನು ಬರೆದಿದ್ದಾರೆ ಆ ಲೇಖನದಲ್ಲಿ ಕೆಳಗೆ ಕಂಡ ಅಂಶಗಳು ಕೊಡಲ್ಪಟ್ಟಿವೆ —

ಮೈಸೂರಿನ ವಿಷಯವಾಗಿ ಕೆಲವು ಮಾತುಗಳನ್ನು ಬರೆಯಬೇಕೆಂದು ನಾನು ಕೇಳಲ್ಪಟ್ಟಿದ್ದೇನೆ. ಇದಕ್ಕಾಗಿ ನಾನು ..ವರಿಗೆ ಕೃತಜ್ಞನಾಗಿದ್ದೇನೆ.

ಶ್ರೀಮನ್ಮಹಾರಾಜರವರ ಪ್ರಸ್ತುತಮಾತ್ರ ಪ್ರಕಾಶದಿಂದ ಅವರಿಗೂ ಮತ್ತು ಸಂಸ್ಥಾನಕ್ಕೂ ವಿಶೇಷ ಉಪಕಾರವಾಗುವುದರಲ್ಲಿ ಸಂದೇಹವಿಲ್ಲ. ಅವರ ಸರಳತೆ ಸೌಹಾರ್ದ, ಗಾಂಭೀರ್ಯ ಮತ್ತು ಪ್ರತಿಭೆಗಳು ...ಸಾತ್ವಿಕರನ್ನೆಲ್ಲಾ ಮುಗ್ಧರನ್ನಾಗಿ ಮಾಡಿದವು. ಅಲ್ಲಿ ನೋಡಬೇಕಾದ ಸ್ಥಳಗಳನ್ನೂ ಜನರನ್ನೂ ನೋಡಿದರು. ನಡೆಯುತ್ತಿರುವ ಕಾರ್ಯಕಲಾಪಗಳನ್ನು ..ವಳಿಗಳನ್ನೂ ಪರಿಶೀಲಿಸಿದರು. ಇದರಿಂದ ಅವರಿಗೆ ಹೆಚ್ಚಾದ ಅನುಭವವೂ ಪ್ರಜಾ ಪರಿಚಯವೂ ಉಂಟಾಗಿರುತ್ತವೆ. ..ವುಗಳು ಪ್ರಜಾಸಾಮಾನ್ಯಕ್ಕೆ ಅತ್ಯಂತ ಉಪಕಾರವಾಗಿರುವ ರೀತಿಯಲ್ಲಿ ಪರಿಣಮಿಸುವುದರಲ್ಲಿ ಸಂಶಯವಿಲ್ಲ.

ಮೈಸೂರಿನಲ್ಲಿ ಅತ್ಯುತ್ತಮವಾದ ಪ್ರಕೃತಿ ಶೋಭೆಯೊಂದಿದೆ. ಆದರಿಂದ ಮೈಸೂರಿನ ಕೀರ್ತಿಯು ದಿಗಂತ ವಿಶ್ರಾಂತವಾಗಿ ಹರಡಿದೆ. ಮೈಸೂರಿನ ಕಾಫಿ ಅಥವಾ ಗಂಧದೆಣ್ಣೆಯ ಸಂಬಂಧದ ಪರಿಚಯ ಮಾತ್ರವೇ ಅಲ್ಲದೆ ಅದು ಹಿಂದೂಸ್ಥಾನದಲ್ಲಿ ಅತ್ಯಂತ ಮುಂದುವರಿದ ದೇಶಗಳಲ್ಲೊಂದಾಗಿಯೂ, ಬಹಳ ತಿಳುವಳಿಕಸ್ತರೂ ಉತ್ತಮ ಯೋಗ್ಯತೆಯುಳ್ಳವರೂ ಆದ ..ರಾಜರಿಂದ ಆಳಲ್ಪಡುತ್ತಿರುವುದರಿಂದಲೂ, ಅದರ ಕೀರ್ತಿಯು ಎಲ್ಲಾ ಕಡೆಗಳಲ್ಲಿಯೂ ಪ್ರಸರಿಸಿರುತ್ತದೆ.

..ಆಳುತ್ತಿರುವ ಮಹಾಸ್ವಾಮಿಯವರು ..ರು ಕೇವಲ ಶಾಂತಸ್ವರೂಪರು, ಗಾಂಭೀರ್ಯಯುಕ್ತರು, ಸರಳಸ್ವಭಾವದವರು, ಆ..ಮಾನವೆಂಬುದು ಅವರಲ್ಲಿ ಸ್ವಲ್ಪವೂ ..ಇತರ ಅನೇಕ ರಾಜರುಗಳಂತೆ ..ಅಥವಾ ತಮ್ಮ ಉತ್ತಮ ಸರ್ಕಾರ ..ಪ್ರಸಿದ್ಧಿಯನ್ನು ಪ್ರಯತ್ನಪೂರ್ವಕವಾಗಿ ಪ್ರಕಟಪಡಿಸುವುದು ಅವರಿಗೆ ಇಷ್ಟವಿಲ್ಲ. ..ಮೈಸೂರಿನ ಖ್ಯಾತಿಯೂ, ಎಲ್ಲಾ ..ಗಳಲ್ಲಿಯೂ ಹರಡಿರುತ್ತದೆ. ಇದಕ್ಕೆ ಶ್ರೀಮನ್ ಮಹಾರಾಜರವರ ಶ್ರೇಷ್ಠ ಆ..ಮುಖ್ಯ ಕಾರಣ.

ಕಾಲು ಶತಮಾನಕ್ಕಿಂತಲೂ ಹೆಚ್ಚಾದ ಅವರ ಆಳ್ವಿಕೆಯಲ್ಲಿ ಮೈಸೂರು ಸಂಸ್ಥಾನವು ಹೊಂದಿರುವ ಪ್ರಗತಿಯೂ, ಅಪಾರವಾದುದು.

ವಿದ್ಯಾಭ್ಯಾಸ ಕೈಗಾರಿಕೆ ವ್ಯಾಪಾರ, ವ್ಯವಸಾಯ ಮುಂತಾದ ಭಾಗಗಳಲ್ಲಿ ಸಂಸ್ಥಾನವು ಎಷ್ಟು ಮುಂದುವರಿದಿದೆ ಎಂಬುದನ್ನು ಎಲ್ಲರೂ ಬಲ್ಲರು. ಈ ದಿನ ದಿವಾನರು ತಮ್ಮ ಹತ್ತು ವರ್ಷದ ಆಡಳಿತದಲ್ಲಿ ಮೈಸೂರು ಹೊಂದಿರುವ ಪುರೋಭಿವೃದ್ಧಿಯನ್ನು ಕುರಿತು ಒಂದು ಪುಸ್ತಕವನ್ನು ಪ್ರಕಟಿಸಿದ್ದಾರೆ "ತಮ್ಮ ತುತ್ತೂರಿಯನ್ನು ತಾವೇ ಊದಿಕೊಳ್ಳುವವರಲ್ಲಿ' ನಾನು ಒಬ್ಬನಲ್ಲ. ಕಳೆದುಹೋದ ಕಾರ್ಯಸಾಧನೆಗಳಲ್ಲಿ ಮಗ್ನನಾಗುವುದು ನನಗೆ ಇಷ್ಟವಿಲ್ಲ. ಅವುಗಳು ವರ್ತಮಾನಕಾಲದಲ್ಲಿ ಬಹು ಸುಲಭವಾಗಿ ಮರೆತುಹೋಗುತ್ತವೆ. ಆದರೆ ಒಂದು ದೊಡ್ಡ ಕಟ್ಟಡವನ್ನು ಕಟ್ಟಲು, ಪ್ರತಿಯೊಂದು ಅಂಶದಲ್ಲಿಯೂ ಪ್ರತಿಯೊಬ್ಬರೂ ಮಾಡಬೇಕಾದ ಕರ್ತವ್ಯದಲ್ಲಿ ನನಗೆ ಹೆಚ್ಚು ಕುತೂಹಲವಿದೆ ಪ್ರಜೆಗಳ ಹಿತಕ್ಕೆ ಸಾಧಕವಾದ ಕಾರ್ಯಕ್ರಮಗಳಲ್ಲೆಲ್ಲಾ ಮೈಸೂರು ಸಂಸ್ಥಾನವು ಒಂದೇ ರೀತಿ ನೀತಿಯನ್ನು ನಿರಂತರವಾಗಿ ಅನುಸರಿಸಿಕೊಂಡು ಬರುತ್ತಿರುವುದೇ ಇಂದಿನ ಪ್ರಗತಿಗೆ ಮೂಲ ಕಾರಣ ಶ್ರೀಮನ್ಮಹಾರಾಜರವರು ಸಹಾ ಕ್ರಮಬದ್ಧವಾದ ಶಿಸ್ತಿನಿಂದ ರಾಜ್ಯ ಸೂತ್ರಗಳನ್ನು ನಡೆಸುತ್ತಿರುವರು. ಭರತಖಂಡದ ಇತರ ಅನೇಕ ರಾಜ್ಯಗಳಿಗೆ ಈ ಗೌರವವು ಸಲ್ಲದು

ಈಚೆಗೆ ಮೈಸೂರು ದೇಶವು ಎಷ್ಟರ ಮಟ್ಟಿಗೆ ಮುಂದುವರಿದಿದೆ ಎಂಬುದನ್ನು ಕುರಿತು ಸಂಸ್ಥಾನದಿಂದ ಸಾಕಷ್ಟು ಪ್ರಕಟನೆಗಳು ಹೊರಬೀಳುತ್ತಿವೆ ಆದರೆ ನವರಾತ್ರಿಯ ವೈಭವ ಮತ್ತು ವಿನೋದಗಳಲ್ಲಿಯೂ ಆ ಸಮಯದಲ್ಲಿ ನಡೆಯುವ ಸುಖಭೋಜನಗಳು, ಪ್ರದರ್ಶನಗಳು, ಕ್ರೀಡೆಗಳು, ದೀಪಾಲಂಕಾರಗಳು ಮತ್ತು ಬಾಣಬಿರುಸುಗಳ ಮಧ್ಯದಲ್ಲಿಯೂ ಕಳೆದ 25 ವರ್ಷಗಳಿಂದ ಕ್ರಮ ಕ್ರಮವಾಗಿ ಇಂದಿನ ಮೈಸೂರಿನ ಭಾಗ್ಯೋದಯಕ್ಕೆ ಹಾಕಿದ ಅಸ್ತಿಭಾರಗಳನ್ನು ಮರೆತುಬಿಡುವ ಪ್ರಸಂಗವಿರುತ್ತದೆ ದಿವಾನ್ ರಂಗಾಚಾರ್ಲ್ಯರವರ ಆಳ್ವಿಕೆಯ ಅಂತ್ಯದಲ್ಲಿ ಸಂಸ್ಥಾನದ ಒಟ್ಟು ಉತ್ಪತ್ತಿ ೧೦೦ ಲಕ್ಷ ರೂ. ಗಳು ಇದ್ದವು. ಹತ್ತು ವರ್ಷಗಳನಂತರ ಇಂದಿನ ಮೈಸೂರಿಗೆ ಜನ್ಮದಾತರಾದ ಸರ್ ಕೆ. ಶೇಷಾದ್ರಿಅಯ್ಯರವರ ಕಾಲದಲ್ಲಿ ೧೮೦ ಲಕ್ಷವಾಯಿತು. ವಿ ಪಿ. ಮಾಧವರಾಯರ ಕಾಲದಲ್ಲಿ ೨೩೦ ಲಕ್ಷಕ್ಕೆ ಏರಿತು. ಸರ್ ಎಂ. ವಿಶ್ವೇಶ್ವರಯ್ಯನವರು ದಿವಾನಗಿರಿಯಿಂದ ನಿವೃತ್ತರಾದಾಗ ೩೫೦ ಲಕ್ಷವಾಯಿತು ರಂಗಾಚಾರ್ಯರವರು ವಿನಹ ಉಳಿದ ಮೇಲ್ಕಂಡ ದಿವಾನರೆಲ್ಲರೂ ಈಗಿನ ಪ್ರಭುಗಳಿಗೆ ಮಂತ್ರಾಲೋಚನೆಯನ್ನು ಹೇಳುತ್ತಿದ್ದರು ಆದರಿಂದಲೇ ಮೈಸೂರು ಸಂಸ್ಥಾನವು ಇಷ್ಟು ಮಟ್ಟಿಗೆ ಮುಂದಕ್ಕೆ ಬಂದಿದೆ ಎಂದು ಹೇಳಬಹುದು.

ಸರಕಾರದ ಹುಟ್ಟುವಳಿಯು ಹೆಚ್ಚಿದಂತೆಲ್ಲಾ ಪ್ರಜೋಪಕಾರ್ಯಗಳು ಹೆಚ್ಚು ಹೆಚ್ಚಾಗಿ ಕೈಗೊಳ್ಳಲ್ಪಟ್ಟವು.

ಅಧಿಕಾರಿಗಳ ಸಂಬಳಗಳೂ ಕಡಿಮೆ ಮಾಡಲ್ಪಟ್ಟವು ಆದಾಗ್ಯೂ ಆಡಳಿತದ ವೆಚ್ಚವು ಜವಾಬ್ದಾರಿಕ್ಕಿಂತಲೂ ಮೈಸೂರಿನಲ್ಲಿ ಹೆಚ್ಚಾಗಿದೆ ಎಂದೂ, ಯೂರೋಪಿನ ಕೆಲವು ಸಣ್ಣ ಪುಟ್ಟ ಸಂಸ್ಥಾನಗಳ ವೆಚ್ಚಕ್ಕಿಂತಲೂ ಅಧಿಕವಾಗಿದೆಯೆಂತಲೂ ಒಪ್ಪಿಕೊಳ್ಳಬೇಕು. ಆದರೆ ರಾಜ್ಯಭಾರವು ಶಿಸ್ತಿನಿಂದಲೂ, ನಿಷ್ಪಕ್ಷಪಾತವಾಗಿಯೂ ನಡೆಯಬೇಕಾದರ ಆಡಳಿತ ವೆಚ್ಚವನ್ನು ಬಹಳವಾಗಿ ಸಂಕುಚಿತ ಮಾಡಲಾಗದು ದಿವಾನರ ಸಂಬಳವು ಮೊದಲನೆಯ ತರಗತಿಯ ಬ್ರಿಟಿಷ್ ಇಂಡಿಯಾದ ಕಮೀಷನರುಗಳ ಸಂಬಳದಷ್ಟು ಇರುತ್ತದೆ ಸಿವಿಲ್ ಅಧಿಕಾರಿಗಳ ಸಂಬಳಗಳು ಬ್ರಿಟಿಷ್ ಇಂಡಿಯಾದ ಸಂಬಳಗಳಿಗೆ ಸಮಾನವಾಗಿವೆ ವಿಶೇಷ ಬಾಬುಗಳಿಗೆ ಧಾರಾಳವಾದ ಸಂಬಳಗಳನ್ನು ಕೊಟ್ಟು ನೌಕರರನ್ನು ನೇಮಿಸಲು ಮೈಸೂರು ಯಾವಾಗಲೂ ಹಿಂಜರಿದಿಲ್ಲ. ಒಂದು ಕಾಲದಲ್ಲಿ ಭದ್ರಾವತಿ ಕಾರ್ಖಾನೆಯನ್ನು ಸ್ಥಾಪಿಸಲು ಮಿ॥ ಪೆರಿನ್ ಎಂಬುವರಿಗೆ ವೈಸ್ರಾಯರಿಗೆ ಕೊಡುವ ಸಂಬಳವನ್ನು ಕೊಟ್ಟು ನೇಮಿಸಿದ್ದರು ಮಿ॥ ಆಲ್ಫ್ರೆಡ್ ಚಾಟರ್ಟನ್ ಎಂಬುವರಿಗೆ ಕೈಗಾರಿಕೆಯ ಡೈರೆಕ್ಟರಾಗಿರಲು ಕೊಡುತ್ತಿದ್ದ ಸಂಬಳವು ಕಮಿಷನು ಸೇರಿ ದಿವಾನರ ಸಂಬಳಕ್ಕಿಂತಲೂ ಹೆಚ್ಚಾಗುತ್ತಿದ್ದವು. ಇವುಗಳಿಂದ ಗೊತ್ತಾಗುವುದೇನೆಂದರೆ ಶ್ರೀಮನ್ ಮಹಾರಾಜರವರು, ತಮ್ಮ ಪ್ರಜೆಗಳ ಆರ್ಥಿಕ ಮತ್ತು ನೈತಿಕ ಸ್ಥಿತಿಗತಿಗಳನ್ನು ಉತ್ತಮಪಡಿಸಲು ಧಾರಾಳವಾಗಿ ಖರ್ಚುವೆಚ್ಚಗಳನ್ನು ಮಂಜೂರುಮಾಡಿರುತ್ತಾರೆ.

೧೮೮೧ ನೇ ಇಸವಿಯಲ್ಲಿ ಮೈಸೂರು ಪ್ರಜಾಪ್ರತಿನಿಧಿ ಸಭೆಯು ಸ್ಥಾಪಿಸಲ್ಪಟ್ಟಿತು. ಈಗಿನ ಮಹಾರಾಜರ ಕಾಲದಲ್ಲಿ ಸಭೆಯ ವ್ಯಾಪನೆಯು ಬೆಳೆಯಿತು ೧೯೨೩ ನೆ ಇಸವಿಯಲ್ಲಿ ಪ್ರಭುಗಳು ರಾಜಕೀಯ ಸುಧಾರಣೆಗಳನ್ನು ಮಂಜೂರುಮಾಡಿದರು ಈ ಸುಧಾರಣೆಗಳು ಯಶಸ್ವಿಯಾಗಿ ನಡೆದುಬಂದಿವೆ ಶೀಘ್ರದಲ್ಲಿಯೇ ಶ್ರೀಮನ್ ಮಹಾರಾಜರವರು ಇನ್ನೂ ಉತ್ತಮ ದರ್ಜೆಯ ಪಾರ್ಲಿಮೆಂಟಿನಂತಹ ಸಭೆಯನ್ನು ರಚಿಸಿ ಅದಕ್ಕೆ ಹೆಚ್ಚಿನ ಅಧಿಕಾರಗಳನ್ನು ಕೊಟ್ಟು ಭರತಖಂಡಕ್ಕೆಲ್ಲಾ ಆದರ್ಶಪ್ರಾಯವಾಗುವಂತೆಯೂ ಹೊಸ ಫೆಡರೇಷನ್ ವ್ಯವಸ್ಥೆಗೆ ಅನುರೂಪವಾಗಿ ಪ್ರವರ್ತಿಸುವಂತೆಯೂ ಏರ್ಪಡಿಸುವರೆಂದು ಹಾರೈಸೋಣ

ಮೈಸೂರು ಸಂಸ್ಥಾನದ ಸಾಂಸ್ಕೃತಿಕ ಅಭಿವೃದ್ಧಿಯೂ ಭರತಖಂಡಕ್ಕೆಲ್ಲಾ ಆದರ್ಶಪ್ರಾಯವಾಗಿದೆ ಶ್ರೀಮನ್ಮಹಾರಾಜರವರೂ ಶ್ರೀಮದ್ಯುವರಾಜರವರೂ ಎಲ್ಲಾ ವಿಧವಾದ ಉತ್ತಮ ಉದ್ಯಮಗಳಲ್ಲಿಯೂ ಸಂಪೂರ್ಣವಾದ ಆಸಕ್ತಿಯನ್ನೂ ಸಹಾನುಭೂತಿಯನ್ನೂ ತೋರ್ಪಡಿಸುತ್ತಿರುವರು ಇದರಿಂದ ಮೈಸೂರಿನ ಖ್ಯಾತಿಯು ಇತೋಪ್ಯತಿಶಯವಾಗಿ ಅಭಿವೃದ್ಧಿಯಾಗುವುದರಲ್ಲಿ ಸಂಶಯವಿಲ್ಲ.

ಪಂಡಿತ ಜವಾಹರಲಾಲರ ಆತ್ಮಕಥೆ.

ಶ್ರೀ॥ ದ ಕೃ ಭಾರದ್ವಾಜರ ಭಾಷಾಂತರವಲ್ಲ

ಬೆಂಗಳೂರಿನ ನವಜೀವನ ಪತ್ರಿಕೆಯ ಶ್ರೀ॥ ಸಿ ಅಶ್ವತ್ಥನಾರಾಯಣರಾವ್ ಬಿ. ಎ ಅವರು ಪ್ರಕಟಿಸಲಿರುವ ಪಂಡಿತ ಜವಾಹರಲಾಲರ ಆತ್ಮಕಥೆಯನ್ನು ಇಂಗ್ಲೀಷಿನಿಂದ ಕನ್ನಡಕ್ಕೆ ಭಾಷಾಂತರಿಸಿ ಜನವರಿ ತಿಂಗಳಿಗೆ ಮುಂಚಿತವಾಗಿ ಕೊಡುವುದು ಕಷ್ಟಸಾಧ್ಯವೆಂದೂ ತಾವು ಅದನ್ನು ವಿಷಾದಪೂರ್ವಕವಾಗಿ ನಿರಾಕರಿಸಬೇಕಾಯಿತೆಂದೂ, ಈಗ ನವರಿಯವರು ಪ್ರಕಟಿಸಿದಂತೆ ಗ್ರಂಥವು ತಮ್ಮ ಭಾಷಾಂತರವಲ್ಲವೆಂದೂ ಶ್ರೀ॥ ಕೃಭಾರದ್ವಾಜರು ತಿಳಿಸುತ್ತಾರೆ. ಮತ್ತೆ ಶೀಘ್ರದಲ್ಲಿಯೇ ಪಂಡಿತರ ಜೀವನಚರಿತ್ರೆಯು ಶ್ರೀ ಭಾರದ್ವಾಜರಿಂದ ರಚಿತವಾಗಿ ಎಲ್ಲರಿಗೂ ಸುಲಭವಾಗಿ ದೊರೆಯುವಂತೆ ರೂ. ೧ ಕ್ಕೆ ಪ್ರಕಟವಾಗಲಿರುವುದೆಂದೂ ತಿಳಿಯಬರುವುದು.

ಸುಳ್ಳನ್ನು ಪತ್ತೆಮಾಡುವ ಯಂತ್ರ

ಸುಳ್ಳನ್ನು ಪತ್ತೆಮಾಡಲು ಒಂದು ಹೊಸಯಂತ್ರವು ಸೃಷ್ಟಿಮಾಡಲ್ಪಟ್ಟಿದೆ. ನ್ಯೂಯಾರ್ಕಿನ ವಾಲ್ಟರ್ ಸಮ್ಮರ್ಸ್ ಎಂಬುವರೇ ಇದರ ಶೋಧಕರು ವಿದ್ಯುಚ್ಛಕ್ತಿಯ ಸಹಾಯದಿಂದ ಇದು ನಡೆಯುತ್ತದೆ. ಮನುಷ್ಯ ಶರೀರದಲ್ಲಿ ವಿದ್ಯುಚ್ಛಕ್ತಿಯು ಪ್ರವಹಿಸುತ್ತಿರುವುದರಿಂದ ಅದರಮೇಲೆ ಈ ಯಂತ್ರವು ಕೆಲಸಮಾಡುತ್ತದೆ. ಯಂತ್ರದ ಸೂಜಿಯು ತನ್ನ ಚಲನದಿಂದ ಸುಳ್ಳಿನ ಪ್ರಮಾಣವೆಷ್ಟೆಂಬುವನ್ನು ಸೂಚಿಸುತ್ತದೆ

ವಿಶ್ವವಿದ್ಯಾನಿಲಯ ಉಪನ್ಯಾಸ

ಶ್ರೀ॥ ಕೆ. ವಿ. ಪುಟ್ಟಪ್ಪನವರು ನಾಳೆ ದಿನ ತುಮಕೂರು "ಗೌರ್ನಮೆಂಟ್" ಹೈಸ್ಕೂಲ್ ಕಟ್ಟಡದಲ್ಲಿ "ಕುಮಾರವ್ಯಾಸನ ಮಂತರ್ಕರ್ಣ" ಎಂಬ ವಿಷಯವಾಗಿ ಭಾಷಣಮಾಡುತ್ತಾರೆ

ವಿಜಯನಗರ ಸಾಮ್ರಾಜ್ಯ ಸ್ಮಾರಕೋತ್ಸವ.

ಮೈಸೂರಿನಲ್ಲಿ ಪ್ರಚಾರಕಾರ್ಯ

ತಾ॥ 12-11-36 ನೆಯ ಸಾಯಂಕಾಲ ರಾಜಧಾನಿಯ ಪುರಭವನದಲ್ಲಿ ಸೋಲ್ಲಂಡ ಸ್ಮಾರಕೋತ್ಸವದ ಪ್ರಚಾರಕರಾದ ಭಾಗವತ ಶಿರೋಮಣಿ ಬೇಲೂರು ಶ್ರೀ ಕೇಶವದಾಸರವರೂ ಮತ್ತು ಕೀರ್ತನ ಕೇಸರಿ ಬಿ ಶಿವಮೂರ್ತಿ ಶಾಸ್ತ್ರಿಗಳೂ ಅಮೋಘವಾದ ಭಾಷಣಗಳನ್ನು ಮಾಡಿದರು. ರಾವ್‌ಸಾಹೇಬ್ ಶ್ರೀಮಾನ್ ಎಂ. ರಾಮಸ್ವಾಮಿಯವರು ಅಧ್ಯಕ್ಷರಾಗಿದ್ದರು. ಅಧ್ಯಕ್ಷರು ಭಾಷಣಕಾರರನ್ನು ಸಭಿಕರಿಗೆ ಪರಿಚಯಮಾಡಿಕೊಟ್ಟ ತರುವಾಯ ಬೇಲೂರು ಶ್ರೀ ಕೇಶವದಾಸರು ಭಾಷಣಮಾಡಿದರು

ಇವರು ತಮ್ಮ ಭಾಷಣದಲ್ಲಿ ನಾವು ವಿಜಯನಗರದ ಗತವೈಭವದ ವಿಚಾರ ವಿತಕ್ಕಾಗಿ ಯೋಚಿಸಬೇಕೆಂಬುದನ್ನು ವಿವರಿಸಿದರು. ಎಷ್ಟೋ ರಾಜ್ಯಗಳು ಉದಯಿಸಿ ಅಸ್ತಮಿಸಿದಂತೆ ಈ ರಾಜ್ಯವು ವೈಭವದಿಂದ ಇದ್ದು ಕಳೆದು ಹೋಯಿತು.

ನಮ್ಮ ಸಂಸ್ಕೃತಿ, ಸಾಹಿತ್ಯ, ಲಲಿತ ಕಲೆಗಳು ಉಚ್ಛ್ರಾಯಸ್ಥಿತಿಯಲ್ಲಿರುವ ಕಾಲದಲ್ಲಿ ನಾವಿದ್ದೆವೆಂದು ನೆನೆಸೋಣ ಅಂದಿನ ವಿಜಯನಗರವು ವಿಶ್ವಖ್ಯಾತಿಯುಳ್ಳಿತ್ತು. ಅಂದಿನ ಕರ್ನಾಟಕವು 60 ಸಾವಿರ ಮೈಲು ವಿಸ್ತೀರ್ಣವಿಂದಿತ್ತು. ಒಂದೇ ವಿಜಯನಗರವು 14×12 ಚದುರಮೈಲು ವಿಸ್ತೀರ್ಣವುಳ್ಳದ್ದಾಗಿತ್ತು. 45 ಲಕ್ಷ ಪ್ರಜಾಸಂಖ್ಯೆಯಿಂದ ಕೂಡಿತವಾಗಿತ್ತು. ಒಂದೊಂದು ಬಣ್ಣದಲ್ಲೂ ಒಂದು ಲಕ್ಷ ಕುದುರೆಗಳು ಇರುತ್ತಿದ್ದವು ವಿಜಯನಗರವು ಕರ್ನಾಟಕ ಸಾಮ್ರಾಜ್ಯದ ಕಿರೀಟವಾಗಿತ್ತು ಎಂದು ತಮ್ಮ ಭಾಷಣವನ್ನು ಮುಂದುವರಿಸುತ್ತಾ ಕೆಲವು ಪದ್ಯಗಳಿಂದ ನಗರದನ್ನು ಅದರ ವೈಭವಗಳನ್ನೂ ಮನರಂಜಿಸುವ ರೀತಿಯಲ್ಲಿ ವಿವರಿಸಿದರು ವಿಜಯನಗರವು ಧರ್ಮಾಭಿಮಾನಿಗಳ, ಸಕಲ ಶಾಸ್ತ್ರಕೋವಿದರ ಆಶ್ರಯಸ್ಥಾನವಾಗಿದ್ದಿತು ಆ ನಗರದ ರಾಜರು ಅನುಸರಿಸುತ್ತಿದ್ದ ಸಕಲ ನಿಯಮಗಳನ್ನು ಎಡೆಬಿಡದೆ ಪರಿಪಾಲಿಸುತ್ತಿರುವವರು ನಮ್ಮ ಶ್ರೀಕೃಷ್ಣರಾಜ ಒಡೆಯರು. ನಮ್ಮ ಕರ್ನಾಟಕದಲ್ಲಿ 600 ವರುಷಗಳ ಹಿಂದೆ ಮೆರೆಯುತ್ತಿದ್ದ ಯಾವ ವೈಭವವಿದ್ದರೂ ಅದು ನಮ್ಮ ವೈಭವ ಯಾವ ಕೀರ್ತಿಯಿದ್ದರೂ ಅದು ನಮ್ಮ ಕೀರ್ತಿ. ಈ ಮಹಾಸಾಮ್ರಾಜ್ಯದ ಸ್ಮಾರಕೋತ್ಸವಕ್ಕೆ ನಿಮ್ಮಿಂದಾದ ಧನಸಹಾಯ ಮಾಡಿರಿ ಮತ್ತು ಆ ಮಹೋತ್ಸವದಲ್ಲಿ ನೀವು ಭಾಗಿಗಳಾಗಿರಿ

ತರುವಾಯ ತುಮಕೂರಿನ ಹುಲುಕುಂಟೆ ಮಠದ ವ್ಯವಸ್ಥಾಪಕರೂ, ಸಾಹಿತ್ಯಸೇವಾನಿರತರೂ ಅತ್ಯುತ್ತಮ ಕೀರ್ತನಕಾರರುಗಳೂ ಆದ ಶ್ರೀ॥ ಬಿ. ಶಿವಮೂರ್ತಿ ಶಾಸ್ತ್ರಿಗಳು ತಮ್ಮ ಸರಳವಾಣಿಯಿಂದ ಮುಕ್ಕಾಲು ಗಂಟೆಯಕಾಲ ಪುರಾಣ, ಇತಿಹಾಸ, ಚರಿತ್ರಾರ್ಹಗಳಾದ ಶಾಸನಾಧಾರಗಳಿಂದಲೂ ಗ್ರಂಥಗಳ ಆಧಾರಗಳಿಂದಲೂ ಪ್ರತ್ಯಕ್ಷ ನಿದರ್ಶನಗಳಿಂದಲೂ ಜನರ ಮನಸ್ಸಿನಮೇಲೆ ತೀವ್ರವಾದ ಪರಿಣಾಮವಾಗುವಂತಹ ಭಾಷಣವನ್ನು ಮಾಡಿದರು ಸಾರಾಂಶರೂಪದಿಂದ ಇಷ್ಟನ್ನು ಮಾತ್ರ ಹೇಳಬಹುದು

“ವಿಜಯನಗರ ಸ್ಮಾರಕೋತ್ಸವವೆಂದರೆ, ಕನ್ನಡಿಗರನ್ನು ಕನ್ನಡಿಗರನ್ನಾಗಿಯೇ ಮಾಡುವುದು” ಅಂದರೆ ಕರ್ನಾಟಕದಲ್ಲಿ ಯಾವ ವೈಭವವಿತ್ತೋ ಆ ವೈಭವ ಸ್ಫೂರ್ತಿಯನ್ನು ನಾವು ಅನುಭವಿಸುವುದು ರಾಮಾಯಣ, ಮಹಾಭಾರತಾದಿಗಳ ವೀರಪುರುಷರು ನಮ್ಮ ಕರ್ನಾಟಕದ ಬಂಧುಗಳಾಗಿದ್ದರು ಎಂಬುದನ್ನು ಸೂಚಿಸಿದರು ಶ್ರೀಮತಸ್ಥಾಪನಾಚಾರ್ಯರು ಕರ್ನಾಟಕದವರಾಗಿದ್ದರು ನಮ್ಮ ನಾಡು ರಾಜಾಧಿರಾಜರ ನಾಡು, ಬ್ರಹ್ಮಾಂಡದ ವಿಚಿತ್ರ ಶಿಲ್ಪಗಳು ನಮ್ಮ ಭರತಖಂಡದಲ್ಲಿರುವುವು ಪ್ರಸಿದ್ಧರಾದ ರಾಜತಂತ್ರಜ್ಞರೂ ವೈಜ್ಞಾನಿಕರೂ ಕವಿವರ್ಯರೂ ತತ್ವದರ್ಶಿಗಳೂ ನಮ್ಮಲ್ಲಿರುವರು ಗತವೈಭವದ ಸ್ಮರಣೆಯಿಲ್ಲದಿದ್ದರೆ ಇಂದಿನ ಮಹಾವೀರರೆಂದು ಕೀರ್ತಿಪಡೆದಿರುವ ಮುಸಲೋನಿಯವಾಗಲಿ, ಹಿಟ್ಲರ್‌ನಾಗಲಿ ಜಗತ್ತಿನ ಪರಿಗಣನೆಯಲ್ಲಿರುತ್ತಿರಲಿಲ್ಲ ಯಾವ ನಾಡಿನಲ್ಲಿ ಹಿರಿಯರ ನೆನಪುವುದಿಲ್ಲವೋ ಅಲ್ಲಿ ಹುರುಪಿರುವುದಿಲ್ಲ ಕರ್ನಾಟಕರು ಸಿಂಹಗಳಂತಿರಬೇಕಾಗಿದ್ದವರು ಇಂದು ಕುರಿಗಳಂತಾದರೇ! ಒಂದು ಬಾರಿ ಹಿಂತಿರುಗಿ ನೋಡಿರಿ ನಮ್ಮ ಕೀರ್ತಿಯು ಜಗದ್ವಿಖ್ಯಾತವಾಗಿದ್ದಿತು ನಮ್ಮ ಗೌರವವನ್ನು ಳಿಸಿತ್ತು ಗೋಮಟೇಶ್ವರನಂತಹ ದಿವ್ಯ ಮೂರ್ತಿಯು ಪ್ರಪಂಚದಲ್ಲಿ ಬೇರೆ ಇರುವುದಿಲ್ಲ ಆ ಮೂರ್ತಿಯನ್ನು ನೋಡಿದ ಶಿಲ್ಪಿಯ ಮನಸ್ಸು ಎಷ್ಟು ವಿಶಾಲವಾಗಿರಬೇಕು? ಕರ್ನಾಟಕ ಸಾಹಿತ್ಯ, ಸಂಗೀತ, ಕಲೆ, ತತ್ವಜ್ಞಾನದ ಮಹಿಮೆಯು ಅನೋಘವಾಗಿರುತ್ತದೆ ಯಾವ ಕರ್ನಾಟಕವು ಸರಸ್ವತಿಯ ನೆಲೆಯಾಗಿತ್ತೋ ಆ ಮಹಾಕ್ಷೇತ್ರದ ಸ್ಮರಣೆಯು ನಮ್ಮನ್ನು ಪಾವನಮಾಡುತ್ತದೆ ನಮ್ಮ ಕರ್ನಾಟಕದವರೂ ಮೈಸೂರಿನವರೂ ಈ ನಾಡಹಬ್ಬವನ್ನು ಯಶಸ್ವಿಯನ್ನಾಗಿ ಮಾಡಲು ಧನಸಹಾಯ ಮಾಡಬೇಕಾಗಿ ಬೇಡುತ್ತೇನೆ. ಕಾಲವು ಅತ್ಯಲ್ಪವಾಗಿದೆ ಮಹಾಜನರು ನಮ್ಮ ವಿಜ್ಞಾಪನೆಯನ್ನು ಕೇಳಿ ಧನಸಹಾಯ ಮಾಡಬೇಕಾಗಿ ಕೋರುತ್ತೇನೆ.

ಅಧ್ಯಕ್ಷರು ಉಚಿತವಾದ ಭಾಷಣಮಾಡಿ ಸಭೆಯನ್ನು ಪರಿಸಮಾಪ್ತಿ ಮಾಡಿದರು

ಜೆ. ಎಸ್.

ಅಂತರಿಕ್ಷದಲ್ಲಿ ಚಿತ್ರ.

ಇದುವರೆಗೆ ಚಲನಚಿತ್ರಗಳನ್ನು ತೋರಿಸಲು ತೆರೆಗಳು ಬೇಕಾಗಿದ್ದುವು. ಇನ್ನು ಮೇಲೆ ಮೋಡಗಳ ಮೇಲೆಯೇ ಚಿತ್ರಗಳು ತೋರಿಸಲ್ಪಡುತ್ತವೆ. ಒಹಿಯೋ ಎಂಬಲ್ಲಿ ಇದನ್ನು ಈಗ ಮಾಡಿ ತೋರಿಸುತ್ತಿರುವರು.

ಯುದ್ಧ ನಿರೋಧ ದಿನಾಚರಣೆ.

ಪಂಡಿತ ಜವಹರಲಾಲರವರ ಅಪ್ಪಣೆಯಂತೆ ಮೈಸೂರು ಡಿಸ್ಟ್ರಿಕ್ಟ್ ಕಾಂಗ್ರೆಸ್ ಕಮಿಟಿಯವರು ಕಳೆದ ಬುಧವಾರ ಒಂದು ಸಭೆಯನ್ನು ನಡೆಸಿದರು. ಶ್ರೀ॥ ತಗಡೂರು ರಾಮಚಂದ್ರರಾಯರು ಅಗ್ರಾಸನವನ್ನು ವಹಿಸಿದ್ದರು. ಅನೇಕ ಸದಸ್ಯರು ಬಂದಿದ್ದರು ಲಾಹೋರು ಕಾಂಗ್ರೆಸ್ ಮಹಾಸಭೆಯಲ್ಲಿ ಯುದ್ಧ ನಿರೋಧದ ವಿಷಯವಾಗಿ ಮಂಜೂರಾಗಿದ್ದ ಠರಾವು ವಿವರಿಸಲ್ಪಟ್ಟಿತು. ಚಕ್ರಾಧಿಪತ್ಯದವರು ಕೈಗೊಳ್ಳುವ ಯುದ್ಧಗಳಲ್ಲಿ ಭಾರತೀಯರು ಭಾಗವಹಿಸುವುದರಿಂದ ಯಾವ ಪ್ರಯೋಜನವೂ ಇಲ್ಲವೆಂದೂ ಅದರಿಂದ ವಿಶೇಷ ನಷ್ಟವು ಪ್ರಾಪ್ತವಾಗುವುದೆಂದೂ ವಿವರಿಸಲ್ಪಟ್ಟಿತು ಅನಂತರ ಠರಾವನ್ನು ಸರ್ವಾನುಮತದಿಂದ ಅಂಗೀಕರಿಸಲಾಯಿತು

ಅಗೊಂದು ಈಗೊಂದು.

ಲಾರ್ಡ್ ವಿಲ್ಲಿಂಗ್ಡನ್ನರು ವೈಸ್ರಾಯರಾಗಿದ್ದಾಗ ಪ್ರಾರಂಭದ ವೇಳೆಯಲ್ಲಿ ತಾನು ಜವಾಬ್ದಾರಿ ಆಡಳಿತ ಪದ್ಧತಿಯ ಪ್ರಥಮ ವೈಸರಾಯರಾಗುತ್ತೇನೆಂದು ಹೇಳಿದರು ಅಂದರೆ ಅವರ ಜೀವಮಾನ ಕಾಲದಲ್ಲಿಯೇ ಅವರ ಆಳ್ವಿಕೆಯಲ್ಲಿಯೇ ಭರತಖಂಡಕ್ಕೆ ಸ್ವಾತಂತ್ರ್ಯವೂ, ಜವಾಬ್ದಾರಿ ಸರ್ಕಾರವೂ ಪ್ರಾಪ್ತವಾಗುವುದೆಂದು ತಿಳಿಸಿದ್ದರು ಈಗ ಅವರು ಹೇಳಿರುವುದನ್ನು ನೋಡಿ! “ಭರತಖಂಡದಮೇಲೆ ಬ್ರಿಟಿಷರ ಆಳ್ವಿಕೆಯು ಇನ್ನೂ ಅನೇಕ ವರ್ಷಗಳ ಕಾಲ ನಡೆಯುವುದು.”

ಒಂದಕ್ಕೊಂದಕ್ಕೆ ಅಸಂಬದ್ಧ. ಇವೆರಡರಲ್ಲಿ ಯಾವುದು ನಿಜ? ಬಹುಶಃ ಎರಡೂ ಸುಳ್ಳೇ ಆಗಬಹುದು. ಮತ್ತೊಂದು ಸಾರಿ ಅವರು ಬಾಯಿಬಿಟ್ಟಾಗ ಇನ್ನೂ ಹೊಸದಾದ ಅಭಿಪ್ರಾಯವನ್ನು ಹೇಳಬಹುದು.

ಆಕಾಶವಾಣಿ ಕಾರ್ಯಕ್ರಮ

14ನೇ ಶನಿವಾರ:— ಸಾ॥ 6–30ರಿಂದ 8 ‘ವಿದ್ವಾನ್ ನಾರಣಪ್ಪ ಮತ್ತು ಪಾರ್ಟಿಯವರ ನಾಗಸ್ವರ. ಸೋಮವಾರ.— 7–45 ರಿಂದ 9–15 ಆರ್ಕೆಸ್ಟ್ರಾ ಸಂಗೀತ, “ಸಮುದ್ರಶಕ್ತಿ” ಉಪನ್ಯಾಸ ಮಂಗಳವಾರ:—6–30 ರಿಂದ 8 ಕರ್ನಾಟಕ ಸಂಗೀತ ಮತ್ತು ಕನ್ನಡಸಾಹಿತ್ಯ ಕಥನ. ಬುಧವಾರ —7–45 ರಿಂದ 9–15 ಕರ್ನಾಟಕ ವಾದ್ಯಸಂಗೀತ—ಡಾ॥ ಎಂ. ವಿ. ಗೋಪಾಲಸ್ವಾಮಿಯವರ ಉಪನ್ಯಾಸ “ಚಿರಂಜೀವಿತ್ವ ಭಾವನೆ”. ಗುರುವಾರ:— 6 30 ರಿಂದ 8 ಕನ್ನಡ ನಾಟಕ “ಲವಕುಶ.” ನಗರ ಶಾಸ್ತ್ರಿ ಶ್ರೀ॥ ಎನ್. ಕಸ್ತೂರಿಯವರು.

ಮುಸೋಲಿನಿಯ ಬೆದರಿ

ಇಂಗ್ಲೆಂಡಿಗೆ ಮುಸ್ಸೋಲಿನಿಯು ಮತ್ತೊಂದು ಬೆದರಿಕೆಯನ್ನು ಹುಟ್ಟಿ ವನು. ಮೆಡಿಟರೇನಿಯನ್ ಸಮುದ್ರ ರೋಮನ್ ಸಾಮ್ರಾಜ್ಯಕ್ಕೆ ಸೇರಿ ಅದರಲ್ಲಿ ಬ್ರಿಟಿಷ್ ಹಡಗುಗಳು ಮಾ ವಾಗಿ ಬಂದು ಹೋಗಲು ಮಾತ್ರ ಕಾಶ ಕೊಡಲ್ಪಡುವುದು, ಹೆಚ್ಚಿನ ಕಾರವೇನೂ ಇರುವುದಿಲ್ಲ. ಅದರ ಹಕ್ಕನ್ನು ಸ್ವಲ್ಪಮಟ್ಟಿಗೆ ಬದಲಾಯಿಸ ಕಾದರೆ ಇಟಲಿಯು ಅಬಿಸೀನಿಯದ ಲೆ ಹೊಂದಿದ ದಿಗ್ವಿಜಯವನ್ನು ಇಂಗ್ ಡು ಸಂಪೂರ್ಣವಾಗಿ ಅಂಗೀಕರಿಸಬೇ

ಇದರಿಂದ ಇಂಗ್ಲೆಂಡಿನಲ್ಲಿ ಪರಿವ ರ್ಯವುಂಟಾಗಿದೆ ಅಬಿಸೀನಿಯಾ ವಿಜಯವನ್ನು ಸ್ವಲ್ಪಮಟ್ಟಿಗೆ ಇಂಗ್ಲೆಂಡು ಅಂಗೀಕರಿಸಿತ್ತು. ಅದು ಸಸ್ಸೆಯಾಗದ ವೆಂದು ತಿಳಿದು ಮುಸ್ಸೋಲಿನಿಯು ವಾದ ಆಶೆಯನ್ನು ಇಟ್ಟಿರುವನು ಇಂಗ್ಲೆಂಡು ಇನ್ನೂ ಅವನಿಗೆ ಉತ್ತರ ಕೊಟ್ಟಿಲ್ಲ

ಅರಕಲಗೂಡು ವರ್ತಮಾನ

(ನಮ್ಮ ಭಾತ್ಮೀದಾರರಿಂದ)

ಈ ಊರಿನ ಮ್ಯುನಿಸಿಪಲ್ ಚುನಾವ ಯು ತಾ॥ 9 ಮತ್ತು 10 ಈ ಎರ ದಿವಸಗಳೂ ನಮ್ಮ ತಾಲ್ಲೋಕು ಆ ಲ್ದಾರ್ರ ಅಧ್ಯಕ್ಷತೆಯಲ್ಲಿ ನಡೆಯಿತು ಈ ಎರಡು ದಿನಗಳೂ ಕಛೇರಿಯು ಹಿಡಿಯಲಾರದಷ್ಟು ಜನಗಳು ಕಿಕ್ಕಿರಿದಿದ್ದರು. ಮೆಂಬರಾಗಲು ನಿಂತಿರುವವರ ಪೈಕಿ ನಾಲ್ಕು ಜನರು ಇನ್ನೂ ತರುಣರು ಇವರುಗ ಮುಂದೆ ನಿಂತು ನಮ್ಮ ಊರಿನ ಪ್ರಜೆಗ ಸೌಕರ್ಯಗಳನ್ನು ದಗಿಸಿಕೊಟ್ಟು ಗಳೂ ಹೆಸರನ್ನು ಪಡೆಯುತ್ತಾರೆಂದು ಲಾಗಿದೆ

ಈ ಊರಿನಲ್ಲಿ ಸರ್ಕಾರದ ಎರಡು ಬಾಯ್ಸ್‌ಸ್ಕೂಲ್‌ಗಳೂ ಎರಡು ಗರ್ಲ್ಸ್‌ಸ್ಕೂಲ್‌ಗಳೂ ಇವೆ. ಇವೂ ಅಲ್ಲದೆ ಪ್ರೈಮರಿ ಬಾಯ್ಸ್ ಸ್ಕೂಲೂ ಸಹ ಇದ್ದಿತು. ಇದೇ ಊರಿನ ವರ್ತಕ ಮಂಡಳಿ ಮತ್ತು ಇತರ ಸರ್ಕಾರಿ ನೌಕರರ ಮಕ್ಕಳುಗಳನ್ನು ಸರ್ಕಾರದ ಸ್ಕೂಲಿಗೆ ಕಳುಹಿಸುವುದಕ್ಕೆ ಬದಲಾಗಿ ಈ ಊರಿನ ಪೇಟೆಯಲ್ಲಿ ಒಬ್ಬ ಉಪಾಧ್ಯಾಯರ ಹತ್ತಿರ ವಿದ್ಯೆ ಹೇಳಿಸಲು ಕಳುಹಿಸುತ್ತಿರುತ್ತಾರೆ. ಸರ್ಕಾರದ ಪಾಠಶಾಲೆ ಇಷ್ಟು ಇದ್ದರೂ ಜನ ಟ್ರೈನಿಂಗ್ ಪಾಸ್‌ಮಾಡಿರುವ ಉಪಾಧ್ಯಾಯರುಗಳಿದ್ದರೂ ಕೂಡ ಪ್ರೈವೇಟ್ ಪಾಠಕ್ಕೆ ಗಮನಕೊಡುವುದು ಶೋಚನೀಯವಾದ್ದು. ಈ ಕಾರಣಗಳಿಂದ ವಿದ್ಯಾ ಇಲಾಖೆಯವರು ಗಮನಕ್ಕೆ ತಂದುಕೊಂಡು ಮುಂದೆ ಅಭಿವೃದ್ಧಿಗೆ ಬರು ಮಕ್ಕಳ ವಿಷಯದಲ್ಲಿ ಹೆಚ್ಚು ನಿಗಾಕೊಡ ತ್ತಾರೆಂದು ನಂಬಲಾಗಿದೆ

ತಗಡೂರು ರಾಯರ ವಿವಾಹ ವಿಚಾರ.

ಪತ್ರಗಳಿಗೆ ಉತ್ತರ.

ಶ್ರೀ ತಗಡೂರು ರಾಮಚಂದ್ರರಾಯರು ಹೀಗೆ ಬರೆಯುತ್ತಾರೆ.—

ನನ್ನ ವಿವಾಹದ ಸಂಬಂಧವಾಗಿ ಪತ್ರಗಳು ಬರಲಾರಂಭವಾಗಿವೆ. ಅವುಗಳಲ್ಲಿ ನನ್ನ ಆರ್ಥಿಕವಿಚಾರ, ಮಕ್ಕಳಾದರೆ ಅವರ ಅಭಿವೃದ್ಧಿಯ ಮಾರ್ಗ, ನನ್ನ ಮುಂದಿನ ರಾಜಕೀಯ ದೃಷ್ಟಿ ಇವೇ ಮುಂತಾದ ಪ್ರಧಾನ ಪ್ರಶ್ನೆಗಳಿವೆ. ಈ ಪ್ರಶ್ನೆಗಳಿಗೆಲ್ಲಾ ನನ್ನ ಪತ್ರಗಳೇ ಉತ್ತರಗಳನ್ನು ಕೊಡುವೆ ಆದರೂ ಇದೊಂದು ಸುಧಾರಣಾ ವಾದವಾದುದರಿಂದ ಪ್ರಶ್ನೆಗಳನೆಲ್ಲಾ ಬರೆದ ಸಂದೇಹಗಳನ್ನು ನಿವೃತ್ತಿಮಾಡಿ ದೇಶಕ್ಕೆ ಒಂದು ಸಹಜಮಾರ್ಗವನ್ನು ಕಲ್ಪಿಸುವ ದೃಷ್ಟಿಯಿಂದ ಬಹಿರಂಗವಾಗಿ ಉತ್ತರವನ್ನು ಕೊಡುತ್ತೇನೆ. ಯಾರೂ ದುಡುಕದೆ ಮುಂದು ಪೂರ್ವಾಪರಗಳೆಲ್ಲಾ ಚನ್ನಾಗಿ ಯೋಚಿಸಿ ಜೀವಮಾನದ ಸಿದ್ಧಾಂತ ದಿಂದ ಪತ್ರವ್ಯವಹಾರಗಳನ್ನು ಬೆಳಸಬೇಕು. ನನ್ನ ಚಳವಳಿಯು ಬಹಳ ಕಠಿಣತರವಾದುದು. ನಿರ್ದಾಕ್ಷಿಣ್ಯವಾದುದು.

ದೇಶದಲ್ಲಿ ಬಡತನ ಇರಬಾರದು. ಶ್ರೀಮಂತಿಕೆ ಇರಬಾರದು. ಆಸ್ತಿ ಐಶ್ವರ್ಯಗಳೆಲ್ಲಾ ದೇಶದ್ದಾಗಿರಬೇಕು. ಜನರು ಜನ್ಮವೆತ್ತುವಾಗ ಏನನ್ನೂ ತರುವುದಿಲ್ಲ. ಜನ್ಮ ಮುಕ್ತಿಯಾಗುವಾಗ ಏನನ್ನೂ ತೆಗೆದುಕೊಂಡು ಹೋಗುವುದಿಲ್ಲ. ಆದ್ದರಿಂದ ಜೀವಂತರಾಗಿರುವವರೆಗೆ ಮಾತ್ರ ಅನುಭವಿಸುವುದು. ಅವಶ್ಯವಾದಷ್ಟು ಬೇಕೇ ಬೇಕು. ಅದನ್ನು ಪೂರೈಸಿಕೊಳ್ಳುವಸಲುವಾಗಿ ಕರ್ಮವನ್ನು ಮಾಡಬೇಕು. ತನಗೆ ಎಷ್ಟು ಅವಶ್ಯವೋ ಅಷ್ಟನ್ನುಮಾತ್ರ ಉಪಯೋಗಿಸಿಕೊಳ್ಳಬೇಕು. ಉಳಿದಿದ್ದನ್ನು ಕೂಡಿಡಬಾರದು. ಅದು ರಾಷ್ಟ್ರದ್ದಾಗಿರಬೇಕು. ಈಶ್ವರನದು ಆದುದರಿಂದ ಜನರು ಕೇವಲ ಪಾತ್ರ ಉತ್ತರವಾದಿಗಳು. ಕರ್ಮ ಮಾಡಬೇಕು. ಅದರಿಂದ ಜೀವಿಸಬೇಕು. ಲೋಭಿಗಳಾಗಬಾರದು. ಈ ತತ್ವವೇ ದೇಶದಲ್ಲಿ ಸುಖಶಾಂತಿಗಳನ್ನು ಸ್ಥಾಪಿಸುವುದು. ಮಹರ್ಷಿಗಳು ಆಚರಿಸಿದ್ದು ಇದೇ. ಅವತಾರ ಪುರುಷರುಗಳೂ ಆಗಾಗ್ಗೆ ಇದನ್ನು ಜಗತ್ತಿಗೆ ಸಾರುತ್ತಿರುವರು. ಇದರಲ್ಲಿ ನಾನು ಚಳವಳಿಯನ್ನು ಆರಂಭಿಸಿದಾಗ ಬಿಕ್ಷಾಟಣೆಯನ್ನು ಮಾಡಿ ಅದರಲ್ಲಿ ಜೀವಿಸುತ್ತಿದ್ದೆನು. ಈಗ ಚಳವಳಿಯು ಒಂದು ಮಾದರಿ ತಾಲ್ಲೋಕು ಮಾಡುವವರೆಗೆ ಬೆಳೆದಿದೆ.

ನನಗೆ ಸ್ವಂತ ಆಸ್ತಿ ಏನೇನೂ ಇಲ್ಲ. ಈ ತತ್ವದಪ್ರಕಾರ ಆಸ್ತಿಯನ್ನು ಮಾಡುವುದಿಲ್ಲ. ಹಾಗೆ ಮಾಡುವುದು ಮನಸ್ಸಿನ ಮಾಡಲೂಬಾರದು. ಈಶ್ವರನಲ್ಲಿ ಅಪನಂಬಿಕೆಯನ್ನಿಡಬಾರದು. ಈಶ್ವರ ರಕ್ಷಕನು ನಮ್ಮನ್ನು ಕೊಲ್ಲುವುದಿಲ್ಲ. ನನಗೆ ಕಳೆದ 16 ವರ್ಷಗಳ ಅನುಭವದಲ್ಲಿ ಇದುವರೆಗೆ ಒಂದು ದಿವಸವೂ ಜೀವನದ ಹೆದರಿಕೆಯು ಪ್ರಾಪ್ತಿಯಾಗಿಲ್ಲ. ಮತ್ತು ಆಗುವುದೂ ಇಲ್ಲ. ಇದೇ ನನ್ನ ಆರ್ಥಿಕವಿಚಾರ. ಈ ತತ್ವವನ್ನೇ ದೇಶದಲ್ಲೆಲ್ಲಾ ಪ್ರಚಾರಮಾಡಲು ಹೊರಟಿರುವ ನನಗೆ ಮಕ್ಕಳಾದರೆ ದೇಶದ ಜನರಂತೆ ಅವರೂ ಅಭಿವೃದ್ಧಿಯನ್ನು ಹೊಂದುವರು. ದೇಶಸೇವೆಮಾಡಲು ಪ್ರತಿಯೊಬ್ಬ ಮನುಷ್ಯನೂ, ಪ್ರತಿಯೊಂದು ಸಂಸಾರವೂ ಪ್ರಯತ್ನಪಡಬೇಕೆಂಬುದೇ ನನ್ನ ಬಯಕೆ. ದೇಶಸೇವೆಮಾಡಲು ಆದರ್ಶರಾಗಿರುವವರು ಸಾರ್ವಜನಿಕ ಚಳವಳಿಯಲ್ಲೇ ಜೀವಮಾನವನ್ನು ಆದರ್ಶವನ್ನಾಗಿ ಕಳೆಯತಕ್ಕದ್ದು. ಪ್ರಾಣವಾಯುವು ಹಾರಿಹೋಗುವಪರ್ಯಂತರವೂ ದುಡಿಯತಕ್ಕದ್ದು. ಇವೇ ಮಕ್ಕಳು ಮತ್ತು ಸಂಸಾರದ ವಿಚಾರ. ಪ್ರತಿಯೊಂದು ಸಂಸಾರವೂ ಅಥವ ಪ್ರತಿಯೊಬ್ಬ ಮನುಷ್ಯನೂ ತನಗೆ ಅಗತ್ಯವಿರುವುದಕ್ಕಿಂತ ಹೆಚ್ಚಿಗೆ ಏನನ್ನೂ ಕೂಡಿಡಲು ಅವಕಾಶವನ್ನು ಕಲ್ಪಿಸಬಾರದು. ಇದರಂತೆ ಯೋಗ್ಯವ್ಯವಸ್ಥೆಯನ್ನು ಮಾಡಿ ರಾಷ್ಟ್ರದ ಪ್ರತಿಷ್ಠೆಯನ್ನು ಕಾಯುವುದೇ ನನ್ನ ಮುಂದಿನ ರಾಜಕೀಯ ದೃಷ್ಟಿ. ವಿವಾಹವು ವಿವಾಹಕ್ಕಾಗಿ; ಚಪಲಕ್ಕಾಗಿ ಅಲ್ಲವೆಂದೂ ವಿವಾಹವು ರಾಷ್ಟ್ರ ಹಿತದೃಷ್ಟಿಯಿಂದ ಸುಧಾರಣೆಗಾಗಿ ಚಳವಳಿಗಾಗಿ ಆಗಬೇಕೆಂದೂ 15 ರೂ. ಗಳ ಖರ್ಚಿನಲ್ಲೇ ಪೂರೈಸತಕ್ಕದ್ದೆಂದೂ ಸಹ ತಿಳಿಸಿದ್ದೇನೆ.

ಯುನಾನಿ ಮೆಡಿಕಲ್ ಸಂಘ.

ಮೆಡಿಕಲ್ ಯುನಾನಿ ಸಂಘದ ಮೀಟಿಂಗು ಮುನಿಸಿಪಲ್‌ಕೌನ್ಸಿಲರಾದ ಮು॥ ಅಹಮದ್‌ಖಾನರವರ ಅಧ್ಯಕ್ಷತೆಯಲ್ಲಿ ಕಳೆದ 2ನೇ ತಾ॥ ನಡೆಯಿತು. ಡಿಪ್ಲೋಮಾಗಳನ್ನು ಪಡೆಯದೆ ಇರುವ ಹಕೀಮರುಗಳನ್ನು ಸರ್ಕಾರಿ ನೌಕರೀಗಳಿಗೆ ತೆಗೆದುಕೊಳ್ಳಕೂಡದೆಂದು ತೀರ್ಮಾನವಾಯಿತು. ಅಲ್ಲದೆ ಈಕೆಳಗೆ ಕಂಡ ನಿಯಮಗಳೂ ಮಂಜೂರಾದವು:—ಇಂಡಿಯನ್ ಮೆಡಿಕಲ್ ರಿಜಿಸ್ಟ್ರೇಷನ್ ಕಾನೂನಿನ ಪ್ರಕಾರ ಮೈಸೂರು ಆಯುರ್ವೇದಿಕ್ ಮತ್ತು ಯುನಾನಿ ಕಾಲೇಜುಗಳಿಗೆ ಅಂಗೀಕಾರವನ್ನು ಪಡೆಯಬೇಕು. ಈ ಕಾಲೇಜಿನ ವಿದ್ಯಾರ್ಥಿಗಳು ಎಲ್. ಎಂ. ಪಿ. ಪರೀಕ್ಷೆಗೆ ಓದುವುದಾದರೆ ಅವರಿಗೆ 40 ರೂ ವಿದ್ಯಾರ್ಥಿ ವೇತನವನ್ನು ಕೊಡಬೇಕು. ತೇರ್ಗಡೆಯಾದ ವಿದ್ಯಾರ್ಥಿಗಳ ಪೈಕಿ ಹಳಬರಿಗೆ ಮೊದಲು ನೌಕರಿಯನ್ನು ಕೊಡಬೇಕು.

ಕರ್ನಾಟಕ ಏಕೀಕರಣ ಸಮ್ಮೇಳನ

ಈ ತಿಂಗಳಿನ ಅಂತ್ಯಭಾಗದಲ್ಲಿ ಬೆಳಗಾವಿಯಲ್ಲಿ ಅಖಿಲ ಕರ್ನಾಟಕ ಏಕೀಕರಣ ಸಮ್ಮೇಳನವು ನಡೆಯಲಿರುವುದು. ಈ ಸಮ್ಮೇಳನಕ್ಕೆ ಅಧ್ಯಕ್ಷರಾಗಿ ಮದರಾಸಿನ ಡಾ॥ ಯ. ರಾಮರಾಯರನ್ನೂ, ಸ್ವಾಗತ ಸಮಿತಿಯ ಅಧ್ಯಕ್ಷ ಪದವಿಗೆ ಶ್ರೀ ಬಿ ಯನ್. ದಾತಾರ್ ರವರನ್ನೂ ಕಾರ್ಯಕಾರೀ ಮಂಡಲಿಯವರು ನಿಯಮಿಸಿರುವರು.

ಬೆಂಗಳೂರಿನಲ್ಲಿ ಸ್ವದೇಶೀ ಪ್ರದರ್ಶನ.

ಬೆಂಗಳೂರು ಮಹಿಳಾ ಸಮಾಜದ ಕಟ್ಟಡದಲ್ಲಿ ತಾ॥ ೧೦—೧೧—೩೬ನೇ ಸಂಜೆ ಎರಡನೇ ದೀಪಾವಳೀ ಖಾದಿ ಮತ್ತು ಸ್ವದೇಶಿ ವಸ್ತುಪ್ರದರ್ಶನದ ಆರಂಭೋತ್ಸವವು ಶ್ರೀಮತಿ ರುಸ್ತುಂಜಿ ಫರಿದ್ಖೋಂಜಿ ಯವರಿಂದ ನೆರವೇರಿತು. ಪ್ರದರ್ಶನಾಲಯಕ್ಕೆ ನೂರಾರುಜನ ಮಹನೀಯರುಗಳೂ, ಮಹಿಳೆಯರೂ ಆಗಮಿಸಿದ್ದರು. ಪ್ರಾರ್ಥನೆಯಾದಮೇಲೆ ಶ್ರೀ ಮತಿ ಕಮಲಮ್ಮ ದಾಸಪ್ಪನವರು, ಶ್ರೀಮತಿ ರುಸ್ತುಂಜಿಯವರನ್ನು ಆರಂಭೋತ್ಸವ ನೆರವೇರಿಸಬೇಕೆಂದು ಪ್ರಾರ್ಥಿಸಿದರು.

ಶ್ರೀ ಮತಿ ರುಸ್ತುಂಜಿಯವರು ಪ್ರದರ್ಶನವನ್ನು ಪ್ರಾರಂಭಿಸಿ ಹೀಗೆ ಹೇಳಿದರು.—

ನಮ್ಮ ಭಾರತೀಯರು ವ್ಯಾಪಾರದಲ್ಲಿಯೂ, ಸಾಮಾನುಗಳನ್ನು ತಯಾರುಮಾಡುವುದರಲ್ಲಿಯೂ ವಿಶೇಷ ಹಿಂದುಳಿದಿರುವರು. ನಮ್ಮವರು ಇತರ ದೇಶಗಳ ಸ್ಥಿತಿಗತಿಗಳನ್ನು ತಿಳಿಯದ ಈ ಅವಸ್ಥೆಗೆ ಗುರಿಯಾಗಿರುವರು. ಜಪಾನಿಯರು ವ್ಯಾಪಾರ ಇತ್ಯಾದಿಗಳಲ್ಲಿ ಮುಂದರಿದಿರುವಹಾಗೆ ಇನ್ನೂಯಾರೂ ಬಂದಿಲ್ಲ. ನಮ್ಮಲ್ಲಿ ಸ್ವದೇಶಾಭಿಮಾನವಿದೆ, ಸ್ವಾರ್ಥತ್ಯಾಗವಿದೆ ಆದರೆ ಇವೆರಡೂ ಸರಿಯಾಗಿ ರೂಪುಗೊಳ್ಳಬೇಕು. ಅದನ್ನು ಯುವಕ ಜನಾಂಗಕ್ಕೆ ಮುಖ್ಯವಾಗಿ ಸಾರಿಹೇಳುವೆನು ಎಂದು ಹೇಳಿ ಭಾಷಣವನ್ನು ಮುಗಿಸಿದರು. ಶ್ರೀ॥ ಆರ್ ಕೃಷ್ಣಯ್ಯರ್ ರವರು ವಂದನೆಯನ್ನು ಅರ್ಪಿಸಿದರು. ಬಾಲಕಿಯರ ಪ್ರಾರ್ಥನೆಯೊಡನೆ ಸಭೆಯು ಮುಕ್ತಾಯವಾಯಿತು.

ರೈತರ ದಂಡಯಾತ್ರೆ.

ದಕ್ಷಿಣ ಭಾರತ ರೈತರ ಸಂಯುಕ್ತ ಸಂಸ್ಥೆಗೆ ಕಾರ್ಯದರ್ಶಿಗಳಾದ ಶ್ರೀ॥ ಎನ್ ಜಿ ರಂಗಾರವರು ಇದೇ ತಿಂಗಳಿನ 28 ನೆಯ ತಾರೀಖಿನದಿನ ಮದರಾಸ್ ಪ್ರಾಂತ್ಯದ ಎಲ್ಲಾ ಸ್ಥಳಗಳಲ್ಲಿಯೂ "ರೈತರ ದಂಡಯಾತ್ರೆ" ಯು ನಡೆಯಬೇಕೆಂದು ತಿಳಿಸಿರುವರು. ಅವರ ಕಷ್ಟಗಳ ಕಡೆಗೆ ಜನರ ಗಮನವನ್ನು ಆಕರ್ಷಿಸುವುದೇ ಇದರ ಮುಖ್ಯೋದ್ದೇಶ. ಹಳ್ಳಿಹಳ್ಳಿಗಳಿಂದ ರೈತರು ಆ ದಿನ ಗುಂಪಾಗಿ ಹೊರಟು ತಮ್ಮ ತಮ್ಮ ತಾಲ್ಲೂಕು ಕಸಬಾಗಳಿಗೆ ಹೋಗಿ ಪ್ರದರ್ಶನ ಮಾಡುವರು.

"ಪೋಲೀಸರಿಗೂ ಖಾದಿ ತೊಡಿಸುವೆವು"

ಸತ್ಯಮೂರ್ತಿಯವರ ಪ್ರಚಾರ.

"ಖಾದಿಯು ಭಾರತೀಯರ ಯೂನಿಫಾರಂ ಆಗಬೇಕು. ದೇವರ ದಯವಿದ್ದರೆ ಸರ್ಕಾರೀ ನೌಕರರೆಲ್ಲರಿಗೂ—ಪೋಲೀಸರಿಗೂ ಬಿಡದಂತೆ, ಖಾದಿಯನ್ನೇ ತೊಡಿಸುವೆವು." ಎಂದು ಶ್ರೀ ಸತ್ಯಮೂರ್ತಿಯವರು ಕಂಚಿಯಲ್ಲಿ ಭಾಷಣಮಾಡಿದರು.

ಸರ್ವರೂ ಒಟ್ಟುಗೂಡಿ ರಾಷ್ಟ್ರ ಮಹಾಸಭೆಯವರಿಗೇ ಸಹಾಯಮಾಡಬೇಕೆಂದು ಅವರು ಕೋರಿದರು.

ನೂತನ ಶೋಧನೆಗಳು.

ಶಾಸನದ ಇಲಾಖಾ ಮುಖ್ಯಾಧಿಕಾರಿಗಳಾದ ಡಾ॥ ಎಂ. ಹೆಚ್. ಕೃಷ್ಣಾರವರು ಈಚೆಗೆ ಮೈಸೂರು ಡಿಸ್ಟ್ರಿಕ್ಟಿನಲ್ಲಿ ಸಂಚರಿಸುವಾಗ ಚಾಮರಾಜನಗರದ ತಾಲ್ಲೋಕಿನಲ್ಲಿ ಪೂರ್ವಕಾಲದ ದೇವಸ್ಥಾನವೊಂದನ್ನೂ ಮತ್ತು ಒಂದು ಶಿಲಾ ಶಾಸನವನ್ನೂ ಗೊತ್ತುಹಚ್ಚಿರುವರೆಂದು ತಿಳಿದುಬರುತ್ತೆ. ಅದು ಯಾವ ಕಾಲದ್ದೆಂಬುದು ಸರಿಯಾಗಿ ತಿಳಿದಿಲ್ಲ. ಪ್ರಾಯಕವಾಗಿ ಗಂಗ, ಚೋಳರ ಕಾಲದ್ದೆಂದು ಗೊತ್ತಾಗುತ್ತದೆ. ಡಾ॥ ಕೃಷ್ಣಾರವರು ಚಾಮರಾಜನಗರದ ತಾಲ್ಲೋಕಿನಲ್ಲಿ ಮಾತ್ರವಲ್ಲದೆ ಗುಂಡ್ಲುಪೇಟೆ, ಹೆಗ್ಗಡದೇವನ ಕೋಟೆಗೂ ಸಹ ಭೇಟಿ ಕೊಟ್ಟು ಸಂಶೋಧನೆ ನಡೆಸಿದ್ದರಲ್ಲಿ ರಾಜೇಂದ್ರ ಚೋಳನ ಕಾಲಕ್ಕೆ ಸಂಬಂಧಪಟ್ಟ ಶಾಸನಗಳನ್ನು ಶೇಖರಿಸಲಾಯಿತು. 1500 ವರ್ಷಗಳ ಹಿಂದೆ ಪ್ರಸಿದ್ಧನಾದ ಪ್ರತ್ಯಾಡ್ ರಾಜನ ರಾಜಧಾನಿಯಾದ ಕೀರ್ತಿಪುರವಿದ್ದ ಪ್ರದೇಶವನ್ನೂ, ಬಬ್ರುವಾಹನನ ರಾಜಧಾನಿಯಾದ ಹರಳಕೋಟೆಯಿದ್ದ ಜಾಗವನ್ನೂ ಸಹ ಪರೀಕ್ಷಿಸಲಾಯಿತು. ಅದೂ ಅಲ್ಲದೆ ದ್ರಾವಿಡ ಪದ್ಧತಿಗನುಸಾರವಾಗಿ, ಹೊಯ್ಸಳರಿಂದ ನಿರ್ಮಿಸಿದಂಥ ದೇವಾಲಯಗಳನ್ನೂ ಪರಿಶೀಲಿಸಲಾಯಿತು. ಹೆಗ್ಗಡದೇವನಕೋಟೆ ತಾಲ್ಲೂಕಿನಲ್ಲಿ ಚಾಳುಕ್ಯ ಪದ್ಧತಿಗನುಸಾರವಾಗಿ ಹೊಯ್ಸಳರಿಂದ ರಚಿಸಲ್ಪಟ್ಟ ಒಂದು ಹಿಟ್ಟುಗಲ್ಲಿನ ದೇವಸ್ಥಾನವನ್ನೂ ಚಾಮರಾಜನಗರದ ತಾಲ್ಲೋಕು ಮತ್ತು ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಚೋಳರ ಕಾಲದ ಸೊಗಸಾದ ತಸ್ವೀರುಗಳಿಂದೊಳಗೊಂಡ ದೇವಸ್ಥಾನಗಳನ್ನೂ ಮತ್ತು ನಂದಿಯಲ್ಲಿರುವ 'ಭೋಗ' ನಂದೀಶ್ವರ ದೇವಸ್ಥಾನದಂತಿರುವ ಹಿಂದಿನಕಾಲದ ದೇವಸ್ಥಾನವನ್ನೂ ಸಹ ಪರೀಕ್ಷಿಸಿದರು.

ಲಕ್ಷ ರೂಪಾಯಿ ಹಾರಿಸಿದನಂತೆ!

ಕಲ್ಕತ್ತಾದಲ್ಲಿ ಜ. ಪಿಕರ್ಡ್ ಎಂಬೊಬ್ಬ ಯೂರೋಪಿಯನ್ನನು ಮೆ॥ ಥಾಮಸ್ ಕುಕ್ ಕಂಪೆನಿಯವರಲ್ಲಿ ಕೆಲಸಕ್ಕಿದ್ದನು. ಅಲ್ಲಿ ಲಕ್ಷ ರೂಪಾಯಿನಷ್ಟು ಹಣವನ್ನು ಅಪಹಾವಣೆ ಮಾಡಿದನೆಂದು ಅವನನ್ನು ಪೋಲೀಸರು ದಸ್ತಗಿರಿ ಮಾಡಿದ್ದಾರೆ. ವಿಚಾರಣೆಯಾಗುತ್ತಿದೆ.

ಬಿರುದಿಗೆ ತಿಲಾಂಜಲಿ.

ಕೊಯಮತ್ತೂರಿನಲ್ಲಿ ಕಾಂಗ್ರೆಸ್ ಉಮೇದುವಾರರಾದ ಶ್ರೀ॥ ಟಿ. ಎ. ರಾಮಲಿಂಗಂ ಚೆಟ್ಟಿಯಾರ್ರವರು ತಮಗೆ ಬಂದಿದ್ದ 'ದಿವಾನ್ ಬಹದ್ದೂರ್,' ಮತ್ತು "ರಾವ್‌ಬಹದ್ದೂರ್" ಬಿರುದುಗಳನ್ನೂ, ಇತರ ಖಿಲ್ಲತ್ತುಗಳನ್ನೂ ತ್ಯಜಿಸಿರುವುದಾಗಿ ವೈಸ್ರಾಯರ ಕಾರ್ಯದರ್ಶಿಗಳವರಿಗೆ ತಿಳಿಸಿದ್ದಾರೆ. ಇನ್ನೂ ಅನೇಕರು ಇಂತಹ ತಿರಸ್ಕಾರಗಳನ್ನು ಮಾಡುವವರಿದ್ದಾರೆ. ಅದಾಗ್ಯೂ ಈ ಬಿರುದು ಬಾವಲಿಗಳಿಗಾಗಿಯೇ ಬಿಟ್ಟುಕೊಂಡು ಉಮೇದುವಾರಿ ಮಾಡುವವರೂ ಎಷ್ಟೋ ಮಂದಿ ಇರುವರು.

ದಸರಾ ಮಹೋತ್ಸವದ ಲಾವಣಿ ಪದ

ಮ॥ ಎಸ್. ವಿಷಕಂಠರಾವ್‌ರಿಂದ ರಚಿಸಲ್ಪಟ್ಟಿತು.

ಸೃಷ್ಟಿ ಚರಾಚರ ಪಿಂಡವನು
ಸೃಷ್ಟಿಸಿರುವ ಚಾಮುಂಡಿಯು
ದಿಟ್ಟಿಯೊಳು ಮೈಸೂರ
ಮೈಸೂರಿನ ಯುತಲಿ
ಪುನ । ವಿಷ್ಣುವೀನ ಪರಮೋತ್ಸವ ತರುಣದಲಿ
ತಿ । ದಸ್ಸು ನುಡಿವ ನಮ್ಮ
ಗುರು ನಕರುಣದಲಿ ।
ಸ್ನೇಹಯಿಂದ ವಿಜ್ಞ ಸಂಯೋಗ
ಅಷ್ಟಸಿದ್ಧಿ ಪಡೆದ ವೀರ ಶ್ರೀಕೃಷ್ಣರಾಜ
ಒಡೆಯರ್ ನೆರವಿನಲಿ ॥ ೧ ॥
ನಿರ್ಮಲಾತ್ಮ ಜ್ಞಾನದಿಂದ
ಪೆರ್ಮೆಗೊಂಡ ಪದವನ್ನು ಧರ್ಮದಿಂದ
ಪಾಲಕರೊಮ್ಮೆ ನಡೆಯುತ್ತಲಿ ।
ಸ್ವಾತಿ । ಕರ್ಮವಾಲಿಪರು
ಕೀರ್ತಿ ಮೆರೆಯುತಲಿಹೆ ।
ಮತಿ । ಪರ್ಮೆಯಿಂದ ವರ್ಮ
ಜ್ಞಾನ ಪದದುತ್ತರಿಸೆ ॥
ಧರ್ಮಮಾರ್ಗದಿಂದ ರಾಜ
ಕಾರ್ಯ ಜನಿತ ಕೀರ್ತಿಯಿಂದ
ಮನೋಗಗೊಂಡ ಸಿಂಹ
ಪೀಠದ-ಗುಣ ಲಿಪಿ ॥ ೨ ॥
ಪ್ರತ್ಯಗಾತ್ಮ ರಾಜನೆಂದು
ಸತ್ಯಸಂಧ ಕೃಷ್ಣನೆಂದು
ನಿತ್ಯ ಹರಿ ಪಾದವನು ಧ್ಯಾನಿಸುತ್ತಿರುವರು
ಪ್ರತಿ । ನಿತ್ಯ ಚಿರಂಜೀವಿಯಾಗ
ಪರಮಾಶ್ರಿತ ವರ ।
ಮಿಥ್ಯಾ ಜ್ಞಾನವನ್ನು ಬಿಟ್ಟು
ಸತ್ಯಧರ್ಮವನ್ನು ತೊಟ್ಟು
ಚಿತ್ತಶುದ್ಧ ಕೃಷ್ಣನೆಂದು
ಭಜಿಸುತ್ತಿರುವರು ॥ ೩ ॥
ಧರೆಯ ಸಿರಿಯುತ ಸುಗುಣದ
ಮೋದ ಪರಮ ತತ್ವ ಜ್ಞಾನದ
ಸಿರಿಯು ಕನ್ನಡರ ರಾಜ್ಯ ಸಿಂಹಾಸನ
ಪದ । ನಿರುತ ನನ್ನ ನಾದ ಕೀರ್ತಿ
ಪೂರ್ಣ ಜನಗಳ ।
ಸ್ಮರ । ಪರಮ ಕಾಂತಿ ಲತೆಯು
ಆಷ್ಟದಳ ಮಂಟಪದಲಿ ॥
ಒರೆಯ ಸಿರಿಯ ವರ ಚರಿತೆಯು
ಪರಮ ಕರುಣಾಕರನಾಳ್ವ
ನರಪತಿ ಕೃಷ್ಣ ನವಛತ್ರದ ಪಾವನ ॥೪॥
ಜಯ ಜಯತು ಶ್ರೀ ಚಾಮುಂಡಿಗೆ
ಜಯತು ಕೃಷ್ಣರಾಜರಿಗೆ
ಜಯತು ಜಯತು ಸಂಸ್ಥಾನ
ಕಂಠೀರವರಿಗೆ
ಜಯ । ಜಯ ಕುವರ ಯುವರಾಜರು
ವಿಜಯ ಚಾಮರಾಜರ ।
ಜಯ । ಜಯ ಸುಖ ಭವನ
ಪ್ರಾಂತ ರಾಜ್ಯ ಲಕ್ಷ್ಮಿಗೆ ॥
ಜಯತು ಜಯತು ಮೈಸೂರಿಗೆ
ಜಯತು ಶ್ರೀ ಕಂಠೇಶ್ವರನಿಗೆ
ಜಯ ಜಯತು
ತಾಯಿ ಭುವನೇಶ್ವರಿ ನಂಜನಗೆ ॥ ೫ ॥

ಪಂಡಿತ ಜವಾಹರ ಲಾಲರ ಆತ್ಮಕಥೆ

(ಕನ್ನಡ ಭಾಷಾಂತರ.)

೧೦೦೦ ಪುಟಗಳು । ೨ ಸಂಪುಟಗಳು ॥
೧ ನೆಯ ಸಂಪುಟ—೧—೧೨—೩೬
೨ „ „ —೧—೧೨—೩೬
ಹೊರಬೀಳುವುವು.
ಟಪಾಲು ಖರ್ಚು ಪ್ರತ್ಯೇಕ.
ಉತ್ತಮ ಪ್ರತಿ . ರೂ. ೧೦-೦-೦
ವಾಚನಾಲಯ ಪ್ರತಿ . „ ೭-೦-೦
ಸಾಮಾನ್ಯ ಪ್ರತಿ . „ ೫-೦-೦
ತಾ॥ ೩೦-೧೧-೩೬ ರ ಒಳಗೆ ಹಣ
ಮುಂಗಡ ಕಳುಹುವವರಿಗೆ.
ಉತ್ತಮ ಪ್ರತಿ ರೂ. ೧೦-೦-೦
ವಾಚನಾಲಯ ಪ್ರತಿ „ ೬-೦-೦
ಸಾಮಾನ್ಯ ಪ್ರತಿ . „ ೪-೦-೦
ಟಪಾಲು ಖರ್ಚು ಸಮೇತ
ಹಣವನ್ನು ನೇರ ಕಳುಹಿಸಬೇಕು.
(ಏಜಂಟರಿಗೆ ಕಮಿಷನಿಲ್ಲ)

ಮುಂಗಡವಾಗಿ ಆರ್ಡರನ್ನು ಕೊಟ್ಟು ವ್ಯಾಪಾರ ನಡೆಸುವ ಪುಸ್ತಕ ವ್ಯಾಪಾರಿಗಳಿಗೆ ಧಾರಾಳವಾದ ಕಮೀಷನ್ ಕೊಡಲ್ಪಡುವುದು.

ಪ್ರಕಾಶಕರು— ಸಿ. ಅಶ್ವತ್ಥನಾರಾಯಣರಾವ್, ಬಿ. ಎ.,
ಸಂಪಾದಕರು. "ನವಜೀವನ" ಮತ್ತು
"ಮಕ್ಕಳ ಪುಸ್ತಕ"
ಬಳೇಪೇಟೆ, ಬೆಂಗಳೂರು ಸಿಟಿ

ಯಾತನೆಯಿಲ್ಲದೆ ಬಸಿರು ಇಳಿಯುವುದು.

ಪ್ರಾಣಿಗಳಿಗೆ ನೋವಾಗದಂತೆ ಬಸಿರು ಇಳಿಸುವ ವಿಧಾನವನ್ನು ಅಮೆರಿಕದ ವೈದ್ಯ ಸಾಯದ ರಲಾಯನರು ಕಂಡುಹಿಡಿದಿರುವರು. ಇದುವರೆಗೆ ಕಬ್ಬಿಣವನ್ನು ಕಂಪಗೆ ಕಾಯಿಸಿ ಬಿಸಿ ಎಳೆಯುತ್ತಿದ್ದರು. ಈಗ ಒಂದು ದ್ರಾವಕವನ್ನು ಕಂಡುಹಿಡಿದಿರುವರು. ಅವುಗಳನ್ನು ಅಂಗಡಿಗಳಲ್ಲಿ ಮಾರಾಟಕ್ಕೆ ಇಡಲಾಗಿದೆ. ಇದಕ್ಕಾಗಿ ಪ್ರಾಣಿ ಕೋಟಿಗಳು ಅವರಿಗೆ ಕೃತಜ್ಞರಾಗಿರಬೇಕಾಗಿದೆ.

ಪುನಃ ಸಿದ್ದಿಕ್ ಚನ್ನಬಸವೇಶ್ವರರು.

ಈಗಾಗಲೇ ಪ್ರಸಿದ್ಧರಾಗಿರುವ ಶಿದ್ದಿಕ್ ಚನ್ನಬಸವೇಶ್ವರರು ಕಳೆದ ೨೧ನೇ ತಾ॥ ನಿಂದ ಮೈಸೂರು ಟೌನ್‌ಹಾಲಿನಲ್ಲಿ ತಮ್ಮ ಉಪನ್ಯಾಸಗಳನ್ನು ಆರಂಭಿಸಿದರು. ಕಳೆದ ೧ ನೇ ತಾ। ಹಿಂದೂಮತವನ್ನು ಹಿಯ್ಯಾಳಿಸುತ್ತಲೂ ದಲಿತರು ಆರ್ಯಸಮಾಜವನ್ನು ತಿರಸ್ಕರಿಸುತ್ತಲೂ ಬಾಷಣಮಾಡುತ್ತಿದ್ದರು. ಆಗ ಮೈಸೂರು ಆರ್ಯಸಮಾಜದ ಕೆಲವು ಸದಸ್ಯರು ಸಾಹೇಬರಿಗೆ ಕೆಲವು ಪ್ರಶ್ನೆಗಳನ್ನು ಹಾಕಿದರು. ಅದಕ್ಕೆ ಉತ್ತರಕೊಡಲು ಸಿದ್ದಿಕ್‌ರವರು ಇದ್ದರು. ತಾವು ಕೊಡುವದಾಗಿ ಆಪರಿ ಶಿಷ್ಯರಿದ್ದರು. ಪುನಃ ಸಿದ್ದಿಕ್‌ರವರು ತಾವೇ ಕೊಡುವದಾಗಿ ಎದ್ದರು. ಒಪ್ಪದಲ್ಲಿ ಪೋಲೀಸಿನ ಅಧಿಕಾರಿಗಳು ಬಂದು ಅವರನ್ನೂ, ಅವರ ಶಿಷ್ಯರನ್ನೂ ಅಲ್ಲಿಂದ ಹೊರಡಿಸಿದರು. ಆದರೂ ಮಾತನಾಡಲು ಪ್ರಯತ್ನಪಟ್ಟಾಗ ಬಾಯಿಮುಚ್ಚಿಸಿದರು. ಹಿಂದೆ ಈ ಸಾಹೇಬರಿಗೆ ೧೪೪ ನೇ ಕಲಮು ಪ್ರಯೋಗವಾಗಿದೆ. ಇವರ ಪ್ರಚಾರವನ್ನು ತಪ್ಪಿಸುವುದು ಅಗತ್ಯ.

—ಪ್ರತ್ಯಕ್ಷದರ್ಶಿ.

ಸಾಮುದ್ರಿಕಾ ಶಾಸ್ತ್ರ ಪಂಡಿತರು

ಮ॥ ರಾ॥ ಸ್ವಾಮಿಯವರು ಬಂದಿರುವರು. ಹಸ್ತ ಸಾಮುದ್ರಿಕವನ್ನು ಬಹು ಕರಾರುವಾಕ ಹೇಳುವರು. ನಿಮಗೆ ಸಂಭವಿಸಬಹುದಾದ ಅಪಾಯಗಳನ್ನೂ ತೊಂದರೆಗಳನ್ನೂ ತಿಳಿಸುವರು.

ಸುಸಮಯವನ್ನು ಕಳೆದುಕೊಳ್ಳಬೇಡಿ

ಜೀವಮಾನದ ಭವಿಷ್ಯದ ಸಾರಾಂಶವನ್ನು ಹೇಳುವುದಕ್ಕೆ ... 3 ರೂ.
ಜೀವಮಾನದ ಸಂಪೂರ್ಣ ಭವಿಷ್ಯವನ್ನು ಹೇಳುವುದಕ್ಕೆ . 6 ರೂ.

ವಿಳಾಸ — ರಂಗವಿಲಾಸ,
ಮೆಜೆಸ್ಟಿಕ್ ಥಿಯೇಟರ್ ಹತ್ತಿರ,
ಬೆಂಗಳೂರು ಸಿಟಿ

ಬಲಾತ್ಕಾರದ ಮೋಟಾರು ವಿಮೆ.

ಮೋಟಾರು ಕಾರುಗಳ ವಿಷಯವಾಗಿ ಬಲಾತ್ಕಾರದಿಂದ ಇನ್ಸೂರೆನ್ಸು ಮಾಡುವ ಪದ್ಧತಿಯನ್ನು ಜಾರಿಗೆ ತರಲು ಸಲಹೆಗಳನ್ನು ಕೊಡುವುದಕ್ಕಾಗಿ ಇಂಡಿಯಾ ಸರ್ಕಾರದವರು ಒಂದು ಸಮಿತಿಯನ್ನು ಏರ್ಪಡಿಸಿರುವರು

ಶ್ರೀ ರಂಗನಾಥ ಟೈಪ್ ಫೌಂಡ್ರಿ

ಚಿಕ್ಕಪೇಟೆ, ಬೆಂಗಳೂರು ಸಿಟಿ.

ಸುಂದರವಾದ ಅಕ್ಷರಗಳು, ಮುದ್ದುಮುದ್ದಾದ ಬಾರ್ಡರುಗಳು ಬಗೆಬಗೆಯ ಆಕೃತಿ

ನಮಗೆ ಈ ಕೆಲಸದಲ್ಲಿ ೩೦ ವರ್ಷಗಳ ಕಾಲದ ಅನುಭವವಿದೆ. ಆಧುನಿಕ ಕಾಲಕ್ಕೆ ತಕ್ಕಂತೆ ಅಕ್ಷರದ ಆಕಾರವನ್ನು ಬಹು ಸುಂದರವಾಗಿ ಸುಧಾರಿಸಿದ್ದೇವೆ.

ನಮ್ಮಲ್ಲಿನ "ಕನ್ನಡ, ಇಂಗ್ಲೀಷ್" ಅಕ್ಷರಗಳಂತಹ ಸುಂದರವಾದ ಅಕ್ಷರಗಳು ಮತ್ತೆಲ್ಲಿಯೂ ನೋಡಬಾರದು. ಮತ್ತು

ನೂರಾರು ಬಗೆಯ ಸುಂದರವಾದ ಬಾರ್ಡರುಗಳು, ನಯನಮನೋಹರವಾಗಿವೆ

೮ ಪಾಯಿಂಟಿನಿಂದ ೪೮ ಪಾಯಿಂಟಿನವರಿಗೆ ಹಲವಿಧವಾದ ಸುಂದರಾಕ್ಷರಗಳಿವೆ

ನಮ್ಮ "ರಂಗನಾಥ ಕನ್ನಡ ಡಾಯಿಪ್" ಅಕ್ಷರಗಳನ್ನು ನೋಡಲು ಮರೆಯಬೇಡಿ

ನಾವು ಕಾಪರ್ ಅಲಾಯ್ (ತಾಮ್ರಮಿಶ್ರ) ಲೋಹದಿಂದ ಅಕ್ಷರಗಳನ್ನು ತಯಾರಿಸುತ್ತೇವೆ. ಸುಲಭ ಬೆಲೆ ಗ್ಯಾರಂಟಿಯಾದ ಬಾಳಿಕೆ



ಚಿತ್ರಶಾಬ್ದಸ್ಪರ್ಧೆ ನಂ. ೧೩ ರ ಉತ್ತರ

ಇದರಲ್ಲಿ ಬಹುಮಾನ ಪಡೆದವರ ಹೆಸರುಗಳನ್ನು ಸೋಮವಾರದ ಸಾಧ್ವಿಯಲ್ಲಿ ಪ್ರಕಟಿಸಲಾಗುತ್ತೆ

ಇನ್ನು ಮುಂದೆ ಹೊಸ್ತಿಂದ ಸ್ಪರ್ಧೆಯೂ ಮತ್ತು ಸಂಬಂಧಪಟ್ಟ ಎಲ್ಲಾ ವಿಚಾರಗಳೂ ಸಾಧ್ವಿ ಪತ್ರಿಕೆಯಲ್ಲಿ ಪ್ರಕಟವಾಗುವುವು. ಆದ್ದರಿಂದ ವಾಚಕರು ಹೋಲ್ಡಿಂಗ್ ಪತ್ರಿಕೆಯನ್ನು ತೆಗೆದುಕೊಂಡು, ಈವರಿಗೂ ನಮ್ಮ ಪ್ರೋತ್ಸಾಹಕೊಟ್ಟಂತೆ ಮುಂದೆಯೂ ಕೊಡಬೇಕೆಂದು ಪ್ರಾರ್ಥನೆ

ಮ್ಯಾ. ಟಿ

Asiatic Government Security Life Assurance Co., Ltd.

HEAD OFFICE:-ASIATIC BUILDINGS, BANGALORE CITY.

THIS IS PURELY A NATIONAL CONCERN

Managed by Experts. Low Premiums and Liberal Policy Conditions.

Apply for Agency.— To Mr. H. Venkataramiah, Divl Supdt., ASIATIC BUILDINGS, Bangalore City Or To V. RANGASAMI Esq B.A. B.L., F.C.I. General Manager.



ಚೆನ್ನಾಗಿ ಅನುಭವವುಳ್ಳವರ ಆಡಳಿತಕ್ಕೆ ಒಳಪಟ್ಟ, ಕಡಿಮೆ ಪ್ರೀಮಿಯಮ್ಮು ಮತ್ತು ಧಾರಾಳವಾದ ಪಾಲಿಸಿ ಷರತ್ತುಗಳುಳ್ಳ ಶುದ್ಧ ಸ್ವದೇಶೀ ವಿಮಾ ಸಂಸ್ಥೆ

ಏಜನ್ಸಿಗಾಗಿ ಕೆಳಗಿನ ವಿಳಾಸಕ್ಕೆ ಬರೆಯಿರಿ —

ಹೆಚ್. ವೆಂಕಟರಾಮಯ್ಯ, ಡಿವಿಜನಲ್ ಸೂಪರಿಂಟೆಂಡೆಂಟ್, ಏಸ್ಯಾಟಿಕ್ ಬಿಲ್ಡಿಂಗ್ಸ್, ಬೆಂಗಳೂರು ಸಿಟಿ.

ಅಥವಾ

ಮ॥ ವಿ. ರಂಗಸ್ವಾಮಿ, ಬಿ.ಎ., ಬಿ.ಎಲ್., ಎಫ್.ಸಿ.ಐ. ಜನರಲ್ ಮ್ಯಾನೇಜರ್.

ಏಷ್ಯಾಟಿಕ್ ಲೈಫ್ ಇನ್ಷೂರೆನ್ಸ್ ಕಂಪೆನಿ ಲಿಮಿಟೆಡ್

ಹೆಡ್ ಆಫೀಸ್:—ಏಸ್ಯಾಟಿಕ್ ಬಿಲ್ಡಿಂಗ್ಸ್, ಬೆಂಗಳೂರು

ಪ್ರಸಿದ್ಧ ಪಾಳ್ಯದ ವೆಂಕಟಾಚಲ ಪಂಡಿತ ಅಂಡ್ ಸನ್ಸರ ಆಯುರ್ವೇದೀಯ ಸಿದ್ಧೌಷಧಗಳು.

ಸರ್ವರೋಗಾಮಯಹರ ಕಸ್ತೂರಿ ಮಾತ್ರೆಗಳು

ಈ ಮಾತ್ರೆಗಳು 1-2 ನ್ನು ಪ್ರತಿ ದಿನ ಊಟವಾದ ಬಳಿಕ ತಾಂಬೂಲದೊಡನಾಗಲಿ ಹಾಗೆಯಾಗಲಿ, ಉಪಯೋಗಿಸುತ್ತಿದ್ದರೆ, ಬಾಯಿ ಸುವಾಸನೆಯಾಗಿರುತ್ತೆ ಎಂಥಹ ಗಡುಸಾದ ಆಹಾರವನ್ನಾದರೂ ಜೀರ್ಣಿಸಿ ಕೊಳಕಾದ ನೀರು, ಕೆಟ್ಟಗಾಳಿಗಳ ದೋಷವನ್ನೂ, ಅಂಟುಜಾಡ್ಯಗಳನ್ನೂ ಬಳಿಗೆ ಸೇರಿಸದೆ ದುರ್ಬಲ್ಯವನ್ನು ಹೋಗಲಾಡಿಸಿ, ಆರೋಗ್ಯವಾಗಿರುವಂತೆ ಮಾಡುತ್ತವೆ.

ಮಕ್ಕಳ ಪಕ್ಕೆಸಳೆತ (ಎಳವು) ಕಾಲುಕ್ಕೆ ಊದಲು. ಬಾಯಲ್ಲಿ ಜೊಲ್ಲುಸುರಿಸುವ ಸೀತವಾತ ಮಕ್ಕಳ ಮತ್ತು ದೊಡ್ಡವರ ಸೀತ, ನೆಗಡಿ, ಕೆಮ್ಮಲು, ಗೂರಲು, ಜ್ವರ, ಚಳಿಜ್ವರ, ಅಜೀರ್ಣ, ಅಜೀರ್ಣ ಭೇದಿ. ಹೊಟ್ಟೆಯುಬ್ಬರ, ಹೊಟ್ಟೆ ನೋವು, ಅಗ್ನಿಮಾಂದ್ಯ, ಇನ್ಫ್ಲುಯೆಂಜಾ, ಪ್ಲೇಗು, ಶೀತಭೇದಿ ಇನ್ನೂ ಅನೇಕ ರೋಗಗಳನ್ನು ಗುಣಪಡಿಸುತ್ತವೆ

ಸ್ತ್ರೀಯರು ಹೆತ್ತ ದಿನ ಸ್ನಾನದ ದಿನ ಶೀತವಾತ ಪರಿಹಾರಕ್ಕಾಗಿ ... ಬದಲು ಈ ಮಾತ್ರೆಗಳನ್ನೇ ಲಕ್ಷೋಪಲಕ್ಷ ಜನರು ಉಪಯೋಗಿಸುತ್ತಾರೆ. ಈ ಮಾತ್ರೆಗಳಲ್ಲಿ ಅಫೀಮಾಗಲಿ, ವಿಷವಸ್ತುವಾಗಲಿ, ಖಂಡಿತ ... ಸೇರಿಲ್ಲ. ಒಂದೇ ಒಂದು ಈ ಸೀಸೆಯು ನಿಮ್ಮ ಬಳಿ ಇದ್ದರೆ, ವೈದ್ಯರ ಸಹಾಯವನ್ನಪೇಕ್ಷಿಸದೆ, ನೀವೇ ಅನೇಕ ವ್ಯಾಧಿಗಳನ್ನು ಗುಣಪಡಿಸಬಲ್ಲವರಾಗುತ್ತೀರಿ.

250 ರಿಂದ 300 ಮಾತ್ರೆಗಳವರಿವಿಗಿರುವ ಸೀಸೆ 1 ಕ್ಕೆ 4 ಆಣೆ. ಟಪಾಲು ಮೂಲಕವಾದರೆ 1 ಸೀಸೆಗೆ 9 ಆಣೆ 6 ಸೀಸೆಗೆ 1—0—0. 12 ಕ್ಕೆ 2—13—0 25 ಕ್ಕೆ 5—3—0.

ಪಾಳ್ಯದ ವೆಂಕಟಾಚಲ ಪಂಡಿತ ಅಂಡ್ ಸನ್ಸ್,

ಶ್ರೀ ಸೀತಾರಾಮ ವೈದ್ಯಶಾಲಾ, ಮೈಸೂರು.

ದ್ರಾಕ್ಷಾಮೃತ

ಈ ದ್ರಾಕ್ಷಾಮೃತವು ಸಹ್ಯಾದ್ರಿ ಪರ್ವತದಲ್ಲಿ ಅನೇಕ ವನಸ್ಪತಿಗಳ ರಸವರ್ಗಗಳೊಂದಿಗೆ ದ್ರಾಕ್ಷಿ ರಸವನ್ನು ಮಿಶ್ರಮಾಡಿ ಸ್ವದೇಶಿ ಯಂತ್ರದಿಂದ ಶಾಸ್ತ್ರೋಕ್ತ ಪದ್ಧತಿ ಪ್ರಕಾರ ತಯಾರು ಮಾಡಿರುವದರಿಂದ ಸ್ವಾದಿಷ್ಟವು ಮತ್ತು ಮಧುರವು ಆಗಿದೆ

ಇದರ ಸೇವನೆಯಿಂದ ಶರೀರದೊಳಗಿನ ಹಳೆ ಕಡಕಿ (ಗರಮಿ) ಸಂಪೂರ್ಣ ನಾಶವಾಗುತ್ತದೆ. ಮತ್ತು ಧಾತುಸ್ರಾವ, ಸ್ವಪ್ನಾವಸ್ಥೆಯಿಂದ ಅಥವಾ ಬೇರೆ ಯಾವದೇ ಕಾರಣದಿಂದ ಬಂದ ಅಶಕ್ತತೆಯಿಂದ ಕೈಕಾಲು, ಕಣ್ಣೊಳಗೆ ಉರುವು ಜೀರ್ಣ, ರಾಜಕ್ಷಯ ನಂತ ಆನಡೆ ಇದೋಣ, ಮುಂತಾದ ಎಲ್ಲ ವಿಕಾರಗಳು ನಷ್ಟವಾಗಿ ಕ್ಷುಧಾಗ್ನಿ ಬೆಳೆಯುತ್ತದೆ. ಮತ್ತು ಅನ್ನ ಚೆನ್ನಾಗಿ ಪಚನವಾಗಿ ಶೌಚಕ್ಕೆ ಸಾಫವಾಗುತ್ತದೆ. ಇದರ ಸೇವನೆಯಿಂದ ತರುಣರಿಗೆ ವ್ಯಭಿಚಾರದಿಂದ ಅಥವಾ ಬೇರೆ ಕಾರಣದಿಂದ ಬಂದ ಧಾತುಕ್ಷೀಣತೆ, ನಪುಂಸಕತ್ವ ಇದ್ದರೆ ಅದು ಹೋಗಿ ಪುನಃ ಯೌವನವಂತರಾಗಿ, ಶರೀರ ಬಲವಾಗಿ ಮಕ್ಕಳು ಪುಷ್ಟಿವಂತರಾಗುವರು ಹೆಂಗಸರಿಗೂ ಮತ್ತು ಮಕ್ಕಳಿಗೂ ಈ ಔಷಧವು ಗುಣಕಾರಿ ಇದೆ. ಮುಟ್ಟಾಗದಿದ್ದರೆ ಮತ್ತು ಉಷ್ಣ ಗರ್ಭ ಸಂಬಂಧವಾದ ರೋಗಗಳಿದ್ದರೂ ಅವೆಲ್ಲ ಗುಣವಾಗಿ ಹೆಂಗಸರಿಗೆ ಸಂತತಿ ವೃದ್ಧಿಯಾಗುವದು ಈ ಔಷಧದ ಮೂರು ಬಾಟ್ಲಿಗಳನ್ನು ಸೇವನೆ ಮಾಡಿದರೆ ಪೂರ್ಣ ಗುಣಬರುತ್ತದೆ ಇದರ ಅನುಭವ 1 ಬಾಟ್ಲಿ ಸೇವನೆ ಮಾಡಿದ ಅನಂತರ ನಿಮಗೆ ತಿಳಿದೀತು

1 ಬಾಟ್ಲಿ ಬೆಲೆ ರೂ ೧—೬—೦, 3 ಬಾಟ್ಲಿ ೩—೮—೦, 1 ಡಜನ್ ಬಾಟ್ಲಿ ಬೆಲೆ ೧೨—೦—೦

ಮ್ಯಾನೇಜರ್—ದ್ರಾಕ್ಷಾಮೃತ ಡಿಪೋ. ಪೋಸ್ಟ್ ನಿಪ್ಪಾಣಿ, ಜಿಲ್ಲಾ ಬೆಳಗಾವಿ.

ಮೈಸೂರು ಸ್ಟಾಕಿಸ್ಟ್ಸ—ಟಿ. ಸಿ. ನಟರಾಜ್, ಬೊಂಬಾಯಿ ಆನಂದ ಭವನ, ಮಾಡರ್ನ್ ಫಾರ್ಮಸಿ, ಸಯ್ಯಾಜಿರಾವ್ ರೋಡ್ ಬೆಂಗಳೂರು ಸಿಟಿ—ಸಿ.ವಿ. ಶಾಸ್ತ್ರಿ ಅಂಡ್ ಸನ್ಸ್, ಚಿಕ್ಕಪೇಟೆ. ತುಂಕೂರು—ಟಿ ಆರ್ ಗುರು ಚನ್ನಬಸಪ್ಪ ಅಂಡ್ ಬ್ರದರ್ಸ. ಚಿಕ್ಕಮಗಳೂರು—ಎಂ. ಎಲ್ ನಂಜಯ್ಯಶೆಟ್ಟಿ ಶಿವಮೊಗ್ಗ—ಶ್ರೀಕೃಷ್ಣ ಟ್ರೇಡಿಂಗ್ ಏಜನ್ಸಿ ಮತ್ತು ಪಂಡರೀರಾವ್ ಬ್ರದರ್ಸ. ದಾವಣಗೆರೆ—ಮಲ್ಲೇಶಪ್ಪ ಮತ್ತು ಕೆ. ಭೋಗಯ್ಯಶೆಟ್ಟಿ ಅಂಡ್ ಬ್ರದರ್ಸ್.

ಪ್ರಾಚೀನ ಕನ್ನಡ ವಚನ ಗ್ರಂಥಗಳು

ಸೌಗಂಧಿಕಾಪರಿಣಯ:—ಪೂರ್ವದಲ್ಲಿ ದೇವೇಂದ್ರನಿಗೆ ದೂರ್ವಾಸ ಮುನಿಗಳಿಂದ ಆಶೀರ್ವಾದ ಪೂರ್ವಕವಾಗಿ ಕೊಡಲ್ಪಟ್ಟ ಕಮಲಮಾಲಿಕೆಯನ್ನು ಆನೆಯ ಕುಂಭಸ್ಥಳದಲ್ಲಿಟ್ಟವೊಡನೆ, ಆನೆಯು ಆ ಮಾಲಿಕೆಯನ್ನು ಕಾಲಿನಲ್ಲಿ ಹೊಸಕಿ ವ್ಯರ್ಥಪಡಿಸಲು, ಋಷಿಗಳ ಶಾಪದಿಂದ ಭೂಲೋಕದಲ್ಲಿ ರತ್ನಪುರಿಯಲ್ಲಿ ಸುಗಂಧರಾಜನಾಗಿ ಹುಟ್ಟಿ, ಕಳಿಂಗದೇಶದ ರಾಜಪುತ್ರಿಯಾದ ಸೌಗಂಧಿಕಾದೇವಿಯನ್ನು ಸ್ವಯಂವರಮಾಡಿಕೊಂಡ, ಬಹಳ ವಿನಯಗಳಿರುವ ಕಥೆ

೧೪೦ ಪುಟಗಳು ಕ್ರಯ ರೂ ೧—೮—೦

ಸಹಸ್ರಾಯುಚರಿತ್ರೆ:—ಮಾಹಿಷ್ಮತೀ ಅರಸನ ಜ್ಯೇಷ್ಠಪತ್ನಿಯಲ್ಲಿ ದಾಕ್ಷಾಯಣಿ ವರಪ್ರಸಾದದಿಂದ ಜನಿಸಿ ಲೋಕಪ್ರಸಿದ್ಧನಾಗಿ ತನಗೆ ಇತರರಿಂದ ಬಂದ ಗಂಡಾಂತರಗಳೆಲ್ಲವನ್ನೂ ಪರಿಹರಿಸಿಕೊಂಡ ಒಬ್ಬ ಮಹಾಪುರುಷನ ಕಥೆ

೮೭೫ ಪುಟಗಳು ಕ್ರಯ ರೂ. ೩—೦—೦

ಕಾಶೀಕ್ಷೇತ್ರಮಹಾತ್ಮೆ:—ಇದರಲ್ಲಿ ೧೪ ಲೋಕಗಳ ವರ್ಣನೆ, ನದಿಗಳು, ದೇವತೆಗಳು ಋಷಿಗಳೇ ಮುಂತಾದವರ ಉತ್ಪತ್ತಿಕ್ರಮ, ಗಂಗಾಸಹಸ್ರನಾಮಾವಳಿ ಮೊದಲಾದ ಅನೇಕ ವಿಷಯಗಳು ಅಡಕವಾಗಿರುತ್ತೆ

೬೮೬ ಪುಟಗಳು ಕ್ರಯ ರೂ. ೩—೨—೦

N B ಪುಸ್ತಕದ ಕ್ರಯದ ನಾಲ್ಕರಲ್ಲಿ ಒಂದು ಭಾಗ ಮೊಬಲಗು ಅಡ್ವಾನ್ಸು ಕಳುಹಿಸಿದರೆ ಬಾಕಿಗೆ ವಿ ಪಿ ಮಾಡಲಾಗುತ್ತೆ.

ವಿಳಾಸ —

ಗುಂಡ್ಲು ಪಂಡಿತ ಲಕ್ಷ್ಮಣಾಚಾರ್ಯರ ಮಕ್ಕಳು
ಶ್ರೀನಿವಾಸ ದೇಶಿಕಾಚಾರ್,
೩೦೭, ಕರುಪಟ್ಟಿಬೀದಿ, ಮೈಸೂರು.

ಜ. ನೆಹ್ರೂ

— ಆತ್ಮಕಥೆ —

ಕನ್ನಡ ಭಾಷಾಂತರ

೧೦೦೦ ಪುಟಗಳು! ೨ ಸಂಪುಟಗಳು!!
೧ನೆಯ ಸಂಪುಟ—೧-೧೨-೩೬
೨ ,, ,, ೨೫-೧೨-೩೬.

ಹೊರಬೀಳುವುವು.

ಅತ್ಯುತ್ತಮ ಪ್ರತಿ ರೂ ೧೦ ಪೋಸ್ಟೇಜ್ ಬೇರೆ
ವಾಚನಾಲಯ ಪ್ರತಿ ರೂ. ೭. ,,
ಸಾಮಾನ್ಯ ಪ್ರತಿ ರೂ. ೫ ,,

೩೦-೧೧-೩೬ ರ ಒಳಗೆ ಹಣ ಕಳಿಸುವವರಿಗೆ ರೂ ೧೦, ರೂ ೬, ರೂ ೪.೮.೦.
ಪೋಸ್ಟೇಜ್ ಮುಕ್ತ.

ಸಿ ಅಶ್ವತ್ಥನಾರಾಯಣರಾವ್, ಬಿ ಎ.,
ಸಂಪಾದಕ
"ನವಜೀವನ" ಮತ್ತು "ಮಕ್ಕಳ ಪುಸ್ತಕ"
ಬೆಂಗಳೂರು ಸಿಟಿ

ಸಾಮುದ್ರಿಕಾ ಶಾಸ್ತ್ರ ಪಂಡಿತರು

ಮ|| ರಾ|| ಸ್ವಾಮಿಯವರು ಬಂದಿರುವರು

ಹಸ್ತ ಸಾಮುದ್ರಿಕವನ್ನು ಬಹು ಕರಾರುವಾಕ ಹೇಳುವರು ನಿಮಗೆ ಸಂಭವಿಸಬಹುದಾದ ಅಪಾಯಗಳನ್ನೂ ತೊಂದರೆಗಳನ್ನೂ ತಿಳಿಸುವರು.

ಸುಸಮಯವನ್ನು ಕಳೆದುಕೊಳ್ಳಬೇಡಿ

ಜೀವಮಾನದ ಭವಿಷ್ಯದ ಸಾರಾಂಶವನ್ನು ಹೇಳುವುದಕ್ಕೆ . 3 ರೂ.
ಜೀವಮಾನದ ಸಂಪೂರ್ಣ ಭವಿಷ್ಯವನ್ನು ಹೇಳುವುದಕ್ಕೆ . 6 ರೂ.

ವಿಳಾಸ —**ರಂಗವಿಲಾಸ,**
ಮೆಜೆಸ್ಟಿಕ್ ಥಿಯೇಟರ್ ಹತ್ತಿರ,
ಬೆಂಗಳೂರು ಸಿಟಿ

ದ್ರಾಕ್ಷಾಮೃತ

ಈ ದ್ರಾಕ್ಷಾಮೃತವು ಸಹ್ಯಾದ್ರಿ ಪರ್ವತದಲ್ಲಿ ಅನೇಕ ವನಸ್ಪತಿಗಳ ರಸವನ್ನುಗಳೊಂದಿಗೆ ದ್ರಾಕ್ಷಾರಸವನ್ನು ಮಿಶ್ರಮಾಡಿ ಸ್ವದೇಶಿ ಯಂತ್ರದಿಂದ ಶಾಸ್ತ್ರೋಕ್ತ ಪದ್ಧತಿ ಪ್ರಕಾರ ತಯಾರು ಮಾಡಿರುವದರಿಂದ ಸ್ವಾದಿಷ್ಟವು ಮತ್ತು ಮಧುರ… ಆಗಿದೆ.

ಇದರ ಸೇವನೆಯಿಂದ ಶರೀರದೊಳಗಿನ ಹಳೆ ಕಾವು (ಗರಮಿ) ಸಂಪೂರ್ಣ ನಾಶವಾಗುತ್ತದೆ ಮತ್ತು ಧಾತುಸ್ರಾವ, ಸ್ವಪ್ನಾವಸ್ಥೆಯಿಂದ ಅಥವಾ ಬೇರೆ ಯಾವದೇ ಕಾರಣದಿಂದ ಬಂದ ಅಶಕ್ತತೆಯಿಂದ ಕೈಕಾಲು, ಕಣ್ಣೊಳಗೆ ಉರಿ… ಬೀಳೋಣ, ಶೌಚಕ್ಕೆ ಸಾಫ ಆಗದೆ ಇರೋಣ, ಮುಂತಾದ ಎಲ್ಲ ವಿಕಾರಗಳು …ವಾಗಿ ಹಸಿವು ಚೆನ್ನಾಗಿ ಬೆಳೆಯುತ್ತದೆ ಮತ್ತು ಅನ್ನ ಚೆನ್ನಾಗಿ ಪಚನವಾಗಿ ಶೌಚಕ್ಕೆ ಸಾಫವಾಗುತ್ತದೆ ಇದರ ಸೇವನೆಯಿಂದ ತರುಣರಿಗೆ ವ್ಯಭಿಚಾರದಿಂದ ಅಥವಾ ಬೇರೆ ಕಾರಣದಿಂದ ಬಂದ ಧಾತುಕ್ಷೀಣತೆ, ನಪುಂಸಕತ್ವ ಇದ್ದರೆ ಅದು ಹೋಗಿ ಪುನಃ ಯೌವನವಂತರಾಗಿ, ಶರೀರ ಬಲವಾಗಿ ಮಕ್ಕಳು ಪುಷ್ಟಿವಂತರಾಗುವರು ಹೆಂಗಸರಿಗೂ ಮತ್ತು ಮಕ್ಕಳಿಗೂ ಈ ಔಷಧವು ಗುಣಕಾರಿ ಇದೆ ಮುಟ್ಟಾಗದಿದ್ದರೆ ಮತ್ತು ಉಷ್ಣ ಗರ್ಭ ಸಂಬಂಧವಾದ ರೋಗಗಳಿದ್ದರೂ ಅವೆಲ್ಲ ಗುಣವಾ… ಹೆಂಗಸರಿಗೆ ಸಂತತಿ ವೃದ್ಧಿಯಾಗುವದು ಈ ಔಷಧವ ಮೂರು ಬಾಟ್ಲಿಗಳ… ಸೇವನೆ ಮಾಡಿದರೆ ಪೂರ್ಣ ಗುಣಬರುತ್ತದೆ ಇದರ ಅನುಭವ 1 ಬಾಟ್ಲಿ … ಮಾಡಿದ ಅನಂತರ ನಿಮಗೆ ತಿಳಿದೀತು.

1 ಬಾಟ್ಲಿ ಬೆಲೆ ರೂ ೧-೮-೦, 3 ಬಾಟ್ಲಿ ೩-೮-೦, 1 ಡಜ಼ನ ಬಾಟ್ಲಿ ಬೆಲೆ ೧…

ಮ್ಯಾನೇಜರ್—ದ್ರಾಕ್ಷಾಮೃತ ಡಿಪೋ. ಪೋಸ್ಟ್ ನಿಪ್ಪಾಣಿ, ಜಿಲ್ಲಾ ಬೆಳಗಾವಿ

ಮೈಸೂರು ಸ್ಟಾಕಿಸ್ಟ್ಸ —ಟಿ ಸಿ. ನಟರಾಜ್, ಬೊಂಬಾಯಿ ಆನಂದ ಭವನ ಮಾಡರ್ನ್ ಫಾರ್ಮಸಿ, ಸಯ್ಯಾಜಿರಾವ್ ರೋಡ್ ಬೆಂಗಳೂರು ಸಿಟಿ —ಸಿ… ಶಾಸ್ತ್ರಿ ಅಂಡ್ ಸನ್ಸ್, ಚಿಕ್ಕಪೇಟೆ. ತುಂಕೂರು—ಟಿ ಆರ್ ಗುರು ಬಸ್ವ… ಅಂಡ್ ಬ್ರದರ್ಸ್ ಚಿಕ್ಕಮಗಳೂರು—ಎಂ. ಎಲ್ ಮಂಜಯ್ಯಶೆಟ್ಟಿ ಶಿವಮೊಗ್ಗ—ಶ್ರೀಕೃಷ್ಣ ಟ್ರೇಡಿಂಗ್ ಏಜನ್ಸಿ ಮತ್ತು ಖಂಡೇರಾವ್ ಬ್ರದರ್ಸ್ ದಾವಣಗೆರೆ—ಮಲ್ಲೇಶಪ್ಪ ಮತ್ತು ಕೆ ಭೋಗಯ್ಯಶೆಟ್ಟಿ ಅಂಡ್ ಬ್ರದರ್ಸ್

"ಬ್ರೇಕ್ ಪಿಲ್ಸ್"

INVENTED BY A HIMALAYAN SAGE.

● ಸ್ತ್ರೀಪುರುಷರಿಗೆ ಆನಂದವನ್ನುಂಟುಮಾಡುವುದು ಈ ಮಾತ್ರೆಗಳೇ. ಮದಿಸಿದ ಸ್ತ್ರೀಯರ ಗರ್ವಭಂಗಮಾಡಲು ಕಂಡುಹಿಡಿದಿರುವ ಮಾತ್ರೆಗಳಿವು ಇದರಲ್ಲಿ ರಸ ಸಿಂಧೂರಾದಿಗಳು ಸೇರಿಲ್ಲ ಕಸ್ತೂರಿ, ಚಿನ್ನ, ಹಿಮಾಲಯ ಪರ್ವತದ ವನಮೂಲಿಕೆಗಳು ಮುಂತಾದುವುಗಳಿಂದ ಯೋಗೀಶ್ವರರ ಹತ್ತಿರ ಸಂಗ್ರಹಿಸಿ ಮುದುಕತನವನ್ನು ಲೋಕದಲ್ಲಿ ಇಲ್ಲದಂತೆ ಮಾಡುವುದು. ಅರ್ಧ ಘಂಟೆಯೊಳಗಾಗಿ ವೀರ್ಯಸ್ತಂಭನ ಮಾಡಿ ರಮಿಸಲು ಉಲ್ಲಾಸವನ್ನು ಮಾಡುವುದು ಗುಣವಿಲ್ಲದಿದ್ದಲ್ಲಿ ಹಣ ವಾಪಸು

೬೦ ಮಾತ್ರೆಗಳು ರೂ ೨—೦—೦ ೩೦ ಮಾತ್ರೆಗಳು ರೂ. ೩—೦—೦

(ಕಾಗದ ಪತ್ರಗಳು ಇಂಗ್ಲೀಷಿನಲ್ಲಿಯೇ)

ಡಾ|| ಎ ಎಸ್. ಮೂರ್ತಿ, ಎಂ.ಕೆ.ಲೇನ್, ಗಂಜಾಮ್ ಡಿಸ್ಟ್ರಿಕ್ಟ್.

ಶ್ರೀ ರಂಗನಾಥ ಟೈಪ್ ಫೌಂಡ್ರಿ

ಚಿಕ್ಕಪೇಟೆ ಬೆಂಗಳೂರು ಸಿಟಿ

ಸುಂದರವಾದ ಅಕ್ಷರಗಳು, ಮುದ್ದುಮುದ್ದಾದ ಬಾರ್ಡರ ಗಳು ಬಗೆಬಗೆಯ ಆಕಾರ

ನಮಗೆ ೫ ವರ್ಷದಲ್ಲಿ ೩೦ ವರ್ಷಗಳ ಕಾಲದ ಅನುಭವವಿದೆ ಆಧುನಿಕ ಕಾಲಕ್ಕೆ ತಕ್ಕಂತೆ ಅಕ್ಷರದ ಆಕಾರವನ್ನು ಬಹು ಸುಂದರವಾಗಿ ಸುಧಾರಿಸಿದ್ದೇವೆ

ನಮ್ಮಲ್ಲಿನ "**ಕನ್ನಡ, ಇಂಗ್ಲೀಷ್**" ಅಕ್ಷರಗಳಂತಹ ಸುಂದರವಾದ ಅಕ್ಷರಗಳನ್ನು ಮತ್ತೆಲ್ಲಿಯೂ ನೋಡಲಾರಿರಿ ಸತ್ಯ

ನೂರಾರು ಬಗೆಯ ಸುಂದರವಾದ ಬಾರ್ಡರುಗಳು, ನಯನಮನೋಹರವಾಗಿವೆ

೬ ಪಾಯಿಂಟಿನಿಂದ ೭೨ ಪಾಯಿಂಟಿನವರೆಗೆ ವಿಧವಿಧವಾದ ಸುಂದರಾಕ್ಷರಗಳಿವೆ

ನಮ್ಮ 'ರಂಗನಾಥ ಕನ್ನಡ ಡಾಮಿನಿಸ' ಅಕ್ಷರಗಳನ್ನು ನೋಡಲು ಮರೆಯಬೇಡಿ

ನಾವು ಕಾಪರ್ ಟೈಪ್ (ತಾಮ್ರಮಿಶ್ರಿತ) ಲೋಹದಿಂದ ಅಕ್ಷರಗಳನ್ನು ತಯಾರಿಸುತ್ತೇವೆ. ಸುಲಭ ಬೆಲೆ. ಗ್ಯಾರಂಟಿಯಾದ ಬಾಳಿಕೆ

House to let.

A big and well-ventilated house with fourteen d… rooms and spacious Hall and with up-stairs, fit … Hostels or Hotels, near College, University, Pu… Offices etc.

Apply for details to —

X

C/o Sadhvi Office, Mysore

॥ ಸತ್ಯಮೇವೋದ್ಧರಾಮ್ಯಹಮ್ ॥

ರಾಜಧಾನಿಯ ರಾಷ್ಟ್ರೀಯ ವಾರಪತ್ರಿಕೆ.

ವೃದ್ಧಪಿತಾಮಹ ಎಂ. ವೆಂಕಟಕೃಷ್ಣಯ್ಯನವರ ಜ್ಞಾಪಕಾರ್ಥವಾಗಿ ಪ್ರಕಟಿಸಲ್ಪಡುವುದು

ಸಂಪಾದಕರು. ಅಗರಂ ರಂಗಯ್ಯ, ಬಿ ಎ

ಸಂಪುಟ ೧ | MYSORE : MONDAY 23—11—36 ಮೈಸೂರು : ಸೋಮವಾರ ೨೩—೧೧—೩೬ [ಸಂಚಿಕೆ ೪೯

…ವ್ ಸಾಹೇಬರಿಗೆ ಹೊಸ ಬಿರುದು

…ಮುಟ್ಠಾಳ ಶತ್ರು" ಎಂಬ ನಾಮಕರಣ

…ಬೊಂಬಾಯಿ ನ್ಯಾಯ ವಿಧಾಯಕ ಸಭೆ…ಲ್ಲಿ ರಾವ್ ಸಾಹೇಬ್ ಪಿ ಡಿ ಕುಲ…ರ್ಣಿಯವರು ಮಿ॥ ಜೆ ಡಿ ಜೆಂಕಿನ್ಸ್…ಬ ಐರೋಪ್ಯರ ವಿಷಯವಾಗಿ ಕೆಲವು …ಶ್ನೆಗಳನ್ನು ಕೇಳಿದರು

…ದನಂತರ ಕೆಲವು ದಿನಗಳಲ್ಲಿಯೇ …ಗೆ ಆ ಐರೋಪ್ಯರಿಂದ ಕಾಗದ ಒಂ…ಬಂದಿತು ಅದರ ಒಕ್ಕಣೆ ಇದು

'ನಾನು ಮೊದಲೇ ಹೇಳಿರುವಂ…ನೊಬ್ಬ ಮುಟ್ಠಾಳ ಶತ್ರು ಎಂಬು…ದು ಖಂಡಿತ ಅದರ ಜತೆಗೆ ಎಂ…ಎಲ್ ಸಿಯೂ, ಸಮಾಜ ಸೇವಕ…ನೂ ಆಗಿದ್ದೀಯೆ"

ಎಲ್ ಸಿ ಗಳೇ, ಹುಷಾರ್

* * *

…ಬ್ಬ ಮಹಾರಾಜರು!

ಸೂರತ್ತಿನ ಹತ್ತಿರದಲ್ಲಿ ಒಂದು ದೇಶೀ ಸಂಸ್ಥಾನವಿದೆ. ಅದರ ವಿವರ…ವು —

…ರದ ಉಳತೆ ಒಂದೇ ಒಂದು ಚದರ…ಲಿ

…ನ ಸಂಖ್ಯೆ ಕೇವಲ ಮೂವತ್ತೆರಡು…ದಿ

…ರ್ಷದ ಉತ್ಪತ್ತಿ ಅರವತ್ತು ರೂ…

…ದರಲ್ಲಿ ಇರುವ ಕೋವುಗಳು 13…ಗು

…ನ ರಾಜರ ಬಿರುದು "ಅವತಾರ್…ನ ಮಹಾರಾಜ' ಎಂದು

* * *

…ಸೆ ಒಳ್ಳೆಯದಕ್ಕೋ?

…ಸ್ವಾತಂತ್ರ್ಯದ ಮಸೋದಾ ಸಂಸ್ಥಾ…ಯುವರಾಜರು ಮುಸಲ್ಮಾನ ಮತವ…ನ್ನು ದೆಹಲಿಯ ಆರ್ಯಸಮಾಜ…ದ್ದಿ ಹೊಂದಿ ಹಿಂದೂ ಮತವನ್ನು…ಸಿದರಂತೆ ತಮ್ಮ ಅಂತಃಕರಣ…ಕ್ಕಾಗಿ ವೈದಿಕ ಧರ್ಮವನ್ನು ಅ…ಸಿರುವವಾಗಿ ಅವರು ತಿಳಿಸಿರುವರು …ನೆಯೇ ಇರಬಹುದೆಂದು ಆಶಿ…ಇನ್ನಾವ ಆಶೋತ್ತರಗಳೂ ಇ…ರಬಾರದೇನು!

ಹೃದ್ರೋಗಕ್ಕೂ ಶಸ್ತ್ರ ಚಿಕಿತ್ಸೆ!

ಲಂಡನ್ನಿನ ರಾಯಲ್ ಚೆಸ್ಟ್ ಆಸ್ಪತ್ರೆಯಲ್ಲಿ ಮಿ॥ ಹಾರ್ಲೆ ಎಂಬುವರ ಮೇಲೆ ಒಂದು ಅದ್ಭುತ ಶಸ್ತ್ರ ಚಿಕಿತ್ಸೆಯನ್ನು ನಡೆಸಿದ್ದಾರೆ ಅವರ ಹೃದಯದ ಮೇಲೆ ಆವರಿಸಿದ್ದ ಒಂದು ತರಹೆಯ ಸುಣ್ಣದ ಪೊಟ್ಟನ್ನು ಹೃದಯ ಚಲನೆಯಾಗುತ್ತಿರುವಾಗಲೇ ಕೆರದು ಹಾಕಿದ್ದಾರೆ

ಶಸ್ತ್ರ ಚಿಕಿತ್ಸೆಯಾದ ವೇಳೆ ಹಾರ್ಲೆಯವರನ್ನು ಆಮ್ಲಜನಕದಿಂದ ತುಂಬಿರುವ ಒಂದು ಪೆಟ್ಟಿಗೆಯಲ್ಲಿ ಮಲಗಿಸಿ ಆರೈಕೆ ಮಾಡುತ್ತಿದ್ದಾರೆ ಆ ಪೆಟ್ಟಿಗೆಯಲ್ಲಿಯೇ ಅಂದಿನಿಂದಲೂ ರೋಗಿಯು ಗುಣಹೊಂದುತ್ತಿರುವನು

ಈ ಶಸ್ತ್ರ ಚಿಕಿತ್ಸೆಯು ಮೋಟಾರು ಎಂಜಿನ್ನಿನ ಮೇಲೆ ಆವರಿಸಿದ ಕಪ್ಪನ್ನು ತಿಕ್ಕಿ ತೆಗೆಯುವುದಕ್ಕೆ ಹೋಲಿಸಬಹುದು, ಎಂದು ಒಬ್ಬ ವೈದ್ಯರು ಅಭಿಪ್ರಾಯಪಟ್ಟಿರುವರು

* * *

ಸಿಂಹವು ಹುಲಿಯನ್ನು ಕೊಂದಿತು

ಬಂಗಾಳದಲ್ಲಿರುವ ಅಗರ್ತಲಾ ಎಂಬೂರಿನ ಪ್ರಾಣಿಸಂಗ್ರಹಾಲಯದಲ್ಲಿ ಕಳೆದ ತಿಂಗಳು ಒಂದು ಪ್ರಾಣಿ ಯುದ್ಧವಾಗಿ, ಹುಲಿಯೊಂದು ಪ್ರಾಣಬಿಟ್ಟಿತು.

ಒಂದೇ ಬೋನಿನಲ್ಲಿದ್ದ ಒಂದು ಹೆಣ್ಣು ಹುಲಿಗೂ, ಒಂದು ಸಿಂಹಕ್ಕೂ ಏನೋ ವೈಷಮ್ಯಹುಟ್ಟಿ, ಕಚ್ಚಾಟವು ಆರಂಭವಾಗಿ, ಹುಲಿಯು ಸಾಯುವವರೆಗೂ ಕಾದಾಟವು ಕೊನೆಗಾಣಲೇ ಇಲ್ಲ

ಸಂಗ್ರಹಾಲಯದ ನಿರ್ವಾಹಕರ ರಾಜೀ ಪ್ರಯತ್ನಗಳೆಲ್ಲವೂ ವಿಫಲವಾದುವು

* * *

ಜರ್ಮನಿಯಲ್ಲಿ ಪುಸ್ತಕಕ್ಕೆ ಬಹಿಷ್ಕಾರ

ಸುಪ್ರಸಿದ್ಧ ಇಂಗ್ಲಿಷ್ ಕಾದಂಬರಿಕಾರನಾದ ಎಡ್ಗಾರ್ ವಾಲೇಸಿನ ಪುಸ್ತಕಗಳು ಜರ್ಮನಿಗೆ ಬರಕೂಡದೆಂದು ನಾಜೀ ಸರ್ಕಾರವು ಅಜ್ಞೆ ಮಾಡಿದೆ.

ಎಡ್ಗಾರ್ ವಾಲೇಸರು ಯಹೂದ್ಯ ಪಂಗಡಕ್ಕೆ ಸೇರಿದವರ ರಕ್ತ ಸಂಬಂಧಿಗಳಾದುದರಿಂದ ಈರೀತಿ ಮಾಡಿರುವರಂತೆ

ಶಿಶುವು ಶಿಲೆಯಾಗುತ್ತಿದೆ

ಅಮೆರಿಕಾದಲ್ಲಿ ಆರ್ಕೇಡಿಯಾ ಎಂಬ ಹಳ್ಳಿಯಿಂದ ಬಂದಿರುವ ಸುದ್ದಿ ಇದು

ಡೊಲೋರೆಸ್ ಪ್ರೈಸ್ ಎಂಬ ಎರಡು ವರ್ಷದ ಮುದ್ದುಮಗುವಿಗೆ ಒಂದು ವಿಚಿತ್ರ ಖಾಯಿಲೆಯು ಅಂಟಿದೆ

ಅವಳ ಬಲಗೈಯಿಡೀ ಕ್ರಮೇಣ ಕಲ್ಲಿನಂತಾಗಿಬಿಟ್ಟಿದೆ ಇತರ ಭಾಗಗಳಿಗೂ ಈ ವಿಚಿತ್ರ ಜಾಡ್ಯವು ಹರಡಿದೆ

ಆ ಭಾಗಗಳಲ್ಲಿ ನೋವು ಸ್ವಲ್ಪವೂ ಇಲ್ಲ ಆದರೆ ಆ ಭಾಗವನ್ನು ಉಪಯೋಗಿಸಲೂ ಆಗುವುದಿಲ್ಲ.

ಈ ಜಾಡ್ಯದ ಅರಿವೆಯೇ ಇಲ್ಲದೆ ಮಗುವು ಆಡುತ್ತಲಿದೆ

* * *

ಪತ್ನಿ ಬಂದಳೆಂದು ಸ್ಟಾಂಪಿಟ್ಟ ರಶೀತಿ!

ಲಂಡನ್ನಿನ ಟಾಟೆನ್ಹ್ಯಾಮ್ ಕೋರ್ಟಿನಲ್ಲಿ ಕಳೆದವಾರ ವಿಚಾರಣೆಯಾದ ಒಂದು ಕೇಸಿನಲ್ಲಿ ನಡೆದ ಸಂಭಾಷಣೆ ಇದು —

ಸತಿ ಮಾರನೆಯ ದಿನ ನನ್ನ ಅತ್ತೆಯು ನನ್ನ ಹೆಂಡತಿಯನ್ನು ವಾಪ್ಸು ಕಳುಹಿಸಿದಳು ಅದಕ್ಕೆ ನಾನು ಸ್ಟಾಂಪಿನೊಡನೆ ಒಂದು ರಶೀತಿಯನ್ನು ಕೊಟ್ಟು ಕಳುಹಿಸಿದೆ

ಪತ್ನಿ "ಆ ರಶೀತಿಯಲ್ಲಿ "ಸಾಮಾನು ತಲ್ಪಿದೆ" ಎಂದು ಬರೆದಿತ್ತು"

* * *

ಬಿರುದೇನೋ ದೊಡ್ಡದು, ಕೆಲಸ

ಬೀದಿ ಗುಡಿಸುವದು

ಇಂಗ್ಲೆಂಡಿನ ಫೋರ್ಡಿಲೆ ಎಂಬಲ್ಲಿ ಕಾರ್ಪೊರಲ್ ವಿಲಿಯಂ ಬೀಸ್ ಎಂಬೊಬ್ಬ ಕಸಗುಡಿಸುವವನಿದ್ದಾನೆ ಇವನಿಗೆ ಇಂಗ್ಲೆಂಡಿನಲ್ಲಿ ಅಗ್ರಸ್ಥಾನವು ಒಮ್ಮೆ ದೊರತು, ವಿಕ್ಟೋರಿಯಾ ಕ್ರಾಸ್ ಎಂಬ ಪದಕವು ದೊರೆತಿದೆ

ಬೋಅರ್ ಯುದ್ಧದಲ್ಲಿ ಇವನ ಸಾಹಸಕ್ಕೆ ಮೆಚ್ಚಿ ಆ ಪದಕವು ಇವನಿಗೆ ಚಕ್ರವರ್ತಿಗಳಿಂದ ಕೊಡಲ್ಪಟ್ಟಿತು!

ಆದರೆ ಬಿರುದಿಗೂ ಕೆಲಸಕ್ಕೂ ಸಂಬಂಧ ಉಂಟೆ? ಅದೂ ಇಂಗ್ಲೆಂಡಿನಲ್ಲಿ?

ದೊರೆಗಳಿಗೂ ಬಿರುದಿನ ಹುಚ್ಚು

ಎರಡು ಶಬ್ದಕ್ಕಾಗಿ

46, 800,000 ಪೌಂಡುಗಳು

ಪೋರ್ಚುಗಲ್ಲಿಗೆ 1620 ರಿಂದ 1750 ರವರೆಗ ರಾಜನಾಗಿದ್ದ ಐದನೆಯ ಜಾರ್ಜ ದೊರೆಯು ಒಂದು ಬಿರುದಿಗಾಗಿ ಆಗಿನ ಪೋಪ್‌ರವರಿಗೆ 16,600,000 ಪೌಂಡು ಹಣವನ್ನು ಕೊಟ್ಟನಂತೆ

"ಧರ್ಮ ಪ್ರವರ್ತಕಾಗ್ರೇಸರ" ಎಂದಾಗುತ್ತದೆ ಅದರ ಅರ್ಥ

ಈ ಬಿರುದಿಗಾಗಿ ಖಜಾನೆಯ ಹಣವೆಲ್ಲವೂ ಖಾಲಿಯಾದುದರಿಂದ, ದೊರೆಯು ಸತ್ತಾಗ ಜನರೆಲ್ಲರೂ ಚಂದಾ ಕೂಡಿಸಿ ರಾಜನನ್ನು ಹೂಳಬೇಕಾಯಿತಂತೆ!

ರಾಗಿತ್ತು ಅವನ ಬಿರುದಿನ ಹುಚ್ಚು!

* * *

ಒಂದು ಪೆನ್ನಿ ಸ್ಟಾಂಪಿಗೆ 100 ಪೌಂಡು

1693 ರಲ್ಲಿ ಉಪಯೋಗಿಸಲ್ಪಟ್ಟ ಒಂದು ಪೆನ್ನಿ ಸ್ಟಾಂಪಿಗೆ ಕಳೆದ ತಿಂಗಳು 100 ಪೌಂಡು ಬೆಲೆಯು ದೊರೆಯಿತು ಅದರಲ್ಲಿ ಯಾವುದೋ ತಪ್ಪು ಇರುವುದರಿಂದ ಅದು ಅಮೂಲ್ಯವಾಗಿದೆಯಂತೆ!

* * *

ಸೊಳ್ಳೆ ಕಚ್ಚಿತು ಪ್ರಾಣವೇ ಹೋಯಿತು

ಒಂದು ಬೆರಳಿನ ಮೇಲೆ ಸೊಳ್ಳೆಯು ಕಚ್ಚಿದುದರ ಫಲಿತಾಂಶವಾಗಿ ಮಿ॥ ಹಾರ್ಲೆಕ್ ಎಂಬೊಬ್ಬ ಲಕ್ಷಾಧೀಶನು ಗತಿಸಿಹೋದನು

ಸೊಳ್ಳೆಯು ಕಡಿತದಿಂದ ಬೆರಳು ಊದಿಕೊಂಡು ಬಹಳ ವಿಪರೀತವಾಗಿ ಮರಣವು ಸಂಭವಿಸಿತಂತೆ

ಮಿ॥ ಹಾರ್ಲೆಕ್‌ರವರು ಅನೇಕ ಜಹಜುಗಳ ಮಾಲೀಕರಾಗಿ ಲಂಡನ್ನಿನಲ್ಲಿ ಗಣ್ಯಸ್ಥಾನವನ್ನು ಪಡೆದಿದ್ದರು.

* * *

ಮೊಲವಾದರೂ ಹೆಂಡದ ರುಚಿಗೊತ್ತು

ರಾಥಮ್ ಎಂಬಲ್ಲಿ ಮಿ॥ ಜೋನ್ಸ್ ಎಂಬುವರ ಬಳಿ ಒಂದು ಮೊಲವಿದೆ ಇದಕ್ಕೆ ಪ್ರತಿ ದಿನವೂ ಹೆಂಡ ಕುಡಿಯದಿದ್ದರೆ ಆಗುವುದಿಲ್ಲ

ಅದರಲ್ಲಿ ಯಾವುದೋ ಒಂದು ಕಂಪೆನಿಯ ಒಂದು 'ಬ್ರಾಂಡಿ" ನವೇ ಅದಕ್ಕೆ ಬೇಕಂತೆ ಇಷ್ಟಾಗಿ

ಅದೃಷ್ಟ.

ಲೇಖಕರು:—ಶ್ರೀಮತಿ ನಾಗರತ್ನಂ, ಬಸರೂರ್.

ಅರವಿಂದನು ಬಹಳ ದರಿದ್ರನು. ಲೇಖನಿಯೇ ಇವನ ಸರ್ವಸ್ವ; ಅದರಿಂದ ದೊರೆತ ಅಲ್ಪ ಮುಷ್ಟಿಯಲ್ಲಿಯೇ ಜೀವನ ನೌಕೆಯನ್ನು ನಡೆಸುತ್ತಿದ್ದನು. ಬಹುಕಷ್ಟದಿಂದ ಸಂಸಾರವನ್ನು ಸಾಗಿಸುತಲಿದ್ದರೂ ಇವನ ಹೃದಯೇಶ್ವರಿ ಸುಶೀಲೆಯು ಇವನ ನೊಂದಮನಕ್ಕೆ ಶಾಂತಿಯನ್ನು ತರುತ್ತಿದ್ದಳು.

ಒಂದು ದಿನ ಸಂಜೆ. ಅಗಾಧ ಮಳೆ. ಜೊತೆಗೆ ಗಾಢಾಂಧಕಾರವು ವಿಶ್ವವನ್ನೆಲ್ಲಾ ಆವರಿಸುತ್ತಿದೆ. ಊರಿನ ಮೂಲೆಯ ಮನೆಯಲ್ಲಿ ಎರಡು ವ್ಯಕ್ತಿಗಳು ಅತಿ ಶೋಚನೀಯ ಪರಿಸ್ಥಿತಿಯಲ್ಲಿ ನರಳುತ್ತಲಿವೆ. ಸಣ್ಣ ದೀಪ ಒಂದು ಮಿಣ ಮಿಣನೆ ಉರಿಯುತ್ತಿದೆ. ಹೊರಗೆಲ್ಲ ನಿಶ್ಶಬ್ದ. ಒಂದು ಆರ್ತನಾದವು ಆ ನೀರವತೆಯನ್ನು ಭೇದಿಸತೊಡಗಿದೆ. ಸುಶೀಲೆಯು ಉಲ್ಬಣಿಸ್ಥದ ಸಂತಾಪದಿಂದ ಹಾಸಿಗೆಯ ಮೇಲೆ ನರಳುತ್ತ ಮಲಗಿದ್ದಾಳೆ. ಆವಳಿಗೆ ಜ್ವರದ ಸಂಕಟ ಬೇರೆ. ತನ್ನ ಪ್ರಿಯತಮನ ದೈನ್ಯಾವಸ್ಥೆ ಒಂದು ಕಡೆ ಎಲ್ಲವನ್ನೂ ಯೋಚಿಸಿ ನೋಡಿದಳು ಕಣ್ಣೀರು ಒಂದೇ ಸಮನಾಗಿ ಹರಿಯಲಾರಂಭಿಸಿತು.

ಅರವಿಂದನು ಸುಶೀಲೆಯನ್ನು ಉಪಚರಿಸುತ್ತ ಪಕ್ಕದಲ್ಲಿಯೇ ಕುಳಿತಿದ್ದನು. ತನ್ನ ಪ್ರೇಮಕುಸುಮವು ಬಾಡಿಹೋಗುತ್ತಿರುವುದನ್ನು ನೋಡಿದಂತೆಲ್ಲಾ ಹೃದಯವು ಛಿದ್ರ ಛಿದ್ರವಾಗಿ ಒಡೆದಂತೆ ಭಾಸವಾಗತೊಡಗಿತು. ನಯನಗಳಿಂದ ಕಂಬನಿಗಳು ಉದುರಲಾರಂಭಿಸಿದವು. ಮಾತನಾಡಲು ಶಕ್ತಿ ಸಾಲದು. ಬಾಯೇ ಬರದು.

ಅರವಿಂದನು ಅಗಾಧ ದುಃಖವನ್ನು ಬದಿಗೊತ್ತಿದನು. ಪ್ರಿಯತಮೆಯ ಕಂಬನಿಗಳನ್ನು ಒರಸುತ್ತ, ಅವಳ ಕೋಮಲ ಬಾಹುಗಳನ್ನು ತನ್ನ ಕೈಗಳಲ್ಲಿ ಹಿಡಿದು "ಸುಶೀಲೆ, ನೀನು ನನ್ನಂತಹ ಪಾಪಿಯನ್ನು ವರಿಸಬಾರದಾಗಿತ್ತು. ಕಡು ಬಡವನನ್ನು ಸೇರಿ ತಾರುಣ್ಯದಲ್ಲಿ ಈ ಸ್ಥಿತಿ ಬಂದಿತೆ! ಹಾಯ್ ಪರಮೇಶ್ವರಾ! ಹತಭಾಗ್ಯನಾದ ನನ್ನನ್ನು ನೀನೂ ಒಮ್ಮೆ ನೋಡಬಾರದೆಯಾ? ನನ್ನ ಜೀವಾಳದ ಸಂಪಾದನೆಯು ತೀರುತ್ತಿರುವುದನ್ನು ಕಣ್ತೆರೆದು ಬೇಗ ನೋಡಲ' ಎಂದು ನೊಂದು ನಂತೆ ಅತ್ತನು.

ಮೃತ್ಯುವೆಂಬ ಉಜ್ವಲಾಗ್ನಿಗೆ ತನ್ನ ಪ್ರಿಯತಮೆಯ ಪ್ರಾಣಪಕ್ಷಿಯು ತುತ್ತಾಗುತ್ತಿರುವುದನ್ನು ನೋಡುತ್ತ ನೋಡುತ್ತ ಅರವಿಂದನ ಶರೀರವಾದ್ಯಂತವೂ ಕಂಪಿಸತೊಡಗಿತು. ಕಂಬನಿ ತುಂಬಿ ಕಣ್ಣು ಕಾಣದಂತಾಯಿತು; ಗಂಟಲು ಬಿಗಿದು ಬಂದಿತು. ದಿಕ್ಕೇ ತೋಚದಂತಾಗಿ ದೌರ್ಭಾಗ್ಯದ ಕಾರ್ಮುಗಿಲೊಂದು ತನ್ನನ್ನು ಆವರಿಸುತ್ತಿರುವುದನ್ನು ನೋಡಿ ಮತ್ತಷ್ಟು ಹೆದರಿ ಚೀರಿದನು!

ನರಳುತ್ತಿದ್ದ ಸುಶೀಲೆಯು ಅರವಿಂದನ ಪರಿಸ್ಥಿತಿಯನ್ನು ನೋಡಿದಳು. ತನ್ನ ಜೀವೇಶ್ವರನ ದುಸ್ಥಿತಿಯನ್ನು ನೋಡಿ ಹೃದಯಕ್ಕೆ ಶೂಲವಿರಿದಂತಾಯಿತು. ಸುಶೀಲೆಯು ಅತಿಪ್ರಯತ್ನದಿಂದ ಎದ್ದು ಕುಳಿತಳು. ಮೂರ್ಛಿತನಾದ ಪತಿದೇವನನ್ನು ಸಾವರಿಸಿ ತನ್ನ ತೊಡೆಯಮೇಲಿರಿಸಿ, ಗದ್ಗದಸ್ವರದಿಂದ "ನಾಥಾ! ನನಗಾಗಿ ಇಷ್ಟು ವ್ಯಸನಪಡಬೇಡಿ. ನಾನು ತಮ್ಮ ಮನೆಯ ಹೊಸಿಲನ್ನು ಪ್ರವೇಶಿಸಿದಂದಿನಿಂದ ನಿಮಗೆ ಭಾಗ್ಯವು ಕುಂದುತ್ತ ಬಂದಿತು ನಿಮ್ಮ ಈ ದುಸ್ಥಿತಿಗೆಲ್ಲ ಪಾಪಿಯಾದ ನಾನೇ ಕಾರಣಳು. ಇದು ನನ್ನ ಹಣೆಯ ಬರಹ. ಇನ್ನು ಮೇಲೆ ನೀವಾದರೂ ಸುಖವಾಗಿ ಬಾಳಬೇಕೆಂಬುದೇ ನನ್ನ ಜೀವನದ ಮಹತ್ವಾಕಾಂಕ್ಷೆ. ನನ್ನ ಒಂದು ಆಸೆಯನ್ನು ನೆರವೇರಿಸುತ್ತೇನೆಂದು ವಾಗ್ದಾನಮಾಡಿದರೆ, ನಿಶ್ಚಿಂತಳಾಗಿ ಪ್ರಾಣಬಿಡುವೆನು' ಎಂದಳು.

ಅರವಿಂದನಿಗೆ ಏನು ಮಾಡಬೇಕೆಂದು ತೋಚಲಿಲ್ಲ. ಕಂಪಿತ ಧ್ವನಿಯಿಂದ 'ಸುಶೀಲಾ! ಹೇಳು, ಬೇಗ ಹೇಳು ನಿನ್ನ ಮನದಿಷ್ಟವನ್ನು ಖಂಡಿತವಾಗಿಯೂ ನಡೆಸಿಕೊಡುವೆನು" ಎಂದನು.

"ಸ್ವಾಮಿಾ! ನನ್ನ ಮಹದಾಕಾಂಕ್ಷೆ ಇಷ್ಟೆ. ತಾವು ಮತ್ತೊಬ್ಬ ತರುಣಿಯನ್ನು ವಿವಾಹಮಾಡಿಕೊಂಡು ಸಂತೋಷದಿಂದ ಸುಖವಾಗಿ ಸಂಸಾರ ಮಾಡಬೇಕೆಂಬುದೇ ನನ್ನ ಹೃದಯದ ಅಂತರಾಳದ ಆಕಾಂಕ್ಷೆ. ಖಂಡಿತವಾಗಿಯೂ ಇದನ್ನು ಫಲಕಾರಿಯನ್ನಾಗಿ ಮಾಡಲು ನಿಮ್ಮನ್ನು ದೈನ್ಯದಿಂದ ಬೇಡುತ್ತೇನೆ" ಎಂದಳು.

ಅರವಿಂದನಿಗೆ ಆಕಾಶವೇ ಕಳಚಿ ತಲೆಯ ಮೇಲೆ ಬಿದ್ದಂತಾಯಿತು. ಒಂದು ಕಡೆ ಸುಶೀಲೆಯ ಅಸಾಧಾರಣವಾದ ಸದ್ಗುಣಗಳು; ಮತ್ತೊಂದು ಕಡೆ ಅವಳ ಜೀವನಯಾತ್ರೆಯ ಭೀಕರದೃಶ್ಯ. ಮೃತ್ಯುಶಯ್ಯೆಯಲ್ಲಿ ಮಲಗಿರುವಳನ್ನು ನೋಡುತ್ತ ಕಣ್ಣುಗಳನ್ನು ಕೈಗಳಿಂದ ಮುಚ್ಚಿಕೊಂಡನು. ಆ ಘೋರದುಃಖವನ್ನು ತಡೆಯಲಾರದೆ ಮೂರ್ಛಿತನು.

ಬೆಳಗಾಯಿತು. ಭಯಂಕರ ಸ್ವಪ್ನವನ್ನು ರಾತ್ರಿ ಕಂಡಂತೆ ಭಾಸವಾಯಿತು. ತಿರುಗಿ ಪಕ್ಕದಲ್ಲಿ ನೋಡುತ್ತಾನೆ ಅದೇ ಘೋರ ದೃಶ್ಯ! ಮಾನವರ ಗತಿ ಪರಿಸ್ಥಿತಿ. ಸುಶೀಲೆಯು ಕಂಗೆಟ್ಟು ಹೃದಯವಿದ್ರಾವಕ ಸ್ಥಿತಿಯಲ್ಲಿ ನರಳುತ್ತ ಮಲಗಿರುವುದನ್ನು ನೋಡಿದನು. ವಿಪರೀತವಾಗಿ ಶೋಕಿಸಲಾರಂಭಿಸಿದನು.

ಕೆಲಹೊತ್ತು ಹಾಗೆಯೇ ಯೋಚನೆ ಮಾಡಿದನು. "ಅಯ್ಯೋ! ಹೀಗೆ ಅಳುತ್ತ ಕುಳಿತರೆ ಕೈಯಾರ ಕೊಂದಂತಾಗುವುದಲ್ಲಾ! ವೈದ್ಯರಿಂದ ಔಷಧಿಯನ್ನಾದರೂ ತಂದುಕೊಟ್ಟರೆ ಕೊಂಚ ಗುಣವಾದೀತು" ಎಂದು ಎದ್ದು ತನ್ನ ಅಂಗಿ ಜೇಬುಗಳೆಲ್ಲವನ್ನೂ ಹುಡುಕುತ್ತಾನೆ. ಅವನ ದುರದೃಷ್ಟಕ್ಕೆ ಮೂರು ಕಾಸಿನ ಒಂದು ಬಿಲ್ಲೆಯೂ ಇರಲಿಲ್ಲ. ಇದ್ದ ಪೆಟ್ಟಿಗೆಗಳನ್ನೆಲ್ಲಾ ತಡಕಿದನು. ಏನೂ ದೊರೆಯಲಿಲ್ಲ. ತಲೆಯ ಮೇಲೆ ಕೈಹೊತ್ತು ನಿಂತನು.

ಥಟ್ಟನೆ ಯೋಚನೆಯೊಂದು ಹೊಳೆಯಿತು. ತಾನು ಪತ್ರಿಕೆಯ ಸಂಪಾದಕರೊಬ್ಬರಿಗೆ ಕೆಲವು ಲೇಖನಗಳನ್ನು ಕೊಟ್ಟಿದ್ದುದು ಜ್ಞಾಪಕಕ್ಕೆ ಬಂದಿತು. ತಕ್ಷಣವೆ ಅಂಗಿ, ಟೋಪಿಯನ್ನು ತಗುಲಿಹಾಕಿಕೊಂಡು ಸಂಪಾದಕರ ಕಛೇರಿಗೆ ಬಂದನು. "ರಾಯರೆ! ನಿಮ್ಮ ಲೇಖನಗಳನ್ನು ಮುಂದಲ ತಿಂಗಳು ಮುದ್ರಿಸುತ್ತೇವೆ. ಕಾರಣಾಂತರದಿಂದ ಈಗ ಬೇರೆ ಕೆಲವು ಲೇಖನಗಳನ್ನು ಮುದ್ರಿಸಬೇಕಾಗಿದೆ. ಬೇಕಾದರೆ ನಿಮ್ಮ ಲೇಖನಗಳನ್ನು ಅಗತ್ಯವಾಗಿ ತೆಗೆದುಕೊಂಡು ಹೋಗಬಹುದು" ಎಂದು ಅವರು ಹೇಳಿದರು.

ಅರವಿಂದನು ಆ ಸ್ಥಳವನ್ನು ಬಿಟ್ಟು ಎಲ್ಲಿಯೋ ತಿರುಗಾಡಲಾರಂಭಿಸಿದನು.

ಒಬ್ಬ ವ್ಯಕ್ತಿಯು ಜಟಕಾಗಾಡಿಯಲ್ಲಿ ಕುಳಿತು ಎದುರಾಗಿ ಬರುತ್ತಿದ್ದನು. ತನ್ನ ಪೂರ್ವದ ಸ್ನೇಹಿತನಾದ ರಘುವನ್ನು ಅರವಿಂದನು ಕೂಗಿದನು. ಅವನು ಕೇಳಿದರೂ ಕೇಳದವನಂತೆ ಕುಳಿತಿದ್ದನು. ಮತ್ತೊಮ್ಮೆ ಗಟ್ಟಿಯಾಗಿ ಕೂಗಿದನು. ಆದರೂ ತಿರುಗಿನೋಡದೆ ಹೊರಟೇ ಹೋದನು.

ಅರವಿಂದನು ಬ್ಯಾರಿಸ್ಟರ್ ರಾಮರಾಯರ ಮನೆ ಮುಂದೆ ಬಂದನು. ಇವರೂ ಇವನ ಜೀವದ ಗೆಳೆಯರು. ಅರವಿಂದನು ಪದವೀಧರನಾಗಿ ಇಲ್ಲಿಯೇ ಪತ್ರಿಕೋದ್ಯೋಗಿಯಾಗಿ ನಿಂತನು. ಆದರೆ ರಾಮರಾಯರು ಲಂಡನ್ನಿಗೆ ಹೋಗಿ ಬ್ಯಾರಿಸ್ಟರಾಗಿ ಬಂದರು. ಅರವಿಂದನು ತಾನು ಬಂದಿರುವುದಾಗಿ ಹೇಳಿ ಕಳುಹಿಸಲು ಪುರಸತ್ತಿಲ್ಲವೆಂಬ ಉತ್ತರ ದೊರೆಯಿತು.

ತನ್ನ ದುರ್ಭಾಗ್ಯದ ಕೊನೆಯ ಪರೀಕ್ಷೆಯೆಂದು ತಿಳಿದು ತನ್ನ ಮತ್ತೊಬ್ಬ ಮಿತ್ರರ ಮನೆಗೆ ಹೋದನು. ಅವರು ಭಾರೀ ವರ್ತಕರು. ಅವರನ್ನು ಕುರಿತು "ಕೃಷ್ಣಪ್ಪಶೆಟ್ಟರೇ! ಬಹಳ ಸಮಯವಾಗಿದೆ. ೫ ರೂ. ಸಾಲ ಕೊಡಿ. ನೀವು ಹೇಳಿದಷ್ಟು ಬಡ್ಡಿ ಕೊಟ್ಟು ಮುಂದಲ ವಾರ ನಿಮ್ಮ ಸಾಲವನ್ನು ಖಂಡಿತವಾಗಿ ತೀರಿಸುತ್ತೇನೆ" ಎಂದು ನಮ್ರತೆಯಿಂದ ಬೇಡಿದನು. ಆ ಶೆಟ್ಟಿಯು "ಇವತ್ತೇನೂ ಪ್ರಯೋಜನವಿಲ್ಲ ನಾಳೆ ಬನ್ನಿ; ಏನಾದರೂ ನೋಡೋಣ" ಎಂದು ಘೋರಣೆಯಿಂದ ನುಡಿದನು.

ಸ್ನೇಹಿತರ ಕಟುಕವರ್ತನೆಯ ಕೋಪವೂ, ಪ್ರಾಣೇಶ್ವರಿಯ ಅಗಾಧ ಸಂಕಟವೂ ಇವನ ಇಡೀ ದೇಹವನ್ನೇ ದಹಿಸಿದವು. ಒಂದು ಅವನಿಗೆ ಮನ ಶೂನ್ಯವಾಯಿತು. ಮನೆಯೂ ಶೂನ್ಯವಾದಂತೆ ತೋಚಿತು. ಇಷ್ಟೇಕೆ? ಇಡೀ ಪ್ರಪಂಚವೇ ಶೂನ್ಯವಾಗಿ ಕಂಡಿತು.

ಹೇಗೋ ಮನೆಯನ್ನು ತಲುಪಿದನು ಪ್ರಿಯತಮೆ ಸುಶೀಲೆಯು ಅರವಿಂದನನ್ನು ಸಮೀಪಕ್ಕೆ ಕರೆದಳು. ಮಹ್ಹದಿಂದ ಇವನು ಹೋದನು. ಅವಳು ಆಯಾಸ ಪಟ್ಟು ಎದ್ದು ಇವನ ಪಾದಗಳನ್ನು ಮುಟ್ಟಿ ಕಣ್ಣಿಗೊತ್ತಿಕೊಂಡಳು. ಅಷ್ಟರಲ್ಲಿ ಅಂಚೆ ಜವಾನನ ಕೂಗು ಕೇಳಿತು ಎದ್ದು ನೋಡುವಲ್ಲಿ ಜವಾನನು ಕಲ್ಕತ್ತೆಯಿಂದ ಬಂದ 450 ರೂ ತಂದಿದ್ದನು. ಅರವಿಂದನಿಗೆ ದುಃಖವೂ ಆನಂದವೂ ಏಕಕಾಲದಲ್ಲಿ ಉಕ್ಕಿ ಬರುತ್ತಿದ್ದವು. ಹಣವನ್ನು ತೆಗೆದುಕೊಂಡನು. ಒಬ್ಬ ವೃದ್ಧಸ್ತ್ರೀಯು ಒಂದು ಸುಶೀಲೆಗೆ ಒಂದು ಔಷಧವನ್ನು ಕೊಟ್ಟಳು. ಒಡನೆ ಸುಶೀಲೆಯು ಚೇತರಿಸಿಕೊಂಡು ಗುಣಮುಖಳಾದಳು. ಕಾಲಕ್ರಮದಲ್ಲಿ ಸಂಪೂರ್ಣ ಆರೋಗ್ಯವನ್ನು ಹೊಂದಿದಳು. ಕಲ್ಕತ್ತೆಯ ಕಂಪನಿಯಲ್ಲಿ ಅರವಿಂದನಿಗೆ ಭಾರಿ ಉದ್ಯೋಗವು ದೊರೆಯಿತು. ಅರವಿಂದ ಸುಶೀಲೆಯರು ಉಳಿದ ಜೀವಮಾನವನ್ನು ಸಂತೋಷದಿಂದ ಕಳೆದರು.

ವಿದ್ಯಾಭ್ಯಾಸಕ್ಕೆ ಪಂಚಾಯಿತಿ ಹಣವಿಲ್ಲ.

ಗ್ರಾಮ ಪಂಚಾಯಿತಿಗಳ ಕಾರ್ಯಕ್ರಮಗಳಲ್ಲಿ ವಿದ್ಯಾಭ್ಯಾಸವು ಅಷ್ಟೇನೂ ಪ್ರಾಮುಖ್ಯವಾದುದಲ್ಲವೆಂದೂ ಪಂಚಾಯಿತಿಗಳ ಹಣವನ್ನು ಸಾಮಾನ್ಯವಾಗಿ ಸ್ಕೂಲು ಕಟ್ಟಡಗಳಿಗೆ ಉಪಯೋಗಿಸಬಾರದೆಂದೂ ಸರಕಾರದವರು ಅಭಿಪ್ರಾಯ ಪಟ್ಟಿರುತ್ತಾರೆ. ಪಾಕೀಜ ಮುಂತಾದ ಮುಖ್ಯವಾದ ಬಾಬುಗಳ ವೆಚ್ಚಗಳಿಗೆ ಖರ್ಚುಮಾಡಿದ ನಂತರ ಹಣವು ಉಳಿದರೆ ಸರಕಾರದವರ ವಿಶೇಷ ಮಂಜೂರಾತಿಯನ್ನು ಪಡೆದು, ಸ್ಕೂಲು ಕಟ್ಟಡಕ್ಕೆ ಉಪಯೋಗಿಸಲು ಅವಕಾಶ ಹೊಂದಬಹುದು.

ಹಿಮಾಲಯವು ಕರಗುತ್ತಿದೆಯಂತೆ!

ಹಿಮಾಲಯ ಪರ್ವತವು ದಿನೇದಿನೇ ಕರಗುತ್ತಿರುವುದಾಗಿ ಸ್ವೀಡನ್ನಿನ ಪ್ರೊ॥ ಹೈಮ್ ಎಂಬುವರು ತಿಳಿಸುತ್ತಾರೆ. ಅವರು ಮೊನ್ನೆ ತಾನೆ ಅಲ್ಲಿಗೆ ಹೋಗಿ ಶೋಧನೆಗಳನ್ನು ನಡೆಸಿದರು. ಸಾವಿರಾರು ವರ್ಷಗಳಿಂದ ಕರಗುತ್ತಿದೆಯಂತೆ. ಈಗಾಗಲೇ ಇಪ್ಪತ್ತು ಮೈಲಿಗಳು ಕೆಳಗೆ ಇಳಿದಿದೆಯಂತೆ! ಅಲ್ಲಿ ಅವರು ಸಾವಿರಾರು ಫೋಟೋಗಳನ್ನು ತೆಗೆದುಕೊಂಡಿರುವರು.

ಭಕ್ತ ಸೂರ್‌ದಾಸನ ಅವತಾರ!

ಎರಡುವರ್ಷದ ಬಾಲಕನೊಬ್ಬನಿಗೆ ರಾಮಾಯಣ ಮಹಾಭಾರತಗಳು ಕಂಠಪಾಠವಾಗಿವೆ ಮಾತ್ರವಲ್ಲ, ಅವನು ಹುಟ್ಟು ಕುರುಡ ಇದೂ ಅಲ್ಲದೆ ಶ್ರೀ ಭಗವದ್ಗೀತೆಯ ಶ್ಲೋಕಗಳನ್ನೆಲ್ಲಾ ಸ್ಪುಟವಾಗಿ ಹೇಳುತ್ತಾನೆ ಅವನ ದರ್ಶನಕ್ಕಾಗಿ ಸಾವಿರಾರು ಜನರು ಹೋಗುತ್ತಿರುವರು. ಇವನಿರುವುದು ಯೂಪಿಯಲ್ಲಿ. ಈತನು ಭಕ್ತ ಸೂರದಾಸನ ಅವತಾರವೆಂದು ನಂಬಲ್ಪಟ್ಟಿದೆ.

ದೇಶಭಕ್ತ ಎಂ. ಎನ್. ರಾಯರು.

ಶ್ರೀ|| ಎಂ. ಎನ್ ರಾಯರು ಕಳೆದ ಶು ಕ್ರವಾರ ಡೆಹರಾಡೂನ್ ಜೈಲಿನಿಂದ ಬಿಡುಗಡೆಯಾದರು. ಅವರು ಆರು ವರುಷದ ಕೆಳಗೆ ಬಂಧಿಸಲ್ಪಟ್ಟರು. ಕಮ್ಯೂನಿಸ್ಟ್ ಸಂಘವನ್ನು ಸೇರಿ ಕ್ರಾಂತಿ ಪ್ರಯತ್ನ ವಲ್ಲಿದ್ದರೆಂಬ ಆಪಾದನೆಯು ಅವರ ಮೇಲೆ ಇತ್ತು. ಅವರು ಬಹಳ ದಿನಗಳವರೆಗೆ ಪೋಲೀಸಿನವರ ಕಣ್ಣಿಗೆ ಬೀಳಲೇ ಇಲ್ಲ. ಕಡೆಗೆ ಸಿಕ್ಕಿದರು. ವಿಚಾರಣೆಯಾಯಿತು. ಅನೇಕ ಪಿತೂರಿಗಳನ್ನು ನಡೆಸಿ ಸರ್ಕಾರಕ್ಕೆ ವಿರುದ್ಧವಾದ ಚಳುವಳಿ ನಡೆಸುತ್ತಿರುವರೆಂದು ತೀರ್ಮಾನ ಮಾಡಲ್ಪಟ್ಟಿತು. ನಲ್ಲಿಂದಂತೆ ಶಿಕ್ಷೆಯಾಯಿತು.

ಇವರು ವೀರ ದೇಶಾಭಿಮಾನಿಗಳು. ಸಂಪೂರ್ಣ ಸ್ವಾತಂತ್ರ್ಯವಾದಿಗಳು. ಶ್ರೀ ಪ್ರಗಾಮಿಗಳು. ಪಂಡಿತ ಜವಹರಲಾಲರ ಆಪ್ತ ಮಿತ್ರರು. ಪ್ರಪಂಚದ ಅನೇಕ ಭಾಗಗಳಲ್ಲಿ ಸಂಚರಿಸಿ ಭರತಖಂಡದ ಸ್ವಾತಂತ್ರ್ಯಕ್ಕಾಗಿ ಪ್ರಯತ್ನಿಸಿರುವರು.

ಇವರು ಬಿಡುಗಡೆಯಾದಮೇಲೆ ಹೇಳಿದ ವಾಕ್ಯಗಳು ಗಮನಾರ್ಹವಾಗಿವೆ —

"ಅಖಿಲಭಾರತ ರಾಷ್ಟ್ರೀಯ ಮಹಾಸಭೆಯ ಆಶ್ರಯದಲ್ಲಿ ಕೋಟ್ಯಾಂತರ ಭಾರತೀಯರು ಸೇರಿ ಸ್ವಾತಂತ್ರ್ಯ ಯುದ್ಧವನ್ನು ನಡಸುವುದೇ ನಾನು ಕೊಡುವ ಸಂದೇಶ. ಸಂಪೂರ್ಣ ಸ್ವಾತಂತ್ರ್ಯವನ್ನು ಹೊಂದುವುದಕ್ಕಾಗಿ ನಾವು ಸ್ಪಷ್ಟವಾದ ರೀತಿನೀತಿಯನ್ನು ಅನುಸರಿಸಬೇಕು. ಈಗ ನಾವು ಪಂಗಡಗಳ ವಿಚಾರವಾಗಿ ಹೊಡೆದಾಡಬೇಕಾಗಿಲ್ಲ. ಸ್ವಾತಂತ್ರ್ಯ ಸಾಧನೆಗಾಗಿ ಎಲ್ಲರೂ ಏಕಮನಸ್ಸಿನಿಂದ ಪ್ರಯತ್ನಿಸಬೇಕು. ಸಾಮ್ರಾಜ್ಯ ವಿರೋಧವಾದ ಶಕ್ತಿಗಳನ್ನೆಲ್ಲಾ ಒಂದುಗೂಡಿಸಬೇಕು. ಪ್ರಜೆಗಳ ಹಿತಕ್ಕಾಗಿ ಪ್ರಜೆಗಳ ಸರಕಾರವೇ ಬೇಕೆಂಬುದನ್ನು ಸ್ಥಾಪಿಸಬೇಕು. ನಮ್ಮೆಲ್ಲರಿಗೂ ರಾಷ್ಟ್ರೀಯ ಮಹಾಸಭೆಯೇ ಸರಿಯಾದ ವೇದಿಕೆ. ಅದನ್ನು ಇನ್ನೂ ಬಲಪಡಿಸಬೇಕು. ಅದಕ್ಕೆ ಶಿಸ್ತು, ಐಕ್ಯತೆಯನ್ನುಂಟುಮಾಡಬೇಕು. ಎಲ್ಲಾ ಸ್ವಾರ್ಥತ್ಯಾಗಿಗಳೂ ಅದರಲ್ಲಿ ಸೇರಿ ಕೆಲಸ ಮಾಡಬೇಕೆಂಬುದೇ ನನ್ನ ಕೋರಿಕೆ."

—

ಹಾಲು ಮಾರುವ ಪೌರಾಧ್ಯಕ್ಷರು.

ಇಂಗ್ಲೇಂಡಿನಲ್ಲಿ ಸೋಕರ್‌ಬಿಂಟ್ ಎಂಬ ನಗರದಲ್ಲಿ ಪೌರಸಭಾಧ್ಯಕ್ಷರಿಗೆ ನಗರದ ನಾನಾ ಭಾಗಗಳು ಎಲ್ಲರಿಗಿಂತಲೂ ಚೆನ್ನಾಗಿ ಗೊತ್ತು.

ಇವರ ಖಾಸಗಿ ವೃತ್ತಿಯು ಹಾಲುಮಾರುವುದು. ದಿನವೂ ಬೆಳಗ್ಗೆ ಹಾಲನ್ನು ಕೊಡಲು ಹೋಗುವಾಗ ನಗರ ಪರೀಕ್ಷೆಯನ್ನು ನೆರವೇರಿಸಿ ಬರುತ್ತಾರೆ.

ಹಾಲಿನ ಗಾಡಿಯನ್ನು ತಳ್ಳಿಕೊಂಡು ಮನೆ ಮನೆಗೂ ಹೋಗುತ್ತಿರುವ ಈ ಪೌರಸಭಾಧ್ಯಕ್ಷ ಮೈಕೇಲ್ ಬೆನ್ಸನ್ನರನ್ನು ಅರಿಯದವರಿಲ್ಲ.

ಹೆರಿಗೆ ಪಂದ್ಯದ ಪರಿಸಮಾಪ್ತಿ

ಆಕ್ಟೋಬರ್ 31ನೆಯ ತಾರೀಖಿನ ದಿನ ಟೊರಂಟೋವಿನಲ್ಲಿ ಹತ್ತು ವರ್ಷದಿಂದಲೂ ನಡೆಯುತ್ತಿದ್ದ ಒಂದು ವಿಚಿತ್ರ ಹೆರಿಗೆ ಪಂದ್ಯವು ಕೊನೆಗೊಂಡಿತು.

ಆದಿನ ಹತ್ತಾರು ತಾಯಿಯರು ನೂರಾರು ಮಕ್ಕಳನ್ನು ಕಟ್ಟಿಕೊಂಡು ಒಂದೂವರೆ ಲಕ್ಷ ಪೌನಿನ ಬಹುಮಾನಕ್ಕಾಗಿ ಒಂದು ಮನೆಯಲ್ಲಿ ಕಾದಾತುತ್ತಿದ್ದರು.

ಇದರ ಪೂರ್ವ ಕಥೆ ಹೀಗಿದೆ —

1926ನೆ ಅಕ್ಟೋಬರ್ 31ನೆಯ ತಾರೀಖಿನದಿನ ಟೊರಂಟೋವಿನ ಒಬ್ಬ ನ್ಯಾಯವಾದಿಯು ಸತ್ತು ಹೋದನು. ಅವನಿಗೆ ಇದ್ದ ಆಸ್ತಿ 1 50,000 ಪೌಂಡು.

ಈ ಹಣವೆಲ್ಲವೂ ಒಂದು ವಿಚಿತ್ರ ಪಂದ್ಯಕ್ಕಾಗಿ ವಿನಿಯೋಗಿಸಲ್ಪಡಬೇಕೆಂದು ಅವನು ಉಯಿಲಿನಲ್ಲಿ ಬರೆದಿದ್ದನು.

ಅವನು ಸತ್ತ ದಿನದಿಂದ ಹತ್ತು ವರ್ಷ ಮುಗಿಯುವುದರೊಳಗಾಗಿ ಟೊರಂಟೋವಿ

ರಾಜಧಾನಿಯ ಪೌರಸಭೆ

ಮೈಸೂರು ಪೌರಸಭೆಯವರು ತೆಗೆದುಕೊಂಡಿರುವ ೧೦ಲಕ್ಷ ರೂಪಾಯಿಗಳ ಸಾಲದ ಪೈಕಿ ಸರ್ಕಾರಕ್ಕೆ ಕೊಡಬೇಕಾದ ಸುಮಾರು ೪,೯೧,೫೦೦ ರೂಪಾಯಿಗಳನ್ನು ಕೊಟ್ಟಮೇಲೆ ಮಿಗುವ ಹಣವನ್ನು ಬೇರೆ ಬೇರೆ ಅಭಿವೃದ್ಧಿ ಕಾರ್ಯಗಳಿಗೆ ಸಂಬಂಧಿಸಿದ ವಿವರಗಳನ್ನು ಪರ್ಯಾಲೋಚಿಸುವುದಕ್ಕಾಗಿ ಶ್ರೀ ಎಂ ಎ ಶ್ರೀನಿವಾಸರವರ ಅಧ್ಯಕ್ಷತೆಯಲ್ಲಿ ನಿನ್ನೆ ಸಾಯಂಕಾಲ ನಡೆದ ಮೈಸೂರು ಪೌರಸಭೆಯ ವಿಶೇಷ ಮೀಟಿಂಗಿನಲ್ಲಿ ಈ ಕೆಳಗೆ ಕಂಡು ಬರುವ ಬಾಬುಗಳಿಗೆ ಹಣವನ್ನೊದಗಿಸಲಾಯಿತು —

ನಗರದಲ್ಲಿರುವ ಮುಖ್ಯ ರಸ್ತೆಗಳು ಮತ್ತು ಒಳಭಾಗದ ರಸ್ತೆಗಳಿಗೆ ಟಾರ್ ಹಾಕುವುದಕ್ಕೆ ೧,೫೦,೦೦೦ ರೂಗಳು

ಪ್ಲೇಹಿಂಗ್ ಕಕ್ಕಸ್ಸುಗಳು ಮತ್ತು ಯೂರಿನಲ್ಲುಗಳನ್ನು ಕಟ್ಟುವುದಕ್ಕಾಗಿ ೨೫,೦೦೦ ರೂಪಾಯಿಗಳು

ತಗಡೂರು ನಾಡರಿ ತಾಲ್ಲೂಕು.

ವಾರ್ಷಿಕೋತ್ಸವ ಸಮಾರಂಭ.

ನಲ್ಲಿ ಯಾವ ಸ್ತ್ರೀಯು ಹೆಚ್ಚು ಮಕ್ಕಳನ್ನು ಹೆರುವಳೋ, ಅವಳಿಗೆ ಈ ಬಹುಮಾನವು ದೊರಯಬೇಕೆಂದು ಅವನು ತಿಳಿಸಿದ್ದನು.

ಪಂದ್ಯವು ಆರಂಭವಾಯಿತು. ಹತ್ತಾರು ಜನ ಸ್ತ್ರೀಯರು ಪಂದ್ಯದಲ್ಲಿ ಭಾಗವಹಿಸಿದರು.

ಈ ವರ್ಷ ಅಕ್ಟೋಬರ್ 31ನೇಯ ದಿನ ಪಂದ್ಯವು ಮುಗಿಯಿತು. ಆಗ ಪಂದ್ಯದಲ್ಲಿ ಭಾಗವಹಿಸಿದ್ದವರ ವಿವರಗಳಿವು.

ಮಿಸೆಸ್ ಕೆನಿ ಇವಳಿಗೆ ಹತ್ತು ವರ್ಷದಿಂದ ಒಟ್ಟು ಒಂಭತ್ತು ಮಕ್ಕಳಾಗಿವೆ. ಈಗ ಪುನಃ ಗರ್ಭಿಣಿಯಾಗಿ ಒಂಬತ್ತು ತಿಂಗಳಾಗಿವೆ. ಅವಳಿ ಜವಳಿ ಮಕ್ಕಳು ಹುಟ್ಟಬಹುದೆಂದು ಅವಳು ಆಶಿಸಿದ್ದಾಳೆ.

ಮಿಸೆಸ್ ವ್ಯಾರಿಸ್ ಒಟ್ಟು 14 ಜನ ಮಕ್ಕಳಿದ್ದಾರೆ. ೮ ಜನರು ಈ ಹತ್ತು ವರ್ಷದಲ್ಲಿ ಹುಟ್ಟಿದವರು.

ಮಿಸೆಸ್ ಟಿಮ್ಲಿಕ್ ಒಟ್ಟು 11 ಜನ ಮಕ್ಕಳು ಹತ್ತುವರ್ಷದಲ್ಲಿ ಹತ್ತು ಮಕ್ಕಳು ಹುಟ್ಟಿವೆ.

ಅಂಡರ್ ಗ್ರೌಂಡ್ ಡ್ರೈನೇಜಿಗಾಗಿ ೧ ಲಕ್ಷ ರೂಪಾಯಿಗಳು

೨೦೦ ರೂಪಾಯಿ ಗಳಿಗಿಂತ ಹೆಚ್ಚು ಬಾಡಿಗೆ ಬೆಲೆಯುಳ್ಳ ಮನೆಗಳಿಗೆ ನಲ್ಲಿ ಮೀಟರ್ ಹಾಕುವುದಕ್ಕೆ ೨೦,೦೦೦ ರೂಗಳು

ಚಾಮುಂಡಿ ಬಡಾವಣೆ, ಸಿದ್ದಿಕಾ ಕಟ್ಟೆ, ಬಕ್ಷಿ ಬಸಪ್ಪಾಜಿ ಲಾಯ, ಹಳೇ ಪುಡ್‌ಯಾರ್ಡ್, ಮಂಡಿ ಮತ್ತು ಲಷ್ಕರ್ ಮೊಹಲ್ಲಾಗಳ ನೀರಿನ ಸರಬರಾಯಿ ಪದ್ಧತಿಯನ್ನು ಉತ್ತಮಪಡಿಸುವುದಕ್ಕೆ ೮೫,೦೦೦ ರೂಗಳು

ಮುನಿಸಿಪಲ್ ಫಾರಂ ಅನ್ನು ಬದಾಯಿಸಿ ಉತ್ತಮಪಡಿಸುವುದಕ್ಕೆ ೨೧,೦೦೦ ರೂಗಳು

ಚಮಾಲ್ ಮರದ ಹಿಂದಲ ಬೀದಿ, ಗುರುಕಾರ್ ವ್ಯಾಪಣ್ಣ ಮತ್ತು ಸೊಪ್ಪಿನ ಕೊಳದ ಬೀದಿಗಳಲ್ಲಿರುವ ಮಳೆ ನೀರಿನ ಚರಂಡಿಗಳನ್ನು ಉತ್ತಮಪಡಿಸುವುದಕ್ಕೆ ೩೦,೦೦೦ ರೂಗಳು

ವಾರ್ಷಿಕೋತ್ಸವ.

(ಒಬ್ಬ ವಾತ್ತೀದಾರರಿಂದ)

ಮಂಜರಾಬಾದು ತಾಲ್ಲೂಕು ಬೈಕೆರೆ ಗ್ರಾಮದ ಪ್ರೈಮರಿ ಸ್ಕೂಲಿನ ವಾರ್ಷಿಕೋತ್ಸವವನ್ನು ಇದೇ ಮಾಹೆ 18ನೇ ತಾರೀಖು ಬುಧವಾರ ಅನ್ನಾಪುರದ ಮಠಾಧ್ಯಕ್ಷರು ಶ್ರೀ ಬಸವಲಿಂಗಸ್ವಾಮಿಗಳ ಅಧ್ಯಕ್ಷತೆಯಲ್ಲಿ ಅತಿ ವಿಜೃಂಭಣೆಯಿಂದ ಜರುಗಿಸಿದರು. ಸ್ಕೂಲ್ ಕಟ್ಟಡವನ್ನು ತಳಿರು ತೋರಣಗಳಿಂದಲೂ, ಚಿತ್ರ ಪಟಗಳಿಂದಲೂ ಅಲಂಕರಿಸಿದ್ದರು. ಮಂಗಳವಾದ್ಯಗಳು, ಫೋನೋಗ್ರಾಫು ತ್ತಿದ್ದವು. ಸ್ಕೂಲ್ ಕಮಿಟಿ ಮೆಂಬರುಗಳೂ, ಸ್ಥಳ ಮತ್ತು ಪರಸ್ಥಳದ ದೊಡ್ಡ ಮನುಷ್ಯರನೇಕರೂ ಸಭೆಯನ್ನಲಂಕರಿಸಿದ್ದರು.

ವಿದ್ಯಾರ್ಥಿಗಳು ಮಂಗಳಾಚರಣೆಗಳನ್ನು ಪಠಿಸಿದರು. ಅನಂತರ ಮ|| ರಾ|| ಮೈಸೂರು ರಂಗಯ್ಯನವರ ಸಂಗೀತವು ನಡೆದು ಸಭಿಕರನ್ನು ಸಂತೋಷಪಡಿಸಿತು. ಮಾಸ್ಟರು ಎಚ್ ಪರಮೇಶ್ವರಯ್ಯನವರು ಸ್ಕೂಲ ವರದಿಯನ್ನೋದಿದರು. ಅನಂತರ ಮ|| ರಾ|| ಗಣಿವ ಮಲ್ಲಪ್ಪನವರು ವಿದ್ಯಾಭ್ಯಾಸದ ಆವಶ್ಯಕತೆಯ ವಿಷಯವಾಗಿಯೂ, ಲಿಂಗಯ್ಯನವರು ಬಾಲಕರ ಕರ್ತವ್ಯ, ಮ|| ರಾ|| ಹುಚ್ಚೇಗೌಡರು ಸಂಘಗಳ ಆವಶ್ಯಕತೆ ವೀರಪ್ಪನವರು, ವಿದ್ಯಾರ್ಥಿಗಳ ಕರ್ತವ್ಯ ಎಂಬ ವಿಷಯದಲ್ಲೂ ಸ್ವಾರಸ್ಯವಾದ ಭಾಷಣಗಳನ್ನು ಮಾಡಿದರು.

ಪಟೇಲರು ಮ|| ರಾ|| ಪುಟ್ಟಸಿದ್ದಪ್ಪನವರು, ಶಾನುಭೋಗರವರು ಈ ಗ್ರಾಮಕ್ಕೆ ಸ್ಕೂಲನ್ನು ದಯಪಾಲಿಸಿದ ಮತ್ತು ಇದುವರೆಗಿನ ಸ್ಥಿತಿಗತಿಗಳ ವಿಷಯವಾಗಿ ಭಾಷಣಮಾಡಿದರು. ಮತ್ತು ದಾಲೀ ಉಪಾಧ್ಯಾಯರಾಗಿರುವ ಎಚ್ ಪರಮೇಶ್ವರಯ್ಯನವರ ಶ್ರದ್ಧೆ, ಪ್ರೋತ್ಸಾಹ, ಉತ್ಸಾಹಗಳನ್ನು ಶ್ಲಾಘಿಸಿದರು. ಕಮಿಟೀ ಮೆಂಬರು ಮ|| ರಾ|| ಹುಚ್ಚೇಗೌಡರು ಬಾಲಕರ ಆಟಪಾಟಗಳಿಗೆ ಸಂತೋಷಪಟ್ಟು, ತಮ್ಮ ಸ್ವಂತ ಖರ್ಚಿನಿಂದ ಅಲ್ಲಿ ನೆರದಿದ್ದ ಬಾಲಕರಿಗೆಲ್ಲಾ, ಬಹುಮಾನವನ್ನು ಹಂಚಿದರು.

ಅಧ್ಯಕ್ಷರ ಭಾಷಣ, ಮತ್ತು ಶ್ರೀಮನ್ಮಹಾರಾಜರವರ ಶ್ರೇಯಃ ಪ್ರಾರ್ಥನೆ ಬಳಿಕ ನಂತರ, ಗಂಧ, ಪುಷ್ಪ, ತಾಂಬೂಲ ವಿನಿಯೋಗದಿಂದ ಸಭೆಯು ಬರಖಾಸ್ತಾಯ್ತು.

ಸ್ಲಂ ಪ್ರದೇಶಗಳನ್ನು ತೆಗೆದುಹಾಕಿ ಬಡವರಿಗೆ ವಸತಿಗಳನ್ನು ಕಟ್ಟಿಸಿಕೊಡುವುದಕ್ಕೆ ೮೦೦೦ ರೂ. ಗಳು.

ಕುನಿನಿಂಗ್ ಬಜಾರ್ ಕಟ್ಟುವುದಕ್ಕೆ ೧೫,೦೦೦ ರೂಗಳು

ಸಾಧ್ವಿ

೨೩—೧೧—೩೬ ನೇ ಸೋಮವಾರ

ಮೈಸೂರು ಪೌರಸಭೆಯ ಉಪಾಧ್ಯಕ್ಷತೆ.

ರಾಜಧಾನಿಯ ಪೌರಸಭೆಯ ಉಪಾಧ್ಯಕ್ಷರಾದ ಮಿ|| ಮಹಮುದ್ ಸೇಟರವರು ತಮ್ಮ ಸ್ಥಾನವನ್ನು ಕಳೆದುಕೊಂಡಿರುವರು. ಇವರು ಭತ್ಯವನ್ನು ತೆಗೆದುಕೊಳ್ಳುತ್ತ ತಮ್ಮ ಕರ್ತವ್ಯಗಳನ್ನು ಮಾಡುತ್ತಿರಲಿಲ್ಲ ವೆಂಬುದೇ ಆಪಾದನೆ. ಈ ಆಪಾದನೆಯ ಮೇಲೆ ಪೌರ ಸಭೆಯಲ್ಲಿ ಚರ್ಚೆಯಾಗಿ ರ ದ್ದಾಯಿತು. ಅವರ ಕರ್ತವ್ಯ ಲೋಪ ಕ್ಕಾಗಿ ಸರ್ಕಾರದವರು ಉಚಿತವಾದ ಕಾ ರ್ಯಕ್ರಮ ನಡೆಸಬೇಕೆಂದು ತೀರ್ಮಾನ ವಾಯಿತು. ಈಗ ಸರ್ಕಾರದವರು ಪ್ರವೇ ಶಿಸಿ ಕರ್ತವ್ಯಲೋಪಕ್ಕಾಗಿ ಮಿ|| ಸೇಟರ ನ್ನು ಆ ಸ್ಥಳದಿಂದ ತೆಗೆದು ಹಾಕಿರುವರು.

ಈ ಪ್ರಸಂಗದಲ್ಲಿ ನಾವು ನಮ್ಮ ಪೌರ ಸಭಾ ಸದಸ್ಯರನ್ನು ಅಭಿನಂದಿಸಲಾರೆವು. ಇಂದು ಮಿ|| ಮಹಮುದ್ ಸೇಟರಿಗೆ ಪ್ರಾ ಪ್ತವಾದ ಅವಸ್ಥೆಯು ನಾಳೆ ಮತ್ತೊಬ್ಬರಿ ಗೂ ಬರಬಹುದೆಂಬ ಅಂಶವನ್ನು ಅವರು ಗಮನಿಸಲಿಲ್ಲವೆಂದು ನಾವು ಭಾವಿಸುತ್ತೇ ತ್ತೇವೆ. ಉಪಾಧ್ಯಕ್ಷತೆಯು ಒಂದು ಗೌರವ ದ ಸ್ಥಾನ. ಅದಕ್ಕೆ ಸಂಬಳವಿಲ್ಲ. ಕೇವಲ ವಾಹನ ವೆಚ್ಚಗಳಿಗಾಗಿ ಸ್ವಲ್ಪ ಭತ್ಯವನ್ನು ಕೊಡಲಾಗುವುದು. ಇತರ ಸಂಬಳದ ನೌ ಕರರಷ್ಟು ಅವರಿಗೆ ನಿರ್ಬಂಧವಿಲ್ಲ. ಅವರ ಕೆಲಸಕಾರ್ಯಗಳಲ್ಲಿ ಅವರಿಗೆ ಬಿಡುವ ನ್ನು ನೋಡಿ ಇವೆ. ಅವರು ಅವರಿಗೆ ವ ಹಿಸಲ್ಪಟ್ಟಿರುವ ಕರ್ತವ್ಯಗಳನ್ನು ಅವರ ಕಷ್ಟಾಯವಾಗಿ ನಡೆಸಲೇಬೇಕೆಂಬುದನ್ನು ನಾವು ಒಪ್ಪುತ್ತೇವೆ. ಆದರೆ ಅವರಿಗೆ ಇ ತರ ನೌಕರರುಗಳಂತೆ ಅವರಿಗೆ ಎಲ್ಲಾ ವಿಧವಾದ ನಿರ್ಬಂಧಗಳೂ ಇರಕೂಡದು.

ಇದಲ್ಲದೆ ಉಪಾಧ್ಯಕ್ಷರು ಸದಸ್ಯರಿಂದ ಚುನಾಯಿತರಾದವರು. ಅವರ ಗೌರವವೇ ಸದಸ್ಯರ ಗೌರವ. ಸದಸ್ಯರ ಗೌರವವೇ ಅವರ ಗೌರವ. ಸಮರ್ಪಕವಾಗಿ ಕೆಲಸ ಮಾಡುತ್ತಿಲ್ಲವೆಂಬುದನ್ನು ೬ ತಿಂಗಳುಗ ಳಿಂದ ನೋಡುತ್ತ ಸುಮ್ಮನಿದ್ದು ಎಂಟು ತಿಂ ಗಳ ಬಳಿಕ ಅವರ ಮೇಲೆ ಕಾರ್ಯ ಕ್ರಮ ನಡೆಸುವಂತೆ ಸರ್ಕಾರವನ್ನು ಕೋರುವುದು ಯುಕ್ತವಲ್ಲ. ತಮ್ಮ ಕೈಯಲ್ಲಾಗುವ ಕಾರ್ಯಕ್ಕೆ ಹೊರಗಿನವರನ್ನು ಕೋರು ವುದು ನಿಶ್ಶಕ್ತಿಯ ಕುರುಹು. ತಮ್ಮ ಜುಟ್ಟ ನ್ನು ಇತರರ ಕೈಲಿ ಕೊಟ್ಟು ತಾವೂ ಕೆಟ್ಟು ಎರಡನೆಯವರನ್ನೂ ಕೆಡಿಸುವುದು ನಮ್ಮ ದೇಶದ ದೌರ್ಭಾಗ್ಯದ ಪದ್ಧತಿ ಯಾಗಿದೆ. ಇದರ ಒಂದು ನಿದರ್ಶನವೇ ಈಗ ನಮ್ಮೂರಿನಲ್ಲಿ ನಡೆದಿರುತ್ತದೆ.

ಮಿ|| ಸೇಟರಲ್ಲಿರುವ ಅನೇಕ ವಿಧವಾದ ನ್ಯೂನತೆಗಳು ನಮಗೆ ಗೊತ್ತು. ಅವರು ಉಪಾಧ್ಯಕ್ಷರಾಗಿ ಇನ್ನು ಮುಂದೆಯೂ ಇರ ಬಾರದೆಂದೇ ನಾವೂ ಖಂಡಿತವಾ ಗಿ ಹೇಳುತ್ತೇವೆ. ಆದರೆ ಸ್ಥಳೀಯ ಸಂಸ್ಥೆಗಳು ತಮ್ಮ ತಮ್ಮ ಸ್ಥಿತಿಗತಿಗಳನ್ನು ಸರಿಪಡಿಸಲು ಮಾತೆತ್ತಿದರೆ ಸರ್ಕಾರದ ಆ ಶ್ರಯವನ್ನು ಅಪೇಕ್ಷಿಸುವುದು ಆತ್ಮಘಾತ ವೆಂದು ಹೇಳದಿರಲಾರೆವು. ಮಿ|| ಸೇಟರ ಮೇಲೆ ಒಂದು ಅವಿಶ್ವಾಸದ ಠರಾವನ್ನು ಸೂಚಿಸಿದ್ದರೆ ಅದು ಪಾಸಾಗುವ ಮುಂಚೆ ಯೇ ಅವರೇ ರಾಜೀನಾಮೆಯಿಯುತ್ತಿದ್ದ ರೆಂದು ನಾವು ಹೇಳಬಲ್ಲೆವು.

ಹೊಸ ಚುನಾವಣೆಗಳು ಸಮೀಪಿಸಿದವು. ಇನ್ನು ಮುಂದೆ ರಚನೆಯಾಗುವ ಪೌರಸಭೆ ಯಲ್ಲಿಯಾದರೂ ಸ್ಥಳೀಯ ಸಂಸ್ಥೆಗಳ ಗೌರವಕ್ಕೆ ತಕ್ಕಂತೆ ಸದಸ್ಯರು ವರ್ತಿಸ ಬಹುದೆಂದು ಹಾರೈಸುತ್ತೇವೆ.

ಪ್ರಜಾಪ್ರತಿನಿಧಿ ಸಭೆ ಮತ್ತು ನ್ಯಾಯವಿಧಾಯಕ ಸಭೆ.

ಪ್ರಜಾ ಪ್ರತಿನಿಧಿ ಸಭೆ ಮತ್ತು ನ್ಯಾ ಯವಿಧಾಯಕ ಸಭೆಗಳ ರಚನೆ ಮುಂತಾ ದ ವಿಷಯವನ್ನು ಪರಿಶೀಲಿಸಿ ವರದಿಮಾ ಡಲು ರಾಜಮಂತ್ರ ಪ್ರವೀಣ ಎನ್. ಮಾ ಧವರಾವ್ ಅವರ ಅಧ್ಯಕ್ಷತೆ ಯಲ್ಲಿ ಒಂದು ಸಮಿತಿಯನ್ನು ನೇಮಿಸಿದ್ದ ರು. ಸಮಿತಿಯ ವರದಿಯು ಹೊರಬಿದ್ದಿ ದೆ. ಸರ್ಕಾರದವರೂ ಅದರ ಮೇಲೆ ತಮ್ಮ ಹುಕುಮನ್ನು ನೆನ್ನೆ ತಾನೆ ಪ್ರಕಟಿಸಿರು ವರು. ಅದರ ಪ್ರಕಾರ ಒಬ್ಬ ಸದಸ್ಯನು ಎರಡು ಸಭೆಗಳಲ್ಲಿಯೂ ಇರಲು ಅವಕಾಶವಿ ಲ್ಲ. ಇದುವರೆಗೆ ಜಾರಿಯಲ್ಲಿದ್ದಂತೆ ಪ್ರಜಾ ಪ್ರತಿನಿಧಿ ಸಭೆಯವರ ಕೆಲವರನ್ನು ನ್ಯಾ ಯವಿಧಾಯಕ ಸಭೆಗೆ ಚುನಾಯಿಸುವ ಪ ದ್ಧತಿಯು ತಪ್ಪಿಹೋಗಿರುವುದು.

ಎಲ್ಲಾ ವಿಷಯಗಳಲ್ಲೂ ನ್ಯಾಯವಿಧಾ ಯಕ ಸಭೆಗೆ ಇರುವ ಹಕ್ಕು ಪ್ರಜಾ ಪ್ರತಿ ನಿಧಿ ಸಭೆಯಲ್ಲಿ ಇಲ್ಲ. ಮುಖ್ಯ ತತ್ವ ಗಳ ಚರ್ಚಿಸಲ್ಪಡುವ ಪದ್ಧತಿ ಈಗ ಇದು ತ್ತದೆ. ಇನ್ನು ಮೇಲೆ ಹಲವು ಮಸೂದೆಗಳು ನೇರವಾಗಿ ಶಾಸನಸಭೆಗೇ ಬರು ತ್ತವೆ. ಅನಂತರ ಹೊಸದಿನ ಪ್ರತಿನಿಧಿ ಸಭೆ ಯಲ್ಲಿ ಅದರ ಸಾಮಾನ್ಯ ತತ್ವಗಳು ತಿಳಿ ಸಲ್ಪಡುತ್ತವೆ. ಇನ್ನೊಂದು ಅಂಶಗಳಲ್ಲಿ ಸಾಮಾನ್ಯವಾಗಿ ಸರ್ಕಾರದವರು ಸಮಿತಿ ಯವರ ಅಭಿಪ್ರಾಯವನ್ನೇ ಅಂಗೀಕರಿಸಿ ರುತ್ತಾರೆ.

ಆದರೆ ಸದಸ್ಯರ ಹಕ್ಕಿನ ಬಗ್ಗೆ ಬಂದಿ ರುವ ಸಲಹೆಯನ್ನು ಸರ್ಕಾರದವರು ಅನು ಮೋದಿಸಿಲ್ಲ. ತಿರಸ್ಕರಿಸಿಯೂ ಇಲ್ಲ. ಈ ವಿಷಯವನ್ನು ಮುಂದಕ್ಕೆ ತಳ್ಳಿ ಬಿಟ್ಟಿದ್ದಾ ರೆ. ಶಾಸನ ಸಭಾಸದಸ್ಯರಿಗೆ ಭಾಷಣ ಸ್ವಾತಂತ್ರ್ಯ ಇರಬೇಕೆಂದು ಸಲಹೆ ಬಂದಿ ತ್ತು. ಈ ಸಲಹೆಯು ಸಾಧುವಾದದ್ದು. ಬ್ರಿಟಿಷ್ ಇಂಡಿಯದಲ್ಲಿ ಶಾಸನ ಸಭಾಸದ ಸ್ಯರಿಗೆ ಈ ಸ್ವಾತಂತ್ರ್ಯವಿದೆ. ಅವರು ಅ ಧಿಕಾರಿಗಳ ಮತ್ತು ಖಾಸಗಿ ಜನರ ಪ್ರವ ರ್ತನೆಗಳ ಮೇಲೆ ನಿರ್ಭಯವಾಗಿ ಟೀಕೆ ಮಾಡಬೇಕಾಗುತ್ತದೆ. ರುಜುವಾತುಗಳ ನ್ನು ಕೊಡಬೇಕಾಗುತ್ತದೆ. ಇದರಲ್ಲಿ ಅವ ರಿಗೆ ರಕ್ಷಣೆಯಿಲ್ಲದಿದ್ದರೆ ಪ್ರತಿದಿನವೂ ಅವ ರನ್ನು ಕೋರ್ಟು ಕಚೇರಿಗಳಿಗೆ ಎಳೆಯಲು ಅವಕಾಶವಾಗುವುದು. ನಿಷ್ಠುರದ ಅಂ ಶಗಳನ್ನು ಅವರು ಹೊರಗಿಡಲು ಹಿಂಜರಿ ಯಬಹುದು. ಈ ಲೋಪಕ್ಕೆ ಅವಕಾಶ ವಿರಬಾರದು. ಸರ್ಕಾರದವರು ಈ ವಿಷ ಯದಲ್ಲಿ ತಟಸ್ಥರಾಗಿರುವುದು ಸರಿಯಲ್ಲ. ಒಡನೆ ಭಾಷಣ ಸ್ವಾತಂತ್ರ್ಯವನ್ನು ಕಲ್ಪಿ ಸಬೇಕು.

ರಾಜಧಾನಿಯಲ್ಲಿ ಗೋವಿನ ಬೇಟೆ.

ಪೌರಸಭಾ ಸದಸ್ಯರು ಕಣ್ಣು ಬಿಟ್ಟು ನೋಡುವರೆ?

ರಾಜಧಾನಿಯಲ್ಲಿ ಪೋಲಿ ದನಗಳನ್ನು ಹಿಡಿದು ದೊಡ್ಡಿಗಳಿಗೆ ಕೊಡುವ ನೆಪದಿಂ ದ ಬೀದಿಯಲ್ಲಿ ಮೇವಿಗಾಗಿ ತಿರುಗಾಡಿ ಕೊಂಡು ಬರುವ ದನಗಳಿಗೂ ಉಳಿಗಾಲ ವಿಲ್ಲವಾಗಿದೆ. ಕಳೆದ ಗುರುವಾರ ಮಧ್ಯಾ ಹ್ನ ಅರಮನೆ ಆಫೀಸು ಚೌಕದಲ್ಲಿ ಕರ್ಣ ಕಠೋರವಾದ ಅಂಶವು ಜರುಗಿತು.

ದನಗಳು ಎಂದಿನಂತೆ ಮೇಯ್ದು ಮನೆ ಗಳಿಗೆ ಹಿಂತಿರುಗುತ್ತಿದ್ದವು. ದನಕಾಯು ವವನೂ ಹಿಂದೆಯೇ ಬರುತ್ತಿದ್ದನು. ಒಂ ದು ಹಸುವು ಗುಂಪಿನಿಂದ ಸ್ವಲ್ಪ ಮುಂದೆ ಓಡಿ ಹೋಯಿತು. ಅಲ್ಲಿ ಕಾದಿದ್ದ ದನ ಹಿಡಿಯುವವರು ಅದನ್ನು ಅಟ್ಟಿಕೊಂಡು ಹೋದರು. ಅದು ಸಿಕ್ಕದೆ ಅರಮನೆ ಕಛೇರಿಯ ಕಾಂಪೌಂಡಿನ ಒಳಗೆ ನುಗ್ಗಿ ತು. ತಪ್ಪಿಸಿಕೊಂಡು ಓಡಿ ಹೋಯಿತ ಲ್ಲಾ ಎಂದು ಅವರ ಸೈಕಿ ಒಬ್ಬನು, ದಪ್ಪ ನಾದ ದೊಣ್ಣೆಯಿಂದ ಅದಕ್ಕೆ ಬಲವಾಗಿ ಹೊಡೆದನು. ಕೂಡಲೇ ಅದರ ಒಂದು ಕಾಲು ಮುರಿದು ಹೋಯಿತು. ಮೂರು ಕಾಲುಗಳಿಗೆ ಏಟು ಬಿದ್ದಿರುವುದೆಂದು ಗೊ ತ್ತಾಗಿದೆ. ಒಂದು ಕಾಲು ಸಂಪೂರ್ಣ ವಾಗಿ ಮುರಿದು ಹೋಗಿದೆ. ಸ್ವಾಧೀನ ವಿಲ್ಲ. ಇಂದು ಒಡನೆ ಹಸುವು ನರಳುತ್ತ ಓಡಿಬಂದು ಸಹಕಾರಭವನದ ಚೌಕದಲ್ಲಿ ಬಿದ್ದುಕೊಂಡಿತು. ಬಹಳವಾಗಿ ನರಳು ತ್ತಿತ್ತು.

ಇದನ್ನು ನೋಡಿ ಜನರ ಗುಂಪು ಸೇರಿ ತು. ಬಹಳ ಕೋಲಾಹಲವೆದ್ದಿತು. ಹೊ ಡೆದವನನ್ನು ಪೋಲೀಸರಿಗೆ ಗೋವುಗಳಿಗೆ ಇಂತಹ ವಿಪ ತ್ತಿರುವುದಕ್ಕಾಗಿ ಅನೇಕರು ಮರುಗಿದರು. ನೂರಾರು ದಿನ ಬೇರೆ ಕಡೆಗೆ ಸಾಗಿಸಿದರು. ದರಿ ನಗರದಲ್ಲಿ ಈ ರೀತಿಯು ನಡೆಯುವುದು ಕೇವಲ ಶೋ

ಕೇವಲ ಕೆಲವು ದಿನಗಳ ರಾಜ ರಸ್ತೆಯ ದೊಡ್ಡಿಯ ಸೂಗಸಾದ ಗರ್ಭದ ಹಸು ವನ್ನು ತಿಂದು ಪ್ರಾಣವನ್ನು ಕಳೆದವಾರ ರವಾವಿಲಾಸ ಒಬ್ಬ ಮಹನೀಯರು ವಾಗಿ ತಮ್ಮ ಮನೆ ಮುಂದೆ ಹುಲ್ಲನ್ನು ಹಾಕಿದ್ದಾಗ ಬೀದಿಯ ತ್ತಿದ್ದ ದನಗಳನ್ನು ಪೌರಸಭೆ ಆಳುಗಳು ಹಿಡಿದು ದೊಡ್ಡಿಗ ಮಾಲೀಕರು ಎಷ್ಟು ಕೇಳಿದ ಹೀನಾಯವಾಗಿ ಬೈದು ಎಳೆ ಹೋದರು. ಇವರ ಕ್ರೂರವಾದ ಯಿಲ್ಲ. ದನಗಳನ್ನು ರಕ್ಷಿಸುವ

ಈ ಜನರಿಗೆ ಅವರು ಹಿ ರಾಸಿಗೂ ಕಮೀಷನ್ ಸಿಗುವುದ ರಿಂದ ಆದ್ದರಿಂದ ಅವರು ದನ ಗಳನ್ನೆಲ್ಲಾ ಹಿಡಿಯುತ್ತಿರುವರು. ಮೇಲೆ ತಕ್ಕ ಬಂದೋಬಸ್ತು ಅವಶ್ಯಕ.

ನಮ್ಮ ಪೌರಸಭಾ ಸದಸ್ಯರು ಇತ್ತ ಕಡೆ ಗಮನಕೊಟ್ಟು ಮೂಕಪ್ರಾಣಿಗಳನ್ನು ಸಂರಕ್ಷಿಸುವರೆ? ಪ್ರಾಣಿ

"ವಿಜಯನಗರವೂ ಹಿಂದೂ ಧರ್ಮವೂ"

ತಾ|| 17-11-1936 ರಲ್ಲಿ ಸಭಾ ಪರವಾಗಿ ರಾಜಧಾನಿಯ ಲರ್ಗರವರ ಸ್ಮಾರಕ ಭವನದಲ್ಲಿ ಸಾರ್ವಜನಿಕ ಸಭೆಯು ನಡೆ ದ್ದಿತು. ಅನೇಕ ಮಹನೀಯರು, ಯರೂ, ದಯಮಾಡಿಸಿದ್ದರು. ಶ್ರೀ ಬಳೆ ಸುಬ್ರಹ್ಮಣ್ಯಯ್ಯರವರು ಅಧ್ಯಕ್ಷ ರಾಗಿದ್ದರು. ಪ್ರಾರಂಭದಲ್ಲಿ ಶ್ರೀ|| ಕೇಶವದಾಸರು "ಹಿಂದೂ" ದ ವಿಚಾರವಾಗಿ ಸಾನಂದರ್ಭ ಗೊಂಡ ವ್ಯಾಖ್ಯಾನವನ್ನು ಮಾಡಿ ಗಳಿಗೆ ಹಿಂದೂ ಮತವೂ ಹಿಂದೂ ವೂ ಅತ್ಯಂತ ಪವಿತ್ರವಾದವೆಂದು ಮರ್ಮವನ್ನು ನಮ್ಮ ಹಿಂದುಗಳು ಲಿಸಬೇಕೆಂದೂ ತಿಳಿಸಿದರು. ತ ಶ್ರೀ|| ಬಿ. ಶಿವಮೂರ್ತಿ ಶಾಸ್ತ್ರಿಗಳ ದೂ ಧರ್ಮ" ಎಂಬ ವಿಚಾರವಾ ಗಿ ಅಮೋಘವಾದ ಭಾಷಣವನ್ನು ಡಿದರು. ಭಾಷಣದಲ್ಲಿ ಮಾನವ ತ್ವಕ್ಕೆ ಧರ್ಮವೇ ಆಧಾರವಾದ ಹಿಂದುಗಳಲ್ಲಿ ಏಕೀಕರಣವಾದ ಧರ್ಮ ಸಂರಕ್ಷಣೆಯಾಗಬಾರದೆಂ ಸಿದರು. ವಿಜಯನಗರ ಸ್ಮಾರಕ ಕ್ಕೆ ಎಲ್ಲರೂ ಸಹಾಯ ಮಾಡ ಕೋರಿದರು

ಆಯುರ್ವೇದ ವೈದ್ಯ ಸಂಘ, ಮೈಸೂರು.

ತಾ॥ 12-11-27 ರಲ್ಲಿ ಆಯುರ್ವೇದ ವೈದ್ಯ ಸಂಘವು ಸ್ಥಾಪಿತವಾಯಿತು ಇದಕ್ಕೆ ಶ್ರೀಯುತ ಅಂಬಳೆ ಅಣ್ಣಯ್ಯಪಂಡಿತರು ಅಧ್ಯಕ್ಷರಾಗಿಯೂ, ಶ್ರೀಯುತ ಭಿಷಕ್ ಚೂಡಾಮಣಿ ವೈ ಲಕ್ಷ್ಮೀನರಸಿಂಹಶಾಸ್ತ್ರಿಗಳವರು ಕಾರ್ಯದರ್ಶಿಗಳಾಗಿಯೂ ಚುನಾಯಿತರಾದರ ಇವರು ತಮ್ಮ ನ್ಯಾಯ ಸುಗಂಭೀರ ಉತ್ಸಾಹದಿಂದ 1931 ರ ಇಸವಿಯವರೆಗೂ ಈ ಸಂಘದ ಕಾರ್ಯಕಲಾಪಗಳನ್ನು ನಡೆಸಿಕೊಂಡು ಬಂದರು ನಂತರ ಶ್ರೀಯುತ ವೆಂಕಟಾಚಲ ಪಂಡಿತರು ಅಧ್ಯಕ್ಷರಾಗಿಯೂ, ಶ್ರೀಯುತ ಗೋಪಾಲಕೃಷ್ಣ ವೈದ್ಯ ಸಿಗಳವರು ಗೌರವ ಕಾರ್ಯದರ್ಶಿಗಳಾಗಿಯೂ ಚುನಾಯಿತರಾದರು ಇವರು ಇದುವರೆಗೂ ಬಹಳ ಉತ್ಸಾಹದಿಂದ ಈ ಸಂಘದಲ್ಲಿ ಕೆಲಸಮಾಡಿ ಮೆಂಬರುಗಳ ಪ್ರೀತಿಗೆ ಪಾತ್ರರಾಗಿರುವರು ಇದೇ ತಿಂಗಳಿನ ಅಂತ್ಯ ಭಾಗದಲ್ಲಿ ಹೊಸ ಚುನಾವಣೆಯು ನಡೆಯುವುದೆಂದೂ ಅದರಲ್ಲಿ ಗೌರವ ಕಾರ್ಯದರ್ಶಿಗಳ ಸ್ಥಾನವನ್ನು ಆಯುರ್ವೇದ ಕಾಲೇಜಿನಲ್ಲಿ ತೇರ್ಗಡೆಹೊಂದಿದ ಯುವಕರನ್ನೇ ಚುನಾಯಿಸಬೇಕೆಂದಿರುವ ಸಂಗತಿಯನ್ನೂ ಕೇಳಿ ಬಹಳ ಸಂತೋಷವಾಗುತ್ತದೆ ಈ ಸಂಘದ ಶ್ರೇಯ ಸಾಧನೆಯಲ್ಲಿ ಭಾಗಿಗಳಾಗಲು ಎಲ್ಲಾ ವೈದ್ಯರುಗಳಿಗೂ ಅವಕಾಶವಿದೆ ಹೆಚ್ಚು ಜನ ವಿದ್ವಾಂಸರುಗಳು ಪ್ರೋತ್ಸಾಹಿಸುವುದರಿಂದ ಆಯುರ್ವೇದ ವಿದ್ವಾಂಸರುಗಳ ಸಮ್ಮೇಳನವನ್ನು ಕೂಡಾ ಏರ್ಪಡಿಸಲು ಅವಕಾಶವಾಗುವುದರಲ್ಲಿ ಸಂದೇಹವಿಲ್ಲ

ಧನ್ವಂತರಿ ಜಯಂತಿ

ಈ ಮೇಲ್ಕಂಡ ಸಂಘದವರು ಇದೇ ಧಾತೃನಾಮ ಸಂವತ್ಸರದ ಆಶ್ವಯುಜ ಬಹುಳ, ತ್ರಯೋದಶಿ ಬುಧವಾರ ಸಾಯಂಕಾಲ 6 ಘಂಟೆಗೆ ಮೈಸೂರು ಮಂಡೀ ಮೊಹಲ್ಲಾದಲ್ಲಿರುವ ಶ್ರೀಮಾನ್ ಸಾಹುಕಾರ್ ಕಾಡಯ್ಯನವರ ಧರ್ಮ ಛತ್ರದಲ್ಲಿ ಸಭೆ ಸೇರಿದ್ದರು. ಇಂಟರ್‌ಮೀಡಿಯೆಟ್ ಕಾಲೇಜಿನ ಅಧ್ಯಾಪಕರಾದ ಮ॥ ನಾಗೇಶರಾಯರು ಅಗ್ರಾಸನವನ್ನು ವಹಿಸಿದ್ದರು. ವೇ॥ ಬ್ರ॥ ಆಸ್ಥಾನ ಮಹಾವಿದ್ವಾನ್ ಸಾಹಿತ್ಯರತ್ನಂ ಬಿ ವೆಂಕಟರಾಮ ಶಾಸ್ತ್ರಿಗಳು 'ತರ್ಕಶಾಸ್ತ್ರವೂ ಮತ್ತು ವೇದಾಂತವೂ' ಎಂಬ ವಿಚಾರದಲ್ಲಿ ಉಪನ್ಯಾಸವನ್ನಿತ್ತು, ಸಭಿಕರ ಮನಸ್ಸನ್ನು ಆಕರ್ಷಿಸಿ ಆನಂದವನ್ನುಂಟುಮಾಡಿದರು

ನಂತರ ಅಧ್ಯಕ್ಷರು ಆಯುರ್ವೇದ ವಿದ್ಯಾರ್ಥಿಗಳಿಗೂ ಮತ್ತು ವಿದ್ವಾಂಸರುಗಳಿಗೆ ಕೆಲವು ಹಿತೋಕ್ತಿಯನ್ನಾಡಿ ಉಪನ್ಯಾಸವನ್ನು ಮುಕ್ತಾಯಮಾಡಿದರು ವಂದನಾ ಸಮರ್ಪಣ, ಮಂಗಳಾರತಿ, ಪ್ರಸಾದ ವಿನಿಯೋಗ ಇವುಗಳಾದ ನಂತರ ಸಭೆಯು ಮುಕ್ತಾಯವಾಯಿತು

—ಆಯುರ್ವೇದ ವೈದ್ಯ.

ಕರ್ಣಾಟಕ ಸಾಮ್ರಾಜ್ಯದ ನೆನಪು

ಪ್ರೇಕ್ಷಕರಿಗೆ ಕೆಲವು ಸೂಚನೆಗಳು

ಕರ್ನಾಟಕ ಸಾಮ್ರಾಜ್ಯದ ಗತ ವೈಭವವನ್ನು ಸ್ಮರಿಸಿ ಮುಂದೆ ನಮ್ಮ ಕರ್ನಾಟಕವು ಹಿಂದಿನಂತೆ ತನ್ನ ವೈಭವವನ್ನು ನಮ್ಮ ನಾಡಿಗೆ ಪ್ರಕಾಶಪಡಿಸಲೆಂಬ ಸಾಹಸ ಸಂಕಲ್ಪದಿಂದ ವಿಜಯನಗರ ಸ್ಮಾರಕೋತ್ಸವವು ನಡಿಸಲ್ಪಡುವದು ಡಿಸೆಂಬರ್ ತಾ॥ 23 ರಿಂದ ಮೂರು ದಿನಗಳು ಸಂಮೇಳನವು ಹಂಪೆಯಲ್ಲಿ ನಡೆವುದು ಸಂಗೀತ, ಸಾಹಿತ್ಯ, ಕಲೆ, ಭಾಷೆ, ವ್ಯಾಯಾಮಗಳಿಗೆ ಸಂಬಂಧಿಸಿದ ವಿವಿಧ ಪ್ರದರ್ಶನಗಳು ಏರ್ಪಡಿಸಲ್ಪಡುವುವು ನಮ್ಮ ಮೈಸೂರು ಪ್ರಾಂತ್ಯದಲ್ಲಿ ಪ್ರಚಾರ ಕಾರ್ಯದ ನಿಮಿತ್ತ ಶ್ರೀ॥ ಗಳಾದ ಬೇಲೂರು ಕೇಶವದಾಸರೂ, ಬಿ ಶಿವಮೂರ್ತಿ ಶಾಸ್ತ್ರಿಗಳೂ ಸಂಚರಿಸುತ್ತಿರುವರು ಇವರು

ಚಿತ್ರಶಾಲಾ ಸ್ಪರ್ಧೆ ನಂ ೧೩ ರಲ್ಲಿ ಬಹುಮಾನ ಪಡೆದವರು

ಸರಿಯಾದ ಉತ್ತರಗಳು ಒಂದೂ ಬರಲಿಲ್ಲವಾದ್ದರಿಂದ ಒಂದು ತಪ್ಪಿನ ಉತ್ತರಗಳನ್ನು ಕಳುಹಿಸಿದ್ದ ಆರು ಜನರಿಗೆ ಮೊದಲನೇ ಬಹುಮಾನದಲ್ಲಿ ತಲಾ ಹತ್ತು ರೂಪಾಯಿನಂತೆಯೂ (ಶ್ರೀಮತಿ॥ ಜಾರ ಕೀಬಾಯಿ ಬಾಟ್ಲೆ ಮೈಸೂರು, ಆರ್ ಅನಂತಸ್ವಾಮಿ ಹುಣಸೂರ, ಎಂ. ಕೆ ಸುಬ್ರಾವ್, ಎಂ ಎಲ್ ಶೇಷಗಿರಿ ಬಂಗಳೂರು, ಟಿ ಎಸ್. ನಾರಾಯಣರಾವ್ ತುಂಕೂರು, ಜಿ ಕೆ ಗುರುಮೂರ್ತಪ್ಪ ಕೋಲಾರ) ಎರಡು ತಪ್ಪಿನ ಉತ್ತರಗಳನ್ನು ಕಳುಹಿಸಿದ್ದ 16 ಜನರಿಗೆ ತಲಾ 1—0—0 ರೂ ಗಳಂತೆಯೂ ಎನ್ ಕಾಶೀರಾವ್, ಹಚ್ ಎಸ್ ಕೃಷ್ಣರಾವ್, ಟಿ ದೇವರಾಜಯ್ಯ, ಟಿ. ನಾರಾಯಣರಾವ್ ಮೈಸೂರು, ಎಂ ಆರ್ ಕೃಷ್ಣಶಾಸ್ತ್ರಿ ಅಂಡ್ ಸನ್ಸ್ ಬೆಂಗಳೂರು, ವಿ ಲಕ್ಷ್ಮೀನಾರಾಣಪ್ಪ, ಕೆ ರಾಘವೇಂದ್ರರಾವ್, ಕೆ ಆರ್ ವೆಂಕಟರಾವ್, ಶ್ರೀ॥ ಗಂಗಮ್ಮ ಶ್ರೀ॥ ಪುಟ್ಟ ಎಸ್ ರಾಜಮ್ಮ ತುಮಕೂರು, ಎಂ ಎಸ್ ಚಂದ್ರಶೇಖರ ಶಾಸ್ತ್ರಿ, ಶ್ರೀ॥ ಪಾರ್ವತಮ್ಮ ಕೋಲಾರ, ಸಿ ಶಿವಪ್ಪ ದಾವಣಗೆರೆ, ಆರ್ ಕೆ ಸುಬ್ರಾವ್ ಜೋಳವಾಳು, ಬಿ. ರಂಗಯ್ಯ ನುಪ್ಪ, ಜಿ ಕೆ ಬಟ್ ಹೂಳಲು ಮತ್ತು ಮೂರು ತಪ್ಪಿನ ಉತ್ತರಗಳನ್ನು ಕಳುಹಿಸಿದ್ದ 70 ಜನರಿಗೆ ತಲಾ 0 8 0 ಯಂತೆಯೂ ಕೊಟ್ಟಿರುತ್ತೆ. ಎಸ್ ವೆಂಕಟರಾಮಯ್ಯ, ಎಂ ಎನ್ ತಿಪ್ಪಯ್ಯ, ಜಿ ದಾಸಪ್ಪ, ಎ. ವಿ ಕೃಷ್ಣಶೆಟ್ಟಿ, ಎಸ್ ವಿ ಬಾಲಂ, ಎಚ್ ಎಸ್ ಲಕ್ಷ್ಮೀದೇವಿ, ಟಿ ಎಸ್ ನರಸಮ್ಮ, ರಾಮಭಟ್ಟ, ಎಸ್ ಟಿ ಧಿಯಾಫಿಲ್, ಎನ್ ಶ್ರೀನಿವಾಸ ಉಡಪ, ಎನ್ ಜಿ ಮರಿಶೆಟ್ಟಿ, ಟಿ ಕೆ ವೆಂಕಟೇಗೌಡ, ಭಾಗೀರಥಮ್ಮ, ಎಸ್ ಅನ್ನಪೂರ್ಣಮ್ಮ, ಎಚ್ ಶಂಕರನಾರಾಯಣರಾವ್, ಬಿ ಮೈಲಾರರಾವ್, ಕೆ ಎಚ್ ಘೋರಪಡೆ, ಪಿ ಸುಬ್ಬರಾವ, ಎ ನರಸಿಂಹಯ್ಯ, ಪಿ ಗೋಪಾಲರಾವ್, ಎ ಪುಟ್ಟೊಬಾಯಿ, ಸೀತಾಲಕ್ಷ್ಮಮ್ಮ, ಎ ತಿರುಮಲರಾವ್, ಮೈಸೂರು ಎಸ್ ನಾರಾಯಣರಾವ್, ಎ. ವಿ ಗೋಪಾಲರಾವ್ ಎ ಎನ್. ನರಸಿಂಹಯ್ಯ, ಬೆಜ್ ಜಿ ವಿಜಯರಾಘವರೆಡ್ಡಿ, ವೆಂಕಟರಾಮರಾಜು, ಎಚ್ ಸಿ ಚಂದ್ರಶೇಖರಯ್ಯ, ಟಿ ಆರ್ ಪ್ರದಾನಾಚಾರಿ, ವಿ ರಾಧಮ್ಮ, ಬಿ ವಿ ಗುಂಡೂರಾವ್, ಎಂ ಎಲ್ ಶಿವಪ್ಪ, ಜಿ ಎಚ್ ಸಿದ್ದವೀರಯ್ಯ ಬೆಂಗಳೂರು ಜಿ ಎಂ ರಂಗಪ್ಪ, ಜನಾರ್ದನ ಉಪಾಧ್ಯ, ಎಂ ಆರ್. ಚನ್ನಪ್ಪಯ್ಯ, ಎನ್ ಎಂ ವೀರಯ್ಯ, ಎ ಚಂದ್ರಯ್ಯ, ರಾಮೇಶ್ವರಮ್ಮ, ಎಂ ರಾಮಚಂದ್ರ ಎಂ ರಾಜಣ್ಣ, ತುಮಕೂರು, ಲಕ್ಷ್ಮೀಪುರ್ ಲಕ್ಷ್ಮಣರಾವ್, ಶಿವಮೊಗ್ಗ ಭಾರತಿ ಅರವಿಂದಮಿತ್ರ, ತೀರ್ಥಹಳ್ಳಿ, ಎಚ್. ಆರ್ ಶ್ರೀಕಂಠರಾವ್, ಜಗಳೂರು ಆರ್ ವೇಲಮ್ಮಾಳ್, ಭದ್ರಾವತಿ, ಎ ನರಸಿಂಹಯ್ಯ, ನೀಲಪ್ಪ ರಾ ಕೆ ಜಿ ಶ್ರೀನಿವಾಸರಾವ್, ಅರಸೀಕೆರೆ, ವೈ ಎ ವೆಂಕಟಸುಬ್ಬಯ್ಯ, ಕೂಡಲ್ಲೂರು ಡಿ ಆರ್ ವೆಂಕಟಸ್ವಾಮಿಶೆಟ್ಟಿ, ಎಂ ವಿ ಎಸ್ ಮೂರ್ತಿ ದಾವಣಗೆರೆ ಎಸ್ ಹನುಮಂತಯ್ಯ, ಹರಿಹರಪುರ ಜಿ ನರಸಿಂಹಮೂರ್ತಿ, ಬಾಗೇಪಲ್ಲಿ ಕೆ ನ್ಯಾಮಾಚಾರ್, ಬೌರಿಂಗ್ ಪೇಟೆ ಕೆ ಸಿ ದಾಸಪ್ಪಶೆಟ್ಟಿ, ಚಿಕ್ಕೇರಿ ಸಿ ಕಮಲಮ್ಮ, ಎಸ್ ಸುಬ್ಬಯ್ಯ, ಚಾಮರಾಜನಗರ ಎನ್ ಚನ್ನವೀರಯ್ಯ, ಕುಪೇರು ಎಂ ಕೆ ರಾಮಚಂದ್ರಾಚಾರ್, ಕೊಳ್ಳೇಗಾಲ ಎ ಆರ್ ತಿರುಮಲಾಚಾರ್, ಬಿ ರಾಮಣ್ಣ, ಪಂಡಿತ ವಿ ಕೃಷ್ಣಮಾಚಾರ್ಯ, ಬೇಲೂರು, ಟಿ ರಾಮರಾವ್. ಮೂಡಿಗೆರೆ ವಿ ವಿ ಕುಪ್ಪಸ್ವಾಮಿ, ತರೀಕೆರೆ ಕೆ ಎಸ್ ಭಾಗೀರಥಮ್ಮ ಚನ್ನಪಟ್ಟಣ ಸಿ ಎಸ್ ರಾಮಯ್ಯ, ಕೆ. ಆರ್ ಸಾಗರ, ಎ ಎಸ್ ದೀಕ್ಷಿತ್, ಶ್ರೀರಂಗಪಟ್ಟಣ, ಪಾಯಸ್ಥರಾಯಪ್ಪಬಸ್ತಿ ಬೆಳಗಾಂ ಮಾರ್ತಾಂಡರಾವ್, ಹೊಳಲು

ಮೇಲ್ಕಂಡ ಬಹುಮಾನಗಳನ್ನು ಮುಂದಿನ ವಾರ ಎಲ್ಲರಿಗೂ ಕಳುಹಿಸಲಾಗುತ್ತೆ

ಮ್ಯಾ ಜ

ತಗಡೂರು ಖಾದಿ ಕೇಂದ್ರ



ಕೈರಾಟೆಯಲ್ಲಿ ನೂಲು ತೆಗೆಯುವ ಸ್ತ್ರೀಯರು

ತಾ॥ 14 ರಿಂದ 19 ರ ವರೆಗೆ ಮೈಸೂರು ಪ್ರವಾಸವನ್ನು ಮುಗಿಸಿ ತರವಾಯ ಬೆಂಗಳೂರಿನ ಕಡೆಗೆ ದಯಮಾಡಿಸಿರುತ್ತಾರೆ

ರಾಜಧಾನಿಯಲ್ಲಿ ಈ ಸ್ಮಾರಕೋತ್ಸವದ ವಿಚಾರದಲ್ಲಿ ಅಡ್ವೊಕೇಟ್ ಶ್ರೀ ಕೆ ಶೇಷಾದ್ರಿಯವರು, ಹೆಚ್ಚಾದವರಿಗೆ ಹೆಚ್ಚಿಗೆ ವಿವರಗಳನ್ನು ತಿಳಿಸುವರು ' ವಿಜಯನಗರದ ಸ್ಮಾರಕೋತ್ಸವದ ಪೂರ್ಣ ವಿವರಗಳನ್ನು ಒಳಗೊಂಡ ಹಸ್ತಪತ್ರಿಕೆಗಳೂ ಉಚಿತವಾಗಿ ಕೊಡಲ್ಪಡುವುವು

ಸಹಾಯಕರು 3 ರೂ ನಿಂದ ನೂರು ರೂಪಾಯಿಗಳವರೆವಿಗೂ, ಪೋಷಕರು ಒಂದು ನೂರು ರೂಪಾಯಿಗಳಿಂದ ಒಂದು ಸಾವಿರ ರೂಪಾಯಿಗಳವರೆವಿಗೂ ಸಹಾಯ ಮಾಡಬಹುದು 10 ರೂಪಾಯಿಗಳನ್ನು ಸಹಾಯ ಮಾಡುವವರಿಗೆ ಅಲ್ಲಿ ವಸತಿಯ ಸೌಲಭ್ಯವು ಉಚಿತವಾಗಿ ಏರ್ಪಡಿಸಲ್ಪಡುವುದು ಮತ್ತು ಸ್ಮಾರಕಮಂಡಲದ ಪ್ರಕಟನ ಗ್ರಂಥಗಳು ಉಚಿತವಾಗಿ ಕೊಡಲ್ಪಡುವುವು

ಪ್ರಯಾಣ ಮಾಡುವವರು ತಮ್ಮ ಸ್ವಂತ ಖರ್ಚಿನಿಂದ ಹೋಗಬೇಕಾಗಿರುತ್ತದೆ ಮತ್ತು ಊಟಕ್ಕೆ ನಿಯಮಿತವಾದಷ್ಟು ಹಣವನ್ನು ಕೊಡುವುದರ ಮೂಲಕ ಆ ಸ್ಥಳದಲ್ಲಿ ಅನುಕೂಲವನ್ನು ಪಡೆಯಬಹುದು ಇದುವರೆಗೆ ಅನೇಕ ಜನ ದೊಡ್ಡ ಮನುಷ್ಯರು ಸಹಾಯ ಮಾಡಿರುವರು

ಮೈಸೂರಿನ ಅಧಿಕಾರಿಗಳು ಭೋಪಾಲಿಗೆ

ಮಂತ್ರದ ಹೊಸ ವ್ಯವಸಾಯ ಡೈರೆಕ್ಟರಾದ ಮ॥ ಕೆ ಎಂ ಗುರುರಾಜಾಚಾರ್ಯರನ್ನು ಎರಡು ವರ್ಷಗಳವರೆಗೆ ಭೋಪಾಲ ಸಂಸ್ಥಾನಕ್ಕೆ ಕಳುಹಿಸಿಕೊಡಲಾಗಿದೆ ಅಲ್ಲಿನ ಆರ್ಥಿಕ ಸಚಿವರಾಗಿರುವ ಸರ್ ಜೋಸೆಫ್ ಭೋರರವರ ಸಹಾಯಕರನ್ನಾಗಿ ಇವರನ್ನು ಆರಿಸಿರುವರು

ಸ್ಪೆಷಲ್ ಡೆಪ್ಯೂಟಿ ಅಮಲ್ದಾರರವರು

ಮ॥ ಎಸ್. ಡಿ. ವೆಂಕಟಸುಬ್ಬಯ್ಯನವರು ಕ್ಲಾರ್ಕ್, ಎಕ್ಸೈಜು ಕಮೀಷನರವರ ಆಫೀಸು ಮ॥ ಜೆ ಬಿ ಕುಮಾರಾರಾಧ್ಯರು, ಎಕ್ಸೈಜು ಇನ್ಸ್‌ಪೆಕ್ಟರು, ಈಗ ಹಾಸನ ಡಿಸ್ಟ್ರಿಕ್ಟಿನಲ್ಲಿ ಅಸಿಸ್ಟೆಂಟ್ ಆಫೀಸರವರ ಕೆಲಸವನ್ನು ನೋಡುತ್ತಿದ್ದಾರೆ ಮ॥ ಡಿ. ಜಿ. ನಾರಾಯಣಸ್ವಿಂಗ್‌ರವರು, ಸಬ್ ರಜಿಸ್ಟ್ರಾರ್, ನಂಜನಗೂಡು ಮ॥ ಎಂ ಆರ್ ವಿಶ್ವನಾಥರಾವ್, ಅವರು, ಡಿಸ್ಟ್ರಿಕ್ಟ್ ಪ್ರಜಾರು, ಚಿತ್ರದುರ್ಗ, ಬೇರೆ ಕೆಲಸದ ಮೇಲೆ ಎಂದರೆ, ಅಸಿಸ್ಟೆಂಟ್ ಆಫೀಸರಾಗಿರುವ, ಮ॥ ಕುಮಾರಾರಾಧ್ಯರವರ ಜಾಗದಲ್ಲಿ. ಮ॥ ಎಸ್. ರಾಮಚಂದ್ರಗುಪ್ತರು, ರೆವಿನ್ಯೂ ಕಮಿಷನರವರ ಆಫೀಸಿನಲ್ಲಿ ಕ್ಲಾರ್ಕರಾಗಿ, ಶಿವಮೊಗ್ಗ ಡಿಸ್ಟ್ರಿಕ್ಟಿನಲ್ಲಿ ಅಸಿಸ್ಟೆಂಟ್ ಆಫೀಸರವರ ಕೆಲಸವನ್ನು ಮಾಡುತ್ತಿರುವ ಮ॥ ಟಿ ಸಿದ್ಧಲಿಂಗದೇವರು ಅವರು ಜನರಲ್ ಮತ್ತು ರೆವಿನ್ಯೂ ಸೆಕ್ರೆಟರಿಯಟ್ಟಿನಲ್ಲಿ ಫಸ್ಟ್ ಡಿವಿಜನ್ ಕ್ಲಾರ್ಕ್, ಬೇರೆ ಕೆಲಸದ ಮೇಲೆ ಎಂದರೆ, ಅಸಿಸ್ಟೆಂಟ್ ಆಫೀಸರಾಗಿರುವ ಮ॥ ರಾಮಚಂದ್ರಗುಪ್ತರವರ ಜಾಗದಲ್ಲಿ. ಹರಿಹರ ಸಬ್ ತಾಲ್ಲೂಕಿನ ಬದಲಿ ತರಬೇತು ಡೆಪ್ಯುಟಿ ಅಮಲ್ದಾರರಾದ ಮ॥ ಡಿ. ಎಸ್. ರಾಘವೇಂದ್ರಾಚಾರ್, ಎಂ ಎಸ್‌ಸಿ, ಅವರನ್ನು ಬದಲಿ ತರಬೇತು ಅಸಿಸ್ಟೆಂಟ್ ಕಮಿಷನರಾಗಿ ನೇಮಕ ಮಾಡಲ್ಪಟ್ಟು, ಮ॥ ಎಸ್. ಮಲ್ಲಸಂಜಪ್ಪ, ಅವರ ಜಾಗದಲ್ಲಿ ಬದಲಿ ತರಬೇತು ಅಮಲ್ದಾರರನ್ನಾಗಿ ನೇಮಕ ಮಾಡಲಾಗಿದೆ.

ವೆಂಕಟಕೃಷ್ಣಯ್ಯ ಸ್ಮಾರಕ ಬ್ಯಾಡ್ಮಿಂಟನ್.

ದಿವಂಗತ ವೃದ್ಧಪಿತಾಮಹ ಎಂ. ವೆಂಕಟಕೃಷ್ಣಯ್ಯನವರ ಸ್ಮಾರಕಾರ್ಥವಾಗಿ ಮೈಸೂರಿನ ಬ್ಯಾಡ್ಮಿಂಟನ್ ಟೋರ್ನಮೆಂಟು ಏರ್ಪಾಡಾಗಿದೆ. ಇದಕ್ಕೆ ಮ॥ ಎಲ್ ಕೋಣೇರಿರಾಯರು ಅಧ್ಯಕ್ಷರು. ಶ್ರೀ॥ ಗಣಪತಿ ಟಿ. ಸುಬ್ಬಾಭಟ್ಟರೂ, ಎಂ ಎ. ರಂಗಸ್ವಾಮಿಯವರೂ ಕಾರ್ಯದರ್ಶಿಗಳು. ಅನೇಕ ದೊಡ್ಡ ಮನುಷ್ಯರು ಸದಸ್ಯರು ಈ ಟೋರ್ನಮೆಂಟಿಗೆ ಸೇರಲು ಎಲ್ಲರಿಗೂ ಅವಕಾಶವಿದೆ ಗೆದ್ದವರಿಗೆ ಬೆಳ್ಳಿ ಬಟ್ಟಲುಗಳು ಬಹುಮಾನವಾಗಿ ಕೊಡಲ್ಪಡುವುವು ಇದರಲ್ಲಿ ಭಾಗವಹಿಸುವವರು ನಿಯಮಿತವಾದ ಶುಲ್ಕದೊಡನೆ ಈ ತಿಂಗಳು 25 ನೇ ತಾ॥ ನೊಳಗೆ ಕಾರ್ಯದರ್ಶಿಗಳಿಗೆ ಬರಬೇಕು

ಸ್ಕೌಟು ರ್‍ಯಾಲಿ

ಮೈಸೂರು ಸಂಸ್ಥಾನದ ಸ್ಕೌಟು ರ್‍ಯಾಲಿಯು ಮುಂದಿನ ತಿಂಗಳು 21 ರಿಂದ 31 ನೇ ತಾ॥ ವರೆಗೆ ದಾವಣಗೆರೆಯಲ್ಲಿ ನಡೆಯುವಂತೆ ಏರ್ಪಾಡಾಗಿದೆ.

ಆಕಾಶವಾಣಿ ಕಾರ್ಯಕ್ರಮ

ತಾ॥ 23ನೇ ಸೋಮವಾರ —8ರಿಂದ 9-15 ಕರ್ನಾಟಕ ವಾದ್ಯ ಸಂಗೀತ, ರೇಡಿಯೋ ಸಂಭಾಷಣೆ "ಪ್ರಪಂಚಪರಿಚಯ" ಮಂಗಳವಾರ —6-30 ರಿಂದ 8 ಶ್ರೀ॥ ಕೃಷ್ಣಗಿರಿ ಕೃಷ್ಣರಾಯರಿಂದ ಭಾರತಪಠನ; ಲಘುಸಂಗೀತ-ಬುಧವಾರ.—8 ರಿಂದ 9-15 ಕರ್ನಾಟಕ ಗಾನ, ಉಪನ್ಯಾಸ, ಮನಶ್ಶಾಸ್ತ್ರ, "ಸೂಚನೆಯೆಂದರೇನು?" ಡಾ॥ ಎಂ. ವಿ. ಗೋಪಾಲಸ್ವಾಮಿಯವರಿಂದ. ಗುರುವಾರ.—6-30ರ 8-ಕನ್ನಡ ನಾಟಕ "ರಾಮದಾಸ", ನಗರ ಶಾಸ್ತ್ರ-"ಬಡತನ" ಉಪನ್ಯಾಸ ಶ್ರೀ॥ ಎಸ್ ಕಸ್ತೂರಿಯವರಿಂದ

ನವರಾತ್ರಿ ಅಭ್ಯಾಗತರು.

ನವರಾತ್ರಿ ಉತ್ಸವಕ್ಕೆ ರಾಜಾತಿಥಿಗಳಾಗಿ ಅನೇಕ ಜನರು ದೇಶದೇಶಗಳಿಂದ ಬಂದಿದ್ದರು. ಮತ್ತು ಇತರರೂ ಲಕ್ಷಾಂತರ ಜನರು ಬಂದಿದ್ದರು. ಅವರಲ್ಲಿ ರೈಲಿನ ಮೂಲಕ ಒಂದು ಲಕ್ಷ ಜನರು ಬಂದಿದ್ದರು. ಎತ್ತಿನಗಾಡಿಗಳಲ್ಲಿ ಗ್ರಾಮಾಂತರದಿಂದ ಪ್ರಜೆಗಳು ಬಂದಿದ್ದರು. ಅವರಲ್ಲಿ ಖಾಸ್‌ಬಂಗಲೆಯಲ್ಲಿರುವ ಮೃಗಾಲಯಕ್ಕೆ ೭೩,೭೪೧ ಜನರೂ, ನವರಾತ್ರಿ ವಸ್ತುಪ್ರದರ್ಶನಕ್ಕೆ ೧,೦೦,೪೧೬ ಜನರೂ, ಕೃಷ್ಣರಾಜಸಾಗರದ ಬೃಂದಾವನವನ್ನು ನೋಡಲು ೬೭,೨೦೦ ಜನರೂ, ಮೈಸೂರು ಜಗನ್ಮೋಹನ ಬಂಗಲೆಯನ್ನೂ, ಅಲ್ಲಿರುವ ಚಿತ್ರಶಾಲೆಯನ್ನೂ ನೋಡಲು ೧೨,೬೧೫ ಜನರೂ ಹೋಗಿದ್ದರೆಂದು ಲೆಖ್ಖ ಗೊತ್ತಾಗುತ್ತದೆ.

ತಗಡೂರು ಮಾದರಿ ತಾಲ್ಲೂಕು.



ಕೈರಾಟೆಗಳಲ್ಲಿ ನೂಲು ತೆಗೆಯುತ್ತಿರುವ ಸ್ವಯಂಸೇವಕರು.

ವಿಶ್ವವಿದ್ಯಾನಿಲಯದ ಉಪನ್ಯಾಸಗಳು.

ತಾ॥ 24 ನೇ ಮಂಗಳವಾರ ಸಾಯಂಕಾಲ ಮೈಸೂರು ಮಹಾರಾಜರ ಕಾಲೇಜಿನಲ್ಲಿ-ಮೆಡಿಕಲ್ ಕಾಲೇಜು ಉಪನ್ಯಾಸಕರಾದ ಡಾ॥ ಸುಂದರೇಶನ್‌ರವರು ಕನ್ನಡದಲ್ಲಿ "ಆಹಾರಪುಷ್ಟಿ" ಎಂಬ ವಿಷಯವಾಗಿ ಉಪನ್ಯಾಸ ಮಾಡುವರು ಮತ್ತು ಅವರೇ ಬೆಂಗಳೂರು ಕರ್ನಾಟಕ ಸಾಹಿತ್ಯ ಪರಿಷನ್ಮಂದಿರದಲ್ಲಿ ತಾ॥ 26 ನೇ ಗುರುವಾರ ಅದೇ ವಿಚಾರವಾಗಿ ಮತ್ತೊಂದು ಭಾಷಣವನ್ನು ಮಾಡುವರು. ಕೈಗಾರಿಕೆ ಇಲಾಖೆಯ ಅಸಿಸ್ಟೆಂಟ್ ಡೈರೆಕ್ಟರಾದ ಮ॥ ಎಚ್ ಕೆ ರಾಮಯ್ಯಂಗಾರ್‍ರವರು "ಗ್ರಾಮ ಕೈಗಾರಿಕೆಗಳು" ಎಂಬ ವಿಚಾರವಾಗಿ ಈ ಕೆಳಗೆ ಕಂಡಂತೆ ಉಪನ್ಯಾಸ ಮಾಡುವರು —ತಾ॥ 23 ನೇ ಸೋಮವಾರ 6 ಗಂಟೆಗೆ ಅರಸೀಕೆರೆ ಟೌನ್‌ಹಾಲಿನಲ್ಲಿ, ತಾ॥ 30 ನೇ ಸೋಮವಾರ ಸಾಯಂಕಾಲ ಚಿಕ್ಕಬಳ್ಳಾಪುರದ ಟೌನ್ ಜೂಬಿಲಿ ಹಾಲಿನಲ್ಲಿ; ಡಿಸೆಂಬರ್ ತಾ॥ 7 ನೇ ಸೋಮವಾರ ಸಾಯಂಕಾಲ, ನಂಜನಗೂಡು, ದಳವಾಯಿ ಕಟ್ಟಡದಲ್ಲಿ.

ವಿ :—" ಇಲ್ಲ. ಡಾಕ್ಟರೇ ಫುಟ್‌ಬಾಲ್ ಆಡಲು ಬರುತ್ತಾರಲ್ಲಾ. ಅವರನ್ನೂ ಅವರ ಆಟವನ್ನೂ ಎರಡನ್ನೂ ನೋಡಿದಂತಾಗಲಿಲ್ಲವೆ?"

(ಎಂ ಸಿ. ವಿರೂಪಾಕ್ಷಪ್ಪ ಮೈಸೂರು, ಇವರಿಂದ)

ರಾಯರು.—ಏನು ಆಚಾರ್‍ರೆ ಮೊನ್ನೆ 3 ರೂಪಾಯಿಗೆ ತೆಗೆದುಕೊಂಡ್ರಲ್ಲಾ ಗಡಿಯಾರ ಹೇಗಿದೆ?

ಆಚಾರ್‍ರು —ಟೈಮ್ ಸರಿಯಾಗಿ ತೋರಿಸುತ್ತ ಕಂಡ್ರಿ. ಅಂದ್ರೆ 4 ಘಂಟೆಗೆ 5 ಘಂಟೆ ಹೊಡೆಯುತ್ತೆ ಅದೊಂದೆ.

* * *

ಹಳ್ಳಿಯವನು.—ಸ್ವಾಮಿ ನಂಗೆ 3 ಜಿನದಿಂದ ಜರ ಬರ್‍ತೈತೆ ಬುದ್ಧಿ ಎಂಗಾರ ಮಾಡಿ ಓಗಿಸ್ ಬಿಡಿ ಬುದ್ಧಿ

ಡಾಕ್ಟರ್:— ಈ ತರಮಾಮೀಟರನ್ನು ಕಂಕುಳಲ್ಲಿ ಇಟ್ಟುಕೊಳ್ಳಯ್ಯಾ.

ಹಳ್ಳಿಯವನು:—ಇದನ್ನಿಟ್ಕೊಂಡ್ರೆ ಜರ ಓಯ್ತೈತ ಬುದ್ಧಿ?

ವಿನೋದಲಹರಿ.

"ಏನ್ರೀ! ನಿಮ್ಮ ಯಜಮಾನರಿಗೆ ತಿಂಗಳಿಗೆ ಭಾರಿ ಸಂಬಳ ಬರುತ್ತೆ. ಆದರೂ ಏಕೆ ಇನ್ನೂ ಒಂದು ಮೋಟಾರು ತೆಗೆದಿಲ್ಲಾ?

ಸ್ನೇಹಿತೆ—ಮೋಟಾರು ತೆಗೆದುಕೊಂಡರೆ ನಾವು ಪಾಪರಾಗುವ ಪರ್ಚುಗಳು ಬೇಕಾದಷ್ಟಿದೆ ಎಂದು ನಮ್ಮ ಯಜಮಾನರು ಹೇಳುವರು.

* * *

ಕಾಫಿಯಿಂದ ಎಣ್ಣೆ ತೆಗೆಯಬಹುದೆಂದು ಒಬ್ಬ ವಿಜ್ಞಾನ ಶಾಸ್ತ್ರಜ್ಞರು ಬಹಳ ಪ್ರಯಾಸಪಟ್ಟು ಕಂಡುಹಿಡಿದಿರುವರಂತೆ ಆದರೆ ನಾವು ಅನೇಕ ಕಡೆ ಕುಡಿಯುವ ಕಾಫಿಯು ಎಣ್ಣೆಯಂತೆಯೇ ಇರುತ್ತದೆಂಬುದು ಅವರಿಗೆ ಗೊತ್ತಿಲ್ಲವೇನೋ?

* * *

ಪತ್ರಿಕೆ ವ್ಯಾಪಾರಿ—ಬಿಸಿ ಬಿಸಿ ಸುದ್ದಿ ಒಂದು ಪತ್ರಿಕೆ ತೆಗೆದುಕೊಳ್ಳಿ ಆರೇ ಕಾಸು

ಗೌಡ:—(ಪತ್ರಿಕೆ ಮುಟ್ಟಿನೋಡಿ) ತಣ್ಣಗೇ ಇದೆಯಲ್ಲ ಸ್ವಾಮಿ?

* * *

ಡಾಕ್ಟರು—ಏನು ರಾಯರೇ ಒಂದು ಕ್ಷೇಮವೇ?

ರಾಯರು —ಕ್ಷೇಮವಾಗಿದ್ದರೆ ನಿಮ್ಮ ಬಳಿಗೇಕ ಬರುತ್ತಿದ್ದೆ?

* * *

ಉಪಾಧ್ಯಾಯರು —ಏನೋ ರಾಮು ನಿನಗೆ ಜ್ಞಾಪಕಶಕ್ತಿ ಕಡಿಮೆಯಾದ ಹಾಗೆ ಅಂತ ಕಾಣುತ್ತೆ?

ರಾಮು:—ಹವುದು ಸಾರ್ ಡಾಕ್ಟರು ಮೊನ್ನೆ ದಿವಸ ಜೀರ್ಣಶಕ್ತಿ ಕಡಿಮೆಯಾಗಿರಬೇಕು ಅಂತ ಹೇಳಿದರು. ಅದಕ್ಕೇನೇ ಜ್ಞಾಪಕಶಕ್ತಿ ಕಡಿಮೆ

* * *

ಉಪಾಧ್ಯಾಯರು —ಶಿಷ್ಯನನ್ನು ಕುರಿತು ದಶರಥನ ಅಪ್ಪ ಯಾರು?

ಶಿಷ್ಯ:—ಶತರಥ ಸಾರ್

* * *

ನಿರುದ್ಯೋಗಿಯೊಬ್ಬನು ಕಾರಕೂನಿಕೆಗೆ ಅರ್ಜಿ ಹಾಕಿದನು. ಭೇಟಿಗೆ ಹೋಗಿದ್ದಾಗ ವ್ಯವಸ್ಥಾಪಕರು "ನಿನಗೆ ಯಾವ ಆಕಾಂಕ್ಷೆ ಇದೆ?" ಎಂದು ಕೇಳಿದರು "ಆಕಾಂಕ್ಷೆಯೇ? ನಿಮ್ಮ ಕಷ್ಟವನ್ನು ತಪ್ಪಿಸಿ ಆ ಸ್ಥಳಕ್ಕೆ ನಾನು ಬರುವವರೆಗೂ ಸುಮ್ಮನೆ ಕುಳಿತುಕೊಳ್ಳುವುದಿಲ್ಲ" ಎಂದನು.

* * *

ಹಾರಗಳಿಗೆ ಚಕ್ಕರ್ ಕೊಟ್ಟು ಹುಡುಗನೊಬ್ಬನು ಫುಟ್‌ಬಾಲ್ ಮೈದಾನದಲ್ಲಿ ಇದ್ದವನ್ನು ಕಂಡು ಅವನ ಸ್ನೇಹಿತನು "ಹೇಗೆ ರಜಾ ತೆಗೆದುಕೊಂಡೆಯಯ್ಯಾ" ಎಂದನು.

ವಿದ್ಯಾರ್ಥಿ—'ಡಾಕ್ಟರನ್ನು ನೋಡಬೇಕು ರಜಾ ಕೊಡಿ ಎಂದು ಕೇಳಿದೆ"

ಸ್ನೇ:—"ಹಾಗಾದರೆ ಡಾಕ್ಟರಬಳಿಗೆ ಹೋಗುವೆಯಾ"?

(ಹಿಂದಿನ ಕಾಲಮನ್ನು ನೋಡಿ)

ಕನ್ನಡದಲ್ಲಿ ಕಲಿಸುವುದು

ಲೇಖಕರು :—ಆರ್. ಕೆ. ಸುಬ್ಬರಾಯಪ್ಪ, ಎಂ. ಎ. ಬಿ ಟಿ

'ವಿಶ್ವವಿದ್ಯಾನಿಲಯವನ್ನು ಪ್ರವೇಶಿಸ ಬಾಲಕರ ಬೌದ್ಧಿಕ ಸಂಸ್ಕಾರವು ಇಂಗ್ಲೀಷಿನಲ್ಲಿ ಅತಿಕಡಿಮೆಯಾಗಿರುವುದು. ಸೈನ್ಸ್ ಚರಿತ್ರೆ ಮುಂತಾದುವುಗಳನ್ನು ಕನ್ನಡದಲ್ಲಿ ಕಲಿಸುವುದೇ ಕಾರಣವು" "ಹೈಸ್ಕೂಲುಗಳನ್ನು ಬಿಟ್ಟು ಕಾಲೇಜು ಸೇರುವ ಬಾಲಕರು ಇಂಗ್ಲೀಷಿನಲ್ಲಿ ಬಹಳ ಹಿಂದಾಗಿರುವರು; ಒಂದೆರಡು ವಾಕ್ಯಗಳನ್ನು ಕೂಡ ತಪ್ಪಿಲ್ಲದೆ ಸರಿಯಾಗಿ ಬರೆಯಲಾರರು. ಇದಕ್ಕೆ ಕಾರಣವೇನಿರಬಹುದು? ಬಾಲಕರ ಇಂಗ್ಲೀಷು ಚೆನ್ನಾಗಿರುವಂತೆ ಮಾಡಲು ನಾವು ಮಾಡಬೇಕಾದುದೇನು?"

ಈ ಪ್ರಶ್ನೆಗಳು ಎಲ್ಲೆಲ್ಲೂ ಕೇಳಿಬರುವುವು. "ಮೊದಲು ಹೈಸ್ಕೂಲು ತರಗತಿಗಳಲ್ಲಿ ಚರಿತ್ರೆ, ಭೂಗೋಳ, ಗಣಿತ, ಸೈನ್ಸ್ ಮುಂತಾದವುಗಳನ್ನು ಇಂಗ್ಲೀಷಿನಲ್ಲಿ ಕಲಿಸುತ್ತಿದ್ದರು. ಈಚೆಗೆ ಕನ್ನಡದಲ್ಲಿ ಕಲಿಸಲು ಮೊದಲು ಮಾಡಿದುದರಿಂದ ಬಾಲಕರ ಇಂಗ್ಲೀಷು ಭಾಷೆಯಲ್ಲಿನ ಜ್ಞಾನವು ಕಡಿಮೆಯಾಯಿತು. ಹೈಸ್ಕೂಲುಗಳಲ್ಲಿ ಮಾತೃಭಾಷೆಯಲ್ಲಿ ಪಾಠಕಲಿಸುವುದನ್ನು ತಪ್ಪಿಸಿ, ಪುನಃ ಮೊದಲಿನಂತೆ ಇಂಗ್ಲೀಷಿನಲ್ಲೇ ಕಲಿಸಲು ಪ್ರಾರಂಭಿಸಬೇಕು. ಹಾಗಿಲ್ಲದಿದ್ದಲ್ಲಿ ವಿಶ್ವವಿದ್ಯಾಲಯದ ಪರೀಕ್ಷೆಗಳಲ್ಲಿ ಫೇಲಾಗುವವರ ಸಂಖ್ಯೆಯು ಹೆಚ್ಚಾಗುವುದು" ಎಂದು ಕೆಲವರು ಹೇಳುವರು. ಈ ವಾದಕ್ಕೆ ಏನಾದರೂ ಆಧಾರವುಂಟೆ ಎಂಬುದನ್ನು ನಾವು ನೋಡಬೇಕು.

ಮಾತೃಭಾಷೆಯಲ್ಲಿ ಸುಲಭವಾಗಿ ವಿಷಯ ಗ್ರಹಣವಾಗುವ ಹಾಗೆ ಪರಕೀಯ ಭಾಷೆಯಲ್ಲಿ ಎಂದಿಗೂ ಆಗಲಾರದು. ಇಂಗ್ಲೀಷಿನಲ್ಲೇ ಪಾಠಮಾಡುತ್ತಿರುವಾಗಲೂ ಉಪಾಧ್ಯಾಯರು ತಾವು ಹೇಳಿಕೊಟ್ಟ ಪಾಠವು ಬಾಲಕರ ಮನಸ್ಸಿಗೆ ಚೆನ್ನಾಗಿ ಹಿಡಿಯುವಂತೆ ಮಾಡಲು ಮಾತೃಭಾಷೆಯನ್ನು ಹೆಚ್ಚಾಗಿ ಉಪಯೋಗಿಸುತ್ತಿದ್ದರು. ಇಂಗ್ಲೀಷಿನಲ್ಲಿ ಪಾಠಹೇಳುತ್ತಿರುವಾಗ, ಮಾತೃಭಾಷೆಯಲ್ಲಿನ ಒಂದೆರಡು ಮಾತುಗಳನ್ನು ಉಪಯೋಗಿಸುವುದರಿಂದ ಒಂದು ಗಂಟೆಯಲ್ಲಿ ಹೇಳಿಕೊಟ್ಟ ಪಾಠವನ್ನು ಬಾಲಕರು ಒಂದೆರಡು ನಿಮಿಷಗಳಲ್ಲಿ ಗ್ರಹಿಸುವರು. ಹೀಗಿರುವಲ್ಲಿ ಮಾತೃಭಾಷೆಯಲ್ಲಿ ಪಾಠವನ್ನು ಹೇಳಿಕೊಟ್ಟಲ್ಲಿ ಬಹಳ ಪ್ರಯೋಜನ ಉಂಟೆಂದು ನಾವು ಬೇರೆ ಹೇಳಬೇಕೆ! ಪರಭಾಷೆಯಲ್ಲಿ ನಾವು ಎಷ್ಟು ಚೆನ್ನಾಗಿ ಪಾಠಹೇಳಿಕೊಟ್ಟರೂ ಬಾಲಕರ ಮನಸ್ಸಿನಲ್ಲಿ ಉಂಟಾಗುವ ಅಭಿಪ್ರಾಯಗಳು ಅಷ್ಟು ಸ್ಪಷ್ಟವಾಗಿರಲಾರವು; ಕೆಲವೇಳೆ ಅಭಿಪ್ರಾಯಗಳು ಅಸ್ಪಷ್ಟವಾಗಿದ್ದರೂ ಹೆಚ್ಚು ಅಭಿಪ್ರಾಯಗಳು ಬರವು. ಅಲ್ಪಕಾಲದಲ್ಲಿ ಹೆಚ್ಚು ವಿಷಯಗಳನ್ನು ಸ್ಪಷ್ಟವಾಗಿ ಬಾಲಕರ ಮನಸ್ಸಿಗೆ ಹಿಡಿಯುವಂತೆ ಮಾಡುವುದೇ ಮಾತೃಭಾಷೆಯಲ್ಲಿ ಪಾಠ ಹೇಳುವುದರ ಮುಖ್ಯ ಉದ್ದೇಶವು.

ಹೀಗೆ ಬಾಲಕರು ತಾವು ತಿಳಿಯಬೇಕಾದ ಅಂಶಗಳನ್ನು ಸ್ಪಷ್ಟವಾಗಿ ತಿಳಿದುಕೊಂಡುದೇ ಆದರೆ ಅದಕ್ಕಾಗಿ ಮನೆಯಲ್ಲಿ ಹೆಚ್ಚು ಕ್ಲೇಶಪಡಬೇಕಾದುದಿಲ್ಲವು. ತನಗಿರುವ ಕಾಲವನ್ನು ಪರಭಾಷೆ ಕಲಿಯಲು ಉಪಯೋಗಿಸಬಹುದು, ಪರಭಾಷೆಯಲ್ಲಿ ಪಾಠಮಾಡಿ ಪರಭಾಷೆಯಲ್ಲೇ ಅಭಿಪ್ರಾಯಗಳನ್ನು ತಿಳಿದುಕೊಳ್ಳುವಂತೆ ನಾವು ಬಾಲಕರಿಗೆ ಬಲಾತ್ಕಾರಮಾಡಿದಲ್ಲಿ, ಬಾಲಕರು "ಮಕ್ಷಿಕಾಸ್ಥಾನೇ ಮಕ್ಷಿಕಾ" ಎಂಬಂತೆ ಉರುಹೊಡೆಯಲು ಮೊದಲು ಮಾಡುವರು. ಅದಕ್ಕಾಗಿ ಅವರು ತಮ್ಮ ಕಾಲವನ್ನೆಲ್ಲಾ ವ್ಯರ್ಥ ಮಾಡಿಬಿಡುವರು.

ನಮ್ಮ ಬಾಲಕರುಗಳ ಮನಸ್ಸಿನಲ್ಲಿ ಭಾವನೆಗಳೇ ಇಲ್ಲವು. ಇರುವ ಅಲ್ಪಸ್ವಲ್ಪ ಭಾವನೆಗಳೂ ಸ್ಪಷ್ಟವಾಗಿಲ್ಲವು. ಆದುದರಿಂದಲೇ ಅವರು ಬರೆಯಲಾರರು. ನಾವು ಏನಾದರೂ ಕೆಲಸ ಮಾಡಬೇಕಾದರೆ ಅದಕ್ಕನುರೂಪವಾದ ಭಾವನೆಯು, ಎಷ್ಟು ಎಷ್ಟು ಸ್ಪಷ್ಟವಾಗಿರುವುದೋ ಎಷ್ಟು ಎಷ್ಟು ಪ್ರಬಲವಾಗಿರುವುದೂ, ನಮ್ಮ ಕಾರ್ಯವು ಅಷ್ಟು ಅಷ್ಟು ವೇಗವಾಗಿರುವುದು. ನಮ್ಮ ಬಾಲಕರು ಇಂಗ್ಲೀಷಿನಲ್ಲಿ ಬಹಳ ಕೆಳಗಿದ್ದಾರೆಂದರೆ, ಅವರ ಮನಸ್ಸಿನಲ್ಲಿನ ಭಾವನೆಗಳು ಸ್ಪಷ್ಟವಾಗಿಲ್ಲವೆಂದರ್ಥವು. ಬಾಲಕರ ಮನಸ್ಸನ್ನು ಪರೀಕ್ಷಿಸಿ ನೋಡಿದರೆ ಅದು ಸ್ಪಷ್ಟವಾಗುವುದು. ಕಾಲೇಜಿನ ಬಾಲಕರು ಇಂಗ್ಲೀಷಿನಲ್ಲಿ ನಾಲ್ಕಾರು ವಾಕ್ಯಗಳನ್ನು ಒಟ್ಟಿಗೆ ಬರೆಯಲಾರರು ಎಂದು ಹೇಳಿದರೆ ಕಾಲೇಜಿನಲ್ಲಿ ಹೇಳಿಕೊಡುವ ಅಂಶಗಳು ಬಾಲಕರ ಮನಸ್ಸಿಗೆ ಗ್ರಹಿಕೆಯಾಗಿಲ್ಲವೆಂದರ್ಥ. ಹೈಸ್ಕೂಲಿನಲ್ಲಿ ಕನ್ನಡದಲ್ಲಿ ಪಾಠಗಳನ್ನು ಕಲಿಸುವುದರಿಂದ ಎಂದಿಗೂ ಅವರು ಅಸಮರ್ಥರಾಗಲಾರರು.

ಒಂದುವೇಳೆ ಹೈಸ್ಕೂಲುಗಳಲ್ಲಿ ಇಂಗ್ಲೀಷಿನಲ್ಲೇ ಎಲ್ಲವನ್ನೂ ಹೇಳಿಕೊಡುವುದರಿಂದ ಆಗುವ ಪರಿಣಾಮವೇನು? ಏನು? ತಾನು ಕಲಿಯಬೇಕಾದ ವಿಷಯಗಳೆಲ್ಲವನ್ನೂ ಪಠ್ಯಪುಸ್ತಕಗಳನ್ನೋದಿ ತಿಳಿದುಕೊಳ್ಳಲಾರನು, ಪರೀಕ್ಷಾರ್ಥವಾಗಿ ಉಪಾಧ್ಯಾಯರನ್ನು ಕುರಿತು "ಮುಖ್ಯವಾದುದನ್ನು ಹೇಳಿ, ನೋಟ್ಸು ಬರೆಸಿಬಿಡಿ" ಎನ್ನುವನು. ಉಪಾಧ್ಯಾಯರು ಪರೀಕ್ಷೆಗೆ ಬರಬಹುದಾದ ಮುಖ್ಯ ಮುಖ್ಯ ಅಂಶಗಳನ್ನು ಬರೆಯಿಸಿಬಿಡುವರು. ಬಾಲಕನು ತಪ್ಪು ತಪ್ಪಾಗಿ ಅವುಗಳನ್ನು ಬರೆದುಕೊಂಡು ಉರುಹಾಕಿ ಪರೀಕ್ಷೆಯಲ್ಲಿ ತಾನು ಉರುಹಾಕಿದ್ದನ್ನು ಉಗುಳಿಬಿಡುವನು ಏನೋ ಪ್ಯಾಸು ಮಾತ್ರ ಆಗಿ ಹೋಗುತ್ತದೆ. ಬಾಲಕನಿಗೆ ತಾನು ಕಲಿತ ಗ್ರಂಥಗಳಲ್ಲಿ ನವಿಲ್ಲ, ಸ್ವತಂತ್ರಾಭಿಪ್ರಾಯಗಳೊಂದೂ ಇಲ್ಲ. ಇಂತಹ ಬಾಲಕನು ಕಾಲೇಜಿಗೆ ಹೋಗುತ್ತಾನೆ. ಅಲ್ಲಿ ಇಟ್ಟಿರುವ ಪಾಠಗಳು ಹೆಚ್ಚು; ಹೇಳಿಕೊಡುವುದು ಕಡಿಮೆ. ವರ್ಷಕ್ಕೆ 90–100 ದಿವಸಗಳು ಪಾಠ ಆದರೆ ಅದೇ ಹೆಚ್ಚು. ಅಷ್ಟನ್ನೂ ಸ್ವತಂತ್ರವಾಗಿ ಓದಿ ಕಲಿಯಲು ಯೋಗ್ಯತೆ ಸಾಲದು.

ಆದ್ದರಿಂದ ಕಾಲೇಜಿನ ಅಧ್ಯಾಪಕರು ಬಾಲಕರ ಮೇಲಿನ ಕನಿಕರದಿಂದ ಪರೀಕ್ಷೆಯಲ್ಲಿ ಬರಬಹುದಾದ ವಿಷಯಗಳ ಮೇಲೆ ಸಾರಾಂಶವನ್ನು ನೋಟ್ಸು ಬರೆಯಿಸುವರು. ಹುಡುಗರು ಅವುಗಳನ್ನು ತಪ್ಪಾಗಿಯೋ ಸರಿಯಾಗಿಯೋ ಹೇಗೋ ಬರೆದುಕೊಂಡು ಉರುಹೊಡೆದು ಪರೀಕ್ಷೆಗೆ ಕೂತುಕೊಳ್ಳುವರು. ಹೀಗಾಗಿ ಬಾಲಕರ ಪರಭಾಷಾಜ್ಞಾನವು ಕಡಮೆಯಾಗಿದೆಯೋ ಹೊರತಾಗಿ "ಅನಿಷ್ಟಕ್ಕೆ ಶನೇಶ್ವರನೇ" ಎಂಬಂತೆ ಹೈಸ್ಕೂಲಿನಲ್ಲಿ ಕನ್ನಡದಲ್ಲಿ ಪಾಠಕಲಿಸುವುದು ಎಂದಿಗೂ ಅಲ್ಲವು.

ಹೀಗೆ ಹೈಸ್ಕೂಲು ಮೊದಲುಗೊಂಡು (ಇದಕ್ಕೆ ಮಿಡಲ್ ಸ್ಕೂಲನ್ನು ಸೇರಿಸಿಕೊಳ್ಳಬಹುದು) ಕಾಲೇಜು ಬಿಟ್ಟ ಪದವೀಧರರಾಗುವವರೆಗೂ ಈ ನೋಟ್ಸುಗಳಲ್ಲೇ ಅವರ ವಿದ್ಯಾಭ್ಯಾಸವು ಆಗಿಹೋಗಿಬಿಡುತ್ತದೆಯೇ ಹೊರತು, ಪುಸ್ತಕ ಪಾಠವಾಗುವುದು ತೀರ ಕಡಮೆ. ಪುಸ್ತಕಗಳನ್ನು ಓದಿ ಪ್ಯಾಸುಮಾಡುವವರ ಸಂಖ್ಯೆ ಬಹಳ ಕಡಮೆ ಎಂದರೆ ಅತಿಶಯೋಕ್ತಿಯಾಗಲಾರದು. ಪುಸ್ತಕ ಯಾವುದೇ ಆಗಲಿ ಅರ್ಥವಾದರೆ ಓದಬೇಕೆಂದನ್ನಿಸುತ್ತದೆ. ಅರ್ಥವಾಗದಿದ್ದರೆ ಅದನ್ನು ದೂರವಿಡಬೇಕೆಂದೆನ್ನಿಸುತ್ತದೆ. ಹಾಗೆ ದೂರ ಬಿಸಾಡದಂತೆ ಮಾಡಲು ಪರಭಾಷೆಯನ್ನು ಹೈಸ್ಕೂಲುಗಳಲ್ಲಿ ಕಲಿಸುವ ಕ್ರಮವಾವುದೆಂಬುದನ್ನು ಯೋಚಿಸಿ ಅದನ್ನು ಸರಿಪಡಿಸಬೇಕೆ ಹೊರತು, ಚರಿತ್ರೆ, ಭೂಗೋಳ, ಸೈನ್ಸ್ ಮುಂತಾದವುಗಳನ್ನು ಕನ್ನಡದಲ್ಲಿ ಕಲಿಸುವುದರಿಂದ ಹೀಗಾಗಿದೆ ಎಂದು ತಪ್ಪು ತಿಳುವಳಿಕೆ ಮಾಡಿಕೊಂಡು ಮರವು ಕೊಡಲಿಗೆ ಕಾವಾದಂತೆ ಕನ್ನಡ ಛೇದನಕ್ಕೆ ಕಾರಣರಾಗುವುದು ಧರ್ಮವೇ?

ಹಾಗೆಯ ಗೋಧಿ, ಮುಸ್ಸಾಗಡ ಬೆಲ್ಲ?

ಮೈಸೂರು ಮೊದಲನೇ ಮುನ್ಸೀಫರ ಕೋರ್ಟಿನಲ್ಲಿ ೧೨೨೦ ರೂ. ಬಾಕಿಗೋಸ್ಕರ ಒಂದು ದಾವಾ ಆಗಿದೆ. ಮೊಕದ್ದಮೆಗೆ ಸಂಬಂಧಪಟ್ಟ ಕಾಗದಪತ್ರಗಳನ್ನೂ ಖರಡುಗಳನ್ನೂ, ಮತ್ತು ರುಜು ಮುಂತಾದವುಗಳನ್ನೂ ಪರೀಕ್ಷಿಸಲು ಅವುಗಳನ್ನು ಪರೀಕ್ಷಿಸುವ ನಿಪುಣರನ್ನು ಕಲ್ಕತ್ತೆಯಿಂದ ಕರೆಸಲಾಯಿತು ಆತನಿಗೆ ಹೋಗಿ ಬರುವ ಪ್ರಯಾಣ ಭತ್ಯ ಆತನ ವೇತನ ಮುಂತಾದುವುಗಳೆಲ್ಲವೂ ಸೇರಿ ೬00 ರೂ. ಗಿಂತ ಹೆಚ್ಚಾಗಿರುವುದಾಗಿ ತಿಳಿದುಬಂದಿದೆ. ನ್ಯಾಯವಿಮರ್ಶೆಯು ಬೆಲೆಗೆ ಸರಿಯಾಯಿತೆ?

ರಾಜರು ಸ್ವಂತ ಆಸ್ತಿ ಮಾಡ ಬಾರದು.

ಮಹಾತ್ಮಾ ಗಾಂಧಿಯವರ ಹೇಳಿಕೆ.

ಹರಿಜನ ಪತ್ರಿಕೆಯಲ್ಲಿ ಬರೆದಿರುವ ಒಂದು ಲೇಖನದಲ್ಲಿ ಮಹಾತ್ಮಾ ಗಾಂಧಿಯವರು ಹೀಗೆ ಹೇಳಿರುವರು.—

ವೇದಗಳಿಂದ ನಿರೂಪಿತವಾಗಿರುವ ಸನಾತನ ಧರ್ಮದ ಮೂಲ ತತ್ವಗಳಿಗೆ ವಿರೋಧವಿಲ್ಲದ ಧಾರ್ಮಿಕ ಕರ್ಮಗಳನ್ನು ಕಾಲಕ್ಕೆ ತಕ್ಕಂತೆ ವಿಧಿಸಿ ಪ್ರಚಾರ ಮಾಡುವುದು ಹಿಂದೂ ರಾಜರುಗಳ ಹಕ್ಕು ಮತ್ತು ಪ್ರಥಮ ಕರ್ತವ್ಯ. ರಾಜರುಗಳು ಹಾಗೆ ಮಾಡದಿದ್ದರೆ ಅವು ಅನ್ಯ ತಪ್ಪಿಲ್ಲ ಜೀರ್ಣವಾಗುತ್ತಿರುವ ವ್ಯವಸ್ಥೆಗೆ ಅದಕ್ಕೆ ಕಾರಣ ನಿಜವಾದ ಪ್ರಜಾ ತಜ್ಞರನ್ನು ಸ್ಥಾಪಿಸಲ್ಪಟ್ಟರೆ ರಾಜರುಗಳು ಜಗಿಗಳಾಗುವರು. ಆಗ ರಾಜರುಗಳು ತಮ್ಮ ಶ್ರಮಕ್ಕೆ ಪ್ರತಿಫಲರೂಪವಾಗಿ ತಮಗೆ ನ್ಯಾಯವಾಗಿ ಸಲ್ಲಬೇಕಾದ ವೇತನವನ್ನು ಮಾತ್ರ ದೇಶದ ಬೊಕ್ಕಸದಿಂದ ತೆಗೆದುಕೊಳ್ಳುವರು. ಪ್ರಜೆಗಳಿಂದ ಬಂದ ಹುಟ್ಟುವಳಿಯನ್ನು ಇತರ ಟ್ರಸ್ಟಿಗಳಾಗಿ ರಕ್ಷಣೆ ಮಾಡುವರು. ಅವರು ಈಗ ಮಾಡುತ್ತಿರುವಂತೆ ಸ್ವಂತ ಆಸ್ತಿಯನ್ನು ಮಾಡುವುದಿಲ್ಲ. ಇತರ ಅಭಿಪ್ರಾಯವನ್ನು ತಿರಸ್ಕರಿಸಿ ಸ್ವೇಚ್ಛೆಯಿಂದ ಪ್ರವರ್ತಿಸುವುದಿಲ್ಲ. ಆದರೆ ನಮ್ಮ ಜೀವ ಮಾನದಲ್ಲಿಯೇ ಈ ಆದರ್ಶ ಪರಿಸ್ಥಿತಿಯನ್ನು ನೋಡುತ್ತೇವೆಯೋ ಇಲ್ಲವೋ ಅಥವಾ ಇನ್ನು ಮುಂದೆ ಎಂದಾದರೂ ಕಾಣುತ್ತೇವೆಯೋ ಇಲ್ಲವೋ ತಿಳಿಯದು.

ಜವಾಹರಲಾಲರ ವರ್ಧಂತಿ.

ಪಂಡಿತ ಜವಾಹರಲಾಲರ 47 ನೇ ವರ್ಷದ ವರ್ಧಂತಿ ಪ್ರಯುಕ್ತ ಕಳೆದ 14 ನೇ ಶನಿವಾರ ಮುನಿಸ್ಪಲ್ ಎಲ್ಲಾ ಸ್ಕೂಲು ಪಾಠಶಾಲಾ ಮಕ್ಕಳಿಗೂ ಮಿ॥ ವೆಂಕಟಗಿರಿಯಪ್ಪನವರು ತಿಂಡಿ ಪದಾರ್ಥಗಳನ್ನು ಹಂಚಿಸಿದ ವಿಷಯವು ಬಹಳ ಸ್ತೋತ್ರಾರ್ಹವಾಗಿದೆ.

ಶ್ರೀ ಗೋಮಟೇಶ್ವರ ಸ್ವಾಮಿ

ಶ್ರವಣಬೆಳಗೊಳದ ಚಂದ್ರಗಿರಿಯ ಮೇಲಿರುವ ಶ್ರೀ ಗೋಮಟೇಶ್ವರಸ್ವಾಮಿಯನ್ನು ಬೆಟ್ಟದಮೇಲೆ ಹತ್ತಿಹೋಗಿ ದರ್ಶನಮಾಡಿ ಪೂಜೆಮಾಡಿಸಿಕೊಂಡು ಬರಲು ಅಲ್ಲಿನ ಸ್ವಾಮಿಗಳು ಹರಿಜನರಿಗೆ ಅವಕಾಶವನ್ನು ಕಲ್ಪಿಸಿಕೊಟ್ಟಿರುತ್ತಾರೆಂದು ಪತ್ರಿಕೆಗಳಲ್ಲಿ ಪ್ರಕಟವಾಗಿತ್ತು. ಈ ವಿಷಯವು ನಿರಾಧಾರವಾದುದೆಂದೂ, ಶ್ರೀಗಳವರು ಮೇಲ್ಕಂಡಂತೆ ಯಾರಿಗೂ ಅಪ್ಪಣೆ ಕೊಡಿಸಿಲ್ಲವೆಂದೂ, ಪೂರ್ವ ಪದ್ಧತಿಗೆ ವಿರುದ್ಧವಾಗಿ ಜನರನ್ನು ಇಚ್ಛಾನುಸಾರ ಬಿಟ್ಟಿರಲು ಶ್ರೀಗಳವರು ಅಪ್ಪಣೆ ಕೊಡಿಸಲೂ ಇಲ್ಲವೆಂದೂ ಅಲ್ಲಿನ ಗೌ॥ ಕಾರ್ಯದರ್ಶಿಗಳಾದ ನ್ಯಾಯತೀರ್ಥ ಎ. ಸುಬ್ಬಯ್ಯ ಶಾಸ್ತ್ರಿಗಳು ಪ್ರಕಟಿಸಿರುತ್ತಾರೆ.

ಇಣುಕಪ್ಪನ ನೋಟ.

ಸ್ವಾಮಿ ನಾನು ತಮ್ಮಿಂದ ಭೇಟಿಮಾಡಿ ಸ್ವಲ್ಪವೇ ಸ್ವಲ್ಪನಾಗಿ 2-3 ತಿಂಗಳು ಗಳುರುಳಿದುವು. ಕ್ಷಮಿಸಿ. ಕಾರಣ ಗೊತ್ತಿದೆಯಲ್ಲ ಪಾಕ್ಷಿಕ ಪ್ರವಾಸದಿಂದ ಬಂದ ಕೂಡಲೆ ಸಾಧ್ವಿ ಕೃಷ್ಣನ ಸನ್ನಿಧಿ ನೋಟದ ಕಾತುರತೆ ದಸರ ವಸ್ತುಪ್ರದರ್ಶನ, ನೋಟಗಳ ವೈವಿಧ್ಯ ದಸರೆಗೆ ಬರುತ್ತ ಜ್ಯೋತ್ಸ್ನಾ, ಪ್ರತಿನಿಧಿ ಸಭೆಯ ಕಾರ್ಯಕಲಾಪಗಳು, ಜಗನ್ಮಾತೃಯಾದ ಚಾಮುಂಡಾಂಬೆಯ ರಥೋತ್ಸವ ಇತ್ಯಾದಿ ನೋಟ್ಯೋತ್ಸವಗಳ ದಯಪಾಗ ನನ್ನ ನೋಟದ ಕಡೆಗೆ ತಮ್ಮನ್ನು ಮರೆಮಾಡಿಕೊಳ್ಳುವುದು ಯುಕ್ತವಲ್ಲವೆಂದು ಇದುವರೆವಿಗೂ ಸುಮ್ಮನಿದ್ದೆ ಅಷ್ಟೆ.

ಕುರಿಲ ಪ್ರಶ್ನೆಯೋ, ಓಟಿನ ಭಿಕ್ಷೆಯೋ?

ಮೊನ್ನೆ ಪ್ರಾತಃಕಾಲ ಹಾಗೆಯೇ ಹೊರಟೆ. ಆಗ ಕಾಲಾವತ್ತಿನ ಪೇಟೆ ದರುಸಿಕ್ಕಯಲ್ಲಿ ನಾಕಿಂಗ್ ಸ್ಟಿಕ್ (ದೊಣ್ಣೆ) ಹಿಡಿದ ಒಂದು ವ್ಯಕ್ತಿಯು ಮುನಿಸಿಪಲ್ ಕನ್ಸರ್ವೆನ್ಸಿ ಸಿಬ್ಬಂದಿಯ ಮೇಲೆ ತನಿಖೆ ನಡೆಯುತ್ತಿತ್ತು. ಎತ್ತೆತ್ತಲ್ಲೂ ರಸ್ತೆಯಲ್ಲಿ ಸಂಚರಿಸುತ್ತಿದ್ದ. ಆ ನೊಣಗಳ್ಳಕ್ಕೆ ಸೇರಿದ್ದ ಪರಿಂದ ಸಾಗ ಬಂದವರ ಕುರಿಲ ಪ್ರಶ್ನೆಗಳನ್ನು ಕೇಳ ಮಾಡುತ್ತಿತ್ತು. ಎಲ್ಲಿಂದಲೂ ಆಶ್ಚರ್ಯವಾಯಿತು. ಎಂದೂ ಕೇಳದ ನಾರ್ಥ, ಎಂದೂ ಕಾಣದ ವ್ಯಕ್ತಿ. ಈಪರಿಂತ ಒಗ 1-5 ಗೂಡ್ಸ್ ಬೀದಿಗಳಲ್ಲಿ ನಡೆಯಿತು. ವಿಚಾರಮಾಡುವಲ್ಲಿ ಓಟಿನ ಭಿಕ್ಷೆ ಹತ್ತಿರವಾಯಿತು. ವ್ಯಕ್ತಿಗಳಲ್ಲಾ ಈ ತಿಂಗಳು ಈ ನಾಲ್ಕು ಸಾಗಲಕ್ಕೆ ನಿಜವಾಗಿ ಸಾರ್ವಜನಿಕ ಹಿತವನ್ನು ಕೋರುವ ಮುನಿಸಿಪಲ್ ಕೌನ್ಸಿಲರ್‌ಗಳು ಬಯಸುವ ಅಮೋಘ ಸದಾಯಗಳನ್ನು ಒಬ್ಬರುಗಳಿಗೆ ಮಾಡಿಕೊಟ್ಟರುವವರೋ ಅವನ್ನೆಲ್ಲಾ ವೋಟರುಗಳ ಮುಂದೆ ಇಡಲಿ. ಆಗಲಿ ಗವರ್ನ್‌ಮೆಂಟಕ್ಕೆ ಹೋಗದೇನೆ ಅಪ್ರಾರ್ಥಿತವಾಗಿ ಮಾನನೀಯವಾದ ಘನತೆಯೂ ಸದಸ್ಯತ್ವವೂ ಲಭಿಸುವದು.

ಸಾರ್ವಜನಿಕ ಸಭೆಯೂ—ಸಾರ್ವಜನಿಕ ಭವನವೂ

ನಮ್ಮ ಟವರ್ನ್‌ಹಾಲು ಸಾರ್ವಜನಿಕ ಸಭಾಕಾರ್ಯಗಳಿಗೆ ಮೀಸಲಾಗಿದೆ ಯಷ್ಟೆ? ಇತ್ತೀಚಿಗೆ ಸಾರ್ವಜನಿಕರ ಉಪಯೋಗಕ್ಕಾಗಿ ರೇಡಿಯೋ ಇಡಲಾಗಿರುತ್ತೆ. ಯಾವದೊಂದು ಸಾರ್ವಜನಿಕ ಕಾರ್ಯವು ಸಾಯಂಕಾಲವೇ ನಡೆಯುವದು ಹೆಚ್ಚು. ರೇಡಿಯೋ ಪ್ರೋಗ್ರಾಂಗಳೂ ಸಂಧ್ಯಾಕಾಲನೇ. ಮೊನ್ನೆ ಭವನದ ಹೊರಗಡೆ ರೇಡಿಯೋ ಸಂಗೀತ, ಒಳಗಿನ ವೇದಿಕೆಯ ಮೇಲೆ ವಿಜಯನಗರದ ಸಾಮ್ರಾಜ್ಯೋತ್ಸವದ ಪ್ರಚಾರ ಸಂಬಂಧದ ಸಭೆ. ಹೀಗಾದರೆ ಸಭಿಕರಾದರೂ ಯಾವ ಕಡೆಗೆ ಎಂತು ಗಮನಕೊಡಬೇಕು? ಸಭಿಕರಿಗೆ ಸರಿಯಾಗಿ ಒಂದುಕಡೆ ಮನಕೊಡುವ ಅವಕಾಶವಿಲ್ಲದ ಪ್ರಸಂಗ ಒದಗಿತು. ಸಭಾ ಕಾರ್ಯನಿರ್ವಹಣಕಾರರ ಮನದ ಉಲ್ಲಾಸವೇನಾಗಬೇಕು? ಈ ಅಸಂಬದ್ಧಗಳನ್ನು ತಪ್ಪಿಸುವಸಲುವಾಗಿ ಸಾರ್ವಜನಿಕ ಸಭೆಗಳಿರುವ ದಿನ ರೇಡಿಯೋ ಪ್ರೋಗ್ರಾಮನ್ನು ಟೌನ್‌ಹಾಲಿನಲ್ಲಾದರೂ ತಾತ್ಕಾಲಿಕವಾಗಿ ನಿಲ್ಲಿಸುವ ಏರ್ಪಾಡಿನ ಕಡೆಗೆ ಟೌನ್‌ಹಾಲ್ ಕಮಿಟಿಯು ಗಮನಕೊಟ್ಟರೆ ಒಳ್ಳೆ ಉಪಕಾರ!

ಉಮೇದುವಾರರೇ! ನಿಮಗೆ ಓಟು ಬೇಕೋ?

ಹಾಗಾದರೆ ನನ್ನ ಮಾತನ್ನು ಕೇಳಿ ಬರೆದಿಂದ ನೀವು ವಿಜಯಶಾಲಿಗಳಾಗುವಿರಿ ಇದು ಖಂಡಿತ. ಉದಾಸೀನವಾಗಬಾರದು ಚುನಾವಣೆಯು ಹತ್ತಿರ ಬಂತು ತಿಂಗಳುಗಳಲ್ಲ ಇನ್ನ ದಿನಗಳಗಳಲ್ಲಿಗಳು. ಇನ್ನು ಮೇಲೆ ಓಟರುಗಳ ಮೀಟಿಂಗು, ಗುಪ್ತ ಸಿಸ್ಸ್ರೋಘ ವಿಷಯಗಳನ್ನು ತಿಳಿಸತಕ್ಕಂಥ ಭಾಷಣಗಳೂ ಮಹಾಸಭೆಗಳೂ ನಡೆಯುವದು, ವಾಡಿಕೆಯಾಗಿಲ್ಲವೆ? ಅಂಥ ಕಾರ್ಯಕ್ರಮಗಳೆಲ್ಲವನ್ನೂ ರೇಡಿಯೋ ಮೂಲಕವಾಗಿಯೇ ನಡಿಸಲು ಏತಕ್ಕಾಗಿ ಸಾರ್ವಜನಿಕ ಸಂಘಗಳೂ ರೇಡಿಯೋ ಸಂಸ್ಥಾಪಕರೂ ಪ್ರಯತ್ನಪಡಬಾರದು? ಈರೀತಿ ಮಾಡುವದರಿಂದ ಸಭೆಗಳಲ್ಲಿ ಭಾಗವಹಿಸಲು ಅನಿವಾರ್ಯವಾಗಿಂತಹ ಹೆಂಗಸರು ಮಕ್ಕಳಿಗೂ ಸಹ ಮನೆಗಳಲ್ಲೇ ಇರತಕ್ಕ ರೇಡಿಯೋಗಳ ಮೂಲಕ ಅಮೋಘ ಪ್ರಯೋಜನವಾಗುವುದಿಲ್ಲವೇ?

* • •

ಎಲೆಕ್ಷನ್ ಬಂದು ಬಿಟ್ಟಿತ್ತೆನು ಸಿ ನರಂಡೆ ಮಹಾಜನ ಸಭೆಗಳಲ್ಲಿ ತಾವು ಯಾವ ಯಾವ ಸಾರ್ವಜನಿಕ ಉಪಯುಕ್ತ ಕಾರ್ಯಗಳನ್ನು ಮಾಡುವದಾಗಿ ಭರವಸೆ ಇತ್ತಿದ್ದಿರಿ? ಆ ಸ್ಥಳಕ್ಕೆ ಯಾವುದರಲ್ಲಿ ವಿಜಯಿಗಳಾಗಿರುತ್ತೀರಿ? ಆ ತಪಶೀಲನ್ನು ತಾವು ದಯಮಾಡಿ ಮಹಾಜನರ ಮುಂದೆ ಇಡಿ. ತಾವು ಸಿದ್ಧರಾಗಿ ಅಂತಹ ಮಹಾಸಭೆಯೊಂದನ್ನು ನಡೆಸಿ ತಮ್ಮನ್ನು ಚುನಾಯಿಸಿರುವ ಒಬರುಗಳಿಗೆ ಬೇಕಾದ ವಿಷಯಗಳನ್ನು ಹೇಳಿದರೆ ತಮಗೆ ಈಗ ನೆನಪುಮಾಡಿಕೊಡುವೆನು. ಮ್ಯು|| ಕಂದಾಯವನ್ನು ಕಮ್ಮಿಮಾಡಿಸುವದು ಇರತಕ್ಕದನ್ನು ಕಮ್ಮಿಮಾಡುವದಕ್ಕೆ ತಾವು ಪ್ರಯತ್ನಿಸುತ್ತಿದ್ದೀರೆಂದು ತಾವು ಆಚರಿಸಕೂಡದಹುದ ಹೆಚ್ಚಿನ ತೆರಿಗೆಗಳನ್ನು ಹಾಕುವದನ್ನಾದರೂ ತಪ್ಪಿಸಿರುತ್ತೀರಾ? ಪ್ರಜಾ ಸಾಮಾನ್ಯಕ್ಕೆ ಮುಖ್ಯವಾಗಿ ಬೇಕಾದ ಆರೋಗ್ಯಸೂತ್ರಗಳು, ಗ್ರಾಮ ನಿರ್ಮಲೀಕರಣಕಾರ್ಯಗಳು ತೃಪ್ತಿಕರವಾಗಿ ನಡೆಯುತ್ತಿರುವದರ ಬಗೆ ತಾವೇನು ಮಾಡಿರುವಿರಿ? (ಮಾದರಿಗೆ — ಕ್ಲಬ್‌ಹೌಸ್ ಕಕ್ಕಸುಗಳ ಪುರಾಣ ತಿಳಿದಿರಬಹುದಲ್ಲವೇ) ನಿಮ್ಮ ನಿಮ್ಮ ಹೊಸಲ್ಲಾಗಳಲ್ಲಿ ಬಾರ್ ರೋಡ ಒಳದ, ಜಲ್ಲಿಯ ಮಯವಾದ ರಸ್ತೆಯ, ಅಸ್ತಾರಿತ್ಯ ಕಾಣದಿರುವ ದಾರಿಗಳ ಪರಿಚಯ ನಿಮಗಿದೆಯೇ ಇರುವದೇ? ಇತ್ಯಾದಿ.

ತಾವು ನೆಲ್ಲಂಡ ಕಾರ್ಯದ ಪರಿಣತೆಯಲ್ಲಿ ಬಿಡ್ಡಿರುವ ಕಂದಾಯದಾರರುಗಳ ಸಂಘದ ಮೀಟಿಂಗುಗಳು ಇನ್ನೆಲ್ಲಾ ಮುಗಿದಾಗುತ್ತೆ. ಗಳ್ಳಿಗಳ್ಲಿಗಳಲ್ಲಿಯೂ ಸಾವಿರಾರು ರೂ ಬಾಳುವ ಮೋಟಾರುಗಳ ಓಡಾಟ. ಅಮೋಘ ವಿದ್ಯಾ ಪಂಡಿತರುಗಳ ಕೈಗಳೂ ಸುಗಂಧದ ದ್ರವ್ಯಗಳಲ್ಲ ಮುಳುಗೇಳತಕ್ಕ ಹಸ್ತಗಳೂ ಸಹ ಕೇವಲ ಅಶುಚಿಯೂ, ಕೇವಲ ಪಾಷಂಡರೂ, ಸಮಯದಲ್ಲಿ ಉಚ್ಚ ನೀತಿಗಳಿಲ್ಲದೆ ಕೆಲಸ ಮಾಡತಕ್ಕ ಹಸ್ತಗಳಿಗೆ ಷೇಕ್‌ಹ್ಯಾಂಡ್ ಕೊಡುವ ಕಾಲ ಬೇಕೆಂದರೆ ಇದಕ್ಕಿಂತಲೂ ಬೇರೆ ಸಮಯ ದೊರಯುವುದಿಲ್ಲ. ಹಾಗೇ ಮುಂದರಿದರೆ ಚುನಾವಣೆ ಕಾಲದ ಧೈರ್ಯೋತ್ಸವಗಳು ಇನ್ನೆಲ್ಲಾ ದೊಡ್ಡ ದಾರಿಗಳು.

* * *

ರೇಡಿಯೋಕ್ಕೆ ಇಸ್ತಿರಸ್ತು ಕೊಡಿ

ನೂರಾರ ರೂ ಖರ್ಚಿನಿಂದ, ಸಾರ್ವಜನಿಕರ ಉಪಯೋಗಕ್ಕೆಂದು ಅಲ್ಲಲ್ಲಿ ರೇಡಿಯೋ ರಿಸೀವಿಂಗ್ ಸೆಟ್ಟುಗಳನ್ನು ಇಡಿಸಿರುವರಷ್ಟೆ. ಸಾರ್ವಜನೋಪಯುಕ್ತವಾದ ನಮ್ಮ ಸಂಸ್ಕೃತಿ ನಮ್ಮ ಭಾಷೆ, ನಮ್ಮ ಪ್ರಾಚೀನ ಧಾರ್ಮಿಕ ವಿಷಯಗಳು ನಮ್ಮ ನಾಡಿನ ಸಂಬಂಧವಾದ ಪಲವು ಅ

ತಗದೂರು ಮಾದರಿ ತಾಲ್ಲೂಕು.

ರಾಷ್ಟ್ರೀಯ ಧ್ವಜಸ್ತಂಭ

ಗೆಜೆಟ್ ಸಂಗ್ರ

ಸ್ಟಾಂಪು ಇಲಾಖೆ ಆಡಳಿತ

1935-36 ನೆಯ ಸಾಲಿನ ಆದಾಯವು 20,74,584 ರೂ 1934-35 ನೆಯ ಸಾಲಿನಲ್ಲಿ ಆದಾಯವು 20,65,237 ರೂ. ಇಲಾಖೆಯ ವೆಚ್ಚವು 1935-36 ಸಾಲಿನಲ್ಲಿ 2,01,713 ರೂ 1934-35 ನೆಯ ಸಾಲಿನಲ್ಲಿ 1,61,746 ರೂಪಾಯಿಗಳು. ಮಾರಾಟವಾದ ಸ್ಟಾಂಪುಗಳ ಹಣವನ್ನು ವಾಪಸು ಮಾಡಿದ್ದು, ಸ್ಟಾಂಪುಗಳನ್ನು ಮಾರುವದರ ಮೇಲೆ 'ಡಿಸ್ಕೌಂಟು' ಮೊಬಲಗು ಹೆಚ್ಚಿದುದೂ ಈ ವೆಚ್ಚವು ಹೆಚ್ಚಾಗಿರುವುದಕ್ಕೆ ಕಾರಣ.

ವಾಪರು ಖಾತೆಗಳಲ್ಲಿ ದಾಖಲಾತಿ ಸಂಬಂಧದಲ್ಲಿ ಸರ್ಕಾರಕ್ಕೆ ಕಂದು ತೀರ್ಮಾನವಾದ ಸ್ಟಾಂಪುಗಳ ಬಾಬತು ಪ್ರಸಕ್ತಸಾಲಿ (1935-36) ಬರಬೇಕಾಗಿದ್ದ ಒಟ್ಟು 1,46,615 ರೂಪಾಯಿಗಳು, 9,110 ರೂಪಾಯಿಗಳು ವಸೂಲು 2,206 ರೂಪಾಯಿಗಳನ್ನು ಖರ್ಚು ಮಾಡಲಾಯಿತು ಹೋಗಲಾಗಿ ಈ ಬಾಬಿನಲ್ಲಿ 1,35,299 ರೂಪಾಯಿಗಳು ವಸೂಲು ಬೇಕಾಗಿದ ಬಾಕಿ ನಿಂತಿರುವ ದು ಭಾರಿಯಾಗಿದೆ. ಈ ಬಾಕಿಗಳನ್ನು ವಸೂಲು ಮಾಡಲು ತ್ವರ್ಯವಾದ ಕ್ರಮವನ್ನು ಮಾಡಬೇಕು ಎಂಬುದಾಗಿ ಜನರಲ್ ಸೆಕ್ರೆಟರಿಗಳು ಅಭಿಪ್ರಾಯಪಟ್ಟಿದ್ದಾರೆ.

ಮರಣ ದಂಡನೆ

ಕಡೂರು ಡಿಸ್ಟ್ರಿಕ್ಟ್ ದಂಡದವ ಗ್ರಾಮದ ತಿಪ್ಪಯ್ಯ ಎಂಬುವ ಚಿಕ್ಕೇಗೌಡ ಎಂಬುವನ ತೋಟವನ್ನು ಕತ್ತರಿಸುತ್ತಿದ್ದನು. ಗೌಡನು ವಾಡಿ ಆಕ್ಷೇಪಿಸಲು ತಿಪ್ಪಯ್ಯನು ಅನ್ನು ಹೊಡದುದರಿಂದ ಅವನು ಸತ್ತವನೆಂದು ಮೊಕದ್ದಮೆ ಆಗಿ ಸಾಕ್ಷಿಯವರು ತಿಪ್ಪಯ್ಯನಿಗೆ ಮರಣದಂಡನೆಯನ್ನು ವಿಧಿಸಿದರು.

ನ್ನು ಹೊಂದಿರಿ. ನೀವು ಇತರರಿಂದ ಭಿಕ್ಷೆಗೆ ಹೋಗದೇನೆ ವಿಜಯಗಳೂ ಪ್ರಭಾವಶಾಲಿಗಳೂ ಆಗಬೇಕಾದರೆ ಮಾರ್ಗಸೂಚಿವಾಗಲಿ ಸ್ವಂತ ಸುಗುಣವಿದ್ದಲ್ಲಿ ಪ್ರೀತಿಯಿಂದ ಆ ಕ್ರಮವನ್ನು ಅನುಸರಿಸಿ. ನಿಮಗೆ ವಿಜಯವಾಗಲಿ

ತಮ್ಮ ಪ
ಇಣು

ಈ ಸುಸಮಯವನ್ನು ಕಳೆದುಕೊಳ್ಳಬೇಡಿರಿ!

ಚಿತ್ರಶಾಲಾ ಸ್ಪರ್ಧೆ ನಂ ೧೪.

ಸ್ಪೆಷಲ್

ದೀಪಾವಳಿ ಹಬ್ಬಕ್ಕಾಗಿ ಸ್ಪೆಷಲ್ ರಿಯಾಯಿತಿಗಳು

೧೦೦ ರೂ. ಬಹುಮಾನ

ಮೊದಲನೇ ಬಹುಮಾನ ೬೦ ರೂ.

ಸ್ಪೆಷಲ್

ಬಿಳಿಯ ಕಾಗದದಮೇಲೆ ಬರೆದು ಕಳುಹಿಸಬಹುದು

ಇತರ ಬಹುಮಾನಗಳು ೪೦ ರೂ.



ಕೂಪನ್ ನಂಬರು

ಹೆಸರು

ವಿಳಾಸ

— ಎಡದಿಂದ ಬಲಕ್ಕೆ —

೧ ಬಿಡುಗಡೆ ೨ ಉಚ್ಚ ಶಿಕ್ಷಣವನ್ನು ಕೊಡತಕ್ಕ ... ೬ ಕಪಿ ೭ ಕುಲಗುರು ೮ ಮರುಕ ೧೦ ಮ... ೩ ಗಾಂಧಿಯವರು ಪ್ರಪಂಚಕ್ಕೇ ... ಪ್ರಾಯರ ... ಬಹು ಹಿಂದಿನಕಾಲದ ಸ್ಥಳ ೧೪ ಇನ್ನೊಬ್ಬರ ... ೧೫ ಬೇಕೆಂದು ಒಂದು ಕೆಲಸಕ್ಕೆ ತರುವ ೬ಡ್ಡಿ ೧... ೧೭ ಆದಕ್ಕೆ ೧೯ ಹಿರಿತ್ತುವ ಸಾಧನ ೨೧ ವ... ೨೨ ಹಿಂದೂ ಜನಾಂಗವನ್ನು ನಾಲ್ಕು ... ಗಿ ವಿಂಗಡಿಸಿದ್ದಾರೆ ೨೩ ಕೇಳು ೨೦ ಇದು ಭೂ... ಯೊಳಗೆ ಇರುತ್ತದೆ ೨೮ ಮಾತಿನ–ಬಾಣ ೨೩ ದು... ಸ್ಟನ್ನು ಶಿಕ್ಷಿಸುವುದೇ ಇವರ ಕುಲ ಕಸಬು ೩೧ ಸಿಹಿ ... ಇದನ್ನು ಕೊರೆದು ವಿಗ್ರಹಗಳನ್ನು ಮಾಡುತ್ತಾರೆ ೩೭ ಆಶ್ಚರ್ಯ ೩೮ ಇದು ನಮ್ಮ ದೇಶಕ್ಕೆ ಈಗ ಅಗ... ತ್ಯಾಗಿ ಬೇಕು

— ಮೇಲಿನಿಂದ ಕೆಳಕ್ಕೆ: —

೧ ಉಭಯ ಪಕ್ಷದವರ ಸಹಕಾರವೂ ಇದಕ್ಕೆ ಬೇಕು ... ನೂಲು ತೆಗೆಯುವ ಯಂತ್ರ ೩ ಸುದ್ದಿ ೪ ತೋರಿಸಿ ಕೊಡುವುದು ೫ ಒಂದೇ ಸ್ಥಳದಲ್ಲಿ ಹುಟ್ಟಿ ಬೇರೆ ಬೇರೆ ಹರಿದು ಒಂದೇ ಸ್ಥಳದಲ್ಲಿ ಸಮುದ್ರವನ್ನು ಸೇರುವ ನದಿಗಳು ... ಹಸು ೯ ಉಪವಾಸ ವ್ರತ ೧೦ ಪೂಜೆ ೧೧ ... ಗಳಲ್ಲೊಂದು ೧೨ ಪೂಜಾದಿ ಕಾರ್ಯಗಳನ್ನು ನಡೆಸುವವನು ೧೩ ನೆಡು ೧೪ ನೊಂದುವ ೧೬ ವಾದ್ಯ ೧೭ ಆಶೀರ್ವದಿಸು ೨೦ ಬೆಂಗಳೂರಿನಲ್ಲಿ ನಡೆಯುವ ... ಶಾಸ್ತ್ರಿ ೨೨ ಶತ್ರುಗಳು ಗೆದ್ದಲ್ಲಿ ಊರಿನಲ್ಲಿಲ್ಲಾ ... ಮಾಡುವರು ೨೩ ರೋಗಿಗೆ ಔಷಧಿಯು ... ವುದಿಲ್ಲಾ ೨೫ ಪುನಃ ೨೭ ನದಿ ಸಮುದ್ರಗಳಲ್ಲಿ ಇಷ್ಟ ಇರುತ್ತವೆ ೨೮ ಇದರಲ್ಲಿ ಪರಿಣತರಾದವರು ಪ್ರಸಿದ್ಧರಾಗುತ್ತಾರೆ ೨೯ ಅನುಭವ ಶಾಲಿಯಾದ ಈತನ ಸೇವೆ ಯಿಂದ ಜನರು ಉತ್ತಮ ಸ್ಥಿತಿಗೆ ಬರಬಹುದು ೩೧ ವೇ... ೩೨ ನೇತ್ರಾಂಗನೆ ೩೪ ಇದ ಹಿಂದೂ ಧರ್ಮವನ್ನು ಬೋಧಿಸುತ್ತದೆ

ಸೂಚನೆ:—ಈ ಸ್ಪರ್ಧೆಯ ಸರಿಯಾದ ಉತ್ತರವು ಸಾಧ್ವಿ ಎಡಿಟರ ಬಳಿ ಮೊಹರುಮಾಡಿ ಇಟ್ಟಿರುತ್ತೆ. ಅದಕ್ಕೆ ಪ್ರತಿ ಅಕ್ಷರವೂ ಸರಿಹೋಲತಕ್ಕ ಸ್ಪರ್ಧೆಗೆ ಮೊದಲನೇ ಬಹುಮಾನವೂ, ಒಂದು ತಪ್ಪಿರುವವುಗಳಿಗೆ ಇತರ ಬಹುಮಾನಗಳೂ ಕೊಡಲ್ಪಡುವುವು. ಮೇಲ್ಕಂಡ ಬಹುಮಾನಗಳು ಎಲ್ಲರಿಗೂ ಹಂಚಲ್ಪಡುವುವು. ಬಹುಮಾನಕ್ಕೆ ಯೋಗ್ಯವಾದ ಉತ್ತರಗಳು ಒಂದಕ್ಕಿಂತ ಹೆಚ್ಚಾಗಿ ... ಬಹುಮಾನಗಳನ್ನು ಹಂಚುವ ವಿಚಾರ ಸ್ಪರ್ಧೆಯ ಮ್ಯಾನೇಜರಿಗೆ ಸೇರಿದ್ದು. ಈ ವಿಚಾರದಲ್ಲಿ ಯಾವ ಪತ್ರವ್ಯವಹಾರಗಳಿಗೂ ಅವಕಾಶವಿಲ್ಲಾ. ಪ್ರತಿ ಸ್ಪರ್ಧೆಗೂ ಪ್ರವೇಶಧನ ನಾಲ್ಕಾಣೆ. ಎತತಕ್ಕಿಂತ ಕಡಿಮೆ ಸ್ಪರ್ಧೆಗಳನ್ನು ಅಂಗೀಕರಿಸುವುದಿಲ್ಲ. ಪ್ರವೇಶಧನವನ್ನು ಪೋಸ್ಟಲ್ ಸ್ಟಾಂಪು, ಅಥವಾ ಇಂಡಿಯನ್ ಪೋಸ್ಟಲ್ ಆರ್ಡರ್ ಅಥವಾ ಮನಿಯಾರ್ಡರ್ ಮೂಲಕ ರವಾನಿಸಬಹುದು. ಉತ್ತರಗಳನ್ನು ಒಳಿಯತಕ್ಕವರು ಸಾಧ್ವಿ ಪೇಪರಿನಲ್ಲಿರತಕ್ಕ ಕೂಪನ್ನಿನಲ್ಲಾಗಲಿ ಅಥವಾ ಬಿಳಿಯ ಕಾಗದದಲ್ಲಾಗಲಿ ಚಿತ್ತಿಲ್ಲದಂತೆ ಚೆನ್ನಾಗಿ (ಶಾಯಿನಲ್ಲಿ) ಬರೆದು ಕಳುಹಿಸಬೇಕು. ಉತ್ತರಗಳನ್ನು ಕಳುಹಿಸಲು ಡಿಸೆಂಬರ್ 3 ನೇ ತಾರೀಖು ಕೊನೆಯದಿನ. ನಂತರ ಬಂದ ಉತ್ತರಗಳನ್ನು ಸ್ವೀಕರಿಸುವುದಿಲ್ಲಾ. ಸರಿಯಾದ ಉತ್ತರವನ್ನು ಡಿಸೆಂಬರು 7 ನೇ ತಾರೀಖಿನ ಸಾಧ್ವಿ ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತೆ.

ವಿಳಾಸ:— ಮ್ಯಾನೇಜರ್ ಚಿತ್ರಶಾಲಾ ಸ್ಪರ್ಧೆ, ಚಿತ್ರಶಾಲಾ, ವಾಣೀವಿಲಾಸ ಮೊಹಲ್ಲಾ, ಒಂಟಿಕೊಪ್ಪಲ್, ಮೈಸೂರು

ಸೂ: ಮೈಸೂರಿನಲ್ಲಿ ಸ್ಪರ್ಧೆಗೆ ಭಾಗವಹಿಸುವವರು ತಮ್ಮ ಉತ್ತರಗಳನ್ನು ಮೆಸರ್ಸ್ ಸ್ಪೀಟ್ ಮಾರ್ಟ್ ಇವರಿ ಹಾಜರಿಮಾಡಬೇಕಾಗಿ ವಿನಂತಿ. ಮ್ಯಾ ಚಿ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

— ಬಾಲಸುಧಾ —

ಮಕ್ಕಳ ಜ್ವರದ ಗೆಡ್ಡೆಯನ್ನು ಖಾತರಿ ಗುಣ ಪಡಿಸುತ್ತೆ. ಲಿವರ್ (ಪಿತ್ತಕೋಶ) ದಪ್ಪನಾಗಿ ಕಣ್ಣು ಹಳದಿ ಬಣ್ಣವಾಗಿದ್ದರೆ ಇದರ ಸೇವನೆಯಿಂದ ವಿನೇ... ಗುಣವಾಗುತ್ತೆ. 20 ವರ್ಷಗಳಿಂದಲೂ ಅನುಭವ ಸಿದ್ಧವಾಗಿದೆ—ಮಕ್ಕಳಿಗೆ ನಮ್ಮ ಬಾಲಸಂಜೀವಿನಿಯನ್ನೇ ಉಪಯೋಗಿಸಿರಿ.

ಬಾಲಸುಧಾ ಬೆಲೆ 1 ರೂ ಬಾಲಸಂಜೀವಿನಿ 1 ೮.

ಮೈಸೂರು, ಬೆಂಗಳೂರು, ಮದ್ರಾಸುಗಳಲ್ಲಿ ನಮ್ಮ ಶಾಖೆಗಳಿವೆ

ಸದ್ವೈದ್ಯಶಾಲಾ, ನಂಜನಗೂಡು

ANANDA SODA FACTORY,

BEST AERATED WATER SUPPLIERS.

COMPLETE REQUISITES FOR AERATED WATER MANUFACTURERS AVAILABLE

ಆನಂದಾ ಸೋಡಾ ಫ್ಯಾಕ್ಟರಿ,

ದೊಡ್ಡ ಪೇಟೆ, ಮೈಸೂರು



ಟಿ. ಸಿ. ನಟರಾಜ್ ಔಷಧಾಲಯ,

ಸಯ್ಯಾಜಿರಾವ್ ರೋಡು, ಮೈಸೂರು

ಇವರಲ್ಲಿ ನೇತ್ರಪರೀಕ್ಷೆಯು ಉಚಿತವಾಗಿ ಮಾಡಲ್ಪಡುತ್ತದೆ.

ಅತ್ಯಗತ್ಯವಾಗಿ ಬೇಕಾದ ಎಲ್ಲಾ ಇಂಜಕ್ಷನ್ ಔಷದಿಗಳೂ ಸದಾ ಕಾಲದಲ್ಲಿಯೂ ದೊರಕುವುದಲ್ಲದೆ ಸಮಸ್ತ ವ್ಯಾಧಿಗಳಿಗೂ ಚಿಕಿತ್ಸೆಯು ಬಹು ಸುಲಭ ಛಾರ್ಜಿನಿಂದ ಮಾಡಲ್ಪಡುತ್ತದೆ

ಝಂಡೂರವರ ಆಯುರ್ವೇದೀಯ ಸಿದ್ಧೌಷಧಗಳೆಲ್ಲವೂ ಸದಾ ದೊರಕುತ್ತವೆ.

ಎಂ. ವಿ. ನಾರಾಯಣರಾಯರ

ಶ್ರೀ ಸತ್ಯನಾರಾಯಣ ಪರಿಮಳ ಫ್ಯಾಕ್ಟರಿ,

ಜಗನ್ಮೋಹನ ಬಂಗ್ಲಾ ಬೀದಿ, ಮೈಸೂರು

ಪರಿಮಳ ಅಗರ ಬತ್ತಿ

ಉಪಯೋಗಿಸಿ ಪ್ರೋತ್ಸಾಹಿಸಿರಿ.

Asiatic Government Security Life Assurance Co., Ltd.

HEAD OFFICE:-ASIATIC BUILDINGS, BANGALORE CITY.

THIS IS PURELY A NATIONAL CONCERN

Managed by Experts.
Low Premiums and Liberal Policy Conditions.

Apply for Agency:—
To
Mr. H. Venkataramiah,
Divl. Supdt.,
ASIATIC BUILDINGS,
Bangalore City. Or
To
V. RANGASAMI Esq
B.A. B.L., F.C.I.
General Manager.



ಚೆನ್ನಾಗಿ ಅನುಭವವುಳ್ಳವರ ಆಡಳಿತಕ್ಕೆ ಒಳಪಟ್ಟು, ಕಡಿಮೆ ಪ್ರೀಮಿಯಮ್ಮು ಮತ್ತು ಧಾರಾಳವಾದ ಪಾಲಿಸಿ ಷರತ್ತುಗಳೂ ಉಳ್ಳ ಶುದ್ಧ ಸ್ವದೇಶೀ ವಿಮಾ ಸಂಸ್ಥೆ.

ಏಜನ್ಸಿಗಾಗಿ ಕೆಳಗಿನ ವಿಳಾಸಕ್ಕೆ ಬರೆಯಿರಿ:—
ಹೆಚ್. ವೆಂಕಟರಾಮಯ್ಯ,
ಡಿವಿಜನಲ್ ಸೂಪರಿಂಟೆಂಡೆಂಟ್,
ಏಷ್ಯಾಟಿಕ್ ಬಿಲ್ಡಿಂಗ್ಸ್,
ಬೆಂಗಳೂರು ಸಿಟಿ.
ಅಥವಾ
ಮಿ॥ ವಿ. ರಂಗಸ್ವಾಮಿ, ಬಿ.ಎ., ಬಿ.ಎಲ್., ಎಫ್.ಸಿ.ಐ.
ಜನರಲ್ ಮ್ಯಾನೇಜರ್.

ಏಷ್ಯಾಟಿಕ್ ಲೈಫ್ ಇನ್ಷೂರೆನ್ಸ್ ಕಂಪೆನಿ ಲಿಮಿಟೆಡ್

ಹೆಡ್ ಆಫೀಸ್:—ಏಷ್ಯಾಟಿಕ್ ಬಿಲ್ಡಿಂಗ್ಸ್, ಬೆಂಗಳೂರು.

House to let.

A big and well-ventilated house with fourteen decent rooms and spacious Hall and with up-stairs, fit for Hostels or Hotels, near College, University, Public Offices etc.

Apply for details to:—

X

C/o Sadhvi Office, Mysore.

ಶ್ರೀ ರಂಗನಾಥ ಟೈಪ್ ಫೌಂಡ್ರಿ

ಚಿಕ್ಕಪೇಟೆ, ಬೆಂಗಳೂರು ಸಿಟಿ.

ಸುಂದರವಾದ ಅಕ್ಷರಗಳು, ಮುದ್ದು ಮುದ್ದಾದ ಬಾರ್ಡರುಗಳು ಬಗೆಬಗೆಯ ಆಕಾರ

ನಮಗೆ ಈ ಕೆಲಸದಲ್ಲಿ ೩೦ ವರ್ಷಗಳ ಕಾಲದ ಅನುಭವವಿದೆ. ಆಧುನಿಕ ಕಾಲಕ್ಕೆ ತಕ್ಕಂತೆ ಅಕ್ಷರದ ಆಕಾರವನ್ನು ಬಹು ಸುಂದರವಾಗಿ ಸುಧಾರಿಸಿದ್ದೇವೆ.

ನಮ್ಮಲ್ಲಿನ "ಕನ್ನಡ ಇಂಗ್ಲೀಷ್" ಅಕ್ಷರಗಳಂತಹ ಸುಂದರವಾದ ಅಕ್ಷರಗಳನ್ನು ಮತ್ತೆಲ್ಲಿಯೂ ನೋಡಲಾರಿರಿ. ಮತ್ತು

ನೂರಾರು ಬಗೆಯ ಸುಂದರವಾದ ಬಾರ್ಡರುಗಳು, ನಯನಮನೋಹರವಾಗಿವೆ. ೮ ಪಾಯಿಂಟಿನಿಂದ ೪೮ ಪಾಯಿಂಟಿನವರೆಗೆ ವಿಧವಿಧವಾದ ಸುಂದರಾಕ್ಷರಗಳಿವೆ. ನಮ್ಮ "ರಂಗನಾಥ ಕನ್ನಡ ಡಾಮಿನಸ್" ಅಕ್ಷರಗಳನ್ನು ನೋಡಲು ಮರೆಯಬೇಡಿರಿ.

ನಾವು ಕಾಸರ್ ಅಲಾಯ್ (ಕಾಪ್ರ ಮಿಶ್ರ) ಸೀಸದಿಂದ ಅಕ್ಷರಗಳನ್ನು ತಯಾರಿಸುತ್ತೇವೆ. ಸುಲಭ ಬೆಲೆ. ಗ್ಯಾರಂಟಿಯಾದ ಬಾಳಿಕೆ.

"ಪ್ರೇಕ್ ಪಿಲ್ಸ್"

INVENTED BY A HIMALAYAN SAGE.

● ಸ್ತ್ರೀಪುರುಷರಿಗೆ ಆನಂದವನ್ನುಂಟುಮಾಡುವುವು ಈ ಮಾತ್ರೆಗಳೇ. ಮದಿಸಿದ ಸ್ತ್ರೀಯರ ಗರ್ವಭಂಗಮಾಡಲು ಕಂಡುಹಿಡಿದಿರುವ ಮಾತ್ರೆಗಳಿವು. ಇವರಲ್ಲಿ ಗಸವಿಷಾದಿಗಳೇ ಸೇರಿಲ್ಲ. ಕಸ್ತೂರಿ, ಚಿನ್ನ, ಹಿಮಾಲಯ ಪರ್ವತದ ವನಮೂಲಿಕೆಗಳು ಮುಂತಾದುವುಗಳಿಂದ ದೊಡ್ಡ ಯೋಗೀಶ್ವರರ ಹತ್ತಿರ ಸಂಗ್ರಹಿಸಿ ಮುದುಕತನವನ್ನು ಲೋಕದಲ್ಲಿ ಇಲ್ಲದಂತೆ ಮಾಡುವುದು. ಅರ್ಧ ಘಂಟೆಯೊಳಗಾಗಿ ವೀರ್ಯವನ್ನು ಕಲ್ಲಿನಂತೆಮಾಡಿ ರಮಿಸಲು ಉಲ್ಲಾಸವನ್ನು ಮಾಡುವುದು. ಗುಣವಿಲ್ಲದಿದ್ದಲ್ಲಿ ಹಣ ವಾಪಸು.

೬೦ ಮಾತ್ರೆಗಳು ರೂ. ೫—೦—೦. ೩೦ ಮಾತ್ರೆಗಳು ರೂ. ೩—೦—೦

(ಕಾಗದ ಪತ್ರಗಳು ಇಂಗ್ಲೀಷಿನಲ್ಲಿಯೇ.)

ಡಾ॥ ಎ. ಎಸ್. ಮೂರ್ತಿ, ಚಿಕಾಕೋಲ್, ಗಂಜಾಮ್ ಡಿಸ್ಟ್ರಿಕ್ಟ್.

THE SADHVI

RECOMMENDED FOR SCHOOLS BY THE DEPARTMENT.

No. T1. 3778-145—35-36.

OFFICE OF THE DIRECTOR OF PUBLIC INSTRUCTION IN MYSORE.

Bangalore, Dated 20th April 1936.

ANNUAL SUBSCRIPTION.

Local	....	....	} Rs. 2—4—0.
Moffusil	....	....	

|| ಸತ್ಯಮೇವೋದ್ಧರಾಮ್ಯಹಮ್ ||
ರಾಜಧಾನಿಯ ರಾಷ್ಟ್ರೀಯ ವಾರ ಪತ್ರಿಕೆ.
ವೃದ್ಧಪಿತಾಮಹ ಎಂ. ವೆಂಕಟಕೃಷ್ಣಯ್ಯನವರ ಜ್ಞಾಪಕಾರ್ಥವಾಗಿ ಪ್ರಕಟಿಸಲ್ಪಡುವುದು
ಸಂಪಾದಕರು ಅಗರಂ ರಂಗಯ್ಯ, ಬಿ ಎ
ಸಂಪುಟ ೧] MYSORE : MONDAY 30—11—36 ಮೈಸೂರು : ಸೋಮವಾರ ೩೦—೧೧—೩೬ [ಸಂಚಿಕೆ ೪೦

ತುಂಗಭದ್ರಾ ಜಲಾಶಯ ಸಮಸ್ಯೆ.

ನಮ್ಮ ದಿವಾನರಾದ ಸರ್ ಮಿರ್ಜಾರವ ರು ಡಿಸೆಂಬರ್ ತಾ|| 2 ನೇ ಬುಧವಾರ ಮ ದರಾಸಿಗೆ ದಯಮಾಡಿ ತುಂಗಭದ್ರಾ ನದಿ ಯ ಆಣೆಕಟ್ಟಿನ ಮತ್ತು ಶಿವಸಮುದ್ರದ ಜಲಪಾತದ ವಿಷಯವಾಗಿ ಗವರ್ನರೊಡನೆಯೂ ಮದರಾಸ್ ಸರ್ಕಾರದವರೊಡನೆ ಯೂ ಚರ್ಚಿಸುವವರಾಗಿದ್ದಾರೆ

ಹಿಂದೀಪ್ರಚಾರಕರ ಆತ್ಮಹತ್ಯೆ

ಬೆಂಗಳೂರು ಸಿಟಿ ಮಲ್ಲೇಶ್ವರದಲ್ಲಿರುವ ಹಿಂದೀ ಶಿಕ್ಷಕರಾಗಿದ್ದ ಮಿ|| ಎ ಆರ್ ಅಯ್ಯಂಗಾರ್ರವರು ಶೇಷಾದ್ರಿಪುರದ ಪೊದೆಯಲ್ಲಿ ಕಳೆದ ಶನಿವಾರ ರಾತ್ರಿ ಸತ್ತು ಬಿದ್ದಿದ್ದರೆಂದೂ ಅವರ ಜೇಬಿನಲ್ಲಿದ್ದ ಚೀಟಿಯಿಂದ ಅವರು ಆತ್ಮಹತ್ಯ ಮಾಡಿಕೊಂಡರೆಂದು ತಿಳಿಯುವುದೆಂದೂ ಕೇಳುತ್ತೇವೆ

ಇನ್ನೊಬ್ಬರ ಆತ್ಮಹತ್ಯೆ ಅದೇ ದಿನವೇ ಶೇಷಾದ್ರಿಪುರದ ಇನ್ನೊಂದು ಭಾಗದಲ್ಲಿ ಶ್ರೀಮತಿ ಕಲ್ಯಾಣಮ್ಮ ಎಂಬ ಮಹಿಳೆಯು ಆತ್ಮಹತ್ಯ ಮಾಡಿಕೊಂಡಳೆಂದು ತಿಳಿಯಲಾಗಿದೆ

ಬಸವಿ ಬಿಟ್ಟರೆ ಶಿಕ್ಷೆ

ಉತ್ತರ ಕರ್ನಾಟಕ ಬೀದರ್, ಬಿಸ್ತ್, ಈ ನಗರಗಳವರಲ್ಲಿ ಸಣ್ಣ ವಯಸ್ಸಿನ ಹೆಣ್ಣು ಮಕ್ಕಳನ್ನು ಬಸವಿ ಬಿಡುವ ಪದ್ಧತಿ ಇರುವುದು ಈ ಪದ್ಧತಿಯು ನಾಚಿಕೆಗೇಡಾದುದೆಂದೂ, ಈ ಪದ್ಧತಿಯನ್ನ ನಡೆಸುವುದು ಶಿಕ್ಷಾರ್ಹವಾದ ಅಪರಾಧ ವೆಂದು ಡೆಪ್ಯುಟಿ ಕಮೀಷನರುಗಳು ಮುಖಾಂತರ ಎಚ್ಚರಿಕೆ ಕೊಡಬೇಕೆಂದೂ ಸರ್ಕಾರದ ಅಪ್ಪಣೆಯಾಗಿದೆ

ಬೆಂಗಳೂರಿಗೆ ೨೦ ಲಕ್ಷ ರೂ. ಸಾಲ

ಬೆಂಗಳೂರು ಸಿಟಿ ಮ್ಯುನಿಸಿಪಲ್ ಸಭೆಯವರು ಅಭಿವೃದ್ಧಿಕಾರ್ಯಗಳನ್ನು ನಡೆಸುವುದಕ್ಕಾಗಿ 20 ಲಕ್ಷ ರೂಪಾಯಿ ಸಾಲ ತರಲು ಸರ್ಕಾರದವರು ಅನುಮತಿ ಕೊಡುತ್ತಾರೆ

ಕರ್ನಲ್ ಮೆಗ್ಗಾರವರ ಮರಣ.

ರಿಟೈರ್ಡ್ ಸೀನಿಯರ್ ಮತ್ತು ದರ್ಬಾರ್ ಸರ್ಜನರಾಗಿದ್ದ ಕರ್ನಲ್ ಟಿ ಜೆ ಮೆಗ್ಗಾರವರು ತಾ|| 22 ನೇ ಭಾನುವಾರ ರಾತ್ರಿ ರಾಜಧಾನಿಯಲ್ಲಿ ಅವರು ವಾಸವಾಗಿ 'ಹೈ ವ್ಯೂ' ಎಂಬ ಬಂಗಲೆಯಲ್ಲಿ ಕಾಲವಾದರು ಮೆಗ್ಗಾರವರು 1813 ನೇ ಇಸವಿ ಏಪ್ರಿಲ್ ತಿಂಗಳಲ್ಲಿ ಜನಿಸಿ, ಇಂಡಿಯನ್ ಮೆಡಿಕಲ್ ಸರ್ವಿಸ್ಸಿನಿಂದ ನಿವೃತ್ತರಾದ ಮೇಲೆ 1901 ನೇ ಇಸವಿಯಲ್ಲಿ ಅರಮನೆಯ ವೈದ್ಯರಾಗಿ ಮೈಸೂರಿಗೆ ಬಂದರು ಮಾರನೇ ವರ್ಷ ಸೀನಿಯರ್ ಸರ್ಜನರಾಗಿ ನೇಮಕವಾದರು ಅವರು ತಮ್ಮ ವೃದ್ಧಾಪ್ಯವನ್ನೆಲ್ಲಾ ಶ್ರೀಮನ್ಮಹಾರಾಜರವರ ಕೃಪಾಪೋಷಣೆಯನ್ನು ಪಡೆದು ರಾಜಧಾನಿಯಲ್ಲೇ ಕಳೆದು ಅವಸಾನವನ್ನು ಹೊಂದಿದರು ಸೋಮವಾರ ಸಾಯಂಕಾಲ ಅವರ ಶವವನ್ನು ಅರಮನೆಯ ಮರ್ಯಾದೆಗಳಿಂದ ಮೆರವಣಿಗೆ ಮಾಡಿಕೊಂಡು ಹೋಗಿ ಸಂಸ್ಕಾರಮಾಡಿದರು

ಶಾರದಾವಿಲಾಸ ಹೈಸ್ಕೂಲ್ ಮೈಸೂರು.

ಹಳೆಯ ವಿದ್ಯಾರ್ಥಿಗಳ ಸಂಘ.

ಮೇಲ್ಕಂಡ ಸಂಘದ ಕಾರ್ಯದರ್ಶಿಗಳು ಈರೀತಿ ಬರೆದಿರುತ್ತಾರೆ --ಈ ಶಾಲೆಯ ದಿನಾಚರಣೆಯನ್ನು ಮುಂದಲ ತಿಂಗಳು ಡಿಸೆಂಬರ್ 19 ಮತ್ತು 20 ನೇ ತಾರೀಖಿನಲ್ಲಿ ನಡೆಸಬೇಕೆಂದು ನಿಶ್ಚಯಿಸಲ್ಪಟ್ಟಿದೆ ಶಾಲೆಯ ಹಳೆಯ ವಿದ್ಯಾರ್ಥಿಗಳೆಲ್ಲರೂ ಇದಕ್ಕೆ ಉದಾರವಾಗಿ ಸಹಾಯ ಮಾಡಬೇಕಾಗಿ ಪ್ರಾರ್ಥಿಸುತ್ತೇವೆ. ಚಂದಾ ಹಣವನ್ನು ಚಂದಾದಾರರ ವಿಳಾಸ ಸಹಿತ ಕಾರ್ಯದರ್ಶಿಗಳಿಗೇ ಆಗಲಿ ಅಥವಾ ಗ್ರಾಜುಯೇಟ್ ಕೋ ಆಪರೇಟೀವ್ ಸೊಸೈಟಿಗಾಗಲಿ ಪಾವತಿ ಮಾಡಬೇಕಾಗಿ ಕೋರುತ್ತೇವೆ

ಆಕಾಶವಾಣಿ ಕಾರ್ಯಕ್ರಮ.

ವೇವ್‌ಲೆಂಗ್ತ್ 70 ಮೀಟರುಗಳು.

ಸೋಮವಾರ —ರಾತ್ರಿ 8 ರಿಂದ 9 15 ಆರ್ಕೆಸ್ಟ್ರಾ ಸಂಗೀತ, ರೇಡಿಯೋ ಉಪನ್ಯಾಸ 'ಪ್ರಪಂಚದ ವ್ಯಾಪಾರಗಳು" ಮಂಗಳವಾರ —ಸಾಯಂಕಾಲ 6 30 ರಿಂದ 8 ಕರ್ನಾಟಕ ಸಂಗೀತ ಎನ್ ಎಸ್ ನಾರಾಯಣಶಾಸ್ತ್ರಿ ಎಂ ಎ ಅವರಿಂದ ಕನ್ನಡ ಸಾಹಿತ್ಯದ ಕೆಲವು ಭಾಗಗಳನ್ನು ಓದುವಿಕೆ ಬುಧವಾರ —ರಾತ್ರಿ 8 ರಿಂದ 9-15 ರವರೆಗೆ ವಾದ್ಯಗಳೊಡನೆ ಕೊಳಲು, 'ಪರಮಾವಧಿಯ ಸಂಪಿಗೆಯು ಸಾಧ್ಯವಿದೆಯೆ?" ಎಂಬುದಾಗಿ ದ ಮಿಶ್ರ ವಿಷಯವಾದ ಭಾಷಣ ಗುರುವಾರ — ಸಾಯಂಕಾಲ 6 30 ರಿಂದ 9 ರವರೆಗೆ ಕನ್ನಡ ನಾಟಕ 'ಗಯಚರಿತ್ರೆ" ಪೌರನೀತಿ 'ರಾಜಧಾನಿಯಲ್ಲಿನ ಶಿಕ್ಷಕರ ಸರ್ವೆ" ಎಂಬ ಉಪನ್ಯಾಸ ಮಿ|| ರಾ|| ವಿ ಕೃಷ್ಣಮೂರ್ತಿ ಎಂ ಎ ಅವರಿಂದ ಶುಕ್ರವಾರ —ರಾತ್ರಿ 8 ರಿಂದ 9 15 ವರೆಗೆ ಹಿಂದೂಸ್ಥಾನಿ ಸಂಗೀತ. ಹಿಂದೂ ಭಾಷಣ "ಭಾರತೀಯ ಚರಿತ್ರೆಯ ಒಂದು ಭಾಗ"

ಮೈಸೂರಿನ ಕಾಂಗ್ರೆಸ್ ಪ್ರತಿನಿಧಿಗಳು

ಫೈಜಾಪುರದಲ್ಲಿ ಮುಂದಿನ ತಿಂಗಳು ನಡೆಯುವ ಇಂಡಿಯನ್ ನ್ಯಾಷನಲ್ ಕಾಂಗ್ರೆಸ್ ಮಹಾಸಭೆಗೆ ಮೈಸೂರಿನಿಂದ ಮ|| ಗಳಾದ ತಗಡೂರು ರಾಮಚಂದ್ರರಾವ್, ಎಂ ಎನ್ ಜೋಯಿಸ್, ಎ ಎಸ್ ಪಂಡಿತ್, ಅಗರಂ ರಂಗಯ್ಯ, ಕೆ ವಿಶ್ವೇಶ್ವರ ಗೌಡ, ಇವರುಗಳನ್ನು ಪ್ರತಿನಿಧಿಗಳಾಗಿ ಹೋಗಿಬರಲು ಚುನಾಯಿಸಿರುತ್ತಾರೆ,

ಕೂಲಿಯವರಿಗೆ ಎಲ್ಲಾ ಒಂದೇ

ಮೈಸೂರು ರೇಷ್ಮೆ ಕಾರ್ಖಾನೆಯಲ್ಲಿ ಮುಷ್ಕರ ಪ್ರಕರಣ ಜರುಗುತ್ತಿದ

ಕೂಲಿಯವರ ವಿಚಾರದಲ್ಲಿ ಬಂಡವಾಳಸ್ಥರೂ ಸರ್ಕಾರದವರೂ ಒಂದೇ ಆದರ್ಶ ನೀತಿಯ ಪೋಷಕರೆಂಬುದಕ್ಕೆ ಇದೂ ಒಂದು ನಿದರ್ಶನ

"ಇದಕ್ಕೇ ಕ್ಲಾಸ್‌ವಾರ್' ಎನ್ನುವುದು

ಮೈಸೂರು ಸಿವಿಲಿಯನ್ನರು.

ಮೈಸೂರು ಸಿವಿಲ್ ಸರ್ವಿಸ್ ಪರೀಕ್ಷೆಗೆ ಒಟ್ಟು ಅರ್ಜಿದಾರರಾಗಿದ್ದವರು 113 ಮಂದಿ ಅವರಲ್ಲಿ 15 ಮಂದಿ ವೈದ್ಯಕೀಯ ಪರೀಕ್ಷೆಯಲ್ಲಿ ಉತ್ತೀರ್ಣರಾಗಲಿಲ್ಲ

ಉಳಿದ 96 ರಲ್ಲಿ 34 ಜನರಿಗೆ ಸಂದರ್ಶನ ಬಾಜನೇ ದೊರೆಯಲಿಲ್ಲ ಸಂದರ್ಶನ ಶಕ್ತಿ ಪರೀಕ್ಷೆಯೂ 38 ಜನರನ್ನು ಕೋಧಿಸಿಬಿಟ್ಟಿತು

ಇನ್ನು ಪೂರ್ತಿ ಪರೀಕ್ಷೆಗೆ ಕುಳಿತುಕೊಳ್ಳುವವರು ಕೇವಲ 26 ಜನ ಮಾತ್ರ

ಅವರಲ್ಲಿ ಎಬ್ಬರೇ ಇಬ್ಬರು ಬ್ರಾಹ್ಮಣೇತರರು ಉಳಿದ 30 ಜನ ಬ್ರಾಹ್ಮಣೇತರರಲ್ಲ 'ನೀಲ್' ಅವರು

ಅಂದಮೇಲೆ ಒದುವ ನ್ಯಾಯವಿಧಾಯಕ ಸಭೆಯಲ್ಲಿ ಸೆನ್ಸರ ಪ್ರಶ್ನೆಗಳು ಸ್ವಾರಸ್ಯವಾಗಿರುತ್ತವೆಯಲ್ಲವೆ?

ಇದ್ದೇ ಇರಬೇಕು

ವಿಶ್ವವಿದ್ಯಾಲಯದಲ್ಲಿ ಹಿಂದೀಭಾಷೆ.

ಹಿಂದೀ ಭಾಷೆಯು ವಿಶ್ವವಿದ್ಯಾಲಯದಲ್ಲಿ ಐಚ್ಛಿಕ ಭಾಷೆಯಾಗಬೇಕೆಂದು ಠರಾವು ಪಾಸಾಗಿದೆ ಸೆನೇಟಿನಲ್ಲಿ

ಇನ್ನು 'ಪ್ರಬುದ್ಧ ಕರ್ನಾಟಕ' ದ ನೀತಿ ಹೇಗಾಗುವುದೋ ನೋಡತಕ್ಕ ವಿಷಯ

ಆಮೇಲೆ ಸಾಹಿತ್ಯ ಪರಿಷತ್ತೋ?

ಓಃ ಪಾಪ

ನವೀನ ಬ್ರಾಹ್ಮಣ ಫಿತೂರಿ

ಧಾರವಾಡದ ಪತ್ರಿಕೆಯೊಂದು ಒಂದು ಹೊಸ ಸಂಶೋಧನೆಯನ್ನು ನಡೆಸಿದೆ ವಿಜಯನಗರದ ಸ್ಮಾರಕೋತ್ಸವವು "ಬ್ರಾಹ್ಮಣರ ಪಿತೂರಿಯ ಫಲವೆಂದೂ" ಇತ್ಯಾದಿಯಾಗಿ ಅದು ಹೇಳಿದೆ

ದೇವರೇ ಗತಿ ನಾಳೆ ಕರ್ನಾಟಕ ಏಕೀಕರಣವೂ ಕೂಡಾ "ಬ್ರಾಹ್ಮಣರ ಪಿತೂರಿ" ಎಂದಾಗುವುದೇನೋ ಎಂದು ಹೆದರಿಕೆಯಾಗಿದೆ

ಅಂತೂ ಈ ಪತ್ರಿಕೆಯ ಸಂಪಾದಕರಿಗೆ 'ಸಂಶೋಧನಾ ಪ್ರವೀಣ' ಎಂಬ ಬಿರುದನ್ನು ಸ್ಮಾರಕೋತ್ಸವದ ಕಾರ್ಯಕರ್ತರು ಕೊಡಬೇಕೆಂದು ನಮ್ಮ ಬಿನ್ನಹ

ಈ ವಾರದ ಕಥೆ.

ಮೋಹನ.

ಲೇಖಕರು.—ಕೆ. ಎ ಸೂರ್ಯನಾರಾಯಣ ರಾವ್, ಮೈಸೂರು.

ಅಜ್ಜಿಯು ಎಂದಿನಂತೆ ತನ್ನ ಕೆಲಸಗಳನ್ನು ಮಾಡುತ್ತಿದ್ದಳು ಆಗತಾನೇ ಶಾಲೆಯಿಂದ ಬಂದ ಮೋಹನನು ತನ್ನ ಚಡಿಗೆಗಳನ್ನು ತೆಗೆದುಹಾಕಿ ಕೈಕಾಲಿಗೆ ನೀರುಹಾಕಿಕೊಂಡು ಅಡಿಗೆ ಮನೆಯನ್ನು ಪ್ರವೇಶಿಸುತ್ತ 'ಅಜ್ಜಿ' ಎಂದು ಕೂಗಿಕೊಂಡನು.

'ಬಾ! ನನ್ನ ಕಂದಾ!!' ಎಂದು ಅಜ್ಜಿಯು ಮೋಹನನನ್ನು ಹತ್ತಿರಕ್ಕೆ ಕರೆದು ತಲೆಯನ್ನು ತಡವರಿಸಿ, ತಬ್ಬಿ ಮುತ್ತಿಟ್ಟು ತಿಂಡಿಯನ್ನು ಕೊಟ್ಟಳು.

ರಾಮರಾಯರು ಆಫೀಸಿನಿಂದ ಮನೆಗೆ ಬಂದರು ಮೋಹನನು "ಅಪ್ಪಾ! ಈ ದಿನ ನಮ್ಮ ಮೇಷ್ಟ್ರು ಪಾಪಚ್ಚಿ ಕಥೆಯನ್ನು ಹೇಳಿದರು ಪುಟ್ಟ ಛತ್ರಿ ಪಾಪಚ್ಚೀಮ. ಬಿಳಿಯ ಮೊಲದ ಮೇಲೆ ಸವಾರಿ ಮಾಡುತ್ತಾ ಹೋಗುವಾಗ ದಾರಿಯಲ್ಲಿ ಪೆಪ್ಪರ್ಮಿಂಟಿನ ಕೆರೆ.... '

ರಾಮರಾಯರು ಕೋಪದಿಂದ "ಹೋಗೋ! ಮುಟ್ಠಾಳ!! ಅಜ್ಜಿ ಕಥೆ ಹೇಳುಕ್ಕೆ ಒರ್ತಾನೆ ಲೆಖ್ಖ ಎಷ್ಟು ಬಂತು ಹೇಳು? ಇಂಗ್ಲಿಷ್ ಎಲ್ಲಿಯವರೆಗೆ ಓದಿದೆ?"

ಮೋಹನನು ಜೋಲುಮುಖವನ್ನು ಹಾಕಿಕೊಂಡು "ಎ ಸಿ ಎ ಟೈಗರ್" ಎನ್ನುತ್ತಾ ತಂದೆಯ ಮುಖವನ್ನು ನೋಡಿ ಭಯದಿಂದ ನಿಂತಿದ್ದನು

'ದಟ್ ಈಸ್ ಎ ಗುಡ್ ಬಾಯ್' ಎಂದು ರಾಮರಾಯರು ಮಗನನ್ನು ಎತ್ತಿ ಮುದ್ದಾಡಿದರು.

* * *

ಮಧ್ಯಾಹ್ನ ಒಂದುವರೆ ಗಂಟೆಯ ಸಮಯ ಮನೆಯವರೆಲ್ಲರೂ ಊಟವಾಗಿ ಸರಸಸಲ್ಲಾಪಗಳನ್ನಾಡುತ್ತಾ, ತಾಂಬೂಲವನ್ನು ಹಾಕಿಕೊಳ್ಳುತ್ತಾ ಮನೆಯ ತೊಟ್ಟಿಯ ಮುಂದುಗಡೆ ಮೋರಿನ ಹಜಾರದಲ್ಲಿ ಕುಳಿತಿದ್ದರು. ಅಜ್ಜಿಯು ಅನತಿದೂರದಲ್ಲಿ ಒಂದು ಕೃಷ್ಣಾಜಿನವನ್ನು ಹಾಕಿಕೊಂಡು ಕಾಲುಗಳನ್ನು ಮುದರಿ ಮಲಗಿದ್ದಳು. ಮೋಹನನು ಆಕೆಯ ಬಳಿಯಲ್ಲಿ ಕುಳಿತು 'ಕಥೆ ಹೇಳಜ್ಜೀ" ಎಂದನು.

ಅಜ್ಜಿಯು, "ಒಂದಾನೊಂದು ಕಾಲದಲ್ಲಿ ಒಬ್ಬ ದೊರೆ ಇದ್ದನು. ದೊರೆಯ ಮಗನೂ ಮಂತ್ರಿಯ ಮಗನೂ ತುಂಬಾ ಸ್ನೇಹಿತರು ಒಂದು ದಿನ ಇವರಿಬ್ಬರೂ "

ಇಷ್ಟರಲ್ಲಿ ಶಾರದೆಯು "ಮೋಹನಾ ಮೇಷ್ಟ್ರು ಬಂದ್ರೂಕಣೋ" ಎಂದು ಕೂಗಿಕೊಂಡಳು ಮೋಹನನು ಕಥೆಯನ್ನು ಕೇಳುವುದರಲ್ಲಿ ಮಗ್ನನಾಗಿದ್ದುದರಿಂದ, ಇದು ಅವನಿಗೆ ಕೇಳಿಸಲಿಲ್ಲ ತಂದೆ ರಾಮರಾಯರೂ, ತಾಯಿ ಸರಸ್ವತಮ್ಮನವರೂ, ಒಂದೇ ದನಿಯಲ್ಲಿ ಕೂಗುಹಾಕಿದರು. "ಹುಚ್ಚು ಮುಂಡೆ! ಸ್ಲೇಟೂ ಪುಸ್ತಕ ತಾರೋ, ಅಜ್ಜಿಯ ಹತ್ತಿರ ಹೋಗಿ ಕೂತ್ಕೊಳ್ತಾನೆ"

ಕೂಡಲೆ ಮೋಹನನು ಸ್ಲೇಟು ಪುಸ್ತಕಗಳನ್ನು ಕೈಲಿ ಹಿಡಿದುಕೊಂಡು ಬಂದು ಕಕಿಬಿಕನೆ ನೋಡುತ್ತಾ ಮೇಷ್ಟ್ರ ಬಳಿಯಲ್ಲಿ ಕುಳಿತನು. ಉಪಾಧ್ಯಾಯರು 'ಎಂಟು ಮೂರ್‌ಲಿ" ಎಂದು ಪ್ರಾರಂಭ ಮಾಡಿದರು. ಆದರೆ ಸಣ್ಣ ಮೋಹನನಿಗೆ ಇದನ್ನು ತಿಳಿದುಕೊಳ್ಳುವುದು ಕಷ್ಟವಾಯಿತು. ಅವನು 'ರಾಜರ ಮಗ, ಮಂತ್ರಿಯ ಮಗ ಇವರು ಏನು ಮಾಡಿದರು?" ಎಂದು ಯೋಚಿಸುತ್ತಿದ್ದನು ಪಾಪಚ್ಚಿಯು ಕಳೆದುಕೊಂಡ ಕಾಲಂದುಗೆಯ ವಿಚಾರವಾಗಿ ಪಶ್ಚಾತ್ತಾಪಪಡುತ್ತಿದ್ದನು

ರಾಮರಾಯರು ಬಹಳ ಬಿರುಸಿನಿಂದ ಎದ್ದು ಬಂದು ಮಗುವಿನ ಕಿವಿಯನ್ನು ಹಿಡಿದು, ಬಲವಾಗಿ ಹಿಂಡಿ," ಅಪ್ಲಿಷ್ಟೋ ಮುಂಡೇದೇ! ಅಜ್ಜಿ ಹೇಳೋ ಕಥೆಗಳೆಲ್ಲಾ ಬರೀ ಸುಳ್ಳುಕಣೋ, "ಎಂಟುಮೂರ್‌ಲಿ, ಇಪ್ಪತ್ತನಾಲ್ಕು' ಇದು ನಿಜ. ಆದುದರಿಂದ ಅಜ್ಜಿ ಹೇಳಿದ ಕಥೆಗಳನ್ನು ಮರೆತುಬಿಡು, ಮೇಷ್ಟ್ರು ಹೇಳುವುದನ್ನು ಕಲಿತುಕೊ ಎಲ್ಲಿ ಈಗ ಹೇಳು' ಎಂಟುಮೂರ್‌ಲಿ— ?'

ಮೋಹನನಿಗೆ ಕಿವಿ ಹಿಂಡಿದ್ದರಿಂದ ಕಣ್ಣುಗಳಲ್ಲಿ ನೀರು ತುಳುಕಾಡುತ್ತಿತ್ತು. ಅಜ್ಜಿಯು ಮಗುವನ್ನು ಒಂದು ಬಾರಿ ನೋಡಿದಳು. ಅವನ ಆಗಿನ ನೋಟವು ಅಜ್ಜಿಯ ಎದೆಗೆ ಕರುಣೆಯನ್ನು ಹುಟ್ಟಿಸುವಂತಿತ್ತು

ಸರಿ, ರಾಮರಾಯರಿಗೆ ಕೋಪ ಬಂತು ಕೈಗೆ ಒಂದು ಚಿತ್ತವೂ ಸಿಕ್ಕಿತ. ಮೋಹನನಿಗೆ ಚೆನ್ನಾಗಿ ಏಟು ಬಿತ್ತು. ಅಜ್ಜಿಯು ಬಿಡಿಸಿಕೊಳ್ಳುವುದಕ್ಕೆ ಬಂದಳು ಅವಳಿಗೂ ಬೈಗಳವಾಯಿತು. ಸರಸ್ವತಮ್ಮನವರು ಬಂದರು. "ಮಗು! ಹಾಗೆ ಆಡಬೇಡಪ್ಪ, ನೋಡ. ನಿಮ್ಮ ತಂದೆ ದೊಡ್ಡ ಸರ್ಕಾರಿ ಹುದ್ದೆಯಲ್ಲಿದ್ದಾರೆ. ತುಂಬಾ ಸಂಪಾದನೆ ಮಾಡುತ್ತಾರೆ. ನೀನೂ ಅವರಂತೆಯೇ ದೊಡ್ಡ ಹುದ್ದೆದಾರನಾಗಿ ಹಣಸಂಪಾದನೆ ಮಾಡಬೇಕೆಂಬ ಆಸೆ ನಿನಗಿಲ್ಲವೇ?" ಎಂತೆಲ್ಲಾ ಎಷ್ಟನ್ನೋ ಹೇಳಿ ಸಮಾಧಾನ ಮಾಡಿದರು. ಸೋದರಮಾವ ನಾರಾಯಣರಾಯ, ಚಿಕ್ಕಪ್ಪ ವೆಂಕಣ್ಣಭಟ್ಟ, ಪಕ್ಕದ ಮನೆ ಕಮಲಮ್ಮ, ಗಿರಿಜ, ಎಲ್ಲರೂ ಬಂದು ಮೋಹನನಿಗೆ ನೀತಿ ಹೇಳಿದ್ದಾಯಿತು ಎಳೆಯ ಮೋಹನನಿಗಾದರೂ ಇದೊಂದೂ ತಲೆಗೆ ಹತ್ತಲಿಲ್ಲ

ಉಪಾಧ್ಯಾಯನು ತಾನು ನಾರ್ಮಲ್ ಸ್ಕೂಲಿನಲ್ಲಿ ಶಿಕ್ಷಣವನ್ನು ಪಡೆದು, ತನ್ನ ಸ್ವಂತ ಅನುಭವದಿಂದ ಮಕ್ಕಳ ಸ್ವಭಾವವನ್ನು ತಕ್ಕಮಟ್ಟಿಗೆ ಅರಿತವನಾದರೂ, ತನ್ನ ಹೊಟ್ಟೆಯಪಾಡಿಗಾಗಿ ನಾಲ್ಕು ರೂಪಾಯಿಗಳನ್ನು ಸಂಪಾದಿಸಿಕೊಳ್ಳುವುದರ ಸಲುವಾಗಿ ರಾಮರಾಯರು ಎಳೆದ ರಾಗಕ್ಕೇ ತಾಳ ಹಾಕಿದನು. ರಾಮರಾಯರಿಗಾದರೋ ಮೋಹನನೇ ಹಿರಿಯ ಮಗ, ಇನ್ನೂ ಚಿಕ್ಕ ಸಂಸಾರ, ಕೈತುಂಬಾ ಸಂಪಾದನೆ, ದೊಡ್ಡಸ್ತಿಕೆ, ಈಗಿನ ನವನಾಗರಿಕತೆಯ ಡಂಭಾಚಾರ, ಇವೆಲ್ಲವೂ ಯಥೇಷ್ಟವಾಗಿದ್ದವು. ಅವರ ಹೆಂಡತಿ ಸರಸ್ವತಮ್ಮನವರಿಗಂತೂ ಬಹಳ ಆಸೆ. ಮಗನು ಈ ದಿನವೇ ಬಿ.ಎ., ಪಾಸುಮಾಡಿದರೂ ಅಲ್ಪವೇ. ಅವರಿವರ ಮಕ್ಕಳಿಗಿಂತಲೂ ಬಹಳ ಮುಂದುವರಿದು ಬಂದನೆಂದರೆ ರಾಮರಾಯರ ಸಹೋದ್ಯೋಗಿಗಳಲ್ಲಿಯೂ, ಪಕ್ಕದ ಮನೆ ಹೆಂಗಸರು, ನೆಂಟರಿಷ್ಟರು ಇತ್ಯಾದಿ ಜನಗಳಲ್ಲಿಯೂ ತುಂಬಾ ಮರ್ಯಾದೆ ಪಡಬಹುದೆಂಬ ಆವಸರ ಮಗನನ್ನು ಆದಷ್ಟು ಬೇಗ ಭಾರಿ ನೌಕರನನ್ನಾಗಿ ಮಾಡಬೇಕು, ಅವನು ಪಾಸುಮಾಡಿರುವ ಪರೀಕ್ಷೆಗೂ, ಅವನು ಪಡೆದಿರುವ ಪದಕ, ಹುದ್ದೆ ಮುಂತಾದುವುಗಳಿಗೂ ಸರಿದೂಗುವಷ್ಟು ಹಣವನ್ನು ವರದಕ್ಷಿಣೆಯ ರೂಪವಾಗಿ ಹೆಣ್ಣಿನವರ ಕಡೆಯಿಂದ ಕಸಿದುಕೊಳ್ಳಬೇಕೆಂಬ ಆಸೆ.

ಇಷ್ಟು ಹೊತ್ತಿಗೆ ಮೂರು ಗಂಟೆಯಾಯಿತು. ಗಡಿಯಾರವನ್ನು ನೋಡುತಲೆ ಶಾಲೆಗೆ ಹೊತ್ತಾಗಬಹುದೆಂಬ ಭಯವೂ, ಬೋಧಕ ರಂಗರಾಯನ ಮನಸ್ಸಿನಲ್ಲಿ ಅಂಕುರಿಸಿತು. ಹೇಗಿದ್ದರೂ ಮನೆಗೆ ಹೋಗಬೇಕಾದ ಅವಶ್ಯಕತೆಯಿಲ್ಲ ರಾಮರಾಯರ ಮನೆಯಲ್ಲಿಯೇ ಮಧ್ಯಾಹ್ನದ ಕಾಫಿಯೂ ಆಯಿತು. ಅವರ ಜತೆಗೆ ಮೋಹನನ ಒಂದು ದಿನದ ಪಾಠವೂ ಆಯಿತು. ಉಪಾಧ್ಯಾಯನಿಗೆ ಆ ದಿನದ ವೇತನವೂ ಸಿಕ್ಕಿತು

'ಹು, ಹೋಗಿ, ಮೇಷ್ಟ್ರೆ, ನಿಮಗೆ ಮರೀಲಿಲ್ಲ, ನಮ್ಮ ಹುಡುಗನಿಗೆ ಬರಲಿಲ್ಲ, ನಮ್ಮ ಗ್ರಹಚಾರಕ್ಕೆ ಇಂಥಾ ಮಗ ಹುಟ್ಟಿದಾನೆ' ಎಂದು ಜಿಗುಪ್ಸೆಯಿಂದ ಹೇಳಿ ರಾಮರಾಯರು ತಮ್ಮ ಕೊಠಡಿಯೊಳಗೆ ಪ್ರವೇಶಿಸಿ, ಆರಾಮಕುರ್ಚಿಯ ಮೇಲೆ ಕುಳಿತು, ತಾವು ಹಿಂದಿನ ದಿನ ರೈಲ್ವೆ ಸ್ಟೇಷನ್ನಿನಲ್ಲಿ ಹಿಗ್ಗಿನ್‌ಬಾತಮ್ಸ್ ಪುಸ್ತಕಾಲಯದಿಂದ ತಂದಿದ್ದ "ಲವ್ ಡೈವೋರ್ಸ್ ಮರ್ಡರ್" ಎಂಬ ಪುಸ್ತಕವನ್ನು ಓದುತ್ತಾ ಕುಳಿತುಕೊಂಡನು.

ನೋಡಿದಿರಾ, ಅಜ್ಜಿಯು ಕತೆಯೆಲ್ಲವೂ ಸುಳ್ಳೆಂದು ಅರಿಯದ ಹಸುಗೂಸಿಗೆ ಇದುವರೆಗೂ ಬೋಧಿಸಿದ ರಾಮರಾಯರು ತಮ್ಮ ಕೊಠಡಿಯೊಳಗೆ ಹೋಗುತ್ತಲೆ ಮೋಹನನಿಗೆ ತಾವು ಮಾಡಿದ ಉಪನ್ಯಾಸವನ್ನೆಲ್ಲಾ ಕ್ಷಣಾರ್ಧದಲ್ಲಿ ಮರೆತು, ಹನ್ನೆರಡಾಣೆಗಳಿಗೆ ರೈಲು ಪ್ರಯಾಣಿಕರಿಗೆ ಹೊತ್ತು ಹೋಗುವುದೆಂದು, ತನ್ನ ಹೊಟ್ಟೆಕೊ ಯುವುದರ ಸಲುವಾಗಿ ಯಾರೋ, ಪರದೇಶದ ನಾರಿಯು ಬರೆದ 'ಪ್ರೀತಿ ಮದುವೆಯ ಬಂಧನದ ಬಿಡುಗಡೆ, ಕೊಲೆ' ಎಂ ಗಾಳಿಗೋಪುರಕ್ಕೆ ಸಮಾನವಾದ 'ಕಥೆ'ಯೊಂದನ್ನು ಓದಲುಪಕ್ರಮಿಸಿದನೇಕೆ?

ನಿಜಾಂಶವೇನೆಂದರೆ, ಈ ಪ್ರಪಂಚದಲ್ಲಿ ಬಾಲ್ಯದಿಂದ ಮೊದಲುಗೊಂಡು ಮಿಕ್ಕ ಎಲ್ಲಾ ಅವಸ್ಥೆಗಳಲ್ಲಿಯೂ, ಮನುಷ್ಯನು ಕತೆಗಳನ್ನು ಹೇಳಲೂ, ಕೇಳಲೂ, ಓದಲೂ ಅಪೇಕ್ಷಿಸುತ್ತಾನೆ. ಈ ಅಪೇಕ್ಷೆಯು ಸ್ವಾಭಾವಿಕವಾದುದು ಇದು ಪುರಾತನ ಕಾಲದಿಂದಲೂ ಮನುಷ್ಯನನ್ನು ಅನುಸರಿಸಿ ಬಂದಿರುವುದು. ಕತೆಗಳನ್ನು ಕಟ್ಟುವುದೇ ದರೆ ಮನುಷ್ಯರಿಗೇಕೆ, ದೇವತೆಗಳಿಗೂ ತ್ಯವಾದ ಅಪೇಕ್ಷೆಯಿದ್ದೇಯಿರುವುದು ಆಧುನಿಕ ಚರಿತ್ರಕಾರರು 'ಚರಿತ್ರೆಯೇ ನಿ ಜಾಕಿ ಕತೆಗಳೆಲ್ಲಾ ಬರಿಯ ಸುಳ್ಳು' ಎಂದು ಹೇಳಬಹುದು. ಆದರೆ ಪ್ರಕೃತದ ನಿಜವಾದುದು, ಸುಳ್ಳಾದುದು ಎಂಬ ಶೆಯು ಮುಖ್ಯವಲ್ಲ 'ಆಯಾ ವಯಸ್ಸಿನಲ್ಲಿ ಮನುಷ್ಯನನ್ನು ಆನಂದಗೊಳಿಸ ವಾದುದು' ಎಂಬುದೇ ಇಲ್ಲಿ ನಾವು ದುಕೊಳ್ಳಬೇಕಾದ ಮುಖ್ಯಾಂಶ.

ಮನುಷ್ಯ ತನ್ನ ಕೆಲಸವನ್ನು ತನಗೂ ತನ್ನ ಬಂಧು ಜನಗಳಿಗೂ, ಸಮಾಜಕ್ಕೂ ಅನುಕೂಲಿಸುವಂತೆ ನಡೆಸಿಕೊಂ ಬರಬೇಕಾದರೆ ಸಾಕಷ್ಟು ಅನುಭವಳು ಬೇಕು. ಈ ಅನುಭವಗಳು ಸಮ ದ ಸನ್ನಿವೇಶ, ಕತೆ, ವಿಷಯಜ್ಞಾನ ಗಳಿಂದ ಉಂಟಾಗುತ್ತದೆ. ಆದುದರಿಂ ನಮ್ಮ ಚಿಕ್ಕ ಹೋದರ ಸಹೋದರಿಯ ಮುಂದೆ ಆದರ್ಶ ಮೈಸೂರು ಸಂಸ್ಥಾ ಆದರ್ಶಪ್ರಜೆಗಳಾಗಬೇಕಾದರೆ ಮಕ್ಕ ಆಸೆ, ಸ್ವಭಾವ ಕುತೂಹಲ ಇವುಗಳಿ ಸಾರವಾಗಿ ಅವರನ್ನು ತರಬಿಯತ್ತು ಮಾ ಬೇಕು ಕತೆ ಕೇಳುವುದರಲ್ಲಿ ಅವರಿಗಿ ವಿಶ್ವಾಸವನ್ನೇ ಪಾಯವಾಗಿಟ್ಟುಕೊಂ ಮುಂದಕ್ಕೆ ಸಣ್ಣ ಕತೆಗಳೆಂಬ ಇಟ್ಟಿಳಿಂದ ಸುಂದರವಾದ ಕಟ್ಟಡವನ್ನು ಕಲು ಪ್ರಯತ್ನಿಸಬೇಕು ಒಂದೇ ಮಾಲ್ಲಿ ಹೇಳುವುದೆಂದರೆ, ಉಪಾಧ್ಯಾಯ ತಂದೆತಾಯಿಗಳೂ, ಎಲ್ಲರೂ ಅಜ್ಜಯೇ ಆಗಬೇಕು ಏಕೆಂದರೆ ಉಪ ಕಲಿಸುವಿಕೆಗಿಂತಲೂ ಅಜ್ಜಿಯು ಕಳಿಕೆಯು ಬಹಳ ಜಾಗ್ರತೆಯಾಗಿ ಮ ಫಲಗಳನ್ನು ಕೊಡುವುದು.

ಫೆಡರೇಷನ್ ಪ್ರತಿನಿಧಿಗಳು.

ಮೈಸೂರಾಯದ ವಿಶೇಷ ಪ್ರತಿನಿಧಿ ಮಿ|| ಎ. ಸಿ ಲೋಥಿಯನ್ನವರು ಬೆಂಗಗೆ ಬಂದರು. ದಿವಾನ್ ಸರ್ ಮಿ ಇಸ್ಮೇಲರು ಅವರೊಡನೆ ನೂತನ ಗ ವ್ಯವಸ್ಥೆಯ ವಿಷಯವಾಗಿ ದೀರ್ ದ ಚರ್ಚೆ ನಡೆಸಿದರು. ಶ್ರೀಮನ್ಮಹಾರಾಜರವರನ್ನು ಸ ದರೆಂದು ಗೊತ್ತಾಗಿದೆ

ಗೆಜೆಟ್ ಸಂಗ್ರಹ.

ಶಿವಮೊಗ್ಗೆಯ ಸಬಾರ್ಡಿನೇಟ್ ಜಡ್ಜ್ ಮ॥ ಎಸ್. ರಾಮಚಂದ್ರಶಾಸ್ತ್ರಿಗಳಿಗೆ ನವೆಂಬರ್ ತಾ॥ 2 ರಿಂದ ಒಂದು ತಿಂಗಳು ಇಪ್ಪತ್ತೆರಡು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಈ ರಜಾ ಅವಧಿಯಲ್ಲಿ ಮಂಡ್ಯದ ಫಸ್ಟ್‌ಗ್ರೇಡ್ ಮುನ್ಸೀಫ್ ಮ॥ ಡಿ. ರಾಘವೇಂದ್ರರಾಯರನ್ನು ಸಬಾರ್ಡಿನೇಟ್ ಜಡ್ಜಿಯವರಾಗಿ ನೇಮಕಮಾಡಿ ಶಿವಮೊಗ್ಗೆಯ ಸಬಾರ್ಡಿನೇಟ್ ಜಡ್ಜಿಯವರ ಕೋರ್ಟ್ ಛಾರ್ಜಿಗೆ ಮೊಕರೂರು ಮಾಡಿದೆ ಈ ಅವಧಿಯಲ್ಲಿ ಅಡ್ವೋಕೇಟ್ ಮ॥ ಅಗ ಅಬ್ದುಲ್ ಮಜೀದ್‌ರವರನ್ನು ಸೆಕೆಂಡ್ ಗ್ರೇಡ್ ಮುನ್ಸೀಫರಾಗಿ ನೇಮಿಸಿ ಅವರಿಗೆ ಮಂಡ್ಯದ ಮುನ್ಸೀಫ್ ಕೋರ್ಟ್ ಛಾರ್ಜ್ ವಹಿಸಿದೆ

ಹಾಸನದ ಮುನ್ಸೀಫ್ ಮ॥ ಟಿ ಎಸ್ ವಸಂತಮೂರ್ತಿಯವರಿಗೆ ನವೆಂಬರ್ ತಾ॥ 2 ರಿಂದ ಆರು ತಿಂಗಳ ರಜಾ ಕೊಟ್ಟಿದೆ ಈ ರಜಾ ಅವಧಿಯಲ್ಲಿ ಬೆಂಗಳೂರಿನ ಅಡ್ವೋಕೇಟ್ ಮ॥ ಡಿ ರಾಮಸ್ವಾಮಿಯ್ಯಂಗಾರ್ರವರನ್ನು ಸೆಕೆಂಡ್ ಗ್ರೇಡ್ ಮುನ್ಸೀಫರಾಗಿ ನೇಮಿಸಿ ಹಾಸನದ ಮುನ್ಸೀಫರ ಕೋರ್ಟ್ ಛಾರ್ಜಿಗೆ ಮೊಕರೂರು ಮಾಡಿದೆ

ಬೆಂಗಳೂರು ಕೋರ್ಟ್ ಹೈಸ್ಕೂಲಿನ ಒಳಗೆ ಇದ್ದ ತಾಲ್ಲೂಕು ಕಚೇರಿಯನ್ನೂ, ಖಜಾನೆಯನ್ನೂ ಹಳೇ ಮುನಿಸಿಪಲ್ ಆಫೀಸ್ ಕಟ್ಟಡಕ್ಕೆ ಬದಲಾಯಿಸಿರುತ್ತಾರೆ.

ಕಡೂರು ಡಿಸ್ಟ್ರಿಕ್ಟ್ ಡೆಪ್ಯುಟಿಕಮಿಷನರ್ ಮ॥ ಎಂ ಅಬ್ದುಲ್ ಹಕ್ ರವರನ್ನು ಕೃಷ್ಣರಾಜಸಾಗರ ವರ್ಕ್ಸ್ ಸ್ಪೆಷಲ್ ಲ್ಯಾಂಡ್ ಅಕ್ವಿಜಿಷನ್ ಆಫೀಸರಾಗಿ ಮೊಕರೂರು ಮಾಡಿದೆ ಇವರ ಆಫೀಸು ಮೈಸೂರು ಡಿಸ್ಟ್ರಿಕ್ಟ್ ಆಫೀಸ್ ಕಟ್ಟಡದಲ್ಲಿ ಮಾಡಿದೆ.

ಮಳವಳ್ಳಿ ತಾಲ್ಲೂಕು ಅಮಲ್ದಾರ್ ಮ॥ ಕೆ. ಪ್ರಸಾದ್‌ರವರಿಗೆ ಡಿಸೆಂಬರ್ ತಾ॥ 9 ರಿಂದ ಹದಿನೈದು ದಿನಗಳ ಪ್ರಿವಿಲೆಜ್ ರಜಾ ಕೊಟ್ಟಿದೆ. ಈ ರಜಾ ಅವಧಿಯಲ್ಲಿ ತಾಲ್ಲೂಕು ಶಿರಸ್ತೇದಾರರು ತಾಲ್ಲೂಕಿನ ಛಾರ್ಜು ವಹಿಸಿರತಕ್ಕದ್ದು.

ಸಬ್ ರಿಜಿಸ್ಟ್ರಾರುಗಳು ಮ॥ ಗಳಾದ ಕ ಗೋಪೀನಾಥರಾಯರನ್ನು ಶ್ರೀರಂಗಪಟ್ಟಣದಿಂದ ನಂಜನಗೂಡಿಗೂ, ಡಿ. ಸಿದ್ದಪ್ಪನವರನ್ನು ಕೃಷ್ಣರಾಜನಗರದಿಂದ ಶ್ರೀರಂಗಪಟ್ಟಣಕ್ಕೂ, ಎಂ. ಹನುಮಯ್ಯನವರನ್ನು ಮಧುಗಿರಿಯಿಂದ ಕೃಷ್ಣರಾಜನಗರಕ್ಕೂ, ವಿ ಹಿರಣ್ಯಪ್ಪನವರನ್ನು ಚಿಕ್ಕಬಳ್ಳಾಪುರದಿಂದ ಮಧುಗಿರಿಗೂ ಎಂ. ಎ. ರಜಾಕ್‌ರವರನ್ನು ತೀರ್ಥಹಳ್ಳಿಯಿಂದ ಚಿಕ್ಕಬಳ್ಳಾಪುರಕ್ಕೂ ವರ್ಗಾವರ್ಗಿ ಮಾಡಿದೆ

ಅಮಲ್ದಾರರು ಮ॥ ಗಳಾದ ಬಿ. ಎನ್. ಸೀತಾರಾಮಯ್ಯನವರನ್ನು ಹಿರಿಯೂರು ತಾಲ್ಲೂಕಿನಿಂದ ಮೈಸೂರು ತಾಲ್ಲೂಕಿಗೂ

ಪಂಡಿತ ಜವಹರಲಾಲರ ಆತ್ಮಕಥೆ.

ಜವಹರಲಾಲರ ಆತ್ಮಕಥೆಯ ಭಾಷಾಂತರ ಮತ್ತು ಪ್ರಕಟಣೆಯ ಎಲ್ಲ ಹಕ್ಕುಗಳನ್ನೂ ಪಂಡಿತರಿಂದ ಪಡೆದಿರುತ್ತೇನೆ. ಈ ಆತ್ಮಕಥೆಯ ಕನ್ನಡ ಭಾಷಾಂತರಕಾರರು ಶ್ರೀ ದ ಕೃ. ಭಾರದ್ವಾಜರಲ್ಲವೆಂಬ ಸುದ್ದಿಯೂ ಕರ್ನಾಟಕದ ಕೆಲವು ಪತ್ರಿಕೆಗಳಲ್ಲಿ ಪ್ರಕಟವಾಗಿದೆ. ಅದೇ ಸುದ್ದಿಯಲ್ಲಿ, ನಾವು ಪ್ರಕಟಿಸುವ ಪುಸ್ತಕಕ್ಕೆ ಬಾಧಕವನ್ನುಂಟುಮಾಡುವ ಒಂದೆರಡು ವಾಕ್ಯಗಳಿವೆ. ಆ ವಿಚಾರವಾಗಿ ಸರಿಯಾದ ತಿಳಿವಳಿಕೆಯನ್ನು ಕೊಡಬೇಕೆಂದು ನನ್ನ ಆಶೆ.

ನಾನು ಪ್ರಕಟಿಸುತ್ತಿರುವ ಕನ್ನಡ ಆತ್ಮಕಥೆಯ ಭಾಷಾಂತರಕಾರರು ಶ್ರೀ ದ. ಕೃ. ಭಾರದ್ವಾಜರಲ್ಲ. ಅವರೇ ಅನುವಾದ ಕಾರ್ಯಮಾಡಬೇಕೆಂದು ಅವರಲ್ಲಿ ನಾನು ಕರಾರು ಮಾಡಿಕೊಂಡಿದ್ದೆ ಆಗ ಅವರ ಹೆಸರನ್ನೊಳಗೊಂಡ ಜಾಹಿರಾತುಗಳನ್ನು ಪತ್ರಿಕೆಗಳಿಗೆ ಕೊಟ್ಟಿದ್ದೆ. ಶ್ರೀ. ಭಾರದ್ವಾಜರು ಕರಾರು ನಡೆದ ಕೆಲವು ದಿನಗಳ ಮೇಲೆ, ಅನುವಾದ ಕಾರ್ಯ ಮಾಡಲು ಇರುವ ತೊಂದರೆಗಳನ್ನು ಹೇಳಿ, ಕರಾರಿನಿಂದ ಬಿಡಿಸಬೇಕೆಂದರು. ಅಲ್ಲಿಂದಾಚೆಗೆ ನಾನು ಕೊಟ್ಟ ಜಾಹಿರಾತುಗಳಲ್ಲಿ ಶ್ರೀ. ಭಾರದ್ವಾಜರ ಹೆಸರನ್ನು ತೆಗೆದುಹಾಕಿಬಿಟ್ಟಿದ್ದೇನೆ. ಜಾಹಿರಾತುಗಳನ್ನು ನೋಡುತ್ತಿರುವವರೆಲ್ಲರೂ ಇದನ್ನು ಸುಲಭವಾಗಿ ತಿಳಿದುಕೊಳ್ಳಬಹುದು.

ನಮ್ಮ ಪ್ರಕಟಣೆಯ ಅನುವಾದ ಕಾರ್ಯವು ನವಜೀವನ ಕನ್ನಡ ಗುಂಪಿನಿಂದ ನಡೆಯುತ್ತಿದೆ. ಡಿಸೆಂಬರ್ ೧ ನೆಯ ತಾರೀಖಿನ ಹೊತ್ತಿಗೆ ಮೊದಲನೆಯ ಭಾಗವು ಹೊರಬೀಳುವುದು. ತಿಂಗಳು ಆಖೈರಿಗೆ ಗ್ರಂಥವು ಪೂರ್ತಿಯಾಗುವುದು.

ಭಾಷಾಂತರ ಕಾರ್ಯದ ಬದಲಾವಣೆಗಳಿಂದ ನನಗೆ ಆಗಿರುವ ನಷ್ಟಕ್ಕೂ ಅನಾನುಕೂಲಗಳಿಗೂ ಯಾವ ವಿಧವಾಗಿ ಪರಿಹಾರವನ್ನು ಪಡೆಯಬೇಕೆಂಬ ಆಲೋಚನೆ ನಡೆಯುತ್ತಿದೆ.

ಸಿ ಅಶ್ವತ್ಥನಾರಾಯಣರಾವ್,
ಸಂಪಾದಕ, ಮಕ್ಕಳ ಪುಸ್ತಕ
ಮತ್ತು ನವಜೀವನ.

ಕೆ. ಮಾದವರಾಯರನ್ನು ಮೈಸೂರು ತಾಲ್ಲೂಕಿನಿಂದ ಬೆಂಗಳೂರು ತಾಲ್ಲೂಕಿಗೂ, ಡಿ. ಎಸ್. ರಾಘವೇಂದ್ರಾಚಾರ್ಯರನ್ನು ಹಿರಿಯೂರು ತಾಲ್ಲೂಕಿಗೂ, ಆಕ್ಟಿಂಗ್ ಸ್ಪೆಷಲ್ ಡೆಪ್ಯುಟಿ-ಅಮಲ್ದಾರ್ ಮ॥ ಅಬ್ದುಲ್ಲಾ ಪಾಲಿ ಪೇಷ್ಕಾರರನ್ನು ಚಾಮರಾಜನಗರ ತಾಲ್ಲೂಕಿನಿಂದ ಹರಿಹರ ಸಬ್ ತಾಲ್ಲೂಕಿಗೂ ವರ್ಗಾವರ್ಗಿ ಮಾಡಿದೆ.

ಮೈಸೂರು ಮಹಿಳಾ ಸಮ್ಮೇಳನದ ಅಧಿವೇಶನದಲ್ಲಿ ನಿರ್ಣಯಿಸಿದ ವಿಷಯಗಳು

ಕೋಲಾರದಲ್ಲಿ ತಾ॥ 24-11-36 ನೇ ದಿನ ಮೈಸೂರು ಮಹಿಳಾ ಸಮ್ಮೇಳನದ ವಾರ್ಷಿಕೋತ್ಸವವು ಲೇಡಿ ಮಿರ್ಜಾರವರ ಅಧ್ಯಕ್ಷತೆಯಲ್ಲಿ ನೆರವೇರಿತು. ಸಭೆಯಲ್ಲಿ ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟ ಅನೇಕ ವಿಷಯಗಳು ನಿರ್ಣಯಿಸಲ್ಪಟ್ಟಿತು. ಮಿಸೆಸ್, ಸರೋಜಮ್ಮನವರು ತಿರುವಾಂಕೂರಿನ ಮಹಾರಾಜರು ಹರಿಜನರಿಗೆ ದೇವಾಲಯ ಪ್ರವೇಶವನ್ನು ಕಲ್ಪಿಸಿದುದಕ್ಕಾಗಿ ಅಭಿನಂದಿಸುವಂತಹ ನಿರ್ಣಯವನ್ನು ಸಭೆಯಲ್ಲಿ ತಂದೊಡ್ಡಿದರು. ಆ ನಿರ್ಣಯವು ಎಲ್ಲರಿಂದಲೂ, ಸಂಪೂರ್ಣ ಒಪ್ಪಿಗೆಯನ್ನು ಪಡೆಯಿತು. ಮತ್ತು ಕೋಲಾರದ ಮಿಸ್ ಮುತ್ತೈಯವರು ಬಾಲ್ಯವಿವಾಹದ ಪದ್ಧತಿಯನ್ನು ಖಂಡಿತವಾಗಿ ರದ್ದುಪಡಿಸುವಂಥ ಒಂದು ನಿರ್ಣಯವನ್ನು ತಂದಿಡಲು ಸಭೆಯಲ್ಲಿ ಅನೇಕರು ಈ ನಿರ್ಣಯವನ್ನು ವಿರೋಧಿಸಿದರು. ಕಡೆಗೆ 120-75 ಓಟುಗಳಿಂದ ಅಂಗೀಕೃತವಾಯಿತು ಅಂಗೀಕರಿಸಿದ ಕೆಲವು ಸಾಧಾರಣಗಳಾವುವೆಂದರೆ.—ಉರ್ದು ಬಾಲಕಿಯರ ಪ್ರೈಮರಿ ಸ್ಕೂಲ್‌ಗಳಿಗೆ ಟ್ರೈನಿಂಗ್ ಆಗಿರುವವರನ್ನೇ ಮುಖ್ಯಾಧಿಕಾರಿಗಳನ್ನಾಗಿ ಮಾಡಬೇಕೆಂದೂ, ಚಿಕ್ಕ ಹುಡುಗಿಯರ ದೇಹದಾರ್ಢ್ಯಕ್ಕೆ ವಿಶೇಷರೀತಿಯಲ್ಲಿ ಪ್ರೋತ್ಸಾಹಿಸಬೇಕೆಂದೂ, ಎಲ್ಲಾ ಸ್ಥಳಗಳಲ್ಲೂ ಶಿಶುವಿಹಾರ ಶಿಕ್ಷಣ ಸ್ಕೂಲ್‌ಗಳನ್ನು ಏರ್ಪಡಿಸಬೇಕೆಂದೂ, ಈಗ ಸಿನಿಮಾಗಳಲ್ಲಿ ತೋರಿಸುತ್ತಿರುವ ಚಿತ್ರಗಳಿಂದ ಬಾಲಕ, ಬಾಲಕಿಯರ ಮನಸ್ಸಿನಲ್ಲಿ ಭಿನ್ನಭಾವಗಳು ಉಕ್ಕುವಿಸುವುವೆಂತಲೂ ಆದ್ದರಿಂದ ಹುಡುಗರಿಗೆ ನೀತಿಬೋಧಕವಾಗುವಂತಹ ಚಿತ್ರಗಳನ್ನು ಪ್ರದರ್ಶಿಸಬೇಕೆಂದೂ, ಸಿನಿಮಾದವರಿಗೆ ಎಚ್ಚರಿಕೆ ಕೊಡಬೇಕೆಂತಲೂ, ಮೈಸೂರು ಸಂಸ್ಥಾನದಲ್ಲಿ ಬಾಲ್ಯವಿವಾಹ ತಪ್ಪಿಸಿ, ಶಾರದಾಕಾನೂನನ್ನು ಜಾರಿಯಲ್ಲಿ ತರಬೇಕೆಂದೂ, ನೀತಿಗಳಲ್ಲಿ ಶೂನ್ಯಹೊಂದಿದ ಸ್ತ್ರೀಯರನ್ನು ಸರಿಪಡಿಸಲು ಪ್ರತಿಯೊಂದು ಜಿಲ್ಲೆಗಳಲ್ಲೂ ರಕ್ಷಣಾಸಭೆಗಳನ್ನು ಏರ್ಪಡಿಸಬೇಕೆಂದೂ, ಮೈಸೂರು ರೈಲ್ವೆಯವರು ಮೂರನೆ ತರಗತಿಯಲ್ಲಿ ಪ್ರಯಾಣಬೆಳಸುವ ಹೆಂಗಸರಿಗೆ ಈಗಿರುವುದಕ್ಕಿಂತ ಇನ್ನೂ ಹೆಚ್ಚು ಸೌಕರ್ಯವನ್ನು ಕಲ್ಪಿಸಬೇಕೆಂದೂ, ತೀರ್ಮಾನವಾಯಿತು. ಮತ್ತು ದೇಶದ ಎಲ್ಲಾ ಜಿಲ್ಲೆಗಳ ಪೌರಸಭೆಯಲ್ಲಿಯೂ ಮಹಿಳೆಯರು ನಾಮಿನೇಷನ್ ಮೂಲಕವಾಗಿಯಾದರೂ ಸದಸ್ಯರಾಗಬೇಕೆಂಬ ಅಂಶವನ್ನು ಸರಕಾರದವರಲ್ಲಿ ಮನಃಮಾಡಿಕೊಳ್ಳುವುದಾಗಿ ಈ ಸಮ್ಮೇಳನವು ಪ್ರಾರ್ಥಿಸಿದೆ.

ನ್ಯಾಯವಿಧಾಯಕ ಸಭೆ ಮತ್ತು ಪ್ರಜಾಪ್ರತಿನಿಧಿ ಸಭೆ.

ಪ್ರಜಾಪ್ರತಿನಿಧಿಸಭೆಯ ಮತ್ತು ನ್ಯಾಯವಿಧಾಯಕಸಭೆಯ ಸದಸ್ಯರುಗಳಿಗೆ ಇರತಕ್ಕ ಹಕ್ಕು ಬಾಧ್ಯತೆಗಳು

ಯುಕ್ತವಾದ ಸಂಯಮಿತಿಗೊಳಪಟ್ಟ ವಾಕ್ಸ್ವಾತಂತ್ರ್ಯ.

'ಜೂರರುಗಳಾಗಿಯೂ' ಮತ್ತು "ಅಸ್ಸೆಸರುಗಳಾಗಿಯೂ" ಕೆಲಸ ಮಾಡಬೇಕಾದುದಿಲ್ಲವೆಂದು ವಿನಾಯಿತಿ.

ಪ್ರಜಾಪ್ರತಿನಿಧಿಸಭೆಯ ಮತ್ತು ನ್ಯಾಯವಿಧಾಯಕಸಭೆಯ ಅಧಿವೇಶನಗಳು ನಡೆಯುತ್ತಿರುವಾಗ ಸಿವಿಲ್ ನಡವಳಿಕೆಗಳ ಮೇರೆಗೆ ದಸ್ತಗಿರಿ ಮಾಡದಂತೆ ಅಥವಾ ಬಂದೀಖಾನೆಯಲ್ಲಿಟ್ಟುಕೊಳ್ಳದಂತೆ ವಿನಾಯಿತಿ.

ಕಾನೂನು ರಚನೆ.—ಮಸೂದಾ ಕಾನೂನಿನ ವಿಷಯದಲ್ಲಿ ಪ್ರಜಾಪ್ರತಿನಿಧಿಸಭೆಯ ಸದಸ್ಯರ ಅಭಿಪ್ರಾಯವನ್ನು ಮುಂದಾಗಿ ತೆಗೆದುಕೊಳ್ಳದೆಯೇ ಅದನ್ನು ನ್ಯಾಯವಿಧಾಯಕಸಭೆಯ ಮುಂದಿಡುವುದಕ್ಕೂ ಮತ್ತು ಅದು ಮೂರನೆಯವೇಳೆ ನ್ಯಾಯವಿಧಾಯಕಸಭೆಯ ಮುಂದೆ (ಆಖೈರು ತೀರ್ಮಾನಕ್ಕಾಗಿ) ಬರುವುದಕ್ಕೆ ಮುಂಚೆ ಅದರ ವಿಷಯದಲ್ಲಿ ಪ್ರಜಾಪ್ರತಿನಿಧಿಸಭೆಯ ಸದಸ್ಯರ ಅಭಿಪ್ರಾಯವನ್ನು ತೆಗೆದುಕೊಳ್ಳುವುದಕ್ಕೂ ಕಾನೂನಿನಲ್ಲಿ ಅವಕಾಶವನ್ನು ಕಲ್ಪಿಸುವುದು.

ಲಂಡನ್ ಫಿಲ್ಮ್ ಕಂಪೆನಿಯವರ ಬಹುಮಾನ

ಹೆಗ್ಗಡದೇವನಕೋಟೆ ಮುಸಲ್ಮಾನ ಹುಡುಗನನ್ನು ಲಂಡನ್ ಫಿಲ್ಮ್ ಕಂಪೆನಿಯವರು "ಎಲಿಫೆಂಟ್‌ಬಾಯ್" ಎಂಬ ಚಿತ್ರದಲ್ಲಿ ಪಾತ್ರವಹಿಸಲು ಡೆಹ್ಯಾಂಸ್ಟುಡಿಯೋಗೆ ಕರೆದುಕೊಂಡು ಹೋಗಿರುತ್ತಾರೆ. ಈ ಸ್ಟುಡಿಯೋವು ಬಹಳ ಭಾರಿಯದಾಗಿಯೂ ಮತ್ತು ವಿಶಾಲವಾಗಿಯೂ ಇದೆ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಸಾಬುವು ತಿರುಗಾಡಲು ತೊಂದರೆಯಾದುದರಿಂದ ಅವನಿಗೆ ಕಂಪೆನಿಯವರು ಒಂದು ಮೋಟಾರನ್ನು ಬಹುಮಾನವಾಗಿ ಕೊಟ್ಟಿರುತ್ತಾರೆ.

ಆತಂಕನಿಗ್ರಹ ಡೈರಿ

ಜಾಮ್‌ನಗರದ ಆತಂಕನಿಗ್ರಹ ಔಷಧಾಲಯದವರು ಪ್ರಕಟಿಸಿರುವ 1937 ನೇ ಇಸವಿಯ ಅಂದವಾದ ಪಾಕೆಟ್ ಡೈರಿಯ ಒಂದು ಪ್ರತಿಯನ್ನು ನಾವು ಕೃತಜ್ಞತೆಯಿಂದ ಸ್ವೀಕರಿಸಿದ್ದೇವೆ ಎರಡಾಣೆ ಸ್ಟಾಂಪು ಕಳುಹಿಸಿದವರಿಗೆ ಇದನ್ನು ಉಚಿತವಾಗಿ ಕಳುಹಿಸಲಾಗುವುದು.

ಹೊಸ ಎಲೆಕ್ಟ್ರಿಕ್ ಎಂಜಿನೀಯರು

1936 ನೇ ಡಿಸೆಂಬರ್ ತಾ. 3 ರಿಂದ ಮೈಸೂರು ಸರ್ಕಾರದವರು ಮಿ॥ ಎಸ್. ಜಿ. ಫೋರ್ಬ್ಸ್‌ರವರನ್ನು ನಮ್ಮ ಸಂಸ್ಥಾನದ ಚೀಫ್ ಎಲೆಕ್ಟ್ರಿಕಲ್ ಇಂಜನಿಯರಾಗಿ ಮತ್ತೆ ನೇಮಿಸಿದ್ದಾರೆ.

ಸಾಧ್ವಿ

೩೦—೧೧—೩೬ ನೇ ಸೋಮವಾರ

ಬಂಗಾಳಾ ಡಿಟೆನ್ಯೂಗಳು.

ಒಬ್ಬರಲ್ಲ ಇಬ್ಬರಲ್ಲ ಎಷ್ಟೋ ಮಂದಿ ವಂಗಯುವಕರುಗಳು ಸರ್ಕಾರದಿಂದ ನ್ಯಾಯಾಸ್ಥಾನದಲ್ಲಿ ವಿಚಾರಣೆ ಎಂಬುದೇ ಇಲ್ಲದೆ ಕೊಳೆಯುತ್ತಿದ್ದಾರೆ. ಯಾವ ರಾಷ್ಟ್ರಗಳೇ ಆಗಲೀ ಅದರ ಯುವಕರೇ ಕಾರ್ಯನಿರತರಾಗಿ ದೇಶಾಭ್ಯುದಯಕ್ಕಾಗಿ ಸಿದ್ಧರಾಗಬೇಕಾದವರಾಗಿರುವರು. ಇಂಥ ಭಾವೀ ಜನಾಂಗವನ್ನು ತುದಿಮೊದಲಿಲ್ಲದ ಬಂಧನಕ್ಕೆ ಸಿಕ್ಕಿಸಿ, ಅವರಿಗೆ ನ್ಯಾಯಾಸ್ಥಾನದ ಸೌಲಭ್ಯಗಳನ್ನೂ ಸಹ ಕಲ್ಪಿಸಿ ಕೊಡದೆ, ಅವರಿಗ ಹಿಂಸ ಮಾಡುವಲ್ಲಿ ಅದು ಆ ಜನಾಂಗಕ್ಕೇ ಒಂದು ಮಹಾಪರಾಧ ಮಾಡಿದಂತಾಗುವುದು. ಈ ತಪ್ಪಿನಿಂದ ದೇಶಕ್ಕೇ ಹಾನಿತಟ್ಟುವುದು, ಎಂದಿಗೂ ಅವರ ಅಧಿಕಾರಿಗಳೂ ಕೂಡಾ ಇದರಿಂದ ತಪ್ಪಿಸಿಕೊಳ್ಳಲಾರರು

ಅನೇಕ ಬಾರಿ ಅನೇಕ ಜನರು ಬಂಗಾಳಾ ಡಿಟೆನ್ಯೂಗಳ ವಿಷಯವಾಗಿ ಕೇಂದ್ರಶಾಸನ ಸಭೆಯಲ್ಲಿ ಪ್ರಶ್ನಿಸಿದ್ದಾರೆ. ಪ್ರಶ್ನಿಸಿದ್ದಾರೆ. ಅವರ ಇದಕ್ಕೆಲ್ಲಕ್ಕೂ ಸರ್ಕಾರದ ಉತ್ತರವೇನು? ವಾದವೂ ಸಾಧುವಾದದ್ದು, ಕೋಲೂ ಮುರಿಯಬಾರದು, ಎಂಬಂತೆ ಈ ಪ್ರಶ್ನೆಗಳಿಗೆಲ್ಲಾ ನಿರರ್ಥಕವಾದ ಜವಾಬುಗಳನ್ನು ಹೇಳಿ, ನವಯುವಕರ ಭವಿತವ್ಯಕ್ಕೆ ಕುಂದು ತರುತ್ತಿದೆ. ಇದು ಬಹಿರಂಗವಾಗಿ ಘೋರ ಶೋಚನೀಯವಾದುದೇ

ಈಗ ಭಾರತದೇಶದ ಜನರು ಈ ವಂಗದೇಶೀಯ ಯುವಕರ ದುರ್ದೆಸೆಗೆ ಗಮನವೀಯಬೇಕು ಪತ್ರಿಕೆ ಹೆನ್ನೆಬ ಬಾರಿ ಸರ್ಕಾರವು ಜನರ ಅಭಿಪ್ರಾಯಕ್ಕೆ ಮನ್ನಣೆ ಮಾಡದಿದ್ದರೂ, ಪ್ರಬಂಧದ ಎದೆಗುಂದದೆ ಪುನಃ ಪುನಃ ನಾಗರಿಕ ನ್ಯಾಯಕ್ಕಾಗಿ ನ್ಯಾಯಸ್ಥಾನದ ವಿಚಾರಣೆಗಾಗಿ ಚಳುವಳಿಯನ್ನು ಹೂಡಬೇಕು ಹೀಗೆ ಮುಂದಿದ್ದಲ್ಲಿ ಇಂದು ಬಂಗಾಳಕ್ಕೆ ಸಂಭವಿಸಿರುವ

ಮಂಡ್ಯದಲ್ಲಿ ಮಹಿಳಾ ಸಮಾಜದ ಪ್ರವೇಶೋತ್ಸವ

ಮಂಡ್ಯದ ಸಮಾಜದ ಪ್ರವೇಶೋತ್ಸವವು ತಾ|| 26-11-36 ನೇ ಗುರುವಾರ ಮಧ್ಯಾಹ್ನ 3½ ಘಂಟೆಯಲ್ಲಿ ಮಿಸೆಸ್|| ಟಿ ಜಿ ರಾಮಯ್ಯನವರ ಅಧ್ಯಕ್ಷತೆಯಲ್ಲಿ ಸಾಂಗವಾಗಿ ನೆರವೇರಿತು ಆಹ್ವಾನಿಸಲ್ಪಟ್ಟಿದ್ದ ಅನೇಕ ಮಾನ್ಯ ಮಹಿಳೆಯರು ಕಿಕ್ಕಿರಿದು ನೆರೆದಿದ್ದರು. ಅಧ್ಯಕ್ಷರು ಸಭಾಂಗಣಕ್ಕೆ ಬಂದ ಕೂಡಲೆ, ಸಭೆಯವರೆಲ್ಲಾ ಸುಸ್ವಾಗತ ಬೇಡಿದರು. ಇಲ್ಲಿಯ ಪ್ರಾಥಮಿಕ ಪಾಠಶಾಲೆಯ ಬಾಲಕಿಯರಿಂದ ಶ್ರೀಕೃಷ್ಣ ಪಾರಿಜಾತವೆಂಬ ನಾಟಕವು ಸ್ವಾರಸ್ಯವಾಗಿ ಅಭಿನಯಿಸಲ್ಪಟ್ಟಿತು ಇದಾದಮೇಲೆ ಸುನಂದಮ್ಮನವರ ಹಾಡುಗಾರಿಕೆಯೂ ತಂಗಮ್ಮ. ಸೀತಮ್ಮ, ಅಲಮೇಲಮ್ಮನ ವೀಣಾವಾದ್ಯವೂ ಬಹು ಸುಶ್ರಾವ್ಯವಾಗಿ ನುಡಿಸಲ್ಪಟ್ಟಿತು. ಇದೆಲ್ಲಕ್ಕಿಂತ ಕಾಂತಮ್ಮನವರ ಹಾಡುಗಾರಿಕೆಯು ಹೃದಯಾಕರ್ಷಣವಾಗಿ ವರ್ಣನಾತೀತವಾಗಿತ್ತು ಕೊನೆಗೆ ಬಿ. ಎಂ. ಕೃಷ್ಣಸ್ವಾಮಿಯವರಿಂದ ವಾರ್ಷಿಕ ವರದಿಯು ಓದಲ್ಪಟ್ಟಿತು.

ಅನಂತರ ಅಧ್ಯಕ್ಷರು "ಮಹಿಳೆಯರೆ! ನಿಮ್ಮ ಈ ಸಮಾಜವು ಇಷ್ಟರಮಟ್ಟಿಗೆ ಅಭಿವೃದ್ಧಿಗೆ ಬರುತ್ತಾ ಇರುವುದು. ನಮ್ಮ ಸಂತೋಷಕ್ಕೆ ಮಿತಿಯೇ ಇಲ್ಲದಾಗಿ ಇರುತ್ತೆ. ನಿಮ್ಮ ಸಮಾಜದ ವಾರ್ಷಿಕ ವರದಿಯನ್ನು ಕೇಳಿದರೆ ವರ್ಷ ವರ್ಷಕ್ಕೆ ಎಷ್ಟರಮಟ್ಟಿಗೆ ಅಭಿವೃದ್ಧಿಗೆ ಬರುತ್ತಿದೆ ಎಂಬುದು ವಿದಿತವಾಗುವುದು. ಈ ಸಮಾಜವನ್ನು ನಡೆಸಿಕೊಂಡು ಬರುತ್ತಿರುವ ಕಾರ್ಯದರ್ಶಿಗಳ ಸಾಹಸವನ್ನು ಎಷ್ಟು ಸ್ತೋತ್ರ ಮಾಡಿದರೂ ಸ್ವಲ್ಪವೇ ಆಗಿದೆ ಆದ್ದರಿಂದ ಈ ಸಮಾಜವು ಇತ್ಯೋತ್ಕೃಷ್ಟತೆಯವಾಗಿ ಅಭಿವೃದ್ಧಿಗೆ ಬರಲೆಂದೂ, ಇದನ್ನು ನಡೆಸುತ್ತಿರುವ ಕಾರ್ಯದರ್ಶಿಗಳಿಗೂ ಮತ್ತು ಬಾಗಿಗಳಾಗಿರುವ ನಿಮ್ಮುಗಳಿಗೂ ದೇವರು ಆಯುರಾರೋಗ್ಯವನ್ನು ಕೊಟ್ಟು ಕಾಪಾಡಲಿ ಎಂದು ಸರ್ವಶಕ್ತನಲ್ಲಿ ಪ್ರಾರ್ಥಿಸುತ್ತೇನೆ ಎಂದು ಹೇಳಿ ಸಮಾಪ್ತಿಗೊಳಿಸಿದರು. ಬಳಿಕ ಅಲ್ಲಿ ನೆರೆದಿದ್ದವರಿಗೆಲ್ಲಾ ಗಂಧ, ಪುಷ್ಪ, ತಾಂಬೂಲಾದಿಗಳನ್ನು ಕೊಟ್ಟು ಸಭೆಯು ಮುಕ್ತಾಯಗೊಳಿಸಲಾಯಿತು.

ದುರ್ದೆಸೆಯು ಬೇರೆಡೆಗೂ ವ್ಯಾಪಿಸದಿರುವುದೆಂಬ ಭರವಸೆಯೇ ಇಲ್ಲದಂತಾಗುವುದು. ಹೀಗಾಗಿ ದೇಶದ ನೆಮ್ಮದಿಯೇ ಕೆಟ್ಟು ಹೋಗುವುದು

ಜನರು ನಾಗರಿಕ ಸ್ವಾತಂತ್ರ್ಯ ರಕ್ಷಣಾ ಸಂಘಗಳನ್ನೇರ್ಪಡಿಸಿಕೊಂಡು ತನ್ಮೂಲಕ ನಾಗರಿಕ ಜೀವನದ ಹಕ್ಕು ಬಾಧ್ಯತೆಗಳನ್ನು ಕಾಪಾಡಿಕೊಳ್ಳಬೇಕಾದುದೇ ನಮ್ಮ ಹಾರೈಕೆ

ಅನಾಥಾಲಯ ಮೈಸೂರು

ಅನಾಥಾಲಯದ ಗೌ|| ಕಾರ್ಯದರ್ಶಿಗಳಾದ ಮ|| ರಾ|| ಸಿ. ನರಸಿಂಹಯ್ಯನವರು ಈ ರೀತಿ ಬರೆದು ಕಳುಹಿಸಿರುತ್ತಾರೆ.

ಮಹಾಶಯರೇ,

ಈ ವರ್ಷ ಮೈಸೂರು ಅನಾಥಾಲಯದಿಂದ ಒಬ್ಬ ವಿದ್ಯಾರ್ಥಿಯು ಬಿ.ಎಸ್ ಸಿ. ಪರೀಕ್ಷೆಗೆ ಹೋಗುತ್ತಾನೆ ಅಪ್ಲಿಕೇಷನ್ ಫೀಜು ರೂ. 50 ಒಬ್ಬ ವಿದ್ಯಾರ್ಥಿಯು ಇಂಟರ್ ಮೀಡಿಯಟ್ ಪರೀಕ್ಷೆಗೆ ರೂ. 30. ಹತ್ತು ವಿದ್ಯಾರ್ಥಿಗಳು ಎಸ್. ಎಸ್. ಎಲ್. ಸಿ. ಪರೀಕ್ಷೆಗೆ ರೂ. 120 ಮೂರು ವಿದ್ಯಾರ್ಥಿಗಳು ಕಮರ್ಷಿಯಲ್ ಪರೀಕ್ಷೆಗೆ ರೂ 54 ಒಬ್ಬ ವಿದ್ಯಾರ್ಥಿಯು ವಿ. ಟಿ ಸಿ ಮತ್ತು ಪಂಡಿತ ಇಂಟರ್‌ಮೀಡಿಯೆಟ್ ಪರೀಕ್ಷೆಗೆ ರೂ. 17.

ಒಟ್ಟು ಈ ವಿದ್ಯಾರ್ಥಿಗಳಿಗೆ ಅಪ್ಲಿಕೇಷನ್ ಫೀಸಿಗೆ ಅವರ ಖರ್ಚು ಸೇರಿ 600 ರೂಪಾಯಿಗಳು ಬೇಕಾಗುವುದು ಈ ಮೊಬಲಗಿಗೆ ಪ್ರತಿ ವರ್ಷವೂ ತಾವು ದಯವಿಟ್ಟು ಸಹಾಯ ಮಾಡುತ್ತಾ ಇರುತ್ತೀರಿ. ಇದರಿಂದ ಪ್ರೇರಿತನಾಗಿ ಈ ವರ್ಷವೂ ತಾವುಗಳು ಈ ಮೊಬಲಗಿಗೆ ಯಥಾಶಕ್ತಿ ಸಹಾಯ ಮಾಡಬೇಕೆಂದು ಪ್ರಾರ್ಥಿಸುತ್ತೇನೆ ಈ ಪುಣ್ಯಕ್ಕೆ ತಾವು ಭಾಗಿಗಳಾಗಿ ಅನಾಥರಕ್ಷಕನಾದ ಜಗದೀಶ್ವರನ ಅನುಗ್ರಹಕ್ಕೆ ಪಾತ್ರರಾಗುತ್ತೀರೆಂದು ನಾನು ನಂಬಿದ್ದೇನೆ.

ವಿದೇಶಗಳಲ್ಲಿ ವಿದ್ಯಾಭ್ಯಾಸಮಾಡಿಕೊಂಡು ಬರುವುದಕ್ಕಾಗಿ ಕೊಡತಕ್ಕ ದಾಮೋದರದಾಸ್ ವಿದ್ಯಾರ್ಥಿ ವೇತನಗಳು

ವಿದ್ಯುಚ್ಛಕ್ತಿಯ ಸಂಬಂಧವಾದ ಇಂಜಿನಿಯರಿಂಗ್ (ಎಲೆಕ್ಟ್ರಿಕಲ್ ಇಂಜಿನಿಯರಿಂಗ್) ವಿಷಯದಲ್ಲಿ ಪಾಶ್ಚಾತ್ಯ ದೇಶದಲ್ಲಿ ವ್ಯಾಸಂಗಮಾಡಿಕೊಂಡು ಬರುವುದಕ್ಕಾಗಿ ಒಂದು ಉಚಿತವಾದ ವಿದ್ಯಾರ್ಥಿವೇತನವನ್ನು ದಾಮೋದರದಾಸ್ ರವರ ಹೆಸರಿನಲ್ಲಿ ಏರ್ಪಟ್ಟಿರುವ ವಿದ್ಯಾರ್ಥಿವೇತನವಾಗಿ ಕೊಡುವುದಾಗಿ ಮೈಸೂರು ಸರಕಾರದವರು ತಿಳಿಯಪಡಿಸಿರುತ್ತಾರೆ. ಈ ವಿದ್ಯಾರ್ಥಿವೇತನವನ್ನು ಮೈಸೂರು ದೇಶದಲ್ಲಿಯೇ ಹುಟ್ಟಿದಪ್ರಯುಕ್ತ, ಅಥವಾ ಕ್ಲುಪ್ತಕಾಲ ಮೈಸೂರು ದೇಶದಲ್ಲಿ ವಾಸ ಮಾಡಿರುವಪ್ರಯುಕ್ತ, ಮೈಸೂರು ದೇಶದವರಾಗಿರುವ ವಿದ್ಯಾರ್ಥಿಗಳಿಗೆ ಕೊಡಲಾಗುವುದು.

ಆಕ್ಸ್‌ಫರ್ಡ್, ಕೇಂಬ್ರಿಡ್ಜ್ ಮತ್ತು ಎಡಿನ್‌ಬರೋ, ಈ ಸ್ಥಳಗಳಲ್ಲಿ ವ್ಯಾಸಂಗ ಮಾಡುವುದಾದರೆ ವರ್ಷವೊಂದಕ್ಕೆ 300 ಪೌಂಡುಗಳ ವಿದ್ಯಾರ್ಥಿವೇತನವನ್ನೂ,

ಲಂಡನ್ನಿನಲ್ಲಿ ವ್ಯಾಸಂಗಮಾಡುವುದಾದರೆ ವರ್ಷವೊಂದಕ್ಕೆ 275 ಪೌಂಡುಗಳ ವಿದ್ಯಾರ್ಥಿವೇತನವನ್ನೂ,

ಯೂರೋಪಿನ ಇತರ ಸ್ಥಳಗಳಲ್ಲಿ ವ್ಯಾಸಂಗಮಾಡತಕ್ಕವರಿಗೆ ವರ್ಷವೊಂದಕ್ಕೆ 250 ಪೌಂಡುಗಳ ವಿದ್ಯಾರ್ಥಿವೇತನವನ್ನು ವ್ಯಾಸಂಗಕ್ಕಾಗಿ ಕೊಡಲಾಗುವುದು.

ಈ ವಿದ್ಯಾರ್ಥಿವೇತನವನ್ನು ಅಪೇಕ್ಷಿಸುವ ಉಮೇದುವಾರರು ಈ ಉದ್ದೇಶಕ್ಕಾಗಿ ವಿಧಾಯಕವಾದ ನಮೂನೆಯಲ್ಲಿ ತಮ್ಮ ದರಖಾಸ್ತುಗಳನ್ನು 1937ನೆಯ ಇಸವಿ ಜನವರಿ 4 ನೆಯ ತಾರೀಖಿನ ದಿನ ಅಥವಾ ಆ ತಾರೀಖಿಗೆ ಮುಂಚಿತವಾಗಿ ಬೆಂಗಳೂರು ಅಠಾರಾ ಕಚೇರಿಯಲ್ಲಿರುವ ಮೈಸೂರು ಸರ್ಕಾರದ ಜನರಲ್ ಸೆಕ್ರೆಟರಿಯವರಿಗೆ ತಲುಪುವಂತೆ ಕಳುಹಿಸಬೇಕೆಂದು ಸರ್ಕಾರದವರು ಅಪ್ಪಣೆಮಾಡಿದ್ದಾರೆ

ಹಿಂದೂ ದೇವಾಲಯದ ಪವಿತ್ರತೆ

ಗಾಜಿಯಾಬಾದಿನ ಕಾಳೀದೇವಸ್ಥಾನದಲ್ಲಿ ಒಬ್ಬ ಸಂದಿಗ್ಧವ್ಯಕ್ತಿಯು ಇರುವನೆಂಬ ಸೂಚನೆಯಮೇಲೆ ಪೋಲೀಸಿನವರು ಅಲ್ಲಿಗೆ ಹೋಗಿ ಒಳಗಿದ್ದ ಒಬ್ಬ ಹಿಂದೂ ಸನ್ಯಾಸಿಯನ್ನು ದಸ್ತಗಿರಿಮಾಡಿದರು ಪೋಲೀಸರು ಠಾಣೆಗೆ ಕರೆದುಕೊಂಡು ಬಂದಮೇಲೆ ಆತನು ಹಿಂದೂ ಸಂನ್ಯಾಸಿಯಾಗಿರಲಿಲ್ಲವೆಂದೂ, ಪೀರ್‌ಮಹಮ್ಮದ್ ರೆಂಬ ಮಹಮ್ಮದೀಯನೆಂದೂ ತಿಳಿದುಬಂದು ಸಾಹೇಬರಿಗೆ ಒಂದು ವರುಷ ಸಜಾ ವಿಧಿಸಿದರಂತೆ.

ಬೃಂದಾವನದ ಪೂಜೆ.

ಗಾನವಿಶಾರದ ಬಿಡಾರದ ಕೃಷ್ಣಪ್ಪನವರ ಮಂದಿರದಲ್ಲಿ ಹಾಮೂಲಿನಂತೆ ಉತ್ಥಾನ ದ್ವಾದಶಿ ಪ್ರಯುಕ್ತ 26-11-36 ರ ಸಾಯಂಕಾಲ ತುಳಸೀ ತೋಟವು ಅನೇಕ ವಿದ್ಯುದ್ದೀಪಗಳಿಂದಲೂ, ತಳಿರು ತೋರಣಗಳಿಂದಲೂ, ಸುಂದರವಾದ ಚಿತ್ರಗಳಿಂದಲೂ ಅಲಂಕೃತವಾಗಿತ್ತು ವಿದ್ವಾನ್ ಗುರುರಾಜಪ್ಪನವರ ಹಾಡುಗಾರಿಕೆ, ಸುಶ್ರಾವ್ಯವಾದ ಪಕ್ಕವಾದ್ಯಗಳಿಂದ ಜರುಗಿತು. ಅನೇಕ ಮಹನೀಯರೂ, ಮಹಿಳೆಯರೂ ಆಗಮಿಸಿದ್ದರು ಮಂಗಳಾರತಿಯನಂತರ ನೆರೆದಿದ್ದವರಿಗೆಲ್ಲಾ ಪ್ರಸಾದಗಳನ್ನು ವಿನಿಯೋಗ ಮಾಡಲಾಯಿತು.

ಪ್ರೇಕ್ಷಕ,
ಆರ್. ಎ. ಎ

ಸಕ್ಕರೆ ಮಾಡಲು ಸುಲಭೋಪಾಯ

ಇಂಪೀರಿಯಲ್ ಅಗ್ರಿಕಲ್ಚರಲ್ ರಿಸರ್ಚ್ ಇನ್ಸ್ಟಿಟ್ಯೂಟ್ ಎಂಬ ಸಂಸ್ಥೆಯವರು ಬೆಲ್ಲಮಾಡುವ ರೈತನು ತಾನೇ ಬಿಳಿ ಸಕ್ಕರೆಯನ್ನೂ ಸುಲಭವಾಗಿ ಮಾಡಬಹುದಾದ ಒಂದು ಉಪಾಯವನ್ನು ಕಂಡುಹಿಡಿದಿದ್ದಾರೆ. ಇದಕ್ಕೆ 21 ರೂಪಾಯಿ ಬಂಡವಾಳ ಸಾಕೆಂದು ಅವರ ಅಭಿಪ್ರಾಯ

ತಿದ್ದು ಪಡಿ.

10 ನೇ ಪೇಜಿನ 3 ನೇ ಕಾಲಂನ 2ನೇ ಲೈನ "ಸಂಹಾರ"ಕ್ಕೆ "ಸಂಚಾರ" ಎಂದೂ ಮತ್ತು 1 ಲಂನಲ್ಲಿ "ಭಾರಿ ದನಗಳ ಸಂತೆ" ವನ್ನು "ನ್ಯಾಯವಿಧಾಯಕಸಭೆ" ಓದಿಕೊಳ್ಳಬೇಕಾಗಿ ವಿನಂತಿ.

ರಮಣ ಮಹರ್ಷಿಗಳು.

ಲೇಖಕರು—ಕೆ. ಎನ್. ಕೃಷ್ಣಮೂರ್ತಿ ರಾವ್.

ಭಾರತಾಂಬೆಯ ಮೋಕ್ಷಪೂರಿತ ಮನೋಮಂಡಲದಲ್ಲಿ ಜ್ಞಾನಪ್ರಭೆಯ ಪ್ರತ್ಯುಜ್ಯೋತಿಗಳನೇಕವು ಮೂಡಿ, ಮಿಣುಮಿಣುಕಿ, ಮರೆಯಾಗಿವೆ. ಅದೃಷ್ಟಶಾಲಿಗಳನೇಕರು ಅವುಗಳ ದರ್ಶನಸುಖೆಯನ್ನೂ, ಜ್ಞಾನಪ್ರಭೆಯನ್ನೂ, ಸವಿದು ತಣಿದಿದ್ದಾರೆ. ನಮ್ಮ ಮಾತೃಭೂಮಿಯ ಪುಣ್ಯಗರ್ಭವು ಅಷ್ಟಕ್ಕೆ ತೃಪ್ತಿಯೊಂದದೆ ಅಜ್ಞಾನಾಂಧಕಾರದಲ್ಲಿ ತೊಳಲುತ್ತಿರುವ, ಮುಗ್ಗರಿಸುತ್ತಿರುವ, ನಮಗೆ, ಕೈದೀವಟಿಗೆಯಂತೆ, ಮಾರ್ಗದರ್ಶಕರನೇಕರನ್ನೂ, ಆತ್ಮಜ್ಞಾನಿಗಳನ್ನೂ, ಜ್ಞಾನಜ್ಯೋತಿಗಳನ್ನೂ, ಕಳುಹಿಸುತ್ತಿರುವುದು ನಮ್ಮ ಭಾಗ್ಯೋದಯವಲ್ಲವೆ!

ಪ್ರಭಾತದ ನವನಪ್ರಭೆಯ ಅರುಣಪ್ರಕಾರದಲ್ಲಿ ಗೂಡುಗಳಿಂದ ಹೊರಬಿದ್ದ ಮನೋಹರ ಪಕ್ಷಿಗಳು ತಮ್ಮ ಕಂಠಗಳಿಂದ ಸುಸ್ವರದಿಂದ ಇಂಚರಗೈಯುತ್ತಾ ಹಾರಾಡುವುದರಲ್ಲಿ ಏನೋ ಒಂದು ರಹಸ್ಯವಡಗಿದೆಯಲ್ಲವೆ! ಗಿರಿಗಳಿಂದ ಹೊರಬಿದ್ದ ಝರಿಯ ಸೌಮ್ಯಪ್ರವಾಹದಲ್ಲಿ ಏನೋ ಒಂದು ರಮ್ಯತೆ ಇದೆಯಲ್ಲವೆ! ಒಂದರೊಡನೊಂದು ಬಡಿದಾಡುತ್ತಾ, ಘೋರ್ಗರೆಯುತ್ತಿರುವ, ಅಗಾಧಸಾಗರದ ಅಲೆಗಳ ವಿಹಾರಲೀಲೆಯಲ್ಲಿ ಏನೋ ಒಂದು ಸೌಂದರ್ಯವಿದೆಯಲ್ಲವೆ! ವಿವಿಧ ಬಣ್ಣಗಳಿಂದ ತೂಗಾಡುತ್ತಾ ಕುಡಿವರಿವ ಲತೆಗಳನೇಕವನ್ನು ಮುತ್ತಿಕ್ಕುವ ಪರಿಮಳ ಪುಷ್ಪಗಳಲ್ಲಿ ಅವರ್ಣನೀಯವಾದ ರಮಣೀಯತೆ ಇದೆಯಲ್ಲವೆ! ಮಧ್ಯೆ ಮಧ್ಯೆ ಚುಕ್ಕೆಗಳಿಂದ ಕೂಡಿ ನಾನಾವಿಧ ಬಣ್ಣಗಳಿಂದ ಮೆರೆಯುತ್ತಿರುವ ಚಿಟ್ಟೆಗಳ ಹಾರಾಟಕ್ಕೆ ಮನ ಸೋಲುತ್ತದಲ್ಲವೆ! ರಾಗರಂಜಿತ ಪಡುವಣ ದಿಗಂತರದಲ್ಲಿ ಅನಿರ್ವಚನೀಯವಾದ ಶೋಭೆಯಿದೆಯಲ್ಲವೆ! ಪ್ರಣಯಿಗಳ ರಾಗಪೂರಿತ ಹೃದಯವನ್ನು ಭೇದಿಸಿ ಅವರ ನೃತ್ಯಕ್ಕೆ ಸರಿಯಾಗಿ ತಾಡಿಸುವ ಮೃಗಧರನ ಪ್ರಶಾಂತಮಂದಕಿರಣದ ಶಕ್ತಿ ಅದ್ವಿತೀಯವಾದುದಲ್ಲವೆ! ಅಭ್ಯಾಸವಿಲ್ಲದೆ ಹುಟ್ಟಿನಿಂದಾಗಿ ಬಂದಿರುವ ಮಯೂರದ ಮನೋಹರ ನೃತ್ಯದಲ್ಲಿಯೂ, ಕೋಗಿಲೆಯ ಸುಮಧುರ ಗಂಧರ್ವಗಾನದಲ್ಲಿಯೂ ರೋಮಾಂಚನಗೈವ ಶಕ್ತಿಯೊಂದಿದೆಯಲ್ಲವೆ?

ವಿಶ್ವದ ಈ ಗೂಢತರ ಗಂಭೀರ ಮಾರ್ಗಾಂತರಾಳದಲ್ಲಿ ಒಂದು ಅಭೇದ್ಯವಾದ ಅರ್ಥವಿರಬೇಕಲ್ಲವೆ! ಈ ಅನುಭವ ತೆರೆಯ ಹಿಂದೆ ವಿಶ್ವದ ಸೃಷ್ಟಿಕರ್ತನೊಬ್ಬನಿರಬೇಕೆಂದು ಬೋಧೆಯಾಗುತ್ತದಲ್ಲವೆ! ನಿದರ್ಶನಿಯಾಗುತ್ತದಲ್ಲವೆ! ಹಾಗಾದರೆ ಆತನ ಸೃಷ್ಟಿಯಿಂದ ವಿಶ್ವದ ಯಾವ ಬಗೆಯ ಕರ್ತವ್ಯವು ನೆರವೇರಬೇಕಾಗಿದೆ ಎಂಬ ಪ್ರಶ್ನೆ ಯಾವ ವಿವೇಕಿಯ ಮೆದುಳನಲ್ಲಾದರೂ ಉದಯವಾಗುತ್ತದಲ್ಲವೇ? ಹಾಗೆ ಉದಯವಾದ ನಾನಾರು? ಎಂಬ ಪ್ರಶ್ನೆಗೆ ತಕ್ಕ ಉತ್ತರವನ್ನು ಕಂಡುಹಿಡಿಯುವ, ಎಂದರೆ ತನ್ನನ್ನು ತಾನು ತಿಳಿಯುವುದಲ್ಲವೇ ಆತ್ಮಜ್ಞಾನ! ಈ ಆತ್ಮಜ್ಞಾನ ಲಾಭಕ್ಕಾಗಿಯಲ್ಲವೇ ಬುದ್ಧನು ಸರ್ವಸಂಗ ಪರಿತ್ಯಾಗಿಯಾಗಿ, ರಾಜ್ಯವನ್ನು ಕಡೆಗಣಿಸಿ ಯೌವನದಿಂದ ಶೋಭಿಸುತ್ತಿದ್ದ ಕೈಹಿಡಿದ ರೂಪರಾಶಿಯನ್ನು ಹೃದಯದಿಂದ ಕಿತ್ತೆಸೆದು, ಬಾಲಲೀಲೆಗಳಿಂದ ಪ್ರೇಮಜಾಲದಲ್ಲಿ ಸೆರೆಗೈಯುವ ಎಳೆಗೂಸನ್ನು ಕಣ್ಣೆತ್ತಿ ಸಹ ನೋಡದ ಭಿಕಾರಿಯಾದುದು! ಇದಕ್ಕಾಗಿಯಲ್ಲವೆ ತುಳಸೀದಾಸ, ಚೈತನ್ಯ, ಕಬೀರ, ದಯಾನಂದ, ರಾಮಕೃಷ್ಣ ಪರಮಹಂಸ ಮುಂತಾದವರೆಲ್ಲಾ ಹೆಣಗಿದುದು! ಬಾಲ್ಯದಿಂದಲೂ ಇಂಗ್ಲೆಂಡಿನಲ್ಲಿ ಬೆಳೆದು ಆಂಗ್ಲ ಸಂಸ್ಕೃತಿಯಿಂದ ಪೋಷಿತರಾಗಿ, ಕೇಂಬ್ರಿಡ್ಜ್ ವಿಶ್ವವಿದ್ಯಾಲಯದಲ್ಲಿ ಪದವಿಯನ್ನು ಹೊಂದಿ ಬರೋಡಾ ಕಾಲೇಜಿನಲ್ಲಿ ವೈಸ್ ಪ್ರಿನ್ಸಿಪಾಲರಾಗಿದ್ದು, ಕರ್ಜನರ ದರ್ಪದಿಂದ ಆಂದೋಳನ ಹೊಂದಿದ, ಪವಿತ್ರ ಗಂಗಾಜಲ ಪ್ಲಾವಿತವಾದ, ತಮ್ಮ ಮಾತೃಭೂಮಿ ವಂಗದೇಶವನ್ನು ಸೇರಿ, ಸ್ವದೇಶಿ ಚಳುವಳಿಯಲ್ಲಿ ಮುಖಂಡರಾಗಿ ನಿಂತು. ಕಾರಾಗೃಹಕ್ಕೊಯ್ಯಲ್ಪಟ್ಟಾಗ ಹಠಾತ್ತಾಗಿ ಹಸ್ತಗತವಾದ ಗೀತೆಯಿಂದ ತತ್ತ್ವಮಸಿ ಬ್ರಹ್ಮವನ್ನರಿತು, ರಾಜಕೀಯ ಕಾರ್ಯರಂಗದಿಂದ, ಪುದುಚೇರಿಗೆ ಹೋಗಿ, ಅರವಿಂದರು ಗಾಢವಾದ ತಪಸ್ಸಿನಲ್ಲಿ ಮುಳುಗಿದುದು ಈ ಆತ್ಮಜ್ಞಾನಕ್ಕಾಗಿಯಲ್ಲವೆ! ಅನೇಕರನ್ನು ಈಗ ಕೈಹಿಡಿದು ಮೇಲಕ್ಕೆತ್ತುತ್ತಿರುವ ರಮಣ ಮಹರ್ಷಿಗಳು ಮೊದಲು ಅನೇಕ ವರ್ಷಗಳು ಕಠೋರ ಸಮಾಧಿಯಲ್ಲಿ ಮುಳುಗಿದುದು. ಇದಕ್ಕಾಗಿಯೇ ಅಲ್ಲವೆ?

ತಿರುವಣ್ಣಾಮಲೆಯ ಅರುಣಾಚಲ ದೇವಸ್ಥಾನ. ಆಗತಾನೆ ಆಯುಷ್ಕರ್ಮ ಮಾಡಿಸಿಕೊಂಡಿದ್ದ ಭವ್ಯಾಕಾರದ ಸನ್ಯಾಸಿಯೋರ್ವನು ಲಂಗೋಟಿಮಾತ್ರವನ್ನು ಧರಿಸಿ ಧ್ಯಾನಾರೂಢನಾಗಿದ್ದನು. ಇದ್ದಕ್ಕಿದ್ದ ಹಾಗೆಯೇ ಸನ್ಯಾಸಿಯು ಕಣ್ಣು ಬಿಟ್ಟು ಮೇಲೆದ್ದು ತನ್ನ ಮಗ್ಗುಲಲ್ಲಿದ್ದ ಬಟ್ಟೆಯ ಗಂಟೊಂದನ್ನು ಬಿಚ್ಚಿ ಅದರಲ್ಲಿದ್ದ ಹಣವನ್ನು ಎಣಿಸಿದನು. ಕ್ಷಣಹೊತ್ತು ಹಿಗ್ಗಿದನು. ಮರುಕ್ಷಣದಲ್ಲಿಯೇ "ಹಣದಾಸೆಯು ಪಾಪಕ್ಕೆ ಮೂಲ" ಎನ್ನುತ್ತಾ ರೋಷಾವಿಷ್ಟನಾಗಿ ತಿರಸ್ಕಾರಾತಿಶಯದಿಂದ ಆ ಗಂಟನ್ನು ದೂರ ಬಿಸುಟನು "ನಾನೊಬ್ಬ ಸನ್ಯಾಸಿ, ಭಿಕ್ಷುಕ, ಭಿಕಾರಿ, ನನಗೇಕೆ ಹಣ? ನನಗೇಕೆ ಈ ಜನಿವಾರ?" ಎಂದೆನ್ನುತ್ತಾ ಮೂಳೆಯ ಆ ದಾರವನ್ನು ತೆತ್ತು ತುಂಡರಿಸಿ ಧ್ಯಾನಮಗ್ನನಾದನು. ಅಲ್ಲಿದ್ದ ಕೆಲಜನರು "ಆಹ! ಇವನಾರು? ಈ ಸನ್ಯಾಸಿ!" ಎನ್ನುತ್ತಾ ತಮ್ಮ ತಮ್ಮಲ್ಲೇ ಗುಸುಗುಟ್ಟಿದರು.

ತಿರುಚೂಳಿ ಎಂಬುದು ಮಧುರೆಗೆ ಸುಮಾರು ಮೂವತ್ತು ಮೈಲಿ ದೂರದಲ್ಲಿದೆ. ಅಥವಾ ವಿರೂಧ ನಗರಕ್ಕೆ ಹದಿನೆಂಟು ಮೈಲಿ ದೂರವಿದೆ. ಇದೇ ಇಲ್ಲಿಯ ರೈಲ್ವೆ ನಿಲ್ದಾಣ. ಮೊದಲು ಬಹಳ ಸಣ್ಣ ಹಳ್ಳಿಯಾಗಿದ್ದ ಈ ಊರು ಈಚೆಗೆ ಬಹಳ ಬೆಳೆಯುತ್ತಾ ಇದೆ. ಅಲ್ಲಿರುವ ಅನೇಕ ಮನೆಗಳೊಂದರಲ್ಲಿ ಮೂವರು ಹುಡುಗರು ಬಹಳ ಸಂತೋಷದಿಂದ ಕಾಲಕಳೆಯುತ್ತಿದ್ದಾರೆ. ಇದೇ ಈ ಊರ ಪ್ಲೀಡರು ಸುಂದರಮ್ಮಯ್ಯರನ ಮನೆ. ಬಹಳ ಕಮ್ಮಿ ದರ್ಜೆಯ ಕೆಲಸದಲ್ಲಿದ್ದ ಇವನು ಪ್ಲೀಡರಾದಂದಿನಿಂದ ಬಹಳ ಧನಿಕನಾಗಹತ್ತಿದನು; ಜೊತೆಗೆ ಧರ್ಮಿಷ್ಠನಾಗಿದ್ದನು.

ಇವರ ಮನೆತನಕ್ಕೆ ಸೇರಿ ಬಂದ ವಿಚಿತ್ರವಾದ ಕಥೆಯೊಂದು ಇದೆ. ಒಮ್ಮೆ ಹಸಿದ ಸನ್ಯಾಸಿಯೋರ್ವನು ಅಯ್ಯರನ ಮನೆಯ ಮುಂದೆ ನಿಂತು "ಜಯಶಂಕರ್" ಎಂದು ಕೂಗಿದನು ಅದನ್ನು ಯಾರೂ ಕಿವಿಯ ಮೇಲೆ ಹಾಕಿಕೊಳ್ಳದಿರಲು ಸಿಟ್ಟಿಗೆದ್ದು "ನನ್ನ ಶಾಪ ನಿಮ್ಮ ಮೇಲಿರಲಿ" ಎಂದು ಹೇಳಿ ಹೊರಟುಹೋದಂತೆ ಪ್ರತೀತಿ "ನಿಮ್ಮ ಮನೆತನದ ಪ್ರತಿ ತಲೆಮಾರಿಗೊಮ್ಮೆ ಒಬ್ಬ ಸನ್ಯಾಸಿಯಾಗಲಿ" ಇದೇ ಆತನ ಶಾಪ

ಸಾವಿರದೆಂಟನೂರು ತೊಂಬತ್ತೆರಡನೆಯ ಇಸವಿ ಸಮೀಪಿಸುತ್ತಲೇ ಸುಂದರಮ್ಮಯ್ಯರನು ನಾಗಸ್ವಾಮಿ, ವೆಂಕಟರಾಮ್ ಮತ್ತು ನಾಗಸುಂದರ ಎಂಬ ತನ್ನ ಮೂವರು ಮಕ್ಕಳನ್ನು ಬಿಟ್ಟು ಕಾಲವಾದನು. ಕ್ರಮವಾಗಿ ಆ ಮೂವರಿಗೂ ಹದಿನಾರು, ಹದಿನಾಲ್ಕು ಮತ್ತು ಆರು ವರ್ಷಗಳಾಗಿದ್ದುವು. ತಂದೆಯು ಕಾಲವಾದಮೇಲೆ ಹಿರಿಯವನಾದ ನಾಗಸ್ವಾಮಿಯ ಮೇಲೆ ಸಂಸಾರದ ಭಾರವೆಲ್ಲವೂ ಬಿದ್ದಿತು ನಾಗಸುಂದರನು ಇನ್ನೂ ಚಿಕ್ಕವನಾಗಿದ್ದುದರಿಂದ ಶಾಲೆಗೆ ಹೋಗುತ್ತಿರಲಿಲ್ಲ.

ವೆಂಕಟರಾಮನು ಶಾಲೆಯಲ್ಲಿ ಬಹಳ ವ್ಯಗ್ರನಾಗಿದ್ದನು ಉಪಾಧ್ಯಾಯನು ಪ್ರಶ್ನೆಯನ್ನು ಕೇಳಿದಾಗ ಪಕ್ಕದ ಹುಡುಗನು ಹೇಳುವುದನ್ನು ಜತೆ ಕೂಡ ತಪ್ಪದೆ ಹೇಳುತ್ತಿದ್ದನು. ಆದರೆ ಕೊನೆಗೆ ಬರುತ್ತಲೇ ಎಲ್ಲವನ್ನು ಮರೆತುಬಿಡುತ್ತಿದ್ದನು ಧೃಢಕಾಯನಾಗಿದ್ದ ಇವನು ವ್ಯಾಯಾಮ ಕ್ರೀಡೆಗಳಲ್ಲಿ ಮುಂದಾಳಾಗಿಯೂ, ಕುಸ್ತಿ, ಗರುಡಿ ಸಾಧನೆಗಳಲ್ಲಿ ನಿಪುಣನಾಗಿಯೂ ಇದ್ದನು. ಸ್ಕಾಟ್ಸ್ ಮಾಧ್ಯಮಿಕ ಶಾಲೆಯಲ್ಲಿ ತೇರ್ಗಡೆಹೊಂದಿ, ಪ್ರೌಢ ವಿದ್ಯಾಭ್ಯಾಸಕ್ಕೆ ಅಮೇರಿಕನ್ ಮಿಷನ್ ಹೈಸ್ಕೂಲನ್ನು ಸೇರಿದನು.

ಇಂದು ಸಾವಿರದೆಂಟನೂರ ತೊಂಬತ್ತಾರನೆಯ ಇಸವಿ. ಆದರೆ ಸನ್ಯಾಸಿಯ ಶಾಪದಂತೆ ಯಾರೂ ಸನ್ಯಾಸ ಸ್ವೀಕಾರ ಮಾಡಲಿಲ್ಲ. ಆದ್ದರಿಂದ ಅಯ್ಯರನ ಮನೆಯವರು ತಮ್ಮ ದಾಯಾದಿಗಳಲ್ಲಿ ಯಾರಾದರೂ ಸನ್ಯಾಸಿಗಳಾದಾರೆಂದು ನಂಬಿದ್ದರು

ವೆಂಕಟರಾಮ್ ಹುಟ್ಟಿದುದು 1879 ನೇ ಇಸವಿ ಡಿಸೆಂಬರ್ 30 ನೇ ತಾರೀಖಿನಲ್ಲಿ. ಅವನು ಅರುಣಾಚಲದ ಹೆಸರನ್ನಾಗಲೀ, ತಿರುವಣ್ಣಾಮಲೆಯ ಹೆಸರನ್ನಾಗಲೀ, ಕೇಳಿದರೆ ಸಾಕು ಉಬ್ಬಿ ಹೋಗುತ್ತಿದ್ದನು ಮೈಯೆಲ್ಲ ಒಂದು ತೆರನಾದ ಕಾಂತಿಯನ್ನು ಹೊಂದುತ್ತಿದ್ದಿತು. ಅವನ ಆರನೆಯ ವರ್ಷದಲ್ಲೊಮ್ಮೆ, ಬಾಲ್ಯಪ್ರಜ್ಞಾಶೂನ್ಯನಾಗಿ ಅವನ ಚಿಕ್ಕಪ್ಪನ ಹಾಸ್ತಿಲಿನ ಮೇಲೆ ಬಿದ್ದುಬಿಟ್ಟನು. ಚೇತರಿಸಿಕೊಂಡು ಎದ್ದನಂತರ ತನ್ನಲ್ಲಿ ತಾನೇ "ನಾನು ಸಾಯುವೆನು" ಎಂದುಕೊಳ್ಳುತ್ತಿದ್ದನು.

ಇಂದು ಆಗಸ್ಟ್ 29 ನೇ ತಾರೀಖು 1896 ನೇ ಇಸವಿ ಸುಂದರಮ್ಮಯ್ಯರನ ಮನೆಯ ಒಂದು ಕೋಣೆ. ಬಾಲಕನೊಬ್ಬನು ಯಾವುದೋ ಪುಸ್ತಕದ ಪಾಠವೊಂದನ್ನು ಪ್ರತಿಮಾಡುತ್ತಾ ಕುಳಿತಿದ್ದಾನೆ. ಬರೆದುದನ್ನೇ ಎರಡುಬಾರಿ ಬರೆದಿರಬಹುದು ಹಠಾತ್ತಾಗಿ ತಾನು ಪ್ರತಿ ಮಾಡುತ್ತಿದ್ದ ಪುಸ್ತಕವನ್ನು ಉಂಡೆಮಾಡೆಸೆದು ಕಾಲಮೇಲೆ ಕಾಲುಹಾಕಿಕೊಂಡು ಧ್ಯಾನಾಸಕ್ತನಾದನು. ಅವನು ಪ್ರತಿಮಾಡುತ್ತಿದ್ದ ಪುಸ್ತಕ ಬೇಯಿನ್ ಸಾಹೇಬರ ಆಂಗ್ಲ ವ್ಯಾಕರಣ. ಸುಮಾರು ಅರ್ಧ ತಾಸಿನ ತರುವಾಯ ಬಾಲಕನು ವೆಂಕಟರಾಮ್ ಎಂಬ ಧ್ವನಿಯಿಂದ ಧ್ಯಾನವಿಮುಕ್ತನಾದನು ಹಾಗೆ ಕೂಗಿದವನು ಅವನ ಹಿರಿಯಣ್ಣ ನಾಗಸ್ವಾಮಿ. ಆತನು ಅಧಿಕಾರವಾಣಿಯಲ್ಲಿ "ಇವೆಲ್ಲಾ ಮಾಡುವವರಿಗೆ ಇದೇಕೆ?" ಎಂದನು. "ಹೌದು ನನಗಿನ್ನೇನು ಕೆಲಸ ಇಲ್ಲಿ" ಎಂದುಕೊಂಡನು ವೆಂಕಟರಾಮ್

ಸ್ವಲ್ಪ ಹೊತ್ತಿನ ತರುವಾಯ ನಾಗಸ್ವಾಮಿಯು ವೆಂಕಟರಾಮ್ ಕುರಿತು "ನೀನು ಶಾಲೆಗೆ ಹೋಗುವ ಮುನ್ನ ನನ್ನ ಕಾಲೇಜಿಗೆ ಐದು ರೂಪಾಯಿಗಳನ್ನು ಸಲ್ಲಿಸಿ ಹೋಗು" ಎಂದನು. ಆ ದಿನ ವೆಂಕಟರಾಮ್ ಶಾಲೆಯಲ್ಲಿ ವಿದ್ಯುಚ್ಛಕ್ತಿಯ ವಿಷಯದ ಮೇಲೆ ಸ್ಪೆಷಲ್ ತರಗತಿ ಇಡಲ್ಪಟ್ಟಿತ್ತು. ಭೋಜನಾನಂತರ ಕಾಲೇಜಿಗೆ ಸಲ್ಲಿಸಬೇಕಾಗಿದ್ದ ಐದು ರೂಪಾಯಿಗಳನ್ನು ತೆಗೆದುಕೊಂಡು ತನ್ನ ಕೊಠಡಿಗೆ ಹೋಗಿ ಕಾಗದವೊಂದನ್ನು ಬರೆದನು. ಅದರ ಒಕ್ಕಣಿಕೆ ಈ ರೀತಿ ಇತ್ತು.—

"ನಾನು ನನ್ನ ತಂದೆಯ ದರ್ಶನಕ್ಕಾಗಿಯೂ, ಆತನ ಅಪ್ಪಣೆಯಂತೆಯೂ ಹೊರಟಿದ್ದೇನೆ. ಇದು ಧರ್ಮಬದ್ಧವಾದ ಕೆಲಸವಾದ್ದರಿಂದ ಇದರ ವಿಷಯದಲ್ಲಿ ಯಾರೂ ಚಿಂತಿಸಲವಶ್ಯವಿಲ್ಲ, ನನ್ನನ್ನು ಹುಡುಕಲು ಹಣ ವ್ಯಯಮಾಡಬೇಕಾದಿಲ್ಲ"

[ಕಾಲೇಜಿಗೆ ಹಣಸಲ್ಲಿಸಿಲ್ಲ. ಎರಡು ರೂಪಾಯಿಗಳು ಈ ಕಾಗದದ ಜೊತೆಯಲ್ಲಿದೆ]

. ... .

ಇತಿ

[ಎಂಟನೆ ಪುಟವನ್ನು ನೋಡಿ]

[ಏಳನೆ ಪುಟದಿಂದ ಮುಂದುವರಿದುದು]

ಟಿಂಚೂಸಿ ಟೈಲ್ವೆ ನಿಲ್ದಾಣ. ಹನ್ನೆರಡಾಗಿ ಸ್ವಲ್ಪ ಹೊತ್ತಾಗಿತ್ತು. ಬಾಲಕನೊಬ್ಬನು ಬಹಳ ಗಾಬರಿಯಿಂದ ಓಡಿ ಬಂದು ರೈಲ್ವೆದರದ ಪಟ್ಟಿಯನ್ನು ನೋಡಿ ತಿಂಡಿವನಕ್ಕೆ ರೂಪಾಯಿ 2—13—0. ಎಂಬುದನ್ನು ತಿಳಿದು ಗೊತ್ತುಗುರಿಯಿಲ್ಲದೆ ಅಲ್ಲಿಗೆ ಟಿಕೇಟೊಂದನ್ನು ಕೊಂಡನು. ದಸ್ರರದಕ್ಕೆ ಬರಬೇಕಾಗಿದ್ದ ಉಗಿಬಂಡಿಯು ಬಾಲಕನ ಸೌಭಾಗ್ಯಕ್ಕೋ ಏನ್ನೋ ಅಂತೂ ಆ ದಿನ ಲೇಟಾಗಿ ಬಂದಿತು. ಬಾಲಕನು ಬಂಡಿಯನ್ನು ಹತ್ತಿ ಮೌನವಾಗಿ ಒಂದು ಮೂಲೆಯಲ್ಲಿ ಕುಳಿತನು. ಬಾಲಕನಾರು? ಆತನೇ ಸುಂದರಸ್ವಾಮಯ್ಯರ ದ್ವಿತೀಯ ಪುತ್ರ ವೆಂಕಟರಾಮು. ಹೆತ್ತತಾಯಿಯನ್ನು ಜೊತೆಗೂಡಿ ಬಂದ ಅಣ್ಣತಮ್ಮಂದಿರನ್ನು, ಜನ್ಮವೆತ್ತಿದ ಸ್ಥಳದ ಬಂಧನವನ್ನೂ ಹರಿದು ಒಮ್ಮೆಲೆ ಹೊರಟಿರುವ ಹದಿನೇಳು ವರುಷದ ಆ ಬಾಲಕನ ವೈರಾಗ್ಯವೆಷ್ಟು!

ರೈಲು ತಿರುವನಾಮಲೈಯನ್ನು ಸೇರಿದಾಗ ವೆಂಕಟರಾಮನಿಗೆ ಬಹಳ ಹಸಿವಾಯಿತು. ನಿಲ್ದಾಣದಲ್ಲಿದ್ದ ಮುದುಕಿಯೊಬ್ಬಳ ಬಳಿ ಎರಡು ಕಾಸಿನ ಹಣ್ಣುಗಳನ್ನು ಕೊಂಡು ಒಂದನ್ನು ತಿಂದು ತೃಪ್ತನಾದನು. ಎರಡು ಬಾರಿ ಪ್ರಸ್ಥಳ ಊಟಮಾಡಿಯೂ ಧೀರ್ಘವಾಗಿ ತಿಂಡಿ ತಿನ್ನುತ್ತಿದ್ದ ವೆಂಕಟರಾಮನಿಗೆ ಇಂದು ಒಂದು ಕಾಸಿನ ಹಣ್ಣಿನಿಂದ ಮಾತ್ರ ಹೊಟ್ಟೆ ತುಂಬಿತು!

ಪಟ್ಟಣದಲ್ಲಿದ್ದ ಬಾಲಕನು ಅರುವಣ್ಣಾಮಲೆಗೆ ಯಾರನ್ನಾದರೂ ದಾರಿಯನ್ನು ಕೇಳಲು ನಾಚಿಕೆ ಪಟ್ಟು ಬೀದಿಗಳನ್ನು ಹುಡುಕಹೊರಟನು ಕೊನೆಗೆ ದೇವತ್ತಿದ್ದ ದೇವಾಲಯವೊಂದನ್ನು ಹೊಕ್ಕು ಧ್ಯಾನಾಸಕ್ತನಾದನು. ಧ್ಯಾನಮಗ್ನ ಬಾಲಯೋಗಿಯನ್ನು ನೋಡಿ ಮುಗ್ಧನಾದ ಭೋಜನಾಲಯದ ಯಜಮಾನನು ಅವನಿಂದ ಹಣವನ್ನೂ ತೆಗೆದುಕೊಳ್ಳದೆ ಊಟಮಾಡಿಸಿ ಕಳುಹಿಸಿದನು

ಬಾಲಕನು ಜಾಗ್ರತೆಯಾಗಿ ರೈಲ್ವೆ ನಿಲ್ದಾಣವನ್ನು ಸೇರಿ ತನ್ನಲ್ಲುಳಿದಿದ್ದ ಎರಡೂವರೆ ಆಣೆಯಿಂದ ಪಾಬಳ್ ಪಟ್ಟಣವನ್ನು ಸೇರಿದನು. ಮುಂದಿನ ದಾರಿಯನ್ನೆಲ್ಲಾ ನಡೆಯಬೇಕೆಂದು ಮನಸ್ಸು ಮಾಡಿದ ಬಾಲಕನು ಎದುರಿಗಿದ್ದ ಗುಡ್ಡವನ್ನೂ, ಅದರ ಮೇಲಿನ ದೇವಸ್ಥಾನವನ್ನೂ, ನೋಡಿ, ಮೇಲೇರಿ ಹೋಗಿ, ದೇವಾಲಯದ ಮಂಟಪವೊಂದರಲ್ಲಿ ಧ್ಯಾನಮಗ್ನನಾದನು. ಪೂಜಾನಂತರ ಅರ್ಚಕನು 'ಹೊರಡು ಹೊತ್ತಾಯಿತು" ಎಂದು ಕೂಗಿದನು. ಎಚ್ಚೆತ್ತ ಬಾಲಕನು ದೀನಸ್ವರದಿಂದ ಸ್ವಲ್ಪ ತಿಂಡಿಯನ್ನು ಕೊಡಿ ಎಂದು ಬೇಡಿದನು. ಕಠಿಣಮನಸ್ಕನಾದ ಅರ್ಚಕನು "ಇಲ್ಲ, ನಡೀ ಆಚೆ" ಎಂದುಬಿಟ್ಟನು. ಇದನ್ನು ನೋಡುತ್ತಿದ್ದ ತಮಟೆಯವನೊಬ್ಬನು ಮನಕರಗಿ ತನ್ನ ಪಾಲಿನ ತಿಂಡಿಯನ್ನು ಅವನಿಗೆ ಕೊಡುವಂತೆ ಅರ್ಚಕನಿಗೆ ಹೇಳಿ ಕೊಡಿಸಿದನು.

ಬೆಳಗಾಗುತ್ತಲೇ ಹೊಟ್ಟೆ ಹಸಿವಿನಿಂದ ಸಂಕಟಪಡುತ್ತಾ ಮುಂದೆ ಹೆಜ್ಜೆ ಇಡಲಾರದೆ, ತನ್ನ ಕಿವಿಯ ಓಲೆಗಳನ್ನಾದರೂ ಒತ್ತೆ ಇಟ್ಟು ಹೊಟ್ಟೆ ತುಂಬಿಕೊಳ್ಳಬೇಕೆಂದು ಮನಸ್ಸುಮಾಡಿ ಮುತ್ತುಕೃಷ್ಣ ಭಾಗವತರೆಂಬುವರ ಮನೆಗೆ ಹೋದನು. ಅಂದು ಗೋಕುಲಾಷ್ಟಮಿ. ಗೀತಾವಾಕ್ಯದಂತೆ, ತಮ್ಮ ಮನೆಗೆ ಬಂದ ಅತಿಥಿಗಳಾರೇ ಆಗಲಿ ದೇವರೆಂದು ನಂಬಿದ್ದ ಭಾಗವತರು ಬಾಲಕನನ್ನು ಸನ್ಮಾನಿಸಿದರು ಭೋಜನಾನಂತರ ಸುಮಾರು ಇಪ್ಪತ್ತು ರೂಪಾಯಿಗಳ ಬಾಳುತ್ತಿದ್ದ ತನ್ನ ಕಿವಿಯ ಓಲೆಗಳನ್ನು ನಾಲ್ಕು ರೂಪಾಯಿಗಳಿಗೆ ಭಾಗವತರಲ್ಲಿ ಒತ್ತೆಯಿಟ್ಟು ಅವರ ವಿಳಾಸವನ್ನೂ, ಅವರು ಪ್ರೇಮಪುರಸ್ಸರದಿಂದ ಕೊಟ್ಟ ತಿಂಡಿಯನ್ನೂ ತೆಗೆದುಕೊಂಡು ರೈಲ್ವೆ ನಿಲ್ದಾಣವನ್ನು ಸೇರಿದನು. ನಿಲ್ದಾಣವನ್ನು ಸೇರಿ ಚಿಂತಾಮಗ್ನನಾದ ಬಾಲಕನು ಕೊನೆಗೆ ಒಮ್ಮನಸ್ಸಿನಿಂದ 'ಆ ಓಲೆಗಳು ಎಷ್ಟೇ ಬೆಲೆಬಾಳಲಿ ಅವುಗಳನ್ನು ಮಾತ್ರ ನಾನು ಹಿಂದಕ್ಕೆ ತೆಗೆದುಕೊಳ್ಳಾರೆ" ಎಂದೆನ್ನುತ್ತಾ, ಆ ವಿಳಾಸದ ಚೀಟಿಯನ್ನು ಹರಿದೆಸೆದು, ನಾಲ್ದಾಣೆಯನ್ನು ಬಿಟ್ಟು ತಿರುವಣ್ಣಾಮಲೆಗೆ ಟಿಕೇಟನ್ನು ಕೊಂಡು ಸ್ವಲ್ಪಹೊತ್ತಿನ ನಂತರ ಆ ಊರನ್ನು ಸೇರಿದನು

(ಮುಂದುವರಿಯುವುದು.)

ಶ್ರೀಯುತ ಕೆ. ಎಸ್. ವೆಂಕಟಸುಬ್ಬರಾವ್ ರವರಿಗೆ ಸತ್ಕಾರ.

ಅನಾಥಾಲಯದಲ್ಲಿ ಅಪೂರ್ವ ಸಂಭ್ರಮ.

ವೃದ್ಧಪಿತಾಮಹ, ದಯಾಸಾಗರ, ಕೀರ್ತಿಶೇಷ ಶ್ರೀಮಾನ್ ಎಂ. ವೆಂಕಟಕೃಷ್ಣಯ್ಯನವರಿಂದ ಸ್ಥಾಪಿಸಲ್ಪಟ್ಟ ಮೈಸೂರು ಅನಾಥಾಲಯದಲ್ಲಿ ಕಳೆದ 4–5 ವರ್ಷಗಳಿಂದಲೂ ಮ್ಯಾನೇಜರಾಗಿ ಆಲಯದ ಅಭಿವೃದ್ಧಿಗಾಗಿ ಶ್ರಮಿಸಿ, ಅಲ್ಲಿನ ಎಲ್ಲ ವಿದ್ಯಾರ್ಥಿಗಳ ಪ್ರೀತಿ, ಗೌರವಗಳನ್ನು ಸಂಪಾದಿಸಿದ್ದ ಶ್ರೀಯುತ ಕೆ. ಎಸ್ ವೆಂಕಟಸುಬ್ಬರಾವ್‌ರವರಿಗೆ ಆಲಯದ ವಿದ್ಯಾರ್ಥಿಗಳು ಸತ್ಕಾರಕೂಟವೊಂದನ್ನು ಕಳೆದ 27 ನೆ ತಾರೀಖು ಶುಕ್ರವಾರ ಸಾಯಂಕಾಲದಲ್ಲಿ, ಆಲಯದ ಆವರಣದಲ್ಲಿ, ವಿಶೇಷ ವೈಭವದಿಂದ ಜರುಗಿಸಿದರು. ಶ್ರೀಮಾನ್ ವೆಂಕಟಸುಬ್ಬರಾವ್‌ರವರು ಯಾವಾಗಲೂ ವಿದ್ಯಾರ್ಥಿಗಳ ಅನುಕೂಲ್ಯಗಳನ್ನೇ ತಮ್ಮ ಆಡಳಿತ ಮುಖ್ಯ ಧ್ಯೇಯವಾಗಿಟ್ಟುಕೊಂಡು ಅವರಿಗೆ ಪ್ರತ್ಯಕ್ಷವಲ್ಲೂ ತಮ್ಮ ಶಕ್ತಿ ಮೀರಿ ಸಹಾಯ ಮಾಡುತ್ತಿದ್ದರು. ಅವರಿಗೆ ಮೈಸೂರಿನ ವಾಯುಗುಣವು ಸರಿಬೀಳದೆ, ದೇಹಾಲಸ್ಯವು ಹೆಚ್ಚುತ್ತಿದ್ದುದರಿಂದ ಅವರು ಬೆಂಗಳೂರಿಗೆ ಪ್ರಯಾಣ ಬೆಳಸಬೇಕಾಯಿತು. ಅವರು ಹೊರಡಲು ಮುಂಚೆ ಅವರಿಗೆ ಸತ್ಕಾರಕೂಟವೊಂದು ನಡೆಯಿತು. ಮುಂದೆ ಬರಲಿರುವ ಮ್ಯಾನೇಜರಾದ ಮ|| ರಾ|| ಡಿ. ವೆಂಕಟಾಚಲೈಯ್ಯನವರಿಗೆ ಸ್ವಾಗತವೂ ನೆರವೇರಿತು. ಮೊದಲು ಗ್ರೂಪ್ ಫೋಟೋವನ್ನು ತೆಗೆಯಾಯಿತು. 70 ಮಂದಿ ವಿದ್ಯಾರ್ಥಿಗಳಲ್ಲದೆ, ಆಲಯದ ಗೌರವ ಕಾರ್ಯದರ್ಶಿಗಳಾದ ಮ|| ರಾ|| ಸಿ. ನರಸಿಂಹಯ್ಯನವರೂ, ಕೆ. ಎಸ್ ವೆಂಕಟಸುಬ್ಬರಾವ್, ಡಿ ವೆಂಕಟಾಚಲೈಯ್ಯ ಮತ್ತು ಇನ್ನೂ ಕೆಲವರು ದಯಮಾಡಿಸಿದ್ದರು ಎಲ್ಲರಿಗೂ ಟೀ ಆದನಂತರ ಶ್ರೀಮಾನ್ ಸಿ. ನರಸಿಂಹಯ್ಯನವರು ಜರೂರು ಕಾರ್ಯವಿದ್ದುದರಿಂದ ಹೊರಟುಹೋಗಬೇಕಾಯಿತು. ಆಮೇಲೆ 6 ಘಂಟೆಗೆ ಸಭೆಯ ಕಾರ್ಯಗಳು ಪ್ರಾರಂಭವಾದವು. ದೇವತಾ ಪ್ರಾರ್ಥನೆಯು ಶ್ರೀ ಎಸ್ ವೆಂಕಟನಾರಾಯಣರವರಿಂದ ನಡೆದಮೇಲೆ ಭಾಷಣಗಳು ನಡೆದವು. ಮ|| ರಾ|| ಗಳಾದ ಎಸ್. ಲಕ್ಷ್ಮೀನರಸಿಂಹನ್, ಎ. ಎಂ. ಕೃಷ್ಣಮೂರ್ತಿ ಮತ್ತು ಕೆ. ಆರ್. ಗುಂಡೂರಾವ್ ಇವರುಗಳು ವೆಂಕಟಸುಬ್ಬರಾಯರ ಗುಣಕಥನವನ್ನು ಮಾಡಿದರು. ಅವರ ಉದಾರತೆ ಮತ್ತು ಕಾರ್ಯತತ್ಪರತೆ ಇವು ಹೃದಯಂಗಮವಾಗಿ ಬಣ್ಣಿಸಲ್ಪಟ್ಟವು. ನಂತರ ಶ್ರೀ ವೆಂಕಟಸುಬ್ಬರಾವ್‌ರವರು ಪ್ರತ್ಯುತ್ತರವೀಯುತ್ತ ತಮ್ಮ ಸಹೋದರನಂತೆ ಭಾವಿಸಿದ್ದ ಒಂದು ವಿದ್ಯಾರ್ಥಿಗಣವನ್ನು ತ್ಯಜಿಸಿ ಹೋಗಬೇಕೆಂದು ಗದ್ಗದಸ್ವರದಿಂದ ಭಾಷಣ ಮಾಡುತ್ತ ತಮ್ಮ ವಿಷಾದವನ್ನು ವ್ಯಕ್ತಪಡಿಸಿದರು. ವಿದ್ಯಾರ್ಥಿಗಳಿಗೆ ತಾತಯ್ಯನವರ ಉಜ್ವಲ ಕೀರ್ತಿಯುತ ಕಾಂತಿಯನ್ನು ಇಮ್ಮಡಿ ಮಾಡುವ ಶಕ್ತಿಯನ್ನು ಕೊಡಲೆಂದೂ, ಆಲಯವು ಇನ್ನೂ ಏಳಿಗೆಗೆ ಬರಲೆಂದೂ ಹರಸಿದರು.

ಆಮೇಲೆ ವಿದ್ವಾನ್ ಚೌಡಯ್ಯನವರ ಪ್ರಿಯ ಶಿಷ್ಯರಾದ ಮುತ್ತಣ್ಣನವರ ರಾಗಮಾಲಿಕೆಯು ಸುಶ್ರಾವ್ಯವಾಗಿ ನಡೆಯಿತು. ಆಲಯದ ವಿದ್ಯಾರ್ಥಿಯಾದ ಶ್ರೀ ನಾಗಣ್ಣನವರ ತಬಲವು ಅತ್ಯಂತ ಶ್ಲಾಘನೀಯವಾಗಿದ್ದಿತು ಇಂಪಾದ ಸಂಗೀತವಾದನಂತರ ವೆಂಕಟಸುಬ್ಬರಾವ್‌ರವರಿಗೆ ಸುಗಂಧವನ್ನೂ ಮತ್ತು ಹಾರತುರಾಯಿಗಳನ್ನೂ ವಿದ್ಯಾರ್ಥಿಗಳು ಅರ್ಪಿಸಿದರು. ಹೊರಗಿನ ಅನೇಕ ಮಾನ್ಯ ಅತಿಥಿಗಳು ದಯಮಾಡಿಸಿದ್ದರು. ಅವರೆಲ್ಲರಿಗೂ ಗಂಧ ಪುಷ್ಪಾದಿಗಳು ಕೊಡಲ್ಪಟ್ಟವು. ಶ್ರೀಮಾನ್ ಜಿ ಎಲ್. ನಂಜುಂಡಯ್ಯನವರು ಎಲ್ಲರಿಗೂ ಹೃತ್ಪೂರ್ವಕವಾದ ವಂದನೆಗಳನ್ನರ್ಪಿಸಿದನಂತರ ಸಭೆಯು ಭರಕಾಸ್ತಾಯಿತು.

ಪ್ರಜಾಪ್ರತಿನಿಧಿಸಭೆಯ ಮತ್ತು ನ್ಯಾಯವಿಧಾಯಕ ಸಭೆಯ ರಚನಾ ವ್ಯವಸ್ಥೆ.

ಪ್ರಜಾಪ್ರತಿನಿಧಿಸಭೆಯನ್ನು ನ್ಯಾಯವಿಧಾಯಕ ಸಭೆಗೆ ಸದಸ್ಯರುಗಳನ್ನು ಚುನಾಯಿಸಿ ಕಳುಹಿಸುವ ಒಂದು ಚುನಾವಣೆ ಸ್ಥಾನವನ್ನಾಗಿ ಭಾವಿಸಿ, ಪ್ರಜಾಪ್ರತಿನಿಧಿಸಭೆಯಿಂದ ನ್ಯಾಯವಿಧಾಯಕಸಭೆಗೆ ಸದಸ್ಯರುಗಳನ್ನು ಚುನಾವಣೆ ಮಾಡುವಂತೆ ಈಗ ಜಾರಿಯಲ್ಲಿರುವ ಏರ್ಪಾಟನ್ನು ಇನ್ನು ಮುಂದೆಯೂ ಅನುಸರಿಸುವುದು ಅನವಶ್ಯಕ. ಮತ್ತು ಒಂದೊಂದು ಡಿಸ್ಟ್ರಿಕ್ಟಿನಿಂದ ಒಬ್ಬೊಬ್ಬರು ಸದಸ್ಯರನ್ನು ನೇರವಾಗಿ ಚುನಾಯಿಸುವುದರ ಮೂಲಕ, ಡಿಸ್ಟ್ರಿಕ್ಟುಗಳಿಂದ ಎಂಟು ಮಂದಿ ಹೆಚ್ಚಿನ ಸದಸ್ಯರುಗಳನ್ನು ಚುನಾಯಿಸುವುದು.

ಬ್ರಿಟಿಷ್ ಇಂಡಿಯಾದಲ್ಲಿ ಜಾರಿಯಲ್ಲಿರುವಂತೆ ಒಬ್ಬರು ಒಂದು ಸಭೆಯಲ್ಲಿ ಮಾತ್ರವೇ ಸದಸ್ಯರಾಗಿರಬೇಕೆಂಬ ನಿರ್ಬಂಧವನ್ನು ಕಲ್ಪಿಸುವುದು.

ಮುನಿಸಿಪಾಲಿಟಿಗಳ ಪ್ರತಿನಿಧಿಗಳು ಚುನಾವಣೆ ಹೊಂದಿ ಪ್ರಜಾಪ್ರತಿನಿಧಿಸಭೆಯಲ್ಲಿ ಸದಸ್ಯರಾಗಿರತಕ್ಕವರ ಪರಮಾವಧಿ ಪರಿಮಿತಿಯು ೨೫ ಆಗಿರತಕ್ಕದ್ದು.

ಪ್ರಜಾಪ್ರತಿನಿಧಿಸಭೆಯಲ್ಲಿಯೂ ಮತ್ತು ನ್ಯಾಯವಿಧಾಯಕಸಭೆಯಲ್ಲಿಯೂ ಕಾನೂನಿನ ವಿಷಯವಾಗಿ ಪರ್ಯಾಲೋಚನೆ ನಡೆಯಿಸುವಾಗ ಅನುಸರಿಸಬೇಕಾದ ಕ್ರಮ

“ನ್ಯಾಯವಿಧಾಯಕಸಭೆಯ ಪರ್ಯಾಲೋಚನೆಗೆ ಯಾವುದೊಂದು ಮಸೂದಾ ಕಾನೂನನ್ನಾದರೂ ತರಬೇಕೆಂದು ಉದ್ದೇಶಿಸಿದಾಗ, ಸರ್ಕಾರದವರು ಅಲ್ಲಿನ ಸಾಮಾನ್ಯ ನಿಯಮಗಳ ವಿವರಣೆಯೊಂದನ್ನು ಮೊದಲು ಪ್ರಜಾಪ್ರತಿನಿಧಿಸಭೆಗೊಪ್ಪಿಸಿ ಆ ಸಭೆಯ ಅಭಿಪ್ರಾಯವನ್ನು ತೆಗೆದುಕೊಳ್ಳಬಹುದು. ನ್ಯಾಯವಿಧಾಯಕಸಭೆಯ ಪರ್ಯಾಲೋಚನೆಗೆ ಒಂದು ಮಸೂದಾ ಕಾನೂನನ್ನು ತರುವುದಕ್ಕೆ ಪೂರ್ವಭಾವಿಯಾಗಿ ಪ್ರಜಾಪ್ರತಿನಿಧಿಸಭೆಯ ಅಭಿಪ್ರಾಯವನ್ನು ಪಡೆಯದಿದ್ದ ಸಂದರ್ಭದಲ್ಲಿ ಆ ಮಸೂದಾ ಕಾನೂನಿನ ಸಾಮಾನ್ಯ ನಿಯಮಗಳ ವಿವರಣೆಯನ್ನು ಸರ್ಕಾರದವರು ಆ ತರುವಾಯ ಅದನ್ನು ಶೀಘ್ರಾವಕಾಶದಲ್ಲಿ ಮತ್ತು ಆ ಮಸೂದಾ ಕಾನೂನನ್ನು ನ್ಯಾಯವಿಧಾಯಕಸಭೆಯವರು ಅನುಮೋದಿಸಿ ಮಂಜೂರು ಮಾಡುವ ಮೊದಲು ಪ್ರಜಾಪ್ರತಿನಿಧಿಸಭೆಗೆ ಒಪ್ಪಿಸಿ ಆ ಸಭೆಯ ಅಭಿಪ್ರಾಯವನ್ನು ಪಡೆಯತಕ್ಕದ್ದು.”

ಅಧಿವೇಶನವು ಶಿಸ್ತಿನಿಂದ ನಡೆಯುವಂತೆ ಏರ್ಪಾಡು

ಸಭೆಯ ಕಾರ್ಯಗಳು ಸುಲಲಿತವಾಗಿ ನಡೆಯುವುದಕ್ಕೆ ಭಂಗಬರುವ ರೀತಿಯಲ್ಲಿ ಅಕ್ರಮವರ್ತನೆಯಿಂದ ನಡೆಯುವ ಯಾವ ಸದಸ್ಯರನ್ನಾದರೂ ಸಭೆಯಿಂದ ಹೊರಕ್ಕೆ ಕಳುಹಿಸಲು ಅಪ್ಪಣೆ ಮಾಡುವುದಕ್ಕಾಗಿ ನಿಯಮವನ್ನೇರ್ಪಡಿಸುವುದು.

ಜಪಾನಿನ ವ್ಯಾಪಾರದ ಅಭಿವೃದ್ಧಿ.

ಲೇಖಕರು.— **ಆರ್. ಎಸ್. ಆರಾಧ್ಯ**, ತುಮಕೂರು.

ರಾಷ್ಟ್ರದ ಪ್ರಗತಿಗೆ ವ್ಯಾಪಾರವು ಒಂದು ಮುಖ್ಯ ಕಾರಣ. ಇಂತಹ ವ್ಯಾಪಾರವೇ ಈಗ ಜರ್ಮನ್ ದೇಶವನ್ನು ಜಗತ್ತಿನ ಗಣ್ಯ ರಾಷ್ಟ್ರಗಳಲ್ಲಿ ಅತಿ ಮುಖ್ಯವನ್ನಾಗಿ ಮಾಡಿರುವುದು. ಮೊದಲು ಅಂದರೆ ಹಿಂದಿನ ಕಾಲದಲ್ಲಿ ಜರ್ಮನ್ ದೇಶದಲ್ಲಿ ಈಗ ನಡೆಯುತ್ತಿರುವುದರ ಕಾಲುಪಾಲು ವ್ಯಾಪಾರವೂ ಕೂಡ ನಡೆಯುತ್ತಿರಲಿಲ್ಲ. ಹಿಂದಿನವರು ವ್ಯಾಪಾರವನ್ನು ಹೀನವೃತ್ತಿಯೆಂದು ತಿಳಿದುಕೊಂಡಿದ್ದರು. ಇದಕ್ಕೆ ಮುಖ್ಯ ಕಾರಣವೆಂದು ಹೇಳಬಹುದು. ಇದಲ್ಲದೆ ಆಗ ಇತರ ದೇಶದವರನ್ನು ತಮ್ಮ ದೇಶದೊಳಗೆ ಬಿಡುವುದಕ್ಕೂ ತಾವು ಇತರ ದೇಶಗಳಿಗೆ ಹೋಗುವುದಕ್ಕೂ ಅವರಲ್ಲಿ ಅನೇಕ ಶಙ್ಕೆ ಆತಂಕಗಳಿದ್ದುವು. ಆದರೆ ಈಗ ಅವುಗಳೆಲ್ಲವನ್ನೂ ತೊರೆದು ಜರ್ಮನರು ಅಮೆರಿಕಾ, ಇಂಗ್ಲೆಂಡ್ ಮುಂತಾದ ದೇಶಗಳೊಂದಿಗೆ ಸ್ನೇಹವನ್ನು ಬೆಳೆಯಿಸಿ ವ್ಯಾಪಾರವನ್ನು ಬಹುಮಟ್ಟಿಗೆ ಅಭಿವೃದ್ಧಿಗೊಳಿಸಿದ್ದಾರೆ.

ಅನ್ಯ ದೇಶದ ಕೈಗಾರಿಕೆ, ವ್ಯವಸಾಯ, ವ್ಯಾಪಾರ ಮುಂತಾದುವುಗಳಲ್ಲಿನ ನೂತನ ಪದ್ಧತಿಗಳನ್ನು ಕಲಿಯಬೇಕೆಂಬುದು ಜಪಾನರಿಗೆ ಬಹಳ ಆಶೆ. ಇಂತಹ ಆಶೆ ಇವರಲ್ಲಿರುವ ಕಾರ್ಯಶಕ್ತಿ, ಕಾರ್ಯತತ್ಪರತೆಗಳು ಈಗಿನ ಉನ್ನತಿಗೆ ಮುಖ್ಯಕಾರಣವೆಂದು ಜಪಾನಿನವರು ಕೈಗಾರಿಕೆಯಲ್ಲಿ ಇತರ ಜನಾಂಗಗಳನ್ನು ಮೀರಿಸಿರುವರೆಂಬುದರಲ್ಲಿ ಸಂದೇಹವಿಲ್ಲ.

ಇಲ್ಲಿನ ಕೂಲಿಗಾರರನ್ನು ನೋಡಿದರೆ ನಾವೂ ಹೆಮ್ಮೆಪಡಬೇಕು. ತಮ್ಮ ದೇಶೋನ್ನತಿಗೆ ನೆರವಾಗಲು ತಾವೂ ಕೈಲಾದಷ್ಟಿಗೆ ಸಹಾಯಮಾಡುತ್ತಿರುವರು. ಅವರು ತಮಗೆ ಖರ್ಚಾಗುವುದಕ್ಕಿಂತ ಹೆಚ್ಚಿನ ಕೂಲಿಯನ್ನು ತೆಗೆದುಕೊಳ್ಳಲು ಇಚ್ಛಿಸುವುದಿಲ್ಲ. ಆದ್ದರಿಂದ ಜಪಾನಿನಲ್ಲಿ ಕೂಲಿ ಖರ್ಚು ಕಡಿಮೆ. ಈ ಖರ್ಚು ಕಡಿಮೆಯಾದ್ದರಿಂದಲೇ ಅಲ್ಲಿನ ಕೈಗಾರಿಕೆ [illegible] ಕಾರಣವಾಯಿತು. ಕೈಗಾರಿಕೆಯ ವಿಷಯದಲ್ಲಿ ಇಷ್ಟೊಂದು ಅಭಿವೃದ್ಧಿಯಾಗಲು ಇನ್ನೊಂದು ಕಾರಣವೇನೆಂದರೆ ಜಪಾನಿನವರಿಗೆ ಚಿತ್ರಕಲಾಕೌಶಲ್ಯವೆಂದರೆ ಬಹಳ ಆಶೆ. ಅಲ್ಲಿ ಒಬ್ಬ ಕೂಲಿಯವನಿಂದ ಹಿಡಿದು ದೊರೆಯವರವಿಗೂ ಹಸ್ತಕೌಶಲ್ಯದಲ್ಲಿ ಬಹು ನಿಪುಣರಾಗಿದ್ದಾರೆ. ಈ ಸ್ವಭಾವವು ಪ್ರತಿಯೊಬ್ಬನಿಗೂ ಹುಟ್ಟಿನಿಂದ ಬಂದಿದೆಯೆಂದು ಹೇಳಬಹುದು. ಮೊದಲು ಕೈಗಾರಿಕೆಯನ್ನು ಜನರು ತಮ್ಮ ಕೈಯಿಂದಲೇ ಮಾಡುತ್ತಿದ್ದರು. ಈಗಲಾದರೋ ಸಾಮಾನ್ಯವಾಗಿ ಎಲ್ಲವೂ ಯಂತ್ರಗಳಿಂದಲೇ ತಯಾರಾಗುತ್ತವೆ. ಇಂತಹ ದೊಡ್ಡ ಯಂತ್ರಗಳು ಈಗ ಸುಮಾರು ೧೫೦೦ಕ್ಕೆ ಮೇಲ್ಪಟ್ಟಿವೆ. ಜಪಾನಿನವರು ನೀರಿನ ಪ್ರಯಾಣದಲ್ಲಿ ಬಹಳ ಚತುರರು. ಈಗ ತಾವೇ ಸ್ಟೀಮರ್ ಹಡಗುಗಳನ್ನು ತಯಾರಿಸಿ ಜಹಜುಗಳನ್ನು ಬಹಳ ಪ್ರಚಾರಕ್ಕೆ ತಂದಿದ್ದಾರೆ. ಇಂದು ಇವರ ಹಡಗುಗಳನ್ನು ಯಾವ ಸಾಗರದಲ್ಲಿಯಾದರೂ ನೋಡಬಹುದು. ಒಳದೇಶದ ವ್ಯಾಪಾರಕ್ಕೆ ಅನುಕೂಲವು ಬಹಳವಾಗಿದೆ. ಪದಾರ್ಥಗಳನ್ನು ಒಂದು ಕಡೆಯಿಂದ ಮತ್ತೊಂದು ಕಡೆಗೆ ಸಾಗಿಸಲು ಸುಮಾರು ೫-೬ ಸಾವಿರ ಮೈಲಿಗಳ ರೈಲ್ವೆ ಇದೆ. ಇದಲ್ಲದೆ ವ್ಯಾಪಾರಕ್ಕೆ ಕಣ್ಣು, ಕಿವಿಗಳಂತಿರುವ ಅಂಚೆಯ ಮತ್ತು ತಂತಿಯ ಇಲಾಖೆಗಳು ಬಹಳ ಸಹಾಯವಾಗಿವೆ. ಈಗ ತಂತಿಯ ಟಪಾಲು ಸುಮಾರು ೧೫೦೦೦ ಮೈಲಿ ಇರಬಹುದು. ಇಲ್ಲಿನ ಬ್ಯಾಂಕುಗಳನ್ನು ನೋಡಿದರೆ ಜಪಾನಿನ ವ್ಯಾಪಾರದ ಉನ್ನತಸ್ಥಿತಿಯನ್ನು ತಿಳಿಯಬಹುದು. ಈಗ ಸುಮಾರು ೩೦೦೦ ವ್ಯಾಪಾರದ ಬ್ಯಾಂಕುಗಳು ಇಲ್ಲಿನ ವ್ಯಾಪಾರವನ್ನು ಇಷ್ಟು ಅಭಿವೃದ್ಧಿಸ್ಥಿತಿಗೆ ತಂದಿವೆ. ಇಷ್ಟು ಬ್ಯಾಂಕುಗಳಿದ್ದರೂ ಒಂದೂ ದಿವಾಳಿಯಾಗದೆ ಸರಿಯಾಗಿ ನಡೆದುಕೊಂಡು ಬರುವುದನ್ನು ನೋಡಿದರೆ ಜಪಾನರು ಎಷ್ಟರಮಟ್ಟಿಗೆ ನಿರ್ವಂಚನೆಯಿಂದಲೂ ಮತ್ತು ನಿಕಪಟತ್ವದಿಂದಲೂ ಕೆಲಸಮಾಡಿ ಇತರರನ್ನು ಬದುಕಿಸಿ ತಾವೂ ಬದುಕುತ್ತಿರುವರೆಂಬುದು ಸ್ಪಷ್ಟವಾಗುತ್ತದೆ.

ಸತ್ಯವು ರಾಷ್ಟ್ರದ ಅಭ್ಯುದಯಕ್ಕೆ ಅತ್ಯಗತ್ಯ. ಒಂದು ಜನಾಂಗವಾಗಲಿ ಅಥವಾ ದೇಶವಾಗಲಿ ಏಳಿಗೆಗೆ ಬರಬೇಕಾದರೆ ಜನರು ಒಬ್ಬರನ್ನೊಬ್ಬರು ನಂಬಬೇಕು. ಈ ನಂಬಿಕೆಗೆ ಪ್ರಾಮಾಣಿಕತೆ ಮತ್ತು ವಿಶ್ವಾಸಗಳೇ ಕಾರಣವೆಂದು ಜಪಾನಿನವರು ಚೆನ್ನಾಗಿ ತಿಳಿದಿರುವರು. ತಮ್ಮ ದೇಶದಲ್ಲಿ ಸುಳ್ಳಾಡಿದರೆ, ಕಳ್ಳತನ, ಮೋಸ ಮತ್ತು ದರೋಡೆಗಳನ್ನು ಮಾಡಿದರೆ ತಮ್ಮ ಜನಾಂಗದವರೇ ಹಾನಿಯುಂಬುದನ್ನು ಜಪಾನಿನವರು ಚೆನ್ನಾಗಿ ಅರಿತಿರುವುದರಿಂದಲೇ ಆ ದೇಶದಲ್ಲಿ ಕಳ್ಳತನ ದರೋಡೆಗಳು ಅತ್ಯಲ್ಪ. ಇವರಲ್ಲಿ ಐಕಮತ್ಯ ಬಹಳ ಹೆಚ್ಚು. ಅಲ್ಲಿನ ದೇಶವೇ ಒಂದು ಸಂಘ. ಆ ಸಂಘಕ್ಕೋಸ್ಕರ ಪ್ರತಿಯೊಬ್ಬರೂ ತಲೆಬಾಗಿ ಹಗಲಿರುಳು ಕೆಲಸಮಾಡುತ್ತಿದ್ದಾರೆ. ಪ್ರಪಂಚದಲ್ಲೆಲ್ಲಾ ಜಪಾನರು ಅತಿ ಕಷ್ಟಸಹಿಷ್ಣುಗಳೆಂದು ಹೆಸರುಪಡೆದಿರುವರು. ಇವರಹಾಗೆ ಕಾರ್ಯತತ್ಪರತೆಯಿಂದ ಇನ್ನಾವ ಜನಾಂಗದವರೂ ಇಲ್ಲ. ಯಾವ ಹುದ್ದೆಯಲ್ಲಿ ಇರುವವನೇ ಆಗಲಿ ತನ್ನ ಕಾರ್ಯವನ್ನು ಯಾವ ವೇಳೆಯಲ್ಲಿ ಬೇಕಾದರೂ ಮಾಡಲು ಸಿದ್ಧನಾಗಿರುತ್ತಾನೆ. ಇಲ್ಲಿಯ ಸರಕಾರದಲ್ಲಿ ಯಾವ ಕುಂದುಕವೇ ಕಂಡುಬರಲಿ ಅದನ್ನು ಪ್ರಜೆಗಳು ಹೊಟ್ಟೆಗೆ ಮನಸ್ಸಿಗೆ ತಂದುಕೊಳ್ಳುವುದಿಲ್ಲ. ಅಲ್ಲದೆ ಅಂತಹ ಹುಳುಕುಗಳನ್ನು ತೆಗೆದುಹಾಕಿ ಒಬ್ಬರಿಗೊಬ್ಬರಿಗೆ ಎತ್ತಿಗಟ್ಟಿ ಗಲಾಟೆಯನ್ನು ಮಾಡಲು ಇವರು ಎಂದಿಗೂ ಇಷ್ಟಪಡುವುದಿಲ್ಲ. ಇಲ್ಲಿಯ ಜನಗಳಿಗೆ ತಮ್ಮ ರಾಷ್ಟ್ರದ ಒಗ್ಗೆ ಹೇಳತೀರದಷ್ಟು ಅಭಿಮಾನ.

ಯಾವ ದೇಶವು ತನಗೆ ಬೇಕಾಗುವುದಕ್ಕಿಂತ ಹೆಚ್ಚಾಗಿ ಉತ್ಪತ್ತಿಮಾಡಿ ಹೊರದೇಶಕ್ಕೆ ಕಳುಹಿಸುವುದೋ, ಯಾವ ದೇಶವು ಪರದೇಶದ ವಸ್ತುಗಳ ಸಹಾಯವಿಲ್ಲದಿದ್ದರೂ ತೊಂದರೆ ಪಡದಿರುವುದೋ, ಅಂತಹ ದೇಶವು ಅಭಿವೃದ್ಧಿಗೆ ಬರುವುದರಲ್ಲಿ ಸಂದೇಹವಿಲ್ಲ. ಜಪಾನ್ ದೇಶವೂ ಕೂಡ ಇತರ ದೇಶಗಳಿಗೆ ತನ್ನಲ್ಲಿಯ ಪದಾರ್ಥಗಳನ್ನು ಕಳುಹಿಸುತ್ತದೆಯೇ ಹೊರತು ಹೆಚ್ಚಿಗೆ ತರಿಸಿಕೊಳ್ಳುವುದಿಲ್ಲ. ಇವರು ಎಲ್ಲಾ ತರಹ ಕೈಗಾರಿಕೆಗಳನ್ನೂ ಒಕ್ಕವರಾದ್ದರಿಂದ ಅವರ ದೇಶದಲ್ಲಿನ ನೀರಾವರಿ ಕೆಲಸ, ಕೃಷಿ, ವಿದ್ಯುಚ್ಛಕ್ತಿ, ಟೆಲಿಗ್ರಾಫ್, ಟೆಲಿಫೋನ್ ಮುಂತಾದುವುಗಳಿಗೆ ನಮ್ಮ ದೇಶದವರಂತೆ ಇತರರಿಗೆ ದುಡ್ಡನ್ನು ತೆರುವುದಿಲ್ಲ. ಎಲ್ಲಾ ಕೆಲಸಗಳನ್ನೂ ಇತರರ ಸಹಾಯವಿಲ್ಲದೆ ತಮ್ಮ ಸ್ವಶಕ್ತಿಯಿಂದ ಮಾಡಿಕೊಳ್ಳುತ್ತಾರೆ. ಜಪಾನಿನವರ ಈಗಿನ ವ್ಯಾಪಾರ ಎಷ್ಟು ವಿಶಾಲವಾದುದೆಂಬುದನ್ನು ಅವರ ದೇಶದಿಂದ ಬರುವ ಸಾಮಾನುಗಳಿಂದ ತಿಳಿಯಬಹುದು. ನಾವು ನಮಗೆ ಬೇಕಾದ ಸಾಮಾನುಗಳನ್ನು ಕೊಳ್ಳಲು ಪೇಟೆಗೆ ಹೋದರೆ ಜಪಾನಿನವರ ಸಾಮಾನುಗಳೇ ಅಂಗಡಿಗಳಲ್ಲಿ ತುಂಬಿರುತ್ತವೆ. ಯಾವ ಪದಾರ್ಥದ ಮೇಲೆ ನೋಡಿದರೂ "ಜಪಾನಿನಲ್ಲಿ ತಯಾರಾದ್ದು" (Made in Japan) ಎಂದು ಬರೆದಿರುತ್ತದೆ. ಇದನ್ನು ನೋಡಿದರೆ ಜಪಾನಿನವರು ಮಾಡದ ಸಾಮಾನುಗಳೇ ಇಲ್ಲವೆಂದು ಹೇಳಬಹುದು. ಇವರ ಪದಾರ್ಥಗಳು ಬಹಳ ಬಾಳಿಕೆ ಇಲ್ಲವೆಂದೂ ಅಷ್ಟು ಉಪಯೋಗಕ್ಕೆ ಬರುವುದಿಲ್ಲವೆಂದೂ ಹಲವರ ಅಭಿಪ್ರಾಯ. ಆದರೆ ಅವರು ಇಂತಹ ಬೆಲೆಬಾಳದ ಪದಾರ್ಥಗಳನ್ನು ಏತಕ್ಕೆ ಮಾಡುತ್ತಾರೆಂದು ನೋಡಬೇಕು. ಇತರ ದೇಶಗಳೊಡನೆ ಪೈಪೋಟಿಗೆ ನಿಂತು ಜಯಶೀಲರಾಗಬೇಕೆಂಬುದೇ ಇದಕ್ಕೆ ಕಾರಣ. ಇವರು ಇತರ ದೇಶಕ್ಕಿಂತ ಉತ್ತಮವಾದ ಪದಾರ್ಥಗಳನ್ನು ಮಾಡಬಲ್ಲವರಾಗಿದ್ದರೂ ಹಾಗೆ ಮಾಡದೆ ಕನಿಷ್ಠ ದರ್ಜೆಯ ಪದಾರ್ಥಗಳನ್ನು ಮಾಡಿ ಇತರರು ಮಾರುವುದಕ್ಕೆ ಶೇಕಡ ೫೦ರಷ್ಟು ಒಂದೊಂದು ಸಲ ೯೦ರಷ್ಟು ಕಡಿಮೆ ಮಾರುತ್ತಾರೆ. ಹೀಗೆ ಮಾರುವುದರಿಂದ ಅವರ ಸಾಮಾನುಗಳಿಗೆ ಎಲ್ಲೆಲ್ಲೂ ಗಿರಾಕಿಗಳು ಹೆಚ್ಚಾಗಿ ಪ್ರಪಂಚದಲ್ಲೆಲ್ಲಾ ಜಪಾನಿನವರ ಸಾಮಾನು ತುಂಬಿ ತುಳುಕಾಡುತ್ತಿವೆ. ಆಚೆಯ ವರುಷ ಜಪಾನಿನವರು ರೂಪಾಯಿಗೆ [illegible] ಸೇರು ಅಕ್ಕಿಯನ್ನು ಕೊಡುತ್ತಾರೆಂಬ ಸುದ್ದಿ ಘೋಷಗರೆಯುತ್ತಿತ್ತು. ಆದರೆ ನಮ್ಮ ದೇಶದ ಚೇಂಬರ್ಸ್ ಆಫ್ ಕಾಮರ್ಸಿನವರು ಆ ಅಕ್ಕಿಯನ್ನು ನಮ್ಮ ದೇಶದೊಳಕ್ಕೆ ಬರಲು ಅವಕಾಶ ಕೊಡಲಿಲ್ಲ.

ಇತರ ಜನಾಂಗಗಳೆಲ್ಲವೂ ತಮ್ಮನ್ನು ಆದರ್ಶವಾಗಿ ಇಟ್ಟುಕೊಳ್ಳಬೇಕೆಂಬ ಉದ್ದೇಶದಿಂದ ಜಪಾನರು ದೇಶದ ಆರ್ಥಿಕ ಸ್ಥಿತಿಯನ್ನು ಸೂಕ್ಷ್ಮವಾಗಿ ಗಮನಿಸುತ್ತಿದ್ದಾರೆ. ಮಹಾ ಯುದ್ಧಾನಂತರವೇ ಜಪಾನಿನವರು ಅಭಿವೃದ್ಧಿಯಾಗಲು ಅನುಕೂಲವಾಯಿತು. ಏಕೆಂದರೆ ಮೊದಲು ಮೊದಲು ಕೈಗಾರಿಕೆಗೆ ಸಹಾಯವಾಗಿ ಇವರಿಗೆ ದ್ರವ್ಯ ದೊರಕುತ್ತಿರಲಿಲ್ಲ. ಈಗ ವ್ಯಾಪಾರದಲ್ಲಿ ಪ್ರಪಂಚದ ಯಾವ ದೇಶವೂ ಕೂಡ ಜಪಾನಿನ ವಿದೇಶವ್ಯಾಪಾರದೊಡನೆ ಸಮತೂಗಲಾರದು. ಹಿಂದಿನ ವರುಷ ವಿದೇಶದ ವ್ಯಾಪಾರವು ನೂರಕ್ಕೆ ಫ್ರಾನ್ಸ್‌ದೇಶದಲ್ಲಿ ಐದರಂತೆಯೂ, ಇಂಗ್ಲೆಂಡಿನಲ್ಲಿ ಆರರಂತೆಯೂ, ಅಮೆರಿಕಾದಲ್ಲಿ ಏಳರಂತೆಯೂ, ಮತ್ತು ಜರ್ಮನಿಯಲ್ಲಿ ಹದಿನಾಲ್ಕರಂತೆಯೂ ಕಡಿಮೆಯಾಗಿರುತ್ತದೆ. ಆದರೆ ಜಪಾನಿನಲ್ಲಿ ವಿದೇಶದ ವ್ಯಾಪಾರವು ನೂರಕ್ಕೆ ನಾಲ್ವತ್ತರಂತೆ ಹೆಚ್ಚಿರುತ್ತದೆಯೆಂದಮೇಲೆ ಇವರ ಏಳಿಗೆಯನ್ನು ಹೇಳಲಿಕ್ಕಾದೀತೆ?

ಸ್ಪೈಯಿನಿನಲ್ಲಿ ಅಗಾಧ ಮಳೆ

ದಂಗೆಕಾರರು ಮುಂದುವರಿಯುತ್ತಿಲ್ಲ

ಸ್ಪೈಯಿನಿನಲ್ಲಿ ದಂಗೆಕಾರರಿಗೂ, ಸರ್ಕಾರದ ಸೈನಿಕರಿಗೂ ಯುದ್ಧವು ಮುಂದುವರಿಯುತ್ತಿದೆ. ಈಗ ವಿಪರೀತ ಮಳೆ ಬಂದುದರ ದೆಸೆಯಿಂದ ದಂಗೆಕಾರರು ಮುಂದುವರಿಯುತ್ತಿಲ್ಲ. ಅವರು ವಿಶ್ವವಿದ್ಯಾಲಯದ ಕ್ಷೇತ್ರದಲ್ಲಿರುತ್ತಾರೆ.

ಸರ್ಕಾರದ ಸೈನಿಕರು ಜನರನ್ನು ಸುರಕ್ಷಿತವಾದ ಸ್ಥಳಕ್ಕೆ ಕೊಂಡೊಯ್ಯುವ ಪ್ರಯತ್ನಗಳನ್ನು ಮಾಡುತ್ತಿದ್ದಾರೆ.

ಫೈಜಾಪುರಕ್ಕೆ ಮಹಾತ್ಮಾಜಿಯವರ ಪ್ರಯಾಣ

ಮಹಾತ್ಮಾ ಗಾಂಧಿಯವರು ಫೈಜಾಪುರದಲ್ಲಿ ನಡೆಯುವ ವಸ್ತು ಪ್ರದರ್ಶನದ ಕಾರ್ಯಕ್ರಮಗಳನ್ನು ಪರಿಶೀಲಿಸುವುದಕ್ಕೋಸ್ಕರ ಪ್ರಯಾಣ ಬೆಳೆಸುವವರಿದ್ದಾರೆ. ಅವರು ಡಿಸೆಂಬರ್ ಮೊದಲನೇ ವಾರದ ಅಂತ್ಯದಲ್ಲಿ ಫೈಜಾಪುರಕ್ಕೆ ಹೋಗುವರೆಂದು ಗೊತ್ತಾಗಿದೆ.

ಮೊಟಾರಿಗೆ ಬೆಂಕಿ

ಲಾಹೋರಿನಲ್ಲಿ ಕೆಲವು ಪುಂಡರು ಇಂಡಿಯನ್ ಒಲಂಪಿಕ್ ಹಾಕಿ ಟೀಮಿನ ಸಕ್ರೆಟರಿಗಳಾದ ಮಿ॥ ಜಿ ಸೊಂಧಿಯವರ ಮೋಟಾರಿಗೆ ಬೆಂಕಿ ಹಾಕಿದರೆಂದು ತಿಳಿದು ಬಂದಿದೆ. ಪೋಲೀಸಿನವರು ತನಿಖೆಗಳನ್ನು ನಡೆಸುತ್ತಿರುವರು.

ಫೆಡರೇಷನ್ ಪ್ರತಿನಿಧಿಗಳ ಪ್ರಯಾಣ

ತಾ॥ 25 ನೇ ಬುಧವಾರ ಮಧ್ಯಾಹ್ನ ಫೆಡರೇಷನ್ ಪ್ರತಿನಿಧಿಗಳಾದ ಮಿ॥ ಲೋಥಿಯನ್‌ರವರು ಮತ್ತು ಇನ್ನೂ ಅನೇಕರು ಉಪಕಮಂಡಲಕ್ಕೆ ಪ್ರಯಾಣ ಬೆಳೆಸಿದರು.

ಇಣಕಪ್ಪನ ನೋಟ.

ಕಳೆದವಾರ ಚುನಾವಣೆಗೆ ನಿಂತಿರತಕ್ಕ ಉಮೇದ ವಾರರ ಪೂರ್ವ ಸಿದ್ಧತೆಗಳ ವಿಷಯ ಸ್ವಲ್ಪ ಬರೆದಿದ್ದೆನಷ್ಟೆ ಈ ವಾರ ಇನ್ನೂ ಸ್ವಲ್ಪ ಬರೆಯಬೇಕಾಗಿ ಬಂದಿರುತ್ತೇನೆ ನನ್ನ ಊಹೆಯಂತೆ 3-4 ದಿನದ ಹಿಂದೆ ಸೆಂಟ್ರೇಲ್ ಹಾಲ್‌ನಲ್ಲಿ ಕಂದಾಯದಾರರ ಮೀಟಿಂಗೊಂದು ನಡೆಯಿತು ಆ ಸಭೆಯ ಚಾಲಕರು ಬಹುವಾಗಿ ಪೌರಸಭಾ ಸದಸ್ಯರುಗಳೇ ಆಗಿದ್ದರು ಬಾಕಿ ಹೋಬಳಿಗಳಲ್ಲಿಯೂ ಇದೇ ರೀತಿಯಾದ ಮೀಟಿಂಗುಗಳು ನಡೆಯಬಹುದೆಂದು ನನ್ನ ಊಹೆ ಬೆಂಗಳೂರು ನಗರದ ಉಮೇದುವಾರರುಗಳು ಈಗಾಗಲೇ ಪತ್ರಿಕೆಗಳಲ್ಲಿ ತಮ್ಮನ್ನೇ ಚುನಾಯಿಸಬೇಕೆಂಬ ಒಕ್ಕಣೆ ಪ್ರಚಾರ ಮಾಡಿಕೊಳ್ಳುತ್ತಿರುವರು ಮೈಸೂರಿನಲ್ಲಿ ಪ್ರತಿನಿತ್ಯದ ಪತ್ರಿಕೆಗಳಿಲ್ಲ ಪಾಪ! ಇರುವವುಗಳು ವಾರಪತ್ರಿಕೆಗಳು ದಿನ ಪತ್ರಿಕೆಗಳಿದ್ದಿದ್ದರೆ ಅವಕ್ಕೂ ಒಂದೊಂದು ಛಾನ್ಸು ಕೊಡದೇ ಇರುತ್ತಿರಲಿಲ್ಲ ಮುಖ್ಯವಾಗಿ ಅಷ್ಟೆ! ಇರಬೇಕಲ್ಲವೆ

ಬೆಂಗಳೂರಿನಲ್ಲಿ, ಪತ್ರಿಕೆಗಳಲ್ಲಿ ಪ್ರಚಾರ ಮಾಡುವುದಾದರೆ ಒಪ್ಪತಕ್ಕ ಸಂಗತಿ ಏಕೆಂದರೆ ಅಲ್ಲಿ ಪತ್ರಿಕೆಗಳ ಪ್ರಚಾರ ಜನರ ಆಸಕ್ತಿ ಗಮನಿಸಬಹುದು ಇರಬಹುದು. ನಮ್ಮ ರಾಜಧಾನಿಯಲ್ಲಿ ಉಮೇದುವಾರರಿಗೆ ವಿಶೇಷ ಸೌಲಭ್ಯವುಂಟು ಹೇಗೆ ಎಂದರೆ ರೇಡಿಯೋ ಆಫೀಸ್ ಇದ್ದೇ ಇದೆ ದಿನಕ್ಕೆ ಪ್ರಾತಃಕಾಲ 6 ರಿಂದ 8, ಸಾಯಂಕಾಲ 6 ರಿಂದ 8 ಮತ್ತು ರಾತ್ರಿ 10 ಘಂಟೆಯಿಂದ 11 ಘಂಟೆಯವರೆಗೆ ಈ ಮೂರು ಸಮಯಗಳನ್ನು ಉಪಯೋಗಿಸಿಕೊಳ್ಳಿ ಅದರಲ್ಲಿ ನಿಮ್ಮ ಈವರೆಗಿನ ಸದಸ್ಯತ್ವದ ದಿಗ್ವಿಜಯಗಳನ್ನು ವಿವರವಾಗಿ (ಮಹಾಜನರಿಗೆ) ನಿಮ್ಮ ವೋಟರುಗಳಿಗೆಲ್ಲಾ ತಿಳಿಸಿ ಆ ಕಾಲಗಳಲ್ಲಾದರೆ ಎಲ್ಲರೂ ಸಾವಧಾನದಿಂದ ನಿಮ್ಮ ವಿಷಯಗಳನ್ನು ಪರಿಶೀಲಿಸಿ ನಿಮ್ಮ ಕೋರಿಕೆಯನ್ನು ಈಡೇರಿಸಿ ಕೊಡಲು ಅನುಕೂಲಿಸುವುದು

* * *

ಹೀಗ ಮಾಡಿದರೆ ನಿಮಗೆ ವೋಟರುಗಳನ್ನು ಕರೆತರಲು ತಗಲುವ ವಾಹನದ ಖರ್ಚನ್ನು ಉಳಿಸಿಕೊಳ್ಳಬಹುದು ಹಾಲಿ ವಾಡಿಕೆಯಲ್ಲಿರುವ ಎಳನೀರು, ಕಿತ್ತಳೆ ಹಣ್ಣುಗಳನ್ನು ವೋಟರುಗಳ ಕೈಗೆ ಕೆಲವರು ಸ್ವೀಕರಿಸುವರು ಮತ್ತೆ ಕೆಲವರು ವೋಟು ಕೊಡುವುದಕ್ಕಾಗಿ ಇದೇನು ಲಂಚವೇ? ಎಂದೂ ಕೇಳುವರು ನಿಜವಾಗಿಯೂ ವಜ್ರ ವೈಢೂರ್ಯ ಪುಷ್ಪರಾಗಗಳನ್ನು ಎಂಥಾ ಕಿತ್ತಳೆ ಕೊಟ್ಟರೂ ಬಿಟ್ಟುಬಿಡುವರೂ ಎವರ ಪ್ರತಿಷ್ಠೆಯು ಎಂತಹವರನ್ನಾದರೂ ಹೇಗೆ ಮುಗ್ಧರನ್ನಾಗಿ ಮಾಡಬಲ್ಲವೋ ಹಾಗೆಯೇ ಆಡಂಬರಾಕಾಂಕ್ಷೆ ಇಲ್ಲದೆ ಜನತಾ ಸೇವೆ ಮಾಡಬೇಕೆಂಬ ಧ್ಯೇಯವಿರುವ ಉಮೇದುವಾರರುಗಳು ನನ್ನ ಮೇಲಿನ ಸಲಹೆಯನ್ನು ಉಪಯೋಗಮಾಡಿಕೊಳ್ಳಲು ಇದು ಸುಸಮಯವಾಗಿದೆ

* * *

ಪೌರಸಭಾಸದಸ್ಯರುಗಳ ತಿರುಳು ಎಂಥದೆಂಬುದನ್ನು, ಕಂದಾಯದಾರರುಗಳ ಸಂಘದ ಚಟುವಟಿಕೆ, ಮೊನ್ನೆ ಕೆಲವು ತಿಂಗಳುಗಳ ಲಾಗಾಯಿತು ಜಾರಿಗೆ ಬಂದಿರುವಂತೆ 21 ಪದಾರ್ಥಗಳ ಮೇಲೆ ಹೊಸದಾಗಿ ಸುಂಕವನ್ನು ಹೇರಿರುವುದು

ಪ್ರಾಣಿವರ್ಗವನ್ನೇ ಸಾಕಿ ಸಲಹುತ್ತಿರುವ ಗೋಮಾತೆಗೆ ರಸ್ತೆಯಲ್ಲಿ ಸಂಚಾರಕ್ಕೆ ಅವಕಾಶವಿಲ್ಲದೆ ಕೊಂದರೆಗಳೇ ಒಂದರಮೇಲೊಂದರಂತೆ ಪ್ರಾಪ್ತವಾಗುತ್ತಿರುವುದು

ಊರಿನ ಹಲವು ಸಾರ್ವಜನಿಕ ಪ್ರದೇಶಗಳಲ್ಲೇ ಗ್ರಾಮ ನಿರ್ಮಲೀಕರಣ ಕಾರ್ಯಗಳು ತೃಪ್ತಿಯಾಗಿ ನಡೆಯದಿರುವಾಗ ಬಡಜನರ ಮೇಲೆ ನಡೆಯುತ್ತಿರುವ ಕಾರಕರ್ಮಗಳು

ಈಗಾಗಲೇ ಪೌರಸಭೆಯು ಹತ್ತು ಲಕ್ಷ ರೂಗಳ ಸಾಲದ ಮೊಟ್ಟೆಯ ಮೇಲೆ ಕೂತಿರುವುದು ಇತ್ಯಾದಿ

* * *

ಮತ್ತೊಂದೆಡೆಯಲ್ಲಿ ಅನಾದಿಯಾಗಿ ಬಂದಿದ್ದ ಕುಟೀರ ಹೋಯಿತು ಪೌರಸಭೆಯು ಕೂಡತಕ್ಕ ಅಪ್ಪ (ಮನೆಗಾಗಿ) ಮೋಬಲಗು ಮುನಿಸಿಪಾಲಿಟಿಯ ಪ್ಲಾನಿನಂತೆ ಕಟ್ಟಲು ಸಾಕಾಗದ ಊರುಹೊರಗೆ ಹೋಗಿ ನಾನಾ ಕಷ್ಟಗಳಿಂದ ಕಣ್ಣೀರಿನಲ್ಲಿ ಕೈ ತೊಳೆಯುತ್ತಿರುವುದು ಇದೆಲ್ಲಾ ನಿಮ್ಮ ಮನಸ್ಸಿಗೆ ಸರಿಬರುವುದೆ?

ಅಕ್ಷರಬಂಧ ಸ್ಪರ್ಧೆ.

ಬಹುಮಾನ ಪಡೆದವರ ಹೆಸರನ್ನು ಮುಂದಲವಾರ ಪ್ರಕಟಿಸಲಾಗುತ್ತೆ

ಮ್ಯಾನೇಜರ್

ಅಕ್ಷರಬಂಧ ಸ್ಪರ್ಧೆ ನಂ ೧.

ಉತ್ತರ —

(1) ಗಣಪತಿ. (2) ರಾಮಾಯಣ (3) ಚಕ್ರಪಾಣಿ (4) ಜಟಾಧರ (5) ಶಶಿಮುಖಿ (6) ಕೂರ್ಮಾವತಾರ (7) ಜಲರುಹ (8) ಬಸ್ಮಾಸುರ

——

ಭಾರಿ ದನಗಳಸಂತೆ

ಮುಂದಿನ ತಿಂಗಳು 14ನೇ ತಾ॥ ನಡೆಯಬೇಕಾಗಿದ್ದ ಮೈಸೂರು ನ್ಯಾಯವಿಧಾಯಕ ಸಭೆಯ ಅಧಿವೇಶನವು ಜನವರಿ 2ನೇ ತಾ॥ಗೆ ಮುಂದುವರಿಸಲ್ಪಟ್ಟಿದೆ ದಿವಾನರು ಮದ್ಯೆ ಸಂಯುಕ್ತ ರಾಜ್ಯಾಂಗ ವ್ಯವಸ್ಥೆಯ ವಿಷಯವಾಗಿ ಡೆಹಲಿಗೆ ಪ್ರಯಾಣ ಮಾಡಬೇಕಾದ ಸಂದರ್ಭಗಳು ಒದಗುವುದರಿಂದ ಈ ಬದಲಾವಣೆಗಳನ್ನು ಮಾಡಿರುವುದಾಗಿ ತಿಳಿದು ಬಂದಿದೆ

ಏನು ಹೇಳಿದರೇನು? ಒಟ್ಟಿನಲ್ಲಿ ತ್ರಿಮೂರ್ತಿಗಳ ನಲಿವಾಟ! ಬಡ ಸಂಸಾರಿಗಳ ಪೋಂಜಾಟ!! ಕಡೆಯಲ್ಲಿ ಪ್ರಾಣಕ್ಕೇ ಸಂಚಕಾರ! ಹೀಗಾಗಿದೆ ನಮ್ಮ ಮಾದು ಸಂಸ್ಥಾನದ ಪರಿಸ್ಥಿತಿ

ಇಣಕಪ್ಪ

From Tuesday the 1 st December 1936

AT NEW OPERA TALKIES.

The New Theatre's marvellous mirthquake.

"MILLIONAIRE"

With SIGAL, PAHARI SANYAL, MALINA, RAJ KUMARI, NAWAB, KIDER, KAPOOR, SHORE NEMO, and others

Also Showing Topical Reels of 49th Session of the Indian National Congress held at Lucknow, presided by Pandit Jawaharlal Nehru.

ನ್ಯೂ ಅಪೆರ ಟಾಕೀಸಿನಲ್ಲಿ,

ಇದೇ ಡಿಸೆಂಬರ್ ತಾರೀಖು 1 ನೇ ಮಂಗಳವಾರದಿಂದ

ನ್ಯೂ ಥಿಯೇಟರ್ಸ್ಸರವರ ತಯಾರಿಕೆಯಲ್ಲಿ ಅತ್ಯುತ್ತಮವಾದ

ಕ್ರೋರ ಪತಿ

ಅಥವಾ

"ಕೋಟ್ಯಾಧೀಶ್ವರ"

ಪಂಡಿತ ಜವಹರಲಾಲ್ ನೆಹರು ರವರ ಅಧ್ಯಕ್ಷತೆಯಲ್ಲಿ ಲಕ್ನೋದಲ್ಲಿ ನಡೆದ ೪೯ ನೆಯ ನ್ಯಾಷನಲ್ ಕಾಂಗ್ರೆಸ್ ಟಾಪಿಕಲ್ ರೀಲ್ಸು ಸಹ ತೋರಿಸಲ್ಪಡುತ್ತೆ

ಇದರಲ್ಲಿ ಸೈಗಾಲ್, ಪಹಾರಿ ಸನ್ಯಾಲ್, ಮಾಲಿನ, ರಾಜ ಕುಮಾರಿ, ನವಾಬ್, ಕೇದರ್ ಮುಂತಾದವರು ಪಾತ್ರವಹಿಸಿರುವರು.

Coming Attraction — (1) ACHHUT KANYA (2) BHAKTA KUCHELA (Tamil) (3) RAJ MAKUT (4) SAIDE HAVIS, (5) JANMA BHOOMI, (6) MANZIL, (7) FLASH GARDON, (8) ASIR I HAVIS

ಸ್ಪೆಷಲ್
ದೀಪಾವಳಿ ಹಬ್ಬಕ್ಕಾಗಿ ಸ್ಪೆಷಲ್ ರಿಯಾಯ್ತಿಗಳು
೧೦೦ ರೂ. ಬಹುಮಾನ.

ಈ ಸುಸಮಯವನ್ನು ಕಳೆದುಕೊಳ್ಳಬೇಡಿರಿ!

ಚಿತ್ರಶಾಲಾ ಸ್ಪರ್ಧೆ ನಂ. ೧೪.

ಮೊದಲನೇ ಬಹುಮಾನ ೬೦ ರೂ.

ಸ್ಪೆಷಲ್
ಬರಿಯ ಕಾಗದದಮೇಲೆ ಬರೆದು ಕಳುಹಿಸಬಹುದು.

ಇತರ ಬಹುಮಾನಗಳು ೪೦ ರೂ.

— ಎಡದಿಂದ ಬಲಕ್ಕೆ —

೧ ಬಡಗಡೆ ೩ ಉಚ್ಚ ಶಿಕ್ಷಣವನ್ನು ಕೊಡತಕ್ಕ ಸ್ಥಳ ೬ ಕಪಿ ೭ ಕುಲಗುರು ೮ ಮರುಕ ೧೦ ಮಹಾತ್ಮಾ ಗಾಂಧಿಯವರು ಪ್ರಪಂಚಕ್ಕೇ.........ಪ್ರಾಯರು ೧೩ ಬಹು ಹಿಂದಿನಕಾಲದ ಸ್ಥಳ ೧೪ ಇನ್ಸ್ಪೆಕ್ಟರ ೧೫ ...ನ ೧೫ ಬೇಕೆಂದು ಒಂದು ಕೆಲಸಕ್ಕೆ ತರುವ ಅಡ್ಡಿ ೧೭ ...ಪಣ್ಯ ೧೭ ಅದಕ್ಕೆ ೧೯ ನೇರೆತ್ತುವ ಸಾಧನ ೨೧ ವರ್ತ್ರರು ೨೪ ಹಿಂದೂ ಜನಾಂಗವನ್ನು ನಾಲ್ಕು.........ಗಾಗಿ ವಿಂಗಡಿಸಿದ್ದಾರೆ ೨೬ ಕೇಳು ೩೦ ಇದು ಭೂಮಿ ಯೊಳಗೆ ಇರುತ್ತದೆ ೩೨ ಪಾಶಿ-ಬಾಣ ೩೩ ದುಷ್ಟನನ್ನು ಶಿಕ್ಷಿಸುವುದೇ ಇವರ ಕುಲ ಕಸಬು ೩೫ ಸಿಪಾ... ಇವನ್ನು ಕೊರೆದು ವಿಗ್ರಹಗಳನ್ನು ಮಾಡುತ್ತಾರೆ ೩೭ ಆಶ್ಚರ್ಯ ೩೮ ಇದು ನಮ್ಮ ದೇಶಕ್ಕೆ ಈಗ ಅಗತ್ಯವಾಗಿ ಬೇಕು.



ಕೂಪನ್ ನಂಬರು...............
ಹೆಸರು...............
ವಿಳಾಸ...............

— ಮೇಲಿನಿಂದ ಕೆಳಕ್ಕೆ: —

೧ ಉಭಯ ಪಕ್ಷದವರ ಸಹಕಾರವೂ ಇದಕ್ಕೆ ಬೇಕು ೨ ನೂಲು ತೆಗೆಯುವ ಯಂತ್ರ ೩ ಶುದ್ಧಿ ೪ ತೋರಿಸಿ ಕೊಡುವುದು ೫ ಒಂದೇ ಸ್ಥಳದಲ್ಲಿ ಹುಟ್ಟಿ ಬೇರೆ ಬೇರೆ ಹರಿದು ಒಂದೇ ಸ್ಥಳದಲ್ಲಿ ಸಮುದ್ರವನ್ನು ಸೇರುವ ನದಿಗಳು ೭ ಹಸು ೯ ಉಪವಾಸ ವ್ರತ ೧೦ ಪೂಜೆ ೧೧ ಋಚಗಳಲ್ಲೊಂದು ೧೨ ಪೂಜಾದಿ ಕಾರ್ಯಗಳನ್ನು ನಡೆಸುವವನು ೧೩ ನೆಡು ೧೪ ಹೊಂದುವ ೧೬ ವಾದ್ಯ ೧೮ ಆಶೀರ್ವದಿಸು ೨೦ ಬೆಂಗಳೂರಿನಲ್ಲಿ ನಡೆಯುವ ಜಾತ್ರೆ ೨೨ ಕತ್ತುಗಳು ಗೆದ್ದಲ್ಲಿ ಊರಿನಲ್ಲೆಲ್ಲಾ.........ನ್ನು ಮಾಡುವರು ೨೩ ರೋಗಿಗೆ ಔಷಧಿಯು.........ವುದಿಲ್ಲಾ ೨೫ ಪುನಃ ೨೭ ನದಿ ಸಮುದ್ರಗಳಲ್ಲಿ ಇವು ಇರುತ್ತವೆ ೨೮ ಇವರಲ್ಲಿ ಪರಿಣತರಾದವರು ಪ್ರಸಿದ್ಧರಾಗುತ್ತಾರೆ ೨೯ ಅನುಭವ ಶಾಲಿಯಾದ ಈತನ ಸೇವೆಯಿಂದ ಜನರು ಉತ್ತಮ ಸ್ಥಿತಿಗೆ ಬರಬಹುದು ೩೧ ವೇಳೆ ೩೩ ವೇಶ್ಯಾಂಗನೆ ೩೪ ಇದು ಹಿಂದೂ ಧರ್ಮವನ್ನು ಬೋಧಿಸುತ್ತದೆ.

ಸೂಚನೆ:— ಈ ಸ್ಪರ್ಧೆಯ ಸರಿಯಾದ ಉತ್ತರವು ಸಾಕ್ಷಿ ಎಡಿಟರ ಬಳಿ ಮೊಹರುಮಾಡಿ ಇಟ್ಟಿರುತ್ತೆ. ಅದಕ್ಕೆ ಪ್ರತಿ ಅಕ್ಷರವೂ ಸರಿಹೋಲತಕ್ಕ ಸ್ಪರ್ಧೆಗೆ ಮೊದಲನೇ ಬಹುಮಾನವೂ, ಒಂದು ತಪ್ಪಿರುವವುಗಳಿಗೆ ಇತರ ಬಹುಮಾನಗಳೂ ಕೊಡಲ್ಪಡುವುವು. ಬಹುಮಾನಕ್ಕೆ ಯೋಗ್ಯವಾದ ಉತ್ತರಗಳು ಒಂದಕ್ಕಿಂತ ಹೆಚ್ಚಾಗಿದ್ದಲ್ಲಿ ಮೇಲ್ಕಂಡ ಬಹುಮಾನಗಳು ಎಲ್ಲರಿಗೂ ಹಂಚಲ್ಪಡುವುವು. ಬಹುಮಾನಗಳನ್ನು ಕುರಿತ ವಿಚಾರ ಸ್ಪರ್ಧೆಯ ಮ್ಯಾನೇಜರಿಗೆ ಸೇರಿದ್ದು. ಈ ವಿಚಾರದಲ್ಲಿ ಯಾವ ಪ್ರತ್ಯವಹಾರಗಳಿಗೂ ಅವಕಾಶವಿಲ್ಲಾ. ಪ್ರತಿ ಸ್ಪರ್ಧೆಗೂ ಪ್ರವೇಶಧನ ನಾಲ್ಕಾಣೆ. ಇದಕ್ಕಿಂತ ಕಡಿಮೆ ಸ್ಪರ್ಧೆಗಳನ್ನು ಅಂಗೀಕರಿಸುವುದಿಲ್ಲಾ. ಪ್ರವೇಶಧನವನ್ನು ಪೋಸ್ಟಲ್ ಸ್ಟಾಂಪು, ಅಥವಾ ಇಂಡಿಯನ್ ಪೋಸ್ಟಲ್ ಆರ್ಡರ್ ಅಥವಾ ಮನಿಯಾರ್ಡರ್ ಮೂಲಕ ರವಾನಿಸಬಹುದು. ಉತ್ತರಗಳನ್ನು ಬರೆಯತಕ್ಕವರು ಸಾಧ್ಯವಿದ್ದಲ್ಲಿರತಕ್ಕ ಕೂಪನ್ನಿನಲ್ಲಾಗಲಿ ಅಥವಾ ಬರಿಯ ಕಾಗದದಲ್ಲಾಗಲಿ ಚಿತ್ರದಲ್ಲಿದಂತೆ ಚೆನ್ನಾಗಿ (ಶಾಯಿಯಲ್ಲಿ) ಬರೆದು ಕಳುಹಿಸಬೇಕು. ಉತ್ತರಗಳನ್ನು ಕಳುಹಿಸಲು ಡಿಸೆಂಬರು 3 ನೇ ತಾರೀಖು ಕೊನೆಯದಿನ. ನಂತರ ಬಂದ ಉತ್ತರಗಳನ್ನು ಸ್ವೀಕರಿಸುವುದಿಲ್ಲಾ. ಸರಿಯಾದ ಉತ್ತರವನ್ನು ಡಿಸೆಂಬರು 7 ನೇ ತಾರೀಖಿನ ಸಾಕ್ಷಿಯಲ್ಲಿ ಪ್ರಕಟಿಸಲಾಗುತ್ತೆ.

ವಿಳಾಸ:— ಮ್ಯಾನೇಜರ್ ಚಿತ್ರಶಾಲಾ ಸ್ಪರ್ಧೆ, ಚಿತ್ರಶಾಲಾ, ವಾಣೀವಿಲಾಸ ಮೊಹಲ್ಲಾ ಒಂಟಿಕೊಪ್ಪಲ್, ಮೈಸೂರು.

ಸೂ. ಮೈಸೂರಿನಲ್ಲಿ ಸ್ಪರ್ಧೆಗೆ ಭಾಗವಹಿಸುವವರು ತಮ್ಮ ಉತ್ತರಗಳನ್ನು ಮೆಸರ್ಸ್ ಸ್ಟೀಟ್ ಮಾರ್ಟ್ ಇವರಿಗೆ ಪಾಪತಿನಾದಬೇಕಾಗಿ ವಿನಂತಿ. ಮ್ಯಾ. ಚಿ.

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

— ಬಾಲಸುಧಾ —

ಮಕ್ಕಳ ಜ್ವರದ ಗೆಡ್ಡೆಯನ್ನು ಜಾಕರಿ ಗುಣ ಪಡಿಸುತ್ತೆ. ಲಿವರ್ (ಪಿತ್ತಜನಕ) ದಪ್ಪನಾಗಿ ಕೆನ್ನು ಹಳದಿ ಬಣ್ಣವಾಗಿದ್ದರೆ ಇದರ ಸೇವನೆಯಿಂದ ದಿನೇ ದಿನೇ ಗುಣವಾಗುತ್ತೆ. 20 ವರ್ಷಗಳಿಂದಲೂ ಅನುಭವ ಸಿದ್ಧವಾಗಿದೆ—ಮಕ್ಕಳಿಗೆ ನಮ್ಮ ಬಾಲಸಂಜೀವಿನಿಯನ್ನೇ ಉಪಯೋಗಿಸಿರಿ.
ಬಾಲಸುಧಾ ಬೆಲೆ 1 ರೂ. ಬಾಲಸಂಜೀವಿನಿ 4 ಅ.
ಮೈಸೂರು, ಬೆಂಗಳೂರು, ಮದ್ರಾಸುಗಳಲ್ಲಿ ನಮ್ಮ ಶಾಖೆಗಳಿವೆ.
ಸದ್ವೈದ್ಯಶಾಲಾ, ನಂಜನಗೂಡು.

ANANDA SODA FACTORY,

BEST AERATED WATER SUPPLIERS.
COMPLETE REQUISITES FOR AERATED WATER MANUFACTURERS AVAILABLE.
ಆನಂದಾ ಸೋಡಾ ಫ್ಯಾಕ್ಟರಿ,
ದೊಡ್ಡ ಪೇಟೆ, ಮೈಸೂರು.

ಟಿ. ಸಿ. ನಟರಾಜ್ ಔಷಧಾಲಯ,

ಸಯ್ಯಾಜಿರಾವ್ ರೋಡು, ಮೈಸೂರು.
ಇವರಲ್ಲಿ ನೇತ್ರಪರೀಕ್ಷೆಯು ಉಚಿತವಾಗಿ ಮಾಡಲ್ಪಡುತ್ತದೆ.
ಅತ್ಯಗತ್ಯವಾಗಿ ಬೇಕಾದ ಎಲ್ಲಾ ಇಂಜಕ್ಷನ್ ಔಷಧಿಗಳೂ ಸದಾ ಕಾಲದಲ್ಲಿಯೂ ದೊರಕುವುದಲ್ಲದೆ ಸಮಸ್ತ ವ್ಯಾಧಿಗಳಿಗೂ ಚಿಕಿತ್ಸೆಯು ಬಹು ಸುಲಭ ಧಾರಣೆಯಿಂದ ಮಾಡಲ್ಪಡುತ್ತದೆ.
ಕುಂಬಕೋಣರವರ ಆಯುರ್ವೇದೀಯ ಸಿದ್ಧೌಷಧಗಳೆಲ್ಲವೂ ಸದಾ ದೊರೆಯುತ್ತವೆ.

ಎಂ. ವಿ. ನಾರಾಯಣರಾಯರ
ಶ್ರೀ ಸತ್ಯನಾರಾಯಣ ಪರಿಮಳ ಫ್ಯಾಕ್ಟರಿ,
ಜಗನ್ಮೋಹನ ಬಂಗ್ಲಾ ಬೀದಿ, ಮೈಸೂರು.
ಪರಿಮಳ ಅಗರಬತ್ತಿ
ಉಪಯೋಗಿಸಿ ಪ್ರೋತ್ಸಾಹಿಸಿರಿ.

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತ ಅಂಡ್ ಸನ್ಸರ

ಆಯುರ್ವೇದೀಯ ಸಿದ್ಧೌಷಧಗಳು.

ಲೋಕಾಮಯಹರ ಕಸ್ತೂರಿ ಮಾತ್ರೆಗಳು

ಈ ಮಾತ್ರೆಗಳು 1—2 ನ್ನು ಪ್ರತಿ ದಿನ ಊಟದಿಂದ ಬಳಿಕ ತೆಗೆದುಕೊಂಡು ಬಂದರೆ ಮೈಗೆ ಉಪಯೋಗವಾಗುತ್ತದೆ, ಬಾಯಿ ಸುವಾಸನೆಯಾಗಿರುತ್ತದೆ ಎಂತಹ ಗಟ್ಟಿಯಾದ ಆಹಾರವನ್ನಾದರೂ ಜೀರ್ಣಿಸಿ ಕೊಳಕಾದ ನೀರು, ಕೆಟ್ಟ ಗಾಳಿಗಳ ದೋಷವನ್ನೂ, ಅಂಟುಜಾಡ್ಯಗಳನ್ನೂ ಒಳಗೆ ಸೇರಿಸದೆ ಮಲಬದ್ಧವನ್ನು ಹೋಗಲಾಡಿಸಿ, ಆರೋಗ್ಯವಾಗಿರುವಂತೆ ಮಾಡುತ್ತದೆ

ಮಕ್ಕಳ ಸನ್ನಿಪಾತ (ಎದೆನ್ನು, ಗಾಳಿಕೆಮ್ಮು ಸೆಳವು, ಬಾಣಂತಿ ಜ್ವರ ಮುಂತಾದ ಸೀತವಾತ) ಮಕ್ಕಳ ಮತ್ತು ದೊಡ್ಡವರ ಸೀತ, ನೆಗಡಿ, ಕೆಮ್ಮು, ಗೂರಲು, ಜ್ವರ, ಚಳಿಜ್ವರ, ಅಜೀರ್ಣ, ಅಜೀರ್ಣದ ಭೇದಿ, ಹೊಟ್ಟೆಯ ಉಬ್ಬರ, ಹೊಟ್ಟೆ ನೋವು, ಅಗ್ನಿಮಾಂದ್ಯ, ಅಪಸ್ಮಾರ, ಪ್ಲೇಗು, ವಿಷಭೇದಿ ಇವುಗಳು ಅನೇಕ ರೋಗಗಳನ್ನು ಗುಣಪಡಿಸುತ್ತವೆ

ಸ್ತ್ರೀಯರು ಹೆತ್ತ ದಿನ ಮೊದಲ್ಗೊಂಡು ದಿನ ಸೀತವಾತ ಪರಿಹಾರಕ್ಕಾಗಿ ಕಸ್ತೂರಿಗೆ ಬದಲು ಈ ಮಾತ್ರೆಗಳನ್ನೇ ಲಕ್ಷೋಪಲಕ್ಷ ಜನರು ಉಪಯೋಗಿಸುತ್ತಿರುತ್ತಾರೆ ಈ ಮಾತ್ರೆಗಳಲ್ಲಿ ಅಪಾಯಕರವಾದ ವಿಷವಸ್ತು ಸೇರಿರುವುದಿಲ್ಲ ಎಂದು ಖಂಡಿತವಾಗಿ ಹೇಳಬಹುದು. ಒಂದೇ ಒಂದು ಈ ಔಷಧಿಯು ನಿಮ್ಮ ಬಳಿ ಇದ್ದರೆ ವೈದ್ಯರ ಸಹಾಯವನ್ನಪೇಕ್ಷಿಸದೆ ನೀವೇ ಅನೇಕ ವ್ಯಾಧಿಗಳನ್ನು ಗುಣಪಡಿಸಬಲ್ಲವ ರಾಗುತ್ತೀರಿ

250 ರಿಂದ 300 ಮಾತ್ರೆಗಳುಳ್ಳ ಸೀಸೆ 1 ಕ್ಕೆ 1 ಅಣೆ ಟಪಾಲು ಮೂಲಕವಾದರೆ 1 ಸೀಸೆಗೆ 9 ಆಣೆ 6 ಸೀಸೆಗೆ 1—8—0 12 ಕ್ಕೆ 2—15—0 25 ಕ್ಕೆ 5—8—0

ಪಾಳ್ಯದ ವೆಂಕಟಾಚಲ ಪಂಡಿತ ಅಂಡ್ ಸನ್ಸ್,

ಶ್ರೀ ಸೀತಾರಾಘವ ವೈದ್ಯಶಾಲಾ, ಮೈಸೂರು.

"ಬ್ರೇಕ್ ಪಿಲ್ಸ್"

INVENTED BY A HIMALAYAN SAGE

ಸ್ತ್ರೀಪುರುಷರಿಗೆ ಆನಂದವನ್ನುಂಟುಮಾಡುವುದು ಈ ಮಾತ್ರೆಗಳ ಮುದಿಸಿದ ಸ್ತ್ರೀಯರ ಗರ್ಭಭಂಗ ಮಾಡಲು ಕಂಡುಹಿಡಿದಿರುವ ಮಾತ್ರೆಗಳಲ್ಲ ಇದರಲ್ಲಿ ರಸ

ಸಿಂಧೂರಗಳು ಸೇರಿಲ್ಲ ಕಸ್ತೂರಿ ಮುಂತಾದ ಹಿಮಾಲಯ ಪರ್ವತದ ವನಮೂಲಿಕೆಗಳು ಮುಂತಾದವುಗಳಿಂದ ದೊಡ್ಡ ಯೋಗೀಶ್ವರರ ಹತ್ತಿರ ಸಂಗ್ರಹಿಸಿ ಸುಮುಕತನವನ್ನು ಲೋಕದಲ್ಲಿ ಇಲ್ಲದಂತೆ ಮಾಡುವುದು ಅರ್ಧ ಘಂಟೆಯೊಳಗಾಗಿ ವೀರ್ಯವನ್ನು ಕಟ್ಟಿನಂತೆ ಮಾಡಿ ರಮಿಸಲು ಉಲ್ಲಾಸವನ್ನು ಮಾಡುವುದು ಗುಣವಿಲ್ಲದಿದ್ದಲ್ಲಿ ಹಣ ವಾಪಸು.

೬೦ ಮಾತ್ರೆಗಳು ರೂ ೫—೦—೦ ೨೦ ಮಾತ್ರೆಗಳು ರೂ ೩—೦—೦

(ಕಾಗದ ಪತ್ರಗಳು ಇಂಗ್ಲೀಷಿನಲ್ಲಿರಬೇಕು.)

ಡಾ|| ವಿ ಎಸ್. ಮೂರ್ತಿ, ಪಿಕಾಕೆಟ್, ಗಂಜಾಮ್ ಡಿಸ್ಟ್ರಿಕ್ಟ್

THE SADHVI

RECOMMENDED FOR SCHOOLS BY THE DEPARTMENT.

No Tl. 5776 146—35 36.

OFFICE OF THE DIRECTOR OF PUBLIC INSTRUCTION IN MYSORE.

Bangalore, Dated 20th April 1936

ANNUAL SUBSCRIPTION

Local
Moffusil } Rs 2—4—0.

ದ್ರಾಕ್ಷಾಮೃತ

ಈ ದ್ರಾಕ್ಷಾಮೃತವು ಸಹ್ಯಾದ್ರಿ ಪರ್ವತದಲ್ಲಿ ಅನೇಕ ವನಸ್ಪತಿಗಳ ರಸಗಳೊಂದಿಗೆ ದ್ರಾಕ್ಷಾರಸವನ್ನು ಮಿಶ್ರಮಾಡಿ ಸ್ವದೇಶಿ ಯಂತ್ರದಿಂದ ಶಾಸ್ತ್ರ ಪದ್ಧತಿ ಪ್ರಕಾರ ತಯಾರು ಮಾಡಿರುವದರಿಂದ ಸ್ವಾದಿಷ್ಟವು ಮತ್ತು ರುಚಿ ಆಗಿದೆ

ಇದರ ಸೇವನೆಯಿಂದ ಶರೀರದೊಳಗಿನ ಹಳೆ ಕಡಕಿ (ಗರಮಿ) ನಾಶವಾಗುತ್ತದೆ ಮತ್ತು ಧಾತುಸ್ರಾವ, ಸ್ವಪ್ನಾವಸ್ಥೆಯಿಂದ ಆದಾಗ್ಯೂ ಯಾವದೇ ಕಾರಣದಿಂದ ಬಂದ ಅಶಕ್ತತೆಯಿಂದ ಕೈಕಾಲು, ಕಣ್ಣೊಳಗೆ ಉರಿ ಬೀಳೋದು, ಸೊಂಟಕ್ಕೆ ನೋವು ಆಗದೆ ಇರೋದು, ಮುಂತಾದ ಎಲ್ಲ ವಿಕಾರಗಳು ನಾಶವಾಗಿ ಕ್ಷುಧಾಗ್ನಿ ಬೆಳೆಯುತ್ತದೆ ಮತ್ತು ಅನ್ನ ಚೆನ್ನಾಗಿ ಪಚನವಾಗಿ ರಕ್ತಶೋಧನವಾಗುತ್ತದೆ ಇದರ ಸೇವನೆಯಿಂದ ತರುಣರಿಗ ವ್ಯಭಿಚಾರದಿಂದ ಅಥವಾ ಬೇರೆ ಕಾರಣದಿಂದ ಬಂದ ಧಾತುಕ್ಷೀಣತೆ, ನಪುಂಸಕತ್ವ ಇದ್ದರೆ ಅದು ಪುನಃ ಯೌವನವಂತರಾಗಿ, ಶರೀರ ಬಲವಾಗಿ ಮಕ್ಕಳು ಪುಷ್ಟಿವಂತರಾಗುವರು ಹೆಂಗಸರಿಗೂ ಮತ್ತು ಮಕ್ಕಳಿಗೂ ಈ ಔಷಧವು ಗುಣಕಾರಿ ಇದೆ. ಮುಟ್ಟಿನ ದೋಷ ಮತ್ತು ಬಸ್ತ ಗರ್ಭ ಸಂಬಂಧವಾದ ರೋಗಗಳಿದ್ದರೂ ಅವೆಲ್ಲ ಗುಣವಾಗಿ ಹೆಂಗಸರಿಗೆ ಸಂತತಿ ವೃದ್ಧಿಯಾಗುವದು. ಈ ಔಷಧದ ಮೂರು ಬಾಟ್ಲಿ ಸೇವನೆ ಮಾಡಿದರೆ ಪೂರ್ಣ ಗುಣಬರುತ್ತದೆ ಇದರ ಅನುಭವ 1 ಬಾಟ್ಲಿ ಸೇವನೆ ಮಾಡಿದ ಅನಂತರ ನಿಮಗ ತಿಳಿದೀತು.

1 ಬಾಟ್ಲಿ ಬೆಲೆ ರೂ ೧—೪—೦, 3 ಬಾಟ್ಲಿ ೩—೮—೦, 1 ಡರ್ಜ ಬಾಟ್ಲಿ ಬೆಲೆ ೧೨—

ಮ್ಯಾನೇಜರ್—ದ್ರಾಕ್ಷಾಮೃತ ಡಿಪೋ. ಪೋಸ್ಟ್ ನಿಪ್ಪಾಣಿ, ಜಿಲ್ಲಾ ಬೆಳಗಾವಿ

ಮೈಸೂರು ಸ್ಟಾಕಿಸ್ಟ್ಸ್—ಟಿ ಸಿ. ನಟರಾಜ್, ದೊಡ್ಡಾಯ ಆನಂದ ಮಾಡರ್ನ್ ಫಾರ್ಮಸಿ, ಸಯ್ಯಾಜಿರಾವ್ ರೋಡ್ ಬೆಂಗಳೂರು ಸಿಟಿ—ಶಾಸ್ತ್ರಿ ಅಂಡ್ ಸನ್ಸ್, ಚಿಕ್ಕಪೇಟೆ ತುಂಕೂರು—ಟಿ ಆರ್ ಗುರು ಚನ್ನಪ್ಪ ಅಂಡ್ ಬ್ರದರ್ಸ್. ಚಿಕ್ಕಮಗಳೂರು—ಎಂ ಎಚ್ ಮಂಜಯ್ಯಶೆಟ್ಟಿ ಹಾಸನ—ಶ್ರೀಕೃಷ್ಣ ಟ್ರೇಡಿಂಗ್ ಏಜನ್ಸಿ ಮತ್ತು ಖಂಡೇರಾವ್ ಬ್ರದರ್ಸ್. ದಾವಣಗೆರೆ—ಮಲ್ಲಪ್ಪ ಮತ್ತು ಕ ಭೋಗಯ್ಯಶೆಟ್ಟಿ ಅಂಡ್ ಬ್ರದರ್ಸ್.

ಪ್ರಾಚೀನ ಕನ್ನಡ ವಚನ ಗ್ರಂಥಗಳು

ಸೌಗಂಧಿಕಾಪರಿಣಯ:— ಪೂರ್ವದಲ್ಲಿ ದೇವೇಂದ್ರನಿಗೆ ದೂರ್ವಾಸ ಮುನಿಗಳಿಂದ ಆಶೀರ್ವಾದ ಪೂರ್ವಕವಾಗಿ ಕೊಡಲ್ಪಟ್ಟ ಕಮಲಮಾಲಿಕೆಯನ್ನು ಆನೆಯ ಕುಂಭಸ್ಥಳದಲ್ಲಿಟ್ಟವುದನ, ಆನೆಯು ಆ ಮಾಲಿಕೆಯನ್ನು ಕಾಲಿನಲ್ಲಿ ಹೊಸಕಿ ಮರ್ದಪಡಿಸಲು, ಋಷಿಗಳ ಶಾಪದಿಂದ ಭೂಲೋಕದಲ್ಲಿ ರತ್ನಪುರಿಯಲ್ಲಿ ಸುಗಂಧರಾಜನಾಗಿ ಹುಟ್ಟಿ, ಕಳಿಂಗದೇಶದ ರಾಜಪುತ್ರಿಯಾದ ಸೌಗಂಧಿಕಾದೇವಿಯನ್ನು ಸ್ವಯಂವರಮಾಡಿಕೊಂಡ, ಬಹಳ ವಿಷಯಗಳಿರುವ ಕಥೆ

೧೨೦ ಪುಟಗಳು ಕ್ರಯ ರೂ. ೪—೦—೦

ಸಹಸ್ರಾಯುಚರಿತ್ರೆ:— ಮಾಹಿಷ್ಮತೀ ಅರಸನ ಜ್ಯೇಷ್ಠಪತ್ನಿಯಲ್ಲಿ ದಾಕ್ಷಾಯಿಣಿ ವರಪ್ರಸಾದದಿಂದ ಜನಿಸಿ ಲೋಕಪ್ರಸಿದ್ಧನಾಗಿ ತನಗೆ ಇತರರಿಂದ ಬಂದ ಗಂಡಾಂತರಗಳನ್ನೆಲ್ಲಾ ಪರಿಹರಿಸಿಕೊಂಡ ಮಹಾಪುರುಷನ ಕಥೆ

೬೭ ಪುಟಗಳು ಕ್ರಯ ರೂ ೨—೦—೦

ಕಾಶೀಕ್ಷೇತ್ರಮಹಾತ್ಮೆ:— ಇದರಲ್ಲಿ ೧೪ ಲೋಕಗಳ ವರ್ಣನ, ನದಿಗಳು, ದೇವತೆಗಳು ಋಷಿಗಳೇ ಮುಂತಾದವರ ಉತ್ಪತ್ತಿಕ್ರಮ, ಸಹಸ್ರನಾಮವೇ ಮೊದಲಾದ ಅನೇಕ ವಿಷಯಗಳು ಅಡಕವಾಗಿರುತ್ತ

೬೦೩ ಪುಟಗಳು ಕ್ರಯ ರೂ ೨—೭—೦

N. B. ಪುಸ್ತಕದ ಕ್ರಯದ ನಾಲ್ಕರಲ್ಲಿ ಒಂದು ಭಾಗ ಮುಂಗಡ ಹಣ ಕಳುಹಿಸಿದರೆ ಬಾಕಿಗೆ ವಿ ಪಿ ಮಾಡಲಾಗುತ್ತೆ

ಅಡ್ರೆಸ್ಸು:—

ಗುಂಡ್ಲು ಪಂಡಿತ ಲಕ್ಷ್ಮಣಾಚಾರ್ಯರ ಮಕ್ಕಳು
ಶ್ರೀನಿವಾಸ ದೇಶಿಕಾಚಾರ್,
೬೦೭ ಕಲುಹಟ್ಟಿಬೀದಿ, ಮೈಸೂರು.

|| ಸತ್ಯಮೇವೋದ್ಧರಾಮ್ಯಹಮ್ ||
ರಾಜಧಾನಿಯ ರಾಷ್ಟ್ರೀಯ ವಾರ ಪತ್ರಿಕೆ.
ವೃದ್ಧಪಿತಾಮಹ ಎಂ. ವೆಂಕಟಕೃಷ್ಣಯ್ಯನವರ ಜ್ಞಾಪಕಾರ್ಥವಾಗಿ ಪ್ರಕಟಿಸಲ್ಪಡುವುದು.
ಸಂಪಾದಕರು ಅಗರಂ ರಂಗಯ್ಯ, ಬಿ.ಎ

ಸಂಪುಟ ೧] MYSORE : MONDAY 7—12—36 ಮೈಸೂರು : ಸೋಮವಾರ ೭—೧೨—೩೬ [ಸಂಚಿಕೆ ೪೧

ಭಾರತಕ್ಕೂ ವಿಷವಾಯು ಪ್ರಯೋಗವೆ?

ಲಾಠಿ ಪ್ರಯೋಗವು ಪ್ರಯೋಜನಕಾರಿಯಲ್ಲ. ವಿಷವಾಯುವನ್ನೇ ಪ್ರಯೋಗಿಸಬೇಕು. ಕಲ್ಕತ್ತಾದಲ್ಲಿ ನಾನು ಹೊಂದಿದ ಅನುಭವದಿಂದ ಇದನ್ನು ಹೇಳುತ್ತೇನೆ. ಗುಂಪುಗಳನ್ನು ಚದುರಿಸಲು ಲಾಠಿ ಪ್ರಯೋಗ ಮಾಡುವುದಕ್ಕಿಂತಲೂ ಟೀರ್ ಗ್ಯಾಸನ್ನು ಉಪಯೋಗಿಸುವುದು ಉತ್ತಮ. ದೇಶೀಯ ರಾಜರೂ ಸಹ ಹಾಗೆಯೇ ಮಾಡುವುದು ಒಳ್ಳೆಯದು—" ಎಂದು ನಿವೃತ್ತ ಪೋಲೀಸ್ ಕಮೀಷನರಾದ ಕೆ ಚಾರ್ಲ್ಸ್ ಕ್ಲಾರ್ಕ್ ಎಂಬುವರು ಹೇಳಿರುವರು.

ಭಾರತಖಂಡದ ಉಪ್ಪು ತಿಂದುದಕ್ಕೆ ಇದೇ ಪ್ರತಿಫಲ!

ರಾಜರು ಸಿನಿಮಾ ನಟರಾದರು

ಇಂದೂರಿನ ಯಶವಂತರಾವ್ ಹೋಳ್ಕರರು ಸಿನಿಮಾದಲ್ಲಿ ಪಾತ್ರವಹಿಸಿರುವರು. ಹಾಲಿವುಡ್ಡಿನ ಸಿನಿಮಾ ಕಂಪನಿಯವರು ಅವರನ್ನು ಪ್ರಾರ್ಥಿಸಲು ಅವರು ಮೊದಲು ಒಪ್ಪಲಿಲ್ಲ. ಆದರೆ ಅವರ ಪಾತ್ರವು ಸಭ್ಯತರವೆಂದು ಕೇಳಲು ಪಾತ್ರಧಾರಣೆ ಮಾಡಿದರು.

ಕರೀ ಗುಲಾಬಿ.

ಬಿಳೀ ಗುಲಾಬಿ, ಕೆಂಪು ಗುಲಾಬಿ, ಗುಲಾಬ್ ಗುಲಾಬಿ, ಹಳದಿ ಗುಲಾಬಿಗಳನ್ನು ನೋಡಿದ್ದೇವೆ. ಕರೀ ಗುಲಾಬಿಯನ್ನು ಯಾರೂ ಇದುವರೆಗೆ ನೋಡಿಲ್ಲ. ಕ್ಯಾಲಿಫೋರ್ನಿಯದ ಒಬ್ಬ ತೋಟಗಾರನು ನಲವತ್ತು ವರ್ಷಗಳಿಂದ ಪ್ರಯತ್ನಿಸಿ ಕರೀ ಬಣ್ಣದ ಗುಲಾಬಿ ಹೂಗಳನ್ನು ಬೆಳೆಯುತ್ತಿದ್ದಾನೆ

ಕರ್ಣಭಗಳಿಗೂ ದಸ್ತಗಿರಿ

ಆಕಸ್ಮಾತ್ತಾಗಿ ತೆರಿಗೆಗಳನ್ನು ಕೊಡಬೇಕಾದ ಕೆಲವು ಸಾಮಗ್ರಿಗಳನ್ನು ಪಾಶ್ಚಾತ್ಯ ದೇಶಗಳ ಕೆಲವು ವರ್ತಕರು ಕತ್ತೆಗಳ ಮೇಲೆ ಹೇರಿ ಕಳುಹಿಸಿಬಿಡುತ್ತಿರುವರು. ಆ ಕತ್ತೆಗಳು ಎಲ್ಲೆಲ್ಲಿಯೋ ಅಲೆದುಕೊಂಡು ಕಡೆಗೆ ತಮ್ಮ ಮಾಲಿಕರ ಸ್ಥಳಕ್ಕೆ ಬಂದು ಸೇರುವುವು. ಇದು ಪತ್ತೆಯಾಗಿ ಈಗ ಇಂತಹ ಕತ್ತೆಗಳನ್ನು ದಸ್ತಗಿರಿ ಮಾಡಲು ಏರ್ಪಾಡಾಗಿದೆ

ಕೆಂಪ-ಯಕ್ಕಾಗಿ ಸ್ತ್ರೀಯರ ದಸ್ತಗಿರಿ!

ಗಂಡನ ಅಥವ ಅಣ್ಣ ತಮ್ಮಂದಿರ ಕಂದಾಯದ ಬಾಕಿಗಾಗಿ ಹೆಂಗಸರನ್ನು ದಸ್ತಗಿರಿಮಾಡಿದ ಘೋರ ಕಥೆಯು ಕೆನ್ಯಾ ಪ್ರಾಂತ್ಯದ ವಾರ್ಷಿಕ ವರದಿಯಲ್ಲಿ ನಿರೂಪಿಸಲ್ಪಟ್ಟಿದೆ. ಅಲ್ಲಿನ ಜನರಿಗೆ ಕಂದಾಯದ ವಸೂಲಿ ಕಾಲದಲ್ಲಿ ವಿಪರೀತವಾದ ಹಿಂಸೆಗಳು ಕೊಡಲ್ಪಡುತ್ತಿದ್ದವು. ನ್ಯಾಯ ವಿರುದ್ಧವಾದ ದಸ್ತಗಿರಿಗಳಾಗುತ್ತಿದ್ದವು ಸ್ತ್ರೀಯರ ದಸ್ತಗಿರಿಯು ಒಂದು ವಿಪರೀತದ ಪ್ರಸಂಗವು.

ಫ್ರಾನ್ಸಿನ ಯುದ್ಧ ಸಿದ್ಧತೆ.

ಫ್ರಾನ್ಸ್ ದೇಶದಲ್ಲಿರುವ ಉಕ್ಕಿನ ಗೋಡೆಯನ್ನು ಒಂದಕ್ಕೆ ಮೂರಷ್ಟು ಹೆಚ್ಚಿಸುವದಾಗಿರುವರು ಯುದ್ಧದ ತಯಾರಿಗಾಗಿ 25 ಕೋಟಿ ಪೌಂಡುಗಳನ್ನು ಫ್ರೆಂಚ್ ಸರ್ಕಾರದವರು ಮುಂಜೂರು ಮಾಡಿರುವರು. ಮೇಲ್ಕಂಡ ಗೋಡೆಯನ್ನು ಆರುನೂರು ಮೈಲಿಗಳ ಉದ್ದಕ್ಕೆ ಹೆಚ್ಚಿಸುವರು. ಈಗ ಅದರ ಉದ್ದ 250 ಮೈಲಿ.

ಲಂಡನ್ನಿಗೆ ಅಂತರಿಕ್ಷದ ಗೋಡೆ

ರಾತ್ರಿ ಕಾಲದಲ್ಲಿ ಶತ್ರುಪಕ್ಷದವರು ಅಂತರಿಕ್ಷ ಮಾರ್ಗದಿಂದ ಬಂದು ಲಂಡನ್ ನಗರದ ಮೇಲೆ ಧಾಳಿನಡೆಸದಂತೆ ಅಂತರಿಕ್ಷದಲ್ಲಿ ತಂತಿಯಿಂದ ಬಿಗಿದ ಒಂದು ಗೋಡೆಯು ರಾತ್ರಿ ಕಾಲದಲ್ಲಿ ನಿರ್ಮಿಸಲ್ಪಡುವುದು. ನಗರದ ಸುತ್ತಲೂ ವಾಯುಮಂಡಲದಲ್ಲಿ ವಿಮಾನಗಳ ಮೂಲಕ ಈ ತಂತಿಗಳು ಬಿಗಿಯಲ್ಪಟ್ಟು ಶತ್ರು ವಿಮಾನಗಳು ಒಳಗೆ ಪ್ರವೇಶಿಸದಂತೆ ಮಾಡುತ್ತವೆ.

ಅಂತರಿಕ್ಷದಲ್ಲಿ ಕಟ್ಟಡಗಳನ್ನು ಕಟ್ಟುವುದೊಂದೇ ಬಾಕಿ.

ಅಳುವುದರಿಂದ ಆರೋಗ್ಯ!

ಅಳುವುದರಿಂದ ಆರೋಗ್ಯ ವುಂಟಾಗುವುದೆಂದು ವೈದ್ಯರ ಅಭಿಪ್ರಾಯ. ರೋಗದ ಅಣುಗಳನ್ನು ನಾಶಗೊಳಿಸುವ ಶಕ್ತಿಯು ಕಣ್ಣೀರಿಗೆ ಇರುವುದೆಂದು ಅವರು ಹೇಳುವರು. ಆದ್ದರಿಂದ ಇನ್ನುಮೇಲೆ ಅಳುವವರಿಗೆ ಉತ್ತೇಜನ ಕೊಡಬಹುದಲ್ಲವೆ?

ಸಾಯಲು ಅಧಿಕಾರ

ಸಾಯುವ ಅಧಿಕಾರವನ್ನು ಕೊಡುವ ಒಂದು ಕಾನೂನು ಪಾರ್ಲಿಮೆಂಟಿನಲ್ಲಿ ಚರ್ಚೆಗೆ ಬರಲಿರುವುದು. ಅನಿವಾರ್ಯವಾದ ಖಾಯಿಲೆಯಿಂದ ನರಳುವವರು ರೋಗದಲ್ಲಿ ಪಾಡು ಪಡುವುದಕ್ಕಿಂತ ಸಾಯುವುದೇ ಲೇಸೆಂಬ ಅಭಿಪ್ರಾಯದಿಂದ ಈ ಮಸೂದೆಯು ಬಂದಿದೆ. ಡಾಕ್ಟರುಗಳನ್ನು ಕೋರಿಯು ಬೇಡಿಕೊಳ್ಳಬೇಕು. ಆ ನಂತರ ಅವರನ್ನು ಬಾಧೆಯಿಲ್ಲದಂತೆ ಅವರು ಸ್ವರ್ಗಕ್ಕೆ ಕಳುಹಿಸುವರು. ಈ ಮಸೂದೆಯು ಏನಾಗುವುದೋ ನೋಡಬೇಕು. ಅಂತೂ ಆತ್ಮಹತ್ಯಕ್ಕೆ ಒಳ್ಳೇ ಉಪಕಾರ.

ಮೂಷಕ ಬಂಧನಾಧಿಕಾರಿ!

ವಾಂಡ್ಸ್‌ವರ್ತ್ ಎಂಬಲ್ಲಿ ಇಲಿಗಳ ಹಾವಳಿ ವಿಪರೀತವಾಗಿದೆ ಅವುಗಳನ್ನು ವಿನಾಶಮಾಡಲು ಆರೋಗ್ಯ ಇಲಾಖೆಯವರು ಸರ್ವ ಪ್ರಯತ್ನಗಳನ್ನೂ ಮಾಡಿದರು. ಸಾಧ್ಯವಾಗಲಿಲ್ಲ ಇಲಿಗಳನ್ನು ಹಿಡಿಯಲು ಒಬ್ಬ ಅಧಿಕಾರಿಯನ್ನು ಅವರು ನೇಮಿಸಿರುವರು ಅವರಿಗೆ ವರ್ಷಕ್ಕೆ 300 ಪೌಂಡು ಸಂಬಳ. ಅವರ ಸಹಾಯಾಧಿಕಾರಿಗಳಿಗೆ 150 ಪೌಂಡು

ಜರ್ಮನಿಯಲ್ಲಿ ಅಸ್ಪೃಶ್ಯತೆ

ಜರ್ಮನಿ ದೇಶದಲ್ಲಿ ಯೆಹೂದ್ಯರನ್ನು ಕಂಡರೆ ಆಗದು. ಅವರನ್ನು ಅಲ್ಲಿಂದ ಹೊರಡಿಸಿದರು. ಅಲ್ಲಿ ನಿಂತ ಯೆಹೂದ್ಯರಿಗೆ ಚಿತ್ರಹಿಂಸೆ ಕೊಟ್ಟರು. ಸುಪ್ರಸಿದ್ಧ ಗ್ರಂಥಕರ್ತರೂ ಸಂಶೋಧಕರೂ ಆದ ಅನೇಕ ಜನ ಮೇಧಾವಿಗಳಾದ ಯೆಹೂದ್ಯರು ಜರ್ಮನಿಯನ್ನು ಬಿಟ್ಟು ಹೋಗುತ್ತಿರುವರು. ಅಸ್ಪೃಶ್ಯತೆಯು ಪೌರ್ವಾತ್ಯರಂತೆಯೇ ಪಾಶ್ಚಿಮಾತ್ಯರಲ್ಲಿಯೂ ಇರುತ್ತದೆ

ಚೀನಾ—ಜಪಾನರ ಯುದ್ಧ

ಚೀನಾದೇಶವು ಜಪಾನಿನೊಡನೆ ಯುದ್ಧಮಾಡುವ ವಿಚಾರವಾಗಿ ಅಲ್ಲಿನ ಜನರ ಅಭಿಪ್ರಾಯವನ್ನು ತೆಗೆದುಕೊಂಡರು. ಶೇ॥ 60 ಜನರು ಯುದ್ಧಮಾಡಲೇಬೇಕೆಂದು ತಿಳಿಸಿದರು ಅರ್ಧಜನರು ಯುದ್ಧವಾಗದೆ ಇರುವುದಿಲ್ಲ ಎಂದರು ಆದರೆ ಯುದ್ಧವು ಸಧ್ಯದಲ್ಲಿಯೇ ಸಂಭವಿಸುವುದೋ ಇನ್ನು ಬಹಳ ಕಾಲ ತಳ್ಳುವುದೋ ಹೇಳಲಾಗುವುದಿಲ್ಲ.

ತಿರುವಾಂಕೂರು ರಾಜರ ಹೆಸರು.

ತಿರುವಾಂಕೂರು ರಾಜರು ತಮ್ಮ ಹೆಸರನ್ನು ಈ ರೀತಿ ಇಟ್ಟುಕೊಂಡಿರುವರು — ಶ್ರೀ ಪದ್ಮನಾಭದಾಸ ವಂಚಿಪಾಲ (ಸರ್) ಬಲರಾಮ ವರ್ಮ ಕುಲಶೇಖರ ಕಿರೀಟಪತಿ ಮನ್ನೆ ಸುಲ್ತಾನ್ ಮಹಾರಾಜ ರಾಜಾ ರಾಮರಾಜ ಬಹದ್ದೂರ್ ಶಂಶೇರ್ ಜಂಗ್—ಇದರಲ್ಲಿ "ಬಲ" ಎಂಬ ಪದವು ಕೆಲವು ದಿನಗಳಿಂದ ಬಿಟ್ಟು ಹೋಗಿತ್ತೆಂದೂ ರಿಕಾರ್ಡುಗಳನ್ನು ನೋಡುವಲ್ಲಿ ಸಿಕ್ಕಿತೆಂದೂ ಅದುದರಿಂದ ಸೇರಿಸಿಕೊಂಡಿರುವರೆಂದೂ ತಿಳಿಯ ಬರುತ್ತದೆ.

ಚುಂಬನ ನಿರೋಧ.

ಚುಂಬನವು ಒಂದು ಹಾನಿಕರವಾದ ವಿದೇಶಿ ಪದ್ಧತಿಯೆಂದು ಜಪಾನಿನ ಸರ್ಕಾರದವರು ಭಾವಿಸುತ್ತಾರೆ ಆದ್ದರಿಂದ ಸಿನಿಮಾಗಳಲ್ಲಿ ತೋರಿಸುವ ಚಿತ್ರಗಳಲ್ಲಿ ಚುಂಬನವನ್ನು ತೋರಿಸಕೂಡದು. ಅದಲ್ಲದೆ ಆಲಿಂಗನ, ನರ್ತನ ಮತ್ತು ಮದ್ಯಪಾನಗಳನ್ನು ಸಹ ತೋರಿಸಕೂಡದು.

ಎಂದ ಮೇಲೆ ಇನ್ನು ಸಿನಿಮಾದಲ್ಲಿ ತೋರಿಸತಕ್ಕದ್ದೇನಿದೆ? ತಮ್ಮ ವ್ಯಾಪಾರವು ಹಾಳಾಯಿತೆಂದು ಸಿನಿಮಾ ಚಾಲಕರು ಆಗಲೇ ಗೊಣಗುಟ್ಟುತ್ತಿದ್ದಾರೆ.

೧೦೬ ವರ್ಷ ವಯಸ್ಸಿನ ಮುದುಕಿ

ಇಂಗ್ಲೆಂಡಿನ ಸೋಮರ್‌ಸೆಟ್ ಎಂಬಲ್ಲಿರುವ ಮಿಸೆಸ್ ಎಮ್ಮ ಕೋಟ್ ಎಂಬಾಕೆಗೆ ಈಗ 106 ವರ್ಷ ವಯಸ್ಸು ಆಕೆಯು ಒಬ್ಬ ರೈತನ ಮಗಳು ಬೇಸಿಗೆಯಲ್ಲಿ ಬೆಳಗಿನ ಮೂರು ಗಂಟೆಗೂ ಚಳಿಗಾಲದಲ್ಲಿ ಆರು ಗಂಟೆಗೂ ಏಳುವಳು ಮೈಬಗ್ಗಿ ಕೆಲಸ ಮಾಡುವುದು, ಹೊಟ್ಟೆ ತುಂಬ ಆಹಾರ ತಿನ್ನುವುದು, ಇವುಗಳೇ ದೀರ್ಘಾಯುಸ್ಸಿಗೆ ಮಾರ್ಗವೆಂದು ಹೇಳುವಳು ಪ್ರತಿದಿನವೂ ಒಂದು ಮೈಲಿ ನಡೆಯುತ್ತಾಳೆ

೨೬೧ ದಿವಸಗಳ ಉಪವಾಸ

ಜೈನ ಸನ್ಯಾಸಿಗಳಲ್ಲಿ ಉಂಟಾಗಿದ್ದ ಭೇದಭಾವಗಳನ್ನು ಹೋಗಲಾಡಿಸಲು ಮುನಿ ಶ್ರೀನಿಮ್ರಿ ಲಾಲ್‌ಜಿಯವರು ೨೬೧ ದಿವಸ ಉಪವಾಸಮಾಡಿದರು. ಇದು ಎಲ್ಲಾ ಉಪವಾಸಗಳಿಗಿಂತಲೂ ಬಹಳ ದೀರ್ಘವಾದುದೆಂದು ಹೇಳಲ್ಪಟ್ಟಿದೆ

|| ಸತ್ಯಮೇವೋದ್ಧರಾಮ್ಯಹಮ್ ||
ರಾಜಧಾನಿಯ ರಾಷ್ಟ್ರೀಯ ವಾರ ಪತ್ರಿಕೆ.
ವೃದ್ಧಪಿತಾಮಹ ಎಂ. ವೆಂಕಟಕೃಷ್ಣಯ್ಯನವರ ಜ್ಞಾಪಕಾರ್ಥವಾಗಿ ಪ್ರಕಟಿಸಲ್ಪಡುವುದು.
ಸಂಪಾದಕರು ಆಗರಂ ರಂಗಯ್ಯ, ಬಿ.ಎ

..ಪುಟ ೧] MYSORE : MONDAY 7—12—36 ಮೈಸೂರು : ಸೋಮವಾರ ೭—೧೨—೩೬ [ಸಂಚಿಕೆ ೪೧

ಭಾರತಕ್ಕೂ ವಿಷವಾಯು ಪ್ರಯೋಗವೆ?

ಲಾಠಿ ಪ್ರಯೋಗವು ಪ್ರಯೋಜನ ...ರಿಯುಲ್ಲ. ವಿಷವಾಯುವನ್ನೇ ಪ್ರಯೋಗಿ ...ಬೇಕು. ಕಲ್ಕತ್ತಾದಲ್ಲಿ ನಾನು ಹೊಂದಿ ...ನುಭವದಿಂದ ಇದನ್ನು ಹೇಳುತ್ತೇನೆ. ...ಂಪುಗಳನ್ನು ಚದುರಿಸಲು ಲಾಠಿ ಪ್ರ ...ಯೋಗ ಮಾಡುವುದಕ್ಕಿಂತಲೂ ಟೀರ್ ...ಸನ್ನು ಉಪಯೋಗಿಸುವುದು ಉತ್ತ... ದೇಶೀಯ ರಾಜರೂ ಸಹ ಹಾಗೆಯೇ ಮಾಡುವುದು ಒಳ್ಳೆಯದು—" ಎಂದು ...ವೃತ್ತ ಪೋಲೀಸ್ ಕಮೀಷನರಾದ ಕೆ ...ಜಾರ್ಲ್ಸ್ ಕ್ಲಾರ್ಕ್ ಎಂಬುವರು ಹೇಳಿರು ...ರು

...ಬಂತಖಂಡದ ಉಪ್ಪು ತಿಂದುದಕ್ಕೆ ಇ... ಪ್ರತಿಫಲ!

—

...ಜರು ಸಿನಿಮಾ ನಟರಾದರು

...ಂಬೂರಿನ ಯಶವಂತರಾವ್ ಹೋಳ ...ರು ಸಿನಿಮಾದಲ್ಲಿ ಪಾತ್ರವಹಿಸಿರುವರು ...ಳಿಪುಷ್ಟಿನ ಸಿನಿಮಾ ಕಂಪನಿಯವರು ...ವರನ್ನು ಪ್ರಾರ್ಥಿಸಲು ಅವರು ಮೊದ ...ಲ ಒಪ್ಪಲಿಲ್ಲ ಆದರೆ ಅವರ ಪಾತ್ರವು ...ನಪ್ಯಕವೆಂದು ಕೇಳಲು ಪಾತ್ರಧಾರಣೆ ...ಮಾಡಿದರು.

—

...ೀ ಗುಲಾಬಿ.

ಬಿಳೀ ಗುಲಾಬಿ, ಕೆಂಪು ಗುಲಾಬಿ, ಗು...ಲ್ ಗುಲಾಬಿ, ಹಳದಿ ಗುಲಾಬಿಗಳನ್ನು ...ಪ್ಪ ನೋಡಿದ್ದೇವೆ. ಕರೀ ಗುಲಾಬಿಯ... ಯಾರೂ ಇದುವರೆಗೆ ನೋಡಿಲ್ಲ. ...ಲಿಫೋರ್ನಿಯದ ಒಬ್ಬ ತೋಟಗಾರ ...ನಲವತ್ತು ವರ್ಷಗಳಿಂದ ಪ್ರಯತ್ನಿಸಿ ...ಗೆ ಕರೀ ಬಣ್ಣದ ಗುಲಾಬಿ ಹೂಗಳನ್ನು ...ಳೆಯುತ್ತಿದ್ದಾನೆ

—

...ರ್ಗಭಗಳಿಗೂ ದಸ್ತಗಿರಿ

...ಕಸ್ಟ್ರಿಯ ತೆರಿಗೆಗಳನ್ನು ಕೊಡಬೇ ...ದ ಕೆಲವು ಸಾಮಗ್ರಿಗಳನ್ನು ಹಾಲ್ಡಾ... ದೇಶಗಳ ಕೆಲವು ವರ್ತಕರು ಕತ್ತೆಗಳ ...ಲೆ ಹೇರಿ ಕಳುಹಿಸಿಬಿಡುತ್ತಿರುವರು ...ಕತ್ತೆಗಳು ಎಲ್ಲೆಲ್ಲಿಯೋ ಅಲೆದುಕೊಂ... ಕಡೆಗೆ ತಮ್ಮ ಮಾಲಿಕರ ಸ್ಥಳಕ್ಕೆ ...ದು ಸೇರುವುವು ಇದು ಪತ್ತೆಯಾಗಿ ...ಗ ಇಂತಹ ಕತ್ತೆಗಳನ್ನು ದಸ್ತಗಿರಿ ...ಸಲು ಏರ್ಪಾಡಾಗಿದೆ

ಕಂದಾಯಕ್ಕಾಗಿ ಸ್ತ್ರೀಯರ ದಸ್ತಗಿರಿ!

ಗಂಡನ ಅಥವ ಅಣ್ಣ ತಮ್ಮಂದಿರ ಕಂದಾಯದ ಬಾಕಿಗಾಗಿ ಹೆಂಗಸರನ್ನು ದಸ್ತಗಿರಿಮಾಡಿದ ಘೋರ ಕಥೆಯು ಕೆನ್ಯಾ ಪ್ರಾಂತ್ಯದ ವಾರ್ಷಿಕ ವರದಿಯಲ್ಲಿ ನಿರೂಪಿಸಲ್ಪಟ್ಟಿದೆ. ಅಲ್ಲಿನ ಜನರಿಗೆ ಕಂದಾಯದ ವಸೂಲಿ ಕಾಲದಲ್ಲಿ ವಿಪರೀತವಾದ ಹಿಂಸೆಗಳು ಕೊಡಲ್ಪಡುತ್ತಿದ್ದವು. ನ್ಯಾಯ ವಿರುದ್ಧವಾದ ದಸ್ತಗಿರಿಗಳಾಗುತ್ತಿದ್ದವು ಸ್ತ್ರೀಯರ ದಸ್ತಗಿರಿಯು ಒಂದು ವಿಪರೀತದ ಪ್ರಸಂಗವು.

—

ಫ್ರಾನ್ಸಿನ ಯುದ್ಧ ಸಿದ್ಧತೆ.

ಫ್ರಾನ್ಸ್ ದೇಶದಲ್ಲಿರುವ ಉಕ್ಕಿನ ಗೋಡೆಯನ್ನು ಒಂದಕ್ಕೆ ಮೂರಷ್ಟು ಹೆಚ್ಚಿಸುವದಾಗಿರುವರು ಯುದ್ಧದ ತಯಾರಿಗಾಗಿ 25 ಕೋಟಿ ಪೌಂಡುಗಳನ್ನು ಫ್ರೆಂಚ್ ಸರ್ಕಾರದವರು ಮುಂಜೂರು ಮಾಡಿರುವರು. ಮೇಲ್ಕಂಡ ಗೋಡೆಯನ್ನು ಇನ್ನೂರು ಮೈಲಿಗಳ ಉದ್ದಕ್ಕೆ ಹೆಚ್ಚಿಸುವರು. ಈಗ ಅದರ ಉದ್ದ 250 ಮೈಲಿ.

—

ಲಂಡನ್ನಿಗೆ ಅಂತರಿಕ್ಷದ ಗೋಡೆ

ರಾತ್ರಿ ಕಾಲದಲ್ಲಿ ಶತ್ರುಪಕ್ಷದವರು ಅಂತರಿಕ್ಷ ಮಾರ್ಗದಿಂದ ಬಂದು ಲಂಡನ್ ನಗರದ ಮೇಲೆ ಧಾಳಿನಡೆಸದಂತೆ ಅಂತರಿಕ್ಷದಲ್ಲಿ ತಂತಿಯಿಂದ ಬಿಗಿದ ಒಂದು ಗೋಡೆಯು ರಾತ್ರಿ ಕಾಲದಲ್ಲಿ ನಿರ್ಮಿಸಲ್ಪಡುವುದು. ನಗರದ ಸುತ್ತಲೂ ವಾಯುಮಂಡಲದಲ್ಲಿ ವಿಮಾನಗಳ ಮೂಲಕ ಈ ತಂತಿಗಳು ಬಿಗಿಯಲ್ಪಟ್ಟು ಶತ್ರು ವಿಮಾನಗಳು ಒಳಗೆ ಪ್ರವೇಶಿಸದಂತೆ ಮಾಡುತ್ತವೆ.

ಅಂತರಿಕ್ಷದಲ್ಲಿ ಕಟ್ಟಡಗಳನ್ನು ಕಟ್ಟುವುದೊಂದೇ ಬಾಕಿ.

—

ಅಳುವುದರಿಂದ ಆರೋಗ್ಯ!

ಅಳುವುದರಿಂದ ಆರೋಗ್ಯ ವುಂಟಾಗುವುದೆಂದು ವೈದ್ಯರ ಅಭಿಪ್ರಾಯ. ರೋಗದ ಅಣುಗಳನ್ನು ನಾಶಗೊಳಿಸುವ ಶಕ್ತಿಯು ಕಣ್ಣೀರಿಗೆ ಇರುವುದೆಂದು ಅವರು ಹೇಳುವರು. ಆದ್ದರಿಂದ ಇನ್ನುಮೇಲೆ ಅಳುವವರಿಗೆ ಉತ್ತೇಜನ ಕೊಡಬಹುದಲ್ಲವೆ?

ಸಾಯಲು ಅಧಿಕಾರ

ಸಾಯುವ ಅಧಿಕಾರವನ್ನು ಕೊಡುವ ಒಂದು ಕಾನೂನು ಪಾರ್ಲಿಮೆಂಟಿನಲ್ಲಿ ಚರ್ಚೆಗೆ ಬರಲಿರುವುದು ಅನಿವಾರ್ಯವಾದ ಬಾಧೆಯಿಂದ ನರಳುವವರು ರೋಗದಲ್ಲಿ ಹಾಡು ಪಡುವುದಕ್ಕಿಂತ ಸಾಯುವುದೇ ಲೇಸೆಂಬ ಅಭಿಪ್ರಾಯದಿಂದ ಈ ಮಸೂದೆಯು ಬಂದಿದೆ ಡಾಕ್ಟರುಗಳನ್ನು ರೋಗಿಯು ಬೇಡಿಕೊಳ್ಳಬೇಕು ಅನಂತರ ಅವರನ್ನು ಬಾಧೆಯಿಲ್ಲದಂತೆ ಅವರು ಸ್ವರ್ಗಕ್ಕೆ ಕಳುಹಿಸುವರು ಈ ಮಸೂದೆಯು ಏನಾಗುವುದೋ ನೋಡಬೇಕು. ಅಂತೂ ಆತ್ಮಹತ್ಯಕ್ಕೆ ಒಳ್ಳೇ ಅವಕಾಶ.

—

ಮೂಷಕ ಬಂಧನಾಧಿಕಾರಿ!

ವಾಂಡ್ಸ್‌ವರ್ತ್ ಎಂಬಲ್ಲಿ ಇಲಿಗಳ ಹಾವಳಿ ವಿಪರೀತವಾಗಿದೆ ಅವುಗಳನ್ನು ವಿನಾಶಮಾಡಲು ಆರೋಗ್ಯ ಇಲಾಖೆಯವರು ಸರ್ವ ಪ್ರಯತ್ನಗಳನ್ನೂ ಮಾಡಿದರು. ಸಾಧ್ಯವಾಗಲಿಲ್ಲ ಇಲಿಗಳನ್ನು ಹಿಡಿಯಲು ಒಬ್ಬ ಅಧಿಕಾರಿಯನ್ನು ಅವರು ನೇಮಿಸಿರುವರು ಅವರಿಗೆ ವರ್ಷಕ್ಕೆ 300 ಪೌಂಡು ಸಂಬಳ. ಅವರ ಸಹಾಯಾಧಿಕಾರಿಗಳಿಗೆ 150 ಪೌಂಡು

—

ಜರ್ಮನಿಯಲ್ಲಿ ಅಸ್ಪೃಶ್ಯತೆ

ಜರ್ಮನಿ ದೇಶದಲ್ಲಿ ಯೆಹೂದ್ಯರನ್ನು ಕಂಡರೆ ಆಗದು. ಅವರನ್ನು ಅಲ್ಲಿಂದ ಹೊರಡಿಸಿದರು. ಅಲ್ಲಿ ನಿಂತ ಯೆಹೂದ್ಯರಿಗೆ ಚಿತ್ರಹಿಂಸೆ ಕೊಟ್ಟರು. ಸುಪ್ರಸಿದ್ಧ ಗ್ರಂಥಕರ್ತರೂ ಸಂಶೋಧಕರೂ ಆದ ಅನೇಕ ಜನ ಮೇಧಾವಿಗಳಾದ ಯೆಹೂದ್ಯರು ಜರ್ಮನಿಯನ್ನು ಬಿಟ್ಟು ಹೋಗುತ್ತಿರುವರು. ಅಸ್ಪೃಶ್ಯತೆಯು ಪೌರ್ವಾತ್ಯರಂತೆಯೇ ಪಾಶ್ಚಿಮಾತ್ಯರಲ್ಲಿಯೂ ಇರುತ್ತದೆ

—

ಚೀಣಾ—ಜಪಾನರ ಯುದ್ಧ

ಚೀನಾದೇಶವು ಜಪಾನಿನೊಡನೆ ಯುದ್ಧಮಾಡುವ ವಿಚಾರವಾಗಿ ಅಲ್ಲಿನ ಜನರ ಅಭಿಪ್ರಾಯವನ್ನು ತೆಗೆದುಕೊಂಡರು. ಶೇ|| 80 ಜನರು ಯುದ್ಧಮಾಡಲೇಬೇಕೆಂದು ತಿಳಿಸಿದರು ಅರ್ಧಜನರು ಯುದ್ಧವಾಗದೆ ಇರುವುದಿಲ್ಲ ಎಂದರು ಆದರ ಯುದ್ಧವು ಸದ್ಯದಲ್ಲಿಯೇ ಸಂಭವಿಸುವುದೋ ಇನ್ನು ಬಹಳ ಕಾಲ ತಳ್ಳುವುದೋ ಹೇಳಲಾಗುವುದಿಲ್ಲ.

ತಿರುವಾಂಕೂರು ರಾಜರ ಹೆಸರು

ತಿರುವಾಂಕೂರು ರಾಜರು ತಮ್ಮ ಹೆಸರನ್ನು ಈ ರೀತಿ ಇಟ್ಟುಕೊಂಡಿರುವರು— ಶ್ರೀ ಪದ್ಮನಾಭದಾಸ ವಂಚಿಪಾಲ (ಸರ್) ಬಲರಾಮ ವರ್ಮ ಕುಲಶೇಖರ ಕಿರೀಟಪತಿ ಮನ್ನೆ ಸುಲ್ತಾನ್ ಮಹಾರಾಜ ರಾಜರಾಮರಾಜ ಬಹದ್ದೂರ್ ಶಂಷೇರ್‌ಜಂಗ್—ಇದರಲ್ಲಿ "ಬಲ" ಎಂಬ ಪದವು ಕೆಲವು ದಿನಗಳಿಂದ ಬಿಟ್ಟು ಹೋಗಿತ್ತೆಂದೂ ರಿಕಾರ್ಡುಗಳನ್ನು ನೋಡುವಲ್ಲಿ ಸಿಕ್ಕಿತೆಂದೂ ಆದುದರಿಂದ ಸೇರಿಸಿಕೊಂಡಿರುವರೆಂದೂ ತಿಳಿಯ ಬರುತ್ತದೆ.

—

ಚುಂಬನ ನಿರೋಧ.

ಚುಂಬನವು ಒಂದು ಹಾನಿಕರವಾದ ವಿದೇಶಿ ಪದ್ಧತಿಯೆಂದು ಜಪಾನಿನ ಸರ್ಕಾರದವರು ಭಾವಿಸುತ್ತಾರೆ ಆದ್ದರಿಂದ ಸಿನಿಮಾಗಳಲ್ಲಿ ತೋರಿಸುವ ಚಿತ್ರಗಳಲ್ಲಿ ಚುಂಬನವನ್ನು ತೋರಿಸಕೂಡದು. ಅದಲ್ಲದೆ ಆಲಿಂಗನ, ನರ್ತನ ಮತ್ತು ಮದ್ಯಪಾನಗಳನ್ನು ಸಹ ತೋರಿಸಕೂಡದು.

ಎಂದ ಮೇಲೆ ಇನ್ನು ಸಿನಿಮಾದಲ್ಲಿ ತೋರಿಸತಕ್ಕದ್ದೇನಿದೆ? ತಮ್ಮ ವ್ಯಾಪಾರವು ಹಾಳಾಯಿತೆಂದು ಸಿನಿಮಾ ಚಾಲಕರು ಆಗಲೇ ಗೊಣಗುಟ್ಟುತ್ತಿದ್ದಾರೆ.

—

೧೦೬ ವರ್ಷ ವಯಸ್ಸಿನ ಮುದುಕಿ

ಇಂಗ್ಲೆಂಡಿನ ಸೋಮರ್‌ಸೆಟ್ ಎಂಬಲ್ಲಿರುವ ಮಿಸೆಸ್ ಎಮ್ಮ ಕೋಟ್ ಎಂಬಾಕೆಗೆ ಈಗ 106 ವರ್ಷ ವಯಸ್ಸು ಆಕೆಯು ಒಬ್ಬ ರೈತನ ಮಗಳು ಬೇಸಿಗೆಯಲ್ಲಿ ಬೆಳಗಿನ ಝಾವ ಮೂರು ಗಂಟೆಗೂ ಚಳಿಗಾಲದಲ್ಲಿ ಆರು ಗಂಟೆಗೂ ಏಳುವಳು ಮೈಬಗ್ಗಿ ಕೆಲಸ ಮಾಡುವುದು, ಹೊಟ್ಟೆ ತುಂಬ ಆಹಾರ ತಿನ್ನುವುದು, ಇವುಗಳೇ ದೀರ್ಘಾಯುಸ್ಸಕ್ಕೆ ಮಾರ್ಗವೆಂದು ಹೇಳುವಳು ಪ್ರತಿದಿನವೂ ಒಂದು ಮೈಲಿ ನಡೆಯುತ್ತಾಳೆ

—

೨೩೧ ದಿವಸಗಳ ಉಪವಾಸ

ಜೈನ ಸನ್ಯಾಸಿಗಳಲ್ಲಿ ಉಂಟಾಗಿದ್ದ ಭೇದಭಾವಗಳನ್ನು ಹೋಗಲಾಡಿಸಲು ಮುನಿಶ್ರೀ ನುತ್ರಿಲಾಲ್‌ಜಿಯವರು ೨೩೧ ದಿವಸ ಉಪವಾಸಮಾಡಿದರು. ಇದು ಎಲ್ಲಾ ಉಪವಾಸಗಳಿಗಿಂತಲೂ ಬಹಳ ದೀರ್ಘವಾದುದೆಂದು ಹೇಳಲ್ಪಟ್ಟಿದೆ

ಟಿ. ಎಲ್. ಕಾಂತಂರವರು ಜೀವನಾಂಶ ಕೊಡಬೇಕಾಗಿಲ್ಲ

ಅಸಿಸ್ಟೆಂಟ್ ಕಮೀಷನರಾದ ಶ್ರೀ॥ ಟಿ. ಎಲ್. ಕಾಂತಂರವರ ಮೇಲೆ ಶ್ರೀಮತಿ ಸರೋಜಮ್ಮ ಎಂಬಾಕೆಯು ಮೊಕದ್ದಮೆ ಹೂಡಿ ತನಗೂ ತನ್ನಲ್ಲಿ ಹುಟ್ಟಿದ್ದ ಗೋಪೀನಾಥನೆಂಬ ಮಗುವಿಗೂ ಒಟ್ಟು ಮಾಹೆಯಾನಾ ಒಂದು ನೂರು ರೂಪಾಯಿನ ಜೀವನಾಂಶವನ್ನು ಕೊಡುವಂತೆ ಕೋಲಾರದ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ತೀರ್ಮಾನ ಹೊಂದಿದ್ದಳಷ್ಟೆ. ಮಿ॥ ಕಾಂತಂರವರು ಈ ವಿಷಯದಲ್ಲಿ ಹೈಕೋರ್ಟಿಗೆ ಅಪ್ಪೀಲು ಮಾಡಿದರು. ಮಿ॥ ಅಬ್ಬುಲ್‌ಗನಿಯವರು ವಿಚಾರಣೆ ನಡೆಸಿ ಮ್ಯಾಜಿಸ್ಟ್ರೇಟರ ತೀರ್ಮಾನವನ್ನು ವಜಾ ಮಾಡಿದರು. ಆದರೆ ಸರೋಜಮ್ಮನೂ ಗೋಪೀನಾಥನೂ ಸಿವಿಲ್ ಕೋರ್ಟಿನಲ್ಲಿ ಮಿ॥ ಕಾಂತಂರವರ ಮೇಲೆ ಮೊಕದ್ದಮೆ ಹೂಡಲು ಅವಕಾಶವಿದೆ.

ಕೆಳಗಿನ ಕೋರ್ಟಿನ ವಿಚಾರಣೆಯಲ್ಲಿ ಕಂಡುಬಂದ ಅಂಶಗಳು ಇವು —

1931 ನೇ ಏಪ್ರಿಲ್‌ನಲ್ಲಿ ಮಿ॥ ಕಾಂತಂರವರು ಸರೋಜಮ್ಮನನ್ನು ಮದುವೆ ಮಾಡಿದರು. ಅನಂತರ ಗೋಪೀನಾಥ್ ಎಂಬ ಮಗನು ಹುಟ್ಟಿದನು. ಮಗುವಿಗೆ ಈಗ ಎರಡು ವರ್ಷ ವಯಸ್ಸು. ಕೆಲವು ದಿನಗಳ ಮೇಲೆ ಕಾಂತಂರವರು ಸರೋಜಮ್ಮನನ್ನು ಬಿಟ್ಟುಬಿಟ್ಟು ಬೇರೆ ಒಬ್ಬ ತರುಣಿಯನ್ನು ಮದುವೆಯಾದರು. ಆದ್ದರಿಂದ ಮೊಕದ್ದಮೆ ಹೂಡಲ್ಪಟ್ಟಿತು. ತಾವು ಮದುವೆ ಮಾಡಿಕೊಳ್ಳಲೇ ಇಲ್ಲವೆಂದೂ, ಮಗುವಿಗೂ ತಮಗೂ ಏನೂ ಸಂಬಂಧವಿಲ್ಲವೆಂದೂ ಕಾಂತಂರವರು ಹೇಳಿದರು. ಮ್ಯಾಜಿಸ್ಟ್ರೇಟರು ನಡೆಸಿದ ವಿಚಾರಣೆಯಲ್ಲಿ ವಿವಾಹವಾಗಿದ್ದುದು ನಿಜವೆಂದೂ ಆ ಮಗುವು ಕಾಂತಂರವರದೇ ಎಂದೂ ತೀರ್ಮಾನವಾಯಿತು. ಮೇಲ್ಕಂಡ ರೀತಿಯಲ್ಲಿ ಸರೋಜಮ್ಮನಿಗೆ ಮಾಹೆಯಾನಾ 75 ರೂ ಎನ್ನೂ ಗೋಪೀನಾಥನಿಗೆ 25 ರೂ ಗಳನ್ನೂ ಜೀವನಕ್ಕಾಗಿ ಕೊಡಬೇಕೆಂದು ತೀರ್ಮಾನಿಸಿದ್ದರು.

ಗ್ರ್ಯಾಂಡ್ ಪಾರ್ಲಿಮೆಂಟ್

ಮೈಸೂರು ದಿವಾನರ ರಕ್ಷಣೆಯ 160 ನೇ ನಂಬರು ಮನೆಯಲ್ಲಿ ಸ್ಥಾಪಿತವಾಗಿರುವ ಗ್ರ್ಯಾಂಡ್ ಪಾರ್ಲಿಮೆಂಟಿನವರು ಬರುವ ಕ್ರಿಸ್‌ಮಿಸ್ ರಜದ ಕಾಲದಲ್ಲಿ ಮಿಡ್ಲ್ ಸ್ಕೂಲ್ ವಿದ್ಯಾರ್ಥಿಗಳ ಉಪಯೋಗಾರ್ಥವಾಗಿ ಒಂದು ಪರೀಕ್ಷಾ ಸ್ಪರ್ಧೆಯನ್ನು ಏರ್ಪಡಿಸಿರುವರು. ಇಲಾಖೆಯವರಿಂದ ಗೊತ್ತುಮಾಡಲ್ಪಟ್ಟ ಪಾಠಪ್ರವಚನಗಳಲ್ಲಿಯೇ ಪರೀಕ್ಷೆ ನಡೆಯುವುದು. ಮೊದಲನೆಯವರಿಗೆ ಬೆಳ್ಳಿ ಪದಕವೂ ಇತರ 13 ಜನರಿಗೆ ಬಹುಮಾನಗಳೂ ಕೊಡಲ್ಪಡುವುವು. ಉಮೇದುವಾರರು ಈ ತಿಂಗಳು 15 ನೇ ತಾ॥ ನೊಳಗೆ ಕಾರ್ಯದರ್ಶಿಗಳಿಗೆ ಬರೆದುಕೊಳ್ಳಬೇಕು.

ವಿಜಯನಗರ ಸ್ಮಾರಕೋತ್ಸವ

ವಿಜಯನಗರ ಸ್ಮಾರಕೋತ್ಸವದ ಮಂಡಲಿಯವರು ತಾ॥ 1-12-36 ನೇ ದಿನ ಶ್ರೀಯುತರುಗಳಾದ ಪಿ ಬಿ ಹಾಲುಭಾವಿ, ಜಿ ಎಸ್. ಕುಲಕರಣಿ, ಡಿ ಪಿ. ಕರ್ಮಾರ್ಕರ್ ತಿ ಬೆಳಗಾಪ್‌ಕರ್, ಬೇಲೂರು ಕೇಶವದಾಸರು, ಬಿ. ಶಿವಮೂರ್ತಿಶಾಸ್ತ್ರಿಗಳು, ಮತ್ತು ರಾಜಚರಿತವಿಶಾರದ, ಸಿ ಹಯವದನರಾವ್‌ರವರ ಸಂಗಡ, ಸರ್ ಮಿರ್ಜಾ ಎಂ ಇಸ್ಮೈಲ್‌ರವರನ್ನು ಭೇಟಿ ಮಾಡಿದರು. ಕರಮರ್‌ಕರ್‌ರವರು ವಿಜಯನಗರದ ವಿಷಯವಾಗಿಯೂ, ಅಲ್ಲಿ ನಡೆಯುವ ಕಾರ್ಯಕ್ರಮಗಳ ವಿಷಯವಾಗಿಯೂ ದಿವಾನರಿಗೆ ತಿಳಿಸಿದರು. ದಿವಾನರು ತಮ್ಮ ಸಂತೋಷವನ್ನು ತೋರ್ಪಡಿಸಿದರು.

ಸ್ಟೇಟ್ ರ್‍ಯಾಲಿ

ಮೈಸೂರು ಸಂಸ್ಥಾನದ ಸ್ಟೇಟ್ ರ್‍ಯಾಲಿಯು ದಾವಣಗೆರೆಯಲ್ಲಿ ತಾ॥ 17 12 36 ನೇ ದಿನ ನಡೆಯುವುದೆಂದು ತಿಳಿಸಿತ್ತಷ್ಟೆ. ಈಗ ಆ ಊರಿನ ಸುತ್ತಮುತ್ತಲಿನ ಹಳ್ಳಿಗಳಲ್ಲಿ ಕಾಲರ ರೋಗವು ಹರಡಿರುವುದರಿಂದ ರ್‍ಯಾಲಿಯು ಮುಂದಕ್ಕೆ ಹಾಕಲ್ಪಟ್ಟಿದೆ.

ಶ್ರೀರಾಮಕೃಷ್ಣ ಶತಮಾನೋತ್ಸವ

ಶ್ರೀ ರಾಮಕೃಷ್ಣ ಪರಮಹಂಸರ ಶತಮಾನೋತ್ಸವವನ್ನು ಎಲ್ಲಾ ಕಡೆಗಳಲ್ಲಿಯೂ ಅತ್ಯಂತ ಶ್ರದ್ಧಾ ಭಕ್ತಿಗಳಿಂದ ಆಚರಿಸುತ್ತಿರುವರು. ಬೆಂಗಳೂರು ಮೈಸೂರುಗಳಲ್ಲಿ ವಿಶೇಷ ವೈಭವದಿಂದ ನಡೆಸಲು ಏರ್ಪಾಡುಗಳಾಗುತ್ತಿವೆ. ಅನೇಕ ಮೊಹಲ್ಲಗಳಲ್ಲಿ ಉಪನ್ಯಾಸಗಳೂ, ಹರಿಕಥೆಗಳೂ ಭಜನೆಗಳೂ, ಸಂಗೀತಗಳೂ ನಡೆಯುವುವು. ಬಡಜನರಿಗೆ ಅನ್ನ ದಾನವೂ ಆಗುವುದು. ಇದಕ್ಕಾಗಿ ಉಪಸಮಿತಿಗಳು ಏರ್ಪಾಡಾಗಿವೆ.

ರಷ್ಯಾ ದೇಶದಲ್ಲಿ ಪ್ರತಿಯೊಂದು ಗ್ರಾಮದಲ್ಲಿಯೂ ರೇಡಿಯೋ ಇರಿಸಿ ಪ್ರಪಂಚದ ವಾರ್ತೆಗಳನ್ನು ಆ ಗ್ರಾಮಸ್ಥರಿಗೆ ತಿಳಿಸಬೇಕೆಂಬುದು ಉದ್ಯೋಗಸ್ಥರ ಆಶಯ. ಆದರೆ ರೇಡಿಯೋನಲ್ಲಿ ಕೇಳಿ, ಬಂದುದಕ್ಕೆ ಪ್ರಶ್ನೆಗಳನ್ನು ಹಾಕಿದರೆ ಉತ್ತರ ಬರುವುದಿಲ್ಲವಾಗಿ ಅದು ತಮಗೆ ಅನಾವಶ್ಯಕವೆಂದು ಗ್ರಾಮಸ್ಥರು ನಿಷ್ಕರ್ಷೆ ಮಾಡಿದ್ದಾರಂತೆ.

ಮತ್ತೊಂದು ಅಣೆಕಟ್ಟು.

ತುಮಕೂರು ಡಿಸ್ಟ್ರಿಕ್ಟಿನಲ್ಲಿ ಮತ್ತೊಂದು ಹೊಸ ಅಣೆಕಟ್ಟನ್ನು ಕಟ್ಟಿಸುವ ಏರ್ಪಾಡನ್ನು ಸರ್ಕಾರದವರು ಈಗತಾನೆ ಅನುಮೋದಿಸಿರುವರು. ಕುಣಿಗಲ್ ತಾಲ್ಲೂಕು ಮಾರ್ಕೋನಹಳ್ಳಿ ಸಮೀಪದಲ್ಲಿ ಜಲಾಶಯವನ್ನು ನಿರ್ಮಿಸಬೇಕೆಂದು ಪಬ್ಲಿಕ್ ವರ್ಕ್ ಇಲಾಖೆಯವರು ಸರ್ಕಾರಕ್ಕೆ ಸಲಹೆ ಕೊಟ್ಟಿದ್ದರು. ಇದಕ್ಕೆ 22 ಲಕ್ಷ ರೂ. ಖರ್ಚಾಗುವುದು. ಹತ್ತು ಸಾವಿರ ಎಕರೆ ತರೀ ವ್ಯವಸಾಯಕ್ಕೆ ಸಹಾಯವಾಗುವುದು.

ಎದೆ ಹಾಲು ಕುಡಿದ ಹಾವು

ತೇಜಪುರದ ಸಮೀಪದಲ್ಲಿಯ ಒಂದು ಗ್ರಾಮದ ಸ್ತ್ರೀಯು ತನ್ನ ಯಜಮಾನನು ಹೊಲದಲ್ಲಿ ಕಲಸಮಾಡುತ್ತಿದ್ದನಾದ್ದರಿಂದ ಅವನಿಗೆ ಅನ್ನವನ್ನು ತೆಗೆದುಕೊಂಡು ಹೋಗುತ್ತಿದ್ದಳು. ದಾರಿಯಲ್ಲಿ ಒಂದು ಹಾವು ಬಂದು ಅವಳ ಕಾಲುಗಳಿಗೆ ಸುತ್ತಿಕೊಂಡಿತು. ಇದನ್ನು ನೋಡಿ ಅವಳು ಕೂಗಾಡತೊಡಗಿದಳು. ಅಷ್ಟರಲ್ಲಿ ಹಾವು ಮೇಲಕ್ಕೆ ಹಾರಿ ಅವಳ ರವಿಕೆಯೊಳಗೆ ತಲೆ ತೂರಿಸಿ ಅವಳ ಎದೆ ಹಾಲನ್ನು ಕುಡಿಯಿತು. ಆ ಸ್ತ್ರೀಯು ಮೂರ್ಛೆ ಬಿದ್ದಳು. ಅವಳು ಮೂರ್ಛೆಯಿಂದ ಏಳುವ ವೇಳೆಗೆ ಸೀರೆ ಎಲ್ಲವೂ ಹಾಲಿನಿಂದ ನೆನೆದು ಹೋಗಿತ್ತು. ಹೀಗಿದ್ದ ಹೆಂಡತಿಯನ್ನು ನೋಡಿ ಗಂಡನು ಮನೆಗೆ ಕರೆದುಕೊಂಡು ಹೋದನು.

ಬ್ರಿಟಿಷ್ ಪೋಸ್ಟು ಆಫೀಸುಗಳಲ್ಲಿ ವರುಷ ಒಂದಕ್ಕೆ 300,00,00,000 ಸ್ಟಾಂಪುಗಳು ಮಾರಲ್ಪಡುತ್ತಲಿವೆ.

ಇಂಡಿಯಾದೇಶದ ಹಾಗೆ ಆಸ್ಟ್ರಿಯಾ ದೇಶದಲ್ಲೂ ತಿರುಕರು ಹೆಚ್ಚಾಗಿದ್ದಾರೆ. ಕಳೆದ ವರುಷ ಸೋಮಾರಿಗಳಾದ ತಿರುಕರಲ್ಲಿ 10,000 ಜನರು ದಸ್ತಗಿರಿಮಾಡಲ್ಪಟ್ಟರು. ಇವರಲ್ಲಿ 8 ಸಾವಿರಕ್ಕೆ ಯಾಚಕವೇ ಜೀವನವೆಂದು ತಿಳಿದುಬರುತ್ತೆ.

ಈಗಿನ ಟಾಕೀಗಳಲ್ಲಿ ಮೃಗಗಳಿಗೆ ಕೂಡಾ ಸಂಬಳ ಕೊಡುತ್ತಲಿದ್ದಾರೆ. ಹಾಲಿವುಡ್‌ನಲ್ಲಿ ಖಡ್ಗಮೃಗಗಳು ಮತ್ತು ಸಾಮ್ರಾಜ್ಯ(?) ಮೃಗಗಳು ದಿನಕ್ಕೆ 300 ರೂಪಾಯಿಯ ಹಾಗೆ ಸಂಬಳ ಕೊಡಲ್ಪಡುತ್ತಲಿವೆ. ಆದರೆ ಒಳ್ಳೇ ಪ್ರತಿಭಾಶಾಲಿಗಳಿಗೇ ದೊರತು ಎಲ್ಲರಿಗೂ ಇಲ್ಲ.

ಸಾಮುದ್ರಿಕಾ ಶಾಸ್ತ್ರ ಪಂಡಿತರು

ಮಿ॥ ರಾ॥ ಸ್ವಾಮಿಯವರು ಬಂದಿರುವರು

ಹಸ್ತ ಸಾಮುದ್ರಿಕವನ್ನು ಬಹು ಕರಾರುವಾಕ್ಕಿ ಹೇಳುವರು ನಿಮಗೆ ಸಂಭವಿಸಬಹುದಾದ ಅಪಾಯಗಳನ್ನೂ ತೊಂದರೆಗಳನ್ನೂ ತಿಳಿಸುವರು.

ಸುಸಮಯವನ್ನು ಕಳೆದುಕೊಳ್ಳಬೇಡಿ

ಜೀವಮಾನದ ಭವಿಷ್ಯದ ಸಾರಾಂಶವನ್ನು ಹೇಳುವುದಕ್ಕೆ .. 3 ರೂ.

ಜೀವಮಾನದ ಸಂಪೂರ್ಣ ಭವಿಷ್ಯವನ್ನು ಹೇಳುವುದಕ್ಕೆ . 6 ರೂ

ವಿಳಾಸ —ರಂಗವಿಲಾಸ,
ಮೆಜೆಸ್ಟಿಕ್ ಥಿಯೇಟರ್ ಹತ್ತಿರ,
ಬೆಂಗಳೂರು ಸಿಟಿ.

ವಿನೋದಲಹರಿ.

ದಳ್ಳಾಳಿ—ಈ ಎತ್ತು ಬಹಳ ಚೆನ್ನಾಗಿದೆ. ಒಂದೇ ಪೋಟಕ್ಕೆ ಹತ್ತು ಮೈಲಿ ಓಡಬಲ್ಲುದು.

ರೈತ—ಹಾಗಾದರೆ ಬೇಡ. ನಮ್ಮೂರು ಇಲ್ಲಿಗೆ ಆರೇ ಮೈಲಿ. ಹತ್ತು ಮೈಲಿ ಅಲ್ಲ

• • •

ಗೌಡ—(ತನ್ನ ಸ್ನೇಹಿತನಿಗೆ) ನಮ್ಮ ಹುಡುಗ ಇಂಗ್ಲೀಷನ್ನು ಕಲಿತಮೇಲೆ ಕುರಿಗಳನ್ನು ಹೊಸ ವಿಧಾನದಿಂದ ಎಣಿಸುತ್ತಾನೆ

ಸ್ನೇಹಿತ—ಅದು ಹೇಗೆ?

ಗೌಡ—ಕುರಿಗಳ ಕಾಲುಗಳನ್ನೆಲ್ಲಾ ಎಣಿಸಿ ಅದನ್ನು ನಾಲ್ಕರಿಂದ ಭಾಗಿಸುತ್ತಾನೆ

• • •

ಟಿಕೆಟ್ ಕಲೆಕ್ಟರು—ಶೆಟ್ರೇ ನಿಮಗೇನೋ ಟಿಕೆಟಿದೆ. ನಿಮ್ಮ ಹುಡುಗನಿಗೆ ಟಿಕೇಟಿಲ್ಲ. ಟಿಕೇಟಿಲ್ಲದೆ ರೈಲಿನಲ್ಲಿ ಕುಳಿತುಕೊಳ್ಳುವುದು ರೂಲ್ಸಿಗೆ ವಿರೋಧ!

ಶೆಟ್ರು—ಅಟ್ಲೈತೆ ನಿಂಚುಕೋರ ಚಿನ್ನೋಡ (ಹಾಗಾದರೆ ನಿಂತ್ಕೊಳ್ಳೋ ಹುಡುಗ)

• • •

ಕಿವುಡ. ನೆಂಟ—ರೋಗಿಯನ್ನು ನೋಡಿ ತು. ತಮ್ಮ ದೇಹಸ್ಥಿತಿ ಈಗ ಹೇಗಿದೆ?

ರೋಗಿ—ಅಯ್ಯೋ! ನೆನ್ನೆ ರಾತ್ರಿಯ ಜ್ವರವು ನನ್ನನ್ನು ತುಂಬಾ ಬಾಧಿಸುತ್ತಿದೆ

ನೆಂಟ—ತಮ್ಮನ್ನು ದೇವರು ಯಾವಾಗಲೂ ಇದೇ ರೀತಿಯಲ್ಲಿ ಇಟ್ಟಿರಲಿ

• • •

ಭಿಕ್ಷುಕ—ಭಿಕ್ಷ ಹಾಕಿ ಸ್ವಾಮಿ, ಇಲ್ಲದಿದ್ದರೆ ನೆನ್ನೆ ಮಾಡಿದಹಾಗೆ ಮಾಡಬೇಕಾಗುತ್ತೆ.

ಮನೆಯವನು—(ಗಾಬರಿಯಿಂದ) ಏನೆಂದರೆ ನಿನ್ನೆ ಏನುಮಾಡಿದೆಯೋ!

ಭಿ—ಉಪವಾಸಮಾಡಿದೆ

• • •

ನ್ಯಾಯಾಧೀಶ —ಎಲೋ ಖೈದಿ, ನಾನು ನಿನ್ನನ್ನು ಖುಲಾಸೆ ಮಾಡಿದ್ದರೂ ನಿನ್ನ ಬಟ್ಟೆಗಳನ್ನೆಲ್ಲಾ ಏಕೆ ಇಲ್ಲಿಯೆ ಬಿಟ್ಟು ಹೋಗುವೆ?

ಖೈದಿ.— ಇನ್ನೇನೂ ಇಲ್ಲ. ನಾನು ಪುನಃ ಇಲ್ಲಿಗೇ ಬರಬೇಕಾಗುತ್ತೆ ಅಂತ ಬಟ್ಟೆಗಳನ್ನು ಬಿಟ್ಟಿದ್ದೇನೆ.

• • •

ಪ್ರಶ್ನೆ —ಜೀವದಮೇಲೆ ಬೇಜಾರಾದರೆ ಏನುಮಾಡಬೇಕು?

ಉ —ಜೀವವಿಮೆ ಮಾಡಬೇಕು

ಪ್ರ.—ವಿಮೆಮಾಡಿದರೆ ಜೀವ ಹೋಗುತ್ತದೆಯೆ?

ಉ —ವಾರಸುದಾರರಾದರೂ ಜೀವ ಹೋಗುವಂತೆ ಮಾಡುತ್ತಾರೆ

• • •

ಗಿರಾಕಿಯಿಲ್ಲದ ಡಾಕ್ಟರು —ಕ್ರಿಮಿಗಳನ್ನು ಕೊಲ್ಲುವುದು ಬಹುಕಷ್ಟವಾಗಿದೆ

ನಿರುದ್ಯೋಗಿ ಸ್ನೇಹಿತ —ಬಂದ ರೋಗಿಗಳನ್ನೆಲ್ಲಾ ಕೊಲ್ಲುತ್ತ ಹೋದರೆ ಏನಾಗುವುದು?

ಓಟರುಗಳಲ್ಲಿ ವಿಜ್ಞಾಪನೆ.

ಇದುವರಿವಿಗೂ ಮೂರು ವರ್ಷ ಕಳೆದು ಹೋಯಿತು ನಾಲ್ಕನೆ ವರ್ಷವು ಆರಂಭವಾಯಿತು. ಈಗಾಗಲೇ ಉಮೇದುವಾರರು ತಮ್ಮ ತಮ್ಮ ಮೊಹಲ್ಲಾಗಳಲ್ಲಿ ಮನೆ ಮನೆಗಳಿಗೆ ಹೋಗಿ ' ಓಟು ಕೊಡಿರಿ, ತಮ್ಮ ಸೇವೆಯನ್ನು ಮಾಡಬೇಕೆಂದಿದ್ದೇನೆ" ಎಂಬ ಪದಗಳವು ಸಾಗುತ್ತಾ ಇವೆ. ಪ್ರತಿವರ್ಷವೂ ಚುನಾಯಿಸಲ್ಪಟ್ಟವರು ಹೇಗೋ ಹಾಗೆ ಚುನಾಯಿತರಾಗುವರು ಇಲ್ಲಿವೇ ಇದ್ದವರು ಇಲ್ಲವೇ ಇಲ್ಲ ಅವರ ಅವರ ಸಂಕಟವೂ ಬಿನ್ನಾಟವೂ ಹೇಳತೀರದು

ನೊನ್ನೆ ತಾನೆ ನಡೆದ ಪೌರಸಭೆಯ ಮೀಟಿಂಗಿನಲ್ಲಿ ಹೆಲ್ತ್ ಆಫೀಸರವರು ಪುರವಾಸಿಗಳಿಗೆ ಕೊಡುತ್ತಿರುವ ತಿರುಕುಳ ... ರಿಪೋರ್ಟು ಮರಿಯಪ್ಪನವರು ಓದಿಸಿದರು ಸದಸ್ಯರೆಲ್ಲರೂ ದಾಕ್ಷಿಣ್ಯಕ್ಕೆ ಒಳಗಾಗಿ ಹೆಲ್ತ್ ಆಫೀಸರು ಮಾಡುವುದೇ ಸರಿ ಎಂದು ಅನುಮೋದಿಸಿದರು ಶ್ರೀ ಮರಿಯಪ್ಪನವರ ಸಲಹೆಕಡೆ ಯಾವ ಸದಸ್ಯರೂ ಗಮನಹಿಸಲಿಲ್ಲ ಅಂಥ ಸದಸ್ಯರು ಪ್ರಜೆಗಳನ್ನು ಉದ್ಧಾರಮಾಡುವರೆ? ಇವರಿಗೆ ಓಟು ಕೊಡುವುದಕ್ಕಿಂತ ... ಮನೆಯಲ್ಲಿ ಕೂತಿರುವುದು ಲೇಸಲ್ಲವೆ? ಇವರಿಗೆ ಓಟು ಕೊಡುವುದು ಎಷ್ಟು ಚೆನ್ನಾಗಿದೆ ನೀವೇ ತಿಳಿಯಿರಿ. ಇವರಿಗೆ ಓಟು ಕೊಟ್ಟರೆ ಹಾಗೆ ಹಾಳೆರಡು ... ಗುವುದು ಪುರಜನರ ಹಿತವನ್ನು ದುರುಪಯೋಗಮಾಡಿದರು ಎಂಬ ಅಪವಾದವೂ ಈಗಲೇ ಬಂದಿದೆ

ಮೆಂಬರುಗಳು ಪುರಜನರಿಗೆ ಆಸೆ ಹುಟ್ಟಿಸಿ ನಿಮಗೆ ಬೇಕಾದ್ದು ಮಾಡಿ ಕೊಡುತ್ತೇವೆಂದು ಹೇಳಿ ಭಿಕ್ಷದ ಜೋಳಿಗೆಯನ್ನು ಒಡಿದು ಬೇಡುತ್ತಿರುತ್ತಾರೆ ಹೀಗೆ ... ಮಾಡಿದರೂ ಕೂಡ ಅವರಲ್ಲಿ ಅನೇಕರು ಅನುತ್ತೀರ್ಣರಾಗುವರು. ಇಷ್ಟವೇ ಕೂತ ಸದಸ್ಯರಲ್ಲರೂ ಅಧಿಕಾರಿಗಳ ದಯೇ ಭಾಗವಹಿಸುವುದು ತುಂಬಾ ... ಯವಾದ ಸಂಗತಿಯಲ್ಲವೇ? ... ಪ್ರಜೆಗಳಿಗೆ ಅನೇಕ ತೊಂದರೆ ಒಂದಿಗೆ ಸದಸ್ಯರು ಆ ಕಡೆಗೆ ಗಮನಕೊಟ್ಟರೇ? ಹಾಗೆ ಕೊಡದಿರಲು ಕಾರಣವೇನು?

ನಗರದಲ್ಲಿ ಪೌರಸಭೆಯವರು ಪ್ಲೇಗಿನ ... ಕ್ಕನ್ನಿಗೋಸ್ಕರ ಪುರನಿವಾಸಿಗಳಿಗೆ ದು ... ಅಭಾವದಿಂದ ಶಕ್ಕಸ್ಸು ಬೇಡದಿದ್ದರೂ ಕೂಡ ಬಲವಂತ ಮಾಡುತ್ತಿರುವರು. ... ಪ್ರಜೆಗಳು ಜಗ್ಗದೇ ಹೋದರೆ ಸ ... ಪ್ರಜೆಗಳಮೇಲೆ ಪೌರಸಭೆಯವರು ... ಲ್ಯಾನೆಗಳನ್ನು ಹಾಕಿಸಿವರಲ್ಲಾ ಆಗ ಸದಸ್ಯರುಗಳು ಎಲ್ಲಿ ಹೋಗಿದ್ದರು? ಕ ... ಬಿಟ್ಟು ನೋಡಿದರೆ ಓಟು ಸಿಕ್ಕುವತನಕ ಬಡವರ ಸೇವೆಯಲ್ಲಿಯೇ ನಿರತರಾಗುವಾಗಿ ಹೇಳುತ್ತಿದ್ದು ಓಟು ಸಿಕ್ಕಿದನಂತರ ಸದಸ್ಯರಿಗೂ ಬಡವರಿಗೂ ಸಂಬಂಧವೇ ... ನಂತಾಗುತ್ತದೆ

ಮುನಿಸಿಪಾಲಿಟಿಯವರು ಪ್ರಜೆಗಳಿಗೆ ... ದುವ ಕಷ್ಟವನ್ನು ತಪ್ಪಿಸುವದೇ ಸದ ... ಕರ್ತವ್ಯ. ನೀವು ಓಟು ಹಾಕತಕ್ಕ

ಜವಾಹರಲಾಲರ ಆತ್ಮಕಥೆ.

ಬೆಂಗಳೂರು " ನವಜೀವನ" ಪತ್ರಿಕಾ ಸಂಪಾದಕರಾದ ಶ್ರೀ|| ಸಿ. ಅಶ್ವತ್ಥನಾರಾಯಣರಾಯರು ಪ್ರಕಟಿಸಿರುವ ಪಂಡಿತ ಜವಹರಲಾಲ ನೆಹರೂರವರ ಆತ್ಮಕಥೆಯ ಕನ್ನಡ ಅನುವಾದದ ಮೊದಲನೇ ಭಾಗವನ್ನು ನಾವು ಕೃತಜ್ಞತೆಯಿಂದ ಸ್ವೀಕರಿಸಿದ್ದೇವೆ ರಾಯರು ಕೈಗೊಂಡಿರುವ ಕಾರ್ಯವು ಅತ್ಯಂತ ಪ್ರಶಂಸನೀಯವು. ಇತರ ಅನೇಕ ಭಾಷೆಯಲ್ಲಿ ಹತ್ತಾರು ಸಾರಿ ಮುದ್ರಣವಾದರೂ ಇನ್ನೂ ಕನ್ನಡಕ್ಕೆ ತರ್ಜುಮೆಯಾಗದೆ ಇದ್ದ ಈ ಗ್ರಂಥವನ್ನು ರಾಯರು ಪ್ರಕಟಿಸಿರುವುದು ಸ್ವಾಗತಾರ್ಹವೇ ಸರಿ. ಅಲ್ಲದೆ ಕಾಲಕ್ಕೆ ಸರಿಯಾಗಿ ಪ್ರಥಮ ಸಂಪುಟವನ್ನು ಹೊರಡಿಸಿರುವುದು ಮತ್ತೂ ಶ್ಲಾಘ್ಯವಾಗಿದೆ

ಈ ಗ್ರಂಥದಲ್ಲಿ 22 ಅಧ್ಯಾಯಗಳಿವೆ ಉಳಿದ ಅಧ್ಯಾಯಗಳು ಶೀಘ್ರದಲ್ಲಿಯೇ ಪ್ರಕಟಿಸಲ್ಪಡುವುವು "ನವಜೀವನ" ಕನ್ನಡ ಗುಂಪಿನವರಿಂದ ಭಾಷಾಂತರಿಸಲ್ಪಟ್ಟಿದೆ ಮೂಲಗ್ರಂಥದ ಆಶಯಗಳೂ ರಸವೂ ಸ್ವಾರಸ್ಯವೂ ಕೆಡದಂತೆ ಕನ್ನಡಿಸಲ್ಪಟ್ಟಿವೆ ಈ ಪುಸ್ತಕದಲ್ಲಿ ಪಂಡಿತ ಮೋತೀಲಾಲ್ ನೆಹರು, ಶ್ರೀಮತಿ ಕಮಲಾ ನೆಹರು ಮತ್ತು ಪಂ|| ಜವಾಹಿರಲಾಲರ ಸುಂದರವಾದ ಚಿತ್ರಗಳು ಕೊಡಲ್ಪಟ್ಟಿವೆ. ಈ ಗ್ರಂಥವನ್ನು ಕನ್ನಡಿಗರೆಲ್ಲರೂ ಓದಿ ಅದರ ಪ್ರಯೋಜನ ಹೊಂದಲೆಂದು ಕೋರುತ್ತೇವೆ

X (ಇಂಟು ಮಾರ್ಕು) ಅಥವಾ ಇನ್ನು ಯಾವಾಗಲೂ ಮಾರ್ಕು, ಅದು ಕೇವಲ ಮನಿಯ ಗುರ್ತೆಂದು ಭಾವಿಸಬೇಡಿರಿ. ಈ ಗುರ್ತಿನಿಂದ ನಿಮ್ಮ ಸರ್ವ ಹಕ್ಕನ್ನೂ ಮಾನವನ್ನೂ ಮತ್ತೊಬ್ಬರಿಗೆ ಮಾರಿಕೊಂಡಂತಾಗುತ್ತದೆ ಕೆಲಸಕ್ಕೆಬಾರದ ಏನೂ ತಿಳಿಯದ ಮೂಢ ಪುರುಷನ ಹೆಸರಿನ ಎದುರಿಗೆ ನೀವು ಗುರ್ತನ್ನು ಹಾಕಿದ್ದೇ ಆದರೆ ಕೆಂಪಗೆ ಕಾದ ಕಬ್ಬಿಣದ ಸರಳಿನಿಂದ ನಿಮ್ಮ ಹಣೆಯಮೇಲೆ (X) ಇಂಥ ಗುರ್ತು ಹಾಕಿದಂತೆಯೇ ಸರಿ. ಈ ಗುರ್ತು ನಿಮಗೆ ಸಾಯುವತನಕ ನೋವನ್ನೇ ಕೊಡುತ್ತಿರುತ್ತದೆ. ಅದಲ್ಲದೆ ಅದೇ ಗುರ್ತನ್ನು ಕ್ರಮವಹಿಸಿ ಒಡವರಿಗಾಗಿ ದುಡಿಯುವ ಯೋಗ್ಯ ಪುರುಷನ ಹೆಸರಿನ ಎದುರಿಗೆ ಹಾಕಿದಲ್ಲಿ ನಿಮ್ಮ ಕೊರಳಿಗೆ ಬಂಗಾರದಿಂದಮಾಡಿದ ಪದಕವು ಬಹುಮಾನವಾಗಿ ಸಿಕ್ಕಿತೆಂದು ತಿಳಿಯಿರಿ. ಸದಸ್ಯರುಗಳು ಪುರ ನಿವಾಸಿಗಳಿಗೆ ಕಾಲಕ್ಕನುಸಾರವಾಗಿ ಹೆಚ್ಚಿನ ಸೌಕರ್ಯಗಳನ್ನು ಉಂಟು ಮಾಡಿಕೊಡುವಂತೆ ಮೇಲಿನ ಅಧಿಕಾರಿ ವರ್ಗದವರಿಗೆ ಸಲಹೆಕೊಟ್ಟು ಬಡವರಿಗೆ ನಿತ್ಯಜೀವನದ ಆವಶ್ಯಕತೆಯನ್ನು ಅಧಿಕಾರಿಗಳ ಗಮನಕ್ಕೆ ತಂದು ಸೌಕರ್ಯಗಳನ್ನು ಕಲ್ಪಿಸಿಕೊಡುವ, ಮತ್ತು ಅನುಭವವುಳ್ಳ ಬದ್ಧಿವಂತರಾದ ಮಹನೀಯರುಗಳಿಗೆ ತಮ್ಮ ಓಟನ್ನು ಕೊಟ್ಟು ತಮ್ಮ ಹಕ್ಕನ್ನೂ ಮತ್ತು ಓಟಿನ ಬೆಲೆಯನ್ನೂ ಉಪಯೋಗಿಸಿ ಕೊಳ್ಳುವಿರೆಂದು ನಂಬಿದ್ದೇನೆ.

ಟಿ ಎಸ್. ಸುಬ್ಬಣ್ಣ.

" ಪೋಲೀಸರಿಂದ ಚಿತ್ರ ಹಿಂಸೆಯೆ ? "

ಮೈಸೂರು ಮುನ್ಸಿಫ್ ಕೋರ್ಟ್ ಪ್ಲೀಡರ್ ಆದ ನಾಗರಾಜಾಚಾರ್ಯರೆಂಬುವರ ಮೇಲೆ ಕಳ್ಳತನದ ಆಪಾದನೆಯಾಗಿದ್ದಾಗ ಅವರನ್ನು ಪೋಲೀಸರು ಬಂಧನದಲ್ಲಿರಿಸಿ ಅವರಿಂದ 'ನಿಜಾಂಶ"ವನ್ನು ಹೊರಡಿಸಲು ಅವರಿಗೆ ಚಿತ್ರ ವಿಚಿತ್ರ ಹಿಂಸೆಗಳನ್ನು ಕೊಟ್ಟರೆಂಬ ಅಪಾದನೆ ಮೇಲೆ ಅವಿಮಾಲಬರ್ ಮತ್ತು ನೀಲಕಂಠಾರಾಧ್ಯ ಎಂಬ ಇಬ್ಬರು ಸಬ್‌ಇನ್ಸ್‌ಪೆಕ್ಟರುಗಳು ಮತ್ತು ಆರುಜನ ಕಾನ್ಸ್‌ಟೇಬಲ್‌ಗಳ ಮೇಲೆ ಮೈಸೂರು ಸಿಟಿ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಮೊಕದ್ದಮೆ ನಡೆಯುತ್ತಿದೆ. ನೂರಾರು ಜನರು ಕುತೂಹಲದಿಂದ ಕೋರ್ಟಿನ ಬಳಿ ಸೇರುತ್ತಿರುವರು. ಫಿರ್ಯಾದಿಯು ತಮ್ಮ ಹೇಳಿಕೆಯಲ್ಲಿ ಪೋಲೀಸರು ತಮಗೆ ಕೊಟ್ಟರೆಂದು ಹೇಳುವ ಚಿತ್ರ ವಿಚಿತ್ರ ಹಿಂಸೆಗಳನ್ನು ವರ್ಣಿಸಿದರು ತಮಗೆ ಉಂಟಾಗಿದ್ದ ಗಾಯಗಳಿಗಾಗಿ ಡಾಕ್ಟರ್ ಬಳಿ ಸರ್ಟಿಫಿಕೇಟ್ ತೆಗೆದುಕೊಂಡಿರುವರು ಮೊಕದ್ದಮೆ ನಡೆಯುತ್ತಿದೆ

ಶ್ರೀ ಕೃಷ್ಣ ರಥ ಬಂಧ.

ಮೈಸೂರು ಒಂಟಿಕೊಪ್ಪಲಿನಲ್ಲಿರುವ ಕನ್ನಡ ನಿಘಂಟು ಮತ್ತು ಇತರ ಗ್ರಂಥಗಳ ಲೇಖಕರಾದ ಪಂಡಿತ ಜೆ ರಘುನಾಥಾಚಾರ್ಯರು ರಚಿಸಿರುವ ಶ್ರೀಕೃಷ್ಣ ರಥ ಬಂಧದ ಒಂದು ಪ್ರತಿಯನ್ನೂ ಲಾರ್ಡ್ ವಿಲ್ಲಿಂಗ್ಡನ್ನರಿಗೆ ಬರೆದು ಒಪ್ಪಿಸಿದ ಇಂಗ್ಲೀಷು ಪದ್ಯ ಮಾಲಿಕೆಯ ಒಂದು ಪ್ರತಿಯನ್ನೂ ನಾವು ಸ್ವೀಕರಿಸಿದ್ದೇವೆ ಪಂಡಿತರು ಸಂಸ್ಕೃತ ಮತ್ತು ಇಂಗ್ಲೀಷು ಭಾಷೆಗಳಲ್ಲಿ ಉತ್ತಮ ಪಾಂಡಿತ್ಯವನ್ನು ಹೊಂದಿರುವರು ಇವರ ಪ್ರಕಟಣೆಗಳು ಸರ್ವರಿಗೂ ಗ್ರಾಹ್ಯವಾಗಿವೆ.

ತುಂಗಾಭದ್ರಾ ನೀರಿನ ಹಂಚಿಕೆ

ತುಂಗಭದ್ರಾ ನದಿಯ ಮೇಲೆ ಹೊಸ ಹೂಡು ಎಸೆಗಟ್ಟನ್ನು ಕಟ್ಟಿ ಮೈಸೂರು ಮದರಾಸ್ ಮತ್ತು ಹೈದರಾಬಾದ್ ಪ್ರಾಂತ್ಯಗಳಿಗೆ ಹಂಚುವ ವಿಷಯದಲ್ಲಿ ಕಳೆದ ವಾರ ಮದರಾಸಿನಲ್ಲಿ ಒಂದು ಸಮ್ಮೇಳನ ಜರುಗಿತು ದಿವಾನ್ ವಿ ಚಾರ್ ಇದ್ದರೂ, ಪ್ರಥಮ ಸಚಿವರೂ ದಯಮಾಡಿಸಿದ್ದರು ಚರ್ಚೆಗಳು ಫಲಕಾರಿಯಾಗಲಿಲ್ಲ.



ಟಿ. ಸಿ. ನಟರಾಜ್ ಔಷಧಾಲಯ,

ಸಯ್ಯಾಜಿರಾವ್ ರೋಡು, ಮೈಸೂರು

ಇವರಲ್ಲಿ ನೇತ್ರಪರೀಕ್ಷೆಯು ಉಚಿತವಾಗಿ ಮಾಡಲ್ಪಡುತ್ತದೆ.

ಅತ್ಯಗತ್ಯವಾಗಿ ಬೇಕಾದ ಎಲ್ಲಾ ಇಂಜಕ್ಷನ್ ಔಷಧಿಗಳೂ ಸದಾ ಕಾಲದಲ್ಲಿಯೂ ದೊರಕುವುವಲ್ಲದೆ ಸಮಸ್ತ ವ್ಯಾಧಿಗಳಿಗೂ ಚಿಕಿತ್ಸೆಯು ಬಹು ಸುಲಭ ಛಾರ್ಜಿನಿಂದ ಮಾಡಲ್ಪಡುತ್ತದೆ

ಕುಂದೂರವರ ಆಯುರ್ವೇದೀಯ ಸಿದ್ಧೌಷಧಗಳೆಲ್ಲವೂ ಸದಾ ದೊರಕುತ್ತವೆ.

ಶ್ರೀ ರಂಗನಾಥ ಟೈಪ್ ಫೌಂಡ್ರಿ

ಚಿಕ್ಕಪೇಟೆ, ಬೆಂಗಳೂರು ಸಿಟಿ

ಸುಂದರವಾದ ಅಕ್ಷರಗಳು, ಮುದ್ದುಮುದ್ದಾದ ಬಾರ್ಡರುಗಳು ಬಗೆಬಗೆಯ ಆಕಾರ

ನಮಗೆ ಈ ಕೆಲಸದಲ್ಲಿ ೩೦ ವರ್ಷಗಳ ಕಾಲದ ಅನುಭವವಿದೆ ಆಧುನಿಕ ಕಾಲಕ್ಕೆ ತಕ್ಕಂತೆ ಅಕ್ಷರದ ಆಕಾರವನ್ನು ಬಹು ಸುಂದರವಾಗಿ ಸುಧಾರಿಸಿದ್ದೇವೆ

ನಮ್ಮಲ್ಲಿನ " **ಕನ್ನಡ, ಇಂಗ್ಲೀಷ್** " ಅಕ್ಷರಗಳಂತಹ ಸುಂದರವಾದ ಅಕ್ಷರಗಳನ್ನು ಮತ್ತೆಲ್ಲಿಯೂ ನೋಡಲಾರಿರಿ. ಮತ್ತು

ನೂರಾರು ಬಗೆಯ ಸುಂದರವಾದ ಬಾರ್ಡರುಗಳು, ನಯನಮನೋಹರವಾಗಿವೆ ೮ ಪಾಯಿಂಟಿನಿಂದ ೪೮ ಪಾಯಿಂಟಿನವರೆಗೆ ವಿಧವಿಧವಾದ ಸುಂದರಾಕ್ಷರಗಳಿವೆ ನಮ್ಮ "ರಂಗನಾಥ ಕನ್ನಡ ಡಾಮಿನಸ್" ಅಕ್ಷರಗಳನ್ನು ನೋಡಲು ಮರೆಯಬೇಡಿರಿ.

ನಾವು ಕಾಪರ್ ಅಲಾಯ್ನ (ತಾಮ್ರಮಿಶ್ರ) ಸೀಸದಿಂದ ಅಕ್ಷರಗಳನ್ನು ತಯಾರಿಸುತ್ತೇವೆ ಸುಲಭ ಬೆಲೆ ಗ್ಯಾರಂಟಿ ಮಾಲು ಬಾಳಿಕೆ

ಮೈಸೂರು ಅರಮನೆಗೆ ಸಪ್ಲೈ ಮಾಡುವ

ಎಂ. ಪಿ. ನಾರಾಯಣರಾವ್

ಶ್ರೀ ಸತ್ಯನಾರಾಯಣ ಪರಿಮಳ ಫ್ಯಾಕ್ಟರಿ,

ಜಗನ್ಮೋಹನ ಬಂಗ್ಲಾ ಬೀದಿ, ಮೈಸೂರು.

ಪರಿಮಳ ಅಗರ ಬತ್ತಿ

ಉಪಯೋಗಿಸಿ ಪ್ರೋತ್ಸಾಹಿಸಿರಿ.

ಸಾಧ್ವಿ

೭—೧೨—೩೬ ನೇ ಸೋಮವಾರ

ಪಾಣಿಗ್ರಹಣವೋ ರಾಜ್ಯತ್ಯಾಗವೋ?

ಬ್ರಿಟಿಷ್ ಚಕ್ರವರ್ತಿಗಳಿಗೆ ಈಗ ಹೊಸ ಸಮಸ್ಯೆ ಬಂದಿದೆ. ಅಮೆರಿಕಾ ದೇಶದ ಒಬ್ಬ ತರುಣಿಯಲ್ಲಿ ಅವರಿಗೆ ಅನುರಾಗ ಹುಟ್ಟಿದೆ. ಆಕೆಯನ್ನು ಮದುವೆಯಾಗಬೇಕೆಂಬ ಅಪೇಕ್ಷೆಯನ್ನು ಅವರು ಸೂಚಿಸಿರುವರು. ಆದರೆ ಆಕೆಯು ರಾಜವಂಶದವಳಲ್ಲ. ಸಾಮಾನ್ಯ ಸಂತತಿಯವಳು. ಸಾಲದಕ್ಕೆ ಹಿಂದೆ ಎರಡುಬಾರಿ ವಿವಾಹವಾಗಿದ್ದವಳು. ಇಬ್ಬರು ಗಂಡದಿರನ್ನೂ ಬಿಟ್ಟುಬಿಟ್ಟಿರುವವಳು. ಆ ಇಬ್ಬರು ಗಂಡಂದಿರೂ ಬದುಕಿರುವರು.

ಇಂತಹ ವಿವಾಹವು ಇಂಗ್ಲೆಂಡಿನ ಕಾನೂನಿಗೆ ವಿರುದ್ಧವಾದುದು. ಅಲ್ಲಿಯ ಚರಿತ್ರೆಯಲ್ಲಿ ಹೊಸದು. ಇದುವರೆಗೆ ಚಕ್ರವರ್ತಿಗಳಾದವರು ರಾಜಸಂತತಿಯಲ್ಲಿಯೇ ಹೆಣ್ಣನ್ನು ತಂದುಕೊಳ್ಳುತ್ತಿದ್ದರು. ಈಗ ಚಕ್ರವರ್ತಿಯವರು ಅರ್ನೆಸ್ಟ್ ಸಿಂಪ್ಸನ್ ಎಂಬ ಮೇಲ್ಕಂಡ ತರುಣಿಯನ್ನು ವಿವಾಹವಾಗಬೇಕೆಂದು ಅಪೇಕ್ಷಪಟ್ಟಿರುವರು.

ಈ ವಿಷಯವು ಇಂಗ್ಲೆಂಡಿನಲ್ಲೆಲ್ಲಾ ಅತ್ಯಂತ ಕೋಲಾಹಲವನ್ನೆಬ್ಬಿಸಿದೆ. ಚಕ್ರಾಧಿಪತ್ಯದ ಅನೇಕ ಭಾಗಗಳೂ ತಮ್ಮ ಅಸಮಾಧಾನವನ್ನು ಸೂಚಿಸಿವೆ. ಬ್ರಿಟಿಷ ಪತ್ರಿಕೆಗಳು ತೀವ್ರವಾಗಿ ಖಂಡಿಸಿವೆ. ಮೊದಲನೆಯದಾಗಿ ಸಾಮಾನ್ಯ ಸ್ತ್ರೀಯೊಬ್ಬಳನ್ನು ಚಕ್ರವರ್ತಿ ಸಾರ್ವಭೌಮ ಪದವಿಯಲ್ಲಿರುವವರು ಅಂಗೀಕರಿಸುವ ಅಂಶವನ್ನು ಅನುಮೋದಿಸುವುದಿಲ್ಲ. ಎರಡನೆಯದಾಗಿ ವಿದೇಶೀಯಳಾದ ಸ್ತ್ರೀಯನ್ನು ಸ್ವೀಕರಿಸುವ ಅಭಿಪ್ರಾಯವು ಬ್ರಿಟಿಷರಿಗೆ ರುಚಿಸುವದಿಲ್ಲ. ಮೂರನೆಯದಾಗಿ ಇಬ್ಬರು ಗಂಡರೊಡನೆ ವಿವಾಹವಿಚ್ಛೇದನವನ್ನು ಮಾಡಿಕೊಂಡ ಹೆಂಗಸನ್ನು ಸ್ವೀಕರಿಸುವುದು ಅವರಿಗೆ ಎಷ್ಟು ಮಾತ್ರವೂ ಒಪ್ಪುವುದಿಲ್ಲ.

ಆದರೆ ಚಕ್ರವರ್ತಿಗಳಿಗೂ ಬಹಳ ಬಿಕ್ಕಟ್ಟಿರುವ ಹಾಗೆ ತೋರುತ್ತದೆ. ಆಕೆಯನ್ನು ತಾವು ವಿವಾಹವಾಗಬೇಕೆಂಬ ಸಂಕಲ್ಪವನ್ನು ಮಾಡಿರುವಂತೆ ಕಾಣುತ್ತದೆ. ಆದರೆ ಒಂದು ರೀತಿಯಲ್ಲಿ ನೋಡಿದರೆ ಇದು ಚಕ್ರವರ್ತಿಯವರ ಸ್ವಂತ ಖಾಸಗಿ ವಿಷಯ. ಮತ್ತೊಂದು ರೀತಿಯಲ್ಲಿ ಸಾಮ್ರಾಜ್ಯದ ವಿಷಯ. ತನ್ನ ಹೆಂಡತಿಯನ್ನು ತಾನು ಸ್ವತಂತ್ರನಾಗಿ ಚುನಾಯಿಸಿಕೊಳ್ಳುವ ಹಕ್ಕು ಇತರ ಬ್ರಿಟಿಷ್ ಪ್ರಜೆಗಳೆಲ್ಲರಿಗೂ ಇರುವಂತೆ ತಮಗೂ ಇರಬೇಕೆಂದು ಚಕ್ರವರ್ತಿಯವರು ಅಪೇಕ್ಷಿಸುವುದೇನೂ ಅಸ್ವಾಭಾವಿಕವಲ್ಲ. ಆದರೆ ಕಾನೂನು ಕಟ್ಟಲೆಗಳ ಶೃಂಖಲೆಗಳು ಇದಕ್ಕೆ ಅವಕಾಶಕೊಡುವುದಿಲ್ಲ. ಇದಕ್ಕಾಗಿ ಹೊಸದೊಂದು ಕಾನೂನನ್ನು ಮಾಡಲು ಪಾರ್ಲಿಮೆಂಟ್ ಸಭೆಯು ಸಿದ್ಧವಾಗಿಲ್ಲ. ಚಕ್ರವರ್ತಿಗಳು ತಮ್ಮ ಜೀವನದ ಸಖಿಯನ್ನು ಚುನಾಯಿಸಿಕೊಳ್ಳುವುದು ಅವರ ಇಷ್ಟ. ಆದರೆ ರಾಜ್ಯದ ಚಕ್ರವರ್ತಿನಿಯನ್ನು ಚುನಾಯಿಸುವುದು ಅವರ ಇಷ್ಟವಲ್ಲವೆಂಬುದಾಗಿ ಬ್ರಿಟಿಷರು ವಾದಿಸುತ್ತಿರುವರು. ಚಕ್ರವರ್ತಿಯವರ ಪ್ರಯತ್ನವನ್ನು ಅಂಗೀಕರಿಸುವವರೂ ಹಲವರಿರುವರು. ಆದರೆ ಅವರ ಸಂಖ್ಯೆ ಬಹಳ ಕಡಿಮೆ.

ಈ ವಿಷಯವನ್ನು ವಿಮರ್ಶಿಸಲು ಪಾರ್ಲಿಮೆಂಟಿನ ವಿಶೇಷ ಸಭೆಯೊಂದು ನಾಳೆ ಸೇರುವುದು. ಅದರಲ್ಲಿ ಹೇಗೆ ತೀರ್ಮಾನವಾಗುವುದೋ ಹೇಳಲಾಗುವುದಿಲ್ಲ. ಬ್ರಿಟಿಷ ರಾಜನೀತಿಯು ಈಗ ಒರೆಗಲ್ಲಿಗೆ ಹಚ್ಚಲ್ಪಡುತ್ತಿದೆ. ಹೀಗೆ ಅವರಿಗೆ ಪ್ರಾಪ್ತವಾದ ಅನೇಕ ರಾಜಕೀಯ ಬಿಕ್ಕಟ್ಟಿನ ಪರಿಸ್ಥಿತಿಯನ್ನು ಅವರು ಬಹಳ ನೈಪುಣ್ಯದಿಂದ ಬಗೆಹರಿಸಿರುವರು. ಇಂದು ಪ್ರಾಪ್ತವಾಗಿರುವುದು ಅವೆಲ್ಲಕ್ಕಿಂತಲೂ ಹೆಚ್ಚಿನ ಸಂದಿಗ್ಧ ಪರಿಸ್ಥಿತಿ.

ಚಕ್ರವರ್ತಿಯವರು ಮೇಲ್ಕಂಡ ಹೆಂಗಸನ್ನು ಮದುವೆಯಾಗಲು ಅವಕಾಶಕೊಡುವರೋ ಅಥವಾ ಕಿರೀಟಧಾರಣೆಯ ಸಂಭ್ರಮಗಳು ಬಿರುಸಿನಿಂದ ನಡೆಯುತ್ತಿರುವ ಈ ಸಂದರ್ಭದಲ್ಲಿ ಚಕ್ರವರ್ತಿಗಳನ್ನು ರಾಜ್ಯತ್ಯಾಗ ಮಾಡಲು ಅವಕಾಶಕೊಡುವರೋ ನೋಡಬೇಕು. ಅಥವ ಇನ್ನೊಂದು ತೆರದ ಮೂರನೆಯ ದಾರಿಯೂ ಒಂದಿದೆ. ಸದರಿ ಸ್ತ್ರೀಯನ್ನು ವಿವಾಹವಾದರೂ ಆಕೆಗೆ ಚಕ್ರವರ್ತಿನಿ ಪದವಿ ದೊರೆಯುವುದಿಲ್ಲ. ಆಕೆಯ ಸಂತಾನಕ್ಕೆ ರಾಜ್ಯಾಧಿಕಾರವಿಲ್ಲ. ಇವುಗಳನ್ನು ತ್ಯಾಗಮಾಡಿ ಅರ್ನೆಸ್ಟ್ ಸಿಂಪ್ಸನ್ನಳನ್ನು ಮದುವೆಯಾಗಿ ತಮ್ಮ ಇಷ್ಟಾರ್ಥಗಳನ್ನು ನೆರವೇರಿಸಿಕೊಳ್ಳಲು ಚಕ್ರವರ್ತಿಗಳಿಗೆ ಅವಕಾಶವಿದೆ. ಯಾವ ರೀತಿ ನಡೆದರೂ ಇದೊಂದು ಐತಿಹಾಸಿಕ ವಿಶೇಷವೇ ಸರಿ.

ಈ ಪ್ರಸಂಗದಲ್ಲಿ ಒಂದು ಅಂಶವು ಸ್ಪಷ್ಟವಾಗಿ ಒಡೆದು ಕಾಣುವುದು. ಅದೇನೆಂದರೆ, ಬ್ರಿಟಿಷ್ ಪ್ರಜೆಗಳ ಸ್ವಾತಂತ್ರ್ಯ. ತಮ್ಮ ದೊರೆಗಳು ಯಾವ ರಾಣಿಯನ್ನು ಪರಿಗ್ರಹಿಸಬೇಕೆಂಬ ವಿಷಯವು ಪ್ರಜೆಗಳ ಇಷ್ಟಕ್ಕೆ ಅಧೀನವಾಗಿದೆ. ಚಕ್ರವರ್ತಿಗಳ ಇಷ್ಟವಲ್ಲ. ತಮಗೆ ಸಮರ್ಪಕವಿಲ್ಲದ ಸಂಬಂಧಗಳನ್ನು ಖಂಡಿಸಲು ಅವರಿಗೆ ಸಂಪೂರ್ಣ ಅವಕಾಶವಿದೆ. ಅಲ್ಲಿನ ಸರ್ಕಾರವು ಚಕ್ರವರ್ತಿಗಳ ಇಷ್ಟದಲ್ಲಿ ಪ್ರವೇಶಿಸಲು ಅಧಿಕಾರವಿದೆ. ನಮ್ಮ ದೇಶದಲ್ಲಿ ಇಂತಹ ಅಭಿಪ್ರಾಯಗಳನ್ನು ಸೂಚಿಸುವುದೂ ಸಹ ಮಹಾಪರಾಧವಾಗಬಹುದು. ರಾಜದ್ರೋಹವೆಂದೂ ಪರಿಗಣಿಸಲ್ಪಡಬಹುದು. ಕ್ರೂರಶಿಕ್ಷೆಗೂ ಒಳಗಾಗಬಹುದು.

ನಮ್ಮಲ್ಲಿರುವ ಅನೇಕ ದೇಶೀಯ ರಾಜರುಗಳು ವಿದೇಶೀಯ ಸ್ತ್ರೀಯರುಗಳೊಡನೆ ಸಂಪರ್ಕಮಾಡಿ ಶೋಚನೀಯವಾದ ಅವಸ್ಥೆಗಳಿಗೆ ಈಡಾಗಿರುವರು. ಇಂದೋರಿನ ಮಹಾರಾಜರಾಗಿದ್ದ ತುಕೋಜಿರಾವ್ ಹೋಳ್ಕರರೇ ಇದಕ್ಕೆ ಸಾಕ್ಷಿ. ಅವರು ಒಬ್ಬ ಪಾಶ್ಚಾತ್ಯ ಹೆಂಗಸನ್ನು ಮದುವೆಯಾಗಲು ಭೂಮಿ ಆಕಾಶಗಳನ್ನು ತಲೆಕೆಳಗು ಮಾಡಿದರು. ಮೊದಲೇ ಅವರಿಗೆ ಉತ್ತಮ ರಾಜವಂಶದ ವಿವಾಹವಾಗಿತ್ತು. ಮಕ್ಕಳೂ ಇದ್ದರು. ಆದರೂ ಅವರಿಗೆ ಪರಸ್ತ್ರೀ ವ್ಯಾಮೋಹವು ಇದ್ದಿತು. "My Kingdom for a dancing girl ಸ್ತ್ರೀಗಾಗಿ ರಾಜ್ಯವನ್ನಾದರೂ ಬಿಡಲು ಸಿದ್ಧನಾಗಿದ್ದೇನೆ" ಎಂದು ಅವರು ಹೇಳಿದರಂತೆ. ವ್ಯಾಮೋಹಕ್ಕೆ ಕಣ್ಣಿಲ್ಲ.

ಆ ಪಾಶ್ಚಾತ್ಯ ಸ್ತ್ರೀಗೆ ಶುದ್ಧಿಸಂಸ್ಕಾರವೆಂಬ ಕ್ರಿಯೆಯನ್ನು ಮಾಡಿ, ಶರ್ಮಿಷ್ಠೆ ಎಂಬ ಹೆಸರನ್ನು ಕೊಟ್ಟು ಆಕೆಯನ್ನು ಮದುವೆಯಾದರು.

ಇಂತಹ ಪ್ರಸಂಗಗಳ ಮೇಲೆ ಸರಿಯಾದ ಹತೋಟಿಯು ಇರುವುದು ಅತ್ಯಾವಶ್ಯಕ. ಪ್ರಕೃತದಲ್ಲಿ ಬ್ರಿಟಿಷ್ ರಾಜನೀತಿ ನೈಪುಣ್ಯವು ಹೇಗೆ ವರ್ತಿಸುವುದೆಂಬುದನ್ನು ಪ್ರಪಂಚವು ಇದಿರು ನೋಡುತ್ತಿದೆ.

ಸರ್ವೆ ಇಲಾಖೆ ಆಡಳಿತದ ವೈಚಿತ್ರ್ಯ

ಸ್ವಾಮಿ,

ಸರ್ ಮಿರ್ಜಾ ಇಸ್ಮಾಯಿಲ್‌ರವರು ಮಂತ್ರಿ ಪದವಿಗೆ ಬಂದಲಾಗಾಯ್ತು ಪ್ರಜೆಗಳ ಸುಖವೇ ತಮ್ಮ ಸುಖವೆಂದು ತಿಳಿದುಕೊಂಡು ಹಗಲಿರುಳೂ ತನುಮನಧನಗಳನ್ನು ಅರ್ಪಿಸುತ್ತಾ, ನಮ್ಮನ್ನಾಳುವ ಮಹಾಸ್ವಾಮಿಗಳ ಕೃಪಾಪಾತ್ರರಾಗಿ, ಮೈಸೂರು ಆದರ್ಶ ಸಂಸ್ಥಾನವೆಂದು ಹೊಗಳಿಸಿಕೊಳ್ಳಲು ಸರ್ವದಾ ಪ್ರಯತ್ನ ಪಡುತ್ತಿರುವುದು ಲೋಕವಿದಿತವಾದ ಸಂಗತಿಯಾಗಿರುತ್ತೆ.

ಹೀಗಿರುವಲ್ಲಿ ನಮ್ಮನ್ನಾಳುವ ಮಹಾಸ್ವಾಮಿಗಳೊಡನೆ ವಿದೇಶಕ್ಕೆ ದಿವಾನ್‌ಸಾಹೇಬರು ಪ್ರಯಾಣ ಬೆಳಸಿದ್ದ ವೇಳೆಯಲ್ಲಿ ಇಲ್ಲಿನ ಅಧಿಕಾರಿಗಳು "ಯಾವ ನೌಕರನೂ ತನ್ನ ಇಲಾಖೆಯ ಮುಖ್ಯ ಅಧಿಕಾರಿಯ ಅಪ್ಪಣೆ ಇಲ್ಲದೆ ದಿವಾನರನ್ನಾಗಲಿ ಅಥವಾ ಕೌನ್ಸಿಲ್ ಮೆಂಬರುಗಳನ್ನೇ ಆಗಲಿ ನೋಡಕೂಡದು" ಎಂಬ ಆರ್ಡರನ್ನು ಹೊರಡಿಸಿದ್ದಾರಂತೆ. ಇದು ಸರಿಯಾಗಿದೆಯೆ ಎಂಬ ಅಂಶವನ್ನು ವಾಚಕರೇ ಊಹಿಸಬೇಕು. ಈ ಶಾಸನದ ಮೊದಲನೇ ಬಾಣವು ಪ್ರಥಮತಃ ಸರ್ವೆ ಇಲಾಖೆಯ ಮೇಲೆ ಪ್ರಯೋಗಿಸಿದಂತೆ ತಿಳಿಯಬರುತ್ತೆ. ಈ ಇಲಾಖೆಯಲ್ಲಿ ಸುಮಾರು 300 ನೌಕರರು ಕೆಲಸಮಾಡುತ್ತಾರೆ. ರಿಕಾರ್ಡ್ ಆಫ್ ರೈಟ್ಸ್ ಜಾರಿಗೆ ತರುವ ವೇಳೆಯಲ್ಲಿ, ಈ ಕೆಲಸಕ್ಕಾಗಿ ತೆಗೆದುಕೊಂಡವರಿಗೆ ಒಂದು ನಿರ್ದಿಷ್ಟವಾದ ಸಂಬಳದ ಸ್ಕೇಲನ್ನು ಕೊಡುವುದಾಗಿ ಜಾಹಿರಾತನ್ನು ಪ್ರಕಟಿಸಿದ್ದರು. ಆದರೆ ಇವರುಗಳ ಸಂಬಳದ ಬಡತಿ ಬಗ್ಗೆ, ಹಿಂದಿನ ಸ್ಕೇಲನ್ನು ರದ್ದುಮಾಡಿ, ಹೊಸದಾಗಿ ಒಂದು ಸ್ಕೇಲನ್ನು ಮಾಡಿರುವರು. ಇದರಲ್ಲಿ ಕೇವಲ 50 ಮಂದಿಗೆ ಮಾತ್ರ ಬಹಳ ಉಪಯೋಗವಾಗಿ ಉಳಿದ 250 ಜನಗಳಿಗೆ ಏನೂ ಉಪಯೋಗವಿಲ್ಲವಾಗಿದೆ. ಇದಕ್ಕಾಗಿ ತಮ್ಮ ಅಹವಾಲುಗಳನ್ನು ಅರ್ಜಿಗಳ ಮುಖಾಂತರವೂ ಮತ್ತು ಮೇಲಿನ ಅಧಿಕಾರಿಗಳ ರೂಬರೂಬು ತಮಗಾಗಿರುವ ಕಷ್ಟನಷ್ಟಗಳನ್ನು ಹೇಳಿಕೊಂಡರು. ಆದರೂ ಅಧಿಕಾರಿಗಳು ಇವನ್ನೊಂದನ್ನೂ ಗಮನಿಸದೆ, ಅರ್ಜಿ ಕೊಟ್ಟವರಿಗೆ ದಂಡವನ್ನೂ, ಅಹವಾಲುಗಳನ್ನು ಹೇಳಿಕೊಂಡವರಿಗೆ ಡಿಗ್ರೇಡನ್ನೂ ಸಹ ಮಾಡಿರುತ್ತಾರೆ. ಇವರ ಪ್ರಾರ್ಥನೆಗಳೆಲ್ಲವೂ ಅರಣ್ಯ ರೋದನವಾದವು.

ದಯಾಳುಗಳಾದ ಸರ್ ಮಿರ್ಜಾರವರ ಆಡಳಿತದಲ್ಲಿ ಹೀಗೆ ಆಗುವುದೆಂತು? ಇದನ್ನೆಲ್ಲಾ ನೋಡಿದರೆ ಈ ವಿಷಯಗಳು ಯಾವವೂ ಅವರ ಅವಗಾಹನೆಗೆ ಬಂದಂತೆ ಕಾಣುವುದಿಲ್ಲ. 25 ರಿಂದ 30 ವರ್ಷಗಳು ಸರ್ಕಾರದಲ್ಲಿ ದುಡಿದು ರಿಟೈರ್ ಆಗುವ ಕಾಲದಲ್ಲಿ ಅನೇಕ ನೌಕರರಿಗೆ ಈಗ ಬರುತ್ತಿರುವ ಸಂಬಳದಲ್ಲಿ 5 ರಿಂದ 20 ರೂ. ಗಳವರೆಗೂ ಕಮ್ಮಿಯಾಗಿರುವುದಲ್ಲದೆ, ಈ ಶಿಕ್ಷೆಗೆ ಗುರಿಮಾಡಲ್ಪಟ್ಟಿರುವುದು ತುಂಬಾ ಶೋಚನೀಯವಾದ ವಿಷಯ.

ಈಗ ಜಾರಿಗೆ ತಂದಿರುವ ಸ್ಕೇಲು ಪ್ರಕಾರ 5-6 ವರ್ಷ ಸರ್ವಿಸ್ ಆಗಿರುವವರಿಗೆ 5 ರಿಂದ 25 ರೂ. ವರೆಗೂ ಸಂಬಳದಲ್ಲಿ ಬಡತಿ ಸಿಕ್ಕಿರುತ್ತದೆ. ಈ ನೌಕರರಲ್ಲಿ ಗ್ರ್ಯಾಜುಯೇಟ್ಸ್ ಮತ್ತು ನಾನ್‌ಗ್ರ್ಯಾಜುಯೇಟ್ಸ್ ಇದ್ದಾರೆ. ಇವರುಗಳೆಲ್ಲರೂ ಇಲಾಖೆಯಲ್ಲಿ ಮಾಡುತ್ತಿರುವ ಕೆಲಸವು ಒಂದೇ ವಿಧವಾಗಿರುತ್ತದೆ. ಪ್ರಾಥಮಿಕ ವಿದ್ಯೆಯ ಆವಶ್ಯಕತೆ ಈ ಇಲಾಖೆಯ ಕೆಲಸದಲ್ಲಿ ಏನೂ ಅಗತ್ಯವಿಲ್ಲ. ಹೀಗಿರುವಲ್ಲಿ ಡಿಗ್ರಿಹೊಂದಿದವರಿಗೂ ಮತ್ತು ಹೊಂದದವರಿಗೂ ಸರ್ವಿಸ್ ಒಂದೇ ಆಗಿದ್ದಾಗ್ಯೂ, ಹೊಸ ಸ್ಕೇಲಿನಂತೆ ಬಡತಿಕೊಟ್ಟಿರುವುದು ನ್ಯಾಯವನ್ನು ಕೊಂದು ಹುಟ್ಟಿಗೆ ಹಾಕಿದಂತಾಗಿದೆ. ಇಂಥಾ ಬಡತಿಯು ಇದುವರೆಗೆ ಯಾವ ಇಲಾಖೆಯಲ್ಲಿಯೂ ಜಾರಿಗೆ ಬಂದಿರುವುದಿಲ್ಲ.

ಈ ವಿಷಯವನ್ನು ಘನಸರ್ಕಾರದವರು ಕೂಲಂಕಷವಾಗಿ ಪರಿಶೀಲಿಸಿ, ಬಡನೌಕರರಿಗೆ ಆಗಿರುವ ತೊಂದರೆಗಳನ್ನು ನಿವಾರಣೆ ಮಾಡುವರೆಂಬುದಾಗಿ ನಂಬಿರುತ್ತೇನೆ.

ಸತ್ಯವಾದಿ.

ಮೈಸೂರು ಡಿಸ್ಟ್ರಿಕ್ಟ್ ಕಾಂಗ್ರೆಸ್ ಕಮಿಟಿ

ಮೈಸೂರು ಡಿಸ್ಟ್ರಿಕ್ಟ್ ಕಾಂಗ್ರೆಸ್ ಕಮಿಟಿಯ ವಾರ್ಷಿಕ ಸಭೆಯು ಕಳೆದ ಗುರುವಾರ ರಾಜಧಾನಿಯ ಶ್ರೀ ರಾಮ ಕೃಷ್ಣ ಮಹಡಿ ಮೇಲೆ ನಡೆಯಿತು. ಅನೇಕ ಜನ ಸದಸ್ಯರು ಬಂದಿದ್ದರು ಅಧ್ಯಕ್ಷರಾದ ಶ್ರೀ॥ ತಗಡೂರು ರಾಮಚಂದ್ರರಾಯರು ಅಗ್ರಾಸನವನ್ನು ವಹಿಸಿದ್ದರು

ಕಾರ್ಯದರ್ಶಿಗಳಾದ ಶ್ರೀ॥ ಎಂ ಎಸ್ ಜೋಯಿಸರವರು ಕಳೆದ ವರ್ಷದ ವರದಿಯನ್ನು ಓದಿ ಒಪ್ಪಿಸಿದರು ಅದು ಎಲ್ಲರಿಂದಲೂ ಅನುಮೋದಿಸಲ್ಪಟ್ಟಿತು ಜಮಾ ಖರ್ಚು ಪಟ್ಟಿಯನ್ನು ಅಂಗೀಕರಿಸಲಾಯಿತು ಸದಸ್ಯರಿಂದ ಹಲವು ಸಲಹೆಗಳು ಬಂದಿದ್ದವು ಅವುಗಳು ಪರ್ಯಾಲೋಚಿಸಲ್ಪಟ್ಟವು ಮೈಸೂರು ನಗರ ದ [illegible] ಹೀಯ ಧ್ವಜವನ್ನು ಹಾರಿಸಕೂಡದೆಂದು ಕಳೆದ ಐದಾರು ವರ್ಷಗಳಿಂದ ಡಿ. ಮ್ಯಾಜಿಸ್ಟ್ರೇಟರು ಹಾಕುತ್ತಿರುವ ನಿರ್ಬಂಧದ ವಿಚಾರವನ್ನು ಪರಿಶೀಲಿಸಿ ಅದನ್ನು ಖಂಡಿಸಲಾಯಿತು ಅನಂತರ ಮುಂದಿನ ವರ್ಷದ ಕಾರ್ಯನಿರ್ವಾಹಕ ಮಂಡಲಿಯ ಚುನಾವಣೆ ನಡೆಯಿತು ಈ ಸಭೆಗೆ ಬಂದ ಮಹನೀಯರು ಚುನಾಯಿಸಲ್ಪಟ್ಟರು ಶ್ರೀ॥ ತಗಡೂರು ರಾಮಚಂದ್ರರಾಯರು ಅಧ್ಯಕ್ಷರು, ಶ್ರೀ॥ ಆಗರಂ [illegible] ನವರು ಉಪಾಧ್ಯಕ್ಷರು, ಶ್ರೀ॥ ಎಂ ಎಸ್ ಜೋಯಿಸರು ಕಾರ್ಯದರ್ಶಿ [illegible] 15 ಜನ ಸದಸ್ಯರೂ ಸಹ ಚುನಾಯಿಸಲ್ಪಟ್ಟರು ಅನಂತರ ಧನ್ಯವಾದ ಸಮರ್ಪಿಸಲ್ಪಟ್ಟು ಜಯಕಾರದೊಡನೆ ಸಭೆ ಮುಗಿಯಿತು.

ಸತ್ಕಾರ ಕೂಟ.

ಬೆಂಗಳೂರು ದಂಡಿನ ಕಾಂಗ್ರೆಸ್ ನಾಯಕರಾದ ಶ್ರೀ॥ ಆರ್ ಕೃಷ್ಣಯ್ಯರವರ ಗೌರವಾರ್ಥಕವಾಗಿ ಮೈಸೂರಿನ ಶ್ರೀ॥ [illegible] ಕೃಷ್ಣಮೂರ್ತಿಯವರು ಕಳೆದ ಗುರುವಾರ ಮೈಸೂರು ಮಾಡರ್ನ ಹೋಟಲಿನಲ್ಲಿ ಒಂದು ದಿವ್ಯವಾದ ಔತಣವನ್ನು ಏರ್ಪಡಿಸಿದ್ದರು ಅನೇಕ ಜನ ಮೊಡ್ಡ ಮನುಷ್ಯರು ಸೇರಿದ್ದರು. ಸುಖ ಭೋಜನ ನಂತರ ಸಭೆ ನಡೆಯಿತು. ಶ್ರೀ॥ ಅಡ್ವೊಕೇಟ್ ವಿ ಲಿಂಗಪ್ಪಯ್ಯನವರು ಆಸನವನ್ನು ವಹಿಸಿದ್ದರು ಶ್ರೀ॥ ಕೃಷ್ಣಯ್ಯನವರು ಕಳೆದ ಕಂಟೋನ್ಮೆಂಟಿನ ಮುನಿಸಿಪಲ್ ಚುನಾವಣೆಯಲ್ಲಿ ಕಾಂಗ್ರೆಸ್ಸಿನವರು ಹೇಗೆ ಕೆಲಸಮಾಡಿ ವಿಜಯವನ್ನು ಹೊಂದಿದರೆಂಬುದನ್ನು ವಿವರಿಸಿ ಪುಷ್ಪ ತಾಂಬೂಲಗಳ ಸಮರ್ಪಣೆ ನಂತರ ಸಭೆ ಮುಗಿಯಿತು

ಧರ್ಮಪ್ರಕಾಶರ ಭಾವಚಿತ್ರ.

ತಾ॥ 30-11-36 ನೇ ಸಾಯಂಕಾಲ ಮೈಸೂರು ಪೌರಸಭಾಂಗಣದಲ್ಲಿ ದಿವಂಗತರಾದ ಸಾ॥ ಡಿ ಬನುಮಯ್ಯನವರ ಭಾವಚಿತ್ರ ಅನಾವರಣವು ನಡೆಯಿತು ಪೌರಸಭಾಧ್ಯಕ್ಷರು ಅಗ್ರಾಸನವನ್ನು ವಹಿಸಿದ್ದರು ಅನೇಕ ಮಹನೀಯರುಗಳು ನೆರೆದಿದ್ದರು ಡಾ॥ ಸರ್ ಕೆ. ಸಿ ಪುಟ್ಟಣ್ಣಶೆಟ್ಟರು ಧರ್ಮಪ್ರಕಾಶರ ಪ್ರಶಂಸಾರೂಪವಾಗಿ ಬರೆದಿದ್ದ ಪತ್ರವನ್ನು ಓದಲಾಯಿತು. ಮ॥ ಗಳಾದ ಎಫ್. ಸಿ ದೇವರಾಜೇ ಅರಸಿನವರು, ಎ ಕೃಷ್ಣರಾಯರು, ಪಿ ಎಸ್ ಅನಂತರಾವ್, ಕೆ. ಧನಕೋಟಿಶೆಟ್ಟಿ, ಇವರುಗಳು ದಿವಂಗತರ ಗುಣಕಥನ ಮಾಡಿದರು ಎಲ್ಲರಿಗೂ ಫಲಾಹಾರವಾಯಿತು

ಆಕಾಶವಾಣಿ ಕಾರ್ಯಕ್ರಮ

ಸೋಮವಾರ ರಾತ್ರಿ 8 ರಿಂದ 9 15 ವಿರೋಕ್ಷ ಸಂಗೀತ, ರಾಜನೀತಿ "ಸ್ವಾತಂತ್ರ್ಯ ಮತ್ತು ಕಾನೂನು" ಉಪನ್ಯಾಸ, ಮಂಗಳವಾರ ಸಾ॥ 6-30 ರಿಂದ 8 ಕರ್ನಾಟಕ ನಾಟಕ, ಸಾಹಿತ್ಯಪಠನ. ಬುಧವಾರ ರಾತ್ರಿ 8 ರಿಂದ 9 15 ಕರ್ನಾಟಕವಾದ್ಯ ಸಂಗೀತ ಗ್ರಂಥವಿಮರ್ಶೆ. ಗುರುವಾರ 6 30 ರಿಂದ 8 ಕನ್ನಡ ನಾಟಕ " ದಾನಶೂರ ಕರ್ಣ ' ಜನಪದ ವಿಜ್ಞಾನ ' ವಸ್ತು ಸ್ವಭಾವ " ಮ॥ ವಿ ಎಂ ಶಿವರಾಮಯ್ಯನವರು, ಶುಕ್ರವಾರ ರಾತ್ರಿ 8 ರಿಂದ 9 15 ಹಿಂದೂಸ್ಥಾನಿ ಸಂಗೀತ, ಕೊರ್ರ್ಗ ಪಠನ

ಧರ್ಮಪ್ರಕಾಶ ಡಿ. ಬನುಮಯ್ಯನವರು.

ಅಕ್ಷರ ಬಂಧ ಸ್ಪರ್ಧೆ ನಂ. ೧

ಬಹುಮಾನ ಪಡೆದವರು.

ಸರಿಯಾದ ಉತ್ತರವು ಒಂದೂ ಬರಲಿಲ್ಲವಾದ್ದರಿಂದ ಮೊದಲನೆಯ ಬಹುಮಾನವನ್ನು 1 ತಪ್ಪಿನವರಿಗೆ ಕೊಡಲಾಗಿದೆ

ಬಹುಮಾನ 6—0—0

ಎಂ ಕೆ ಭೀಮರಾವ್ ಒಕ್ಕಲಿಗರಸ್ವಾಮಿ ಬಡಾವಣೆ ಮೈಸೂರು

ಎರಡು ತಪ್ಪಿನ ಉತ್ತರಗಳು ಬರಲಿಲ್ಲವಾದ್ದರಿಂದ ಇತರ ಬಹುಮಾನವನ್ನು ಮೂರು ಮತ್ತು ನಾಲ್ಕು ತಪ್ಪಿನವರಿಗೆ ಕೊಡಲಾಗಿದೆ

ಮೂರು ತಪ್ಪಿನ 5 ಜನರಿಗೆ ತಲಾ 1—0—0

1 ಡಿ ಎಸ್ ಲಲಿತಾಂಬ, ನಂ, 70 ಗುಜ್ಜಲಗೇರಿ ಮೈಸೂರು 2 ಯು ರಾಮಚಂದ್ರರಾವ್, ಪಾರ್ಥಸಾರಥಿ ಭವನ, ದೊಡ್ಡಪೇಟೆ ಮೈಸೂರು 3 ಸಿ ನಿತ್ಯಾನಂದ C/o ಡಿಸ್ಟ್ರಿಕ್ಟು ಬೋರ್ಡ್ ಪ್ರೆಸಿಡೆಂಟ್ ಶಿವಮೊಗ್ಗ 4 ಸಿ. ಲಕ್ಷ್ಮೀನರಸಿಂಹ ಮಲ್ಲೇಶ್ವರ, ಬೆಂಗಳೂರು 5 ಡಿ ವಿ ಜಾನಕಮ್ಮ, ನಗರ್ತರ ಪೇಟೆ, ಬೆಂಗಳೂರು

4 ತಪ್ಪಿನ 4 ಜನರಿಗೆ ತಲಾ 0-8-0

1 ವೈ ಹಿರಣ್ಣಯ್ಯ ಸಕ್ಕರೆ ಕಾರ್ಖಾನೆ ಮಂಡ್ಯ 2. ಎಂ ಆರ್ ತಿರುಮಲಾಚಾರ್ 3 ಎಂ ವಿ ಗೋಪಾಲರಾವ್ ಮೈಸೂರು 4 ಎಚ್ ಸಿ ನಾಗೇಶರಾವ್ ವಿದ್ಯಾರ್ಥಿ, ಪ್ರಾಥಮಿಕ ಪಾಠಶಾಲಾ, ಹುಬ್ಬಳ್ಳಿ

ಬಹುಮಾನದ ಮೊಬಲಗು ಮುಂದಿನ ವಾರ ಕಳುಹಿಸಲ್ಪಡತ್ತೆ

ಮ್ಯಾನೇಜರ್

ಮಂಡ್ಯದ ಮುನ್ಸೀಫ್ ಕೋರ್ಟು.

ಈ ನ್ಯಾಯಸ್ಥಾನವು ಘನ ಸರ್ಕಾರದವರಿಂದ 1927 ನೇ ಇಸವಿಯಲ್ಲಿ ಸ್ಥಾಪಿತವಾಯಿತು ಇದರಿಂದ ಮಂಡ್ಯ, ಮದ್ದೂರು, ಮಳವಳ್ಳಿ, ತಾಲ್ಲೂಕಿನ ಬಡ ಕ್ಷೈತರಿಗೆ ತುಂಬಾ ಅನುಕೂಲವಾದಂತೆ ಆಗಿರುತ್ತೆ. ನ್ಯಾಯಸ್ಥಾನವು ನಡೆಯುವ ಕಟ್ಟಡವು ಸರ್ಕಾರದವರಿಗೆ ಸೇರಿರುವುದಿಲ್ಲ. ಬಾಡಿಗೆ ಕಟ್ಟಡದಲ್ಲೇ ನಡೆಯುತ್ತಾ ಇದೆ ಹಿಂದೆ ಸಾಹುಕಾರ್ ಸಂಗಪ್ಪನವರ ಛತ್ರದಲ್ಲಿ ನಡೆಯುತ್ತಾ ಇತ್ತು ಕೋರ್ಟು ನಡೆಯಲು ಮಹಡಿಮೇಲೆ ಸ್ಥಳ ಮಾಡಿ ಕಕ್ಷಿಗಾರರಿಗೆ ಕೆಳಗೆ ಇಳಿಯುವುದು ತುಂಬಾ ಅನಾನುಕೂಲವಾಗಿದ್ದರೂ ಕಕ್ಷಿಗಾರರಿಗೆ ನೀರು, ನೆರಳು ವಗೈರ ಎಲ್ಲಾ ಅನುಕೂಲವು ಚನ್ನಾಗಿತ್ತು ಈಗ ನಮ್ಮ ನ್ಯಾಯಸ್ಥಾನವು ಯಾವ ಕಾರಣದಿಂದಲೋ ಸಾಹುಕಾರ್ ಸೇಟ್ ರಾಮರಾಯರ ಬಂಗ್ಲೆಯಲ್ಲಿ ನಡೆಯುತ್ತಾ ಇದೆ ಈ ಕಟ್ಟಡದಲ್ಲೂ ಸಹ ಕೋರ್ಟಿನ ಕೆಲಸಕ್ಕಾಗಲಿ ಕಕ್ಷಿಗಾರರ ಅನ್ಕೂಲವಾದ ನೀರು ನೆರಳು ವಗೈರೆ ಯಾವ ಸಹಾಯವೂ ಇಲ್ಲ ನೀವು ಮುಕ್ಕು ಬೆಳೆದು ಬಹಳ ತೊಂದರೆಪಡಬೇಕಾಗಿದೆ ಸರ್ಕಾರಕ್ಕೆ ಉತ್ಪತ್ತಿಯಾಗುವ ಈ ನ್ಯಾಯಸ್ಥಾನಕ್ಕೆ ಕಟ್ಟಡ ಕಟ್ಟಿಸಿಕೊಡದೆ ಇರುವುದು ಶೋಚನೀಯವಾಗಿದೆ ಇದನ್ನು ಬೇಗನೆ ಸರಿಪಡಿಸಿಕೊಡುತ್ತಾರೆಂದು ನಂಬಿದ್ದೇನೆ

ಕಕ್ಷಿಗಾರ

ಮಂಡ್ಯದ ವರ್ತಮಾನ

ಇಲ್ಲಿನ ರೈಲ್ವೆ ಸ್ಟೇಷನ್ ರಸ್ತೆಯಲ್ಲಿರುವ ಸಕ್ಕರೆ ಕಾರ್ಖಾನೆ ಆಪರೇಟರ್ ಸಿ ಡಿ ಗೋಪಾಲರಾಯರ ರೂಮಿನಲ್ಲಿ 28-11-36 ನೇ ಶನಿವಾರ ಸಾಯಂಕಾಲ ಸುಮಾರು 7-30 ಘಂಟೆ ಸಮಯದಲ್ಲಿ ಕಳ್ಳತನವಾಗಿ ಸುಮಾರು 20—22 ರೂ ಗಳ ಸಾಮಾನು ಹೋಯಿತು ಪೋಲೀಸಿನವರು ಪತ್ತೆ ತಂದೂರು ನಡೆಸುತ್ತಿದ್ದಾರೆ

ಈ ತಿಂಗಳು 1ನೇ ತಾರೀಖಿನಿಂದ ಟೌನ್ ಹಾಲಿನಲ್ಲಿ ಆಕಾಶವಾಣಿ ಕಾರ್ಯಕ್ರಮವು ನಡೆಯುತ್ತಾಯಿದೆ ಇದರಿಂದ ಅನೇಕ ಜನರು ಹೊರಗಡೆ ನಡೆಯುವ, ಭಾಷಣ, ಸಂಗೀತ ಮೊದಲಾದವುಗಳನ್ನು ಕೇಳಿ ಸಂತೋಷಪಡುತ್ತಿದ್ದಾರೆ

ಈ ತಿಂಗಳು ಚಂದ್ರಕಲಾ ನಾಟಕ ಮಂಡಲಿಯವರೂ, ಕಲಾಸೇವಾ ನಾಟಕ ಮಂಡಲಿಯವರೂ, ಶ್ರೀ ಚಾಮುಂಡೇಶ್ವರಿ ಕರ್ನಾಟಕ ನಾಟಕ ಮಂಡಲಿಯವರೂ ಬಂದು ತಮ್ಮ ಅಮೋಘವಾದ ನಾಟಕಗಳನ್ನು ಪ್ರದರ್ಶಿಸುತ್ತಾರೆಂದು ತಿಳಿಯುಬಂದಿದೆ

ಪುರವಾಸಿ

ಹಿಂದೂ ಜನತೆಯಲ್ಲಿ ಹೀರಾಲಾಲ ಗಾಂಧಿಯ ಯಾಚನೆ

ತಾ॥ 14-11-1936 ರಲ್ಲಿ ಶ್ರೀ ಅಬ್ದುಲ್ಲಾ ಗಾಂಧಿಯವರು ಶುದ್ಧಿಹೊಂದಿ ವೈದಿಕ ಧರ್ಮದಲ್ಲಿ ಸೇರಿಕೊಂಡರು. ಅವರು ಇಂಗ್ಲಿಷು ಮತ್ತು ಗುಜರಾತಿಯಲ್ಲಿ ಪ್ರಕಟಣೆಗೋಸ್ಕರ ಬರೆದ ಒಂದು ಪತ್ರದ ಅನುವಾದವನ್ನು ಈ ಕೆಳಗೆ ಕೊಟ್ಟಿದೆ —

'ಪೂಜ್ಯ ಮಹಾಶಯರೇ, ಬ್ರಾತೃಗಳೇ ಮತ್ತು ಭಗಿನಿಯರೇ!

ನನ್ನ ಉದ್ದೇಶ ಏನಾಯಿತೆಂದು ಅನೇಕರಿಗೆ ಆಶ್ಚರ್ಯವಾಗಿರಬಹುದು. ಅನೇಕ ಮುಸಲ್ಮಾನರೂ, ಹಿಂದುಗಳೂ ನನ್ನ ವಿಷಯದಲ್ಲಿ ವಿಶೇಷವಾಗಿ ಯೋಚಿಸುತ್ತಿರಬಹುದು. ಆದ್ದರಿಂದ ನಾನು ನನ್ನ ಮನಸ್ಸನ್ನು ಬಿಚ್ಚಿ ತೋರಿಸುತ್ತೇನೆ. ವೇದವೆನ್ನುವುದು ಕೇವಲ ಸಿದ್ಧಾಂತಗಳ ಹಳರಾಗಿರದೆ, ಇವರ ಅನುಯಾಯಿಗಳ ಸಂಸ್ಕೃತಿ, ಆಚಾರ ಮತ್ತು ಸಾಮಾಜಿಕ ಜೀವನವೂ, ಇವರಲ್ಲಿ ಸಮ್ಮಿಳಿತವಾಗಿರುತ್ತವೆ. ನನ್ನ ಪ್ರತ್ಯಕ್ಷ ಅನುಭವದಲ್ಲಿ ಪ್ರಾಚೀನ ವೈದಿಕ ಧರ್ಮದ ಸಂಸ್ಕೃತಿ, ಭಾಷೆ, ಸಾಹಿತ್ಯ, ಮತ್ತು ಸಾಮಾಜಿಕ ಆಚಾರ ವಿಚಾರಗಳು ನಮ್ಮ ದೇಶದಲ್ಲಿ ಪ್ರಚಲಿತವಾಗಿರುವ ಧರ್ಮಗಳೆಲ್ಲಕ್ಕೂ ಶ್ರೇಷ್ಠವಾಗಿವೆ.

ಮಹರ್ಷಿ ದಯಾನಂದ ಸರಸ್ವತಿಯವರು ತೋರಿಸಿರುವ ಪ್ರಕಾಶದ ಮಹಾಂತ್ರ ನೋಡಿದರೆ ಎಲ್ಲಾ ಧರ್ಮಗಳಲ್ಲಿರುವ ಸತ್ಯದ ಆದಿಸ್ರೋತ್ರವು ವೈದಿಕ ಧರ್ಮವೆಂದು ಘಂಟಾಘೋಷವಾಗಿ ಹೇಳಬೇಕಾಗುತ್ತದೆ.

ಆದರೆ ಈ ಸಾರ್ವಭೌಮ ಸತ್ಯವು ಭಿನ್ನ ಭಿನ್ನ ಮತಗಳ ಸಂಕೀರ್ಣತೆಯ ಮಿಶ್ರಣದಿಂದ ವಿಕೃತವಾಗಿರುತ್ತದೆ. ಅರೇಬಿಯ ಮುಸಲ್ಮಾನರ ಸಂಪರ್ಕದ ಆದುದರಿಂದ—ಅವರು ಮಹಮ್ಮದ್ ಸಾಹೇಬರ ಉಕ್ತಿಗಳಿಗೂ ಮತ್ತು ಧಾರ್ಮಿಕ ಸಿದ್ಧಾಂತಗಳಿಗೂ ಬಹಳ ದೂರದಲ್ಲಿರುವರೆಂದು ಹೇಳಬಲ್ಲೆನು. ಹಜರತ್ ಖಲೀಫಾ ಉಮರರವರು ಬೇರೆ ಮತದವರ ಧಾರ್ಮಿಕ ಸ್ಥಾನಗಳನ್ನು ಮತ್ತು ಸಂಸ್ಥೆಗಳನ್ನು ನಾಶಪಡಿಸುವಂತೆ ಆಜ್ಞೆ ಕೊಟ್ಟಿರುವುದಾಗಿ ನನಗೆ ತೋರುವುದಿಲ್ಲ.

ಈ ಎಲ್ಲಾ ಮಾತುಗಳನ್ನೂ ಧ್ಯಾನದಲ್ಲಿಡುತ್ತಾ ಈಗ ನಾನು ನನ್ನ ಹೆಚ್ಚಾಗಿ ಇಸ್ಲಾಮಿನ ಸೇವೆ ಮಾಡಬಲ್ಲೆನೆಂದು ನಿಶ್ಚಯಿಸಿಕೊಂಡಿರುವೆನು.

ಕೆಳಗೆ ಬಿದ್ದ ಮನುಷ್ಯನು ಮೇಲಕ್ಕೆದ್ದು ಪುನಃ ತನ್ನ ಸ್ಥಾನದಲ್ಲಿ ಕೂರುವಂತೆ ನಾನೂ ಕೂಡ ಮಹರ್ಷಿ ದಯಾನಂದ ಸರಸ್ವತಿಯವರು ತೋರಿಸಿರುವ ಪ್ರಕಾಶದಲ್ಲಿ ಸತ್ಯ ವೈದಿಕ ಧರ್ಮದ ಸಿದ್ಧಾಂತಗಳನ್ನು ತಿಳಿಯುವ ಯತ್ನ ಮಾಡುತ್ತಿರುವೆನು. ಪೂರ್ವದ ಕಿರಣಗಳೋಪಾದಿಯಲ್ಲಿ ಈ ಸಿದ್ಧಾಂತಗಳು ಸತ್ಯವಾಗಿಯೂ ಸಾರ್ವಭೌಮವಾಗಿಯೂ ಇವೆ. ಮಹರ್ಷಿ ದಯಾನಂದರು ತಮ್ಮ ಸತ್ಯಾರ್ಥಪ್ರಕಾಶ, ಋಗ್ವೇದಾದಿ ಭಾಷ್ಯ ಭೂಮಿಕಾ ಆದಿ ಪುಸ್ತಕಗಳಲ್ಲಿ ಇವರ ಮಾಹಾತ್ಮ್ಯೆಯನ್ನು ನೋಡಿರುವರು. ಆರ್ಯ ಸಮಾಜದ ಪ್ರಯತ್ನ ಮತ್ತು ಸ್ವಾಮಿ ಶ್ರದ್ಧಾನಂದರ ಶಿಕ್ಷಣದ ಕೃಪೆಯಿಂದ ನನ್ನ ಪೈತೃಕ ಧರ್ಮ ಮತ್ತು ಪವಿತ್ರ ಸಂಸ್ಕೃತಿಯ ಚರಣಗಳಲ್ಲಿ ಪುನಃ ಬರುತ್ತಿರುವೆನು. ನನ್ನ ತಾಯಿ, ತಂದೆ ಸಂಬಂಧಿಗಳು ಮತ್ತು ಮಿತ್ರರು ಈ ಸಮಾಚಾರದಿಂದ ಪ್ರಸನ್ನರಾದರೆ ನಾನು ಅವರ ಆಶೀರ್ವಾದದ ಭಿಕ್ಷುಕನಾಗಿರುವೆನು.

ಕಡೆಯಲ್ಲಿ ಸರ್ವ ಸಿದ್ಧೇಶ್ವರನೆಂದರೆ—ನನ್ನನ್ನು ರಕ್ಷಿಸಿ ನನ್ನ ಮೇಲೆ ದಯೆಯಿಟ್ಟು ಮತ್ತು ನನ್ನನ್ನು ಕ್ಷಮಿಸಿ ನಾನು ಜೊತೆಯಾಯಿ ಆರ್ಯಸಮಾಜದ ಕಾರ್ಯಕರ್ತರಿಗೂ ಮತ್ತು ನನ್ನ ಶುದ್ಧಿ ಸಮಯದಲ್ಲಿದ್ದ ಎಲ್ಲಾ ಮಹಾನುಭಾವರಿಗೂ ವಂದನಾಪೂರ್ವಕವನ್ನರ್ಪಿಸುತ್ತೇನೆ.

'ಓಂ ತಮಸೋ ಮಾ ಜ್ಯೋತಿರ್ಗಮಯ!'

ಕರ್ನಾಟಕ ಪ್ರಾಂತೀಯ ಹಿಂದೀ ಪ್ರಚಾರ ಸಭಾ.

ಒಬ್ಬ ಬಾತ್ಮೀದಾರರಿಂದ

ಕಳೆದ ತಿಂಗಳ ತಾ॥ 15 ಕ್ಕೆ ಬೆಂಗಳೂರು ಸ್ಯಾಷನಲ್ ಹೈಸ್ಕೂಲಿನಲ್ಲಿ ಅಖಿಲ ಕರ್ನಾಟಕ ಹಿಂದೀ ಪ್ರಚಾರ ಸಭೆಯ ಮಹಾ ಅಧಿವೇಶನವು ಜರಗಿತು. ಕರ್ನಾಟಕದ ಎಲ್ಲಾ ಭಾಗಗಳಿಂದಲೂ ಸುಮಾರು 60 ಮಂದಿ ಸದಸ್ಯರು ಬಂದಿದ್ದರು. ಸಭೆಗೆ ನಿಷ್ಕರವರಿಗೆ ನಡೆದು ಬಂದ ಹೆಸರನ್ನು ಬದಲಾಯಿಸಿ ಮೇಲ್ಕಂಡ ಹೆಸರು ಇಡಲ್ಪಟ್ಟಿತು. ಸಭೆಯ ಕಾರ್ಯ ಕಲಾಪಗಳನ್ನು ಇನ್ನೂ ವಿಶೇಷ ರೀತಿಯಿಂದ ಮುಂದುವರಿಸಬೇಕು ಮತ್ತು ಹಣ ಹೊಂದಿದ ಮೈಸೂರು ಸರ್ಕಾರದಿಂದ ಆರ್ಥಿಕ ಸಹಾಯವನ್ನು ಪಡೆಯುವುದಕ್ಕಾಗಿ ಒಂದು ಶಿಷ್ಟ ಮಂಡಳವನ್ನು ಏರ್ಪಡಿಸಬೇಕು ಎಂದು ಮೊದಲಾದ ಅನೇಕ ಠರಾವುಗಳು ಅಂಗೀಕೃತವಾದವು. ನೂತನ ಕಾರ್ಯಕಾರಿಣಿ ಸಮಿತಿಯ ಪ್ರಥಮ ಅಧಿವೇಶನವು ತಾ॥ ೧೬ ಕ್ಕೆ ಜರುಗಿ ಕೆಳಗೆ ಕಂಡವರು ಮುಂದಿನ ವರ್ಷದ ಕಾರ್ಯಾಧಿಕಾರಿಗಳಾಗಿ ಚುನಾಯಿಸಲ್ಪಟ್ಟಿದ್ದಾರೆ —

1 ಡಾ॥ ಸರ್ ಕೆ ಪಿ ಪುಟ್ಟಣ್ಣಚೆಟ್ಟಿ ಕ ಸಿ ಐ ಇ ಗೌರವ ಅಧ್ಯಕ್ಷರು 2 ರಾವ್ ಬಹದ್ದೂರ್ ಡಾ॥ ಸಿ ಬಿ ರಾಮರಾವ, ಅಧ್ಯಕ್ಷರು 3 ಶ್ರೀ॥ ಪಿ ಸಬ್ಬರಾಮಚೆಟ್ಟಿ, ಉಪಾಧ್ಯಕ್ಷರು 4 ಶ್ರೀ॥ ನಾರಾಯಣಗೋವಿಂದ ನಾಯಕ್—ಶ್ರೀರಾಮಾ ಸಿಲ್ಕ್ ಫ್ಯಾಕ್ಟರಿ, ಕೋಶಾಧ್ಯಕ್ಷರು 5 ಶ್ರೀ॥ ಕ ಸಂಪದ್ಗಿರಿರಾವ್ ಗೌರವ ಕಾರ್ಯದರ್ಶಿಗಳು, 6 ಶ್ರೀ॥ ಪಂಡಿತ ಸಿದ್ಧನಾಥ ಪಂತರು, ಸಂಚಾಲಕ ಕಾರ್ಯದರ್ಶಿಗಳು.

ದಕ್ಷಿಣ ಭಾರತ ಹಿಂದೀ ಪ್ರಚಾರ ಸಭೆಯ ಪ್ರಾಂತೀಯ ಕಾರ್ಯ ವಿಭಜನೆಯ ನಿಯಮಾನುಸಾರವಾಗಿ ಮೈಸೂರು, ಮದ್ರಾಸ್ ಮತ್ತು ಮುಂಬಾಯಿ ಕರ್ನಾಟಕ ಜಿಲ್ಲೆಗಳ ಸಮಸ್ತ ಕಾರ್ಯಭಾರವನ್ನು ಮೇಲ್ಕಂಡ ಸಭೆಯವರು 1937 ನೇ ಜನವರಿಯಿಂದ ವಹಿಸಿಕೊಳ್ಳುವರು.

ಅಮೋಘವಾದ ಹರಿಕಥಾ ಸಪ್ತಾಹ.

(ಒಬ್ಬ ಬಾತ್ಮೀದಾರರಿಂದ)

ಕಳೆದ ನವೆಂಬರ್ ತಾ॥ 21 ಶನಿವಾರದಿಂದ 27 ನೇ ಶುಕ್ರವಾರದವರೆಗೂ ಮೈಸೂರು ಸಂತೇಪೇಟೆ ಲೇಟ್ ಬೊಮ್ಮಯ್ಯನವರ ಛತ್ರದಲ್ಲಿ ಅಖಂಡ ರಾಮ ಸಪ್ತಾಹವು ನಡೆಸಲ್ಪಟ್ಟಿತು. ಪ್ರತಿ ದಿನ ಬೆಳಗ್ಗೆ ಶ್ರೀ ಗೀತಾಪ್ರಚಾರಿಣೀ ಸಭೆಯವರಿಂದ ಗೀತಾಪಾರಾಯಣವೂ, ಸಾಯಂಕಾಲ 6 ಘಂಟೆಯಿಂದ ರಾತ್ರಿ 9 ಘಂಟೆಯವರೆಗೂ ಬೆಂಗಳೂರು ಶ್ರೀ॥ ನರಸಿಂಹ ದಾಸರಿಂದ "ಕಬೀರ್‌ದಾಸ್, ಪ್ರಹ್ಲಾದ ಚರಿತ್ರೆ, ಸತಿ ಅನಸೂಯ, ಸಖೂಬಾಯಿ, ಗೋರ ಕುಂಬಾರ, ಸೇನಾನಾಯಿ, ದಾಮಾಜಿಪಂತ ಎಂಬ ಕಥೆಗಳು ನಡೆಸಲ್ಪಟ್ಟವು. ಇವಕ್ಕಾಗಿ ಪ್ರತಿದಿನವೂ ಸ್ತ್ರೀಪುರುಷರಾದಿಯಾಗಿ ತಂಡೋಪತಂಡವಾಗಿ ಶ್ರೋತೃಗಳು ದಯಮಾಡಿಸುತ್ತಿದ್ದರು.

ಶ್ರೀ॥ ನರಸಿಂಹ ದಾಸರವರು ಕಥಾಭಾಗವನ್ನು, ವಿಶೇಷವಾಗಿ ಬೆಳಸದೆ ಅರ್ಥಗರ್ಭಿತವಾದ ಅಮೂಲ್ಯವಾದ ವಿಷಯಗಳನ್ನು ಎಂದರೆ ಮಾನವ ಸ್ವರೂಪ, ಸದ್ಗುರುಲಾಭ, ಶಾಸ್ತ್ರ ಸಿದ್ಧತೆ, ಆತ್ಮಾನುಭವ ಎಂಬ ಅತ್ಯವಶ್ಯಕವಾದ ಗಾಢವಾದ ವಿಷಯಗಳನ್ನು ಪಂಡಿತಪಾಮರರಿಗೂ ತಿಳಿಯುವಂತೆ ಸರಳರೀತಿಯಿಂದ ಹೇಳುತ್ತಿದ್ದುದಲ್ಲದೆ ನಮ್ಮ ಸನಾತನ ಧರ್ಮವು ಆಧುನಿಕ ನಾಗರೀಕತೆಯಿಂದ ಹೇಗೆ ಹಿಂದಾಗುತ್ತಿದೆ ಎಂಬ ವಿಷಯವನ್ನೂ ಅನೇಕ ಉಪಮಾನ ಉಪಮೇಯಗಳಿಂದ ನಿರೂಪಿಸಿದ್ದು ಎಲ್ಲರನ್ನು ಮುಗ್ಧರನ್ನಾಗಿ ಮಾಡುತ್ತಿದ್ದಿತು.

ತಾ॥ 28 ನೇ ಶನಿವಾರ ಶ್ರೀರಾಮ ಚಂದ್ರಮೂರ್ತಿಯ ಉತ್ಸವವು ನಡೆದು ಸಮಗ್ರವಾದ ಮೇಲೆ ತಾ॥ 29 ನೇ ಭಾನುವಾರ ಸಾವಿರಾರು ಜನಗಳಿಗೆ ಮಹಾ ಸಂತರ್ಪಣೆ ನಡೆಯಿತು.

ಇಂಥಹ ಭಗವತ್ಸೇವೆಯನ್ನು ಇಷ್ಟು ಅತಿಶಯವಾಗಿ ನಡೆಸಿ ಎಲ್ಲರಿಗೂ ಆನಂದವನ್ನುಂಟುಮಾಡಿದ ಸಪ್ತಾಹದ ಕಾರ್ಯದರ್ಶಿಗಳು ಮತ್ತು ಇವರ ಸಹಾಯಕರೂ ವಂದನೀಯರಾಗಿರುತ್ತಾರೆ.

ಮೈಸೂರು ಕಫೆ

ಮೈಸೂರು ಉಡುಪಿ ಆನಂದ ಭವನದ ಮಾಲೀಕರಾದ ಶ್ರೀ ಗುರುರಾಜಾಚಾರ್ಯರವರೂ, ಮತ್ತು ಗೋಪಾಲಾಚಾರ್ಯರವರೂ ಸಹ ಮದರಾಸ್ ಸಾಹುಕಾರ್ ಪೇಟೆಯಲ್ಲಿ "ಮೈಸೂರು ಕಫೆ" ಎಂಬ ಹೆಸರಿನಿಂದ ನೂತನ ಫಲಾಹಾರ ಮಂದಿರವನ್ನು ಏರ್ಪಡಿಸಿರುವರು. ಮದರಾಸಿನ ಮೇಯರರವರು ಕಳೆದ 29 ನೇ ತಾ॥ ಭಾನುವಾರ ಇದರ ಪ್ರಾರಂಭೋತ್ಸವವನ್ನು ನೆರವೇರಿಸಿದರು. ಅನೇಕ ಜನ ಅತಿಥಿಗಳು ಬಂದಿದ್ದರು. ಎಲ್ಲರಿಗೂ ಸತ್ಕಾರ ಕೂಟವು ನಡೆಯಿತು.

ಮೃತ್ಯು ಕಿರಣ.

ಬ್ರಿಟಿಷರು ಮೃತ್ಯು ಕಿರಣವನ್ನು ಕಂಡುಹಿಡಿದಿರುವರಂತೆ! ಇದು ಇನ್ನೂ ಸ್ವಲ್ಪ ವರ್ಷಗಳಲ್ಲಿ ಯಾವ ದೇಶದ ವಿಮಾನವೂ ಬ್ರಿಟಿಷ್ ದ್ವೀಪದಲ್ಲಿ ಸುಳಿಯುವಂತಿಲ್ಲ. ಮೃತ್ಯುವಿನ ತೆರೆಯು ವಿಮಾನಯಂತ್ರದ ಬಿಮ್ಮ ಶಕ್ತಿಗುಂದಿಸಿ ವಿಮಾನವನ್ನು ಕೆಳಗಿಳಿಸುವುದು. ಈ ಕಿರಣಗಳು ಆಗರ ಅಪರಿಹಾರ್ಯ!! ಸಾವಿರಾರು ಅಡಿ ಎತ್ತರದಲ್ಲಿ ಹಾರುತ್ತಿರುವ ವಿಮಾನಗಳ ಮೇಲೆ ಈ ಕಿರಣಗಳನ್ನು ಗೋಪ್ಯವಾಗಿ ಪ್ರಯೋಗಿಸಿದ್ದಾಯಿತು. ಯಂತ್ರಗಳು ನಿಲ್ಲಿಸಿ, ಈ ಕಿರಣಗಳು ವಿಮಾನಗಳು ಭೂಮಿಗುರುಳುವವು. ಕಿರಣದ ಪ್ರಯೋಗವು ವಿಮಾನ ಶಾಖೆಯಲ್ಲಿ ಬಹು ಮಹತ್ವವಾಗಿ ಗಣಿಸಲ್ಪಟ್ಟಿದೆ. ಏಕೆಂದರೆ ಇಂಗ್ಲೆಂಡಿನ ರಕ್ಷಣೆಗೆ ಇದು ಅತ್ಯಾವಶ್ಯಕವು. ಹಾಗೆಯೇ ಮುಂದೆ ನಡೆಯುವ ಪ್ರಯೋಗಗಳೂ ಫಲಕಾರಿಯಾಗುವುದಾದರೆ ಬ್ರಿಟಿಷ್ ದ್ವೀಪಗಳ ಸುತ್ತಲೂ ಅಗೋಚರವಾದ ಒಂದು ತಡೆಯನ್ನು ಅಂತರಿಕ್ಷದಲ್ಲಿ ನಿರ್ಮಿಸಲು ಸಾಧ್ಯ. ಇದು ಇಪ್ಪತ್ತೆ ಮೂವತ್ತು ಸಾವಿರ ಅಡಿಗಳ ಎತ್ತರ ಹಾರುವ ವಿಮಾನಗಳನ್ನು ಒಲಗು ಬಲ್ಲುದೆಂದು ತಿಳಿದುಬಂದಿದೆ.

ಅನೇಕ ಶಾಸ್ತ್ರಜ್ಞರು ಪ್ರಯೋಗಶಾಲೆಗಳಲ್ಲಿ ಪರೀಕ್ಷಾರ್ಥವಾದ ಕಾರ್ಯ ತೊಡಗಿರುವರು. ಇದರ ತತ್ವವು ಗುಟ್ಟಾಗಿ ಹಲವು ವರ್ಷಗಳಿಂದಲೂ ಯ ಕಷ್ಟದಿಂದ ಕಂಡುಹಿಡಿದಾಗಿ ಉಪಗಿಸಲಾಗಿದೆ.

ಜರ್ಮನರ ಮೃತ್ಯು ಕಿರಣ

ಆಕರ್ಷಣ ಶಕ್ತಿಯನ್ನು ಉಪಯೋಗಿಸುವುದರಿಂದಲೇ, ವಿದ್ಯುತ್ತರಂಗಳಿಂದಲೂ, ರೇಡಿಯೋ ಅಲೆಗಳಿಂದಲೂ ಹೀಗೆ ಮಾಡುವುದು ದಕ್ಷ ಜರ್ಮನರು ಇಂತಹ ಮೃತ್ಯು ಕಿರಣಗಳನ್ನು ಪರೀಕ್ಷಿಸುತ್ತಿದ್ದಾರೆಂಬುದು ತಪ್ಪಿನದ್ದಾಗಿದ ತಾವು, ಅಲ್ಯೂಮಿನಿಯಂ ಲೋಹಗಳ ಆವರಣಗಳಿಂದ ಇದನ್ನು ತಪ್ಪಿಸಿಕೊಳ್ಳಲು ಸಾಧ್ಯ. ಈ ಕಿರಣಗಳನ್ನೂ ಒಂದು ವೇಳೆ ವೈಮಾನಿಕರು ತಪ್ಪಿಸಿಕೊಳ್ಳುವುದಾದರೆ ಅವನ ಸುರುವ ಬಾಂಬುಗಳೇ ಸಿಡಿದು ಅವನ ವಿಮಾನವು ನಾಶವಾಗುವುದು. ಈ ಕಿರಣಕ್ಕೆ ಅಲ್ಪ ನಿಮಿಷಗಳಲ್ಲಿ ಯಾವ ಪ್ರಾಣಿಯನ್ನಾದರೂ ಕೊಲ್ಲುವ ಶಕ್ತಿ ಯಿದೆ.

ಈಗ ಯುದ್ಧಕಾಲದ ಪರಿಸ್ಥಿತಿಗಳು, ಯುತ್ತಲಿವೆ. ವೈಮಾನಿಕನೇ ಇಲ್ಲದ ವಿಮಾನಗಳೂ, ಯುದ್ಧಕಾಲದಲ್ಲಿ ಒದಗಿಬರುವ ಹೆಚ್ಚಿದ ವಿಮಾನ ಶಕ್ತಿಯ ರಕ್ಷಣೆಯೂ ಇರುವ ವಿಮಾನಗಳನ್ನು ಕುರಿತು ಫಲಿತವನ್ನು ತಿಳಿಯಬೇಕಾಗಿದೆ. ಹೇಗೂ ಪ್ರಥಮದಲ್ಲಿ ಅಗೋಚರವಾದ ಒಂದು ಕೋಟೆಯನ್ನು ಅಂತರಿಕ್ಷದಲ್ಲಿ ಶತ್ರು ವಿಮಾನಗಳಿಗೆ ದುರ್ಭೇದ್ಯವಾಗುವಂತೆ ಕಟ್ಟಲು ಸಾಧ್ಯವೆಂದು ತಿಳಿದುಬಂದಿದೆ.

ಹರಿಜನರ ದೇವಾಲಯ ಪ್ರವೇಶ.

ತಿರುವಾಂಕೂರು ರಾಜರ ಆಜ್ಞೆ.

೨೦ ನಿಯಮಗಳು.

ತಿರುವಾಂಕೂರು ಮಹಾರಾಜರು ಹರಿಜನರಿಗೆ ದೇವಾಲಯಪ್ರವೇಶದ ಹಕ್ಕನ್ನು ಕೊಟ್ಟಿರುವರಷ್ಟೆ. ಆ ಸಂದರ್ಭದಲ್ಲಿ ಅವರು ಮಾಡಿರುವ ನಿಯಮಗಳನ್ನು ಈ ಕೆಳಗೆ ಕೊಟ್ಟಿದೆ —

(೧) 'ದೇವಾಲಯ' ಎಂದರೆ ಮುಖ್ಯ ದೇವಾಲಯ, ಸಣ್ಣ ಪುಟ್ಟ ದೇವಸ್ಥಾನಗಳು, ಮಂಟಪಗಳು ಮತ್ತು ಇತರ ಕಟ್ಟಡ ... ಕಲ್ಯಾಣಿಗಳು ಇವೆಲ್ಲ ಆ ಶಬ್ದಕ್ಕೆ ... ಮಾಡತಕ್ಕದ್ದು.

(೨) ದೇವಸ್ಥಾನಗಳಲ್ಲಿ ನಿತ್ಯೋತ್ಸವಗ, ಪೂಜೆಗಳು, ನೈವೇದ್ಯಗಳು, ವಿಧಿವ ..., ನಿತ್ಯವಿಧಾನಗಳು, ಮಾಸೋತ್ಸ ... ಮತ್ತು ವಿಶೇಷಗಳು ಇವೆಲ್ಲವೂ ... ಂತೆಯೇ ಸಂಪ್ರದಾಯಾನುಸಾರವಾ ... ಡೆಯತಕ್ಕದ್ದು ದೇವಸ್ವದ ಅಧಿಕಾರಿ ... ರಾಜ ನಿರೂಪದ ಉದ್ದೇಶಕ್ಕೆ ಅನು ... ಗಿ ಕಾಲಕಾಲಕ್ಕೆ ತಕ್ಕಂತೆ ಅರ್ಚ ..., ದೇವಾಲಯ ಪ್ರವೇಶಕ್ಕೂ ಅವ ... ಗಳನ್ನು ಕಲ್ಪಿಸತಕ್ಕದ್ದು.

(೩) ಗರ್ಭಗುಡಿಗೂ (ಶ್ರೀ ಕೋವಿ...) ... ಕಶಾಲೆಗೂ ಪ್ರವೇಶವಿಲ್ಲ. ಅಲ್ಲದೆ ... ಲೂ ಯಾವ ಯಾವ ಸ್ಥಳಗಳಿಗೆ ಯಾ... ಪ್ರವೇಶವಿಲ್ಲವೋ ಅವುಗಳಿಗೆ ಯಾ... ಪ್ರವೇಶ ಮಾಡಲಾಗದು.

(೪) ದೇವಾಲಯಕ್ಕೆ ಬರುವ ಭಕ್ತರೆಲ್ಲ ದೇವಸ್ವ ಅಧಿಕಾರಿಗಳ ಆಜ್ಞೆಗೆ ಒಳ... ತಕ್ಕದ್ದು.

(೫) (೧) ಹಿಂದುಗಳಲ್ಲದವರು (೨) ... ಶೌಚ, ಮೃತಾಶೌಚವುಳ್ಳವರು (೩) ... ಯಾದ ಹೆಂಗಸರು (೪) ಕುಡುಕ ಮತ್ತು ಪುಂಡು ಪೋಕರಿಗಳು (೫) ... ಮಿಕ ಮತ್ತು ಭೀಭತ್ಸವಾದ ರೋ... ದ ನರಳುತ್ತಿರುವವರು (೬) ಹು... (ದೇವಸ್ಥಾನದ ಅಧಿಕಾರಿಗಳ ಅ... ಪಡೆದು ಇಂತಹವರನ್ನು ದೇವಸ್ಥಾ... ಕರೆದುಕೊಂಡು ಹೋಗಬಹುದು) (೭) ಅಜನ್ಮ ಭಿಕ್ಷುಕರು, ಇವರು ... ಲಯಗಳಿಗೆ ಹೋಗಲು ಅಧಿಕಾರ ...

(...) ದೇವಾಲಯಗಳಿಗೆ ಹೋಗುವ ... ದ್ಧವಾದ ಮಗುಟವನ್ನು ಉಡ... ಲ್ಲದೆ ಸಂಪ್ರದಾಯಕ್ಕೆ ಅನುಗು... ರೀತಿಯಲ್ಲಿಯೇ ವಸ್ತ್ರಗಳನ್ನುಡ... ಪಾದರಕ್ಷೆಗಳನ್ನು ಧರಿಸಿ ಯಾ... ರೂ ಒಳಗೆ ಬರಲಾಗದು

(೭) ಎಲ್ಲರೂ ಸ್ವೈರ್ಮಾಲ್ಯ ನಿಯಮಕ್ಕೆ ಒಳಗಾಗಬೇಕು ಎಲ್ಲೂ ಉಗುಳಬಾರದು ಎಲೆ ಅಡಿಕೆ ಹಾಕಿಕೊಳ್ಳಬಾರದು. ಹೊಗೆ ಸೊಪ್ಪನ್ನು ಹಾಕಿಕೊಳ್ಳಬಾರದು ಹೊಗೆ ಬತ್ತಿ ಸೇದಬಾರದು. ಅಥವಾ ಇಂತಹ ಯಾವ ಪದಾರ್ಥಗಳನ್ನೂ ಒಳಕ್ಕೆ ತರಬಾರದು ಮಾಂಸ, ಮೀನು, ಮೊಟ್ಟೆ, ಮದ್ಯ ಸಾರಾಯಿ ಈ ಬಗೆಯ ಯಾವ ಪದಾರ್ಥಗಳನ್ನೂ ತೆಗೆದುಕೊಂಡು ಹೋಗಬಾರದು

(೮) ಪೂರ್ವಾಚಾರದಂತೆ ವಸ್ತ್ರಧಾರಣ ಮಾಡಬೇಕು ಯಾರಿಗೆ ಹಕ್ಕಿಲ್ಲವೋ ಅವರಲ್ಲದೆ ಬೇರೆ ಯಾರೂ ರುಮಾಲನ್ನಾಗಲೀ ಟೋಪಿಯನ್ನಾಗಲೀ ಧರಿಸಲಾಗದು. ಕೊಡೆಯನ್ನು ತೆಗೆದುಕೊಂಡು ಹೋಗಲಾಗದು. ಸೀಮೆಯೆಣ್ಣೆ ದೀಪಗಳನ್ನು ಒಳಗೆ ತೆಗೆದುಕೊಂಡು ಹೋಗಬಾರದು

(೯) ಸ್ನಾನಮಾಡದೆ, ಅವರವರ ಜಾತಿ ಧರ್ಮಗಳಿಗೆ ಅನುಸರಿಸಿ ಮುಖಕ್ಕೆ ಏನಾದರೂ ಇಟ್ಟುಕೊಳ್ಳದೆ, ಮಡಿಯನ್ನು ಉಟ್ಟುಕೊಳ್ಳದೆ ಒಳಕ್ಕೆ ಬರಲಾಗದು. ಹಿಂದುಗಳಲ್ಲದೆ ಮತ್ತೆ ಯಾರೂ ದೇವಾಲಯಕ್ಕೆ ಸಂಬಂಧಪಟ್ಟ ಕೊಳಗಳಲ್ಲಿ ಇಳಿಯಬಾರದು. ಯಾವ ಕೊಳಗಳು ದೇವಾಲಯದವರಿಗೇ ಮೀಸಲಾಗಿವೆಯೋ ಅವುಗಳನ್ನು ಯಾರೂ ಉಪಯೋಗಿಸಬಾರದು

(೧೦) ಎಲ್ಲಿಗೆ ಬರಬಾರದೆಂದು, ಮೊದಲಿನಿಂದಲೂ ಪದ್ಧತಿ ಇದೆಯೋ ಅದು ಎಲ್ಲಾ ಪಂಗಡಗಳವರಿಗೂ ಅನ್ವಯಿಸುತ್ತದೆ

(೧೧) ದೇವಾಲಯದಲ್ಲಿ ಪೂಜೆಗಳು ನಡೆಯುತ್ತಿರುವಾಗ, ಅವಕ್ಕೆ ಅಡ್ಡಿಯುಂಟಾಗುವಂತೆ ಗಟ್ಟಿಯಾಗಿ ಮಾತನಾಡಬಾರದು ಅಥವ ಪವಿತ್ರ ವಾತಾವರಣಕ್ಕೆ ಭಂಗ ತರುವಂತಹ ಯಾವ ಕೆಲಸವನ್ನೂ ಮಾಡಲಾಗದು.

(೧೨) ದೇವಾಲಯಗಳಿಗೆ ಬಂದವರು ಅಲ್ಲಿನ ಯಾವ ಸ್ಥಳದಲ್ಲೂ ಮತ್ತೆ ಯಾವ ಕೆಲಸವನ್ನೂ ಮಾಡಲಾಗದು.

(೧೩) ದೇವಾಲಯಕ್ಕೆ ಬಂದವರು ದೇವಾಲಯದ ಪವಿತ್ರತೆ, ಮತ್ತು ನೈರ್ಮಲ್ಯಕ್ಕೆ ಲೋಪ ತರುವಂತಹ ಯಾವ ವ್ಯಾಪಾರವನ್ನೂ ನಡೆಸಕೂಡದು

(೧೪) ಈ ನಿಯಮಗಳ ಪಾಲನೆಯಲ್ಲಿ ಭಿನ್ನಾಭಿಪ್ರಾಯವುಂಟಾದಲ್ಲಿ ದೇವಸ್ವ ಅಧಿಕಾರಿಗಳಿಗೆ ಮಾರೆ ಇಟ್ಟುಕೊಳ್ಳಬಹುದು

(೧೫) ದೇವಸ್ವ ಅಧಿಕಾರಿಗಳಿಗೆ ಸರಿಯಾದ ಕಾರಣಗಳು ಕಂಡುಬಂದರೆ, ಯಾರನ್ನು ಬೇಕಾದರೂ ದೇವಾಲಯದಿಂದ ಹೊರಕ್ಕೆ ಕಳುಹಿಸಬಹುದು. ಅವರ ಆಜ್ಞೆಯನ್ನು ಉಲ್ಲಂಘಿಸುವವರನ್ನು ಅವರು ಪೋಲೀಸ್ ಅಧಿಕಾರಿಗಳಿಂದ ದಸ್ತಗಿರಿ ಮಾಡಿಸಬಹುದು ಕ್ರಿಮಿನಲ್ ಪ್ರೊಸೀಜರ ಕೋಡಿನ ೩೬ ನೆ ವಿಧಿಯಂತೆ ಕಾರ್ಯಕ್ರಮ ನಡೆಸಬಹುದು.

(೧೬) ದೇವಾಲಯಕ್ಕೆ ಬಂದವರು ಯಾರಾದರೂ ಅಲ್ಲಿನ ಪೂಜಾದ್ಯವಸರಗಳಿಗೆ ಭಂಗ ತಂದರೆ ಪ್ರಾಯಶ್ಚಿತ್ತಾದಿ ಕರ್ಮಗಳಿಗೆ ಆಗುವ ವೆಚ್ಚವನ್ನು ದಂಡವಾಗಿ ಕೊಡಬೇಕು ಆ ದಂಡವನ್ನು ಕಂದಾಯದ ಬಾಕಿ ವಸೂಲಿಯಂತೆ ವಸೂಲ್ಮಾಡಬಹುದು

(೧೭) ದೇವಾಲಯದ ಮೇಲೆ ಅಧಿಕಾರವಿರುವ 'ಗೆಜೆಟೆಡ್' ಅಧಿಕಾರಿಯ ಜೂರಿ ಇಲ್ಲದೆ ಯಾರ ಮೇಲೂ ಕ್ರಿಮಿನಲ್ ವ್ಯವಹಾರ ನಡೆಸಲಾಗದು.

(೧೮) ದೇವಸ್ವ ಅಧಿಕಾರಿಗಳ ಮೇಲಾಗಲೀ, ಇತರ ಅಧಿಕಾರಿಗಳ ಮೇಲಾಗಲೀ, ಈ ನಿಯಮಗಳಿಗೆ ಸಂಬಂಧಪಟ್ಟಂತೆ, ಕರ್ತವ್ಯ ನಿರ್ವಾಹ ಮಾಡಿದಾಗ ಅವರ ಮೇಲೆ ಯಾರೊಬ್ಬರೂ ವ್ಯವಹಾರವನ್ನಾಗಲೀ ಮೊಕದ್ದಮೆಯನ್ನಾಗಲೀ ಹೂಡಲಾಗದು.

(೧೯) ಈ ನಿಯಮಗಳ ವಿಚಾರದಲ್ಲಿ ಭಿನ್ನಾಭಿಪ್ರಾಯವುಂಟಾದರೆ ಅನುಮಾನವುಂಟಾದರೆ ಜಗಳವುಂಟಾದರೆ ದಿವಾನರ ತೀರ್ಮಾನವೇ ಕಟ್ಟಕಡೆಯದು

(೨೦) ವಿಶೇಷ ಸಂದರ್ಭಗಳಲ್ಲಿ ದಿವಾನರು ತಮಗೆ ಸೂಕ್ತ ಕಂಡಂತೆ, ಈ ನಿಯಮಗಳಿಗೆ ಸಂಬಂಧಪಟ್ಟ ಹಾಗೆ ಆಜ್ಞೆ ಮಾಡಬಹುದು.

ಖಾದಿಯ ಉಡುಪನ್ನೇ ಕೊಡಬೇಕು.

ಸ್ಯಾನಿಟರಿ ಇನ್ಸ್ಪೆಕ್ಟರುಗಳಿಗೆ

ಮದ್ರಾಸು ಕಾರ್ಪೊರೇಷನ್ನಿನ ಕೌನ್ಸಿಲ್ ಮೀಟಿಂಗು ನಡೆಯಿತು. ಆರೋಗ್ಯ ಇಲಾಖೆಯ ೨೩ ಜನ ಸ್ಯಾನಿಟರಿ ಇನ್ಸ್ಪೆಕ್ಟರುಗಳಿಗೂ ೧೭ ಜನ ಪ್ರೋಸೆಸ್ ಸರ್ವರುಗಳಿಗೂ ಉಡುಪನ್ನು ಹೊಲಿಸಿಕೊಡುವ ವಿಷಯವು ಚರ್ಚೆಗೆ ಬಂದಿತು.

ಒಬ್ಬ ಕಾಂಗ್ರೆಸ್ ಕೌನ್ಸಿಲರು ಎಲ್ಲರಿಗೂ ಖಾದಿ ಪಟ್ಟೆ, ಷರ್ಟ್, ಹ್ಯಾಟ್ ಮುಂತಾದುವುಗಳನ್ನು ಒದಗಿಸಬೇಕೆಂದು ಸೂಚಿಸಿದರು.

ಶ್ರೀ ಎಂ. ಎಸ್. ವರದಾಚಾರಿಯವರು ಇದನ್ನು ಸಮರ್ಥಿಸುತ್ತಾ ಖಾದಿಯು ಜನರಿಗೆ ಅವಶ್ಯಕವಾದುದೆಂದೂ ಅದು ದಯಾಪರತೆಯನ್ನುಂಟುಮಾಡುವುದೆಂದೂ ಖಾದಿಯನ್ನು ಧರಿಸಿದ ಕೂಡಲೇ ಕೋಟ್ಯಂತರ ಹಸಿದ ಭಾರತೀಯ ಜನರ ನೆನಪುಂಟಾಗುವುದೆಂದೂ ತಿಳಿಸಿದರು

ಶ್ರೀಮತಿ ರುಕ್ಮಿಣೀ ಲಕ್ಷ್ಮೀಪತಿಯವರು ಮಾತನಾಡುತ್ತಾ ಖಾದಿಯನ್ನು ಧರಿಸಿದ ಹೆಂಗಸರು ಹೆಚ್ಚು ಸೌಂದರ್ಯವನ್ನು ಪಡೆಯುತ್ತಾರೆಂದು ತಿಳಿಸಿದರು. ಠರಾವು ಅಂಗೀಕೃತವಾಯಿತು.

ಭಗಿನೀ ಸೇವಾಸಮಾಜ, ಮೈಸೂರು.

ತಾ|| 21-11-36 ನೆಯ ದಿನ ಮೇಲ್ಕಂಡ ಸಮಾಜದ 14 ನೇ ವಾರ್ಷಿಕ ಮಹೋತ್ಸವವು ಶ್ರೀಮತಿ ಸೌ|| ರಾಜಕುಮಾರಿ ಲೀಲಾವತಿಯವರ ಅಧ್ಯಕ್ಷತೆಯಲ್ಲಿ ಬಹಳ ವಿಜೃಂಭಣೆಯಿಂದ ನೆರವೇರಿತು. ಸಮಾಜದ ಆವರಣದಲ್ಲಿ ಮಂಟಪವು ಏರ್ಪಡಿಸಲ್ಪಟ್ಟಿದ್ದಿತು ಸುಮಾರು ಮುನ್ನೂರು ಮಂದಿ ಮಹಿಳೆಯರು ಸೇರಿದ್ದರು.

ಪ್ರಾರಂಭದಲ್ಲಿ ದೇವತಾ ಪ್ರಾರ್ಥನೆಯು ನಡೆಯಿತು ತರುವಾಯ ಈ ಸಮಾಜದ ಗೌ|| ಕಾರ್ಯದರ್ಶಿಯವರಾದ ಶ್ರೀಮತಿ ವೈ. ಕೆ. ಅಮೃತಾಬಾಯಿಯವರು ವರದಿಯನ್ನು ಓದಿದರು.

ಕಳೆದ ಎರಡು ವರುಷಗಳ ಕಾರ್ಯಕ್ರಮಗಳೂ ಈ ವರದಿಯಲ್ಲಿ ಸೇರಿಸಲ್ಪಟ್ಟಿವೆ.

ನಮ್ಮ ಸ್ತ್ರೀಯರು ಸದ್ಗೃಹಿಣಿಯರಾಗಲು ಅವಶ್ಯಕವಾದ ವಿದ್ಯಾಭ್ಯಾಸವೂ, ಕೈಗಾರಿಕೆಯ ಏರ್ಪಾಡುಗಳೂ, ಕುಶಲವಿದ್ಯೆಗಳೂ ಇಲ್ಲಿ ನಡಿಸಲ್ಪಡುತ್ತವೆ ಇಂಗ್ಲೀಷ್ ಕನ್ನಡ, ಹಿಂದಿ, ಸಂಸ್ಕೃತ ಭಾಷೆಗಳು ಕಲಿಸಲ್ಪಡುತ್ತವೆ ಕನ್ನಡದಲ್ಲಿ 20 ಮಂದಿ ಇಂಗ್ಲೀಷಿನಲ್ಲಿ 32 ಮಂದಿ ಹಿಂದಿಯಲ್ಲಿ 12 ಮಂದಿ ಸಂಸ್ಕೃತದಲ್ಲಿ 4 ಮಂದಿ ವ್ಯಾಸಂಗ ಮಾಡುತ್ತಿರುವರು ಕೈಗಾರಿಕೆ ಶಾಖೆಯಲ್ಲಿ 45 ಮಂದಿ ಹೊಲಿಗೆಯಲ್ಲಿ 25 ಮಂದಿ, ಕಲಿಯುತ್ತಿರುತ್ತಾರೆ ಒಟ್ಟು 180 ಮಂದಿ ಸ್ತ್ರೀಯರು ಇಲ್ಲಿ ಶಿಕ್ಷಣ ಪಡೆಯುತ್ತಿರುತ್ತಾರೆ ಪ್ರಾಥಮಿಕ ತರಗತಿಯಿಂದ ಪ್ರೌಢ ತರಗತಿಯವರೆಗೂ ವಿದ್ಯೆಯು ಕಲಿಸಲ್ಪಡುವದು

ಈ ಸಮಾಜದಲ್ಲಿ "ಕರ್ನಾಟಕ ಸಂಘ" ಒಂದಿದೆ ಈ ಸಂಘದ ಆಶ್ರಯದಲ್ಲಿ ಪುರಾಣಗಳೂ, ಹರಿಕಥೆಗಳೂ, ಕಾವ್ಯ ಪಠನವೂ, ಭಾಷಣಗಳೂ ನಡಿಸಲ್ಪಡುತ್ತವೆ. ಕವಿ ಸಪ್ತಾಹವು ನಡೆದಿದೆ ಈ ಎರಡು ವರುಷಗಳಲ್ಲೂ ಸಮಾಜಕ್ಕೆ 9310 ರೂ. ಆದಾಯ ಬಂದಿದೆ. 9304 ರೂ ಖರ್ಚಾಗಿದೆ

ಸುಮಾರು ಐವತ್ತು ಮಂದಿ ವಿದ್ಯಾರ್ಥಿನಿಯರಿಗೆ ನಾನಾ ಶಾಖೆಗಳಲ್ಲಿ ತೇರ್ಗಡೆಯಾದುದರಿಂದ ಬಹುಮಾನಗಳು ಹಂಚಲ್ಪಟ್ಟವು

ಅಧ್ಯಕ್ಷಸ್ಥಾನವನ್ನು ವಹಿಸಿದ್ದ ಶ್ರೀಮತಿ ಸೌ|| ರಾಜಕುಮಾರಿಯವರು ತಮಗೆ ಸಮರ್ಪಿಸಿದ ಮಾನ ಪತ್ರಕ್ಕೆ ಪ್ರತ್ಯುತ್ತರವಾಗಿಯೂ ಮತ್ತು ಈ ಸಮಾಜದ ಅಭಿವೃದ್ಧಿಗೆ ಸಾಧಕವಾಗಿಯೂ ಇರುವಂತಹ ಅತ್ಯಮೂಲ್ಯ ಭಾಷಣವನ್ನು ಮಾಡಿ ಈ ಸಮಾಜಕ್ಕೆ ಸರ್ವತೋಮುಖವಾದ ಅಭಿವೃದ್ಧಿಯಾಗುವಂತೆ ಬಯಸಿ ತಮ್ಮ ಭಾಷಣವನ್ನು ಪರಿಸಮಾಪ್ತಿ ಮಾಡಿದರು. ವಂದನಾ ಸಮರ್ಪಣೆಯೊಡನೆ ಸಭೆಯು ಮುಕ್ತಾಯವಾಯಿತು.

ಈಗಿನ ಗ್ರಾಮೋದ್ಧಾರ

ಲೇಖಕರು.—ಎಸ್. ಎಸ್.

ನಂಜನಗೂಡು ತಾಲ್ಲೂಕು ತಂಡ್ಯವೆಂಬುದೊಂದು ಗ್ರಾಮ. ಅಲ್ಲಿಂದ ಮೈಸೂರು ರಸ್ತೆಯವರೆಗೆ ಅಂದವಾದ ರಸ್ತೆಯನ್ನು ಈಚೆಗೆ ಮಾಡಿರುವರು. ಬಚ್ಚಲು ನೀರಿಗಾಗಿ ಸಿಮೆಂಟಿನ ಗುಂಡಿಗಳನ್ನು ಕಟ್ಟಿಸಿರುವರು. ಒಂದು ಸ್ಕೂಲಿದೆ. ಹೈಲು ಇಲ್ಲಿ ನಿಲ್ಲುತ್ತದೆ. ವ್ಯವಸಾಯದ ಇಲಾಖೆ, ಕೈಗಾರಿಕಾ ಇಲಾಖೆಯವರುಗಳು ಎಷ್ಟು ಸಹಾಯ ಸಾಧ್ಯವೋ ಅದೆಲ್ಲವನ್ನೂ ಮಾಡಿರುವರು. ವಿದ್ಯುಚ್ಛಕ್ತಿಯ ದೀಪಗಳಿವೆ. ಹೊಸ ತರಹದ ನೇಗಿಲುಗಳನ್ನು ಒದಗಿಸಿರುವರು. ಕಂಬಳಿ ನೇಯ್ಗೆ, ರೇಷ್ಮೆ ನೇಯುವುದು ಮುಂತಾದ ಶಿಕ್ಷಣಗಳು ಕೊಡಲ್ಪಡುತ್ತಲಿವೆ. ದನಗಳ ತಳಿಯನ್ನು ವೃದ್ಧಿಪಡಿಸಲು ಉತ್ತಮವಾದ ಗೂಳಿಗಳಿವೆ. ಬಿತ್ತನೆ ವಗೈರೆ ಕೆಲಸಗಳಿಗಾಗಿ ಎಂತದಾದರೂ ಒಂದು ಸಹಕಾರ ಸಂಘವನ್ನೂ ಏರ್ಪಡಿಸುವವರಾಗಿರುವರು. ಇಂತಹ ಹಲವು ಸೌಕರ್ಯಗಳಿಗಾಗಿ ಎಷ್ಟು ಹಣವೂ, ಸರ್ಕಾರದ ಅಧಿಕಾರಿಗಳ, ದೇಶ ಹಿತೈಷಿಗಳ ಶ್ರಮವೂ ಸಹ ಸಂದಿದೆಯೋ

ನಾವು ಸರ್ಕಾರವನ್ನು ಕೇಳುವುದಿಷ್ಟೇ. ಈ ಎಲ್ಲ ಕೆಲಸಗಳಿಗಾಗಿ ರೈತನು ಹೊರಬೇಕಾದ ಖರ್ಚು ಎಷ್ಟು? ಅದಕ್ಕೆ ಪ್ರತಿಯಾಗಿ ಅವನ ವರಮಾನವು ಹೆಚ್ಚಿದೆಯೆ?

ಆ ಊರಿನ ಪ್ರಜಾಸಂಖ್ಯೆಯು 1500. ಆ ಗ್ರಾಮದ ತರಿ ಜಮೀನು 300 ಎಕರೆಗಳು. ಅದರಲ್ಲಿ ಆ ಊರಿನವರಿಗಿರುವುದು ನಲವತ್ತು ಎಕರೆಗಳು ಮಾತ್ರ. ಖುಷ್ಕಿ ಜಮೀನುಗಳು ಸುಮಾರು 800 ಎಕರೆಗಳು. ಅದರಲ್ಲಿ ಊರಿನವರಿಗಿರುವುದು ಸುಮಾರು 679 ಎಕರೆಗಳು. ಬೇರೆ ಗ್ರಾಮಗಳಲ್ಲಿ ಇದ್ದವರಿಗಿರುವುದು ಉಳಿದಷ್ಟು. ಇಲ್ಲಿನ ಜಮೀನು ಉತ್ಪತ್ತಿ ಎಲ್ಲವನ್ನೂ ಲೆಕ್ಕಹಾಕಿದರ ತಲೆ ಒಂದಕ್ಕೆ ಎರಡು ಕೊಳಗದಂತೆ ಬತ್ತ ಒಂದು ವರ್ಷಕ್ಕೆ ಬೆಳೆಯುತ್ತಲಿದೆ. ಇದಕ್ಕಾಗಿ ರೈತನು ಪ್ರತ್ಯಕ್ಷವಾಗಿ ತಲೆ ಒಂದಕ್ಕೆ 1-8-0 ರೂ. ಅಪ್ರತ್ಯಕ್ಷವಾಗಿ ಒಂದು ವರ್ಷಕ್ಕೆ 0-8-0 ಲೆಕ್ಕದಂತೆ ಕೊಡುತ್ತಿದ್ದಾನೆ. ಇಷ್ಟರಿಂದ ಜೀವಿಕೆಗೆ ಉಳಿಯುವುದೆಷ್ಟು? ಇದರ ಫಲವಾಗಿಯೂ ಗ್ರಾಮದ ಭೂಮಿಗಳೆಲ್ಲವೂ ಹೊರ ಊರಿನವರ ಪಾಲಾಗುತ್ತಿರುವುವು. ನಮಗೆ ತಿಳಿದಂತೆ ವ್ಯವಸಾಯಗಾರರಿಗೆ ಸ್ವಂತ ಭೂಮಿ ಇಲ್ಲದವರು ಬಹ ಮಂದಿ ಇದ್ದಾರೆ. ... ಮಂಡಲಿಗೆಗಳಿಗೇ ಗಿರಾಕಿ ಸಾಲದು.

ಇದು ಇಷ್ಟೇ ಕೆಲಸವನ್ನು ಕಾಂಗ್ರೆಸ್ಸಿನವನು ಮಾಡಿದ್ದರ ನಾನು ಮೊದಲು ದುಡ್ಡು ಕೊಟ್ಟು ಎಲ್ಲಿನ ಕಂಬಳಿ, ಮಂಡಲಿಗೆಗಳನ್ನೇ ಉಪಯೋಗಿಸುತ್ತಿದ್ದೆನು. ಊರು ಮುಂದಿನ ಕೆರೆ ಅಂಗಳವನ್ನು ವ್ಯವಸಾಯ ಪರಿಶೋಧನಾ ಕ್ಷೇತ್ರವನ್ನಾಗಿ ಮಾಡಿ ರೈತನ ಸಂಗಡಲೇ ತಾನೂ ಉತ್ತಮ ವಾದ ಬೆಳೆಗಳನ್ನು ಬೆಳೆಯುತ್ತಿದ್ದೆನು. ಸರ್ಕಾರವು ತಾನು ಮಾಡಿರುವ ಕೆಲಸಕ್ಕಾಗಿ ವಂದಿಸಿ, ಜನರಿಗೆ ಇರುವ ಕುಂದು ಕೊರತೆಗಳನ್ನು ಮುಂದಿಡ ಬಯಸುವುದು ಮಾತ್ರ ಈ ಲೇಖನದ ಉದ್ದೇಶವು. ಈ ಲೇಖನದಲ್ಲಿರುವ ಅಂಕೆಗಳಲ್ಲಿ ತಪ್ಪಿದ್ದರ ತೋರಿಸಿ ಕೊಟ್ಟರೆ ತಿದ್ದಿಕೊಳ್ಳಲು ಸಿದ್ಧರಾಗಿರುವೆವು.

ಆರ್ಥಿಕಮುಗ್ಗಟ್ಟಿನ ಪರಿಹಾರ

(ಬರೆದು ಬಂದದ್ದು)

ತಗಡೂರು ಗ್ರಾಮ ಪಂಚಾಯತಿ ಭವನದಲ್ಲಿ ಶ್ರೀ॥ ತಗಡೂರು ರಾಮಚಂದ್ರರಾಯರ ಪ್ರಾರ್ಥನೆಯ ಪ್ರಕಾರ 28 11 36 ನೇ ಶನಿವಾರ ಬೆಳಗ್ಗೆ 9 ಘಂಟೆಗೆ ಸರಿಯಾಗಿ ಗ್ರಾಮಪಂಚಾಯಿತಿ ಮತ್ತು ಎಲ್ಲಾ ಕೋಮುಗಳ ಮುಖಂಡರುಗಳು ಶ್ರೀ॥ ಭಾಸ್ಕರರಾಜೇ ಅರಸಿನವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ಈ ಕೆಳಗೆ ಕಂಡ ರಿಸಾಲ್ಯೂಷನ್‌ಗಳನ್ನು ಪಾಸುಮಾಡಲಾಯಿತು

1. ದಿವಾನ್ ಸಾಹೇಬರವರು 28-10-36 ರಲ್ಲಿ ಮೈಸೂರಿನಲ್ಲಿ ನಡೆದ ಪ್ರಜಾಪ್ರತಿನಿಧಿ ಸಭೆಯಲ್ಲಿ ಅಪ್ಪಣೆಕೊಡಿಸಿದ ಭಾಷಣದಲ್ಲಿ ಮುಖ್ಯವಾದ ಗ್ರಾಮ ಕೈಗಾರಿಕೆಗಳ ಪುನರುಜ್ಜೀವನದ ತತ್ವವನ್ನೂ, ಮೈಸೂರು ಸರ್ಕಾರದ ಖಾದಿಕೇಂದ್ರವಾದ ಬದನವಾಳು ಗ್ರಾಮದ ಕೇಂದ್ರಕ್ಕೆ ಸ್ವಾವಲಂಬನ ತತ್ವವನ್ನು ಜಾರಿತರುವ ಸಲುವಾಗಿ ಸರ್ಕಾರದವರು ಕೊಟ್ಟಿರುವ (ತಮ್ಮ ಹುಕುಂ ನಂ. ಡಿ 3190-91 ಇ ಟಿ ಸಿ 19-31-2 ತಾ॥ 26-11-31 ರಲ್ಲಿ) ಹುಕುಮ್ಮನ್ನೂ, ಅದರಂತೆ ಬದನವಾಳಿನವರು ಕಾರ್ಯತಃ ಜಾರಿಗೆ ತಂದು ಪ್ರಕಟಿಸಿರುವ ವರದಿಯನ್ನೂ ತಗಡೂರು ಖಾದಿ ಕೇಂದ್ರದ ವರದಿಯನ್ನೂ, ಪರಿಶೀಲಿಸಲಾಗಿ ಗ್ರಾಮ ಕೈಗಾರಿಕೆಗಳಿಂದ ಬಹಳ ಜನರಿಗೆ ಜೀವನೋಪಾಯವೂ, ಉದ್ಯೋಗವೂ ದೊರತು, ಸ್ವಾವಲಂಬನವೂ ಜೀವನದಲ್ಲಿ ಧೈರ್ಯವೂ ಉಂಟಾಗುತ್ತದೆಂದು ಗೊತ್ತಾಗುತ್ತದೆ. ಆದುದರಿಂದ ದಿವಾನ್ ಸಾಹೇಬರು ಅಪ್ಪಣೆಕೊಡಿಸಿರುವ ಪ್ರಕಾರ ತಗಡೂರು ಗ್ರಾಮ ಪಂಚಾಯತಿಯವರು ಕೈರಾಟೆ, ಕೈಮಗ್ಗ, ಕಂಬಳಿ, ಚಾಪೆ, ಹಗ್ಗ, ಎಣ್ಣೆ ಮತ್ತು ಹಿಂಡಿ ಈ ಕೈಗಾರಿಕೆಗಳನ್ನು ಉತ್ತೇಜನಪಡಿಸಿ ಗ್ರಾಮದಲ್ಲೇ ತಯಾರುಮಾಡಿ, ಅಲ್ಲೇ ಉಪಯೋಗಿಸುವಂತೆ ಮಾಡಬೇಕೆಂದು ಈ ಸಭೆಯು ನಿರ್ಧರಿಸಿರುತ್ತದೆ.

2 ತಗಡೂರಲ್ಲಿ ಪ್ರತಿಯೊಂದು ಕೋಮಿನವರಿಂದಲೂ ಹೊರಗಿನಿಂದ ಪದಾರ್ಥಗಳಿಗಾಗಿ ಎಷ್ಟೆಷ್ಟು ರೂಪಾಯಿಗಳು ಮನೆ ಬಿಟ್ಟು ಹೊರಗೆ ಹೋಗುತ್ತದೆ ಎಂಬುದನ್ನು, ಪ್ರತಿಯೊಂದು ಮನೆಯವರಿಗೂ ಪ್ರತಿಯೊಂದು ಕೋಮಿನವರಿಗೂ ತಿಳಿಸುವ ಸಲುವಾಗಿಯೂ ಈ ಕೈಗಾರಿಕೆಗಳನ್ನು ನಾವೇ ಮಾಡಿ ಉಪಯೋಗಿಸಿದರೆ ಎಷ್ಟು ರೂಪಾಯಿಗಳು ಉಳಿಯುವುವೆಂಬುದನ್ನು ತಿಳಿಸುವುದಕ್ಕಾಗಿಯೂ ಈ ಕಾರ್ಯವನ್ನು ಪ್ರತಿಯೊಂದು ಕೋಮಿನ ಯಜಮಾನರುಗಳೂ ಗ್ರಾಮಪಂಚಾಯಿತಿಯವರೂ ನೆರವೇರಿಸುವಂತೆ ಜನರಿಗೆ ಉತ್ತೇಜನಪಡಿಸಿ ಈ ಮಹಾ ಆರ್ಥಿಕ ಮುಗ್ಗಟ್ಟನ್ನು ಪರಿಹರಿಸಬೇಕೆಂಬುದಾಗಿಯೂ ನಿರ್ಧರಿಸಿ ಗ್ರಾಮ ಸರ್ವೆ ಮಾಡುವ ಸಲುವಾಗಿ ಈ ಕೆಳಗೆ ಕಂಡ ಮಹನೀಯರುಗಳೊಳಗೊಂಡ ಒಂದು ಸಮಿತಿಯನ್ನು ನೇಮಕಮಾಡಲಾಗಿದೆ

ಶ್ರೀ॥ ಗಳಾದ 1 ಗೋವಿಂದಸ್ವಾಮಿ ಅಯ್ಯಂಗಾರರವರು 2 ಕೆ ಸುಬ್ರಾಯರವರು 3 ಭಾಸ್ಕರರಾಜೇ ಅರಸಿನವರು 4. ಶಕ್ತಿ ಮಾದಪ್ಪನವರು 5. ದೇವರ್ಸೆ ಬಸಪ್ಪನವರು 6 ಸಾ॥ ಅಶ್ವತ್ಥನಾರಣಪ್ಪನವರು 7 ಉಪ್ಪುತ್ತೂರು ದೇವಣ್ಣನವರು 8, ದೊಡ್ಡ ನಾಗಪ್ಪಶೆಟ್ಟರು 9 ತಗಡೂರು ರಾಮಚಂದ್ರರಾಯರು

3 ಸರ್ವೆ ವರದಿಯು 1937 ನೇ ಜನವರಿ ಅಂತ್ಯದೊಳಗಾಗಿ ಮುಗಿದು ಗ್ರಾಮಪಂಚಾಯಿತಿಗೆ ಒಪ್ಪಿಸಬೇಕೆಂದೂ ಪಂಚಾಯಿತಿಯವರು ಆ ವರದಿಯನ್ನು ಸಹಾಯ ಸಮಾಲೋಚನೆಗಾಗಿ ಬಗ್ಗೆ ಸರಕಾರಕ್ಕೆ ಕಳುಹಿಸಿ ಅಪ್ಪಣೆಯನ್ನು ಪಡೆಯಬೇಕೆಂದೂ ಸಹ ಈ ಸಭೆಯು ನಿರ್ಧರಿಸಿರುತ್ತದೆ.

4. ಸರಿಯಾದ ವಾತಾವರಣವನ್ನುಂಟುಮಾಡುವ ಸಲುವಾಗಿ ಸುತ್ತಮುತ್ತಣ ಗ್ರಾಮಪಂಚಾಯಿತಿಗಳಿಗೂ ಮುಖಂಡರುಗಳಿಗೂ ಮಂತ್ರಿಮಂಡಲದ ಗಮನಕ್ಕೆ ತರುವ ಸಲುವಾಗಿ ಚೀಫ್ ಸೆಕ್ರೆಟರಿಯವರಿಗೂ ಪ್ರಜಾಪ್ರತಿನಿಧಿಸಭೆ ಮತ್ತು ಸಾರ್ವಜನಿಕ ಸಂಸ್ಥೆಗಳಿಗೂ ಕಳುಹಿಸಬೇಕೆಂದು ಈ ಸಭೆಯು ನಿರ್ಧರಿಸಿದೆ

" ಮೋಕ್ಷ ವಿಮರ್ಶೆ "

ಶ್ರೀ॥ ಕೆ. ಪಿ ಪುರಾಣಿಕರು ತಮ್ಮಿಂದ ರಚಿತವಾದ ಮೇಲ್ಕಂಡ ಹೆಸರಿನ ಗ್ರಂಥವೊಂದನ್ನು ನಮಗೆ ಕಳುಹಿಸಿದ್ದಾರೆ. ಅದನ್ನು ಕೃತಜ್ಞತೆಯಿಂದ ಸ್ವೀಕರಿಸಿದ್ದೇವೆ. ಮೋಕ್ಷವು ನಿತ್ಯವೋ ಅನಿತ್ಯವೊ, ಎಂಬುದನ್ನು ಈ ಪುಸ್ತಕದಲ್ಲಿ ವಿಮರ್ಶೆ ಮಾಡಿರುತ್ತದೆ. ಅನೇಕ ವೇದ ಶಾಸ್ತ್ರಗಳ ಆಧಾರಗಳನ್ನು ಪರಿಶೀಲಿಸಿರುತ್ತಾರೆ. ಈ ಗ್ರಂಥದಲ್ಲಿ ಯಾವುದಾದರೂ ಲೋಪದೋಷಗಳಿದ್ದರೆ ಅವುಗಳನ್ನು ವಾಚಕರು ತಿಳಿಸಬೇಕೆಂದು ಕೋರಿರುತ್ತಾರೆ.

ರಾಜಲಕ್ಷ್ಮೀ ಟೈಲರಿಂಗ್ ಹಾಲ್

ಮೈಸೂರು ಶಿವರಾಂಪೇಟೆಯಲ್ಲಿರುವ ಮೇಲ್ಕಂಡ ಟೇಲರಿಂಗ್ ಹಾಲ್‌ನವರು ಖಾದಿಬಟ್ಟೆಗಳಲ್ಲಿ ಉಡುಪುಗಳನ್ನು ಹೊಲಿಸುವವರಿಗೆ ಅರ್ಧ ದರಕ್ಕೆ ಹೊಲಿದುಕೊಡುವುದಾಗಿ ತಿಳಿಸುತ್ತಾರೆ. ಎಲ್ಲರೂ ಖಾದಿಯನ್ನು ಧರಿಸಿ ಪ್ರೋತ್ಸಾಹಿಸಬೇಕೆಂದು ಕೋರುತ್ತಾರೆ.

ನಂಜನಗೂಡು ವರ್ತಮಾನ

ಪುರಸಭೆ —ಅಧ್ಯಕ್ಷರು ಎಂದಿನಂತೆ ಚಟುವಟಿಕೆಯಿಂದ ಕೆಲಸಮಾಡುತ್ತಿದ್ದಾರೆ. ರೈಲ್ವೆಸ್ಟೇಷನ್ ಸುತ್ತಲೂ ಜನಾಕರ್ಷಣೆಯಾದುದು ಇವರ ಯತ್ನದಿಂದಲೇ. ... ದನಗಳ ಜಾತ್ರೆಗೇಕೆ ಇವರು ಗಮನ ಕೊಡಲಿಲ್ಲವೆಂಬುದು ಕೆಲವರಿಗೆ ಆಶ್ಚರ್ಯ.

ದೇವಸ್ಥಾನ—ಬಹುಸೌಮ್ಯಸ್ವಭಾವದ ಪೇಷ್ಕಾರರವರು ಕಿತ್ತುಹೋದ ಜಗಲಿ ಕಂಬಿಸರಗಳನ್ನು ಅರಮನೆಯ ... ಗಾದರೂ ಬರೆದು ಕಟ್ಟಿಸಿ ಉಪಯೋಗಿಸಬಾರದೆ? ನೌಕರರು ತಮ್ಮ ತಮ್ಮ ... ಕಿತ್ತಾಟಗಳನ್ನು ಬಿಟ್ಟು, ಯಾತ್ರಿಕರ ಸೌಕರ್ಯಕ್ಕೆ ಗಮನಕೊಡಬೇಕು. ಕೆಲವು ವಾಹನಗಳಂತೂ ತೀರಾ ಶಿಥಿಲ ... ಕ್ಷಿ ಮಂಟಪವೇ ಇದಕ್ಕೆ ಸಾಕ್ಷಿ. ... ದರ್ಶಿಗಳೇನು ಮಾಡುತ್ತಿದ್ದಾರೆ?

ರೈಲ್ವೆ—ಬುಕಿಂಗ್ ಆಫೀಸಿನವರು ಜನಗಳ ಸೌಕರ್ಯಕ್ಕೆ ತಕ್ಕಂತೆ ವರ್ತಿಸುತ್ತಾರೆ. ಗೂಡ್ಸು ಬಾಬಿನಲ್ಲಿ ಏನೋ ... ಲ್ಪ ಕೊರತೆಯಿರುವಂತೆ ತೋರುವುದು. ಮೇಲಿನವರು ಕ್ರಮಪಡಿಸಲಾರರೆ?

ಸ್ಕೂಲುಗಳು—ಕೆಲ ಕೆಲವು ಉಪಾಧ್ಯಾಯರುಗಳು ಸ್ವಂತ ಪಾಠಗಳನ್ನು ಹೇಳುತ್ತಾ ಕಾಸಿನ ಆಸೆಗೆ ತಮ್ಮ ವಿದ್ಯಾರ್ಥಿಗಳಲ್ಲಿಯೇ ಪಕ್ಷಪಾತ ಮಾಡುತ್ತಿದ್ದಾರೆಂದು ಅಲ್ಲಲ್ಲಿ ಒಡಕುಸುದ್ದಿಗಳು ಹರಡಿವೆ. ಮುಖ್ಯವಾಗಿ ಮಿಡ್ಲ್ ಸ್ಕೂಲು ಹೆಡ್ಮಾಸ್ಟರವರು ಇದನ್ನು ಗಮನಿಸಿದರೆ ಒಳ್ಳೆಯದಿತ್ತು

ಅದ್ವೈತಸಭೆ—ಹಣವಿದ್ದರೂ ... ಲ್ಲವೆಂಬಂತಿರುವ, ಈ ಸಭೆಯನ್ನು ... ಕಾರ್ಯದರ್ಶಿಗಳು ಇನ್ನಾದರೂ ... ಜೀವನಗೊಳಿಸಬಾರದೆ

ಊರಿನ ಪರಿಸ್ಥಿತಿ — ಹಗಲು ... ದಲ್ಲಿಯೂ ಹೆಂಗಸು ಮಕ್ಕಳು ... ರಾಗಿ ಸಂಚರಿಸಲು ಹೆದರುವ ಕಾಲ ... ದ ಹಿಂದೊಂದು ಬಾರಿ ಅಂಗಡಿ ... ಯ ನಡುವೆಂಟೀ ಶ್ರೀ ವಿಶ್ವೇಶ್ವರ ... ತಹ ಮಧ್ಯರಾತ್ರದ ಮನೆಯ ಬಾಗಿಲಿನಲ್ಲಿ ... ಯೋ ಬಾಲಕಿಯ ಕತ್ತಿನ ಚಿನ್ನದ ಸರ ... ಯನ್ನು ಕಿತ್ತೊಗೆದು ಸಾಗಿಸಿದರು. ಕೆಲ ದಿನಗಳ ಕೆಳಗೆ ಸುಮಂಗಲಿಯೊಬ್ಬಳ ... ರಾಭರಣವನ್ನು ಬಲಾತ್ಕಾರದಿಂದ ... ಸಿದರು. ಇತ್ತೀಚೆಗೆ ಮನೆಯ ಬಾಗಿ ... ಬೆಳಗಿನ ಹೊತ್ತು ರಂಗೋಲಿಯನ್ನು ... ಯುತ್ತಿದ್ದ ಸೌಭಾಗ್ಯವತಿಯ ಕುತ್ತಿಗೆಗೆ ಕೈಹಾಕಿ ಮಾಂಗಲ್ಯವನ್ನೇ ಕಿತ್ತುಕೊಂಡರಂತೆ! ಇವೆಲ್ಲವೂ ಪೋಲೀಸಿನವರ ಸಾಮರ್ಥ್ಯ, ಚಟುವಟಿಕೆ, ದರ್ಶನಗಳಿಗೆ ... ಷ್ಟು ನಿದರ್ಶನವಲ್ಲವೆ ಎಂದು ಜನರು ... ಣಾಡುತ್ತಿದ್ದಾರೆ. ಅವರ ಪಾಂಡಿತ್ಯ, ... ಷ, ಸಂಭಾಷಣ, ಎಲ್ಲವನ್ನೂ ನೋಡಿ ಅವರಿಂದ ಊರಿನ ನೆಮ್ಮದಿಯನ್ನು ... ಸುವುದು ತೀರಾ ತಪ್ಪು. ಜನಗಳು ... ಗಿ ಸ್ವಲ್ಪ ಎಚ್ಚರಿಕೆಯಿಂದ ನಿರೀಕ್ಷಿಸಿ ... ಳ್ಳರನ್ನು ಬಯಲಿಗೆಳೆಯಬೇಕಾಗಿದೆ

ಈ ಸುಸಮಯವನ್ನು ಕಳೆದುಕೊಳ್ಳಬೇಡಿರಿ!

ಚಿತ್ರಶಾಲಾ ಸ್ಪರ್ಧೆ ನಂ. ೧೫.

ಎರಡು ವಾರಗಳು ಮಾತ್ರ

೧೦೦ ರೂ. ಬಹುಮಾನ

ಮೊದಲನೇ ಬಹುಮಾನ ೬೦ ರೂ.

ಬಿಳಿಯ ಕಾಗದದಮೇಲೆಯೂ ಬರೆದು ಕಳುಹಿಸಬಹುದು

ಇತರ ಬಹುಮಾನಗಳು ೪೦ ರೂ.



ಕೂಪನ್ ನಂಬರು

ಹೆಸರು

ವಿಳಾಸ

— ಎಡದಿಂದ ಬಲಕ್ಕೆ —

೧ ಪಕ್ಷಿಗೆ ೩ ಸೇರಿಸಾಗ ೭ ಒಡೆಯರು ೧೦ ಧ್ಯಾನಮಾಡುವುದು ೧೨ ಮೊಗಲಾಯಿ ಚಕ್ರವರ್ತಿಗಳೆಲ್ಲಾಬಟ್ಟ ೧೪ ಬಾಳು ೧೬ ಬಿರುಕು ಬಿಟ್ಟಿರುವುದು ೧೮ ವಿವಾಹವು, ಈ ಕೋಟೆಯನ್ನು ಕಟ್ಟಿಸಿದನು ೨೦ ಇವು ನಾಲ್ಕು ಇವೆ ೨೧ ಈತನೂ ಒಂದು ವಿಧವಾದ ಸಾಲಕ್ಕೆ ಮಾಡುವವನು ೨೨ ಹೊಸ ಶಕ್ತಿ ೨೪ ಜೇರಿದವರು ೨೫ ಸಮಾನತ್ವ ೨೬ ತುಂಬಿದ ೨೮ ಇದು ಕಣ್ಣಿಗ ಕಾಣಿಸದು ೩೦ ಕಡು ೩೧ ಮುಂದಾಗುವದನ್ನು ಹೇಳುವನು ೩೨ ಮಾತ್ರಾಗುಣಂಥದು ೩೩ ಪದಾರ್ಥ ೩೪ ಮೋಸಗಾರರ ೩೫ ಮನಸಂಚ ೩ ೪೦ ಇಂದಿನ ಮನುಷ್ಯರು ಯಾವಾಗಲೂ ಇನ್ನೊಬ್ಬರ ಸಹಾಯವನ್ನು ಅಪೇಕ್ಷಿಸುವುದಿಲ್ಲ ೪೧ ಕೊಡಿಸು

— ಮೇಲಿನಿಂದ ಕೆಳಕ್ಕೆ —

೧ ಇದು ಬಹಳ ಹಿಂದಿನಕಾಲದಿಂದಲೂ ಇರುವದು ೩ ಜೀವಿತದ ಕಾಲ ೪ ಸಂತೋಷ ೫ ಜಪಮನ್ನು ೬ ಒಂದು ಗಿಡ ೮ ಹಣ್ಣಾದ ೯ ಇದರ ಬೆಲೆಯನ್ನು ಗೊತ್ತುಮಾಡುವದು ಕಷ್ಟ ೧೧ ಸ್ಪಷ್ಟ ೧೩ ಬಿಟ್ಟುಬಿಡು ೧೫ ನಿರ್ಗತಿಕ ೧೬ ದುರಾಲೋಚನೆ ೧೭ ಮುತ್ತೈದೆಯರು ಇದನ್ನು ಒಬ್ಬರಿಗೊಬ್ಬರು ಕೊಡುವ ವಾಡಿಕೆ ಇದೆ ೧೮ ಸರಕಾರೀ ಉದ್ಯೋಗ ೧೯ ಪ್ರಾಧ್ಯಾಪಕ ೨೩ ಋತುಗಳಲ್ಲೊಂದು ೨೪ ಹೆಂಗಸರಿಗೆ ಈ ಕಾಲವು ತುಂಬಾ ಕಷ್ಟಕರವಾದದ್ದು ೨೬ ಆರಿಕೆ ೨೭ ಅವಸರದ ಓಡಾಟ ೩೦ ಹಿಂಬಾಲಿಸು ೩೧ ದೇವರು ೩೨ ಮನೆ ೩೩ ಅಷ್ಟದಿಕ್ಪಾಲಕರಲ್ಲೊಬ್ಬ ೩೪ ಆನೆಯಾಳು ೩೫ ಹಿಂದೂ, ಈಗಲೂ, ಮುಂದೂ ಇದಕ್ಕೆ ಗೌರವ ಇದ್ದೇ ಇದೆ ೩೬ ಮಗಳು

ಸೂಚನೆ —ಈ ಸ್ಪರ್ಧೆಯ ಸರಿಯಾದ ಉತ್ತರವು ಸಾಕ್ಷಿ ಎಡಿಟರ ಬಳಿ ಮೊಹರುಮಾಡಿ ಇಟ್ಟಿರುತ್ತೆ ಅದಕ್ಕೆ ಪ್ರತಿ ಅಕ್ಷರವೂ ಸರಿಹೋಲತಕ್ಕ ಸ್ಪರ್ಧಿಗೆ ಮೊದಲನೇ ಬಹುಮಾನವೂ, ಒಂದು ತಪ್ಪಿರುವವರುಗಳಿಗೆ ಇತರ ಬಹುಮಾನಗಳೂ ಕೊಡಲ್ಪಡುವುವು ಬಹುಮಾನಕ್ಕೆ ಯೋಗ್ಯವಾದ ಉತ್ತರಗಳು ಒಂದಕ್ಕಿಂತ ಹೆಚ್ಚಾಗಿದ್ದಲ್ಲಿ ಮೇಲ್ಕಂಡ ಬಹುಮಾನಗಳು ಎಲ್ಲರಿಗೂ ಹಂಚಲ್ಪಡುವುವು ಬಹುಮಾನಗಳನ್ನು ಹಂಚುವ ವಿಚಾರ ಸ್ಪರ್ಧೆಯ ಮ್ಯಾನೇಜರಿಗೆ ಸೇರಿದ್ದು ಈ ವಿಷಯದಲ್ಲಿ ಯಾವ ಪತ್ರವ್ಯವಹಾರಕ್ಕೂ ಅವಕಾಶವಿಲ್ಲ ಪ್ರತಿ ಸ್ಪರ್ಧಿಗೂ ಪ್ರವೇಶದ ಸಂಬಂಧ ಎರಡಕ್ಕಿಂತ ಕಡಿಮೆ ಸ್ಪರ್ಧೆಗಳನ್ನು ಅಂಗೀಕರಿಸುವುದಿಲ್ಲ ಪ್ರವೇಶಧನವನ್ನು ಪೋಸ್ಟಲ್ ಸ್ಟಾಂಪು, ಅಥವಾ ಇಂಡಿಯನ್ ಪೋಸ್ಟಲ್ ಆರ್ಡರ್ ಅಥವಾ ಮನಿಯಾರ್ಡರ್ ಮೂಲಕ ರವಾನಿಸಬಹುದು ಉತ್ತರಗಳನ್ನು ಬರೆಯತಕ್ಕವರು ಸಾಕ್ಷಿ ಪೇಪರಿನಲ್ಲಿರತಕ್ಕ ಕೂಪನ್ನಿನಲ್ಲಾಗಲಿ ಅಥವಾ ಬಿಳಿಯ ಕಾಗದದಲ್ಲಾಗಲಿ ಚಿತ್ರದಲ್ಲಿದ್ದಂತೆ ಚೆನ್ನಾಗಿ (ಶಾಯಿಯಿನಲ್ಲಿ) ಬರೆದು ಕಳುಹಿಸಬೇಕು ಉತ್ತರಗಳನ್ನು ಕಳುಹಿಸಲು ಡಿಸಂಬರು 24 ನೇ ತಾರೀಖು ಕೊನೆಯದಿನ. ನಂತರ ಬಂದ ಉತ್ತರಗಳನ್ನು ಸ್ವೀಕರಿಸುವುದಿಲ್ಲ ಸರಿಯಾದ ಉತ್ತರವನ್ನು ಡಿಸಂಬರು 28 ನೇ ತಾರೀಖಿನ ಸಾಕ್ಷಿಯಲ್ಲಿ ಪ್ರಕಟಿಸಲಾಗುತ್ತೆ

ವಿಳಾಸ:— ಮ್ಯಾನೇಜರ್ ಚಿತ್ರಶಾಲಾ ಸ್ಪರ್ಧೆ, ಚಿತ್ರಶಾಲಾ, ವಾಣೀವಿಲಾಸ ಮೊಹಲ್ಲಾ ಒಂಟಿಕೊಪ್ಪಲ್, ಮೈಸೂರು.

ನಿ ಸೂ ಮೈಸೂರಿನಲ್ಲಿ ಸ್ಪರ್ಧೆಗೆ ಭಾಗವಹಿಸುವವರು ತಮ್ಮ ಉತ್ತರಗಳನ್ನು ಮೆಸರ್ಸ್ ಸ್ಟೇಟ್ ಮಾರ್ಟ್ಸ್ ಇವರಿಗೆ ಸಾದರಪಡಿಸಬೇಕಾಗಿ ವಿನಂತಿ ಮ್ಯಾ ಚಿ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ ವಿ. ಪಂಡಿತರ

— ಬಾಲಸುಧಾ —

ಮಕ್ಕಳ ಜ್ವರದ ಗೆಡ್ಡೆಯನ್ನು ಜಾತರ ಗುಣಪಡಿಸುತ್ತೆ ಲಿವರ್ (ಪಿತ್ತಕೋಶ) ದಪ್ಪನಾಗಿ ಕಣ್ಣು ಹಳದಿ ಬಣ್ಣವಾಗಿದ್ದರೆ ಇದರ ಸೇವನೆಯಿಂದ ವಿಶೇಷ ಗುಣವಾಗುತ್ತೆ 20 ವರ್ಷಗಳಿಂದಲೂ ಅನುಭವ ಸಿದ್ಧವಾಗಿದೆ—ಮಕ್ಕಳ ಸೀದಿಗೆ ನಮ್ಮ ಬಾಲಸಂಜೀವಿನಿಯನ್ನೇ ಉಪಯೋಗಿಸಿರಿ.

ಬಾಲಸುಧಾ ಬೆಲೆ 1 ರೂ ಬಾಲಸಂಜೀವಿನಿ ೪ ಆ

ಮೈಸೂರು, ಬೆಂಗಳೂರು, ಮದ್ರಾಸುಗಳಲ್ಲಿ ನಮ್ಮ ಏಜೆಂಟರಿವೆ

ಸದ್ವೈದ್ಯಶಾಲಾ, ನಂಜನಗೂಡು

ANANDA SODA FACTORY,

BEST AERATED WATER SUPPLIERS.

COMPLETE REQUISITES FOR AERATED WATER MANUFACTURERS AVAILABLE

ಆನಂದಾ ಸೋಡಾ ಫ್ಯಾಕ್ಟರಿ,

ದೊಡ್ಡ ಪೇಟೆ, ಮೈಸೂರು.

ಚಿತ್ರಶಾಲಾ ಸ್ಪರ್ಧೆ ನಂ ೧೪ರ ಉತ್ತರ.



ಇದರಲ್ಲಿ ಬಹುಮಾನ ಪಡೆದವರ ಹೆಸರುಗಳನ್ನು ಮುಂದಿನ ವಾರ ಪ್ರಕಟಿಸಲಾಗುತ್ತೆ

ಮ್ಯಾ ಚಿ

ಭಿಷಗ್ರತ್ನ ಪಾಳ್ಯದ ವೆಂಕಟಾಚಲ ಪಂಡಿತ ಅಂಡ್ ಸನ್ಸ್

ಆಯುರ್ವೇದೀಯ ಸಿದ್ಧೌಷಧಗಳು

ಲೋಕಾಮಯಹರ ಕಸ್ತೂರಿ ಮಾತ್ರೆಗಳು

ಈ ಮಾತ್ರೆಗಳು 1 2 ಸ್ನು ಪ್ರತಿ ದಿನ ಉಪಯೋಗಿಸುವುದರಿಂದ ಬಗೆಬಗೆಯ ಜ್ವರಗಳು, ಕೆಮ್ಮು, ದಮ್ಮು, ವಾಯು, ಎಂತಹ ಕಠಿಣವಾದ ರೋಗಗಳಾದರೂ ಗುಣವಾಗಿ ಆರೋಗ್ಯವಾಗುವುದು ...

ಮತ್ತು ... (...) ... ಜ್ವರ, ... ರೋಗಗಳನ್ನು ಗುಣಪಡಿಸುತ್ತವೆ.

ಸ್ತ್ರೀಯರು ... ಕಸ್ತೂರಿ ... ಈ ಮಾತ್ರೆಗಳನ್ನೇ ... ಈ ಮಾತ್ರೆಗಳು ... ಗುಣಪಡಿಸಬಲ್ಲವಾಗುತ್ತವೆ.

250 ರಿಂದ 300 ಮಾತ್ರೆಗಳುಳ್ಳ ಸೀಸೆ 1 ಕ್ಕೆ 1 ಅಣೆ ... 1 ಸೀಸೆಗೆ 9 ... 6 ಸೀಸೆ 1—8—0 12 ಕ್ಕೆ 2—13—0 25 ಕ್ಕೆ 5—3—0

ಪಾಳ್ಯದ ವೆಂಕಟಾಚಲ ಪಂಡಿತ ಅಂಡ್ ಸನ್ಸ್,

ಶ್ರೀ ಸೀತಾರಾಮರ ವೃಂದಾವನ, ಮೈಸೂರು

"ಬ್ರೀಕ್ ಪಿಲ್ಸ್"

INVENTED BY A HIMALAYAN SAGE

● ಸ್ತ್ರೀಪುರುಷರಿಗೆ ... ಈ ಮಾತ್ರೆಗಳ ... ಕಸ್ತೂರಿ ... ಹಿಮಾಲಯ ಪರ್ವತದ ... ಲೋಕರಲ್ಲಿ ... ಗುಣವಿಲ್ಲದಿದ್ದಲ್ಲಿ ಹಣ ವಾಪಸು

೬೦ ಮಾತ್ರೆಗಳು ರೂ ೫—೦—೦ ೩೦ ಮಾತ್ರೆಗಳು ರೂ. ೩—೦—೦

(ಕಾಗದ ಪತ್ರಗಳು ಇಂಗ್ಲೀಷಿನಲ್ಲಿರಲಿ)

ಡಾ॥ ಎ ಎಸ್ ಮೂರ್ತಿ, ... ಗಂಜಾಂ ಡಿಸ್ಟ್ರಿಕ್ಟ್.

ಶ್ರೀ ರಂಗನಾಥ ಟೈಪ್ ಫೌಂಡ್ರಿ

ಚಿಕ್ಕಪೇಟೆ, ಬೆಂಗಳೂರು ಸಿಟಿ

ಸುಂದರವಾದ ಅಕ್ಷರಗಳು, ... ಬಾರ್ಡರ ಗಳು ಬಗೆಬಗೆಯ ಆಕಾರ ... ಈ ಕೆಲಸದಲ್ಲಿ ... ಆಧುನಿಕ ಕಾಲಕ್ಕೆ ತಕ್ಕಂತೆ ... ನಮ್ಮಲ್ಲಿ "ಕನ್ನಡ, ಇಂಗ್ಲೀಷ್" ಅಕ್ಷರಗಳಂತೆ ... ಸುಂದರವಾದ ಅಕ್ಷರಗಳನ್ನು ... ಮತ್ತು

ನೂರಾರು ... ಸುಂದರವಾದ ... ಮನೋಹರವಾಗಿ ... ಸುಂದರಾಕ್ಷರಗಳನ್ನು ನಮ್ಮ ... ಅಕ್ಷರಗಳನ್ನು ನೋಡಬಹುದು ... ನಾವು ... (...) ... ಅಕ್ಷರಗಳನ್ನು ... ಸುಲಭ ... ಬೆಲೆ

ದ್ರಾಕ್ಷಾಮೃತ

ಈ ದ್ರಾಕ್ಷಾಮೃತವು ಸಹ್ಯಾದ್ರಿ ಪರ್ವತದಲ್ಲಿ ಅನೇಕ ವನಸ್ಪತಿಗಳ ರಸವನ್ನು ಗಳೊಂದಿಗೆ ದ್ರಾಕ್ಷಾರಸವನ್ನು ಮಿಶ್ರಮಾಡಿ ಸ್ವದೇಶಿ ಯಂತ್ರದಿಂದ ಶಾಸ್ತ್ರೋಕ್ತ ಪದ್ಧತಿ ಪ್ರಕಾರ ತಯಾರು ಮಾಡಿರುವದರಿಂದ ಸ್ವಾದಿಷ್ಟವು ಮತ್ತು ಮಧುರವು ಆಗಿದೆ

ಇದರ ಸೇವನೆಯಿಂದ ಶರೀರದೊಳಗಿನ ಹಳೆ ಕಡಕಿ (ಗರಮಿ) ಸಂಪೂರ್ಣ ನಾಶವಾಗುತ್ತದೆ ಮತ್ತು ಧಾತುಸ್ರಾವ, ಸ್ವಪ್ನಾವಸ್ಥೆಯಿಂದ ಅಥವಾ ಬೇ ... ಕಾರಣಗಳಿಂದ ಬಂದ ಅಶಕ್ತತೆಯಿಂದ ಕೈಕಾಲು, ಕಣ್ಣುಗಳಿಗೆ ಉರಿ ಬೀಳೋಣ, ಶೌಚಕ್ಕೆ ಸಾಫ ಆಗದೆ ಇರೋಣ, ಮುಂತಾದ ಎಲ್ಲ ವಿಕಾರಗಳು ನಷ್ಟವಾಗಿ ಹಸಿವಾಗ್ಗಿ ಬೇಳುತ್ತದೆ ಮತ್ತು ಅನ್ನ ಚೆನ್ನಾಗಿ ಪಚನವಾಗಿ ಶೌಚಕ್ಕೆ ಸುಸಾಗುತ್ತದೆ. ಇದರ ಸೇವನೆಯಿಂದ ತರುಣರಿಗೆ ವ್ಯಭಿಚಾರದಿಂದ ಅಥವಾ ಬೇರೆ ಕಾರಣದಿಂದ ಬಂದ ಧಾತುಕ್ಷೀಣತೆ ನಪುಂಸಕತ್ವ ಇದ್ದರೆ ಅದು ಹೋಗಿ ಪುನಃ ಯೌವನವಂತರಾಗಿ, ಶರೀರ ಬಲವಾಗಿ ಮಕ್ಕಳು ಪುಷ್ಟಿವಂತರಾಗುವರು ಹೆಂಗಸರಿಗೂ ಮತ್ತು ಮಕ್ಕಳಿಗೂ ಈ ಔಷಧವು ಗುಣಕಾರಿ ಇದೆ. ಮುಟ್ಟಾಗ ... ಮತ್ತು ಬಸ್ಸ ಗರ್ಭ ಸಂಬಂಧವಾದ ರೋಗಗಳಿದ್ದರೂ ಒಪ್ಪ ಗುಣವಾಗಿ ಹೆಂಗಸರಿಗೆ ಸಂತತಿ ವೃದ್ಧಿಯಾಗುವದು. ಈ ಔಷಧದ ಮೂರು ಬಾಟ್ಲಿಗಳನ್ನು ಸೇವನೆ ಮಾಡಿದರೆ ಪೂರ್ಣ ಗುಣಬರುತ್ತದೆ ಇದರ ಅನುಭವ 1 ಬಾಟ್ಲಿ ಸೇವನೆ ಮಾಡಿದ ನಂತರ ನಿಮಗೆ ತಿಳಿದೀತು.

1 ಬಾಟ್ಲಿ ಬೆಲೆ ರೂ. ೧—೪—೦, 3 ಬಾಟ್ಲಿ ೩—೪—೦, 1 ಡಜನ್ ಬಾಟ್ಲಿ ಬೆಲೆ ೧೨—೦—೦

ಮ್ಯಾನೇಜರ್—ದ್ರಾಕ್ಷಾಮೃತ ಡಿಪ್ಪೋ. ಪೋಸ್ಟ್ ನಿಪ್ಪಾಣಿ, ಜಿಲ್ಲಾ ಬೆಳಗಾಂ

ಮೈಸೂರು ಸ್ಟಾಕಿಸ್ಟ್ಸ್ —ಟಿ ಸಿ ನಟರಾಜ, ಬೊಂಬಾಯಿ ಆನಂದ ಭವನ ಮಾರ್ಡರ್ನ್ ಹಾಸ್ಪಿಟಲ್, ಸಯ್ಯಾಜಿರಾವ್ ರೋಡ್ ಬೆಂಗಳೂರು ಸಿಟಿ —ಸಿ: ಶಾಸ್ತ್ರಿ ಅಂಡ್ ಸನ್ಸ್, ಚಿಕ್ಕಪೇಟೆ ತುಂಕೂರು—ಟಿ ಆರ್. ಗುರು ಚನ್ನಬಸವ ಅಂಡ್ ಬ್ರದರ್ಸ್ ಚಿಕ್ಕಮಗಳೂರು—ಎಂ ಎಲ್ ಮಂಜಯ್ಯಶೆಟ್ಟಿ ಶಿವಮೊಗ್ಗ—ಶ್ರೀಕೃಷ್ಣ ಟ್ರೇಡಿಂಗ್ ಏಜನ್ಸಿ ಮತ್ತು ಇಂಡೋರಾವ್ ಬ್ರದರ್ಸ್ ನಾಗರ—ಮಲ್ಲೀರಪ್ಪ ಮತ್ತು ಕೆ ಭೋಗಯ್ಯಶೆಟ್ಟಿ ಅಂಡ್ ಬ್ರದರ್ಸ್.

ಪ್ರಾಚೀನ ಕನ್ನಡ ವಚನ ಗ್ರಂಥಗಳು

ಸೌಗಂಧಿಕಾಪರಿಣಯ:— ಪೂರ್ವದಲ್ಲಿ ಮಹೇಂದ್ರನಿಗೆ ದೂರ್ವಾಸ ಮುನಿಗಳಿಂದ ಆಶೀರ್ವಾದ ಪೂರ್ವಕವಾಗಿ ಕೊಡಲ್ಪಟ್ಟ ಕಮಲಮಾಲಿಕೆಯನ್ನು ಆನೆಯ ಕುಂಭಸ್ಥಳದಲ್ಲಿಟ್ಟಿದ್ದೊಡನೆ, ಆನೆಯು ಆ ಮಾಲಿಕೆಯನ್ನು ಕಾಲಿನಲ್ಲಿ ಹೊಸಕಿ ವ್ಯರ್ಥಪಡಿಸಲು, ಋಷಿಗಳ ಶಾಪದಿಂದ ಭೂಲೋಕದಲ್ಲಿ ರತ್ನಪುರಿಯಲ್ಲಿ ಸುಗಂಧರಾಜನಾಗಿ ಹುಟ್ಟಿ, ಕಳಿಂಗ ದೇಶದ ರಾಜಪುತ್ರಿಯಾದ ಸೌಗಂಧಿಕಾದೇವಿಯನ್ನು ಸ್ವಯಂವರವಾಗಿ ಕೈಗೊಂಡ, ಬಹಳ ವಿಷಯಗಳಿರುವ ಕಥೆ

೧೧೨ ಪುಟಗಳು ಕ್ರಯ ರೂ ೧—೪—೦

ಸಹಸ್ರಾಯುಚರಿತ್ರೆ:— ... ಅರಸನ ಜ್ಯೇಷ್ಠಪತ್ನಿಯಲ್ಲಿ ... ವರಪ್ರಸಾದದಿಂದ ಜನಿಸಿ ಲೋಕಪ್ರಸಿದ್ಧನಾಗಿ ತನಗೆ ಇತರರಿಂದ ಬಂದ ಗಂಡಾಂತರಗಳನ್ನೆಲ್ಲಾ ಪರಿಹರಿಸಿಕೊಂಡ ಒಬ್ಬ ಮಹಾಪುರುಷನ ಕಥೆ

೬೭ ಪುಟಗಳು ಕ್ರಯ ರೂ ೦—೧೦—೦

ಕಾಶೀಕ್ಷೇತ್ರಮಹಾತ್ಮೆ:— ಇದರಲ್ಲಿ ೧೪ ಲೋಕಗಳ ವರ್ಣನೆ, ನದಿಗಳೆ, ದೇವತೆಗಳು ಋಷಿಗಳೇ ಮುಂತಾದವರ ಉತ್ಪತ್ತಿಕ್ರಮ, ಗಂಗಾ ಸಹಸ್ರನಾಮವೇ ಮೊದಲಾದ ಅನೇಕ ವಿಷಯಗಳು ಅಡಕವಾಗಿರುತ್ತೆ

೭೦ ಪುಟಗಳು ಕ್ರಯ ರೂ ೦—೫—೦

N. B ಪುಸ್ತಕದ ಕ್ರಯದ ನಾಲ್ಕರಲ್ಲಿ ಒಂದು ಭಾಗ ಮೊಬಲಗು ಅಡ್ವಾನ್ಸು ಕಳುಹಿಸಿದರೆ ಬಾಕಿಗೆ ವಿ ಪಿ ಮಾಡಲಾಗುತ್ತೆ.

ಇತಿ ಸ್ನೇಹ —

ಗುಂಡ್ಲು ಪಂಡಿತ ಲಕ್ಷ್ಮಣಾಚಾರ್ಯರ ಮಕ್ಕಳು

ಶ್ರೀನಿವಾಸ ದೇಶಿಕಾಚಾರ್,

೬೦೭, ಕರುಹಟ್ಟಿಬೀದಿ, ಮೈಸೂರು

॥ ಸತ್ಯಮೇವೋದ್ಧರಾಮ್ಯಹಮ್ ॥
ರಾಜಧಾನಿಯ ರಾಷ್ಟ್ರೀಯ ವಾರ ಪತ್ರಿಕೆ.
ವೃದ್ಧಪಿತಾಮಹ ಎಂ. ವೆಂಕಟಕೃಷ್ಣಯ್ಯನವರ ಜ್ಞಾಪಕಾರ್ಥವಾಗಿ ಪ್ರಕಟಿಸಲ್ಪಡುವುದು.
ಸಂಪಾದಕರು: ಅಗರಂ ರಂಗಯ್ಯ, ಬಿ. ಎ.
ಸಂಪುಟ ೧] MYSORE : MONDAY 21—12—36 ಮೈಸೂರು : ಸೋಮವಾರ ೨೧—೧೨—೩೬ [ಸಂಚಿಕೆ ೪೩

ಗಾಂಧಿಯವರನ್ನು ಕ್ರೈಸ್ತ ಮತಕ್ಕೆ ಸೇರಿಸಬೇಕಂತೆ

ಕ್ರೈಸ್ತಪಾದ್ರಿಗಳು ಹರಿಜನರನ್ನು ತಮ್ಮ ಮತಕ್ಕೆ ಸೇರಿಸಬೇಕಾದರೆ ನನ್ನನ್ನು ಮೊದಲು ಸೇರಿಸಲು ಪ್ರಯತ್ನಿಸಲಿ. ಮಹಾತ್ಮಗಾಂಧಿಯವರು ಹೇಳಿ... ಕೊಳಕಾದ ಕೈಗಳಿಂದಲೂ, ಕಂ... ತಿಳಿವಳಿಕೆಯಿಂದಲೂ ಇರುವ ...ಗೆ ಬೋಧನೆ ಮಾಡುವ ಬದಲು ನನ... ಒಪ್ಪಿಸಲಿ, ಎನ್ನುವರು. ಪಾ... ಈ ಮಾತನ್ನು ಕೇಳುವರ?

...ಹರರ ಸೇವಕನೂ ಉಮೇದುವಾರ

ಸಂಯುಕ್ತ ಪ್ರಾಂತ ಶಾಸನ ಸಭೆ ಚುನಾವಣೆಗೆ ಪಂಡಿತ ಜವಹರಲಾಲ ಸೇವಕನೊಬ್ಬನು ಉಮೇದುವಾರನಾಗಿ ...ನಂತೆ! ಸಾಕು. ಅವನಿಗಿಂತ ಹೆಚ್ಚ... ...ಯುಳ್ಳವರು ಆ ಕೌನ್ಸಿಲ್ಲಿಗೇಕೆ? ... ನೋಡಿ ಆಂಗ್ಲೋ ಇಂಡಿಯನ್ ...ಗಳು ಗಾಬರಿ ಬಿದ್ದಿವೆ. ಜವಾಹರ...ರ ಪ್ರಭಾವವೇ ಅವರ ಸೇವಕನಲ್ಲಿ ...ಎಷ್ಟು ಬಂದಿರಬಹುದೋ ಎಂಬುದೇ ...

ಪಸುಮಕ್ಕಳ ಯೋಗಕ್ಷೇಮ

...ಗೆ ಹೋಗುವ ಎಳೆಯ ಮಕ್ಕಳಿಗೆ ... ಪುಷ್ಟಿಕರವಾದ ಆಹಾರವನ್ನು ...ಸುವುದಕ್ಕಾಗಿ ಸಿಲೋನ್ ಸರ್ಕಾರದವರು ...ಂದು ಲಕ್ಷ ರೂ. ಅನ್ನು ಮಂಜೂರು ಮಾಡಿರುವರು. ಮಕ್ಕಳ ಅಭಿವೃದ್ಧಿ...ನವರು ಮಾಡಿರುವ ಏರ್ಪಾಟು ಎಷ್ಟೊ ಮೆಚ್ಚುವಂತಹುದಾಗಿದೆ. ನಮ್ಮ ...ಲ್ಲಿ ಎಷ್ಟೋ ಮಕ್ಕಳು ಸರಿಯಾದ ...ಸಿಲ್ಲದೆ ಕೃಶವಾಗಿರುತ್ತವೆ. ನಮ್ಮ ...ವೂ ಇದನ್ನು ಅನುಸರಿಸಬಾರದೆ?

ಅಂಜೂರದ ವ್ಯವಸಾಯ.

ರಂಗಪಟ್ಟಣಕ್ಕೆ 2 ಮೈಲಿ ದೂರದಲ್ಲಿ ...ಬಾಂ ಸರಹದ್ದಿನಲ್ಲಿ ಅಂಜೂರದ ...ಯವನ್ನು ನಡೆಸಲು, ಸರ್ಕಾರದ ...ಲೋಚಿಸಿದ್ದು ಈಗ ಫಲಕಾರಿಯಾ... ...ರಿನ ಸರಬರಾಯಿ ಚೆನ್ನಾಗಿದೆ. ಸ...ರವರು, 12,000 ರೂ. ಗಳನ್ನು ...ಮಾಡಿರುವರು

ರಾಜಧಾನಿಗೆ ಸಿಟಿ ಬಸ್ ಸರ್ವಿಸ್ಸು

ಮೈಸೂರು ಪಟ್ಟಣದಲ್ಲಿಯೂ ಬೆಂಗಳೂರಿನಂತೆಯೇ ಸಿಟಿ ಬಸ್ ಸರ್ವಿಸ್ಸೊಂದು ಏರ್ಪಾಡಾಗುವುದಿದೆ. ಶ್ರೀ॥ ಜಿವ... ...ರಂ ರಷ್ಮಿಯಾರ್ ಎಂಬುವರೊಬ್ಬರು ಇದಕ್ಕೆ ಅರ್ಜಿ ಹಾಕಿಕೊಂಡಿದ್ದಾರೆ. ಅವರು ನಾಟಕಕೋಟೆಯವರು. ಅನುಕೂಲಸ್ಥರು. ನಗರಿ ಸರ್ವಿಸ್ ಏರ್ಪಡಿಸಿಗ ಗಿ ಒಂದು ಕಂಪೆನಿಯನ್ನು ರಚಿಸುವರು. ಪೌರಸಭೆಯೂ ಅದರಲ್ಲಿ ಪಾಲುದಾರನಾಗುವ ಸಂಭವವಿದೆ. ಈ ಊರೇನೋ ಬಹಳ ಚಿಕ್ಕದು. ಸಂಚಾರವೂ ಅಷ್ಟೇನೂ ಹೆಚ್ಚಿಲ್ಲ. ಆದರೂ ಈ ಸೌಕರ್ಯವಿಲ್ಲದಿರುವುದು ಮಹಾನಗರಕ್ಕೆ ಒಂದು ಕೊರತೆಯಲ್ಲವೆ?

ಕೇ॥ ೯೦೦ ರಷ್ಟು ತೆರಿಗೆ!

ಆಲ್ಕೋಹಾಲ್ ಎಂಬ ಮಾದಕ ಪದಾರ್ಥದ ಮೇಲೆ ಇಂಡಿಯಾ ಸರ್ಕಾರದವರು ಶೇ॥ ಒಂಭೈನೂರರಷ್ಟು ತೆರಿಗೆಯನ್ನು ವಿಧಿಸಿರುವರು. ಈ ಪದಾರ್ಥವು ಕೈಗಾರಿಕೆಗಳಿಗೆ ಅತ್ಯಂತ ಮುಖ್ಯವಾದುದೆಂದು ಸರಕಾರದವರೇ ಒಪ್ಪಿಕೊಳ್ಳುವರು. ಮತ್ತು ಇಂಡಿಯಾ ದೇಶದಲ್ಲಿಯೇ ತಯಾರಾಗುತ್ತಿದೆ. ಮುಖ್ಯವಾಗಿ ಔಷಧಸಾಮಗ್ರಿಗಳನ್ನು ತಯಾರಿಸಲು ಇದು ಬೇಕಾಗುವುದು. ಈ ದುಬಾರಿ ತೆರಿಗೆಯನ್ನು ಡಾಕ್ಟರುಗಳು ಪ್ರತಿಭಟಿಸುತ್ತಿರುವರು.

ಸಿಂಹಕ್ಕೆ ಕ್ಲೋರೋಫಾರಂ.

ಆಸ್ಪತ್ರೆಗಳಲ್ಲಿ ಶಸ್ತ್ರ ಚಿಕಿತ್ಸೆ ಮಾಡುವಾಗ ಜ್ಞಾನ ತಪ್ಪಿಸಲು ಕ್ಲೋರೋಫಾರಂ ಕೊಡುತ್ತಾರೆ. ಲಂಡನ್ ಮೃಗಾಲಯದಲ್ಲಿ ಒಂದು ಸಿಂಹಕ್ಕೆ ಆಗಾಗ್ಗೆ ಈ ರೀತಿ ಜ್ಞಾನ ತಪ್ಪಿಸಬೇಕಾಗಿದೆ. ಅದರ ಕಾಲಿನ ಉಗುರುಗಳು ವಕ್ರಾಕಾರವಾಗಿ ಬೆಳೆಯುತ್ತಿವೆ ಮುಂಗಾಲಿನ ಉಗುರುಗಳನ್ನು ಮಾತ್ರ ಅದೇ ಸರಿಪಡಿಸಿಕೊಳ್ಳುತ್ತದೆ. ಆದರೆ ಹಿಂಗಾಲಿನ ಉಗುರುಗಳು ಅದಕ್ಕೆ ಬಹಳ ಬಾಧೆಯನ್ನು ಕೊಡುತ್ತವೆ. ಆದ್ದರಿಂದ ಅಲ್ಲಿನ ಮುಖ್ಯಾಧಿಕಾರಿಗಳು ಅದಕ್ಕೆ ಮೇಲ್ಕಂಡ ರೀತಿ ಜ್ಞಾನ ತಪ್ಪಿಸಿ ಉಗುರುಗಳನ್ನು ಸರಿಯಾಗಿ ಕತ್ತರಿಸುವರು.

ಸರ್ ಸಿ ಪಿ. ರಾಮಸ್ವಾಮಿಗೆ ವಿರೋಧ.

ಟಾಟಾ ವಿಜ್ಞಾನ ಶಾಲೆಯ ಘಟಿಕೋತ್ಸವ ವಾರ್ಷಿಕ ಸಭೆಯಲ್ಲಿ ಅಧ್ಯಕ್ಷರಾಗಿದ್ದ ಸರ್ ಸಿ. ಪಿ. ರಾಮಸ್ವಾಮಿ ಅಯ್ಯರವರ ಮೇಲೆ ಕೆಲವು ಆರೋಪಗಳ ಹೊರಿಸಿ, ಸಭಾ ಬಹಿಷ್ಕಾರ ಪ್ರಕರಣವೂ ನಡೆದು ಅವರೂ, ಹಲವು ಸಭಿಕರೂ ಇದ್ದ ಮನೆಯ ಮೇಲೆ ಕಲ್ಲುಗಳು ಸುರಿಯಿತು. ಕೊನೆಗೆ ಪೋಲೀಸರಿಂದ ಬಹಳ ಕಷ್ಟದೊಡನೆ ಪರಿಸ್ಥಿತಿಯನ್ನು ಶಾಂತತೆಗೆ ತರಲಾಯಿತು. ಸಭೆಯು ಮುಗಿದು ಎಲ್ಲರೂ ಮನೆಗೆ ಹೋದಬಳಿಕ ಬೇರೆ ಭವನದಲ್ಲಿದ್ದ ಸರ್ ಸಿ. ಪಿ. ರಾಮಸ್ವಾಮಿ ಅಯ್ಯರು ಕೆಲವು ವಿದ್ಯಾರ್ಥಿಗಳೊಡಗೂಡಿ ತಮ್ಮ ಗೃಹಕ್ಕೆ ತೆರಳಿದರು.

ಲಂಡನ್ ನಗರವು ಸುರಕ್ಷಿತವಾಗಿಲ್ಲ

ರಾತ್ರಿವೇಳೆಯಲ್ಲಿ ವಿಮಾನಗಳ ಮೂಲಕ ಬಂದು ಲಂಡನ್ನಿನ ಮೇಲೆ ಬಾಂಬನ್ನು ಎಸೆಯುವುದನ್ನು ತಪ್ಪಿಸಲು ವಿಮಾನವ್ಯೂಹವೊಂದನ್ನು ರಚಿಸಿರುವರಷ್ಟೆ. ಅದರ ಆವರಿಂದ ರಕ್ಷಣೆಯು ಖಾತರಿ ಇಲ್ಲವೆಂದು ಅರಿತವರು ಹೇಳುತ್ತಿರುವರು. ... ನಿಂದ ಬರುವ ವಿಮಾನಗಳು ತಮ್ಮ ಮುಂದಿರುವ ಚೂಪಾದ ಅಲಗುಗಳಿಂದ ಲಂಡನ್ ಮೇಲಿರುವ ತಂತಿಯ ಆವರಣವನ್ನು ಛೇದಿಸಿ ಒಳಗೆ ನುಗ್ಗುವುವು. ಇನ್ನು ನಗರ ರಕ್ಷಣೆಗೆ ಏನು ಮಾಡುವರೋ ನೋಡಬೇಕು.

ಆಕಾಶವಾಣಿ ಕಾರ್ಯಕ್ರಮ

ಸೋಮವಾರ:—ರಾತ್ರಿ 8 ರಿಂದ 9-15 ಆರ್ಕೆಸ್ಟ್ರಾ ಸಂಗೀತ, ಡಾ॥ ಎಂ. ವಿ. ಗೋಪಾಲಸ್ವಾಮಿಯವರ ಉಪನ್ಯಾಸ. "ಮನಶ್ಶಾಸ್ತ್ರ". ಮಂಗಳವಾರ.—6-30 ರಿಂದ 8 ಸಂಗೀತ. ಪುರಂದರದಾಸರ ಕೀರ್ತನೆಗಳು, ಮ॥ ಕೆ. ರಾಮಸ್ವಾಮಿಯವರಿಂದ. ಬುಧವಾರ:—8ರಿಂದ 9 15 ಕರ್ನಾಟಕ ವಾದ್ಯ ಸಂಗೀತ. ಶ್ರೀ॥ ಎ.ಆರ್. ಕೃಷ್ಣಸ್ವಾಮಿಯವರ ಭಾಷಣ "ಪ್ರಾಣಿಗಳ ವರ್ಣ ರಚನೆ'. ಗುರುವಾರ—8 ರಿಂದ 10 ಕ್ರಿಸ್‌ಮಸ್‌ಈವ್—ಸೆಂಟ್ ಫಿಲೋಮಿನರ ಸಂಗೀತ ಮಂಡಲಿಯವರ ಗಾನ

ಮಾಜಿ ಗೌರ್‍ನರಿಗಿಂತಲೂ ಸ್ವಯಂ ಸೇವಕನೇ ಹೆಚ್ಚು

ಮಧ್ಯಪ್ರಾಂತ್ಯದ ಹಂಗಾಮಿ ಗೌರ್‍ನರಾಗಿದ್ದ ಶ್ರೀ॥ ಇ. ರಾಘವೇಂದ್ರರಾಯರು ಮುಂದಿನ ಚುನಾವಣೆಯಲ್ಲಿ ಯಾವ ಪ್ರಾಂತ್ಯದಿಂದ ನಿಲ್ಲಬೇಕೋ ಅರಿಯದವರಾಗಿದ್ದಾರೆ ಎಲ್ಲಿ ಹೋದರೂ ಅವರಿಗೆ ಕಾಂಗ್ರೆಸ್ಸಿನ ವಿರೋಧ. ಒಂದು ಕಾಲದಲ್ಲಿ ಅವರು ಕಾಂಗ್ರೆಸ್ಸಿನವರಾಗಿದ್ದರು. ಖಾದಿ ಬಟ್ಟೆಯನ್ನು ಧರಿಸುತ್ತಿದ್ದರು. ಹಂಗಾಮಿ ಗೌರ್‍ನರರಾದಾಗಲೂ ಖಾದಿ ಟೋಪಿಯನ್ನೇ ಧರಿಸುತ್ತಿದ್ದರು. ಈಗ ಅವರ ಉಮೇದುವಾರಿಕೆಯನ್ನು ಕಾಂಗ್ರೆಸ್ಸಿನವರು ಅಂಗೀಕರಿಸುವುದಿಲ್ಲ. ಅವರು ಯಾವ ಪ್ರಾಂತದಿಂದ ಬೇಕಾದರೂ ಚುನಾವಣೆಗೆ ನಿಲ್ಲಲಿ. ಕಾಂಗ್ರೆಸ್ಸಿನ ಒಬ್ಬ ಸ್ವಯಂಸೇವಕನನ್ನು ಅವರಿಗೆ ವಿರೋಧವಾಗಿ ನಿಲ್ಲಿಸಿ ಅವರನ್ನು ಸೋಲಿಸುವುದಾಗಿ ಅಲ್ಲಿನ ಕಾಂಗ್ರೆಸ್ ಕಾರ್ಯದರ್ಶಿಗಳು ಸವಾಲ್ ಹಾಕಿದ್ದಾರೆ. ಕಟ್ಟನ್ನು ಉಲ್ಲಂಘಿಸಿದವರ ಗತಿ ಹೀಗೆಯೇ!

ಬ್ರಿಟಿಷ್ ಪೋಸ್ಟಾಫೀಸಿನ ಆದಾಯ.

ಬ್ರಿಟಿಷ್ ಪೋಸ್ಟಾಫೀಸಿನ ವರಮಾನವು ಅಭಿವೃದ್ಧಿಯಾಗುತ್ತಿದೆ ಕಳೆದ ವರ್ಷ ಅದಕ್ಕೆ 12,266,000 ಪೌಂಡು ವರಮಾನ ಬಂತು ಅದರಲ್ಲಿ ಇತರ ಎಲ್ಲಾ ಸಂಸ್ಥೆಗಳಿಗಿಂತಲೂ ಹೆಚ್ಚು ಜನರು ನೌಕರಿಯಲ್ಲಿರುವರು. 2,52,000 ಜನರಿಗೆ ಸಂಬಳ ದೊರೆಯುತ್ತಿದೆ. ಕಾರ್ಡುಗಳು, ಕವರುಗಳು, ಮನಿಯಾರ್ಡರುಗಳು, ತಂತಿಗಳು, ಟೆಲಿಫೋನುಗಳ ವ್ಯಾಪಾರವೂ ವಿಶೇಷವಾಗಿ ಹೆಚ್ಚಿರುತ್ತದೆ.

ವಿಜಯನಗರದ ಸಮಾರಂಭದ ಅಧ್ಯಕ್ಷರು.

ಹಿಂದೂ ಮಹಾಸಭಾಧ್ಯಕ್ಷರಾದ ಡಾ॥ ಕುರ್ತಕೋಟಿ ಶಂಕರಾಚಾರ್ಯರವರು ಹಂಪೆಯಲ್ಲಿ ನಡೆಯುವ ವಿಜಯನಗರದ ಶತಮಾನೋತ್ಸವ ಸಮಾರಂಭಕ್ಕೆ ಅಧ್ಯಕ್ಷರಾಗಲು ಒಪ್ಪಿರುವರು.

ಈ ವಾರದ ಕಥೆ

ಆಶಾ ನಿರಾಶೆ.

ಲೇಖಕರು —ಎಚ್. ವಾಮನಮೂರ್ತಿ, ಮೈಸೂರು

ಪ್ರಾತಃಕಾಲ ಸುಮಾರು 9 ಘಂಟೆಯ ಸಮಯ ರಾಜು ಪುಸ್ತಕದ ಮುಂದೆ ಕುಳಿತು, ಈ ಸಾರು ಪರೀಕ್ಷೆಯಲ್ಲಿ ಹೇಗೆ ಬರಬಹುದೋ ಈಗ ಯಾವ ತಿಂಗಳು? ಇನ್ನೂ ಡಿಸೆಂಬರ್ ಜನವರಿ, ಫೆಬ್ರವರಿ, ಮಾರ್ಚ್ ಇನ್ನೂ ಮೂರ್ತಿಂಗಳು ಕಳೆಬೇಕಲ್ಲಪ್ಪ ಆ ಮೇಲೆ ಪರೀಕ್ಷೆ ಬರೋದೆ ಅಂತ ಯೋಚನೆ ಮಾಡುತ್ತಾ ಕುಳಿತಿದ್ದ. ಕೂನೆಗೆ 15 ದಿನ ರಜ ತಗೊಂಡು ಹೊರಟೇ ಬಿಡೋಣ ಅಂತ ನಿರ್ಧಾರ ಮಾಡಿದ. ಯೋಚನ ಮಾಡುತ್ತ ತನ್ನ ರಜ ಚೀಟಿ ಬರೆದು ಸೀನು ಮನೆಗೆ ಹೋಗಿ 'ಲೋ ಸೀನು ಇದನ್ನು ಉಪಾಧ್ಯಾಯರಿಗೆ ಕೊಡು ಅಂತ ಹೇಳ್ದ. ಸೀನು ಮರು ಮಾತಿಲ್ದೆ ತೊಗೊಂಡ. ಇಲ್ದೆ ಇದ್ರೆ ಯೂನಿಯನ್ ಕ್ಲಾಸಿಗೆ ಚಕ್ರಬೀಳತ್ತೇ ಅಂತ ಗೊತ್ತು ಅವನಿಗೆ

ಯಾವಾಗ ಮಾವನ ಮನೆಗೆ ಹೋದೇನು? ಯಾವಾಗ ಪದ್ಮನ್ನ ನೋಡೇನು ಎಂದು ಅವನ ಮನಸ್ಸು ಕಾತುರಗೊಳ್ಳುತ್ತಲಿತ್ತು. ಮನೆಗೆ ಬಂದು ಹೊರಡುವ ದಕ್ಕೆ ಸಿದ್ಧನಾದ ಅಷ್ಟು ಹೊತ್ತಿಗೆ "ಅಮ್ಮನ್ನ ಹ್ಯಾಗೆ ಒಪ್ಪಿಸುವದು" ಅಂತ ಯೋಚನೆ ಬಂತು ಸ್ವಲ್ಪಹೊತ್ತು ಕುಳಿತು ಯೋಚಿಸಿ, ಆಮೇಲೆ 'ಪದ್ಮಗೆ ಬಹಳ ಖಾಯಿಲೆ ಅಂತೆ ನಾನು ಜಾಗ್ರತೆ ಬರಬೇಕು ಅಂತ ಮಾವನವರು ಕಾಗದ ಬರೆದಿದ್ದಾರೆ ಅಂತ ಹೇಳಿಬಿಡ್ತೇನೆ ಅದಕ್ಕೆ ಅಮ್ಮಾ ಒಪ್ತಾಳೆ' ಎಂದು ಮೆಲ್ಲ ಕದ್ದು ಅಡಿಗೆ ಮನೆಗೆ ಹೋದ

ಸೀತಮ್ಮನವರು ಯಾವುದೋ ಕಾಗದ ವನ್ನು ಓದುತ್ತಾ ಅಡಿಗೆ ಮನೆಯಲ್ಲಿ ನಿಂತಿದ್ದರು 'ಯಾರದಮ್ಮಾ ಕಾಗದ ಅದು" ಎಂದು ಕೇಳಿದ ರಾಜು

ನಿಮ್ಮ ಮಾವನ ಮನೆಯವರೇ ಎಲ್ಲ ರೂ ಸೌಖ್ಯವಾಗಿದ್ದೇವೆಂದು ಕಾಗದ ಬರೆದಿದ್ದಾರೆ'

ತಾನು ಮಾಡಿದ್ದ ಯೋಜನೆಗಳೆಲ್ಲಾ ಹಾಳು ಬಿತ್ತಲ್ಲಾ ಅಂತ ರಾಜುಗೆ ವಿಪರೀತ ಸಿಟ್ಟು ಬಂತು. ಆದರೆ ಅದನ್ನು ಯಾರ ಮೇಲೂ ತೋರಿಸಲೂ ಮಾರ್ಗವಿಲ್ಲಾ

'ರಾಜು, ಕಾಲೇಜಿಗೆ ಹೊತ್ತಾಗಲಿಲ್ವೆ? ಲೀಲಾ ಆಗ್ಲೆ ಊಟಮಾಡ್ಕೊಂಡು ಹೋದ ಳು' ಅಂದ್ರು, ಸೀತಮ್ಮನವರು

"ಈಗ ಹಸಿವಿ ಇಲ್ಲಾ ಅಮ್ಮಾ, ಮಧ್ಯಾಹ್ನ ಬಿಟ್ಟಾಗ ಬಂದು ಊಟ ಮಾಡ್ಕೊಂಡು ಹೋಗ್ತೀನಿ' ಎಂದು ಕೋಟು ಹಾಕಿಕೊಂಡು ಸೈಕಲ್ ತೊಗೊಂಡು ಕಾಲೇಜಿಗೆ ಹೊರಟ

ಕಾಲೇಜಿನ ಹತ್ತಿರ ಬಂದ ಸೀನು ಲೇಟಾಗಿದೆ ಅಂತ ಹೊರಗಡೇನೆ ನಿಂತಿದ್ದ

ರಾಜು—ಯಾಕೋ ಸೀನು ಕ್ಲಾಸಿಗೆ ಹೋಗಲಿಲ್ಲಾ,

ಸೀನು —ಹೊತ್ತಾಯ್ತು ಕಣೋ

ರಾಜು—ಸೀನ ಒಂದ್ ಮಾತ್ಕೇಳೋ ಕಣೋ ನಿನ್ನಿಂದವರೆಗೂ ಜ್ವರ ಬರು ಬಿಟ್ಟಿದೆ

ಸೀನು— ಸುಮ್ಮನಿರೂ ಸಾಕು

ಸೀನು ಒಂದ್ ಮಾತು ಲೋ ರಾಜು ಯಾತಕ್ಕೂ ನಿನಗೆ ಹದಿನೈದು ದಿನ ರಜ' ಎಂದ

'ನ್ಯಾಲಿ ಯಾಕೊ ಚೆನ್ನಾಗಿಲ್ಲ ಕಣೋ ಎಂದ ರಾಜು ಎಷ್ಟು ಬುರು ಡಾನ ಬರಲ್ಲಾ ಸೈಕಲ್ ಮೇಲೆ ಹೋಗಿಬಿಟ್ಟಿದ್ದಾನೆ ಇವನಿಗೆ ನ್ಯಾಯ ಚೆನ್ನಾ ಗಿಲ್ಲವಂತೆ' ಎಂದ ಮನದಲ್ಲಿ ಸೀನ

ರಾಜ ನಡೆದ ವಿಚಾರವನ್ನೆಲ್ಲಾ ತಿಳಿಸಿ 'ನೀ ರಾಜು ಈಗೇನು ಮಾಡಲಿ" ಎಂದ ಸೀನು ಸ್ವಲ್ಪ ಯೋಚಿಸಿ, ಕೊನೆಗೆ ಒಂದು ಉಪಾಯ ಹೇಳಿಕೊಡ್ತೇನೆ ನೀನು ಅದರಂತೆ ಮಾಡೋದು ಅಪೇಕ್ಷ ಇದೆಯೇನು, ಎಂದ

"ಏನು" ಎಂದ ರಾಜು "ನನಗೆ ಸಿಟ್ಟು ಬರುಲ್ಲ ಅಂತ ಹೇಳು, ನಾನು ಆ ಉಪಾಯ ಹೇಳ್ತೀನಿ' ಎಂದ ಸೀನು

ಸಿಟ್ಟು ಇಲ್ಲಾ ಏನೂ ಇಲ್ಲಾ ಹೇಳೋ ಏನೇನು ಬೇಗ ಎಂದ ರಾಜು ಆತುರ ದಿಂದ

'ಈಗ ಮನೆಗೆ ಹೋಲ್ಡಾಲು ಹಾಕಿ ಕೊಂಡು ಹೋಗು ನಿಮ್ಮಮ್ಮಾ ಯಾಕೆ ಅಂತ ಕೇಳ್ತಾರೆ ಆಗ ಮಾವ ಅಪ್ಪ ದಿಂದ ಎಷ್ಟಂತೆ ಬಹಳ ಹೆಚ್ಚಾಗಿದೆ ಯಂತೆ, ನೀನು ಬೇಗ ಬಾ ಅಂತ ಟೆಲಿ ಗ್ರಾಂ ಮಾಡಿದ್ದಾರೆ ಅನ್ನು ಆಗ ನಿಮ್ಮ ತಾಯಿ ಒಪ್ತಾರೆ ಎಂದು ಸೀನು ಹೇ ಳಿದ ರಾಜು ನಗುತ್ತಾ 'ಭಲೆ ಒಳ್ಳೆ ಉಪಾಯ ಕಣೋ, ನೀ ಹೇಳಿದ್ದಾಗ ಮಾ ಡ್ತೇನೆ ಅಂತ ಸೈಕಲ್ ಹಾಕಿಕೊಂಡು ಮ ನೆಗೆ ಬಂದ

ಮನೆಗೆ ಬಂದು, ಸೀನು ಹೇಳಿದಹಾಗೆ ಮಾಡಿದ ರಾಜು, ಅವರ ತಾಯಿಗೆ ಇ ಷ್ಟಾ ನಿಜವಾಗಲು, 'ಹೋಗಿಬಿಟ್ಟು ಬಾ ರಪ್ಪ ರಾಜಾದರೆ" ಎಂದರು

ರಾಜುವಿನ ಸಂತೋಷಕ್ಕೆ ಪಾರವೆ ಇಲ್ಲ. 'ಪದ್ಮನಿಗೆ ಏನು ಏನು ಸಾ ಮಾನು ತರೋದು' ಎಂದು ಯೋಚನಾಗ ಲೀಕ ಸ್ತ್ರೀಯರು ಉಪಯೋಗಿಸುವ ಸಾ ಮಾನುಗಳನ್ನ ಒಂದು ಕಾಗದದ ಮೇಲೆ ಬರೆದು ಅವುಗಳಲ್ಲಿ ಕೆಲವನ್ನ ತರುವ ದೆಂದು ನಿರ್ಧಾರ ಮಾಡಿ ಪೇಟೆಗ ಹೊರ ಡಲು ಉದ್ಯುಕ್ತನಾಗುತ್ತಲಿದ್ದ, ಅಷ್ಟು ಹೊತ್ತಿಗೆ ಸರಿಯಾಗಿ ಲೀಲಾ ಮಧ್ಯಾಹ್ನ ಕಾಫಿಗೆ ಮನೆಗೆ ಬಂದಳು ತಾಯಿಯಿಂದ

ವಿಚಾರ ತಿಳಿದು ರಾಜು ಇದ್ದ ಕೊಠಡಿಗೆ ಬಂದು "ಎಲ್ಲಿ ರಾಜು ಏನೊ ಟೆಲಿಗ್ರಾಂ ಬಂದಿದೆಯಂತಲ್ಲಾ' ಎಂದಳು. ರಾಜು ವು ಪೆಚ್ಚಾದನು ಲೀಲೆಗೆ ವಿಚಾರ ತಿಳಿ ಯಿತು "ಮೊನ್ನೆತಾನೆ ದೀಪಾವಳಿಗೆ ಹೋಗಿದ್ದೆ ಈಗ ಮತ್ತೆ ಸ್ಕೂಲಿಗ ಚಕ್ರ ಕೊಟ್ಟು ಮಾವನ ಮನೆಗೆ ಹೋಗಬೇ ಕೇನೊ" ಎಂದಳು ರಾಜನ ಮನ ಆತಿ ಯ ನಿರಾಶೆಯಾಯಿತು ಅವನು ದೈನ್ಯ ದಿಂದ "ಅಕ್ಕ, ದಮ್ಮಯ್ಯ ಕಣೆ, ಅಮ್ಮಂಗೆ ಹೇಳಬೇಡ" ಎಂದ "ನಾ ಹೇಳೋದೆ ಸರಿ" ಎಂದು ಹಟ ಹಿಡಿದಳು ಲೀಲಾ "ನೀ ಹೇಳದ ಇದ್ದರೆ ನಿನಗೆ ಆ ಫೌಂಟನ್ ಪೆನ್ ಪ್ರೆಸೆಂಟ್ ಮಾಡ್ತೀನಿ ಎಂದ ರಾಜು

ಹಾಗಾದರೆ ಹೇಳೋಲ್ಲ ಕೊಡು ಮತ್ತೆ ಎಂದು ಲೀಲಾ ಫೌಂಟನ್ ಪೆನ್ ತೆಗೆದುಕೊಂ ಡು ಕ್ಲಾಸಿಗ ಹೊತ್ತಾಗುತ್ತಾ ಬಂದುದ ರಿಂದ ಹೊರಟು ಹೋದಳು.

ರಾಜು ಪೇಟೆಗ ಹೋಗಿ, ಒಂದು ಡಜನ್ ಹೇರ್ ಪಿನ್, ಒಂದು ಹೇರ್ ಆಯಿಲ್ ಬಾಟ್ಲು, ಮೂರು ನಾಲ್ಕು ಟಾಯಿಲೆಟ್ ಸೋಪು ಇನ್ನೂ ಇತರೆ ಐದು ರೂಪಾಯಿ ಗಳು ಬೆಲೆ ಬಾಳುವ ಸಾಮಾನುಗಳನ್ನು ತೆಗೆದುಕೊಂಡು ಮನೆಗೆ ಬಂದ ಅಷ್ಟು ಹೊತ್ತಿಗ ಸುಮಾರು 3 ಘಂಟೆಯಾಗ ತ್ತಾ ಬಂತು ಊಟ ಮುಗಿಸಿಕೊಂಡು ಮಂ ಚದ ಮೇಲೆ ಮಲಗಿಕೊಂಡು ಹೊರಡೋ ಡ ಹತ್ತಿರದ ಅವನಿಗ ಒಂದು ಘಂಟೆ ಕಳೆಯುವುದು ಒಂದು ಯುಗ ಕಳೆಯು ವಷ್ಟು ಬೇಸರಕೆಯಾಯಿತು. 'ಏನಪ್ಪ ಬೇಗ ನಾಲ್ಕು ಘಂಟೆಯಾಗವುದಿಲ್ಲವಲ್ಲ" ಎಂದುಕೊಂಡ ಮನಸಿನಲ್ಲಿ ಹಾಗೆಯೆ ಹೊರಳಾಡುತ್ತಾ ನಿದ್ರೆ ಹತ್ತಿತ್ತು ಏಳು ವಹೊತ್ತಿಗ ಐದು ಘಂಟೆ ಆಗಿಹೋಗಿತ್ತು ನಾಲ್ಕು ಘಂಟೆಯ ರೈಲು ತಪ್ಪಿಹೋಯಿ ತು ಅವನಿಗೆ ಇನ್ನೂ ಸಿಟ್ಟು ಬಂತು ಹಾಳು ನಿದ್ದೆ ಎಂದು ನಿದ್ದೆಯನ್ನು ಶಪಿಸಿ ದನು ಪುನಃ ಅವನ ಯೋಚನೆ ಪ್ರಾ ರಂಭವಾಯಿತು "ಇನ್ನೂ 8 ಘಂಟೆತನಕ ಕಾಯಬೇಕು ಅಷ್ಟರಲ್ಲಿ ಲೀಲಾ ಒಂದು ಅಮ್ಮನ ಮುಂದೆ ಎಲ್ಲಿ ಹೇಳಿಬಿಡುತ್ತಾಳೆ ಯೊ" ಎಂದು

7 ಘಂಟೆ ಆಯಿತು ಲೀಲಾ ಅಷ್ಟು ಹೊತ್ತಿಗೆ ಮನೆಗೆ ಬಂದು ಮಗ್ಗುಲ ಮನೆ ಯಲಿ ಆರುತಿ ಎಂದು ಅಲ್ಲಿಗ ಹೋಗಿದ್ದಳು.

ಅಡಿಗ ಮನೆಗೆ ಹೋಗಿ, 'ಅಮ್ಮಾ ನಾನು ಹೋಗ್ಬಿಟ್ಟು ಬರ್ತೀನೆ ಬಹಳ ದಿನ ನಿಲ್ಲುವುದಿಲ್ಲ" ಎಂದು ತಾಯಿಯ ಉತ್ತ ರವನ್ನು ಸಹ ನಿರೀಕ್ಷಿಸದೆ ಸರಸರನೆ ರೈಲ್ವೆ ಸ್ಟೇಷನಿಗೆ ಹೊರಟ ಅವನು ಹೋಗುವ ಹೊತ್ತಿಗೆ ರೈಲು ಸಿದ್ಧವಾಗಿತ್ತು ಆ ಸಡ ಗರದಲ್ಲಿ ಟಿಕೆಟ್ ತೊಗೊಳ್ಳೋದನ್ನ ಮ ರೆತುಬಿಟ್ಟು ಪದ್ಮನ ಯಾವಾಗ ನೋಡೇ ನು, ಅವಳೊಡನೆ ಯಾವಾಗ ಸರಸವಾಗಿ ಮಾತಾಡೇನು ಎಂಬ ಆತುರದಲ್ಲಿ ಟಿಕೆಟ್ ಇಲ್ಲದೆ ರೈಲ್ ಹತ್ತಿದ ರೈಲು ಹೊರಟಿ ತು. ಹತ್ತು ಘಂಟೆಗೆ ಸರಿಯಾಗಿ ಮಾ ವನ ಊರನ್ನು ಸೇರಿದ ಗೇಟಿನ ಹತ್ತಿರ ಬಂದ "ಟಿಕೇಟ್' ಎಂಬ ಶಬ್ದ ಕೇಳಿಸಿ ತು ಜೇಬಿನಲ್ಲಿ ನೋಡಿದ ಟಿಕೇಟ್

ಇಲ್ಲ ಡಬ್ಬಲ್ ಛಾರ್ಜು ಕೊಟ್ಟು ಮಾ ವನ ಮನೆ ದಾರಿ ಹಿಡಿದ ಸುಮಾರು ಅರ್ಧದಾರಿ ಹೋಗಿರಬಹುದು ಅಷ್ಟು ಹೊತ್ತಿಗೆ ಪದ್ಮನಿಗಾಗಿ ತಂದ ಸಾಮಾ ನ್ನು ರೈಲಿನಲ್ಲಿಯೆ ಬಿಟ್ಟು ಬಂದದು ಜ್ಞಾ ಪಕ ಬಂತು. 'ಹೋದರೆ ಹೋಗ್ಲಿ ಪ... ... ಗಿ' ಎಂದು ಹೇಳಿ ಮನೆಯ ಹತ್ತಿರ ಬಂದ ಅವರ ಮನೆ ಬಾಗಿಲು ಬೀಗ ಹಾಕಿತ್ತು. ಜವಾನ ಕಟ್ಟೆ ಮೇಲೆ ಮಲ ಗಿದ್ದ.

ಜವಾನನ್ನು ಎಬ್ಬಿಸಿ ಎಲ್ಲಿಗೆ ಹೋಗಿ ದ್ದಾರೆ ಅಂತ ಹೇಳಿದ ಅವನು '9 ಘಂ ಟೆ ರೈಲಿಗೆ ಬೆಂಗಳೂರಿಗೆ ಮನೆಯವರೆಲ್ಲ ಹೋಗಿದ್ದಾರೆ ಬರೋದು ಒಂದು ತಿಂ ಗಳಾಗುತ್ತೆ' ಎಂದ ರಾಜನ ಆಸೆ ನಿರಾಶೆ ಯಾಯಿತು ರಾತ್ರಿ ಎಲ್ಲಾ ಹಾಸಿಗೆ ಇಲ್ಲದೆ ಹೊರಳಿ, ಬೆಳಗ್ಗೆ ಪೆಚ್ಚು ಮೋರೆ ಹಾಕಿಕೊಂಡು ಊರುಕಡೆ ದಾರಿಹಿಡಿದ

ಮಹಿಳಾ ಸಮಾಜ, ಮಂಡ್ಯ

ಮೇಲ್ಕಂಡ ಸಮಾಜದ ನೂತನ ಕಟ್ಟ ಡದಲ್ಲಿ 10–12–36 ನೇ ಗುರುವಾರ ಮ ಧ್ಯಾಹ್ನ 4–30 ಗಂಟೆಯಲ್ಲಿ ಒಂದು ಸಭೆ ನೆರೆದಿತ್ತು ಇದರಲ್ಲಿ ಸಮಾಜದ ಅಧ್ಯಕ್ಷ ರಾದ ಮಿಸೆಸ್ ಟಿ ರಾಮಯ್ಯನವರು ಅ ಗ್ರಾಸನವನ್ನು ವಹಿಸಿದ್ದರು

ಇದರಲ್ಲಿ ಆಹ್ವಾನಿಸಲ್ಪಟ್ಟಿದ್ದ ಮಹಿಳೆ ಯರು ಸುಮಾರು 50 ಜನ ನೆರೆದಿದ್ದರು. ಮಿಸೆಸ್ ಪಾರ್ವತಮ್ಮ ಸುಬ್ಬರಾವ್ ರವರ ದಿವ್ಯವಾದ ಸಂಗೀತವಾಯಿತು ಅನಂತ ರ ಅಧ್ಯಕ್ಷರವರು ಇನ್ನು ಮುಂದ ಇಲ್ಲಿ ಪು ಸ್ತಕ ಭಂಡಾರವನ್ನೂ, ಹೊಲಿಗ, ಕಸೂ ತಿ, ಹೆಣಿಗೆ ಮುಂತಾದ ಕೈಗಾರಿಕೆ ಕಲೆ ಗಳನ್ನು ಇಂಗ್ಲೀಷ್ ಭಾಷೆ ಕಲಿಯಲಿಚ್ಛಿ ಸುವವರಿಗ ಇಂಗ್ಲೀಷ್ ಪಾಠವನ್ನು ಹೇಳಿಕೊಡುವುದಾಗಿಯೂ ಬಡ ಮಕ್ಕಳಿಗೆ ಹಾಲನ್ನೂ, ಕೊಡುವುದಾಗಿಯೂ ... ಗರ್ಭಿಣಿ ಶಿಶುಗಳ ಸೌಕರ್ಯವನ್ನು ಏರ್ಪಾಡು ಮಾಡುವ ದಾಗಿಯೂ ತಿಳಿಸಿದರು ನಂತರ ಅಲ್ಲಿ ನೆರೆದಿದ್ದ ಮಹಿಳೆಯರನ್ನೆಲ್ಲಾ ಸಮಾಜಕ್ಕೆ ಪ್ರೋತ್ಸಾಹ ಕೊಡಬೇಕೆಂದು ಪ್ರಾರ್ಥಿ ಸಿದರು

ಯುದ್ಧದ ಹಡಗುಗಳಿಗೆ ಗಂಡಾಂತರ

ಭಾರಿ ಭಾರಿ ಯುದ್ಧದ ಹಡಗುಗಳಿಗೆ ಹೊಸದೊಂದು ಗಂಡಾಂತರವು ಪ್ರಾಪ್ತ ವಾಗಿದೆ ವಿಮಾನಗಳಿಂದ ಬಾಂಬು ಗಳು ಒಂದು ಬೀಳುವುದನ್ನು ಅವು ತಪ್ಪಿಸಿಕೊಳ್ಳಲು ಸಾಧ್ಯವಾಗುವುದಿಲ್ಲ. ಇದಕ್ಕಾಗಿ ಒಂದು ಹೊಸ ವಾಯುವು ಕಂ ಡು ಹಿಡಿಯಲ್ಪಟ್ಟಿದೆ ಅದನ್ನು ನೀರಿನ ಮೇಲೆ ಬಿಟ್ಟಾಗ ದೊಡ್ಡ ಮೋಡವಾಗಿ ಪರಿಣಮಿಸಿ ಹಡಗನ್ನು ಆವರಿಸುತ್ತದೆ. ಆದರೆ ವಿಮಾನದಲ್ಲಿರುವವರಿಗೆ ಹಡಗು ಗೋಚರವಾಗುತ್ತವೆ ಹಡಗಿನಲ್ಲಿರುವ ವರಿಗೆ ವಿಮಾನಗಳು ಕಾಣುವುದಿಲ್ಲ

ಜಲಸೈನ್ಯದವರ ದಂಗೆ

ಒಡವಾಲು ಬಳಿಯ ಕೊಳ್ಳ ವೃದ್ಧರ ಬಳಿ ಸ್ನಿಗ್ಧದಲ್ಲಿ ಕೆಲಸ ಮಾಡುತ್ತಿದ್ದ ನಿವೃತ್ತರ 30 ಜನ ಸಿಪಾಯಿಗಳು ತಮ್ಮ ಸಂಬಳಗಳನ್ನು ಹೆಚ್ಚಿಸಬೇಕೆಂದು ಸುಮಾರು ಎರಡು ತಿಂಗಳ ಹಿಂದೆ ಎಡೆ ಬಿಡದೆ ಕೆಲಸವನ್ನು ನಿಲ್ಲಿಸಿದರು. ಆಗ ಹೊರಟವರು ಈಗ ಬಂದು ಇನ್ನು ಕೆಲವರು ದಾರಿ ತಪ್ಪಿ ಆಸ್ಪತ್ರೆಗಳಿಗೆ ಸೇರಿದರು. ಬಂದ ನಾಯಕರ ಮುಖಂಡ ... ನಿಂತು ಬಿಟ್ಟರು. ಹದಿನೈದು ಜನ ಜಯಪ್ರದವಾಗಿ ನಡೆದು ಬಂದು ಸೇರಿದರು.

ಮುದುಕಿಯ ಶತಮಾನೋತ್ಸವ

ವೃಷ್ಟಿಪುರ ಎಂಬಲ್ಲಿ ... ಎಂಬೊಬ್ಬಳು ಮುದುಕಿ ... ಆಕೆಗೆ ನೂರು ವರ್ಷ ವಯಸ್ಸು ... ಚಕ್ರವರ್ತಿ ... ಆಕೆಯ ... ನೂರನೇ ವರ್ಷಂತಿ ... ಸೂಚಿಸಿ ... ಭರತಖಂಡದಲ್ಲಿ ... ಮುದುಕಿಯರ ... ಎಷ್ಟು ... ಯಾರಾದರೂ ... ಬಯಸುವರೆ? ——

ಸಂತೋಷದ ಸಮಾರಂಭ

ಈ ವಾರ ಶ್ರೀ ... 60 ನೇ ವರ್ಷದ ಶಾಂತಿ ... ಅವರ ಮನೆಯಲ್ಲಿ ಹವನ ಹೋಮಾದಿಗಳು ನಡೆದುವು.

ಆ ದಿನ ಅವರು ನೂರಾರು ಜನ ಬ್ರಾಹ್ಮಣರನ್ನೂ, ವಿದ್ವಾಂಸರನ್ನೂ, ಕರೆದು ಸಂತರ್ಪಣೆ ಮಾಡಿಸಿದರು.

ಆ ದಿನ ರಾತ್ರಿ ... ಮಾಸ್ಟರ್ ... ಶ್ರೀ ... ರಾಮರಾಯರು, ಶ್ರೀ ... ಕೃಷ್ಣರಾಯರ ... ಈ ಸಭೆ ... ಸಂಗೀತ ... ಕೇಳುತ್ತಿದ್ದ ... ಸುಬ್ಬಣ್ಣನವರು ... ಸಂಗೀತವು ಮನೋಹರವಾಗಿತ್ತು.

ರಾಜಧಾನಿಯ ಸಂಗೀತ ವಿದ್ವಾಂಸರಾದ ಶ್ರೀ ... ಗೋಪಾಲಕೃಷ್ಣಯ್ಯ ... ಸಭೆ ಸೇರಿ ... ಸುಬ್ರಹ್ಮಣ್ಯನವರನ್ನು ... ಅಭಿನಂದನಪತ್ರಿಕೆಯನ್ನು ಸಮರ್ಪಿಸಿ ... ಶ್ರೀ ... ಆರಿಸಿದವರು ... ಸಂಗೀತವು ನಡೆದುವು.

ದೇಶಭಾಷೆಯಲ್ಲಿ ಶಿಕ್ಷಣ

ಕಲ್ಕತ್ತಾ ವಿಶ್ವವಿದ್ಯಾಲಯದವರು ದೇಶಭಾಷೆಯ ಮೂಲಕವೇ ಪಾಠಗಳನ್ನು ನಡೆಸಬೇಕೆಂದು ನಿರ್ಧರಿಸಿರುವರು. ಹಾಗೆ ... ವಿಶ್ವವಿದ್ಯಾಲಯದವರು ಈ ರೀತಿ ... ನಿಶ್ಚಯಿಸಿದ್ದರು.

ಕಾಂಗ್ರೆಸ್ ಸುದ್ದಿಗಳು

ಕಾಂಗ್ರೆಸ್ಸಿಗೆ ಮಹಾತ್ಮರಿಂದ ಪ್ರವೇಶಧನ

ಫೈಜಪುರದ ಕಾಂಗ್ರೆಸ್ಸಿಗೆ ಮಹಾತ್ಮ ಗಾಂಧಿಯವರು ಸಾಮಾನ್ಯ ಪ್ರೇಕ್ಷಕರಂತೆ ದುಡ್ಡು ಕೊಟ್ಟು ... ಬೇಕೆಂದು, ನಿರ್ಧರಿಸಿದ್ದಾರೆ.

ನಾಲ್ಕು ಸಾವಿರ ಪ್ರೇಕ್ಷಕರು

ಫೈಜಪುರ್ ಕಾಂಗ್ರೆಸ್ಸಿಗೆ 1200 ಮಂದಿ ಪ್ರತಿನಿಧಿಗಳೂ, 1 ಸಾವಿರ ಮಂದಿ ಪ್ರೇಕ್ಷಕರೂ ... ಎಂದು ಗೊತ್ತಾಗಿದೆ. ಹತ್ತು 10 ಸಾವಿರ ಮಂದಿ ... ಬರುವರೆಂದು ನಿರೀಕ್ಷಿಸಿದೆ.

ತಿಲಕ್ ನಗರದಲ್ಲಿ ಸೌಕರ್ಯ

ಕಾಂಗ್ರೆಸ್ ನಡೆಯುವ ಸ್ಥಳಕ್ಕೆ ... ತಿಲಕ್ ನಗರವೆಂದು ಹೆಸರು. ಈಗಲೇ ... ಕಕ್ಕಸ್ಸು, ದೀಪಗಳು ಮತ್ತು ತಣ್ಣೀರು ... ಏರ್ಪಾಡಾಗಿದೆ. ಮತ್ತು 100 ನಲ್ಲಿಗಳನ್ನು ಇಡಿಸಿರುವರು.

ಶ್ರೀ ರಾಮನಾಥಪುರ ಕ್ಷೇತ್ರ ಮಹಾತ್ಮೆ

ಲೇಖಕ —ಲಕ್ಷ್ಮೀಕಾಂತಯ್ಯ, ರುದ್ರಪಟ್ಟಣ

ಹಿಂದೆ ಈ ರಾಮನಾಥಪುರ ಕ್ಷೇತ್ರದಲ್ಲಿ (ಪದ್ಮಕಲ್ಪದಲ್ಲಿ) ವಿಷ್ಣು ... ಪತಿವ್ರತಾ ಶಿರೋಮಣಿಯೂ, ... ಪ್ರಸೂತೆಯೂ ... ಸಾವಿರ ವರ್ಷ ... ಈಕೆಯ ... ಪತಿವ್ರತ್ಯ ... ಸಂತೃಪ್ತನಾದ ... ಪ್ರತ್ಯಕ್ಷನಾಗಿ ಆಕೆಯ ಇಷ್ಟದಂತೆ ಈ ಕ್ಷೇತ್ರಕ್ಕೆ ... ಎಂದು ಹೆಸರಿಟ್ಟು ... ನಲೆಸಿದನು ... ನದಿಯು ಇಲ್ಲಿ ... ವಿಷ್ಣು ಪುಷ್ಕರಿಣಿ ... ಗೋಗರ್ಜನ

ಕೃಪಾದ ... ಪುಷ್ಕರಿಣಿಯಲ್ಲಿ ಯಾರು ಸ್ನಾನಮಾಡುವರೋ ಅಥವಾ ಯಾರು ಆ ... ಸ್ಮರಿಸುವರೋ ಅಂಥವರಿಗೆ ಮಹಾ ಪಾತಕಗಳೆಲ್ಲಾ ನಾಶವಾಗುವುವು.

... ಪುಷ್ಕರಿಣಿಯ ಸಮೀಪದಲ್ಲಿ ಗಾಯತ್ರಿ ... ಸೂರ್ಯ ... ಸ್ನಾನ ಮಾಡಿ ಗಾಯತ್ರಿ ಜಪ ಮಾಡಿದವರಿಗೆ ಬ್ರಹ್ಮಹತ್ಯಾದಿ ಮಹಾ ಪಾಪಗಳೆಲ್ಲಾ ಪರಿಹಾರವಾಗುವುವು. ಹಿಂದೆ ಶ್ರೀರಾಮನು ರಾವಣಾದಿ ರಾಕ್ಷಸರನ್ನು ಸಂಹರಿಸಿದ ... ಮಹಾ ಪಾತಕವನ್ನು ... ಈ ಕ್ಷೇತ್ರಕ್ಕೆ ಬಂದು ... ಪುಷ್ಕರಿಣಿಯಲ್ಲಿ ಸ್ನಾನ ಮಾಡಿ ಗಾಯತ್ರಿ ... ಗಾಯತ್ರಿಯನ್ನು ... ಮಹಾ ಪಾತಕಗಳನ್ನು ಪರಿಹರಿಸಿಕೊಂಡನು. ಮತ್ತು ಒಂದು ... ನಿರ್ಮಿಸಿ ಅಲ್ಲಿಯೇ ಪ್ರತಿಷ್ಠಿಸಿದನು. ಜನರು ... ದರ್ಶನ ... ತಿಳಿದು ... ಮಾಡಿದರು. ಈಗಲೂ, ... ಇಲ್ಲಿ ... ಕಾವೇರಿ ... ಕಟ್ಟಡದಲ್ಲಿಯೂ, ... ದೇವಸ್ಥಾನದಲ್ಲಿಯೂ ನೆಲಸಿರುವನು.

ಇಂದ್ರನು ... ದಿಂದ ... ಗಾಯತ್ರಿ ... ಕುರಿತು ಘೋರ ತಪಸ್ಸನ್ನು ಮಾಡಲು ... ಪ್ರತ್ಯಕ್ಷಳಾಗಿ ... ಸಂಹರಿಸಿದ್ದಂದ ... ಪಾಪವನ್ನು ಪರಿಹರಿಸಿ ... ಗಾಯತ್ರಿ ... ಎಂದು ಹೆಸರಿಟ್ಟು ... ನೆಲಸಿದಳು ಮತ್ತು ಶ್ರೀರಾಮನು ಪ್ರತಿಷ್ಠಿಸಿದ ... ಕೃಷ್ಣ ... ದಿವಸ ಸ್ನಾನ ಮಾಡಿದವರ ... ಇಂದ್ರ ... ಪ್ರಾಪ್ತಿಯು ...

ಇದಲ್ಲದೆ ... ಸುಬ್ರಹ್ಮಣ್ಯ ಕ್ಷೇತ್ರ ... ಸುಬ್ರಹ್ಮಣ್ಯೇಶ್ವರ ಸ್ವಾಮಿಯು ... ಈ ರಾಮನಾಥಪುರ ಕ್ಷೇತ್ರಕ್ಕೆ ... ಸುಬ್ರಹ್ಮಣ್ಯೇಶ್ವರ ... ಷಷ್ಠಿ ... ರಥೋತ್ಸವವನ್ನು ನಡೆಸುತ್ತಿರುವರು. ಈ ರಥೋತ್ಸವವನ್ನು ... ಗಾಯತ್ರಿ ... ಮಾಡಿದ್ದೇ ...

ಹೊಸ ಚಕ್ರವರ್ತಿಯವರು

ಆರನೇ ಜಾರ್ಜರು

ಹೊಸ ಚಕ್ರವರ್ತಿನಿಯವರು

ಎಲಿಸಬೆತ್‌ರವರು

ಚಿಕಿತ್ಸಾಲಯ

ತಿಲಕ್ ನಗರಕ್ಕೆ ... ಕಾಂಗ್ರೆಸ್ ಚಿಕಿತ್ಸಾಲಯ (ಆಸ್ಪತ್ರೆ) ಏರ್ಪಟ್ಟಿದೆ ... ಔಷಧಿ ...

ಸ್ವಾಗತ ಏರ್ಪಾಡು

ಕಾಂಗ್ರೆಸ್ಸಿಗೆ ಬರುವ ಪ್ರೇಕ್ಷಕರನ್ನು ಸ್ವಾಗತಿಸಿ, ... ಗಂಡಸರಿಗೂ, ಪ್ರತ್ಯೇಕ ಪ್ರತ್ಯೇಕವಾಗಿ ... ಪ್ರೇಕ್ಷಕರ ... ವಾದ ನೀರು ... 10 ಕೊಳಾಯಿಗಳನ್ನು ಇಡಿಸಿರುವರು.

ಅಚ್ಯುತ ಕನ್ಯಾ

ರಾಜಧಾನಿಯ ... ಟಾಕೀಸಿನಲ್ಲಿ 23-12-36 ರಿಂದ 'ಅಚ್ಯುತ ಕನ್ಯಾ' ... ಎಂಬ ... ಚಿತ್ರವು ಪ್ರದರ್ಶಿಸಲ್ಪಡುವುದು.

... ಮಹಾತ್ಮೆಯು ... ಪುಷ್ಕರಿಣಿಯಲ್ಲಿ ನಿಂತು ... ಸೂರ್ಯ ... ಎರಡು ಕಣ್ಣುಗಳನ್ನಿಗೆ ... ಪುಷ್ಕರಿಣಿಯಲ್ಲಿ ನಿಂತು ... ಮಾಡಿ ಬ್ರಹ್ಮರ್ಷಿಯಾದನು. ಇಂತಹ ...

ಸ್ವೀಕಾರ

ಎಸ್ ... 1937 ನೇ ... ಕ್ಯಾಲೆಂಡರನ್ನು ಕೃತಜ್ಞತೆಯಿಂದ ಸ್ವೀಕರಿಸಿರುತ್ತೇವೆ.

ಸಾಧ್ವಿ

೨೧—೧೨—೩೬ ನೇ ಸೋಮವಾರ

ಮುಂದೇನು ?

ಪುರಸಭೆಯ ಓಟಿನ ಚಟಿ ಎಲ್ಲವೂ ಮುಗಿದು ಜನಸಾಮಾನ್ಯದಲ್ಲಿ ನೆಮ್ಮದಿಯು ಕಾಣುತ್ತಿದೆ. ಪುರಸಭೆ ಎಂದರೆ ಓದ್ಯು ರು, ವರ್ತಕ, ಅಧಿಕಾರಿ, ಹರಿಜನ, ಸಮಾಜ ಸಂಗತಗಳೂ ಸೇರಿದ ಕೆಲಸಗಾರ ಲೋಗರದ ಜನಸಮುದಾಯ. ಇದರ ರಚನೆಯೇ ವಿಚಿತ್ರ, ಜವಾಬ್ದಾರಿಯಂತೂ ಸರ್ಕಾರದ್ದು. ಮೆಂಬರುಗಳಿಗಿಲ್ಲದೂ ಅಭಿಪ್ರಾಯ ಕೊಡುವ ಸಲಹೆಗಾರರು. ಮಾತ್ರ ಯಾವುದಾದರೂಂದು ಒಳ್ಳೆ ವಿಷಯಕ್ಕಾಗಿ ಸುತಂತ್ರವಾದ ವಾಗ್ಯುದ್ಧವು ಒಳಿದು ಸರ್ಕಾರದ ತೀರ್ಮಾನಕ್ಕಾಗಿ ಬಾಯ್ದೆರೆದು ಹಲವು ದಿನಗಳು ಕಾದು ಕುಳಿತಿರುವುದೂ ಉಂಟು. ಈ ಮೆಂಬರುಗಳಿಗಾಗುವ ಪ್ರಯೋಜನವು ಅರವತ್ತು ಜನರ ಪರಾಕಿಗೆ ಬಾಗಿಲು ಮುಚ್ಚಿದಂತೆ.

ಮೈಸೂರಿನ ಜನರು ಉಪಕೃತರಾದರೇನು? ಪುರಸಭೆ ಚುನಾವಣೆಗಳಲ್ಲಿ ಸರ್ಕಾರದ ರೀತಿ ನೀತಿ ಸ್ಥಾಪ್ಯವೆ? ಪರಿಪೂರ್ಣ ಸ್ವಾತಂತ್ರ್ಯವನ್ನು? ಜನಾಂಗದ ನ್ಯಾಯದ ವಾಸನೆ ಎಲ್ಲಾ ಕಡೆ ಹಬ್ಬಿದೆಯೆ? ಪುರಸಭೆಗೆ ಅದೆಷ್ಟು ಸ್ವಾತಂತ್ರ್ಯವು ಸರ್ಕಾರದ ಕಡೆಯಿಂದ? ಜನಗಳ ಮತ್ತು ಹಕ್ಕುಗಳು ಮಾತ್ರ ಇರುವ ಪ್ರಶ್ನೆಗಳು ನಗರನಿವಾಸಿಗಳ ಮುಂದೆ ಇವೆ ಆಗಿಯೇ ನಿಂತಿವೆ. ಇದಕ್ಕೆ ಸರಿಯಾದ ವಾಗಿಯೇ ನಿಷ್ಕೃಷ್ಟವಾದ ದಾಗಿಯೂ, ಉತ್ತರ ಹೇಳುವುದು ಕಷ್ಟ.

ಕಾಡುತ್ತಿರುವ ಕೆರಿಗೆಗೆ ತಕ್ಕಷ್ಟು ಪ್ರತಿಫಲವಿದೆಯೆ? ಇಷ್ಟೇ ಸೌಕರ್ಯಗಳನ್ನು ಕಡಿಮೆ ತೆರಿಗೆಯಿಂದ ಪಡೆಯಲು ಸಾಧ್ಯವಿಲ್ಲವೆ? ನಗರ ನೈರ್ಮಲ್ಯವನ್ನು ಮತ್ತಷ್ಟು ನೋಡಿಕೊಳ್ಳಲು ಸಾಧ್ಯವಿಲ್ಲವೆ? ಕೇವಲ ಅಂದ ಚಂದಗಳ ಹೆಸರಿನಲ್ಲಿ ಪುರಸಭೆಯ ಮೇಲೆ ಹೆಚ್ಚಿನ ಸಾಲವನ್ನು ಹೇರಿಲ್ಲವೆ? ಇವೆಲ್ಲವನ್ನೂ ಹೊಸ ಮೆಂಬರುಗಳು ಪರಿಶೀಲಿಸಬೇಕಾಗಿದೆ. ನಗರ ನೈರ್ಮಲ್ಯಕ್ಕಾಗಲಿ, ಸೌಂದರ್ಯಕ್ಕಾಗಲಿ, ಜನಸಾಮಾನ್ಯರ ನೆಮ್ಮದಿಯನ್ನು ಬಲಿಕೊಟ್ಟು ನಡೆ ಯಬೇಕಾಗಿದೆ.

ಇನ್ನು ಮುಂದೆ ಮೆಂಬರುಗಳು ಆದರ್ಶವು ಸಾಧಿಸಲು ಸೇವೆ ಅನನ್ಯವಾಗಿ ಆತ್ಮಗೌರವ, ಸಂಗಡಲೇ ಸ್ವಾತಂತ್ರ್ಯವಾಗಲಿ.

ಈ ಸರಿಯ ಚುನಾವಣೆಯಲ್ಲಿ ಕೆಲವು ಜನ ಪ್ರಮುಖರಾದ ಹಳಬರಿಗೆ ಪರಾಜಯವಾಯಿತು. ಅವರ ಪೈಕಿ ಮುಖ್ಯರಾದವರು ಶ್ರೀ॥ ಗಳಾದ ಎ ಕೃಷ್ಣರಾವ್, ಎಸ್ ಕೃಷ್ಣಸ್ವಾಮಿರಾವ್ ಪೈ ವಿರೂಪಾಕ್ಷಯ್ಯ, ಇವರುಗಳ ಸೇವೆಯು ಪೌರ ಸಭೆಗ ತಪ್ಪಿದ್ದು ಶೋಚನೀಯವೆಂದು ನಾವು ಭಾವಿಸುತ್ತೇವೆ. ಇನ್ನು ಮುಂದೆ ಇವರು ಉತ್ಸಾಹಗುಂದದೆ ಇತರ ಅನೇಕ ವಿಧಗಳಿಂದ ಪ್ರಜಾಸೇವೆ ಮಾಡಲು ತೊಡಗಲೆಂದು ನಾವು ಕೋರುತ್ತೇವೆ.

ಒಬ್ಬ ಜಹಗೀರ್ ದಾರರ ದಬ್ಬಾಳಿಕೆ

ಜಾರ್ಜ್ ಪುರ ಸಂಸ್ಥಾನದ ರಾಮಪುರ ಪಂಚಾಯ್ತಿಯ ಜಹಗೀರ್‌ದಾರರು ತಮ್ಮ ಪ್ರಜೆಗಳ ಮೇಲೆ ಹಲವು ವಿಧದ ಅಕ್ರಮ ತೆರಿಗೆಗಳನ್ನು ಹೊರಿಸಿರುವರು. ಅವುಗಳನ್ನು ಬಲಾತ್ಕಾರವಾಗಿ ವಸೂಲ್ಮಾಡುವುದಾಗಿಯೂ ಕೊಡದಿರುವವರನ್ನು ಜಹಗೀರಿಯಿಂದ ಹೊರಕ್ಕೆ ಕಳುಹಿಸುವುದಾಗಿಯೂ ಬೆದರಿಸಿದ ಕಾರಣ ಅಲ್ಲಿನ ಪ್ರಜೆಗಳು ಮಹಾರಾಜರಿಗೆ ಅರ್ಜಿ ಬರೆದು ಈ ಅನ್ಯಾಯದ ತೆರಿಗೆಗಳನ್ನು ವಿಚಾರಿಸಿರುವರು. ಒಂದು ಸ್ವತಂತ್ರವಾದ ವಿಚಾರಣೆಯನ್ನು ನಡಸಬೇಕೆಂದು ಕೋರಿರುವರು.

ಜೋಹುಕುಂ ದರ್ಬಾರ್

ಹುಬ್ಬಳ್ಳಿ ಗಿಂಬ್ ಎಂಬಲ್ಲಿ ಸರ್ಕಾರದವರು ಒಂದು ಪ್ರದರ್ಶನವನ್ನು ನಡೆಸುವರು. ಅದರ ಸಹಾಯಾರ್ಥವಾಗಿ ಚಂದಾ ಎತ್ತಬೇಕೆಂದು ಎಲ್ಲಾ ನೌಕರರಿಗೂ ತಗಾದೆ ಹೋಗಿದೆ. ಆದರೂ ಹಣ ವೇನೂ ವಸೂಲಾಗಲಿಲ್ಲ. ಆದ್ದರಿಂದ ಪ್ರದರ್ಶನದ ಕಾರ್ಯದರ್ಶಿಗಳು ಒಂದು ಗುಪ್ತ ಇಷ್ತಿಹಾರನ್ನು ಹೊರಡಿಸಿರುವರಂತೆ, ಪ್ರತಿಯೊಬ್ಬ ನೌಕರನೂ ಕರ್ಡ್ ಪಕ್ಷ 25 ರೂ ಅನ್ನಾದರೂ ವಸೂಲು ಮಾಡದೇ ಹೋದರೆ, ಇಲ್ಲದಿದ್ದರೆ ಸಬ್‌ಡಿವಿಜನ್ ಆಫೀಸರು ಅವರ ವಿಷಯದಲ್ಲಿ ತಕ್ಕ ಕಾರ್ಯಕ್ರಮ ನಡಸುವರೆಂದೂ ತಿಳಿಸಿರುವರು.

ಕೃಷ್ಣರಾಜ ನಗರ

ಎಡತೊರೆಯ ಕೈಲ್ಸ್ ಪ್ಲೇಗ್ ಫ ರಂ ಹೋಟಲುಗಳ ಮೇಲೆ ಸ್ಯಾನಿಟರಿ ಇಲಾಖೆಯವರು ತಕ್ಕ ನಿಗಾ ಯಿಡಬೇಕೆಂದು ಒಬ್ಬ ಬಾತ್ಮೀದಾರ ಬರೆಯುತ್ತಾರೆ. ಕಾಫಿ ಕೊಟ್ಟ ಬಟ್ಟಲುಗಳನ್ನು ಸರಿಯಾಗಿ ಶುದ್ಧಿ ಮಾಡುತ್ತಿಲ್ಲವೆಂದೂ, ಬಿಸಿ ನೀರಿನಲ್ಲಿ ತೊಳೆಯುತ್ತಿಲ್ಲವೆಂದೂ ಇದರಿಂದ ಪ್ರಯಾಣಿಕರಿಗೆ ಅನೇಕ ವಿಧವಾದ ಸಾಂಕ್ರಾಮಿಕ ರೋಗಗಳು ಉಂಟಾಗಲು ಕಾರಣವಾಗುವುದೆಂದೂ ಬರೆಯುತ್ತಾರೆ. ಈ ವಿಷಯಕ್ಕೆ ಗಮನಕೊಡಲ್ಪಡುವುದೆಂದು ಕೋರಲಾಗಿದೆ.

ಪೌರಸಭಾಸದರಲ್ಲಿ ವಿನಂತಿ

ಸಹೋದರರೇ!

ತಾವು ಪ್ರಜಾಸೇವೆ ಮಾಡುತ್ತೇವೆಂದು ತಾವು ಮುಂದೆ ನಾವು ಮುಂದೆ ಎಂದು ಬಂದಿರುವುದು ಬಹಳ ಸಂತೋಷಕರವಾದ ಸಂಗತಿಯೇ ಸರಿ. ಓಟಿಗೋಸ್ಕರ ಪ್ರಜೆಗಳ ಹತ್ತಿರ ಹೋಗಿ ಹೇಗೆ ತಮ್ಮ ಹಕ್ಕನ್ನು ಸಂಪಾದಿಸಿಕೊಂಡಿರೋ ಹಾಗೆಯೇ ಪ್ರಜೆಗಳ ಹಕ್ಕುಬಾಧ್ಯತೆಗಳನ್ನು ಸಂಪಾದಿಸಿ ಕೊಡಿರಿ. ತಾವುಗಳು ಆಗಾಗ್ಗೆ ತಮ್ಮ ತಮ್ಮ ಮೊಹಲ್ಲಾಗಳಿಗೆ ಹೋಗಿ ಜನರ ಕಷ್ಟಸುಖಗಳನ್ನು ವಿಚಾರಿಸಿ. ಮತ್ತು ಅವರಲ್ಲಿ ವಿಶ್ವಾಸ, ಪ್ರೇಮ, ಮರ್ಯಾದೆಗಳನ್ನು ಸಂಪಾದಿಸಿರಿ. ಈಸಾರಿ ನಿಮಗೆ ನಿಮ್ಮ ಸತ್ವ ಪರೀಕ್ಷೆಗೋಸ್ಕರ ಓಟನ್ನು ಕೊಟ್ಟಿದ್ದಾರೆ. ನಾನು ಆಗಾಗ್ಗೆ ಆಯಾ ಮೊಹಲ್ಲಾಗಳಿಗೆ ಹೋಗಿ ನೋಡುತ್ತಿರುತ್ತೇನೆ. ಆವಾಗ ಕೆಲಸವು ಸಮರ್ಪಕವಾಗಿಲ್ಲದಿದ್ದರೆ ಬಯಲಿಗೆ ತಾವು ಬರಬೇಕಾಗುತ್ತದೆ. ತಾವುಗಳು ಪ್ರಜಾ ಸೇವೆಯನ್ನು ಮಾಡುವಿರೆಂದು ನಂಬಿದ್ದೇನೆ. ಇವರಲ್ಲಿ ಉತ್ತೀರ್ಣರಾದವರಿಗೆ ನನ್ನ ಅಭಿನಂದನೆಗಳು. ಸೋತವರಿಗೆ ನನ್ನ ಅನುತಾಪ.

ಟಿ. ಎಸ್. ಸುಬ್ಬಣ್ಣ.

ಪುರಸಭೆಯ ಚುನಾವಣೆ.

ಈ ಕೆಳಗ ಕಂಡವರು ಮೈಸೂರು ಪೌರಸಭಾ ಸದಸ್ಯರಾಗಿ ಚುನಾಯಿಸಲ್ಪಟ್ಟಿರುವರು.—

ನಜರ್ಬಾದ್—ಮ॥ ಲಿಂಗಣ್ಣನವರು

ಕಿಲ್ಲೆ ಮೊಹಲ್ಲಾ—ಶ್ರೀ॥ ಎಂ. ಕೆ ಕೃಷ್ಣರಾವ್

ಚಾಮರಾಜ ಮೊಹಲ್ಲಾ—ಮ॥ ಗಳಾದ ಎ ವೆಂಕಟೇಶಯ್ಯ, ವಿ ಲಿಂಗಪ್ಪಯ್ಯ, ಎಸ್ ರಂಗರಾಮಯ್ಯ, ಜಿ ರಾಮಾನುಜಯ್ಯಂಗಾರ್

ಕೃಷ್ಣರಾಜ ಮೊಹಲ್ಲಾ—ಮ॥ ಗಳಾದ ರಾವ್‌ಸಾಹೇಬ್ ಎಂ ರಾಮಸ್ವಾಮಿ, ಪಿ ಸೀತಾರಾಮಯ್ಯ, ಸಿ ನರಸಿಂಹಯ್ಯ, ಟಿ ಎಸ್ ರಾಜಗೋಪಾಲಯ್ಯಂಗಾರ್

ದೇವರಾಜ ಮೊಹಲ್ಲಾ—ಮ॥ ಗಳಾದ ಯು ಎಲ್ ರಾಮಚಂದ್ರರಾವ್, ಎಂ ಸಿ ತಮ್ಮಯ್ಯ, ಡಿ ಬಿ ವಿಶ್ವಂಭರಯ್ಯ, ನಂದಿ ಬಸಪ್ಪ

ಮಂಡಿ ಮೊಹಲ್ಲಾ—ಮ॥ ಗಳಾದ ಹೆಚ್ ಸಿ ದಾಸಪ್ಪ, ಎಂ ಕೆ ಮಾಧವರಾವ್ ಪವಾರ್, ಟಿ ಮುನಿಯಪ್ಪ, ಸಿ ಪೆರುಮಾಳ್ ಶೆಟ್ಟಿ, ಎಂ ಶಂಕರಯ್ಯ

ಲಷ್ಕರ್—ಮ॥ ಗಳಾದ ಕೆ ಗೋಪಾಲ ಕೃಷ್ಣಶೆಟ್ಟಿ, ಎಂ ಸಿ. ಲಕ್ಷ್ಮೀಪತಯ್ಯ, ಮಹಮದ್ ಸೇಟ್, ಕೆ ಧನಕೋಟಿಶೆಟ್ಟಿ, ಡಾ॥ ಎ ಜಿ ರಾಂ

ಇವರಿಗೆ ನಮ್ಮ ಅಭಿನಂದನೆಗಳು

ಹಿಂದೀಪ್ರಚಾರ ಸಭಾ, ಮೈಸೂರು.

ಬರುವ ಜನವರಿ ತಿಂಗಳ ಮೊದಲನೆಯ ವಾರದಲ್ಲಿ ಸಭೆಯ ಪ್ರಮಾಣಪತ್ರ ಪ್ರದಾನೋತ್ಸವ (ಕಾನ್ವೋಕೇಷನ್)ವನ್ನು ಜರಗಿಸಬೇಕೆಂದು ನಿಶ್ಚಯಿಸಲಾಗಿದೆ. 1936 ನೇ ಫೆಬ್ರವರಿ ಮತ್ತು ಸೆಪ್ಟೆಂಬರ್ ತಿಂಗಳಲ್ಲಿ ನಡೆದ ಪ್ರಾಥಮಿಕ, ಮಧ್ಯಮಾ, ರಾಷ್ಟ್ರಭಾಷಾ ಪರೀಕ್ಷೆಗಳಲ್ಲಿ ಮೈಸೂರು ಕೇಂದ್ರದಲ್ಲಿ ಕುಳಿತ, ಉತ್ತೀರ್ಣರಾದವರಿಗೆ ಪ್ರಮಾಣಪತ್ರಗಳನ್ನು ಹಂಚಲಾಗುವುದು. ಮೇಲೆ ಹೇಳಿದ ಪರೀಕ್ಷೆಗಳಲ್ಲಿ ಉತ್ತೀರ್ಣರಾದವರೆಲ್ಲರೂ ತಾರೀಖು 3-1 37 ರ ವಳಗೆ ತಮ್ಮ ತಮ್ಮ ಹೆಸರುಗಳನ್ನು ಸಭೆಯ ಲಕ್ಷ್ಮೀಪುರಂ ಕಾರ್ಯಾಲಯದಲ್ಲಿ ದಾಖಲು ಮಾಡಬೇಕೆಂದು ಈ ಮೂಲಕ ಸೂಚಿಸಲಾಗಿದೆ.

ಕೇಂದ್ರದಲ್ಲಿ ಪ್ರತ್ಯೇಕ ಪರೀಕ್ಷೆಯಲ್ಲಿ ಉಚ್ಚಸ್ಥಾನಗಳನ್ನು ಪಡೆದವರೆಲ್ಲರಿಗೂ ಬಹುಮಾನಗಳನ್ನು ಕೊಡಲಾಗುವುದು. ಬಹುಮಾನ ಪಡೆದವರ ಹೆಸರುಗಳನ್ನು ಶೀಘ್ರವಾಗಿ ತಿಳಿಸಲಾಗುವುದು.

ಕಾನ್ವೊಕೇಷನಿನ ಸಮಯದಲ್ಲಿ ಸಭೆಯ ನಾಟಕ ಮಂಡಲಿಯವರು "ಸುಹರಾಬ್ ರುಸ್ತುಮ್" ಎಂಬ ಹಿಂದೀ ನಾಟಕವನ್ನು ಅಭಿನಯಿಸುವರು

ವಿಶಾರದ ವರ್ಗ

ತಾ॥ 1-1-37 ರಿಂದ ಲಕ್ಷ್ಮೀಪುರದ ಕಾರ್ಯಾಲಯದಲ್ಲಿ ರಾಷ್ಟ್ರಭಾಷಾ ವಿಶಾರದ ಚುನಾವ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿದವರ ಸಲುವಾಗಿ ಒಂದು ವಿಶಾರದ ವರ್ಗವನ್ನು ನಡೆಸಲಾಗುವುದು. ಈ ವರ್ಗವನ್ನು ಸೇರಲಿಚ್ಛಿಸುವವರು ತಮ್ಮ ಹೆಸರುಗಳನ್ನು ಹಿಂದೀ ಪ್ರಚಾರಕರಾದ ಶ್ರೀ॥ ಶಿವ ನ್ನಾಯಜೀಯಜೀವರಿಗೆ ಕೊಡಬೇಕಾಗಿ ಗೌರವ ಕಾರ್ಯದರ್ಶಿಯವರು ಕೋರುತ್ತಾರೆ

ಕಾಲುರೂಪಾಯಿಗಾಗಿ ಕೊಲೆ

ತಂಜಾವೂರಿನ ಒಂದು ಹಳ್ಳಿಯಲ್ಲಿ ಗೋವಿಂದ ಸಾಂಬ ನೆಂಬುವನು ತನ್ನ ಸ್ನೇಹಿತನಿಗೆ ಕಾಲುರೂಪಾಯಿ ಸಾಲ ಕೊಟ್ಟಿದ್ದನು, ಸ್ವಲ್ಪ ದಿನಗಳನಂತರ ಸ್ನೇಹಿತನ ಹತ್ತಿರ ಹೋಗಿ ಕೇಳಲು ಸ್ನೇಹಿತನು ಕೊಡುವುದಿಲ್ಲ ಎಂದು ಹೇಳಿದುದರ ಪರಿಣಾಮವಾಗಿ ಕೊಲೆಗ ತುತ್ತಾದನು. ಇದಲ್ಲವೆ ಸಾಲ ಕೊಟ್ಟವರ ಲಕ್ಷಣ

ಮುದುಕಿಯ ಮದುವೆ

ತುರ್ಕಿ ದೇಶದಲ್ಲಿ ತೊಂಭತ್ತು ವರ್ಷ ವಯಸ್ಸಿನ ಓರ್ವ ವೃದ್ಧೆಯು ಈಗ ವಿವಾಹವಾದಳು. ಈಕೆಯ ಕೈಹಿಡಿದ ಗಂಡನ ವಯಸ್ಸು 15. ಐವತ್ತನೇ ವಯಸ್ಸಿನ ತನ್ನ ನಾಲ್ಕನೇ ಗಂಡನು ಯಮಪುರಿಗೆ ನಡೆದನು. ಆವಳ ಇಷ್ಟ ಇನ್ನೂ 30 ವರ್ಷಗಳು ಬದುಕಬೇಕೆಂದು ಆದ್ದರಿಂದ ಒಂಟಿಯಾಗಿ ಜೀವನ ಸಾಗಿಸುವುದು ಬೇಸರಿಕೆಯೆಂದು ತಿಳಿದು ಬಹಳ ವಿಜೃಂಭಣೆಯಿಂದ ವಿವಾಹವಾದಳು

ನಂಜನಗೂಡು ವರ್ತಮಾನ.

ಹೊಸ ಆಸ್ಪತ್ರೆ — ಶ್ರೀ ಪಿ ಡಿ ರಾಮಸ್ವಾಮಿ ಮೊದಲಿಯಾರರವರ ಧರ್ಮದ ಆಸ್ಪತ್ರೆ ಕಟ್ಟಡದ ಪ್ರಾರಂಭೋತ್ಸವವು ದಿವಾನ್ ಸಾಹೇಬರವರಿಂದ ಜನವರಿ ತಾರೀ 15ರ ಒಳಗಾಗಿ ನೆರವೇರುವುದಾಗಿ ಕೇಳುತ್ತೇವೆ ಕಟ್ಟಡವು ಆಸ್ಪತ್ರೆಗೆ ಬೇಕಾದಷ್ಟು ವಿಸ್ತೀರ್ಣವಾಗಿಲ್ಲ ಉಪಯೋಗದ ವಿಷಯದಲ್ಲಿಯಾದರೂ ಸಾಕು ಸಾಲದೆಂತಿದೆ

ಲೈಬ್ರರಿ — ಇಲ್ಲಿನ ಲೈಬ್ರರಿ ಕಟ್ಟಡದ ಆಯುಸ್ಸು ಮೂಲೆಯು ಹೆಚ್ಚು ಬಿರುಕು ಬಿಟ್ಟು, ಯಾವ ವೇಳೆಗೆ ಏನೋ ಎಂಬ ಸ್ಥಿತಿಗೆ ಅಪಾಯಸ್ಥಿತಿಯಲ್ಲಿದೆ ಪುರಸಭೆಯವರು ತಕ್ಷಣ ಇದಾ ತೆಗೆದುಕೊಂಡಿರುವರಾದರೂ ಸದ್ಯದಲ್ಲಿ ಬಾಡಿಗೆಯ ಸ್ಥಳಕ್ಕಾದರೂ ಬದಲಾಯಿಸುವುದು ಮೇಲು

ಮಹಿಳಾ ಸಮಾಜ,— ಶ್ರೀಮತಿ ಕೆ ಬಿ ಗೌಡರವರು ಹೆಚ್ಚು ಉತ್ಸಾಹದಿಂದ ಸಮಾಜದ ವಾರ್ಷಿಕೋತ್ಸವವನ್ನು ನೆರವೇರಿಸಿದರೆಂದು ಕೇಳುತ್ತೇವೆ ಶ್ರೀಮತಿಯವರು ಇನ್ನೂ ಶ್ರೀಮಂತರಂತೆ ಸಮಾಜ ಸೇವೆಯಲ್ಲಿ ಮುಂದುವರಿಯುತ್ತಿರುವುದು ಅಭಿನಂದನಾರ್ಹವೇ ಸರಿ

ಸಹಕಾರ ಸಂಘ — ಕ್ರೆಡಿಟ್ ಬ್ಯಾಂಕಿನವರು ಒಂದು ಕಟ್ಟಡವನ್ನು ಕಟ್ಟುವ ಯೋಚನೆಯಲ್ಲಿರುವರೆಂದೂ, ರಜತೋತ್ಸವ ಸ್ಮಾರಕಾರ್ಥವಾದ ಈ ಕಟ್ಟಡದ ಅಸ್ತಿಭಾರ ಕಲ್ಲನ್ನು ಹಾಕಲು ದಿವಾನ್ ಸಾಹೇಬರವರನ್ನು ಪ್ರಾರ್ಥಿಸುವರೆಂದೂ ವರ್ತಮಾನವಿದೆ

ಧನ್ವಂತರಿ ಜಯಂತಿ — ಕಳೆದ ಹನ್ನೊಂದನೆಯ ತಾರೀಖಿನದಿನ ಭಿಷಗ್ರತ್ನರು ತಮ್ಮ ಮನೆಯಲ್ಲಿ ವಿಶೇಷ ವೈಭವದಿಂದ ಈ ಉತ್ಸವವನ್ನು ಎಂದಿನಂತೆ ನೆರವೇರಿಸಿದರು ಶ್ರೀ ವಿಜಾಪೂರಕರ್‌ರವರ ರಸಾಯನ ಶಾಸ್ತ್ರದ ಆಯುರ್ವೇದ ವಿಭಾಗದ ಉಪನ್ಯಾಸವು ಬಹು ಬೆಲೆಯುಳ್ಳದಾಗಿದ್ದಿತು ಮೈಸೂರಿನಿಂದಲೂ ಬಹು ಮಂದಿ ದೊಡ್ಡ ಮನುಷ್ಯರು ಬಂದಿದ್ದರು

ಗರ್ಲ್ಸ್ ಮಿಡ್ಲ್ ಸ್ಕೂಲು— ಇಲ್ಲಿನ ನಿವಾಸಿಗಳಾಗಿ ಮೈಸೂರಿನಲ್ಲಿ ಭಾರೀ ಬಸ್ ಸರ್ವಿಸ್ ಮಾಲೀಕರಾದ ಶ್ರೀ ಸಿ ಪರುಸಾಳು ಚಟ್ಟಿಯವರು ಐದು ಸಾವಿರ ರೂಪಾಯಿಗಳನ್ನು ಈ ಕಟ್ಟಡಕ್ಕಾಗಿ ಉದಾರವಾಗಿ ದಾನಮಾಡಿರುವರೆಂದು ಕೇಳಿ ಊರಿನವರೆಲ್ಲರೂ ವಿಶೇಷವಾಗಿ ಶ್ರೀ ಚಟ್ಟಿಯವರನ್ನು ಅಭಿನಂದಿಸುತ್ತಿರುವರು

ನೀರಿನ ಸರಬರಾಯಿ— ಈ ಊರಿನ ನೀರಿನ ಸರಬರಾಯಿ ಸುತರಾಂ ಸಮರ್ಪಕವಾಗಿಲ್ಲ ಹಲವು ಕಡೆಗಳಲ್ಲಿ ನೀರು ಅನೇಕ ಘಂಟೆಗಳಕಾಲ ಹತ್ತುವುದೇ ಇಲ್ಲ ನಲ್ಲಿನೀರು ಸ್ವಲ್ಪ ವಾಸನೆ ಎಂದು ಜನ ಆಡಿಕೊಳ್ಳುತ್ತಿರುವರು ಮೂವತ್ತು ವರ್ಷಕ್ಕೆ ಮೇಲ್ಪಟ್ಟು ಹಾಕಿದ ಕೊಳವೆಗಳನ್ನು ಸ್ವಲ್ಪ ಬದಲಾಯಿಸಿದಲ್ಲದೆ ಜನರಿಗೆ ಕುಡಿಯುವ ನೀರು ಆರೋಗ್ಯಕರ

ಮಿಸೆಸ್ ಸಿಂಪ್‌ಸನ್ನಳ ವರ್ಣನೆ

ಮೊದಲನೆ ಗಂಡನ ಮೆಚ್ಚಿಗೆ.

ಸಿಂಪ್‌ಸನ್ನಳ ಮೊದಲನೆಯ ಗಂಡನಾದ ಸ್ಪೆನ್ಸರ್‌ನು ಒಂದು ಕಾಲು ಮುರಿದುಕೊಂಡು ಆಸ್ಪತ್ರೆಯಲ್ಲಿ ಬಿದ್ದಿದ್ದಾನೆ ಇವನು ಮಿಸೆಸ್ ಸಿಂಪ್‌ಸನ್ನಳ ವಿಷಯವಾಗಿ ಒಬ್ಬ ಪತ್ರಿಕಾ ಪ್ರತಿನಿಧಿಗೆ ತಿಳಿಸುತ್ತಾ "ನನಗೆ ತಿಳಿದ ಮಟ್ಟಿಗೆ, ನಾನು ನೋಡಿರುವ ಹೆಂಗಸರ ಪೈಕಿಯೆಲ್ಲಾ ಅವಳೇ ಅತ್ಯಂತ ಸೊಗಸಾದವಳು' ಎಂದು ಹೇಳಿದನು

ಬ್ರಿಟಿಷ್ ಪತ್ರಿಕೆಗಳು ಇವಳ ಸೌಂದರ್ಯವನ್ನು ಈ ರೀತಿ ವಿವರಿಸುತ್ತವೆ ಬಿಳುಪು ವರ್ಣ, ಕ್ರಾಪಿಂಗ್, ಮಾತಿನ ಗಂಭೀರತೆ, ವಿನೋದ ಚಿತ್ತವೃತ್ತಿ, ಚಂಚಲವಾದ ಕಣ್ಣುಗಳು, ಅರಿಸಿ ತರೆದ ಉಡುಪು, ಗಾಲ್ಫ್ ಮತ್ತು ಬ್ರಿಜ್ ಆಟಗಳಲ್ಲಿ ನೈಪುಣ್ಯ, ಸುಂದರಾಂಗಿ, ಅವರೆ ಆಕರ್ಷಣ ಮೂರ್ತಿ, ನೃತ್ಯದಲ್ಲಿ ಚಾಲಕಿ, ಮಧುಪಾನದಲ್ಲಿ ಆಸಕ್ತಿಯಿಲ್ಲ, ಅವರ ಬಲು ಚುರುಕಾದ ಬುದ್ಧಿಯು, ಸೊಗಸು ಇವುಗಳಲ್ಲಿ ಅವಳಿಗೆ ಸಮರಿಲ್ಲ

ಮಿಸೆಸ್ ಸಿಂಪ್ಸನ್

ಚಲನ ಚಿತ್ರ ನಿರ್ಬಂಧ

ಹೊಸ ರತ್ನಕಾಂತಿಗಳನ್ನು ತೋರಿಸುವ ಚಲನ ಚಿತ್ರಗಳನ್ನು ಮುಂದಿನ ವರ್ಷದಿಂದ ಮಕ್ಕಳಿಗೆ ತೋರಿಸಕೂಡದೆಂದು ಲಂಡನ್ನಿನಲ್ಲಿ ನಿರ್ಬಂಧವು ಮಾಡಲ್ಪಡುತ್ತದೆ

ವಾದುದು ಸಿಕ್ಕಲಾರದೆಂದು ಹಲವರು ಅಭಿಪ್ರಾಯಪಡುತ್ತಾರೆ ಸನಾತನ ಧರ್ಮದ ಅಧ್ಯಕ್ಷರು ಈ ವಿಚಾರಕ್ಕೆ ಕೂಡಲೆ ಗಮನ ಕೊಡುವರೆಂದು ನಂಬುತ್ತೇವೆ

ರೇಂದಿ ಗಲಾಟೆ— ಬುಧವಾರ ರಾತ್ರಿ ರೈಲಿನಲ್ಲಿ ರೇಂದಿಯನ್ನು ಸಾಗಿಸುವವರು ಬಹು ಗಲಾಟೆ ಮಾಡಿದರೆಂದು ಕೇಳುತ್ತೇವೆ ಈ ರೈಲಿನಲ್ಲಿ ಎರಡೇ ಗಾಡಿಗಳಿವೆ ರೇಂದಿ ಸೋರಿಹೋಗಿದು ಚೆಲ್ಲಿತೆಂದೂ, ಒಬ್ಬನು ವಾಂತಿ ಮಾಡಿಕೊಂಡನೆಂದೂ ಕೇಳುತ್ತೇವೆ ಪ್ರಯಾಣಿಕರಿಗೆ ಎಷ್ಟು ಕಸಿವಿಸಿಯಾಗಿರಬೇಕೆಂಬುದನ್ನು ಇಲಾಖೆಯವರು ಗಮನಿಸಬಾರದೆ?

—ಹಿತೈಷಿ

ಹೆರಿಗೆ ಪಂದ್ಯ

ಕೆನಡಾ ದೇಶದ ಒಬ್ಬ ನಿವೃತ್ತ ನ್ಯಾಯಾಧೀಶನು ಒಂದು ಹೆರಿಗೆ ಪಂದ್ಯವನ್ನು ಏರ್ಪಡಿಸಿದ್ದನಷ್ಟೆ ಹತ್ತು ವರ್ಷಗಳಲ್ಲಿ ಹೆಚ್ಚು ಮಕ್ಕಳನ್ನು ಹೆರುವ ಜೀವಂತರಾಗಿರುವ ಮಕ್ಕಳೊಂದೊಡಗೂಡಿದ ತಾಯಿಗೆ ಆತನು 1,50,000 ಪೌಂಡು ಬಹುಮಾನವನ್ನಿಟ್ಟಿದ್ದನು ಅನೇಕ ಜನ ತಾಯಂದಿರು ಈ ಪಂದ್ಯದಲ್ಲಿ ಭಾಗಿಗಳಾದರು. ಈ ಬಹುಮಾನಕ್ಕೆ ಅರ್ಹರಾದ ತಾಯಂದಿರು ಬಹಳ ಮಂದಿ ಇರುವರು ಆದ್ದರಿಂದ ಬಹುಮಾನವನ್ನು ಹಂಚುವ ವಿಷಯದಲ್ಲಿ ವಿವಾದವುಂಟಾಗಿದೆ ಅನೇಕರು ಭಗ್ನಮನೋರಥರಾಗುತ್ತಿರುವರು ತಮ್ಮ ಪ್ರಯತ್ನವು ವ್ಯರ್ಥವಾದುದಕ್ಕಾಗಿ ಹಲವು ಜನ ಮಾತೆಯರು ಪರಿತಪಿಸುತ್ತಿರುವರು

ಅವರ ಮಕ್ಕಳು ಪಂದ್ಯದ ಪರಿಣಾಮವಾಗಿ ಜನಿಸಿದುದರಿಂದ ಅವುಗಳಿಗೆ ಕೆನಡಾ ಸರ್ಕಾರದವರು ಸಹಾಯ ಮಾಡಬೇಕೆಂದು ನಿರ್ಧರಿಸಿರುವರು ಭಾರೀ ಆಸ್ತಿಯ ಬದಲು ಆ ಮಕ್ಕಳಿಗೆ ಸರ್ಕಾರದ ಪೋಷಣೆ ದೊರೆಯುವುದು

ಸುಲಭವಾದ ವಿದ್ಯುಚ್ಛಕ್ತಿ

ಇಂಗ್ಲೆಂಡಿನ ಗನ್ನೆ ಎಂಬಲ್ಲಿ ಜಾರ್ಜ್ ಜೋನ್ಸ್ ಎಂಬೊಬ್ಬ ರೈತನು ಒಂದು ಮೈದಾನ ಪ್ರದೇಶದಲ್ಲಿ ಗುಡಿಸಿಲಿನಲ್ಲಿ ವಾಸಿಸುತ್ತಿದ್ದಾನೆ ಗುಡಿಸಿಲಿನ ಬಳಿ ಒಂದು ಸಣ್ಣ ತೊರೆ ಹರಿಯುತ್ತಿದೆ ಅದಕ್ಕೆ ಒಂದು ಚಿಕ್ಕ ಕಟ್ಟೆ ಕಟ್ಟಿದ್ದಾನೆ ಇದರಿಂದ ಬೀಳುವ ನೀರು ಒಂದು ಜಲ ಚಕ್ರವನ್ನು ತಿರುಗಿಸುವುದು ಚಕ್ರವು ಒಂದು ಡೈನಮೋವನ್ನು ತಿರುಗಿಸುವುದು ಡೈನಮೋದಿಂದ ವಿದ್ಯುಚ್ಛಕ್ತಿ ಉತ್ಪತ್ತಿಯಾಗುವುದು ಇದರಿಂದ ಜೋನ್ಸನು ಮನೆಗೆ ದೀಪ ಮುಂತಾದ ಸೌಕರ್ಯಗಳನ್ನು ಮಾಡಿಕೊಂಡಿರುವನು

ಮಂಗಗಳಿಗೆ ಓದುಬರಹ.

ಲಂಡನ್ ಮೃಗಾಲಯದ ಎಳೆ ಬಾಲಕಿಸ್ಲದ ಮಂಗಗಳು ಸ್ಕೂಲಿಗೆ ಹೋಗುತ್ತಿವೆ ಅದರ ಉಪಾಧ್ಯಾಯರ ಹೆಸರು ಮಿಸ್ ಆರ್. ಸೂಲವಾರ್ಸ್ಟ ಕಿಂಡರ್ ಗಾರ್ಟನ್ ಪದ್ಧತಿಪ್ರಕಾರ ಮಂಗಗಳಿಗೆ ಪಾಠವನ್ನು ಕಲಿಸಲಾಗುತ್ತಿದೆ ಅವುಗಳಿಗೆ ಸಾಮಾಜಿಕ ನೀತಿಯನ್ನೂ ವೇಷ, ಭೂಷಣ, ಶೃಂಗಾರ ವಿಷಯಗಳನ್ನೂ ಮತ್ತು ಆತ್ಮಸಂಯಮವನ್ನೂ ಕಲಿಸಲಾಗುತ್ತಿದೆ

ವಿಚಿತ್ರ ಶಿಕ್ಷೆ

ಊರಿನಿಂದ ಹೊರಕ್ಕೆ ತನ್ನ ಮಗನು ಹೋದ ಸಮಾಚಾರವನ್ನು ಪೋಲೀಸರಿಗೆ ತಿಳಿಸದೆ ಇದ್ದುದಕ್ಕಾಗಿ ಕೊಂಟಾಯ್ ಎಂಬಲ್ಲಿಯ ವಕೀಲರಾದ ತ್ರೈಲೋಕ್ಯನಾಥ ನೈಟಿ ಎಂಬುವರಿಗೆ 25 ರೂ ಜುಲ್ಮಾನೆ ವಿಧಿಸಲ್ಪಟ್ಟಿತು.

ಯಳಂದೂರು ವರ್ತಮಾನ

(ನಮ್ಮ ಬಾತ್ಮೀದಾರರಿಂದ)

ಈ ತಾಲ್ಲೂಕಿನಲ್ಲಿ ಈಚೆಗೆ ಮಳೆ ಬೀಳಲಿಲ್ಲ ತಾಲ್ಲೂಕು ಕೆರೆಗಳಿಗೆ ಸಂಪೂರ್ಣವಾಗಿ ನೀರು ಬಂದು ತುಂಬಿಲ್ಲ ರಾಗಿ, ಭತ್ತ ವಗೈರೆ ಫಸಲುಗಳು ಸಾಮಾನ್ಯವಾಗಿವೆ ಜನಾರೋಗ್ಯವು ಸುಮಾರಾಗಿದೆ

ಕಳೆದ ತಿಂಗಳಲ್ಲಿ ರೆವಿನ್ಯೂ ಕಮಿಷನರವರು ಡೆಪ್ಯುಟಿ ಕಮಿಷನರ್ ಮತ್ತು ಸಬ್ ಡಿವಿಜನ್ ಸಾಹೇಬರುಗಳ ಜೊತೆಯಲ್ಲಿ ದಯಮಾಡಿಸಿದ್ದರು ತಾಲ್ಲೂಕು ಕಚೇರಿ ರಿಕಾರ್ಡ್ಸ್ ವಗೈರ ಬಾಬುಗಳನ್ನು ಇನ್ಸ್‌ಪೆಕ್ಟ್ ಮಾಡಿದರು ಈ ತಾಲ್ಲೂಕಿನ ಕೆರೆ ಕಾಮಗಾರಿ, ರೈತರು ಕೊಡತಕ್ಕ ಕಂಟ್ರಿಬ್ಯೂಷನ್ ಇವೇ ಮುಂತಾದ ವಿಚಾರವಾಗಿ ಹಲವು ಜನ ರೈತರೊಡನೆ ಮಾತನಾಡಿಕೊಂಡು ವಾಪಸು ತೆರಳಿದರು.

ಈ ಕಸಬಾದಲ್ಲಿರುವ ಪರಸ್ಪರ ಸಹಾಯ ಸಂಘವು ಸ್ಥಾಪಿತವಾಗಿ 25 ವರ್ಷಗಳಾದವು ಅದರ ಜ್ಞಾಪಕಾರ್ಥವಾಗಿ ಈ ಸಂಘದವರು ಕಳೆದ ತಾ|| 5 ರಲ್ಲಿ ಸಂಘದ "ಸಿಲ್ವರ್" ಜೂಬಿಲಿ ಮಹೋತ್ಸವವನ್ನು ನೆರವೇರಿಸಿದರು ಈ ಉತ್ಸವಕ್ಕೆ ಸಹಕಾರ ಸಂಘಗಳ ಅಸಿಸ್ಟೆಂಟ್ ರಿಜಸ್ಟ್ರಾರಾದ ಶ್ರೀ|| ಬಿ ಟಿ ಕೆಂಪಣ್ಣನವರು ಅಧ್ಯಕ್ಷರಾಗಿದ್ದರು ಆ ದಿನ ಬೆಳಗ್ಗೆ ವಾದ್ಯಸಮೇತ ಶ್ರೀಮನ್ಮಹಾರಾಜರ ಭಾವಚಿತ್ರದ ಮೆರವಣಿಗೆಯಾಯಿತು. ಮಧ್ಯಾಹ್ನ ಉಪಾಹಾರವಾದನಂತರ ಸಭೆ ಸೇರಿತು ದೇವತಾ ಪ್ರಾರ್ಥನೆಯಾದ ಮೇಲೆ ಕಾರ್ಯದರ್ಶಿಗಳು ಸಂಘದ ವರದಿಯನ್ನು ಓದಿ ಒಪ್ಪಿಸಿದರು. ಮ|| ಗಳಾದ ಬಿ ಕೆ ನಾರಾಯಣರಾಯರೂ, ವೈ|| ಶ್ರೀನಿವಾಸ ಅಯ್ಯಂಗಾರ್ಯರವರೂ ಸಂಘದ ಅಭಿವೃದ್ಧಿಯ ವಿಷಯವಾಗಿ ಉಪನ್ಯಾಸ ಮಾಡಿದರು ಅಧ್ಯಕ್ಷರ ಭಾಷಣವಾದ ತರುವಾಯ ಶ್ರೀಮನ್ಮಹಾರಾಜರ ಶ್ರೇಯಃ ಪ್ರಾರ್ಥನೆಯೂ, ಬಾಲಕಿಯರಿಂದ ಮಂಗಳವೂ ಜರುಗಿ ಸಭೆ ಮುಗಿಯಿತು

ಸ್ತ್ರೀಯರ ಪ್ರದರ್ಶನ

ಮುಂದಿನ ವರುಷ ಪ್ಯಾರಿಸ್ ನಗರದಲ್ಲಿ ಅಂತರರಾಷ್ಟ್ರೀಯ ಪ್ರದರ್ಶನವೊಂದು ನಡೆಯುವುದು ಅದರಲ್ಲಿ ಮೇಣ ಬತ್ತಿಯ ನೋಟವೊಂದರಲ್ಲಿ ಇನ್ನೂರು ಜನ ಸುಂದರ ಸ್ತ್ರೀಯರನ್ನು ಪ್ರದರ್ಶಿಸಲಾಗುವುದು. ಇದಲ್ಲದೆ ಗಾಜಿನಲ್ಲಿ ಮನುಷ್ಯನ ಆಕೃತಿಯನ್ನು ಮಾಡಿ ಶರೀರದೊಳಗಿನ ಅಂಗಾಂಗಗಳನ್ನೂ ರಕ್ತಚಲನಾಕ್ರಮವನ್ನೂ ತೋರಿಸಲಾಗುವುದು

ಅಗೋಚರವಾದ ಗುರುತುಗಳು

ಅಗಸರು ಬಟ್ಟೆಗಳ ಮೇಲೆ ಹಾಕುವ ಗುರುತುಗಳನ್ನು ಇನ್ನು ಮೇಲೆ ಕಣ್ಣಿಗೆ ಕಾಣಿಸದ ರೀತಿಯಲ್ಲಿ ಹಾಕಬಹುದು. ಇದಕ್ಕಾಗಿ ಒಂದು ಪ್ರತ್ಯೇಕವಾದ ಯಂತ್ರವನ್ನು ತಯಾರು ಮಾಡಿರುವರು ಅದರ ಮೂಲಕ ನೋಡಿದರೆ ಮಾತ್ರ ಈ ಚಿಹ್ನೆಗಳು ಗೋಚರವಾಗುವುವು

ಚಿತ್ರಗಾರರೂ (ಸೋಮವಂಶ ಆರ್ಯ ಕ್ಷತ್ರಿಯರು) ಸಿವಿಲ್ ಸರ್ವಿಸ್ಸೂ.

ಸಂಸ್ಥಾನದ ನಾನಾ ಕಡೆಗಳಲ್ಲಿ ಚದುರಿ ಹೋಗಿರುವ ಈ ಜನಾಂಗದವರು ನಮ್ಮ ದೇಶದ ಕಲಾ ಕುಶಲ ವಿದ್ಯೆಗಳ ಮುಖ್ಯಾಧಾರರಾಗಿರುವರು. ಬೆಂಗಳೂರು ಮುಂತಾದ ಮುಖ್ಯ ಪಟ್ಟಣಗಳಲ್ಲಿ, ಚಿನ್ನ ಬೆಳ್ಳಿ ಆಭರಣಗಳು ವಿಗ್ರಹಗಳು ಬೊಂಬೆ ಕೆಲಸ ಭಾವ ಚಿತ್ರಗಳನ್ನು ಬರೆಯುವುದು ಇತ್ಯಾದಿ ಕಲಾ ಕುಶಲ ವಿದ್ಯೆಗಳನ್ನು ಅವಲಂಬಿಸಿರುವರು. ಸಂಸ್ಥಾನದ ಯಾವಯಾವ ಭಾಗದಲ್ಲಿ ಕಲಾಕೌಶಲ್ಯ ವಿದ್ಯೆಗಳು ವಿರಾಜಿಸುವುವೋ, ಅವೆಲ್ಲವೂ ಈ ಜನಾಂಗದವರಿಂದಲೇ ಆಗಿರುವುದಾಗಿದೆ. ಈ ಜನಾಂಗದವರು ಕೇವಲ ಹಿಂದುಳಿದಿರುವುದರಿಂದ ಸರಿಯಾದ ಜನೇಷುಮಾರಿಯು ತೆಗೆದಿಲ್ಲ. ಆದರೆ ಕನಿಷ್ಠ ಪಕ್ಷ ಸಂಸ್ಥಾನದಲ್ಲೆಲ್ಲಾ ಒಟ್ಟು ಐವತ್ತು ಸಾವಿರ ಮಂದಿಗೆ ಕಡಿಮೆಯಿಲ್ಲವೆಂದು ಲೆಕ್ಕ ಮಾಡಲ್ಪಟ್ಟಿದೆ.

ಈ ಜನಾಂಗದವರು ನಮ್ಮ ದೇಶದ ಕಲಾಕುಶಲವಿದ್ಯೆಗಳನ್ನು ಕೇಂದ್ರೀಕರಿಸಿ ನಮ್ಮ ದೇಶದ ಖ್ಯಾತಿಯು ದಿಕ್ದಿಕ್ಕಿಗೂ ಹರಡಲು ಕಾರಣರಾಗಿರುತ್ತಾರೆ. ಇಂತಹ ಮುಖ್ಯವಾದ ಹಿಂದುಳಿದ ಸಂಗಡವಾದರೂ ಈ ಆಧುನಿಕ ಕಾಲದಲ್ಲಿ ಎಲ್ಲಾ ಜನಾಂಗದವರೂ ವಿದ್ಯಾ ಪ್ರಚಾರ ಮುಂತಾದವುಗಳಿಂದ ಪುರೋಭಿವೃದ್ಧಿ ಹೊಂದುತ್ತಿರುವಂತೆಯೇ ಈ ಜನಾಂಗದವರೂ ಅಭಿವೃದ್ಧಿ ಹೊಂದಲು ಅವಕಾಶವಿಲ್ಲದಾಗಿದೆ. ಇವರಲ್ಲಿ ವಿದ್ಯಾ ಪ್ರಚಾರವಿಲ್ಲದೆ ಓದು ಬರಹ ಬಲ್ಲವರ ಸಂಖ್ಯೆಯು ಶೇಕಡ ಒಂದಕ್ಕಿಂತಲೂ ತುಂಬಾ ಕಡಿಮೆಯಾಗಿದೆ. ಇವರನ್ನು ಹಿಂದುಳಿದ ಪಂಗಡಗಳಲ್ಲೆಲ್ಲಾ ಅತ್ಯಂತ ಹಿಂದುಳಿದವರೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು.

ಸರ್ಕಾರದ ನೌಕರಿಗಳಲ್ಲಂತೂ ಈ ಸಂಗಡದವರಿಗೆ ಪ್ರಾತಿನಿಧ್ಯವೇ ಇಲ್ಲದಾಗಿದೆ. ಇದುವರೆವಿಗೂ ಸರ್ಕಾರಿ ಇಲಾಖೆಗಳಿಗೆ ಅನೇಕಾವರ್ತಿ ನಡೆದಿರುವ ಉಮೇದುವಾರ ಚುನಾವಣೆಗಳಲ್ಲಿ ಈ ಜನಾಂಗದವರಿಗೆ ಒಂದು ಸಾರಿಯಾದರೂ ಅವಕಾಶವೇ ದೊರೆತಿಲ್ಲ. ವಿದ್ಯಾ ಪ್ರಚಾರವಿಲ್ಲದೆಯೂ, ಸರ್ಕಾರದವರ ಪ್ರೋತ್ಸಾಹವಿಲ್ಲದೆಯೂ ಈ ಜನಾಂಗದವರು ಈಗಾಗಲೇ ಸ್ವಂತವಾಗಿ ಅಭಿವೃದ್ಧಿ ಮಾರ್ಗವನ್ನೇ ತ್ಯಜಿಸುತ್ತಿರುವಂತೆ ತೋರಿಬರುತ್ತದೆ. ಇವರಲ್ಲಿರುವ ಒಬ್ಬಿಬ್ಬ ವಿದ್ಯಾವಂತರಿಗೆ ಉತ್ತೇಜನವೇ ಇಲ್ಲದಿರುವುದನ್ನು ನೋಡಿ ಈ ಜನಾಂಗದ ಬಾಲಕರು ವಿದ್ಯಾಭ್ಯಾಸವನ್ನೇ ಬಿಡುತ್ತಿರುವರು. ಇದರಿಂದ ಇವರಲ್ಲಿ ವಿದ್ಯಾ ಪ್ರಚಾರವೇ ನಿಂತು ಹೋಗುವ ಸಂಭವವಿದೆಯೆಂದು ಹೇಳಬಹುದು. ಸಂಸ್ಥಾನದ ಎಲ್ಲಾ ಹಿಂದುಳಿದ ಪಂಗಡಗಳೂ ಅಭಿವೃದ್ಧಿ ಹೊಂದಬೇಕೆಂದು ಘನ ಸರ್ಕಾರದವರು ಪ್ರಯತ್ನಪಡುತ್ತಿರುವ ಈ ಕಾಲದಲ್ಲಿ ಈ ಜನಾಂಗದವರು ಇಂತಹ ಶೋಚನೀಯ ಸ್ಥಿತಿಯಲ್ಲಿರುವುದು ವಿಷಾದಕರವಾಗಿದೆ.

ಇಂತಹ ಅಸಹಾಯರಾದ ಇವರಿಗೂ ಉತ್ತೇಜನವೆಂಬುದನ್ನೇ ಅರಿಯದ ಅತ್ಯಂತ ಹಿಂದುಳಿದ ಪಂಗಡಗಳ ಮೇಲೆ ಈಗಲಾದರೂ ಘನಸರ್ಕಾರದವರ ಗಮನವು ಬೀಳಬೇಕಾದುದು ಅತ್ಯಾವಶ್ಯಕವಾಗಿರುತ್ತದೆ. ಉತ್ತೇಜನವಿಲ್ಲದಿದ್ದರೆ ಇಂತಹ ಪಂಗಡಗಳು ಇನ್ನೂ ಅತ್ಯಂತ ಶೋಚನೀಯಸ್ಥಿತಿಗೆ ಬರುವುದರಲ್ಲಿ ಸಂದೇಹವಿಲ್ಲ. ಹೀಗಿರುವುದು ದೇಶದ ಏಳಿಗೆಗೆ ಕ್ಷೇಮಕರವೆಂದು ಯಾರೂ ಹೇಳಲಾರರು. ಆದುದರಿಂದ ಈ ಸಾರಿ ಸರ್ಕಾರಿನ ನಾಮಿನೇಷನ್ ಇತ್ಯಾದಿಗಳನ್ನು ಮಾಡುವ ಸಂದರ್ಭದಲ್ಲಿ ಇಂತಹ ಪ್ರಾತಿನಿಧ್ಯವಿಲ್ಲದ ಹಿಂದುಳಿದ ಮೈನಾರ್ ಪಂಗಡಗಳ ಶೋಚನೀಯ ಸ್ಥಿತಿಯನ್ನು ಪರಿಶೀಲಿಸಿ ಇವುಗಳಿಗೆ ಘನಸರ್ಕಾರದವರು ಈಗಲಾದರೂ ಪ್ರಾತಿನಿಧ್ಯವನ್ನು ಕೊಡುವುದರ ಮೂಲಕ ಉತ್ತೇಜನ ನೀಡುವರೆಂದು ನಿರೀಕ್ಷಿಸಲಾಗಿದೆ.

"ಹಿತಚಿಂತಕ'

ಬಾತುಕೋಳಿಗಳ ಭೇಟಿ!

ವೈಸ್‌ರಾಯರುಗಳೂ, ಗೌವರ್ನರುಗಳೂ, ದೇಶೀಯ ಸಂಸ್ಥಾನಗಳಿಗೆ ಭೇಟಿ ಕೊಟ್ಟರೆ, ಒಂದು ಶಿಕಾರಿಯ ಸಂಭ್ರಮವು ಏರ್ಪಡಿಸಲ್ಪಡುವುದು ಹುಲಿಗಳನ್ನೂ, ಚಿರತೆಗಳನ್ನೂ ಮತ್ತು ಕಾಡುಕೋಣಗಳನ್ನೂ ಹೊಡೆದು ಕೊಲ್ಲುವರು. ಆನೆಗಳನ್ನು ಹಿಡಿದು ತರುವರು. ಇವುಗಳಿಗಾದರೂ ಒಂದು ಅರ್ಥವಿದೆ. ಆದರೆ ವೈಸ್ರಾಯರು ಮೊನ್ನೆ ಬಿಕನೀರ್ ಸಂಸ್ಥಾನಕ್ಕೆ ಭೇಟಿ ಇತ್ತಾಗ ವೈಸ್ರಾಯರೂ, ಮಹಾರಾಜರೂ 2,000 ಬಾತು ಕೋಳಿಗಳನ್ನು ಹೊಡೆದು ಕೊಂದರೆಂದು ವರದಿಯಾಗಿದೆ. ಇದು ಯಾವ ದೇವರಿಗೆ ಪ್ರೀತಿಯೋ ಗೊತ್ತಿಲ್ಲ. 'ಅಹಿಂಸಾ ಪರಮೋಧರ್ಮಃ' ಎಂದು ಜಗತ್ತಿಗೆ ಸಾರಿದ ಗೌತಮ ಬುದ್ಧನು ಜನ್ಮವೆತ್ತಿದುದು ಆ ದೇಶದಲ್ಲಿಯೇ. ನಿರಪರಾಧಿಗಳಾದ ಆ ಪ್ರಾಣಿಗಳ ಹತ್ಯೆಯು ಎಲ್ಲರಿಗೂ ವಿಷಾದವನ್ನುಂಟುಮಾಡುವುದು.

ಗೌರ್ನರುಗಳಿಂದಲೂ ಪ್ರಶಂಸೆ

ಭರತಖಂಡದ ರಾಷ್ಟ್ರೀಯ ಮುಖಂಡರು ಮತ್ತು ಚಳುವಳಿಗಳ ಮೇಲೆ ಇದ್ದ ವಕ್ರದೃಷ್ಟಿಯು ಅಧಿಕಾರಿಗಳಿಗೂ ಸಹ ಕ್ರಮ ಕ್ರಮವಾಗಿ ಬದಲಾಯಿಸುತ್ತಿದೆ. ಕೆಲವು ದಿನಗಳ ಹಿಂದೆ, ಬಂಗಾಳದ ಗೌರ್ನರವರು, ಬಂಗಾಳದ ರಾಷ್ಟ್ರೀಯ ಜಾಗೃತಿಗೆ ಮೂಲಕಾರಣರಾದ ಬಂಕಿಂ ಚಂದ್ರ ಚಟರ್ಜಿಯವರನ್ನು ಬಹಳವಾಗಿ ಹೊಗಳಿದರು 'ವಂದೇ ಮಾತರಂ' ಗಾನವನ್ನು ಕೊಂಡಾಡಿದರು. ದೇಶಬಂಧು ಚಿತ್ತರಂಜನದಾಸರನ್ನು ಸ್ತುತಿಸಲು ಆರಂಭಿಸಿದ್ದಾರೆ. ಇನ್ನು ಗಾಂಧಿಯವರನ್ನೂ, ಜವಹರಲಾಲ್‌ರನ್ನೂ, ಸಂಪೂರ್ಣ ಸ್ವಾತಂತ್ರ್ಯವನ್ನೂ, ಪ್ರಶಂಸಿಸುವುದು ಒಂದೇ ಬಾಕಿ.

ಈ ವಾರದ ಫಲ

(ಒಬ್ಬ ಜೋತಿಷ್ಯ ವಿದ್ವಾಂಸರಿಂದ)

ತಾ. 21-12-36 ಸೋಮವಾರ:— ಆಕಾರದಲ್ಲಿ ಎತ್ತರವೂ ಹೊಂಬಣ್ಣವೂ ವ್ಯಾಪಾರಿಯೂ ಆದ ವೈಶ್ಯನಿಗೂ, ಮತ್ತು ಶೂದ್ರನಿಗೂ, ಈ ದಿವಸ ಸ್ತ್ರೀಯರೊಡನೆ ಸ್ವಲ್ಪ ಕಲಹವೂ, ಕೆಲಸವು ಕೈಗೂಡದ್ದರಿಂದ ಮನಸ್ಸು ಉದ್ವಿಗ್ನವೂ ಆಗುತ್ತದೆ. ಪಿತ್ತಪ್ರಕೋಪವೂ ಚಿತ್ತ ಚಾಂಚಲ್ಯವೂ ಉಂಟಾಗುತ್ತದೆ.

ತಾ. 22-12-36 ಮಂಗಳವಾರ— ಕೃಶನಾಗಿಯೂ ಎತ್ತರವಾಗಿಯೂ ಕಪ್ಪಗೂ ಇರತಕ್ಕ ವ್ಯಾಪಾರಿಯಾಗಲೀ ಅಥವಾ ಕೈಗಾರಿಕೆಯಿಂದ ಜೀವಿಸತಕ್ಕ ಶೂದ್ರನಿಗೂ ಮತ್ತು ಮೇಲ್ಕಂಡ ಗುಣಗಳುಳ್ಳ ಅಕ್ಕಸಾಲಿಗೂ ಈ ದಿವಸ ಚಿಂತೆಯೂ ಶತ್ರುವಿನೊಡನೆ ಸಂವಾದವೂ ಸಂಭವಿಸುವುದು. ಕೊಟ್ಟ ಸಾಲವು ವಸೂಲಾಗುವುದು. ಆಸ್ತಿ ಸಂಬಂಧವಾಗಿ ವ್ಯಾಜ್ಯವುಂಟಾಗುವುದು. ಉಷ್ಣ ಸಂಬಂಧವಾದ ರೋಗವು ಪ್ರಾಪ್ತವಾಗುವುದು.

ತಾ|| 23-12-36 ಬುಧವಾರ:—ಎತ್ತರವಾಗಿಯೂ, ಸಾಮಾನ್ಯ ಕೆಂಪಾಗಿಯೂ, ವಿದ್ಯಾವಂತನಾಗಿಯೂ, ಕಣ್ಣಿನಲ್ಲಿ ಯಾವುದಾದರೂ [illegible] ಇರತಕ್ಕ ಬ್ರಾಹ್ಮಣನಿಗೆ ಉತ್ತಮ. ಸದ್ಗ್ರಂಥಗಳ ಲಾಭವಾಗುವುದು. ಪ್ರವಾಸ ಒದಗುವುದು. ಒಳ್ಳೆ ಸ್ವಪ್ನಗಳು ಬೀಳುವುದು. ಚಪಲಚಿತ್ತನಾಗುವನು. ಶಿರೋವ್ಯಾಧಿ ಉಂಟಾಗುವುದು.

ತಾ|| 24-12-36 ಬೃಹಸ್ಪತಿವಾರ— ಕೃಶನಾಗಿಯೂ, ಕುಳ್ಳಗಿಯೂ, ಕೆಂಪಗೂ ಇರುವವನೂ, ಗುಮಾಸ್ತಗಿರಿಯಲ್ಲಿರುವವನೂ, ಬಡವನಿಗೆ, ಎರಡನೆಯವರ ಸಹಾಯದಿಂದ ಕಾರ್ಯವಾಗುವುದು. ಮತ್ತು ಲಾಭವಾಗುವುದು.

ತಾ|| 25-12-36 ಶುಕ್ರವಾರ:—ಎತ್ತರವೂ, ಕೆಂಪಗೂ, ಮತ್ತು ಚಪಲನೂ, ಮಂದ ಸ್ವಭಾವವೂ ಉಳ್ಳ ಕ್ಷತ್ರಿಯನಿಗೆ ದೊಡ್ಡ ಮನುಷ್ಯರಿಂದ ಸಹಾಯವೂ, ಸರಕಾರಿ ಕೆಲಸದಲ್ಲಿ ಲಾಭವೂ ಆಗುತ್ತದೆ.

ತಾ|| 26-12-36 ಶನಿವಾರ:— ಎತ್ತರವೂ, ಕಪ್ಪಗೂ, ಇರುವವನೂ, ವ್ಯಾಪಾರಿಯೂ ಆದ ಮಧ್ಯವಯಸ್ಸಿನವನು ಕೋರ್ಟಿನ ವ್ಯವಹಾರದಲ್ಲಿ ಜಯವನ್ನು ಪಡೆಯುವನು. ಶತ್ರುಗಳಲ್ಲಿ ಸ್ನೇಹ ಬೆಳೆಸುವನು.

ತಾ|| 27-12-36 ಭಾನುವಾರ:— ಸಾಮಾನ್ಯವಾದ ಎತ್ತರವುಳ್ಳವನೂ ಕಪ್ಪಗಿರುವವನೂ ವ್ಯಾಪಾರಿಯೂ ಆದ ಕ್ಷತ್ರಿಯನಿಗೆ ಬಂಧುಗಳಿಂದ ಲಾಭವೂ ಬಂಧನದಲ್ಲಿರುವವರ ಬಿಡುಗಡೆಯೂ ಸಮಲಾಭವೂ ಆಗುವುದು.

ಪರಮಹಂಸರ ಶತಮಾನೋತ್ಸವ.

ಶ್ರೀ ರಾಮಕೃಷ್ಣ ಪರಮಹಂಸರ ಶತಮಾನೋತ್ಸವವು ತಾ|| 20-12-36 ನೇ ಭಾನುವಾರ ಮಂಡ್ಯದ ಪುರಭವನದಲ್ಲಿ ಯಶಸ್ವಿಯಾಗಿ ನಡೆಯಿತು. ಬೆಳಿಗ್ಗೆ ಶ್ರೀರಾಮಕೃಷ್ಣಪರಮಹಂಸರ ಚಿತ್ರಸಹಿತ ಭಜನೆಯೊಂದಿಗೆ ಪ್ರಾರಂಭವಾಗಿ ಮಧ್ಯಾಹ್ನ ಬಡಬಗ್ಗರಿಗೆ ಅನ್ನದಾನವೂ, ಸಂಜೆ ಭಾಷಣ. ಭಾಷಣಗಳಲ್ಲಿ ಮುಕ್ತಾಯವಾಯಿತು. ಇದನ್ನು ಯಶಸ್ವಿಯಾಗಿ ಕೊನೆಗಾಣಿಸಿದವರೆಲ್ಲರಿಗೂ ಮಂಡ್ಯದ ಪುರವಾಸಿಗಳು ಕೃತಜ್ಞರಾಗಿದ್ದಾರೆ.

ಮಂಡ್ಯದ ಟೌನ್ ಓಟರು ಮಹಾಶಯರಲ್ಲಿ ವಿಜ್ಞಾಪನೆ.

ತಾ|| 23-12-36 ನೆ ಬುಧವಾರ ನಡೆಯುವ ಮುನಿಸಿಪಲ್ ಚುನಾವಣೆಯಲ್ಲಿ 21 ಜನ ಉಮೇದುವಾರರು ನಿಂತಿದ್ದಾರೆ ಎಂಬ ವಿಚಾರ ತಮ್ಮಗಳೆಲ್ಲರಿಗೂ ಗೊತ್ತೇ ಇದೆ. ಪ್ರಜಾ ಸೇವೆಯನ್ನು ಮಾಡಿ ನಿಷ್ಪಕ್ಷಪಾತದಿಂದ ಕೆಲಸಮಾಡುವ ಮಹನೀಯರುಗಳಿಗೆ ತಮ್ಮ ಘನವಾದ ಓಟುಗಳನ್ನು ಕೊಟ್ಟು ಚುನಾಯಿಸಿ ನಗರದ ಪುರೋಭಿವೃದ್ಧಿಯನ್ನು ಬಯಸಬೇಕಾಗಿ ಪ್ರಾರ್ಥಿಸುತ್ತೇನೆ.

ಹಿತೈಷಿ

ಲಾರಿಯಿಂದ ವಿಚಿತ್ರ ಮರಣ.

ತಾ|| 14-12-36 ನೇ ಸೋಮವಾರ ಚಿಕ್ಕ ಮಂಡ್ಯದ ಹತ್ತಿರ ಅಂದರೆ ಸಾಮಂಗಲದ ರಸ್ತೆಯಲ್ಲಿ ಒಬ್ಬನ ಮೇಲೆ ಮೋಟಾರು ಲಾರಿ ಹರಿದು ಮೃತಪಟ್ಟನು. ಆ ಮನುಷ್ಯನು ತನ್ನ ಊರಿಗೆ ಹೋಗುವಾಗ ಒಂದು ಹಾವನ್ನು ಕಂಡು ಅದನ್ನು ಕೊಲ್ಲುವುದಕ್ಕೆ ಪ್ರಯತ್ನಿಸುತ್ತಿರುವಲ್ಲಿ ಲಾರಿಯು ಒಂದು ಎತ್ತಿನ ಬಂಡಿಯನ್ನು ಹಿಂದೆ ಸರಿಸಿಕೊಂಡು ಬಂದು ಮನುಷ್ಯನ ಮೇಲೆ ಹರಿಯಿತು. ಲಾರಿಯನ್ನು ನಡೆಯಿಸುತ್ತಿದ್ದವನು ಅದನ್ನು ಅಲ್ಲೇ ಬಿಟ್ಟು ಪರಾರಿಯಾಗಿರುತ್ತಾನೆಂದು ತಿಳಿದು ಬಂದಿರುತ್ತದೆ.

ಪ್ರಾಣಿಗಳೂ ಮಾತನಾಡುತ್ತವೆ

ಜರ್ಮನಿಯ ಪ್ರವಾಸಿಯೂ ಶಿಕಾರಿಗಾರರೂ ಆದ ಹೆರ್ಮನ್ ಫ್ರೇಬರ್ಗ್ ಎಂಬುವರು ಪ್ರಾಣಿಗಳೂ ಸಹ ಮಾತನಾಡುತ್ತವೆಂದು ಹೇಳುತ್ತಾರೆ. ಬೇಟೆಯಾಡಲು ಅವರು ಒಮ್ಮೆ ಕಾಡಿಗೆ ಹೋಗಿದ್ದಾಗ ಸಿಂಹ ಗೋರಿಲ್ಲಾವನ್ನು ಗುಂಡಿನಿಂದ ಹೊಡೆಯುವುದರಲ್ಲಿದ್ದರು. ಅಷ್ಟರಲ್ಲಿ ಅವರೊಡನಿದ್ದ ಕಾಡುಕುರುಬನು ಹೊಡೆಯದಂತೆ ತಡೆದನು. ಒಂದು ವಿಧವಾಗಿ ಕೂಗುತ್ತಲೂ ಅರಚುತ್ತಲೂ ಆ ಪ್ರಾಣಿಯು ಹೊರಟು ಹೋಗುವಂತೆ ಹೇಳಿದನು. ಅದಕ್ಕೆ ಪ್ರಾಣಿಯೂ ಸರಿ ಉತ್ತರವನ್ನು ಕೊಟ್ಟು ತನ್ನನ್ನು ಹೊಡೆಯದಂತೆ ಪ್ರಾರ್ಥಿಸಿ ಹೊರಟು ಹೋಯಿತು.

ಮತಾಂತರದ ಘಂಟೆ.

ದೇಶೀಯ ಬಿಷೋಪರ ಕೂಗು!!

" ಒಂದು ವರುಷದಲ್ಲಿ ೧೧ ೦೦೦ ಮಂದಿ ಕ್ರೈಸ್ತರಾದರು !

ಲೇಖಕರು —ಶ್ರೀ ಜೆ. ಸ್ವಾಮಿದಾಸ್

'ಅಧಿಕವಾದ ಜನ, ಧನಸಹಾಯ ಮಾಡುವರ ನಾವು ಇಲ್ಲಿ ಬಲವಾದ ಬೇಟೆಯಾಡುತ್ತೇವೆ. ನಮಗೆ ಬೆಂಬಲ ಕೊಡಿರಿ ಧನ ಸಹಾಯ ಮಾಡಿರಿ. ತಡಮಾಡಲು ನಮಗ ಅವಕಾಶ ಕೊಡಬೇಡಿರಿ "

ಈ ರೀತಿ ದೋರ್ನಕಲ್ ಬಿಷೋಪರು ಲಂಡನ್ನಿನ ಪ್ರಸಿದ್ಧ ಪತ್ರಿಕೆಯಾದ "ಮಾಂಚಸ್ಟರ್ ಗಾರ್ಡಿಯನ್" ಪತ್ರಿಕೆಯಲ್ಲಿ ಹೇಳಿರುವರು

ಧನಕ್ಕಾಗಿ ಯಾಚನೆ —ಭಾರತದಲ್ಲಿ ವಿದೇಶೀಯರಾದ ಮಿಷನರಿಗಳು ಮತ ಪ್ರಚಾರಕ್ಕಾಗಿ ಸಹಾಯಕಾರರಮತ್ತು ರುವರೆಂಬುದು ಲೋಕವಿದಿತವಾದ ವಿಷಯ, ಧನ ಸಂಗ್ರಹಕ್ಕೆ ಬಹು ಕಷ್ಟಪಡಬೇಕೆಂಬುದು ವಿದೇಶೀಯರಿಗೆ ಮನವರಿಕೆಯಾಗಿದೆ. ಮತಾಂತರ ಮಾಡುತ್ತೇವೆ ಧನ ಸಹಾಯ ಮಾಡಿರೆಂದು ಭರತಖಂಡದಲ್ಲಿ ಕೂಗಿವರಿಬಿಗೊಡುವವರು ಯಾರಾಗಲಿ ಇಲ್ಲ. ಕಾರಣ ವೇನಂದರೆ, ಮತಾಂತರ ಮಾಡ ವುದಾಗಲಿ ಮಾಡಿಸುವುದಾಗಲಿ ಯುಕ್ತವಾದುದಲ್ಲವೆಂಬುದು ಭಾರತೀಯರ ಅಭಿಮತ. ಇದಕ್ಕೆ ಭಾರತೀಯರಲ್ಲಿ ಧರ್ಮದಮೇಲೆ ಅಭಿಮಾನವಿರುವದೇ ಕಾರಣ. ಮತವನ್ನು ಧರ್ಮತತ್ವಗಳನ್ನು ಮಾರುವುದಾಗಲಿ ಕೊಳ್ಳುವುದಾಗಲಿ ಅಪರಾಧವೆಂಬುದು ಭಾರತೀಯರ ಸಂಪ್ರದಾಯ. ಆದರೆ ವಿದೇಶೀಯರಿಗೆ ಮತವನ್ನು ಮಾರುವುದಾಗಲಿ ಕೊಳ್ಳುವುದೆಂಬುದಾಗಲಿ ಅಭಿಮತ. ಮತತತ್ವಗಳನ್ನು ವಿಕ್ರಯಿಸುವುದನ್ನು ಅವರು ಸಾಮಾನ್ಯವಾದ ವ್ಯಾಪಾರದಂತೆಯೇ ಭಾವಿಸಿರುವರು. ಈ ಯುಕ್ತಿಯನ್ನೇ ಆಧಾರಮಾಡಿಕೊಂಡು ಮಿಷನರಿಗಳು ಧನಭಿಕ್ಷೆಗಾಗಿ ಯಾಚಿಸುವರು. ಕೋತಿ ಆಡಿಸುವವನಿಗೆ ಕೋತಿಯನ್ನು ಸಾಕಬೇಕೆಂಬ ಅಭಿಪ್ರಾಯವಿರುವುದಿಲ್ಲ. ಅವನೂ ತನ್ನ ಕೋತಿಯನ್ನು ಮಾತ್ರ ತನ್ನ ಬಳಿಯಲ್ಲಿಟ್ಟುಕೊಂಡೇ ಇರುವನು. ಅವನ ಉದ್ದೇಶವು ಪರಿಷ್ಕಾರವಾಗಿರುವುದು. ತನ್ನ ಜೀವನಾಧಾರಕ್ಕೆ ಈ ಪ್ರಾಣಿಯನು ಸಾಕುವನು. ಪಾಶ್ಚಿಮಾತ್ಯರಾದ ಮಿಷನರಿಗಳು ತಮ್ಮ ಜೀವನಾಧಾರಕ್ಕೆ ಮತವನ್ನು ಉಪಕರಣವಾಗಿ ಉಪಯೋಗಿಸುವರು. ಸಮಯಬಂದಂತೆಲ್ಲಾ ಈ ಉಪಕರಣದಿಂದ ತಮ್ಮ ಜೀವನಾಧಾರವನ್ನು ಕಲ್ಪಿಸಿಕೊಳ್ಳುವರು

ಪಾಶ್ಚಿಮಾತ್ಯರು ಏತಕ್ಕಾಗಿ ಹಣ ಕೊಡುವರು. —ಮತಾಂತರಕ್ಕೆ ಜನರನ್ನು ಸೆಳೆಯುತ್ತೇವೆ. ನಮಗೆ ಧನ ಸಹಾಯ ಮಾಡಿರಿ, ಎಂದು ಲಂಡನ್ನಿನವರಿಗೆ ನಮ್ಮ ದೇಶದಲ್ಲಿರುವ ಮಿಷನರಿಗಳು ಕೂಗಿದೊಡನೆಯೇ ಅವರು ಹಣ ಕೊಡುವರು

ಭಿಕ್ಷೆಯ ಆಡಳಿತ —ನಮ್ಮ ಭರತ ಖಂಡದಲ್ಲಿ ಸಾವಿರಾರು ಮಿಷನರಿಗಳಿರುವರು. ನೂರಾರು ಸಂಸ್ಥೆಗಳಿರುವುವು. ಒಂದೊಂದು ಸಂಸ್ಥೆಯವರು ಧನ ಭಿಕ್ಷೆಯನ್ನು ಬೇಡುವರು. ಈ ಭಿಕ್ಷೆಯಿಂದ ಲಕ್ಷಾಂತರ ದ್ರವ್ಯವೂ ಸಂಗ್ರಹವಾಗುವುದು. ಈ ನಿಧಿಯಿಂದ ಮಿಷನರಿಗಳು ತಮ್ಮ ಸುಖಭೋಗಾದಿಗಳನ್ನು ಕಲ್ಪಿಸಿಕೊಳ್ಳುವರು. ದೊಡ್ಡ ದೊಡ್ಡ ಬಂಗಲೆಗಳನ್ನು ಕಟ್ಟಿಸುವರು. ಉದ್ಯಾನವನಗಳನ್ನೂ, ವಿದ್ಯಾಮಂದಿರಗಳನ್ನೂ, ಕೊಳ್ಳುವರು. ಬ್ಯಾಂಕುಗಳಲ್ಲೂ, ಸೊಸೈಟಿಗಳಲ್ಲೂ ಇನ್ಶೂರೆನ್ಸ್ ಕಂಪೆನಿಗಳಲ್ಲೂ

ಕಾಗದದ ಕಾರ್ಖಾನೆ ಷೇರು ದಾರರ ತೊಂದರೆ.

ಸ್ವಾಮಿ,

ದಿ ಮೈಸೂರು ಪೇಪರ್ ಮಿಲ್ಸ್, ಲಿಮಿಟೆಡ್, ಎಂಬ ಕಂಪನಿಯು ಬೆಂಗಳೂರಿನಲ್ಲಿ ಸ್ಥಾಪಿತವಾಗಿರುವುದು ಸಕಲರಿಗೂ ತಿಳಿದ ಅಂಶವಾಗಿರುವುದು. ಈ ಕಂಪನಿಯನ್ನು ಸ್ಥಾಪಿಸುವಾಗ ಷೇರುಗಳನ್ನು ಜನರಿಗೆ ಕೊಡುವುದಾಗಿ ಪ್ರಕಟಿಸಿ ಅಪ್ಲಿಕೇಷನ್ ಫಾರಂಗಳು ಮತ್ತು ಫೀಯನ್ನು ಸಹ ಗೌರ್ನಮೆಂಟ ತಾಲ್ಲೂಕು ಟ್ರೆಜರಿಗಳಲ್ಲಿಯೂ, ಮೈಸೂರು ಬ್ಯಾಂಕು ಲಿಮಿಟೆಡ್, ಬೆಂಗಳೂರು ಮತ್ತು ಅದರ ಶಾಖೆಗಳೂ, ಇಂಪೀರಿಯಲ್ ಬ್ಯಾಂಕ್, ಲಿಮಿಟೆಡ್, ಬೆಂಗಳೂರು ಇವುಗಳಲ್ಲಿ ಕಟ್ಟಬಹುದೆಂದೂ ಪ್ರಕಟಿಸಿದ್ದರು. ಅದರಂತೆ ಎಲ್ಲರೂ ಸಲ್ಲಿಸಿದರು

ಅನಂತರ ಷೇರುಗಳನ್ನು ಹಂಚಿ ಅಲಾಟ್‌ಮೆಂಟು ಫಾರಂಗಳನ್ನು ಎಲ್ಲಾ ಷೇರುದಾರರಿಗೂ ಕಳುಹಿಸಿ ಇನ್ನೂ ಬಾಕಿ ಮೊಬಲಗಿನಲ್ಲಿ ಅಲಾಟ್‌ಮೆಂಟು ಫೀಯನ್ನು ಕಟ್ಟಲು ತಾಲ್ಲೂಕು ಟ್ರೆಜರಿ ವಿನಹ ಬಾಕಿ ಕಡೆಗಳಲ್ಲಿ ಕಟ್ಟುವಂತೆ ನಮೂದಿಸಲ್ಪಟ್ಟಿತ್ತು. ಅದರಂತೆ ಅನೇಕರು ಮಣಿಯಾರ್ಡರು ಮತ್ತು ಅನೇಕ ಸಿಧವಾಗಿ ರೂಪಾಯಿಗಳನ್ನು ಸಲ್ಲಿಸಿದ್ದಾಯಿತು. ಇದರಿಂದುಂಟಾದ ತೊಂದರೆ ಮತ್ತು ಕಂಪನಿಗೆ ಉಂಟಾದ ನಷ್ಟದ ವಿಚಾರವಾಗಿ ಕಂಪನಿಯವರಿಗೆ ಪತ್ರವ್ಯವಹಾರ ನಡೆದಾಗ್ಯೂ ಏನೂ ಪ್ರಯೋಜನವಾಗಲಿಲ್ಲ

ಈಗ ಕಂಪನಿಯವರು ಬಾಕಿ ಉಳಿದಿರುವ ಆರು ರೂಪಾಯಿಗಳಲ್ಲಿ ಮೊದಲನೆಯ ಕಂತು 2 ರೂಪಾಯಿಗಳನ್ನು ಸಲ್ಲಿಸಲು ಫಾರಂಗಳನ್ನು ಕಳುಹಿಸಿದ್ದಾರೆ. ಆದರೆ ಹಿಂದಿನ ಮೇಲ್ಕಂಡ ಬ್ಯಾಂಕುಗಳ ಶಾಖೆಗಳಲ್ಲಿ ಕಟ್ಟಲೂ ಸಹ ನಮೂದಿಸಿಲ್ಲ. ಇಲ್ಲಿರುವ ಬ್ಯಾಂಕುಗಳಿಗೆ ಕಟ್ಟಲು ಕಂಪನಿಯವರ ಅನುಮತಿಯಿಲ್ಲ. ಇದರಿಂದ ಷೇರುದಾರರುಗಳಿಗೆ ತುಂಬಾ ತೊಂದರೆಯಾಗಿದೆ. ಈ ವಿಚಾರದಲ್ಲಿ ಕಂಪನಿಯವರು ಪರ್ಯಾಲೋಚಿಸಿ ರೂಪಾಯಿಗಳನ್ನು ಗೌರ್ನ

ಮುಂಬಾಯಿ ಬೈಕುಲ್ಲಾ ಮಾರುತಿ ದೇವಾಲಯ



ಬೊಂಬಾಯಿ ಹಿಂದೂ ಮುಸ್ಲಿಂ ಗಲಭೆಯ ಮೂಲಸ್ಥಾನ

ಸಾವಿರಾರು ರೂಪಾಯಿಗಳನ್ನಿಟ್ಟುಕೊಂಡು, ಬಡವರೂ, ದಡ್ಡರೂ, ದರಿದ್ರರೂ ಆದ ದೇಶೀಯ ಕ್ರೈಸ್ತರ ಮೇಲೆ ದೊರತನ ಮಾಡುವರು. ಧರ್ಮಭಿಕ್ಷೆಯ ಪರಿಣಾಮವಿದು

ಬಿಷೋಪರ ಘಂಟಾನಾದ —"ನಾವು ಒಂದೇ ವರ್ಷದಲ್ಲಿ ಹನ್ನೊಂದು ಸಾವಿರ ಜನರನ್ನು ನಮ್ಮ ಮತಕ್ಕೆ ಸೇರಿಸಿಕೊಂಡವು. ಇನ್ನೂ ಲಕ್ಷಾಂತರ ಜನರು ನಮ್ಮ ಕಡೆಗೆ ಸೇರುವರು. ಈ ಕೆಲಸಕ್ಕೆ ನಾವು ಸಮರ್ಥರಾದ ನಾಯಕರನ್ನೂ ಹಿಡಿದಿರುತ್ತೇವೆ. ನೀವು ಸಹಾಯ ಮಾಡಿ' ರೆಂದು ವಿಲಾಯಿತಿಗೆ ಮೊರೆಯಿಟ್ಟಿರುವರು.

ಪರಿಣಾಮವೇನಾದೀತು? :— ಬಿಷೋಪರು ತೋರಿಸಿರುವ ಅಂಕಗಣನೆಯು ಆಕರ್ಷಣೀಯವಾಗಿರುವುದು. ಯಾರನ್ನು ಹಿಡಿದಿರುತ್ತೇವೆ, ಅವರ ಸ್ಥಿತಿಗತಿಗಳೇನು ಅವರು ಹಿಂದೆ ಯಾವರೀತಿಯಲ್ಲಿದ್ದರು ಎಂಬುದ ವಿಷಯ ಯಾರೂ ಯೋಚಿಸುವುದಿಲ್ಲ. ಧನಿಕರ, ಅಪಾರವಾದ ಧನವನ್ನು ಸಹಾಯ ಮಾಡುವರು. ಅಂತೂ ಬಿಷೋಪರು ಕೂಗಿರುವುದರಿಂದ ನಿಧಿಯು ಸಂಗ್ರಹಿಸಲ್ಪಡುವುದು

ಮುಖಂಡರಾದವರು ವ್ಯಾಖ್ಯಾನಗಳನ್ನು ಮಾಡುವನು. ತಮ್ಮ ತಮ್ಮ ಸಂಘಗಳಿಂದಲೂ, ಸಂಸ್ಥೆಗಳಿಂದಲೂ, ನಿಧಿಯನ್ನು ಕೂಡಿಸಿ ಬಿಷೋಪರಿಗೆ ಕಳುಹಿಸುವರು. ಬರುವ ಹಣವನ್ನು ತಡೆಯುವುದಕ್ಕೆ ನಮಗೆ ಸಾಧ್ಯವಿಲ್ಲ! ಆದರೂ ಒಂದನ್ನು ಮಾತ್ರ ನಾವು ಭಾರತೀಯರು ಮಾಡಬಹುದು

ಮೆಂಟು ತಾಲ್ಲೂಕು ಟ್ರೆಜರಿಯಲ್ಲಿ ಕಟ್ಟಲು ಅನುಮತಿ ಕೊಡುತ್ತಾರೆಂದೂ ಒಸಾ ಇಸ್ಯಾವ ವಿಧವಾದರೂ ತೊಂದರೆಯನ್ನು ತಪ್ಪಿಸಬೇಕಾಗಿಯೂ ವಿನಂತಿ

ಷೇರುದಾರರ ಹಿತಚಿಂತಕ,
ಮಂಡ್ಯ

ಈಗ ನಮ್ಮ ಕರ್ತವ್ಯವೇನು? :— ಬಿಷೋಪರು ಕೂಗಲಿ, ಮಿಷನರಿಗಳು ಯಾಚಿಸಲಿ ಇವರಿಗೆ ಧನ ಸಹಾಯವು ಬರುತ್ತಿ. ಆದರೆ ಇದಕ್ಕೆ ನಮ್ಮ ಜನರು ಸಿಕ್ಕದಂತೆ, ಮಿಷನರಿಗಳ ಬಲೆಗೆ ಬೀಳದಂತೆ ನಿರೋಧ ಕಾರ್ಯಕ್ರಮಗಳನ್ನು ನಡಿಸಬೇಕಾಗಿದೆ. ಜನಜಾಗ್ರತಿಯುಂಟುಮಾಡಲು ನಮ್ಮ ದೇಶೀಯರು ಮುಂದಾಗಬೇಕಾಗಿದೆ

ಒಂದೇಸಲ ರೂ. 50,000 ಗಳಿಸಿರಿ

ಒಂದು ಗ್ರಾಮಫೋನು, ಕೈ ಮತ್ತು ಜೇಬಿನ ಗಡಿಯಾರ, ಮತ್ತು

೧೪ ಕ್ಯಾರೆಟ್ ರೋಲ್ಡ್ ಗೋಲ್ಡ್ ಫೌಂಟನ್ ಪೆನ್ ಉಚಿತ!

(1) ಎಲ್ಲಾ ಚೌಕಗಳನ್ನು ಸರಿಯಾಗಿ ಬರೆದು ಕಳುಹಿಸುವವರಿಗೆ 5,000 ರೂ. ಗಳ 8 ಬಹುಮಾನ.
(2) 2 ಚೌಕಗಳನ್ನು ಸರಿಯಾಗಿ ಬರೆದು ಕಳುಹಿಸುವವರಿಗೆ 100 ರೂ ಗಳ 50 ಬಹುಮಾನ.
(3) 1 ಚೌಕವನ್ನು ಸರಿಯಾಗಿ ಬರೆದು ಕಳುಹಿಸುವವರಿಗೆ 10 ರೂ. ಗಳ 100 ಬಹುಮಾನ.
(4) 25 ಉತ್ತರಗಳನ್ನು ಕಳುಹಿಸುವ ಎಲ್ಲಾ ಉಮೇದುವಾರರುಗಳಿಗೂ, 20 ವರುಷಗಳು ಬಾಳುವ ಚಂದವಾದ ಗ್ಯಾರಂಟಿಯುಳ್ಳ 200 ಕೈ ಗಡಿಯಾರಗಳ ಬಹುಮಾನ.

ಗ್ಯಾರಂಟಿ— ಮೇಲ್ಕಂಡ ಎಲ್ಲಾ ಬಹುಮಾನಗಳೂ ಗ್ಯಾರಂಟೀಯಾಗಿವೆ: ಸರಿಯಾದ ಉತ್ತರಗಳ ಸಂಖ್ಯೆಗೆ ಸಂಬಂಧಪಟ್ಟಿಲ್ಲ. ಹಂಚಲಾಗುತ್ತೆ. ಅಂದರೆ, ಎಲ್ಲಾ ಸರಿಯಾದ್ದಕ್ಕೆ ರೂ. 5,000 ಗಳೂ, 2 ಚೌಕ ಸರಿಯಾಗಿದ್ದರೆ ರೂ. 100 ಗಳೂ 1 ಚೌಕ ಸರಿಯಾಗಿದ್ದಕ್ಕೆ ರೂ 10 ಗಳೂ 25 ಅಥವಾ ಹೆಚ್ಚಾಗಿ ಉತ್ತರ ಕಳುಹಿಸುವವರಿಗೆ ಒಂದು ಕೈಗಡಿಯಾರವೂ ಕೊಡಲಾಗುತ್ತೆ.

(5) ನಮ್ಮ ರಿಜಿಸ್ಟರಿನಲ್ಲಿ 5, 15, 25 ಸಂಖ್ಯೆಯಿಂದ ರಿಜಿಸ್ಟರ್ ಮಾಡಿಕೊಳ್ಳುವ ಉತ್ತರ ಕಳುಹಿಸುವವರಿಗೆ ಒಂದು 14 ಕ್ಯಾರೆಟ್ ರೋ. ಗೋಲ್ಡ್ ಫೌಂಟನ್ ಪೆನ್ ಉಚಿತವಾಗಿ ಕೊಡಲಾಗುತ್ತೆ.
(6) ನಮ್ಮ ರಿಜಿಸ್ಟರಿನಲ್ಲಿ 10, 20, 30 ಈ ರೀತಿ ರಿಜಿಸ್ಟರಾಗುವ ಸಂಖ್ಯೆಯ ಉತ್ತರವನ್ನು ಕಳುಹಿಸುವವರಿಗೆ 5 ವರ್ಷ ಗ್ಯಾರಂಟಿಯಾದ ಒಂದು ಜೇಬಿನ ಗಡಿಯಾರ ಕೊಡಲಾಗುತ್ತೆ.
(7) 100, 200, 500 ರೀತಿ ರಿಜಿಸ್ಟರಾಗುವ ಸಂಖ್ಯೆಯ ಉತ್ತರಗಳನ್ನು ಕಳುಹಿಸಿದವರಿಗೆ ಒಂದು ವಿಕ್ಟೋರಿಯಾ ಡಬಲ್ ಸ್ಪ್ರಿಂಗ್ ಗ್ರಾಮಾಫೋನು ಉಚಿತವಾಗಿ ಕೊಡಲಾಗುತ್ತೆ.

ಗ್ಯಾರಂಟಿ—ಪ್ರತಿ ಉಮೇದುವಾರನೂ ಪ್ರತಿ ಬಹುಮಾನ ಪಡೆಯಲು ಅವಕಾಶವಿದೆ. ಪ್ರತಿ 4 ಸಂಖ್ಯೆಯ ನಂತರ ಒಂದೊಂದು ಬಹುಮಾನ ಕೊಡುವವರಾಗಿದ್ದೇವೆ. 5 ಉತ್ತರ ಕಳುಹಿಸುವವರು 5 ನೇ ನಂಬರಿನ ಬಹುಮಾನ ಪಡೆಯುವುದು ಖಂಡಿತ. ಮತ್ತು 6 ಮತ್ತು 7 ನೇ ನಂಬರಿನಲ್ಲಿ ನಮೂದಿಸಿರುವ ಬಹುಮಾನ ಪಡೆಯಲು ಹೆಚ್ಚು ಅವಕಾಶವಿದೆ. 10 ಉತ್ತರ ಕಳುಹಿಸುವವರು 6 ನೇ ನಂಬರಿನಲ್ಲಿ ನಮೂದಿಸಿರುವ ಬಹುಮಾನ ಪಡೆಯುವುದು ಖಾತರಿ, ಮತ್ತು 7 ನೇ ನಂಬರಿನ ಬಹುಮಾನ ಪಡೆಯಲು ಅವಕಾಶವಿದೆ. 100 ಅಥವಾ ಹೆಚ್ಚು ಉತ್ತರಗಳನ್ನು ಕಳುಹಿಸುವವರು 7 ನೇ ನಂಬರು ಬಹುಮಾನ ಪಡೆಯುವುದು ಖಂಡಿತ. ಈ ರೀತಿ ಪ್ರತಿ ಉಮೇದುವಾರರೂ 5, 6, 7 ನೇ ನಂಬರಿನಲ್ಲಿ ನಮೂದಿಸಿರುವ ಬಹುಮಾನ ಪಡೆಯಲು ಅವಕಾಶವಿದೆ.

ಪ್ರವೇಶ ಧನ 1—4—0

ಕಡೆಯ ತಾರೀಖು 10—1—37

ನಂ. 1

		31
	30	
29		

ನಂ. 2

		41
	40	
39		

ನಂ. 3

		51
	50	
49		

ಸೂ. ಮಹಿಳೆಯರಿಂದಲೂ ವಿದ್ಯಾರ್ಥಿಗಳಿಂದಲೂ ಬರುವ ಉತ್ತರಗಳಿಗೆ ವಿಶೇಷ ಗಮನವೂ ಸ್ಪೆಷಲ್ ಬಹುಮಾನಗಳೂ ಕೊಡಲ್ಪಡುವುವು. ಸ್ಪೆಷಲ್ ಬಹುಮಾನಗಳು—ಮೇಲ್ಕಂಡ ಬಹುಮಾನಗಳಲ್ಲದೆ ರೂ. 4,000 ರೂ. 3,000 ರೂ. 2,000, ರೂ. 1000 ಈ ರೀತಿಯಾಗಿ ಡಿಸೆಂಬರ್ 15, 20, 25 ಜನವರಿ 1 ರೊಳಗಾಗಿ ನಮ್ಮ ಆಫೀಸಿಗೆ ಬರುವ ಒಂದೂ ತಪ್ಪಿಲ್ಲದ ಉತ್ತರವನ್ನು ಕಳುಹಿಸುವವರಿಗೆ ಕೊಡಲಾಗುತ್ತದೆ. ಮೇಲ್ಕಂಡ 3 ಚೌಕಗಳಲ್ಲಿನ ಖಾಲೀ ಭಾಗಗಳಲ್ಲಿ ಬೇಕಾದ ಅಂಕಿಯನ್ನು ಉಪಯೋಗಿಸಿ, ನೇರಲಿಂದ, ಅಡ್ಡಲಾಗಿ, ಮೂಲೆಗಳಿಂದ ಹೇಗೆ ಕೂಡಿದರೂ, 1ನೇ ನಂಬರಿನಲ್ಲಿ ಒಟ್ಟು 90 ಬರುವಹಾಗೂ, 2 ನೆಯದರಲ್ಲಿ 120 ಬರುವಹಾಗೂ, 3 ನೆಯದರಲ್ಲಿ 150 ಬರುವಹಾಗೂ ಮಾಡಬೇಕು. ಪ್ರತಿ ಚೌಕದಲ್ಲೂ ಒಂದೊಂದು ಅಂಕವನ್ನು ಒಂದುಸಾರಿ ಉಪಯೋಗಿಸಬೇಕು. ಒಬ್ಬೊಬ್ಬರು ಎಷ್ಟೆಷ್ಟು ಉತ್ತರ ಬೇಕಾದರೂ ಸಾಧಾರಣ ಕಾಗದದಲ್ಲಿ ಬರೆದು ಒಂದೇ ಕವರಿನಲ್ಲಿ ಕಳುಹಿಸಬಹುದು. 3 ಚೌಕದ ಪ್ರತಿಯೊಂದು ಉತ್ತರಕ್ಕೂ ರೂ 1-4-0 ಪ್ರವೇಶಧನದಂತೆ ಪೋಸ್ಟಲ್ ಆರ್ಡರ್ ಯಾ ಮನಿಯಾರ್ಡರ್ ಮೂಲಕ ಕಳುಹಿಸಿ. ಮನಿಯಾರ್ಡರ್ ರಶೀತಿ ಸಹ ಕಳುಹಿಸಬೇಕು. ಇಲ್ಲದಿದ್ದರೆ ಗಮನಕೊಡಲ್ಪಡದು. ಉಮೇದುವಾರರ ಹೆಸರು ವಿಳಾಸವನ್ನು ಸ್ಪಷ್ಟವಾಗಿ ಮನಿಯಾರ್ಡರ್ ಕೂಪನ್ನಿನಲ್ಲೂ ಮತ್ತು ಉತ್ತರದ ಕಾಪಿನಲ್ಲೂ ಬರೆಯಬೇಕು. ಎಲ್ಲಾ ಉತ್ತರಗಳೂ ಅಂಕಿಗಳಲ್ಲೂ, ಚೌಕಗಳಲ್ಲೂ ಬ್ಯಾಂಕಿನಲ್ಲಿ ಇಟ್ಟಿರುವ ಉತ್ತರಗಳಿಗೆ ಅಕ್ಷರಶಃ ಸರಿಯಾಗಿರಬೇಕು. ಹೆಚ್ಚು ಬೆಲೆಯ ಒಂದು ಬಹುಮಾನವನ್ನು ಒಬ್ಬ ಉಮೇದುವಾರನು ಪಡೆಯಲರ್ಹನಾಗಿದ್ದಾನೆ. ಪ್ರವೇಶಧನ ವಾಪಸ್ಸು ಮಾಡಲ್ಪಡುವುದಿಲ್ಲ. ಜನವರಿ 15 ನೇ ತಾರೀಖಿನದಿನ ಬಹುಮಾನಗಳು ತೀರ್ಮಾನಿಸಲ್ಪಟ್ಟು, ಕೂಡಲೇ ಪ್ರತಿಯೊಬ್ಬರಿಗೆ ಕಳುಹಿಸಲಾಗುವುದು. ಅಡ್ರೆಸ್ ಬರೆದು ಸ್ಟಾಂಪು ಅಂಟಿಸಿದ ಕವರನ್ನು ಕಳುಹಿಸಿದವರಿಗೆ ಮಾತ್ರ ಫಲಿತಾಂಶಗಳು ಕಳುಹಿಸಲಾಗುತ್ತೆ.

ಅನೇಕ ಉಮೇದುವಾರರ ಅಪೇಕ್ಷೆಯಂತೆ ಕಡೆಯ ತಾರೀಖನ್ನು ಮುಂದಿನ ಜನವರಿ 10 ಕ್ಕೆ ಬದಲಾಯಿಸಿರುವುದನ್ನು ಎಲ್ಲರೂ ಗಮನಿಸಬೇಕಾಗಿ ಕೋರಿದೆ.

ವಿಕ್ಟೋರಿಯಾ ಕಾಂಪಿಟಿಷನ್, ಗಿರಗಾಂ, ಬೊಂಬಾಯಿ ೪

Victoria Competition, Girgaum, Bombay, 4

ಸಿದ್ಧವಾಗಿದೆ!

ಪಂಡಿತ ಜವಹರಲಾಲರ ಆತ್ಮಕಥೆ.

ಕನ್ನಡ ಭಾಷಾಂತರ. ನವಜೀವನ ಕನ್ನಡ ಗುಂಪಿನಿಂದ

೧ನೆಯ ಸಂಪುಟ ಸಿದ್ಧವಾಗಿದೆ.

ಡಿಸೆಂಬರ್ ತಿಂಗಳ ಕೊನೆಗೆ ಗ್ರಂಥವು ಪೂರ್ತಿಯಾಗುವುದು.

ಟಪಾಲು ಚಾರ್ಜು ಪ್ರತ್ಯೇಕ.

ಉತ್ತಮೋತ್ತಮ ಪ್ರತಿ ರೂ. ೧೦—೦—೦
ವಾಚನಾಲಯ ಪ್ರತಿ „ ೭—೦—೦
ಸಾಮಾನ್ಯ ಪ್ರತಿ „ ೫—೦—೦

ಡಿಸೆಂಬರ್ ತಿಂಗಳೊಳಗಾಗಿ ಒಟ್ಟಿಗೆ ಹಣ ಕಳುಹಿಸುವವರಿಗೆ ಟಪಾಲು ಖರ್ಚು ಮುಫತ್ತು.

ಪುಸ್ತಕ ವ್ಯಾಪಾರಿಗಳಿಗೆ ಧಾರಾಳವಾದ ಕಮೀಷನ್ ಕೊಡಲ್ಪಡುವುದು

ಪ್ರಕಾಶಕರು.—
ಸಿ. ಅಶ್ವತ್ಥನಾರಾಯಣರಾವ್, ಬಿ.ಎ.
ಸಂಪಾದಕರು.—
"ನವಜೀವನ" ಮತ್ತು "ಮಕ್ಕಳ ಪುಸ್ತಕ"
ಬಳೇಪೇಟೆ, ಬೆಂಗಳೂರು ಸಿಟಿ

ಸಾಮುದ್ರಿಕಾ ಶಾಸ್ತ್ರ ಪಂಡಿತರು

ಮ॥ ರಾ॥ ಸ್ವಾಮಿಯವರು ಬಂದಿರುವರು

ಹಸ್ತ ಸಾಮುದ್ರಿಕವನ್ನು ಬಹು ಕರಾರುವಾಕ ಹೇಳುವರು. ನಿಮಗೆ ಸಂಭವಿಸಬಹುದಾದ ಅಪಾಯಗಳನ್ನೂ ತೊಂದರೆಗಳನ್ನೂ ತಿಳಿಸುವರು.

ಸುಸಮಯವನ್ನು ಕಳೆದುಕೊಳ್ಳಬೇಡಿ

ಜೀವಮಾನದ ಭವಿಷ್ಯದ ಸಾರಾಂಶವನ್ನು ಹೇಳುವುದಕ್ಕೆ .... 3 ರೂ.

ಜೀವಮಾನದ ಸಂಪೂರ್ಣ ಭವಿಷ್ಯವನ್ನು ಹೇಳುವುದಕ್ಕೆ .. 6 ರೂ.

ವಿಳಾಸ—**ರಂಗವಿಲಾಸ,**
ಮೆಜೆಸ್ಟಿಕ್ ಥಿಯೇಟರ್ ಹತ್ತಿರ.
ಬೆಂಗಳೂರು ಸಿಟಿ.

ಅಕ್ಷರಬಂಧಸ್ಪರ್ಧೆ ನಂ. ೨ ಉತ್ತರ

(1) ಗಜಾನನ.
(2) ಚಿತ್ರಶಾಲ.
(3) ಗಂಗಾಜನಕ.
(4) ಭೂತಪತಿ
(5) ಬೆಂಗಳೂರು.
(6) ಪ್ರಭವ.
(7) ಭರಣಿ.
(8) ಚಾಮರಾಜನಗರ.

ಬಹುಮಾನ ಪಡೆದವರ ಹೆಸರನ್ನು ಮುಂದಿನವಾರ ಪ್ರಕಟಿಸಲಾಗುತ್ತದೆ.

ಈ ಸುಸಮಯವನ್ನು ಕಳೆದುಕೊಳ್ಳಬೇಡಿರಿ!

ಎರಡು ವಾರಗಳು ಮಾತ್ರ.

ಚಿತ್ರಶಾಲಾ ಸ್ಪರ್ಧೆ ನಂ ೧೬.

ಬಹುಮಾನವನ್ನು ಹೆಚ್ಚಿಸಲಾಗಿದೆ!

ಒಂದು ಕಾಗದದಮೇಲೆಯೂ ಎರಡು ಕಳುಹಿಸಬಹುದು

೧೨೦ ರೂ. ಬಹುಮಾನ

ಮೊದಲನೇ ಬಹುಮಾನ ೬೦ ರೂ.

ಇತರ ಬಹುಮಾನಗಳು ೬೦ ರೂ.

— ಎಡದಿಂದ ಬಲಕ್ಕೆ —

೧. ಯೋಚನೆಮಾಡುವುದು ೮ ಭಕ್ತ ೨. ಅರಿಕೆ ೯ ರೇಕು ೧೧ ಇಲ್ಲಿ ಬಂದುಹೋಗುವ ಪತ್ರಿಕೆ ೧೩. ಗಾಂಪು ೧೩ ಗುಟ್ಟು ೧೫. ಗಣಿತ ೧೭. ಒಂದು ಆಯುಧ ೨೦ ಬೀಳುವಿಕೆ ೨೨. ಅನರ್ಥವಾದದ್ದು ೨೪ ಸಂಪತ್ತು ೨೬. ಮೊಸ್ಸಗ ೨೮. ಯೋಗ್ಯವಾದ ರೀತಿ ೨೯. ಮನಸ್ಸಿನಲ್ಲುಂಟಾಗುವ ಆಲೋಚನೆ ೩೦ ದೇಹ ೩೧ ಬಲವಂತ (ಜುಲುಂ) ೩೨ ವಿನಾಯಿತಿ ಕೋಟಿ ಗುಂಪಿನಿಂದ ೩೩. ಗಮನಿಸು ೩೬ ಒಂದು ಹಕ್ಕಿ ೩೭ ಹೇಳಿಕೊಡು.



ಕೂಪನ್ ನಂಬರು . . . .

ಹೆಸರು .. . .

ವಿಳಾಸ ... .

— ಮೇಲಿನಿಂದ ಕೆಳಕ್ಕೆ —

೧. ಈಗಿನ ಕಾಲದಲ್ಲಿ ಇವರಲ್ಲಿ ಮಿತಿಯಾಗಿರಬೇಕು ೩. ಒಂದು ಅಟ ೩. ಇದು ಕಿನ್ನರಾಗ ಹುಚಿಯಾಗಿ ದುತ್ತೆ ೫. ಒಂದು, ದಿನ ೬. ಗೃಹ ೭. ದವಾಖಾನೆ ೮. ೧೦೦ದ ಹೂ ೧೧ ಸ್ಥಿರತೆ ೧೪ ಇದರಿಂದ ಮನುಷ್ಯರ ಏಳಿಗೆ ಕುಂಠಿತವಾಗುವುದು ೧೬. ಯುಗಗಳಲ್ಲೊಂದು ೧೮. ನೋಡಲು ಚನ್ನಾಗಿಲ್ಲದಿರುವುದು ೧೯ ಮನುಷ್ಯ ೨೦ ಚಿತ್ರಶಾಲಾ ಕಂಪನಿ ಎಲ್ಲ ಕೆಲಸಗಳಂತೆ ಇದೂ ಪ್ರಸಿದ್ಧಿ ಪಡೆದಿದೆ ೨೫. ಮನುಷ್ಯರು ೨೭. ರಕ್ತ ೨೯ ಇಂಪಾದ ಸ್ವರ ೩೦ ಕಳುಹಿಸು ೩೨. ಸ್ತ್ರೀ ೩೪ ದೂರ ೩೫. ಬಲಯುತ ೩೬. ಸ್ನೇಹ 33. ಉಗ್ಗಿದರ ಒಡೆದುಹೋಗುವ ಸ್ವಭಾವ

ಸೂಚನೆ—ಈ ಸ್ಪರ್ಧೆಯ ಸರಿಯಾದ ಉತ್ತರವು ಸಾಧ್ವಿ ಆಫೀಸಿನಲ್ಲಿ ಮೊಹರುಮಾಡಿ ಇಟ್ಟಿರುತ್ತೆ. ಅದಕ್ಕೆ ಪ್ರತಿ ಅಕ್ಷರವೂ ಸರಿಹೋಲುವದಕ್ಕೆ ಸ್ಪರ್ಧೆಗೆ ಮೊದಲನೇ ಬಹುಮಾನವೂ, ಒಂದು ತಪ್ಪಿರುವವುಗಳಿಗೆ ಇತರ ಬಹುಮಾನಗಳೂ ಕೊಡಲ್ಪಡುವುವು. ಬಹುಮಾನಕ್ಕೆ ಯೋಗ್ಯವಾದ ಉತ್ತರಗಳು ಒಂದಕ್ಕಿಂತ ಹೆಚ್ಚಾಗಿ ದ್ದಲ್ಲಿ ಮೇಲ್ಕಂಡ ಬಹುಮಾನಗಳು ಎಲ್ಲರಿಗೂ ಹಂಚಲ್ಪಡುವುವು. ಬಹುಮಾನಗಳನ್ನು ಹಂಚುವ ವಿಚಾರ ಸ್ಪರ್ಧೆಯ ಮ್ಯಾನೇಜರಿಗೆ ಸೇರಿದ್ದು. ಈ ವಿಚಾರದಲ್ಲಿ ಯಾವ ತಕರಾರುಗಳಿಗೂ ಅವಕಾಶವಿಲ್ಲ. ಪ್ರತಿ ಸ್ಪರ್ಧೆಗೂ ಪ್ರವೇಶಧನ ಆರು ಆಣೆ. ಎರಡಕ್ಕಿಂತ ಕಡಿಮೆ ಸ್ಪರ್ಧೆಗಳನ್ನು ಅಂಗೀಕರಿಸುವುದಿಲ್ಲ. ಪ್ರವೇಶಧನವನ್ನು ಪೋಸ್ಟಲ್ ಸ್ಟಾಂಪು, ಅಥವಾ ಇಂಡಿಯನ್ ಪೋಸ್ಟಲ್ ಆರ್ಡರ್ ಅಥವಾ ಮನಿಯಾರ್ಡರ್ ಮೂಲಕ ರವಾನಿಸಬಹುದು. ಉತ್ತರಗಳನ್ನು ಎರಡಕ್ಕಿಂತ ಸಾಧ್ವಿ ಪತ್ರಿಕೆಯಲ್ಲಿರತಕ್ಕ ಕೂಪನ್ನಿನಲ್ಲಾಗಲಿ ಅಥವಾ ಬಿಳಿಯ ಕಾಗದದಲ್ಲಾಗಲಿ ಚಿತ್ರದಲ್ಲಿರುವಂತೆ ಚೆನ್ನಾಗಿ (ಶಾಯಿಯಲ್ಲಿ) ಬರೆದು ಕಳುಹಿಸಬೇಕು. ಉತ್ತರಗಳನ್ನು ಕಳುಹಿಸಲು 1937 ನೇ ಇಸವಿ ಜನವರಿ 7 ನೇ ತಾರೀಖು ಕೊನೆಯದಿನ. ನಂತರ ಬಂದ ಉತ್ತರಗಳನ್ನು ಸ್ವೀಕರಿಸುವುದಿಲ್ಲ. ಸರಿಯಾದ ಉತ್ತರವನ್ನು ಜನವರಿ 11 ನೇ ತಾರೀಖಿನ ಸಾಧ್ವಿಯಲ್ಲಿ ಪ್ರಕಟಿಸಲಾಗುತ್ತೆ.

ವಿಳಾಸ:— ಮ್ಯಾನೇಜರ್-ಚಿತ್ರಶಾಲಾ ಸ್ಪರ್ಧೆ, ಚಿತ್ರಶಾಲಾ, ನಾರಾಯಣ ಮೊಹಲ್ಲಾ ಒಂಟಿಕೊಪ್ಪಲ್, ಮೈಸೂರು.

ಮೈಸೂರಿನಲ್ಲಿ ಸ್ಪರ್ಧೆಗೆ ಭಾಗವಹಿಸುವವರು ತಮ್ಮ ಉತ್ತರಗಳನ್ನು ಮಿಷನ್ ಸ್ಟ್ರೀಟ್ ಪೋಸ್ಟ್ ಇವರಿಗೆ ರವಾನೆಮಾಡಬೇಕಾಗಿ ವಿನಂತಿ. ಮ್ಯಾ. ಚಿ.

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಟಿ. ವಿ. ಪಂಡಿತರ

— ಬಾಲಸುಧಾ —

ಮಕ್ಕಳ ಜ್ವರದ ಗೆಡ್ಡೆಯನ್ನು ಜಾತರ ಗುಣ ಪಡಿಸುತ್ತೆ. ಲಿವರ್ (ಪಿತ್ತ ಕೋಶ) ದಪ್ಪನಾಗಿ ಕಣ್ಣು ಹಳದಿ ಬಣ್ಣವಾಗಿದ್ದರೆ ಇದರ ಸೇವನೆಯಿಂದ ವಿಶೇಷ ಗುಣವಾಗುತ್ತೆ. 20 ವರ್ಷಗಳಿಂದಲೂ ಅನುಭವ ಸಿದ್ಧವಾಗಿದೆ—ಮಕ್ಕಳಿಗೆ ನಮ್ಮ ಬಾಲಸಂಜೀವಿನಿಯನ್ನೇ ಉಪಯೋಗಿಸಿರಿ.

ಬಾಲಸುಧಾ ಬೆಲೆ 1 ರೂ ಬಾಲಸಂಜೀವಿನಿ 1 ಆ.

ಮೈಸೂರು, ಬೆಂಗಳೂರು, ಮದ್ರಾಸುಗಳಲ್ಲಿ ನಮ್ಮ ಶಾಖೆಗಳಿವೆ.

ಸದ್ವೈದ್ಯಶಾಲಾ, ನಂಜನಗೂಡು.

ANANDA SODA FACTORY,

BEST AERATED WATER SUPPLIERS.
COMPLETE REQUISITES FOR
AERATED WATER MANUFACTURERS
AVAILABLE.

ಆನಂದಾ ಸೋಡಾ ಫ್ಯಾಕ್ಟರಿ,

ದೊಡ್ಡ ಪೇಟೆ, ಮೈಸೂರು.



ಟಿ. ಸಿ. ನಟರಾಜ್ ಔಷಧಾಲಯ,

ಸಯ್ಯಾಜಿರಾವ್ ರೋಡು, ಮೈಸೂರು

ಇವರಲ್ಲಿ ನೇತ್ರಪರೀಕ್ಷೆಯು ಉಚಿತವಾಗಿ ಮಾಡಲ್ಪಡುತ್ತದೆ.

ಅತ್ಯಗತ್ಯವಾಗಿ ಬೇಕಾದ ಎಲ್ಲಾ ಇಂಜಕ್ಷನ್ ಔಷಧಿಗಳೂ ಸದಾ ಕಾಲದಲ್ಲಿಯೂ ದೊರಕುವುದಲ್ಲದೆ ಸಮಸ್ತ ವ್ಯಾಧಿಗಳಿಗೂ ಚಿಕಿತ್ಸೆಯು ಬಹು ಸುಲಭ ಚಾರ್ಜಿನಿಂದ ಮಾಡಲ್ಪಡುತ್ತದೆ.

ಝಂಡೂರವರ ಆಯುರ್ವೇದೀಯ ಸಿದ್ಧೌಷಧಗಳೆಲ್ಲವೂ ಸದಾ ದೊರಕುತ್ತವೆ.

ಮೈಸೂರು ಅರಮನೆಗೆ ಸಪ್ಲೈ ಮಾಡುವ

ಎಂ. ವಿ. ನಾರಾಯಣರಾಯರ

ಶ್ರೀ ಸತ್ಯನಾರಾಯಣ ಪರಿಮಳ ಫ್ಯಾಕ್ಟರಿ,

ಜಗನ್ಮೋಹನ ಬಂಗ್ಲಾ ಬೀದಿ, ಮೈಸೂರು.

ಪರಿಮಳ ಅಗರ ಬತ್ತಿ

ಉಪಯೋಗಿಸಿ ಪ್ರೋತ್ಸಾಹಿಸಿರಿ

ಚಿತ್ರಶಾಲಾ ಸ್ಪರ್ಧೆ ನಂ. ೧೫ ರ ಉತ್ತರ



ಬಹುಮಾನ ಪಡೆದವರ ಹೆಸರುಗಳನ್ನು ಮುಂದಿನವಾರ ಪ್ರಕಟಿಸಲಾಗುತ್ತೆ

THE SADHVI

RECOMMENDED FOR SCHOOLS BY THE DEPARTMENT

No T1 3778-146—35 36

OFFICE OF THE DIRECTOR OF PUBLIC

INSTRUCTION IN MYSORE

Bangalore, Dated 20th April 1936

ANNUAL SUBSCRIPTION

Local
Moffusil } **Rs 2—4—0**

ಸುಸಮಯ!
Last day of Entry
9—1—37

Fee for each Entry
2 Annas

ಬಹುಮಾನವನ್ನು ಹೆಚ್ಚಿಸಿ
Result on
11—1—37

ಅಕ್ಷರ ಬಂಧ ಸ್ಪರ್ಧೆ ನಂ. ೩.

ಬಹುಮಾನ ಇಪ್ಪತ್ತು ರೂಪಾಯಿ.

ಮೊದಲನೇ ಬಹುಮಾನ ಹತ್ತು ರೂ. - - ಇತರ ಬಹುಮಾನಗಳು ಹತ್ತು ರೂ.

ಪ್ರತಿಯೊಬ್ಬ ಬಹುಮಾನದಾರರಿಗೂ ಒಂದೊಂದು ಪುಸ್ತಕವು ಬಹುಮಾನವಾಗಿ ಕೊಡಲ್ಪಡುವುದು.

ಪ್ರವೇಶ ದನ ಎರಡಾಣೆ ಮಾತ್ರ . . . ಕಡೆಯ ತಾ|| ೯—೧—೩೭

ಕೆಳಗೆ ಕೊಟ್ಟಿರುವ ಎಂಟು ಪದಗಳಲ್ಲಿ ಬಿಟ್ಟಿರುವ ಅಕ್ಷರಗಳನ್ನು ಸೇರಿಸಬೇಕು.

ಪದಗಳು		ಬರಬೇಕಾದ ಅರ್ಥ
ಸಂಸಾರ ನೌಕೆ	=	ಆಧುನಿಕ ನಾಟಕಗಳಲ್ಲೊಂದು.
ದಕ್ಷ — —	=	ಪಾಂಡು ಪುತ್ರರಲ್ಲಿ ಒಬ್ಬ
— — ಕರ	=	ಸೂರ್ಯ
— — ಕೂರು	=	ಮೈಸೂರು ದೇಶದ ಡಿಸ್ಟ್ರಿಕ್ಟುಗಳಲ್ಲೊಂದು
— — ರಾಜ	=	ಮೈಸೂರಿನ ದೊರೆಗಳಲ್ಲೊಬ್ಬರು
— — ಗೆ	=	ತಿಥಿಗಳಲ್ಲೊಂದು.
— — ಲ	=	ಪಾತಾಳ ಲೋಕಗಳಲ್ಲೊಂದು
— — ರಾಸು	=	ಒಂದು ಜಾತಿ ಪಕ್ಷಿ

ಹೆಸರು
ವಿಳಾಸ

ನಿಯಮಗಳು

1. ಈ ಸ್ಪರ್ಧೆಯ ಉತ್ತರವು "ಸಾಧ್ವಿ" ಪತ್ರಿಕಾ ಸಂಪಾದಕರ ಬಳಿ ಮೊಹರುಮಾಡಿ ಇಡಲ್ಪಟ್ಟಿದೆ. 2 ಅದಕ್ಕೆ ಪ್ರತಿ ಅಕ್ಷರವೂ ಸರಿ ಹೋಲತಕ್ಕ ಉತ್ತರಕ್ಕೆ ಮೊದಲನೇ ಬಹುಮಾನವೂ ಒಂದು ತಪ್ಪು ಇರುತ್ತವಕ್ಕೆ ಎರಡನೇ ಬಹುಮಾನವೂ ಕೊಡಲ್ಪಡುತ್ತವೆ 3. ಎರಡಕ್ಕಿಂತ ತಪ್ಪು ಉತ್ತರವನ್ನು ಅಂಗೀಕರಿಸುವುದಿಲ್ಲ 4 ಪ್ರವೇಶಧನ ಒಂದು ಉತ್ತರಕ್ಕೆ ಎರಡಾಣೆ 5 ಪ್ರವೇಶಧನವನ್ನು ಅಂಚೆ ಸ್ಟಾಂಪು ಮೂಲಕವಾಗಿಯಾಗಲೀ ಮನಿಯಾರ್ಡರು ಮೂಲಕವಾಗಿಯಾಗಲೀ ಕಳುಹಿಸಬಹುದು 6. ಕನಿಷ್ಟಪಕ್ಷ ಎರಡು ಉತ್ತರಗಳನ್ನು "ಸಾಧ್ವಿ" ಪತ್ರಿಕೆಯ ಕೂಪನ್ನಿನಲ್ಲೇ ಕಳುಹಿಸಬೇಕು ಬಾಕಿ ಉತ್ತರಗಳನ್ನು ಬೇರೆ ಕಾಗದದಲ್ಲಿ ಕಳುಹಿಸಬಹುದು 7. ಒಂದು ರೂಪಾಯಿಗೆ ಹತ್ತು ಉತ್ತರಗಳನ್ನು ಕಳುಹಿಸಬಹುದು. 8 ಬಹುಮಾನಗಳಿಗೆ ಯೋಗ್ಯವಾದ ಉತ್ತರಗಳು ಒಂದಕ್ಕಿಂತ ಹೆಚ್ಚು ಬಂದಲ್ಲಿ ಬಹುಮಾನವನ್ನು ಹಂಚಲಾಗುವದು. 9. ಇದರಲ್ಲಿ ಭಾಗವಹಿಸಬೇಕೆಂಬ ಇಷ್ಟವುಳ್ಳವರು ಈ ತಿಂಗಳು 9 ನೇ ತಾ|| ನೊಳಗೆ ಉತ್ತರಗಳನ್ನು ಕಳುಹಿಸಬೇಕು 10 ಮೈಸೂರಿನಲ್ಲಿ ಭಾಗವಹಿಸುವವರು "ಸಾಧ್ವಿ" ಪತ್ರಿಕೆಯ ಆಫೀಸಿನಲ್ಲಿ ಕೊಡಬಹುದು. 11 ಈ "ಸ್ಪರ್ಧೆ"ಯ ವಿಚಾರವಾಗಿ ಯಾವ ವ್ಯವಹಾರಗಳಿಗೂ ಅವಕಾಶವಿಲ್ಲ ಮ್ಯಾನೇಜರವರ ತೀರ್ಮಾನವೇ ಕಡೆಯದು ಅದಕ್ಕೆ ಎಲ್ಲರೂ ಬದ್ಧರು

ವಿಳಾಸ.— ಮ್ಯಾನೇಜರ್. **"ಅಕ್ಷರ ಬಂಧ ಸ್ಪರ್ಧೆ"**
ಕೃಷ್ಣಸ್ವಾಮಿ ರಸ್ತೆ, ಮಂಡ್ಯ

॥ ಸತ್ಯಮೇವೋದ್ಧರಾಮ್ಯಹಮ್ ॥

ರಾಜಧಾನಿಯ ರಾಷ್ಟ್ರೀಯ ವಾರ ಪತ್ರಿಕೆ.

ವೃದ್ಧಪಿತಾಮಹ ಎಂ. ವೆಂಕಟಕೃಷ್ಣಯ್ಯನವರ ಜ್ಞಾಪಕಾರ್ಥವಾಗಿ ಪ್ರಕಟಿಸಲ್ಪಡುವುದು.

ಸಂಪಾದಕರು ಆಗರಂ ರಂಗಯ್ಯ, ಬಿ. ಎ.

ಸಂಪುಟ ೧] MYSORE : MONDAY 28—12—36 ಮೈಸೂರು : ಸೋಮವಾರ ೨೮—೧೨—೩೬ [ಸಂಚಿಕೆ ೪೪

ಮಹಾತ್ಮರು ರಾಜಕೀಯಕ್ಕೆ ಪುನಃ ಬರುವರೇ

—

ಗಾಂಧೀಜೀಯವರು ಪುನಃ ಕಾಂಗ್ರೆಸ್ಸಿಗೆ ಬಂದು ದೇಶದ ನಾಯಕತ್ವವನ್ನು ವಹಿಸುವರೆ ಎಂಬ ಪ್ರಶ್ನೆಯು ರಾಷ್ಟ್ರದ ಎಲ್ಲೆಡೆಗಳಲ್ಲಿಯೂ ಪ್ರತಿಧ್ವನಿಸಲಾಗುತ್ತಿದೆ. ಮಹಾತ್ಮರು ಸಲಹೆಗಾರರಾಗಿ ಅವರ ಮನಸ್ಸು ಉದಾತ್ತವಾದುದು. ಕಾಂಗ್ರೆಸ್ ರೈತರ ಸಂಸ್ಥೆಯಾಗಬೇಕೆಂಬುದೇ ಅವರ ಬಯಕೆ. ಫೈಜ್‌ಪುರದಲ್ಲಿ ನಡೆಯುವ ಕಾಂಗ್ರೆಸ್ ಅಧಿವೇಶನಕ್ಕೆ 30,000 ರೈತರು ಬರುವರು. ಜನರ ಆಲೋಚನೆಗಳಲ್ಲಿ ಅನುಕೂಲವಿಲ್ಲ. ಹೆಚ್ಚು ಗಲಾಟೆ ಇಲ್ಲದ, ಆನಂದಕರವಾದ ಏರ್ಪಾಡಾಗಿದೆ. ಫೈಜ್‌ಪುರದ ಕಾಂಗ್ರೆಸ್ ನಡೆಯುವುದು. ಮಹಾತ್ಮರು ಫೈಜ್‌ಪುರಕ್ಕೆ ಪ್ರವೇಶಿಸಿದಾಗ ಕೂಡ ಯಾವ ತರಹ ಪ್ರದರ್ಶನವೂ ನಡೆಯಲಿಲ್ಲ. ಆದ್ದರಿಂದ ಅಲ್ಲಿ ನಡೆಯುವ ಕಲಾಪಗಳು ಏಕಕಂಠದಿಂದ ರೈತರ ಪರವಾಗಿ ನಾವು ದುಡಿಯಬೇಕೆಂದು ಹೇಳಿದರೆ ಆಗ ಮಹಾತ್ಮರ ಮನಸ್ಸನ್ನು ಗೆದ್ದು ಅವರು ಪುನಃ ರಾಜಕೀಯಕ್ಕೆ ಬರುವರೆಂದು ನಂಬಲಾಗಿದೆ.

ಅದೃಷ್ಟವಶಾತ್ ಈ ಸಾರಿ ಕಾಂಗ್ರೆಸ್ ಫೈಜ್‌ಪುರದಲ್ಲಿ ನಡೆಯುವುದು. ಮಹಾತ್ಮರ ಜನರು ಸಹ ಶಾಂತಚಿತ್ತರು ಮತ್ತು ಆಡಂಬರವಿಲ್ಲದವರು.

—

ತಿಲಕ್ ನಗರ

ಈ ಸಾರಿ ಕಾಂಗ್ರೆಸ್ ತಿಲಕ್ ನಗರದಲ್ಲಿ ನಡೆಯುವುದು. 1000 ಜನ ಸ್ತ್ರೀ ಸ್ವಯಂಸೇವಕಿಯರುಗಳೂ 100 ಜನ ಪುರುಷ ಸ್ವಯಂಸೇವಕರುಗಳೂ ಹಗಲಿರುಳೂ ಕೆಲಸ ಮಾಡುತ್ತಿರುವರು. 1200 ಡೆಲಿಗೇಟುಗಳು, 30,000 ರೈತರ ಜೊತೆಗೆ 1000 ಪ್ರೇಕ್ಷಕರೂ ಈ ಕಾಂಗ್ರೆಸ್ಸಿಗೆ ಬರಲಿರುವ ಜನಗಳ ಅನುಕೂಲಕ್ಕಾಗಿ 500 ಸ್ನಾನಗೃಹಗಳನ್ನು ಏರ್ಪಡಿಸಿದ್ದಾರೆ. 25 ಗುಡಿಸಲುಗಳಲ್ಲಿ ಕಾಂಗ್ರೆಸ್ಸಿನ ಮುಂದಾಳುಗಳು ಇಳಿದುಕೊಳ್ಳುವರು. ಅತ್ಯುತ್ತಮ ಪಟ್ಟವರ್ಧನ್ ಎಂಬುವ ರಾಷ್ಟ್ರದ ನಾಯಕರು ಜೊಂಡು ಮಣ್ಣನ್ನು ಹೊತ್ತು ಕಟ್ಟಡವನ್ನು ಬೇಗ ಮುಗಿಸಲು ಸಹಾಯ ಮಾಡುತ್ತಿದ್ದಾರೆ. ತಿಲಕ್ ನಗರವು ಬಹಳ ರಮಣೀಯವಾಗಿ ಶೋಭಿಸುತ್ತಿದೆ.

ಫೈಜ್‌ಪುರದ ಕಾರ್ಯಕ್ರಮಗಳ ವಿವರ

ತಿಲಕ್ ನಗರದಲ್ಲಿ ನಡೆಯುವ 50 ನೆಯ ಕಾಂಗ್ರೆಸ್ ಅಧಿವೇಶನದ ಸಮಾರಂಭದಲ್ಲಿ ಈ ಕೆಳಕಂಡ ಕಾರ್ಯಕ್ರಮಗಳು ನಿರ್ಧಾರವಾಗಿವೆ. ಡಿಸೆಂಬರ್ 23,24 ಕಾರ್ಯಕಾರೀ ಮಂಡಲಿಯ ಸಭೆ (ಅಧ್ಯಕ್ಷರ ಬಿಡಾರದಲ್ಲಿ) ತಾ॥ 25, 26, ವಿಷಯ ನಿಯಾಮಕ ಸಮಿತಿ ಸಭೆ ತಾ॥ 27, 28, 29 ಕಾಂಗ್ರೆಸ್ ಬಹಿರಂಗ ಅಧಿವೇಶನ.

ಮಹಾತ್ಮ ಗಾಂಧಿಯವರು

ಮಹಾತ್ಮ ಗಾಂಧಿಯವರು ಕಳೆದವಾರ ತಿಲಕ್ ನಗರಕ್ಕೆ ಬಂದು ಬಿಡಾರ ಮಾಡಿದ್ದಾರೆ. ಇವರಿಗೆ ಸುಸ್ವಾಗತವನ್ನು ಕೊಡಲು ಅನೇಕರು ಬಂದಿದ್ದರು. ಇವರಿರುವುದರಿಂದ ಕಾಂಗ್ರೆಸ್ ಜ್ಯೋತಿಯು ಉಜ್ವಲ ಕಾಂತಿಯಿಂದ ಬೆಳಗುತ್ತಿದೆ.

ಮಹಾತ್ಮರು ಕಾಂಗ್ರೆಸ್ ಬಹಿರಂಗ ಅಧಿವೇಶನದಲ್ಲಿ ಮಾತ್ರ ಭಾಗವಹಿಸುವರು.

ರಾಷ್ಟ್ರಪತಿ ಜವಾಹಿರಲಾಲರು

ಕಾಂಗ್ರೆಸ್ಸಿಗೆ ಒಂದಾಣೆ ಸದಸ್ಯರು

—

ಶ್ರೀ ಎಂ. ಎನ್. ರಾಯ್‌ರವರ ಸಲಹೆ

ಪ್ರತಿ ಕಾಂಗ್ರೆಸ್ ಸದಸ್ಯರೂ ಮಾಹೆಯಾನ ಒಂದಾಣೆ ಚಂದಾ ಹಣವನ್ನು ಸಲ್ಲಿಸತಕ್ಕದ್ದು. ಈ ಚಂದಾ ಹಣದ ವಸೂಲಿಯಿಂದ ಕಾರ್ಯೋತ್ಸಾಹಕರಾದ ಕಾಂಗ್ರೆಸ್ ವ್ಯಕ್ತಿಗಳು ಆಯಾಯಾ ಸ್ಥಳದ ಜನಸಾಮಾನ್ಯರೊಡನೆ ಯಾವಾಗಲೂ ಸಂಬಂಧವನ್ನಿಟ್ಟುಕೊಂಡು ಕೆಲಸ ಮಾಡುವರು ಮತ್ತು ಕಾಂಗ್ರೆಸ್ಸಿನ ಗುರಿಯೇನೆಂಬುದನ್ನು ಸಾಧಿಸಲು ಅವರು ಸದಾ ಬಿಡುವಿಲ್ಲದ ಕೆಲಸ ಮಾಡುವರು, ಅಲ್ಲದೆ ಚಳುವಳಿಯ ಪ್ರಭಾವವನ್ನೂ ಕೈಕೊಳ್ಳುವರು.

ಈ ಸಂಬಂಧದಿಂದ ಜನಸಾಮಾನ್ಯರ ರಾಜಕೀಯ ಜಾಗ್ರತಿಯು ಪ್ರವರ್ಧಮಾನವಾಗುವುದು ಮತ್ತು ಅವರ ದೈನಂದಿನ ಕುಂದುಕೊರತೆಗಳು ಬೇಗ ಪರಿಹಾರವಾಗುವುದು.

ಹೀಗೆ ಮಾಡುತ್ತಾ ಬಂದರೆ, ದೇಶವು ಮುಂದೊದಗಬಹುದಾದ ಮಹಾ ರಾಜಕೀಯ ಆಂದೋಳನಕ್ಕೆ ತಯಾರಾಗುವುದು.

ಈ ಮೇಲ್ಕಂಡ ಸಲಹೆಯನ್ನು ಶ್ರೀ ರಾಯ್‌ರು ವರ್ಕಿಂಗ್ ಕಮಿಟಿಗೆ ಕಳುಹಿಸಿದ್ದಾರೆ.

ಕಾಂಗ್ರೆಸ್ ಅಂಗರಚನೆಯಲ್ಲಿ ಬದಲಾವಣೆ

—

ಶ್ರೀ॥ ಎಂ. ಎನ್. ರಾಯ್‌ರವರು ಕಾಂಗ್ರೆಸ್ ಅಂಗರಚನೆಯಲ್ಲಿ ಕೆಲವು ಬದಲಾವಣೆಗಳನ್ನು ಮಾಡಬೇಕೆಂದು ವರ್ಕಿಂಗ್ ಕಮಿಟಿಗೆ ಸಲಹೆಗಳನ್ನು ಕೊಟ್ಟಿರುವರು. ರಾಯ್‌ರವರು ಕಾಂಗ್ರೆಸ್ ಸಧ್ಯದಲ್ಲಿಯೇ ಕೌನ್ಸಿಲ್ ಪ್ರವೇಶದ ಚಳುವಳಿಯನ್ನು ತ್ಯಜಿಸುವುದಾಗಿಯೂ ಮತ್ತು ಜನಗಳಲ್ಲಿ ಒಂದು ಹೊಸ ಸ್ಫೂರ್ತಿಯನ್ನು ಉಂಟು ಮಾಡುವ ಚಳುವಳಿಯನ್ನು ಹೂಡುವುದಾಗಿಯೂ ಊಹಿಸುತ್ತಾರೆ.

ಪೂರ್ಣ ಸ್ವರಾಜ್ಯವೆಂಬ ಪದದ ಅರ್ಥವನ್ನು ಸರಿಯಾಗಿ ವಿವರಿಸಿಲ್ಲವೆಂದು ಅವರ ಅಭಿಪ್ರಾಯ ಮತ್ತು ಸ್ವರಾಜ್ಯ ಬಂದ ನಂತರ ಯಾವ ತರಹ ಸರ್ಕಾರವಿರಬೇಕೆಂದು ಕಾಂಗ್ರೆಸ್ಸಿನ ಕಾನ್ಸ್ಟಿಟ್ಯೂಷನ್ನಿನಲ್ಲಿ ನಮೂದಿಸಿಲ್ಲವೆಂಬುವೇ ಅವರ ಆಕ್ಷೇಪಣೆ.

ಎರಡನೆಯದಾಗಿ ಕಾಂಗ್ರೆಸ್ಸಿನ ನಾಯಕತ್ವವು ಮೇಲಿಂದ ಬರುತ್ತಿರುವುದೇ ವಿನಹ ಕೆಳಗಿನಿಂದಲ್ಲ. ಅಂದರೆ ಡಿಸ್ಟ್ರಿಕ್ಟ್ ಮತ್ತು ತಾಲ್ಲೂಕು ಕಮಿಟಿಗಳಿಂದಲ್ಲ. ಕಾಂಗ್ರೆಸ್ ವರ್ಕಿಂಗ್ ಕಮಿಟಿಯಿಂದ ಎಂದರ್ಥ.

ವರ್ಕಿಂಗ್ ಕಮಿಟಿಗೆ ಮೆಂಬರುಗಳನ್ನು ಎ. ಐ. ಸಿ. ಸಿ. ಯು ಚುನಾಯಿಸಬೇಕೆ ವಿನಹ ಅಧ್ಯಕ್ಷರು ಚುನಾಯಿಸಕೂಡದು ಎಂಬುದು ಮೂರನೆಯ ಬದಲಾವಣೆ. ಇವುಗಳಿಗೆ ವರ್ಕಿಂಗ್ ಕಮಿಟಿಯವರು ಗಮನ ಕೊಡುವರೆಂದು ನಂಬಲಾಗಿದೆ.

—

ಕಾಂಗ್ರೆಸ್ ಕೆಲಸಗಾರನು ಕಾಲವಾದನು

ಇಪ್ಪತ್ತು ವರ್ಷ ವಯಸ್ಸಿನ ಕಾಂಗ್ರೆಸ್ ಕೆಲಸಗಾರನು ನ್ಯೂಮೋನಿಯ ಜ್ವರದಿಂದ ಪೀಡಿತನಾಗಿ ತಾ॥ ೨೧ ರಲ್ಲಿ ಕಾಲವಾದನು.

—

ರಬ್ಬರ್ ಮುಖ

ಹೊಸದಾಗಿ ವೈಜ್ಞಾನಿಕರು ರಬ್ಬರು ಮುಖವನ್ನು ಕಂಡು ಹಿಡಿದಿದ್ದಾರೆ. ರೋಗ ಅಥವಾ ಆಘಾತಗಳಲ್ಲಿ ಮೂಗು ಕಿವಿ ಹೋದವರು ಅದೇ ಮುಖ ಬಣ್ಣದ ಅಂಗಗಳನ್ನು ಹಾಕಿಕೊಳ್ಳಬಹುದು.

ಬಾಳಿನ ಹಾಳೆ.

(ಎಲ್ಲವೂ ದೇವರಿಗಾಗಿ, ಅವನ ಹೆಸರಿನಲ್ಲಿ)

ಲೇಖಕರು:—ಶ್ರೀ ಎಸ್. ಸುಬ್ರಹ್ಮಣ್ಯಯ್ಯ, ನಂಜನಗೂಡು.

ಜಯ—ನಾನು ನಿನ್ನವಳಾಗಬೇಕೆಂದಿದ್ದೆ.

ವಿಜಯ—ನಾನದನ್ನು ಮರೆತೆನೆಂದು ತಿಳಿದೆಯಾ, ಜಯಾ,

ಜಯ—ಆದರೆ ಈಗಿನ ಮಾತೇ ಬೇರೆ. ಈಗ ನನ್ನ ಮನಸ್ಸೇ ಬೇರೆಯಾಗಿದೆ.

ವಿಜಯ—ಮನಸ್ಸು ಬೇರೆಯಾಯಿತೆ? ಹಾಗಾದರೆ!

ಜಯ—ವಯಸ್ಸಿಟ್ಟು, ಮೊದಲಿನಹಾಗೆ ಕಾಮುಕ ದೃಷ್ಟಿಯಿಂದ ನೋಡಬೇಡ. ನಿನ್ನ ಕಣ್ಣುಗಳು ನನ್ನನ್ನು ಚುಚ್ಚುತ್ತಿವೆ. ನಿನಗದು ಗೊತ್ತಿಲ್ಲ.

ವಿಜಯ—ನನಗೆ ಗೊತ್ತಿಲ್ಲ! ನನಗಿಂತಲೂ ಹೆಚ್ಚಾಗಿ ನಿನ್ನನ್ನು ತಿಳಿದಿರುವವರಾರು? ಹೇಳು.

ಜಯ—ದೇವರು ನನಗೆ ಅಡ್ಡಬಂದಿದ್ದಾನೆ. ನನ್ನ ಸೌಖ್ಯದ ಬಾಗಿಲು ಮುಚ್ಚಿದೆ. ನಾನು ಇನ್ನು ಮುಂದೆ ಸನ್ಯಾಸಿನಿಯಾಗಿರಲು ನಿಶ್ಚಯಿಸಿರುವೆನು. ನೀನು ಹೊರಡು.

ವಿಜಯ—ಆದರೆ ಒಂದು ಸಲಿ... ...

ಜಯ—ಆದರೆ ಏನು! ಹೊರಡು.

ವಿಜಯ—ಎಲ್ಲಿಗೆ? ಜಯಾ?

ಜಯ—ಎಲ್ಲಿಗೆ ಬೇಕಾದರೂ, ನನಗೆ ಗೊತ್ತಿಲ್ಲ.

ಇಂತಹ ಕೆಲವು ಮಾತುಕತೆಗಳಿಂದ ಪ್ರೇಮ ನಾಶವು ಸತ್ತು ಹೋಯಿತು. ಪ್ರಣಯ ಜ್ಯೋತಿಯು ನಂದಿ ಹೋಯಿತು. ಸ್ಥಿರವಾದ ಮನಸ್ಸುಳ್ಳವಳಲ್ಲವಾದರೂ ಜಯ ಸನ್ಯಾಸಿಯ ಉಡುಪನ್ನು ಧರಿಸಿದಳು. ಪಾಪ! ವಿಜಯನಿಗೆ ಸರ್ವವೂ ಶೂನ್ಯ. ಹೇಗೋ ಎಂದಿನಂತೆ ದಿನಚರಿಯ ಕರ್ತವ್ಯದಲ್ಲಿ ತೊಡಗಿ ಕಾಲಯಾಪನೆ ಮಾಡತೊಡಗಿದನು.

ಜಯ—ಅವನಿಗೆ ಖಂಡಿತವಾಗಿ ಹೇಳಿಬಿಟ್ಟು ಕಳುಹಿಸಿಬಿಟ್ಟೆ.

ಜೊತೆಗಾತಿ—ಜಯಾ ಹೇಳಬೇಡಾ! ಎಂತಹ ಕಲ್ಲೆದೆಯವಳೇ ನೀನು. ಬದುಕಿರುವಾಗಲೇ ನನಗೆ ಒಳಗೆ ಹೇಳಲು ಮನಸ್ಸು ಬರದು.

ಜಯ—ಜೊತೆಗಾತಿಗೆ ಅವನಿಗೆ ಹೇಳಿ ಕಳುಹಿಸಿದೆ.

ಜೊತೆಗಾತಿ—ನಿನಗೇಕೆ ಇಂತಹ ಬುದ್ಧಿ! ಕ್ಷಣಕೋಪ, ಬಗೆಯ ಬುದ್ಧಿ.

ಜಯ—ನಿನಗಾರಿಗೂ ಗೊತ್ತಿಲ್ಲ. ಸಮಾಜದಲ್ಲಿ ಗಂಡಸಿನ ಸ್ಥಿತಿಯು ಹೆಂಗಸಿನ ಘನತೆಗೇ ಕುಂದಕವನ್ನುಂಟುಮಾಡುತ್ತಿದೆ. ಮೇಲಾಗಿ ದೇವರ ಸೇವೆಗಾಗಿ ಮೀಸಲಾದ ದೇಹವನ್ನು ಮನುಷ್ಯನಿಗೆ ಒಪ್ಪಿಸುವುದು ಹೇಗೆ?

II

ಕೆಲವು ಕಾಲ ಕಳೆದ ಮೇಲೆ.

ಜಯಳ ಅಗಲಿಕೆಯು ವಿಜಯನಿಗೆ ಬಹು ಕಷ್ಟವಾಯಿತು. ಪ್ರಾಣವು ಹೋಗದಂತೆ ಹೇಗಾದರೂ ಜಯಳು ಹಿಂದಿರುಗುವಳೆಂದೂ, ತನ್ನವಳಾಗುವಳೆಂದೂ ಆಶೋಂದು ಭಾವನೆಯಿಂದ ಜೀವಿಸಿದ್ದನು. ಜಯಳಾದರೂ ವಿಜಯನನ್ನು ಮರೆಯಲಿಲ್ಲ. ಈಗ ವಿಜಯನಿಗೆ ಮೂವತ್ತು ವರ್ಷ. ಭಾಗ್ಯಚಕ್ರವು ಹೊರಳಿತು. ವಿಜಯನು ಅತುಳೈಶ್ವರ್ಯಕ್ಕೆ ಅಧಿಕಾರಿ ಇವ್ವಾದರೂ ಜಯಳ ಮೇಲಿನ ಮಮತೆಯು ಮರೆಯದು. ಮುದ್ದು ಮೊಗದಂತೆ ಜಯಳೂ ದೊರಕುವಳೆಂದೇ ಅವನ ನಂಬಿಕೆ.

ಜಯಳಿಗಂತೂ ವಿಜಯನ ಭಾಗ್ಯಚಕ್ರವು ಪರಿವರ್ತಿತವಾದುದು ಬಹು ಸಂತೋಷವನ್ನುಂಟುಮಾಡಿತು. ನನ್ನ ಅದೃಷ್ಟವಾದರೂ ಬದಲಾಗಬಾರದೇಕೆ? ಎಂಬುದೇ ಅವಳ ಚಿಂತೆ. ಹಲವು ದಿನಗಳಾದರೂ ವಿಜಯನ ಸುಳಿವೇ ಇಲ್ಲ. ಭಗವಂತನ ಸೇವೆ ಎಂದು ಉಪಾಸನೆಯಿಂದ ಬಹು ಮಂದಿ ತರುಣಿಯರನ್ನು ಸೇರಿಸಿ ಅನಾಥ ಸ್ತ್ರೀಯರ ರಕ್ಷಣಾಲಯವನ್ನು ಸ್ಥಾಪಿಸಿದಳು. ಹೇಗೂ ವಿಜಯನ ಸುಳಿವೇ ಇಲ್ಲ. ಹಲವು ಮಂದಿ ಅತುಳೈಶ್ವರ್ಯವುಳ್ಳ ಯುವಕರು ಈ ಸೌಂದರ್ಯರಾಶಿಗೆ ವಿಜಯನೇಕೆ ಬರಲಿಲ್ಲ?

ಅನಿರೀಕ್ಷಿತವಾಗಿ ಒಂದು ದಿನ ಮಾರ್ಗದಲ್ಲಿ ವಿಜಯನು ದೊರೆತನು. ಜಯಳು ನಾಚಿಕೆ, ಅಭಿಮಾನಗಳೆಲ್ಲವೂ ಬಿಟ್ಟು ವಿಜಯಾ! ಇಷ್ಟು ದಿನಗಳ ಮೇಲೆ ಭಗವಂತನ ಸರಿಯಾದ ಅಪ್ಪಣೆಯು ನನಗೆ ದೊರೆಯಿತು. ದೇವರನ್ನು ವಿನಾ ಮತ್ತಾರನ್ನೂ ಪ್ರೀತಿಸುವುದಿಲ್ಲವೆಂಬುದು ನನ್ನ ಕಟ್ಟಕಡೆಯ ಸಂಕಲ್ಪ. ಅವನು ಈಗ ಜಗತ್ತಿನಲ್ಲಿಯೇ ಇರುವನೆಂಬುದನ್ನು ಕಂಡಿರುವೆನು. ಇದುವರೆಗೆ ಇಂದಿನಂತೆ ನಾನು ಸನ್ಯಾಸಿನಿಯಲ್ಲ. ಜಗತ್ತನ್ನೇ ಪ್ರೀತಿಸುವವಳು.

ದೇವರಿದ್ದಾನೆ. ಈ ರೂಪವನ್ನು ಸೃಷ್ಟಿಸಿದವನು ಇದಕ್ಕೊಂದು ಕರ್ತವ್ಯವನ್ನು ಗೊತ್ತುಮಾಡಿಯೇ ಇರಬೇಕು. ಎಂದು ವಿಜಯನು ಮನಸ್ಸಿನಲ್ಲಿಯೇ ನಿರ್ಧರಿಸಿದನು.

ವಿಜಯ—ಹಾಗಾದರೆ ನಮ್ಮ ಮದುವೆ?

ಜಯ—ವಿಜಯ! ನಿನಗೆ ಪ್ರೇಮದಲ್ಲಿ ನಂಬಿಕೆಯಿಲ್ಲವೆ? ಗಂಡಸಿನಲ್ಲಿ ಭರವಸೆ ಇಡುವ ಹೆಂಗಸಿಗಿಂತಲೂ ನಿನಗಿನ್ನೇನು ಬೇಕು. ಈ ನಂಬಿಕೆ ಭರವಸೆಗಳಿಗಾಗಿಯೇ ನಾವು ಇಷ್ಟು ದಿವಸಗಳೂ ಕಾದಿರಲಿಲ್ಲವೆ? ಈ ನಂಬಿಕೆಯಿಂದಲೇ ಗಂಡಸು ಹೆಚ್ಚು, ಹೆಂಗಸು ಕಪ್ಪು ಎಂಬ ತಾರತಮ್ಯ ಇಲ್ಲದೆ ಕೆಲವು ಕಾಲ ಜೀವನ ಯಾತ್ರೆಯನ್ನು ನಡೆಸೋಣ. ಕಟ್ಟಕಡೆ ವಿವಾಹ ಬಂಧನದಿಂದ ದೇವರು ಬಿಗಿದರೂ ಬಿಗಿಯಲಿ.

ವಿವಾಹವು ಕೊನೆಗೂ ನಡೆಯಲಿಲ್ಲ. ದೇವರು ಈ ಬಂಧನಕ್ಕೊಪ್ಪಿಗೆಯನ್ನು ಕೊಡಲಿಲ್ಲ.

ಹಿಂದಿನ ಜೊತೆಗಾತಿ—ಜಯಾ! ನಿನಗೇಕೆ ಹೀಗೆ ಬಾಂಬಾಂಗೂ ಬದಲಾಯಿಸಿಕೊಳ್ಳುತ್ತಿರುವೆ. ನಿನ್ನ ಮನಸ್ಸಿಗೊಂದು ನೆಲೆಯೇ ಬೇಡವೆ.

ಜಯಳು—ಕಿರುನಗೆಯ ಬೆಳದಿಂಗಳನ್ನು ಚೆಲ್ಲಿದಳು.

ಬೆಂಗಳೂರು ನಗರದ ಪೌರ ಸಭಾ ಸದಸ್ಯರಿಗೆ ಸ್ವಾಗತ, ಮೈಸೂರು ನಗರದ ಪೌರ ಸಭಾ ಸದಸ್ಯರಿಗೆ ಸಂದೇಶ.

ಲೇಖಕ—ಜೆ. ಸ್ವಾಮಿದಾಸ್.

ಬೆಂಗಳೂರಿನ ಪೌರಸಭೆಗೆ ಮತ್ತು ರಾಜಧಾನಿಯ ಪೌರಸಭೆಗೆ ಚುನಾಯಿಸಲ್ಪಟ್ಟಿರುವ ಮಹನೀಯರೇ,

ನಿಮ್ಮ ಸ್ಥಾನವು ಮಾನ್ಯವಾದುದು. ನಿಮ್ಮ ಜವಾಬ್ದಾರಿಕೆಯು ಮಹತ್ತರವಾದುದು. ಜನಸೇವೆ ಮಾಡುವವರು ಜನರಿಂದ ಮೆಚ್ಚಿಗೆಯನ್ನು ಪಡೆಯದಿರಬಹುದು. ಆದರೆ ಪರಮಾತ್ಮನ ಮೆಚ್ಚಿಗೆಯು ಮಹತ್ವವುಳ್ಳದ್ದಾಗಿರುವುದು. ನೀವು ಲಕ್ಷಾಂತರ ಜನರ ಪ್ರತಿನಿಧಿಗಳಾಗಿದ್ದೀರಿ. ದರ್ಪಣದಲ್ಲಿ ಪ್ರತಿ ಬಿಂಬವು ಕಾಣುವಂತೆ ನಿಮ್ಮ ವರ್ತನೆಗಳಲ್ಲಿ ನ್ಯಾಯ, ಧರ್ಮ, ಸದಾಚಾರಗಳು ಪ್ರತಿಬಿಂಬಿಸಲಿ. ಜಾತಿ, ಕುಲ, ಮತಗಳನ್ನು ಎಣಿಸದೆ ತ್ರಿಕರಣ ಪೂರ್ವಕವಾಗಿ ಜನಸೇವೆಮಾಡಿರಿ. ಮುಂದಿನ ಮೂರು ವರ್ಷಗಳಲ್ಲಿ ನೀವು ಮಾಡುವ ಕಾರ್ಯಗಳ ಅಳತೆ ಮಾಡಲ್ಪಡುವುವು. ನಿಮ್ಮ ಸಾರ್ವಜನಿಕ ಜೀವನವು ಪರಿಶುದ್ಧವಾಗಿರಲಿ ಮತ್ತು ನಿಮ್ಮ ಕಾರ್ಯಗಳನ್ನು ಪರಮಾತ್ಮನು ಮಂಗಳಮಾಡಲಿ.

ಬೆಂಗಳೂರಿನ ಮಹಾಜನರು ತಮ್ಮ ಆರಿಸಿರುವ ಪ್ರತಿನಿಧಿಗಳನ್ನು ಬಹಳ ಜಾಗರೂಕತೆಯಿಂದ ಚುನಾಯಿಸಿದ್ದಾರೆ.

ಪೌರಸಭಾ ಸದಸ್ಯರಿಗೆ ಸ್ವಾಗತ:— ಈ ಕಾಲವು ಪ್ರಗತಿಯ ಕಾಲ ಸ್ವಾತಂತ್ರ್ಯಾವಲಂಬನದ ಕಾಲ. ರಾಷ್ಟ್ರವು ಸರ್ವತೋಮುಖವಾದ ಏಳಿಗೆಯನ್ನು ಪಡೆಯುತ್ತಿರುವಕಾಲ. ರಾಜಕೀಯ ಧಾರ್ಮಿಕಾಭ್ಯುದಯಗಳ ಸಮಾಗಮದ ಕಾಲ. ನಗರ ಜೀವನವು ಪರಿಶುದ್ಧವಾಗಿದೆ. ಸಾವಿರಾರು ಬಡ ಜನರು ವಾಸಿಸಲು ಮನೆಗಳಿರುವುದಿಲ್ಲ. ನಗರದಲ್ಲಿ ಕೆಲವು ರಾಜಮಾರ್ಗಗಳು ಹೊರತು ಇನ್ನೂ ನೂರಾರು ಕಲ್ಮಷಮಯವಾದ ಗಲ್ಲಿಗಳಿರುವುವು. ಗಾಳಿ ಬೆಳಕು ಪ್ರವೇಶಿಸಬಾರದ ಸಾವಿರಾರು ಮನೆಗಳಿರುವವು. ಕುಡಿಯುವ ನೀರಿನ ಸೌಕರ್ಯವಿರುವುದಿಲ್ಲ. ಇವುಗಳನ್ನು ಉತ್ತಮಪಡಿಸಲು ಪೌರಸಭೆಗಳು ಹೆಚ್ಚಾಗಿ ಕೆಲಸಮಾಡಬೇಕಾಗಿದೆ. ವಾದವಿವಾದಗಳಿಗಿಂತಲೂ ಕಾರ್ಯದ ಕಡೆ ಹೆಚ್ಚು ಗಮನಕೊಡಬೇಕಾಗಿದೆ. ಪುರ ಭವನಗಳು ಅಂದ ಚಂದವಾಗಿ ಮಾರ್ಪಡಿಸಲ್ಪಡುತ್ತಿರುವವು. ಅಸಹ್ಯವಾದ ಗಲ್ಲಿಗಳು ಶುದ್ಧ ಮಾಡಲ್ಪಡುತ್ತಿರುವವು. ಆದರೂ ನಡೆಯಬೇಕಾದ ಕೆಲಸಗಳು ಬಹಳವಿರುತ್ತವೆ. ಜನರಿಗೋಸ್ಕರ ನೀವು ಸೇವಕರಾಗಿರುವಿರಿ. ಕರ್ತವ್ಯದ ಕಡೆಗೆ ನಿಮ್ಮ ದೃಷ್ಟಿಯು ಇರಲಿ. ನಿಮಗೆ ಮಹಾಜನರು ಹೃತ್ಪೂರ್ವಕ ಸ್ವಾಗತ ಬಯಸುತ್ತಾರೆ.

ರಾಜಧಾನಿಯ ಚುನಾವಣೆಗಳು :— ಬೆಂಗಳೂರಿನಲ್ಲಿ 22 ಸ್ಥಾನಗಳಿಗೆ 41 ಜನ ಸದಸ್ಯರು ಉಮೇದುವಾರರಾಗಿದ್ದರು. ರಾಜಧಾನಿಯಲ್ಲಿ 24 ಸ್ಥಾನಗಳಿಗೆ 34 ಜನ ಸದಸ್ಯರು ನಿಂತಿದ್ದರು. ಜಯಾಪಜಯಗಳಿಂದ ಮನನೊಂದಿರುವವರ ಅಭ್ಯಾಸ ಬಿಡಬೇಕು. ಯಾರನ್ನಾದರೂ ಅಸಮ್ಮತಿಯಿಂದ ಹೇಳುವುದಕ್ಕಾಗುವುದಿಲ್ಲ. ಆದರೆ ಸ್ಥಾನಗಳಿಗೆ ಬೇಕಾದವರು 21 ಜನ ಮಾತ್ರ

ಸದಸ್ಯರಿಗೊಂದು ವಿಜ್ಞಾಪನೆ—ಪಬ್ಲಿಕ್‌ನವರು ಪ್ರತಿದಿನವೂ ಒಂದೊಂದು ಮೊಹಲ್ಲಾವನ್ನು ತಾವೇ ಖುದ್ದಾಗಿ ನೋಡಿ ತರುವಾಯ ಮೀಟಿಂಗಿನಲ್ಲಿ ಮಾತಾಡುತ್ತಿದ್ದರು. ಚುನಾಯಿಸಲ್ಪಡುವರು ವಾರ್ಷಿಕ ಮೀಟಿಂಗ್‌ಗಳಿಗೆ ಹಾಜರಿಕೊಡುವುದು ಮಾತ್ರ ಸಾಲದು ನಿಮ್ಮ ಮೊಹಲ್ಲಾಗಳನ್ನು ಕನಿಷ್ಠ 15 ದಿನಕ್ಕೆ ಒಂದು ಬಾರಿಯಾದರೂ ಸಂದರ್ಶಿಸಿ ಆ ಸ್ಥಳದ ಜನರ ಸ್ಥಿತಿಗತಿಗಳನ್ನು ತಿಳಿದು ಅನಂತರ ನಿಮ್ಮ ಅಭಿಪ್ರಾಯವನ್ನು ಮುನಿಸಿಪಲ್ ಮೀಟಿಂಗುಗಳಲ್ಲಿ ತಿಳಿಸಿ

ಅಮೆರಿಕದವರ ಅಸಮಾಧಾನ

ಮಿಸೆಸ್ ಸಿಂಪ್ಸನ್ನಳನ್ನು ರಾಣಿಯಾಗಿ ಅಂಗೀಕರಿಸದಿದ್ದುದಕ್ಕಾಗಿ ಅಮೆರಿಕದವರು ಇಂಗ್ಲೆಂಡಿನ ಮೇಲೆ ಬಹಳ ಅಸಮಾಧಾನಗೊಂಡಿದ್ದಾರೆ. ತಮ್ಮ ದೇಶದ ಒಬ್ಬ ಸಾಮಾನ್ಯ ಸ್ತ್ರೀಯನ್ನು ಬ್ರಿಟಿಷ್ ಚಕ್ರಾಧಿಪತ್ಯದ ರಾಣಿಯನ್ನಾಗಿ ಮಾಡಲು ಅವರೂ ಸಹ ಬಹಳ ಶ್ರಮಪಟ್ಟು ವಿಶೇಷ ಪ್ರಚಾರಮಾಡಿದರು. ಚಕ್ರವರ್ತಿಗಳಿಗೆ ಜಯವಾಗಲೆಂದು ಹರಕೆಗಳನ್ನು ಸಲ್ಲಿಸಿದರು. ಒಂದುವೇಳೆ ಈ ಮದುವೆಗೆ ಪಾರ್ಲಿಮೆಂಟಿನವರು ಒಪ್ಪಿದರೆ ಅಮೆರಿಕದವರು ಇಂಗ್ಲೆಂಡಿನವರನ್ನು ಪರಿಹಾಸ್ಯ ಮಾಡುತ್ತಿದ್ದರು. ತಮ್ಮ ದೇಶದ ಯಃಕಶ್ಚಿತ್ ಹುಡುಗಿಯು ಬ್ರಿಟಿಷ್ ಚಕ್ರಾಧಿಪತ್ಯದ ಒಡತಿಯೆಂದು ಜಂಬಿಸುತ್ತಿದ್ದರು. ಬ್ರಿಟನ್ನಿಗೆ ಅವರಿಂದ ಹೇಗೂ ಹಾಗೂ ಕಷ್ಟ.

ಸ್ವಾತಂತ್ರ್ಯ ಸಂಗ್ರಾಮದ ಜ್ಯೋತಿಗಳು.

ಶ್ರೀ ವಿ. ಜೆ. ಪಟೇಲರು

ಫವಲಿಯಲ್ಲಿ ಮುಂದಿನ ಕಾಂಗ್ರೆಸ್

[illegible]

ಅಧ್ಯಕ್ಷತೆಗೆ ಜವಾಹಿರರ ಅನುಪಸ್ಥಿತಿಯ ಅರ್ಹತೆ

ಅವರ ಆರು ಅದ್ಭುತ ರಿಕಾರ್ಡುಗಳು

ಕ್ರೈಪುರದಲ್ಲಿ ನಡೆಯುವ ಕಾಂಗ್ರೆಸ್ಸಿನ 50 ನೆಯ ಅಧಿವೇಶನಕ್ಕೆ ಪಂ॥ ಜವಾಹಿರ ಲಾಲ್ ನೆಹರೂರವರು ... [illegible]

ಶ್ರೀಮತಿ ಕಮಲಾ ನೆಹರು

[illegible]

... ಪಂ॥ ಜವಾಹಿರಲಾಲರು ... [illegible]

[illegible]

ಡಾ॥ ಅನ್ಸಾರಿಯವರು.

ಗಾಂಧಿಯವರು ಮತ್ತು ರೈತರು

ಮಹಾತ್ಮ ಗಾಂಧಿಯವರು ... [illegible]

ತಿಲಕ ನಗರದ ವೈಭವ.

[illegible]

ನಾವು ಬಲ್ಲ ಭಂಗಿ

ಮಹಾತ್ಮರು ... [illegible]

ಶ್ರೀ ಜೆ. ಎಂ. ಸೇನ ಗುಪ್ತ

ಸಾಧ್ವಿ

೨೮—೧೨—೩೬ ನೇ ಸೋಮವಾರ

ಕಾಂಗ್ರೆಸ್ ಅಧ್ಯಕ್ಷತೆ.

ಜವಾಹರಲಾಲರು ರಾಷ್ಟ್ರೀಯ ಮಹಾಸಭೆಯ ಅಧ್ಯಕ್ಷರಾಗಿರುವುದು, ಇದರೊಂದಿಗೆ ಮೂರನೆಯಸಾರಿ ರಾಷ್ಟ್ರವು ಜವಾಹರಲಾಲರನ್ನು ರಾಷ್ಟ್ರಪತಿಯ ಸ್ಥಾನಕ್ಕೆ ಚುನಾಯಿಸಿರುವುದು ಬಹಳ ಮಹತ್ವವಾದದ್ದು. ಕಾಂಗ್ರೆಸಿನ ಇತಿಹಾಸದಲ್ಲಿ ಯಾರೂ ಮೂರು ಸಲ ಕಾಂಗ್ರೆಸಿನ ಅಧ್ಯಕ್ಷರಾಗಿರಲಿಲ್ಲ. ಇಂತಹ ಮಾನ್ಯಪದವಿಯು ಜವಾಹರಲಾಲರಂತಹ ವೀರ ಪುರುಷರಿಗೇ ಹೊರತು ಮತ್ತಾರಿಗೂ ಸಿಗಲಾರದು.

ಕಾಂಗ್ರೆಸ್ಸಿನ ಎರಡು ಭಾಗಗಳನ್ನು ಸಮಗೂಡಿಸುವ ಶಕ್ತಿ ಅವರಲ್ಲದ ಈ ಶಕ್ತಿ ಈಗಿನ ಕಾಂಗ್ರೆಸ್ಸಿನಲ್ಲಿ ಜವಹರಲಾಲರಿಗೆ ಇರುವಷ್ಟು ಮತ್ತಾರಿಗೂ ಇಲ್ಲವೆಂದು ಸಂದೇಹವಿಲ್ಲದೆ ಹೇಳಬಹುದು.

ಜವಾಹರಲಾಲರು ಸಮತಾವಾದಿಗಳು. ಅವರ ಅವರ ಸಮತಾವಾದವು ನಮ್ಮ ಸಂಸ್ಕೃತಿ, ಜನತೆಗೆ ಹೊರಗಿನದಲ್ಲ. ಸಮಾಜದ ಒಳಗೆ ಮೂಡಿರುವ ಶಕ್ತಿಗಳನ್ನು ಬಹಿರಂಗಪಡಿಸಿ, ಅದರ ನಿಜವಾದ ಅರ್ಥವನ್ನು ತಿಳಿಸುವುದೇ ಸಮತಾವಾದದ ತಿರುಳು. ನಮ್ಮ ದೇಶಕ್ಕೆ ಅತ್ಯಗತ್ಯವಾಗಿರುವ ಸ್ವಾತಂತ್ರ್ಯದ ಅರ್ಥವನ್ನು ಅನೇಕರು ತಿಳಿಯದೇ ಇರುವರೆಂದೇ ಜವಾಹರಲಾಲರ ಅಭಿಪ್ರಾಯ. ಪ್ರತಿಯೊಂದು ಕೆಲಸವನ್ನು ಕೈಗೊಳ್ಳುವಾಗಲೂ, ಅದು ನಮಗೆ ಸಂಪೂರ್ಣ ಸ್ವಾತಂತ್ರ್ಯ ಬೇಕು ಎನ್ನುತ್ತ ಆ ಕೆಲಸದ ಅವರ, ಕೆಲಸದ ಗುರಿ ಇಲ್ಲದೇ ನಮ್ಮ ಪ್ರಯತ್ನವು ಕೈಗೂಡುವುದಿಲ್ಲವೆಂದು ಎಲ್ಲರಿಗೂ ತಿಳಿದಿದೆ. ಇದೇ ಸಾಧಾರಣ ನೀತಿಯನ್ನೇ ಜವಾಹರಲಾಲರ ನಮ್ಮ ದೇಶದ ಸ್ವಾತಂತ್ರ್ಯಸಾಧನೆಯಲ್ಲಿ ನಾವು ಕಾಣಬೇಕೆಂದು ಸದಾ ಹಾರುತ್ತಿದ್ದಾರೆ.

ಸ್ವಾತಂತ್ರ್ಯದ ಇತಿಹಾಸದಲ್ಲಿ ಜವಾಹರಲಾಲರ ಹೆಸರು ಶಾಶ್ವತವಾಗಿ ಈ ಎರಡು ವಿಷಯಗಳಲ್ಲಿ ಬರೆಯಲ್ಪಡುವುದು: (೧) ಸಂಪೂರ್ಣ ಸ್ವಾತಂತ್ರ್ಯದ ಧ್ಯೇಯವನ್ನು ಒಪ್ಪಿಕೊಳ್ಳುವಂತೆ ಮಾಡಿದವರು ಅವರು, (೨) ಸ್ವಾತಂತ್ರ್ಯದ ಹೋರಾಟದ ಮಾರ್ಗ ರೀತಿಯ ಗುರಿಯನ್ನು ಮುಂದಿಟ್ಟುಕೊಳ್ಳಬೇಕೆಂದು ಸಮತಾವಾದದ ಅವಶ್ಯಕತೆಯನ್ನು ನಮಗೆ ತೋರಿಸಿದವರು ಜವಾಹರಲಾಲರು.

ಮಹಾತ್ಮರ ಪಟ್ಟ ಜವಾಹರಲಾಲರ ಇಂದಿನ ಮುಖ್ಯ ಗುರಿಯಾದರೂ ಅವರು ಅದನ್ನು ಕಾಂಗ್ರೆಸಿನ ಮೇಲೆ ಬಲಾತ್ಕರಿಸಿಲ್ಲ. ಕಾಂಗ್ರೆಸು ಆ ದಾರಿಯನ್ನು ಹಿಡಿದರೆ ನಿಜವಾದ ಸ್ವಾತಂತ್ರ್ಯವು ನಮಗೆ ದೊರೆಯುವುದೆಂದು ಅವರ ಅಭಿಪ್ರಾಯ. ಹೀಗೆ ಆಗಲಿ ಜವಾಹರಲಾಲರು ಮನ್ನಣೆ ಕೊಡುವದರಲ್ಲಿ ನಮ್ಮ ದೇಶದಲ್ಲಿ ಎಲ್ಲರಿಗೂ ಮಹತ್ವಾಕಾಂಕ್ಷೆಯನ್ನು ಹುಟ್ಟಿಸಿ ಜೀವನವನ್ನು ತುಂಬಿದ್ದಾರೆ. ರಾಷ್ಟ್ರಮಾತೆಯ ಸುಪುತ್ರರಾದ ಜವಹರಲಾಲರಿಗೆ ಇಂದಿನಂತೆ ಕಾಂಗ್ರೆಸಿನ ಅಧ್ಯಕ್ಷಪದವಿಯ ಗೌರವವು ಪಲವು ಬಾರಿ ದೊರಕಲೆಂದು ನಮ್ಮ ಹಾರೈಕೆ.

ಎತ್ತಿನ ಗಾಡಿಯಲ್ಲಿ ಅಧ್ಯಕ್ಷರ ಮೆರವಣಿಗೆ

51 ನೇ ಕಾಂಗ್ರೆಸ್ ಅಧಿವೇಶನಕ್ಕೆ ಅಧ್ಯಕ್ಷರಾದ ಪಂಡಿತ ಜವಾಹರಲಾಲ್ ನೆಹ್ರೂರವರನ್ನು ಆರು ಎತ್ತುಗಳನ್ನು ಕಟ್ಟಿದ ಬಂಡಿಯಲ್ಲಿ ತಾ॥ 23 ರಲ್ಲಿ ಸಂಜೆಯಿಂದ ತಿಲಕ್ ನಗರಕ್ಕೆ ಮೆರವಣಿಗೆ ಮಾಡಿ ಕರೆದುಕೊಂಡು ಹೋದರು. ಪ್ರತಿವರ್ಷವೂ ಇರುವಂತೆ ಈಸಲ ಮೋಟಾರುಗಾಡಿಗಳೇ, ಸಾರೋಟುಗಳೇ ಏನೂ ಇರಲಿಲ್ಲ. ಕಾಂಗ್ರೆಸ್ಸಿನವರಿಗೂ ರೈತರಿಗೂ ಹೆಚ್ಚು ಮೈತ್ರಿ ಉಂಟಾಗಲೆಂಬುದೇ ಈ ಮೆರವಣಿಗೆಯ ಸರಳತೆಯ ಉದ್ದೇಶ. ಕಾಂಗ್ರೆಸ್ ಪಟ್ಟಣದಲ್ಲಿ ವಾಸಮಾಡುವ ಸಂಸ್ಥೆಯಲ್ಲ, ರೈತರ ಸಂಪದಭಿವೃದ್ಧಿ ಮಾಡುವ ಒಂದು ಅಂಗ ಎಂಬ ಭಾವನೆಯು ಅಲ್ಲಿಯ ಜನರ ಹೃದಯದಲ್ಲಿ ಬೇರೂರುವಂತೆ ಮಾಡಬೇಕೆಂದು ಕಾಂಗ್ರೆಸ್ಸಿನ ನಾಯಕರು ಪ್ರಯತ್ನ ಪಡುತ್ತಿರುವರು.

ಉದಾರ ಸಹಾಯ

ವಿಜಯನಗರದ ಸ್ಮಾರಕದ ಷಷ್ಟಿಶತಮಾನೋತ್ಸವದ ಸಮಾರಂಭಾರ್ಥವಾಗಿ ಮೈಸೂರು ಸರ್ಕಾರದವರು ಉದಾರವಾಗಿ 100 ರೂಗಳನ್ನು ದಾನ ಮಾಡಿರುತ್ತಾರೆ. ಇದಕ್ಕಾಗಿ ಸ್ಮಾರಕ ಸಮಿತಿಯವರು ಶ್ರೀಮನ್ಮಹಾರಾಜರವರಿಗೆ ತಮ್ಮ ವಂದನೆಗಳನ್ನು ಅರ್ಪಿಸಿರುವರೆಂದು ತಿಳಿದು ಬರುತ್ತೆ.

ಸಮತಾವಾದಿಗಳ ಪ್ರತಿಭೆ

ಮುಂದಿನ ಏಪ್ರಿಲ್ ತಿಂಗಳಿನ ಆದಿಯಿಂದ ಹೊಸ ರಾಜ್ಯಾಂಗವು ಜಾರಿಗೆ ಬರಲಿದೆ. ಅದಕ್ಕಾಗಿ ಆ ದಿವಸ ದೇಶವ್ಯಾಪ್ತವೂ ಹರತಾಳವನ್ನಾಚರಿಸಬೇಕೆಂದು ಸಮತಾವಾದಿಗಳ ಕಾರ್ಯಕಾರೀ ಮಂಡಲಿಯವರು ಕಾಂಗ್ರೆಸ್ಸಿನವರಲ್ಲಿ ಮನವಿ ಮಾಡಿಕೊಂಡಿದ್ದಾರೆ.

ಆಗ—ಈಗ

ವಿಜಯನಗರದ ಶತಮಾನೋತ್ಸವ

ಆಗ ಎಂದರೆ ಐದುನೂರು ವರ್ಷಗಳ ಹಿಂದಿನ ಮಾತು. ವಿಜಯನಗರವೋ, ವಿದ್ಯಾನಗರವೋ! ಹೇಗೂ ನಮ್ಮ ಸಂಸ್ಕೃತಿಯನ್ನು ಕಾಪಾಡಿಕೊಂಡು ಬರುತ್ತಿದ್ದಿತು. ಈಗಿನ ಗ್ರಾಮಪದ್ಧತಿಗಳ ಬಾರಾ ಬಲೂತಿ, ಅಥವಾ ಆಯಗಾರರು ಎಂಬ ಸೇವಕರನ್ನು ಮೊದಲು ವ್ಯವಸ್ಥೆ ಮಾಡಿದವರು ವಿಜಯನಗರದ ಅರಸುಗಳು. ಅಲ್ಲಿನ ಐಶ್ವರ್ಯವೂ, ಸಾಮ್ರಾಜ್ಯ ವೈಭವವೂ, ನಮ್ಮ ನೆನಪಿಗೆ ಬರುವ ಅಲ್ಲಾವುದ್ದೀನನ ಅದ್ಭುತ ದೀಪಸ್ತಂಭದ ಕಥೆಯಂತೆಯೇ ನಮಗೆ ಕಾಣುವುದು. ಆಗಿನವರು ಸಂಸ್ಕೃತಿ ಸಂರಕ್ಷಕರು. ಅವರ ಸಂಪ್ರದಾಯಗಳು ಆಚರಣೆಗಳಲ್ಲಿ ಪರಿಮಿತವಾಗಿ ಇರಲಿಲ್ಲ. ಗ್ರಾಮಗಳ ಮೂಲೆ ಮೂಲೆಗಳಲ್ಲಿ ಜನಾಂಗದಲ್ಲಿ ಜೀವನಿದ್ದಿತು. ಜನಜೀವನವು ತೃಪ್ತಿಯಿಂದ ತುಳುಕಾಡುತ್ತಿದ್ದಿತು. ಸಾಮ್ರಾಜ್ಯ ಸ್ಥಾಪಕರೆಂದು ನಾವು ವಿಜಯನಗರದ ರಾಜರುಗಳನ್ನು ಹೊಗಳಬೇಕಾದುದಿಲ್ಲ. ಹೊಯ್ಸಳರೂ, ಚಾಲುಕ್ಯರೂ ಸಾಮ್ರಾಜ್ಯ ಸ್ಥಾಪಕರೂ ಹೌದು. ಕನ್ನಡಿಗರೂ ಹೌದು. ಜನಾಂಗದ ಪ್ರಾಣನೆಂದರೆ ಸಂಸ್ಕೃತಿ, ಅದರ ಉದ್ಧಾರಕ್ಕಾಗಿಯೇ ಆ ಅರಸರು ಜೀವಿಸಿದ್ದರು. ಅದರಿಂದಲೇ ಆಗಿ ಚಿರಕಾಲವೂ ಆ ಮಹಾಪುರುಷರ ಪ್ರಾತಃಸ್ಮರಣೀಯರೆಂದು ವಿಜಯನಗರಕ್ಕೂ ವಿದ್ಯಾರಣ್ಯರಿಗೂ ಈಗ ಕಲವರು ತೋರಿಸುತ್ತಿರುವ ಸಂಬಂಧವು ಸರಿ ಎಂದು ಯಾರೂ ಸಿದ್ಧಾಂತಿಸಲಾಗಿಲ್ಲ. ಆಚಾರ್ಯರು ಶೇಂಗಿಸಮರವನ್ನು ಬಗ್ಗಿಸಿದುದನ್ನೂ, ಪರಕಾಯಪ್ರವೇಶವನ್ನು ಮಾಡಿದುದನ್ನೂ, ನಂಬುವಂತಹರು ಏನನ್ನು ಬೇಕಾದರೂ ನಂಬಬಹುದು. ಇವಿಷ್ಟೂ ಆಗಿನ ಮಾತು.

ಈಗ ನವರಾತ್ರಿ ಉತ್ಸವಾದಿಗಳಲ್ಲಿ ವೈಭವವನ್ನು ಬಿಟ್ಟರೆ ಹಿಂದಿನ ಸಂಸ್ಕೃತಿಯ ಸುಳಿವೂ ಕಾಣಿಸದು. ವೇಷ, ಭಾಷೆ, ಆಚಾರ, ಶಿಲ್ಪಕಲೆ, ಒಂದರಲ್ಲಿ ಒಂದುವರೂ ಬದ್ಧವಾದ ಆರ್ಯ ಸಂಸ್ಕೃತಿಯನ್ನು ಕಳೆದುಕೊಂಡ ಹಾಗೆಲ್ಲಾ, ಸ್ವಾತಂತ್ರ್ಯವನ್ನು ಕಳೆದುಕೊಂಡೆವು. ಜೀವಗಳಲ್ಲೂ ಸ್ವಾರ್ಥಪರರೂ ಆಗುತ್ತಿದ್ದೇವೆ. ಯಾತಕ್ಕಾಗಿ ಜೀವಿಸಬೇಕು? ಹೇಗೆ ಜೀವಿಸಬೇಕು? ಯಾತಕ್ಕಾಗಿ ಸಾಯಬೇಕು? ಹೇಗೆ ಸಾಯಬೇಕು? ಇವೆರಡನ್ನೂ ನಾವು ಮರೆತೆವು. ಜೀವನದಲ್ಲಿ ನಮಗೆ ಬೇಸರಿಕೆ ಆದರೆ ಸಾಯಲು ಗೊತ್ತಿಲ್ಲ. ಇದೇ ಇಂದಿನ ನಮ್ಮ ಸ್ಥಿತಿ.

ಸಾಮ್ರಾಜ್ಯವು ಅವಶ್ಯಕವೇ? ಸಂಸ್ಕೃತಿಯ ಸಂರಕ್ಷಣೆಗಾಗಿ ಅತ್ಯಾವಶ್ಯಕ, ಪಾಶ್ಚಾತ್ಯರ ದೃಷ್ಟಿಯಿಂದ ಜನಜೀವನವನ್ನು ಹೀರುವ ಕೆಟ್ಟ ಸಂಸ್ಥೆ. ಪಾಶ್ಚಾತ್ಯರ ಸಾಮ್ರಾಜ್ಯಗಳು ಇಂದಲ್ಲದಿದ್ದರೆ ನಾಳೆ ಆ

ಸೋಶಿಯಲಿಸ್ಟ್ ಸಮ್ಮೇಳ[ನ]

ಅಖಿಲ ಭಾರತ ಮೂರನೇ ಸೋಶಿಯಲಿಸ್ಟ್ ಸಮ್ಮೇಳನವು 23 ನೇ ತಾ[ರೀಖು] ಫೈಜ್‌ಪುರದಲ್ಲಿ ಶ್ರೀ ಜೈಪ್ರಕಾಶ ನಾರಾಯಣರ ಅಧ್ಯಕ್ಷತೆಯಲ್ಲಿ ಬಹಳ ವಿಜೃಂಭಣೆಯಿಂದ ನಡೆಯಿತು.

ಅಧ್ಯಕ್ಷ ಭಾಷಣವು ಬಹಳ ವಿ[ಚಾರ] ಪೂರಿತವಾಗಿಯೂ ಮತ್ತು ಸ್ಫೂರ್ತಿ[ದಾಯಕ] ವಾಗಿಯೂ ಇದ್ದಿತು.

'ಸ್ವಾತಂತ್ರ್ಯ ಸಂಗ್ರಾಮದಲ್ಲಿ ... ಹೋರಾಟವೇ ಕೊನೆಯದು. ಇನ್ನು ... ವರ್ಷಗಳೊಳಗಾಗಿ ನಾವು ಪೂರ್ಣ [ಸ್ವಾ]ತಂತ್ರ್ಯವನ್ನು ಹೊಂದುವೆವು" ಎಂ[ದು ಜೈ]ಪ್ರಕಾಶರು ಘೋಷಿಸಿದರು.

ಭಾರತದ ರೈತರ ದುಸ್ಥಿತಿ ... ಲು ಕಷ್ಟ. ಇಂಡಿಯಾ ಸರ್ಕಾರವು ... ಸ್ಥಿತಿಯನ್ನು ಉತ್ತಮಗೊಳಿಸಲು ... ಕೋಟಿ ರೂಪಾಯಿಗಳನ್ನು ಮಂಜೂ[ರು] ಮಾಡಿರುವರು. ಇದು ಮಹಾತ್ಮರ ಗ್ರಾ[ಮ] ಪುನರುಜ್ಜೀವನ ಕಾರ್ಯಕ್ಕೆ ಪ್ರತಿಯಾಗಿ ... ಡುವ ಕೆಲಸ ದಬ್ಬಾಳಿಕೆ ಮಾಡುವ ... ಹ ಈಗ ರೈತರ ಗೋಳನ್ನು ತಿಳಿಯು[ವ] ತಾಗಿದೆ. ರೈತರಿಗೆ ಸರಿಯಾದ ಸಹಾಯ[ವ]ನ್ನು ಮಾಡಲು ಇಷ್ಟ ಮತ್ತು ಶಕ್ತಿ ... ದೆ ಅವರನ್ನು ಈ ರೀತಿಯಾಗಿ ಸರ್ಕಾ[ರದ]ವರು ಪುಸಲಾಯಿಸುತ್ತಿದ್ದಾರೆ' ಎಂ[ದು] ಹೇಳಿದರು.

ವಾಹನಗಳಿಗೆ ಅಲ್ಪಾವಧಿ ಲೈಸೆನ್ಸ್

ಹೊರಗಿನಿಂದ ಮೈಸೂರು ದೇಶ[ದ] ಸಂಚಾರಕ್ಕಾಗಿ ಬರತಕ್ಕ ಮೋಟಾರು [ಮ]ತ್ತು ಮೋಟಾರು ಬೈಸಿಕಲ್‌ಗಳಿಗಾಗಿ ... ದಿವಸ ಮತ್ತು 30 ದಿವಸಗಳ ಅಲ್ಪಾ[ವಧಿ] ಲೈಸೆನ್ಸ್‌ಗಳನ್ನು ರಿಯಾಯಿತಿ ದರದ[ಲ್ಲಿ] ಯಮಿಸಿರುತ್ತಾರೆಂದು ತಿಳಿದುಬರುತ್ತ[ದೆ].

ಳಿಯಲೇಬೇಕು. ಆದರ ಬದಲಲ್ಲಿ ಮತ್ತೆ ... ದು ಜನಾಂಗದ ಏಳಿಗೆಯಿಲ್ಲ, ಸುಲಿಗೆ ...

ಸಾಮ್ರಾಜ್ಯ ಸ್ಥಾಪನೆಯನ್ನು ನ... ಸ್ಮರಿಸಲೇಕೆ? ಅದರಿಂದ ನಾವು ಕ... ಬೇಕಾದುದಿದೆ. ಶಿಲ್ಪ, ಸಾಹಿತ್ಯ, ... ನೀತಿ, ಯಾವುದಾದರೊಂದಕ್ಕಾಗಿಯೇ ... ಳಬೇಕು; ಅದಕ್ಕಾಗಿಯೇ ಸಾಯಬೇ[ಕು] ನಿರರ್ಥಕವಾಗಿ ಬದುಕಬಾರದು; ನಿರ[ರ್ಥಕ]ವಾಗಿ ಸಾಯಬಾರದು.

ಇಂದು ನಮ್ಮ ಸಮಾಜಕ್ಕೆ ಮಹಾ ... ಗಂಡಗಳಿವೆ. ಒಂದು ಕಡೆಯಲ್ಲಿ ... ಇಸ್ಲಾಮಿಯರು, ಮತ್ತೊಂದು ಕಡೆ ... ಕ್ರೈಸ್ತರು ನಮ್ಮ ಸಂಸ್ಕೃತಿಯನ್ನು ... ದೇ ಸಮನಾಗಿ ಸವೆಬಡಿಯುತ್ತಿರುವರು... ತಹ ಸಮಯದಲ್ಲಿ ಆ ಸಾಮ್ರಾಜ್ಯದ ... ರ್ನಿಜದ ನಾವು ಹೊಸ ಹುರುಪನ್ನು ... ದಿ ನಮ್ಮ ಸಂಸ್ಕೃತಿಯನ್ನು ಜನಜೀ... ವನ್ನು ಕಾಪಾಡಿಕೊಳ್ಳಬೇಕಾದುದೇ ...

ಉತ್ತರ ಕರ್ನಾಟಕದ ನಮ್ಮ ... ಗಳಿಗೆ ಇಂತಹ ಮಹತ್ಕಾರ್ಯವನ್ನು ... ಗೊಂಡುದಕ್ಕಾಗಿ ನಾವೆಲ್ಲರೂ ಋಣಿ... ಗಳು

ಸಿರಿಗನ್ನಡ...

ಐತಿಹಾಸಿಕ ಸಮ್ಮೇಳನ

ಶ್ರೀ ಕೃಷ್ಣರಾವರ ಉಜ್ವಲ ಭಾಷಣ

ವಿಜಯನಗರದ ಸಾಮ್ರಾಜ್ಯವು ನೂರಾರು ಕೋಟೆಗೆ ನಾನಾ ಮುಖವಾದ ಸನ್ಮಾನ ಎತ್ತಿ ಹಿಡಿಯುವಂತಹುದಾಗಿದೆ. ...ತನ ಹಾದಿ, ಸ್ವಾತಂತ್ರ್ಯ ರಕ್ಷಣೆ, ಸ ...ವತ್ಸರಗಳಲ್ಲಿ ಇರಬೇಕಾದ ಸಮುಷ್ಟಿ ...ಸಹಕಾರ ಇವುಗಳನ್ನು ತಿಳಿಸಿ ...ದೆ ಎಷ್ಟೇ ಕಷ್ಟ ಬಂದಾಗ್ಯೂ ...ಕತೆಯನ್ನು ರಕ್ಷಿಸುವ ಬಗೆಯನ್ನೂ ...ಕ ಸ್ವಾತಂತ್ರ್ಯ, ಸಾಹಿತ್ಯ, ಮ ...ಕಲಾ ಪೋಷಣ ಇವುಗಳನ್ನು ಹೇಗೆ ...ದೆಂಬುವನ್ನೂ ತೋರಿಸಿ ಕೊಡು ...ದಾಗಿದೆ ವಿಜಯನಗರ ಸಾಮ್ರಾಜ್ಯವನ್ನು ಇಂತಹ ರತ್ನಗಳಿಗ ನೆಲೆ ...ಗಿತ್ತು. ಭಾರತದ ಇತಿಹಾಸದಲ್ಲಿ ...ವಿಜಯನಗರದ ಇತಿಹಾಸವು ಒಂದು ...ದ ಅಧ್ಯಾಯ ಇದೇ ಇತಿಹಾಸಕ್ಕೆ ಕಿ ...ಯವಾದ ಅಧ್ಯಾಯ. ಅನಾದಿ ...ದ ಒಂದೆ ನಾಗರೀಕತೆಯನ್ನು ಅನೇಕ ...ಡಗಳ ಮಧ್ಯೆ ರಕ್ಷಿಸಿದ ಮಹಾ ಇತಿ ...ನ—ಅಂತಹ ಒತ್ತಡಗಳ ಮಧ್ಯೆ ಆ ...ಕತೆಯನ್ನು ವಿಶೇಷ ಉತ್ಸಾಹದಿಂ ...ವಾಗಿ ಬೆಳಸಿದ ಇತಿಹಾಸವು—ವಿ ...ನಗರ ಸಾಮ್ರಾಜ್ಯದ ಇತಿಹಾಸವಾಗಿ ... ಆರನೆಯ ಶತಮಾನೋತ್ಸವದಿಂದ ...ತದ ಸಾಂಸ್ಕೃತಿಕರಲ್ಲಿ ಮರೆತು ...ಹೋದ ಸಾಮ್ರಾಜ್ಯದ ವಿವೇಚನೆಗಾಗಿ ...ಯುಂಟಾಗ ವಂತಾಗಲಿ" ಎಂದು ...ರು ಸರ್ಕಾರದ ವಾಸ್ತು ಶಿಲ್ಪ ಶೋ ...ಧಿಕಾರಿಗಳೂ, ಮೈಸೂರು ವಿಶ್ವವಿದ್ಯಾ ...ಲಯದ ಚರಿತ್ರೆಯ ಪ್ರೊಫೆಸರೂ ಆದ ...ಎಂ. ಹೆಚ್. ಕೃಷ್ಣಾರವರು ವಿಜಯ ...ನಗರ ಸಾಮ್ರಾಜ್ಯದ ಆರನೆಯ ಶತಮಾ ...ನೋತ್ಸವಕ್ಕಾಗಿ ಏರ್ಪಡಿಸಿದ್ದ ಕರ್ಣಾಟಕ ...ಹಾಸಿಕ ಸಮ್ಮೇಳನದಲ್ಲಿ ಅಧ್ಯಕ್ಷತೆಯ ...ವಹಿಸಿ ಈ ಅರ್ಥಗರ್ಭಿತ ಭಾಷಣ ...ವನ್ನು ಮಾಡಿದರು.

ಶ್ರೀ ಕೃಷ್ಣರವರು ವಿಜಯನಗರದ ಆ ...ತ ಕ್ರಮವನ್ನು ವಿಮರ್ಶಿಸುತ್ತಾ ಹೇಳ ...ದ್ದೇನೆಂದರೆ—

'ವಿಜಯನಗರದ ಸಾಮ್ರಾಜ್ಯದ ಆಡಳಿ ...ತ ವಿಶೇಷವು ಗಮನೀಯವಾದುದು. ಆಳಿ ...ದ ಅರಸರೂ ಧರ್ಮರಾಜ್ಯ ಸೂತ್ರವ ...ನ್ನು ಧರ್ಮಶಾಸ್ತ್ರಾನುಸಾರವಾಗಿ ಅಕ್ಷರಶಃ ...ಪಾಲಿಸಿದರು. ಪ್ರಜಾ ಕ್ಷೇಮವೇ ಅವರ ...ನಿರಂತರ ಚಿಂತೆಯಾಗಿದ್ದಿತು. ರಾಜ್ಯದ ...ನೀತಿಯು ವಿಶೇಷ ವಿಚಕ್ಷಣತೆಯಿಂದ ಕೂ ...ಡಿತ್ತು. ಮಾಧವ ಮಂತ್ರಿ, ಮಾಧವಾಚಾ ...ರ್ಯ, ಲಕ್ಕಣದಣ್ಣಾಯಕ ಮತ್ತು ಸಾಳ್ವ ...ತಿಮ್ಮ ಇವರು ಆ ಸಾಮ್ರಾಜ್ಯದ ಮಹಾ ...ಗೌರವವನ್ನು ಹೆಚ್ಚಿಸಿದ ಮಹಾ ಮಂತ್ರಿಗ ...ಳಲ್ಲಿ ಕೆಲವರು."

'ಈ ಸಾಮ್ರಾಜ್ಯದ ಆಶ್ರಯದಲ್ಲಿ ಪ್ರಾಚೀನ ಸಾಹಿತ್ಯವೆನಿಸಿದ ಸಂಸ್ಕೃತಕ್ಕೆ ದೊರೆತ ಸನ್ಮಾನವೂ, ಪೋಷಣೆಯೂ ಹಾಗೆಯೇ ಕನ್ನಡ, ತೆಲುಗು ಮತ್ತು ತಮಿಳು ಸಾಹಿತ್ಯಕ್ಕೆ ದೊರೆತ ಪ್ರೋತ್ಸಾಹವೂ ಗಮನೀಯವಾದುದು. ವೇದಾಂತ ದೇಶಿಕ, ದಿಂಡಿಮ, ವೆಂಕಟಾಧ್ವರಿ, ಸಾಯಣ, ಅಪ್ಪಯ್ಯದೀಕ್ಷಿತ ಮುಂತಾದ ಸಂಸ್ಕೃತ ಕವಿಗಳೂ ವಿಶೇಷ ಸಾಹಿತ್ಯ ಸೇವೆಯನ್ನು ಮಾಡಿದ್ದಾರೆ. ಇದೇ ಕಾಲದಲ್ಲಿ ಕನ್ನಡದಲ್ಲಿ ಷಟ್ಪದಿ ಕಾವ್ಯಗಳೂ, ಸಾಂಗತ್ಯಗಳೂ, ಕೀರ್ತನೆಗಳೂ ವಿಶೇಷ ರೂಢಿಗೆ ಬಂದವು. ತೆಲುಗು ಸಾಹಿತ್ಯದ ಸುವರ್ಣ ಯುಗವಾದರೂ ಇದೇ ಕಾಲದಲ್ಲಿದೆ. ಈ ಸಾಮ್ರಾಜ್ಯದ ಆಳರಸರಿಂದ ಪ್ರೋತ್ಸಾಹಿತವಾಗಿದೆ ತಮಿಳು ಸಾಹಿತ್ಯದಲ್ಲಿರುವ ರತ್ನಗಳು ಇದೇ ಕಾಲಕ್ಕೆ ಸೇರಿದುವು."

"ಈ ಸಾಮ್ರಾಜ್ಯದಲ್ಲಿ ಸನಾತನ ಧರ್ಮವು ಆ ವ್ಯಾಪಕವಾಗಿ ಪೋಷಣೆಯಾಯಿತು. ಶ್ರೀ ವೈಷ್ಣವರಿಗೂ, ಸ್ಮಾರ್ತರಿಗೂ ವೈಷ್ಣವರಿಗೂ ಜೈನರಿಗೂ ಯಾವ ಆತಂಕಗಳೂ ಇರಲಿಲ್ಲ. ಎಲ್ಲರೂ ಸಾಮ್ರಾಜ್ಯ ಸೇವೆಯನ್ನು ಉಚಿತವಾಗಿ ನೆರವೇರಿಸಿದ್ದಾರೆ."

'ಈ ಕಾಲದಲ್ಲಿ ಶಿಲ್ಪ ಕಲೆಗೆ ವಿಶೇಷ ಪ್ರಾಶಸ್ತ್ಯವು ದೊರೆಯಿತು. ಹೊಸ್ಪೇಟೆ ತಾಲ್ಲೂಕಿನ ಶಿಲ್ಪವನ್ನು ನಾವು ಇಂದು ಕಂಡು ಬೆಕ್ಕಸ ಬೆರಗಾಗುತ್ತಿದ್ದೇವೆ. ಶೃಂಗೇರಿಯ ವಿದ್ಯಾಶಂಕರ ದೇವಸ್ಥಾನ, ಹಂಪೆಯ ವಿಠಲ ಮತ್ತು ಹಜಾರ ರಾಮಸ್ವಾಮಿ ದೇವಸ್ಥಾನಗಳೂ, ಲೇಪಾಕ್ಷಿಯ ವೀರಭದ್ರ ದೇವಸ್ಥಾನ ಮತ್ತು ಅನೇಕ ಇತರ ದೇವಸ್ಥಾನಗಳು ಕಟ್ಟಲ್ಪಟ್ಟಿರುವ ಬಗೆಯನ್ನೂ ಕಂಡು ನಾವು ವಿಸ್ಮಯರಾಗಿದ್ದೇವೆ. ಅನೇಕ ಪ್ರಾಕಾರಗಳೂ, ಉನ್ನತ ರಾಯಗೋಪುರಗಳೂ, ವಿಶಾಲ ಮಂಟಪಗಳೂ, ಶುದ್ಧವಾದ ಕಲ್ಯಾಣಿಗಳೂ ಇವುಗಳಲ್ಲಡಗಿರುವ ಕಲಾಕೌಶಲ್ಯವನ್ನು ಅರಿಯುವುದರಲ್ಲಿ ಮಗ್ನರಾಗಿದ್ದೇವೆ. ಇದೇ ಕಾಲದಲ್ಲಿ ಚಿತ್ರಕಲೆಯು ವಿಶೇಷವಾಗಿ ಪೋಷಿತವಾಯಿತು. ಮೈಸೂರು ಮತ್ತು ಮದರಾಸುಗಳಲ್ಲಿ ಹೆಚ್ಚು ಪ್ರಭಾವದಿಂದಿರುವ ಕರ್ಣಾಟಕ ಸಂಗೀತದ ಜನನವು ಈ ಕಾಲದಲ್ಲಾದುದು.

ಒಟ್ಟಿನಲ್ಲಿ ಈ ಸಾಮ್ರಾಜ್ಯದ ಜೀವನಾವಧಿಯಲ್ಲಿ ನಡೆದ ಕಾರ್ಯಗಳು ಮಹಾ ಕಾರ್ಯಗಳು. ಭಾರತದ ಜನಜೀವನದ ಮೇಲೆಯೇ ಅಲ್ಲದೆ ಪ್ರಪಂಚದ ಜನಜೀವನದ ಮೇಲೆಯೂ ಮಹತ್ವ ಪರಿಣಾಮಗಳನ್ನು ಉಂಟುಮಾಡುವಂತಹವು. ಈ ಸಾಮ್ರಾಜ್ಯದ ಇತಿಹಾಸವು ಸ್ವಾತಂತ್ರ್ಯ ಪೋಷಣೆ, ಅನ್ಯಮತ ಸಹಿಷ್ಣುತೆ, ಉದಾತ್ತ ವಿಷಯಗಳಲ್ಲಿ ಆಸಕ್ತಿ, ಧರ್ಮ ರಾಜ್ಯದಲ್ಲಿ ವಿಶ್ವಾಸ, ಸಂಸ್ಕೃತಿಯ ರಕ್ಷಣೆ, ಜ್ಞಾನಪ್ರಚಾರ ಕಾರ್ಯ—ಇವುಗಳನ್ನು ಎತ್ತಿ ಹಿಡಿಯುತ್ತಿದೆ. ಈ ಮಹಾಸಾಮ್ರಾಜ್ಯದ ಸ್ಮಾರಕೋತ್ಸವವು ಎಲ್ಲರಲ್ಲಿಯೂ ಸ್ಫೂರ್ತಿಯನ್ನುಂಟುಮಾಡಲಿ. ವಿಚಾರಪರರನ್ನಾಗಿ ಮಾಡಲಿ.

ವಿಜಯನಗರ ಸಾಮ್ರಾಜ್ಯ ಸ್ಮಾರಕೋತ್ಸವ

ಶ್ರೀ ಶಂಕರಾಚಾರ್ಯರ ಅಧ್ಯಕ್ಷ ಭಾಷಣ

20 ನೇ ತಾರೀಖು ಬಹಳ ವಿಜೃಂಭಣೆಯಿಂದ ಡಾ॥ ಕುರ್ತುಕೋಟಿ (ಶ್ರೀ ಶಂಕರಾಚಾರ್ಯ)ರವರ ಅಧ್ಯಕ್ಷತೆಯಲ್ಲಿ ಹಂಪೆಯಲ್ಲಿ ಪ್ರಾರಂಭವಾಯಿತು. ಅವರ ಅಧ್ಯಕ್ಷ ಭಾಷಣದ ಸಾರಾಂಶ —

"ವಿಜಯನಗರದ ಸಾಮ್ರಾಜ್ಯದ ಇತಿಹಾಸದಿಂದ ನಾವು ಹಿಂದೂಗಳು ಒಟ್ಟಿನಲ್ಲಿರುವುದನ್ನು ತಿಳಿಯಬೇಕು. ನಮ್ಮಲ್ಲಿ ನವ ಸಾಮರ್ಥ್ಯದಲ್ಲಿ ವಿಶ್ವಾಸವಿರುವುದನ್ನು ಅರಿಯಬೇಕು. ನಾವು ದೇಶಕ್ಕೆ ಒಳಗಾಗಬಾರದು. ಕೃತ್ರಿಮ ಮಯವಾದ ಕ್ಷೇಮಕ್ಕೂ ಸ್ನೇಹಕ್ಕೂ ಎಡೆಗೊಡಕೂಡದು. ನಾವು ವಿಶಾಲ ದೃಷ್ಟಿಯುಳ್ಳವರಾಗಬೇಕು. ನೆರೆಹೊರೆಯಲ್ಲಿ ಮತ್ತೆ ಪರರು ಜಗತ್ತಿನಲ್ಲಿ ನಡೆಯುತ್ತಿರುವ ಕಾರ್ಯಗಳನ್ನೂ ಸೂಕ್ಷ್ಮವಾಗಿನೋಡದರೂ ಸಾವಕಾಶವಿಲ್ಲದೆ ತಿಳಿಯುತ್ತಿರಬೇಕು."

"ವಿಜಯನಗರದ ಕೀರ್ತಿಯು ಕರ್ನಾಟಕಕ್ಕೆ ಸೇರಿದುದೇ ಅಲ್ಲ ಇಡೀ ಭಾರತಕ್ಕೆ ಸೇರಿದುದು. ಹಿಂದೂ ಧರ್ಮಕ್ಕೆ ಸೇರಿದುದು. ನಾನು ಕರ್ಣಾಟಕದಲ್ಲಿ ಜನ್ಮತಾಳಿದವನು. ವಿಜಯನಗರದ ಸಾಮ್ರಾಜ್ಯ ಸ್ಥಾಪನೆಗೆ ಕಾರಣರಾದ ವಿದ್ಯಾರಣ್ಯರ ಅಂಚಲಿ ಒಬ್ಬನಾದ ಶಿಷ್ಯನು. ಆದರೆ ನಾನು ಮೊದಲು ಭಾರತೀಯನೆಂದು ಹೇಳಿಕೊಳ್ಳಲು ಆಶಿಸುತ್ತೇನೆ. ಶಂಕರಾಚಾರ್ಯ, ಮಧ್ವಾಚಾರ್ಯ, ರಾಮಾನುಜಾಚಾರ್ಯ, ವಲ್ಲಭ ಇವರಲ್ಲೆಲ್ಲಾ ನನಗೆ ವಿಶೇಷ ಗೌರವವುಂಟು. ಆದರೆ ಇದರಿಂದ ವಿಜಯನಗರವನ್ನೂ ವಿದ್ಯಾರಣ್ಯರನ್ನೂ ಮರೆಯುತ್ತೇನೆಂದು ಭಾವಿಸಕೂಡದು. ವಿಜಯನಗರ ಸ್ವಾತಂತ್ರ್ಯ ಜ್ಞಾನಕ್ಕೆ, ಪಾಂಡಿತ್ಯಕ್ಕೆ ವಿಶೇಷ ಪುರಸ್ಕಾರವು ದೊರೆತದ್ದರಿಂದಲೇ, ಪ್ರಜಾಕ್ಷೇಮವು ನಿರ್ವಂಚನೆಯಿಂದ ನಡೆದುದರಿಂದಲೇ, ಧರ್ಮ ಪರಿಪಾಲನೆಯು ನಿಷ್ಪಕ್ಷಪಾತವಾಗಿದ್ದುದರಿಂದಲೇ, ಅದು ಮಹಾ ಸಾಮ್ರಾಜ್ಯವಾಯಿತು. ಅಂದಿನ ಜನರಿಗೆ ಶಿಕ್ಷಣ ಸೌಕರ್ಯವಿತ್ತು. ಸಂಸ್ಕೃತಿಯಲ್ಲಿ ಸಂತೋಷವಿತ್ತು. ಜ್ಞಾನಾರ್ಜನೆಯಲ್ಲಿ ಆಸಕ್ತಿಯಿತ್ತು. ಸೌಖ್ಯದಲ್ಲಿ ತೃಪ್ತಿಯಿತ್ತು. ಮೇಲಾಗಿ ದೇಶದ ಕೀರ್ತಿಯಲ್ಲಿ ವಿಶೇಷ ಉತ್ಸಾಹವಿತ್ತು."

"ಆ ಕಾಲದಲ್ಲಿ ಮಹಮ್ಮದೀಯ ಮತ್ತು ಬಹಮನೀ ರಾಜ್ಯಗಳ ಒತ್ತಡದಲ್ಲಿ ಸಿಕ್ಕಿ ನಶಿಸಿ ಹೋಗುತ್ತಿದ್ದ ಸನಾತನ ಧರ್ಮವನ್ನು ರಕ್ಷಿಸುವ ಭಾರವು ವಿಜಯನಗರದ ಪಾಲಿಗೆ ಬಂತು. ಅದನ್ನು ಯುಕ್ತವಾಗಿ ನಿರ್ವಹಿಸಿಯೂ ಆಯಿತು. ಅದರ ಫಲವನ್ನು ನಾವೂ ಅನುಭವಿಸುತ್ತಲೂ ಇದ್ದೇವೆ. ಅಂದು ಉಳಿದ ಹಿಂದೂ ಸಂಸ್ಕೃತಿಯೇ ನಾವು ಈಗ ಹೊಂದಿರುವುದು. ಅಂದಿನ ಮಹಾ ಪುರುಷರು ಸಾರಿ ಹೇಳಿರುವ ವಿಷಯವನ್ನೇ ನಾವು ನಮ್ಮ ಜೀವನದಲ್ಲಿ ಅನುಷ್ಠಾನಗೊಳಿಸಲು ಪ್ರಯತ್ನಪಡುತ್ತಿರುವುದು, ಅನುಷ್ಠಾನಗೊಳಿಸಿದವರಲ್ಲಿ ಸೌಖ್ಯವನ್ನನುಭವಿಸುತ್ತಿರುವುದು"

ಫೈಜಪುರ್ ಕಾಂಗ್ರೆಸ್ಸಿಗೆ ಮೈಸೂರಿನ ಪ್ರತಿನಿಧಿಗಳು

ಮೈಸೂರಿನಿಂದ ಶ್ರೀಯುತರುಗಳಾದ ತಗರಂ ರಂಗಯ್ಯ, ತಗಡೂರು ರಾಮಚಂದ್ರರಾವ್, ಸೂರ್ಯನಾರಾಯಣ ಪಂಡಿತ್, ಎಂ. ಎನ್. ಜೋಯಿಸ್, ನಾರಾಯಣರಾವ್, ಗುಪ್ತ, ಚಂದೂರ್ ಸಿದ್ಧಸಾಧಕಂತ್ ಸಿದ್ಧಲಿಂಗಯ್ಯ ಮತ್ತು ಇನ್ನೂ ಕೆಲವರು ಫೈಜಪುರಕ್ಕೆ ಮೈಸೂರಿನ ಕಾಂಗ್ರೆಸ್ ಪ್ರತಿನಿಧಿಗಳಾಗಿ ಹೋಗಿದ್ದಾರೆ.

ಮೈಸೂರಿನಲ್ಲಿ ನ್ಯೂಸ್ ಪಿಕ್ಚರ್

ಶ್ರೀ॥ ಜಿ. ವಿ. ಈಶ್ವರರವರು ಮೈಸೂರಿನ ಉತ್ಸಾಹೀ ತರುಣರು. ಲಂಡನ್ ಫಿಲ್ಮ್ ಕಂಪೆನಿಯವರು ಮೈಸೂರಿನಲ್ಲಿದ್ದಾಗ ಇವರು ಅಲ್ಲಿ ಉತ್ತಮ ಶಿಕ್ಷಣವನ್ನು ಪಡೆದರು. ಈಗ ನಮ್ಮ ಸಂಸ್ಥಾನದಲ್ಲಿ ನ್ಯೂಸ್ ಪಿಕ್ಚರುಗಳನ್ನು ತಯಾರಿಸುವ ಉದ್ಯಮದಲ್ಲಿ ಆಸಕ್ತರಾಗಿದ್ದಾರೆ. ಇವರಿಗೆ ಜನಗಳ ಸಹಾನುಭೂತಿ ಮತ್ತು ಸರ್ಕಾರದವರ ಸಹಕಾರ ದೊರಕುವುದೆಂದು ನಂಬಲಾಗಿದೆ. ಇದುವರೆಗೆ ಭಾರತದಲ್ಲಿ ಈ ತರಹ ಉದ್ಯಮಕ್ಕೆ ಯಾರೂ ಮುಂದೆ ಬಂದಿಲ್ಲ. ಇದ ಮೈಸೂರಿನವರು ಹೆಮ್ಮೆಪಡುವ ವಿಚಾರ.

ಮೈಲಾರರಾಯರ ನಿಧನ

ರಾ॥ ಡೆಪ್ಯುಟಿಕಮಿಷನರಾಗಿದ್ದ ಶ್ರೀ॥ ಕೆ. ಎಂ. ಮೈಲಾರರಾಯರು ತಾ॥ 25 ರ ಬೆಳಗ್ಗೆ ದೈವಾಧೀನರಾದರೆಂದು ತಿಳಿಸಲು ತುಂಬಾ ವಿಷಾದಪಡುತ್ತೇವೆ. ಇವರು ತಮ್ಮ ಅಧಿಕಾರದ ಕಾಲದಲ್ಲಿ ತಮ್ಮ ಶಕ್ತಿ ಮತ್ತು ನ್ಯಾಯದಿಂದ ಪ್ರಭುಗಳ ಮೆಚ್ಚಿಗೆಯನ್ನು ಮತ್ತು ಜನಗಳ ಪ್ರೀತಿಯನ್ನು ಗಳಿಸಿದ್ದರು. ಇವರ ಆತ್ಮಕ್ಕೆ ಭಗವಂತನು ಶಾಂತಿಯನ್ನೀಯಲೆಂದು ಪ್ರಾರ್ಥಿಸುತ್ತೇವೆ.

ತಿದ್ದುಪಡಿ

ದಯವಿಟ್ಟು ವಾಚಕರು ಆರನೇ ಪೇಜು ಎರಡನೇ ಕಾಲಂನಲ್ಲಿರುವ "ನೋಟು ಸಾಧ್ಯಗಳು ಇರಲಿಲ್ಲ" ಎಂಬುದನ್ನು "ವಾದ್ಯ ಘೋಷವಾಗಲೀ ಅಥವಾ ಮೋಟಾರುಗಳ ಆಡಂಬರವಾಗಲೀ ಇರಲಿಲ್ಲ" ಎಂದೂ ಅದೇ ಕಾಲಂನಲ್ಲಿ "ಉದಾರ ಸಹಾಯ" ಎಂಬ ಶಿರೋನಾಮೆಯಲ್ಲಿ 100 ರೂ ಎಂಬುದಕ್ಕೆ ಬದಲಾಗಿ 1,000 ರೂ. ಎಂದೂ ಓದಿಕೊಳ್ಳಬೇಕಾಗಿ ಪ್ರಾರ್ಥನೆ

ಭಾರತದ ಆದರ್ಶ ವ್ಯಕ್ತಿಗಳು.

ಪಂ॥ ಮಾಳವೀಯರು.

ಫೈಜಪುರದಲ್ಲಿ ಗ್ರಾಮ ಕೈಗಾರಿಕೆಯ ಪ್ರದರ್ಶನ.

ಮಹಾತ್ಮರ ಪ್ರಾರಂಭ ಭಾಷಣ.

25 ನೇ ತಾ॥ ಮಹಾತ್ಮಾ ಗಾಂಧಿಯವರು ಅಖಿಲ ಭಾರತ ಗ್ರಾಮ ಕೈಗಾರಿಕೆಗಳ ಸಂಘದ ಆಶ್ರಯದಲ್ಲಿ ಏರ್ಪಡಿಸಲಾಗಿರುವ ಕಾಂಗ್ರೆಸ್ ಸ್ವದೇಶೀ ಪ್ರದರ್ಶನವನ್ನು ತೆರೆದರು

ಮಹಾತ್ಮರು ಸುಮಾರು ಒಂದು ಘಂಟೆ ಕಾಲ ಹಾಸ್ಯಯುತವಾದ ಭಾಷಣವನ್ನು ಮಾಡುತ್ತಾ ಸ್ವದೇಶೀ ಪ್ರದರ್ಶನಗಳು ಬರೀ ತಮಾಷೆಯಲ್ಲ; ಅವುಗಳನ್ನು ಏರ್ಪಡಿಸುವ ಉದ್ದೇಶ ಹಳೇ ಗ್ರಾಮ ಕೈಗಾರಿಕೆಗಳನ್ನು ಪುನರುದ್ಧಾರ ಮಾಡುವುದಕ್ಕಾಗಿ, ಎಂದು ಹೇಳಿ ಮುಂದುವರಿಯುತ್ತಾ ಮಹಾತ್ಮರು ಹೀಗೆಂದು ಹೇಳಿದರು

"ನಾನು ಒಬ್ಬ ಗ್ರಾಮಸ್ಥನು ನಗರದಲ್ಲಿ ಹುಟ್ಟಿ ಬೆಳೆದಿದ್ದರೂ ನನ್ನ ಮನಸ್ಸು ಪೂ ಗ್ರಾಮದ ಕಡೆಯೇ ಇದೆ ನನಗೆ ಮಲೇರಿಯಾ ಬಂದಿದ್ದರೂ ನಾನು ಸೇಗಾಂ ಗ್ರಾಮದಲ್ಲಿ ಸೌಖ್ಯದಿಂದಲೇ ಇದ್ದೇನೆ. ನನಗೆ ಈಗ ಮಲೇರಿಯಾ ಇಲ್ಲ ಈಗ ಎಲ್ಲರೂ ನಾನು ಹೆಚ್ಚು ಬಲಯುತನಾಗಿದ್ದೇನೆಂದು ಹೇಳುತ್ತಾರೆ"

ಶ್ರೀ॥ ಸುಭಾಸ ಬೋಸರವರು

ಜನಗಳು ನನ್ನ ನಾಯಕತ್ವದಲ್ಲಿ ಪಂಡಿತ ನೆಹರು ರವರ ಮೇಲೂ, ವಲ್ಲಭಭಾಯಿ ಮೇಲೂ ನಾನು ಕಾರಣನೆಂದು ಹೇಳುತ್ತಾರೆ ಆದರೆ ನಾನು ಹಾಗೆ ತಿಳಿದುಕೊಂಡಿಲ್ಲ. ನನ್ನ ಪ್ರೀತಿ ಸೆಳೆದಿದ್ದು ಗ್ರಾಮದಲ್ಲಿ, ಪ್ರಯುಕ್ತ ನನ್ನ ದೇಹವು ಈಗ ಇಲ್ಲಿರುವುದರಿಂದ ನಾನು ಪ್ರದರ್ಶನಕ್ಕಾಗಿ ಸಂತೋಷಿಯಾಗಿಯೂ ಇದ್ದೇನೆ ಎಂದರು.

ಭಾಷಣವನ್ನು ಮುಂದುವರಿಸುತ್ತಾ, ಗಾಂಧಿಜಿಯವರು 'ಗ್ರಾಮ ಪ್ರದೇಶಗಳ ಮಧ್ಯೆ ಫೈಜಪುರದಲ್ಲಿ ಕಾಂಗ್ರೆಸ್ ಅಧಿವೇಶನವನ್ನು ನಡೆಸುವುದಕ್ಕೂ, ಸಂಪೂರ್ಣವಾಗಿ ಗ್ರಾಮ ವಸ್ತುಗಳ ಪ್ರದರ್ಶನವನ್ನು ಏರ್ಪಡಿಸುವುದಕ್ಕೂ ಜವಾಬ್ದಾರಿ ವಹಿಸಿದವನು ನಾನೇ. ನಾನು ಚರಕ ಸಂಘದ ಅ

ಪ್ರತಿನಿಧಿಯಾದ ಆದ ಪರದೇಶದ ರಾಗಳೇ ಅಥವ ಡಿಪ್ರೆಷನ್ನಿನರಾಗಲೀ ಅವರ ಗಳ ಕೈಗಳಿಂದ ಇವು ಮಾಡಲ್ಪಟ್ಟವಲ್ಲ. ಅವರ ಕೈಗಳಿಗಿಂತ ಹೆಚ್ಚು ಶಕ್ತಿಯನ್ನು ಹೊಂದಿರುವ ಗ್ರಾಮದ ಕೈಗಳಿಂದ ಮಾಡಲ್ಪಟ್ಟವು' ಎಂದು ಗಾಂಧೀಜಿಯವರು ಪ್ರದರ್ಶನದಲ್ಲಿದ್ದ ಕಬ್ಬಿಣದ ಸಾಮಾನುಗಳು, ತೊಗಲು, ಬಟ್ಟೆ ವಿಧವಿಧವಾದ ಕಾಗದಗಳು ಇತ್ಯಾದಿ ಪದಾರ್ಥಗಳನ್ನು ತೋರಿಸಿದರು

ಆಯುಧ ಎಂಬ ಪದಕ್ಕೆ ಗಾಂಧೀಜಿಯವರು ಉಪಯೋಗಿಸಿದ ಒಂದು ಅರ್ಥದ ನನ್ನು ಜನರು ತಿಳಿದು ಸಂತೋಷ ಪಟ್ಟದನ್ನು ಸೂಚಿಸಿದರು. ಆಗ ಗಾಂಧೀಜಿಯವರು "ನನಗೆ ಒಂದು ಕೋಟಿ ಆಥವ ಹತ್ತು ಬಿಲಿಯನ್ನಾದರೂ ನನ್ನ ಸಹ

ಮಹಾತ್ಮ ಗಾಂಧಿಯವರು.

ಪ್ರತ್ಯಾಗಿ ಗ್ರಾಮ ಕೈಗಾರಿಕೆಗಳ ಸಂಘದ ಮುಂದಾಳುಗಳಾದವರಿಂದ ಸ್ವಲ್ಪ ಕೆಲಸಗಾರರು ಸಿಗುವುದರಿಂದ ನನ್ನ ಬುದ್ಧಿವಾದವನ್ನು ಕೇಳುತ್ತಿದ್ದಾರೆ' ಎಂದರು

ಮಹಾತ್ಮರು ಪ್ರದರ್ಶನವನ್ನೇರ್ಪಡಿಸಲು ಬಹು ಶ್ರಮವಹಿಸಿದ ಶಾಂತಿನಿಕೇತನದ ಕಲಾಕೋವಿದರಾದ ಶ್ರೀ ನಂದಲಾಲ್ ಬೋಸರವರನ್ನು ಪ್ರಶಂಸಿಸುತ್ತ 'ಗ್ರಾಮಕೈಗಾರಿಕೆಗಳ ಪ್ರದರ್ಶನದ ಹಿಂದಿರುವ ಕಲೆಯನ್ನು ನಂದಲಾಲರವರು' ಎಂದರು

ಪ್ರದರ್ಶನವನ್ನು ಕುರಿತು ಗಾಂಧೀಜಿಯವರು ಪ್ರದರ್ಶನವು ತಮಾಷೆಯಲ್ಲ. ಅದರ ಒಂದು ಆಟದ ಸಾಮಾನಲ್ಲ ಹಳೇ ಗ್ರಾಮ ಕೈಗಾರಿಕೆಗಳನ್ನು ಪುನರುದ್ಧಾರ ಮಾಡುವುದೇ ಅದರ ಉದ್ದೇಶ ಕೈಗಳಿಂದ ಕೆಲಸ ಮಾಡುವುದಕ್ಕೆ ಅವ

ಳು ಇನ್ನೂ ಹೊಸದಾಗಿಯೇ ಇವೆ ಅವು ಯಾವಾಗಲೂ ಸಾರ್ಥಕ್ಯವೆಂದು ಇಲ್ಲವೇ ಇಲ್ಲ ಎಂದರು

ಶಿವಾಜಿ ದ್ವಾರದಲ್ಲಿ ಅಭೂತಪೂರ್ವವಾದ ಸ್ವಾಗತ

25 ನೇ ತಾ॥ ಸುಮಾರು 5000 ಮಂದಿ ಸ್ವಯಂಸೇವಕರು ಬಹಳ ಉತ್ಸಾಹದಿಂದ ತಿಲಕ ನಗರಕ್ಕೆ ಬಾಲ್ಕದಿಗೆಯಿಂದ ಕೊಡಲಿ ಮತ್ತು ಸುತ್ತಿಗೆ ಚಿತ್ರಿತವಾದ ಕೆಂಪು ಬಣ್ಣದ ಪತಾಕೆಗಳೊಡನೆ ಶಿವಾಜಿ ದ್ವಾರದ ಮೂಲಕ ಪ್ರವೇಶಿಸಿದರು.

ಈ ಸಮೂಹದವರು ತಿಲಕ್ ನಗರವ ಪ್ರವೇಶಿಸುತ್ತಲೇ ಅವರನ್ನು ಪಂ॥ ಜವಾಹರಲಾಲ್, ಎಂ. ಎನ್. ರಾಯ್ ಶಂಕರ ರಾವ್ ದೇವ್, ಆಚಾರ್ಯ ನರೇಂದ್ರ

ಶ್ರೀಮತಿ॥ ಸರೋಜನಿಯವರು.

ದೇವ್, ಶಿವನಾಥ ಬ್ಯಾನರ್ಜಿ, ಎಸ್ ಎ ಡಾಂಗೆ ಮತ್ತು ಇತರರು ಕಾಂಗ್ರೆಸ್ ದ್ವಾರದಲ್ಲಿ ಸ್ವಾಗತಿಸಿದರು.

ಪ್ರೊಫೆಸರ್ ರಂಗಾರಾವ್ ರವರು ಸಮೂಹವನ್ನುದ್ದೇಶಿಸಿ ಭಾಷಣ ಮಾಡುತ್ತಾ ಹೀಗೆಂದರು—

"ವೀರ ಸಾಹಸಿಗಳಾದ ನಮ್ಮ ಕಿಸಾನ್ ಒಡನಾಡಿಗಳು ಇನ್ನೂರು ಮೈಲಿಗಳ ನಡೆದು ಇಲ್ಲಿಗೆ ಬಂದಿದ್ದಾರೆ. ಅವರ ಸ್ವಾಗತಿಸಲು ನನಗೆ ಮಹಾ ಆನಂದವಾಗಿದೆ ಇಂತಹ ಕ್ರಾಂತಿಕಾರಕ ಯುವಕರನ್ನು ಕಾಂಗ್ರೆಸ್ಸು ಸ್ವಾಗತಿಸುವುದರಿಂದ ಪೂರ್ಣ ಸ್ವರಾಜ್ಯ ಲಭಿಸುತ್ತದೆ ಹೇಳುತ್ತೇನೆ ಇವರೆಲ್ಲಾ ಕಿಸಾನ್ ಒಡನಾಡಿಗಳನ್ನು ಮಹಾತ್ಮರ ಪರವಾಗಿ ಅಭಿನಂದಿಸುತ್ತೇನೆ ಎಂದರು.

ಶ್ರೀ ರಂಗರಾವ್‌ರವರು ಸಮೂಹವನ್ನು ಸ್ವಾಗತಿಸಿದ ನಂತರ ಕಾಂಗ್ರೆಸ್ ಅಧ್ಯಕ್ಷ ಪಂಡಿತ ಜವಾಹರಲಾಲರು ಅವರನ್ನು ಮಾತಾಡಿಸಿದರು

"ಇನ್ನೆರಡು ದಿವಸ ಭಾಷಣ ಮಾಡುವವರಿಗೂ ನಾವು ನಿಮ್ಮನ್ನುದ್ದೇಶಿಸಿ ಭಾಷಣ ಮಾಡುವುದರಿಂದ ಈಗ ನಿಮ್ಮನ್ನು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇನೆ" ಎಂದರು



ಶ್ರೀ॥ ವಲ್ಲಭಾಯಿಯವರು

ಮಂಡ್ಯದ ವರ್ತಮಾನ

ಈ ಪಟ್ಟಣವು ಅಭಿವೃದ್ಧಿಗೆ ಬರುತ್ತಿರುವುದು ಸಕಲರಿಗೂ ತಿಳಿದ ವಿಷಯವಾಗಿದೆ ಈ ಕೆಳಗಿನ ಅಂಶಗಳಿಂದ ಈ ಪುರದ ಜನರು ಮತ್ತು ಪುರಸಭೆಯವರೂ ಮೇಲ್ಕಂಡ ಅಂಶದಲ್ಲಿ ಯಾವರೀತಿ ಕೆಲಸಕಾರ್ಯವನ್ನು ಮಾಡುತ್ತಿರುವರೆಂದು ತಿಳಿಯುತ್ತದೆ

೧ ಈ ಪುರದಲ್ಲಿ ಅವಶ್ಯಕವಾಗಿರುವ ಮೆಟರ್ನಿಟಿ ಮತ್ತು ಶಿಶು ಸಂರಕ್ಷಣಾದ ಆಸ್ಪತ್ರೆ ಹೈಸ್ಕೂಲು ಇವುಗಳ ಕಟ್ಟಡಗಳಿಗೆ ಫಂಡ್ ಅನೇಕ ಮಹಾತ್ಮರು ಸಹಾಯ ಮಾಡಲು ಸಿದ್ಧವಾಗಿರುವರು

೨ ಇಲ್ಲಿನ ಪೌರಸಭೆಯು ಊರಿನ ರಸ್ತೆ ಚರಂಡಿಗಳ ರಿಪೇರಿ ಮತ್ತು ಮಾರ್ಕೆಟು ಇವುಗಳ ವಿಚಾರದಲ್ಲಿ ಶ್ರದ್ಧೆಯಿಂದ ಕೆಲಸಮಾಡುತ್ತಿರುವನು

೩ ಇಲ್ಲಿನ ಹೊಸ ಬಡಾವಣೆಯಲ್ಲಿ ಪ್ರಾಥಮಿಕ ಪಾಠಶಾಲೆಯ ಸ್ಥಾಪನೆ ಮೈಸೂರು ಸಕ್ಕರೆ ಕಾರ್ಖಾನೆಯ ಅಧಿಕಾರಿಗಳ ಮತ್ತು ಕೂಲಿಗಳ ವಾಸಸ್ಥಳದಲ್ಲಿ ಒಂದು ಪಾಠಶಾಲೆಯನ್ನು ಕಾರ್ಖಾನೆಯವರು ಸ್ಥಾಪಿಸಿರುವುದು ಸ್ತೋತ್ರಾರ್ಹವಾದ ಸಂಗತಿಯಾಗಿದೆ

೪ ದಿನ ದಿನಕ್ಕೆ ಕಟ್ಟಡಗಳು ಹೆಚ್ಚುತ್ತಾ ಹೋಗುತ್ತಿದ್ದರೂ, ನಾಗರಿಕರಿಗೋಸ್ಕರ ಕಟ್ಟಲ್ಪಡುತ್ತಿರುವುದು ಇದೇ ರೀತಿ ಇನ್ನೂ ಈ ಪುರವು ಪ್ರತಿನಿತ್ಯವೂ ಅಭಿವೃದ್ಧಿಗೆ ಬರವುದಕ್ಕೆ ಸಂಶಯ ವಿಲ್ಲವೆಂದು ಹೇಳಬಹುದು

ಇತರೆ ಕೆಲವು ವಿಷಯಗಳಲ್ಲಿ ಮಾತ್ರ ಈಗಿನ ಪುರಸಭೆಯವರು ಮತ್ತು ಆ ವಿಷಯಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಗಮನ ಕೊಡುವರೆಂದು ನಂಬಿರುತ್ತೇನೆ.

ಇಲ್ಲಿನ ರೈಲ್ವೆ ಸ್ಟೇಷನ್ ರಸ್ತೆಯಲ್ಲಿರುವ ಚರಂಡಿಯ ಹತ್ತಿರ, ಹೊಸಹಳ್ಳಿ ರಸ್ತೆ, ಊರಿನ ಮಧ್ಯಭಾಗದಲ್ಲಿ ಕೆಲವು ಸ್ಥಳಗಳಲ್ಲಿ ಅಂದರೆ ಪ್ರಾಥಮಿಕ ಪಾಠಶಾಲೆಯ ಹತ್ತಿರ ಇರುವ ಚರಂಡಿಯ ಹತ್ತಿರದಲ್ಲಿ ಸಾಮಾನ್ಯವಾಗಿ ಎಲ್ಲರೂ ತಿರುಗಾಡುವಾಗ ಅವರು ವಾಸನೆಯಿಂದ ಮೂಗನ್ನು ಮುಚ್ಚಿಕೊಂಡು ಓಡಾಡಬೇಕಾಗಿದೆ ಈ ವಿಚಾರದಲ್ಲಿ ಅದಕ್ಕೆ ಸಂಬಂಧಪಟ್ಟವರು ಗಮನಕ್ಕೆ ತಂದುಕೊಳ್ಳುವರೆಂದು ನಂಬಿದ.

ಹೊಸ ಬಡಾವಣೆಯಲ್ಲಿರುವ ಪ್ರಾಥಮಿಕ ಪಾಠಶಾಲೆಯಲ್ಲಿಯ ಬಾಲಕ, ಬಾಲಕಿಯರ ಸಂಖ್ಯೆ ಹೆಚ್ಚಾಗಿದೆ ಆದರೆ ಉಪಾಧ್ಯಾಯರುಗಳ ಸಂಖ್ಯೆ ಬಹಳ ಕಮ್ಮಿಯಾಗಿ ಸ್ವಲ್ಪ ತೊಂದರೆಯಾಗಿದೆ

ಇಲ್ಲಿನ ಮಾಧ್ಯಮಿಕ ಪಾಠಶಾಲೆಯಲ್ಲಿಯೂ ಕೂಡ ಬಾಲಕ, ಬಾಲಕಿಯರ ಸಂಖ್ಯೆ ಹೆಚ್ಚಾಗಿರುವುದು ಆದರೆ ಇಲ್ಲಿ ಬಾಲಕಿಯರಿಗೆ ಪ್ರತ್ಯೇಕವಾಗಿ ಮಾಧ್ಯಮಿಕ ಶಾಲೆಯು ಅತ್ಯವಶ್ಯಕವಾಗಿದೆ ಈ ವಿಚಾರದಲ್ಲಿಯೂ ಕೂಡ ಅದಕ್ಕೆ ಸಂಬಂಧಪಟ್ಟ ಅಧಿಕಾರಿಗಳು ಗಮನ ಕೊಡಬೇಕಾಗಿ ವಿನಂತಿ

ಪುರವಾಸಿ

ತಾಯಿಯ ಪ್ರೇಮ

ಒಂದು ವರ್ಷದ ಕೆಳಗೆ ಲಂಡನ್ನಿನ ಮಿಸೆಸ್ ವಾಲ್ಟರ್ ವೈಲ್ಸ್ ಎಂಬುವಳು ಒಟ್ಟಿಗೆ ನಾಲ್ಕು ಶಿಶುಗಳನ್ನು ಪ್ರಸುವಿಸಿದಳು ಮಕ್ಕಳು ಹುಟ್ಟುವುದಕ್ಕೆ ಒಂದು ದಿನದ ಮುಂಚೆ ಅವಳ ಮನೆ ವಿಳಾಸ ಯಾರಿಗೂ ಗೊತ್ತಿರಲಿಲ್ಲ ಆ ನಾಲ್ಕು ಮಕ್ಕಳು ಹುಟ್ಟಿದ ಮೇಲೆ ಕೋಟ್ಯಾಂತರ ಜನಕ್ಕೆ ತಿಳಿದಿದೆ

ಈಗ ಆ ಮಕ್ಕಳೆಲ್ಲಾ ದೊಡ್ಡವರಾಗಿ ಬೆಳೆದು ಬಹಳ ಆಕರ್ಷಣೀಯರಾಗಿದೆ ಲಂಡನ್ನಿನ ಒಬ್ಬ ಸ್ತ್ರೀಯು ೫ ಸಾ 10,000 ಪೌಂಡುಗಳನ್ನು ಕೊಡುವುದಾಗಿಯೂ ಅದಕ್ಕೆ ಬದಲಾಗಿ ಆ ತಾಯಿಯು ಒಂದು ಮಗುವನ್ನು ಕೊಡಬೇಕೆಂದು ಕೇಳಿದಳು ಅದಕ್ಕೆ ರೋಷಗೊಂಡು ವಾಲ್ಟರಳು ಉತ್ತರ ಕೊಟ್ಟದ್ದೇನೆಂದರೆ "ಬ್ಯಾಂಕ್ ಆಫ್ ಇಂಗ್ಲೆಂಡಿನಲ್ಲಿರುವ ಚಿನ್ನವನ್ನೆಲ್ಲಾ ಕೊಟ್ಟರೂ ನಾನು ಒಂದು ಶಿಶುವನ್ನೂ ಸಹ ಬಿಟ್ಟಿರಲಾರೆ ಇದಲ್ಲವೇ ಪುತ್ರ ವಾತ್ಸಲ್ಯ.

ಮಾರ್ಕೊನಿಯವರ ಅದ್ಭುತ ಸಾಹಸ.

ವೈರ್‌ಲೆಸ್‌ಅನ್ನು ಕಂಡುಹಿಡಿದ ಸುಪ್ರಸಿದ್ಧ ವೈಜ್ಞಾನಿಕರಾದ ಮಾರ್ಕೋನಿಯವರು ಹೊಸದಾಗಿ ಮಾರ್ಕೋನಿ ವೇವ್ಸ್ ಎಂಬುವನ್ನು ಕಂಡುಹಿಡಿದಿದ್ದಾರೆ ಇದರ ಸಹಾಯದಿಂದ ಒಂದು ಪದವನ್ನು ಉಚ್ಛರಿಸಿದರೆ ಅದನ್ನು ಒಂದು ಸೆಕೆಂಡಿನಲ್ಲಿ ಪ್ರಪಂಚದ ಏಳು ಭಾಗಗಳಲ್ಲಿ ಕೇಳಬಹುದು

ಸಿನಿಮಾ ತಾರೆಗೆ ಹೆದರಿಕೆ ಪತ್ರ.

ಹಾಲಿವುಡ್ಡಿನ ಪ್ರಸಿದ್ಧ ಸಿನಿಮಾ ಒಕ್ಟರ್ ಫ್ರೆಡ್ಡಿ ಎಂಬ ಹುಡುಗನನ್ನು 10,000 ಪೌಂಡುಗಳ ಕೊಡದೆ ಹೋದರೆ ಅಪಹರಿಸುವೆವೆಂದು ಅವನ ತಂದೆಗೆ ಒಂದು ಹೆದರಿಕೆ ಪತ್ರ ಬಂದಿದೆ ಸ್ಪೆಷಲ್ ಪೋಲೀಸರು ಆ ಹುಡುಗನನ್ನು ರಕ್ಷಿಸಲು ನೇಮಿಸಲ್ಪಟ್ಟಿದ್ದಾರೆ

ಪ್ರೇಮದ ಕಾಣಿಕೆ.

ಸುಂದರಾಂಗಿ ಲಲಿತ ಕಲಾ ದಾಲ ಎಂಬ ನರ್ತಕಿಯು ಮಸ್ಸಿಕೋ ಇಂದ ಲಂಡನ್ನಿಗೆ ತಪ್ಪಿಸಿಕೊಂಡು ಬಂದಿದ್ದಾಳೆ ಇವಳನ್ನು ಅಲ್ಲಿಯ ಕೋಟ್ಯಾಧೀಶ್ವರನು ಮದುವೆಯಾಗಲು ಹಂಬಲಿಸುತ್ತಿದ್ದನು ಆದರೆ ಇವಳು ಅವನನ್ನು ಇಚ್ಛಿಸುವುದಿಲ್ಲ ಅವನೂ ಸಹ ಲಂಡನ್ನಿಗೆ ತನ್ನ ಹಣದ ಚೀಲದೊಡನೆ ಬರುತ್ತಿದ್ದಾನೆ ಪ್ರೀತಿಗೆ ಸಾರೆಯು ಎಂಟ!

ಹಾಡುವ ಕಪ್ಪೆ

ಜಪಾನಿನಲ್ಲಿ ಹಾಡುವ ಕಪ್ಪೆಗಳು ಅನೇಕವಿವೆ ಜೊತೆ ಒಂದಕ್ಕೆ 3000 ರೂ ಬೆಲೆ ತೋಟದ ಕೊಳದಲ್ಲಿ ಇವು ಹಾಡುತ್ತಿದ್ದರೆ ಕೋಗಿಲೆಯ ಮಧುರ ಗಾನದಂತೆ ಇಂಪಾದ ಧ್ವನಿ ಹೊರಡುತ್ತದೆ

ಯೂರೋಪಿನ ಶಸ್ತ್ರ ದೊರೆ

ಯೂರೋಪಿನ ಆಯುಧಗಳ ದೊರೆಯಾಗಿದ್ದ ಸರ್ ಬೆಸಿಲ್ ಜಹರಾಫ್ ಎಂಬ ಕೋಟ್ಯಾಧೀಶ್ವರನು ಕೆಲವು ದಿನಗಳ ಹಿಂದೆ ಕಾಲವಾದನು ಇವನಿಗೆ ಮಕ್ಕಳಿಲ್ಲ ಇವನ ೩ ಕೋಟಿ ಪೌಂಡುಗಳ ಆಸ್ತಿ ಇಬ್ಬರು ಹೆಂಗಸರಿಗೆ ಸೇರುವುದು

ಸರ್ ಬೆಸಿಲ್‌ನನ್ನು ಯೂರೋಪಿನ ಮಿಸ್ಟರಿ ಮನುಷ್ಯನೆಂದು ಕರೆಯುತ್ತಿದ್ದರು ಇವನ ಪೂರ್ವ ಕಥೆ ಮತ್ತು ಜೀವನದ ರಹಸ್ಯ ಯಾರಿಗೂ ಗೊತ್ತಿರಲಿಲ್ಲ ತಾನು ಸಾಯುವವರೆಗೂ ಒಂದು ಪತ್ರವನ್ನು ಒಡೆಯಕೂಡದೆಂದು ಹೇಳಿ ಲಂಡನ್ ಬ್ಯಾಂಕಿನಲ್ಲಿ ಅದನ್ನು ಇಟ್ಟಿದ್ದನು ಆ ಗುಪ್ತವಾದ ಪತ್ರದಲ್ಲಿ ಅವನ ಜೀವನದ ಕೆಲವು ಅಂಶಗಳು ಬರೆಯಲ್ಪಟ್ಟಿವೆ

ಸರ್ ಬ್ಯಾಸಿಲ್ ಬಹಳ ಶಕ್ತಿಯುತನಾದ ಮನುಷ್ಯ ಹೊಳೆ ಹೊಳೆವ ಮೈಕಟ್ಟು, ಬಿಳಿಯ ದಾಡಿ, ತುಂಬಾ ಆಯಾಸಗೊಂಡರ ಕಾಣುವ ಕಣ್ಣುಗಳು ಮತ್ತು ಹೆಚ್ಚು ಆಡಂಬರವಿಲ್ಲದ ಉಡುಪು ಇವುಗಳು ಅವನ ಹತ್ತಿರಕ್ಕೆ ಬರುವವರನ್ನು ಆಶ್ಚರ್ಯಚಕಿತರನ್ನಾಗಿ ಮಾಡುತ್ತಿತ್ತು

ಇವನು ಪ್ರಪಂಚದಲ್ಲಿ ಎಲ್ಲರಿಗಿಂತಲೂ ಹೆಚ್ಚಾಗಿ ಯುದ್ಧದ ಸಾಮಗ್ರಿಗಳನ್ನು ಮಾಡಿದನು ಇದರ ಗುಟ್ಟನ್ನು ಆ ಪತ್ರದಲ್ಲಿ ತಿಳಿಸಿರುವನು ಯುದ್ಧದ ಮಂತ್ರಿಯ ಹೆಂಡತಿಯನ್ನು ಹೊಗಳಿ ತನ್ನ ಕಾರ್ಯವನ್ನು ಸಾಧಿಸುತ್ತಿದ್ದನು

ಬ್ಯಾಸಿಲ್ಲನಿಗೆ ಮಕ್ಕಳನ್ನು ಕಂಡರೆ ತುಂಬಾ ಪ್ರೀತಿ ದೇಶಕ್ಕೆ ಹೋದರೂ ನೋಡಲು ಎಸೊಯಿಟಾರಗಳಿಗೆ ಹೋಗುತ್ತಿದ್ದನು ಅಲ್ಲಿಯ ಅಧಿಕಾರಿಗಳು ಓಡಿಸುವವರಿಗೂ ಅಲ್ಲಿಯೇ ಇರುತ್ತಿದ್ದನು

ಇವನಿಗೆ ಪುಷ್ಪಗಳನ್ನು ಕಂಡರೆ ತುಂಬಾ ಇಷ್ಟ ಬಹಳ ವಿಚಿತ್ರವಾದ ಬಣ್ಣಗಳನ್ನುಳ್ಳ ಹೂಗಳಿಂದ ತೋರುತ್ತಿರುವುದು ಜಹರಾಫಿನಲ್ಲಿ ಇವನ ಮನೆಯ ತೋಟ ಕಾಂತಿಯುಳ್ಳ ಅವನ್ನು ವಿಚಾರಿಸುತ್ತಿತ್ತು

ಮುತ್ತು ಕೊಡುವಾಗ ಕತ್ತು ಸೊಟ್ಟಾಯಿತು

ಇಂಗ್ಲೆಂಡಿನ ರಾಬರ್ಟ್ ಫ್ರಾಂಕ್ಲಿನ್ ಎಂಬ 93 ವಯಸ್ಸಿನ ವೃದ್ಧನು 30 ವರ್ಷಗಳ ಕೆಳಗೆ ತನ್ನ ಹೆಂಡತಿಗೆ ಮುತ್ತಿಡುತ್ತಿರುವಾಗ ಕತ್ತು ಸೊಟ್ಟಾಯಿತು ಅಂದಿನಿಂದ ಇವನು ದಿನಕ್ಕೆ 16 ಮೈಲಿ ದೂರ ನಡೆಯುತ್ತಾ ತನ್ನ ಆರೋಗ್ಯವನ್ನು ಕ್ರಮವಾಗಿಟ್ಟುಕೊಂಡಿದ್ದಾನೆ

ಶ್ರೀ ಹನುಮಜ್ಜಯಂತಿ ಮಹೋತ್ಸವ

ಪದ್ಧತಿಯ ಮೇರೆ ಈ ವರ್ಷವೂ ಮ|| ಆಸ್ಥಾನ ಸಂಗೀತವಿದ್ವಾನ್ ವಿ ದೇವೇಂದ್ರಪ್ಪನವರು ತಾ|| ೨೬—೧೨—೩೬ ರ ಆರಂಭವಾಗಿ ಹತ್ತು ದಿನಗಳ ಪರ್ಯಂತವೂ ಮೈಸೂರು ಇರ್ವಿನ್ ರೋಡಿನಲ್ಲಿರುವ ಮ|| ತಿಮ್ಮಯ್ಯಾ ಶಾಸ್ತ್ರಿ ಛತ್ರದಲ್ಲಿ ಶ್ರೀ ಹನುಮಜ್ಜಯಂತಿಯನ್ನು ನಡೆಸುತ್ತಾರೆ ಇದಕ್ಕೆ ಭಕ್ತ ಮಹಾಜನಗಳೆಲ್ಲರಿಗೂ ಆಹ್ವಾನವುಂಟು

ಅಕ್ಷರಬಂಧ ಸ್ಪರ್ಧೆ ನಂಬರು ೨ ರಲ್ಲಿ ಬಹುಮಾನ ಪಡೆದವರ ಹೆಸರುಗಳು

ಒಂದೂ ತಪ್ಪಿಲ್ಲದ ಎರಡು ಉತ್ತರಗಳಿಗೆ ತಲಾ ೩ ರೂಪಾಯಿ

೧ ಶ್ರೀಮತಿ ಸರೋಜಮ್ಮ, ರೈಲ್ವೆ ಸ್ಟೇಷನ್ ರಸ್ತೆ ಮಂಡ್ಯ. ೨ ಮ|| ಬಿ ಆರ್ ಗೋಪಾಲ ಕೃಷ್ಣಯ್ಯ, ಪ್ಯಾಸು ಫೋನ್ ಹೊಸಬೂದನೂರು

ಒಂದು ತಪ್ಪಿನ ಇಬ್ಬರಿಗೆ ತಲಾ ೧ ರೂ

೧ ಮ|| ಹೆಚ್ ವಿ ನಾಗೇಶರಾಯರವರು ಹುಲ್ಲಹಳ್ಳಿ ೨ ಮ್ಯಾನೇಜರ್ ಸನ್ಮಾರ್ಗದರ್ಶಿ, ೧ನೇ ಕ್ರಾಸ್, ೬ನೇ ಮೇನ್ ರೋಡು ಮಲ್ಲೇಶ್ವರಂ, ಬೆಂಗಳೂರು

ಎರಡು ತಪ್ಪಿನ ೧೮ ಜನರಿಗೆ ತಲಾ ೦—೮—೦ ಆಣೆ

೧ ಮ|| ರಾ|| ಗೌಡ ಬಿ ಸಿ ರೇವಾಚಾರ್ ಸಕ್ಕರೆ ಗಿರಣಿ ಮಂಡ್ಯ ೨ ಎಸ್ ಕಾಳಯ್ಯ, ಸಕ್ಕರೆ ಗಿರಣಿ ಮಂಡ್ಯ. ೩ ಎಂ ಸಿ ಅಣ್ಣಯ್ಯಪ್ಪ ಟಾಪಿ ಕಂಟ್ರಾಕ್ಟರ್ ಮಂಡ್ಯ ೪ ಬಿ ಸುಂದರಸಿಂಗ್ ಸಿಂಗರ್ ಏಜೆಂಟ್ ಮಂಡ್ಯ ೫ ಶ್ರೀಮತಿ ಆರ್ ಸುನಂದ C/o ಟಿ ರಾಮಯ್ಯ ಸಬ್‌ಡಿವಿಜನ್ ಆಫೀಸರು ಮಂಡ್ಯ ೬. ಮ|| ರಾ|| ಗೌಡ ಕೆ ರಾಮರಾವ್ ೭ ಉಡುಪಿ ಅನಂತವರ್ಧ ಮೈಸೂರು ೮ ಎಂ ಧರ್ಮಪ್ರಕಾಶ ವೈಶ್ಯರ ರಸ್ತೆ ಮೈಸೂರು ೯ ಜಿ ನಾರಾಯಣಶಾಸ್ತ್ರಿ, ಕೆಂಪುನಂಜಮ್ಮ ಅಗ್ರಹಾರ ೬೦ ಮೈಸೂರು ೧೦ ಎ ಕೆ ಸುಬ್ಬರಾವ್ ೯೩೪ ಲಕ್ಷ್ಮೀಪುರಂ ಮೈಸೂರು ೧೧ ಶ್ರೀಮತಿ ಕೆ. ಕಮಲಾಬಾಯ್ D/o ಕಲ್ಯಾಣಿ ಶ್ರೀನಿವಾಸಚಾರ್ ಆರ್ಟಿಸ್ಟ್ ಶ್ರೀನಿವಾಸ ಬಜಾರ್ ಬೀದಿ ಬೆಂಗಳೂರು ಸಿಟಿ ೧೨ ಮ|| ರಾ|| ಗಳೇ ಎಸ್ ಶ್ಯಾಮರಾವ್ III ಫಾರಂ, ಸ್ಟೂ ಹೈಸ್ಕೂಲು, ಬೆಂಗಳೂರುಸಿಟಿ ೧೩ ಎಂ ಎಸ್ ವಾಸುದೇವ್, ಅನಂತಭವನ, ಹೊಸಪೇಟೆ, ತುಮಕೂರು ೧೪ ಎಂ ಆರ್ ಚನ್ನಪ್ಪಯ್ಯ C/o ಕೆ ಶ್ರೀಕಂಠಯ್ಯ, ಬಿ ಎ, ಎಲ್ ಎಲ್ ಬಿ ಅಡ್ವೋಕೇಟ್ ತುಮಕೂರು, ೧೫. ಸಿ ಎಸ್ ರಾಮಯ್ಯ, ಎಜೆಂಟ್ ಆಫೀಸು, ಕೃಷ್ಣರಾಜಸಾಗರ ೧೬ ಎ ವಿ ರಾಜರಾವ್, ಮುನಿಸಿಪಲ್ ಆಫೀಸು, ಚಿಕ್ಕನಾಯಕನಹಳ್ಳಿ ೧೭ ವೈ ಎಸ್ ವೆಂಕಟರಂಗಯ್ಯಂಗಾರ್ ಬಿಲ್ ಕಲೆಕ್ಟರ್, ಮುನಿಸಿಪಾಲಿಟಿ ಮಾಂಬಳ್ಳಿ ೧೮ ಸಿ ಕೆ ಕೃಷ್ಣಮೂರ್ತಿ, C/o ಸಿ ಕೆ ಕೃಷ್ಣಯ್ಯಂಗಾರ್ ಕಂಟ್ರಾಕ್ಟರ್, ಯಲಿಯೂರು ೧೯ ಸುಬ್ಬ ನರಸಿಂಹಯ್ಯ C/o ಕೆ ಎನ್ ಸುಬ್ರಹ್ಮಣ್ಯ ಶ್ರೀಕಂಠಪುರಂ, ನಂಜನಗೂಡು

ಇವರುಗಳಿಗೆ ಬಹುಮಾನ ಮುಂದಿನವಾರ ಕಳುಹಿಸಲಾಗುತ್ತೆ

N B —ಮಂಡ್ಯದಲ್ಲಿರುವವರು ಬಹುಮಾನವನ್ನು ಮ್ಯಾನೇಜರ ಆಫೀಸಿನಲ್ಲಿ ಪಡೆಯಬಹುದು ಮ್ಯಾನೇಜರ್,

ಅಕ್ಷರಬಂಧ ಸ್ಪರ್ಧೆ ಮಂಡ್ಯ.

ಒಂದೇಸಲ ರೂ. 50,000 ಗಳಿಸಿರಿ

ಒಂದು ಗ್ರಾಮಫೋನು, ಕೈ ಮತ್ತು ಜೇಬಿನ ಗಡಿಯಾರ, ಮತ್ತು ೧೪ ಕ್ಯಾರೆಟ್ ರೋಲ್ಡ್ ಗೋಲ್ಡ್ ಫೌಂಟನ್ ಪೆನ್ ಉಚಿತ!

(1) ಎಲ್ಲಾ ಚೌಕಗಳನ್ನು ಸರಿಯಾಗಿ ಬರೆದು ಕಳುಹಿಸುವವರಿಗೆ 5,000 ರೂ ಗಳ 8 ಬಹುಮಾನ.

(2) 2 ಚೌಕಗಳನ್ನು ಸರಿಯಾಗಿ ಬರೆದು ಕಳುಹಿಸುವವರಿಗೆ 100 ರೂ. ಗಳ 50 ಬಹುಮಾನ

(3) 1 ಚೌಕವನ್ನು ಸರಿಯಾಗಿ ಬರೆದು ಕಳುಹಿಸುವವರಿಗೆ 10 ರೂ ಗಳ 100 ಬಹುಮಾನ

(4) 25 ಉತ್ತರಗಳನ್ನು ಕಳುಹಿಸುವ ಎಲ್ಲಾ ಉಮೇದುವಾರರಿಗೂ, 30 ರೂಪಾಯಿ ಬೆಲೆ ಬಾಳುವ ಅಂದವಾದ ಗಟ್ಟಿಮುಟ್ಟಾದ 200 ಕೈ ಗಡಿಯಾರಗಳ ಬಹುಮಾನ

ಗ್ಯಾರಂಟಿ— ಮೇಲ್ಕಂಡ ಎಲ್ಲಾ ಬಹುಮಾನಗಳೂ ಗ್ಯಾರಂಟೀಯಾಗಿವೆ, ಸರಿಯಾದ ಉತ್ತರಗಳ ಸಂಖ್ಯೆಗೆ ಸಂಬಂಧವಿಲ್ಲದೆ ಹಂಚಲಾಗುತ್ತೆ. ಅಂದರೆ, ಎಲ್ಲಾ ಸರಿಯಾದ್ದಕ್ಕೆ ರೂ. 5,000 ಗಳೂ 2 ಚೌಕ ಸರಿಯಾಗಿದ್ದರೆ ರೂ 100 ಗಳೂ. 1 ಚೌಕ ಸರಿಯಾಗಿದ್ದಕ್ಕೆ ರೂ 10 ಗಳೂ 25 ಅಥವಾ ಹೆಚ್ಚಾಗಿ ಉತ್ತರ ಕಳುಹಿಸುವವರಿಗೆ ಒಂದು ಕೈಗಡಿಯಾರವೂ ಕೊಡಲಾಗುತ್ತೆ.

(5) ನಮ್ಮ ರಿಜಿಸ್ಟರಿನಲ್ಲಿ 5, 15, 25 ಸಂಖ್ಯೆಯಂತೆ ರಿಜಿಸ್ಟರ್ ಮಾಡಿಕೊಳ್ಳುವ ಉತ್ತರ ಕಳುಹಿಸುವವರಿಗೆ ಒಂದು 14 ಕ್ಯಾರೆಟ್ ರೋಲ್ಡ್ ಗೋಲ್ಡ್ ಫೌಂಟನ್ ಉಚಿತವಾಗಿ ಕೊಡಲಾಗುತ್ತೆ.

(6) ನಮ್ಮ ರಿಜಿಸ್ಟರಿನಲ್ಲಿ 10, 20, 30 ಈ ರೀತಿ ರಿಜಿಸ್ಟರಾಗುವ ಸಂಖ್ಯೆಯ ಉತ್ತರವನ್ನು ಕಳುಹಿಸುವವರಿಗೆ 5 ವರ್ಷ ಗ್ಯಾರಂಟಿಯಾದ ಒಂದು ಜೇಬಿನ ಗಡಿಯಾರ ಕೊಡಲಾಗುತ್ತೆ.

(7) 100, 200, 300 ರಂತೆ ರಿಜಿಸ್ಟರಾಗುವ ಸಂಖ್ಯೆಯ ಉತ್ತರಗಳನ್ನು ಕಳುಹಿಸಿದವರಿಗೆ ಒಂದು ವಿಕ್ಟೋರಿಯಾ ಡಬಲ್ ಸ್ಪ್ರಿಂಗ್ ಗ್ರಾಮಾಫೋನು ಉಚಿತವಾಗಿ ಕೊಡಲಾಗುತ್ತೆ

ಗ್ಯಾರಂಟಿ—ಪ್ರತಿ ಉಮೇದುವಾರನೂ ಪ್ರತಿ ಬಹುಮಾನ ಪಡೆಯಲು ಅವಕಾಶವಿದೆ ಪ್ರತಿ 4 ಸಂಖ್ಯೆಯ ನಂತರ ಒಂದೊಂದು ಬಹುಮಾನ ಕೊಡಬೇಕಾಗಿದೆ. 5 ಉತ್ತರ ಕಳುಹಿಸುವವರು 5 ನೇ ನಂಬರಿನ ಬಹುಮಾನ ಪಡೆಯುವುದು ಖಂಡಿತ, ಮತ್ತು 6 ಮತ್ತು 7 ನೇ ನಂಬರಿನಲ್ಲಿ ನಮೂದಿಸಿರುವ ಬಹುಮಾನ ಪಡೆಯಲು ಹೆಚ್ಚು ಅವಕಾಶವಿದೆ 10 ಉತ್ತರ ಕಳುಹಿಸುವವರು 6 ನೇ ನಂಬರಿನಲ್ಲಿ ನಮೂದಿಸಿರುವ ಬಹುಮಾನ ಪಡೆಯುವುದು ಖಂಡಿತ, ಮತ್ತು 7 ನೇ ನಂಬರಿನ ಬಹುಮಾನ ಪಡೆಯಲು ಅವಕಾಶವಿದೆ. 100 ಅಥವಾ ಹೆಚ್ಚು ಉತ್ತರಗಳನ್ನು ಕಳುಹಿಸುವವರು 7 ನೇ ನಂಬರು ಬಹುಮಾನ ಪಡೆಯುವುದು ಖಂಡಿತ ಈ ರೀತಿ ಪ್ರತಿ ಉಮೇದುವಾರನೂ 5, 6, 7 ನೇ ನಂಬರಿನಲ್ಲಿ ನಮೂದಿಸಿರುವ ಬಹುಮಾನ ಪಡೆಯಲು ಅವಕಾಶವಿದೆ

ನಂ 1

		31
	30	
29		

ನಂ 2

		41
	40	
39		

ನಂ 3

		51
	50	
49		

ಪ್ರವೇಶ ಧನ 1—4—0

ಕಡೆಯ ತಾರೀಖು 10—1—37

ಸೂಚನೆ: ಕಾರ್ಮಿಕರಿಂದಲೂ ವಿದ್ಯಾರ್ಥಿಗಳಿಂದಲೂ ಬರುವ ಉತ್ತರಗಳಿಗೆ ವಿಶೇಷ ಗಮನವನ್ನೂ ಸ್ಪೆಷಲ್ ಬಹುಮಾನಗಳೂ ಕೊಡಲ್ಪಡುವುವು ಸ್ಪೆಷಲ್ ಬಹುಮಾನಗಳು—ಮೇಲ್ಕಂಡ ಬಹುಮಾನಗಳಲ್ಲದೆ ರೂ 1,000 ರೂ 3,000 ರೂ 2,000, ರೂ 1000 ಈ ರೀತಿಯಾಗಿ ಡಿಸೆಂಬರ್ 15, 20, 25 ಜನವರಿ 1 ರೊಳಗಾಗಿ ನಮ್ಮ ಆಫೀಸಿಗೆ ಬರುವ ಒಂದೂ ತಪ್ಪಿಲ್ಲದ ಉತ್ತರವನ್ನು ಕಳುಹಿಸುವವರಿಗೆ ಕೊಡಲಾಗುತ್ತದೆ ಮೇಲ್ಕಂಡ 3 ಚೌಕಗಳಲ್ಲಿನ ಖಾಲೀ ಭಾಗಗಳಲ್ಲಿ ಬೇಕಾದ ಅಂಕಿಯನ್ನು ಉಪಯೋಗಿಸಿ, ನೇರಿಂದ, ಅಡ್ಡಲಾಗಿ, ಮೂಲೆಗಳಿಂದ ಹೇಗೆ ಕೂಡಿದರೂ, 1ನೇ ನಂಬರಿನಲ್ಲಿ ಒಟ್ಟು 90 ಬರುವಹಾಗೂ, 2 ನೆಯದರಲ್ಲಿ 120 ಬರುವಹಾಗೂ, 3 ನೆಯದರಲ್ಲಿ 150 ಬರುವಹಾಗೂ ಮಾಡಬೇಕು ಪ್ರತಿ ಚೌಕದಲ್ಲೂ ಒಂದೊಂದು ಅಂಕಿಯನ್ನು ಒಂದೊಂದೇಸಾರಿ ಉಪಯೋಗಿಸಬೇಕು ಒಬ್ಬೊಬ್ಬರು ಎಷ್ಟೆಷ್ಟು ಉತ್ತರ ಬೇಕಾದರೂ ಸಾಧಾರಣ ಕಾಗದದಲ್ಲಿ ಬರೆದು ಒಂದೇ ಕವರಿನಲ್ಲಿ ಕಳುಹಿಸಬಹುದು 3 ಚೌಕದ ಪ್ರತಿಯೊಂದು ಉತ್ತರಕ್ಕೂ ರೂ 1-4-0 ಪ್ರವೇಶಧನದಂತೆ ಪೋಸ್ಟಲ್ ಆರ್ಡರ್ ಯಾ ಮನಿಯಾರ್ಡರ್ ಮೂಲಕ ಕಳುಹಿಸಿ ಮನಿಯಾರ್ಡರ್ ರಶೀತಿ ಸಹ ಕಳುಹಿಸಬೇಕು. ಇಲ್ಲದಿದ್ದರೆ ಗಮನಕೊಡುವುದಿಲ್ಲ ಉಮೇದುವಾರರ ಹೆಸರು ವಿಳಾಸವನ್ನು ಸ್ಪಷ್ಟವಾಗಿ ಮನಿಯಾರ್ಡರ್ ಕೂಪನ್ನಿನಲ್ಲೂ ಮತ್ತು ಉತ್ತರದ ಕೂಪನ್ನಿನಲ್ಲೂ ಬರೆಯಬೇಕು. ಸಲ್ಲುವ ಉತ್ತರಗಳು ಅಂಕಿಗಳಲ್ಲೂ, ಚೌಕಗಳಲ್ಲೂ ಬ್ಲಾಂಕಿನಲ್ಲಿ ಇಟ್ಟಿರುವ ಉತ್ತರಗಳಿಗೆ ಅಕ್ಷರಶಃ ಸರಿಯಾಗಿರಬೇಕು. ಹೆಚ್ಚು ವಿಧಿಯ ಒಂದು ಬಹುಮಾನವನ್ನು ಒಬ್ಬ ಉಮೇದುವಾರನು ಪಡೆಯಲರ್ಹನಾಗಿದ್ದಾಗ ಪ್ರವೇಶಧನ ವಾಪಸ್ಸು ಮಾಡುವುದಿಲ್ಲ. ಜನವರಿ 15 ನೇ ತಾರೀಖಿನದಿನ ಬಹುಮಾನಗಳು ತೀರ್ಮಾನಿಸಲ್ಪಟ್ಟು, ಕೂಡಲೇ ಪ್ರಕಟಣೆಗೆ ಕಳುಹಿಸಲಾಗುವುದು. ಎಕ್ಸ್ಪ್ರೆಸ್ ಬರವು ಸ್ಟಾಂಪು ಅಂಟಿಸಿದ ಕವರನ್ನು ಕಳುಹಿಸಿದವರಿಗೆ ಮಾತ್ರ ಫಲಿತಾಂಶಗಳು ಕಳುಹಿಸಲಾಗುತ್ತೆ

ಅನೇಕ ಉಮೇದುವಾರರ ಅಪೇಕ್ಷೆಯಂತೆ ಕಡೆಯ ತಾರೀಖನ್ನು ಮುಂದಿನ ಜನವರಿ 10 ಕ್ಕೆ ಬದಲಾಯಿಸಿರುವುದನ್ನು ಎಲ್ಲರೂ ಗಮನಿಸಬೇಕಾಗಿ ಕೋರಿದೆ

ವಿಕ್ಟೋರಿಯಾ ಕಾಂಪಿಟಿಷನ್, ಗಿರಗಾಂ, ಬೊಂಬಾಯಿ ೪

Victoria Competition, Girgaum, Bombay, 4.

ಸಿದ್ಧವಾಗಿದೆ!

ಪಂಡಿತ ಜವಹರಲಾಲರ ಆತ್ಮಕಥೆ.

ಕನ್ನಡ ಭಾಷಾಂತರ. ನವಜೀವನ ಕನ್ನಡ ಗುಂಪಿನಿಂದ

೧ನೆಯ ಸಂಪುಟ ಸಿದ್ಧವಾಗಿದೆ.

ಡಿಸೆಂಬರ್ ತಿಂಗಳ ಕೊನೆಗೆ ಗ್ರಂಥವು ಪೂರ್ತಿಯಾಗುವುದು

ಟಪಾಲು ಚಾರ್ಜು ಪ್ರತ್ಯೇಕ

ಆತ್ಯುತ್ತಮ ಪ್ರತಿ ರೂ ೧೦—೦—೦

ವಾಚನಾಲಯ ಪ್ರತಿ „ ೭—೦—೦

ಸಾಮಾನ್ಯ ಪ್ರತಿ „ ೫—೦—೦

ಡಿಸೆಂಬರ್ ತಿಂಗಳೊಳಗಾಗಿ ಒಟ್ಟಿಗೆ ಹಣ ಕಳುಹಿಸುವವರಿಗೆ ಟಪಾಲು ಖರ್ಚು ಮುಫತ್ತು.

ಪುಸ್ತಕ ವ್ಯಾಪಾರಿಗಳಿಗೆ ಧಾರಾಳವಾದ ಕಮೀಷನ್ ಕೊಡಲ್ಪಡುವುದು

ಪ್ರಕಾಶಕರು —

ಸಿ **ಅಶ್ವತ್ಥನಾರಾಯಣರಾವ್**, ಬಿ ಎ

ಸಂಪಾದಕರು :—

'ನವಜೀವನ' ಮತ್ತು "ಮಕ್ಕಳ ಪುಸ್ತಕ ಬಳೇಪೇಟೆ, ಬೆಂಗಳೂರು ಸಿಟಿ

ಸಾಮುದ್ರಿಕಾ ಶಾಸ್ತ್ರ ಪಂಡಿತರು

ಮ॥ ರಾ॥ ಸ್ವಾಮಿಯವರು ಬಂದಿರುವರು

ಹಸ್ತ ಸಾಮುದ್ರಿಕವನ್ನು ಬಹು ಕರಾರುವಾಕ ಹೇಳುವರು ನಿಮಗೆ ಸಂಭವಿಸಬಹುದಾದ ಅಪಾಯಗಳನ್ನೂ ತೊಂದರೆಗಳನ್ನೂ ತಿಳಿಸುವರು.

ಸುಸಮಯವನ್ನು ಕಳೆದುಕೊಳ್ಳಬೇಡಿ

ಜೀವಮಾನದ ಭವಿಷ್ಯದ ಸಾರಾಂಶವನ್ನು ಹೇಳುವುದಕ್ಕೆ .. 3 ರೂ.

ಜೀವಮಾನದ ಸಂಪೂರ್ಣ ಭವಿಷ್ಯವನ್ನು ಹೇಳುವುದಕ್ಕೆ . 6 ರೂ.

ವಿಳಾಸ —**ರಂಗವಿಲಾಸ**, ಮೆಜೆಸ್ಟಿಕ್ ಥಿಯೇಟರ್ ಹತ್ತಿರ, **ಬೆಂಗಳೂರು ಸಿಟಿ.**

ಮುದುಕಿಯು ಯುವತಿಯಾದಳು

ಲಂಡನ್ನಿನಲ್ಲಿ ರಾಜಾರಾಮ್ ಸಿಂಗ್ ಎಂಬ ಭಾರತದ ಯೋಗೀಶ್ವರನೊಬ್ಬನು ತನ್ನ ಅದ್ಭುತ ಚಮತ್ಕಾರಗಳಿಂದ ಆಲ್ಲಿನ ಜನರನ್ನು ವಿಸ್ಮಯಗೊಳಿಸಿದ್ದಾನೆ. ಆಹಾರ, ವ್ಯಾಯಾಮ ಮತ್ತು ಮನಸ್ಸಿನ ಶಕ್ತಿ ಇವುಗಳಿಂದ ಕೂಡಿದ ಈತನ ಯೋಗಾಭ್ಯಾಸ ಕ್ರಮವನ್ನು ಅನುಸರಿಸಿದ ಒಬ್ಬ ಮುದುಕಿಯು ಕೆಲವು ದಿನಗಳ ಒಳಗೆ ಸುಂದರ ತರುಣಿಯಾದಳು.

ಈ ಸುಸಮಯವನ್ನು ಕಳೆದುಕೊಳ್ಳಬೇಡಿರಿ! ಎರಡು ವಾರಗಳು ಮಾತ್ರ.

ಚಿತ್ರಶಾಲಾ ಸ್ಪರ್ಧೆ ನಂ ೧೬.

ಬಹುಮಾನವನ್ನು ಹೆಚ್ಚಿಸಲಾಗಿದೆ! ಬರಿಯ ಕಾಗದದಮೇಲೆಯೂ ಬರೆದು ಕಳುಹಿಸಬಹುದು

೧೫೦ ರೂ. ಬಹುಮಾನ ಮೊದಲನೇ ಬಹುಮಾನ ೬೦ ರೂ. ಇತರ ಬಹುಮಾನಗಳು ೬೦ ರೂ.

— ಎಡದಿಂದ ಬಲಕ್ಕೆ —

೧ ಯೋಚನೆಮಾಡುವುದು ೪ ಭಕ್ತ ೮ ಅರಿಕೆ ೯ ರೇಕು ೧೧ ಇಲ್ಲಿ ಬಂಧುತ್ವವು ಅಸ್ಪಷ್ಟತ ೧೫ ...ಂಪು ೧೩ ಗುಟ್ಟು ೧೪ ಗಣಿತ ೧೭ ಒಂದು ...ಮುಖ ೨೦ ಬೇಳುವಿಕೆ ೨೨ ಆಗತ್ಯವಾದದ್ದು ೨೪ ನಂತನೆ ೨೬ ಪೆರವ್ವ್ರಗ ೨೮ ಯೋಗ್ಯವಾದ ರೀತಿ ೨೯ ಮನಸ್ಸಿನಲ್ಲಿಂಟಾಗುವ ಆಂಜಿಕೆ ೩೦ ಹೇಳು ೩೧ ಬಲವಂತ (ಜುಲುಂ) ೩೩ ಏನಾದರು ಕೋಟಿ ೩೪ ...ನ್ನೊಂದು ೩೬. ಗಮನಿಸು ೩೭ ಒಂದು ಹಕ್ಕಿ ೩೮ ಹೇಳಿಕೊಡು



ಕೂಪನ್ ನಂಬರು

ಹೆಸರು

ವಿಳಾಸ

— ಮೇಲಿನಿಂದ ಕೆಳಕ್ಕೆ —

೧. ಈಗಿನ ಕಾಲದಲ್ಲಿ, ಇವರಲ್ಲಿ ಮಿತಿಯಾಗಿರಬೇಕು ೨ ಒಂದು ಆಟ ೩. ಇದು ಚಿನ್ನವಾಗ ರುಚಿಯಾಗಿರುತ್ತೆ ೫ ಒಂದು ದಿಕ್ಕು ೬ ಗೃಹ ೭ ವಾಸಿಸು ೮ ಒಂದು ಹೂ ೧೧ ಸ್ವರ ೧೪ ಇದರಿಂದ ಮನುಷ್ಯನ ಏಳಿಗೆಗೆ ಕುಂದಕ ಬರುವುದು ೧೬ ಯುಗಗಳಲ್ಲೊಂದು ೧೭ ಸೋದ... ಚನ್ನಾಗಿಲ್ಲದಿರುವುದು ೧೯ ಮರ್ಯಾದಸ್ಥ ೨೦ ಅತ್ಯಂತ ೨೧ ಎಲ್ಲಾ ಕಲೆಗಳಂತೆ ಇದೂ ಪ್ರಸಿದ್ಧಿಪಡೆದಿದೆ ೨೩ ಮನುಷ್ಯರು ೨೫ ರಕ್ತ ೨೭ ಇಂಪಾದ ಸ್ವರ ೩೨. ಕುಲುಕಿಸು ೩೪ ಸ್ತ್ರೀ ೩೦ ಪೂರ... ಬಲಯುತ ೩೬ ನೀರು 33 ಒಗ್ಗಿಸದರೆ ಒಡೆದುಹೋಗುವ ಸ್ವಭಾವ

ಸೂಚನೆ:—ಈ ಸ್ಪರ್ಧೆಯ ಸರಿಯಾದ ಉತ್ತರವು ಸಾಧ್ವಿ ಎಡಿಟರ ಬಳಿ ಮೊಹರುಮಾಡಿ ಇಟ್ಟಿರುತ್ತೆ. ಇದಕ್ಕೆ ಪ್ರತಿ ಪ್ರಶ್ನೆಯೂ ಸರಿಹೋಲತಕ್ಕ ಸ್ಪರ್ಧೆಗೆ ಮೊದಲನೇ ಬಹುಮಾನವೂ, ಒಂದ ತಪ್ಪಿರುವವುಗಳಿಗೆ ಇತರ ಬಹುಮಾನಗಳೂ ಕೊಡಲ್ಪಡುವುವು. ಬಹುಮಾನಕ್ಕೆ ಯೋಗ್ಯವಾದ ಉತ್ತರಗಳು ಒಂದಕ್ಕಿಂತ ಹೆಚ್ಚಾಗಿದ್ದಲ್ಲಿ ಮೇಲ್ಕಂಡ ಬಹುಮಾನಗಳು ಎಲ್ಲರಿಗೂ ಹಂಚಲ್ಪಡುವುವು. ಬಹುಮಾನಗಳನ್ನು ಹಂಚುವ ವಿಚಾರ ಸ್ಪರ್ಧೆಯ ಮ್ಯಾನೇಜರಿಗೆ ಬಿಟ್ಟಿದ್ದು. ಈ ವಿಚಾರದಲ್ಲಿ ಯಾವ ಪತ್ರವ್ಯವಹಾರಗಳಿಗೂ ಅವಕಾಶವಿಲ್ಲ. ಪ್ರತಿ ಸ್ಪರ್ಧೆಗೂ ಪ್ರವೇಶಧನ ನಾಲ್ಕಾಣೆ. ಎರಡಕ್ಕಿಂತ ಕಡಿಮೆ ಸ್ಪರ್ಧೆಗಳನ್ನು ಅಂಗೀಕರಿಸುವುದಿಲ್ಲ. ಪ್ರವೇಶಧನವನ್ನು ಪೋಸ್ಟಲ್ ಸ್ಟಾಂಪು, ಅಥವಾ ಇಂಡಿಯನ್ ಪೋಸ್ಟಲ್ ಆರ್ಡರ್ ಅಥವಾ ಮನಿಯಾರ್ಡರ್ ಮೂಲಕ ರವಾನಿಸಬಹುದು. ಉತ್ತರಗಳನ್ನು ಬರೆಯತಕ್ಕವರು ಸಾಧ್ವಿ ಪೇಪರಿನಲ್ಲಿರತಕ್ಕ ಕೂಪನ್ನಿನಲ್ಲಾಗಲಿ ಅಥವಾ ಬರಿಯ ಕಾಗದದಲ್ಲಾಗಲಿ ಚಿತ್ರಿಸಿದಂತೆ ಚೆನ್ನಾಗಿ (ಶಾಯಿಯಲ್ಲಿ) ಬರೆದು ಕಳುಹಿಸಬೇಕು. ಉತ್ತರಗಳನ್ನು ಕಳುಹಿಸಲು 1937 ನೇ ಇಸವಿ ಜನವರಿ 7 ನೇ ತಾರೀಖು ಕೊನೆಯದಿನ. ನಂತರ ಬಂದ ಉತ್ತರಗಳನ್ನು ಸ್ವೀಕರಿಸುವುದಿಲ್ಲ. ಸರಿಯಾದ ಉತ್ತರವನ್ನು ಜನವರಿ 11 ನೇ ತಾರೀಖಿನ ಸಾಧ್ವಿಯಲ್ಲಿ ಪ್ರಕಟಿಸಲಾಗುತ್ತೆ.

ವಿಳಾಸ:— ಮ್ಯಾನೇಜರ್ ಚಿತ್ರಶಾಲಾ ಸ್ಪರ್ಧೆ, ಚಿತ್ರಶಾಲಾ, ನಾಗೇವಿಲಾಸ ಮೊಹಲ್ಲಾ ಒಂಟಿಕೊಪ್ಪಲ್, ಮೈಸೂರು.

ವಿ ಸೂ ಮೈಸೂರಿನಲ್ಲಿ ಸ್ಪರ್ಧೆಗೆ ಭಾಗವಹಿಸುವವರು ತಮ್ಮ ಉತ್ತರಗಳನ್ನು ಮೆಸರ್ಸ್ ಸ್ಪೆಷಲ್ ಮಾರ್ಟ್ ಇವರಿಗೆ ಮಾವಕಿಮಾಡಬೇಕಾಗಿ ವಿನಂತಿ. ಮ್ಯಾ ಚಿ

ಭಿಷಗ್ರತ್ನ ಆಯುರ್ವೇದ ವಿದ್ವಾನ್ ಬಿ. ವಿ. ಪಂಡಿತರ

- ಬಾಲಸುಧಾ -

ಮಕ್ಕಳ ಪ್ಲೀಹದ ಗೆಡ್ಡೆಯನ್ನು ಲಾತರಿ ಗುಣಪಡಿಸುತ್ತೆ. ಲಿವರ್ (ಪಿತ್ತಕೋಶ) ದಪ್ಪನಾಗಿ ಕಣ್ಣು ಹಳದಿ ಬಣ್ಣವಾಗಿದ್ದರೆ ಇದರ ಸೇವನೆಯಿಂದ ದಿನೇ ದಿನೇ ಗುಣವಾಗುತ್ತೆ. 20 ವರ್ಷಗಳಿಂದಲೂ ಅನುಭವ ಸಿದ್ಧವಾಗಿದೆ—ಮಕ್ಕಳ ಏಳಿಗೆ ನಮ್ಮ ಬಾಲಸಂಜೀವಿನಿಯನ್ನೇ ಉಪಯೋಗಿಸಿರಿ.

ಬಾಲಸುಧಾ ಬೆಲೆ 1 ರೂ. ಬಾಲಸಂಜೀವಿನಿ 1 ರೂ.

ಮೈಸೂರು, ಬೆಂಗಳೂರು, ಮದ್ರಾಸುಗಳಲ್ಲಿ ನಮ್ಮ ಶಾಖೆಗಳಿವೆ

ಸದ್ವೈದ್ಯಶಾಲಾ, ನಂಜನಗೂಡು

ANANDA SODA FACTORY,

BEST AERATED WATER SUPPLIERS
COMPLETE REQUISITES FOR
AERATED WATER MANUFACTURERS
AVAILABLE

ಆನಂದಾ ಸೋಡಾ ಫ್ಯಾಕ್ಟರಿ,
ದೊಡ್ಡ ಪೇಟೆ, ಮೈಸೂರು



ಟಿ. ಸಿ. ನಟರಾಜ್ ಔಷಧಾಲಯ,

ಸಯ್ಯಾಜಿರಾವ್ ರೋಡು, ಮೈಸೂರು

ಇವರಲ್ಲಿ ನೇತ್ರಪರೀಕ್ಷೆಯು ಉಚಿತವಾಗಿ ಮಾಡಲ್ಪಡುತ್ತದೆ

ಆತ್ಯಗತ್ಯವಾಗಿ ಬೇಕಾದ ಎಲ್ಲಾ ಇಂಜಕ್ಷನ್ ಔಷಧಿಗಳೂ ಸದಾ ಕಾಲದಲ್ಲೂ ದೊರಕುವುವಲ್ಲದೆ ಸಮಸ್ತ ವ್ಯಾಧಿಗಳಿಗೂ ಚಿಕಿತ್ಸೆಯು ಬಹು ಸುಲಭ ಛಾರ್ಜಿನಿಂದ ಮಾಡಲ್ಪಡುತ್ತದೆ

ಕೃಷ್ಣಾಪುರದವರ ಆಯುರ್ವೇದೀಯ ಸಿದ್ಧೌಷಧಗಳೆಲ್ಲವೂ ಸದಾ ದೊರಕುತ್ತವೆ

ಮೈಸೂರು ಅರಮನೆಗೆ ಸಪ್ಲೈ ಮಾಡುವ
ಎಂ. ವಿ. ನಾರಾಯಣರಾಯರ
ಶ್ರೀ ಸತ್ಯನಾರಾಯಣ ಪರಿಮಳ ಫ್ಯಾಕ್ಟರಿ,
ಜಗನ್ಮೋಹನ ಬಂಗ್ಲಾ ಬೀದಿ, ಮೈಸೂರು

ಪರಿಮಳ ಅಗರ ಬತ್ತಿ

ಉಪಯೋಗಿಸಿ ಪ್ರೋತ್ಸಾಹಿಸಿರಿ